ಭಾಗ 2

ಕನ್ನಡ ಚಲನಚಿತ್ರ ಇತಿಹಾಸ

ಕನ್ನಡ ವಿಶ್ವವಿದ್ಯಾಲಯ, ಹಂಪಿ



ಕನ್ನಡ ಚಲನಚಿತ್ರ ಇತಿಹಾಸ

ಸಂಪುಟ ೧

ಡಾ. ವಿಜಯಾ
ಎಂ.ಬಿ.ಸಿಂಗ್
ವಿ.ಎನ್. ಸುಬ್ಬರಾವ್

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ
೨೮, ಕ್ರೆಸೆಂಟ್ ರಸ್ತೆ,
ಬೆಂಗಳೂರು

Kannada Chalanachitra Itihasa : Vol - 2
A History of Kannada Cinema
Edited By
Dr. Vijaya
M.B. Singh
V. N. Subba Rao
for Karnataka Film Chamber of Commerce
Published by
Publication Division, Prasaranga
Kannada University, Hampi
Vidyaranya - 583 276
Pages : xvi + 867
Price : Rs. 1000-00 (Incl. 2 Vol.)
First Impression : 2001

ಆರ್ಥಿಕ ನೆರವು
ಕರ್ನಾಟಕ ಸರ್ಕಾರ

ಪ್ರಕಾಶಕರು
ಪ್ರಕಟಣ ವಿಭಾಗ, ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಬೆಲೆ ರೂ. ೧೦೦೦-೦೦ (ಎರಡು ಸಂಪುಟಗಳು ಸೇರಿ)

ಮುಖಪುಟಗಳ ವಿನ್ಯಾಸ
ಚಂದ್ರನಾಥ ಆಚಾರ್ಯ

ವರ್ಣ ಪುಟಗಳ ವಿನ್ಯಾಸ
ಯು.ಟಿ. ಸುರೇಶ್

ಕಪ್ಪು ಬಿಳುಪು ಚಿತ್ರಗಳ ಸಂಸ್ಕರಣ
ವಿಶ್ವನಾಥ್ ಶೆಟ್ಟಿಗಾರ್

ಗಣಕಯಂತ್ರ ಅಕ್ಷರ ವಿನ್ಯಾಸ
ಎಸ್. ಎಸ್. ಸುರೇಶ್‌ಕುಮಾರ್, ಜಿ. ಮಧುಸೂದನ್, ವಿಶ್ವನಾಥ್. ಕೆ.

ಮುದ್ರಣ
ಪ್ರಗತಿ ಪ್ರಿಂಟ್ ಕಮ್ಯುನಿಕೇಶನ್ಸ್, ಬೆಂಗಳೂರು. ✆ : 98450-62303

ಸಂಪುಟ -೨ ರಲ್ಲಿ

ನಾಡು ಹೆಮ್ಮೆ ಪಡುವಂಥ ಸಾಧನೆ

ಚಲನಚಿತ್ರ ಪಾಶ್ಚಾತ್ಯ ಮೂಲದ ಪ್ರಭಾವ. ಪಾಶ್ಚಾತ್ಯರಿಗೆ ಈ ಮಾಧ್ಯಮ ಹೆಜ್ಜೆ ಹೆಜ್ಜೆಯಾಗಿ ಬೆಳೆದು ಲಭ್ಯವಾಯಿತು. ನಮಗೆ ಒಂದು ಪ್ರಮಾಣದಲ್ಲಿ ರೂಪಿತ ಮಾಧ್ಯಮವಾಗಿಯೇ ಕೈಗೆಟುಕಿತು. ಆ ವೇಳೆಗಾಗಲೇ ಶ್ರೀಮಂತವಾಗಿ ರೂಪಿತಗೊಂಡು ಜನರ ಮಧ್ಯೆ ಒಂದು ಸ್ಥಾನವನ್ನು ಪಡೆದುಕೊಂಡಿದ್ದ ನಾಟಕ ಮಾಧ್ಯಮದವರೇ ಹೆಚ್ಚಾಗಿ ಇಲ್ಲಿಯೂ ತೊಡಗಿಕೊಂಡರು. ಸಹಜವಾಗಿಯೇ ಜನಪ್ರಿಯ ನಾಟಕ-ಸಂಗೀತಗಳ ಬಳಕೆ ಇಲ್ಲಿಯೂ ಆಯಿತು. ಪ್ರಾರಂಭದಲ್ಲಿ ಬಹುತೇಕ ಪೌರಾಣಿಕ ವಸ್ತು ತೆಗೆದುಕೊಂಡದ್ದನ್ನು ಕಾಣುತ್ತೇವೆ. ಆ ಸಾಮಗ್ರಿಯಿಂದ ಬದುಕಿಗಿಂತ ದೊಡ್ಡದಾದ್ದನ್ನು ಹೇಳಲು ಪ್ರಯತ್ನಿಸಿತೆ, ಕವಿಸಮಯ (ಪೊಯಟಿಕ್ ಜಸ್ಟಿಸ್) ಈ ಮಾಧ್ಯಮದಲ್ಲಿ ಹೇಗೆ ಕೆಲಸ ಮಾಡಿದೆ ಎಂಬುದು ಸಹಜವಾಗಿಯೇ ಏಳುವ ಪ್ರಶ್ನೆ.

• • •

ಸಿನಿಮಾ ಜೀವನ ಮತ್ತು ಸಂದರ್ಭ-ಸನ್ನಿವೇಶಗಳ ಬಗ್ಗೆ ಮಾಹಿತಿ ಒದಗಿಸುವ, ಆಲೋಚಿಸುವ ಮಾಧ್ಯಮವಾಗಿದೆ. ಸಾಮಾಜಿಕ ವ್ಯವಸ್ಥೆಯಲ್ಲಿ ಸಮುದಾಯದ ವರ್ತನೆ, ಮೌಲ್ಯ, ಆಶೆ-ಆಕಾಂಕ್ಷೆಗಳಿಗೆ ಆದರ್ಶ, ಮಾದರಿಗಳನ್ನು ಒದಗಿಸುವ ಸಾಧ್ಯತೆ ಹೊಂದಿದೆ.

ವಸ್ತುವಿನ್ಯಾಸ, ಕಲಾವಿನ್ಯಾಸ, ಅಭಿನಯ ಅಥವಾ ಅಂಗಸನ್ನೆ, ಪ್ರಸಾಧನ, ಜೊತೆಗೆ ಹಲವು ತಾಂತ್ರಿಕ ಅಂಶಗಳು ತಮ್ಮ ತಮ್ಮ ರೀತಿಯಿಂದಲೇ ಅರ್ಥ ಸೃಷ್ಟಿಗೆ ಕಾರಣವಾಗುತ್ತವೆ. ಪ್ರತಿಯೊಂದು ಅಂಶವೂ ಒಟ್ಟು ದೃಶ್ಯದ ಅವಿಭಾಜ್ಯ ಭಾಗದ ಒಂದು ಸಂಜ್ಞೆ ಅಥವಾ ಘಟನೆ-ಕ್ರಿಯೆಗಳ ಭಾಗವಾದ ಸಂಜ್ಞೆ ಆಗಿರುತ್ತದೆ. ಪದಗಳಿಗೆ, ವಾಕ್ಯಗಳಿಗೆ ಅರ್ಥವಿರುವಂತೆ ಸಂಜ್ಞೆಗೂ ಸಂಜ್ಞಾ ಪುಂಜಗಳಿಗೂ ಅರ್ಥವಿದೆ ಎಂದು ವ್ಯಾಖ್ಯಾನಿಸಲಾಯಿತು. ಆದ್ದರಿಂದಲೇ ಚಲನಚಿತ್ರವನ್ನು 'ನೋಡುವ' ಕ್ರಮದಲ್ಲಿ ಇಂಥ ಮಾತಿಗೆ ಮೀರಿದ ಅರ್ಥವನ್ನು ಕೊಡಬಲ್ಲ ಸಂಜ್ಞೆಗಳ ಪಾತ್ರ ಮುಖ್ಯ. ಚಲನಚಿತ್ರ ಪ್ರತೀಕ (symbol)ಗಳ ಬಳಕೆಯನ್ನು ಹೆಚ್ಚು ಆಧರಿಸಿದೆ. ರೂಢಿಯಲ್ಲಿ ಇದನ್ನೇ ಸಂಕೇತ-ಪ್ರತಿಮೆ ಎಂದೂ ಹೇಳುತ್ತೇವೆ. ಚಲನಚಿತ್ರವನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಸಂಜ್ಞೆ ನೆರವಿಗೆ ಬರುತ್ತದೆ. ಬಳಕೆಯಾದ ಹಲವು ಕಲೆ ಮತ್ತು ತಂತ್ರ ವಿಧಾನಗಳ ಮೂಲಕ ಮನುಷ್ಯರ ವರ್ತನೆಗಳ ರೂಪ ಸಾದೃಶ್ಯದ (Mimesis) ಮೂಲಕ ಹೊರ ಜಗತ್ತಿನ ಸಂಕೀರ್ಣತೆಯನ್ನು ಪ್ರದರ್ಶಿಸಬಲ್ಲುದು ಚಲನಚಿತ್ರ. ಚಲನಚಿತ್ರದ ಧೋರಣೆಯೊಂದು ಅದರ ಆಕೃತಿಯಲ್ಲೇ ವ್ಯಕ್ತವಾಗುತ್ತದೆ. ಒಬ್ಬ ಗಂಭೀರವಾದ ನಿರ್ದೇಶಕ ಆ ತಕ್ಷಣ ಹೇಳಬೇಕಾಗಿರುವುದರ ಹೊಣೆಗಾರಿಕೆಯನ್ನು ಹೊತ್ತಿರುತ್ತಾನೆ. ಜಾಣತನದಿಂದ ಪ್ರತಿಪಾದಿಸಲಾಗುವ ಕೆಟ್ಟ ನಂಬಿಕೆಗಳೂ ಒಪ್ಪಿತವಾಗುವಂತಿದ್ದಾಗ ಅಪಾಯವಿದೆ. ಒಳ್ಳೆಯ ನಂಬಿಕೆಗಳನ್ನು ಗ್ರಹಿಸಲು ಸಮರ್ಥರಲ್ಲ ಎಂಬ ಕಾರಣ ಕೊಟ್ಟು ಜನಸಮುದಾಯವನ್ನು ದೂರ ಇರಿಸುವುದು ಒಂದು ತಂತ್ರ. ಒಳ್ಳೆಯ ನಂಬಿಕೆಗಳನ್ನು -ಮೋಸದ ಮಾರ್ಗ ಬಿಟ್ಟು - ಪ್ರತಿಪಾದಿಸುವುದು ಸಂಸ್ಕೃತಿಯ ನಿಜವಾದ ಅರ್ಥ - ಆದರೆ ಚಲನಚಿತ್ರವೆಂದರೆ ಕಥಾ ಚಿತ್ರಗಳು, ಚಲನಚಿತ್ರ ಉದಾರವಾದಿ ಎಂಬ ಸ್ವಯಂ ಘೋಷಿತ ನಿಲುವು ಬಹುವಾಗಿ ಕೆಲಸ ಮಾಡಿದೆ. ಜನರು ಏನನ್ನು ನಿರೀಕ್ಷಿಸುತ್ತಾರೆಂಬ ಬಗ್ಗೆ ಅವರ ಪ್ರಜ್ಞೆ - ಅಭಿರುಚಿಯನ್ನು ಸ್ವೇಚ್ಛೆಯಾಗಿ ಗುರುತಿಸಿಕೊಂಡಿದ್ದರಿಂದ ಗಂಭೀರವಾದ ದೃಷ್ಟಿ-ಧೋರಣೆಗಳು ಇಲ್ಲವಾಗುತ್ತಾ ಬಂದವು.

ಪ್ರೇಕ್ಷಕ ವರ್ಗ ಎರಡು ಕಾರಣಗಳಿಂದ ಹೆಚ್ಚುತ್ತದೆ. ಒಂದು, ಜನರಲ್ಲಿ ಸಮಕಾಲೀನ ಸಮಸ್ಯೆಗಳ ಅರಿವಿನ ಮಟ್ಟ ಹೆಚ್ಚುವುದರಿಂದ. ಮತ್ತೊಂದು, ಸಹಜವಾದ - ಸುಲಭವಾದ ಮತ್ತು ನೇರವಾದ ತಂತ್ರಗಳ ಬಳಕೆಯಿಂದ. ಸಿನಿಮಾ ನೋಡಲು ಬರುವವರಿಗೆ ಪ್ರೇರಣೆ ಯಾವುದು? ಚಲನಚಿತ್ರದಿಂದ ಒದಗುವ ಆನಂದ, ಸೌಂದರ್ಯಾನುಭವದ ತೃಪ್ತಿ ಮತ್ತು ಆ ಬಗ್ಗೆ ಯಾವುದೋ ನಿರೀಕ್ಷೆ ಆಳದಲ್ಲಿ ಇರುತ್ತದೆ. ಇದು ತಳಹದಿ. ಆದರಾಚೆಗೆ ಸಿಗಬಹುದಾದ ಯಾವುದೆ ಅನುಭವ, ವಿಚಾರ ಇತ್ಯಾದಿಗಳು ಈ ತಳಹದಿಯ ಮೇಲಿನ ಕಟ್ಟಡ ಮಾತ್ರ. ಅದು ಭಾವನಾತ್ಮಕ, ಬೌದ್ಧಿಕ, ನೈತಿಕ, ಮತೀಯ, ಆಧ್ಯಾತ್ಮಿಕ ಅನುಭವಗಳ ಸ್ತರಗಳೂ ಆಗಿರಬಹುದು. ಕಲಾವಿದರಿಗೂ ಅವರ ಸೃಜನಶೀಲ ತುಡಿತಗಳ ಅಭಿವ್ಯಕ್ತಿ ಫಲಪ್ರದವಾಗುವುದು ಪ್ರೇಕ್ಷಕನ ಸೌಂದರ್ಯಾನುಭವದಲ್ಲೇ. ಬಹುತೇಕ ಚಲನಚಿತ್ರಗಳಲ್ಲಿ ಅಂಗಸನ್ನೆಗಳು, ಮುಖಭಾವಗಳಿಗೆ ಆದ್ಯತೆ. ಅವು ಸಾಮಾಜಿಕ, ಸಾಂಸ್ಕೃತಿಕ ಭೇದವಿಲ್ಲದೆ ತಕ್ಷಣ ಎಲ್ಲ ಜನರಿಗೂ ಅರ್ಥವಾಗುವಂಥವು. ಮತ್ತು ನಟ/ನಟಿಯ ಬಾಹ್ಯರೂಪವೇ ಸಾಂಸ್ಕೃತಿಕವಾಗಿ ಅರ್ಥವತ್ತಾಗುತ್ತದೆ. ಆದ್ದರಿಂದಲೇ ವರ್ತನೆ, ಭಾಷೆ, ವಿಧಿಯಾಚರಣೆ, ಅಭಿರುಚಿ, ಆದರ್ಶಗಳು, ಹಾಸ್ಯಪ್ರಜ್ಞೆ, ಮೂಢನಂಬಿಕೆಗಳು, ಮತೀಯ ನಂಬಿಕೆಗಳು, ನೈತಿಕತೆಯ ಅಂಶಗಳು ಕೂಡಾ ಪ್ರದರ್ಶನದಲ್ಲಿ ವಿಚಾರ ಮತ್ತು ಕಲ್ಪನೆಗಳ ಶರೀರವಾಗುತ್ತವೆ. ಇವುಗಳ ಜೊತೆಗೆ ಪ್ರೇಕ್ಷಕನ ವೈಯಕ್ತಿಕ ನೆನಪುಗಳು, ಅನುಭವಗಳು, ಊಹೆಗಳು, ನಿರೀಕ್ಷೆಗಳೂ ಪ್ರಭಾವ ಬೀರುತ್ತವೆ.

• • •

ಚಿತ್ರರಂಗದ ಅರ್ಥ ಸಂಗತಿಗಳು ಎಂದೂ ಸುಮುಖವಾಗಿ ನಡೆದದ್ದಿಲ್ಲ. ಪ್ರತಿಯೊಂದು ಹಂತದಲ್ಲೂ ಆರ್ಥಿಕ ಸಮಸ್ಯೆಗಳನ್ನು ಎದುರಿಸುತ್ತಲೇ ಅಸ್ತಿತ್ವವನ್ನುಳಿಸಿಕೊಂಡು ಬರಬೇಕಾಯಿತು. ಚಿತ್ರಗಳಿಗೆ 'ಧ್ವನಿ'ಯ ಸೇರ್ಪಡೆಯಾದಾಗಲೇ ಅಲ್ಲಿ ಲಾಭ-ನಷ್ಟ ಎರಡೂ ಇತ್ತು. ಮೂಕಿ ಚಿತ್ರಗಳ ಕಾಲದಲ್ಲಿ ಭಾರತೀಯ ಚಿತ್ರಗಳಿಗೆ ವಿದೇಶೀ ಚಿತ್ರಗಳೊಂದಿಗೆ ನೇರವಾದ ಪೈಪೋಟಿಯಿತ್ತು.

ಭಾರತೀಯ ಚಿತ್ರ ನಿರ್ಮಾಣವನ್ನು ಪ್ರೋತ್ಸಾಹಿಸಲು ಕಡ್ಡಾಯ ಪ್ರದರ್ಶನ ಇತ್ಯಾದಿ ಕೆಲವು ಸವಲತ್ತುಗಳನ್ನು ಒದಗಿಸಿ ಎಂದು ಪದೇ ಪದೇ ಪ್ರಾರ್ಥಿಸಿದಾಗಲೂ ಬ್ರಿಟಿಷ್ ಸರ್ಕಾರ ಲಕ್ಷಿಸಲಿಲ್ಲ. ಅದಕ್ಕೆ ಮಾಧ್ಯಮವೊಂದು ಹಾಗೆ ಬೆಳೆಯುವುದು ಬೇಕಾಗಿರಲೂ ಇಲ್ಲ.

ಚಿತ್ರಗಳು ಮಾತಾಡ ತೊಡಗಿದ ಮೇಲೆ ಈ ಪೈಪೋಟಿಯಿಂದ ಹೊರಗೆ ಬರಲು ಸಾಧ್ಯವಾಯಿತು. ಏಕೆಂದರೆ ಸ್ಥಳೀಯರಿಗೆ ಅವರದೇ ಭಾಷೆಯಲ್ಲಿ ಹಾಡು, ಸಂಭಾಷಣೆ ಮೊದಲಾದ ಆಕರ್ಷಣೆಗಳಿದ್ದವು. ಆ ಆಕರ್ಷಣೆಯನ್ನು ಭದ್ರವಾಗಿ ಹಿಡಿದಿಟ್ಟುಕೊಳ್ಳುವುದು ಸಾಧ್ಯವಾಗಲಿಲ್ಲ ಎಂಬುದು ಒಂದು ಕಡೆಯಾದರೆ, ಇನ್ನೊಂದು ಕಡೆ ಮಾತನಾಡುವ ಚಿತ್ರಗಳು ಬಂದ ಮೇಲೆ ಭಾಷಾ ಚಿತ್ರಗಳ ಮಾರುಕಟ್ಟೆ ಸೀಮಿತಗೊಂಡಿತು. ವಿದೇಶಗಳ ಮಾತು ಹಾಗಿರಲಿ ತನ್ನ ಪರಿಸರದಲ್ಲೇ ಪ್ರಾದೇಶಿಕ ಗಡಿಯಾಚೆಗೂ ಹೋಗಲಾಗದ ಸ್ಥಿತಿಯೊಂದು ಏರ್ಪಟ್ಟಿತು.

ಮಾತನಾಡುವ ಚಿತ್ರಗಳು ಮತ್ತೂ ಹಲವು ಸಮಸ್ಯೆಗಳನ್ನು ಉಡಿಯಲ್ಲಿಟ್ಟುಕೊಂಡೇ ಬಂದಿದ್ದವು. ಮಾತನಾಡಬೇಕಾದರೆ ಹೊಸ ಯಂತ್ರಗಳನ್ನು ಅಳವಡಿಸಬೇಕು. ಆ ಯಂತ್ರಗಳನ್ನು ಕೊಳ್ಳುವ ಖರ್ಚು, ಅವುಗಳನ್ನು ಚಾಲಿಸಲು ಪರಿಣತರು ಇನ್ನಿತರ ಸಿಬ್ಬಂದಿಯ ನೇಮಕವಾಗಬೇಕು. ಇವೆಲ್ಲ ಧುತ್ತನೆ ಬಂದೆರಗಿದ ಹೊರೆಯಾಗಿತ್ತು. ತಯಾರಿಕೆಯೊಂದೇ ಅಲ್ಲ, ಚಿತ್ರಮಂದಿರಗಳಲ್ಲೂ ಆವರೆಗೆ ಇದ್ದ ಉಪಕರಣಗಳು ಬಳಕೆಯಾಗುವಂತಿರಲಿಲ್ಲ. ಹೊಸ ಯಂತ್ರಗಳ ಜೋಡಣೆ, ಧ್ವನಿಯ ಸಲುವಾಗಿ ವಿಶೇಷ ಸಜ್ಜಾಗಬೇಕಾದ ಅನಿವಾರ್ಯಗಳು ಎದುರಾದವು. ಹಲವು ಪ್ರದರ್ಶಕರು ಈ ವೃತ್ತಿಗೇ ವಿದಾಯ ಹೇಳಿದರು, ಹಲವು ಚಿತ್ರ ನಿರ್ಮಾಣ ಕಂಪನಿಗಳು ಮುಚ್ಚಿಹೋದವು. ಆದರೂ ಅಸ್ತಿತ್ವಕ್ಕಾಗಿ ಹೋರಾಡುತ್ತಲೇ ತನ್ನದೇ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಚಿತ್ರರಂಗವನ್ನು ಆಗಲೂ ಅಮೆರಿಕೆಯ ಆಕ್ರಮಣಕಾರೀ ತಂತ್ರಗಳ ಕಬಂಧ ಬಾಹು ಸೆಳೆಯುತ್ತಲೇ ಇತ್ತು. ಚಿತ್ರರಂಗ ನಡೆದು ಬಂದ ಹಾದಿ ಮೇಲು ನೋಟಕ್ಕೆ ಕಾಣುವ ಹಾಗೆ ಸುಲಭದ್ದೂ ಅಲ್ಲ, ರಂಗುರಂಗಿನದ್ದೂ ಆಗಿರಲಿಲ್ಲ. ಅದರ ಉಳಿವು ಕೇವಲ ವ್ಯವಹಾರದ ಮೇಲೆ ನಿಂತಿರಲಿಲ್ಲ. ಆ ವ್ಯವಹಾರಕ್ಕೆ ಅದು ಪಣವಾಗಿಟ್ಟಿದ್ದು ಕಲೆ-ಸೌಂದರ್ಯ ಪ್ರಜ್ಞೆಯನ್ನು. ಈ ಕಾರಣಕ್ಕಾಗಿಯೇ ಕಲೆ ತನ್ನ ನವಿರು ಕಳೆದುಕೊಳ್ಳುತ್ತ ವ್ಯಗ್ರವಾಗುತ್ತ ಹೋಗುತ್ತದೆ. ಯಾರು ಬೇಕಾದರೂ ಹಣ ತೊಡಗಿಸಿ ಸೃಜನಶೀಲತೆಯನ್ನು ಕೊಂಡುಕೊಳ್ಳುವ, ಜೀತಕ್ಕಿಟ್ಟುಕೊಳ್ಳುವ ಸ್ಥಿತಿಯ ಲಾಭ ಪಡೆದು ಭೂಗತ ಜಗತ್ತು ನುಗ್ಗಿತು. ಚಿತ್ರದ ವಸ್ತು-ನಿರೂಪಣೆಯಲ್ಲಿಯೂ ಭೂಗತ ಜಗತ್ತು, ಅದರ ಚಟುವಟಿಕೆಗಳ ವೈಭವೀಕರಣ ಹೆಚ್ಚಾಯಿತು. ಕೆಲವೊಮ್ಮೆ ಚಿತ್ರಗಳೂ ಭಾರೀ ಗಳಿಕೆಯ ದಾಖಲೆ ತೋರುತ್ತಿವೆ. ಆದರೆ ಒಬ್ಬ ನಿರ್ಮಾಪಕನೂ ಹಣದ ಮುಖ ಕಂಡೆನೆಂದು ಸಂತೋಷದಿಂದ ಹೇಳುತ್ತಿಲ್ಲ. ಚಿತ್ರ ಸೋತಾಗ ದಿವಾಳಿ-ಆತ್ಮಹತ್ಯೆ, ಕೊಲೆಗಳೂ ಆಗಿಹೋಗಿವೆ. ಯಶಸ್ವಿಯಾದಾಗ ಸೋರಿಹೋಗುವ ದಾರಿಗಳು ನೂರು, ಸಾವಿರ.

ಚಿತ್ರರಂಗ ಒಂದು ಉದ್ಯಮ. ಉದ್ಯಮಗಳಿಗೆ ಕೊಡಬೇಕಾದ ಸವಲತ್ತುಗಳನ್ನೆಲ್ಲ ಇವರಿಗೂ ಕೊಡಬೇಕು ಎಂದು ಸರ್ಕಾರ ಘೋಷಿಸುವುದಕ್ಕೆ ೧೯೯೦ರ ವರೆಗೆ ಶಬರಿಯಂತೆ ಕಾಯಬೇಕಾಯಿತು. ಟೂರಿಂಗ್ ಟಾಕೀಸ್ ಎಂದು ಗುರುತಿಸಲಾದ ಸಂಚಾರಿ ಚಿತ್ರಮಂದಿರಗಳನ್ನು ಪ್ರಾರಂಭದ ದಿನಗಳಲ್ಲಿ ತಾಲ್ಲೂಕು ಕೇಂದ್ರಗಳಿಗೆ ತರುವ ಯೋಜನೆ ಮುಂದಿಟ್ಟಾಗ ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ತೀವ್ರವಾಗಿ ಖಂಡಿಸಲಾಗಿತ್ತು. ಹೊಟ್ಟೆ-ಬಟ್ಟೆಗಿಲ್ಲದವರಿಗೆ ಇಂಥ ಆಕರ್ಷಣೆ ಮುಂದಿಟ್ಟರೆ ತುತ್ತಿಗೂ ಇಲ್ಲದ ಬಡತನ ಆವರಿಸಿಬಿಡುತ್ತದೆ ಎಂಬುದು ಕಾರಣ... ಭಾರತದಲ್ಲೇ ಮೊದಲ ಬಾರಿಗೆ ಕರ್ನಾಟಕ ಈ ಸಮಸ್ಯೆಯನ್ನು ಕೈಗೆತ್ತಿಕೊಂಡು ಹೋರಾಡಿತು. ರಾಷ್ಟ್ರಮಟ್ಟದಲ್ಲಿ ಶತ್ರುಘ್ನ ಸಿನ್ಹಾ ಮೊದಲಾದವರಿದ್ದ ತಜ್ಞರ ಒಂದು ಸಮಿತಿ ರಚಿಸಿ ಈ ಬಗ್ಗೆ ಚರ್ಚಿಸಲಾಯಿತು. ಚಿತ್ರಮಂದಿರ ನಿರ್ಮಾಣಕ್ಕೆ ಸಾಲ ಕೊಡಬಹುದೆಂದು ಸಮಿತಿ ಎಷ್ಟೇ ಸಮರ್ಥವಾಗಿ ವಾದ ಮಂಡಿಸಿದರೂ ರಾಷ್ಟ್ರೀಕೃತ ಬ್ಯಾಂಕುಗಳು ಒಪ್ಪಿಕೊಳ್ಳುವುದಿಲ್ಲ. ಅವರ ಪ್ರಕಾರ ಚಿತ್ರಮಂದಿರ ಉತ್ಪಾದನಾ ವಲಯಕ್ಕೆ ಬರುವುದಿಲ್ಲ. ಖಾಯಂ ಚಿತ್ರಮಂದಿರಗಳಿಗೂ ಸಿನಿಮಾಟೊಗ್ರಫಿ ನಿಯಮಗಳು ಉಸಿರುಗಟ್ಟಿಸುವಂತಿವೆ. ಚಿತ್ರೋದ್ಯಮದ ಹಿತಕ್ಕಾಗಿಯೇ ಇರುವ ರಾಷ್ಟ್ರ-ರಾಜ್ಯ ಮಟ್ಟದ ಅಭಿವೃದ್ಧಿ ನಿಗಮಗಳು ಚಿತ್ರಮಂದಿರ, ಮಿನಿ ಚಿತ್ರಮಂದಿರಗಳ ಅಗತ್ಯದ ಬಗ್ಗೆ ಮಾತಾಡುತ್ತವಾಗಲೀ ಅವರೂ ನಿರ್ಮಿಸುವುದಿಲ್ಲ; ನಿರ್ಮಿಸುವವರಿಗೂ ನೆರವು ಕೊಡಲಿಲ್ಲ. ಈಗ ಅವೂ ಮುಚ್ಚುವ ಸ್ಥಿತಿಗೆ ಬಂದಿವೆ.

ಚಿತ್ರ ಹಂಚಿಕಾ ವ್ಯವಸ್ಥೆಯಲ್ಲೂ ಒಂದು ಸ್ಪಷ್ಟ ರೂಪುರೇಖೆಗಳಿಲ್ಲ. ಒಂದು ಕಾಲಕ್ಕೆ ಚಲನಚಿತ್ರವೆಂದರೆ ಮೂಗು ಮುರಿಯುತ್ತಿದ್ದ ಸ್ಥಳೀಯರು ಮುಂದೆ ಬರಲಿಲ್ಲ. ಗುಜರಾತಿಗಳು ಮುಂದಾಗಿ ವಿತರಣ ಸಂಸ್ಥೆಗಳನ್ನು ಪ್ರಾರಂಭಿಸಿದರು. ಕನ್ನಡ ಚಿತ್ರರಂಗ ಅವರಿಗೆ ಋಣಿಯಾಗಿದೆ. ವಿತರಣ ಸಂಸ್ಥೆಗಳನ್ನೇನೋ ಅವರು ಪ್ರಾರಂಭಿಸಿದರು. ಬೇಡಿಕೆ ಇದ್ದಷ್ಟು ಕನ್ನಡ ಚಿತ್ರಗಳು ತಯಾರಾಗುತ್ತಿರಲಿಲ್ಲ. ಈ ಹಂತದಲ್ಲಿ ವ್ಯಾಪಾರದ ಬಗ್ಗೆ ಏನೂ ತಿಳಿಯದವರೂ ನುಗ್ಗಿದರು. ಹಣ ಕಳೆದುಕೊಂಡರು. ಫೈಟಿಂಗ್ ಇದ್ದರೆ ಏಳು-ಎಂಟು ಸಾವಿರ ಕೊಟ್ಟು ಚಿತ್ರಗಳನ್ನು ಕೊಂಡು ತರುವಾಗ ಅವರದೇ ಆದ ಲೆಕ್ಕಾಚಾರವಾಯಿತು. ಅಷ್ಟು ಗಳಿಸಲಾಗದೆ ನಷ್ಟದ ತರುತ್ತಿದ್ದ ಚಿತ್ರಗಳಿಗೆ ಆ ಅಭಾವ ಕಾಲದಲ್ಲಿ ಹದಿನಾಲ್ಕರಿಂದ ಹದಿನೈದು ಸಾವಿರದವರೆಗೆ ಏರಿತ್ತು. ದಾರಿ ಹಿಡಿದವರೆಷ್ಟೋ ಮಂದಿ. ಗತ್ಯಂತರವಿಲ್ಲದೆ ನೆರೆರಾಜ್ಯಗಳಿಂದ ಅನ್ಯಭಾಷಾ ಚಿತ್ರಗಳನ್ನು ತಂದು ವಿತರಿಸಿದರು. ಸಹಜವಾಗಿಯೇ ಪ್ರೇಕ್ಷಕ ಎಲ್ಲ ಭಾಷೆಯ ಚಿತ್ರಗಳನ್ನು ನೋಡಲು ಒಗ್ಗಿಕೊಂಡ. ಇವತ್ತಿಗೂ ಆ ಸಮಸ್ಯೆಯಿಂದ ಹೊರಬರಲಾಗಿಲ್ಲ. ಕನ್ನಡ ಚಿತ್ರಗಳು ತತ್ತರಿಸುತ್ತಿವೆ.

ಭಾಷಾವಾರು ಕರ್ನಾಟಕದಲ್ಲಿ ಪ್ರಾರಂಭವಾದ ಪ್ರತಿಷ್ಠಿತ ವಿತರಣ ಸಂಸ್ಥೆಗಳು, ಕನ್ನಡ ಚಿತ್ರಗಳ ಮಾರುಕಟ್ಟೆ ಕ್ರಮೇಣ ವಿಸ್ತಾರವಾಗುತ್ತ ಬಂದದ್ದು ಗಮನಾರ್ಹ. ಒಂದು ಹಂತದಲ್ಲಿ ಹೊಸ ಅಲೆ ಅಥವಾ ಗುಣಮಟ್ಟದಲ್ಲಿ ಉತ್ತಮವಿದ್ದ ಚಿತ್ರಗಳನ್ನು ವಿತರಣೆಗೆ ತೆಗೆದುಕೊಂಡು ಅತ್ಯಂತ ಜನಪ್ರಿಯ ಚಿತ್ರಗಳನ್ನು ಬೇಡಿದ ಪ್ರದರ್ಶಕರಿಗೆ ಕಡ್ಡಾಯವಾಗಿ ಈ ಬಗೆಯ ಚಿತ್ರ ಪ್ರದರ್ಶಿಸುವ ಒತ್ತಾಯ ತಂದ ವಿತರಕರಿದ್ದರು. ಕ್ರಮೇಣ ವಿತರಕರು ಇಂಥ ಚಿತ್ರಗಳ ಬಗ್ಗೆ ಆಸಕ್ತಿ ಕಳೆದು ಕೊಂಡರೆ, ಕೆಲವು ವಿತರಕರು ಚಿತ್ರನಿರ್ಮಾಣದಲ್ಲಿ ವಿಪರೀತ ಮೂಗು ತೂರಿಸಿ ಸೃಜನಶೀಲ ಕಲೆಯನ್ನು ತಾನು ಕೊಟ್ಟ ಧನ ಸಹಾಯಕ್ಕಾಗಿ - ಮನ ಬಂದಂತೆ ತಿರುಚುವ ಪ್ರಯತ್ನವೂ ಆಯಿತು. ಇವೆಲ್ಲ ಗದ್ದಲದ ನಡುವೆ ಕೆಲವರ ಏಕಸ್ವಾಮ್ಯವಾಗುತ್ತಿದೆ ಅನ್ನಿಸಿ ವಿಕೇಂದ್ರೀಕರಣಕ್ಕೆ ಒತ್ತು ಕೊಟ್ಟು ಜಿಲ್ಲಾವಾರು ವಿತರಣೆ ಪ್ರಾರಂಭಿಸಿದ್ದರ ಪರಿಣಾಮ ಒಮ್ಮೆಲೇ ಕಟ್ಟುಕಿತ್ತ ಮಂದೆಯಂತೆ ವ್ಯವಸ್ಥೆಯಲ್ಲಿ ವಿಚಿತ್ರ ಏರುಪೇರುಗಳಾದವು. ಇಲ್ಲಿ ಇರಬಹುದಾದ ಹಣದ ವಹಿವಾಟಿನ ಅಂದಾಜು ಎಲ್ಲರಿಗೂ ಅರ್ಥವಾಗತೊಡಗಿತು. ಚಿತ್ರ ನಿರ್ಮಾಣ, ವಿತರಣೆ ಯಾವುದೂ ಅಂಕೆ ಇಲ್ಲದೆ ಸೊಕ್ಕಿ ಸೂರೆಯಾಗತೊಡಗಿತು. ಹಾಗೇ ಕೆಲವಾದರೂ ವೃತ್ತಿನಿಷ್ಠೆಯಿಟ್ಟು ಕೆಲಸ

ಮಾಡುತ್ತಿದ್ದ ವಿತರಣ ಸಂಸ್ಥೆಗಳೂ ಕ್ಷೀಣಿಸಿ, ಕಡೆಗೊಮ್ಮೆ ಬಾಗಿಲು ಹಾಕಿಕೊಂಡವು. ಕೆಲವು ನಿರ್ಮಾಣ ಸಂಸ್ಥೆಗಳು ತಮ್ಮದೇ ವಿತರಣೆಯ ವ್ಯವಸ್ಥೆ ಹಾಗೂ ಪ್ರದರ್ಶನಕ್ಕೂ ಚಿತ್ರಮಂದಿರಗಳ ಗುತ್ತಿಗೆ ಇತ್ಯಾದಿ ವ್ಯವಸ್ಥೆಯ ಮೂಲಕ ಕಾರ್ಯ ನಿರ್ವಹಿಸತೊಡಗಿದವು. ಈ ಅಬ್ಬರದಲ್ಲಿ ಏನೂ ತಿಳಿಯದೆ ಹಳ್ಳಕ್ಕೆ ಬಿದ್ದ ಹಲವರು ಅಂಟಿನ ಮೇಲೆ ಕೂತ ನೊಣಗಳಂತಾಗಿ ಪರದಾಡಿದರು. ಈಗೀಗ ಚಿತ್ರರಂಗಕ್ಕೆ ಜಾಗತೀಕರಣದ ಭೀಕರ ರಾಕ್ಷಸನ ಆಕ್ರಮಣವಾಗಿದೆ. ಎಲ್ಲವೂ ಸರಕು. ಮಾರಾಟಕ್ಕೆ ಬೇಕಾದದ್ದನ್ನು ತುಂಬುವುದು, ಕಾರ್ಯ-ಕಾರಣ ಸಂಬಂಧಗಳು ಗೌಣ ಎಂಬಂಥ ಸ್ಥಿತಿ. ಹೀಗಾಗಿ ಚಿತ್ರಗಳು ತಬ್ಬಲಿಗಳೂ - ಪರದೇಶಿಗಳೂ ಆಗಿ ಹೋಗುತ್ತಿವೆ. ಅಷ್ಟು ಶ್ರಮಪಟ್ಟು ನಿರ್ಮಿಸಿದ ಚಿತ್ರದ ಬಗ್ಗೆ ಯಾವ ಸಂಬಂಧವೂ ಇಲ್ಲದ ಇಂಥ ಸ್ಥಿತಿ ಪ್ರಾಯಃ ಬೇರಾವ ಕ್ಷೇತ್ರದಲ್ಲೂ ಇದ್ದಿರಲಾರದು. ಒಂದು ಉದ್ಯಮ ಎಂದಾಗ ಇರಬೇಕಾದ ಯಾವ ಮಿನಿಮಮ್ ಗ್ಯಾರಂಟಿಯೂ ಇಲ್ಲದ್ದರಿಂದ ಸೃಜನಶೀಲತೆ-ವ್ಯವಹಾರ ಕ್ಷಣಕ್ಷಣಕ್ಕೂ ಬದಲಾವಣೆ ಬೇಡುವ ಪ್ರೇಕ್ಷಕನ ಅಭಿರುಚಿಯನ್ನು ಅಂದಾಜು ಮಾಡುತ್ತಲೇ ಕೆಲಸ ಮಾಡುವಂತಾಗಿದೆ. ಬಹು ಬಂಡವಾಳ ತೊಡಗಿಸಿ, ಮನುಷ್ಯ ಪ್ರಯತ್ನಕ್ಕೂ ಮಿಗಿಲಾಗಿ 'ಅದೃಷ್ಟ'ವನ್ನು ನಂಬಿ ಕೂರುವ ಗತ್ಯಂತರವಿಲ್ಲದ ಸ್ಥಿತಿಯೊಂದು ಎದುರಿಗಿದೆ.. ಇಂಥ ತಬ್ಬಲಿತನದಿಂದಾಗಿ ಚಲನಚಿತ್ರದಂಥ ಅಪೂರ್ವ ಮಾಧ್ಯಮ ತನ್ನ ವೈಶಿಷ್ಟ್ಯ ಕಾಪಾಡಿಕೊಂಡು ಪ್ರಬಲ ಸಂವಹನ ಮಾಧ್ಯಮ, ಹೊಸ ಪರಿಭಾಷೆಯಾಗಿ ಬೆಳೆಯುವ ಅವಕಾಶದಿಂದ ವಂಚಿತವಾಗತೊಡಗಿದೆ.

• • •

ಸಾಮಾನ್ಯವಾಗಿ ಸಿನಿಮಾ ಕುರಿತ ಎಲ್ಲ ಚರ್ಚೆಗಳೂ ಸಾಹಿತ್ಯದ ಸುತ್ತ ಪರಿಭ್ರಮಿಸುತ್ತಿರುತ್ತವೆ. ಚಲನಚಿತ್ರ ತಾಂತ್ರಿಕ ಸಾಧ್ಯತೆಗಳ ಮೂಲಕ ಅವರದೇ ಆದ ಭಾಷೆಯನ್ನು ಹೊಂದಿರುವುದರಿಂದ ಅದಕ್ಕಾಗಿಯೇ ಕಥಾವಸ್ತುವನ್ನೂ ಕಟ್ಟಿಕೊಳ್ಳಬೇಕು, ಸಾಹಿತ್ಯ ಕೃತಿಗಳಿಗಾಗಿ ಹಪ ಹಪಿಸಬೇಕಿಲ್ಲ ಎನ್ನುತ್ತದೆ ಒಂದು ವರ್ಗ. ಆದರೆ ಹಾಗೆ ಪ್ರತ್ಯೇಕವಾಗುವ ಅಗತ್ಯವಿಲ್ಲ, ಸಾಹಿತ್ಯವನ್ನೂ ಒಳಗೊಂಡಂತೆ ಎಲ್ಲ ಕಲಾಮಾಧ್ಯಮಗಳೂ ಚಿತ್ರ ನಿರ್ಮಾಣದಲ್ಲಿ ಕೆಲಸಮಾಡುತ್ತಿವೆ. ಸಾಹಿತ್ಯವನ್ನು ಅಥವಾ ವಸ್ತುವನ್ನು ಕೇಂದ್ರವಾಗಿಟ್ಟುಕೊಂಡು ಅದನ್ನು ವಿಸ್ತರಿಸುತ್ತ ಈ ಹೊಸಭಾಷೆಯ ಸಾಧ್ಯತೆಗಳ ಮೂಲಕ ಹೊಸ ಧ್ವನಿಗಳನ್ನು ಕಂಡುಕೊಳ್ಳುತ್ತೇವೆ. ಇದಕ್ಕೆ ಸಾಹಿತ್ಯ ನೆರವಾಗಬೇಕು; ಕಥೆ-ಚಿತ್ರಕಥೆ ರೂಪಿಸಬಲ್ಲ ಒಂದು ವರ್ಗ ರೂಪುಗೊಳ್ಳಬೇಕು ಎನ್ನುವ ಇನ್ನೊಂದು ವರ್ಗವಿದೆ. ವಿಶಿಷ್ಟ ಚಿತ್ರಗಳನ್ನು ತೆರೆಗಿತ್ತ ಪುಟ್ಟಣ್ಣ ಕಣಗಾಲರು ಒಂದು ಸಂದರ್ಭದಲ್ಲಿ ''....ಸುಸಂಸ್ಕೃತರು, ಮಹಾವಿದ್ಯಾವಂತರು ಹೆಚ್ಚುಹೆಚ್ಚಾಗಿ ಉತ್ತಮ ಕನ್ನಡ ಚಿತ್ರಗಳನ್ನು ನೋಡಿ ಒಳ್ಳೆಯ ಕೆಲಸಕ್ಕೆ ಹುರಿದುಂಬಿಸಬೇಕು. ಆಗ ಮಾತ್ರ ಶುದ್ಧ ಚಿತ್ರಗಳ ಸಂಖ್ಯೆ ಹೆಚ್ಚಾಗುವುದು ಸಾಧ್ಯ.... ಕೊನೆಗೆ ನಾವು ಬರೆಸಿದ ಸಂಭಾಷಣೆ, ಗೀತೆಗಳೇ ಉತ್ತಮ ಎಂದು ನಾವು ಭಾವಿಸಿಕೊಂಡು ಜನಕ್ಕೆ ಅದನ್ನೇ ಕೊಡುತ್ತಿದ್ದೇವೆ...'' ಎಂದಿದ್ದಾರೆ.

ಚಿತ್ರರಂಗ ಸಾಹಿತ್ಯ ಕ್ಷೇತ್ರವನ್ನು ಗೌರವದಿಂದಲೇ ಕಂಡಿದೆ. ಚಿತ್ರಮಾಧ್ಯಮದ ಇತಿ-ಮಿತಿಗಳನ್ನು ಅಷ್ಟೇ ಗಂಭೀರವಾಗಿ ಸಾಹಿತ್ಯ ವಲಯ ಪರಿಗಣಿಸಿದೆ ಅನ್ನಿಸುವುದಿಲ್ಲ. ಚಿತ್ರಮಾಧ್ಯಮದ ಸಾಧ್ಯತೆಗಳನ್ನು ಗಮನದಲ್ಲಿಟ್ಟುಕೊಳ್ಳದೆ ಸಾಹಿತ್ಯ ಕೃತಿಯ ಶ್ರೇಷ್ಠತೆಯ ಮಾನದಂಡವನ್ನೇ ಪರಿಗಣಿಸುವುದರಿಂದಾಗಿ ಸಾಹಿತ್ಯ ಕೃತಿಯ ಪ್ರತಿಕೃತಿ ಸಿನಿಮಾ ಆಗದಿದ್ದಾಗ ಮುಜುಗರ ಮಾಡಿಕೊಳ್ಳುತ್ತದೆ; ದೂರ ಸರಿಯತೊಡಗುತ್ತದೆ. ಚಿತ್ರ ಮಾಧ್ಯಮದಲ್ಲಿ ತೊಡಗಿಸುವ ಅಧಿಕ ಬಂಡವಾಳ, ಕೆಲಸ ಮಾಡುವ ರೀತಿ, ಹತ್ತಾರು ಕಲೆಗಳನ್ನು ದುಡಿಸಿಕೊಳ್ಳುವ ಬಗೆ, ತಾಂತ್ರಿಕ ಕಾರಣಗಳಿಗೆ ಒಗ್ಗಿಕೊಳ್ಳಬೇಕಾದ ಅನಿವಾರ್ಯ ಇತ್ಯಾದಿಗಳು ಸಾಹಿತ್ಯ ವಲಯ ಅಪೇಕ್ಷಿಸುವ 'ಏಕಾಂತ'ದಿಂದ ಬೇರೆಯಾದದ್ದು. ನಿರ್ದೇಶಕನೊಬ್ಬ ಏಕಾಂತದಲ್ಲಿ ಎಲ್ಲವನ್ನು ರೂಪಿಸಿಕೊಂಡಿರುತ್ತಾನೆ ಅವನ ಕಲ್ಪನೆಯನ್ನು ಮಾತ್ರ ಇವು ಸಾಕಾರಗೊಳಿಸುತ್ತವೆ ಎಂಬ ಬಗ್ಗೆ ಸಾಹಿತ್ಯ ವಲಯಕ್ಕೆ ಭರವಸೆಯೂ ಇದ್ದಂತಿಲ್ಲ. ಇನ್ನೊಂದು ಸಾಹಿತ್ಯ ವಲಯ ಚಿತ್ರಗಳಿಗಾಗಿ, ಚಿತ್ರಗಳಿಂದಲೇ ಘಟನೆಗಳನ್ನಾಯ್ದು ಸೂತ್ರಬದ್ಧ ಸಾಹಿತ್ಯ ಕೃತಿಗಳನ್ನು ಕೊಟ್ಟಿದ್ದುಂಟು. ಇಂಥ ಕಡೆ ಸಾಹಿತಿ ಮತ್ತು ನಿರ್ದೇಶಕ ಎಂಬ ಎರಡು ಸೃಜನಶೀಲ ಶಕ್ತಿಗಳ ಸಮನ್ವಯ ಆಗಬೇಕು. ಹಾಗೆ ಆಗಿರುವುದು ತುಂಬ ಅಪರೂಪ. ಚಿತ್ರ ನಿರ್ದೇಶಕರೂ ಬಹಳಷ್ಟು ಸಂದರ್ಭಗಳಲ್ಲಿ ಸಾಹಿತ್ಯ ಕೃತಿಯ ಆಶಯ, ಮೌಲ್ಯ ಪ್ರತಿಪಾದನೆಯನ್ನು ಸರಿಯಾಗಿ ಗ್ರಹಿಸದೆ ಯಾವುದೋ ದೃಶ್ಯ ಸಾಧ್ಯತೆಗೆ, ಕಥೆಯಲ್ಲಿ ಸಿಗಬಹುದಾದ ಅನಿರೀಕ್ಷಿತ ತಿರುವುಗಳಿಗೆ ಆಕರ್ಷಿತರಾಗಿದ್ದೂ ಇದೆ. ಇಂಥ ನಿರ್ದೇಶಕರಲ್ಲಿ ಕಥೆಯ ನಿರೂಪಣೆಯೇ ಪ್ರಧಾನವಾಗಿರುತ್ತದೆ; ಮಾಧ್ಯಮದ ಸಾಧ್ಯತೆಗಳಲ್ಲ. ಇದರಿಂದಾಗಿ ಸಾಹಿತ್ಯ ಕೃತಿಯೊಂದು ಬೇಡುವ ಪಾತ್ರ ಪೋಷಣೆ, ಸನ್ನಿವೇಶ ನಿರ್ಮಾಣದಂಥ ಸಂಗತಿಗಳು, ಆ ಮೂಲಕ ಒಂದು ಗಟ್ಟಿಯಾದ ಅನುಭವ ದಕ್ಕಬೇಕೆಂಬ ಅಪೇಕ್ಷೆ ಎಲ್ಲ ಸಂದರ್ಭದಲ್ಲೂ ಸಾಧಿತವಾಗುವುದಿಲ್ಲ.

'ಹೊಸ ಅಲೆ' ಚಿತ್ರನಿರ್ಮಾಣದ ಸಂದರ್ಭದಲ್ಲಿ ಸಾಹಿತ್ಯ-ಸಾಹಿತಿಗಳು ಆಸಕ್ತಿ ವಹಿಸಿದರು. ಆದರೆ ಸಾಹಿತ್ಯ ಕ್ಷೇತ್ರದ ನಿರೀಕ್ಷೆಗೆ ಎಲ್ಲ ಚಿತ್ರಗಳೂ ಬರಲಿಲ್ಲ. ಹಾಗೆಯೇ ಕೆಲವೊಮ್ಮೆ ಸಾಹಿತ್ಯವನ್ನು ಮೀರಿದ ಸಿನಿಮಾ ಆದದ್ದೂ ಉಂಟು. ಸಾಹಿತ್ಯವಲಯ ಈ ಉಲ್ಲಂಘನೆಯನ್ನೂ ಒಪ್ಪಿಕೊಳ್ಳಲಿಲ್ಲ. ಎಲ್ಲ ಅಭಿಪ್ರಾಯಗಳ ಪರ-ವಿರೋಧದ ನಡುವೆಯೂ ಸಾಹಿತ್ಯ-ಸಿನಿಮಾ ಪರಸ್ಪರ ಅವಲಂಬಿತ-ಆಕರ್ಷಿತ ಎನ್ನುವುದು ಮುಖ್ಯ. ಬೇರೆ ಬೇರೆ ಘಟ್ಟಗಳಲ್ಲಿ ಏರ್ಪಟ್ಟ ಸಾಹಿತ್ಯ ಚಳವಳಿಯ ಪ್ರಭಾವ ಚಲನಚಿತ್ರದ ಮೇಲೆ ಬಹಳಷ್ಟಿವೆ. ಆರಂಭದ ದಿನಗಳಲ್ಲಿ ಹೆಸರಾದ ಸಾಹಿತಿಗಳು ಚಲನಚಿತ್ರ ಸಾಹಿತ್ಯ ರಚನೆಯಲ್ಲಿ ತೊಡಗಿಸಿಕೊಂಡರಾದರೂ ನಂತರದಲ್ಲಿ ಭ್ರಮ ನಿರಸನರಾದಂತೆ ಜಾರಿಕೊಂಡುದೂ ಉಂಟು.

ಈ ದಿಕ್ಕಿನಲ್ಲಿ ಗಮನ ಹರಿಸಿದಾಗ ಸಾಹಿತ್ಯ ಗ್ರಾಂಥಿಕತೆ ಕಳೆದುಕೊಂಡು ಆಡುಮಾತಿಗೆ ಬಂದದ್ದು, ಸರಳ ನಿರೂಪಣೆಯಾದಾಗಲೂ ಉತ್ತಮ ಅನಿಸುವಂತೆ ಸಾಹಿತ್ಯ ಕೃತಿಗಳು ತೆರೆಗೆ ಮಾರ್ಪಾಟಾದದ್ದು, ಗೀತ ಸಾಹಿತ್ಯದಲ್ಲಿ ಆದಂಥ ಬದಲಾವಣೆಗಳು ಮೊದಲಾದವು ಸಾಹಿತ್ಯದ ವಿಷಯದಲ್ಲಿ ಚಲನಚಿತ್ರ ಮಾಧ್ಯಮವನ್ನು ತಳ್ಳಿ ಹಾಕುವಂತಿಲ್ಲ ಎಂದು ಹೇಳುತ್ತಿವೆ. ಇದೇ ಹೊತ್ತಿನಲ್ಲಿ ಸಂಭಾಷಣೆಯಲ್ಲಿ, ಪರಿಸರ ನಿರ್ಮಾಣದಲ್ಲಿ ದೇಸೀಯ ಅಂಶಗಳು ಹೆಚ್ಚುಹೆಚ್ಚಾಗಿ ಪ್ರವೇಶಿಸಿವೆ. ಗಾದೆಗಳು, ನುಡಿಗಟ್ಟುಗಳು ಸಂಭಾಷಣೆ, ಗೀತೆಗಳಲ್ಲಿ ಧಾರಾಳವಾಗಿ ಮೂಡಿಬಂದಿವೆ. 'ಸಂಸ್ಕಾರ' - 'ಕಾಡು' ಚಿತ್ರಗಳಲ್ಲಿ ಬಳಕೆಯಾದ ಕೆಲವು ಪದಗಳ ಬಗ್ಗೆ ಆಕ್ಷೇಪಗಳಿದ್ದವು. ಗ್ರಾಮೀಣ ಪರಿಸರದ ಆಡುಮಾತಿನ ಬಳಕೆ, ಸಹಜತೆಗಾಗಿ ಅಗತ್ಯ ಎಂಬ ಸಮರ್ಥನೆ ಕೊಡಲಾಗಿತ್ತು. ಆದರೆ ಇಂಥ ಪುಟ್ಟದೊಂದು ಒಳದಾರಿ ಸಿಕ್ಕಿದ್ದು ಮುಂದಿನ ಹೆದ್ದಾರಿಗೆ ನೆರವಾಯಿತೇನೋ ಎಂಬಂತೆ ಈಗ ಯಾವ ಎಗ್ಗಿಲ್ಲದೆ ಕಟ್ಟೂ ಇಲ್ಲದೆ ಭಾಷಾ ಪ್ರಯೋಗ ಆಗುತ್ತಿದೆ. ಸಂಭಾಷಣೆ ಹೇಳುವ ಕಲಾವಿದ ಆ ಪಾತ್ರದ ಸ್ಥಾನ ಅರಿತು ಮಾತನಾಡುವ ಪ್ರಮೇಯವೂ ಇಲ್ಲದೆ ಪದ ಪ್ರಯೋಗಗಳು, ಉಚ್ಚಾರಣೆ ಸಾಗುತ್ತಿದೆ. ಇವನ್ನೆಲ್ಲ ಪ್ರೇಕ್ಷಕ ಉದಾರವಾಗಿ ಸಹಿಸಿ, ಸ್ವೀಕರಿಸಿದ್ದಾನೆ. ಆದರೆ ಈ ಸ್ವೀಕಾರ ಗುಣವನ್ನು ಚಿತ್ರ ಮಾಧ್ಯಮ ಸರಿಯಾಗಿ ಬಳಸಿಕೊಳ್ಳಲಿಲ್ಲ ಎಂಬುದು ವ್ಯಥೆಯ ಸಂಗತಿ.

ಇವೆಲ್ಲವರಿಂದಾಗಿ ಸಿನಿಮಾ ಜನರ ಅಭಿರುಚಿಯನ್ನು ಹಾಳುಮಾಡುವಲ್ಲಿ ಅಥವಾ ತನ್ನ ಒಳಗಿನ ಆಸಕ್ತಿ ಏನೆಂದು ಪ್ರೇಕ್ಷಕ ತಿಳಿಯಕೊಳ್ಳುವುದಕ್ಕೂ ವ್ಯವಧಾನ ಕೊಡದೆ ಎತ್ತಲೋ ಸೆಳೆದು ಭ್ರಮಾ ಲೋಕದ ಕಡೆಗೆ, ಹಸಿ-ಹಸಿ ಭಾವನೆಗಳತ್ತ ಧಾವಿಸುವಂತೆ ಮಾಡುತ್ತಿದೆ ಎಂಬ ಆಕ್ಷೇಪಗಳಿವೆ. ಆ ಮಾತೂ ಹುರುಳಿಲ್ಲದ್ದೇನಲ್ಲ. ಉತ್ತಮ ಸಾಹಿತ್ಯ ಕೃತಿಗಳು ತೆಕ್ಕೆಗೆ ಬಾರದಾಗ ಕಲ್ಪಿತ ಕಥೆಗಳು ಅಪಕ್ವ ರೀತಿಯಲ್ಲಿ ರೂಪುಗೊಳ್ಳತೊಡಗಿದ್ದಿವೆ. ಸಮಾಜದಲ್ಲಿ ಏನು ನಡೆದಿದೆಯೋ ಅದೇ ನಮ್ಮ ನಿರೂಪಣೆಗೆ ಪ್ರೇರಣೆ ಎಂಬ ವಾದ ಮುಂದಿಟ್ಟುಕೊಂಡು ಸಮಾಜದಲ್ಲಿ ಯಾವ ಸಂಗತಿಗೆ ಪ್ರಾಧಾನ್ಯ-ವ್ಯಾಪಕ ಚರ್ಚೆ ಇದೆಯೋ ಅದನ್ನು ಜನಪ್ರಿಯ ಚಿತ್ರಗಳು ಎತ್ತಿಕೊಂಡುಬಿಡುತ್ತವೆ. ಆ ಮಟ್ಟಿಗೆ ಅದು ತತ್ಕಾಲೀನ ಸಮಾಜವನ್ನು ಬಿಂಬಿಸುತ್ತಿರುತ್ತದೆ. ಆದರೆ ಅಂಥ ವಸ್ತುವನ್ನು ಸಕಾರಾತ್ಮಕ-ನಕಾರಾತ್ಮಕಗೊಳಿಸುವಲ್ಲಿ ಪ್ರೇಕ್ಷಕನ ಬಗ್ಗೆ ಸ್ವೇಚ್ಛೆಯ ತೀರ್ಮಾನ ತೆಗೆದುಕೊಳ್ಳುತ್ತಾರೆ. ಅದ್ದರಿಂದಾಗಿ ಅನೇಕ ಸಂಗತಿಗಳು ತತ್ಕಾಲೀನವೇ ಆಗಿದ್ದರೂ ಅವರ ಕಾರ್ಯ-ಕಾರಣ ಸಂಬಂಧಗಳ ವಿಶ್ಲೇಷಣೆ ತೀರ್ಮಾನಗಳಿಲ್ಲದೇ ವಿಡಂಬನಾತ್ಮಕ, ವ್ಯಂಗ್ಯ, ಹಾಸ್ಯಗಳ ನೆಲೆಯಲ್ಲಿ ನಿಂತುಬಿಡಬಹುದು. ಉದಾಹರಣೆಗೆ ವೈಚಾರಿಕತೆ, ಸ್ತ್ರೀ ಸಮಾನತೆ, ಜಾತಿ ಪದ್ಧತಿ, ಕಾರ್ಮಿಕ ಸಮಸ್ಯೆಗಳು, ಸಾಕ್ಷರತಾ ಆಂದೋಲನ, ಚುನಾವಣೆ ಹೀಗೆ ಸಾಲುಸಾಲಾಗಿ ಪಟ್ಟಿ ಮಾಡಬಹುದು. ಯಾವ ಸಂಗತಿಗಳನ್ನು ಗಂಭೀರವಾಗಿ ಯೋಚಿಸುವಂತೆ ಹೇಳಬೇಕೋ ಅವೆಲ್ಲವೂ ಜನಪ್ರಿಯ ಸಿನಿಮಾದಲ್ಲಿ ತಮಾಷೆಯ ಸಂಗತಿಗಳಾಗಿ ತೇಲಿ ಹೋಗುತ್ತಿವೆ.

ಸಿನಿಮಾ ಯಾವ ಪೂರ್ವಸಿದ್ಧತೆಯೂ ಇಲ್ಲದೆ ನುಗ್ಗಿ ಬಂದ ತಂತ್ರಜ್ಞಾನ. ಅದರ ಜೊತೆಗೆ ಹೊಂದಿಸಿಕೊಳ್ಳುತ್ತಲೇ ಬೆಳೆಯಬೇಕಾದ ಇತರ ಕಲಾ ಮಾಧ್ಯಮಗಳು ತಂತ್ರವೇ ಪ್ರಧಾನವಾಗುವ ಅಪಾಯದಿಂದ ತಪ್ಪಿಸಿಕೊಂಡು ಅಸ್ತಿತ್ವ ಉಳಿಸಿಕೊಳ್ಳಲು ನೆರವಾದದ್ದು ಸಾಹಿತ್ಯ ಮತ್ತು ಚಿತ್ರಸಾಹಿತ್ಯಕ್ಕೇ ಒಪ್ಪಿಸಿಕೊಂಡ ಮಹನೀಯರ ಅನವರತ ಪರಿಶ್ರಮ. ಚಿತ್ರಮಾಧ್ಯಮ ತನ್ನೆಲ್ಲ ಅಸಹಜ, ಸ್ವಚ್ಛಂದ ಗುಣಗಳ ನಡುವೆಯೂ ಮತ್ತೆ ಮತ್ತೆ ಮಣ್ಣಿನ ವಾಸನೆಗೆ ಮರಳುತ್ತಿದ್ದರೆ ಅದು ಕನ್ನಡ ಜನಪದ ಸಾಹಿತ್ಯ-ಕಲೆಗಳ ಆಕರ್ಷಣೆಯಿಂದಲೇ. ಮಾಧ್ಯಮದಲ್ಲಿ ಗಂಭೀರವಾದ ಕಾಳಜಿಯುಳ್ಳ ಹೊಸ ಪೀಳಿಗೆಯೊಂದು ಮುಂಚೂಣಿಗೆ ಬರುತ್ತಿದೆ. ಒಂದು ಸಿದ್ಧಸೂತ್ರವೇ ಸತ್ಯವೆಂದುಕೊಂಡ ಸ್ಥಿತಿಯಿಂದಾಚೆಗೆ ಹೊಸ ವ್ಯಾಕರಣವನ್ನು ಕಟ್ಟುವ ಕೆಲಸವೂ ಸಮಸಮನಾಗಿ ನಡೆಯುತ್ತಿದೆ. ಇದೊಂದು ಶುಭ ಸೂಚನೆ. ಪ್ರಾದೇಶಿಕ ವೈಶಿಷ್ಟ್ಯಗಳೇ ಬೇಡವೆನ್ನುವ ಕಾಲ ಬಂದಿತ್ತು. ಜಾಗತೀಕರಣ ಸಾಂಸ್ಕೃತಿಕ ಏಕಾಂಶವನ್ನು ಬೇಡುತ್ತಿದೆ. ಸಾಹಿತ್ಯ ಕೃತಿಯನ್ನು ಧರಿಸಿದಾಗಲೇ ಮಾಧ್ಯಮಕ್ಕೆ ಮಾನ್ಯತೆ ಎನ್ನುವುದಕ್ಕಿಂತ ಪ್ರೇಕ್ಷಕನ ಮನಸ್ಸನ್ನು ಅರಳಿಸುವ ಒಳ್ಳೆಯ ಕಥೆ, ಹೇಳುವುದರಲ್ಲಿ ಹೊಸ ರೀತಿ ಮುಖ್ಯ. ಆದರೆ ತಾಂತ್ರಿಕ ಸೌಲಭ್ಯಕ್ಕಾಗಿಯೇ ಹುಟ್ಟುವ ವಸ್ತು ಬಹುಕಾಲ ಆಕರ್ಷಣೆ ಉಳಿಸಿಕೊಳ್ಳಲಾರದು ಎಂಬ ಬಗ್ಗೆ ಎಚ್ಚರಿಕೆ ಬೇಕಾಗುತ್ತದೆ. ಈಚೆಗೆ ಗ್ರಾಫಿಕ್ಸ್ ಸಲುವಾಗಿ ಆಯ್ದುಕೊಳ್ಳುತ್ತಿರುವ ಕತೆಗಳು ಸಮಾಜಕ್ಕೆ ಏನನ್ನೂ ಕೊಡುತ್ತಿಲ್ಲ. ಕ್ಷಣದ ಸಂತಸ ಸ್ಥಿರವಲ್ಲ ಎಂಬುದನ್ನು ಅವುಗಳೇ ಪುನರಾವೃತ್ತವಾದಾಗಿನ ಸೋಲುಗಳು ಹೇಳುತ್ತಿವೆ. ಫಸಲಿನ ಜೊತೆಗೆ ಕಳೆಯೂ ಇರುತ್ತದೆ. ಇವೆಲ್ಲದರ ಬಗ್ಗೆ ಬೇಕು-ಬೇಡದ ಮೊದಲು ಅದೊಂದು ಉದ್ಯಮ, ಜನರ ತುತ್ತಿನ ಚೀಲ ತುಂಬುತ್ತದೆ ಎಂಬುದಕ್ಕಾಗಿ ಕೆಲಸಗಳು ನಡೆಯುತ್ತಿರಲಿ, ಅದೇ ಎಲ್ಲವೂ ಆಗದೆ ಒಳ್ಳೆಯ ಫಸಲಿಗೂ ಎಡೆಮಾಡಲಿ.

• • •

ಭಾರತೀಯ ಚಿತ್ರರಂಗದ ಬಹುದೊಡ್ಡ ಕೊಡುಗೆ ಸಂಗೀತ-ಗೀತ ಸಂಗೀತ. ಕನ್ನಡ ಚಿತ್ರಗಳ ಸಂದರ್ಭದಲ್ಲಿಯಂತೂ ಸಂಗೀತ ಮಾಧುರ್ಯವನ್ನೂ, ಗೀತ ರಚನೆಯಲ್ಲಿ ಕಾವ್ಯಗುಣವನ್ನೂ ಕಾಪಾಡಿಕೊಂಡು ಬಂದಿದೆ. ಎಂದೆಂದೂ ನೆನಪಿನಿಂದ ಮಾಸಿ ಹೋಗಲಾಗದ ಸಾವಿರಾರು ಗೀತೆಗಳ ಶ್ರೀಮಂತಿಕೆ ಕನ್ನಡ ಚಿತ್ರರಂಗದ್ದು. ಕನ್ನಡದ ಜಾಯಮಾನವಾದ ಸರಳತೆ, ಕನ್ನಡ ಪದಗಳಿಗೇ ಇರುವ ಲಾಲಿತ್ಯ ಅತ್ಯುತ್ತಮ ಗೀತ ರಚನೆಗೆ ಕಾರಣವಾಗಿದ್ದರೆ, ಪ್ರಾರಂಭದ ದಿನಗಳಲ್ಲಿ ಅನುಕರಣೆಯಾಗಿದ್ದ ರಾಗ ಸಂಯೋಜನೆ ಕ್ರಮೇಣ ಸ್ವಂತಿಕೆಯನ್ನು ಪಡೆದುಕೊಂಡಿತು. ಇದಕ್ಕಾಗಿ ಬದುಕೆಲ್ಲ ತನ್ನನ್ನೇ ತೇದುಕೊಂಡ ಮಹನೀಯರಿದ್ದಾರೆ. ಕನ್ನಡ ಕವಿತೆಗೆ ರಾಗ ಸಂಯೋಜನೆ ಎಂದರೆ ಆ ಕೋಮಲ ಭಾವಗಳಿಗೆ ಮಾರು ಹೋಗಿ ಮೈಮರೆಯುವುದು ಎಂದು ಭಾವಿಸಿದವರಿದ್ದರು. ಅದು ಗೀತರಚನೆ-ಗಾಯನಗಳಿಗೂ ಅನ್ವಯವಾಗುವ ಸಂಗತಿ.

ಬದಲಾವಣೆಯ ಭರಾಟೆ ಕಥಾ ನಿರೂಪಣೆಯಲ್ಲಿ ವಿಚಿತ್ರ ವೇಗವನ್ನು ತಂದಿಟ್ಟಿತು. ಈ ವೇಗ ಬೇಡುವ ಸಂಗೀತವೂ ಅನಿವಾರ್ಯವಾಯಿತು. ಮಾಧುರ್ಯವನ್ನು ಮೀರಿ ತಾಳ-ಲಯಗಳು ನರ್ತಿಸತೊಡಗಿದವು. ಒಂದೊಂದು ರಾಗವೂ ಕುಣಿಸುವಂತಿರಬೇಕೆಂಬ ಸಡಗರದಲ್ಲಿ ಪದಲಾಲಿತ್ಯ ಕಣ್ಮರೆಯಾಯಿತು. ಕಾವ್ಯಮಯತೆಗೇ ಆದ್ಯತೆ ಎಂದುಕೊಂಡ ಕವಿಗಳು ಹಿನ್ನೆಲೆಗೆ ಸರಿದು ಅವಸರದ ಆಟಿಗೆಗೆ ಸಂಗೀತ ನಿರ್ದೇಶಕನೇ ಗೀತ ರಚನಕಾರನೂ ಆಗುವ ಅನಿವಾರ್ಯಗಳು ಎದುರಾದವು. ಎಲ್ಲವನ್ನು ಸರಕು-ವ್ಯಾಪಾರ ಮಾಡತೊಡಗಿದಾಗ ಅದಕ್ಕೆ ಸ್ಪಂದಿಸಿದ ಕೆಲವರ ಮುಷ್ಟಿಯಲ್ಲಿ ಈ ಕ್ಷೇತ್ರ ಅಡಗಿಕೊಳ್ಳಲಾರಂಭಿಸಿತು. ಸಾಹಿತ್ಯದ ಸಾಲುಗಳು, ಉಪಮೆಗಳು, ನುಡಿಗಟ್ಟುಗಳು, ಕನ್ನಡತನ ಕೂಡಾ ಸಿಗುವುದು ಕಷ್ಟವೆನಿಸುವಂಥ ಸ್ಥಿತಿ.

ಹಿರಿಯ ಸಾಧಕರ ಹೆಜ್ಜೆ ಗುರುತನ್ನು ಮುರಿದು ನುಗ್ಗಿದ ಹಂಸಲೇಖಾ ಅಂಥವರು ಲಗ್ಗೆ ಇಟ್ಟರು. ಅವರ ಮಟ್ಟಿಗೆ ಮೊದಲ ಬಳಕೆದಾರ ನಿರ್ಮಾಪಕನಾಗಿದ. ಆವನ ಅಭಿರುಚಿ ಮತ್ತು ಪ್ರೇಕ್ಷಕನ ಅಭಿರುಚಿಯ ಬಗ್ಗೆ ಆತ ತಳೆದ ಧೋರಣೆಯಿಂದಾಗಿ ರಾಜಿಯಾಗುವ ಅನಿವಾರ್ಯ ಎದುರಾಯಿತು. ಆದರೂ ಅವಕಾಶ ದೊರೆತಾಗಲೆಲ್ಲ ಒಳ್ಳೆಯದನ್ನು ಕೊಟ್ಟಿದ್ದಾರೆ. ಅವರ ಮೂಲಕವೇ ರಂಗಕ್ಕಿಳಿದ ಹಲವರು ಪ್ರತಿಭಾವಂತರು ಗಮನ ಸೆಳೆಯುವಂಥ ಕೆಲಸ ಮಾಡಿದ್ದಾರೆ - ಏಕತಾನತೆಯನ್ನು ಮುರಿದು ಉತ್ತಮ ಬೆಳೆಸನ್ನು ತರುವ ಸಾಧ್ಯತೆಯಲ್ಲಿ ಬೆಳಕು ಚೆಲ್ಲಿದ್ದಾರೆಂಬುದನ್ನು ಮರೆಯುವಂತಿಲ್ಲ. ಸನ್ನಿವೇಶಕ್ಕೆ ಗೀತೆ, ಒಳ್ಳೆಯ ಕವಿಗೀತೆಯ ದಿನಗಳು ಮರೆಯಾದವು. ನಾಯಕ ನಟನ ವರ್ಚಸ್ಸಿಗೆ ಹೊಂದಿಸಲು ಸಂಗೀತ ಮಣೆಯ ತೊಡಗಿತು. ಕನ್ನಡ ಶಬ್ದ ಭಂಡಾರವೆಲ್ಲ ಗುಣವಾಚಕವಾಗುತ್ತ ನಾಯಕನಟರಿಗೆ ಪರಾಕು ಹೇಳತೊಡಗಿತು. ಅದರ ಜೊತೆಗೇ ವ್ಯಾಪಾರೀಕರಣ, ಅತೃಪ್ತ ಮನಸ್ಸುಗಳನ್ನು ತಲುಪುವ ಸಡಗರದಲ್ಲಿ ಸಭ್ಯತೆಯ ಎಲ್ಲೆ ದಾಟಿದ ಪದಪ್ರಯೋಗಗಳೂ ಆಗತೊಡಗಿದವು. ಪ್ರೇಕ್ಷಕ ಹೀಗೆ ಎಲ್ಲವನ್ನು ಒಪ್ಪಿಕೊಳ್ಳುವ ಔದಾರ್ಯ ತೋರುತ್ತಲೇ ಬಂದುದರಿಂದ ಅವನ ಮೇಲೆ ಪದೇ ಪದೇ ಕನ್ನಡ ಭಾಷೆ, ಕಲೆಯ ಅಭಿಮಾನ-ನಿರಭಿಮಾನಗಳ ಬಗ್ಗೆ ಹೇಳುತ್ತ ಭಾವನಾತ್ಮಕವಾಗಿ ಆಕ್ರಮಿಸಿದ್ದೂ ಒಂದು ವ್ಯಾಪಾರಿ ಮನೋಧರ್ಮವೇ ಆಗಿತ್ತು.

ಗಾಯನ ಕ್ಷೇತ್ರದಲ್ಲಿ ಹೊಸ ಪ್ರತಿಭೆಗಳು ಕಾಣುತ್ತಿವೆ. ಈಗ ನೆರೆಯವರ ನೆರವು ಬೇಕಿಲ್ಲ. ಆದರೂ ಕೆಲವು ಹಿತಾಸಕ್ತಿಗಳು ವ್ಯವಹಾರಕ್ಕೆ ಜನಪ್ರಿಯತೆ ಬೇಕು, ಅನುಭವಿಗಳಾದರೆ ಕೆಲಸ ಶೀಘ್ರವಾಗಿ ಆಗುತ್ತದೆ ಎಂಬೆಲ್ಲ ಕಾರಣ ಮುಂದಿಟ್ಟು ಎಲ್ಲೆಲ್ಲಿಂದಲೋ ಕರೆತರುವುದುಂಟು. ಆದಾವ ಕಂಠವೂ ಇನ್ನೂ ಕನ್ನಡಿಗನ ಮನಸ್ಸನ್ನು ಸಮೀಪಿಸಿಲ್ಲ. ನಮ್ಮ ಯುವಗಾಯಕರೇ ಹೃದಯವನ್ನು ಸಮೀಪಿಸುತ್ತಿದ್ದಾರೆ.

ಬೀದಿಗೊಂದರಂತೆ ರಿಕಾರ್ಡಿಂಗ್ ಸ್ಟುಡಿಯೋಗಳು ಬರುತ್ತಿವೆ. ಇವರೆಲ್ಲರಿಗೂ ಸದ್ಯಕ್ಕಂತೂ ಕೆಲಸ ಇದೆ. ಹೊಸ ತಂತ್ರಜ್ಞಾನ ಅಳವಡಿಸುವ ಚೈತನ್ಯವಿಲ್ಲದೆ ಹಳೆಯ ಸ್ಟುಡಿಯೋಗಳು, ಕೆಲಸಗಾರರು ಬರಿಗೈಯಾಗುತ್ತಿದ್ದಾರೆ. ಕನ್ನಡ ಚಿತ್ರ ಸಂಗೀತ ಕ್ಷೇತ್ರದ ನಾಳೆಗಳು ತುಂಬಾ ಉಜ್ವಲವಾಗಿವೆ ಅನ್ನಿಸುತ್ತಿಲ್ಲ. ಎಲ್ಲಿಯವರೆಗೆ ಇಲ್ಲಿಯ ಪ್ರವೇಶಕ್ಕಾಗಿ ಕನಿಷ್ಠ ಪ್ರಮಾಣದ ಕಲಿಕೆ, ಅನುಭವ, ಸ್ವಂತಿಕೆ ಕಡ್ಡಾಯ ಆಗುವುದಿಲ್ಲವೋ ಅಲ್ಲಿಯವರೆಗೆ ಕ್ಸೆರಾಕ್ಸ್ ಸಂಗೀತವೇ ಇರುತ್ತದೆ.

• • •

'ಕನ್ನಡ ಚಿತ್ರ ಸಂಗೀತ ಮಾಧುರ್ಯಕ್ಕೇ ಒತ್ತು ಕೊಡುತ್ತದೆ. ನೃತ್ಯ ಬೇಡುವಷ್ಟು ಲಯ ಪ್ರಧಾನವಲ್ಲ' ಎಂಬುದು ನೃತ್ಯ ನಿರ್ದೇಶಕರು ಯಾವಾಗಲೂ ಹೇಳುವ ಮಾತು. ಹೆಚ್ಚಿನಂಶ ಶಾಸ್ತ್ರೀಯ ನೃತ್ಯವೇ ಇರುತ್ತಿತ್ತು, ಅದೂ ಸನ್ನಿವೇಶಕ್ಕೆ ಹೊಂದಿಕೊಂಡಂತೆ. ಇಲ್ಲಿಯೂ ಕ್ರಮೇಣ ಬದಲಾವಣೆಯ ಗಾಳಿ ಬೀಸಿತು. ನೃತ್ಯದ ಜೊತೆಗೆ ಕ್ಯಾಬರೆ ಸೇರಿತು. ಅಂಥದೇ ಮಾದಕ ಗೀತೆ-ಸಂಗೀತ ಅಳವಡಿತವಾಯಿತು. ಕ್ರಮೇಣ ಎಲ್ಲವನ್ನೂ ಚಿತ್ರದ ನಾಯಕ-ನಾಯಕಿಯರೇ ನಿರ್ವಹಿಸತೊಡಗಿದರು. ತತ್ಫಲವಾಗಿ ಪರಿಣಿತ ನರ್ತಕಿಯರು, ಕ್ಯಾಬರಿಯರು ಮರೆಯಾದರು.

ಕಥೆ-ಪಾತ್ರ ಸ್ವಭಾವದ ಆಚೆಗೆ ನೃತ್ಯವನ್ನು ಪ್ರತ್ಯೇಕವಾಗೇ ಇಟ್ಟು 'ಆಸ್ವಾದಿಸುವ' ಹಂತ ತಲುಪಿಯಾಗಿದೆ. ಇಂಥ ಸನ್ನಿವೇಶಗಳಿಗೆ ಕನಸು-ಕಲ್ಪನೆ ಎಂಬ ತರ್ಕವಾದರೂ ಒಂದು ಕಾಲಕ್ಕೆ ಇತ್ತು. ಈಗ ಅಂಥ ಎಲ್ಲ ಕಟ್ಟುಗಳನ್ನೂ ಕಿತ್ತುಕೊಂಡು ವಿಜೃಂಭಿಸಿದೆ ಕೊರಿಯಾಗ್ರಫಿ. ಕೊರಿಯಾಗ್ರಫಿಯನ್ನು ಅನುಕೂಲಕ್ಕಾಗಿ ಸಂಯೋಜನೆ ಎಂದು ಹೇಳಬಹುದಾದರೆ ಅದೂ ಒಂದು ಕಲೆ. ಅದಕ್ಕೊಂದು ಶಾಸ್ತ್ರವಿದೆ. ಆದರೆ ಅಂಥ ಚೌಕಟ್ಟಿನೊಳಗೆ ಸಿನಿಮಾದ ಕೊರಿಯಾಗ್ರಫಿಯೂ ಇದೆ ಅನ್ನಿಸುವುದಿಲ್ಲ. ಪಾಶ್ಚಾತ್ಯರ ಟ್ವಿಸ್ಟ್, ಬ್ಯಾಲೆ ಇತ್ಯಾದಿಗಳು ಆ ದೇಶದ ಜಾನಪದೀಯ ಕಲೆಗಳು. ನಾವು ಆ ಶುದ್ಧ ಕಲೆಯನ್ನು ಅಳವಡಿಸಿಕೊಂಡದ್ದು ಕಡಿಮೆ. ಸಮವಸ್ತ್ರ ತೊಟ್ಟವರ ಸರ್ಕಸ್ ಆಗುತ್ತ ನಡೆದದ್ದು, ನೃತ್ಯ ಬಾರದ ಮುಖ್ಯ ಕಲಾವಿದರಿಗಾಗಿ ಭಂಗಿಗಳನ್ನು ತುಂಡರಿಸಿ ಜೋಡಿಸುವುದು ಹೆಚ್ಚಾಯಿತು. ಹೀಗಾಗಿ ಈಗಿನ ನೃತ್ಯ ನಿರ್ದೇಶಕರಿಗೆ ಅನೇಕ ಹೊಂದಾಣಿಕೆಗಳ ಅನಿವಾರ್ಯವಿದೆ. ಕಲಾವಿದರ ಮಿತಿ ಅರ್ಥಮಾಡಿಕೊಂಡು ಅವರ ನೃತ್ಯಕ್ಕಿಂತ ಆವರಣವೇ ಪ್ರಧಾನವಾಗುವ ಹಾಗೆ ನೋಡಿಕೊಳ್ಳುವುದು ಮತ್ತು ಇಂಥ ಕೊರತೆಗಳು ಕಾಣದ ಹಾಗೆ ಕೋನಗಳು, ಬೆಳಕು ವಿನ್ಯಾಸ, ಸಂಕಲನದ ಶೈಲಿಯನ್ನು ಸಹ ಅವರೇ ನಿರ್ಧರಿಸುವಂತಾಗಿದೆ. ಮತ್ತು ಮುಖ್ಯ ಪಾತ್ರಧಾರಿಯನ್ನು ವೈಭವೀಕರಿಸುವುದೇ ಪ್ರಧಾನ ಗುಣವಾಗಿ ಕಲೆ ಕರಗಿ ಹೋಗುತ್ತಿದೆ. ಇದಕ್ಕಾಗಿ ಸಿದ್ಧವಾಗುವ ಸಂಗೀತ ಮಾಧುರ್ಯವನ್ನು ದೇಸೀಯತೆಯನ್ನು ಬಿಟ್ಟುಕೊಡುತ್ತಿದೆ.

• • •

ಚಿತ್ರ ಮಾಧ್ಯಮದ ಬಹುಮುಖ್ಯ ಅಂಗ ಅಭಿನಯ. ಅದರದೇ ಆದ ಪರಂಪರೆ, ಶೈಲಿ, ಇತಿಹಾಸ ಇರುವಂಥದ್ದು. ಅನೂಚಾನವಾಗಿ ಕೆಲವು ಪಾತ್ರಗಳಿಗೆ ಸಿದ್ಧ 'ಮಾದರಿ'ಗಳೂ ಇವೆ. ಇತರ ಅಂಗಗಳು ಅಭಿನಯವನ್ನು ಪೋಷಿಸಲು ನೆರವಾಗುತ್ತವೆ. ಧ್ವನಿ ಮುದ್ರಣ ತಂತ್ರ ಬಂದ ಮೇಲೆ ತುಟಿ ಚಲನೆಯ ಅನುಕೂಲಕ್ಕಾಗಿ ಆಂಗಿಕ ಚಲನೆಯಲ್ಲೂ ಒಂದು ಲೆಕ್ಕಾಚಾರ, ಮಾತುಗಳನ್ನು ತುಂಡರಿಸುವುದು ಪ್ರಾರಂಭವಾಗಿ ಕೆಲವೊಮ್ಮೆ ಭಾವರಾಹಿತ್ಯ - ಕೃತಕ ಆಗುತ್ತದೆಯಾದರೂ ಅದಕ್ಕೆ ಒಗ್ಗಿಕೊಂಡಾಗಿದೆ. ಚಿತ್ರದ ಯಶಸ್ಸು ಪ್ರಧಾನ ಪಾತ್ರಧಾರಿ, ಮುಖ್ಯವಾಗಿ ನಾಯಕ ನಟನನ್ನು ಅವಲಂಬಿಸಿದೆ. ಜನಪ್ರಿಯತೆಗಾಗಿ ಧೀರೋದ್ಧಾತ, ಗುಣವಂತ ನಾಯಕನನ್ನು ರೂಪಿಸಲು ಉಳಿದೆಲ್ಲಾ ಅಂಗಗಳೂ ದುಡಿಯುವಂತಾಗಿದೆ. ಜನರನ್ನು ಒಲಿಸಲು ನಾಯಕ ಪಾತ್ರಗಳಿಗೆ ಗೀತೆ - ಮಾತುಗಳಲ್ಲಿ ವಿನಯ-ರೋಷವೇ ಮೊದಲಾದ ಅಂಶಗಳನ್ನು ಸೇರಿಸುವ ಅನಿವಾರ್ಯ ಸ್ಥಿತಿ ಒದಗಿದೆ. ಈ ಕಟ್ಟುಪಾಡುಗಳಲ್ಲಿ ಬಂಧಿತರಾದ ಕಲಾವಿದರು ಬಯಸಿದರೂ ಸ್ವಾತಂತ್ರ್ಯ ಇಲ್ಲವಾಗಿದೆ. ಜನಪ್ರಿಯತೆ ಇರುವವರೆಗೆ ಉಳಿವು ಎಂಬ ಕಾರಣಕ್ಕಾಗಿ ಅಭಿನಯವೂ ಒಳಗಿನ ತುಡಿತವಾಗದೆ, ತೃಪ್ತಿಗಿಂತ ಆತಂಕದಲ್ಲಿ ಸಾಗುವಂತಾಗಿದೆ. ಈ ಒಪ್ಪಿಸುವ ಒತ್ತಡದಿಂದ, ನಾಯಕಪಾತ್ರಗಳನ್ನ ವೈಭವಿಸುವ ಸಂಕಟವನ್ನಲ್ಲದೆ ತಾಂತ್ರಿಕತೆಯ ಅನುಕೂಲ ಬಳಸಬಲ್ಲ ಸಮರ್ಥ ನಿರ್ದೇಶಕರು ಕೆಲವರು ಹೊಸಬರನ್ನು ತಂದರು, ಅವರೇ 'ನಾಯಕ'ರೂ ಆದರು. ತಂತ್ರ ಪ್ರಧಾನ ಮಾಧ್ಯಮದಲ್ಲಿ ಏನೂ ಸಾಧ್ಯ ಎಂದಾಯಿತು. ಜನಪ್ರಿಯತೆ ಇರುವವರೆಗೂ ಮತ್ತು ಯಶಸ್ವಿಯಾದರೆ ಮಾತ್ರ ಉಳಿವು ಆದ್ದರಿಂದ ನಾಯಕ ಪಾತ್ರಧಾರಿಗಳಲ್ಲಿ ಜಿಗುಟುತನವೂ ಪ್ರವೇಶಿಸಿತು. ಇವೆಲ್ಲದರನಡುವೆ ಸ್ತ್ರೀಪಾತ್ರಗಳು ಕರಗಿಹೋದವು. ಮೊದಲಿನಿಂದಲೂ ತ್ಯಾಗ - ಕಣ್ಣೀರುಗಳ ಪ್ರತಿನಿಧಿಗಳಾಗಿದ್ದ ಸ್ತ್ರೀ ಪಾತ್ರಗಳಿಗೆ ಸ್ತ್ರೀ ಪ್ರಧಾನ ವಸ್ತುವಾದಾಗಲೂ ಅದಕ್ಕಿಂತ ಭಿನ್ನ ಪಾತ್ರಗಳೇನೂ ಇರಲಿಲ್ಲ. ಒಂದೇ ಅಚ್ಚಿನಲ್ಲಿ ತೆಗೆದ ಮಾದರಿಗಳಾದವು. ಕ್ರಮೇಣ ತ್ಯಾಗ, ಕಷ್ಟಸಹಿಷ್ಣುತೆ ಮೊದಲಾದವನ್ನೂ ನಾಯಕ ನಟರೇ ನಿರ್ವಹಿಸತೊಡಗಿದ್ದರಿಂದ ಸ್ತ್ರೀ ಪಾತ್ರಗಳು ಅಸ್ತಿತ್ವ ಕಳೆದುಕೊಂಡವು. ಯಾರು ಬೇಕಾದರೂ ಒಂದು ಬೊಂಬೆಯಂತೆ ಆಡಿ ಹೋಗುವಂತಾಗಿ ಸ್ಥಳೀಯ ಕಲಾವಿದೆಯರು ಅಪರೂಪವಾಗುತ್ತಿದ್ದಾರೆ. ಒಂದು ಕಾಲಕ್ಕೆ ಹಾಸ್ಯ ಸನ್ನಿವೇಶ - ಪಾತ್ರಗಳಿಗೆ ಮಹತ್ವವಿದ್ದು ಕಲಾವಿದರೆ ಸನ್ನಿವೇಶ, ಮಾತು ರಚಿಸಿ ನಿರ್ವಹಿಸುತ್ತಿದ್ದುದೂ ಉಂಟು. ಈಚೆಗೆ ಹಾಸ್ಯವನ್ನೂ ನಾಯಕ ಪಾತ್ರಗಳೇ ನಿರ್ವಹಿಸುತ್ತಿವೆ. ಕೆಲವು ಕಲಾವಿದರು ವಕ್ರಚೇಷ್ಟೆ, ವಿಚಿತ್ರ ಕಂಠ ಸ್ವರ, ದ್ವಂದಾರ್ಥ, ಅತಿಯಾದ ಆಂಗಿಕಾಭಿನಯವನ್ನೇ ಹಾಸ್ಯಾಭಿನಯ ಮಾಡಿ ಕೊಂಡುದರಿಂದ ಹಾಸ್ಯ ಭಾವಾಭಿನಯ ಸೂಕ್ಷ್ಮಗಳನ್ನು ಕಳೆದುಕೊಂಡಿದೆ. ಹಾಸ್ಯ - ಭೀಭತ್ಸಗಳ ನಡುವೆ ಅಂತರ ಇಲ್ಲವಾಗಿದೆ. ಛಾಯಾಗ್ರಹಣ -ಸಂಕಲನಗಳು ಕನಿಷ್ಠ ಅರ್ಹತೆ ಇಲ್ಲದವರನ್ನೂ 'ಕಲಾವಿದ'ರಾಗಿಸ ಬಲ್ಲವೆಂಬ ಗುಟ್ಟು ಗೊತ್ತಾಗಿದೆಯಾದ್ದರಿಂದ ನಿಜವಾದ ಕಲಾವಿದರಿಗೆ ಪ್ರತಿಭಾ-ವೈವಿಧ್ಯಕ್ಕಿಂತ ಚಿತ್ರದ ಯಶಸ್ಸು(ಗಳಿಕೆ)ಮಾತ್ರ ಅವರ ಉಳಿವನ್ನು ನಿರ್ವಹಿಸುವುದರಿಂದ ಪ್ರತಿಕ್ಷಣ ಆತಂಕದಲ್ಲಿರುವಂತಾಗಿದೆ. ಮೇಲು ನೋಟಕ್ಕೆ ಕಾಣುವ ಅಥವಾ ಆರೋಪಿಸುತ್ತಿರುವ ಅನೇಕ ಲಕ್ಷಣಗಳು ಆಳದಲ್ಲಿ ನಿಜವಲ್ಲ. ಯಾವುದೇ ಉಜ್ವಲ ಪ್ರತಿಭೆಗೂ ಸವಾಲಾಗಬಲ್ಲ ಸಾಮರ್ಥ್ಯವಿದ್ದರೂ ವಿಶ್ವ, ರಾಷ್ಟ್ರಮಟ್ಟಕ್ಕೆ ಏರಲಾಗದೆ ನಮ್ಮ ಕಲಾವಿದರು ತಾವು ಕಟ್ಟಿಕೊಂಡ ಕೋಟೆಯಲ್ಲಿ ತಾವೇ ಸೆರೆಯಾಗಿ ಸೀಮಿತ ಪರಿಧಿಯಲ್ಲೇ ಚಲಿಸುತ್ತಿರುವುದು ಕನ್ನಡಕ್ಕಾಗಿರುವ ದೊಡ್ಡ ನಷ್ಟ.

ಛಾಯಾಗ್ರಾಹಕರು ನಡೆದು ಬಂದ ಹಾದಿ ಹೂವಿನ ಹಾಸಿಗೆಯಾಗಿರಲಿಲ್ಲ. ಫಿಲಂ ಅಭಾವ. ಸಿಗುತ್ತಿದ್ದ ಕೊಂಚ ಸರಕಿನಲ್ಲೇ ಕಾರ್ಯಮುಗಿಸಬೇಕಿತ್ತು. ಎಷ್ಟೋ ಬಾರಿ ಯಾರಿಗೂ ಬೇಡದ ವೇಸ್ಟ್ ಕೂಡಾ ನಮಗೆ ಮುಳುಗುವವನಿಗೆ ಹುಲ್ಲುಕಡ್ಡಿಯಂತ ನೆರವಾಗಿದೆ. ಎಲ್ಲ ಅಭಾವಗಳ ನಡುವೆ ಶ್ರೇಷ್ಠವಾದ್ದನ್ನು ಕೊಡಲು ಹೆಣಗಾಟ. ಇರುವಷ್ಟೇ ಬೆಳಕಿನಲ್ಲಿ ಲೈಟಿಂಗ್ ಡಿಸೈನ್ ಮಾಡಿದ್ದೇನೂ ಸುಲಭದ ಸಂಗತಿಯಾಗಿರಲಿಲ್ಲ. ಒಳ್ಳೆಯ ಕ್ಯಾಮರಾಮನ್ ಆಗಿದ್ದರೆ ಸಂಸ್ಕರಣದಲ್ಲಿ ಕೆಲಸ ಕಡಿಮೆ. ಇಲ್ಲವಾದರೆ ಎಲ್ಲವನ್ನೂ ಸಂಸ್ಕರಣದಲ್ಲೇ ಸರಿದೂಗಿಸುವ ಅನಿವಾರ್ಯ. ಅಂಥ ಪರಿಣತರೂ ಇದ್ದುದು ಚಿತ್ರರಂಗದ ಭಾಗ್ಯ. ವರ್ಣದ ಪರಿಚಯ ಆದ ಮೇಲೆ ಸಮಸ್ಯೆಗಳು ಬೇರೆಯಾದವು. ವರ್ಣ ಫಿಲಂನಲ್ಲಿ ವಿವಿಧ ರೀತಿಗಳು. ಉತ್ತಮವಾದದ್ದು ಅಲಭ್ಯ. ಲಭ್ಯವಿದ್ದದ್ದು ಎಷ್ಟು ಬೆಳಕನ್ನು ಧರಿಸಬಲ್ಲುದು, ಯಾವ ವರ್ಣಕ್ಕೆ ಆಧಿಕ್ಯ ಎಂಬೆಲ್ಲ ತಾಂತ್ರಿಕ ಸಂಗತಿಗಳನ್ನು ಅಧ್ಯಯನ ಮಾಡಲು ಎಲ್ಲರಿಗೂ ಸಾಧ್ಯವಿರಲಿಲ್ಲ. ಉದಾಹರಣೆಗೆ ಆರ್‌ವೋ ಫಿಲಂ ಬಂದಾಗ ವಿಪರೀತ ಕಷ್ಟವೆನಿಸಿತ್ತು. ಅಧ್ಯಯನ ಮಾಡಿ ಸೂಕ್ತ ಮಾರ್ಪಾಡು ಮಾಡಿಕೊಂಡವರಲ್ಲಿ ಎಸ್. ರಾಮಚಂದ್ರ, ಈಶಾನ್ ಆರ್ಯ ಮೊದಲಾದ ಕೆಲವರು ಅಪೂರ್ವ ಅನ್ನಿಸುವಂಥ ಕೆಲಸ ಮಾಡಿದರು.

ಈಸ್ಟ್‌ಮನ್ ವರ್ಣದಲ್ಲಿ ಸಿಗುವ ಸೊಗಸು ಇಲ್ಲಿ ಇಲ್ಲ ಅಂದವರೇ ಅಧಿಕ. 'ಕಪ್ಪು-ಬಿಳುಪು'ನಲ್ಲಿ ಇರುವ ಸವಾಲು, ಸಿಗುವ ಪರಿಣಾಮ ವರ್ಣದಲ್ಲಿ ಇಲ್ಲ ಎನ್ನುವವರು ಈಗಲೂ ಇದ್ದಾರೆ. ಸೂಕ್ಷ್ಮವಾಗಿ ಗಮನಿಸಿದರೆ ಈಗಲೂ ಕಪ್ಪು-ಬಿಳುಪು ಚಿತ್ರಗಳಲ್ಲಿ ಕಾಣಸಿಗುವ ಆಳ-ವಿಸ್ತಾರ (ಡೆಪ್ತ್)ಗಳು ವರ್ಣದಲ್ಲಿ ಇಲ್ಲವೆಂದೇ ಅನ್ನಿಸುತ್ತದೆ. ಒಂದು ಕಾಲಕ್ಕೆ ಶಾಸ್ತ್ರ-ಸೂತ್ರ ಎಂಬಂತಿದ್ದ ಚಿತ್ರಿಕೆಗಳು ಈಗ ಬದಲಾಗಿವೆ. ಹೊಸ ವ್ಯಾಕರಣ, ಹೊಸ ಬೆಳಕು ವಿನ್ಯಾಸ, ಗಮನ ಸೆಳೆಯುತ್ತವೆ. ಚಿತ್ರಮಾಧ್ಯಮದ ಒಳಗಿರುವ ಎಲ್ಲ ಕಲೆಗಳೂ ನಾಯಕನಟನ ವೈಭವೀಕರಣಕ್ಕೇ ದುಡಿಯತೊಡಗಿದ ಹಾಗೆ ಛಾಯಾಗ್ರಹಣದ ಎಲ್ಲ ಕೋನಗಳು, ಬೆಳಕು ವಿನ್ಯಾಸವೂ ಅದಕ್ಕಾಗೇ ದುಡಿದವು. ಬೇರೆ ಬೇರೆ ಸ್ಕೂಲ್ ಆಫ್ ಥಾಟ್ಸ್ ಅನ್ನು ಛಾಯಾಗ್ರಹಣದಲ್ಲೂ ಕಾಣುತ್ತೇವೆ. ಅವುಗಳದೇ ಪರಂಪರೆ. ಅವರದೇ ಶೈಲಿಗಳಿವೆ.

ದಿನದಿನಕ್ಕೆ ಆಧುನಿಕಗೊಳ್ಳುತ್ತಿರುವ ತಾಂತ್ರಿಕ ಸಲಕರಣೆಗಳು ಬಹಳ ಅವಸರದಲ್ಲಿ ಎಲ್ಲವನ್ನೂ ಭೂತಕಾಲಕ್ಕೆ- ಇತಿಹಾಸಕ್ಕೆ ತಳ್ಳುತ್ತಿರುವಾಗ ಹೊಸ ಆವಿಷ್ಕಾರಗಳ ಸವಾಲನ್ನು ಸ್ವೀಕರಿಸುತ್ತಾ ತನ್ನತನವನ್ನು ಉಳಿಸಿಕೊಳ್ಳುವ ಅನಿವಾರ್ಯವಿದೆ. ಛಾಯಾಗ್ರಹಣ ಗ್ಲಾಮರ್‌ಗಾಗಿ ಅಲ್ಲ, ಪರಿಸರದ ಹಿನ್ನೆಲೆಯೂ ಭಾವ ಸ್ಫುರಣಕ್ಕೆ ಸಹಾಯಕವಾಗುವ ಪರಿಕರವಾಗಬೇಕು ಎಂಬ ಅನೇಕ ಪ್ರತಿಭಾವಂತರಿದ್ದಾರೆ. ತಾರಾ ವರ್ಚಸ್ಸಿಗೆ ಶರಣಾಗುವ ಉದ್ಯಮ ಇಂಥ ಪ್ರತಿಭೆಗಳನ್ನು ತಾರೆಗಳನ್ನು ವೈಭವಿಸಲು ಮಾತ್ರ ಬಳಸುವಂತಾಗದಿರಲಿ, ಅದು ಅನಂತ ಅವಕಾಶ ಸಾಧ್ಯತೆಗಳನ್ನು ಚಿವುಟಿದಂತೆ ಎಂಬ ಅರಿವು ಜಾಗೃತವಾಗಲಿ.

• • •

ಕಲಾ ನಿರ್ದೇಶನ ಎಂಬ ಪರಿಕಲ್ಪನೆ ಬಂದದ್ದೇ ತುಂಬ ತಡವಾಗಿ. ಪ್ರಾದೇಶಿಕತೆ, ಕನ್ನಡ ಸಂಸ್ಕೃತಿಯ ಜಾಯಮಾನಗಳು ಗ್ರಹೀತವಾಗುವುದೇ ಕಲಾ ನಿರ್ದೇಶನ, ವಸ್ತ್ರ ವಿನ್ಯಾಸಗಳ ಮೂಲಕ. ಭಾಷೆ ತಿಳಿಯದಿದ್ದರೂ ಇದು ಇಂಥ ಪ್ರಾಂತ್ಯದ್ದು ಎಂದು ಗುರುತಿಸಲು ಸಾಧ್ಯವಾಗಬೇಕಾದರೆ ಈ ಕ್ಷೇತ್ರಗಳ ಸಮರ್ಪಕ ಕೆಲಸದಿಂದ ಮಾತ್ರ ಸಾಧ್ಯ. ಅನುಕರಣೆ, ತಾಂತ್ರಿಕ ಕಾರಣಗಳಿಗಾಗಿ ಅನಿವಾರ್ಯವಾಗಿದ್ದ ಅಸಹಜತೆಗಳನ್ನು ೬೦-೭೦ರ ದಶಕದಲ್ಲಿ ನಿವಾರಿಸಿಕೊಳ್ಳುವ ಪ್ರಯತ್ನಗಳಾದವು. ಸ್ಟುಡಿಯೋಗಳಿಂದ ಹೊರಗೆ ಬಂದ ಚಿತ್ರೀಕರಣದಿಂದಾಗಿ ಚಿತ್ರೀಕರಣ ನಡೆಯುವ ಮನೆಯನ್ನು ಕೊಂಚ ನವೀಕರಿಸುವುದಷ್ಟೇ ಕಲಾನಿರ್ದೇಶನವಾಗತೊಡಗಿತು. ಸಾಹಸಪ್ರಧಾನವಾಗತೊಡಗಿದ್ದರಿಂದ ಸಂಬಂಧಿಸಿದ ಪರಿಕರ ಜೋಡಣೆ, ಒಂದು ಗೊತ್ತಾದ ಮಾದರಿಯನ್ನೇ ಸಣ್ಣ-ಪುಟ್ಟ ಬದಲಾವಣೆಯೊಂದಿಗೆ ಪುನಃ ಜೋಡಿಸುತ್ತ ಕಥೆಯ, ಪಾತ್ರದ ಆರ್ಥಿಕ-ಸಾಮಾಜಿಕ ಹಿನ್ನೆಲೆಯನ್ನು ಗಮನಿಸದೆ ಅದ್ದೂರಿಯೊಂದೇ ಮುಖ್ಯವಾಗತೊಡಗಿತು. ನಿರ್ದೇಶಕ-ಕಲಾನಿರ್ದೇಶಕ-ಛಾಯಾಗ್ರಾಹಕರ ಸಹಯೋಗ ತಪ್ಪಿತು. ಈಚೆಗೆ ಹೊಸ ಪೀಳಿಗೆಯ ಕಲಾ ನಿರ್ದೇಶಕರು ಗಮನ ಸೆಳೆಯುತ್ತಿದ್ದಾರೆ. ಅವರ ಇಲ್ಲೆಲ್ಲ ಕಸುಬುದಾರಿಕೆ ಇಲ್ಲ, ಬರೀ ಚಂದ ಕಾಣುತ್ತದೆ ಎನ್ನುವ ಹಿರಿಯರೂ ಇದ್ದಾರೆ. ಇಂಥದೊಂದು ಕಲೆ ಬೇಡುವ ಶಿಕ್ಷಣ ಸಾಕಷ್ಟು ಪ್ರಮಾಣದಲ್ಲಿ ಸಿಗುತ್ತಿಲ್ಲ. ಮುಖ್ಯವಾಗಿ ಈ ಕ್ಷೇತ್ರದ ಸುತ್ತ ಹರಡಿಕೊಂಡ ಮೌಲ್ಡರ್, ಬಡಗಿಯೇ ಮೊದಲಾದವರ ಉಪವೃತ್ತಿಗಳಿಗೆ ಸಾಕಷ್ಟು ಅವಕಾಶಗಳಿಲ್ಲವಾಗಿವೆ. ಹೀಗಾಗಿ ಕರ್ನಾಟಕದ ಸಂದರ್ಭದಲ್ಲಿ ಇತರ ಪ್ರಾಂತ್ಯಗಳಲ್ಲಿಯ ಹಾಗೆ ಉಪವೃತ್ತಿಗಳು ಬೆಳೆಯದಿರುವುದರಿಂದ ಕಲಾನಿರ್ದೇಶನ ಒಂದು ಅರ್ಥದಲ್ಲಿ ಪ್ರಯಾಸದ ಕೆಲಸವಾಗಿದೆ. ಕೆಲಸ ಬಲ್ಲ ಹಲವರಿಗೆ ಕೈತುಂಬ ಕೆಲಸವಿಲ್ಲವೆಂಬಂಥ ಸ್ಥಿತಿಯೂ ಇದೆ. ತೃಪ್ತಿಯಿಲ್ಲ ಎಂದುಕೊಳ್ಳುವಾಗಲೂ ಪ್ರಯೋಗಗಳ ಬೆನ್ನಿಗೇ ಪ್ರಶಸ್ತಿಗಳನ್ನು ಉಡಿಯಲ್ಲಿಟ್ಟುಕೊಳ್ಳುತ್ತ ಬಂದಿದೆ ಕನ್ನಡ ಚಿತ್ರರಂಗ.

• • •

ಕನ್ನಡ ಚಿತ್ರರಂಗದಲ್ಲಿ ಸಾಹಸದ್ದೊಂದು ಪ್ರತ್ಯೇಕ ವಿಭಾಗ ಪ್ರಾರಂಭವಾದದ್ದೂ ತುಂಬ ತಡವಾಗಿಯೇ. ಆ ಮೊದಲು ಸಾಹಸವಿದ್ದರೂ ಶಾಸ್ತ್ರೀಯವಾಗಿ ಕತ್ತಿಯುದ್ಧ, ಮಲ್ಲಯುದ್ಧಾದಿಗಳನ್ನು ಕುದುರೆ ಸವಾರಿ, ಈಜು ಮುಂತಾದ ವಿಶೇಷಗಳನ್ನು ಕಲಿತರೇ ಚಿತ್ರರಂಗದಲ್ಲಿ ಅಭಿನಯಿಸಲು ಅರ್ಹತೆ. ಅವರೆ ಆ ಬಗೆಯ ಸಾಹಸ ದೃಶ್ಯಗಳು ಈಗ ಕಡಿಮೆಯಾಗುತ್ತಿವೆ. ಕಥೆ-ಸನ್ನಿವೇಶಕ್ಕೆ ಹೊಂದಿದಂತೆ ಸಾಹಸದ ಸೇರ್ಪಡೆ ಎಂಬುದು ಅಪರೂಪವಾಗುತ್ತಿದೆ. ಸಾಹಸದ ವಿವಿಧ ರೀತಿಗಳನ್ನು ಯೋಜಿಸಿ ಆದಮೇಲೆ ಸನ್ನಿವೇಶವನ್ನು ಅದಕ್ಕಾಗಿ ಜೋಡಿಸುವ ಪರಿಸ್ಥಿತಿ ಏರ್ಪಟ್ಟಿದೆ. ಒಂದು ಮತ್ತೊಂದಕ್ಕಿಂತ ಭಿನ್ನ-ಭೀಭತ್ಸ ಆಗಿರಬೇಕೆಂಬ ಪ್ರಬಲ ಪೈಪೋಟಿಯೇ ಪರಮಗುರಿ ಆಗುತ್ತಿದೆ. ಹೊರದೇಶಗಳ ಚಿತ್ರಗಳಿಂದ ತಂದ ಎರವಲು ಅನ್ನಿಸಿದರೂ ಸಾಹಸಿಗರು ತಮ್ಮ ಜೀವವನ್ನೇ ಪಣವಾಗಿಟ್ಟು ಕೆಲಸ ಮಾಡುತ್ತಾರೆ. ಅಪಘಾತ ಸಂಭವಿಸಿದಾಗ ಸಾವು-ಅಂಗ ಹೀನತೆ ಏರ್ಪಡುವುದರಿಂದ ಮೊದಲೇ ಅಗತ್ಯ ವಿಮಾ ಯೋಜನೆ ರೂಪಿಸುವ ಪ್ರಯತ್ನಗಳೂ ಫಲ ಕೊಟ್ಟಿಲ್ಲ. ಪ್ರತಿ ಕ್ಷಣವೂ ಹೆಂಡತಿ-ಮಕ್ಕಳನ್ನು ಅನಾಥವಾಗಿಟ್ಟೇ ಕೆಲಸ ಮಾಡುವ ಈ ಸಾಹಸಿಗರನ್ನು ಪ್ರೀತಿಸುವ ಪ್ರೇಕ್ಷಕ ಅವನೇ ನಾಯಕನಟನಾದರೂ ಸ್ವೀಕರಿಸುವಂತಾಗಿದೆ. ಸಾಹಸ ದೃಶ್ಯಗಳ ಚಿತ್ರೀಕರಣದ ತಂತ್ರಗಾರಿಕೆಯೂ ವಿಭಿನ್ನವಾಗುತ್ತಿದೆ. ಹಿಂದೆಲ್ಲ ಸಾಹಸ ದೃಶ್ಯಗಳಿಗೆ ನೀಳವಾದ ಚಿತ್ರಿಕೆಗಳನ್ನು (Lengthy Shots) ಬಳಸಲಾಗುತ್ತಿತ್ತು. ಈಗ ಆ ತಂತ್ರ ಬದಲಾಗಿದೆ. ವೇಗದ ಸಂಕಲನ, ಸ್ಪೆಷಲ್ ಎಫೆಕ್ಟ್ಸ್, ಛಾಯಾಗ್ರಹಣದಲ್ಲಿ ತುಣುಕು ಚಿತ್ರಿಕೆಗಳು ಮುಖ್ಯವಾಗುತ್ತಿವೆ. ಈ ಕ್ಷೇತ್ರ ಬೇಡುವ ಅನೇಕ ಅನುಕೂಲಗಳನ್ನು, ಸುರಕ್ಷತೆಯನ್ನು ಕೊಡುವಲ್ಲಿ ಉದ್ಯಮ ಸೋತಿದೆ, ಲಕ್ಷ್ಯಕ್ಕೇ ತೆಗೆದುಕೊಂಡಿಲ್ಲ. ಮಗ, ಗಂಡ, ಅಪ್ಪನನ್ನು ಕಳೆದುಕೊಂಡು ಅನಾಥವಾಗುತ್ತಿರುವ ಕುಟುಂಬಗಳ ಸಂಖ್ಯೆ ಹೆಚ್ಚುತ್ತಿದೆ.

ಶಿಕ್ಷಣ-ಸಂರಕ್ಷಣೆಗೆ ಗಮನ ನೀಡುವ ಉದ್ದೇಶ ಹೊತ್ತ ಈ ಕ್ಷೇತ್ರದ ಸಂಘಟನೆಯೊಂದೇ ಗಟ್ಟಿಯಾಗಿ ಹಕ್ಕುಗಳಿಗಾಗಿ ಹೋರಾಡಬೇಕಾಗಿದೆ.

ಚಲನಚಿತ್ರ ಮುಖ್ಯವಾಗಿ ತಾಂತ್ರಿಕತೆಯನ್ನು ಆಧರಿಸಿದ್ದು. ತಾಂತ್ರಿಕತೆಯ ಬಳಕೆಗಾಗಿಯೇ ಪೌರಾಣಿಕ-ಜಾನಪದ ಕಥಾವಸ್ತುಗಳನ್ನು ಬಳಸಿ ಚಮತ್ಕಾರಗಳ ಮೂಲಕವೇ ಪ್ರೇಕ್ಷಕರನ್ನು ಆಕರ್ಷಿಸಲು ಪ್ರಯತ್ನಿಸಿದರು. ಕಾಲಕ್ರಮೇಣ ಈ ವಿಧಾನ ಹಿಂದೆ ಸರಿದು, ಕಥೆಯೊಂದನ್ನು ನೇರವಾಗಿ, ಎಳೆಎಳೆಯಾಗಿ ಬಿಡಿಸಿ ಹೇಳುವುದಕ್ಕೆ ಮಾತ್ರ ತಾಂತ್ರಿಕತೆಯನ್ನು ಬಳಸತೊಡಗಿದರು. ಮಧ್ಯಮವರ್ಗ, ಗ್ರಾಮೀಣ ಜೀವನದ ಕೌಟುಂಬಿಕ ಕಥಾನಕಗಳನ್ನು ಅಳವಡಿಸತೊಡಗಿದ್ದು ಮತ್ತೊಂದು ಘಟ್ಟ. ಕುಟುಂಬ ವ್ಯವಸ್ಥೆಯ ಆರಾಧನೆ, ಸಮರ್ಥನೆಗಳು ಹೆಚ್ಚಿದವು.

ಸಾಮೂಹಿಕ ವ್ಯವಸಾಯದ ಆಗತ್ಯದ ಹಿನ್ನೆಲೆಯಲ್ಲಿ ಅವಿಭಕ್ತ ಕುಟುಂಬದ ಅಗತ್ಯವನ್ನು ಒತ್ತಿ ಹೇಳಲಾಯಿತು. ಗ್ರಾಮ ಸ್ವರಾಜ್ಯದ ಹಿನ್ನೆಲೆಯಲ್ಲಿ ವಿದ್ಯಾವಂತರು ಅದರಲ್ಲೂ ಇಂಜಿನಿಯರುಗಳು, ವೈದ್ಯರು, ಶಿಕ್ಷಕರು ಗ್ರಾಮಗಳಲ್ಲಿ ನೆಲೆಸಬೇಕೆಂಬ ವಾದವನ್ನು ಎತ್ತಿ ಹಿಡಿದರು. ಫ್ಯೂಡಲ್ ವ್ಯವಸ್ಥೆಯನ್ನು ವಿರೋಧಿಸಿ ಜೀತಪದ್ಧತಿ, ಜಾತಿ ಪದ್ಧತಿಗಳನ್ನು ನಿರಾಕರಿಸುವ ಪ್ರಯತ್ನಗಳನ್ನೂ ಕೆಲವು ಸಿನಿಮಾಗಳಲ್ಲಿ ಕಾಣಬಹುದಾಗಿತ್ತು. ಆದರೆ ಇವೆಲ್ಲವೂ ಒಂದು ತತ್ವ, ಆಶಯದ ಹಿನ್ನೆಲೆಯಲ್ಲಿ ಸೂಕ್ತವಾಗಿ ಮೂಡಿ ಬಂದದ್ದು ಅಪರೂಪವಾಯಿತು.

ಆರೋಪಿತ ಆದರ್ಶಗಳು, ಬಹುಜನಾಭಿಪ್ರಾಯದ ನೆಪದಲ್ಲಿ ಸ್ತ್ರೀ ಶೋಷಣೆಯನ್ನು ಬೆಂಬಲಿಸಲಾಯಿತು. ಅಧಿಕಾರದ ಮುಂದೆ ದೈನ್ಯ, ಸೇವಾಭಾವಗಳನ್ನು ಸಮರ್ಥಿಸಿದರು. ವ್ಯವಸ್ಥೆಯ ಬಗ್ಗೆ ಇರಬಹುದಾದ ಸಿಟ್ಟನ್ನು, ಬದಲಾವಣೆಯ ಸಾಧನಗಳನ್ನು ಮರೆಮಾಚುವ ಪ್ರವೃತ್ತಿಯೇ ಹೆಚ್ಚಾಗಿತ್ತು. ಆವರೆಗೆ ಇದ್ದುದನ್ನೆಲ್ಲ ಮುರಿದು ಹೊಸ ಆಶಯಕ್ಕೆ ಹೊಸ ಆಕೃತಿ ಕೊಡುವ ರಭಸ ಕಂಡಿತು. ಆದರೆ ಆ ಆಕೃತಿ ಜನಪರವಾದುದೇ ಎಂಬುದನ್ನು ವಿಶ್ಲೇಷಿಸಲು ಬಳಸಿದ್ದೂ ಚಿತ್ರಮಂದಿರ ತುಂಬಿದ್ದರ ಮಾನದಂಡದಿಂದ.

ತಂತ್ರಜ್ಞಾನದ ಯಾವ ಹೊಸ ಆವಿಷ್ಕಾರಕ್ಕೂ ಕನ್ನಡ ಚಿತ್ರರಂಗ ದಾರಿ ಮಾಡಿಕೊಳ್ಳಲೇ ಇಲ್ಲ. ನಮ್ಮಲ್ಲೇ ಇದ್ದ ಪ್ರತಿಭಾವಂತ ತಂತ್ರಜ್ಞರು, ಕಲಾವಿದರೂ ವಲಸೆ ಹೋಗುವಂಥ ಸ್ಥಿತಿ. ವಸ್ತು, ತಂತ್ರಜ್ಞರು, ಕಲಾವಿದರೂ ಆಮದಾದರು. ಇದ್ದವರು ಕರಗಿದರು; ಇನ್ನೊಂದು ಪೀಳಿಗೆಯನ್ನು ಹುಟ್ಟುಹಾಕುವ ಪ್ರಯತ್ನವೂ ಕಾಣಲಿಲ್ಲ. ಒಂದು ರೀತಿಯಲ್ಲಿ ನಮ್ಮದು ಆಹನ್ಯಹನಿಯ ಕಾಲಕ್ಷೇಪ. ಈ ಸಂತೆಹೊತ್ತಿಗೆ ನೇಯುವ ತುರ್ತಿನಲ್ಲಿ ವ್ಯವಧಾನ ಅಥವಾ ಯಾವುದೇ ರಿಸರ್ಚ್ ಅಂಡ್ ಡೆವಲಪ್‌ಮೆಂಟ್‌ನಂಥದ್ದು ಸಾಧ್ಯವಾಗಲಿಲ್ಲ. ಕರ್ನಾಟಕದ್ದೇ ಆದ ತಾಂತ್ರಿಕ ಆವಿಷ್ಕಾರವೂ ಸಾಧ್ಯವಾಗಲಿಲ್ಲ. ಇರುವುದರಲ್ಲೇ ಹಿರಿದನ್ನು ಸಾಧಿಸಿದ ತಂತ್ರಜ್ಞರಿದ್ದರು. ಧ್ವನಿ, ಛಾಯಾಗ್ರಹಣ, ಸಂಕಲನ ಮೊದಲಾದ ಕ್ಷೇತ್ರಗಳಲ್ಲಿ ಅಂಥ ತಂತ್ರಜ್ಞರ ಕೊಡುಗೆಯಿದೆ. ಈ ಆಧುನಿಕ ಯುಗದಲ್ಲಿ ವಿಶಾಲ ವಿಶ್ವವೇ ತೆರೆದುಕೊಂಡಿದೆ. ಹೊಸಪೀಳಿಗೆ ಎಲ್ಲವನ್ನು ನಡುಮನೆಗೆ ತರುವ ಸಾಹಸವನ್ನಂತೂ ಮಾಡುತ್ತಿದೆ. ಅವೆಲ್ಲದರ ಹಿಂದೆ ಮಾಧ್ಯಮವನ್ನು ಸದ್ಬಳಕೆಗೊಳಿಸುವ ಶ್ರದ್ಧೆಗಿಂತ ಬೇರೆ ಬೇರೆ ಕಾರಣಗಳೇ ಇವೆಯಾದರೂ ಆ ಪ್ರಯತ್ನಗಳು ಒಂದು ಗಮನಾರ್ಹ ಬೆಳವಣಿಗೆ ಎಂಬುದನ್ನು ತಳ್ಳಿಹಾಕುವಂತಿಲ್ಲ.

ಚಿತ್ರೋದ್ಯಮದ ಉಳಿವಿಗಾಗಿ ಬಹು ಪ್ರಯಾಸದಿಂದ ನಡೆದು ಬಂದ ಸ್ಟುಡಿಯೋಗಳನ್ನು ಉಳಿಸಿಕೊಳ್ಳದಾದೆವು. ಪೂರ್ವಯೋಜಿತವಲ್ಲದ ಕಾರ್ಯ ವಿಧಾನ ಮತ್ತು ಸುಲಭ ಮಾರ್ಗವನ್ನು ಬೆನ್ನು ಹತ್ತಿದ್ದರಿಂದ ತನ್ನ ನೆಲದ ಮೊಳಕೆಯನ್ನೇ ಚಿವುಟಿತು ಕನ್ನಡ ಚಿತ್ರರಂಗ.

೧೯೬೧-೭೦ರ ಅವಧಿಯಲ್ಲಿ ಅನುಕೂಲಕರವಾದ ಕ್ಯಾಮರಾ ಮೊದಲಾದ ತಾಂತ್ರಿಕ ಸಾಮಗ್ರಿಯೂ ಬಂದುದರಿಂದ ಸಹಜತೆಯ ಕಾರಣವನ್ನು ಮುಂದಿಟ್ಟು ಮನೆಗಳಲ್ಲಿ ಚಿತ್ರಿಸತೊಡಗಿದರು. ವರ್ಷಕ್ಕೆ ೬೦-೭೦ ಚಿತ್ರಗಳಾಗುವಾಗ ಒಂದೊಂದು ಚಿತ್ರ ಕನಿಷ್ಠ ನಾಲ್ಕು ದಿನವಾದರೂ ಸ್ಟುಡಿಯೋಗಳಲ್ಲಿ ಕೆಲಸ ಮಾಡಿದ್ದರೆ ವರ್ಷದ ೩೬೫ ದಿನವಾದರೂ ಸ್ಟುಡಿಯೋಗಳಲ್ಲಿ ಕೆಲಸ ನಡೆಯುತ್ತಿತ್ತು. ಹೊರಗೆ ಚಿತ್ರೀಕರಣ ಮಾಡಿ ತೊಡಗಿಸಿದ ಹಣದ ಒಂದು ಭಾಗ ಹೊರಗೇ ಸೋರಿ ಹೋಗುತ್ತಿತ್ತು. ಸ್ಟುಡಿಯೋಗಳು ಕೆಲಸವಿಲ್ಲದೆ ಸೊರಗಿದವು. ಸರ್ಕಾರೀ ಸ್ವಾಮ್ಯದ ಸ್ಟುಡಿಯೋದಲ್ಲಿ ಸರ್ಕಾರೀ ವಿಳಂಬನೀತಿ, ಅನೇಕ ಅನುಸರಿಸಲು ಯೋಗ್ಯವಲ್ಲದ ನಿಯಮಗಳ ಕಾರಣದಿಂದ ಕೆಲಸಗಳು ಕುಂಠಿತವಾದವು. ಎಲ್ಲಿಯೂ ವೃತ್ತಿನಿಷ್ಠೆ ಬೆಳೆಯಲಿಲ್ಲ. ಇದೊಂದು ದೂರಾಲೋಚನೆ ಇಲ್ಲದ್ದರ ಪರಿಣಾಮ ಎನ್ನಬಹುದು. ಇದರಿಂದಾಗಿ ಇದರ ಸುತ್ತ ಬೆಳೆದು ಬರಬೇಕಾಗಿದ್ದ ಉಪವೃತ್ತಿಗಳೂ ಬೆಳೆಯಲು ಅವಕಾಶವಾಗಲಿಲ್ಲ.

ಆಧುನಿಕ ತಂತ್ರಜ್ಞಾನದಿಂದ ಎಷ್ಟು ಅನುಕೂಲವೋ ಅಷ್ಟೇ ಅಪಾಯವೂ ಇತ್ತು. ಹೊಸ ರಿಕಾರ್ಡಿಂಗ್ ಸ್ಟುಡಿಯೊಗಳು ಬಂದವು. ಹಳೆಯ ಸಲಕರಣೆಗಳು ಬೇಡವಾದ್ದರಿಂದ ಚಾಮುಂಡೇಶ್ವರಿ, ಪ್ರಸಾದ್ ಮೊದಲಾದವು ತತ್ತರಿಸಿದವು. ಹೊಸ ಅವಿಡ್ ಸಂಕಲನ ಬಂದು, ಹಳೆಯ ವಿಧಾನಗಳು ಮರೆಯಾಗತೊಡಗಿದವು. ಜ್ಯೋತಿ, ಲಕ್ಷ್ಮಿ ಮೊದಲಾದ ಹಲವು ಸಂಕಲನ ಕೇಂದ್ರಗಳು ಮುಚ್ಚಿ ಹೋದವು. ತಂತ್ರಜ್ಞಾನಕ್ಕೂ ಉಳಿವಿನದೇ ಹೋರಾಟವಾಗಿ ಬಿಟ್ಟಿದೆ.

• • •

ಬಹುತೇಕ ಮತ್ತಾವ ಭಾಷೆಯಲ್ಲೂ ಇದ್ದಿರಲಾರದೆಂಬಷ್ಟು ವೈಶಿಷ್ಟ್ಯ ಕನ್ನಡದ ಉಪಭಾಷೆಗಳದ್ದು. ಕೆಲವಕ್ಕೆ ಸ್ವತಂತ್ರ ಅಸ್ತಿತ್ವವೂ ಇದೆ ಎನ್ನಿಸುವಷ್ಟು ಸಮರ್ಥವಾಗಿವೆ. ಆಯಾ ಕ್ಷೇತ್ರದ ಜಾನಪದ, ಸಾಹಿತ್ಯ, ಕಲೆ ಅಷ್ಟೊಂದು ಶ್ರೀಮಂತವಾಗಿವೆ. ಚಿತ್ರರಂಗಕ್ಕೂ ಈ ಮಾತು ಹೊರತಲ್ಲ. ತುಳು, ಕೊಡವ, ಕೊಂಕಣಿ ಭಾಷೆಗಳಲ್ಲಿ, ಲಂಬಾಣಿ ಭಾಷೆಯಲ್ಲಿ ಕೂಡಾ ಚಿತ್ರಗಳು ಬಂದಿವೆ. ಕೆಲವೇ ಸಾಹಸಿಗರು ಇಂಥ ಪ್ರಯೋಗ ಮಾಡಿದ್ದಾರೆ.

ಕನ್ನಡದ 'ಭಕ್ತ ಧ್ರುವ', 'ಸತಿ ಸುಲೋಚನಾ' ಚಿತ್ರಗಳ ಹಾಗೇ ಇಲ್ಲಿಯೂ ಮೊದಲುಗಳ ಮೇಲಾಟವೊಂದು ಕೆಲಸ ಮಾಡಿದೆ. 'ದಾರೆದ ಬುಡದಿ' ತುಳು ಚಿತ್ರ ಮೊದಲೇ ಸಿದ್ಧವಾಗಿದ್ದರೂ ತೆರೆಕಂಡದ್ದು 'ಎನ್ನ ತಂಗಡಿ'. ಯಥಾ ಪ್ರಕಾರ ಯಾವುದು ಮೊದಲು ಎಂಬ ಜಿಜ್ಞಾಸೆ ಸಹಜವಾಗೇ ಏಳುತ್ತದೆ. ಕನ್ನಡದವರಾದ ಎಸ್.ಆರ್. ರಾಜನ್ ಈ ಉಪಭಾಷಾ ಚಿತ್ರಗಳನ್ನು ತೆರೆಗಿತ್ತ ಮೊದಲಿಗರು. ಅವರು ಕೊಡವ ಭಾಷೆಯ ಚಿತ್ರ ನಿರ್ದೇಶನ ಮಾಡಿದ ಮೊದಲಿಗರೂ ಹೌದು. ಇವೆಲ್ಲ 'ಬಂಗಾರ ಪಟ್ಲೇರ್' (ತುಳು) 'ಬೊಗ್ಸಾಣೆ' (ಕೊಂಕಣಿ) ೧೯೪೯ರಲ್ಲೇ ನಡೆದ ಸಾಹಸಗಳು. ಬಹು ದೀರ್ಘಕಾಲದ ಮೌನ ಮುರಿದವರು ಕೆ.ಎನ್. ಟೈಲರ್ ಮತ್ತು ಆರೂರು ಪಟ್ಟಾಭಿ. ಮತ್ತೆ ಚಾಲನೆ ಕೊಟ್ಟ ಇವರನ್ನ ಈ ಭಾಷಾ ಚಿತ್ರಗಳಿಗೆ ಆದ್ಯರೆಂದು ಗುರುತಿಸಲಾಗಿದೆ.

ಕರ್ನಾಟಕ ಸರ್ಕಾರದ ಸಹಾಯಧನ ಯೋಜನೆ ಉಪಭಾಷಾ ಚಿತ್ರ ನಿರ್ಮಿಸುವವರಿಗೆ ಒಂದು ವರದಾನವಾಯಿತು. ಸಹಾಯಧನ, ಪ್ರಶಸ್ತಿಗಳ ಮೂಲಕ ಅಸ್ತಿತ್ವವನ್ನು ನೆಲೆಗೊಳಿಸುವ ಪ್ರಯತ್ನಗಳಾದವು. ಅದರ ಈ ಚಿತ್ರಗಳಲ್ಲಿ ಪ್ರೇಕ್ಷಕನಿಗೆ ಅದಾಗಲೇ ಪರಿಚಯವಾಗಿದ್ದ ತಾಂತ್ರಿಕ ಗುಣಮಟ್ಟ ಕಾಣಲಿಲ್ಲ. ಯಕ್ಷಗಾನ ಕಲೆಯೇ ಉಸಿರಾದ ಜನರಿರುವ ಪ್ರದೇಶವಿದು. ಪ್ರೇಕ್ಷಕರನ್ನು ಬಿಟ್ಟುಕೊಡಲೊಲ್ಲದ ಯಕ್ಷಗಾನವೇ - ಶುದ್ಧ ಕಲೆಯ ಆಸಕ್ತರು ಟೀಕಿಸಿದರೂ ಲೆಕ್ಕಿಸದೆ - ಸಿನಿಮಾವನ್ನೂ ಗರ್ಭೀಕರಿಸಿಕೊಳ್ಳತೊಡಗಿತು. ಈ ಚಿತ್ರಗಳು ಅಪರೂಪಕ್ಕೆ ಶತದಿನ ಕಂಡದ್ದೂ ಇದೆ. ಮುಖ್ಯವಾಗಿ ಪ್ರಜ್ಞಾವಂತ, ಮಾಧ್ಯಮಾಸಕ್ತ ಸಾಹಿತಿಗಳಾದ ಅಮೃತ ಸೋಮೇಶ್ವರ, ವಿವೇಕ್ ರೈ ಮೊದಲಾದವರು ಈ ಚಿತ್ರ ಮಾಧ್ಯಮದಲ್ಲಿ ತೊಡಗಿದ್ದರು. ಸಿನಿಮಾದಿಂದ ದೊಡ್ಡ ಸಾಂಸ್ಕೃತಿಕ ಕ್ರಾಂತಿ ಆಗದಿರಬಹುದು. ಸಾಮಾನ್ಯ ಬುದ್ಧಿಮತ್ತೆಯ ಮೇಲೆ ಒಂದು ಹಂತದಲ್ಲಿ ಪರಿಣಾಮ ಬೀರುವುದಂತೂ ಸಾಧ್ಯ. ನಮ್ಮ ಅನೇಕ ಸಾರ್ವಜನಿಕ ಚಳವಳಿಗಳಲ್ಲೂ ಜನಪ್ರಿಯ ಸಂಸ್ಕೃತಿಯನ್ನು ಬಳಸಿಕೊಳ್ಳಲಾಗಿದೆ. ಈ ಹಿನ್ನೆಲೆಯಲ್ಲಿ ಯಾವುದೇ ಮೂಲೆಯಲ್ಲಿ, ಯಾವುದೇ ಭಾಷೆಯಲ್ಲಿ ಮಾಧ್ಯಮದ ಬಳಕೆ ಅದರೂ ಅದೊಂದು ಗುಣಾತ್ಮಕ ಅಂಶವೇ ಆಗುತ್ತದೆ.

• • •

ಕನ್ನಡ ಚಿತ್ರರಂಗದಲ್ಲಿ 'ಹೊಸ ಅಲೆ' ಎಂಬ ಪರಿಕಲ್ಪನೆ ಎಪ್ಪತ್ತರ ದಶಕದಿಂದೀಚೆಗೆ ಕೇಳಿಬಂತು. ಒಂದು ವಿಶಿಷ್ಟ ನಿರೂಪಣಾ ಶೈಲಿಯನ್ನು ಕುರಿತಂತೆ 'ಹೊಸ ಅಲೆ', 'ಪರ್ಯಾಯ ಸಿನಿಮಾ', 'ಸೇತು ಸಿನಿಮಾ', 'ನವ್ಯ ಚಿತ್ರಗಳು', 'ಪರ್ಸನಲ್ ಸಿನಿಮಾ' ಹೀಗೆ ಹಲವು ಹೆಸರುಗಳನ್ನು ಹೊತ್ತ ಒಂದು ಶೈಲಿ ಹೆಚ್ಚು ಗಮನ ಸೆಳೆಯಿತು.

ನವ್ಯ ಸಾಹಿತ್ಯ, ನವ್ಯ ನಾಟಕಗಳು, ಅಸಂಗತ ನಾಟಕಗಳು, ನವ್ಯ ಚಿತ್ರಕಲೆ ಮೊದಲಾದವು ಹೆಚ್ಚು ಪ್ರಾತಿನಿಧ್ಯ ಪಡೆದುಕೊಂಡ ದಿನಗಳಲ್ಲಿ ಚಲನಚಿತ್ರದಲ್ಲೂ ಅಂಥದೊಂದು ಅಲೆ ಬಂತು. ಪ್ರಧಾನವಾಹಿನಿಯ ಚಿತ್ರರಂಗ ಈ ಹೆಸರುಗಳನ್ನು ವ್ಯಂಗ್ಯ ಮಾಡುವ ಮೂಲಕವೇ ದೂರ ಇಡಲು ಪ್ರಯತ್ನಿಸಿತು. ಪತ್ರಕರ್ತರು ಪ್ರೋತ್ಸಾಹಿಸಿದರು, ಹಾಗೂ ಅಕಾಡೆಮಿಕ್ ವಲಯಕ್ಕೆ ಈ ಶೈಲಿ ಮೆಚ್ಚಾಯಿತು. ಅವರು ಈ ಕ್ಷೇತ್ರವನ್ನು ಒಳಹೊಕ್ಕು ಕೆಲಸಮಾಡುವ ಆಸಕ್ತಿಯನ್ನು ತೋರಿದರು. ಎಲ್ಲ ಸೃಜನಶೀಲ ಮನಸ್ಸುಗಳೂ ಈ ಧ್ವನಿಪೂರ್ಣ ಅಭಿವ್ಯಕ್ತಿ ಮಾರ್ಗದ ಬಗ್ಗೆ ಯೋಚಿಸುವಷ್ಟು ಕೆಲಸವಾಗಿತ್ತು.

ಹೀಗೆ ಸಿದ್ಧಪಡಿಸಿದ್ದ ವೇದಿಕೆಯನ್ನು 'ಹೊಸ ಅಲೆ' ಎಂದುಕೊಂಡೇ ಆಕ್ರಮಿಸಿದ ಒಂದು ವರ್ಗದ ಸಿನಿಮಾಗಳು ಒಂದು ಚಳವಳಿಯಂತೆಯೇ ಕೆಲಸ ಮಾಡತೊಡಗಿದವು. ಇದಕ್ಕೆ ಪೂರಕವಾಗಿ ಪುಣೆಯ ಫಿಲಂ ಇನ್ಸ್‌ಟಿಟ್ಯೂಟ್‌ನಿಂದ ಶಾಸ್ತ್ರೀಯವಾಗಿ ಸಿನಿಮಾ ಕುರಿತ ಶಿಕ್ಷಣ ಪಡೆದ ನಿರ್ದೇಶಕರು, ಚಿತ್ರನಾಟಕ ರಚನಾ ಪರಿಣತರು, ಛಾಯಾಗ್ರಾಹಕರು, ಸಂಕಲನಕಾರರು ಬಂದು ಸೇರಿದರು. ಇನ್ನಿತರ ಮುಖ್ಯವಾಗಿ ಹಿಂದಿ ಭಾಷೆಯಲ್ಲಿ ಆದ ಹಾಗೆ ಶಿಕ್ಷಣ ಪಡೆದ ನಟವರ್ಗ ಬಂದದ್ದು ಬಹಳ ಕಡಿಮೆ. ಇವೆಲ್ಲದರ ಸಂಗಮವಾಗಿ ಆವರೆಗೆ ಇದ್ದ ಏಕತಾನತೆಯನ್ನು ಮುರಿದು ಹೊಸ ಕಣ್ಣೋಟದ ಸಡಗರ ತುಂಬಿತು. ಹೊಸ ಅಲೆ ಚಿತ್ರಗಳಲ್ಲಿ ದೇಸೀಯ ಅಂಶಗಳಿಗೆ ಪ್ರಾಧಾನ್ಯ. ಇಲ್ಲಿ ಬಳಸುವ ಸಂಗೀತ, ಶಬ್ದಗ್ರಹಣ, ಸಂಕಲನ, ಬೆಳಕು ವಿನ್ಯಾಸ, ಕ್ಯಾಮರಾ ಕೋನಗಳು ಎಲ್ಲವೂ ಪ್ರಧಾನವಾಹಿನಿಗಿಂತ ಭಿನ್ನ ಶೈಲಿಯವು. ಪ್ರಧಾನವಾಹಿನಿಯಲ್ಲಿ ವೇಗ ಪ್ರಧಾನವಾದರೆ, ಹೊಸ ಅಲೆಯಲ್ಲಿ ನಿಧಾನವಾಗಿ ಹೇಳುತ್ತಿರುವ ಸಂಗತಿಗಳು ನೋಟಕನ ಮನಸ್ಸಿನಾಳಕ್ಕೆ ಹೋಗಿ ಒಂದು ಅನುಭವ ಆಗುವಂತೆ ಚಿತ್ರಿಕೆಗಳನ್ನು ಹೊಂದಿಸಲಾಗುತ್ತದೆ.

ಹೊಸ ಅಲೆ ಚಳವಳಿಯ ಸಾಧನೆ-ಸಿದ್ಧಿಗಳು ಚಿತ್ರರಂಗದ ನೋಡುವ ಕ್ರಮ ಮತ್ತು ವಸ್ತುನಿರ್ವಹಣೆಯಲ್ಲಿ ಪ್ರಭಾವವನ್ನಂತೂ ಬೀರಿತು. ನೇರ ನಿರೂಪಣೆಯ ಜೊತೆಗೆ ಪ್ರತಿಮೆಗಳ ಮೂಲಕ ಅಭಿವ್ಯಕ್ತಿಸುವ ಪ್ರಯತ್ನ ಪ್ರಧಾನವಾಹಿನಿಯ ಚಿತ್ರಗಳಲ್ಲೂ ಕಾಣತೊಡಗಿತು. ಹೀಗಾಗಿ ಹೊಸ ಅಲೆ ಒಂದು ದೃಷ್ಟಿಕೋನವೂ ಹೌದು. ಅದರ ಕೊಡುಗೆಯೂ ಹಿರಿದು.

'ಹೊಸ ಅಲೆ' ಚಿತ್ರಗಳಿಗೆ ಪಾಶ್ಚಾತ್ಯ ಪ್ರೇರಣೆಗಳನ್ನು ಈ ಹಿನ್ನೆಲೆಯಲ್ಲಿ ಗುರುತಿಸಬಹುದು. ಆರಂಭಿಕ ಕುತೂಹಲ, ಪ್ರಯೋಗಶೀಲತೆ ದಾಟಿದ ಮೇಲೆ ನಲುವತ್ತರ ದಶಕದಲ್ಲಿ ತಾತ್ವಿಕ ಗ್ರಹಿಕೆಗಳನ್ನು ವಿಶ್ವ ಚಿತ್ರರಂಗ ಪಡೆದುಕೊಳ್ಳಲು ಆರಂಭಿಸಿತು. ಪುಡೋವ್ಕಿನ್, ಐಸನ್‌ಸ್ಟೈನ್, ಗ್ರಿಫಿತ್ ಮುಂತಾದವರು ಚಿತ್ರರಂಗ ಪಡೆದುಕೊಂಡಿದ್ದ ನೇರ ನಿರೂಪಣೆ ಮತ್ತು ಭಾವೋತ್ಕರ್ಷಗಳು ಸೇರಿಕೊಂಡ ಮೆಲೋಡ್ರಾಮ ಎಂದು ಕರೆಯಬಹುದಾದ ದಾರಿಯಿಂದ ಬದಲಾವಣೆ ಪಡೆಯಲು ಪ್ರಯತ್ನಿಸಿದರು. ಈ ಪ್ರಯೋಗಗಳನ್ನು ಎರಡು ನೆಲೆಗಳಲ್ಲಿ ಗುರುತಿಸಬಹುದು. ಒಂದು, ತಾಂತ್ರಿಕವಾಗಿ ನೇರ ನಿರೂಪಣೆಯಿಂದ ಉಂಟಾಗುತ್ತಿದ್ದ ಕೃತ್ರಿಮತೆ ದಾಟಲು ಮಾಡಿದ ಪ್ರಯೋಗಗಳು. ವೈಡ್ ಸ್ಕ್ರೀನ್, ಲಾಂಗ್ ಟೇಕ್ ಮತ್ತು ಘಟನಾತ್ಮಕ ನಿರೂಪಣೆಗಳಿಂದ ಚಿತ್ರದ ವೇಗ ಮತ್ತು ವಿಭಜನೆ ಸೂಕ್ಷ್ಮವಾಯಿತು. ಇದರಿಂದ ಚಿತ್ರ ನಿರ್ದೇಶಕನ ಮಾಧ್ಯಮವಾಯಿತು. ಇದನ್ನು ಕೇಂದ್ರೀಕೃತ ಅಭಿವ್ಯಕ್ತಿ ಎಂದು ಹೇಳಬಹುದು. ಈ ಚಳವಳಿಯಲ್ಲಿ 'ಕೆಹರ್ ದು ಸಿನಿಮಾ' ಪತ್ರಿಕೆಯ ವಿಮರ್ಶಕನಾಗಿದ್ದ ಅಂದ್ರೆ ಬಾಜಿನ್‌ನ ಚಿಂತನೆಗಳಿಂದ ಪ್ರಭಾವಿತರಾಗಿದ್ದ ಅನೇಕ ನಿರ್ದೇಶಕರಿದ್ದರು. ಅವರಲ್ಲಿ ಥ್ರೂಫೊ (Francois Trufaut), ಗೊಡಾರ್ಡ್ (Jean Lue Godard) ಛಾಬ್ರೊ (Claude Chabroı) ಪ್ರಮುಖರು. ಮುಖ್ಯವಾಗಿ ಫ್ರಾನ್ಸ್‌ನಲ್ಲಿ ಇಂತಹ ಚಳವಳಿ ತೀವ್ರವಾಗಿತ್ತು. ವಿಮರ್ಶಕರಾಗಿದ್ದ ಹಲವರು ಚಿತ್ರನಿರ್ದೇಶನಕ್ಕಿಳಿದು ತಮ್ಮ ತಾತ್ವಿಕತೆಯನ್ನು ಸಾಕಾರಗೊಳಿಸಲು ಯತ್ನಿಸಿದರು. ಹೆಚ್ಚು ಕಡಿಮೆ ಇದೇ ಸಂದರ್ಭದಲ್ಲಿ ಇಟಲಿಯಲ್ಲಿ ನವವಾಸ್ತವವಾದಿ ಚಳವಳಿ ಆರಂಭವಾಗಿತ್ತು. ಇದು ಮೂಲತಃ ಹಾಲಿವುಡ್ ಚಿತ್ರಗಳು ನಿರ್ಮಿಸಿದ್ದ ಭ್ರಮಾತ್ಮಕ ವಾತಾವರಣವನ್ನು ಮುರಿಯಲು ಮಾಡಿದ ಪ್ರಯತ್ನಗಳು. ಮತ್ತೊಂದು, ವಸ್ತುವಿನ ನೆಲೆಯಲ್ಲಿ ಅದ ಪ್ರಯೋಗ. ಯುರೋಪಿನ ಹೊಸ ಅಲೆ ಚಳವಳಿಯ ಅನೇಕರು ಸುಸಂಬದ್ಧ ಕಥಾ ನಿರೂಪಣೆಯನ್ನೇ ಪ್ರಶ್ನಿಸಲಾರಂಭಿಸಿದರು. ಬದುಕಿಗೇ ಇಲ್ಲದ ತರ್ಕ ಅದರ ಅಭಿವ್ಯಕ್ತಿಗೆ ಬೇಕೇ ಎಂಬ ಚಿಂತನೆ ಆ ಹಂತದಲ್ಲಿ ಹೆಚ್ಚು ತೀವ್ರವಾಯಿತು. ವ್ಯಕ್ತಿಗತ ಚಿಂತನೆಯ ಏರುಪೇರಿಗೆ ಅನುಗುಣವಾಗಿ ಚಿತ್ರದ ಕ್ಯಾನ್‌ವಾಸ್ ಬದಲಾಯಿತು. ಇದು ಬಹು ಬಂಡವಾಳ ತೊಡಗಿಸಿ ಸಿದ್ಧವಾಗುತ್ತಿದ್ದ ಚಿತ್ರಗಳು ಸೃಷ್ಟಿಸಿದ ಭ್ರಮೆಯನ್ನು ತೊಡೆಯುವ ಪ್ರಯತ್ನವೂ ಹೌದು. ಲ್ಯಾಟಿನ್ ಅಮೆರಿಕಾದಲ್ಲೂ ಇದೇ ಮಾದರಿಯ ಚಿತ್ರ ಚಳವಳಿ ಕಾಣಿಸಿಕೊಂಡಿತು. ನೊಬೆಲ್ ಪ್ರಶಸ್ತಿ ವಿಜೇತ ಮಾರ್ಕ್ವೆಜ್‌ನ ತಾತ್ವಿಕತೆಯ ನೆರವೂ ಈ ಚಳವಳಿಗೆ ದೊರಕಿತು.

ಭಾರತದಲ್ಲಿ ಕೂಡಾ ಪ್ರಧಾನವಾಹಿನಿ ಚಿತ್ರಗಳಿಗೆ ಪರ್ಯಾಯವಾಗಿ ಇಂತಹ ಚಳವಳಿಗಳಿಂದ ಸ್ಫೂರ್ತಿ ಪಡೆದ ಚಿತ್ರಗಳು ಕಾಣಿಸಿಕೊಂಡವು. ೧೯೪೬ರಲ್ಲಿ ತೆರೆಕಂಡ ಕೆ.ಎ.ಅಬ್ಬಾಸ್ ಅವರ 'ಧರ್ತೀಕೆ ಲಾಲ್', ಚೇತನ್ ಆನಂದ್‌ರ 'ನೀಚ ನಗರ್', ಚಿತ್ರಗಳಲ್ಲೇ ಇದನ್ನು ಸೂಕ್ಷ್ಮವಾಗಿ ಗುರುತಿಸಬಹುದು. ನಂತರ ವಿ. ಶಾಂತಾರಾಮ್ ಅವರ 'ದಹೇಜ್', 'ದೋ ಆಂಖೇ ಬಾರಾ ಹಾತ್' ಮೊದಲಾದವು ಪ್ರಧಾನವಾಹಿನಿಯಿಂದ ಭಿನ್ನದಾರಿ ತುಳಿಯಲು ಪ್ರಯತ್ನಿಸಿದವು. ಇದೇ ಸಂದರ್ಭದಲ್ಲಿ ೧೯೫೨ರಲ್ಲಿ ಅಂತರರಾಷ್ಟ್ರೀಯ ಚಿತ್ರೋತ್ಸವ ಭಾರತದ ನಾಲ್ಕು ಮಹಾನಗರಗಳಲ್ಲಿ ನಡೆಯಿತು. ಆಗ ಜಗತ್ತಿನ ವಿಶ್ವರೂಪವೇ ಭಾರತದ ಚಿತ್ರ ನಿರ್ಮಾತೃಗಳಿಗೆ ಲಭ್ಯವಾಯಿತು. ಇದರ ಪ್ರೇರಣೆಯಿಂದ ಮೆಹಬೂಬ್ ಖಾನ್‌ರ 'ಮದರ್ ಇಂಡಿಯಾ', ಹೃಷಿಕೇಶ್

ಮುಖರ್ಜಿಯವರ 'ಮುಸಾಫಿರ್', ಗುರುದತ್‌ರ 'ಪ್ಯಾಸಾ', 'ಕಾಗಜ್ ಕೆ ಫೂಲ್' ಮುಂತಾದ ಸೂಕ್ಷ್ಮ ಸಂವೇದನೆಯ ಚಿತ್ರಗಳು ತೆರೆ ಕಂಡವು. ಇವೆಲ್ಲ ಹಿನ್ನೆಲೆಯಲ್ಲಿ ೧೯೫೫ರಲ್ಲಿ ತೆರೆಕಂಡ ಸತ್ಯಜಿತ್ ರಾಯ್ ಅವರ 'ಪಥೇರ್ ಪಾಂಚಾಲಿ' ಚಿತ್ರರಂಗಕ್ಕೆ ಹೊಸ ಅರಿವಿನ ಸ್ಪಷ್ಟ ಕಾಣಿಕೆ ನೀಡಿತು. ರಾಯ್ ಅವರು ಚಿತ್ರ ನಿರ್ಮಾಣದ ಜೊತೆಜೊತೆಗೆ ಚಿತ್ರ ಸಮಾಜಗಳ ಮೂಲಕ ಹೊಸ ಚಿತ್ರ ಸಂಸ್ಕೃತಿಯು ಭಾರತದಾದ್ಯಂತ ಹರಡುವಂತ ಮಾಡಿದರು. ಭಾರತದ ಬಹುತೇಕ ಎಲ್ಲ ಭಾಷೆಯ ಚಿತ್ರಗಳಲ್ಲೂ ಇದರ ಪ್ರಭಾವ ಕಾಣಿಸಲಾರಂಭಿಸಿತು. ಇದೇ ಹೊತ್ತಿಗೆ ಭಾರತದಾದ್ಯಂತ ಸಾಹಿತ್ಯ, ಸಂಸ್ಕೃತಿಯ ಎಲ್ಲ ಅಭಿವ್ಯಕ್ತಿ ಮಾರ್ಗಗಳಲ್ಲೂ ಹೊಸ ಆಂದೋಲನವಿತ್ತು. ಸ್ವಾತಂತ್ರ್ಯೋತ್ತರ ಭಾರತದಲ್ಲಿನ ಅನೇಕ ಬದಲಾವಣೆಗಳು ಭ್ರಮನಿರಸನಗಳು ಹೊಸ ತುಡಿತಗಳನ್ನು ಕೆದರಿದವು. ಹೀಗೆ ಸಿನಿಮಾ ಕ್ಷೇತ್ರದಲ್ಲಿ 'ಹೊಸ ಅಲೆ' ಚಳವಳಿಗೆ ದೇಶವ್ಯಾಪಿ ಸ್ವರೂಪ ಬಂದಿತು.

ಕನ್ನಡ ಚಿತ್ರರಂಗ ಆರಂಭದಲ್ಲಿ ಬಹುತೇಕ ಅನುಕರಣೆಯ ನೆರಳಿನಲ್ಲೇ ಸಾಗಿತ್ತು. ಪರಾವಲಂಬನೆ ಅನಿವಾರ್ಯವಾಗಿದ್ದರೂ ಸ್ವಂತಿಕೆಯ ಪ್ರಯತ್ನ ಅಲ್ಲಲ್ಲಿ ಕಾಣಲಾರಂಭಿಸಿತ್ತು. ಅರುವತ್ತರ ದಶಕದಲ್ಲೇ ಎಸ್.ಲಕ್ಷ್ಮೀನಾರಾಯಣ್, ಜಿ.ವಿ.ಅಯ್ಯರ್, ಪುಟ್ಟಣ್ಣ ಕಣಗಾಲ್ ಮೊದಲಾದ ನಿರ್ದೇಶಕರು ಚಿತ್ರಗಳ ಅಭಿವ್ಯಕ್ತಿಯಲ್ಲಿ ಕ್ಲೀಷೆಯಾಗುತ್ತಿದ್ದ ನುಡಿಗಟ್ಟುಗಳನ್ನು ಬದಲಿಸಲಾರಂಭಿಸಿದ್ದರು. ಇದೇ ಹೊತ್ತಿಗೆ ಎಪ್ಪತ್ತರ ದಶಕದಲ್ಲಿ ನವ್ಯ ಸಾಹಿತ್ಯ ಚಳವಳಿ ತೀವ್ರವಾಯಿತು. ಈ ಚಳವಳಿ ಮೂಡಿಸಿದ್ದ ಹೊಸ ಸಂವೇದನೆ ಎಲ್ಲ ಪ್ರಕಾರಗಳಲ್ಲೂ ಕಾಣಿಸಿಕೊಳ್ಳಲಾರಂಭಿಸಿತು. ಈ ಚಳವಳಿಯ ಪ್ರಮುಖ ಕಾದಂಬರಿಯಾದ ಯು.ಆರ್. ಅನಂತಮೂರ್ತಿಯವರ 'ಸಂಸ್ಕಾರ'ವನ್ನು ಪಟ್ಟಾಭಿರಾಮರೆಡ್ಡಿಯವರು ಚಲನಚಿತ್ರವಾಗಿಸಿದರು. ಇಲ್ಲಿ ತೊಡಗಿಕೊಂಡ ಗಿರೀಶ್ ಕಾರ್ನಾಡ್, ಪಿ.ಲಂಕೇಶ್, ಸ್ನೇಹಲತಾ ರೆಡ್ಡಿ, ಕಲಾ ನಿರ್ದೇಶಕ ಎಸ್.ಜಿ. ವಾಸುದೇವ್, ಸಂಗೀತ ನಿರ್ದೇಶಿಸಿದ ರಾಜೀವ ತಾರಾನಾಥ್ ಇವರೆಲ್ಲ ನವ್ಯದ ಪರಂಪರೆಯನ್ನು ಒಪ್ಪಿಕೊಂಡವರು. ಸಿನಿಮಾದಂಥ ಮಾಧ್ಯಮದಲ್ಲೂ ಆ ಹೊಸ ಅರಿವು ಮೂಡಿಸಬೇಕೆಂಬ ತುಡಿತ ಅಲ್ಲಿತ್ತು. 'ಸಂಸ್ಕಾರ'ವನ್ನು ಹಿಂಬಾಲಿಸಿ 'ವಂಶವೃಕ್ಷ', 'ಸಂಕಲ್ಪ', 'ಚೋಮನದುಡಿ', 'ಕಾಡು', 'ಒಂದಾನೊಂದು ಕಾಲದಲ್ಲಿ', 'ಗ್ರಹಣ' ಮೊದಲಾದ ಚಿತ್ರಗಳು ಸಾಲುಸಾಲಾಗಿ ಬಂದವು. 'ಘಟಶ್ರಾದ್ಧ' ಅವರೆಗಿನ ಪ್ರಯೋಗ ಕುತೂಹಲವನ್ನು ಮೀರಿ ಮಾಧ್ಯಮದ ಸಾಧ್ಯತೆಗಳನ್ನು ಸಮರ್ಥವಾಗಿ ದುಡಿಸಿಕೊಂಡ-ನಿಜವಾದ ಅರ್ಥದಲ್ಲಿ 'ಹೊಸ ಅಲೆ'ಯ ಚಿತ್ರವಾಗಿ ತೆರೆಗ ಬಂತು. ಒಳ್ಳೆಯ ಚಿತ್ರಗಳು ಎಂದರೆ ಕನ್ನಡ ಚಿತ್ರಗಳು ಎಂದು ದೇಶವ್ಯಾಪೀ ಮೆಚ್ಚುಗೆ ಪಡೆಯುವಂತೆ ಈ ಹೊಸ ಶೈಲಿಯ ಚಿತ್ರ ಚಳವಳಿ ನಮ್ಮಲ್ಲಿ ಬೆಳೆಯಿತು. ಎಂಬತ್ತರ ದಶಕದಿಂದೀಚೆಗೆ ಕ್ರಮೇಣ ಕರಗುತ್ತ ಬಂದಿದೆ. ಆದರೆ ಅದರ ಅಂತಃಸ್ಸತ್ವವೇನೂ ಮರೆಯಾಗಲಿಲ್ಲ. ಬಹುಮುಖ್ಯವಾಗಿ ಹೊಸ ಅಲೆ ಚಿತ್ರಗಳ ಚಿಂತನಾಕ್ರಮ ಕನ್ನಡ ಚಿತ್ರಗಳ ನುಡಿಗಟ್ಟಿಗೆ ಸೇರಿಹೋಗಿದೆ. ಈಗಾಗಲೇ ಪ್ರಸ್ತಾಪಿಸಿದ ಹಾಗೆ ಕನ್ನಡ ಹೊಸ ಅಲೆ ಚಿತ್ರಗಳು ಪಾಶ್ಚಾತ್ಯ ಹೊಸ ಅಲೆ ಚಿತ್ರಗಳಿಂದ ಪ್ರೇರಿತವಾದದ್ದಕ್ಕಿಂತ ಹೆಚ್ಚು ನಮ್ಮ ನವ್ಯ ಸಾಹಿತ್ಯದ ಪ್ರೇರಣೆ ಪಡೆದವು. ನೇರ ಕಥಾ ನಿರೂಪಣೆಗೆ ಬದಲಾಗಿ ಮೂಡಿ ಬಂದ ಪ್ರತಿಮಾ ವಿಧಾನದಲ್ಲಿ ಗಿರೀಶ್ ಕಾಸರವಳ್ಳಿಯವರಂತಹ ನಿರ್ದೇಶಕರನ್ನು ಬಿಟ್ಟರೆ ಬಹುತೇಕ ದೃಶ್ಯ ಸಾಧ್ಯತೆಗಿಂತ ಸಾಹಿತ್ಯಕ ಸಾಧ್ಯತೆಯೆ ಹೆಚ್ಚಾಗಿ ಕಂಡು ಬಂತು. ದೃಶ್ಯ ಸಂಯೋಜನೆಗಳಲ್ಲಿ ಕೂಡಾ ಸಾಹಿತ್ಯಕ ಅರ್ಥವಂತಿಕೆ ಹೆಚ್ಚಾಗಿತ್ತು.

ಜಿ.ವಿ.ಅಯ್ಯರ್ ಪ್ರಧಾನವಾಹಿನಿಯಿಂದ ಬಂದವರೇ. ಆದರೆ ಅವರು ರಂಗಭೂಮಿಯ ದಿನಗಳಿಂದಲೂ ಹೊಸ ಅಭಿವ್ಯಕ್ತಿ ವಿಧಾನಕ್ಕಾಗಿ ತುಡಿದವರು. ಇದ್ದ ಅವಕಾಶದಲ್ಲೇ ಪ್ರಯೋಗ ಮಾಡುತ್ತ ಬಂದವರು. ಅವರ ದಾಹವನ್ನು ತಣಿಸಲೆಂದೇ ಬಂದಿತೋ ಎಂಬಂತೆ ಹೊಸ ಅಲ ಅವರನ್ನು ತೊಡಗಿಸಿಕೊಂಡಿತು. ಅನಂತರದ ಅವರ ಚಲನಚಿತ್ರದಲ್ಲಿಯ ಎಲ್ಲ ಪ್ರಯತ್ನಗಳೂ ಪ್ರಯೋಗಗಳೇ ಆದವು. ಅವರು ಅಭಿವ್ಯಕ್ತಿಗೆ ಬಳಸಿದ ಪ್ರತಿಮೆ-ಸಂಕೇತಗಳು ನವ್ಯ ಸಾಹಿತ್ಯ, ಅಸಂಗತ ನಾಟಕಗಳ ಆಳದಿಂದ ಬಗೆದು ತೆಗೆದಂಥವೇ ಆಗಿದ್ದವು.

ಅಯ್ಯರ್ ಅವರದು ಅನೆ ನಡೆದ ಹಾದಿಯಂತೆ, ಅವರೆಗಿನ ಏಕತಾನತೆಯನ್ನೆಲ್ಲ ಧ್ವಂಸಮಾಡುತ್ತ ನಡೆದರು. ಆದರ ಸಂಸ್ಕೃತಿ-ಪರಂಪರೆ, ಬದುಕಿನ ಶ್ರೇಷ್ಠ ಮೌಲ್ಯಗಳನ್ನು ಉಳಿಸಿಕೊಳ್ಳುವುದಕ್ಕಾಗಿ ಈ ಅಭಿವ್ಯಕ್ತಿ ವಿಧಾನವನ್ನು ಬಳಸಿಕೊಳ್ಳುವ ಪ್ರಯತ್ನವಿತ್ತು. ಹೊಸ ಅಲೆ ಸಂಗೀತ - ಮುಖ್ಯವಾಗಿ ಗೀತೆಗಳು ವನ್ನು ದೂರ ಇಟ್ಟರೆ ಅಯ್ಯರ್ ಸಂಗೀತವೇ ಪ್ರಧಾನವಾದ 'ಹಂಸಗೀತೆ' ಚಿತ್ರ ಕೊಟ್ಟರು. ಅದರೆ ಈ ಚಿತ್ರದ ಪ್ರತಿಯೊಂದು ಚಿತ್ರಿಕೆಯೂ ಸಂಕೇತ-ಪ್ರತಿಮೆಗಳ ಮೂಲಕ ಹೊಸ ರೀತಿಯಲ್ಲಿ ಅರ್ಥೈಸುತ್ತಿತ್ತು. ಸಂಗೀತ-ನೃತ್ಯಗಳ ನಿಷೇಧ ತಪ್ಪು, ಅವು ಭಾರತೀಯ ಸಂಸ್ಕೃತಿ ವಿಶ್ವಕ್ಕೆ ಕೊಟ್ಟ ಬಹುದೊಡ್ಡ ಕೊಡುಗೆ ಎಂಬ ನಿಲುವನ್ನು ಎತ್ತಿ ಹಿಡಿದರು. ಇದು ಮತ್ತು ಇದರಾಚೆಗಿನ ವಿಸ್ತಾರವನ್ನು ಸಂಗೀತದ ಮೂಲಕ ಕಾಣಿಸಿದವರು ಬಿ.ವಿ.ಕಾರಂತ, ಚಂದ್ರಶೇಖರ ಕಂಬಾರ. ಅಯ್ಯರ್, ಕಾರಂತ, ಕಂಬಾರರಿಗೆ ರಂಗಭೂಮಿ, ಜನಪದ, ಚಿತ್ರಕಲೆ, ಸಾಹಿತ್ಯ ಮೊದಲಾದ ಹತ್ತಾರು ವಿಷಯಗಳಲ್ಲಿ ಇದ್ದ ಆಸಕ್ತಿ ಇಂಥದನ್ನೆಲ್ಲ ಸಾಧ್ಯವಾಗಿಸಿತ್ತು. ಜಿ.ವಿ.ಅಯ್ಯರ್ ಇಲ್ಲಿಂದಲೂ ಮುಂದೆ ಸಾಗಿದರು. ಅವರ ಅಧ್ಯಯನಾಸಕ್ತಿಯ ಫಲವಾಗಿ ಅವರು ಹೆಚ್ಚು ಆಕರ್ಷಿತರಾದದು ಭಾರತೀಯ ತತ್ವಚಿಂತನೆಗಳತ್ತ. ನವ್ಯ ಸಾಹಿತ್ಯದ ಪ್ರತಿಮಾ ವಿಧಾನ ದೃಶ್ಯ ಪ್ರತಿಮೆಗಳಾಗಿ ಪರಿವರ್ತಿತವಾದಾಗ ತತ್ವ-ಪರಮಾರ್ಥ ಚಿಂತನೆಗಳ ಅಭಿವ್ಯಕ್ತಿಗೆ ಸಮರ್ಥ ಪರಿಕರವೆಂದು ಗ್ರಹಿಸಿದರು. ಸೂತ್ರಗಳನ್ನೆಲ್ಲ ಮುರಿದು, ಹೊಸ ವ್ಯಾಕರಣವನ್ನು ಅಳವಡಿಸುವುದೇ ಮೊದಲಾದ ವಿಶಿಷ್ಟ ವಿಧಾನವೊಂದು 'ಕುದುರೆ ಮೊಟ್ಟೆ', 'ವಾಲ್ ಪೋಸ್ಟರ್' ಮೊದಲಾದ ವಿಫಲ ಪ್ರಯತ್ನಗಳಲ್ಲೇ ಕಂಡುಬಂದವು. ಅದರೆ ಮಹಾಕಾವ್ಯ ರೂಪುಗೊಳ್ಳುವಾಗ ಅದರೊಳಕ್ಕೆ ಸೇರಿಹೋಗುವ ಉಪಕಥೆಗಳ ಹಾಗೆ ಈ ವಿಫಲ ಪ್ರಯತ್ನಗಳು ಮುಂದಿನ ದಾರಿಗೆ ಚಿಮ್ಮು ಹಲಗೆಗಳಾದವು. ಆದರೆ ಮತ್ತೆ ಮತ್ತೆ ಅದೇ ಹಾದಿಯಾಗಿದ್ದರಿಂದ ನವಕಲು ಅನ್ನಿಸಿದ್ದೂ ಹೌದು. ಆದಿಶಂಕರಾಚಾರ್ಯ, ಮಧ್ವಾಚಾರ್ಯ, ರಾಮಾನುಜಾಚಾರ್ಯಾ ಹಾಗೂ ಭಗವದ್ಗೀತೆ ಚಿತ್ರಗಳು ವಿಭಿನ್ನ ಭಾಷೆಯಲ್ಲಿ ಬಂದರೂ ಶಾಬ್ದಿಕ ಭಾಷೆಯ ಮಿತಿ ಹಾಕುವ ಅಗತ್ಯವೇ ಬೀಳಲಿಲ್ಲ.

ನಿರಂತರವಾಗಿ ಒಂದು ಗೊತ್ತಾದ ಜಾಡಿನಲ್ಲಿ ಬದಲಾಗುತ್ತಲೇ ಇದ್ದ ಸಂದರ್ಭಕ್ಕೆ ಸ್ವಲ್ಪಸ್ವಲ್ಪವಾಗಿಯೇ ಹೊಂದಿಕೊಳ್ಳುತ್ತ ಯಾವುದೇ ರಾಜಿ-ಒಪ್ಪಂದಗಳಿಲ್ಲದೆ ಈ ಮಾಧ್ಯಮದಲ್ಲಿ ಕೆಲಸ ಮಾಡಿದ ಗಿರೀಶ್ ಕಾಸರವಳ್ಳಿ ಅವರಿಗೆ ಇದು ಪ್ರಯೋಗವಾಗಲಿಲ್ಲ. ತಪ್ಪುಗಳ ಮೂಲಕ ಕಲಿಯುವ ಅಗತ್ಯವೂ ಇರಲಿಲ್ಲ. ಹೀಗಾಗಿ ಖಚಿತವಾದ ಒಂದು ಆಕಾರ ಅವರ ಕೈಯಳತೆಯಲ್ಲಿತ್ತು. ಯಾವ ಹಣೆಪಟ್ಟಿಯನ್ನು ಕೊಟ್ಟುಕೊಳ್ಳದೆಯೇ ಕೆಲಸ ಮಾಡಿದ ಅವರು ಸಮಾಜಮುಖಿಯಾಗಿ ದುಡಿದದ್ದೇ ವಿಶೇಷ. ಅವರು ಸಂಕೇತ-ಪ್ರತಿಮೆಗಳಿಗಾಗಿ ವಸ್ತುವನ್ನು ಆಯ್ದವರಲ್ಲ, ಅವರ ನಿರೂಪಣೆಯೇ ಎಲ್ಲವನ್ನು ಒಳಗೊಂಡುಬಿಡುವಂಥದ್ದು. ಅವರ ವಸ್ತುವಿನ ಆಯ್ಕೆಯಲ್ಲೂ ವಿಶೇಷವಿತ್ತು. ಅವರ ಚಿತ್ರಗಳು ಪ್ರಧಾನವಾಹಿನಿ ದಿವ್ಯ ನಿರ್ಲಕ್ಷ್ಯ ತೋರಿದ್ದ, ಅಥವಾ ವಿಕೃತಗೊಳಿಸಿದ್ದ ಸ್ತ್ರೀಯರು, ದುರ್ಬಲ ವರ್ಗದ ನೋವುಗಳಿಗೆ ಸ್ಪಂದಿಸಿದ್ದವು.

ಕೆ.ಎಂ. ಶಂಕರಪ್ಪ, ಎಂ.ಬಿ.ಎಸ್. ಪ್ರಸಾದ್, ಟಿ.ಎಸ್.ರಂಗಾ, ನಾಗಾಭರಣ, ಚಂದ್ರಶೇಖರ ಕಂಬಾರ, ಗಿರೀಶ್ ಕಾರ್ನಾಡ್, ಬರಗೂರು ರಾಮಚಂದ್ರಪ್ಪ, ವಿ.ಆರ್.ಕೆ. ಪ್ರಸಾದ್, ಮೊದಲಾಗಿ ಹಲವರು ಈ ನಿರೂಪಣಾ ವಿಧಾನವನ್ನು ಒಲಿದರು. ಕೆಲವರು ಮುಂದುವರಿಸದೆ ತಣ್ಣಗಾದರೆ, ಕೆಲವರು ಆ ಜಾಡು ಬಿಟ್ಟು ಮಧ್ಯಮ ಮಾರ್ಗ ಹಿಡಿದರು. ಅವರುಗಳಲ್ಲಿ ಮಾಧ್ಯಮ ನಿಷ್ಠೆ-ಹೊಸ ನಿರೂಪಣಾ ವಿಧಾನದಲ್ಲಿದ್ದ ತುಡಿತ ಕುಗ್ಗಿರಲಿಲ್ಲ.

ಇವೆರಡರ ನಡುವೆ ಸುರೇಶ್ ಹೆಬ್ಳೀಕರ್, ಪಿ.ಎನ್.ಶ್ರೀನಿವಾಸ್ ಮೊದಲಾದವರ ಮಧ್ಯಮ ವರ್ಗವೊಂದು ಬೆಳೆದು ಬಂದಿದೆ. ಸದಾನಂದ ಸುವರ್ಣ, ಜಯಮಾಲಾ, ಸೌಂದರ್ಯರಂಥ ಒಂದಿಬ್ಬರು ಸಾಹಸಿಗಳನ್ನು ಬಿಟ್ಟರೆ ಸರ್ಕಾರೀ ಸಾಲದ ವಿನಾ ಬೇರೆ ಬಂಡವಾಳವಿಲ್ಲದ ಇಂಥ ಚಿತ್ರಗಳಿಗೆ ಭವಿಷ್ಯವಿದೆಯೇ ಎಂದು ಕೇಳುವಂತಾಗಿದೆ.

ಕನ್ನಡದ ಹೆಮ್ಮೆ ಅನ್ನಿಸುವಂಥ ಪ್ರಯತ್ನ ಪ್ರೇಮಾ ಕಾರಂತರದ್ದು. 'ಫಣಿಯಮ್ಮ' ದಂಥ ಚಿತ್ರ ನಿರ್ದೇಶಿಸಿದ ಸಾಹಸಿ ಆಕೆ. ಯಶಸ್ಸು ಇದ್ದಾಗಲೂ ಮತ್ತೊಂದು ಪ್ರಯತ್ನಕ್ಕೆ ಅವಕಾಶ ಕೊಡಲಾಗದ ಬಡತನ ನಮ್ಮದು - ಚಿತ್ರೋದ್ಯಮದ್ದು. 'ಹೊಸ ಅಲೆ' ಹೆಸರಿನಲ್ಲಿ ಚಿತ್ರಗಳು ಸಾಲುಸಾಲಾಗಿ ಬಂದವು. ಅಪಹಾಸ್ಯಕ್ಕೂ ಗುರಿಯಾದವು. ಅರ್ಧಕ್ಕೇ ನಿಂತವು, ತೆರೆ ಕಾಣದೇ ಕೂತವು. ಪ್ರಶಸ್ತಿಯಾದರೂ ಬಂದರೆ ಸ್ವಲ್ಪ ಗೌರವ ಉಂಟು, ಇಲ್ಲವಾದರೆ ಹೇಳ ಹೆಸರಿಲ್ಲದ ಸ್ಥಿತಿ. ಅಂತಿಮ ಗುರಿ ತಲುಪಲು, ನೆಲೆ ನಿಲ್ಲಲು ಸಾಧ್ಯವಾದದ್ದು ಹೊಸ ಅಲೆ ಅಭಿವ್ಯಕ್ತಿ ವಿಧಾನಕ್ಕೆ ಶಾಸ್ತ್ರೀಯವಾಗಿ ಬದ್ಧರಾಗಿದ್ದ ಒಬ್ಬಿಬ್ಬರಿಗೆ ಮಾತ್ರ. ಹೀಗಾಗಿ ಒಂದು ಪರಂಪರೆಯಾಗಬಹುದಾಗಿದ್ದ ಚಳವಳಿ ಅರ್ಥ ಕಳೆದುಕೊಂಡಿತು. ಏನನ್ನು ಬೇಕಾದರೂ ವ್ಯಂಗ್ಯ ಮಾಡುತ್ತಲೇ ಹೊಟ್ಟೆಯೊಳಗಿಟ್ಟುಕೊಂಡು ತನಗೇ ತಿಳಿಯದಂತೆ ತನ್ನ ಅನುಕೂಲಕ್ಕೆ ಬಳಸಿಕೊಳ್ಳುವ ಪ್ರಧಾನವಾಹಿನಿಯ ಚಿತ್ರಗಳಲ್ಲಿ ಹೊಸ ಅಲೆಯಲ್ಲಿ ಮೊಳಕೆಯೊಡೆದು ಚಿಗುರಿದ್ದ ಅನೇಕ ಅಭಿವ್ಯಕ್ತಿ ವಿಧಾನಗಳು ಫಲ ಕೊಡತೊಡಗಿದವು. ಹೊಸ ತಂತ್ರಜ್ಞಾನ ಮತ್ತು ಶಾಸ್ತ್ರೀಯವಾಗಿ ಅಧ್ಯಯನ ಮಾಡಿದ ತಂತ್ರಜ್ಞರೂ ಪ್ರಧಾನವಾಹಿನಿಯಲ್ಲೇ ತೊಡಗಿಕೊಂಡ ಮೇಲೆ ಹೊಸ ಅಲೆಯಲ್ಲಿ ಗುರುತಿಸಿಕೊಂಡಿದ್ದ ಅನೇಕ ತಾಂತ್ರಿಕ ಅಂಶಗಳು ಇಲ್ಲಿ ಬೇರೆ ಬೇರೆ ಕಾರಣಗಳಿಗೆ ಬಳಕೆಯಾಗತೊಡಗಿದವು.

ಒಟ್ಟಿನಲ್ಲಿ ಹೇಳಬೇಕೆಂದರೆ ಹೊಸ ಅಲೆ ಚಳವಳಿ ಕನ್ನಡ ಚಿತ್ರರಂಗದಲ್ಲಿ ಮೂಡಿಸಿದ ಪ್ರಭಾವ-ಪರಿಣಾಮ ಸುಲಭವಾಗಿ ತಳ್ಳಿ ಹಾಕುವಂಥದ್ದಲ್ಲ. ಪ್ರಧಾನವಾಹಿನಿ ಚಿತ್ರಗಳಲ್ಲಿಯೂ ಪ್ರತಿಮಾ ವಿಧಾನ ಬಳಕೆಯಾಗುತ್ತಲೇ ಇದೆ. ಇಲ್ಲಿ ಅರ್ಥವಂತಿಕೆಗಿಂತ ಬೇರೆಯದೇ ಆದ ಕಾರಣಗಳಿವೆ. ರವಿಚಂದ್ರನ್ ಚಿತ್ರಗಳಲ್ಲಿ ಇದನ್ನು ಗಮನಿಸಬಹುದು. ಹಾಗೆಯೇ ಹೊಸ ಅಲೆಯ ರಾಚನಿಕ ಸ್ವರೂಪದಲ್ಲೂ ರಂಜನೆ ಬೆರೆಸುವ ಉದಾಹರಣೆಗಳು ದಟ್ಟವಾಗುತ್ತಿವೆ. ಹೀಗಾಗಿ ಪ್ರತ್ಯೇಕತೆಯ ಪದಗುಚ್ಛ ಹಂತಹಂತವಾಗಿ ಅಸ್ತಿತ್ವ ಕಳೆದುಕೊಳ್ಳುತ್ತಿದೆ. ಬೆರಳೆಣಿಕೆಯಷ್ಟು ಪ್ರಯತ್ನಗಳು ಮಾತ್ರ 'ದ್ವೀಪ'ಗಳಂತೆ ಮೂಲ ಶುದ್ಧತೆ ಉಳಿಸಿಕೊಳ್ಳಲು ಹೆಣಗುತ್ತಿವೆ.

ಇಂದು ಹೊಸ ಅಲೆಯ ಚಿತ್ರಗಳು ಉತ್ತೇಜಕ ಎನಿಸುತ್ತಿಲ್ಲ. ಹೆಚ್ಚು ಸಂಖ್ಯೆಯಲ್ಲಿ ಪ್ರೇಕ್ಷಕರನ್ನು ಸೆಳೆಯಲಾರದೆಅವು ಮುಗ್ಗರಿಸುತ್ತಿವೆ. ಈಗಿರುವ ಚಿತ್ರ ಮಂದಿರಗಳವರ ವ್ಯಾಪಾರಿ ದೃಷ್ಟಿಯಿಂದಾಗಿ ಹೊಸ ಅಲೆಯ ಚಿತ್ರಗಳಿಗೆ ಪ್ರದರ್ಶನಾವಕಾಶ ದೊರೆಯುತ್ತಿಲ್ಲ. ಆ ಬಗೆಯ ಚಿತ್ರಗಳ ಪ್ರದರ್ಶನಕ್ಕಾಗಿಯೇ ಸಣ್ಣ ಪ್ರಮಾಣದ ಚಿತ್ರಮಂದಿರಗಳ ನಿರ್ಮಾಣ ಅಗತ್ಯವಾಗಿದೆ. ಅಲ್ಲದೆ ಜನರನ್ನು ಸೆಳೆಯಲು ಸುಲಭ ಪ್ರವೇಶ ದರಬೇಕು. ಚಿತ್ರ ಸಮಾಜಗಳು ಹೊಸ ಅಲೆಯ. ಚಿತ್ರಗಳನ್ನು ಜನರಲ್ಲಿಗೆ ಕೊಂಡೊಯ್ಯಲು ಈಗಿರುವ ಏಕೈಕ ಸಾಧನವಾಗಿವೆ.

• • •

ಭಾರತೀಯ ಚಿತ್ರೋದ್ಯಮದಲ್ಲೇ ಅಭಿರುಚಿ ನಿರ್ಮಾಣ, ಮುಖ್ಯವಾಗಿ ವಿಶ್ವದಾದ್ಯಂತ ಚಿತ್ರರಂಗದಲ್ಲಿ ಆಗುತ್ತಿರುವ ಬದಲಾವಣೆಗಳು, ಪ್ರಯೋಗಗಳು ಎಲ್ಲವನ್ನು ಅರ್ಥಮಾಡಿಸುವ ಗಂಭೀರ ಪ್ರಯತ್ನಗಳಾದದ್ದು ಚಿತ್ರಸಮಾಜಗಳಿಂದ. ಸತ್ಯಜಿತ್ ರಾಯ್ ಅಂಥವರು ಬೆಂಬಲಿಸಿದ ಚಿತ್ರ ಸಮಾಜ ಒಂದು ವ್ಯವಸ್ಥಿತ ದಾರಿಯಲ್ಲಿ ನಡೆದು ಬಂತು. ಹೆಗ್ಗೋಡಿನಲ್ಲಿ ಕೆ.ವಿ.ಸುಬ್ಬಣ್ಣನವರಂತೂ ಚಲನಚಿತ್ರ ಶ್ರೀಸಾಮಾನ್ಯನನ್ನು ತಲುಪಬಲ್ಲುದು ಎಂಬುದನ್ನು ಪ್ರತ್ಯಕ್ಷವಾಗಿಸಿಬಿಟ್ಟರು. ಚಿತ್ರ ಸಮಾಜಗಳು 'ಹೊಸಅಲೆ' ಚಿತ್ರಗಳಿಗೆ, ಮುಖ್ಯವಾಗಿ ಒಳ್ಳೆಯ ಚಿತ್ರಗಳನ್ನು ಪ್ರೇಕ್ಷಕ ಗಂಭೀರವಾಗಿ ಗ್ರಹಿಸುವ ದಿಕ್ಕಿನಲ್ಲಿ ಕೆಲಸ ಮಾಡಿವೆ. ಮಯೂರ, ಬೆಂಗಳೂರು ಫಿಲಂ ಸೊಸೈಟಿ, ಸುಚಿತ್ರ, ವೀಕ್ಷಕ ಮೊದಲಾದ ಕರ್ನಾಟಕದ ಚಿತ್ರ ಸಮಾಜಗಳು ಚಲನಚಿತ್ರ ರಸಗ್ರಹಣದ ವಿಷಯದಲ್ಲಿ ಬಹಳಷ್ಟು ಗಮನಾರ್ಹ ಕೆಲಸ ಮಾಡಿವೆ. ಈ ಎಲ್ಲ ಚಿತ್ರ ಸಮಾಜಗಳ ಕಾರ್ಯಚಟುವಟಿಕೆಯ ಹಿಂದೆ ಹಿರಿಯ ಚಿತ್ರನಿರ್ದೇಶಕ ಎಂ.ವಿ. ಕೃಷ್ಣಸ್ವಾಮಿಯವರ ಅನವರತ ಪರಿಶ್ರಮ, ದೂರದೃಷ್ಟಿಗಳಿದ್ದವು. ಚಿತ್ರಸಮಾಜಗಳಿಂದ ಅನುಕೂಲಗಳೇನೆಂದು ಚಿತ್ರೋದ್ಯಮ ಸರಕಾರಗಳು ಗುರುತಿಸಿಕೊಳ್ಳಲಿಲ್ಲ. ಅವನ್ನು ಉಳಿಸಿಕೊಳ್ಳುವ ಎಚ್ಚರ ಇದ್ದಿದ್ದರೆ ಈ ಹೊತ್ತು ಚಿತ್ರೋದ್ಯಮ ತನ್ನ ಪ್ರೇಕ್ಷಕ ಯಾರು ಎಂದು ಗುರುತಿಸಲಾಗದ ಅತಂತ್ರ ಸ್ಥಿತಿಗೆ ಬರುತ್ತಿರಲಿಲ್ಲ. ಪ್ರೇಕ್ಷಕನ ಹುಡುಕಾಟ ಎಂದರೆ ಅವನನ್ನು ಪ್ರತಿ ಕ್ಷಣವೂ ಉತ್ಕಂಠ ಸ್ಥಿತಿಯಲ್ಲಿಟ್ಟು ಉದ್ರೇಕಗೊಳಿಸುವುದು ಎಂದು ವ್ಯಾಖ್ಯಾನಿಸಿಕೊಳ್ಳುವ ನಿಲುವಿಗೂ ಬರಬೇಕಾಗಿರಲಿಲ್ಲ. ಆಧುನಿಕ ತಂತ್ರಜ್ಞಾನ, ಹೊಸ ರೀತಿಯಲ್ಲಿ ನಿರೂಪಣೆ ಮುಂತಾದ ತಾನು ಮಾಡಿದ ಯಾವುದೇ ಪ್ರಯೋಗ ಪ್ರೇಕ್ಷಕನನ್ನು ತಲುಪುತ್ತದೊ ಇಲ್ಲವೋ ಎಂಬ ಆತಂಕಗಳನ್ನು ದೂರವಿಡಬಹುದಿತ್ತು. ಸಿದ್ಧ ಪ್ರೇಕ್ಷಕನನ್ನು ಪಡೆದುಕೊಳ್ಳಬಹುದಿತ್ತು. ಈಗಲೂ ತಾಲ್ಲೂಕು ಕೇಂದ್ರಗಳಲ್ಲಿ, ಗ್ರಾಮ ಪರಿಸರದಲ್ಲಿ ವೀಕ್ಷಕರಿಗೆ ರಸಗ್ರಹಣದ ಸ್ಥೂಲ ಪರಿಚಯವನ್ನಾದರೂ ಮಾಡುವುದರಿಂದ ಸ್ವಲ್ಪ ಮಟ್ಟಿಗಾದರೂ ಸಮಸ್ಯೆಗೆ ಪರಿಹಾರ ಸಿಗುವ ಸಾಧ್ಯತೆಯಿದೆ. ಬಳಕೆದಾರ ಯಾರು, ಅವನ ಅಗತ್ಯಗಳೇನು ಎಂದು ಗ್ರಹಿಸದೆ ಉತ್ಪಾದನೆ ಮಾಡಹೊರಟಿರುವುದರಿಂದ ಚಿತ್ರೋದ್ಯಮ ಪ್ರತಿ ಕ್ಷಣವೂ ತಲ್ಲಣಗಳನ್ನನುಭವಿಸುತ್ತಿದೆ.

• • •

ಕಲಾಮಾಧ್ಯಮವೊಂದನ್ನು ನಿಯಂತ್ರಿಸಬೇಕೆ ? ಕಟ್ಟುಪಾಡುಗಳಡಿಯಲ್ಲಿ ಕಲೆ ಅರಳುತ್ತದೆಯೆ ? ಕಲೆಯಾಗಿ ಉಳಿಯುತ್ತದೆಯೆ ಎಂಬುದು ಪ್ರಶ್ನೆ.ಪ್ರಾದೇಶಿಕ ಭಾಷೆ, ವಿಧಿಯಾಚರಣೆ, ಸಂಸ್ಕೃತಿ ಸಂಗತಿಗಳನ್ನು ಅಪಮಾನಿಸುವಂಥವು ಮತ್ತು ಭಾರತೀಯ ಸಂದರ್ಭಕ್ಕೂ - ಅನ್ಯದೇಶೀಯ ರೀತಿಗೂ ಶೀಲ-ಅಶ್ಲೀಲಗಳ ಬಗ್ಗೆ ಗ್ರಹಿಕೆಯಲ್ಲೇ ಅನೇಕ ವ್ಯತ್ಯಾಸಗಳಿರುವುದರಿಂದ ಅತ್ತ ಕಡೆಯಿಂದ ಬರುತ್ತಿದ್ದ ಚಿತ್ರಗಳನ್ನು ವೀಕ್ಷಿಸಿ ತೆರೆಗೆ ಅನುಮತಿ ಕೊಡಬೇಕೆಂದು ಸಮಿತಿಯೊಂದನ್ನು ರಚಿಸಲಾಯಿತು. ಕ್ರಮೇಣ ಅದರ ಸ್ವರೂಪ ಬದಲಾಗುತ್ತ ಬಂದಿತು. ಈ ಹೊತ್ತಿನ 'ಸೆನ್ಸಾರ್' ನಿಯಮಾವಳಿಯವರೆಗೆ ವಿವಾದಗಳು ಅಡಚಣೆಗಳ ಮೂಟೆ ಹೊತ್ತುಕೊಂಡೇ ಬಂದಿದೆ ಸೆನ್ಸಾರ್ ವಿಭಾಗ.

ಕರ್ನಾಟಕದ ಪ್ರಜ್ಞಾವಂತರನೇಕರು ಸೆನ್ಸಾರ್ ಅನ್ನು ವಿರೋಧಿಸುತ್ತಾರೆ. ಸೃಜನಶೀಲತೆಗೆ ಸ್ವನಿಯಂತ್ರಣ ಇರಬೇಕಾಗಲೀ, ಹೇರಬಾರದು ಎಂಬುದು ಒಂದು ವಾದ. ಈ ಹಿನ್ನೆಲೆಯಲ್ಲಿ ಎಂ. ಭಕ್ತವತ್ಸಲ, ಕೆ.ಎಂ. ಶಂಕರಪ್ಪ ಕೋರ್ಟಿನವರೆಗೆ ದೂರು ಕೊಂಡೊಯ್ದರು. ಸಾಂವಿಧಾನಿಕವಾಗಿ ಮೂಲಭೂತ ಬದಲಾವಣೆ ಮಾಡಬೇಕಾಗಿರುವುದರಿಂದ ಇಂಥ ಪ್ರಯತ್ನಗಳು ಸಲೀಸಾಗಿ ಮುಂದೆ ಸಾಗುವುದಿಲ್ಲ. ವಿರೋಧದ ದನಿಗಳೂ ಹೆಚ್ಚು ಇಲ್ಲ.

ಕಾಲಮಾನವನ್ನು ಪರಿಗಣಿಸಿ, ಚಿತ್ರೋದ್ಯಮ ಎದುರಿಸುತ್ತಿರುವ ಪ್ರಬಲ ಪೈಪೋಟಿಯ ಹಿನ್ನೆಲೆಯಲ್ಲಿ ಸೆನ್ಸಾರ್ ನಿಯಮಗಳ ಪುನರ್ರಚನೆಯಾಗಬೇಕಾಗುತ್ತದೆ. ಇಲ್ಲಿಯೂ ಎರಡು ಮೂರು ಹಂತಗಳಿರುವುದರಿಂದ ಒಂದು ಸಮಿತಿಯ ತೀರ್ಮಾನವನ್ನು ಮತ್ತೊಂದು ಸಮಿತಿ ಸಂಪೂರ್ಣವಾಗಿ ಬದಲಾಯಿಸಿ ಬಿಡುವುದರಿಂದ ಸಮಾಜದ ವಿವಿಧ ವಲಯದ ಗಣ್ಯರಿರುವ ಸಮಿತಿಯ ತೀರ್ಮಾನವನ್ನು ಅಲಕ್ಷಿಸಿದಂತಾಗುತ್ತದೆ. ಇದಲ್ಲದೆ ಈ ಸಮಿತಿಗಳಿಗೆ ಆಯ್ಕೆಯಾಗುವ ಸದಸ್ಯರಲ್ಲಿ ಬಹುತೇಕ ಆಳುವ ಸರ್ಕಾರದ ಹತ್ತಿರದವರೇ ಆಗಿರುತ್ತಾರೆ ಮತ್ತು ಅವರಲ್ಲಿ ಅನೇಕರಿಗೆ ಲವಲೇಶವಾದರೂ ಸಂಸ್ಕೃತಿ, ಸಾಹಿತ್ಯ, ಕಲೆಗಳ ಬಗ್ಗೆ ತಿಳಿದಿರುವುದಿಲ್ಲ. ಅಂಥವರು ತೀರ್ಮಾನಿಸುತ್ತಾರೆಂಬುದೂ ಕೂಡಾ ಆ ಕಲೆಗಳಿಗಾಗುವ ಅವಮಾನ ಎಂದು ಭಾವಿಸುವವರುಂಟು. ಇಂಥ ಅನೇಕ ತೊಡಕುಗಳ ಜೊತೆಗೇ ಭ್ರಷ್ಟತೆ, ತತ್ಪರಿಣಾಮವಾಗಿ ಸೆನ್ಸಾರ್‌ನಲ್ಲಿ ಕತ್ತರಿಸಿದ ತುಣುಕುಗಳನ್ನು ಮತ್ತೆ ಸೇರಿಸಿ ಪ್ರದರ್ಶಿಸುವುದು ಮೊದಲಾಗಿ ಅನೇಕ ಅಪ್ರಾಮಾಣಿಕ ಸಂಗತಿಗಳೂ ನಡೆಯುತ್ತಿವೆ. ಬೇರಾವ ದೇಶದಲ್ಲಿಯೂ ಇದ್ದಿರಲಾರದಷ್ಟು ಸ್ವಾತಂತ್ರ್ಯ ನಮ್ಮಲ್ಲಿ ಇದ್ದೂ ಚಿತ್ರರಂಗ ಸ್ವೇಚ್ಛೆಯ ಕಾರಣದಿಂದಾಗಿ ನಿಯಂತ್ರಣವೊಂದರ ಅನಿವಾರ್ಯತೆಯನ್ನು ತಾನೇ ಎತ್ತಿಹಾಕಿಕೊಂಡಿತು.

• • •

ಸಾಮಾನ್ಯವಾಗಿ ಚಿತ್ರ ನಿರ್ಮಾಣದ ಆಯವ್ಯಯ ಪಟ್ಟಿಯಲ್ಲಿ ಪ್ರಚಾರಕ್ಕೆಂದು ಇಂತಿಷ್ಟನ್ನು ಗೊತ್ತುಮಾಡಿಡುತ್ತಾರೆ. ಮೊದಲೆಲ್ಲ ಚಿತ್ರ ಸಿದ್ಧವಾದ ಮೇಲೆ ವಿತರಕರೇ 'ಪ್ರಿಂಟ್ ಅಂಡ್ ಪಬ್ಲಿಸಿಟಿ' ನಿರ್ವಹಿಸುತ್ತಿದ್ದರು. ಈಗ ಎಲ್ಲವೂ ಬೇರೆಯೇ ಆಗಿದೆ. ಈಗ ಪ್ರಚಾರಕ್ಕೆ ವೆಚ್ಚವಾಗುವ ಹಣ ಎರಡು ಸಾಮಾನ್ಯ ಸಿನಿಮಾಗಾಗುವಷ್ಟು ಎಂದರೂ ಅತಿಶಯವಿಲ್ಲ. ಪ್ರತಿಯೊಂದು ಹಂತದಲ್ಲೂ ಪ್ರಚಾರಕ್ಕಾಗಿ ಹೊಸಹೊಸ ತಂತ್ರಗಳನ್ನು ಬಳಸಲಾಗುತ್ತಿದೆ. ಜಾಹಿರಾತು ವಿನ್ಯಾಸ, ಶೀರ್ಷಿಕೆಯಿಂದ ಹಿಡಿದು ಧ್ವನಿಮುದ್ರಿಕೆಯ ಬಿಡುಗಡೆ, ಮುಹೂರ್ತದ ಆಹ್ವಾನ ಪತ್ರಿಕೆ ಮುಹೂರ್ತ ಮೊದಲ್ಗೊಂಡು ಎಲ್ಲಕ್ಕೂ ಅದ್ದೂರಿತನ ಬಂದಿದೆ. ಪತ್ರಿಕೆಗಳ ಮುಖಪುಟದಲ್ಲಿ ಸುದ್ದಿಯಾಗುವಂಥ ವಿವಾದ ಸೃಷ್ಟಿಸುವುದರ ಹಿಂದೆ ಕೂಡಾ ಪ್ರಚಾರದ ತಂತ್ರವಿದೆ. ನಟ-ನಿರ್ದೇಶಕರೊಬ್ಬರು ತಾವೇ ಕಳೆದುಹೋದದ್ದನ್ನು ಪ್ರಚಾರ ಮಾಡಿಕೊಂಡ ನಿದರ್ಶನವೂ ಇದೆ. ತಾರೆಯರ ಖಾಸಗೀ ಬದುಕು, ಕಾಲ್‌ಶೀಟ್ ತೊಡಕು, ಸೆಟ್‌ಗಳ ಅದ್ದೂರಿ, ಕಡೆಗೆ ಯಾರೊ ಯಾರನ್ನೋ ಹೊಡೆದದ್ದು, ಸಾಹಸ ದೃಶ್ಯಗಳಲ್ಲಾಗುವ ಅಪಘಾತ-ಸಾವು ಕೂಡಾ ಪ್ರಚಾರದ ಒಂದು ಅಂಗವಾಗಿ ಹೋಗಿದೆ. ಮಾನವೀಯತೆ ಕೂಡಾ ಮರೆಯಾಗುವಂಥ ವ್ಯಾಪಾರ. ಚಿತ್ರದ ಗಳಿಕೆಯ ಲೆಕ್ಕಾಚಾರ ಕೂಡಾ ಈ ದಿನಗಳಲ್ಲಿ ಪ್ರಚಾರವಾಗಿ ಮಾರ್ಪಡುತ್ತಿದೆ. ಹಿಂದೆಂದೂ ಕಂಡಿರದಂಥ ಪ್ರಚಾರ ವೈಖರಿಗಳು ಕಾಣುತ್ತಿವೆ. ಸರಕು ಮಾರಾಟವಾಗಬೇಕು, ಹೇಗಾದರೂ ಸರಿ ಎಂಬ ನಿಲುವು. ಆದರೆ ಒಂದು ಕಾಲದ ಲಯಬದ್ಧ ನಡೆಯ ಸೊಗಸು ಇದಕ್ಕಿದೆಯೆ?

• • •

ಕನ್ನಡ ಚಲನಚಿತ್ರ ಪತ್ರಿಕೋದ್ಯಮ ಕನ್ನಡ ಚಿತ್ರೋದ್ಯಮದಲ್ಲಿ ಬಹು ಮುಖ್ಯ ಪಾತ್ರ ವಹಿಸಿದೆ. ಪ್ರಾರಂಭದಿಂದಲೂ ಚಿತ್ರೋದ್ಯಮದ ಜೊತೆ ಸಂಬಂಧಗಳನ್ನು ಬೆಸೆದುಕೊಂಡು ಬಂದಿದೆ. ಸರ್ಕಾರದ ಜೊತೆ ಪದೇ ಪದೇ ವಾಗ್ವಾದ ಮಾಡಿದೆ, ಸಕಾಲದಲ್ಲಿ ಎಚ್ಚರಿಸಿದೆ. ಚಿತ್ರೋದ್ಯಮದ ದೋಷಗಳನ್ನು ಖಂಡಿಸಿದೆ; ಪ್ರೇಕ್ಷಕನ ನಿರಭಿಮಾನವನ್ನು ಎತ್ತಿ ತೋರಿಸಿ ಕನ್ನಡ ಚಿತ್ರಗಳಿಗೆ ಗಮನ ಕೊಡಲು, ನಾಡು-ನುಡಿಯ ಅಭಿಮಾನದ ಅಗತ್ಯವನ್ನು ಅರ್ಥಮಾಡಿಸಿದೆ. ಚಲನಚಿತ್ರ ಪತ್ರಿಕೆಗಳು, ದಿನಪತ್ರಿಕೆಗಳು ಸಿನಿಮಾ ವಿಭಾಗವನ್ನೇ ಪ್ರತ್ಯೇಕವಾಗಿ ಆರಂಭಿಸಿದ್ದು, ಚಿತ್ರೋದ್ಯಮದ ಎಲ್ಲ ಮಗ್ಗುಲುಗಳನ್ನು ಜನಸಾಮಾನ್ಯರಿಗೆ ಅರ್ಥ ಮಾಡಿಸಿದ್ದು ಹೀಗೆ ಪತ್ರಿಕೋದ್ಯಮದ ನೆರವನ್ನು ಪಟ್ಟಿ ಮಾಡುತ್ತಾ ಹೋಗಬಹುದು.

ಚಲನಚಿತ್ರಕ್ಕಾಗೇ ಮೀಸಲಾದ ಪತ್ರಿಕೆಗಳು ಬಹಳ ಕೆಲಸ ಮಾಡಿವೆ. ಆದರೆ ಅಂಥ ಪತ್ರಿಕೆಗಳನ್ನು ಉಳಿಸಿಕೊಳ್ಳುವ ಪ್ರಯತ್ನವನ್ನು ಚಿತ್ರೋದ್ಯಮ ಮಾಡಲಿಲ್ಲ. ಪತ್ರಿಕೆಗಳ ಉಳಿವು ತಮ್ಮಿಂದಲೇ ಎಂದುಕೊಂಡ ತಾರೆಯರು, ತಾವು ಕೊಡುವ ಸ್ಥಿರ ಚಿತ್ರಗಳು, - ಜಾಹಿರಾತೇ ಪತ್ರಿಕೆಗಳಿಗೆ ಉಸಿರು ಎಂದು ಬೀಗಿಕೊಂಡವರು, ಪ್ರಕಟಿಸಿದ ಜಾಹಿರಾತಿನ ಹಣವನ್ನು ಪಾವತಿಸದವರು, ಇಂಥ ಹತ್ತು ದಿಕ್ಕುಗಳ ಸತತ ನಿರ್ಲಕ್ಷ್ಯದಿಂದಾಗಿ ಗಂಭೀರವಾಗಿ ಕೆಲಸ ಮಾಡಿದ ಪತ್ರಿಕೆಗಳೂ ಸಾಯುವಂತಾಯಿತು. ಪತ್ರಿಕೆಗಳೂ ಸುದ್ದಿವೈವಿಧ್ಯವಿಲ್ಲದ ಏಕತಾನತೆಯನ್ನು ಕೊಡವಿಕೊಂಡು ಏಳಲು ದೀರ್ಘಕಾಲ ತೆಗೆದುಕೊಂಡವು. ಚಲನಚಿತ್ರ ಪತ್ರಕರ್ತರಿಗೆ ಅಗತ್ಯ ಮಾಹಿತಿಗಳು, ಲೈಬ್ರರಿಗಳ ಸೌಲಭ್ಯ ಇಲ್ಲ. ತುಂಬ ಪ್ರಯಾಸದಿಂದಲೇ ವರದಿಗಳು-ಲೇಖನಗಳನ್ನು ಸಿದ್ಧಪಡಿಸುತ್ತಿದ್ದಾರೆ. ಕನ್ನಡ ಚಲನಚಿತ್ರ ಪತ್ರಿಕೋದ್ಯಮ ಹೊಸ ಪ್ರತಿಭೆಗಳನ್ನು ಗುರುತಿಸಿದೆ, ಕೀರ್ತಿಶನಿಯ ಬೆನ್ನು ಹತ್ತಿ ಕರ್ತವ್ಯ ಮರೆತವರನ್ನು ಎಚ್ಚರಿಸಿದೆ, ಮುಖ್ಯವಾಗಿ ಚಲನಚಿತ್ರ ಕುರಿತ ಬರವಣಿಗೆಗಾಗಿ ಕನ್ನಡದ ಹೊಸ ಶಬ್ದಗಳನ್ನು ಟಂಕಿಸಿದೆ, ಪ್ರೇಕ್ಷಕರನ್ನು ಹೆಚ್ಚಿಸಿದೆ. ಇಷ್ಟಾದರೂ ಪತ್ರಿಕಾ ಮಾಲೀಕರಿಗೆ ಸಿನಿಮಾ ಪತ್ರಿಕೋದ್ಯಮ ಅಂಥ ಆಸಕ್ತಿಕರ ಸಂಗತಿ ಆಗಿಲ್ಲ.

ಆಧುನಿಕ ಸಂವಹನ ಮಾಧ್ಯಮಗಳ ಪೈಪೋಟಿಯ ನಡುವೆಯೂ ಸಿನಿಮಾ ಪತ್ರಿಕೋದ್ಯಮದಲ್ಲಿ ಕೆಲವು ಯುವ ಬರಹಗಾರರು ಗಂಭೀರವಾಗಿ ತೊಡಗಿದ್ದಾರೆ. ಈ ಯುವ ಪತ್ರಕರ್ತರು ತಮ್ಮ ಬರವಣಿಗೆ ಮತ್ತು ಬೇರೆ ಬೇರೆ ದಿಕ್ಕಿನಿಂದ ವಿಷಯವನ್ನು ಗ್ರಹಿಸಿ ದಾಖಲಿಸುವ ವಿಧಾನದಿಂದಲೂ ಗಮನ ಸೆಳೆಯುತ್ತಾರೆ. ಚಿತ್ರೋದ್ಯಮವೇ ವಿಚಿತ್ರ ಪಲ್ಲಟಗಳನ್ನು ತಲ್ಲಣಗಳನ್ನು ಗರ್ಭದಲ್ಲಿಟ್ಟುಕೊಂಡು ಪ್ರತಿಕ್ಷಣವೂ ಉಳಿವಿಗಾಗಿ ಹೋರಾಡುವಂತಿದ್ದಾಗಲೂ ಪತ್ರಿಕೋದ್ಯಮ ವಿಶಿಷ್ಟ ರೀತಿಯಲ್ಲಿ ತನ್ನ ಸ್ವರೂಪ, ವಿಧಾನಗಳನ್ನು ರೂಪಿಸಿಕೊಳ್ಳುತ್ತ ಬಂದಿದೆ. ಉದ್ಯಮಕ್ಕೆ ಚೈತನ್ಯ ತುಂಬಲು ಪ್ರಯತ್ನಿಸಿದೆ. ಆ ಮಟ್ಟಿಗೆ ಯುವ ಪತ್ರಕರ್ತರು, ಛಾಯಾ ಚಿತ್ರ ಪತ್ರಕರ್ತರ ಸಾಹಸ, ಹೊಸತಿಗಾಗಿರುವ ತುಡಿತ, ಪ್ರಯೋಗಗಳು ಅಭಿನಂದನೀಯ.

ಉದ್ಯಮದ ಪ್ರಚಾರ ತಂತ್ರದಿಂದಾಗಿ ಮಾಧ್ಯಮಗಳು ತಪ್ಪುದಾರಿಗೆ ಹೋಗುವಂತಾಗಿದೆ. ಇದರಿಂದಾಗಿ ಮಾಹಿತಿಯ ಅಧಿಕೃತತೆಯೇ ಸಮಸ್ಯೆಯಾಗಿದೆ. ಚಿತ್ರೋದ್ಯಮದ ಒಳಹೊಕ್ಕು ಬೇರುಬಿಡುತ್ತಿರುವ ಭೂಗತ ಜಗತ್ತಿನ ಗನ್ ಪಾಯಿಂಟ್‌ನಲ್ಲಿ ಕೆಲಸಮಾಡಿಸುವ ವಿಧಾನವನ್ನು ಪತ್ರಿಕಾ ಮಾಧ್ಯಮ ಹತ್ತಿರಕ್ಕೆ ಸೇರಿಸಿಲ್ಲ, ಸೇರಿಸದಿರಲಿ. ಚಿತ್ರ ಪ್ರಚಾರಕ್ಕೆ ಹೊಸ ಸೇರ್ಪಡೆ

ಪ್ರಚಾರಕರ್ತರದು. ಪತ್ರಕರ್ತರಿಗೂ-ಉದ್ಯಮಕ್ಕೂ ನಡುವೆ ಮಧ್ಯವರ್ತಿಗಳಾಗಿ ಕೆಲಸ ಮಾಡುವ ಈ ತರುಣರಲ್ಲಿ ಉತ್ಸಾಹವಿದೆ. ಚಿತ್ರವೊಂದರ ಬಗ್ಗೆ ಪ್ರೇಕ್ಷಕನ ಕುತೂಹಲ ಹೆಚ್ಚಿಸುವ ದಿಕ್ಕಿನಲ್ಲಿ ಹೊಸ ಪ್ರಚಾರ ವಿನ್ಯಾಸದ ಪ್ರಯೋಗ ಇನ್ನೂ ಇವರಿಂದ ಇವೆಲ್ಲವರ ನಡುವೆಯೂ ಆಗಬೇಕಾಗಿದೆ. ಆದರೆ, ತಾಲ್ಲೂಕು ಕೇಂದ್ರಗಳ ಪತ್ರಿಕೆಗಳಿಗೆ ಸುದ್ದಿ ಒದಗಿಸಬಲ್ಲ ಇವರ ಪಾತ್ರ ಗಮನಾರ್ಹ.

• • •

ತಂತ್ರಜ್ಞಾನ ಇದೊಂದು ಗಂಭೀರವಾಗಿ ಪರಿಗಣಿಸಬೇಕಾದ ಮಾಧ್ಯಮ. ಇಲ್ಲಿಯ ತಂತ್ರಜ್ಞಾನಕ್ಕೆ ವ್ಯವಸ್ಥಿತ ಶಿಕ್ಷಣದ ಅಗತ್ಯವಿದೆ ಎಂದು ಮನಗಂಡದ್ದೇ ತುಂಬ ತಡವಾಗಿ. ಮೊಟ್ಟಮೊದಲಿಗೆಂಬಂತೆ ಬೆಂಗಳೂರಿನಲ್ಲಿ ಈ ಶಿಕ್ಷಣ ಪ್ರಾರಂಭವಾಯಿತು. ಇಲ್ಲಿ ಪದವಿ ಪಡೆದ ತಂತ್ರಜ್ಞರನೇಕರು ರಾಷ್ಟ್ರಮಟ್ಟದಲ್ಲಿ, ಖ್ಯಾತರಾದರು. ಆದರೆ ಅದನ್ನು ಲಕ್ಷ್ಯ ಕೊಟ್ಟು ಬೆಳೆಸುವ ಸೂಕ್ತ ವಿಧಾನ ಇರಲಿಲ್ಲ. ಶಿಕ್ಷಣ ಇಲಾಖೆಯ ನಿರಪೇಕ್ಷತೆ ಒಂದೆಡೆಯಾದರೆ ಉದ್ಯಮ ಕೂಡಾ ಶಿಕ್ಷಣವನ್ನು ಆದರಿಸಲಿಲ್ಲ. ಜಯಚಾಮರಾಜೇಂದ್ರ ಚಲನಚಿತ್ರ ಶಿಕ್ಷಣ ಕೇಂದ್ರ ಕೂಡಾ ಈಗ ಬೆಂಗಳೂರಿನಿಂದ ಕೊಂಚ ದೂರದಲ್ಲಿ ಪ್ರಪಂಚ ಬ್ಯಾಂಕಿನ ನೆರವಿನಿಂದ ಸುಸಜ್ಜಿತವಾಗಿ ನಿಂತಿದೆ. ಆದರೂ ಸಾಮಾಜಿಕರು - ಯುವ ವಿದ್ಯಾರ್ಥಿಗಳು ಇತ್ತ ಸಾಕಷ್ಟು ಗಮನ ಹರಿಸುತ್ತಿಲ್ಲ. ಅಂಥ ಗಮನ ಸೆಳೆಯುವ ಪ್ರಯತ್ನವನ್ನೂ ಸಂಸ್ಥೆಗಳು ಮಾಡುತ್ತಿಲ್ಲ. ಹಿಂದೆ ಕೆಲಸ ಮಾಡಿದವರ ಬಗ್ಗೆ ಸರಿಯಾದ ದಾಖಲೆಯಿಲ್ಲ. ತಂತ್ರಜ್ಞ ಟಿ. ದ್ವಾರಕಾನಾಥ್ ಈ ಕ್ಷೇತ್ರದಲ್ಲಿ ಕೆಲಸ ಮಾಡಿದ್ದನ್ನು ಚಿತ್ರ ಪತ್ರಿಕೆಗಳು ದಾಖಲಿಸಿವೆ. ರಾಜ್ಯ ಪತ್ರಾಗಾರದಲ್ಲೇ ಉಲ್ಲೇಖವಿಲ್ಲ. ಪುಣೆಯ ಫಿಲಂ ಇನ್‌ಸ್ಟಿಟ್ಯೂಟ್ ಪಡೆದುಕೊಂಡ ಪ್ರಚಾರ ಒಂದು ಕ್ರಮಬದ್ಧ ಶಿಕ್ಷಣದ ಸೂಚಿ (ಸಿಲಬಸ್), ಮುಖ್ಯವಾಗಿ ತಂತ್ರಜ್ಞಾನದ ಜೊತೆಗೆ ಅಭಿನಯಕ್ಕೂ ಆದ್ಯತೆ ಮೊದಲಾದ ಕಾರಣಗಳಿಂದಾಗಿ ಮತ್ತೆ ಚಲನಚಿತ್ರ ಶಿಕ್ಷಣ ವಿಶೇಷ ಗಮನ ಸೆಳೆಯಿತು. ಮದರಾಸಿನ ಫಿಲಂ ಇನ್‌ಸ್ಟಿಟ್ಯೂಟ್, ಬೆಂಗಳೂರಿನ ಆದರ್ಶ ಸಂಸ್ಥೆ ಸುದ್ದಿಯಾದವು. ಇನ್ನೂ ಚಲನಚಿತ್ರ ಶಿಕ್ಷಣ ಒಂದು ಅಕೆಡಮಿಕ್ ಆದ ಸ್ಥಾನ ಪಡೆದುಕೊಂಡಿಲ್ಲ. ಉದ್ಯಮ - ಸರ್ಕಾರ, ಸಾಮಾಜಿಕರು ಕೂಡಿಯೇ ಸಮಾಲೋಚಿಸಿ ಈ ಶಿಕ್ಷಣ ವ್ಯವಸ್ಥೆಯನ್ನು ಸರಿಪಡಿಸಬೇಕಿದೆ.

• • •

ಶಿಸ್ತು ಕಡಿಮೆ, ಅನಿಶ್ಚಿತತೆ ಹೆಚ್ಚು ಇರುವ ಚಿತ್ರರಂಗದಲ್ಲಿ ಅನೇಕರು ಉದ್ಯೋಗರಹಿತರಾಗುತ್ತಾರೆ. ದುಡಿದದ್ದಕ್ಕೆ ಪ್ರತಿಫಲವೂ ಇಲ್ಲದಾಗಬಹುದು. ಹೀಗೆ ಹಲವು ಸಮಸ್ಯೆಗಳು ಏರ್ಪಡುತ್ತವೆ. ಕಾರ್ಮಿಕ ವರ್ಗಕ್ಕೆ ಮಾತ್ರವಲ್ಲ. ಎಲ್ಲ ವಲಯಗಳಿಗೂ ಅವರದೇ ಆದ ಸಮಸ್ಯೆಗಳಿರುವುದರಿಂದ ಸಂಘಟಿತರಾಗಿ ಉದ್ಯಮ, ಸರ್ಕಾರಗಳ ಜೊತೆ ಸಂವಾದ ಮಾಡುವುದು ಅಗತ್ಯ. ಈ ಹಿನ್ನೆಲೆಯಲ್ಲಿ ಕಾರ್ಮಿಕರ ಒಕ್ಕೂಟವೊಂದರಲ್ಲೇ ಹಲವಾರು ಶಾಖೆಗಳಿದ್ದರೆ, ಕಲಾವಿದರೂ ಸೇರಿದಂತೆ ಇನ್ನಿತರ ವಲಯಗಳೂ ಸಂಘಟನೆಗೆ ಒತ್ತು ಕೊಟ್ಟಿವೆ. ಇದರಿಂದಾಗಿ ಉದ್ಯಮಕ್ಕೆ ಒಳ್ಳೆಯದಾಗಿದೆ. ಸಮಸ್ಯೆಗಳೇನೆಂದು ಗ್ರಹಿಸಿ, ಅಗತ್ಯಗಳನ್ನು ಮುಂದಿಟ್ಟು ಚರ್ಚಿಸುವ ಕಾರಣದಿಂದಾಗಿ ಒಂದು ರೀತಿಯ ಸ್ವನಿಯಂತ್ರಣ, ರಕ್ಷಣೆಯಂಥದ್ದು ಸಾಧಿತವಾಗುತ್ತಿದೆ.

ಮಾತುಮಾತಿಗೆ ಕೋರ್ಟಿಗೆ ಹೋಗಕೂಡದೆಂದು ಸೂಕ್ತ ಯೋಜನೆ ಹಾಕಿಕೊಂಡು ನಿರ್ವಹಿಸುವ ವಾಣಿಜ್ಯ ಮಂಡಳಿ ಕೂಡಾ ಮಾತೃ ಸಂಸ್ಥೆಯಂತೆ ಕೆಲಸ ಮಾಡುತ್ತಿದೆ. ಇಲ್ಲಿ ಯಾವುದೇ ಏಕಸ್ವಾಮ್ಯವಿಲ್ಲ, ವಿಕೇಂದ್ರೀಕರಣವಿದೆ. ಆದರೆ ಅಗತ್ಯವಿದ್ದಾಗ ನಿಯಂತ್ರಿಸಿ ಹತೋಟಿಗೆ ತರುವ ಸಾಮರ್ಥ್ಯವೂ ಇದೆ. ಅಪರೂಪವೆನಿಸುವ ಈ ಸಂಘಟನೆಗಳಿಂದಾಗಿಯೇ ಕೋಟಿಗಳ ವ್ಯವಹಾರ, ವಿಭಿನ್ನ ಮನೋಧರ್ಮದ ಜನರ ನಡುವೆಯೂ ಒಂದು ಲಯ-ಸೂತ್ರಬದ್ಧ ನಡೆ ತರಲು ಸಾಧ್ಯವಾಗಿದೆ.

ಚಿತ್ರೋದ್ಯಮದ ಹಲವು ಭಾಗಗಳಿಂದ ಬರುವ ತೆರಿಗೆಗಳು ಸರ್ಕಾರದ ಬೊಕ್ಕಸಕ್ಕೆ ಬಹಳ ಮುಖ್ಯ. ಚಿತ್ರರಂಗಕ್ಕೆ ನೆರವಾಗುವ ಮನಸ್ಸು ಸರ್ಕಾರಕ್ಕಿದೆ. ಆದರೆ ಈ ಕೊಡ - ಕೊಳ್ಳುವಿಕೆಯಲ್ಲಿ ಒಂದು ವ್ಯವಸ್ಥಿತ ವಿಧಾನವಿಲ್ಲ. ಪೂರ್ವಭಾವಿ ಚರ್ಚೆಯಿಂದ ಆಗುಹೋಗುಗಳು ಪರಿಣಾಮಗಳನ್ನು ತಿಳಿದು ಜಾರಿಗೆ ಬರುತ್ತಿಲ್ಲ. ಒಂದು ನಿಯಮಕ್ಕೆ ಹಲವು ಬಾರಿ ಪರಿಷ್ಕರಣೆಯಾಗುತ್ತಿದೆ. ಗೊಂದಲಗಳು ತುಂಬಿಹೋಗಿವೆ. ಯಾವ ಸಮಿತಿಯ ಸಮಗ್ರ ನೀತಿಯನ್ನೂ ಸರಿಯಾಗಿ ಅಧ್ಯಯನ ಮಾಡಿ ಜಾರಿಗೆ ತರುತ್ತಿಲ್ಲ. ಚಲನಚಿತ್ರ ಅಕಾಡಮಿಯ ವಿಚಾರ ನೆನೆಗುದಿಗೆ ಬಿದ್ದಿದೆ. ಇತರ ಅಕಾಡಮಿಗಳ ಸ್ಥಿತಿ ನೋಡಿದರೆ, ಇನ್ನೊಂದು ವೈಫಲ್ಯವನ್ನು ಎತ್ತಿ ಹಾಕಿಕೊಳ್ಳುವುದು ಬೇಡವೆಂದೂ ತೋರುತ್ತದೆ.

ಎಲ್ಲಾ ಚಿತ್ರಗಳಿಗೂ ಸಾರ ಸಗಟಾಗಿ ಸರ್ಕಾರ ತೆರಿಗೆ ವಿನಾಯಿತಿ ನೀಡಿ ಕತ್ತೆ ಕುದುರೆಗಳು ಒಂದೇ ಮಾಡಿದ್ದರಿಂದ ಪ್ರೇಕ್ಷಕನ ಆಯ್ಕೆಗೆ ತೊಡಕುಗಳಾಗಿವೆ. ಗುಣಮಟ್ಟ ನೋಡಿ ಸಹಾಯಧನ ಕೊಡುವ ವಿಚಾರದಲ್ಲಿ ಗೊಂದಲಗಳಿವೆ. ಸಾಲುಸಾಲಾಗಿ ಸಮಸ್ಯೆಗಳ ಚಿತ್ರೋದ್ಯಮದ ಸಮಸ್ಯೆಗಳನ್ನು ಅಧ್ಯಯನ ಮಾಡದೆ ಸರ್ಕಾರವು ಜನಪ್ರಿಯತೆಯ ಹಿಂದೆ ಬೀಳುವುದರಿಂದಾಗಿ ತೆರೆಹಿಂದೆ ದುಡಿಯುವ ಅನೇಕರು ಅವಕಾಶಗಳಿಂದ ಗೌರವ ಮನ್ನಣೆಗಳಿಂದ ದೂರವೇ ಉಳಿಯುತ್ತಿದ್ದಾರೆ.

ಇತರ ಕಲಾ ಮಾಧ್ಯಮಗಳಿಗೆ ಹೋಲಿಸಿದಾಗ 'ಎಪಿಕ್' ಅನ್ನುವಂಥದನ್ನು ಕಟ್ಟಿಕೊಡಲಿಲ್ಲ. ಹೊಸ ತಂತ್ರಜ್ಞಾನದ ಆವಿಷ್ಕಾರವಾಗಿಲ್ಲ, ರಿಸರ್ಚ್ ಅಂಡ್ ಡೆವಲಪ್‌ಮೆಂಟ್ ಅನುಸರಿಸದ ಉದ್ಯಮ, ಅಕಡೆಮಿಕ್ ಶಿಸ್ತುಗಳಿಲ್ಲ, ಗಣಿತದ ಗಣನೆಯಿಲ್ಲದ ಧನದ ಸೂರೆ, ಬುರುಗು ಎಂಬ ಆಕ್ಷೇಪಗಳ ಸರಪಣಿಯನ್ನೇ ಮುಂದಿಡುವವರಿದ್ದಾರೆ. ಅವೆಲ್ಲವನ್ನೂ ಆಗಮಾಡುವಂಥ ವ್ಯಾಪಕ ಮಾರುಕಟ್ಟೆ, ಗಂಭೀರವಾಗಿ ತೊಡಗಿಕೊಳ್ಳಬೇಕಾದ ವಿವಿಧ ಮಾಧ್ಯಮಗಳ ಶ್ರೇಷ್ಠರು, ಲಾಭ ನಷ್ಟಗಳಾಚೆಗೆ ಹೆಜ್ಜೆಗುರುತು ಮೂಡಿಸುವ ಮನಸ್ಸುಳ್ಳ ಸಮರ್ಥರು ಇನ್ನೂ ಬರಬೇಕಾಗಿದೆ. ಇಲ್ಲಗಳ ನಡುವೆಯೂ ಬಹಳಷ್ಟನ್ನು - ನಾಡು ಹೆಮ್ಮೆ ಪಡುವಂಥದನ್ನು ಕನ್ನಡ ಚಿತ್ರರಂಗ ಕೊಟ್ಟಿದೆ. ರಾಷ್ಟ್ರ-ರಾಜ್ಯಮಟ್ಟದಲ್ಲಿ ಹೆಮ್ಮೆಯಿಂದ ತಲೆ ಎತ್ತಿ ಕೆಲಸಮಾಡಿದೆ. ನಾಳೆಗಳು ಬರಿ ಶೂನ್ಯ - ಕತ್ತಲೆಯೇ ಅಲ್ಲ ಎನ್ನುತ್ತದೆ ಹೊಸಪೀಳಿಗೆ.

ಸಾಂಸ್ಕೃತಿಕವಾಗಿ ಕನ್ನಡ ಚಲನಚಿತ್ರ ಕ್ಷೇತ್ರಕ್ಕೆ ಮುಖ್ಯವಾದ ಸ್ಥಾನವಿದೆ. ಪ್ರಜ್ಞಾವಂತರು ಇನ್ನೂ ಗುರುತಿಸಿಕೊಳ್ಳದೆ ದಿವ್ಯ ನಿರ್ಲಕ್ಷ್ಯ ತೋರಿದರೆ ಸಂಸ್ಕೃತಿ ಪ್ರಸಾರದ ದೃಷ್ಟಿಯಿಂದ ಅಪಚಾರ - ಆತ್ಮವಂಚನೆ ಆದೀತು.

• • •

ಹೇಳುತ್ತಾ ಹೋದಷ್ಟೂ ಅಕ್ಷಯವಾಗುತ್ತಿರುವ ಈ ಎಲ್ಲ ವಿಷಯಗಳ ಬಗ್ಗೆ ಅಧ್ಯಯನ ಪೂರ್ಣ ಲೇಖನಗಳನ್ನು ಕೊಟ್ಟ ಎಲ್ಲ ಲೇಖಕರಿಗೆ ಕೃತಜ್ಞರಾಗಿರುತ್ತೇವೆ. ಈ ಸಂಪುಟಗಳ ಸಿದ್ಧತೆಯಲ್ಲಿ ಮಾರ್ಗದರ್ಶನಮಾಡಿದ ಮಹನೀಯರಾದ ಪ್ರೊ. ಎಲ್. ಎಸ್. ಶೇಷಗಿರಿರಾವ್, ಎಂ. ಹೆಚ್. ಕೃಷ್ಣಯ್ಯನವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ. ನೆರವಾದ ಎಲ್ಲರಿಗೂ ಮತ್ತೊಮ್ಮೆ ನಮಸ್ಕರಿಸುತ್ತಾ ಈ ಎರಡು ಸಂಪುಟಗಳನ್ನು ತಮ್ಮ ಉಡಿಯಲ್ಲಿಡುತ್ತಿದ್ದೇವೆ ಸ್ವೀಕರಿಸಿ.

- ಸಂಪಾದಕರು

ನಾವೀನ್ಯಕ್ಕಾಗಿ ನಿರಂತರ ಶೋಧ

ಚಲನಚಿತ್ರಗಳಲ್ಲಿ ವಸ್ತುವಿಗಿಂತ ಸ್ವರೂಪ ಮುಖ್ಯವೇ, (Content ಗಿಂತ Form) ಎಂಬ ಪ್ರಶ್ನೆ ಏಳುತ್ತದೆ. ಯಾವುದೇ ಅನುಭವದ ಅಭಿವ್ಯಕ್ತಿಯಲ್ಲಿ, ನಿರೂಪಣೆಯಲ್ಲಿ, ತಂತ್ರವು ಪೂರಕವಾದ ಪಾತ್ರ ವಹಿಸದೇ, ಅದೇ ಪ್ರಬಲವಾಗಿ ಕಣ್ಣಿಗೆ ರಾಚುವಷ್ಟು ರಾರಾಜಿಸಿದರೆ ಅದು ಮೂಲ ಉದ್ದೇಶದ ವೈಫಲ್ಯದೊಂದಿಗೆ, ನಿರ್ದೇಶಕನ ಸೋಲೂ ಆಗುತ್ತದೆ.

ಈ ದೃಷ್ಟಿಯಿಂದ ಕನ್ನಡ ಚಿತ್ರಗಳಲ್ಲಿ ತಂತ್ರಜ್ಞಾನದ ಬೆಳವಣಿಗೆ ಮೂಕಿಯಿಂದ ಟಾಕಿಯವರೆಗ ಒಂದು ಪಕ್ಷಿ ನೋಟ, ಚಿತ್ರರಂಗದ ಭದ್ರ ಬುನಾದಿ ಅರಿಯಲು ಅಗತ್ಯ.

ಮೂವಿ ಕ್ಯಾಮರ

ನೀರಿನಲ್ಲಿ ತನ್ನ ಪ್ರತಿಬಿಂಬ ಕಂಡು ಸಂಭ್ರಮಪಟ್ಟ ಆದಿ ಮಾನವ. ಡಾರ್ವಿನ್ನನ ವಿಕಾಸವಾದದ ಕೊಂಡಿಯಾಗಿ ಬೆಳೆಯುತ್ತಾ ನುಣುಪಾದ ಕಲ್ಲಿನಿಂದ ಆರಂಭಿಸಿ ಕೊನೆಗೆ ಕನ್ನಡಿಯಲ್ಲಿ ತನ್ನ ನಡೆದಾಡುವ ಛಾಯೆ ಕಂಡೂ ಆನಂದಿಸಿದ. ಆದರೆ ಮೂವೀ ಕ್ಯಾಮರಾದ ಆವಿಷ್ಕಾರ, ಬದುಕಿನ ಹಲವಾರು ಮುಖದ ಚಲನೆಗಳನ್ನು ಚಿತ್ರಿಸಿ, ತನ್ನ ಅನುಕೂಲಕ್ಕೆ ತಕ್ಕಂತೆ ವೀಕ್ಷಿಸುವ ಸೌಲಭ್ಯ ಒದಗಿಸಿತು. ಮನುಕುಲದ ಅನೇಕ ಶತಮಾನಗಳ ಕನಸು ನನಸಾದ ದಿನವದು. ಇದರ ಫಲವೇ, ಮಾನವ ಆಗ ತಾನೇ ತನ್ನ ಸುತ್ತಲಿನ ಪ್ರಪಂಚದಲ್ಲಿ ಚಲನೆಯನ್ನು ಪ್ರಥಮ ಬಾರಿಗ ಕಂಡುಕೊಂಡವನಂತೆ, ತನಗೆ ಅಗಾಧವೆನಿಸಿದ ಘಟನೆಗಳಾದ ರೈಲು ಬರುವುದು, ಹಡಗು ಬಂದರಿನಲ್ಲಿ ಬಂದು ನಿಲ್ಲುದುದು, ಫ್ಯಾಕ್ಟರಿಯಿಂದ ಕಾರ್ಮಿಕರು ಹೊರಬರುವುದು, ಇಂತಹ ಚಲನೆಗಳನ್ನು ಚಿತ್ರಿಸಿ, ಅದನ್ನು ತೆರೆಯ ಮೇಲೆ ಮರು ಸೃಷ್ಟಿಸಿದಾಗ, ಅದನ್ನೇ ಹಣ ಕೊಟ್ಟು ನೋಡಿ ಆನಂದಿಸಿದರು ಆಗಿನ ಪ್ರೇಕ್ಷಕರು. ಈ ಅದ್ಭುತ ಆಟಿಕೆಯೊಡನೆ ಅಂದು ಆರಂಭವಾದ ಅವನ ಸರಸ, ಸ್ನೇಹ ಮುಂದುವರೆದಂತೆ ಕ್ಯಾಮರಾವನ್ನು ಸ್ಥಿರವಾಗಿ ಒಂದೆಡ ಸ್ಥಾಪಿಸಿ, ತಾನು ಹತೋಟಿ ಹೊಂದಿದ ಘಟನೆಯನ್ನು ಚಿತ್ರಿಸಿ ಆನಂದಿಸಿದ. ಇದಕ್ಕೆ "ವಾಟರಿಂಗ್ ದಿ ಗಾರ್ಡನರ್" ಚಿತ್ರವೇ ಉದಾಹರಣೆ. ಈ ವಿಶೇಷ ಅನುಭವ ನೀಡಿದ ಮೊದಲಿಗರು ಫ್ರಾನ್ಸಿನ ಲ್ಯೂಮಿಯೆರ್ ಬಂಧುಗಳು. ಇದರಂತೆಯೇ ಫ್ರಾನ್ಸಿನ ಯಕ್ಷಿಣಿಗಾರ ಜಾರ್ಜ್ ಮೆಲೆ ತನ್ನ ಮೂಲ ಕಸುಬನ್ನು ಮೂವೀ ತಂತ್ರಕ್ಕೆ ಬೆರೆಸಿ, ಕ್ಯಾಮರಾದಲ್ಲಿ ಕೈ ಚಳಕ ಬಳಸಿ, ಬಿಚ್ಚಿನ ಹಿಂದಿನಿಂದ ಬಗೆ ಬಗೆ ವೇಷ ಧರಿಸಿದ ಹಲವಾರು ಜನ ಉದಯಿಸುವಂತೆ ಅಥವಾ ಅದರಲ್ಲಿ ಹಲವಾರು ಜನರು ಲೀನವಾಗುವಂತೆ ಚಿತ್ರಿಸಿ, ಅವಾಸ್ತವವಾದರೂ ಅದ್ಭುತ ಅನುಭವದ ಖುಷಿ ನೀಡಿದ.

ಮೂವೀ ಕ್ಯಾಮರಾದಲ್ಲಿ ದೃಶ್ಯಗಳನ್ನು ತುಣುಕುಗಳಾಗಿ ಚಿತ್ರೀಕರಿಸಿ, ಅವುಗಳನ್ನು ಯಾವ ಕ್ರಮದಲ್ಲಿ ಹಾಗೂ ಯಾವ ಗತಿ, ವೇಗ ಮತ್ತು ಲಯದಲ್ಲಿ ಜೋಡಿಸಿದರೆ ಏನು ಪರಿಣಾಮ ಬೀರುತ್ತವೆ, ಯಾವ ಅರ್ಥ ನೀಡುತ್ತದೆ ಎಂಬ ವೈಜ್ಞಾನಿಕ ಸೂತ್ರ ಹಾಗೂ ಸತ್ಯಾನ್ವೇಷಣೆಯಲ್ಲಿ ರಷಿಯಾದ ಐಸೆನ್‌ಸ್ಟೈನ್ ಮತ್ತು ಪುಡೋವ್ಕಿನ್ ಇಂತಹವರು ಪ್ರಯೋಗಾಲಯದಲ್ಲಿ ಪ್ರಪಂಚದ ಒಂದೆಡೆ ನಿರತರಾದರು. ನಂತರ 'ಬ್ಯಾಟಲ್ ಷಿಪ್ ಪೊಟೆಂಕಿನ್' ನಂತಹ ಚಿತ್ರಗಳಲ್ಲಿ ಅದನ್ನು ಭಟ್ಟಿ ಇಳಿಸಿದರು.

ಅದೇ ಸಮಯಕ್ಕೆ ವಿಶ್ವದ ಅಮೆರಿಕಾದಂತಹ ದೇಶದಲ್ಲಿ, ಪ್ರೇಕ್ಷಕ ಎರಡು ಭಿನ್ನ ಘಟನಾ ಕ್ರಮಗಳನ್ನು ವೀಕ್ಷಿಸಿದರೂ ಅದನ್ನು ಅರ್ಥೈಸಬಲ್ಲ ಎಂಬ ಸೂತ್ರ ಕಂಡುಕೊಂಡರು. ಇದನ್ನು 'ದಿ ಗ್ರೇಟ್ ಟ್ರೈನ್ ರಾಬರಿ'ಯಲ್ಲಿ ನಾವು ಗುರುತಿಸಬಹುದು. ಮುಂದೆ ಡಿ.ಡಬ್ಲ್ಯೂ.ಗ್ರಿಫಿತ್ ನಾಲ್ಕು ಭಿನ್ನ ಭಿನ್ನ ಕಥನ ಕ್ರಮಗಳನ್ನು ಸಮಾನಾಂತರವಾಗಿ ಜೋಡಿಸಿ, ಕ್ಯಾಮರಾವನ್ನು ಚಿತ್ರಿಸುವಾಗಲೇ ಚಲಿಸುವಂತೆ ಮಾಡಿ, 'ಬರ್ತ್ ಆಫ್ ಎ ನೇಷನ್' ಚಿತ್ರದಲ್ಲಿ ವಿಭಿನ್ನ ಅನುಭವ ನೀಡಿದ. ಅವನು ಸಿನಿಮಾ ಕಲೆಗೆ ನೀಡಿದ ವಿಶೇಷ ಕೊಡುಗೆ ಎಂದರೆ, ಯಾವುದೇ ಅನುಭವದ ಒಂದು ವಿಶಿಷ್ಟ ಅಂಶವನ್ನು ವಿವರವನ್ನು ಒತ್ತು ಕೊಟ್ಟು (emphasis) ಹೇಳಲು, ಆ ದೃಶ್ಯವನ್ನು ಅತಿ ಸಮೀಪದಿಂದ, ಮೂಲದೃಶ್ಯದಿಂದ ಪ್ರತ್ಯೇಕಿಸಲ್ಪಟ್ಟ ಭಾಗದಂತೆ, ವಿವರವಾಗಿ ದೊಡ್ಡದಾಗಿ ಕಾಣಿಸುವಂತೆ (close upನಲ್ಲಿ) ಚಿತ್ರಿಸಿದ್ದು. ಪ್ರೇಕ್ಷಕ ಇದನ್ನೂ ಸಹ ಅನುಭವದ ಒಂದು ಅವಿಭಕ್ತ ಅಂಗವಾಗಿ ಮಾನಸಿಕವಾಗಿ ಜೀರ್ಣಿಸಿಕೊಳ್ಳಬಲ್ಲ ಎಂದು ವ್ಯವಹಾರದಲ್ಲಿ ಬಳಸಿ ತೋರಿಸಿದ ಹೆಗ್ಗಳಿಕೆ ಈ ನಿರ್ದೇಶಕನದು. ಇದು ಸಿನಿಮಾ ಇತಿಹಾಸದಲ್ಲಿ ಪ್ರಮುಖ ಮೈಲಿಗಲ್ಲು.

ಮೂಕಿ ಚಿತ್ರದ ಸಾರ್ವತ್ರಿಕತೆ

ಒಂದು ಸೆಕೆಂಡಿಗೆ ಹದಿನಾರು ಫ್ರೇಮು ಓಡುದ ಅಂದಿನ ಮೂವೀ ಕ್ಯಾಮರಾ ತಂತ್ರ ವಿಶ್ವ ಭಾಷೆಯಾಯಿತು. ಸಮಸ್ತ ಮಾನವನ ನಗು-ಅಳು ರೂಪಿಸುವ ಸೇತುವೆಯಾಯಿತು. ಅವನ ಹಸಿವು, ದರ್ಪ, ದೌರ್ಜನ್ಯಕ್ಕೆ ಕನ್ನಡಿ ಹಿಡಿಯುವ ಸಾಧನವಾಗಿ, ಜನಸಾಮಾನ್ಯನ ಹೃದಯಕ್ಕೆ ಹತ್ತಿರದ ಭಾಷೆಯಾಯಿತು. ಈ ಒಂದು ವಿಶೇಷ ಕಾರಣದಿಂದಾಗಿ ಚಾರ್ಲಿ ಚಾಪ್ಲಿನ್ ಚಿತ್ರಗಳನ್ನು, ರಾಜಕೀಯವಾಗಿ ಶತ್ರುಗಳೆಂದು ಪರಿಗಣಿಸಲಾದ ದೇಶಗಳ ಪ್ರಜೆಗಳೂ ಸಿನಿಮಾ ಭಾಷೆಗೆ ಈ ಅಮಾನವೀಯ ಕೋಟೆಯನ್ನು ದಾಟಿ ಸ್ಪಂದಿಸಿದರು, ಆನಂದಿಸಿದರು.

ಆಗಿನ ಅಪರಿಪಕ್ವ, ಮೂವೀ ಕ್ಯಾಮರಾದ ಇತಿ ಮಿತಿಯಲ್ಲೇ ಪ್ರಯೋಗ ಶೀಲನಾದ ನಿರ್ದೇಶಕ, ಸೆಕೆಂಡಿಗೆ ೧೬ ಫ್ರೇಮಿಗಿಂತಲೂ ಕಡಿಮೆ (ಸುಮಾರು ೮ ಅಥವಾ ೧೦) ಫ್ರೇಮು ವೇಗದಲ್ಲಿ ಚಿತ್ರಿಸಿ, ೧೬ ಫ್ರೇಮು ಗತಿಯಲ್ಲಿ ಪ್ರದರ್ಶಿಸಿದಾಗ ಅದು ಚಲನ-ವಲನಗಳಲ್ಲಿ ಅತಿ ವೇಗ (fast speed) ಸೃಷ್ಟಿಸಿ ಹಾಸ್ಯರಸ ಉಕ್ಕಿಸುವಲ್ಲಿ ಯಶಸ್ವಿಯಾಯಿತು. ಅದೇ ರೀತಿ ಇದರ ತದ್ವಿರುದ್ಧ ಸೂತ್ರ (slow motion) ತಂತ್ರ ಬಳಸಿ, ಸಹಜ ಕ್ರಿಯೆ, ವಿಳಂಬಿತ ಪರಿಣಾಮ ಬೀರುವಂತೆ ಮಾಡಿದ. ಮುಂದೆ ಕಥನ ನಿರೂಪಿಸಲು, ಒಂದು ಸನ್ನಿವೇಶಕ್ಕೂ ಮತ್ತೊಂದಕ್ಕೂ ಬದಲಾವಣೆ ಅಥವಾ ಸಮಯದ ಅಂತರ ತಿಳಿಸಲು ತೆರೆ ಕಪ್ಪಾಗುವ ಪರಿಣಾಮ ಮೂಡಿಸಲು (fade out) ಚಿತ್ರೀಕರಣ ಕಾಲದಲ್ಲೇ ದೃಶ್ಯದ ಮುಂದೆ ಕ್ಯಾಮರಾದ ಷಟರನ್ನು ನಿಧಾನವಾಗಿ ಮುಚ್ಚಿ ಚಿತ್ರಿಸುವ ತಂತ್ರ ಬಳಸಿದ. ಅದೇ ರೀತಿ ದೃಶ್ಯ ಆರಂಭವಾಗುವ ಸೂಚನೆ ನೀಡಲು, ತೆರೆ ಮೇಲೆ ಹೊಸ ಸನ್ನಿವೇಶದ ಚಿತ್ರ ಮೂಡಿಬರಲು, ಕತ್ತಲಿನಿಂದ ಬೆಳಕಾಗುವಂತೆ (fade in) ರೂಪಿಸಲು, ಕ್ಯಾಮರಾದ ಷಟರನ್ನು ನಿಧಾನವಾಗಿ ತೆರೆದ. ಅದೇ ರೀತಿ ಒಂದು ಸನ್ನಿವೇಶದ ಕೊನೆಯ ದೃಶ್ಯದ ಕೊನೆಯ ಭಾಗವನ್ನು ಹಾಗೂ ಮುಂದಿನ ಸನ್ನಿವೇಶದ ಆರಂಭದ ಚಿತ್ರಿಕೆಯಲ್ಲಿ, ಅದು ಘಟಿಸುತ್ತಿರುವಂತೆಯೇ ಮಿಶ್ರಣವಾಗಿ, ಪ್ರೇಕ್ಷಕನಿಗೆ ಅರಿವಿಲ್ಲದಂತೆಯೇ ಅವನನ್ನು ಮಾನಸಿಕವಾಗಿ ವಿಶ್ರಮಿಸಲು ಬಿಡದೆ, ಇನ್ನೊಂದು ಸನ್ನಿವೇಶಕ್ಕೆ ಕರೆದೊಯ್ಯಲು (dissolve) ದೃಶ್ಯಮಿಶ್ರಣ ತಂತ್ರ ಬಳಸಿದ. ಈ ಅವಧಿಯಲ್ಲಿ ಒಂದು ವಿಶೇಷ ಸಾಧನೆಯೆಂದರೆ, ಇದುವರೆಗೆ ಸ್ಥಿರವಾಗಿ ಸ್ಥಾಪಿತವಾಗಿರುತ್ತಿದ್ದ ಕ್ಯಾಮರಾ, ಅನಂತರ ಮೇಲೆ ಕೆಳಗೆ ಗೋಣು ಆಡಿಸಿದಂತೆ (tilt up and tilt down), ಕ್ರಮೇಣ ಮುಂದೆ ಹಿಂದೆ (trolly in and trolly out) ಕ್ಯಾಮರಾವೇ ಚಲಿಸುತ್ತಲೇ ಬಳಕೆಯಾಗ ತೊಡಗಿತು. ಅದೇ ರೀತಿ ತೆರೆಯ ಮೇಲೆ

ಒಂದೇ ವ್ಯಕ್ತಿಯು ಒಂದಕ್ಕಿಂತಲೂ ಹೆಚ್ಚು ಚಿತ್ರ ಹಾಗೂ ಕ್ರಿಯೆಗಳು ಮೂಡುವಂತೆ (double or multiple exposure / montage) ತಂತ್ರ ರೂಪಿಸಿ, ಮಾನಸಿಕ ತುಮುಲ, ಸಮಯ ಸಂದುವಿಕೆಯ ಸೂಚನೆ ಅಥವಾ ಯಾವುದಾದರೂ ಬೆಳವಣಿಗೆ ಸೂಚಿಸಲು ನಾಟಕೀಯ ಪರಿಣಾಮ ಬೀರಲು ಬಳಸಿದ.

ಆದಿಮಾನವನ ಅದಮ್ಯ ಬಯಕೆಗಳಲ್ಲಿ ತನ್ನ ಪ್ರತಿಬಿಂಬ ನೋಡುವುದಾಗಿದ್ದಾಗ ಅದನ್ನು ನಿರ್ಮಲವಾದ ನೀರು, ನುಣುಪಾದ ಕಲ್ಲು ಈಡೇರಿಸಿರಬಹುದು. ಅವರೆ ಅಷ್ಟೇ ಪುರಾತನವಾದ ಅವನ ಇನ್ನೊಂದು ಆಸೆ, ತನ್ನಂತೆ ಕಾಣುವ ಇನ್ನೊಂದು ವ್ಯಕ್ತಿ. ತಾನೊಂದು ಕ್ರಿಯೆಯಲ್ಲಿ ತೊಡಗಿದಾಗ, ಇನ್ನೊಂದು ಪ್ರತಿರೂಪ ಇನ್ನೊಂದು ಕ್ರಿಯೆಯಲ್ಲಿ ಸಕ್ರಿಯವಿರಬೇಕೆಂಬ ವಾಂಛೆಯನ್ನು ಸೃಷ್ಟಿಯೇ ಅವಳಿ ಅಥವಾ ಅವಳಿ-ಜವಳಿ ಮಕ್ಕಳ ಜನನದಿಂದ ಈಡೇರಿಸಿರಬಹುದು.

ಸೃಷ್ಟಿಯ ಈ ಕೊಡುಗೆಯನ್ನು ಚಲನಚಿತ್ರ ಕ್ಷೇತ್ರದಲ್ಲಿ 'ಡಬ್ಬಲ್ ರೋಲ್' (ದ್ವಿಪಾತ್ರ) ಎಂಬ ಶಿರೋನಾಮೆಯಲ್ಲಿ ಬಳಸಿ, ತಂತ್ರ ದೃಷ್ಟಿಯಿಂದ ಪರಾಕಾಷ್ಠೆ ತಲುಪಿತೆಂದೇ ಹೇಳಬಹುದು. ಇಬ್ಬರು ಅಣ್ಣ-ತಮ್ಮ, ಅಕ್ಕ-ತಂಗಿಯರನ್ನು ಕ್ಯಾಮರಾ ತಂತ್ರದಲ್ಲಿ ಮಾಸ್ಕ್ ಮಾಡಿ, ಡಬಲ್ ಎಕ್ಸ್‌ಪೋಸ್ ಮಾಡಿ, ಪಾತ್ರದ ಸ್ವಭಾವ - ನಡತೆಯಲ್ಲಿ ವೈರುಧ್ಯವನ್ನು ರೂಪಿಸಿ, ಪ್ರೇಕ್ಷಕರನ್ನು ಮುದಗೊಳಿಸಿದರು. ಇಂತಹ ಕಥಾನಕಗಳು ನಿರೂಪಣೆಯಲ್ಲಿ ಕೇಶಾಲಂಕಾರ, ವಸ್ತ್ರಾಲಂಕಾರ, ನೃತ್ಯ ನಿರ್ದೇಶಕ, ಸಾಹಸ ನಿರ್ದೇಶಕ, ನಟನಾ ಸಾಮರ್ಥ್ಯ, ಛಾಯಾಗ್ರಾಹಕನ ಕೈ ಚಳಕ ಎಲ್ಲವನ್ನೂ ಸಮಗ್ರವಾಗಿ ಒಗ್ಗಿಸಿಕೊಂಡಿದ್ದವು. ನಂತರದ ಹಂತಗಳಲ್ಲಿ ಇಂತಹ ಕಥೆಗಳಲ್ಲಿ ಕೆಲವು ಪರಿಣಾಮ ಸಾಧಿಸಲು ಸಂಕಲನಕಾರ ಆಪ್ಟಿಕಲ್ ತಂತ್ರದ ನೆರವಿನಿಂದ ನಿರ್ದೇಶಕನಿಗೆ ನಿರೀಕ್ಷಿತ ಪರಿಣಾಮ ನೀಡುವಲ್ಲಿ ನೆರವಾದ.

ಕನ್ನಡ ಚಿತ್ರರಂಗದಲ್ಲಿ ಇಂತಹ ದ್ವಿಪಾತ್ರಗಳ ಚಿತ್ರಗಳಾದ ಪುಟ್ಟಣ್ಣ ಕಣಗಾಲರ 'ಕಪ್ಪು-ಬಿಳುಪು', ಎಂ.ಆರ್.ವಿಠಲ್‌ರ 'ಎರಡು ಮುಖ'ದ ಛಾಯಾಗ್ರಹಣದಲ್ಲಿ ಜಾನಕಿರಾಂ ಮೆರೆದರೆ, ವರ್ಣಯುಗದ 'ಬಭ್ರುವಾಹನ' ಚಿತ್ರದಲ್ಲಿ ಎಸ್.ವಿ.ಶ್ರೀಕಾಂತ್, ಹಾಗೇ ಎರಡಕ್ಕಿಂತಲೂ ಹೆಚ್ಚಿನ ಪಾತ್ರಗಳನ್ನು ಹೊರಾಂಗಣದಲ್ಲಿ ತಮ್ಮ 'ತಂತ್ರ ನೈಪುಣ್ಯ'ದಿಂದ ಚಿತ್ರಿಸಿ 'ಶಂಕರ ಗುರು' ಚಿತ್ರದಲ್ಲಿ ಮೆರೆದವರು ಛಾಯಾಗ್ರಾಹಕ ಮಧುಸೂದನ್ ಇಂತಹದೇ ತಂತ್ರವನ್ನು ಪುನರ್ಜನ್ಮದ ಕಥೆಗಳಲ್ಲಿ ಬಳಸಿದ ಉದಾಹರಣೆಗಳಿವೆ. ಇವರಲ್ಲಿ ಶಂಕರ್‌ನಾಗ್ ನಿರ್ದೇಶನದ 'ಜನ್ಮ ಜನ್ಮದ ಅನುಬಂಧ' ಉಲ್ಲೇಖನೀಯ. ಇಷ್ಟಾದರೂ ಕನ್ನಡ ಚಿತ್ರರಂಗ ಮನೋವಿಜ್ಞಾನ ಕ್ಷೇತ್ರದಲ್ಲಿ ಲಭ್ಯವಿರುವ ಅವಳಿ ಸಂತಾನ ಕುರಿತ ಸಂಶೋಧಿತ ಸಾಹಿತ್ಯವನ್ನು ಆಧರಿಸಿ, ಮೈ ಜುಂ ಎನ್ನುವಂತಹ ಚಿತ್ರ ಇದುವರೆವಿಗೂ ನಿರ್ಮಿಸಿಲ್ಲವೆಂದೇ ಹೇಳಬಹುದು.

ಕ್ಯಾಮರಾದಲ್ಲೇ ವಿಶೇಷ ದೃಶ್ಯ ಪ್ರಭಾವ ನಿರೂಪಿಸಲು ಇರುವ ತಾಂತ್ರಿಕ ತೊಂದರೆ - ಕಲಾವಿದ, ಚಿತ್ರೀಕರಣದ ಸ್ಥಳ, ಚಿತ್ರೀಕರಿಸುವ ಕ್ರಮಗಳ ಇತಿ ಮಿತಿಯ ಅರಿವಾಗತೊಡಗಿದಂತೆ, ಅದರಲ್ಲಿ ಸೃಷ್ಟಿಸಲಾಗುವ ಎಲ್ಲ ವಿಶೇಷ ಪರಿಣಾಮಗಳನ್ನು ಸಂಕಲನದ ಟೇಬಲಿನ ಮೇಲೆ, ದೃಶ್ಯಗಳ ಕ್ರಮ, ಗತಿ, ಅವಧಿ, ನಿರೀಕ್ಷಿತ ಪರಿಣಾಮದ ಲೆಕ್ಕಾಚಾರ ಹಾಕಿ, ವಿಶೇಷ ಮುದ್ರಣ ಯಂತ್ರ (optical effects printer) ದಲ್ಲಿ ಮರುಸೃಷ್ಟಿಸತೊಡಗಿದ ಸಂಕಲನಕಾರ. ಜೊತೆಗೆ ಸಂಕಲನಕಾರ ತನ್ನ ಹರಿತ ಕತ್ತರಿಯ ನೆರವಿನಿಂದ, ಹಲವಾರು ಘಟನೆಗಳನ್ನು ತುಂಡು ತುಣುಕುಗಳಾಗಿ ಚಿತ್ರಿಸಿರುವುದನ್ನು ವಿಶೇಷ ತೀವ್ರಗತಿಯಲ್ಲಿ ಕತ್ತರಿಸಿ ಜೋಡಿಸಿ ಹಾಸ್ಯ (slapstick comedy) ಹಾಗೂ ಭಯ (suspence scene), ಆತಂಕ (fight scene), ಉದ್ವೇಗದ ಭಾವನೆ (chase scene) ಇವುಗಳನ್ನು ಸೃಷ್ಟಿಸುವಲ್ಲಿ ಸಫಲನಾದ. ಒಂದು ಅನುಭವವನ್ನು ತುಣುಕು ತುಣುಕಾಗಿ, ವಿವರವಾಗಿ ಚಿತ್ರಿಸಿದ್ದರೂ ಅವೆಲ್ಲವುಗಳನ್ನು ಒಂದು ನಿರ್ದಿಷ್ಟ ಕ್ರಮದಲ್ಲಿ, ನಿರ್ದಿಷ್ಟ ಅವಧಿಯ ತನಕ ಮಾತ್ರ ತೆರೆಯ ಮೇಲೆ ಇರುವಂತೆ ಜೋಡಿಸಿ, ಮಾನಸಿಕವಾಗಿ ಪ್ರೇಕ್ಷಕ ಏನನ್ನು, ಯಾವಾಗ ನೋಡಲು ಬಯಸುತ್ತಾನೆ ಎಂಬುದನ್ನು ಊಹಿಸುತ್ತಲೇ ಅದು ಒಟ್ಟಾರೆ, ನಾಟಕೀಯವಾಗಿ ಪರಿಣಾಮ ಬೀರುವ ಒಂದೇ ಘಟನೆಯಾಗಿ ತೋರುವಂತೆ ನಿರೂಪಿಸುವುದಕ್ಕೆ ಸಂಕಲನ ತಂತ್ರ ಬಳಸಿದ.

ನಿರ್ದೇಶಕ ನಿರೂಪಿಸಲು ಆರಿಸಿಕೊಳ್ಳುವ ಅನುಭವ ವಿಶಾಲವಾಗಿದ್ದು, ಕ್ಲಿಷ್ಟಕರವೂ ಆದಾಗ, ತಾನು ಹೇಳಬೇಕೆಂದಿರುವ ಅಂಶ ಪ್ರೇಕ್ಷಕನಿಗೆ ಅದೇ ಸ್ವರೂಪದಲ್ಲಿ ತಲುಪಲಿ ಎಂಬ ಉದ್ದೇಶದಿಂದ ಅಥವಾ ಹೆಚ್ಚು ಜನರಿಗೆ ಸುಲಭವಾಗಿ ತಲುಪಲಿ ಎಂಬ ಕಾಳಜಿಯಿಂದ, ಎರಡು ದೃಶ್ಯಗಳ ನಡುವೆ ವಿವರಣಾತ್ಮಕ ಶೀರ್ಷಿಕೆಗಳನ್ನು (titles) ಬಳಸತೊಡಗಿದ. ಮುಂದೆ ಇದನ್ನು ಬೇರೆ ಬೇರೆ ಪಾತ್ರಗಳ ನಡುವಿನ ಸಂಭಾಷಣೆ ಸ್ವರೂಪದಲ್ಲಿ ಬಳಸತೊಡಗಿದ. ಇನ್ನೂ ಹೆಚ್ಚು ಜನರಿಗೆ ತಲುಪಲಿ ಎಂಬ ಗುರಿ ಇಟ್ಟುಕೊಂಡು ಒಂದೇ ಶೀರ್ಷಿಕೆಯಲ್ಲಿ ಎರಡೆರಡು ಭಾಷೆಯ ಸಾಲುಗಳನ್ನು ಬಳಸಿದ. ರಾಷ್ಟ್ರಮಟ್ಟದಲ್ಲಿ ಇಂಗ್ಲಿಷ್-ಹಿಂದಿ ಅಥವಾ ಹಿಂದಿ-ಉರ್ದು ಸಾಲುಗಳು ಇದ್ದರೆ, ಪ್ರಾದೇಶಿಕ ಮಾರುಕಟ್ಟೆಯಲ್ಲಿ ಪ್ರಾದೇಶಿಕ ಭಾಷೆಯ ಶೀರ್ಷಿಕೆಗಳು ಇಂಗ್ಲಿಷ್‌ನೊಂದಿಗೆ ಬಳಸಲ್ಪಟ್ಟವು. ಈ ತಂತ್ರ ಬೆಳವಣಿಗೆಯನ್ನು ವಿಶ್ವ ಮಟ್ಟದಲ್ಲಿ ನೋಡಿದಾಗ, ಸಿನಿಮಾ ಒಂದು ದೃಶ್ಯ ಮಾಧ್ಯಮ ಎಂಬುದನ್ನು ಸಫಲಗೊಳಿಸುವಂತೆ ಬಾಳಿದ ಈ ಕಲೆ, ಶೀರ್ಷಿಕೆಯ ಉಪಯೋಗದಿಂದಾಗಿ ಸ್ವಲ್ಪ ಮಟ್ಟಿಗೆ ತನ್ನ ನಡುವೆ ಪ್ರತ್ಯೇಕತೆಯ ಗೋಡೆ ಕಟ್ಟಿಕೊಂಡಿತು. ಆದರೆ ಭಾರತೀಯ ಸನ್ನಿವೇಶದಲ್ಲಿ ಹೇಳುವುದಾದರೆ, ಆಗ ನಿರಕ್ಷರತೆಯ ಪ್ರಮಾಣ ಹೇರಳವಾಗಿದ್ದರೂ ನಿರ್ದೇಶಕ ನಿರೂಪಿಸಲು ಹೊರಟ ಕಥೆಗಳು, ಪ್ರಸಂಗಗಳೆಂದರೆ ರಾಮಾಯಣ, ಮಹಾ ಭಾರತ, ಕೃಷ್ಣ ಲೀಲೆ, ಕಂಸ ವಧೆ, ಕಾಳಿಂಗ ಮರ್ದನ, ರಾಜಾ ಹರಿಶ್ಚಂದ್ರ ಇಂತಹವುಗಳು. ಇವು ಭಾರತೀಯ ಮನಸ್ಸಿನಲ್ಲಿ ಅಚ್ಚೊತ್ತಿದ ಸಾಂಸ್ಕೃತಿಕ ಅನುಭವಗಳಾದ್ದರಿಂದ, ಈ ಶೀರ್ಷಿಕೆಯ ಉಪಯೋಗ ಅವನಿಗೆ ಅಗತ್ಯವೂ ಅನಿಸಲಿಲ್ಲ, ಕಿರಿಕಿರಿಯ ಅಂಶವೂ ಆಗಲಿಲ್ಲ. ಆದರೆ ಅವನಿಗೆ ಚಿತ್ರ ಪ್ರದರ್ಶನ ಕಾಲದಲ್ಲಿ ಚಿತ್ರ ಮಂದಿರದಲ್ಲಿ ಮುಂದೆ ಕುಳಿತು ಪ್ರತಿ ಪ್ರದರ್ಶನಕ್ಕೂ ಸರಿಯಾಗಿ ನೀಡುವ ಹಿನ್ನೆಲೆ ಸಂಗೀತವೇ ಅಪ್ಯಾಯಮಾನವಾದ ಅನುಭವವಾಗಿರಲೂ ಸಾಕು.

ಮೂಕಿ ಚಿತ್ರಗಳ ನಿರ್ಮಾಣ ಕಾಲದ ಒಂದು ವಿಶೇಷತೆಯೆಂದರೆ, ಆಗ ಭಾಷೆ ಅಭಿವ್ಯಕ್ತಿಗೆ ಎಂದೂ ಅಡ್ಡಗಾಲು ಆಗಲಿಲ್ಲ. ಇದು ತೆರೆಮರೆಯ ತಂತ್ರಜ್ಞರಿಗೂ ಅನ್ವಯಿಸುವಂತಹುದು. ಹೀಗಾಗಿ ಆಗಿನ ಚಿತ್ರ ನಿರ್ಮಾಣದಲ್ಲಿ ಜರ್ಮನಿ, ಬ್ರಿಟನ್ನಿನ ಛಾಯಾಗ್ರಾಹಕರೂ, ನಿರ್ದೇಶಕರೂ ಭಾರತದಲ್ಲಿ ಕಾರ್ಯನಿರತರಾದರು. ಅದೇ ರೀತಿ ಚಿತ್ರದ ಕಲಾವಿದರೂ ಸಹ ಹಿಂದಿ, ಮರಾಠಿ, ತಮಿಳು, ತೆಲುಗು, ಬಂಗಾಳಿ ಹೀಗೆ ಹಲವಾರು ಭಾಷೆಯವರು ಸೇರಿ ನಟಿಸಿದರು. ಗುಬ್ಬಿ ವೀರಣ್ಣನವರ 'ಕನ್ನಡ' ಮೂಕಿ ಚಿತ್ರ "ಹಿಸ್ ಲವ್ ಅಫೇರ್"ನಲ್ಲಿ ಮರಾಠಿ ನಟಿ ಲಲಿತಾ ಪವಾರ್ ನಟಿಸಿದರೆಂಬ ಒಂದು ಉದಾಹರಣೆ ಇಲ್ಲಿ ಸಾಕು. ಆಗ ಚಿತ್ರಕ್ಕೆ ಹಣ ಹಾಕುವವನು ಸಹ ಮೊದಲಿಯಾರೋ ಮಾರ್ವಾಡಿಯೋ ಸಿಂಧಿಯೋ ಚೆಟ್ಟಿಯಾರೋ ಆಗಿರುತ್ತಿದ್ದರು. ಒಟ್ಟಿನಲ್ಲಿ ಎಲ್ಲರಿಗೂ ಮೂಕಿ ಸಿನಿಮಾ ಒಂದು 'ರಾಷ್ಟ್ರೀಯ ಉತ್ಪನ್ನ'ವಾಗಿತ್ತು (national product). ಬಹುಶಃ ಸ್ವಾತಂತ್ರ್ಯ ಹೋರಾಟದ ಭಾವನೆಯ ನಂತರ ಭಾರತೀಯರನ್ನು ಮಾನಸಿಕವಾಗಿ ಒಗ್ಗೂಡಿಸಿದ ಹಿರಿಮೆ ಮೂಕಿ ಚಿತ್ರ ರಂಗಕ್ಕೆ ಸಲ್ಲಬೇಕು.

ಈ ಹಿನ್ನೆಲೆಯಲ್ಲಿ ಈಗ ಯಾವುದು "ಕನ್ನಡ ಮೂಕಿ ಚಿತ್ರ" ಅಥವಾ ಅಂತಹ ಹಣೆ ಪಟ್ಟಿ ಕೊಡಲು ಆಧಾರ, ಬಳಸುವ ಮಾನದಂಡ ಏನು ಎಂಬ ಪ್ರಶ್ನೆ ಏಳುತ್ತದೆ. ಮೂಕಿ ಚಿತ್ರಗಳ ಕಾಲದಲ್ಲಿ ನಮ್ಮಲ್ಲೇ ಅನೇಕ ಚಿತ್ರಗಳು ತಯಾರಾದವು. ಆದರೆ ನಾವು ನಮ್ಮವರೆ ಆದ ಗುಬ್ಬಿ ವೀರಣ್ಣ ಮೊದಲಾದವರು ನಿರ್ಮಿಸಿದ ಚಿತ್ರಗಳನ್ನು ಮಾತ್ರ 'ಕನ್ನಡ'ದ ಮೂಕಿ ಚಿತ್ರಗಳು ಎಂದು ಗುರುತಿಸಿ ದಾಖಲಿಸುತ್ತಾ ಬಂದಿದ್ದೇವೆ.

ಆದರ ತೀರ ಇತ್ತೀಚೆಗೆ ನಿರ್ಮಾಣವಾದ ಕನ್ನಡಿಗ ಶೃಂಗಾರ್ ನಾಗರಾಜ್ ನಿರ್ಮಿಸಿದ 'ಪುಷ್ಪಕ ವಿಮಾನ' ವರ್ಣ ಚಿತ್ರದಲ್ಲಿ ಕನ್ನಡ ಮಾತುಗಳಿಲ್ಲ. ಇದರಲ್ಲಿ ಕಲಾವಿದರು, ತಂತ್ರಜ್ಞರು ಪರ ಭಾಷೆಯವರು. ಹೀಗಾಗಿ ಇದು ಕನ್ನಡ ಚಿತ್ರವಲ್ಲ, ಆದ್ದರಿಂದ ಇದು ವರ್ಷದ ಅತ್ಯುತ್ತಮ ಕನ್ನಡ ಚಿತ್ರ ಪ್ರಶಸ್ತಿಗೆ ಅರ್ಹವಾಗುವುದಿಲ್ಲ ಎಂದು ಪ್ರಶಸ್ತಿ ಸಮಿತಿ ಚರ್ಚೆ ಮಾಡಿತ್ತು. ಅಂತಿಮವಾಗಿ ಟೈಟಲ್ ಕಾರ್ಡ್ಸ್ ಆಧಾರದ ಮೇಲೆ ಇದು ನಮ್ಮದೇ ಚಿತ್ರ ಎಂದು ತೀರ್ಮಾನಿಸಲಾಯಿತು.

ಟಾಕಿ ಯುಗ

ವಿಜ್ಞಾನದ ಹೆಜ್ಜೆ ಸದಾ ಮುಂದೆ. ಅದರ ಗುರಿ ಸತ್ಯಾನ್ವೇಷಣೆ, ಸಂಶೋಧನೆ. ಅದರ ಸದುಪಯೋಗ ಮಾನವ ಕುಲದ ಹೊಣೆ. ಇದು ಈ ತನಕ ನಡೆದುಬಂದ ಪದ್ಧತಿ. ಸಿನಿಮಾ ಸಹ ಇದಕ್ಕೆ ಹೊರತಲ್ಲ.

ಮೂಕಿ ಚಿತ್ರಕ್ಕೆ ಧ್ವನಿ ಜೋಡಿಸುವ ಸಾಧ್ಯತೆ ೧೯೨೮ರಲ್ಲಿ ಸಫಲವಾದಾಗ, ಚಲನ ಚಿತ್ರ ಕ್ಷೇತ್ರದ ಜನ ಖುಶಿಯಿಂದ ಕುಣಿದು ಕುಪ್ಪಳಿಸಿದರು. ಆದರೆ ಅದುವರೆಗೆ ಮೂಕಿ

ಸಿನಿಮಾ ಒಂದು ದೃಶ್ಯ ಮಾಧ್ಯಮ, ಜನ ಸಾಮಾನ್ಯನಿಗೂ ಅರ್ಥವಾಗುವ ಭಾಷೆ ಎಂದು ಮೆರೆದ ವಿಶ್ವ ಕಲೆ, ಭಾಷೆಯ ಹೆಸರಿನಲ್ಲಿ ಒಡೆದು ನುಚ್ಚುನೂರಾಗಿ ಮತ್ತೆ ಅನೇಕ ಅಡ್ಡ ಗೋಡೆಗಳು ನಿರ್ಮಾಣವಾದವು. ಅಳು-ನಗುವಿನ ಸಾರ್ವತ್ರಿಕ ಭಾಷೆಯಿಂದ ಜಾರಿ, ದೇಶ ಪ್ರಾಂತ್ಯದ ಭಾಷೆಯ, ಶಬ್ದಗಳ ಜಂಜಾಟದಲ್ಲಿ ಬಂದು ಬಿದ್ದಿತು.

ಆದುವರೆಗಾಗಲೇ ಒಂದು ಪರಿಣತಿಯ ಹಂತ ತಲುಪಿದ್ದ ಮೂಕಿ ಚಿತ್ರದ ನಿರ್ಮಾಣ ವ್ಯವಸ್ಥೆ, ಟಾಕಿ ಸಂಶೋಧನೆಯಿಂದ ಆಘಾತಕ್ಕೆ ಒಳಗಾಯಿತು. ಕೇವಲ ದೃಶ್ಯ ಮಾಧ್ಯಮಕ್ಕೆ ಸೂಕ್ತವಾದ ಹಾವ-ಭಾವ, ಅಭಿನಯ ರೂಪಿಸಿಕೊಂಡಿದ್ದ ಕಲಾವಿದರನೇಕರು ವೃತ್ತಿಯಿಂದ ನಿವೃತ್ತರಾದರು. ಮಾರುಕಟ್ಟೆಯಲ್ಲಿ ಮೂಲೆಗುಂಪಾದರು. ಇನ್ನುಳಿದವರು ಹೊಸ ಮಾತಿನ ತಂತ್ರದ ಅಭಿನಯಕ್ಕೆ ಹೊಂದಿಕೊಳ್ಳಲು ಪರದಾಡಿದರು. ಸಫಲರಾದವರು ಮಾತ್ರ ಉಳಿದರು.

ಈ ಆವಿಷ್ಕಾರದ ಫಲವೇನಾಯಿತೆಂದರೆ, ಆಗ ತಾನೇ ಮಾತನಾಡಲು ಕಲಿತ ಮಗು ಬಾಯಿಗೆ ಬಂದದ್ದನ್ನು ಸದಾ ಕಾಲವೂ ಟರಟರ ಹಲುಬುವಂತೆ, ನಮ್ಮ ಭಾರತೀಯ ಸಿನಿಮಾಗಳು ಸಹ ಮಾತಾಡತೊಡಗಿದವು. ಅತೀ ಮಾತು, ಅತೀ ನಾಟಕೀಯತೆ, ಅತೀ ಹಾಡು, ಅತೀ ದೀರ್ಘಾವಧಿಯ ಚಿತ್ರಗಳು ತಯಾರಾಗತೊಡಗಿದವು. ಪ್ರಭಾವಶಾಲಿಯಾಗಿ ಮಾತನಾಡಬಲ್ಲ, ಇಂಪಾಗಿ ಹಾಡಬಲ್ಲ ಕಲಾವಿದರ ಒಂದು ಹೊಸ ವರ್ಗವೇ ನಿರ್ಮಾಣವಾಯಿತು. ಅಂತರರಾಷ್ಟ್ರೀಯ ಮಟ್ಟದಲ್ಲಿ ಹೇಳುವುದಾದರೆ ೧೯೨೭ರಲ್ಲಿ ಮಾತಿನ ಮೊದಲ ಚಿತ್ರ 'ದಿ ಜಾಜ್ ಸಿಂಗರ್' ಬಿಡುಗಡೆಯಾಗಿದ್ದರೂ, ಚಾರ್ಲಿ ಚಾಪ್ಲಿನ್ ನಿರ್ಮಿಸಿದ ೧೯೩೧ರ 'ಸಿಟಿ ಲೈಟ್ಸ್' ಹಾಗೂ ೧೯೩೬ರ 'ಮಾಡರ್ನ್ ಟೈಮ್ಸ್' ಚಿತ್ರಗಳಲ್ಲೂ ಸಂಗೀತವನ್ನು ಅಳವಡಿಸಿದ್ದರೂ, ಮಾತಿನ ದೃಷ್ಟಿಯಿಂದ ಅವು ಮೂಕಿ ಚಿತ್ರಗಳಾಗಿಯೇ ಇದ್ದವು. ಚಿತ್ರಗಳಲ್ಲಿ ಮಾತನ್ನು ಬಳಸಿ, ಅದರ ಸಾರ್ವತ್ರಿಕತೆ, ವಿಶ್ವವ್ಯಾಪಿತನ ಕುಂಠಿತಗೊಳಿಸಲು ಚಾಪ್ಲಿನ್ ಒಪ್ಪದೇ ಪ್ರತಿಭಟಿಸುತ್ತಲೇ ಇದ್ದ. ಕೊನೆಗೆ ೧೯೪೦ರಲ್ಲಿ ತೆರೆಗೆ ಬಂದ 'ದಿ ಗ್ರೇಟ್ ಡಿಕ್ಟೇಟರ್'. ಸರ್ವಕಾಲೀನ ರಾಜಕೀಯ ಬದುಕಿನ ಸರ್ವಾಧಿಕಾರಿ, ಮನುಕುಲ ಶತ್ರು ಹಿಟ್ಲರ್‌ನನ್ನು ಲೇವಡಿ ಮಾಡುವ ಈ ಚಿತ್ರದಲ್ಲಿ ಚಾಪ್ಲಿನ್ ಮೊದಲ ಬಾರಿಗೆ ತನ್ನ ಪಾತ್ರಕ್ಕೆ ಸಂಭಾಷಣೆ ಬಳಸಿದ. ಅಂದು ಅವನಾಡಿದ ಮಾತು ಇಂದಿಗೂ ಅತ್ಯಂತ ಶ್ರೇಷ್ಠ ಸ್ಫೂರ್ತಿದಾಯಕ ಸಂದೇಶ ನೀಡುವ ಭಾಷಣ ಎಂದೇ ಹಲವಾರು ರಾಜಕಾರಣಿಗಳು, ಅಂತರರಾಷ್ಟ್ರೀಯ ಮಟ್ಟದ ಚಲನಚಿತ್ರ ನಿರ್ದೇಶಕರಿಂದ ಪರಿಗಣಿಸಲ್ಪಟ್ಟಿದೆ. ಆದರೆ ಅಂದು ಅವನಾಡಿದ ಮಾತಿನಿಂದಾಗಿ ಚಾಪ್ಲಿನ್ ಅನುಮಾನದಿಂದ ನೋಡಲ್ಪಟ್ಟ, ಅವಮಾನಕ್ಕೊಳಗಾದ, ಕೊನೆಗೆ ಅಪಾರ ಧನ ಹಾನಿಯೊಂದಿಗೆ ದೇಶಭ್ರಷ್ಟನೂ ಆದ.

ಮೂಕಿ ಕಾಲದಲ್ಲಿ ಚಿತ್ರ ಪ್ರದರ್ಶನವಾಗುವಾಗ ಪ್ರೊಜೆಕ್ಟರ್ ಓಡಿಸುವಾಗ ಕಿರ್ ಎಂದು ಮಾಡುವ ಸದ್ದು ಅಡಗಿಸಲು, ಅದಕ್ಕಿಂತಲೂ ಜೋರಾಗಿ ಸಂಗೀತವನ್ನು ನುಡಿಸುವ ವ್ಯವಸ್ಥೆ ಜಾರಿಗೆ ಬಂದಿತು. ಇದು ಪರದೆಯ ಮುಂದೆ ಕುಳಿತಾದರೂ ಸಂಗೀತಗಾರ ನುಡಿಸಬಹುದಿತ್ತು. ಅಥವಾ ಬೇರೆ ಧ್ವನಿ ಉಪಕರಣಗಳಲ್ಲಿ ಅಂದರೆ ಹಾಡಿನ ತಟ್ಟೆ (Gramophone Disk) ಸೌಲಭ್ಯ ಬಳಸಿಯೂ ಈ ಪರಿಣಾಮ ಒದಗಿಸಬಹುದಿತ್ತು.

೧೮೯೫ ಡಿಸೆಂಬರ್‌ನಿಂದ ೧೮೯೬ ಜುಲೈ - ಏಳೇ ತಿಂಗಳಲ್ಲಿ ಮೂಕಿ ಚಿತ್ರ ಫ್ರಾನ್ಸ್‌ನಿಂದ ಭಾರತಕ್ಕೆ ಬಂತು. ಆದರೆ ಟಾಕಿ ಚಿತ್ರ ತಂತ್ರ ಭಾರತಕ್ಕೆ ಬರಲು ನಾಲ್ಕು ವರ್ಷ ನಿರೀಕ್ಷೆ ಮಾಡಬೇಕಾಯಿತು. ಅಮೇರಿಕದಲ್ಲಿ ೧೯೨೭ರಲ್ಲಿ ಟಾಕಿ ಚಿತ್ರ ಪ್ರದರ್ಶನವಾದ ಬಳಿಕ ಎರಡು ವರ್ಷದ ನಂತರ ೧೯೨೯ರಲ್ಲಿ 'ಮೆಲೋಡೀಸ್ ಆಫ್ ಲವ್' ಚಿತ್ರದಿಂದ ಭಾರತದಲ್ಲಿ ಕೇಳಲು ದೊರೆಯಿತು. ಇದರ ನಂತರ ಮತ್ತೆ ಎರಡು ವರ್ಷದ ಬಳಿಕ, ೧೯೩೧ರ ಮಾರ್ಚ್ ೧೪ರಂದು ಕಲ್ಕತ್ತದಲ್ಲಿ ಮೊಟ್ಟ ಮೊದಲ ಭಾರತೀಯ ಧ್ವನಿ ಚಿತ್ರ ಪ್ರದರ್ಶನವನ್ನು ಮಾಡಲಾಯಿತು. ಆದರೆ ಅವು ಕಿರುಧ್ವನಿ ಚಿತ್ರಗಳಾಗಿದ್ದವು. ಇವುಗಳಲ್ಲಿ ಸರ್ ಸಿ.ವಿ. ರಾಮನ್‌ರ ಒಂದು ಪುಟ್ಟ ಭಾಷಣವು ಇತ್ತು. ಅದೇ ದಿನ ಮುಂಬೈಯಲ್ಲಿ 'ಅಲಂ ಆರಾ' (ಭುವನ ಸುಂದರಿ) ಎಂಬ ಅಪ್ಪಟ ಭಾರತೀಯ ಮೊದಲ ಧ್ವನಿ ಕಥಾಚಿತ್ರವೂ ಪ್ರದರ್ಶಿತವಾಯಿತು.

ದೃಶ್ಯ ಧ್ವನಿ ಎರಡೂ ಏಕಕಾಲದಲ್ಲಿ ನೆಗೆಟಿವ್‌ನಲ್ಲಿ ಚಿತ್ರೀಕರಣ ಮಾಡಿ ಗ್ರಹಿಸಿ, ನಂತರ ಅದನ್ನು ನೇರವಾಗಿ ಪಾಸಿಟಿವ್ ಆಗಿ ರಾಸಾಯನಿಕದಲ್ಲಿ ಸಂಸ್ಕರಣ ಮಾಡಿ ಪ್ರದರ್ಶನ ಮಾಡುತ್ತಿದ್ದರು. ಇದನ್ನೇ 'ಸಿಂಗಲ್ ಸಿಸ್ಟಮ್' ಚಿತ್ರ ತಯಾರಿಕೆ ಎನ್ನುತ್ತಿದ್ದರು. ಇದರಿಂದ ಒಂದೇ ಚಿತ್ರ ಮಾಡಲು ಸಾಧ್ಯವಿತ್ತು; ಪ್ರತಿಗಳನ್ನಲ್ಲ. ಈ ಪದ್ಧತಿಯಲ್ಲಿ ತಯಾರಾದ ಪ್ರಥಮ ಚಿತ್ರ 'ಆಲಂ ಆರಾ'.

ಮೂಕಿ ಕಾಲದಲ್ಲಿ ಉಡಾಳನಂತೆ ಊರೆಲ್ಲ ಅಲೆಯುತ್ತಿದ್ದ ಕ್ಯಾಮರಾಗೆ ಧ್ವನಿಯನ್ನು ಗಂಟು ಹಾಕಿದಾಗ, ಚಿತ್ರೀಕರಣ ಕಾಲದಲ್ಲಿ ಸಂಭಾಷಣೆಯ ಜೊತೆಗೆ ಚಿತ್ರೀಕರಣ ಸ್ಥಳದ ಇತರ ಸದ್ದು ಗದ್ದಲಗಳ ಧ್ವನಿಗ್ರಹಣವಾದೀತೆಂಬ ಭಯಕ್ಕೆ ಚಿತ್ರ ಮತ್ತೆ ಸ್ಟುಡಿಯೋದೊಳಗೆ ಬಂದು, ನಾಲ್ಕು ಗೋಡೆಯೊಳಗೆ ಬಂಧಿತವಾಯಿತು.

ಮೂಕಿ ಚಿತ್ರೀಕರಣ ಕಾಲದಲ್ಲಿ ನಟರಿಗೆ ನಿರ್ದೇಶಕ ತನ್ನ ಸಲಹೆಗಳನ್ನು ಕೂಗಿ ಕೂಗಿ ಹೇಳುತ್ತಿದ್ದ, ಕಲಾವಿದರು ಅವುಗಳನ್ನು ನಟಿಸುತ್ತಲೇ ಪಾಲಿಸುತ್ತಿದ್ದರು. ಧ್ವನಿಯ ಸಂಶೋಧನೆ ಟಾಕಿ ಚಿತ್ರೀಕರಣ ಕಾಲದಲ್ಲಿ, ನಿರ್ದೇಶಕ ಚಿತ್ರಿಕೆ (shot) ಚಿತ್ರಿಸುವ ಮೊದಲೇ ಸೂಚನೆ ಸಲಹೆ ನೀಡಿ, ನಂತರ ತೆಪ್ಪಗಾಗುವಂತೆ ಮಾಡಿತು. ಏನಾದರೂ ನಟನೆಯಲ್ಲಿ ದೋಷ, ಸಂಭಾಷಣೆಯಲ್ಲಿ ತಪ್ಪು ಅಥವಾ ನಿರ್ದೇಶಕನ ಕಲ್ಪನೆಯಂತೆ ಚಿತ್ರಿಕೆ ಬರದಿದ್ದರೆ, ಆಗ ಇನ್ನೊಂದು ಪ್ರಯತ್ನ (take 2) ಎಂದು ಮತ್ತೆ ಅದನ್ನು ಚಿತ್ರಿಸಬೇಕಾಗುತ್ತಿತ್ತು. ಸಂಪೂರ್ಣ ಚಿತ್ರವನ್ನು ಡಬ್ಬಿಂಗ್ ಮಾಡುವ ತಂತ್ರ ಚಾಲ್ತಿಯಲ್ಲಿ ಬಂದ ನಂತರ ನಿರ್ದೇಶಕ ಮತ್ತೆ ಸ್ವತಂತ್ರನಾದ.

ಧ್ವನಿಯ ಆವಿಷ್ಕಾರ, ಕ್ಯಾಮರಾ ರಚನೆಯಲ್ಲಿ ಇನ್ನೊಂದು ಬದಲಾವಣೆಗೆ ಕಾರಣವಾಯಿತು. ಸೆಕೆಂಡಿಗೆ ೧೬ ಫ್ರೇಂನಲ್ಲಿ ಓಡುವ ಕ್ಯಾಮರಾ ಅದೇ ಗತಿಯಲ್ಲಿ ಧ್ವನಿಯನ್ನು ಗ್ರಹಿಸಿತು. ಅದನ್ನು ಮರು ನುಡಿಸಿದಾಗ (replay) ಕೇಳುವವನಿಗೆ ನಗೆ ತರಿಸುವಂತಿತ್ತು. ಅಸ್ಪಷ್ಟ ಅಥವಾ ವಿಚಿತ್ರವಾದ ರಾಗದಂತಿತ್ತು. ಶಬ್ದ ಮತ್ತು ನೋಟಗಳ ವೇಗಕ್ಕೆ ಇರುವ ವ್ಯತ್ಯಾಸದಿಂದಾಗಿ ಹೀಗಾಯಿತು. ಒಂದೊಂದೇ ಫ್ರೇಮ್‌ನಂತೆ ಹೆಚ್ಚಿಸುತ್ತಾ ಬಂದು ೨೪ ಫ್ರೇಮ್‌ಗೆ ಬಂದಾಗ ಧ್ವನಿ-ನೋಟಗಳು ಹೊಂದಿಕೊಂಡವು. ಈಗ ಚಾಲ್ತಿಯಲ್ಲಿರುವುದು ೨೪ ಫ್ರೇಮುಗಳ ವೇಗದಲ್ಲಿ ಓಡುವ ಕ್ಯಾಮರಾ. ಟಿ.ವಿ. ಮಾಧ್ಯಮದ ತಂತ್ರಕ್ಕೆ ಇದಕ್ಕಿಂತ ಒಂದು ಫ್ರೇಮ್ ಹೆಚ್ಚು ಬೇಕು. ಅಂದರೆ ಪ್ರತಿ ಸೆಕೆಂಡಿಗೆ ೨೫ ಫ್ರೇಮ್‌ನಲ್ಲಿ ಓಡುವ ಕ್ಯಾಮರಾಗಳು ಇವೆ.

ಕನ್ನಡದ ಟಾಕಿ ಯುಗ

ಕನ್ನಡದ ಸಂದರ್ಭದಲ್ಲಿ ಹೇಳುವುದಾದರೆ, ಹೆಚ್ಚಿನಂಶ ಮೂಕಿ ಚಿತ್ರಗಳ ಯುಗದಲ್ಲೇ ರಾಮಾಯಣ, ಮಹಾಭಾರತದಂತಹ ಮಹಾಕಾವ್ಯಗಳನ್ನು ಕಂಡು ಆನಂದಿಸಿದ ಪ್ರೇಕ್ಷಕರಿಗೆ, ಧ್ವನಿ ಚಿತ್ರಗಳ ಕಾಲಕ್ಕೆ ಸರಿಯಾಗಿ ಪೌರಾಣಿಕ, ಜನಪದ ಹಾಗೂ ಸಾಮಾಜಿಕ ವಸ್ತುಗಳತ್ತ ಕಣ್ಣಾಡಿಸಬೇಕಾಯಿತು. ಈ ಸಮಯಕ್ಕೆ ನೆರವಿಗೆ ಬಂದಿದ್ದು ಆಗಿನ ನಾಟಕ ಕಂಪನಿಗಳಾಡುತ್ತಿದ್ದ ಜನಪ್ರಿಯ ನಾಟಕಗಳು.

ಇಲ್ಲಿ ಸಿದ್ಧವಾಗಿರುವ ಸಾಹಿತ್ಯ, ನುರಿತ ಕಲಾವಿದರು, ಸಂಗೀತಗಾರರು, ಗಾಯಕರು ಚಿತ್ರರಂಗಕ್ಕೆ ಆಧಾರವಾದರು. ಸ್ಟುಡಿಯೋದಲ್ಲೇ ಚಿತ್ರೀಕರಣ, ನುರಿತ ಕಲಾ ನಿರ್ದೇಶಕರಿಂದ ಸೂಕ್ತ ಸೆಟ್ಟುಗಳ ನಿರ್ಮಾಣ, ಚಿತ್ರೀಕರಣ ಕಾಲದಲ್ಲೇ ಧ್ವನಿಮುದ್ರಣ, ಶ್ರದ್ಧೆಯಿಂದ ಮತ್ತು ಆಸಕ್ತಿಯಿಂದ ತಮ್ಮ ತಮ್ಮ ಕಾರ್ಯ ನಿರ್ವಹಿಸುವ ವಸ್ತ್ರವಿನ್ಯಾಸ, ಮೇಕಪ್, ಕೇಶಾಲಂಕಾರ ತಂತ್ರಜ್ಞರು ಹಾಗೂ ನೇರ ಕಥಾ ನಿರೂಪಣೆಯ ಸರಳ ಸಂಕಲನ, ಇವೆಲ್ಲವೂ ಚಿತ್ರಕ್ಕೆ ಒಂದು ಸಮಗ್ರತೆಯನ್ನು ತಂದುಕೊಟ್ಟವು.

ಕನ್ನಡ ಚಿತ್ರಗಳ ನಿರ್ಮಾಣಕ್ಕೆ ಬಂಡವಾಳ ಕಡಿಮೆ ಇದ್ದುದರಿಂದ ಹಾಗೂ ವೆಚ್ಚ ಕಡಿಮೆ ಮಾಡಲು, ಬೇರೆ ಚಿತ್ರಗಳ ಸಿದ್ಧವಾಗಿರುವ ಸೆಟ್ಟುಗಳನ್ನು ಬಳಸಲು ಅನುಮತಿ ಇದ್ದುದರಿಂದ, ಸ್ಟುಡಿಯೋದಲ್ಲಿನ ಒಂದೇ ಕ್ಯಾಮರಾ ಕೇವಲ ರಾತ್ರಿ ಮಾತ್ರ ಲಭ್ಯವಿದ್ದುದರಿಂದ ಮತ್ತು ರಾತ್ರಿ ಕಾಲದ ಸ್ಟುಡಿಯೋಗಳ ಬಾಡಿಗೆ ದರ ಕಡಿಮೆ ಇದ್ದುದರಿಂದ, ರಾತ್ರಿ ಮಾತ್ರ ಕನ್ನಡ ಚಿತ್ರ ನಿರ್ಮಾಣ ಸಾಧ್ಯವಾಗುತ್ತಿತ್ತು. ಹೀಗಾಗಿ ಕೆಲವು ಕಲಾವಿದರು ಮೇಕಪ್, ವೇಷ-ಭೂಷ ಧರಿಸಿಯೇ ಸ್ಟುಡಿಯೋದಲ್ಲಿ ಮಲಗಿ, ತಮ್ಮ ಸರದಿ ಬೆಳಗಿನ ಜಾವ ಬಂದಾಗ ಪಾತ್ರ ಮಾಡುತ್ತಿದ್ದರು.

ತಂತ್ರಜ್ಞಾನದ ದೃಷ್ಟಿಯಿಂದ ಹೇಳುವುದಾದರೆ ವಿದೇಶಿ ಚಿತ್ರರಂಗ ಅತಿ ಕಷ್ಟದಿಂದ ತೆರೆಯ ಮೇಲೆ ಸಮಾನಾಂತರ ಕಥೆ ಹೇಳುವ ತಂತ್ರ (parallel story telling) ಕಂಡುಹಿಡಿಯಿತು. ಆದರೆ ನಮ್ಮ ಕಂಪೆನಿ ನಾಟಕಗಳಲ್ಲಿ ಈ ತಂತ್ರ ಬಹುಕಾಲದಿಂದಲೂ ಚಾಲ್ತಿಯಲ್ಲಿತ್ತು. ಎರಡು ಸನ್ನಿವೇಶಗಳ ನಡುವೆ ಆಗಬೇಕಾದ ಕಥಾನಾಯಕನ

ವೇಷ-ಭೂಷಣ, ವರ್ಣಾಲಂಕಾರ ಬದಲಾವಣೆಗೆ, ತೆರೆಮರೆಯಲ್ಲಿ ಸಮಯ ಒದಗಿಸಲು ಹಾಗೂ ಪ್ರೇಕ್ಷಕರನ್ನು ಅಲ್ಲಿಯವರೆಗೆ ರಂಜನೀಯವಾಗಿ ಹಿಡಿದಿಡಲು, ನಾಯಕನ ಗೆಳೆಯ ಅಥವಾ ವಿದೂಷಕನ ಪಾತ್ರದ ಹಾಸ್ಯ ಸನ್ನಿವೇಶಗಳು ಸಮಾನಾಂತರವಾಗಿ ನಿರೂಪಿತವಾಗುತ್ತಿದ್ದವು. ಕಥೆಯ ಕೊನೆಗೆ (climax) ಉತ್ಕರ್ಷದ ಸನ್ನಿವೇಶಗಳಲ್ಲಿ ಎಲ್ಲ ಪಾತ್ರಗಳೂ ಒಂದಾಗಿ ನಾಟಕ ಸುಖಾಂತ್ಯವಾಗುತ್ತಿದ್ದವು. ಈ ತಂತ್ರ ಚಲನ ಚಿತ್ರಗಳಲ್ಲೂ ಬಳಸಲ್ಪಟ್ಟಿತು. ಪ್ರೇಕ್ಷಕನಿಗೆ ರಸಾಭಾಸವಾಗದಂತೆ, ಅಲ್ಲಲ್ಲಿ ಅವನ ಮನಸ್ಸಿನಲ್ಲಿ ಮುಖ್ಯ ಕಥೆಯಲ್ಲಿ ಸೃಷ್ಟಿಸಿದ ಮಾನಸಿಕ ಆತಂಕಗಳಿಗೆ ಸ್ವಲ್ಪ ವಿಶ್ರಾಂತಿ ನೀಡಿ, ಮತ್ತೆ ಅವನನ್ನು ಮುಂದಿನ ರಸಾಸ್ವಾದನೆಗೆ ಹಾಸ್ಯ ಕಥಾ ಭಾಗದಿಂದ ಸಿದ್ಧ ಪಡಿಸುತ್ತಿದ್ದರು. ಈ ತಂತ್ರವನ್ನು ಹೆಚ್ಚು ಸಂಖ್ಯೆಯ ನಿರ್ದೇಶಕರು ಬಳಸಿಕೊಂಡರು, ಹಾಗೂ ಇವರಲ್ಲಿ ಹೆಚ್ಚಿನವರು ನಾಟಕ ರಂಗದ ಹಿನ್ನೆಲೆಯಿಂದ ಬಂದವರಾಗಿದ್ದರು.

ಇವರ ನಂತರವೂ ಸಹ ಬಂದ ಅನೇಕ ಕನ್ನಡ ಚಿತ್ರಗಳು ಕಾದಂಬರಿ ಆಧಾರಿತವಾಗಿದ್ದಾಗಲೂ ಸಿನಿಮಾದ ಹಲವಾರು ಕಥನ ತಂತ್ರಗಳಾದ ಹಿಂದಿನ ಸ್ಮರಣೆ, (flash back) ಒಂದಕ್ಕಿಂತಲೂ ಹೆಚ್ಚಿನ ಕಥಾನಕಗಳ ಸಮಾನಾಂತರ ಕಥಾ ನಿರೂಪಣೆ (parallel story narration), ಕನಸುಗಳ ಸನ್ನಿವೇಶ (dream scene) ಇವುಗಳು ಸಾಹಿತ್ಯ ನಿರೂಪಣೆಯಲ್ಲೇ ಹಾಸುಹೊಕ್ಕಾಗಿದ್ದವು. ನಿರ್ದೇಶಕ ಹೆಚ್ಚಿನ ಸಂದರ್ಭಗಳಲ್ಲಿ ಮೂಲ ಕಾದಂಬರಿಯಲ್ಲಿ ಇಲ್ಲದಿರುವ ಹಾಸ್ಯ ಸನ್ನಿವೇಶಕ್ಕೆ ಸ್ಥಾನ ಕಲ್ಪನೆ ಹಾಗೂ ಹಾಡುಗಳಿಗೆ ಸೂಕ್ತ ಸನ್ನಿವೇಶ ಸೃಷ್ಟಿಸುವ ಮೂಲಕ 'ಚಿತ್ರಕಥಾ ರಚನೆ' 'ಚಿತ್ರನಾಟಕ' ಎಂಬ ಹೊಸ ವಿಧಾನಕ್ಕೆ ಕಾರಣನಾದ.

ವರ್ಣ ಯುಗ

ಇದೇ ಸಮಯಕ್ಕೆ ಕಪ್ಪು-ಬಿಳುಪಿನಲ್ಲಿ ಬೆಳಕು-ನೆರಳಿನಾಟ ಸೃಷ್ಟಿಸುತ್ತ, ಸಕಲ ದೃಷ್ಟಿಯಿಂದಲೂ ಸಂಪೂರ್ಣತೆಯ ಸ್ವರೂಪ ಪಡೆಯುವ ಹಂತದಲ್ಲಿದ್ದಾಗಲೇ, ಸಿನಿಮಾ ಕಲೆಯ ಜೀವನದಲ್ಲಿ ವರ್ಣವೂ ಇಣುಕಿತು. ಸಿನಿಮಾಕ್ಕೆ ಬಣ್ಣ ಸೇರಿದೊಡನೆ ನಿರ್ದೇಶಕರ ಕಲ್ಪನೆಯ ನವಿಲು ಗರಿಗೆದರಿ ಕುಣಿಯತೊಡಗಿತು. ದೃಶ್ಯ ಶ್ರೀಮಂತಿಕೆ, ವರ್ಣ ವೈಭವ, ಸೃಷ್ಟಿ ಸೌಂದರ್ಯವೇ ಮೇಲುಗೈ ಪಡೆಯುವಂತಹ ಐತಿಹಾಸಿಕ, ಪೌರಾಣಿಕ ಚಿತ್ರಗಳ ನಿರ್ಮಾಣ ಮತ್ತೆ ಚಿಗುರಿತು. ಮಧ್ಯಮ ವರ್ಗದ ನಿರ್ಮಾಪಕರು ಪ್ರೇಕ್ಷಕರನ್ನು ಆಕರ್ಷಿಸಲು ಒಂದು ಮಧ್ಯ ಮಾರ್ಗ ಕಂಡುಕೊಂಡರು; ಅದೇ ಭಾಗಶಃ ವರ್ಣ ಚಿತ್ರ ಎಂಬ ಪದ್ಧತಿಯ ಚಿತ್ರ ನಿರ್ಮಾಣ. ಕನ್ನಡದಲ್ಲಿ ಈ ರೀತಿ ತಯಾರಾದ ಮೊದಲ ಚಿತ್ರ 'ಸ್ತ್ರೀ ರತ್ನ' ಹಾಗೂ ನಂತರದ 'ಪ್ರಭುಲಿಂಗ ಲೀಲೆ' ಮತ್ತು 'ವೀರಕೇಸರಿ' ಮುಖ್ಯವಾದವು.

ಇದಲ್ಲದೆ ಕೆಲವು ಕಪ್ಪು-ಬಿಳುಪು ಚಿತ್ರಗಳನ್ನು ಫ್ರೇಮ್-ಪ್ರತಿ-ಫ್ರೇಮ್ (frame-to-frame) ತಂತ್ರಜ್ಞರ ನೆರವಿನಿಂದ ಕೈಯಾರೆ ಬಣ್ಣ ಬಳಿದು, ಅವುಗಳನ್ನು ಚಿತ್ರ ಮಂದಿರದಲ್ಲಿ ಪ್ರದರ್ಶಿಸಲಾಯಿತು. ಈ ರೀತಿ ಕನ್ನಡದಲ್ಲಿ ನಿರ್ಮಾಣವಾದ ಚಿತ್ರ - "ಆದರ್ಶ ಸತಿ". ೨ ರೀಲುಗಳನ್ನು ಆರ್.ನಾಗೇಂದ್ರ ರಾಯರ 'ವಸಂತಸೇನಾ'ಕ್ಕೆ ವರ್ಣದಲ್ಲಿ ತರಲಾಯಿತು. ಅತಿ ಸೂಕ್ಷ್ಮವಾದ್ದನ್ನು ನೋಡುವಂಥ ಭೂದು ಗಾಜುಗಳ ಮೂಲಕ ಪ್ರತಿ ಫ್ರೇಂ ಅನ್ನು ನೋಡಿ ಬಣ್ಣ ಹಾಕಬೇಕಾಗಿತ್ತು. ಕೊಂಚ ವ್ಯತ್ಯಾಸವಾದರೂ ಆಭಾಸವೇ. ಮೀಸೆ ಬರೆಯುವಾಗ ಕಣ್ತಪ್ಪಿನಿಂದಾಗಿ ಮೂಗಿನ ಕೆಳಗೆ ಬರಬೇಕಾದ್ದು ಹಣೆಯ ಮೇಲೆ ಹೋದಂಥ ಆಭಾಸಗಳೂ ಆಗಿವೆ. ಅತ್ಯಂತ ಕಷ್ಟಕರವಾದ ಕೆಲಸ, ಕೆಟ್ಟರೆ ನಗೆ ಪಾಟಲು ಎಂಬ ಕಾರಣಕ್ಕೆ ಈ ವಿಧಾನವನ್ನು ಕೈ ಬಿಡಲಾಯಿತು.

ವರ್ಣ ಬಂದ ಮೇಲೆ ಭಾಗಶಃ ವರ್ಣದ ಪದ್ಧತಿ ಪ್ರಾರಂಭವಾಗಿ ಇಲ್ಲಿಯೂ ನಿರ್ದೇಶಕ ತಾಂತ್ರಿಕ ಪರಿಣತನಂತೆ ಚಿತ್ರಕಥೆ ಸಿದ್ಧಪಡಿಸ ಬೇಕಾಯಿತು. ಮಧ್ಯದಲ್ಲಿ ಬರುವ ಹಾಡು, ಕನಸು, ಯುದ್ಧ ಇಂತಹ ದೃಶ್ಯಗಳು ವರ್ಣದಲ್ಲಿ ಆರಂಭಗೊಂಡು, ಅದು ಅಂತ್ಯವಾಗುವುದು ಹತ್ತರಿಂದ ಇಪ್ಪತ್ತು ನಿಮಿಷದಲ್ಲಿ ಮಾತ್ರ ಎಂಬ ನಿಯಮ ಪಾಲಿಸಬೇಕಾಯಿತು. ಹಾಗಿದ್ದಾಗ ಮಾತ್ರ ಸಂಕಲನಕಾರ ವರ್ಣದ ಆ ರೀಲುಗಳನ್ನು ಮಾತ್ರ ಪ್ರತ್ಯೇಕವಾಗಿ ಸಂಕಲಿಸಿ, ಅದರ ನೆಗೆಟಿವ್ ಪ್ರತ್ಯೇಕವಾಗಿ ಬೇರೆ ಸಂಸ್ಕರಣ ಘಟಕಕ್ಕೆ (lab) ಮುದ್ರಿಸಲು ಕಳುಹಿಸುವುದಕ್ಕ ಅನುಕೂಲವಾಗುತ್ತಿತ್ತು. ನಂತರ ಅದು ಕ್ರಮಶಃ ರೀಲಿನ ಸಂಖ್ಯೆ ಪಡೆದು, ಆ ಪ್ರತಿ ಅಂತಿಮ ಪ್ರದರ್ಶನಕ್ಕೆ ಚಿತ್ರಮಂದಿರಕ್ಕೆ ಬರುತ್ತಿತ್ತು.

ಚಿತ್ರರಂಗದಲ್ಲಿ ಪರದೆಯ ಮೇಲೆ ತೋರುವ ಕಥನಗಳಲ್ಲಿ ಬದಲಾವಣೆಯಷ್ಟೇ ತೀವ್ರವಾಗಿ ತೆರೆಮರೆಯ ತಂತ್ರಜ್ಞಾನ ಪರಿಕರಗಳಲ್ಲಿ ಬದಲಾವಣೆ ಆಗಲಿಲ್ಲ. ಹೊರಾಂಗಣ ಚಿತ್ರೀಕರಣಕ್ಕೆ ಯಮಭಾರದ ಡೆಬ್ರಿ-ಮಿಚೆಲ್ ಕ್ಯಾಮರಾ ಹೊತ್ತು ತರುತ್ತಿದ್ದರು. ಧ್ವನಿಮುದ್ರಣಕ್ಕೆ ಅಥವಾ ಹಾಡಿನ ಚಿತ್ರೀಕರಣದ ಸಾಲುಗಳನ್ನು ಮರುನುಡಿಸಲು (play back) ಮ್ಯಾಗ್ನಾಸಿಂಕ್‌ನಂತಹ ಗಜಗಾತ್ರದ ಯಂತ್ರವನ್ನು ಗುಡ್ಡ, ಬೆಟ್ಟ, ನದಿ, ಸರೋವರ, ಕೋಟೆ, ಕೊತ್ತಲ ಹೀಗೆ, ನಿರ್ದೇಶಕನ ಕಲ್ಪನೆಯ ಕುದುರೆಯ ಹಿಂದೆ ಹೊತ್ತು ಹೋಗಬೇಕಾದ ಕಾಲವದು. ಅತೀ ದೂರದ ದೃಶ್ಯಗಳಲ್ಲಿ ಹಾಗೂ ಧ್ವನಿ ಗ್ರಹಣಕ್ಕೆ ಮೈಕ್ ಇಡಲು ಸಾಧ್ಯವಿರದ ಸಂದರ್ಭದಲ್ಲಿ, ಆ ಚಿತ್ರಿಕೆ ಚಿತ್ರೀಕರಣವಾದ ಕೂಡಲೇ, ಅದರ ಸಂಭಾಷಣೆ, ಅದೇ ಸ್ಥಳದಲ್ಲಿ - ಚಿತ್ರ ತಂಡ ಸ್ತಬ್ಧತೆ ಪಾಲಿಸಿ - ಅದನ್ನು ಕಚ್ಚಾಪದ್ಧತಿಯಲ್ಲಿ (wild) ಧ್ವನಿ ಮುದ್ರಿಸಿ, ಅದನ್ನೇ ಡಬ್ಬಿಂಗ್ ಎಂದು ಸಂಭಾಷಣೆಗೆ ಹೊಂದಿಸಿ ಬಳಸುತ್ತಿದ್ದರು. ತಕ್ಷಣ ಅದನ್ನು ಧ್ವನಿ ಮುದ್ರಿಸುವ ಉದ್ದೇಶ, ಕಲಾವಿದ ತನ್ನ ಸಂಭಾಷಣೆಯ ಸಾಲುಗಳನ್ನು ಹಾಗೂ ಅದರ ಉಚ್ಚಾರಣೆಯ ಪರಿಳಿತಗಳನ್ನು, ಭಾವನೆಯನ್ನು ಮರೆಯುವ ಮುನ್ನವೇ ಅದು ದಾಖಲಾಗಲಿ ಎಂಬ ತರ್ಕ. ಸಂಕಲನಕಾರನಂತೂ ಅವನಿಗೆ ನೀಡಲಾದ ಧ್ವನಿ ಫಿಲಂಗಿಂತ ಹೆಚ್ಚು ಕರ್ಕಶ ಶಬ್ದ ಮಾಡುತ್ತ ಚಿತ್ರ ಓಡಿಸುವ ಸಂಕಲನ ಯಂತ್ರ movioladದಲ್ಲಿ ಮಸುಕಾಗಿ ಕಾಣುವ ಚಿತ್ರವನ್ನೇ ಪೆನ್ಸಿಲ್‌ನಿಂದ ಗುರುತು ಹಾಕಿಕೊಂಡು, ತನ್ನ ಕಣ್ಣಿಂದ ವೀಕ್ಷಿಸಿಯೇ ಬಂದೂಕಿನ ಗುಂಡು, ರೇಲಿನ ಸಿಳ್ಳೆ, ಹೊಡೆದಾಟದ ಪಂಚ್ ಧ್ವನಿ, ಗಿಳಿ - ನಾಯಿಯ ಕೂಗು, ತಬಲ - ಸಿತಾರ್ ಇವುಗಳ ಮಿಡಿತದ ಆರಂಭ, ಅಂತ್ಯ ಹೀಗೆ ಹಲವಾರು ಧ್ವನಿಗಳನ್ನು (optical track) ನೋಡಿ ಕಂಡುಹಿಡಿದು ಸಂಕಲನ ಮಾಡುವಷ್ಟು ಪರಿಣಿತನಾದ.

ಚಿತ್ರಿಸಿದ ದೃಶ್ಯಗಳು ಅಂತಿಮ ಸಂಕಲನವಾಗಿ, ಅದರ ನೆಗೆಟಿವ್ ಪ್ರತಿ ರೂಪದಂತೆ ಕತ್ತರಿಸಿದ ನಂತರ, ಛಾಯಾಗ್ರಾಹಕ ಲ್ಯಾಬೋರೇಟರಿಯಲ್ಲಿ ಪ್ರಿಂಟಿಂಗ್ ವಿಭಾಗದ ಪರಿಣಿತರೊಡನೆ ಕುಳಿತು ಚರ್ಚಿಸಿ, ಚಿತ್ರ-ಪ್ರತಿ-ಚಿತ್ರ (shot-by-shot) ಅದರ ಬೆಳಕಿನ ಸಂಯೋಜನೆ, ದೃಶ್ಯದುದ್ದಕ್ಕೂ ಏಕ ರೀತಿಯಲ್ಲಿ ಹಾಗೂ ಕಥೆಗೆ ಪೂರಕವಾಗಿರುವಂತೆ ಪ್ರಿಂಟಾಗಲು ಗ್ರೇಡಿಂಗ್ ಕಾರ್ಯದಲ್ಲಿ ನೆರವಾಗಿ ತನ್ನ ಶ್ರಮ ಸಾರ್ಥಕವಾಗುವಂತೆ ನೋಡಿಕೊಳ್ಳುತ್ತಿದ್ದ.

ಸ್ಟುಡಿಯೋ ಪದ್ಧತಿ ಅವನತಿ

ಸಿನಿಮಾ ನಿರ್ಮಾಣ ಒಂದು ರಹಸ್ಯ ತಂತ್ರ (technic), ಅದನ್ನು ಜನಸಾಮಾನ್ಯ ಅರಿತರೆ, ಅವನಿಗೆ ತಂತ್ರ ಅರಿವಾದರೆ, ಸಿನಿಮಾ ನೋಡಿ ಆನಂದಿಸಲಾರ. ತಂತ್ರ ಸುಲಭವಾಗಿ ತಿಳಿದರೆ, ಹೆಚ್ಚು ಜನ ಈ ರಂಗಕ್ಕೆ ಬಂದು ಸ್ಪರ್ಧೆ ಉಂಟಾಗಬಹುದೆಂಬ ಬಂಡವಾಳಶಾಹಿ ಮನೋಭಾವ, ಈ ಎಲ್ಲಾ ವಿಚಾರಧಾರೆಯ ಮಿಳಿತದಿಂದಾಗಿ, ಸಿನಿಮಾ ಸ್ಟುಡಿಯೋದಲ್ಲಿ ಚಿತ್ರೀಕರಣ ವೀಕ್ಷಿಸಲು ಪ್ರವೇಶವು ರಕ್ಷಣಾ ಇಲಾಖೆಯ ಘಟಕದ ಪ್ರವೇಶದಷ್ಟೇ ಕಷ್ಟಕರವಾಗಿತ್ತು. ಹಾಗೊಮ್ಮೆ ಪ್ರವೇಶ ಪಡೆದ ನಂತರ ವ್ಯಕ್ತಿಯ ಗುರಿ ನಿರ್ದೇಶಕನಾಗುವುದಿದ್ದರೆ, ಅವನು ಸಿನಿಮಾ ನಿರ್ಮಾಣದ ಎಲ್ಲಾ ವಿಭಾಗಗಳ ಜ್ಞಾನ ಪಡೆಯಲು, ಎಲ್ಲರಡಿಯಲ್ಲಿ ಕ್ರಮವಾಗಿ ತರಬೇತಿ ಪಡೆಯುತ್ತಿದ್ದ. ಆದರೆ ಒಂದು ಸ್ಟುಡಿಯೋ ತಾನು ಬಳಸಿದ, ಕಂಡುಕೊಂಡ ಯಶಸ್ವಿ ತಂತ್ರವನ್ನು ಇನ್ನೊಂದು ಸ್ಟುಡಿಯೋಕ್ಕೆ ಬಿಟ್ಟುಕೊಡುತ್ತಿರಲಿಲ್ಲ. ಉದಾಹರಣೆಗೆ ಹೇಳುವುದಾದರೆ ಪುಣೆಯ ಪ್ರಭಾತ ಸ್ಟುಡಿಯೋ. ಹಲವಾರು ಸ್ಟುಡಿಯೋಗಳ ನಡುವಿನ ತುರುಸಿನ ಸ್ಪರ್ಧೆ ಇದಕ್ಕೆ ಕಾರಣವಾಗಿತ್ತು.

ಟಾಕಿ ಯುಗದ ಆರಂಭದಲ್ಲಿ ದೃಶ್ಯ ಪರಿಣಾಮವನ್ನು ಯೋಜಿಸಿ ರೂಪಿಸಿದಷ್ಟೇ ಧ್ವನಿ ಬಳಕೆಯನ್ನು ಯೋಜಿಸಿ ಬಳಸಿದವರು ನಿರ್ದೇಶಕ ವಿ.ಶಾಂತಾರಾಮ್. ಪ್ರಭಾತ್ ಸಂಸ್ಥೆಯ 'ದುನಿಯಾ ನಾ ಮಾನೇ', 'ಪಡೋಸಿ', 'ದೋ ಆಂಖೆ ಬಾರಾಹಾತ್', 'ರಾಮಶಾಸ್ತ್ರಿ' ಚಿತ್ರಗಳಲ್ಲಿ ಸಂಭಾಷಣೆಯ ನಡುವೆ ಪ್ರತ್ಯೇಕವಾಗಿ, ನಾಟಕೀಯ ಪರಿಣಾಮಕ್ಕಾಗಿ ಬಿರುಗಾಳಿ, ಗುಡುಗು, ಸಿಡಿಲು, ಗೋಡೆ ಗಡಿಯಾರದ, ಕನ್ನಡಿ ಒಡೆಯುವ ಸದ್ದುಗಳಿಗೆ ಸ್ಥಾನ ಕಲ್ಪಿಸುತ್ತಿದ್ದರು. ಇದು ಸಂಭಾಷಣೆ ಮತ್ತು ಧ್ವನಿವಿಶೇಷ ಒಂದಕ್ಕೊಂದು ತಾಕಲಾಟ (clash) ಆಗುತ್ತಿದ್ದುದರಿಂದ ಒಂದೇ ಧ್ವನಿಪಟ್ಟಿಯಲ್ಲಿ ಹೊಂದಿಸಲು ಆಗದೆ ಗತ್ಯಂತರವಿಲ್ಲದೆ ಬಳಸಬೇಕಾದ ತಂತ್ರವಾದರೂ, ಅದಕ್ಕೇ

ಒಗ್ಗಿಕೊಂಡು ಮತ್ತಷ್ಟು ಸೃಜನಾತ್ಮಕವಾಗಿ ಬಳಸಿಕೊಂಡರು. ಇವರ ನಂತರ ಅವರು ಕಂಡುಕೊಂಡ ತಂತ್ರ, ಧ್ವನಿವಿಶೇಷಗಳನ್ನು ಅಗತ್ಯವಿದ್ದ ಮಟ್ಟದಲ್ಲಿ (volume) ಧ್ವನಿಗ್ರಹಿಸಿ, ಅವನ್ನು ಚಿತ್ರಕ್ಕೆ ಹೊಂದಿಸಿ, ಒಂದು ಪ್ರತ್ಯೇಕ ಸೌಂಡ್ ನೆಗೆಟಿವ್ ರೀಲು ಸಿದ್ಧಪಡಿಸುತ್ತಿದ್ದರು. ಇದನ್ನು ಹಾಗೂ ಸಂಭಾಷಣೆಯ ಧ್ವನಿ ಫಿಲಂನ್ನು ಒಂದೇ (sync mark) ಆರಂಭ ಗುರುತಿನಿಂದ, ಒಂದರ ನಂತರ ಒಂದು ಮುದ್ರಿಸಿ ಅದನ್ನು ಡೆವಲಪ್ ಮಾಡಿದಾಗ, ಸಂಭಾಷಣೆಯ ಮೇಲೂ ಸಹ, ಧ್ವನಿ ವಿಶೇಷ ಅಗತ್ಯದ ಸ್ತರದಲ್ಲಿ ಕೇಳಿಸುತ್ತಿತ್ತು. ಅಂತಿಮ ಪರಿಣಾಮ ಸಮಾಧಾನಕರವಾಗಿರದಿದ್ದರೆ, ಅದನ್ನು ಮತ್ತೆ ಧ್ವನಿಗ್ರಹಣ ಮಾಡಿ, ಮುದ್ರಿಸುತ್ತಿದ್ದರು. ಇದು ಅವರು ಧ್ವನಿಯ ವಿಭಿನ್ನ ಟ್ರ್ಯಾಕುಗಳನ್ನು ಒಂದುಗೂಡಿಸುವ (mixing technic) ಮುನ್ನ ಕಂಡುಕೊಂಡ ತಂತ್ರ. ಈ ರಹಸ್ಯ ಪದ್ಧತಿಯಿಂದಾಗಿಯೇ ಇಂದು, ಮಿಕ್ಸಿಂಗ್ ತಂತ್ರವನ್ನು ಚಾಲ್ತಿಗೆ ತಂದ ಪ್ರಥಮರು ಯಾರು ಎಂದು ಖಚಿತವಾಗಿ ಹೇಳುವುದು ಕಷ್ಟ. ಇದರಂತೆಯೇ ಇತರ ತಂತ್ರಗಳೂ ಸಹ ಎಂದು ಹೇಳಬಹುದು.

ನಾವು ರೈಲಿನಲ್ಲಿ ಚಲಿಸುವಾಗ ಕಿಟಕಿಯಿಂದ ನೋಡಿದರೆ ಕಾಣುವ ಮರ, ಗಿಡ, ಬೆಟ್ಟ, ಊರು ಇವುಗಳನ್ನು ಅಥವಾ ಕಾರಿನಲ್ಲಿ ಹೋದಾಗ ರಸ್ತೆಯ ಬದಿಯ ಕಟ್ಟಡಗಳು ಅಥವಾ ನೇರವಾಗಿ ಹಿಂದೆ ನೋಡಿದಾಗ ಕಾಣುವ ಇತರೆ ವಾಹನಗಳು ಇವುಗಳನ್ನು ಚಿತ್ರಿಸಿ, ನಂತರ ಇದನ್ನು ಒಂದು ಪರದೆಯ ಮೇಲೆ ಪ್ರದರ್ಶಿಸುತ್ತಲೇ, ಇವರ ಮುಂದೆ ನಿಂತಲ್ಲಿಯೇ ಕುಲುಕಾಡುವ ಕಾರು ಅಥವಾ ರೇಲ್ವೆ ಡಬ್ಬಿಯಲ್ಲಿ ಕಲಾವಿದರು ಮಾತನಾಡುವುದನ್ನು ಸಂಯೋಜಿತವಾಗಿ (composite) ಚಿತ್ರಿಸುವ ತಂತ್ರವೇ ಬ್ಯಾಕ್ ಪ್ರೊಜೆಕ್ಷನ್.

ಪಕ್ಷಿರಾಜಾ ಸ್ಟುಡಿಯೋದಲ್ಲಿ ಸಿನಿಮಾ ಆಪರೇಟರ್ ಆಗಿದ್ದ ಶ್ರೀನಿವಾಸ ಎಂಬುವವರು ಸ್ಥಳೀಯ ಪತ್ರಿಕೆಯಲ್ಲಿ ಬ್ಯಾಕ್ ಪ್ರೊಜೆಕ್ಷನ್ ಕುರಿತು ಲೇಖನ ಒಂದನ್ನು ಬರೆದು ಪ್ರಕಟಿಸಿದಾಗ, ಸಿನಿಮಾ ತಂತ್ರಜ್ಞಾನವನ್ನು ಹೊರಗಿನವರಿಗೆ ಬಿಟ್ಟುಕೊಡಲು ನಿನಗೆ ಯಾರು ಅನುಮತಿ ನೀಡಿದರೆಂದು ಪ್ರಶ್ನಿಸಿ, ಒಂದು ವರ್ಷ ಕಾಲ ಅವರ ಸಂಬಳ ಬಡ್ತಿ (increment) ತಡೆಹಿಡಿಯಲಾಯಿತು. ಶೇಖರ್ ಎಂಬ ಸೌಂಡ್ ಇಂಜಿಯರ್ ಆರ್‌ಸಿಎ ಧ್ವನಿಗ್ರಹಣ ಯಂತ್ರದಲ್ಲಿ ಸಣ್ಣ ಬದಲಾವಣೆ ಮಾಡಿಕೊಂಡು, ಮಾತು, ಸಂಗೀತ ಎರಡನ್ನೂ ಮುದ್ರಿಸಿಕೊಂಡಿದ್ದು ದೊಡ್ಡ ಚರ್ಚೆಗೆ ಕಾರಣವಾಗಿಬಿಟ್ಟಿತ್ತು. (ನೋಡಿ : ೧೯೫೧-೬೦ ದಶಕದ ಲೇಖನ)

ದೇಶದಲ್ಲಿ ಆದ ಅನೇಕ ಆರ್ಥಿಕ ಬದಲಾವಣೆಗಳು ಹಾಗೂ ಜನರಲ್ಲಿ ಸಿನಿಮಾ ಬಗ್ಗೆ ಇರುವ ಕೀಳು ಮನೋಭಾವ ದೂರವಾಗತೊಡಗಿದಂತೆ ಈ ಕ್ಷೇತ್ರದತ್ತ ಅನೇಕ ಹಣವಂತರು ಪ್ರಸಿದ್ಧಿಗಾಗಿ, ಹೆಚ್ಚಿನ ಧನ ಸಂಪಾದನೆಗಾಗಿ, ಥಳಕು-ಬಳುಕಿನ ಐಶಾರಾಮ ಭೋಗಲಾಲಸೆಗಾಗಿ, ಇದೂ ಒಂದು ವೃತ್ತಿ ಎಂದು, ಕೆಲವರು ಮಾತ್ರ ಇದನ್ನು ಒಂದು ಕಲಾಪ್ರಕಾರ ಎಂದು ಭಾವಿಸಿ ಇಣುಕ ತೊಡಗಿದರು. ಅದೇ ಸಮಯಕ್ಕೆ ಚಿತ್ರರಂಗದವರಿಗೆ ಹೊರಾಂಗಣಕ್ಕೆ ಒಯ್ಯಲು ತುಂಬಾ ಸರಳ ಹಾಗೂ ಸುಲಭವಾದ ಕಡಿಮೆ ಭಾರದ 'ಆ್ಯರಿಫ್ಲೆಕ್ಸ್' ಕ್ಯಾಮರಾ ಹಾಗೂ ಚಿತ್ರೀಕರಣ ಕಾಲದಲ್ಲೇ ಮಾತುಗಳನ್ನು ತುಟಿ ಚಲನೆಗೆ ಹೊಂದುವಂತೆ (insync) ಧ್ವನಿಗ್ರಹಿಸುವ 'ನಾಗರ' ಧ್ವನಿಮುದ್ರಣ ಯಂತ್ರದ ಪರಿಚಯವಾದದ್ದು. ಕಟ್ಟಿಹಾಕಿದಂತಿದ್ದ ಸ್ಟುಡಿಯೋ ನಿರ್ಮಾಣದ ಮಿತಿ ತಪ್ಪಿತು. ಹೊರಾಂಗಣ ಘಟಕಗಳು, ಚಿತ್ರೀಕರಣಕ್ಕೆ ನಿಜವಾದ ಮನೆಗಳು, ತೋಟಗಳು, ಗೀತೆ ಹಾಗೂ ಮಾತು ಧ್ವನಿಮುದ್ರಣಕ್ಕೆ ಧ್ವನಿಸ್ಟುಡಿಯೋಗಳು, ಸಂಕಲನ ಕೊಠಡಿಗಳು, ವರ್ಣ ಸಂಸ್ಕರಣ ಘಟಕಗಳು ಹುಟ್ಟಿಕೊಂಡವು. ಹೀಗಾಗಿ ಇದುವರೆಗೆ ಸ್ಟುಡಿಯೋ - ಸಂಸ್ಥೆಗಳ ಜೀತದಾಳಿನಂತಿದ್ದ ಸಿನಿಮಾ ಮುಕ್ತವಾಗಿ ಹೊರಬಂದು ನೆಮ್ಮದಿಯ ಉಸಿರಾಡಲು ತೊಡಗಿತು. ತೆರೆ ಮೇಲೆ, ತೆರೆಯ ಹಿಂದೆ ಹೊಸ ಪ್ರತಿಭೆ ಅರಳಲು ಅವಕಾಶಗಳು ಸೃಷ್ಟಿಯಾದವು.

ಈ ಸಮಯವನ್ನು ನಾವು ಒಂದು ರೀತಿಯ ದ್ವಂದ್ವಕಾಲ ಎನ್ನಬಹುದು. ಅದುವರೆಗೆ ಹಳೆಯ ಯಂತ್ರೋಪಕರಣಗಳಲ್ಲಿ ಕೆಲಸ ಮಾಡಿದ ತಂತ್ರಜ್ಞರು ಹೊಸದಕ್ಕೆ ಹೊಂದಿಕೊಳ್ಳುವುದರಲ್ಲಿ ಅಸಮರ್ಥರಾದರು, ಕೆಲವರು ಅಂತಹ ಉಪಕರಣಗಳ ಸಾಮರ್ಥ್ಯದ ಬಗ್ಗೆ ಅನುಮಾನದಿಂದ ನೋಡಿದರು ಅಪಪ್ರಚಾರ ಮಾಡಿದರು. ಹಳೆಯದೇ ಶ್ರೇಷ್ಠ, ಅದರ ಗುಣಮಟ್ಟವೇ ಉತ್ತಮ ಎಂದು ಪ್ರತಿಪಾದಿಸಲು ತೊಡಗಿದರು. ಈ ಮಧ್ಯೆ ಝೂಂ ಲೆನ್ಸಿನ ಪ್ರವೇಶವಾಯಿತು. ಸತ್ಯಜಿತ್ ರಾಯ್ ಅಂತಹ ನಿರ್ದೇಶಕರು ಇದೇ ಝೂಮ್ ಲೆನ್ಸ್ ಕುರಿತು - ''ಇದೊಂದು ಗಣನೀಯ ಸಂಶೋಧನೆ, ಕೇವಲ ಕ್ಯಾಮರಾ ಚಲನೆಯ ಸಮಯವನ್ನು ಉಳಿಸುವ ಸಾಧನವಾಗಿ ಮಾತ್ರವಲ್ಲ, ತನ್ನದೇ ಆದ ಶೈಲಿಯಲ್ಲಿ ವಿವಿಧವಾಗಿ ಒತ್ತು ಕೊಡುವುದನ್ನು ಸಾಧಿಸಲು'' ಎಂದು ಬಣ್ಣಿಸಿದರು. ಹೀಗಾಗಿ ಝೂಂ ಲೆನ್ಸ್ ಮಾತ್ರ ಚಿತ್ರರಂಗವೂ ಮುಕ್ತವಾಗಿ ಸ್ವೀಕರಿಸಿದ ಸಾಧನವಾಗಿ, ತಂತ್ರಗಾರಿಕೆಯ ಎರಡು ತಲೆಮಾರುಗಳಿಗೆ ಸ್ನೇಹ ಸೇತುವೆಯಾಗಿ ನಿಂತಿತು.

ಈ ಲೆನ್ಸಿನ ವಿಶೇಷತೆಯೆಂದರೆ ಕ್ಯಾಮರಾವನ್ನು ಇಟ್ಟ ಸ್ಥಳದಿಂದ ಮುಂದೆ-ಹಿಂದೆ ಚಲಿಸದೆ, ಹಾಗೇ ಕಲಾವಿದ - ವಸ್ತುವನ್ನು ಸಹ ಚಲಿಸದೇ, ಈ ಉಪಕರಣದ (lensನ) ಮಸೂರದ ಮುಂಭಾಗವನ್ನು ಚಲಿಸುವುದರ ಮೂಲಕ ಅದು / ಅವು ತೀರ ಹತ್ತಿರಕ್ಕೆ ಬಂದಂತೆ ಅಥವಾ ತೀರಾ ದೂರ ಹೋದಂತೆ, ಅತ್ಯಂತ ಕೃತ್ರಿಮ ಹಾಗೂ ಅಸಹಜವಾದರೂ, ಕ್ರಮೇಣ ನಿಧಾನವಾಗಿ ಅಥವಾ ಸರ್ರನೆ ವೇಗವಾಗಿ ಚಲಿಸುವಂತೆ ತೋರಿಸುವ ಸಾಧ್ಯತೆಯುಳ್ಳ ಸಾಧನ ಇದು. ಸುಮಾರು ೩೦೦ ಅಡಿ ದೂರದಲ್ಲಿ ನಿಂತಿರುವ ವ್ಯಕ್ತಿಯ ಮುಖವನ್ನು, ಒಂದಡಿ ಚಚ್ಚೌಕದ ಫೋಟೋದಷ್ಟು ಹತ್ತಿರದಂತೆ ತೋರಿಸಬಲ್ಲುದು. ಈ ಉಪಕರಣವನ್ನು ಸಾಮಾನ್ಯವಾಗಿ ಜನಸಂದಣಿ ಇರುವ ಜಾಗದಲ್ಲಿ ಸಹ ಕ್ಯಾಮರಾವನ್ನು ಮರೆಯಲ್ಲಿ ಇಟ್ಟು candid ಪದ್ಧತಿಯಲ್ಲಿ ಕಲಾವಿದರನ್ನು ಹತ್ತಿರದಿಂದ ಚಿತ್ರಿಸಲು ಸಾಧ್ಯ.

ತಾರಾ ಪದ್ಧತಿ

ಇಷ್ಟು ವರ್ಷಗಳ ಕಾಲ ಚಿತ್ರರಂಗ ಬೆಳೆದು ಬಂದ ಫಲವಾಗಿ ಕೆಲವು ಜನಪ್ರಿಯ ತಾರೆಯರ ಉದಯವಾಯಿತು. ಬೇಡಿಕೆಯ ನಿರ್ದೇಶಕರು ತಯಾರಾದರು. ಅಂತೆಯೇ ಮಾರಾಟವಾಗುವ ಪ್ರಣಯ, ಹಾಡು, ಹಿಂಸೆ, ಕಾಮ, ಹೊಡೆದಾಟ, ಹೀಗೆ ಹಲವು ಮಸಾಲೆಗಳ ಗಲ್ಲಾಪೆಟ್ಟಿಗೆಯ ಸಿದ್ಧ ಸೂತ್ರವೊಂದು ತಾನೇ ತಾನಾಗಿ ಅಸ್ತಿತ್ವಕ್ಕೆ ಬಂದಿತು. ಏಕಕಾಲಕ್ಕೆ ಹಲವಾರು ಚಿತ್ರಗಳಲ್ಲಿ ತೊಡಗಿಸಿಕೊಳ್ಳುವ ಪ್ರವೃತ್ತಿಯು, ಕಲಾವಿದ, ನಿರ್ದೇಶಕರ ವೃತ್ತಿ ಜೀವನದಲ್ಲಿ ಇಣುಕಿತು. ತಾರೆಯರು ಚಿತ್ರೀಕರಣಕ್ಕೆ ನೀಡುವ ದಿನಗಳ (call sheet) ಆಧಾರದ ಮೇಲೆ, ಕಥೆ-ಚಿತ್ರಕಥೆಯ ಸಿದ್ಧತೆಯಿಲ್ಲದೆ ಚಿತ್ರೀಕರಣ ಯೋಜನೆಗಳು, ಚರ್ಚೆಗಳು, ಕೂಲಂಕಶ ವಿವರಗಳ ಸಂಗ್ರಹ ಮಾಡದೇ ಚಿತ್ರ ಪ್ರಾರಂಭಿಸುವ ಪರಿಪಾಠ ಆರಂಭವಾಯಿತು. ಬಡ್ಡಿಗೆ ಸಾಲ ತಂದ ನಿರ್ಮಾಪಕನೂ ಅವಸರದ ಅಡುಗೆಗೆ ಒತ್ತಾಯಿಸತೊಡಗಿದ. ಹೀಗಾಗಿ ಎಲ್ಲರೂ ತಮ್ಮ ತಮ್ಮ ಕೆಲಸದತ್ತ ನಿಗಾ ನೀಡತೊಡಗಿ, ಚಿತ್ರ ನಿರ್ಮಾಣದಲ್ಲಿ ಏಕತೆ ಹೋಯಿತು. ಪರಿಣಾಮವಾಗಿ ಚಿತ್ರದಲ್ಲಿ ಸಮಗ್ರತೆಯ ಕೊರತೆ ಕಾಣತೊಡಗಿತು. ಚಿತ್ರಗಳು ಭಾಗಶಃ ಬೇರೆ ಬೇರೆಯವರ ಸುಪರ್ದಿನಲ್ಲಿ ತಯಾರಾಗಿ, ನಿರ್ದೇಶಕನ ಸಮ್ಮುಖದಲ್ಲಿ ಅವನ ಮೂಗಿನ ನೇರಕ್ಕೆ ಜೋಡಿಸಲ್ಪಟ್ಟವು. ಇವನ್ನೇ (assembly line production) ಬಿಡಿ ಭಾಗಗಳ ಸಂಯೋಜನೆಯ ಯಂತ್ರೋತ್ಪಾದನೆ ಎಂದು ಚಿತ್ರರಂಗದವರು ಪರಿಗಣಿಸಿದಾಗ, ಸಿನಿಮಾ ಕಲೆಗಿಂತ ಒಂದು ಉದ್ಯಮವೆಂದು ದೃಢಪಟ್ಟಿತು.

ಇವನ್ನೇ ಬಹುಶಃ ಸತ್ಯಜಿತ್ ರಾಯ್ ಅವರು, ''ಮುಂಬೈನಲ್ಲಿ ಸಿನಿಮಾವನ್ನು ನಿರ್ದೇಶಕನೆಲ್ಲಿ ಮಾಡುತ್ತಾನೆ ? ನೃತ್ಯ ನಿರ್ದೇಶಕ, ನೃತ್ಯ-ಹಾಡಿನ ಭಾಗ ನಿರ್ದೇಶಿಸುತ್ತಾನೆ; ಸ್ಟಂಟ್ ನಿರ್ದೇಶಕ, ಹೊಡೆದಾಟ-ಛೇಸುಗಳನ್ನು ನಿರ್ದೇಶಿಸುತ್ತಾನೆ. ಕಲಾವಿದರು ಸಹಾಯಕ ನಿರ್ದೇಶಕರು ಸೇರಿ ಮಾತಿನ ದೃಶ್ಯಗಳನ್ನು ಚಿತ್ರೀಕರಿಸುತ್ತಾರೆ. ಸಂಕಲನಕಾರ ಇವೆಲ್ಲವನ್ನೂ ಕತ್ತರಿಸಿ, ಯೋಗ್ಯವಾಗಿ ಜೋಡಿಸುತ್ತಾನೆ. ನಿರ್ದೇಶಕ ಆ ಹೊತ್ತಿಗಾಗಲೇ ಇನ್ನೊಂದು ಚಿತ್ರದ ನಿರ್ದೇಶನದ ವ್ಯವಹಾರ ಕುದುರಿಸುವಲ್ಲಿ ಮುಳುಗಿರುತ್ತಾನೆ'' ಎಂದರು. ಅಂದು ಅವರು ಹೇಳಿದ ಮಾತು ಬಹುಶಃ, ಇಂದು ಎಲ್ಲ ಭಾಷೆಯ ಚಿತ್ರರಂಗಕ್ಕೂ ಅನ್ವಯವಾಗುತ್ತದೆ.

ಕನ್ನಡ ಚಿತ್ರರಂಗದಲ್ಲಿನ ಕೆಲವು ವಿಚಿತ್ರ ತಂತ್ರಗಳು

ಸ್ಟುಡಿಯೋದಲ್ಲಿ ವಿದ್ಯುತ್ ಪೂರೈಕೆ ಸ್ಥಿರವಾದ ವೋಲ್ಟ್‌ನಲ್ಲಿ ಸತತವಾಗಿ ಇರುವುದರಿಂದ ಧ್ವನಿ ಮತ್ತು ದೃಶ್ಯಗಳ ಚಿತ್ರಣ ಏಕಕಾಲದಲ್ಲಿ, ಸಿಂಕ್ ಪದ್ಧತಿಯಲ್ಲಿ ಸಾಧ್ಯ. ಆದರೆ ನಿಜವಾದ ಮನೆಗಳಲ್ಲಿ, ಸಿಂಕ್ರನಸ್ ಮೋಟಾರ್ ಬಳಸದೆ ಚಿತ್ರೀಕರಿಸಿ, ದೃಶ್ಯ ಧ್ವನಿ ಸಂಬಂಧ ಏರುಪೇರಾದರೂ ೧೫-೨೦ ಸಾವಿರ ಅಡಿ ಸೌಂಡ್ ನೆಗೆಟಿವ್‌ಗೆ

ಅದನ್ನು ವರ್ಗಾಯಿಸಿ, ಕ್ಯಾಮರಾದ ಕಿರ್ರನೆಯ ಧ್ವನಿಯೂ ಅದರಲ್ಲಿ ಸೇರಿಕೊಂಡು, ನಂತರ ಪೂರ್ತಿ ಚಿತ್ರದ ಧ್ವನಿ ಸ್ಟುಡಿಯೋದಲ್ಲಿ ಡಬ್ ಮಾಡಬೇಕಾದ ಅನಿವಾರ್ಯ ಪ್ರಸಂಗಗಳು ಹಲವಾರು ಇವೆ. (ಉದಾಹರಣೆಗೆ :೧. ಚಿತ್ರ - 'ಬಾಳು ಬಂಗಾರ' ನಿರ್ದೇಶಕ - ಅರಸು ಕುಮಾರ್. ೨. ಚಿತ್ರ - 'ಉಡುಗೊರೆ' ನಿರ್ದೇಶಕ - ಮಹೇಶ್.)

ಚಿತ್ರದ ಸಂಪೂರ್ಣ ಸಂಭಾಷಣೆಗಳನ್ನು ಸಮುದ್ರ ತೀರದಲ್ಲಿ ಚಿತ್ರೀಕರಿಸುವಾಗ ಅಲೆಯ ಸದ್ದಿನ ನಡುವೆ ಧ್ವನಿ ಮುದ್ರಿಸಿ, ಅದು ಯಾರಿಗೂ ಕೇಳಿಸದಂತಿದ್ದರೂ, ಅದನ್ನು ಸೌಂಡ್ ನೆಗೆಟಿವ್‌ಗೆ ವರ್ಗ ಮಾಡಿಸಿ, ನಂತರ ಪೂರ್ತಿ ಚಿತ್ರ ಡಬ್ ಮಾಡಿ, ಇಪ್ಪತ್ತು ಸಾವಿರ ಅಡಿ ಸೌಂಡ್ ನೆಗೆಟಿವ್ ಎಸೆದ ಪ್ರಕರಣಗಳೂ ಇವೆ. (ಉದಾ : ಚಿತ್ರ - 'ಒಂದು ಮುತ್ತಿನ ಕಥೆ', ನಿರ್ದೇಶಕ - ಶಂಕರ್‌ನಾಗ್.) ಚಿತ್ರೀಕರಣ ಕಾಲದಲ್ಲಿ ಮಾತಾಡುವುದೇ ಅಂತಿಮ ಹಾಗೂ ಸಹಜ ಪದ್ಧತಿ. ನಂತರ ಅದನ್ನು ಮರು ಸೃಷ್ಟಿಸಲಾಗದು ಎಂದು ಖಚಿತವಾಗಿ ನಂಬಿ, ಯಾರೂ ಅನುಸರಿಸದ ಕಾಲದಲ್ಲಿ ಈ ಪದ್ಧತಿಯನ್ನು ಅನುಸರಿಸಿ, ಸಿಂಕ್ ವಿಧಾನದಲ್ಲಿ, ಕ್ಯಾಮರಾ ಸದ್ದಡಗಿಸಲು (blimp) ಕ್ಯಾಮರಾ ಕವಚ ಬಳಸಿ, ಪೂರ್ತಿ ಚಿತ್ರ ಚಿತ್ರೀಕರಿಸಿ, ಭಲೇ ಎನಿಸಿಕೊಂಡ ನಿರ್ದೇಶಕರು ಶಿವರಾಮ ಕಾರಂತ, ಚಿತ್ರ - ಮಲೆಯ ಮಕ್ಕಳು.

ಕೆಲವು ಇತ್ತೀಚಿನ ನಿರ್ದೇಶಕರು ಸಂಪೂರ್ಣ ಚಿತ್ರ ಡಬ್ ಮಾಡಲು ಮೊದಲೇ ನಿರ್ಧರಿಸಿ, ಚಿತ್ರೀಕರಣ ಕಾಲದ ಧ್ವನಿಯನ್ನು ಕೇವಲ ಮಾದರಿ ಸಂದರ್ಭ ಬಳಕೆಗೆ (pilot track) ಎಂದು ಅದನ್ನು ದೂರದಿಂದಲೇ ಧ್ವನಿಗ್ರಹಣ ಮಾಡಿ, ಛಾಯಾಗ್ರಾಹಕನ ಲೈಟಿಂಗ್ ಸಮಯದಲ್ಲಿ ಮೈಕ್ರೋ ಫೋನ್ ಅಡ್ಡ ತರದೆ, ಸಂಪೂರ್ಣ ಸ್ವತಂತ್ರ, ಮುಕ್ತ ವಾತಾವರಣ ಸೃಷ್ಟಿಸಲು ನೆರವಾದ ಘಟನೆಗಳು ಸಾಮಾನ್ಯ. (ಉದಾ : ೧. ಚಿತ್ರ - 'ಕಂಕಣ', ನಿರ್ದೇಶಕರು - ಎಂ.ಬಿ.ಎಸ್.ಪ್ರಸಾದ್. ೨. ಚಿತ್ರ - 'ಘಟಶ್ರಾದ್ಧ', ನಿರ್ದೇಶಕರು - ಗಿರೀಶ್ ಕಾಸರವಳ್ಳಿ.)

ಚಿತ್ರ ನಿರ್ಮಾಣ ಕಾಲದಲ್ಲಿ ಖರ್ಚಿನ ಉಳಿತಾಯ ಎಲ್ಲ ತಂತ್ರಜ್ಞರ ಗುರಿ. ಇದನ್ನು ನೆರವೇರಿಸಲು, ಸಾಮಾನ್ಯವಾಗಿ ಛಾಯಾಗ್ರಾಹಕ ಚಿತ್ರೀಕರಣ ಕಾಲದಲ್ಲಿ, ಸ್ಟುಡಿಯೋ ಲೈಟುಗಳು ಹೊರಾಂಗಣಕ್ಕೆ ಬೇಕೇ ಬೇಕೆನ್ನದೆ, ಇರುವ ಬೆಳಕನ್ನೇ ಪ್ರತಿಫಲಕಗಳನ್ನು ಬಳಸಿ (reflecter), ಬೆಳಕನ್ನು ಮರು ಪ್ರಕಾಶಿಸಿ ತನ್ನ ಪ್ರತಿಭೆಗೆ ಸ್ವಲ್ಪ ಕುಂದು ಬಂದರೂ ಒಪ್ಪಂದ ಮಾಡಿಕೊಂಡು ಚಿತ್ರೀಕರಿಸುತ್ತಾನೆ. ಉದಾ : ಚಿತ್ರ - 'ಪೋಸ್ಟ್ ಮಾಸ್ಟರ್'. ಇದರಲ್ಲಿ ಮೈಸೂರಿನ ಟೌನ್ ಹಾಲ್‌ನಲ್ಲಿ ಲಭ್ಯವಿದ್ದ ಲೈಟಿನಲ್ಲೇ ಚಿತ್ರಿತವಾದ ಸನ್ನಿವೇಶಗಳಿವೆ. ಕೆಲವೊಮ್ಮೆ ಛಾಯಾಗ್ರಾಹಕನಿಗೆ ಟ್ರಾಲಿ ಇಲ್ಲದಿದ್ದರೆ, ಮಕ್ಕಳ ಸೈಕಲನ್ನು, ಕ್ರೇನ್ ಇಲ್ಲದಿದ್ದರೆ ಮರದ ಅಟ್ಟಣೆಗೆ ಹಾಗೂ ಹಗ್ಗದ ತೂಗೂಯ್ಯಾಲೆಯೋ, ನೀರಿನೊಳಗೆ ಚಿತ್ರೀಕರಿಸಲು ಡ್ರಮ್ಮಿನಲ್ಲಿ ತಾನು ಹಾಗೂ ಕ್ಯಾಮರಾ ಅಡಗಿ ಕುಳಿತು, ನೀರಿನಲ್ಲಿ ಅದನ್ನು ಮುಳುಗಿಸಿ, ತನ್ನ ಪ್ರಾಣ ಅಪಾಯದಲ್ಲಿದ್ದರೂ ಚಿತ್ರಿಸಿದ ಘಟನೆಗಳಿವೆ (ಉದಾ : ಛಾಯಾಗ್ರಾಹಕ - ಎಸ್.ರಾಮಚಂದ್ರ, ಚಿತ್ರ - ಕಂಕಣ, ಮಾಲ್ಗುಡಿ ದಿನಗಳು). ಆದರೆ ಸಾಮಾನ್ಯವಾಗಿ ಇಂತಹ ದೃಶ್ಯಗಳನ್ನು ಇದಕ್ಕಾಗಿಯೇ ನಿರ್ಮಿಸಲಾದ ನೀರಿನ ತೊಟ್ಟಿಯಲ್ಲಿ ಗ್ಲಾಸಿನ ಮುಖಾಂತರ ಚಿತ್ರಿಸುವರು. ಈ ರೀತಿ 'ಬೂತಯ್ಯನ ಮಗ ಅಯ್ಯು', 'ಒಂದು ಮುತ್ತಿನ ಕಥೆ' ಚಿತ್ರಗಳಲ್ಲಿ ಚಿತ್ರಿಸಲಾಗಿದೆ.

ಇದೇ ರೀತಿ ಧ್ವನಿ ಗ್ರಾಹಕ ನಿರ್ಮಾಪಕನಿಗೆ ಹಣ ಉಳಿತಾಯ ಮಾಡಲು ಧ್ವನಿ ಫಿಲಂನ (sound negetive) ಎರಡೂ ಬದಿಗೆ ಬೇರೆ ಬೇರೆ ಹಾಡುಗಳನ್ನು ವರ್ಗಾಯಿಸಿ, ಅರ್ಧದಷ್ಟು ದುಡ್ಡು ಉಳಿತಾಯ ಮಾಡುತ್ತಾನೆ. ಇದರ ನಂತರದ ಘಟ್ಟ ಸಂಕಲನ.

ಸಂಕಲನದ ಮೇಜಿಗೆ ಬಂದಾಗ ಸಾಮಾನ್ಯವಾಗಿ ಅತೀ ಹೆಚ್ಚಿನ ತಾಂತ್ರಿಕ ಹೊಂದಾಣಿಕೆ ನಿರೀಕ್ಷಿಸಲಾಗುತ್ತದೆ. ಅವಸರದ ಚಿತ್ರೀಕರಣ, ಅನೇಕ ಒತ್ತಡಗಳಿಂದಾಗಿ ಸಂಕಲನದಲ್ಲಿ ಸರಿಪಡಿಸಿದರಾಯಿತೆಂದು ಸುರುಳಿ ಸುತ್ತಿದ ಚಿತ್ರಗಳಲ್ಲಿ ಸಂಕಲನಕಾರನೇ ಛಾಯಾಗ್ರಾಹಕನ, ಧ್ವನಿಗ್ರಾಹಕನ, ಕಲಾವಿದನ, ನಿರ್ದೇಶಕನ ದೋಷಗಳನ್ನು ಸರಿಪಡಿಸಬೇಕಾಗುತ್ತದೆ. ಚಿತ್ರೀಕರಣದ ವರದಿ ಆಧರಿಸಿ, ಚಿತ್ರಿಕೆಗಳ ದೋಷಪೂರ್ಣ (n.g. - not good) ಭಾಗವನ್ನು ನೆಗೆಟಿವ್‌ನಲ್ಲಿ ಕತ್ತರಿಸಿ, ಅಷ್ಟೇ ಪ್ರಮಾಣದ ಪಾಸಿಟಿವ್ ಕಚ್ಚಾಫಿಲಂ, ಪ್ರಿಂಟಿಂಗ್, ಪ್ರೊಸೆಸಿಂಗ್ ವೆಚ್ಚವನ್ನು ಉಳಿಸುತ್ತಾನೆ. ಚಿತ್ರಿಕೆ ಆರಂಭದಲ್ಲಿ ನೀಡಲಾದ ದೃಶ್ಯ ವಿವರಗಳ ಫಲಕ (clap board) ಹೆಚ್ಚು ಅಡಿ ಚಿತ್ರಿತವಾಗಿದ್ದರೆ, ಅದನ್ನು ಅಗತ್ಯದಷ್ಟೇ ಉಳಿಸಿಕೊಂಡು ಅಲ್ಲೂ ಉಳಿತಾಯ ಮಾಡುತ್ತಾನೆ.

ಚಿತ್ರದ ಮೌನ ಸನ್ನಿವೇಶಗಳಲ್ಲಿ ಬಳಸಲು ಬೇಕಾದ (silent sound track) ಧ್ವನಿ ಇಲ್ಲದ ಸೌಂಡ್ ನೆಗೆಟಿವ್ ಒದಗಿಸದಿದ್ದಾಗ, ಯಾವುದಾದರೂ ಹಳೇ ಚಿತ್ರದ, ಕೆಲಸಕ್ಕೆ ಬಾರದ ಸೌಂಡ್ ನೆಗೆಟಿವ್ ಅನ್ನು ತಿರುವು ಮುರುವು (reverse track) ಹಾಕಿ ಬಳಸುತ್ತಾನೆ. ಸಂಗೀತ ಮುದ್ರಣಕ್ಕೆ ಬೇಕಾದ (R.R.print) ಚಿತ್ರ ಪ್ರತಿಯ ಬದಲು ನೂರಾರು ತೇಪೆ ಹಾಕಿದ ಸಂಕಲಿತ ಪ್ರತಿ (work print) ಮೇಲೆ ಕಾರ್ಯ ನಿಭಾಯಿಸಲು ನೆರವಾಗುತ್ತಾನೆ. ಡಬ್ಬಿಂಗ್ ಸಮಯದಲ್ಲಿ ಒಂದು ದೃಶ್ಯದ ಆರಂಭ ಮತ್ತು ಕೊನೆಯ ತುದಿ ಎರಡೂ ಸೇರಿಸಿ ತೇಪೆ ಹಾಕಿ, ಚಿತ್ರಮಾಲೆ (loop) ಪದ್ಧತಿಯಲ್ಲಿ ಸಂಭಾಷಣೆಯನ್ನು ಸ್ಟುಡಿಯೋದಲ್ಲಿ ಧ್ವನಿಗ್ರಹಣ ಮಾಡಿದಾಗ, ಅದರಲ್ಲಿನ ಕಲಾವಿದರು ಏಕಕಾಲದಲ್ಲಿ ಬರಲು ಸಾಧ್ಯವಾಗದಿದ್ದರೆ ಅವರ ಮಾತಿನ ಪ್ರತ್ಯೇಕ ಧ್ವನಿ ಫಿಲಂ ಅನ್ನು, ಅದು ಅಂತಿಮ ಮಿಶ್ರಣವಾಗಿ ಒಂದೇ ಧ್ವನಿ ಫಿಲಂ ಆಗುವ ತನಕ, ದೃಶ್ಯ-ಧ್ವನಿಯ ಸಂಬಂಧ ಕಾಪಾಡುತ್ತಾನೆ. ಸಂಕಲನಕಾಲದಲ್ಲಿ ಅತೀ ನಿಗಾ ವಹಿಸಿ, ಸಂಕಲನ ಯಂತ್ರದಲ್ಲಿ ಓಡಿಸಿರುವ ಹಾಡಿನ ಧ್ವನಿ ಫಿಲಂ ಪಾಸಿಟಿವನ್ನು ರಿಪೇರಿ ಮಾಡಿ, ಅದನ್ನೇ ಹಾಡಿನ ತಟ್ಟೆ (disk) ತಯಾರಿಸಲು ರಿಕಾರ್ಡಿಂಗ್ ಕಂಪೆನಿಗೆ ಕಳುಹಿಸಲು ಒಪ್ಪುತ್ತಾನೆ. ಇತ್ತೀಚೆಗೆ ಸೌಂಡ್ ನೆಗೆಟಿವ್ ಸಂಸ್ಕರಣ ಮಾಡುವ ಖರ್ಚು ಉಳಿಸಲು, ಸಂಕಲನಕಾರನಿಗೆ ಧ್ವನಿ ತರಂಗಗಳು (modulation) ಬರೀ ಕಣ್ಣಿಗೆ ಕಾಣದಿದ್ದರೂ, ಮ್ಯಾಗ್ನೆಟಿಕ್ ಟೇಪನ್ನು ಬಳಸಿ, ಸಂಭಾಷಣೆ ಸಂಕಲನ ಪದ್ಧತಿ ಅನುಸರಿಸುತ್ತಿರುವನು. ಚಿತ್ರದಲ್ಲಿ ಹಿನ್ನೆಲೆ ಸಂಗೀತ ಇಲ್ಲದ ಸನ್ನಿವೇಶಗಳಲ್ಲಿ, ಸಂಭಾಷಣೆಯ ಧ್ವನಿ ಫಿಲಂನಿಂದ ಆ ದೃಶ್ಯದಷ್ಟು ಉದ್ದದ ಧ್ವನಿ ಫಿಲಂ ಅನ್ನು ಕತ್ತರಿಸಿ, ಅಂತಿಮ ಧ್ವನಿ ಫಿಲಂ (final sound negetive)ನಲ್ಲಿ ಸೇರಿಸಿ ನಿರ್ಮಾಪಕನಿಗೆ ನೆರವಾಗುವುದುಂಟು. ಎಷ್ಟೋ ಸಲ ಹಿನ್ನೆಲೆ ಸಂಗೀತ ಧ್ವನಿ ಮುದ್ರಿಸಲು ಹಣದ ಅನುಕೂಲ ಇಲ್ಲದಿದ್ದರೆ, ತನ್ನಲ್ಲಿ ಸಂಗ್ರಹಿಸಿರುವ ಹಳೆಯ ಸಂಗೀತದ ತುಂಡು ಫಿಲಂಗಳನ್ನು (ಹಾಡಿನ ಎರಡು ನುಡಿಗಳ ನಡುವೆ ಇರುವ ಸಂಗೀತದ ತುಣುಕುಗಳು, ಶೀರ್ಷಿಕೆ ತೋರಿಸಲು ಟೈಟಲಿಗೆ ಬಳಸಿ ಬಿಟ್ಟಿರುವ ಸಂಗೀತದ ತುಣುಕುಗಳು) ಜೋಡಿಸಿ, ಛೇಸ್, ಹೊಡೆದಾಟದ ಸನ್ನಿವೇಶಗಳಿಗೆ ಹೊಂದಿಸಿ, ನೇರ ಬಳಸಿ ಅಥವಾ ಸಂಭಾಷಣೆ ಸನ್ನಿವೇಶಗಳಿಗೆ ಧ್ವನಿ ಮಿಶ್ರಣಕ್ಕೆ ನೀಡಿ, ಚಿತ್ರ ಅಂತಿಮ ಘಟ್ಟ ತಲುಪಲು ನೆರವಾಗುತ್ತಾನೆ. ಸೆನ್ಸಾರ್ ಹಂತದಲ್ಲಿ ಬೇಕಾದ ಖರ್ಚು ವೆಚ್ಚಕ್ಕೆ ಹಲವಾರು ಬಾರಿ, ನಿರ್ಮಾಪಕನ ಚಾಳಿ ಚಿತ್ರದ ಬೇಡವಾಗಿರುವ ಹಾಗೂ ಕತ್ತರಿಸಿ ಎಸೆದ ಪಾಸಿಟಿವ್-ನೆಗೆಟಿವ್ ಫಿಲಂ ಅನ್ನು, ಬೆಳ್ಳಿ ತೆಗೆದು, ಪ್ಲಾಸ್ಟಿಕ್ ಬಳೆ ಮಾಡುವವನಿಗೆ ತೂಕದಲ್ಲಿ ಮಾರಾಟ ಮಾಡಿಸಿ, ಅವನ ಚಿತ್ರ, ತನ್ನದೂ ಚಿತ್ರವೆಂಬ ಭಾವದಿಂದ ಅದು ತೆರೆಕಾಣಲು ನೆರವಾಗುತ್ತಾನೆ. ಇದು ಸಂಕಲನಕಾರ ಸೃಜನಾತ್ಮಕವಾಗಿ ಅಲ್ಲದಿದ್ದರೂ ತಾಂತ್ರಿಕವಾಗಿ ನೀಡುವ ಕೊಡುಗೆ.

ಕಚ್ಚಾ ಫಿಲಂ

ಅಂದಿನಿಂದ ಇಂದಿನವರೆಗೆ ಚಿತ್ರರಂಗಕ್ಕೆ ಸದಾ ಕಾಲವೂ ಕಾಡಿದ ಸಮಸ್ಯೆ ಎಂದರೆ ಸಿನಿಮಾ ತಯಾರಿಸಲು ಬೇಕಾದ ಕಚ್ಚಾ ಫಿಲಂ (raw stock). ಇದು ಪಿಕ್ಚರ್ ನೆಗೆಟಿವ್, ಪಿಕ್ಚರ್ ಪಾಸಿಟಿವ್, ಸೌಂಡ್ ನೆಗೆಟಿವ್ ಮೂರು ಅಂಶಗಳನ್ನು ಒಳಗೊಂಡ ವಿಷಯ.

ಮೂಕಿಯುಗದ ಕಾಲದಲ್ಲಿ ನಾವು ಇನ್ನೂ ಪರಕೀಯರ ಆಡಳಿತದಲ್ಲಿದ್ದೆವು. ಆಗ ಚಿತ್ರಕ್ಕೆ ನೆಗೆಟಿವ್ ತಯಾರಿಸಲು ಬೇಕಾದ ತಳಹದಿ ಫಿಲಂ (base) ನೈಟ್ರೇಟ್ ಯುಕ್ತವಾಗಿರುತ್ತಿತ್ತು. ಇದು ಬಲುಬೇಗ ಅಗ್ನಿ ಆಕರ್ಷಕ (inflammable) ಹಾಗೂ ಸ್ಫೋಟಕವಾಗಿತ್ತು. ಈ ಗುಣದಿಂದಾಗಿ ಅದು ರಕ್ಷಣಾ ಖಾತೆಗೂ ಯುದ್ಧ ಕಾಲದಲ್ಲಿ ಅವಶ್ಯಕ ವಸ್ತುವಾಗಿತ್ತು. ಇದೊಂದೇ ಕಾರಣದಿಂದಾಗಿ, ತಯಾರಾಗುವ ಚಿತ್ರದ ಉದ್ದದ ಮೇಲೆ ಆಗಿನ ಸರ್ಕಾರ ಆಗಾಗ ಇತಿಮಿತಿ ಹೇರುತ್ತಲೇ ಇತ್ತು. ಚಿತ್ರದ ಉದ್ದ ಕಡಿಮೆ ಇದ್ದಷ್ಟೂ ಅದು ಸ್ವಾಗತಾರ್ಹವಾಗಿತ್ತು. ಇದಲ್ಲದೇ ಚಿತ್ರೀಕರಣದಲ್ಲಿ ಬಳಸುವ ನೆಗೆಟಿವ್ ಹಾಗೂ ಅಂತಿಮ ಸಂಕಲಿತ ಚಿತ್ರದ ನೆಗೆಟಿವ್ ಉದ್ದ, ಇದರ ಅನುಪಾತ ಇತಿಮಿತಿಯಲ್ಲೇ ಇರಬೇಕಾಗಿತ್ತು. ಎರಡನೇ ಮಹಾ ಯುದ್ಧದ ನಂತರ ಹಾಗೂ ನಮ್ಮಲ್ಲಿ ಸ್ವಾತಂತ್ರ್ಯಾನಂತರ ಈ ಪರಿಸ್ಥಿತಿ ಸ್ವಲ್ಪ ಸಡಿಲವಾಯಿತು.

ಒಬ್ಬ ಉತ್ತಮ ಚಲನಚಿತ್ರ ಸಂಕಲನಕಾರ ಒಂದು ಚಿತ್ರವನ್ನು ಸಾಯಿಸಬಲ್ಲ ಅಥವಾ ಜೀವದಾನ ನೀಡಬಲ್ಲ ಎಂಬ ಹೇಳಿಕೆ ಚಿತ್ರರಂಗದಲ್ಲಿ ಚಾಲನೆಯಲ್ಲಿದೆ. ಚಲನಚಿತ್ರರಂಗದ ಇತಿಹಾಸದಲ್ಲಿ, ಒಬ್ಬ ಉತ್ತಮ ಸಂಕಲನಕಾರ ಒಬ್ಬ ಉತ್ತಮ ನಿರ್ದೇಶಕನಾಗಬಲ್ಲ ಎಂದು ರೂಪಿಸಿದ್ದಿದೆ. ಕಾರಣ ಅವನು ಕಥನ ತಂತ್ರದ

ನಿರೂಪಣೆಯ ಒಡೆಯ. ಹೀಗಾಗಿ ಕನ್ನಡ ಚಿತ್ರರಂಗದ ಇತಿಹಾಸದ ಆರಂಭಕಾಲದಲ್ಲಿ ಹಲವಾರು ಸಂಕಲನತಂತ್ರಜ್ಞರು ನಿರ್ದೇಶಕರಾಗಿ ಮೆರೆದಿದ್ದಾರೆ. ಅವರಲ್ಲಿ ಕೆ.ಸುಬ್ರಮಣ್ಯಂ, ಸಿ.ವಿ.ರಾಜು, ಎಸ್.ಸಿ.ರಾಜನ್, ಆರ್.ರಾಮಮೂರ್ತಿ ಪಿ.ಎಸ್.ಮೂರ್ತಿ, ಪ್ರಮುಖರು.

ಆಗಿನ ಕಾಲದಲ್ಲಿ ಕೆಲವು ಚಿತ್ರಗಳು ಗಲ್ಲಾ ಪೆಟ್ಟಿಗೆಯಲ್ಲಿ ಸೋತಿದ್ದರೂ, ಅವುಗಳನ್ನು ನಂತರ ನುರಿತ ಸಂಕಲನಕಾರನಿಂದ ಮರುಸಂಕಲಿಸಿ, ಬೇರೆ ರೂಪ, ಬೇರೆ ಶೀರ್ಷಿಕೆ, ಬೇರೆ ಕಂಪೆನಿಯ ಹೆಸರಿನಲ್ಲಿ ಬಿಡುಗಡೆ ಮಾಡಿದ ದಾಖಲೆಗಳು ಇವೆ. ೧೯೩೭ರ 'ರಾಜಸೂಯ ಯಾಗ', ೧೯೪೭ರಲ್ಲಿ ಬಿಡುಗಡೆಯಾದ 'ಮಹಾನಂದ' (ಶಿವಪಾರ್ವತಿಯಾಗಿ),'ಕೃಷ್ಣಲೀಲ' (ಶ್ರೀಕೃಷ್ಣನಾಗಿ) ತೆರೆಕಂಡ ಉದಾಹರಣೆಗಳಿವೆ.

ಇವರೆಲ್ಲರ ಕಾಲದಲ್ಲಿ ಚಿತ್ರೀಕರಣ ಪದ್ಧತಿ ಎಂದರೆ ಸಂಪೂರ್ಣ ದೃಶ್ಯವನ್ನು ಚೆನ್ನಾಗಿ ತಾಲೀಮು ಮಾಡಿ, ಕ್ಯಾಮರಾ ಚಲನೆ, ನಟರ ಚಲನೆ ಒಗ್ಗೂಡಿಸಿ, ಒಂದೇ ಶಾಟ್‌ನಲ್ಲಿ (missenscene) ಪದ್ಧತಿಯಲ್ಲಿ ಚಿತ್ರಿಸುತ್ತಿದ್ದರು. ನಂತರ ಸ್ವಲ್ಪ ತಂತ್ರ ಸುಧಾರಣೆಯಾಗಿ, ಅದಕ್ಕೆ ಹೊಂದಿಕೊಳ್ಳುವಂತಹ ಪ್ರತಿಕ್ರಿಯೆ ಚಿತ್ರಿಕೆಗಳು (reaction shot), ಅಥವಾ ದೃಶ್ಯ ವಿಶೇಷ ವಸ್ತುಗಳ ಸಮೀಪ ಚಿತ್ರಿಕೆ, ಸಂಕಲನಕಾರ ತಾಂತ್ರಿಕವಾಗಿ ನಾಟಕೀಯವಾಗಿ ಬಳಸಲು ನೀಡುವ ಪರಂಪರೆ ಚಾಲ್ತಿಯಲ್ಲಿ ಬಂದಿತು. ಒಬ್ಬ ಕಲಾವಿದನ ಸಂಭಾಷಣೆಯನ್ನು ಇನ್ನೊಬ್ಬ ಕಲಾವಿದನ ಪ್ರತಿಕ್ರಿಯಿಸುವ ಮುಖದ ಮೇಲೆ ಹಾಕುವ ತಂತ್ರವನ್ನು ಸಂಕಲನಕಾರ ಕ್ರಮೇಣ ಕಲಿತುಕೊಂಡ. ಸಂಕಲನಕಾರನ ಕತ್ತರಿಯ ಪ್ರತಿಭೆ ಮಿಂಚಲು ಅವಕಾಶ ನೀಡಿದ ಸನ್ನಿವೇಶಗಳೆಂದರೆ ಹಾಡು, ನೃತ್ಯ, ಹೊಡೆದಾಟ, ಚೆನ್ನಟ್ಟುವ ಛೇಸ್, ಬಲಾತ್ಕಾರದ ದೃಶ್ಯಗಳು.

ಸಂಪೂರ್ಣ ದೃಶ್ಯವನ್ನು ವಿಭಿನ್ನ ಚಿತ್ರಿಕೆಗಳಿಂದಲೇ ನಿರ್ಮಾಣ ಮಾಡಿ, ನಾಟಕೀಯವಾಗಿ ರೂಪಿಸುವ ತಂತ್ರ, ವರ್ಣಚಿತ್ರಗಳ ಕಾಲದಲ್ಲಿ ತಲೆ ಎತ್ತತೊಡಗಿತು. ಹಾಗೂ ನವ್ಯ ಸಿನಿಮಾದವರು ಇದನ್ನು ಇನ್ನೂ ಹೆಚ್ಚು ಬಳಸಿದರು. ಇದಕ್ಕೆ ಅವರು ಚಿತ್ರಿಸುವ ಸಣ್ಣ ತಾಣಗಳಲ್ಲಿ ಟ್ರಾಲಿ, ಟ್ರ್ಯಾಕ್, ಕ್ರೇನ್, ಜೂಮ್ ಬಳಕೆ ಸಾಧ್ಯವಿಲ್ಲವಾದ್ದರಿಂದ ಹಾಗೂ ಹೊಸ ಕಲಾವಿದರು ತುಂಬಾ ದೀರ್ಘಾವಧಿಯ ಸಂಭಾಷಣೆಯ ಚಿತ್ರಿಕೆಯನ್ನು ಸಮರ್ಪಕವಾಗಿ ನೀಡಲಾರರು ಎಂಬ ಕಾರಣವೂ ಇರಬಹುದು. ಅಥವಾ ದೃಶ್ಯದ ವಿಭಜನೆ ಹಾಗೂ ಸಂಯೋಜನೆಯ ಮೇಲೆ ಇರುವ ಹಿಡಿತ ಹಾಗೂ ಆತ್ಮವಿಶ್ವಾಸವೂ ಇರಬಹುದು. ಒಟ್ಟಿನಲ್ಲಿ ಈ ತಂತ್ರ ಬಳಸಿ ಚಿತ್ರ ನಿರ್ದೇಶಿಸಿದ ಸಂಕಲನಕಾರರಲ್ಲಿ ವಿ.ಆರ್.ಕೆ.ಪ್ರಸಾದ್, ಉಮೇಶ್ ಕುಲಕರ್ಣಿ, ಅನ್ವರ್ ತಾವರೆಕೆರೆ, ಅರುಣಾ ದೇಸಾಯಿ, ಸುಬ್ರಹ್ಮಣ್ಯ ಪ್ರಮುಖರು. ಈ ಎಲ್ಲ ನಿರ್ದೇಶಕ-ಸಂಕಲನಕಾರರು ಕೈಗೊಂಡ ಕಾರ್ಯವನ್ನು - ''ಕನ್ನಡ ಚಿತ್ರಗಳ ಕಲಾತ್ಮಕ ಸೆನ್ಸಾರು'' ಎಂದು ಹೇಳಬಹುದು.

ಸಂಕಲನಕಾರನಿಗೆ ದೃಶ್ಯವನ್ನು ಪುನರ್ ರಚಿಸುವ ಕಲೆ ಕರಗತವಾದ್ದರಿಂದ, ಅವನು ವಿಭಿನ್ನ ಚಿತ್ರಿಕೆಗಳನ್ನು ಖಚಿತವಾದ ಉದ್ದ ಹಾಗೂ ಅಗತ್ಯಕ್ಕೆ ತಕ್ಕಂತೆ ಚಿತ್ರಿಸಿ, ನಿರ್ಮಾಪಕನ ಕಚ್ಚಾ ಫಿಲಂ, ಕಲಾವಿದರ ಸಮಯ ಹಾಗೂ ನಿರ್ಮಾಣ ವೆಚ್ಚ ಉಳಿಸಲು ನೆರವಾಗುತ್ತಿದ್ದ. ಈ ಕಲೆ ಕರಗತವಿಲ್ಲದ ಇತರ ರಂಗದ ನಿರ್ದೇಶಕರು, ರಿಮೇಕ್ ಸಂಪ್ರದಾಯಕ್ಕೆ ಜೋತುಬಿದ್ದು, ಸಿದ್ಧವಿರುವ ಚಿತ್ರದ ವೀಡಿಯೋ ಪ್ರತಿ ನೋಡಿ ಶಾಟುಗಳ ಸಂಯೋಜನೆ, ಉದ್ದ ನಿರ್ಧರಿಸ ತೊಡಗಿದರು. ಆದರೂ ಕೈಮೀರಿ ಚಿತ್ರಿಸಿದ ಸನ್ನಿವೇಶಗಳು, ಹಾಡು, ಹೊಡೆದಾಟ, ಬಲಾತ್ಕಾರ ಹಾಗೂ ಛೇಸ್ ದೃಶ್ಯಗಳು ಸಂಕಲನಕಾರನಿಂದಲೇ ರೂಪುಗೊಳ್ಳಬೇಕು.

ದುರಂತವೆಂದರೆ ಈ ನೈಟ್ರೇಟ್ ಬೇಸ್‌ನಲ್ಲಿ ತಯಾರಾದ ಅನೇಕ ಚಿತ್ರಗಳ ಅಂತಿಮ ನೆಗೆಟಿವ್‌ಗಳನ್ನು ಆಗ ಸರಿಯಾದ ಶೀತ ವ್ಯವಸ್ಥೆಯಲ್ಲಿ (air condition - air cool) ಸಂಗ್ರಹಿಸಿ ಇಡಲಿಲ್ಲ. ಇದಕ್ಕೆ ನಿರ್ಮಾಪಕನ ಅಜ್ಞಾನ, ತಾತ್ಸಾರ, ಸೋಲಿನ ನೋವು, ತಲೆವಾರಿನ ಅಂತರದಿಂದಾಗಿ ಹಕ್ಕುಗಳ ವ್ಯಾಜ್ಯ, ಅದನ್ನು ಸಂಗ್ರಹಿಸಿ ಇಡಲಾದ ಸ್ಟುಡಿಯೋ-ಲ್ಯಾಬ್ ಸಂಸ್ಥೆಗಳು ದಿವಾಳಿಯಾಗಿ ಮುಚ್ಚಲ್ಪಡುವಿಕೆ, ಹೀಗೆ ನಾನಾ ಕಾರಣಗಳಿಂದಾಗಿ ಹಾಗೂ ಅನೇಕ ಚಿತ್ರಗಳು ಮದ್ರಾಸಿನ ಬಿಸಿಲಿನ ಫಲವಾಗಿ ಸ್ಫೋಟಗೊಂಡು, ಸುಟ್ಟು ಹಾಳಾದವು. ಇಂದು ನಮ್ಮಲ್ಲಿ 'ಸರ್ವಜ್ಞ'ನಂತಹ ಚಿತ್ರದ ಒಂದು ಬಿಡುಗಡೆ (release) ಪ್ರಿಂಟ್ ಹಾಗೂ ನಿರ್ಮಾಪಕ-ಲೇಖಕ ನರೇಂದ್ರಬಾಬು ಬಳಿ ಇರುವ ಚಿತ್ರಕಥೆ ಬಿಟ್ಟರೆ, ಅದರ ಬೇರೆ ಯಾವುದೇ ರಕ್ಷಣಾ ಯೋಗ್ಯ ಅವಶೇಷಗಳೂ ಉಳಿದಿಲ್ಲ. ಈ ರೀತಿ ಸರ್ವನಾಶವಾದ ಕನ್ನಡ ಚಿತ್ರಗಳ ಒಂದು ಪಟ್ಟಿಯನ್ನೇ ಕೊಡಬಹುದು. ಟಿ.ಎಸ್.ಟಿ.ಲ್ಯಾಬ್‌ನಲ್ಲಿ ಇದ್ದ ಚಿತ್ರಗಳ ನೆಗೆಟಿವ್‌ಗಳಾದ 'ನಾಗಕನ್ಯೆ', 'ದಳ್ಳಾಳಿ', 'ಜಗನ್ಮೋಹಿನಿ', 'ಸೌಭಾಗ್ಯ ಲಕ್ಷ್ಮಿ' ಮತ್ತು 'ಕೃಷ್ಣಲೀಲಾ' ಇವೆಲ್ಲಾ ನಾಶವಾದವು. ಇನ್ನೇನು ಬಿಡುಗಡೆಯಾಗುತ್ತದೆ ಎಂಬ ಹಂತದಲ್ಲಿದ್ದ 'ಬಿಂದು ಬಿ.ಎ.' ಕೂಡಾ ಇಂಥ ಅಜ್ಞಾನದಿಂದಲೆ ಪ್ರಿಂಟ್ ಸುಟ್ಟು ಹೋದರೆ, ನೆಗೆಟಿವ್ ಪುಡಿ ಪುಡಿಯಾಯಿತು. ನಂತರದಲ್ಲಿ ತಯಾರಾದ ಚಿತ್ರಗಳು ರಕ್ಷಣಾಯೋಗ್ಯ ಎಸಿಟೇಟ್ (base) ಫಿಲಂ ಬಳಸಿದ್ದರೂ, ಹೆಚ್ಚು ಅಗ್ನಿ ಆಕರ್ಷಕ ಇಲ್ಲದಿದ್ದರೂ, ಅವು ಸಹ ಎಲ್ಲರ ತಾತ್ಸಾರದಿಂದಾಗಿ ಇದೇ ರೀತಿ ದುರಂತ ಕಂಡಿವೆ.

ಒಂದು ಹಂತದಲ್ಲಿ ಅಧಿಕಾರದ ಗದ್ದುಗೆ ಏರಿದ ಕೆಂಪರಾಜ್ ಅರಸ್ ರಂತಹ ಅದೃಷ್ಟಶಾಲಿಗಳು, ತಮ್ಮ ದೂರದರ್ಶಿತ್ವ, ಆಕಾಂಕ್ಷೆಯ ಫಲದಿಂದಾಗಿ ಅಂದು 'ಜಲದುರ್ಗ'ದಂತಹ ಚಿತ್ರ ಗಲ್ಲಾಪೆಟ್ಟಿಗೆಯಲ್ಲಿ ಸೋಲು ಕಂಡಿತೆಂಬ ಸಿಟ್ಟಿನಿಂದ ಅದರ ನೆಗೆಟಿವ್ ಸುಟ್ಟುಹಾಕಿದ್ದರೂ ಈಗ ಅದರ ಹಳೆಯ ಪ್ರಿಂಟ್ ಹುಡುಕಿ, ಸಂಗ್ರಹಿಸಿ, ಅದನ್ನು ಶುದ್ಧೀಕರಿಸಿ, ಅದರಿಂದಲೇ ಒಂದು ಮರು ನೆಗೆಟಿವ್ (dupe negetive) ಮಾಡಿಸಿ, ಚಿತ್ರ ಇತಿಹಾಸಕ್ಕೆ ಕೊಡುಗೆ ನೀಡಿದರು. 'ರಾಜಾ ವಿಕ್ರಮ'ದಂತಹ ಚಿತ್ರವನ್ನು ತೆರಿಗೆ ವಿನಾಯಿತಿ ಪಡೆದು ಮತ್ತೆ ಬಿಡುಗಡೆ ಮಾಡಿದರು.

ಚಿತ್ರೀಕರಣದ ಕಚ್ಚಾ ಫಿಲಂ ನೆಗೆಟಿವ್‌ಗಳ ಪೂರೈಕೆಗೆ ಅಂದಿನಿಂದಲೂ ವೃತ್ತಿಪರ ಸಂಸ್ಥೆಗಳಾದ ದಕ್ಷಿಣ ಭಾರತದ ಫಿಲಂ ಛೇಂಬರ್ ಆಫ್ ಕಾಮರ್ಸ್, ನಂತರ ಕರ್ನಾಟಕ ಫಿಲಂ ಛೇಂಬರ್ ಆಫ್ ಕಾಮರ್ಸ್, ತನ್ನ ಸದಸ್ಯ ನಿರ್ಮಾಪಕರಿಗೆ ಕೋಟಾ ಪದ್ಧತಿಯಲ್ಲಿ, ಚಿತ್ರದ ಪ್ರಗತಿಗೆ ಅನುಗುಣವಾಗಿ ನೆಗೆಟಿವ್ ನೀಡುತ್ತಿತ್ತು. ಆಗ ತಾರೆಗಳ ಕಾಲ್ ಶೀಟ್, ಹಾಗೂ ಸ್ಟುಡಿಯೋ ಸೆಟ್‌ಗಳ ನಿರ್ಮಾಣ ಇವೆರಡೂ ಹಂತ ಹಂತವಾಗಿ ದೊರಕುತ್ತಿದ್ದುದರಿಂದ, ಈ ಬಗೆಯ ನೆಗೆಟಿವ್ ಹಂಚಿಕೆ ಸಮರ್ಪಕವಾಯಿತು. ಆಗಿನ ನಿರ್ದೇಶಕನು ನೆಮ್ಮದಿಯಿಂದ ತಾಂತ್ರಿಕವಾಗಿ ಮುಂದಿನ ಚಿತ್ರೀಕರಣದ ರೂಪುರೇಷೆ ನಿರೂಪಿಸಲು, ಚಿತ್ರಿತವಾದ ಭಾಗಗಳಲ್ಲಿ ತಾಂತ್ರಿಕ ದೋಷ ಗುಣಪಡಿಸಲು ಸಮಯ ದೊರೆಯುತ್ತಿತ್ತು. ಆದರೆ ನಂತರ ಬಂದ ನಿರ್ಮಾಪಕರು ಒಂದೇ ಹಂತದಲ್ಲಿ ಸಂಪೂರ್ಣ ಚಿತ್ರೀಕರಣ ಆರಂಭಿಸಿದಾಗ, ಈ ನೆಗೆಟಿವ್ ಹಂಚಿಕೆ ವಿಧಾನ ಒತ್ತಡ, ವಿವಾದ, ಪ್ರಭಾವಗಳ ಆಪಾದನೆಗೆ ಈಡಾಯಿತು. ಸಾಮಾನ್ಯವಾಗಿ ಯೋಜಿತ ನಿರ್ಮಾಣ ಹಾಗೂ ಕಸುಬು ಗೊತ್ತಿರುವ ಉತ್ತಮ ಹಾಗೂ ಖಚಿತ ಚಿತ್ರಕಥೆ ಹೊಂದಿದ ನಿರ್ದೇಶಕ, ತನ್ನ ಚಿತ್ರದ ಸಂಕಲಿತ ಅಂತಿಮ ಉದ್ದ ಹಾಗೂ ಚಿತ್ರೀಕೃತ ಮೂಲ ಚಿತ್ರದ ಉದ್ದ, ಇವರ ಅನುಪಾತ ೧:೩ ಯನ್ನು ಮೀರುತ್ತಿರಲಿಲ್ಲ. ಕೆಲವು ವಿಶೇಷ ಸಂದರ್ಭಗಳು, ಉದಾ : 'ಶುಭ ಮಂಗಳ' ಚಿತ್ರದಲ್ಲಿ ನಾಯಕಿ ಆರತಿ ಸಮುದ್ರ ದಂಡೆಯಲ್ಲಿ ಒಂದು ಸಂಭಾಷಣೆ ಹೇಳಿದ ನಂತರ, ಅವಳ ಪಾದದ ಕೆಳಗಿನ ಮರಳು ಕುಸಿಯಬೇಕು. ಇದು ನಿರ್ದೇಶಕರ ಕಲ್ಪನೆ. ಅದನ್ನು ಸಾಕಾರಗೊಳಿಸಲು ನಿರ್ದೇಶಕರು ಸುಮಾರು ೫೦ ಟೇಕ್‌ಗಳನ್ನು ಚಿತ್ರಿಸಿದ ವರದಿ ಪತ್ರಿಕೆಗಳಲ್ಲಿ ಬಂತು. ಅದಕ್ಕೆ ಇಷ್ಟೇಕೆ ಶ್ರಮ ಪಡಬೇಕಾಯಿತೆಂದರೆ, ಸಂಭಾಷಣೆಗೂ ಮೊದಲೇ, ಸಂಭಾಷಣೆ ಕಾಲದಲ್ಲಿ ಅಥವಾ ಸಂಭಾಷಣೆ ಹೇಳಿದ ಬಹಳ ಹೊತ್ತಿನ ನಂತರ ಕಾಲಡಿಯ ಮರಳು ಕುಸಿಯುತ್ತಿತ್ತು.

ಪ್ರೇಕ್ಷಕನ ಬೌದ್ಧಿಕ ಮಟ್ಟ ಎಂದೂ ಚಿತ್ರದ ವರ್ಣ ಗುಣಮಟ್ಟವನ್ನು ಅರಿತು ವೀಕ್ಷಿಸುವ ಹಂತ ತಲುಪಲೇ ಇಲ್ಲ. ಹೀಗಾಗಿ ಆಗ ಮಾರುಕಟ್ಟೆಯಲ್ಲಿ ಇದ್ದ ಮೂರು ಬಗೆಯ ಕಲರ್ ನೆಗೆಟಿವ್‌ಗಳಲ್ಲಿ ಉತ್ತಮ ಗುಣಮಟ್ಟದ ಈಸ್ಟ್‌ಮನ್ ಕಲರ್ ನೆಗೆಟಿವ್ ಬಹಳ ದುಬಾರಿ ಬೆಲೆಯದಾಗಿದ್ದು ದೊಡ್ಡ ಬಜೆಟ್ ನಿರ್ಮಾಪಕರಿಗೆ ಮಾತ್ರ ಎಟುಕುವಂತಿತ್ತು. ಈಸ್ಟ್‌ಮನ್ ಲಭ್ಯವಿಲ್ಲದಿದ್ದಾಗ ನಿರ್ಮಾಪಕರು ಫ್ಯೂಜಿ ನೆಗೆಟಿವ್ ಬಳಸಿದರು. ಇದರಲ್ಲಿ ಕೆಂಪು ವರ್ಣ ಹೆಚ್ಚು ಮೂಡಿಬರುತ್ತದೆ (red tint) ಎಂದು ಛಾಯಾಗ್ರಾಹಕರ ದೂರು. ಆದರೆ ಚಿತ್ರದ ಪ್ರತಿಗಳು ಈಸ್ಟ್‌ಮನ್ ಪಾಸಿಟಿವ್‌ನಲ್ಲಿ ಮುದ್ರಿತವಾಗಿ ಮಾರುಕಟ್ಟೆಗೆ ಬಂದಾಗ, ಜಾಹಿರಾತಿನಲ್ಲಿ ಈಸ್ಟ್‌ಮನ್ ಬಳಕೆಯ ಉಲ್ಲೇಖವಾಗುತ್ತಿತ್ತೇ ಹೊರತು, ಇತರ ನೆಗೆಟಿವ್‌ಗಳ ಪ್ರಚಾರ ಮಾಡುತ್ತಿರಲಿಲ್ಲ. ಆದರೆ ಇದೇ ಸಮಯದಲ್ಲಿ ತೃತೀಯ ರಾಷ್ಟ್ರಗಳಿಗೆ ಹಾಗೂ ಕಡಿಮೆ ಬಂಡವಾಳದ, ಪ್ರಾಂತೀಯ ಚಿತ್ರೋದ್ಯಮಕ್ಕೆ ಹೇಳಿ ಮಾಡಿಸಿದಂತಹ ವರ್ಣ ನೆಗೆಟಿವ್ ಎಂದರೆ,

ಜರ್ಮನಿಯ 'ಆರ್ವೋ ಕಲರ್' (orwo) ಬಂತು. ಇದಕ್ಕೂ ಈಸ್ಟ್‌ಮನ್‌ಗೂ ಬೆಲೆಯಲ್ಲಿ ೧:೩ ಅನುಪಾತದಲ್ಲಿ ವ್ಯತ್ಯಾಸ ಇರುತ್ತಿತ್ತು. ಇದಕ್ಕೆ ಲೈಟುಗಳು ಹೆಚ್ಚಿಗೆ ಬೇಕು, ಆದ್ದರಿಂದ ಬಹುಪಾಲು ಹೊರಾಂಗಣದಲ್ಲಿ ಚಿತ್ರಿಸಿ, ನಿರ್ಮಾಪಕ ಸರಿದೂಗಿಸಿಕೊಂಡ. ವರ್ಣಗಳ ಪಡಿಯಚ್ಚು (colour production) ಸರಿಯಾಗಿರುವುದಿಲ್ಲವೆಂದು ಛಾಯಾಗ್ರಾಹಕ ದೂರಿದಾಗ, ಅದನ್ನು ಗೇವಾ ವರ್ಣ ಪಾಸಿಟಿವ್‌ನಲ್ಲಿ ಮುದ್ರಿಸಿ ಸ್ವಲ್ಪ ಮಟ್ಟಿಗೆ ಸರಿಪಡಿಸಿಕೊಂಡ. ಅನೇಕ ಹಣೆಪಟ್ಟಿಯಲ್ಲಿ ಬಂದ ಸಮಾನಾಂತರ, ಕಡಿಮೆ ಬಜೆಟಿನ ಹಲವಾರು ಚಿತ್ರ ತಯಾರಾದುದು ಈ 'ಆರ್ವೋ' ವರ್ಣದಲ್ಲೇ ಎಂಬುದು ಒಂದು ವಿಶೇಷ. ಈಗ ಇದರ ತಯಾರಿಕೆ ನಿಂತಿದೆ. 'ಫಲೇ ಅದೃಷ್ಟವೋ ಅದೃಷ್ಟ' ಕನ್ನಡದ ಮೊದಲ ಆರ್ವೋ ಕಲರ್ ಚಿತ್ರ. ೧೯೭೦ರಲ್ಲಿ ತಯಾರಾದ ಈ ಚಿತ್ರದ ಛಾಯಾಗ್ರಾಹಕರು ಆರ್.ಎನ್.ಕೃಷ್ಣಪ್ರಸಾದ್ ಹಾಗೂ ನಿರ್ದೇಶಕ-ನಿರ್ಮಾಪಕರು ರವಿ. ಇದರ ನಂತರ ಆರ್ವೋ ಎನ್‌ಸಿ-೧ರಲ್ಲಿ - ನಿಮಾಯ ಘೋಷ್ ಛಾಯಾಗ್ರಹಣದ 'ಮದರ್' - ಚಿತ್ರಗಳು ತಯಾರಾದವು.

ಈ ಆರ್ವೋ ಎನ್‌ಸಿ-೩ ನೆಗೆಟಿವ್‌ನಲ್ಲಿ ಏನೇ ತಾಂತ್ರಿಕ ದೋಷಗಳಿದ್ದರೂ ಸಹ ಇವರಲ್ಲಿ ಉತ್ತಮ ಫಲಿತಾಂಶ ನೀಡಿದ ಛಾಯಾಗ್ರಾಹಕರು ಎಸ್. ರಾಮಚಂದ್ರ (ಋಷ್ಯಶೃಂಗ), ಎಮ್.ಎ.ರವೀಂದ್ರ (ಶಂಖನಾದ), ಎಸ್.ಆರ್.ಭಟ್ (ಸೂರ್ಯ), ಸುಂದರನಾಥ ಸುವರ್ಣ (ಕಾಡು ಕುದುರೆ), ಮಧು ಅಂಬಟ್ (ಪ್ರೇಮ ಕಾಮ), ಗೌರಿಶಂಕರ್ (ಅನುಭವ) ಇವರಲ್ಲಿ ವಿಶೇಷ ದೃಶ್ಯ ಪ್ರಭಾವ (special effects) ಮಾಡಲು, ಪ್ರತಿ ನೆಗಟಿವ್ (dupe negative) ಗುಣಮಟ್ಟ ಉತ್ತಮವಾಗಿರುವುದಿಲ್ಲವೆಂಬ ಒಂದೇ ಕಾರಣಕ್ಕೆ, ಅಲ್ಲಲ್ಲಿ ಕಲಾವಿದ ಸ್ತಬ್ಧ (freeze) ನಾಗುವಂತೆ ಪ್ರಿಂಟ್ ಮಾಡುವ ಬದಲಿಗೆ ಅವನನ್ನೇ ಸ್ತಬ್ಧನಾಗಿರಲು ಹೇಳಿ, ಅವನ ಮುಖದ ಮೇಲೆ ಸ್ವಗತ (monologue) ಮಾತುಗಳನ್ನು ಹಾಕುವ ತಂತ್ರವನ್ನು ಸಂಕಲನಕಾರ-ನಿರ್ದೇಶಕ ಉಮೇಶ್ ಕುಲಕರ್ಣಿ 'ಶಂಖನಾದ' ಚಿತ್ರದಲ್ಲಿ ಬಳಸಿದ್ದರು.

ಚಿತ್ರೀಕರಣದ ನಂತರ ಬೇಕಾಗುವ ವರ್ಣ ಮತ್ತು ಕಪ್ಪು ಬಿಳುಪು ಪಾಸಿಟಿವ್ ಹಾಗೂ ಸೌಂಡ್ ನೆಗೆಟಿವ್ ಪೂರೈಕೆಗೆ ಭಾರತೀಯ ಚಿತ್ರರಂಗ ಕಂಡುಕೊಂಡ ಪರಿಹಾರ, ಭಾರತ ಸರ್ಕಾರದ ಊಟಿಯಲ್ಲಿರುವ ಹಿಂದುಸ್ತಾನ ಫೋಟೋ ಫಿಲಂನಿಂದ (H.P.F) ಪೂರೈಕೆಯಾಗುತ್ತಿದ್ದ ಕಚ್ಚಾ ಫಿಲಂಗಳು.

ಇಲ್ಲಿ ವಿದೇಶದಿಂದ ಆಮದು ಮಾಡಿಕೊಂಡ ಜಂಬೋ ರೋಲ್‌ಗಳನ್ನು ಸಾವಿರ ಅಡಿ ಉದ್ದಕ್ಕೂ, ೩೫ ಮಿಲಿ ಮೀಟರ್ ಅಗಲ ಸೀಳಿ, ಅದಕ್ಕೆ ಎರಡು ಬದಿಗೆ ತೂತುಗಳನ್ನು (perforation) ಹಾಕಿ, ಸಾವಿರ ಅಡಿ, ಎರಡು ಸಾವಿರ ಅಡಿ ಡಬ್ಬಿ (can)ಗಳಲ್ಲಿ ಸೀಲು ಮಾಡಿ ಮಾರುಕಟ್ಟೆಗೆ ಬಿಡುತ್ತಿದ್ದರು. ಈ ಮಧ್ಯವರ್ತಿ ಕಾರ್ಯ ಮುಗಿಸುವುದರಲ್ಲೇ ಸರ್ಕಾರಿ ಸಿಬ್ಬಂದಿಗಳು ಸಾಕಷ್ಟು ನಿರ್ಮಾಣ ದೋಷ, ಕಳಪೆ ಗುಣಮಟ್ಟದ ಕಚ್ಚಾ ಫಿಲಂ ಇದು ಎಂಬ ದೂರುಗಳು ಸ್ಟುಡಿಯೋದಿಂದ ನಿರ್ಮಾಪಕರಿಂದ, ಛಾಯಾಗ್ರಾಹಕ, ಧ್ವನಿಗ್ರಾಹಕ, ಸಂಕಲನಕಾರರಿಂದ ಬರುವಂತೆ ಕೈಂಕರ್ಯ ಮಾಡುತ್ತಿದ್ದರು. ಈಗ ಇತ್ತೀಚಿನ ಹತ್ತು ವರ್ಷಗಳಲ್ಲಿ ಭಾರತ ಸರ್ಕಾರದ ಮುಕ್ತ ಮಾರುಕಟ್ಟೆ ಮತ್ತು ನಿಷೇಧವಿಲ್ಲದ ಆಮದು ನೀತಿಯಿಂದಾಗಿ, ವಿದೇಶದಿಂದ ಉತ್ತಮ ಗುಣಮಟ್ಟದ ಕೊಡಕ್, ಅಗ್ಫಾ, ಫ್ಯೂಜಿ, ನೆಗೆಟಿವ್, ಪಾಸಿಟಿವ್, ಸೌಂಡ್ ನೆಗೆಟಿವ್ ವಿವಿಧ ಕಚ್ಚಾ ಫಿಲಂ ನೇರವಾಗಿ ದೊರೆಯುವಂತಾಗಿದೆ.

ಸಂಭಾಷಣೆ ಧ್ವನಿ ಮುದ್ರಿಸಲು, ಸಂಕಲನ ಮಾಡಲು ಹಾಗೂ ಧ್ವನಿ ವಿಶೇಷ (sound effects) ಧ್ವನಿ ಫಿಲಂ (sound track) ಅಂತಿಮ ಧ್ವನಿ ಮುದ್ರಣಕ್ಕೆ ಸಿದ್ಧಪಡಿಸಲು, ನಿರ್ಮಾಪಕನಿಗೆ ಗುಣ ಮತ್ತು ಹಣದ ದೃಷ್ಟಿಯಿಂದ ನೆರವಾದದ್ದು ೩೫ ಎಮ್.ಎಮ್. ಮ್ಯಾಗ್ನೆಟಿಕ್ ಫಿಲಂ. ಇದು ಅಸಿಟೇಟ್ ಬೇಸ್ ಹೊಂದಿದ್ದು, ಬೇಕಾದರೆ ೩೫ ಮಿಲಿಮೀಟರ್ ಪೂರ್ತಿ ಅಗಲಕ್ಕೂ ಮ್ಯಾಗ್ನೆಟಿಕ್ ದ್ರಾವಣ ಪೂರ್ಣಲೇಪಿತ (full coated) ಸಿಗುತ್ತಿತ್ತು. ಇದನ್ನು ಸ್ಟುಡಿಯೋದಲ್ಲಿ ಸಂಗೀತ ಗೀತೆಗಳ ಧ್ವನಿ ಮುದ್ರಿಸಲು ಬಳಸುತ್ತಿದ್ದರು. ಹಾಗೇ ಪಟ್ಟಿ ಲೇಪಿತ (stripe coated) ಫಿಲಂ ಅನ್ನು ಸಂಭಾಷಣೆ, ಧ್ವನಿ ವಿಶೇಷ ಮುದ್ರಿಸಲು, ಸಂಕಲನಕ್ಕೆ ಬಳಸುತ್ತಿದ್ದರು. ಇದನ್ನು ಸಂಸ್ಕರಣ (process) ಮಾಡಬೇಕಾದ ಅಗತ್ಯವಿರಲಿಲ್ಲ. ಹಾಗೂ ಇದನ್ನು ನಂತರ ಬೇರೆ ಚಿತ್ರಕ್ಕೆ ಮರು ಬಳಕೆ ಮಾಡಲು ಬರುತ್ತಿದ್ದುದರಿಂದ ನಿರ್ಮಾಪಕನಿಗೆ ಆರ್ಥಿಕವಾಗಿ ಅನುಕೂಲವಾಯಿತು. ಈಗ ಈ ಫಿಲಂ ಪಾಲಿಯೆಸ್ಟರ್ ತಳಹದಿಯ ಮೇಲೆ ಲೇಪಿತವಾಗಿ ಲಭ್ಯವಾಗುತ್ತದೆ. ಇದರಿಂದಾಗಿ ಇದು ಹಲವಾರು ಬಾರಿ ಯಂತ್ರಗಳಲ್ಲಿ ಓಡಾಡಿಸಿದರೂ ಹರಿಯದೆ, ಮುರುಟಿಕೊಳ್ಳದೆ, ತಡೆದುಕೊಳ್ಳುವ ಗುಣ ಹೊಂದಿರುವುದು ಸಂಕಲನಕಾರನಿಗೆ ಒಂದು ವರವೇ ಎನ್ನಬಹುದು.

ಇನ್ನು ಚಿತ್ರಗಳಲ್ಲಿ ಬಳಸಲಾಗುವ ವಿಶೇಷ ದೃಶ್ಯ ಪ್ರಭಾವ (special effects) ಗಳಾದ ಫೇಡ್ ಔಟ್, ಫೇಡ್ ಇನ್, ಡಿಸಾಲ್ವ್, ಫ್ರೀಜ್, ನೆಗೆಟಿವ್ ಇಮೇಜ್ ಇವುಗಳನ್ನು ತಯಾರಿಸಲು ಬೇಕಾಗುವ ವಿಶೇಷ ಸೂಕ್ಷ್ಮತೆ ಹಾಗೂ ಗುಣಧರ್ಮ ಹೊಂದಿರುವ ಮರು ಪ್ರತಿ ನೆಗೆಟಿವ್ (dupe negetive) ಹಾಗೂ ಮಾಸ್ಟರ್ ಪಾಸಿಟೀವ್ (master positive) ಹಾಗೂ ಮರು ಪ್ರತಿ ಪಾಸಿಟಿವ್‌ಗಳನ್ನು ಆಪ್ಟಿಕಲ್ ಪ್ರಿಂಟರ್ (optical printer) ವಿಶೇಷ ಮುದ್ರಣ ಯಂತ್ರದಲ್ಲಿ ಮುದ್ರಿಸುವ ಸಂಸ್ಥೆಗಳೇ ಪೂರೈಸುತ್ತವೆ. ಇದು ದುಬಾರಿಯಾದರೂ ಚಿತ್ರಕ್ಕೆ ಅಗತ್ಯವಾದಾಗ, ನಿರ್ದೇಶಕ ಒತ್ತಾಯಿಸಿದಾಗ, ನಿರ್ಮಾಪಕ ಸಹಕರಿಸಬೇಕಾಗುತ್ತದೆ. ಆಗ ಸಂಕಲನಕಾರ ವಿಶೇಷ ಆಸಕ್ತಿ ವಹಿಸಿ ಇದನ್ನು ಕಾರ್ಯರೂಪಕ್ಕೆ ತರುತ್ತಾನೆ. ಆದರೆ ನಿರೂಪಣೆಯಲ್ಲಿ ಹೊಸ ವಿಧಾನಗಳು ಬರತೊಡಗಿದವು. ಮುಖ್ಯವಾಗಿ ಕಥನ ಕ್ರಮದಲ್ಲಿ ಅತೀವ ಬದಲಾವಣೆಗಳಾಗಿದ್ದರಿಂದ, ಇಂತಹ ವಿಶೇಷ ಘಟಕಗಳು ಕೆಲಸವಿಲ್ಲದೇ ತಮ್ಮ ಸಂಸ್ಥೆಯನ್ನು ಮುಚ್ಚತೊಡಗಿದವು. ಕೆಲವು ಮಾತ್ರ ಚಿತ್ರದ ಶೀರ್ಷಿಕೆಗಳಿಗೆ (titles) ವಿಶೇಷ ಹಿನ್ನೆಲೆ ಪ್ರಭಾವ ಸೇರಿಸಿ, ಮುದ್ರಿಸಲು ನೆರವು ನೀಡುತ್ತಿವೆ. ಈಗ ಕಂಪ್ಯೂಟರ್ ಗ್ರಾಫಿಕ್ಸ್ ಕ್ರಾಂತಿ ಇನ್ನೂ ಬದಲಾವಣೆ ತಂದರೆ ಅಚ್ಚರಿ ಪಡಬೇಕಿಲ್ಲ.

ಪ್ರಪಂಚದಲ್ಲಿ ಅತೀ ಹೆಚ್ಚು ಚಿತ್ರ ತಯಾರಿಸುವ ದೇಶ ಭಾರತ. ಹಲವಾರು ಇತರ ಕ್ಷೇತ್ರಗಳಲ್ಲಿ ತಂತ್ರಜ್ಞಾನ ವಿಜ್ಞಾನದಲ್ಲಿ ಪ್ರಪಂಚದ ಇತರ ದೇಶಗಳಿಗೆ ಸರಿಸಮ ನಿಲ್ಲುವಂತಹ ಪ್ರತಿಭಾ ಪರಿಸರ ನಮ್ಮದು. ಸರ್ಕಾರಕ್ಕೆ ತೆರಿಗೆ ರೂಪದಲ್ಲಿ ಅತೀ ಹೆಚ್ಚು ವರಮಾನ ತರುವ ಚಿತ್ರರಂಗ ಇಷ್ಟಾದರೂ ಸಹ, ಮೂಲಭೂತ ಅಗತ್ಯ ಪೂರೈಸಲು ನಮ್ಮ ದೇಶದಲ್ಲೇ ವರ್ಣನೆಗೆಟಿವ್ ತಯಾರಿಸುವ ಘಟಕ ಸ್ಥಾಪಿಸದೇ ಇರುವುದು ದೊಡ್ಡ ದುರಂತ.

ಈಗಲೂ 'ಆರ್ವೋ' ತಂತ್ರಜ್ಞಾನ ಯಂತ್ರ ಜರ್ಮನಿಯಿಂದ ಖರೀದಿಸಿ, ಈ ನಿಟ್ಟಿನಲ್ಲಿ ಮುಂದುವರೆದರೆ, ಬಹುಶಃ ತೃತೀಯ ದೇಶಕ್ಕೂ ಉಪಕಾರವಾಗಬಹುದು. ಪ್ರಾದೇಶಿಕ ಚಿತ್ರೋದ್ಯಮಗಳು ಸ್ವಲ್ಪ ನಿರಮ್ಮಳವಾಗಿ ಉಸಿರಾಡಬಹುದು.

ಸೆನ್ಸಾರ್

ನಮ್ಮ ಚಿತ್ರರಂಗಕ್ಕೆ ಸದಾಕಾಲವೂ ತಲೆ ಮೇಲೆ ತೂಗಾಡುವ ಕತ್ತಿಯಂತಿರುವ ವ್ಯವಸ್ಥೆಯೇ ಸೆನ್ಸಾರ್. ಚಲನಚಿತ್ರ ಕಲೆಯ ಹುಟ್ಟು, ವಿಕಾಸದ ಆರಂಭದ ಹಂತ ಮತ್ತು ನಾವು ಪರಕೀಯರ ಆಡಳಿತದಲ್ಲಿ ಇದ್ದ ಕಾಲಮಾನ ಒಂದೇ ಆದ್ದರಿಂದ, ನಾವು ಇನ್ನೂ ದೊಡ್ಡ ಕತ್ತರಿಯಲ್ಲಿ ಸಿಕ್ಕಿಕೊಂಡೆವು.

ಸೆನ್ಸಾರ್‌ಶಿಪ್ ಬಿಗಿಯಾದಂತೆಲ್ಲ ಚಿತ್ರರಂಗ ತನ್ನದೇ ಆದ ನುಸುಳಿಕೊಂಡು ತಪ್ಪಿಸಿಕೊಳ್ಳುವ ತಂತ್ರಗಳನ್ನು ಕಂಡುಕೊಂಡಿತು. ಚಿತ್ರೀಕರಣ ಕಾಲದಲ್ಲೇ ಮಾದಕ ದೇಹದ ನಟಿಯ ನೃತ್ಯ ಚಿತ್ರಿಸುವಾಗ 'ಈ ಶಾಟ್ ಪ್ರೇಕ್ಷಕರಿಗೆ' ಎಂದಾಗ ಮುಕ್ತವಾಗಿ, ಸ್ವಚ್ಛಂದವಾಗಿ ಅಭಿನಯಿಸಿ ಕುಣಿದರೆ, 'ಈಗ ಈ ಶಾಟು ಸೆನ್ಸಾರ್ಗೆ' ಎಂದು ಚಿತ್ರಿಸಿದಾಗ, ತುಂಬಾ ಗಾಂಭೀರ್ಯ-ಶಾಲೀನತೆಯಿಂದ ಕುಣಿದಾಗ, ನಟಿಯ ಎರಡೂ ಟೇಕುಗಳು ನಿರ್ದೇಶಕನಿಂದ ಒಪ್ಪಿಗೆ ಪಡೆಯುತ್ತಿದ್ದವು. ಸಂಕಲನಕಾರ ಎರಡನ್ನು ಸಿಂಕ್ ಮಾಡಿಟ್ಟುಕೊಂಡು, ಸೆನ್ಸಾರ್ ಆದ ನಂತರ ಪ್ರೇಕ್ಷಕರಿಗೆ ಚಿತ್ರಿಸಲಾದ ಮುಕ್ತ ದೃಶ್ಯದ ಶಾಟ್ ಅನ್ನು ಸೇರಿಸಿ, ಇತರ ಪ್ರತಿಗಳಲ್ಲಿ ಅದು ಪ್ರಿಂಟಾಗಿ ಬರುವಂತೆ ನೋಡಿಕೊಳ್ಳುತ್ತಿದ್ದ. ಹೊಸ ಚಿತ್ರಗಳ ಸೆನ್ಸಾರಿಗೇ ಸಮಯವಿಲ್ಲದ ಅಧಿಕಾರಿಗಳು, ಸಮಿತಿಯ ಸದಸ್ಯರು, ಇನ್ನು ಈ ರೀತಿ ನಂತರ ಬದಲಾಯಿಸಿದ ದೃಶ್ಯಗಳನ್ನು ಬಿ ಮತ್ತು ಸಿ ಪ್ರದರ್ಶನ ಕೇಂದ್ರಗಳಲ್ಲಿ ನೋಡಿ ಗುರುತಿಸಿ, ಕಂಡುಹಿಡಿದು, ಕ್ರಮ ತೆಗೆದುಕೊಳ್ಳುವುದು ಅಸಾಧ್ಯದ ಮಾತಾಗಿತ್ತು. ಇದೇ ರೀತಿ ಸೆನ್ಸಾರಿಗೆ ತೋರಿಸದೆ ಇರುವ ಸ್ನಾನದ ದೃಶ್ಯ, ಬೆಡ್ ರೂಂ ದೃಶ್ಯಗಳು, ಬಲಾತ್ಕಾರದ ದೃಶ್ಯಗಳು, ಚಿತ್ತಲಾಗುವ ದೃಶ್ಯಗಳು ನಂತರ ಸೇರಿಸಲ್ಪಡುತ್ತಿದ್ದವು. ಇದೆಲ್ಲ ಸಾಹಸಗಳಿಗೆ ತಂತ್ರಜ್ಞರ ಸಹಕಾರ, ನೆರವು ಸಿಗಲು ಕಾರಣ, ಆಕಸ್ಮಾತ್ ಕಾನೂನಿನ ಕ್ರಮ ಕೈಗೊಂಡರೆ ಇದಕ್ಕೆ ಹೊಣೆಗಾರನಾಗುವುದು ಕೇವಲ ನಿರ್ಮಾಪಕ ಮಾತ್ರ ಎಂಬ ಧೈರ್ಯ.

ಸಿನಿಮಾ ನಿರ್ದೇಶಕನ ಮಾಧ್ಯಮವಾದರೂ, ಅದು ಪ್ರೇಕ್ಷಕನನ್ನು ತಲುಪವವರೆಗೆ ಅದೆಷ್ಟೊಂದು ಅಡೆತಡೆ ಸ್ಪರ್ಧೆ (hurdle race) ಎದುರಿಸಬೇಕಾಗಿತ್ತು ಎಂಬುದನ್ನು ತಿಳಿಯುವುದು ಅವಶ್ಯ.

ಒಂದು ಚಿತ್ರದ ಪ್ರಥಮ ಪ್ರತಿ ಹೊರ ತರುವಾಗ ಸಂಸ್ಕರಣ ಘಟಕದ ದಕ್ಷತೆ, ಸೇವೆ ಸಮರ್ಪಕವಾಗಿದ್ದರೆ, ವರ್ಣ ಬೆಳಕು ನೆರಳಿನ ಸಂಯೋಜನೆಯ ಉತ್ತಮ ಫಲಿತಾಂಶ ಹೊಂದಿದ ಪ್ರಿಂಟ್ ನಿರ್ಮಾಪಕ ಪಡೆಯಬಲ್ಲ. ಇದರ ನಂತರ ಸೆನ್ಸಾರಿಗೆ ಪ್ರಿಯವಾದ ದೃಶ್ಯ ಧ್ವನಿಗಳನ್ನು ಕತ್ತರಿಸಿ ನೀಡಿ, ಉಳಿದುದನ್ನು ಚಿತ್ರ ಮಂದಿರಕ್ಕೆ ಬಿಡುಗಡೆ ಮಾಡುವನು. ಅಲ್ಲಿ ಪ್ರೇಕ್ಷಕನ ಪ್ರತಿಕ್ರಿಯೆ ಒಂದೆರಡು ದಿನ ನೋಡಿ, ಸಂಕಲನಕಾರರನ್ನು ಕರೆದೊಯ್ದು, ಮತ್ತೆ ಅಲ್ಲಿ ಕೆಲವು ದೃಶ್ಯಗಳನ್ನು ಕತ್ತರಿಸಿಹಾಕುವ ನಿರ್ದೇಶಕರು ಇದ್ದಾರೆ.

ಯಾವುದೇ ನಿರ್ದೇಶಕ ಚಿತ್ರದಲ್ಲಿ ವಿರಾಮ ನೀಡದೆ ಚಿತ್ರವನ್ನು ನಿರೂಪಿಸಲು ಬಯಸಿದರೂ, ಚಿತ್ರೋದ್ಯಮದ ಪ್ರದರ್ಶನವಲಯದ ಆರ್ಥಿಕ ಕಾರಣಗಳಿಂದಾಗಿ ಹಾಗೆ ಮಾಡುವಂತಿಲ್ಲ. ಚಿತ್ರಮಂದಿರವಲ್ಲಿನ ಕ್ಯಾಂಟೀನುಗಳು ವ್ಯಾಪಾರ ವಹಿವಾಟು ಸಾಗಿಸಲು ಹಾಗೂ ಒಂದು ಪ್ರದರ್ಶನ ಇನ್ನೊಂದು ಪ್ರದರ್ಶನಕ್ಕೆ ನಡುವೆ ಕಡಿಮೆ ಸಮಯದ ಅಂತರವಿಟ್ಟು ಪ್ರೇಕ್ಷಕರು ಪರಸ್ಪರ ಸ್ಪಂದಿಸಿ, ಗಲ್ಲಾಪೆಟ್ಟಿಗೆ ಟ್ರೆಂಡ್ ನಿರ್ಮಾಣವಾಗಲಿ ಎಂದು ಬಲವಂತದ 'ವಿರಾಮ' ನೀಡಲಾಯಿತು. ಎನ್ನೆಲ್ ನಿರ್ದೇಶನದ 'ಅಬಚೂರಿನ ಪೋಸ್ಟಾಫೀಸು' ವಿನಂತಹ ಕಡಿಮೆ ಉದ್ದವಿರುವ ಚಿತ್ರ ಪ್ರದರ್ಶಿಸಿದಾಗ ಅದಕ್ಕೆ ಪೂರಕ ರಸನಿರ್ಮಾಣ ಹಾಗು ಸಮಯ ಹೊಂದಾಣಿಕೆಗೆಂದು ಎಮ್.ಎಸ್. ಸತ್ಯು ನಿರ್ದೇಶನದ ಕರ್ನಾಟಕ ಸರ್ಕಾರ ನಿರ್ಮಿಸಿದ 'ನಾಟಕ ರತ್ನ ಗುಬ್ಬಿ ವೀರಣ್ಣ', ಸಾಕ್ಷ್ಯಚಿತ್ರ ಪ್ರದರ್ಶನ ವ್ಯವಸ್ಥೆಯನ್ನು ನಿರ್ಮಾಪಕರು ಮಾಡಬೇಕಾಯಿತು. ಇದು ಕೆಲವೊಮ್ಮೆ ಸಂಕಲನಕಾರ ಎದುರಿಸಿದ ಸಮಸ್ಯೆಯೂ ಹೌದು. ಕೆಲವೊಮ್ಮೆ 'ಬಿ' 'ಸಿ' ಕೇಂದ್ರಗಳಲ್ಲಿ ಚಿತ್ರಮಂದಿರದ ಆಪರೇಟರ್ ತನಗೆ ಬೇಡವೆನಿಸಿದ್ದನ್ನು ಕತ್ತರಿಸಿ, ಬೇಕಾದ ವಿಶೇಷ ದೃಶ್ಯವನ್ನು ಸೇರಿಸಿ, ಪ್ರೇಕ್ಷಕನಿಗೆ ಖುಷಿ ಕೊಡುತ್ತಾನೆ. ಚಿತ್ರ ಮಂದಿರದಲ್ಲಿ ಆಪರೇಟರ್ ಪ್ರೊಜೆಕ್ಟರ್‌ನಲ್ಲಿ ಆರ್ಕ್‌ನ್ನು ಸರಿಯಾಗಿ ಕೇಂದ್ರೀಕರಿಸಿ ಉರಿಸಿದರೆ, ಗೋಡೆಯ ಮೇಲಿನ ಗಾಜು ಸರಿಯಾಗಿ ಒರಸಿದರೆ, ಫೋಕಸನ್ನು ಸರಿಯಾಗಿ ಇಟ್ಟಿದ್ದರೆ ಚಿತ್ರ ಸ್ಪಷ್ಟವಾಗಿ ಮೂಡುವುದು. ಅದೇ ರೀತಿ ಸ್ಪೀಕರ್‌ಗಳು ದೋಷರಹಿತವಾಗಿದ್ದು, ಪ್ರೊಜೆಕ್ಟರ್‌ನಲ್ಲಿ ಓಡುತ್ತಿರುವ ಚಿತ್ರದ ಧ್ವನಿಗೆ ನೀಡಬೇಕಾದ ವಾಲ್ಯೂಂ ಸರಿಯಾದ ಸಂಖ್ಯೆಯ ಸ್ಟಾಪ್ ನೀಡಿದರೆ, ಧ್ವನಿಯು ಪ್ರೇಕ್ಷಕನಿಗೆ ಸರಿಯಾಗಿ ಕೇಳಿಸುವುದು. ಇಲ್ಲದಿದ್ದರೆ ಛಾಯಾಗ್ರಾಹಕ, ಧ್ವನಿ ಗ್ರಾಹಕ ಇಬ್ಬರ ವೈಯಕ್ತಿಕ ಶ್ರಮದ ಜೊತೆ ಮಿಕ್ಕೆಲ್ಲರ ಪ್ರತಿಭೆಯೂ ಮಣ್ಣು ಪಾಲಾಗುತ್ತದೆ. ಕೆಲವು ಬಾರಿ ಚಿತ್ರ ತಂಡದವರ ಹೆಸರನ್ನು ಚಿತ್ರದ ಕೊನೆಯಲ್ಲಿ ಹಾಕುತ್ತಾರೆ. ಆದರೆ 'ಶುಭಂ' ಬಂದೊಡನೆ ಜನ ಮೇಲೆ ಏಳುವರು. ಆಗ ತಾನು ಉರಿಸುವ ೬ ಇಂಚು ಉದ್ದದ ಆರ್ಕ್ ಉಳಿಸಲು, ಚಿತ್ರ ಮಂದಿರದವರು ಟೈಟಲುಗಳನ್ನು ತೋರಿಸುವದನ್ನೇ ನಿಲ್ಲಿಸಿಬಿಡುತ್ತಾರೆ.

ಕೆಲವೊಮ್ಮೆ 'ಬಿ' 'ಸಿ' ಕೇಂದ್ರಗಳಲ್ಲಿ ಚಿತ್ರದ ಆರಂಭದಲ್ಲಿ ಅಚ್ಚಾದ ರೀಲುಗಳ ಸಂಖ್ಯೆ ನಮೂದಾಗಿರುವ 'ಆರಂಭದ ಫಿಲಂ ಪಟ್ಟಿ' (leader) ಇರದಿದ್ದರೆ ರೀಲುಗಳ ಸಂಖ್ಯೆ ಹಾಗೂ ಕ್ರಮ ಹಿಂದುಮುಂದಾಗಿ ಓಡುತ್ತದೆ. ಅದೇ ರೀತಿ ಪ್ರದರ್ಶಿಸಿದ್ದೂ ಉಂಟು. ಕೆಲವೊಮ್ಮೆ ಪ್ರದರ್ಶನ ವೇಳೆಯಲ್ಲಿ ಅರ್ಧ ಘಂಟೆಯ ವ್ಯತ್ಯಾಸವಿರುವ ಹತ್ತಿರದ ಎರಡು ಚಿತ್ರ ಮಂದಿರಗಳಲ್ಲಿ ಅದೇ ಚಿತ್ರದ ಒಂದೇ ಪ್ರಿಂಟಿನ ರೀಲುಗಳನ್ನು ಪ್ರದರ್ಶಿತವಾದಂತೆಲ್ಲ ಎರಡೆರಡು ರೀಲು ಕಳುಹಿಸಿಕೊಡುತ್ತಾರೆ. ಈ ಪ್ರಿಂಟ್ ಶಿಫ್ಟಿಂಗ್ ಪದ್ಧತಿಯಲ್ಲಿ, ದಾರಿ ಮಧ್ಯೆ ವಾಹನ ಕೆಟ್ಟರೆ, ಟ್ರಾಫಿಕ್ ಜಾಮ್ ಆದರೆ, ಮಳೆ ಅಥವಾ ಬಂದ್‌ನಿಂದಾಗಿ ಸಂಚಾರ ಅನಿರೀಕ್ಷಿತ ರದ್ದಾದರೆ, ಚಿತ್ರ ಮಂದಿರದಲ್ಲಿ ಕುಳಿತ ಪ್ರೇಕ್ಷಕನಿಗೆ, ಚಿತ್ರದಲ್ಲಿ ರಸಭಂಗವಾಗದೆ ತೊಡಗಿಕೊಳ್ಳಲು ಸಾಧ್ಯವಾಗುವುದಿಲ್ಲ. ಹೀಗಾದಾಗ ಅವನ ರೋಷ, ಪ್ರತಿಭಟನೆಗೆ ಚಿತ್ರ ಮಂದಿರದ ಆಸನಗಳು ತುತ್ತಾಗುತ್ತವೆ.

ಗ್ರಾಮೀಣ ಕ್ಷೇತ್ರಗಳ ಚಿತ್ರಮಂದಿರಗಳಲ್ಲಿ ಒಂದೇ ಪ್ರೊಜೆಕ್ಟರ್ ಇರುವೆಡೆ ಎರಡನೇ ರೀಲಿನ ತುದಿಗೆ ಅದು ಓಡುತ್ತಿರುವಂತೆಯೇ, ಮೂರು-ನಾಲ್ಕು ರೀಲನ್ನು ಅಂಟಿಸಿ, ಗಾಳಿ ಪಟದಂತೆ ಬಿಡುತ್ತಲೇ ಪ್ರದರ್ಶನಕ್ಕೆ ಬಾಧೆ ಬರದಂತೆ, ಆ ರೀಲಿನ ಚಕ್ರವನ್ನು ಪ್ರೊಜೆಕ್ಟರಿನಲ್ಲಿ ಸಿಕ್ಕಿಸಿಬಿಡುತ್ತಾನೆ. ಈ ಕಲೆ ಬಾರದವನು ಚಿತ್ರದಲ್ಲಿ ಪ್ರತಿ ಎರಡು ರೀಲಿಗೆ ಒಮ್ಮೆ 'ಬೀಡಿ ಸಿಗರೆಟ್ ಸೇದಬಾರದು' ಎಂಬ ಸಲಹೆ ಪ್ರದರ್ಶಿಸುತ್ತ ಸಮಯ ಹೊಂದಿಸುತ್ತಾರೆ.

ಪ್ರತಿಯೊಂದು ಕಲಾ ಮಾಧ್ಯಮಕ್ಕೂ ತನ್ನದೇ ಆದ ಇತಿಮಿತಿಗಳಿರುತ್ತವೆ. ಅದನ್ನು ಅರಿತಾಗ ಮಾತ್ರ ಅಭಿವ್ಯಕ್ತಿಯೂ ಸುಲಭ, ಹಾಗೂ ಅದರ ಮೇಲೆ ಹಿಡಿತ ಸಾಧಿಸಿ, ಅದರ ಎಲ್ಲ ಸಾಧನಗಳನ್ನು, ಸಾಧ್ಯತೆಗಳನ್ನು ಬಳಸಿಕೊಳ್ಳಲು ಸಾಧ್ಯ.

ಚಿತ್ರದ ನಿರ್ದೇಶಕನಿಗೆ ತಾಂತ್ರಿಕ ಹಾಗೂ ಅತಾಂತ್ರಿಕ ಎರಡು ವಿಭಾಗಗಳ ಜ್ಞಾನ ಸಾಧ್ಯತೆಗಳು ಗೊತ್ತಿರಬೇಕು. ಚಿತ್ರ ತಂಡದವರಿಗೆ ತನ್ನ ಬೇಕು ಬೇಡಗಳನ್ನು ತಿಳಿಸಿ ಅವರಿಂದ ಫಲಿತಾಂಶ ಹೊರ ತರುವ ಸಾಮರ್ಥ್ಯವಿರಬೇಕು. ಸ್ಟುಡಿಯೋ ಇರುವವರೆಗೂ ಆಗಿನ ಎಲ್ಲ ನಿರ್ದೇಶಕರು ಈ ಅರ್ಹತೆ ಪಡೆದಿದ್ದರು. ಹೀಗೆಂದ ಮಾತ್ರಕ್ಕೆ ನಿರ್ದೇಶಕ ಎಲ್ಲ ವಿಭಾಗಗಳಲ್ಲಿ ತಾನೆ ತೀರ್ಮಾನ ಕೈಗೊಂಡು ಕಾರ್ಯ ಪ್ರವೃತ್ತನಾಗುವ ಕೇವಲ ತಂತ್ರಜ್ಞಾನವುಳ್ಳವನಾಗಿರಬೇಕಿಲ್ಲ. ಬೇರೆ ಚಿತ್ರರಂಗಗಳಲ್ಲಿ ಸತ್ಯಜಿತ್ ರೇ ಅಂತಹ ಮೇಧಾವಿ, ಸೃಜನಶೀಲ ಬಹುಮುಖ ಪ್ರತಿಭೆಯ ನಿರ್ದೇಶಕನಿಗೆ ಕ್ಯಾಮರಾ ಕಾರ್ಯ ಕೈಗೊಳ್ಳಲು, ಛಾಯಾಗ್ರಾಹಕನು ಬಿಡಲಿಲ್ಲ. ಛಾಯಾಗ್ರಾಹಕರ ವೃತ್ತಿ ಸಂಸ್ಥೆಗಳು (ಟ್ರೇಡ್ ಯೂನಿಯನ್) ಪ್ರತಿಭಟಿಸಿದವು. ಇದನ್ನೇ ಹಿಂದಿ ಚಿತ್ರರಂಗದಲ್ಲಿ ಬಹುಮುಖ ಪ್ರತಿಭೆಯ ಕಿಶೋರ್ ಕುಮಾರ್ ಸಹ ಅನುಭವಿಸಬೇಕಾಯಿತು.

ಪ್ರಸಿದ್ಧ ನಿರ್ದೇಶಕರೊಬ್ಬರ ಚಿತ್ರದ ನಾಯಕಿ ನಿಜ ಜೀವನದಲ್ಲಿ ಗರ್ಭಿಣಿ ಇದ್ದ ಕಾರಣದಿಂದ ಚಿತ್ರವನ್ನು ಮಾಡಿ ಮುಗಿಸಬೇಕಾದ ಒತ್ತಡದಿಂದಾಗಿ, ಚಿತ್ರದ ಉತ್ಕರ್ಷ (climax) ದೃಶ್ಯಗಳನ್ನು ಕೇವಲ ದೇಹದ ಮೇಲಿನ ಭಾಗ ಕಾಣುವಂತೆ ಮಧ್ಯಮ ಚಿತ್ರಿಕೆ (mid shot) ಹಾಗೂ ಸಮೀಪ ಚಿತ್ರಿಕೆ (close up)ಗಳಲ್ಲಿ ಮಾತ್ರ ಚಿತ್ರಿಸಿದ ಉದಾಹರಣೆಗಳಿವೆ.

ಸಿನಿಮಾದ ಮೂಲ ತತ್ವವೇ 'ಅದು' ಅದೇ ಆಗಿರಬೇಕಿಲ್ಲ. 'ಅದು' ಅದರಂತಿದ್ದರೆ ಸಾಕು. ಪ್ರೇಮಿನ ಒಳಗೆ ಕಾಣುವುದೇ ಸತ್ಯ (make belief). ರಕ್ತ ತೋರಿಸಲು ಬ್ಲಡ್ ಬ್ಯಾಂಕಿನಿಂದ ತರಿಸಬೇಕಿಲ್ಲ. ಆದರೆ ಹಾಗೂ ಮಾಡಿದವರಿದ್ದಾರೆ. ಉದಾ : 'ಅಂತ'.

ಚಿತ್ರರಂಗದ ಇನ್ನೊಂದು ಮುಖವಾದ ನವ್ಯ, ಪರ್ಯಾಯ, ಹೊಸ ಅಲೆ, ಪ್ರಾಯೋಗಿಕ ಚಿತ್ರದ ಹಣೆಪಟ್ಟಿಯಲ್ಲಿ ಬಂದ ಚಿತ್ರದ ನಿರ್ದೇಶಕರು, ತಂತ್ರಜ್ಞರದು ಇನ್ನೊಂದು ಪಾಡು.

ಗಿರೀಶ್ ಕಾರ್ನಾಡ್ ಮತ್ತು ಬಿ.ವಿ.ಕಾರಂತರ ಜಂಟಿ ನಿರ್ದೇಶನದ 'ವಂಶ ವೃಕ್ಷ' ತಾಂತ್ರಿಕವಾಗಿ ತೃಪ್ತಿಕರವಿರಲಿಲ್ಲ. ಚಿತ್ರೀಕರಿಸಿದ ಫಲಿತಾಂಶಗಳನ್ನು ತೆರೆ ಮೇಲೆ ಹಾಕಿ ನೋಡಿದಾಗ, ನಿಜವಾದ ಚಿಕ್ಕ ಚಿಕ್ಕ ಮನೆಗಳಲ್ಲಿ ಚಿತ್ರೀಕರಿಸಿದ್ದರಿಂದ, ಲೈಟುಗಳನ್ನು ಹಿಡಿದು ಗೋಡೆಗೆ ಆತುಕೊಂಡು ನಿಂತ ಲೈಟ್ ಬಾಯ್‌ಗಳ ಕಾಲುಗಳು, ಲೈಟಿನ ಕೇಬಲ್ಲುಗಳು, ಲೈಟಿನ ಸ್ಟ್ಯಾಂಡುಗಳು ಕಂಡಾಗ, ಅದನ್ನು ಮದ್ರಾಸಿಗೆ ಕಳುಹಿಸಿ ವಿಶೇಷ ಮುದ್ರಣ ಯಂತ್ರದಲ್ಲಿ, ಸುತ್ತಲಿನ ನಾಲ್ಕು ಭಾಗಗಳು ಕಾಣದಂತೆ ಮುಚ್ಚಿ, ಮಿಕ್ಕ ದೃಶ್ಯವನ್ನು ಹತ್ತಿರದಿಂದ ಕಾಣುವಂತೆ (blow up) ಮಾಡಲಾಯಿತು.

ಯಾವುದೇ ಚಲನಚಿತ್ರದ ೩೫ ಎಮ್. ಎಮ್. ಪ್ರೊಜೆಕ್ಟರ್‌ನ ವಿನ್ಯಾಸ ಯಾವ ರೀತಿ ಇರುವುದೆಂದರೆ ಅದರಲ್ಲಿ ಪ್ರದರ್ಶಿತವಾಗುವ ಚಿತ್ರದ ಫ್ರೇಮ್, ಪಿಕ್ಚರ್ ಗೇಟಿನಲ್ಲಿದ್ದರೆ, ಅದರ ಸಂಬಂಧಿತ ಧ್ವನಿ, ಎರಡು ಮೂರು ರೋಲರ್ಗಳಲ್ಲಿ ನುಸುಳಿ, ಧ್ವನಿ ಉತ್ಪಾದಿಸುವ ಲೈಟಿನ ಕಿರಣ ಬೀಳುವ ಕೇಂದ್ರ ಬಿಂದು (optical sound head light beam) ವಿನ ಕೆಳಗಿನಿಂದ ಅದೇ ಕ್ಷಣದಲ್ಲಿ ಸಾಗುತ್ತಿರುತ್ತದೆ. ಈ ಎರಡು ದೃಶ್ಯ ಧ್ವನಿಗಳ ಸಂಬಂಧದ ಅಂತರ ಹತ್ತೊಂಬತ್ತೂವರೆ ಫ್ರೇಮಿನಷ್ಟು ಇರುತ್ತದೆ. ಹೀಗಾಗಿ ಚಿತ್ರದ ಅಂತಿಮ ಪ್ರತಿಗಳಲ್ಲಿ ಧ್ವನಿ ಮತ್ತು ಚಿತ್ರವನ್ನು ಈ ವ್ಯತ್ಯಾಸ ಮಾಡಿಯೇ ಮುದ್ರಿಸುವರು. (ಸಂಕಲನ ಹಂತದಲ್ಲಿ ಇವೆರಡು ಸಮಾನಾಂತರ ಸಂಬಂಧ ಹೊಂದಿರುತ್ತವೆ). ಸಂಕಲನಕಾರ ಈ ೨೦ ಫ್ರೇಮಿನ ಧ್ವನಿಯನ್ನು ಬ್ಲೇಡಿನಲ್ಲಿ ಕೆರೆದು, ಕರಿ ಟೇಪು ಅಂಟಿಸಿ ಪ್ರದರ್ಶಿಸಿದಾಗ ಇದನ್ನರಿಯದೆ, ಸಂಕಲನ ಎಂಬುದು ಒಂದು ಜಾದೂ, ಅದು ತಂತ್ರವಲ್ಲ (editing is a magic, not a technic) ಎಂಬಂತೆ ವಾದ ಮಾಡಿದ್ದುಂಟು. ಈ ಸಮಸ್ಯೆ ಅರಿತವನು, ಎದುರಿಸುವವನು, ಪರಿಹರಿಸುವವನು ಸಂಕಲನಕಾರ.

'ವಂಶ ವೃಕ್ಷ'ದ ಸಂಗೀತ ಮುದ್ರಣ, ಧ್ವನಿ ಮಿಶ್ರಣಕ್ಕೆ ಚಿತ್ರದ ವಿಶೇಷ ಪ್ರತಿ (re-recording print) ತರಾತುರಿಯಲ್ಲಿ ಮೈಸೂರಿನ ಪ್ರೀಮಿಯರ್ ಸ್ಟುಡಿಯೋದಲ್ಲಿ ಪ್ರಿಂಟ್ ಮಾಡಿ ಮದ್ರಾಸಿನ ಸ್ಟುಡಿಯೋ ತೆರೆಯ ಮೇಲೆ ಹಾಕಿದಾಗ, ಸಂಪೂರ್ಣ ಚಿತ್ರದ ದೃಶ್ಯ ಮತ್ತು ಧ್ವನಿಯ ಸಂಬಂಧ ವ್ಯತ್ಯಾಸ (out of sync) ಆಗಿತ್ತು. ಕಾರಣವಿಷ್ಟೆ -

ಮುಂಬೈ ಪದ್ಧತಿಯ ಸಂಕಲನಕಾರರು (ಅರುಣ ದೇಸಾಯಿ) ಚಿತ್ರದ ಪಿಕ್ಚರ್ ನೆಗೆಟಿವ್ ಹಾಗೂ ಸಂಭಾಷಣೆಯ ಸೌಂಡ್ ನೆಗೆಟಿವ್ ಪ್ರಿಂಟ್‌ಗೆ ಕಳುಹಿಸುವ ಮುನ್ನ ಹತ್ತೊಂಬತ್ತೂವರೆ ಫ್ರೇಮ್ ವ್ಯತ್ಯಾಸ ಮಾಡಿ, ಧ್ವನಿಯನ್ನು ಚಿತ್ರಕ್ಕಿಂತ ಮುಂದೂಡಿ ಲ್ಯಾಬಿಗೆ ಕಳುಹಿಸಿದ್ದರು. ಆದರೆ ಅದನ್ನು ಲ್ಯಾಬಿಗೆ ತಿಳಿಸಿರಲಿಲ್ಲ. ದಕ್ಷಿಣ ಭಾರತದ ಪದ್ಧತಿಯಂತೆ ಮೈಸೂರಿನ ಪ್ರೀಮಿಯರ್ ಸ್ಟುಡಿಯೋ ತಂತ್ರಜ್ಞರು ಅದನ್ನು ಮತ್ತೆ ತಾವೂ ಸಹ ಹತ್ತೊಂಬತ್ತೂವರೆ ಫ್ರೇಮ್ ಮುಂದೂಡಿ ಪ್ರಿಂಟ್ ಹಾಕಿದರು. ಹೀಗಾಗಿ ಪ್ರಿಂಟು ೨೦ ಫ್ರೇಮ್ ಔಟ್ ಆಫ್ ಸಿಂಕ್ ಆಗಿ ಪ್ರಿಂಟಾಗಿತ್ತು. ಅಂದರೆ ಧ್ವನಿ-ದೃಶ್ಯಗಳು ಸಂಬಂಧ ಕಳೆದುಕೊಂಡಿದ್ದವು. ಈ ಅವಾಂತರದಿಂದಾಗಿ ಮೈಸೂರಿನಿಂದ ಸಂಭಾಷಣೆಯ ಮೂಲ ಸೌಂಡ್ ನೆಗೆಟಿವ್ ಅನ್ನು ಲ್ಯಾಬಿನಿಂದ ಕಾರಿನಲ್ಲಿ ತರಿಸಿ, ಮದ್ರಾಸ್ ಸ್ಟುಡಿಯೋದ ಪ್ರೊಜೆಕ್ಟರ್‌ನಲ್ಲಿ ಚಿತ್ರದ ಜೊತೆ ಸಿಂಕ್‌ನಲ್ಲಿ ಓಡಿಸಿ, ಧ್ವನಿ ಮುದ್ರಣ ಮಾಡಿ, ಧ್ವನಿ ಮಿಶ್ರಣ ಮಾಡಲಾಯಿತು. ಅದರ ಫಲವೇ ಈಗಲೂ ಚಿತ್ರದುದ್ದಕ್ಕೂ, ಧ್ವನಿಯಲ್ಲಿರುವ ಬುಸುಗುಟ್ಟುವ ಸದ್ದು (HISS) ಹಾಗೂ ಕಿರುಚುವಿಕೆಯಿಂದ ಕಿರಿಕಿರಿ ಅನುಭವ (high frequency reproduction). ಬಹುಶಃ ತಂತ್ರಗಾರಿಕೆ ಮತ್ತು ನಿರೂಪಣ ದೃಷ್ಟಿಯಿಂದ ಪಕ್ವವಾದ ಮತ್ತು ಪ್ರೇಕ್ಷಕನಿಗೆ ತೀರ ಹತ್ತಿರವಾದ ಚಿತ್ರ ಗಿರೀಶ್ ಕಾರ್ನಾಡರ 'ಒಂದಾನೊಂದು ಕಾಲದಲ್ಲಿ' ಎನ್ನಬಹುದು.

ಚಿತ್ರ ಕೇವಲವಾಗಿ ಗಲ್ಲಾಪೆಟ್ಟಿಗೆಯಲ್ಲಿ ಸೋತರೂ ಸಹ, ತಂತ್ರದ ದೃಷ್ಟಿಯಿಂದ ಉಚಿತ ಪದ್ಧತಿ ಅನುಸರಿಸಿ, ಸಾಕಷ್ಟು ನೋವು, ಟೀಕೆ ಅನುಭವಿಸಿ, ದೀರ್ಘ ಕಾಲ ನಿರ್ಮಾಣದಲ್ಲಿದ್ದು, ನಂತರ ಹೊರಬಂದ ಚಿತ್ರ 'ಮಾಡಿ ಮಡಿದವರು'. ಪುಣೆ ಫಿಲಂ ಇನ್‌ಸ್ಟಿಟ್ಯೂಟ್‌ನ ಪ್ರಥಮ ಪದವೀಧರ ನಿರ್ದೇಶಕ ಕೆ. ಎಂ. ಶಂಕರಪ್ಪ ಹಾಗೂ ಅದೇ ಸಂಸ್ಥೆಯಿಂದ ಬಂದ ಛಾಯಾಗ್ರಾಹಕ ಯು. ಎಂ. ಎನ್. ಶರೀಫ್, ಧ್ವನಿಗ್ರಾಹಕ ಕೆ. ಎಸ್. ಕೃಷ್ಣಮೂರ್ತಿ ಮತ್ತು ಸಂಕಲನಕಾರ ಉಮೇಶ್ ಕುಲಕರ್ಣಿ ಇವರೆಲ್ಲರಿಗೂ ಅದು ಪ್ರಥಮ ಚಿತ್ರ.

ಈ ಚಿತ್ರದ ಸಂಭಾಷಣೆಯನ್ನು ಕನ್ನಡದಲ್ಲಿ ಪ್ರಥಮ ಬಾರಿಗೆ ಸಂಪೂರ್ಣವಾಗಿ 'ನಾಗರಾ' ಧ್ವನಿಗ್ರಹಣ ಯಂತ್ರದಲ್ಲಿ ಧ್ವನಿಗ್ರಹಣ ಮಾಡಲಾಯಿತು. ಪುಣೆ ಫಿಲಂ ಇನ್‌ಸ್ಟಿಟ್ಯೂಟ್‌ನಲ್ಲಿ ಸಂಗೀತದ ಗುರುಗಳಾದ ಭಾಸ್ಕರ್ ಚಂದಾವರ್‌ಕರ್ ಸಂಗೀತ ನಿರ್ದೇಶನ ಮಾಡಿದ್ದು ಒಂದು ವಿಶೇಷ. ಅವರು ಈ ಚಿತ್ರದ ಹಿನ್ನೆಲೆ ಸಂಗೀತವನ್ನು ಬಾಲ ಭವನದಲ್ಲಿ ನೀಡಿ, ಪ್ರಥಮ ಬಾರಿಗೆ ನಾಗರದಲ್ಲಿ ಧ್ವನಿಗ್ರಾಹಕ ಕೃಷ್ಣಮೂರ್ತಿ ಧ್ವನಿ ಮುದ್ರಿಸಿ, ಅಂತಿಮವಾಗಿ ಅದನ್ನು ಪುಣೆಯ ಫಿಲಂ ಇನ್‌ಸ್ಟಿಟ್ಯೂಟ್‌ನ ಸ್ಟುಡಿಯೋದಲ್ಲಿ ಧ್ವನಿ ಮಿಶ್ರಣ ಮಾಡಲಾಯಿತು. ಈ ಚಿತ್ರಕ್ಕೆ ಶೇಷಾದ್ರಿಪುರಂನಲ್ಲಿ ಆಗ ಅಸ್ತಿತ್ವದಲ್ಲಿದ್ದ 'ಬೆಂಗಳೂರು ಫಿಲಂ ಲ್ಯಾಬೋರೇಟರಿ'ಯಲ್ಲಿ ಸಂಪೂರ್ಣ ಕಪ್ಪು ಬಿಳುಪು ಪ್ರಕ್ಷಾಳನ (processing), ಮಾತಿನ ಧ್ವನಿ ಗ್ರಹಣ (dubbing), ಸಂಕಲನ ಮಾಡಿದ್ದಲ್ಲದೇ, ಜೆಕೊಸ್ಲೋವಕಿಯಾದಿಂದ ಆಮದಾದ 'ಕಿನೋ' (kino) ಪಾಸಿಟಿವ್ ಫಿಲಂನಲ್ಲಿ ಅಂತಿಮ ಪ್ರತಿಗಳನ್ನು ಮುದ್ರಿಸಲಾಯಿತು. ಈ ಚಿತ್ರಕ್ಕೆ ಕಲಾವಿದ ಆರ್ಯರಿಂದ ಕಪ್ಪು-ಬಿಳಿ ಬಣ್ಣದಲ್ಲಿ ಚಿತ್ರಗಳನ್ನು (sketch) ಬರೆಸಿ, ಅದನ್ನು ಕಾಂಟ್ರಾಸ್ಟ್‌ಗಾಗಿ ಸೌಂಡ್ ನೆಗೆಟಿವ್‌ನಲ್ಲಿ ಚಿತ್ರಿಸಿ, ಮೈಸೂರು ಅನಂತಸ್ವಾಮಿ ಹಾಡಿದ ಗೋಪಾಲಕೃಷ್ಣ ಅಡಿಗರ ಕವನ 'ನೆನೆ ನೆನೆ ಆ ದಿನವಾ'ಕ್ಕೆ ಸಂಕಲನ ಮಾಡಿ ಉಕ್ಕಿಸಿದ ವೀರರಸ, ನಿರ್ದೇಶಕರ ಕ್ರಿಯಾಶೀಲತೆಗೆ ಸಾಕ್ಷಿ. ಆದರೆ ಇದೇ ಚಿತ್ರದಲ್ಲಿ ಮಾತಿನ ದೃಶ್ಯವೊಂದಕ್ಕೆ ಸಂಗೀತವನ್ನು ಮಾತ್ರ ಬಳಸಿ, ಒಂದಷ್ಟು ಸಮಯ ಕಳೆದರೆಂಬುದನ್ನು ಸೂಚಿಸಲು ಮಾಂಟಾಜ್ (montage) ತಂತ್ರ ಬಳಸಿದಾಗ, ಚಿತ್ರ ನೋಡಿದ ಪ್ರೇಕ್ಷಕರು, ಸಂಗೀತ ಕೇಳುತ್ತಿದ್ದರೂ ಮಾತು ಕೇಳುತ್ತಿಲ್ಲವಾದ್ದರಿಂದ, ಚಿತ್ರ ಮಂದಿರದವರಿಗೆ 'ನಿಮ್ಮ ಪ್ರೊಜೆಕ್ಟರ್, ಸೌಂಡ್ ಸಿಸ್ಟಮ್ ದೋಷವಿದೆ, ಅದನ್ನು ಸರಿಪಡಿಸಿ' ಎಂದು ಕೂಗಿದ್ದೂ ಉಂಟು.

ಟಾಕಿ ಯುಗದ ಯಾವುದೇ ಚಿತ್ರದ ಚಿತ್ರೀಕರಣದಲ್ಲಿ, ಪ್ರತಿ ಚಿತ್ರಿಕೆಗೆ ಮುನ್ನ ಕ್ಯಾಮರಾ ಚಲಿಸಿದ ತಕ್ಷಣ, ಆ ದೃಶ್ಯದ ಸಂಖ್ಯೆ, ಚಿತ್ರಿಕೆ ಸಂಖ್ಯೆ ಮತ್ತು ಸೆರೆ ಹಿಡಿಯುವ ಪ್ರಯತ್ನದ (take) ಸಂಖ್ಯೆಯನ್ನು, ಒಂದು ಮರದ ಹಲಗೆಯ ಮೇಲೆ ನಮೂದಿಸಿ, ಸಹಾಯಕ ನಿರ್ದೇಶಕ ಅದನ್ನು ಘೋಷಿಸುತ್ತಲೆ 'ಟಪ್' ಎಂದು ಅದರ ಮೇಲಿನ ಕೈಭಾಗ ಅದರದೇ ಕೆಳಗಿನ ದೇಹ ಭಾಗಕ್ಕೆ ತಟ್ಟುತ್ತಿದ್ದರು. ಇದು ನಂತರ ಸಂಕಲನಕಾರನಿಗೆ ಚಿತ್ರದ ಫಲಿತಾಂಶ ಪ್ರಿಂಟ್ ಮಾಡಲು ಕಳುಹಿಸುವಾಗ, (sync point) ದೃಶ್ಯ ಧ್ವನಿ ಸಂಬಂಧ ಬಿಂದು ನಿರ್ಧರಿಸಲು ನೆರವಾಗುತ್ತದೆ. ನವ್ಯ ನಿರ್ದೇಶಕರು ಸಂಪೂರ್ಣ ಚಿತ್ರ ಡಬ್ ಮಾಡಲು ನಿರ್ಧರಿಸಿ, ಸ್ಥಳೀಯ ಸಂಭಾಷಣೆಯನ್ನು ಕೇವಲ ಮಾದರಿ ಉದ್ದೇಶಕ್ಕೆ (pilot track) ಧ್ವನಿ ಮುದ್ರಿಸುವ ಪರಂಪರೆ ಚಾಲ್ತಿಗೆ ತಂದಿದ್ದರಿಂದ, ಕ್ಲಾಪ್ ಬೋರ್ಡನ್ನು ತಟ್ಟದೆ, ದೃಶ್ಯ ಧ್ವನಿ ಸಂಖ್ಯೆ ಘೋಷಿಸದೆ, ಸುಮ್ಮನೆ ಕ್ಯಾಮರಾ ಮುಂದೆ ಹಿಡಿದಿದ್ದಾಗ, ಅದನ್ನು ಎಂಟು ಅಥವಾ ಹತ್ತು ಫ್ರೇಮ್ ಚಿತ್ರೀಕರಿಸಲಾಗುತ್ತಿತ್ತು. ಇದರಿಂದ ನಿರ್ಮಾಪಕನಿಗೆ ಸಾಕಷ್ಟು ಕಚ್ಚಾ ಫಿಲಂ ಉಳಿತಾಯವಾಗುತ್ತಿತ್ತು.

ಹೀಗೆ ಒಂದು ಚಿತ್ರ ತಂಡ ಈ ರೀತಿ ಚಿತ್ರಿಸಿದ ಭಾಗಗಳನ್ನು ಪರದೆಯ ಮೇಲೆ ಹಾಕಿ ಕ್ಲಾಪನ್ನು ಓದಲು ಸಾಧ್ಯವಾಗದೆ, ಚಿತ್ರ ತಂಡದ ಎಲ್ಲರ ಮೇಲೂ ನಿರ್ದೇಶಕರು ರೇಗುತ್ತ 'ಇದಾರು ಈ ರೀತಿ ಕ್ಲಾಪ್ ನೀಡಿದ್ದು, ಇದನ್ನು ಯಾರಿಗೂ ಓದಲು ಸಾಧ್ಯವಿಲ್ಲ' ಎಂದು ಚಿತ್ರ ನಿರ್ಮಾಣದ ತಮ್ಮ ಪುಸ್ತಕೀಯ ಜ್ಞಾನ ಪ್ರದರ್ಶಿಸಿದಾಗ ತಂಡ ಬೆರಗುಗಣ್ಣಿನಿಂದ ಅವರತ್ತ ನೋಡಿತು. ಈ ರೀತಿಯ ಕ್ಲಾಪ್ ಇರುವುದು ಸಂಕಲನಕಾರ ಸಂಕಲನದ ಮೇಜಿನ ಮೇಲೆ ಭೂತಗನ್ನಡಿಯಿಂದ ಓದಿ, ಗುರುತಿಸಿ, ಚಿತ್ರಿತ ಪ್ರಯತ್ನ ಸಂಖ್ಯೆ (take number) ಆಯ್ಕೆ ಮಾಡುವುದಕ್ಕೆ ಎಂದು ತಿಳಿಸಿ ಒಪ್ಪಿಸುವಲ್ಲಿ ಛಾಯಾಗ್ರಾಹಕರು (ಬಿ.ಸಿ.ಗೌರೀಶಂಕರ್) ಸುಸ್ತಾದದ್ದುಂಟು. ಇಸ್ರೋ ವಿಜ್ಞಾನಿ, ನಿರ್ದೇಶಕ ಪಿ.ಎಸ್.ಶ್ರೀನಿವಾಸರ 'ಸ್ಪಂದನ' ಚಿತ್ರದಲ್ಲಿ ಇವರು ಬೆಳಗ್ಗೆ ಸಂಕಲಿಸಿದ್ದ ಸನ್ನಿವೇಶಗಳನ್ನು ಸಂಜೆ ಮತ್ತೆ ಬದಲಾಯಿಸಿ ಬೇರೆ ರೀತಿ ಸಂಕಲಿಸಿ ಪರಿಣಾಮವನ್ನು (trial and error) 'ಮಾಡು ಮತ್ತು ಕಲಿ' ಪದ್ಧತಿಯಲ್ಲಿ ಜಾರಿಗೊಳಿಸಿದಾಗ, ವೃತ್ತಿ ನಿರತ ಸಂಕಲನಕಾರನೂ (ರಾಜಾನಂದ ರೆಡ್ಡಿ) ಬೇಸತ್ತು, ಸೋತು ಸುಣ್ಣವಾದದ್ದಿದೆ.

ಸಾಮಾನ್ಯವಾಗಿ ಒಳಾಂಗಣಕ್ಕೆ ಜೂಮ್ ಲೆನ್ಸ್ ಬಳಸುವುದಿಲ್ಲ, ಕೇವಲ ಬ್ಲಾಕ್ ಲೆನ್ಸ್‌ಗಳನ್ನೇ ಬಳಸುವುದು. ಜೂಮ್ ಲೆನ್ಸ್ ಬಳಸಿದ ಸಂದರ್ಭದಲ್ಲಿ ನಿರ್ದೇಶಕನೊಡನೆ, ದೃಶ್ಯದ ಯಾವ ಹಂತದಲ್ಲಿ, ಯಾವ ವಿವರಗಳನ್ನು, ಎಷ್ಟರ ಮಟ್ಟಿಗೆ ಹತ್ತಿರದಿಂದ ಚಿತ್ರಿಸಬೇಕೆಂಬುದನ್ನು ಚರ್ಚಿಸಿ, ಒಂದೆರಡು ತಾಲೀಮು ಮಾಡಿಯೇ, ಅಂತಿಮ ಚಿತ್ರಣ ಪ್ರಯತ್ನ ಕೈಗೊಳ್ಳುವುದು ಛಾಯಾಗ್ರಾಹಕರ ಅಭ್ಯಾಸ. ಛಾಯಾಗ್ರಾಹಕ ಬಿ.ಸಿ.ಗೌರೀಶಂಕರ್ ಚಿತ್ರೀಕರಿಸುತ್ತಿದ್ದ ಚಿತ್ರವೊಂದರಲ್ಲಿರಸಮಯ ಸನ್ನಿವೇಶದಲ್ಲಿ ಮುಳುಗಿದ್ದ ನಿರ್ದೇಶಕರೊಬ್ಬರು ಕ್ಯಾಮರಾದಲ್ಲಿ ಯಾವ ಲೆನ್ಸ್ ಇದೆ ಎಂದೂ ತಿಳಿದುಕೊಳ್ಳದೆ 'ಜೂಮ್' ಎಂದು ಕೂಗಿದಾಗ ಜೂಮ್ ಲೆನ್ಸ್ ಹಾಕಿಲ್ಲ ಎಂದು ತಿಳಿಸಲು ಪರದಾಡಿದ ಪ್ರಸಂಗವೂ ಇದೆ.

ಇದೇ ರೀತಿ 'ಪಲ್ಲವಿ'ಯನ್ನು ಮೊದಲು ೧೬ ಎಂ.ಎಂ.ನಲ್ಲಿ ಚಿತ್ರಿಸಿ, ಅರ್ಧದಲ್ಲಿ ಅದನ್ನು ತೊರೆದು ಮತ್ತೆ ೩೫ ಎಂ.ಎಂ.ನಲ್ಲಿ ನಿರ್ಮಿಸಿದ ನಿರ್ದೇಶಕ ಪಿ. ಲಂಕೇಶರು, ಖ್ಯಾತ ಸಂಕಲನಕಾರ ಹೃಷಿಕೇಶ್ ಮುಖರ್ಜಿ ತರಿತವಾಗಿ ಸಂಕಲಿಸಿದ 'ಅನುರೂಪ' ಚಿತ್ರದ ಉದ್ದ ಸಬ್ಸಿಡಿಗೆ ಕಡಿಮೆಯಾಯಿತೆಂದು ಮತ್ತೆ ಸನ್ನಿವೇಶಗಳನ್ನು ಮರುಜೋಡಿಸಿ ಚಿತ್ರದ ಉದ್ದ ಹೆಚ್ಚಿಸಿದ್ದರು.

ಪುಣೆ ಫಿಲಂ ಇನ್‌ಸ್ಟಿಟ್ಯೂಟ್‌ನಲ್ಲಿ ತರಬೇತಿ ಪಡೆದ 'ವಂಶವೃಕ್ಷ'ದ ಸಂಕಲನಕಾರ್ತಿ ಅರುಣಾ ದೇಸಾಯಿಯ ಸಹಾಯಕ ಸಂಕಲನಕಾರ ವಿ.ಆರ್.ಕೆ.ಪ್ರಸಾದ್, ಮಾಂಟಾಜ್ ಮತ್ತು ಎಡಿಟಿಂಗ್ ಎಂದರೆ ಒಂದೇ ಎಂದು ವಿವಾದ ಸೃಷ್ಟಿಸಿದ್ದರು. ಈ ಹೇಳಿಕೆಯನ್ನು ವಿರೋಧಿಸಿ, ಚರ್ಚೆ ಬೆಳೆಸಿದವರು ಎಸ್.ಲಕ್ಷ್ಮೀನಾರಾಯಣ್. ಸಂಕಲನಕಾರ ವಿ.ಆರ್.ಕೆ.ಪ್ರಸಾದ್ ನಿರ್ದೇಶಿಸಿದ 'ಋಷ್ಯಶೃಂಗ' ಆರ್ವೋ ಎನ್ ಸಿ ೩ ವರ್ಣದಲ್ಲಿ ತಯಾರಾದ ಪ್ರಥಮ ಚಿತ್ರ. ಈ ಚಿತ್ರದ ಕಾಲದಲ್ಲಿ, ಲ್ಯಾಬೊರೇಟರಿಗಳಲ್ಲಿ ಅಂತಿಮ ವರ್ಣ ಪ್ರತಿ ಮುದ್ರಿಸಲು ಸಂಕಲನಕಾರ ಅದರ ಜೊತೆಗೆ 'ಲಿಲ್ಲಿ'ಗಳನ್ನು ಒದಗಿಸುವ ಪದ್ಧತಿ ಇತ್ತು. ಈ ಪದ್ಧತಿಯಲ್ಲಿ ಚಿತ್ರದಲ್ಲಿ ಬಳಸಲಾದ ಎಲ್ಲ ಚಿತ್ರಿಕೆಗಳ (shots) ಆರಂಭದ ಎರಡೆರಡು ಫ್ರೇಮ್‌ಗಳನ್ನು, ಅದೇ ಕ್ರಮದಲ್ಲಿ ಕತ್ತರಿಸಿ, ಜೋಡಿಸಿ, ಅಂಟಿಸಿ, ಲ್ಯಾಬಿಗೆ ಪ್ರತ್ಯೇಕವಾಗಿ ನೀಡಬೇಕಿತ್ತು. ಇದು ಚಿತ್ರದ ಪ್ರತಿ ರೀಲಿಗೂ ಅನ್ವಯಿಸುತ್ತಿತ್ತು. ಈ ಮಾದರಿ ಫ್ರೇಮುಗಳ ರೀಲನ್ನು 'ಲಿಲ್ಲಿ' ಎಂದು ಕರೆಯುತ್ತಾರೆ.

ಆದರೆ 'ಋಷ್ಯಶೃಂಗ'ದ ಪ್ರಸಾದ್ ಅವರೇ ಸಂಕಲನಕಾರರಾಗಿದ್ದರೂ ಲಿಲ್ಲಿಗೆ ನೀಡಲೂ ಫ್ರೇಮ್ ಉಳಿಯದಂತೆ ಚಿತ್ರಿಕೆಯ ಮೊದಲ ಫ್ರೇಮ್‌ನಿಂದ ಎಲ್ಲವನ್ನೂ

ಬಳಸಿದ್ದರು. ಇದರ ಛಾಯಾಗ್ರಾಹಕರು, ನಿರ್ಮಾಪಕ - ಕಂ - ನಿರ್ದೇಶಕನಿಗೆ ಕಚ್ಚಾ ಫಿಲಂ ಉಳಿಸಲು ಹೋಗಿದ್ದರಿಂದ ಹೀಗಾಯಿತು. ಇದೇ ಚಿತ್ರದಲ್ಲಿ ಛಾಯಾಗ್ರಾಹಕ, ಚಿತ್ರದ ನಿರ್ದೇಶಕ ಚಿತ್ರೀಕರಣಕ್ಕೂ ಮುಂಚೆ ಚಿತ್ರಕಥೆ ಚರ್ಚಿಸಿದ್ದರಿಂದ ಅದಕ್ಕನುಗುಣವಾಗಿ ಒಂದರ ನಂತರ ಬರುವ ಇನ್ನೊಂದು ದೃಶ್ಯ (scene) ಗಳ ಪರಸ್ಪರ ಬೆಳಕು ನೆರಳಿನ ತಾದಾತ್ಮ್ಯ (unison) ಕಾಪಾಡಿಕೊಳ್ಳಲು, ಅದಕ್ಕೆ ಪೂರಕವಾಗಿ ಬೆಳಕನ್ನು ಸಂಯೋಜಿಸಿ ಚಿತ್ರಿಸಿದ್ದರು ಛಾಯಾಗ್ರಾಹಕರು. ಅದರೆ ಸಂಕಲಿತ ಚಿತ್ರ ನೋಡಿದಾಗ, ಎರಡು ದೃಶ್ಯಗಳ ಚಿತ್ರಿಕೆಗಳನ್ನು, ಸಮಾನಾಂತರ ನಿರೂಪಣೆಗೆ 'ಇಂಟರ್‌ಕಟ್' ಮಾಡಿದ್ದನ್ನು ನೋಡಿ ಅಚ್ಚರಿಯಿಂದ ಪ್ರಶ್ನಿಸಿದಾಗ, 'ಇಂಪ್ರೊವೈಸೇಷನ್ ನಿರ್ದೇಶಕನ ಹಕ್ಕು' ಎಂಬ ತರ್ಕವನ್ನು ಮುಂದೊಡ್ಡಿದರು. ಈ ರೀತಿಯ 'ಚಿತ್ರ ಬಂಧ' ನಿಮ್ಮ ಹಕ್ಕು ಹೌದು, ನಾನು ಅದನ್ನು ಗೌರವಿಸುತ್ತೇನೆ, ಅದರ ಮೊದಲೇ ತಿಳಿಸಿದ್ದರೆ, ಅವಕ್ಕನುಗುಣವಾಗಿ ಬೆಳಕನ್ನು ಪ್ರತಿ ಚಿತ್ರಿಕೆಗೆ ಬದಲಾಯಿಸಿ ಸಂಯೋಜಿಸುತ್ತಿದ್ದೆ. ಈಗಿರುವಂತೆ ಅತೀ ಬೆಳಕಿನಿಂದ ಅತೀ ಕತ್ತಲಿನ ಸನ್ನಿವೇಶಕ್ಕೆ ಜಿಗಿದು, ರಸಾಭಾಸ ಮಾಡಬೇಕಾದ ಅಗತ್ಯವಿರಲಿಲ್ಲ" ಎಂಬ ಛಾಯಾಗ್ರಾಹಕರ ವಾದಕ್ಕೆ ಬೆಲೆ ಕೊಡಲಿಲ್ಲ. ಈ ಹಿನ್ನೆಲೆಯಲ್ಲಿ ಈ ಚಿತ್ರಕ್ಕೆ ರಾಷ್ಟ್ರ ಮಟ್ಟದಲ್ಲಿ ಅತ್ಯುತ್ತಮ ಛಾಯಾಗ್ರಾಹಕ ಪ್ರಶಸ್ತಿ ದೊರೆತಾಗ, ಅದನ್ನು ಸ್ವೀಕರಿಸಲು ಅತೀವ ನಾಚಿಕೆ, ಸಂಕೋಚ ಪಟ್ಟುಕೊಂಡಿದ್ದರು ಛಾಯಾಗ್ರಾಹಕ ಎಸ್.ರಾಮಚಂದ್ರ.

ನವ್ಯರ ಚಿತ್ರಗಳಿಗೆ, ಚಿತ್ರೀಕರಣ ಕಾಲದಲ್ಲಿ ಕ್ಯಾಮರಾ ಗೇಟಿನಲ್ಲಿ ತಾಮ್ರದ ಹಾಳೆಯಿಂದ ತಯಾರಿಸಿದ ಮಾಸ್ಕನ್ನು ಕೂಡಿಸಿ ಚಿತ್ರೀಕರಿಸುವ ಪದ್ಧತಿಯನ್ನು ಅನೇಕ ಛಾಯಾಗ್ರಾಹಕರು ಅನುಸರಿಸುತ್ತಿದ್ದರು. ಇದರಿಂದ ಚಿತ್ರದ ಫ್ರೇಮಿನ ನಾಲ್ಕೂ ಅಂಚುಗಳು ಎಲ್ಲ ಚಿತ್ರಮಂದಿರಗಳಲ್ಲಿ ಯಾವುದೇ ಭಾಗ ಕಟ್ಟಾಗದೆ ಪ್ರದರ್ಶಿತವಾಗುತ್ತಿದ್ದವು. ಕೆಲವರಿಗೆ ಅದೇ ಸಿನಿಮಾ ಸ್ಕೋಪ್ ತರಹ ಕಾಣಿಸಿ ಮುದ ನೀಡಿದರೆ, ಇನ್ನು ಕೆಲವರು ಇದನ್ನು ಸಿನಿಮಾ ಸ್ಕೋಪ್‌ಗೆ ಬ್ಲೋ ಅಪ್ ಮಾಡಲು ಅನುಕೂಲ ಎಂದು ಸಮಜಾಯಿಷಿ ನೀಡಿದರು. ಆದರೆ ಯಾರೂ ಸಿನಿಮಾ ಸ್ಕೋಪ್ ಪ್ರಿಂಟ್ ಮಾಡಿಸಲಿಲ್ಲ.

ಈ ರೀತಿ ಮಾಸ್ಕ್ ಪದ್ಧತಿಯಲ್ಲಿ ಚಿತ್ರಿತವಾದ 'ಗೀಜಗನ ಗೂಡು' ಚಿತ್ರದಲ್ಲಿ, ಕ್ಯಾಮರಾ ದೋಷದಿಂದಾಗಿ ಹಲವಾರು ಶಾಟ್‌ಗಳಲ್ಲಿ ಎರಡು ಫ್ರೇಮಿನ ನಡುವೆ ಫ್ರೇಮ್ ಲೈನ್ ಬರದೆ, ಎರಡೂ ಫ್ರೇಮ್ ಒಂದಾಗಿ ಚಿತ್ರಿತವಾಗಿದ್ದವು. ಅಂದರೆ ಒಂದು ಫ್ರೇಮಿನ ಅಕ್ಕಪಕ್ಕದಲ್ಲಿ ೪+೪ ತೂತು (perforation) ಇರಬೇಕಾಗಿತ್ತು; ಎರಡು ಫ್ರೇಮಿಗೆ ೮ ಇರುವುದು ತರ್ಕಬದ್ಧವಾಗಿತ್ತು. ಈ ಫ್ರೇಮ್ ಲೈನಿನ ಮೇಲೆ ಸಂಕಲನಕಾರ ಕತ್ತರಿ ಹಾಕಿ ಜೋಡಿಸುವುದು ಎಲ್ಲರೂ ಅನುಸರಿಸುವ ಪದ್ಧತಿ. ಈಗ ಫ್ರೇಮ್ ಲೈನೇ ಇರದ ಶಾಟಿನಲ್ಲಿ ಎಲ್ಲಿ ಕತ್ತರಿಸಬೇಕು ಎಂಬ ತಾಂತ್ರಿಕ ಪ್ರಶ್ನೆ ಎದುರಾಯಿತು. ಇದನ್ನು ಹಾಗೇ ಬಿಟ್ಟರೆ ಚಿತ್ರ ನೋಡುವಾಗ, ಸರಿಯಾಗಿ ಜೋಡಿಸದೆ ಚಿತ್ರ ಓಡಿಸುವಾಗ, ಚಿತ್ರ ಮಂದಿರದಲ್ಲಿ ಅರ್ಧಂಬರ್ಧ ಫ್ರೇಮ್ ಕಾಣುವಂತೆ ಕಿರಿಕಿರಿ ಉಂಟುಮಾಡುತ್ತಿತ್ತು. ಈ ಚಿತ್ರದ ಸಂಕಲನಕಾರರು (ಭಕ್ತ ವತ್ಸಲ) ಮದರಾಸಿನಲ್ಲಿ ಇದ್ದುದರಿಂದ, ನಾಗಾಭರಣರು ನಿರ್ದೇಶನ ಹಾಗೂ ಸಂಕಲನ ಎರಡೂ ವಿಭಾಗದಲ್ಲಿ ಸಹಾಯಕರಾದುದರಿಂದ, ಅಂತಹ ದೋಷಯುಕ್ತ ಫ್ರೇಮುಗಳನ್ನು ಕತ್ತರಿಸಿಹಾಕಿದರು. ನಂತರ ಚಿತ್ರಣದ ಫಲಿತಾಂಶ ನೋಡಿದಾಗ, ಟ್ರಾಲಿ ಶಾಟ್‌ಗಳಲ್ಲಿ, ಜೂಮ್ ಶಾಟ್‌ಗಳಲ್ಲಿ, ಪ್ಯಾನ್ ಹಾಗೂ ಟಿಲ್ಟ್ ಚಲನೆಗಳಿರುವ ಶಾಟುಗಳಲ್ಲಿ ಇದ್ದಕ್ಕಿದ್ದಂತೆ ಜರ್ಕ್ ಹೊಡೆಯ ತೊಡಗಿತು, ಮತ್ತು ಮಾಸ್ಕ್ ಮಾಡಿದ ಕಾರಣದಿಂದಾಗಿ ಫ್ರೇಮ್ ಲೈನ್ ಎಲ್ಲಿದೆ ಎಂದು ಗುರುತಿಸಲಾಗದೆ ಸಹಾಯಕ ಸಂಕಲನಕಾರರು ತಪ್ಪು ಜಾಗದಲ್ಲಿ ಕತ್ತರಿಸಿದ್ದರಿಂದ, ಅದನ್ನು ಸರಿಪಡಿಸಲು ಮತ್ತೆ ಎರಡು ಫ್ರೇಮ್ ಬಲಿ ನೀಡಲಾಯಿತು. ಒಟ್ಟು ನಾಲ್ಕು ಫ್ರೇಮ್ ಕಳೆದುಕೊಂಡ ಶಾಟ್ ತನ್ನ ಸೌಂದರ್ಯ ಕಳೆದುಕೊಂಡಿತಲ್ಲದೆ ನಂತರ ಕಲಾವಿದ ಡಬ್ಬಿಂಗ್ ಮಾಡುವಾಗ ನಾಲ್ಕು ಫ್ರೇಮಿನ ಸಂಭಾಷಣೆಯನ್ನೂ ಕಳೆದುಕೊಂಡಿದ್ದ.

ಇಂಥದೇ ಸಮಸ್ಯೆ 'ಘಟಶ್ರಾದ್ಧ' ಚಿತ್ರದ ಒಂದು ಶಾಟ್‌ನಲ್ಲಿ ಉದ್ಭವಿಸಿದಾಗ, ಅಸ್ತಿತ್ವದಲ್ಲಿ ಇರಬೇಕಾಗಿದ್ದ, ಆದರೆ ಇಲ್ಲದ ಆ ಒಂದು ತೂತನ್ನು, ಪಾರದರ್ಶಕ ಚಿತ್ರದ (silver positive) ತುಂಡಿನಿಂದ ಒಂದು ತೂತು ಕತ್ತರಿಸಿ, ಪರಿಹಾರ ರೂಪದಲ್ಲಿ (to compensate) ಆ ಜಾಗದಲ್ಲಿ ಅಂಟಿಸಲಾಯಿತು. ಇದು ಸೆಕೆಂಡಿನ ಭಾಗಶಃ ಕ್ಷಣಕಾಲ (fraction of a second) ತೆರೆಯ ಮೇಲೆ ಬರುವುದರಿಂದ ಪ್ರೇಕ್ಷಕನು ಈ ದೋಷ ಗುರ್ತಿಸಲಿಲ್ಲ. ಕ್ಯಾಮರಾ ಚಲನೆ ಹಾಗೂ ಕಲಾವಿದರ ಸಂಭಾಷಣೆಯ ತುಟಿಯ ಚಲನವಲನಕ್ಕೂ ಇದರಿಂದ ಭಂಗ ಬರಲಿಲ್ಲ.

ಸಾಹಿತಿ ನಿರ್ದೇಶಕರೊಬ್ಬರ ಪ್ರಥಮ ಚಿತ್ರದ ಸಂಕಲನಕ್ಕೆ ತರಬೇತಿ ಪಡೆದ ಸಂಕಲನಕಾರರು ಗೊತ್ತಾದಾಗ, ಛಾಯಾಗ್ರಾಹಕರ ನೇರ ವಿಶೇಷ ಸಲಹೆಯೊಂದು ಸಂಕಲನಕಾರನಿಗೆ ಕಾಯ್ದಿತ್ತು. ಚಿತ್ರದಲ್ಲಿ ಅಲ್ಲಲ್ಲಿ ಕಾಣಿಸುವ, ಹೆಚ್ಚಿನ ಬೆಳಕು ಹರಿಯುವುದನ್ನು ತಡೆಯಲು ಬಳಸುವ ಮರದ ತೆಳುವಾದ ಹಲಗೆ (light cutters) ಹಾಗೂ ಟ್ರಾಲಿ ಶಾಟುಗಳಲ್ಲಿ ಕ್ಯಾಮರಾ ಚಲಿಸಲು ಬಳಸುವ ಪೈಪ್‌ನಂತಿರುವ ರೈಲ್ವೆ ಮಾದರಿಯ ಹಳಿ (trolly track) ಕಂಡರೆ, ಆ ಶಾಟನ್ನು ಅಲ್ಲೇ ಕತ್ತರಿಸಲು ವಿನಂತಿಸಿದ್ದರು. ತಂತ್ರಜ್ಞರನ್ನು ನೆಚ್ಚಿ ಈ ಮಾಧ್ಯಮಕ್ಕೆ ಹೊಸಬರು ಬರುತ್ತಾರೆ. ಅಂಥವರನ್ನು ಹೆದರಿಸುವ, ಆಕ್ಷೇಪಕ್ಕೆ ಒಳಗುಮಾಡುವ ಈ ಪರಿ ತಂತ್ರಜ್ಞರಿಗೆ ಸಾಧುವಲ್ಲ.

ವ್ಯಾಪಾರಿ ಚಿತ್ರಗಳು ತಮ್ಮ ಥಳಕು-ಬಳಕು, ಜನಪ್ರಿಯತೆಯಿಂದ ಹಲವರನ್ನು ಆಕರ್ಷಿಸಿದರೆ, ನವ್ಯದ ನಾಮಧೇಯರೂ ಸಹ ಹಲವಾರು ಹೊಸ ಪ್ರತಿಭೆಗಳನ್ನು ಚಿತ್ರರಂಗದತ್ತ ಆಕರ್ಷಿಸುವಲ್ಲಿ ಯಶಸ್ವಿಯಾದರು. ಈ ರೀತಿ ಬಂದವರೂ ಸಹ ಅನೇಕ ಪ್ರಯೋಗಗಳನ್ನು ಮಾಡಿದರು. 'ಫೀನಿಕ್ಸ್' ಎಂಬ ಚಿತ್ರದ ಅನೇಕ ದೃಶ್ಯಗಳ ಚಿತ್ರೀಕರಣದಲ್ಲಿ ಜೂಮ್ ಲೆನ್ಸ್ ಇರುವ ಕ್ಯಾಮರಾವನ್ನು ಕೈಯಲ್ಲಿ ಹಿಡಿದುಕೊಂಡು, ತಾವು ಒಂದು ಜಮಖಾನೆಯ ಮೇಲೆ ಬೋರಲು ಮಲಗಿ, ಸಹಾಯಕರಿಗೆ ಅದನ್ನು ಟ್ರಾಲಿಯಂತೆ ಹಿಂದೆ ಎಳೆಯಲು ಹೇಳಿ ಚಿತ್ರಿಸಿದ ಖ್ಯಾತಿ ಛಾಯಾಗ್ರಾಹಕ ಸುಂದರನಾಥ ಸುವರ್ಣರದು (ನಿರ್ದೇಶನ : ಉಗ್ರ ನರಸಿಂಹ). ಈ ಚಿತ್ರದ ವಿಮರ್ಶೆಯನ್ನು ಇಂಗ್ಲೀಷ್ ಪತ್ರಿಕೆಯ ಹಿರಿಯ ಪತ್ರಕರ್ತರು ಬರೆಯುತ್ತ, 'ಆಡುವ ಮಗುವಿನ ಕೈಯಲ್ಲಿ ಆಟಿಕೆ ಸಾಮಾನು ನೀಡಿದಂತಿದೆ' ಎಂದು ಛಾಯಾಗ್ರಹಣವನ್ನು ವಿಶೇಷವಾಗಿ ಉಲ್ಲೇಖಿಸಿದ್ದರು.

ಹಿರಿಯ ಪತ್ರಕರ್ತದ್ವಯರು ಗೀತಪ್ರಿಯರ ನಿರ್ದೇಶನದಲ್ಲಿ ನಿರ್ಮಿಸಿದ ಚಿತ್ರ 'ಪ್ರೇಮಾಯಣ'. ಈ ಚಿತ್ರ ಸಂಪೂರ್ಣವಾಗಿ ವರ್ಣ ಸಂಸ್ಕರಣ, ವರ್ಣ ಮುದ್ರಣವಾಗಿದ್ದು, ಕಂಠೀರವ ಸ್ಟುಡಿಯೋದಲ್ಲಿ ನೆಲೆಸಿದ್ದ ಮುಂಬಯಿಯ ಶೆಟ್ಟಿ ಬಂಧುಗಳ 'ಕ್ವಾಲಿಟಿ ಲ್ಯಾಬ್'ನಲ್ಲಿ. "ಈ ಸಂಸ್ಥೆ ನೀಡಿದ ಸೇವೆಯ ಗುಣಮಟ್ಟ ಸಮಾಧಾನಕರವಾಗಿಲ್ಲ. ಚಿತ್ರದ ವರ್ಣ ಪ್ರತಿ ತುಂಬಾ ಕೆಟ್ಟದಾಗಿದೆ" ಎಂದು ಸಬ್ಸಿಡಿಗೆ ಸಂಬಂಧಪಟ್ಟ ಸರ್ಕಾರೀ ಅಧಿಕಾರಿಯ ಬಳಿ ನಿರ್ಮಾಪಕರು ದೂರಿದಾಗ ಅವರು ನೇರವಾಗಿ ಕೇಳಿದ ಪ್ರಶ್ನೆ - 'ನಿಮ್ಮ ಚಿತ್ರಕ್ಕೆ ಯಾವ ಕಲರ್ ಫಿಲಂ ಬಳಸಿದ್ದೀರಿ' ಎಂದು. ಕಾರಣ, ಅದು ಆಗ ಮಾರುಕಟ್ಟೆಯಲ್ಲಿ ಲಭ್ಯವಿರುವ ಎಲ್ಲ ಬಗೆಯ ಕಚ್ಚಾಫಿಲಂ (ಈಸ್ಟಮನ್, ಫ್ಯೂಜಿ, ಆಗ್ಫಾ, ಗೇವಾ, ಅರ್ವೋ) ಬಳಸಿ ಚಿತ್ರಿಸಲಾದ ಏಕೈಕ ಕನ್ನಡ ಚಿತ್ರ.

ಕಾಶೀನಾಥ್ ಅವರ ಆರಂಭದ ಚಿತ್ರಗಳು ತಯಾರಾದದ್ದು 'ಆರ್ವೋ' ವರ್ಣದಲ್ಲಿ. ಇವರ ಇತ್ತೀಚಿನ 'ಹೆಂಡ್ತಿ ಎಂದರೆ ಹೀಗಿರಬೇಕು', 'ಆರ್ವೋ' ವರ್ಣ ಚಿತ್ರದ ಛಾಯಾಗ್ರಾಹಕರು ಉಮಾನಾಥ್. ಸಂಪೂರ್ಣ ಚಿತ್ರ ಅಲ್ಪ ಮಸುಕಾಗಿರುವುದು (soft focus) ಹಾಗೂ ಹೊರಾಂಗಣದಲ್ಲಿ ಮನೆ, ಅಂಗಡಿ ದೃಶ್ಯದಲ್ಲಿನ ಮುಂದಿನ ಭಾಗ ಅತೀ ಕತ್ತಲುಮಯವಾಗಿ ಕಂಡರೆ, ಹಿನ್ನೆಲೆ ರಣಬಿಸಿಲಿನಿಂದ ಉರಿಯುತ್ತಿರುವಂತಿದೆ. ಬಹುಶಃ ಕನ್ನಡದಲ್ಲಿ 'ಆರ್ವೋ' ವರ್ಣದಲ್ಲಿ ತಯಾರಾದ ಕೊನೆಯ ಚಿತ್ರ ಇದು. ಕಾರಣವಿಷ್ಟೇ - ಇದೇ ಸಮಯಕ್ಕೆ ಸರಿಯಾಗಿ ಜರ್ಮನಿಯ 'ಆರ್ವೋ' ಕಂಪೆನಿ ವರ್ಣ ನೆಗೆಟಿವ್ ತಯಾರಿಕೆಯನ್ನು ಶಾಶ್ವತವಾಗಿ ಸ್ಥಗಿತಗೊಳಿಸಿತು.

ಎಟುಕದ ತಂತ್ರಜ್ಞಾನ

ನವ್ಯ ಪಂಥದ ಚಿತ್ರಗಳ ಹೆಸರೆತ್ತಿದೊಡನೆ ನೆನಪಾಗುವ ಒಂದು ಮಹತ್ವದ ಅಂಶ (16 m.m) ಹದಿನಾರು ಮಿಲಿ ಮೀಟರ್‌ನಲ್ಲಿ ಚಿತ್ರ ತಯಾರಿಸುವ ಪದ್ಧತಿ. ವಿದೇಶಗಳಲ್ಲಿ ಚಾಲ್ತಿಯಿದ್ದ ಹಾಗೂ ಯಶಸ್ವಿಯಾದ ಈ ವಿಧಾನ, ಭಾರತದಲ್ಲಿ ಚಿಗುರದೇ ಇರಲು ಕಾರಣಗಳು ಹಲವು.

೧೬ ಎಂ.ಎಂ.ನಲ್ಲಿ ಚಿತ್ರ ತಯಾರಿಸಿದಾಗ ಉಳಿತಾಯವಾಗುವುದು ಕೇವಲ ೩೫ ಎಂ.ಎಂ. ಮತ್ತು ೧೬ ಎಂ.ಎಂ.ನ ಪಿಕ್ಚರ್ ನೆಗೆಟಿವ್‌ನ ಬೆಲೆಯಲ್ಲಿ ಇರುವ ಅಂತರದ ಮೊತ್ತ ಮಾತ್ರ. ಚಿತ್ರ ತಯಾರಿಕೆಯ ಉಳಿದ ಅಂಶಗಳಾದ ಪ್ರಸಾಧನ, ವಸ್ತ್ರ ವಿನ್ಯಾಸ, ಊಟ-ತಿಂಡಿ, ವಾಹನ, ವಸತಿ ಎಲ್ಲ ಬಾಬ್ತುಗಳ ವೆಚ್ಚದಲ್ಲಿ ಯಾವ ಉಳಿತಾಯವೂ

ಇರುವುದಿಲ್ಲ ಎಂಬುದು ಒಂದು ತರ್ಕ. ಏನೇ ಉಳಿತಾಯದ ಮೊತ್ತವಿದ್ದರು, ಚಿತ್ರವನ್ನು (blow up) ವಿಕಸಿತ ರೂಪದಲ್ಲಿ ಪ್ರಿಂಟ್ ಮಾಡುವಲ್ಲಿ ಹಾಗೂ ನೆಗೆಟಿವ್‌ನ (key number) ಅಂಚಿಗಿರುವ ಅಡಿ ಸಂಖ್ಯೆಯನ್ನು ಪಾಸಿಟಿವ್ ಅಂಚಿನ ಮೇಲೆ ಬರೆಸುವ ವೆಚ್ಚದಲ್ಲಿ ಕರಗುವುದೆಂಬುದು ಇನ್ನೊಂದು ವಾದ. ೧೬ ಎಂ.ಎಂ. ಎಂದೊಡನೆ ಅತೀ ಕಡಿಮೆ ಬಂಡವಾಳದಲ್ಲಿ ಚಿತ್ರ ತಯಾರಾಗಿದೆ ಎಂಬ ತಪ್ಪು ಗ್ರಹಿಕೆ ಹಂಚಿಕೆದಾರರಿಗೆ, ಹೀಗಾಗಿ ಕೊಳ್ಳಲು ಅನಾಸಕ್ತಿ.

ಬೇರೆ ದೇಶಗಳಲ್ಲಿ ೧೬ ಎಂ.ಎಂ.ನಲ್ಲಿ ಚಿತ್ರೀಕರಿಸಿದರೆ ಅದೇ (format) ಸ್ವರೂಪದಲ್ಲಿ ಮಾತಿನ ಧ್ವನಿ ಮುದ್ರಣ, ಸಂಕಲನ ಹಾಗೂ ಸಾರ್ವಜನಿಕ ಪ್ರದರ್ಶನ ಮಾಡಲು ಸೌಲಭ್ಯಗಳು ಇವೆ. ನಮ್ಮಲ್ಲಿ ಇವೆಲ್ಲವುಗಳ ಕೊರತೆಯಿದೆ. ಒಂದೇ ಸೂರಿನಡಿ ಈ ಅನುಕೂಲಗಳು ಲಭ್ಯವಿಲ್ಲದೇ ಇರುವುದರಿಂದ ನಿರ್ಮಾಣ ಹಂತದಲ್ಲಿ ಪರದಾಟ, ಬಿಡುಗಡೆ ಸಮಸ್ಯೆಗೆ ಹೆದರಿ ಈ ಪದ್ಧತಿಯಿಂದ ನಿರ್ಮಾಪಕರು ದೂರ ಉಳಿದರು.

ಛಾಯಾಗ್ರಹಣ ಮತ್ತು ನಿರ್ದೇಶನ ಮಾಧ್ಯಮ ಬಲ್ಲವರಾಗಿದ್ದರೆ ಮಾತ್ರ, ೧೬ ಎಂ.ಎಂ.ನ ಇತಿಮಿತಿ ಅರಿತು ಈ ದಿಕ್ಕಿನಲ್ಲಿ ಹೆಜ್ಜೆ ಇಡುವರು. ಉದಾ : ೧೬ ಎಂ.ಎಂ.ನಲ್ಲಿ ಸಾಧ್ಯವಾದಷ್ಟೂ ಮಧ್ಯಮ ಹಾಗೂ ಸಮೀಪ ಚಿತ್ರಿಕೆಗಳನ್ನು ಮಾತ್ರ ಚಿತ್ರಿಸಬೇಕು. ದೂರ ಚಿತ್ರಿಕೆಯಲ್ಲಿ ಚಿತ್ರಿಸಿದ ದೃಶ್ಯ, ೩೫ ಎಂ.ಎಂ.ಗೆ ವಿಕಸಿತಗೊಳಿಸಿದಾಗ ವಿಪರೀತ ಚುಕ್ಕೆ (grains) ಹೊಂದಿರುತ್ತದೆ ಹಾಗೂ ಚಿತ್ರ ಸ್ವಲ್ಪ ಮಸುಕಾಗಿ (soft focus) ಕಾಣಿಸುತ್ತದೆ. ರಾತ್ರಿ ಸನ್ನಿವೇಶಗಳಲ್ಲಿ ಈ ಚುಕ್ಕೆಗಳು ಕಂಡುಬರುವುದಿಲ್ಲ. ಆದರೆ ಹಗಲಿನ ದೃಶ್ಯಗಳಲ್ಲಿ ಇವು ಎದ್ದು ಕಾಣುತ್ತವೆ. ೧೬ ಎಂ.ಎಂ.ನಿಂದ ೩೫ ಎಂ.ಎಂ.ಗೆ ಬ್ಲೋ ಅಪ್ ಮಾಡಿದಾಗ, ಅಂತಿಮ ಫ್ರೇಮ್‌ನಲ್ಲಿ ೩೫ ಎಂ.ಎಂ.ನಲ್ಲಿ ಮೇಲೆ ಕೆಳಗೆ ಹಾಗೂ ಎಡ ಬಲ ಕಟ್ಟಾಗುವ ದೃಶ್ಯದ ಅನುಪಾತ (aspect ratio) ಛಾಯಾಗ್ರಾಹಕನಿಗೆ ಗೊತ್ತಿರಬೇಕು. ಇಲ್ಲದಿದ್ದರೆ, ಕಲಾವಿದನ ತಲೆ, ಕಿವಿ ಕಾಣದಂತೆ ಮಾಯವಾಗುವುದು.

೧೬ ಎಂ.ಎಂ. ಮಾಧ್ಯಮದ ಮೇಲಿನ ಪ್ರೇಮಕ್ಕಿಂತಲೂ ಹೆಚ್ಚಾಗಿ ಈ ಸ್ವರೂಪದಲ್ಲಿ ಚಿತ್ರ ಮಾಡಿದರೆ, ಉತ್ತಮ ಚಿತ್ರಗಳಿಗೆ ಧನ ಸಹಾಯ - ಸಾಲ ನೀಡುವ 'ರಾಷ್ಟ್ರೀಯ ಚಲನ ಚಿತ್ರ ಅಭಿವೃದ್ಧಿ ನಿಗಮ' (N.F.D.C), ೩೫ ಎಂ.ಎಂ. ಚಿತ್ರಗಳಿಗೆ ಸಾಲ ನೀಡುವಾಗ ಕೇಳುವಂತೆ, ಈ ಚಿತ್ರಗಳಿಗೆ ಯಾವುದೇ ಜಮೀನು, ಆಸ್ತಿ ಸ್ವತ್ತಿನ ಜಾಮೀನನ್ನು (colataral security) ಕೇಳುವುದಿಲ್ಲ. ಹೀಗಾಗಿ ಆರ್ಥಿಕ ಸುಭದ್ರತೆಯ ಹಿನ್ನೆಲೆ ಇಲ್ಲದ ಅನೇಕ ನಿರ್ದೇಶಕರು ಬೇರೆ ದಾರಿ ಕಾಣದೆ ೧೬ ಎಂ.ಎಂ.ಗೆ ಶರಣು ಹೋಗಿದ್ದಾರೆ. ಈ ಮಾಧ್ಯಮದ ಇತಿಮಿತಿ ಅರಿತು ಈ ಅವಕಾಶ ಸದುಪಯೋಗ ಮಾಡಿಕೊಂಡು, ಕನ್ನಡದಲ್ಲಿ ತಯಾರಾದ ಚಿತ್ರಗಳಲ್ಲಿ ಎಂ.ಎಸ್. ಸತ್ಯುರವರ 'ಬರ' (ಹಿಂದಿಯಲ್ಲಿ 'ಸೂಖಾ', ಛಾಯಾಗ್ರಹಣ : ಈಷಾನ್ ಆರ್ಯ), ಪ್ರೇಮಾಕಾರಂತರ 'ಫಣಿಯಮ್ಮ' (ಛಾಯಾಗ್ರಹಣ : ಮಧು ಅಂಬಟ್), ಗಿರೀಶ್ ಕಾಸರವಳ್ಳಿ ಅವರ 'ತಬರನ ಕಥೆ' ಹಾಗೂ 'ಬಣ್ಣದ ವೇಷ' (ಛಾಯಾಗ್ರಹಣ : ಭಾಸ್ಕರ್) ಮುಖ್ಯವಾದವು. ಚಿತ್ರ ಮಾಡಲೇಬೇಕೆಂಬ ಅವಮ್ಯ ಬಯಕೆ ತೀರಿಸಿಕೊಳ್ಳಲು ಖಾಸಗೀ ನಿರ್ಮಾಪಕರಿಂದ ತಯಾರಾದ ೧೬ ಎಂ.ಎಂ. ಚಿತ್ರಗಳಲ್ಲಿ ಇಂದಿಗೂ ಬಿಡುಗಡೆಯಾಗದ ಶ್ರೀಧರ ಕ್ಷೀರಸಾಗರರ 'ಕನಕಾಂಬರ', ಯೋಗಾನರಸಿಂಹರ 'ಮಧುಮಾಸ', ಪಟ್ಟಾಭಿ ರಾಮರಡ್ಡಿಯವರ 'ಶೃಂಗಾರಮಾಸ', 'ಚಂಡಮಾರುತ', ಚಂದ್ರಶೇಖರ ಕಂಬಾರರು ದೂರದರ್ಶನಕ್ಕೆ ನಿರ್ಮಿಸಿದ 'ಜಿ.ಕೆ.ಮಾಸ್ತರರ ಪ್ರಣಯ ಪ್ರಸಂಗ' ಹಾಗೂ ಸಿ.ಚಂದ್ರಶೇಖರರ 'ಹುಲಿ ಬಂತು ಹುಲಿ', ಕೆಲವು ಶೃಂಗಾರರಸದ ಅರೆ ಕಾಮದ ಚಿತ್ರಗಳು. ಆದರೆ ಕೆ.ವಿ. ಜಯರಾಮ್‌ರ 'ರಂಜಿತಾ' ತೆರೆಗೂ ಬಂದು ಜನಪ್ರಿಯವಾಯಿತು. ಇದರ ಛಾಯಾಗ್ರಾಹಕರು ಶ್ರೀರಂಗ.

ಪುಣೆಯ ಫಿಲಂ ಇನ್‌ಸ್ಟಿಟ್ಯೂಟ್‌ನಿಂದ ನಿರ್ದೇಶನ ಪದವಿ ಗಳಿಸಿದ ಗಿರೀಶ್ ಕಾಸರವಳ್ಳಿ ಅವರ ಮೊದಲನೆಯ ಕಥಾ ಚಿತ್ರ 'ಘಟಶ್ರಾದ್ಧ'ದಲ್ಲಿ ಬದುಕಿಗೆ ತೀರ ಹತ್ತಿರವಾದ ಪರಿಸರ ಮತ್ತು ಕಥಾ ವಸ್ತುವನ್ನು ಮಾಧ್ಯಮಕ್ಕೆ ಸೂಕ್ತವಾಗಿ ಅಳವಡಿಸಿ ಪ್ರಸ್ತುತಪಡಿಸಿರುವುದು, ಚಿತ್ರದ ಪ್ರತಿ ಫ್ರೇಮಿನಲ್ಲೂ ಇಣುಕುತ್ತಿದೆ.

ಅವರದೇ ಆದ ಶೈಲಿಗೆ ಅನುಗುಣವಾಗಿ, ಎರಡು ಚಿತ್ರಿಕೆಗಳ ಕ್ಯಾಮರಾ ಚಲನೆ, ತೆರೆಯ ಒಂದೇ ದಿಕ್ಕಿನತ್ತ (screen direction) ರೂಪಿಸಿ, ಚಿತ್ರಿಕೆಯ ಅಂತ್ಯ ಮತ್ತು ಅದರ ನಂತರದ ಚಿತ್ರಿಕೆಯ ಆರಂಭದಲ್ಲಿ ಬರುವ ಯಾವುದಾದರೂ ಸ್ಥಿರ ವಸ್ತು (ಕಂಬ, ಗೋಡೆ, ಬಾಗಿಲು, ಜೇಲ್) ಅಥವಾ ಚಲಿಸುವ ವಸ್ತು (ಬಸ್ಸು, ಪ್ರಾಣಿ) ಅಥವಾ ಕಲಾವಿದರ ಕ್ರಿಯೆ (ಪಂಚೆ ಕೊಡವುದು, ಬಾಗಿಲು ಮುಚ್ಚುವುದು) ಇಂಥವುಗಳನ್ನು ಬೆಳಕು, ನೆರಳು ಆಧರಿಸಿ, ಧ್ವನಿ ವಿಶೇಷದ ನೆರವಿನಿಂದ ಎರಡನ್ನೂ ಜಕ್ಸ್‌ಟಾಪೋಸ್ (juxtapose) ಪದ್ಧತಿಯಲ್ಲಿ ಸಂಕಲಿಸುವ ಶೈಲಿ ಚಿತ್ರದುದ್ದಕ್ಕೂ ಕಾಣಬಹುದು.

ಯಾವ ಛಾಯಾಗ್ರಾಹಕನೂ ತಾನು ರೂಪಿಸಿರುವ ಕ್ಯಾಮರಾ ಚಲನೆ (camera movement)ಯನ್ನು ಅದು ಪೂರ್ತಿಯಾಗಿ ನಿಲ್ಲುವ ತನಕ, ಸಂಕಲನಕಾರ ಕತ್ತರಿಸಿ ಬೇರೆ ಶಾಟ್‌ಗೆ ಮುನ್ನಡೆಯುವುದನ್ನು ಇಚ್ಛಿಸುವುದಿಲ್ಲ. ಹೀಗಾಗಿ ಛಾಯಾಗ್ರಹಣದ ತತ್ವದಂತೆ 'ಘಟ ಶ್ರಾದ್ಧ' ಸಂಕಲಿಸಿದಾಗ ಕೈಗೆ ದೊರೆತ ಚಿತ್ರದ ಉದ್ದ ೨೨ ಸಾವಿರ ಅಡಿಗಳು, ಅಂದರೆ ೨೨ ರೀಲು. ಆದರೆ ನಿರ್ದೇಶಕರು ಮೊದಲೇ ಕಲ್ಪಿಸಿಕೊಂಡ, ರೂಪಿಸಿಕೊಂಡ ಶೈಲಿಗೆ ಅನುಗುಣವಾಗಿ - ಛಾಯಾಗ್ರಾಹಕ ವಿರೋಧಿಸಿದರೂ - ನಿರ್ದೇಶಕರ ಅಗತ್ಯದ ಮೇರೆಗೆ ಸಂಕಲನ ಮಾಡಿದಾಗ ಚಿತ್ರದ ಉದ್ದ ದೊರೆತದ್ದು ಹದಿನಾರು ಸಾವಿರ ಅಡಿಗಳು. ಆಗಲೇ ಚಿತ್ರಕ್ಕೊಂದು ಗತಿ (tempo), ಲಯ (pace), ತಾಳ (rhythem) ದೊರೆತಿದ್ದು.

ಈ ಚಿತ್ರವು ಸೆನ್ಸಾರಿಗೆ ಹೋದಾಗ, ಚಿತ್ರದಲ್ಲಿ ಯಮುನಕ್ಕ ಪ್ರಭುವಿನ ಮನೆಯಲ್ಲಿ ಅನುಭವಿಸುವ ಗರ್ಭಪಾತದ ನೋವು ಹಾಗೂ ಹೊರಗೆ ದಲಿತರು ಕುಡಿದು ಬೆಂಕಿಯ ಮುಂದೆ ಕುಣಿಯುವ ದೃಶ್ಯದ ಕೆಲ ಅಂಶಕ್ಕೆ ಅಧಿಕಾರಿಗಳು ಆಕ್ಷೇಪಿಸಿದರು. ಚಿತ್ರದಲ್ಲಿ ಈ ಆವರ್ತಿತ (stoccatto rhythem) ಲಯ ಉಳಿಸಿಕೊಳ್ಳಲು, ನಿರ್ದೇಶಕರು ತಾವಾಗಿಯೇ ಇನ್ನೊಂದಿಷ್ಟು ಚಿತ್ರಿಕೆಯನ್ನು ಕತ್ತರಿಸಿ, ಆ ದೃಶ್ಯದಲ್ಲಿ ಉಳಿದ ಎಲ್ಲ ಚಿತ್ರಿಕೆಗಳಿಗೆ ಒಂದು ಸಮಾನ ಸ್ಥಾನಮಾನ (proper placement) ಒದಗಿಸಿದ್ದು ಒಂದು ವಿಶೇಷ.

ಕೆಲವೆಡೆ ಸೂಕ್ಷ್ಮಾತಿಸೂಕ್ಷ್ಮ ವಿವರಗಳನ್ನು ಶ್ರಮಪಟ್ಟು ಚಿತ್ರೀಕರಿಸಿದ್ದರೂ ಚಿತ್ರದ ಒಟ್ಟು ಓಟ ಹಾಗೂ ಪರಿಣಾಮಕ್ಕೆ ಅಡ್ಡಿ ಉಂಟುಮಾಡುವ ಶಂಕೆ ಬಂದೊಡನೆ ನಿರ್ದಯವಾಗಿ ಕತ್ತರಿಸುವ ನಿರ್ಣಯ ಕೈಗೊಂಡಿದ್ದು, ಅವರು ಮಾಧ್ಯಮದ ಮೇಲೆ ಸಾಧಿಸಿರುವ ಹಿಡಿತಕ್ಕೆ ಸಾಕ್ಷಿ. ಇಂಥ ಅಥವಾ ಇದಕ್ಕಿಂತ ಹೆಚ್ಚಿನ ಪರಿಣತಿ ಇರುವ, ಸಮಸ್ಯೆಗಳನ್ನು ನಿವಾರಿಸಿಕೊಂಡ ಅನೇಕ ಚಿತ್ರಗಳಿವೆ ಎಂಬ ಅರಿವಿದೆ. ಅವೆಲ್ಲವನ್ನೂ ಉದಹರಿಸಲು ಖಚಿತ ಮಾಹಿತಿ ಇಲ್ಲದ್ದರಿಂದ ಸಾಧ್ಯವಾಗುತ್ತಿಲ್ಲ.

ಸಿನಿಮಾ, ನಿರ್ದೇಶಕರ ಮಾಧ್ಯಮ ಹಾಗೂ ಸಿನಿಮಾ ಒಂದು ದೃಶ್ಯ ಮಾಧ್ಯಮ. ಈ ಎರಡೂ ತತ್ವವನ್ನು ಸಮನ್ವಯಗೊಳಿಸಿಕೊಂಡಿದೆ. ಇತ್ತೀಚೆಗೆ ವಿಶ್ವವು ಚಲನಚಿತ್ರ ಇತಿಹಾಸದ ನೂರನೇ ವರ್ಷದ ಸಂಭ್ರಮವನ್ನು ಫ್ರಾನ್ಸ್‌ನಲ್ಲಿ ಆಚರಿಸಿದಾಗ, ಪ್ರತಿಯೊಂದು ದೇಶದಿಂದ ಒಂದು ಚಿತ್ರವನ್ನು ಪ್ರಾತಿನಿಧಿಕವಾಗಿ ತಾನೇ ಆಯ್ಕೆ ಮಾಡಿತು. ಈ ಸಂದರ್ಭಕ್ಕಾಗಿ ದಕ್ಷಿಣ ಭಾರತದಿಂದ ಏಕೈಕ ಪ್ರತಿನಿಧಿ ಚಿತ್ರವಾಗಿ 'ಘಟಶ್ರಾದ್ಧ' ಚಿತ್ರ ಆಯ್ಕೆಯಾಗಿದೆಯೆಂದರೆ ಹಲವು ದಶಕಗಳ ಇತಿಹಾಸ ಹೊಂದಿದ ಕನ್ನಡ ಚಲನಚಿತ್ರರಂಗ ನಿಜವಾಗಿಯೂ ಹೆಮ್ಮೆ ಪಡುತ್ತದೆ.

ವಿವಿಧ ಗಾತ್ರದ (format) ಚಿತ್ರಗಳು

ಕನ್ನಡದಲ್ಲಿ ಕಡಿಮೆ ಬಂಡವಾಳದ ಕಲಾತ್ಮಕ ಚಿತ್ರಗಳನ್ನು ನಿರ್ಮಿಸಲು ನಿರ್ಮಾಪಕರು ಕಡಿಮೆ ಅಗಲದ (small format) ಚಿತ್ರಕ್ಕೆ ಮೊರೆ ಹೋದರೆ, ಹಾಲಿವುಡ್ ಟಿ.ವಿ. ಕಿರುತೆರೆಯ ಸ್ಪರ್ಧೆ ಎದುರಿಸಲು ಒಂದರ ನಂತರ ಇನ್ನೊಂದು ದೊಡ್ಡ ಗಾತ್ರದ (bigger format) ದೊಡ್ಡ ತೆರೆಯ ಚಿತ್ರಗಳತ್ತ ದಾಪುಗಾಲು ಇಡುತ್ತಾ ಹೊರಟಿತು.

ಈ ಹಿನ್ನೆಲೆಯಲ್ಲಿ ಮೂಕಿ ಚಿತ್ರಗಳ ಕಾಲದಿಂದಲೂ ಚಿತ್ರದ ಗಾತ್ರ ಹಾಗೂ ಪರದೆಯ ಗಾತ್ರ ಕುರಿತು ಆದ ಪ್ರಯೋಗಗಳು ಹಾಗು ಬೆಳವಣಿಗೆಯತ್ತ ಒಂದು ನೋಟ.

ಎಡಿಸನ್ ಕಂಡುಹಿಡಿದ ಮೂವಿಕ್ಯಾಮರಾ ಜನಪ್ರಿಯವಾದಾಗ, ಅದರಲ್ಲಿ ಬಳಸಲಾಗುತ್ತಿದ್ದ ೩೫ ಎಂ.ಎಂ. ಫಿಲಂನ ಫ್ರೇಮಿನ ಗಾತ್ರ, ಅಗಲ ೧ ಇಂಚು, ಹಾಗೂ ೩/೪ (ಮುಕ್ಕಾಲು) ಇಂಚು ಎತ್ತರವಿತ್ತು. ಅಂದರೆ ೨೪ ಎಂ.ಎಂ×೧೮ ಎಂ.ಎಂ ಎನ್ನಬಹುದು. ಇದು ಅನೇಕ ವರ್ಷಗಳ ಕಾಲ ಮೂಕಿ ಚಿತ್ರಗಳಲ್ಲಿ ಬಳಕೆಯಲ್ಲಿತ್ತು.

೧೯೨೯ರಲ್ಲಿ ಸಿನಿಮಾ ಚಿತ್ರದ ಮೇಲೆ ಆಪ್ಟಿಕಲ್(optical) ಧ್ವನಿಮುದ್ರಣ ಮಾಡುವ ಸಾಧ್ಯತೆ ಸಂಶೋಧನೆಯಾದಾಗ, ಫ್ರೇಮಿನ ಅಗಲವನ್ನು ಕಡಿಮೆ ಮಾಡಿ, ಅಲ್ಲಿ ಧ್ವನಿಯ ಟ್ರ್ಯಾಕಿಗೆ ಸ್ಥಳಾವಕಾಶ ಕಲ್ಪಿಸಲಾಯಿತು. ಆದರೆ ಫ್ರೇಮಿನ ೪:೩ ಅನುಪಾತವನ್ನು, ಎತ್ತರ ಕಡಿಮೆ ಮಾಡುವುದರ ಮೂಲಕ



(ಚಿತ್ರ ೧) ವಿವಿಧ ತಂತ್ರಜ್ಞಾನದ ನೆಗೆಟಿವ್‌ಗಳ ಫ್ರೇಮ್‌ನ ಸ್ವರೂಪ
೧) ಮೂವಿಟೋನ್ (೧.೩೭ : ೧), ೨) ವೈಡ್ ಸ್ಕ್ರೀನ್ (೧.೮೫ : ೧), ೩) ಸೂಪರ್ ಸ್ಕೋಪ್ (೨.೩೫:೧), ೪) ವಿಸ್ಟಾ ವಿಷನ್ (೧.೭೫:೧), ೫) ಟೆಕ್ನಿರಮಾ (೨.೩೫:೧), ೬) ಟಾಡ್ ಎಓ ೬೫ ಎಂ.ಎಂ., ೭) ಆರಂಭದ ಮೂರು ಫಿಲ್ಮ್‌ನ ಸಿನೆರಮಾ ಮತ್ತು ಸಿನಿಮಿರಕಲ್ (೨.೧ : ೧), ೮) ಸಿನಿಮಾ ಸ್ಕೋಪ್ ಮತ್ತು ಅದಕ್ಕೆ ಸಮನಾದ ತಂತ್ರಜ್ಞಾನ (೨.೩೫ : ೧), ೯) ಟೆಕ್ನಿ ಸ್ಕೋಪ್ (೨.೩೫ : ೧)

ಉಳಿಸಿಕೊಳ್ಳಲಾಯಿತು. ಇದನ್ನು 'ಮೂವಿಟೋನ್ ಫ್ರೇಮ್' ಎಂದು ಕರೆಯುವುದು ವಾಡಿಕೆ. (ನೋಡಿ : ಚಿತ್ರ ೧)

ಪದ್ಧತಿಯಲ್ಲಿ ೦.೮೨೫ ಇಂಚುX೦.೬೦೦ ಇಂಚು (ಅಂದರೆ ೨೦.೯೬ ಎಂ.ಎಂX೧೫.೨೫ ಎಂ.ಎಂ) ಫ್ರೇಮಿನ ಚಿತ್ರ ವಿಸ್ತೀರ್ಣವಾಯಿತು. ಹಾಗೂ ಇದರ ಅನುಪಾತ ೧.೩೭:೧ ಆಯಿತು. ಇದು ೨೫ ವರ್ಷಗಳ ಕಾಲ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಮಾನ್ಯತೆ ಪಡೆದ ವ್ಯಾಪಾರಿ ಮನೋರಂಜನೆಯ ಸಾಧನವಾಯಿತು.

ಇದರ ನಂತರದ ಪ್ರಯತ್ನವೇ "ವೈಡ್ ಸ್ಕ್ರೀನ್' (wide screen). ಈ ಪದವು ಅನೇಕ ಬಗೆಯ ಫಿಲಂನ್ನು ಸಾಧನವಾಗಿ ಸೂಚಿಸುತ್ತದೆ. ಇದರಲ್ಲಿ ಆ್ಯಸ್ಪೆಕ್ಟ್ ರೇಷಿಯೋ ಅಂದರೆ ಅಗಲ ಮತ್ತು ಎತ್ತರದ ಅನುಪಾತವು ಸಾಮಾನ್ಯವಾಗಿ ಬಳಸುವ ೪:೩ಗಿಂತ ಹೆಚ್ಚಿಗೆ ಇರುತ್ತದೆ. ೧೯೫೨ರಿಂದ ಇಂತಹ 'ವೈಡ್ ಸ್ಕ್ರೀನ್'ಗೆ ಸಂಬಂಧಿಸಿದ ಹಲವಾರು ಪ್ರಯೋಗಗಳನ್ನು ಕೈಗೊಳ್ಳಲಾಯಿತು. ಹೀಗಾಗಿ 'ವೈಡ್ ಸ್ಕ್ರೀನ್' ಎಂಬ ಪದದ ಬಳಕೆ ಚಿತ್ರದ ಫ್ರೇಮಿನ ಅನುಪಾತ ಸೂಚಿಸುತ್ತದೆಯೇ ಹೊರತು, ಅದು ಪರದೆಯ ಮೇಲೆ ಮೂಡುವ ಚಿತ್ರದ ಗಾತ್ರವನ್ನಲ್ಲ. ೧೯೩೭ರಲ್ಲೇ, ಪ್ಯಾರಿಸ್ ಪ್ರದರ್ಶನದಲ್ಲಿ ಪ್ರಯೋಗ ಮಾಡಿ, ಯಶಸ್ವಿಯಾಗಿ ಪ್ರದರ್ಶಿಸಲ್ಪಟ್ಟಿದ್ದರೂ ೧೯೫೩ರಲ್ಲಿ 'ಅನಾಮಾರ್ಫಿಕ್' (anamorphic)ಲೆನ್ಸ್ ಬಳಸಿ, ೨.೫೫:೧ ಅನುಪಾತದ ಚಿತ್ರದ ಜೊತೆಗೆ, ನಾಲ್ಕು 'ಸ್ಟಿರೀಯೋಫೋನಿಕ್' ಧ್ವನಿ ಟ್ರ್ಯಾಕುಗಳು ಮರು ನುಡಿಸಲು (replay) ಅನುಕೂಲವಾಗುವಂತೆ ರೂಪಿತವಾದ ತಂತ್ರವೇ ಸಿನಿಮಾ ಸ್ಕೋಪ್ (cinema scope). 'ಸಿನಿಮಾ ಸ್ಕೋಪ್' ಎಂಬ ತಂತ್ರ ಜನಪ್ರಿಯವಾಗಿ ಜಾರಿಗೆ ತಂದ ಕಂಪನಿಯ 'ವ್ಯಾಪಾರಿ ನಾಮ'ವಾದರೂ ವ್ಯಾಪಾರಿ ಚಿತ್ರಗಳ ನಿರ್ಮಾಣದಲ್ಲಿ, ಅದೇ ಒಂದು ಶಾಶ್ವತ ಹೆಸರೆಂಬಂತೆ ಉಳಿದುಕೊಂಡಿತು. ಈ ಪದ್ಧತಿಯಲ್ಲಿ ೧೯೫೩ರಲ್ಲಿ ನಿರ್ಮಾಣವಾದ ಮೊದಲ ಚಿತ್ರ 'ದ ರೋಬ್' (the robe). ಭಾರತದಲ್ಲಿ ಈ ಪದ್ಧತಿಯಲ್ಲಿ ತಯಾರಾಗಿ, ೧೯೫೯ರಲ್ಲಿ ಬಿಡುಗಡೆಯಾದ ಪ್ರಥಮ ಕಪ್ಪು-ಬಿಳುಪು ಚಿತ್ರ ಗುರುದತ್ ನಟಿಸಿದ 'ಕಾಗಜ್ ಕೆ ಫೂಲ್' ಹಾಗು ಇದರ ಛಾಯಾಗ್ರಾಹಕರು ಕನ್ನಡಿಗರಾದ ವಿ.ಕೆ. ಮೂರ್ತಿ. ಈ ರೀತಿ ಕನ್ನಡದಲ್ಲಿ ತಯಾರಾದ ಪ್ರಥಮ ಚಿತ್ರ 'ಸೊಸೆ ತಂದ ಸೌಭಾಗ್ಯ'. ಇದರ ನಿರ್ದೇಶಕರು : ಎ.ವಿ.ಶೇಷಗಿರಿರಾವ್, ಛಾಯಾಗ್ರಾಹಕರು: ಅಣ್ಣಯ್ಯ-ಮಲ್ಲಿಕ್.

ಕನ್ನಡದಲ್ಲಿ ಜೋಸೈಮನ್ ನಿರ್ದೇಶನದ 'ಒಂದು ಪ್ರೇಮದ ಕಥೆ' ಕಪ್ಪು ಬಿಳುಪು ಚಿತ್ರ ಕೂಡಾ ಮೊದಲ ಬಾರಿಗೆ ಬ್ಲೋಅಪ್ ಆದ ಸಿನಿಮಾ ಸ್ಕೋಪ್ ಚಿತ್ರ.

೩೫ ಎಂ.ಎಂ.ನಲ್ಲಿ ಚಿತ್ರಿಸಲಾದ ಸಂಕುಚಿತ (squeeze) ಚಿತ್ರವನ್ನು ದೊಡ್ಡ ಪರದೆಯ ಮೇಲೆ ಪ್ರದರ್ಶಿಸಿದಾಗ ದೃಶ್ಯಗಳ ಸ್ಪಷ್ಟತೆ, ವರ್ಣ, ಗುಣಮಟ್ಟವನ್ನು ಉತ್ತಮಪಡಿಸಲು ಮತ್ತೆ ಹುಡುಕಾಟ ಪ್ರಾರಂಭವಾಯಿತು. ಇದರ ಫಲವೇ ೩೫ ಎಂ.ಎಂ.ಗಿಂತಲೂ ಅಗಲವಾದ ನೆಗೆಟಿವ್ ಬಳಕೆಯ ಪದ್ಧತಿ.

೧೯೫೪ರಲ್ಲಿ ೩೫ ಎಂ.ಎಂ. ಸೈಜಿಗಿಂತಲೂ ದ್ವಿಗುಣ ಗಾತ್ರದ ಫ್ರೇಮನ್ನು ಬಳಸಿ, ಯಾವುದೇ ಚಿತ್ರವನ್ನು ಸಂಕುಚಿತ ಚಿತ್ರಣ ಮಾಡದೇ, ೧.೮೫:೧ ಅನುಪಾತದಲ್ಲಿ ದೃಶ್ಯ ಮೂಡುವಂತೆ 'ವಿಸ್ಟಾ ವಿಷನ್' (vista vision) ರೂಪಿತವಾಯಿತು. ಈ ಪದ್ಧತಿಯಲ್ಲಿ, ಕ್ಯಾಮರಾದಲ್ಲಿ ಹಾಗೂ ಪ್ರೊಜೆಕ್ಟರ್‌ನಲ್ಲಿ ಹಾಯ್ದು ಹೋಗುವ ನೆಗೆಟಿವ್ ಹಾಗೂ ಪಾಸಿಟಿವ್ ಫಿಲಂಗಳು ಉದ್ದುದ್ದವಾಗಿ (vertical) ಹೋಗುವ ಬದಲು ಅಡ್ಡಡ್ಡವಾಗಿ (horizontal) ಚಲಿಸುವ ಪದ್ಧತಿ ಅನುಸರಿಸಬೇಕಾದ್ದರಿಂದ ಇದು ಜನಪ್ರಿಯವಾಗಲಿಲ್ಲ.

ಇದರ ನಂತರ ಕೆಲವೇ ವರ್ಷಗಳಲ್ಲಿ ಟಾಡ್-ಎವೋ (Todd-Ao) ಪದ್ಧತಿ ಚಾಲ್ತಿಗೆ ಬಂತು. ಇದರಲ್ಲಿ ೬೫ ಎಂ.ಎಂ. ಅಗಲದ ನೆಗೆಟಿವ್ ಫಿಲಂ ಅನ್ನು ಕ್ಯಾಮರಾದಲ್ಲಿ ಚಿತ್ರೀಕರಣಕ್ಕೆ ಬಳಸಿ, ೭೦ ಎಂ.ಎಂ. ಅಗಲದ ಪಾಸಿಟಿವ್ ಫಿಲಂನ ಮೇಲೆ ಅದನ್ನು ಮುದ್ರಿಸಿ, ಪ್ರದರ್ಶನಕ್ಕೆ ಬಳಸಲಾಯಿತು. ಇದರ ಹಿಂದೆ ಆರು ಮ್ಯಾಗ್ನೆಟಿಕ್ ಧ್ವನಿ ಟ್ರ್ಯಾಕುಗಳು 'ಸ್ಟೀರಿಯೋಫೋನಿಕ್' ಪರಿಣಾಮ ನೀಡಲು ಸ್ಥಳಾವಕಾಶ ಕಲ್ಪಿಸಲಾಯಿತು. ಈ ಪದ್ಧತಿಯಲ್ಲಿ ಬಂದ ಜನಪ್ರಿಯ ಚಿತ್ರ 'ಬೆನ್ ಹರ್' (ben hur).

೧೯೬೨ರಲ್ಲಿ 'ರ್‍ಯಾಂಕ್ ಆಪ್ಟಿಕಲ್' ಕಂಪನಿಯವರು ನಿರ್ಮಿಸಿದ ವಿಶೇಷ ಲೆನ್ಸ್‌ನಿಂದಾಗಿ, ಸಿನಿಮಾ ಸ್ಕೋಪ್‌ನಲ್ಲಿ ಚಿತ್ರಿಸಿ, ಅದನ್ನು ೭೦ ಎಂ.ಎಂ.ಗೆ ಪರಿವರ್ತಿಸಿ ಮುದ್ರಿಸಲು ಸಾಧ್ಯವಾಯಿತು. ನಮ್ಮಲ್ಲಿ ಈ ಪದ್ಧತಿಯಲ್ಲಿ ತಯಾರಾದ ಪ್ರಥಮ ಚಿತ್ರ 'ಶರವೇಗದ ಸರದಾರ'. ಇದರ ನಿರ್ದೇಶಕರು ಕೆ.ವಿ.ಜಯರಾಂ ಮತ್ತು ಛಾಯಾಗ್ರಾಹಕರು ಆರ್.ಸಿ.ಮಾಪಾಕ್ಷಿ. ಇದರಂತೆ ತಯಾರಾದ ಇನ್ನೊಂದು ಚಿತ್ರ 'ಮುತ್ತಿನ ಹಾರ'. ಇದರ ನಿರ್ದೇಶಕರು ಎಸ್.ವಿ.ರಾಜೇಂದ್ರಸಿಂಗ್ ಬಾಬು ಹಾಗೂ ಛಾಯಾಗ್ರಾಹಕರು ಡಿ.ವಿ.ರಾಜಾರಾಂ.

೧೯೫೨ರಲ್ಲಿ, ಜನರಿಗೆ ಇನ್ನೂ ಹೆಚ್ಚಿನ 'ಥ್ರಿಲ್' ಹಾಗೂ ಮನರಂಜನೆಯನ್ನು ನೀಡಲು ಜಾರಿಗೆ ಬಂದ ಪ್ರಯೋಗಾತ್ಮಕ ಪದ್ಧತಿಯೇ 'ಸಿನೆರಮಾ'. ಇದರಲ್ಲಿ ಮೂರು ಕ್ಯಾಮರಾಗಳನ್ನು ಪಕ್ಕ ಪಕ್ಕದಲ್ಲಿ ಇರಿಸಿ, ಒಂದರಲ್ಲಿ ಕಾಣುವ ದೃಶ್ಯದ ಅಂಚಿನಿಂದ ಇನ್ನೊಂದು ಕ್ಯಾಮರಾದಲ್ಲಿ ಇನ್ನೊಂದು ದೃಶ್ಯ ಮುಂದುವರಿದಂತೆ ಸಂಯೋಜಿಸಿ, ಅದು ಹಾಗೇ ಮೂರನೇ ಕ್ಯಾಮರಾದಲ್ಲಿ ಹೊಂದಾಣಿಕೆಯಾಗುತ್ತಿತ್ತು. ಇವು ಮೂರರ ಸಂಯೋಜಿತ ಪರಿಣಾಮ, ಬಿಲ್ಲಿನಂತೆ ಬಾಗಿದ ಪರದೆಯ ಮೇಲೆ, ಸುಮಾರು ಅರ್ಧ ವರ್ತುಲಾಕಾರದಲ್ಲಿ ಕಾಣುವಂತೆ ಸಂಯೋಜಿಸಲಾಗುತ್ತಿತ್ತು. (ನೋಡಿ :ಚಿತ್ರ ೧-೨)

ಇದರ ಮೇಲೆ ಯಾವುದೇ ಧ್ವನಿಮುದ್ರಣ ಇರುತ್ತಿರಲಿಲ್ಲ. ಧ್ವನಿಯನ್ನು ಪ್ರತ್ಯೇಕವಾದ ೩೫ ಎಂ.ಎಂ. ಮ್ಯಾಗ್ನೆಟಿಕ್ ಫಿಲಂನಲ್ಲಿ, ಎಂಟು ಟ್ರ್ಯಾಕುಗಳಲ್ಲಿ ಸಂಯೋಜಿಸಿ, ದೃಶ್ಯ ಸಂಬಂಧ ಉಳಿಸಿಕೊಂಡು (insync), ಪರದೆಯ ಹಿಂದಿನ ಐದು ಧ್ವನಿವರ್ಧಕಗಳು (speakers) ಹಾಗೂ ಪ್ರೇಕ್ಷಕರ ಅಕ್ಕ-ಪಕ್ಕ ಹಾಗು ಹಿಂದೆ ಇಡಲಾದ ಹೆಚ್ಚಿನ ಎಂಟು ಧ್ವನಿವರ್ಧಕಗಳಿಂದ ಹೊರಹೊಮ್ಮುತ್ತಿತ್ತು. ಹೀಗಾಗಿ ಇದರಲ್ಲಿನ ದೃಶ್ಯ ವೈಭವ, ಪ್ರತಿ ಕ್ಯಾಮರಾದಲ್ಲೂ ೨೫.೦೨ ಎಂ.ಎಂx೨೭.೬೪ ಎಂ.ಎಂ. ಇದ್ದು, ಪ್ರದರ್ಶಿತ ಚಿತ್ರದ ಅನುಪಾತ, ಮಧ್ಯದ ಪ್ರೊಜೆಕ್ಟರ್ ಬಳಿ ನಿಂತು ನೋಡಿದಾಗ ೨.೧:೧ ಆಗಿರುತ್ತಿತ್ತು. ಪ್ರೇಕ್ಷಕರು ಪ್ರೊಜೆಕ್ಟರ್ ಹಾಗೂ ಪರದೆಯ ನಡುವೆ ಕುಳಿತು ಚಿತ್ರವನ್ನು ನೋಡಬಹುದಿತ್ತು.



(ಚಿತ್ರ ೨) ಸಿನೆರಮಾ - ಮೂರು ಸಂಯೋಜಿತ ಕ್ಯಾಮರಾಗಳಿಂದ ಚಿತ್ರಿತವಾದ ದೃಶ್ಯವನ್ನು, ಮೂರು ಸಂಯೋಜಿತ ಪ್ರೊಜೆಕ್ಟರಿನಿಂದ ಕಂಸಾಕಾರದ ತೆರೆಯ ಮೇಲೆ ದೃಶ್ಯ ಪ್ರಕ್ಷೇಪಣ.



(ಚಿತ್ರ ೩) ಸರ್ಕಾರಮಾ - ಗೋಳಾಕಾರದ ತೆರೆಯನ್ನು ೯ ಘಟಕಗಳಾಗಿ ವಿಂಗಡಿಸಿ, ೯ ಪ್ರೊಜೆಕ್ಟರುಗಳಿಂದ ೩೬೦ ಡಿಗ್ರಿಗಳಲ್ಲಿ ದೃಶ್ಯ ಪ್ರದರ್ಶನ

ಈ ಪದ್ಧತಿಯಲ್ಲಿ ಆರಂಭದ, ಅಂದರೆ ೧೯೫೨ರ ನಂತರ ತಯಾರಾದ ಚಿತ್ರಗಳು -'ದಿಸ್ ಈಸ್ ಸಿನೆರಮಾ' (This is Cinerama), 'ದಿ ಸೆವನ್ ವಂಡರ್ಸ್ ಆಫ್ ದ ವರ್ಲ್ಡ್' (The Seven Wonders of the World), 'ಹಾಲಿಡೇ ಸಿನೆರಮಾ' (Holiday Cinerama). ಇದರ ನಂತರ ೧೯೬೨ರಲ್ಲಿ, 'ಹೌ ದ ವೆಸ್ಟ್ ವಾಸ್ ವನ್' (How the west was won), 'ದ ಫೇರಿ ಟೇಲ್ ವರ್ಲ್ಡ್ ಅಫ್ ದ ಬ್ರದರ್ಸ್ ಗ್ರಿಮ್' (The fairy tale world of the brother's grimm) ತಯಾರಾದ ರೂಪಕ ಚಿತ್ರಗಳು. ೧೯೬೭ರಲ್ಲಿ ಬೆಂಗಳೂರಿನ ಕಪಾಲಿ ಚಿತ್ರಮಂದಿರದಲ್ಲಿ ಪ್ರಥಮ ಬಾರಿಗೆ ಈ ಸಿನೆರಮಾ ಪದ್ಧತಿಯಲ್ಲಿ ಚಿತ್ರಗಳನ್ನು ಪ್ರದರ್ಶಿಸಲಾಯಿತು.

ಇದರ ನಂತರದ ಸಂಶೋಧನೆಯೇ 'ಸರ್ಕಾರಮಾ' (Circarama). ಇದರಲ್ಲಿ ಪ್ರೇಕ್ಷಕನ ಸುತ್ತಮುತ್ತಲಿನಲ್ಲೂ ೩೬೦ ಡಿಗ್ರಿಯಲ್ಲಿ ಪರದೆ ವರ್ತುಲಾಕೃತಿಯಲ್ಲಿ ಇರುತ್ತದೆ. ಅದೆಲ್ಲದರ ಮೇಲೆ ಚಿತ್ರಗಳು ಬರುತ್ತಿರುತ್ತವೆ. ಈ ಪದ್ಧತಿಯನ್ನು ೧೮೯೬ರಲ್ಲಿ ಪ್ಯಾರಿಸ್ ಪ್ರದರ್ಶನದಲ್ಲಿ ರೂಪಿಸಿದಾಗ, ಹತ್ತು ಪ್ರೊಜೆಕ್ಟರ್‌ಗಳನ್ನು ಬಳಸಲಾಗಿತ್ತು. ಇದರಂತೆಯೇ ೧೯೬೪ರಲ್ಲಿ, ನ್ಯೂಯಾರ್ಕ್‌ನ ಜಾಗತಿಕ ಮೇಳದಲ್ಲಿ 'ಥಿಯೇಟರಮಾ' (Theaterama) ಆರು ೩೫ ಎಂ.ಎಂ. ಪ್ರೊಜೆಕ್ಟರುಗಳನ್ನು 'ಅನಾಮಾರ್ಫಿಕ್' ಲೆನ್ಸ್ ನೆರವಿನಿಂದ ಬಳಸಲಾಯಿತು. ಇದೇ ರೀತಿ, ಡಿಸ್ನಿಯವರ 'ಸರ್ಕಾರಮಾ' ಪದ್ಧತಿಯಲ್ಲಿ ಹನ್ನೊಂದು ಸಂಖ್ಯೆಯಷ್ಟು ೧೬ ಎಂ.ಎಂ. ಪ್ರೊಜೆಕ್ಟರುಗಳನ್ನು ಬಳಸಿದರೂ ನಂತರ ಅದರ ಬದಲು ಒಂಬತ್ತು ಸಂಖ್ಯೆಯಷ್ಟು ೩೫ ಎಂ.ಎಂ. ಪ್ರೊಜೆಕ್ಟರುಗಳನ್ನು ಬಳಸಲಾಯಿತು. (ಚಿತ್ರ ೩ ನೋಡಿರಿ)

ರಷಿಯಾದ 'ಕಿನೋ ಪನೋರಮಾ' ಪದ್ಧತಿಯಲ್ಲಿ ಹನ್ನೊಂದು ಪ್ರೊಜೆಕ್ಟರ್‌ನಲ್ಲಿ ಸುತ್ತಲಿನ ೩೬೦ ಡಿಗ್ರಿಯಷ್ಟು ದೃಶ್ಯ ಪ್ರದರ್ಶಿಸಿದರೆ, ಇನ್ನೂ ಹನ್ನೊಂದು ಪ್ರೊಜೆಕ್ಟರುಗಳು ಗುಮ್ಮಟಾಕಾರದ- ಪ್ರೇಕ್ಷಕನ ತಲೆಯ ಮೇಲಿದ್ದ ಪರದೆಯನ್ನು ಆವರಿಸಿದ್ದವು. ಅದರಲ್ಲಿ ಕೇವಲ 'ಎನಿಮೇಷನ್' ಕಾರ್ಟೂನ್ ಚಿತ್ರಗಳನ್ನು ಬಳಸಿ, ಸುತ್ತಮುತ್ತಲೂ ನೈಜ ಚಲನೆಯ ಚಿತ್ರ ತೋರಿಸಲಾಯಿತು.

ಈ ಪದ್ಧತಿಯಲ್ಲಿ ಚಿತ್ರ ತಯಾರಿಸಲು, ಪ್ರೊಜೆಕ್ಟರ್‌ನಷ್ಟೇ ಸಂಖ್ಯೆಯ ಕ್ಯಾಮರಾಗಳನ್ನು (ಇವನ್ನು ತಿರುವು-ಮುರುವು ಹೇಳಬಹುದು) ನಿರ್ದಿಷ್ಟವಾದ ಸ್ಥಳದಲ್ಲಿದ್ದೇ, ನಿರ್ದಿಷ್ಟವಾದ ಕೋನದಲ್ಲಿ, ೩೬೦ ಡಿಗ್ರಿ ಚಿತ್ರಿಸುವಂತೆ, ಆದರೆ ಒಂದು ದೃಶ್ಯಕ್ಕೂ ಇನ್ನೊಂದು ದೃಶ್ಯಕ್ಕೂ ಯಾವುದೇ ಅಂತರವಿರದಂತೆ ವ್ಯವಸ್ಥೆ ಮಾಡಬೇಕಾಗುತ್ತಿತ್ತು. ಹೀಗಾಗಿ ಕ್ಯಾಮರಾ ಸಾಕಷ್ಟು ಎತ್ತರದ ಸ್ಥಾನದಲ್ಲಿದ್ದು, ಸಾಮಾನ್ಯವಾಗಿ ವಿಮಾನದಿಂದ ಹಾರಾಡುವಾಗ ಕಾಣುವ ನಿಸರ್ಗವೈಭವ, ನಗರದ ದೃಶ್ಯಗಳು, ಪರ್ವತ ಶ್ರೇಣಿಗಳು ಇಂತಹುದಕ್ಕೆ ಸೀಮಿತವಾಗಿದ್ದವು. ಈ ಪದ್ಧತಿಯಲ್ಲೂ ಸಹ ಧ್ವನಿಯನ್ನು ಪ್ರತ್ಯೇಕವಾದ ಮ್ಯಾಗ್ನೆಟಿಕ್ ಬಹುವಾಹಿನಿ ಟ್ರ್ಯಾಕುಗಳ ಮೂಲಕ, ಹಲವಾರು ದಿಕ್ಕಿಗೆ, ಕೆಲವೊಮ್ಮೆ ಮೇಲೆ ಕೆಳಗೂ ಸಹ ಇಡಲಾದ ಧ್ವನಿ ವರ್ಧಕಗಳ ಮೂಲಕ ಧ್ವನಿ ವಿಶೇಷಗಳು, ಸಂಗೀತ ಹೊರಹೊಮ್ಮುತ್ತಿತ್ತು. ಈ ಚಿತ್ರವನ್ನು ನಿಂತೇ ಸುತ್ತಲೂ ನೋಡಬೇಕಾದ ಪ್ರೇಕ್ಷಕರು ಅನುಭವಿಸಿದ ಆನಂದ, ಹರ್ಷವನ್ನು ಅವರ ಕೂಗಾಟ, ಚೀರಾಟ, ಕೇಕೆ, ಸಿಳ್ಳೆ, ಚಪ್ಪಾಳೆ ನೋಡಿಯೇ ತಿಳಿಯಬೇಕು.

ಈ ಪದ್ಧತಿಯಲ್ಲಿ ತಯಾರಾದ ಸುಮಾರು ಹತ್ತು ನಿಮಿಷ ಅವಧಿಯ ಚಿತ್ರವನ್ನು, ೧೯೬೫ರಲ್ಲಿ ಬೆಂಗಳೂರಿನ ಬಾಲಭವನ ವೃತ್ತದಲ್ಲಿರುವ ಮುಕ್ತ (ಈಗಿನ jewels paradise ಕಟ್ಟಡದ) ಜಾಗದಲ್ಲಿ ಥೇಟರನ್ನು ನಿರ್ಮಿಸಿ, ಪ್ರದರ್ಶಿಸಲಾಯಿತು. ಪ್ರೇಕ್ಷಕರಿಗೆ ಉಚಿತವಾಗಿ ಖುಷಿ ನೀಡಿದ ಅನುಭವ. ದೆಹಲಿಯ ''ಅಪ್ಪುಘರ್''ನಲ್ಲಿ ಇದು ನೋಡಲು ಸಿಗುತ್ತದೆ.

ಎನಿಮೇಷನ್ ತಂತ್ರ

ಮೂವೀ ಕ್ಯಾಮರಾದ ಸಂಶೋಧನೆಗೂ ಮೊದಲೇ ಎನಿಮೇಷನ್ ತಂತ್ರದ ಪ್ರಯೋಗಗಳು ಜಾರಿಯಲ್ಲಿದ್ದವು. ಪ್ಯಾರಿಸ್ ನಗರದ ಥೇಟರ್ ಆಪ್ಟಿಕ್‌ನಲ್ಲಿ ಅದರ ಮುಖ್ಯಸ್ಥ ಎಮಿಲ್ ರೇಯ್‌ನಾಡ್ ೧೮೯೨ರಲ್ಲೇ ಎನಿಮೇಷನ್ ತಂತ್ರದಲ್ಲಿ ಚಿತ್ರವನ್ನು ಪ್ರದರ್ಶಿಸುತ್ತಿದ್ದ. ನಂತರ ಮೂವೀ ಕ್ಯಾಮರಾದ ಶೋಧನೆ, ಈ ತಂತ್ರವನ್ನು ಕೆಲವು ವರ್ಷಗಳ ಕಾಲ ಮೂಲೆ ಗುಂಪುಮಾಡಿತು.

ಮತ್ತೆ ೧೯೦೮ರಲ್ಲಿ ಅಮೆರಿಕದ ಜೆ.ಸ್ಟುವರ್ಟ್ ಬ್ಲಾಕ್‌ಟನ್ ಹಾಗೂ ಫ್ರಾನ್ಸ್‌ನ ಎಮಿಲಿ ಕೋಲ್ ಹೊಸ ಪದ್ಧತಿಯನ್ನು ಪಾಲಿಸಿ, ಎನಿಮೇಷನ್ ತಂತ್ರದಲ್ಲಿ ಕ್ರಾಂತಿ ತಂದರು. ೧೯೦೯ ಹಾಗೂ ೧೯೧೮ರಲ್ಲಿ ವ್ಯಂಗ್ಯಚಿತ್ರಕಾರ ವಿನ್ಸರ್ ಮ್ಯಾಕಿ ಎರಡು ಕಾರ್ಟೂನ್ ಚಿತ್ರ ತಯಾರಿಸಿ, ೧೯೨೦ರಲ್ಲಿ ಅಮೆರಿಕಾದ ಕಾರ್ಟೂನ್ ಚಿತ್ರ ತಯಾರಿಕೆಯ ಪ್ರಥಮ ಘಟಕ ಸ್ಥಾಪಿಸಿದ.

೧೯೨೮ರಲ್ಲಿ ವಾಲ್ಟ್ ಡಿಸ್ನಿ ಕಂಪನಿಯು ಪ್ರಥಮ ಧ್ವನಿ ಕಾರ್ಟೂನ್ ಚಿತ್ರ 'ಸ್ಟೀಮ್ ಬೋಟ್ ವಿಲ್ಲಿ' ಹಾಗೂ ೧೯೩೫ರಲ್ಲಿ ಪ್ರಥಮ ವರ್ಣ ಕಾರ್ಟೂನ್ ಚಿತ್ರ 'ದ ಬ್ಯಾಂಡ್ ಕನ್ಸರ್ಟ್' ನಿರ್ಮಿಸಿತು. ಇದರಲ್ಲಿ ಪರಿಚಯಿಸಲಾದ ಮಿಕಿಮೌಸ್ ಪಾತ್ರ ವಿಶ್ವದಾದ್ಯಂತ ಜನಪ್ರಿಯವಾಗಿ, ೧೯೭೮ರಲ್ಲಿ ತನ್ನ ೫೦ನೆಯ ಹುಟ್ಟುಹಬ್ಬ ಆಚರಿಸಿತು.

ಆದರೆ ಎನಿಮೇಷನ್ ಚಿತ್ರಕ್ಕೆ ನೈಪುಣ್ಯತೆ ಹಾಗೂ ಜನಪ್ರಿಯತೆ ಜೊತೆಗೆ ವೃತ್ತಿಪರತೆ ತಂದುಕೊಟ್ಟದ್ದು ವಾಲ್ಟ್‌ಡಿಸ್ನಿ (೧೯೦೧-೧೯೬೬). ಇವರು ೧೯೩೭ರಲ್ಲಿ ತಯಾರಿಸಿದ ಪ್ರಥಮ ಕಥಾಚಿತ್ರ (ಸ್ನೋವೈಟ್ ಅಂಡ್ ದ ಸೆವೆನ್ ಡ್ವಾರ್ಫ್ಸ್)ದಲ್ಲಿ ೪,೭೭,೦೦೦ ಚಿತ್ರಿಸಿದ ಚಿತ್ರಕೃತಿಗಳಿದ್ದವು. ಇದು ೧೯೩೮ರಲ್ಲಿ ಗಲ್ಲಾಪೆಟ್ಟಿಗೆಯ ಯಶಸ್ವಿ ಚಿತ್ರವೆನಿಸಿ, ಇದರ ಧ್ವನಿಯನ್ನು ವಿಶ್ವದ ೧೩ ಭಾಷೆಗಳಲ್ಲಿ 'ಡಬ್' ಮಾಡಲಾಯಿತು.

ನಾವು ಎನಿಮೇಷನ್ ತಂತ್ರದ ಹಲವಾರು ಚಿತ್ರಗಳನ್ನು ಕಂಡಿದ್ದೇವೆ, ಆನಂದಿಸಿದ್ದೇವೆ, ಸ್ಫೂರ್ತಿ ಪಡೆದಿದ್ದೇವೆ. ಇದರ ಫಲವೇ ಆರಂಭ ಕಾಲದಲ್ಲಿ ಶೀರ್ಷಿಕೆಗಳಿಗೆ ಕನ್ನಡ ಚಿತ್ರದಲ್ಲಿ ಕಾರ್ಟೂನ್ ಸ್ಥಿರ ಚಿತ್ರಗಳನ್ನು ಹಾಸ್ಯ ಚಿತ್ರಕ್ಕಾಗಿ ಬಳಸಿದೆ. ಇತ್ತೀಚೆಗೆ ಬೇರೆ ಭಾಷೆಯ ಚಿತ್ರಗಳು ಹಾಡಿನಲ್ಲಿ ಎನಿಮೇಷನ್ ಬಳಸಿದ ನಂತರ, ನಾವು ಹಾಡಿನಲ್ಲಿ ಇದರ ಬಳಕೆ ಆರಂಭಿಸಿದೆವು. 'ಮಿ.ಪುಟ್ಸಾಮಿ' ಚಿತ್ರದಲ್ಲಿ ಕಂಪ್ಯೂಟರ್ ಗ್ರಾಫಿಕ್ಸ್ ಅನ್ನು ವಿದೇಶದಲ್ಲಿ ತಯಾರಿಸಿ, ಅದನ್ನು ಭಿತ್ತಿಪತ್ರಗಳಲ್ಲಿ ಮುದ್ರಿಸಿ, ಜನರನ್ನು ಆಕರ್ಷಿಸಲು ಯತ್ನಿಸಲಾಯಿತು.

ಈಗಲಂತೂ ಕನ್ನಡ ಚಿತ್ರರಂಗದಲ್ಲಿ ಮಾತೆತ್ತಿದರೆ ಕೋಟಿ ರೂಪಾಯಿಗಳ ನಿರ್ಮಾಣದ ಘೋಷಣೆ ಕಿವಿಗೆ ಬೀಳುತ್ತಿದೆ. ಇದೇ ಮಟ್ಟದಲ್ಲಿ ಸಂಪೂರ್ಣ ಎನಿಮೇಷನ್ ತಂತ್ರದ ಕಥಾಚಿತ್ರ ನಿರ್ಮಾಣವೇಕೆ ಸಾಧ್ಯವಾಗುತ್ತಿಲ್ಲ ? ಇಂದಿನ ಮುಕ್ತ ಮಾರುಕಟ್ಟೆ, ಮುಕ್ತ ಆಮದು ನೀತಿ, ತಂತ್ರಜ್ಞಾನ ಲಭ್ಯವಿರುವಾಗ, ಕನ್ನಡದಲ್ಲಿ ಇಂತಹ ಮಾಧ್ಯಮಕ್ಕೆ ಬೇಕಾದ ಕಥೆ, ಕಥನ ಕವನಗಳಿಗೆ ಕೊರತೆ ಇಲ್ಲ. ಇಂತಹ ಕಲ್ಪನೆಯ ಹಂದರ ಬಿಡಿಸುವ ನಿರ್ದೇಶಕರೂ ಇಲ್ಲವೆಂದಿಲ್ಲ. ಕೊರತೆ ಇರುವುದು ಇಂತಹ ಚಿತ್ರಗಳಿಗೆ ಬೇಕಾದ ಅಪಾರ ಶ್ರಮ, ತಾಳ್ಮೆ, ಶ್ರದ್ಧೆ ಮತ್ತು ಪೂರ್ವ ಸಿದ್ಧತೆ. ಈ ತಂತ್ರದಲ್ಲಿ ತಯಾರಿಸಿದ ಚಿತ್ರಗಳನ್ನು ಸುಲಭವಾಗಿ ಬೇರೆ ಭಾಷೆಗಳಿಗೆ ಡಬ್ ಮಾಡುವ ವ್ಯಾಪಾರಿ ಸಿದ್ಧತೆಗಳೂ ಇರುವಾಗ, ನಿರ್ಮಾಪಕರು ಈ ನಿಟ್ಟಿನಲ್ಲಿ ಯೋಚಿಸದಿರುವುದು ಸೋಜಿಗದ ಸಂಗತಿ. ಜಪಾನಿನ ತಂಡ, ಜಪಾನ್ ದೇಶದಲ್ಲಿ, ಭಾರತದ ರಾಮಾಯಣವನ್ನು ಜಪಾನಿ ಶೈಲಿಯ ಚಿತ್ರಕಲೆ ಬಳಸಿ, ಸಂಪೂರ್ಣ ಕಥಾಚಿತ್ರ ನಿರ್ಮಿಸಿರುವಾಗ, ನಾವು ಈಗಲಾದರೂ ಹೊಸ ಹೆಜ್ಜೆ ಇಡಬೇಕಲ್ಲವೇ ?



(ಚಿತ್ರ ೪) ಸರ್ಕಾರಮಾ ಪ್ರದರ್ಶನದ ಗೋಳ - ಗುಮ್ಮಟದ ಒಳಭಾಗದಲ್ಲಿ ಗೋಳಾಕಾರದ ತೆರೆಯ ಮೇಲ ಒಂಬತ್ತು ಪ್ರೊಜೆಕ್ಟರುಗಳಿಂದ ಮೂಡಿದ ಚಿತ್ರಗಳ ನಡುವೆ ಇರುವ ಪ್ರೇಕ್ಷನಿಗೆ ತಾನು ಪ್ರದರ್ಶನ ದೃಶ್ಯದ ಒಂದು ಭಾಗವಾಗುವ ಅಪೂರ್ವ ಅನುಭವ. ಅಮೆರಿಕಾದ ವಾರ್ತಾ ಇಲಾಖೆ ಬೆಂಗಳೂರಿನಲ್ಲಿ ನಾಗರಿಕರಿಗೆ ೬೦ರ ದಶಕದಲ್ಲಿ 'ಸರ್ಕಾರಮಾ'ದ ಪರಿಚಯ ಮಾಡಿಸಿತು. ೬೦೦ ಕೊಳವೆಗಳನ್ನು ೭೫೦ ಪೌಂಡ್‌ಗಳಷ್ಟು ತೂಕದ ನಟ್ಟು ಬೋಲ್ಟುಗಳಿಂದ ಕೂಡಿಸಿ, ಒಂದು ಟನ್ ಭಾರದ ತೆರೆಯನ್ನು ನಿಲ್ಲಿಸಲು ೨೩ ಕಾರ್ಮಿಕರು ತೆಗೆದುಕೊಂಡ ಕಾಲಾವಧಿ ಕೇವಲ ಐದು ಗಂಟೆ.

3D ಚಿತ್ರಗಳು

ನಾವು ನಮ್ಮ ಸುತ್ತಮುತ್ತಲಿನ ಪ್ರಪಂಚ ನೋಡಿದಾಗ, ಅದನ್ನು ಏಕಕಾಲಕ್ಕೆ ಎರಡು ಕಣ್ಣುಗಳಿಂದ, ಎರಡು ದೃಷ್ಟಿಕೋನದಿಂದ ನೋಡುತ್ತೇವೆ. ಇದರಿಂದಾಗಿ ನಾವು ಯಾವುದೇ ವಸ್ತುವಿನ ಎತ್ತರ, ಅಗಲ ಮಾತ್ರವಲ್ಲದೆ, ಅದು ನಮ್ಮಿಂದ ಇರುವ ಅಂತರ ಹಾಗು ಅವುಗಳ ನಡುವಿನ ಪರಸ್ಪರ ಅಂತರ ಅರಿಯಲು ಸಾಧ್ಯವಾಗುತ್ತದೆ. ನಾವು ಈ ಮೂರು - ಎತ್ತರ, ಅಗಲ ಮತ್ತು ಅಂತರ (depth) ಅರಿಯಲು ಸಾಧ್ಯವಾದ್ದರಿಂದ ಇದಕ್ಕೆ (3D) 'ಮೂರನೇ ಆಯಾಮ' ಎಂಬ ಪದ ಬಳಕೆಗೆ ಬಂತು. ಇದನ್ನು ಇನ್ನೂ ಖಚಿತವಾಗಿ ಹೇಳಬೇಕೆಂದರೆ, ನೀವು ನಿಮ್ಮ ಮುಖದ ಮುಂದೆ, ಮೂಗಿನ ನೇರಕ್ಕೆ ಒಂದೂವರೆ ಅಡಿ ದೂರದಲ್ಲಿ ಒಂದು ಪೆನ್ಸಿಲನ್ನು ನೇರವಾಗಿ ನಿಲ್ಲಿಸಿ ಹಿಡಿಯಿರಿ. ಈಗ ಇದನ್ನು ಒಂದು ಕಣ್ಣು ಮುಚ್ಚಿ ಇನ್ನೊಂದು ಕಣ್ಣಿನಿಂದ ನೋಡಿರಿ. ನಂತರ ತಕ್ಷಣವೇ ಆ ಇನ್ನೊಂದು ಕಣ್ಣನ್ನು ಮುಚ್ಚಿ, ಮೊದಲು ಮುಚ್ಚಿದ ಕಣ್ಣನ್ನು ತೆರೆದು ನೋಡಿರಿ. ಹೀಗೆ ಎರಡೂ ಕಣ್ಣುಗಳನ್ನು ತೀವ್ರವಾಗಿ ಹಾಗು ಪರ್ಯಾಯವಾಗಿ ತೆರೆದು ಮುಚ್ಚಿ ನೋಡುತ್ತಿದ್ದರೆ, ಕೈಯಲ್ಲಿ ಹಿಡಿದ ಪೆನ್ಸಿಲ್ಲು ನೀವು ಕೈ ಅಲುಗಾಡಿಸದಿದ್ದರೂ ಪೆನ್ಸಿಲು ಮಾತ್ರ ಎಡಬಲ ಸರಿಯುತ್ತಿದ್ದಂತೆ ತೋರುತ್ತದೆ. ಅಂದರೆ ಅದು ನಿಮಗಿರುವ ಎರಡು ದೃಷ್ಟಿಕೋನವನ್ನು ಖಚಿತ ಪಡಿಸುತ್ತದೆ. ಈ ವ್ಯತ್ಯಯವನ್ನೇ ಪ್ಯಾರಾಲಾಕ್ಸ್ (parallax) ಎನ್ನುತ್ತಾರೆ.

ಈಗ ನೀವು ಎರಡೂ ಕಣ್ಣು ಬಿಟ್ಟು ಒಮ್ಮೆಲೆ ನೋಡಿದಾಗ, ಒಂದೇ ಸ್ಥಾನದಲ್ಲಿ, ಒಂದೇ ಪೆನ್ಸಿಲ್ಲು ಕಾಣಿಸುತ್ತದೆ. ಹೀಗೆ ಒಗ್ಗೂಡಿಸಿ ದೃಶ್ಯವನ್ನು ತೋರಿಸುವ ಕ್ರಿಯೆಯಲ್ಲಿ ಮಾನವನ ಮೆದುಳು ಕಾರ್ಯ ನಿರ್ವಹಿಸುತ್ತದೆ. ಇದು ಆಳ, ಅಂತರವಿಲ್ಲದ ಎರಡು ದೃಷ್ಟಿ-ದೃಶ್ಯಗಳನ್ನು ಒಂದು ಸಂಯೋಜಿತ, ಮೂರನೇ ಆಯಾಮದ ದೃಷ್ಟಿ-ದೃಶ್ಯವಾಗಿ ಪರಿವರ್ತಿಸಿ ತೋರಿಸುತ್ತದೆ. ಇದನ್ನೇ 'ಸ್ಟೀರಿಯೋ ಸ್ಕೋಪಿಕ್ ವಿಷನ್' (stereo scopic vision) ಎನ್ನುವರು. ಈ ತತ್ವವೇ 3D ಚಿತ್ರಗಳ ನಿರ್ಮಾಣದ ಆಧಾರವಾಗಿದೆ.

ಈ ಮೊದಲು ನಿರ್ಮಾಣವಾಗುತ್ತಿದ್ದ (2D) ಎರಡು ಆಯಾಮದ ಚಿತ್ರಗಳಲ್ಲಿ ನಿರ್ದೇಶಕ, ಛಾಯಾಗ್ರಾಹಕರು ಪ್ರಯತ್ನಪಟ್ಟು ಸಮಪಾತಳಿ (flat) ಚಿತ್ರದಲ್ಲೂ ಲೈಟಿಂಗ್, ಲೆನ್ಸ್‌ಗಳ ಉಪಯೋಗ, ಫೋಕಸ್ಸನ್ನು ಬದಲಾಯಿಸಿ, ಫ್ರೇಮಿನ ಸಂಯೋಜನೆ ಮೂಲಕ ದೃಶ್ಯದಲ್ಲಿ ಆಳ - ಅಂತರ (depth) ಸೃಷ್ಟಿಸುತ್ತಿದ್ದರು. ಆದರೆ ಇದು 'ಭ್ರಾಮಕ ಅಂತರ' (apparant distance) ಆಗಿರುತ್ತಿತ್ತು. ಇದರಲ್ಲಿ ಪ್ರೇಕ್ಷಕ ಚಿತ್ರ ನೋಡಿದಾಗ, ಯಾವ ಯಾವ ನಟರು ಎಲ್ಲಿ ನಿಂತಿರುವರು, ಎಷ್ಟು ಅಂತರದಲ್ಲಿ ನಿಂತಿರುವರು ಎಂಬುದನ್ನು ಗುರುತಿಸಲು ಸಾಧ್ಯವಿತ್ತು. ಆದರೆ 3D ಚಿತ್ರ ನಿರ್ಮಾಣದ ಉದ್ದೇಶ, ಈ ಮೊದಲೇ ವಿವರಿಸಿದಂತೆ, ಮನುಷ್ಯನ ದೃಷ್ಟಿಗೋಚರವಾಗುವ (binocular vision) ಆಳ-ಅಂತರವನ್ನು, ಬೆಳಕು-ನೆರಳಿನ ಗಾತ್ರ, ದೃಶ್ಯ ಸ್ಪಷ್ಟತೆ (clarity) ಹಾಗೂ ಗತಿ (ಪರಸ್ಪರ ಇರುವ ಸಹಜ ಗತಿ ಅಥವಾ ಕೃತ್ರಿಮವಾಗಿ ಸೃಷ್ಟಿಸಲಾದ ಗತಿ) ಇವುಗಳಿಂದ ತಾಂತ್ರಿಕವಾಗಿ ಮರು ಸೃಷ್ಟಿಸುವುದೇ ಆಗಿತ್ತು. (ಚಿತ್ರ ನೋಡಿರಿ)

3D ಪದ್ಧತಿಯಲ್ಲಿ ಯಾವುದೇ ದೃಶ್ಯವನ್ನು, ಪರಸ್ಪರ ಅಡ್ಡಡ್ಡ ಅಂತರವಿಟ್ಟು, ವೇಗವಾಗಿ ಎರಡು ಚಿತ್ರಗಳಾಗಿ ಗ್ರಹಿಸುತ್ತಾರೆ. ಈ ಪರಸ್ಪರ ಅಂತರವನ್ನು 3D ಪದ್ಧತಿಯಲ್ಲಿ 'ಇಂಟರ್ ಆ್ಯಕ್ಷಿಯಲ್' (inter axial) ಎಂದು ಗುರುತಿಸುತ್ತಾರೆ.

ಈ ಎರಡು ದೃಶ್ಯಗಳು ನಮ್ಮ ಕಣ್ಣುಗಳು ನೋಡುವುದನ್ನು ಪ್ರತಿನಿಧಿಸುವಂತೆ, ಕ್ಯಾಮರಾವನ್ನು ಆ ಸ್ಥಳದಲ್ಲಿ ಇಟ್ಟು ಚಿತ್ರಿಸಿರುತ್ತಾರೆ. ಆದ್ದರಿಂದಲೇ ಈ ರೀತಿಯ ದೃಶ್ಯ ಚಿತ್ರಿಕೆಗೆ 'ಎಡಗಣ್ಣಿನ ದೃಶ್ಯ' 'ಬಲಗಣ್ಣಿನ ದೃಶ್ಯ' ಎಂದು ಕರೆಯುವರು. ಈ ರೀತಿ ಎರಡು ದೃಶ್ಯಗಳನ್ನು ಪಡೆಯಲು, ಚಿತ್ರಿಸುವಾಗ ಎರಡು ಕ್ಯಾಮರಾಗಳನ್ನಾದರೂ ಬಳಸಬಹುದು. ಅಥವಾ ಒಂದೇ ಕ್ಯಾಮರಾದಲ್ಲಿ, ವಿಶೇಷ ಲೆನ್ಸ್ ಅಳವಡಿಸಿ, ಒಂದೇ ಫಿಲಂ ಮೇಲೆ ಎರಡು ಪ್ರತ್ಯೇಕ ದೃಶ್ಯಗಳನ್ನು ಚಿತ್ರಿಸಬಹುದು. ಎರಡು ಪ್ರತ್ಯೇಕ ಕ್ಯಾಮರಾ ಬಳಸಿದ್ದರೆ, ಆ ಕ್ಯಾಮರಾದ ಸ್ಟೀರಿಯೋ ಲೆನ್ಸುಗಳ ಎರಡೂ ಚಿತ್ರಗಳು 'ಅಂತರ ಏಕೀಕೃತಗೊಳ್ಳುವ' (converging the fields) ಸಾಮರ್ಥ್ಯ ಹೊಂದಿರಬೇಕು.

ಇದೇ ರೀತಿ, ಈ ಚಿತ್ರವನ್ನು ಪ್ರದರ್ಶಿಸಿದಾಗ, ಈ 'ಅಂತರ ಏಕೀಕೃತಗೊಳ್ಳುವ' ಬಿಂದು ಸಿನಿಮಾಗೃಹದ ಪರದೆ ಆಗಿರುತ್ತದೆ. ಹೀಗಾಗಿ ಅಂತರ ಏಕೀಕೃತ ಬಿಂದುವಿನಾಚೆಗೆ ಇರುವ ವಸ್ತುಗಳು ಪರದೆಯ ಆಚೆಗೆ ಆಳದಲ್ಲಿ, ಅಂದರೆ ಅನತಿ ದೂರದಲ್ಲಿ ಇರುವಂತೆಯೂ, ಅಂತರ ಏಕೀಕೃತ ಬಿಂದುವಿನ ಈಚೆಗೆ ಇರುವ ವಸ್ತುಗಳು, ಪರದೆಗೂ ಮುಂದೆ, ಸನಿಹದಲ್ಲಿ ಇರುವಂತೆಯೂ ಭಾಸವಾಗುತ್ತವೆ.

ಮಾನವನ ಎರಡು ಕಣ್ಣುಗಳ ನಡುವೆ ಇರುವ ಎರಡೂವರೆ ಇಂಚು ಅಂತರವನ್ನು 'ಇಂಟರ್ ಆಕ್ಯುಲರ್' (interocular) ವ್ಯತ್ಯಾಸವೆನ್ನುತ್ತಾರೆ. 3D ಫೋಟೋಗ್ರಾಫಿಯಲ್ಲೂ ಮನುಷ್ಯ ಸಹಜ ದೃಶ್ಯದಾಳ ಸ್ವೀಕೃತಿ (depth perception) ನಿರ್ಮಾಣ ಮಾಡಲು ಒಂದೇ ಕ್ಯಾಮರಾದ, ಎರಡು ಲೆನ್ಸ್‌ಗಳ ನಡುವೆ, ಇಷ್ಟೇ ಅಂತರ ಏರ್ಪಡಿಸುತ್ತಾರೆ. ಇದನ್ನೇ 'ಇಂಟರ್ ಆ್ಯಕ್ಷಿಯಲ್' (inter axial) ವ್ಯತ್ಯಾಸವೆನ್ನುವರು.

೧೯೮೪ರಲ್ಲಿ ಭಾರತದಲ್ಲಿ ಪ್ರಪ್ರಥಮವಾಗಿ ನಿರ್ಮಾಣವಾದ 3D ಚಿತ್ರ ಮಲಯಾಳಂನ 'ಮೈಡಿಯರ್ ಕುಟ್ಟಿಚಾತನ್'ಗೆ, 'ಸ್ಟೀರಿಯೋ ವಿಷನ್' ಉಪಕರಣವನ್ನು ಬಳಸಲಾಯಿತು. ಇದು ೧೯೭೭ರಲ್ಲಿ, ಕ್ರಿಸ್.ಜೆ.ಕಾಂಡನ್ ಅಭಿವೃದ್ಧಿ ಪಡಿಸಿದ ತಂತ್ರವಾಗಿತ್ತು. ಇದೇ ಪದ್ಧತಿಯಲ್ಲಿ 'ಮೆಟಲ್ ಸ್ಟಾರ್ಮ್' 'ಜಾಸ್-3' ಚಿತ್ರಗಳೂ ಈ ಮೊದಲು ನಿರ್ಮಾಣವಾಗಿದ್ದವು. ಈ ಪದ್ಧತಿಯಲ್ಲಿ ಲೆನ್ಸ್, ದೃಶ್ಯದ ಎರಡು ಚಿತ್ರಿಕೆಗಳನ್ನು ಏಕಕಾಲಕ್ಕೆ ಒಂದೇ ಫ್ರೇಮಿನ ಮೇಲಿನ ಅರ್ಧ ಭಾಗಕ್ಕೆ ಎಡಗಣ್ಣಿನ ದೃಶ್ಯವನ್ನು ಕೆಳಗಿನ ಅರ್ಧ ಭಾಗಕ್ಕೆ ಬಲಗಣ್ಣಿನ ದೃಶ್ಯವನ್ನು ಗ್ರಹಿಸುತ್ತದೆ. ಪ್ರತಿ ಚಿತ್ರದ ಗಾತ್ರ ಟೆಕ್ನಿಸ್ಕೋಪ್ ಚಿತ್ರದ ಗಾತ್ರದಷ್ಟೇ ಇರುತ್ತದೆ. (ನೋಡಿ : ಚಿತ್ರ ೬)

ಇದೇ ತಂತ್ರ ಅನುಸರಿಸಿ, ಪ್ರೊಜೆಕ್ಟರಿಗೆ ವಿಶೇಷ ಲೆನ್ಸ್ ಬಳಸಿ, ೩೫ ಎಂ.ಎಂ. ನಲ್ಲಿ ಮುದ್ರಿತ 3D ಪ್ರತಿ ಪ್ರದರ್ಶಿಸಿದಾಗ, ಕಾಣಿಸುವ 'ಸಂಯುಕ್ತ ಚಿತ್ರವನ್ನು',



(ಚಿತ್ರ ೫) ಎರಡು ಕಣ್ಣುಗಳಿಂದ ಕಾಣುವ ದೃಶ್ಯದಲ್ಲಿನ ವ್ಯತ್ಯಾಸ



(ಚಿತ್ರ ೬)

ಪೋಲಾರೈಸ್ಡ್ 3D ಕನ್ನಡಕವನ್ನು ಹಾಕಿ, ಸ್ಪಷ್ಟವಾದ, ಸಜೀವಗಾತ್ರದ, ಮೂರನೇ ಆಯಾಮವಾದ ಚಿತ್ರಾನುಭವವನ್ನು ಪಡೆಯಬಹುದು. (ನೋಡಿ : ಚಿತ್ರ ೭)

ಮಲೆಯಾಳಂ ಮೂಲದ 'ಮೈಡಿಯರ್ ಕುಟ್ಟಿಚಾತನ್' ಚಿತ್ರದ ಛಾಯಾಗ್ರಾಹಕರು ದಕ್ಷಿಣದ ಅಶೋಕ್ ಕುಮಾರ್. ಇದರ ನಂತರ ಹಿಂದಿಯಲ್ಲಿ ರೋಮುಸಿಪ್ಪಿ ನಿರ್ಮಾಣದ 'ಶಿವಾ ಕಾ ಇನ್ಸಾಫ್'. ಇದು ಮೊದಲ ಹಿಂದಿಯ 3D ಚಿತ್ರ. ಛಾಯಾಗ್ರಾಹಕರು ಅಶೋಕ್ ಮೆಹತಾ.

ಕನ್ನಡ ಚಿತ್ರರಂಗದಲ್ಲೂ ಎರಡು 3D ಚಿತ್ರಗಳು ನಿರ್ಮಾಣಗೊಂಡು ಬಿಡುಗಡೆಯಾದವು. ೧೯೮೬ರಲ್ಲಿ 'ಕಾಡಿನ ಜಾತ್ರೆ' ಹಾಗೂ ನಂತರ ೧೯೮೮ರಲ್ಲಿ ಬಿಡುಗಡೆಯಾದ 'ಸೂಪರ್ ಬಾಯ್'. ಇವುಗಳ ನಿರ್ದೇಶಕರು ಕ್ರಮಶಃ ಎಸ್. ಎಸ್. ಧನಂಜಯ್ (ದತ್ತು) ಹಾಗೂ ರವಿಕಾಂತ್ ನಗಾಯಿಚ್. ಇದಲ್ಲದ ೧೯೯೯ರಲ್ಲಿ 'ನಮ್ಮ ಭೂಮಿ' ಎಂಬ ಇನ್ನೊಂದು 3D ಚಿತ್ರ ಆರ್. ತ್ಯಾಗರಾಜ್ ನಿರ್ದೇಶನದಲ್ಲಿ ತಯಾರಾಯಿತು.

ಈ ಚಿತ್ರಗಳು ಗಲ್ಲಾ ಪೆಟ್ಟಿಗೆಯಲ್ಲಿ ಮುಗ್ಗರಿಸಿದ ರೀತಿ ಕಂಡು ಚಿತ್ರೋದ್ಯಮದ ಜನರು ಈ ಮಾದರಿ ಚಿತ್ರಗಳ ನಿರ್ಮಾಣದಿಂದ ಬೆದರಿ ದೂರ ಸರಿದರು. ಹೀಗಾಗಿ, ಸುರಿತವರ ಕೈಯಲ್ಲಿ ತಂತ್ರವಾಗಿ ಮೆರೆಯಬೇಕಾದ 3D ಅರಿಯದವರ ಕೈಯಲ್ಲಿ ಕೇವಲ 'ಗಿಮ್ಮಿಕ್' ಆಗಿ ಬಳಕೆಯಾಗಿ, ಸೋಲಿನ ಹಣೆಪಟ್ಟಿಯೊಂದಿಗೆ ಹಿಂದೆ ಸರಿಯಿತು.

೧೯೫೩ರಲ್ಲಿ 'ಹೌಸ್ ಆಫ್ ವ್ಯಾಕ್ಸ್'ನಂತಹ ಯಶಸ್ವಿ 3D ಚಿತ್ರದ ಬಿಡುಗಡೆಯ ೩೦ ವರ್ಷಗಳ ನಂತರ, ೧೯೮೩ರಲ್ಲಿ ಭಾರತಕ್ಕೆ ಮತ್ತೆ ಬಂದ ಈ ಯಶಸ್ವಿ ತಂತ್ರ, ಈಗ ಟಿ.ವಿ. ಚಾನೆಲ್‌ಗಳ ಕಾಟ, ವೀಡಿಯೋ ಕಳ್ಳರ ಹಿಂಸೆ ತಾಳದೇ, ಪ್ರೇಕ್ಷಕರನ್ನು ಚಿತ್ರಮಂದಿರಕ್ಕೆ ಸೆಳೆಯಲು ಇನ್ನೊಮ್ಮೆ ಮೈಕೊಡವಿಕೊಂಡು ಬಂದರೂ ಬರಬಹುದು.

ಸರ್ಕಾರ ಮತ್ತು ಸಿನಿಮಾ

ಸಿನಿಮಾದಂತಹ ಕ್ಲಿಷ್ಟ, ಸಾಮೂಹಿಕ ಕಲೆಯ ವಿಭಿನ್ನ ತಂತ್ರಗಾರಿಕೆಯನ್ನು ಗುರುತಿಸಬೇಕಾದ ಹೊಣೆ ವಿಮರ್ಶಕ, ಚಿತ್ರಸಮಾಜ (ಫಿಲಂ ಸೊಸೈಟಿ) ಹಾಗೂ ಪ್ರೇಕ್ಷಕರಿಗೆ ಸೇರಿದ್ದು. ಚಿತ್ರರಂಗದ ಪ್ರಗತಿಗೆ ನೀಡಿದ ತಂತ್ರಗಾರಿಕೆಯನ್ನು ಗುರುತಿಸಿ ಪುರಸ್ಕರಿಸಬೇಕಾದ ಹೊಣೆ ಸರ್ಕಾರದ್ದು. ಆದರ...

೧೯೫೬ರಲ್ಲಿ ಭಾರತದ ರಾಜ್ಯಗಳ ಪುನರ್ ರಚನೆಯಾಯಿತು. ನಮ್ಮಲ್ಲಿ ಸುಮಾರು ಸಾವಿರದ ಒಂಭೈನೂರ ಆರುವತ್ತರಿಂದ ಸರ್ಕಾರದ ಸಾಧನೆಗಳ ಪ್ರಚಾರಕ್ಕಾಗಿ ವಾರ್ತಾ ಮತ್ತು ಪ್ರಚಾರ ಇಲಾಖೆ ವೃತ್ತಚಿತ್ರ ಹಾಗೂ ಸಾಕ್ಷ್ಯಚಿತ್ರ ನಿರ್ಮಿಸುತ್ತಿದೆ. ಅಂದರೆ ನಮ್ಮ ರಾಜ್ಯ ಸರ್ಕಾರಕ್ಕೆ ಸಿನಿಮಾ ಮಾಧ್ಯಮದ ಮಹತ್ವ, ಪ್ರಭಾವದ ಅರಿವಿದೆ. ಆದರೆ ಅದು ಕನ್ನಡ ಚಿತ್ರಗಳಿಗೆ ಪ್ರಶಸ್ತಿ ನೀಡಲಾರಂಭಿಸಿದ್ದು ೧೯೬೬-೬೭ರಲ್ಲಿ. ಹಾಗೂ ಸಹಾಯಧನವನ್ನು ಇದೇ ಕಾಲದಲ್ಲಿ ನೀಡಲು ಆರಂಭಿಸಿತು. ತಂತ್ರಜ್ಞರಿಗೆ ವಿಶೇಷ ಪ್ರಶಸ್ತಿಗಳನ್ನು ನೀಡುವ ಪರಂಪರೆ ಬೆಳೆಸಿಕೊಂಡದ್ದು ೧೯೮೦ರ ನಂತರ, ಅದೂ ಸಹ ಪ್ರಶಸ್ತಿ ಸಮಿತಿ ಅಂತಹ ಒಂದು ಸಲಹೆ ಮುಂದೆ ಇಟ್ಟಿದ್ದರಿಂದ. ಶಾಶ್ವತವಾದ, ದೀರ್ಘಕಾಲೀನ ಹಾಗೂ ದೂರದೃಷ್ಟಿಯ ಚಿಂತನೆಯ ಅಭಾವದಿಂದಾಗಿ ನಾವು 'ರಾಜ್ಯ ಚಲನಚಿತ್ರ ಭಂಡಾರ' (ಸ್ಟೇಟ್ ಫಿಲಂ ಆರ್‌ಕೈವ್) ಆರಂಭಿಸಿದ್ದು ೧೯೮೦ರಲ್ಲಿ. ಇದೇ ನಿರ್ಣಯ ಸ್ವಲ್ಪ ಮೊದಲೇ ಕೈಗೊಂಡಿದ್ದರೆ ಬಹುಶಃ ಒಂದಷ್ಟು ಅಮೂಲ್ಯವಾದ ಚಿತ್ರಗಳನ್ನು ನಾವು ಉಳಿಸಿಕೊಳ್ಳಲು ಸಾಧ್ಯವಾಗುತ್ತಿತ್ತು.

ಈಗಲೂ ಸಹ ಅಪರೂಪದ ಚಿತ್ರಗಳನ್ನು ಕೊಳ್ಳುವ, ರಕ್ಷಿಸುವ ಅದರ ನಿರ್ಣಯ, ಆಮೆ ನಡಿಗೆಯ ಕ್ರಮ ಎನ್ನಬಹುದು.

ದೃಶ್ಯ ಸಂಸ್ಕೃತಿ

ಯಾವುದೇ ಒಂದು ದೇಶದ ಜನತೆಗೆ, ಅವರ ಶಿಕ್ಷಣದ ಮಟ್ಟ, ಸಾಂಸ್ಕೃತಿಕ ಬದುಕಿನ ಹಿನ್ನೆಲೆ, ಪರಸ್ಪರರ ಒಡನಾಟ ಆಧರಿಸಿ, ಪ್ರತಿಯೊಬ್ಬರಿಗೂ ಅವರದೇ ಆದ ಒಂದು ದೃಶ್ಯ ಸಂಸ್ಕೃತಿ (visual culture) ಇರುತ್ತದೆ. ಈಗ ಕೆಲವು ದಶಕಗಳ ಹಿಂದೆ, ಗ್ರಾಮೀಣ ಕ್ಷೇತ್ರದಲ್ಲಿ ಒಬ್ಬ ನಾಗರಿಕ ಚಿತ್ರಮಂದಿರಕ್ಕೆ ಹೋದರೆ, ಅದನು ಬಾಯಿಬಿಟ್ಟು ಬೆದರುಗಣ್ಣುಗಳಿಂದ ಚಿತ್ರ ನೋಡುತ್ತಿದ್ದನೆ ಹೊರತು, ಅವುಗಳನ್ನು ಗ್ರಹಿಸಿ (grasp) ಅರ್ಥೈಸಿಕೊಳ್ಳಲು ಆಗುತ್ತಿರಲಿಲ್ಲ. ಅವನಿಗೆ ಎಲ್ಲವೂ ಬೇಗ ಬೇಗ ಬಂದು ಹೋಗುವ ಬೊಂಬೆಗಳಾಗಿದ್ದವು. ಅಲ್ಲಿ ನಡೆಯುವ ಘಟನೆ, ಮಾತನ್ನು ಅರ್ಥೈಸಿ ಹೇಳಲು ಅವನಿಗಿಂತಲೂ ಉತ್ತಮ ದೃಶ್ಯ ಸಂಸ್ಕೃತಿ ಇರುವ ವ್ಯಕ್ತಿಯ ನೆರವು ಬೇಕಾಗುತ್ತಿತ್ತು.

ಈ ನ್ಯೂನತೆಯನ್ನು ಸರಿಪಡಿಸಲು ಬೇಕಾದಂತಹ ಚಿಕಿತ್ಸೆ ಎಂದರೆ, ಹೆಗ್ಗೋಡಿನ ನೀನಾಸಂ ಮಾದರಿಯ, ಗ್ರಾಮೀಣ ಕ್ಷೇತ್ರದ ಜನತೆಗೆ ಪುನಃ ಪುನಃ ಉತ್ತಮ ಚಿತ್ರ ತೋರಿಸಿ ಚರ್ಚಿಸಿ, ಅದನ್ನು ಗ್ರಹಿಸಲು ಮಾನಸಿಕ ತರಬೇತಿ ನೀಡುವ ಕಾರ್ಯಕ್ರಮ. ಆದರ ನಮ್ಮಲ್ಲಿ ಪ್ರೇಕ್ಷಕನ ದೃಶ್ಯ ಸಂಸ್ಕೃತಿ ಬೆಳೆಸುವುದೇ ಸಾಧ್ಯವಿಲ್ಲದಾಗ, ಇನ್ನು ಅವನು ಉತ್ತಮ ಚಿತ್ರದ ತಂತ್ರಜ್ಞಾನ ಗುರುತಿಸುವನೆಂದು ನಿರೀಕ್ಷಿಸುವುದು ಅರ್ಥಹೀನ ಎನ್ನಬಹುದು.

ದೂರದರ್ಶನವು ಸತತವಾಗಿ ದೇಶವ್ಯಾಪಿ ಕಾರ್ಯಕ್ರಮಗಳನ್ನು ಪ್ರದರ್ಶಿಸಿ, ದೇಶದ ಜನತೆಯಲ್ಲಿ 'ದೃಶ್ಯ ಸಂಸ್ಕೃತಿ' ಮೂಡಲು ಕಾರಣವಾಗಿದೆ ಎನ್ನುವುದರಲ್ಲಿ ಯಾವ ಸಂಶಯವೂ ಇಲ್ಲ. ಈಗ ಇತರೇ ಟಿವಿ ವಾಹಿನಿಗಳು ಆ ದೃಶ್ಯ ಸಂಸ್ಕೃತಿಗೆ ಒಂದು ಪರಿಪಕ್ವತೆ, ಮೆರಗು ನೀಡುತ್ತಿವೆ ಎನ್ನುವುದು ಅಷ್ಟೇ ಸತ್ಯ. ಆದರೆ ಟಿವಿ ವಾಹಿನಿಗಳು ಸಹ, ವೀಕ್ಷಕರು ತಮ್ಮ ದೃಶ್ಯ ಸಂಸ್ಕೃತಿಯ ಬಲದ ಆಧಾರದ ಮೇಲೆ, ವೀಕ್ಷಿಸುತ್ತಿರುವ ಕಾರ್ಯಕ್ರಮದ ಮುಂದಿನ ಭಾಗವನ್ನು ಊಹಿಸಿದರೆ, ಆಸಕ್ತಿ ಕಳೆದುಕೊಳ್ಳುವ ಸಾಧ್ಯತೆಗಳಿರುವುದರಿಂದ, ಅವರ ಚಿತ್ತವನ್ನು ಹಿಡಿದಿಡಲು, ತಮ್ಮ ಕಾರ್ಯಕ್ರಮಗಳಿಗೆ ಅಮೂರ್ತ, ಅತಾರ್ಕಿಕ, ಅಸಹಜ, ಅನಪೇಕ್ಷಿತ, ಅಸಂಗತ ದೃಶ್ಯ ಬಂಧ (Absurd and abstract visual structure) ರಚನೆಯ ಪದ್ಧತಿ ಪಾಲಿಸುತ್ತಿದ್ದಾರೆ. ಹೀಗಾಗಿ ಸುಶಿಕ್ಷಿತರು, ಸಿನಿಮಾ ಹಾಗೂ ಇತರೆ ಕಲೆಗಳಲ್ಲಿ ಆಸಕ್ತಿ ಹೊಂದಿರುವವರು ಸಹ ಎಂ-ಟಿವಿ, ವಿ-ಚಾನೆಲ್ ಕಾರ್ಯಕ್ರಮಗಳನ್ನು ಬೆರಗು ಕಣ್ಣುಗಳಿಂದ ನೋಡುವಂತಾಗಿದೆ. ಹಿಂದೀ ಚಿತ್ರಗಳು ಸಹ ಇದೇ ತತ್ವ ತಮ್ಮ ಚಿತ್ರದ ಹಾಡುಗಳ ಚಿತ್ರೀಕರಣದಲ್ಲಿ



(ಚಿತ್ರ ೭) ಎರಡು ಕಣ್ಣುಗಳಿಂದ ಕಾಣುವ ದೃಶ್ಯದಲ್ಲಿನ ವ್ಯತ್ಯಾಸ

ಅನುಸರಿಸುತ್ತಿವೆ. ಈ ಗಾಳಿ ಪ್ರಾದೇಶಿಕ ಚಿತ್ರರಂಗದತ್ತ ಬೀಸಿದರೆ ಯಾರೂ ಅಚ್ಚರಿ ಪಡಬೇಕಿಲ್ಲ. ಕನ್ನಡದವರು ಇದಕ್ಕಾಗಿ ಕನಲಬೇಕಿಲ್ಲ.

ಸರ್ಕಾರದ ದೂರದರ್ಶಿತನದ ಅಭಾವದ ಪರಿಣಾಮವಾಗಿ ಚಿತ್ರರಂಗ, ತನ್ನ ತಾಂತ್ರಿಕ ಸಮೃದ್ಧಿಗೆ ಒದಗಿಬಂದ ಒಂದೆರಡು ಅವಕಾಶಗಳನ್ನು ಕಳೆದುಕೊಂಡುದರ ಚರ್ಚೆ ಇಲ್ಲಿ ಅತೀ ಅಗತ್ಯ.

೧೯೬೦ರಲ್ಲಿ ಮಹಾರಾಷ್ಟ್ರದ ಎಸ್.ಕೆ. ಪಾಟೀಲ್ ಅಧ್ಯಕ್ಷತೆಯಲ್ಲಿ ಭಾರತ ಸರ್ಕಾರ ರಚಿಸಿದ ಸಮಿತಿಯು ತನ್ನ ವರದಿಯಲ್ಲಿ, ಫಿಲಂ ತಂತ್ರಜ್ಞಾನ ತರಬೇತಿ ಶಿಕ್ಷಣ ಕೇಂದ್ರ (institute) ತೆರೆಯಲು ಬೆಂಗಳೂರು ನಗರ ಯೋಗ್ಯ ಸ್ಥಳವೆಂದು ಸೂಚಿಸಿತು. ಭಾರತದಲ್ಲಿ ಪ್ರಥಮ ಸಿನಿಮಾಟೋಗ್ರಫಿ, ಧ್ವನಿ ಗ್ರಹಣ ತರಬೇತಿ ಕೇಂದ್ರ ಹೊಂದಿದ ಬೆಂಗಳೂರು ಶ್ರೀ ಜಯಚಾಮರಾಜೇಂದ್ರ ಪಾಲಿಟೆಕ್ನಿಕ್ ಸಂಸ್ಥೆಯು ತಂತ್ರಪರಿಕರ ಆಧುನಿಕಗೊಳಿಸಿ, ರಾಷ್ಟ್ರಮಟ್ಟದ ತರಬೇತಿ ಕೇಂದ್ರ ಆರಂಭಿಸಲು ಸಲಹೆ ನೀಡಿತು. ಆದರೆ ಅಂತಿಮವಾಗಿ ಈ ಸಂಸ್ಥೆ ಪೂನಾದಲ್ಲಿ ಅಸ್ತಿತ್ವಕ್ಕೆ ಬಂದಿತು.

ಇದರ ನಂತರ ಕಚ್ಚಾ ಫಿಲಂ ತಯಾರಿಸುವ ಹಿಂದುಸ್ತಾನ ಫೋಟೋ ಫಿಲಂಸ ಕೈಗಾರಿಕಾ ಘಟಕ ಆರಂಭಿಸಲು ಮಂಡ್ಯ ಜಿಲ್ಲೆ ಯೋಗ್ಯ ಕೇಂದ್ರವೆಂದು ಭಾರತ ಸರ್ಕಾರದವರು ತೀರ್ಮಾನಿಸಿದರು. ಆಗ ಅವರಿಗೆ ಸೂಕ್ತ ಸ್ಥಳ, ಬೆಂಬಲ ನೀಡದೆ ಕಾಲಹರಣ ಮಾಡಿ, ಈ ಅವಕಾಶ ತಮಿಳುನಾಡಿಗೆ ನೀಡಿದಾಗ, ಈ ಉದ್ಯಮ ಊಟಿಯಲ್ಲಿ ನೆಲೆಗೊಂಡಿತು.

ಇತ್ತೀಚೆಗೆ 'ಭಾರತೀಯ ಮಕ್ಕಳ ಚಿತ್ರ ಸಮೂಹ ಸಮುಚ್ಚಯ' (Children Film Society Complex) ಸ್ಥಾಪನೆಗ ಅಡಿಗಲ್ಲು ಹಾಕಿದ ನಂತರವೂ, ಪರ್ಯಾವರಣ ನೆಪದಲ್ಲಿ ಹೇಳಿಕ ನೀಡಿ, ಹಗರಣ ಮಾಡಿ, ಈ ಅವಕಾಶವನ್ನು ಆಂಧ್ರ ಪ್ರದೇಶಕ್ಕೆ ನೀಡಿ, ಅದೂ ಹೈದರಾಬಾದಿನಲ್ಲಿ ನೆಲೆಸುವಂತಾಯಿತು.

ಭಾರತದಲ್ಲೇ ಪ್ರಥಮವಾಗಿ ೧೯೬೮ರಲ್ಲಿ 'ಕರ್ನಾಟಕ ರಾಜ್ಯ ಚಲನ ಚಿತ್ರ ಅಭಿವೃದ್ಧಿ ನಿಗಮ' ಸ್ಥಾಪಿಲಾಯಿತು (K.F.I.D.C). ೧೯೭೦ರಲ್ಲಿ ಆಧುನಿಕ ತಂತ್ರಜ್ಞಾನ ಹೊಂದಿದ 'ಆ್ಯರಿ ಬಿ ಎಲ್ ಕ್ಯಾಮರಾ, ನಾಗರಾ ಹಾಗೂ ಮೇಕಪ್ ಕೋಣೆ ಸಹಿತವಿರುವ ಹೊರಾಂಗಣ ಘಟಕ ವಾಹನವನ್ನು ಕೊಂಡು ತಂದಿತಲ್ಲದೆ, ಸಂಕಲನಕ್ಕಾಗಿ ಅತ್ಯಾಧುನಿಕ ಸ್ಟೀನ್‌ಬೆಕ್ ಸಂಕಲನ ಯಂತ್ರ ಉದ್ಯಮಕ್ಕೆ ಒದಗಿಸಿತು. ಇಲ್ಲಿಯ ಸೌಲಭ್ಯ ಬಳಸಿದರೆ ಸಾಲ ರೂಪವಾಗಿ ನೀಡಲು, ಸಬ್ಸಿಡಿಯನ್ನು ಅದಕ್ಕ ಒತ್ತೆ ಇಡುವಂತೆ ಅನುಕೂಲಕರ ಸರ್ಕಾರಿ ಆಜ್ಞೆ ಪತ್ರ (Government Order) ಸಹ ರಚಿಸಿತು. ಆದರೆ ನಮ್ಮ ಚಿತ್ರರಂಗ ಮಾತ್ರ ಈ ಸಂಸ್ಥೆಯೊಡನೆ ಎಂದೂ ಸ್ಪಂದಿಸಲಿಲ್ಲ. ಇದಕ್ಕೆ ಅಪವಾದ ಕಟ್ಟೆರಾಮಚಂದ್ರರ ಚಿತ್ರ 'ಅರಿವು'.

'ಆ್ಯರಿಫ್ಲೆಕ್ಸ್' ಕ್ಯಾಮರಾ ಚಲಿಸಿದೊಡನೆ ಕರ್ರ್ ಎಂದು ಕರ್ಕಶವಾಗಿ ಮಾಡುವ ಸದ್ದೇ ಕಲಾವಿದರಿಗೆ ಸ್ಫೂರ್ತಿಯ ಸೆಲೆ ಆಗಿದ್ದರಿಂದ ಕೆ.ಎಫ್.ಐ.ಡಿ.ಸಿ.ಯ ಸದ್ದುಗದ್ದಲವಿಲ್ಲದೆ ಓಡುವ ಆಧುನಿಕ 'ಆ್ಯರಿ ಬಿ ಎಲ್' ಕ್ಯಾಮರಾ ಕಲಾವಿದರಿಗೆ ಒಂದು ಕುಂದು ಎನಿಸತೊಡಗಿತು. ಹಾಡಿನ ಚಿತ್ರೀಕರಣಕ್ಕೆ ಮಾತ್ರ ನಾಗರಾ ಘಟಕ ಆಗೊಮ್ಮೆ ಈಗೊಮ್ಮೆ ಬಳಸತೊಡಗಿದರು. ಆಧುನಿಕ ಸಂಕಲನ ಯಂತ್ರ ಮುಟ್ಟಲು ಚಿತ್ರರಂಗದ ಹಳೆಯ ತಲೆಮಾರು ಸಿದ್ಧವೇ ಇರಲಿಲ್ಲ. ಆದರೆ ಹೊರನಾಡಿನಿಂದ ಬಂದವರು ಇವುಗಳನ್ನು ಅತಿಯಾಗಿ ಉಪಯೋಗಿಸಿ, ಇವುಗಳ ಸಾಮಯಿಕ ದುರಸ್ತಿ, ಸೇವೆ (maintainance) ಸಾಲದೆ, ಈ ಉಪಕರಣಗಳು, ಒಂದೊಂದೇ ತಮ್ಮ ಸ್ವರೂಪ, ಗುಣಮಟ್ಟ ಕಳೆದುಕೊಂಡವು. ಹೊರಾಂಗಣ ಘಟಕವನ್ನು ಮಾರಲಾಯಿತು. ಸಂಸ್ಥೆ ನಾಲ್ಕು ಕನ್ನಡ ಚಿತ್ರಗಳ ನಿರ್ಮಾಣಕ್ಕೆ ಧನಸಹಾಯ ಮಾಡಿದ್ದೇ ತಪ್ಪು ಹೆಜ್ಜೆಯಾಗಿ ಬಹಳ ನಷ್ಟವಾಯಿತು. ಮೂವತ್ತು ವರ್ಷದಿಂದ ಅಸ್ತಿತ್ವದಲ್ಲಿದ್ದರೂ ಈ ಸಂಸ್ಥೆ ತನ್ನದೇ ಆದ ಒಂದು ಸ್ವಂತ ಕಟ್ಟಡ ಹೊಂದಿಲ್ಲ. ಕರ್ನಾಟಕ ಸರ್ಕಾರ ಅದಕ್ಕೆ ಕಂಠೀರವ ಸ್ಟುಡಿಯೋ ಹಾಗೂ ಪುಟ್ಟಣ್ಣ ಚಿತ್ರಮಂದಿರವನ್ನು ವಹಿಸಿ, ಅದರಿಂದ ಬರುವ ಸಂಪಾದನೆ ಹಾಗೂ ಸರ್ಕಾರದ ವಾರ್ತಾ ಇಲಾಖೆಯೊಡನೆ ಸ್ಪರ್ಧಿಸಿ ಸೆಣಸಾಡಿ ತಂದ ಸಾಕ್ಷ್ಯ ಚಿತ್ರಗಳ ನಿರ್ಮಾಣವೇ - ಈಗ ಅದರ ಜೀವಾಳವಾಗಿದೆ. ಇದುವರೆಗೆ ಚಿತ್ರರಂಗದಿಂದ ಕೇವಲ ಇಬ್ಬರನ್ನು ಮಾತ್ರ ಅಧ್ಯಕ್ಷರನ್ನಾಗಿ (ಅರಸುಕುಮಾರ್ ಹಾಗೂ ಬಿ. ಸರೋಜಾದೇವಿ) ಹೊಂದಿದ ಈ ಸಂಸ್ಥೆ ಎಂದೂ ಪ್ರಶಸ್ತಿ ಸಮಿತಿಗಳಲ್ಲಾಗಲಿ, ರೀಮೇಕ್, ಡಬ್ಬಿಂಗ್ ನಿರ್ಧರಿಸುವ ಸಮಿತಿಯಲ್ಲಾಗಲಿ, ಸಬ್ಸಿಡಿ ನೀಡುವ ಕಮಿಟಿಯಲ್ಲಾಗಲಿ ಪ್ರಾತಿನಿಧ್ಯ ಪಡೆಯಲಿಲ್ಲ. ಇಲ್ಲಿ ವ್ಯವಸ್ಥಾಪಕ ನಿರ್ದೇಶಕರಾಗಿ ಬರುವ ಅನೇಕ ಐ.ಎ.ಎಸ್., ಐ.ಪಿ.ಎಸ್. ಅಧಿಕಾರಿಗಳಿಗೆ ಸಿನಿಮಾ ತಂತ್ರ ತರಬೇತಿ ಕೇಂದ್ರವಾಗಿಯೂ ಅಥವಾ ನಿವೃತ್ತಿಯ ಹಂತದಲ್ಲಿರುವ ಅಧಿಕಾರಿಗಳಿಗೆ ಪುನರ್ವಸತಿ ಕೇಂದ್ರವಾಗಿಯೂ ಈ ಸಂಸ್ಥೆ ಉಸಿರಾಡುತ್ತಿದೆ. ಇತ್ತೀಚೆಗೆ 'ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್' (I.I.M.S) ಇದರ ಸಂಪೂರ್ಣ ಇತಿಹಾಸ ಅಧ್ಯಯನ ಮಾಡಿ, ಈ ಸಂಸ್ಥೆಯನ್ನು ಮುಚ್ಚುವುದೇ ಕ್ಷೇಮಕರವೆಂದು ವರದಿ ಸಲ್ಲಿಸಿತು. (Film City) ಚಿತ್ರನಗರ ನಿರ್ಮಾಣಕ್ಕೆ ನೀಡಲಾಗಿರುವ ಹೆಸರುಘಟ್ಟದ ಬಳಿಯ ಮುನ್ನೂರು ಎಕರೆ ಜಮೀನನ್ನು ವರ್ಷ ವರ್ಷ ಒಂದೆರಡು ಎಕರೆ ಮಾರಿ, ಈ ಸಂಸ್ಥೆಯನ್ನು ಸಾಕುವ ಬೇಡಿಕೆಯನ್ನು ಸರ್ಕಾರದ ಮುಂದಿಡಲಾಗಿದೆ. ಇವುಗಳ ನಡುವೆ ಚಿತ್ರ ನಿರ್ಮಾಣಕ್ಕೆ ಬೇಕಾದ ಸೌಲಭ್ಯಗಳ ಜಾಲ (infrastructure) ಹೊಂದುವ ಬಯಕೆ ಒಂದು ಕನಸಷ್ಟೇ.

ಆಕಾಶವಾಣಿ

ಎಲ್ಲ ಸರ್ಕಾರಗಳು ಯಾವುದೇ ಬದಲಾವಣೆಗೆ ಒಳಗಾಗದ ಬಾಹುಬಲಿ ಇದ್ದಂತೆ. ಯಾವುದೋ ಓಬಿರಾಯನ ಕಾಲದಲ್ಲಿ ಆಕಾಶವಾಣಿಯಲ್ಲಿ ಕನ್ನಡ ಸಿನಿಮಾ ಹಾಡಿನ ಡಿಸ್ಕ್‌ಗಳನ್ನು ಬಳಸುವ ಪದ್ಧತಿ ಜಾರಿಯಲ್ಲಿ ಬಂದರೆ, ಅದು ನಂತರ ಚಿತ್ರರಂಗವು ಆಡಿಯೋ ಕ್ಯಾಸೆಟ್, ಆಡಿಯೋ ಸಿ.ಡಿ.ಯಂತಹ ಆಧುನಿಕ ತಂತ್ರಜ್ಞಾನ ಬಳಸಿದರೂ, ಆಕಾಶವಾಣಿ ಮಾತ್ರ ಇದೇ ತಾಂತ್ರಿಕ ನೆಪದಿಂದಾಗಿ ಕನ್ನಡ ಚಿತ್ರಗೀತೆಗಳನ್ನು ಬಿತ್ತರಿಸುತ್ತಲೇ ಇಲ್ಲ. ಕೇವಲ ಆಕಾಶವಾಣಿಯ ಪ್ರಚಾರಕ್ಕಾಗಿ ಡಿಸ್ಕ್ ಮಾಡಲು ನಿರ್ಮಾಪಕನು ನಿರ್ಣಯ ಕೈಗೊಳ್ಳಬೇಕು. ಇದು ಸಾಧ್ಯವೇ ? ಆಧುನಿಕ ಆಡಿಯೋ ಕ್ಯಾಸೆಟ್‌ಗಳ ಮೇಲೆ ಸ್ಟುಡಿಯೋಗಳಲ್ಲಿ ಮೂಲ ಹಾಡುಗಳನ್ನೇ ಧ್ವನಿ ಮುದ್ರಣಕ್ಕಾಗಿ ಬಳಸುತ್ತಿರುವಾಗ, ಇದನ್ನು ಆಕಾಶವಾಣಿ ಪ್ರಸಾರ ಮಾಡಲು ಯಾಕೆ ಬಳಸಬಾರದು ಎಂಬುದಕ್ಕೆ ಯಾವ ತಂತ್ರಜ್ಞನೂ ಉತ್ತರಿಸುವುದಿಲ್ಲ.

ಈಗಿನ ತಾಂತ್ರಿಕ ಪರಿಸರ : ಚಿತ್ರರಂಗ ತನ್ನ ಕಾಲಮೇಲೆ ತಾನು ನಿಲ್ಲಲು ಪ್ರಯತ್ನಿಸಿದೆ. ತುಸು ಮಟ್ಟಿಗೆ ಯಶಸ್ವಿಯೂ ಆಗಿದೆ. ಇಂದು ಚಿತ್ರರಂಗ ತಾಂತ್ರಿಕವಾಗಿ ಅಗಾಧವಾಗಿ ಬೆಳೆದಿದೆ, ಹೊಸ ಪರಿಕರದ ಬಳಕೆ, ಹೊಸ ಚಿಂತನೆ ಇಣುಕುತ್ತಿದೆ. ಹೊಸತನಕ್ಕಾಗಿ ಹುಡುಕಾಟ ಸತತವಾಗಿ ನಡದೇ ಇದೆ. ನಿರೀಕ್ಷಿಸಲಾಗದ ಅನಿಶ್ಚಿತ ಮನೋಭಾವದ ಪ್ರೇಕ್ಷಕನನ್ನು ಹಿಡಿದಿಡಲು ಅವನನ್ನು ಚಿತ್ರಮಂದಿರಕ್ಕೆ ಆಕರ್ಷಿಸಲು, ಮಾತತ್ತಿವರೆ ಕೋಟಿ ರೂಪಾಯಿ ಬಂಡವಾಳದ ಶ್ರೀಮಂತಿಕೆಯ ಚಿತ್ರಗಳು ನಿರ್ಮಾಣಗೊಳ್ಳುತ್ತಿವೆ. ಇದರ ಫಲವಾಗಿ ದೊಡ್ಡ ಸ್ವರೂಪದ ೩೫ ಎಂ.ಎಂ.ನಿಂದ ಆರಂಭಿಸಿ ಸಿನಿಮಾ ಸ್ಕೋಪ್, ೭೦ ಎಂ.ಎಂ, 3D ಚಿತ್ರ ನಿರ್ಮಾಣದ ಹಂತ ತಲುಪಿದ್ದೇವೆ. ದೊಡ್ಡ ಪರದೆಯ ಮೇಲೆ ಮೈ ಝುಂ ಎನ್ನುವ ಧ್ವನಿ ವಿಶೇಷತೆ ನೀಡಲು ಆಧುನಿಕ ಧ್ವನಿಗ್ರಹಣ ತಂತ್ರದ ಸ್ಟೀರಿಯೋ ಫೋನಿಕ್, ಡಾಲ್ಬಿ ಪದ್ಧತಿ, ಡಿ.ಟಿ.ಎಸ್. ಪದ್ಧತಿ ಅಳವಡಿಸುತ್ತಿದ್ದೇವೆ. ಕಂಪ್ಯೂಟರ್ ಬಳಸಿ ದೃಶ್ಯ ವಿಶೇಷ ಪ್ರಭಾವ (graphics) ನಿರ್ಮಿಸುತ್ತಿದ್ದೇವೆ. ಇಂದು ಚಿತ್ರೀಕರಣಕ್ಕೆ ಒಂದಕ್ಕಿಂತಲೂ ಹೆಚ್ಚು ಕ್ಯಾಮರಾಗಳ ಬಳಕೆ, ಸಂಗೀತದ ಧ್ವನಿ ಮುದ್ರಣಕ್ಕೆ ಎಲೆಕ್ಟ್ರಾನಿಕ್ ವಾದ್ಯಗಳು, ಹಾಡುಗಳನ್ನು ಆಡಿಯೊ ಸಿ.ಡಿ.ಗಳಲ್ಲಿ ಪ್ರತಿ ಮಾಡಿ ಮಾರುಕಟ್ಟೆಗೆ ಅದ್ದೂರಿ ಸಮಾರಂಭದ ನಂತರ ಬಿಡುಗಡೆ ಮಾಡುತ್ತಿದ್ದೇವೆ. ಚಿತ್ರದ ಬಿಡುಗಡೆ ಪೂರ್ವ ಪ್ರಚಾರಕ್ಕೆ ರೇಡಿಯೋ, ಟಿ.ವಿ.ಯ ಹಂತ ದಾಟಿ ವೆಬ್-ಇಂಟರ್‌ನೆಟ್ ತಲುಪಿದ್ದೇವೆ. ಇಷ್ಟಾದರೂ, ಯಾವುದೇ ಉತ್ತಮ ಚಿತ್ರದ ಉಸಿರಾಗಿರುವ ಕಥೆಯಲ್ಲಿ ಹೊಸತನವೇ ಇಲ್ಲದ್ದರಿಂದ, ಪ್ರಾಣವಿಲ್ಲದ ದೇಹಕ್ಕೆ ಶೃಂಗಾರ ಮಾಡಿದಂತೆ ಕಾಣುತ್ತಿರುವ ಇಂತಹ ಚಿತ್ರಗಳನ್ನು ಪ್ರೇಕ್ಷಕರು ಸಾರಾಸಗಟಾಗಿ ತಿರಸ್ಕರಿಸುತ್ತಿದ್ದಾರೆ. ಇದರಿಂದ ಚಿತ್ರರಂಗ ಮತ್ತೆ ಅನಿಶ್ಚಿತತೆ, ಮೂಢನಂಬಿಕೆ, ಹೊಸತನಕ್ಕೆ ಹಿಂಜರಿತ, ವಲಸೆ ಹೋಗುವಿಕೆ, ಇಂತಹ ವಾಮಮಾರ್ಗಗಳನ್ನು ಅನುಸರಿಸುತ್ತಿದೆ.

ಏನಾದರೂ ಮಾಡಿ ಪ್ರೇಕ್ಷಕ ಚಿತ್ರ ಮಂದಿರಕ್ಕೆ ಬರಲಿ, ಒಮ್ಮೆಯಾದರೂ ತನ್ನ ಚಿತ್ರ ನೋಡಲಿ ಎಂಬ ಉದ್ದೇಶದಿಂದ, ಅದ್ದೂರಿ ಮುಹೂರ್ತ ಕಾಲದಿಂದಲೇ ತನ್ನ ಚಿತ್ರದಲ್ಲಿರುವ ವಿಶೇಷತೆ, ತಾನು ಇತರರಿಗಿಂತ ಭಿನ್ನ, ತಾನು ಈ ರೀತಿ ಮಾಡುತ್ತಿರುವ ಮೊದಲಿಗ, ಮೊದಲ ಚಿತ್ರ ಇತ್ಯಾದಿ ಹೆಗ್ಗಳಿಕೆ ಪ್ರಚಾರ ಮಾಡಿ, ಪತ್ರಿಕೆಗಳಲ್ಲಿ ಬರೆಸಿ, ಪೋಸ್ಟರ್‌ಗಳಲ್ಲಿ ಮುದ್ರಿಸಿ ವಿವಿಧ ಮಾರಾಟ ತಂತ್ರ ಬಳಸಿದ್ದಾನೆ. ಇಂದು ಆ ರೀತಿಯ ಮಾರಾಟ ತಂತ್ರದ ಸಾಹಿತ್ಯಗಳೇ ನಮಗೆ ಕನ್ನಡ ಚಿತ್ರರಂಗದ ತಾಂತ್ರಿಕತೆ ಗುರುತಿಸಲು ಇರುವ ಮೈಲಿಗಲ್ಲುಗಳು. ಇವುಗಳಲ್ಲಿ ಕೆಲವು ವಿಶೇಷಣಗಳ ಸತ್ಯಾಸತ್ಯತೆ, ನಿಖರತೆ, ಅನುಮಾನಾಸ್ಪದ, ಕೆಲವೊಮ್ಮೆ ಪೊಳ್ಳು ಎಂಬ ಆಪಾದನೆ ಇದ್ದರೂ ಇವುಗಳ ಚರ್ಚೆ ಆರೋಗ್ಯಕರವೆಂದೇ ಭಾವಿಸಬಹುದು.



ಬಿಂಬಕ್ಕೆ ಕಂಠದಾನ

ಜನಪ್ರಿಯ ತಾರೆ ರಾಜಕುಮಾರ್ ನಟಿಸಿದ, ಬಹುದಿನಗಳಿಂದ ಅಭಿಮಾನಿಗಳು ನಿರೀಕ್ಷಿಸಿದ್ದ ಚಿತ್ರ 'ಶಬ್ದವೇಧಿ' ನಗರದ ಚಿತ್ರಮಂದಿರದಲ್ಲಿ ನಡೆಯುತ್ತಿತ್ತು. ಜನ ತಲ್ಲೀನರಾಗಿ ನೋಡುತ್ತಿದ್ದರು. ಮಧ್ಯದಲ್ಲಿ ಕೆಲ ಕ್ಷಣಗಳ ಕಾಲ ಧ್ವನಿಯಲ್ಲಿ ಏರುಪೇರಾಯಿತು. ಜನಕ್ಕೆ ಬೇಸರ. ಸಿಳ್ಳೆ ಹಾಕಿತು, ಕೂಗಾಡಿತು. ಧ್ವನಿ ಸರಿ ಹೋಯಿತು. ಆದರೆ ಒಂದೆರಡು ಕ್ಷಣಗಳಲ್ಲಿ ಧ್ವನಿ ಮತ್ತೆ ನಾಪತ್ತೆ. ಬಹಳ ಹೊತ್ತಿನ ತನಕ ಬರಲೇ ಇಲ್ಲ. ಪ್ರೇಕ್ಷಕರು ಸಹನೆ ಕಳೆದುಕೊಂಡು ಮಾಡಿದ ದೊಂಬಿಗೆ ಲಕ್ಷಾಂತರ ರೂಪಾಯಿಗಳ ಪೀಠೋಪಕರಣ ಹಾನಿಯಾಯಿತು. ಇದರಲ್ಲಿ ದೋಷ, ಚಿತ್ರದ ಮೇಲೆ ಧ್ವನಿ ಮುದ್ರಣ ಮಾಡಿದ ವರ್ಣ ಸಂಸ್ಕರಣ ಘಟಕದ್ದೋ (Lab), ಅಥವಾ ಅದನ್ನು ಮರು ಉತ್ಪಾದಿಸಿದ (Reproduce) ಪ್ರೊಜೆಕ್ಟರ್ (Projector)ದ್ದೋ, ಅಥವಾ ಪ್ರೇಕ್ಷಕರ ಬಳಿ ಇಡಲಾದ ಧ್ವನಿವರ್ಧಕ (Speaker) ಗಳದ್ದೋ ಎಂಬುದು ಯಾರಿಗೂ ತಿಳಿಯಲಿಲ್ಲ. ಆದರೆ ಇದೊಂದು ಅಪರೂಪದ ಉದಾಹರಣೆ ಎಂದೇ ಹೇಳಬಹುದು. ದಿನ ನಿತ್ಯದ ಅನುಭವದಲ್ಲೂ ನಾವು ನೋಡುವುದೇನು ? ಚಿತ್ರ ನಡೆಯುತ್ತಿರುವಾಗ ಸ್ವಲ್ಪ ಹೊತ್ತು ಧ್ವನಿ ಕೇಳಿಸದೆ ಹೋದರೆ ಜನಕ್ಕೆ ಅಸಮಾಧಾನ. ಎಷ್ಟೋ ಸಲ ಸಿನಿಮಾದಲ್ಲಿಯೇ ನಿರ್ದಿಷ್ಟ ದೃಶ್ಯದಲ್ಲಿ ಧ್ವನಿ ಇರುವುದಿಲ್ಲ. ದೃಶ್ಯದ ನಾಟಕೀಯ ಪರಿಣಾಮ ತೀವ್ರಗೊಳಿಸುವ ಉದ್ದೇಶದಿಂದ ನಿರ್ದೇಶಕರೇ ಅಲ್ಲಿ ನಿಶ್ಯಬ್ದವನ್ನು ಯೋಜಿಸಿರಬಹುದು. ಆಗಲೂ ಕೂಡ ಪ್ರೇಕ್ಷಕರು ನಿಶ್ಯಬ್ದವನ್ನು ಸಹಿಸಲಾರದೆ ಕೂಗಾಡಿ, ತಾವೇ ಶಬ್ದಸೃಷ್ಟಿ ಮಾಡಿರುತ್ತಾರೆ. ಅದಕ್ಕೆಂದೇ ನಮ್ಮ ನಿರ್ದೇಶಕರು ಇಂಥ ಪ್ರಯೋಗಗಳಿಗೆ ಕೈ ಹಾಕದೆ ಚಿತ್ರದ ಮೊದಲ ಫ್ರೇಮ್ ಬರುವ ಮುಂಚಿನಿಂದಲೇ ಆರಂಭಿಸಿ ಚಿತ್ರದ ಕೊನೆಯ ಫ್ರೇಮ್ ಮುಗಿದು ಒಂದರ್ಧ ನಿಮಿಷ ಆಗುವವರೆಗೂ ಹಿನ್ನೆಲೆ ಸಂಗೀತವನ್ನಾದರೂ ಹಾಕಿಯೇ ಇರುತ್ತಾರೆ. ಹೀಗೇಕೆ ? ಇದನ್ನರಿಯಲು ನಾವು ಚಲನಚಿತ್ರದಲ್ಲಿ ಧ್ವನಿಯ ಬೆಳವಣಿಗೆಯತ್ತ ಕಣ್ಣು ಹಾಯಿಸಬೇಕು.

ಧ್ವನಿಯ ಉಗಮ

ಚಲನಚಿತ್ರದ ಉಗಮದ ಇತಿಹಾಸ ಅಸ್ಪಷ್ಟ. ಜಗತ್ತಿನ ವಿವಿಧ ಕಡೆಗಳಲ್ಲಿ ಸಮಾನಾಂತರವಾಗಿ ನಡೆದ ಸಂಶೋಧನೆ, ತಾಂತ್ರಿಕ ಪ್ರಗತಿಯ ಫಲವಾಗಿ ಚಲಿಸುವ ದೃಶ್ಯಗಳು ಫಲಿಸಿದವು. ಕೊನೆಯಲ್ಲಿ ಫ್ರಾನ್ಸ್‌ನ ಲ್ಯುಮಿಯೆರ್ ಸಹೋದರರು ಚಲಿಸುವ ದೃಶ್ಯಗಳ ಕೆಲವು ತುಣುಕುಗಳನ್ನು ಸಾರ್ವಜನಿಕವಾಗಿ ೧೮೯೫ರಲ್ಲಿ ಪ್ರದರ್ಶಿಸಿದರು, ಅದರ ದಾಖಲೆಯೂ ಉಳಿಯಿತು. ನಂತರದ ಬಹುತೇಕ ಇತಿಹಾಸಕಾರರಿಗೆ ಚಲನಚಿತ್ರದ ಉಗಮ ಅದೇ ಆಯಿತು. ಅಂತಯೇ ಚಲನಚಿತ್ರಕ್ಕೆ ಧ್ವನಿ ಸೇರಿದ ಕುರಿತಾದ ಇತಿಹಾಸವೂ ಅಷ್ಟೇನೂ ನಿಖರವಾಗಿಲ್ಲ. ಆದರೂ ಚಲನಚಿತ್ರ ಹುಟ್ಟಿದ ಸುಮಾರು ೩೪ ವರ್ಷಗಳ ನಂತರ, ಅಂದರೆ ೧೯೨೯ರಲ್ಲಿ, ಮಾತಾಡತೊಡಗಿದ್ದು ಹಾಡತೊಡಗಿದ್ದು, ನಗತೊಡಗಿದ್ದು ಎಂಬುದು ಎಲ್ಲರಿಗೂ ತಿಳಿದ ವಿಷಯ.

(ಚಿತ್ರ ೧) ಅರ್ದೇಶಿರ್ ಎಂ.ಇರಾನಿ ಧ್ವನಿ ಸಹಿತ ಕಥಾಚಿತ್ರದ ಮೊದಲ ಭಾರತೀಯ ನಿರ್ಮಾಪಕರು

ಧ್ವನಿಯನ್ನು ಪುನರುತ್ಪಾದಿಸುವ ದಿಸೆಯಲ್ಲಿ ಹಲವಾರು ರೀತಿಯ ಸಂಶೋಧನೆಗಳು ನಡೆದು ಯಾಂತ್ರಿಕ ಸಾಧ್ಯತೆಗಳ ಕೆಲವು ಮಾದರಿಗಳನ್ನು ಕಂಡುಹಿಡಿದಿದ್ದರು. ಚಲಿಸುವ ಬಿಂಬಗಳ ದೃಶ್ಯಾವಳಿಯ ಸಾಧನೆಗೆ ಮೊದಲೇ ಧ್ವನಿಯ ಬಗ್ಗೆ ಸಂಶೋಧನೆ ನಡೆದಿತ್ತು. ೧೮೭೭ರ ಸುಮಾರಿಗೆ ಥಾಮಸ್ ಆಲ್ವ ಎಡಿಸನ್ ಮೊಟ್ಟ ಮೊದಲ ಬಾರಿಗೆ ಫೋನೋಗ್ರಾಫ್‌ನ ಸಹಾಯದಿಂದ ಧ್ವನಿಮುದ್ರಣ ಮತ್ತು ಧ್ವನಿ ಪುನರುತ್ಪಾದನೆಯ ತಂತ್ರಗಳನ್ನು ಕಂಡುಹಿಡಿದಿದ್ದ. ಚಲಿಸುವ ಚಿತ್ರಗಳಿಗೆ ಧ್ವನಿಯನ್ನು ಜೋಡಿಸುವ ಸಾಧ್ಯತೆಯನ್ನು ಎಡಿಸನ್ ಆಗಲೇ ಮನಗಂಡಿದ್ದ. ೧೮೯೧ರಲ್ಲಿ ಆತ ಕಿನಿಟೊಸ್ಕೋಪ್ (Kinetoscope) ಸಾಧನವನ್ನು ಕಂಡುಹಿಡಿದ. ಈ ಸಾಧನದಿಂದ ಒಬ್ಬನಿಗೆ ಒಂದು ಬಾರಿ ಚಲಿಸುವ ಚಿತ್ರಗಳ ದೃಶ್ಯಗಳನ್ನು ತೋರಿಸುವುದು (Peep show machine) ಸಾಧ್ಯವಾಯಿತು. ಈ ಸಾಧನಕ್ಕೆ ಫೋನೊಗ್ರಾಫ್ ಅನ್ನು ಜೋಡಿಸಿದಾಗ ಅದು ಕಿನಿಟೋ ಫೋನ್ (Kineto Phone) ಎನಿಸಿತು.

೧೮೯೬ರಲ್ಲಿ ಚಾರ್ಲ್ಸ್ ಪಾಥೆ (Charles Pathe) ಪ್ಯಾರಿಸ್ ನಗರದಲ್ಲಿ ಮತ್ತು ಮೆಸ್ಟರ್ (Messter) ಜರ್ಮನಿಯಲ್ಲಿ ಇದನ್ನು ಹೊಸದಾಗಿ ಕಂಡು ಹಿಡಿದಿದ್ದರು.

೧೯೦೬ರ ಸುಮಾರಿಗೆ ಯೂಜಿನ್ ಲೌಸ್ಟ್ (Eugene Lauste) ಬ್ರಿಟನ್‌ನಲ್ಲಿ ಚಲನ ಚಿತ್ರಗಳಲ್ಲಿ ಧ್ವನಿಯನ್ನು, ಅಂದರೆ ಧ್ವನಿಯ ಕಂಪನಗಳನ್ನು ಛಾಯಾಗ್ರಹಣ ಪದ್ಧತಿಯಲ್ಲಿ ಸೆರೆಹಿಡಿದು ಅದರ ಸ್ವಾಮ್ಯ ಪಡೆದುಕೊಂಡ. ಹೀಗೆ ದೃಶ್ಯದ ಜತೆಯಲ್ಲೇ ಧ್ವನಿಯನ್ನು ಅಳವಡಿಸುವ ತಂತ್ರ (Synchronisation) ದಿಂದ ಚಿತ್ರಕ್ಕೆ ಧ್ವನಿ ಲಭಿಸಿತು. ಈ ತಾಂತ್ರಿಕತೆ ಬೆಳೆದು ಧ್ವನಿ ಶಕ್ತಿಯನ್ನು ಹೆಚ್ಚಿಸಲು ಆ್ಯಂಪ್ಲಿಫಿಕೇಷನ್ (Amplification) ತಂತ್ರ ಬಳಕೆಗೆ ಬಂದಿತು.

ಈ ಸಿನಿಮಾಟೋಗ್ರಾಫ್ (Cine- matograph) ಯಂತ್ರದೊಂದಿಗೆ ಬರ್ಲಿನರ್ ಗ್ರಾಮಫೋನ್ ಸೇರಿಸಿದ. ೧೯೦೮ರಲ್ಲಿ ನಡೆದ ಈ ಅಳವಡಿಕೆ ಚಲನಚಿತ್ರ ಕಲೆಗೆ ಜೀವ ತುಂಬಿತು. ಇಂಗ್ಲೆಂಡ್‌ನಲ್ಲಿ ವಾರ್ ವಿಕ್ ಕಂಪೆನಿ ಸಿನೇಫೋನ್ ಆಪರೇಟರ್ ಸಾಧನ ಬಿಡುಗಡೆ ಮಾಡಿತು. ಇದರ ಹಿಂದೆಯೇ ಹೆಪ್‌ವರ್ತ್ (Hep Worth) ವಿವಾಫೋನ್ ಮತ್ತು ಗ್ರಾಮಂಟ್ ಕ್ರೋನೋಫೋನ್ ಬಳಕೆಗೆ ಬಂದುವು. ಇವುಗಳೊಂದಿಗೆ ಗ್ರಾಮಫೋನ್ ರಿಕಾರ್ಡ್‌ಗಳನ್ನು ಬಳಸಿಕೊಂಡು ಧ್ವನಿ ನೀಡುವ ಚಿತ್ರ ಮತ್ತು ಧ್ವನಿಗಳ ಎರಡೂ ಯಂತ್ರಗಳನ್ನು ಒಂದೇ ಗತಿಯಲ್ಲಿ, ಜೊತೆಯಲ್ಲಿ ನಡೆಸಲು ಸಿಂಕ್ರೊನೈಸೇಶನ್

'ಧ್ವನಿ' ಪದಕ್ಕೆ ಸಾಹಿತ್ಯಕವಾಗಿ ವಿಶೇಷ ಅರ್ಥಗಳಿವೆ. ಪ್ರಸ್ತುತ ಲೇಖನದಲ್ಲಿ 'ಧ್ವನಿ'ಯು 'ಸೌಂಡ್'ಗೆ ಸಂವಾದಿಯಾಗಿ ಮಾತ್ರ ಬಳಕೆಯಾಗಿದೆ. ಸಂ

(Synchronisation) ತಂತ್ರ ಚಾಲ್ತಿಗೆ ಬಂದಿತು. ಆದರೆ ಕೆಲ ತಾಂತ್ರಿಕ ದೋಷಗಳಿಂದಾಗಿ ಈ ವಿಧಾನ ಹೆಚ್ಚು ಕಾಲ ಮುಂದುವರೆಯಲಿಲ್ಲ. ಚಿತ್ರ ಮತ್ತು ಧ್ವನಿಯ ಸಾಮರಸ್ಯ ನಿರೀಕ್ಷೆಯ ಮಟ್ಟ ತಲುಪದೆ ಈ ವಿಧಾನ ವಿಫಲಗೊಂಡಿತು. ೧೯೨೬ರ ಸುಮಾರಿಗೆ ಆಪ್ಟಿಕಲ್ ಸೌಂಡ್ (Optical Sound) ಪದ್ಧತಿಯನ್ನು ಕಂಡುಹಿಡಿಯುವಲ್ಲಿ ಯಶಸ್ವಿಯಾದರು. ಇದರಿಂದ ಏಕಕಾಲದಲ್ಲಿ ದೃಶ್ಯ ಮತ್ತು ಧ್ವನಿಯನ್ನು ಗ್ರಹಣ ಮಾಡಲು ಸಾಧ್ಯವಾಯಿತು. ಹೀಗೆ ಮೊಟ್ಟ ಮೊದಲಿಗೆ ಯಶಸ್ವಿಯಾಗಿ ಪ್ರದರ್ಶನಗೊಂಡು ಜನಪ್ರಿಯವಾದ ಚಿತ್ರವೇ 'ದಿ ಜಾಜ್ ಸಿಂಗರ್'. ಅಲನ್ ಕ್ರಾಸ್‌ಲ್ಯಾಂಡ್ ಈ ಚಿತ್ರದ ನಿರ್ದೇಶಕ.

ವಾರ್ನರ್ ಬ್ರದರ್ಸ್ ಸಂಸ್ಥೆ ೧೯೨೭ರಲ್ಲಿ ತಯಾರಿಸಿದ 'ದಿ ಜಾಜ್ ಸಿಂಗರ್' ಚಿತ್ರವೇ ಮೊದಲ ಮಾತಿನ ಚಿತ್ರ. ಈ ಚಿತ್ರದಿಂದಾಗಿ ಕೆಲವೇ ಕೆಲವು ತಿಂಗಳುಗಳೊಳಗಾಗಿ ಜಗತ್ತಿನಾದ್ಯಂತ ಚಿತ್ರಮಂದಿರಗಳು ಧ್ವನಿ ವ್ಯವಸ್ಥೆಯನ್ನು ಅಳವಡಿಸಿ ಕೊಂಡವು.

ಅನಂತರದಲ್ಲಿ ಆಪ್ಟಿಕಲ್ ಪದ್ಧತಿ ಇನ್ನೂ ಕಲ ಮಾರ್ಪಾಡುಗಳೊಂದಿಗೆ ಸುಧಾರಣೆ ಕಂಡಿತು. ಮಾತಿನ (ಟಾಕಿ) ಚಿತ್ರಗಳು ೧೯೩೦ರ ನಂತರದಲ್ಲೇ ಸಾರ್ವಜನಿಕ ಪ್ರದರ್ಶನಕ್ಕೆ ಅಣಿಯಾದವು. ಈ ಹಂತದಲ್ಲಿ ಹಿಂದಿನ ಹಲವಾರು ಶ್ರೇಷ್ಠ ದರ್ಜೆಯ ಮೂಕಿ ಚಿತ್ರಗಳಿಗೆ ಧ್ವನಿಯನ್ನು ಅಳವಡಿಸಲಾಯಿತು. ಅವುಗಳಲ್ಲಿ 'ಇನ್‌ಟಾಲರೆನ್ಸ್', 'ಗ್ರೀಡ್', 'ಬ್ಯಾಟಲ್‌ಶಿಪ್ ಪೊಟೆಂಕಿನ್', 'ಅರ್ತ್', 'ದಿ ಲಾಸ್ಟ್ ಲಾಫ್', 'ಸಿಟಿ ಲೈಟ್ಸ್' ಮತ್ತು 'ನೆಪೋಲಿಯನ್' ಮುಖ್ಯವಾದವು.

ಮೂಕಿ ಚಿತ್ರಗಳಲ್ಲಿ ಎಲ್ಲ ರೀತಿಯಿಂದ ದೃಶ್ಯಗಳೇ ಪ್ರಧಾನವಾಗಿದ್ದರಿಂದ ಹಾವ-ಭಾವಗಳನ್ನು ಪರಿಣಾಮಕಾರಿಯಾಗಿ ತೋರಿಸುವುದೊಂದೇ ದಾರಿಯಾಗಿತ್ತು. ಚಿತ್ರಗಳಲ್ಲಿ ಧ್ವನಿಯ ಸೇರ್ಪಡೆಯಿಂದ ಸಿನಿಮಾಕ್ಕೆ ಮತ್ತೊಂದು ಆಯಾಮ ದೊರೆತಂತಾಗಿ ನಟರ-ನಿರ್ದೇಶಕರ ಕೆಲಸ ಸ್ವಲ್ಪ ಮಟ್ಟಿಗೆ ಸುಲಭವಾಯಿತು. ದೃಶ್ಯದೊಂದಿಗೆ ಧ್ವನಿ ಮೇಳವಿಸಿ ಸಿನಿಮಾ ಎಂಬ 'ನಂಬಿಸುವ ಕಲೆ'ಗೆ ಇನ್ನೂ ಹೆಚ್ಚಿನ ಶಕ್ತಿ ಕೂಡಿತು.

ಧ್ವನಿ ತಂದ ಹರ್ಷ

ಪ್ಯಾರಿಸ್‌ನ ಗ್ರ್ಯಾಂಡ್ ಕೆಫೆಯಲ್ಲಿ ೧೮೯೫ರ ಡಿಸೆಂಬರ್ ೨೮ರಂದು ಮೊದಲ ಪ್ರದರ್ಶನದಲ್ಲಿಯೇ ಪ್ರೇಕ್ಷಕರು ತೋರಿದ ಅಭೂತಪೂರ್ವ ಉನ್ಮಾದಭರಿತ ಪ್ರತಿಕ್ರಿಯೆಯ ಲಾಭವನ್ನು ಜಾಗತಿಕ ಮಟ್ಟದಲ್ಲಿ ಪಡೆಯುವ ಧಾವಂತ ಲ್ಯುಮಿಯೆರ್ ಸೋದರರಿಗೆ. ಸ್ವಲ್ಪ ತಡವಾದರೂ ಈಗಾಗಲೇ ಅಂತಹುದೇ ಯಂತ್ರಗಳ ತಯಾರಿಕೆಯ ನಿರ್ಣಾಯಕ ಹಂತದಲ್ಲಿದ್ದ ಅಮೆರಿಕಾ ಅಥವಾ ಇನ್ಯಾವುದೇ ದೇಶದ ಉದ್ಯಮಿಗಳು ಹೊಸತನದ ಲಾಭವನ್ನು ಪಡೆಯುವವರಿದ್ದರು. ಲ್ಯುಮಿಯೆರ್ ಸೋದರರು ತಮ್ಮ ಪ್ರತಿನಿಧಿ ಮೊರಿಸ್ ಸೆಸ್ಟಿಯರ್‌ನನ್ನು ತಮ್ಮ ಸಿನಿಮಾಟೋಗ್ರಾಫ್ ಯಂತ್ರ ಹಾಗೂ ಕೆಲವು ಕಿರುಚಿತ್ರಗಳೊಂದಿಗೆ ಆಸ್ಟ್ರೇಲಿಯಾಕ್ಕೆ ಕಳುಹಿಸಿದರು. ಸೆಸ್ಟಿಯರ್ ಆಸ್ಟ್ರೇಲಿಯ ತಲುಪುವ ಹಾದಿಯಲ್ಲಿ ಸಿಗುವ ಭಾರತದಲ್ಲಿಯೂ ಸಿನಿಮಾ ಆಗಮನದ ಸಿಹಿ ಸುದ್ದಿಯನ್ನು ಸಾರಿ ಮುಂದಕ್ಕೆ ಹೋಗಬೇಕಾಗಿತ್ತು.

ಇದರ ಪರಿಣಾಮವಾಗಿ ಜಗತ್ತಿನ ಮೊಟ್ಟಮೊದಲ ಪ್ರದರ್ಶನವಾದ ಕೇವಲ ಏಳು ತಿಂಗಳ ಒಳಗೆ, ಎಂದರೆ ೧೮೯೬ರ ಜುಲೈ ೭ರಂದು, ಮುಂಬಯಿಯಲ್ಲಿ ಲ್ಯುಮಿಯೆರ್‌ನ ಚಲನಚಿತ್ರಗಳು ಭಾರತದಲ್ಲಿಯೇ ಮೊದಲ ಬಾರಿಗೆ ಪ್ರದರ್ಶನವನ್ನು ಕಂಡವು. ಹಾಗೆಯೇ ಲ್ಯುಮಿಯೆರ್ ತುಣುಕು ಚಿತ್ರಗಳನ್ನು ನೋಡಿದ ಮರುವರ್ಷವೆ ಹರಿಶ್ಚಂದ್ರ ಸಖಾರಾಮ್ ಭಟವಾಡೇಕರ್ ಲಂಡನ್‌ನಿಂದ ಮೂವಿಕ್ಯಾಮರಾ ಉಪಕರಣಗಳನ್ನು ತರಿಸಿಕೊಂಡು ತಮ್ಮದೇ ಆದ ಭಾರತೀಯ ಕಿರುಚಿತ್ರಗಳನ್ನು ಚಿತ್ರಿಸತೊಡಗಿದರು. ಚಲಿಸುವ ಚಿತ್ರಗಳ ಪ್ರದರ್ಶನ ಹಾಗೂ ಅವುಗಳ ತಯಾರಿಕೆಯಲ್ಲಿ ತೋರಿದ ಅವಸರ ಅದು ಹೇಗೋ ಧ್ವನಿಯ ಆಗಮನದ ಸಂದರ್ಭದಲ್ಲಿ ತೋರಲಿಲ್ಲ. ಅಮೆರಿಕಾದಲ್ಲಿ 'ಜಾಜ್ ಸಿಂಗರ್' ಹಾಡಿನ ನಂತರ ಭಾರತದ ಭುವನ ಸುಂದರಿ 'ಆಲಂ ಆರಾ' ಹಾಡಲು ಸುಮಾರು ನಾಲ್ಕು ವರ್ಷಗಳೇ ಬೇಕಾದವು. ಅದಕ್ಕೂ ಮುಂಚಿನ, ಟಾಕಿ ಪೂರ್ವದ ಸಿನಿಮಾ ಇತಿಹಾಸವೂ ಸ್ವಾರಸ್ಯಕರ.

(ಚಿತ್ರ ೨) ಚಲನಚಿತ್ರ ಮಾಧ್ಯಮದಲ್ಲಿ ಧ್ವನಿಯ ಆಗಮನವನ್ನು ಸಾರಿದ 'ದಿ ಜಾಜ್ ಸಿಂಗರ್' ಚಿತ್ರದಲ್ಲಿ ಅಲ್ ಜೋಲ್ಸನ್

ಭಾರತದಲ್ಲಿ ಚಲನಚಿತ್ರಗಳ ಪ್ರದರ್ಶನ ಆಗತೊಡಗಿದಂದಿನಿಂದ ಆರಂಭಿಸಿ ಸುಮಾರು ೧೫-೧೬ ವರ್ಷ ಭಾರತೀಯರು ವಿದೇಶಿ ಸಿನಿಮಾಗಳನ್ನು ನೋಡಿಯೇ ತೃಪ್ತಿ ಪಟ್ಟುಕೊಳ್ಳಬೇಕಾಗಿತ್ತು. ಹೇಗೂ ಭಾಷೆ ಇರಲಿಲ್ಲ. ಕಥೆಗಳೂ ಸರಳವಾಗಿರುತ್ತಿದ್ದವು, ನೋಡುತ್ತಿದ್ದರು. ಆದರೂ ನಮ್ಮವರಿಗಿಂತ ತುಂಬ ಭಿನ್ನವಾಗಿ ಕಾಣುವ ಬಿಳಿಯರು ಅವರ ವಿಚಿತ್ರ ಹಾವ ಭಾವ, ಮಹಿಳೆಯರ 'ಸ್ವಚ್ಛಂದ' ವರ್ತನೆ ಭಾರತೀಯ ಪ್ರೇಕ್ಷಕ ಗಣಕ್ಕೆ ಮುಜುಗರ ಉಂಟುಮಾಡುತ್ತಿದ್ದವು. ಇದಕ್ಕೆಲ್ಲ ಮುಕ್ತಿ ಸಿಕ್ಕಿದ್ದು ೧೯೧೩ರಲ್ಲಿ ದಾದಾಭಾಯಿ ಫಾಲ್ಕೆ ತಮ್ಮ ಮೊಟ್ಟಮೊದಲ ಅಪ್ಪಟ ಭಾರತೀಯವಾದ 'ರಾಜಾ ಹರಿಶ್ಚಂದ್ರ' ಚಿತ್ರವನ್ನು ಬಿಡುಗಡೆ ಮಾಡಿದಾಗ. ಮುಂದೆ ಭಾರತೀಯ ನಿರ್ಮಾಪಕರು ಅನೇಕ ಚಲನಚಿತ್ರಗಳನ್ನು ನಿರ್ಮಿಸಿದರೂ ವಿದೇಶಿ ಚಿತ್ರಗಳ ಆಗಮನವೇನೂ ನಿಲ್ಲಲಿಲ್ಲ.

ಕೆಲವು ಚಿತ್ರಗಳು ಅಂತರರಾಷ್ಟ್ರೀಯ, ರಾಷ್ಟ್ರೀಯ ಉತ್ಸವಗಳಿಗೆ ಆಯ್ಕೆಯಾದಾಗ, ಆ ಚಿತ್ರದ ಪ್ರತಿಗಳಲ್ಲಿ ಇಂಗ್ಲಿಷಿನಲ್ಲಿ ಸಬ್ ಟೈಟಲ್ಸ್, ಎಂದರೆ ಉಪಶೀರ್ಷಿಕೆಗಳು ಇರುವುದನ್ನು ನಾವು ನೋಡುತ್ತೇವೆ. ಆದರೆ ಟಾಕಿ ಪೂರ್ವದ ಕಾಲದಲ್ಲಿ ಹೆಚ್ಚು ಕಡಿಮೆ ಎಲ್ಲ ಮೂಕಿ ಚಿತ್ರಗಳಿಗೆ ವಿವರಣಾತ್ಮಕ ಶೀರ್ಷಿಕೆಗಳು (Explanatory Titles) ಇರುತ್ತಿದ್ದವು. ಒಂದಲ್ಲ ೩-೪ ಭಾಷೆಗಳಲ್ಲಿ. ಉತ್ತರ ಭಾರತದಲ್ಲಿ ಬಿಡುಗಡೆ ಕಾಣುವ, ಒಂದೇ ಚಿತ್ರದ ಪ್ರತಿಗಳಲ್ಲಿ ಹಿಂದಿ, ಗುಜರಾತಿ ಹಾಗೂ ಉರ್ದು ಭಾಷೆಗಳಲ್ಲಿ ಉಪಶೀರ್ಷಿಕೆಗಳಿದ್ದರೆ ದಕ್ಷಿಣ ಭಾರತದಲ್ಲಿ ಪ್ರದರ್ಶಿತವಾಗುವ ಪ್ರತಿಗಳಿಗೆ ತಮಿಳು, ತೆಲುಗು ಮತ್ತು ಇಂಗ್ಲಿಷ್‌ನಲ್ಲಿ ಉಪಶೀರ್ಷಿಕೆಗಳು ಇರುತ್ತಿದ್ದವು.

ಪ್ರತಿ ಸಲ ಶೀರ್ಷಿಕೆ ರೂಪದ ಸಂಭಾಷಣೆ, ಪರದೆ ಮೇಲೆ ಕಾಣಿಸಿಕೊಂಡಾಗಲೂ ಅದನ್ನು ಗಟ್ಟಿಯಾಗಿ ಓದಿಕೊಳ್ಳುವ ಪ್ರೇಕ್ಷಕರ ಧ್ವನಿಯಿಂದ ಇಡೀ ಥಿಯೇಟರು ಸದ್ದಿನಿಂದ ಗಿಜಿಗುಟ್ಟುತ್ತಿತ್ತಂತೆ (ಅಂದಿನ ಚಲನಚಿತ್ರಗಳಲ್ಲಿ ಧ್ವನಿ ಇರುತ್ತಿರಲಿಲ್ಲ ಎಂದು ಹೇಳಿದವರ್ಯಾರು?). ತಾವೇ ಓದಿಕೊಳ್ಳುವುದರ ಜೊತೆಗೆ, ಓದಲು ಬರುವವರು ಬಾರದ ಅನಕ್ಷರಸ್ಥರಿಗೆ ಓದಿ ಹೇಳುವ ಸದ್ದುಗದ್ದಲ ಬೇರೆ. ಕೆಲವು ಥಿಯೇಟರುಗಳಲ್ಲಿ ಮಾಲೀಕರೇ ನೇಮಿಸಿದ ಅಧಿಕೃತ ವಾಚಕರು ಇರುತ್ತಿದ್ದರು. ಪರದೆ ಮೇಲೆ ಕಾಣುವ ಶೀರ್ಷಿಕೆಗಳನ್ನು ಓದಿ ಹೇಳುವುದಲ್ಲದೆಯೇ, ಇವರು ಅದನ್ನು ಸ್ಥಳೀಯ ಭಾಷೆಗೆ ಅನುವಾದ ಮಾಡಿಯೂ ಹೇಳುತ್ತಿದ್ದರು. 'ಡೆಮಾನ್‌ಸ್ಟ್ರೇಟರ್' ಎಂದು ಕರೆಯಲ್ಪಡುತ್ತಿದ್ದ ಇಂಥವರಿಗೆ ಚಿತ್ರದ ಕಥೆ ಮೊದಲೇ ಗೊತ್ತಿರುತ್ತಿತ್ತು. ಹೀಗಾಗಿ ಅವರು ಒಮ್ಮೊಮ್ಮೆ ಅತಿ ಉತ್ಸಾಹ ತೋರಿ, ಮುಂದಾಗಿಯೇ ಕಥೆಯನ್ನು ಹೇಳಿ ಪ್ರೇಕ್ಷಕರ ಸ್ವಾರಸ್ಯವನ್ನು ಕಳೆದುಬಿಡುತ್ತಿದ್ದರು. ಅವರ ಕೋಪಕ್ಕೂ ಗುರಿಯಾಗುತ್ತಿದ್ದರು.

ಮೂವತ್ತರ ದಶಕದ ಕೊನೆ ಭಾಗದಲ್ಲಿ ಸಿನಿಮಾಕ್ಕೆ ಧ್ವನಿ ಸೇರಿಸುವ ಸಡಗರದಲ್ಲಿ ಅಮೆರಿಕಾ ಹಾಗೂ ಐರೋಪ್ಯ ರಾಷ್ಟ್ರಗಳಲ್ಲಿ ಉಂಟಾದ ಗೊಂದಲ, ಸಂಕಷ್ಟಗಳು ಭಾರತದಲ್ಲಿಯೂ ಕಾಣಿಸಿಕೊಂಡವು. ಪ್ರಪಂಚದ ಉಳಿದೆಡೆ ಸಿನಿಮಾಗಳು ಮಾತಾಡತೊಡಗಿವೆ ಎಂಬ ಸುದ್ದಿ ಕೇಳಿದ ಕೂಡಲೇ ಇಲ್ಲಿಯ ಜನರಿಗೂ ಮಾತಾಡುವ ಚಿತ್ರಗಳನ್ನು ನೋಡುವ ಆಸೆಯಾಯಿತು. ಇದನ್ನು ಅನುಸರಿಸಿ ವಿದೇಶಿ ಟಾಕಿಗಳು ಭಾರತಕ್ಕೆ ಲಗ್ಗೆ ಇಡತೊಡಗಿದವು. ಇವನ್ನು ಪ್ರದರ್ಶಿಸಬೇಕು ಎಂದಾದರೆ ಥಿಯೇಟರುಗಳು ಅಂದಿನವರೆಗೆ ಇಲ್ಲದಿದ್ದ ಧ್ವನಿ ಉಪಕರಣಗಳನ್ನು ದುಬಾರಿ ವೆಚ್ಚದಲ್ಲಿ ಅಳವಡಿಸಿಕೊಳ್ಳಬೇಕಾಗುತ್ತಿತ್ತು. ಸಾಲದೆಂಬಂತೆ ಭಾರತದ ದೊಡ್ಡ ದೊಡ್ಡ ನಿರ್ಮಾಣ ಸಂಸ್ಥೆಗಳು ಆರ್ಥಿಕ ಬಿಕ್ಕಟ್ಟನ್ನು ಎದುರಿಸುತ್ತಿದ್ದ ಕಾಲವದು. ೧೯೩೦ರ ಹೊತ್ತಿಗೆ ಸುಮಾರು ೧೭೨ ಥಿಯೇಟರುಗಳ ಒಡೆತನ, ಇಲ್ಲವೇ ನಿಯಂತ್ರಣ ಹೊಂದಿದ್ದ ಕಲ್ಕತ್ತಾದ ಮದನ್ ಥಿಯೇಟರ್ಸ್ ಲಿಮಿಟೆಡ್ ತನ್ನ ಥಿಯೇಟರುಗಳನ್ನು ವಿದೇಶಿ ಕಂಪನಿಯೊಂದಕ್ಕೆ ಸಾರಾಸಗಟು ಮಾರಿಬಿಡುವ ಆಲೋಚನೆ ಮಾಡುತ್ತಿತ್ತು. ಪರಿಸ್ಥಿತಿ ಏನೇ ಇದ್ದರೂ ಟಾಕಿಗಳು ಭಾರತಕ್ಕೆ ನುಸುಳುವುದನ್ನು ತಡೆಯಲು ಸಾಧ್ಯವಿರಲಿಲ್ಲ.

ಕಲ್ಕತ್ತಾದಲ್ಲಿ ೧೯೨೯ರಲ್ಲಿ ಮದನ್ ಥಿಯೇಟರ್ಸ್‌ನವರ ಎಲ್ಫಿನ್‌ಸ್ಟನ್ ಪಿಕ್ಚರ್ ಪ್ಯಾಲೇಸ್‌ನಲ್ಲಿ ಯೂನಿವರ್ಸಲ್‌ನವರ 'ಮೆಲೋಡಿ ಆಫ್ ಲವ್' ಚಿತ್ರದ

ಪ್ರದರ್ಶನದೊಂದಿಗೆ ಭಾರತದಲ್ಲಿ ಟಾಕಿಗಳ ಯುಗ ಆರಂಭವಾಯಿತು. ಆದರೆ ಅದು ಕೇವಲ ಪ್ರದರ್ಶನ ಮಾತ್ರ. ಭಾರತೀಯರ ಸ್ವಂತ ನಿರ್ಮಾಣವಲ್ಲ ಎಂಬುದನ್ನು ಮರೆಯಬಾರದು. ಆದರೂ ಟಾಕಿಗಳು ಹೊರದೇಶಗಳಿಂದ ಬಂದು ಇಲ್ಲಿ ಪ್ರದರ್ಶನವಾಗತೊಡಗಿದ ನಂತರ ಮಾತಾಡುವ, ಹಾಡುವ ಚಿತ್ರಗಳು ಪ್ರೇಕ್ಷಕರ ಮೇಲೆ ಬೀರುತ್ತಿದ್ದ ಅದ್ಭುತ ಪರಿಣಾಮವನ್ನು ಕಣ್ಣಾರೆ ಕಂಡ ಭಾರತೀಯ ಚಿತ್ರ ನಿರ್ಮಾಪಕರು ಸುಮ್ಮನೆ ಕುಳಿತಿರಲು ಸಾಧ್ಯವಾದೀತೆ ? ಸರಿ, ಭಾರತೀಯ ಸಿನಿಮಾದಲ್ಲಿಯೇ ಧ್ವನಿಯ ಸ್ವಾಗತಕ್ಕೆ ಸಿದ್ಧತೆಗಳು ನಡೆದವು.

ಕಲ್ಕತ್ತಾದ ಮದನ್ ಥಿಯೇಟರ್ಸ್ ಲಿಮಿಟೆಡ್ ಸಂಸ್ಥೆ ಆಗಿನ ಕಾಲದ ಅತ್ಯಂತ ದೊಡ್ಡ ಚಿತ್ರ ನಿರ್ಮಾಣ ಮತ್ತು ಪ್ರದರ್ಶನ ಸಂಸ್ಥೆಗಳಲ್ಲಿ ಒಂದು. ಅದರ ನಿರ್ಮಾಪಕ ನಿರ್ದೇಶಕರಾದ ಜೆ.ಜೆ.ಮದನ್ ಮಹತ್ವಾಕಾಂಕ್ಷಿ. ಅವರಿಗೆ ಅಮೆರಿಕಾದ ಚಿತ್ರ ನಿರ್ಮಾಪಕರ ನೇರ ಪರಿಚಯವೂ ಇತ್ತು. ಅವರು ಆ ವರ್ಷ ಅಮೆರಿಕಾಕ್ಕೆ ಹೋಗಿದಾಗ ನ್ಯೂಯಾರ್ಕ್‌ನಲ್ಲಿ 'ಜಾಜ್ ಸಿಂಗರ್' ಚಿತ್ರವನ್ನು ನೋಡಿದರು. ಧ್ವನಿಯ ಸೇರ್ಪಡೆಯಿಂದ ಚಲನಚಿತ್ರದಲ್ಲಿ ಆದ ಸುಧಾರಣೆ, ಅದು ಪ್ರೇಕ್ಷಕರ ಮೇಲೆ ಬೀರುತ್ತಿದ್ದ ರೋಮಾಂಚಕ ಪರಿಣಾಮ ಇವುಗಳನ್ನು ಸ್ವತಃ ಅನುಭವಿಸಿದರು. ಇಡೀ ಅಮೆರಿಕಾ ಸಿನಿಮೋದ್ಯಮ ಧ್ವನಿಯನ್ನು ಅಪ್ಪಿಕೊಳ್ಳಲು ನಡೆಸಿರುವ ಧಾವಂತವನ್ನು ಕಣ್ಣಾರೆ ಕಂಡರು. ಇದರ ಪರಿಣಾಮವಾಗಿ ಅಲ್ಲಿಂದ ಹಿಂತಿರುಗುವಾಗ ಧ್ವನಿ ಉಪಕರಣಗಳ ಖರೀದಿಗೆ ಬೇಡಿಕೆಯನ್ನು ಸಲ್ಲಿಸಿಯೇ ಸ್ವದೇಶಕ್ಕೆ ಮರಳಿದರು.


(ಚಿತ್ರ ೩) ಹಾಡುಗಳ ಚಿತ್ರಣಕ್ಕೆ ನೆರವಾಗುವ ಸಾಂಗ್ ಪ್ಲೇಬ್ಯಾಕ್ ಮೆಷಿನ್, ಹಳೆಯ ಮಾದರಿ

ಈ ಹಿಂದೆ ಹೇಳಿದ ಹಾಗೆ ಮದನ್ ಥಿಯೇಟರ್ಸ್ ಲಿಮಿಟೆಡ್ ಮೂವತ್ತರ ದಶಕದ ಆರಂಭದಲ್ಲಿ ತೀವ್ರ ಆರ್ಥಿಕ ಬಿಕ್ಕಟ್ಟನ್ನು ಎದುರಿಸುತ್ತಿತ್ತು. ತನ್ನ ಈ ಇಕ್ಕಟ್ಟಿನಿಂದ ಪಾರಾಗಲು ಆ ಸಂಸ್ಥೆಗೆ ಎರಡು ಮಾರ್ಗಗಳಿದ್ದವು. ಇದ್ದ ಎಲ್ಲ ಥಿಯೇಟರುಗಳನ್ನೂ ಮಾರಿಬಿಟ್ಟು ಸಿನಿಮಾ ಉದ್ಯಮದಿಂದ ನಿರ್ಗಮಿಸುವುದು, ಇಲ್ಲವೆ ಯಾರೂ ಮಾಡಲಾರದ ಒಂದು ಹೊಸ ಸಾಹಸ ಮಾಡಿ, ಅದರಿಂದ ಲಾಭ ಗಳಿಸಿ ಉಳಿದು ಕೊಳ್ಳುವುದು. ಜೆ.ಜೆ.ಮದನ್ ಆರಿಸಿಕೊಂಡಿದ್ದು ಎರಡನೇ ಕ್ರಮವನ್ನು. ಮಾಡಲು ಹೊರಟ ವಿನೂತನ ಸಾಹಸ ಭಾರತದಲ್ಲಿ ಧ್ವನಿಯುಕ್ತ ಚಿತ್ರ ನಿರ್ಮಾಣ.

೧೯೩೧ರ ಮಾರ್ಚ್ ೧೪ರಂದು ಮೊಟ್ಟಮೊದಲ ಪ್ರದರ್ಶನ ನೀಡುವುದರ ಮೂಲಕ ಅವರು ತಮ್ಮ ಯೋಜನೆಯನ್ನು ಕಾರ್ಯರೂಪಕ್ಕೆ ತಂದರು. ಧ್ವನಿಸಹಿತ ಸಿನಿಮಾಗಳ ಇತಿಹಾಸ ದೃಷ್ಟಿಯಿಂದ ಗಮನಿಸಬೇಕಾದ ಒಂದು ಅಂಶವೆಂದರೆ ಅದು ಒಂದು ಪೂರ್ಣಪ್ರಮಾಣದ ರೂಪಕ ಚಿತ್ರವಾಗಿರಲಿಲ್ಲವೆಂಬುದು. ಆ ಪ್ರದರ್ಶನವಲ್ಲಿ ಒಟ್ಟು ೩೧ ಕಿರುಚಿತ್ರಗಳು ಇದ್ದವು. 'ಶಿವ ಮಂದಿರದಲ್ಲಿ ಭಕ್ತೆಯರಿಂದ ಸಂಸ್ಕೃತ ಮಂತ್ರ ಪಠಣ', 'ಶಾಲಾ ವಿದ್ಯಾರ್ಥಿನಿಯರಿಂದ ಠಾಗೋರರ ಗೀತೆಯ ಗಾಯನ', 'ಹಿಂದಿ/ಉರ್ದು ನಾಟಕದ ಒಂದೊಂದು ದೃಶ್ಯ' - ಹೀಗೆ ತುಣುಕುಗಳ ಪಟ್ಟಿ. ಒಂದು ವಿಶೇಷವೆಂದರೆ ಅವರಲ್ಲಿ ನೊಬೆಲ್ ಪುರಸ್ಕೃತ ಸರ್ ಸಿ.ವಿ.ರಾಮನ್‌ರಿಂದ ಒಂದು ಪುಟ್ಟ ಭಾಷಣವೂ ಇತ್ತು.

ಆದರೆ ಅದೇ ದಿನ ಇದಕ್ಕಿಂತ ಅದ್ಭುತವಾದ ಘಟನೆ ಮುಂಬಯಿಯಲ್ಲಿ ನಡೆದಿತ್ತು. ಅಂದು ಅಲ್ಲಿ 'ಆಲಂ ಆರಾ' (ಭುವನಸುಂದರಿ) ಎಂಬ ಕಥಾಚಿತ್ರ ಪ್ರದರ್ಶನಗೊಂಡಿತು. ಇದರ ಮೂಲಕ ಇಂಪೀರಿಯಲ್ ಕಂಪನಿಯ ಅರ್ದೇಶಿರ್ ಎಂ.ಇರಾನಿಯವರು ಮೊದಲ ಧ್ವನಿ ಸಹಿತ ಭಾರತೀಯ ಕಥಾಚಿತ್ರವನ್ನು ಬಿಡುಗಡೆ ಮಾಡಿದ ಕೀರ್ತಿಗೆ ಪಾತ್ರರಾದರು. ಇದಕ್ಕೆ ಸಂವಾದಿಯಾಗಿ ಆ ಕಡೆ ಕಲ್ಕತ್ತಾದಲ್ಲಿ ಧ್ವನಿ ಚಿತ್ರಗಳ ತಯಾರಿಕೆ ಇನ್ನೂ ಭರಾಟೆಯಿಂದ ನಡೆದು ಮದನ್ ಥಿಯೇಟರ್ಸ್‌ನವರು ಅದೇ ವರ್ಷ(೧೯೩೧) ಹಿಂದಿ ಮತ್ತು ಬಂಗಾಳಿಯಲ್ಲಿ ಎಂಟು ಧ್ವನಿಸಹಿತ ಚಿತ್ರಗಳನ್ನು ಬಿಡುಗಡೆ ಮಾಡಿದರು. ಅದರ ಮುಂದಿನ ವರ್ಷ ಅವರದೇ ಹದಿನಾರು ಚಿತ್ರಗಳು ಬಂದವು. ಮುಂಬಯಿಯಲ್ಲಿ ಇನ್ನೂ ೨೨ ಹಿಂದಿ ಚಿತ್ರಗಳು, ದಕ್ಷಿಣದಲ್ಲಿ ತೆಲುಗಿನಲ್ಲಿ ಒಂದು, ತಮಿಳಿನಲ್ಲಿ ಒಂದು ಧ್ವನಿಸಹಿತ ಚಿತ್ರಗಳು ಬಂದವು. ೧೯೩೪ರಲ್ಲಿ ಚಂದುಲಾಲ್ ಜೆ.ಷಾಹ್ ನಿರ್ಮಿಸಿದ, ಭಾರತದ ಮೊತ್ತಮೊದಲ ಸಾಮಾಜಿಕ ಚಿತ್ರ ಎನ್ನಿಸಿಕೊಂಡು 'ಗುಣಸುಂದರಿ' ೧೯೩೪ರಲ್ಲಿ ಮೂರು ಭಾಷೆಗಳಲ್ಲಿ ಮಾತು ಕಲಿತು ಮತ್ತೊಮ್ಮೆ ಪ್ರೇಕ್ಷಕರ ಮುಂದೆ ಬಂದಳು. ಮುಂದಿನ ವರ್ಷಗಳಲ್ಲಿ ಟಾಕಿ ಚಿತ್ರಗಳ ನಿರ್ಮಾಣ ಸಾಗಿತು.

ಕೆಲವು ಇತಿಹಾಸಕಾರರ ಪ್ರಕಾರ ಧ್ವನಿಯ ಸೇರ್ಪಡೆಯ ನಂತರವೇ ಭಾರತೀಯ ಸಿನಿಮಾ ತನ್ನ ಸ್ವಂತ ವ್ಯಕ್ತಿತ್ವವನ್ನು ಸ್ಥಾಪಿಸಿಕೊಳ್ಳಲು ಸಾಧ್ಯವಾಯಿತು. ಇದಕ್ಕೆ ಪೂರಕವಾದ ಸಾಧನಗಳಲ್ಲಿ ಪ್ರಮುಖವಾದುದು ಎಂದರೆ ಹಾಡು. ಧ್ವನಿ ಬಂದ ಕೂಡಲೆ ನಮ್ಮ ಸಿನಿಮಾಗಳು ಹಾಡತೊಡಗಿದವು. ಹಾಡಿನ ಹುಚ್ಚು ಎಷ್ಟಿತ್ತು ಎಂದರೆ ಭಾರತದ ಮೊದಲ ಧ್ವನಿಚಿತ್ರ 'ಆಲಂ ಆರಾ'ದಲ್ಲಿ ಹತ್ತು ಹನ್ನೆರಡು ಹಾಡುಗಳಿದ್ದವು. ಆ ಸುಮಾರಿಗೆ ಬಂದ ಒಂದು ಹಿಂದಿ ಚಿತ್ರದಲ್ಲಿ ೪೦, ಹಾಗೂ ಒಂದು ತಮಿಳು ಚಿತ್ರದಲ್ಲಿ ೬೦ಕ್ಕೂ ಹೆಚ್ಚು ಹಾಡುಗಳಿದ್ದುವಂತೆ. ಈಗ ಹಾಡುಗಳ ಸಂಖ್ಯೆ ಕಡಿಮೆಯಾಗಿರಬಹುದು. ಆದರೆ ಹುಚ್ಚು ಹೆಚ್ಚಾಗಿರುವುದನ್ನು ಕಾಣುತ್ತೇವೆ. ಹಾಡು ಡ್ಯಾನ್ಸುಗಳೇ ಸಿನಿಮಾ ಎನ್ನುವವರೆಗೆ ಪ್ರೇಕ್ಷಕರ ಅಭಿರುಚಿ ಮತ್ತ ಬದಲಾಗಿದೆ.

ಆರಂಭದಲ್ಲಿ ಒಂದೆಡೆ ಹಾಡುಗಳು ಬೇಕಿತ್ತು. ಹಾಡನ್ನು ಶೂಟಿಂಗ್ ಹೊತ್ತಿನಲ್ಲಿಯೇ ರಿಕಾರ್ಡ್ ಮಾಡಬೇಕಿತ್ತು. ಅಂದರೆ ನಟರೇ ಸ್ವತಃ ಹಾಡಬೇಕಾಗಿತ್ತು, ಅದೂ ಅಭಿನಯಿಸುತ್ತಿರುವಾಗಲೆ, ಕಂಪನಿ ನಾಟಕಗಳ ತರಹ. ಧ್ವನಿಯ ಆಗಮನದ ನಂತರ ಹಾಲಿವುಡ್‌ನಲ್ಲೂ ಕೂಡ ಉದ್ದುದ್ದ ಸಂಭಾಷಣೆಗಳನ್ನು ಉರು ಹೊಡೆದು ಒಳ್ಳೆ ಉಚ್ಚಾರಣೆಯೊಂದಿಗೆ ಹೇಳಲು ಆಗದ ಮೂಕಿ ಕಾಲದ ಅನೇಕ ಸ್ಟಾರುಗಳು ಮನೆಗೆ ಹೋದರಂತೆ. ಅವರ ಸ್ಥಾನದಲ್ಲಿ ರಂಗಭೂಮಿಯಿಂದ ಬಂದ ನಟರುಗಳಿಗೆ ಆಗ ಸುಗ್ಗಿಕಾಲವಾಯಿತು. ಹಾಗೇ ಸಂಗೀತಪ್ರಿಯ ಭಾರತೀಯರಿಗೆ ಚಿತ್ರಗಳನ್ನು ಮಾಡುವಾಗ ಸ್ವತಃ ಹಾಡಲು ಬರುವ ನಟರಿಗೆ ಆದ್ಯತೆ ಸಿಗತೊಡಗಿತು.

ಹಾಗೆ ನೋಡಿದರೆ ಕುಂದನ್‌ಲಾಲ್ ಸೈಗಾಲ್ ನಿಜವಾಗಿಯೂ ನಟರೇ ಅಲ್ಲ. ಆದರೂ ಹಾಡಬಲ್ಲರು ಎಂಬ ಕಾರಣಕ್ಕಾಗಿ ಅನೇಕ ಚಿತ್ರಗಳಿಗೆ ಅವರು ನಾಯಕರಾಗಿದ್ದರು. ಅವರು ತಮ್ಮ ಪಾತ್ರಗಳಲ್ಲಿ ಸ್ವತಃ ಹಾಡುತ್ತಿದ್ದರು. ಆ ದಿನಗಳಲ್ಲಿ ಪಾತ್ರ ಅಭಿನಯಿಸುವಾಗಲೇ ಹಾಡನ್ನೂ ರಿಕಾರ್ಡ್ ಮಾಡಿಕೊಳ್ಳಬೇಕಾಗಿದ್ದರಿಂದ ಅವರ ತಲೆಯ ಮೇಲೊಂದು ಮೈಕ್ ತೂಗುತ್ತಿರುತ್ತಿತ್ತು. ಪಕ್ಕದಲ್ಲಿಯೇ ಪೂರಕವಾದ್ಯಗಳ ಒಂದು ತಂಡವೂ ಇರುತ್ತಿತ್ತು. ಇದ್ಯಾವುದೂ ಕಾಣದ ಹಾಗೆ ಅವರನ್ನಷ್ಟೇ ಚಿತ್ರೀಕರಿಸಬೇಕು. ಇಂಥ ಮಿತಿಗಳಿಂದಾಗಿ, ಸೈಗಾಲ್ ಒಂದು ಜಾಗದಲ್ಲಿ ನಿಂತು ಹಾಡತೊಡಗಿದರೆ (ಅವರು ಹಾಡುತ್ತಿದ್ದುದೇ ವಿಳಂಬಿತ ಗತಿಯಲ್ಲಿ) ಅವರು ಇಡೀ ಗೀತೆ ಹಾಡಿ ಮುಗಿಸುವವರೆಗೆ ಕ್ಯಾಮರಾ ಸ್ವಲ್ಪವೂ ಅಲುಗಾಡದೆ ಸ್ಥಿರ ಸ್ಥಿತಿಯಲ್ಲಿದ್ದು ಚಿತ್ರೀಕರಿಸಿಕೊಳ್ಳಬೇಕಾಗುತ್ತಿತ್ತು.

ಇದು ತುಂಬಾ ಜಡವಾಯಿತು ಅನ್ನಿಸಿ ಮುಂದೆ ಅವರನ್ನು ಸ್ವಲ್ಪವಾದರೂ ಆಚೀಚೆ ಓಡಾಡಿಕೊಂಡು ಹಾಡುವಂತೆ ಮಾಡಬೇಕು. ಆ ನೆಪದಲ್ಲಿ ಸ್ವಲ್ಪವಾದರೂ ಕ್ಯಾಮರಾ ಚಲನೆ ಸಾಧ್ಯವಾದೀತು ಎಂಬ ವಿಚಾರ ಬಂತು. ಆಗ ಕ್ಯಾಮರಾವನ್ನು ಒಂದು ಚಕ್ರದ ಗಾಡಿ(Trolly) ಮೇಲೆ ಸ್ಥಾಪಿಸಿದ್ದಷ್ಟೇ ಅಲ್ಲ, ಸೈಗಾಲ್‌ರಿಗೆ ಜೊತೆ ಕೊಡುವ ಆರ್ಕೆಸ್ಟ್ರಾವನ್ನೂ ಉರುಳು ವೇದಿಕೆಯ ಮೇಲೆ ಕೂಡಿಸಬೇಕಾಗಿತ್ತು. ಸೈಗಾಲ್ ಅವರು ಒಂದೆರಡು ಹೆಜ್ಜೆ ಆಚೀಚೆ ಸರಿದರೆ ಕ್ಯಾಮರಾ ಗಾಡಿ ಹಾಗೂ ಆರ್ಕೆಸ್ಟ್ರಾ ಗಾಡಿ ಎರಡೂ

ಅದಕ್ಕೆ ತಕ್ಕಂತೆ ಚಲಿಸುತ್ತಿದ್ದವು. ಹಾಡನ್ನು ಚಿತ್ರೀಕರಣಕ್ಕಿಂತ ಮುಂಚೆಯೇ ಸಿದ್ಧ ಮಾಡಿಟ್ಟುಕೊಂಡು ಅದನ್ನು ನೂರಾರು ತುಣುಕುಗಳಲ್ಲಿ ವಿಭಜಿಸಿಕೊಂಡು, ಅದಕ್ಕೆ ತಕ್ಕಂತೆ ಚಿಕ್ಕ ಚಿಕ್ಕ ಶಾಟ್‌ಗಳಲ್ಲಿ ಚಿತ್ರೀಕರಿಸಿಕೊಂಡು, ಅಷ್ಟೇ ಚುರುಕಾಗಿ ಸಂಕಲಿಸಿ ಸೃಷ್ಟಿಸುವ ಇಂದಿನ ಹಾಡುಗಳ ದೃಶ್ಯೀಕರಣಕ್ಕೆ ಒಗ್ಗಿರುವ ಸಾಮಾನ್ಯ ಪ್ರೇಕ್ಷಕರಿಗೆ ಬಹುಶಃ ಆರಂಭದ ಪರಿಸ್ಥಿತಿಯ ಅರಿವೇ ಇರಲಿಕ್ಕಿಲ್ಲ.

ಭಾರತೀಯ ಸಿನಿಮಾಗಳಲ್ಲಿ ಧ್ವನಿಯ ಸೇರ್ಪಡೆಯಿಂದ ಉದ್ದಿಮೆಗೆ ಲಾಭ-ನಷ್ಟ ಎರಡೂ ಕಾದಿದ್ದವು. ಮೂಕಿ ಚಿತ್ರಗಳ ಕಾಲದಲ್ಲಿ ಭಾರತೀಯ ಚಿತ್ರಗಳು ಇತರ ವಿದೇಶಿ ಚಿತ್ರಗಳೊಂದಿಗೆ ಪೈಪೋಟಿ ಮಾಡಬೇಕಾಗಿತ್ತು. ಭಾರತೀಯ ಚಿತ್ರಗಳಿಗೆ ಮನ್ನಣೆ ನೀಡುವ ಸಲುವಾಗಿ ಇಂತಿಷ್ಟು ಪ್ರಮಾಣದಲ್ಲಿ ತೋರಿಸಲೇಬೇಕು ಎಂಬ ಕೋಟಾ ವ್ಯವಸ್ಥೆಯನ್ನು ಮಾಡಿ ಎಂದರೂ ಆಗಿನ ಬ್ರಿಟಿಷ್ ಸರಕಾರ ಅದನ್ನು ಕಿವಿಗೆ ಹಾಕಿಕೊಂಡಿರಲಿಲ್ಲ. ಈಗ ಸಿನಿಮಾದಲ್ಲಿ ಸೇರಿಕೊಂಡ ಮಾತು ಭಾರತೀಯ ನಿರ್ಮಾಪಕರಿಗೆ ಸಹಜವಾದ ರಕ್ಷಣೆಯನ್ನು ನೀಡಿತ್ತು. ಸಂಭಾಷಣೆ, ಹಾಡು ಹಾಗೂ ನೃತ್ಯಗಳೇ ತುಂಬಿರುತ್ತಿದ್ದ ಭಾರತೀಯ ಸಿನಿಮಾಗಳು ಸ್ಥಳೀಯ ಪ್ರೇಕ್ಷಕರನ್ನು ಅನನ್ಯವಾಗಿ ಆಕರ್ಷಿಸಿದವು. ವಿದೇಶಿ ಚಿತ್ರಗಳು ಏನಿದ್ದರೂ ಪ್ರತಿಷ್ಠಿತ, ಸುಶಿಕ್ಷಿತ ಪ್ರೇಕ್ಷಕರಿಗೆ ಎಂಬ ಪರಿಸ್ಥಿತಿ ಉಂಟಾಯಿತು.

ಈ ಪ್ರತ್ಯೇಕ ಮಣೆಯ ಮರ್ಯಾದೆಯನ್ನು ಅನುಭವಿಸಲು ತೊಡಗಿದ ಭಾರತೀಯ ಭಾಷಾ ಚಿತ್ರಗಳಿಗೆ ಅನಿವಾರ್ಯವಾದ ಇನ್ನೊಂದು ಅಪಾಯ ಕಾದಿತ್ತು. ಮೂಕಿ ಯುಗವಲ್ಲಾದರೋ ಭಾರತದಲ್ಲಿ ತಯಾರಾದ ಚಿತ್ರಗಳು ಬರ್ಮಾ, ಸಿಲೋನ್‌ಗಳಲ್ಲೂ ಪ್ರದರ್ಶಿತವಾಗುತ್ತಿದ್ದವು. ಕೆಲವೊಮ್ಮೆ ಮಲಯಾ, ಪೂರ್ವ ಆಫ್ರಿಕಾ, ದಕ್ಷಿಣ ಆಫ್ರಿಕಾಗಳಿಗೂ ಹೋಗುತ್ತಿದ್ದವು. ಚಿತ್ರಗಳಿಗೆ ಭಾಷೆ ಸೇರಿಕೊಂಡ ಕೂಡಲೇ ಪ್ರದರ್ಶನ ಜಾಲ ಇದ್ದಕ್ಕಿದ್ದಂತೆ ತೀವ್ರವಾಗಿ ಸೀಮಿತಗೊಂಡಿತು. ವಿದೇಶದ ಮಾರುಕಟ್ಟೆ ಕಳೆದು ಹೋಗುವ ಮಾತು ಹಾಗಿರಲಿ, ಭಾರತದಲ್ಲಿಯೇ ಒಂದು ಪ್ರದೇಶದಲ್ಲಿ ತಯಾರಾದ ಚಿತ್ರಗಳು ಅದರ ಗಡಿಯನ್ನು ದಾಟಿ ಹೋಗದ ಪರಿಸ್ಥಿತಿ ಅನಿವಾರ್ಯವಾಯಿತು. ಭಾರತದಲ್ಲಿ ವ್ಯಾಪಕವಾಗಿ ಬಳಕೆಯಲ್ಲಿದ್ದು ಕೆಲ ಪ್ರದೇಶ-ರಾಷ್ಟ್ರಗಳಲ್ಲೂ ಪ್ರಚಲಿತವಿದ್ದ ಹಿಂದಿ ಭಾಷೆಯ ವಿಚಾರವೇ ಹೀಗಾದರೆ ಬರೀ ಒಂದೊಂದೇ ಪ್ರದೇಶ-ಸರಹದ್ದಿಗೆ ಮಾತ್ರ ಸೀಮಿತವಾಗಿದ್ದ ಕನ್ನಡ, ಗುಜರಾತಿ, ಬಂಗಾಲಿಯಂಥ ಭಾರತೀಯ ಭಾಷೆಗಳ ಚಿತ್ರಗಳ ಗತಿ ಏನಾಗಿರಬಹುದು? ಬಹುಶಃ ಆಗ ಶುರುವಾದ ಭಾಷಾ ಚಿತ್ರಗಳ ಮಾರುಕಟ್ಟೆ ಬಿಕ್ಕಟ್ಟು ಸಿನಿಮೋದ್ಯಮವನ್ನು ಒಂದಿಲ್ಲ ಒಂದು ರೀತಿಯಲ್ಲಿ ಕಾಡುತ್ತಲೇ ಬಂದಿದೆ, ಸಮಸ್ಯೆ ಮುಂದುವರಿದಿದೆ.

ಧ್ವನಿ ತಂದ ಸಮಸ್ಯೆ

ನಮ್ಮ ಕಂಪನಿ ನಾಟಕಗಳಲ್ಲಿ ರಂಗದ ಎದುರಿಗೆ ಒಂದು ತಗ್ಗನ್ನು ಮಾಡಿಕೊಂಡು ಅದರಲ್ಲಿ ಹಾರ್ಮೋನಿಯಂ ಮಾಸ್ಟರ್ ಹಾಗೂ ತಬಲಾ ನುಡಿಸುವವರು ಕುಳಿತು ನಾಟಕದ ದೃಶ್ಯಗಳಿಗೆ ಸಂಗೀತ ಒದಗಿಸುವ ಪದ್ಧತಿ ಇದೆಯಲ್ಲವೇ ಹಾಗೆಯೇ ಚಿತ್ರಮಂದಿರಗಳಲ್ಲೂ ಪರದೆಯ ಹತ್ತಿರ ವಾದ್ಯಗೋಷ್ಠಿಯವರು ಕುಳಿತು ಪರದೆಯ ಮೇಲೆ ನಡೆಯುತ್ತಿರುವ ದೃಶ್ಯಗಳಿಗೆ ತಕ್ಕ ಹಾಗೆ ಸಂಗೀತವನ್ನು ನೀಡುತ್ತಿದ್ದರು. ಭಾರತದಲ್ಲಿಯೂ ೧೮೯೬ರ ಜುಲೈನಲ್ಲಿ ಲ್ಯುಮಿಯೆರ್ ಬ್ರದರ್ಸ್ ಪ್ರತಿನಿಧಿ ಮಾರಿಸ್ ಸೆಸ್ಟಿಯರ್ ಚಲಿಸುವ ಚಿತ್ರಗಳ ಪ್ರದರ್ಶನ ನೀಡಲು ತೊಡಗಿದ ಹೊಸತರಲ್ಲಿಯೇ ಅವುಗಳ ಆಕರ್ಷಣೆಯನ್ನು ಹೆಚ್ಚಿಸಲು 'ಎಸ್. ಸೆಯ್ಮೋರ್ ದೋವ್‌ರ ನಿರ್ದೇಶನದಲ್ಲಿ ತಕ್ಕ ಸಂಗೀತದ ಆಯ್ಕೆ' ಮಾಡಿ ಬಳಸಿದ ದಾಖಲೆಗಳಿವೆ.

ಚಲಿಸುವ ಜೀವಂತ ಚಿತ್ರಗಳನ್ನು ನೋಡಿಯೇ ಜಗತ್ತಿನಾದ್ಯಂತ ಜನ ಆನಂದದಿಂದ ಕುಣಿದಾಡಿದ್ದರು. ಆದಾಗಲೇ ಸಿನಿಮಾ ಇತಿಹಾಸದಲ್ಲಿಯೇ ಮೇರು ಕೃತಿಗಳೆನ್ನಿಸಿಕೊಂಡ ಚಿತ್ರಗಳೂ ಬಂದಿದ್ದವು. ಆದರೂ ಹೆಚ್ಚು ಹೆಚ್ಚು ಸಾರ್ವತ್ರಿಕ ಪ್ರೇಕ್ಷಕರನ್ನು ಆಕರ್ಷಿಸಬೇಕು ಎಂಬ ಅಪೇಕ್ಷೆ ಸಿನಿಮಾ ನಿರ್ಮಾಪಕರಿಗೆ. ಇದನ್ನು ಅನುಸರಿಸಿ ನಾ ಮುಂದು ತಾ ಮುಂದು ಎಂದು ಪೈಪೋಟಿಯಲ್ಲಿ ಹೊಸದನ್ನು ಕೊಡುವ ಧಾವಂತದಲ್ಲಿ ಧ್ವನಿ ಸಂಯೋಜಿತ ಚಿತ್ರಗಳನ್ನೇನೋ ತಂದರು. ಮೊದಮೊದಲು ಬರೀ ಪ್ರಯೋಗದ ರೀತಿಯಲ್ಲಿ ಪ್ರದರ್ಶಿತವಾಗುತ್ತಿದ್ದ ಧ್ವನಿಚಿತ್ರಗಳು ಬರುಬರುತ್ತಾ ಮುಖ್ಯ ಪ್ರದರ್ಶನಗಳೇ ಆಗಬೇಕಾದ ಅನಿವಾರ್ಯ ಬಹಳ ಬೇಗನೆ ಬಂದೂಬಿಟ್ಟಿತು. ಒಂದು ಕಡೆ ಹೊಸ ಅನುಭವದಿಂದ ರೋಮಾಂಚಿತರಾಗಿ ಜನ ಕುಣಿದಾಡುತ್ತಿರುವಾಗ ಚಿತ್ರ ನಿರ್ಮಾಣ ಸಂಸ್ಥೆಗಳು, ಚಿತ್ರಮಂದಿರದ ಮಾಲೀಕರು ಒಂದು ವಿಚಿತ್ರ ಬಿಕ್ಕಟ್ಟಿನಲ್ಲಿ ಸಿಕ್ಕಿಹಾಕಿಕೊಂಡು ಉಗುಳಲೂ ಆಗದ ನುಂಗಲೂ ಆಗದ ಪರಿಸ್ಥಿತಿಯನ್ನು ಅನುಭವಿಸುತ್ತಿದ್ದರು.

ಚಿತ್ರದೊಂದಿಗೆ ಧ್ವನಿಯನ್ನೂ ಅಳವಡಿಸಬೇಕು ಎಂದರೆ ಇನ್ನಷ್ಟು ಕ್ಲಿಷ್ಟಕರವಾದ ತಂತ್ರಜ್ಞಾನ ಅನಿವಾರ್ಯ. ತಾಂತ್ರಿಕ ಸುಧಾರಣೆಯೇನೋ ಆಗಿತ್ತು. ಆದರೆ ದುಬಾರಿ ವೆಚ್ಚದ ಉಪಕರಣಗಳನ್ನು ಕೊಳ್ಳಬೇಕು. ಅವನ್ನು ಆಪರೇಟ್ ಮಾಡಲು ಬೇಕಾದ ಪರಿಣತ ಸಿಬ್ಬಂದಿಯನ್ನು ನೇಮಿಸಬೇಕು. ಅಷ್ಟರಮಟ್ಟಿಗೆ ನಿರ್ಮಾಣ ವೆಚ್ಚದಲ್ಲಿ ಹೆಚ್ಚಳ. ಅಂತಯೇ ಥಿಯೇಟರಿನಲ್ಲಿ ಪ್ರದರ್ಶನ ವ್ಯವಸ್ಥೆಯನ್ನೂ ಧ್ವನಿಗೆ ತಕ್ಕಹಾಗೆ ಸುಧಾರಿಸಿಕೊಳ್ಳಬೇಕಾಗಿತ್ತು.

ಆರಂಭದಲ್ಲಿ ಬಳಕೆಗೆ ಬಂದ ಪದ್ಧತಿ ಪ್ರಕಾರ ಚಿತ್ರೀಕರಣ ಮಾಡುತ್ತಿರುವಾಗಲೇ ಜೊತೆಜೊತೆಗೇ ಧ್ವನಿಯನ್ನೂ ರಿಕಾರ್ಡ್ ಮಾಡಿಕೊಂಡುಬಿಡಬೇಕಾಗಿತ್ತು. ಅಂದರೆ ನಟರು ಅಭಿನಯಿಸಿ ಕ್ಯಾಮರಾಗಳು ಅದನ್ನು ಚಿತ್ರೀಕರಣ ಮಾಡಿಕೊಳ್ಳುತ್ತಿರುವಾಗ ಅನುಸರಿಸುವ ಮೈಕ್ರೋಫೋನ್ 'ಆನ್' ಆಗಿರುತ್ತಿತ್ತು. ಆಗಿನ ಕ್ಯಾಮರಾಗಳು ಚಲಿಸಿದಾಗ ಈಗಿನವುಗಳಿಂತ ಹೆಚ್ಚು ಸದ್ದು ಮಾಡುತ್ತಿದ್ದವು. ಹೀಗಾಗಿ ಸೂಕ್ಷ್ಮವಾಗಿದ್ದ ಮೈಕುಗಳಲ್ಲಿ ನಟರ ಸಂಭಾಷಣೆಯೊಂದಿಗೆ ಕ್ಯಾಮರಾದ ಕಿರ್‌ರ್‌ರ್.... ಸದ್ದೂ ಮುದ್ರಿತವಾಗಿಬಿಡುತ್ತಿತ್ತು. ಈ ಸಮಸ್ಯೆಯನ್ನು ಬಗೆಹರಿಸಲು, ಕ್ಯಾಮರಾಗಳಿಗೆ ದಪ್ಪನೆಯ ಹೊದಿಕೆಗಳನ್ನು ಹೊದಿಸಲಾಗುತ್ತಿತ್ತು. ಅದೂ ಸಾಲದೆಂಬಂತೆ ಇಡೀ ಕ್ಯಾಮರಾ ವ್ಯವಸ್ಥೆಯನ್ನು ಒಂದು ಶಬ್ದ ಸುರಕ್ಷಿತ (Sound Proof) ಡಬ್ಬದಲ್ಲಿ (Blimp) ಅಳವಡಿಸಲಾಗುತ್ತಿತ್ತು. ಇದರಿಂದಾಗಿ ಕ್ಯಾಮರಾ ಅಲ್ಲಿಯವರೆಗೆ ರೂಢಿಸಿಕೊಂಡಿದ್ದ ಚುರುಕಾದ ಚಲನೆಯನ್ನು ಕಳೆದುಕೊಂಡು ನಿಂತಲ್ಲೇ ಬಹಳ ಹೊತ್ತು ನಿಲ್ಲುವಂತಾಯಿತು. ದೃಶ್ಯ ನಿರೂಪಣೆ ಜೀವಂತಿಕೆಯನ್ನು ಕಳೆದುಕೊಂಡಿತು.

ಸಂಭಾಷಣೆ ಇತ್ಯಾದಿ ಧ್ವನಿಗಳನ್ನು ಜೊತೆಜೊತೆಗೇ ಧ್ವನಿ ಮುದ್ರಣ ಮಾಡಿಕೊಳ್ಳಬೇಕಾಗಿದ್ದರಿಂದ ಹೊರಾಂಗಣ ಚಿತ್ರೀಕರಣ ಹೆಚ್ಚು ಕಡಿಮೆ ಕೈ ಬಿಡಬೇಕಾಯಿತು. ಅಲ್ಲಿನ ಸಹಜ ಸದ್ದುಗದ್ದಲವನ್ನು ನಿಯಂತ್ರಣ ಮಾಡುವುದು ಹೇಗೆ? ಚಿತ್ರೀಕರಣವೆಲ್ಲ ಒಳಾಂಗಣದ ಸ್ಟುಡಿಯೋಗಳಲ್ಲಿ, ಅಲ್ಲಿಯೂ ಕೂಡ ಹೊರಗಿನ ಸದ್ದು ಒಳಗಡೆ ಕೇಳಿಸದ ಹಾಗೆ ಮಾಡಲು ಸ್ಟುಡಿಯೋಗಳನ್ನು ಶಬ್ದಸುರಕ್ಷಿತ (Sound Proof) ಮಾಡಬೇಕಾಗುತ್ತಿತ್ತು. ಸರಿ ಇದನ್ನು ಮಾಡುವ ಸಲುವಾಗಿ ಬಾಗಿಲು ಕಿಟಕಿಗಳನ್ನೆಲ್ಲಾ ಭದ್ರವಾಗಿ ಮುಚ್ಚಿದ ಮೇಲೆ ಒಳಗೆ ಕತ್ತಲಾಯಿತು. ಚಿತ್ರೀಕರಣಕ್ಕೆ ಬೇಕಾದ ಬೆಳಕನ್ನು ಕೃತ್ರಿಮವಾಗಿ ಒದಗಿಸಲು ಬೆಳಕು ಸಾಧನಗಳು ಬೇಕಾದವು. ಜೊತೆಗೆ ಅವುಗಳನ್ನು ನಿರ್ವಹಿಸುವವರ ತಂಡ. ಕಥೆ ಇಲ್ಲಿಗೇ ಮುಗಿಯಲಿಲ್ಲ. ಥಿಯೇಟರು ಮಾಲೀಕರಿಗ ಹೊಸ ಸಮಸ್ಯೆ ಎದುರಾಯಿತು. ಮೊದಲು ಬರೀ ಚಿತ್ರಪಟ್ಟಿಯನ್ನು ಪರದೆಯ ಮೇಲೆ ಹಿಗ್ಗಿಸಿ ಪ್ರದರ್ಶಿಸುವ ಪ್ರೊಜೆಕ್ಟರ್ ಉಪಕರಣಗಳು ಇದ್ದರೆ ಸಾಕಿತ್ತು. ಆದರೆ ಈಗ ಧ್ವನಿಯ ಪುನರುತ್ಪಾದನೆಗೆ ಬೇಕಾದ ಸಾಧನೋಪಕರಣಗಳನ್ನು ಅಳವಡಿಸಿಕೊಳ್ಳಬೇಕಾಗಿತ್ತು. ಧ್ವನಿಯನ್ನು ಅಳವಡಿಸಿಕೊಂಡ ಕೂಡಲೇ ಇಡೀ ಥಿಯೇಟರನ್ನು ಶಬ್ದಸುರಕ್ಷಿತಗೊಳಿಸಬೇಕಾದ ಅನಿವಾರ್ಯ ಬೇರೆ.

ಒಂದು ಕಡೆ ಇದ್ದಕ್ಕಿದ್ದಂತೆ ಹೆಚ್ಚಿದ ನಿರ್ಮಾಣ ವೆಚ್ಚ, ಉಪಕರಣಗಳ ಹಾಗೂ ತರಬೇತಿ ಹೊಂದಿದ ಪರಿಣತರ ಕೊರತೆ, ಥಿಯೇಟರುಗಳನ್ನು ಮತ್ತೊಮ್ಮೆ ಸಜ್ಜುಗೊಳಿಸಬೇಕಾದ ತುರ್ತು. ಇವೆಲ್ಲದರ ಗದ್ದಲದಲ್ಲಿ ಸದ್ದಿಲ್ಲದೆ ಅನೇಕ ಚಿತ್ರ ನಿರ್ಮಾಣ ಕಂಪನಿಗಳು ನಿರ್ನಾಮವಾದವು. ಥಿಯೇಟರುಗಳು ಮುಚ್ಚಿದವು. ಇನ್ನುಳಿದವು ಬದುಕುಳಿಯಲು ಬೇರೆ ಮಾರ್ಗವಿಲ್ಲವೆಂಬಂತೆ ನಿಧಾನವಾಗಿ ಒಂದೊಂದೇ ಬದಲಾಗತೊಡಗಿದವು. ಅಮೆರಿಕಾದ ಮಟ್ಟಿಗೆ ಹೇಳುವುದಾದರೆ ೧೯೨೯ರ ಹೊತ್ತಿಗೆ ಸುಮಾರು ೭೫ ಪ್ರತಿಶತ ಚಿತ್ರಮಂದಿರಗಳು ಧ್ವನಿ ಉಪಕರಣಗಳನ್ನು ಅಳವಡಿಸಿಕೊಂಡವು. ಮುಂದಿನ ವರ್ಷದ ಹೊತ್ತಿಗೆ ಹೆಚ್ಚು ಕಡಿಮೆ ಉಳಿದೆಲ್ಲ ಥಿಯೇಟರುಗಳೂ ಧ್ವನಿ ಚಲನಚಿತ್ರಗಳನ್ನು ತೋರಲು ಸಿದ್ಧವಾಗಿದ್ದವು.

ಧ್ವನಿಯ ಆಕ್ರಮಣದಿಂದ ತತ್ತರಿಸಿದವರು ನಿರ್ಮಾಪಕ, ಪ್ರದರ್ಶಕರಷ್ಟೇ ಅಲ್ಲ, ಚಿತ್ರ ನಿರ್ದೇಶಕರೂ ಒಮ್ಮೆ ಹೊಸ ಬೆಳವಣಿಗೆಯನ್ನು ಅವಲೋಕಿಸಿ ಅದನ್ನು ತಮ್ಮ ತಂತ್ರಗಳ ಬತ್ತಳಿಕೆಯಲ್ಲಿ ಅಳವಡಿಸಿಕೊಂಡೇ ಬದುಕಬೇಕಾಗಿತ್ತು. ಮೂವತ್ತರ ದಶಕದುದ್ದಕ್ಕೂ ಮೂಕ ಚಿತ್ರಗಳನ್ನೇ ನಿರ್ಮಿಸುವ ಛಾತಿ ತೋರಿದ್ದು ಚಾರ್ಲಿ ಚಾಪ್ಲಿನ್ ಒಬ್ಬರೇ.

ಸದ್ದಿನ ನಿಯಂತ್ರಣಕ್ಕಾಗಿ ಕ್ಯಾಮರಾವನ್ನು ದೊಡ್ಡ ಗೂಡಿನಲ್ಲಿ ಇಡಬೇಕಾಗುತ್ತಿದ್ದುದರಿಂದ ಈ ವ್ಯವಸ್ಥೆ ಸ್ವಲ್ಪಮಟ್ಟಿಗೆ ಬಡವಾಯಿತು. ಮೈಕ್ರೋಫೋನ್‌ನ ಬಳಕೆ ಹೆಚ್ಚಿದಂತೆ ಅದರಲ್ಲೂ ವೈವಿಧ್ಯ ಬಂತು. ಹೊಸ ಹೊಸ ಮಾದರಿಗಳನ್ನು ಕಂಡುಹಿಡಿಯಲಾಯಿತು. ಮೂವಿಂಗ್ ಕಾಯಿಲ್ ಮೈಕ್, ರಿಬ್ಬನ್ ಮೈಕ್ ಇತ್ಯಾದಿ. ಇವು ಗಾತ್ರದಲ್ಲಿ ಬಹಳ ದಪ್ಪವಾಗಿದ್ದವು. ಪ್ರಾರಂಭದಲ್ಲಿ ಚಿತ್ರ ನಿರ್ಮಾಣದಲ್ಲಿ ಬೂಮ್ ಬಳಕೆ ಬಹಳವಾಗಿತ್ತು. ಇವರಲ್ಲಿ ನಾಲ್ಕು ಚಕ್ರಗಳ ಮೇಲೆ ಒಂದು ಕಂಬಕ್ಕೆ ಕ್ರೇನ್ ರೂಪದಲ್ಲಿ ಚಾಚಿರುವ ಕಂಬಿಯ ತುದಿಗೆ ಮೈಕ್ರೋಫೋನ್ ಜೋಡಿಸುತ್ತಾರೆ. ಈ ಕಂಬಿಯ ಉದ್ದವನ್ನು ಬೇಕಾದಂತೆ ಹಿಗ್ಗಿಸಬಹುದು, ಕುಗ್ಗಿಸಬಹುದು. ಯಾವ ದಿಕ್ಕಿಗಾದರೂ ಅದನ್ನು ತಿರುಗಿಸಬಹುದು. ನಿಂತಲ್ಲಿಂದಲೇ ಬೇಕಾದಲ್ಲಿಗೆ ಚಲಿಸುವಂತೆ ಮಾಡಬಹುದು. ಈ ಕೆಲಸವನ್ನು ಬೂಮ್ ಮ್ಯಾನ್ ನಿರ್ವಹಿಸುತ್ತಾನೆ. ಅಂದರೆ ಕಲಾವಿದ ಮಾತನಾಡುತ್ತಾ ಚಲಿಸಿದ ದಿಕ್ಕಿನಲ್ಲೇ ಈ ಸಾಧನದಿಂದ ಮೈಕ್ ಅನ್ನೂ ಸ್ಥಳಾಂತರಿಸಬಹುದು. ಹಾಗಾಗಿ ಧ್ವನಿಗ್ರಹಣ ಸುಲಭ ಸಾಧ್ಯವಾಯಿತು (ಬೂಮ್ ಬಳಕೆ ಈಗಲೂ ಪ್ರಚಲಿತವಾಗಿದೆ).

ಹಿಂದೆ ಕಲಾವಿದರು ಅಭಿನಯದೊಂದಿಗೆ ಸಂಭಾಷಣೆಯನ್ನೂ ಏಕಕಾಲದಲ್ಲಿ ನೀಡಬೇಕಾಗಿತ್ತು. ಡಬ್ಬಿಂಗ್ ವೇಳೆ ಭಾವನೆ ತುಂಬಿ ಕೊಡಬಹುದು ಎಂಬ ಕಲ್ಪನೆ ಆಗಿನ ನಟ - ನಿರ್ದೇಶಕರಿಗೆ ಇರಲಿಲ್ಲ. ಹೀಗಾಗಿ ನಟರು ಪ್ರತಿ ಹೆಜ್ಜೆಯಲ್ಲೂ ಎಚ್ಚರದಿಂದ ನಟಿಸುತ್ತಿದ್ದರು. ಅಂದಿನ ಕಲಾವಿದರಾದರೂ ರಂಗಭೂಮಿಯಿಂದ ಬಂದವರಾದ್ದರಿಂದ ಮೈಕಿನ ಸಹಾಯ ಇಲ್ಲದೆಯೇ ನಾಟಕ ಮಂದಿರದ ಕೊನೆಯ ಸಾಲಿನಲ್ಲಿ ಕೂತವರಿಗೂ ಕೇಳುವ ಹಾಗೆ ಸಂಭಾಷಣೆಯನ್ನು ಒಪ್ಪಿಸುವ ಸಾಮರ್ಥ್ಯ ಹೊಂದಿದವರಾಗಿದ್ದರು. ಈಗ ಡಬ್ಬಿಂಗ್‌ನಲ್ಲಿ ಸಂಭಾಷಣೆಯನ್ನು ಪರಿಷ್ಕರಿಸಿಕೊಳ್ಳುವುದು ಅಭ್ಯಾಸವಾಗಿದೆ. ಅದೇ ರೀತಿ ನಟನ ದೇಹದ ಆಕಾರಕ್ಕೆ ತಕ್ಕಂತೆ ಧ್ವನಿ ಇರಬೇಕು, ಇಲ್ಲದಿದ್ದರೆ ಆಭಾಸ. ಮೇಲಾಗಿ ಹಿಂದಿನ ನಟರು ಗಾಯಕರೂ ಆಗಿರುತ್ತಿದ್ದರು.

ಹಿಂದೆ ಆರ್.ಸಿ.ಎ. ಕಂಪೆನಿಯ ಮೈಕ್ರೋಫೋನ್‌ಗಳನ್ನೇ ಹೆಚ್ಚಾಗಿ ಉಪಯೋಗಿಸುತ್ತಿದ್ದರು. ರಿಬ್ಬನ್ ಮೈಕ್, ವೆಲಾಸಿಟಿ ಮೈಕ್‌ಗಳನ್ನು ಬಳಸುತ್ತಿದ್ದರು. ಇವು ಗಾತ್ರದಲ್ಲಿ ಭಾರಿ ದೊಡ್ಡವು, ಭಾರವೂ ವಿಪರೀತ. ಆಗ ಚಿತ್ರೀಕರಣ ಬಹುತೇಕ ಸ್ಟುಡಿಯೋಗಳಲ್ಲೇ ನಡೆಯುತ್ತಿತ್ತು. ಕ್ಯಾಮರಾಗಳ ಧ್ವನಿ ನಿಯಂತ್ರಿಸಲು ಬ್ಲಿಂಪ್ (Blimp) ಬಳಸಿ ಕ್ಯಾಮರಾ ಮೋಟರ್ ಸದ್ದು ತಗ್ಗಿಸುತ್ತಿದ್ದರು. ಚಿತ್ರೀಕರಣ ಪ್ರಾರಂಭಕ್ಕೆ ಮುಂಚೆ ಕರೆಗಂಟೆ ಬಾರಿಸುತ್ತಿದ್ದರು. ಬೇರೆ ಯಾವ ರೀತಿಯ ಸದ್ದೂ ಇರಬಾರದೆಂದು ಈ ಮುನ್ನೆಚ್ಚರಿಕೆ. ಈ ವ್ಯವಸ್ಥೆಗೆ ಪ್ರತಿಯೊಬ್ಬರೂ ಓಗೊಡುತ್ತಿದ್ದರು. ದೃಶ್ಯದ ಚಿತ್ರೀಕರಣ ಮುಗಿದ ನಂತರವೂ ಮುಕ್ತಾಯ ಸೂಚಕವಾಗಿ ಕರೆಗಂಟೆ ಬಾರಿಸುತ್ತಿದ್ದರು. ಇದೇ ರೀತಿಯಲ್ಲಿ ಧ್ವನಿಗ್ರಹಣ ಬಹಳ ವರ್ಷಗಳ ಕಾಲ ಸಾಗಿತು.

ಸಾಲದೆಂಬಂತೆ ಇದರ ಜೊತೆಗೆ ಅಲ್ಲಲ್ಲಿ ಹೂವಿನ ಕುಂಡಗಳಲ್ಲಿ, ಕಂಬದ ಹಿಂಭಾಗದಲ್ಲಿ, ಪುಸ್ತಕಗಳ ಬದಿಯಲ್ಲಿ ಕಾಣದ ಹಾಗೆ ಅಡಗಿಸಿಟ್ಟ ಮೈಕ್ರೋಫೋನಿಗೆ ಆದಷ್ಟು ನೇರವಾಗಿ, ಹತ್ತಿರದಿಂದ ಮಾತಾಡಬೇಕಾದ ತಾಂತ್ರಿಕ ಅನಿವಾರ್ಯದಿಂದಾಗಿ ನಟ-ನಟಿಯರೂ ಚಲನೆ, ಚಟುವಟಿಕೆಗಳನ್ನು ಕಳೆದುಕೊಂಡರು. ಆಯಾ ಮೈಕ್ರೋಫೋನ್‌ಗಳಿಗೆ ಅಂಟಿಕೊಂಡಂತೆ ನಿಂತುಕೊಂಡು ಉದ್ದುದ್ದ ಸಂಭಾಷಣೆಗಳನ್ನು ಹೇಳುವುದೇ ಅಭಿನಯವಾಗತೊಡಗಿತು. ಮೈಕ್ರೋಫೋನ್‌ಗಳು ಸೂಕ್ಷ್ಮವಾಗಿದ್ದರಿಂದ ಅವು ಸಂಭಾಷಣೆಯೊಂದಿಗೆ ಅನಗತ್ಯವಾದ ಪರಿಸರದ ಸದ್ದು ಗದ್ದಲವನ್ನು ಗ್ರಹಿಸಿಬಿಡುತ್ತಿದ್ದವು. ಅಭಿನಯಿಸುವಾಗ ಬಳಸುವ ಕೈ ವಸ್ತುಗಳು ಉಂಟುಮಾಡುವ ಸದ್ದುಗಳ ಕುರಿತೂ ಬಹಳ ಎಚ್ಚರಿಕೆ ವಹಿಸಬೇಕಾಗುತ್ತಿತ್ತು. ಉದಾಹರಣೆಗೆ ಒಬ್ಬ ಮಾತಾಡುತ್ತ ಓದಲು ಒಂದು ಪತ್ರವನ್ನು ತೆರೆದರೆ ಆ ಕಾಗದದ ಸದ್ದು ಅಸಹನೀಯ ಎನ್ನುವಷ್ಟು ಜೋರಾಗಿರುತ್ತಿತ್ತು. ಅದನ್ನು ತಗ್ಗಿಸಲು ಕಾಗದವನ್ನು ಮೊದಲೇ ಸ್ವಲ್ಪ ಒದ್ದೆ ಮಾಡಿಟ್ಟುಕೊಳ್ಳಬೇಕಾಗುತ್ತಿತ್ತು. ಟೀ ಕಪ್ಪು, ಪುಸ್ತಕ ಇತ್ಯಾದಿ ವಸ್ತುಗಳನ್ನು ಬಳಸುವಾಗ, ಬಾಗಿಲನ್ನು ತೆರೆಯುವಾಗ, ಮುಚ್ಚುವಾಗ ಸದ್ದಿನ ಹೆದರಿಕೆಯಿಂದಾಗಿ ದೃಶ್ಯದಲ್ಲಿ ಸಹಜತೆ ಸಾಧ್ಯವಾಗುತ್ತಿರಲಿಲ್ಲ. ಈವರೆಗೆ ಕ್ಯಾಮರಾದ ತಾಂತ್ರಿಕ ಅಗತ್ಯಕ್ಕೆ ತಕ್ಕಂತೆ ಮಾತ್ರ ಅಭಿನಯಿಸಬೇಕಾದ ನಟನಟಿಯರು ಈಗ ಮೈಕ್ರೋಫೋನ್ ಅಗತ್ಯಕ್ಕೆ ತಕ್ಕಂತೆ ಅಭಿನಯಿಸಬೇಕಾಯಿತು. ಹಾಗೂ ಕೃತ್ರಿಮ ಬೆಳಕಿನ ವಿನ್ಯಾಸಕ್ಕೂ ಗಮನ ಕೊಡಬೇಕಾಗುತ್ತಿತ್ತು.

ಮೂಕಿಯ ಕಾಲದಲ್ಲಿ ಚಿತ್ರೀಕರಣ ಆಗುತ್ತಿರುವಾಗಲೇ ನಿರ್ದೇಶಕರು ನಟರಿಗೆ ಭಾವ, ಚಲನೆ ಮತ್ತು ಅಭಿನಯದ ಬಗ್ಗೆ ಕೂಗಿ ಸೂಚನೆಗಳನ್ನು ನೀಡುತ್ತಿದ್ದರು. ಅಲ್ಲೇ ಸಂಭಾಷಣೆಯನ್ನೂ ಧ್ವನಿ ಮುದ್ರಿಸುವ ವ್ಯವಸ್ಥೆ ಬಂದ ನಂತರ ಇದೆಲ್ಲವನ್ನೂ ಕೈಬಿಡಬೇಕಾಯಿತು. ಇದೆಲ್ಲದರ ಪರಿಣಾಮದಿಂದ ಆಗಿದ್ದೇನು ? ಒಂದೇ ಕಡೆ ನಿಂತು ಉದ್ದುದ್ದ ಸಂಭಾಷಣೆಗಳನ್ನು ಹೇಳುವ ದೃಶ್ಯಗಳ ಸರಣಿಗಳು, ಇಲ್ಲವೆ ಸಹಜ ಉತ್ಸಾಹವೇ ಇಲ್ಲದೆ ಹಾಡಿದ ಹಾಡುಗಳ ಸರಮಾಲೆಗಳು ಇವೇ ಸಿನಿಮಾಗಳು ಎಂದು ಬರತೊಡಗಿದವು. ಧ್ವನಿಯ ಆಗಮನವನ್ನು ಕಂಡು ಹಿಗ್ಗಿದ್ದ ಅಂದಿನ ವಿಮರ್ಶಕರು ಅದರ ಆಕ್ರಮಣದಿಂದ ಸಿನಿಮಾ ಕಲೆಯ ಮೇಲೆ ಉಂಟಾದ ದುಷ್ಪರಿಣಾಮಗಳನ್ನು ಕಂಡು 'ಮೂಕಿ'ಗಳ ನಿರ್ಗಮನಕ್ಕಾಗಿ ಶೋಕಾಚರಣೆಯನ್ನೂ ಮಾಡಿದರು. ಬಹುಶಃ ಕೆ.ಎಲ್.ಸೈಗಾಲರು 'ಏಕ್ ಬಂಗಲಾ ಬನೇಗಾ ನ್ಯಾರಾ' ಈ ಪೂರ್ತಿ ಹಾಡನ್ನು ಒಂದೇ (Close up) ಚಿತ್ರಿಕೆಯಲ್ಲಿ ಹಾಡಿದ್ದನ್ನು ಈಗಲೂ ಟಿ.ವಿ.ಯಲ್ಲಿ ನೋಡಬಹುದು.

ಮೂಕಿ ಯುಗದಲ್ಲಿ ಸುಂದರವಾದ ಮೂಗೇ ನಟಿಯರಿಗೆ ವರವಾಗಿತ್ತು. ಟಾಕಿ ಬಂದನಂತರ ಆ ಸಂಪಿಗೆಯಂಥ ಮೂಗೇ ಕೆಲವರಿಗೆ ಶಾಪವಾಯಿತಂತೆ. ಕಾರಣ, ಕೆಲವರು ಮೂಗಿನ ಮೂಲಕ ಮಾತಾಡುತ್ತಿದ್ದುದು. ಈಗ ಆ ದೋಷ ಎದ್ದು ತೋರುತ್ತಿತ್ತು. ಅಂಥವರನ್ನು ಮಾತಿನ ಚಿತ್ರಗಳಲ್ಲಿ ತೆಗೆದುಕೊಳ್ಳುವುದು ಕಷ್ಟವಾಗುತ್ತಿತ್ತು. ಹಾಗೆಯೇ ಮಾತಾಡುವಾಗ ಉಚ್ಚಾರಣೆಯಲ್ಲಿ ವಿದೇಶಿ ಛಾಯೆಯನ್ನು ಹೊಂದಿದ್ದ ಕಲಾವಿದರೂ ನಟನೆಯ ಆಯ್ಕೆಯಲ್ಲಿ ನಪಾಸಾಗತೊಡಗಿದರು. ಸುಮ್ಮನಿದ್ದರೆ ಅಡ್ಡಿಯಿಲ್ಲ, ಬಾಯಿ ಬಿಟ್ಟರೆ ಬಣ್ಣಗೇಡು ಎನ್ನುವಂತಾಯಿತು ಅವರ ಪಾಡು.

ಈ ಎಲ್ಲ ವಿಕೃತಿಗಳು ಕಾಣಿಸಿಕೊಂಡಿದ್ದು ಚಿತ್ರೀಕರಣ ಮಾಡುವಾಗಲೇ ಸಂಬಂಧಪಟ್ಟ ಮಾತನ್ನು ಒಟ್ಟಿಗೇ ಧ್ವನಿ ಮುದ್ರಿಸಿಕೊಳ್ಳಬೇಕಾಗಿದ್ದ ಅನಿವಾರ್ಯದಿಂದ. ಇಂದಿನ ಪ್ರೇಕ್ಷಕರಿಗೆ ಇದೆಲ್ಲವೂ ವಿಚಿತ್ರವಾಗಿ ತೋರಬಹುದು. ಇಂದು ಧ್ವನಿ ಚೆನ್ನಾಗಿಲ್ಲದ, ಭಾಷೆ ಬಾರದ ನಟ ನಟಿಯರೂ ಅಭಿನಯಿಸುತ್ತಾರೆ. ವಿವಿಧ ರಾಗ, ವಾದ್ಯ ಸಂಯೋಜನೆಯುಳ್ಳ ಹಾಡುಗಳು ಇರುತ್ತವೆ. ಬೇಕಾದ ಧ್ವನಿಗಳಲ್ಲಿ ಮಾತ್ರ ಸ್ಪಷ್ಟವಾಗಿ ಕೇಳಿಸುತ್ತವೆ. ಎಲ್ಲವೂ ಕೇಳಿಸುವುದಿಲ್ಲ. ಆದರೆ ಇದೆಲ್ಲ ಸಾಧ್ಯವಾಗುವುದು ದೃಶ್ಯದ ಚಿತ್ರೀಕರಣ ಬೇರೆಯಾಗಿಯೇ ಮಾಡಿ ಅದಕ್ಕೆ ಬೇಕಾದ ಸಂಭಾಷಣೆ, ಹಾಡು, ಸಂಗೀತ, ಧ್ವನಿವಿಶೇಷಗಳನ್ನು ಪ್ರತ್ಯೇಕವಾಗಿ ಸಂಪೂರ್ಣ ನಿಯಂತ್ರಿತ ಪರಿಸರದಲ್ಲಿ ಧ್ವನಿ ಮುದ್ರಿಸಿಕೊಂಡು ನಂತರದ ಹಂತಗಳಲ್ಲಿ ದೃಶ್ಯಪಟ್ಟಿಯ ಮೇಲೆ ಸೇರಿಸುವ ಅನುಕೂಲವಿರುವುದರಿಂದ. ಆದರೆ ಇಂಥ ತಾಂತ್ರಿಕ ಸ್ವಾತಂತ್ರ್ಯಪೂರ್ವದ ನಿರ್ದೇಶಕರಿಗೆ ಇರಲಿಲ್ಲವೆಂಬುದನ್ನು ನಾವು ನೆನಪಿನಲ್ಲಿ ಇಡಬೇಕು.

ಶಬ್ದದ ಮೂಲ ದೃಶ್ಯದಲ್ಲಿ ಕಂಡಾಗ ಅದನ್ನು Synchronous ಎನ್ನುತ್ತಾರೆ. ಉದಾ: ಜಟಕಾ ಗಾಡಿ ಹೋಗುವಾಗ ಕುದುರೆಯ ಕಾಲಿನ ಶಬ್ದವನ್ನು ಜೋಡಿಸಿದಾಗ ಅದು Synchronous ಜೋಡಣೆ ಎನ್ನಬಹುದು. ಒಂದು ವೇಳೆ ಕೇಳುತ್ತಿರುವ ಶಬ್ದದ ಮೂಲ ಆ ದೃಶ್ಯ/ಚಿತ್ರಿಕೆಯಲ್ಲಿಲ್ಲದಿದ್ದರೆ ಅದನ್ನು Asynchronous ಎನ್ನುತ್ತಾರೆ. ಉದಾ: ಮನೆಯ ಒಳಗಡೆಯ ದೃಶ್ಯ ನಡೆಯುತ್ತಿದೆ. ಆಗ ಶಬ್ದ ಪಟ್ಟಿಯಲ್ಲಿ ರೈಲು ಶಿಳ್ಳೆ ಕೇಳಿಸುತ್ತದೆ ಎಂದಿಟ್ಟುಕೊಳ್ಳಿ - ಅದು Asychronous ಜೋಡಣೆಯಾಗುತ್ತದೆ. ದೃಶ್ಯದಲ್ಲಿ ವಿವರ ತೋರದಿದ್ದರೂ ಆ ಮನೆ ರೈಲ್ವೆ ಹಳಿಯ ಪಕ್ಕದಲ್ಲಿದೆ ಎಂದು ಸೂಚಿತವಾಗುತ್ತದೆ. ಚಲನಚಿತ್ರದಲ್ಲಿ ಈ Asychronous ಜೋಡಣೆಗೆ ಬಹಳ ಮಹತ್ವ ಕೊಡುತ್ತಾರೆ. ನಿರ್ದೇಶಕ ಹೇಗೆ, ಎಷ್ಟು ಜಾಣ್ಮೆಯಿಂದ ಇದನ್ನು ಬಳಸುತ್ತಾನೆ ಎಂಬುದರಿಂದ ಆತನ ಹಿಡಿತವನ್ನು ಅಳೆಯುವ ಎಷ್ಟೋ ಉದಾಹರಣೆಗಳನ್ನು ನಾವು ನೋಡುತ್ತೇವೆ.

ದೃಶ್ಯದಲ್ಲಿ ನಡೆಯುವ ಕ್ರಿಯೆಗಳಿಂದಲೇ ಹುಟ್ಟುವ ಧ್ವನಿಗಳು ದೃಶ್ಯದ ನೈಜತೆಯನ್ನು ಹೆಚ್ಚಿಸುತ್ತವೆ. ನಲ್ಲಿಯಿಂದ ಬಕೆಟ್ಟಿಗೆ ಸುರಿಯುವ ನೀರು, ಟೈಪರೇಟರ್ ಸಪ್ಪಳ, ವೇಗವಾಗಿ ಓಡುವ ರೈಲು, ಬಾಗಿಲು ಮುಚ್ಚುವುದು ಇಂಥ ಕ್ರಿಯೆಗಳ ಜೊತೆ ಆಯಾ ಸದ್ದು ಇದ್ದಾಗಲೇ ಅವು ನಿಜವಾಗಿ ತೋರುವುದು. ಇಂಥ ಧ್ವನಿಗಳನ್ನು ಕ್ರಿಯೆಗಳಲ್ಲಿ ಸೃಷ್ಟಿಸಬಹುದಾದ ಹೊತ್ತಿಗೆ ಸರಿಯಾಗಿ ಹೊಂದಿಸಿ ಹಾಕಬೇಕಾಗುತ್ತದೆ. ಇಂಥ ನೈಜ ಕ್ರಿಯೆಗಳು ಧ್ವನಿಯನ್ನು ಸೃಷ್ಟಿಸುವಂತಿದ್ದರೂ ಅವು ದೃಶ್ಯದಲ್ಲಿ ನಡೆದಾಗ ಅವುಗಳ ಸಹಜ ಧ್ವನಿ ಕೇಳಿಸದಿದ್ದರೆ ಹಾಗೆ ಮಾಡುವ ನಿರ್ಣಯವನ್ನು ನಿರ್ದೇಶಕ ಉದ್ದೇಶಪೂರ್ವಕವಾಗಿ ತೆಗೆದುಕೊಂಡಿದ್ದಾನೆ ಎಂದರ್ಥ.

ಕೆಲವೊಮ್ಮೆ ದೃಶ್ಯದಲ್ಲಿ ನಡೆಯುವ ಕ್ರಿಯೆಗಳಿಗೆ ಸಂಬಂಧಪಟ್ಟ ಧ್ವನಿಗಳು ಅವುಗಳಿಗೆ ಹೊಂದಿಕೊಂಡು ಇರುತ್ತವೇನೋ ನಿಜ, ಆದರೆ ಸಹಜವಾಗಿರುವುದಿಲ್ಲ. ನೈಜಕ್ಕಿಂತ

(ಚಿತ್ರ ೪) ಮಿಕ್ಸರ್ (ಡಬ್ಬಿಂಗ್) ಸೌಂಡ್, ಆಧುನಿಕ ಮಾದರಿ

ಹೆಚ್ಚು ಗಟ್ಟಿಯಾಗಿ, ಇಲ್ಲವೆ ವಿಭಿನ್ನವಾಗಿ ಕೇಳುತ್ತವೆ. ಉದಾಹರಣೆಗೆ: ಲಬ್ ಡಬ್...ಲಬ್ ಡಬ್ ಎಂದು ಹೃದಯ ಬಡಿದುಕೊಳ್ಳುವುದು, ಯಾರೋ ನಡೆದು ಬರುವ ಬೂಟಿನ ಸದ್ದು, ಮಧ್ಯರಾತ್ರಿಯಲ್ಲಿ ಗಡಿಯಾರ ಟಿಕ್ ಟೋಕ್, ಟಿಕ್ ಟೋಕ್ ಎಂದು ಮಿಡಿಯುವ ಸದ್ದು, ಫೈಟಿಂಗ್ ಮಾಡುವಾಗ ಉಂಟಾಗುವ ಢಿಶುಂ ಢಿಶುಂ - ಇವೆಲ್ಲಾ ಸದ್ದುಗಳು ಸಹಜಕ್ಕಿಂತ ಜೋರಾಗಿ, ವಿಭಿನ್ನವಾಗಿ ಕೇಳಿಸುತ್ತವೆ. ಇವು ದೃಶ್ಯದ ಭಾವದ ಕುರಿತು ನೈಜಕ್ಕಿಂತ ಭಿನ್ನವಾದ ಹೇಳಿಕೆಯನ್ನು ನೀಡಲು ಪ್ರಯತ್ನಿಸುತ್ತಿವೆ ಎಂದರ್ಥ. ನಾಟಕೀಯ ಪರಿಣಾಮ ಉಂಟುಮಾಡುವುದು ಇದರ ಉದ್ದೇಶ.

ಇನ್ನು ಕೆಲವು ಸದ್ದುಗಳನ್ನು ನಾವು ಧ್ವನಿವಾಹಿನಿಯಲ್ಲಿ ಕೇಳುತ್ತೇವೆ. ಅವುಗಳ ಆಕರಗಳು ದೃಶ್ಯದಲ್ಲಿ ಇರುವುದಿಲ್ಲ. ಹಿನ್ನೆಲೆಯಲ್ಲಿ ಕೇಳಿಬರುವ ಈ ಸದ್ದುಗಳು ದೃಶ್ಯ ನಡೆಯುತ್ತಿರುವ ಜಾಗ, ಇರುವ ತಾಣದ ವಿವರಗಳನ್ನು ನೀಡುತ್ತಿರಬಹುದು. ಇಲ್ಲವೆ ಮುಂದೆ ಕೆಲಕ್ಷಣಗಳಲ್ಲಿ ನಡೆಯಲಿರುವ ಘಟನೆಯ ಸೂಚನೆ ನೀಡುತ್ತಿರಬಹುದು. ಟ್ರಾಫಿಕ್, ರೈಲ್ವೆ ಸ್ಟೇಷನ್‌ನಿಂದ ಉಂಟಾಗುವ ನಿರಂತರ ಸದ್ದು, ದೂರದಿಂದ ಕೇಳಿಸಿ ಹತ್ತಿರ ಆಗುತ್ತಿರುವ ಪೊಲೀಸ್ ಸೈರನ್ ಇವು ಕೆಲವು ಉದಾಹರಣೆಗಳು. ಕೆಲವೊಮ್ಮೆ ಹಿನ್ನೆಲೆಯಲ್ಲಿ ಕೇಳಿಸುವ ಇಂಥ ಧ್ವನಿಗಳು ದೃಶ್ಯದ ಲಹರಿಯನ್ನು, ಪಾತ್ರದ ಮನಃಸ್ಥಿತಿಯನ್ನು ಸಾಂಕೇತಿಕವಾಗಿ ಸೂಚಿಸುತ್ತವೆ. ಮಳೆಯಿಲ್ಲದಿದ್ದರೂ ಹಿನ್ನೆಲೆಯಲ್ಲಿ ಕೇಳುವ ಸಿಡಿಲಿನ ಸದ್ದು ಪಾತ್ರವೊಂದು ಘೋರವಾದ ಸುದ್ದಿಯನ್ನು ಕೇಳಿದ್ದನ್ನು ಸೂಚಿಸುತ್ತದೆ. ಹಿನ್ನೆಲೆಯಲ್ಲಿ ಕೇಳಿಸುವ ಫೈಯರ್ ಬ್ರಿಗೇಡ್ ಇಲ್ಲವೇ ಆ್ಯಂಬುಲೆನ್ಸ್‌ನ ಸೈರನ್ ಸದ್ದು ಅಪಾಯವನ್ನು, ಸಾವನ್ನು ಸೂಚಿಸಬಹುದು.

ಮೊದಮೊದಲು ಚಿತ್ರೀಕರಣದ ಸಮಯದಲ್ಲೇ ಸಂಭಾಷಣೆಗಳನ್ನು ಧ್ವನಿ ಮುದ್ರಿಸಿಕೊಳ್ಳಬೇಕಾಗಿತ್ತು. ಇದಕ್ಕಾಗಿ ಬ್ಲಿಂಪ್ (ಕ್ಯಾಮರಾದ ಶಬ್ದ / ಸದ್ದನ್ನು ನಿಯಂತ್ರಿಸುವ ಸಾಧನ) ಅಳವಡಿಸಿ ಚಿತ್ರೀಕರಣ ನಡೆಸುತ್ತಿದ್ದರು. ಸೌಂಡ್ ರಿಕಾರ್ಡರ್ ಮತ್ತು ಕ್ಯಾಮರಾವನ್ನು ಇಂಟರ್ ಲಾಕ್ ಮಾಡಿ ಎರಡನ್ನೂ ಏಕಕಾಲದಲ್ಲಿ ಚಾಲನೆ ಮಾಡುತ್ತಿದ್ದರು, ಏಕಕಾಲದಲ್ಲಿ ನಿಲ್ಲಿಸುತ್ತಿದ್ದರು. ಹಾಡಿನ ದೃಶ್ಯದಲ್ಲಿ ಪ್ಲೇಬ್ಯಾಕ್ ಮಾಡಲು ಮತ್ತು ದೃಶ್ಯಗಳ ಚಿತ್ರೀಕರಣದಲ್ಲಿ ಸಂಭಾಷಣೆಗಳನ್ನು ಧ್ವನಿ ಮುದ್ರಿಸಿಕೊಳ್ಳಲು ಈ ಇಂಟರ್ ಲಾಕಿಂಗ್ ವಿಧಾನವನ್ನು ಬಳಸಿಕೊಳ್ಳಲಾಗುತ್ತಿತ್ತು. ಅದರ ಬದಲಾಗಿ ಈಗ ನಾಗರಾ ಉಪಕರಣದಲ್ಲಿ ಪಲ್ಸ್ ಸಿಂಕ್ರೊನೈಸ್ ಪದ್ಧತಿಯಲ್ಲಿ Beep Sound ಬಳಸಿ ತುಟಿ ಚಲನೆ ಹೊಂದಿಸುತ್ತಾರೆ. ಹಾಡಿಗೂ ಇದೇ ತಂತ್ರ ಬಳಸಬಹುದು. ಹಿಂದೆ ಅನೇಕ ಚಿತ್ರಗಳನ್ನು ನೇರವಾಗಿ ಈ ವಿಧಾನದಲ್ಲಿ ಚಿತ್ರಿಸಿದ್ದೂ ಉಂಟು. ಉದಾಹರಣೆಗೆ 'ಸಾಕ್ಷಾತ್ಕಾರ', 'ಗೆಜ್ಜೆ ಪೂಜೆ', 'ಅಣ್ಣ-ತಂಗಿ' ಮೊದಲಾದ ಹಿಂದಿನ ಚಿತ್ರಗಳು.

ಟಾಕಿ ಸಿನಿಮಾದ ಪ್ರಾರಂಭದ ದಿನಗಳಲ್ಲಿ ಧ್ವನಿಯನ್ನು ದೃಶ್ಯಗಳನ್ನು ಚಿತ್ರೀಕರಿಸುವಾಗಲೇ Sync Shooting ವಿಧಾನದಲ್ಲಿ ಮುದ್ರಿಸಿಕೊಳ್ಳಬೇಕಾಗಿತ್ತು. ಆದರೆ ತಂತ್ರಜ್ಞಾನ ಸುಧಾರಿಸಿದ ಹಾಗೆ ದೃಶ್ಯಗಳನ್ನು ಚಿತ್ರೀಕರಿಸಿ ಸಂಕಲಿಸಿದ ನಂತರ ಧ್ವನಿಯನ್ನು ಪ್ರತ್ಯೇಕವಾಗಿ ಸ್ಟುಡಿಯೋದಲ್ಲಿ ಧ್ವನಿ ಮುದ್ರಿಸಿಕೊಂಡು ಆಮೇಲೆ ದೃಶ್ಯವಾಹಿನಿಯೊಂದಿಗೆ ಹೊಂದಿಸಿ ಸೇರಿಸುವ ಕ್ರಮ ರೂಢಿಗೆ ಬಂದಿತು.

ಚಿತ್ರೀಕರಣವನ್ನು ನಿಯಂತ್ರಿತ ಪರಿಸರವಿರುವ ಒಳಾಂಗಣದಲ್ಲೇ ಮಾಡಿದರೂ ಪಾತ್ರಗಳು ಅಭಿನಯಿಸುತ್ತಿರುವ ದೃಶ್ಯದೊಂದಿಗೆ ಧ್ವನಿಮುದ್ರಣ ಮಾಡಿಕೊಳ್ಳುವುದರಲ್ಲಿ ಕೆಲವು ತೊಂದರೆಗಳಿವೆ. ಇದನ್ನು ಪರಿಹರಿಸಲು ತೆಗೆದುಕೊಳ್ಳುವ ಕ್ರಮಗಳಿಂದಾಗಿ ಕ್ಯಾಮರಾ ಇಲ್ಲವೆ ಪಾತ್ರಗಳ ಚಲನೆಗೆ ಅಡ್ಡಿಯುಂಟಾಗಬಹುದು. ಇನ್ನು ನಮ್ಮ ನಿಯಂತ್ರಣದಲ್ಲಿ ಇಲ್ಲದ ಹೊರಾಂಗಣದಲ್ಲಿ ಚಿತ್ರೀಕರಣ ಮಾಡಿದರಂತೂ ದೃಶ್ಯದೊಂದಿಗೆ ಸಂಭಾಷಣೆಯನ್ನೂ ಸ್ಥಳದಲ್ಲಿಯೇ ಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ. ಅದರೊಂದಿಗೆ ಸುತ್ತಮುತ್ತಲಿನ ಸದ್ದು ಗದ್ದಲಗಳೂ ಸೇರಿ ಅಂಥ ಪರಿಸ್ಥಿತಿಯಲ್ಲಿ ಧ್ವನಿ ಮುದ್ರಿಸಿಕೊಂಡ ಸಂಭಾಷಣೆ ಅಂತಿಮವಾಗಿ ಬಳಸಲು ಯೋಗ್ಯವಾಗಿರುವುದಿಲ್ಲ.

ಚಿತ್ರೀಕರಣ ಪೂರ್ಣಗೊಂಡ ನಂತರ ದೃಶ್ಯಗಳ ಒಂದು ಕರಡು ಪ್ರತಿ (Rush Print) ಯನ್ನು ತೆಗೆದು ಸಂಕಲನಕಾರರಿಗೆ ಒದಗಿಸುತ್ತಾರೆ. ಅವರು ನಿರ್ದೇಶಕರ ಇಂಗಿತವನ್ನು ಅನುಸರಿಸಿ ದೃಶ್ಯಗಳನ್ನು ಸಂಕಲಿಸುತ್ತಾರೆ. ಈ ಹಂತದಲ್ಲಿ ದೃಶ್ಯಗಳು ಮೂಕವಾಗಿರುತ್ತವೆ. ತುಟಿ ಚಲಿಸಿದರೂ ಹಾವ-ಭಾವಗಳು ಕಂಡರೂ ಮಾತಿರುವುದಿಲ್ಲ. ಹೀಗೆ ದೃಶ್ಯಗಳ ಕಚ್ಚಾ ಸರಣಿ (Rough cut) ಸಿದ್ಧವಾದ ಮೇಲೆ ಅವಕ್ಕೆ ಮಾತನ್ನು ನೀಡಲು ಅವನ್ನು ಡಬ್ಬಿಂಗ್ ಸ್ಟುಡಿಯೋಕ್ಕೆ ಕಳುಹಿಸುತ್ತಾರೆ. ಇಲ್ಲಿ ಚಿತ್ರಣವಾದ ದೃಶ್ಯಗಳನ್ನು ಸ್ಟುಡಿಯೋದಲ್ಲಿ ತೆರೆಯ ಮೇಲೆ ತೋರಿಸಿದಾಗ ಆಯಾ ಪಾತ್ರಧಾರಿಗಳು ಚಿತ್ರೀಕರಣ ಕಾಲದಲ್ಲಿ ತಾವಾಡಿದ ಮೂಲ ಭಾಷೆಯ ಮಾತುಗಳನ್ನೇ ಇಲ್ಲಿ ಮತ್ತೊಮ್ಮೆ ಆಡುತ್ತಾರೆ. ಶಬ್ದ ಪಟ್ಟಿಯ ಸೃಷ್ಟಿ ಹೆಚ್ಚಿಸಲಿಕ್ಕಾಗಿ ಈ ಕ್ರಮ. ಇದನ್ನು ಪಾಶ್ಚಾತ್ಯ ದೇಶಗಳಲ್ಲಿ Post-Synchronisation ಎಂದು ಕರೆಯುತ್ತಾರೆ. ಈ ತಂತ್ರ ನಟರಿಗೆ ತಮ್ಮ ದೋಷಗಳನ್ನು ತಿದ್ದಿಕೊಳ್ಳಲು ಸಹಾಯಕವಾಗಬಹುದು. ಕೆಲವೊಮ್ಮೆ ಪಾತ್ರಧಾರಿಗಳ ಭಾಷಾ ಉಚ್ಚಾರಣೆ ಸರಿ ಇಲ್ಲದಿದ್ದರೆ ಬೇರೆಯವರಿಂದ ಡಬ್ ಮಾಡಿಸಬಹುದು (ಈ ಕಾರಣಕ್ಕಾಗಿ ಡಬ್ಬಿಂಗ್ ಆರ್ಟಿಸ್ಟ್‌ಗಳೆಂಬ ಹೊಸತೊಂದು ವರ್ಗ ಹುಟ್ಟಿದ್ದು). ಇದರಿಂದ ಅನೇಕ ಅನುಕೂಲಗಳೂ ಉಂಟು. ಒಂದು ದೃಶ್ಯದ ಎಲ್ಲಾ ಶಾಟ್ (ಚಿತ್ರಿಕೆ)ಗಳನ್ನು ಅನುಕ್ರಮವಾಗಿ ಚಿತ್ರೀಕರಿಸುವುದಿಲ್ಲವಾದ್ದರಿಂದ ನಟ ಒಂದೊಂದು ಶಾಟ್‌ನಲ್ಲಿ ಒಂದೊಂದು ಭಾವದಲ್ಲಿ, ಒಂದೊಂದು ವೇಗದಲ್ಲಿ ಮಾತನಾಡಿರಬಹುದು. ಡಬ್ಬಿಂಗ್ ಸ್ಟೇಜ್‌ನಲ್ಲಿ ಬಳಸುವುದು ಸಂಕಲಿಸುವ ಚಿತ್ರವಾದ್ದರಿಂದ ಇಡೀ ದೃಶ್ಯದ ಭಾವನೆಗಳಿಗೆ ಅನುಗುಣವಾಗಿ ಧ್ವನಿ ಏರಿಳಿತ ರೂಪಿತಗೊಳ್ಳುವುದು ಸಾಧ್ಯವಾಗುತ್ತದೆ. ಆದರೆ ಡಬ್ಬಿಂಗ್‌ನಿಂದ ಆಗುವ ನಷ್ಟವೆಂದರೆ ಶಬ್ದ ಪಟ್ಟಿಗೆ ಒಳ್ಳೆಯ perspective ಸಿಗದೆ ಇರುವುದು. ಪಾತ್ರ ಬಯಲಲ್ಲಿ ಮಾತನಾಡಿದರೂ, ಗುಹೆಯಲ್ಲಿ ಮಾತನಾಡಿದರೂ, ಹತ್ತಿರದಲ್ಲಿ ಮಾತನಾಡಿದರೂ, ದೂರದಲ್ಲಿ ಮಾತನಾಡಿದರೂ ಒಂದೇ ರೀತಿಯಲ್ಲಿರುತ್ತದೆ. ಡಬ್ಬಿಂಗ್ ಪಾತ್ರದಲ್ಲಿ ಇದನ್ನು ತರಲು ಸಾಧ್ಯ ಎನ್ನುವುದಕ್ಕೆ ಉದಾಹರಣೆಗಳಿವೆ.

೧ನೆಯ ಹಂತ - Loop Dubbing : ಒಂದು ಚಿತ್ರದಲ್ಲಿ ಒಂದು ಸಾವಿರ ಶಾಟ್‌ಗಳಿದ್ದರೆ ಅದನ್ನು ಸಾವಿರ ಲೂಪ್‌ಗಳಾಗಿ ಮಾಡಲಾಗುತ್ತಿತ್ತು. ಒಂದೊಂದೇ ಲೂಪ್ ಹಾಕಿದಾಗ ಅದೇ ಶಾಟ್ ಮತ್ತೆ ಮತ್ತೆ ತೆರೆಯ ಮೇಲೆ ಮೂಡುತ್ತಿತ್ತು. ನಟ-ನಟಿ ಆ ಲೂಪನ್ನು ನೋಡಿ ತಾಲೀಮು ನಡೆಸಿ ನಂತರ ಡಬ್ ಮಾಡುತ್ತಿದ್ದರು.

೨ನೆ ಹಂತ : ಈಗ ಈ ವ್ಯವಸ್ಥೆ ಹೋಗಿ Rock and Roll system ಬಂದಿದೆ. ಇಡೀ ದೃಶ್ಯ ತೆರೆಯ ಮೇಲೆ ಚಲಿಸುತ್ತದೆ. ಪುನಃ ತಂತಾನೇ ಹಿಂದಕ್ಕೆ ಹೋಗಿ ಪುನಃ ಅದೇ ಶಾಟ್ ಕಂಡುಬರುತ್ತದೆ. ಒಬ್ಬ ನಟ ಸಮರ್ಥನಾಗಿದ್ದರೆ ಒಟ್ಟು ೪-೫ ಶಾಟನ್ನೂ ಒಂದೇ ಬಾರಿಗೆ ಡಬ್ ಮಾಡಬಹುದು. ಇದರಿಂದ ಅವರಿಗೆ ಭಾವನೆಯ ನಿರಂತರತೆಯನ್ನು ಚೆನ್ನಾಗಿಟ್ಟುಕೊಳ್ಳಲು ಸಾಧ್ಯವಾಗುತ್ತದೆ.

೩ನೆ ಹಂತ : ಈಗ Digital Recording ಬರುತ್ತಿದೆ/ಬರಲಿದೆ. ಅದರಲ್ಲಿ ಕಂಪ್ಯೂಟರ್ ಮೂಲಕ ಧ್ವನಿ ತರಂಗಗಳನ್ನು ಹೊಂದಿಸಬಹುದಾಗಿದೆ.

ಡಬ್ಬಿಂಗ್ ತಂತ್ರಜ್ಞಾನದಲ್ಲಿ ವ್ಯತ್ಯಾಸ ಆದಂತೆ ಈ ೨೦ ವರ್ಷಗಳಲ್ಲಿ ರಿಕಾರ್ಡಿಂಗ್ ಕ್ರಮವೂ ಬದಲಾಗಿದೆ. ಡಬ್ಬಿಂಗ್ (Dubbing) ಎಂದರೆ ಚಿತ್ರೀಕರಣದ ಸಮಯದಲ್ಲಿ ಚಿತ್ರೀಕರಣ ಸ್ಥಳದಲ್ಲಿ ದೃಶ್ಯೀಕರಿಸಿದ ಭಾಗವನ್ನು ನಿಯಂತ್ರಿತ ಪರಿಸರ ಇರುವ ಡಬ್ಬಿಂಗ್ ಸ್ಟುಡಿಯೋದಲ್ಲಿ ಮತ್ತೆ ಕರಾರುವಾಕ್ಕಾಗಿ ಧ್ವನಿ ಮುದ್ರಿಸಿಕೊಳ್ಳುವುದು. ಚಿತ್ರೀಕರಣ ಸಮಯದಲ್ಲಿ ಮುದ್ರಿಸಿಕೊಂಡ ಭಾಗವನ್ನು ಪ್ಲೇ ಬ್ಯಾಕ್ ಮಾಡಿ ಹೆಡ್‌ಫೋನ್ ಸಹಾಯದಿಂದ ಅದನ್ನು ಆಲಿಸಿ ತುಟಿಗಳ ಚಲನೆಗೆ ಕರಾರುವಾಕ್ಕಾಗಿ ಹೊಂದುವಂತೆ ಕಲಾವಿದರು ಸಂಭಾಷಣೆಯನ್ನು ಒಪ್ಪಿಸಬೇಕು. ಮಾತು ಸರಿಹೊಂದುವವರೆಗೆ ಸಂಭಾಷಣೆಯ ಭಾಗಗಳನ್ನು ಮತ್ತೆ ಮತ್ತೆ ಹೇಳಬೇಕು. ಚಿತ್ರದ ದೃಶ್ಯವನ್ನು ಪರದೆಯ ಮೇಲೆ ಎಷ್ಟು ಬೇಕೋ ಅಷ್ಟು ಭಾಗವನ್ನು ತುಣುಕು-ತುಣುಕುಗಳಾಗಿ ಲೂಪ್ (Loop)

(ಚಿತ್ರ ೫) ಡಬ್ಬಿಂಗ್ ಪ್ರೊಜೆಕ್ಟರ್ ಆಧುನಿಕ ಮಾದರಿ



(ಚಿತ್ರ ೬) ಡಬ್ಬಿಂಗ್‌ಗಾಗಿ ಬಳಸಲಾಗುತ್ತಿರುವ ಆಧುನಿಕ ೩೫ ಎಂ.ಎಂ.ಮ್ಯಾಗ್ನೆಟಿಕ್ ರಿಕಾರ್ಡರ್

ಧ್ವನಿ ಮುದ್ರಿಸಿಕೊಳ್ಳುತ್ತಾರೆ. ಚಿತ್ರೀಕರಣದ ಸಂದರ್ಭದಲ್ಲಿ ಹೇಳಿದ ಸಂಭಾಷಣೆಯನ್ನು ಮತ್ತೊಮ್ಮೆ ದೃಶ್ಯದೊಂದಿಗೆ ಕೇಳಿಕೊಂಡು ಭಾವಗಳನ್ನು ಹೆಚ್ಚು ಸ್ಫುಟಗೊಳಿಸಲು ಪೈಲಟ್ ಟ್ರ್ಯಾಕ್ ಸಹಕಾರಿ.

ಮೊದಲು ನೇರವಾಗಿ Optical Recording ಕ್ರಮ ಇತ್ತು. ನಟ/ನಟಿ ಮಾತು ತಪ್ಪಿದರೆ ಆ ಫಿಲಂ ಹಾಳಾದಂತೆ, ನಂತರ Magnetic tape ಬಂತು. ಅದರಲ್ಲಿ ಮುದ್ರಿಸಿಕೊಂಡು ಯಾವುದು ಚೆನ್ನಾಗಿ ಬರುತ್ತದೋ ಅವುಗಳನ್ನು ಮಾತ್ರ ಫಿಲಂಗೆ ವರ್ಗಾಯಿಸುವ ಕ್ರಮ ೮೦ರ ಸುಮಾರಿಗೆ ಬಂತು Striped Tape. ಇದು ಫಿಲಂಗಿಂತ ಅಗ್ಗವಾಗಿದ್ದರಿಂದ ಹೆಚ್ಚು ಮನ್ನಣೆ ಸಿಗತೊಡಗಿತು.

ಈಗ ಡಿಜಿಟಲ್ ಬಂದಿದೆ. ಕಂಪ್ಯೂಟರ್‌ನಲ್ಲೇ ಧ್ವನಿಯ ಸಾಂದ್ರತೆಯನ್ನು, Syncನ್ನು ಸರಿಪಡಿಸಿ ನಂತರ ಫಿಲಂಗೆ ಹಾಕುವ ತಂತ್ರ ಇದು. ಹಾಗಾಗಿ ಕೇವಲ ೨೫ ವರ್ಷದ ಹಿಂದೆ ತಲೆ ನೋವಾಗುತ್ತಿದ್ದ ಡಬ್ಬಿಂಗ್ - ದುಬಾರಿ ಎನ್ನುವ ಕಾರಣಕ್ಕೆ - ಇವತ್ತು ಹೆಚ್ಚಿನ Creative challenge ಎಸೆಯುವ ತಂತ್ರವಾಗಿ ಬೆಳೆದು ಬಂದಿದೆ.

ಇದಲ್ಲದೇ Dubbing ಎಂಬ ಶಬ್ದವನ್ನು ಇನ್ನೂ ಎರಡರ್ಥದಲ್ಲಿ ಬಳಸುತ್ತಾರೆ. ಒಂದು ಭಾಷೆಯ ಚಿತ್ರದ ದೃಶ್ಯಕ್ಕೆ, ಅದರ ಮೂಲ ಸಂಭಾಷಣೆ ಕೈ ಬಿಟ್ಟು ಮತ್ತೊಂದು ಭಾಷೆಯ ಸಂಭಾಷಣೆಯನ್ನು ಅಲ್ಲಿ ಹೊಂದಿಸಿದಾಗ ಅದನ್ನು ಡಬ್ಬಿಂಗ್ ಎನ್ನುತ್ತಾರೆ. ಉದಾ : 'ಮಾಯಾಬಜಾರ್', 'ಜಗದೇಕವೀರ'ನ ಕತೆ, ಇವು ತೆಲುಗಿನಿಂದ/ತಮಿಳಿನಿಂದ ಕನ್ನಡಕ್ಕೆ ಡಬ್ ಆದ ಚಿತ್ರಗಳು. ಹಾಗೆಯೇ ಕನ್ನಡದ 'ಮಹಿಷಾಸುರ ಮರ್ದಿನಿ' ಚಿತ್ರ ಬೇರ ಬೇರ ಭಾಷೆಗಳಿಗೆ ಡಬ್ ಆಯಿತು. ಇನ್ನೊಂದು ಮಾದರಿಯ ಡಬ್ಬಿಂಗ್‌ನಲ್ಲಿ ಮೂಲ ಚಿತ್ರದ ಮೂಲ ಭಾಷೆಯ ಸಂಭಾಷಣೆಯನ್ನು ಕಡಿಮೆ ಕೇಳಿಸುವಂತೆ ಉಳಿಸಿಕೊಂಡು, ಅದರ ಮೇಲೆಯೇ ಬೇರೆ ಭಾಷೆಯ ಮಾತುಗಳನ್ನು, ಗಂಡು ಪಾತ್ರಕ್ಕೆ ಗಂಡುಧ್ವನಿ, ಹೆಣ್ಣು ಪಾತ್ರಕ್ಕೆ ಹೆಣ್ಣು ಧ್ವನಿ, ತುಟಿಗಳ ಚಲನವಲನಕ್ಕೆ ಹೊಂದದಂತೆ, ಸುಮ್ಮನೆ ಅದರ ಮೇಲೆ ಹೇರಿಸಿ ಬಿಡುತ್ತಾರೆ. ಇದನ್ನು para dubbing (ಪ್ಯಾರಾ ಡಬ್ಬಿಂಗ್) ಎನ್ನುತ್ತಾರೆ. ಈ ಪದ್ಧತಿ ರಷ್ಯಾ ದೇಶದಲ್ಲಿ ಅತಿ ಹೆಚ್ಚು ಬಳಕೆಯಲ್ಲಿದೆ. ಇದನ್ನು ಕೆಲವು ದೃಷ್ಟಿಯಿಂದ ಕನ್ನಡದ 'ಕನಕಾಂಬರ' ಚಿತ್ರದಲ್ಲಿ ಬಳಸಲಾಗಿತ್ತು. ಆದರೆ ಚಿತ್ರ ತೆರೆ ಕಾಣಲಿಲ್ಲ.

ಅಥವಾ ರಾಕ್ ಅಂಡ್ ರೋಲ್ ಪದ್ಧತಿಯಲ್ಲಿ ಮುದ್ರಿಸಿಕೊಂಡು ಈ ಪ್ರಕ್ರಿಯೆ ಸಾಗುತ್ತದೆ. ಮಾತು ಸರಿ ಹೊಂದಿದ ಮೇಲೆ ಅದನ್ನು ಹೊಸದಾಗಿ ಧ್ವನಿ ಮುದ್ರಿಸಿಕೊಳ್ಳಲಾಗುವುದು. ಇದಕ್ಕಾಗಿ ೩೫ ಎಂ.ಎಂ. ಪೂರ್ಣಲೇಪಿತ ಮ್ಯಾಗ್ನೆಟಿಕ್ ಫಿಲಂ ಬಳಸಿಕೊಳ್ಳಲಾಗುತ್ತದೆ. ಇಡೀ ಚಿತ್ರದ ದೃಶ್ಯಗಳನ್ನು ಹೀಗೆ ಹಂತ-ಹಂತವಾಗಿ ಧ್ವನಿ ಮುದ್ರಿಸಿಕೊಂಡ ನಂತರ ಈ ಭಾಗಗಳನ್ನು ಪಟ್ಟಿ ಲೇಪಿತ (Stripe Coated) ೩೫ ಎಂ.ಎಂ. ಮ್ಯಾಗ್ನೆಟಿಕ್ ಫಿಲಂಗೆ ವರ್ಗಾಯಿಸಿ ಸಂಕಲನಕಾರನ ಬಳಿಗೆ ರವಾನಿಸುತ್ತಾರೆ. ಈಗ ಮತ್ತೆ ಸಂಕಲನಕಾರ ಅಂತಿಮ ಹಂತದ ಸಂಕಲನಕ್ಕೆ ಅನಗತ್ಯ ಧ್ವನಿ-ದೃಶ್ಯಗಳನ್ನು ಕಿತ್ತುಹಾಕಿ ಹಿನ್ನೆಲೆ ಸಂಗೀತದ ಧ್ವನಿಮುದ್ರಣ ಮಾಡಲು ಸಂಭಾಷಣೆ - ಚಿತ್ರ ಎರಡನ್ನೂ ಹಿಂದಕ್ಕೆ ಕಳುಹಿಸಿ ಕೊಡುತ್ತಾನೆ.

'ನಾಗರಾ' ಎಂಬ ನಿಯೋಪೈಲಟ್ ಪದ್ಧತಿಯಲ್ಲಿ - ಸ್ವಿಟ್ಜರ್‌ಲ್ಯಾಂಡ್‌ನ ಈ ರಿಕಾರ್ಡರ್‌ನಲ್ಲಿ ಮ್ಯಾಗ್ನೆಟಿಕ್ ಟೇಪ್ - ಸ್ಪೂಲ್ ಬಳಸಿಕೊಳ್ಳಬಹುದು. ಇಂದು ಚಿತ್ರರಂಗದಲ್ಲಿ, ಅದರಲ್ಲೂ ಧ್ವನಿ ಮುದ್ರಣ ವಿಭಾಗದಲ್ಲಿ, ಹಲವು ಮಾರ್ಪಾಟುಗಳು ಆಗಿವೆ. ಇದು ಧ್ವನಿ ಮುದ್ರಣ - ಧ್ವನಿ ಪುನರುತ್ಪಾದನೆಗೆ ಬಳಸುತ್ತಿದ್ದ ಭಾರಿ ಗಾತ್ರದ ಯಂತ್ರೋಪಕರಣಗಳನ್ನು ಮೂಲೆಗುಂಪು ಮಾಡಿತು. ಅವು ನಿರ್ವಹಿಸುತ್ತಿದ್ದ ಎಲ್ಲ ಕೆಲಸಗಳನ್ನೂ ಪುಟ್ಟ - ಎಲ್ಲೆಂದರಲ್ಲಿ ಹೊತ್ತೊಯ್ಯಬಹುದಾದ ಉಪಕರಣ 'ನಾಗರಾ' ನಿರ್ವಹಿಸಿತು. 'ಮೂರು ದಾರಿಗಳು', 'ಅನ್ವೇಷಣೆ', 'ಅಮರ ಮಧುರ ಪ್ರೇಮ', 'ಪ್ರೇಮ ಕಾಮ', 'ಇತಿಹಾಸ', 'ನಾಳೆಗಳನ್ನು ಮಾಡುವವರು' ಚಿತ್ರಗಳ ಡಬ್ಬಿಂಗ್‌ಗೆ ಈ ನಾಗರಾ ಬಳಸಿಕೊಳ್ಳಲಾಗಿತ್ತು. ಆದರ ಇತ್ತೀಚಿನ ದಿನಗಳಲ್ಲಿ ನಾಗರಾವನ್ನು ಪೈಲಟ್‌ಟ್ರ್ಯಾಕ್ ಅಥವಾ ರಫರೆನ್ಸ್ ಟ್ರ್ಯಾಕ್ ತಯಾರಿಸಲು ಹೊರಾಂಗಣ ಮತ್ತು ಒಳಾಂಗಣ ಚಿತ್ರೀಕರಣ ಸಮಯದಲ್ಲಿ ಬಳಸಿ ನಂತರ ಮಾತುಗಳನ್ನು ಡಬ್ಬಿಂಗ್ ಸಮಯದಲ್ಲಿ ಸ್ಟುಡಿಯೋಗಳಲ್ಲಿ

(ಚಿತ್ರ ೭) 'ನಾಗರಾ' ಹೊರಾಂಗಣ ಧ್ವನಿಮುದ್ರಣ ಸರಳಗೊಳಿಸಿದ ಧ್ವನಿಮುದ್ರಕ

ಹಾಡುಗಳು

ಇಂದು ಪ್ರಚಲಿತವಿರುವ ಪದ್ಧತಿಯಲ್ಲಿ ಸಾಮಾನ್ಯವಾಗಿ ಚಿತ್ರದ ಹಾಡುಗಳನ್ನು ಮೊಟ್ಟಮೊದಲಿಗೆ, ಚಿತ್ರೀಕರಣಕ್ಕಿಂತ ಮುಂಚೆಯೇ ಧ್ವನಿ ಮುದ್ರಿಸಿಕೊಳ್ಳಲಾಗುತ್ತದೆ. ಸ್ಟುಡಿಯೋಗಳಲ್ಲಿ ನಿಯಂತ್ರಿತ ವಾತಾವರಣದಲ್ಲಿ ಹಾಡುಗಳನ್ನು ಎರಡರಿಂದ ನಾಲ್ಕು ಪಥಗಳ ಟ್ರ್ಯಾಕ್ ರಿಕಾರ್ಡರ್‌ಗಳಲ್ಲಿ ಮುದ್ರಿಸುತ್ತಾರೆ. ಧ್ವನಿಗ್ರಹಣ ಕೇಂದ್ರವು ಅನೇಕ ಪರಿಕರ-ಉಪಕರಣಗಳನ್ನು ಹೊಂದಿರ ಬೇಕಾಗುತ್ತದೆ. ಮೈಕ್ರೋಫೋನ್‌ಗಳು, ಕೇಬಲ್ ಕನೆಕ್ಟರ್‌ಗಳು, ಆಡಿಯೋ ಮಿಕ್ಸರ್, ಡಿಜಿಟಲ್ ರಿಲೇ, ರಿವರ್ಬ್ ಯೂನಿಟ್, ಎಕೋ ಚೇಂಬರ್, ಕಂಪ್ರೆಸರ್ ಲಿಮಿಟರ್, ರಿಕಾರ್ಡಿಂಗ್ ಯಂತ್ರಗಳು, ಹೆಡ್ ಫೋನ್‌ಗಳು, ಮಾನಿಟರ್ ಮಾಡಲು ಸ್ಪೀಕರ್‌ಗಳು ಇತ್ಯಾದಿ.

ಹಾಡುಗಳನ್ನು ಮುದ್ರಿಸಿಕೊಳ್ಳುವಾಗ ಪಕ್ಕ ವಾದ್ಯಗಳನ್ನು ಪ್ರತ್ಯೇಕಿಸಬೇಕು. ತಬಲಾ ಮತ್ತಿತರ ಚರ್ಮ ವಾದ್ಯಗಳು, ವೀಣೆ, ಸಿತಾರ್, ಪಿಟೀಲಿನಂತಹ ತಂತಿವಾದ್ಯಗಳನ್ನು ಮತ್ತು ಪಿಯಾನೋ, ಗಿಟಾರ್, ಹಾರ್ಮೋನಿಯಂ, ಮತ್ತಿತರ ಇಲೆಕ್ಟ್ರಾನಿಕ್ ವಾದ್ಯಗಳನ್ನು

ಪ್ರತ್ಯೇಕವಾಗಿ ಹೊಂದಿಸಿ ಕೊಳ್ಳಬೇಕು. ಹಾಡುಗಾರರನ್ನು (ಗಾಯಕರನ್ನು) ಒಬ್ಬರು, ಇಬ್ಬರು (ಯುಗಳಗೀತೆ) ಮತ್ತು ಸಮೂಹವಾಗಿ ವಿಂಗಡಿಸಿಕೊಳ್ಳಬೇಕಾಗುತ್ತದೆ. ಅದಕ್ಕ ಸೂಕ್ತ ಮೈಕ್ರೋ ಫೋನ್‌ಗಳು ಒಂದೇ ದಿಕ್ಕಿನಿಂದ ಬಳಸಬಹುದಾದದ್ದು (ಆಮ್ನಿ ಡೈರಕ್ಷನ್, ಯೂನಿ ಡೈರಕ್ಷನ್, ಕಾರ್ಡಿಯಾಯ್ಡ್, ಹೈಪರ್ ಕಾರ್ಡಿಯಾಯ್ಡ್) ಎಲ್ಲ ದಿಕ್ಕುಗಳಿಂದ ಬಳಸಬಹುದಾದವು ಅಗತ್ಯ. ಅಗತ್ಯಕ್ಕೆ ತಕ್ಕಂತೆ ಆಯಾ ಮೈಕ್ರೋಫೋನ್‌ಗಳನ್ನು ಬಳಸಿ, ಆಡಿಯೋ ಮಿಕ್ಸರ್ ಮೂಲಕ ಹಾಡನ್ನು ಪ್ರವಹಿಸಿ, ಸಂಸ್ಕರಿಸಿ ಅದರ ಧ್ವನಿಗೆ ಬೇಕಾದ ಪ್ರತಿ ಕಂಪನ (ಎಕೋ ರಿವರ್ಬ್) ಬೆರಸಿ ಧ್ವನಿಯನ್ನು ಮತ್ತಷ್ಟು ಉತ್ತಮಪಡಿಸಬಹುದು. ತಾಳ ವಾದ್ಯಗಳನ್ನು (ತಬಲಾ, ಢೋಲಕ್, ಖಂಜಿರ, ಮೃದಂಗ ಮುಂತಾದವು) ಗಾಳಿ ವಾದ್ಯಗಳನ್ನು (ಕೊಳಲು, ಮುಖವೀಣೆ, ಪುಂಗಿ, ನಾದಸ್ವರ, ಶಹನಾಯ್, ಕ್ಲಾರಿಯೂನೆಟ್ ಇತ್ಯಾದಿ), ತಂತಿ ವಾದ್ಯಗಳನ್ನು (ವೀಣೆ, ಸಿತಾರ್, ತಂಬೂರಿ, ವಯೊಲಿನ್, ಏಕತಾರಿ ಮುಂತಾದವು), ಗಾಯಕರ ಧ್ವನಿಯನ್ನು ಪ್ರತ್ಯೇಕವಾಗಿ ಧ್ವನಿ ಮುದ್ರಿಸಿಕೊಂಡು ಅನಂತರ ಮಿಶ್ರಣ ಮಾಡಬಹುದಾಗಿದ. ಈ ರೀತಿಯಿಂದ ಸಂಯೋಜಿಸಿದ ಹಾಡನ್ನು ಮ್ಯಾಗ್ನೆಟಿಕ್ ಪರ್‌ಫರೇಟೆಡ್ ಟೇಪಿನ ಮೇಲೆ ಮುದ್ರಿಸಲಾಗುತ್ತದೆ. ಅದನ್ನೇ 'ಮಾಸ್ಟರ್' ಎಂದು ಕರಯುವುದು. ಅನಂತರ ಉತ್ತಮ ಗುಣಮಟ್ಟದ ಲೊಕೇಶನ್ ರಿಕಾರ್ಡರ್ (Location Recorder) ಅಂದರೆ ಪೋರ್ಟೆಬಲ್ ರಿಕಾರ್ಡರ್ (ನಾಗರಾ) ಮೂಲಕ ಮ್ಯಾಗ್ನೆಟಿಕ್ ಸ್ಪೂಲ್‌ಗೆ ವರ್ಗಾಯಿಸಲಾಗುತ್ತದ. ಅನಂತರ ಅದನ್ನು ಚಿತ್ರೀಕರಣಕ್ಕೆ ಬೇಕಾದಂತೆ ಹಾಡಿನ ಸಾಲುಗಳನ್ನು ತಾಳ-ಲಯ, ಅರ್ಥಕ್ಕೆ ಒದಗುವಂತೆ ವಿಂಗಡಿಸಿಕೊಂಡು ದೃಶ್ಯಗಳನ್ನು (Shots) ಚಿತ್ರೀಕರಿಸಬಹುದು. ಇದನ್ನು ದೃಶ್ಯ ವಿಂಗಡಣೆ (Shot Division) ಎಂದು ಕರಯುತ್ತಾರೆ. ಹಾಡಿನ ಸಾಲುಗಳನ್ನು ಗುರುತಿಸಲು ಸಾಲುಗಳಿಗೆ ಕ್ರಮವಾಗಿ ಅಂಕಗಳನ್ನು ನೀಡಿ ಚಿತ್ರೀಕರಣಕ್ಕೆ ಮುನ್ನ ಕ್ಲಾಪ್ ಬೋರ್ಡ್‌ನ ಮೇಲೆ ಹಾಡಿನ ಸಾಲಿನ ಸಂಖ್ಯೆ ಗುರುತು ಹಾಕಿಕೊಂಡು ಎಷ್ಟು ಶಾಟ್ ತೆಗೆಯಲಾಗಿದೆ ಎಂದು ಅದರ ಸಂಖ್ಯೆ ನೀಡಿ ಚಿತ್ರೀಕರಿಸುವುದು ವಾಡಿಕೆ (ಚಿತ್ರದ ಸಂಕಲನ ಸಮಯದಲ್ಲಿ ಇದು ಉಪಯೋಗಕ್ಕೆ ಬರುತ್ತದೆ). ನಂತರದಲ್ಲಿ ಇಡೀ ಹಾಡನ್ನು ಆಯಾ ಸ್ಥಳಗಳಲ್ಲಿ ಸೂಕ್ತ ನೃತ್ಯ-ದೃಶ್ಯ ಸಂಯೋಜನೆಯೊಂದಿಗೆ ಚಿತ್ರೀಕರಿಸುತ್ತಾರೆ. ಉದಾ: ಒಂದೇ ದಿಕ್ಕಿನಿಂದ ಬರುವ ಶಬ್ದ ಮಾತ್ರ ಮುದ್ರಿಸಬೇಕಿದ್ದರೆ ಒಂದು ರೀತಿಯ ಮೈಕ್ರೋಫೋನ್ ಬಳಸುತ್ತಾರ. ಆಗ ಅಲ್ಲೇ ಪಕ್ಕದಲ್ಲೇ ಆದ ಮತ್ತೊಂದು ಶಬ್ದ ಮುದ್ರಿತವಾಗುತ್ತಿರುವುದಿಲ್ಲ. ಹಾಗೆಯೇ ಸುತ್ತಲಿಂದ ಬರುವ ಶಬ್ದಗಳನ್ನು ಮುದ್ರಿಸಿಕೊಳ್ಳಬೇಕಿದ್ದರೆ, ಉದಾಹರಣೆಗೆ ಸಮೂಹ ಗಾನವಾದರೆ, ಆಗ ಬೇರೆ ರೀತಿಯ ಮೈಕ್ರೋಫೋನ್‌ಗಳನ್ನು ಬಳಸುತ್ತಾರೆ.

ಹೀಗೆ ವಿವಿಧ ತುಣುಕುಗಳಲ್ಲಿ ಚಿತ್ರೀಕರಣಗೊಂಡ ದೃಶ್ಯಗಳ ಪಟ್ಟಿಗಳು (Shots) ಹಾಗೂ ಮ್ಯಾಗ್ನೆಟಿಕ್ ಪಟ್ಟಿಯ ಮೇಲೆ ಧ್ವನಿಮುದ್ರಿಸಿದ ಹಾಡುಗಳನ್ನು ಸಂಕಲನಕಾರನಲ್ಲಿಗೆ ಕಳುಹಿಸುತ್ತಾರ. ಅವರು ಅಲ್ಲಿ ಹಾಡಿಗೆ ತಕ್ಕಹಾಗೆ ಚಿತ್ರೀಕೃತ ದೃಶ್ಯಭಾಗಗಳನ್ನು ಅಚ್ಚುಕಟ್ಟಾಗಿ ಜೋಡಿಸಿ ಗತಿ, ತಾಳ, ಲಯಕ್ಕೆ ಹೊಂದಿಸಿ ಸಂಕಲಿಸುತ್ತಾರೆ. ಹಾಡುಗಳ ಧ್ವನಿಮುದ್ರಣ ಎಲ್ಲಕ್ಕಿಂತ ಮುಂಚೆ ಆಗಿದ್ದರೂ ಅವು ಚಿತ್ರದ ಧ್ವನಿವಾಹಿನಿಯಲ್ಲಿ ಸೇರಿಕೊಳ್ಳುವುದು ನಿರ್ಮಾಣದ ಕೊನೇ ಹಂತದಲ್ಲಿ. ನಿರ್ಮಾಣದ ವಿವರಗಳ ಪ್ರಕಾರ ಹೇಳುವುದಾದರೆ ಹಾಡುಗಳಿಗಿಂತ ಭಿನ್ನವಾದ ಹಿನ್ನೆಲೆ ಸಂಗೀತ ಚಿತ್ರದಲ್ಲಿ ಸೇರಿಕೊಳ್ಳುವುದೂ ಕೂಡ ಆಮೇಲೆ.

ಹಿನ್ನೆಲೆ ಸಂಗೀತ

ಹಾಡುಗಳಿವೆ, ಸಂಭಾಷಣೆ ಇದೆ, ಉಳಿದಿರುವ ಇನ್ನೊಂದು ಅಂಶವೆಂದರೆ ಹಿನ್ನೆಲೆ ಸಂಗೀತ. ಈ ಹಂತದಲ್ಲಿ ಚಿತ್ರ ಪಟ್ಟಿಯೊಂದಿಗೆ ಸಂಭಾಷಣೆಯ ಪಟ್ಟಿಯನ್ನು ಅವು ಪ್ರತ್ಯೇಕವಾಗಿದ್ದರೂ ಓಡಿಸಿ ಪ್ರೊಜೆಕ್ಟ್ ಮಾಡಲು ಸಾಧ್ಯವಾಗುತ್ತದೆ. ಚಿತ್ರಕ್ಕೆ ಸಂಗೀತ ನೀಡಬೇಕಾದ ನಿರ್ದೇಶಕರು ಚಿತ್ರನಿರ್ದೇಶಕರೊಂದಿಗೆ ಸಂಗೀತದ ಶೈಲಿ, ಸ್ವಭಾವದ ಕುರಿತು ಈಗಾಗಲೇ ಮಾತಾಡಿಕೊಂಡಿರುತ್ತಾರೆ. ಈಗ ಸ್ಟುಡಿಯೋದಲ್ಲಿ ಚಿತ್ರದ ಒಂದೊಂದೇ ರೀಲನ್ನು ಪ್ರೊಜೆಕ್ಟ್ ಮಾಡುತ್ತಾರೆ. ತಮ್ಮ ವಾದ್ಯಗೋಷ್ಠಿಯೊಂದಿಗ, ಸಹಾಯಕರೊಂದಿಗೆ ಸಂಗೀತ ನಿರ್ದೇಶಕರು ದೃಶ್ಯಗಳನ್ನು ನೋಡುತ್ತಾರೆ. ದೃಶ್ಯಗಳ ಭಾವ, ಸಂಭಾಷಣೆಗಳ ಲಹರಿ ಇವುಗಳನ್ನು ಅನುಸರಿಸಿ ಸಂಗೀತ ನಿರ್ದೇಶಕರು ಹಿನ್ನೆಲ ಸಂಗೀತವನ್ನು ಸಂಯೋಜಿಸುತ್ತಾರೆ. ಕಲಾವಿದರು ಅದನ್ನು ಅಭ್ಯಾಸ ಮಾಡಿಕೊಂಡಾದ ಮೇಲೆ ಸ್ಟುಡಿಯೋ ಇಂಜನಿಯರ್ ಹಿನ್ನೆಲೆ ಸಂಗೀತವನ್ನು ರೀಲುವಾರು ಧ್ವನಿ ಮುದ್ರಿಸಿಕೊಳ್ಳುತ್ತಾ ಹೋಗುತ್ತಾರೆ.

(ಚಿತ್ರ ೮) ರಿಕಾರ್ಡಿಂಗ್, ೨೪ ಟ್ರ್ಯಾಕ್‌ಗಳ ರಿ-ರಿಕಾರ್ಡಿಂಗ್ ಮಿಕ್ಸರ್

ಧ್ವನಿ ವಿಶೇಷಗಳು

ಇನ್ನು ಉಳಿದಿರುವುದು ಧ್ವನಿ ವಿಶೇಷಗಳು. ದೃಶ್ಯಕ್ಕೆ ಬೇಕಾದ ನೈಜ ಧ್ವನಿಗಳನ್ನು ಚಿತ್ರೀಕರಣ ಮಾಡಿದ ಆಯಾ ತಾಣಗಳಿಂದಲೇ ಸಂಗ್ರಹ ಮಾಡಿಕೊಂಡಿರುತ್ತಾರೆ. ಉಳಿದಂತೆ ಇತರ ಧ್ವನಿಗಳನ್ನು ಸ್ಟುಡಿಯೋದಲ್ಲಿ ಮುದ್ರಿಸಿಕೊಳ್ಳುತ್ತಾರೆ. ಚಿತ್ರಗಳಿಗೆ ಬೇಕಾದ ಧ್ವನಿ ವಿಶೇಷಗಳನ್ನು ಒದಗಿಸುವ ಪ್ರತ್ಯೇಕ ಪರಿಣತರೇ ಇರುತ್ತಾರೆ. ಅವರ ಹತ್ತಿರ ಸರ್ವೇ ಸಾಮಾನ್ಯವಾಗಿ ಬೇಕಾಗುವ ಫೋನ್ ರಿಂಗ್ ಆಗುವುದು, ಕಾರಿಗೆ ಬ್ರೇಕ್ ಹಾಕುವುದು, ರಿವಾಲ್ವರ್ ಗುಂಡು - ಹೀಗೆ ಅನೇಕ ಸದ್ದುಗಳ ಒಂದು ದೊಡ್ಡ ಸಂಗ್ರಹವೇ ಇರುತ್ತದೆ. ಜೊತೆಗೆ ಕಾಲ್ನಡಿಗೆಯ ಸಪ್ಪಳ, ಫೈಟಿಂಗ್‌ನ ಢಿಷುಂ ಢಿಷುಂ ಇಂಥ ಕೆಲವು ಧ್ವನಿ ವಿಶೇಷಗಳನ್ನು ದೃಶ್ಯದ ಓಟಕ್ಕೆ ತಕ್ಕ ಹಾಗೆ ಅಲ್ಲಿಯೇ ಸೃಷ್ಟಿ ಮಾಡಲು ಬೇಕಾದ ಪರಿಕರಗಳು ಇರುತ್ತವೆ. ಇದನ್ನೂ ಸ್ಪೆಷಲ್ ಎಫೆಕ್ಟ್ಸ್ ಎನ್ನುತ್ತಾರೆ. ಕೆಲವೊಮ್ಮೆ ಪಾತ್ರಗಳ ಹೊಡೆದಾಟ, ನರಳಾಟ, ಚೀರಾಟಗಳ ಧ್ವನಿ ವಿಶೇಷ, ಘೋಷಣೆ, ಜಯಕಾರ, ಚಪ್ಪಾಳೆಗಳ ಧ್ವನಿ ವಿಶೇಷ ಇವನ್ನು ಸೃಷ್ಟಿಸಲು ಡಬ್ಬಿಂಗ್ ಕಲಾವಿದರ ತಂಡವೇ ಸಿದ್ಧವಿರುತ್ತದೆ. ಸ್ಟುಡಿಯೋದಲ್ಲಿ ಇವರಿಗಾಗಿ ಹಾಕಿ ತೋರುವ ರೀಲುಗಳನ್ನು ನೋಡಿ ಪ್ರತಿಯೊಂದು ದೃಶ್ಯದಲ್ಲಿ ಅಗತ್ಯವಿರುವ ಧ್ವನಿ ವಿಶೇಷಗಳನ್ನು ಪಟ್ಟಿಮಾಡುತ್ತಾರೆ. ಈ ಚಿತ್ರಕ್ಕಾಗಿಯೇ ವಿಶಿಷ್ಟವಾಗಿದ್ದರೆ ಅದನ್ನು ಸೃಷ್ಟಿಸಿ ಕೊಳ್ಳಬೇಕಾಗಬಹುದು. ಅಥವಾ ಲಭ್ಯವಿರುವ ಧ್ವನಿ ವಿಶೇಷಗಳಲ್ಲಿ ಕೆಲವನ್ನು ಬೆರೆಸಿ ಹೊಸತೊಂದು ಧ್ವನಿ ವಿಶೇಷವನ್ನು ರೂಪಿಸಿಕೊಳ್ಳಬಹುದು. ಹೀಗೊಮ್ಮೆ ಸಿದ್ಧತೆ ಮಾಡಿಕೊಂಡ ಮೇಲೆ ರೀಲುಗಳನ್ನು ಪ್ರೊಜೆಕ್ಟ್ ಮಾಡುತ್ತಾ ಒಂದೊಂದೇ ರೀಲಿಗೆ ತಕ್ಕಹಾಗೆ ಧ್ವನಿ ವಿಶೇಷಗಳನ್ನು ಮುದ್ರಣ ಮಾಡಿಕೊಳ್ಳುತ್ತಾ ಹೋಗುತ್ತಾರೆ.

ಧ್ವನಿಗಳ ಮಿಶ್ರವಾಹಿನಿ : ಧ್ವನಿಗ್ರಹಣ - ಸಂಸ್ಕರಣ, ಮುದ್ರಣ

ಸಂಭಾಷಣೆ, ಸಂಗೀತ, ಸಾಂದರ್ಭಿಕ ವಿಶೇಷ ಧ್ವನಿಗಳ ಪ್ರತ್ಯೇಕ ಧ್ವನಿ ವಾಹಿನಿಗಳನ್ನು ಸಿಂಕ್ರನಸ್ (Syncronus) ಮತ್ತು ಅಸಿಂಕ್ರನಸ್ (Asyncronus) ಧ್ವನಿಮುದ್ರಿಕೆಗಳನ್ನು ಸುಸಜ್ಜಿತ ರಿ-ರಿಕಾರ್ಡಿಂಗ್ ಸ್ಟುಡಿಯೋದಲ್ಲಿ ಡಬ್ಬರ್ (ನಾಲ್ಕು ಟ್ರ್ಯಾಕ್‌ಗಳದ್ದು), ಮಾಸ್ಟರ್ ರಿಕಾರ್ಡರ್ ಮತ್ತು ಸ್ಲೇವ್ (Slave) ರಿಕಾರ್ಡರ್ ಇವುಗಳನ್ನು ಆಂತರಿಕವಾಗಿ ವಿದ್ಯುಚ್ಛಕ್ತಿಯಿಂದ ಒಂದಾಗಿಸಿ (Inter Lock) ಈ ಹಂತದಲ್ಲಿ ಸಂಸ್ಕರಿಸಲಾದ ಸಂಭಾಷಣೆ, ಸಂಗೀತ, ಧ್ವನಿ ವಿಶೇಷಗಳಲ್ಲಿ ಬಿಟ್ಟುಹೋಗಿರುವ ಧ್ವನಿಗಳನ್ನು ಸೇರಿಸುವುದಕ್ಕೂ, ಸರಿ ಹೊಂದಿಸುವುದಕ್ಕೂ ಈ ಸಲಕರಣೆಗಳು ಅನುವು ಮಾಡಿಕೊಡುತ್ತವೆ. ಸಂಬಂಧಪಟ್ಟ ಪಿಕ್ಚರ್ ಪಾಸಿಟಿವ್ ಅನ್ನು ಪ್ರೊಜೆಕ್ಟರ್‌ನಲ್ಲಿ ಹಾಕಿ ಪ್ರದರ್ಶಿಸುತ್ತಾರೆ. ಈ ಉಪಕರಣಗಳು ಹಾಗೂ ಪ್ರೊಜೆಕ್ಟರ್ ಅನ್ನು ಒಂದೇ ವಿದ್ಯುತ್ ವಾಹಕಕ್ಕೆ ಜೋಡಿಸಿ ಅವು ಏಕಕಾಲದಲ್ಲಿ ಒಂದೇ ರೀತಿಯಲ್ಲಿ ಚಲಿಸುವಂತೆ ಮಾಡಲಾಗುವುದು.

ಪಿಕ್ಚರ್ ಮೇಲೆ ಮೂರು ಬಾರಿ ಸಿಂಕ್ ಗುರುತನ್ನು ಅದೇ ರೀತಿ ಧ್ವನಿ ಸುರುಳಿಗಳ ಮೇಲೆ ಸಂಕಲನಕಾರ ಮಾಡಿರುವ ಸಿಂಕ್ ಮಾರ್ಕ್ ಅನ್ನು ಧ್ವನಿಮುದ್ರಿಸುವ ಮತ್ತು ಧ್ವನಿ ಪುನರುತ್ಪಾದಿಸುವ ಪ್ಲೇಯರ್‌ನ ರಿಪ್ರೊಡಕ್ಷನ್ ಹೆಡ್ ಮೇಲೆ ತಂದು ಏಕಕಾಲದಲ್ಲಿ ಎಲ್ಲ ಯಾಂತ್ರಿಕ ವ್ಯವಸ್ಥೆಗಳನ್ನೂ ಚಾಲನೆ ಮಾಡುತ್ತಾರೆ. ದೃಶ್ಯಗಳಲ್ಲಿ

ಬರುವ ಸಂದರ್ಭಗಳಿಗೆ ಅನುಗುಣವಾಗಿ ಅವುಗಳ ಗಾತ್ರ ಮತ್ತು ಸ್ಥಾನಕ್ಕೆ ತಕ್ಕಂತೆ (Perspective) ಸಂಭಾಷಣೆ, ಹಾಡುಗಳು, ಹಿನ್ನೆಲೆ ಸಂಗೀತ ಹಾಗೂ ಧ್ವನಿ ವಿಶೇಷಗಳನ್ನು ಬೇಕಾದ ಪ್ರಮಾಣ ಮತ್ತು ರೀತಿಯಲ್ಲಿ ಸಂಸ್ಕರಿಸಲಾಗುತ್ತದೆ. ಧ್ವನಿಯಲ್ಲಿ ನಾಟಕೀಯ ಗುಣವನ್ನು ತರಲು ಹಿನ್ನೆಲೆ ಸಂಗೀತದಲ್ಲಿ ಪರಿಳಿತ ಅಗತ್ಯ. ಸಂಭಾಷಣೆಯಲ್ಲಿ ಸ್ಪಷ್ಟತೆ ಕಾಪಾಡಲೂ ಇದು ಸಹಾಯಕ. ಧ್ವನಿ ವಿಶೇಷಗಳನ್ನು ಸ್ವಜತೆ ಮೂಡುವ ರೀತಿಯಲ್ಲಿ ಅತ್ಯಂತ ಜಾಗರೂಕತೆಯಿಂದ ಬಳಸಿಕೊಳ್ಳುವುದಕ್ಕೂ ಇದು ಅತ್ಯವಶ್ಯ. ಈ ಧ್ವನಿ ಸೂಕ್ಷ್ಮವನ್ನು ದೃಶ್ಯಗಳೊಂದಿಗೆ ಮತ್ತೆ ಮತ್ತೆ ವೀಕ್ಷಿಸಿ ಪರಿಶೀಲಿಸಿ, ಸಂಪೂರ್ಣತೆ ಬಂದ ಮೇಲಷ್ಟೇ ಮಿಶ್ರಗೊಳಿಸಿದ ಧ್ವನಿಯನ್ನು ರಿಕಾರ್ಡರ್‌ನಲ್ಲಿ ಧ್ವನಿ ಮುದ್ರಿಸಲಾಗುವುದು. ಈಗ ಅದು ಮ್ಯಾಗ್ನೆಟಿಕ್ ಟೇಪ್‌ನ ಮೇಲೆ ಮುದ್ರಿತವಾಗಿರುತ್ತದೆ. ತದನಂತರ ಆಪ್ಟಿಕಲ್ ರಿಕಾರ್ಡರ್ ಅನ್ನು ಬಳಸಿ ಕಚ್ಚಾ ಫಿಲಂನ ಮೇಲೆ ವರ್ಗಾಯಿಸಿ. ಈ ಸೌಂಡ್ ನೆಗೆಟಿವ್ ಅನ್ನು ಚಲನಚಿತ್ರ ಸಂಸ್ಕರಣ ಘಟಕ (Film Processing Lab) ದಲ್ಲಿ ಸಂಸ್ಕರಣಕ್ಕೆ ಒಳಪಡಿಸಲಾಗುವುದು.

ಇದಾದ ಮೇಲೆ ಸಂಕಲನಕಾರ, ದೃಶ್ಯದ ವರ್ಕ್ ಪ್ರಿಂಟ್ (Work Print) ನೊಂದಿಗೆ ಪಿಕ್ಚರ್ ನೆಗೆಟಿವ್ (Picture Negative) ಗಳನ್ನು ದೃಶ್ಯ-ಸನ್ನಿವೇಶಕ್ಕೆ ತಕ್ಕಂತೆ ಸೇರಿಸಿ ನೆಗೆಟಿವ್ ಕಟ್ಟಿಂಗ್ (Negative Cutting) ಮಾಡುತ್ತಾನೆ. ಈಗ ಪ್ರತ್ಯೇಕವಾಗಿರುವ ಮಿಶ್ರಿತ ಧ್ವನಿಯ ಸೌಂಡ್ ನೆಗೆಟಿವ್ ಮತ್ತು ಪಿಕ್ಚರ್ ನೆಗೆಟಿವ್‌ಗಳನ್ನು ಜೋಡಣೆ ಮಾಡಿ ಕಚ್ಚಾಫಿಲಂ ಪಾಸಿಟಿವ್ ಮೇಲೆ ಮುದ್ರಿಸಲಾಗುವುದು. ಇದಾದ ಮೇಲೆ ಕಚ್ಚಾಫಿಲಂ ಪಾಸಿಟಿವ್ ಅನ್ನು ಸಂಸ್ಕರಣಕ್ಕೆ ಒಡ್ಡಲಾಗುವುದು. ಈಗ ಕೊನೆಯದಾದ ಸಿದ್ಧ ಪ್ರತಿ (Married Print) ಅಥವಾ ಆನ್ಸರ್ ಪ್ರಿಂಟ್ (Answer Print) ಮೂಡಿರುತ್ತದೆ. ಅಂದರೆ ಧ್ವನಿ-ದೃಶ್ಯ ಈಗ ಒಂದೇ ಫಿಲಂ ಸುರುಳಿಯಲ್ಲಿರುತ್ತದೆ.

ಸೌಂಡ್ ನೆಗೆಟಿವ್‌ನಲ್ಲಿನ ಧ್ವನಿಯನ್ನು ಮುದ್ರಿಸು (Print)ವಾಗ ಹತ್ತೊಂಬತ್ತೂವರೆ ಚೌಕಟ್ಟು (19½ frame) ಗಳಷ್ಟು ಅಂತರ (ಪಿಕ್ಚರ್‌ಗಿಂತ ಮುಂಚೆ) ಇಟ್ಟಿರುತ್ತಾರೆ. ಪ್ರೊಜೆಕ್ಟರ್‌ನಲ್ಲಿ ಪೋಣಿಸುವಾಗಲೂ (Threading) ಪಿಕ್ಚರ್ ಗೇಟ್ ಮತ್ತು ಸೌಂಡ್ ಹೆಡ್ ಮಧ್ಯೆ ಇಷ್ಟೇ ಅಂತರ ಕಾಯ್ದುಕೊಂಡಿರುತ್ತಾರೆ. ಸಿದ್ಧ ಪ್ರತಿಯಲ್ಲೂ ನ್ಯೂನತೆ ಅಥವಾ ದೋಷಗಳೇನಾದರೂ ಉಳಿದಿದ್ದರೆ ಅವನ್ನು ಅನಂತರ ತೆಗೆಯುವ ಪ್ರತಿಗಳಲ್ಲಿ ಸರಿಪಡಿಸಿಕೊಳ್ಳುತ್ತಾರೆ. ಇಷ್ಟೆಲ್ಲಾ ಆದ ಮೇಲೆ ಬಿಡುಗಡೆ ಪ್ರತಿ (Release Prints) ಗಳನ್ನು ತಯಾರಿಸುವರು. ಇದು ಆಪ್ಟಿಕಲ್ ಟ್ರ್ಯಾಕ್ ಪದ್ಧತಿ. ಈಗ ಒಂದು ಆಧುನಿಕ ಮ್ಯಾಗ್ನೆಟಿಕ್ ಟ್ರ್ಯಾಕ್, ನಾಲ್ಕು ಮತ್ತು ಆರು ಟ್ರ್ಯಾಕ್‌ಗಳಲ್ಲಿ ಬರುತ್ತಿದೆ. ಒಂದೇ ಟ್ರ್ಯಾಕ್ ಇದ್ದರೆ ಮೋನೋ ಟ್ರ್ಯಾಕ್ (Monotrack), ನಾಲ್ಕು ಟ್ರ್ಯಾಕ್‌ಗಳಲ್ಲಿ ಸ್ಟೀರಿಯೋ ಫೋನಿಕ್. ಈಗ ಆರು ಟ್ರ್ಯಾಕ್‌ಗಳಲ್ಲಿ ಬರುವ ಡಿಜಿಟಲ್ ಥಿಯೇಟರ್ ಸಿಸ್ಟಮ್ (DTS) ಇವುಗಳಲ್ಲಿ ಅತ್ಯಾಧುನಿಕ ಮಾದರಿಯದು.

ಧ್ವನಿಯ ಪುನರುತ್ಪಾದನೆ

ಚಲನಚಿತ್ರವನ್ನು ಪ್ರೇಕ್ಷಕರು ನೋಡುವುದು ಸಿನಿಮಾ ಮಂದಿರದಲ್ಲಿ. ಪ್ರೇಕ್ಷಕಾಂಗಣದ ಹಿಂಬದಿಯಲ್ಲಿರುವ ಪ್ರೊಜೆಕ್ಷನ್ ಕೋಣೆಯೊಳಗೆ ಇರುವ ಪ್ರೊಜೆಕ್ಟರುಗಳ ಸಹಾಯದಿಂದ ಚಿತ್ರವನ್ನು ಮುಂದಿರುವ ಬಿಳಿ ಪರದೆಯ ಮೇಲೆ ಬಿಟ್ಟು ತೋರಿಸುತ್ತಾರೆ. ಪ್ರೊಜೆಕ್ಟರಿನ ಲೆನ್ಸಿನ ಹಿಂಬದಿಯಲ್ಲಿ ಚಿತ್ರಪಟ್ಟಿ ಚಲಿಸುತ್ತಿರುತ್ತದೆ. ಅದರ ಹಿಂಬದಿಯಿಂದ ತೀಕ್ಷ್ಣವಾದ ಬೆಳಕು ಬರುತ್ತಿರುತ್ತದೆ. ಈ ಬೆಳಕು ಚಿತ್ರಪಟ್ಟಿಯ ಮೂಲಕ ತೂರಿ ಮೂಡಿಸಿದ ಬಿಂಬವು ಲೆನ್ಸಿನ ಮೂಲಕ ಹಾದು ನಿಖರತೆ ಹಾಗೂ ದೊಡ್ಡ ಆಕಾರ ಪಡೆದು ವಿಶಾಲವಾದ ಪರದೆಯ ಮೇಲೆ ಮೂಡುತ್ತದೆ. ಇದು ದೃಶ್ಯದ ವಿಚಾರವಾಯಿತು. ಕಾಣುತ್ತಿರುವ ದೃಶ್ಯದೊಂದಿಗೆ ಇರುವ ಧ್ವನಿ ನಮಗೆ ಕೇಳಿಸುವುದು ಹೇಗೆ ?

ಸಾಮಾನ್ಯವಾಗಿ ಎಲ್ಲ ಸಿನಿಮಾ ಗೃಹಗಳಲ್ಲೂ ಎರಡು ಪ್ರೊಜೆಕ್ಟರ್ ವ್ಯವಸ್ಥೆ ಇರುತ್ತದೆ. ಎರಡೂ ಪ್ರೊಜೆಕ್ಟರ್‌ಗಳಲ್ಲಿ ಒಂದೇ ರೀತಿಯ, ಒಂದೇ ಗುಣಮಟ್ಟದ ಲೆನ್ಸ್, ಎಕ್ಸೈಟರ್ ಲ್ಯಾಂಪ್, ಫೋಟೋ ಡಯೋಡ್ ಅಥವಾ ಮ್ಯಾಗ್ನೆಟಿಕ್ ಹೆಡ್ ಅಳವಡಿಸಿರುತ್ತಾರೆ. ಚಿತ್ರಮಂದಿರಕ್ಕೆ ಬರುವ ಪ್ರಿಂಟ್‌ಗಳಿಗೆ ಅನುಗುಣವಾಗಿ (ಮೋನೊಫೋನಿಕ್, ಸ್ಟೀರಿಯೋ ಫೋನಿಕ್, ಡಾಲ್ಬಿ ಅಥವಾ ಡಿ.ಟಿ.ಎಸ್.) ತಾಂತ್ರಿಕ ವ್ಯವಸ್ಥೆ ಅಲ್ಲಿರುತ್ತದೆ.

ಪ್ರೊಜೆಕ್ಟರ್‌ನಲ್ಲಿ ಎರಡು ಪ್ರಮುಖ ಅಂಗಗಳಿರುತ್ತವೆ. ಆರ್ಕ್ ಹೌಸ್ ಲೆನ್ಸ್ ಮತ್ತು ಫೋಟೋ ಸೆಲ್ / ಮ್ಯಾಗ್ನೆಟಿಕ್ ಟೇಪ್, ಆಂಪ್ಲಿಫಯರ್. ಚಲನಚಿತ್ರದ ಸುರುಳಿಯನ್ನು ಪ್ರೊಜೆಕ್ಟರ್‌ನಲ್ಲಿ ನಿಗದಿತ ಜಾಗದಲ್ಲಿ ಅಳವಡಿಸಿದ ಮೇಲೆ ಆರ್ಕ್ ಹೌಸ್‌ನಿಂದ ಬರುವ ತೀಕ್ಷ್ಣವಾದ ಬೆಳಕು ಪಿಕ್ಚರ್ ಗೇಟ್‌ನಲ್ಲಿರುವ ದೃಶ್ಯ ಸುರುಳಿ (Reel) ಮೂಲಕ ಹಾದು ದೃಶ್ಯದ ಪ್ರತಿಬಿಂಬ ಮಸೂರ (Lens)ದ ನಿಖರತೆ ಪಡೆದುಕೊಂಡು ದೊಡ್ಡ ಆಕಾರದಲ್ಲಿ ಪರದೆಯ ಮೇಲೆ ಬೀಳುವುದು. ಮೊದಲೇ ಹೇಳಿರುವಂತೆ ಧ್ವನಿ ಚಿತ್ರದ ಸುರುಳಿಯಲ್ಲಿ ನಿಖರವಾಗಿ ಹತ್ತೊಂಭತ್ತೂವರೆ ಫ್ರೇಮುಗಳಷ್ಟು ಮುಂದೆ ಆಪ್ಟಿಕಲ್ ಫೋಟೋ ಸೆಲ್ ಹತ್ತಿರ ಮುದ್ರಿತವಾಗಿರುತ್ತದೆ, ಅಂದರೆ ಧ್ವನಿ ಪಟಲ ಪ್ರಾರಂಭವಾಗುವುದು ಅಲ್ಲಿಂದ. ಇದು ಪ್ರೊಜೆಕ್ಟರ್‌ನಲ್ಲಿರುವ ವಿನ್ಯಾಸ, ಅಂತರ. ಮ್ಯಾಗ್ನೆಟಿಕ್ ಹೆಡ್ ಅನ್ನು ಪಕ್ಕದಲ್ಲೇ ಅಳವಡಿಸಿರುತ್ತಾರೆ. ಈ ಧ್ವನಿಯನ್ನು ಆಂಪ್ಲಿಫಯರ್ ಮೂಲಕ ಬೇಕಾದಂತೆ ನಿಯಂತ್ರಿಸಬಹುದು. ಅಂದರೆ ಹಿಗ್ಗಿಸಿ-ಕುಗ್ಗಿಸಿ ಸ್ಪೀಕರ್‌ಗಳ ಮೂಲಕ ಆಲಿಸಬಹುದು.

ಥಿಯೇಟರಿನಲ್ಲಿ ಶಬ್ದ ನಿಯಂತ್ರಣ

ಥಿಯೇಟರಿನಲ್ಲಿ ಒಮ್ಮೆಲೇ ಕುಳಿತು ನೋಡುವ ನೂರಾರು ಜನರಿಗೂ ಸ್ಪಷ್ಟವಾಗಿ ಕಾಣುವಂತೆ ಮಾಡಲು ದೃಶ್ಯವನ್ನು ದೊಡ್ಡದಾಗಿ ಹಿಗ್ಗಿಸಿ ದೊಡ್ಡ ಪರದೆಯ ಮೇಲೆ ಬಿಡುತ್ತಾರೆ. ಅಷ್ಟೇ ದೊಡ್ಡದಾಗಿ ಕೇಳಿಸುವಂತೆ ಧ್ವನಿಯನ್ನು ವರ್ಧಿಸಿದಾಗ ಥಿಯೇಟರಿನಲ್ಲಿ ಕೆಲವು ಸಮಸ್ಯೆಗಳು ತಲೆದೋರುತ್ತವೆ. ಅಷ್ಟು ದೊಡ್ಡ ಅಳತೆಯ ಕಟ್ಟಡದಲ್ಲಿ ಏನೇ ಮಾತಾಡಿದರೂ ಪ್ರತಿಧ್ವನಿ ಉಂಟಾಗುವುದನ್ನು ನೀವು ಗಮನಿಸಿರಬಹುದಲ್ಲವೆ ? ಅದನ್ನು ಪ್ರತಿಧ್ವನಿ (Echo) ಎನ್ನುವುದಕ್ಕಿಂತ 'ಅನುಧ್ವನಿ' (Reverberation) ಎಂದು ಕರೆಯುವುದು ಹೆಚ್ಚು ಸೂಕ್ತ. ಏಕೆಂದರೆ ಇಂಥ ಜಾಗದಲ್ಲಿ ನಾವು ಏನಾದರೊಂದನ್ನು ಅಂದು ಮುಗಿಸಿದ ಮೇಲೆ ಪ್ರತ್ಯೇಕವಾಗಿ ಅದರ ಪ್ರತಿಧ್ವನಿ ಉಂಟಾಗುವುದಿಲ್ಲ. ಬದಲಿಗೆ ನಾವು ಧ್ವನಿಯನ್ನು ಹೊರಡಿಸಿದ ಅರೆಕ್ಷಣದಲ್ಲಿಯೇ ಅದರ ಅನುರಣನ ಉಂಟಾಗಿ ಅದು ಪ್ರತ್ಯೇಕವಾಗಿ ಉಳಿಯದೆ ಮೂಲಧ್ವನಿಯೊಂದಿಗೇ ಬೆರೆತುಬಿಡುತ್ತದೆ. ಇಂಥ ಅನುಧ್ವನಿ ಸಂಗೀತದಲ್ಲಿ ಸಹ್ಯವಾದರೂ ಮಾತುಗಳ ಸಂದರ್ಭದಲ್ಲಿ ಮಾರಕ. ಅನುಧ್ವನಿ ಇರುವ ಸಭಾಂಗಣ, ಮದುವೆ ಮಂದಿರ ಮುಂತಾದ ಕಡೆ ಒಂದಷ್ಟು ಜನ ಸೇರಿದಾಗ ಒಬ್ಬರು ಮಾತಾಡಿದ್ದು ಇನ್ನೊಬ್ಬರಿಗೆ ಸ್ಪಷ್ಟವಾಗಿ ಕೇಳದಿರುವ ಪರಿಸ್ಥಿತಿ ಉಂಟಾಗುವುದನ್ನು ನೀವು ಗಮನಿಸಿದ್ದೀರಿ. ಸಿನಿಮಾ ಮಂದಿರದಲ್ಲಿ ಈ ರೀತಿಯ ಪರಿಸ್ಥಿತಿ ಇದ್ದರೆ ಸಂಭಾಷಣೆಗಳು ಸ್ಪಷ್ಟವಾಗಿ ಕೇಳದೆ ಕಿರಿಕಿರಿ ಉಂಟಾಗುತ್ತದೆ. ಹೀಗೆಂದೇ ಇದಕ್ಕೆ ಪರಿಹಾರವನ್ನು ಕಂಡುಕೊಳ್ಳಲು ಥಿಯೇಟರುಗಳಲ್ಲಿ 'ಅಕೌಸ್ಟಿಕ್ಸ್ ಟ್ರೀಟ್‌ಮೆಂಟ್' ಮಾಡಿರುತ್ತಾರೆ.

ಧ್ವನಿವರ್ಧಕಗಳ ಮೂಲಕ ಹೊರಟ ಧ್ವನಿ ಪ್ರೇಕ್ಷಕರಿಗೆ ತಲುಪಬೇಕು. ಆದರೆ ಗೋಡೆಯಂಥ ಸಮತಲಗಳ ಮೇಲೆ ಬಿದ್ದ ಧ್ವನಿ ಪ್ರತಿಫಲನ ಹೊಂದಿ ಪ್ರತಿಧ್ವನಿಯ ರೂಪ ಪಡೆದು ಪ್ರೇಕ್ಷಕರವರೆಗೆ ತಲುಪದ ಹಾಗೆ ಮಾಡಬೇಕು. ಇದಕ್ಕಾಗಿ ಗೋಡೆ, ಸೂರು ಇವುಗಳ ಸಮತಲಗಳ ಮೇಲೆ ಧ್ವನಿಯನ್ನು ವಿವಿಧ ಪ್ರಮಾಣದಲ್ಲಿ ಹೀರಿಕೊಳ್ಳುವ ಫಲಕ (Grass Bricks) ಗಳನ್ನು ಹಾಕಿರುತ್ತಾರೆ. ಜೊತೆಗೆ ಗೋಡೆ ಇತ್ಯಾದಿಗಳ ತಲಗಳು ಎಲ್ಲಿಯೂ ಬಹಳ ವಿಶಾಲವಾಗಿ ಒಂದೇ ಸಮತಲದಲ್ಲಿ ಇಲ್ಲದ ಹಾಗೆ ನೋಡಿಕೊಳ್ಳುತ್ತಾರೆ. ಪ್ರತಿಫಲನ ಧ್ವನಿಯ ಸಹಜ ಪ್ರವೃತ್ತಿ. ಎರಡು ಗೋಡೆಗಳು ನಿರ್ದಿಷ್ಟ ಅಂತರದಲ್ಲಿರುವುದರಿಂದ ಉತ್ಪತ್ತಿಯಾದ ಯಾವುದೇ ಶಬ್ದವು ಎದುರು-ಬದುರು ಇರುವ ಗೋಡೆಗಳನ್ನು ಬಡಿದು ಪ್ರತಿಧ್ವನಿಸುತ್ತದೆ. ಇಂತಹ ಪ್ರತಿಧ್ವನಿಯನ್ನು ಅಥವಾ ಅನುಧ್ವನಿಯನ್ನು ಕಡಿಮೆ ಮಾಡುವುದು ಅತಿ ಅವಶ್ಯಕವಾಗಿರುವುದರಿಂದ ಗೋಡೆಗಳ ಮೇಲೆ ಗ್ಲಾಸ್ ವುಲ್, ತೆಂಗಿನ ನಾರು, ಗೋಣಿ ಚೀಲದಲ್ಲಿ ತುಂಬಿ ರಂಧ್ರಗಳುಳ್ಳ ಪ್ಲೈವುಡ್‌ಗಳನ್ನು ಹಲವಾರು ರೀತಿಯಲ್ಲಿ ವಿನ್ಯಾಸಗೊಳಿಸಿ ನೋಡಲು ಅಂದವಾಗಿ ಕಾಣಿಸುವಂತೆ ಮಾಡುತ್ತಾರೆ. ಒಳಗೂ, ಹೊರಗೂ ಬಾಗಿರುವಂತೆ ಆಕಾರಗಳನ್ನು ಕೃತಕವಾಗಿ ನಿರ್ಮಿಸುತ್ತಾರೆ. ಪ್ರತಿಯೊಂದು ವಸ್ತುವಿಗೂ ಧ್ವನಿಯನ್ನು ಹೀರಿಕೊಳ್ಳುವ ಶಕ್ತಿಯಿದ್ದು ಆಯಾ ವಸ್ತುಗಳಿಗೆ ಅದರದೇ ಪ್ರಕಾರದ ಧ್ವನಿ ಹೀರುವ ಅಂಶವಿರುತ್ತದೆ. ಧ್ವನಿಯನ್ನು ಉತ್ತಮ ರೀತಿಯಲ್ಲಿ ಆಲಿಸಲು ಸಹಕಾರಿಯಾಗುತ್ತದೆ. ವಿವಿಧ ರೀತಿಯಲ್ಲಿ ಬಾಗಿರುವ ಗೋಡೆಯ ವಿನ್ಯಾಸ ಚಂದವಾಗಿ ಕಂಡರೂ ಅದಕ್ಕಿಂತ ಹೆಚ್ಚಾಗಿ ಧ್ವನಿಯ ಅಲೆಗಳನ್ನು ವ್ಯವಸ್ಥಿತವಾಗಿ ಆಚೀಚೆ ಚದುರಿಸಿಬಿಡುವ ಕೆಲಸವನ್ನು ಮಾಡುತ್ತದೆ. ನೆಲಕ್ಕೆ ಹಾಸಿರಬಹುದಾದ ದಪ್ಪನೆಯ ಹಾಸುಗಳು, ಪರದೆಗಳು, ಅಷ್ಟೇ ಏಕೆ ಸೀಟುಗಳಿಗೆ ಅಳವಡಿಸಿರುವ ಮೆತ್ತೆಗಳೂ ಧ್ವನಿಯನ್ನು ಹೀರಿಕೊಂಡು ಪ್ರತಿಫಲನವನ್ನು ನಿಯಂತ್ರಿಸುವಲ್ಲಿ ಸಹಾಯಕವಾಗಿವೆ. ಪ್ರೇಕ್ಷಕರು ಧರಿಸಿರುವ ಉಡುಪು, ದೇಹವೂ ಧ್ವನಿ ಪ್ರತಿಫಲಿಸದಂತೆ ನೆರವಾಗುತ್ತವೆ. ಖಾಲಿ ಚಿತ್ರಮಂದಿರದಲ್ಲಿನ ಧ್ವನಿ ಹಾಗೂ ತುಂಬಿದ ಚಿತ್ರಮಂದಿರದಲ್ಲಿನ ಧ್ವನಿ ಪ್ರತಿಫಲನೆಯಲ್ಲಿ ವ್ಯತ್ಯಾಸ ಗಮನಿಸಬಹುದು.

ಸದ್ದು (Sound), ಗದ್ದಲ (Noise)ವಾಗಬಾರದು

ಚಲನಚಿತ್ರದಲ್ಲಿ ಮಾತು, ಸಂಗೀತ ಅಥವಾ ಯಾವುದೇ ರೀತಿಯ ಧ್ವನಿಮುದ್ರಣವೂ ಒಂದು ನಿರ್ದಿಷ್ಟ ಮಟ್ಟ ಮತ್ತು ಮಾನದಲ್ಲಿ ನಡೆಯುತ್ತದೆ. ಅದನ್ನು ಡೆಸಿಬಲ್ ಎಂದು ಕರೆಯುತ್ತಾರೆ. ಸಂಯುಕ್ತವಾಗಿ ಧ್ವನಿಗಳನ್ನು ಮಿಶ್ರಣ ಮಾಡುವಾಗ ಒಂದು ಪ್ರಮಾಣ, ಮಾನ ಇಟ್ಟುಕೊಂಡು ಧ್ವನಿ ಗ್ರಹಿಸಲಾಗುವುದು. ಧ್ವನಿಯ ಪರಿಳಿತವನ್ನು ಪ್ರೇಕ್ಷಕರಿಗೆ ಅದೇ ಮಟ್ಟದಲ್ಲಿ ತಲುಪಿಸುವುದು ಅತಿ ಮುಖ್ಯ. ಕಾರಣ ಚಿತ್ರ ಮಂದಿರದ ಧ್ವನಿವರ್ಧಕ ಸಾಧನಗಳಲ್ಲೂ ಸಹ ಇದೇ ಮಟ್ಟದಲ್ಲಿ ಕೇಳುವ 'ಪ್ರಮಾಣ - ಮಾನ' ನಿರ್ದಿಷ್ಟವಾಗಿ ಸ್ಥಿರ (Fix) ಗೊಳಿಸಿರುತ್ತಾರೆ. ಇದು ಬಹಳ ಪ್ರಮುಖವಾದ ವಿಷಯ. ಚಿತ್ರಮಂದಿರ ಭರ್ತಿಯಾದ ಸಮಯದಲ್ಲಿ ಧ್ವನಿಯನ್ನು ಸ್ವಲ್ಪಮಟ್ಟಿಗೆ ಹೆಚ್ಚಿಸಬಹುದು.

ಒಂದು ಚಿತ್ರದ ಸಂಯೋಜಿತ ಧ್ವನಿವಾಹಿನಿಯನ್ನು ತಯಾರಿಸಲು ನಿರ್ದೇಶಕರೊಂದಿಗೆ ಅದೆಷ್ಟು ಜನ ಕಲಾವಿದರು, ತಂತ್ರಜ್ಞರು ದುಡಿದಿರುತ್ತಾರೆ ಎಂದು ನೀವು ಗಮನಿಸಿದ್ದೀರಿ. ಇವರೆಲ್ಲರೂ ಪ್ರತಿ ಹಂತದಲ್ಲೂ ಎಚ್ಚರಿಕೆಯನ್ನು ವಹಿಸಿ, ಸಂಭಾಷಣೆ, ಸಂಗೀತ, ಧ್ವನಿವಿಶೇಷ ಇತ್ಯಾದಿಗಳು ಎಷ್ಟೆಷ್ಟು ಪ್ರಮಾಣದಲ್ಲಿ ಕೇಳಬೇಕು ಎಂಬುದನ್ನು ನಿರ್ಣಯಿಸಿರುತ್ತಾರೆ. ಆ ಪ್ರಕಾರ ಸಂಯುಕ್ತ ರೂಪದಲ್ಲಿ ಸಿದ್ಧವಾಗಿ ಚಿತ್ರಪಟ್ಟಿಯೊಂದಿಗೆ ಅಳವಟ್ಟು ಬಂದಿರುವ ಧ್ವನಿಯನ್ನು ಹೇಗಿದೆಯೋ ಹಾಗೆಯೇ ಪುನರುತ್ಪಾದಿಸುವುದು ಥಿಯೇಟರಿನವರ ಕರ್ತವ್ಯ. ಧ್ವನಿವಾಹಿನಿಯ ತೀವ್ರತೆಯನ್ನು ಅನುಕೂಲಕರವಾದ ಸಾಮಾನ್ಯ ಮಟ್ಟಕ್ಕೆ (General Volume) ಒಮ್ಮೆ ನಿಗದಿ ಪಡಿಸಿದರೆ ಇಡೀ ಚಿತ್ರವನ್ನು ಆ ಮಟ್ಟದಲ್ಲಿಯೇ ನಡೆಸಬೇಕು. ಆಗಲೇ ವಿವಿಧ ಧ್ವನಿಗಳ ಪರಿಳಿಕೆ ಕುರಿತು ನಿರ್ದೇಶಕರು, ಸ್ಟುಡಿಯೋ ತಂತ್ರಜ್ಞರು ತೆಗೆದುಕೊಂಡಿರುವ ನಿರ್ಣಯಗಳು ಪ್ರಯೋಜನಕ್ಕೆ ಬರುತ್ತವೆ. ಆದರೆ ಕೆಲವೊಮ್ಮೆ ಥಿಯೇಟರುಗಳಲ್ಲಿ ಕೆಲ ಪ್ರೊಜೆಕ್ಟರ್ ಆಪರೇಟರುಗಳು ತಾವೇ ಸ್ವಂತ ನಿರ್ಣಯವನ್ನು ತೆಗೆದುಕೊಂಡು ಫೈಟಿಂಗ್ ಬಂದಾಗಲೋ, ಹಾಡು, ಡ್ಯಾನ್ಸ್ ಬಂದಾಗಲೋ ಧ್ವನಿ ಪ್ರಮಾಣವನ್ನು ಏರಿಸಿಬಿಡುತ್ತಾರೆ. ಇದು ಸರಿಯಾದ ಅಭ್ಯಾಸವಲ್ಲ. ಧ್ವನಿವಾಹಿನಿಯ ಸೂಕ್ತ ಆಸ್ವಾದನೆಗೆ ಇದರಿಂದ ಅಡ್ಡಿಯುಂಟಾಗುತ್ತದೆ. ಹೀಗೆ ಮಾಡುವ ಹಕ್ಕು ಆಪರೇಟರಿಗೆ ಇಲ್ಲ.

ಧ್ವನಿಯ ತಾಂತ್ರಿಕ ಪ್ರಗತಿ

ನೈಜವಾಗಿ ಸಂಭವಿಸುವ ಧ್ವನಿಯನ್ನು ನಿಯಂತ್ರಣಕ್ಕೆ ತೆಗೆದುಕೊಂಡು ನಮಗೆ ಬೇಕಾದಾಗ, ಬೇಕಾದ ರೀತಿಯಲ್ಲಿ ಬಳಸಲು ಸಾಧ್ಯವಾಗಬೇಕು ಎಂದರೆ ಅದನ್ನು ದಾಖಲಿಸಿಕೊಳ್ಳುವ ಮತ್ತು ಪುನರುತ್ಪಾದಿಸುವ ವಿಧಾನಗಳನ್ನು ಅಭಿವೃದ್ಧಿ ಪಡಿಸಬೇಕಾಗುತ್ತದೆ. ಅಷ್ಟೇ ಅಲ್ಲ, ಧ್ವನಿಯನ್ನು ಯಾವುದಾದರೂ ಮಾಧ್ಯಮದ ಮೂಲಕ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಪ್ರಸಾರ ಮಾಡುವುದಕ್ಕೂ ಸಾಧ್ಯವಾಗಬೇಕು. ಮನುಷ್ಯ ಹತ್ತೊಂಬತ್ತನೇ ಶತಮಾನದ ಮಧ್ಯ ಭಾಗದಿಂದಲೇ ಇದರ ಹುಡುಕಾಟದಲ್ಲಿ ತೊಡಗಿದ್ದ. ಅಮೆರಿಕಾದ ಥಾಮಸ್ ಆಲ್ವ ಎಡಿಸನ್ ೧೮೭೭ರಲ್ಲಿ ಮೊತ್ತಮೊದಲ ಬಾರಿಗೆ ತನ್ನ ಫೋನೋಗ್ರಾಫ್ ಯಂತ್ರದ ಸಹಾಯದಿಂದ ಒಂದು ಅರಗಿನ ಸಿಲಿಂಡರಿನ ಮೇಲೆ ಮನುಷ್ಯನ ಧ್ವನಿಯನ್ನು ಮುದ್ರಿಸಿ ಮತ್ತೆ ಪುನರುತ್ಪಾದಿಸಿದ.

ಚಲನಚಿತ್ರದಲ್ಲಿ ಧ್ವನಿಯನ್ನು ಬಳಸುವಲ್ಲಿ ಮೂಲಭೂತವಾಗಿ ಎರಡು ತಾಂತ್ರಿಕ ಅಡಚಣೆಗಳಿದ್ದವು. ಮೊದಲನೆಯದಾಗಿ ಚಿತ್ರಪಟ್ಟಿ ಬೇರೆ, ಧ್ವನಿ ಪಟ್ಟಿ ಅಥವಾ ವ್ಯವಸ್ಥೆ ಬೇರೆ ಇರುವುದಾದರೆ ಅಂಥ ವಿಧಾನ ವಾಣಿಜ್ಯ ಬಳಕೆಯಲ್ಲಿ ಜನಪ್ರಿಯವಾಗುವುದಿಲ್ಲ. ಹೀಗಾಗಿ ಒಂದೇ ಫಿಲಂ ಪಟ್ಟಿಯ ಮೇಲೆ ದೃಶ್ಯದ ಜೊತೆಗೆ ಧ್ವನಿಯನ್ನೂ ಅಳವಡಿಸಲು ಸಾಧ್ಯವಾಗಬೇಕಾಗಿತ್ತು. ಎರಡನೆಯದಾಗಿ, ಅಲ್ಲಿಯವರೆಗೆ ಇದ್ದ ಧ್ವನಿ ಪುನರುತ್ಪಾದನಾ ವಿಧಾನಗಳು ಒಬ್ಬಿಬ್ಬರು ಶ್ರೋತೃಗಳು ಮಾತ್ರ ಕೇಳಿಸಿಕೊಳ್ಳಲು ಸಾಧ್ಯವಿದ್ದಂಥವು. ಧ್ವನಿಯನ್ನು ಥಿಯೇಟರಿನಲ್ಲಿ ಕುಳಿತು ಚಿತ್ರ ನೋಡುತ್ತಿರುವ ನೂರಾರು ಜನ ಪ್ರೇಕ್ಷಕರಿಗೆ ಕೇಳಿಸುವ ಹಾಗೆ ಧ್ವನಿವರ್ಧನೆ ಮಾಡುವ ಸಾಧನಗಳು ಆಗಿನ ಕಾಲದಲ್ಲಿ ಇರಲಿಲ್ಲ. ಲೀ. ಡಿ. ಫಾರೆಸ್ಟ್ ಎಂಬಾತ ೧೯೧೮ರ ಹೊತ್ತಿಗೆ ಈ ಸಮಸ್ಯೆಗೆ ಸಮಾಧಾನ ಕಂಡುಹಿಡಿದ ಮೇಲೆ ಉಳಿದ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವುದರಲ್ಲಿ ಬೇರೆ ಬೇರೆಯವರು ಸ್ವತಂತ್ರವಾಗಿ ಪ್ರಯತ್ನಗಳನ್ನು ಮುಂದುವರಿಸಿದರು.

ಚಲನಚಿತ್ರಕ್ಕಾಗಿ ಧ್ವನಿಮುದ್ರಣ ಮಾಡುವುದರಲ್ಲಿ ಮೂಲಭೂತವಾಗಿ ನಾಲ್ಕು ವಿಧಾನಗಳು ಬಳಕೆಯಲ್ಲಿವೆ. **ಡಿಸ್ಕ್, ಆಪ್ಟಿಕಲ್ ಅಥವಾ ಫೋಟೋಗ್ರಾಫಿಕ್ ಫಿಲಂ, ಮ್ಯಾಗ್ನೆಟಿಕ್ ಫಿಲಂ ಮತ್ತು ಮ್ಯಾಗ್ನೆಟಿಕ್ ಟೇಪ್** - ಇವು ಇತಿಹಾಸದ ವಿವಿಧ ಹಂತಗಳಲ್ಲಿ ಅಭಿವೃದ್ಧಿ ಹೊಂದಿದವು. ಆದರೂ ಪ್ರತಿಯೊಂದರ ಉದ್ದೇಶ, ಅನುಕೂಲಗಳನ್ನು ಅನುಸರಿಸಿ ಈಗ ಇವು ಎಲ್ಲವೂ ಬಳಕೆಯಲ್ಲಿವೆ.

ಡಿಸ್ಕ್ ರಿಕಾರ್ಡಿಂಗ್

ಧ್ವನಿಮುದ್ರಣ ಹಾಗೂ ಪುನರುತ್ಪಾದನೆಯಲ್ಲಿ ಮೊತ್ತಮೊದಲಿಗೆ ರೂಢಿಗೆ ಬಂದದ್ದು ಅಕ್ಷದ ಮೇಲೆ ತಿರುಗುತ್ತಿರುವ ಅರಗು ಲೇಪಿತ (Lacquer) ಸಿಲಿಂಡರಿನ ಮೇಲೆ ಧ್ವನಿಯ ಬರಹವನ್ನು ಮೂಡಿಸಿ, ಮತ್ತೆ ಪುನರುತ್ಪಾದಿಸುವ ಪದ್ಧತಿ. ಥಾಮಸ್ ಆಲ್ವ ಎಡಿಸನ್ ಇದನ್ನು ೧೮೭೭ರಲ್ಲಿ ಅಭಿವೃದ್ಧಿ ಪಡಿಸಿದ್ದರು. ಇದರಲ್ಲಿದ್ದ ಕೆಲವು ಲೋಪದೋಷಗಳನ್ನು ನಿವಾರಿಸಿ ೧೯೮೭ರ ಹೊತ್ತಿಗೆ ಎಮಿಲಿ ಬರ್ಲಿನರ್ ಸಿಲಿಂಡರ್ ಬದಲಿಗೆ ಸಮತಲದಲ್ಲಿ ತಿರುಗುವ ತಟ್ಟೆಗಳ ವಿಧಾನವನ್ನು ಅಭಿವೃದ್ಧಿ ಪಡಿಸಿದರು. ಧ್ವನಿಯನ್ನು ಮುದ್ರಿಸಲು, ಪುನರುತ್ಪಾದಿಸಲು, ಮೂಲ ಪ್ರತಿಗಳನ್ನು ಸಂರಕ್ಷಿಸಿ ಇಡಲು, ಬಹುಪ್ರತಿಗಳನ್ನು ತಯಾರಿಸಲು ಈ ಎಲ್ಲಾ ಕೆಲಸಗಳಿಗಾಗಿ ಡಿಸ್ಕ್ ಬಳಕೆ ಬಹಳ ಉಪಯುಕ್ತವಾಗಿತ್ತು. ಹಾಗಾಗಿ ಈ ಪದ್ಧತಿ ಬಹಳ ಬೇಗ ಜನಪ್ರಿಯವಾಯಿತು.

ಮೊದಲು ದಪ್ಪವಾದ, ಭಾರವಾದ ತಟ್ಟೆಗಳು ಇದ್ದವು. ಬಿದ್ದರೆ ಸುಲಭವಾಗಿ ಮುರಿದು ಹೋಗುವಂಥವು. ನಿಮಿಷಕ್ಕೆ ೭೮ ಸುತ್ತು ಆರ್.ಪಿ.ಎಂ. (Round Per Minute) ತಿರುಗುತ್ತಿದ್ದವು. ನಂತರ ಬರಬರುತ್ತಾ ತೆಳ್ಳನೆಯ, ಸುಲಭವಾಗಿ ಮುರಿಯಲಾಗದ ಡಿಸ್ಕ್‌ಗಳು ಬಂದವು. ೪೫ ಹಾಗೂ ೩೩ ಆರ್.ಪಿ.ಎಂ. ವೇಗದವೂ ಪ್ರಚಲಿತವಾದವು. ಮುಂದೆ ೧೯೧೩ರಲ್ಲಿ ಸುಲಭವಾಗಿ ಸಾಗಿಸಬಹುದಾದ ಸಂಚಾರಿ ಗ್ರಾಮಾಫೋನ್ ಬಂದ ಮೇಲೆ, ಅದಕ್ಕೂ ಮುಖ್ಯವಾಗಿ ೧೯೨೫ರಲ್ಲಿ ಇಲೆಕ್ಟ್ರಾನಿಕೀಯವಾಗಿ ನಡೆಸಬಹುದಾದ, ಇನ್ನೂ ಚಿಕ್ಕ ಆಕಾರದ ಡಿಸ್ಕ್ ಪ್ಲೇಯರ್‌ಗಳು ಮಾರುಕಟ್ಟೆಗೆ ಬಂದ ಮೇಲೆ ಅವು ಬಹಳ ಜನಪ್ರಿಯವಾದವು.

ಧ್ವನಿತಟ್ಟೆಗಳು ಸಿನಿಮಾಕ್ಕಿಂತ ಮುಂಚಿತವಾಗಿ ಬಂದಿದ್ದರೂ ನಂತರ ಬಂದ ಚಲನಚಿತ್ರಗಳು ಮೂಕವಾಗಿದ್ದವು. ಏಕೆ ? ಮೇಣದ ಸಿಲಿಂಡರಿನ ಮೇಲೆ ಧ್ವನಿಯನ್ನು ಮುದ್ರಿಸುತ್ತಿದ್ದ ಆರಂಭದ ದಿನಗಳಲ್ಲೇ ಎಡಿಸನ್ ಧ್ವನಿಯ ಜೊತೆ ದೃಶ್ಯಗಳನ್ನೂ ಅವರ ಮೇಲೆ ಹೇಗಾದರೂ ದಾಖಲೆ ಮಾಡಲಾದೀತೆ ? ನಂತರ ದೃಶ್ಯ ಮತ್ತು ಧ್ವನಿಯನ್ನು ಒಟ್ಟಿಗೆ ಪುನರುತ್ಪಾದಿಸಲು ಆದೀತೆ ಎಂದು ಪ್ರಯತ್ನಗಳನ್ನು ನಡೆಸಿದ್ದರು. ಆದರೆ ಅದು ಅಸಾಧ್ಯವೆಂದು ಕಂಡುಬಂದ ಮೇಲೆ ಎಡಿಸನ್ ಇದರಲ್ಲಿ ಆಸಕ್ತಿಯನ್ನೇ ಕಳೆದುಕೊಂಡರು.

ಒಂದು ಫಿಲಂನ ಪಟ್ಟಿಯ ಮೇಲೆ ಚಿತ್ರಸರಣಿಗಳನ್ನು ಮೂಡಿಸಿ ಅವನ್ನು ಪರದೆಯ ಮೇಲೆ ಬಿಟ್ಟು ಚಲಿಸುವ ಚಿತ್ರಗಳನ್ನು ಸಾಧಿಸಿದ ಬಹಳ ದಿನಗಳವರೆಗೂ ಧ್ವನಿಯ ಕಡೆಗೆ ಗಮನವಿರಲಿಲ್ಲ. ಚಲನಚಿತ್ರ ಸುಧಾರಿಸಿ ಚಿಕ್ಕ ಪುಟ್ಟ ಕಥೆಗಳು ಬರತೊಡಗಿದ ಮೇಲೆ ಸಾರ್ವಜನಿಕ ಪ್ರದರ್ಶನಗಳು ಜನಪ್ರಿಯವಾದ ಮೇಲೆ ಧ್ವನಿ ಇಲ್ಲದ್ದು ಕೊರತೆ ಎನಿಸತೊಡಗಿತು. ಆಗ ಇವರ ಸಹಾಯಕ್ಕೆ ಬಂದದ್ದು ಗ್ರಾಮಾಫೋನ್ ಡಿಸ್ಕ್‌ಗಳು. ಆದರೆ ನಾವೀಗ ಕಾಣುವಂತೆ ಚಲನಚಿತ್ರಕ್ಕೆ ಧ್ವನಿಯನ್ನು ಒದಗಿಸಲು ಅಲ್ಲ, ಮೂಕ ಚಲನಚಿತ್ರ ಪರದೆಯ ಮೇಲೆ ನಡೆಯುತ್ತಿರುವಾಗಲೇ ಪ್ರೊಜೆಕ್ಟರಿನಿಂದ ಹೊರಡುವ ಕಿರ್‌ರ್‌ರ್... ಎಂಬ ಸದ್ದು ಪ್ರೇಕ್ಷಕರಿಗೆ ಕೇಳಿಸಿದರೆ ಕಿರಿಕಿರಿಯಲ್ಲವೆ ? ಅದು ಕೇಳಿಸದ ಹಾಗೆ ಗ್ರಾಮಾಫೋನ್ ಡಿಸ್ಕ್‌ಗಳಿಂದ ಸಂಗೀತವನ್ನು ಹಾಕುತ್ತಿದ್ದರು, ಅಷ್ಟೆ. ಬರಬರುತ್ತಾ ದೃಶ್ಯಾವಳಿಗೆ ತಕ್ಕ ಸಂಗೀತವನ್ನು ಆಯ್ಕೆ ಮಾಡುವಷ್ಟು ಸುಧಾರಣೆ ಆಯಿತು; ಆ ನಂತರ ದೃಶ್ಯಗಳಿಗೆ ಸಂಗೀತವನ್ನು ಚಿತ್ರಕ್ಕಾಗಿಯೇ ಸಂಯೋಜಿಸಿ ಡಿಸ್ಕ್‌ಗಳನ್ನು ತಯಾರಿಸಿಕೊಳ್ಳುವುದು ಪ್ರಚಲಿತವಾಯಿತು. ಆದರೂ ಈ ಹಂತದಲ್ಲಿ ದೃಶ್ಯ ಹಾಗೂ ಧ್ವನಿಗಳ ನಡುವೆ ಕರಾರುವಾಕ್ಕಾದ (Synchronisation) ಹೊಂದಾಣಿಕೆ ಸಾಧ್ಯವಿರಲಿಲ್ಲ.

ಮುಂದೆ ಜಗತ್ತಿನ ಮೊತ್ತಮೊದಲ ಪೂರ್ಣಾವಧಿ ಟಾಕಿ ಎಂದು ಹೆಸರಾಗಿರುವ 'ಜಾಜ್ ಸಿಂಗರ್'ಗೆ (೧೯೨೭) ಧ್ವನಿಯನ್ನು ಪೂರೈಸಿರುವುದು ಡಿಸ್ಕ್‌ಗಳ ಸಹಾಯದಿಂದ. ಬೆಲ್ ಟೆಲಿಫೋನ್‌ನವರು ಅಭಿವೃದ್ಧಿ ಪಡಿಸಿದ್ದ 'ವಿಟಾಫೋನ್' ಎಂಬ ಕ್ರಮದಲ್ಲಿ ಧ್ವನಿಯನ್ನು ಪ್ರತ್ಯೇಕ ಡಿಸ್ಕ್‌ಗಳಲ್ಲಿಯೇ ಮುದ್ರಿಸಿದರೂ ದೃಶ್ಯಪಟ್ಟಿಯ ಜೊತೆ ಓಡಿಸಿ ಹೊಂದಾಣಿಕೆಯಲ್ಲಿ ರಿಕಾರ್ಡ್ ಮಾಡಲು ಸಾಧ್ಯವಿತ್ತು. ಹಾಗೆಯೇ ಪ್ರೊಜೆಕ್ಟರಿನ ಸಹಾಯದಿಂದ ಚಿತ್ರವನ್ನು ಬಿಡುವಾಗ ಆಯಾ ರೀಲಿಗೆ ತಕ್ಕ ಡಿಸ್ಕ್‌ಗಳನ್ನು ದೃಶ್ಯಗಳಿಗೆ ಹೊಂದಿಸಿಯೇ ಪ್ಲೇ ಮಾಡಬಹುದಾಗಿತ್ತು. ಪದ್ಧತಿ ಸ್ವಲ್ಪ ಕ್ಲಿಷ್ಟಕರವಾಗಿದ್ದರೂ ನಟರ ತುಟಿಚಲನೆಗೆ ತಕ್ಕ ಹಾಗೆ ಮಾತು ಮತ್ತು ಹಾಡುಗಳು,

ನುಡಿಸುವ ವಾದ್ಯಗಳ ಚಲನೆಗೆ ತಕ್ಕ ಹಾಗೆ ಅವುಗಳಿಂದ ಹೊರಡುವ ನಾದ ಇವುಗಳ ಕರಾರುವಾಕ್ ಹೊಂದಾಣಿಕೆ ಅಂದಿನ ಪ್ರೇಕ್ಷಕರನ್ನು, ವಿಮರ್ಶಕರನ್ನು ದಂಗುಬಡಿಸಿದವು. ಮುಂದೆ ೧೯೨೮ರಲ್ಲಿ ಚಿತ್ರಪಟ್ಟಿಯ ಮೇಲೆಯೇ ಧ್ವನಿವಾಹಿನಿ ಅಳವಡಿಸುವ ಪದ್ಧತಿಯ ಪ್ರಕಾರ ತಯಾರಾದ 'ಲೈಟ್ಸ್ ಆಫ್ ನ್ಯೂಯಾರ್ಕ್' ಎಂಬ ಚಿತ್ರದ ನಂತರ ವಿಟಾಫೋನ್ ಬಳಕೆ ನಿಂತು ಹೋಯಿತು. ಆದರೂ ಸಂಗೀತವನ್ನು ಧ್ವನಿ ಮುದ್ರಿಸಿ ಬೇಕಾದಾಗ ಕೇಳಿಸಿಕೊಳ್ಳುವ ಸೌಲಭ್ಯವಿರುವ ಗ್ರಾಮಾಫೋನ್ ಹಾಗೂ ಡಿಸ್ಕ್‌ಗಳು ತಮ್ಮ ಜನಪ್ರಿಯತೆಯನ್ನು ಕಳದುಕೊಳ್ಳಲಿಲ್ಲ.

ಆಪ್ಟಿಕಲ್ ಫಿಲಂ

ಸ್ಥಿರ ಚಿತ್ರವಾಗಲಿ, ಚಲನಚಿತ್ರವಾಗಲಿ ಅದು ಒಂದು 'ಫೋಟೋಗ್ರಾಫ್'. ಎಂದರೆ ಬೆಳಕಿನಿಂದ ಬರೆದ ಬರಹ ಅಥವಾ ಚಿತ್ರ. (ಫೋಟೋ' ಎಂದರೆ ಬೆಳಕು, 'ಗ್ರಾಫ್' ಎಂದರೆ ಬರಹ). ಫಿಲಂನ ನೆಗೆಟಿವ್ ಪಟ್ಟಿಯ ಮೇಲೆ ಬೆಳಕಿಗೆ ಪ್ರತಿಕ್ರಿಯಿಸುವ ರಾಸಾಯಿನಿಕಗಳ ಲೇಪನವಿರುತ್ತದೆ. ಕ್ಯಾಮರಾ ಲೆನ್ಸಿನ ಸಹಾಯದಿಂದ ಈ ರಾಸಾಯನಿಕ ಸಮತಲದ ಮೇಲೆ ಮೂಡಿದ ಚಿತ್ರಗಳು ಅದರಲ್ಲಿ ಸ್ಥಿರಗೊಳ್ಳುತ್ತವೆ. ಪ್ಲಾಸ್ಟಿಕ್ ಪಟ್ಟಿಯಾದ್ದರಿಂದ ನಂತರ ಹಿಂಬದಿಯಿಂದ ತೀಕ್ಷ್ಣವಾದ ಬೆಳಕನ್ನು ಬೀರಿ, ಆ ಚಿತ್ರಗಳನ್ನು ಪರದೆಯ ಮೇಲೆ ಮೂಡಿಸಬಹುದು. ಇದೇ ರೀತಿ ದ್ಯುತಿ ಸಂಶ್ಲೇಷಣಾ ವಿಧಾನದಿಂದ ಧ್ವನಿಯನ್ನೂ ಫೋಟೋಗ್ರಾಫಿಕ್ ಫಿಲಂನ ಮೇಲೆ ಮೂಡಿಸುಹುದು. ಈ ಕಾರಣಕ್ಕಾಗಿಯೇ ಈ ವಿಧಾನವನ್ನು 'ಆಪ್ಟಿಕಲ್ ಅಥವಾ ಫೋಟೋಗ್ರಾಫಿಕ್ ವಿಧಾನ' ಎನ್ನುವುದು.

ಸಾಧಾರಣ ೩೫ ಎಂ.ಎಂ. ಸಿನಿಮಾದ ಫಿಲಂನ ಒಂದು ತುಂಡನ್ನು ತೆಗೆದುಕೊಂಡು ನೋಡಿದರೆ ನೀವು ದೃಶ್ಯ ಚೌಕಟ್ಟುಗಳ (Frame) ಬದಿಯಲ್ಲಿ ನಿರಂತರವಾಗಿ ಓಡುವ ಒಂದು ಕಪ್ಪು ಬಿಳುಪು ರಂಗೋಲಿಯಂತಹ ಗೆರೆಯನ್ನು ಕಾಣುತ್ತೀರಿ. ಅದೇ ಆಪ್ಟಿಕಲ್ ವಿಧಾನದಿಂದ ಬರೆಯಲಾದ ಧ್ವನಿವಾಹಿನಿ (Sound Track). ಸಂಭಾಷಣೆ, ಸಂಗೀತ ಇತ್ಯಾದಿ ಧ್ವನಿಪ್ರಕಾರಗಳು ಉಂಟುಮಾಡುವ ಪರಿಳಿತಗಳಿಗೆ ಸಂವಾದಿಯಾಗಿ ಈ ಧ್ವನಿವಾಹಿನಿಯ ಆಕಾರದಲ್ಲಿ ಪರಿಳಿತಗಳು ಉಂಟಾಗಿರುತ್ತವೆ. ಈ ಧ್ವನಿವಾಹಿನಿ ಇರುವ ಫಿಲಂನ್ನು ಪ್ರೊಜೆಕ್ಟರಿನಲ್ಲಿ ಓಡಿಸಿದಾಗ, ಇವನ್ನು ರಿಕಾರ್ಡಿಂಗ್ ಮಾಡಿದ ಪ್ರಕ್ರಿಯೆಗೆ ವಿರುದ್ಧವಾದ ಪ್ರಕ್ರಿಯೆಯಲ್ಲಿ ಧ್ವನಿಯ ಪುನರುತ್ಪಾದನೆ ಆಗುತ್ತದೆ.

ಧ್ವನಿಚಿತ್ರಗಳ ಆರಂಭದ ದಿನಗಳಲ್ಲಿ ಒಂದು ನಿರ್ದಿಷ್ಟ ಪದ್ಧತಿಯ ಪ್ರಕಾರ ಚಿತ್ರದ ಶೂಟಿಂಗ್ ಮಾಡುತ್ತಿರುವಾಗ ದೃಶ್ಯ ಹಾಗೂ ಧ್ವನಿಗಳು ಏಕಕಾಲಕ್ಕೆ ಒಂದೇ ಪಟ್ಟಿಯ ಮೇಲೆ ಮೂಡುತ್ತಿದ್ದವು. ಇಲ್ಲಿ ಧ್ವನಿ ಆಪ್ಟಿಕಲ್ ಪದ್ಧತಿಯಾಗಿದ್ದಿತು. ಫಿಲಂನ ನೆಗೆಟಿವ್ ಮೇಲೆ ಎರಡೂ ಅಕ್ಕ-ಪಕ್ಕ ಮೂಡುತ್ತಿದ್ದವು. ಪಾಸಿಟಿವ್ ಆಗಿ ಡೆವಲಪ್ ಮಾಡಿದಾಗ ದೃಶ್ಯ-ಧ್ವನಿ ಎರಡೂ ಒಟ್ಟಿಗೇ ಸಿಗುತ್ತಿದ್ದವು. ಇದನ್ನು 'ಸಿಂಗಲ್ ಸಿಸ್ಟಮ್' ಎನ್ನುತ್ತಿದ್ದರು. ನಿಜವೆಂದರೆ, ಭಾರತದ ಮೊದಲ ಧ್ವನಿಚಿತ್ರವೆಂದು ಪ್ರಖ್ಯಾತವಾಗಿದ್ದ 'ಆಲಂ ಆರಾ'ವನ್ನು ತಯಾರಿಸಿದ್ದು ಈ ಪದ್ಧತಿಯಲ್ಲಿ. ಆರ್ದೇಶಿರ್ ಇರಾನಿ, ಅಮೇರಿಕಾದಿಂದ ತಂದ ಹೆಚ್ಚು ಕಡಿಮೆ ಗುಜರಿಯಾಗಿದ್ದ ಯಂತ್ರದಿಂದ ಆ ಚಿತ್ರವನ್ನು ಮಾಡಲಾಗಿತ್ತು. ಮುಂದೆ ಕೆಲವು ದಿನ ಬರೀ ವಾರ್ತಾಚಿತ್ರಗಳ ಚಿತ್ರೀಕರಣಕ್ಕಾಗಿ ಬಳಸುತ್ತಿದ್ದ ಪದ್ಧತಿಯನ್ನು ರೂಪಕ ಕಥಾಚಿತ್ರರಂಗ ಬಹಳ ಬೇಗ ನಿರಾಕರಿಸಿತು.

ಸಂಭಾಷಣೆ, ಸಂಗೀತ ಇತ್ಯಾದಿಗಳನ್ನು ಪ್ರತ್ಯೇಕವಾಗಿ ಧ್ವನಿ ಮುದ್ರಿಸಿ ನಂತರ ಅಗತ್ಯಕ್ಕೆ ತಕ್ಕಂತೆ ಸಂಕಲಿಸಿ ಅಳವಡಿಸುವ ಸೌಲಭ್ಯವಿರುವ ಪ್ರತ್ಯೇಕ ಪಟ್ಟಿಯ ಧ್ವನಿ ಮುದ್ರಣವನ್ನು ಅನುಸರಿಸತೊಡಗಿದರು. ಚಿತ್ರೀಕರಣವನ್ನು ಸ್ಟುಡಿಯೋದ ಒಳಾಂಗಣದಲ್ಲಿಯೇ ಮಾಡಲಿ, ಹೊರಾಂಗಣದಲ್ಲಿಯೇ ಮಾಡಲಿ, ಸುಮಾರು ೧೯೪೮ರ ವರೆಗೂ ಧ್ವನಿಯನ್ನು ಸೌಂಡ್ ಕ್ಯಾಮರಾ ಎಂಬ ಭಾರಿ ಗಾತ್ರದ ಯಂತ್ರಗಳ ಸಹಾಯದಿಂದ ಶೂಟಿಂಗ್ ನಡೆಯುವಾಗಲೇ ಮಾಡಬೇಕಾಗುತ್ತಿತ್ತು. ಚಿತ್ರೀಕರಣಕ್ಕೆ ಬಳಸುವ 'ಫಿಲಂ ನೆಗಟಿವ್' ಹಾಗೂ ಧ್ವನಿಮುದ್ರಣಕ್ಕೆ ಬಳಸುವ 'ಸೌಂಡ್ ನೆಗೆಟಿವ್' ಎರಡರ ಅಗಲಳತೆ (೩೫ ಎಂ.ಎಂ.) ಅಂಚುಗಳಲ್ಲಿ ಹಾಕಿರುವ (Perforations) ಕಚ್ಚುರಂಧ್ರಗಳ ಅಳತೆ, ಅಂತರ ಇತ್ಯಾದಿಗಳು ಎರಡರಲ್ಲೂ ಸರ್ವಸಮ ಇರಬೇಕಾದುದು ಇಲ್ಲಿನ ಒಂದು ಮೂಲಭೂತ ಅಗತ್ಯ. ಇದಿದ್ದರೆ ಮಾತ್ರ ಧ್ವನಿ ಮತ್ತು ದೃಶ್ಯಗಳ ಕರಾರುವಾಕ್ ಹೊಂದಾಣಿಕೆ ಸಾಧ್ಯವಾಗುವುದು.

ಛಾಯಾಗ್ರಹಣ ಪದ್ಧತಿಯಲ್ಲಿ ಧ್ವನಿ ಮುದ್ರಣ ತಾಂತ್ರಿಕತೆ

ಈ ಹಂತದಲ್ಲಿ ಚಲನಚಿತ್ರಗಳಲ್ಲಿ ಧ್ವನಿ ಅಳವಡಿಸಲು ಎರಡು ಪ್ರಮುಖ ಮೂಲ ಪದ್ಧತಿ ಬಳಸಲಾಯಿತು. ವೇರಿಯಬಲ್ ಡೆನ್ಸಿಟಿ ಮತ್ತು ವೇರಿಯಬಲ್ ಏರಿಯಾ ಅಥವಾ ವೇರಿಯಬಲ್ ವಿಡ್ತ್. ವೇರಿಯಬಲ್ ಡೆನ್ಸಿಟಿ ಮತ್ತು ವೇರಿಯಬಲ್ ಏರಿಯಾ ಧ್ವನಿಗ್ರಹಣ ಪದ್ಧತಿಯಲ್ಲಿ - ಆಡುವ ಮಾತುಗಳು, ವಾದ್ಯಗಳ ನಾದಗಳು, ಇತರೆ ಯಾವುದೇ ವಾಹಿನಿ, ಮೈಕ್ರೋ ಫೋನ್ ಮೂಲಕ ಹಾದು ಒಂದು ಎಲೆಕ್ಟ್ರಿಕ್ ಬಲ್ಬಿನ ಸಹಾಯದಿಂದ ಫೋಟೋ ಎಲೆಕ್ಟ್ರಿಕ್ ಸೆಲ್ ಬಳಸಿಕೊಂಡು ಇವರ ಗುಣವಿಶೇಷದಿಂದ ವಿದ್ಯುಚ್ಛಕ್ತಿ ಹರಿಸಿದಲ್ಲಿ ಧ್ವನಿಯ ತೀವ್ರತೆಗೆ ಅನುಗುಣವಾಗಿ ಫೋಟೋ ಎಲೆಕ್ಟ್ರಿಕ್ ಸೆಲ್‌ನ ಮೇಲೆ ಬಿದ್ದು ಉಂಟಾಗುವ ಬೆಳಕಿನ ಪರಿಳಿತದಂತೆ ಕಚ್ಚಾ ಫಿಲಂನ ಮೇಲೆ ಧ್ವನಿ ಗ್ರಹಿಸಲಾಯಿತು. ಇದು ಕಪ್ಪು-ಬಿಳುಪಿನ ಛಾಯೆಯಾಗಿ ಮೂಡುತ್ತದೆ. ಈ ರೀತಿ ಧ್ವನಿ ಗ್ರಹಿಸಿದ್ದನ್ನು ಪುನರ್ ಉತ್ಪತ್ತಿ ಮಾಡಲು ಇವರ ವಿರುದ್ಧ ರೀತಿಯಲ್ಲಿ ಪುನರ್ ಸ್ಥಿತಿಗೆ ತರಲಾಗುವುದು. ಅಂದರೆ ಧ್ವನಿಗ್ರಹಣ ಸಮಯದಲ್ಲಿ ಬಳಸಿದ ಕ್ರಮದ 'ರಿವರ್ಸ್' ಪದ್ಧತಿ ಬಳಸಿ ಧ್ವನಿಯನ್ನು ಉತ್ಪಾದಿಸಲಾಗುವುದು. ಇದರಿಂದ ಅಕೋಸ್ಟಿಕಲ್ ಎನರ್ಜಿ - ಎಲೆಕ್ಟ್ರಿಕಲ್ ಇಂಪಲ್ಸ್‌ನಿಂದ ಮತ್ತೆ ಅಕೋಸ್ಟಿಕಲ್ ಎನರ್ಜಿ ಅಗಿ ಪರಿವರ್ತಿತವಾಗುವುದು. ಇಂತಹ ಪದ್ಧತಿ ಚಿತ್ರಮಂದಿರದಲ್ಲಿ ಅಳವಡಿಸಿದ ಪ್ರೊಜೆಕ್ಟರ್‌ನಲ್ಲಿ ಇರುತ್ತದೆ.



(ಚಿತ್ರ ೯) ಧ್ವನಿಯನ್ನು ಫಿಲಂ ಮೇಲೆ ಮುದ್ರಿಸುವ ಯಂತ್ರ

ಮ್ಯಾಗ್ನೆಟಿಕ್ ಫಿಲಂ

ತಂತ್ರಜ್ಞಾನ ಸುಧಾರಿಸಿದಂತೆ ಚಿತ್ರಕ್ಕೆ ಬೇಕಾದ ಧ್ವನಿಯನ್ನು ಚಿತ್ರೀಕರಣಕ್ಕೆ ಮುಂಚೆಯೋ, ಇಲ್ಲವೇ ನಂತರವೋ ಶಬ್ದಸುರಕ್ಷಿತ ಸ್ಟುಡಿಯೋಗಳಲ್ಲಿ ಧ್ವನಿಮುದ್ರಿಸಿಕೊಳ್ಳುವ ಸೌಲಭ್ಯಗಳು ಕಲ್ಪಿತವಾದುವು. ಆಗ ಸ್ಟುಡಿಯೋಗಳಲ್ಲಿ ರಿಕಾರ್ಡಿಂಗ್‌ಗೆ ಮ್ಯಾಗ್ನೆಟಿಕ್ ಫಿಲಂ ಬಳಸತೊಡಗಿದರು. ಇವರಲ್ಲಿ ರಿಕಾರ್ಡಿಂಗ್ ವಿಧಾನ ಆಪ್ಟಿಕಲ್ ವಿಧಾನಕ್ಕಿಂತ ಸರಳ. ಒಮ್ಮೆ ಮಾಡಿದ ರಿಕಾರ್ಡಿಂಗ್ ಅನ್ನು Bulk Eraser ಮೂಲಕ ಅಳಿಸಿ ಮತ್ತೆ ಮಾಡಬಹುದು. ಇಂಥ ಹಲವು ಅನುಕೂಲಗಳಿಂದಾಗಿ ಮುಂದೆ ಸ್ಟುಡಿಯೋಗಳಲ್ಲಿ ಮ್ಯಾಗ್ನೆಟಿಕ್ ಫಿಲಂ ಬಳಕೆಯಾಯಿತು.

ಆಪ್ಟಿಕಲ್ ಫಿಲಂನಲ್ಲಿ (ಧ್ವನಿಗ್ರಹಣ - ಧ್ವನಿ ಪುನರುತ್ಪಾದನೆ) ಹಲವು ಇತಿಮಿತಿ (Limitations)ಗಳಿವೆ. ಅಂದರೆ ಧ್ವನಿ ಪಟಲ ೨೦ ಡೆಸಿಬಲ್‌ನಿಂದ ೨೦,೦೦೦ ಡೆಸಿಬಲ್‌ವರೆಗೆ ಹರಡಿದೆ. ಆಪ್ಟಿಕಲ್ ಫಿಲಂ ಬಳಸಿದರೆ ಎಂಟು ಕಿಲೋ ಸೈಕಲ್‌ನವರೆಗೆ ಮಾತ್ರ ಧ್ವನಿಯನ್ನು ಅಳವಡಿಸಲು ಸಾಧ್ಯ. ಇದಕ್ಕಿಂತ ಹೆಚ್ಚಾದ ಶಬ್ದ ಪುನರುತ್ಪಾದನೆ ಅಸಾಧ್ಯ. ಆದರೆ ಮ್ಯಾಗ್ನೆಟಿಕ್ ಟೇಪ್‌ನಲ್ಲಿ ಧ್ವನಿಯನ್ನು ಪೂರ್ತಿಯಾಗಿ ಮುದ್ರಿಸಲು, ಪುನರುತ್ಪಾದಿಸಲು ಸಾಧ್ಯ. ಮ್ಯಾಗ್ನಟಿಕ್ ಟೇಪ್ ಅಥವಾ ಫಿಲಂ ಪಟ್ಟಿಯ ಮೇಲೆ ಕಬ್ಬಿಣದ ಆಕ್ಸೈಡ್‌ನ ಲೇಪನ ಮಾಡಿರುತ್ತಾರೆ. ಇಲೆಕ್ಟ್ರೋ ಮ್ಯಾಗ್ನೆಟಿಕ್ ವಿಧಾನದಲ್ಲಿ ಧ್ವನಿ ತರಂಗಗಳು, ಲೇಪನ ಮಾಡಿರುವ ಪಟ್ಟಿಯ ಮೇಲೆ ಸಣ್ಣ ಸಣ್ಣ ಅಯಸ್ಕಾಂತಗಳಾಗಿ ಮಾರ್ಪಟ್ಟು ಮುದ್ರಿತವಾಗುತ್ತವೆ. ವಿರುದ್ಧ ಪ್ರಕ್ರಿಯೆಯಲ್ಲಿ ಧ್ವನಿ ಪುನರುತ್ಪಾದನೆಯಾಗುತ್ತದೆ. ಚಲನಚಿತ್ರದ ಎಲ್ಲ ಹಂತಗಳಲ್ಲೂ ಮ್ಯಾಗ್ನೆಟಿಕ್ ಟೇಪ್ (ಪೂರ್ಣ ಲೇಪಿತ ಅಥವಾ ಕಾಲು ಇಂಚಿನಷ್ಟು ಲೇಪಿತ) ಬಳಕೆಯಲ್ಲಿದೆ. ಕೊನೆಯ ಹಂತದಲ್ಲಿ ಮಿಶ್ರಿತ ಧ್ವನಿವಾಹಿನಿಯನ್ನು ಆಪ್ಟಿಕಲ್ ಫಿಲಂಗೆ ವರ್ಗಾವಣೆ ಮಾಡಿ ನೆಗೆಟಿವ್‌ನಿಂದ ಪ್ರತಿ (Print) ತೆಗೆಯುತ್ತಾರೆ.

ಮೊದಮೊದಲು ಸಂಗೀತ, ನಿರೂಪಣೆ, ಸಂಭಾಷಣೆಗಳನ್ನು ಆಪ್ಟಿಕಲ್ ವಿಧಾನದಲ್ಲಿ ನೆಗೆಟಿವ್ ಪ್ರಿಂಟ್ ತೆಗೆದು ಸಿದ್ಧ ಪ್ರತಿ (Work Print) ಯೊಂದಿಗೆ ಹೊಂದಿಸಿ (Syncronin) ನಂತರ ಪ್ರತ್ಯೇಕ ಟ್ರ್ಯಾಕ್‌ಗಳಲ್ಲಿರುವ ಸಂಭಾಷಣೆ, ಸಂಗೀತ, ವಿಶೇಷ ಧ್ವನಿಗಳನ್ನು ಆಪ್ಟಿಕಲ್ ಡಬ್ಬರ್ (Optical Dubber) ನಲ್ಲಿ ಹಾಯಿಸಿ ಅಂತಿಮ ಮಿಶ್ರಣ ನಡೆಸುತ್ತಿದ್ದರು. ಉದಾಹರಣೆಗೆ ಎಸ್.ಲಕ್ಷ್ಮೀನಾರಾಯಣ ನಿರ್ದೇಶನದ 'ಮುಯ್ಯಿ' ಚಿತ್ರದಲ್ಲಿ ಶಬ್ದಗ್ರಹಣಕ್ಕೆ ಬಹಳ ಪ್ರಾಧಾನ್ಯವಿತ್ತು. ವಿಶೇಷ ಧ್ವನಿಮುದ್ರಣಕ್ಕೆ ನಿರ್ದೇಶಕರು ಪ್ರತ್ಯೇಕ ಏಳು ಟ್ರ್ಯಾಕುಗಳನ್ನು ಮಾಡಿದ್ದರು. ಕನ್ನಡ ಚಿತ್ರರಂಗದಲ್ಲಿ ಈ ಚಿತ್ರ ವಿಶೇಷವೆನಿಸಿತ್ತು. ಚಿತ್ರದ ಉದ್ದಕ್ಕೂ ಬಸ್ ಪ್ರಯಾಣ ಇದ್ದುದರಿಂದ ಬಸ್ಸಿನ ಶಬ್ದ ದೃಶ್ಯಕ್ಕೆ ಅನುಗುಣವಾಗಿತ್ತು. ಹಲವಾರು ಬಾರಿ ರೀ-ಮಿಕ್ಸ್ ಮಾಡಿ ಒಂದೇ ಟ್ರ್ಯಾಕ್‌ಗೆ ಧ್ವನಿಯನ್ನು ರಿಕಾರ್ಡ್ ಮಾಡಲು ಪ್ರತ್ಯೇಕ ಧ್ವನಿ ಲೇಖನ (Sound Script) ತಯಾರಿಸಲಾಗಿತ್ತು. ಆಪ್ಟಿಕಲ್ ಫಿಲಂನ ಮುಂದಿನ ಸುಧಾರಣೆ ಮ್ಯಾಗ್ನೆಟಿಕ್ ಫಿಲಂ ಎಂದು ಹೇಳಬಹುದು. ಎಲ್ಲ ಅಗಲಳತೆ, ಕಚ್ಚುರಂಧ್ರಗಳನ್ನು ಮಾಡಿರುವ ವಿಧಾನ ಎಲ್ಲ ರೀತಿಯಲ್ಲೂ ಚಿತ್ರೀಕರಣದ ಫಿಲಂನ ಮಾದರಿಯಲ್ಲಿಯೇ ಇರುವ ಪ್ಲಾಸ್ಟಿಕ್ ಪಟ್ಟಿಯ ಮೇಲೆ (Acetate or Polyster) Iron Oxideನ್ನು ಲೇಪನ ಮಾಡಿದರೆ ಸಿಗುವುದು ಮ್ಯಾಗ್ನೆಟಿಕ್ ಫಿಲಂ. ಇದರ ಮೇಲೆ ಧ್ವನಿಯ ಏರಿಳಿತಕ್ಕೆ ತಕ್ಕಂತೆ ಉಂಟಾಗುವ ವೋಲ್ಟೇಜಿನ ವ್ಯತ್ಯಾಸ, ಹಾಗೂ ಈ ವ್ಯತ್ಯಾಸಕ್ಕೆ ತಕ್ಕಂತೆ ಮ್ಯಾಗ್ನೆಟಿಕ್ ಎಲಿಮೆಂಟ್‌ಗಳಲ್ಲಿ ಉಂಟಾಗುವ ವಿನ್ಯಾಸಗಳ ರೂಪದಲ್ಲಿ ಧ್ವನಿಯನ್ನು ಮುದ್ರಿಸಲಾಗುತ್ತದೆ.

ಚಲನಚಿತ್ರ ಸ್ಟುಡಿಯೋಗಳಲ್ಲಿ ಹೆಚ್ಚು ಬಳಕೆಯಲ್ಲಿರುವ ವಿಧಾನ ಇದು. ಹಾಡುಗಳನ್ನು ರಿಕಾರ್ಡ್ ಮಾಡಲು, ಸಂಭಾಷಣೆಯನ್ನು ಮರುಮುದ್ರಿಸಿಕೊಳ್ಳಲು, ಹಿನ್ನೆಲೆ ಸಂಗೀತವನ್ನು ಧ್ವನಿಮುದ್ರಿಸಲು, ನಂತರ ಧ್ವನಿವಿಶೇಷಗಳನ್ನು ಸೇರಿಸಲು ಹೀಗೆ ವಿವಿಧ ಹಂತಗಳಲ್ಲಿ ನಡೆಯುವ ಧ್ವನಿಮುದ್ರಣವನ್ನು ಮ್ಯಾಗ್ನೆಟಿಕ್ ಫಿಲಂನ ಮೇಲೆ ಮಾಡಿಕೊಳ್ಳಲಾಗುತ್ತದೆ. ಸ್ಟುಡಿಯೋದಲ್ಲಿ ಸ್ಥಾಪಿಸಿರುವ ಧ್ವನಿಮುದ್ರಣ ಯಂತ್ರಗಳಲ್ಲಿ ಈ ಫಿಲ್ಮನ್ನು ಬಳಸಿ ಧ್ವನಿಮುದ್ರಣ ಮಾಡಲಾಗುತ್ತದೆ. ಇವುಗಳ ಒಂದು ವೈಶಿಷ್ಟ್ಯವೆಂದರೆ ಸ್ಟುಡಿಯೋದಲ್ಲಿರುವ ಧ್ವನಿಮುದ್ರಣ ಯಂತ್ರಗಳನ್ನು ಪರಸ್ಪರ ಹಾಗೂ ಪರದೆ ಮೇಲೆ ಚಿತ್ರವನ್ನು ಬಿಡುವ ಪ್ರೊಜೆಕ್ಟರಿನೊಂದಿಗೆ ಸಮಜೋಡಿಯಾಗಿ ನಡೆಯುವಂತೆ ಲಾಕ್ ಮಾಡಬಹುದು. ಸಂಭಾಷಣೆಯ ಡಬ್ಬಿಂಗ್, ಹಿನ್ನೆಲೆ ಸಂಗೀತ ಹಾಗೂ ಧ್ವನಿ ವಿಶೇಷಗಳ ರಿಕಾರ್ಡಿಂಗ್ ಸಮಯದಲ್ಲಿ, ದೃಶ್ಯಗಳನ್ನು ಪ್ರೊಜೆಕ್ಟರ್ ಸಹಾಯದಿಂದ ಪರದೆಯ ಮೇಲೆ ಬಿಟ್ಟು ಅವುಗಳ ಓಟಕ್ಕೆ ತಕ್ಕಂತೆ ರಿಕಾರ್ಡ್ ಮಾಡಿಕೊಳ್ಳಲು ಇದು ಸಹಾಯಕವಾಗುತ್ತದೆ. ಒಂದೇ ಪಟ್ಟಿಯ ಮೇಲೆ ಅಳವಡಿಸಿರುವ ಮೂರು ಪ್ರತ್ಯೇಕ ಮ್ಯಾಗ್ನೆಟಿಕ್ ಪಥಗಳ (Track) ಅನುಕೂಲವನ್ನು ಬಳಸಿಕೊಂಡು ಒಂದರಲ್ಲಿ ಸಂಭಾಷಣೆ, ಇನ್ನೊಂದರಲ್ಲಿ ಹಿನ್ನೆಲೆ ಸಂಗೀತ, ಮತ್ತೊಂದರಲ್ಲಿ ಧ್ವನಿ ವಿಶೇಷ ಹೀಗೆ ಬೇರೆ ಬೇರೆಯಾಗಿಟ್ಟುಕೊಂಡು, ಧ್ವನಿವಾಹಿನಿಯ ತಯಾರಿಕೆಯ ಕೊನೆ ಹಂತದಲ್ಲಿ ಈ ಮೂರನ್ನೂ ಸಮ್ಮಿಶ್ರಣ (Mixing) ಮಾಡಬಹುದು.

ಒಂದು ವಾಸ್ತವವೆಂದರೆ, ಸಿನಿಮಾ ಥಿಯೇಟರುಗಳಲ್ಲಿ ಆಪ್ಟಿಕಲ್ ವಿಧಾನದಿಂದ ಧ್ವನಿಪುನರುತ್ಪಾದನೆ ಮಾಡುವ ಸೌಲಭ್ಯ ಇರುವುದೇ ಹೆಚ್ಚು ಪ್ರಚಲಿತ. ಹೀಗಾಗಿ ಧ್ವನಿವಾಹಿನಿಯ ವಿವಿಧ ಹಂತಗಳ ಧ್ವನಿಮುದ್ರಣಕ್ಕಾಗಿ, ಕೊನೆಗೆ ಅದನ್ನು ಒಂದು ಸಂಯೋಜಿತ ವಾಹಿನಿಯಾಗಿ ಬೆರೆಸುವುದಕ್ಕಾಗಿ ಸ್ಟುಡಿಯೋಗಳಲ್ಲಿ ಮ್ಯಾಗ್ನೆಟಿಕ್ ಫಿಲಂನ ಬಳಕೆಯಾದರೂ ಸಾಮಾನ್ಯವಾಗಿ ಥಿಯೇಟರುಗಳಲ್ಲಿ ಪ್ರದರ್ಶನಕ್ಕಾಗಿ ಸಿದ್ಧಪಡಿಸುವ ಪ್ರಿಂಟ್‌ನ ಮೇಲೆ ಧ್ವನಿವಾಹಿನಿಯನ್ನು ಆಪ್ಟಿಕಲ್ ರೂಪದಲ್ಲಿ ಮುದ್ರಿಸುತ್ತಾರೆ.

ಮ್ಯಾಗ್ನೆಟಿಕ್ ಟೇಪ್

ವೃತ್ತಿಪರ ಆಡಿಯೋ ಸ್ಟುಡಿಯೋಗಳಲ್ಲಿ ಹಾಡು, ಸಂಗೀತ, ನಾಟಕ ಇತ್ಯಾದಿಗಳನ್ನು ಧ್ವನಿಮುದ್ರಿಸಲು ಮ್ಯಾಗ್ನೆಟಿಕ್ ಟೇಪನ್ನು ಬಳಸುವರಾದರೂ ಅವು ಒಂದು ಚಕ್ರಕ್ಕೆ ಸುತ್ತಿದ ಸ್ಪೂಲ್ ಮಾದರಿಯಲ್ಲಿ ಇರುತ್ತವೆ. ಟೇಪ್ ರಿಕಾರ್ಡರ್‌ನಲ್ಲಿ ರಿಕಾರ್ಡಿಂಗ್ ಅಥವಾ ಪ್ಲೇಬ್ಯಾಕ್ ಮಾಡುವಾಗ ತುಂಬಿರುವ ಸ್ಪೂಲಿನಿಂದ ಟೇಪು, ಧ್ವನಿಮುದ್ರಣ ಇಲ್ಲವೆ ಪುನರುತ್ಪಾದನಾ ಸಾಧನದ ಎದುರು ಹಾದು ಖಾಲಿ ಸ್ಪೂಲಿನಲ್ಲಿ ಸುತ್ತಿಕೊಳ್ಳುತ್ತದೆ. ಉತ್ತಮ ಮಟ್ಟದ ಧ್ವನಿಮುದ್ರಣ ಇದರಿಂದ ಸಾಧ್ಯವಾಗುತ್ತದೆ.

ಸಾಮಾನ್ಯವಾಗಿ ಯಾವುದೇ ಕಾರ್ಯಕ್ರಮದ ಮಾಸ್ಟರ್ ಎಂದರೆ ಮೂಲಪ್ರತಿಯನ್ನು ಇದರ ಸ್ಪೂಲ್ (¼ ಇಂಚು ಅಗಲದ ಟೇಪಿನ) ಮೇಲೆ ಮಾಡಿ, ಸಂರಕ್ಷಿಸುತ್ತಾರೆ. ವಿತರಣೆ, ಮಾರಾಟ ಹಾಗೂ ದಿನನಿತ್ಯದ ಪ್ಲೇಬ್ಯಾಕ್‌ಗಾಗಿ ಕ್ಯಾಸೆಟ್ ರೂಪದಲ್ಲಿ ಪ್ರತಿಗಳನ್ನು ಪಡೆಯುತ್ತಾರೆ. ಕೆಲವು ಸಲ ಚಲನಚಿತ್ರಕ್ಕೆ ಬೇಕಾದ ಧ್ವನಿಮುದ್ರಣವನ್ನು ಇಂಥ ಮ್ಯಾಗ್ನೆಟಿಕ್ ಟೇಪಿನ ಮೇಲೆ ಮಾಡಬೇಕಾದ ಸಂದರ್ಭ ಬರುತ್ತದೆ. ಇಲ್ಲಿ ಧ್ವನಿ ಚಿತ್ರಸರಣಿಯೊಂದಿಗೆ ಕರಾರುವಾಕ್ಕಾಗಿ ಹೊಂದಿಕೊಂಡೇ ನಡೆಯಬೇಕಾದುದು ಅಗತ್ಯ. ಮ್ಯಾಗ್ನೆಟಿಕ್ ಫಿಲಂ ವಿಧಾನದಲ್ಲಾದರೋ ಧ್ವನಿಫಿಲಂನ ಕಚ್ಚುರಂಧ್ರ (Perforation) ಗಳನ್ನು ದೃಶ್ಯದ ಫಿಲಂನ ಕಚ್ಚುರಂಧ್ರಗಳ ಜೊತೆ (Sync) ಜೋಡಿ ಮಾಡಿ ಹೊಂದಾಣಿಕೆಯನ್ನು ಸಾಧಿಸುತ್ತಾರೆ.

ವೃತ್ತಿಪರರು ಬಳಸುವ ಧ್ವನಿಮುದ್ರಣ ಸಾಧನ ನಾಗರ ಟೇಪ್ ರಿಕಾರ್ಡರ್. ಇದರಲ್ಲಿ ಕಾಲು ಇಂಚಿನ ಮ್ಯಾಗ್ನೆಟಿಕ್ ಟೇಪ್ ಬಳಸುತ್ತಾರೆ. ಈ ಟೇಪ್ ರಿಕಾರ್ಡರ್‌ನಲ್ಲಿ ಧ್ವನಿಮುದ್ರಿಸಲು ರಿಕಾರ್ಡಿಂಗ್ ಹೆಡ್, ರಿಪ್ರೊಡಕ್ಷನ್ ಹೆಡ್ (ಧ್ವನಿ ಪುನರುತ್ಪಾದಿಸಲು) ಮತ್ತು ಇರೇಸಿಂಗ್ ಹೆಡ್ (ಇರುವ ಧ್ವನಿಯನ್ನು ಅಳಿಸಲು) ಹಾಗೂ ಪೈಲಟ್ ಹೆಡ್ (೫೦ ಸೈಕಲ್ಸ್ ವಿದ್ಯುಚ್ಛಕ್ತಿ ತರಂಗ) ಇರುತ್ತದೆ. ಪೈಲಟ್ ಕೇಬಲ್‌ನಿಂದ ಜೋಡಿಸಿ ನಾಗರಾದಲ್ಲಿನ ಟೇಪ್‌ನ ಮೇಲೆ ಧ್ವನಿ ಮುದ್ರಿತವಾಗುತ್ತದೆ. ಇದರೊಂದಿಗೆ ಬೀಪ್ ಎಂಬ ಸದ್ದು ಕೂಡ ಕೇಳುತ್ತಿರುತ್ತದೆ. ಸಂಕಲನಕಾರರಿಗೆ ಕ್ಯಾಮರಾದಲ್ಲಿ ಫ್ರೇಂ ಪಾಸ್‌ನಿಂದಾದ ಶಬ್ದ ಎಂದು ತಿಳಿಯುತ್ತದೆ. ಇದು ಇಲೆಕ್ಟ್ರಾನಿಕ್ ಕ್ಲಾಪರ್ ತರಹದ ಸಾಧನ. ಏರಿಫ್ಲೆಕ್ಸ್ ೩೫ ಬಿ.ಎಲ್ ಕ್ಯಾಮರಾದಲ್ಲಿ ಈ ವ್ಯವಸ್ಥೆ ಇದೆ.

ಈಗ ಮ್ಯಾಗ್ನೆಟಿಕ್ ಟೇಪುಗಳ ತಂತ್ರಜ್ಞಾನ ಎಷ್ಟೊಂದು ಸುಧಾರಿಸಿದೆ ಎಂದರೆ ಕ್ಯಾಸೆಟ್ಟು ರೂಪದ ಟೇಪುಗಳ ಮೇಲೆಯೇ ಮೂಲಧ್ವನಿ ಮುದ್ರಣವನ್ನು ಮಾಡುವ ವಿಧಾನಗಳು ಜಾರಿಗೆ ಬಂದಿವೆ. ಇದರಿಂದಾಗಿ ಕಡಿಮೆ ವೆಚ್ಚದಲ್ಲೂ ಖಾಸಗಿಯವರು ವೈವಿಧ್ಯಮಯ ಧ್ವನಿ ಕಾರ್ಯಕ್ರಮಗಳನ್ನು ಮುದ್ರಿಸಿ ಮಾರುಕಟ್ಟೆಗೆ ತರುವಂತಾಗಿದೆ. ಇನ್ನೇನಿಲ್ಲವೆಂದರೂ ಕ್ಯಾಸೆಟ್ಟು ಟೇಪುಗಳಿಂದಾಗಿ ಸಿನಿಮಾ ಹಾಡುಗಳಷ್ಟೆ ಅಲ್ಲ, ಭಾವ ಗೀತೆಗಳು, ಜನಪದ ಗೀತಗಳು, ಭಕ್ತಿಗೀತೆಗಳು, ಸ್ವಲ್ಪ ಮಟ್ಟಿಗೆ ಶಾಸ್ತ್ರೀಯ ಸಂಗೀತವೂ ಜನಪ್ರಿಯವಾಗಲು ಸಾಧ್ಯವಾಯಿತು. ಇದಕ್ಕೆ ಪೂರಕವಾಗಿ ಕ್ಯಾಸೆಟ್ಟುಗಳಿಂದ ಧ್ವನಿಯನ್ನು ಹೊರಡಿಸುವ ಕ್ಯಾಸೆಟ್ ಪ್ಲೇಯರುಗಳು ಸಾಕಷ್ಟು ಕಡಿಮೆ ಬೆಲೆಗೆ ಸಿಗುವಂತಾಗಿ ಎಲ್ಲಿಂದರಲ್ಲಿ ಎತ್ತಿಕೊಂಡು ಹೋಗುವಷ್ಟು ಹಗುರವಾದ ನಂತರವಂತೂ ಮಾರುಕಟ್ಟೆಯಲ್ಲಿ ಕ್ಯಾಸೆಟ್ಟು ಕ್ರಾಂತಿಯೇ ಆಗಿದೆ. ಚಿತ್ರೋದ್ಯಮಕ್ಕೆ ಇದು ಬಹಳ ಉಪಕಾರಿಯೂ ಆಗಿದೆ.

ಸ್ಟೀರಿಯೋಫೋನಿಕ್

ಧ್ವನಿಯ ಮುದ್ರಣ ಮತ್ತು ಪುನರುತ್ಪಾದನೆಯಲ್ಲಿ ಎರಡು ಬಗೆ. ಮಾನೋಫೋನಿಕ್ ಹಾಗೂ ಸ್ಟೀರಿಯೋಫೋನಿಕ್ (Monophonic & Stereophonic).

ನೀವು ಸಾಧಾರಣ ಸಿನಿಮಾ ನೋಡುತ್ತಿರುವಾಗ ಗಮನಿಸಿರಬಹುದು, ಪಾತ್ರಧಾರಿಗಳು ದೊಡ್ಡ ಪರದೆಯ ಮೇಲೆ ವಿವಿಧ ಜಾಗಗಳಲ್ಲಿ ಇರುತ್ತಾರೆ. ವಾಹನ, ಯಂತ್ರ, ರೇಡಿಯೋ ಇತ್ಯಾದಿ ಧ್ವನಿ ಕೊಡುವ ಆಕರಗಳೂ ಕೂಡ ಪರದೆಯ ಸಮತಲದ ಮೇಲೆ ಬೇರೆ ಬೇರೆ ಸ್ಥಳಗಳಲ್ಲಿ ಇರಬಹುದು. ಆದರೆ ಮಾತು ಮತ್ತು ಇತರ ಧ್ವನಿಗಳೆಲ್ಲವೂ ಪರದೆಯ ಮಧ್ಯಭಾಗದಲ್ಲಿ ಹಿಂಬದಿಯಲ್ಲಿ ಇಟ್ಟಿರುವ ಒಂದೇ ಸ್ಪೀಕರಿನಿಂದ ಬರುತ್ತವೆ. ಆದರೂ ಆಯಾ ವ್ಯಕ್ತಿ ಅಥವಾ ವಸ್ತು ಇರುವ ಜಾಗದಿಂದಲೇ ಸಂಬಂಧಪಟ್ಟ ಧ್ವನಿ ಬಂದಂತೆ ತೋರುತ್ತದೆ. ಇದು ಹೇಗೆ ? ಮೊದಲನೆಯದಾಗಿ ಪರದೆಯಿಂದ ಸಾಕಷ್ಟು ದೂರದಲ್ಲಿ ಕುಳಿತು ಸಿನಿಮಾ ನೋಡುವವರಿಗೆ ಪರದೆಯ ಮೇಲೆ ಹರಡಿಕೊಂಡಿರುವ ವಿವಿಧ ಆಕರಗಳ ನಡುವೆ ಹೆಚ್ಚು ವ್ಯತ್ಯಾಸ ಕಂಡುಬರುವುದಿಲ್ಲ. ಹೀಗಾಗಿ ಧ್ವನಿ ಮಧ್ಯದಿಂದ ಬಂದರೂ ಗೊತ್ತಾಗುವುದಿಲ್ಲ. ಆದರೆ ಪರದೆಗೆ ತುಂಬಾ ಹತ್ತಿರದಲ್ಲಿ ಕುಳಿತು ನೋಡುವ ಮುಂದಿನ ಸೀಟುಗಳ ಪ್ರೇಕ್ಷಕರಿಗೆ ಪರದೆ ತೀರಾ ವಿಶಾಲವಾಗಿ ಕಂಡುಬರುತ್ತದೆ. ಹೀಗಾಗಿ ಹೀರೋ ತಮ್ಮ ಹತ್ತಿರವೇ ಇದ್ದರೆ ಆತನ ಜೊತೆ ಮಾತನಾಡುವ ಹೀರೋಯಿನ್ ಪರದೆಯ ಇನ್ನೊಂದು ಮೂಲೆಯಲ್ಲಿ, ಎಂದರೆ ಸುಮಾರು ೨೦ ಮೀಟರ್ ದೂರದಲ್ಲಿ ಇರುತ್ತಾಳೆ. ಆದರೆ ಇಬ್ಬರ ಧ್ವನಿಯೂ ಅವರು ಇರುವ ಜಾಗದಿಂದ ಬರದೇ ಅವರಿಬ್ಬರ ನಡುವಿನಿಂದ ಬಂದಂತೆ ತೋರುವ ಸಾಧ್ಯತೆ ಇದೆ.

ಧ್ವನಿ ಪರದೆಯ ಮಧ್ಯಭಾಗದಿಂದ ಬಂದರೂ ಆಯಾ ವ್ಯಕ್ತಿ ಅಥವಾ ವಸ್ತು ಇರುವಲ್ಲಿಂದಲೇ ಬಂದರೂ ಕೇಳುವಲ್ಲಿ ಮನುಷ್ಯನ ಆಲಿಸುವಿಕೆಯ ಸಹಜ ಮಾನಸಿಕ ಸ್ವಭಾವ ನಮ್ಮ ಮೇಲೆ ಪರಿಣಾಮ ಬೀರುತ್ತದೆ. ನಿಜ ಜೀವನದಲ್ಲಿ ಆಕಾರಗಳು



(ಚಿತ್ರ ೧೦) ರಿಕಾರ್ಡಿಂಗ್ ಮತ್ತು ರಿ-ರಿಕಾರ್ಡಿಂಗ್‌ಗಾಗಿ ಬಳಸಲಾಗುತ್ತಿರುವ ಆಧುನಿಕ ಯಂತ್ರ

ತಾವಿರುವಲ್ಲಿಂದಲೇ ಧ್ವನಿ ಉತ್ಪಾದಿಸುವುದನ್ನು ನಾವು ಕಂಡಿದ್ದೇವೆ. ಈ ಅನುಭವದ ಪ್ರಭಾವದಿಂದಾಗಿ ಸಿನಿಮಾದಲ್ಲೂ ನಮಗೆ ಧ್ವನಿಗಳು ಪರದೆಯ ಮೇಲೆ ಆಯಾ ಆಕಾರಗಳು ಇರುವ ಜಾಗದಿಂದ ಬಂದಂಥ ಭ್ರಮೆ ಉಂಟಾಗುತ್ತದೆ. ಹೀಗೆ ಪರದೆಯ ಮೇಲೆ ಹರಡಿಕೊಂಡಿರುವ ಪಾತ್ರ, ವಸ್ತು, ವಾಹನ ಇತ್ಯಾದಿಗಳಿಂದ ಹೊರಡುವ ಧ್ವನಿ ಒಂದೇ ಬಿಂದುವಿನಿಂದ ಕೇಳಿಸುವಂಥ ವ್ಯವಸ್ಥೆಯನ್ನು ಮೊನೋಫೋನಿಕ್ ಎಂದು ಕರೆಯುತ್ತಾರೆ. ಇದು ನೀಡುವ ಶ್ರವಣಾನುಭವ ಎಷ್ಟೇ ಎಂದರೂ ಒಂದೇ ಆಯಾಮದ್ದು, ನೈಜವಾಗಿರುವುದಿಲ್ಲ. ಈ ನೈಜತೆಯನ್ನು ಸಾಧಿಸುವುದು ಹೇಗೆ ?

ಧ್ವನಿಯಲ್ಲಿ ನೈಜತೆಯನ್ನು ಸಾಧಿಸುವುದು ಹೇಗೆ ಎನ್ನುವುದನ್ನು ಅರ್ಥಮಾಡಿಕೊಳ್ಳುವ ಮೊದಲು 'ನೈಜತೆ' ಅಂದರೆ ಏನು ಎಂದು ತಿಳಿದುಕೊಳ್ಳಬೇಕು. ನಿಜ ಜೀವನದಲ್ಲಿ ನಾವು ಯಾವುದೇ ಧ್ವನಿಯನ್ನು ಕೇಳುವುದು ಎರಡು ಕಿವಿಗಳಿಂದ. ಯಾವುದೇ ಧ್ವನಿ ನಮ್ಮ ಕಿವಿಗಳ ಮೇಲೆ ಬಿದ್ದಾಗ ಒಂದೇ ಧ್ವನಿ ಎಡಕಿವಿ ಮೇಲೆ ಬಿದ್ದದ್ದಕ್ಕಿಂತ ಸ್ವಲ್ಪವೇ ಭಿನ್ನವಾಗಿ ಬಲಕಿವಿ ಮೇಲೂ ಬೀಳುತ್ತದೆ. ಹೀಗೆ ಬೇರೆ ಬೇರೆ ಮಾರ್ಗಗಳ ಮೂಲಕ ಸೂಕ್ಷ್ಮ ವ್ಯತ್ಯಾಸವಿರುವ ಎರಡು ಧ್ವನಿಸಂವೇದನೆಗಳು ಮೆದುಳನ್ನು ತಲುಪಿ, ಅಲ್ಲಿ ಸಂಯೋಜಿತವಾಗುವ ಧ್ವನಿಯ ಅನುಭವ ನೈಜವಾಗಿರುತ್ತದೆ. ಇವರಿಂದಾಗಿಯೇ ಧ್ವನಿ ಬಂದ ದಿಕ್ಕು ತಿಳಿಯುತ್ತದೆ. ಎದುರಿಗಿರುವ ಕ್ಷೇತ್ರದಲ್ಲಿ ಇರುವ ವಿವಿಧ ಆಕರಗಳಿಂದ ಹೊರಟುಬರುವ ಧ್ವನಿ ಅಲ್ಲಲ್ಲಿಂದಲೇ ಕೇಳಿಸಿದ ಹಾಗೆಯೂ ಅನುಭವವಾಗುತ್ತದೆ. ಇದನ್ನು ತಾಂತ್ರಿಕವಾಗಿ ಅನುಕರಿಸಲು ಸಾಧ್ಯವಾದರೆ ಅಂಥ ವ್ಯವಸ್ಥೆಯಿಂದ ಪಡೆಯುವ ಧ್ವನಿಯ ಅನುಭವ ನೈಜವಾಗಿರುತ್ತದೆ.

ಸ್ಟೀರಿಯೋಫೋನಿಕ್ ಸೌಂಡ್ ಸಿಸ್ಟಮ್ ಮಾಡುವುದು ಮೂಲಭೂತವಾಗಿ ಇದನ್ನೇ. ಉದಾಹರಣೆಗೆ ವಿಶಾಲವಾಗಿ ಹರಡಿರುವ, ಹಲವಾರು ವಾದ್ಯಗಳ ಒಂದು ಗೋಷ್ಠಿಯ ಸಂಗೀತವನ್ನು ರಿಕಾರ್ಡ್ ಮಾಡಬೇಕಾಗಿದೆ. ಸೂಕ್ತವಾದ ರೀತಿಯಲ್ಲಿ ಮೈಕ್ರೋಫೋನ್‌ಗಳನ್ನು ಇಡಲಾಗುತ್ತದೆ. ಆದರ ಮುಖ್ಯವಾದ ವಿಚಾರವೆಂದರೆ ವಾದ್ಯಗೋಷ್ಠಿಯಿಂದ ಹೊರಡುವ ಧ್ವನಿಯನ್ನು ಪ್ರತ್ಯೇಕವಾದ ಎರಡು ಟ್ರ್ಯಾಕುಗಳಲ್ಲಿ ಬಿಂಗಡಿಸುತ್ತಾರೆ. ಪ್ರತ್ಯೇಕವಾದ ಎರಡು ಟ್ರ್ಯಾಕುಗಳಲ್ಲಿ ಧ್ವನಿ ಮುದ್ರಿಸುತ್ತಾರೆ. ಪ್ರತ್ಯೇಕವಾಗಿ ಪುನರುತ್ಪಾದಿಸುತ್ತಾರೆ. ಪ್ರತ್ಯೇಕವಾಗಿಯೇ ಎರಡು ಅಥವಾ ಎರಡು ಸೆಟ್ಟು ಧ್ವನಿವರ್ಧಕಗಳ ಮೂಲಕ ಕೇಳಿಸುತ್ತಾರೆ. ಇವು ಒಂದೇ ಧ್ವನಿಯನ್ನು ಎರಡು ಕಿವಿಗಳು ಸ್ವಲ್ಪ ವ್ಯತ್ಯಾಸದಿಂದ ಕೇಳುವ ಅನುಭವವನ್ನು ಅನುಕರಿಸುವುದರಿಂದ ಎರಡು ಲೌಡ್ ಸ್ಪೀಕರುಗಳ ನಡುವೆ ಧ್ವನಿಯ ರಂಗವೇ ಸೃಷ್ಟಿಯಾಗುತ್ತದೆ. ಇದನ್ನು ನೀವು ಅನುಭವಿಸಬೇಕು ಎಂದರೆ ಇತ್ತೀಚೆಗೆ ಬಂದಿರುವ ವಾಕ್‌ಮನ್ ಎಂಬ ಪುಟಾಣಿ ಕ್ಯಾಸೆಟ್ ಪ್ಲೇಯರ್‌ನಲ್ಲಿ ಸ್ಟೀರಿಯೋಫೋನಿಕ್ ಕ್ಯಾಸೆಟ್ಟನ್ನು ಹಾಕಿ ಕೇಳಬೇಕು. ಒಂದು ಕಿವಿಯಲ್ಲಿ ಕೇಳಿಸುವ ವಾದ್ಯಸಂಯೋಜನೆಗೂ ಇನ್ನೊಂದರಲ್ಲಿ ಕೇಳಿಸುವುದಕ್ಕೂ ಇರುವ ವ್ಯತ್ಯಾಸ ಸ್ಪಷ್ಟವಾಗಿ ಗೊತ್ತಾಗುತ್ತದೆ. ಹೀಗೆ ಪರಸ್ಪರ ವ್ಯತ್ಯಾಸವಿರುವ ಎರಡು ಟ್ರ್ಯಾಕುಗಳು ಪ್ರತ್ಯೇಕವಾಗಿ ಎರಡು ಕಿವಿಗಳ ಮೂಲಕ ಮೆದುಳನ್ನು ತಲುಪುವುದರಿಂದ ಆಗುವ ಅನುಭವ ಅದ್ಭುತವಾಗಿರುತ್ತದೆ. ನಮ್ಮ ಮನಸ್ಸಿನಲ್ಲಿ ಅದು ಧ್ವನಿಯ, ವಿಶಾಲವಾದ ಮೂರು ಆಯಾಮಗಳ ಒಂದು ಪ್ರಪಂಚವನ್ನೇ ಸೃಷ್ಟಿಮಾಡಿರುತ್ತದೆ.

ಸ್ಟುಡಿಯೋಗಳು

ಬಹುಶಃ ಡಿಸ್ಕ್ ರಿಕಾರ್ಡಿಂಗ್ ಒಂದನ್ನು ಬಿಟ್ಟು ಉಳಿದ ಎಲ್ಲ ವಿಧಾನಗಳ ಧ್ವನಿಮುದ್ರಣವನ್ನು ಎಲ್ಲಾದರೂ ಮಾಡಬಹುದಾದ ಅನುಕೂಲವಿದೆ. ಧ್ವನಿಮುದ್ರಣ ಯಂತ್ರವನ್ನು ಎತ್ತಿಕೊಂಡು ಹೋಗಬೇಕು. ಮೈಕ್ರೋಫೋನನ್ನು ಸೂಕ್ತವಾದ ಜಾಗದಲ್ಲಿ ಇಟ್ಟು ರಿಕಾರ್ಡಿಂಗ್ ಮಾಡಬಹುದು. ಸಾಮಾನ್ಯವಾಗಿ ಹೊರಾಂಗಣದಲ್ಲಿ ಸದ್ದುಗದ್ದಲವಿರುತ್ತದೆ. ಅದನ್ನೇ ಧ್ವನಿಮುದ್ರಿಸಿಕೊಳ್ಳುವ ಉದ್ದೇಶವಿದ್ದರೆ ಅಡ್ಡಿಯಿಲ್ಲ. ಆದರೆ ಆ ಜಾಗದಲ್ಲಿ ಸಂಭಾಷಣೆಯನ್ನು ರಿಕಾರ್ಡ್ ಮಾಡಿಕೊಳ್ಳಬೇಕೆಂದರೆ ಈ ಪಾರಿಸರಿಕ ಗದ್ದಲ ತೊಂದರೆ ಕೊಡುತ್ತದೆ. ಸಂಗೀತದ ರಿಕಾರ್ಡಿಂಗ್ ಅಂತೂ ಸಾಧ್ಯವೇ ಇಲ್ಲ. ಇವಕ್ಕಾಗಿಯೇ ಸ್ಟುಡಿಯೋಗಳ ಕಲ್ಪನೆ ಬಂದಿದ್ದು. ಸ್ಟುಡಿಯೋ ಎಂದರೆ ಶಬ್ದಸುರಕ್ಷಿತವಾದ ಒಂದು ಕಟ್ಟಡ. ಇಲ್ಲಿ ಅಗತ್ಯವಾದ ಎಲ್ಲಾ ಯಂತ್ರೋಪಕರಣಗಳು, ವಿದ್ಯುತ್ತಿನ ಸಂಪರ್ಕಗಳು, ಹವಾನಿಯಂತ್ರಣ ಇವೆಲ್ಲವನ್ನೂ ಪೂರ್ವಭಾವಿಯಾಗಿ ಸುವ್ಯವಸ್ಥೆಗೊಳಿಸುತ್ತಾರೆ. ಇಲ್ಲಿ ಧ್ವನಿ ಮುದ್ರಿಸುವಾಗ ಹೊರಗಿನ ಸದ್ದು ಒಳಗೆ ಕೇಳಿಸುವುದಿಲ್ಲ. ಅಂತೆಯೇ ಒಳಗಿನ ಸದ್ದೂ ಹೊರಗೆ ಕೇಳಿಸುವುದಿಲ್ಲ. ಅಷ್ಟೇ ಅಲ್ಲ ಧ್ವನಿಮುದ್ರಿಸಿಕೊಳ್ಳಬೇಕಾದ ಶಬ್ದವನ್ನೂ ಸಹ ಇಲ್ಲಿ ವಿವಿಧ ರೀತಿಯಲ್ಲಿ ನಿಯಂತ್ರಿಸಬಹುದು. ಯಾಂತ್ರಿಕವಾಗಿ ಅಯಾಂತ್ರಿಕವಾಗಿ, ಇವೂ ಕೂಡ ತನ್ನ ಚಿತ್ರಕ್ಕೆ ಧ್ವನಿವಿನ್ಯಾಸ ಮಾಡಹೊರಟಿರುವ ನಿರ್ದೇಶಕರಿಗೆ ಕೆಲವು ಧ್ವನಿತಂತ್ರಗಳನ್ನು ಒದಗಿಸುತ್ತವೆ.

ಚಲನಚಿತ್ರದ ಧ್ವನಿಗ್ರಹಣಕ್ಕೆ ಬಳಸುವ ಸ್ಟುಡಿಯೋಗಳಲ್ಲಿ ಸಾಮಾನ್ಯವಾಗಿ ಧ್ವನಿಮುದ್ರಣದ ಯಂತ್ರಗಳನ್ನು ಇರಿಸಿರುವ ಒಂದು ವಿಭಾಗವಿರುತ್ತದೆ. ಅದಕ್ಕೆ ಹೊಂದಿಕೊಂಡೇ ಧ್ವನಿಮುದ್ರಣವನ್ನು ನಿಯಂತ್ರಿಸುವ (Mixer Room) ಕಕ್ಷೆ ಇರುತ್ತದೆ. ಇದಕ್ಕೆ ಹೊಂದಿಕೊಂಡು ಕಲಾವಿದರು ತಮ್ಮ ಸಂಭಾಷಣೆ ಹೇಳಲು, ಸಂಗೀತವನ್ನು ಹಾಡಲು, ನುಡಿಸಲು ಇಂಥ ಚಟುವಟಿಕೆಗಾಗಿ ಇರುವ ವಿಭಾಗವಿರುತ್ತದೆ. ಸ್ಟುಡಿಯೋ ಎಷ್ಟು ದೊಡ್ಡದು ಅಥವಾ ಚಿಕ್ಕದು ಎನ್ನುವುದರ ಆಧಾರದ ಮೇಲೆ ಇಲ್ಲಿಯ ಪ್ರತಿಯೊಂದು ವಿಭಾಗದ ಅಳತೆ ಇರುತ್ತದೆ. ದೊಡ್ಡ ಸ್ಟುಡಿಯೋ ಆಗಿದ್ದರೆ ಇಂಥ ವ್ಯವಸ್ಥೆಗಳೇ ಒಂದಕ್ಕಿಂತ ಹೆಚ್ಚು ಇರಬಹುದು.

ಯಾವುದೇ ಆವರಣದಲ್ಲಿ ನಾವು ಶಬ್ದವನ್ನು ಮಾಡಿದರೂ ಅದು ಅಲ್ಲಿರುವ ಗೋಡೆ ಮುಂತಾದ ತಡೆಗಳಿಗೆ ಬಡಿದು ಪ್ರತಿಫಲಿಸಿ (Echo) ಅನುರಣಿಸುತ್ತದೆ. ನಮ್ಮ ಮನೆಗಳ ಸಾಧಾರಣ ಅಳತೆಯ ಕೋಣೆಗಳಲ್ಲಿ ಧ್ವನಿಯೊಂದಿಗಿನ ಈ ಅನುಧ್ವನಿ (Reverberation) ಅಷ್ಟಾಗಿ ನಮ್ಮ ಗಮನಕ್ಕೆ ಬರುವುದಿಲ್ಲ. ಆದರೆ ಆವರಣದ ಅಳತೆ ದೊಡ್ಡದಾದ ಹಾಗೆ ಅನುಧ್ವನಿ ಹೆಚ್ಚು ಹೆಚ್ಚು ಸ್ಪಷ್ಟವಾಗುತ್ತ ಹೋಗುತ್ತದೆ. ಅದು ನಾವು ಮಾತಾಡುವ ಮಾತಿನ ಮೇಲೆಯೇ ಆವರಿಸಿಕೊಂಡುಬಿಡುವುದರಿಂದ ನಮ್ಮ ಮಾತುಗಳು ಸ್ಪಷ್ಟವಾಗಿ ಕೇಳಿಸದಂತಾಗುತ್ತದೆ (ಯಾವುದಾದರೂ ಕಲ್ಯಾಣ ಮಂಟಪದಲ್ಲಿ ಗಮನಿಸಿದರೆ ಈ ಅಂಶ ನಿಮಗೆ ತಿಳಿಯುತ್ತದೆ). ಸಂಭಾಷಣೆಗೆ ಮಾರಕವಾದ ಈ ಅನುಧ್ವನಿ ಸಂಗೀತಕ್ಕೆ ಮೆರಗನ್ನು, ಜೀವವನ್ನು ಕೊಡುತ್ತದೆ. ಅದೂ ಇಂತಿಷ್ಟು ಪ್ರಮಾಣದಲ್ಲಿ ಇದ್ದರೆ ಚೆನ್ನ ಎಂಬ ಲೆಕ್ಕಾಚಾರವೂ ಇದೆ.

ಕಲಾವಿದರು ಮಾತಾಡುವ, ಸಂಗೀತ ನುಡಿಸುವ ವಿಭಾಗದ ಒಳಭಾಗದಲ್ಲಿ ಉಂಟಾಗುವ ಅನುಧ್ವನಿಯನ್ನು ನಮ್ಮ ಅಗತ್ಯಕ್ಕೆ ತಕ್ಕ ಹಾಗೆ ನಿಯಂತ್ರಿಸಬೇಕು. ಅಂದರೆ ಆವರಣದ ಒಳಭಾಗದ ಅಡೆತಡೆಗಳಿಗೆ ಬಡಿದು ಎಷ್ಟು ಪ್ರಮಾಣದಲ್ಲಿ ಬೇಕೋ ಅಷ್ಟೇ ಪ್ರಮಾಣದಲ್ಲಿ ಪ್ರತಿಫಲಿಸುವಂತೆ ಮಾಡಬೇಕು. ಇದಕ್ಕಾಗಿ ಒಳಭಾಗದ ಗೋಡೆ, ಛಾವಣಿ, ನೆಲ ಇಂಥ ಸಮತಲಗಳಿಗೂ ಧ್ವನಿ ಪ್ರತಿಫಲನ ನಿಯಂತ್ರಕ ಫಲಕಗಳನ್ನು ಅಳವಡಿಸಿರುತ್ತಾರೆ. ಅಗತ್ಯಕ್ಕೆ ತಕ್ಕ ಹಾಗೆ ಸಂಭಾಷಣೆಯ ಡಬ್ಬಿಂಗ್‌ಗಾಗಿಯೇ ಬೇರೆ, ಸಂಗೀತದ ರಿಕಾರ್ಡಿಂಗ್‌ಗೇ ಬೇರೆ ಸ್ಟುಡಿಯೋಗಳು ಇರಬಹುದು. ಇಲ್ಲವೆ ಒಂದೇ ಸ್ಟುಡಿಯೋದಲ್ಲಿ ಒಳಗಿನ ರಚನೆಯನ್ನು ಮರುವ್ಯವಸ್ಥೆಗೊಳಿಸಿ ವಿವಿಧ ರೀತಿಯ ಪ್ರಯೋಜನವನ್ನು ಪಡೆಯುವಂತೆಯೂ ಇರಬಹುದು. ಬೇರೆ ಎಲ್ಲ ಸ್ಟುಡಿಯೋಗಳಲ್ಲಿ ಬರೀ ಧ್ವನಿಮುದ್ರಣ ಯಂತ್ರೋಪಕರಣಗಳು ಇದ್ದರೆ ಚಲನಚಿತ್ರ ಸ್ಟುಡಿಯೋಗಳಲ್ಲಿ

ಧ್ವನಿ ಮುದ್ರಿಸುವಾಗ ಚಿತ್ರಪಟ್ಟಿಯನ್ನು ಪರದೆ ಮೇಲೆ ಬಿಡುವ ಪ್ರೊಜೆಕ್ಟರ್ ವ್ಯವಸ್ಥೆಯೂ ಇರುತ್ತದೆ. ಏಕೆಂದರೆ ಡಬ್ಬಿಂಗ್ ಮಾಡುವಾಗ, ಹಿನ್ನೆಲೆ ಸಂಗೀತ, ಧ್ವನಿ ವಿಶೇಷಗಳನ್ನು ರಿಕಾರ್ಡ್ ಮಾಡುವಾಗ ಚಲನಚಿತ್ರದ ದೃಶ್ಯಗಳಿಗೆ ಹೊಂದಿಕೊಂಡೇ ಮಾಡಬೇಕಾದುದು ಅನಿವಾರ್ಯ. ಇಂಥ ಹೊಂದಾಣಿಕೆ ಅಗತ್ಯವಿಲ್ಲದ ಹಾಡುಗಳ ಧ್ವನಿಮುದ್ರಣಕ್ಕೆ ಕೆಲವೊಮ್ಮೆ ಸಿನಿಮಾ ಸ್ಟುಡಿಯೋಗಳಲ್ಲದ ಇತರ ಸ್ಟುಡಿಯೋಗಳನ್ನು ಬಳಸಲು ಸಾಧ್ಯವಾಗುತ್ತದೆ.

ಸದ್ದಿನಲ್ಲೂ ಅರಳಿದ ಸೂಕ್ಷ್ಮತೆ

ಕಲೆಯೊಂದು ಜನಪ್ರಿಯತೆಯ ಜಾಡನ್ನು ಹಿಡಿದು ಹೊರಟರೆ ಏನಾಗುವುದು ಎಂಬುದಕ್ಕೆ ಸಿನಿಮಾವೇ ಉತ್ತಮ ನಿದರ್ಶನ. ಜನಪ್ರಿಯತೆಗೆ ಇಂಬು ಕೊಟ್ಟು, ಸಮೂಹ ಪ್ರೇಕ್ಷಕವರ್ಗದ ಸಾಧಾರಣ ಕುತೂಹಲಗಳನ್ನು ತೃಪ್ತಿ ಪಡಿಸುವುದೇ ಗುರಿಯಾದಾಗ ಮಾಧ್ಯಮ ತನ್ನ ಕಲೆಗಾರಿಕೆಯನ್ನು ಕಳೆದುಕೊಳ್ಳುತ್ತದೆ. ಯಾಂತ್ರಿಕ ಪ್ರಗತಿ ಸಹ ಅಗ್ಗದ ತೆವಲುಗಳನ್ನು ತೀರಿಸುವ ಸಲುವಾಗಿಯೇ ಮಡಿಯತೊಡಗುತ್ತದೆ. ಚಲಿಸುವ ಮೂಕಚಿತ್ರಗಳಿಗೆ ಧ್ವನಿಯ ಸೇರ್ಪಡೆಯಾದಾಗ ಅದೊಂದು ಹೊಸ ಅನುಭವವಾಗಿ ಜನ ಸವಿಯತೊಡಗಿದರು. ಅವನ್ನು ಕಂಡದ್ದೇ ಸಾಕು, ಉದ್ದಿಮೆಯ ಜನ ಧ್ವನಿಯ ಯಾವೆಲ್ಲಾ ಪ್ರಕಾರಗಳು ಇರಲು ಸಾಧ್ಯವೋ ಎಲ್ಲವನ್ನು ಬಳಸತೊಡಗಿದರು. ಸಂಭಾಷಣೆ, ಸಂಗೀತ, ಧ್ವನಿವಿಶೇಷ ಎಲ್ಲದರಲ್ಲೂ ಅಬ್ಬರ. ಈಗಂತೂ ಡಾಲ್ಬಿ, ಡಿಜಿಟಲ್‌ನಂಥ ತಾಂತ್ರಿಕ ಸುಧಾರಣೆಗಳೂ ಸೇರಿ ಸಿನಿಮಾವನ್ನು ಸಹೃದಯತೆಯಿಂದ ಆಸ್ವಾದಿಸುವ, ಸಮಾಧಾನವಾಗಿ ನೋಡಿ, ಕೇಳಿ ಆನಂದಿಸುವ ಪರಿಪಾಠವೆ ತಪ್ಪಿ ಹೋದಂತಾಗಿದೆ. ಸದ್ದಿನ ಗದ್ದಲದಲ್ಲಿ ಸಿನಿಮಾ ಕಲೆ ಉಡುಗಿಹೋಗಿದೆ.

ಸಿನೆರಮಾ, ಸರ್ಕಾರಮಾ, ವಿಸ್ಟಾ ವಿಷನ್ ಇವುಗಳಲ್ಲಿ ಚಿತ್ರಗಳಿಗೆ ಮೂರನೇ ಆಯಾಮ ನೀಡುವ ಪ್ರಯತ್ನ ನಡೆಯಿತು. ಆದರೆ ಈ ವಿಧಾನಗಳು ಬಳಕೆಗೆ ಬರಲಿಲ್ಲ. ಕಾರಣ, ಚಿತ್ರಮಂದಿರದ ವಿನ್ಯಾಸವೇ ಬೇರೆ ರೀತಿ ಇರುತ್ತದೆ.

ದೂರದರ್ಶನದಿಂದ ಪ್ರೇಕ್ಷಕರನ್ನು ಸಿನಿಮಾಮಂದಿರಗಳಿಗೆ ತರಲು ಡಾಲ್ಬಿ, ಡಿ.ಟಿ.ಎಸ್ ಧ್ವನಿ ತಂತ್ರಜ್ಞಾನ ಪ್ರಚಲಿತವಾಗಿದೆ. ಜನಗಳಿಗೆ ವಿಭಿನ್ನ ರೀತಿಯ ಅನುಭವ ನೀಡುವ ಈ ಧ್ವನಿ ತಂತ್ರಜ್ಞಾನ ಜನರ ಮನ ಸೆಳೆದಿದೆ. ಡಾಲ್ಬಿ ಸ್ಟೀರಿಯೋದಲ್ಲಿ ವಿಶೇಷ ತಂತ್ರಜ್ಞಾನದಂತೆ ಪರದೆಯ ಹಿಂಭಾಗದಲ್ಲಿ ಮೂರು ಸ್ಪೀಕರ್‌ಗಳು ಹಾಗೂ ಚಿತ್ರಮಂದಿರದ ಸುತ್ತಲೂ ಅಕ್ಕ-ಪಕ್ಕದಲ್ಲಿ ಸ್ಪೀಕರ್‌ಗಳನ್ನು ಅಳವಡಿಸಿರುತ್ತಾರೆ. ಈ ಚಿತ್ರಗಳಿಗೆ ಧ್ವನಿ ಮಿಶ್ರಣ ಮಾಡುವ ಪದ್ಧತಿಯು ವಿಭಿನ್ನವಾಗಿರುತ್ತದೆ. ಬಳಸುವ ಉಪಕರಣಗಳೂ ಸಹ ಭಿನ್ನವಾಗಿರುತ್ತವೆ. ಈ ವ್ಯವಸ್ಥೆಯಲ್ಲಿ ಧ್ವನಿಗ್ರಹಣಕ್ಕೆ ನಾಲ್ಕು ಟ್ರ್ಯಾಕ್‌ಗಳಿರುತ್ತವೆ. ಅದರಂತೆ ಡಿಜಿಟಲ್ ಥಿಯೇಟರ್ ಸಿಸ್ಟಮ್ (ಡಿ.ಟಿ.ಎಸ್)ನಲ್ಲಿ ಒಟ್ಟು ಆರು ಟ್ರ್ಯಾಕುಗಳಿರುತ್ತವೆ. ಪರದೆಯ ಹಿಂಭಾಗದಲ್ಲಿ ಅಳವಡಿಸಿರುವ ಸ್ಪೀಕರ್‌ಗಳಿಗೆ ಐದು ಪ್ರತ್ಯೇಕ ಟ್ರ್ಯಾಕ್‌ಗಳಿಂದ ಹೊರಬರುವ ಧ್ವನಿಯ ಸಂಪರ್ಕ ಇರುತ್ತದೆ. ಇದಲ್ಲದೆ ಆರನೇ ಟ್ರ್ಯಾಕ್‌ನಲ್ಲಿ ಬರುವ ವಿಶೇಷ ಧ್ವನಿ ತರಂಗಗಳು, ಥಿಯೇಟರ್‌ನಲ್ಲಿ ಸುತ್ತಲೂ ಅಳವಡಿಸಿರುವ ಧ್ವನಿ ವರ್ಧಕ (Sound Speaker) ಗಳಲ್ಲಿ ಕೇಳುತ್ತದೆ. ಇದರಿಂದ ಚಿತ್ರ ನೋಡುವ ಪ್ರೇಕ್ಷಕನಿಗೆ ತಾನು ನೋಡುವ ದೃಶ್ಯವು ನೈಜತೆಯ ಅನುಭವ ನೀಡುತ್ತದೆ.

ದೃಶ್ಯದಲ್ಲಿ ಬರುವ ಸಾಂದರ್ಭಿಕ ಧ್ವನಿಗಳನ್ನು ಕಲಾತ್ಮಕವಾಗಿ ಬಳಸುವ ಸಾಮರ್ಥ್ಯ ನಿರ್ದೇಶಕನಿಗಿರಬೇಕು. ಇವನ್ನು ಅಬ್ಬರ ಮಾಡುವ ಸಾಹಸಕ್ಕೆ ಹೋಗದೆ ಹಿತವಾಗಿ, ನವಿರಾಗಿ, ಇಂಪಾಗಿ ಮಾಡಬೇಕಷ್ಟೆ. ಉದಾಹರಣೆಗೆ: ಡಾಲ್ಬಿ ಸ್ಟೀರಿಯೋ ಚಿತ್ರಗಳಾದ 'ಟವರಿಂಗ್ ಇನ್‌ಫರ್ನೋ', 'ಸ್ಪೀಡ್', 'ಟೈಟಾನಿಕ್', 'ಮಮ್ಮಿ', ಸ್ಟೀವನ್ ಸ್ಪಿಲ್ ಬರ್ಗ್ ಅವರ 'ಜಾಸ್', 'ಜುರಾಸಿಕ್ ಪಾರ್ಕ್';'ಲಾಸ್ಟ್ ವರ್ಲ್ಡ್', ಅಟೆನ್ ಬರೋ ಅವರ 'ಗಾಂಧಿ' ಇನ್ನೂ ಅನೇಕ ಚಿತ್ರಗಳು ಮೈನವಿರೇಳಿಸುವಂತಹ ಅನುಭವ ಕೊಡುತ್ತವೆ.

ಧ್ವನಿಯ ಕಲಾತ್ಮಕ ಹೆಜ್ಜೆಗಳು

ಚಲಿಸುವ ದೃಶ್ಯಗಳೊಂದಿಗೆ ನಂತರ ಹೆಜ್ಜೆ ಸೇರಿಸಿದರೂ ಧ್ವನಿ ಇಂದು ಸಿನಿಮಾದ ಅವಿಭಾಜ್ಯ ಅಂಗವಾಗಿಬಿಟ್ಟಿದೆ. ದೃಶ್ಯಘಟಕದಲ್ಲಿ ಆಗಿರುವಷ್ಟು ರೀತಿಯ ಪ್ರಯೋಗಗಳು, ಸೃಜನಶೀಲ ಆವಿಷ್ಕಾರಗಳು ಧ್ವನಿಘಟಕದಲ್ಲಿ ಆದ ಹಾಗೆ ತೋರುವುದಿಲ್ಲ. ಧ್ವನಿಯ ತಂತ್ರಜ್ಞಾನ ಬೆಳೆದ ಹಾಗೆ ಅದರ ಅನುಕೂಲಗಳನ್ನು ಚಲನಚಿತ್ರವೂ ಬಳಸಿಕೊಂಡು ಬಂದಿದೆ. ಆದರೂ ಧ್ವನಿಯು ಸಿನಿಮೀಯ ನುಡಿಗಟ್ಟಿನ ಒಂದು ಅವಿಭಾಜ್ಯ ಅಂಶ. ಅದನ್ನು ತನ್ನದೇ ಆದ ಸ್ವತಂತ್ರ ಸತ್ವಕ್ಕಾಗಿ ಮತ್ತು ದೃಶ್ಯಕ್ಕೆ ಪೂರಕವಾಗಿ (Counter point use of sound) ಅತಿ ಕಾಳಜಿಯಿಂದ ಬಳಸಿರುವ ಉದಾಹರಣೆಗಳನ್ನು ನಾವು ಅಲ್ಲಲ್ಲಿ ಕಾಣುತ್ತೇವೆ. ಚಿತ್ರಕಥಾ ರಚನೆಯ ಹಂತದಲ್ಲಿಯೇ ದೃಶ್ಯಗಳ ಸಂಯೋಜನೆಯೊಂದಿಗೆ ಧ್ವನಿಯ (Sound Track Design) ಸಂಯೋಜನೆಯನ್ನೂ ಆರಂಭದ ಹಂತದಿಂದಲೇ ಮಾಡಿಕೊಳ್ಳುವ ಹಲವು ನಿರ್ದೇಶಕರು ಇದ್ದಾರೆ.

ಒಬ್ಬೊಬ್ಬರಿಗೆ ಒಂದೊಂದು ರೀತಿ, ಸಿನಿಮಾದಲ್ಲಿ ದೃಶ್ಯದೊಂದಿಗೆ ಧ್ವನಿಯ ಸಂಬಂಧ ಈಗಂತೂ ಮೂಲಭೂತ. ಚಲಿಸುವ ಚಿತ್ರಗಳೊಂದಿಗೆ ಧ್ವನಿ ಇದ್ದೇ ಇರುತ್ತದೆ. ಆ ಧ್ವನಿಯನ್ನು ಸೂಕ್ಷ್ಮವಾಗಿ ಗಮನಿಸಿದರೆ ಅದರ ವೈವಿಧ್ಯ ಅರಿವಿಗೆ ಬರುತ್ತದೆ. ಅದು ಉಂಟುಮಾಡುವ ಪರಿಣಾಮದ ಆಧಾರದ ಮೇಲೆ ಚಲಿಸುವ ಚಿತ್ರಗಳೊಂದಿಗೆ ಧ್ವನಿಯು ಎಷ್ಟೊಂದು ಬೆರೆತು ಹೋಗಿರುತ್ತದೆ ಎಂದರೆ ಅದರ ಪ್ರಕಾರಗಳು ಹಾಗಿರಲಿ, ಅದರ ಇರುವಿಕೆಯೇ ಸಾಮಾನ್ಯ ಪ್ರೇಕ್ಷಕರ ಗಮನಕ್ಕೆ ಬರುವುದಿಲ್ಲ. ಆದರೂ ತಿಳಿದುಕೊಳ್ಳುವ ಸಲುವಾಗಿ ಧ್ವನಿವಾಹಿನಿಯಲ್ಲಿ ಬೆರೆತು ಬರುವ ಧ್ವನಿಗಳನ್ನು ನಾಲ್ಕು ವಿಧವಾಗಿ ವಿಂಗಡಿಸಬಹುದು. ಸಂಭಾಷಣೆ (Dialogue) / ನಿರೂಪಣೆ (Commentary), ಸಂಗೀತ / ಹಾಡು (Music/Song), ಧ್ವನಿ ವಿಶೇಷಗಳು (Sound Effects), ಹಾಗೂ ನಿಶ್ಶಬ್ದ / ಮೌನ (Silence) .

ಸಂಭಾಷಣೆ, ನಿರೂಪಣೆ

ಮನುಷ್ಯನು ಆಡುವ ಭಾಷೆಯನ್ನು ಸಿನಿಮಾಗಳಲ್ಲೂ ಬಳಸಲಾಗುತ್ತದೆ. ಕಥಾಚಿತ್ರಗಳಲ್ಲಿ ಪಾತ್ರಗಳ ಮೂಲಕ ಬರುವ ಮಾತುಗಳಾದರೆ ಸಂಭಾಷಣೆ ಎನ್ನುತ್ತೇವೆ; ಅದೇ ಕಥೆಯೇತರ ಚಿತ್ರಗಳಲ್ಲಿ, ದೃಶ್ಯಗಳ ಹಿನ್ನೆಲೆಯಲ್ಲಿ ಮೂಡಿಬರುವ ಮಾತುಗಳನ್ನು ನಿರೂಪಣೆ (ಕಾಮೆಂಟರಿ) ಎನ್ನುತ್ತೇವೆ. ಪಾತ್ರಗಳು ತಮ್ಮ ಮನಸ್ಸಿನ ಭಾವನೆಗಳನ್ನು, ಮಾಹಿತಿಯನ್ನು ಇತರ ಪಾತ್ರಗಳೊಂದಿಗೆ ಮಾತಿನಲ್ಲಿ ಹಂಚಿಕೊಳ್ಳುತ್ತವೆ. ಪ್ರದೇಶ ಹಾಗೂ ಕಾಲದ ಅರಿವನ್ನು ನೀಡುತ್ತವೆ. ಸಂದರ್ಭವನ್ನು ವಿವರಿಸುತ್ತವೆ.

ಆದರೆ ಸಿನಿಮಾ ಸಬಲ ದೃಶ್ಯಮಾಧ್ಯಮ. ಚಿತ್ರಚೌಕಟ್ಟು, ರೇಖೆ ಹಾಗೂ ಆಕಾರಗಳ ವಿನ್ಯಾಸ, ಬಣ್ಣ, ನೆರಳು, ಬೆಳಕು, ಚಲನೆ, ಪಾತ್ರಗಳ ಸ್ಥಾನ ಹಾಗೂ ಚಲನೆ ಇವೇ ಮುಂತಾದ ವಿವಿಧ ದೃಶ್ಯ-ಘಟಕಗಳ ಸೂಕ್ತ ಸಂಯೋಜನೆಯಿಂದಲೇ ಅರ್ಥಗಳು ವಿನಿಮಯವಾಗಬೇಕು. ಸಿನಿಮಾದಲ್ಲಿ ಕಣ್ಣಿಗೆ ಕಾಣುವ ವಸ್ತು, ಕ್ರಿಯೆಗಳನ್ನು ಮಾತಿನಿಂದಲೂ ಹೇಳಬೇಕಾಗಿಲ್ಲ. ದೃಶ್ಯದ ವಿವರ, ಅಭಿನಯದಿಂದಲೇ ವ್ಯಕ್ತವಾಗುವ ಭಾವನೆಗಳು ಸಂಭಾಷಣೆಯಲ್ಲಿ ಹೇಳುವುದಕ್ಕಿಂತ ಹೆಚ್ಚು ಪರಿಣಾಮಕಾರಿಯಾಗಿ ವ್ಯಕ್ತವಾಗುತ್ತವೆ. ಪ್ರೇಕ್ಷಕರ ತಲ್ಲೀನತೆ, ಕಥೆಯ ಮುನ್ನಡೆಯೊಂದಿಗೆ ಅವರ ಒಡನಾಟ ಹೆಚ್ಚು ಹೆಚ್ಚು ದೃಢವಾಗುತ್ತದೆ. ಆದರೆ ನಮ್ಮ ಬಹುತೇಕ ಚಿತ್ರಗಳಲ್ಲಿ ಈ ಸೂಕ್ಷ್ಮತೆ ಕಾಣುವುದಿಲ್ಲ. ಅಲ್ಲಿನ ಪಾತ್ರಗಳು ಬಲು ಮಾತಾಡುತ್ತವೆ. ಪ್ರೇಕ್ಷಕರ ಕಣ್ಣೆದುರೇ ನಡೆದಿದ್ದನ್ನೂ, ನಡೆಯುತ್ತಿರುವುದನ್ನೂ ಮಾತಿನಲ್ಲಿಯೂ ಪುನರುಚ್ಚರಿಸುತ್ತವೆ. ಸೂಚ್ಯವಾಗಬೇಕಾದದ್ದು ವಾಚ್ಯ ಆಗುತ್ತದೆ.

ಉದಾಹರಣೆಗೆ ಪಾತ್ರವೊಂದು 'ಗೋಪು' ಎನ್ನುವ ವ್ಯಕ್ತಿಯನ್ನು ಹುಡುಕುತ್ತಿದೆ ಎಂದಿಟ್ಟುಕೊಳ್ಳಿ. ಆ ಪಾತ್ರ ಗೋಪು ಗೋಪು ಎಂದು ಕರೆಯುತ್ತಾ ೩-೪ ಸ್ಥಳಗಳನ್ನು ಹುಡುಕಿದ ನಂತರವೂ ಕ್ಯಾಮರಾ ಎದುರಿಗೆ ಬಂದು ಈ ಗೋಪು ಎಲ್ಲಿ ಹೋದ, ಎಲ್ಲಿ ಹುಡುಕಿದರೂ ಕಾಣುವುದೇ ಇಲ್ಲ ಎಂದು ಹೇಳುವಂಥ ದೃಶ್ಯ ರಚನೆ ನಮ್ಮ ಚಿತ್ರಗಳಲ್ಲಿ ಸಾಮಾನ್ಯ. ಅಂದರೆ ದೃಶ್ಯ ಹೇಳಿದ್ದನ್ನು ಅನುಮಾನಿಸಿ, ಮಾತಿನಲ್ಲಿ ಮತ್ತೊಮ್ಮೆ ಪುಷ್ಟೀಕರಿಸುವ ಪ್ರಯತ್ನ.

ಕೆಲವೊಮ್ಮೆ ಬರೀ ದೃಶ್ಯ ತಂತ್ರದಿಂದ ಮನಸ್ಸಿನ ಕೆಲವು ಒಳತೋಟಿಗಳನ್ನು ಅಭಿವ್ಯಕ್ತಿಸಲು ಸಾಧ್ಯವಾಗುವುದಿಲ್ಲ. ಹೇಳಬೇಕಾಗಿರುವುದನ್ನು ನಿಖರವಾಗಿ ಹೇಳಬೇಕಾದ ಅನಿವಾರ್ಯವಿರುತ್ತದೆ. ಮಾತಿನ ಮೂಲಕವೂ ಒಂದು ಪಾತ್ರದ ಹಿನ್ನೆಲೆ, ಸ್ವಭಾವವನ್ನು ತೋರಬೇಕಾಗುತ್ತದೆ.

ಉಪಭಾಷೆಗಳ ವೈವಿಧ್ಯ

ಕನ್ನಡ, ತೆಲುಗು, ತಮಿಳಿನಂಥ ಪ್ರಚಲಿತ ಭಾಷೆಗಳಲ್ಲೂ ವಿವಿಧ ಪ್ರಾದೇಶಿಕ ಪ್ರಭೇದಗಳು ಇರುತ್ತವೆ. ಉದಾಹರಣೆಗೆ ಕನ್ನಡದಲ್ಲಿ ಗುಲ್ಬರ್ಗ ಕನ್ನಡ, ಧಾರವಾಡ ಕನ್ನಡ, ಮಂಗಳೂರು ಕನ್ನಡ, ಮೈಸೂರು ಕನ್ನಡ ಎಂಬ ವ್ಯತ್ಯಾಸಗಳಿವೆ. ಇವಲ್ಲದೆ ಪ್ರತಿ ಪ್ರಾದೇಶಿಕ ಪ್ರಭೇದದ ಕ್ಷೇತ್ರದಲ್ಲೂ ಒಂದೇ ಭಾಷೆಯನ್ನು ಆಡುವ ಜನರಲ್ಲೂ

ಧರ್ಮ, ಜಾತಿ, ವೃತ್ತಿ ಇತ್ಯಾದಿಗಳಿಂದಾಗಿ ಸೂಕ್ಷ್ಮ ವ್ಯತ್ಯಾಸಗಳಿರುತ್ತವೆ. ಲಿಂಗ, ವಯೋಮಾನ, ಶೈಕ್ಷಣಿಕ ಹಿನ್ನೆಲೆ ಇವುಗಳಿಂದಾಗಿ ಮಾತಾಡುವ ಶೈಲಿ ವ್ಯಕ್ತಿಯಿಂದ ವ್ಯಕ್ತಿಗೆ ವಿಶಿಷ್ಟವಾಗಿರುತ್ತದೆ. ಒಬ್ಬ ವ್ಯಕ್ತಿ ಒಂದು ನಿರ್ದಿಷ್ಟ ವ್ಯಕ್ತಿತ್ವ ಉಳ್ಳ ನೈಜ ವ್ಯಕ್ತಿಯಾಗಿ ತೋರುವುದಕ್ಕೆ ಕಾರಣವಾಗುವ ಅಂಶಗಳಲ್ಲಿ ಆತನಾಡುವ ಭಾಷಾಪ್ರಭೇದವೂ ಒಂದಾಗಿದೆ.

ದಿನನಿತ್ಯದ ವ್ಯಕ್ತಿ-ವ್ಯಕ್ತಿ ಸಂಬಂಧಗಳಲ್ಲಿ ಸಂಭಾಷಣೆಯ ಪಾತ್ರ ಗಮನಾರ್ಹ. ಪ್ರತಿಯೊಬ್ಬ ವ್ಯಕ್ತಿ ಬಳಸುವ ಮಾತುಗಳೂ ಆ ವ್ಯಕ್ತಿಯ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಹಿನ್ನೆಲೆಯನ್ನು, ಆಯಾ ಸಂದರ್ಭದಲ್ಲಿ ವ್ಯಕ್ತಿ ಇರುವ ಮನಃಸ್ಥಿತಿಯನ್ನು, ಸಂಭಾಷಣೆಯಲ್ಲಿ ಅಡಗಿರುವ ಆತನ ವ್ಯಕ್ತ ಹಾಗೂ ಅವ್ಯಕ್ತ ಉದ್ದೇಶವನ್ನು ಬಿಂಬಿಸುತ್ತಿರುತ್ತದೆ. ವ್ಯಕ್ತಿಯ ಮಾತೂ ಆತನ ಸ್ವಭಾವದ ಒಂದು ಭಾಗ. ಆದರಿಂದಾಗಿ ಆ ವ್ಯಕ್ತಿ ನಿಜವಾಗಿರುತ್ತಾನೆ. ಸಿನಿಮಾಗಳಲ್ಲಿ ಪಾತ್ರ ನಿರೂಪಣೆಗಾಗಿ ಬಳಸುವ ಸಂಭಾಷಣೆಯಲ್ಲಿ ಈ ಅಂಶವನ್ನು ಮಡಿಸಿಕೊಳ್ಳಬೇಕಾಗುತ್ತದೆ.

ನಿಜ ಜೀವನದ ಪ್ರತಿಬಿಂಬವೆಂಬಂತೆ ತಮ್ಮ ಚಲನಚಿತ್ರಗಳಲ್ಲಿ ಪಾತ್ರಗಳನ್ನು ಸೃಷ್ಟಿ ಮಾಡುವವರು, ದೃಶ್ಯಾಂಶದ ಇತರ ವಿವರಗಳಲ್ಲಿ ಸಹಜತೆಯನ್ನು ತರುವ ಪ್ರಯತ್ನ ಮಾಡುವವರು, ಸಂಭಾಷಣೆಗಳನ್ನು ರಚಿಸುವಾಗ, ಆ ಸಂಭಾಷಣೆಗಳನ್ನು ಪಾತ್ರಗಳ ಮೂಲಕ ಹೇಳಿಸುವಾಗ ಮೇಲಿನ ಅಂಶಗಳನ್ನು ಗಮನಿಸಬೇಕಾಗುತ್ತದೆ. ಆದರೆ ಇಂದಿನ ಬಹುತೇಕ ಸಿನಿಮಾಗಳಲ್ಲಿ ದೃಶ್ಯಾಂಶಗಳು ಯಾವುದೇ ನಿರ್ದಿಷ್ಟ ಸಾಮಾಜಿಕ, ಸಾಂಸ್ಕೃತಿಕ ರೀತಿ-ನೀತಿಗಳಿಗೆ ಬದ್ಧವಾಗಿರುವುದಿಲ್ಲ. ಪಾತ್ರಗಳ ಹಿನ್ನೆಲೆ ಏನೇ ಇರಲಿ, ಸಿನಿಮಾದಲ್ಲಿ ಬರುವ ಮನೆಮಾರು, ಬಟ್ಟೆಬರೆ, ವರ್ತನೆ ಇತ್ಯಾದಿಗಳು, ಅಂತೆಯೇ ಇಂಥ ಪಾತ್ರಗಳು ಆಡುವ ಮಾತುಗಳು ಯಾವುದೇ ಸಾಂಸ್ಕೃತಿಕ ವೈಶಿಷ್ಟ್ಯ (Cultural identity) ತೋರದೆ ಸಾಮಾನ್ಯೀಕೃತ (Generalisation) ಹಾಗೂ ಸಿನಿಮೀಯ ಕೃತ್ರಿಮತೆಯನ್ನು ಹೊಂದಿರುತ್ತವೆ.

ಕಥಾಚಿತ್ರಗಳಿಗಿಂತ ಭಿನ್ನವಾಗಿರುವ ಸಾಕ್ಷ್ಯಚಿತ್ರಗಳು, ಶೈಕ್ಷಣಿಕ ಚಿತ್ರಗಳು ಇತ್ಯಾದಿಗಳಲ್ಲಿ ಸಾಮಾನ್ಯವಾಗಿ ಸಂಭಾಷಣೆಯ ಬದಲಿಗೆ ನಿರೂಪಣೆ ಇರುತ್ತದೆ. ತೋರುತ್ತಿರುವ ದೃಶ್ಯ ಸರಣಿಗೆ ಒಂದು ಸಂದರ್ಭವನ್ನು, ಉದ್ದೇಶವನ್ನು ಈ ನಿರೂಪಣೆ ಕಲ್ಪಿಸುತ್ತದೆ. ದೃಶ್ಯದಲ್ಲಿರುವ ವಿವರವನ್ನು ನಿರೂಪಣೆ ವಿಶ್ಲೇಷಿಸುತ್ತದೆ, ಪೂರಕ ಮಾಹಿತಿಯನ್ನು ಸೇರಿಸುತ್ತದೆ. ಭೌತಿಕ ವಿವರಗಳಲ್ಲಿ ತೋರಲು ಸಾಧ್ಯವಿಲ್ಲದ್ದನ್ನು ಮಾತಿನಲ್ಲಿ ಹೇಳುತ್ತದೆ. ಅಂತೂ ನಿರೂಪಣೆ (ಕಾಮೆಂಟರಿ) ದೃಶ್ಯದ ಮೌಲ್ಯವನ್ನು ಹೆಚ್ಚಿಸುತ್ತದೆ. ಇಲ್ಲಿಯೂ ಕೂಡ ದೃಶ್ಯ ಮತ್ತು ಇತರ ಧ್ವನಿಗಳು ತಮ್ಮ ಕೆಲಸವನ್ನು ಚೆನ್ನಾಗಿಯೇ ನಿರ್ವಹಿಸುತ್ತಿದ್ದರೆ, ಅದರ ಜೊತೆಗೆ ನಿರೂಪಣೆಯನ್ನೂ ಸೇರಿಸುವ ಅಧಿಕ ಪ್ರಯತ್ನ ಸಲ್ಲ. ಕಥಾ ಚಿತ್ರಗಳಲ್ಲೂ ನಿರೂಪಣೆಯ ಬಳಕೆಯಾಗಿದೆ. ಅನೇಕ ಕನ್ನಡ ಚಿತ್ರಗಳಲ್ಲಿ ಪೀಠಿಕೆಯ ರೂಪದಲ್ಲಿ ನಿರೂಪಣೆ ಬಳಸಲಾಗಿದೆ. ಉದಾ : 'ಚಂದವಳ್ಳಿಯ ತೋಟ', 'ಚಕ್ರತೀರ್ಥ', 'ಕಥಾಸಂಗಮ' ಇತ್ಯಾದಿ.

ಆದರೆ 'ಹೊಸ ಅಲೆ' ಎಂಬ ಹಣೆಪಟ್ಟಿ ಹಚ್ಚಿಕೊಂಡ ಕೆಲವು ಸಿನಿಮಾಗಳಲ್ಲಿ ಈ ನಿರೂಪಣೆಯನ್ನು ಒಂದು ವಿಭಿನ್ನ ಕಥಾನಕದ ನೆಲೆಯಾಗಿ ಬಳಸಲಾಗಿದೆ. ಉದಾ : 'ಪಲ್ಲವಿ' - ಇದು ಮುಖ್ಯ ಪಾತ್ರದ First person narrative ಆಗಿ ಇಡೀ ಚಿತ್ರ ಯೋಜಿತವಾಗಿದ್ದು - ಕನ್ನಡದ ಮಟ್ಟಿಗೆ ಹೊಸತು. ಹಾಗೆಯೇ 'ಆಕ್ರಮಣ'ದ ನಿರೂಪಣೆ ಕೂಡ ಸಾಂಪ್ರದಾಯಿಕ ಅರ್ಥದ ರಾಜಕೀಯ ಘಟನೆಗಳನ್ನು ಬೇಕೆಂದೇ ನಿರೂಪಣೆಯ ಮೂಲಕ ಹೇಳಿ ದೃಶ್ಯದ 'ಕ್ರಿಯಾ ಪರಂಪರೆ'ಗೆ ಬೇರೆ ಆಯಾಮ ಕೊಡಲಾಗಿದೆ.

ಹಾಗೆಯೇ ಈ ನಿರೂಪಣೆ ಕೆಲವೊಮ್ಮೆ ನಿರ್ದೇಶಕನ ನಿಲುವು ವ್ಯಕ್ತಪಡಿಸಲೂ ಬಳಸಲಾಗಿದೆ. ಉದಾ : 'ಎಡಕಲ್ಲು ಗುಡ್ಡದ ಮೇಲೆ' ಆರಂಭದಲ್ಲಿ ಜಗತ್ತಿನ ಉಗಮ, ನೀತಿಯ ಕಲ್ಪನೆ ಇತ್ಯಾದಿ ಹೇಳುತ್ತಾ, ಚಿತ್ರದ ಉದ್ದೇಶವನ್ನು ಸ್ಪಷ್ಟ ಪಡಿಸಲಾಗಿದೆ (ಆ ಮಾತುಗಳು ಪ್ರತಿಗಾಮಿ ಎನ್ನುವುದು ಬೇರೆ ವಿಷಯ). 'ಭೂಮಿಗೀತ'ದಲ್ಲೂ ನಿರೂಪಣೆ ಎಂದರೆ ನಿರ್ದೇಶಕ ತನ್ನ ನಿಲುವನ್ನು ಸಮರ್ಥಿಸುವ ಮಾತುಗಳು ಅಕ್ಷರವಾಗಿ ಮೂಡಿ ಬಂದಿವೆ ಎಂದು ಗಮನಿಸಬಹುದು.

ಹಾಡು

ನಮ್ಮ ದೇಶದಲ್ಲಿ ಧ್ವನಿಯ ಆರಂಭ ಕಾಲದ ಚಿತ್ರಗಳು ಸಂಪೂರ್ಣವಾಗಿ ಮಾತಾಡುವ, ಹಾಡುವ, ಕುಣಿಯುವ ಅನುಭವಗಳಿಂದೇ ಪ್ರಚಾರವಾಗುತ್ತಿದ್ದವು. ಇದರ ಪರಿಣಾಮ, ಚಿತ್ರದಿಂದ ಚಿತ್ರಕ್ಕೆ ಹಾಡುಗಳ ಸಂಖ್ಯೆ ಹೆಚ್ಚುತ್ತಲೇ ಹೋಯಿತು. ಅದೇ ಕಾಲಕ್ಕೆ ಯೋಗಾಯೋಗವೆಂಬಂತೆ ದೇಶದಲ್ಲಿನ ರಾಜಕೀಯ ವಾತಾವರಣದ ಬಿಸಿ ಕಾವು, ಚಿತ್ರಗಳಲ್ಲಿ ದೇಶಭಕ್ತಿಗೀತೆಗಳ ಮಹಾಪೂರಕ್ಕೆ ಕಾರಣವಾಯಿತು. ಇದರ ಫಲವಾಗಿ ನಾಯಕ ಯುದ್ಧರಂಗದಲ್ಲಿ ಶತ್ರುಗಳನ್ನು ಸದೆಬಡಿಯಲು ಖಡ್ಗ ಹಿಡಿಯುವ ಮುನ್ನ ಹಾಡೊಂದನ್ನು ಹೇಳಿ ಅಥವಾ ಹೇಳುತ್ತಲೇ ಹೋರಾಡುವ ಪರಂಪರೆ ಚಾಲ್ತಿಗೆ ಬಂದಿತು. ಅದರ ಸ್ವರೂಪವನ್ನು ಇಂದಿಗೂ ನಾವು ಕನ್ನಡದ 'ಬಬ್ರುವಾಹನ' ಚಿತ್ರದಲ್ಲಿ ಕಾಣಬಹುದು.

ನಮ್ಮ ಚಿತ್ರಗಳು ಕಂಡುಕೊಂಡ ಇನ್ನೊಂದು ತಂತ್ರ, ಚಿತ್ರದಲ್ಲಿ ನಾಯಕ ಅಥವಾ ನಾಯಕಿ ಅನ್ಯಾಯಕ್ಕೆ ಒಳಗಾದಾಗ, ಮನಸ್ಸಿನ ನೆಮ್ಮದಿಯನ್ನು ಕಳೆದುಕೊಂಡಾಗ, ಅವರ ಮನಸ್ಸಿಗೆ ನೀತಿ, ಶಾಂತಿ ಪಾಠ ಹೇಳಲು, ಇದೆಲ್ಲ ದೈವದಾಟವೆಂದು ತಿಳಿಸಲು, ಮನೆಯ-ಬೀದಿಯ ಮುಂದೆ ಸಾಧು, ಸನ್ಯಾಸಿ, ಫಕೀರ, ಭಿಕ್ಷುಕ ಹಾಡುವ ಸನ್ನಿವೇಶಗಳು ನಿರ್ಮಾಣಗೊಂಡವು.

ಭಾರತೀಯ ಸಂಸ್ಕೃತಿಯ ಇತಿ-ಮಿತಿ ಒಂದೆಡೆ, ನಮ್ಮ ಸೆನ್ಸಾರಿನ ವ್ಯವಸ್ಥೆಯ ಹಿಂಸೆ ಇನ್ನೊಂದೆಡೆ ಹೆಚ್ಚಾದಾಗ, ಪ್ರೀತಿ, ಪ್ರೇಮದಂತಹ ಸೂಕ್ಷ್ಮ ಭಾವನೆಯನ್ನು ಹಾಡುಗಳಲ್ಲಿ ಅಭಿವ್ಯಕ್ತಪಡಿಸುವ ಪರಂಪರೆ ಆರಂಭವಾಯಿತು. ನಂತರ ಇದು ದೇಶ-ವಿದೇಶಗಳಲ್ಲಿ, ಬೀದಿ, ರಸ್ತೆ, ಪಾರ್ಕುಗಳಲ್ಲಿ 'ಸಂಗೀತ ವ್ಯಾಯಾಮ' ಮಾಡುತ್ತ ಪ್ರಕಟವಾಗುವಂತಹ ವಿಕೃತಿ ತಾಳಿತು. ನಾಯಕ-ನಾಯಕಿಯ ವಿರಹವೂ ಸಹ ಅಭಿವ್ಯಕ್ತಿಗೆ ಹಾಡಿನ ಮೊರೆ ಹೋಯಿತು. ಈಗ ಬದಲಾದ ಸಾಮಾಜಿಕ ಮೌಲ್ಯಗಳ ಹಿನ್ನೆಲೆಯಲ್ಲಿ ವಿರಹ ಗೀತೆಗಳ ಕಾಟ, ಹಿಂಸೆ, ಸಂಖ್ಯೆ ಕಡಿಮೆಯಾಗತೊಡಗಿದೆ. ಈ ಎರಡು ಕಾರಣಗಳಿಂದಾಗಿ (ಪ್ರೇಮ ವಿರಹದ ಅಭಿವ್ಯಕ್ತಿಯ ಸಾಧನ) ನಮ್ಮ ಹಲವಾರು ಗಂಭೀರ ಸಿನಿಮಾಗಳನ್ನು (ಲೈಲಾ ಮಜ್ನು, ಬೈಜು ಬಾವ್ರಾ, ಹೀರ್‌ರಾಂಝಾ) ಇಂದಿಗೂ ವಿದೇಶದಲ್ಲಿ ಹಾಸ್ಯ ಚಿತ್ರವಾಗಿ ನೋಡಿ ಆನಂದಿಸುತ್ತಾರೆ. ವಿದೇಶೀಯರ ಪ್ರೀತಿ, ಪ್ರೇಮದ ಆರಂಭ ಚುಂಬನ, ಮಲಗುವ ಕೋಣೆಯಲ್ಲಾಗಿ, ವಿರಹ ಕೋರ್ಟಿನಲ್ಲಿ ವಿವಾಹ ವಿಚ್ಛೇದನ, ಅಥವಾ ಇನ್ನೊಂದು ಮದುವೆಯಲ್ಲಿ ಕೊನೆಗೊಳ್ಳುವುದು ಸಾಮಾನ್ಯ ಅನುಭವವಾದ ಹಿನ್ನೆಲೆಯಲ್ಲಿ ಈ ರೀತಿಯ ಪ್ರತಿಕ್ರಿಯೆ ಅತಿ ಸಹಜ ಎನ್ನಬಹುದು.

ಹಲವಾರು ಚಿತ್ರಗಳಲ್ಲಿ ನಾಯಕ-ನಾಯಕಿಯ ಪಾತ್ರದ ಪವಿತ್ರತೆಯ ದೃಷ್ಟಿಯಿಂದ (ಸಾಧು, ಸಂನ್ಯಾಸಿ, ಗುರು, ವಿರಾಗಿಣಿಯರ ಪ್ರೇಮಾಂಕುರ) ಅಥವಾ ಅವರು ಹಾಡು-ನೃತ್ಯದಲ್ಲಿ ಅನನುಭವಿಗಳಾಗಿದ್ದಾಗ ಕಂಡುಕೊಂಡ ಇನ್ನೊಂದು ತಂತ್ರ, ಪ್ರೇಮ ಯುಗಳಗೀತೆಯ ಜೋಡಿಯೊಂದನ್ನು (ಉಪನಾಯಕ-ಉಪನಾಯಕಿ) ಸೃಷ್ಟಿಸಿ, ಆ ಹಾಡಿನ ಸಾಲುಗಳ ನಡುವಿನ ಸಂಗೀತಕ್ಕೆ ನಾಯಕ-ನಾಯಕಿಯ ನೋಟ, ನಗು, ಒಡನಾಟ ಚಲಿಸುವುದು. ಉದಾ : ದಾರಾಸಿಂಗ್, ನಿಶಿ ಚಿತ್ರದಲ್ಲಿ ಫಿರೋಜ್ ಖಾನ್, ಮುಮ್ತಾಜ್ ಪ್ರೇಮಗೀತೆ ಸಮಾನಾಂತರವಾಗಿ ಚಿತ್ರೀಕರಣವಾಗಿರುತ್ತಿತ್ತು.

ಚಲನಚಿತ್ರಗಳ ಯಶಸ್ಸಿನ ಸೂತ್ರವಾಗಿ ಬಳಸಿದ ಇನ್ನೊಂದು ತಂತ್ರ, ಚಿತ್ರಗಳಲ್ಲಿ ಮಕ್ಕಳ ಪಾತ್ರ ಸೃಷ್ಟಿಸಿ, ಅವುಗಳಿಂದ ಹಾಡನ್ನು ಹೇಳಿಸುವುದು. ಇದು ದೇವರ ಪ್ರಾರ್ಥನೆ, ಮೊರೆ ಇರಬಹುದು, ತಾಯಿ, ಅಜ್ಜಿಯ ಮಮತೆ, ವಾತ್ಸಲ್ಯದ ನಿರೂಪಣೆ ಇರಬಹುದು, ಕಷ್ಟ-ಕಾರ್ಪಣ್ಯಗಳ ನೋವಿನ ನಿರೂಪಣೆಯಾಗಿರಬಹುದು, ಸಮಾಜದ ಅನ್ಯಾಯಗಳ ವಿರುದ್ಧ ಹೋರಾಡಲು ಶತ್ರುಗಳನ್ನು ಆಹ್ವಾನಿಸುವ ಅಥವಾ ದೇಶಭಕ್ತಿಯ ಸನ್ನಿವೇಶ ಇರಬಹುದು. ಈ ಮಾತಿಗೆ ಕನ್ನಡದ 'ಸತ್ಯ ಹರಿಶ್ಚಂದ್ರ', 'ಭಕ್ತ ಪ್ರಹ್ಲಾದ'ನಿಂದ ಹಿಡಿದು 'ಪ್ರಾಣ ಪೇಷೆಂಟ್ ೧೨೩', 'ದಂಗೆಯೆದ್ದ ಮಕ್ಕಳು' ಚಿತ್ರಗಳವರೆಗೆ ಹೆಸರಿಸಬಹುದು.

ಭಾರತೀಯ ಬದುಕಿನ ಮಾನಸದಲ್ಲಿ, ಅವ್ಯಕ್ತ ಶಕ್ತಿಯ ಕಲ್ಪನೆ ಹಾಗೂ ಪರಿಸ್ಥಿತಿ ಹತೋಟಿ ತಪ್ಪಿದಾಗ ಅದಕ್ಕೆ ಮೊರೆ ಹೋಗಬೇಕೆನ್ನುವ ಪರಿಪಾಠ ಸಿನಿಮಾದಲ್ಲಿ ವಿಶೇಷ ಸನ್ನಿವೇಶಕ್ಕೆ ದಾರಿ ಮಾಡಿಕೊಟ್ಟವು. ಯಾವುದೇ ಪಾತ್ರದ ಪ್ರಾಣಾಂತಿಕ ರೋಗಕ್ಕೆ ಶಸ್ತ್ರ ಚಿಕಿತ್ಸೆ ಅಥವಾ ಅಪಘಾತ ಗಾಯಕ್ಕೆ ರಕ್ತ ನೀಡಿ ಚಿಕಿತ್ಸೆ ಮಾಡಿ ಕೊನೆಗೆ ಡಾಕ್ಟರು, "ನನ್ನ ಪ್ರಯತ್ನವೆಲ್ಲಾ ಮಾಡಿದ್ದಾಯಿತು. ಇನ್ನು ಉಳಿದಿದ್ದು ದೈವೇಚ್ಛೆ" ಎಂದು ಕೈ ಆಕಾಶಕ್ಕೆ ತೋರಿದಾಗ ಸಂಬಂಧಿತ ಪಾತ್ರಗಳು ದೇವ-ದೇವತೆಯ ಹಾಡನ್ನು ಹಾಡುವುದು ಸಾಮಾನ್ಯ. ಇದರಂತೆಯೇ ನಾಯಕ/ನಾಯಕಿ ಕಣ್ಣು ಕಳೆದುಕೊಂಡಾಗ, ಪ್ರಾಣವೇ ಹೋಗಿರುವಾಗ ದೇವಾಂಶದ ಜ್ಯೋತಿ ಬಂದು ದೃಷ್ಟಿದಾನ, ಜೀವದಾನ ನೀಡುವಂತಹ ಹಾಡು ಇರುತ್ತದೆ. ಇಂತಹ ಸನ್ನಿವೇಶ ಕೇವಲ ಹಿಂದೂ ಧರ್ಮದ ಪಾತ್ರಗಳಿಗಷ್ಟೇ ಅಲ್ಲ. ಮುಸ್ಲಿಂ, ಕ್ರಿಶ್ಚಿಯನ್, ಸಿಖ್ ಧರ್ಮವೂ ಇದಕ್ಕೆ ಅಪವಾದವೇನಲ್ಲ. ಹಿಂದಿಯ 'ನಾನಕ್ ನಾಮ ಜಹಾಜ್ ಹೈ'ನಿಂದ 'ಓ ನನ್ನ ನಲ್ಲೆ'ವರೆಗೆ ಉದಾಹರಿಸಬಹುದು.

ಇದರಂತೆಯೇ ಮಾನವ ಬದುಕಿನಲ್ಲಿ ಕಾಡುವ ದುಷ್ಟಶಕ್ತಿಗಳಾದ ದೆವ್ವ, ಭೂತ, ಪ್ರೇತ ಇವುಗಳನ್ನು ಹೊಡೆದೋಡಿಸಲು ಸಹ, ಅದಕ್ಕೂ ಮೀರಿದ ದೈವಶಕ್ತಿ, ಸಾಧು

ಸಂತರ ಆಧ್ಯಾತ್ಮಶಕ್ತಿಯ ಮೊರೆ ಹೋಗುವ ಹಾಡು, ಭಜನೆಯಿಂದ ಮೂಡಿದಾಗ, ಆ ಚಿತ್ರಗಳು ಯಶಸ್ಸನ್ನು ಪಡೆದು ಸಿದ್ಧ ಸೂತ್ರವೆಂಬುದನ್ನು ಖಚಿತ ಪಡಿಸಿವೆ. ಇವಕ್ಕೆ 'ನಾ ನಿನ್ನ ಬಿಡಲಾರೆ'ಯ ಗುರು ರಾಘವೇಂದ್ರಸ್ವಾಮಿ ಒಂದು ಉದಾಹರಣೆ ಅಷ್ಟೇ. ಶಿರಡಿ ಸಾಯಿಬಾಬಾ, ಮಂಜುನಾಥ, ಸಂತೋಷಿ ಮಾತಾ, ದುರ್ಗೆ, ಕಾಳಿ, ಬನಶಂಕರಿ, ಅಣ್ಣಮ್ಮ ಇಂತಹ ಯಾರೇ ಆಗಿರಲಿ, ಅದು ನಿರ್ಮಾಪಕ, ನಿರ್ದೇಶಕರ ಕುಲದೈವ, ಇಚ್ಛಿತಾದೈವದಂತೆ ಚಿತ್ರದಲ್ಲಿ ಮಾರಾಟದ ಸರಕಾಗಬಹುದು.

ಚಿತ್ರದಲ್ಲಿ ಬಳಸಲಾದ ಹಾಡು ಅತ್ಯಂತ ಜನಪ್ರಿಯವಾಗಲು ಕಾರಣವಾಗುವ ಪಾತ್ರ ಭಿಕ್ಷುಕನದು. ನಂತರ ಈ ಹಾಡು ದೇಶದಾದ್ಯಂತ ರೈಲುಗಳಲ್ಲಿ, ಬಸ್ ನಿಲ್ದಾಣಗಳಲ್ಲಿ ಭಿಕ್ಷುಕರಿಂದಲೇ ಜನಪ್ರಿಯವಾಗುವುದೊಂದು ವಿಶೇಷ (ಹಿಂದಿಯ 'ದಸ್ ಲಾಖ್' ಚಿತ್ರದ 'ತುಮ್ ಏಕ್ ಪೈಸಾ ದೋಗೆ ತೊ ದಸ್ ಲಾಖ್ ದೇಗಾ..' ಹಾಡು). ಇದರಂತೆ ಇಂದಿಗೂ ಹಾಡನ್ನು ಜನಪ್ರಿಯಗೊಳಿಸುವಲ್ಲಿ ಇನ್ನೊಂದು ಸಾಧನ ಮದುವೆಯ ಬ್ಯಾಂಡು ಬಾಜಾಗಳು. ಇವರು ನುಡಿಸುವ ಬೇಗಾನೀ ಶಾದೀಮೇ, ಅಬ್ದುಲ್ಲಾ ದೀವಾನಾದಿಂದ, ಅಸಾಮಯಿಕ ವಿದಾಯ/ವಿರಹದ ಬಾಬುಲ್ ಕೀ ದುವಾಯೇ ಲೇತಿ ಜಾ, ಜಾ ತುಝ್ಝ್ ಕೋ ಸುಖೀ ಸಂಸಾರ ಮಿಲೇ... ಎಂಬ ತಂದೆ-ತಾಯಿಯ ಆರ್ತನಾದವೂ ಇವರಿಂದಲೇ ಮೊಳಗಬೇಕು. ವಿವಿಧ ಸಂಪ್ರದಾಯಗಳಲ್ಲಿ, ಸಂದರ್ಭಗಳಲ್ಲಿ ಹೆಣದ ಮುಂದೆ ಸಹ ಈ ಬ್ಯಾಂಡಿನವರು ನುಡಿಸುವ ಸಿನಿಮಾ ಗೀತೆ, ಯುವಕರ ಕುಣಿತ, ಪರಿಸ್ಥಿತಿಗೆ ಆಯಾಮ ನೀಡುವಂತಿರುತ್ತವೆ. ೧೯೫೪ರಲ್ಲಿ ನಡೆದ ಸ್ವತಂತ್ರ ಭಾರತದ ಪ್ರಥಮ ಕುಂಭಮೇಳದಲ್ಲಿ ಸಾಧುಗಳನ್ನು ಸ್ವಾಗತಿಸಲು ಈ ಬ್ಯಾಂಡು ನುಡಿಸಿದ್ದು ಅಂದಿನ ಜನಪ್ರಿಯ ಹಿಂದಿ ಸಿನಿಮಾದ ಹಾಡು ಎಂದರೆ ನಮ್ಮ ಜೀವನದಲ್ಲಿ ಸಿನಿಮಾ ಹಾಡುಗಳ ಅಡಿಪಾಯದ ಅರಿವಾಗಬಹುದು.

ಹಾಡಿನ ಕಾರ್ಯ ಸ್ವರೂಪಗಳು

ಚಲನಚಿತ್ರಗಳಲ್ಲಿ ಬಳಸಲಾದ ಹಾಡುಗಳನ್ನು ಗಮನಿಸಿದರೆ ಅವುಗಳನ್ನು ನಾವು ಸ್ಥೂಲವಾಗಿ ನಾಲ್ಕು ವಿಭಾಗದಲ್ಲಿ ವಿಂಗಡಿಸಬಹುದು.

ಸಂಗೀತ ಪ್ರಧಾನ ಚಿತ್ರಗಳು : ನಿರ್ಮಾಪಕನಿಗೆ ಅಭಿರುಚಿ ಹಾಗೂ ನಿರ್ದೇಶಕನಿಗೆ ಸಂಗೀತ ಜ್ಞಾನವಿದ್ದ ಸಂದರ್ಭದಲ್ಲಿ ಹಾಡು, ನೃತ್ಯ ಯಶಸ್ಸಿನ ಸೂತ್ರ ಎಂಬ ಅರಿವಿನಿಂದಾಗಿ, ಹಾಡುಗಳಿಗೆ ಪ್ರಾಧಾನ್ಯ ಒದಗಿಸುವ ಕಥೆಗಳ ಆಯ್ಕೆ, ಚಿತ್ರ ನಿರ್ಮಾಣ ಸಾಮಾನ್ಯ. ಇವುಗಳಲ್ಲಿ ಆರಂಭ ಕಾಲದ ನೃತ್ಯಗಾರ ಉದಯಶಂಕರ ಅವರ 'ಕಲ್ಪನಾ', ವಿ.ಶಾಂತಾರಾಂ ಅವರ 'ಝನಕ್ ಝನಕ್ ಪಾಯಲ್ ಬಾಜೇ' ಹೆಸರಿಸಬಹುದು. ಇದೇ ಪರಂಪರೆಗೆ ಕನ್ನಡದ 'ಪುರಂದರದಾಸ', 'ಕನಕದಾಸ', 'ಸಂಧ್ಯಾರಾಗ', 'ಹಂಸಗೀತೆ', 'ಆನಂದ ಭೈರವಿ', 'ಮಲಯಮಾರುತ', 'ಗಾನಯೋಗಿ ಪಂಚಾಕ್ಷರ ಗವಾಯಿ' ಚಿತ್ರಗಳನ್ನು ಹೆಸರಿಸಬಹುದು. ಇವು ಆಯಾ ಕಾಲದ ಪರಭಾಷೆಯ ಸಮಕಾಲೀನ ಚಿತ್ರಗಳಾದ 'ಶಂಕರಾಭರಣಂ', 'ಸಾಗರ ಸಂಗಮಂ'ನಿಂದ ಪ್ರೇರಣೆ ಪಡೆದಿರಲೂಬಹುದು. ಇವೆಲ್ಲದರ ಪ್ರೇರಣೆಯ ಜೊತೆಗೆ ಲೆಕ್ಕಾಚಾರ ಮಾಡಿ ಸಿದ್ಧಪಡಿಸಿದ ಹೊಸ ಸೂತ್ರದಿಂದ ಯಶಸ್ವಿಯಾದ ಚಿತ್ರನಟ-ನಿರ್ಮಾಪಕ ರವಿಚಂದ್ರನ್‌ರ 'ಪ್ರೇಮಲೋಕ'.

ಆದರೆ ನಮ್ಮಲ್ಲಿ ಇಂತಹ ಚಿತ್ರಗಳಲ್ಲಿ ಒಂದು ಆಭಾಸವೆಂದರೆ, ನಾಯಕ ಗಾಯಕನಾಗಿದ್ದರೆ ಅವನ ಎಲ್ಲಾ ಹಾಡುಗಳಿಗೂ ಒಬ್ಬನೇ ಹಿನ್ನೆಲೆ ಗಾಯಕನ ಕಂಠ ಬಳಸದೆ ರಸ ಆಧಾರಿತ ಆಯ್ಕೆ ಮಾಡಲು ಹೋಗಿ ಭಕ್ತಿರಸ, ವೀರರಸ, ಹಾಸ್ಯರಸ, ಶೃಂಗಾರರಸಕ್ಕೆ ಬೇರೆ ಬೇರೆ ಗಾಯಕರು ಹಾಡಿ ಕಂಠಸಿರಿ (Timbre) ನಾಯಕ, ನಾಯಕಿಯರಿಗೆ ಹೊಂದದೇ ಅಸಹಜ ವಾತಾವರಣ ನಿರ್ಮಿಸುವುದು ವಾಡಿಕೆ. ಈ ವಿಕೃತಿ ಪಾಶ್ಚಿಮಾತ್ಯ ಚಿತ್ರಗಳಲ್ಲಿ ಕಂಡುಬರುವುದಿಲ್ಲ.

ನಿರೂಪಣೆಯ ಅವಿಭಾಜ್ಯ ಅಂಗಗಳಾಗಿ ಹಾಡುಗಳು : ಪ್ರೇಕ್ಷಕ ಚಿತ್ರದಲ್ಲಿ ಹಾಡು ಬಂದೊಡನೆ ಚಿತ್ರಮಂದಿರದಿಂದ ಹೊರ ಹೋಗದಿರಲು, ಅವನ ಆಸಕ್ತಿ ಮತ್ತು ಚಿತ್ತ ಸೆಳೆದಿಡಲು ನಿರೂಪಿಸಲಾದ ಈ ತಂತ್ರದಲ್ಲಿ ಹಾಡು, ಕಥನ ಕಲೆಯ ಅವಿಭಾಜ್ಯ ಅಂಗವಾಗಿ ಮೂಡಿ ಬಂದಿತು. ಉದಾ : ಕ್ಯಾಬರೇ ಕ್ಲಬ್ಬುಗಳಲ್ಲಿ ನಾಯಕ, ಖಳನಾಯಕನನ್ನು ಹುಡುಕಿಕೊಂಡು ಬಂದಾಗ ಅವರಿಬ್ಬರ ಭೇಟಿ ಹೇಗೆ ? ಹೊಡೆದಾಟದಲ್ಲೋ, ಬೆನ್ನಟ್ಟಿಸಿಕೊಂಡು ಹೋಗುವುದರಲ್ಲೋ, ಸಾವಿನಲ್ಲೋ ಎಂಬ ಕುತೂಹಲ, ಪ್ರೇಕ್ಷಕನನ್ನು ಹಿಡಿದಿಡುತ್ತದೆ. ಇದು ನಾಯಕ-ನಾಯಕಿಯನ್ನು ಒಂದುಗೂಡಿಸುವ, ತಾಯಿ-ಮಕ್ಕಳನ್ನು ಮತ್ತೆ ಕ್ಷೇಮವಾಗಿ ಸೇರಿಸುವ ಯಾವುದೇ ಸನ್ನಿವೇಶವಾಗಿರಬಹುದು. ಇದನ್ನು ಸೃಜನಾತ್ಮಕವಾಗಿ ಬಳಸಿದ ನಿರ್ದೇಶಕರು ವಿರಳ. ಕೆಲವೊಮ್ಮೆ ಸಂಪೂರ್ಣ ಚಿತ್ರದಲ್ಲಿ ನಿರೂಪಿತವಾಗಿದ್ದ/ಆಗಬೇಕಾದ ನಾಯಕನ ವ್ಯಕ್ತಿತ್ವ, ಗುಣ ವಿಶೇಷಗಳು, ಸ್ವಭಾವಗಳು ಮೂರು ನಿಮಿಷದ ಹಾಡಿನಲ್ಲಿ ರೂಪಿತವಾಗಿ ನಿರ್ದೇಶಕನ ಹೊರೆಯನ್ನು ಕಡಿಮೆ ಮಾಡುವುವು. ಪುಟ್ಟಣ್ಣನವರ 'ನಾಗರಹಾವು' ಚಿತ್ರದಲ್ಲಿ 'ಹಾವಿನ ದ್ವೇಷ ಹನ್ನೆರಡು ವರುಷ...' ಹಾಡು, 'ಉಪಾಸನೆ'ಯಲ್ಲಿ ರೇಡಿಯೋ ರಂಗಮ್ಮನ ಪಾತ್ರಕ್ಕೆ ಪ್ರತಿಕ್ರಿಯೆಯಾಗಿ 'ಆಚಾರವಿಲ್ಲದ ನಾಲಿಗೆ...' ದಾಸರ ಪದ, 'ಬಹದ್ದೂರ್ ಗಂಡು' ಚಿತ್ರದಲ್ಲಿನ 'ಬಂಕಾಪುರದ ಜೆಂಕಿ ಚೆಂಡು...', 'ಮಿ|ರಾಜಕುಮಾರ್' ಚಿತ್ರದಲ್ಲಿನ 'ನಾನೇ ರಾಜಕುಮಾರ...' ಹಾಡುಗಳನ್ನು ಹೆಸರಿಸಬಹುದು. ಈ ವ್ಯಾಮೋಹ ವಿದೇಶಿ ತರುಣಿ, ಭಾರತೀಯನನ್ನು ಮದುವೆಯಾಗಿ, ಅಮೆರಿಕನ್ನಡದ ಉಚ್ಚಾರಣೆಯಲ್ಲಿ 'ಬಿಳೀಹೆಂಡ್ತಿ' ಎಂದು ಹಾಡು ಹೇಳಿ ರಂಜಿಸುವವರೆಗೆ ಸಾಗಿ ಬಂದಿದೆ. ಇನ್ನೂ ಬಹಳ ಮುಂದೆ ಸಾಗಿದೆ.

ನಿರ್ದೇಶಕನ ಸಂದೇಶ / ಹೇಳಿಕೆ ಹಾಡುಗಳು : ಕೇವಲ ಕಥನ ಶೈಲಿಯಲ್ಲಿ ಸಿನಿಮಾ ಮಾಡುವ ನಿರ್ದೇಶಕರ ತಲೆಮಾರಿನ ನಂತರ ಬಂದ ಕೆಲವು ನಿರ್ದೇಶಕರು ಕಥೆಯೊಂದಿಗೆ ಬೇರೆಯ ಸ್ತರದಲ್ಲಿ ಒಂದು ಹೇಳಿಕೆ, ಸಂದೇಶ ಕೊಡುವ ಉದ್ದೇಶದಿಂದ ಹಾಡನ್ನು ಬಳಸಿದ ಉದಾಹರಣೆಗಳಿವೆ. ಇದು ಸಾಹಿತಿ ಲಂಕೇಶರಂತಹವರ 'ಎಲ್ಲಿಂದಲೋ ಬಂದವರು' ಚಿತ್ರದಲ್ಲಿ 'ಕೆಂಪಾದವೋ ಎಲ್ಲ ಕೆಂಪಾದವೋ...' ಗೀತೆ ಇರಬಹುದು, ಕವಿ-ನಿರ್ದೇಶಕ ಚಂದ್ರಶೇಖರ ಕಂಬಾರರ 'ಕಾಡುಕುದುರೆ' ಚಿತ್ರದ 'ಕಾಡು ಕುದುರೆ ಓಡಿ ಬಂದಿತ್ತಾ...' ಇರಬಹುದು, ಪುಟ್ಟಣ್ಣ ಕಣಗಾಲರ 'ಮಾನಸ ಸರೋವರ'ದ 'ನೀನೇ ಸಾಕಿದ ಗಿಣಿ ನಿನ್ನ ಮುದ್ದಿನ ಗಿಣಿ...' ಎಂಬ ವೈಯಕ್ತಿಕ ಅಳಲೂ ಆಗಿರಬಹುದು.

ದಲಿತರ ಶೋಷಣೆ, ಮೇಲ್ಜಾತಿಯವರ ಅಧಿಕಾರದ ಗುದ್ದಾಟ, ಮೌಲ್ಯ ನಿಷ್ಠ ರಾಜಕೀಯಕ್ಕೆ ತಿಲಾಂಜಲಿ, ಚುನಾವಣೆಯಲ್ಲಿ ಹಣ, ಹೆಂಡ, ಜಾತಿಯ ಅಸ್ತ್ರಗಳ ಬಳಕೆ, ಇಂತಹವುಗಳನ್ನು ಎಂ.ಎನ್.ವ್ಯಾಸರಾವ್ ಗೀತೆಯಲ್ಲಿ 'ಆಟಾ ನೋಡಿರೋ, ಆಲದಾಟ ನೋಡಿರೋ..' ಎಂಬ ಗೀತೆ, ಉಮೇಶ್ ಕುಲಕರ್ಣಿ ನಿರ್ದೇಶನದ 'ಶಂಖನಾದ' ಚಿತ್ರದಲ್ಲಿ ಪರಿಸ್ಥಿತಿಯ ಮೇಲೆ ನಿರ್ದೇಶಕರ ವ್ಯಂಗ್ಯ ಹೇಳಿಕೆಯಾಗಿ ನಿರೂಪಿತವಾಗಿದೆ. ಇದೇ ಚಿತ್ರದಲ್ಲಿ ಉಪಕಥೆಯಾಗಿ ಬರುವ ಬಸವಿಯೊಬ್ಬಳು ಅಧಿಕಾರ ಬಂದ ನಂತರ ಕಾಣುವ ಆದರ್ಶದ ಕನಸಾಗಿ, ಬಾಲ್ಯ ವಿವಾಹ, ವರದಕ್ಷಿಣೆ ಸಾವು, ದೇವದಾಸಿ ಪದ್ಧತಿ ನಿರ್ಮೂಲನೆ ಜೊತೆ, ಗಂಡು-ಹೆಣ್ಣಿನ ಸಮಾನತೆಯನ್ನು ದೊಡ್ಡರಂಗೇಗೌಡರ ಗೀತೆಯಲ್ಲಿ, ನಿರ್ದೇಶಕರ ಹೇಳಿಕೆಯಾಗಿ ರೂಪಿತವಾಗಿದೆ. ಈ ನಿಟ್ಟಿನಲ್ಲಿ 'ಹರಕೆ', 'ಚಿತ್ತಲೆ ಸೇವೆ' ಚಿತ್ರಗಳನ್ನು ಉದಹರಿಸಬಹುದು.

ಯಶಸ್ಸಿನ ಸೂತ್ರವಾಗಿ ಗೀತೆಗಳು : ಹಾಡಿಲ್ಲದ ಚಿತ್ರ, ಹಾಡಿರುವ ಚಿತ್ರ ಈ ಪೈಪೋಟಿ ನಿರಂತರವಾಗಿ ನಡೆದೇ ಇದೆ. ಇದರ ನಡುವೆ 'ಸಂಪತ್ತಿಗೆ ಸವಾಲ್'ನ 'ಯಾರೇ ಕೂಗಾಡಲಿ ಊರೇ ಹೋರಾಡಲಿ....' ಎಮ್ಮೆ ಹಾಡು, 'ಗುರು-ಶಿಷ್ಯರು' ಚಿತ್ರದ ಭಾರ್ಗವರ 'ದೊಡ್ಡವರೆಲ್ಲಾ ಜಾಣರಲ್ಲಾ...' ಹಾಡು, 'ನಂಜುಂಡಿ ಕಲ್ಯಾಣ' ಚಿತ್ರದ 'ಒಳಗ ಸೇರಿದರೆ ಗುಂಡು' ಮಾಲಾಶ್ರೀಯ ಹಾಡು, 'ಜನುಮದ ಜೋಡಿ' ಚಿತ್ರದ ಶಿವರಾಜಕುಮಾರ್ ನಟನೆಯ 'ಕೋಲುಮಂಡೆ ಜಂಗಮ ದೇವರು..' ಕಂಸಾಳೆ ಹಾಡು, ಚಿತ್ರದಲ್ಲಿ ಹಾಡಿನ ಬಳಕೆಯನ್ನು ಯಶಸ್ವಿ ಸೂತ್ರವಾಗಿ ಪುಷ್ಟೀಕರಿಸುತ್ತವೆ. ಇನ್ನೊಂದೆಡೆ ಹಾಡೇ ಇಲ್ಲದ ನವ್ಯ ನಿರ್ದೇಶಕರ ಚಿತ್ರಗಳ ಸೋಲು ಈ ನಂಬಿಕೆಯನ್ನು ಇನ್ನೂ ದೃಢಪಡಿಸುತ್ತವೆ. ಆದರೆ ಮಾತು, ಹಾಡುಗಳೇ ಇಲ್ಲದ 'ಪುಷ್ಪಕ ವಿಮಾನ'ದ ಯಶಸ್ಸಿಗೇನು ಕಾರಣ. ಅಂತಿಮವಾಗಿ ಈ ವಿಷಯದಲ್ಲಿ 'ಪ್ರೇಕ್ಷಕನೇ ಪ್ರಭು' ಎನ್ನಲೇಬೇಕು.

ಎಷ್ಟೋ ಸಲ ಮಾತಿನಲ್ಲಿ ಕಡಿಮೆ ಸಮಯದಲ್ಲಿ ಹೇಳಲಾಗದ ಭಾವನೆಗಳನ್ನು ಹಾಡಿನಲ್ಲಿ ಹೇಳಲು ಸಾಧ್ಯವಾಗುತ್ತದೆ. ನಮ್ಮ ಸಂಸ್ಕೃತಿಯಲ್ಲಿ ಹಾಡುಗಳು ನಿರ್ದಿಷ್ಟ ಮಹತ್ವವನ್ನು ಹೊಂದಿವೆ. ಮಾತಿನ ಸ್ಥಾನದಲ್ಲಿ ಹಾಡು ಬಂದು ಆಯಾ ಭಾವನೆಗಳನ್ನು ಅಸ್ಪಷ್ಟವಾದರೂ ಅಡ್ಡಿಯಿಲ್ಲ, ತೀವ್ರಗೊಳಿಸಲು ಸಹಾಯಕವಾಗುತ್ತದೆ. ಚಿತ್ರಕ್ಕೆ ಹಾಡು ಪೂರಕವಾಗಿರಬೇಕು, ಅದು ಎಂದೂ ಮಾರಕವಾಗಿ ಪರಿಣಮಿಸಬಾರದು. ಹಾಡು ಕಥೆಯ ಓಟಕ್ಕೆ ಸಹಾಯಕವಾಗಿರಬೇಕು. ಹಾಡಿಗಾಗಿ ಸಿನಿಮಾ ಅಲ್ಲ, ಸಿನಿಮಾಗಾಗಿ ಹಾಡು ಎಂಬುದನ್ನು ಅರಿತುಕೊಳ್ಳುವುದು ಅಗತ್ಯ. ಕನ್ನಡದ 'ಆದರ್ಶ ಸತಿ' ಚಿತ್ರದಲ್ಲಿ ೨೨ ಹಾಡುಗಳಿದ್ದವು. ಹಿಂದಿಯ 'ಇಂದ್ರಸಭಾ' (೧೯೩೨) ಚಿತ್ರದಲ್ಲಿ ೭೦ ಹಾಡುಗಳಿದ್ದವು. 'ನಿಷ್ಕರ್ಷ' ಜನಪ್ರಿಯ ಧಾಟಿಯ ಚಿತ್ರವಾದರೂ ಆ ಚಿತ್ರದಲ್ಲಿ ಒಂದೂ ಹಾಡಿರಲಿಲ್ಲ.

ಸತ್ಯು ಅವರ 'ಬರ' ಚಿತ್ರದಲ್ಲಿ ಎರಡು ಹಾಡುಗಳಿತ್ತಾದರೂ ಹಿನ್ನೆಲೆ ಸಂಗೀತವಿರಲಿಲ್ಲ. 'ಸತ್ಯ ಹರಿಶ್ಚಂದ್ರ' ಚಿತ್ರದ 'ಕುಲದಲ್ಲಿ ಕೀಳ್ಯಾವುದೋ..' ಹಾಡಿನಲ್ಲಿರುವ ಭಾಷಣದ ಶೈಲಿಯ, ಕೆಲವೊಮ್ಮೆ ಸಂಸ್ಕೃತೀಕರಣದ ನೆಲೆಯಲ್ಲಿ ರಚಿತಗೊಂಡ ಹಾಡುಗಳಿಗೂ ಅದರದ್ದೇ ಲಯ, ರಾಜಕೀಯ ಇದೆ ಎಂಬ ಚರ್ಚೆ ಸಾಧ್ಯವಿದೆ.

ಹಾಡಿನಲ್ಲಿ ಎರಡು ಬಗೆ. ಪಾತ್ರಗಳೇ ಹಾಡುತ್ತಿರುವ ಹಾಗೆ (Lip Sync) ತೋರಿಸುವ ಹಾಡು ಒಂದಾದರೆ ಇನ್ನೊಂದು, ದೃಶ್ಯದ ಹಿನ್ನೆಲೆಯಲ್ಲಿ ಮೂಡಿಬರುವ ಹಾಡು (Background Song). ಪಾತ್ರಗಳೇ ಹಾಡುವಂತೆ ತೋರುವುದಾದರೆ ಮೊದಲೇ ಹಿನ್ನೆಲೆ ಹಾಡುಗಾರರು ಹಾಡಿ ಧ್ವನಿ ಮುದ್ರಿಸಿದ ಹಾಡಿನ ಪದಗಳಿಗೆ ತಕ್ಕ ಹಾಗೆ ಪಾತ್ರಧಾರಿಗಳು ತುಟಿ ಚಲಿಸುತ್ತಾರೆ. ಹಾಡು ಹಿನ್ನೆಲೆಯಲ್ಲಿ ಬರುತ್ತಿದ್ದರೆ ತುಟಿಗಳ ಚಲನೆಯನ್ನು ಹೊಂದಿಸುವ ಅಗತ್ಯವಿಲ್ಲ.

ಹಾಡಿನ ಸಾಹಿತ್ಯ, ರಾಗ ಸಂಯೋಜನೆ, ಪಾತ್ರಗಳನ್ನೊಳಗೊಂಡು ಅದನ್ನು ದೃಶ್ಯೀಕರಿಸುವ ಶೈಲಿ ಎಲ್ಲವೂ ಇಡೀ ಚಲನಚಿತ್ರದ ಶೈಲಿ, ಹಾಡಿಗೆ ದಾರಿ ಮಾಡಿಕೊಡುವ ದೃಶ್ಯದ ಸಂದರ್ಭ, ಭಾವ, ಅದನ್ನು ಅಭಿನಯಿಸಬೇಕಾಗಿರುವ ಪಾತ್ರಗಳ ವ್ಯಕ್ತಿತ್ವ - ಇವುಗಳಿಗೆ ಸಂಬದ್ಧವಾಗಿರಬೇಕು. 'ಕುಲವಧು' ಚಿತ್ರದಲ್ಲಿ ವಿ.ಸೀತಾರಾಮಯ್ಯನವರ ಕವಿತೆ 'ಎಮ್ಮ ಮನೆಯಂಗಳದಿ ಬೆಳೆದೊಂದು ಹೂವನ್ನು....' ಬಳಕೆಯಾಗಿದೆ. ಮನೆ ಮಗಳನ್ನು ಗಂಡನ ಮನೆಗೆ ಕಳುಹಿಸುವ ಸನ್ನಿವೇಶ. ಈ ಗೀತೆಯನ್ನು ಪ್ರತಿಯೊಂದು ಮದುವೆ ಮನೆಯಲ್ಲೂ ಒಂದು ಸಂಪ್ರದಾಯದಂತೆ ಹಾಡತೊಡಗಿದರು. ಅದೇ ರೀತಿ ಚಿತ್ರವೊಂದರ ಗೀತೆ 'ಸ್ವಾಮಿ ದೇವನೇ ಲೋಕಪಾಲನೇ ತೇನವೋಸ್ತು ನಮೋಸ್ತುತೇ...' ಎನ್ನುವುದು ಕೂಡಾ ಇವತ್ತಿಗೂ ಪ್ರಾರ್ಥನೆ ಹಾಡಾಗಿ ಬಳಕೆಯಲ್ಲಿದೆ. ಈಗ ಹಾಡುವ ಅನೇಕರಿಗೆ ಇವು ಚಲನಚಿತ್ರ ಗೀತೆಗಳೆಂದು ತಿಳಿದೇ ಇಲ್ಲ. ಹಾಗೆ ಬದುಕಿನಲ್ಲಿ ಬೆಸೆದು ಹೋಗಿವೆ ಗೀತೆಗಳು. ಹಾಗೇ 'ನಾಗರಹಾವು' ಚಿತ್ರದ 'ಕತೆ ಹೇಳುವೆ ನನ್ನ ಕಥೆ ಹೇಳುವೆ....' ಹಾಡಿನ ಮೂಲಕ ಕತೆಯೊಂದನ್ನು - narrative - 'flash back' ಬದಲು ಹಾಡಿನಲ್ಲೇ ಹೇಳಲಾಗಿದೆ. ಇಂಥ ಸಮರ್ಥ ಪ್ರಯೋಗ 'ಚೋಮನ ದುಡಿ'ಯ ಚನಿಯನ ಸಾವಿನ ದೃಶ್ಯದಲ್ಲಿ ಪಾಡ್ದನದ ಮಟ್ಟನ್ನು ಆಲಿಸಿ, ಹಾಡಿದ 'ಅಯ್ಯೋ ದೇವರೇ....' ಹಾಡು ಬಹಳ ಪರಿಣಾಮಕಾರಿಯಾಗಿತ್ತು. ಹಾಡನ್ನು Creative ಆಗಿ ಬಳಸಿದ ಚಿತ್ರ 'ಹಂಸಗೀತೆ'. ಸ್ವರ, ಅಲಾಪ, ಮಾತ್ರೆ ಎಂದೆಲ್ಲ ಬೇರೆ ಬೇರೆ ಕಾರಣಕ್ಕೆ ಬಳಸಲಾಗಿದೆ ಹಾಗೂ ಸಾಕಷ್ಟು ಪರಿಣಾಮಕಾರಿ ಕೂಡ. 'ಪ್ರೇಮಲೋಕ'ದಲ್ಲೂ ಕೂಡ ಮಾತುಗಳನ್ನೇ ಹಾಡು (ಏನಮ್ಮ ಹುಡುಗಿ ಕೇಳಮ್ಮ ಸರಿಯಾಗಿ.....) ಮಾಡಿದ್ದಾರೆ. ಆದರೆ ಚಿತ್ರದ ಕಥೆಯ ಎಳೆಗೂ (Thread) ಹಾಡುಗಳ ಶೈಲಿಗೂ ಸಂಬದ್ಧತೆ ತಪ್ಪಿ ಹೋಗುವ ಉದಾಹರಣೆಗಳು ಈಚೆಗೆ ಹೆಚ್ಚುತ್ತಿವೆ.

ಹಿನ್ನೆಲೆ ಸಂಗೀತ

ಭಾವನೆಗೆ ಒತ್ತು ಕೊಡಲು, ರಸ ಪೋಷಣೆಗಾಗಿ ಸಂಗೀತ. ಹಿನ್ನೆಲೆ ಸಂಗೀತದ ಲಯವನ್ನು ಕಾಯ್ದುಕೊಳ್ಳುವುದು, ಮುಖ್ಯವಾಗಿ ಸಿನಿಮಾ ಪ್ರೇಕ್ಷಕನ ಮನಸ್ಸನ್ನು ಹಿಡಿದಿಡಲು ಬಳಸುವ ತಂತ್ರ. ಹಿನ್ನೆಲೆ ಸಂಗೀತ ನೀಡುವಾಗ ಅದು ತೋರಿಸುವ ದೃಶ್ಯದ ಸಹಜ ಸನ್ನಿವೇಶ ನಿರ್ಮಾಣಕ್ಕಷ್ಟೇ ಸೀಮಿತವಾಗಿರಬೇಕು. ಉದಾಹರಣೆಗೆ ಆಸ್ಪತ್ರೆಯಲ್ಲಿ ತುರ್ತು ನಿಗಾ ವಿಭಾಗದಲ್ಲಿರುವ ರೋಗಿಯನ್ನು ತೋರಿಸುವ ಸಂದರ್ಭದಲ್ಲಿ ಸನ್ನಿವೇಶದ ತೀವ್ರತೆಯನ್ನು ತೋರಿಸಲು ಅದು ಸಹಕಾರಿಯಾಗಿರಬೇಕೇ ಹೊರತು ಗಾಬರಿ ಹುಟ್ಟಿಸುವ ರೀತಿಯಲ್ಲಿರಬಾರದು.

ಈ ಮೊದಲೇ ಸೂಚಿಸಿದ 'ಬರ' ಮತ್ತು 'ನಿಷ್ಕರ್ಷ' ಚಿತ್ರಗಳನ್ನು ಈ ಹಂತದಲ್ಲಿ ಉದಾಹರಿಸಬಹುದು. 'ಕಾಡು' ಚಿತ್ರದಲ್ಲಿ ಕಾರಂತರು ಜಾನಪದ ಮಟ್ಟುಗಳನ್ನು ವಾದ್ಯಗಳನ್ನೇ ಹೆಚ್ಚಾಗಿ ಬಳಸಿದ್ದು ಅದು 'ನಮ್ಮ ಕೇಳುವ ಪ್ರಜ್ಞೆ'ಯನ್ನು ಹೆಚ್ಚಿಸುತ್ತದೆ. 'ಚೋಮನ ದುಡಿ'ಯಲ್ಲಿ ಬೆಳ್ಳಿ ಬೆಳಿಯನ ಹತ್ತಿರ ಹೋದಾಗ ರೈಲಿನ ಕೂಗು, ಕಾಸರವಳ್ಳಿಯವರ 'ಕ್ರೌರ್ಯ'ದಲ್ಲಿ ರೈಲಿನ ಸಿಳ್ಳು ಮತ್ತಿತರ ಶಬ್ದಗಳ ಬಳಕೆ, ಹೀಗೆ ಹತ್ತಾರು ಉದಾಹರಣೆಗಳನ್ನು ನೋಡಬಹುದು.

ದೃಶ್ಯದ ಹಿನ್ನೆಲೆಯಲ್ಲಿ ಹಾಡಿನ ಬದಲಿಗೆ ಬರೀ ಸಂಗೀತವೂ ಇರಬಹುದು. ಇದೂ ಕೂಡ ದೃಶ್ಯದ ಲಹರಿಯನ್ನು ಸ್ಥಾಪಿಸುವಲ್ಲಿ, ದೃಶ್ಯಾಂಶ ಹಾಗೂ ಮಾತು ಇತ್ಯಾದಿಗಳಿಂದ ಸ್ಥಾಪಿತವಾದ ಲಹರಿಯನ್ನು ತೀವ್ರಗೊಳಿಸುವಲ್ಲಿ ಸಹಾಯಕವಾಗುತ್ತದೆ. ಇಡೀ ಚಿತ್ರಕ್ಕೆ ಹಿನ್ನೆಲೆ ಸಂಗೀತ ಒಂದು ಗತಿಯನ್ನು, ಲಯವನ್ನು ಒದಗಿಸುತ್ತದೆ.

ಧ್ವನಿ ವಿಶೇಷಗಳು

ಚಿತ್ರದ ಧ್ವನಿ ವಾಹಿನಿಯಲ್ಲಿ ಬರುವ ಮಾತು, ಸಂಗೀತವಲ್ಲದ ಧ್ವನಿಗಳೆಲ್ಲವೂ 'ಧ್ವನಿ ವಿಶೇಷ' (sound effects)ಗಳು. ಉದಾಹರಣೆಗೆ ಕಾರು ಚಲಿಸುವುದು, ಮಳೆ ಬರುವುದು, ಅಂಬುಲೆನ್ಸ್ ಸೈರನ್, ರೈಲಿನ ಸಿಳ್ಳೆ ಇವೇ ಮುಂತಾದುವು. ಕಾಶಿನಾಥ್‌ರ 'ಅಪರಿಚಿತ'ದಲ್ಲಿನ ಒಂದು sound ಬಳಕೆ ಉಲ್ಲೇಖನೀಯ. ಕೋಕಿಲಾ ಮೋಹನ್ ಒಂದು ಪಾತ್ರ, black mail ಮಾಡುತ್ತಾನೆ. ತಾನು ಹೇಳಬೇಕಾಗಿದ್ದ ಮಾತು ಹೇಳುತ್ತಾ ಕುಳಿತಿದ್ದ ಟೇಬಲ್ ಮೇಲೆ ಉಗುರಿನಿಂದ-ಬೆರಳಿನಿಂದ tap ಮಾಡುತ್ತಾ ಹೋಗುತ್ತಾನೆ. ಆಗ ಅದನ್ನೇ musical rhythmಗೆ ಬದಲಾಯಿಸಿ ಅದ್ಭುತ ಎಫೆಕ್ಟ್ ತುಂಬಿದ್ದಾರೆ.

'ಗೀಜಗನ ಗೂಡು' ಚಿತ್ರದ ಕೊನೆಯ sound effect ಬಹಳ ಚೆನ್ನಾಗಿದೆ. Tribal ಜನರ ಜೀವನಕ್ರಮವನ್ನು ಫೋಟೋ ಹಿಡಿದು commodity ಮಾಡುವ ನಾಯಕಿ ಅದರ ಫೋಟೋ ತೆಗೆಯುತ್ತ ಹೋಗುತ್ತಾಳೆ. ಕ್ಯಾಮರಾ ಕ್ಲಿಕ್ ಶಬ್ದವು ಕ್ರಮೇಣ Gun shot ಆಗಿ ಬದಲಾಗುತ್ತದೆ. ಆದರೆ ಸೌಂಡ್ ರಿಕಾರ್ಡಿಂಗ್ ಸ್ವಲ್ಪ ಮಂದ ಆಗಿರುವುದರಿಂದ ಇದು ನಿರೀಕ್ಷಿತ ಪ್ರಮಾಣದ ಪರಿಣಾಮ ಬೀರಿರಲಿಲ್ಲ. ಇದೇ ರೀತಿ 'ಭೂಮಿಗೀತ' ಚಿತ್ರದಲ್ಲೂ ಜಾನಪದ ವಾದ್ಯಗಳನ್ನು ಬಳಸಲಾಗಿತ್ತು.

ಧ್ವನಿವಾಹಿನಿಯ ವಿನ್ಯಾಸದ ವಿವಿಧ ಹಂತಗಳು

ಥಿಯೇಟರಿನಲ್ಲಿ ಕುಳಿತು ಸಿನಿಮಾವನ್ನು ಆಸ್ವಾದಿಸುವಾಗ ನಮಗೆ ದೃಶ್ಯ ಬೇರೆ, ಧ್ವನಿ ಬೇರೆಯಾಗಿ ತೋರುವುದೇ ಇಲ್ಲ. ಇನ್ನು ಧ್ವನಿಯ ವಿವಿಧ ಅಂಶಗಳ ಬಗ್ಗೆ ಗಮನ ಹೋಗುವುದಂತೂ ದೂರವೇ ಉಳಿಯಿತು. ನೋಡುವ ದೃಶ್ಯವಾಹಿನಿಯ ವಿವಿಧ ಹಂತಗಳ ಕಾರ್ಯಾಚರಣೆಗಳ ಸಂಯೋಜನೆಯಿಂದ ರೂಪುಗೊಳ್ಳುವ ಹಾಗೆ ಧ್ವನಿಯ ಸಂಗೀತ, ಸಂಭಾಷಣೆ, ಧ್ವನಿವಿಶೇಷ ಇಂಥ ಅಂಶಗಳೂ ಚಿತ್ರ ನಿರ್ಮಾಣದ ವಿವಿಧ ಹಂತಗಳಲ್ಲಿ ಪ್ರತ್ಯೇಕವಾಗಿ (Track) ಹಾಗೂ ಸಂಯೋಜಿತವಾಗಿ ಧ್ವನಿವಾಹಿನಿಯಲ್ಲಿ ಸೇರಿಕೊಂಡು (Mixing) ರೂಪುಗೊಳ್ಳುತ್ತವೆ.

ಮೌನ, ನಿಶ್ಶಬ್ದ

ಕನ್ನಡ ಚಿತ್ರರಂಗದ ಆರಂಭದ ದೆಸೆಯಲ್ಲಿ ಶಬ್ದ ಮುದ್ರಣದ ಯಂತ್ರದ ಭಾರಿ ಗಾತ್ರ ಹಾಗೂ ಅದನ್ನು ಬಳಸುವ ಕ್ಲಿಷ್ಟ ವಿಧಾನದಿಂದಾಗಿ ಅದಕ್ಕೆ three phase current ಬೇಕಿತ್ತು. ಸಾಗಿಸಲು ಲಾರಿಯೇ ಬೇಕಾಗುತ್ತಿತ್ತು. ಶಬ್ದ ಮುದ್ರಣವೆಂದರೆ ಸಂಭಾಷಣೆ ಮತ್ತು ಸಂಗೀತದ ಮುದ್ರಣ ಮಾತ್ರ ಆಗಿರುತ್ತಿತ್ತು. ನಂತರ portable ಮಾದರಿಯ ಒಂದು ಮುದ್ರಣ ಯಂತ್ರ ಬಂದ ಮೇಲೆ ಎಲ್ಲಿ ಬೇಕಾದರೂ ಧ್ವನಿ ಮುದ್ರಣ ಸಾಧ್ಯವಾಯಿತು. ಹೆಗಲಿಗೇರಿಸಿಕೊಂಡು ಓಡಾಡಬಹುದಾದ ಈ ಯಂತ್ರ ಬ್ಯಾಟರಿ/ಸೆಲ್‌ನಲ್ಲಿ ಚಲಿಸುತ್ತದೆ. ಈ ಸೌಕರ್ಯ ಬಂದ ಮೇಲೆ ಕನ್ನಡ ಚಿತ್ರಗಳಲ್ಲಿ ಹೆಚ್ಚು ಶಾಬ್ದಿಕ ಘಟಕಗಳನ್ನು ಸೇರಿಸಲು ಸಾಧ್ಯವಾಯಿತು. ಪ್ರಪಂಚದೆಲ್ಲೆಡೆಯೂ ಇದೇ ಆದದ್ದು. ಒಂದು ವ್ಯತ್ಯಾಸವೆಂದರೆ ಈ portable recorder ಕನ್ನಡ ಚಿತ್ರರಂಗದಲ್ಲಿ ಬಳಕೆಗೆ ಬಂದದ್ದು ಬಹಳ ತಡವಾಗಿ, ಅಂದರೆ ೧೯೭೨ರಲ್ಲಿ ('ನಾಗರ' ಇಂತಹದೇ ಒಂದು ಯಂತ್ರ). ಹಾಗಾಗಿ ೬೦-೭೦ರ ನಂತರದ ಕನ್ನಡ ಚಿತ್ರಗಳ ಶಬ್ದ ಪಟ್ಟಿಯ ವಿನ್ಯಾಸದಲ್ಲಿ ಗಮನಾರ್ಹ ಬದಲಾವಣೆ ಕಂಡುಬಂದಿದೆ. ಇದರ ಪರಿಣಾಮವೇನೆಂದರೆ ಸ್ಟುಡಿಯೋ ನೇಮಿಸಿಕೊಂಡ ಧ್ವನಿತಜ್ಞರಲ್ಲದೆ freelance ಧ್ವನಿತಜ್ಞರೂ ಚಿತ್ರದ ತಂಡಕ್ಕೆ ಸೇರ್ಪಡೆಯಾದದ್ದು ಆಗಲೇ ಎನ್ನಬಹುದು (ಉದಾ: ಕೆ.ಎಸ್.ಕೃಷ್ಣಮೂರ್ತಿ, ಚಂದ್ರಶೇಖರ್, ಪೀಟರ್, ಸೋಮಶೇಖರ್). ಹಾಗೇ ಧ್ವನಿ ವಿಶೇಷಗಳನ್ನು ನೀಡುವ ಒಂದು ವೃತ್ತಿಪರ ತಂಡವೂ ಸೃಷ್ಟಿಯಾಯಿತು.

'ಉಯ್ಯಾಲೆ' ಕನ್ನಡದಲ್ಲಿ ಹೊರಾಂಗಣದಲ್ಲೇ ಧ್ವನಿ ಮುದ್ರಿತವಾದ ಮೊದಲ ಚಿತ್ರ. ಆ ಚಿತ್ರದಲ್ಲಿ ಧ್ವನಿ ವಿಶೇಷಗಳು ಬಹಳ ಕಡಿಮೆ ಇದ್ದದ್ದಕ್ಕೆ ಅದು ಹೊಸ ತಂತ್ರವಾಗಿದ್ದೂ ಕಾರಣವೆನ್ನಬಹುದು. 'ನಾಂದಿ' ಚಿತ್ರ ಕಿವುಡಿ, ಮೂಗಿ ಹುಡುಗಿಯ ಕತೆ. ಅಲ್ಲಿ ಮಗುವಿನ ಸಾವಿನ ದೃಶ್ಯದಲ್ಲಿ ಆಕೆಗೆ ಮಗು ಕೂಗುವುದು ಕೇಳಿಸುತ್ತಿಲ್ಲ ಎನ್ನುವುದಕ್ಕೆ ಮೌನ ಬಳಸಲಾಯಿತು. ಹ.ಸೂ.ರಾಜಶೇಖರ್‌ರವರ 'ಕರ್ಫ್ಯೂ' ಚಿತ್ರದ ಕ್ಲೈಮ್ಯಾಕ್ಸ್‌ನಲ್ಲಿ ನಿಶ್ಶಬ್ದವನ್ನು ಬಹಳ ಪರಿಣಾಮಕಾರಿಯಾಗಿ ಬಳಸಲಾಗಿತ್ತು.

'ಮೌನವೂ ಮಾತಿನ ಒಂದು ರೂಪ, ನಿಶ್ಶಬ್ದವೂ ಶಬ್ದದ ಒಂದು ಪ್ರಕಾರ' ಎಂದು ಗುರುತಿಸಲು ಸಾಧ್ಯವಾದರೆ ಚಲನಚಿತ್ರದಲ್ಲಿ ಇದರ ಅರ್ಥಪೂರ್ಣ ಬಳಕೆಯೂ ಸಾಧ್ಯ. ವಿವಿಧ ಧ್ವನಿಪ್ರಕಾರಗಳ ನಡುವೆ ಕೆಲಕ್ಷಣ ಬರುವ ನಿಶ್ಶಬ್ದ ವಿಭಿನ್ನತೆಯಿಂದಲೇ ಗಮನ ಸೆಳೆಯುತ್ತದೆ. ಹಾಗೆಯೇ ನಿರಂತರ ಮಾತಿನ ನಡುವೆ ಸೇರಿಕೊಳ್ಳುವ ಮೌನ ಮಾತಿಗಿಂತ

ಹೆಚ್ಚು ಅರ್ಥಪೂರ್ಣವಾಗಿಬಿಡುತ್ತದೆ. 'ಮೌನಂ ಸಮ್ಮತಿ ಲಕ್ಷಣಂ' ಎಂದು ನಂಬಿಕೊಂಡೇ ಬಂದಿರುವ ನಮಗೆ ಮೌನಕ್ಕೆ ಅಸಮ್ಮತಿ, ಉಪೇಕ್ಷೆ, ರಹಸ್ಯ, ಆಲಸ್ಯ, ಸಂವಹನರಾಹಿತ್ಯ ಇಂಥ ವಿವಿಧ ಅರ್ಥಗಳೂ ಇವೆ ಎಂಬ ಅರಿವಾಗುವುದು ಕಷ್ಟ. ನಿಜ ಜೀವನದಲ್ಲಿ ಮೌನ ಇನ್ನೂ ಅನೇಕ ಅರ್ಥಗಳನ್ನು ಪ್ರತಿನಿಧಿಸುತ್ತದೆ. ಇದರ ಸಮರ್ಥ ಬಳಕೆಯಿಂದ ಧ್ವನಿವಾಹಿನಿ ಇನ್ನೂ ಶ್ರೀಮಂತಗೊಳ್ಳುತ್ತದೆ.

ಸೃಜನಶೀಲ ಧ್ವನಿ ವಿನ್ಯಾಸಗಳು

ಮೂರ್ತತೆ, ನಿಖರತೆ, ವಾಸ್ತವತೆ, ವರ್ತಮಾನಬದ್ಧತೆ - ಇವು ಚಲನಚಿತ್ರದ ಸತ್ವವೂ ಹೌದು, ದೌರ್ಬಲ್ಯವೂ ಹೌದು. ಒಂದು ಸಾಕ್ಷ್ಯಚಿತ್ರ ಇಲ್ಲವೆ ವಿಜ್ಞಾನ ಚಿತ್ರ, ತರಬೇತಿ ಚಿತ್ರ, ಪ್ರಾತ್ಯಕ್ಷಿಕಾ ಚಿತ್ರ ಇಂಥವನ್ನು ಮಾಡುವಾಗ ಚಲನಚಿತ್ರದ ಮೂರ್ತತೆ ಹಾಗೂ ವಾಸ್ತವತೆಗಳು ವಸ್ತುನಿಷ್ಠ ಸಂವಹನದ ಉತ್ತಮ ಸಾಧನಗಳಾಗಿ ಪರಿಣಮಿಸುತ್ತವೆ. ಭಾಷೆಯಲ್ಲಿ ಎಷ್ಟೇ ಕಷ್ಟಪಟ್ಟರೂ ಸಾಧಿಸಲಾಗದಂಥ ನಿಖರತೆಯನ್ನು ಚಲನಚಿತ್ರ ಮಾಧ್ಯಮದಲ್ಲಿ ಸುಲಭವಾಗಿ ಸಾಧಿಸಬಹುದು.

ಆದರೆ ಕಲೆಗಳ ಮಹತ್ವವಿರುವುದು ಸಂವಹನಕ್ಕಿಂತ ಹೆಚ್ಚಾಗಿ 'ಅಭಿವ್ಯಕ್ತಿ'ಯ ಸಾಧನಗಳಾಗಿ ಮೂಲಭೂತ ಸಾಮಗ್ರಿ, ತಂತ್ರಗಳು ಒಂದೇ ಆಗಿದ್ದರೂ ಪ್ರತಿಯೊಬ್ಬ ಕಲಾವಿದನೂ ವಿಭಿನ್ನ ರೀತಿಯಲ್ಲಿ ತನ್ನ ಕೃತಿಗಳನ್ನು ಸೃಜಿಸಲು ಸಾಧ್ಯವಿರುವುದೇ ಕಲಾಮಾಧ್ಯಮಗಳ ಸತ್ವ. ಚಲನಚಿತ್ರ ನಿರ್ಮಾಣ ಕಲೆಯಲ್ಲಿ ಮೂರ್ತತೆ ಇಂಥ ಸೃಜನಕ್ರಿಯೆಗೆ ಅಡ್ಡಿಯುಂಟುಮಾಡುತ್ತದೆ. ಅದು ಎಲ್ಲವನ್ನೂ 'ಅದೆಂದರೆ ಅದೇ' ಎಂಬ ರೀತಿಯ ವಾಸ್ತವತೆಗೆ ಬಂಧಿಸಿಬಿಡುತ್ತದೆ. ಕಲಾಪ್ರಕಾರವಾಗಿ ಅದೇ ಅದರ ದೌರ್ಬಲ್ಯ. ಚಲನಚಿತ್ರ ಮಾಧ್ಯಮವನ್ನು ಸೃಜನಶೀಲ ಅಭಿವ್ಯಕ್ತಿಗೆ ಬಳಸಲು ನೋಡುವ ನಿರ್ದೇಶಕನಿಗೆ ಇದೊಂದು ನಿತ್ಯದ ಸವಾಲಾಗುತ್ತದೆ. ಚಲನಚಿತ್ರದ ಎರಡು ಪ್ರಮುಖ ಘಟಕಗಳಾದ ದೃಶ್ಯ ಹಾಗೂ ಧ್ವನಿ ಎರಡಕ್ಕೂ ಈ ಮಾತು ಅನ್ವಯವಾಗುತ್ತದೆ. ಧ್ವನಿಯ ಮಟ್ಟಿಗೆ ಹೇಳುವುದಾದರೆ ನಮ್ಮಲ್ಲಿ ದೃಶ್ಯಾಂಶದಲ್ಲಿ ನಡೆದಷ್ಟು ಪ್ರಯೋಗಗಳೂ ನಡೆದಿಲ್ಲ ಎನ್ನಬಹುದು.

ಚಲನಚಿತ್ರದಲ್ಲಿ ದೃಶ್ಯಸರಣಿಯ ಜೊತೆ ಸಂಯೋಜಿತವಾಗಿ ಬಳಕೆಯಾಗುವ ಧ್ವನಿವಾಹಿನಿಯಲ್ಲಿ ಇರುವ ಧ್ವನಿವರ್ಗಗಳು ಎಂದರೆ ಸಂಭಾಷಣೆ/ನಿರೂಪಣೆ, ಹಾಡು/ಸಂಗೀತ, ಧ್ವನಿವಿಶೇಷಗಳು ಹಾಗೂ ಮೌನ/ನಿಶ್ಶಬ್ದ. ಒಬ್ಬ ಸೃಜನಶೀಲ ನಿರ್ದೇಶಕನ ಕೈಯಲ್ಲಿ ಇವು ಪ್ರತ್ಯೇಕವಾಗಿ ಮತ್ತು ಸಂಯೋಜಿತವಾಗಿ ಅತ್ಯಂತ ಪರಿಣಾಮಕಾರಿ ಸಾಧನಗಳಾಗಬಲ್ಲವು. ಆದರೆ ಭಾರತೀಯ ಸಂದರ್ಭದಲ್ಲಿ ಹಾಗೂ ಕನ್ನಡ ಚಿತ್ರಗಳ ಸಂದರ್ಭದಲ್ಲಿ ಹೇಳುವುದಾದರೆ ಈ ಧ್ವನಿಸಾಧನಗಳಲ್ಲಿ ಸಾಮಾನ್ಯವಾಗಿ ಬಳಕೆಯಾಗಿರುವುದು ಮೊದಲ ಎರಡು ಎಂದರೆ ಸಂಭಾಷಣೆ ಹಾಗೂ ಹಾಡು/ಸಂಗೀತಗಳು ಮಾತ್ರ. ಅದೂ ಅತಿ ಹೆಚ್ಚು ಎನ್ನುವ ಮಟ್ಟಿಗೆ ಉಳಿದ ಧ್ವನಿಯ ಅಂಶಗಳ ಕುರಿತು ನಮ್ಮ ನಿರ್ದೇಶಕರು ಹೆಚ್ಚು ಗಮನ ಹರಿಸಿಲ್ಲ.

ಚಲನಚಿತ್ರದ, ಅದರಲ್ಲೂ ಮುಖ್ಯವಾಗಿ ಟಾಕಿಯ, ಆರಂಭದ ದಿನಗಳಲ್ಲಿ ಚಿತ್ರ ನಿರ್ಮಾಣದಲ್ಲಿ ತೊಡಗಿದ್ದವರು ಹೆಚ್ಚಿನಂಶ ರಂಗಭೂಮಿಯಿಂದ ಬಂದವರಾಗಿದ್ದುದೂ ಇದಕ್ಕೆ ಪ್ರಮುಖ ಕಾರಣವಿರಬಹುದು. ನಾಟಕವೆಂದರೆ ಉದ್ದುದ್ದ, ಪ್ರಾಸಬದ್ಧ ಸಂಭಾಷಣೆ ಹಾಗೂ ಹೆಜ್ಜೆ ಹೆಜ್ಜೆಗೆ ಹಾಡು ಎಂದು ಕಲಾವಿದರು ಭಾವಿಸಿದ್ದ ಕಾಲವದು. ಇನ್ನು ಹಿನ್ನೆಲೆ ಸಂಗೀತವೂ ಸೂತ್ರಬದ್ಧವಾಗಿತ್ತು. ಸಂತೋಷ, ದುಃಖ, ರೌದ್ರ, ಹಾಸ್ಯ ಹೀಗೆ ಇಂತಿಂಥ ಸಂದರ್ಭದಲ್ಲಿ ಇಂತಿಂಥ ರಾಗದಲ್ಲಿ ಹಿನ್ನೆಲೆ ಸಂಗೀತ ಒದಗಿಸಬೇಕು ಎಂಬ ಸಾಧಾರಣ ಪದ್ಧತಿ ರೂಢಿಯಾಗಿದ್ದ ಕಾಲ ಅದು. ಇನ್ನು ಉಳಿದಂತೆ ದೃಶ್ಯಗಳು ಬದಲಾವಣೆಯಾಗುವಾಗ ಮಧ್ಯದಲ್ಲಿ ಪರದೆ ಬಿದ್ದು ಏಳುವಾಗ, ಇಲ್ಲವೆ ರಂಗಸಜ್ಜಿಕೆಯನ್ನು ಬದಲಾಯಿಸುವಾಗ ಉಂಟಾಗುವ ಬಿಡುವನ್ನು ತುಂಬಲು ಸೇತು ಸಂಗೀತ (Bridge Music), ಇದು ಯಾವುದಿದ್ದರೂ ನಡೆಯುತ್ತದೆ. ಆಗಿ ಹೋಗಿರುವ ದೃಶ್ಯ ಇಲ್ಲವೆ ಬರಲಿರುವ ದೃಶ್ಯಗಳ ಲಹರಿಗೆ ತಕ್ಕ ಹಾಗೆ ಇರಬೇಕು ಎಂಬ ಕಾಳಜಿಯೇನೂ ಇರುತ್ತಿರಲಿಲ್ಲ. ಗುಬ್ಬಿವೀರಣ್ಣರಂಥವರು ಜನಪ್ರಿಯ ನಾಟಕಗಳನ್ನೇ ಸಿನಿಮಾ ಮಾಡಲು ಹೊರಟಾಗ ಸಹಜವಾಗಿಯೇ ಸಂಭಾಷಣೆ ಹಾಗೂ ಹಾಡುಗಳು ಧ್ವನಿ ಪಟ್ಟಿಯ ಎಲ್ಲಾ ಜಾಗವನ್ನೂ ಆಕ್ರಮಿಸಿದವು. ಮುಂದಿನ ವರ್ಷಗಳಲ್ಲಿ ಬಂದ ನಿರ್ದೇಶಕರೆಲ್ಲರೂ ರಂಗಭೂಮಿಯ ಹಿನ್ನೆಲೆ ಇದ್ದವರೇನೂ ಅಲ್ಲ. ಆದರೆ ಅವರಿಗೂ ಆ ಹಿಂದಿನ ಸಿನಿಮಾಗಳೇ ಮಾದರಿಗಳಾದವು. ಇಂದಿಗೂ ಕೂಡ ಈ ನಾಟಕೀಯ ಸ್ವಭಾವವೇ ನಮ್ಮ ಸಿನಿಮಾಗಳಲ್ಲಿ ಹೆಚ್ಚು ಪ್ರಚಲಿತ ಹಾಗೂ ಜನಪ್ರಿಯ. ಮಾಧ್ಯಮ ಬದಲಾಯಿತು, ಆದರೆ ನಿರೂಪಣೆಯ (narration) ವಿಧಾನ ಹಾಗೆಯೇ ಉಳಿಯಿತು.

ಸೃಜನಶೀಲ ರಂಗಭೂಮಿಯಲ್ಲಿಯೂ ಕೂಡ ದೃಶ್ಯಕ್ಕೆ 'ಗ್ರೌಂಡ್ ಪ್ಲ್ಯಾನ್' ಇದ್ದ ಹಾಗೆ ಧ್ವನಿಗೂ ಒಂದು 'ಸೌಂಡ್ ಪ್ಲ್ಯಾನ್' ಇರಬೇಕು. ಚಲನಚಿತ್ರ ನಿರ್ಮಾಣದ ಸಂದರ್ಭದಲ್ಲಿ ಇದು ಇನ್ನೂ ಸಂಬದ್ಧ. ಚಲನಚಿತ್ರದ ಮೂಲಭೂತ ಸಾಧನಗಳೇ ಎರಡು, ದೃಶ್ಯ ಮತ್ತು ಧ್ವನಿ. ಕ್ಯಾಮರಾ ಕೋನಗಳು, ಚಲನೆಗಳು, ಚಿತ್ರ ಚೌಕಟ್ಟಿನಲ್ಲಿ ವಿವಿಧ ದೃಶ್ಯಾಂಶಗಳ ವಿನ್ಯಾಸ, ಸಮತೋಲನ, ಸಂಕಲನ, ವಿಶೇಷ ಪರಿಣಾಮಗಳು ಹೀಗೆ ವಿವಿಧ ಸಾಧ್ಯತೆಗಳನ್ನು ಬಳಸಿಕೊಂಡು ನಿರ್ದೇಶಕ ತನ್ನ ಚಿತ್ರದ ದೃಶ್ಯ ಭಾಗವನ್ನು ಯೋಜಿಸಿಕೊಳ್ಳುತ್ತಾನೆ. ಇದೇ ಕಾಳಜಿಯನ್ನು ಧ್ವನಿ ಭಾಗದ ಯೋಜನೆಯಲ್ಲೂ ತೋರಿದರೆ ದೃಶ್ಯ-ಧ್ವನಿಗಳ ಸಾಮರಸ್ಯ ಉಂಟಾಗುತ್ತದೆ; ಉತ್ತಮ ಸಿನಿಮಾ ಕೃತಿಯ ರಚನೆಯಾಗುತ್ತದೆ.

ಸರ್ವೇಸಾಮಾನ್ಯವಾಗಿ ಗುರುತಿಸಿಕೊಂಡಿರುವ ಸಂಭಾಷಣೆ, ಸಂಗೀತವೂ ತನ್ನ ವಾಸ್ತವಿಕ ಅರ್ಥದಲ್ಲಷ್ಟೇ ಬಳಕೆಯಾಗುತ್ತಿರುವುದೇ ಹೆಚ್ಚು. ಅದಕ್ಕೂ ಮೀರಿ ಅವಕ್ಕೆ ಸಾಂಕೇತಿಕ ಅರ್ಥ ಇದೆ, ಅವು ವಾಸ್ತವಕ್ಕಿಂತ ಭಿನ್ನವಾದ ಇನ್ನೊಂದು ಆಯಾಮವನ್ನು ಚಿತ್ರಕ್ಕೆ ಸೃಷ್ಟಿಸಿಕೊಡಬಲ್ಲವು ಎಂಬ ಅಂಶವನ್ನು ಗೌಣವಾಗಿ ಕಾಣುವುದು ರೂಢಿಯಾಗಿದೆ.

ಕಲಾತ್ಮಕ ಬಳಕೆಯ ಕೆಲವು ನಿದರ್ಶನಗಳು

ಭಾರತೀಯ ಸಿನಿಮಾದ ಸಂದರ್ಭದಲ್ಲಿ ಸತ್ಯಜಿತ್ ರೇ, ಋತ್ವಿಕ್ ಘಟಕ್, ಮೃಣಾಲ್ ಸೇನ್ ಮುಂತಾದವರು ಧ್ವನಿಯ ವಿವಿಧ ಘಟಕಗಳನ್ನು ತಮ್ಮ ಚಿತ್ರಗಳಲ್ಲಿ ಹೆಚ್ಚು ಕಲಾತ್ಮಕವಾಗಿ ಬಳಸಿಕೊಂಡಿರುವುದನ್ನು ನಾವು ಕಾಣುತ್ತೇವೆ. ಉದಾಹರಣೆಗೆ ಸಿತಾರ್ ವಾದಕ ಶ್ರೇಷ್ಠ ರವಿಶಂಕರ್‌ರ ಸಂಗೀತ ನಿರ್ದೇಶನದಲ್ಲಿ, 'ಪಥೇರ್ ಪಾಂಚಾಲಿ' ಚಿತ್ರದಲ್ಲಿ ಸತ್ಯಜಿತ್‌ರಾಯ್ ಬಳಸಿರುವ ಹಿನ್ನೆಲೆ ಸಂಗೀತ ಅಲ್ಲಿಯವರೆಗೆ ಭಾರತೀಯ ಸಿನಿಮಾದಲ್ಲಿ ಅಪರೂಪವಾಗಿದ್ದ ವಾಸ್ತವಿಕತೆಗೆ ಪೂರಕವಾಗಿದೆ. ವಯಸ್ಸಿಗೆ ಬಂದ ಮಗಳು ದುರ್ಗಾ ಸತ್ತು ಹೋಗಿರುವ ಸುದ್ದಿಯನ್ನು ಅದೇ ತಾನೇ ಯಾತ್ರೆಯಿಂದ ಹಿಂದಿರುಗಿದ ಗಂಡನಿಗೆ ಹೇಳಲಾಗದೆ ಸಂಕಟದಿಂದ ಗೋಳೋ ಎಂದು ತಾಯಿ ಅತ್ತಾಗ ಅವಳು ಅಳುವ ಧ್ವನಿಯನ್ನು ನಾವು ಕೇಳುವುದಿಲ್ಲ, ಅದರ ಬದಲಿಗೆ ಸಿತಾರ್‌ನ ಝಾಲಾ ಕೇಳಿಸುತ್ತದೆ. ನಿಜವಾದ ಅಳುವಿನ ಸದ್ದಿನಿಂದ ಬರೀ ಮೆಲೋಡ್ರಾಮಾ ಆಗಬಹುದಾಗಿತ್ತು, ಅಳು ಸಂಗೀತದಿಂದಾಗಿ ನಮ್ಮ ಕರುಳನ್ನು ಹಿಂಡುತ್ತದೆ. ಪ್ರೇಕ್ಷಕರೂ ಮೂಕವಾಗಿ ಅಳುತ್ತಾರೆ.

ಸತ್ಯಜಿತ್ ರಾಯ್ ಅವರ ಇನ್ನೊಂದು ಚಿತ್ರ 'ನಾಯಕ್'. ಅದರ ಕಥೆ ಬಹಳ ಹೊತ್ತು ಒಂದು ರೈಲಿನಲ್ಲಿ ನಡೆಯುತ್ತದೆ. ಇಲ್ಲಿನ ದೃಶ್ಯಾವಳಿಗಳ ಹಿನ್ನೆಲೆಯಲ್ಲಿ ಸಂಗೀತದ ಬದಲಿಗೆ ರಾಯ್ ಅವರು ಧ್ವನಿವಿಶೇಷಗಳನ್ನು ಬಳಸಿರುವ ರೀತಿ ಅತ್ಯಂತ ಕೌಶಲಪೂರ್ಣವಾಗಿದೆ. ಬರೀ ರೈಲಿನ ಸದ್ದೇ ಆದರೂ ಅದರಲ್ಲೂ ಅನೇಕ ವಿಧಗಳಿವೆ. ಪ್ರಯಾಣಿಕರಿನ್ನೂ ಹತ್ತಿ-ಇಳಿಯುತ್ತಿರುವಾಗ ರೈಲು ನಿಲ್ದಾಣದ ಸದ್ದು, ರೈಲು ಹೊರಟಾಗ ಅದರ ಚಲನೆಯ ಸದ್ದಿನೊಂದಿಗೆ ಜನರ ಗಡಿಬಿಡಿಯ ಸದ್ದು, ರೈಲು ವಿವಿಧ ಗತಿಗಳನ್ನು ಪಡೆಯುವ ಸದ್ದು, ಅದು ನಿರಂತರವಾಗಿ ಸಾಗಿರುವಾಗಲೂ ಮೊದಲ ದರ್ಜೆ ಕ್ಯಾಬಿನ್‌ನಲ್ಲಿ ಕೇಳಿಸುವ ಅದರ ಸದ್ದೇ ಬೇರೆ, ಕಾರಿಡಾರ್‌ನಲ್ಲಿ ಕೇಳಿಸುವ ಸದ್ದೇ ಬೇರೆ. ಬಾಗಿಲು ತೆಗೆದಾಗ, ಮುಚ್ಚಿದಾಗ, ಆಗುವ ಏರಿಳಿತ, ಟಾಯ್ಲೆಟ್‌ನಲ್ಲಿ ಪ್ರವೇಶಿಸಿದಾಗ ಅಡಿಯಿಂದ ಕೇಳಿಸುವ ಸದ್ದು - ಹೀಗೆ ರೈಲಿನ ಸದ್ದೇ ಅನೇಕ ಶ್ರುತಿ, ಲಯ, ಏರಿಳಿತಗಳಲ್ಲಿ ಸಂಭವಿಸುತ್ತದೆ ಎಂಬುದು ದಿನನಿತ್ಯ ಪ್ರಯಾಣ ಮಾಡುವವರ ಗಮನಕ್ಕೂ ಬಂದಿರಲಿಕ್ಕಿಲ್ಲ. ಆದರೆ ರಾಯ್ ಅವರು ಧ್ವನಿಯಲ್ಲಿ ಏನೆಲ್ಲ ವೈವಿಧ್ಯ ಸಾಧ್ಯವೋ ಅದನ್ನೆಲ್ಲಾ ಬಳಸಿಕೊಂಡಿದ್ದಷ್ಟೇ ಅಲ್ಲ, ಅವುಗಳನ್ನು ಒಂದರ ಪಕ್ಕದಲ್ಲಿ ಒಂದು ಜೋಡಿಸಿರುವುದರ ಮೂಲಕ ಒಂದು ವಿಶಿಷ್ಟ ಶಬ್ದವಿನ್ಯಾಸವನ್ನೇ ಸೃಷ್ಟಿಸಿದ್ದಾರೆ.

ಧ್ವನಿಗ್ರಾಹಕ, ನಿರ್ದೇಶಕ ಋತ್ವಿಕ್ ಘಟಕ್‌ರ 'ಮೇಘ ಢಾಕೆ ತಾರಾ' ಚಿತ್ರದಲ್ಲಿ ಒಂದೆಡೆ ನಾಯಕಿ ಕೋಣೆಯ ಬಾಗಿಲು ತೆರೆದಾಗ ಅವಳ ಪ್ರಿಯಕರನೊಂದಿಗೆ ಅವಳ ತಂಗಿ ಪ್ರೇಮ ಸಲ್ಲಾಪದಲ್ಲಿ ತೊಡಗಿರುವುದನ್ನು ಕಾಣುತ್ತಾಳೆ. ಅದರಿಂದ ಅವಳಿಗೆ ಆದ ಆಘಾತವನ್ನು ನಿರ್ದೇಶಕರು ಹಿನ್ನೆಲೆಯಲ್ಲಿ ಹಾಕಿರುವ ಚಾವಟಿ ಏಟಿನ ಸದ್ದಿನಿಂದ ಬಿಂಬಿಸುತ್ತಾರೆ. ಸ್ವಂತ ಸುಖ ಸಂತೋಷಗಳನ್ನು ತೊರೆದು, ತಾನು ದುಡಿದು ಸಾಕುತ್ತಿರುವ ಕುಟುಂಬದ ಸದಸ್ಯರಿಂದಲೇ ಅವಳಿಗೆ ವಂಚನೆ, ದ್ರೋಹ ನಡೆದಾಗಲೆಲ್ಲ ಈ ಚಾವಟಿ ಏಟಿನ ಸದ್ದು ಪುನರಾವರ್ತಿಸುತ್ತ ಹೋಗುತ್ತದೆ. ಹಾಗೆಯೇ ಅಲ್ಲಲ್ಲಿ ಕೇಳಿಸುವ ಒಗ್ಗರಣೆ ಹಾಕುವಾಗ ಉಂಟಾಗುವ ಚಟಪಟ ಸದ್ದೂ ಕೂಡ ನಾಯಕಿಯ ಮನದಲ್ಲಿನ ಈರ್ಷೆಯನ್ನು ಪ್ರತಿನಿಧಿಸುತ್ತಾ ಹೋಗುತ್ತದೆ. ಇಲ್ಲಿ ವಾಸ್ತವವೇ ಆದ

ಸದ್ದುಗಳು ಆ ಮಟ್ಟವನ್ನು ಮೀರಿ ದೃಶ್ಯಕ್ಕೆ ಒಂದು ಧ್ವನಿಭಾಷ್ಯವೇನೋ ಎಂಬ ರೀತಿಯಲ್ಲಿ ಕೆಲಸ ಮಾಡತೊಡಗುತ್ತವೆ.

ಮೃಣಾಲ್‌ಸೇನ್ ಅವರ 'ಏಕ್ ದಿನ್ ಪ್ರತಿ ದಿನ್' ಚಿತ್ರದ ಕೊನೆಯಲ್ಲಿ ಇಡೀ ಕಲ್ಕತ್ತಾ ನಗರವನ್ನು ಸುತ್ತಾಡಿ ಕೊನೆಗೆ ನಾಯಕಿ ಇರುವ ವಠಾರವನ್ನು ತಲುಪುವ ದೃಶ್ಯಸರಣಿಯೊಂದಿಗೆ ಹಿನ್ನೆಲೆಯಲ್ಲಿ ಆಕಾಶವಾಣಿ ಕೇಂದ್ರದ ಬೆಳಗಿನ 'ಆರಂಭಿಕ ಸಂಗೀತ' (Signature Tune) ಇದೆ. ಹಾಗೆ ನೋಡಿದರೆ ಅದು ರವಿಶಂಕರ್ ಅವರ ನಿರ್ದೇಶನದಲ್ಲಿ ರಚಿತವಾಗಿರುವ ಸುಮಧುರವಾದ ಒಂದು ಸಂಯೋಜನೆ. ಆದರೆ ಚಿತ್ರವನ್ನು ಅವರೆಗೆ ನೋಡಿರುವ ಪ್ರೇಕ್ಷಕರ ಮನಸ್ಸಿನಲ್ಲಿ ಬೀರುವ ಪರಿಣಾಮ ಮಧುರವಾದದ್ದಲ್ಲ. ಬದಲಿಗೆ ಅದು ನಾಯಕಿಯ, ಅಥವಾ ಮಧ್ಯಮವರ್ಗದ ಯುವತಿಯರ ಬದುಕಿನಲ್ಲಿ ಬದಲಾವಣೆಯೇ ಇಲ್ಲದೇ ದಿನದಿನವೂ ಮರುಕಳಿಸುವ ಘೋರ ಏಕತಾನತೆಯನ್ನು ಕ್ರೂರವಾಗಿ ಬಿಂಬಿಸುತ್ತದೆ.

ಆಕಾಶವಾಣಿಯ Signature Tune ರವಿಶಂಕರ್‌ರವರದ್ದು. ಇದೇ ಟ್ಯೂನ್ ಅನ್ನು ಬಸು ಭಟ್ಟಾಚಾರ್ಯ ಅವರು 'ಏಕ್ ದಿನ್ ಪ್ರತಿ ದಿನ್'ಗಿಂತಲೂ ಮೊದಲು 'ಅನುಭವ್'ನಲ್ಲಿ ಬಳಸಿದ್ದರು. ಈ ಸಂದರ್ಭದಲ್ಲಿ 'ಗೆಜ್ಜೆಪೂಜೆ'ಯ ''ಕಾಯೌ ಶ್ರೀಗೌರಿ.....' ಬಳಕೆಯನ್ನು ಸ್ಮರಿಸಬಹುದು. ಈ ಹಾಡಿನ ಬಳಕೆಯಿಂದ ಕ್ಷಣಾರ್ಧದಲ್ಲಿ ಹಳೆಯ, ಸಾಂಪ್ರದಾಯಿಕ ಮೈಸೂರಿನ ವಾತಾವರಣವನ್ನು ಪುಟ್ಟಣ್ಣನವರು ಸೃಷ್ಟಿಸಿದರು. ಸುಪ್ರಭಾತ ಉಪಯೋಗಿಸಿ ಬೆಳಗಾಯಿತು ಎಂದು ಸೂಚಿಸುವ ಅನೇಕ ಪ್ರಯೋಗಗಳು ಕನ್ನಡದಲ್ಲಿವೆ. ಹಾಸ್ಯ ಎನ್ನಿಸಲು 'ಪುಷ್ಪಕ ವಿಮಾನ' ಚಿತ್ರದಲ್ಲಿ ಬಳಸಿದ ರೀತಿ ಉಲ್ಲೇಖನೀಯ.

ಕನ್ನಡದಲ್ಲಿ ಹೆಚ್ಚಾಗಿ ಕಂಡುಬಂದ ಒಂದು ರೀತಿಯ ಶಬ್ದ ಸಂಯೋಜನೆಯನ್ನು ಇನ್ನೂ ಒಂದು ರೀತಿಯಲ್ಲಿ ಬಳಸಬಹುದು. ಆಗ ಆ ಶಬ್ದ ದೃಶ್ಯದ ಮೇಲೆ ವಿಡಂಬನೆ ಮಾಡುತ್ತಿರುತ್ತದೆ. ಸೂಚ್ಯದ ನೆಲೆಯಲ್ಲಿ. ಉದಾಹರಣೆಗೆ, ಸುಖದೇವ್‌ರ 'ಇಂಡಿಯಾ ೬೭' ಸಾಕ್ಷ್ಯಚಿತ್ರದಲ್ಲಿ ಒಬ್ಬ ಸ್ಕೂಲ್ ಮಾಸ್ತರ ಹಳ್ಳಿಯ ಹುಡುಗರನ್ನು ಬಯಲಿನಲ್ಲಿ ಕೂರಿಸಿ ಪಾಠ ಮಾಡುತ್ತಿರುತ್ತಾನೆ. ಯಾವುದೇ-ಬೋರ್ಡು, ಬಳಪ - ಸಲಕರಣೆಗಳಿಲ್ಲ. ಆತ ಮಾಡುತ್ತಿರುವ ಪಾಠ ಭಾರತದ ಪ್ರಗತಿ ಅಷ್ಟೆ. ಯಾವುದೇ ಒತ್ತುಗಳಿಲ್ಲ. ಯಾವುದೇ ಢಾಳಾದ ಹೇಳಿಕೆ ಇಲ್ಲ. ಸೂಚ್ಯ ನೆಲೆಯಲ್ಲಿ ದೃಶ್ಯದ ವೈರುಧ್ಯ ಮೂಡಿ ಬರುತ್ತದೆ.

ಗಿರೀಶ್ ಕಾಸರವಳ್ಳಿಯವರ 'ಘಟಶ್ರಾದ್ಧ' (ಕಪ್ಪು-ಬಿಳುಪು) ಚಿತ್ರದಲ್ಲಿ ಬಾಲಕ ನಾಣಿ ಕಟೀರನೊಂದಿಗೆ ರಾತ್ರಿ ಹೊತ್ತಿನಲ್ಲಿ ಕಾಡಿನಲ್ಲಿ ಹೋಗುತ್ತಿರುವ ಒಂದು ದೃಶ್ಯವಿದೆ. ನಾಣಿಗೆ ಇದ್ದಕ್ಕಿದ್ದಂತೆ ಭೂತದ ಭಯ ಆವರಿಸುತ್ತದೆ. ಎಷ್ಟರ ಮಟ್ಟಿಗೆ ಎಂದರೆ ಜೊತೆಗೆ ನಡೆಯುತ್ತಿರುವ ಕಟೀರನೂ ನಿಜವಲ್ಲವೇನೋ, ಅವನೇ ಭೂತವೇನೋ ಎನ್ನುವಷ್ಟು. ಖಾತ್ರಿ ಪಡಿಸಿಕೊಳ್ಳಲು 'ಕಟೀರ, ನನ್ನನ್ನು ಮುಟ್ಟು' ಅನ್ನುತ್ತಾನೆ. ಕಟೀರ ತಾನು ಕೆಳಜಾತಿಯವನಾದ್ದರಿಂದ ಮುಟ್ಟಲಾರೆ ಎನ್ನುತ್ತಾನೆ. ನಾಣಿಗೆ ಭಯ ಇನ್ನೂ ಜಾಸ್ತಿಯಾಗುತ್ತದೆ. ಗಾಯತ್ರಿ ಮಂತ್ರ ಹೇಳಿಕೊಂಡರೆ ಭಯ ಹೋಗುತ್ತದೆ ಎಂಬ ಅರಿವು ಮೂಡುತ್ತದೆ. ಇದನ್ನು ಅನುಸರಿಸಿ ನಿರ್ದೇಶಕರು ಅಲ್ಲಿ ಅವನಿಂದ ಗಾಯತ್ರಿ ಮಂತ್ರಪಠಣ ಮಾಡಿಸಬಹುದಿತ್ತು. ಆದರೆ ಗಾಯತ್ರಿ ಮಂತ್ರ ಹೇಳಲೂ ಕೆಲವು ನಿಯಮ - ಕ್ರಮಗಳಿವೆ. ನಾಣಿಯೇ ಖುದ್ದು ಹೇಳಲೂ ಬಾರದು. ಆದರೂ ಗಾಯತ್ರಿ ಮಂತ್ರ ಕೇಳಿಸಲೂ ಬೇಕು. ಇಂಥ ಉದ್ದೇಶದಿಂದ ನಿರ್ದೇಶಕ ಗಿರೀಶ್ ಮಾಡಿದ್ದೇನು ? ಗಾಯತ್ರಿ ಮಂತ್ರ ಎಲ್ಲೋ ನಾಣಿಯ ಪೂರ್ವಜರು ಹೇಳುತ್ತಿದ್ದ ಹಾಗೆ, ಪೂರ್ವಸಂಸ್ಕಾರದಿಂದ ಬರುತ್ತಿರುವ ಹಾಗೆ ಹಿನ್ನೆಲೆಯಲ್ಲಿ ಬಳಸಿದ್ದಾರೆ.

ಅವರದೇ 'ಕ್ರೌರ್ಯ' ವರ್ಣಚಿತ್ರದಲ್ಲಿ, ಹುಡುಗ ರಂಗಜ್ಜಿಯ ಮಗ ಬಾವಿಯಲ್ಲಿ ಸತ್ತದ್ದನ್ನು ಕಾಣುವ ದೃಶ್ಯ. ಹುಡುಗ ಅನುಮಾನದಿಂದ ನೀರಿನಲ್ಲಿ ತೇಲುತ್ತಿರುವ ರಂಗಜ್ಜಿ ಮಗನ ಬಟ್ಟೆಯನ್ನು ಕೋಲಿನಿಂದ ಎತ್ತುತ್ತಾನೆ. ಸಂಪೂರ್ಣ ನಿಶ್ಶಬ್ದದ ಹಿನ್ನೆಲೆಯಲ್ಲಿ, ಬಟ್ಟೆಯಿಂದ ತೊಟ್ಟಿಕ್ಕುತ್ತಿರುವ ಹನಿಗಳು ನೀರಿನಲ್ಲಿ ಬೀಳುವ 'ಟಪ್ ಟಪ್' ಸದ್ದು ಮಾತ್ರ ಕೇಳಿಸುತ್ತದೆ. ಇದು ದೃಶ್ಯದ ನಿಗೂಢತೆಯನ್ನು ಹೆಚ್ಚಿಸುವಲ್ಲಿ ಸಹಾಯಕವಾಗಿದೆ. ರಂಗಜ್ಜಿಯ ಮಗನ ಹೆಣವನ್ನು ಹುಡುಗ ನೋಡಲಿರುವುದಕ್ಕೆ ಪೂರ್ವಭಾವಿಯಾಗಿ ಬಂದಿರುವ ನೀರ ಹನಿಗಳ ಹಿಗ್ಗಿಸಿದ ಸದ್ದು ಚಿತ್ರದಲ್ಲಿ ಇನ್ನೂ ಎರಡು ಮೂರುಕಡೆ ಪುನರಾವರ್ತಿಸುತ್ತದೆ. ಪ್ರತಿಸಲವೂ 'ಸಾವಿನ' ದ್ಯೋತಕವಾಗಿ ಪರಿಣಮಿಸುತ್ತದೆ. ಮೊದಲ ಸಲ ರಂಗಜ್ಜಿಯ ಮಗನ ಹೆಣವನ್ನು ಬಾವಿಯಲ್ಲಿ ನೋಡಿ ಭಯಗೊಂಡ ಹುಡುಗ 'ಅಮ್ಮಾ' ಎಂದು ಚೀರುತ್ತಾನೆ. ಅವನ ಚೀರುವ ಧ್ವನಿ ರೈಲಿನ ಪ್ರತಿಯಲ್ಲಿ ಬೆರೆತು ಮುಂದುವರಿದು ನಾಟಕೀಯ (Dramatic) ಪರಿಣಾಮವನ್ನು ಬೀರುತ್ತದೆ.

ಕಡಿಮೆ ವೆಚ್ಚದಲ್ಲಿ ಚಲನಚಿತ್ರಗಳ ಧ್ವನಿಗ್ರಹಣವನ್ನು ನಾಗರಾ ಉಪಕರಣ ಬಳಸಿ ಡಬ್ಬಿಂಗ್ ಮಾಡಿದ್ದಾಗಿದೆ. ನಾಗರಾ ¼ ಇಂಚಿನ ಟೇಪಿನಲ್ಲಿ ಮುದ್ರಿಸಿದ ಧ್ವನಿಯನ್ನು Splice ಮಾಡಿ ಖಾಲಿ ಜಾಗ ಹಾಕಿ S.S.T (Silent Sound Track) ಉಪಯೋಗಿಸಿ ¼ ಇಂಚಿನ ಟೇಪಿನಲ್ಲಿ ಧ್ವನಿಯನ್ನು ಸುರಳಿ ಮಾಡಿ, ಅಂದರೆ ದೃಶ್ಯದ ಅವಧಿಗೆ ಅನುಗುಣವಾಗಿ ಧ್ವನಿ ರಿಕಾರ್ಡ್ ಮಾಡಿ, ಆದರ್ಶ ಫಿಲಂ ಇನ್‌ಸ್ಟಿಟ್ಯೂಟಿನ ಪ್ರಿವ್ಯೂ ಥಿಯೇಟರ್‌ನಲ್ಲಿ, ಬಾಲಭವನ ಸಭಾಂಗಣದಲ್ಲಿ, ಕೌಶಿಕ್ ರಂಗಮಂದಿರದಲ್ಲಿ, ಮುಂತಾದ ಸ್ಥಳಗಳಲ್ಲಿ ಧ್ವನಿಗ್ರಹಣ ಮಾಡಿ ಪ್ರಾಯೋಗಿಕ ಚಿತ್ರಗಳನ್ನು ನಿರ್ಮಿಸುವ ನಿರ್ಮಾಪಕರಿಗೆ ಧ್ವನಿಸಂಯೋಜನೆ ಮಾಡುವಲ್ಲಿ ಪುಣೆ ಫಿಲಂ ಅಂಡ್ ಟೆಲಿವಿಷನ್ ಇನ್‌ಸ್ಟಿಟ್ಯೂಟಿನ ಪದವೀಧರರಾದ ಕೆ.ಎಸ್.ಕೃಷ್ಣಮೂರ್ತಿಯವರು ೧೯೭೦ರಿಂದಲೇ ಅಪಾರ ಸೇವೆ ಸಲ್ಲಿಸಿದ್ದಾರೆ. ಅವರ ಜೊತೆಯಲ್ಲಿ ಸಹಾಯಕರಾಗಿ ಎಸ್.ಜೆ. ಪಾಲಿಟೆಕ್ನಿಕ್‌ನ ಧ್ವನಿಗ್ರಹಣ ಪದವೀಧರರಾದ ಪೀಟರ್ ಹಾಗೂ ಮದ್ರಾಸ್‌ನ ಫಿಲಂ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಪದವೀಧರರಾದ ಎನ್.ಆರ್. ಚಂದ್ರಶೇಖರ್ ಅವರು ಚಿತ್ರ ರಂಗದಲ್ಲಿ ಸೇವೆ ಸಲ್ಲಿಸಿದ್ದಾರೆ. ನಂತರ ಇವರುಗಳು ಪುಟ್ಟಣ್ಣ ಕಣಗಾಲರ ಚಿತ್ರವಾದ 'ರಂಗನಾಯಕಿ', 'ಮಸಣದ ಹೂವು' ಚಿತ್ರದ ಕೆಲವು ದೃಶ್ಯಗಳನ್ನು ನೇರವಾಗಿ ಸ್ಥಳದಲ್ಲೇ ಧ್ವನಿಗ್ರಹಣ ಮಾಡಿದ್ದು, ಕೆಲವು ದೃಶ್ಯಗಳ ಹಾಗೂ ಲೈವ್ ಬ್ಯಾಂಡ್‌ಗಳನ್ನು ನೇರವಾಗಿ ಚಿತ್ರದಲ್ಲಿ ಅಳವಡಿಸಿದ್ದಾರೆ. ಇದು ಪುಟ್ಟಣ್ಣ ಕಣಗಾಲ್‌ರವರ ಪ್ರಯೋಗಪ್ರಿಯ ಸ್ವಭಾವಕ್ಕೂ ನಿದರ್ಶನವಾಗಿದೆ. ಅಲ್ಲದೆ ಗಿರೀಶ್ ಕಾಸರವಳ್ಳಿಯವರ 'ತಬರನ ಕಥೆ', 'ಬಣ್ಣದ ವೇಷ', ನಾಗಾಭರಣರವರ ಕೆಲವು ಚಿತ್ರಗಳಿಗೆ ಪ್ರಾಯೋಗಿಕವಾಗಿ ಕೆಲಸ ಮಾಡುವ ಅವಕಾಶ ದೊರಕಿದಾಗ ಅದನ್ನೂ ಸದುಪಯೋಗ ಪಡಿಸಿಕೊಂಡಿದ್ದಾರೆ.

ಪೂನಾದ ಫಿಲಂ ಅಂಡ್ ಟೆಲಿವಿಷನ್ ಇನ್‌ಸ್ಟಿಟ್ಯೂಟಿನಿಂದ ಸೌಂಡ್ ರಿಕಾರ್ಡಿಂಗ್ ಪದವಿ ಪಡೆದಿದ್ದ ಕೆ.ಎಸ್.ಕೃಷ್ಣಮೂರ್ತಿಯವರು ಬಿ.ವಿ.ಕಾರಂತರ 'ಚೋಮನ ದುಡಿ' ಚಿತ್ರಕ್ಕಾಗಿ ವಿನ್ಯಾಸ ಮಾಡಿರುವ ಹಲವಾರು ಶಬ್ದವಿಶೇಷಗಳು ಗಮನ ಸೆಳೆಯುತ್ತವೆ. ಚೋಮ ಬೆಟ್ಟದ ಮೇಲೆ ನಿಂತಿರುವಾಗ ಫ್ರೇಮ್‌ನಲ್ಲಿ ಕಾಣದ ಒಂದು ಅತೀತವಾದ ಆಯಾಮ (Virtual Space)ವನ್ನು ದೂರದಿಂದ ಕ್ಷೀಣವಾಗಿ ಕೇಳಿಸುವ ಸನಿನಾಟಿಯ ಧ್ವನಿಯಿಂದ ಸೃಷ್ಟಿಸುತ್ತಾರೆ. ಚನಿಯ ಸತ್ತಾಗ ಹಿನ್ನೆಲೆಯಲ್ಲಿ ವಾದ್ಯನದ ಬಳಕೆ, ಚೋಮ ಮತಾಂತರಕ್ಕೆ ಹೊರಟಾಗ ಪಂಜುರ್ಲಿ ಗುಡಿಯನ್ನು ಕಂಡಾಗ ಆತನಿಗೆ ಆಗುವ ಭಯವನ್ನು ತೋರಲು ನೀಡಿರುವ ಕೃತ್ರಿಮ ಶಬ್ದಗಳ ಸಂಯೋಜನೆ ಇವೆಲ್ಲವೂ ಆ ಚಿತ್ರದಲ್ಲಿ ಧ್ವನಿ ವಿನ್ಯಾಸದ ವಿಷಯದಲ್ಲಿ ಕಾಳಜಿ ವಹಿಸಿರುವುದನ್ನು ತೋರುತ್ತದೆ.

ಗಿರೀಶ್ ಕಾರ್ನಾಡರ 'ಕಾಡು' ಚಿತ್ರದಲ್ಲಿ ಅಳು, ಕೂಗಿನ ಹಕ್ಕಿಯ ಧ್ವನಿಯನ್ನು ಬಳಸಿದ ವಿಧಾನ ಕೂಡ ಇಂಥದೇ ಆಗಿದೆ. ಕೆ.ಎಸ್.ಕೃಷ್ಣಮೂರ್ತಿ ಇಂಥ ಪ್ರಯೋಗಗಳಿಂದ ಚಲನಚಿತ್ರದ ಧ್ವನಿ ಪಟ್ಟಿಯನ್ನು ಶ್ರೀಮಂತಗೊಳಿಸಿರುವುದನ್ನು ಹಲವು ನಿರ್ದೇಶಕರು ನೆನಪಿಸಿಕೊಳ್ಳುತ್ತಾರೆ.

ಸಮಕಾಲೀನ ತಾಂತ್ರಿಕ ಪ್ರಗತಿ ಕನ್ನಡ ಚಿತ್ರರಂಗದಲ್ಲೂ ಧ್ವನಿಗ್ರಹಣ ರೀತಿ / ಧ್ವನಿಗ್ರಹಣ ಪುನರುತ್ಪಾದನೆಯಲ್ಲಿ ಸಾಕಷ್ಟು ಬದಲಾವಣೆಗಳನ್ನು ತಂದಿದೆ. 'ಎ.ಕೆ.47', 'ಉಪೇಂದ್ರ', 'ಪ್ರೀತ್ಸೆ', 'ನಾಗದೇವತೆ', ಶಬ್ದವೇಧಿ' ಈ ಪಟ್ಟಿಗೆ ಸೇರುತ್ತವೆ. ಯಾವುದೇ ಹೊಸತನ ಜೀವನದಲ್ಲಿ ಸ್ವಾಗತಾರ್ಹ. ಅದು ನಮಗೂ, ನಮ್ಮ ಪರಿಸರವನ್ನು ಹೊಂದಿಕೊಳ್ಳುವವರೆಗೂ ಸ್ವಲ್ಪ ಮುಜುಗರವೆನಿಸಬಹುದು. ಕಾಲಕ್ರಮೇಣ ನಾವು ಅದಕ್ಕೆ ಹೊಂದಿಕೊಳ್ಳುತ್ತೇವೆ. ಇದು ವಾಸ್ತವ.

ಮೋಹನ ಸುಂದರಂ, ಕೋಟೇಶ್ವರರಾವ್, ಎಸ್.ಪಿ.ರಾಮನಾಥನ್, ಸಿ.ಡಿ.ವಿಶ್ವನಾಥ್, ಎಂ.ಬಿ.ವಾಲ್ಕೆ, ಎಸ್.ರಂಗಸ್ವಾಮಿ, ಸ್ವಾಮಿನಾಥನ್, ಎಂ.ಎ.ಎಸ್.ಅಯ್ಯಂಗಾರ್, ಕೆ.ಆರ್.ಸೀತಾರಾಂ, ಶ್ರೀನಿವಾಸ್, ಎ.ಗೋವಿಂದ ಸ್ವಾಮಿ, ಕೋದಂಡಪಾಣಿ, ಕೃಷ್ಣಮೂರ್ತಿ, ಆರ್ಮುಗಂ, ಇ.ಪಿ.ಜೀವ, ಮೀನಾಕ್ಷಿ ಸುಂದರಂ, ಪಿ.ಜಿ.ಲಕ್ಷ್ಮಣ್ ಮುಂತಾದವರು, ಮೈಸೂರು, ಬೆಂಗಳೂರು ಹಾಗೂ ಮದರಾಸುಗಳಲ್ಲಿ ಚಿತ್ರಿತವಾದ ಕನ್ನಡ ಚಿತ್ರಗಳ ಧ್ವನಿಗ್ರಾಹಕರಾಗಿ ಕೆಲಸ ಮಾಡಿದವರಲ್ಲಿ ಪ್ರಮುಖರು.

ಛಾಯಾಗ್ರಹಣ

ಚಿತ್ರಕ್ಕೆ ಸೃಜನಾತ್ಮಕ ಚೌಕಟ್ಟು

ಚಲನಚಿತ್ರ ಆವಿಷ್ಕಾರದ ತರುಣದಲ್ಲಿ ಅದನ್ನು ಆವಿಷ್ಕರಿಸಿದ ಅಥವಾ ಕೊಂಡುಕೊಂಡಾತ ಚಿತ್ರದ ತುಣುಕುಗಳನ್ನೇ ಪ್ರದರ್ಶಿಸಿ ಜನರನ್ನು ದಿಗ್ಭ್ರಾಂತಿಗೊಳಿಸಿದ. ಕ್ರಮೇಣ ಅವನೇ ಕೆಲವು ಘಟನೆಗಳನ್ನು ಚಿತ್ರಿಸಿ ಪ್ರದರ್ಶಿಸಲಾರಂಭಿಸಿದ. ಈ ರೀತಿ ಆರಂಭವಾದ ಚಲನಚಿತ್ರ ಸೃಷ್ಟಿ ಹಾಗೂ ಪ್ರದರ್ಶನ ಭಾರತಕ್ಕೂ ಆಗಮಿಸಿತು. ಆ ಸಂದರ್ಭದಲ್ಲಿ ಭಾರತೀಯರು ಸ್ಪಂದಿಸಿದ ರೀತಿ, ಅವರಿಂದ ದೊರೆಯಬಹುದಾದ ಆರ್ಥಿಕ ಲಾಭ ಹಾಗೂ ಅದರ ಜನಪ್ರಿಯತೆ ಕೆಲವು ಉತ್ಸಾಹಿಗಳಾದ ಆಸಕ್ತರನ್ನು ಈ ನಿಟ್ಟಿನಲ್ಲಿ ಹೆಚ್ಚಿನ ಜ್ಞಾನ, ಅನುಭವ, ಪರಿಣತಿ ಪಡೆಯಲು ಸಾಗರೋಲ್ಲಂಘನ ಮಾಡುವಂತಾಗಿಸಿತು. ಇದೇ ಸಂದರ್ಭದಲ್ಲಿ ಕೆಲವರು, ಚಲನಚಿತ್ರ ಸೃಷ್ಟಿಯಲ್ಲಿ ಅನುಭವ ಪಡೆದ ವಿದೇಶಿ ತಂತ್ರಜ್ಞರನ್ನು ತಮ್ಮ ಚಿತ್ರಗಳ ತಯಾರಿಕೆಯಲ್ಲಿ ಬಳಸಿಕೊಂಡರು. ಇನ್ನು ಹಲವರು ಚಲನಚಿತ್ರ ನಿರ್ಮಾಣಕ್ಕೆ ಅಗತ್ಯವಾದ ಉಪಕರಣಗಳನ್ನು ವಿದೇಶಗಳಿಂದ ತರಿಸಿಕೊಂಡರೆ, ಮತ್ತೆ ಕೆಲವರು ವಿದೇಶಗಳಲ್ಲಿ ನಿರ್ಮಾಣವಾಗುತ್ತಿದ್ದ ಚಿತ್ರಗಳನ್ನು ಖರೀದಿಸಿ, ಇಲ್ಲಿ ಪ್ರದರ್ಶಿಸುತ್ತ ಈ ಕ್ಷೇತ್ರದಲ್ಲಿ ಬೆಳೆದರು. ಭಾರತದಲ್ಲಿನ ಚಿತ್ರ ನಿರ್ಮಾಣ ಕ್ಷೇತ್ರದಲ್ಲಿ ಮಹಾರಾಷ್ಟ್ರದವರು, ಬಂಗಾಳದವರು ಮತ್ತು ತಮಿಳುನಾಡಿನವರು ಸಾಹಸ ಮನೋವೃತ್ತಿಯಿಂದ ತೊಡಗಿಸಿಕೊಂಡವರಲ್ಲಿ ಮೊದಲಿಗರು. ಉಳಿದವರು ಇವರಂತೆಯೇ ಧೈರ್ಯ ಮಾಡದೆ ಹೋದರೂ ಭಾರತದಲ್ಲಿ ಚಿತ್ರರಂಗದ ಬೆಳವಣಿಗೆಯನ್ನು ಆಸಕ್ತಿಯಿಂದಲೇ ಗಮನಿಸಿದರು.

ಕರ್ನಾಟಕದಲ್ಲಿ ಮೂಕಿಚಿತ್ರಗಳ ಕಾಲದಲ್ಲಿಯೇ ಚಲನಚಿತ್ರ ಸೃಷ್ಟಿ ಕಾರ್ಯ ಆರಂಭವಾಗಿದ್ದರೂ, ಅವುಗಳ ತಾಂತ್ರಿಕ ವಿಭಾಗಗಳಲ್ಲಿ ಹೊರ ರಾಜ್ಯಗಳವರೇ ಹೆಚ್ಚಾಗಿ ತೊಡಗಿಕೊಂಡಿದ್ದರು. ಟಾಕಿ ಯುಗ ಆರಂಭವಾಗಿ ಕನ್ನಡದಲ್ಲಿ ವಾಕ್ಚಿತ್ರಗಳ ತಯಾರಿಕೆ ಆರಂಭಗೊಂಡ ತರುಣದಲ್ಲಿಯೂ ತಾಂತ್ರಿಕ ವಿಭಾಗಗಳಲ್ಲಿ ಕೆಲಸ ಮಾಡಿದವರು ಕನ್ನಡೇತರರೇ. ಅವುಗಳ ಚಿತ್ರೀಕರಣ ಕರ್ನಾಟಕದಲ್ಲಿ ನಡೆದುದರಿಂದ, ಅವುಗಳಲ್ಲಿ ಅಭಿನಯಿಸಿದ ಕಲಾವಿದರು ಕರ್ನಾಟಕದವರಾಗಿದ್ದುದರಿಂದ ಹಾಗೂ ಅದಕ್ಕೆ ಬಂಡವಾಳ ಹಾಕಿದವರು ಕರ್ನಾಟಕದವರಾಗಿದ್ದರಿಂದ ಅವು ನಮ್ಮವು ಎನಿಸಿದವು.

ಚಿತ್ರಕ್ಕೆ ಧ್ವನಿ ಸೇರಿದಾಗ ಚಿತ್ರಗಳ ನಿರ್ಮಾಣ ತಾಂತ್ರಿಕ ಕಾರಣಕ್ಕಾಗಿ ಮತ್ತೆ ಸ್ಟುಡಿಯೋ ಗೋಡೆಯೊಳಗೆ ಬಂಧಿತವಾಯಿತು. ಕನ್ನಡದ ಹೆಚ್ಚಿನ ಚಿತ್ರಗಳು ತಯಾರಾದದ್ದು ಮದ್ರಾಸ್, ಕೊಯಮತ್ತೂರು, ಮಹಾರಾಷ್ಟ್ರದ ಪೂನಾ, ಮುಂಬೈ, ಕೊಲ್ಹಾಪುರಗಳಲ್ಲಿ. ಹೀಗಾಗಿ ನಮ್ಮ ಕನ್ನಡ ಚಿತ್ರಗಳ ಆರಂಭಕಾಲದ ಪರಿಸರ ಮತ್ತು ಪರಿಕರಗಳ ಚರ್ಚೆ ಅನಿವಾರ್ಯವಾಗುತ್ತದೆ. ಆಗಿನ ಗೊಂದಲ, ಗೋಜಲುಗಳಿಂದಾಗಿ ಕೆಲವು ಮಾಹಿತಿ ಖಚಿತವಾಗಿ ದೊರೆಯದಿರುವುದರಿಂದ ಕೇವಲ ಊಹಿಸಿ ಬರೆಯಬಹುದು. ಆದರೆ ಕನ್ನಡ ಚಿತ್ರರಂಗ ಕರ್ನಾಟಕದಲ್ಲಿ ನೆಲೆಯೂರಿದ ಮೇಲೆ ಈ ಸಮಸ್ಯೆ ಸ್ವಲ್ಪ ಮಟ್ಟಿಗೆ ಪರಿಹಾರವಾಗಿ, ತಾಂತ್ರಿಕ ಬೆಳವಣಿಗೆಯನ್ನು ಖಚಿತವಾಗಿ ಗಮನಿಸಬಹುದು.

(ಚಿತ್ರ ೧) ಕ್ಯಾಮರಾ ಬೂತ್ ಕೊಠಡಿಯಲ್ಲಿ ಕನ್ನಡಿಯ ತೆರೆಯ ಹಿಂದೆ ಕ್ಯಾಮರಾ

ವಿಶ್ವಮಟ್ಟದಲ್ಲಿ ತಾಂತ್ರಿಕ ಬೆಳವಣಿಗೆ ಹಾಗೂ ಅದರ ಪರಿಣಾಮಗಳು

ಕಣ್ಣಿನ ಪರ್ಸಿಸ್ಟೆನ್ಸ್ ಆಫ್ ವಿಷನ್‌ನಿಂದ ಹತ್ತಕ್ಕಿಂತ ಹೆಚ್ಚು ಸ್ಥಿರಚಿತ್ರಗಳು ಒಂದರ ಹಿಂದೆ ಒಂದು ಬಂದಾಗ ಅವು ಒಂದಕ್ಕೊಂದು ಮಿಳಿತವಾಗುವುದರಿಂದ ಚಲನಚಿತ್ರಗಳನ್ನು ತಯಾರಿಸಲು ಸೆಕೆಂಡಿಗೆ ಹದಿನಾರು ಸ್ಥಿರಚಿತ್ರಗಳು ಸರಿಸೆಯಾಗಿ ಬರುವಂತೆ ಫಿಲಂ ಓಡುವ ವೇಗವನ್ನು ನಿರ್ಧರಿಸಲಾಯಿತು. ಕ್ಯಾಮರಾವಿಗೆ ವಿದ್ಯುತ್ ನಿಯಂತ್ರಣವನ್ನು ಇನ್ನೂ ಮಾಡದಿದ್ದುದರಿಂದ, ಫಿಲಂ ಅನ್ನು ಕ್ಯಾಮರಾದೊಳಗೆ ಚಲಿಸಲು ಕ್ಯಾಮರಾದ ಬಲ ಪಕ್ಕದಲ್ಲಿದ್ದ ಹಿಡಿಯನ್ನು ಕೈಯಿಂದ ಸುತ್ತಬೇಕಾಗಿತ್ತು. ಕ್ಯಾಮರಾವನ್ನು ಒಂದೆಡೆಯಲ್ಲಿ ಸ್ಥಿರವಾಗಿಟ್ಟು ಛಾಯಾಗ್ರಾಹಕ ಚಿತ್ರೀಕರಣ ನಡೆಯುವಷ್ಟು ಹೊತ್ತೂ ನಿರಂತರವಾಗಿ ಈ ಹಿಡಿಯನ್ನು ಸುತ್ತಬೇಕಿತ್ತು. ಮೂಕಿಚಿತ್ರಗಳ ತಯಾರಿಕೆ ನಡೆಯುತ್ತಿದ್ದಷ್ಟು ಕಾಲ ಇದೇ ರೀತಿ ಚಿತ್ರೀಕರಣವಾಗುತ್ತಿತ್ತು.

೧೯೨೭ರಲ್ಲಿ ಚಿತ್ರೀಕರಣ ವಿಧಾನದಲ್ಲಿ ಒಂದು ಮಹಾಕ್ರಾಂತಿ ಜರುಗಿತು. ಅದುವರೆಗೆ ನಡೆದು ಬಂದಿದ್ದೆಲ್ಲವನ್ನೂ ತಲೆಕೆಳಗು ಮಾಡಿಬಿಟ್ಟಿತು. ಅದೇ ಚಲನಚಿತ್ರದಲ್ಲಿ ಮಾತುಗಳ ಆಗಮನ. ವಿಜ್ಞಾನಿಗಳ ಪರಿಶ್ರಮದ ಫಲವಾಗಿ, ಪ್ರತಿ ಸನ್ನಿವೇಶದಲ್ಲಿನ ಮಾತು ಮತ್ತು ಶಬ್ದಗಳು ಅದೇ ಫಿಲಂ ಮೇಲೆ ಮೂಡಿಸಲ್ಪಟ್ಟು ಪಾತ್ರಗಳ ತುಟಿಯ ಚಲನೆಗೆ ಜೊತೆಯಾಗಿ ಮಾತುಗಳೂ ಕೇಳಿಸುವಂತೆ ಮಾಡಲು ಸಾಧ್ಯವಾಯಿತು.

ಫಿಲಂ ಮೇಲೆ ಶಬ್ದದ ಮೂಡಿಕೆ ಆರಂಭವಾದ ಮೇಲೆ, ಶಬ್ದವು ಇನ್ನೂ ಹೆಚ್ಚು ಸಹಜವಾಗಿ ಬರಬೇಕಾದರೆ ಫಿಲಂ ಓಡುವ ವೇಗವನ್ನು ಹೆಚ್ಚಿಸಬೇಕಾದದ್ದು ಅನಿವಾರ್ಯವಾಯಿತು. ಸಂಶೋಧನೆಯ ಫಲವಾಗಿ ಫಿಲಂ ಓಡುವ ವೇಗವನ್ನು ಒಂದೂವರೆಯಷ್ಟು ಹೆಚ್ಚಿಸಿದರೆ ಶಬ್ದದ ಪುನರ್ ರಚನೆಯು ಉತ್ತಮವಾಗಿರುವುದೆಂದು ನಿರ್ಧರಿಸಲಾಯಿತು. ಅದರಂತೆ, ಅದುವರೆಗೆ ಕ್ಯಾಮರಾದಲ್ಲಿ ಹಾಗೂ ಪ್ರದರ್ಶನ ಕಾಲದಲ್ಲಿ ಫಿಲಂ ಓಡುವ ವೇಗವನ್ನು ೧೬ರಿಂದ ೨೪ ಫ್ರೇಮುಗಳಿಗೆ ಹೆಚ್ಚಿಸಲಾಯಿತು. ಇದೇ ವೇಗ ಈಗ ಪ್ರಪಂಚದಾದ್ಯಂತ ಸ್ವೀಕೃತವಾದ ನಿಯಂತ್ರಿತ ವೇಗವಾಗಿ ಪರಿಗಣಿಸಲ್ಪಟ್ಟಿದೆ.

ಫಿಲಂ ಓಡುವ ವೇಗ ಹೆಚ್ಚಾದ ನಂತರ ಫಿಲಂ ಅನ್ನು ಕೈಯಿಂದ ಸುತ್ತಲು ಸಾಧ್ಯವಾಗದಿದ್ದುದರಿಂದ, ಕ್ಯಾಮರಾದಲ್ಲಿ ಹಾಗೂ ಪ್ರದರ್ಶನ ಯಂತ್ರದಲ್ಲಿ ವಿದ್ಯುತ್ ಮೋಟಾರುಗಳನ್ನು ಅಳವಡಿಸಲಾಯಿತು. ಕೈಯಲ್ಲಿ ಫಿಲಂ ಸುತ್ತುತ್ತಿದ್ದಾಗ ಫಿಲಂ ಓಡುವ ವೇಗದಲ್ಲಿ ಸ್ವಲ್ಪ ಹೆಚ್ಚು ಕಡಿಮೆಯಾದರೂ ತಡೆದುಕೊಳ್ಳಬಹುದಿತ್ತು. ಆದರೆ ಫಿಲಂ ಮೇಲೆ ಮೂಡಿದ ಫಿಲಂನಿಂದ ಬರುವ ಶಬ್ದವು ೨೪ ಸ್ಥಿರ ಚಿತ್ರಗಳಿಗಿಂತ ಹೆಚ್ಚು ಅಥವಾ ಕಡಿಮೆಯಾದಲ್ಲಿ ಶಬ್ದದ ಪುನರ್ ರಚನೆಯು ವಿಕೃತವಾಗಿ ಬರುವುದನ್ನು ತಪ್ಪಿಸಲು ಸೆಕೆಂಡಿಗೆ ೨೪ ಫ್ರೇಮ್‌ಗಳು ಅಥವಾ ಸ್ಥಿರಚಿತ್ರಗಳು ಓಡುವಂತೆ ಮಾಡುವ ಮೋಟಾರುಗಳನ್ನೇ ಉಪಯೋಗಿಸಲಾಯಿತು. ಧ್ವನಿಮುದ್ರಣ ಯಂತ್ರದಲ್ಲಿಯೂ ಸಹ ಇದೇ ರೀತಿಯ

ಮೋಟಾರನ್ನು ಉಪಯೋಗಿಸಿ, ಕ್ಯಾಮರಾ ಹಾಗೂ ಧ್ವನಿಮುದ್ರಣ ಯಂತ್ರಗಳು ಜೊತೆಯಾಗಿ ಓಡುವಂತೆ ಮಾಡುತ್ತಿದ್ದ ಈ ಮೋಟಾರುಗಳಿಗೆ ಸಿಂಕ್ರೊನೋಸ್ ಮೋಟಾರ್ ಎಂದು ಹೆಸರಾಯಿತು.

ಶಬ್ದವನ್ನು ಫಿಲಂ ಮೇಲೆ ಮುದ್ರಿಸುವುದಕ್ಕೆ ಪ್ರಾರಂಭಿಸಿದ ನಂತರ ಹಲವಾರು ದಶಕಗಳವರೆಗೆ ನಟನಟಿಯರ ಮಾತುಗಳನ್ನು ನೇರವಾಗಿ, ದೃಶ್ಯವು ಚಿತ್ರೀಕರಣವಾಗುತ್ತಿರುವಾಗಲೇ ಧ್ವನಿಮುದ್ರಣವನ್ನೂ ಮಾಡುವ ಪದ್ಧತಿಯು ರೂಢಿಯಲ್ಲಿದ್ದಿತು. ಮೊದಮೊದಲು ಕ್ಯಾಮರಾವಿಗೆ ಮೋಟರ್‌ಗಳನ್ನು ಜೋಡಿಸಿದಾಗ ಅದು ವಿಪರೀತ ಶಬ್ದ ಮಾಡುತ್ತಿತ್ತು. ಇದರಿಂದ ನೇರವಾಗಿ ಶಬ್ದಗ್ರಹಣ ಮಾಡಲು ಅಡಚಣೆಯಾಗುತ್ತಿತ್ತು. ಆದ್ದರಿಂದ ಮೋಟರ್ ಓಡುವ ಶಬ್ದವು ಹೊರಗೆ ಕೇಳದಿರುವಂತೆ ಸುತ್ತಲೂ ಮೆತ್ತೆಗಳನ್ನು ಹಾಕಿ ತಯಾರು ಮಾಡಿದ ಚಿಕ್ಕ ಕೊಠಡಿಗಳಲ್ಲಿ (ಕ್ಯಾಮರಾ ಬೂತ್) ಕ್ಯಾಮರಾವನ್ನಿಟ್ಟು ಮುಂದಿದ್ದ ಗಾಜಿನ ಮೂಲಕ ದೃಶ್ಯದ ಚಿತ್ರೀಕರಣ ಮಾಡಲಾಗುತ್ತಿತ್ತು. ಇದರಿಂದ ಕ್ಯಾಮರಾವನ್ನು ಒಂದೇ ಜಾಗದಲ್ಲಿ ಸ್ಥಿರವಾಗಿಡಬೇಕಾದದ್ದು ಅನಿವಾರ್ಯವಾಗಿತ್ತು.

ನಿರಂತರ ಸಂಶೋಧನೆಯಿಂದ ಕ್ಯಾಮರಾದಲ್ಲಿನ ಫಿಲಂ ಓಡುವುದಕ್ಕೆ ಬೇಕಾದ ಹಲವು ಭಾಗಗಳನ್ನು ಲೋಹದಿಂದ ಮಾಡುವ ಬದಲು ಫೈಬರ್‌ನಿಂದ ತಯಾರು ಮಾಡಿದರೆ ಕ್ಯಾಮರಾ ಓಡುವ ಸಮಯದಲ್ಲಿ ಉಂಟಾಗುವ ಅನವಶ್ಯಕ ಶಬ್ದವು ಬಹಳಷ್ಟು ಕಡಿಮೆಯಾಗುವುದೆಂದು ಕಂಡುಹಿಡಿಯಲಾಯಿತು. ಜೊತೆಗೆ ಕ್ಯಾಮರಾದ ಒಡಲಿನ ವಿನ್ಯಾಸದಲ್ಲಿಯೂ ಹಲವು ಮಾರ್ಪಾಡುಗಳನ್ನು ಮಾಡಿದ್ದರಿಂದ ಕ್ಯಾಮರಾ ಓಡುವ ಸಮಯದಲ್ಲಿ ಉಂಟಾಗುತ್ತಿದ್ದ ಶಬ್ದವು ಕೇಳಿಸುವುದನ್ನು ಬಹಳಷ್ಟು ತಡೆಯಲಾಯಿತು. ಇದರ ಪರಿಣಾಮವಾಗಿ ಕ್ಯಾಮರಾವಿಗೆ ಕ್ಯಾಮರಾ ಬೂತ್‌ನಿಂದ ಬಿಡುಗಡೆ ದೊರಕಿ ಅದು ಹೊರಗೆ ಬರಲು ಸಾಧ್ಯವಾಯಿತು.

ಈ ರೀತಿ ತಯಾರಾದ ಕ್ಯಾಮರಾಗಳಲ್ಲಿ ಪ್ರಮುಖವಾದದ್ದು ಮಿಚೆಲ್ ಕ್ಯಾಮರಾ. ಶಬ್ದ ನಿಯಂತ್ರಣ ಹೊಂದಿದ್ದ ಈ ಕ್ಯಾಮರಾಗೆ 'ನಾಯ್ಸ್ ಕಂಟ್ರೋಲ್ಡ್ ಮಾಡಲ್' ಎಂದು ಹೆಸರು. ಅದನ್ನು ಇನ್ನೂ ಹ್ರಸ್ವಗೊಳಿಸಿ ರೂಪಿಸಿದ 'ಎನ್.ಸಿ. ಮಾಡೆಲ್ ಮಿಚೆಲ್' ನಮ್ಮ ದೇಶದಲ್ಲಿ ಕಳೆದ ಎರಡು ದಶಕಗಳವರೆಗೆ ಬಳಕೆಯಲ್ಲಿದ್ದಿತು.

ಈ ಮಾದರಿ ಕ್ಯಾಮರಾದಲ್ಲಿ ಸಹ ಇನ್ನೂ ಸ್ವಲ್ಪ ಶಬ್ದ ಕೇಳಿ ಬರುತ್ತಿದ್ದುದರಿಂದ ಅದಕ್ಕೆ ಲೋಹದಲ್ಲಿ ಮಾಡಿದ ದೊಡ್ಡದೊಂದು ಕವಚವನ್ನು ಹಾಕಿ ಚಿತ್ರೀಕರಣ ಮಾಡಲಾಗುತ್ತಿತ್ತು. ಈ ಕವಚವು ಬಹಳ ಭಾರವಾಗಿರುತ್ತಿದ್ದುದರಿಂದ ಅದನ್ನು ಒಳಾಂಗಣ ಚಿತ್ರೀಕರಣದ ಸಮಯದಲ್ಲಿ ಮಾತ್ರ ಎಂದರೆ, ಸ್ಟುಡಿಯೋಗಳಲ್ಲಿ ಮಾತ್ರ ಕ್ಯಾಮರಾ ಚಲಿಸುವಂತೆ ಮಾಡಲು ಉಪಯೋಗಿಸುತ್ತಿದ್ದ ಟ್ರಾಲಿಗಳ ಮೇಲೆ ಕ್ಯಾಮರಾ ಇರಿಸಿದಾಗ ಮಾತ್ರ ಉಪಯೋಗಿಸಲಾಗುತ್ತಿತ್ತು. ಇವುಗಳಿಗೆ 'ಕ್ಯಾಮರಾ ಬ್ಲಿಂಪ್'ಗಳೆಂದು ಹೆಸರು. ಇವೆಲ್ಲಾ ಈಗ ವಸ್ತು ಸಂಗ್ರಹಾಲಯಗಳನ್ನು ಸೇರಿವೆ.



(ಚಿತ್ರ ೪) ಡೆಬ್ರಿ ಕ್ಯಾಮರಾ ಬಳಸಿ ಚಿತ್ರೀಕರಣ

ಮಿಚೆಲ್ ಕ್ಯಾಮರಾವಿಗೆ ಬೇರೊಂದು ಕವಚ ಹಾಕುವ ಬದಲು, ಆ ಕ್ಯಾಮರಾಗೇ ಹೊಂದಿಕೊಂಡು ಬರುವ ಕವಚವನ್ನು ತಯಾರಿಸಲಾಯಿತು. ಈ ಮಾದರಿಗೆ 'ಬ್ಲಿಂಪ್ಡ್ ನಾಯ್ಸ್ ಕಂಟ್ರೋಲ್ಡ್ ಮಾಡೆಲ್ ಮಿಚೆಲ್' ಅಥವಾ 'ಬಿ.ಎನ್.ಸಿ.ಮಾಡೆಲ್' ಎಂದು ಹೆಸರು. ಎನ್.ಸಿ.ಮಿಚೆಲ್ ಕ್ಯಾಮರಾ ಮುಂಭಾಗದಲ್ಲಿ ನಾಲ್ಕು ಬೇರೆ ಬೇರೆ ಲೆನ್ಸ್‌ಗಳನ್ನು ಜೋಡಿಸಿದ್ದ ಟರೆಟ್ ಇರುತ್ತಿದ್ದು, ಲೆನ್ಸ್ ಅನ್ನು ಬದಲಾಯಿಸಬೇಕಾದಾಗ ಟರೆಟ್ ಅನ್ನು ತಿರುಗಿಸಿ ಬೇರೆ ಲೆನ್ಸ್ ಹಾಕಬಹುದಿತ್ತು. ಆದರೆ ಈ ಬಿ.ಎನ್.ಸಿ.ಮಾಡೆಲ್ ಮಿಚೆಲ್‌ನಲ್ಲಿ ಟರೆಟ್ ಇಲ್ಲದಿದ್ದುದರಿಂದ, ಪ್ರತಿಯೊಂದು ಬಾರಿ ಲೆನ್ಸ್ ಬದಲಾಯಿಸಬೇಕಾದಾಗ ಮೊದಲಿದ್ದ ಲೆನ್ಸ್ ಅನ್ನು ಕಳಚಿ, ಅದೆ ಜಾಗದಲ್ಲಿ ಬೇರೆ ಲೆನ್ಸ್ ಅನ್ನು ಹಾಕಬೇಕಿತ್ತು. ನಮ್ಮ ದೇಶದಲ್ಲಿ ಈ ಮಾಡೆಲ್ ಕ್ಯಾಮರಾಗಳು ಒಂದೆರಡು ಮಾತ್ರ ಇದ್ದವು.

ಅಮೆರಿಕಾದಲ್ಲಿ ಮಿಚೆಲ್ ಕ್ಯಾಮರಾಗಳು ತಯಾರಾಗುತ್ತಿದ್ದ ಸಮಯದಲ್ಲಿ ಚಲನಚಿತ್ರ ತಯಾರಿಕೆಯಲ್ಲಿ ತನ್ನದೇ ಆದ ದಿಶೆಯಲ್ಲಿ ಮುನ್ನಡೆಯುತ್ತಿದ್ದ ಫ್ರಾನ್ಸ್ ದೇಶದಲ್ಲಿ ಬೇರೆ ರೀತಿಯ ಕ್ಯಾಮರಾ ತಯಾರಾಗಿತ್ತು. ಅದಕ್ಕೆ 'ಡೆಬ್ರಿ' ಕ್ಯಾಮರಾ ಎಂದು ಹೆಸರು.

(ಚಿತ್ರ ೨) ಎನ್.ಸಿ.ಮಾಡೆಲ್ ಮಿಚೆಲ್ ಕ್ಯಾಮರಾ

(ಚಿತ್ರ ೩) ಬಿ.ಎನ್.ಸಿ.ಮಾಡೆಲ್ ಮಿಚೆಲ್ ಕ್ಯಾಮರಾ

ಮಿಚೆಲ್ ಕ್ಯಾಮರಾವಿಗೂ ಡೆಬ್ರಿ ಕ್ಯಾಮರಾವಿಗೂ ಬಹಳ ವ್ಯತ್ಯಾಸವಿದ್ದಿತು. ಮಿಚೆಲ್ ಕ್ಯಾಮರಾದಲ್ಲಿ ಕಚ್ಚಾ ಫಿಲಂ ತುಂಬಲು ಮತ್ತು ಚಿತ್ರ-ಗ್ರಹಣ ಮಾಡಿದ ನಂತರ ಫಿಲಂ ಸುತ್ತಿಕೊಳ್ಳಲು ಉಪಯೋಗಿಸುತ್ತಿದ್ದ 'ಮ್ಯಾಗಜೀನ್' ಕ್ಯಾಮರಾವಿನ ಮೇಲೆ ಇರುತ್ತಿತ್ತು. ಆದರೆ ಡಬ್ರಿಯಲ್ಲಿ ಇವೆರಡಕ್ಕೂ ಬೇರೆ ಬೇರೆ ಮ್ಯಾಗಜೀನ್‌ಗಳು ಇದ್ದು, ಕ್ಯಾಮರಾವಿನ ಬಲಭಾಗದಲ್ಲಿ ಒಂದು, ಎಡಭಾಗದಲ್ಲಿ ಇನ್ನೊಂದು ಇರುತ್ತಿತ್ತು. ಮಿಚೆಲ್‌ನಲ್ಲಿ ಪಕ್ಕದಲ್ಲಿದ್ದ ವ್ಯೂ ಫೈಂಡರ್‌ನಲ್ಲಿ ಚಿತ್ರೀಕರಣ ನಡೆಯುತ್ತಿರುವ ದೃಶ್ಯವನ್ನು ನೋಡುವಂತಿತ್ತು. ಫಿಲಂ ಮೇಲೆ ಚಿತ್ರಗ್ರಹಣ ವಾಗುವ ಪಿಕ್ಚರ್ ಗೇಟಿಗೂ, ಈ ವ್ಯೂ ಫೈಂಡರ್‌ಗೂ ಇರುವ ಅಂತರದಿಂದ ಉಂಟಾಗುವ 'ಪ್ಯಾರಲಾಕ್ಸ್' ಅನ್ನು ಸರಿಮಾಡುವುದಕ್ಕಾಗಿ ಈ ವ್ಯೂ ಫೈಂಡರ್, ಉಪಯೋಗಿಸುತ್ತಿರುವ ಲೆನ್ಸಿಗೂ, ದೃಶ್ಯಕ್ಕೂ ಕ್ಯಾಮರಾಗೂ ಇರುವ ದೂರಕ್ಕೆ ತಕ್ಕಂತೆ ಎಡಕ್ಕೂ ಬಲಕ್ಕೂ ಚಲಿಸುವಂತೆ ಏರ್ಪಾಡು ಮಾಡಲಾಗಿತ್ತು. ಕ್ಯಾಮರಾ ಚಲನೆಗೆ ತಕ್ಕಂತೆ ಲೆನ್ಸಿನ ಫೋಕಸ್ ಸರಿಮಾಡಿದಾಗ ಅದಕ್ಕೆ ತಕ್ಕಂತೆ ವ್ಯೂ ಫೈಂಡರ್ ಸಹ

ಚಲಿಸುತ್ತಿತ್ತು. ಇದಕ್ಕೆ ಫಾಲೋ ಫೋಕಸ್ ಎಂದು ಹೆಸರು. ಡೆಬ್ರಿ ಕ್ಯಾಮರಾದಲ್ಲಿ ಈ ಫಾಲೋ ಫೋಕಸ್ ಇರಲಿಲ್ಲ. ದೃಶ್ಯವನ್ನು ಚಿತ್ರೀಕರಣ ಮಾಡುತ್ತಿರುವ ಲೆನ್ಸಿನ ಮೂಲಕವೇ ಕ್ಯಾಮರಾದ ಹಿಂಭಾಗದಲ್ಲಿ ಇರಿಸಿದ್ದ ವೀಕ್ಷಕ ಲೆನ್ಸಿನ ಮೂಲಕ ಕಾಣಬಹುದಿತ್ತು. ಚಿತ್ರೀಕರಣ ಸಮಯದಲ್ಲಿ ಕ್ಯಾಮರಾ ಲೆನ್ಸಿನಿಂದ ಬಂದ ಬಿಂಬವು ಫಿಲಂ ಮೇಲೆ ಬಿದ್ದ ನಂತರ ಫಿಲಂನ ಹಿಂಭಾಗದಲ್ಲಿ ಕಂಡು ಬರುವ ಬಿಂಬವನ್ನು ವೀಕ್ಷಕ ಲೆನ್ಸಿನಿಂದ ನೋಡಿ ಚಿತ್ರೀಕರಣ ಮಾಡಬೇಕಿತ್ತು. ಇಂದಿನ ಕಚ್ಚಾ ಫಿಲಂನ ಹಿಂಭಾಗದಲ್ಲಿ ಕೊಟ್ಟಿರುವ 'ಆ್ಯಂಟಿ ಹ್ಯಾಲೇಷನ್ ಲೇಪನ' ಆಗ ಇರದಿದ್ದುದರಿಂದ ಈ ಬಿಂಬವನ್ನು ಕಾಣಲು ಸಾಧ್ಯವಾಗುತ್ತಿತ್ತು. ಮಿಚೆಲ್ ಕ್ಯಾಮರಾದಲ್ಲಿ ಉಂಟಾಗುವ ಪ್ಯಾರಲಾಕ್ಸ್ ತಪ್ಪುಗಳು ಇದರಲ್ಲಿ ಆಗುವ ಸಾಧ್ಯತೆ ಇರಲಿಲ್ಲ. ಆದರೆ, ಫಿಲಂನ ಹಿಂಭಾಗದಲ್ಲಿ ಕಂಡುಬರುತ್ತಿದ್ದ ಬಿಂಬವು ನೇರವಾಗಿ ಕಾಣುವ ಬಿಂಬದಷ್ಟು ಪ್ರಕಾಶವಾಗಿಲ್ಲದಿದ್ದುದರಿಂದ ಛಾಯಾಗ್ರಾಹಕನ ದೃಷ್ಟಿಗೆ ಸ್ವಲ್ಪ ಆಪತ್ತು ತರುವಂತಿತ್ತು. ಇವೆರಡರ ನಡುವೆ ಇದ್ದ ವ್ಯತ್ಯಾಸವೆಂದರೆ ಫಿಲಂ ಸುರುಳಿ ಸುತ್ತುವ ವಿಧಾನ. ಮಿಚೆಲ್ ಕ್ಯಾಮರಾಗೆ ಉಪಯೋಗಿಸುವ ಫಿಲಂ ಸುರುಳಿಯು ಚಿತ್ರೀಕರಣವಾಗುವ ಎಮಲ್ಷನ್ ಲೇಪನ ಒಳಭಾಗದಲ್ಲಿದ್ದು, ಚಿತ್ರೀಕರಣದ ನಂತರವೂ ಒಳಗಡೆ ಇರುವಂತೆ ಮ್ಯಾಗಜೀನ್‌ನಲ್ಲಿ ಸುತ್ತಿಕೊಳ್ಳುತ್ತಿತ್ತು. ಡೆಬ್ರಿ ಕ್ಯಾಮರಾವಿಗೆ ಉಪಯೋಗಿಸುವ ಫಿಲಂ ಸುರುಳಿಯಲ್ಲಿ ಕಚ್ಚಾ ಫಿಲಂ ಸುರುಳಿಯ ಎಮಲ್ಷನ್ ಮೇಲ್ಭಾಗದಲ್ಲಿ ಸುತ್ತಿಕೊಳ್ಳುತ್ತಿತ್ತು. ಆದ್ದರಿಂದ ಡೆಬ್ರಿ ಕ್ಯಾಮರಾಗೆ ಉಪಯೋಗಿಸಲು ಸಿಗುತ್ತಿದ್ದ ಫಿಲಂ ಸುರುಳಿಗೆ 'ಡೆಬ್ರಿ ವೈಂಡಿಂಗ್' ಎಂದೇ ಹೆಸರಾಗಿತ್ತು. ಇದನ್ನು ಮಿಚೆಲ್ ಕ್ಯಾಮರಾದಲ್ಲಿ ಉಪಯೋಗಿಸಲು ಸಾಧ್ಯವಿರಲಿಲ್ಲ.

ಡೆಬ್ರಿ ಕ್ಯಾಮರಾವನ್ನೇ ಹೆಚ್ಚಾಗಿ ಉಪಯೋಗಿಸುತ್ತಿದ್ದ ಛಾಯಾಗ್ರಾಹಕರೊಬ್ಬರಿಗೆ 'ಡೆಬ್ರಿ ಮಣಿ' ಎಂದೇ ಹೆಸರಾಗಿತ್ತು. ಖ್ಯಾತ ಛಾಯಾಗ್ರಾಹಕ ಯೂಸಫ್ ಮೌಲ್ಟಿ ಎಂಬುವರು ಕಲ್ಕತ್ತಾದವರು. ಕನ್ನಡದ 'ಜಾತಕ ಫಲ' ಚಿತ್ರಕ್ಕೂ ಡೆಬ್ರಿ ಕ್ಯಾಮರಾವನ್ನೇ ಉಪಯೋಗಿಸಿದ್ದರು. ೧೯೫೭ರಲ್ಲಿ 'ಪ್ರೇಮದ ಪುತ್ರಿ' ಚಿತ್ರವನ್ನು ಸಹ ಆರ್.ಎನ್.ಕೃಷ್ಣಪ್ರಸಾದ್‌ರು ಡೆಬ್ರಿ ಕ್ಯಾಮರಾದಲ್ಲಿಯೇ ಚಿತ್ರೀಕರಣ ಮಾಡಿದರು.

ಡೆಬ್ರಿ ಕ್ಯಾಮರಾದ ಉಪಯೋಗದಿಂದ ಛಾಯಾ ಗ್ರಾಹಕನ ದೃಷ್ಟಿಗೆ ಉಂಟಾಗುತ್ತಿದ್ದ ತೊಂದರೆಯ ಕಾರಣದಿಂದ ಡೆಬ್ರಿ ಕ್ಯಾಮರಾದ ಉಪಯೋಗವನ್ನು ಕಾಲಕ್ರಮೇಣ ಕೈ ಬಿಡಲಾಯಿತು. ಬಹಳ ವರ್ಷಗಳವರೆಗೆ ಮಿಚೆಲ್ ಎನ್.ಸಿ.ಮಾಡೆಲ್ ಕ್ಯಾಮರಾವೇ ಜನಪ್ರಿಯವಾಗಿ ಉಳಿದಿತ್ತು. ಅಮೆರಿಕಾ ದೇಶದ ತಯಾರಿಕೆಯಾದ ಮಿಚಲ್ ಕ್ಯಾಮರಾದ ಮಾದರಿಯಲ್ಲಿ ಬ್ರಿಟನ್ನಿನಲ್ಲಿ 'ನ್ಯೂವಾಲ್' ಕ್ಯಾಮರಾ ತಯಾರಾಯಿತು. ಇದರಂತೆಯೇ ಜಪಾನಿನಲ್ಲಿ 'ಸಿ ಕಿ' ಕ್ಯಾಮರಾದ ರಚನೆಯಾಯಿತು. ಆದರೆ ಇವೆರಡೂ ಮಿಚೆಲ್‌ನಷ್ಟು ಜನಪ್ರಿಯವಾಗಲಿಲ್ಲ.

(ಚಿತ್ರ ೫) ಐಮೋ ಕ್ಯಾಮರಾ

ವಾರ್ತಾಚಿತ್ರಗಳ ಚಿತ್ರೀಕರಣಕ್ಕೆ ಭಾರವಾದ ಮಿಚೆಲ್ ಕ್ಯಾಮರಾವನ್ನು ಉಪಯೋಗಿಸುವುದಕ್ಕೆ ಬದಲು ಕಡಿಮೆ ತೂಕದ, ಚಿಕ್ಕ ಆಕಾರದ, ಸುಲಭವಾಗಿ ಕೊಂಡೊಯ್ಯಬಹುದಾದ ಕ್ಯಾಮರಾಗಳಿಗಾಗಿ ಮೂರು ಲೆನ್ಸ್‌ಗಳ ಟರೆಟ್ ಇದ್ದ ಐಮೋ ಕ್ಯಾಮರಾವನ್ನೂ, ಬೆಲ್ ಅಂಡ್ ಹೆವೆಲ್ ಕ್ಯಾಮರಾವನ್ನೂ ಉಪಯೋಗಿಸಲಾಗುತ್ತಿತ್ತು. ಮಿಚೆಲ್ ಕ್ಯಾಮರಾದಲ್ಲಿ ತುಂಬುವ ೧೦೦೦ ಅಡಿ ಸೀಳದ ಫಿಲಂ ಸುರುಳಿಗೆ ಬದಲು ಕೇವಲ ೧೦೦ ಅಡಿ ಸೀಳದ ಫಿಲಂ ಸುರುಳಿಯನ್ನು ಇವುಗಳಲ್ಲಿ ಉಪಯೋಗಿಸುತ್ತಿದ್ದುದರಿಂದ ಕ್ಯಾಮರಾದ ಒಟ್ಟು ಭಾರ ಕಡಿಮೆಯಾಗಿರುತ್ತಿತ್ತು.

ಮಿಚೆಲ್ ಕ್ಯಾಮರಾದಲ್ಲಿದ್ದ ಒಂದೇ ಒಂದು ತೊಂದರೆಯೆಂದರೆ ವ್ಯೂ ಫೈಂಡರ್‌ನಲ್ಲಿ ಕಾಣುವ ದೃಶ್ಯಕ್ಕೂ, ವಾಸ್ತವವಾಗಿ ಲೆನ್ಸಿನ ಮೂಲಕ ಚಿತ್ರೀಕರಣವಾಗುತ್ತಿದ್ದ ದೃಶ್ಯಕ್ಕೂ ಪ್ಯಾರಲಾಕ್ಸ್‌ನಿಂದ ಉಂಟಾಗುತ್ತಿದ್ದ ವ್ಯತ್ಯಾಸ. ಇದನ್ನು ನಿರ್ಮೂಲ ಮಾಡುವುದಕ್ಕಾಗಿ ಆ್ಯರಿಫ್ಲೆಕ್ಸ್ ಕ್ಯಾಮರಾದಲ್ಲಿ ಚಿತ್ರೀಕರಣ ಲೆನ್ಸಿಗೂ, ಫಿಲಂ ಓಡುವ ಫಿಲಂ ಗೇಟಿಗೂ ನಡುವೆ ೪೫ ಡಿಗ್ರಿ ಕೋನದಲ್ಲಿ ಅಪಾರದರ್ಶಕ ಕನ್ನಡಿಯೊಂದನ್ನು ಇರಿಸಿ, ಪಕ್ಕದಲ್ಲಿರುವ ವ್ಯೂ ಫೈಂಡರ್‌ನಲ್ಲಿರುವ ಮತ್ತೊಂದು ೪೫ ಡಿಗ್ರಿ ಕನ್ನಡಿಯಿಂದ ಅಥವಾ ಪ್ರಿಸಮ್‌ನಿಂದ ಮೊದಲ ಕನ್ನಡಿಯಿಂದ ಪ್ರತಿಫಲಿತವಾದ ದೃಶ್ಯದ ಬಿಂಬವನ್ನು ಮತ್ತೊಮ್ಮೆ ಪ್ರತಿಫಲಿಸುವಂತೆ ಮಾಡಿ ವೀಕ್ಷಕ ಲೆನ್ಸಿನ ಮೂಲಕ ಅದನ್ನು ಕಾಣುವಂತೆ ಏರ್ಪಾಡು ಮಾಡಲಾಯಿತು. ಅಪಾರದರ್ಶಕ ಕನ್ನಡಿಯಲ್ಲಿ ಸ್ವಲ್ಪ ಭಾಗ ಮಾತ್ರ ಬೆಳಕು ಪ್ರತಿಫಲಿತವಾಗಿ, ಉಳಿದದ್ದು ನೇರವಾಗಿ ಫಿಲಂ ಮೇಲೆ ಬಿದ್ದು ಚಿತ್ರೀಕರಣವಾಗುತ್ತಿತ್ತು. ಇದರಿಂದ ಚಿತ್ರೀಕರಣಕ್ಕಾಗಿ ಲೆನ್ಸಿನಿಂದ ಬರುವ ಬಿಂಬವನ್ನೇ ಸ್ವಲ್ಪವೂ ವ್ಯತ್ಯಾಸವಿಲ್ಲದೇ ಕಾಣಬಹುದಲ್ಲದೇ, ಡೆಬ್ರಿ ಕ್ಯಾಮರಾದಲ್ಲಿದಂತೆ ಫಿಲಂ ಅನ್ನು ಹಾದು ಬಂದ ಪ್ರಕಾಶವಿಲ್ಲದ ಬಿಂಬವನ್ನು ಆಧರಿಸಿ ಚಿತ್ರೀಕರಣ ಮಾಡುವ ಬದಲು ಛಾಯಾಗ್ರಾಹಕನಿಗೆ ಪ್ರಕಾಶವಾದ, ತಿಳಿಯಾದ ಬಿಂಬವು ಕಂಡುಬರುತ್ತಿತ್ತು.

ಆ್ಯರಿಫ್ಲೆಕ್ಸ್ ಕ್ಯಾಮರಾ ಚಲನಚಿತ್ರ ಛಾಯಾಗ್ರಹಣದಲ್ಲಿ ಮತ್ತೊಮ್ಮೆ ದೊಡ್ಡ ಕ್ರಾಂತಿಯನ್ನೇ ಉಂಟುಮಾಡಿತು. ಅದರ ಚಿಕ್ಕ ಆಕಾರ, ಸ್ಥಳದಿಂದ ಸ್ಥಳಕ್ಕೆ ರವಾನಿಸಲು ಇರುವ ಸೌಲಭ್ಯ, ಲೆನ್ಸಿನ ಮೂಲಕವೇ ದೃಶ್ಯವನ್ನು ಕಾಣುವ ಅವಕಾಶ ಮುಂತಾದವುಗಳು ಈ ಮಾದರಿಯ ಜನಪ್ರಿಯತೆಯನ್ನು ಬಹಳವಾಗಿ ಹೆಚ್ಚಿಸಿತು. ಕ್ಯಾಮರಾ ಓಡಲು ಉಪಯೋಗಿಸುತ್ತಿದ್ದ ಫೈಬರ್ ಭಾಗಗಳು ಅತಿಶಯ ಶಬ್ದವನ್ನು ಮಾಡುತ್ತಿದ್ದುದರಿಂದ ಮೊದಮೊದಲು ಹೊರಾಂಗಣದಲ್ಲಿ ಹಾಡು ಅಥವಾ ಫೈಟಿಂಗ್ ದೃಶ್ಯಗಳ ಚಿತ್ರೀಕರಣಕ್ಕೆ ಮಾತ್ರ ಆ್ಯರಿಫ್ಲೆಕ್ಸ್ ಕ್ಯಾಮರಾವನ್ನು ಉಪಯೋಗಿಸಲಾಗುತ್ತಿತ್ತು. ಸ್ಟುಡಿಯೋದಲ್ಲಿ ಅದನ್ನು ಉಪಯೋಗಿಸುವಾಗ, ಅದಕ್ಕೆಂದೇ ತಯಾರಿಸಿದ್ದ ಬ್ಲಿಂಪ್ ಕವಚವನ್ನು ಬಳಸಿ ಚಿತ್ರೀಕರಣ ಮಾಡಬೇಕಿತ್ತು.

ಚಲನಚಿತ್ರಗಳಲ್ಲಿ ಮಾತುಗಳ ಡಬ್ಬಿಂಗ್ ಪದ್ಧತಿಯು ಬಂದ ನಂತರ, ಬ್ಲಿಂಪ್ ಹಾಕಬೇಕಾದ ಅವಶ್ಯಕತೆಯೇ ಇಲ್ಲದಿದ್ದುದರಿಂದ, ಎಲ್ಲ ವಿಧ ಚಿತ್ರೀಕರಣಕ್ಕೂ - ಒಳಾಂಗಣವಾಗಲೀ, ಹೊರಾಂಗಣವಾಗಲೀ - ಆ್ಯರಿಫ್ಲೆಕ್ಸ್ ಕ್ಯಾಮರಾವನ್ನೇ ಉಪಯೋಗಿಸಲು ಅನುಕೂಲವಾಯಿತು. ಇಂದಿಗೂ ಇದೇ ಬಳಕೆಯಲ್ಲಿದ.

ನಮ್ಮ ದೇಶದಲ್ಲಿ ಆ್ಯರಿಫ್ಲೆಕ್ಸ್ ಕ್ಯಾಮರಾದ ವಿವಿಧ ಮಾದರಿಗಳು ಉಪಯೋಗದಲ್ಲಿವೆ. ಮೊದಲು ಬಂದ ಮಾದರಿ ಆ್ಯರಿ ೨. ನಂತರ ಆ್ಯರಿ ೨ ಬಿ, ಆ್ಯರಿ ೨ ಸಿ, ಆ್ಯರಿ ೩ ಮುಂತಾದ ಮಾದರಿಗಳು ಬಂದವು. ಆ್ಯರಿ ಬಿ.ಎಲ್. ಮಾದರಿಯಲ್ಲಿ ಕ್ಯಾಮರಾ ಮ್ಯಾಗಜೀನ್ ಮೇಲ್ಭಾಗದಲ್ಲಿರುವ ಬದಲು ಕ್ಯಾಮರಾದ ಹಿಂದಿರುತ್ತದೆ. ಈ ಮಾದರಿ ಕ್ಯಾಮರಾ ಕರ್ನಾಟಕದಲ್ಲಿ ಕೆ.ಎಫ್.ಐ.ಡಿ.ಸಿ. ಬಳಿ ಇದೆ. ಇದು ವಾರ್ತಾ ಚಿತ್ರಗಳನ್ನು, ಡಾಕ್ಯುಮೆಂಟರಿಗಳನ್ನು ತಯಾರಿಸಲು ಅನುಕೂಲಕರವಾಗಿರುತ್ತದೆ. ಏಕೆಂದರೆ, ಕ್ಯಾಮರಾ ಮತ್ತು ಮ್ಯಾಗಜೀನ್ ಎರಡರ ಭಾರವನ್ನೂ ಎರಡು ಕೈಗಳಲ್ಲಿ ಹಿಡಿದುಕೊಳ್ಳುವ ಬದಲು, ಮ್ಯಾಗಜೀನನ್ನು ಛಾಯಾಗ್ರಾಹಕ ತನ್ನ ಹೆಗಲಿನ ಮೇಲೆ ಇರಿಸಿಕೊಂಡು ಚಿತ್ರೀಕರಣ ಮಾಡಲು ಅನುಕೂಲವಿರುವುದರಿಂದ, ಸ್ಥಳದಿಂದ ಸ್ಥಳಕ್ಕೆ ಬೇಗ ತೆಗೆದುಕೊಂಡು ಹೋಗಲು ಅನುಕೂಲವಾಗಿರುತ್ತದೆ.

ಇತ್ತೀಚೆಗೆ ಬಂದಿರುವ ಅತ್ಯಾಧುನಿಕ ಕ್ಯಾಮರಾ ಎಂದರೆ ಆ್ಯರಿಫ್ಲೆಕ್ಸ್ ೫೩೫ ಮತ್ತು ಆ್ಯರಿಫ್ಲೆಕ್ಸ್ ೭೬೫. ಆ್ಯರಿಫ್ಲೆಕ್ಸ್ ೫೩೫ ಮಾದರಿಯಲ್ಲಿ ವಿನೂತನ ವ್ಯೂ ಫೈಂಡರ್ ಮತ್ತು ವಿಡಿಯೋ ಕ್ಯಾಮರಾ ಮತ್ತು ಟಿ.ವಿ.ಯನ್ನು ಜೋಡಿಸುವ ಸಾಧ್ಯತೆ, ಅನುಕೂಲಗಳಿವೆ. ಇದರಿಂದ ಚಿತ್ರೀಕರಣವಾಗುತ್ತಿರುವ ದೃಶ್ಯವನ್ನು ಅದೇ ಸಮಯದಲ್ಲಿ ವಿಡಿಯೋದಲ್ಲೂ ಸಹ ಚಿತ್ರೀಕರಿಸುವುದರ ಮೂಲಕ, ಚಿತ್ರೀಕರಣವಾಗಿರುವ ದೃಶ್ಯ ಸರಿಯಾಗಿದೆಯೇ ಇಲ್ಲವೇ ಎಂದು ತತ್‌ಕ್ಷಣದಲ್ಲಿ ನೋಡಿ, ಸರಿಯಿಲ್ಲದಿದ್ದಲ್ಲಿ ಪುನಃ ಅದೇ ದೃಶ್ಯವನ್ನು ಸರಿಯಾಗಿ ಚಿತ್ರಿಸಲು ಅನುಕೂಲವಾಗುತ್ತದೆ. ಈ ಕ್ಯಾಮರಾವು ಸಂಪೂರ್ಣವಾಗಿ ಶಬ್ದರಹಿತವಾಗಿರುವ ಕಾರಣ ಸಂಭಾಷಣೆಗಳನ್ನು ನೇರವಾಗಿ ಶಬ್ದಗ್ರಹಣ ಮಾಡಿಕೊಳ್ಳುವ ಸಾಧ್ಯತೆ ಇದೆ. ಇದಕ್ಕೆ ೧೦೦೦ ಅಡಿ ಉದ್ದದ ೩೫ ಮಿ.ಮೀ. ಫಿಲಂ ತುಂಬಲು ಸಾಧ್ಯವಿರುವ ಮ್ಯಾಗಜೀನ್ ಇರುವುದರಿಂದ, ಪದೇ ಪದೇ ಮ್ಯಾಗಜೀನ್ ಬದಲಾಯಿಸುವ ಅವಶ್ಯಕತೆ ಇರುವುದಿಲ್ಲ. ಇತರ ಕಂಟ್ರೋಲ್‌ಗಳು ಎಲೆಕ್ಟ್ರಾನಿಕ್ ವಿಧದಲ್ಲಿ ಅಳವಡಿಸಲಾಗಿದೆ. ಈ ಮಾದರಿ ಕ್ಯಾಮರಾವು ಕರ್ನಾಟಕ ಸರ್ಕಾರದ ಬೆಂಗಳೂರಿನ ಹೆಸರಘಟ್ಟದ ಬಳಿ ಇರುವ ಸರ್ಕಾರಿ ಫಿಲಂ ಇನ್‌ಸ್ಟಿಟ್ಯೂಟ್‌ನಲ್ಲಿದೆ.



ಆ್ಯರಿಫ್ಲೆಕ್ಸ್ ಕ್ಯಾಮರಾದ ಮಾದರಿಗಳು - (ಚಿತ್ರ ೬) ಆ್ಯರಿಫ್ಲೆಕ್ಸ್ ಆರಂಭದ ಮಾದರಿ, (ಚಿತ್ರ ೭) ಆ್ಯರಿಫ್ಲೆಕ್ಸ್ IIIಸಿ, (ಚಿತ್ರ ೮) ನಂತರದ ಅತ್ಯಾಧುನಿಕ ಮಾದರಿ (ಆ್ಯರಿ ಬಿ.ಎಲ್. ೫೩೫)

ಕರ್ನಾಟಕದಲ್ಲಿ ಬೆಳವಣಿಗೆ

ಚಲನಚಿತ್ರಗಳು ನಿರ್ಮಾಣವಾಗುತ್ತಿದದ್ದು ನೆರೆ ರಾಜ್ಯಗಳ ತಂತ್ರಜ್ಞರ ಸಹಾಯದಿಂದ. ಕಾರಣ ಅಂದು ವೃತ್ತಿ ಪರ ಛಾಯಾಗ್ರಾಹಕರ್‍ಯಾರು ಇರಲಿಲ್ಲ. ಚಲನಚಿತ್ರಕ್ಕೆ ಅಗತ್ಯವಾದ ಕ್ಯಾಮರಾ ಹಾಗೂ ಉಳಿದ ಉಪಕರಣಗಳನ್ನು ನೀಡುತ್ತಿದ್ದ ಸ್ಟುಡಿಯೋ ಮಾಲೀಕರೆ ಕ್ಯಾಮರಾಮನ್‌ಗಳ ನೆರವನ್ನು ಒದಗಿಸುತ್ತಿದ್ದರು. ಆಗ ನಿರ್ದೇಶಕರು, ಛಾಯಾಗ್ರಾಹಕರು ಕ್ಯಾಮರಾವನ್ನು ಒಂದು ಕಡೆ ಇರಿಸಿ, ಉದ್ದವಾದ ದೃಶ್ಯಗಳನ್ನು ಚಿತ್ರೀಕರಿಸುತ್ತಿದ್ದರು.

೧೯೪೬ರಲ್ಲಿ ಜಯಚಾಮರಾಜೇಂದ್ರ ತಾಂತ್ರಿಕ ವಿದ್ಯಾಲಯದಲ್ಲಿ ಸಿನಿಮಾ ತಂತ್ರಜ್ಞಾನವು ಅನೇಕ ತಂತ್ರಜ್ಞಾನಗಳಂತೆ ಪ್ರಾರಂಭವಾಯಿತು. ಅದರಲ್ಲಿ ಮುಖ್ಯವಾಗಿ ಚಲನಚಿತ್ರ ಛಾಯಾಗ್ರಹಣ ಮತ್ತು ಚಲನಚಿತ್ರ ಧ್ವನಿ ಮುದ್ರೀಕರಣಗಳಲ್ಲಿ ತಲಾ ಮೂರು ವರ್ಷಗಳ ತರಬೇತಿ ಪ್ರಾರಂಭಿಸಿದರು. ಇದೇ ದೇಶದ ಮೊದಲನೆಯ ಚಲನಚಿತ್ರ ತಾಂತ್ರಿಕತೆಯ ವಿದ್ಯಾಲಯ.

೧೯೪೭ರಲ್ಲಿ ಆರ್.ನಾಗೇಂದ್ರರಾಯರು ತಯಾರಿಸಿದ 'ಮಹಾತ್ಮ ಕಬೀರ್' ಚಿತ್ರಕ್ಕೆ ಜರ್ಮನಿ ದೇಶದ ಬೇಯಜ್ ಎನ್ನುವವರು ಛಾಯಾಗ್ರಾಹಕರಾಗಿದ್ದರು. ಎರಡನೇ ಮಹಾಯುದ್ಧ ಮುಗಿದು ಶಾಂತಿ ಎಲ್ಲೆಡೆ ಹರಡಿದಾಗ ಇವರು ಚಿತ್ರದ ಛಾಯಾಗ್ರಹಣ ಅರ್ಧದಲ್ಲೇ ಬಿಟ್ಟು ಸ್ವದೇಶಕ್ಕೆ ಹೊರಟು ಹೋದರು. ಇಂತಹ ಪರಿಸ್ಥಿತಿಯಲ್ಲಿ ಆ ಚಿತ್ರಕ್ಕೆ ಸ್ಥಿರಚಿತ್ರ ಛಾಯಾಗ್ರಾಹಕರಾಗಿದ್ದ ಮಾರುತಿರಾವ್ ಅವರಿಗೆ ಅವಕಾಶ ನೀಡಲಾಯಿತು. ಮುಂದೆ ತಮ್ಮ ವೃತ್ತಿಯಲ್ಲಿ ಯಶಸ್ಸು ಪಡೆದು ಎ.ವಿ.ಎಂ. ಸಂಸ್ಥೆ ತಯಾರಿಸಿದ ಹಲವಾರು ಚಲನಚಿತ್ರಗಳಿಗೆ ಛಾಯಾಗ್ರಾಹಕರಾಗಿ ದುಡಿದರು. ಪುಟ್ಟಣ್ಣ ಕಣಗಾಲ್‌ರವರ ಕೆಲವು ಚಿತ್ರಗಳಿಗೆ ಛಾಯಾಗ್ರಹಣ ಮಾಡಿದುದಲ್ಲದೆ, ೧೯೮೫ರಲ್ಲಿ ತಯಾರಾದ 'ಮಸಣದ ಹೂ' ಚಿತ್ರಕ್ಕೆ ರಾಜ್ಯದ ಅತ್ಯುತ್ತಮ ಛಾಯಾಗ್ರಹಣ ಪ್ರಶಸ್ತಿ ಪಡೆದರು.

೧೯೫೦ರಲ್ಲಿ ತ್ರೀ ವ್ಹೀಲ್ ಟ್ರಾಲಿಯಿಂದ ಚಿತ್ರೀಕರಣ ಪ್ರಾರಂಭವಾಯಿತು. ಟ್ರ್ಯಾಕ್ ಟ್ರಾಲಿ ನಂತರ ವಿನ್‌ಟನ್ (winton) ಡಾಲಿ-ಕ್ರೇನ್‌ಗಳಂತಹ ಸಲಕರಣೆಗಳು ಬಳಕೆಗೆ ಬರಲು ಪ್ರಾರಂಭಿಸಿದವು. ಇದರಿಂದ ಕ್ಯಾಮರಾಗಳನ್ನು ಮುಂದಕ್ಕೆ, ಹಿಂದಕ್ಕೆ, ಎಡಕ್ಕೆ, ಬಲಕ್ಕೆ ಮತ್ತು ಮೇಲಕ್ಕೆ, ಕೆಳಕ್ಕೆ ಚಲಿಸುವಂತಹ ಪ್ರಯೋಗಗಳು ಪ್ರಾರಂಭವಾದವು.

ಆ ಕಾಲದಲ್ಲಿ ಇಡೀ ಚಿತ್ರದ ೮೦ರಿಂದ ೯೦ ಭಾಗದಷ್ಟು ಚಿತ್ರೀಕರಣವು ಸ್ಟುಡಿಯೋ ಒಳಾಂಗಣದಲ್ಲಿ ನಡೆಯುತ್ತಿತ್ತು. ಕಾಡಿನ ದೃಶ್ಯಗಳು, ಉದ್ಯಾನವನದ ದೃಶ್ಯಗಳು, ಹಾಡುಗಳಿಗೆ ಬೇಕಾದಂತಹ ಹೊರಾಂಗಣ ದೃಶ್ಯಗಳನ್ನು ಸ್ಟುಡಿಯೋದಲ್ಲೇ ನಿರ್ಮಿಸಿ ಚಿತ್ರೀಕರಣ ನಡೆಸುತ್ತಿದ್ದರು.

(ಚಿತ್ರ ೯) ಅತ್ಯಾಧುನಿಕ ಸ್ಟಡಿಕ್ಯಾಮ್ ಉಪಕರಣ

೧೯೫೩, ೧೯೫೪ರಲ್ಲಿ ಅರುಣಾ ಕೃಷ್ಣಸ್ವಾಮಿ ಎಂಬುವವರು ಮೊದಲ ಬಾರಿಗೆ ಆ್ಯರಿಫ್ಲೆಕ್ಸ್ ೨ ಎ ಮಾಡಲ್, ಫೋರ್ ವ್ಹೀಲ್ ಟ್ರ್ಯಾಕ್ ಟ್ರಾಲಿಯನ್ನು ತರಿಸಿದರು. ಇದರೊಂದಿಗೆ ೩೫ ಎಂ.ಎಂ.ನಿಂದ ೧೩೫ ಎಂ.ಎಂ.ವರೆಗಿನ ಝೂಮ್ ಲೆನ್ಸ್ ತರಿಸಲಾಯಿತು. ಅದೇ ಕಾಲದಲ್ಲಿ 'ಪಟೇಲ್ ಇಂಡಿಯಾ' ಕಂಪನಿಯು ಮಿಚೆಲ್ ಕ್ಯಾಮರಾಗೆ ಝೂಮ್ ಲೆನ್ಸ್ ಅನ್ನು ತರಿಸಿದರು. ಅರುಣಾ ಕೃಷ್ಣಸ್ವಾಮಿ ಸ್ವತಃ ತಾವೇ ಚಲನಚಿತ್ರ ಛಾಯಾಗ್ರಾಹಕರಾಗಿದ್ದರು.

೧೯೫೪ರಲ್ಲಿ 'ಕಣವನೇ ಕಣ್‌ಕಂಡ ದೈವಂ' ಚಿತ್ರ ತಂಡವು ಚಿತ್ರೀಕರಣಕ್ಕೆಂದು ಬೆಂಗಳೂರಿಗ ಬಂದಿತ್ತು. ಆ ತಂಡದಲ್ಲಿ ಛಾಯಾಗ್ರಾಹಕರಾಗಿ ಬಂದ ಮಧ್ಯ ವಯಸ್ಸಿ ಕನ್ನಡಿಗರೊಬ್ಬರಿದ್ದರು. ಅವರೇ ಮುಂದೆ ಖ್ಯಾತ ಛಾಯಾಗ್ರಾಹಕರಾಗಿ, ನಿರ್ಮಾಪಕ-ನಿರ್ದೇಶಕರಾಗಿ ಮದ್ರಾಸ್‌ನಲ್ಲಿ ವಿಕ್ರಂ ಸ್ಟುಡಿಯೋನ ಮಾಲೀಕರೂ ಆದ ಬಿ.ಎಸ್.ರಂಗಾ ಅವರು. ಇವರು ಮುಂಬಯಿಯಲ್ಲಿ ಛಾಯಾಗ್ರಹಣದ ಸಹಾಯಕರಾಗಿದ್ದರು. ಮುಂದೆ ಛಾಯಾಗ್ರಾಹಕರಾದ ಬಿ.ಎಸ್.ರಂಗಾ ಅವರು ತಯಾರಿಸಿದ 'ಮಾಗೋಪಿ' ಚಿತ್ರದ ಯಶಸ್ಸಿನ ಫಲವಾಗಿ ಮದರಾಸಿನಲ್ಲಿ ವಿಕ್ರಂ ಸ್ಟುಡಿಯೋ ಸ್ಥಾಪಿಸಿದರು. ಇವರು ಕನ್ನಡ ಭಾಷೆಯ ಮೇಲಿನ ಪ್ರೇಮದಿಂದ ಅನೇಕ ಕನ್ನಡ ಚಿತ್ರಗಳನ್ನು ತಯಾರಿಸಿದರು.

ಸರಿ ಸುಮಾರು ೧೯೫೫ರಲ್ಲಿ 'ಸ್ತ್ರೀ ರತ್ನ' ಚಿತ್ರವನ್ನು ಭಾಗಶಃ ವರ್ಣದಲ್ಲಿ ಚಿತ್ರೀಕರಿಸಲಾಯಿತು. ಈ ಹೊತ್ತಿಗಾಗಲೇ ವರ್ಣಚಿತ್ರದ ಆವಿಷ್ಕಾರ ನಡೆದಿತ್ತು. ೧೯೫೯ರಲ್ಲಿ 'ಧರ್ಮವಿಜಯ' ಎಂಬ ಚಿತ್ರವನ್ನು ಭಾಗಶಃ ವರ್ಣದಲ್ಲಿ ಚಿತ್ರಿಸಲಾಯಿತು. ೧೯೬೪ರಲ್ಲಿ ಪೂರ್ಣ ಪ್ರಮಾಣದಲ್ಲಿ ತಯಾರಾಗಿ ಹೊರ ಬಂದ ವರ್ಣಚಿತ್ರ ಬಿ.ಎಸ್.ರಂಗಾ ಅವರ 'ಅಮರ ಶಿಲ್ಪಿ ಜಕಣಾಚಾರಿ'. ಈ ಚಿತ್ರದ ಮೂಲಕ ವರ್ಣಚಿತ್ರಗಳ ಯುಗವೊಂದು ಕನ್ನಡದಲ್ಲಿ ಪ್ರಾರಂಭವಾಯಿತು. ನಿಮಾಯ್ ಘೋಷ್ ಈ ಚಿತ್ರದ ಛಾಯಾಗ್ರಹಣ ಸಂದರ್ಭದಲ್ಲಿ ಸಲಹೆ ಸಹಕಾರ ನೀಡಿದರು.

೧೯೫೫ರಲ್ಲಿ ಎ.ವಿ.ಎಂ. ಪ್ರೊಡಕ್ಷನ್ಸ್ ಅವರು ತಯಾರಿಸಿದ 'ಆದರ್ಶ ಸತಿ' ಎಂಬ ಕನ್ನಡ ಚಿತ್ರದ ಛಾಯಾಗ್ರಹಣವನ್ನು ಮಹಾರಾಷ್ಟ್ರದವರಾದ ಮಾಧವರಾವ್ ಬುಲ್‌ಬುಲೆ ಎಂಬುವರು ಮಾಡಿದರು. ಇವರು ಕ್ಯಾಮರಾ ಟ್ರಿಕ್ ಶಾಟ್‌ಗಳಲ್ಲಿ ಪರಿಣತರಾಗಿದ್ದು, ಬಿ.ನಾಗಿರೆಡ್ಡಿಯವರು ತಯಾರಿಸಿದ 'ಸತ್ಯ ಹರಿಶ್ಚಂದ್ರ' ಚಿತ್ರಕ್ಕೂ ಛಾಯಾಗ್ರಾಹಕರಾಗಿದ್ದರು.

ಆರ್.ನಾಗೇಂದ್ರರಾಯರ ಪುತ್ರರಾದ ಆರ್.ಎನ್.ಕೃಷ್ಣಪ್ರಸಾದ್ ತಮ್ಮ ಚಲನಚಿತ್ರ ಛಾಯಾಗ್ರಹಣ ವಿದ್ಯಾಭ್ಯಾಸ ಮುಗಿಸಿ ಮದ್ರಾಸಿನ ಎ.ವಿ.ಎಂ. ಸ್ಟುಡಿಯೋದಲ್ಲಿ ಸಹಛಾಯಾಗ್ರಾಹಕರಾಗಿ ತಮ್ಮ ವೃತ್ತಿಯನ್ನು ಆರಂಭಿಸಿದರು. ಮುಂದೆ ಅವರ ತಂದೆಯವರು ೧೯೫೭ರಲ್ಲಿ ತಯಾರಿಸಿದ 'ಪ್ರೇಮದ

ಪುತ್ರಿ' ಚಿತ್ರಕ್ಕೆ ಸ್ವತಂತ್ರ ಛಾಯಾಗ್ರಾಹಕರಾಗಿ ಕೆಲಸ ಮಾಡಿದರು.

ಮಿಚೆಲ್ ಮತ್ತು ಆ್ಯರಿಫ್ಲೆಕ್ಸ್ ಕ್ಯಾಮರಾಗಳ ಆವಿಷ್ಕಾರದಿಂದ ಕ್ಲಿಷ್ಟವಾದ ಡೆಬ್ರಿ ಕ್ಯಾಮರಾ ಕೇಳುವವರೇ ಇಲ್ಲದಂತಾಯಿತು. ಮದರಾಸಿನ ರೋಹಿಣಿ ಸ್ಟುಡಿಯೋವಿನ ಮಾಲಿಕರಾದ ಹೆಚ್.ಎಂ. ರಡ್ಡಿಯವರ ಅಳಿಯ ಅಣ್ಣಯ್ಯನವರು ತಮ್ಮದೇ ಆದ ಶೈಲಿಯಿಂದ ಹೆಸರು ಗಳಿಸಿದವರು. ಇವರೊಂದಿಗೆ ಬಂಗಾಳದವರಾದ ಹಿರಿಯ ಛಾಯಾಗ್ರಾಹಕ ನಿಮಾಯ್ ಘೋಷ್ ಮದರಾಸಿನಲ್ಲಿಯೇ ನೆಲೆಸಿ ಕನ್ನಡ ಚಲನಚಿತ್ರಗಳಿಗೆ ಛಾಯಾಗ್ರಹಣ ಮಾಡಿದರಲ್ಲದ, ಜಿ.ವಿ.ಅಯ್ಯರ್ ನಿರ್ದೇಶಿಸಿದ 'ಹಂಸಗೀತೆ' ಚಿತ್ರದ ಛಾಯಾಗ್ರಹಣವನ್ನೂ ಕೈಗೊಂಡರು.

ಕನ್ನಡದಲ್ಲಿ ಉತ್ತಮ ಚಿತ್ರಗಳನ್ನು ತಯಾರಿಸಿದ ಪದ್ಮಿನಿ ಪಿಕ್ಚರ್ಸ್‌ನವರ 'ಶ್ರೀಕೃಷ್ಣದೇವರಾಯ', 'ಕಿತ್ತೂರು ರಾಣಿ ಚೆನ್ನಮ್ಮ' ಚಿತ್ರಗಳಿಗೆ ಛಾಯಾಗ್ರಹಣ ನೀಡಿದ ಡಬ್ಲ್ಯೂ.ಆರ್.ಸುಬ್ಬರಾವ್ ಕನ್ನಡಿಗರು. ಛಾಯಾಗ್ರಹಣದ ಜತೆಗೆ ಸ್ಪೆಷಲ್ ಎಫೆಕ್ಟ್ ತಯಾರಿಕೆಯಲ್ಲಿ ನುರಿತವರೇ ಆಗಿದ್ದು ಅನೇಕ ಕನ್ನಡ ಚಿತ್ರಗಳಿಗೆ ಕೆಲಸ ಮಾಡಿದ್ದಾರೆ. ಆ ಕಾಲದಲ್ಲಿ ಹೆಚ್ಚು ಪೌರಾಣಿಕ ಮತ್ತು ಚಾರಿತ್ರಿಕ ಚಿತ್ರಗಳೇ ತಯಾರಾಗುತ್ತಿದ್ದುದರಿಂದ 'ಸ್ಪೆಷಲ್ ಎಫೆಕ್ಟ್' ಅವಶ್ಯಕತೆ ಹೆಚ್ಚಾಗಿದ್ದುದರಿಂದ ಆ ತಂತ್ರಜ್ಞಾನದಲ್ಲಿ ಹಲವರು ಪರಿಣತಿಯನ್ನು ಪಡೆದಿದ್ದರು.

(ಚಿತ್ರ ೧೦) ಕ್ಯಾಮರಾ ಚಲಿಸಲು ಬಳಸುವ ಎನ್‌ಟನ್ ಡಾಲಿ

ಇವರಲ್ಲಿ ಡಬ್ಲ್ಯೂ.ಆರ್.ಸುಬ್ಬರಾವ್, ಟಿ.ಮುತ್ತುಸ್ವಾಮಿ, ಮಾಧವರಾವ್ ಬುಲ್‌ಬುಲೆ, ನಿಮಾಯ್ ಘೋಷ್, ಆರ್.ಎನ್.ಕೆ.ಪ್ರಸಾದ್, ಶ್ರೀಕಾಂತ್, ಆರ್.ಮಧು ಮುಂತಾದವರು ಮುಖ್ಯರು ಮತ್ತು ಕನ್ನಡ ಚಿತ್ರಗಳ ಸ್ಪೆಷಲ್ ಎಫೆಕ್ಟ್‌ಗೆ ಸಾಕಷ್ಟು ಕೊಡುಗೆ ಕೊಟ್ಟಿದ್ದಾರೆ.

ಚಲನಚಿತ್ರ ಛಾಯಾಗ್ರಹಣದಲ್ಲಿ ಡಿಫ್ಯೂಸರ್ ಎನ್ನುವಂತಹ ಲೆನ್ಸ್ ಫಿಲ್ಟರ್‌ಗಳನ್ನು ಉಪಯೋಗಿಸಿ ನಾಯಕಿಯರ ಸಮೀಪ ಚಿತ್ರಗಳನ್ನು ತೆಗೆಯುವುದರಲ್ಲಿ ಒಂದು ಅದ್ಭುತವನ್ನು ಕಾಣುವಂತಹ ಕಾಲವಿತ್ತು. ಬ್ಯಾಕ್ ಲೈಟ್ ಅನ್ನು ಉಪಯೋಗಿಸಿ ಕಥೆಗೆ ಪೂರಕವಲ್ಲದಿದ್ದರೂ ದೃಶ್ಯವನ್ನು ವೈಭವೀಕರಿಸುವುದರಲ್ಲಿ ಅಂದಿನ ಛಾಯಾಗ್ರಾಹಕರು ಅವರ ಪ್ರತಿಭೆಯನ್ನು ತೋರಿಸುವಂತಹ ದಿನಗಳಿದ್ದವು. ಕಪ್ಪು-ಬಿಳುಪು ಫಿಲಂ ಉಪಯೋಗಿಸಿ ಅನೇಕ ಲೈಟ್ ಅಂಡ್ ಶೇಡ್‌ಗಳನ್ನು ಮತ್ತು ಹಗಲು-ರಾತ್ರಿ ದೃಶ್ಯಗಳನ್ನು ಸ್ಪಷ್ಟವಾಗಿ ಕಾಣುವಂತೆ ಚಿತ್ರೀಕರಿಸುವುದರಲ್ಲಿ ಆಗಿನ ಚಲನಚಿತ್ರ ಛಾಯಾಗ್ರಾಹಕರು ತಮ್ಮ ಪರಿಣತಿಯನ್ನು ತೋರಿಸುತ್ತಿದ್ದರು.

ಕ್ಯಾಮರಾ ತಂತ್ರಜ್ಞಾನದ ಆವಿಷ್ಕಾರ ಮುಂದುವರಿದಂತೆ ಅಮೆರಿಕಾದಲ್ಲಿ ಸಾಧಾರಣ ಚೌಕಟ್ಟಿಗೆ ಬದಲು ಎರಡು ಚೌಕಟ್ಟು ಅಗಲದ ಸಿನಿಮಾ ಚಿತ್ರೀಕರಿಸಿ ಪ್ರದರ್ಶಿಸುವ ಪ್ರಯತ್ನ ನಡೆದಿತ್ತು. ೩೫ ಎಂ.ಎಂ. ಕ್ಯಾಮರಾಗಳಲ್ಲಿ ಅನಾಮಾರ್ಫಿಕ್ ಲೆನ್ಸ್‌ಗಳ ಉಪಯೋಗದಿಂದ ಎರಡು ಚೌಕಟ್ಟು ಅಗಲದ ಚಿತ್ರೀಕರಣ ವಿಧಾನಕ್ಕೆ 'ಸಿನಿಮಾಸ್ಕೋಪ್' ಎಂದು ಹೆಸರಿಡಲಾಯಿತು. ಇದಕ್ಕೆ ೩೫ ಎಂ.ಎಂ. ಫಿಲಂ ಅನ್ನು ಉಪಯೋಗಿಸುತ್ತಿದ್ದುದರಿಂದ ಚಿತ್ರೀಕರಣವು ಸುಲಭವಾಗಿತ್ತು. ಎರಡು ಚೌಕಟ್ಟು ಅಗಲದಲ್ಲಿ ಚಿತ್ರೀಕರಿಸಿ ಪ್ರದರ್ಶಿಸುವ ವಿಧಾನವನ್ನು ಮೊಟ್ಟಮೊದಲಿಗೆ ಭಾರತ ದೇಶದಲ್ಲಿ ೧೯೫೬ರಲ್ಲಿ ಕನ್ನಡದವರೇ ಆದ ಮುಂಬಯಿ ನಿವಾಸಿ ಛಾಯಾಗ್ರಾಹಕ ವಿ.ಕೆ.ಮೂರ್ತಿ, ಮತ್ತೊಬ್ಬ ಕನ್ನಡದವರಾದ ಗುರುದತ್ ನಿರ್ದೇಶನದಲ್ಲಿ 'ಕಾಗಜ್ ಕೆ ಫೂಲ್' ಎಂಬ ಕಪ್ಪು-ಬಿಳುಪು ಚಿತ್ರದಲ್ಲಿ ಬಳಸಿದರು. ಇದೇ ವಿಧಾನದಲ್ಲಿ ಕನ್ನಡ ಚಿತ್ರರಂಗದಲ್ಲಿ ೧೯೭೭ರಲ್ಲಿ 'ಸೊಸೆ ತಂದ ಸೌಭಾಗ್ಯ' ಎಂಬ ವರ್ಣಚಿತ್ರವನ್ನು ಚಿತ್ರೀಕರಿಸಿದರು. ನಂತರ ನಿರ್ಮಾಪಕ-ನಟ ದ್ವಾರಕೀಶ್ ತಮ್ಮ 'ಸಿಂಗಾಪುರದಲ್ಲಿ ರಾಜಾಕುಳ್ಳ' ಚಿತ್ರವನ್ನು ಸಿನಿಮಾಸ್ಕೋಪ್‌ನಲ್ಲಿ ತಯಾರಿಸಿದರು. ೧೯೮೬ರಲ್ಲಿ ಶಾಸ್ತ್ರಿ ಮೂವೀಸ್ ಅವರ 'ಮಲಯ ಮಾರುತ' ಈ ವಿಧಾನದಲ್ಲಿ ಬಿ.ಪುರುಷೋತ್ತಮ್ ಛಾಯಾಗ್ರಹಣ ದಲ್ಲಿ ತೆರೆಕಂಡಿತು. ೧೯೮೭ರಲ್ಲಿ 'ಪ್ರೇಮಲೋಕ' ತಯಾರಾಯಿತು. ಮತ್ತೆ ಈ ತಂತ್ರಜ್ಞಾನವನ್ನು ೧೯೮೯ರಲ್ಲಿ 'ಶರವೇಗದ ಸರದಾರ' ಎಂಬ ಚಿತ್ರಕ್ಕೆ ಛಾಯಾಗ್ರಾಹಕ ಆರ್.ಸಿ.ಮಾಪಾಕ್ಷಿ ಮೊಟ್ಟಮೊದಲಿಗೆ ಕನ್ನಡದಲ್ಲಿ. ಅಂದರೆ ಚಿತ್ರವನ್ನು ಸಿನಿಮಾ ಸ್ಕೋಪ್‌ನಲ್ಲಿ ಚಿತ್ರೀಕರಿಸಿ, ನಂತರ ಅದೇ ಚಿತ್ರವನ್ನು ೭೦ ಎಂ.ಎಂ. ತಂತ್ರಜ್ಞಾನ ಬಳಸಿ ಹಿಗ್ಗಿಸಿ ಅಂತಿಮ ಪ್ರತಿಯನ್ನು ಸಿದ್ಧಗೊಳಿಸಲಾಯಿತು.

ಹೀಗೆ ಉಪಯೋಗಿಸಿದ ತಂತ್ರಜ್ಞಾನವು ಅಮೆರಿಕಾದಲ್ಲಿ ೧೯೬೨ರಿಂದಲೇ ಚಾಲ್ತಿಯಲ್ಲಿತ್ತು. ಇದೇ ತಂತ್ರಜ್ಞಾನವನ್ನು ಉಪಯೋಗಿಸಿ ಛಾಯಾಗ್ರಾಹಕ ಡಿ.ವಿ.ರಾಜಾರಾಂ ಅವರು ಚಿತ್ರಿಸಿದ 'ಮುತ್ತಿನ ಹಾರ' ಎರಡನೇ ೭೦ ಎಂ.ಎಂ. ಚಿತ್ರವಾಗಿ ತೆರೆಗೆ ಬಂತು. ೨೦೦೦ನೇ ಇಸವಿಯ ಹೊತ್ತಿಗೆ ಸಂಪೂರ್ಣವಾಗಿ ಸಿನಿಮಾ ಸ್ಕೋಪ್‌ನಲ್ಲಿ ಕನ್ನಡ ಚಿತ್ರಗಳು ಚಿತ್ರೀಕರಣವಾಗುತ್ತಿವೆ.

ಕಚ್ಚಾ ಫಿಲಂ

೧೯೬೪ನೇ ಇಸವಿಯಲ್ಲಿ 'ಅಮರ ಶಿಲ್ಪಿ ಜಕಣಾಚಾರಿ'ಯಿಂದ ಪ್ರಾರಂಭಗೊಂಡ ಸಂಪೂರ್ಣ ವರ್ಣ ಚಿತ್ರೀಕರಣ ಮಂದಗತಿಯಲ್ಲಿ ಬೆಳೆದು ೧೯೭೬ರ ಹೊತ್ತಿಗೆ ಕನ್ನಡದ ಚಿತ್ರಗಳಲ್ಲಿ (ಶೇಕಡಾ ೭೫ರಷ್ಟು) ವರ್ಣ ಚಿತ್ರಗಳಾಗಿ ಮಾರ್ಪಾಡಾಗಿ, ೧೯೭೭ರ ಹೊತ್ತಿಗೆ ಸಂಪೂರ್ಣವಾಗಿ ಎಲ್ಲ ಕನ್ನಡ ಚಿತ್ರಗಳು ವರ್ಣಮಯವಾದವು. ಇದಕ್ಕೆ ಬೇಕಾದ ಕಚ್ಚಾ ಫಿಲಂ ಅನ್ನು ೧೯೪೦ರಿಂದ ಜರ್ಮನಿಯ ಗೇವಾರ್ಟ್ ಕಂಪನಿ, ೧೯೫೨ರಿಂದ ಅಮೆರಿಕಾದ ಕೊಡಕ್ ಈಸ್ಟ್‌ಮನ್ ಕಂಪನಿ, ೧೯೫೩ರಿಂದ ಬೆಲ್ಜಿಯಂನಿಂದ ಆಗ್ಫಾ ಕಲರ್ ಫಿಲಂ ಅನ್ನು, ೧೯೫೫ರಲ್ಲಿ ಜಪಾನಿನಿಂದ ಫ್ಯೂಜಿ ಕಲರ್ ಫಿಲಂನ್ನು, ೧೯೬೦ರಲ್ಲಿ ಜರ್ಮನಿಯ ಆರ್ವೋ ಕಲರ್ ಫಿಲಂನ್ನು ಸರಬರಾಜು ಮಾಡುತ್ತಿದ್ದವು. ಇವುಗಳಲ್ಲಿ ಆರ್ವೋ ಕಲರ್ ಫಿಲಂ ಅತಿ ಕಡಿಮೆ ಬೆಲೆಗೆ ಸಿಗುತ್ತಿದ್ದುದರಿಂದ ಇದರ ತಾಂತ್ರಿಕತೆ ಬೇರೆಯದರಷ್ಟು ವಿಶಿಷ್ಟವಲ್ಲದಿದ್ದರೂ ಇದನ್ನು ಉಪಯೋಗಿಸಿ ಹೆಚ್ಚು ಕನ್ನಡ ಚಲನಚಿತ್ರಗಳು ತಯಾರಾಗುತ್ತಿದ್ದವು. ೧೯೭೧ರಲ್ಲಿ ತಯಾರಾದ 'ಭಲೇ ಅದೃಷ್ಟವೋ ಅದೃಷ್ಟ' ಕನ್ನಡದಲ್ಲಿ ಆರ್ವೋ ಬಳಸಿದ ಮೊದಲ ಚಿತ್ರ. ಕ್ರಮೇಣ ಕಾರಣಾಂತರಗಳಿಂದ ೧೯೯೦ರಲ್ಲಿ ಆರ್ವೋ ಕಂಪನಿ, ೯೬ರ ಸಮಯಕ್ಕೆ ಆಗ್ಫಾವೂ ಸ್ಥಗಿತಗೊಂಡಿತು. ಕೊಡಾಕ್ ಈಸ್ಟ್‌ಮನ್ ಕಲರ್ ಮತ್ತು ಫ್ಯೂಜಿ ಕಲರ್ ಫಿಲಂಗಳು ಈಗಲೂ ಲಭ್ಯವಿವೆ. ಇಂದಿನ ಪರಿಸ್ಥಿತಿಯಲ್ಲಿ ಫ್ಯೂಜಿ ಕಲರ್ ಫಿಲಂ ಕೊಡಾಕ್ ಕಲರ್ ಫಿಲಂಗಿಂತ ಸ್ವಲ್ಪ ಮಟ್ಟಿಗೆ ಕಡಿಮೆ ದರದಲ್ಲಿ ದೊರೆಯುವುದರಿಂದ ಹೆಚ್ಚು ಚಲನಚಿತ್ರಗಳು ಫ್ಯೂಜಿ ಕಲರ್ ಫಿಲಂನಲ್ಲಿ ತಯಾರಾಗುತ್ತಿವೆ.

ಈ ಮುಂಚೆ ದೊರೆಯುತ್ತಿದ್ದ ೧೦೦, ೧೨೫, ೨೫೦ (ASA) ವೇಗದ ಕಚ್ಚಾ ಫಿಲಂಗಳು ೧೯೮೧ರಲ್ಲಿ ಭಾರತ ದೇಶದ ಮಾರುಕಟ್ಟೆಗೆ ಬಿಡುಗಡೆ ಮಾಡಲಾಯಿತು. ಇದನ್ನೆ ಅನುಸರಿಸಿ ಫ್ಯೂಜಿ ೨೦೦ (ASA) ವೇಗದ ಫಿಲಂ ಮಾರುಕಟ್ಟೆಗೆ ಬಂದಿತು. ನಂತರ ೧೯೮೪ರಲ್ಲಿ ಮತ್ತೆ ಕೊಡಾಕ್ ಫಿಲಂ ಕಂಪನಿಯವರು ತಮ್ಮ ತಾಂತ್ರಿಕ ಆವಿಷ್ಕಾರದಿಂದ ೪೦೦ ASA ವೇಗದ ಫಿಲಂ ಅನ್ನು ಉಪಯೋಗಕ್ಕೆ ತಂದರು. ೧೯೮೪ರಲ್ಲಿ 'ಹೊಸ ಬಾಳು' ಕನ್ನಡ ಚಿತ್ರದಲ್ಲಿ ಸಂಪೂರ್ಣವಾಗಿ ಈಸ್ಟ್‌ಮನ್ ಕಲರ್ ೪೦೦ ASA ಅತಿ ವೇಗದ ಫಿಲಂ ಸ್ಟಾಕ್ ಅನ್ನು ಉಪಯೋಗಿಸಿದರು. ಆಗ್ಫಾ ಕಂಪನಿಯು XT ೧೨೫ ASA ಫಿಲಂನೊಂದಿಗೆ XT ೩೨೦ ASA ಫಿಲಂ ಅನ್ನು ಮೊಟ್ಟಮೊದಲಿಗೆ ಮಾರುಕಟ್ಟೆಗೆ ತಂದರು. ೧೯೮೯ರಲ್ಲಿ ಅದೇ ಸಮಯಕ್ಕೆ ಈ ಫಿಲಂ ಅನ್ನು 'ಶರವೇಗದ ಸರದಾರ' ಚಿತ್ರಕ್ಕೆ ಉಪಯೋಗಿಸಿ, ೭೦ ಎಂ.ಎಂ.ಮಾಡಿದರು.

೧೬ ಎಂ.ಎಂ.ನಲ್ಲಿ ಚಿತ್ರ ನಿರ್ಮಾಣ

೧೬ ಎಂ.ಎಂ. ಚಿತ್ರೀಕರಣಕ್ಕೆ ಲಭ್ಯವಿರುವ ಕ್ಯಾಮರಾಗಳೆಂದರೆ ಆ್ಯರಿಫ್ಲೆಕ್ಸ್ (S.T), B.L. ಆ್ಯರಿಫ್ಲೆಕ್ಸ್ (SR), SR-2. SR-3, CP-16 ಇದಲ್ಲದೆ ಬೊಲೆಕ್ಸ್ ಕಂಪನಿಯವರು ೧೬ ಎಂ.ಎಂ. ಕ್ಯಾಮರಾಗಳನ್ನು spring winding ಮತ್ತು motorised ಕ್ಯಾಮರಾಗಳನ್ನು ತಯಾರಿಸಿ ಮಾರುಕಟ್ಟೆಗೆ ಬಿಡುಗಡೆ ಮಾಡಿದರು. ಈ ಎಲ್ಲಾ ಕ್ಯಾಮರಾಗಳನ್ನು ಸಾಕ್ಷ್ಯಚಿತ್ರ ತಯಾರಿಕೆ ಮತ್ತು ೧೯೮೩ವರೆಗೆ ದೂರದರ್ಶನದ ಎಲ್ಲಾ ರೀತಿಯ ಚಿತ್ರ ತಯಾರಿಕೆಗಳಲ್ಲಿ ಬಳಸುತ್ತಿದ್ದರು. ಮೇಲೆ ನಮೂದಿಸಿರುವ ಆ್ಯರಿಫ್ಲೆಕ್ಸ್ ಕ್ಯಾಮರಾಗಳಲ್ಲಿ ಆ್ಯರಿ ST ಕ್ಯಾಮರಾ ಮೂರು ಲೆನ್ಸ್‌ಗಳ ಟರೆಟ್‌ನೊಟ್ಟಿಗೆ ತಯಾರಿಸಲ್ಪಟ್ಟಿವು. ಕ್ಯಾಮರಾ ಓಡುವಾಗ ಸಾಕಷ್ಟು ಶಬ್ದ ಮಾಡುವುದರಿಂದ ಸ್ಥಳದಲ್ಲೇ ಶಬ್ದಗ್ರಹಣ ಮಾಡಲು ಅನುಕೂಲವಿಲ್ಲ. ಅದನ್ನು ಬಿಟ್ಟು ಬಾಕಿ ಎಲ್ಲಾ ರೀತಿಯ ಕೆಲಸಗಳಿಗೂ ಉಪಯೋಗಿಸುತ್ತಿದ್ದರು.

ಆ್ಯರಿ ಬಿ.ಎಲ್ ಒಂದೇ ಲೆನ್ಸ್ (ವಿವಿಧ ಲೆನ್ಸ್‌ಗಳನ್ನು ಬಳಸಬಹುದಾದ ಸಿಂಗಲ್ ಲೆನ್ಸ್ ಟರೆಟ್) ಅಂದರೆ ಝೂಮ್ ಲೆನ್ಸ್ ಮಾತ್ರ ಅಳವಡಿಸಿದ self blimped ಕ್ಯಾಮರಾ. ಇದು ಚಲಿಸುವಾಗ ಅದರ ಶಬ್ದವು ಹೊರ ಬರದಂತೆ ಅಳವಡಿಸಲಾಗಿದೆ. ಇದರಿಂದ ಸ್ಥಳದಲ್ಲೇ ಚಿತ್ರೀಕರಣ, ಶಬ್ದಗ್ರಹಣ ಒಟ್ಟೊಟ್ಟಿಗೆ ಮಾಡಲು ಸಾಧ್ಯವಾಗುತ್ತದೆ. ಆದ್ದರಿಂದಲೇ ೧೬ ಆ್ಯರಿ ಬಿ.ಎಲ್. ಎಂದು ಕರೆಯಲ್ಪಡುತ್ತದೆ. ಮುಂದೆ ಈ ಕ್ಯಾಮರಾವನ್ನು ಉಪಯೋಗಿಸಿ ಚಲನಚಿತ್ರಗಳನ್ನು ೧೬ ಎಂ.ಎಂ.ನಲ್ಲಿ ಚಿತ್ರೀಕರಿಸಿ ೩೫ ಎಂ.ಎಂ.ಗೆ ಚಿತ್ರದ ಪ್ರತಿಗಳು ತೆಗೆಯಲು ಸಾಧ್ಯವಿದೆ. ಆದರೆ ದೂರದರ್ಶನ ಬಿಟ್ಟರೆ ಬೇರೆ ಯಾರೂ ಸ್ಥಳದಲ್ಲೆ ಶಬ್ದಗ್ರಹಣವನ್ನು ಮಾಡಿಕೊಳ್ಳಬಹುದಾದ ಅನುಕೂಲವನ್ನು ಉಪಯೋಗಿಸಿಕೊಳ್ಳಲಿಲ್ಲ. ಇದೇ ಕಂಪನಿಯು ಇನ್ನೊಂದು ಕ್ಯಾಮರಾ ಎಸ್.ಆರ್.೧೬ ಮಾಡಲ್ ಬಿ.ಎಲ್.ಗಿಂತ ಸಾಕಷ್ಟು ಚಿಕ್ಕದು. ಕಡಿಮೆ ತೂಕದ ಮತ್ತು ಮುಂದುವರಿದ ತಂತ್ರಜ್ಞಾನದಿಂದ ತಯಾರಿಸಲ್ಪಟ್ಟಿದೆ. ಇದರಲ್ಲಿ ಒಂದೇ ಲೆನ್ಸ್ ಅನ್ನು ಅಳವಡಿಸುವ ಅವಕಾಶವಿರುವುದರಿಂದ ಪ್ರತಿಸಲವೂ ಚಿತ್ರೀಕರಣಕ್ಕೆ ಬೇಕಾದ ಲೆನ್ಸ್ ಅನ್ನು ಬದಲಾಯಿಸಿ ಚಿತ್ರೀಕರಣ ಮಾಡಬೇಕು. ಚಲಿಸುವಾಗ ಸಾಕಷ್ಟು ಶಬ್ದ ಮಾಡುವುದರಿಂದ ನೇರ ಶಬ್ದಗ್ರಹಣಕ್ಕೆ ಯೋಗ್ಯವಲ್ಲ.

ಕ್ಯಾಮರಾ ಪ್ರಾಡಕ್ಟ್ಸ್ ಎನ್ನುವ ಕಂಪನಿಯ ಸಿ.ಪಿ.೧೬ ಎನ್ನುವ ಕ್ಯಾಮರಾ ಚಲನಚಿತ್ರಗಳ ಚಿತ್ರೀಕರಣಕ್ಕೆ ಲಭ್ಯವಿದೆ. ಹಲವಾರು ಚಿತ್ರ ತಯಾರಕರು ಈ ತಂತ್ರಜ್ಞಾನವನ್ನು ಉಪಯೋಗಿಸಿ ಕಡಿಮೆ ವೆಚ್ಚದಲ್ಲಿ ಚಲನಚಿತ್ರಗಳನ್ನು ಕನ್ನಡದಲ್ಲಿ ತಯಾರಿಸಿದ್ದಾರೆ. ಇವುಗಳ ಸರಿಯಾದ ಮಾಹಿತಿ ಇಲ್ಲದಿರುವುದರಿಂದ ಕೆಲವನ್ನು ಮಾತ್ರ ಇಲ್ಲಿ ಪ್ರಸ್ತಾಪಿಸಲಾಗಿದೆ.

೧೯೭೬ರಲ್ಲಿ ಪ್ರೇಮಾ ಕಾರಂತ್ ನಿರ್ದೇಶಿಸಿ, ಮಧು ಅಂಬಟ್ ಛಾಯಾಗ್ರಹಣ ನೀಡಿದ 'ಫಣಿಯಮ್ಮ', ೧೯೮೬ರಲ್ಲಿ ಎಚ್.ಕೆ.ಯೋಗಾನರಸಿಂಹ ನಿರ್ದೇಶನದ, ಆರ್.ಸಿ.ಮಾಪಾಕ್ಷಿ ಛಾಯಾಗ್ರಹಣ ನೀಡಿದ 'ಜೀವನ ಸಂಗ್ರಾಮ' (ಬಿಡುಗಡೆ ಆಗಿಲ್ಲ), ೧೯೯೬ರಲ್ಲಿ ಕೆ.ವಿ.ಜಯರಾಂ ನಿರ್ದೇಶಿಸಿದ 'ರಂಜಿತಾ', ಸದಾನಂದ ಸುವರ್ಣರ ನಿರ್ದೇಶನದಲ್ಲಿ ಜಿ.ಎಸ್.ಭಾಸ್ಕರ್ ಛಾಯಾಗ್ರಹಣ ಮಾಡಿದ 'ಕುಬಿ ಮತ್ತು ಇಯಾಲ', ಪಟ್ಟಾಭಿರಾಮರೆಡ್ಡಿ ನಿರ್ದೇಶಿಸಿ, ಗೌರಿಶಂಕರ್ ಛಾಯಾಗ್ರಹಣ ನೀಡಿದ 'ಶೃಂಗಾರ ಮಾಸ', ಗಿರೀಶ್ ಕಾಸರವಳ್ಳಿ ನಿರ್ದೇಶನದ 'ತಬರನ ಕಥೆ' (ಛಾಯಾಗ್ರಹಣ: ಮಧು ಅಂಭಟ್), ಕೆ.ವಿ.ಜಯರಾಂ ನಿರ್ದೇಶನದ 'ಗಾಜಿನ ಮನೆ', ಎಂ.ಡಿ.ಕೌಶಿಕ್‌ರವರ 'ರಂಭೆ ನೀ ವಯ್ಯಾರದ ಗೂಂಜ' (ಛಾಯಾಗ್ರಹಣ : ಆರ್.ಸಿ.ಮಾಪಾಕ್ಷಿ), ಶಾಸ್ತ್ರಿ ಛಾಯಾಗ್ರಹಣ ಮಾಡಿದ ಪಿ.ಶೇಷಾದ್ರಿ ನಿರ್ದೇಶನದ 'ಮುನ್ನುಡಿ', ಸಿ.ಚಂದ್ರಶೇಖರ ನಿರ್ದೇಶಿಸಿದ ಗೌರಿಶಂಕರ ಛಾಯಾಗ್ರಹಣದ 'ಹುಲಿ ಬಂತು ಹುಲಿ' ಇನ್ನೂ ಮುಂತಾದವಲ್ಲದೆ, ೧೬ ಎಂ.ಎಂ. ತಂತ್ರದಲ್ಲಿ ಅನೇಕ ತುಳು, ಕೊಡವ, ಕೊಂಕಣಿ ಚಲನಚಿತ್ರಗಳೂ ತಯಾರಾಗಿವೆ.

೧೬ ಎಂ.ಎಂ.ನಿಂದ ೩೫ ಎಂ.ಎಂ.ಗೆ ಹಿಗ್ಗಿಸಲು ಚಿತ್ರಿಸುವಾಗ ತಂತ್ರಜ್ಞಾನ ಸಾಕಷ್ಟು ಕ್ಲಿಷ್ಟವಾದದ್ದು. ೧೬ ಎಂ.ಎಂ.ನಲ್ಲಿ ಚಿತ್ರಿಸಬೇಕಾದಾಗ ಸರಿಯಾದ ತಾಂತ್ರಿಕ ಜ್ಞಾನದ ಅರಿವಿಲ್ಲದೆ, ಕೆಲವು ಚಿತ್ರಗಳು ಅಷ್ಟು ಸಮಂಜಸವಾಗಿರಲಿಲ್ಲ.

ಈಗಿನ ಆಧುನಿಕ ಸೂಪರ್ ೧೬ ಎಂಬ ಪದ್ಧತಿಯನ್ನು ಅಳವಡಿಸಿ, ೧೬ ಎಂ.ಎಂ. ಫಿಲಂ ಉಪಯೋಗಿಸಿ ಇನ್ನೂ ಉತ್ತಮ ಮಟ್ಟದ ತಾಂತ್ರಿಕತೆಯೊಂದಿಗೆ ಗುಣಮಟ್ಟ ಹೆಚ್ಚಿಸುವ ಚಲನಚಿತ್ರಗಳನ್ನು ಕಡಿಮೆ ವೆಚ್ಚದಲ್ಲಿ ತಯಾರಿಸಲು ಸಾಧ್ಯವಿದೆ. ದುರಾದೃಷ್ಟವಶಾತ್ ಕನ್ನಡ ಚಿತ್ರರಂಗದಲ್ಲಿ ಸುಲಭವಾಗಿ ಸಬ್ಸಿಡಿ ಕಬಳಿಸಲು ಹಾಗೂ ಲೈಂಗಿಕ ಕಥಾವಸ್ತು ಇರುವ ಕೆಟ್ಟ ಅಭಿರುಚಿಯ ಚಿತ್ರಗಳಲ್ಲಿ ಮಾತ್ರ ೧೬ ಎಂ.ಎಂ.ನ ತಂತ್ರಜ್ಞಾನವನ್ನು ಉಪಯೋಗಿಸುತ್ತಿದ್ದಾರೆ ಎಂಬುದು ಖೇದದ ಸಂಗತಿ.

೩೫ ಎಂ.ಎಂ. ಅತಿ ವೇಗದ ಫಿಲಂಗಳಂತೆಯೇ ೧೬ ಎಂ.ಎಂ. ವೇಗದ ಫಿಲಂಗಳು, ಆಗಿಂದಾಗ್ಗೆ ಮಾರುಕಟ್ಟೆಗೆ ಬರುತ್ತಿವೆ. ಸಂಸ್ಕರಣ ವಿಜ್ಞಾನದಲ್ಲೂ ೧೬ ಎಂ.ಎಂ.ನಿಂದ ೩೫ ಎಂ.ಎಂ.ಗೆ ಹಿಗ್ಗಿಸುವ ತಾಂತ್ರಿಕತೆ ಬಿಟ್ಟರೆ, ಬೇರೆಲ್ಲವು ೩೫ ಎಂ.ಎಂ. ಫಿಲಂಗೆ ಬೇಕಾದಂತಹ ತಾಂತ್ರಿಕತೆಯನ್ನೇ ಉಪಯೋಗಿಸಲಾಗುತ್ತಿದೆ. ಉಳಿದ ನಿರ್ಮಾಣದ ಬಾಬ್ತುಗಳಾದ ಊಟ, ವಸತಿ, ಸಾರಿಗೆ, ಸಂಭಾವನೆ, ಉಡುಗೆ-ತೊಡುಗೆ, ವರ್ಣಾಲಂಕಾರ ಇದರಲ್ಲಿ ಯಾವ ಬದಲಾವಣೆ ಅಥವಾ ಕಡಿಮೆ ಖರ್ಚು ಇರದೇ ಇರುವುದರಿಂದ ಈ ಪದ್ಧತಿಯಲ್ಲಿ ಚಿತ್ರ ಮಾಡಲು ನಿರ್ಮಾಪಕರಿಗೆ ಅನಾಸಕ್ತಿ. ತಾಂತ್ರಿಕ ತೊಂದರೆಗಳಿಂದಾಗಿ ತಂತ್ರಜ್ಞರಿಗೂ ಹುರುಪು ಕಡಿಮೆ.

ಛಾಯಾಗ್ರಹಣದಲ್ಲಿ ಕಲಾತ್ಮಕತೆ

ಸಿನಿಮಾ ಒಂದು ದೃಶ್ಯ ಮಾಧ್ಯಮ ಹಾಗೂ ಇದರ ಮೂಲಭೂತ ಸಲಕರಣೆಗಳೇ ಕ್ಯಾಮರಾ, ಬೆಳಕು ಮತ್ತು ಫಿಲಂ ಎನ್ನಬಹುದು. ನಿರ್ದೇಶಕನ ಮನದಲ್ಲಿನ ಅಗಾಧ ಕಲ್ಪನೆಗಳು ಕಾಗದದ ಮೇಲೆ ಇಳಿದು, ಖಚಿತ ರೂಪ ಪಡೆದು, ಪ್ರೇಕ್ಷಕನಿಗೆ ಫಿಲಂ ಮೂಲಕ ಅದನ್ನು ತಲುಪಿಸುವ ಈ ಮಧ್ಯಮಾವಸ್ಥೆಯೇ ಛಾಯಾಗ್ರಹಣ ಕಲೆಯ ಘಟ್ಟ.



(ಚಿತ್ರ ೧೧) ಆ್ಯರಿಫ್ಲೆಕ್ಸ್ ೧೬ ಎಸ್.ಆರ್ ೨

(ಚಿತ್ರ ೧೨) ಆ್ಯರಿಫ್ಲೆಕ್ಸ್ ಬಿ.ಎಲ್-೩

ಸಿನಿಮಾ ನಿರ್ಮಾಣ ಒಂದು ಸಾಮೂಹಿಕ ಕಲೆ. ಇದರಲ್ಲಿ ನೂರಾರು ಜನರ ಶ್ರಮ ಮತ್ತು ಸೃಜನಶೀಲತೆ, ಒಬ್ಬ ವ್ಯಕ್ತಿಯ ಮಾರ್ಗದರ್ಶನದಲ್ಲಿ ಅಥವಾ ಅವನ ಕಲ್ಪನೆಯ ಅನುರೂಪಕ್ಕೆ ತಕ್ಕಂತೆ ಕಾರ್ಯ ಸಾಗುತ್ತದೆ. ಹೀಗಿರುವಾಗ ಈ ಮಾಧ್ಯಮದಲ್ಲಿ ತೊಡಗುವ ಪ್ರತಿ ವ್ಯಕ್ತಿಗೆ ಇರಬೇಕಾದ ಕೆಲವು ಗುಣ, ಸ್ವಭಾವ, ವೈಚಿತ್ರ್ಯಗಳನ್ನು ಅರಿಯಲೇಬೇಕು.

ಪ್ರತಿಯೊಬ್ಬ ಛಾಯಾಗ್ರಾಹಕನಿಗೆ ಇರಲೇಬೇಕಾದ ಮೂರು ಪೂರ್ವಾಗತ್ಯ ಗುಣಗಳೆಂದರೆ, ತಾವು ಮಾಡುವ ಕಾರ್ಯದ ಕುರಿತು ತಾಂತ್ರಿಕ ಜ್ಞಾನ, ಕಲಾತ್ಮಕ ಸಂವೇದನಾಶೀಲತೆ ಹಾಗೂ ಚಿತ್ರದ ಅಂತಿಮ ಸ್ವರೂಪವನ್ನು ಚಿತ್ತದಲ್ಲಿಟ್ಟುಕೊಂಡು ಚಿತ್ರ ತಂಡದ ಇತರ ಜನರೊಡನೆ ಸೃಜನಾತ್ಮಕವಾಗಿ ಸ್ಪಂದಿಸುವ ಗುಣ ಹಾಗೂ ತಂಡದ ಇತರ ಸದಸ್ಯರಿಂದ ಬರುವ ಕ್ರಿಯಾತ್ಮಕ ಸಲಹೆ. ಸೂಚನೆಗಳನ್ನು ಯಾವ 'ಅಹಂ' ಇಲ್ಲದೇ ಪರಿಶೀಲಿಸುವ, ಒಳ್ಳೆಯದಾಗಿದ್ದರೆ ಅದನ್ನು ಸ್ವೀಕರಿಸುವ ಗುಣ ಇರಲೇಬೇಕು. 'ಏಕವ್ಯಕ್ತಿ ಕಲಾವಿದನಾದ' ಚಿತ್ರಕಾರ, ಸಂಗೀತಕಾರ, ಸಾಹಿತಿ, ಕವಿಯ ಸ್ವಭಾವದ ವೈಪರೀತ್ಯಗಳು ಇರಬೇಕಿಲ್ಲ. ಇದ್ದರೆ ಅದು ಅವನ ವೃತ್ತಿಗೆ ಮಾರಕ. ಈ ದೃಷ್ಟಿಯಿಂದ ಬಹುಶಃ ಒಬ್ಬ ಛಾಯಾಗ್ರಾಹಕ ಒಂದು ಚಿತ್ರವನ್ನು ಉತ್ತಮವಾಗಿ ಮಾಡಬಲ್ಲ ಅಥವಾ ಮುರಿಯಲೂ ಬಲ್ಲ ಎಂಬ ಗ್ರಹಿಕೆ ಚಾಲನೆಯಲ್ಲಿದೆ.

ಒಂದು ಚಿತ್ರ ನಿರ್ಮಾಣದ ಸ್ವರೂಪ (format) ಆರ್ಥಿಕ ಆಧಾರದ ಮೇಲೆ ನಿರ್ಮಾಪಕ ತೀರ್ಮಾನಿಸಿದ ಕೂಡಲೇ, ಅದರ ಛಾಯಾಗ್ರಾಹಕನಿಂದ ತಾವು ಬಳಸಲಿರುವ ಕಚ್ಚಾ ಫಿಲ್ಮ್, ಉಪಕರಣ, ವರ್ಣ ಸಂಸ್ಕರಣ ಸೌಲಭ್ಯ ಕುರಿತು ಸಲಹೆ, ಸೂಚನೆ ಪಡೆಯುವರು. ಇದರ ನಂತರ ನಿರ್ದೇಶಕ-ಲೇಖಕನೊಡನೆ ಚಿತ್ರಕಥೆ ಚರ್ಚಿಸಿ,



(ಚಿತ್ರ ೧೩-೧೫) ಆ್ಯರಿಫ್ಲೆಕ್ಸ್ ೧೬ ಎಂ.ಎಂ.ಎಸ್.ಟಿ.ಮಾಡೆಲ್‌ಗಳು ಹಾಗೂ ಆ್ಯರಿಫ್ಲೆಕ್ಸ್ ಬಿ.ಎಲ್.ಮಾಡೆಲ್

ಕಥೆಯ ಕಾಲಕ್ಕೆ ಅನುಗುಣವಾಗಿ ಬೆಳಕಿನ ಸಂಯೋಜನಾ ಶೈಲಿ ತೀರ್ಮಾನಿಸುವನು. ಇಂದಿಗೂ ನಾವು ೧೯೩೦ರ ಆರಂಭದ ಚಿತ್ರಗಳಲ್ಲಿ 'ಪ್ರಬಲವಾದ ಮಂದ ಬೆಳಕು' (strong diffusion), ನಂತರ 'ತೀಕ್ಷ್ಣ ವೈರುಧ್ಯ' (sharp contrast) ಮತ್ತು 'ಆಳವಾದ ಸ್ಪಷ್ಟತೆ' (deep focus), ಇತ್ತೀಚೆಗೆ ಮಂದ ಬೆಳಕು, ಮಂದ ಸ್ಪಷ್ಟತೆ (soft light - soft focus) ಶೈಲಿಗಳನ್ನು ಗುರುತಿಸಬಹುದು. ಕೆಲವು ಚಿತ್ರಗಳನ್ನು ನಾವು ಶೀರ್ಷಿಕೆ ಪ್ರದರ್ಶನ ಮುಗಿದ ನಂತರವೂ ಚಿತ್ರಮಂದಿರ ಪ್ರವೇಶಿಸಿದರೆ ಇದು ಯಾರ ಛಾಯಾಗ್ರಹಣದ ಚಿತ್ರವೆಂದು ಗುರುತಿಸಲು ಸಾಧ್ಯ. ಇದಕ್ಕೆ ಕಾರಣ ಆಯಾ ಛಾಯಾಗ್ರಾಹಕ ಅನುಸರಿಸುವ ಶೈಲಿ (style) ಎನ್ನಬಹುದು.

ಯಾವುದೇ ಚಿತ್ರವಲ್ಲಿ ಛಾಯಾಗ್ರಹಣ ಶೈಲಿ ಅದರಲ್ಲಿನ ನೆರಳು-ಬೆಳಕು ಸಂಯೋಜನೆಯನ್ನು ಅವಲಂಬಿಸಿರುತ್ತದೆ. ಇದಲ್ಲದೆ ಬಳಸಲಾಗಿರುವ ಕಚ್ಚಾ ಫಿಲಂನ ಕಣತ್ವ (Grannuality), ಫ್ರೇಮಿನ ಸಂಯೋಜನೆಯ ಜಾಣ್ಮೆ, ಅಗತ್ಯವಿದ್ದಲ್ಲಿ ವರ್ಣ ಸಂಸ್ಕರಣ ಘಟಕದಲ್ಲಿ ಬಳಸಲಾದ ವಿಶೇಷ ಮಾದರಿಯ ಪ್ರಕ್ಷಾಳನ (processing) ಪದ್ಧತಿಯನ್ನು ಆಧರಿಸಿರುತ್ತದೆ.

ಬೆಳಕು ಸಂಯೋಜನೆಯನ್ನು 'ಪ್ರಬಲ ಬೆಳಕು' (high key) ಹಾಗೂ ಮಂದ ಬೆಳಕು (low key) ಎಂದು ಗುರುತಿಸಬಹುದು. ಪ್ರಬಲ ಬೆಳಕು ಪದ್ಧತಿಯಲ್ಲಿ ಎಲ್ಲ ವಿವರಗಳೂ ಕಾಣುವಂತೆ ತುಂಬೆಳಕು (fill light) ಬಳಸಿ, ನೆರಳು ಕಾಣದಂತೆ ಅಡಗಿಸಿ, ಆ ದೃಶ್ಯದಲ್ಲಿ ನೆರಳು ಬೆಳಕಿನ ವೈರುಧ್ಯ ಅತಿ ಕಡಿಮೆ ಕಾಣಿಸುವಂತೆ ಮಾಡುವರು. ಆದರೆ, ಮಂದ ಬೆಳಕು ವಿಧಾನದಲ್ಲಿ ಚಿತ್ರಿಕೆಯಲ್ಲಿ ಬೆಳಕು-ನೆರಳು ವೈರುಧ್ಯ ಹೆಚ್ಚಾಗಿದ್ದು, ನೆರಳು ಇನ್ನೂ ದಟ್ಟವಾಗುವಂತೆ ಮಾಡಿ, ವಿವರಗಳು ಮಾತ್ರ ಪ್ರಖರ ಬೆಳಕಿನಲ್ಲಿ ಕಾಣುವಂತೆ ಮಾಡುವರು.

ಇವೆರಡೂ ಪದ್ಧತಿಯಲ್ಲದೇ ಇನ್ನೊಂದು ಮಾರ್ಗವೆಂದರೆ, ಬೆಳಕನ್ನು ನೇರವಾಗಿ ಬಳಸದೇ ಅವನ್ನು ಪ್ರತಿಫಲಿತವಾಗುವಂತೆ (reflect) ಮಾಡಿ, ಅಥವಾ ತ್ವರಿತಗತಿಯ ಕಚ್ಚಾ ಫಿಲಂನ್ನು ಬಳಸಿ, ಲಭ್ಯವಿರುವ ಸಹಜ ಬೆಳಕು ಮಾತ್ರ ಬಳಸುವರು, ಅಥವಾ ಅತೀ ಕಡಿಮ ಬೆಂಬಲ ದೀಪ (Supplimentary lights)ಗಳನ್ನು ಬಳಸುವರು. ಈ ಮಾದರಿ ಬೆಳಕು ಸಂಯೋಜನೆಯನ್ನು ಸ್ಟುಡಿಯೋಗಳ ಬದಲು ನಿಜವಾದ ತಾಣ (ಮನೆ, ಮಠ)ಗಳಲ್ಲಿ ಬಳಸಿದರೆ ಅದಕ್ಕೊಂದು ಸಹಜತೆಯ ಮೆರುಗು ಬರುವುದು. ಇದನ್ನೇ 'ನವ ವಾಸ್ತವವಾದಿ' (Neo Realism) ನಿರ್ದೇಶಕರು, ಛಾಯಾಗ್ರಾಹಕರು ಬಯಸುವುದು. ಇದರಲ್ಲಿ ಸಾಕ್ಷ್ಯಚಿತ್ರ, ವಾರ್ತಾಚಿತ್ರಗಳ ಛಾಯೆ ಇರುತ್ತದೆ.

ಈ ಎಲ್ಲ ಶೈಲಿಗಳನ್ನು ಹೊರತುಪಡಿಸಿ, 'ಸಿನಿಮಾ ಎಂಬುದು ಒಂದು ಭ್ರಮಾಲೋಕ, ಇಲ್ಲಿ ಬರುವ ಪ್ರೇಕ್ಷಕ ಕಾಸು ಕೊಟ್ಟು ಕನಸಿನಲೋಕ ನೋಡಲು ಇಚ್ಛಿಸುತ್ತಾನೆ' ಎಂಬ ಸಿದ್ಧಾಂತಕ್ಕೆ ಅನುಗುಣವಾಗಿ, ಸ್ಟುಡಿಯೋ ಪರಿಸರದಲ್ಲಿ ಎಲ್ಲವೂ ಮಿಣಮಿಣನೆ ಮಿಂಚುವ, ಬಣ್ಣ ಬಣ್ಣಗಳಿಂದ ಕಣ್ಣು ಕುಕ್ಕುವ, ಪ್ರತಿಯೊಂದಕ್ಕೂ ಕೇಂದ್ರೀಕರಿಸಿದ ವಿದ್ಯುದ್ದೀಪ (spot light) ಬಳಸಿ ಕಲಾವಿದರನ್ನು ಮೆರೆಸುವ 'ಬೆಡಗಿನ ತಂತ್ರ'ದ (glamorous technique) ಬಳಕೆಯನ್ನು ತಾರಾ ಪದ್ಧತಿಯಲ್ಲಿ ಚಿತ್ರ ತಯಾರಿಸುವ ತಂತ್ರಜ್ಞರು ಅನುಸರಿಸುತ್ತಾರ.

ಒಬ್ಬ ಛಾಯಾಗ್ರಾಹಕ ಸಿನಿಮಾ ಭಾಷೆಯನ್ನು ಅರ್ಥ ಮಾಡಿಕೊಂಡ ರೀತಿಯನ್ನು ಅಳೆಯಲು ಸುಲಭ ಸಾಧನ, ಅವನು ಒಂದು ದೃಶ್ಯದಲ್ಲಿ ಬರುವ ವಿವಿಧ ಚಿತ್ರಿಕೆಗಳನ್ನು ಸಂಯೋಜಿಸುವ (composition) ರೀತಿಯಿಂದ ಎನ್ನಬಹುದು. ಇದು ಛಾಯಾಗ್ರಾಹಕನ ವೈಯಕ್ತಿಕ ಅಭಿರುಚಿಯ ಸಂಕೇತ.

ಯಾವ ತರಬೇತಿ ಇಲ್ಲದೇ ಚಿತ್ರಕಾರನಾಗಿಯೋ (painter) ಅಥವಾ ಸ್ಥಿರಚಿತ್ರಗ್ರಾಹಕ (still photographer) ಆಗಿಯೋ, ನಂತರ ಸಿನಿಮಾರಂಗವಲ್ಲಿ ಛಾಯಾಗ್ರಾಹಕನಾಗಿದ್ದರೆ ಅವನ ಸಂಯೋಜನೆ, ನೆರಳು-ಬೆಳಕಿನಾಟ, ಸ್ಥಿರವಾದ ಚಿತ್ರಿಕೆಗಳಲ್ಲಿ ಮಾತ್ರ ತನ್ನ ಕಾವ್ಯಗುಣದ ತತ್ವ ಉಳಿಸಿಕೊಳ್ಳುತ್ತದೆ. ಆದರ ಆ ಚಿತ್ರಿಕ ಚಲಿಸುವ ರೀತಿಯದಾಗಿದ್ದು, ಆಂತರಿಕ ಕ್ಷಣಗಳಲ್ಲಿ ಅದು ಭಿನ್ನ ಭಿನ್ನ ಸಂಯೋಜನೆ ಪಡೆದಾಗ, ಛಾಯಾಗ್ರಾಹಕ ಬಳಸುವ ಬೆಳಕು, ಅಲ್ಲಲ್ಲಿ ಸಾಧಿಸುವ ಸಂಯೋಜನೆ ಅವನ ದೌರ್ಬಲ್ಯ/ವಿಶ್ವಾಸದ ಹಿಡಿತವನ್ನು ತೋರಬಹುದು. ಸಿನಿಮಾ ನಿರ್ಮಾಣದ ಆರಂಭ ಕಾಲದಲ್ಲಿದ್ದ ೩:೪ ಅನುಪಾತದ ದೃಶ್ಯ ಸಂಯೋಜನೆ ಎಲ್ಲ ಛಾಯಾಗ್ರಾಹಕರ ಪ್ರೀತಿಯ ಕೂಸಾಗಿ, ಜಗನ್ಮಾನ್ಯವಾಗಿತ್ತು. ಆದರೆ ನಂತರದ ಸ್ಪರ್ಧೆ, ಹೊಸ ತಂತ್ರ, ದೊಡ್ಡ ತೆರೆಯ ಹುಡುಕಾಟದಿಂದಾಗಿ ವೈಡ್ ಸ್ಕ್ರೀನ್, ಸಿನಿಮಾ ಸ್ಕೋಪ್ ಹಾಗೂ ಟಿ.ವಿ.ಯ ಕಿರುತೆರೆ ಅಗತ್ಯ ಇವೆಲ್ಲವುಗಳಿಂದಾಗಿ ಈಗ ಸಂಯೋಜನೆಯ ಪರಿ ಬದಲಾಗಿದೆ. ಈಗ ಅವನು ಉತ್ತಮ ಸಂಯೋಜನೆಯ ಬದಲು ಅಂತಿಮವಾಗಿ ಪ್ರೇಕ್ಷಕನಿಗೆ ಕಾಣಲೇಬೇಕಾದ 'ಸುರಕ್ಷಿತ ಪ್ರದೇಶ' (safe area)ದೊಳಗೆ ಸಂಯೋಜಿಸಿ ಚಿತ್ರದ ಮಹತ್ತರವಾದ ಎಲ್ಲ ಭಾಗ ಕಾಣುವಂತೆ ಜಾಗರೂಕತೆ ವಹಿಸುತ್ತಾನೆ.

ಒಬ್ಬ ನಿರ್ದೇಶಕ ತನ್ನ ಕಲ್ಪನೆ ಸಾಕಾರಗೊಳ್ಳಲು ಹಲವಾರು ತಂತ್ರಜ್ಞರನ್ನು ಅವಲಂಬಿಸಿದಂತೆ, ಒಬ್ಬ ತಂತ್ರಜ್ಞನು ನಿರ್ದೇಶಕ ನಿರೀಕ್ಷಿಸಿದ ಪರಿಣಾಮ ನೀಡಲು ಹಲವಾರು ಸಹಾಯಕರನ್ನು ಅವಲಂಬಿಸಬೇಕಾಗುತ್ತದೆ. ಇವರಲ್ಲಿ ಯಾರೇ ಒಬ್ಬ ವ್ಯಕ್ತಿಯ ಕರ್ತವ್ಯದಲ್ಲಿ ಚ್ಯುತಿ ಬಂದರೆ ಪರಿಣಾಮ ನಷ್ಟವಾಗುವುದು. ಒಂದು ಚಿತ್ರಿಕೆಯನ್ನು ತೆಗೆಯುವಾಗ ಛಾಯಾಗ್ರಾಹಕನಿಗೆ ಬೆಳಕಿನ ಸಹಾಯಕ (lighting assistant), ಕ್ಯಾಮರಾ ಚಾಲನೆಯ ಸಹಾಯಕ (operating assistant), ಬ್ಯಾಟರಿ ಸಹಾಯಕ, ಸ್ಪಷ್ಟತೆ ಸಹಾಯಕ (focus assistant), ತಳ್ಳುಗಾಡಿ (trolley) ಸಹಾಯಕ, ಕಚ್ಚಾ ಫಿಲಂ ಅನ್ನು ಕ್ಯಾಮರಾಕ್ಕೆ ತುಂಬುವ, ಚಿತ್ರಿಸಿದ್ದನ್ನು ತೆಗೆದು ಡಬ್ಬದಲ್ಲಿ ಸೇರಿಸಿ ಅದರ ಮೇಲೆ ಲ್ಯಾಬ್‌ಗೆ ಸಲಹೆ ಸೂಚನೆ ಬರೆಯುವ ಸಹಾಯಕ, ಝೂಮ್ ಲೆನ್ಸ್ ಬಳಸಿದರೆ, ಕ್ರೇನ್ ಬಳಸಿದರೆ, ಹೈಸ್ಪೀಡ್ ಕ್ಯಾಮರಾ ಬಳಸಿದರೆ, ಜನರೇಟರ್ ಬಳಸಿದರೆ ಬರುವ ಸಹಾಯಕರು ಬೇರೆ. ಇವರೆಲ್ಲರಿಂದಲೂ ಉತ್ತಮ ಸೇವೆ, ಅತಿ ಕಡಿಮೆ ಅವಧಿಯಲ್ಲಿ ಪಡೆಯಲು ಛಾಯಾಗ್ರಾಹಕನಿಗೆ ಇರಬೇಕಾದ ಪ್ರತಿಭೆ, ಅನುಭವ ಹಾಗೂ ಪ್ರಭಾವ ಊಹಿಸಲೂ ಅಸಾಧ್ಯ.

ಇಷ್ಟು ಸಾಲದೆಂಬಂತೆ, ದೃಶ್ಯಗಳನ್ನು ಕಥೆಯ ಅನುಕ್ರಮದಲ್ಲಿ ಚಿತ್ರಿಸುವುದಿಲ್ಲ. ಕಲಾವಿದ, ಸ್ಟುಡಿಯೋ, ಹೊರಾಂಗಣ ಇವುಗಳ ಲಭ್ಯತೆ ಆಧರಿಸಿ ತಮ್ಮದೇ ಅನುಕೂಲಕರ ಕ್ರಮದಲ್ಲಿ ಚಿತ್ರಿಸುವರು. ಆದರೂ ಚಿತ್ರ ಅಂತಿಮವಾಗಿ ಸಂಕಲನದ ಮೇಜಿನ ಮೇಲೆ ಕ್ರಮವಾಗಿ ಜೋಡಿಸಲ್ಪಟ್ಟಾಗ ದೃಶ್ಯದಿಂದ ದೃಶ್ಯಕ್ಕೆ ಸಂಯೋಜನೆ, ಬೆಳಕು, ಶೈಲಿ ಹಾಗೂ ಭಾವನೆಗಳು ಏಕಮುಖವಾಗಿ ಪ್ರವಹಿಸುವಂತಿರಬೇಕು. ಇದಕ್ಕೆ ಅಪಾರ ನೆನಪಿನ ಶಕ್ತಿ ಬೇಕು. ಇದಲ್ಲದೇ ಯಾವ ಚಿತ್ರಿಕೆಯಲ್ಲಿ ಯಾವ ಮಸೂರ (lens) ಬಳಸಬೇಕೆಂಬ ತೀರ್ಮಾನವನ್ನೂ ಕೈಗೊಳ್ಳಬೇಕು. ಇದು ಕ್ಯಾಮರಾ ಮುಂದಿರುವ ಕಲಾವಿದ ಹಾಗೂ ಅವನ ಹಿನ್ನೆಲೆಯ ಸ್ಪಷ್ಟತೆಯನ್ನು (background sharpness) ತೀರ್ಮಾನಿಸುತ್ತದ. ಕಥೆಯ ನಿರೂಪಣೆಯಲ್ಲಿ ಅಗತ್ಯವಿದ್ದಷ್ಟು ಒತ್ತುಕೊಡಲು ಅದಕ್ಕೆ ಸೂಕ್ತವಾದ ಲೆನ್ಸ್ ಬಳಸುವುದು ಅಗತ್ಯ.

ಸ್ಟುಡಿಯೋ ಒಳಾಂಗಣದಲ್ಲಿ ಬೆಳಕಿನ ವ್ಯವಸ್ಥೆ

ಇಲ್ಲಿ ರಚಿಸಲಾದ ಸೆಟ್ಟುಗಳಲ್ಲಿ ಎರಡು ಹಂತದಲ್ಲಿ ಲೈಟುಗಳನ್ನು ಬೆಳಕಿನ ವ್ಯವಸ್ಥೆಗೆ ಬಳಸುವರು. ಮೊದಲನೆಯದಾಗಿ, ಇಡೀ ಸೆಟ್ಟನ್ನು ಬೆಳಕಿನಿಂದ ಸಂಯೋಜಿಸುವುದು. ಎರಡನೆಯದಾಗಿ, ಅದರಲ್ಲಿನ ಕಲಾವಿದರನ್ನು ಬೆಳಕಿನಲ್ಲಿ ಸಂಯೋಜಿಸುವುದು. ಈ ಎರಡನೆಯ ಬಗೆಯ ಬೆಳಕು ವಿನ್ಯಾಸ ಮಾಡುವಾಗ ಸ್ವಲ್ಪ ಮನೋವಿಜ್ಞಾನಕ್ಕೆ ಸಂಬಂಧಿಸಿದ ಭಾವನೆಗಳ ತಾಕಲಾಟ ಕುರಿತು ಅರಿತಿರಬೇಕು. ಹಾಗೂ ಕಲಾವಿದರಿಂದ ಸಹಕಾರ ಪಡೆಯಲು ಎಚ್ಚರಿಕೆಯಿಂದ ವರ್ತಿಸಬೇಕು.

ಸಾಮಾನ್ಯವಾಗಿ ಈ ಅಂಶ ಸಾಧಿಸಲು ದೃಶ್ಯದ ಒಂದು ರಿಹರ್ಸಲ್, ಕಲಾವಿದರ ಚಲನ-ವಲನ ಸಹಿತ, ಸಂಭಾಷಣೆಗೆ ಒತ್ತು ಕೊಡದೇ ಮಾಡುವರು. ಈಗ ಅವರು ಚಲಿಸಿದ ನಂತರ ಅವರು ನಿಲ್ಲುವ ಸ್ಥಳ, ಎತ್ತರ, ದಿಕ್ಕು ಗಮನಿಸಿ ಅಲ್ಲಿ ತಮ್ಮ ಸಹಾಯಕರನ್ನು ನಿಲ್ಲಿಸಿ ಬೆಳಕಿನ ದೀಪಗಳನ್ನು ಹೊಂದಿಸುವರು. ಇದರಿಂದ ಕಲಾವಿದ ಅನವಶ್ಯಕವಾಗಿ ಲೈಟಿನ ಪ್ರಖರತೆಯಲ್ಲಿ ಬೆಂದು ಬೆವತು ಕಗ್ಗಾಗುವುದಿಲ್ಲ, ಹಾಗೂ ಸಂಭಾಷಣೆ ಉರುಹೊಡೆಯಲು, ಸಹಕಲಾವಿದರ ಸಂಭಾಷಣೆಯ ಪ್ರತಿಕ್ರಿಯೆಗೆ ಸ್ಪಂದಿಸಲು ಅವರಿಗೆ ಕಾಲಾವಕಾಶವೂ ದೊರೆಯುವುದು. ಹೀಗಾಗಿ ಒಂದೇ ಟೇಕ್‌ನಲ್ಲಿ ಪರಿಪಕ್ವವಾದ ಅಭಿನಯ ಪಡೆಯಲು ಛಾಯಾಗ್ರಾಹಕ ನಿರ್ದೇಶಕನಿಗೆ, ಕಲಾವಿದರಿಗೆ ನೆರವಾಗಬಹುದು.

ಸಾಮಾನ್ಯವಾಗಿ ಸೆಟ್‌ನಲ್ಲಿ ಬೆಳಕು ವ್ಯವಸ್ಥೆ ಮಾಡುವ ಮುನ್ನ ಕಿಟಕಿ, ಬಾಗಿಲು, ಬೆಳಕಿಂಡಿ ಹೀಗೆ ಯಾವುದಾದರೂ ದೃಶ್ಯಗೋಚರ ಬೆಳಕಿನ ಮೂಲ ಗುರುತಿಸಿ, ಅಲ್ಲಿಂದ 'source lighting' ಮಾಡುವರು. ಇದಕ್ಕೆ ಪೂರಕವಾಗಿ ಕಲಾವಿದರ ಅಥವಾ ಸೆಟ್‌ನ ವಿವರಗಳಿಗೆ ಒತ್ತುಕೊಡಲು ಮೂಲ ಬೆಳಕಿಗೆ ಹೊಂದುವಂತೆ ವಿವಿಧ fill-in ದೀಪ ಹೊಂದಿಸುವರು. ಈ ಲೈಟ್‌ಗಳನ್ನು ಇಡುವ ರೀತಿ - ನಂತರ ನಿರ್ದೇಶಕ ಚಿತ್ರಿಸಲು ಬಯಸುವ ಆ ದೃಶ್ಯದ ಮಿಡ್ ಕ್ಲೋಸಪ್, ಕ್ಲೋಸಪ್‌ಗಳ ಕಾಲದಲ್ಲಿ ಅಡ್ಡ ಬರದಂತೆ ಎಚ್ಚರಿಕೆ ವಹಿಸುವರು. ಇದರಿಂದ ಸಮಯ ಹಾಗೂ ಮಾನವ ಶಕ್ತಿ ಉಳಿತಾಯವಾಗುವುದು.

ಚಿತ್ರಿಸಲಿರುವ ದೃಶ್ಯದಲ್ಲಿನ ಕಲಾವಿದರ ಹಾಗೂ ಕ್ಯಾಮರಾದ ಚಲನೆಯ ಸಂಪೂರ್ಣ ಕಲ್ಪನೆ ಹೊಂದಿ ಬೆಳಕಿನ ಸಂಯೋಜನೆ ಮಾಡಲು ಛಾಯಾಗ್ರಾಹಕ ಮುಂದಾದಲ್ಲಿ, ಪ್ರತಿ ಚಿತ್ರಿಕೆಗೂ ಲೈಟ್‌ಗಳ ಸ್ಥಳ ಬದಲಾಯಿಸಿ ಬೆಳಕು ಸಂಯೋಜನೆಯ ಶೈಲಿಗೆ ಧಕ್ಕೆ ತರದೆ, ಸಮಯ ಹಾಗೂ ಶಕ್ತಿಯನ್ನು ಉಳಿಸಿಕೊಳ್ಳಲು ನಿರ್ದೇಶಕ ಹಾಗೂ ಛಾಯಾಗ್ರಾಹಕನ ನಡುವೆ ಪೂರ್ವಚರ್ಚೆ ಅಗತ್ಯ.



(ಚಿತ್ರ ೧೬-೨೦) ಚಿತ್ರೀಕರಣಕ್ಕೆ ಉಪಯೋಗಿಸುವ ವಿವಿಧ ಮಾದರಿಯ ಲೈಟಿಂಗ್ ಉಪಕರಣಗಳು

ಚಿತ್ರರಂಗದಲ್ಲಿ ಯಾವುದೇ ಕಲಾವಿದ ಮತ್ತು ಛಾಯಾಗ್ರಾಹಕ ತುಂಬ ಇಷ್ಟ ಪಡುವುದು, ಪ್ರೀತಿಸುವುದು close-up ಚಿತ್ರಿಕೆಗಳನ್ನು. ಕಲಾವಿದರ ಸುಂದರವಾದ ಮುಖವನ್ನು ಇನ್ನೂ ಸುಂದರವಾಗಿ ತೋರಿಸಲು ಛಾಯಾಗ್ರಾಹಕ ವಿಶೇಷ ಎತ್ತರ, ಕೋನ, ತೀಕ್ಷ್ಣತೆಯಿಂದ ದೀಪ ಬೆಳಗಿಸಿ, ಫಿಲ್ಟರ್ ಅಥವಾ ಗಾಜಸ್ (gauzes) ಬಳಸಿ ಚಿತ್ರಿಸುವನು. ಇದಲ್ಲದೇ ಚಿತ್ರದಲ್ಲಿ ನಾಟಕೀಯ ಪರಿಣಾಮಕ್ಕಾಗಿ ಅಥವಾ ಹಾಡಿನಲ್ಲಿನ ಪದಗಳಿಗೆ ಒತ್ತುಕೊಡಲು, ಕಲಾವಿದರ ಕೇವಲ ಕಣ್ಣು, ಮೂಗು, ತುಟಿ, ಕಿವಿ, ಹೊಕ್ಕಳು, ಮುಷ್ಟಿ ಚಿತ್ರಿಸುವಾಗಲೂ ಅನುಕೂಲವಾಗಲೆಂದು ಇದನ್ನು ಪ್ರತ್ಯೇಕ ಚಿತ್ರಿಕೆಯಾಗಿ ತೆಗೆದು, ಸಂಕಲನದಲ್ಲಿ ಸರಿಯಾಗಿ ಜೋಡಿಸುವರು. ಈ ಪರಿಣಾಮ ಅಖಂಡ ಚಿತ್ರಿಕೆಯ ಅಂಗವಾಗಿ ಕ್ಯಾಮರಾ ಚಲನೆಯಿಂದಾಗಿ ಕೊನೆಗೋ ಅಥವಾ ಮೊದಲಿಗೋ ಬಂದರೆ ಛಾಯಾಗ್ರಾಹಕ ತನ್ನಲ್ಲಿರುವ ಇತರ ತಂತ್ರಗಳನ್ನು ಬಳಸಿ ಮೆರೆಯಲಾರ. ಈ ದೃಷ್ಟಿಯಿಂದ ಈಗಲೂ ಕೆಲವು ಹಳೆಯ ಚಿತ್ರಗಳಲ್ಲಿನ ನಾಯಕಿಯರ ಮುಖದ ಸೌಂದರ್ಯ ವೀಕ್ಷಿಸುವುದು ಪ್ರೇಕ್ಷಕರ ಕಣ್ಣಿಗೊಂದು ಹಬ್ಬವಿದ್ದಂತೆ.

ನಿಜವಾದ ತಾಣಗಳಲ್ಲಿ ಒಳಾಂಗಣ ಚಿತ್ರಿಸಿದಾಗ ಛಾಯಾಗ್ರಾಹಕ ಸ್ಟುಡಿಯೋದಲ್ಲಿಟ್ಟಂತೆ ಎಲ್ಲೆಂದರಲ್ಲಿ ಲೈಟುಗಳನ್ನು ಇಡಲು ಸಾಧ್ಯವಿಲ್ಲ. ಸ್ಟುಡಿಯೋದಲ್ಲಿ ಅವನಿಗೆ ಛಾವಣಿಯೇ ಇಲ್ಲದ ಮನೆಯ ಸೆಟ್ಟು, ಅದರ ನಾಲ್ಕೂ ಕಡೆಗೆ ಕಟ್ಟಲಾಗಿರುವ (catwalk) ದೀಪಗಳನ್ನು ಹೊಂದಿಸಲು ಅಟ್ಟಣಿಗೆ ವ್ಯವಸ್ಥೆ, ಅಕ್ಕಪಕ್ಕ ವಿಶಾಲವಾದ ಸಲ ಇಲ್ಲಿ ಲಭ್ಯವಿರುವುದಿಲ್ಲ. ಹೀಗಾಗಿ ಬೆಳಕಿನ ದೀಪ ಇಡಲು, ಕ್ಯಾಮರಾ ಚಲಿಸಲು, ವಿಶೇಷ ಕೋನದಲ್ಲಿ ಸಂಯೋಜಿಸಲು, ಕಲಾವಿದರ ಚಲನೆಗೆ ಇತಿಮಿತಿ ಇದ್ದರೂ ಸಹಜತೆಗಾಗಿ ಅಲ್ಲೇ ಚಿತ್ರಿಸಬೇಕಾಗುತ್ತದೆ. ಆಗ ತ್ವರಿತವೇಗದ ಕಚ್ಚಾ ಫಿಲಂ ಬಳಸಿ, ಕನಿಷ್ಠ ತೀವ್ರತೆಯ ಲೈಟು, ಕ್ಯಾಮರಾದ ಚಿಕ್ಕದಾದ ಚಲನೆ, ಕಲಾವಿದರ ಮಿತಿಯರಿತ ಓಡಾಟ, ವಿಶೇಷವಾದ ಕೋನ ಬಳಸಿ ಚಿತ್ರಿಸಬೇಕಾಗುತ್ತದೆ. ಇದಕ್ಕೂ ಮೊದಲು ಆ ತಾಣದಲ್ಲಿರುವ ಕಿಟಕಿಗಳಿಗೆ (ಫಿಲ್ಟರ್ ಜಿಲಾಟಿನ್) ಬಣ್ಣದ ಪಾರದರ್ಶಕ ಕಾಗದ ಮೆತ್ತಿ, ಬಾಗಿಲಿಗೆ ಪರದೆ ಅಳವಡಿಸಿ, ಹೊರಗಿರುವ ಬೆಳಕಿನ ಪ್ರಖರತೆಯನ್ನು ಗಮನದಲ್ಲಿಟ್ಟುಕೊಂಡು ಚಿತ್ರಿಸಬೇಕಾಗುತ್ತದೆ.

ಸ್ಟುಡಿಯೋದಲ್ಲೇ ಹೊರಾಂಗಣ

ಕಥೆಗೆ ಅಗತ್ಯವಾಗಿ ಬೇಕಾದ ತೋಟ, ರಸ್ತೆಯ ಚೌಕ, ರಸ್ತೆಯ ವರ್ತುಲ, ಮನೆಯ ಮುಂದಿನ ಬೀದಿ, ಅಂಗಳ, ಓಣಿ, ಹಿತ್ತಲು ಕಲಾನಿರ್ದೇಶಕನ ಕೈಚಳಕದಿಂದ ನೈಜವಾಗಿ ಕಾಣಬಹುದು. ಇದರಲ್ಲಿ ಬೀದಿ ದೀಪಗಳನ್ನು, ಕಂಬಗಳನ್ನು ನೆಟ್ಟು, ಕಸದ ತೊಟ್ಟಿ, ಸಾರ್ವಜನಿಕ ನಲ್ಲಿ, ಬೋರ್‌ವೆಲ್, ಗೋಡೆ ಬರಹ ಪುನರ್‌ಸೃಷ್ಟಿಸಿ ನೈಜ ಪರಿಣಾಮ ತರಬಹುದು. ಆದರೆ ಇವೆಲ್ಲವನ್ನೂ ನುಂಗಿಹಾಕುವ ಅಜಾತುರ್ಯವೆಂದರೆ, ನಿಜ ಜೀವನದಲ್ಲಿ ಬೀದಿಯಲ್ಲಿ ಕಾಣದೇ ಇರುವ ಒಂದಕ್ಕಿಂತ ಹೆಚ್ಚಿನ ನೆರಳುಗಳು. ಇವು ಸ್ಟುಡಿಯೋ ಬೀದಿ ದೃಶ್ಯದಲ್ಲಿ ಎಷ್ಟೇ ಮುಂಜಾಗ್ರತೆ ವಹಿಸಿದರೂ ಕಾಣುತ್ತವೆ. ಒಂದು ಹಗಲನ್ನು ಪುನರ್ ನಿರ್ಮಾಣ ಮಾಡಲು ಸಾಕಷ್ಟು ಲೈಟುಗಳನ್ನು ಬಳಸಿದಾಗ, ಅವು ಪ್ರತಿಯೊಂದೂ ನೆರಳನ್ನು ಹುಟ್ಟುಹಾಕುವುದು. ಛಾಯಾಗ್ರಾಹಕ ಅದರ ತೀವ್ರತೆ, ಪ್ರಖರತೆ ಕಡಿಮೆ ಮಾಡಲು ಪ್ರಯತ್ನಿಸುವನು, ಅಷ್ಟೇ.

ಹಗಲಿನ ಹೊರಾಂಗಣ

ನಿಜವಾದ ಹೊರಾಂಗಣದಲ್ಲಿ ಚಿತ್ರಿಸಲು, ಸಾಮಾನ್ಯವಾಗಿ ಛಾಯಾಗ್ರಾಹಕ ಮೋಡದ ಬೆಳಕಿಗಿಂತ ಬಿಸಿಲನ್ನೇ ಬಯಸುವನು. ಕೆಲವರು ಮಾತ್ರ ಬೆಳಗಿನ ಅಥವಾ ಸಂಜೆಯ ಹಿಂಬದಿ ಬೆಳಕಿನಲ್ಲಿ ಚಿತ್ರಿಸಲು ಇಷ್ಟ ಪಡುವರು. ಆದರೆ ಈ ರೀತಿ ದೊರಕುವ ಸಮಯಾವಧಿ ಅತ್ಯಲ್ಪವಾಗಿರುವುದರಿಂದ ಹೆಚ್ಚು ಚಿತ್ರೀಕರಣ ಅಸಾಧ್ಯ. ಕಡಿಮೆ ಬಜೆಟ್‌ನ ಚಿತ್ರಗಳಲ್ಲಿ ಛಾಯಾಗ್ರಾಹಕನ ಸಲಹೆಯ ಮೇರೆಗೆ ಲಭ್ಯವಿರುವ ಬೆಳಕಿನ ಪ್ರಮಾಣ, ಅವಧಿ ಆಧರಿಸಿ ಅಂದು ಚಿತ್ರಣವಾಗುವ ದೃಶ್ಯಗಳನ್ನು ತೀರ್ಮಾನಿಸುವರು. ಆಗ ಅತಿ ಕಡಿಮೆ ಲೈಟು, ಕಡಿಮೆ ಕ್ಯಾಮರಾ ಚಲನೆ, ವಿಶೇಷವಾದ ಸಂಯೋಜನೆ ಹಾಗೂ ಫಿಲ್ಟರ್ ಬಳಸಿ ಚಿತ್ರಣ ಮುಂದುವರಿಸುವರು. ಹೆಚ್ಚಾಗಿ ರಿಫ್ಲೆಕ್ಟರುಗಳನ್ನು ಬಳಸಿ ಸೂರ್ಯನ ಬೆಳಕನ್ನು ಪ್ರತಿಫಲಿಸುವಂತೆ ಮಾಡಿ ಚಿತ್ರೀಕರಣ ನಡೆಸುವರು. ಥರ್ಮೋಕೋಲ್ ಹಾಳೆಗಳನ್ನು ಬಳಸಿ ಬೆಳಕಿನ ಪ್ರತಿಫಲನ ನಡೆಸುವುದೂ ರೂಢಿಯಲ್ಲಿದೆ.

ಸೂರ್ಯೋದಯ, ಸೂರ್ಯಾಸ್ತ ಕಾಲದಲ್ಲಿ ಚಿತ್ರಿಸುವ ದೃಶ್ಯಗಳಿಗೆ ಕೇವಲ ೩೦ ರಿಂದ ೪೫ ನಿಮಿಷ ಅವಧಿ ಸಿಗುವುದರಿಂದ, ಆಗ ಬೇಕಾಗುವ ಲೈಟುಗಳು, ಫಿಲ್ಟರ್‌ಗಳು, ಡಿಫ್ಯೂಸರ್‌ಗಳು ಕೇಳಿದೊಡನೆ ತಕ್ಷಣಕ್ಕೆ ಸಿಗುವಂತಿರಬೇಕು. ಆಗ ಮಾತ್ರ ಕಲಾವಿದರನ್ನು ಹತ್ತಿರ ನಿಲ್ಲಿಸಿ, ಅವರ ಮುಖದ ಮೇಲೆ ಸ್ವಲ್ಪ ಬೆಳಕು ಚೆಲ್ಲಿ, ಮುಖಭಾವ ವಿವರ ಗ್ರಹಿಸಿ, ಉಳಿದದ್ದನ್ನು ಕೆಂಪು ವರ್ಣದ ಕರಿಛಾಯೆಯಲ್ಲಿ ಮುದ್ರಿಸುವಂತೆ ಲ್ಯಾಬ್‌ಗೆ ಸೂಚಿಸಬಹುದು. ಆಗ ಮಾತ್ರ ನಿರೀಕ್ಷಿತ ಪರಿಣಾಮ ಸಾಧ್ಯ. ಇದನ್ನು ಹಲವಾರು ಕನ್ನಡ ಚಿತ್ರಗಳಲ್ಲಿ ಗಮನಿಸಬಹುದು.

ಹೊರಾಂಗಣದಲ್ಲಿ ರಾತ್ರಿ ಚಿತ್ರೀಕರಣ

ನಿಜವಾದ ಹೊರಾಂಗಣದಲ್ಲಿ ಪಾರ್ಕು, ತೋಟ, ಕಾಡು ಇವುಗಳನ್ನು ರಾತ್ರಿ ಹೊತ್ತು ತೋರಿಸಲು ಬಹಳಷ್ಟು ವಿದ್ಯುತ್ ದೀಪಗಳು ಬೇಕು. ಅಲ್ಲದೇ ಈ ರೀತಿ ಬೆಳಕು ಸಂಯೋಜಿಸಿದಾಗ ಅದು ತುಂಬಾ ಕೃತ್ರಿಮವಾಗಿ ಕಾಣುವುದು. ಆದರೆ ಈ ಹಿನ್ನೆಲೆಯಲ್ಲಿ ಬರುವ ಕಲಾವಿದರ ಮುಖಭಾವ, ಚಲನೆಯನ್ನು ಪ್ರೇಕ್ಷಕ ಗ್ರಹಿಸಲು ದೀಪದ ವ್ಯವಸ್ಥೆ ಮಾಡಲೇಬೇಕು. ಇಂತಹ ಕ್ಲಿಷ್ಟ ಸಂದರ್ಭಗಳಿಗೆ ಲಭ್ಯವಿರುವ ಚಿತ್ರಣದ ಇನ್ನೊಂದು

(ಚಿತ್ರ ೨೧) ಹೊರಾಂಗಣ ಚಿತ್ರೀಕರಣದಲ್ಲಿ ಬಳಸುವ ರಿಫ್ಲೆಕ್ಟರ್‌ಗಳು

ಮಾರ್ಗವೆಂದರೆ 'ಹಗಲನ್ನು ರಾತ್ರಿಯೆಂದು ಚಿತ್ರಿಸುವುದು' (day for night). ಅಂದರೆ, ಬಿಸಿಲಿನಲ್ಲಿ ಚಿತ್ರಿಸಿ, ಅದನ್ನು ರಾತ್ರಿಯ ಬೆಳದಿಂಗಳು ಕಾಣುವಂತೆ ಮಾಡುವುದು. ಇದೊಂದೇ ಕಡಿಮೆ ಖರ್ಚಿನ, ಸುಲಭವಾದ ಪರ್ಯಾಯ ಮಾರ್ಗ.

ಕಪ್ಪು-ಬಿಳುಪು ಚಿತ್ರಗಳಲ್ಲಿ ಈ ಪರಿಣಾಮವನ್ನು ರ್ಯಾಟನ್ ೭೨ಬಿ (wratten 72B) ಫಿಲ್ಟರ್ ಬಳಸಿದಾಗ, ಇದು ನೀಲೀ ಆಕಾಶವನ್ನು ಕಪ್ಪಾಗಿ ಪರಿವರ್ತಿಸುವುದು. ಒಂದು ವೇಳೆ ಬಿಸಿಲಿರದಿದ್ದರೆ, ಆಕಾಶವನ್ನು ಫ್ರೇಮಿನಲ್ಲಿ ಬರದಂತೆ ಎಚ್ಚರ ವಹಿಸಿ, ಚಿತ್ರಿಕೆಗಳನ್ನು ತುಸು 'ಅಂಡರ್ ಎಕ್ಸ್‌ಪೋಸ್' ಮಾಡಿ (ಸುಮಾರು ೨ ಸ್ಟಾಪ್‌ನಷ್ಟು), ಇದನ್ನು ಲ್ಯಾಬ್‌ಗೆ ಲಿಖಿತ ರೂಪದಲ್ಲಿ 'ರಾತ್ರಿ ಪರಿಣಾಮ' ಬೇಕಾಗಿದೆ ಎಂದು ತಿಳಿಸುವರು. ಇಂತಹ ಹಿನ್ನೆಲೆಯ ದೃಶ್ಯದಲ್ಲಿ ಕಲಾವಿದರ ಮುಖವನ್ನು ಮಧ್ಯಮ ಹಾಗೂ ಹತ್ತಿರದ ಚಿತ್ರಿಕೆ (Medium close-up & Close-up) ಯಲ್ಲಿ (ಆರ್ಕ್ ಲೈಟಿನಿಂದ ಬೆಳಗಿಸಿದರೆ ಉತ್ತಮ) ರಿಫ್ಲೆಕ್ಟರ್‌ನಿಂದ ಕಣ್ಣುಗಳು ಕುಕ್ಕದಂತೆ ಬೆಳಕನ್ನು ಬಿಟ್ಟು ಚಿತ್ರಿಸಬೇಕು. ಇಂತಹ ದೃಶ್ಯದಲ್ಲಿ ಮೊದಲು ಚಂದ್ರನ ಚಿತ್ರಿಕೆಯೊಂದನ್ನು ಬಳಸಿ, ನಂತರದ ಚಿತ್ರಿಕೆಗಳಲ್ಲಿ ಎಲ್ಲೂ ದನ ಹುಲ್ಲು ಮೇಯುವ, ಪಕ್ಷಿಗಳು ಹಾರುತ್ತಿರುವ, ಹಿನ್ನೆಲೆಯಲ್ಲಿ ಜನರು ತಿರುಗಾಡುವುದನ್ನು ತಪ್ಪಿಸಬೇಕು. ಏಕೆಂದರೆ ಅವು ರಾತ್ರಿ ಪರಿಣಾಮದಲ್ಲಿ ಕಾಣಬೇಕಿಲ್ಲ. ಇವೆಲ್ಲವೂ ಆಯಾ ಛಾಯಾಗ್ರಾಹಕರ ಕಲ್ಪನೆ, ಪ್ರಯೋಗಶೀಲತೆ ಹಾಗೂ ಅವರ ಮನದಲ್ಲಿ ಮೂಡಿದ ಚಿತ್ತಾರವನ್ನು ಅವಲಂಬಿಸಿರುತ್ತದೆ.

ವರ್ಣದಲ್ಲಿ ಹೊರಾಂಗಣದ ರಾತ್ರಿ ಸನ್ನಿವೇಶ ಚಿತ್ರಿಸುವಾಗ ವರ್ಣಗಳು ಕಚ್ಚಾಫಿಲಂನ ಮೇಲೆ ಉತ್ಪ್ರೇಕ್ಷಿತವಾಗಿ ಬಿಂಬಿತವಾಗುತ್ತವೆ. ಹೀಗಾಗಿ ನಿಜಜೀವನಕ್ಕಿಂತ ವರ್ಣಗಳು ಗಾಢವಾಗಿ, ಬೆಳಕು ಹೆಚ್ಚು ಪ್ರಖರವಾಗಿ ಮೂಡುತ್ತದೆ. ಕಲಾವಿದರ ಸುತ್ತಮುತ್ತಲಿನ ಖಾಲಿ ಕ್ಷೇತ್ರ ಹೆಚ್ಚು ಕಪ್ಪಾಗಿ ಮೂಡುತ್ತದೆ. ಆದರೆ ಸ್ಟುಡಿಯೋದಲ್ಲಿ ಚಿತ್ರಿತವಾದ ದೃಶ್ಯಗಳಲ್ಲಿ ಸೆಟ್ಟುಗಳ ಹಿನ್ನೆಲೆಯ ಬಣ್ಣ, ಕಲಾವಿದರ ವಸ್ತ್ರಗಳ ಬಣ್ಣಗಳನ್ನು ಯೋಜಿಸುವುದರಿಂದ ವರ್ಣ ವೈರುಧ್ಯಗಳನ್ನು ಹತೋಟಿಯಲ್ಲಿಡಬಹುದು ಹಾಗೂ ಉದ್ದೇಶಿತ ಪರಿಣಾಮ ನೀಡಬಹುದು.

ಹೊರಾಂಗಣದಲ್ಲಿ ಹಗಲಿನಲ್ಲಿ ಮರ, ಗಿಡಬಳ್ಳಿ, ಹುಲ್ಲುಗಳ ಹಸಿರು ಇನ್ನೂ ಹಸಿರಾಗಿ, ಆಕಾಶವು ಇದ್ದುದಕ್ಕಿಂತ ಹೆಚ್ಚು ನೀಲಿಯಾಗಿ ಕಾಣುವುದು. ಇವನ್ನು ನಿಯಂತ್ರಿಸಲು ಡಿಫ್ಯೂಜರ್ ಫಿಲ್ಟರ್ ಅಥವಾ ಗಾಜಸ್ (gauzes) ಬಳಸಿ ವರ್ಣ ವೈರುಧ್ಯದ ವೈಪರೀತ್ಯ ತಡೆಯಲು ಸಾಧ್ಯ. ಈ ಬಗೆಯ ವೈರುಧ್ಯವನ್ನು ಕಪ್ಪು-ಬಿಳುಪು ಚಿತ್ರಗಳಲ್ಲಿ, ನಂತರ ಲ್ಯಾಬಿನಲ್ಲಿ ಹತೋಟಿಗೆ ತರಬಹುದಾಗಿತ್ತು. ಆದರೆ ವರ್ಣದಲ್ಲಿ ಇದು ಅಸಾಧ್ಯ. ಇದಕ್ಕೆ ಕಾರಣ, ವರ್ಣ ಸಂಸ್ಕರಣದಲ್ಲಿ ಬಳಸುವ ಫಿಲ್ಟರು, ದೃಶ್ಯದ ಎಲ್ಲ ವರ್ಣಗಳನ್ನು ನಿಯಂತ್ರಿಸುತ್ತದ. ಹೀಗಾಗಿ ಯಾವುದೇ ಒಂದು ವರ್ಣವನ್ನು ಇನ್ನೊಂದು ವರ್ಣಕ್ಕೆ ದುಷ್ಪರಿಣಾಮ ಬೀರದೆ ಹತೋಟಿಗೆ ತರುವುದು ಸಾಧ್ಯವಿಲ್ಲ. ವರ್ಣದಲ್ಲಿ ಸಹ 'ಅಡಿಟಿವ್ ಪ್ರಿಂಟಿಂಗ್' (Additive Printing) ಪದ್ಧತಿಯಲ್ಲಿ ಇದು ಸಾಧ್ಯವಿತ್ತು. ಆದರೆ ಈಗ ಇದು ಚಾಲ್ತಿಯಲ್ಲಿಲ್ಲ.

ವರ್ಣ ಕಚ್ಚಾ ಫಿಲಂ ಕಪ್ಪು-ಬಿಳುಪು ಕಚ್ಚಾ ಫಿಲಂಗಿಂತ ವೇಗದಲ್ಲಿ ಕಡಿಮೆ ಗತಿಯದಾಗಿದ್ದು, ಇದನ್ನು ಚಿತ್ರಿಸಲು ಹೆಚ್ಚಿನ ದೀಪಗಳು ಬೇಕಾಗುತ್ತಿತ್ತು. ಇತ್ತೀಚಿನ ಕಚ್ಚಾ ವರ್ಣ ಫಿಲಂಗಳು ಸಾಕಷ್ಟು ತ್ವರಿತ ವೇಗದಿಂದ ಕೂಡಿದ್ದು, ಕಲಾವಿದರನ್ನು ಹೆಚ್ಚು ಲೈಟು ಬಳಸಿ ಕಾವಿನಲ್ಲಿ ಹುರಿಯಬೇಕಾಗಿಲ್ಲ. ಇದು ವರ್ಣದ ಆರಂಭ ಕಾಲದಲ್ಲಿ ಆರ್ಕ್‌ಲೈಟ್ ಬಳಸಿದಾಗ ತಪ್ಪಿಸಲಾಗದ ಬವಣೆಯಾಗಿತ್ತು.

ಉತ್ತಮ ಸೌಷ್ಟವತೆ ಹಾಗೂ ಪ್ರತ್ಯೇಕತೆ (Good Modelling & Seperation) ಕಪ್ಪು-ಬಿಳುಪು ಚಿತ್ರಣದ ಈ ಎರಡೂ ಪೂರ್ವಾಗತ್ಯಗಳನ್ನು ವರ್ಣ ಕಚ್ಚಾ ಫಿಲಂ ನಿಭಾಯಿಸುವುದರಿಂದ, ಛಾಯಾಗ್ರಾಹಕನ ಸಮಸ್ಯೆಗಳು ಕೊಂಚ ಕಡಿಮೆ ಆಗುತ್ತವೆ.

ವರ್ಣದಲ್ಲಿ 'ಡೇ ಫಾರ್ ನೈಟ್' ಚಿತ್ರಿಸುವಾಗ ಕಲಾವಿದರಿಗೆ ಹಿಂಬದಿ ಬೆಳಕು ಬಳಸಿ, ಚಿತ್ರಿಕೆಗಳನ್ನು 'ಅಂಡರ್ ಎಕ್ಸ್‌ಪೋಸ್' ಮಾಡಿ, ಲ್ಯಾಬ್‌ನವರಿಗೆ ಈ ದೃಶ್ಯವನ್ನು 'ನೀಲಿ ಛಾಯೆ' (blue tone) ನೀಡಿ ಮುದ್ರಿಸಲು ಸೂಚಿಸುವುದು. ಇದು ರಂಗಭೂಮಿಯಿಂದ ಎರವಲಾಗಿ ಬಂದ ಚಂದ್ರನ ಬೆಳದಿಂಗಳ ಕಲ್ಪನೆ ಹಾಗೂ ಇದು ವಾಸ್ತವವಾದ ಅಲ್ಲ. 'ಎಡಕಲ್ಲು ಗುಡ್ಡದ ಮೇಲೆ' ಚಿತ್ರದಲ್ಲಿನ 'ವಿರಹಾ ನೂರು ನೂರು ತರಹಾ...' ಗೀತೆಯಲ್ಲಿ ಛಾಯಾಗ್ರಾಹಕ ಶ್ರೀಕಾಂತ್ ನೀಡಿದ ಪರಿಣಾಮ ಇದನ್ನು ಜ್ಞಾಪಿಸುತ್ತದೆ. ಆದರೂ ತಾಂತ್ರಿಕ ಇತಿಮಿತಿಗಳಿಂದಾಗಿ ನಮ್ಮ ಕನ್ನಡ ಚಿತ್ರಗಳಲ್ಲಿ ವರ್ಣಗಳ ನಾಟಕೀಯ ಹಾಗೂ ಕಲಾತ್ಮಕ ಬಳಕೆ ಇನ್ನೂ ಶೈಶವಾವಸ್ಥೆಯಲ್ಲೇ ಇದೆ ಎನ್ನಬಹುದು.

ವರ್ಗೀಕರಣ (Grading)

ಛಾಯಾಗ್ರಾಹಕನ ಸಕಲ ಪರಿಶ್ರಮವೂ ನಿರ್ದೇಶಕನ ಕಲ್ಪನೆಯಂತೆ, ಪ್ರೇಕ್ಷಕನವರೆಗೂ ತಲುಪಿಸಬೇಕೆಂದರೆ, ಅವನು ಲ್ಯಾಬ್‌ನಲ್ಲಿ ಚಿತ್ರದ ಅಂತಿಮ ಹಂತದ ಮೊದಲ ಪ್ರತಿ ಮುದ್ರಣವಾಗುವಾಗ ಅದರ ವರ್ಗೀಕರಣದಲ್ಲಿ ಭಾಗವಹಿಸಲೇಬೇಕು.

ಕಪ್ಪು-ಬಿಳುಪು ಚಿತ್ರಗಳಲ್ಲಿ ಕೇವಲ ಬೆಳಕು ನೆರಳಿನಾಟ ಆಡಬೇಕಾದ್ದರಿಂದ ಇಡೀ ದೃಶ್ಯದಲ್ಲಿ ತಾದ್ಯಾತ್ಮ್ಯ (Unison) ಉಳಿಯುವಂತೆ ವರ್ಗೀಕರಣದಲ್ಲಿ ಶ್ರಮವಹಿಸುತ್ತಿದ್ದ. ಒಂದರಿಂದ ಇಪ್ಪತ್ತರವರೆಗಿನ 'ಪಂಚ್‌ಹೋಲ್' ಪದ್ಧತಿಯಲ್ಲಿ ಈ ಪರಿಣಾಮವನ್ನು ಮುದ್ರಣ ಯಂತ್ರದಲ್ಲಿ ವರ್ಗೀಕರಣ ಪಟ್ಟಿಯ ಫಿಲಂನ ನೆರವಿನಿಂದ ಸಾಧಿಸಬಹುದಾಗಿತ್ತು. ಆರ್ವೋದಲ್ಲಿ, ಕಪ್ಪು-ಬಿಳುಪು ಮಂದಗತಿಯ NP7 ನೆಗೆಟಿವ್ ಫಿಲಂನಲ್ಲಿ ಇಡೀ ದೃಶ್ಯದ ದೂರ ಚಿತ್ರಿಕೆ ಚಿತ್ರಿಸಿ, ಅದಕ್ಕೆ ಸಂಬಂಧಪಟ್ಟ ಸಮೀಪ ಚಿತ್ರಿಕೆಗಳನ್ನು ತೀವ್ರಗತಿಯ NP55 ನೆಗೆಟಿವ್ ಫಿಲಂನಲ್ಲಿ ಚಿತ್ರಿಸಿ, ಸಂಕಲನದಲ್ಲಿ ಅವುಗಳನ್ನು ಕಲಸುಮೇಲೋಗರ ಮಾಡಿ ಬಳಸಿದರೂ ಅಂತಿಮ ದೃಶ್ಯದಲ್ಲಿ ಏಕರೂಪ ಪರಿಣಾಮ ನೀಡುವಲ್ಲಿ ಲ್ಯಾಬ್ ಮತ್ತು ಛಾಯಾಗ್ರಾಹಕರ ಪರಿಶ್ರಮ ಬಹಳ ಮುಖ್ಯವೆನಿಸುತ್ತದೆ; ಅವರು ಚಿತ್ರವನ್ನು ಅರಿತು ದುಡಿಸಿಕೊಂಡ ರೀತಿಯನ್ನು ಸೂಚಿಸುತ್ತದೆ.

ವರ್ಣದಲ್ಲಿ ವರ್ಗೀಕರಣ ಮಾಡುವಾಗ ಸಾಮಾನ್ಯವಾಗಿ ಪ್ರತಿಯಲ್ಲಿ ಮೂಡುವ ಪ್ರಖರತೆ (Brightness / Density), ಸಾಂದ್ರತೆ ಹೊಂದಾಣಿಕೆ ಮಾಡಿ, ವರ್ಣ ವೈರುಧ್ಯವನ್ನು ಪ್ರತಿ ಚಿತ್ರಿಕೆಗಳಲ್ಲಿ ಬದಲಾಯಿಸದೇ, ಇಡೀ ರೀಲ್‌ನಲ್ಲಿ ಹೆಚ್ಚು ಅಥವಾ ಕಡಿಮೆ ಮಾಡಬೇಕಾಗುವುದು. ದೃಶ್ಯದಿಂದ ದೃಶ್ಯಕ್ಕೆ ವರ್ಣವೈರುಧ್ಯ ಸಾಧಿಸಲು, ಚಿತ್ರೀಕರಣ ಹಾಗೂ ವರ್ಣ ನೆಗೆಟಿವ್ ಡೆವಲಪ್ ಮಾಡುವಾಗ ಈ ಕ್ರಮ ಅಗತ್ಯವಾಗುತ್ತದೆ. ಆದರೂ ವರ್ಣ ಚಿತ್ರಗಳಲ್ಲಿ ದೃಶ್ಯದಿಂದ ದೃಶ್ಯಕ್ಕೆ ವರ್ಣ ಛಾಯೆ (colour tone) ಹೊಂದಿಸುವರು ಹಾಗೂ ಇಡೀ ದೃಶ್ಯದ ಪರಿಣಾಮವನ್ನು ಗಮನದಲ್ಲಿ ಇರಿಸಿಕೊಳ್ಳುವರು.

ವಿಭಿನ್ನ ಹಿನ್ನೆಲೆಯ ಛಾಯಾಗ್ರಾಹಕರು

ಛಾಯಾಗ್ರಾಹಕರಲ್ಲಿ ಒಬ್ಬೊಬ್ಬರು ಒಂದೊಂದು ಬಗೆಯಲ್ಲಿ ಪರಿಣತಿ ಸಾಧಿಸಿದ್ದಾರೆ. ಕೆಲವರು ಸಹಾಯಕರಾಗಿ ಕ್ಷೇತ್ರವನ್ನು ಪ್ರವೇಶಿಸಿ, ನುರಿತ-ಹಿರಿಯ ಛಾಯಾಗ್ರಾಹಕರ ಕೈಕೆಳಗೆ ಕೆಲಸ ಮಾಡುತ್ತಾ, ಛಾಯಾಗ್ರಹಣ ಕಲೆಯಲ್ಲಿ ಪರಿಣತರಾದರೆ, ಇನ್ನು ಕೆಲವರು ಸ್ಥಿರಚಿತ್ರ ಛಾಯಾಗ್ರಾಹಕರಾಗಿ ಚಿತ್ರೀಕರಣ ತಾಣದಲ್ಲಿದ್ದು, ಅನುಭವಿ ಛಾಯಾಗ್ರಾಹಕ ಕೆಲಸ ಮಾಡುವುದನ್ನು ನೋಡುತ್ತಾ ಕಲಿತವರು. ಮತ್ತೆ ಕೆಲವರು ಬೆಂಗಳೂರು ಹಾಗೂ ಮತ್ತಿತರ ಕಡೆ ವಿದ್ಯಾಲಯಗಳಲ್ಲಿ ಶಿಕ್ಷಣ ಪಡೆದು ಬಂದು ಚಿತ್ರಗಳಲ್ಲಿ ಕೆಲಸ ಮಾಡುತ್ತಾ ಪಳಗಿದವರು. ಹೀಗೆ ವಿವಿಧ ಮಾರ್ಗಗಳಲ್ಲಿ ಈ ಕ್ಷೇತ್ರವನ್ನು ಪ್ರವೇಶಿಸಿದ ಛಾಯಾಗ್ರಾಹಕರು ಪ್ರತಿಯೊಬ್ಬರೂ ತಮ್ಮದೇ ಆದ ಶೈಲಿ-ಕಾರ್ಯ ನಿರ್ವಹಣೆ ವಿಧಾನ ಹೊಂದಿದ್ದಾರೆ.

ವ್ಯಾಪಾರಿ ಚಿತ್ರರಂಗದ ವ್ಯಾಪ್ತಿ, ಕಾರ್ಯ ಕ್ಷೇತ್ರದಷ್ಟೇ ಕಾರ್ಯಶೈಲಿಯೂ ವಿಶಾಲವಾದುದು. ಇಲ್ಲಿ ಎಲ್ಲದಕ್ಕೂ ಪರಿಣತರ ಸೇವೆ ಲಭ್ಯ. ಸದಾ ಕಾಲವೂ ಸಾಕ್ಷ್ಯಚಿತ್ರ, ವಾರ್ತಾಚಿತ್ರಗಳನ್ನು ಚಿತ್ರಿಸುವ ಛಾಯಾಗ್ರಾಹಕನಿಗೆ ನಿತ್ಯವೂ ಹೊಸ ಹೊಸ ಪರಿಸ್ಥಿತಿಗೆ ಹೊಂದಿಕೊಳ್ಳುವ ಸಂದರ್ಭ, ಅನುಭವ ಒಂದೆಡೆಯಾದರೆ ವಿದ್ಯುತ್ ದೀಪದ ಕೊರತೆ, ಸಹಜ ಬೆಳಕಿನ ಅಭಾವ, ಕ್ಯಾಮರಾ ಚಲಿಸಲು ಉಪಕರಣಗಳ ಖೋತಾ, ಚಿತ್ರಿಸುತ್ತಿರುವ ವಸ್ತು ವಿಷಯವೇ ಕೈ ಮೀರಿದ್ದು. ಆದರೂ ಅವನು ತನ್ನ ಸಮತೋಲನ ಕಾಯ್ದುಕೊಂಡು ಚಿತ್ರಿಸುವ ಯತ್ನ ಮಾಡುವನು. ಕಥಾಚಿತ್ರದ ಛಾಯಾಗ್ರಾಹಕನಿಗೆ ಇದೆಲ್ಲದರ ಝಳ ತಟ್ಟುವುದಿಲ್ಲ.

ಅಂತಿಮವಾಗಿ, ಛಾಯಾಗ್ರಹಣ ಯಂತ್ರ ಪರಿಕರಗಳು ಸುಧಾರಣೆಯಾಗಬಹುದು, ಆದರೆ ಅದು ಕೇವಲ ತಾಂತ್ರಿಕ ಸಾಧನ ಮಾತ್ರ. ಹೀಗಾಗಿ ವ್ಯತ್ಯಾಸ ಇರುವುದು ಛಾಯಾಗ್ರಾಹಕ ವಸ್ತುವನ್ನು ಕಲ್ಪನಾಮಯವಾಗಿ ಪ್ರಸ್ತುತಪಡಿಸುವುದರಲ್ಲಿ. ಅಲ್ಲಿ ಛಾಯಾಗ್ರಾಹಕ ತನ್ನ ವೈಯಕ್ತಿಕತೆ ಮೆರೆಯುತ್ತಾನೆ. ಆದ್ದರಿಂದ ಛಾಯಾಗ್ರಾಹಕನೆಂಬ ವ್ಯಕ್ತಿ, ನಿರ್ದೇಶಕನ ಮೆದುಳಿನಲ್ಲಿರುವ ಕಲ್ಪನೆಗಳನ್ನು ಪ್ರತಿಫಲಿಸುವ ಕನ್ನಡಿಯ ಸೃಜನಾತ್ಮಕ ಕಣ್ಣಾಗಿರಬೇಕು.

ವರ್ಣದ ತತ್ವಗಳು

ವ್ಯಕ್ತಿಯ ವೈಯಕ್ತಿಕ ದೃಷ್ಟಿಕೋನದಿಂದ ಹೇಳುವುದಾದರೆ, ವರ್ಣ ಮತ್ತು ಅವರಿಂದಾಗುವ ಭಾವನೆಗಳು, ಆ ವರ್ಣದ ಸ್ಮರಣೆ ಹಾಗೂ ಅದರಿಂದ ಉದ್ಭವಿಸುವ ವಿಚಾರ ಸರಣಿಗೆ ಪರಸ್ಪರ ಸಂಬಂಧ ಹೊಂದಿರುತ್ತದೆ. ಬೇರೆ ಬೇರೆ ವರ್ಣಗಳು ಮನದಲ್ಲಿ ಸ್ನೇಹ, ಶಾಂತಿ, ಆನಂದ, ದ್ವೇಷ ಹೀಗೆ ನಾನಾ ಭಾವನೆಗಳನ್ನು ಸೃಷ್ಟಿಸಬಹುದು. ಇದೇ ರೀತಿ, ಒಬ್ಬ ವ್ಯಕ್ತಿಯು ಯಾವುದೇ ಒಂದು ವಿಷಯಕ್ಕೆ ಪ್ರತಿಕ್ರಿಯಿಸುವ ರೀತಿಯು ಅವನ ತರಬೇತಿ, ಸಾಂಸ್ಕೃತಿಕ ಹಿನ್ನೆಲೆಯನ್ನು ಅವಲಂಬಿಸಿರುತ್ತದೆ ಹಾಗೂ ಯಾವುದೇ ವರ್ಣವನ್ನು ಅದನ್ನು ತಿಳಿಯಾಗಿ, ಸೂಕ್ಷ್ಮವಾಗಿ, ಆಸಕ್ತಿಯಿಂದ ಸ್ವೀಕರಿಸುವನೋ ಅಥವಾ ಒಮ್ಮೊಮ್ಮೆ ಅವನ ದೃಷ್ಟಿಯಲ್ಲಿ ಒಂದು ವರ್ಣದ ವರ್ಣವೇ ಬದಲಾಗಬಹುದು.

ವರ್ಣವು ಮನುಷ್ಯನ ನಡತೆ (Behaviour) ಮೇಲೆ ಪ್ರಭಾವ ಬೀರುವುದು. ಹೀಗಾಗಿ ಒಳಾಂಗಣ ಅಲಂಕಾರ, ಮಾರಾಟ ವೃತ್ತಿ ಅಥವಾ ಮನೋರಂಜನಾ ಉದ್ಯಮದಲ್ಲಿ ಅಲ್ಲಿನವರು ಸಾಮಾನ್ಯವಾಗಿ ಏನನ್ನು ಮಾಡಲು ಬಯಸುವುದಿಲ್ಲವೋ ಅವನ್ನೇ ಮಾಡುವಂತೆ ಪ್ರೇರೇಪಿಸಲು ಸಹ ವರ್ಣಗಳನ್ನು ಬಳಸುವರು.

ವರ್ಣದಿಂದ ನಾವು ಕೆಲವು ಪದಾರ್ಥಗಳನ್ನು ಹಾಗೂ ಅವುಗಳ ಸ್ಥಿತಿ-ಗತಿಗಳನ್ನು ಅರಿಯಬಹುದು. ಯಾವುದೇ ಮರದ ಫಲವು ಹಣ್ಣಾಗಿದೆಯೇ (Ripe) ಎಂಬುದನ್ನು ಅರಿಯಲು ಅದರ ವರ್ಣ ನೆರವಾಗುವುದು. ಅದೇ ರೀತಿ ಆರೋಗ್ಯವನ್ನು ಕಣ್ಣುಗುಡ್ಡೆ, ನಾಲಿಗೆಯ ಬಣ್ಣ ನೋಡಿ ಅರಿಯುವೆವು. ಹೀಗೆ ವರ್ಣದ ಮಹತ್ವವನ್ನು ಜೀವನದ ಹಲವಾರು ಕ್ಷೇತ್ರಗಳಲ್ಲಿ ನಾವು ಗಮನಿಸಬಹುದು.

ಸಹಜವಾದ ನೈಸರ್ಗಿಕ ವರ್ಣಗಳಲ್ಲದೇ ನಾವೇ ರೂಪಿಸಿಕೊಂಡಿರುವ ವರ್ಣಗಳಿಗೆ ವಿಶೇಷ ಅರ್ಥಗಳನ್ನು ನೀಡಿ, ಅದನ್ನು ಸಂವಹನ ಸಾಧನವಾಗಿ ಬಳಸಬಹುದು. ರಕ್ಷಣಾ ಸಿಬ್ಬಂದಿಗಳು ಬಳಸುವ ವರ್ಣಮಯ ಧ್ವಜಗಳು ಹಾಗೂ ಅವುಗಳ ಭಾಷಾಸಂಜ್ಞೆ, ವ್ಯಾಪಾರದ ಪದಾರ್ಥಗಳಿಗೆ ನೀಡಿರುವ ವರ್ಣ ಸಂಜ್ಞೆಗಳು, ಸಂಕೇತಗಳು, ಚಿತ್ರೀಕರಣದಲ್ಲಿ ವರ್ಣ ವಿಶ್ಲೇಷಣೆಗೆ ಬಳಸುವ 'ಕಲರ್ ಬಾರ್'ಗಳು ಇಂಥವುಗಳನ್ನು ಹೆಸರಿಸಬಹುದು.

ಹೀಗೆ ಮುಂದುವರಿಯುತ್ತಿರುವ ಚಲನಚಿತ್ರದ ತಾಂತ್ರಿಕ ಪ್ರಗತಿಗೆ ಅನುಗುಣವಾಗಿ, ಪ್ರತಿ ಛಾಯಾಗ್ರಾಹಕರೂ ವರ್ಣ ವೈವಿಧ್ಯ, ಅದರ ಸಾಂಕೇತಿಕ ಮಹತ್ವ, ಅದನ್ನು ತಾಂತ್ರಿಕವಾಗಿ ಮರುಸೃಷ್ಟಿಸುವ ಬಗೆ, ಹಾಗೂ ತನ್ನಲ್ಲಿ ಲಭ್ಯವಿರುವ ಪರಿಕರಗಳನ್ನು ದುಡಿಸಿಕೊಳ್ಳುವ ವಿಧಾನ ಕಂಡುಕೊಳ್ಳುತ್ತಲೇ ಇರುತ್ತಾರೆ. ಇದೊಂದು ಸದಾ ಮುನ್ನಡೆಯುವ ನಿರಂತರ ಕ್ರಿಯೆ.

ಛಾಯಾಗ್ರಹಣ ಕಲೆಯ ಚರ್ಚೆ

ನಮ್ಮಲ್ಲಿ 'ಸುಂದರ ಛಾಯಾಗ್ರಹಣ'ವೆಂದರೆ ಸೂರ್ಯಾಸ್ತ, ಸೂರ್ಯೋದಯ ಹಾಗೂ ಕ್ರಿಯೇಟಿವ್ ಲೈಟಿಂಗ್ ಎಂದರೆ (ಸಿಲ್‌ಹೌಟ್) ನೆರಳಿನಾಕಾರದಲ್ಲಿ ಕಲಾವಿದರ ಚಿತ್ರಣ ಎಂಬ ಅಭಿಪ್ರಾಯ ಪ್ರೇಕ್ಷಕರಲ್ಲಿ ಬಂದಿದೆ. ಅದೇ ರೀತಿ ಕಲಾತ್ಮಕ ಚಿತ್ರಗಳೆಂದರೆ ಕತ್ತಲು ಕತ್ತಲಾಗಿರುವ ದೃಶ್ಯಗಳು ಎಂಬ ಭಾವನೆಯೂ ಮೂಡಿದೆ.

ಹೆಚ್ಚಿನಂಶದ ಛಾಯಾಗ್ರಹಣದಲ್ಲಿ ತಮ್ಮ ಪರಿಕರಗಳನ್ನು ಸಮಗ್ರವಾಗಿ ದುಡಿಸಿಕೊಳ್ಳುವ ಅವಕಾಶವಾಗದೆ ಇರುವುದರಿಂದ ಲೈಟಿಂಗ್, ಲೆನ್ಸ್, ಕಂಪೋಜಿಷನ್, ಕ್ಯಾಮರಾ ಚಲನೆ ಒಂದು 'ಗಿಮಿಕ್' ತಂತ್ರದಾಟವಾಗುತ್ತದೆ. ಇದು ಆರೋಗ್ಯಕರ ಬೆಳವಣಿಗೆ ಅಲ್ಲ.

ಯಾವುದೇ ಚಿತ್ರದಲ್ಲಿ ಕಥೆಯು ಛಾಯಾಚಿತ್ರಣದ ಶೈಲಿಯನ್ನು ನಿರ್ಧರಿಸುತ್ತದೆ. ಕುತೂಹಲ ಕಾಯ್ದುಕೊಳ್ಳುವ, ಕಚಗುಳಿ ಇಡುವ, ಭಾವನೆ ಹಿಡಿದಿಡುವ, ರೋಷ ಉಕ್ಕಿಸುವ ಹೀಗೆ ಹಲವಾರು ದೃಶ್ಯಕ್ಕೆ ಪೂರಕವಾದ ಶೈಲಿಯನ್ನು ಅನುಸರಿಸಲಾಗುತ್ತದೆ. ಪ್ರತಿ ದೃಶ್ಯದಲ್ಲೂ ಭಾವಾಭಿವ್ಯಕ್ತಿಗೆ ನೆರವಾಗುವಂತೆ ಲೆನ್ಸ್‌ಗಳ ಆಯ್ಕೆ, ಕಲಾವಿದರ ಇತಿಮಿತಿ ಅರಿತು ಕ್ಯಾಮರಾಚಲನೆ ನಿರ್ಧರಿಸುವುದು ಅಗತ್ಯ. ಹಾಗೆಯೇ ಅತಿಮಾನಸ, ಅತೀಂದ್ರಿಯ ಪಾತ್ರ, ಕಲ್ಪನೆ, ಭ್ರಮೆ, ಕನಸು, ಭೂತ ಪ್ರೇತಪೀಡಿತ, ರಕ್ತಸ್ರಾವದಿಂದ ಬಿಳಿಚಿಕೊಂಡ ಮುಖ ಹೀಗೆ ವಿಭಿನ್ನ ಸನ್ನಿವೇಶಗಳಿಗೂ ವಿಶೇಷ ಲೈಟಿಂಗ್ ಶೈಲಿ, ಕ್ಯಾಮರಾ ಚಲನೆ ರೂಪಿಸಲಾಗುವುದು.

ಕೆಲವು ವ್ಯಾಪಾರಿ ಚಿತ್ರಗಳಲ್ಲಿ ದೊಡ್ಡ ತಾರಾಗಣ, ಭಾರೀ ಸೆಟ್ಟು, ವರ್ಣಮಯ ವಸ್ತ್ರಾಲಂಕಾರ ಇತ್ಯಾದಿ ಅಂಶ ಇದ್ದು, ಹೆಚ್ಚು ಬೆಳಕು ವಿನ್ಯಾಸ ಮಾಡುವುದುಂಟು. ಇಲ್ಲಿ ಸೌಂದರ್ಯೀಕರಣ ವ್ಯಾಪಾರದ ಒಂದು ಅಂಗ ಹಾಗೂ ಗ್ಲಾಮರ್ ಫೋಟೋಗ್ರಫಿ ಎಂಬುವುದು ಕೊಳ್ಳುವ ಗ್ರಾಹಕ ಸಂಸ್ಕೃತಿಯ ಒಂದು ಸಾಧನವಾಗಿ ಬಳಸಲ್ಪಡುತ್ತದೆ.

ಈ ಮಾದರಿಯ ಚಿತ್ರಗಳ ಇನ್ನೊಂದು ದೊಡ್ಡ ದೋಷವೆಂದರೆ ಎಲ್ಲರೂ ಕ್ಯಾಮರಾಕ್ಕಾಗಿ, ಕ್ಯಾಮರಾ ಮುಂದೆ ನಿಂತು ಸಂಭಾಷಣೆ ಹೇಳುವುವು. ಪಾತ್ರಗಳ ಆಗಮನ, ನಿರ್ಗಮನ, ಚಲನೆಯ ರೀತಿ ಎಲ್ಲವೂ ರಂಗಭೂಮಿಯಿಂದ ಪ್ರೇರಿತವಾದವು. ಕೆಲವೊಮ್ಮೆ ಚಿತ್ರಿಸಿದ ರಂಗಭೂಮಿ ನಾಟಕ ನೋಡುತ್ತಿದ್ದೇವೇನೋ ಎಂಬಂತಹ ಮುಜುಗರದ ಅನುಭವ. ಲೈಟಿಂಗ್ ಹೇಗಿರಬೇಕು, ಯಾವ ಸಂದರ್ಭದಲ್ಲಿ ಕ್ಯಾಮರಾ ಚಾಲನೆ ಸೂಕ್ತ, ಯಾವ ದೃಶ್ಯಕ್ಕೆ, ಯಾವ ಚಿತ್ರಿಕೆಗೆ ಯಾವ ಲೆನ್ಸ್ ಬಳಕೆ ಎಂಬುದು ಮುಖ್ಯ. ಈ ತಿಳುವಳಿಕೆ ನಿರ್ದೇಶಕನಿಗೆ ಇರಬೇಕು ಅಥವಾ ಛಾಯಾಗ್ರಾಹಕನಿಗಾದರೂ ಇರಬೇಕು. ಇಲ್ಲವಾದಲ್ಲಿ ಅಂತಿಮ ಪರಿಣಾಮ ಕಲಸುಮೇಲೋಗರವಾಗುತ್ತದೆ.

ಉತ್ತಮ ಛಾಯಾಗ್ರಹಣ ಸ್ವತಂತ್ರ ತಂತ್ರಗಾರಿಕೆ ಅಲ್ಲ. ಆದರೆ ನಿರ್ದೇಶಕನೇ ಅನನುಭವಿಯಾಗಿದ್ದರೆ, ತಂತ್ರಜ್ಞನ ಕೈಗೊಂಬೆಯಾಗಿದ್ದರೆ, ಆಗ ಛಾಯಾಗ್ರಹಣ ತಂತ್ರ ಮಾತ್ರ ಮೆರೆದು ಪ್ರತ್ಯೇಕವಾಗಿ ನಿಂತದ್ದಿದೆ. ಆದರೆ ಅಭಿವ್ಯಕ್ತಿಯ ಸಾಧನವಾಗಿ ಅಲ್ಲ. ಹೀಗಾಗಿ ಅದೂ ಒಂದು ವಿನ್ಯಾಸದ ಅಂಗವಾಗುವುದು ಅಪರೂಪವೆನ್ನಬಹುದು.

ಯಾವುದೇ ದೃಶ್ಯದ ಬೆಳಕಿನ ವಿನ್ಯಾಸ ಗಮನಿಸಿದರೆ, ಛಾಯಾಗ್ರಾಹಕ ಆ ದೃಶ್ಯವನ್ನು ಗ್ರಹಿಸಿರುವ ಕ್ರಮವು ತಿಳಿಯುತ್ತದೆ. ಆಗ ಮಾತ್ರ ಇದು ಕೇವಲ ತಂತ್ರವಾಗದೇ ಅಭಿವ್ಯಕ್ತಿಯ ಸಾಧನವಾಗುತ್ತದೆ. ಈ ಹಿನ್ನೆಲೆಯಲ್ಲಿ ಕಥಾವಸ್ತುವಿನ ಪರಿಸರದಿಂದ ಬೇರೆಯಾಗಿಯೇ ನಿಲ್ಲುವ ತಾಂತ್ರಿಕ ಅಂಶಗಳು ಕಲಾಭಿವ್ಯಕ್ತಿಯ ಸಾಧನವಾಗುವುದಿಲ್ಲ. ಇಂತಹ ಚಿಂತನೆಯ ಫಲವೇ 'ನವ ವಾಸ್ತವವಾದೀ' ಪಂಥದ ಜನನಕ್ಕೆ ಕಾರಣ ಎನ್ನಬಹುದು.

ಚಲನಚಿತ್ರದ ಮೂಲ ಸೂತ್ರವೇ ಚಲನೆ. ಹೀಗಾಗಿ ಕ್ಯಾಮರಾ ಸದಾ ಚಲಿಸುತ್ತಲೇ ಇರಬೇಕೆಂಬ ಸಿದ್ಧಾಂತ ಅನುಸರಿಸಿ, ಚಿತ್ರದುದ್ದಕ್ಕೂ ಈ ರೀತಿಯ ಒಂದು ಚಲನಗೆರೆ (Axis)ಯಲ್ಲೇ ಚಿತ್ರದ ಎಲ್ಲ ದೃಶ್ಯಗಳನ್ನು ಕೆಲವು ಚಿತ್ರಗಳಲ್ಲಿ ನೋಡಬಹುದು. ಇದರಲ್ಲಿ ಪಾತ್ರಗಳ ಹಾಗೂ ಕ್ಯಾಮರಾದ ವಿರುದ್ಧ ದಿಕ್ಕಿನ ಚಲನೆ ಚಿತ್ರಕ್ಕೊಂದು ಸಂಘರ್ಷ ಹಾಗೂ ಲಯ ಒದಗಿಸಿದೆ.

ಧ್ವನಿಗೆ ಪೂರಕವಾದ ದೃಶ್ಯಗಳ ಚಿತ್ರೀಕರಣ ನಿರ್ದೇಶಕ-ಛಾಯಾಗ್ರಾಹಕರ ಸಂಯೋಜಿತ ಪ್ರಮದ ಫಲ. ಋತ್ವಿಕ್ ಘಟಕ್‌ರ 'ಮೇಘಢಕೇ ತಾರಾ' ಚಿತ್ರದ ಉತ್ಕರ್ಷದಲ್ಲಿ 'ನಾ ಬದುಕಬೇಕು, ನಾ ಜೀವಿಸಬೇಕು, ನಾನು ಸಾಯೋಕೆ ಬಯಸೋಲ್ಲ' ಎಂದು ನಾಯಕಿ ಪಾತ್ರದ ಧ್ವನಿಗೆ ಲಯಬದ್ಧವಾಗಿ ಕ್ಯಾಮರಾ ಎಡಬಲದ ಗುಡ್ಡಗಿಡಗಳ ಪರಿಸರದ ಮೇಲೆ ತಲೆ ಸುತ್ತಿದವರಂತೆ (Swish Pan) ತಿರುಗುತ್ತದೆ. ನಾಯಕಿ ರಕ್ತ ಕಾರಿ ಬೀಳುತ್ತಾಳೆ. ಸಾವಿನ ಅಂಚಿನಲ್ಲಿ ಬದುಕುವ ಆಸೆಯನ್ನು ಅಭಿವ್ಯಕ್ತಿಪಡಿಸಿದ ತಾಂತ್ರಿಕ ರೀತಿ ಇಂದಿಗೂ ಮನಕಲುಕುವಂತಹದು.

ಸತ್ಯಜಿತ್ ರಾಯ್ ಅವರು 'ಸೋನಾರ್ ಕಿಲ್ಲ' (ಬಂಗಾರದ ಕೋಟೆ) ಚಿತ್ರದಲ್ಲಿ ಪುನರ್‌ಜನ್ಮದ ನೆನಪಿನಿಂದ ಕಾಡುವ ಬಾಲಕ ಕಲ್ಕತ್ತಾದಿಂದ ರಾಜಸ್ಥಾನದ ಜೈಸಲ್ಮೇರ ಕೋಟೆ ಇರುವ ಊರಿಗೆ ಬರುತ್ತಾನೆ. ಅಲ್ಲಿ, ಬಾಲಕ ಯಾವುದೋ ಬೀದಿಯಲ್ಲಿ ಪಾಳು



(ಚಿತ್ರ ೨೨) ಕ್ರೇನ್

ಬಿದ್ದಿರುವ ಮನೆಯನ್ನು ಗುರುತಿಸಿ, 'ಇದು ಮಲಗುವ ಕೋಣೆ, ಇದು ಅಡುಗೆ ಮನೆ, ಇದು ಮುತ್ತು ರತ್ನ ಇಡುತ್ತಿದ್ದ ಗೂಡು' ಹೀಗೆ ಹೇಳುತ್ತಾ 'ಹ್ಞಾಂ ಇಲ್ಲಿ ನಾನು ಹುಟ್ಟಿದ್ದು' ಎಂದು ಒಂದು ಜಾಗದಲ್ಲಿ ಕುಳಿತು ಪಾಳುಮನೆಯ ಭಗ್ನಾವಶೇಷ ನೋಡುತ್ತಾನೆ, ಅಷ್ಟೇ. ಕ್ಯಾಮರಾ Low-Angleನಲ್ಲಿ ಅವನ ಮುಖಕ್ಕೆ ಸಣ್ಣದಾಗಿ zoom-in ಆ ಅವಶೇಷದ ದೃಷ್ಟಿಕೋನದಿಂದ ಆಗುತ್ತದೆ. ಅದರ ಮೇಲೆ ಆಗ ತಾನೇ ಹುಟ್ಟಿದ ಮಗುವಿನ ಅಳು ಕೇಳಿಸುತ್ತದೆ. ಈಗ ಬಾಲಕನ ಕುತೂಹಲ ತಣಿದು, ಅವನು ಮರಳಿ ಕಲ್ಕತ್ತಾಕ್ಕೆ ಹೋಗಲು ಸಿದ್ಧವಾಗುತ್ತಾನೆ. ಇಲ್ಲಿ, ಈ ದೃಶ್ಯದ ವಿಶೇಷತೆಯೆಂದರೆ, ಬಾಲಕನ ದೃಷ್ಟಿಯಿಂದ ಯಾವ ದೃಶ್ಯ ವೈಭವವನ್ನು ಸೃಷ್ಟಿಸದೇ ಅವನ ಕುತೂಹಲ ಚಿಕಿತ್ಸೆ (probe) ಮಾಡುವ ಕೋನಗಳ ಪರಿಣಾಮ ಮನದಲ್ಲಿ ಉಳಿಯುತ್ತದೆ. ಇಂತಹದೇ ಒಂದು ಪರಿಣಾಮವನ್ನು ತಾಂತ್ರಿಕ ದೃಷ್ಟಿಯಿಂದ ಪುಟ್ಟಣ್ಣನವರು ಸಾಧಿಸಿದ್ದು 'ಶರಪಂಜರ'ದಲ್ಲಿ. ನಾಯಕಿ ತನ್ನ ಕನ್ಯತ್ವ (ಶೀಲ) ವನ್ನು ಕಳೆದುಕೊಂಡ ಜಾಗದಲ್ಲಿ ಅದನ್ನು ಮತ್ತೆ ಹುಡುಕುವ ಪರಿಯಲ್ಲಿ ಹುಚ್ಚಿಯಂತೆ ದಿಕ್ಕೆಟ್ಟು ಅಲೆಯುವ ಅವಳ ಮನೋಸ್ಥಿತಿ, ಕ್ಯಾಮರಾ ಕೈಚಳಕದ ಚಿತ್ರಿಕೆಯಲ್ಲಿ ಪ್ರಭಾವಿಯಾಗಿ ಮೂಡಿ ಬಂದ ದೃಶ್ಯವೆನ್ನಬಹುದು.

ಸಾಮಾನ್ಯವಾಗಿ ಯಾವುದೇ ಚಿತ್ರಿಕೆಗಳಲ್ಲಿ ಕ್ಯಾಮರಾ ಚಲನೆಯ ವೇಗವನ್ನು ಅದು ಟ್ರಾಲಿ, ಪ್ಯಾನ್, ಟಿಲ್ಟ್, ಝೂಮ್, ಕ್ರೇನ್ ಏನೇ ಆಗಿರಲಿ ನಿರ್ಧರಿಸುವುದು ಅದರ ಸಂಕಲನದ ಗತಿ. ಅದು ನಿರ್ದೇಶಕ-ಛಾಯಗ್ರಾಹಕ ಇಬ್ಬರೂ ತಿಳಿದಿರಬೇಕು. ಈ ಚಿತ್ರಿಕೆಯ ಹಿಂದೆ-ಮುಂದೆ ಸಂಕಲನದಲ್ಲಿ ಬರುವ ಚಿತ್ರಿಕೆಗಳು ಹಾಗೂ ಅವುಗಳ ಕ್ಯಾಮರಾ ಚಲನೆಯೂ ಇದಕ್ಕೆ ಪೂರಕವಾಗಿರುತ್ತದೆ.

ಪಾತ್ರದ ಮನದ ಶೂನ್ಯತೆ ಬಿಂಬಿಸಲು, ಈ ಮೊದಲು ಇದೇ ಪಾತ್ರ ಓಡಾಡಿದ ಜಾಗಗಳಲ್ಲಿ, ಪಾತ್ರವು ಅಲ್ಲಿ ಕಾಣದಂತೆ ಹಾಗೂ ಅಲ್ಲಿರುವ ಕೆಲವು ವಸ್ತುಗಳನ್ನು ತೆಗೆದು ಹಾಕಿ ಎದ್ದು ತೋರುವಂತೆ ಚಿತ್ರಿಸಿ, ಏಕಾಂತತೆಯ ಭಾವ ಮೂಡಿಸಬಹುದು. ಇದರಲ್ಲಿ ಮಾನಸಿಕ ವಿಕೃತಿ, ಕಾವ್ಯಾತ್ಮಕತೆ ಯಾವ ಭಾವನೆ ಬೇಕಾದರೂ ಬೆಳಕು, ಚಲನೆ, ಲೆನ್ಸ್‌ನ ನೆರವಿನಿಂದ ರೂಪಿಸಬಹುದು. ಇದೇ ರೀತಿ ದ್ವಿಪಾತ್ರ, ತ್ರಿಪಾತ್ರಗಳಲ್ಲಿ ಪಾತ್ರದ ವಯಸ್ಸು, ಮುಪ್ಪು ರೂಪಿಸಲು ಭಿನ್ನ ಭಿನ್ನ ವೈಡ್ ಆ್ಯಂಗಲ್ (wide-angle) ಲೆನ್ಸ್ ಹಾಗೂ ಸೂಕ್ತ ಕೋನದಿಂದ (Low or High), ಮೇಕಪ್ ನೆರವಿನಿಂದ ಪ್ರಭಾವಿಯಾಗಿ ರೂಪಿಸಬಹುದು.

ಚಿತ್ರದಲ್ಲಿ ಪ್ರತಿ ಫ್ರೇಮಿನ ಸಂಯೋಜನೆಯನ್ನು ಆಯಾ ಚಿತ್ರಮಂದಿರಗಳಲ್ಲಿನ ಪ್ರೊಜೆಕ್ಟರುಗಳು ಅದರ ಅಂಚುಗಳನ್ನು ಭಿನ್ನ ಅನುಪಾತದಲ್ಲಿ ನುಂಗಿಹಾಕುತ್ತವೆ. ಹೀಗಾಗಿ ಇದಕ್ಕಾಗಿ 'ಸುರಕ್ಷಿತ ಕ್ಷೇತ್ರ'ದೊಳಗೆ ಫ್ರೇಮ್ ಸಂಯೋಜಿಸಿ, ಹೊಂದಾಣಿಕೆ ಮಾಡಿಕೊಳ್ಳಬೇಕಾಗುತ್ತದೆ. ಇದೇ ರೀತಿ ಪ್ರೊಜೆಕ್ಟರ್‌ನಲ್ಲಿ ಬಳಸುವ ಆರ್ಕ್‌ನ ಪ್ರಖರತೆ ಹಾಗೂ ಚಿತ್ರಮಂದಿರದಲ್ಲಿನ ಪರದೆಯಲ್ಲಿನ ಧೂಳು, ಕೊಳೆ ಚಿತ್ರದ ಪ್ರಖರತೆ ನಿರ್ಧರಿಸುವ ಅಂಶಗಳು. ಇದು ಒಂದರಿಂದ ಮತ್ತೊಂದು ಚಿತ್ರಮಂದಿರಕ್ಕೆ ಬದಲಾಗುತ್ತ ಹೋಗುವುದರಿಂದ ಛಾಯಾಗ್ರಾಹಕ ಇಲ್ಲಿ ತೀರ ಅಸಹಾಯಕನಾಗುತ್ತಾನೆ.

ಇತ್ತೀಚೆಗೆ ಕಡಿಮೆ ಬೆಳಕು (Low Key) ಹಾಗೂ ಹಿಂಬದಿ ಬೆಳಕು (Back Light) ತಂತ್ರದಲ್ಲಿ ತೀರ ಮಸುಕಾಗಿ (Soft Focus) ಚಿತ್ರಿಸಿದ 'ಅಂಜಲಿ'ಯಂತಹ ಚಿತ್ರಗಳು ಆರ್ಕ್‌ನ ಪ್ರಖರತೆಯಿಂದಾಗಿ ಚಿತ್ರಮಂದಿರದಲ್ಲಿ ಸ್ವಲ್ಪಮಟ್ಟಿಗಾದರೂ ಸ್ವಚ್ಛವಾಗಿ ಕಂಡವು. ಟಿ.ವಿ.ಗಳಲ್ಲಿ ಇಂತಹ ಚಿತ್ರಗಳನ್ನು ಹಾಕಿದಾಗ ಏನೂ ಕಾಣದೇ ಇರುವ ಸಾಧ್ಯತೆಗಳೇ ಹೆಚ್ಚು. (ಅದಕ್ಕಾಗಿಯೇ ಈ ತಂತ್ರ ಬಳಸಿದೆ ಎಂದು ನಿರ್ದೇಶಕ ಮಣಿರತ್ನಂ ನುಡಿದದ್ದು ಸಹ ಇಲ್ಲಿ ಅರ್ಥಪೂರ್ಣ.)

ಆದರೆ ಈಗ ಟಿ.ವಿ.ವೀಕ್ಷಕ ಸಾರ್ವಭೌಮ ನಾಗುತ್ತಿದ್ದಾನೆ. ಅವನು ತನ್ನ ಟಿ.ವಿ.ಯ ರಿಮೋಟ್ ನೆರವಿನಿಂದ ಅಥವಾ ಟಿ.ವಿ. ನಾಬ್ ತಿರುಗಿಸಿ ಯಾವುದೇ ವರ್ಣಚಿತ್ರವನ್ನು ಕಪ್ಪು ಬಿಳುಪಾಗಿಸಿ, ಕತ್ತಲು ಕತ್ತಲಾಗಿರುವ ಚಿತ್ರವನ್ನು ಹೆಚ್ಚು ಬೆಳಕಿನಲ್ಲಿ ಅಥವಾ ಕಣ್ಣಿಗೆ ರಾಚುವಂತಹ ಪ್ರಖರ ದೃಶ್ಯವನ್ನು ಕಡಿಮೆ ಬೆಳಕಿನಲ್ಲಿರುವಂತೆ ಮಾಡಿ ನೋಡಬಲ್ಲ. ಹೀಗಾಗಿ ಕೆಲವು ಚಿತ್ರ ಟಿ.ವಿ. ಸರಣಿ, ಟೆಲಿ ಫಿಲಂ ಪ್ರಸಾರವಾದಾಗ ತಮ್ಮ ಚಿತ್ರದ ಲೋ ಕೀ ಲೈಟಿಂಗ್ ಜನರು ನೋಡಿ, ಅರಿಯಲೆಂದು 'ನಿಮ್ಮ ಟಿ.ವಿ. ಸೆಟ್ಟುಗಳಲ್ಲಿ ಲೈಟಿಂಗನ್ನು ಹೆಚ್ಚಿಸಬೇಡಿ' ಎಂಬ ಸೂಚನೆ ಪ್ರಸಾರ ಮಾಡಿದ್ದುಂಟು. ಕನ್ನಡದಲ್ಲಿ ಛಾಯಾಗ್ರಾಹಕ ರಾಘವೇಂದ್ರರ 'ದೊಡ್ಡಮನೆ ಎಸ್ಟೇಟ್' (ಹೆಚ್.ಎಲ್.ನಾಗೇಗೌಡರ ಕಾದಂಬರಿ ಆಧಾರಿತ) ಟಿ.ವಿ. ಧಾರಾವಾಹಿಯಲ್ಲಿ ಈ ಪ್ರಯೋಗವಿತ್ತು. ಇಂತಹದೇ ಅನುಭವ ಶ್ಯಾಮ್ ಬೆನಗಲ್‌ರ 'ತ್ರಿಕಾಲ್' ಚಿತ್ರದಲ್ಲಿ ಗೋವಿಂದ ನಿಹಲಾನಿಯವರಿಗೂ, ಛಾಯಾಗ್ರಾಹಕ-ನಿರ್ದೇಶಕ ಬಾಲುಮಹೇಂದ್ರರಿಗೆ 'ಕೋಕಿಲಾ' ಚಿತ್ರದಲ್ಲೂ ಆದದ್ದಿದೆ.

ಝೂಮ್ ಲೆನ್ಸ್ ಬಳಕೆ ಬಗ್ಗೆ ಪರ ಹಾಗೂ ವಿರೋಧ ಅಭಿಪ್ರಾಯ ಎರಡೂ ಇದೆ. ಹಿಂದಿನ ಹಲವು ಚಿತ್ರಗಳಲ್ಲಿ ಪ್ರೇಕ್ಷಕರೇ ನಿಧಾನವಾಗಿ ಕಲಾವಿದರ ಬಳಿ ಹೋದ ಅನುಭವವಾಗುತ್ತಿತ್ತು. ಅದು ಟ್ರಾಲಿ-ಇನ್ ಪ್ರಭಾವ. ಈಗ ಕಲಾವಿದರೇ ಸರ್‍ರನೆ ಪ್ರೇಕ್ಷಕನ ಬಳಿ ಬಂದಂತಾಗುತ್ತದೆ ಅಥವಾ ದೂರ ತಳ್ಳಿದಂತಾಗುತ್ತದೆ. ಇದು ಝೂಮ್ ಲೆನ್ಸ್‌ನ ಪ್ರಭಾವ. ಇದರಲ್ಲಿ ಒಂದು ಸಹಜ, ಇನ್ನೊಂದು ಅಸಹಜ. ಇದರಲ್ಲೂ ಕೆಲವರು ಟ್ರಾಲಿ ಮುಂದೆ ತಳ್ಳುತ್ತಲೇ ಕ್ಯಾಮರಾದಲ್ಲಿ ಝೂಮ್ ಬ್ಯಾಕ್ ಮಾಡಿ, ವಸ್ತುವಿನ ಗಾತ್ರ ಹಾಗೇ ಉಳಿಸಿ, ಹಿನ್ನೆಲೆ ದೊಡ್ಡದಾಗಿಸಿ. ಈ ಅಸಹಜ ಕ್ರಿಯೆಯಿಂದ ಪಾತ್ರದ ಮಾನಸಿಕ ಅಸಹಜತೆ ತೋರಿಸಲು ಬಳಸಿರಬಹುದು. ಮನುಷ್ಯ ಸಹಜವಾಗಿ ತನ್ನ ಕಣ್ಣಿನಿಂದ ನೋಡುವುದಕ್ಕೂ, ಝೂಮ್ ಲೆನ್ಸ್ ಮುಖಾಂತರ ನೋಡುವ ದೃಶ್ಯದ ರೀತಿಗೂ ವ್ಯತ್ಯಾಸವಿದೆ. ಹಾಗಿದ್ದರೆ ನೈಜತೆಯ ಚಿತ್ರಣ ಎಂದು ಸಾರುವವರು ಈ ಉಪಕರಣ ಬಳಸುವ ಔಚಿತ್ಯವಾದರೂ ಏನು ಎಂಬ ನೇರ ಪ್ರಶ್ನೆಯೂ ಇಲ್ಲಿದೆ. ಇದು ಪರಿಸ್ಥಿತಿ, ಪರಿಣಾಮ ಅನುಸರಿಸಿ ಸ್ವೀಕಾರಾರ್ಹವೆಂದೇ ಹೇಳಬಹುದು.

ಕೆಲವೊಮ್ಮೆ ಅತೀ ಹತ್ತಿರದಿಂದ (ಎಕ್ಸ್‌ಟ್ರೀಮ್ ಕ್ಲೋಸ್ ಅಪ್) ಚಿತ್ರಿಕೆ ತೆಗೆಯಲು ಕ್ಯಾಮರಾ ಉಪಕರಣವನ್ನೇ ಬಾಲಕಲಾವಿದ, ಹೊಸಬ ಕಲಾವಿದ, ಪ್ರಾಣಿಗಳ ಮುಖದ ಬಳಿ ತೀರ ಹತ್ತಿರಕ್ಕೆ ಒಯ್ಯದೇ, ದೂರದಿಂದಲೇ ಕಣ್ಣು, ಕಿವಿ, ಮೂಗು, ತುಟಿ ಬಳಸಿ ಪ್ರೇಮ, ಕಾಮ, ಶೃಂಗಾರ, ವಿರಹ, ರೋಷ ತೋರಲು ಝೂಮ್ ಅತ್ಯಂತ ಪರಿಣಾಮಕಾರಿ ಹಾಗೂ ಅನುಕೂಲಕರ. ಸ್ಥಳಾಭಾವ ಇರುವಲ್ಲಿ ಟೆಲಿ ಲೆನ್ಸ್, ಝೂಮ್ ಲೆನ್ಸ್ ಬಳಸಲು ಅವಕಾಶ ಇಲ್ಲದೇ ಇರಬಹುದು ಅಥವಾ ಟ್ರಾಲಿ ಹಾಕಲು ಜಾಗವಿಲ್ಲದಲ್ಲಿ ಝೂಮ್ ಬಳಸಬಹುದು. ಬ್ಲಾಕ್ ಲೆನ್ಸ್ ಬಳಸಿದರೆ ಅತಿ ಕಡಿಮೆ ಬೆಳಕಿನಲ್ಲಿ 'ಅಪರ್‌ಚರ್' ಕಡಿಮೆ ಮಾಡಿ ಚಿತ್ರಿಸುವ ಅನುಕೂಲ ಝೂಮ್‌ನಲ್ಲಿ ಸಿಗದೇ ಇರಬಹುದು. ಆದರೆ ಒಂದು ಪಡೆಯಲು ಇನ್ನೊಂದು ತ್ಯಾಗ ಮಾಡಲೇಬೇಕು. ಬಹುಶಃ ಇದನ್ನೇ ಎಲ್ಲ ಛಾಯಾಗ್ರಾಹಕರು, ಛಾಯಾಗ್ರಹಣ ಕಲೆಯ ಐದು ಮೂಲ ತತ್ವಗಳ ಸಂಕೇತ 'ಸಿ'ಗಳಾದ ಕ್ಯಾಮರಾ ಕೋನ (ಕ್ಯಾಮರಾ ಆ್ಯಂಗಲ್), ಸಂಯೋಜನೆ (ಕಂಪೋಸಿಷನ್), ಸಮೀಪ ಚಿತ್ರಿಕೆ (ಕ್ಲೋಸಪ್), ಎರಡು ಚಿತ್ರಿಕೆಗಳ ನಡುವಿನ ಅಂಶಗಳ ಅಖಂಡತೆ (ಕಂಟಿನ್ಯೂಯಿಟಿ), ಸಂಕಲನದಲ್ಲಿ ಸಾರೂಪತೆ (ಕಟಿಂಗ್).

ಜೊತೆಯಲ್ಲಿ ಆರನೆಯದಾದ ಹೊಂದಾಣಿಕೆ (ಕಾಂಪ್ರೊಮೈಸ್) 'ಸಿ'ಯನ್ನು ಸೇರಿಸಿರುವುದು. ಬಹುಶಃ ಇದನ್ನು ತರಬೇತಿ ಪಡೆದ ತರುಣ ಛಾಯಾಗ್ರಾಹಕ ಸೂಚಿಸಿದರೆ, ಅನುಭವೀ ಹಿರಿಯ ಛಾಯಾಗ್ರಾಹಕ ಬೆಂಬಲಿಸುತ್ತಾನೆ ಅಥವಾ ಇದರ ತದ್ವಿರುದ್ಧವೂ ಸಾಧ್ಯವಿದೆ. ಅದೇ ಸಿನಿಮಾ ಕಲೆಯ ಗುಟ್ಟೂ ಹೌದು.

ಚಲನಚಿತ್ರ ಪ್ರಕ್ಷಾಳನದ (ಲ್ಯಾಬ್) ಕೊಡುಗೆ

ಸಿನಿಮಾದಲ್ಲಿ ಸುಂದರವಾದದ್ದನ್ನು ತೆರೆಯ ಮೇಲೆ ಮೂಡಿಸುವಲ್ಲಿ ಎಲ್ಲರಷ್ಟೇ ಮಹತ್ವದ ವ್ಯಕ್ತಿಗಳೇ ಈ ಲ್ಯಾಬೊರೇಟರಿಯ ತಂಡ. ಇಲ್ಲಿ ರಾಸಾಯನಿಕ ತತ್ವ ವಿಶೇಷಜ್ಞ, ವರ್ಣ ವಿಶೇಷಜ್ಞ, ಬೆಳಕು ವಿಶೇಷಜ್ಞ, ಧ್ವನಿ ವಿಶೇಷಜ್ಞ, ಸಂಕಲನ ವಿಶೇಷಜ್ಞ ಹೀಗೆ ಎಲ್ಲರ ಸಂಯೋಜಿತ ಸೇವೆ ಸೇರಿರುತ್ತವೆ. ಚಿತ್ರದಲ್ಲಿ ಉಳಿದವರು ಕೇವಲ ತೆರೆಮರೆಯಲ್ಲಿ ಇದ್ದರೆ, ಇವರ ಬದುಕು ಮಾತ್ರ ಅಕ್ಷರಶಃ ಕತ್ತಲಲ್ಲಿ ಹಾಗೂ ಸದಾ ದುರ್ನಾತ ಬೀರುವ ರಾಸಾಯನಿಕ ಗಂಧಪೂರಿತ ತಣ್ಣನೆಯ ಕೋಣೆಗಳಲ್ಲಿ. ಚಿತ್ರರಂಗದ ಪರಿಚಯವಿಲ್ಲದ ಯಾರೂ ಆ ವಾತಾವರಣವನ್ನು ಅರ್ಧ ತಾಸಿಗೂ ಹೆಚ್ಚಿಗೆ ಸಹಿಸಿಕೊಂಡು ಅಲ್ಲಿರಲಾರ. ಆದರೆ ಅವನ ಪರಿಶ್ರಮಕ್ಕೆ ತಕ್ಕ ಪ್ರತಿಫಲ, ಪ್ರತಿಭೆಗೆ ಮನ್ನಣೆ ಅಪರೂಪ. ಸಾಮಾನ್ಯವಾಗಿ ಎಲ್ಲ ಛಾಯಾಗ್ರಾಹಕರೂ ತಮ್ಮ ಅತ್ಯುತ್ತಮ ಕೆಲಸವನ್ನು ಉಳಿಸಿಕೊಳ್ಳುವ ಸಲುವಾಗಿ ಲ್ಯಾಬ್‌ನಲ್ಲಿನ ತಂತ್ರಜ್ಞರ ಸಹಕಾರವನ್ನು ಪಡೆಯುತ್ತಾರೆ.

ಕಪ್ಪು-ಬಿಳುಪು ಚಿತ್ರಗಳಲ್ಲಿ ಸಾಮಾನ್ಯವಾಗಿ ಸಂಕಲನಕ್ಕೆ ಬಳಸುವ ಪ್ರತಿ (ರಶ್ ಪ್ರಿಂಟ್)ಯನ್ನು ಒಂದೇ ಲೈಟಿನ ಪ್ರತಿಯೆಂದೇ ಮುದ್ರಿಸುವರು. ಕತ್ತಲೆಯ ದೃಶ್ಯಗಳನ್ನು ಡಬ್ಬಿಂಗ್ ಮಾಡುವಾಗ ಕಲಾವಿದರಿಗೆ ತುಟಿಯ ಚಲನೆ ಕಾಣುವಂತೆ ಸ್ವಲ್ಪ ಪ್ರಖರವಾಗಿ ಮುದ್ರಿಸಲು ಸಂಕಲನಕಾರ ಸೂಚಿಸುವನು. ಸಂಕಲನ, ಡಬ್ಬಿಂಗ್, ರಿ-ರಿಕಾರ್ಡಿಂಗ್ ಮಿಕ್ಸಿಂಗ್ ಪೂರ್ಣಗೊಂಡ ನಂತರ ಪ್ರತಿಗಳನ್ನು ಸಿದ್ಧಪಡಿಸುವ ಹಂತದಲ್ಲಿ ಛಾಯಾಗ್ರಾಹಕ ವರ್ಗೀಕರಣ (ಗ್ರೇಡಿಂಗ್) ಮಾಡಿಕೊಡುವುದು ಪದ್ಧತಿ.

ಮಾರುಕಟ್ಟೆಗೆ ಯಾವುದೇ ವರ್ಣದ ನೆಗೆಟಿವ್ ಬಂದಾಗ, ಅದರ ವರ್ಣ ವೈವಿಧ್ಯತೆ ಹಾಗೂ ಬೆಳಕಿಗೆ ಸ್ಪಂದಿಸುವ ಸೂಕ್ಷ್ಮತೆ ಅರಿಯಲು ಛಾಯಾಗ್ರಾಹಕನಷ್ಟೇ ಲ್ಯಾಬ್‌ನ ಮುಖ್ಯಸ್ಥನೂ ಉತ್ಸುಕನಾಗಿರುತ್ತಾನೆ. ಇವರಿಬ್ಬರ ಸಂಯುಕ್ತ ಪರಿಶ್ರಮದ ಮೇಲೆ ಚಿತ್ರದ ಅಂತಿಮ ಪರಿಣಾಮ ಅವಲಂಬಿಸಿರುತ್ತದೆ. ಈ ದೃಷ್ಟಿಯಿಂದ ಕಚ್ಚಾ ಫಿಲಂ ಒದಗಿಸುವ ಕಂಪನಿಗಳು ಕೆಲವು ಛಾಯಾಗ್ರಾಹಕರಿಗೆ ಮಾದರಿ ಚಿತ್ರೀಕರಿಸಲೆಂದು ಒಂದಿಷ್ಟು ನೆಗೆಟಿವ್ ಫಿಲಂ ಅನ್ನು ಉಚಿತವಾಗಿ ನೀಡಿ, ತಾವೇ ಅದರ ಪ್ರಕ್ಷಾಳನ, ಮುದ್ರಣ ಖರ್ಚನ್ನು ಭರಿಸುವುವು. ಇದರ ಉದ್ದೇಶ, ಇಂತಹ ಚಿತ್ರಣದ ಫಲಿತಾಂಶ, ಲ್ಯಾಬ್ ಮುಖ್ಯಸ್ಥನ ಸೇವೆಯ ಮೂಲಕ ಇತರ ಚಿತ್ರಗಳ ತಂತ್ರಜ್ಞರಿಗೂ ದಕ್ಕಲಿ ಎಂಬ ದೂರದೃಷ್ಟಿ. ಇದಕ್ಕಾಗಿ ಛಾಯಾಗ್ರಾಹಕ ಮಾದರಿ ಚಿತ್ರೀಕರಣದಲ್ಲಿ ಪ್ರತಿ ಚಿತ್ರಿಕೆಯ ಮುಂದೆ ಕ್ಲ್ಯಾಪ್ ಬೋರ್ಡ್‌ನಲ್ಲಿ ಆ ಚಿತ್ರಿಕೆಗೆ ಬಳಸಿರುವ ಲೈಟ್, ನೀಡಿರುವ ಎಕ್ಸ್‌ಪೋಜರ್, ಅಪರ್‌ಚರ್, ಉಪಯೋಗಿಸಿರುವ ಫಿಲ್ಟರ್ ಇಷ್ಟು ಮಾಹಿತಿ ನೀಡಬೇಕು. ಆಗ ಮಾತ್ರ ನೆಗೆಟಿವ್ ಪ್ರೋಸೆಸ್ ಆದ ನಂತರ ಲ್ಯಾಬ್‌ನ ಮುಖ್ಯಸ್ಥ ಈ ನೆಗೆಟಿವ್ ಅನ್ನು ಭೂತಗನ್ನಡಿಯಲ್ಲಿ ವೀಕ್ಷಿಸಿ, ಹೊಸ ಕಚ್ಚಾ ಫಿಲಂನ ಗುಣಾವಗುಣ ಗ್ರಹಿಸಿ, ಛಾಯಾಗ್ರಾಹಕನಂತೆ ತಾನೂ ಅದಕ್ಕೆ ತಕ್ಕ ಮಾರ್ಪಾಡು ಮಾಡಿ ಮುದ್ರಿಸಿಕೊಳ್ಳಬಲ್ಲ.

ಕಚ್ಚಾ ಫಿಲಂ ಸರಬರಾಜಿನ ಅಸ್ಥಿರತೆ ಚಿತ್ರರಂಗವನ್ನು ಸದಾ ಕಾಡುವ ಸಮಸ್ಯೆ. ಯುದ್ಧ, ಬೆಳ್ಳಿಯ ಧಾರಣೆ ಹಾಗೂ ಸರ್ಕಾರದ ಆಯಾತ ನಿರ್ಯಾತ ನೀತಿ ಇದನ್ನು ಅಂತಾರಾಷ್ಟ್ರೀಯ ಸರಕನ್ನಾಗಿ ಪರಿವರ್ತಿಸಿದೆ.

ಕೆಲವೊಂದು ಸಂದರ್ಭಗಳಲ್ಲಿ ಯಾವ ಯಾವುದೋ ಕಾರಣಗಳಿಂದಾಗಿ ಕಚ್ಚಾ ಫಿಲಂ ಸಮರ್ಪಕವಾಗಿ ಸರಬರಾಜಾಗದೆ, ಬೇರೆ ಬೇರೆ ಕಂಪೆನಿಗಳ, ಬೇರೆ ಬೇರೆ ಎಮಲ್ಶನ್‌ಗಳ ಹಾಗೂ ವಿಭಿನ್ನ ತಾಪಮಾನಗಳಲ್ಲಿ ಸಂಗ್ರಹಿಸಲಾದ ನೆಗೆಟಿವ್ ಬಳಸಬೇಕಾಗಿ ಬರುವುದುಂಟು. ಇಂತಹ ನೆಗೆಟಿವ್‌ಗಳಲ್ಲಿ ತಳ ಅಥವಾ ಅಂಚು (base fog or edge fog) ಗಳಲ್ಲಿ ಬೆಳಕಿನ ಕಿರಣ ಆಕಸ್ಮಾತ್ ಪ್ರಸರಣವಾಗಿ ಕಚ್ಚಾ ಫಿಲಂ ಹಾಳಾಗಿರುವ ಸಂಭವ ಹೆಚ್ಚು. ಅಂತಹ ಫಿಲಂನ್ನು ಬಳಸುವ ಮುನ್ನ ಲ್ಯಾಬ್‌ನಲ್ಲಿ ಪರೀಕ್ಷೆಗೊಳಪಡಿಸಿ ಫಲಿತಾಂಶವನ್ನು ಗಮನಿಸುವುದು ವಾಡಿಕೆ.

ನಮ್ಮ ರಾಜ್ಯದಲ್ಲಿ ಇರುವ ಬಹುದೊಡ್ಡ ಸಮಸ್ಯೆಯೆಂದರೆ, ವಿದ್ಯುಚ್ಛಕ್ತಿ ಪೂರೈಕೆಯನ್ನು ಯಾವ ಪೂರ್ವಭಾವಿ ಸೂಚನೆ ನೀಡದೆ, ಅನಿರ್ದಿಷ್ಟಕಾಲ ನಿಲ್ಲಿಸುವುದು. ಇದರಿಂದಾಗಿ ಚಿತ್ರಗಳ ನೆಗೆಟಿವ್ ಪ್ರೋಸೆಸಿಂಗ್ ಕಾಲದಲ್ಲಿ ವಿದ್ಯುತ್ತನ್ನೇ ಅವಲಂಬಿಸಿ ಕಾರ್ಯ ಕೈಗೊಂಡರೆ ನಿರ್ಮಾಪಕ ಹಾಗೂ ಲ್ಯಾಬ್ ಮುಖ್ಯಸ್ಥನ ಹೃದಯ ಅಂತಿಮವಾಗಿ ನೆಗೆಟಿವ್ ಸುರಕ್ಷಿತವಾಗಿ ಹೊರ ಬರುವವರೆಗೆ ಡವಗುಟ್ಟುತ್ತಲೇ ಇರುತ್ತದೆ. ಕೆಲವೊಮ್ಮೆ ಹಾಗೆ ವಿದ್ಯುತ್ ಬೋತಾ ಆದಾಗ, ಕೈಯಿಂದಲೇ ಸಾವಿರಾರು ಅಡಿ ಫಿಲಂ ಅನ್ನು ಬಾವಿಯಿಂದ ನೀರು ಸೇದಿದಂತೆ ಎಳೆದು ಹಾಕಿ, ನೆಗೆಟಿವ್ ಅನ್ನು ಉಳಿಸಿದ್ದೂ ಇದೆ. ಅದಕ್ಕಾಗಿ ಇತ್ತೀಚೆಗೆ ಎಲ್ಲ ಲ್ಯಾಬ್‌ಗಳೂ ಈ ರೀತಿ ವಿದ್ಯುತ್ ಬೋತಾ ಆದೊಡನೆ ಜನರೇಟರ್ ಸ್ವಯಂಚಾಲಿತವಾಗಿ ಈ ಕಾರ್ಯ ಕೈಗೊಳ್ಳುವಂತೆ ವ್ಯವಸ್ಥೆ ಮಾಡಿಕೊಂಡಿದ್ದಾರೆ. ಇದು ಎಲ್ಲರ ಪರಿಶ್ರಮಕ್ಕೂ ಸಿಕ್ಕ ದೊಡ್ಡ ಪರಿಹಾರ ಎನ್ನಬಹುದು. ಇಲ್ಲದಿದ್ದರೆ ಇಂತಹ ಕ್ಷುಲ್ಲಕ ಕಾರಣಕ್ಕಾಗಿ ಪುನಃ ಚಿತ್ರಣ ಮಾಡಬೇಕಾದ ಪ್ರಸಂಗ ಬರುತ್ತಿತ್ತು.

ವರ್ಣ ನೆಗೆಟಿವ್‌ಗಳನ್ನು ಪ್ರೋಸೆಸ್ ಮಾಡುವ ಮುನ್ನ ಗಮನಿಸುವ ಒಂದು ಅಂಶವೆಂದರೆ, ಲ್ಯಾಬ್‌ನಲ್ಲಿಯ ಉಷ್ಣತಾಮಾನ. ಅದು ತಂಪಾಗಿದ್ದಷ್ಟೂ ಒಳಿತು. ಹೀಗಾಗಿ ಸಾಮಾನ್ಯತಃ ಚಿತ್ರಣದ ನೆಗೆಟಿವ್‌ಗಳನ್ನು ಬೆಳಗಿನ ಜಾವ ಅಥವಾ ರಾತ್ರಿಯೇ ಪ್ರೋಸೆಸ್ ಮಾಡುವರು. ಪೂರ್ತಿ ನೆಗೆಟಿವ್ ಪ್ರೋಸೆಸ್ ಮಾಡುವ ಮುನ್ನ ಆಯ್ದ ಮ್ಯಾಗಜೀನ್‌ಗಳ ಒಳಗೋ ಅಥವಾ ಹೊರಗೋ ನೀಡಲಾಗಿರುವ ಪರೀಕ್ಷಕ ಪಟ್ಟಿ (Test Bit)ಯನ್ನು ಪ್ರೋಸೆಸ್ ಮಾಡಿ, ನಂತರ ಅದರ ಆಧಾರದ ಮೇಲೆ ಉಳಿದ ಸಂಪೂರ್ಣ ನೆಗೆಟಿವ್ ಪ್ರೋಸೆಸ್ ಮಾಡುವರು.

ಕೊಡಕ್, ಫ್ಯೂಜಿ, ಆಗ್ಫಾ, ಗೇವರ್ಟ್, ಆರ್ವೋ ನೆಗೆಟಿವ್‌ಗಳಿಗೆ ಹಾಗೂ ಸೌಂಡ್ ನೆಗೆಟಿವ್, ಕಪ್ಪು-ಬಿಳುಪು ಪಾಸಿಟಿವ್‌ಗಳಿಗೆ ಪ್ರತ್ಯೇಕವಾದ ರಾಸಾಯನಿಕಗಳನ್ನು ಪ್ರೋಸೆಸ್ ಮಾಡುವಾಗ ಬಳಸುವರು. ಹೀಗಾಗಿ ಒಂದರ ಕಾರ್ಯ ನಡೆಯುವಾಗ ಇನ್ನೊಂದರ ಕಾರ್ಯ ಕೈಗೊಳ್ಳಲು ಸಾಧ್ಯವಿಲ್ಲ. ಸಾಮಾನ್ಯವಾಗಿ ಯಾವುದೇ ನೆಗೆಟಿವ್ ಪ್ರೋಸೆಸ್ ಮಾಡಲು ಬೇಕಾದ ಕಡಿಮೆ ಪ್ರಮಾಣದ ಉದ್ದವೆಂದರೆ ೫,೦೦೦ ಅಡಿಗಳು. ಹೀಗಾಗಿ ಯಾರದ್ದಾದರೂ ಈಸ್ಟ್‌ಮನ್ ನೆಗೆಟಿವ್ ಪ್ರೋಸೆಸ್ ಮಾಡುವಾಗ ಉಳಿದ ಎಲ್ಲ ಚಿತ್ರ ನಿರ್ಮಾಣ ಕಂಪನಿಯ ಈಸ್ಟ್‌ಮನ್ ನೆಗೆಟಿವ್ ಒಮ್ಮೆಲೇ ಪ್ರೋಸೆಸ್ ಮಾಡುವರು. ಆಗ ಆ ಉದ್ದ ಎಷ್ಟಾದರೂ ಆಗಿರಬಹುದು. ಕಡಿಮೆ ಉದ್ದದ ನೆಗೆಟಿವ್‌ಗಳನ್ನು ಪ್ರೋಸೆಸ್ ಮಾಡಲು ವಾರದ ಕೊನೆಯಲ್ಲಿ ಕೈಗೆತ್ತಿಕೊಳ್ಳುವರು. ಹೀಗಾಗಿ ಆರ್ವೋ ವರ್ಣದಲ್ಲಿ ಚಿತ್ರ ಮಾಡಿದವರ ಪಾಡು ಕೊನೆಯ ಪಂಕ್ತಿಯಲ್ಲಿ ಊಟ ಮಾಡಿದವನಂತೆ ಆಗುತ್ತಿತ್ತು.

ಚಿತ್ರದ ಪ್ರತಿಗಳನ್ನು ಮುದ್ರಿಸಿ ಅವುಗಳು ಚಿತ್ರಮಂದಿರ ತಲುಪಿದ ಮೇಲೆ ಲ್ಯಾಬ್‌ನವರ ಹೊಣೆಗಾರಿಕೆ ಅಲ್ಲಿಗೆ ಮುಗಿಯಿತು ಎಂದುಕೊಳ್ಳುವಂತಿಲ್ಲ. ಒಬ್ಬ ನಿರ್ಮಾಪಕ ಮಾಡಿದ ಚಿತ್ರದ ಮೇಲಿನ ಬಂಡವಾಳದ ಶಾಶ್ವತ ರೂಪವೇ ಈ ಅಂತಿಮ ಪಿಕ್ಚರ್ ನೆಗೆಟಿವ್ ಹಾಗೂ ಸೌಂಡ್ ನೆಗೆಟಿವ್. ಇದು ಭದ್ರವಿದ್ದರೆ ಅವನ ಆಸ್ತಿ, ಆದಾಯ ಭದ್ರ. ಹೀಗಾಗಿ ಲ್ಯಾಬ್‌ನಲ್ಲಿ ಈ ನೆಗೆಟಿವ್‌ಗಳನ್ನು ಬೆಂಕಿ, ಹೊಗೆ, ಧೂಳು ಇವುಗಳಿಂದ ಸಂರಕ್ಷಿಸಿ, ಆಗಾಗ ಅವುಗಳನ್ನು ಹೊರತೆಗೆದು ಪರೀಕ್ಷಿಸಿ, ಮರುಸುತ್ತಿ (Rewind), ಬೇರೆ ತುಕ್ಕು ಹಿಡಿಯದ ಡಬ್ಬಿಗಳಿಗೆ ವರ್ಗಾಯಿಸಿ ಇಡುತ್ತಾರೆ. ಈ ಹೊಣೆಗಾರಿಕೆ ನಿಭಾಯಿಸುವಲ್ಲಿ ಬೇಜವಾಬ್ದಾರಿ ತೋರಿದ ಹಿಂದಿನ ಕೆಲವು ಸಂಸ್ಥೆಗಳ ಫಲವಾಗಿ ಇಂದು ನಾವು ಅನೇಕ ಕಪ್ಪು-ಬಿಳುಪು ಚಿತ್ರಗಳ ನೆಗೆಟಿವ್‌ಗಳನ್ನು ಕಳೆದುಕೊಂಡಿದ್ದೇವೆ. ಅದರ ಪ್ರತಿಗಳು ಲಭ್ಯವಿಲ್ಲ. ದಾಖಲೆ ಇರುವುದು ಕೆಲವು ಸ್ಥಿರ ಚಿತ್ರಗಳು ಹಾಗೂ ಪತ್ರಿಕೆಯಲ್ಲಿನ ತುಣುಕು ಸುದ್ದಿಗಳು ಮಾತ್ರ.

ಕರ್ನಾಟಕದಲ್ಲಿ ಈಗ ವರ್ಣ ಸಂಸ್ಕರಣದಲ್ಲಿ ಸೇವೆ ನೀಡುತ್ತಿರುವ ಸಂಸ್ಥೆಗಳು ಬೆಂಗಳೂರಿನಲ್ಲಿರುವ ಪ್ರಸಾದ್ ಫಿಲಂ ಲ್ಯಾಬ್, ವಸಂತ್ ಕಲರ್ ಲ್ಯಾಬ್, ಆನಂದ್ ಸಿನೆ ಪ್ರೋಸೆಸಿಂಗ್ ಲ್ಯಾಬ್ ಹಾಗೂ ಕಪ್ಪು-ಬಿಳುಪು ಸೇವೆಯ ಚಾಮುಂಡೇಶ್ವರಿ ಲ್ಯಾಬ್ ಎನ್ನಬಹುದು. ಮೈಸೂರಿನಲ್ಲಿ ಕಪ್ಪು-ಬಿಳುಪು ಲ್ಯಾಬ್ ಪ್ರೀಮಿಯರ್ ಸ್ಟುಡಿಯೋದಲ್ಲಿ ಹಲವಾರು ವರ್ಷಗಳ ಕಾಲ ಇತ್ತು. ಈಗ ಅದು ಸೇವೆಗೈಯುತ್ತಿಲ್ಲ. ಅದೇ ರೀತಿ ಬೆಂಗಳೂರಿನಲ್ಲಿ ಕಂಠೀರವ ಸ್ಟುಡಿಯೋದ ಅಂಗಳದಲ್ಲಿ ಮುಂಬೈನ ಆ್ಯಡ್ ಲ್ಯಾಬ್‌ನ ಸೋದರ ಸಂಸ್ಥೆ 'ಕ್ವಾಲಿಟೀ ಲ್ಯಾಬ್' ಕೆಲವು ವರ್ಷಗಳ ಕಾಲ ವರ್ಣ ಸಂಸ್ಕರಣ ಸೇವೆ ನೀಡಿ, ನಂತರ ಅದೂ ಮುಚ್ಚಲ್ಪಟ್ಟಿತು. ಬೆಂಗಳೂರಿನ ಶೇಷಾದ್ರಿಪುರಂನಲ್ಲಿ 'ಬೆಂಗಳೂರು ಫಿಲಂ ಲ್ಯಾಬೋರೇಟರಿ' ಎಂಬ ಸಂಸ್ಥೆ ಮುಂಬೈ ಉದ್ಯಮಿ ಸಕ್ಸೇರಿಯಾರಿಂದ ಕೆಲವು ಕಾಲ ವೃತ್ತಿಸೇವೆ ಒದಗಿಸಿತು.

ಲ್ಯಾಬ್‌ನಲ್ಲಿ ದುಡಿಯುತ್ತಲೇ ಸಂಕಲನ ತಂತ್ರ ಕರಗತ ಮಾಡಿಕೊಂಡವರಲ್ಲಿ ಮೈಸೂರು ಪ್ರೀಮಿಯರ್ ಸ್ಟುಡಿಯೋದಲ್ಲಿದ್ದ ಚಿನ್ನಪ್ಪ, ವೆಂಕಟರಾಮ್, ಮದರಾಸಿನಲ್ಲಿರುವ ತಾತಯ್ಯ, ಚಾಮುಂಡೇಶ್ವರಿ ಸ್ಟುಡಿಯೋದಲ್ಲಿದ್ದ ವರದನ್ ಮುಖ್ಯರು. ಇದೇ ರೀತಿ ಲ್ಯಾಬ್‌ನಲ್ಲಿ ಮುಖ್ಯಸ್ಥರಾಗಿ ಸೇವೆ ನೀಡಿದವರಲ್ಲಿ ಮೈಸೂರಿನ ಸೀತಾರಾಮ್ ಕಶಾಳ್ಕರ್, ಬೆಂಗಳೂರಿನ ಮೋಹನ್ ಅಚರೇಕರ್, ಬೆಂಗಳೂರು ಫಿಲಂ ಲ್ಯಾಬ್‌ನ ನಾರಾಯಣ್ ಅಮೋಣ್‌ಕರ್, ಪ್ರಸಾದ್ ಲ್ಯಾಬ್‌ನ ವಿಶ್ವನಾಥ್ ಇವರು ಪ್ರಮುಖರು.

ಕನ್ನಡದ ಕೆಲವು ಛಾಯಾಗ್ರಾಹಕರನ್ನು ಅವರ ಅನುಭವ ಹಾಗೂ 'ಅವರು ಕಂಡಂತೆ ತಂತ್ರ'ದ ಹಿನ್ನೆಲೆಯಲ್ಲಿ ಸಂದರ್ಶಿಸಿದಾಗ, ಎಲ್ಲ ಛಾಯಾಗ್ರಾಹಕರ ಮಾತಿನಲ್ಲೂ ಹಲವಾರು ವಿಷಯಗಳ ಬಗ್ಗೆ, ವಿಚಾರದಲ್ಲಿ, ಕಾರ್ಯಶೈಲಿಯಲ್ಲಿ ಸಾಮ್ಯ ಇದೆ. ವ್ಯತ್ಯಯ ಇರುವುದು ಅವರು ವ್ಯಕ್ತಪಡಿಸುವ ಭಾಷೆಯಲ್ಲಿ ಅಥವಾ ಕೆಲಸದೊತ್ತಡದಿಂದ ಮಾಡಿಕೊಂಡಿರಬಹುದಾದ ಅನಿವಾರ್ಯ ಹೊಂದಾಣಿಕೆಯಲ್ಲಿ ಮಾತ್ರ ಎನ್ನಬಹುದು.

ಯಾವ ಇನ್‌ಸ್ಟಿಟ್ಯೂಟ್‌ನಲ್ಲೂ ಅಧ್ಯಯನ ಮಾಡದೇ ಕೇವಲ ಪ್ರತಿಭೆ, ಪರಿಶ್ರಮ, ಅನುಭವದಿಂದ ಈ ಕ್ಷೇತ್ರದಲ್ಲಿ ದುಡಿಯುತ್ತಿರುವ ಹಿರಿಯ ಛಾಯಾಗ್ರಾಹಕ ಡಿ.ವಿ.ರಾಜಾರಾಂ 'ಸಂತ ತುಕಾರಾಂ', 'ಪುರಂದರದಾಸ' ಚಿತ್ರದಲ್ಲಿ ತಮ್ಮ ಪ್ರಯತ್ನ ಫಲಿಸಿದ್ದನ್ನು ನೆನೆಯುತ್ತಾರೆ. 'ಬಂಗಾರದ ಮನುಷ್ಯ' ಚಿತ್ರದಲ್ಲಿ ಒಂದು ಹಾಡಿನ ವಾದ್ಯ ಸಂಗೀತದ ಭಾಗವನ್ನು ಚಿತ್ರಿಸಲು ಬೇಕಾದ ಸುಂದರವಾದ ತಾಣಕ್ಕಾಗಿ ಇಪ್ಪತ್ತು ದಿನಗಳ ಕಾಲ ತಂಡದೊಡನೆ ಅಲೆದದ್ದನ್ನು ಸ್ಮರಿಸಿಕೊಳ್ಳುತ್ತಾರೆ. ೧೯೬೩ರಲ್ಲಿ 'ಸಂತ ತುಕಾರಾಂ' ಚಿತ್ರದ ಛಾಯಾಗ್ರಾಹಕರಾಗಿ ಕನ್ನಡ ಚಿತ್ರರಂಗವನ್ನು ಪ್ರವೇಶಿಸಿದ ಡಿ.ವಿ.ರಾಜಾರಾಂ ಛಾಯಾಗ್ರಹಣ ಕಲೆಯಲ್ಲಿ ಆಸಕ್ತಿ ತಳೆದ ಇಂದಿನ ಪೀಳಿಗೆಯ ಅನೇಕ ಮಂದಿಗೆ ಮಾರ್ಗದರ್ಶನ ನೀಡಿದ್ದಾರೆ. 'ಬಂಗಾರದ ಮನುಷ್ಯ'ವೇ ಅಲ್ಲದೆ 'ಕಪ್ಪು ಬಿಳುಪು', 'ಶರಪಂಜರ', 'ಮಿಸ್ ಲೀಲಾವತಿ', 'ಬೂತಯ್ಯನ ಮಗ ಅಯ್ಯು' ಮತ್ತಿತರ ಚಿತ್ರಗಳಲ್ಲಿ ಛಾಯಾಗ್ರಾಹಕನ ಕಲ್ಪನೆ-ಕೌಶಲಗಳನ್ನು ಮೆರೆಸಿದ್ದಾರೆ.

'ಜೀವನತರಂಗ' ಚಿತ್ರದಿಂದ ವೃತ್ತಿಜೀವನ ಆರಂಭಿಸಿದ ಛಾಯಾಗ್ರಾಹಕ ಎಸ್.ವಿ.ಶ್ರೀಕಾಂತ್ 'ಮಿಸ್ ಲೀಲಾವತಿ', 'ಮಾರ್ಗದರ್ಶಿ', 'ಗೆಜ್ಜೆಪೂಜೆ' ಚಿತ್ರಗಳ ನಂತರ 'ಎಡಕಲ್ಲು ಗುಡ್ಡದ ಮೇಲೆ' ಚಿತ್ರದ 'ವಿರಹಾ ನೂರು ನೂರು ತರಹಾ....' ಗೀತೆಯ (ಡೇ ಫಾರ್ ನೈಟ್) ಬೆಳದಿಂಗಳ ಪರಿಣಾಮಕ್ಕೆ ಕನ್ನಡ ಪ್ರೇಕ್ಷಕರ ಮನದಲ್ಲಿ ಉಳಿದರು. 'ಎಡಕಲ್ಲು ಗುಡ್ಡದ ಮೇಲೆ' ಚಿತ್ರೀಕರಣ ಸಮಯದಲ್ಲಿ ಮಳೆ ಬಂದು 'ಪ್ಯಾಕ್ ಅಪ್' ಆಯಿತು. ಹಿಂದೆಯೇ ಸುಂದರವಾದ ಕಾಮನಬಿಲ್ಲು ಮೂಡಿತು. ಅದನ್ನು ಸುಂದರವಾಗಿ ಸೆರೆ ಹಿಡಿಯಲು ಪುಟ್ಟಣ್ಣ, ಛಾಯಾಗ್ರಾಹಕ ಶ್ರೀಕಾಂತ್‌ಗೆ ಆದೇಶಿಸಿದರು. ಎರಡೇ ನಿಮಿಷಗಳಲ್ಲಿ ಚಿತ್ರೀಕರಿಸಿದ ಆ ಕಾಮನಬಿಲ್ಲನ್ನು, ನಂತರ ಚಿತ್ರದಲ್ಲಿ ಕೆ.ಎಸ್.ಅಶ್ವತ್ಥ್ 'ಆ ಕಾಮನಬಿಲ್ಲಿನ ಬಣ್ಣದ ಸೀರೆ ತಂದುಕೊಡು' ಎಂದು ಚಂದ್ರಶೇಖರ್‌ಗೆ ಹೇಳುವ ಮಾತು ಹೃದಯಂಗಮ ಎಂದು ನೆನೆಯುತ್ತಾರೆ. ಛಾಯಾಗ್ರಾಹಕ ನೀಡಿದ ಸುಂದರ ದೃಶ್ಯವನ್ನು ನಿರ್ದೇಶಕನಿಗೆ ಬಳಸಲು ಗೊತ್ತಿರಬೇಕು ಎಂಬುದು ಎಸ್.ವಿ.ಶ್ರೀಕಾಂತ್ ಅವರ ಅನಿಸಿಕೆ. ಟ್ರಿಕ್ ಫೋಟೋಗ್ರಫಿಯಲ್ಲಿಯೂ ಶ್ರೀಕಾಂತ್ ಪರಿಣತರು.

ತಮ್ಮ ೨೨ನೇ ವಯಸ್ಸಿನಲ್ಲೇ ಪ್ರಥಮ ಚಿತ್ರ 'ಕನಕದಾಸ'ದಲ್ಲಿ ಶ್ರೀಕೃಷ್ಣನ ಬಾಯಿಯಲ್ಲಿ ಕನಕದಾಸರು ಹೋಗುವ ದೃಶ್ಯ ಚಿತ್ರಿಸಿ ಸೈ ಅನ್ನಿಸಿಕೊಂಡ ಛಾಯಾಗ್ರಾಹಕ ಮಧು (ಆರ್.ಮಧುಸೂದನ್) ಚಿತ್ರರಂಗದಲ್ಲೇ ಟ್ರಿಕ್‌ಶಾಟ್ಸ್, ಮಾಸ್ಕ್ ವರ್ಕ್‌ಗೆ ಸಿದ್ಧಹಸ್ತರು. 'ಶಂಕರ್ ಗುರು' ಚಿತ್ರದಲ್ಲಿ ಮೂರು ವಿಭಿನ್ನ ಪಾತ್ರಗಳಿಗೆ ಮೂರು ಕ್ಯಾಮರಾ ಬಳಸಿ ಚಿತ್ರಿಸಿ, ಮೂರರ ಮಾಸ್ಕ್ ಅನ್ನು ಹೊಂದಿಸಿದ ಜಾಣ್ಮೆ ಇವರದು. 'ದಾರಿ ತಪ್ಪಿದ ಮಗ' ಚಿತ್ರದಲ್ಲಿ ರಾಜಕುಮಾರ್ ಡ್ಯೂಯೆಟ್ ಫೈಟ್‌ಗೆ ಸೆಟ್‌ನಲ್ಲಿ ಏಕಕಾಲದಲ್ಲಿ ಏಳು ಕ್ಯಾಮರಾ ಬಳಸಿದಾಗ ಅಕ್ಕಪಕ್ಕದ ಸೆಟ್‌ನಲ್ಲಿದ್ದ ತಂತ್ರಜ್ಞರು "ಮಧು ಕ್ಯಾಮರಾ ಎಗ್ಸಿಬಿಷನ್ ಇಟ್ಟಿದ್ದಾನೆ" ಎಂದು ಚುಡಾಯಿಸಿದ್ದುಂಟು. ಆದರೆ ಅಂತಿಮ ಫಲಿತಾಂಶ ನೋಡಿ ಬೆರಗಾದವರೂ ಅವರೇ. 'ಶಂಕರ್ ಗುರು' ಚಿತ್ರಕ್ಕೆ ಕಾಶ್ಮೀರದ ಹೊರಾಂಗಣದಲ್ಲಿ ತ್ರಿಪಾತ್ರಕ್ಕೆ ಕ್ಯಾಮರಾ ಮಾಸ್ಕ್ ಮಾಡಿ ಚಿತ್ರಿಸಿದ ಸಾಹಸ ಇವರದು. ರವಿಚಂದ್ರನ್ ಚಿತ್ರಗಳ ವಿಶಿಷ್ಟ ಟೈಟಲ್ ಕಾರ್ಡ್‌ಗಳಿಂದ ಹಿಡಿದು ಅನೇಕ ವಿಶೇಷ ಚಿತ್ರಿಕೆಗಳಿಗೆ ಮಧು ಪ್ರತಿಭೆ ಕೆಲಸ ಮಾಡಿದೆ.

'ಭಕ್ತ ಪ್ರಹ್ಲಾದ' ಚಿತ್ರದಲ್ಲಿ ಸ್ಪೆಷಲ್ ಟ್ರಿಕ್ ಫೋಟೋಗ್ರಫಿಗೆ ಪ್ರಶಸ್ತಿ ಪಡೆದ ಎಸ್.ಎಸ್.ಲಾಲ್ ತಮ್ಮ ಪುತ್ರ ಕಬೀರ್ ಲಾಲ್‌ಗೆ ಕೇವಲ ೩೦ ದಿನಗಳಲ್ಲಿ ಛಾಯಾಗ್ರಹಣ ತಂತ್ರಜ್ಞಾನ ತಿಳಿಸಿ ಹೇಳಿದರು. 'ಕರ್ತವ್ಯ' ಕನ್ನಡ ಚಿತ್ರದಲ್ಲಿ ಚಿತ್ರಿಕೆಯ ಮೊದಲ ಅರ್ಧ ಸಮುದ್ರ ತೀರಕ್ಕೆ ಹೋಗಿ ಚಿತ್ರಿಸಿ, ಆ ಭಾಗ ಮಾಸ್ಕ್ ಮಾಡಿ, ಸ್ಟುಡಿಯೋದಲ್ಲಿ ಆ ಅರ್ಧಕ್ಕೆ ಮಿನಿಯೇಚರ್‌ಗೆ ಕಲಾವಿದರನ್ನಿಟ್ಟು ಹಾಡು ಚಿತ್ರಿಸಿರುವ ಪರಿಣತಿ ಇವರದು. ಇಂತಹ ಕೈಚಳಕವನ್ನು ಇವರ 'ವೀರಾಧಿವೀರ', 'ಮಾರುತಿ ಮಹಿಮೆ', 'ನನ್ನ ಪ್ರತಿಜ್ಞೆ' ಚಿತ್ರಗಳಲ್ಲೂ ಕಾಣಬಹುದು.

ಛಾಯಾಗ್ರಹಣ ತಂತ್ರ ಅಧ್ಯಯನ ಮಾಡಿ, ಅತಿ ಹೆಚ್ಚು ಬಾರಿ ಕಪ್ಪು-ಬಿಳುಪು ಹಾಗೂ ವರ್ಣ ಛಾಯಾಗ್ರಹಣ ಕಲೆಗಾಗಿ ಪ್ರಶಸ್ತಿಗಳನ್ನು ಪಡೆದಿದ್ದರೂ ಸಹ ಬಿ.ಸಿ.ಗೌರಿಶಂಕರ್ ಈಗಲೂ ವಿನಯದಿಂದ "ನಾವು ಮಾಡುವುದೆಲ್ಲಾ ಬಹಳ ಮಾಮೂಲಿ ಕೆಲಸ. ಛಲ ಹುಟ್ಟಿಸುವಂತಹದೇನಲ್ಲ. ಈಗಿನ ನಮ್ಮ ಉತ್ತಮ ಸಾಧನೆಗೆ ತಾಂತ್ರಿಕ ಉತ್ಕೃಷ್ಟತೆ ಸಾಧಿಸಿರುವ ಕ್ಯಾಮರಾ ಉಪಕರಣ, ಲ್ಯಾಬ್‌ಗಳ ಸೇವೆ, ಅಲ್ಲಿನ ಪ್ರೋಸೆಸಿಂಗ್, ಗ್ರೇಡಿಂಗ್ ದಕ್ಷತೆ, ಚಿತ್ರಮಂದಿರಗಳ ಉಪಕರಣಗಳು ಮತ್ತು ಸೇವೆ ಕಾರಣ. ನಿರ್ಮಾಪಕನ ಆರ್ಥಿಕ ತೊಂದರೆ, ಕಲಾವಿದರ ದಿನಾಂಕದ ಸಮಯದ ಒತ್ತಡ, ಹೀಗೆ ಒಪ್ಪಂದ, ಹೊಂದಾಣಿಕೆಯಲ್ಲೇ ಅತ್ಯುತ್ತಮ ಫಲಿತಾಂಶ ನೀಡಲು ಪ್ರಯತ್ನಿಸುತ್ತೇವೆ" ಎಂದು ನುಡಿಯುವರು.

'ಮಾನಸ ಸರೋವರ' ಚಿತ್ರದಲ್ಲಿ ಪ್ರಕೃತಿಯ ಸೊಬಗನ್ನು ಸವಿಯುತ್ತಾ ನಾಯಕ ನೀರಿಗ ಕಲ್ಲು ಎಸೆಯುತ್ತಾನೆ. ಮುಂದಿನ ದೃಶ್ಯದಲ್ಲಿ ನಾಯಕಿ (ಹುಚ್ಚಿ) ಕಲ್ಲು ಎಸೆಯುತ್ತಾ ಓಡಿ ಬರುತ್ತಾಳೆ. ಚಿತ್ರದ ಕೊನೆಯ ದೃಶ್ಯವೂ ಸಹ ಕಲ್ಲನ್ನು ತೆಗೆದುಕೊಳ್ಳುವುದರಲ್ಲೇ ಇದೆ. ತನ್ನ ಕಣ್ಣೆದುರಿಗೆ ನಡೆಯುತ್ತಿರುವ ಘಟನೆಗಳ ಪರಿಣಾಮವಾಗಿ ಡಾ। ಆನಂದ್‌ಗೆ ಮಾನಸಿಕ ಆಘಾತವಾಗುವುದು, ಕ್ರಮೇಣ ಆತನ ಮೃದು ಮನಸ್ಸು ಕಠಿಣವಾಗುತ್ತಾ ಕೊನೆಗೆ ರೌದ್ರಕ್ಕೆ ಆತ ವಶವಾಗುವುದನ್ನು ತಿಳಿಯಾದ ಕೊಳ ಬರಬರುತ್ತಾ ಕೆಂಪಗೆ ವಿಸ್ತಾರಗೊಳ್ಳುವುದರ ಮೂಲಕ ತೋರಿಸಲಾಗಿದೆ. ನಾಯಕಿಗಿದ್ದ ಹುಚ್ಚು ಬಿಟ್ಟು ಮತ್ತೆ ಈ ಪ್ರಪಂಚಜ್ಞಾನ ಆಕೆಗೆ ಬಂದೀತೆಂಬುದನ್ನು ಸೂಚ್ಯವಾಗಿ ಕತ್ತಲು ಮೋಡ ಸರಿದು ಸ್ವಚ್ಛ ಬೆಳಕು ಬರುವಂತೆ ಸಂಯೋಜಿಸಲಾಗಿತ್ತು ಎಂದು ಪುಟ್ಟಣ್ಣನವರ ಕಲ್ಪನಾಶಕ್ತಿ, ತಾಂತ್ರಿಕ ಸಾಧ್ಯತೆ ಹಾಗೂ ಅದನ್ನು ಜಾರಿಗೊಳಿಸಿದ ರೀತಿಯ ಬಗ್ಗೆ ಅವರ ಛಾಯಾಗ್ರಾಹಕ ಬಿ.ಎಸ್.ಬಸವರಾಜ್ ಸಂಭ್ರಮದಿಂದ ನೆನೆಯುತ್ತಾರೆ. ಕೆಲವೊಂದು ಚಿತ್ರಗಳಲ್ಲಿ ಬಿ.ಎಸ್.ಬಸವರಾಜ್ ತಾವು ಕರಗತ ಮಾಡಿಕೊಂಡ ಛಾಯಾಗ್ರಹಣ ತಂತ್ರ ಕೌಶಲವನ್ನು ಅತ್ಯುತ್ತಮವಾಗಿ ದುಡಿಸಿಕೊಂಡಿದ್ದಾರೆ.

ಮಲ್ಲಿಕ್ ಎಂದೇ ಪರಿಚಿತರಾಗಿರುವ ಮಲ್ಲಿಕಾರ್ಜುನ್, ಮಾರುತಿ ಶಿವರಾಂ ನಿರ್ದೇಶನದ 'ಅನುರಕ್ತೆ'ಯಲ್ಲಿ ಫ್ಲಾಶ್‌ಬ್ಯಾಕ್ ಅನ್ನು ನೆಗೆಟಿವ್ ದೃಶ್ಯಗಳಲ್ಲಿ ತೋರಿಸದೆ, ಫ್ಲಾಶ್ ಬ್ಯಾಕ್‌ಗೆ ಒಂದು ವರ್ಣ (ಹಳದಿ) ಹಾಗೂ ಮುಂದಾಗುವ ದೃಶ್ಯ ಕಲ್ಪಿಸಿಕೊಂಡಾಗ ಅದು ಇನ್ನೊಂದು ವರ್ಣ (ಕೆಂಪು) ಹೀಗೆ ಕಲ್ಪಿಸಿಕೊಂಡು ಸಾಂಕೇತಿಕವಾಗಿ ಒಂದೇ ಫ್ರೇಮ್‌ನಲ್ಲಿ ಚಿತ್ರಿಸಲಾಯಿತು. ಆದರೆ ಮೊದಲ ಪ್ರತಿ ಹೊರಬಂದ ನಂತರ, ವಿನೋ ಕಾರ್ಯ ಪ್ರಯುಕ್ತ ಮದರಾಸಿನಲ್ಲಿದ್ದ ಲ್ಯಾಬ್ ಚೀಫ್ ರಜೆಗೆ ತೆರಳಿದಾಗ, ಆ ಕಾರ್ಯ ವಹಿಸಿಕೊಂಡ ಇನ್ನೊರ್ವ ತಜ್ಞರು ಈ ವರ್ಣ ಯೋಜನೆ ಗೊತ್ತಿಲ್ಲದೇ, ಇದು ದೋಷಯುಕ್ತ ಪ್ರಿಂಟ್ ಎಂದು ಭಾವಿಸಿ, ಕತ್ತರಿಸಿ, ಬೇರೆಯದನ್ನೇ ಮುದ್ರಿಸಿ, ಅಂಟಿಸಿದರು. ಮತ್ತೆ ಮೂಲ ಕಲ್ಪನೆಗೆ ಪರಿಸ್ಥಿತಿ ತರುವುದರಲ್ಲಿ ಸಮಯ, ಶ್ರಮ, ಒಂದಿಷ್ಟು ಆರ್ಥಿಕ ಹಾನಿಯೂ ಆಯಿತು. ಇದು ಪ್ರಯೋಗಶೀಲತೆಗೆ ತೆತ್ತ ಬೆಲೆ.

ಕನ್ನಡದಲ್ಲಿ ವರ್ಣಚಿತ್ರ ನಿರ್ಮಾಣ ಆರಂಭವಾದ ಮೇಲೆ, ಇತರ ಕಂಪನಿಗಳ ವರ್ಣ ನೆಗೆಟಿವ್‌ಗಳಿಗಿಂತ ಕಡಿಮೆ ಬೆಲೆಯಲ್ಲಿ ಆರ್ವೋ ಸಂಸ್ಥೆಯು ಎನ್‌ಸಿ-೧ ನೆಗೆಟಿವ್ ಫಿಲಂನ್ನು ಮಾರುಕಟ್ಟೆಗೆ ತಂದಿತು. 'ಭಲೇ ಅದೃಷ್ಟವೋ ಅದೃಷ್ಟ' ಚಿತ್ರದಲ್ಲಿ ಅದನ್ನು ಬಳಸಿ ಪ್ರಯೋಗ ಮಾಡಿದವರು ಆರ್.ಎನ್.ಕೆ.ಪ್ರಸಾದ್. 'ಪ್ರೇಮದ ಪುತ್ರಿ'ಯಿಂದ ಸ್ವತಂತ್ರ ಛಾಯಾಗ್ರಾಹಕರಾದ ಕೃಷ್ಣಪ್ರಸಾದ್, ನಿರ್ದೇಶಕ ಎಸ್.ಆರ್.ಪುಟ್ಟಣ್ಣ ಕಣಗಾಲ್‌ರ ನಿರ್ಧಾರವನ್ನು ಅನುಸರಿಸಿ, ಬೇರೆಲ್ಲಿಂದಲೋ ಕಡಿದು ತಂದ ಮರವೊಂದನ್ನು ಬೆಟ್ಟವೊಂದರ ಅಂಚಿನಲ್ಲಿ ಸೂರ್ಯ ಉದಯಿಸುವ ದಿಕ್ಕಿನಲ್ಲಿ ಸೂಕ್ತವಾಗಿ ನೆಡಿಸಿ, ಬೆಳಗಿನ ರಭಾವದಲ್ಲಿ ಉದಯಿಸುತ್ತಿರುವ ಸೂರ್ಯನ ಮಬ್ಬು ಬೆಳಕಿನಲ್ಲಿ ತಾರೆ ಕಲ್ಪನಾ ಹಾಡುತ್ತಾ ಬರುವ 'ಮೂಡಲ ಮನೆಯ ಮುತ್ತಿನ ನೀರಿನ....' ಹಾಡನ್ನು 'ಬೆಳ್ಳಿ ಮೋಡ' ಚಿತ್ರಕ್ಕಾಗಿ ಚಿತ್ರಿಸಿ ಕೊಟ್ಟರು. ೧೯೬೭ರಲ್ಲಿ ಬಳಕೆಯಲ್ಲಿದ್ದ ಯಂತ್ರೋಪಕರಣಗಳು ಘನ(ಭಾರಹೆಚ್ಚು)ವಾಗಿದ್ದು, ಸೂರ್ಯೋದಯಕ್ಕ ಬಹಳ ಮುಂಚಿತವಾಗಿಯೇ ಬೆಟ್ಟದ ತುದಿಯ ಮರದ ಬಳಿಗೆ ಸಾಗಿಸಿದ್ದನ್ನು ಪ್ರಸಾದ್ ನೆನಪಿಸಿಕೊಳ್ಳುತ್ತಾರೆ.

‘ಶುಭ ಮಂಗಳ’ ಚಿತ್ರಕ್ಕಾಗಿ ಕಲಾವಿದರಾದ ಶ್ರೀನಾಥ್ ಮತ್ತು ಆರತಿ ಒಂದು ದೋಣಿಯಲ್ಲಿ, ಕ್ಯಾಮರಾ ಮತ್ತು ಧ್ವನಿಗೆ ಸಂಬಂಧಿಸಿದ ಯಂತ್ರೋಪಕರಣ ಇನ್ನೊಂದು ದೋಣಿಯಲ್ಲಿರಿಸಿಕೊಂಡು ಬೀಸಿ ಬರುವ ಗಾಳಿಯ ಹೊಡೆತ, ತೇಲಿ ಬಂದು ಅಪ್ಪಳಿಸುವ ಅಲೆಗಳ ಮೊರೆತಗಳ ನಡುವೆ ಚಿತ್ರೀಕರಣ ನಡೆಸಿದುದನ್ನು ನೆನಪಿಸಿಕೊಳ್ಳುತ್ತಿದ್ದ ಛಾಯಾಗ್ರಾಹಕ ಎಸ್.ಜಿ.ರಾವ್, ಆ ಸಂದರ್ಭದಲ್ಲಿ ಎರಡು ದೋಣಿಗಳ ನಡುವೆ ಸಿಕ್ಕಿಕೊಂಡ ಕೈಬೆರಳು ತುಂಡಾದುದನ್ನು ನೆನಪು ಮಾಡಿಕೊಳ್ಳುತ್ತಿದ್ದರು.

‘ಮಲಯ ಮಾರುತ’ ಚಿತ್ರಕ್ಕಾಗಿ ಮಂಗಳೂರಿನ ಬೀಚೊಂದರಲ್ಲಿ ಅಲೆಗಳ ರುದ್ರ ರಮಣೀಯತೆಯನ್ನು ಚಿತ್ರಿಸುವ ಹುಮ್ಮಸ್ಸಿನಲ್ಲಿದ್ದ ತಮ್ಮನ್ನು, ತಮ್ಮ ಸಹಾಯಕನನ್ನೂ ಕ್ಯಾಮರಾದ ಜೊತೆಗೇ, ಭರದಿಂದ ಧಾವಿಸಿಬಂದ ಆಳೆತ್ತರ ಮೀರಿದ ಅಲೆಗಳು ಭರ ಸೆಳೆದು ಕಡಲ ಒಡಲಿನತ್ತ ಒಯ್ದುದನ್ನೂ ಹರ ಸಾಹಸ ಮಾಡಿ ಪಾರಾದುದನ್ನೂ ನೆನಪು ಮಾಡಿಕೊಳ್ಳುತ್ತಾರೆ ಬಾಬುಲ್‌ನಾಥ್ ಪುರುಷೋತ್ತಮ್.

‘ನಾಗರಹಾವು’ ಚಿತ್ರದ ಚಿತ್ರೀಕರಣ ಸಂದರ್ಭದಲ್ಲಿ ನಿರ್ದೇಶಕ ಪುಟ್ಟಣ್ಣ ಕಣಗಾಲ್ ಅವರು ತಮಗೆ ಸ್ಲೋ ಮೋಷನ್ ಎಫೆಕ್ಟ್ ಬೇಕೆಂದಾಗ, ಸ್ಥಳದಲ್ಲಿ ಲಭ್ಯವಿದ್ದ ಕನಿಷ್ಠ ಉಪಕರಣಗಳನ್ನು ಬಳಸಿಕೊಂಡು, ನಿರ್ದೇಶಕರು ಸೂಚಿಸಿದ ಚಿತ್ರಿಕೆಗಳಲ್ಲಿ ಸ್ಲೋ ಮೋಷನ್ ತಂತ್ರದ ಪರಿಣಾಮ ಮೂಡಿಸಿದ ನೆನಪು ಇನ್ನೂ ಹಸಿರಾಗಿದೆ ಎನ್ನುತ್ತಾರೆ ಛಾಯಾಗ್ರಾಹಕ ಆರ್.ಚಿಟ್ಟಿಬಾಬು. ಇದಕ್ಕಿಂತ ಮಿಗಿಲಾಗಿ ‘ನಾಗರಹಾವು’ ಚಿತ್ರ ಬಿಡುಗಡೆಯಾದ ನಂತರ ಚಿತ್ರವನ್ನು ವೀಕ್ಷಿಸಿದ ಚಿತ್ರದುರ್ಗದ ಜನತೆ “ನಮ್ಮ ದುರ್ಗವನ್ನು ನಾವು ದಿನ ನಿತ್ಯ ನೋಡುತ್ತೇವೆ. ಅದು ಇಷ್ಟು ಸುಂದರವಾಗಿದೆ ಅಂತ ಚಿತ್ರ ನೋಡಿದ ಮೇಲೆಯೇ ಮನವರಿಕೆಯಾಗಿದ್ದು” ಎಂದು ತಮ್ಮ ಛಾಯಾಗ್ರಹಣ ಕಲೆಯನ್ನು ಮೆಚ್ಚಿಕೊಂಡುದನ್ನೂ ನೆನಪು ಮಾಡಿಕೊಳ್ಳುತ್ತಾರೆ.

ಚಿತ್ರದ ಪ್ರತಿ ನಿಮಿಷದ ರೂವಾರಿ ನಿರ್ದೇಶಕನಾಗಿರುತ್ತಾನೆ. ನಿರ್ದೇಶಕನ ನೈಪುಣ್ಯ, ನಟ-ನಟಿಯರ ಅಭಿನಯ ಮತ್ತು ಚಿತ್ರಕಥೆಯ ಮೂಲಚೈತನ್ಯ ಇವಿಷ್ಟೂ ಛಾಯಾಗ್ರಾಹಕನಿಂದ ಜೀವ ಪಡೆಯಬೇಕಾಗುತ್ತದೆ. ಇಂಥ ಹಿರಿಯ ಹೊಣೆಗಾರಿಕೆಯನ್ನು ನಿರ್ವಹಿಸಲು ಅವಕಾಶ ಸಿಗುವುದು ಹಾಗೂ ಈ ಕ್ಲಿಷ್ಟಕರ ಮಾರ್ಗದಲ್ಲಿ ಸಾಗಿ ಸಫಲತೆ ಹೊಂದುವುದು ಕೆಲವರಿಗೆ ಮಾತ್ರ ಸಾಧ್ಯ ಎನ್ನುತ್ತಾರೆ ‘ಮೂರು ದಾರಿಗಳು’ ಚಿತ್ರದ ಛಾಯಾಗ್ರಾಹಕ ಎಸ್.ಆರ್.ಭಟ್.

ನಮ್ಮ ರಾಜ್ಯದಲ್ಲಿ ಜಾಹೀರಾತು ಚಿತ್ರಗಳ ಪ್ರಥಮ ನಿರ್ಮಾಪಕ ಎಂಬ ಸ್ಥಾನ ಪಡೆದ ಮೈಸೂರಿನ ಎಂ.ಎಸ್.ರಾಜಪ್ಪನ್, ಭಾರತವು ಚಲನಚಿತ್ರ ನಿರ್ಮಾಣದಲ್ಲಿ ಒಂದು ಅತಿ ದೊಡ್ಡ ದೇಶವೆಂದು ಪ್ರಪಂಚದಲ್ಲೇ ಪ್ರಸಿದ್ಧವಾಗಿದ್ದರೂ ವರ್ಣದ ಕಚ್ಚಾ ಫಿಲಂ ತಯಾರಿಕೆ ಇಲ್ಲದಿರುವುದು ಇಡೀ ನಮ್ಮ ಚಿತ್ರೋದ್ಯಮದ ದುರದೃಷ್ಟ. ವಿಶೇಷವಾಗಿ ಇದು ಎಲ್ಲಾ ಭಾರತೀಯ ತಂತ್ರಜ್ಞರ ಮನಸ್ಸನ್ನು ಹಿಂಸಿಸುತ್ತಿರುವ ಸಂಗತಿ. ಸದ್ಯದ ಪರಿಸ್ಥಿತಿಯಲ್ಲಿ ನಮಗೆ ಅಗತ್ಯವಾಗಿರುವುದು ಒಳ್ಳೆಯ ಕಲರ್ ಫಿಲಂ. ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ತುರ್ತು ಕ್ರಮ ಕೈಗೊಳ್ಳಬೇಕು ಎಂದು ನೊಂದು ನುಡಿದಿದ್ದಾರೆ.

ಕಾಡಿನಲ್ಲಿ ಚಿತ್ರಿಸುವ ಒಂದು ದೃಶ್ಯಕ್ಕಾಗಿ ‘ಭಾರತದ ರತ್ನ’ ಚಿತ್ರದಲ್ಲಿ ಅದರ ಛಾಯಾಗ್ರಾಹಕ ನಂಜಪ್ಪ ಅವರು ಕಾಡಿನಲ್ಲಿ ಕ್ರೇನ್ ತರುವುದು ಆರ್ಥಿಕವಾಗಿ ಹಾಗೂ ದೈಹಿಕವಾಗಿ ಅಸಾಧ್ಯವೆಂದು ಅರಿತು, ಇಡೀ ನೃತ್ಯ ತಂಡ ಕಾಣುವಂತಹ ಚಿತ್ರಿಕೆ ತೆಗೆಯಲು, ಕ್ಯಾಮರಾ ಸಹಿತ ತಮ್ಮ ಸಹಾಯಕನ ಭುಜವೇರಿ ಚಿತ್ರಿಸಿ ನಿರ್ದೇಶಕ ಸಿಂಗ್‌ಠಾಕೂರ್ ಅವರಿಂದ ಸೈ ಅನ್ನಿಸಿಕೊಂಡರು.

‘ಗೋಪಿಕೃಷ್ಣ’ ಚಿತ್ರದ ಛಾಯಾಗ್ರಾಹಕ ಜಿ.ಎಸ್.ವಿ.ಸೀತಾರಾಂ, ಅದರಲ್ಲಿನ ‘ಜಗವೆಲ್ಲಾ ಅನುರಾಗದಲಿ....’ ಹಾಡಿನ ಚಿತ್ರೀಕರಣದಲ್ಲಿ ಮೂರು ನೃತ್ಯ ತಂಡಗಳಿಗೆ ಮೂರು ಭಿನ್ನ ಮಾನಸಿಕ ಹಿನ್ನೆಲೆ ರೂಪಿಸಲು ಮೂರು ವಿಭಿನ್ನ ವರ್ಣ ಸಂಯೋಜಿತ ಬೆಳಕಿನಲ್ಲಿ ಚಿತ್ರಿಸಿರುವೆ. ಇದೇ ದೃಶ್ಯದಲ್ಲಿ ಖಳನಾಯಕ ವಿದ್ಯುತ್ ಪೂರೈಕೆಯನ್ನು ಕತ್ತರಿಸಿದ ನಂತರವೂ ಕಡಿಮೆ ಬೆಳಕಿನಲ್ಲಿ ದೃಶ್ಯ ಸಹಜವಾಗಿಯೇ ಮುಂದುವರಿಯಿತು ಎಂದು ಸ್ಮರಿಸುತ್ತಾರೆ.

‘ಬಣ್ಣದ ವೇಷ’ ಚಿತ್ರದಲ್ಲಿ ಪ್ರಧಾನ ಪಾತ್ರವಾದ ಶಂಭು ತಾನೇ ಸೃಷ್ಟಿಸಿಕೊಂಡ ತನ್ನ ವ್ಯಕ್ತಿತ್ವದ ವಿಶ್ವರೂಪದೆದುರು ಹತಾಶನಾಗುವನು. ಇಂತಹ ದೃಶ್ಯದ ಭಾವವನ್ನು ಮಾತುಗಳಿಲ್ಲದೆಯೇ ಸೆರೆ ಹಿಡಿಯಲು ೨ ಕೆ.ವಿ. ಜ್ಯೂನಿಯರ್ ಲೈಟ್ ಅನ್ನು ಕಂಡೆನ್ಸರ್ ತೆಗೆದು ಬಳಸಿ, ಅದರೆದುರಿನಲ್ಲಿ ಶಂಭು ಪಾತ್ರಧಾರಿ (ಶ್ರೀಧರ್) ಅವರನ್ನು ಶತಪಥ ಮಾಡಲು ಸೂಚಿಸಿದೆವು. ಪಾತ್ರಧಾರಿ ದೀಪದತ್ತ ಬಂದಾಗಲೆಲ್ಲಾ ಅವನ ಮುಖದ ಮೇಲೆ ಬೆಳಕಿನ ಉಷ್ಣತೆ ಹೆಚ್ಚುತ್ತಿರುತ್ತದೆ. ಹಿನ್ನೆಲೆಯಲ್ಲಿ ಅತನ ನೆರಳು ಭೂತಾಕಾರವಾಗಿ ನಿಲ್ಲುವುದು. ಹೀಗೆ ಪಾತ್ರದ ಮನೋಸ್ಥಿತಿಯನ್ನು ಮಾತಿಲ್ಲದೆ ಸಾಧಿಸಲಾಯಿತೆಂದು ಇದರ ಛಾಯಾಗ್ರಾಹಕ ಜಿ.ಎಸ್.ಭಾಸ್ಕರ್ ನೆನೆಯುತ್ತಾರೆ.

‘ಶ್!’ ಚಿತ್ರದ್ದು ಸಸ್ಪೆನ್ಸ್-ಹಾರರ್ ಕಥಾವಸ್ತು. ಕಥಾಕಾಲ ಹೆಚ್ಚಿನಂಶ ರಾತ್ರಿ. ಇಲ್ಲಿ ನೀಲಿಯನ್ನು ನಿಗೂಢ, ಭೀಭತ್ಸ, ದುಷ್ಟತನದ ಪ್ರತೀಕ ಹಾಗೂ ಇದಕ್ಕೆ ಪ್ರತಿಯಾಗಿ ಹಳದಿ ಮಿಶ್ರಿತ ಅಗ್ನಿ ವರ್ಣವನ್ನು (ಅಂಬರ್) ಬೆಂಕಿಯ ಸಂಕೇತವಾಗಿ ಉತ್ಪ್ರೇಕ್ಷಿಸಿ, ಎರಡನ್ನೂ ಜೊತೆಯಾಗಿಯೂ ಬಳಸಿ ಪ್ರಭಾವ ನೀಡಿರುವುದಾಗಿಯೂ ಶೀತಲ ಬಣ್ಣ ಸಾಧಿಸಲು ನೀಲಿ ಜೆಲ್ ಫಿಲ್ಟರ್ ಉಪಯೋಗಿಸಿರುವುದಾಗಿಯೂ ಇದರ ಛಾಯಾಗ್ರಾಹಕ ಅಶೋಕ್ ಕಶ್ಯಪ್ ಸ್ಮರಿಸುತ್ತಾರೆ.

‘ಹೊಸ ಬಾಳು’ ಹಾಗೂ ನಂತರ ‘ಒಲವಿನ ಆಸರೆ’ ಈ ಎರಡೂ ಚಿತ್ರಗಳಲ್ಲೂ ೪೦೦ (ASA) ತೀವ್ರಗತಿಯ ನೆಗೆಟಿವ್ ಫಿಲಂ ಬಳಸಿದ ಪ್ರಯೋಗ ಕುರಿತು ಛಾಯಾಗ್ರಾಹಕ ಆರ್.ಸಿ.ಮಾಪಾಕ್ಷಿ ಬಹಳ ವಿಶ್ವಾಸದಿಂದ ನುಡಿಯುತ್ತಾರೆ : “ಇದರಿಂದ ಕಡಿಮೆ ಲೈಟ್‌ಗಳ ಬಳಕೆ ಹಾಗೂ ಕಲಾವಿದರ ಸಮಯದ ಉಳಿತಾಯ ಆಗಿ ನಿರ್ಮಾಪಕರಿಗೆ ಅನುಕೂಲ ಹಾಗೂ ದೃಶ್ಯದ ಫಲಿತಾಂಶವೂ ಉತ್ತಮವಾಗಿತ್ತು ಎನ್ನುತ್ತಾರೆ. ಅವರ ಪ್ರಕಾರ ಯಾವುದೇ ಚಿತ್ರದಲ್ಲಿ ಲ್ಯಾಬ್‌ನ ಕೊಡುಗೆ ಮಹತ್ವದ್ದು. ಛಾಯಾಗ್ರಾಹಕ ಸ್ಟೆಪ್ ಟೆಸ್ಟ್ ಅಂದರೆ ಪ್ರಾಥಮಿಕ ಹಂತದ ಪರೀಕ್ಷೆ ಮಾಡಿ, ಚಿತ್ರಿಸಿದ ಮಾದರಿ ಚಿತ್ರಿಕೆಗಳ ಒಳಾಂಗಣ, ಹೊರಾಂಗಣ ಫಲಿತಾಂಶ ನೋಡಿ, ಮುಂದಿನ ಚಿತ್ರೀಕರಣ ಕೈಗೊಂಡರೆ ಒಳಿತು. ಛಾಯಾಗ್ರಾಹಕ ಮುತುವರ್ಜಿ ವಹಿಸದೇ ಅವನ ಎಷ್ಟೋ ಉತ್ತಮ ಕೆಲಸ ಲ್ಯಾಬ್‌ನ ಅದಕ್ಷತೆಯಿಂದ ಹಾಳಾದದ್ದಿದೆ. ಅದೇ ರೀತಿ ಕೆಟ್ಟ ಛಾಯಾಗ್ರಹಣ ನೀಡಿ ಉತ್ತಮ ಫಲಿತಾಂಶ ನೀಡಲಿಲ್ಲ ಎಂದು ಲ್ಯಾಬ್‌ನ ಮೇಲೆ ಆಪಾದನೆ ಹೊರಿಸುವ ತಂತ್ರಜ್ಞರಿಗೂ ಕೊರತೆ ಏನಿಲ್ಲ. ಆದರೆ ಇದು ತಪ್ಪು, ಹೀಗಾಗಕೂಡದು ಎನ್ನುವ ನಿಷ್ಠುರ ನಿಲುವು ಇವರದು.

‘ಆಗಂತುಕ’ ಚಿತ್ರವನ್ನು ಅರ್ವೋದಲ್ಲಿ ಚಿತ್ರಿಸಿದರೂ ಈಸ್ಟ್‌ಮನ್ ಮಟ್ಟದ ಫಲಿತಾಂಶ ನೀಡಿದ ಛಾಯಾಗ್ರಾಹಕ ರಾಜನ್, ನಂತರ ‘ಕಾಡಿನ ಬೆಂಕಿ’ ಮನೋ ವೈಜ್ಞಾನಿಕ ಚಿತ್ರದಲ್ಲಿ ‘ಮೂಡ್’ ಸೃಷ್ಟಿಸುವ ಬೆಳಕಿನ ಸಂಯೋಜನೆ ಪಾಲಿಸಿದ್ದನ್ನು ನೆನೆಯುತ್ತಾರೆ. ಅವರ ಒಂದು ಬಹಳ ವಿಶೇಷ ನಿಲುವೆಂದರೆ, ಎಲ್ಲ ಛಾಯಾಗ್ರಾಹಕರು ದೃಶ್ಯದ ಲೈಟಿಂಗ್ ಮಾಡಿದ ನಂತರ ‘ಗ್ಲೇರ್’ (ಅಂದರೆ ಬೆಳಕಿನ ಕಿರಣ ನೇರವಾಗಿ ಲೆನ್ಸ್‌ನ ಮೇಲೆ ಬಿದ್ದು ಆ ಪ್ರತಿಫಲನದಿಂದ ಬೆಳಕಿನ ಚುಕ್ಕೆ ತೆರೆಯ ಮೇಲೆ ಮೂಡುವುವು) ಕಟ್ ಮಾಡುವ ತಾಂತ್ರಿಕ ಪದ್ಧತಿ ಬಳಸುತ್ತೇವೆ. ನಿಜವಾಗಿಯೂ ಅದನ್ನು ಒಂದು ತಾಂತ್ರಿಕ ತೊಂದರೆ ಎಂದು ತಿಳಿಯಬೇಕಿಲ್ಲ. ಗ್ಲೇರ್ ಇದ್ದರೆ ದೃಶ್ಯಕ್ಕೆ ಒಂದು ಸುಂದರ ರೂಪ ಬರುತ್ತದೆ. ಇದನ್ನೇ ಸೂಪರ್ ಮ್ಯಾನ್-೧ ಚಿತ್ರದಲ್ಲಿ ಛಾಯಾಗ್ರಾಹಕ ಜೆಫ್ರೆ ಅನ್ಸ್‌ವರ್ತ್ ಸೃಜನಾತ್ಮಕವಾಗಿ ಬಳಸಿದ್ದಾರೆ ಎಂದು ಸ್ಮರಿಸುವರು.

ಛಾಯಾಗ್ರಾಹಕ ಬೇಡಿದ್ದವನ್ನೆಲ್ಲಾ (ಲೈಟ್, ಕ್ಯಾಮರಾ, ಕ್ರೇನ್) ನೀಡಿದರೆ ದೇವಿದಾಸ್ ನಂತಹ ಛಾಯಾಗ್ರಾಹಕರು ಚಿತ್ರದಲ್ಲಿ ದೃಶ್ಯ ವೈವಿಧ್ಯತೆ ನೀಡುತ್ತಾರೆ ಎಂದು ‘ಆಫ್ರಿಕಾದಲ್ಲಿ ಶೀಲಾ’ದ ತಮ್ಮ ಅನುಭವವನ್ನು ದ್ವಾರಕೀಶ್ ನೆನೆಯುತ್ತಾರೆ. ‘ಫ್ಲ್ಯಾಟ್ ಲೈಟಿಂಗ್’ನಿಂದಾಗಿ ಫ್ಲ್ಯಾಟಾಗಿ ಫೋಟೋಗ್ರಾಫ್ ಆಗುವ ದೃಶ್ಯವನ್ನು ತಮ್ಮ ಶಕ್ತಿ ಸಾಮರ್ಥ್ಯ ಮೀರಿ ಆ ಚಿತ್ರಿಕೆಗೆ ಚಲನೆ, ಸಂಯೋಜನೆ ನೀಡಿ, ವೈವಿಧ್ಯತೆ ನೀಡುವುದರಲ್ಲಿ ಛಾಯಾಗ್ರಾಹಕ ದೇವಿದಾಸರು ನಿಸ್ಸೀಮರು.

ನನ್ನನ್ನು ಅಧಿಕಾರಯುತವಾಗಿ ದುಡಿಸಿಕೊಳ್ಳಬಲ್ಲ, ಮಿತಿ ಹಾಕಬಲ್ಲ ನಿರ್ದೇಶಕ ಸಿಗಲಿಲ್ಲ. ನಾನೇ ಎಲ್ಲವೂ ಆಗುತ್ತಿದ್ದೆ. ನನಗೆ ನಿರ್ದೇಶನ ಮಾಡಿದವರಿಲ್ಲ. ಹಾಗನ್ನಿಸಿದಾಗ ಮುಖ್ಯವಾಗಿ ಒಂದು ಚಿತ್ರಕ್ಕೆ ಚಿತ್ರಕಥೆಯಷ್ಟೇ ಮುಖ್ಯ ಕ್ಯಾಮರಾ ಮತ್ತು ಸಂಕಲನ ಅಂತ ಬಲ್ಲೆನಾದ್ದರಿಂದ ನನ್ನ ಎಲ್ಲ ತಾಂತ್ರಿಕ ಪರಿಸ್ಥಿತಿಗೆ ಹೊಂದಬಲ್ಲ ಚಿತ್ರಕಥೆ ನಾನೇ ತಯಾರಿಸಿಕೊಂಡು, ನಾನೇ ‘ಆರಂಭ’ ಚಿತ್ರದ ನಿರ್ದೇಶಕನಾದೆ ಎಂದು ಛಾಯಾಗ್ರಾಹಕ ನಿರ್ದೇಶಕನಾಗಲೇಬೇಕಾಗಿ ಬಂದ ಪ್ರಸಂಗ ಕುರಿತು ಸುಂದರನಾಥ ಸುವರ್ಣ ನೆನೆಯುತ್ತಾರೆ.

ಈಗಿನ ತಲೆಮಾರಿನ ಛಾಯಾಗ್ರಾಹಕರಲ್ಲಿ ಒಬ್ಬರಾದ ಹೆಚ್.ಜಿ.ರಾಜು ಯಾರ ತರಬೇತಿಯಲ್ಲೂ ಛಾಯಾಗ್ರಹಣ ಕಲಿತವರಲ್ಲ. ಸಹಾಯಕರಾಗಿ ದುಡಿದು ಅನುಭವದಿಂದ ಮೇಲೆ ಬಂದ ಇವರು ‘ಸ್ಪೆಷಲ್ ಎಫೆಕ್ಟ್’ (ಟ್ರಿಕ್ ಫೋಟೋಗ್ರಫಿ) ಪರಿಣತರು. ಇವರ ಕೈಚಳಕ ‘ಗಣೇಶ ಮಹಿಮೆ’ಯಲ್ಲಿ ಗಣೇಶ ಆಕಾಶದಲ್ಲಿ ಹಾರುವುದು, ‘ಸಾಹಸ ಸಿಂಹ’ದಲ್ಲಿ ನಾಯಕನ ಕಣ್ಣು ಗುಡ್ಡೆಯಲ್ಲಿ ನಾಯಕಿ ಕಾಣುವಂತೆ ಚಿತ್ರಿಸುವುದು, ‘ರಾಜ ಮಹಾರಾಜ’ದಲ್ಲಿ ಅಶೋಕ್‌ರ ದ್ವಿಪಾತ್ರಕ್ಕೆ ಮಾಸ್ಕ್ ಹಾಕಿ ಚಿತ್ರಿಸಿದ್ದು,

‘ಪರಶುರಾಮ’ ಮತ್ತು ‘ಮಿ।ಮಹೇಶ್ ಕುಮಾರ್’ ಚಿತ್ರದಲ್ಲಿ ಹೆಲಿಕಾಪ್ಟರ್‌ನಿಂದ ಚಿತ್ರಿಸಿದ್ದು, ‘ರಣರಂಗ’ದ ಒಂದು ಹಾಡಿನ ಸನ್ನಿವೇಶದಲ್ಲಿ ಶಿವರಾಜಕುಮಾರ್ ಒಂಬತ್ತು ವಿಭಿನ್ನ ವೇಷಭೂಷಣದಲ್ಲಿ ಒಂದೇ ಫ್ರೇಮ್‌ನಲ್ಲಿ ಬರುವುದನ್ನು ಚಿತ್ರಿಸಿದ್ದು ತೃಪ್ತಿಕರ ಸಾಧನೆ ಎನ್ನುತ್ತಾರೆ.

ಛಾಯಾಗ್ರಹಣ, ನಿರ್ದೇಶನ ಇವೆರಡೂ ವಿಭಿನ್ನ ಮಾನಸಿಕ ಹಿನ್ನೆಲೆಯ ವೃತ್ತಿಗಳು. ಆಯಾ ಕಾರ್ಯ ನಿರ್ವಹಿಸುವಾಗ ಅದರಂತೆಯೇ ಮನೋಭಾವ ಇರಬೇಕು. ಹೀಗಾಗಿ ನಾನು ೧೯೬೯ರಲ್ಲಿ ಬಿ.ಎಸ್.ರಂಗಾ ಅವರಿಗಾಗಿ ‘ಒಡ ಹುಟ್ಟಿದವರು’ ನಿರ್ದೇಶಿಸಿದೆ, ಅದರ ನಂತರ ೧೯೮೪ರಲ್ಲಿ ‘ಆಶಾಕಿರಣ’ ಛಾಯಾಗ್ರಹಿಸಿ ನಿರ್ದೇಶಿಸಿದೆ. ಆದರೆ ಇವೆರಡರ ನಡುವೆ ಹಾಗೂ ನಂತರವೂ ಹಲವಾರು ಚಿತ್ರಗಳಿಗೆ ಕೇವಲ ಸ್ವತಂತ್ರ ಛಾಯಾಗ್ರಾಹಕನಾಗಿ ಕಾರ್ಯ ನಿರ್ವಹಿಸಿದ್ದೇನೆ. ಕಲಾವಿದ ಒಂದು ಪಾತ್ರದಿಂದ ಇನ್ನೊಂದು ಪಾತ್ರಕ್ಕೆ ಪರಕಾಯ ಪ್ರವೇಶ ಮಾಡಿದಷ್ಟೇ ಸುಲಭವಾಗಿ ನಾನು ಈ ವೃತ್ತಿ ಬದಲಾವಣೆ ಸುಲಭವಾಗಿ ಕೈಗೊಳ್ಳುತ್ತೇನೆ ಎಂದು ಅಭಿಮಾನದಿಂದ ನೆನೆಯುತ್ತಾರೆ ಛಾಯಾಗ್ರಾಹಕ ಬಿ.ಎನ್.ಹರಿದಾಸ್.

ಯಾವುದೇ ಸಂಸ್ಥೆ ವ್ಯಕ್ತಿಗೆ ವೃತ್ತಿಯ ತರಬೇತಿ ನೀಡಬಲ್ಲುದೇ ಹೊರತು, ಅದನ್ನು ಕಲಾತ್ಮಕವಾಗಿ ದುಡಿಸಿಕೊಳ್ಳುವುದು ಆಯಾ ವ್ಯಕ್ತಿಯ ಪ್ರಯತ್ನದ ಫಲ ಎಂದು ನಂಬಿರುವ ಛಾಯಾಗ್ರಹಣ ಪದವೀಧರ ಎಸ್.ರಾಮಚಂದ್ರ, ನಿರ್ದೇಶಕನಿಗೆ ವ್ಯಾಪಾರಿ ಚಿತ್ರಗಳಲ್ಲಿ ಸಿಗಬೇಕಾದ ಮಹತ್ವದ ಸ್ಥಾನ ಸಿಕ್ಕಿಲ್ಲದಿರುವುದೇ ಇಂದಿನ ಬಹುತೇಕ ಸಮಸ್ಯೆಗಳಿಗೆ ಕಾರಣವೆಂದು ವಿಶ್ಲೇಷಿಸುವರು. ‘ಸಂಕಲ್ಪ’ ಚಿತ್ರದಲ್ಲಿ ಸೂರ್ಯನ ಬೆಳಕಿಲ್ಲದೇ ಚಿತ್ರಿಸಿದ್ದು, ‘ಚೋಮನದುಡಿ’ ಚಿತ್ರದಲ್ಲಿ ಕನಸಿನ ದೃಶ್ಯಕ್ಕೆ ‘ಸ್ಟೈಲೈಜ್ಡ್’ ಲೈಟಿಂಗ್ ಮಾಡಿದ್ದು ಇವರ ವಿಶೇಷತೆ. ಇವರ ಪ್ರಕಾರ “ಒಳ್ಳೆಯ ಛಾಯಾಗ್ರಾಹಕ ಒಳ್ಳೆಯ ನಿರ್ದೇಶಕನಾಗುವುದು ಬಲು ಅಪರೂಪ. ಇದಕ್ಕೆ ಬದಲು ಒಳ್ಳೆಯ ಪರಿಣತ ಸಂಕಲನಕಾರ ನಿರ್ದೇಶಕನಾದರೆ ಹೆಚ್ಚು ಯಶಸ್ವಿಯಾಗಲು ಸಾಧ್ಯ”. ಹಾಗೆ ಇವರ ಇನ್ನೊಂದು ಪ್ರಬಲ ಅನಿಸಿಕೆ, ‘ನಮ್ಮ ಚಿತ್ರಗಳ ನಿರ್ದೇಶಕರು ಆಯ್ದ ಕಥೆಗಳು ಅವು ಮಂದಗತಿಯ ನಿರೂಪಣೆಗೆ ಅನಿವಾರ್ಯವಾದಂತಹವು. ನಿಧಾನಗತಿ ಚಿತ್ರದ ವಸ್ತು ಮತ್ತು ಸ್ವರೂಪ (Form and content) ಎರಡನ್ನೂ ಅವಲಂಬಿಸಿರುತ್ತದೆ’- ಎಂಬುದು.

ಛಾಯಾಗ್ರಹಣ : ಅನಿಸಿಕೆ-ಅಭಿಪ್ರಾಯಗಳು

ಉತ್ತಮ ಬೆಳಕು ವಿನ್ಯಾಸ ಎನ್ನುವುದು ವಿಭಿನ್ನ ಛಾಯಾಗ್ರಾಹಕರಲ್ಲಿ ವಿಭಿನ್ನವಾಗಿರುತ್ತದೆ. ಚಿತ್ರಿಸುತ್ತಿರುವ ವಸ್ತು ಹಾಸ್ಯವೊ, ಗಂಭೀರವೊ, ಭಾವಪೂರ್ಣವೊ ಎಂಬುದು ವಿನ್ಯಾಸಕ್ಕೆ ಪ್ರಮುಖ ಆಧಾರ. ಹಾಸ್ಯಪ್ರಧಾನ ದೃಶ್ಯಕ್ಕೆ ತೀರಾ ಸಾಮಾನ್ಯವೆನಿಸುವ, ಕಲಾವಿದರ ಅಭಿನಯಕ್ಕೆ ಹೆಚ್ಚು ಅವಕಾಶ ನೀಡುವ ಬೆಳಕು ವಿನ್ಯಾಸವಾದರೆ ಭಾವಪೂರ್ಣ ದೃಶ್ಯದಲ್ಲಿ ನೆರಳು-ಬೆಳಕಿನಾಟ ಅತ್ಯಗತ್ಯ. ಇಲ್ಲಿ ದೃಶ್ಯದ ಭಾವವನ್ನು ತೀವ್ರಗೊಳಿಸಲು ಬ್ಯಾಕ್‌ಲೈಟ್ ಅನ್ನು ಇಟ್ಟು ವಿನ್ಯಾಸ ಮಾಡಬಹುದು. ಅಲ್ಲದೆ ಪ್ರತಿ ಚಿತ್ರಿಕೆಗೂ ವಿಭಿನ್ನ ಕೋನಗಳನ್ನು ಆಯ್ಕೆ ಮಾಡಿಕೊಂಡು, ಕ್ಯಾಮರಾಕ್ಕೆ ಚಲನೆ ನಿಡಿ ಕಥೆಯ ಭಾವವನ್ನು ಹಿಡಿದಿರಿಸಲು ಸಾಧ್ಯ ಎನ್ನುವುದು ಖ್ಯಾತ ಛಾಯಾಗ್ರಾಹಕ ಜಿ.ಎಸ್.ವಿ.ಸೀತಾರಾಂ ಅವರ ಅಭಿಪ್ರಾಯ. ರವಿಚಂದ್ರನ್‌ರ ಬಹಳಷ್ಟು ಚಿತ್ರಗಳ ಛಾಯಾಗ್ರಾಹಕರಾದ ಇವರು ತಮಿಳು, ತೆಲುಗು, ಮಲೆಯಾಳಂ, ಹಿಂದಿ ಹಾಗೂ ಇಂಗ್ಲಿಷ್ ಚಿತ್ರಗಳಲ್ಲಿಯೂ ಕೆಲಸ ಮಾಡಿದವರು.

‘ಮನೆದೇವ್ರು’ ಚಿತ್ರದಲ್ಲಿ ಗಂಡ-ಹೆಂಡತಿಯ ನಡುವೆ ವೈಮನಸ್ಯ ಉಂಟಾಗುವ ದೃಶ್ಯದಲ್ಲಿ, ನಟ-ನಟಿಯರ ಹಿನ್ನೆಲೆಯಲ್ಲಿ ದೃಶ್ಯದ ಉದ್ದಕ್ಕೂ ಕರ್ಟನ್‌ಗಳ ನೆರಳನ್ನು ಗಾಳಿಯೊಡನೆ ಬಳಸಲಾಗಿದೆ. ಇಡೀ ದೃಶ್ಯ ಪೂರ್ಣ ಕಲಾವಿದರ ಮೇಲೆ ಕೇವಲ ಪಾರ್ಶ್ವ ಬೆಳಕು ಚೆಲ್ಲಲಾಗಿದೆ. ಕೆಲವು ಚಿತ್ರಿಕೆಗಳಿಗೆ ಬ್ಯಾಕ್‌ಲೈಟನ್ನೂ ಸಹ ಬಳಸಲಾಗಿದೆ. ಅದು ಕಲಾವಿದರ ಚಲನೆಗೆ ಸಂವಾದಿಯಾಗಿ ಮಾಡಿಕೊಂಡದ್ದು. ದೃಶ್ಯದ ಒಟ್ಟು ಸಂಘರ್ಷಗಳನ್ನು ಪರಿಣಾಮಕಾರಿಯಾಗಿ ತೋರಿಸಲು ಅದು ಸಹಾಯಕವಾಯಿತು. ವಾಣಿಜ್ಯ ಪ್ರಧಾನ ಚಿತ್ರಗಳಲ್ಲಿ ಯಾವುದೇ ದೃಶ್ಯವನ್ನು ಹೀಗೆಯೇ ಚಿತ್ರಿಸುವುದೆಂಬ ಪೂರ್ವ ನಿರ್ಧಾರಿತ ಯೋಜನೆ ಸಾಮಾನ್ಯವಾಗಿ ಇರುವುದಿಲ್ಲ. ಕಥೆಯನ್ನು ಕೇಳಿದಾಗ ಸ್ಥೂಲವಾಗಿ ಒಂದು ಸ್ಕೀಮ್ ಯೋಚಿಸಿಕೊಂಡಿರಬಹುದಷ್ಟೆ. ಆದರ ಅಂತಿಮ ರೂಪು-ರೇಷೆ ಚಿತ್ರೀಕರಣವಾಗುವ ಸ್ಥಳದಲ್ಲಿ ದೊರೆಯುವ ಅನುಕೂಲಗಳು, ಕಿಟಕಿ-ಬಾಗಿಲು ಅಥವಾ ಇನ್ನಿತರ ಬೆಳಕಿನ ಮೂಲಗಳು ಹಾಗೂ ನಟ-ನಟಿಯರ ಚಲನೆಯನ್ನು ಆಧರಿಸಿ ಇರುತ್ತದೆ.

ಅರುವತ್ತರ ದಶಕದ ಕಪ್ಪು-ಬಿಳುಪು ಚಿತ್ರಗಳಲ್ಲಿ ಮಾಡುತ್ತಿದ್ದ ಛಾಯಾಗ್ರಹಣದ ರೀತಿ ಇಂದಿಗೂ ರಮ್ಯದೃಶ್ಯಗಳ ಚಿತ್ರಿಕೆಗಳ ಸಂದರ್ಭಗಳಲ್ಲಿ ಬಳಸಬಹುದಾಗಿದೆ. ಅಂದಿನ ‘ಮೌಲ್ಡಿಂಗ್’ ರೀತಿಯ ಬೆಳಕು ವಿನ್ಯಾಸದಿಂದಾಗಿ ನಟ-ನಟಿಯರು ಹೆಚ್ಚು ಆಕರ್ಷಕವಾಗಿ ಕಾಣುತ್ತಾರಲ್ಲದೆ, ಅಂತಹ ವಿನ್ಯಾಸ ಒಟ್ಟು ಫ್ರೇಮ್ ಅನ್ನು ಆಕರ್ಷಕವಾಗಿಸುತ್ತದೆ. ಆದರೆ ಸಾಹಸ ದೃಶ್ಯಗಳಿಗೆ ಈ ಬಗೆಯ ವಿನ್ಯಾಸವನ್ನು ಬಳಸಲಾಗದು. ಇಂತಹ ಉತ್ತಮ ವಿನ್ಯಾಸ, ಉತ್ತಮ ಛಾಯಾಗ್ರಹಣವನ್ನು ಜಯರಾಮ್ ಅವರು ಚಿತ್ರಿಸಿದ ‘೧೯೨೧’ ಮಲೆಯಾಳಂ ಚಿತ್ರದಲ್ಲಿ ಕಾಣಬಹುದಾಗಿತ್ತು. ಕಥೆಯ ಕಾಲ ಹಾಗೂ ದೃಶ್ಯದ ಭಾವವನ್ನು ಆ ಚಿತ್ರದಲ್ಲಿ ಜಾಗತಿಕ ಗುಣಮಟ್ಟದಲ್ಲಿ ಚಿತ್ರಿಸಲಾಗಿತ್ತು. ವಿ.ರವಿಚಂದ್ರನ್‌ರ ಚಿತ್ರಗಳಲ್ಲಿ ಛಾಯಾಗ್ರಾಹಕರಿಗೆ ಸಂಪೂರ್ಣ ಸ್ವಾತಂತ್ರ್ಯ ಹಾಗೂ ಯಾವುದೇ ಪ್ರಯೋಗ ಮಾಡಲು ಅಗತ್ಯ ವಿಶೇಷ ಸೌಲಭ್ಯವಿದ್ದು, ಪಾಟ್‌ನ ಬೆಳಕು ವಿನ್ಯಾಸಕ್ಕೆ ಸಾಕಷ್ಟು ಸಮಯಾವಕಾಶವೂ ಇರುತ್ತದೆಯಾದ್ದರಿಂದ ಪ್ರಯೋಗ ಮಾಡಲು, ಫಲಿತ ಗಳಿಸಲು ಸಾಧ್ಯ.

ಡಿಫ್ಯೂಸ್ಡ್ ಲೈಟ್ ಮತ್ತು ಡೈರೆಕ್ಟ್ ಲೈಟ್ ಎರಡನ್ನೂ ಬಳಸಲಾಗುತ್ತದೆ. ಇದು ಸಹ ದೃಶ್ಯಕ್ಕೆ ಸಂವಾದಿಯಾಗಿಯೇ. ನೇರ ಬೆಳಕಿನಿಂದ ಚಿತ್ರಿಸುವ ವಸ್ತುವಿನ ಎಲ್ಲ ವಿವರಗಳೂ ಸ್ಪಷ್ಟವಾಗಿ ಕಾಣುತ್ತವೆ. ಆ ವಸ್ತು ಅಥವಾ ಸೆಟ್‌ನ ಶ್ರೀಮಂತಿಕೆ ನಿಚ್ಚಳವಾಗಿ ತಿಳಿಯುತ್ತದೆ. ಕೆಲವು ನೃತ್ಯಗಳ ಚಿತ್ರಿಕೆಯಲ್ಲಿ ಇಂತಹ ಬೆಳಕನ್ನು ಉಪಯೋಗಿಸಲಾಗದು. ಖಳನಾಯಕನ ಸ್ಥಳ ಅಥವಾ ಯಾವುದೇ ಅಪರಾಧ ನಡೆವಂತಹ ದೃಶ್ಯಗಳಲ್ಲಿ ಡಿಫ್ಯೂಸ್ಡ್ ಬೆಳಕನ್ನು ಬಳಸಲಾಗುವುದು. ಈ ಬೆಳಕು ಹಲವೊಮ್ಮೆ ನಟ-ನಟಿಯರಲ್ಲಿನ ಓರೆಕೋರೆಗಳನ್ನು ಮುಚ್ಚುವಲ್ಲಿಯೂ ಸಹಾಯಕ.

ಈಚೆಗೆ ರಮ್ಯ ದೃಶ್ಯಗಳನ್ನು ಡಿಫ್ಯೂಸ್ಡ್ ಬೆಳಕಿನಲ್ಲಿ ಚಿತ್ರಿಸುವ ಅಭ್ಯಾಸ ಬಂದಿದೆ. ಸ್ಯಾಟಿನ್ ಬಟ್ಟೆಯ ಮೇಲಿನಿಂದ ಪ್ರತಿಫಲಿತ ಬೆಳಕನ್ನು ಕಲಾವಿದರಿಗೆ ಹಾಯಿಸಿ, ಬ್ಯಾಕ್‌ಲೈಟ್ ಮೂಲಕ ಅವರ ಆಕಾರವನ್ನು ಸ್ಪಷ್ಟಪಡಿಸಲಾಗುವುದು. ಇದರಿಂದ ಒಟ್ಟು ದೃಶ್ಯಕ್ಕೆ ಕಾವ್ಯಾತ್ಮಕ ರಮ್ಯತೆ ತರಲು ಸಾಧ್ಯ.

ಪ್ರೇಕ್ಷಕರು ಬೆಳೆದಂತೆ ತಂತ್ರಗಾರಿಕೆಯೂ ಬೆಳೆದಿದೆ. ಅಂದಿನ ಕಾಲದಲ್ಲಿ ಕಲಾವಿದರು ಪ್ರೇಕ್ಷಕರ ಪಾಲಿಗೆ ಜೀವಂತ ದೇವತೆಗಳಂತಿದ್ದರು. ಆಗಿನ ತಂತ್ರಜ್ಞರುಗಳ ಬಗ್ಗೆ ಪ್ರೇಕ್ಷಕರು ಯೋಚಿಸುತ್ತಲೇ ಇರಲಿಲ್ಲ. ಈಗ ನಟ-ನಟಿಯರಿದ್ದ ಮಾತ್ರಕ್ಕೆ ಸಿನಿಮಾ ಆಗುವುದಿಲ್ಲ, ಚಿತ್ರನಿರ್ಮಾಣದ ಹಿಂದೆ ತಂತ್ರಜ್ಞರ ತಂಡವೇ ಇರುತ್ತದೆ ಎಂಬ ಅರಿವು ಪ್ರೇಕ್ಷಕರಲ್ಲಿ ಮೂಡಿದೆ. ಪ್ರೇಕ್ಷಕರಲ್ಲಿನ ಈ ಬದಲಾವಣೆ ಹೊಸ ಹೊಸ ಪ್ರಯೋಗಗಳಿಗೆ ಹಾದಿ ಸುಗಮಗೊಳಿಸಿದೆ. ಅನೇಕ ಸಲ ತರ್ಕವಿಲ್ಲದೆಯೂ ತಂತ್ರಗಳ ಬಳಕೆ ಆಗುವುದುಂಟು. ಈಗ ಅತಿಯಾಗಿ ಬಳಸಲಾಗುತ್ತಿರುವ ಫಾಗ್ ಫಿಲ್ಟರ್‌ಗಳು, ಸ್ಪೆಷಲ್ ಎಫೆಕ್ಟ್‌ಗಳು, ಟ್ರಿಕ್ಕುಗಳು ಹಿಂದಿನ ಚಿತ್ರಗಳಲ್ಲಿಯೂ ಇತ್ತು. ಅವುಗಳ ಸಹಾಯದಿಂದಲೇ ಪೌರಾಣಿಕ ಕಥೆಗಳನ್ನು ಚಿತ್ರಿಸುತ್ತಿದ್ದರು. ಈಗಿನ ಪ್ರಯೋಗಗಳು ಅಂದಿನದಕ್ಕಿಂತ ಭಿನ್ನವೇನಲ್ಲ. ಆಗ ಗಮನಿಸದಿದ್ದ ಪ್ರೇಕ್ಷಕ ಈಗ ಅವನ್ನು ಗಮನಿಸುತ್ತಿದ್ದಾನೆ ಎಂಬುದು ಮುಖ್ಯ. ಪ್ರಯೋಗ ಹೊಸತಲ್ಲ; ಪ್ರೇಕ್ಷಕ ಬದಲಾಗಿದ್ದಾನೆ. ಗಮನಿಸುತ್ತಿದ್ದಾನೆ ಎಂದಲ್ಲಿ ಸಮಂಜಸ. ಯಾವುದೆ ಹೆಚ್ಚಿನ ಸೌಭ್ಯವಿಲ್ಲದೆ ಓಬೀರಾಯನ ಕಾಲದ ಯಂತ್ರೋಪಕರಣಗಳಿಂದಲೇ ಅದ್ಭುತಗಳ ಸಾಧನೆಯಾಗಿದೆ.

ಸ್ಟುಡಿಯೋ ಛಾಯಾಗ್ರಹಣದಲ್ಲಿ ಹಿಂದೆ ಮಾಡುತ್ತಿದ್ದ ‘ಮೌಲ್ಡಿಂಗ್’ ಈಗಲೂ ಕ್ಲೋಸಪ್ ಷಾಟ್‌ಗಳಲ್ಲಿ ಮಾಡಲಾಗುತ್ತಿದೆ. ಲಾಂಗ್ ಷಾಟ್‌ಗಳಿಗೆ ಮೌಲ್ಡಿಂಗ್ ಸಮಸ್ಯೆಗಳಿವೆ. ಸ್ಟುಡಿಯೋವಿನಲ್ಲಿ ಹಿನ್ನೆಲೆಯ ಬೆಳಕನ್ನು ಒಮ್ಮೆಗೇ ಮಾಡಿಕೊಂಡು ಕಲಾವಿದರ ಮೇಲಿನ ಬೆಳಕನ್ನು ಮಾತ್ರ ಬದಲಿಸಲಾಗುತ್ತಿತ್ತು. ಈಗ ನಿಜವಾದ ಲೊಕೇಷನ್‌ಗಳಲ್ಲಿ ಚಿತ್ರಿಸುವಾಗ ಆ ಅನುಕೂಲ ಇರುವುದಿಲ್ಲ. ಪ್ರತಿಸಲವೂ ಹಿನ್ನೆಲೆಗೆ ಮತ್ತು ಕಲಾವಿದರಿಗೆ ಬೆಳಕು ಒದಗಿಸಬೇಕು. ಇದಕ್ಕೆ ಹೆಚ್ಚು ಸಮಯ ಬೇಕಾಗುತ್ತದೆ. ಲಾಂಗ್ ಷಾಟ್ ಇದ್ದರೆ ನಮಗೆ ಬೇಕಾದಂತೆ ದೀಪಗಳನ್ನು ಅಡಗಿಸಿಡುವುದು ಅಸಾಧ್ಯ. ಇದರಿಂದಾಗಿ ಹಲವು ಬಾರಿ ಅಂದುಕೊಂಡಂತಹ ವಿನ್ಯಾಸಗಳನ್ನು ಮಾಡಲಾಗದೆ ತೊಂದರೆಯಾಗುವುದೂ ಉಂಟು.

ಹಿಂದೆ ಇದ್ದ ಕಡಿಮೆ ಔಟ್‌ಪುಟ್‌ನ ಬೆಳಕಿಗೆ ಬದಲಾಗಿ ಈಗ ಅಧಿಕ ಔಟ್‌ಪುಟ್‌ನ ಹೆಚ್.ಎಂ.ಐ. ಮುಂತಾದ ಹೊಸ ದೀಪಗಳು ಬಂದಿರುವುದರಿಂದ ಚಿತ್ರೀಕರಣಕ್ಕೆ ವೇಗ ಬಂದಿದೆ. ಈ ದೀಪಗಳಿಂದಾಗಿ ಒಬ್ಬ ಕಲಾವಿದನನ್ನು ಒಂದು ಬೆಳಕಿನಿಂದ ಹಿನ್ನೆಲೆ ಮತ್ತು ಪರಿಕರಗಳಿಂದ ಬೇರೆಯಾಗುವಂತೆ ಮಾಡಲು ಸಾಧ್ಯವಾಗಿದೆ. ಹಿಂದೆ ಇದಕ್ಕಾಗಿ ಅಧಿಕ ದೀಪಗಳನ್ನು ಬಳಸಬೇಕಾಗುತ್ತಿತ್ತು. ಆದರೆ ದೃಶ್ಯವೊಂದರ ಭಾವವನ್ನು ಪೂರ್ಣವಾಗಿ

ಸೆರೆ ಹಿಡಿಯಲು ಸಣ್ಣ ಔಟ್‌ಪುಟ್ ದೀಪಗಳಿಂದ ಮಾತ್ರ ಸಾಧ್ಯ. ಆದರೆ ಚಿತ್ರನಿರ್ಮಾಣದಲ್ಲಿ ಬಂದಿರುವ ವೇಗದ ಅನಿವಾರ್ಯತೆಯಿಂದಾಗಿ ಕಡಿಮೆ ಔಟ್‌ಪುಟ್ ದೀಪಗಳನ್ನು ಬಳಸುವುದು ಕಷ್ಟ. ಇದಲ್ಲದೆ ನೈಜ ಲೊಕೇಶನ್‌ನಲ್ಲಿ ಅಷ್ಟೊಂದು ಸಣ್ಣ ದೀಪಗಳನ್ನು ಅಡಗಿಸಿಡುವುದು ಕಷ್ಟ. ಅಷ್ಟು ಸಂಖ್ಯೆಯ ದೀಪಗಳಿಂದ ಆಗುತ್ತಿದ್ದ ಕೆಲಸವನ್ನು ಈಗ ಮೆಟಲ್ ಹ್ಯಾಲೈಡ್ ಇಲ್ಯುಮಿನೇಷನ್‌ನಿಂದ ಸೂರ್ಯನ ಬೆಳಕಿಗೆ ಹತ್ತಿರವೆನ್ನಿಸುವಷ್ಟು ಪ್ರಖರವಾದ ಬೆಳಕು ಚೆಲ್ಲುವ ಒಂದು ಹೆಚ್.ಎಂ.ಐ. ದೀಪದಿಂದ ಮಾಡಬಹುದಾಗಿದೆ.

ಲೆನ್ಸ್ ಬಳಕೆ

ಚಲನಚಿತ್ರ ಭಾಷೆ ತಿಳಿಯದವರು ಝೂಮ್ ಇನ್ ಅಂಡ್ ಔಟ್‌ಗಳನ್ನು ಬಳಸುತ್ತಾರೆ ಎಂದು ಅಮೆರಿಕನ್ ಚಿತ್ರ ಸಿದ್ಧಾಂತಿಗಳು ಹೇಳಿದಲ್ಲಿ ಅದೇನೂ ವೇದ ವಾಕ್ಯವಲ್ಲ. ಸಿನಿಮಾಕ್ಕೆ ಒಂದು ಭಾಷೆ ಎಂಬುದು ಇನ್ನೂ ಮೂಡುತ್ತಿದೆ. ಆದ್ದರಿಂದ ಝೂಮ್ ಬಳಕೆಯನ್ನು ತಪ್ಪು ಎನ್ನುವುದು ಸರಿಯಲ್ಲ. ಅನಗತ್ಯ ಜರ್ಕ್‌ಗಳಿಲ್ಲದೆ ಸುಲಭವಾಗಿ ಸುಲಲಿತವಾಗಿ ನೋಡಲು ಸಾಧ್ಯವಾಗುವಂತಿರಬೇಕು. ಯಾವುದೇ ಲೆನ್ಸ್ ಆದರೂ ಜರ್ಕ್ ಬರುವುದಾದರೆ ಅದನ್ನು ಬಳಸಬಾರದು. ಎಲ್ಲಿ ನಾರ್ಮಲ್ ಲೆನ್ಸ್ ಬಳಸಲಾಗುವುದಿಲ್ಲವೋ ಅಲ್ಲಿ ಮಾತ್ರ ಝೂಮ್ ಲೆನ್ಸನ್ನು ಬಳಸಬಹುದು. ಕೇವಲ ಕಣ್ಣಿನಿಂದ ಮಿಡ್ ಲಾಂಗ್‌ಗೆ ಬರಬೇಕೆಂದಾಗ, ಅದನ್ನು ನಾರ್ಮಲ್ ಲೆನ್ಸ್ ಬಳಸಿ ಟ್ರಾಲಿಯ ಚಲನೆಯಲ್ಲಿ ಚಿತ್ರೀಕರಿಸಲು ಸಾಧ್ಯವಾಗದಿದ್ದಾಗ ಝೂಮ್ ಬಳಸಬಹುದು. ಜರ್ಕ್ ಇರಬಾರದು ಅಷ್ಟೆ.

'ಹಳ್ಳಿ ಮೇಷ್ಟ್ರು' ಚಿತ್ರದ ಫೈಟ್ ದೃಶ್ಯವೊಂದಕ್ಕೆ ಝೂಮ್ ಬಳಸಲಾಗಿತ್ತು. ನಾಯಕನ ಕಣ್ಣಿಗೆ ಮಣ್ಣೆರಚಿ ಮತ್ತೇನೋ ತಪ್ಪು ಮಾಡಲು ಹೊರಡುವ ದುಷ್ಟರನ್ನು ಕಂಡು ನಾಯಕನಲ್ಲಿ ಕೋಪ ಉಕ್ಕಿದ್ದನ್ನು ಸೂಚಿಸಲು ಆತನ ಕಣ್ಣಿನ ಟೈಟ್ ಕ್ಲೋಸ್ ಷಾಟ್ ತೆಗೆಯಲಾಗಿತ್ತು. ಆತ ಕಣ್ಣು ತೆರೆದಾಗ, ಕೋಪದಿಂದ ಕೆಂಪಾದ ಅವನ ಕಣ್ಣುಗಳು ತೆರೆಯಗಲಕ್ಕೂ ಮೂಡಿ, ನೋಡುಗನಿಗೆ ಅವನ ಮನಸ್ಥಿತಿಯ ಅರಿವಾಗುವಂತಿತ್ತು. ಇಂತಹ ಅನುಭವ ಕೊಡುವಲ್ಲಿ ಝೂಮ್ ಲೆನ್ಸ್ ತುಂಬಾ ಉಪಯುಕ್ತ.

ಟೆಲಿ ಲೆನ್ಸ್ ಉಪಯೋಗಿಸಿದಲ್ಲಿ ಕಲಾವಿದ ಹೆಚ್ಚು ಪ್ರಮುಖನಾಗಿ ತೆರೆಯ ಮೇಲೆ ಕಾಣಲು ಸಾಧ್ಯ. ಅಲ್ಲದೆ ಲೆನ್ಸ್‌ನ ಮುಂದೆ ಡಿಫ್ಯೂಷನ್ ಫಿಲ್ಟರ್ ಮುಂತಾದವನ್ನು ಬಳಸಿದಲ್ಲಿ ಆತ ಇನ್ನೂ ಹೆಚ್ಚು ಗ್ಲಾಮರಸ್ ಆಗಿ ಕಾಣಬಲ್ಲ. ಅವನ ಮುಖಭಾವದ ಸಣ್ಣಪುಟ್ಟ ವಿವರಗಳನ್ನೂ ದಾಖಲಿಸುವುದು ಈ ಲೆನ್ಸಿನಿಂದ ಸಾಧ್ಯ. ಯಾವುದೇ ಒಂದು ಸ್ಥಳದ ಪೂರ್ಣ ಚಿತ್ರವನ್ನು ಸೆರೆ ಹಿಡಿಯುವ ಸಂದರ್ಭದಲ್ಲಿ ವೈಡ್ ಆ್ಯಂಗಲ್ ಲೆನ್ಸ್ ಬಳಕೆಯಾಗುತ್ತದೆ. ಕೆಲವೊಮ್ಮೆ ಕೆಲವರು ಲೆನ್ಸ್‌ನ ಸಮೀಪದಲ್ಲಿರುವ ಗೋಡೆ, ಕಂಬ, ಕೈ-ಕಾಲುಗಳನ್ನು ವಿಕೃತವಾಗಿ ಚಿತ್ರಿಸಲು ವೈಡ್ ಆ್ಯಂಗಲ್ ಲೆನ್ಸ್ ಬಳಸುತ್ತಾರೆ. ಸಾಹಸ ದೃಶ್ಯಗಳಿಗೆ ವೈಡ್ ಬಳಸಬಹುದು. ಟೆಲಿಯಲ್ಲಿ ವೈಡ್‌ನಷ್ಟು ಚೆನ್ನಾಗಿ ಸಾಹಸ ದೃಶ್ಯ ಸಂಯೋಜಿಸಲಾಗುವುದಿಲ್ಲ ಎಂಬುದೇ ಅದಕ್ಕೆ ಕಾರಣ. ಅಲ್ಲದೆ ನೈಜ ಸ್ಥಳಗಳಲ್ಲಿನ ಚಿತ್ರೀಕರಣದಲ್ಲೂ ಟೆಲಿ ಬಳಸಲು ಬೇಕಾದ ರೇಂಜ್ ಸಿಗದ ಕಾರಣ ವೈಡ್ ಬಳಸಲಾಗುವುದು. ಅಂಥ ಸಂದರ್ಭಗಳಲ್ಲಿ ಬ್ಲಾಕ್ ಲೆನ್ಸ್‌ಗಳನ್ನು ಬಳಸಲೇಬೇಕಾಗುತ್ತದೆ. ಆದರೆ ಇಂತಹ ಬ್ಲಾಕ್ ಲೆನ್ಸ್‌ಗಳ ಮುಂದೆ ಡಿಫ್ಯೂಸರ್‌ಗಳನ್ನಿರಿಸಿದರೆ, ಅವುಗಳ ಸಮೀಪ ಫೋಕಸ್ ರೇಂಜಿನಿಂದಾಗಿ ಅವೂ ಸಹ ತೆರೆಯ ಮೇಲೆ ಮೂಡಿ ಒಟ್ಟು ಚಿತ್ರ ಮಸುಕಾಗಿಬಿಡುತ್ತದೆ. ಹೀಗೆ ಒಂದೊಂದು ಲೆನ್ಸಿನಿಂದ ಒಂದೊಂದು ರೀತಿಯ ಅನುಕೂಲ-ಅನಾನುಕೂಲ ಎರಡೂ ಇದ್ದೇ ಇದೆ. ಇರುವ ಅವಕಾಶದಲ್ಲಿ ಕಲ್ಪನೆಯ ಚಿತ್ರವನ್ನು ಸಾಕಾರಗೊಳಿಸುವ ಯಥಾಶಕ್ತಿಯ ಪ್ರಯತ್ನ ನಡೆದೇ ಇರುತ್ತದೆ. ಅದು ನಿರಂತರ.

ಒಳಾಂಗಣ ಚಿತ್ರೀಕರಣದಲ್ಲಿ, ಇರುಳಿನ ಚಿತ್ರೀಕರಣದಲ್ಲಿ ಎಲ್ಲವೂ ಛಾಯಾಗ್ರಾಹಕನ ನಿಯಂತ್ರಣದಲ್ಲಿರುತ್ತದೆಯಾದ್ದರಿಂದ ಬೇಕಾದಂತಹ ನೆರಳು-ಬೆಳಕಿನಾಟವನ್ನು ಆಡಲು, ಕಾಂಟ್ರಾಸ್ಟನ್ನು ತರಲು ಸಾಧ್ಯ. ಹೊರಾಂಗಣದಲ್ಲಿ ಹಸಿರು ಸುಂದರವಾಗಿದ್ದರೆ ಸೂರ್ಯನ ಬೆಳಕಿಗೆ ತಕ್ಕಂತೆ ಚಿತ್ರಿಸುವುದಷ್ಟೇ ಸಾಧ್ಯ. ಕ್ರಿಯಾಶೀಲತೆಗೆ ಅವಕಾಶ ಕಡಿಮೆ. 'ಮನೆದೇವ್ರು' ಚಿತ್ರದ ಒಂದು ಷಾಟ್‌ನಲ್ಲಿ ನಾಯಕನ ಕನ್ನಡಕದೊಳಗೆ ದೇವರ ಮನೆಯಲ್ಲಿ ಪೂಜೆ ಮಾಡುತ್ತಿರುವ ನಾಯಕಿಯ ಪ್ರತಿಬಿಂಬ ಮೂಡುತ್ತದೆ. ಇಂಥದ್ದು ಒಳಾಂಗಣದಲ್ಲಿ ಮಾತ್ರ ಸಾಧ್ಯ. 'ಚಿನ್ನ' ಚಿತ್ರದ ಮೊದಲ ಹಾಡಿನಲ್ಲಿ ನಾಯಕನ ಹಿಂದೆ ಸೂರ್ಯ ಹುಟ್ಟಿ, ಮೇಲೇರುವ ಚಿತ್ರಣವಿದೆ. ಇಂಥ ಅಪರೂಪದ ಪ್ರಯೋಗಗಳನ್ನು ಒಳಾಂಗಣದಲ್ಲಿ ಮಾತ್ರ ಮಾಡಬಹುದು.

ಈ ದೃಷ್ಟಿಯಿಂದ ಛಾಯಾಗ್ರಾಹಕನ ಸಂಯೋಜನೆಯ ಸೌಂದರ್ಯವನ್ನು ಒಳಾಂಗಣ ಚಿತ್ರಗಳಲ್ಲಿ ಕಾಣಬಹುದು.

ದೃಶ್ಯವೊಂದರ ಒಟ್ಟು ಭಾವವನ್ನು ಗ್ರಹಿಸಿದ ನಂತರವೇ ನಟರ ಚಲನೆಯನ್ನು ನಿರ್ಧರಿಸುವುದು. ಇದಕ್ಕೆ ಆ ಷಾಟ್‌ನ ಹಿಂದುಮುಂದಿನ ವಿವರಗಳನ್ನು ಅರಿಯಬೇಕು. ಅಲ್ಲದೆ ಈ ಮೂಲಕ ಪಾತ್ರದ ಭಾವವನ್ನು ಪ್ರೇಕ್ಷಕರಿಗೆ ತಲುಪಿಸುವುದು ಸಾಧ್ಯವೇ ಎಂಬುದನ್ನು ಅರಿತ ನಂತರ ಚಿತ್ರಿಸಬೇಕು. ಇದು ನಿರ್ದೇಶಕ ಹಾಗೂ ಛಾಯಾಗ್ರಾಹಕರ ನಡುವಣ ಹೊಂದಾಣಿಕೆಯಿಂದ ಆಗುವಂಥದ್ದು. ಅದರಲ್ಲಿ ವ್ಯತ್ಯಯವಿದ್ದರೆ ಚಲನೆಯಲ್ಲಿ ವ್ಯತ್ಯಯಗಳು ಬರುತ್ತವೆ. ನಟನ ಮುಖ ಪ್ರಧಾನವಾಗಿ ಕಾಣುವಂತೆ ಚಿತ್ರಿಸುವುದಕ್ಕೆ ಪ್ರೇಕ್ಷಕ ಕಾರಣ. ಕೆಲವೊಮ್ಮೆ ಬೇಕೆಂತಲೇ ಪಾತ್ರವೊಂದರ ಹಿಂಬದಿಯಿಂದಲೇ ಚಿತ್ರಿಸುವುದುಂಟು. ಇದು ಕುತೂಹಲ ಕಾಯ್ದುಕೊಳ್ಳುವ ಸಲುವಾಗಿ ಮಾಡುವಂಥದ್ದು. ಕಥಾವಸ್ತು ಮತ್ತು ನಿರೂಪಣಾ ವಿಧಾನ ಈ ಮೌಲ್ಯಗಳನ್ನು ಒದಗಿಸುತ್ತವೆ. ರಂಗಭೂಮಿ ಹಾಗೂ ಸಿನಿಮಾ ಇವೆರಡರ ನಡುವಿನ ವ್ಯತ್ಯಾಸವನ್ನು ಛಾಯಾಗ್ರಾಹಕ ತೆರೆಯ ಮೇಲೆ ಹೇಗೆ ಸಾಧಿಸಿದ್ದಾನೆ ಎಂಬುದರಿಂದಲೇ ಅವನ ಗುಣಮಟ್ಟ ತಿಳಿಯುವುದು. ರಂಗಭೂಮಿಯ ಛಾಯೆ ಇಲ್ಲದೆಡೆ ನಟರನ್ನು ಸಂಯೋಜಿಸುವುದು ಸದಾ ಸಾಹಸವೇ ಆಗಿರುತ್ತದೆ.

ಬಣ್ಣಗಳು

ಯಾವುದೇ ಛಾಯಾಗ್ರಾಹಕ ಯಾವುದೋ ಒಂದು ಸ್ಪಷ್ಟ ಕಾರಣಕ್ಕಾಗಿ ಯಾವುದೋ ಒಂದು ವರ್ಣವನ್ನು ಬಳಸಬಹುದು. 'ಗೋಪಿಕೃಷ್ಣ' ಚಿತ್ರದಲ್ಲಿ ಹಬ್ಬದ ಸಲುವಾಗಿ ಹಣತೆ ದೀಪಗಳಿಂದ ಅಲಂಕೃತವಾದ ನಾಯಕನ ಮನೆಗೆ, ಅವನನ್ನು ಕೊಲ್ಲಲು ಬರುವ ಖಳರು ವಿದ್ಯುತ್ ವ್ಯವಸ್ಥೆಯನ್ನು ಕಡಿದುಹಾಕಿ ಕತ್ತಲಾಗಿಸಿರುವ ಸಂದರ್ಭ. ಆಗ ಮನೆಯೊಳಗೆ ಹಣತೆಯ ಬೆಳಕು ಮಾತ್ರ. ದೃಶ್ಯ ಅದೇ ಬೆಳಕಿನಲ್ಲಿ ಮುಂದುವರೆಯುವುದು. ಇದಕ್ಕಾಗಿ ಜನರೇಟರ್‌ನ ವೋಲ್ಟೇಜನ್ನು ಕಡಿಮೆ ಮಾಡಿಸಿ, ಕಡಿಮೆ ವೋಲ್ಟೇಜಿನ ಟಂಗ್‌ಸ್ಟನ್ ದೀಪಗಳನ್ನು ಬಳಸಿ ಕ್ಯಾಮರಾಕ್ಕೆ ಆರೆಂಜ್ ಫಿಲ್ಟರ್ ಅಳವಡಿಸಿ ಇಡೀ ದೃಶ್ಯವನ್ನು ಅರಿಶಿನ ಪ್ರಧಾನವಾಗಿಸಿ ಚಿತ್ರಿಸಲಾಗಿತ್ತು. ಹಾಗೆಯೇ ಅದೇ ಚಿತ್ರದಲ್ಲಿನ 'ಜಗವೆಲ್ಲಾ ಅನುರಾಗದಲ್ಲಿ...' ಹಾಡಿನ ಸಂದರ್ಭದಲ್ಲಿಯೂ ಬಣ್ಣಗಳ ಬೆಳಕು ವಿನ್ಯಾಸವಿದೆ. ಹಾಡಿನಲ್ಲಿ ಎರಡು ಜೋಡಿಗಳು ಪ್ರಧಾನ. ನೃತ್ಯಗಾರರ ಗುಂಪು ಹಿಂಬದಿಯಲ್ಲಿ. ಇಲ್ಲಿಯೂ ಒಂದೊಂದಕ್ಕೆ ಒಂದೊಂದು ಬಣ್ಣ ಬಳಕೆಯಾಗಿದೆ. ಎರಡನೆಯ ಜೋಡಿ, ನಾಯಕ-ನಾಯಕಿ ಹಾಡುವಾಗ ಅವರಿಗೆ ರಾತ್ರಿಯ ಸಾಮಾನ್ಯ ಬೆಳಕು, ಅವರನ್ನು ನೋಡಿ ಕನಸುವ ಮೊದಲ ಜೋಡಿಯ ನಾಯಕ-ನಾಯಕಿಗೆ ನೀಲವರ್ಣದ ಬೆಳಕು, ಇವರ ಹಿಂದೆ ಹಾಡಿ ನರ್ತಿಸುವ ಗುಂಪಿಗೆ ಅರಿಶಿನ ಬಣ್ಣದ ಹಿನ್ನೆಲೆ ಬೆಳಕು, ಅವರ ಮುಖಗಳಿಗೆ ದೀಪದ ಬೆಳಕಿಲ್ಲ. ಹೀಗೆ ಮೂರು ಗುಂಪಿನ ಮೂರು ವಿಭಿನ್ನ ಮನಃಸ್ಥಿತಿಯನ್ನು ಚಿತ್ರದಲ್ಲಿ ಸೆರೆ ಹಿಡಿಯುವ ಪ್ರಯತ್ನವಾಗಿತ್ತು. ಇಂತಹುದೇ ಪ್ರಯತ್ನ-ಪ್ರಯೋಗವನ್ನು 'ಚಿನ್ನ' ಚಿತ್ರದಲ್ಲಿನ ಟೈಟಲ್ ಸಾಂಗ್ ಮತ್ತು ಕೆಲವು ದೃಶ್ಯಗಳಲ್ಲಿ ಮಾಡಿರುವುದನ್ನು ಗುರುತಿಸಬಹುದಾಗಿದೆ.

ಕೆಲವು ಛಾಯಾಗ್ರಾಹಕರು ಚಿತ್ರಿಸುವಾಗ ಕಡಿಮೆ ಅಥವಾ ಹೆಚ್ಚು ಎಕ್ಸ್‌ಪೋಷರ್ ನೀಡಿ ನಂತರ ಲ್ಯಾಬ್‌ನಲ್ಲಿ ಅದನ್ನು ಪರಿಷ್ಕರಿಸಬಹುದು. ಆದರೆ ತಾವು ಸಾಮಾನ್ಯವಾಗಿ ಲ್ಯಾಬ್‌ನಲ್ಲಿ ಎಕ್ಸ್‌ಪೋಷರ್ ಬದಲಿಸುವುದಿಲ್ಲ ಎನ್ನುತ್ತಾರೆ ಸೀತಾರಾಮ್. ಅದಕ್ಕೆ ಒಂದು ನಿದರ್ಶನವನ್ನೂ ಅವರು ನೀಡುತ್ತಾರೆ:

ಒಂದು ದೃಶ್ಯದಲ್ಲಿ ಹಾಲ್‌ನ ಮಧ್ಯೆ ಇರುವ ನಟ, ನಂತರ ಕಿಟಕಿಯತ್ತ ಸಾಗಬಹುದು. ಆಗ ಹಾಲ್‌ನ ಮಧ್ಯೆ ಇರುವ ತಾಪವನ್ನೇ ಇಟ್ಟು ಚಿತ್ರಿಸುತ್ತೇವೆ. ನಟ ಕಿಟಕಿಯತ್ತ ಸಾಗಿದಂತೆ ಹೊರಗಿನಿಂದ ಬರುವ ಬೆಳಕು ಅವನ ಮುಖದ ಮೇಲೆ ಹೆಚ್ಚಾಗಿ ಬೀಳುತ್ತದೆ. ಅದನ್ನು ಹಾಗೇ ಬಿಡುತ್ತೇವೆ, ಬದಲಿಸುವುದಿಲ್ಲ. ಇದರಿಂದ ದೃಶ್ಯಕ್ಕೆ ಹೆಚ್ಚಿನ ಸಹಜತೆ ಬರುತ್ತದೆ.

ಒಮ್ಮೊಮ್ಮೆ ಅನಿವಾರ್ಯ ಕಾರಣಗಳಿಂದಾಗಿ ಚಿತ್ರಿಕೆ ಓವರ್ ಎಕ್ಸ್‌ಪೋಸ್ಡ್ ಆಗಬಹುದು. ಹೊರಾಂಗಣದಲ್ಲಿ ಷಾಟ್‌ನ ನಡುವೆ ಹೆಚ್ಚಾಗುವ ಸೂರ್ಯನ ಬೆಳಕು, ಅಂತಹುದನ್ನು ಮತ್ತೆ ಚಿತ್ರಿಸಲಾಗದ ಸ್ಥಿತಿ. ಅಂಥವನ್ನು ಮಾತ್ರ ಲ್ಯಾಬ್‌ನಲ್ಲಿ ಸರಿಪಡಿಸುತ್ತೇವೆ. ಉಳಿದಂತೆ ವರ್ಣ ಸಂಸ್ಕರಣ ನಡೆಯುವಾಗ ಹೊಸ ಬಣ್ಣ ನೀಡುವ ಅಥವಾ ಎಕ್ಸ್‌ಪೋಷರ್ ಬದಲಿಸುವ ಅಭ್ಯಾಸ ಇಲ್ಲ ಎನ್ನುತ್ತಾರೆ ಸೀತಾರಾಮ್.

೧೦೦ ಎಎಸ್ಎ ಫಿಲಂ ಅನ್ನು ೧೨೫ ಎಂತಲೋ ಅಥವಾ ೭೫ ಎಂತಲೋ ಬಳಸುವುದರಿಂದ ಚಿತ್ರದ ಅಂತಿಮ ರೂಪ ಫ್ಲ್ಯಾಟ್ ಎನಿಸಲಾರದೆ ? ಎಂಬ ಪ್ರಶ್ನೆಗೆ

ಸೀತಾರಾಂ ಅವರ ಉತ್ತರ ಹೀಗಿದೆ: ನಾನು ೪೦೦ ಎಎಸ್‌ಎ ನೆಗೆಟಿವ್ ಅನ್ನು ೨೫೦ ಎಎಸ್‌ಎನಂತೆ ಬಳಸುತ್ತೇನೆ. ಇದಕ್ಕೆ ಪ್ರಧಾನ ಕಾರಣ ನಮ್ಮ ನಟರ ಬಣ್ಣ. ಪಾಶ್ಚಾತ್ಯರಂತೆ ನಮ್ಮವರು ಕೆಂಬಣ್ಣದವರಲ್ಲ. ಕಂದು ಅಥವಾ ಗೋಧಿ ಬಣ್ಣದ ಚರ್ಮವುಳ್ಳವರನ್ನು ಚಿತ್ರಿಸಲು ಹೀಗೆ ಮಾಡುತ್ತೇನೆ. ಹಿನ್ನೆಲೆ ಮತ್ತು ನಟರ ವರ್ಣವನ್ನು ಬ್ಯಾಲೆನ್ಸ್ ಮಾಡಲು ಸಹ ಹೀಗೆ ಮಾಡುವುದುಂಟು. ಹೀಗೆ ಚಿತ್ರಿಸಿದ ನೆಗೆಟಿವ್‌ಗಳ ಬಾಳಿಕೆ ಹೆಚ್ಚು. ಹೆಚ್ಚು ಮರುಪ್ರತಿ ತೆಗೆಯಲು ಸಾಧ್ಯ. ಅಲ್ಲದೆ ನಮ್ಮ ಅನೇಕ ಚಿತ್ರಮಂದಿರಗಳಲ್ಲಿ ತೆರೆಯ ಬಣ್ಣ ತಿಳಿ ಹಳದಿಯಾಗಿರುತ್ತದೆ. ಅಲ್ಲದೆ ಸ್ವಚ್ಛವೂ ಆಗಿರುವುದಿಲ್ಲ. ಇದರಿಂದಾಗಿ ನಾವು ಬಯಸಿದ ವರ್ಣ ತೆರೆಯ ಮೇಲೆ ಮೂಡುವುದಿಲ್ಲ ಎಂಬ ಭಯದಿಂದಾಗಿಯೂ ಹೀಗೆ ಮಾಡುತ್ತೇವೆ. ತೆರೆಯ ಮೇಲೆ ಒಮ್ಮೊಮ್ಮೆ ಇದು ಅತಿ ಪ್ರಖರವಾಗಿ ಕಂಡುಬಿಡಬಹುದು. ಇದಕ್ಕೆ ಕಾರಣ ಸಾಮಾನ್ಯವಾಗಿ ಹೆಚ್ಚು ಕಾರ್ಬನ್ ನೀಡಿ ಪ್ರದರ್ಶಿಸಿದ ಚಿತ್ರಮಂದಿರದವರು, ಒಮ್ಮೊಮ್ಮೆ ಹೊಸ ಕಾರ್ಬನ್‌ನ ಕಾರಣವಾಗಿ ಹೆಚ್ಚು ಬೆಳಕು ನೀಡಿ ಪ್ರದರ್ಶಿಸುವುದು. ಇದರಿಂದಾಗಿ ಚಿತ್ರ ಫ್ಲ್ಯಾಟ್ ಎನಿಸಬಹುದು. ಛಾಯಾಗ್ರಾಹಕನ ವಿನ್ಯಾಸವೇ ಫ್ಲ್ಯಾಟಾಗಿದ್ದರೆ ತೆರೆಯ ಮೇಲೆ ಅವು ಮತ್ತಷ್ಟು ಫ್ಲ್ಯಾಟ್ ಆಗಿಬಿಡುತ್ತವೆ.

ವರ್ಣದ ಉಷ್ಣತೆಯನ್ನು ಗಮನದಲ್ಲಿರಿಸಿಕೊಂಡು ವರ್ಣದ ಟೋನ್‌ಗಳನ್ನು ಬೆಳಕಿನ ಮೂಲಕ ಒದಗಿಸುವುದು ಅಥವಾ ಲ್ಯಾಬ್‌ನಲ್ಲಿ ಅನಲೈಜರ್ ಮೂಲಕ ಯಾವುದೇ ಒಂದು ವರ್ಣದ ಸಾಂದ್ರತೆಯನ್ನು ಹೆಚ್ಚಿಸುವುದು ಸಾಧ್ಯವಿದೆಯೇ ಎಂಬ ಪ್ರಶ್ನೆ ಎದುರಾದಾಗ ಸೀತಾರಾಂ ಹೇಳುತ್ತಾರೆ:

ಸಾಮಾನ್ಯವಾಗಿ ಬೆಳಕು ವಿನ್ಯಾಸದ ಮೂಲಕವೇ ವರ್ಣಗಳನ್ನು ಹೆಚ್ಚು ಕಡಿಮೆ ಮಾಡುವುದು, ಪ್ರಧಾನ ಮಾಡುವುದು ನನ್ನ ಕ್ರಮ. ಲ್ಯಾಬ್‌ನಲ್ಲಿ ಇಂತಹ ಬದಲಾವಣೆಗೆ ಯತ್ನಿಸಿದರೆ ಒಂದು ವರ್ಣ ಮಾತ್ರ ಬದಲಾಗದೆ, ಒಟ್ಟಾರೆಯಾಗಿ ಎಲ್ಲ ಬಣ್ಣಗಳೂ ಬದಲಾಗಿಬಿಡುತ್ತವೆ. ಆದ್ದರಿಂದ ಬಯಸಿದ ಒಂದು ಬಣ್ಣಕ್ಕಾಗಿ ಉಳಿದ ಬಣ್ಣಗಳನ್ನು ಕೊಂದಂತಾಗುತ್ತದೆ. ಹೀಗಾಗಿ ಬೆಳಕಿನ ಮೂಲಕವೇ ವರ್ಣಗಳನ್ನು ನೀಡುವುದು ಸೂಕ್ತ.

ಚಲನೆ

ಸಿನಿಮಾ ಸ್ಕೋಪ್ ಚಿತ್ರಗಳನ್ನೇ ಚಿತ್ರಿಸಿರುವ ಛಾಯಾಗ್ರಾಹಕ ಸೀತಾರಾಂ ಕ್ಯಾಮರಾ ಚಲನೆಯ ನಿರ್ವಹಣೆ ಕುರಿತಂತೆ ಹೇಳುವ ಅಭಿಪ್ರಾಯವಿದು : ಸಿನಿಮಾಸ್ಕೋಪ್ ಚಿತ್ರಗಳಲ್ಲಿ ನಟನೊಬ್ಬನ ಚಲನೆಗೆ ಸಮಾನಾಂತರವಾಗಿ ಕ್ಯಾಮರಾ ಸಹ ಚಲಿಸಿದಲ್ಲಿ ಒಟ್ಟು ಫ್ರೇಮ್‌ನ ಅಂದ ಉಳಿಯುತ್ತದೆ. ನಟರ ಚಲನೆಗೆ ಸಂವಾದಿಯಾಗಿ ಕ್ಯಾಮರಾ ಚಲನೆಯೂ ದೃಶ್ಯದಿಂದಲೇ ಒದಗಿ ಬರುವಂಥದ್ದು. ದೃಶ್ಯದ ಭಾವ ತೋರಲು ನಟ ಮಾಡುವ ಚಲನೆಯಂತೆಯೇ ಪ್ರೇಕ್ಷಕ ಅವನನ್ನು ನೋಡಲು ಅನುವಾಗುವಂತೆ ಕ್ಯಾಮರಾ ಚಲಿಸಬೇಕು. ಆ ಮೂಲಕ ದೃಶ್ಯದ ಭಾವವನ್ನು ಪ್ರೇಕ್ಷಕನಿಗೆ ತಲುಪಿಸಬೇಕು. ಭಾರತೀಯ ಚಿತ್ರರಂಗದಲ್ಲಿ ಮಾತ್ರ ಬಳಸಲಾಗುವ ಹಾಡುಗಳನ್ನು ಚಿತ್ರಿಸುವಾಗ ಸಂಗೀತಮಯ ಕಾರಣಗಳಿಗಾಗಿಯೂ ಕ್ಯಾಮರಾ ಚಲಿಸುವುದುಂಟು. ಇದು ಭಾರತೀಯ ಸಿನಿಮಾದ ಪ್ರಧಾನ ಚಿತ್ರೀಕರಣ ತಂತ್ರವೂ ಹೌದು.

ನಿರ್ದೇಶಕನ ತಿಳುವಳಿಕೆಗೂ, ಛಾಯಾಗ್ರಾಹಕನ ತಿಳುವಳಿಕೆಗೂ ಇರುವ ವ್ಯತ್ಯಾಸಗಳ ನಡುವೆ ವಸ್ತು ಸಮಾನಾಂತರ ರೇಖೆಗಳಾಗದ ಹಾಗೆ ಛಾಯಾಗ್ರಹಣ ನಡೆಯುವುದು ಮುಖ್ಯ. ಛಾಯಾಗ್ರಾಹಕ ಸಾಮಾನ್ಯವಾಗಿ ಷಾಟ್‌ನ ಸೌಂದರ್ಯವನ್ನಷ್ಟೇ ಗಮನಿಸುತ್ತಾನೆ. ಆ ದೃಶ್ಯದಲ್ಲಿ ಬೆಳಕು ವಿನ್ಯಾಸ ಹೇಗಿರಬೇಕೆಂಬ ಆಲೋಚನೆ ಅವನಿಗೆ. ನಿರ್ದೇಶಕ ಒಟ್ಟು ಕಥೆಯನ್ನು, ನಿರೂಪಣಾ ವಿಧಾನವನ್ನು, ಚಿತ್ರ ಓಘವನ್ನು ಗಮನಿಸುತ್ತಾನೆ. ಇವರಿಬ್ಬರ ನಡುವೆ ಹೊಂದಾಣಿಕೆ ಇರುವುದು ಅಗತ್ಯ. ಅದಿಲ್ಲದೆ ಹೋದಲ್ಲಿ ಯಾವುದೇ ಒಂದು ಅಂಗ ಪ್ರಧಾನವಾಗಿ ಕಂಡುಬಿಡುವ ಸಾಧ್ಯತೆ ಇದೆ. ಛಾಯಾಗ್ರಾಹಕನೊಡನೆ ಸಂವಹಿಸಿ, ಉತ್ತಮ ಚಿತ್ರ ಸೃಷ್ಟಿಸುವುದು ನಿರ್ದೇಶಕನ ಕೆಲಸ. ಇವರಿಬ್ಬರೂ ಚಿತ್ರವೆಂಬ ರಥದ ಎರಡು ಚಕ್ರಗಳು. ಉಳಿದವು ಸಂಕಲನಕಾರ ಹಾಗೂ ಲೇಖಕರದ್ದು. ಈ ನಾಲ್ಕು ಅಂಗಗಳೂ ಸಮತೂಕದಲ್ಲಿದ್ದಾಗಲೇ ಉತ್ತಮ ಚಿತ್ರ ಆಗುವುದು.

ಕೆಲವು ನಿರ್ದೇಶಕರು ಇಡೀ ಚಿತ್ರವನ್ನು ರೇಖಾಚಿತ್ರಗಳಲ್ಲಿ ಮೂಡಿಸಿ ಕೊಂಡಿರುತ್ತಾರೆ. ಅದನ್ನು ತಂತ್ರಜ್ಞರಿಗೆ ವಿವರಿಸುತ್ತಾರೆ. ಆಗ ಛಾಯಾಗ್ರಾಹಕ ಸಂಕಲನ-ಫ್ರೇಮಿಂಗ್ ಬಗ್ಗೆ ಚಿಂತಿಸದೆ ಕಥೆಗೆ ತಕ್ಕಂತೆ ಎಚ್ಚರದಿಂದ ಬೆಳಕು ವಿನ್ಯಾಸ ಮಾಡಬಹುದು. ಆದರೆ ಅಂತಹ ನಿರ್ದೇಶಕರು ವಾಣಿಜ್ಯ ಪ್ರಧಾನ ಚಿತ್ರಗಳಲ್ಲಿ ಅಪರೂಪ. ಈ ಚಿತ್ರಗಳಲ್ಲಿ ತಂತ್ರಜ್ಞರೆಲ್ಲರ ಹೊಂದಾಣಿಕೆ ಮುಖ್ಯ.

ಶೈಲಿ

ಪ್ರತಿಯೊಬ್ಬ ಛಾಯಾಗ್ರಾಹಕರಿಗೂ ಅವರದ್ದೇ ಆದ ಶೈಲಿ ಇರುತ್ತದೆ. ಕೆಲವರು ಫ್ರೇಮಿಂಗ್-ಸಂಯೋಜನೆಗೆ ಹೆಚ್ಚು ಪ್ರಾಮುಖ್ಯ ನೀಡುವ ಮೂಲಕ ಕಥೆಯನ್ನು ಹೇಳಲು ಪ್ರಯತ್ನಿಸುತ್ತಾರೆ. ಬೆಳಕಿನ ಮೂಲಕ ದೃಶ್ಯದ ಭಾವಕ್ಕೆ ಒತ್ತು ನೀಡುತ್ತಾರೆ. ಆದರೆ ಇಡೀ ಚಿತ್ರವನ್ನು ಒಂದೇ ಸ್ಕೀಮ್‌ನಲ್ಲಿ ಮಾಡದೆ, ಚಿತ್ರ ವರ್ಣರಂಜಿತವೂ ಜನರಂಜನೆ ನೀಡುವಂತಾಗಲೆಂದೂ ಪ್ರಯತ್ನಿಸುತ್ತಾರೆ (ಛಾಯಾಗ್ರಾಹಕ ಸೀತಾರಾಂ ಅವರದು ಇದೇ ಶೈಲಿ).

'ಮನೆದೇವ್ರು' ತಾವು ಛಾಯಾಗ್ರಹಿಸಿದ ಚಿತ್ರಗಳಲ್ಲಿ ಅತ್ಯುತ್ತಮವೆನಿಸುವ ಛಾಯಾಗ್ರಹಣ ಹೊಂದಿದೆ ಎಂಬುದು ಛಾಯಾಗ್ರಾಹಕ ಸೀತಾರಾಂ ಅವರ ಅಭಿಪ್ರಾಯ. ಸಾಮಾಜಿಕ ಕಥೆಯೊಂದಕ್ಕೆ ಅಗತ್ಯವಾದ ಸಹಜತೆಯನ್ನು ಚಿತ್ರದುದ್ದಕ್ಕೂ ಕಾಯ್ದುಕೊಂಡು ಬರಲು ಸಾಧ್ಯವಾಗಿದ್ದುದೇ ಅವರ ಈ ಅನಿಸಿಕೆಗೆ ಕಾರಣ. 'ಚಿನ್ನ' ಕೂಡ ಅವರಿಗೆ ಸಂತಸ ನೀಡಿದ ಛಾಯಾಗ್ರಹಣ. ಪ್ರೇಮ, ನಾಟಕೀಯ ತಿರುವುಗಳು, ಥ್ರಿಲ್ ಎಲ್ಲವೂ ಆ ಚಿತ್ರದಲ್ಲಿದ್ದವು. ಜನರಂಜನೆಗೆ ಅಗತ್ಯವಾದದ್ದನ್ನೆಲ್ಲಾ ಒಂದೆಡೆ ಒದಗಿಸುವ ಪ್ರಯತ್ನವಿತ್ತು. ಆ ಎಲ್ಲವನ್ನೂ ತೆರೆಯ ಮೇಲೆ ತರಲು ತಾವು ಅನೇಕ ಪ್ರಯೋಗ ಮಾಡಿದ್ದುದಾಗಿ ಹೇಳುತ್ತಾರೆ ಜಿ.ಎಸ್.ವಿ.ಸೀತಾರಾಂ.

ಸೌಂದರ್ಯಗ್ರಹಣದ ಜೊತೆಯಲ್ಲಿ

ಸೌಂದರ್ಯಗ್ರಹಣವೇ ಛಾಯಾಗ್ರಹಣದ ಪ್ರಧಾನ ಕೆಲಸ ಎಂಬುದು ಪ್ರಸಿದ್ಧ ಛಾಯಾಗ್ರಾಹಕ ನೆಸ್ಟರ್ ಅಲ್ಮೆಂಡ್ರೋಸ್‌ನ ಅಭಿಪ್ರಾಯ. ಚಲನಚಿತ್ರ ಛಾಯಾಗ್ರಹಣ ಕುರಿತು ಪಾಶ್ಚಾತ್ಯರ ಅನಿಸಿಕೆಗಳಿಗಿಂತ ನಮ್ಮವರದು ಭಿನ್ನ. ಒಬ್ಬ ಛಾಯಾಗ್ರಾಹಕನಿಂದ ಇನ್ನೊಬ್ಬ ಛಾಯಾಗ್ರಾಹಕನಿಗೆ ವೃತ್ತಿ ಒಂದೇ ಆದರೂ ಶೈಲಿ-ಧಾಟಿಯಲ್ಲಿ ಭಿನ್ನತೆ ಇರುತ್ತದೆ. ಪ್ರತಿಯೊಬ್ಬ ಛಾಯಾಗ್ರಾಹಕನೂ ಆ ಕಲೆಯನ್ನು ತನ್ನ ಶೈಲಿಗೆ ತಕ್ಕಂತೆ ದುಡಿಸಿಕೊಳ್ಳುವುದು ಸಹಜ. ಕಥಾವಸ್ತುವಿನ ನಿರೂಪಣೆಗೆ ತಕ್ಕಂತೆ ನಿರ್ದೇಶಕನ ಕಲ್ಪನೆಯನ್ನು, ಆತನೊಂದಿಗೆ ಸಹಕರಿಸಿ ಛಾಯಾಗ್ರಾಹಕ ತನ್ನ ಕಲೆಯನ್ನು ದುಡಿಸಿಕೊಂಡಾಗ ಫಲಿತಾಂಶವೂ ಚೆನ್ನ.

ಹಿಂದಿ ಚಿತ್ರರಂಗದ ಕನ್ನಡಿಗ ನಿರ್ದೇಶಕ ಗುರುದತ್‌ರ ಚಿತ್ರಗಳ ಛಾಯಾಗ್ರಾಹಕ ಕನ್ನಡಿಗ ವಿ.ಕೆ.ಮೂರ್ತಿ ತಮ್ಮ ಅನಿಸಿಕೆಗಳನ್ನು ಬಿಚ್ಚಿಟ್ಟಿದ್ದು ಈ ರೀತಿ :

ಏನೋ ಮಹತ್ತರವಾದುದನ್ನು ಮಾಡುತ್ತಿದ್ದೇನೆಂದು ಭಾವಿಸಿ ನಾನೆಂದೂ ಕೆಲಸ ಮಾಡಿದ್ದಿಲ್ಲ. ನನಗೆ ತೃಪ್ತಿ ಕೊಡುವಂತಾಗಬೇಕೆಂದು ಕೆಲಸ ಮಾಡುವುದು ನನ್ನ ನಿಲುವು. ಅವನ್ನು ಜನ ಮಹತ್ತರವೆಂದು ಗುರುತಿಸಿದ್ದಾರೆ. ನನಗಿದ್ದುದು ಕಷ್ಟಪಟ್ಟು ಕೆಲಸ ಮಾಡುವ ಉತ್ಸಾಹ ಹಾಗೂ ಕೆಲಸದಲ್ಲಿನ ಶ್ರದ್ಧೆ. ಮೊದಲಲ್ಲಿ ಗ್ಲಾಮರ್ ಫೋಟೋಗ್ರಫಿಯನ್ನೇ ಅನುಸರಿಸುತ್ತಿದ್ದೆ. ಸೆಟ್ ಮತ್ತು ಆರ್ಟಿಸ್ಟ್‌ಗಳಿಗನುಗುಣವಾಗಿ ಮೀಡಿಯಂ ಬೆಳಕಿನಲ್ಲಿ ಡೆಪ್ತ್ ಹಾಗೂ ಎಕ್ಸ್‌ಪೋಷರ್ ಕೊಟ್ಟು ಚಿತ್ರಿಸುತ್ತಿದ್ದೆ. ಸೆಟ್ ಹಾಕುವಾಗ ಸಹಜತೆಗೆ ಪ್ರಾಮುಖ್ಯ ಇರುವಂತೆ ಸೂಚಿಸಿ, ಸೆಟ್ ಹಾಕಿದ ಮೇಲೆ ಷಾಟ್ ವಿಭಾಗಿಸಿಕೊಂಡು ಕಥೆಯ ಕಾಲಕ್ಕೆ ತಕ್ಕಂತೆ ಲೈಟಿಂಗ್ ಮಾಡೋದು ಮುಖ್ಯ. ಒಂದೇ ಸೋರ್ಸ್ ಲೈಟಿನಲ್ಲಿ ಚಿತ್ರೀಕರಣ ಮಾಡೋದು ಸರಿಯಲ್ಲ. ಕಣ್ಣಿನ ನೋಟಕ್ಕೂ ಕ್ಯಾಮರಾ ಲೆನ್ಸಿನ ನೋಟಕ್ಕೂ ತುಂಬಾ ವ್ಯತ್ಯಾಸ ಇದೆ. ಲೆನ್ಸಿನ ಮೂಲಕ ಚಿತ್ರ ನೋಡುವಾಗ ಚಿತ್ರದ ಡೆಪ್ತ್ ಅನ್ನು ಸ್ಪಷ್ಟವಾಗಿ ಮೂಡುವಂತೆ ಮಾಡಬೇಕು. ಕಣ್ಣಿನಂತೆ ಕ್ಷಣಾರ್ಧದಲ್ಲಿ ಲೆನ್ಸ್ ವಸ್ತುವೊಂದಕ್ಕೆ ಫೋಕಸ್ ಆಗಲಾರದು. ಆದ್ದರಿಂದ ನೈಜವೆನ್ನಿಸುವಂತಹ ಚಿತ್ರ ಮೂಡಿಸಲು ಸರಿಯಾದ ಲೆನ್ಸ್ ಬಳಸುವುದು, ಎಲ್ಲ ವಿವರಗಳೂ ಕಥೆಯ ಅಗತ್ಯಕ್ಕೆ ದಾಖಲಾಗುವಂತೆ ಲೈಟಿಂಗ್ ಮಾಡುವುದು ಮುಖ್ಯ.

ಛಾಯಾಗ್ರಾಹಕ ಪ್ರತಿ ಕಥೆಗೂ ಇರುವ ಲಯವನ್ನು ಹಿಡಿಯಬೇಕು. ಸಂಗೀತದ ಜ್ಞಾನ ನನ್ನ ಕೆಲಸದಲ್ಲಿ ಸಹಕಾರಿಯಾಗಿದೆ. ನನ್ನ ಚಿತ್ರೀಕರಣ ಶೈಲಿಗೆ ನಾನು ಲಯ (ರಿದಂ)ವನ್ನು ನಂಬುತ್ತೇನೆ. ಅದು ನಮ್ಮನ್ನು ಕಥೆಯ ಅಂತರ್ಯಕ್ಕೆ ಕರೆದೊಯ್ಯುತ್ತದೆ. ಅದರಿಂದ ಕ್ಯಾಮರಾ ಚಲನೆ, ಲೈಟಿಂಗ್ ಎಲ್ಲವೂ ನಿಯಂತ್ರಣಕ್ಕೊಳಪಡಲು ಸಾಧ್ಯ.

ಯಾವುದೇ ತಂತ್ರವಾಗಲಿ ಅದು ಕಥೆಯ ಮೂಡ್‌ನ್ನು ಹಿಡಿಯಬೇಕು. ಅದಕ್ಕೆ ಯಾವುದೇ ಒಂದು ನಿಯಮವಿಲ್ಲ. ಇರಬೇಕಾಗೂ ಇಲ್ಲ. ನಿರಂತರವಾಗಿ ಪ್ರಯೋಗ-ಪ್ರಯತ್ನ ನಡೆಯುತ್ತ ಇರಬೇಕು ಅಷ್ಟೆ.

ನಿರ್ದೇಶಕರಿಗೆ ಛಾಯಾಗ್ರಹಣ, ಲೆನ್ಸ್‌ಗಳ ಬಳಕೆ ಹಾಗೂ ಬೆಳಕಿನ ವಿನ್ಯಾಸಗಳ ಬಗ್ಗೆ ತಿಳುವಳಿಕೆ ಇರಬೇಕು. ಹಾಗಿದ್ದಾಗಲೇ ಕಮರ್ಷಿಯಲ್ ಸೂತ್ರಗಳನ್ನು ಅಳವಡಿಸಿಕೊಂಡು ಒಳ್ಳೆಯ ಪರಿಣಾಮ ತರಲು ಸಾಧ್ಯ.

ಶ್ಯಾಂ ಬೆನಗಲ್ ಅವರ 'ತ್ರಿಕಾಲ್' ಚಿತ್ರದಲ್ಲಿ ಕೆಲವು ದೃಶ್ಯಗಳನ್ನು ಕೇವಲ ಕ್ಯಾಂಡಲ್ ಲೈಟ್ ಸೋರ್ಸ್ ಬಳಸಿ ಚಿತ್ರೀಕರಿಸಲಾಗಿತ್ತು. ತೆರೆಯ ಮೇಲೆ ಅವನ್ನು ನೋಡಿದವರು ಮೆಚ್ಚಿಕೊಂಡರು. ಆದರೆ ಅದೇ ಚಿತ್ರ ಕಿರುತೆರೆಯಲ್ಲಿ ಪ್ರಸಾರವಾದಾಗ ಏನೂ ಕಾಣಲಿಲ್ಲ. ಇವೆಲ್ಲ ಒಂದು ರೀತಿಯ ಗಿಮಿಕ್ಸ್ ಅಷ್ಟೆ. ಮಾಧ್ಯಮ ಯಾವುದೇ ಇರಲಿ, ಚಿತ್ರ ಸ್ಫುಟವಾಗಿ ಕಾಣಬೇಕಾದುದು ಮುಖ್ಯ.

ಯಾವುದೇ ಒಂದು ದೃಶ್ಯದಲ್ಲಿ ಸಂಭಾಷಣೆ ಹೇಳುವ ರೀತಿ, ಕ್ಯಾಮರಾ ಚಲನೆ, ನಟರ ಚಲನೆ ಎಲ್ಲವನ್ನೂ ಟೈಮಿಂಗ್‌ನಲ್ಲಿ ಹೊಂದಿಸಬೇಕು. ಈ ಹೊಂದಾಣಿಕೆಯಿಂದ ಮಾತ್ರ ಹೆಚ್ಚಿನ ಪರಿಣಾಮ ಬೀರಲು ಸಾಧ್ಯ. ಇಲ್ಲಿಯೂ ಲಯಜ್ಞಾನವೇ ಕೆಲಸ ಮಾಡುವುದು. ಛಾಯಾಗ್ರಾಹಕ, ನಿರ್ದೇಶಕ, ಕಥೆ, ಪಾತ್ರಧಾರಿ ಎಲ್ಲರ ಲಯ ಕೂಡಿವಾಗಲೇ ಚಿತ್ರ ಉತ್ತಮವಾಗಿರಲು ಸಾಧ್ಯ. ತರ್ಕಕ್ಕೆ, ಮಾತಿಗೆ ಸಿಗದ ಈ ಲಯಕ್ಕೆ ನಿಯಮಗಳಿಲ್ಲ. ಪ್ರಯೋಗ ಹಾಗೂ ಪ್ರಯತ್ನ ಮಾತ್ರ ನಿರಂತರ. ಎಲ್ಲೋ ಒಮ್ಮೊಮ್ಮೆ ಎಲ್ಲ ಲಯಗಳೂ ಸಮ್ಮಿಳನಗೊಂಡು ಅದ್ಭುತ ಎನ್ನಿಸುತ್ತವೆ, ಅಷ್ಟೆ.

ಚಿತ್ರದ ನೈಜತೆ, ನೈಜ ಚಿತ್ರೀಕರಣ

ಪುಣೆಯ ಫಿಲಂ ಇನ್‌ಸ್ಟಿಟ್ಯೂಟ್ ಪದವೀಧರ ಛಾಯಾಗ್ರಾಹಕ ಎಸ್.ರಾಮಚಂದ್ರ ಕನ್ನಡ ಚಿತ್ರರಂಗದಲ್ಲಿ ಪರಿಚಿತ ಹೆಸರು. ಅನೇಕ ಚಿತ್ರಗಳಲ್ಲಿನ ಅವರ ಛಾಯಾಗ್ರಹಣ ಇಂದಿಗೂ ನೆನಪಿನಲ್ಲಿ ಉಳಿದಿದೆ. ಅವರ ಅನಿಸಿಕೆಗಳನ್ನು ದಾಖಲಿಸುವ ಯತ್ನ ಇದು :

ನೈಜ ಚಿತ್ರೀಕರಣಕ್ಕೂ ಚಿತ್ರದ ನೈಜತೆಗೂ ವ್ಯತ್ಯಾಸವಿದೆ. ಛಾಯಾಗ್ರಾಹಕನ ಸೃಜನಶೀಲತೆ ಪ್ರಕಟವಾಗುವುದು ಇಲ್ಲೇ. 'ಪಾಕೀಜಾ' ಚಿತ್ರದಲ್ಲಿ ನಾಯಕಿ ಬಾಲಕನೊಬ್ಬನ ಮೂಲಕ ನಾಯಕನಿಗೆ ಹೇಳಿ ಕಳುಹಿಸುತ್ತಾಳೆ. ಅತ ಬಂದಾಗ ಅಕೆ ಕತ್ತಲಲ್ಲಿ ಇರುತ್ತಾಳೆ. ಅ ಬಗ್ಗೆ ಅತ ಪ್ರಶ್ನಿಸಿದಾಗ, ತಾನು ಕತ್ತಲಲ್ಲೇ ಇರುವವಳೆನ್ನುತ್ತಾಳೆ ನಾಯಕಿ. ಈ ಮಾತಿಗೆ ಹೊಂದುವಂತೆ ನಾಯಕಿಯನ್ನು ಕತ್ತಲಲ್ಲೇ ಇರಿಸಿ ಚಿತ್ರಿಸಿರುವುದು ಧ್ವನಿಪೂರ್ಣವೆನಿಸುತ್ತದೆ. ಹೆಸರಾಂತ ಕಲಾವಿದರು ಅಭಿನಯಿಸುವಾಗ ಇಂತಹ ಪ್ರಯೋಗ ಮಾಡಿರುವುದು ಛಾಯಾಗ್ರಾಹಕನ ಧೈರ್ಯಕ್ಕೆ ಒಂದು ನಿದರ್ಶನ. ಹಾಗೆಯೇ 'ಕಾಗಜ್ ಕೆ ಫೂಲ್' ಚಿತ್ರದ ಹಾಡೊಂದರ ಚಿತ್ರಣದಲ್ಲಿ ಬಿಸಿಲುಗುದುರೆಯನ್ನೇ ಪ್ರಧಾನ ಪ್ರತಿಮೆಯನ್ನಾಗಿ ಬಳಸಿ ಸೃಷ್ಟಿಸಿದ ಭಾವ. ಇಂಥ ಸನ್ನಿವೇಶಗಳು ತರ್ಕಕ್ಕಾಗಲೀ ವ್ಯಾಖ್ಯಾನಕ್ಕಾಗಲೀ ಸುಲಭವಾಗಿ ದಕ್ಕದ ಕಾವ್ಯಗಳಂತಾಗುತ್ತವೆ. ಇಂಥ ದೃಶ್ಯಗಳು ನೋಡುಗರ ಅನುಭವಕ್ಕೆ ಮಾತ್ರ ತಿಳಿಯುವಂತಹದು.

'ಘಟಶ್ರಾದ್ಧ' ಚಿತ್ರದ ಒಂದು ಸನ್ನಿವೇಶ - ಶ್ರೋತ್ರಿಯರ ವಿಧವೆ ಮಗಳು ಅನೈತಿಕವಾಗಿ ಬಸಿರಾದಾಗ ಮನೆಯ ಎಲ್ಲರೂ ದೂರವಾಗಿ, ಅ ಮನೆಯಲ್ಲೇ ಇದ್ದ ಬಾಲಕನನ್ನು ಜೊತೆಗೆ ಬರುವಂತೆ ಕರೆದಾಗ, ವಿಧವೆ ಹೋಗಬೇಡವೆಂದರೂ ಬಾಲಕ ಅವಳ ಹೊಟ್ಟೆಗೆ ಒದ್ದು ಓಡಿಹೋಗುವುದು, ಅ ಪೆಟ್ಟಿಗೆ ಗರ್ಭಿಣಿ ವಿಧವೆಯ ಮುಖ ನೋವಿನಿಂದ ಕಿವಿಚುವುದು - ಈ ಸಂದರ್ಭದಲ್ಲಿ ಪಾತ್ರಧಾರಿಯ ಮಿತಿಯಿಂದಾಗಿ ಅಗತ್ಯ ಭಾವ ದೊರೆಯದಿದ್ದಾಗ ನಿರ್ದೇಶಕರ ಕಟಿಂಗ್ ಪ್ಯಾಟರ್ನ್‌ಗೆ ತೊಂದರೆಯಾಗದಂತೆ ಕ್ಲೋಸಪ್‌ಗೆ ವೈಡ್ ಆ್ಯಂಗಲ್ ಲೆನ್ಸ್ ಬಳಸಲಾಯಿತು. ನಟಿಯ ಮುಖ ಸಹಜವಾಗಿರುವುದಕ್ಕಿಂತ ಭಿನ್ನವಾಗಿ ಕಾಣಿಸಿತು. ಹೀಗೆ ಒಂದು ಮಿತಿಯನ್ನು ದಾಟಲು ಬಳಸಿದ ಕ್ಯಾಮರಾ ತಂತ್ರದಿಂದಾಗಿ ಸಿನಿಮಾದ ಭಾಷೆಗೆ, ಲಯಕ್ಕೆ ಅನುಕೂಲವಾಯಿತು. ನಿರೂಪಣಾ ಶೈಲಿಗೆ ಇಂಬು ಕೊಡುವಂತೆ ಇಂತಹ ಪ್ರಯೋಗಗಳನ್ನು ಛಾಯಾಗ್ರಾಹಕರು ಮಾಡುವುದು ಬಹಳಷ್ಟು ಸಲ ಅಗತ್ಯವಾಗುತ್ತದೆ.

ವಾಣಿಜ್ಯ ಪ್ರಧಾನ ಚಿತ್ರಗಳಲ್ಲಿ ಕೆಲವು ಫ್ಲಾಶಸ್ ಇರುತ್ತದೆ. ಇದಕ್ಕೆ ಹಲವು ಕಾರಣಗಳಿರಬಹುದು. ವಸ್ತು, ವ್ಯಕ್ತಿ, ಕಾಲ - ಹೀಗೆ ಇವೆಲ್ಲವೂ ಒಂದು ಕ್ರಿಯಾತ್ಮಕ ಹೊಸ ಆಲೋಚನೆಗಳನ್ನು ಒದಗಿಸಿಬಿಡುತ್ತದೆ. ಕೆಲವೊಮ್ಮೆ ಚಿತ್ರೀಕರಣ ಸ್ಥಳದಲ್ಲಿಯೇ ಪೂರ್ವಯೋಜಿತವಲ್ಲದ ಆನ್‌ಸ್ಪಾಟ್ ಅದ್ಭುತ ಕಲ್ಪನೆಗಳೂ ಬರಬಹುದು. 'ಅನ್ವೇಷಣೆ' ಚಿತ್ರದಲ್ಲಿ ಮಧ್ಯಮವರ್ಗದ, ದುಡಿಯುವ ದಂಪತಿಗಳಿರುವ ಮನೆಯೊಳಗೆ ಬಿದ್ದ ಅಪರಿಚಿತ ಶವವನ್ನು ಯಾರಿಗೂ ಗೊತ್ತಾಗದಂತೆ ಸಾಗಿಸಲು ಅ ದಂಪತಿಗಳು ಪ್ರಯತ್ನಿಸುವ ಸಂದರ್ಭ. ಮನೆಯಲ್ಲಿರುವ ಶವ ಎದ್ದು ಬಂದು ತನ್ನನ್ನು ಅಕ್ರಮಿಸಿದಂತೆ ಹೆಂಡತಿಗೆ ಬೀಳುವ ಕನಸಿನ ಚಿತ್ರಣ. ಮನೆಯಲ್ಲಿನ ಎಲ್ಲ ವಸ್ತುಗಳನ್ನು ಬೋಳು ಮನೆ ಮಾಡಿ, ಶವ ಚಲಿಸುವ ಷಾಟ್‌ಗೆ ವಾಸ್ತವವಾಗಿರುವಂತೆ ಲೈಟಿಂಗ್ ಮಾಡಿ ನೋಡಿದಾಗ ಸರಿ ಎನಿಸಲಿಲ್ಲ. ನಂತರ ಸ್ಟೈಲೈಸ್ಡ್ ಮಾಡಿಕೊಂಡು ಎಲ್ಲಿಂದಲೋ ಬರುವ ಬೆಳಕಿನಲ್ಲಿ ಶವ ಕತ್ತಲಿನಿಂದ ಬೆಳಕಿಗೆ, ಬೆಳಕಿನಿಂದ ಕತ್ತಲೆಗೆ ಸಾಗುವುದನ್ನು ಲೋ ಆ್ಯಂಗಲ್‌ನಲ್ಲಿ ಚಿತ್ರೀಕರಿಸಿದಾಗ ದೃಶ್ಯ ಪರಿಣಾಮಕಾರಿಯಾಗಿ ಮೂಡಿ ಬಂದಿತ್ತು. ಇದು ಪೂರ್ವ ನಿರ್ಧಾರಗಳಿಲ್ಲದೆ, ಆನ್ ಸ್ಪಾಟ್ ಮೂಡಿದ ಐಡಿಯಾ.

'ಸಂಗೀತಾ' ಚಿತ್ರದಲ್ಲಿ 'ಬಂದಾ ಸರದಾರ, ಹೃದಯದ ಚೋರ...' ಎಂಬ ನಾಯಕಿಯ ಕನಸನ್ನು ಹೇಳುವ ಹಾಡಿಗೆ ತುಟಿ ಚಲನೆಯಿಲ್ಲದೆ ನಾಯಕಿಯ ಭಾವವನ್ನು ಪ್ರತಿಬಿಂಬಿಸಬೇಕಾದ ಸಂದರ್ಭ. ನಿರಂತರವಾದ ಟ್ರಾಲಿಯ ಚಲನೆಯಿಂದ, ಒಂದು ತಾಳದಿಂದ ಮತ್ತೊಂದು ತಾಳಕ್ಕೆ ಷಾಟ್ ಕಟಿಂಗನ್ನು ಮತ್ತು ಕ್ಯಾಮರಾ ಚಲನೆಯನ್ನು ಹೊಂದಿಸಲಾಯಿತು. ಇದರಿಂದಾಗಿ ನಾಯಕಿಯ ಮನಸ್ಸಿನ ಲಯ ಚಿತ್ರದ ಲಯವೂ ಅಗುವುದಕ್ಕೆ ಸಾಧ್ಯವಾಯಿತು. ಇಂಥಲ್ಲಿ ಛಾಯಾಗ್ರಾಹಕ ಮತ್ತು ನಿರ್ದೇಶಕರ ನಡುವೆ ಹೊಂದಾಣಿಕೆ ಮುಖ್ಯವಾಗುತ್ತದೆ.

'ಘಟಶ್ರಾದ್ಧ' ಚಿತ್ರದಲ್ಲಿ ಗರ್ಭಪಾತ ಸನ್ನಿವೇಶವೊಂದಿದೆ. ಸನ್ನಿವೇಶದ ಅಂತ್ಯದಲ್ಲಿ ಗರ್ಭಪಾತ ಮಾಡಿಸಿಕೊಂಡ ವಿಧವೆಯನ್ನು ಪರೀಕ್ಷಿಸಲು ಸೂಲಗಿತ್ತಿ ಲಾಂದ್ರವೊಂದನ್ನು ಹಿಡಿದು ಬರುತ್ತಾಳೆ. ಈ ಷಾಟ್‌ಗಾಗಿ ಅದುವರೆಗಿದ್ದ ಲೋ ಕೀ ಲೈಟಿಂಗ್ ಸ್ಕೀಮ್‌ಗಿಂತ ಭಿನ್ನವಾಗಿ ಡಿಮ್ಮರ್ ಬಳಸಲಾಯಿತು. ಲಾಂದ್ರದ ಬೆಳಕು ಹತ್ತಿರ ಬಂದಂತೆ ವಿಧವೆ ಪಾತ್ರಧಾರಿಯ ಮುಖದ ಮೇಲೆ ಬೆಳಕು ಹೆಚ್ಚುವಂತೆ ಮಾಡಲಾಯಿತು. ಅವಳು ಸಾಕಷ್ಟು ರಕ್ತ ಕಳೆದುಕೊಂಡಿದ್ದಾಳೆ, ಹೊಟ್ಟೆಯಲ್ಲಿದ್ದ ಜೀವವನ್ನು ಕಳೆದುಕೊಂಡಿದ್ದಾಳೆ ಎಂಬುದನ್ನು ದಾಖಲಿಸಲು ಈ ಹೆಚ್ಚುವರಿ ಬೆಳಕನ್ನು ಮತ್ತಷ್ಟು ಹೆಚ್ಚಿಸಿ ಅವರ ಮುಖ ಬೆಳಕಿನಿಂದ ಮತ್ತಷ್ಟು ಬಿಳಿಚಿಕೊಂಡಂತೆ ಕಾಣುವಂತೆ ಮಾಡಲಾಯಿತು. ಷಾಟ್‌ನ ಅಂತ್ಯವನ್ನು ಸ್ವಲ್ಪ ಓವರ್ ಎಕ್ಸ್‌ಪೋಸ್ ಮಾಡಲಾಯಿತು. ಇದರಿಂದಾಗಿ ಛಾಯಾಗ್ರಹಣದಲ್ಲಿ ಕಥೆಯ ವಿವರವನ್ನು ತರುವ ಪ್ರಯತ್ನ ನಡೆಯಿತು.

ಝೂಮ್ ಲೆನ್ಸ್‌ನ ಬಳಕೆಯನ್ನು ಸರಿಯಾಗಿ ಅರಿತಿರುವುದು ಅಗತ್ಯ. ಒತ್ತಡಗಳ ನಡುವೆ ಕೆಲಸವನ್ನು ಸರಳವಾಗಿಸಿಕೊಳ್ಳಲು ಝೂಮ್ ಬಳಕೆಯಾಗಿಬಿಡುತ್ತದೆ. ಇದು ಸರಿಯಲ್ಲ. ಝೂಮ್ ಮತ್ತು ಟ್ರಾಲಿಗಳ ಸರಿಯಾದ ಸಂಯೋಜನೆಯಿಂದ ಉತ್ತಮ ಪರಿಣಾಮ ಉಂಟುಮಾಡಲು ಸಾಧ್ಯವಿದೆ. 'ಸಿಂಗಾರಿ ಬಂಗಾರಿ' ಚಿತ್ರದಲ್ಲಿ ಸಮುದ್ರ ತೀರದಲ್ಲಿ ನಿಂತಿರುವ ಸಿಂಗಾರಿಯ ತಲೆ ಕೆಡುತ್ತದೆ ಎಂಬುದನ್ನು ಸೂಚಿಸಲು ಟ್ರಾಲಿ ಹಾಕಿ ಕ್ಯಾಮರಾ ಪಾತ್ರದತ್ತ ಸಾಗುತ್ತಿರುವಂತೆಯೇ ಝೂಮ್ ಬ್ಯಾಕ್ ಮಾಡಲಾಯಿತು. ಟ್ರಾಲಿ ಮುಂದೆ ಸಾಗುವಾಗ ಝೂಮ್ ಹಿಂದೆ ಸರಿಯುವುದರಿಂದ ಪಾತ್ರದ ಗಾತ್ರ ಹಾಗೇ ಉಳಿದು ಹಿನ್ನೆಲೆ ಮಾತ್ರ ವಿಶಾಲವಾಗುತ್ತಾ ಹೋಗುತ್ತದೆ. ಹೀಗೆ ಅಸಹಜವೆನಿಸುವ ಒಂದು ಕ್ರಿಯೆ ಮೂಲಕ ಪಾತ್ರದ ಮಾನಸಿಕ ಅಸಹಜತೆಯನ್ನು ತೋರುವ ಪ್ರಯತ್ನ ಅದಾಗಿತ್ತು.

ಕ್ರಿಯೇಟಿವ್ ಲೈಟಿಂಗ್ ಅಂದರೆ ಎಲ್ಲವೂ ಕತ್ತಲೆಯಲ್ಲಿ ಇರೋದು ಎಂಬ ಅಭಿಪ್ರಾಯ ಸಾಮಾನ್ಯವಾಗಿ ಅನೇಕರಲ್ಲಿದೆ, ಅದು ಸರಿಯಲ್ಲ. ಸನ್ನಿವೇಶವನ್ನು ಅರ್ಥ ಮಾಡಿಕೊಂಡು, ಅದರ ಅಗತ್ಯಕ್ಕೆ ತಕ್ಕಂತೆ ಬೆಳಕಿನ ವಿನ್ಯಾಸ ಮಾಡುವುದು ಮುಖ್ಯ.

ಪ್ರತಿಯೊಂದು ಮಾಧ್ಯಮಕ್ಕೂ ಅದರದೇ ಅದ ನಿಬಂಧನೆ ಇದೆ. ಆ ನಿಬಂಧನೆಗಳ ಚೌಕಟ್ಟಿನೊಳಗೇ ಸಾಕಷ್ಟು ಪ್ರಯೋಗ ಮಾಡಲು ಸಾಧ್ಯ. ಅಂತಹ ಪ್ರಯೋಗಗಳಿಗೆ ನಿರ್ದೇಶಕರೂ ನಿರ್ಮಾಪಕರೂ ಸಹಕರಿಸುತ್ತಾರೆ. ಕಥೆಯ ಓಘಕ್ಕೆ ಧಕ್ಕೆಯಾಗದಂತೆ ತಂತ್ರವನ್ನು ಬಳಸುವುದು ಮುಖ್ಯ. ಛಾಯಾಗ್ರಾಹಕನಿಗೆ ಬದುಕನ್ನು ಸೂಕ್ಷ್ಮವಾಗಿ ಗ್ರಹಿಸುವ ಜಾಣ್ಮೆ ಇರಬೇಕಾದುದು ಅಗತ್ಯ.

ವ್ಯಾಪಾರಿ ಚಿತ್ರಗಳು; ಸಮಸ್ಯೆಗಳು

ಕನ್ನಡ ಚಿತ್ರರಂಗದ ಹಿರಿಯ ಛಾಯಾಗ್ರಾಹಕರಲ್ಲೊಬ್ಬರು ಡಿ.ವಿ.ರಾಜಾರಾಂ. ವಾಣಿಜ್ಯ ಚಿತ್ರಗಳ ಛಾಯಾಗ್ರಾಹಕರಾಗಿಯೇ ಪರಿಚಿತರು. ದಶಕಗಳ ಅನುಭವಿ. ಅವರ ಅನಿಸಿಕೆಗಳ ಬಗ್ಗೆ ಅವರೇ ಹೇಳಿದ್ದಾರೆ. ಅದನ್ನಿಲ್ಲಿ ದಾಖಲಿಸಿದೆ ಅಷ್ಟೆ.

ನಾನು ಕೆಲಸ ಮಾಡಿದ ವಾಣಿಜ್ಯ ಪ್ರಧಾನ ಚಿತ್ರಗಳಲ್ಲಿ ಸಾಕಷ್ಟು ಸಮಸ್ಯೆಗಳು ಎದುರಾಗಿವೆ. ವಾಣಿಜ್ಯ ಚಿತ್ರಗಳಲ್ಲಿ ಚರ್ಚೆಗಳಿಗಾಗಲೀ, ತರ್ಕಗಳಿಗಾಗಲೀ ಸಮಯವಿರುವುದಿಲ್ಲ. ಯಾವುದೋ ನಾಯಕ-ನಾಯಕಿ ನಮಗೆ ಸಿಕ್ಕಿರುವ ಅವಧಿಯಲ್ಲಿ ಕೆಲಸ ಮುಗಿಸಬೇಕಾಗುತ್ತದೆ. ಇಂತಹ ಅವಸರಗಳಿಗಾಗಿಯೇ ಗ್ಲಾಮರೈಸಿಂಗ್ ಎಂಬ ಒಂದು ಶೈಲಿಯನ್ನು ರೂಢಿಸಿಕೊಂಡಿದ್ದೇವೆ. ಅದನ್ನು ಬಳಸಿಬಿಡುತ್ತೇವೆ. ತರ್ಕಕ್ಕೆ ಸಿಗದಂತೆ ಬೆಳಕು ವಿನ್ಯಾಸ ಮಾಡಿಯೂ ದೃಶ್ಯದ ಭಾವವನ್ನು ತಕ್ಕಮಟ್ಟಿಗೆ ಹಿಡಿದಿರಿಸುತ್ತೇವೆ.

ನಮಗೆ ಲಯವನ್ನು ಬಳಸುವುದಕ್ಕೆ ಆಗುವುದಿಲ್ಲ. ಹಾಗೆಂದ ಮಾತ್ರಕ್ಕೆ ಕ್ರಿಯಾಶೀಲವಾದ ಕೆಲಸ ಮಾಡಲಾಗುವುದಿಲ್ಲ ಎಂದಲ್ಲ. ಅದೂ ಸಾಧ್ಯವಿದೆ. ಈ ಚಿತ್ರಗಳು ಸಹ ತಮ್ಮದೇ ಆದ ಒಂದು ಪ್ಯಾಟರ್ನ್‌ನ್ನು ಬೆಳೆಸಿಕೊಂಡಿವೆ. ಕಸುಬು ತಿಳಿದವರ ಜೊತೆ ಕೆಲಸ ಮಾಡಿದಾಗ, ಚಿತ್ರನಿರ್ಮಾಣವೂ ಒಂದು ಕಲೆ ಎಂದು ತಿಳಿದವರೊಂದಿಗೆ ದುಡಿಯುವಾಗ ಲಯ ಹಿಡಿದು ಕೆಲಸ ಮಾಡಲು ಸಾಧ್ಯ. ಆದರೆ ವ್ಯಾಪಾರೀ ರಂಗದಲ್ಲಿ ವಾಸ್ತವ ತೀರಾ ಬೇರೆಯಾಗಿದೆ. ಅವಸರದ ಅಡಿಗೆ ಹೆಚ್ಚಾಗಿದೆ. ಕಂಡೂ ಕಾಣದ ಹಲವು ಕೈಗಳು ಛಾಯಾಗ್ರಾಹಕನ ಕೆಲಸವನ್ನು ನಿಯಂತ್ರಿಸುತ್ತಿರುತ್ತವೆ. ಈ ಮಿತಿಗಳ ನಡುವೆಯೂ ಒಮ್ಮೊಮ್ಮೆ ಸೊಗಸಾದ ಕಲ್ಪನೆಗಳು ಮೂಡುತ್ತವೆ. ಅವುಗಳೇ ಇಂದಿಗೂ ಚಾಲಕಶಕ್ತಿಯಾಗಿರೋದು.

ನಮ್ಮ ಚಿತ್ರಮಂದಿರಗಳಲ್ಲಿರುವ ಪ್ರೊಜೆಕ್ಷನ್ ಫೆಸಿಲಿಟಿ ಅತ್ಯುತ್ತಮವೆಂದು ಹೇಳಿಕೊಳ್ಳುವುದು ಸಾಧ್ಯವಿಲ್ಲ. ಹಾಗಾಗಿ ಲೋ ಕೀ ಲೈಟಿಂಗ್ ಮುಂತಾದ ಪ್ರಯೋಗಗಳು ಪ್ರೇಕ್ಷಕರನ್ನು ಮುಟ್ಟುವುದು ಕಷ್ಟವಾಗುತ್ತದೆ. ಇದಕ್ಕಾಗಿಯೇ ಛಾಯಾಗ್ರಾಹಕರು ಲೈಟಿಂಗ್‌ನಲ್ಲಿ ಅನಿವಾರ್ಯವಾಗಿ ಅನೇಕ ರಾಜೀ ಸೂತ್ರಗಳನ್ನು ಮಾಡಿಕೊಳ್ಳಬೇಕಾಗುತ್ತದೆ; ಅನೇಕ ಒಪ್ಪಂದಗಳಿಗೆ ಬರಬೇಕಾಗುತ್ತದೆ.

'ಶರಪಂಜರ' ಚಿತ್ರ ಒಂದು ಬಗೆಯಲ್ಲಿ ಸವಾಲಾಗಿತ್ತೆನ್ನಬೇಕು. ನಾಯಕಿಯು ನದಿ ದಂಡೆಯ ಮೇಲೆ ಓಡಿ ಬಂದು, ಮರಳಲ್ಲಿ ತಡಕಾಡುತ್ತಾಳೆ. ಇದನ್ನು ಚಿತ್ರಿಸುವಾಗ ನಿರ್ದೇಶಕ ಪುಟ್ಟಣ್ಣನವರು ಇಂಗ್ಲಿಷ್ ಚಿತ್ರವೊಂದರ ಸ್ಫೂರ್ತಿಯಿಂದ ದೃಶ್ಯ ವಿವರಣೆ ನೀಡಿದರು. ನೆರಳು ಮತ್ತು ಪ್ರಧಾನವಾಗಿ ಸಿಲ್ಹೋಟ್ ಬಳಕೆಯೊಂದಿಗೆ ದೃಶ್ಯವನ್ನು ಚಿತ್ರೀಕರಿಸಲಾಯಿತು. ಭುಜದ ಮೇಲೆ ಕ್ಯಾಮರಾ ಇಟ್ಟುಕೊಂಡು ನದಿ ದಂಡೆಯ ಮೇಲೆ ಓಡುವುದು ಆ ಕಾಲದಲ್ಲಿ ಕಷ್ಟವಿತ್ತು. ಜೊತೆಗೆ ಲೋ ಆ್ಯಂಗಲ್ ಬೇರೆ. ಬಹಳ ಕಷ್ಟ ಪಡಬೇಕಾಗಿ ಬಂದರೂ ಒಳ್ಳೆಯ ಪರಿಣಾಮ ಮೂಡಿಬಂದಿತು. ಅಮೆರಿಕನ್ ಛಾಯಾಗ್ರಹಣ ಶೈಲಿಗಿಂತ ಬ್ರಿಟಿಷ್ ಛಾಯಾಗ್ರಹಣ ಶೈಲಿಯನ್ನೇ ಹೆಚ್ಚು ಬಳಸುತ್ತಿದ್ದುದರಿಂದ 'ಶರಪಂಜರ' ಚಿತ್ರದ ಆ ದೃಶ್ಯ ಹೈಲೈಟ್ ಆಯಿತು.

ನಟ-ನಟಿಯರ ಮುಖದ ದೋಷಗಳನ್ನು ಮುಚ್ಚಿ ಸುಂದರವಾಗಿಸಿದ ಅನುಭವಗಳೂ ಇವೆ. ಕೆಲವೊಮ್ಮೆ ಕಲಾವಿದರ ವಯಸ್ಸನ್ನೂ ಹಿಂದು-ಮುಂದು ಮಾಡಿ ತೋರಿಸಬೇಕಾಗುತ್ತದೆ. 'ಭಾಗ್ಯವಂತರು' ಚಿತ್ರದಲ್ಲಿ ರಾಜಕುಮಾರ್ ಅವರನ್ನು, ಯುವಕ ಹಾಗೂ ವಯಸ್ಕ ಎರಡೂ ಗೆಟಪ್‌ನಲ್ಲಿ ತೋರಿಸಬೇಕಾಗಿತ್ತು. ಹಿರಿ ವಯಸ್ಸಿನ ಪಾತ್ರವಿರುವ ದೃಶ್ಯಗಳಿಗೆ ೪೦ ಎಂ.ಎಂ. ಲೆನ್ಸ್ ಅನ್ನು ಲೋ ಆ್ಯಂಗಲ್‌ನಲ್ಲಿ ಬಳಸುವ ಮೂಲಕ ಉಂಟಾದ ದೂರದಿಂದ ನಟನ ನಿಜವಾದ ವಯಸ್ಸು ಪಾತ್ರದ ವಯಸ್ಸಿಗೆ ಧಕ್ಕೆಯುಂಟು ಮಾಡದಂತೆ ಚಿತ್ರಿಸಲಾಯಿತು. ಚಿತ್ರೀಕರಣ ಹಂತದಲ್ಲಿ ರಾಜಕುಮಾರ್ ಅವರಿಗೆ ಇದು ಇಷ್ಟವಾದಂತಿರಲಿಲ್ಲ. ತೆರೆಯ ಮೇಲೆ ನೋಡಿದಾಗಲೇ ಅವರಿಗೆ ಮೆಚ್ಚುಗೆಯಾದುದು. ನೃತ್ಯದ ದೃಶ್ಯದಲ್ಲಿ ಕೇವಲ ಬ್ಯಾಕ್ ಲೈಟ್ ಮಾಡಿ ಎಂದು ನಟಿಯೊಬ್ಬರು ಕೇಳಿರುವುದೂ ಉಂಟು. ತಮ್ಮ ಮುಖ ಅರ್ಧ ಬೆಳಕಲ್ಲಿ ಬರಬಾರದು, ಜನರಿಗೆ ತಾವು ಸುಂದರವಾಗಿ, ಸ್ಪಷ್ಟವಾಗಿ ಕಾಣಲೇಬೇಕು ಎನ್ನುವ ನಟರೂ ಇದ್ದಾರೆ. ಹಾಗಾಗಿ ಛಾಯಾಗ್ರಾಹಕರು ಹಲವೊಮ್ಮೆ ರಾಜೀ ಒಪ್ಪಂದಕ್ಕೆ ಬರಬೇಕಾದುದು ಅಗತ್ಯವಾಗುತ್ತದೆ; ಇಲ್ಲವಾದರೆ ಕೆಲಸಕ್ಕೆ ಧಕ್ಕೆಯಾಗುತ್ತದೆ.

ಹೊಂದಾಣಿಕೆ ಅಗತ್ಯ

ನಿರ್ದೇಶಕ ಹಾಗೂ ಛಾಯಾಗ್ರಾಹಕರ ನಡುವೆ ಸಾಮರಸ್ಯ-ಹೊಂದಾಣಿಕೆ ಇರಬೇಕಾದುದು ಅಗತ್ಯ ಎನ್ನುವ ಅನಿಸಿಕೆ ಛಾಯಾಗ್ರಾಹಕ ಯು.ಎಂ.ಎನ್.ಷರೀಫ್ ಅವರದು. ಇವರೂ ಕೂಡ ಪುಣೆಯ ಫಿಲಂ ಇನ್‌ಸ್ಟಿಟ್ಯೂಟ್ ಪದವೀಧರರು.

ಇಂತಹ ಹೊಂದಾಣಿಕೆ ಬರುವುದಕ್ಕೆ ಚಿತ್ರಕಥೆಯ ಹಂತದಿಂದಲೂ ಛಾಯಾಗ್ರಾಹಕ ತಯಾರಿಕೆಯಲ್ಲಿ ತನ್ನನ್ನು ತೊಡಗಿಸಿಕೊಂಡಾಗ ಮಾತ್ರ ಸಾಧ್ಯ. ಹಾಗೆ ತೊಡಗಿಸಿಕೊಳ್ಳದಿದ್ದರೆ ಸಮಸ್ಯೆಗಳ ಸರಮಾಲೆಯೇ ಎದುರಾಗಿಬಿಡುವ ಸಂಭವ-ಸಾಧ್ಯತೆ ಅಧಿಕ. 'ಬೀಸಿದ ಬಲೆ' ಚಿತ್ರದ ಒಂದು ಸನ್ನಿವೇಶಕ್ಕಾಗಿ ಸಮುದ್ರದ ಹತ್ತಿರ ಶೂಟಿಂಗ್ ಮಾಡುತ್ತಿದ್ದ ಸಂದರ್ಭ, ಒಂದು ಗುಡಿಸಲು, ಒಳಗೆ ಸಣ್ಣ ಬುಡ್ಡಿ ದೀಪದ ಬೆಳಕು, ಹತಾಶನಾಗಿ ನಾಯಕ ಗುಡಿಸಲಿನಿಂದಾಚೆಗೆ ಬಂದಾಗ ಕತ್ತಲಲ್ಲೇ ಇರುತ್ತಾನೆ. ಹತ್ತು ಹೆಜ್ಜೆ ನಡೆದ ನಂತರ ಅವನ ಮೇಲೆ ಬೀದಿ ದೀಪದ ಬೆಳಕೊಂದು ಬರುತ್ತದೆ. ಈ ದೃಶ್ಯಕ್ಕೆ ಸಿಲ್ಹೋಟ್ ಹೆಚ್ಚಾಗಿ ಇರುವಂತೆ ಬೆಳಕು ವಿನ್ಯಾಸ ಮಾಡಲಾಗಿತ್ತು. ಆದರೆ ಇದು ತೆರೆಯ ಮೇಲೆ ಕಾಣುವುದೇ ಇಲ್ಲ ಎಂಬ ಅನುಮಾನ ನಿರ್ದೇಶಕರಿಗೆ. ಅವರಿಗಾಗಿ ಬೆಳಕು ಹೆಚ್ಚು ಮಾಡಿದಾಗ, ನಾಯಕನ ನಡಿಗೆಯುದ್ದಕ್ಕೂ ಬೆಳಕು ಚೆಲ್ಲಿತು. ಆಗ ನಿರ್ದೇಶಕರಿಗೆ ದೃಶ್ಯದ ಭಾವ ಕಡಿಮೆಯಾಗುತ್ತದೆಂಬುದು ಅರಿವಾಗಿ, ಲೈಟಿಂಗ್ ಮೊದಲಿನಂತೆಯೇ ಇರಲಿ ಎಂದರು. ಇಂತಹ ಭಿನ್ನ ಭಿನ್ನ ಅಭಿಪ್ರಾಯಗಳು, ಸಿಟ್ಟುಗಳು ನಮ್ಮ ಚಿತ್ರರಂಗದಲ್ಲಿ ಸಾಮಾನ್ಯ. ಅವೆಲ್ಲವನ್ನೂ ಸಮಾಧಾನ ಚಿತ್ತದಿಂದ ಗಮನಿಸಿ, ತರ್ಕ ನಡೆಸಿ ಕೆಲಸ ಮಾಡಿದಲ್ಲಿ ಉತ್ತಮವಾದುದನ್ನು ಮಾಡಲು ಸಾಧ್ಯವಾಗುತ್ತದೆ. ನಿರ್ದೇಶಕನಿಗೆ ಛಾಯಾಗ್ರಾಹಕನ ಬಗ್ಗೆ ಸಂಪೂರ್ಣ ನಂಬಿಕೆ ಇಲ್ಲವಾಗ ಇಂತಹ ಆತಂಕಗಳು ಸಹಜ.

'ಗೂಡಿನಿಂದ ಗಗನಕ್ಕೆ' - ಟಿ.ವಿ. ಸೀರಿಯಲ್. ಲೊಕೇಶನ್ ಇತ್ಯಾದಿ ಮಿತಿಗಳು ಅನೇಕವಿದ್ದವು. ಆದರೂ ಒಳ್ಳೆಯ ಪರಿಣಾಮ ತರಲು ಪ್ರಯತ್ನ. ಸೆಲ್ಲಾರ್‌ನಲ್ಲಿ ಸೋರ್ಸ್ ಲೈಟ್ ಬಹಳ ಕಡಿಮೆ. ಟಿ.ವಿ.ಗೆ ಕಾಂಟ್ರಾಸ್ಟ್ ಅಗತ್ಯ. ಆದ್ದರಿಂದ ಬೌನ್ಸ್ ಲೈಟಿಂಗ್ ಮೂಲಕ ಟಿ.ವಿ.ಗೆ ಅಗತ್ಯವಿರುವಷ್ಟು ಕಾಂಟ್ರಾಸ್ಟನ್ನು ಉಂಟುಮಾಡಿ, ಲೈಟ್ ಸೋರ್ಸ್‌ನ್ನು ತೋರಿಸದೆ, ಅದು ಇಂಥಲ್ಲಿಯೇ ಇದೆ ಎಂಬ ಭ್ರಮೆಯನ್ನು ದೃಶ್ಯದುದ್ದಕ್ಕೂ ಕಾಪಾಡಿಕೊಂಡು ಚಿತ್ರಿಸಬೇಕಾಯಿತು. ಹೀಗೆ ಯಾವುದೇ ಇತಿಮಿತಿಯ ನಡುವೆಯು ಒಳ್ಳೆಯ ಪರಿಣಾಮವನ್ನು ತರಬಹುದು.

ತಂತ್ರಗಳ ಬಳಕೆ

'ಹೊಸ ಬಾಳು' ಚಿತ್ರದಲ್ಲಿ ಒಂದು ಹಾಡು. ಸಂತೋಷ ಮತ್ತು ಸಂಕಟ ಎರಡೂ ಭಾವದಲ್ಲಿ ವಿಭಿನ್ನ ಲಯದೊಡನೆ ಬಳಕೆಯಾಗಿದೆ. ಹಾಡಿನ ಸಂತೋಷದ ಭಾಗವನ್ನು ಹೂವು-ಹಸಿರು ಇತ್ಯಾದಿಗಳ ಹಿನ್ನೆಲೆಯಲ್ಲಿ ಚಿತ್ರಿಸಿಕೊಂಡ ಮೇಲೆ, ವಿಷಾದ ಭಾವದ ಭಾಗದ ಚಿತ್ರೀಕರಣ ಒಂದು ಬಗೆಯಲ್ಲಿ ಸಮಸ್ಯೆಯಾಯಿತು. ಚಿತ್ರದಲ್ಲಿ ಇಂಥ ಹಾಡಿದೆ ಎಂದು ತಿಳಿದಿರದವನಿಗೆ ದಿಢೀರನೆ ಹಾಡಿಗೆ ಏನು ಮಾಡಬಹುದೆಂದು ನಿರ್ದೇಶಕರು ಪ್ರಶ್ನೆ ಎಸೆದಿದ್ದರು. ಆಗ ಥಟ್ಟನೆ ಹೊಳೆದುದು ಸಂತಸವನ್ನು ಚಿತ್ರಿಸಿದ ಸ್ಥಳದಲ್ಲಿಯೇ ಪಾತ್ರಗಳಿಲ್ಲದೆ ಮತ್ತೆ ಚಿತ್ರಿಸುವ ಯೋಚನೆ. ನಿರ್ದೇಶಕರು ಒಪ್ಪಿದರು. ಮತ್ತೆ ಅದೇ ಸ್ಥಳದಲ್ಲಿ ಪಾತ್ರಗಳಿಲ್ಲದೆ, ಕ್ಯಾಮರಾ ಕೋನವನ್ನು ಬದಲಿಸಿ, ಹಿಂದಿನ ಮಧುರ ಕ್ಷಣಗಳನ್ನು ನೆನಪಿಸುತ್ತಾ ಪ್ರಸ್ತುತ ಶೂನ್ಯವನ್ನು ಹೇಳುವ ಮೂಲಕ ಆ ಲೋಕೇಷನ್ನೇ ಒಂದು ಪಾತ್ರವಾಗುವುದು ಸಾಧ್ಯವಾಯಿತು ಎಂಬುದು ಬೆಂಗಳೂರಿನ ಜಯಚಾಮರಾಜೇಂದ್ರ ತಾಂತ್ರಿಕ ವಿದ್ಯಾಲಯದಲ್ಲಿ ಛಾಯಾಗ್ರಹಣ ತರಬೇತಿ ಪಡೆದು ಪದವೀಧರರಾದ ಛಾಯಾಗ್ರಾಹಕ ಆರ್.ಸಿ.ಮಾಪಾಕ್ಷಿ ಅವರ ಅನುಭವ-ಅನಿಸಿಕೆ.

ಕಥೆಯ ಅಗತ್ಯಕ್ಕೆ ತಕ್ಕಂತೆ ತಂತ್ರಗಳ ಬಳಕೆಯಾಗಬೇಕೆಂಬುದು ಸರಿ. ಆದರೆ ತಂತ್ರವೊಂದಿದೆ ಅನ್ನುವ ಕಾರಣಕ್ಕೆ ಎಲ್ಲವನ್ನೂ ಬಳಸುವುದು, ಅನಗತ್ಯವಾದೆಡೆಯಲ್ಲೆಲ್ಲ ಗ್ಲಾಮರೈಸ್ ಮಾಡುವುದು ಸರಿಯಲ್ಲ. ತಂತ್ರದ ತಿಳುವಳಿಕೆಯ ಮೆರವಣಿಗೆ ಸಲ್ಲದು.

ಮೇಣದ ಬತ್ತಿಯ ಬೆಳಕಿನ ಪರಿಣಾಮವನ್ನು ಸನ್ನಿವೇಶದಲ್ಲಿ ಉಂಟುಮಾಡಬೇಕೇ ಹೊರತು, ಕೇವಲ ಕ್ಯಾಂಡಲ್ ಲೈಟಿನ ಬೆಳಕನ್ನೇ ಸೋರ್ಸಾಗಿಟ್ಟುಕೊಂಡು ಅಷ್ಟೇ ಬೆಳಕಿನಲ್ಲಿ ಸನ್ನಿವೇಶವನ್ನು ಚಿತ್ರಿಸುವುದು ಸರಿಯಲ್ಲ. ಇರುವ ತಂತ್ರಜ್ಞಾನದಲ್ಲಿ ಆ ಬೆಳಕನ್ನು ಹೊಂದಿಸಿ, ಸರಿಯಾದ ಎಕ್ಸ್‌ಪೋಷರ್ ಇಟ್ಟು ಚಿತ್ರ ಸುಂದರವಾಗಿ ಕಾಣುವ ಹಾಗೆ ಮಾಡಬೇಕು. ಮಣಿರತ್ನಂ ಅವರ ಚಿತ್ರಗಳಲ್ಲಿ ಈ ಸಮಸ್ಯೆ ಬರುತ್ತದೆ. ಅವರ 'ಅಂಜಲಿ', 'ನಾಯಗನ್' ತರಹದ ಚಿತ್ರಗಳಲ್ಲಿ ತುಂಬಾ ಲೋ ಕೀ ಲೈಟಿಂಗ್ ಇದೆ. ಮಣಿರತ್ನಂ ಅವರು ತಮ್ಮ ಸಿನಿಮಾನ ಥಿಯೇಟರಿನ ಬೃಹತ್ ತೆರೆಯಲ್ಲಿ ನೋಡಬೇಕೇ ಹೊರತು ಟಿ.ವಿ., ವೀಡಿಯೋ ತೆರೆಯಲ್ಲಲ್ಲ. ಜನ ಕಿರುತೆರೆಯಲ್ಲಿ ನೋಡಬಾರದೆಂದೇ ಹೀಗೆ ಮಾಡುತ್ತೇನೆ ಎನ್ನುತ್ತಾರೆ. ಆದರೆ ನಮ್ಮಲ್ಲಿನ ಎಷ್ಟೋ ಚಿತ್ರಮಂದಿರಗಳಲ್ಲೂ ಆ ಸನ್ನಿವೇಶಗಳು ಸ್ಫುಟವಾಗಿ ಕಾಣಿಸುವುದಿಲ್ಲ. ಕಾರಣ ಚಿತ್ರಮಂದಿರಗಳ ಪ್ರೊಜೆಕ್ಷನ್ ವ್ಯವಸ್ಥೆಯ ಕಳಪೆ ಮಟ್ಟ. ಆದುದರಿಂದ ಅಂತಹ ಪ್ರಯೋಗಗಳು ನಿರೀಕ್ಷಿಸಿದ ಫಲ ನೀಡುವುದಿಲ್ಲ.

ನಿರ್ದೇಶಕನ ದೃಷ್ಟಿ

ಸಿನಿಮಾ ಛಾಯಾಗ್ರಹಣ ಕೇವಲ ತಂತ್ರ ಮಾತ್ರವಲ್ಲ, ಅದೊಂದು ಸೃಜನಶೀಲತೆ. ಅದು ಹೇಗೆ ಧ್ವನಿಗಳನ್ನು ಹೊರಡಿಸುತ್ತದೆ, ಇತರ ಕಲೆಗಳೊಂದಿಗೆ ಸಂಯೋಗವಾದಾಗ ಅದು ಎದುರಿಸುವ ಸವಾಲುಗಳು ಎಂಥವು ಎಂಬುದನ್ನು ಗಮನಿಸಿದಾಗಲೇ ಛಾಯಾಗ್ರಹಣದ ನೆಲೆಯನ್ನು ಕಂಡುಕೊಳ್ಳಲು ಸಾಧ್ಯ ಎಂಬುದು ಪ್ರಸಿದ್ಧ ನಿರ್ದೇಶಕ ಗಿರೀಶ್ ಕಾಸರವಳ್ಳಿಯವರ ಅನಿಸಿಕೆ. ಗಿರೀಶ್‌ರು ಪುಣೆಯ ಫಿಲಂ ಇನ್‌ಸ್ಟಿಟ್ಯೂಟಿನಲ್ಲಿ ನಿರ್ದೇಶನ ವಿಭಾಗದಲ್ಲಿ ತರಬೇತಿ ಪಡೆದು ಬಂದ ಪದವೀಧರರು. ಅವರ ಚಿತ್ರಗಳೆಲ್ಲವೂ ಪ್ರಶಸ್ತಿ ಪುರಸ್ಕೃತವಾದವು ಎನ್ನಬಹುದು.

Second Volume Final Approval of Layout, Photos and Proof/ dated 3-1-2002

ಪ್ರತಿಯೊಂದು ಚಿತ್ರಕ್ಕೂ ಒಂದು ಲಯ ಇರುತ್ತದೆ. ಚಿತ್ರದ ನಿರೂಪಣಾ ಶೈಲಿಯಿಂದ ಛಾಯಾಗ್ರಹಣಕ್ಕೆ ಲಯ ಸಿಗುವುದು. ಈ ನಿರೂಪಣಾ ಶೈಲಿಯನ್ನು ನಿರ್ಧರಿಸುವವನು ನಿರ್ದೇಶಕ. ಆದ್ದರಿಂದ ನಿರ್ದೇಶಕನ ಕಟ್ಟಿಂಗ್ ಪ್ಯಾಟರ್ನ್‌ಗೆ ಛಾಯಾಗ್ರಾಹಕ ಹೊಂದಿಕೊಳ್ಳಬೇಕಾಗುತ್ತದೆ. ಎಲ್ಲ ಒಪ್ಪಂದಗಳು, ರಾಜೀ ಸೂತ್ರಗಳು, ಅಡೆ-ತಡೆಗಳ ನಡುವೆಯೂ ಛಾಯಾಗ್ರಾಹಕ ಒಂದು ಒಳ್ಳೆಯ ಲೈಟಿಂಗ್ ಮಾಡಲು, ಒಂದು ಒಳ್ಳೆಯ ಆ್ಯಂಗಲ್‌ನಲ್ಲಿ ಕ್ಯಾಮರಾ ಇರಿಸಲು, ಒಂದು ಇಮೇಜ್ ತರಲು ಪ್ರಯತ್ನಿಸುವುದು ಸಹಜ.

ಒಂದು ತಾಂತ್ರಿಕ ಸೌಲಭ್ಯದ ಇತಿಮಿತಿಯನ್ನು ಅರಿಯದೆ ಅದನ್ನು ಅನಗತ್ಯವಾಗಿ ಬಳಸಿಬಿಡುವ ಪರಿಪಾಠ ನಮ್ಮ ಚಿತ್ರಗಳಲ್ಲಿ ಕಾಣುತ್ತದೆ. ನಮ್ಮಲ್ಲಿನ ಝೂಮ್ ಲೆನ್ಸ್ ಬಳಕೆಯೇ ಇದಕ್ಕೆ ನಿದರ್ಶನ.

ಕಣ್ಣಿಗೆ ಹಿತವೆನಿಸುವ ಸುಂದರ ಹೊರಾಂಗಣ, ವರ್ಣ ಸಂಯೋಜನೆ, ತಾಂತ್ರಿಕ ಚಮತ್ಕಾರಗಳು ಇವುಗಳನ್ನೇ ಉತ್ತಮ ಛಾಯಾಗ್ರಹಣ ಎಂದು ಭಾವಿಸುವುದು ಸಹಜ. ಆದರೆ ಉತ್ತಮ ಛಾಯಾಗ್ರಹಣ ಸ್ವತಂತ್ರ ತಂತ್ರಗಾರಿಕೆಯಷ್ಟೇ ಅಲ್ಲ, ಚಿತ್ರದ ಒಟ್ಟು ವಿನ್ಯಾಸದ ಅಂಗವಾಗಿ ಅದು ಮೂಡಿಬರಬೇಕಾಗುತ್ತದೆ. ಕಥೆಯೊಂದಿಗಷ್ಟೇ ಅಲ್ಲದೆ, ಸಿನಿಮಾದ ಬೇರೆ ಬೇರೆ ತಂತ್ರಗಳೊಂದಿಗೆ ಅದು ಸಾವಯವ ಸಂಬಂಧ ಹೊಂದಿರಬೇಕಾಗುತ್ತದೆ. ಉತ್ತಮ ಎನ್ನುವುದರ ಗ್ರಹಿಕೆಯು ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗುತ್ತದೆ. ಈ ಭಿನ್ನ ಅಭಿಪ್ರಾಯದಿಂದಾಗಿಯೇ ಛಾಯಾಗ್ರಾಹಕ ಮತ್ತು ನಿರ್ದೇಶಕರ ನಡುವೆ ಹೊಂದಾಣಿಕೆ ಮುಖ್ಯವಾಗುವುದು. ಈ ಹೊಂದಾಣಿಕೆಯನ್ನು ಮಾಡಿಕೊಳ್ಳುತ್ತ 'ಉತ್ತಮ' ಎಂಬುದನ್ನು ಸಾಧಿಸಲು ನಿರಂತರ ಯತ್ನಗಳು ನಡೆಯುತ್ತಿರುತ್ತವೆ.

ಚಲನಚಿತ್ರ ಛಾಯಾಗ್ರಹಣದಲ್ಲಿ 'ಉತ್ತಮ' ಎನ್ನುವುದನ್ನು ನಿರ್ಧರಿಸುವುದಕ್ಕೆ ಪ್ರಮುಖವಾಗುವುದು ಬೆಳಕಿನ ವಿನ್ಯಾಸ. ಕೆಲವೊಮ್ಮೆ ಛಾಯಾಗ್ರಾಹಕರು ಕಂಡುಕೊಂಡ ಬೆಳಕು ವಿನ್ಯಾಸದಿಂದಾಗಿ ಚಿತ್ರಕ್ಕೊಂದು ಗಾಂಭೀರ್ಯ, ವಿಶಿಷ್ಟ ಛಾಪು ದೊರೆತ ಉದಾಹರಣೆಗಳು ಇವೆ. ಹಾಗಾಗಿ ಬೆಳಕಿನ ವಿನ್ಯಾಸವನ್ನು ಗಮನಿಸಿದರೆ ಛಾಯಾಗ್ರಾಹಕ ಆ ದೃಶ್ಯವನ್ನು ಗ್ರಹಿಸಿರುವ ಕ್ರಮವೂ ತಿಳಿಯುತ್ತದೆ. ಅಲ್ಲದೆ ಆ ಮೂಲಕ ಆತ ವಾಸ್ತವಕ್ಕೆ ಪ್ರತಿಕ್ರಿಯಿಸುತ್ತಿರುವ ಬಗ್ಗೆ ಒಳನೋಟವೂ ಸಿಗುತ್ತದೆ. ಇದರಿಂದಾಗಿ ಛಾಯಾಗ್ರಹಣ ಕೇವಲ ತಂತ್ರವಾಗದೆ, ಒಂದು ಅಭಿವ್ಯಕ್ತಿ ಸಾಧನವಾಗುತ್ತದೆ.

ಕೆಲವು ದಶಕಗಳ ಹಿಂದೆ ನಟ, ನಟಿಯರನ್ನು ಹಿನ್ನೆಲೆಯಿಂದ ಪ್ರತ್ಯೇಕವಾಗುವಂತೆ ಬೆಳಕು ವಿನ್ಯಾಸ ಮಾಡುವ ಕ್ರಮವಿದ್ದಿತು. ಇದರಿಂದಾಗಿ ನಟ-ನಟಿಯರಿಗೆ ಹೆಚ್ಚಿನ ಪ್ರಾಮುಖ್ಯತೆ ಬಂದು, ಅವರು ಆಕರ್ಷಕವಾಗಿ ಕಾಣುತ್ತಿದ್ದರು. ಆ ಬಗೆಯ ಛಾಯಾಗ್ರಹಣ ಹೆಚ್ಚು ಸುಂದರವೆನಿಸಿತ್ತು. ಕಾಲ ಕ್ರಮೇಣ ಈ ತಂತ್ರವನ್ನು ದುಡಿಸಿಕೊಳ್ಳುವುದು ಹೆಚ್ಚಿ, ದೃಶ್ಯ ಹೇಗೇ ಇರಲಿ ನಟ-ನಟಿಯರನ್ನು ಆಕರ್ಷಕವಾಗಿ ಕಾಣುವಂತೆ ಮಾಡುವುದೇ ಛಾಯಾಗ್ರಹಣದ ಪ್ರಧಾನ ಉದ್ದೇಶ ಎನ್ನುವಷ್ಟು ಅತಿಯಾಯಿತು. ಛಾಯಾಗ್ರಹಣದ ಕೆಲವು ಅಂಶಗಳನ್ನು ಕಥಾವಸ್ತುವಿನ ಪರಿಸರದಿಂದ ಬೇರೆಯಾಗಿಸಿ ನೋಡುವ ಪ್ರವೃತ್ತಿ ಕಲಾಭಿವ್ಯಕ್ತಿಯಲ್ಲ ಎಂಬ ಕಾರಣಕ್ಕೆ ಆ ತಂತ್ರವನ್ನು ತಾತ್ವಿಕವಾಗಿ ವಿರೋಧಿಸುವ ವಾದ ಮೂಡಿದಾಗ, ಜಾಗತಿಕ ಚಿತ್ರರಂಗದ ಛಾಯಾಗ್ರಹಣ ಶೈಲಿಯಲ್ಲಿ ಅನೇಕ ಭಿನ್ನ ಟಿಸಿಲುಗಳು ಮೂಡತೊಡಗಿದವು. ನವವಾಸ್ತವವಾದಿ ಚಿತ್ರ ಚಳವಳಿಗೆ ನಾಂದಿಯಾಯಿತು. ಈ ಚಳವಳಿಯ ಪ್ರಭಾವ ನಮ್ಮ ಚಿತ್ರಗಳ ಮೇಲೆ ಸಾಕಷ್ಟಾಗಿದೆ.

ಉತ್ತಮ ದೃಶ್ಯ ಸಂಯೋಜನೆಗೆ ಮುಖ್ಯವಾಗುವುದು ಲೆನ್ಸ್‌ನ ಬಳಕೆ. ಆದರೆ ಝೂಮ್ ಲೆನ್ಸ್‌ನ ಬಳಕೆ ಕುರಿತಂತೆ ಜಾಗತಿಕ ಸಿನಿಮಾ ರಂಗದಲ್ಲಿ ಭಾರಿ ವಿವಾದವೇ ನಡೆದಿದೆ. ಝೂಮ್ ಮಾಡುವಾಗ ಅದು ದೃಶ್ಯದ ಪ್ರಕ್ಷೇಪಣ (perspective)ವನ್ನು ಬದಲಿಸುತ್ತಾ ಹೋಗುತ್ತದೆ. ಪೂರ್ಣ ವೈಡ್‌ನಲ್ಲಿದ್ದಾಗ ಇರುವ ಪ್ರಕ್ಷೇಪಣವೊಂದು ಝೂಮ್ ಇನ್ ಮಾಡಿದಾಗ ಚಿಕ್ಕದಾಗುತ್ತ ಹೋಗುತ್ತದೆ. ಇದರಿಂದಾಗಿ ಲೆನ್ಸ್‌ಗೆ ಟೆಲಿಫೋಟೋ ಲೆನ್ಸ್‌ನ ಗುಣ ಬರುತ್ತದೆ. ನಾವು ಬರಿಗಣ್ಣಿನಿಂದ ನೋಡುವಾಗ ಹಾಗಾಗುವುದಿಲ್ಲ. ಪ್ರಕ್ಷೇಪಣದಲ್ಲಾಗುವ ಈ ಬದಲಾವಣೆಯಿಂದಾಗಿ ಝೂಮ್‌ನ ಚಲನೆ ಅಸಹಜವೆನಿಸುತ್ತದೆ. ಈ ಅಸಹಜತೆ ತಂತ್ರಜನ್ಯವಾದ್ದರಿಂದ ಚಿತ್ರಕರ್ತ ಅದನ್ನು ಬಳಸಲು ತಾತ್ವಿಕ ಚೌಕಟ್ಟನ್ನು ನಿರ್ಮಿಸಿಕೊಳ್ಳಬೇಕಾಗುವುದೆಂಬುದು ಚಿತ್ರ ಸಿದ್ಧಾಂತಿಗಳ ವಾದ. ಆದ್ದರಿಂದಲೇ ಸಿನಿಮಾ ಬಗ್ಗೆ ಆಳವಾದ ಕಾಳಜಿಯಿದ್ದವರು ಮನರಂಜನೆ ಪ್ರಧಾನ ಚಿತ್ರ ಮಾಡಲಿ, ಕಲಾತ್ಮಕ ಚಿತ್ರ ಮಾಡಲಿ ಝೂಮ್ ಅನ್ನು ಬಳಸುವುದಿಲ್ಲ. ಒಂದು ವೇಳೆ ಬಳಸಿದರೂ ಅದಕ್ಕೊಂದು ತಾತ್ವಿಕ ಕಾರಣ ಇರುತ್ತದೆ. ಇದರಿಂದಾಗಿ ಸಿನಿಮಾಕ್ಕೊಂದು ಗಂಭೀರ ಶೈಲಿ ಒದಗುತ್ತದೆ.

ಕನ್ನಡದ ಅನೇಕ ಚಿತ್ರಗಳಲ್ಲಿ ಹಾಗೂ ಕಿರುತೆರೆಯ ಸರಣಿಗಳಲ್ಲಿ ಝೂಮ್‌ನ ಬಳಕೆ ತೀರಾ ಅತಿಯಾಗಿರುತ್ತದೆ. ಕಥಾಚಿತ್ರಗಳಲ್ಲಿ ಯಾವುದೇ ತಾತ್ವಿಕ ಕಾರಣಗಳಿಲ್ಲದೆ ಝೂಮ್ ಬಳಸುವುದು ವಿನ್ಯಾಸದ ರೂಪದಲ್ಲಿಯೇ ಸಿನಿಮಾ ಭಾಷೆಯ ಬಗ್ಗೆ ಗಮನ ಇಲ್ಲದಿರುವುದನ್ನು ಸೂಚಿಸುತ್ತದೆ. ದೃಶ್ಯವೊಂದರ ಆರಂಭ ಅಥವಾ ಅಂತ್ಯದಲ್ಲಿಯೋ ದೃಶ್ಯದ ಮಧ್ಯದಲ್ಲಿಯೋ ಯಾವುದೇ ಒಬ್ಬ ವ್ಯಕ್ತಿ ಅಥವಾ ವಸ್ತುವಿನಿಂದ ಹಿಂದಕ್ಕೆ ಅಥವಾ ಮುಂದಕ್ಕೆ ಝೂಮ್ ಆಗುವುದನ್ನು ನಮ್ಮ ಚಿತ್ರಗಳಲ್ಲಿ ಕಾಣುತ್ತಲೇ ಇರುತ್ತೇವೆ. ನಮ್ಮ ನೆರೆಯ ಭಾಷೆಯ ಸುಮಾರಾದ ಚಿತ್ರಗಳೂ ಈ ದೋಷಗಳಿಂದ ಮುಕ್ತವಾಗಿರುವಾಗ ನಮ್ಮ ಚಿತ್ರಗಳು ಮಾತ್ರ ಇಂಥವಕ್ಕೆ ಗಮನ ಕೊಡದೆ ಅನುಕೂಲ ಸಿಂಧು ತತ್ವಗಳನ್ನು ಬಳಸುತ್ತಿವೆಯೇನೋ ಎನಿಸುತ್ತದೆ.

ಬೆಳಕು ವಿನ್ಯಾಸ, ಲೆನ್ಸ್‌ಗಳ ಆಯ್ಕೆ, ಕ್ಯಾಮರಾ ಚಲನೆ, ವರ್ಣ ಸಂಯೋಜನೆ ಎಲ್ಲವನ್ನೂ ಉತ್ತಮವಾಗಿ ನಿಭಾಯಿಸಿದಾಗ ದೃಶ್ಯ ಸಂಯೋಜನೆ ಆಗುತ್ತದೆ. ಅದಕ್ಕಿಂತ ಮುಖ್ಯವಾಗಿ ನಟರನ್ನು ಸೇರಿದಂತೆ, ದೃಶ್ಯದ ಎಲ್ಲ ವಿವರಗಳೂ ಒಂದು ಡಿಸೈನ್ ಎಲಿಮೆಂಟ್ ಆಗಿ ಹೇಗೆ ಬಳಕೆಯಾಗಿವೆ ಮತ್ತು ಫ್ರೇಮಿನ ಟೆಕ್ಸ್‌ಚರ್, ವಾಲ್ಯೂಮ್, ಮಾಸ್ ಮತ್ತು ಗ್ರಾಫಿಕ್ಸ್‌ಗಳು ಇಡೀ ಚಿತ್ರದ ಒಟ್ಟು ಉದ್ದೇಶಕ್ಕೆ ಅನುಗುಣವಾಗಿ ಹೇಗೆ ರೂಢಿಸಿಕೊಳ್ಳಲಾಗಿದೆ ಎಂಬುದನ್ನು ಗಮನಿಸುವುದು ಅಗತ್ಯ.

ನಮ್ಮ ಛಾಯಾಗ್ರಹಿತ ದೃಶ್ಯಗಳಲ್ಲಿ ರಂಗಭೂಮಿಯ ಛಾಯೆ ಉಳಿದುಕೊಂಡು ಬಂದಿರುವುದು ವಿಷಾದ. ಒಂದು ಉತ್ತಮ ಕ್ಯಾಮರಾ-ತಂತ್ರವಿರುವ ಚಿತ್ರದಲ್ಲಿ ಯಾವ ಹಂತದಲ್ಲಿಯೂ ನಟ, ನಟಿ ಕ್ಯಾಮರಾ ಎದುರಿಗೆ ಅಭಿನಯಿಸುತ್ತಿದ್ದಾರೆ ಎಂಬ ಭಾವನೆ ಹುಟ್ಟುವುದಿಲ್ಲ, ಅಥವಾ ದೃಶ್ಯ ನಿರ್ಮಿತಿ ಕ್ಯಾಮರಾದ ಕಣ್ಣಿಗಾಗಿಯೇ ಆಗಿದೆ ಎನಿಸುವುದಿಲ್ಲ. ಅಲ್ಲೊಂದು ಹಿನ್ನೆಲೆ ಇದೆ, ಅದರೆದುರಿಗೆ ಪಾತ್ರಗಳು ತಮ್ಮ ಕಾರ್ಯವನ್ನು ನಿರ್ವಹಿಸುತ್ತಿವೆ, ಅವರಿಗೆ ಗೊತ್ತಾಗದಂತೆ ಕ್ಯಾಮರಾ ಅದನ್ನು ಚಿತ್ರೀಕರಿಸಿದ ಎಂಬ ಭಾವನೆಯುಂಟಾಗುವಂತಿರುತ್ತದೆ. ಅನೇಕ ಕನ್ನಡ ಚಿತ್ರಗಳಲ್ಲಿ ಹೀಗಿರುವುದಿಲ್ಲ. ಎಲ್ಲ ಕಲಾವಿದರೂ ಎಲ್ಲ ಸಂದರ್ಭದಲ್ಲೂ ಕ್ಯಾಮರಾ ಎದುರಿಸಿ ಮಾತನಾಡುವುದು, ಆಫ್ ಸ್ಕ್ರೀನ್ ಸ್ಪೇಸನ್ನು ಬಳಸದಿರುವುದು ಕಾಣಬರುತ್ತದೆ. ಪಾತ್ರಗಳ ಪ್ರವೇಶ-ನಿರ್ಗಮನ ಸಂದರ್ಭಗಳಲ್ಲಿ ಈ ದೋಷ ತೀರಾ ಸ್ಪಷ್ಟವಾಗಿ, ಪ್ರಮುಖವಾಗಿ ಕಾಣಬರುತ್ತದೆ. ಸಿನಿಮಾ ಭಾಷೆಯ ಅಲ್ಪಜ್ಞಾನವಿದ್ದವರಿಗೂ ಕಿರಿಕಿರಿಯುಂಟುಮಾಡುವ ಈ ಬಗೆಯ ಸನ್ನಿವೇಶವನ್ನು ಛಾಯಾಗ್ರಾಹಕರು ಸರಿಪಡಿಸಲು ಸಾಧ್ಯವಾಗಬಹುದೇನೋ.

ಕನ್ನಡ ಚಿತ್ರರಂಗಕ್ಕೆ ೬೬ ವರ್ಷವಾದರೂ ನಮ್ಮಲ್ಲಿನ ಅನೇಕ ಛಾಯಾಗ್ರಾಹಕರು ತಮ್ಮದೇ ಆದ ಶೈಲಿಯೊಂದನ್ನು ರೂಢಿಸಿಕೊಂಡಿಲ್ಲವೆಂದು ಮೇಲ್ನೋಟಕ್ಕೆ ಭಾಸವಾಗುವುದಾದರೂ ನಿರಂತರವಾಗಿ ದುಡಿಯುತ್ತಿರುವ ಛಾಯಾಗ್ರಾಹಕರೆಲ್ಲರೂ ತಮ್ಮದೇ ಆದ ಶೈಲಿಯನ್ನು ರೂಪಿಸಿಕೊಳ್ಳುವ ಪ್ರಯತ್ನದಲ್ಲಿಯೇ ಇದ್ದಾರೆ. ಅದನ್ನು ಅರಿತು ಗುರುತಿಸುವ ಕೆಲಸ ಆಗಬೇಕಾಗಿದೆ.

ನಿಷ್ಠುರತೆ

ಚಲನಚಿತ್ರ ಮಾಧ್ಯಮದಲ್ಲಿ ಛಾಯಾಗ್ರಹಣ ಕಲೆಗೆ ತನ್ನದೇ ಆದ ಮಹತ್ವದ ಸ್ಥಾನವಿದೆ. ತನ್ನ ಚಿತ್ರದ ಛಾಯಾಗ್ರಾಹಕನೂ ತನ್ನ ಜೊತೆಗೆ ಸಹ ಸೃಷ್ಟಿಕರ್ತ ಎನ್ನುವ ಪ್ರಸಿದ್ಧ ನಿರ್ದೇಶಕ ಟಾರ್ಕೋವ್‌ಸ್ಕಿ, ತೆರೆಯ ಮೇಲೆ ಮೂಡುವುದೆಲ್ಲವೂ ನಿರ್ದೇಶಕನ ಅಂತಿಮ ತೀರ್ಮಾನ ಎಂಬ ಅಚಲ ನಂಬಿಕೆಯುಳ್ಳವನು. ಛಾಯಾಗ್ರಾಹಕನಿಗಿರುವ ಮಿತಿಯ ಬಗ್ಗೆ ಹೇಳುತ್ತಾ, ಯಾವ ಒಬ್ಬ ಪ್ರಬುದ್ಧ ನಿರ್ದೇಶಕನೂ ಛಾಯಾಗ್ರಾಹಕನಿಗೆ ಸಂಪೂರ್ಣವಾಗಿ ಶರಣಾಗಲಾರನೆನ್ನುತ್ತಾನೆ.

ಟಾರ್ಕೋವ್‌ಸ್ಕಿ 'ಮಿರರ್' ಚಿತ್ರ ಆರಂಭಿಸುವ ಸಂದರ್ಭದಲ್ಲಿ ಚಿತ್ರದ ಛಾಯಾಗ್ರಹಣಕ್ಕಾಗಿ ಸಮರ್ಥ ಛಾಯಾಗ್ರಾಹಕ ವ್ಯಾದಿಮ್ ಯುಸ್ಸೋವ್‌ನನ್ನು ಸಂಪರ್ಕಿಸಿದ. ಚಿತ್ರದ ಕಥೆ ತನ್ನ ಜೀವನಾನುಭವಗಳನ್ನು ಆಧರಿಸಿದೆ ಎಂದು ಹೇಳಿದ. ಆದರೆ ವ್ಯಾದಿಮ್, ಇದು ಆ ನಿರ್ದೇಶಕನ ವೈಯಕ್ತಿಕ ಚಿತ್ರವೆಂದು, ಹೀಗೆ ತನ್ನ ಬಗ್ಗೆ ತಾನೇ ಹೇಳಿಕೊಳ್ಳುವುದು ಸರಿಯಲ್ಲವೆಂದೂ ತಿಳಿಸಿ ಟಾರ್ಕೋವ್‌ಸ್ಕಿಯ ಆಹ್ವಾನವನ್ನು ನಿರಾಕರಿಸಿದ. ಇಲ್ಲಿ ಛಾಯಾಗ್ರಾಹಕನ ಮಹತ್ವವೇನೆಂಬುದರ ಅರಿವಾಗುತ್ತದೆ.

ನಾಲ್ಕು ದಶಕ ; ನೂರು ಅನುಭವ

ಚಿತ್ರರಂಗದಲ್ಲಿ ನಲವತ್ತು ವರ್ಷಗಳಿಗೂ ಮೀರಿದ ದುಡಿಮೆಯ ಅನುಭವಿಯಾದ ನಿರ್ದೇಶಕ ಕೆ.ಎಸ್.ಎಲ್.ಸ್ವಾಮಿ (ರವೀ)ಯವರ ನೆನಪಿನ ಸುರುಳಿ ಬಿಚ್ಚಿಕೊಂಡಾಗ,

ಛಾಯಾಗ್ರಹಣ ಕಲೆಯಲ್ಲಿ ಕೆಲಸ ಮಾಡಿದ ಹಲವು ತಂತ್ರಜ್ಞರ ಪರಿಚಯವಾಗುತ್ತದೆ. ಅದರ ಸಂಕ್ಷಿಪ್ತ ರೂಪ ಇಲ್ಲಿದೆ :

ಆರಂಭದ ದಿನಗಳಲ್ಲಿ ಫ್ರೀ ಲಾನ್ಸ್ ಛಾಯಾಗ್ರಾಹಕರು ಇರಲಿಲ್ಲ ಎನ್ನಬಹುದು. ಸ್ಟುಡಿಯೋಗಳಲ್ಲಿ ಅವರದೇ ಯಂತ್ರೋಪಕರಣಗಳಿದ್ದವು. ತಂತ್ರಜ್ಞರು ಅಲ್ಲಿ ಮಾಸಿಕ ವೇತನದ ಮೇಲೆ ಖಾಯಂ ಉದ್ಯೋಗಿಗಳಾಗಿರುತ್ತಿದ್ದರು. ಅವರಲ್ಲಿ ಬಹಳಷ್ಟು ಮಂದಿ ಯಾವುದೇ ವಿದ್ಯಾಲಯದಲ್ಲೂ ಕಲಿತವರಾಗಿರಲಿಲ್ಲ. ಕೆಲಸ ಮಾಡುತ್ತಾ ಮಾಡುತ್ತಾ ಕಲಿತವರು. ಸ್ಟುಡಿಯೋಗಳಲ್ಲಿ ಅವರೇ ಛಾಯಾಗ್ರಹಣ ಕಾರ್ಯ ನಿರ್ವಹಿಸುತ್ತಿದ್ದರು. ಕೆಲವೊಮ್ಮೆ ಮುಂಬಯಿ, ಕಲ್ಕತ್ತಾಗಳಿಂದ ನುರಿತವರನ್ನು ಕರೆಸಿಕೊಳ್ಳಲಾಗುತ್ತಿತ್ತು. ಅವರಿಗೆ ಸಹಾಯಕರಾಗಿ ಅವರೊಂದಿಗೆ ಕೆಲಸ ಮಾಡುತ್ತಾ ಕಲಿತವರು ಎಷ್ಟೋ ಮಂದಿ ಇಂದು ಕುಶಲ ತಂತ್ರಜ್ಞರೆನಿಸಿದ್ದಾರೆ.

ಅದು ಬ್ರಿಟಿಷರು ಆಳುತ್ತಿದ್ದ ಕಾಲ. ಪುಣೆ ಮತ್ತು ಕಲ್ಕತ್ತಾದ ಸ್ಟುಡಿಯೋಗಳಲ್ಲಿನ ಕೆಲವರನ್ನು ಬಿಟ್ಟರೆ, ವಿದೇಶಿ ತಂತ್ರಜ್ಞರೇ ಹೆಚ್ಚಾಗಿದ್ದರು. ದಕ್ಷಿಣ ಭಾರತದಲ್ಲಿ ಛಾಯಾಗ್ರಹಣದಲ್ಲಿ ಹೆಸರಾದ ವಿ.ಎನ್.ರೆಡ್ಡಿಯವರು ನಲವತ್ತರ ದಶಕದಲ್ಲಿದ್ದವರು. ಹೆಚ್.ಎಂ.ರೆಡ್ಡಿಯವರ ಜೊತೆ ಇದ್ದು ಕೆಲಸ ಮಾಡಿದವರು. ಅತಿ ಹೆಚ್ಚು ಸಂಭಾವನೆ ಪಡೆದ ತಂತ್ರಜ್ಞರು. ಹಾಗೆಯೇ ಡಬ್ಲ್ಯು.ಆರ್.ಸುಬ್ಬರಾವ್ ಇನ್ನೊಬ್ಬ ಪರಿಣತ ಛಾಯಾಗ್ರಾಹಕರು. ಇವರು ಕನ್ನಡಿಗರು. ಮಿಚೆಲ್ ಕ್ಯಾಮರಾ ಎಂದರೆ ಇವರಿಗೆ ಒಂದು ಆಟಿಕೆ. ಕ್ಯಾಮರಾ ಚಾಲನೆ, ಬೆಳಕಿನ ವಿನ್ಯಾಸ, ಸಂಕಲನದ ನಂತರದ ಎಫೆಕ್ಟ್‌ಗಳನ್ನು ಕೂಡ ಇವರೇ ನಿರ್ವಹಿಸುತ್ತಿದ್ದರು. ಕೆಲವು ತೆಲುಗು ಚಿತ್ರಗಳನ್ನು ನಿರ್ದೇಶಿಸಿಯೂ ಇದ್ದರು. ಬಿ.ಆರ್.ಪಂತುಲು ಅವರು ವಾಹಿನಿ ಸ್ಟುಡಿಯೋವಿನ ಎರಡು ಫ್ಲೋರುಗಳನ್ನು ಗುತ್ತಿಗೆಗೆ ಪಡೆದು ಚಿತ್ರೀಕರಣ ಪ್ರಾರಂಭಿಸಿದಾಗ ಡಬ್ಲ್ಯು.ಆರ್.ಸುಬ್ಬರಾಯರೇ ಆ ಚಿತ್ರಗಳ ಛಾಯಾಗ್ರಾಹಕರಾಗಿದ್ದರು. ವಿಜಯ-ವಾಹಿನಿಯಲ್ಲಿ ಮಾರ್ಕಸ್ ಬಾರ್ಟ್ಲೆ ಎಂಬ ಛಾಯಾಗ್ರಾಹಕರಿದ್ದರು. ಯಾವುದೇ ಮೂವೀ ಕ್ಯಾಮರಾ ಕೆಟ್ಟು ನಿಂತರೂ ದುರಸ್ತಿಗೆ ಇವರೇ ಬೇಕಾಗುತ್ತಿತ್ತು. ಅಂತಹ ಪರಿಣತ ತಂತ್ರಜ್ಞರು. ಹಲವು ಹೆಸರಾಂತ ಚಿತ್ರಗಳ ಛಾಯಾಗ್ರಾಹಕರೂ ಕೂಡ. ರಾಜಕುಮಾರ್ ಅಭಿನಯದ 'ಸತ್ಯ ಹರಿಶ್ಚಂದ್ರ', 'ಮದುವೆ ಮಾಡಿ ನೋಡು' ಮತ್ತಿತರ ಚಿತ್ರಗಳ ಛಾಯಾಗ್ರಾಹಕರಾದ ಮತ್ತೊಬ್ಬ ಹಿರಿಯ ಪ್ರತಿಭಾವಂತ ರೆಹಮಾನ್, ವಿಜಯಾ ಸಂಸ್ಥೆಯ ಖಾಯಂ ಛಾಯಾಗ್ರಾಹಕರೆನ್ನಬಹುದು. ನಂತರದಲ್ಲಿ ಮದರಾಸಿನ ಬೇರೆ ಬೇರೆ ಸ್ಟುಡಿಯೋಗಳಲ್ಲಿಯೂ ದುಡಿದರು. ಎ.ವಿ.ಎಂ.ನಲ್ಲಿ ಮುತ್ತು ಎಂಬುವವರು ಛಾಯಾಗ್ರಾಹಕರಾಗಿದ್ದು, ಇವರ ಬಳಿ ಆರ್.ಎನ್.ಕೃಷ್ಣಪ್ರಸಾದ್ ಸಹಾಯಕರಾಗಿ ಕೆಲಸ ಮಾಡಿದವರು.

ಇಲ್ಲಿ ಒಂದು ರೀತಿಯಲ್ಲಿ ಅವರವರದೇ ಶೈಲಿ ಬೆಳೆಯಿತು ಅನ್ನಬಹುದು. ಹೆಚ್.ಎಂ.ರಡ್ಡಿಯವರ ತಂಡದಲ್ಲಿ ಸಹಾಯಕರಾಗಿದ್ದ ಡಿ.ವಿ.ರಾಜಾರಾಂ, ಆರ್.ಚಿಟ್ಟಿಬಾಬು, ಎಸ್.ವಿ.ಶ್ರೀಕಾಂತ್, ಆರ್.ಮಧುಸೂದನ್, ವಿ.ಮನೋಹರ್ ಆ ಪರಂಪರೆಗೆ ಸೇರಿದವರು. ಡಬ್ಲ್ಯು.ಆರ್.ಸುಬ್ಬರಾವ್ ಅವರ ಗರಡಿಯಿಂದ ಬಂದವರು ಕರ್ಣನ್, ಸುಂದರಬಾಬು, ನಮಶ್ಶಿವಾಯಂ ಮುಂತಾದವರು. ಹಾಗೆಯೇ ವಿ.ಎನ್.ರೆಡ್ಡಿಯವರಲ್ಲಿ ಕಲಿತು ಬಂದವರಲ್ಲಿ ಎನ್.ಜಿ.ರಾವ್ ಪ್ರಮುಖರು. ನಮ್ಮಲ್ಲಿ ಮಹಿಳಾ ಛಾಯಾಗ್ರಾಹಕರು ತೀರಾ ಕಡಿಮೆ. ಅಲ್ಲೊಂದು ಇಲ್ಲೊಂದು ಎಂಬಂತೆ ಮಹಿಳೆಯರು ಈ ಕ್ಷೇತ್ರದಲ್ಲಿ ಕಾಣಬಂದಿದ್ದಾರೆ. ಬಿ.ಆರ್.ಪಂತುಲು ಅವರ ಮಗಳು ವಿಜಯಲಕ್ಷ್ಮಿ ಇನ್‌ಸ್ಟಿಟ್ಯೂಟ್‌ನಿಂದ ತರಬೇತಿ ಪಡೆದು ಬಂದ ಛಾಯಾಗ್ರಾಹಕಿ. ಈಕೆ 'ಡಿಸೆಂಬರ್ ೩೧' ಚಿತ್ರದಲ್ಲಿ ಛಾಯಾಗ್ರಾಹಕರಾಗಿ ಕೆಲಸ ಮಾಡಿದ್ದಾರೆ. ಒಂದೊಂದು ಗರಡಿಯಿಂದ ಬಂದ ಈ ಛಾಯಾಗ್ರಾಹಕರಿಗೆ ಅವರದೇ ಆದ ಪ್ರತ್ಯೇಕ ಶೈಲಿ ಇರುವ ಸಾಧ್ಯತ ಇದೆ.

ಮುಂಬೈನಲ್ಲಿದ್ದ ಬಿ.ಎಸ್.ರಂಗಾ ಅವರು ಮದರಾಸಿಗೆ ಬಂದು ಛಾಯಾಗ್ರಹಣ ನಿರ್ವಹಿಸಲಾರಂಭಿಸಿದ್ದು ೧೯೫೪ರಿಂದೀಚೆಗೆ. ಅದಕ್ಕೂ ಮೊದಲು ಮೈಸೂರಿನಲ್ಲಿ ನವಜ್ಯೋತಿ ಸ್ಟುಡಿಯೋ ಆರಂಭವಾಗಿದ್ದು ಸ್ಥಳೀಯ ಪ್ರತಿಭೆಗಳು ಬೆಳಕಿಗೆ ಬರತೊಡಗಿದವು. ಆರಂಭದ ದಿನಗಳಲ್ಲಿ ಹಾಗೂ ಅನಂತರದಲ್ಲಿ ಹೊರಗಿನಿಂದ ಬಂದವರೇ ಹೆಚ್ಚು. ಮಾಧವ ಬುಲ್‌ಬುಲೇ, ಬಿ.ಡಿ.ಮಾಥೂರ್, ಬಾಬುಲ್‌ನಾಥ್ ಪುರುಷೋತ್ತಮ್, ನಿಮಾಯ್ ಘೋಷ್, ಮಧು ಅಂಬಟ್, ನಿರ್ಮಾಪಕ-ನಿರ್ದೇಶಕ-ಛಾಯಾಗ್ರಾಹಕ ಟಿ.ಜಾನಕಿರಾಮ್ ಇವರೆಲ್ಲ ಹೊರಗಿನಿಂದ ಬಂದು ಕನ್ನಡ ಚಿತ್ರೋದ್ಯಮವನ್ನು ಶ್ರೀಮಂತಗೊಳಿಸಿದವರೇ. ೧೯೫೭ರಲ್ಲಿ ಆರೂರು ಪಟ್ಟಾಭಿಯವರ ನಿರ್ದೇಶನದ 'ಭಕ್ತ ವಿಜಯ' ಚಿತ್ರದಲ್ಲಿ ಆರ್.ಸಂಪತ್‌ರೊಂದಿಗೆ ಛಾಯಾಗ್ರಹಣ ವಿಭಾಗದಲ್ಲಿ ಕೆಲಸ ಮಾಡಿದ ಕೆ.ಜಾನಕಿರಾಮ್ ನಂತರದಲ್ಲಿ ಆರೂರು ಪಟ್ಟಾಭಿಯವರ ನಿರ್ದೇಶನದ ಹಲವು ಚಿತ್ರಗಳಿಗೆ ಛಾಯಾಗ್ರಹಣ ಮಾಡಿದರು. ನಂತರದಲ್ಲಿ ನಿರ್ಮಾಣ-ನಿರ್ದೇಶನಗಳನ್ನೂ ಮಾಡಿದರು.

ಕರ್ನಾಟಕ ಸರ್ಕಾರ ಕನ್ನಡ ಚಿತ್ರಗಳಿಗೆ ಸವಲತ್ತುಗಳನ್ನು ಒದಗಿಸಲು ಆರಂಭಿಸುವವರೆವಿಗೂ ಕನ್ನಡ ಚಿತ್ರ ಛಾಯಾಗ್ರಹಣ ಕ್ಷೇತ್ರದಲ್ಲಿ ಇಲ್ಲಿಯವರೂ ಇದ್ದರು; ಹೊರಗಿನವರೂ ಬಂದು ಹೋಗುತ್ತಿದ್ದರು. ಆಗ ಕಪ್ಪು-ಬಿಳುಪು ಚಿತ್ರಗಳೇ ಅಧಿಕ. ಸ್ಟುಡಿಯೋಗಳಲ್ಲೇ ಚಿತ್ರೀಕರಣ, ತಾಂತ್ರಿಕವಾಗಿ ಕ್ರಿಯೇಟಿವ್ ಅನ್ನುವ ಚಿಂತನೆ ಇನ್ನೂ ಇರಲಿಲ್ಲ. ಆಗಲೂ ಮೂಡ್ ಲೈಟ್, ಡೇ ಲೈಟ್, ಎಫೆಕ್ಟ್ ಎಲ್ಲ ಇತ್ತು. ಎಲ್ಲವೂ ನೋಡಿ ಕಲಿತದ್ದು. ಕೆಲವು ಮಕ್ಕಿಕಾಮಕ್ಕಿ - ಲೆಕ್ಕಾಚಾರ ಅಷ್ಟೇ. ಅದೇ ಮಹಾ ಸಾಹಸ. ಅದು ಮಾಲೀಕ ನಿಷ್ಠೆಯ ಕಾಲ, ಮಾಧ್ಯಮದಲ್ಲಿ ಪರಸ್ಪರ ಸಹಾಯ-ಸಹಕಾರ ಪ್ರವೃತ್ತಿ, ಕಾಯಕದ ಮೂಲಕ ಕಲಿಕೆ. ಈ ಸಹಾಯ-ಸಹಕಾರ ಮನೋಧರ್ಮದಿಂದಾಗಿಯೇ ಕು.ರ.ಸೀತಾರಾಮಶಾಸ್ತ್ರಿ ಮತ್ತು ಬೊಮ್ಮನ್ ಡಿ.ಇರಾನಿ ಇವರ ಸಹಯೋಗವಿದ್ದುದು.

ಪುಟ್ಟಣ್ಣ ಕಣಗಾಲ್ ಬಂದರು, ಹೊರಾಂಗಣಕ್ಕೆ ಕ್ಯಾಮರಾ ಬಂತು - ವಿಭಿನ್ನ ರೀತಿಯಲ್ಲಿಯೇ ಬಂತು. ಸಿನಿಮಾ ನಿರ್ದೇಶಕನ ಮಾಧ್ಯಮ ಆದ ದಿನಗಳವು. 'ನಾಂದಿ', 'ಬೆಳ್ಳಿಮೋಡ', 'ಶರಪಂಜರ'ದಂತಹ ಚಿತ್ರಗಳಾದವು. ಕ್ಯಾಮರಾದಲ್ಲಿ ಅವರೆಗೆ ಇದ್ದ ಮೆಲೋಡ್ರಾಮ, ಕಾಮಿಡಿ, ಮಿಥ್, ಸರ್ಕಸ್‌ಗಳ ಆಚೆಗೆ ಇನ್ನೂ ಏನೋ ಸಾಧ್ಯ ಅಂತ ತಿಳಿಯಿತು. ಅವರಿಂದ ಇವರೂ - ಇವರಿಂದ ಅವರೂ ಗ್ರಹಿಸಿದರು. ಛಾಯಾಗ್ರಾಹಕರ ಕಾರ್ಯ ವಿಧಾನದಲ್ಲಿ ಶಿಕ್ಷಣ, ಪರಿಶ್ರಮ, ಕಂಡದನ್ನು ಸರಿಯಾಗಿ ಗ್ರಹಿಸಿ ಅಳವಡಿಸುವ ರೀತಿ ಎಲ್ಲವೂ ಇದ್ದವು. ಛಾಯಾಗ್ರಹಣದ ಪ್ರಾಮುಖ್ಯ ಬೆಳೆಯಿತು. ಕನ್ನಡಾಭಿಮಾನ ಮೂಡಿದ ಕಾಲ, ಕನ್ನಡದ ನೆಲ-ಜಲ-ವಾತಾವರಣ ಸೆರೆ ಹಿಡಿಯುವಾಗ ಇದೆಲ್ಲ ಕೆಲಸ ಮಾಡಿತು. ಹಿಂದಿನ ಚಿತ್ರಗಳಲ್ಲಿ ತಾಂತ್ರಿಕತೆಯ ಹೆಚ್ಚುಗಾರಿಕೆ ಕಾಣದಿದ್ದರೂ ಶ್ರೀಮಂತವಾಗಿರುತ್ತಿದ್ದವು. ಛಾಯಾಗ್ರಹಣ ಸಾಂಪ್ರದಾಯಿಕ. ಸ್ಕಿಲ್ ಇಲ್ಲದಿದ್ದರೂ ಕಾಂಪ್ರೊಮೈಸ್ ಇರುತ್ತಿತ್ತು.

ಪುಣೆಯ ಫಿಲಂ ಇನ್‌ಸ್ಟಿಟ್ಯೂಟ್‌ನಿಂದ ಬಂದವರು ತಾಂತ್ರಿಕತೆ ತಿಳಿದಿದ್ದರು. ಅಲ್ಲಿ ಎಲ್ಲ ವಿಭಾಗ ಕಲಿಯಬೇಕಿತ್ತು. ನಿರ್ದೇಶಕನಾದವನಿಗೆ ಎಲ್ಲ ವಿಷಯಗಳಲ್ಲೂ ನಿಯಂತ್ರಣವಿದ್ದು, ಹೊಸ ಆವಿಷ್ಕಾರಗಳಿಗೆ, ತಂತ್ರಜ್ಞರ ಪ್ರತಿಭಾ ಪ್ರಕಾಶಕ್ಕೆ ಸಹಾಯಕವಾಯಿತು.

ಸ್ಟುಡಿಯೋಗಳಲ್ಲಿ ಹಿರಿಯ ಛಾಯಾಗ್ರಾಹಕರಿಗೆ ಸಹಾಯಕರಾಗಿದ್ದವರಿಗೆ ಮಿತಿಗಳನ್ನು ದಾಟಿ ಸ್ವತಂತ್ರವಾಗಿ ಕೆಲಸ ಮಾಡುವ ಆಸೆ ಇತ್ತು. ಅದೇ ಸಂದರ್ಭದಲ್ಲಿ ಪುಟ್ಟಣ್ಣನವರಂತಹ ನಿರ್ದೇಶಕರು ಅವರುಗಳಿಗೆ ಅವಕಾಶ ಕಲ್ಪಿಸಿದರು. ಹೀಗೆ ನಿರ್ದೇಶಕರು-ಛಾಯಾಗ್ರಾಹಕರು ಪರಸ್ಪರ ಬೋಲ್ಡ್ ಆದರು ಎನ್ನಬಹುದು. ಕಲ್ಪನೆಗಳು, ಆ ಮೂಲಕ ಹೊಸ ಅರ್ಥ - ಹೊಸ ಚಿಂತನೆಗಳು ನಡೆಯಲು ಸಾಧ್ಯವಾಯಿತು. ಕಪ್ಪು-ಬಿಳುಪು ಚಿತ್ರಗಳ ಕಾಲದಲ್ಲಿ ಅನೇಕ ಛಾಯಾಗ್ರಾಹಕರು ಆ ತಾಂತ್ರಿಕ ಕಲೆಯಲ್ಲಿ ತಮ್ಮ ಕೌಶಲವನ್ನು ಮೆರೆಸಿದರು. ಅವರಲ್ಲಿ ದೊರೈ (ಬಿ.ದೊರೈರಾಜ್), ಶ್ರೀಕಾಂತ್, ಡಿ.ವಿ.ರಾಜಾರಾಂ, ಚಿಟ್ಟಿಬಾಬು, ಮಧು, ಅಣ್ಣಯ್ಯ ಮೊದಲಾದವರು ಖ್ಯಾತರು.

ಹಿಂದೆ ಸ್ಟುಡಿಯೋದಲ್ಲೇ ಮಳೆಯ ಸನ್ನಿವೇಶ ಚಿತ್ರಿಸುತ್ತಿದ್ದರು. ಆದರೆ ಅದೊಂದು ಫ್ರೇಮ್ ಆಗಿರುತ್ತಿತ್ತು. ಸೋರ್ಸ್ ಗಮನಿಸುತ್ತಿರಲಿಲ್ಲ. ಹಣತೆ, ಲಾಟೀನು, ಎಲೆಕ್ಟ್ರಿಕ್ ದೀಪ ಬಳಸಿದರೆ ಅದೇ ನೈಟ್ ಎಫೆಕ್ಟ್. ಕಲಾವಿದರಿಗೆ ಮಾತ್ರ ಲೈಟಿಂಗ್, ಉಳಿದಂತೆ ಕಪ್ಪು - ಕತ್ತಲು. ಅರುವತ್ತರ ದಶಕದಿಂದ ಹೊಸತನ ಆರಂಭವಾಯಿತು. ಹೊರಗಿನ ಲೈಟಿಂಗ್ ಶುರು ಆಯಿತು. ನಮ್ಮ ಛಾಯಾಗ್ರಾಹಕರು ಮೀಟರ್ ಇಲ್ಲದೆ ಲೈಟಿಂಗ್ ಮಾಡುವಷ್ಟು ಪರಿಣತರಾದರು. ಎಲ್ಲ ಕಣ್ಣಳತೆ. ಈಗ ಎಲ್ಲ ಸುಲಭ ಆಗಿದೆ. ಫಿಲಂ ನೆಗಟಿವ್‌ನಲ್ಲಿ ಬಣ್ಣ ಬಂದ ಮೇಲಂತೂ ಹೆಚ್ಚಿನ ಸುಧಾರಣೆ ಆಗಿದೆ. ಕ್ಯಾಮರಾಗಳಲ್ಲೂ ಸುಧಾರಣೆ ಬಂದಿತು. ಹಿಂದೆ ಮಿಚೆಲ್ ಬೃಹತ್ ಕ್ಯಾಮರಾವನ್ನು ಕ್ರೇನ್‌ಗೆ ಕಟ್ಟಿ ಚಿತ್ರಿಸಬೇಕಾಗಿತ್ತು. ಆ್ಯರಿ ಬಂದ ಮೇಲೆ ತಾಪತ್ರಯ ತಪ್ಪಿದೆ.

ಛಾಯಾಗ್ರಾಹಕರು ಚಿತ್ರಿಕೆಗಳನ್ನು ಚಿತ್ರಿಸಿಕೊಳ್ಳುವಾಗ ಬೇರೆ ಬೇರೆ ಎಕ್ಸ್‌ಪೋಷರ್‌ಗಳನ್ನು ಬಳಸಬೇಕಾಗುತ್ತದೆ. ಹಗಲನ್ನು ರಾತ್ರಿಯಾಗಿ ಚಿತ್ರಿಸಬೇಕಾಗುತ್ತದೆ. ಇಂತಹ ಪ್ರಯೋಗ, ಪ್ರಯತ್ನಗಳು ನಡೆಯುತ್ತಿರುತ್ತವೆ. ಚಿತ್ರದ ರೀಲುಗಳನ್ನು ಸಂಸ್ಕರಣಕ್ಕೆ

ಕಳುಹಿಸುವಾಗ ಛಾಯಾಗ್ರಾಹಕರು ಆ ಬಗ್ಗೆ ವಿವರಗಳನ್ನು ಲ್ಯಾಬ್‌ನಲ್ಲಿನ ತಂತ್ರಜ್ಞರಿಗೆ ತಿಳಿಯುವಂತೆ ಬರೆದು ಕಳುಹಿಸುವುದು ಮತ್ತು ಪ್ರಿಂಟ್ ತೆಗೆಯುವಾಗ ತಾವೇ ಹಾಜರಿದ್ದು ಗ್ರೇಡಿಂಗ್ ವಿವರಗಳನ್ನು ನೀಡಿ ತಮ್ಮ ಛಾಯಾಗ್ರಹಣ ಸೌಂದರ್ಯವನ್ನು ಕಾಪಾಡಿಕೊಳ್ಳುವುದು ವಾಡಿಕೆ.

ಹಿಂದೆಲ್ಲಾ ಸನ್ನಿವೇಶದಿಂದ ಸನ್ನಿವೇಶಕ್ಕೆ ಕಥೆಯ ಅಗತ್ಯವನ್ನು ಅನುಸರಿಸಿ ಬದಲಾಗುವಾಗ ಮಿಕ್ಸ್, ಡಿಸಾಲ್ವ್, ಫೇಡ್ ಇನ್ - ಫೇಡ್ ಔಟ್ ಮುಂತಾದ ತಂತ್ರಗಳನ್ನು ಬಳಸಲಾಗುತ್ತಿತ್ತು. ಈಚೆಗೆ ಕಟ್-ಟು-ಕಟ್ ತಂತ್ರ ಬಳಕೆಗೆ ಬಂದ ನಂತರ ಹಿಂದಿನ ನಿಯಮಗಳು ಅಸ್ತಿತ್ವ ಕಳೆದುಕೊಂಡವು. ಹಾಗೆಯೇ ಕ್ಯಾಮರಾದಲ್ಲಿ ಬಳಸಲಾಗುವ ಲೆನ್ಸ್‌ಗಳಲ್ಲಿಯೂ ಬಹಳಷ್ಟು ಸುಧಾರಣೆಗಳಾಗಿವೆ. ಹೊಸ ಹೊಸ ಆವಿಷ್ಕಾರಗಳಾಗುತ್ತಲೇ ಇವೆ. ಕ್ಯಾಮರಾಗಳಲ್ಲಿಯೂ ಸುಧಾರಣೆಗಳಾಗುತ್ತಿರುತ್ತವೆ.

ಅರುವತ್ತರ ನಂತರದಲ್ಲಿನ ಕನ್ನಡ ಚಿತ್ರಗಳ ಛಾಯಾಗ್ರಾಹಕರುಗಳಲ್ಲಿ ಹಲವರು ಇನ್‌ಸ್ಟಿಟ್ಯೂಟ್‌ಗಳಲ್ಲಿ ತರಬೇತಿ ಪಡೆದು ಬಂದವರು. ಇವರು ಹೊಸ ಅಲೆಯ ಚಿತ್ರಗಳಲ್ಲಿ ಕೆಲಸ ಮಾಡಿದರಲ್ಲದೆ, ವ್ಯಾಪಾರೀ ಚಿತ್ರಗಳಲ್ಲಿಯೂ ದುಡಿದವರು. ಇನ್‌ಸ್ಟಿಟ್ಯೂಟ್‌ನಿಂದ ಬಂದವರು ಮತ್ತು ಪರಿಣತರ ಬಳಿ ಕೆಲಸ ಕಲಿತವರು ಎಲ್ಲರೂ ತಮ್ಮ ಪ್ರತಿಭೆ ಹಾಗೂ ಕೌಶಲಗಳಿಂದ ಕನ್ನಡ ಚಿತ್ರರಂಗವನ್ನು ಶ್ರೀಮಂತಗೊಳಿಸಿದ್ದಾರೆ.

ಅಣ್ಣಯ್ಯ-ಮಲ್ಲಿಕ್, ಅಶೋಕ್ ಚೌಧರಿ, ಆದಿ ಇರಾನಿ, ಆರ್.ಆರಾಧ್ಯ, ಅಶೋಕ್ ಕಶ್ಯಪ್, ಅಬ್ದುಲ್ ರೆಹಮಾನ್, ಅನಿಲ್ ಸೈಗಾಲ್, ಅಶೋಕ್ ನಾಯ್ಡು, ಕೆ.ಆನಂದ್, ಅಲ್ಲಂ ರಾಮಮೋಹನ್, ಎಂ.ಎ.ಎನ್.ಅಯ್ಯಂಗಾರ್, ಬೊಮ್ಮನ್ ಡಿ.ಇರಾನಿ, ಬಾಬುಲ್‌ನಾಥ್ ಪುರುಷೋತ್ತಮ್ ವಾಲ್ಕೆ, ಬರೂಣ್ ಮುಖರ್ಜಿ, ಬಾಲು ಮಹೇಂದ್ರ, ಇ.ಎನ್.ಬಾಲಕೃಷ್ಣ, ಬೇಯಾಜ್, ಬಾಬುಲಾಲ್, ಬಿ.ಎಸ್.ಬಸವರಾಜ್, ಎಸ್.ಆರ್.ಭಟ್, ಕೆ.ಬಾಲು, ಐ.ಬಾರ್ಗೀರ, ಎ.ಕೆ.ಬೀರ್, ಜಿ.ಎಸ್.ಭಾಸ್ಕರ್, ಬಾಲಕೃಷ್ಣ, ಎಂ.ಬಾಬು, ಎಂ.ಜಿ.ಬೆಂಜಮಿನ್, ಬಾಷಾ ಲಾಲ್, ಟಿ.ವಿ.ಬಾಲು, ಬಾಜ್ಜಿ, ಆರ್.ಚಿಟ್ಟಿಬಾಬು, ಕೆ.ಎಸ್.ಚಂದ್ರಕುಮಾರ್, ಪಿ.ಚಂದ್ರಶೇಖರ್, ಡಿ.ಬಿ.ಚವ್ಹಾಣ್, ಜಿ.ಚಂದ್ರನ್, ಎಸ್.ಎಸ್.ಚಂದ್ರಮೋಹನ್, ಪಿ.ಚಂದ್ರಕುಮಾರ್, ವಿ.ಚಂದ್ರಶೇಖರ್, ಡಬ್ಲ್ಯು.ಆರ್.ಚಂದ್ರನ್, ಯು.ದ್ವಾರಕಾನಾಥ್, ಆರ್.ದೇವಿಪ್ರಸಾದ್, ಬಿ.ದೂರೈರಾಜ್, ದಿನೇಶ್ ಬಾಬು, ದೇವರಾಜ್, ಜಿ.ದೊರೈ, ಪಿ.ದತ್ತಾತ್ರೇಯ, ಪಿ.ಕೆ.ಹೆಚ್.ದಾಸ್, ಫ್ರಾನ್ಸಿಸ್, ಬಿ.ಸಿ.ಗೌರಿಶಂಕರ್, ಕೆ.ಎಸ್.ಗೋವಿಂದಸ್ವಾಮಿ, ಆರ್.ಗಿರಿ, ವಿ.ಸಿ.ಗಣೇಶ್, ಬಿ.ಎನ್.ಹರಿದಾಸ್, ಹೇಮಚಂದ್ರನ್, ಹರಿ ಅನ್‌ಮೋಲ್, ಇಷಾನ್ ಆರ್ಯ, ಟಿ.ಜಾನಕೀರಾಮ್, ಕೆ.ಜಾನಕೀರಾಮ್, ಟಿ.ಜನಾರ್ಧನ್, ಜಾನಿಲಾಲ್, ಜಾನ್ ದೇವರಾಜ್, ಜತಿನ್ ಬ್ಯಾನರ್ಜಿ, ಜಯರಾಂ, ವಿ.ಕೆ.ಕಣ್ಣನ್, ಕಬೀರ್ ಲಾಲ್, ಕರುಣಾಕರರಾವ್, ಆರ್.ಎನ್.ಕೃಷ್ಣಪ್ರಸಾದ್, ಕುಲಶೇಖರ್, ಜೆ.ಜಿ.ಕೃಷ್ಣ, ಎ.ವಿ.ಕೃಷ್ಣಕುಮಾರ್, ಕೈಲಾಷ್ ಅಫಣೆ, ಪಿ.ವಿ.ಕೃಷ್ಣ ಅಯ್ಯರ್, ಡಿ.ಎಸ್.ಕೋಟ್ನಿಸ್, ಪಿ.ಕೃಷ್ಣನ್, ಕುಮಾರ್

(ಚಿತ್ರ ೨೩) ಹೊರಾಂಗಣ ಚಿತ್ರೀಕರಣ

ಜಯಂತ್, ಎಂ.ಕರ್ಣನ್, ವಿ.ಕೃಷ್ಣನ್, ವಿ.ಲಕ್ಷ್ಮಣ್, ಬಿ.ಲೋಕೇಶ್, ಲೋಕ್ ಸಿಂಗ್, ಬಿ.ಎಸ್.ಲೋಕನಾಥ್, ವಿ.ಕೆ.ಲಿಂಗಮ್, ಎಂ.ಎಸ್.ಮಣಿ (ಡೆಪ್ರಿ ಮಣಿ), ಎಸ್.ಮಾರುತಿರಾವ್, ಜಿ.ಕೆ.ಮೆಹ್ತಾ, ಬಿ.ಡಿ.ಮಾಥೂರ್, ಎಸ್.ಆರ್.ಕೆ.ಮೂರ್ತಿ, ಮಾಧವ ಬುಲ್‌ಬುಲೆ, ವಿ.ಕೆ.ಮೂರ್ತಿ, ಹೆಚ್.ಎಂ.ಕೆ.ಮೂರ್ತಿ, ವಿ.ಮನೋಹರ್, ಆರ್.ಮಧುಸೂದನ್, ಕೆ.ಮಲ್ಲಿಕ್, ಮಲ್ಲಿಕಾರ್ಜುನ, ಆರ್.ಸಿ.ಮಾಪಾಕ್ಷಿ (ರಾಜೇಂದ್ರ ಮಾಪಾಕ್ಷಿ), ಮಧು ಅಂಬಟ್, ಟಿ.ಮುತ್ತುಸ್ವಾಮಿ, ಆರ್.ಮಂಜುನಾಥ್, ಸಿ.ಜೆ.ಮೋಹನರಾವ್, ಎಂ.ಮುತ್ತುರಾಜ್, ಮೀನಾಕ್ಷಿ ಸುಂದರಂ, ಕೆ.ಎಸ್.ಮಣಿ, ಕೆ.ಕೆ.ಮೆನನ್, ಎಸ್.ಎನ್.ಬಿ.ಮೂರ್ತಿ, ಸಿ.ವಿ.ಮಧುಸೂದನ್, ಮದನ್ ಮೋಹನ್, ಮೋಹನ್ ಕೃಷ್ಣ, ಸಿ.ಮನೋಹರ್, ಸಿ.ಮಹೇಂದ್ರನ್, ಬಿ.ಕೆ.ಮೂರ್ತಿ, ಕೆ.ಮುತ್ತುಸ್ವಾಮಿ, ಎಸ್.ಕೆ.ನಟರಾಜನ್, ಜಿ.ಆರ್.ನಾದನ್, ಪಿ.ಎಲ್.ನಾಗಪ್ಪ, ನಿಮಾಯ್ ಘೋಷ್, ವಿ.ನಟರಾಜ್, ನಾಗೇಂದ್ರ ಶಾಯಿ, ನಾಗೇಂದ್ರ ಕುಮಾರ್, ಡಿ.ಪ್ರಸಾದ್ ಬಾಬು, ಕೆ.ಪ್ರಭಾಕರ್, ಪದ್ಮ ಕುಮಾರ್, ಪಿ.ಎಸ್.ಪ್ರಕಾಶ್, ಎ.ಎನ್.ಪರಮೇಶ್, ಪುರೋಹಿತ್, ಎಸ್.ಪ್ರಕಾಶ್, ಪಾರ್ಥಸಾರಥಿ, ಪ್ರತಾಪ್ ದವೆ, ವಿ.ಪ್ರತಾಪ್, ಪ್ರಕಾಶರಾವ್, ಎನ್.ಜಿ.ರಾವ್, ಎಸ್.ರಾಮಚಂದ್ರ, ಹೆಚ್.ಜಿ.ರಾಜು, ಬಿ.ಎಸ್.ರಂಗಾ, ಆರ್.ರಾಮಮೂರ್ತಿ, ಎಂ.ಎಸ್.ರಾಜಪ್ಪನ್, ಪಿ.ರಾಜನ್, ಡಿ.ವಿ.ರಾಜಾರಾಮ್, ರವಿಕಾಂತ್ ನಗಾಯಿಚ್, ಯು.ರಾಜಗೋಪಾಲ್, ರಮೇಶ್ ಬಾಬು, ಜಿ.ಕೆ.ರಾಮು. ರವಿ ಬಾಬು, ವಿ.ರಾಮಮೂರ್ತಿ, ಎಂ.ಎ.ರವೀಂದ್ರ, ಸಿ.ಡಿ.ರಾಜು, ಕೆ.ರಾಮಚಂದರ್, ಎನ್.ಎಸ್.ರಾಜು, ಡಿ.ವಿ.ರಮಣ, ಎಂ.ಇ.ರಾಜ್, ರವೀಂದ್ರನ್, ಎಂ.ರಾಜೇಂದ್ರ, ಎಂ.ರಾಮು, ಹೆಚ್.ಎಂ.ರಾಮಚಂದ್ರ (ಹಾಲ್ಕೆರೆ), ರವಿ ಯಾದವ್, ರಘುನಾಥ್, ಪಿ.ರಂಗನ್, ಎಂ.ಕೆ.ರಾಜು, ಎಂ.ಸಿ.ಶೇಖರ್, ಎಸ್.ಕೆ.ಸತೀಶ್, ಎ.ಸುರೇಶ್ ಬಾಬು, ಕೆ.ಸುಂದರನಾಥ ಸುವರ್ಣ, ಡಬ್ಲ್ಯು.ಆರ್.ಸುಬ್ಬರಾವ್, ಎಸ್.ವಿ.ಶ್ರೀಕಾಂತ್, ಬಿ.ಎಸ್.ಶಾಸ್ತ್ರಿ, ಟಿ.ಜಿ.ಶೇಖರ್, ಬಿ.ಸುಬ್ಬರಾವ್, ಆರ್.ಸಂಪತ್, ಜೆ.ಸತ್ಯನಾರಾಯಣ, ಸನ್ನಿ ಜೋಸೆಫ್, ಜಿ.ಎಸ್.ವಿ.ಸೀತಾರಾವ್, ಸಂಜೀವಿ, ಬಿ.ಸತ್ಯನಾರಾಯಣ ಸಿಂಗ್, ಯು.ಎಂ.ಎನ್.ಷರೀಫ್, ಟಿ.ಜಿ.ಶೇಖರ್, ಸಾಂಬಶಿವರಾವ್, ಪಿ.ಎಸ್.ಸುಂದರಂ, ಶ್ರೀರಂಗಾ, ಶೈಲೇನ್ ಬೋಸ್, ಸುಂದರಬಾಬು, ಶಂಕರ ಸಾವೇಕರ್, ವಿ.ಸೆಲ್ವರಾಜ್, ಸೀತಾರಾಂ, ಎ.ಷಣ್ಮುಗಂ, ಶರತ್, ಜೆ.ಇ.ಶಂಕರರಾವ್, ಸುರೇಂದ್ರರೆಡ್ಡಿ, ಎಸ್.ಸತೀಶ್, ಸುರೇಶ್ ಕಲ್ಯಾಣಿ, ವಿ.ಎನ್.ಸುರೇಶ್ ಕುಮಾರ್, ಶ್ರೀನಿವಾಸ್, ಸುರೇಂದ್ರನಾಥ್ ಬೇಗೂರು, ಸುಕುಮಾರ್, ಕೆ.ಸೋಮಶೇಖರ್, ಸಂತೋಷ್ ಕುಮಾರ್, ಸದಾನಂದ್, ಡಿ.ಟಿ.ಟೆಲಾಂಗ್, ಎಸ್.ಜೆ.ಥಾಮಸ್, ಟಾಮ್ ಕೋವನ್ (ಆಸ್ಟ್ರೇಲಿಯಾ), ಜಿ.ವಿ.ಉಮಾಪತಿ, ಬಿ.ಆರ್.ವಿಜಯಲಕ್ಷ್ಮಿ, ಜೆ.ವಿನ್ಸೆಂಟ್, ಸಿ.ವಸಂತಕುಮಾರ್, ವಿಶ್ವಂ ನಟರಾಜ್, ಕೆ.ವಾಸುದೇವ್, ವಾಸುದೇವ್ ಕರ್ನಾಟಕಿ, ಎಸ್.ಕೆ.ವರದರಾಜನ್, ಎನ್.ಎಸ್.ವರ್ಮ, ಹೆಚ್.ಎಸ್.ವೇಣು, ಎಸ್.ವಿ.ವೆಂಕಟರಾಮನ್, ವಸಂತ್, ಟಿ.ಕೆ.ವೆಂಕಟ್, ವಿಜಯಾ ನಂಜಪ್ಪ, ವಿಜಯ ರಾಘವನ್, ವೇದ ಪ್ರಭು, ಎನ್.ಕೆ.ವಿಶ್ವನಾಥನ್, ವಿಜಯಕುಮಾರ್, ವಿಜಯಗೋಪಾಲ್, ಟಿ.ಎಲ್ಲಪ್ಪ, ಯೋಗಾನಂದ್, ಯೂಸುಫ್ ಮೂಲ್ಜಿ ಮುಂತಾದವರು ಕನ್ನಡ ಚಿತ್ರಲೋಕದಲ್ಲಿ ಛಾಯಾಗ್ರಾಹಕರಾಗಿ ದುಡಿದಿದ್ದಾರೆ; ಛಾಯಾಗ್ರಹಣ ತಂತ್ರದ ಮೂಲಕ ಚಲನಚಿತ್ರ ಲೋಕದಲ್ಲಿ ಮೆರುಗು ಮೂಡಿಸಿದ್ದಾರೆ.

ಕನ್ನಡ ಚಿತ್ರರಂಗದ ಆರಂಭದ ದಿನಗಳಲ್ಲಿ ಹೊರಗಿನವರೇ ಹೆಚ್ಚಾಗಿ ಛಾಯಾಗ್ರಹಣ ನಡೆಸಿಕೊಟ್ಟಿದ್ದಾರ. ಡಿ.ಟಿ.ಟೆಲಾಂಗ್, ಆದಿ ಇರಾನಿ, ಬೊಮ್ಮನ್ ಡಿ.ಇರಾನಿ, ಅಶೋಕ್ ಚೌಧರಿ, ಅನಿಲ್ ಸೈಗಾಲ್, ಬೇಯಾಜ್, ಬರೂಣ್ ಮುಖರ್ಜಿ, ಬೆಂಜಮಿನ್, ಬಾರ್ಗೀರಾ, ಡಿ.ಬಿ.ಚವ್ಹಾಣ್, ಜತಿನ್ ಬ್ಯಾನರ್ಜಿ, ಡಿ.ಎಸ್.ಕೋಟ್ನಿಸ್, ಬಿ.ಡಿ.ಮಾಥೂರ್, ನಿಮಾಯ್ ಘೋಷ್, ಪ್ರತಾಪ್ ದವೆ, ಶೈಲೇನ್ ಬೋಸ್, ಶಂಕರ್ ಸುವೇಕರ್, ಯೂಸುಫ್ ಮೂಲ್ಜಿ ಮತ್ತಿತರರು ಮುಂಬಯಿ, ಪುಣೆ ಹಾಗೂ ಬಂಗಾಳದಿಂದ ಬಂದು ಕನ್ನಡ ಚಿತ್ರಗಳಿಗಾಗಿ ಕೆಲಸ ಮಾಡಿದ್ದಾರೆ.

ಆಸ್ಟ್ರೇಲಿಯಾದ ಟಾಮ್ ಕೋವನ್, 'ಸಂಸ್ಕಾರ' ಕನ್ನಡ ಚಿತ್ರದ ಚಿತ್ರೀಕರಣ ಸಮಯದಲ್ಲಿ ಕರ್ನಾಟಕಕ್ಕೆ ಬಂದಿದ್ದು, ಆ ಚಿತ್ರದ ಛಾಯಾಗ್ರಹಣವನ್ನು ನಿರ್ವಹಿಸಿ ನಂತರ ತಮ್ಮ ತಾಯ್ನಾಡಿಗೆ ಮರಳಿದುದು, ಇಶಾನ್ ಆರ್ಯ 'ಕಾಕನ ಕೋಟೆ' ಕನ್ನಡ ಚಿತ್ರದ ಛಾಯಾಗ್ರಹಣ ನಡೆಸಿದುದು ಹಾಗೂ ಜಿ.ಫಿಲಿಫ್ಸ್ ಎಂಬ ವಿದೇಶಿ ತಂತ್ರಜ್ಞ 'ಜಗದೀಶ್ವರಿ' ಕನ್ನಡ ಚಿತ್ರದ ಛಾಯಾಗ್ರಹಣ ನಿರ್ವಹಿಸಿದುದು ಒಂದು ವಿಶೇಷ.



ಸ್ವತಂತ್ರ ವ್ಯಕ್ತಿತ್ವದ ಶೋಧದಲ್ಲಿ

ಚಲನಚಿತ್ರ ಸಂಕಲನದ ಚರಿತ್ರೆ ಎಂದರೆ ಚಲನಚಿತ್ರದ ಚರಿತ್ರೆಯೇ. ಚಲನಚಿತ್ರಕ್ಕಾಗಿ ಛಾಯಾಗ್ರಹಿಸುವ ಪ್ರತಿ ಫ್ರೇಮುಗಳು ಸೇರಿ ಒಂದು ಭೌತಿಕ (Physical) ಚಲನೆ ಸಿಗುತ್ತದೆ. ಈ ನಿರಂತರ ಚಲನೆಯಿಂದ ಕಥೆಗೆ ಅಥವಾ ಹೇಳುತ್ತಿರುವ ವಸ್ತುವಿಗೆ ಅರ್ಥವೊಂದು ಬೌದ್ಧಿಕ ಚಲನೆಯಲ್ಲದೆ, ಕಥೆಯ ನಿರಂತರತೆ (Continuity) ಯಿಂದ ದೊರೆಯುತ್ತದೆ. ಅದರೊಂದಿಗೆ ಆ ಕಥಾ ಚಲನಗೆ ಬೇಕಾದ ಸ್ರೋತವೂ (Flow) ಸಿಗುತ್ತದೆ. ಈ ಎಲ್ಲ ವಿವರಗಳು ಸರಿಯಾಗಿದ್ದಾಗ ಅಂತಿಮ ಚಲನಚಿತ್ರ ರೂಪ ಸಿದ್ಧವಾಗುತ್ತದೆ. ಅಂದರೆ ಚಲನಚಿತ್ರ ಸಂಕಲನ ಎಂಬುದು ಚಿತ್ರವೊಂದರ ಚಿತ್ರೀಕರಣದ ನಂತರ ಪ್ರತಿ ಚಿತ್ರಿಕೆ (Shot)ಯನ್ನು ಜೋಡಿಸಿ ಇಡುವಷ್ಟಕ್ಕೇ ಸೀಮಿತವಾದುದಲ್ಲ. ಅದು ನಡೆಯುವುದು: (೧) ಕಥೆಯ ಆಯ್ಕೆಯ ಸಂದರ್ಭದಲ್ಲಿ, (೨) ಚಿತ್ರಕಥೆ ರಚಿಸುವಾಗ ಯಾವ ದೃಶ್ಯದ ನಂತರ ಯಾವ ದೃಶ್ಯ, ಯಾವ ಮಾತಿನ ನಂತರ ಯಾವ ಮಾತು ಎಂಬ ಆಯ್ಕೆಯಲ್ಲಿ, (೩) ಚಿತ್ರೀಕರಣಕ್ಕೆ ಕಲಾವಿದರನ್ನು ಆರಿಸುವಾಗ ಕಥೆಗೆ ಆ ಪಾತ್ರಧಾರಿಯನ್ನು ಹೊಂದಿಸುವಲ್ಲಿ. ಹೀಗೆ ಒಂದು ಚಿತ್ರದ ಅಂತಿಮ ರೂಪ ಸಿದ್ಧಪಡಿಸಲು ದಾಟಬೇಕಾದ ಎಲ್ಲ ಹಂತಗಳಲ್ಲೂ ಸಂಕಲನ ಒಂದು ಅವಿಭಾಜ್ಯ ಅಂಗ. ಅಂದರೆ ಚಲನಚಿತ್ರ ಕಥನ ಕಲೆಯ ವಿಕಾಸದಲ್ಲಿ ಸಂಕಲನ ತಂತ್ರ ಎಂಬುದು ಪ್ರಧಾನ ಸಾಧನ ಎಂದಾಯಿತು. ಹೀಗಾಗಿ ಸಂಕಲನದ ಬೆಳವಣಿಗೆಯ ಅಧ್ಯಯನವೇ ಚಲನಚಿತ್ರ ಇತಿಹಾಸದ ಅಧ್ಯಯನವೂ ಆಗಿದೆ.

ಈ ದೃಷ್ಟಿಯಿಂದ ಚಲನಚಿತ್ರ ಸಂಕಲನದ ಚರಿತ್ರೆಯನ್ನು ಬರೆಯುವುದು ಒಬ್ಬ ಸಂಶೋಧಕನ ಕೆಲಸ. ಆ ಪ್ರಮಾಣದಲ್ಲಿ ಅಲ್ಲದಿದ್ದರೂ ಇಲ್ಲಿ ಒಂದು ಪಕ್ಷಿನೋಟವಿದೆ ಎನ್ನಬಹುದು.

ಏಕೆ ಹೀಗೆ ?

ಅದು ಸಹಜವಾಗಿಯೇ ಕಾಡುವ ಪ್ರಶ್ನೆ. ಕೇವಲ ಕನ್ನಡ ಚಲನಚಿತ್ರದ ಇತಿಹಾಸವನ್ನು, ಸಂಕಲನವನ್ನು ವಿಶೇಷ ಆಸ್ಥೆಯಿಂದ ಗಮನಿಸಿ ದಾಖಲಿಸಲು ಒಬ್ಬ ಚರಿತ್ರಕಾರ ನೋಡಬೇಕಾದ ಚಿತ್ರಗಳು ಸರಿ ಸುಮಾರು ಎರಡು ಸಾವಿರ ಸಂಖ್ಯೆಯನ್ನು ಮೀರುತ್ತದೆ. ಅದಷ್ಟನ್ನೂ ನೋಡುವುದಲ್ಲದೆ ಆ ಚಿತ್ರ ತಯಾರಾದ ಬಗೆ, ಸ್ಥಿತಿಗತಿಗಳು, ದುಡಿದ ಜನರನ್ನು ಗುರುತಿಸಿಕೊಳ್ಳಬೇಕಾಗುತ್ತದೆ. ಅದಕ್ಕೆ ಬೇಕಾಗುವ ಖಚಿತ ದಾಖಲೆಗಳು ಸಿಗುವುದಿಲ್ಲ. ಕನ್ನಡದ ಅನೇಕ ಚಿತ್ರಗಳ ಸಂಕಲನಕಾರರ ಹೆಸರು ಕೂಡ ತಿಳಿಯದು. ಇದಕ್ಕೆ ಅನೇಕ ಕನ್ನಡ ಚಿತ್ರ ತಯಾರಕರು ತಾವು ಮಾಡುವ ಕೆಲಸ ಚರಿತ್ರಾರ್ಹವಾದುದು ಎಂದು ಭಾವಿಸದೆ ಸಂತೆಯ ಹೊತ್ತಿಗೆ ಮೂರು ಮೊಳ ಎಂಬಂತೆ ಚಿತ್ರ ಮಾಡ ಹೊರಟಿದ್ದು ಕಾರಣವಾಗಿರಬಹುದು. ಹೀಗಾಗಿ ಇಂದು ಅನೇಕ ಚಿತ್ರಗಳ ಪಾತ್ರಧಾರಿಗಳನ್ನು ಗುರುತಿಸಬಹುದು, ಆದರೆ ನಿರ್ದೇಶಕ, ಛಾಯಾಗ್ರಾಹಕ ಮತ್ತಿತರ ಕೆಲವು ತಂತ್ರಜ್ಞರ ವಿವರಗಳೇ ಸರಿಯಾಗಿ ಸಿಗುವುದಿಲ್ಲ. ಇದರಿಂದಾಗಿ ನಮ್ಮಲ್ಲಿ ಚಲನಚಿತ್ರ ಸಂಕಲನ ಎಂಬುದು ಒಂದು ಕಲೆಯಾಗಿ ಬೆಳೆಯದೆ ಕೇವಲ ತಂತ್ರವಾಗಿ, ಒಂದು ಚಿತ್ರಿಕೆ (Shot) ಜೊತೆಗೆ ಮತ್ತೊಂದು ಚಿತ್ರಿಕೆಯನ್ನು ಜೋಡಿಸುವ ಯಾಂತ್ರಿಕ (ಮೆಕ್ಯಾನಿಕಲ್) ಕೆಲಸವಾಗಿ ಉಳಿದುಬಿಟ್ಟಿತ್ತು. ಈ ಸ್ಥಿತಿಯಿಂದ ಕೊಂಚ ಬೇರೆಯಾದ ಪರಿಸ್ಥಿತಿ ನಮ್ಮಲ್ಲಿ ಬರುವ ಹೊತ್ತಿಗೆ ಕನ್ನಡ ಚಿತ್ರರಂಗ ಬಹು ದೂರ ಸಾಗಿ ಬಂದಾಗಿತ್ತು.

ಕನ್ನಡದಲ್ಲಿ ಚಲನಚಿತ್ರರಂಗವನ್ನು ಗಂಭೀರವಾಗಿ ಪರಿಗಣಿಸಿದ ನಿರ್ದೇಶಕರು ಕಾಣಿಸಿಕೊಂಡ ೭೦ರ ದಶಕದ ಮಧ್ಯಭಾಗದಲ್ಲೂ ಚಲನಚಿತ್ರ ಸಂಕಲನ ಎಂಬುದೊಂದು ಎರಡನೆ ದರ್ಜೆಯ ಕೆಲಸವಾಗಿಯೇ ಉಳಿದಿತ್ತು ಎನ್ನಬಹುದು. ಈ ದೃಷ್ಟಿಯಿಂದ ಕನ್ನಡ ಚಲನಚಿತ್ರ ನಡೆದು ಬಂದ ಹಾದಿಯಲ್ಲಿ ಮೈಲಿಗಲ್ಲುಗಳು ಎಂದೆನಿಸಿಕೊಂಡಿರುವ ಕೆಲವು ಚಿತ್ರಗಳಿಗೆ ವಿಶೇಷ ಒತ್ತು ನೀಡಿ ಜಾಗತಿಕ ಚಲನಚಿತ್ರ ಸಂಕಲನದ ಬೆಳವಣಿಗೆಯೊಡನೆ ಕನ್ನಡದ ಕೆಲವು ಚಿತ್ರಗಳನ್ನು ಗಮನಿಸಲು ಈ ಲೇಖನ ಪ್ರಯತ್ನಿಸಿದೆ.

ಆರಂಭ

ಮಾನವನಿಗೆ ಆದಿಕಾಲದಿಂದಲೂ ತನ್ನ ಪ್ರತಿನಿತ್ಯದ ಬದುಕಿನ ಜಂಗಮ ಸ್ಥಿತಿಯನ್ನು ಸ್ಥಾವರವಾಗಿಸುವ ಹೆಬ್ಬಯಕೆ ಇತ್ತು. ಅದೊಂದು ದಾಖಲೆ ಮಾಡುವ ಪ್ರವೃತ್ತಿ ಎನ್ನಬಹುದು. ಅದಕ್ಕಾಗಿ ಆತ ನಿರಂತರವಾಗಿ ಪ್ರಯೋಗಗಳನ್ನು ಮಾಡಿದ. ಆ ಪ್ರಯೋಗಪ್ರಿಯತೆಯನ್ನು ಆಗಿನ ಜನಾಂಗಗಳು ವಾಸಿಸುತ್ತಿದ್ದ ಸ್ಥಳದಲ್ಲಿ ದೊರೆತ ಕಲ್ಲ ಮೇಲೆ ಕೆತ್ತಿದ ರೇಖಾ ಚಿತ್ರಗಳಲ್ಲಿ ಗುರುತಿಸಬಹುದು. ತಾನು ಬೇಟೆಯಾಡಿದ ಪ್ರಾಣಿ, ಬಳಸಿದ ಆಯುಧಗಳನ್ನು ರೇಖೆಗಳಲ್ಲಿ ಕಾಣಿಸುವ ಆತನ ಯತ್ನ ಮಾನವನಿಗೆ ಚಿತ್ರಕಲೆ ಎಂಬ ಕೌಶಲ್ಯವನ್ನು ನೀಡಿತು. ಚಿತ್ರಕಲೆಗಿಂತಲೂ ನೈಜ, ಶಾಶ್ವತ ಅಭಿವ್ಯಕ್ತಿಯ ಮತ್ತು ತನ್ನನ್ನು ತನ್ನಂತೆಯೇ ಉಳಿಸಿಡುವ ಕಲೆಯ ಹುಡುಕಾಟದಲ್ಲಿ ಆತನಿಗೆ ೧೯ನೇ ಶತಮಾನದ ಅಂತ್ಯಕಾಲದಲ್ಲಿ ಛಾಯಾಚಿತ್ರಕಲೆ ದೊರೆಯಿತು. ಈ ಸ್ಥಿರ ಚಿತ್ರಗಳು ತನ್ನ ಚಲನೆಯನ್ನು ಹಿಡಿದಿಡಬಲ್ಲವೆ ಎಂಬ ಹುಡುಕಾಟದಲ್ಲಿ ಆತನಿಗೆ ಕೈನೆಟೋಸ್ಕೋಪ್, ಕಿನಿಮಾ, ಇತ್ಯಾದಿ ಸಣ್ಣಮಟ್ಟದ ಪ್ರೊಜೆಕ್ಟರ್‌ನಂತಹುದು ದೊರೆಯಿತು. ಅವುಗಳ ಸುಧಾರಿತ ಮತ್ತು ಮನುಷ್ಯನ ಚಲನೆಯ ವೇಗಕ್ಕೆ ಅತ್ಯಂತ ಸಮೀಪ ಎನಿಸುವಂತಹ ಚಲನಚಿತ್ರ ಮಾನವನಿಗೆ ಸಿಕ್ಕಿದ್ದು ೧೯ನೇ ಶತಮಾನದ ಉತ್ತರಾರ್ಧದಲ್ಲಿ. ೧೮೯೫ರ ಹೊತ್ತಿಗೆ ಲ್ಯುಮಿಯೆರ್ ಸಹೋದರರು ಮೋಟಾರು ಚಾಲಿತ ಛಾಯಾಗ್ರಾಹಕದಿಂದ ಸೆರೆ ಹಿಡಿದ, ಚಲನೆಯನ್ನುಳ್ಳದ್ದರಂತೆ ಭಾಸವಾಗುವ ಸ್ಥಿರ ಚಿತ್ರಗಳ ಪಟ್ಟಿಯನ್ನು ಸಂಸ್ಕರಿಸಿ ಜನರೆದುರು ಪ್ರದರ್ಶಿಸಲು ಆರಂಭಿಸಿದರು.

ಇಲ್ಲಿ ನಮ್ಮ ಹುಡುಕಾಟವಿರುವುದು ಸಂಕಲಿತ, ಅಂದರೆ ಒಂದು ನಿರ್ದಿಷ್ಟ ಗುರಿಯತ್ತ ಕಥೆಯೊಂದನ್ನು ಅಥವಾ ಪ್ರಕರಣ (ಘಟನೆ) ವೊಂದನ್ನು ಕರೆದೊಯ್ಯುವ ಚಲಿಸುವ ಚಿತ್ರಗಳು ಯಾವಾಗ ಆರಂಭವಾದವು ಎಂದು. ಇದು ಲ್ಯುಮಿಯೆರ್ ಸಹೋದರರು ಪ್ರದರ್ಶಿಸುತ್ತಿದ್ದ ಚಿತ್ರಗಳಲ್ಲಿ ಇರಲಿಲ್ಲ. ಅವರ ಚಿತ್ರಗಳಲ್ಲಿ ಕಾಣಸಿಗುವುದು ಜನರ ಬದುಕಿನ ಸಣ್ಣ ವಿವರಗಳು: ಸಮುದ್ರ ದಂಡೆಯಿಂದ ದೂರ ಸಾಗುವ ಹಡಗು, ನಿಲ್ದಾಣದಿಂದ ಹೊರಡುವ ರೈಲು, ಫ್ಯಾಕ್ಟರಿ ಮುಗಿಸಿ ನಂತರ ತಮ್ಮ ಮನೆಗಳಿಗೆ ಸಾಗುವ ಕಾರ್ಮಿಕರು ಇಂತಹ ವಿವರಗಳು.

ಈ ಚಿತ್ರಗಳು ಮನುಷ್ಯನಿಗಿದ್ದ ತನ್ನ ಚಲನೆಯನ್ನು, ತನ್ನ ಇರವನ್ನು ಶಾಶ್ವತವಾಗಿಸುವ ಬಯಕೆಯನ್ನು ತಣಿಸಿದವಾದರೂ ಅವಕ್ಕೆ ಚಲನಚಿತ್ರ ಎಂಬುದೊಂದು ಕಲೆಯಾಗಿ ಉಳಿಯಲು ಬೇಕಾದ ಕಥನಗುಣ ಇರಲಿಲ್ಲ. ಅಂತಹ ಪ್ರಥಮ ಪ್ರಯತ್ನ ಆದದ್ದು ಲ್ಯುಮಿಯೆರ್ ಸಹೋದರರೇ ಚಿತ್ರಿಸಿದ "Watering the Gardner" (ಮಾಲಿಯ ಸ್ನಾನ) ಎಂಬ ನಾಲ್ಕು ನಿಮಿಷಗಳ ಚಿತ್ರದಲ್ಲಿ. ಈ ಚಿತ್ರದಲ್ಲಿ ಗಿಡಗಳಿಗೆ ಪೈಪಿನಿಂದ ನೀರು ಹಾಯಿಸುತ್ತಿರುವ ಮಾಲಿಯೊಬ್ಬ ಮೊದಲಿಗೆ ಕಾಣುತ್ತಾನೆ. ಅವನಿಂದ ದೂರಕ್ಕೆ ಮತ್ತೊಬ್ಬ ಹುಡುಗ ಬರುವುದು ಕಾಣುತ್ತಾನೆ. ಆ ಹುಡುಗ ಮೆಟ್ಟಿ ಹಿಡಿದಿದ್ದ ನೀರಿನ ಪೈಪಿನ ಮೇಲೆ ಕಾಲಿಡುತ್ತಾನೆ. ಮಾಲಿ ಪೈಪಿನಿಂದ ನೀರು ಬರುತ್ತಿಲ್ಲವೇ ಎಂದು ಪೈಪಿನ ತುದಿಯನ್ನು ಗಮನಿಸುವಾಗ, ಹಿಂದಿರುವ ಬಾಲಕ ಪೈಪಿನ ಮೇಲೆ ತಾನಿಟ್ಟಿರುವ ಕಾಲು ತೆಗೆಯುತ್ತಾನೆ. ಪೈಪಿನ ತುದಿಯಿಂದ ನೋಡುತ್ತಿರುವ ಮಾಲಿಯ ಮುಖದ ಮೇಲೆ ಫಳ್ಳನೆ ನೀರು ಸಿಡಿಯುತ್ತದೆ. ಇದಿಷ್ಟೂ ಒಂದೇ ಚಿತ್ರಿಕೆಯಲ್ಲಿ ಮೂಡಿಬರುತ್ತದೆ.

ಇದು ಕೇವಲ ಒಂದು ಘಟನೆಯನ್ನು ತೋರದೆ ಬದುಕಿನ ಸಣ್ಣ ವಿವರವೇ ಹೇಗೆ ಕಥೆಯಾಗಿ ಪರದೆಯ ಮೇಲೆ ಕಾಣಸಬಹುದು ಎಂದು ತೋರಿಸಿತ್ತು. ಪ್ರಥಮ ಬಾರಿಗೆ

ಕ್ಯಾಮರಾ ಮುಂದೆ ಘಟಿಸುವ ಕ್ರಿಯೆಯ ಮೇಲೆ ನಾಟಕೀಯ ಹಿಡಿತವನ್ನು ಸಾಧಿಸಲಾಯಿತು. ಪ್ರಯೋಗದ ಮುಂದುವರೆದ ಭಾಗದಂತೆ ಛಾಯಾಗ್ರಾಹಕ ಯಂತ್ರವನ್ನು ಬಳಸಿ ನಾಟಕಗಳನ್ನು ಚಿತ್ರೀಕರಿಸುವ, ವಿಶೇಷವಾಗಿ ಬ್ಯಾಲೆಗಳನ್ನು ಚಿತ್ರಿಸುವ ಪ್ರಯೋಗಗಳೂ ಆದವು. ಆದರೆ ಧ್ವನಿಯ ಬಳಕೆಯಿಲ್ಲದೆ ಕೇವಲ ರಂಗನಟರ ಚಲನೆಯನ್ನು ತೋರಿಸುವ ಚಿತ್ರಗಳು ಕೇವಲ ಪ್ರಯೋಗಗಳಾಗಿ ಉಳಿದವು. ಈ ಕಾಲಘಟ್ಟದಲ್ಲಿ ಜಾರ್ಜ್‌ಮೆಲ್ಲೀ ಈ ಚಿತ್ರಗಳ ಮೂಕಿಗುಣವನ್ನು ಗುರುತಿಸಿ ಅನೇಕ ಬ್ಯಾಲೆಗಳನ್ನು, ಈ ಹೊಸ ಮಾಧ್ಯಮದ ಮೂಲಕ ತುಣುಕು ಚಿತ್ರಗಳನ್ನಾಗಿ ಮಾಡಲು ಪ್ರಯತ್ನಿಸಿದ. ಹಾಗೆ 'ಸಿಂಡ್ರೆಲಾ'ದಂತಹ ಕಥೆಯೊಂದನ್ನು ೨೦ ತುಣುಕು ಚಿತ್ರಿಕೆಗಳಿಂದ ಪ್ರೇಕ್ಷಕರಿಗೆ ತಲುಪಿಸುವ ಯತ್ನವನ್ನು ಜಾರ್ಜ್ ಮೆಲೀ (Georg Meilies)ಮಾಡಿದ. ಮೂರು ಅಥವಾ ನಾಲ್ಕು ನಿಮಿಷ ಅವಧಿಯ ಪ್ರತಿ ಚಿತ್ರಿಕೆ (Shot)ಯಲ್ಲೂ ಆತ ವಿಭಿನ್ನ ದೃಶ್ಯಗಳನ್ನು ಇರಿಸಲು ಯತ್ನಿಸಿದ. ಆ ಚಿತ್ರಿಕೆಗಳ ನಡುವೆ ಸೇತುಬಂಧ (Transition)ವಾಗಿ ಆತ ಶೀರ್ಷಿಕೆ ಪಟ್ಟಿ (Title Card) ಗಳನ್ನು ಬಳಸಿದ. ಅಂದರೆ 'ಅಡಿಗೆ ಮನೆಯಲ್ಲಿ ಸಿಂಡ್ರೆಲಾ' ಎಂಬ ಶೀರ್ಷಿಕೆ ಬಂದ ನಂತರ ಸಿಂಡ್ರೆಲಾ ವೇಷದ ರಂಗ ನಟಿ ತನ್ನ ಆದಾಗಲೇ ಅಭಿನೀತವಾದ ನಾಟಕದ ಒಂದು ಭಾಗವನ್ನು ಕ್ಯಾಮರಾದೆದುರು ಅಭಿನಯಿಸಲು ಯತ್ನಿಸುತ್ತಿದ್ದಳು.

(ಚಿತ್ರ ೧) ಜಗತ್ತಿನ ಮೊದಲ ಕಥಾಚಿತ್ರ ಸೃಷ್ಟಿಸಿದ ಎಡ್ವಿನ್ ಎಸ್.ಪೋರ್ಟರ್

ಇಲ್ಲಿ ಚಿತ್ರಿತವಾದ ನಾಟಕವನ್ನು ಜನ ನೋಡುತ್ತಿದ್ದರಷ್ಟೆ. ಈ ನಾಟಕವೂ ಸಹ ಪ್ರತಿ ಸೆಕೆಂಡಿಗೆ ೧೬ ಫ್ರೇಮಿನಿಂದ ಚಿತ್ರಿತವಾದ ಸಿನಿಮಾದಲ್ಲಿ ಅಸಹಜ ಚಲನೆಯನ್ನೇ ದಾಖಲಿಸುತ್ತಿತ್ತು. ಹೀಗಾಗಿ ಜಾರ್ಜ್ ಮೆಲೀ (George Melies) ಪ್ರಯೋಗ ಕೇವಲ ಪ್ರಯೋಗವಾಗಿ ಗುರುತಿಸಲ್ಪಟ್ಟಿತು.

ಈ ಸಂದರ್ಭದಲ್ಲಿ ಸರ್ಕಾರಗಳು ತಮ್ಮ ಸಾಧನೆಯನ್ನು, ತಮ್ಮ ನಾಯಕರನ್ನು ತೋರಲು ಹೊಸ ತಂತ್ರಜ್ಞಾನವನ್ನು ಬಳಸತೊಡಗಿದವು. ಆದರೂ ಇವುಗಳಲ್ಲಿ ಸಂಕಲಿತ ದೃಶ್ಯ ಜೋಡಣೆ ಇರಲಿಲ್ಲವಾದ್ದರಿಂದ ಅವು ಸಾಕ್ಷ್ಯ ಚಿತ್ರಗಳೂ ಆಗದೆ ಕೇವಲ ಭಂಡಾರಗಳಲ್ಲಿ ಉಳಿಯುತ್ತಿದ್ದವು. ಈ ವಿಷಯ ಕುರಿತಂತೆ ಪುಡೋವ್ಕಿನ್ ಹೀಗೆ ಹೇಳುತ್ತಾನೆ: ''ನನ್ನ ಅಭಿಪ್ರಾಯದಂತೆ ಯಾವುದೇ ವಸ್ತುವನ್ನು ಯಾವುದೇ ಕೋನದಿಂದ ಚಿತ್ರಿಸಿ, ತೆರೆಯ ಮೇಲೆ ಅದು ಚಲಿಸಿದಂತೆ ಕಂಡರೂ ಅದು ನಿರ್ಜೀವ ವಸ್ತುವೇ. ಕ್ಯಾಮರಾದೆದುರಿಗೆ ಆದ ವಸ್ತುವೊಂದರ ಚಲನೆ ಸಹಜವಾಗಿ ಚಲನೆ ಎನಿಸಿಕೊಳ್ಳುವುದಿಲ್ಲ. ಅದು ಚಲನಚಿತ್ರದ ಪಟ್ಟಿಕೆಗಳನ್ನು ಕೂಡಿಸಿಡುವ ಸಂಕಲನದ ಕಲಸಕ್ಕೆ ಕೇವಲ ಮೂಲದ್ರವ್ಯ ಮಾತ್ರ. ಅನೇಕ ವಸ್ತುಗಳ ನಡುವೆ ಈ ಚಲಿಸುವ ವಸ್ತುಗಳನ್ನು ಇರಿಸಿದಾಗ ಮಾತ್ರ, ಅನೇಕ ಪ್ರತಿಮೆಗಳ ನಡುವೆ ಈ ವಸ್ತುವಿನ ಸಂಯೋಗವಾದಾಗ ಮಾತ್ರ ಆ ಚಲಿಸುವ ವಸ್ತುವಿಗೆ ಸಿನಿಮಾದ ಜೀವ ದೊರೆಯುತ್ತದೆ. ಸಂಕಲನವೆಂಬ ಮೂಲ ಕ್ರಿಯಾಶಕ್ತಿಯಿಂದ ನಿರ್ಜೀವ ಚಲಿಸುವ ಚಿತ್ರಪಟ್ಟಿಗೆ ಜೀವ ಬರುತ್ತದೆ ಮತ್ತು ಚಲನಚಿತ್ರ ರೂಪ ದೊರೆಯುತ್ತದೆ.''

ಒಟ್ಟಾರೆಯಾಗಿ ಆಗ ತಯಾರಾಗುತ್ತಿದ್ದ ಚಿತ್ರಗಳಲ್ಲಿ ವಾಸ್ತವವನ್ನು ಗ್ರಹಿಸುವ ಶಕ್ತಿ ಇತ್ತು. ಆದರೆ ನಾಟಕೀಯತೆಯ ಅಂಶ ಇರಲಿಲ್ಲ. ಕಥನ ಗುಣ ಇರಲಿಲ್ಲ. ಇಂತಹದೊಂದನ್ನು ಸಾಧಿಸುವ ಪ್ರಥಮ ಪ್ರಯತ್ನವಾದದ್ದು ೧೯೦೨ರಲ್ಲಿ. ಎಡ್ವಿನ್ ಎಸ್. ಪೋರ್ಟರ್ ಅಗ್ನಿಶಾಮಕದಳದ ಭಂಡಾರದಲ್ಲಿನ ಅನೇಕ ತುಣುಕು ಚಿತ್ರಿಕೆಗಳನ್ನು ಜೋಡಿಸಿ 'ಲೈಫ್ ಆಫ್ ಎ ಅಮೆರಿಕನ್ ಫೈರ್‌ಮ್ಯಾನ್' ಚಿತ್ರ ತಯಾರಿಸಿದ. ಅಗ್ನಿಶಾಮಕ ದಳದವನೊಬ್ಬ ಕಛೇರಿಯಲ್ಲಿ ಮಲಗಿರುವ ದೃಶ್ಯ, ಆತನ ಕನಸಲ್ಲಿ ಬರುವ ಅಗ್ನಿ ದುರಂತಕ್ಕೊಳಗಾದ ತಾಯಿ ಮಗುವಿನ ದೃಶ್ಯ. ನಂತರ ಅಗ್ನಿ ದುರಂತಕ್ಕಾಗಿ ಬರುವ ಕರೆ. ಆತ ಅವಸರದಿಂದ ಓಡುವುದು, ಮಹಡಿ ಮನೆಯೊಂದಕ್ಕೆ ಹತ್ತಿರುವ ಬೆಂಕಿ, ಅಗ್ನಿಶಾಮಕದಳದವರಿಂದ ಆರಿಸುವ ಪ್ರಯತ್ನ. ಕಥೆಯ ಮುಖ್ಯ ಪಾತ್ರಧಾರಿ ಉರಿಯುವ ಮನೆಯೊಳಗೆ ನುಗ್ಗಿ ಮನೆಯಲ್ಲಿರುವ ಹೆಂಗಸನ್ನು ರಕ್ಷಿಸುವುದು, ರಕ್ಷಿತ ಹೆಂಗಸಿನ ಚೀರಾಟದಲ್ಲಿ ಬರುವ ಆಗತ್ಯದಂತೆ, ಮತ್ತೆ ಮನೆಯೊಳಗೆ ನುಗ್ಗಿ ಮಗುವನ್ನು ರಕ್ಷಿಸಿ ತಂದು ತಾಯಿಗೆ ನೀಡುವುದು, ಹೀಗೆ ಅನೇಕ ತುಣುಕು ಚಿತ್ರಿಕೆಗಳನ್ನು ಸೇರಿಸಿ ಒಂದು ಕಥೆಯನ್ನು ಹೇಳುವ ಪ್ರಯತ್ನ ಆ ಚಿತ್ರದಲ್ಲಿ ಆಗಿತ್ತು. ಪ್ರಾಯಶಃ ಜಗತ್ತಿನ ಪ್ರಥಮ ಕಥಾಚಿತ್ರ ಇದು. ಕಥೆಯ ನಿರಂತರತೆ (ಕಂಟಿನ್ಯೂಯಿಟಿ)ಯನ್ನು ಕಾಪಾಡಿಕೊಂಡು ಸಾಗುವ ಇಂತಹ ಅನೇಕ ಸಂಕಲಿತ ಚಿತ್ರಗಳು ನಂತರದ ದಿನಗಳಲ್ಲಿ ಬಂದವು. ಸ್ವತಃ ಪೋರ್ಟರ್ ೧೯೦೩ರಲ್ಲಿ 'ದಿ ಗ್ರೇಟ್ ಟ್ರೈನ್ ರಾಬರಿ' ಎಂಬ ಸಿನಿಮಾವನ್ನು ಚಿತ್ರಿಸಿದ. ಇಲ್ಲಿ ಹಿಂದಿನಂತೆ ಭಂಡಾರದಿಂದ ಆಯ್ದುಕೊಂಡ ಚಿತ್ರಿಕೆಗೆ ಬದಲಾಗಿ ತಾನೇ ಆಯ್ದ ಕಥೆಯೊಂದಕ್ಕೆ ತಕ್ಕಂತೆ ಪಾತ್ರಧಾರಿಗಳನ್ನು ಬೇಕಾದ ಸ್ಥಳದಲ್ಲಿ ನಿಲ್ಲಿಸಿ ಆತ ಚಿತ್ರಿಸಿದ್ದ. ಕಥನದ ಅಗತ್ಯವಾದ ಕಾಲೈಕ್ಯ, ಸ್ಥಳೈಕ್ಯಗಳನ್ನು ಮೀರಿ ಘಟನೆಯೊಂದು ಮುಗಿದ ನಂತರ ಮತ್ತೊಂದು ಘಟನೆಗೆ ಸಾಗುವಾಗ ಸಮಯವನ್ನು ಹಿಂದಕ್ಕೆ ಎಳೆದುಕೊಂಡು ತಾನು ಹೇಳ ಹೊರಟದ್ದನ್ನು ಪೋರ್ಟರ್ ಈ ಚಿತ್ರದಲ್ಲಿ ಧ್ವನಿ ಸಹಾಯವಿಲ್ಲದೆ ಚಿತ್ರಿಕೆ, ಚಿತ್ರಿಕೆಗಳ ನಡುವೆ ಶೀರ್ಷಿಕೆಗಳನ್ನು ಬಳಸಿ ಸಾಧಿಸಿದ್ದ.

ಪೋರ್ಟರ್ ಮುಂದೆಯೂ ಇಂತಹ ಚಲನಾತ್ಮಕ ಘಟನೆಗಳನ್ನು ಆಯ್ದು ಅನೇಕ ಚಿತ್ರಗಳನ್ನು ತಯಾರಿಸಿದ ನಾದರೂ ಸಿನಿಮಾ ಕಲೆಯ ಸಂಪೂರ್ಣ ಉಪಯೋಗ ಎಂಬುದನ್ನು ಆವಿಷ್ಕರಿಸಿಕೊಂಡು ಚಿತ್ರಗಳನ್ನು ತಯಾರಿಸಲು ಆರಂಭಿಸಿದವನು ಡಿ.ಡಬ್ಲ್ಯೂ.ಗ್ರಿಫಿತ್. ಆತ ಪೋರ್ಟರ್‌ನ ಪ್ರಯೋಗದಲ್ಲಿದ್ದ ಕಥಾ ನಿರಂತರತೆಯನ್ನು ಕಥೆಯಲ್ಲಿರುವ ನಾಟಕೀಯ ಅಂಶಗಳನ್ನು ಪ್ರೇಕ್ಷಕನಿಗೆ ತಲುಪಿಸಲು ತನ್ನದೇ ಆದ ರೀತಿಯಲ್ಲಿ ಪ್ರಯತ್ನಿಸಿದ. 'ಬರ್ತ್ ಆಫ್ ಎ ನೇಷನ್' ಚಿತ್ರದಲ್ಲಿ ದೀರ್ಘ ದೃಶ್ಯಗಳನ್ನು ಬಳಸದೆ ಕಿರುದೃಶ್ಯಗಳನ್ನು, ಆ ಕಿರುದೃಶ್ಯಗಳಲ್ಲಿ ಅನೇಕ ಚಿತ್ರಿಕೆ (Shot)ಗಳನ್ನು ಬಳಸಲು ಆರಂಭಿಸಿದ. ಪೋರ್ಟರ್‌ನ ಚಿತ್ರಗಳಲ್ಲಿ ಕೆಲವೇ ಚಿತ್ರಿಕೆಗಳಿಂದ ದೃಶ್ಯವೊಂದು ಮುಗಿದರೆ ಗ್ರಿಫಿತ್ ದೃಶ್ಯವೊಂದನ್ನು ಅನೇಕ ಚಿತ್ರಿಕೆಗಳಾಗಿ ವಿಂಗಡಿಸುತ್ತಿದ್ದ. ಅಲ್ಲದೆ ಕಥೆಯಲ್ಲಿನ ನಾಟಕೀಯ ವಿವರಗಳಿಗೆ ಒತ್ತುಕೊಡಲು ಗ್ರಿಫಿತ್ ಪ್ರಯತ್ನಿಸಿದ. ಪೋರ್ಟರ್‌ನ ಪ್ರಯೋಗದಲ್ಲಿ ದೊರೆತಿದ್ದ ಕಥಾ ನಿರಂತರತೆಯನ್ನು ಸಾಧಿಸುವುದಲ್ಲದೆ ಕಥೆಯ ನಾಟಕೀಯ ಪರಿಣಾಮ ನೋಡುಗನ ಮೇಲೆ ತೀವ್ರವೆನಿಸುವಂತಾಗಲೂ ಗ್ರಿಫಿತ್ ಪ್ರಯತ್ನಿಸಿದ. ಪೋರ್ಟರ್‌ನ ಚಿತ್ರದಲ್ಲಿ ಒಂದು ಚಿತ್ರಿಕೆಯ ವಿವರವನ್ನು, ಅದರ ಉದ್ದವನ್ನು ನಿರ್ಧರಿಸುತ್ತಿದ್ದುದು, ಆ ವಿವರಗಳನ್ನು ಕ್ಯಾಮರಾದೆದುರು ನಿಲ್ಲಿಸಲು ಎದುರಾಗುತ್ತಿದ್ದ ಮಿತಿ ಮತ್ತು ಸವಾಲು. ಗ್ರಿಫಿತ್ ಹಾಗಲ್ಲ, ಆತನ ಚಿತ್ರಿಕೆಯ ಉದ್ದ ಮತ್ತು ಅದು ಯಾವ ಪಾತ್ರದ ದೃಷ್ಟಿಕೋನದಿಂದ ತೆಗೆದ ಚಿತ್ರಿಕೆ ಎಂಬುದನ್ನು ಅಲ್ಲಿಯ ನಾಟಕೀಯ ಗುಣದಿಂದ ನಿರ್ಧರಿಸುತ್ತಿದ್ದ. ಈ ಪ್ರಯೋಗದಲ್ಲಿ ಗ್ರಿಫಿತ್ ಪಾತ್ರವೊಂದರ ಅತಿ ಸಮೀಪಕ್ಕೆ ಕ್ಯಾಮರಾವನ್ನು ಕೊಂಡೊಯ್ಯುವ, ಆ ಸಮೀಪ ಚಿತ್ರಿಕೆಯ ಮೂಲಕ ನಾಟಕೀಯತೆಗೆ ಮತ್ತಷ್ಟು ಒತ್ತು ಕೊಡುವ ಪ್ರಯೋಗವನ್ನು ಮಾಡಿದ್ದ. ಗ್ರಿಫಿತ್‌ನ 'ಇನ್‌ಟಾಲರೆನ್ಸ್' ಚಿತ್ರದಲ್ಲಿ ಬರುವ ಕೇವಲ ಕೈಗಳು, ಅವುಗಳ ತಿಕ್ಕಾಟದ ಚಿತ್ರಿಕೆ. ನ್ಯಾಯಾಲಯದ ದೃಶ್ಯದಲ್ಲಿ ಕಾಣುವ ಹೆಂಗಸಿನ ಅತಿ ಸಮೀಪ ಚಿತ್ರಗಳು, ಆ ದೃಶ್ಯದಲ್ಲಿ ಇರಬೇಕಾದ ಕೌತುಕ ಮತ್ತು ಪಾತ್ರಗಳ ಆತಂಕವನ್ನು ಪ್ರೇಕ್ಷಕರಿಗೆ ತಲುಪಿಸುವಲ್ಲಿ ಯಶಸ್ವಿಯಾಗಿದ್ದವು.

ಗ್ರಿಫಿತ್‌ನ ಪ್ರಯೋಗದಿಂದ ಒಂದು ವೈಭವೋಪೇತ ಎನಿಸುವ ದೃಶ್ಯವನ್ನು ಕ್ಯಾಮರಾದೆದುರು ಏರ್ಪಡಿಸುವುದು ಹಾಗೂ ದೃಶ್ಯದಲ್ಲಿನ ನಾಟಕೀಯ ಅಂಶವನ್ನು ಪ್ರೇಕ್ಷಕರಿಗೆ ತಲುಪಿಸುವುದು ಸುಲಭವಾಯಿತು. ಇದಲ್ಲದೆ ಘಟನೆಯೊಂದನ್ನು ನಿರೂಪಿಸಲು ಈ ಮುಂಚೆ ನಟ ತೆಗೆದುಕೊಳ್ಳುತ್ತಿದ್ದ ಸಮಯ ಮತ್ತು ಲಯದ ಜವಾಬ್ದಾರಿ ಗ್ರಿಫಿತ್‌ನ ಪ್ರಯೋಗದಿಂದ ನಿರ್ದೇಶಕನಿಗೆ ಲಭ್ಯವಾಯಿತು. ನಿರ್ದೇಶಕ ಯಾವ ಚಿತ್ರಿಕೆಯನ್ನು ಎಷ್ಟು ಹೊತ್ತು, ಯಾವ ದೂರದಿಂದ ಚಿತ್ರಿಸುತ್ತಾನೆ ಎಂಬುದೇ ಕಥೆಯನ್ನು ಪ್ರೇಕ್ಷಕನಿಗೆ ತಲುಪಿಸುವಲ್ಲಿ ಪ್ರಧಾನ ಸಾಧನವಾಗಿ ಉಪಯೋಗವಾಗತೊಡಗಿತು. ಇದಲ್ಲದೆ ಕಥೆಯ ಅಂತಿಮ ಭಾಗದಲ್ಲಿ ಬೇಕಿದ ಕಥನ ಓಘ (Narration Speed)ವನ್ನು ನಿಯಂತ್ರಿಸಲು ಗ್ರಿಫಿತ್ ಅನೇಕ ಕಿರು ಚಿತ್ರಿಕೆಗಳನ್ನು ಜೋಡಿಸುತ್ತಿದ್ದ. ಆ ಚಿತ್ರಿಕೆಗಳ ಸಂಖ್ಯೆ ಮತ್ತು ಅವು ಬದಲಾಗುತ್ತಿದ್ದ ವೇಗವೇ ಚಿತ್ರದ ಅಂತಿಮ ದೃಶ್ಯಕ್ಕೆ ಓಘವನ್ನು ಕೊಡುತ್ತಿತ್ತು. ಇದನ್ನು 'ಗ್ರಿಫಿತ್‌ನ ಕೊನೆಯ ಕ್ಷಣದ ರಕ್ಷಣೆ' ಎಂದು ಈಗಲೂ ಕರೆಯುತ್ತಾರೆ.

ಒಟ್ಟಾರೆಯಾಗಿ ಸಿನಿಮಾ ತಂತ್ರವನ್ನು ಬಳಸಿಕೊಂಡು ಅದ್ಭುತವಾಗಿ ಕಥೆ ಹೇಳುವ ಕಲೆಯನ್ನು ನಿರ್ವಹಿಸಿದವನು ಗ್ರಿಫಿತ್ ಎಂದು ಹೇಳಬಹುದು. ಕಥಾ ಶಕ್ತಿಯನ್ನು ಹೆಚ್ಚಿಸುವಂತಹ ಸಂಕಲನ ತಂತ್ರವೊಂದನ್ನು ಆತ ಗುರುತಿಸಿಕೊಂಡಿದ್ದರಿಂದ ಇದು ಅವನಿಗೆ ಸಾಧ್ಯವಾಯಿತು. ಆ ದೃಷ್ಟಿಯಿಂದ ಗ್ರಿಫಿತ್‌ನನ್ನು ಚಲನಚಿತ್ರ ಕಲೆಯ ಜನಕ (ಫಾದರ್ ಆಫ್ ಸಿನಿಮಾ ಆರ್ಟ್) ಎಂದೂ ಗುರುತಿಸುತ್ತಾರೆ.

(ಚಿತ್ರ ೨) ಸಿನಿಮಾ ಭಾಷೆಗೆ ಮೂಲ ವ್ಯಾಕರಣ ರಚಿಸಿದ ಡಿ.ಡಬ್ಲ್ಯೂ.ಗ್ರಿಫಿತ್

ಆದರೆ ಇಂತಹ ಸಿನಿಮಾಗಳಲ್ಲಿ ನಿರ್ದೇಶಕನ ಪ್ರತಿಪಾದನೆ ಮತ್ತು ಕ್ರಿಯಾಶೀಲತೆ ಕಾಣಸಿಗದು ಎಂದು ರಷ್ಯಾದ ಚಲನಚಿತ್ರ ನಿರ್ದೇಶಕ ಐಸೆನ್‌ಸ್ಟೈನ್ ಹೀಗೆ ಹೇಳುತ್ತಾನೆ: ''ಅಮೆರಿಕಾದ, ಒಂದರ ನಂತರ ಒಂದು ಬರುವ ಸಮೀಪ ಚಿತ್ರ ಶೈಲಿಗೆ (ಗ್ರಿಫಿತ್‌ನದ್ದು) ಸಮಾನಾಂತರವಾಗಿ ರಷ್ಯಾದ ಯುವ ನಿರ್ದೇಶಕರಾದ ನಾವು ವಿರುದ್ಧವೆನಿಸುವ ದಾರಿ ಹಿಡಿದು ಇವುಗಳನ್ನು (ಚಿತ್ರ ಪಟ್ಟಿಯನ್ನು) ಮಾಂಟಾಜ್ ಎಂಬ ಅಲಂಕರಣ ಸಾಧನದೊಡನೆ ಒಗ್ಗೂಡಿಸುತ್ತೇವೆ.''

ಸಾಹಿತ್ಯ ಸಿದ್ಧಾಂತಿಗಳು 'ಅಲಂಕರಣ' (ಟ್ರೋಪ್)ವನ್ನು ಒಂದು ಪದಕ್ಕಿರುವ ಮೂಲಾರ್ಥಕ್ಕಿಂತ ಭಿನ್ನ ಧ್ವನಿಯೊಡನೆ ಅದೇ ಪದವನ್ನು ಬಳಸುವುದು ಎಂದು ಕರೆಯುತ್ತಾರೆ. ಉದಾಹರಣೆಗೆ, 'ಮೊನಚು' ಎಂಬುದು ಕತ್ತಿಯ ಅಲಗನ್ನು ಕುರಿತು ವಿವರಿಸುತ್ತದೆ. ಅದೇ ಪದ ಸಂಭಾಷಣೆಯ ಸಂದರ್ಭದಲ್ಲಿ ಮೊನಚಾದ ಮಾತಾಗುತ್ತದೆ. ನಾಲಿಗೆ ಕತ್ತಿಯ ಅಲಗಾಗುತ್ತದೆ.

ಗ್ರಿಫಿತ್‌ನ ಚಿತ್ರಗಳಿಗೆ ಈ ರೀತಿಯ ಮಾಂಟಾಜ್‌ನ ಮೂಲಕ ಚಿತ್ರವನ್ನು ಕಟ್ಟುವುದು ಹೇಗೆಂಬುದು ತಿಳಿಯದು. ಆತನ ಸಮೀಪ ಚಿತ್ರಗಳು ವಾತಾವರಣವನ್ನು ತಿಳಿಸುತ್ತವೆ, ಪಾತ್ರದ ವೈಚಿತ್ರ್ಯವನ್ನು ಪರಿಚಯಿಸುತ್ತವೆ. ಒಂದು ಅಟ್ಟಿಸಿಕೊಂಡು ಹೋಗುವ ದೃಶ್ಯದಲ್ಲಿ ಬರುವ ದೂರ ಚಿತ್ರಿಕೆ-ಸಮೀಪ ಚಿತ್ರಿಕೆಗಳು ದೃಶ್ಯದ ವೇಗವನ್ನು ಹೆಚ್ಚಿಸುತ್ತವೆ. ಆದರೆ ಗ್ರಿಫಿತ್ ಎಲ್ಲ ಕಾಲದಲ್ಲೂ ಪ್ರಾತಿನಿಧಿಕವಾಗಿ ಮತ್ತು ವಸ್ತುನಿಷ್ಠವಾಗಿ ಇರುತ್ತಾನೆ ಮತ್ತು ಎಲ್ಲಿಯೂ ಚಿತ್ರಿಕೆಗಳ ಜೋಡಣೆಯ ಸೈಕಟ್ಟಿದಿಂದ (ಜಕ್ಸ್ಟಪೊಸಿಷನ್) ಪ್ರತಿಮೆ ಹಾಗೂ ರೂಪಕಗಳ ಆಮದು ಆಗಲು ಪ್ರಯತ್ನಿಸುವುದಿಲ್ಲ.

ಅಂದರೆ ಸಂಕಲನದ ಉಪಯೋಗದಿಂದ ಉಂಟಾದ ಗ್ರಿಫಿತ್‌ನ ಕಥಾ ನಿರೂಪಣ ತಂತ್ರಕ್ಕಿಂತ ಒಂದು ಹೆಜ್ಜೆ ಮುಂದುವರಿದು ನಿರ್ದೇಶಕ ತಾನು ಹೇಳುತ್ತಿರುವ ಕಥೆಗೆ ತನ್ನದೇ ಪ್ರತಿಪಾದನೆಯನ್ನು ಮತ್ತು ತನ್ನದೇ ಬೌದ್ಧಿಕ ಅಂತ್ಯಗಳನ್ನು ನೀಡಲು ಪ್ರಯತ್ನಿಸತೊಡಗಿದ. ಈ ನಿಟ್ಟಿನಿಂದಲೇ ರಷ್ಯಾದಲ್ಲಿ ಪುಡೋವ್ಕಿನ್, ಐಸೆನ್‌ಸ್ಟೈನ್‌ರಂತಹ ಚಿತ್ರ ನಿರ್ದೇಶಕರು ಹುಟ್ಟಿಕೊಂಡರು. ಇವರುಗಳು ಆಗಿನ ಸವಕಲು ಸಿನಿಮಾ ತಂತ್ರಗಳನ್ನು ತೊರೆದು ತಮ್ಮದೇ ತಂತ್ರಗಳನ್ನು ರೂಪಿಸಿದರು. ಇವುಗಳಲ್ಲಿ ಕುಲ್ಶೇವ್ ಮತ್ತು ಪುಡೋವ್ಕಿನ್‌ರ ಪ್ರಯೋಗಗಳು ಒಂದು ಬಗೆಯದ್ದಾದರೆ, ಐಸೆನ್‌ಸ್ಟೈನ್‌ದು ಮತ್ತೊಂದು ಬಗೆ. ಪುಡೋವ್ಕಿನ್ ಮೊದಲು ಸಿದ್ಧಾಂತ ರೂಪಿಸಿ ಅಂತೆಯೇ ಚಿತ್ರ ತಯಾರಿಸಲು ಯತ್ನಿಸಿದರೆ, ಐಸೆನ್‌ಸ್ಟೈನ್ ತನ್ನ ಪ್ರಯೋಗವನ್ನು ನಂತರ ಸಿದ್ಧಾಂತವಾಗಿಸುತ್ತಿದ್ದ. ಈ ನಿಟ್ಟಿನಲ್ಲಿ ಪುಡೋವ್ಕಿನ್ ನಿರ್ದೇಶಕನ ಕೆಲಸ ಕುರಿತು (ಆ ಮೂಲಕ ಸಂಕಲನಕಾರನ ಕುರಿತು) ಹೀಗೆ ಹೇಳುತ್ತಾನೆ ಗಮನಿಸಿ: ''ಒಬ್ಬ ಚಲನಚಿತ್ರ ನಿರ್ದೇಶಕನ ಕೆಲಸವೇನು ಎಂದು ಗಮನಿಸಿದರೆ ಅನೇಕ ದೃಷ್ಟಿಕೋನದಿಂದ ಚಿತ್ರಿತವಾದ ದೃಶ್ಯ ಪಟ್ಟಿಯೇ ಅವನ ಮೂಲದ್ರವ್ಯವಾಗಿರುತ್ತದೆ. ಇವುಗಳಿಂದಲೇ ಚಿತ್ರಿಕೆಯೊಂದು ತೆರೆಯ ಮೇಲೆ ಸಿನಿಮೀಯ ಜೀವಂತಿಕೆಯೊಡನೆ ಕಾಣಿಸುತ್ತದೆ. ಮತ್ತು ಚಿತ್ರ ನಿರ್ದೇಶಕನ ಕಾರ್ಯ ಚಟುವಟಿಕೆಯೇ ಚಿತ್ರಿಕೆಯೊಂದರ ಚಿತ್ರೀಕರಣದ ಕಾಲಕ್ಕಿಂತ ಪ್ರಮುಖವಾಗಿ ಅವುಗಳ ಜೋಡಣೆಯಲ್ಲಿರುತ್ತದೆ. ಈ ಜೋಡಣೆಯೂ ಆಯಾ ನಿರ್ದೇಶಕನ ಇಚ್ಛೆಯಂತೆಯೇ ತೆರೆಯ ಮೇಲೆ ಮೂಡುತ್ತದೆ. ಈ ರೀತಿಯ ಜೋಡಣೆಯಲ್ಲಿ ಆತ ಎಲ್ಲ ಮಧ್ಯಂತರಗಳನ್ನು ತೆಗೆದು ಕ್ರಿಯಾ ಸಾಂದ್ರತೆಯನ್ನು ಅದರ ಉಚ್ಛ್ರಾಯ ಸ್ಥಿತಿಗೆ ಕೊಂಡೊಯ್ಯುವುದು ಸಾಧ್ಯ.''

ಹೀಗೆ ಹೇಳುತ್ತಲೇ ಪುಡೋವ್ಕಿನ್ Constructive Editing ಎಂಬ ಹೊಸ ಸಿದ್ಧಾಂತವನ್ನು ಕಂಡುಕೊಂಡು ಆ ಮೂಲಕ ಚಿತ್ರಗಳನ್ನು ನಿರ್ಮಿಸಲು ಆರಂಭಿಸಿದ. ಮತ್ತು ಈ ಸಿದ್ಧಾಂತ ಕೆಲಸ ಮಾಡುವ ಬಗೆಯನ್ನು ವಿವರಿಸಲು ಹೊರಟ ಪುಡೋವ್ಕಿನ್ ಐದು ಮಹಡಿಗಳ ಎತ್ತರದ ಕಟ್ಟಡದಿಂದ ವ್ಯಕ್ತಿಯೊಬ್ಬ ಬೀಳುವುದನ್ನು ಚಿತ್ರಿಸಲು ಮೊದಲು, ನಟ ಕಿಟಕಿಯೊಂದರಿಂದ ಕೆಳಗೆ ಇರುವ ವಿಶಾಲವಾದ ಸರ್ಕಸ್ ನೆಟ್‌ನ ಮೇಲೆ ಹಾರುವುದನ್ನು ನೆಟ್ ಕಾಣದಂತೆ ಚಿತ್ರಿಸಿ, ನಂತರ ಅದೇ ವ್ಯಕ್ತಿ ತೀರ ಎತ್ತರದಿಂದ ಹಾರದಿದ್ದರೂ ನೆಲಕ್ಕೆ ತಾಗುವ ಎರಡನೆಯ ಚಿತ್ರಿಕೆಯನ್ನು ಚಿತ್ರಿಸಲು ಹೇಳುತ್ತಾನೆ. ಇವೆರಡೂ ಸೈಕಟ್ಟಿ (ಜಕ್ಸ್ಟಪೋಸ್) ಆದಾಗ ವ್ಯಕ್ತಿಯು ಅಥವಾ ನಟನು ಎತ್ತರದಿಂದ ಬಿದ್ದಂತೆ ಭಾಸವಾಗುತ್ತದೆ. ಅಂದರೆ ಒಂದು ವಾಸ್ತವವಾದ ಸ್ಥಿತಿಯಲ್ಲಿನ ಹಾರಿ ಬೀಳುವ ವ್ಯಕ್ತಿಯಿರುವ ಘಟನೆಯನ್ನು ಎರಡು ಘಟಕವಾಗಿ ಛೇದಿಸಿ ಜೋಡಿಸಿದಾಗ ನೋಡುಗನಿಗೆ ಬೇಕಾದ ಅನುಭವ ನೀಡಲು ಸಾಧ್ಯವಾಗುತ್ತದೆ ಎಂದು ಸೂಚಿಸುತ್ತಾನೆ. ಇಂದಿಗೂ ನಮ್ಮ ಚಿತ್ರರಂಗ ಇದೇ ಕನ್‌ಸ್ಟ್ರಕ್ಟಿವ್ ಎಡಿಟಿಂಗ್ ಸಿದ್ಧಾಂತವನ್ನು ಅನುಸರಿಸಿ ಚಿತ್ರೀಕರಣ ಮಾಡುತ್ತಿದೆ, ಸಂಕಲನ ಮಾಡುತ್ತಿದೆ. ಈ ಹಂತದವರೆಗೆ ಗ್ರಿಫಿತ್‌ನ ಪ್ರಯೋಗಗಳಿಗಿಂತ ತೀರ ಭಿನ್ನವಾಗದ ಪುಡೋವ್ಕಿನ್ ಸಿದ್ಧಾಂತ ಮುಂದುವರೆದು ಹೊಸ ಅನ್ವೇಷಣೆಯನ್ನು ಆರಂಭಿಸುತ್ತದೆ. ಗ್ರಿಫಿತ್ ಒಂದು ದೂರ ಚಿತ್ರಿಕೆ (ಲಾಂಗ್‌ಶಾಟ್)ಯನ್ನು ಚಿತ್ರಿಸಿ, ಅಲ್ಲಿನ ನಾಟಕೀಯತೆಯನ್ನು ಹೆಚ್ಚಿಸಲು ಸಮೀಪ ಚಿತ್ರಿಕೆ (Close up) ಬಳಸುತ್ತಿದ್ದ. ಪುಡೋವ್ಕಿನ್ ಇದಕ್ಕಿಂತ ಉತ್ತಮವಾದ ಸಂಕಲನದ ಮೂಲಕ ಉತ್ತಮ ಕಥಾ ನಿರಂತರತೆ ಸಿನಿಮಾಕ್ಕೆ ದೊರಕಿಸಿ ಕೊಡಲು ಹೊಸ ತಂತ್ರವನ್ನು ಸೂಚಿಸುತ್ತಾನೆ. ದೃಶ್ಯ ಒಂದರಲ್ಲಿ ''ಬಿರುಗಾಳಿ ಮಳೆಯಿದ್ದ ಸಂಜೆಯಲ್ಲಿ ಗಾಡಿಯೊಂದರಲ್ಲಿ, ಚಳಿಗೆ ಮುದುಡಿ ಕುಳಿತ ಚಾಲಕ, ಯಾವುದೋ ಸೈನಿಕನ ಕೋಟು ಧರಿಸಿ, ಕುದುರೆಗೆ ಚಬುಕು ನೀಡುತ್ತಾ ಸಾಗುತ್ತಾನೆ, ಗಾಡಿ ಮೆಲ್ಲಗೆ ಮುಂದೆ ಉರುಳುತ್ತದೆ''. ಈ ರೀತಿಯ ಸಾಹಿತ್ಯಕ ವಿವರಗಳಿದ್ದಲ್ಲಿ ಪ್ರತಿ ವಿವರವೂ ವಿಭಿನ್ನ ಚಿತ್ರಿಕೆಯಾಗಿ ಚಿತ್ರಿತವಾಗಿ, ನಂತರ ಜೋಡಿಸುವಂತಾಗಬೇಕು ಎನ್ನುತ್ತಾನೆ. ಯಾವುದೇ ಕಲೆ ತಯಾರಾಗಲು ಒಂದು ಮೂಲದ್ರವ್ಯ ಇರಬೇಕು. ಸಂಗೀತಗಾರನಿಗೆ ಸ್ವರಗಳು ಇದ್ದಂತೆ, ಚಿತ್ರಕಾರನಿಗೆ ಬಣ್ಣಗಳು ದೊರೆತಂತೆ, ಸಿನಿಮಾ ತಯಾರಕನ ಬಳಿ ವಿಭಿನ್ನ ಚಿತ್ರಿಕೆಗಳ ಪಟ್ಟಿ ಇರಬೇಕು ಎಂಬುದು ಪುಡೋವ್ಕಿನ್ ಮತ್ತು ಕುಲ್ಶೇವ್‌ರ ಅಭಿಪ್ರಾಯವಾಗಿತ್ತು. ಆ ಮೂಲಕ ನಟನೆ, ಚಿತ್ರೀಕರಣ ಎಲ್ಲವೂ ಅಂತಿಮ ಸಂಕಲನಕ್ಕಾಗಿ ಮೂಲದ್ರವ್ಯ ಒದಗಿಸುವ ಹಂತಗಳೆಂದು ಆತ ಭಾವಿಸುತ್ತಾನೆ.

ಈ ಮಾತುಗಳೊಡನೆ ಗ್ರಿಫಿತ್‌ನ ಮೂಕಿ ಚಿತ್ರಗಳೊಂದಿಗೆ ಹೋಲಿಸಿ ಪುಡೋವ್ಕಿನ್ ನಿರ್ಮಿಸಿದ್ದನ್ನು ನೋಡಿದರೆ ಆತನ ಸಿದ್ಧಾಂತದಿಂದ ಚಿತ್ರವೊಂದರ ಭಾವವಲಯವಲ್ಲದೆ ಲಯ ಮತ್ತು ಗೇಯ ಗುಣ ಹೆಚ್ಚಿರುವುದು ಸ್ಪಷ್ಟವಾಗಿ ತಿಳಿಯುತ್ತದೆ. ಇದಕ್ಕಾಗಿ ಆಸಕ್ತರು ಪುಡೋವ್ಕಿನ್ ೧೯೨೯ರ ಆಸುಪಾಸಿನಲ್ಲಿ ಚಿತ್ರಿಸಿದ 'ಮದರ್' ಚಿತ್ರವನ್ನು ನೋಡಬಹುದು.

ಗ್ರಿಫಿತ್ ತನ್ನ ಪ್ರಯೋಗಗಳಲ್ಲಿ ಪ್ರೇಕ್ಷಕರನ್ನು ತಲುಪಲು ಪಾತ್ರಗಳ ವೈಚಿತ್ರ್ಯ ಮತ್ತು ಚಲನೆಯನ್ನು ಅವಲಂಬಿಸಿದರೆ ಪುಡೋವ್ಕಿನ್‌ನ ಪ್ರಯೋಗದಲ್ಲಿ ಪ್ರತಿ ದೃಶ್ಯವೂ ಅತಿ ಎಚ್ಚರಿಕೆಯಿಂದ ಜೋಡಿಸಿದ ವಿವರಗಳಿಂದ, ಚಿತ್ರಿಕೆಯೊಂದು ಮತ್ತೊಂದು ಚಿತ್ರಿಕೆಯೊಡನೆ ಕೂಡಿಕೊಂಡು ಮೂಡಿಸುವ ಧ್ವನಿಯಿಂದ ಪ್ರೇಕ್ಷಕರಿಗೆ ಹೊಸ ಅರ್ಥ ಮೂಡಿಸುತ್ತದೆ. ಇದನ್ನೇ ಸಂಕಲನಕಾರರು ಇಂದಿಗೂ ಪರ್‌ಫೆಕ್ಟ್ ಜಕ್ಸ್ಟಪೋಸಿಷನ್ ಎಂದು ಕರೆಯುತ್ತಾರೆ. ಆದರೆ ಪುಡೋವ್ಕಿನ್‌ನ ನಿರೂಪಣೆಯಲ್ಲಿ ಸಾಂದ್ರಗೊಂಡ ದಟ್ಟ ವಿವರಣೆಯಿದ್ದರೂ ಅದು ವೈಯಕ್ತಿಕ (Personal) ಅನ್ನಿಸುತ್ತಿರಲಿಲ್ಲ. ಗ್ರಿಫಿತ್‌ನ ಚಿತ್ರದಲ್ಲಿ ಮಾನವೀಯ ಸಂಘರ್ಷಗಳು ಸಿಗುತ್ತವೆ. ಪುಡೋವ್ಕಿನ್‌ನ ಚಿತ್ರದಲ್ಲಿ ಕಥೆಯ ಅಕ್ಕ-ಪಕ್ಕದ ವಿವರಗಳು ಮತ್ತು ಕಥೆಯ ಸ್ಥೂಲ ಪರಿಚಯವಾಗುತ್ತದೆ, ಅಲ್ಲಿ ಸಂಘರ್ಷ ಇರುವುದಿಲ್ಲ. ಈ ಕಾರಣಕ್ಕಾಗಿಯೇ ಪುಡೋವ್ಕಿನ್ ಆರಿಸಿಕೊಳ್ಳುತ್ತಿದ್ದ ವಸ್ತುಗಳು ಸಹ ಅತ್ಯಂತ ಸರಳವಾಗಿರುತ್ತಿದ್ದವು. ಒಟ್ಟಾರೆಯಾಗಿ ರಷ್ಯಾದ ಮತ್ತೊಬ್ಬ ನಿರ್ದೇಶಕ ಕುಲ್ಶೇವ್‌ನ ಈ ಮಾತುಗಳು ಪುಡೋವ್ಕಿನ್‌ನ ಸಂಕಲನ ಪ್ರಯೋಗಗಳ ಹಿಂದಿನ ಪ್ರೇರಕ

ಶಕ್ತಿಯಾಗಿದ್ದವು ಎನ್ನಬಹುದು: ''ಸಿನಿಮಾ ಕಲೆಯ ಆರಂಭವಾಗುವುದು ನಟರು ವಿಭಿನ್ನ ದೃಶ್ಯಗಳನ್ನು ಅಭಿನಯಿಸುವಾಗ ಅಲ್ಲ. ಅದು ಕೇವಲ ಅಂತಿಮ ಜೋಡಣೆಗೆ ಮೂಲದ್ರವ್ಯ ಸಂಗ್ರಹಣದ ಹಂತ. ಸಿನಿಮಾ ಕಲೆಯ ಆರಂಭವಾಗುವುದು ನಿರ್ದೇಶಕ ವಿಭಿನ್ನ ದೃಶ್ಯ ಪಟ್ಟಿಯನ್ನು ಜೋಡಿಸುವಾಗ. ಈ ಜೋಡಣೆಯಲ್ಲಿ ಆತ ವೈವಿಧ್ಯಮಯ ಸಂಯೋಗವನ್ನು, ವೈವಿಧ್ಯಮಯ ಸರಣಿಯ ಮೂಲಕ ಫಲಿತಾಂಶವನ್ನು ಪಡೆಯುತ್ತಾನೆ.''

ಇಂತಹದೊಂದು ಸಿದ್ಧಾಂತವನ್ನು ತಲುಪಲೆಂದೇ ಕುಲ್ಶೇವ್ ಪ್ರಸಿದ್ಧ ರಂಗನಟ ಮೋಸ್ಜೂಕಿನ್‌ನ ಒಂದು ಸಮೀಪ ಚಿತ್ರಿಕೆಯ ಅಕ್ಕಪಕ್ಕದಲ್ಲಿ ಒಮ್ಮೆ ರಿವಾಲ್ವರ್ ಅನ್ನು ಇಟ್ಟು, ಮತ್ತೊಮ್ಮೆ ಅನ್ನ ಇಟ್ಟು, ಮತ್ತೊಮ್ಮೆ ಹೆಣವನ್ನಿಟ್ಟು ಪ್ರೇಕ್ಷಕರಿಗೆ ತೋರಿಸಿದ್ದರಂತೆ. ನಟನ ಭಾವರಹಿತ ಚಿತ್ರಿಕೆಯ ಅಕ್ಕಪಕ್ಕದಲ್ಲಿ ಬಂದ ವಸ್ತುವಿನ ಚಿತ್ರಿಕೆಯೊಡನೆ ಪ್ರೇಕ್ಷಕ ನಟನ ಅಭಿನಯವನ್ನು ತಾನೇ ಆರೋಪಿಸಿಕೊಳ್ಳುತ್ತಿದ್ದನಂತೆ. ಹೀಗೆ ಸೈಕಟ್ಟಿದಿಂದಲೇ ಪ್ರೇಕ್ಷಕನ ಹೃದಯಕ್ಕೆ ಬೇಕಾದ ಭಾವವನ್ನು ತಲುಪಿಸಬಹುದು ಎಂಬುದು ಸ್ಪಷ್ಟವಾಯಿತು. ಇಂತಹ ಅನೇಕ ಪ್ರಯೋಗಗಳಿಂದ ಸಿನಿಮಾ ಸಂಕಲನದ ಪ್ರಾಮುಖ್ಯತೆಯನ್ನು ಈ ನಿರ್ದೇಶಕರುಗಳು ತೋರಿಸಿಕೊಟ್ಟರು. ಅಲ್ಲದೆ ನಟರಿಗಿಂತ ಸಿನಿಮಾಕ್ಕೆ ಸಂಕಲನವೇ ಮುಖ್ಯವಾದುದು ಎಂಬುದನ್ನು ಸಹ ಸ್ಪಷ್ಟಪಡಿಸಿದರು. ಈ ಮಾತಿಗೆ ಪುಡೋವ್ಕಿನ್ ತಾನು ಚಿತ್ರಿಸಿದ 'ಮದರ್' ಕುರಿತು ಆಡುವ ಈ ಮಾತುಗಳನ್ನು ಗಮನಿಸಬಹುದು : ''ಮದರ್' ಚಿತ್ರದಲ್ಲಿ ನಾನು ಪ್ರೇಕ್ಷಕರನ್ನು ಮುಟ್ಟಲು ನಟರ ಭಾವನಾತ್ಮಕ ಅಭಿನಯವನ್ನು ಬಳಸಲಿಲ್ಲ. ಬದಲಿಗೆ ಸಂಕಲನ ಕ್ರಮದಲ್ಲಿ ಸುಲಭ ಗ್ರಾಹ್ಯವಾದ ಸಂಯೋಗವನ್ನು ಬಳಸಿದೆ.ಮಗ ಜೈಲಿನಲ್ಲಿದ್ದಾನೆ. ಆತನಿಗೆ ಕಳ್ಳ ಮಾರ್ಗದಿಂದ ಬಂದು ತಲುಪುವ ಸುದ್ದಿಯೊಂದು ಮಾರನೆಯ ದಿನ ಆತ ಬಿಡುಗಡೆಯಾಗಲಿದ್ದಾನೆ ಎಂದು ತಿಳಿಸುತ್ತದೆ. ಇಲ್ಲಿ ಆತನ ಸಂತಸದ ಭಾವವನ್ನು ಸಿನಿಮೀಯವಾಗಿ ತೋರಿಸುವುದು ಸಮಸ್ಯೆಯಾಗಿತ್ತು. ಒಂದು ಮೂಲ ಸಂತಸದಿಂದ ಅರಳುವ ಭಾವವನ್ನು ಕ್ಯಾಮರಾ ಮೂಲಕ ಸೆರೆ ಹಿಡಿದರೂ ಅದು ತೀರಾ ಮಟ್ಟಸವಾದದ್ದಾಗಿ ಬಯಸಿದ ಪರಿಣಾಮವನ್ನು ನೀಡುತ್ತಿರಲಿಲ್ಲ. ಆದ್ದರಿಂದ ನಾನು ಆತನ ಕೈ ನಡುಗುವುದನ್ನು ತೋರಿಸಿ, ಆ ಕೈಗಳನ್ನು ನೋಡುತ್ತಿರುವ ಆತನ ಮುಖವನ್ನು ಕೆಳಮಟ್ಟದ ಕ್ಯಾಮರಾ ಮೂಲಕ ತೋರಿಸಿ, ಆ ಮುಖದಲ್ಲಿರುವ ಸಣ್ಣ ನಗೆಯನ್ನು ತೋರಿಸಿದೆ. ಈ ಚಿತ್ರಿಕೆಯ ನಂತರ ವೈವಿಧ್ಯಮಯವಾದ, ವಸ್ತುವಿಗೆ ನೇರ ಸಂಬಂಧವಿರದ ಚಿತ್ರಿಕೆಗಳನ್ನು ಜೋಡಿಸಿದೆ. ಸೂರ್ಯ ಕಿರಣದಲ್ಲಿ ನಳನಳಿಸುತ್ತಿರುವ ಝರಿಯ ನೀರು, ಹಕ್ಕಿಗಳು ನೀರಿನಲ್ಲಿ ರೆಕ್ಕೆ ಬಡಿಯುತ್ತಿರುವ ಚಿತ್ರಿಕೆ, ಅಂತಿಮವಾಗಿ ನಗುಮುಖದ ಮಗು. ಈ ಚಿತ್ರಿಕೆಗಳ ಜೋಡಣೆಯೊಡನೆ 'ಖೈದಿಯ ಸಂತಸ' ಎಂಬ ಭಾವವನ್ನು ತೆರೆಯ ಮೇಲೆ ತರಲಾಯಿತು.''

ಈ ರೀತಿಯಾಗಿ ನಟನೊಬ್ಬನ ಮುಖದ ಸಮೀಪ ಚಿತ್ರದೊಡನೆ ಹರಿಯುವ ನದಿ, ಕುಣಿಯುವ ಹಗಲ ಬೆಳಕು, ಹಾರುವ ಹಕ್ಕಿ, ಮಗುವಿನ ಮುಖದ ಚಿತ್ರಿಕೆಯನ್ನು ಜೋಡಿಸುವ ಸಂಕೀರ್ಣ ದೃಶ್ಯರಚನೆಯಿಂದ (ಇದನ್ನು ಮಾಂಟಾಜ್ ಎಂದು ಕರೆಯುತ್ತಾರೆ.) ಆತ ಭಾವವೊಂದನ್ನು ಪ್ರೇಕ್ಷಕರಿಗೆ ತಲುಪಿಸಿದ್ದ. ಈ ವಿವರವನ್ನು ಓದುತ್ತಿದ್ದಂತೆ ನಮ್ಮ ಅನೇಕ ಚಿತ್ರಗಳಲ್ಲಿ ಬರುವ ಸಮುದ್ರ, ಹೂವು, ದುಂಬಿ ಇತ್ಯಾದಿ ಚಿತ್ರಿಕೆಗಳನ್ನುಳ್ಳ ದೃಶ್ಯಗಳು ನೆನಪಾಗಬಹುದು.

ಐಸೆನ್‌ಸ್ಟೈನ್ ಮತ್ತು ಬೌದ್ಧಿಕ ಸಂಕಲನ

ಪುಡೋವ್ಕಿನ್ ತನ್ನ ಬೌದ್ಧಿಕ ಸಂಕಲನ (ಕನ್‌ಸ್ಟ್ರಕ್ಟಿವ್ ಎಡಿಟಿಂಗ್) ಸಿದ್ಧಾಂತದ ಮೂಲಕ ದೃಶ್ಯವೊಂದು ಯಶಸ್ವಿಯಾಗಿ ಸಂವಹನವಾಗಲು ಆ ದೃಶ್ಯದ ಅನೇಕ ವಿವರಗಳನ್ನು ಜೋಡಿಸಲು ಯತ್ನಿಸಿದರೆ ಅದೇ ದೇಶದ ಮತ್ತೊಬ್ಬ ಚಿತ್ರ ನಿರ್ದೇಶಕ ಐಸೆನ್‌ಸ್ಟೈನ್ - ಪುಡೋವ್ಕಿನ್‌ಗೆ ಸಂಪೂರ್ಣ ವಿರುದ್ಧವೆನಿಸುವ ನಿಲುವಿನೊಡನೆ ಚಿತ್ರ ನಿರ್ಮಿಸತೊಡಗಿದ. ಈತ ತಯಾರಿಸಿದ 'ಬ್ಯಾಟಲ್‌ಶಿಪ್ ಪೊಟೆಮ್ಕಿನ್', 'ಅಕ್ಟೋಬರ್' ಮುಂತಾದ ಮೂಕಿ ಚಿತ್ರಗಳು ಸಾರ್ವಕಾಲಿಕವೆನಿಸಿಕೊಂಡವು. ಈತ ತನ್ನ ಚಿತ್ರಗಳು ಸಿದ್ಧವಾಗುವುದು ಸಂಕಲನಕಾರನ ಕೋಣೆಯಲ್ಲಿ ಎಂದು ಒಪ್ಪಿಕೊಂಡರೂ ಈತನ ಚಿತ್ರಗಳಲ್ಲಿ ಚಿತ್ರಿಕೆಯೊಂದರ ನಂತರ ಇರುತ್ತಿದ್ದ ಚಿತ್ರಿಕೆ ಅದೇ ದೃಶ್ಯದ ವಿವರವಾಗಿರುತ್ತಿರಲಿಲ್ಲ. ಬದಲಿಗೆ ಅಲ್ಲಿ ಪ್ರತಿ ಚಿತ್ರಿಕೆಯೂ ಒಂದು Shockನಂತೆ, ಒಂದು ಸ್ಫೋಟದಂತೆ ಬಳಕೆಯಾಗುತ್ತಿದ್ದವು. 'ಅಕ್ಟೋಬರ್' ಚಿತ್ರದಲ್ಲಿ ಸೇನಾಪತಿಯ ಸರ್ವಾಧಿಕಾರತ್ವದ ಇಚ್ಛೆಯನ್ನು ಸೂಚಿಸಲು ಆತ ಸೇನಾಪತಿಯ ಚಿತ್ರಿಕೆಯ ನಂತರ ನೆಪೋಲಿಯನ್‌ನ ವಿಗ್ರಹದ ಚಿತ್ರಿಕೆಯನ್ನು ಬಳಸಿದ್ದ. ಆತ ಕುಳಿತ ಸಿಂಹಾಸನದ ಚಿತ್ರಿಕೆಯ ನಂತರ ಅದರೆದುರಿಗೆ ಇರುವ ಖಾಲಿ ಗಾಜಿನ ಲೋಟಗಳನ್ನು, ಸೇನೆಯವರಂತೆ ಕಾಣುವ ಸಾಲು ಬೊಂಬೆಗಳನ್ನು ತೋರಿಸಿ ಆತ ಹಿಡಿದಿರುವುದು ಖಾಲಿತನದ ಅಧಿಕಾರವನ್ನು ಎಂದು ಸೂಚಿಸಿದ್ದ. ಚಿತ್ರಿಕೆಗಳ ಸೈಕಟ್ಟವೆಂದೊಡನೆ ಚಿತ್ರಿಕೆಯೊಡನೆ ಮತ್ತೊಂದು ಚಿತ್ರಿಕೆ ಜೋಡಿಸುವುದು ಎಂದು ಸರಳವಾಗಿ ಹೇಳಲಾಗುವುದಿಲ್ಲ. ಅದು ಸೃಷ್ಟಿಕ್ರಿಯೆ ಎಂದೆನ್ನುವ ಐಸೆನ್‌ಸ್ಟೈನ್ ಮುಂದುವರೆದು ತನ್ನ ಚಿತ್ರದಲ್ಲಿನ ಮಾಂಟಾಜ್ ತಂತ್ರವನ್ನು ಒಂದು ಮೋಟಾರು ವಾಹನಕ್ಕೆ ಹೋಲಿಸಿ ಸಿಡಿಯುವ ಸ್ಪಾರ್ಕ್ ಪ್ಲಗ್ಗಿನಂತೆ ಪ್ರತಿ ಚಿತ್ರಿಕೆಯೂ ಮಿಡಿಯಬೇಕು ಎನ್ನುತ್ತಾನೆ. ಆತ ತನ್ನ ಚಿತ್ರಗಳಲ್ಲಿ ಬರುವ ಸಂಕಲನ (ಮಾಂಟಾಜ್) ತಂತ್ರವನ್ನು ಈಜಿಪ್ಟಿನ ಪಿರಮಿಡ್ಡುಗಳಲ್ಲಿ ಬಳಸಿರುವ ಹೈರೊಗ್ಲಿಫ್ ಬರಹಕ್ಕೆ ಹೋಲಿಸಿ ಹೀಗೆ ಹೇಳುತ್ತಾನೆ.''ನೀರಿನ ಚಿತ್ರ ಮತ್ತು ಕಣ್ಣಿನ ಚಿತ್ರ ಅಳುವನ್ನು ಸೂಚಿಸುತ್ತದೆ. ಕೋಣೆಯ ಬಾಗಿಲ ಚಿತ್ರ ಮತ್ತು ಕಿವಿಗಳ ಚಿತ್ರ ಕದ್ದು ಕೇಳುವುದನ್ನು ಸೂಚಿಸುತ್ತದೆ. ನಾಯಿ + ಬಾಯಿ = ಬೊಗಳುವುದು. ಬಾಯಿ + ಮಗು = ಕಿರುಚುವುದು. ಬಾಯಿ + ಹಕ್ಕಿ = ಹಾಡುವುದು .... ಆದರೆ ಇದೇ ಮಾಂಟಾಜಾ ? ಹೌದು. ನಾವು ಸಿನಿಮಾದಲ್ಲಿ ಇದನ್ನೇ ಮಾಡುವುದು. ಪ್ರತ್ಯೇಕವೂ ಮತ್ತು ಸ್ವತಂತ್ರವೂ ಆದಂತಹ, ವಿವರಣಾತ್ಮಕವಾದ ಚಿತ್ರಿಕೆಗಳನ್ನು ಮತ್ತೊಂದು ಅಂತಹುದೇ ಚಿತ್ರಿಕೆಯೊಡನೆ ನಮಗೆ ಬೇಕಾದ ರೀತಿಯ ಅರ್ಥ ಬರುವಂತೆ ಸರಣಿಯಾಗಿ ಜೋಡಿಸುತ್ತೇವೆ.''

(ಚಿತ್ರ ೩) 'ಸ್ಟ್ರೈಕ್' ಚಿತ್ರದ ಚಿತ್ರಣದಲ್ಲಿ ಮಗ್ನರಾಗಿರುವ ನಿರ್ದೇಶಕ ಐಸೆನ್‌ಸ್ಟೈನ್

ಇದೇ ಸಿದ್ಧಾಂತಕ್ಕೆ ಉದಾಹರಣೆ ಎಂಬಂತೆ 'ಅಕ್ಟೋಬರ್' ಚಿತ್ರದಲ್ಲಿ ಸೇನಾಪತಿ ಮೆಟ್ಟಿಲನ್ನು ಏರುವ ಸುದೀರ್ಘ ಚಿತ್ರಿಕೆಯ ನಡುವೆ ಅನೇಕ ತುಂಡುಗಳನ್ನು ಮಾಡಿ, ಪ್ರತಿ ತುಂಡನ್ನು ಜೋಡಿಸಲು ಐಸೆನ್‌ಸ್ಟೈನ್ ಒಂದೊಂದು ಶೀರ್ಷಿಕೆ ಬಳಸುತ್ತಾನೆ. ಸೇನಾಪತಿ ಒಂದು ಮೆಟ್ಟಿಲು ಹತ್ತಿದೊಡನೆ 'ಡಿಕ್ಟೇಟರ್' ಎಂಬ ಶೀರ್ಷಿಕೆ, ಮತ್ತೊಂದು ಮೆಟ್ಟಿಲೇರಿದಾಗ 'ಜನರಲಿಸಮೊ' ಎಂಬ ಶೀರ್ಷಿಕೆ, ಮತ್ತೊಂದು ಮೆಟ್ಟಿಲೇರಿದಾಗ 'ಮಿನಿಸ್ಟರ್ ಆಫ್ ನೇವಿ ಅಂಡ್ ಆರ್ಮಿ' ಎಂಬ ಶೀರ್ಷಿಕೆ, ಹೀಗೆ ಆರೇಳು ಚಿತ್ರಿಕೆಗಳಲ್ಲಿ ಕೆರೆನ್‌ಸ್ಕೀ ಎಂಬ ಪಾತ್ರ ಅಂತಿಮ ಅಧಿಕಾರದ ಮೆಟ್ಟಿಲು ತಲುಪುವುದನ್ನು ತೋರಿಸುತ್ತಾನೆ. ''ಸಾಂಪ್ರದಾಯಿಕ ಚಿತ್ರಗಳು ಕೇವಲ ಪ್ರೇಕ್ಷಕನ ಭಾವವನ್ನು ಮಾತ್ರ ತಾಗುತ್ತಿದ್ದವು. ಆದರೆ ಬೌದ್ಧಿಕ ಸಂಕಲನ ಪ್ರೇಕ್ಷಕನ ಚಿಂತನ ಶಕ್ತಿಯನ್ನು ಸಹ ನಿರ್ದೇಶಿಸಲು ಸಹಾಯ ಮಾಡುತ್ತದೆ'' ಎಂಬುದು ಐಸೆನ್‌ಸ್ಟೈನ್‌ನ ನಂಬುಗೆಯಾಗಿತ್ತು. ಇದೇ ದೃಷ್ಟಿಯಿಂದ ಆತನ ಚಿತ್ರಗಳಲ್ಲಿ ಚಿತ್ರಿಕೆಯಿಂದ ಚಿತ್ರಿಕೆಗೆ ಕಾಲೈಕ್ಯವನ್ನು ಹಾರಿಕೊಂಡು ಮುಂದೆ ಸಾಗುವುದನ್ನು ಸಹ ನೋಡಬಹುದು. 'ಅಕ್ಟೋಬರ್' ಚಿತ್ರದಲ್ಲಿ ಬರುವ ಸೇತುವೆ ಏಳುವ ದೃಶ್ಯವನ್ನು ಆತ ಎರಡು ವಿಭಿನ್ನ ಕೋನಗಳಲ್ಲಿ ಚಿತ್ರಿಸಿದ್ದ. ಒಂದು ಚಿತ್ರಿಕೆಯಿಂದ ಇನ್ನೊಂದು ಚಿತ್ರಿಕೆಗೆ ಈ ದೃಶ್ಯ ಸಾಗುವಾಗ ಸೇತುವೆ ಏಳುವುದನ್ನು ನೋಡುಗನ ಕಣ್ಣಿಗೆ ಹಿತವಾಗುವಂತೆ ಹೊಂದಿಸಿ (Match Cut) ಛೇದಿಸದೆ, ಇದು ವಿಭಿನ್ನ ಚಿತ್ರಿಕೆ ಎಂದು ತಿಳಿಯುವ, ಕಣ್ಣಿಗೆ ತಟ್ಟನೆ

ಹೊಂದದ (Jerk) ರೀತಿಯೇ ಇರಿಸಿದ್ದ. ಈ ಮೂಲಕ ಆತ ಒಂದು ಕೃತಕ ಯಂತ್ರಚಾಲಿತ ಸೇತುವೆಯನ್ನು ಕುರಿತು ಪ್ರೇಕ್ಷಕರ ಗಮನ ಸೆಳೆಯಲು ಪ್ರಯತ್ನಿಸಿದ್ದ. ಈ ಕಾರಣಕ್ಕಾಗಿಯೇ ಆತನ ಚಿತ್ರಗಳಲ್ಲಿ ಕಥೆಯ ಓಟ ಸರಳ ತರ್ಕಕ್ಕೆ ಸಿಗದಂತೆ ಸಾಗುತ್ತಿತ್ತು. ಪ್ರೇಕ್ಷಕನನ್ನು ಮತ್ತೆ ಆ ಚಿತ್ರವನ್ನು ನೋಡಿ ಅರ್ಥೈಸಿಕೋ ಎಂದು ಪ್ರೇರೇಪಿಸುತ್ತಿತ್ತು. ಇದು ಓದುವಾಗ ಚೆಂದವೆನಿಸುವ ಪ್ರಯೋಗವಾದರೂ ವಾಸ್ತವದಲ್ಲಿ ಪ್ರೇಕ್ಷಕನನ್ನು ಗೊಂದಲದಲ್ಲಿ ತಳ್ಳುತ್ತಿತ್ತು. ಹೀಗಾಗಿಯೇ ಐಸೆನ್‌ಸ್ಟೈನ್‌ನ ಅದ್ಭುತ ಪ್ರಯತ್ನಗಳು ಕೇವಲ ಪ್ರಯೋಗಗಳಾಗಿಯೇ ಉಳಿದುಕೊಂಡವು ಎನ್ನಬಹುದು.

ಈ ಹಂತದಲ್ಲಿ ಚಿತ್ರ ನಿರ್ಮಾಣ ಜಗತ್ತಿನಾದ್ಯಂತ ಶುರುವಾಯಿತು. ಜನರಂಜನೆಯ ಈ ಹೊಸ ಮಾಧ್ಯಮಕ್ಕೆ ಅನೇಕಾನೇಕ ಹೊಸ ನಟ-ನಟಿಯರು, ತಂತ್ರಜ್ಞರು ಬರತೊಡಗಿದರು. ೧೯೨೦ರ ಹೊತ್ತಿಗೆ ಭಾರತದಲ್ಲಿ ಪೂರ್ಣ ಪ್ರಮಾಣದ ಮೂಕಿ ಚಿತ್ರಗಳು ತಯಾರಾಗತೊಡಗಿದವು. ಕರ್ನಾಟಕದ ನಟರು ಅಭಿನಯಿಸಿದ 'ವಸಂತ ಸೇನೆ', 'ಹಿಸ್ ಲವ್ ಅಫೇರ್ಸ್' ಮುಂತಾದ ಮೂಕಿ ಚಿತ್ರಗಳು ತಯಾರಾದವು. ಚಿತ್ರಾಭಿಮಾನಿಗಳು ಸದಾ ನೆನೆಯುವ ನಿರ್ದೇಶಕ-ನಟ ಚಾರ್ಲಿ ಚಾಪ್ಲಿನ್ ತನ್ನ ಮೂಕಿ ಚಿತ್ರಗಳಿಂದ ನೋಡುಗರನ್ನು ಸೆರೆ ಹಿಡಿದುಬಿಟ್ಟಿದ್ದ. ಈ ಎಲ್ಲರೂ ಸೇರಿ ಅಭಿವೃದ್ಧಿ ಪಡಿಸಿದ ಸಂಕಲನ ತಂತ್ರದಿಂದ ಛಾಯಾಗ್ರಹಣವೆಂಬ ಸರಳ ವಾಸ್ತವವನ್ನು ಗ್ರಹಿಸುವ ಯಂತ್ರವೇ ಒಂದು ಅತ್ಯುತ್ಕೃಷ್ಟ ಕಲಾ ಮಾಧ್ಯಮದ ಬಾಗಿಲನ್ನು ತೆರೆದಿಟ್ಟಿತು. ಒಟ್ಟಾರೆಯಾಗಿ ಮೂಕಿ ಚಿತ್ರಗಳ ಚರಿತ್ರೆಯನ್ನು ಸಿನಿಮಾದ ದೃಶ್ಯಶಕ್ತಿಯ ಸಾಧ್ಯತೆಗಳನ್ನು ಹಿಗ್ಗಿಸುವ ನಿರಂತರ ಯತ್ನ ಎಂದು ಸರಳವಾಗಿ ಹೇಳಬಹುದು. ಪ್ರತಿ ನಿರ್ದೇಶಕನ ಒಳಗಡೆ ಇದ್ದ ಸವಾಲುಗಳನ್ನು ಸ್ವೀಕರಿಸುವ ಮನಸ್ಸು ಆತನನ್ನು ಹೊಸ ಪ್ರಯೋಗಕ್ಕೆ, ಆ ಮೂಲಕ ಹೊಸ ಸಂಕೀರ್ಣ ದೃಶ್ಯವೊಂದನ್ನು ಧ್ವನಿ ಸಹಾಯವಿಲ್ಲದೆ ಪ್ರೇಕ್ಷಕನಿಗೆ ತಲುಪಿಸುವ ಯತ್ನಕ್ಕೆ ಈಡುಮಾಡಿತು. ಹೀಗಾಗಿ ಮೂಕಿ ಚಿತ್ರ ಯುಗ ಮುಗಿದ ಕಾಲಕ್ಕೆ ಸ್ವಯಂಪೂರ್ಣ ಎನ್ನಲಾಗದಿದರೂ ಸಾಕಷ್ಟು ಸ್ಪಷ್ಟಗೊಂಡ ಸಿನಿಮಾ ವ್ಯಾಕರಣವೊಂದು ಸಿದ್ಧವಾಗಿತ್ತು. ಆಗ ಸಿನಿಮಾಕ್ಕೆ ಸೇರಿಕೊಂಡಿತು ''ಧ್ವನಿ'' (Sound).

ಟಾಕಿ ಚಿತ್ರಗಳ ಆರಂಭಿಕ ಯುಗ ಮತ್ತು ಸಂಕಲನ

ಹತ್ತೊಂಬತ್ತನೆಯ ಶತಮಾನದ ಇಪ್ಪತ್ತರ ದಶಕದಲ್ಲಿ ಚಲಿಸುವ ಸಿನಿಮಾಗಳಿಗೆ ಜೋಡಿಯಾಯಿತು 'ಧ್ವನಿ' ಎಂಬ ಹೊಸ ಸಾಧನ. ಮನುಷ್ಯನ ಚಲನೆಯನ್ನಲ್ಲದೆ ಆತನ ಧ್ವನಿಯನ್ನೂ ಕೇಳುವ ಅವಕಾಶ ಹೊಸ ಮಾಧ್ಯಮಕ್ಕೆ ದೊರಕಿದೊಡನೆ ಅವರೆಗಿನ ಸಿನಿಮಾ ವ್ಯಾಕರಣದ, ವಿಶೇಷವಾಗಿ ಸಿನಿಮಾ ಸಂಕಲನದ ಪರಿಯೇ ಅಸ್ತವ್ಯಸ್ತವಾಗಿ ಬಿಟ್ಟಿತು. ಈ ಬದಲಾವಣೆಯ ವಿವರಗಳಿಗೆ ಹೋಗುವ ಮುನ್ನ ಒಂದಿಷ್ಟು ತಾಂತ್ರಿಕ ವಿವರಗಳನ್ನು ಸ್ಪಷ್ಟಪಡಿಸಿಕೊಳ್ಳೋಣ.

ಅವರೆಗಿನ ಮೂಕಿ ಚಿತ್ರಗಳು ಕ್ಷಣವೊಂದಕ್ಕೆ ೧೬ ಅಥವಾ ೧೮ ಫ್ರೇಮುಗಳಂತೆ ಓಡುತ್ತಿದ್ದವು. ಹೀಗಾಗಿ ಚಿತ್ರವೊಂದರಲ್ಲಿನ ಚಲನೆ ಸಹಜತೆಯಿಂದ ಸಾಕಷ್ಟು ದೂರವಿತ್ತು. ಇದು ಸಹಜತೆಗೆ ಹತ್ತಿರವಾಗಲು ಕ್ಷಣವೊಂದಕ್ಕೆ ೨೪ ಫ್ರೇಮುಗಳಂತೆ ಸಿನಿಮಾ ಓಡಬೇಕು, ಇದರಿಂದ ಧ್ವನಿಯ ಮರು ಉಚ್ಚಾರಣೆಯೂ ಸ್ಪಷ್ಟ ಎಂದು ಕಂಡುಕೊಂಡ ಹೊಸತರಲ್ಲಿಯೇ ಸಿನಿಮಾದ ಜೊತೆಗೆ ಧ್ವನಿಯನ್ನೂ ಇರಿಸಿ ಸಂಲಗ್ನ ಮಾಡಿ ಧ್ವನಿಮುದ್ರಿತ ದೃಶ್ಯವನ್ನು ತೋರಿಸಬಹುದೆಂದೂ, ಹೀಗೆ ಚಲಿಸುವ ದೃಶ್ಯಕ್ಕೆ ಶ್ರವ್ಯ ದ್ರವ್ಯ (Sound Material) ಹೊಂದಿಕೊಳ್ಳುವುದಕ್ಕೆ (Synchronized) ಚಿತ್ರಕ್ಕಿಂತ ೨೦ ಫ್ರೇಮುಗಳ ಅಂತರದಲ್ಲಿ ಧ್ವನಿಯನ್ನು ಇರಿಸಿ ಪ್ರತಿ ತೆಗೆಯಬೇಕೆಂಬ ವಿವರ ತಿಳಿಯಿತು. ಇಷ್ಟಾದೊಡನೆ ಚಲನಚಿತ್ರ ನಿರ್ಮಾಣಕಾರರು ಧ್ವನಿಮುದ್ರಿತ ಚಿತ್ರಗಳನ್ನು ಒಂದರ ಹಿಂದೆ ಒಂದು ಎಂಬಂತೆ ತೆಗೆಯತೊಡಗಿದರು. ಸಿನಿಮಾ ಶೇಕಡ ನೂರರಷ್ಟು 'ಟಾಕಿ' ಆಗಿ ಹೋಯಿತು. ಇದರಿಂದಾಗಿ ಅವರೆಗೆ ಬೆಳೆದಿದ್ದ ಸಂಕಲನ ತಂತ್ರ ಸಂಪೂರ್ಣ ಮಾಸಿ ಹೋಯಿತು.

ವ್ಯಕ್ತಿಯೊಬ್ಬನ ಸಂತೋಷವನ್ನೋ, ಕೋಪವನ್ನೋ ತೋರಲು ಮೂಕಿ ಚಿತ್ರ ನಿರ್ದೇಶಕ ಕಟ್ಟಿಕೊಡುತ್ತಿದ್ದ ಸಂಕಲಿತ ಚಿತ್ರಿಕೆಗಳ ಸಾಲು (ಪುಡೋವ್ಕಿನ್‌ನ ಬೌದ್ಧಿಕ ಸಂಕಲನವನ್ನು ಮತ್ತೊಮ್ಮೆ ಗಮನಿಸಿ) ಸಂಪೂರ್ಣ ನಾಪತ್ತೆಯಾಗಿ ಮಾತು ಮತ್ತು ಹಿನ್ನೆಲೆ ಸಂಗೀತ ಆ ಜಾಗವನ್ನು ಆಕ್ರಮಿಸಿಕೊಂಡಿತು. ಸಿನಿಮಾ ಕಲೆಯ ಸಿದ್ಧಾಂತಿಗಳು ಧ್ವನಿ ಪ್ರವೇಶವನ್ನು ಸಂಪೂರ್ಣವಾಗಿ ಇಷ್ಟಪಡಲಿಲ್ಲ. ಸಿನಿಮಾದ ದೃಶ್ಯದಲ್ಲಿ ಧ್ವನಿ ಸಿಂಕ್ರೊನೈಜ್ ಆಗುವ ಬದಲು ಕೌಂಟರ್ ಪಾಯಿಂಟ್ ಆಗಬೇಕು ಎಂದು ಅವರು ಇಷ್ಟಪಟ್ಟರು. ಈ ಕುರಿತು ಅರ್ನೆಸ್ಟ್ ಲಿಂಡ್‌ಗ್ರನ್ ಹೇಳುವ ಮಾತುಗಳನ್ನು ಗಮನಿಸಿ:

''...ಧ್ವನಿ ಜೋಡಣೆ ತಂತ್ರದಿಂದ ಆದ ಲಾಭ ತೀರಾ ನಗಣ್ಯವಾದುದು. ಮೂಕಿ ಚಿತ್ರದಲ್ಲಿಯೂ ನಾಯಿ ಬೊಗಳುವುದನ್ನು ನೋಡಿದ್ದೇವೆ. ಟಾಕಿ ಚಿತ್ರದಲ್ಲಿ ಆ ನಾಯಿ ಬೊಗಳುವ ಶಬ್ದವನ್ನು ಸೇರಿಸುವುದು ನೈಜತೆಯ ದೃಷ್ಟಿಯಿಂದ ವಿಶೇಷವೇ ಆದರೂ ಚಿತ್ರಿಕೆಯೊಂದರ ಪ್ರತಿಮಾತ್ಮಕ ಗುಣಕ್ಕೆ ಹೊಸ ಲಾಭವೇನೂ ಆಗುವುದಿಲ್ಲ. ಮಾತು/ಸಂಭಾಷಣೆಯೂ ಅಷ್ಟೆ. ಮೌನದಲ್ಲಿಯೇ ತಿಳಿಯುತ್ತಿದ್ದ ಎಷ್ಟೋ ದೃಶ್ಯಗಳಿಗೆ ಟಾಕಿಯಲ್ಲಿ ಮಾತು ಸೇರಿಸಲಾಗುತ್ತದೆ. ಕುಪಿತ ತಂದೆ ತಪ್ಪು ಮಾಡಿದ ಮಗನಿಗೆ ಮನೆಯ ಬಾಗಿಲನ್ನು ತೋರುವ ಸಂಜ್ಞಾತ್ಮಕ ನಟನೆಯುಳ್ಳ ದೃಶ್ಯಕ್ಕೆ 'ನೀನು ಈ ಮನೆಯೊಳಗೆ ಕಾಲಿಟ್ಟು, ಮನೆಯ ಗೌರವವನ್ನು ಅಪವಿತ್ರ ಮಾಡದಿರು' ಎಂಬ ಮಾತು ಸೇರುವುದರಿಂದ ಹೊಸ ಲಾಭವಿದೆಯೇ ? ಇಂತಹ ಮಾತುಗಳಿಗಿಂತ ಮೂಕಿ ದೃಶ್ಯವೇ ಹೆಚ್ಚು ಪರಿಣಾಮಕಾರಿಯಾಗಿತ್ತು.''

ಲಿಂಡ್‌ಗ್ರನ್‌ನ ಈ ಮಾತುಗಳು ಇಂದಿಗೂ ನಮ್ಮಲ್ಲಿ ಬರುತ್ತಿರುವ ಅನೇಕ ಸಿನಿಮಾಗಳಿಗೆ ಅನ್ವಯಿಸುವಂತಹುದು. ಅದಕ್ಕೂ ಮುನ್ನ ಈ ಸ್ಥಿತಿಗೆ ಕಾರಣವಾದದ್ದೇನು ಎಂದು ಚರಿತ್ರೆಯನ್ನು ಗಮನಿಸೋಣ.

ಧ್ವನಿ ಪ್ರವೇಶ ಆಗುವ ಹೊತ್ತಿಗೆ ಬರುತ್ತಿದ್ದ ಅನೇಕ ಮೂಕಿ ಚಿತ್ರಗಳಲ್ಲಿ ಮಾತಿಗೆ ಬದಲಾಗಿ ಶೀರ್ಷಿಕೆಗಳನ್ನು ಸಿಕ್ಕಾಪಟ್ಟೆ ಬಳಸುವ ಅಭ್ಯಾಸ ಬಂದುಬಿಟ್ಟಿತ್ತು. ದೃಶ್ಯವೊಂದರ ಸುಲಲಿತ ನೋಟಕ್ಕೆ ಈ ಶೀರ್ಷಿಕೆಗಳು ಅಡ್ಡಿಯನ್ನುಂಟು ಮಾಡುತ್ತಿದ್ದವು. ಈ ದೃಷ್ಟಿಯಿಂದ ಹೊಸದಾಗಿ ಬಂದ ಟಾಕಿಯನ್ನು ಆಗಿನ ನಿರ್ದೇಶಕರುಗಳು ಬಳಸಿಕೊಂಡದ್ದು ತಪ್ಪಲ್ಲ. ಆದರೆ ಅಂತಹ ಬಳಕೆಗೆ, ಮತ್ತು ಆ ನಿರೂಪಣೆಗೆ ಅವರು ಆಯ್ದುಕೊಂಡ ಮಾರ್ಗ ರಂಗಭೂಮಿಯ ನಿರೂಪಣೆಯನ್ನು ಹೋಲುವಂತಿತ್ತು. ಇದಕ್ಕೆ ಆರಂಭ ಕಾಲದಲ್ಲಿ ಗ್ರಹಣವಾದ ಧ್ವನಿಯನ್ನು - ಚಿತ್ರೀಕರಣ ಸ್ಥಳದಲ್ಲಿಯೇ ಗ್ರಹಣವಾದ್ದನ್ನು - ಕತ್ತರಿಸಿ ಜೋಡಿಸುವುದು ಕಷ್ಟವೆಂಬ ಪರಿಸ್ಥಿತಿ, ಮತ್ತು ಸ್ಟುಡಿಯೋ ಪ್ರಾಂಗಣದ ನಡುವೆ ಇಟ್ಟ ಏಕೈಕ ಧ್ವನಿಗ್ರಾಹಕ (Mike) ಧ್ವನಿಯನ್ನು ಸೆರೆ ಹಿಡಿಯುತ್ತಾ ಇದ್ದದ್ದು, ಇವುಗಳ ಋಣ ಪಟ್ಟಿಯ ಸಂಲಗ್ನಗೊಂಡ ಒಂದೇ ಪ್ರತಿಯನ್ನು ತೆಗೆಯುತ್ತಾ ಇದ್ದದ್ದು ಇವೆಲ್ಲವೂ ಕಾರಣವಾಗಿತ್ತು. ಈ ಪರಿಸ್ಥಿತಿಯನ್ನು ಹೊಸ ತಂತ್ರವೊಂದರ ಆರಂಭಿಕ ಹಂತದ ಮುಗ್ಗರಿಸುವಿಕೆ ಎಂದೆನ್ನಬಹುದು. ಕಷ್ಟಗಳನ್ನು, ಅಡ್ಡಗೋಡೆಗಳನ್ನು ದಿನೆ-ದಿನೇ ದಾಟಲಾಯಿತು. ನಲವತ್ತರ ದಶಕದ ಅಂತ್ಯಕ್ಕೆ ಪಾಶ್ಚಾತ್ಯರಲ್ಲಿ, ಐವತ್ತರ ದಶಕದ ಮೊದಲ ಭಾಗದಲ್ಲಿಯೇ ಭಾರತದಲ್ಲಿ, ಅರವತ್ತರ ದಶಕದ ಆರಂಭದ ದಿನಗಳಲ್ಲಿ ಕನ್ನಡದಲ್ಲಿ ಈ ಸಮಸ್ಯೆಗೆ ಪರಿಹಾರವನ್ನು ಹುಡುಕಿಕೊಳ್ಳಲಾಯಿತು. ಈ ದೃಷ್ಟಿಯಿಂದ ಈ ಹಂತದ ಚರಿತ್ರೆಯನ್ನು ಕೇವಲ ಅಕಾಡೆಮಿಕ್ ಕುತೂಹಲಕ್ಕಾಗಿ ಗಮನಿಸಬೇಕಾಗುತ್ತದೆ. ತಂತ್ರ ಇಂದು ಬೆಳೆದಿರುವ ದೃಷ್ಟಿಯಿಂದ ಅಮುಖ್ಯವೆನಿಸಲೂ ಬಹುದು.

ಟಾಕಿ ಚಿತ್ರದ ಸುವರ್ಣಯುಗ ಅಥವಾ ಕ್ಲಾಸಿಕಲ್ ಯುಗವನ್ನು ನಾವು ಕಾಣುವುದು ಅಮೆರಿಕಾದಲ್ಲಿ ಆರ್ಸನ್‌ವೆಲ್ಸ್ ತರಹದ ನಿರ್ದೇಶಕರು ತಯಾರಿಸಿದ 'ಸಿಟಿಜನ್ ಕೇನ್' ಮೊದಲಾದ ಚಿತ್ರಗಳ ನಂತರದಿಂದ. ಈ ಹಂತದ ಚರಿತ್ರೆಗೆ ಹೋಗುವ ಮುನ್ನ ಧ್ವನಿಯ ಆಗಮನದಿಂದ ಸಂಕಲನ ವಿಭಾಗಕ್ಕೆ ಆದ ಲಾಭಗಳನ್ನು ಗಮನಿಸೋಣ.

ಮೂಕಿ ಚಿತ್ರದ ನಿರ್ದೇಶಕರು / ಸಂಕಲನಕಾರರು, ಕಥಾ ನಿರೂಪಣೆಗೆ ಮುಂಚೆ ಸುದೀರ್ಘ, ನಾಟಕೀಯ ಮತ್ತು ಸಪ್ಪೆ ಎನಿಸುವ ದೃಶ್ಯ ಪ್ರವೇಶದ ಚಿತ್ರಿಕೆಯನ್ನು ಬಳಸುತ್ತಿದ್ದರು. ಕಥೆಯಲ್ಲಿನ ಕಾಲಾಂತರವನ್ನು ಹೇಳುವುದಕ್ಕಾಗಿ ಶೀರ್ಷಿಕೆಗಳನ್ನು ಬಳಸುತ್ತಿದ್ದರು. ದೃಶ್ಯವೊಂದರಲ್ಲಿ ಪಾತ್ರದ ಭಾವವನ್ನು ಹೇಳಲಿಕ್ಕಾಗಿ ಅನೇಕ ಸಂಕೇತಗಳನ್ನು ಬಳಸುತ್ತಿದ್ದರು. ಇಂತಹ ವಿವರಗಳು ಟಾಕಿ ಚಿತ್ರದಲ್ಲಿ ಸರಳವಾದ ಮಾತಿನಿಂದ ಆಗಿಬಿಡುತ್ತವೆ. ಕಥೆಯೊಂದರಲ್ಲಿ ಪಾತ್ರ ಅಮೆರಿಕಾದಲ್ಲಿದೆಯೋ, ಫ್ರಾನ್ಸಿನಲ್ಲಿದೆಯೋ, ಭಾರತದಲ್ಲಿದೆಯೋ ಎಂಬುದನ್ನು ವಿಶೇಷ ಹಿನ್ನೆಲೆ ಬಳಸದೆ ಪಾತ್ರವೊಂದರ ಮಾತಿನಲ್ಲಿ 'ನಾನೀಗ ನ್ಯೂಯಾರ್ಕಿನಲ್ಲಿಯೋ, ಬೆಂಗಳೂರಿನಲ್ಲಿಯೋ ಇದ್ದೇನೆ' ಎಂದು ಹೇಳುವುದು ಟಾಕಿ ಚಿತ್ರದಲ್ಲಿ ಸುಲಭ. ಅದಕ್ಕಾಗಿ ಮೂಕಿ ಚಿತ್ರದಲ್ಲಿ ಆ ಊರಿನ ಯಾವುದೇ ಮುಖ್ಯ ಸ್ಥಳ (ಬೆಂಗಳೂರಾದರೆ - ವಿಧಾನಸೌಧ, ಪ್ಯಾರಿಸ್ ಆದರೆ - ಐಫೆಲ್ ಟವರ್) ತೋರಿಸುವುದು ಅಗತ್ಯ. ಆದರೆ ಇದು ಟಾಕಿಗೆ ಅನಿವಾರ್ಯವಲ್ಲ. ಈ ದೃಷ್ಟಿಯಿಂದ ಟಾಕಿ ಚಿತ್ರ ನಿರ್ದೇಶಕನಿಗೆ ಕಥನದ ಅವಧಿಯಲ್ಲಿ ಸಾಕಷ್ಟು ಉಳಿತಾಯ ಮಾಡಿಕೊಟ್ಟಿತು. ಸಂಕಲನಕಾರ ಮತ್ತು ನಿರ್ದೇಶಕರು ಪಾತ್ರ ಭಾವವನ್ನು, ಅದಿರುವ ಸ್ಥಳವನ್ನು ಹೇಳಲು ಬಳಸುತ್ತಿದ್ದ ಹೆಚ್ಚುವರಿ ಕಥನ (Narrative)ದ ಅವಧಿಯನ್ನು ಕಥೆಯ ವಿಸ್ತಾರಕ್ಕೆ ಕೊಡುವುದು ಸಾಧ್ಯವಾಯಿತು. ಇಷ್ಟಾದರೂ ಮಾತು ಹೆಚ್ಚಾಗಿ ಕಥೆಯ

(ಚಿತ್ರ ೪) ಆರಂಭ ಕಾಲದ ಸಂಕಲನಕಾರ ಫಿಲಂನ ಫ್ರೇಮ್‌ಗಳನ್ನು ಎಡಿಟಿಂಗ್ ಟೇಬಲಿನ ಗಾಜಿನ ಮೂಲಕ ಕಾಣುವ ಬೆಳಕಿನಲ್ಲಿ ಸಂಕಲನಕಾರರು ಪರಿಶೀಲಿಸಿ, ಅಗತ್ಯ ದೃಶ್ಯವನ್ನು ಹುಡುಕುತ್ತಿರುವುದು.

ಒತ್ತು ದೃಶ್ಯಕ್ಕಿಂತ ಶ್ರವ್ಯಕ್ಕೆ ಮತ್ತು ಅಭಿನಯದಲ್ಲಿ ಬಂದುಬಿಟ್ಟ ನಾಟಕೀಯತೆಗೆ ಹೆಚ್ಚು ದೊರೆಯಿತು. ಇದರಿಂದಾಗಿ ಕೈ ಮುರಿದಂತಾದ ಸಂಕಲನ ಕಲೆಯ ಸ್ಥಿತಿಗೆ ಬಿಡುಗಡೆ ದೊರೆಯುವಂತಹ ಚಿತ್ರಗಳನ್ನು ಜಾನ್‌ಫೋರ್ಡ್, ವಿಟ್ಟೋರಿಯ ಡಿಸಿಕ್ಕಾ, ಆರ್ಸನ್ ವೇಲ್ಸ್ ಮುಂತಾದ ನಿರ್ದೇಶಕರು/ಸಂಕಲನಕಾರರು ನಿರ್ಮಿಸಿದರು. ಒಟ್ಟಾರೆಯಾಗಿ ಟಾಕಿಯುಗ ಬೆಳೆದಂತೆ ಧ್ವನಿ ಮತ್ತು ದೃಶ್ಯಗಳನ್ನು ಸಮತೋಲನದಲ್ಲಿ ಬಳಸಬೇಕು ಎಂಬುದಕ್ಕಿಂತ ಕಥೆಯೊಂದನ್ನು ಪ್ರೇಕ್ಷಕನಿಗೆ ''ಸರಿಯಾಗಿ'' ತಲುಪುವಂತೆ ಬಳಸಬೇಕು ಎಂಬುದು ಸಂಕಲನಕಾರರಿಗೆ ಹಾಗೂ ನಿರ್ದೇಶಕರುಗಳಿಗೆ ಮನದಟ್ಟಾಯಿತು.

ಸಂಕಲನ ಮಾಡುವವರು ಯಾರು ?

ಟಾಕಿ ಚಿತ್ರದಿಂದ ಬೆಳೆದ ಸಿನಿಮಾ ವ್ಯಾಕರಣದಲ್ಲಿ ದೂರ ಚಿತ್ರಿಕೆ (ಲಾಂಗ್ ಶಾಟ್) ಮಧ್ಯಮ ಚಿತ್ರಿಕೆ (ಮಿಡ್ ಶಾಟ್), ಸಮೀಪ ಚಿತ್ರಿಕೆ (ಕ್ಲೋಸ್ ಶಾಟ್), ಹಿಂಚಲನ (ಫ್ಲಾಶ್ ಬ್ಯಾಕ್), ದೃಶ್ಯಮಿಶ್ರಣ (Dissolve), ಲಾಳ ಚಿತ್ರಿಕೆ (ಪ್ಯಾನ್ ಶಾಟ್), ಹಳಿಚಲನದ ಚಿತ್ರಿಕೆ (ಟ್ರ್ಯಾಕ್ ಶಾಟ್), ಇತ್ಯಾದಿ ವೈವಿಧ್ಯಗಳ ಪರಿಚಯ ಸಂಕಲನಕಾರರಿಗೆ ಆಗಿತ್ತು. ಅದು ಇಂದಿನವರೆಗೂ ಉಳಿದುಬಂದಿದೆ. ಇವೆಲ್ಲವೂ ಚಿತ್ರ ತಯಾರಕನ ಮೂಲದ್ರವ್ಯಗಳು. ಆದರೆ ಈ ದ್ರವ್ಯಗಳ ಬಳಕೆ ಹೇಗೆ ಮತ್ತು ಎಷ್ಟು ಹೊತ್ತು ಬಳಸಬೇಕೆಂಬ ನಿರ್ಧಾರವನ್ನು ಮೂಕಿ ಚಿತ್ರದ ಕಾಲದಲ್ಲಿ ನಿರ್ದೇಶಕನೇ ಸ್ವತಃ ಸಂಕಲನಕಾರನಾಗಿ ನಿರ್ವಹಿಸುತ್ತಿದ್ದ. ಈಗ ನಿರ್ದೇಶಕನಲ್ಲದೆ ಸಂಕಲನ ಮಾಡುವ ಮತ್ತೊಬ್ಬ ವ್ಯಕ್ತಿ/ತಂತ್ರಜ್ಞ ಚಿತ್ರ ನಿರ್ಮಾಣಕ್ಕೆ ಬಂದಿದ್ದಾನೆ. ಆತನ ಕೆಲಸವೇನು ? ನಿರ್ದೇಶಕ ಮಾಡುವುದೇನು ? ಚಿತ್ರಕಥಾ ಲೇಖಕ ಮಾಡುವುದೇನು ? ಚಿತ್ರವೊಂದರ ಸಂಕಲನ ಎಲ್ಲಿ ಆರಂಭವಾಗುತ್ತದೆ ? ಎಲ್ಲಿ ಮುಕ್ತಾಯವಾಗುತ್ತದೆ ? ಎಂಬ ಪ್ರಶ್ನೆ ಹುಟ್ಟುತ್ತದೆ.

ಧ್ವನಿಯ ಬಳಕೆ ಬಂದೊಡನೆ ಚಿತ್ರಗಳು ಕಥಾ ವಾಸ್ತವಕ್ಕೆ (ಅಂದರೆ ಕಥೆ ಸ್ವತಃ ಬೇಡುವ ವಾಸ್ತವಕ್ಕೆ) ಹತ್ತಿರವಾಗಲು ಪ್ರಯತ್ನಿಸಿದವು. ಚಿತ್ರದ ವಸ್ತು ಪೌರಾಣಿಕವಾಗಲಿ, ಚಾರಿತ್ರಿಕವಾಗಲಿ, ಸಮಕಾಲೀನವಾಗಲಿ ಅದನ್ನು ತೆರೆಯ ಮೇಲೆ ಕಟ್ಟಿಕೊಡುವ, ಅದು ಈ ನಿಮಿಷ ಕಣ್ಣೆದುರಿಗೆ ನಡೆಯುತ್ತಿದೆ ಎಂಬಂತೆ ಚಿತ್ರಿಸುವ ಪ್ರವೃತ್ತಿ ಬಂದಿತು. ಈ ದೃಷ್ಟಿಯಿಂದ ಮೂಕಿ ಚಿತ್ರಗಳ ಕಾಲದಲ್ಲಿ ಬಳಸುತ್ತಿದ್ದ ದೃಶ್ಯದ ನಡುವೆ ಬರುವ ವಿವರಗಳು, ಗ್ರಿಫಿತ್ ತನ್ನ 'ಬರ್ತ್ ಆಫ್ ಎ ನೇಷನ್' ಚಿತ್ರದಲ್ಲಿ ಬಳಸಿದ ಸಣ್ಣ ಅವಧಿಯ Flash back ಮತ್ತು ಆತನೇ ಬಳಸಿದ Mask Shotಗಳು ಇಂದು ಕೃತಕ ಮತ್ತು ಅವಾಸ್ತವ ಎನಿಸುತ್ತವೆ. ಅಂದು ಚಿತ್ರೀಕರಣವಾದ ಮೇಲೆ ಸಂಕಲನ ಕೋಣೆಯಲ್ಲಿ ಚಿತ್ರವನ್ನು ನಿರ್ದೇಶಕ/ಸಂಕಲನಕಾರ ತನ್ನಿಚ್ಛೆಗೆ ತಕ್ಕಂತೆ ಜೋಡಿಸುತ್ತಿದ್ದ. ಇಂದು ಎಲ್ಲವೂ ಪೂರ್ವಯೋಜಿತವಾಗಬೇಕಾದು ಅನಿವಾರ್ಯ ವೆನಿಸಿಬಿಟ್ಟಿದೆ. ಅಂದರೆ ಕಥೆಯೊಂದರ ನಿರಂತರತೆಯನ್ನು (Continuity/flow) ಕಾಪಾಡುವ ಕೆಲಸ. ಯಾವ ಹಂತದಲ್ಲಿ ಯಾವ ರೀತಿಯ ಚಿತ್ರಿಕೆ, ಯಾವ ಸ್ಥಳದಲ್ಲಿ, ಯಾವ ಕಾಲದಲ್ಲಿ ಚಿತ್ರಿತವಾಗಬೇಕೆಂಬುದನ್ನು ಮುಂಚಿತವಾಗಿ ಕಲ್ಪಿಸಿಕೊಂಡು ಬರೆಯಬೇಕಾದು ಲೇಖಕನ ಕೆಲಸವಾಗಿದೆ. ಇದಕ್ಕೆ ಚಿತ್ರದ ಕಚ್ಚಾ ಫಿಲ್ಮಿನ ಮೇಲೆ ಬಂದ ರೇಷನಿಂಗ್ ಪದ್ಧತಿಯಲ್ಲದೆ ಧ್ವನಿ ಮುದ್ರಣದ ವೆಚ್ಚ ಹೆಚ್ಚಿರುವುದು ಹಾಗೂ ಯೋಜಿತವಲ್ಲದ ಚಿತ್ರವೊಂದರ ನಿರ್ಮಾಣ ದುಡ್ಡು ಹಾಕುವವನನ್ನು ದಿಕ್ಕಿಲ್ಲದ ಸ್ಥಿತಿಗೆ ತರುತ್ತದೆ ಎಂಬುದು ಕಾರಣವಾಗಿದೆ. ಕಾರ್ಲ್ ರೀಸ್ ಮಾತಿನಲ್ಲಿ ಹೇಳುವುದಾದರೆ: ಧ್ವನಿ ಬಳಕೆಯುಳ್ಳ ಚಿತ್ರಗಳಲ್ಲಿ ಅಂತಿಮವಾಗಿ ಚಿತ್ರಿಕೆಗಳನ್ನು ಯಾವ ಕ್ರಮದಲ್ಲಿ ಜೋಡಿಸಬೇಕೆಂಬುದು ಚಿತ್ರೀಕರಣಕ್ಕೆ ಮುಂಚೆಯೇ ನಿರ್ಧರಿತವಾಗಬೇಕು. ಈ ದೃಷ್ಟಿಯಿಂದ ಸಂಕಲನ ಕ್ರಮ ನಿರ್ಧಾರದ ಜವಾಬ್ದಾರಿ ಸಂಕಲನಕಾರನಿಂದ ಬರಹಗಾರನಿಗೆ ಸಾಗಿದೆ''.

ಈ ಲೇಖಕನನ್ನು ಚಿತ್ರಕಥಾ ಲೇಖಕ ಅನ್ನುತ್ತಾರ. ಈತ ಚಿತ್ರದಲ್ಲಿ ಬರಬೇಕಾದ ಕ್ಯಾಮರಾ ಕೋನಗಳನ್ನು ಕಥೆಯ ಯಾವ ಪಾತ್ರದ ಮೇಲೆ ಒತ್ತು ಎಂಬರ್ಥದಿಂದ ಹೇಳಬೇಕಾಗುತ್ತದೆ. ಮಾತಿನ ಓಘ ಮತ್ತು ಲಯವಲ್ಲದೆ ಕಥನ (Narrative) ಓಘ ಮತ್ತು ಲಯವನ್ನು, ಅಂದರೆ ಟೈಮಿಂಗ್ ಅನ್ನು ಸ್ಪಷ್ಟ ಪಡಿಸಬೇಕಾಗುತ್ತದೆ. ಚಿತ್ರದ ನಿರೂಪಣಾ ವಿಧಾನ (Presentation)ವನ್ನು ತಿಳಿಸಬೇಕಾಗುತ್ತದೆ. ಇಲ್ಲಿ ಸೂಚಿಸಿದ ಟೈಮಿಂಗ್ ಅನ್ನುವ ವಿವರವೇ ಮೂಲತಃ ಜೀವರಹಿತವಾದ ಚಿತ್ರಿಕೆಯೊಂದಕ್ಕೆ ಜೀವ ಕೊಡುವಂತಹುದು. ಯಾವ ವೇಗ/ ಕಾಲದಲ್ಲಿ ಚಿತ್ರಿಕೆಯ ಜೊತೆಗೆ ಮತ್ತೊಂದು ಚಿತ್ರಿಕೆ ಹರಿದು ಬರುತ್ತದೆ ಎಂಬುದು ಅಂತಿಮವಾಗಿ ಸಂಕಲನದ ಕೋಣೆಯಲ್ಲೇ ನಿರ್ಧರಿತವಾಗಬೇಕಾದ್ದಾದರೂ ಅದನ್ನು ಚಿತ್ರಕಥಾ ಲೇಖಕ ಸ್ಪಷ್ಟಪಡಿಸದೆ ಹೋದರೆ, ಅಂತಿಮವಾಗಿ ತೆರೆಗೆ ಬರುವ ದೃಶ್ಯ ಪರಿಣಾಮಕಾರಿಯಾಗದೆಯೇ ಉಳಿಯಬಹುದು. ಇದು ವಿಶೇಷವಾಗಿ ಕಥೆಯ ಎರಡು ವಿಶಿಷ್ಟ ಘಟಕಗಳ ನಡುವೆ ಎಚ್ಚರವಹಿಸಬೇಕಾದ ವಿಷಯ. ಇದು ಚಿತ್ರ ಜಗತ್ತಿನ ಮತ್ತೊಂದು ವಿಶಿಷ್ಟ ಮತ್ತು ವಿಸ್ತಾರ ಹರಹಿನ ವಿಷಯ. ಕಥನದ ಘಟ್ಟಗಳು, ಕಥೆಯ ಏರಿಳಿತಗಳು ಇವು ಚಿತ್ರಕಥಾ ರಚನೆ ಎಂಬ ವಿಶಿಷ್ಟ ಮತ್ತು ಸ್ವಯಂಪೂರ್ಣ ಭಾಗದಲ್ಲಿ ಬರುವಂತಹುದು. ಆದ್ದರಿಂದ ಸಂಕಲನಕ್ಕೆ ವಿಶೇಷ ಒತ್ತುಕೊಟ್ಟ ಈ ಲೇಖನದಲ್ಲಿ ಆ ವಿಷಯ ಕುರಿತು ಹೆಚ್ಚು ವಿವರಗಳನ್ನು ನೀಡಿಲ್ಲ. ಒಂದು ದೃಶ್ಯದ ಉಪಸಂಹಾರ ಮತ್ತೊಂದು ದೃಶ್ಯದ ಮುನ್ನುಡಿಯಾಗಬೇಕಾದ್ದರಿಂದ ಇಲ್ಲಿ ಚಿತ್ರಕಥಾ ಲೇಖಕ ಎಡವಿದರೂ ಸಂಕಲನಕಾರ ಜಾಣನಾಗಿರಲೇಬೇಕು. ಇಷ್ಟಾದರೂ ಒಟ್ಟಾರೆಯಾಗಿ ಒಂದು ಟಾಕಿ ಚಿತ್ರದ ಸಂಕಲನ ಚಿತ್ರೀಕೃತ ಸರಕು ಸಂಕಲನ ಕೋಣೆಗೆ ಬರುವ ಎಷ್ಟೋ ದಿನಗಳಿಗಿಂತ ಮುಂಚಿತವಾಗಿಯೇ ಆರಂಭವಾಗಿರುತ್ತದೆ. ಈ ನಿಟ್ಟಿನಿಂದಲೇ ''ಚಿತ್ರವೊಂದು ತಯಾರಾಗುವುದು ಎರಡು ಮೇಜಿನ ಮೇಲೆ - ಒಂದು, ಚಿತ್ರಕಥಾ ಲೇಖಕನ ಮೇಜು; ಮತ್ತೊಂದು, ಸಂಕಲನಕಾರನ ಮೇಜು'' ಎಂಬ ನಾಣ್ಣುಡಿಯೊಂದು ಚಿತ್ರಜಗತ್ತಿನಲ್ಲಿ ಬಳಕೆಯಲ್ಲಿದೆ.

ಹಾಗಾದರೆ ಸಂಕಲನದ ಜವಾಬ್ದಾರಿ ಯಾರದ್ದು ? ಇದು ಚಿತ್ರತಂಡದಿಂದ ತಂಡಕ್ಕೆ ಬದಲಾಗುತ್ತದೆ. ಒಬ್ಬ ಅನುಭವಿ ಚಿತ್ರಕಥಾ ಲೇಖಕ ಸಂಪೂರ್ಣ ಜವಾಬ್ದಾರಿಯನ್ನು ತಾನೇ ಹೊರುತ್ತಾನೆ. ಒಬ್ಬ ಅನುಭವಿ ನಿರ್ದೇಶಕ ಎಲ್ಲ ನಿರ್ಧಾರಗಳನ್ನೂ ತಾನೇ ತೆಗೆದುಕೊಳ್ಳುತ್ತಾನೆ. ಇವರಿಬ್ಬರೂ ಜವಾಬ್ದಾರಿಗಳಿಂದ ದೂರ ಸರಿದಾಗ ಸಂಪೂರ್ಣ ಜವಾಬ್ದಾರಿ ಸಂಕಲನಕಾರನದ್ದಾಗುತ್ತದೆ. ಚಿತ್ರ ಚರಿತ್ರೆಯಲ್ಲಿ ನಿರ್ಮಾಣ ಸಂಸ್ಥೆಗಳನ್ನು, ನಿರ್ಮಿಸುತ್ತಿರುವ ವ್ಯಕ್ತಿಗಳನ್ನು ಆಧರಿಸಿ ಜವಾಬ್ದಾರಿ ಹೊರುವವರು ಬದಲಾಗುತ್ತಲೇ ಇರುತ್ತಾರೆ. ಅಮೆರಿಕಾದಂತಹ ದೇಶದಲ್ಲಿ ನಿರ್ಮಾಪಕ ಮತ್ತು ಲೇಖಕ ಪ್ರಬಲರಾಗಿರುತ್ತಾರೆ. ನಿರ್ದೇಶಕ ಮತ್ತಿತರ ತಂತ್ರಜ್ಞರು ಅವರ ಆಣತಿಯಂತೆ ದುಡಿಯುತ್ತಾರೆ. ಬ್ರಿಟನ್ನಿನಲ್ಲಿ ಚಿತ್ರ ನಿರ್ಮಿಸುವ ಸ್ಟುಡಿಯೋಗಳು ಸಂಪೂರ್ಣ ಜವಾಬ್ದಾರಿಯನ್ನು ನಿರ್ದೇಶಕನ ಮೇಲೆ ಹೇರುತ್ತವೆ. ಭಾರತದಲ್ಲಿ ಸಂದರ್ಭಕ್ಕೆ ತಕ್ಕಂತೆ ಇವೆರಡೂ ರೀತಿಯ ಪ್ರಯೋಗಗಳಾಗುತ್ತವೆ. ಆದರೂ ಚರಿತ್ರೆಯ ತಿಳಿವಳಿಕೆಯ ದೃಷ್ಟಿಯಿಂದ ಅಮೆರಿಕಾದ ಚಲನಚಿತ್ರ ನಿರ್ದೇಶಕ ಫ್ರಾಂಕ್‌ಕ್ಯಾಪ್ರ ೧೯೩೯ರಲ್ಲಿ ಬರೆದ ಈ ಪತ್ರವನ್ನು ಗಮನಿಸಿ. ''...ಇಂದು ಹಾಲಿವುಡ್ಡಿನಲ್ಲಿ ತಮ್ಮ ಇಚ್ಛೆಗೆ ತಕ್ಕಂತೆ ಚಿತ್ರೀಕರಿಸಿ, ಅಂತಿಮ ರೂಪ ಸಿದ್ಧಪಡಿಸುವ ಅವಕಾಶವಿರುವ ನಿರ್ದೇಶಕರ ಸಂಖ್ಯೆ ಅರ್ಧ ಡಜನ್ನಿನ ಸಂಖ್ಯೆಯನ್ನು ಮೀರುವುದಿಲ್ಲ... ನಾವು ಕಳೆದ ಮೂರು ವರ್ಷದಿಂದ

ನಿರ್ದೇಶಕರ ವೇದಿಕೆಯೊಂದನ್ನು ಏರ್ಪಡಿಸಲು ಹೆಣಗಿದ್ದೇವೆ... ಚಿತ್ರ ನಿರ್ದೇಶಕನಿಗೆ ಚಿತ್ರೀಕರಣಕ್ಕೆ ಮುಂಚೆ ಚಿತ್ರಕಥೆಯನ್ನು ಓದುವ ಮತ್ತು ಆ ಚಿತ್ರದ ಮೊದಲ ಪ್ರತಿಯನ್ನು ಪ್ರಸ್ತುತ ಪಡಿಸುವ ಅವಕಾಶ ಕೊಡಿ ಎಂಬುದಷ್ಟೇ ನಮ್ಮ ಬೇಡಿಕೆ. ನನ್ನ ಪ್ರಕಾರ ಇಂದು ಶೇಕಡ ೮೦ರಷ್ಟು ನಿರ್ದೇಶಕರು ತಮಗೆ ಸೂಚನೆ ನೀಡಿರುವಂತೆಯೇ ಚಿತ್ರೀಕರಣ ಮಾಡುತ್ತಾರೆ. ಅವರಲ್ಲಿ ಶೇಕಡ ೯೦ರಷ್ಟು ಜನಕ್ಕೆ ಕಥೆ ಹಾಗೂ ಸಂಕಲನ ಕ್ರಮವನ್ನು ಕುರಿತು ಯಾವುದೇ ಮಾತಾಡುವ ಅವಕಾಶವೂ ಇಲ್ಲ. ನಿರ್ದೇಶಕನ ಮಾಧ್ಯಮ ಎಂದು ಕರೆಸಿಕೊಂಡಿರುವ ಕಲಾ ಪ್ರಕಾರವೊಂದು ಈ ಸ್ಥಿತಿಯಲ್ಲಿರುವುದು ನಿಜವಾಗಿಯೂ ಖೇದದ ಸಂಗತಿ.''

ಈ ಪರಿಸ್ಥಿತಿ ಇಂದಿನ ಭಾರತದಲ್ಲೂ ಬಹುಮಟ್ಟಿಗೆ ಭಿನ್ನವೇನಲ್ಲ. ಹೆಸರಾಂತ ನಿರ್ದೇಶಕರು ಹಾಗೂ ತಂತ್ರಜ್ಞರಿಗೆ ಸಿಗುವ ಸ್ವಾತಂತ್ರ್ಯಗಳು ಉಳಿದವರಿಗೆ ಸಿಗುವುದೇ ಇಲ್ಲ. ಹೀಗಾಗಿ ಲೇಖಕನ ಅಧಿಕಾರ ಹೆಚ್ಚಿರುವ ಚಿತ್ರದಲ್ಲಿ ಸ್ವಾತಂತ್ರ್ಯವಿಲ್ಲದ ನಿರ್ದೇಶಕ ಚಿತ್ರಿಸಿದ ಸಿನಿಮಾ ಅವಕ್ಕೆ ತಕ್ಕಂತೆ ಮಾತುಮಯವಾಗುತ್ತದೆ ಮತ್ತು ಸ್ಥಗಿತವಾದ ನೀರಿನಂತೆ ಕಾಣುತ್ತದೆ. ಇನ್ನು ಯಾವುದೇ ಜನಪ್ರಿಯ ನಟನ ಹೆಸರಿನಿಂದಾಗಿ ಸಿದ್ಧವಾದ ಚಿತ್ರವಲ್ಲಿ ಕಥೆ ಹೆಣೆದಿರುವುದು ನಟನಿಗೆ, ಆತನನ್ನು ಮೆಚ್ಚುವ ಅಭಿಮಾನಿಗಳಿಗೆ ಮತ್ತು ಗಲ್ಲಾ ಪೆಟ್ಟಿಗೆಗೆ. ಹೀಗಾಗಿ ಸಂಕಲನಕಾರ ನಿರ್ದೇಶಕ ಕಥೆಯ ಅಗತ್ಯಕ್ಕಿಂತ ಪಾತ್ರಧಾರಿಯನ್ನು ಸರಿಯಾದ ರೀತಿಯಲ್ಲಿ ತೋರಿಸಲು ದುಡಿಯಬೇಕಾಗುತ್ತದೆ. ಹೀಗಾದಾಗ ''ತಾರಾ ಪದ್ಧತಿಯ ಚಿತ್ರೀಕರಣ ವ್ಯವಸ್ಥೆಯ ಅಂತಿಮ ಫಲಿತಾಂಶ ಸಾಧಾರಣ ಮಟ್ಟಕ್ಕಿಂತ ಕೆಳಗಿನ ಗುಣಮಟ್ಟವುಳ್ಳ ಚಿತ್ರಗಳು'' ಎಂಬ ಕಾರ್ಲ್ ರೀಸ್‌ನ ಮಾತುಗಳ ಹಿನ್ನೆಲೆಯಲ್ಲಿ ನಮ್ಮ ಕನ್ನಡ ಚಿತ್ರರಂಗದ ಕಳೆದ ನಲವತ್ತು ವರ್ಷದ ಇತಿಹಾಸವನ್ನು ಗಮನಿಸಿದರೆ ಅದು ತೀರಾ ಸ್ಪಷ್ಟವಾಗಿಯೇ ಕಾಣುವ ಸತ್ಯ. ಈ ಸಾಮಾನ್ಯೀಕೃತ ಮಾತಿಗೆ ಅಪವಾದವೆಂಬಂತೆ ಆಗಾಗ ಒಳ್ಳೆಯ ಚಿತ್ರಗಳೂ ಕಾಣಿಸಿಕೊಂಡಿವೆ. ಅವು ಹಾಲಿವುಡ್ಡಿನಲ್ಲಿ ಗ್ರೆಟಾಗಾರ್ಬೋ ನಟಿಸಿದ ಚಿತ್ರವಿರಬಹುದು, ಬಾಲಿವುಡ್ಡಿನಲ್ಲಿ ಗುಲ್ಜಾರ್, ಸಲೀಂ-ಜಾವೆದ್ ಬರೆದ ಚಿತ್ರಗಳಿರಬಹುದು, ನೆರೆಯ ತಮಿಳು ನಾಡಿನಲ್ಲಿ ಕೆ.ಬಾಲಚಂದರ್, ಭಾರತೀರಾಜ, ಮಣಿರತ್ನಂ ಮುಂತಾದವರು ಬರೆದು-ನಿರ್ದೇಶಿಸಿದ (ಒಂದರ್ಥಕ್ಕೆ ಸಂಕಲನವನ್ನು ಮಾಡಿದ - ಎಂದರೆ ಇಂಥಲ್ಲಿ ನಿರ್ದೇಶಕ ಹೆಚ್ಚು ಶಕ್ತಿಯುತವಾಗಿರುತ್ತಾನೆ. ಸಂಕಲನಕಾರ ಬೇರೆಯವನೇ ಆದರೂ ಆತ ಕೇವಲ ನಿರ್ದೇಶಕನ ಆಣತಿಯನ್ನು ತೆರೆಗೆ ತರುತ್ತಾನಷ್ಟೆ.) ಚಿತ್ರ ಇರಬಹುದು, ಕನ್ನಡವಲ್ಲಿ ಪುಟ್ಟಣ್ಣ ಕಣಗಾಲ್, ಗಿರೀಶ್ ಕಾಸರವಳ್ಳಿಯಂಥವರು ಚಿತ್ರಿಸಿದ ಸಿನಿಮಾಗಳಾಗಿರಬಹುದು.

ಇನ್ನೂ ಕೆಲವು ಚಿತ್ರಗಳಿವೆ. ಅವು ಮೂಲಭೂತವಾಗಿಯೇ ನಿರ್ದೇಶಕ/ಸಂಕಲನಕಾರರನ್ನು ಮೀರಿ ಬೇರೆ ಆಗುತ್ತವೆ. ಪ್ರೆಸ್ಟನ್ ಸ್ಟರ್ಜಸ್ (Preston Sturges)ನ ಚಿತ್ರಗಳು ಒಬ್ಬ ಅದ್ಭುತ ಸಂಭಾಷಣೆಕಾರನ ಚಿತ್ರವಾಗಿ ಮಾತ್ರ ಉಳಿಯುತ್ತವೆ. ಸಿಸಿಲ್ ಬಿ ಡಿಮಿಲಿ ನಿರ್ಮಿಸಿದ ಚಿತ್ರದಲ್ಲಿ ಎಲ್ಲ ತಂತ್ರಜ್ಞರಿಗಿಂತ ಕಲಾ ನಿರ್ದೇಶಕ ಮುಖ್ಯ ಆಗುತ್ತಾನೆ. ಇನ್ನು ಸಂಗೀತಮಯ ಚಿತ್ರವಲ್ಲಿ (ಉದಾಹರಣೆಗೆ : 'ಸೌಂಡ್ ಆಫ್ ಮ್ಯೂಸಿಕ್', 'ಫಿಡ್ಲರ್ ಆನ್ ದ ರೂಫ್', 'ವೆಸ್ಟ್ ಸೈಡ್ ಸ್ಟೋರಿ') ಸಂಗೀತ ಸಂಯೋಜಕ ಮತ್ತು ಗೀತರಚನೆಕಾರ ಮುಖ್ಯವಾಗುತ್ತಾನೆ. ಕನ್ನಡದ ಸಂದರ್ಭದಲ್ಲಿ ಕು.ರ.ಸೀ ಸಾಹಿತ್ಯ ಇರುವ 'ಅಣ್ಣ ತಂಗಿ', ಜಿ.ವಿ.ಅಯ್ಯರ್‌ರ 'ರಣಧೀರ ಕಂಠೀರವ', ಹುಣಸೂರು ಕೃಷ್ಣಮೂರ್ತಿ ಸಾಹಿತ್ಯದ 'ವೀರ ಸಂಕಲ್ಪ', 'ಭಕ್ತ ಕುಂಬಾರ', 'ಬಬ್ರುವಾಹನ'ದಂತಹ ಮಾತುಗಳೇ ಪ್ರಧಾನವಾದ ಚಿತ್ರಗಳಿವೆ. 'ಪ್ರೇಮಲೋಕ', 'ರಣಧೀರ'ದಂತಹ ಸಂಗೀತ ನಿರ್ದೇಶಕ/ಗೀತ ರಚನೆಕಾರ (ಹಂಸಲೇಖ) ಪ್ರಧಾನವಾದ ಚಿತ್ರಗಳು, 'ಪೋಲೀಸ್ ಸ್ಟೋರಿ', 'ಒನ್ ಮ್ಯಾನ್ ಆರ್ಮಿ'ಯಂತಹ ಸಂಭಾಷಣಾ ಲೇಖಕ (ಡೇವಿಡ್) ಮತ್ತು ಸಾಹಸ ನಿರ್ದೇಶಕರೇ (ಥ್ರಿಲ್ಲರ್ ಮಂಜು) ಪ್ರಧಾನವಾದ ಚಿತ್ರಗಳಿವೆ. ಇಂತಹ ಚಿತ್ರಗಳಲ್ಲಿ ಸಿನಿಮಾ ಎಂಬುದು ಒಟ್ಟಾರೆಯಾಗಿ ಪ್ರೇಕ್ಷಕನತ್ತ ಹರಿಯದೆ ವಾಸ್ತವದಿಂದ ದೂರ ಸರಿದ ನಿರೂಪಣಾಶೈಲಿಯೊಡನೆ ಗೊತ್ತಾದ ವಿಭಾಗದಲ್ಲಿ ಪರಿಣತಿ ಪಡೆದ ತಂತ್ರಜ್ಞನಿಂದ ತಕ್ಕ ವೈಶಿಷ್ಟ್ಯವನ್ನು ಪಡೆದುಕೊಳ್ಳುತ್ತವೆ.

ಒಟ್ಟಾರೆಯಾಗಿ ಸಿನಿಮಾಕ್ಕೆ ಧ್ವನಿ ಪ್ರವೇಶ ಆದ ಮೇಲೆ ಬಂದಿರುವ ಟಾಕಿ ಚಿತ್ರ ಚರಿತ್ರೆಯನ್ನು ಹೀಗೆ ಗುರುತಿಸಬಹುದು : ಟಾಕಿ ಯುಗದಲ್ಲಿ ಮೂಕಿ ಚಿತ್ರಗಳಿಗಿಂತ ಸಂಕೀರ್ಣವಾದ ಕಥೆಗಳನ್ನು ತರುವುದು ಸಾಧ್ಯವಾಗಿದೆ. ಇದರಿಂದಾಗಿ ಧ್ವನಿ ಸಿನಿಮಾಗಳು ಘಟನಾತ್ಮಕ ನಿರೂಪಣೆಯತ್ತ ಹೆಚ್ಚು ವಾಲಿಕೊಂಡು ಸಂಕೇತ ಮತ್ತು ಉಪಮೆಗಳನ್ನು ಬಳಸುವ ವಿವರಣಾತ್ಮಕ ನಿರೂಪಣೆಯಿಂದ ದೂರ ಸರಿದಿವೆ. ಈ ಕುರಿತು ಕಾರ್ಲ್ ರೀಸ್ ಹೀಗೆ ಹೇಳುತ್ತಾನೆ :

(ಚಿತ್ರ ೫) ಸಿಂಕ್ರನೋಮೀಟರ್ ಮತ್ತು ಸ್ಪ್ಲೈಸರ್ ಸಹಿತ ಎಡಿಟಿಂಗ್ ಟೇಬಲ್ - ಫಿಲಂ ಸಿಮೆಂಟ್ ಬಳಸಿ ಫಿಲಂನ ಎರಡು ಭಾಗಗಳನ್ನು ಅಂಟಿಸುತ್ತಿರುವ ಸಂಕಲನಕಾರ ಉಮೇಶ್

''...ಮೂಕಿ ಚಿತ್ರಗಳ ಅತ್ಯುತ್ತಮ ನಿರ್ದೇಶಕರೆನಿಸಿಕೊಂಡವರು ಸರಳ ಕಥಾ ಹಂದರವನ್ನು ವಿವರಣಾತ್ಮಕವಾಗಿ ಮತ್ತು ತಮ್ಮದೇ ಆದ ಪ್ರತಿಮಾತ್ಮಕ, ಸಂಜ್ಞಾತ್ಮಕ ನಿರೂಪಣೆಯೊಡನೆ ಪ್ರಸ್ತುತ ಪಡಿಸುತ್ತಿದ್ದರು. ಆದರೆ ಟಾಕಿ ಚಿತ್ರ ನಿರ್ದೇಶಕರು ಈವರೆಗೆ ನೇರ ನಿರೂಪಣೆಯನ್ನೇ ಬಳಸುತ್ತಿದ್ದಾರೆ. ಇಂದಿನ ಚಿತ್ರ ತಯಾರಿಕಾ ಕ್ರಮ ಸಾಮಾನ್ಯ ಪ್ರೇಕ್ಷಕನ ಅಭಿರುಚಿಗೆ ತಕ್ಕಂತೆ ಬಹುಮಟ್ಟಿಗೆ ನೇರವೂ, ಸರಳವೂ ಆಗಿದೆ. ವೇಗದ, ನಾಟಕೀಯವಾದ ನಿರೂಪಣೆಯೇ ಬಾಕ್ಸ್ ಆಫೀಸ್ ಯಶಸ್ಸಿಗೆ ಕಾರಣವಾಗಿದೆ ಮತ್ತು ಅಂತಹ ಯಶ ಸಾಧಿಸುವುದೇ ಬಹುತೇಕ ನಿರ್ದೇಶಕರ ಗುರಿಯೂ ಆಗಿದೆ.''

ಇದು ಜಗತ್ತಿನಾದ್ಯಂತ ಇರುವ ಚಿತ್ರೋದ್ಯಮಕ್ಕೆ ಹೇಳಬಹುದಾದ ಮಾತು. ಇಂತಹದೊಂದು ಯಶಸ್ಸನ್ನು ಹುಡುಕುತ್ತಾ ಹೋಗುವ ಸೂತ್ರದಿಂದಾಗಿ ಮೂಕಿ ಚಿತ್ರಗಳ ಕಾಲದ ಅನೇಕ ಉತ್ತಮ ನಿರೂಪಣಾ ತಂತ್ರಗಳು ವಿಶೇಷವಾಗಿ ಸಂಕಲನ ಸೂಕ್ಷ್ಮಗಳು ಟಾಕಿ ಚಿತ್ರದಲ್ಲಿ ಬಳಕೆಯೇ ಆಗಲಿಲ್ಲ. ಈ ಮಾತಿಗೆ ಅಪವಾದ ಎಂಬಂತೆ ಐವತ್ತರ ದಶಕದಲ್ಲಿ ಹೊಸಅಲೆ ಎಂಬ ಚಿತ್ರ ಚಳವಳಿ ಹುಟ್ಟಿಕೊಂಡಿತು. ಆದರೆ ಈ ಚಿತ್ರಗಳಲ್ಲಿ ಆದ ಪ್ರಯೋಗಗಳನ್ನು ಗುರುತಿಸಿ, ಮೆಚ್ಚಿಕೊಳ್ಳುವ ಗುಣ ಪ್ರೇಕ್ಷಕನಿಂದ ಮಾಯವಾಗುವಂಥ ಸ್ಥಿತಿಗೆ ಜನಪ್ರಿಯ ಸಿನಿಮಾಗಳು ಅವನ ಮನಸ್ಸನ್ನು ಮೊಂಡು ಮಾಡಿಬಿಟ್ಟಿದ್ದವು. ಹೀಗಾಗಿ ಸರಳವಾಗಿಲ್ಲದ, ಸಂಕೇತಗಳನ್ನು ಬಳಸಿಕೊಂಡ ಕಥನ ವಿನ್ಯಾಸವಿದ್ದ ಪ್ರಾಯೋಗಿಕ ಸಿನಿಮಾಗಳು ಕೆಲವು ಆಸಕ್ತರನ್ನು, ಅಕಾಡೆಮಿಷಿಯನ್ಸ್‌ಗಳನ್ನು ಹೊರತುಪಡಿಸಿ ಉಳಿದವರನ್ನು ತಲುಪಲು ಸಾಧ್ಯವೇ ಆಗಲಿಲ್ಲ. ಆದರೆ ಇಂತಹ ಪ್ರಯೋಗದಿಂದ, ಧ್ವನಿ ಬಳಸಿದ ಸಿನಿಮಾಗಳಲ್ಲೂ, ಐಸೆನ್‌ಸ್ಟೈನ್‌ನ ಸಿದ್ಧಾಂತವಾದ ಬೌದ್ಧಿಕ ಸಂಕಲನ ಮತ್ತು ರಿಲೇಷನಲ್ ಎಡಿಟಿಂಗ್‌ನಂತಹವುಗಳ ವಿಸ್ತರಣೆ ಟಾಕಿ ಚಿತ್ರದಲ್ಲೂ ಸಾಧ್ಯ ಎಂಬುದು ಸಾಬೀತಾಯಿತು. ಉದಾಹರಣೆಗಾಗಿ : ಬಾಸಿಲ್ ರೈಟ್ ಮತ್ತು ಹಂಫ್ರಿ ಜೆನ್ನಿಂಗ್ಸ್ ಮೂವತ್ತರ ದಶಕದಲ್ಲಿ ಚಿತ್ರಿಸಿದ 'ಸಾಂಗ್ ಆಫ್ ಸಿಲೋನ್' ಎಂಬ ಸಾಕ್ಷ್ಯ ಚಿತ್ರವನ್ನು ಗಮನಿಸಬಹುದು. ಒಂದು ಐಡಿಯಾಗಾಗಿ ಕಾಲೈಕ್ಯ, ಸ್ಥಳೈಕ್ಯಗಳನ್ನು ಗಮನಿಸದೆಯೂ ಚಿತ್ರವನ್ನು ಸಂಕಲನ ಮಾಡಬಹುದೆಂಬುದನ್ನು ಇವರಿಬ್ಬರೂ ತೋರಿಸಿಕೊಟ್ಟರು. ಇಂತಹುದೇ ಪ್ರಯೋಗವನ್ನು ಗಿರೀಶ್ ಕಾಸರವಳ್ಳಿಯವರು ನಿರ್ದೇಶಿಸಿದ ಕೆ.ಕೆ.ಹೆಬ್ಬಾರ್ ಅವರನ್ನು ಕುರಿತ ಸಾಕ್ಷ್ಯಚಿತ್ರದಲ್ಲಿ ಗಮನಿಸಬಹುದು. ಈ ಪ್ರಯೋಗಗಳ ಚಾರಿತ್ರಿಕ ವಿವರಗಳಿಗೆ ಸಾಗುವ ಮುನ್ನ ಟಾಕಿ ಚಿತ್ರದಲ್ಲಿ ಸಂಕಲನ ಹೇಗಾಗುತ್ತದೆ ಎಂಬುದನ್ನು ಸ್ಥೂಲವಾಗಿ ಗಮನಿಸೋಣ.

ಸಂಕಲನ ಕ್ರಮ

ಚಲನಚಿತ್ರಕ್ಕೆ ಇರುವ ಚಲನೆಯನ್ನು ಹಿಡಿಯುವ ಗುಣ, ಕಥನ ಕ್ರಿಯೆಯನ್ನು ಚಿತ್ರಿಕೆಯಿಂದ ಚಿತ್ರಿಕೆಗೆ ಹಾರುತ್ತಾ ಯಾವುದೋ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಕ್ಷಣಾರ್ಧದಲ್ಲಿ ಸಾಗಿಬಿಡುವ ನಿರೂಪಣಾ ಸಾಮರ್ಥ್ಯ (ಇದು ಸಂಕಲನದಿಂದ ಬಂದುದು), ಈ ಗುಣಗಳೇ ಅದು ಈ ಮಟ್ಟದ ಯಶ ಪಡೆಯಲು ಕಾರಣವಾದದು. ಮೌಖಿಕವಾಗಿ ಕಥೆ ಹೇಳುವವರು (ನಮ್ಮಲ್ಲಿನ ಹರಿಕಥೆಯಂತಹದು) ಎಷ್ಟೆಲ್ಲ

ವಿವರಗಳನ್ನು ನೀಡುತ್ತಾ ಕಥೆಯನ್ನು ಬಿಡಿಸುವ ಬಗೆಯನ್ನು, ಕಥೆ ಕಾದಂಬರಿಯಲ್ಲಿ ಪುಟಗಟ್ಟಲೆಯಾಗುವ ವರ್ಣನೆಯನ್ನು ಸಿನಿಮಾ ಕ್ಷಣಾರ್ಧದಲ್ಲಿ ತೋರುವ ಸಾಮರ್ಥ್ಯ ಹೊಂದಿತ್ತು. ಅಲ್ಲದೆ ರಂಗಭೂಮಿಗೆ ಇರುವ ಒಂದೇ ಸ್ಥಳದಲ್ಲಿ ಬೇರೆ ಬೇರೆಯ ಹಿನ್ನೆಲೆಯನ್ನು ಕೃತಕವಾಗಿ ಜೋಡಿಸಿಡುವ ಮಿತಿಯನ್ನು ದಾಟಿಕೊಂಡು ಆಯಾ ಹಿನ್ನೆಲೆಯಿರುವ ವಾಸ್ತವ-ನೈಜ ಸ್ಥಳಕ್ಕೆ ಹೋಗುವುದು ಸಿನಿಮಾಗೆ ಸುಲಭವಾಗಿ ಸಾಧ್ಯವಾಗುತ್ತಿತ್ತು. ಇದಲ್ಲದೆ ಒಮ್ಮೆ ಮಾಡಿದ ನಾಟಕವನ್ನು ಮತ್ತೊಂದು ಊರಿಗೆ ಕೊಂಡೊಯ್ಯುವಾಗ ರಂಗಭೂಮಿಗೆ ಆಗುತ್ತಿದ್ದ ಕಷ್ಟಗಳನ್ನು ದಾಟಿಕೊಂಡಿದ್ದ ಈ ಹೊಸ ಮಾಧ್ಯಮ ಒಂದು ಸಂಕಲಿತ ಪ್ರತಿಯ ಅನೇಕ ಮರುಪ್ರತಿಗಳನ್ನು ತೆಗೆದು ಏಕಕಾಲಕ್ಕೆ ಹಲವು ಊರುಗಳಲ್ಲಿ ಪ್ರದರ್ಶಿಸಬಲ್ಲ ಶಕ್ತಿಯನ್ನು ಪಡೆದಿತ್ತು. ಹೀಗಾಗಿಯೇ, ಅಂದರೆ ಪ್ರತಿಗಳನ್ನು ನಿರ್ಮಿಸುವ, ಅವುಗಳನ್ನು ನಿರ್ವಹಿಸುವ ಸಾಮರ್ಥ್ಯದಿಂದಲೇ ಸಿನಿಮಾವನ್ನು ಉದ್ಯಮ ಎಂದು ಕರೆಯಲು ಸಾಧ್ಯವಾದದ್ದು. ಉದ್ಯಮ ಎಂದೊಡನೆ ಸಿನಿಮಾ ತನ್ನ ಕೆಲಸಗಳನ್ನೆಲ್ಲ ಸೂತ್ರಬದ್ಧವಾಗಿಸಲು ಪ್ರಯತ್ನಿಸುವುದು ಸಹಜ. ಈ ಸೂತ್ರೀಕರಣ ಚಿತ್ರಕಥಾ ನಿರೂಪಣೆಯ ಕ್ರಮದಿಂದ ಸಂಕಲನದವರೆಗೆ, ನಂತರದ ಪ್ರತಿ ತೆಗೆಯುವ ಕ್ರಿಯೆಯ ತನಕ ಎಲ್ಲಾ ಹಂತಗಳಿಗೆ ಹರಡಿಕೊಂಡಿದೆ. ಈ ಸೂತ್ರೀಕರಣವು ಸಂಕಲನ ತಂತ್ರ ಮತ್ತು ಸಿನಿಮಾದ ನಿರೂಪಣಾ ತಂತ್ರದ ಮೇಲೆ ಹೇಗೆ ಪರಿಣಾಮ ಬೀರಿದೆ ಎಂಬುದನ್ನು ಮಾತಿನ ದೃಶ್ಯ, ಸಾಹಸ ದೃಶ್ಯ, ಹಾಸ್ಯ ದೃಶ್ಯ, ಮಾಂಟಾಜ್ ದೃಶ್ಯ ಎಂಬ ಸರಳ ವಿಭಾಗೀಕರಣ ಮಾಡಿಕೊಂಡು ಗಮನಿಸೋಣ.



(ಚಿತ್ರ ೬) ಸಂಕಲನದ ಮೇಜು (Editing Table)

ಸಾಹಸ

ಮೂಕಿ ಚಿತ್ರಗಳ ಕಾಲದಲ್ಲಿ ಸಾಹಸ ದೃಶ್ಯ ನಿರೂಪಣೆಗಾಗಿ ಮಾಡಿದ ಪ್ರಯೋಗಗಳೇ ಸಿನಿಮಾ ಸಂಕಲನದ ಅಭಿವೃದ್ಧಿಗೆ ಕಾರಣವಾಯಿತು. ಇಂತಹ ಸಾಹಸ ದೃಶ್ಯಗಳ ಕಚ್ಚಾ ಪ್ರಯೋಗಗಳು ಆದದ್ದು ಪೋರ್ಟರ್‌ನ ಸಿನಿಮಾಗಳಲ್ಲಿ. ನಂತರ ಗ್ರಿಫಿತ್ ತನ್ನ ಚಿತ್ರಗಳಲ್ಲಿ ಸಮಾನಾಂತರ ಛೇದ (ಪ್ಯಾರಲಲ್ ಕಟಿಂಗ್ ಅಥವಾ ಕ್ರಾಸ್ ಕಟಿಂಗ್) ಬಳಸಿದ. ಆ ಮೂಲಕ ತಾನು ಕಟ್ಟುತ್ತಿದ್ದ ದೃಶ್ಯಕ್ಕೆ ಬೇಕಾಗಿದ್ದ ಕಾಲೈಕ್ಯವನ್ನು, ಲಯವನ್ನು ಸಾಧಿಸಿದ. ಒಬ್ಬ ವ್ಯಕ್ತಿಯನ್ನು ಮತ್ತೊಬ್ಬ ಅಟ್ಟಿಸಿಕೊಂಡು ಹೋಗುವ ದೃಶ್ಯದಲ್ಲಿ ತಪ್ಪಿಸಿಕೊಂಡು ಓಡುತ್ತಿರುವವನ ಚಿತ್ರಿಕೆಯಿಂದ ಬೆನ್ನತ್ತಿ ಓಡುತ್ತಿರುವವನ ಚಿತ್ರಿಕೆಗೆ, ಅಲ್ಲಿಂದ ಈ ಓಟವನ್ನು ಗಮನಿಸುತ್ತಿರುವ ಓಟದ ಹಾದಿಯ ಮಧ್ಯೆ ಇರುವ ನೋಡುಗನಿಗೆ. ಹೀಗೆ ನೈಕಟ್ಯವನ್ನು ಮಾಡುತ್ತಾ, ಓಡುವವರ ಚಿತ್ರಿಕೆಯ ನಡುವೆ ಬರುವ ಚಲನ ರಹಿತ ನೋಡುಗನ ಚಿತ್ರಿಕೆಯಿಂದ ಓಡುತ್ತಿರುವವರ ವೇಗಕ್ಕೆ ಒತ್ತು ಕೊಡುವ ಪ್ರಯತ್ನ ಮಾಡಿದ. ಇಂದಿಗೂ ಇಂತಹ ದೃಶ್ಯಗಳ ಸಂಕಲನ ಅದೇ ರೀತಿಯಲ್ಲಿದೆ. ಈ ಸೂತ್ರದ ಮೂಲಕವೇ 'ಛೇಸ್' ದೃಶ್ಯಕ್ಕೆ ಯಶ ದೊರೆಯುವುದೆಂಬ ಭಾವನೆ ಸಿನಿಮಾ ಉದ್ದಿಮೆಯಲ್ಲಿ ಮೂಡಿಬಿಟ್ಟಿದೆ.

ಇಲ್ಲಿ ಸಂಕಲನಕಾರನ ಜಾಣ್ಮೆ (ನಿರೂಪಕ/ನಿರ್ದೇಶಕನ ಜಾಣ್ಮೆ) ಕಾಣುವುದು ಇಡೀ ದೃಶ್ಯ ಯಾರ ದೃಷ್ಟಿಕೋನದಿಂದ ನೋಡಲಾಗುತ್ತಿದೆ ಎಂಬ ಸೂಚನೆಯಿಂದ. ಉದಾಹರಣೆಗೆ : ತಪ್ಪಿಸಿಕೊಳ್ಳುತ್ತಿರುವ ಕಳ್ಳನನ್ನು ನಾಯಕನಾದ ಇನ್‌ಸ್ಪೆಕ್ಟರ್ ಪಾತ್ರಧಾರಿ ಹಿಂಬಾಲಿಸುತ್ತಾ ಇದ್ದರೆ ಪ್ರೇಕ್ಷಕನಲ್ಲಿ ನಾಯಕ ಹಿಡಿಯಲು ಎದುರಾಗುವ ಅಡ್ಡಿಗಳು, ಅದನ್ನವನು ದಾಟಿಕೊಂಡು ಗೆಲ್ಲುವುದರ ವೈಭವೀಕರಣವಿರುತ್ತದೆ. ಪರಿಸ್ಥಿತಿ ತಿರುವು ಮುರುವಾಗಿ ನಾಯಕ ಪಾತ್ರಧಾರಿಯನ್ನು ಇನ್ನಾರೊ ಬೆನ್ನತ್ತಿದರೆ ಆಗ ನಾಯಕ ಸಿಕ್ಕಿ ಬೀಳುವನೋ ಎಂಬ ಆತಂಕದೊಡನೆಯೇ, ಆತ ತಪ್ಪಿಸಿಕೊಳ್ಳಲಿ ಎಂದು ಪ್ರೇಕ್ಷಕ ಪ್ರಾರ್ಥಿಸುವಂತಹ ಸಂಕಲನ, ಆ ಮೂಲಕ ನಾಯಕ ಪಾತ್ರದ ವೈಭವೀಕರಣ ಇರುತ್ತದೆ. ಇಂತಹುದಕ್ಕೆ ಉದಾಹರಣೆಯಾಗಿ, ರಾಜಕುಮಾರ್ ಅಭಿನಯದ 'ನಾನೊಬ್ಬ ಕಳ್ಳ' ಚಿತ್ರವನ್ನು, ಮೊದಲ ವರ್ಗಕ್ಕೆ ಉದಾಹರಣೆಯಾಗಿ ರಾಜಕುಮಾರ್ ಅಭಿನಯದ ಬಾಂಡ್ ಸಿನಿಮಾಗಳನ್ನು ಅಥವಾ 'ಶಂಕರ್ ಗುರು' ಚಿತ್ರವನ್ನು ನೋಡಬಹುದು.

ಈ Cross Cuttingನಿಂದ ಒಂದು ಭೌತಿಕ ಸಂಘರ್ಷವುಳ್ಳ ದೃಶ್ಯ ನಿರಂತರತೆಯನ್ನು ಕಡಿದುಕೊಳ್ಳದೆ ಪ್ರೇಕ್ಷಕನನ್ನು ತಲುಪುತ್ತಿರುತ್ತದೆ. ಆದರೆ ಒಂದು ಸಾಮಾನ್ಯ ದೃಶ್ಯ ಅಥವ ನೇರ ಕಥಾ ದೃಶ್ಯಕ್ಕಿಂತ ಇಂತಹ ದೃಶ್ಯಗಳು ಸಂಕಲನಕಾರನಿಗೆ ಸವಾಲಾಗುತ್ತವೆ. ಏಕೆಂದರೆ ಪ್ರತಿ ಛೇದವೂ ಹಿಂದಿನ ಚಿತ್ರಿಕೆಯ ಚಲನೆಯನ್ನೇ ಮುಂದುವರೆಸುತ್ತಾ ಇರುತ್ತದೆ. ಹೀಗಾಗಿ ಪ್ರೇಕ್ಷಕನಿಗೆ ಗೊಂದಲವೇಳುವುದು ಸಹಜ. ಆದಾಗದಂತೆ ಪ್ರೇಕ್ಷಕನಿಗೆ ತಪ್ಪಿಸಿಕೊಳ್ಳುತ್ತಿರುವವನ ಮತ್ತು ಬೆನ್ನಟ್ಟುತ್ತಿರುವವನ ನಡುವಿನ ದೂರ, ಅಟ್ಟಿಸಿಕೊಂಡು ಹೋಗುತ್ತಿರುವ ಕಾರಣ ಮತ್ತು ದೃಶ್ಯ ನಡೆಯುತ್ತಿರುವ ಸ್ಥಳ ಇವಿಷ್ಟೂ ವಿವರಗಳನ್ನು ನೀಡಿದ ನಂತರವೇ ಆತ ದೃಶ್ಯದ ವೇಗವನ್ನು ಹೆಚ್ಚಿಸುವಂತೆ ಛೇದಗಳ ನಡುವಿನ ಅಂತರವನ್ನು ಕಡಿಮೆ ಮಾಡುತ್ತಾ ಸಾಗಲು ಸಾಧ್ಯ. ಹೀಗೆ ಛೇದದ ಅಂತರ ಕಡಿಮೆಯಾದಾಗ ಮಾತ್ರ ಇಂಥ ದೃಶ್ಯಕ್ಕೆ ಭಾವ ತೀವ್ರತೆ, ನಾಟಕೀಯತೆ ದೊರೆಯುತ್ತದೆ. ಇಂಥಲ್ಲಿ ಸಂಕಲನಕಾರ ಕೇವಲ ವೇಗವನ್ನು ಮಾತ್ರ ಹೆಚ್ಚಿಸಿಬಿಟ್ಟರೆ ಅಂತಿಮ ಪರಿಣಾಮದಲ್ಲಿ ಪ್ರೇಕ್ಷಕನಿಗೆ ತಲುಪಬೇಕಾದ್ದು ತಲುಪದೇ ಹೋಗಬಹುದು. ಇದಕ್ಕೆ ಉದಾಹರಣೆಯಾಗಿ ವಿ.ರವಿಚಂದ್ರನ್ ನಿರ್ದೇಶನದ ಸುರೇಶ್ ಅರಸ್ ಸಂಕಲನವಿದ್ದ 'ಕಲಾವಿದ' ಚಿತ್ರವನ್ನು ಗಮನಿಸಬಹುದು. ಚಿತ್ರದ ಮಧ್ಯ ಭಾಗದಲ್ಲಿ ಹುಚ್ಚು ಹಿಡಿದಿರುವ ನಾಯಕ ಕುದುರೆಯ ಮೇಲೆ ಕೂತಿರುವಾಗ ಕಾರಿನಲ್ಲಿ ಕುಳಿತ ವ್ಯಕ್ತಿಯೊಬ್ಬನನ್ನು ನೋಡುತ್ತಾನೆ. ಅವನಿಗೆ ಆತನನ್ನು ಕಂಡೊಡನೆ ಕೋಪ ಬಂದು ಕಾರನ್ನು ಹಿಂಬಾಲಿಸತೊಡಗುತ್ತಾನೆ. ನಾಯಕನ ಬಗ್ಗೆ ಆಸ್ಥೆಯುಳ್ಳ ನಾಯಕಿ ನಾಯಕನನ್ನು ಕಾರಿನಲ್ಲಿ ಹಿಂಬಾಲಿಸುತ್ತಾಳೆ. ಮುಂದೆ ಸಾಗುತ್ತಿರುವ ಕಾರಿನಲ್ಲಿರುವವನಿಗೆ ಹಿಂದೆ ಅಟ್ಟಿಸಿಕೊಂಡು ಬರುತ್ತಿರುವ ನಾಯಕನ ವಿಷಯ ತಿಳಿಯದು. ನಾಯಕನಾದರೋ ಕುದುರೆಯ ಮೇಲಿದ್ದಾನೆ. ಆತನ ಹಿಂದೆ ನಾಯಕಿ ಮತ್ತೊಂದು ಕಾರಿನಲ್ಲಿ. (ಅಶ್ವ ಶಕ್ತಿಯ ದೃಷ್ಟಿಯಿಂದ ದೃಶ್ಯ ಅತಾರ್ಕಿಕವಾದರೂ ನಾಯಕನ ಪಾತ್ರದ ವೈಭವೀಕರಣಕ್ಕಾಗಿ ಭಾರತೀಯ ವಾಣಿಜ್ಯ ಪ್ರಧಾನ ಚಿತ್ರಗಳಲ್ಲಿ ಇಂತಹ ದೃಶ್ಯಗಳು ಬರುತ್ತವೆ.) ಹೀಗಾದಾಗ ನಗರದ ನಡುವಿನ ವಾಹನ ಚಲನೆಯಲ್ಲಿ ಅನೇಕ ಗೊಂದಲಗಳಾಗುತ್ತವೆ. ಅವು ಅನೇಕ ಸಣ್ಣ ಘಟನೆಗಳಾಗಿ ದೃಶ್ಯದುದ್ದಕ್ಕೂ ಕಾಣಿಸುತ್ತವೆ. ಆದರೆ ನಾಯಕ ಯಾಕೆ ಆ ವ್ಯಕ್ತಿಯ ಬೆನ್ನು ಹತ್ತಿದ್ದಾನೆ ಎಂಬ ವಿವರ ಸಿಕ್ಕದೆ ಇಡೀ ದೃಶ್ಯ ಪ್ರೇಕ್ಷಕನನ್ನು ಗೊಂದಲಕ್ಕೀಡು ಮಾಡುತ್ತದೆ. ಈ ದೃಶ್ಯ ನಡೆದು ಎಷ್ಟೋ ಹೊತ್ತಾದ ಮೇಲೆ ನಾಯಕ ಬೆನ್ನು ಹತ್ತಿದ್ದದ್ದು ಖಳನಾಯಕನನ್ನು ಎಂದು ತಿಳಿಯುತ್ತದಾದರೂ ಅಷ್ಟು ಹೊತ್ತಿಗೆ ಬಂದು ಹೋಗಿರುವ ಛೇಸ್ ದೃಶ್ಯ ಪ್ರೇಕ್ಷಕನನ್ನು ಕಥೆಯಿಂದ ದೂರ ತಳ್ಳಿಬಿಟ್ಟಿರುತ್ತದೆ.[*] ಇದೇ ನಿರ್ದೇಶಕರ ಮತ್ತೊಂದು ಚಿತ್ರ 'ಪುಟ್ನಂಜ'ದ ಆರಂಭದಲ್ಲಿ ಇಂತಹುದೇ ಒಂದು ಛೇಸ್ ದೃಶ್ಯ ಬರುತ್ತದೆ. ಅಲ್ಲಿ ಹಳ್ಳಿಯ ಮುಗ್ಧ ಪಾತ್ರವಾದ ನಾಯಕ, ನಾಯಕಿಯ ಪಾತ್ರದ ಭೇಟಿಗೆಂದು ಮೋಟಾರು ಬೈಕ್ ಏರಿ ಬರುತ್ತಿದ್ದಾನೆ. ನಗರದ ಟ್ರಾಫಿಕ್ ರೂಲ್ಸುಗಳ ಪರಿಚಯ ಇಲ್ಲದ ನಾಯಕ ಯಾವುದೋ ಏಕಮುಖಿ ಸಂಚಾರದ ರಸ್ತೆಯಲ್ಲಿ ವಿರುದ್ಧ ದಿಕ್ಕಿನಲ್ಲಿ ಗಾಡಿ ಓಡಿಸುತ್ತಾನೆ. ಆತನನ್ನು ಪೊಲೀಸನೊಬ್ಬ ಬೆನ್ನಟ್ಟಿ ಬರುತ್ತಾನೆ. ಆದರೆ ನಾಯಕನಿಂದ ಅಡ್ಡಾದಿಡ್ಡಿಯಾದ ನಗರ ಸಂಚಾರದ ವ್ಯವಸ್ಥೆಯಿಂದಾಗಿ ಪೊಲೀಸನಿಗೆ ನಾಯಕನನ್ನು ತಲುಪಲು ಸಾಧ್ಯವಾಗದ ಸ್ಥಿತಿ ಉಂಟಾಗುತ್ತದೆ. ಹೀಗಾಗಿ ಇಡೀ ದೃಶ್ಯಕ್ಕೆ ಅದರ ವೇಗದ

. ಈ ಚಿತ್ರಕ್ಕೆ ಈ ಲೇಖಕ ಸ್ವತಃ ಸಂಭಾಷಣೆ, ಸಹ ನಿರ್ದೇಶನ ನೀಡಿದ್ದ. ಚಿತ್ರೀಕರಣವಾದ ಚಿತ್ರಕಥೆಯಲ್ಲಿ ಖಳನ ಪಾತ್ರದ ಪರಿಚಯ ಮುಂಚೆಯೇ ಆಗುತ್ತದೆ. ಹೀಗಾಗಿ ಈ ದೃಶ್ಯ ಉಪಯುಕ್ತವಾದುದಾಗಿತ್ತು. ಆದರೆ ಹಿನ್ನೆಲೆ ಸಂಗೀತಕ್ಕೆ ಹೊರಡುವ ಮುನ್ನ ನಿರ್ದೇಶಕರು ಸ್ಫೂರ್ತ ವಿಸ್ತರಣೆ (ಇಂಪ್ರೊವೈಸೇಷನ್) ಮಾಡಲು ಹೋಗಿ ಎಲ್ಲ ತಂತ್ರಜ್ಞರನ್ನು ಗೊಂದಲಕ್ಕೆ ತಳ್ಳಿ, ಕೊನೆಗೆ ಪ್ರೇಕ್ಷಕನನ್ನೂ ಗೊಂದಲಕ್ಕೀಡುಮಾಡಿದರು.

ಜೊತೆಗೆ ಹಾಸ್ಯಲೇಪನವೂ ಸೇರಿ, ನಾಯಕನ ಅಮಾಯಕತೆಗಾಗಿ ಪ್ರೇಕ್ಷಕ ಅವನನ್ನು ಮೆಚ್ಚಿಕೊಳ್ಳುವುದು ಸಾಧ್ಯವಾಗುತ್ತದೆ. ಒಟ್ಟಾರೆಯಾಗಿ ಸರಳ ನಿರೂಪಣೆ ಯಿರುವ ವಾಣಿಜ್ಯ ಪ್ರಧಾನ ಚಿತ್ರಗಳಲ್ಲಿ ಛೇಸ್ ದೃಶ್ಯ ಪ್ರೇಕ್ಷಕನಿಗೆ ಸುಲಭವಾಗಿ ತಲುಪುತ್ತದೆ ಎಂದು ಹೇಳಬಹುದು.

ಇನ್ನು ಗುದ್ದಾಡುವ ದೃಶ್ಯಗಳಿಗೆ ಬರೋಣ. ಇಲ್ಲಿ ಏಟು ಕೊಡುವವ ಮತ್ತು ಏಟು ತಿನ್ನುವವ ಇಬ್ಬರೂ ಇದ್ದಾರೆ. ಇಲ್ಲಿ ಹಿಂದೊಮ್ಮೆ ವಿವರಿಸಿದ ಪುಡೋವ್ಕಿನ್‌ನ ಪ್ರಯೋಗವಾದ ಮಹಡಿಯಿಂದ ಹಾರುವವನ ಚಿತ್ರಿಕೆ ನಂತರ ಆತ ನೆಲ ಮುಟ್ಟುವ ಚಿತ್ರಿಕೆಗೆ ಛೇದವಾಗುವ ಕ್ರಮದ ಸಂಕಲನ ಇಂದಿನವರೆಗೂ ಉಳಿದುಬಂದಿದೆ. ನೋಡುಗನಿಗೆ ಏಟು ಕೊಟ್ಟವನ ವೇಗ ಮತ್ತು ಏಟು ತಿಂದವನ ನೋವು ಕಾಣುವಂತೆ ಇದ್ದರೂ ಅವುಗಳು ಸಂಪೂರ್ಣವಾಗಿ ಯಾರಿಗೂ ನೋವಾಗದಂತಹ ಕ್ಯಾಮರಾ ಕೋನಗಳಿಂದ ಚಿತ್ರಿತವಾಗಿರುತ್ತವೆ. ಏಟು ತಾಗುವ ವೇಳೆಗೆ ಸರಿಯಾಗಿ ಸಂಕಲನಕಾರ ಚಿತ್ರ ಪಟ್ಟಿಯ ಜೊತೆಗಿನ ಧ್ವನಿ ಪಟ್ಟಿಗೆ ಸರಿಯಾದ 'ಪಂಚ್' ಶಬ್ದವನ್ನು ನೀಡಿ ಅವಾಸ್ತವವನ್ನು ವಾಸ್ತವ ಎನಿಸುವಂತೆ ಮಾಡುತ್ತಾನೆ. ಇಲ್ಲಿಯೂ ಇವೆರಡೂ ಪಾತ್ರಗಳು ಏಟು ತಿನ್ನುವ, ಏಟು ಕೊಡುವ ಅನೇಕ ಚಿತ್ರಿಕೆಗಳ ಸರಣಿಯ ಬಳಕೆಯಾಗುತ್ತದೆ. ಇಲ್ಲಿ ದೃಶ್ಯದ ವೇಗವನ್ನು, ಭಾವತೀವ್ರತೆಯನ್ನು ಹೆಚ್ಚಿಸಲು ಕ್ಯಾಮರಾ ವೇಗವನ್ನು ತಗ್ಗಿಸಿ (ಕ್ಷಣ ಒಂದಕ್ಕೆ ೨೪ ಫ್ರೇಮು ಬದಲಿಗೆ ೨೦ ಅಥವಾ ೧೮ ಫ್ರೇಮುಗಳ ಹಾಗೆ ಚಿತ್ರಿಸಿ) ಇಡೀ ಹೊಡೆದಾಟ ದೃಶ್ಯವಲ್ಲಿ ಏಟು ಕೊಡುತ್ತಿರುವವನ ವೇಗವನ್ನು - ನಾಯಕನಾಗಿದ್ದರೆ - ವೈಭವೀಕರಿಸುತ್ತಾರೆ. ಏಟು ತಿನ್ನುವವ ನಾಯಕನಾಗಿದ್ದಾಗ ಕ್ಯಾಮರಾದ ವೇಗ ಹೆಚ್ಚಿಸಿ ಅಂತಿಮವಾಗಿ ನೋಡುವಲ್ಲಿ ಏಟು ಬಿದ್ದ ವಿವರಕ್ಕೆ ಒತ್ತು ಸಿಗುವಂತೆ Slow motion ಆಗುವಂತೆ ಮಾಡುತ್ತಾರೆ. ಏಟು ತಿನ್ನುತ್ತಿರುವ ನಾಯಕನ ನೋವನ್ನು ವೈಭವೀಕರಿಸುತ್ತಾರೆ.

ಇಂತಹ ದೃಶ್ಯಗಳಲ್ಲಿ ನಿರ್ದೇಶಕನ ಜೊತೆಗೆ ಸಾಹಸ ಸಂಯೋಜಕನೂ ಇರುತ್ತಾನೆ. ಆತನ ಸಂಯೋಜನೆಗೆ ತಕ್ಕಂತೆ ನಿರ್ದೇಶಕ ತನ್ನ ಕ್ಯಾಮರಾ ಕೋನಗಳನ್ನು ಬದಲಿಸುತ್ತಾನೆ. ಜಪಾನಿನ ಹೆಸರಾಂತ ನಿರ್ದೇಶಕ ಅಕಿರಾ ಕುರಾಸುವ ತನ್ನ ಚಿತ್ರಗಳಲ್ಲಿ ಬರುತ್ತಿದ್ದ ಇಂತಹ ಹೊಡೆದಾಟದ ದೃಶ್ಯಗಳನ್ನು ಏಕಕಾಲಕ್ಕೆ ಮೂರು ಕ್ಯಾಮರಾಗಳನ್ನು, ಮೂರು ವಿಭಿನ್ನ ಕೋನದಲ್ಲಿರಿಸಿ ಚಿತ್ರಿಸುತ್ತಿದ್ದ. ಹೀಗಾಗಿ ಸಂಕಲನಕಾರನಿಗೆ ಚಿತ್ರಿಕೆಯಿಂದ ಚಿತ್ರಿಕೆಗೆ ಸಾಗುವ ಚಲನೆಯ ನಿರಂತರತೆಯನ್ನು (Action Continuity) ಕಾಪಾಡಿಕೊಳ್ಳುವುದು, ಏಕಕಾಲದಲ್ಲಿ ಚಿತ್ರಿತವಾದ ಮೂರು ಕ್ಯಾಮರಾದ ಸಾಮಗ್ರಿಯಲ್ಲಿ ದೊರೆತ ಚಿತ್ರಗಳಿಂದಾಗಿ ಸುಲಭವಾಗುತ್ತಿತ್ತು. ಭಾರತದ ಸಂದರ್ಭದಲ್ಲಿ ಭಾರಿ ಹಣ ಹೂಡಿದ ಚಿತ್ರಗಳನ್ನು ಹೊರತುಪಡಿಸಿ ಉಳಿದವರು ಸಾಹಸ ದೃಶ್ಯವನ್ನು ಒಂದೇ ಕ್ಯಾಮರಾದಲ್ಲಿ, ಕೋನಗಳನ್ನು ನಿರಂತರವಾಗಿ ಬದಲಿಸಿ ಚಿತ್ರಿಸುತ್ತಾರೆ. ಇಂತಹುದನ್ನು ಬೇಕಾದ ಪರಿಣಾಮಕ್ಕೆ ತಕ್ಕಂತೆ ಸಂಕಲನ ಮಾಡಿ ಜೋಡಿಸಿಡುವುದು ಎಂತಹ ಸಂಕಲನಕಾರನಿಗೂ ಸವಾಲೆನಿಸುತ್ತದೆ. ಭಕ್ತವತ್ಸಲ ಅವರ ಸಂಕಲನವಿದ್ದ 'ಬೆಟ್ಟದ ಹುಲಿ' ಚಿತ್ರದಲ್ಲಿ ಬರುವ ನಾಯಕ, ಹುಲಿಯೊಡನೆ ಹೊಡೆದಾಡಿ ಗೆಲ್ಲುವ ದೃಶ್ಯಕ್ಕಾಗಿ ಸಂಕಲನಕಾರರ ಬಯಕೆಯಂತೆ ಹುಲಿಯ ಪಂಜ ಬೀಸುವ, ನಾಯಕ ಬೀಳುವ, ಏಳುವ ಅನೇಕ ಚಿತ್ರಿಕೆಗಳನ್ನು ಮರು ಚಿತ್ರೀಕರಿಸಿ ತೆಗೆದುಕೊಟ್ಟರಂತೆ. ಅಂತಹ ಅನೇಕಾನೇಕ ಚಿತ್ರಿಕೆಗಳನ್ನು ಬಳಸಿ, Cross Cut, Match Cutಗಳ ಮೂಲಕ ಸಂಕಲನಕಾರ ಚಲನ ನಿರಂತರತೆ ಮತ್ತು ಕಥನ ನಿರಂತರತೆ ದೃಶ್ಯದಲ್ಲಿ ಉಳಿಯಲು ಪ್ರಯತ್ನಿಸುತ್ತಾನೆ.

ಇಂತಹ ದೃಶ್ಯಗಳು ಇಂದಿನ ಅನೇಕ ಚಿತ್ರಗಳಲ್ಲಿ ಅನಿವಾರ್ಯವಾಗಿರುವುದರಿಂದ ಚಿತ್ರೋದ್ಯಮ ಈ ದೃಶ್ಯಗಳ ಸಂಕಲನವನ್ನು ಹೀಗ ಸೂತ್ರೀಕರಿಸಿದೆ :

೧. "ದೃಶ್ಯದ ವಸ್ತುವನ್ನು ಸ್ಪಷ್ಟವಾಗಿ ಪ್ರೇಕ್ಷಕನೆದುರು ಇರಿಸುವುದು. ಆದರೆ ಸಮಾನಾಂತರ ಛೇದ ತಂತ್ರ ಪ್ರೇಕ್ಷಕನಿಗೆ ತಲುಪಬೇಕಾದ ಕಥನದಲ್ಲಿ ಗೊಂದಲವನ್ನು ಉಂಟುಮಾಡದಿರುವಂತಹ ಸ್ಪಷ್ಟತೆ.

೨. ಛೇದಗಳ ನಡುವಿನ ಅಂತರವನ್ನು ಬದಲಿಸುತ್ತಾ ದೃಶ್ಯಕ್ಕೆ ಅಗತ್ಯವಾದ ನಾಟಕೀಯ ಬಿಗುವನ್ನು ಓಘ ಮತ್ತು ಲಯದ ಮೂಲಕ ಸಾಧಿಸುವುದು.

(ಚಿತ್ರ ೭) ಹಿಂದೆ ಚಿತ್ರೀಕರಣ ಸಮಯದಲ್ಲಿ ಬಳಸುತ್ತಿದ್ದ ಕ್ಲ್ಯಾಪ್ ಬೋರ್ಡ್

೩. ದೃಶ್ಯದಲ್ಲಿ ನೇರವಾಗಿ ಭಾಗವಹಿಸದ ನೋಡುಗ ಪಾತ್ರದ ಪ್ರತಿಕ್ರಿಯೆಗಳನ್ನು ಪ್ರೇಕ್ಷಕರಿಗೆ ತೋರಿಸುವ ಮೂಲಕ ಇಡೀ ದೃಶ್ಯಕ್ಕೆ ಪ್ರೇಕ್ಷಕ ಪ್ರತಿಕ್ರಿಯಿಸಬೇಕಾದ ರೀತಿಯನ್ನು ಸ್ಪಷ್ಟಪಡಿಸಬೇಕು. ಅಲ್ಲದೆ ಇಂತಹ ಛೇದವೊಂದರ ಬಳಕೆಯಿಂದ ಸಾಹಸ ದೃಶ್ಯದ ಕ್ರಿಯಾ ನಿರಂತರತೆಯಲ್ಲಿರುವ ಕಾಲೈಕ್ಯ, ಸ್ಥಳೈಕ್ಯವನ್ನು ಮೀರುವ ಚಿತ್ರಿಕೆಗಳ ನಡುವೆ ಸೇತುಬಂಧ ಉಂಟುಮಾಡಬೇಕು.

೪. ದೃಶ್ಯ ವೈವಿಧ್ಯಕ್ಕಾಗಿ ಮತ್ತು ಚಲನೆಯನ್ನು ಕುರಿತು ಭ್ರಮೆ ಸಾಧಿಸುವುದಕ್ಕಾಗಿ ಸುಧಾರಣೆ ತಂತ್ರದ ಮೂಲಕ ಮತ್ತು ಒಂದೇ ಸಾಹಸ ಕ್ರಿಯೆಯ ವಿಭಿನ್ನ ಕೋನಗಳ ಚಿತ್ರಿಕೆಗಳನ್ನು ಬಳಸಬೇಕು" ಎನ್ನುತ್ತಾರೆ ಕಾರ್ಲ್‌ರೀಸ್.

ಇವಿಷ್ಟು ಸೂತ್ರಗಳನ್ನು ಸಂಕಲನಕಾರ ಸಾಕಷ್ಟು ಎಚ್ಚರಿಕೆಯಿಂದಲೇ ಸಂಕಲನದ ಕೋಣೆಯಲ್ಲಿ ಗಮನಿಸಿಕೊಳ್ಳುತ್ತಾನಾದರೂ ಇವುಗಳನ್ನು ಚಿತ್ರಕಥೆಯ ಹಂತದಲ್ಲಿಯೇ ಸ್ಪಷ್ಟಪಡಿಸಿಕೊಂಡು, ಆ ನಿರೂಪಣೆಗೆ ಹೊಂದುವಂತಹ ಚಿತ್ರಿಕೆಯನ್ನು ಚಿತ್ರೀಕರಿಸಿರಬೇಕಾಗುತ್ತದೆ. ಇಂಥಲ್ಲಿ ನಿರ್ದೇಶಕನಿಗೆ ಅನುಮಾನಗಳಿದ್ದರೆ ಆತ ಅನೇಕ ಸುರಕ್ಷಣಾ (Safety) ಚಿತ್ರಿಕೆಗಳನ್ನು ಚಿತ್ರಿಸಿಕೊಂಡು ಸಂಕಲನಕಾರನಿಗೆ ಒದಗಿಸಬೇಕಾಗುತ್ತದೆ. ಈ ಚಿತ್ರಿಕೆಗಳನ್ನು ಸಾಲಾಗಿ ಇರಿಸಿ ಜೋಡಿಸುವಾಗ ಸಂಕಲನಕಾರನಿಗೆ ವೇಗ ವರ್ಧನಕ್ಕಾಗಿ ಮಾಡಬಹುದಾದ ಬದಲಾವಣೆಗಳು ಹೊಳೆಯಬಹುದು. ಅಂತೆಯೇ ಆತ ಆ ದೃಶ್ಯದ ನಿರೂಪಣೆಯನ್ನು ಸಿದ್ಧಪಡಿಸಬಹುದು. ಇಷ್ಟೆಲ್ಲಾ ಸೂತ್ರೀಕರಣವಿದ್ದಾಗಲೂ ಸಂಕಲನಕಾರನಿಗೆ ಬೇಕಾಗುವಷ್ಟು ಚಿತ್ರಿಕೆಗಳು ದೊರೆಯದಿದ್ದರೆ ಆತ ಅಸಹಾಯಕನಾಗುವುದು ಸಹಜ.

ಆದರೆ ಒಂದು ವಿಷಯವಂತೂ ಸತ್ಯ. ಇಂತಹ ಸಾಹಸದೃಶ್ಯಗಳ ಸಂಕಲನದಲ್ಲಿ ಸಂಕಲನಕಾರನಿಗೆ ದೊರೆಯುವಷ್ಟು ಸ್ವಾತಂತ್ರ್ಯ, ಕ್ರಿಯಾಶೀಲ ಅವಕಾಶ, ಮಾತಿನ ಮತ್ತು ಹಾಸ್ಯದ ದೃಶ್ಯದಲ್ಲಿ ಸಿಗುವುದಿಲ್ಲ. ಏಕೆಂದರೆ ಇಲ್ಲಿ ಸಂಕಲನಕಾರನ ಸ್ಫೂರ್ತ ವಿಸ್ತರಣೆಯನ್ನು ನಿಯಂತ್ರಿಸುವಂತಹ ಮುಂಚೆಯೇ ಬರೆದ ಮಾತಿಲ್ಲ, ಧ್ವನಿ ಇಲ್ಲ. ದೃಶ್ಯದಿಂದಲೇ ಕಟ್ಟಬಹುದಾದ ಇಂತಹ ಕಥನ ವಿವರಗಳನ್ನು ಅಂದಿನಿಂದ ಇಂದಿನವರೆಗಿನ ಎಲ್ಲ ಸಂಕಲನಕಾರರೂ ಸಾಮಾನ್ಯವಾಗಿ ಹೆಚ್ಚು ಇಷ್ಟಪಡುತ್ತಾರೆ. ಇಲ್ಲಿ



(ಚಿತ್ರ ೮) ಸ್ಪ್ಲೈಸರ್ - ಧ್ವನಿ ಮತ್ತು ಚಿತ್ರಿತ ಫಿಲಂನ ಛೇದಕ

(ಚಿತ್ರ ೯) ಸಿಂಕ್ರನೋಮೀಟರ್

ಆತನ ಕ್ರಿಯಾಶೀಲತೆಯಿಂದಲೇ ದೃಶ್ಯವೊಂದರ ಸೋಲು-ಗೆಲುವು ನಿರ್ಧರಿತವಾಗುತ್ತದೆ ಎಂಬುದು ಸಹ ಸಂಕಲನಕಾರ ಇಂತಹ ದೃಶ್ಯಕ್ಕೆ ಹೆಚ್ಚು ಆಸ್ಥೆ ವಹಿಸುವುದಕ್ಕೆ ಕಾರಣವಾಗುತ್ತದೆ.

ಮಾತುಗಳಿರುವ ದೃಶ್ಯ

ಸಂಭಾಷಣೆಯಿರುವ ದೃಶ್ಯಗಳಲ್ಲಿ ಸಂಕಲನಕಾರನ ಕೆಲಸವನ್ನು ಚಿತ್ರಕಥಾ ಲೇಖಕ/ಸಂಭಾಷಣೆಕಾರ ದೃಶ್ಯದ ಭೂಪಟದಂತೆ ಬರೆದಿಟ್ಟಿರುವಂತೆಯೇ ಚಿತ್ರಿತವಾದ ವಿವರಗಳು ನಿಯಂತ್ರಿಸುತ್ತವೆ. ಇಲ್ಲಿ ಕಥನ ನಿರಂತರತೆಯನ್ನು ಕಾಪಾಡುವ ಜವಾಬ್ದಾರಿ ಸಂಭಾಷಣೆಕಾರ/ಚಿತ್ರಕಥಾ ಲೇಖಕನದ್ದೇ ಆಗಿರುತ್ತದೆ. ಹೀಗಾಗಿ ಇಂತಹ ದೃಶ್ಯಗಳ ಸಂಕಲನ ಅತ್ಯಂತ ಸುಲಭವೂ ಹೌದು, ಕೆಲವೊಮ್ಮೆ ಅಷ್ಟೇ ಸಂಕೀರ್ಣವೂ ಹೌದು. ಸಂಭಾಷಣೆ ಚೆನ್ನಾಗಿದ್ದು ಅದು ದೃಶ್ಯದ ಪರಿಣಾಮವನ್ನು ಸ್ವತಃ ತಲುಪಿಸುವಂತೆ ಇದ್ದರೆ ಸರಿ, ಸಂಕಲನಕಾರನ ಕೆಲಸ ಸುಲಭ. ಬದಲಾಗಿ ನಿರ್ದೇಶಕ ಆ ಮಾತುಗಳನ್ನು ಯಥಾವತ್ತಾಗಿ ಬಳಸದೆ ಮೌನವನ್ನು, ನಟರ ಹಾವ-ಭಾವಗಳನ್ನು ಬಳಸಿ ಚಿತ್ರಿಸಿದ್ದರೆ ಸಂಕಲನಕಾರನೇ ಇಡೀ ದೃಶ್ಯದ ಕಥನ ನಿರಂತರತೆಯ ಜವಾಬ್ದಾರಿ ಹೊರಬೇಕಾಗುತ್ತದೆ.

ಮೊದಲ ರೀತಿಯ, ಅಂದರೆ ಸಂಕೀರ್ಣವಲ್ಲದ, ಮಾತು ಪ್ರಧಾನವಾದ ದೃಶ್ಯವೊಂದನ್ನು ಗಮನಿಸೋಣ. ದೃಶ್ಯ ಮನೆಯೊಂದರೊಳಗೆ ನಡೆಯುತ್ತಿದ್ದು, ಇಬ್ಬರು ಪಾತ್ರಧಾರಿಗಳ ನಡುವೆ ಸಂಘರ್ಷವನ್ನುಳ್ಳ ಮಾತುಗಳು ನಡೆಯುತ್ತಿವೆ ಎಂದಿಟ್ಟುಕೊಳ್ಳೋಣ. ಇಂಥಲ್ಲಿ ಮೊದಲಿಗೆ ಎರಡೂ ಪಾತ್ರಗಳು ಇರುವ ಸ್ಥಳವನ್ನು ಸ್ಪಷ್ಟಪಡಿಸುವ, ಅವರು ಕೂತಿದ್ದಾರೋ, ನಿಂತಿದ್ದಾರೋ ಎಂದು ತಿಳಿಸುವ ಮಧ್ಯಮ ದೂರ ಚಿತ್ರಿಕೆ ಇರುತ್ತದೆ. ಚಿತ್ರಿಕೆ ೨ : ಕ್ಯಾಮರಾ ಹಳಿ ಚಿತ್ರಿಕೆಯೊಡನೆ ಪಾತ್ರಧಾರಿಗಳ ಬಳಿಗೆ ಸರಿಯಬಹುದು ಅಥವಾ ಇಬ್ಬರೂ ಪಾತ್ರಧಾರಿಗಳನ್ನು ದೃಷ್ಟಿ ರೇಖೆಯಲ್ಲಿ ಸಮೀಪ ಚಿತ್ರಿಕೆಯಲ್ಲಿ ತೋರಿಸುತ್ತಾರೆ. ಚಿತ್ರಿಕೆ ೩ : ಈ ಇಬ್ಬರೂ ಪಾತ್ರಧಾರಿಗಳ ಅಕ್ಕ ಪಕ್ಕದಲ್ಲಿ ಕ್ಯಾಮರಾ ಇರಿಸಿ ಕ್ಯಾಮರಾದ ಮುಂದೆ ವ್ಯಕ್ತಿಯೊಬ್ಬನ ಭುಜ, ಎದುರಿಗೆ ಮತ್ತೊಬ್ಬನ ಮುಖ ಇರುವಂತಹ ಚಿತ್ರಿಕೆಗಳ (ಓವರ್ ದಿ ಗೋಲ್ಡನ್ ಶಾಟ್)ಗಳ ಸರಣಿಯೇ ಬರುತ್ತದೆ. ಆ ಮೂಲಕ ಎರಡೂ ಪಾತ್ರಗಳ ನಡುವಿನ ಹಾಗೂ ದೃಶ್ಯದೊಳಗಣ ಸಂಘರ್ಷ ಪ್ರೇಕ್ಷಕನಿಗೆ ಸರಳವಾಗಿ ಮಾತುಗಳಿಂದಲೇ ತಿಳಿಯುತ್ತದೆ. ಚಿತ್ರಿಕೆ ೪ : ದೃಶ್ಯ ಸಂಘರ್ಷದ ಪ್ರಧಾನ ಅಥವಾ ಪರಾಕಾಷ್ಠೆ ಇರುವಲ್ಲಿ ಮಾತುಗಾರನ ಅಥವಾ ಎದುರಿಗಿರುವ ವ್ಯಕ್ತಿಯ ಪ್ರತಿಕ್ರಿಯೆಗಳ ಸಮೀಪ ಚಿತ್ರಿಕೆಗಳ ಸರಣಿ ಬರತೊಡಗುತ್ತದೆ. ಆ ಮೂಲಕ ಛೇದಕ್ಕೆ ಮಾತುಗಳೇ ಮಾರ್ಗದರ್ಶಿಗಳಾಗಿ ಇರುತ್ತವೆ.

ಈ ರೀತಿಯ ಸಂಕಲನ ಶೈಲಿ 'ಪರವಾಗಿಲ್ಲ' ಎಂಬಷ್ಟಕ್ಕೆ ಸರಿ. ಆದರೆ ಇಲ್ಲಿ ಪರಿಪೂರ್ಣತೆ ಇರುವುದಿಲ್ಲ. ಯಾಕೆಂದರೆ ಇಂತಹ ದೃಶ್ಯ ರಚನೆ ಸ್ಥಗಿತವಾಗಿರುತ್ತದೆ. ಇಲ್ಲಿ ಪಾತ್ರಗಳು ಏನು ಮಾಡುತ್ತಿವೆ ಎಂಬುದಕ್ಕಿಂತ ಏನು ಹೇಳುತ್ತಿವೆ ಎಂಬುದು ಪ್ರಧಾನವಾಗಿ, ಸಿನಿಮಾದ ಮೂಲ ಉದ್ದೇಶವಾದ ದೃಶ್ಯಶಕ್ತಿ ಎಂಬುದು ಕ್ಷೀಣವಾಗುತ್ತದೆ. ಇದು ಏಕತಾನೀಯವೆನಿಸಬಾರದೆಂದು ಹಳಿ ಚಿತ್ರಿಕೆ, ಒಬ್ಬ ಪಾತ್ರಧಾರಿಯ ಭುಜದ ಕಡೆಯಿಂದ ಮತ್ತೊಂದು ಪಾತ್ರ ಕಾಣುವ ಚಿತ್ರಿಕೆ, ಸಮೀಪ ಚಿತ್ರಿಕೆ ಇಂತಹ ವೈವಿಧ್ಯವನ್ನು ಉಂಟುಮಾಡಿದರೂ ಇಡೀ ದೃಶ್ಯವೇ ಶ್ರವ್ಯಗುಣಕ್ಕೆ ಒತ್ತು ಕೊಟ್ಟಂತಿರುತ್ತದೆ. ಇಂಥಲ್ಲಿ ಸಂಕಲನಕಾರ ಕೈಚೆಲ್ಲಿ ಕೂರುವುದು ಅನಿವಾರ್ಯ. ಇದಕ್ಕೆ ಉದಾಹರಣೆಯಾಗಿ 'ಪರಕೆಯ ಕುರಿ' ಚಿತ್ರವನ್ನು (ನಿರ್ದೇಶನ : ಕೆ.ಎಸ್.ಎಲ್.ಸ್ವಾಮಿ (ರವೀ), ಸಂಕಲನ : ಸುರೇಶ್ ಅರಸ್) ನೋಡಬಹುದು. ಅಲ್ಲಿ ನಾಯಕನಿಗೆ ಆತನ ಹೆಂಡತಿಯನ್ನು ಕುರಿತು ಖಳನಾಯಕ ಅನುಮಾನ ಬಿತ್ತುವ ದೃಶ್ಯವೊಂದು ಬರುತ್ತದೆ. ಇಡೀ ದೃಶ್ಯದಲ್ಲಿ ಖಳನಾಯಕನ ಜಾಣ್ಮೆಯ ಮಾತಿಗೆ ಹೆಚ್ಚು ಒತ್ತು ಸಿಕ್ಕಿಬಿಟ್ಟಿದೆ. ಆ ಪಾತ್ರಧಾರಿಯ ಮಾತಿನ ವೈಖರಿಯಲ್ಲಿರುವ ಎಳೆದೆಳೆದು ಮಾತಾಡುವ ಶೈಲಿ, ಸುದೀರ್ಘ ದೃಶ್ಯವನ್ನು ಮತ್ತಷ್ಟು ಹಿಗ್ಗಿಸಿರುವುದಲ್ಲದೆ ಇಡೀ ದೃಶ್ಯಕ್ಕೆ ಇರುವ ಸ್ಥಗಿತ ಸ್ಥಿತಿಯನ್ನು ಮತ್ತಷ್ಟು ಹೆಚ್ಚಿಸಿಬಿಟ್ಟಿದೆ. ಇಂಥಲ್ಲಿ ಮಾತಾಡದ ಪಾತ್ರದ ಮೇಲೆ ಆಗುವ ಪರಿಣಾಮ ಮತ್ತು ಅದರ ಮೌನವನ್ನು ವಿಷದೀಕರಿಸುವ ಚಿತ್ರಿಕೆಗಳು ಸಂಕಲನಕಾರನಿಗೆ ದೊರೆತಾಗ, ಆತ ಕೇವಲ ಮಾತುಗಾರನ ಚಿತ್ರಿಕೆಯನ್ನು ಬಳಸದೆ, ಮೂಕಿಯ ಪ್ರತಿಕ್ರಿಯೆಯನ್ನು ಹಿಗ್ಗಿಸಿ, ಆ ಚಿತ್ರಿಕೆಯ ಹಿನ್ನೆಲೆಗೆ ಉತ್ತಮವಾದ ಹಿನ್ನೆಲೆ ಸಂಗೀತವನ್ನು ಒದಗಿಸಿ ಪ್ರೇಕ್ಷಕ ಆಕಳಿಸದಂತಿರಲು ಪ್ರಯತ್ನಿಸುತ್ತಾನೆ. ಅನೇಕ ಬಾರಿ ಇಂತಹ ಅವಕಾಶ ದೊರೆಯದೆ ಸಂಕಲನಕಾರ ಸೋಲಬೇಕಾಗುತ್ತದೆ. ಇಂಥದ್ದೇ ದೃಶ್ಯಕ್ಕೆ ಮತ್ತೊಂದು ಉದಾಹರಣೆ : ಹುಣಸೂರು ಕೃಷ್ಣಮೂರ್ತಿಯವರು ಬರೆದು ನಿರ್ದೇಶಿಸಿದ 'ಬಬ್ರುವಾಹನ' ಚಿತ್ರದ ಪರಾಕಾಷ್ಠೆಯ ಮುಂಚಿನ ದೃಶ್ಯದಲ್ಲಿ ಬರುತ್ತದೆ. ಅಪ್ಪ ಮತ್ತು ಮಗನ ನಡುವೆ ನಾಟಕೀಯ ಮಾತುಗಳುಳ್ಳ ದೃಶ್ಯವದು. ಶಕ್ತಿಯುತ ಮಾತುಗಾರಿಕೆ ಮತ್ತು ಅನುಭವಿ ನಟರು ಇದ್ದುದರಿಂದ ದೃಶ್ಯ ಏಕತಾನೀಯ ಎಂದೆನಿಸದೆ ಹೋದರೂ, ಇಡೀ ದೃಶ್ಯ ಪ್ರೇಕ್ಷಕನ 'ನೋಡು' ಶಕ್ತಿಯನ್ನು ಗಮನಿಸದೆ 'ಕೇಳು' ಶಕ್ತಿಗೆ ಒತ್ತು ಕೊಟ್ಟು ಬಿಟ್ಟಿತ್ತು. ಹೀಗಾಗಿ ದೃಶ್ಯ ಚಿತ್ರಿತ ನಾಟಕದಂತೆ (Canned theatre) ಕಾಣುತ್ತಿತ್ತು.

ಇಂತಹ ಮಾತು ಪ್ರಧಾನವಾದ ದೃಶ್ಯ ಬೇರೆಲ್ಲ ಇಂದ್ರಿಯಗಳನ್ನು ತಣಿಸುವಂತೆ ಚಿತ್ರಿಸಿದ ಅನೇಕ ಚಿತ್ರಗಳು ಜಗತ್ತಿನಾದ್ಯಂತ ಬಂದು ಹೋಗಿವೆ. ಉದಾಹರಣೆಗಾಗಿ ವಿ.ರವಿಚಂದ್ರನ್ ನಿರ್ದೇಶಿಸಿ ಕೆ.ಬಾಲು ಅವರ ಸಂಕಲನವಿದ್ದ 'ಸಿಪಾಯಿ' ಚಿತ್ರದ ಎರಡನೆಯ ಅರ್ಧದ ಆರಂಭದಲ್ಲಿ ಬರುವ ಪಂಚಾಯ್ತಿ ದೃಶ್ಯವನ್ನು ಗಮನಿಸಿ. ಇಲ್ಲಿ ನಾಯಕ ಮೆಚ್ಚಿಕೊಂಡಿರುವ ಹುಡುಗಿಯನ್ನು ಆಕೆಯ ತಂದೆಯೇ ಜೂಜಿನಲ್ಲಿಟ್ಟು ಸೋತಿದ್ದಾನೆ. ಆಕೆ ತನಗೇ ಬೇಕು ಎಂದು ಖಳನಾಯಕ ಪಂಚಾಯ್ತಿಯ ಎದುರು ನಿಂತಿದ್ದಾನೆ. ದೃಶ್ಯದಲ್ಲಿ ನಾಯಕನ ಪರವಾಗಿ ಮಾತಾಡುವ ಜನರೂ ಇದ್ದಾರೆ. ಖಳನಾಯಕನ ಪರವಾಗಿ ಮಾತಾಡುವ ಜನರೂ ಇದ್ದಾರೆ. ಸರಿಸುಮಾರು ಒಂಬತ್ತು ನಿಮಿಷಗಳಷ್ಟು ಉದ್ದದ ಈ ದೃಶ್ಯ ಮುಂಚೆ ತಿಳಿಸಿದ ಸರಳ ಸಂಕಲನ ತಂತ್ರವಿದ್ದಾಗ ತೀರಾ ನಿಶ್ಚಲ (Static) ಆಗಿಬಿಡುವ ಸಾಧ್ಯತೆಯಿದೆ. ಇಂಥಲ್ಲಿ ನಿಶ್ಚಲತೆಯನ್ನು ತಪ್ಪಿಸಲು ನಿರ್ದೇಶಕರು ಚಿತ್ರಿಕೆಯಿಂದ ಚಿತ್ರಿಕೆಗೆ ಸಾಗಲು ವೈಲ್ಡ್ ಸ್ವಿಸ್ ಪ್ಯಾನ್ ಬಳಸಿದ್ದಾರೆ. ಇದು ಯಾವುದೇ ಮಾತಿನ ಪ್ರತಿಕ್ರಿಯೆಯನ್ನು ಹೆಚ್ಚಿಸಲು ಅಗತ್ಯವಾದ ಹಿನ್ನೆಲೆ ಸಂಗೀತಕ್ಕೆ ಅವಕಾಶವನ್ನು ನೀಡುವುದಲ್ಲದೆ ಇಡೀ ದೃಶ್ಯಕ್ಕೆ ಇರುವ ಮಾತಿನ ನಾಟಕೀಯತೆಯನ್ನು ದಾಟುತ್ತಾ, 'ದೃಶ್ಯ' ಅಥವಾ 'ಸಿನಿಮೀಯ' ನಾಟಕೀಯತೆಯನ್ನು ನೀಡುತ್ತದೆ. ಹೀಗಾಗಿ ಇಡೀ ದೃಶ್ಯ ಉತ್ತಮವಾಗಿ ಸಂಕಲಿತವಾದ, ಉತ್ತಮ ನಿರೂಪಣೆ ಇರುವ ಮಾತಿನ ದೃಶ್ಯವಾಗಿ ಪರಿಣಮಿಸುತ್ತದೆ.

ಒಟ್ಟಾರೆಯಾಗಿ ಇಂತಹ ಮಾತಿನ ದೃಶ್ಯಗಳ ನಿರ್ದೇಶನ/ಸಂಕಲನ ಕಷ್ಟದ ಕೆಲಸ ಎನ್ನಬಹುದು. ಇಂತಹ ದೃಶ್ಯಗಳು ತೆರೆಯ ಮೇಲೆ ಯಶಸ್ವಿಯಾಗಲು ದೃಶ್ಯೀಕರಣಕ್ಕೆ (Visualisation) ಅನುಕೂಲವಾಗುವ ವಿವರಗಳೂ ಚಿತ್ರಕಥೆಯಲ್ಲಿ ಇರಬೇಕು. ಹಾಗಲ್ಲದೆ ಲೇಖಕ ಕೇವಲ ಮಾತುಗಳನ್ನಷ್ಟೆ ಬರೆದುಬಿಟ್ಟಿದ್ದರೆ ನಿರ್ದೇಶಕ/ಸಂಕಲನಕಾರರು ಸ್ಫೂರ್ತ ವಿಸ್ತರಣೆಯಿಂದ ದೃಶ್ಯದ 'ನೋಡು' ವಿವರಗಳನ್ನು ಕಟ್ಟಬೇಕಾಗುತ್ತದೆ. ಅಂತಹ ಸ್ಫೂರ್ತ ವಿಸ್ತರಣೆಯ ಅವಧಿಯಲ್ಲಿ ಅನಿವಾರ್ಯ ಎನಿಸದ ಅನೇಕ ಮಾತುಗಳನ್ನು ಕಸದ ಬುಟ್ಟಿಗೆ ಹಾಕಿ, ಮತ್ತೊಂದು ಸಾಂಕೇತಿಕ ಚಿತ್ರಿಕೆಯ ನೆರವನ್ನು ನಿರ್ದೇಶಕ/ಸಂಕಲನಕಾರರು ನಿರೂಪಣೆಗೆ ಬಳಸಬಹುದು. ಚಲನಚಿತ್ರ ನಿರ್ದೇಶಕ ಪುಟ್ಟಣ್ಣ ಕಣಗಾಲ್ ಅವರ ಚಿತ್ರೀಕರಣ ರೀತಿಯನ್ನು ಆಧರಿಸಿ ಇಂತಹ ಅನೇಕ ಉದಾಹರಣೆಗಳನ್ನು ಕೊಡುತ್ತಾರೆ. ಆದರೆ ಪುಟ್ಟಣ್ಣನವರ ಚಿತ್ರಗಳ ಚಿತ್ರಕಥೆಯ ಪೂರ್ವಪಾಠ (ಅಂದರೆ ಚಿತ್ರೀಕರಣಕ್ಕೆ ಮುನ್ನ ಸಿದ್ಧವಿರುವ ದೃಶ್ಯ ವಿವರ, ಯೋಜನೆ)

. ಈ ಚಿತ್ರಕ್ಕೆ ಈ ಲೇಖಕನೇ ಸಂಭಾಷಣೆ ಬರೆದಿದ್ದ. ರಂಗಭೂಮಿಯ ಹಿನ್ನೆಲೆಯಿಂದ ಬಂದ ಸಂಭಾಷಣೆಕಾರ ಕಥೆಯನ್ನು ಮಾತಿನಲ್ಲೇ ಹೇಳಲು ಪ್ರಯತ್ನಿಸುತ್ತಾನೆ ಎಂಬ ಸತ್ಯ ಈ ದೃಶ್ಯದಲ್ಲಿ ಮತ್ತೆ ಸಾಬೀತಾಗಿತ್ತು.



(ಚಿತ್ರ ೧೦) ಸುಧಾರಿತ ಮೂವಿಯೋಲಾ

ಲಭ್ಯವಿಲ್ಲ. ಹೀಗಾಗಿ ಆ ನಿರ್ದೇಶಕರು ಮಾಡಿದ ಸ್ಫೂರ್ತ ವಿಸ್ತರಣೆಯ ದಾಖಲೆಯನ್ನು ಅವರಿವರ ಮಾತನ್ನು ಕೇಳಿ ಬರಯಬೇಕಾಗಿದೆ. ಅದ್ದರಿಂದ ಸ್ಪಷ್ಟ ಉದಾಹರಣೆಯನ್ನು ನೀಡುವುದು ಕಷ್ಟವಾಗುತ್ತದೆ. ಆದರೆ ಪುಟ್ಟಣ್ಣ ಕಣಗಾಲ್ ಚಿತ್ರಕಥೆಯನ್ನು ಮುಂಚೆಯೇ ಸಿದ್ಧಪಡಿಸಿಟ್ಟುಕೊಳ್ಳದೆ ದೃಶ್ಯವೊಂದರ ಸ್ಥೂಲ ವಿವರವನ್ನು ಮಾತ್ರ ಬರೆದಿಟ್ಟುಕೊಂಡು ಚಿತ್ರೀಕರಣದ ಅವಧಿಯಲ್ಲಿ ತಾವೇ ದೃಶ್ಯವನ್ನು ಬೆಳೆಸುತ್ತಿದ್ದರು ಎಂಬುದು ತಿಳಿದುಬಂದಿರುವ ಮತ್ತೊಂದು ಸತ್ಯ. ಹೀಗಾಗಿ ಅವರು ಚಿತ್ರೀಕರಣದ ಅವಧಿಗೆ ನೀಡುತ್ತಿದ್ದ ಒತ್ತು, ಅವರು ಚಿತ್ರ ಸಂಕಲಿಸುತ್ತಿದ್ದ ಅವಧಿಗೆ ಸಿಗುತ್ತಿರಲಿಲ್ಲ. ಹೀಗಾಗಿಯೇ ಪುಟ್ಟಣ್ಣ ಅವರ ಚಿತ್ರದಲ್ಲಿ 'ವಿಶಿಷ್ಟ ಸಂಕಲನ' ಎಂಬ ಉದಾಹರಣೆಗಳು ತೀರಾ ಬೆರಳೆಣಿಕೆಯಷ್ಟು ಮಾತ್ರ ಸಿಗುತ್ತವೆ.

ತಾರಾಮೌಲ್ಯದ ಸಿನಿಮಾ ಪದ್ಧತಿಯಲ್ಲಿ ಮಾತಿನ ಚಿತ್ರೀಕರಣವು ಜನಪ್ರಿಯ ನಟನನ್ನು, ಆತನ ಮಾತು-ನಟನೆಯ ಶೈಲಿಯನ್ನು ಅಭಿಮಾನಿ ಪ್ರೇಕ್ಷಕರು ಬಯಸುವ ರೀತಿಯಲ್ಲಿ ಇಡುವಷ್ಟಕ್ಕೆ ಮಾತ್ರ ಸೀಮಿತವಾಗುತ್ತದೆ. ಅನೇಕ ಸಿನಿಮಾಗಳಲ್ಲಿ ಮಾತಾಡುತ್ತಿರುವ ಪಾತ್ರವು ಪ್ರಧಾನ ನಟ ಆಗಿಲ್ಲದೆ ಹೋದಾಗ ಮಾತಾಡುವ ಪಾತ್ರಕ್ಕಿಂತ ಪ್ರಧಾನ ಪಾತ್ರಧಾರಿಯ ಪ್ರತಿಕ್ರಿಯೆಗೆ ಅವಕಾಶ ನೀಡಿ ಉಳಿದ ಪಾತ್ರಗಳನ್ನು ಬದಿಗೆ ತಳ್ಳಲಾಗುತ್ತದೆ. ಇದು ತಾರಾಪದ್ಧತಿಯು ತಂದೊಡ್ಡುವ ಅನಿವಾರ್ಯ. ಇಂಥಲ್ಲಿ ನಿರ್ದೇಶಕ ಸಂಕಲನಕಾರ ಆ ಪದ್ಧತಿಯನ್ನು ಅನುಸರಿಸುವುದನ್ನು ಹೊರತುಪಡಿಸಿ ಮತ್ತೇನೂ ಮಾಡುವಂತಿಲ್ಲ. ಉದಾಹರಣೆಗೆ ರಾಜಕುಮಾರ್ ಅಭಿನಯದ 'ನಾನೊಬ್ಬ ಕಳ್ಳ' ಚಿತ್ರದಲ್ಲಿ ಬರುವ ದೃಶ್ಯವೊಂದನ್ನು ಗಮನಿಸಿ. ಅಲ್ಲಿ ನಾಯಕನಿಗೆ ತಾನು ಕಳ್ಳತನ ಮಾಡುತ್ತಿದ್ದೇನೆ ಎಂಬ ಅಳುಕಿದೆ, ತನ್ನ ಬಗ್ಗೆಯೇ ಕೀಳರಿಮೆಯಿದೆ. ಅವನು ತನ್ನ ತಂದೆ-ತಾಯಿ, ನಾಯಕಿ ಇತ್ಯಾದಿ ಪಾತ್ರಗಳನ್ನು ಕುರಿತು ಜೋಳುಮರವೊಂದರ ಎದುರಿಗೆ ಸುದೀರ್ಘ ಸ್ವಗತ ಮಾತಾಡುತ್ತಾನೆ. ಸರಿಸುಮಾರು ಐದು ನಿಮಿಷಗಳ ಉದ್ದವಿರುವ ಈ ದೃಶ್ಯದಲ್ಲಿ ನಿರ್ದೇಶಕನಿಗೆ ಯಾವುದೇ ಭೇದವನ್ನು ಕಂಡುಕೊಳ್ಳಲು ಎದುರಿಗೆ ಇನ್ನಾವುದೇ ಪಾತ್ರವಿಲ್ಲ. ಹೀಗಾಗಿ ಇಡೀ ದೃಶ್ಯವನ್ನು ಕೇವಲ ನಟರ ಅಭಿನಯ ಪ್ರಧಾನವಾಗುವಂತೆ ಏಕ ಚಿತ್ರಿಕೆಯಾಗಿಸಿದ್ದಾರೆ. ನಟರ ಆಂಗಿಕ, ವಾಚಿಕ ಮತ್ತು ಆಹಾರ್ಯಾಭಿನಯಗಳಿಗೆ ಒತ್ತು ಸಿಕ್ಕಿದೆ. ಅಭಿಮಾನಿ ಪ್ರೇಕ್ಷಕರ ಮನ ತುಂಬುವಂತೆ ಪ್ರಧಾನ ನಟರು ತಮ್ಮೊಳಗೆ ತಾವೇ ಮಾತಾಡುತ್ತ, ಅಳುತ್ತಾ, ನಗುತ್ತಾ ತಮ್ಮೆಲ್ಲ ನಟನಾ ಸಾಧನಗಳನ್ನು ಬಳಸಿ ಅಭಿನಯಿಸಿದ್ದಾರೆ. ಇದು ಅಭಿಮಾನಿಗಳ ದೃಷ್ಟಿಯಿಂದ ಜನಪ್ರಿಯ ದೃಶ್ಯ. ಆದರೆ ಇಡೀ ದೃಶ್ಯದುದ್ದಕ್ಕೂ ಸಿನಿಮಾ ತಂತ್ರಜ್ಞನಿಗೆ ಕೆಲಸವಿಲ್ಲ. ಕ್ಯಾಮರಾ ಚಾಲೂ ಮಾಡಿ ಛಾಯಾಗ್ರಾಹಕ ಮಲಗಿದ್ದಾನೆ, ಹಿಂದಿನ ಚಿತ್ರಿಕೆಯೊಡನೆ ಈ ಚಿತ್ರಿಕೆಯ ಆರಂಭಿಕ ತುದಿಯನ್ನು ಅಂಟಿಸಿ ಸಂಕಲನಕಾರ ಮಲಗಿದ್ದಾನೆ. ಮಾತು ಬರೆದವ ಮತ್ತು ಸಂಗೀತ ನಿರ್ದೇಶಕರಿಗೆ ಮಾತ್ರ ಇಲ್ಲಿ ಕೆಲಸ. ಹೀಗಾಗಿ ಇದು ಚಿತ್ರಿತ ನಾಟಕದಂತೆ ಮಾತ್ರ ಕಾಣುತ್ತದೆ, ಸಿನಿಮಾ ಆಗುವುದಿಲ್ಲ. ಇಂತಹುದೇ ಒಂದು ದೃಶ್ಯವನ್ನು ಸುನೀಲ್ ಕುಮಾರ್ ದೇಸಾಯಿ ನಿರ್ದೇಶಿಸಿದ, ಶಿವರಾಜ್ ಕುಮಾರ್ ಅಭಿನಯಿಸಿದ್ದ 'ನಮ್ಮೂರ ಮಂದಾರ ಹೂವೆ' ಚಿತ್ರದಲ್ಲೂ ಗಮನಿಸಬಹುದು. ಇಂತಹ ಅನೇಕ ಉದಾಹರಣೆಗಳನ್ನು ತಮಿಳಿನ ಶಿವಾಜಿ ಗಣೇಶನ್ ಅಭಿನಯಿಸಿರುವ ಅನೇಕ ಚಿತ್ರಗಳಿಂದ ನೀಡಬಹುದು. ಕನ್ನಡದ ಮತ್ತೊಬ್ಬ ಮಾತುಗಾರ ನಟ ಸಾಯಿಕುಮಾರ್ ಅಭಿನಯದ ಚಿತ್ರಗಳಿಂದಲೂ ನೀಡಬಹುದು. ಈ ದೃಶ್ಯಗಳು 'ಸಿನಿಮಾ' ಎಂಬ ತಂತ್ರವನ್ನು ಮರೆತು, 'ರಂಗಭೂಮಿ'ಯನ್ನು ಆತುಕೊಳ್ಳುತ್ತವೆ ಎಂಬುದಂತೂ ಸತ್ಯ.

ಒಟ್ಟಾರೆಯಾಗಿ ಹೀಗೆನ್ನಬಹುದು. ಇಂದಿನ ಟಾಕಿ ಚಿತ್ರಗಳಲ್ಲಿನ ಶೇಖಡ ೬೦ರಷ್ಟು ದೃಶ್ಯಗಳು ಮಾತುಮಯವಾಗಿರುತ್ತವೆ. ಶೇಕಡಾವಾರು ಸಂಖ್ಯೆಯಿಂದ ಹೆಚ್ಚಿರುವ ಇಂತಹ ದೃಶ್ಯಗಳೇ ನಮ್ಮ ಅನೇಕ ಸಿನಿಮಾಗಳಲ್ಲಿ ಅತ್ಯಂತ ಅಜಾಗರೂಕತೆಯಿಂದ ಹಾಗೂ ಕಲ್ಪನೆಯ ಕಣ್ಣನ್ನು ಮುಚ್ಚಿಕೊಂಡಂತ ಚಿತ್ರಿತವಾಗಿರುತ್ತವೆ. ಹೀಗಾಗಿ ನಮ್ಮಲ್ಲಿನ ಅನೇಕ ಚಿತ್ರಗಳ ಬಹುಭಾಗವನ್ನು ಕಣ್ಣು ಮುಚ್ಚಿಕೊಂಡೆ ನೋಡಬಹುದು ಅಥವಾ ಕೇಳಬಹುದು.

ಹಾಸ್ಯದೃಶ್ಯಗಳ ಸಂಕಲನ

ಹಾಸ್ಯದೃಶ್ಯಗಳನ್ನು ಸಿನಿಮಾದಲ್ಲಿ ಬಳಸಿದ ಇತಿಹಾಸ ಅದರ ಆರಂಭ ಕಾಲದಿಂದ ಇಂದಿನವರೆಗೆ ತೀರಾ ಬದಲಾಗಿಲ್ಲ. ಇಂಥಾ ದೃಶ್ಯಗಳ ಮೂಲ ಉದ್ದೇಶವೇ ನೋಡುಗನಲ್ಲಿ ನಗು ತರಿಸುವುದು, ಅಷ್ಟೆ. ಅದಕ್ಕಿಂತ ಹೆಚ್ಚಿನದೇನೂ ಹಾಸ್ಯದಿಂದ ಆಗಿಲ್ಲ. ಆಕಸ್ಮಿಕವಾಗಿ ಹಾಸ್ಯ ಬೇರೆಯ ಎತ್ತರ ಪಡೆಯುವುದು ಆ ದೃಶ್ಯದ ಒಳಗೆ, ಹಾಸ್ಯಕ್ಕೆ ಒಳಗಾದ ವಿಷಯದ ಆಡಿಯಲ್ಲಿ ಯಾವುದಾದರೂ ವೈರುಧ್ಯವೋ, ನೋವೋ ಇದ್ದಾಗ. ಚಾರ್ಲಿ ಚಾಪ್ಲಿನ್‌ರ 'ಗೋಲ್ಡ್ ರಷ್' ಚಿತ್ರದಲ್ಲಿ ಹಸಿವಿಗಾಗಿ ಬೂಟು ತಿನ್ನುವುದು, 'ಮಾಡರ್ನ್ ಟೈಮ್ಸ್' ಚಿತ್ರದಲ್ಲಿ ಯಂತ್ರಗಳ ಜೊತೆ ತಾನೂ ಯಂತ್ರವಾಗುವುದು, 'ಗ್ರೇಟ್ ಡಿಕ್ಟೇಟರ್' ಚಿತ್ರದಲ್ಲಿ ಸರ್ವಾಧಿಕಾರವನ್ನು ಹಾಸ್ಯದ ಮೂಲಕವೇ ಗೇಲಿ ಮಾಡುವುದು... ಇಂತಹ ಉದಾಹರಣೆಗಳಲ್ಲಿ ಇರುವುದು ಕಪ್ಪು ಹಾಸ್ಯ. ಅಂದರೆ ಹಾಸ್ಯದ ಮುಖವಾಡದ ಹಿಂದೆ ಬದುಕಿನ ನೋವಿರುತ್ತದೆ. ಅಂತೆಯೇ ಚಾರ್ಲಿಯ ಚಿತ್ರಗಳು ಎಲ್ಲಾ ಕಾಲದಲ್ಲೂ ಜನಪ್ರಿಯ.

ದೃಶ್ಯಗಳ ಸಂಕಲನ ದೃಶ್ಯದ ರಚನೆಯನ್ನು ಆಧರಿಸಿ ಸರಳವೋ ಅಥವಾ ಸಂಕೀರ್ಣವೋ ಆಗುತ್ತದೆ. ಒಟ್ಟಾರೆಯಾಗಿ ಸಂಕಲನಕಾರ ಜೋಕನ್ನು ಅದರ ಅಂತಿಮ ಗುರಿಯತ್ತ ಕರೆದೊಯ್ಯುವುದಷ್ಟೇ ಮುಖ್ಯ. ಹೀಗೆ ಹಾಸ್ಯ ತನ್ನ ಗುರಿಯನ್ನು ತಲುಪಲು ಬೇಕಾದ್ದು ಟೈಮಿಂಗ್. ನಟನೆಯಲ್ಲಿನ ಟೈಮಿಂಗ್, ಭೇದಗಳು ಮತ್ತು ಚಿತ್ರಿಕೆಯೊಡನೆ ಚಿತ್ರಿಕೆ ಬರುವ ರೀತಿಯಲ್ಲಿರಬೇಕಾದ ಟೈಮಿಂಗ್. ಟೈಮಿಂಗ್‌ನಲ್ಲಿ ವ್ಯತ್ಯಯವಾದರೆ ಹಾಸ್ಯ ಹಾಸ್ಯಾಸ್ಪದವಾಗಿ ಬಿಡುತ್ತದೆ. ಉದಾಹರಣೆಗಾಗಿ ಗಿರೀಶ್ ಕಾಸರವಳ್ಳಿಯವರ ನಿರ್ದೇಶನದ 'ಮನೆ' ಚಿತ್ರದಲ್ಲಿ ಹೆಂಡತಿಯನ್ನು ನಗಿಸಲು ಗಂಡ ಹೇಳುವ ಜೋಕ್ ಇರುವ ದೃಶ್ಯವನ್ನು ಗಮನಿಸಿ. ಇಲ್ಲಿ ಆ ಸಂಸಾರವಿರುವ ಮನೆಯ ಪಕ್ಕದ ಶೆಡ್ಡನ್ನು ಖಾಲಿ ಮಾಡಿಸುವ ಕೆಲಸದಲ್ಲಿ ಅವರು ಯಶಸ್ವಿಯಾಗಿದ್ದಾರೆ. ಈಗ ರಾತ್ರಿಗಳು ಕರ್ಣಕಠೋರ ಸದ್ದುಗಳಿಲ್ಲದ ನೀರವವನ್ನು ಮನೆಯಲ್ಲಿ ತಂದಿದೆ. ಈ ಸಂದರ್ಭದಲ್ಲಿ ಹೆಂಡತಿಗೆ ಗಂಡ ಜೋಕ್ ಹೇಳುತ್ತಾನೆ. ಹಾಸ್ಯದ ಟೈಮಿಂಗ್ ಮಿಸ್ಸಾಗದಿರಲಿ ಎಂದು ನಿರ್ದೇಶಕರು ಇಡೀ ಸನ್ನಿವೇಶವನ್ನು ಒಂದೇ ಚಿತ್ರಿಕೆಯಲ್ಲಿ ಹಿಡಿದಿರಿಸಿದ್ದಾರೆ. ಆದರೆ ಪಾತ್ರಧಾರಿ (ನಾಸಿರುದ್ದೀನ್ ಷಾ) ಕನ್ನಡಿಗನಲ್ಲ. ಭಾಷೆ ಬಾರದವ ಜೋಕ್ ಹೇಳಲು ಹೊರಟು ಮಾತು ಕೈಗೆ ಸಿಗದೆ ಇಡೀ ಸನ್ನಿವೇಶದಿಂದ ನಗು ಹುಟ್ಟಿಸುವ ಬದಲು ಸ್ವತಃ ಪೆಕರನಾದಂತೆ ಕಾಣುತ್ತಾನೆ. ಇದು ವಿಮರ್ಶಕರ ದೃಷ್ಟಿಯಲ್ಲಿ ವಿಭಿನ್ನ ಅರ್ಥ ಪಡೆದುಕೊಂಡು, ಹೊಸ ವ್ಯಾಖ್ಯಾನ ಪಡೆದು ಸಂಸಾರದ ನಗಲಾರದ ಸ್ಥಿತಿಯ ಯಶಸ್ವಿ

ದೃಶ್ಯ ಎಂದು ಕನ್ನಡ ಅವತರಣಿಕೆಯಲ್ಲಿ ಅನ್ನಿಸಿಕೊಂಡಿತು. ಇದೇ ದೃಶ್ಯದ ಹಿಂದಿ ಅವತರಣಿಕೆಯಲ್ಲಿ ಪ್ರೇಕ್ಷಕರು ನಗುತ್ತಾರೆ. ಅಲ್ಲಿ ವಿಮರ್ಶಕರ ಹೊಸ ವ್ಯಾಖ್ಯಾನಕ್ಕೆ ಇದೇ ದೃಶ್ಯ ಸಿಗುವುದಿಲ್ಲ. ಅಂದರೆ ಭಾಷೆಯ ಮೇಲೆ ಪ್ರಭುತ್ವವಿಲ್ಲದ ನಟ ಭಾಷೆಯನ್ನು ಅವಲಂಬಿಸಿದ ಜೋಕ್ ಹೇಳಲು ಹೋದಾಗ ಟೈಮಿಂಗ್ ಸಿಗುವುದಿಲ್ಲ ಎಂದಾಯಿತು. ಇಂತಹ ಏಕ ಚಿತ್ರಿಕೆಯ ದೃಶ್ಯದಲ್ಲಿ ಬಿಟ್ಟುಹೋದ ಟೈಮಿಂಗ್ ಅನ್ನು ಸಂಕಲನಕಾರನೂ ತರಲಾರ.

ಬೇರೆಯದೊಂದು ಉದಾಹರಣೆಯನ್ನು ಗಮನಿಸೋಣ. ಲಾರೆಲ್ ಮತ್ತು ಹಾರ್ಡಿಯ ಚಿತ್ರವೊಂದರಲ್ಲಿ ಎರಡೂ ಪಾತ್ರಗಳು ರಸ್ತೆಯೊಂದರಲ್ಲಿ ಸಾಗುತ್ತಿರುತ್ತವೆ. ರಸ್ತೆಯಲ್ಲಿ ಬಿದ್ದಿರುವ ಬಾಳೆಹಣ್ಣಿನ ಸಿಪ್ಪೆಯನ್ನು ತುಳಿದು ಹಾರ್ಡಿ ಜಾರಿ ಬೀಳುತ್ತಾನೆ. ಜನರಲ್ಲಿ ನಗು ಬರುತ್ತದೆ. ಈ ದೃಶ್ಯವನ್ನು ಎರಡು ಬಗೆಯಾಗಿ ಸಂಕಲನ ಮಾಡಬಹುದು.

ಮೊದಲನೆಯದು : (ಚಿತ್ರಿಕೆ ೧) : ರಸ್ತೆಯೊಂದರಲ್ಲಿ ಓಡಿ ಬರುತ್ತಿರುವ ಲಾರೆಲ್ ಮತ್ತು ಹಾರ್ಡಿ. ಅವರ ಓಟಕ್ಕಿರುವ ಕಾರಣವನ್ನು ಮುಂಚೆಯೇ ಸ್ಪಷ್ಟಪಡಿಸಿ, ಅವರ ಓಟವನ್ನು ತೋರಿಸುವುದು. (ಚಿತ್ರಿಕೆ ೨) : ಅವಸರದಿಂದ ಓಡುತ್ತಿರುವವರು ತಲುಪಬೇಕಾದ ಗಮ್ಯವನ್ನು ತಲುಪಿ ಬಿಡುತ್ತಾರೆ ಎಂಬುವಷ್ಟರಲ್ಲಿ ಬಾಳೆಹಣ್ಣಿನ ಸಿಪ್ಪೆ ತುಳಿದು ಹಾರ್ಡಿ ಬೀಳುವುದು. (ಚಿತ್ರಿಕೆ ೩) : ತಾನು ಸೋತದ್ದಕ್ಕೆ ಹಾರ್ಡಿ ಸಿಪ್ಪೆಯನ್ನು ಬಯ್ಯುವುದು.

ಎರಡನೆಯದು : (ಚಿತ್ರಿಕೆ ೧) : ರಸ್ತೆಯಲ್ಲಿ ಬಿದ್ದಿರುವ ಬಾಳೆಹಣ್ಣಿನ ಸಿಪ್ಪೆ. (ಚಿತ್ರಿಕೆ ೨) : ಅದೇ ರಸ್ತೆಯಲ್ಲಿ ನಡೆದು ಬರುತ್ತಿರುವ ಎರಡೂ ಪಾತ್ರಗಳು. (ಚಿತ್ರಿಕೆ ೩) : ಬಾಳೆಹಣ್ಣಿನ ಸಿಪ್ಪೆಯ ಮೇಲೆ ಕಾಲಿರಿಸಿದ ಸ್ಥೂಲದೇಹಿ ಹಾರ್ಡಿ. (ಚಿತ್ರಿಕೆ ೪) : ಆ ಸ್ಥೂಲದೇಹ ಜಾರಿ ಬೀಳುವುದು.

ಈ ಎರಡು ಬಗೆಯಲ್ಲಿ ಯಾವುದು ಸರಿ ಎಂಬುದನ್ನು ನಿರ್ಧರಿಸಬೇಕಾದವನು ಸಂಕಲನಕಾರನಲ್ಲ. ಅದು ಕಥೆಯೇ ತಿಳಿಸುವ ವಿವರ. ಇದೇ ದೃಶ್ಯ ಕುರಿತು ಪ್ರಖ್ಯಾತ ನಿರ್ದೇಶಕ ಸಂಕಲನಕಾರ ಡೇವಿಡ್ ಲೀನ್ ಹೇಳುವ ಮಾತುಗಳನ್ನು ಗಮನಿಸಿ :

"ಈಗ ಬಾಳೆಹಣ್ಣಿನ ಸಿಪ್ಪೆಯ ಸಮೀಪ ಚಿತ್ರಿಕೆಯನ್ನು ಎಲ್ಲಿ ಬಳಸಬೇಕು ?... ಸುರಳೀತ ಛೇದಕ್ಕೂ ಈ ಚಿತ್ರಿಕೆಯನ್ನು ಬಳಸುವ ಬಗೆಗೂ ಯಾವ ಸಂಬಂಧವೂ ಇಲ್ಲ. ಸುರಳೀತ ಛೇದಗಳ ದೃಷ್ಟಿಕೋನದಿಂದ ಈ ಚಿತ್ರಿಕೆಗಳನ್ನು ಗಮನಿಸಿದಾಗ ಈ ಚಿತ್ರಿಕೆಯನ್ನು ಬಳಸಲು ಸೂಕ್ತ ಸಳ ಬೀಳುವವನ ಕಾಲುಗಳು ಸಿಪ್ಪೆಯ ಬಳಿ ಬಂದಾಗ ಎಂದೆನಿಸುತ್ತದೆ. ವ್ಯಕ್ತಿ ಜಾರಿ ಬೀಳುವವರೆಗೆ ಅದೇ ಚಿತ್ರಿಕೆಯನ್ನು ಮುಂದುವರಿಸಿ ನಂತರ ವ್ಯಕ್ತಿಯ ದೇಹ ಬೀಳುವ ಹಾದಿಯಲ್ಲಿರುವಾಗ ಮಧ್ಯದ ಚಿತ್ರಿಕೆಗೆ ಸಾಗಬಹುದು. ಇದು ಸುರಳೀತ ಸಂಕಲನದ ಹಾದಿ. ಈ ಹಾದಿಯ ಮೂಲಕ ಸ್ಥೂಲದೇಹಿ ಹಾರ್ಡಿ ನೆಲ ಮುಟ್ಟಿದಾಗ ಜನ ನಗುತ್ತಾರಾದರೂ ಆ ನಗುವಿನಲ್ಲಿ ಉತ್ಕಟತೆ ಇರುವುದಿಲ್ಲ.

ಇಂಥ ಸಂದರ್ಭದಲ್ಲಿ ಸರಿಯಾದ ಉತ್ತರವಾಗಬಲ್ಲದ್ದು ಹಾಸ್ಯ ದೃಶ್ಯವನ್ನು ಕುರಿತ ಹಳೆಯ ನಾಣ್ನುಡಿ : 'ಪ್ರೇಕ್ಷಕರಿಗೆ ಮುಂದೇನಾಗುತ್ತದೆ ಎಂದು ತಿಳಿಸು. ನಂತರ ಕ್ರಿಯೆಯನ್ನು ತೋರಿಸು. ನಂತರ ಆ ಕ್ರಿಯೆ ಆಯಿತೆಂದು ಸ್ಪಷ್ಟಪಡಿಸು', ಹಾಗಾದರೆ ಇಂತಹ ದೃಶ್ಯ ಹೀಗೆ ಸಂಕಲಿತವಾಗಬೇಕು.

೧. ಮಧ್ಯಮ ಚಿತ್ರಿಕೆ : ಲಾರೆಲ್ ಮತ್ತು ಹಾರ್ಡಿ ರಸ್ತೆಯಲ್ಲಿ ಓಡುತ್ತಿದ್ದಾರೆ.

೨. ಸಮೀಪ ಚಿತ್ರಿಕೆ : ರಸ್ತೆಯಲ್ಲಿ ಬಿದ್ದಿರುವ ಬಾಳೆಹಣ್ಣಿನ ಸಿಪ್ಪೆ.

೩. ಮಧ್ಯಮ ಚಿತ್ರಿಕೆ : ಲಾರೆಲ್ ಮತ್ತು ಹಾರ್ಡಿ ಓಡುತ್ತಿರುವ ಚಿತ್ರಿಕೆ. ಈ ಚಿತ್ರಿಕೆಯನ್ನು ಹಾರ್ಡಿ ಬೀಳುವವರೆಗೆ ಮುಂದುವರೆಸಬೇಕು.

೪. ಸಮೀಪ ಚಿತ್ರಿಕೆ : ಲಾರೆಲ್ ಹತಾಶೆಯೊಡನೆ ದಡ್ಡನಂತೆ ಬಿದ್ದವನತ್ತ ನೋಡುತ್ತಾನೆ.

ಈ ಮೂರನೆಯ ಬಗೆಯಿಂದ ಹೆಚ್ಚು ನಗು ಹುಟ್ಟುತ್ತದೆ. ಏಕೆಂದರೆ ಇಲ್ಲಿ ಓಡುವವರನ್ನು ತೋರಿಸಿದ ನಂತರ ಅವರು ಬೀಳಲಿದ್ದಾರೆ ಎಂದು ಮುಂಚೆಯೇ ತಿಳಿಸುವ ಬಾಳೆಹಣ್ಣು ಸಿಪ್ಪೆಯ ಚಿತ್ರಿಕೆ ಬರುತ್ತದೆ. ನಂತರ ಮತ್ತೆ ಓಡುವವರ ಚಿತ್ರಿಕೆ ಕಂಡೊಡನೆ ಪ್ರೇಕ್ಷಕ ನಗಲು ಸಿದ್ಧನಾಗುತ್ತಾನೆ. ಸ್ಥೂಲದೇಹಿ ಬಿದ್ದಾಗ ನಗುತ್ತಾನೆ. ನಂತರ ಬರುವ ಜೊತೆಗಾರನ ಪೆಕರು ನೋಟ ಗಮನಿಸಿ, ಪ್ರೇಕ್ಷಕ ಅವರಿಬ್ಬರ ದಡ್ಡತನಕ್ಕೆ ಎಂಬಂತೆ ಗಹಗಹಿಸುತ್ತಾನೆ.

ಇಂತಹ ಸೂತ್ರಗಳನ್ನು ಚಿತ್ರ ತಯಾರಕರು ಚರಿತ್ರೆಯುದ್ದಕ್ಕೂ ಕಂಡುಕೊಂಡಿದ್ದಾರೆ. ಆದರೆ ಈ ಸೂತ್ರಗಳ ಪೂರ್ಣ ಪ್ರಮಾಣದ ಉಪಯೋಗ ನಮ್ಮ ಚಿತ್ರಗಳಲ್ಲಿ ಆಗಿಲ್ಲ. ಇಲ್ಲಿನ ಹಾಸ್ಯಚಿತ್ರಗಳು ಸಾಮಾನ್ಯವಾಗಿ ರೂಕ್ಷ (Crude) ವಾಗಿರುತ್ತವೆ. ಇದಕ್ಕೆ ಹಾಸ್ಯ ನಟರ ಅತಿರೇಕದ ಅಭಿನಯವೂ ಸೇರಿಕೊಂಡು ಹಾಸ್ಯ ದೃಶ್ಯಗಳು ಅಸಹನೀಯವಾಗುತ್ತವೆ. ಇದೊಂದು ಸಾಮಾನ್ಯೀಕರಣ. ಅನೇಕ ಉತ್ತಮ ಹಾಸ್ಯ ಸನ್ನಿವೇಶಗಳು ನಮ್ಮ ಚಿತ್ರಗಳಲ್ಲಿ ಅಪವಾದ ಎಂಬಂತೆ ಸಿಗುತ್ತವೆ. 'ಬೇಡರ ಕಣ್ಣಪ್ಪ' ಚಿತ್ರದಲ್ಲಿ ನರಸಿಂಹರಾಜು ಮತ್ತು ಜಿ.ವಿ.ಅಯ್ಯರ್ ಪಾತ್ರಗಳಿಂದ ಹುಟ್ಟುವ ಹಾಸ್ಯ, ರಾಜಕುಮಾರ್ ಅಭಿನಯದ ಅನೇಕ ಬಾಂಡ್ ಶೈಲಿಯ ಚಿತ್ರಗಳಲ್ಲಿ ನರಸಿಂಹರಾಜು ಪಾತ್ರ ಉಂಟುಮಾಡುವ ಹಾಸ್ಯವನ್ನು ನಾವು ಗಮನಿಸಬಹುದು. ಇವು ತೀರಾ Crude ಎಂಬಂತೆ ಅಲ್ಲದಿದ್ದರೂ ರಂಗಭೂಮಿಯೇ ಚಿತ್ರಿತವಾದಂತೆ ಕಾಣುವಂತಹ ಹಾಸ್ಯ ಸನ್ನಿವೇಶಗಳು. ಆ ನಿಟ್ಟಿನಿಂದ ಆಲೋಚಿಸಿದಾಗ ಸಿಂಗೀತಂ ಶ್ರೀನಿವಾಸರಾವ್ ನಿರ್ದೇಶನದ ರಾಜಕುಮಾರ್ ಅಭಿನಯದ 'ಭಾಗ್ಯದ ಲಕ್ಷ್ಮಿ ಬಾರಮ್ಮ' (ಸಂಕಲನ : ಭಕ್ತವತ್ಸಲಂ) ಚಿತ್ರದಲ್ಲಿನ ಹಾಸ್ಯ ಸನ್ನಿವೇಶಗಳನ್ನು, ದಿನೇಶ್ ಬಾಬು ನಿರ್ದೇಶಿಸಿದ ಅನಂತ್‌ನಾಗ್ ಅಭಿನಯಿಸಿದ 'ಹೆಂಡ್ತಿಗ್ಹೇಳ್ಬೇಡಿ' (ಸಂಕಲನ : ಸುರೇಶ್ ಅರಸ್) ಚಿತ್ರದ ಹಾಸ್ಯ ಸನ್ನಿವೇಶವನ್ನು, ಎನ್.ಎಸ್.ಶಂಕರ್ ನಿರ್ದೇಶಿಸಿದ 'ಉಲ್ಟಾ ಪಲ್ಟಾ' (ಸಂಕಲನ : ಗುಣಶೇಖರ್) ಚಿತ್ರದಲ್ಲಿ ಬರುವ ಹಾಸ್ಯವನ್ನು ಗಮನಿಸಬಹುದು. ಇಲ್ಲಿ ಹಾಸ್ಯ ಸಹಿರಾಗಿದೆ. ನಟನೆ ಅಸಹಜವಾಗಿಲ್ಲ ಹಾಗೂ ಅತಿರೇಕವಾಗಿಲ್ಲ ಎಂಬುದೇ ಈ ಮೇಲೆ ಹೆಸರಿಸಿದ ಚಿತ್ರಗಳಲ್ಲಿನ ಹಾಸ್ಯದ ವೈಶಿಷ್ಟ್ಯ. ಆದರೆ ಈ ಚಿತ್ರದ ಹಾಸ್ಯ ಕಟ್ಟುವ ಕ್ರಮದಲ್ಲಿ ಸಂಕಲನಕಾರನ ಕುಸುರಿಗಿಂತ ನಟರ ಅಭಿನಯವೇ ಪ್ರಮುಖವಾಗಿರುತ್ತದೆ. ಚಾರ್ಲಿ ಚಾಪ್ಲಿನ್‌ನ ಚಿತ್ರಗಳಲ್ಲಿ ಆತ ತನ್ನ ಅಭಿನಯದ ಟೈಮಿಂಗ್ ಅನ್ನು ಆಧರಿಸಿ ಸಂಕಲನಕಾರನನ್ನು ಕೇವಲ ಚಿತ್ರಿಕೆಗಳ ಬೆಸುಗೆ ಹಾಕುವವನ ಸ್ಥಿತಿಗೆ ತಂದುದನ್ನು ಮೇಲೆ ಉದಾಹರಿಸಿದ ಚಿತ್ರಗಳಿಗೆ ಹೋಲಿಸಬಹುದು.

ಹಾಸ್ಯ ಸನ್ನಿವೇಶದಲ್ಲಿ ಸಂಕಲನಕಾರನ ವೈಶಿಷ್ಟ್ಯವನ್ನು ಕನ್ನಡ ಚಿತ್ರಗಳಲ್ಲಿ ಕಾಣಬೇಕೆಂದರೆ ನಾವು 'ಪುಷ್ಪಕ ವಿಮಾನ' ಚಿತ್ರವನ್ನು ಗಮನಿಸಬೇಕು (ನಿರ್ದೇಶನ : ಸಿಂಗೀತಂ ಶ್ರೀನಿವಾಸರಾವ್, ಸಂಕಲನ : ವಾಸು). ಈ ಚಿತ್ರದಲ್ಲಿ ಮಾತಿಲ್ಲ. ಧ್ವನಿ ಎಂಬುದು ದೃಶ್ಯವೊಂದರ ಹಿನ್ನೆಲೆಯ ಸದ್ದು ಮಾತ್ರ. ಹೀಗಾಗಿ ದೃಶ್ಯದ ವಾಸ್ತವವನ್ನು ತೆರೆಯ ಮೇಲೆ ತರಲು ಅನೇಕಾನೇಕ ಹಿನ್ನೆಲೆ ಸದ್ದುಗಳನ್ನು ಸಂಕಲನಕಾರ ಬಳಸಬೇಕಾಗುತ್ತದೆ. ಚಿತ್ರದುದ್ದಕ್ಕೂ ಹಾಸ್ಯವನ್ನು ಹೆಣೆದಿರಿಸುವ ಚಿತ್ರಕಥೆಯೂ ಸಂಕಲನಕಾರನಿಗೆ ಸಹಾಯ ಮಾಡಿದೆ. ಉದಾಹರಣೆಗೆ ನಾಯಕ ಪಾತ್ರ ಫೈವ್ ಸ್ಟಾರ್ ಹೋಟೆಲ್ಲಿನ ಐಷಾರಾಮ ದೊರೆತರೂ ನಿದ್ದೆ ಮಾಡಲಾಗದೆ ತೊಳಲುವ ದೃಶ್ಯ ಗಮನಿಸಿ. ಆತ ಅದುವರೆಗೆ ಇದ್ದದ್ದು ಬಂದು ಜನನಿಬಿಡ ಪ್ರದೇಶದ, ಅಷ್ಟೇ ಜನನಿಬಿಡ ಎನಿಸುವ ಕಟ್ಟಡವೊಂದರ ಉಪ್ಪರಿಗೆಯಲ್ಲಿ. ಆತನ ಬದುಕಿನುದ್ದಕ್ಕೂ ಗಲಾಟೆ ಎನಿಸುವಷ್ಟು ಸದ್ದುಗಳು. ರಾತ್ರಿ ಆತನ ಕೋಣೆಯಲ್ಲಿ ಮಲಗಿದಾಗಲೂ ಅವನ ಕೋಣೆಯ ಹತ್ತಿರವೇ ಇರುವ ಟಾಕೀಸಿನಿಂದ ಕೇಳುವ ಯಾವುದೋ ಸಿನಿಮಾದ ಧ್ವನಿಗಳಿರುತ್ತವೆ. ಇದೆಲ್ಲವನ್ನೂ ಮೊದಲೇ ಹೇಳಿರುವ ಚಿತ್ರಕಥಾ ಲೇಖಕ ಅದೇ ನಾಯಕ ಫೈವ್ ಸ್ಟಾರ್ ಹೋಟೆಲಿನಲ್ಲಿ ಮಲಗಿದಾಗ ನಿದ್ದೆ ಬರದೆ ಹೊರಳುವುದನ್ನು ತೋರಿಸುತ್ತಾನೆ. ಆ ಮೂಲಕ ಪ್ರೇಕ್ಷಕನಲ್ಲಿ ನಗುವುದಕ್ಕೆ ಸಿದ್ಧನಾಗು ಎಂಬ ಸೂಚನೆ ನೀಡುತ್ತಾನೆ. ನಂತರ ನಾಯಕ ಹೋಟೆಲಿನ ಕಿಟಕಿಯಿಂದಿಳಿದು ಸಾಗಿ ತನ್ನ ಹಳೆಯ ಕೋಣೆಯ ಬಳಿಗೆ ಬಂದು ಟೇಪ್ ರಿಕಾರ್ಡರ್ ಆನ್ ಮಾಡಿ ಪಕ್ಕದ ಟಾಕೀಸು ಬಿತ್ತರಿಸುವ ಸಿನಿಮಾ ಶಬ್ದವನ್ನು ರಿಕಾರ್ಡ್ ಮಾಡಿಕೊಳ್ಳುತ್ತಾನೆ. ಆಗ ಪ್ರೇಕ್ಷಕ ನಗುವಿಗೆ ಮತ್ತಷ್ಟು ಸಿದ್ಧನಾಗುತ್ತಾನೆ. ಪ್ರೇಕ್ಷಕನ ಗಂಟಲಿನಲ್ಲಿ ಸಣ್ಣ ಕಿಸಕ್ ಬಂದು ಸಾಗುತ್ತದೆ. ನಂತರ ನಾಯಕ ಫೈವ್ ಸ್ಟಾರ್ ಹೋಟೆಲ್ಲಿಗೆ ಮರಳಿ, ರಿಕಾರ್ಡ್ ಮಾಡಿ ತಂದ ಟೇಪನ್ನು ಆನ್ ಮಾಡಿಕೊಂಡು ಮಲಗುತ್ತಾನೆ. ದೇಹ ಬಯಸಿದ ಐಷಾರಾಮದ ಜೊತೆಗೆ ಕಿವಿಗೆ ಅಭ್ಯಾಸವಾಗಿ ಹೋಗಿರುವ ಧ್ವನಿ ದಕ್ಕಿದೊಡನೆ ನಾಯಕ ಸಲೀಸಾಗಿ ನಿದ್ದೆ ಮಾಡುತ್ತಾನೆ. ಈ ಹಂತ ತಲುಪಿದೊಡನೆ ಪ್ರೇಕ್ಷಕ ಹೊಟ್ಟೆ ಹಿಡಿದು ನಗತೊಡಗುತ್ತಾನೆ. ಆ ಮೂಲಕ ಪ್ರೇಕ್ಷಕ ಸ್ವತಃ ತನ್ನನ್ನೇ ನಾಯಕನ ಪಾತ್ರದಲ್ಲಿ ಕಂಡುಕೊಂಡು ಆನಂದಿಸುತ್ತಾನೆ.

ಇಂತಹ ಇನ್ನೂ ಅನೇಕ ದೃಶ್ಯಗಳು 'ಪುಷ್ಪಕ ವಿಮಾನ'ದಲ್ಲಿ ಸಿಗುತ್ತವೆ. ಜೇಬಿನಲ್ಲಿ ಒಂದೇ ಒಂದು ನಾಣ್ಯವಿರುವ ನಾಯಕ ತನ್ನಲ್ಲಿರುವ ಒಂದು ನಾಣ್ಯ ಚಿಮ್ಮಿ ಎದುರಿಗಿರುವ ಭಿಕ್ಷುಕನನ್ನು ರೇಗಿಸಲೆತ್ನಿಸಿದಾಗ ಆ ಭಿಕ್ಷುಕ ತನ್ನ ಹರಕು ಷರಟಿನ ತೋಳಿನ ಮಡಿಕೆಗಳಿಂದ, ತಾನು ಕುಳಿತ ಗೋಣಿಯ ತಳದಿಂದ ನೋಟುಗಳನ್ನು ಒಂದೊಂದಾಗಿ ತೆಗೆದು ತೋರಿಸುತ್ತಾ ನಾಯಕನಿಗಿಂತ ತಾನೇ ಹೆಚ್ಚು ಸ್ಥಿತಿವಂತ, ಸುಖಿ ಎಂಬುದನ್ನು



(ಚಿತ್ರ ೧೧) ಫ್ಲಾಟ್‌ಬೆಡ್ ಮೂವಿಯೋಲಾ - ಎರಡು ಧ್ವನಿ ಪಥ, ಒಂದು ದೃಶ್ಯ ಪಟ್ಟಿಕೆ ವೀಕ್ಷಣೆ ಸೌಲಭ್ಯ.

ತೋರಿಸುವ ದೃಶ್ಯ. ಇದು ಸಾಮಾನ್ಯ ಹಾಸ್ಯ ಚಿತ್ರದಲ್ಲಿರುವಂತೆ ಏಕ ಚಿತ್ರಿಕೆಯ ದೃಶ್ಯವಲ್ಲ. ಅನೇಕ ಛೇದಗಳು ದೃಶ್ಯದಲ್ಲಿ ಬರುತ್ತವೆ. ಆ ಛೇದಗಳಲ್ಲಿನ ವಿಷಯ ಮತ್ತು ಅವೆಲ್ಲವೂ ಕೂಡಿಕೊಂಡು ಹಾಸ್ಯ ಹುಟ್ಟಬೇಕಾದ ಪರಿಯನ್ನು ಸಂಕಲನಕಾರನೇ ಕಟ್ಟಬೇಕಾದ ಪರಿಸ್ಥಿತಿ. ಹೀಗಾಗಿ ಒಂದೊಂದಾಗಿ ವಿವರಗಳನ್ನು ತೋರಿಸುತ್ತಾ ಸಾಗಿ ಸಂಕಲನಕಾರ ಅಂತಿಮವಾಗಿ ನಾಯಕನ ಮುಖದ ಮೇಲಿನ ಭಾವವನ್ನು, ತಾನು ರೇಗಿಸಿದ್ದು ತಪ್ಪು ಎಂಬಂತ ಆತ ಸಾಗುವುದನ್ನು ತೋರಿಸುತ್ತಾನೆ. ಪ್ರೇಕ್ಷಕಾಂಗಣ ಮತ್ತೆ ನಗೆಗಡಲಿನಲ್ಲಿ ಮುಳುಗುತ್ತದೆ. ಈ ದೃಶ್ಯದಲ್ಲಿ ಸಂಕಲನಕಾರ ಯಶಸ್ವಿಯಾದರೆ ಚಿತ್ರಕಥಾ ಲೇಖಕ ಕಥನ ಕ್ರಮದ ಹಾದಿಯಲ್ಲಿ ಅದೇ ಭಿಕ್ಷುಕನ ಸಾವನ್ನು, ಅವನ ಅನಾಥ ಹೆಣವನ್ನು ಹೊತ್ತೊಯ್ಯಲು ಬರುವ ಜನರನ್ನು ದೃಶ್ಯವೊಂದರಲ್ಲಿ ತಂದು, ಆ ಜನ ಭಿಕ್ಷುಕ ಕೂಡಿಸಿಟ್ಟ ದುಡ್ಡು ಕಂಡೊಡನೆ ಹೆಣ ಬಿಟ್ಟು ಹಣದ ಹಿಂದೆ ಹೋಗುವ ವಿವರವನ್ನು ತೋರಿಸಿ ಪ್ರೇಕ್ಷಕರಿಗೆ ಹಳೆಯ ದೃಶ್ಯವನ್ನು ನೆನಪಿಸುತ್ತಾ ನಾಯಕನ ಹಣ ಸೇರಿಸಬೇಕೆಂಬ ಇಚ್ಛೆ ಯಾವ ರೀತಿಯಲ್ಲಿ ವ್ಯರ್ಥ ಎಂಬ ವೇದಾಂತವನ್ನು ನಗಿಸುತ್ತಲೇ ಹೇಳಿ ಯಶಸ್ವಿಯಾಗುತ್ತಾನೆ. ಪ್ರಾಯಶಃ ಮಾತನ್ನು ಬಳಸದೆಯೇ ಈ ಮಟ್ಟದ ಹಾಸ್ಯವನ್ನು ಕಟ್ಟಿಕೊಟ್ಟ ಏಕೈಕ ಕನ್ನಡ ಚಿತ್ರ 'ಪುಷ್ಪಕ ವಿಮಾನ'. ಅಂತೆಯೇ ಆ ಚಿತ್ರ ಸರ್ವಕಾಲಿಕ ಜನಪ್ರಿಯತೆ ಪಡೆಯಿತು. ಇತರ ಭಾಷಾ ಪ್ರಾಂತ್ಯಗಳಲ್ಲೂ ಜನಪ್ರಿಯವೆನಿಸಿಕೊಂಡಿತು.

ಒಟ್ಟಾರೆಯಾಗಿ ಹಾಸ್ಯ ಚಿತ್ರ ಸಂಕಲನ ಜಾಗತಿಕವಾಗಿ ಹಾಗೂ ನಮ್ಮಲ್ಲಿ ಬೆಳೆದು ಬಂದ ಬಗೆಯನ್ನು ಗಮನಿಸಿ ಹೀಗೆ ಕ್ರೋಡೀಕರಿಸಬಹುದು. ಗಂಭೀರ ಚಿತ್ರವೊಂದರಲ್ಲಿ ಸಂಕಲನಕಾರ ತೆರೆಯ ಮೇಲೆ ಮೂಡುವ ಕಥಾಧಾರ ಸುಲಲಿತವಾಗಿ ಪ್ರೇಕ್ಷಕನನ್ನು ತಲುಪಲು, ಅಂದರೆ ಯಾವುದೇ ಕರ್ಕಶ ಅಥವಾ ಹಾರಿಕೆ ಅಥವಾ ಕಣ್ಣಿನ ಓಟಕ್ಕೆ ಧಕ್ಕೆಯುಂಟುಮಾಡುವ ಛೇದಗಳಿಲ್ಲದಂತೆ ನಿರೂಪಿಸಬೇಕು. ಕೆಲವು ಚಿತ್ರಗಳಲ್ಲಿ ನಿರ್ದೇಶಕರ/ಚಿತ್ರಕಥಾ ಲೇಖಕರ ಅಗತ್ಯಕ್ಕೆ ಅಂತಹ ಜೆರ್ಕ್ ಎನಿಸುವ ಛೇದ ಇದ್ದಾಗಿನ ಸ್ಥಿತಿಯನ್ನು ಹೊರತುಪಡಿಸಿದರೆ ಸಂಕಲನಕಾರನ ಕೆಲಸ ಸಾಮಾನ್ಯವಾಗಿ ಆದಾಗಲೇ ತಿಳಿಸಿದಂತೆ ಇರುತ್ತದೆ. ಆದರೆ ಹಾಸ್ಯ ಸಿನಿಮಾ ಮತ್ತು ಸನ್ನಿವೇಶಗಳಲ್ಲಿ ಆತ ಪ್ರೇಕ್ಷಕ ಯಾವುದನ್ನಾದರೂ ಸಲೀಸಾಗಿ ನಂಬಿ ಗ್ರಹಿಸಲಿ ಎಂಬುದಕ್ಕಿಂತ ಆತ ನಗಲಿ ಎಂಬಷ್ಟಕ್ಕೆ ಸೀಮಿತಗೊಂಡು ದುಡಿಯಬೇಕಾಗುತ್ತದೆ. ಇದಕ್ಕಾಗಿ ಕರ್ಕಶವೆನಿಸುವ, ಅವಾಸ್ತವ ಎನಿಸುವ, Jerky ಎನಿಸುವಂತೆ ಕೂಡಾ ಚಿತ್ರಿಕೆಯ ಜೋಡಣೆ ಮಾಡಿದರೂ ಅಂತಿಮವಾಗಿ ನಗು ಹುಟ್ಟುತ್ತದೆ ಎಂದಾದರೆ ಸರಿ.

ಇದೇ ಮಾತಿಗೆ ಹೊಂದುವಂತೆ ನಮ್ಮಲ್ಲಿ ಹಾಸ್ಯ ಸನ್ನಿವೇಶಗಳು ಸೃಷ್ಟಿಯಾಗಿವೆ. ಇದಕ್ಕೆ ನೆರೆಯ ತಮಿಳು-ತೆಲುಗು ಚಿತ್ರಗಳೂ ಹೊರತಲ್ಲ. ಆದರೆ ಆ ಭಾಷೆಯಲ್ಲಿರುವಷ್ಟು ಹಾಸ್ಯಕ್ಕೆ ಪ್ರಾಧಾನ್ಯ ಕೊಡುವ ಸ್ವಭಾವ ಕನ್ನಡದವರಿಗಿಲ್ಲ. ಹೀಗಾಗಿ ಕನ್ನಡದಲ್ಲಿ ಹಾಸ್ಯವೇ ಪ್ರಧಾನವಾದ ಚಿತ್ರಗಳ ಸಂಖ್ಯೆ ತೀರಾ ಕಡಿಮೆ. ಆರ್.ಎನ್.ಜಯಗೋಪಾಲ್ ಬರೆದು ಆರ್.ನಾಗೇಂದ್ರರಾವ್ ನಿರ್ದೇಶಿಸಿದ 'ನಕ್ಕರದೇ ಸ್ವರ್ಗ', ಕೆ.ಎಸ್.ಎಲ್.ಸ್ವಾಮಿ ನಿರ್ದೇಶಿಸಿದ 'ಲಗ್ನ ಪತ್ರಿಕೆ', ನರಸಿಂಹರಾಜು ನಿರ್ಮಿಸಿದ 'ಪ್ರೊ.ಹುಚ್ಚೂರಾಯ' ಮತ್ತು ಈ ಮುಂಚೆ ತಿಳಿಸಿದ ಇನ್ನೂ ಕೆಲವು ಚಿತ್ರಗಳು ಹಾಸ್ಯವನ್ನೇ ಪ್ರಧಾನ ಮಾಡಿಕೊಂಡು ತೆರೆಯನ್ನು ತಲುಪಿವೆ. ಕೆಲವು ಜನಪ್ರಿಯವಾಗಿವೆ. ಉಳಿದವು ಪರವಾಗಿಲ್ಲ ಎಂದಾಗಿವೆ. ಈ ಚಿತ್ರಗಳಲ್ಲಿ ಹೊಸತು ಎನಿಸುವ ವಿಶಿಷ್ಟ ಸಂಕಲನದ ಉದಾಹರಣೆಗಳೂ ಇಲ್ಲ. ಇವುಗಳನ್ನು ಹೊರತುಪಡಿಸಿದರೆ ನಾಯಕ ಪ್ರಧಾನ ಚಿತ್ರಗಳಲ್ಲಿ ಹಾಸ್ಯವೆಂಬುದು ಅಕ್ಕ ಪಕ್ಕದ ಪಾತ್ರಗಳಿಂದ ಕಥೆಗೆ ಸಂಬಂಧವಿಲ್ಲದಂತೆಯೇ ಬಂದಿದೆ. ಇಂಥಲ್ಲಿ ಬರುವ ಹಾಸ್ಯ ಕೆಲವೊಮ್ಮೆ ದ್ವಂದ್ವಾರ್ಥದ ಮಾತನ್ನು ಮುಖ್ಯವಾಗಿಸಿಕೊಂಡರೆ, ಕೆಲವೊಮ್ಮೆ ಯಾವುದೋ ಸ್ಥೂಲದೇಹಿಯನ್ನೋ ಅಥವಾ ವಕ್ರಮೂತಿಯವನನ್ನೋ, ಸೊಣಕಲ, ಕುಳ್ಳ ಹಾಗೂ ಉದ್ದಗಿರುವವರನ್ನು ಹೀಯಾಳಿಸುವುದಕ್ಕೆ ಸೀಮಿತವಾಗಿದೆ. ಇದಕ್ಕಿಂತ ಕೊಂಚ ಭಿನ್ನವಾದ ಹಾಸ್ಯವನ್ನು ಫಣಿ ರಾಮಚಂದ್ರ ಅವರ 'ಗಣೇಶನ ಮದುವೆ' ಮತ್ತು 'ಗೌರಿ ಗಣೇಶ' ಚಿತ್ರದಲ್ಲಿ ಗಮನಿಸಬಹುದಷ್ಟೆ. ಆದರೆ ಈ ಚಿತ್ರಗಳ ಕಥನವೇ ರೂಕ್ಷವಾಗಿರುವುದರಿಂದ 'ಸಂಕಲನ ವಿಶಿಷ್ಟ' ಹಾಸ್ಯ ಸನ್ನಿವೇಶಗಳು ಈ ಚಿತ್ರಗಳಲ್ಲಿ ಇಲ್ಲ.

ಮಾಂಟಾಜ್ ದೃಶ್ಯಗಳ ಸಂಕಲನ

ಮಾಂಟಾಜ್ (Montage) ಎಂಬ ಹೆಸರಿನ ಬಗ್ಗೆ ಹಲವು ವರ್ಷಗಳ ಹಿಂದೆ ಚಲನಚಿತ್ರ ಸಂಕಲನಕಾರ-ನಿರ್ದೇಶಕ ವಿ.ಆರ್.ಕೆ.ಪ್ರಸಾದ್ ಮತ್ತಿತರರು ಎಬ್ಬಿಸಿದ ಗೊಂದಲದ ಹಿನ್ನೆಲೆಯಲ್ಲಿ ಇಂತಹ ದೃಶ್ಯವನ್ನು ಕುರಿತು ಪ್ರತ್ಯೇಕವಾಗಿ ಮಾತಾಡುವುದು ಅನಿವಾರ್ಯ.

ಮಾಂಟಾಜ್ ಎಂದರೆ ಫ್ರೆಂಚ್ ಭಾಷೆಯಲ್ಲಿ ಸಂಕಲನ ಎಂದಷ್ಟೇ ಅರ್ಥ. ಇದೇ ಪದವನ್ನು ಐಸೆನ್‌ಸ್ಟೈನ್ ಮತ್ತು ಪುಡೋವ್ಕಿನ್ ತಮ್ಮ ಕ್ರಿಯಾಶೀಲ ಸಂಕಲನ ಕ್ರಮಕ್ಕೆ ಬಳಸಿದ್ದರು. ಆದರೆ ಬ್ರಿಟಿಷ್ ಮತ್ತು ಅಮೆರಿಕಾದ ಚಿತ್ರ ತಯಾರಕರು ಈ ಹೆಸರನ್ನು ಚಿತ್ರವೊಂದರ ಕಥಾನಕದ ನಡುವೆ ಬರುವ ಸಾಂಗತ್ಯವಿಲ್ಲದ ಚಿತ್ರಿಕೆಗಳ ಸಾಲು, ಅವುಗಳ ಸೇತು ಬಂಧ ಉಂಟುಮಾಡಲು ಬಳಸಿರುವ ದೃಶ್ಯಮಿಶ್ರಣ (Dissolve), ದೃಶ್ಯದ ಮೇಲ್ಮೈಗಲೇಪನ (Super Impose), ದೃಶ್ಯವನ್ನು ಒರೆಸಿ ಮತ್ತೊಂದು ದೃಶ್ಯ ತರುವ ತಂತ್ರ (Wipe) ಇಂತಹ ತಾಂತ್ರಿಕ ಸಾಧನಗಳ ಮೂಲಕ ಕಥಾ ಘಟ್ಟದಲ್ಲಿ ಕಾಲ ಚಲಿಸಿದ್ದನ್ನು, ಪಾತ್ರಧಾರಿಯ ಒಳತೋಟಿಯನ್ನು, ಬೆಳವಣಿಗೆಯನ್ನು ತೋರಲು ಬಳಸುತ್ತಿದ್ದರು. ಇಂತಹ ದೃಶ್ಯಗಳ ಸಂಕಲನದ ಹಿಂದೆ ಇರುವುದು ಐಸೆನ್‌ಸ್ಟೈನ್ ಮತ್ತು ಪುಡೋವ್ಕಿನ್ ಹೇಳಿದ ಒಂದಕ್ಕೊಂದು ನೇರ ಸಂಬಂಧವಿಲ್ಲದ ಚಿತ್ರಿಕೆಗಳ ಮೂಲಕ ಅರ್ಥ ಹೊರಡಿಸುವ ಕಲನೆಯೆ. ಅಂತೆಯೇ ಇಂತಹ ದೃಶ್ಯಗಳಲ್ಲಿ ಆ ಹಿಂದಿನವರ ಪ್ರಯೋಗಗಳಂತೆಯೇ ಅನೇಕ ಅಸಂಗತ, ಅತಾರ್ಕಿಕ ಚಿತ್ರಿಕೆಗಳ ಮೊತ್ತದಿಂದ ಒಂದು ಭಾವವನ್ನು ಪ್ರೇಕ್ಷಕನಿಗೆ ತಲುಪಿಸಲು ಯತ್ನಿಸಲಾಗುತ್ತದೆ. ಸಾಮಾನ್ಯವಾಗಿ ಕಥೆಯಲ್ಲಿ ಅಗತ್ಯವಾದ ವಿವರ, ಆದರೆ ಸ್ವತಃ ಆ ವಿವರಕ್ಕೆ ಸ್ವತಂತ್ರ ದೃಶ್ಯವಾಗುವಷ್ಟು ಭಾವತೀವ್ರತೆ ಇಲ್ಲ ಎಂದೆನಿಸುವ ಸಂದರ್ಭದಲ್ಲಿ ಈ ಮಾಂಟಾಜ್ ಬಳಕೆಯಾಗುತ್ತದೆ.

ಯೂರೋಪಿನ ಇತರ ದೇಶಗಳಲ್ಲಿ ಆದ ಪ್ರಯೋಗಗಳಿಗಿಂತ ಬ್ರಿಟಿಷರ ಮತ್ತು ಅಮೆರಿಕಾದ ಚಿತ್ರಗಳ ಪ್ರಭಾವ ಭಾರತೀಯ ಚಿತ್ರೋದ್ಯಮದಲ್ಲಿ ಹೆಚ್ಚು. ಆದ್ದರಿಂದಲೇ ನಮ್ಮಲ್ಲಿಯೂ ಇಂತಹ ಮಾಂಟಾಜ್ ಸನ್ನಿವೇಶಗಳನ್ನು ಬ್ರಿಟಿಷರು, ಅಮೆರಿಕನ್ನರು ಹೆಸರಿಸಿದಂತೆಯೇ ನಾವೂ ಬಳಸಿಕೊಂಡಿದ್ದೇವೆ.

ಸಾಮಾನ್ಯವಾಗಿ ನಾಯಕ-ನಾಯಕಿಯ ನಡುವೆ ಪ್ರೇಮ ಪಲ್ಲವಿಸಿತು, ಅವರು ಊರೆಲ್ಲ ಸುತ್ತಿ, ಬೀದಿಗಳಲ್ಲಿ ತಿರುಗಿ, ನಕ್ಕು ತಮ್ಮ ಪ್ರೀತಿಯ ಗಿಡವನ್ನು ಮರವಾಗಿಸಿದರು ಎಂಬಂತಹ ವಿವರ ನಮ್ಮಲ್ಲಿ ಮಾಂಟಾಜ್ ಆಗಿ ಬಳಕೆಯಾಗುತ್ತದೆ. ಉದಾಹರಣೆಗೆ ಮಣಿರತ್ನಂ ನಿರ್ದೇಶನದ 'ಪಲ್ಲವಿ ಅನುಪಲ್ಲವಿ' ಚಿತ್ರದ ಒಂದು ಹಾಡಿನಲ್ಲಿ ನಾಯಕ-ನಾಯಕಿ ನಗರದ ಅನೇಕ ಕಡೆ ಸಂಚರಿಸುವುದನ್ನು ನೋಡಬಹುದು. ಇಲ್ಲಿ ಇತರ ಸಿನಿಮಾಗಳ ಹಾಡಿನ ಚಿತ್ರೀಕರಣದಲ್ಲಿ ಇರುವಂತೆ ಕುಣಿಯುತ್ತಾ, ಹಾಡುವುದಿಲ್ಲ. ಆ ಮೂಲಕ ಚಲನೆಯ ನಿರಂತರತೆ ಇಲ್ಲ. ಬದಲಾಗಿ ಒಂದು ಚಿತ್ರಿಕೆ ಪಾರ್ಕಿನಲ್ಲಿ ಆದರೆ, ಮತ್ತೊಂದು ಹೋಟೆಲ್ಲಿನಲ್ಲಿ ಆಗುತ್ತದೆ. ಪಾತ್ರಧಾರಿಗಳು ಹಾಡಿಗೆ ತುಟಿ ಚಲಿಸುವ ಕ್ರಿಯೆಯೂ ಇಲ್ಲ. ಅವರಿಬ್ಬರ ಪ್ರೇಮ ಅನೇಕ ದಿನಗಳ ಕಾಲ ಕೂಡಿ, ಬೆಳೆದು ಗಟ್ಟಿಯಾಯಿತು ಎಂಬ ವಿವರವನ್ನು ಪ್ರೇಕ್ಷಕರಿಗೆ ಚಿತ್ರಕಥಾ ಲೇಖಕ ತಿಳಿಸುತ್ತಿದ್ದಾನೆ. ಇಲ್ಲಿ ಚಿತ್ರಿಕೆಯಿಂದ ಚಿತ್ರಿಕೆಗೆ Dissolveಗಳ ಬದಲಿಗೆ ಛೇದ (ಕಟ್) ಇದೆ. ಇಂತಹ ಮಾಂಟಾಜ್‌ಗೆ ಬೇಕಾದ ಸೇತು ಬಂಧವನ್ನು ಹಿನ್ನೆಲೆ ಸಂಗೀತ

ಒದಗಿಸುತ್ತದೆ. ಇಂತಹ ಸಂಗೀತ ಬಳಸಿದ ಸಂಕಲನವನ್ನು ಮ್ಯೂಸಿಕಲ್ ಮಾಂಟಾಜ್ ಎಂದು ಕರೆಯುತ್ತಾರೆ. ಇಲ್ಲಿ ಛೇದಗಳ ಅವಧಿಯನ್ನು ನಿಯಂತ್ರಿಸುವುದು ಸಂಗೀತವಾಗಿರುತ್ತದೆ. ಇದೇ ರೀತಿ ಸಂಕಲಿಸಿ, ಆದರೆ ಛೇದಕ್ಕೆ ಸಂಗೀತದ ಹಿನ್ನೆಲೆಗಿರುವ ಲಯ-ತಾಳವನ್ನು ಛೇದದ ಅವಧಿಗೆ ಅವಲಂಬಿಸಿದರೆ ಅಂತಹ ಸಂಕಲನವನ್ನು ರಿದಮಿಕ್ ಮಾಂಟಾಜ್ ಎನ್ನುತ್ತಾರೆ. ಇದಕ್ಕೆ ಉದಾಹರಣೆಗಾಗಿ ಜಾಹೀರಾತು ಚಿತ್ರಗಳನ್ನು ಗಮನಿಸಬಹುದು. ವಿ.ರವಿಚಂದ್ರನ್ ನಿರ್ದೇಶನದ, ಕೆ.ಬಾಲು ಸಂಕಲನವಿದ್ದ 'ಪ್ರೇಮಲೋಕ' ಚಿತ್ರದ 'ಯಾರಿವನು' ಹಾಡಿನ ದೃಶ್ಯ ಗಮನಿಸಬಹುದು.

ಇಂತಹ ದೃಶ್ಯಗಳನ್ನು ಕುರಿತು ಸಾಮಾನ್ಯವಾಗಿ ಚಿತ್ರಕಥಾ ಲೇಖಕ ಹೆಚ್ಚು ವಿವರಿಸುವುದಿಲ್ಲ. ಕೇವಲ 'ದೃಶ್ಯ ೨೫/ಮಾಂಟಾಜ್' ಎಂದು ಬರೆದು ಆ ಮಾಂಟಾಜ್‌ನಿಂದ ಪ್ರೇಕ್ಷಕನಿಗೆ ತಲುಪಬೇಕಾದ ಧ್ವನಿ-ಅರ್ಥ ಏನು ಎಂದು ಬರೆದಿರುತ್ತಾನೆ. ಹೀಗಾಗಿ ಇಂತಹ ದೃಶ್ಯದ ಸಂಕಲನಕ್ಕೆ ಬೇಕಾಗುವ ದ್ರವ್ಯವೇನು ಎಂದು ನಿರ್ದೇಶಕ/ಸಂಕಲನಕಾರ ಚರ್ಚಿಸಿ ತೀರ್ಮಾನಿಸಿಕೊಳ್ಳುತ್ತಾರೆ. ಆ ದ್ರವ್ಯಗಳೆಲ್ಲ ಕೈ ಸೇರಿದ ಮೇಲೆ ಸಂಕಲನಕಾರ ಚಿತ್ರ ಭಂಡಾರದಿಂದ ಸೂರ್ಯಾಸ್ತವೋ, ಹೂ ಅರಳುವುದೋ, ಹಕ್ಕಿ ಹಾರುವುದೋ ಇಂತಹ ಅನೇಕ ಚಿತ್ರಿಕೆಗಳನ್ನು ಜೋಡಿಸಿಟ್ಟುಕೊಂಡು, ಚಿತ್ರಿಕೆ-ಚಿತ್ರಿಕೆಗಳ ನಡುವೆ ಸೇತು ಬಂಧವನ್ನು ಯೋಜಿಸಿಕೊಂಡು, ಚಿತ್ರವೊಂದರ ತಯಾರಿಯ ಅಂತಿಮಘಟ್ಟದಲ್ಲಿ ಬರುವ ಆಪ್ಟಿಕಲ್ ಎಂಬ ವಿಶೇಷ ಪ್ರೊಸೆಸಿಂಗ್ ಲ್ಯಾಬೋರೇಟರಿಯಲ್ಲಿ ಆಗಬೇಕಾದ ಕೆಲಸವನ್ನು ಕರಾರುವಾಕ್ಕಾಗಿ ಲೆಕ್ಕ ಹಾಕಿಟ್ಟುಕೊಂಡು ಸಂಕಲನವನ್ನು ಆರಂಭಿಸುತ್ತಾನೆ. ಇದು ಕ್ರಮ.

ಈ ಹಂತದಲ್ಲಿ, ಅಂದರೆ ಮಾಂಟಾಜ್ ದೃಶ್ಯವನ್ನು ಸಂಕಲನ ಮಾಡುವಾಗ, ಎರಡು ವಿಷಯಗಳನ್ನು ಕುರಿತು ಎಚ್ಚರಿಕೆಯಿಂದ ಇರಬೇಕೆಂಬುದನ್ನು ಚಿತ್ರ ಚರಿತ್ರೆ ಕಲಿಸಿದ ಸೂತ್ರ ಸ್ಪಷ್ಟಪಡಿಸಿದೆ. ಮೊದಲನೆಯದು, ಮಾಂಟಾಜ್ ಸನ್ನಿವೇಶ ನೇರ ನಿರೂಪಣೆಯ ದೃಶ್ಯಗಳಿಗಿಂತ ವಿಭಿನ್ನವಾದ ವಾಸ್ತವದಲ್ಲಿ ನಡೆಯುತ್ತದೆ. ಕಥೆಯೊಂದರ ನಡುವೆ ಬರುವ ಇಂತಹ ನಾಟಕೀಯವಲ್ಲದ ಕಥಾ ವಿವರ ಕೇವಲ ಕಥಾ ಘಟ್ಟಗಳ ನಡುವಿನ ಅಂತರವನ್ನು ತುಂಬಲು ಸಹಾಯ ಮಾಡುತ್ತದೆ. ಹೀಗಾಗಿ ಇಡೀ ಮಾಂಟಾಜ್ ಸನ್ನಿವೇಶ ಆದಷ್ಟು ಕ್ಲುಪ್ತವಾಗಿ ಮುಗಿಯಬೇಕು. ಅದು ಅನಗತ್ಯವಾಗಿ ಲಂಬವಾದರೆ ಆವರೆಗಿನ ಕಥಾ ನಿರೂಪಣೆ ಮತ್ತು ನಂತರ ನಿರೂಪಿಸಬೇಕಿರುವ ವಿಷಯಗಳ ಶೈಲಿಗಿಂತ ಅದು ಭಿನ್ನವಾದ್ದರಿಂದ ಪ್ರೇಕ್ಷಕನನ್ನು ದೂರಕ್ಕೆ ತಳ್ಳುತ್ತದೆ. ಇದಕ್ಕೆ ಉದಾಹರಣೆ ಎಂಬಂತೆ ೫೦-೬೦ರ ದಶಕದಲ್ಲಿ ನಮ್ಮಲ್ಲಿಯೇ ಬಂದ ಚಿತ್ರಗಳಲ್ಲಿ 'ಕಾಲ ಉರುಳಿತು' ಎಂಬ ಸಣ್ಣ ವಿವರ ತೋರಲು ಹಾರುತ್ತಿದ್ದ ಕ್ಯಾಲೆಂಡರಿನ ಹಳೆಯ ಚಿತ್ರಿಕೆ, ವಿಭಿನ್ನ ಋತುಗಳಲ್ಲಿ ನಿಸರ್ಗದ ಮೇಲಾದ ಪರಿಣಾಮ ಇತ್ಯಾದಿಯನ್ನು ಮಾಂಟಾಜ್ ಸನ್ನಿವೇಶವಾಗಿ ತೋರುತ್ತಾ ಇದ್ದುದನ್ನು ಗಮನಿಸಬಹುದು. ಈಗ ಅವೆಲ್ಲವೂ ಕ್ಲೀಷೆಯಾಗಿದೆ. ಅಲ್ಲದೆ ಆ ರೀತಿ ಕಥೆಯಲ್ಲಿನ ಕಾಲಾಂತರವನ್ನು ಹೇಳಲು ಕಥನ ಸಮಯವನ್ನು ವ್ಯರ್ಥ ಮಾಡುವುದು ಅನಗತ್ಯ ಎನಿಸಿದೆ. ಎರಡನೆಯದು : ಮಾಂಟಾಜ್ ಸನ್ನಿವೇಶವನ್ನು ಇಡಿಯಾಗಿ ಒಂದು ಸ್ವತಂತ್ರ ವಿವರ ಎಂಬಂತೆ ಕಲ್ಪಿಸಿಕೊಳ್ಳಬೇಕು. ಅಲ್ಲಿ ಬರುವ ಚಿತ್ರಿಕೆ ಸರಣಿಯನ್ನು ಒಂದೇ ಹಿನ್ನೆಲೆ ಸಂಗೀತ ಶೈಲಿಯಿಂದ ಬಂಧಿಸಬೇಕು. ಆ ಸಂಗೀತ ಸಂಕಲನದ ಎರಡನೆಯ ಸಾಧನವಾಗಿ (ದೃಶ್ಯ ಸಿನಿಮಾದ ಮೂಲ ದ್ರವ್ಯ, ಧ್ವನಿ ದೃಶ್ಯಕ್ಕೆ ಲೇಪಿತವಾಗುವ ಎರಡನೆಯ (Secondary) ದ್ರವ್ಯ ಎಂಬ ಅರ್ಥದಲ್ಲಿ ಈ ಮಾತು) ಮಾಂಟಾಜ್‌ನ ಉದ್ದಕ್ಕೂ ನಡೆವ ಘಟನಾವಳಿಯನ್ನು ಹಿಡಿದಿಡಬೇಕು. ಇದನ್ನು ಹೊರತುಪಡಿಸಿ ಮಾಂಟಾಜ್‌ನ ನಡುವೆ ಮಾತುಗಳಿರುವ ಒಂದು ಚಿತ್ರಿಕೆ, ಮಾತಿಲ್ಲದ ಉಳಿದ ಚಿತ್ರಿಕೆ ಬಂದರೆ ಅದು ನೋಡುಗನಲ್ಲಿ ಗೊಂದಲ ಹುಟ್ಟಿಸುತ್ತದೆ. ಈ ಮಾತಿಗೆ ಅಪವಾದ ಎಂಬಂತೆ ಆರ್ಸನ್ ವೆಲ್ಸ್ ೧೯೪೧ರಲ್ಲಿ ಚಿತ್ರಿಸಿದ 'ಸಿಟಿಜನ್ ಕೇನ್' ಚಿತ್ರದಲ್ಲಿ (ಸಂಕಲನ : ರಾಬರ್ಟ್ ವೈಸ್) ಚಿತ್ರದ ನಾಯಕ ಕೇನ್ ತೀರಿಕೊಂಡ ನಂತರ ಆತನನ್ನು ಕುರಿತು ಅನೇಕರನ್ನು ಪತ್ರಕರ್ತನೊಬ್ಬ ಸಂದರ್ಶಿಸುವ ದೃಶ್ಯ ಬರುತ್ತದೆ. ಅಲ್ಲಿ ನಾಯಕ ಕೇನ್ ಮತ್ತು ಆತನ ಮೊದಲ ಗೆಳತಿಯ ಸಂಬಂಧ ಹೇಗೆ ದೂರವಾಯಿತು ಎಂದು ತಿಳಿಸುವುದಕ್ಕೆ ನಿರ್ದೇಶಕ ಫ್ಲಾಷ್ ಬ್ಯಾಕ್ ತಂತ್ರವನ್ನು ಬಳಸಿ, ಆ ಫ್ಲಾಷ್ ಬ್ಯಾಕ್‌ನಲ್ಲಿ ಬರುವ ವಿವರವನ್ನು ಮಾಂಟಾಜ್‌ನಂತೆ ಕೂಡಿಸುತ್ತಾನೆ. ಅಲ್ಲಿ ಪ್ರತಿದಿನ ನಾಯಕ-ನಾಯಕಿ ಹಗಲಿನ ತಿಂಡಿಗೆ ವಿಭಿನ್ನ ದಿನಗಳಲ್ಲಿ ಬರುವ ಚಿತ್ರಿಕೆಗಳಿವೆ. ಪ್ರತಿ ಚಿತ್ರಿಕೆಯಲ್ಲೂ ಅವರಿಬ್ಬರ ನಡುವಣ ಮಾತಿನ ವೈಖರಿ ಬದಲಾಗುತ್ತಾ ಅಂತಿಮವಾಗಿ ಅವರು ದೂರವಾಗಿರುವುದು ತಿಳಿಯುತ್ತದೆ. ಈ ಮಾಂಟಾಜ್‌ನಲ್ಲಿ ನಾವು ನಮ್ಮ ಚಿತ್ರಗಳಲ್ಲಿ ಕಾಣುವ ಸಂಗೀತ ಬಂಧವುಳ್ಳ ಮಾಂಟಾಜ್‌ಗಿಂತ ಭಿನ್ನವಾಗಿ, ಮಾತುಗಳಿವೆ. ಆದರೆ ಅವರಿಬ್ಬರ ನಡುವೆ ಕಾಲಾಂತರದಲ್ಲಿ ದೂರತ್ವ ಉಂಟಾಯಿತು ಎಂಬುದು ಸರಿಸುಮಾರು ಮೂರು ನಿಮಿಷಗಳ ಅವಧಿಯಲ್ಲಿ ಸ್ಪಷ್ಟವಾಗುತ್ತದೆ. ಇಲ್ಲಿ ಚಿತ್ರಿಕೆಗಳನ್ನು ಬಂಧಿಸುವುದು ಅವರು ಪ್ರತಿದಿನ ತಿಂಡಿಗೆ ಕೂಡುವ ಅದೇ ಸ್ಥಳ ಮಾತ್ರ. ಇಂತಹದೊಂದು ದೃಶ್ಯಕ್ಕೆ ಇಂದು ಇನ್ನೂ ಉತ್ತಮವಾದ ತಂತ್ರಗಳಿವೆ. ಉದಾಹರಣೆಗೆ ಎರಡೂ ಪಾತ್ರಗಳ ಸ್ಥಿರ ಚಿತ್ರದ ನಡುವೆ ಆಪ್ಟಿಕಲ್ ಸಹಾಯದಿಂದ ಮಿಂಚಿನಂತಹ ಬೆಳಕು ಬಂದು ಪಟ ಹರಿಯುತ್ತದೆ. ಅಥವಾ ಸಮೀಪವಿದ್ದ ಎರಡೂ ಪಾತ್ರಗಳು ಸ್ವಾಪ್ ಬ್ಲಾಕ್ ತಂತ್ರ ಮುಖೇನ ದೂರ ಸರಿಯುತ್ತವೆ. ಇತ್ಯಾದಿ, ಇಂದು ಈ ಹೊಸ ತಂತ್ರಗಳು ಬಂದಿವೆಯಾದರೂ ಆರ್ಸನ್ ವೆಲ್ಸ್ ಮಾಡಿದ್ದ ಪ್ರಯೋಗ ಆ ಕಾಲಕ್ಕೆ ಅದ್ಭುತವಾದ್ದು ಎಂದೆನ್ನಬೇಕು.

ಇಂತಹ ಮಾಂಟಾಜ್ ದೃಶ್ಯಗಳು ಬಾಲಕನೊಬ್ಬ ನಾಯಕನಾದದ್ದು ಎಂದು ತೋರುವಾಗ, ಇಬ್ಬರ ಮಧ್ಯೆ ಪ್ರೀತಿ ಅರಳಿತು ಎನ್ನುವಾಗ, ನಾಯಕ ಪಾತ್ರ ಒಂದು ಆಡುಕುರ್ಚಿಯಲ್ಲಿ ಕುಳಿತು ತೂಗುತ್ತಿರುವ ಅದೇ ಚಿತ್ರಿಕೆಯ ಸರಣಿಯಲ್ಲಿ ನಾಯಕ ಪಾತ್ರಕ್ಕೆ ವಯಸ್ಸಾದಂತಹ ವಿವರವನ್ನು ಹೇಳುವಾಗ ನಮ್ಮಲ್ಲಿ ಬಳಕೆಯಾಗುತ್ತಿದೆ. ಅದಕ್ಕಿಂತ ಹೆಚ್ಚು ಶಕ್ತಿಯುತವಾಗಿ ಮಾಂಟಾಜ್‌ನ ಬಳಕೆ ನಮ್ಮಲ್ಲಿನ್ನೂ ಆಗಿಲ್ಲ. 'ಪುಷ್ಪಕ ವಿಮಾನ' ಚಿತ್ರದಲ್ಲಿ ನಾಯಕ ಕದ್ದು ಉಳಿದುಕೊಂಡಿರುವ ಫೈವ್ ಸ್ಟಾರ್ ಹೋಟೆಲಿನ ಮಾಲೀಕ ತೀರಿಕೊಳ್ಳುವ ವಿವರ ಬರುತ್ತದೆ. ಅದಾದೊಡನೆ ಆ ಮಾಲೀಕ ಕಡು ಬಡತನದಿಂದ ಆ ಎತ್ತರಕ್ಕೆ ಏರಿದ್ದನ್ನು ಸೂಚಿಸಲು ಆತನ ಹಂತ ಹಂತದ ಬೆಳವಣಿಗೆ ಸೂಚಿಸುವ ಸ್ಥಿರ ಚಿತ್ರಗಳ ಸಾಲು ಕಾಣಿಸಿಕೊಳ್ಳುತ್ತದೆ. ಅಂತಿಮವಾಗಿ ಆತನ ಸಾವು ಮತ್ತೆ ಕಾಣಿಸುತ್ತದೆ. ಇಂತಹದೊಂದು ಮಾಂಟಾಜ್‌ನ ಮೂಲಕ ನಾಯಕ ಪಾತ್ರಧಾರಿಗೆ ತಾನೂ ಕಡು ಬಡತನದ ಸ್ಥಿತಿಯಿಂದ ಕಷ್ಟಪಟ್ಟು ಆ ಎತ್ತರ ತಲುಪಬಹುದು ಎನಿಸುವಂತಾಗುತ್ತದೆ. ಇದು ಸಾಮಾನ್ಯ ಮಾಂಟಾಜ್ ಬಳಕೆಗಿಂತ ಭಿನ್ನ ಸ್ಥಿತಿ. ಪ್ರಾಯಶಃ ಮಾತಿನ ಬಳಕೆಯಿದ್ದಲ್ಲಿ ಮತ್ತಾವುದೇ ಪಾತ್ರ ಆಡುವ ಮಾತಿನಿಂದ ನಾಯಕನಿಗೆ ಬರಬೇಕಿದ್ದ ತಿಳುವಳಿಕೆ ಈ ಮೌನ ಚಿತ್ರದಲ್ಲಿ ಇಂತಹ ಮಾಂಟಾಜ್‌ನಿಂದ ಸಾಧಿತವಾಗಿದೆ.

ಇಂತಹುದೇ ವಿಭಿನ್ನ ಮಾಂಟಾಜ್ ಸನ್ನಿವೇಶವನ್ನು ಸಿದ್ಧಲಿಂಗಯ್ಯ ನಿರ್ದೇಶಿಸಿದ, ಭಕ್ತವತ್ಸಲಂ ಸಂಕಲನವಿದ್ದ 'ಬೂತಯ್ಯನ ಮಗ ಅಯ್ಯು' ಚಿತ್ರದಲ್ಲಿ ಕಾಣಬಹುದು. ಎರಡು ಕುಟುಂಬಗಳು ವಿರಸಕ್ಕೆ ಬಿದ್ದು ಕೋರ್ಟಿನಲ್ಲಿ ಕೇಸ್ ಹಾಕಿಕೊಂಡು ಎಲ್ಲವನ್ನೂ ಕಳೆದುಕೊಳ್ಳುವ ಸ್ಥಿತಿ ತಲುಪುವುದನ್ನು ತೋರಲು ನಿರ್ದೇಶಕ/ಸಂಕಲನಕಾರರು ಹಿನ್ನೆಲೆಯಾಗಿ ಹಾಡೊಂದನ್ನು ಬಳಸಿ ಹಾಡಿನಲ್ಲಿ ವಾಚ್ಯವಾಗಿರುವ ಕಥಾವಿವರಕ್ಕೆ ಹೊಂದುವ ಅಷ್ಟೇ ವಾಚ್ಯವಾದ ಚಿತ್ರಿಕೆಗಳನ್ನು ಇರಿಸುತ್ತಾರೆ. ಇಂತಹ ಇನ್ನೂ ಕೆಲವು ವಿಶಿಷ್ಟ-ವಿಭಿನ್ನ ಅನ್ನಿಸುವ ಮಾಂಟಾಜ್ ಸನ್ನಿವೇಶಗಳು ನಮ್ಮ ಚಿತ್ರಗಳಲ್ಲಿ ಬಂದಿವೆ. ರಾಜೇಂದ್ರಸಿಂಗ್ (ಬಾಬು) ಅವರ ನಿರ್ದೇಶನದ 'ಮುತ್ತಿನ ಹಾರ' ಚಿತ್ರದಲ್ಲಿ 'ದೇವರು ಹೊಸೆದ ಋತುಗಳ ಹಾರ...' ಎಂಬ ಹಾಡಿನ ದೃಶ್ಯದ ಸಂಕಲನವನ್ನು ಗಮನಿಸಬಹುದು. ಕೆ.ಎಸ್.ಎಲ್.ಸ್ವಾಮಿ (ರವೀ) ಅವರ ನಿರ್ದೇಶನದ 'ಮಿಥಿಲೆಯ ಸೀತೆಯರು' ಚಿತ್ರದಲ್ಲಿ ಹೆಣ್ಣು ಮಕ್ಕಳಿಗೆ ಮದುವೆಯಾಗಲಿಲ್ಲವೆಂದು ಕೊರಗುವ ತಾಯಿಯ ಪಾತ್ರದ ಭಾವವನ್ನು ಚಿತ್ರದುದ್ದಕ್ಕೂ ಅಲ್ಲಲ್ಲಿ ಬಳಸಿರುವ 'ರಾಮನು ಬರಲಿಲ್ಲ' ಎಂಬ ಹಾಡಿನ ಬಳಕೆಯಲ್ಲಿ ಗಮನಿಸಬಹುದು. ಕಾರ್ಲ್ ರೀಸ್‌ನ ಈ ಸೂತ್ರೀಕರಣವೆನ್ನಬಹುದಾದಂತಹ ಮಾತಿನ ಮೂಲಕ ಮಾಂಟಾಜ್ ಬಗ್ಗೆ ಸಂಕಲನಕಾರ ತಿಳಿದುಕೊಂಡಿರುವ ಸತ್ಯವನ್ನು ಗ್ರಹಿಸಬಹುದು :

"ಕಥೆಯೊಂದರಲ್ಲಿನ ವಿವರವೊಂದನ್ನು ಕೇವಲ ತುಂಡು ಚಿತ್ರಿಕೆಗಳ ಸರಣಿಯಲ್ಲಿ ಹೇಳಬಹುದೆಂದು ನಿರ್ಧರಿಸಿದರೆ ಸಾಲದು. ಆ ದೃಶ್ಯದ ನಾಟಕೀಯ ತಿರುಳು ಮಾಂಟಾಜ್ ಶೈಲಿಯೊಂದಿಗೆ ಹೊಂದಿಕೊಳ್ಳುವಂತಿರಬೇಕು. ಅಂತಹ ಹೊಂದಾಣಿಕೆ ಸಾಧ್ಯವಾಗದೆ ಹೋದ ಮಾಂಟಾಜ್ ದೃಶ್ಯಗಳು ಕಥೆ/ಕ್ರಿಯಾ ನಿರಂತರತೆಯಿಂದ ತಪ್ಪಿಸಿಕೊಳ್ಳಲು ಮಾಡಿದ ಸರ್ಕಸ್‌ನಂತೆ ಮತ್ತು ತಂತ್ರ ತರ್ಕಹೀನ ಬಳಕೆಯಂತೆ ಕಂಡುಬಿಡಬಹುದು."

ಇಂತಹ ಸಾಂಗತ್ಯವನ್ನು ಸಾಧಿಸಿದ ಮಾಂಟಾಜ್ ದೃಶ್ಯಗಳು ನಮ್ಮಲ್ಲಿ ವಿರಳ. ಅಂತಹ ಸಾಂಗತ್ಯವುಳ್ಳ ಮಾಂಟಾಜ್‌ಗೆ ಉದಾಹರಣೆಯಾಗಿ ಜಿ.ವಿ.ಅಯ್ಯರ್ ನಿರ್ದೇಶನದ, ವಿ.ಆರ್.ಕೆ.ಪ್ರಸಾದ್ ಸಂಕಲನದ 'ಹಂಸಗೀತೆ' ಚಿತ್ರದಲ್ಲಿ ನಾಯಕ ಪಾತ್ರಧಾರಿ ವೆಂಕಟಸುಬ್ಬಯ್ಯ ತಾನು ಯಾವ ರಾಗವನ್ನು ಒಲಿಸಿಕೊಳ್ಳಬೇಕು ಎಂದು

(ಚಿತ್ರ ೧೨) ಮಿನಿ ಮೂವಿಯೋಲಾ

ನಿರ್ಧರಿಸಿಕೊಳ್ಳಲು ಕುಳಿತಾಗ ಅವನ ಸುತ್ತ ವಿಭಿನ್ನ ರಾಗಗಳಿಗೆ ಸಂಕೇತವಾಗಿ ಓಡಾಡುವ ಅನೇಕ ಮಕ್ಕಳು ಇರುವ ಸನ್ನಿವೇಶವನ್ನು ಗಮನಿಸಬಹುದು. ಅಂತೆಯೇ 'ಸಂಕಲ್ಪ' (ನಿರ್ದೇಶನ : ನಂಜರಾಜ ಅರಸ್, ಸಂಕಲನ : ಉಮೇಶ್ ಕುಲಕರ್ಣಿ) ಚಿತ್ರದಲ್ಲಿ ಎರಡು ಖಾಲಿ ಕುರ್ಚಿಗಳು ಆಡುತ್ತಿರುವಾಗ ಹಿನ್ನೆಲೆಯಲ್ಲಿ ವಿಜ್ಞಾನ ಮತ್ತು ಮೂಢನಂಬಿಕೆ ಕುರಿತ ಚರ್ಚೆಯನ್ನು ಬಳಸಿದ ಮಾಂಟಾಜ್ ಸನ್ನಿವೇಶವನ್ನು ಗಮನಿಸಬಹುದು. ತದ್ವಿರುದ್ಧಕ್ಕೆ ಬೇಕಾದಷ್ಟು ಉದಾಹರಣೆಗಳಿವೆ. ಅವು ಪಟ್ಟಿ ಮಾಡುವಷ್ಟು ಮುಖ್ಯವಲ್ಲ.

ಈವರೆಗೆ ಸಂಕಲನ ಚರಿತ್ರೆ ಹಾಗೂ ಆ ವಿಭಾಗ ಕಂಡುಕೊಂಡ ಸೂತ್ರಗಳ ಕೆಲವು ಅಂಶಗಳನ್ನು ಮಾತ್ರ ನೋಡಿದ್ದೇವೆ. ಇದಲ್ಲದೆ ಸಾಕ್ಷ್ಯ ಚಿತ್ರ, ವಾರ್ತಾ ಚಿತ್ರ ಮತ್ತು ವ್ಯಕ್ತಿ ಚಿತ್ರವೆಂಬ ಭಾಗಗಳೂ ಇವೆ. ಕನ್ನಡ ಚಲನಚಿತ್ರ ಚರಿತ್ರೆಯ ಸಂದರ್ಭದಲ್ಲಿ ಈ ವಿಭಾಗಗಳಿಗೆ ಹೆಚ್ಚು ಒತ್ತು ಸಿಕ್ಕಿಯೇ ಇಲ್ಲ. ಹಾಗಾಗಿ ಈ ವಿಭಾಗ ಕುರಿತು ಸ್ಪಷ್ಟ ಇತಿಹಾಸವನ್ನು ಸಂಗ್ರಹಿಸುವ ಪ್ರಯತ್ನಗಳಾಗಿಲ್ಲ.

ಬೆಳೆದು ಬಂದ ಬಗೆ

ಪೋರ್ಟರ್ ಶತಮಾನದ ಆರಂಭದಲ್ಲಿ ಚಿತ್ರಿಕೆಯೊಡನೆ ಚಿತ್ರಿಕೆಯನ್ನು ಜೋಡಿಸುವ ಪ್ರಯೋಗ ಮಾಡಿದಾಗಿನಿಂದ ಇಂದಿನವರೆಗೆ ಸಂಕಲನ, ಅಂದರೆ ಚಿತ್ರಿಕೆಯೊಡನೆ ಮತ್ತೊಂದು ಚಿತ್ರಿಕೆಯನ್ನು ಜೋಡಿಸುವ ಕ್ರಮ ಹಂತ ಹಂತವಾಗಿ ಬದಲಾಗುತ್ತಾ ಬಂದಿದೆ. ಆದಾಗಲೇ ಸಿದ್ಧವಿರುವ ಕಥೆಯೊಂದನ್ನು ಹೇಳುವುದಷ್ಟೇ ಸಂಕಲನದ ಕೆಲಸ ಎಂದು ಮಾತಾಡಿದ್ದೇವೆ. ಆದರೆ ನಿರಂತರವಾಗಿ ನೋಡುಗನ ಕಣ್ಣನ್ನು ತೆರೆಯ ಮೇಲೆ ಸ್ಥಾಪಿಸುವಂತಾಗಲು ಸಂಕಲನಕಾರರು ಅನೇಕ ಪ್ರಯೋಗಗಳನ್ನು ಮಾಡುತ್ತಲೇ ಬಂದಿದ್ದಾರೆ. ಇಂದು ಬಳಕೆಯಲ್ಲಿರುವ ವಿಧಾನಕ್ಕೆ ಕಾರಣವಾದ ಹಂತಗಳನ್ನು ಸ್ಥೂಲವಾಗಿ ಗಮನಿಸೋಣ. ಸ್ಥೂಲವಾಗಿ ಎಂದು ಹೇಳುತ್ತಿರುವುದೇಕೆಂದರೆ ಈ ಕತ್ತರಿಸುವ ಜೋಡಿಸುವ ಕೆಲಸದ ತಾಂತ್ರಿಕ ವಿವರಗಳಿಗೆ ಹೋಗಿಬಿಟ್ಟರೆ ನಾವು 'ಸಂಕಲನ ಚರಿತ್ರೆ' ಎಂಬುದನ್ನು ದಾಟಿ 'ಸಂಕಲನ ಮಾಡುವುದು ಹೇಗೆ' ಎಂಬ ವಿಷಯದತ್ತ ಸಾಗಿಬಿಡುವ ಅಪಾಯವಿದೆ. ಆದ್ದರಿಂದ ಕಾಲದಿಂದ ಕಾಲಕ್ಕೆ ಪ್ರಯೋಗಗಳ ಮೂಲಕ ಸಿದ್ಧವಾದ ಸಂಕಲನ ಸಿದ್ಧಾಂತಗಳನ್ನು ಮಾತ್ರ ಇಲ್ಲಿ ಗಮನಿಸಲಾಗಿದೆ.

ಆದಾಗಲೇ ನಾವು ಪುಡೋವ್ಕಿನ್, ಐಸೆನ್‌ಸ್ಟೈನ್ ಮತ್ತು ಗ್ರಿಫಿತ್ ತರಹದವರು ಮಾಡಿದ ಪ್ರಯೋಗಗಳ ಬಗ್ಗೆ ತಿಳಿದುಕೊಂಡಿದ್ದೇವೆ. ಆದರೆ ಒಂದು ಚಿತ್ರಿಕೆಯೊಡನೆ ಮತ್ತೊಂದು ಚಿತ್ರಿಕೆಯನ್ನು ಹೊಂದಿಸುವ ಭೌತಿಕ ಕ್ರಿಯೆ ಆಗುವುದು ಹೇಗೆ, ಇಲ್ಲಿ ಯಾವ ಫ್ರೇಮಿನಿಂದ ಯಾವ ಫ್ರೇಮಿಗೆ ಛೇದ ಬರಬೇಕು ಎಂಬಲ್ಲಿ ಸಂಕಲನಕಾರನ ಆಯ್ಕೆಯ ತಿಳಿವಳಿಕೆ ಇದೆ. ಉದಾಹರಣೆಗೆ ನಾವು ರಸ್ತೆಯೊಂದರ ನಡುವೆ ಇದ್ದೇವೆ. ನಮ್ಮ ಕಣ್ಣುಗಳು ಎದುರಿಗಿರುವ ಎಲ್ಲ ದಿಕ್ಕುಗಳತ್ತ, ಮನಸೆಳೆವ ವಿವರಗಳತ್ತ ಸಾಗುತ್ತವೆ. ಅದು ಸಹಜ. ಈ ಮಧ್ಯೆ ಸಣ್ಣ ಹುಡುಗನೊಬ್ಬ ತನ್ನನ್ನು ಯಾರೂ ಗಮನಿಸುತ್ತಿಲ್ಲವೆಂದು ಗುರುತಿಸಿ, ರಸ್ತೆಯಲ್ಲಿದ್ದ ಕಲ್ಲೊಂದನ್ನು ಮನೆಯ ಕಿಟಕಿಯ ಗಾಜನ್ನು ಒಡೆಯಲೆಂಬಂತೆ ಗುರಿ ಹಿಡಿಯುತ್ತಾನೆ. ತಟ್ಟನೆ ನಮ್ಮ ಕಣ್ಣು ಆ ಮನೆಯ ಕಿಟಕಿಯ ಗಾಜಿನತ್ತ ಸರಿಯುತ್ತದೆ. ಮತ್ತೆ ನಾವು ಹುಡುಗನನ್ನು ನೋಡುತ್ತೇವೆ. ಅವನು ಕಲ್ಲು ಬೀರುತ್ತಾನೆ. ಮತ್ತೆ ನಮ್ಮ ಕಣ್ಣು ಕಲ್ಲು ಹೋದ ದಿಕ್ಕನ್ನು ಅನುಸರಿಸಿ ಗಾಜು ಒಡೆದಿದ್ದನ್ನು ಗಮನಿಸುತ್ತದೆ. ಮನೆಯವರ್ಯಾರೋ ಕಿಟಕಿಯತ್ತ ಬರುವುದು ಸಹ ಕಾಣಬಹುದು. ಈಗ ಹುಡುಗ ಏನು ಮಾಡುತ್ತಾನೆ ಎಂದು ನಾವು ಮತ್ತೆ ನೋಡುತ್ತೇವೆ. ಹುಡುಗ ಮನೆಯವರಿಗೆ ಸಿಗದಂತೆ ಓಡುತ್ತಾನೆ. ಮತ್ತೆ ನಾವು ಮನೆಯವರತ್ತ ನೋಡುತ್ತೇವೆ. ಮನೆಯವರು ಹುಡುಗನ ಮೇಲಿನ ಕೋಪದಿಂದ ಕೆಳಗೆ ಇಳಿದು ಬರುವಾಗ ಹುಡುಗ ತಪ್ಪಿಸಿಕೊಂಡಿದ್ದಾನೆ. ಮನೆಯವ ಕೋಪದಿಂದ ಗೊಣಗುತ್ತಾ ನಿಂತಿರುವಾಗ ಅವನ ಹಿಂದೆಯೇ ಕಿಟಕಿಯ ಗಾಜು ರಿಪೇರಿ ಮಾಡುವ ವ್ಯಕ್ತಿ ಬರುತ್ತಾನೆ. ಆತನನ್ನು ಕರೆದು ಮನೆಯವ ಗಾಜು ರಿಪೇರಿಯ ಕೆಲಸ ಒಪ್ಪಿಸುತ್ತಾನೆ.

ಈ ದೃಶ್ಯ ಚಾರ್ಲಿ ಚಾಪ್ಲಿನ್‌ನ 'ದ ಕಿಡ್' ಸಿನಿಮಾದ್ದು. ಮೇಲೆ ವಿವರಣೆ ನೀಡುವಲ್ಲಿ ಇರುವ 'ನಾವು'ಗಳನ್ನೆಲ್ಲಾ ಪ್ರೇಕ್ಷಕನ ದೃಷ್ಟಿಕೋನದಲ್ಲಿ ಇರುವ ಕ್ಯಾಮರಾ ಎಂದು ಕೊಂಡರೆ, ದೃಶ್ಯವೊಂದರ ಚಿತ್ರೀಕರಣ ಕ್ರಮ ಅಂದರೆ ಚಿತ್ರಿಕೆಗಳ ವಿಭಾಗೀಕರಣ ಹೇಗೆ ಎಂದು ಗೊತ್ತಾಗುತ್ತದೆ. ಹೀಗೆ ವಿಭಜಿತವಾದ ಚಿತ್ರಿಕೆಯನ್ನು ನಾವು ಕಥಾ ರಚನೆಯಲ್ಲಿ ಹೇಗೆ ವಿವರಗಳ ಮೂಲಕ ಕಣ್ಣೆದುರಿಗೆ ಚಿತ್ರ ಮೂಡುವಂತೆ ಮಾಡಿಕೊಳ್ಳುತ್ತೇವೋ, ಸಂಕಲನಕಾರನು ಅದೇ ಕ್ರಮದಲ್ಲಿ ಚಿತ್ರಿಕೆ ಜೋಡಿಸುತ್ತಾನೆ. ಪ್ರಾಯಶಃ ಅರ್ನೆಸ್ಟ್ ಲಿಂಡ್‌ಗ್ರನ್‌ನ ಈ ಮಾತುಗಳು ಸಂಕಲನ ಕ್ರಮವನ್ನು ಮತ್ತಷ್ಟು ಸ್ಪಷ್ಟಪಡಿಸುತ್ತವೆ:

''ಸಂಕಲನ ಕ್ರಮದ ಹಿಂದಿರುವ ಮಾನಸಿಕ ಸೂತ್ರವು, ನಾವು ನೋಡುವ ಕ್ರಮದಲ್ಲಿರುವ ಮಾನಸಿಕ ಹಾದಿಯನ್ನೇ ಹಿಡಿಯುತ್ತದೆ. ನಮ್ಮ ಸುತ್ತಲ ಪರಿಸರವನ್ನು ಗಮನಿಸುವಾಗ ಕಣ್ಣು ಒಂದರ ನಂತರ ಒಂದು ವಸ್ತುವನ್ನು ನೋಡುವಂತೆಯೇ ಸಂಕಲನದಲ್ಲಿ ಚಿತ್ರಿಕೆ ಜೋಡಣೆಯ ಕ್ರಮವೂ ಒಂದರ ನಂತರ ಒಂದರಂತೆ ವಿವರಗಳನ್ನು ಹೆಣೆದಿರಿಸುತ್ತದೆ.

ಸಿನಿಮಾದಲ್ಲಿರುವುದು ಛಾಯಾಗ್ರಹಿತ ನೈಜತೆ ಮತ್ತು ಅದು ನೈಜತೆಗೆ ಹತ್ತಿರವಾಗುವಂತಹ ಚಲನೆಯನ್ನು ದಾಖಲಿಸುತ್ತದೆ. ಅದೇ ರೀತಿ ಸಂಕಲನವೂ ಸಹ ನಾವು ನೋಡುವ ಕ್ರಮದಲ್ಲಿರುವ ನೈಜತೆಯನ್ನು ಹೋಲುವಂತಹ ಚಿತ್ರಿಕೆಗಳ ಸರಣಿಯನ್ನು ಸಿದ್ಧಪಡಿಸುತ್ತದೆ.''

ಇಂತಹದೊಂದು ಸೂತ್ರಕ್ಕೆ ಸಿನಿಮಾ ಸಂಕಲನಕಾರ ತಲುಪುವ ಹೊತ್ತಿಗೆ ಸಿನಿಮಾಕ್ಕೆ ಮೂವತ್ತರ ಹರೆಯ ಮೀರಿತ್ತು. ೪೦ರ ದಶಕದ ಆರಂಭಕಾಲದಲ್ಲಿ ಈ ಮಟ್ಟದ ಸಂಕಲನವಿದ್ದ ಸಿನಿಮಾಗಳು ಬರತೊಡಗಿದವು. ಭಾರತದ ಸಂದರ್ಭದಲ್ಲಿ ದಾದಾಸಾಹೇಬ್ ಫಾಲ್ಕೆ ಮೊದಲ ಚಿತ್ರ ನಿರ್ಮಿಸಿದರಾದರೂ ಮೇಲೆ ತಿಳಿಸಿದ ರೀತಿಯ ಸಂಕಲನವಿದ್ದ ಸಿನಿಮಾಗಳು ಬರತೊಡಗಿದ್ದು ಐವತ್ತರ ದಶಕದ ಆರಂಭದಲ್ಲಿ. ಕನ್ನಡದ ಸಂದರ್ಭದಲ್ಲಿ ಅಂತಹ ಸಂಕಲನವಿದ್ದ ಸಿನಿಮಾಗಳು ಬಂದುದು ಅರುವತ್ತರ ದಶಕದ ಆರಂಭದಲ್ಲಿ. ಎಂ.ಆರ್.ವಿಠಲ್, ಎಸ್.ಲಕ್ಷ್ಮೀನಾರಾಯಣ್‌ರಂತಹ ನಿರ್ದೇಶಕರುಗಳು ಬಂದ ನಂತರ ಈ 'ನೋಡು ಕ್ರಮ'ದ ಸಂಕಲನವೂ ಬರತೊಡಗಿತು. ಅಲ್ಲಿಯವರೆಗೆ ಕನ್ನಡ ಚಿತ್ರಗಳು ಚಿತ್ರಿತ ರಂಗಭೂಮಿಯಂತೆಯೇ ಇದ್ದವು.

ಒಂದು ಕಥನವನ್ನು ಚಿತ್ರಿಕೆಯಿಂದ ಚಿತ್ರಿಕೆಗೆ ಜೋಡಿಸುವ ಸಂದರ್ಭದಲ್ಲಿ ಸಂಕಲನಕಾರ ಮೇಲೆ ಉದಾಹರಿಸಿದಂತೆ ಕೇವಲ ನೋಡುಗನೊಬ್ಬನ ನೋಟದ ಕ್ರಮವನ್ನು ಅನುಸರಿಸುವುದು ಕಷ್ಟ. ಆತ ಒಂದು ಮಧ್ಯಮ ಚಿತ್ರಿಕೆಯಿಂದ ಸಮೀಪ ಚಿತ್ರಿಕೆಗೆ, ಸಮೀಪ ಚಿತ್ರಿಕೆಯಿಂದ ದೂರ ಚಿತ್ರಿಕೆಗೆ ಸಾಗಬೇಕಾಗಿ ಬರುತ್ತದೆ. ಇದು 'ನೋಡು ಕ್ರಮ' ಅಲ್ಲ. ಅಂದರೆ ಸಂಕಲನಕಾರ ಇಂಥ ಸಂದರ್ಭದಲ್ಲಿ ಮನಬಂದಂತೆ ಜೋಡಿಸುತ್ತಿದ್ದಾನೆ ಎಂದಲ್ಲ. ಆತ ವಿಭಿನ್ನ ಕ್ರಮವನ್ನು ಅನುಸರಿಸುತ್ತಿದ್ದಾನೆ. ಅಂದರೆ ಸಂಕಲನಕಾರನೇ ನೋಡುಗ ಏನನ್ನು ನೋಡಬೇಕು ಎಂದು ನಿರ್ಧರಿಸುತ್ತಿದ್ದಾನೆ. ಲಿಂಡ್‌ಗ್ರನ್ ಹೇಳಿದ ಕ್ರಮದಲ್ಲಿ ಕ್ಯಾಮರಾ ಒಂದೆಡೆಯಲ್ಲಿ ನಿಂತು ಎಲ್ಲವನ್ನೂ ಕತ್ತು ತಿರುಗಿಸಿದಂತೆ ತಿರುಗುತ್ತಾ ನೋಡುತ್ತದೆ. ಮೇಲೆ ತಿಳಿಸಿದ ಎರಡನೆಯ ಕ್ರಮದಲ್ಲಿ ಕ್ಯಾಮರಾವು ದೃಗ್ದರ್ಶನ ಪಥದಲ್ಲಿ ಹಿಂದೆ ಮುಂದೆ ಚಲಿಸುತ್ತಿದೆ. ಈ ಚಲನೆಗೆ ಯಾವ ವಸ್ತು ಕಥನದಲ್ಲಿ ಪ್ರಾಮುಖ್ಯ ಪಡೆಯಬೇಕು ಎಂಬ ವಿವರ ಕಾರಣವಾಗುತ್ತದೆ. ಫ್ಯಾನ್ಸಿ ಸ್ಟೋರ್ ಒಂದರ ಮುಂದೆ ನಿಂತ ವ್ಯಕ್ತಿಗೆ ಅಂಗಡಿಯಾಚೆ ತಗುಲಿಸಿರುವ ಎಲ್ಲಾ ಸಾಮಗ್ರಿಗಳೂ ಕಾಣಿಸುತ್ತವೆ. ಅದರಲ್ಲಿ ಅವನ ಗಮನ ಸೆಳೆವ ಯಾವುದೋ ಪುಟ್ಟ ಪ್ರತಿಮೆ ಕಾಣುತ್ತದೆ. ಅದನ್ನವನು ತೆಗೆದುಕೊಳ್ಳುತ್ತಾನೆ ಎಂದಾಗ ನೋಡುವ ವ್ಯಕ್ತಿ ಮತ್ತು ಅಂಗಡಿಯ ದೂರ ಚಿತ್ರಿಕೆ ಬಂದು, ನಂತರ ಗಮನಸೆಳೆದ ವಸ್ತುವಿನ ಸಮೀಪ ಚಿತ್ರಿಕೆ ಬರುತ್ತದೆ. ನಂತರ ವ್ಯಕ್ತಿ ಆ ವಸ್ತುವನ್ನು ತೆಗೆದುಕೊಳ್ಳುವ ವಿವರವನ್ನುಳ್ಳ ಮಧ್ಯಮ

ಚಿತ್ರಿಕೆ. ಇದು ಎರಡನೆಯ ಕ್ರಮ. ಕ್ಯಾಮರಾ ಕಥಾವಸ್ತುವಿನ ವಿವರಗಳನ್ನು ಗ್ರಹಿಸಿಡಬೇಕು ಎಂಬ ಕಲ್ಪನೆ ಬಂದಾಗ ಎರಡನೆಯ ಕ್ರಮ ಚಾಲ್ತಿಗೆ ಬಂತು. ಇತಿಹಾಸದ ದೃಷ್ಟಿಯಿಂದ ಇವೆರಡು ಕ್ರಮಗಳ ಬಳಕೆಯ ನಡುವಿನ ಅಂತರ ತೀರಾ ದೂರದ್ದಲ್ಲ. ಯೂರೋಪಿನ ಹೊಸಅಲೆಯ ಚಿತ್ರಗಳು, ಆಲ್‌ಫ್ರೆಡ್ ಹಿಚ್‌ಕಾಕ್ ಬ್ರಿಟನ್ನಿನಲ್ಲಿ ಇದ್ದ ಕಾಲದಲ್ಲಿ ನಿರ್ಮಿಸಿದ ಚಿತ್ರಗಳು ಇಂತಹ ಕ್ರಮವನ್ನು ಅನುಸರಿಸತೊಡಗಿದ್ದವು.

ನಿರ್ದೇಶಕನೊಬ್ಬ ಕಥೆಯನ್ನು ಹೇಳ ಹೊರಟಾಗ ಕೇವಲ ಒಬ್ಬ ನೋಡುಗನ ದೃಷ್ಟಿಕೋನದಿಂದ ಕಥೆ ಹೇಳಲಾರ. ಆತ ಪ್ರತಿ ಸನ್ನಿವೇಶಕ್ಕೂ ತನ್ನದೇ ವ್ಯಾಖ್ಯಾನ ನೀಡುತ್ತ, ಯಾವುದು ನಾಟಕೀಯತೆಯ ದೃಷ್ಟಿಯಿಂದ ಸರಿಯೋ ಹಾಗೆ ಕ್ಯಾಮರಾ ಕೋನಗಳನ್ನು ನಿರ್ಧರಿಸುತ್ತಾನೆ. ಆತ ಐಡಿಯಲ್ ಆ್ಯಂಗಲ್‌ನ್ನು ಆರಿಸಿಕೊಳ್ಳುತ್ತಿರುತ್ತಾನೆ. ಆ ಐಡಿಯಲ್ ಆ್ಯಂಗಲ್ ಎಂಬುದು ಯಾವುದೋ ಒಬ್ಬ ವ್ಯಕ್ತಿಯ ನೋಟವಾಗಿರುವುದಿಲ್ಲ. ಅಲ್ಲಿ ಒಮ್ಮೆ ಕ್ಯಾಮರಾ ಕಣ್ಣಿನ ಮಟ್ಟದಲ್ಲಿದ್ದರೆ, ಮತ್ತೊಮ್ಮೆ ನೆಲದ ಮಟ್ಟದಲ್ಲಿ ಕುಳಿತು, ಮೇಲೆ ನೋಡುತ್ತದೆ. ಮತ್ತೊಮ್ಮೆ ಎತ್ತರದಿಂದ ಕೆಳಮುಖವಾಗಿ ನೋಡುತ್ತದೆ. ಮತ್ತೊಮ್ಮೆ ನೋಡುರೇಖೆ ದಾಟಿ[7] ಮತ್ತೊಂದೆಡೆ ಕ್ಯಾಮರಾ ಇರಿಸಿ ಚಿತ್ರಿಸಿರುತ್ತಾನೆ. ಇಲ್ಲಿ ನಿರ್ದೇಶಕ ತಾನೊಬ್ಬ ಕಲೆಗಾರ ಎಂಬ ಸ್ವಾತಂತ್ರ್ಯವನ್ನು (ಸಾಹಿತ್ಯದಲ್ಲಿ ಬರುವ 'ಕವಿ ಸಮಯ'ದ ಹಾಗೆ ಅರ್ಥೈಸಿಕೊಳ್ಳಬಹುದು.) ಬಳಸುತ್ತಿರುತ್ತಾನೆ. ಚಲನಚಿತ್ರ ಇತಿಹಾಸದಲ್ಲಿ ಪರ್ಸನಲ್ ಸಿನಿಮಾ ಅಥವಾ ಆಥರ್ ಥಿಯರಿ ಎಂಬ ಪದ್ಧತಿಯನ್ನು ಯೂರೋಪಿಯನ್ ಹೊಸ ಅಲೆಯ ಚಿತ್ರ ನಿರ್ದೇಶಕರು ತಂದ ಕಾಲದಲ್ಲಿ ಈ ಕ್ರಮದ ಸಂಕಲನ ಬಳಕೆಗೆ ಬಂದಿತು. ಜಪಾನಿ ಚಿತ್ರ ನಿರ್ದೇಶಕ ಓಜು ತನ್ನ ಚಿತ್ರದ ಎಲ್ಲಾ ಚಿತ್ರಿಕೆಗಳು ನೆಲದಿಂದ ಎರಡಡಿ ಎತ್ತರದಲ್ಲಿರುವ ಕ್ಯಾಮರಾದಿಂದಲೇ ಚಿತ್ರಿತವಾಗಬೇಕು ಎಂದು ಬಯಸಿದ್ದ. ಅದಕ್ಕೆ ಅವನು ಜಪಾನೀಯರು ಟೀ ಕುಡಿಯುವಾಗ ಕುಳಿತು ನೋಡುವ ಎತ್ತರವೇ ತನ್ನ ಕ್ಯಾಮರಾದ ಎತ್ತರವೂ ಆಗಬೇಕೆಂಬ ಕಾರಣ ನೀಡಿದ್ದ. ಹೀಗೆ ಕಥಾ ನಿರೂಪಕ ತೆಗೆದುಕೊಂಡ ತೀರ್ಮಾನಗಳಿಗೆ ವೈವಿಧ್ಯಮಯ ಇತಿಹಾಸವಿದೆ. ಆ ಇತಿಹಾಸದಲ್ಲಿ ಜೀನ್ ರೆನ್ವಾನಂತಹ ನವ ವಾಸ್ತವವಾದಿ ಚಿತ್ರ ನಿರ್ದೇಶಕರು, ಚಂಚಲ ಮನಸ್ಸಿನಂತೆ, ಚಂಚಲ ಚಿತ್ರಿಕೆಗಳ ಜೋಡಣೆಯೇ ಸಂಕಲನ ಎಂದ ಗೋದಾರ್ದ್‌ನಂತಹ ನಿರ್ದೇಶಕರು ಬರುತ್ತಾರೆ. ಇವರೆಲ್ಲರೂ ಸಂಕಲನ ಕ್ರಮದಲ್ಲಿ ವೈಯಕ್ತಿಕ ನಿಲುವುಗಳನ್ನು ತಳೆದು ಪ್ರಯೋಗಗಳನ್ನು ಮಾಡಿದರು. ಉಳಿದ ಚಿತ್ರಗಳಿಗಿಂತ ಭಿನ್ನರಾಗಿ ಕೇವಲ ಕಥೆಯನ್ನು ಹೇಳದೆ, ಬದುಕು ಮತ್ತು ಮನುಷ್ಯನ ನಡಾವಳಿಯ ಕುರಿತು ವ್ಯಾಖ್ಯಾನಗಳನ್ನು ನೀಡಲೆತ್ನಿಸಿದರು.

ಇವೆಲ್ಲ ಪ್ರಯೋಗಗಳಿಂದಾಗಿ ಇಂದು ಸಂಕಲನ ಕ್ರಮದಲ್ಲಿ ಕೆಲವು ಸ್ಪಷ್ಟ ಸೂತ್ರಗಳು ಬಂದಿವೆ. ಅವುಗಳೆಂದರೆ:

ಸಲೀಸಾಗಿ ಹರಿವಂತಹ ಕಥಾ ನಿರಂತರತೆ : ಅಂದರೆ ಲೂಸಿಡ್ ಆದಂತಹ ಕಥಾನಕವೊಂದನ್ನು ಪ್ರೇಕ್ಷಕನಿಗೆ ತಲುಪಿಸುವ ಪ್ರಯತ್ನ. ಇದನ್ನು ಸಂಕಲನಕಾರ ಎರಡು ಹಂತದಲ್ಲಿ ಸಾಧಿಸುತ್ತಾನೆ. ಮೊದಲು ಆತ ಎಲ್ಲ ಚಿತ್ರಿಕೆಗಳನ್ನೂ ಜೋಡಿಸಿದ ಸ್ಥೂಲ ಪಟ್ಟಿ (ರಫ್ ಕಟ್) ತಯಾರಿಸುತ್ತಾನೆ. ಅದನ್ನು ಮತ್ತೆ ಮತ್ತೆ ನೋಡುತ್ತ, ಧ್ವನಿ ಲೇಪನದ ಕೆಲಸಗಳನ್ನು ಮುಗಿಸಿಕೊಂಡು ಧ್ವನಿಪಟ್ಟಿ ಹಾಗೂ ದೃಶ್ಯಪಟ್ಟಿ ಎರಡನ್ನೂ ಜೊತೆಯಾಗಿರಿಸಿಕೊಂಡು ಅಂತಿಮ ಛೇದವನ್ನು ಮಾಡುತ್ತಾನೆ. ಈ ಹಂತದಲ್ಲಿ ಕಥೆ ಸಲೀಸಾಗಿ (ಲೂಸಿಡ್) ಹರಿಯಬೇಕು ಎಂದಾಗ ಬಳಸಿರುವ ಸಲೀಸು/ಸುರಳೀತ ಪದದ ಅರ್ಥವನ್ನು ಮತ್ತೊಮ್ಮೆ ಸ್ಪಷ್ಟಪಡಿಸಿಕೊಳ್ಳೋಣ. ಒಂದು ಸ್ಮೂತ್ ಕಟ್ ಸಾಧಿಸುವುದೆಂದರೆ ಚಿತ್ರಿಕೆಯೊಂದರಿಂದ ಮತ್ತೊಂದು ಚಿತ್ರಿಕೆಗೆ ಸಾಗಿದಾಗ ನೋಡುಗನಿಗೆ ಕ್ರಿಯೆಯ ನಿರಂತರತೆ ಮತ್ತು ದೃಶ್ಯದ ನಿರಂತರತೆ ಗೊಂದಲವೆನಿಸಬಾರದಂತಹ ಛೇದ. ಇಲ್ಲಿ ನಿರಂತರತೆಯನ್ನು ಕಾಯ್ದುಕೊಳ್ಳುತ್ತಾ ಸಂಕಲನಕಾರ ಕೇವಲ ಯಾಂತ್ರಿಕ ಕ್ರಿಯಾ ನಿರಂತರತೆ ಗಮನಿಸದೆ ಬೌದ್ಧಿಕ ಮತ್ತು ನಾಟಕೀಯ ನಿರಂತರತೆ ಸಾಧಿಸಲು ಪ್ರಯತ್ನಿಸುತ್ತಾನೆ. ಇದಕ್ಕಾಗಿ ಸಂಕಲನಕಾರ ಚಿತ್ರಿಕೆಯಿಂದ ಚಿತ್ರಿಕೆಗೆ ಸಾಗುವಾಗ ಭೌತಿಕ ಕ್ರಿಯೆಯನ್ನು ಹೊಂದಿಸಲು (ಮ್ಯಾಚಿಂಗ್ ಆ್ಯಕ್ಷನ್ ಕಂಟಿನ್ಯೂಯಿಟಿ) ಪ್ರಯತ್ನಿಸುತ್ತಾನೆ. ಚಿತ್ರಿಕೆಯೊಂದರಲ್ಲಿರುವ ಛಾಯಾಗ್ರಹೀತ ಬಿಂಬದ ಅಳತೆಗೆ ಹೊಂದುವಂತೆ ಎರಡನೆಯ ಚಿತ್ರಿಕೆಯನ್ನು (ಕಂಟ್ರೋಲ್ ಇಮೇಜ್ ಸೈಜ್ ಅಂಡ್ ಆ್ಯಂಗಲ್) ಹೊಂದಿಸುತ್ತಾನೆ. ಕಥೆಯ ನಡೆಯನ್ನಲ್ಲದೆ ಚಿತ್ರಿಕೆಯಿಂದ ಚಿತ್ರಿಕೆಗೆ ಸಾಗುವ ನೋಟದ ದಿಕ್ಕುಗಳು ಛೇದಗಳಿಂದಾಗಿ ಗೊಂದಲ ಉಂಟುಮಾಡದಿರಲಿ (ಪ್ರಿಸರ್ವಿಂಗ್ ಸೆನ್ಸ್ ಆಫ್ ಡೈರೆಕ್ಷನ್) ಎಂಬಂತೆ ಸಂಕಲಿಸುತ್ತಾನೆ. ಇದಲ್ಲದೆ ಒಂದು ಚಿತ್ರಿಕೆಯ ವರ್ಣದ ಸಾಂದ್ರತೆ ಮತ್ತೊಂದು ಚಿತ್ರಿಕೆಯಲ್ಲಿ ಗೊಂದಲ ಹುಟ್ಟುವಷ್ಟು ಬದಲಾಗದಂತೆ (ಮ್ಯಾಚಿಂಗ್ ಟೋನ್) ಎಚ್ಚರದಹಿಸುತ್ತಾನೆ. ಚಿತ್ರಿಕೆಯಿಂದ ಚಿತ್ರಿಕೆಗೆ ಸಿನಿಮಾ ಹರಿವಾಗ ಅದಕ್ಕೆ ಹೊಂದುವಂತೆ ಹಿನ್ನೆಲೆಯ ಧ್ವನಿ ಮತ್ತು ಮಾತುಗಳ ಧ್ವನಿಯ ಎತ್ತರಗಳನ್ನು ನಿಯಂತ್ರಿಸುತ್ತಾನೆ. ಪ್ರತಿ ದೃಶ್ಯದ ಪ್ರಧಾನ ವಿಷಯ, ಸಕಾಲದಲ್ಲಿ ಪ್ರೇಕ್ಷಕನಿಗೆ ಪರಿಣಾಮಕಾರಿಯಾಗಿ ತಲುಪುವಂತೆ ಮಾಡುತ್ತಾನೆ. ಚಿತ್ರದ ಓಘ ಮತ್ತು ಲಯ ಅಡ್ಡಾದಿಡ್ಡಿಯಾಗದಂತೆ, ಆ ಮೂಲಕ ಪ್ರೇಕ್ಷಕನಿಗೆ ಗೊಂದಲಗಳು ಆಗದಂತೆ ನೋಡಿಕೊಳ್ಳುತ್ತಾನೆ. ನಿರ್ದೇಶಕ ತಂದುಕೊಟ್ಟ ಎಲ್ಲ ಚಿತ್ರಿಕೆಗಳನ್ನೂ ಮೇಲೆ ತಿಳಿಸಿದ ಎಲ್ಲ ವಿವರಗಳತ್ತ ಗಮನವಿರಿಸಿ ಆಯ್ದುಕೊಳ್ಳುತ್ತಾನೆ (Selection of shots).

ಇದು ಸಂಕಲನ ಕ್ರಮ ಇಂದು ತಲುಪಿರುವ ಹಂತ. ಮುಂದೆ ಮತ್ತಷ್ಟು ಬದಲಾಗಬಹುದು. ಬದಲಾವಣೆಯೊಂದೆ ಶಾಶ್ವತ ಎಂಬ ಪ್ರಸಿದ್ಧ ಗಾದೆ ಮಾತಿನೊಡನೆ ಸಂಕಲನ ಮಾಡುವುದಕ್ಕೆ ಬಳಸಲಾಗುತ್ತಿರುವ ಯಂತ್ರದಲ್ಲಿ ಆಗಿರುವ ಬೆಳವಣಿಗೆಗಳನ್ನು ಗಮನಿಸೋಣ.

ತಾಂತ್ರಿಕ ಬೆಳವಣಿಗೆ

ಆರಂಭಿಕ ಹಂತದಲ್ಲಿ ಸಂಕಲನಕಾರ ಚಿತ್ರಪಟ್ಟಿಯನ್ನು ಭೂತಗನ್ನಡಿಯಲ್ಲಿ ನೋಡಿ ಯಾವುದೋ ಕೋಣೆಯಲ್ಲಿ ತನಗೆ ಸರಿ ಎನಿಸಿದಲ್ಲಿ ಕತ್ತರಿ ಹಾಕಿ ಮತ್ತೊಂದು ಚಿತ್ರಿಕೆಯನ್ನು ಅಂಟಿಸುತ್ತಿದ್ದ. ನಂತರದ ದಿನಗಳಲ್ಲಿ ಧ್ವನಿಯ ಪ್ರವೇಶ ಆದಾಗ ಚಿತ್ರಪಟ್ಟಿ ಮತ್ತು ಧ್ವನಿಪಟ್ಟಿಯೊಂದನ್ನು ಸಮಾನಾಂತರವಾಗಿ ಇರಿಸಿಕೊಳ್ಳಲು ಸಾಧ್ಯವಾಗುವಂತಹ ಸಿಂಕ್ರೊನಾಮೀಟರ್ ಅಥವಾ ಸಿಂಕ್ರೊನೈಜರ್ ಬಂದವು. ಸಂಕಲನಕಾರ ತನ್ನ ಕೆಲಸಕ್ಕಂದೇ ವಿನ್ಯಾಸ ಮಾಡಿದ ಮೇಜೊಂದನ್ನು ಮಾಡಿಕೊಂಡ. ಅಲ್ಲಿ ಋಣಪಟ್ಟಿ, ಧನಪಟ್ಟಿಗಳನ್ನು ಇಟ್ಟುಕೊಂಡು ಕೆಲಸ ಮಾಡುವಾಗ ಅವು ಹಾಳಾಗದಂತೆ ಅಂದರೆ ಪಟ್ಟಿಗಳ ಮೇಲೆ ಧೂಳು, ಕೈ ಗುರುತುಗಳು ಬೀಳದಂತಹ ವ್ಯವಸ್ಥೆ ಮಾಡಿಕೊಂಡ. ತಾನು ಛೇದಿಸಿದ ತುಂಡುಗಳು ಎಲ್ಲೆಲ್ಲೋ ಬಿದ್ದು, ಮತ್ತೆ ಬೇಕಾದಾಗ ಸಿಗದಂತೆ ಆಗದಿರಲಿ ಎಂದು ಛೇದಗಳನ್ನು ಹಾಕುವುದಕ್ಕಂದೇ ಬುಟ್ಟಿ (bin)ಗಳನ್ನು ಮಾಡಿಕೊಂಡ. ಆ ಬುಟ್ಟಿಗಳಲ್ಲೂ ಪಟ್ಟಿಯನ್ನು ಹಾಳುಮಾಡುವಂತಹ ಧೂಳು ಬೀಳದಂತೆ ಎಚ್ಚರ ವಹಿಸಿದ. ಪ್ರತಿ ಬಾರಿ ತಾನು ಮಾಡಿದ ಸಂಕಲನ ಸರಿಯಾಗಿದೆಯೆ ಎಂದು ಗಮನಿಸಲು ಪ್ರದರ್ಶನ ಮಂದಿರಕ್ಕೆ ಹೋಗುವ ತೊಂದರೆ ಮತ್ತು ಅನಾವಶ್ಯಕ ಖರ್ಚನ್ನು ತಪ್ಪಿಸಲು ಮಾರ್ಗ ಕಂಡುಕೊಳ್ಳಬೇಕಾಯಿತು. ಏಕೆಂದರೆ ಸಂಕಲನ ಹಂತದಲ್ಲಿ ದೃಶ್ಯ-ಧ್ವನಿ ಪಟ್ಟಿಗಳು ಪ್ರತ್ಯೇಕವಿದ್ದು, ಪ್ರೊಜೆಕ್ಟರ್‌ನಲ್ಲಿ ಕೇವಲ ಸಂಲಗ್ನ (ಮ್ಯಾರಿಡ್ ಪ್ರಿಂಟ್) ಪ್ರತಿಯನ್ನು ಓಡಿಸುವ ಅನುಕೂಲವಿತ್ತು. ಸಂಕಲನಕಾರ ತನ್ನ ಕೋಣೆಯಲ್ಲೇ ಚಿತ್ರವನ್ನು ಓಡಿಸಿ ಪುಟ್ಟ ಪರದೆಯ ಮೇಲೆ ಪರಿಣಾಮ ನೋಡಬಹುದಾದ, ಬೇಕಾದಲ್ಲಿ ನಿಲ್ಲಿಸಿ ಅಗತ್ಯವಾದ್ದನ್ನು ಗುರುತಿಸಿಕೊಳ್ಳಬಹುದಾದ ಮೂವಿಯೋಲಾ ಯಂತ್ರವನ್ನು ಕಂಡುಕೊಂಡ. ಮೊದಲು ವಿದ್ಯುಚ್ಛಕ್ತಿ ಪಾದಪೀಠವನ್ನು ತುಳಿದು ಓಡಿಸುವಂತಿದ್ದ ಮೂವೀಯೋಲಾಗಳು ನಂತರದ ದಿನಗಳಲ್ಲಿ ಕೈ ಸ್ವಿಚ್ಚಿನಿಂದ ಚಲಿಸುವಂತಾಯಿತು.

ಈ ಮೂವೀಯೋಲಾದಲ್ಲಿ ದೃಶ್ಯಪಟ್ಟಿಯೂ ಸರಿಯಾಗಿ ಕೂಡದಿದ್ದರೆ ತೊಂದರೆಯಾಗುತ್ತಿತ್ತು. ಅಲ್ಲದೆ ಆ ಯಂತ್ರದ ಶಬ್ದದ ನಡುವೆ ಚಿತ್ರದ ಧ್ವನಿ ಪಟ್ಟಿಯಲ್ಲಿನ ಸದ್ದು ಕೇಳುತ್ತಲೇ ಇರಲಿಲ್ಲ. ಇದಕ್ಕೆ ಕಾರಣ ಈ ಯಂತ್ರದಲ್ಲಿ ಇಂಟರ್‌ಮಿಟೆಂಟ್ ಷಟರ್ ತಂತ್ರ ಬಳಸಲಾಗಿತ್ತು. ಇಲ್ಲಿ ಚಿತ್ರ ಕೆಳಗಿನಿಂದ ಮೇಲೆ ಉದ್ದುದ್ದವಾಗಿ ಓಡುತ್ತಿತ್ತು. ಈ ತೊಂದರೆಯಿಂದ ತಪ್ಪಿಸಿಕೊಳ್ಳಲು ಪ್ರಿಸಮ್ ತಂತ್ರದ ಸ್ಟೀನ್‌ಬೆಕ್‌ನಂತಹ ಸುರಳೀತವಾಗಿ, ಸದ್ದಿಲ್ಲದೆ ದೃಶ್ಯಪಟ್ಟಿ, ಚಿತ್ರಪಟ್ಟಿಯನ್ನು ಅಡ್ಡಡ್ಡವಾಗಿ ಓಡಿಸುವ ಯಂತ್ರಗಳು ಬಂದವು. ಮೊದಲಿಗೆ ಆಪ್ಟಿಕಲ್ (ನೋಡಿ: ಇದೇ ಹೊತ್ತಿಗೆಯಲ್ಲಿರುವ ಸಿನಿಮಾದ 'ಧ್ವನಿ' ಚರಿತ್ರೆ)ನಲ್ಲಿ ಬರುತ್ತಿದ್ದ ಧ್ವನಿಪಟ್ಟಿ ನಂತರ ಮ್ಯಾಗ್ನಟಿಕ್‌ನಲ್ಲಿ ಬರತೊಡಗಿತು. ಹೀಗಾಗಿ ಆಪ್ಟಿಕಲ್ ಧ್ವನಿಪಟ್ಟಿಗೆ ತಗುಲಿದ ಪೆಟ್ಟು, ಮ್ಯಾಗ್ನಟಿಕ್‌ನಲ್ಲಿ ಅದನ್ನು ಎಚ್ಚರಿಕೆಯಿಂದ ಕಾಪಾಡಬೇಕೆಂಬ ಆತಂಕಗಳಿಲ್ಲದೆ ಮ್ಯಾಗ್ನೆಟಿಕ್ ಪಟ್ಟಿಯಲ್ಲಿ ಕೆಲಸ ಮಾಡುವುದು ಸಾಧ್ಯವಾಯಿತು. ಮೊದಲಿಗೆ ಚಿತ್ರಪಟ್ಟಿಗೆ ಬಳಸುತ್ತಿದ್ದ ಅಸಿಟೇಟ್

೭. ಹೀಗೆ ನೋಡುರೇಖೆಯ ವಿರುದ್ಧ ದಿಕ್ಕಿಗೆ ಕ್ಯಾಮರಾ ಇದ್ದಾಗ ಮುಂಚಿನ ಚಿತ್ರಿಕೆಯಲ್ಲಿ ಬಲ-ಎಡಕ್ಕಿದ್ದ ಪಾತ್ರಧಾರಿಗಳು ದಿಢೀರನೆ ತದ್ವಿರುದ್ಧ ದಿಕ್ಕಿನಲ್ಲಿ ಇದ್ದಂತೆ ಭಾಸವಾಗಿ ನೋಡುಗನಿಗೆ ಗೊಂದಲವಾಗುತ್ತದೆ. ಆದ್ದರಿಂದ ಆಕ್ಸಿಸ್ ಜಂಪ್ ಆಗಬಾರದು ಎಂಬುದನ್ನು ಕುರಿತಂತೆ ಅನೇಕ ಸಂಕಲನ ಸಿದ್ಧಾಂತಿಗಳು ಬರೆದಿದ್ದಾರೆ. ಇದು ಕೂಡ ಸಂಕಲನ ಚರಿತ್ರೆಯಲ್ಲಿ ತಿಳಿದಿರಬೇಕಾದ ವಿವರ.

ಪಾಳಿಯು ಸಂಕಲನದ ಸಮಯದಲ್ಲಿ ಪದೇ ಪದೇ ತುಂಡಾಗಿ ಕೊಡುತ್ತಿದ್ದ ತೊಂದರೆಯಿಂದ ತಪ್ಪಿಸಿಕೊಳ್ಳಲೆಂಬಂತೆ ಪಾಲಿಯೇಸ್ಟರ್ ಚಿತ್ರಪಟ್ಟಿ ಬರತೊಡಗಿತು. ಇವೆಲ್ಲವುಗಳನ್ನು ದಾಟಿ ಇಂದು ಸಂಕಲನ ಸಂಪೂರ್ಣ ಗಣಕೀಕೃತವಾಗುವ ಹಂತ ತಲುಪಿದೆ. ಸಂಕಲನಕಾರ ಭೌತಿಕವಾಗಿ ಧ್ವನಿಪಟ್ಟಿಯನ್ನು, ಚಿತ್ರಪಟ್ಟಿಯನ್ನು ಮುಟ್ಟದೆಯೇ ಅಂತಿಮ ಸಂಕಲನದವರೆಗಿನ ಕೆಲಸ ಮುಗಿಸಿ ತಂಡದ ಎಲ್ಲರ ಒಪ್ಪಿಗೆ ಪಡೆದ ನಂತರ ಆ ಕ್ರಮದಲ್ಲಿ ಋಣಪಟ್ಟಿಯನ್ನು ಮಾತ್ರ ಸ್ವತಃ ತಾನೇ ಭೌತಿಕವಾಗಿ ಜೋಡಿಸಿ, ಅದರ ಸಂಲಗ್ನ ಪ್ರತಿಯನ್ನು ಪಡೆವ ಹಂತದವರೆಗೆ ಪರಿಕರಗಳು, ಯಂತ್ರಗಳು ಬೆಳೆದಿವೆ. ಈ ರೀತಿಯ ಸಂಕಲನವನ್ನು ನಾನ್‌ಲೀನಿಯರ್ ಎಡಿಟಿಂಗ್ ಎನ್ನುತ್ತಾರೆ. ಇಂತಹ ಸಂಕಲನ ಕ್ರಮದಲ್ಲಿ ಒಂದು ಚಿತ್ರದ ಅನೇಕ ಆವೃತ್ತಿಗಳನ್ನು ಸಂಕಲಿಸಿ ನೋಡುವ ಸೌಲಭ್ಯವಿದೆ. ಆ ಮೂಲಕ ನಿರ್ದೇಶಕ ತನ್ನ ಪ್ರಯೋಗಗಳ ಬಗ್ಗೆ, ಅದಕ್ಕೆ ಇರುವ ಆರ್ಥಿಕ ಮಿತಿಗಳ ಬಗ್ಗೆ ಚಿಂತಿಸದೆ ಮುಡಿಯುವುದು ಸಾಧ್ಯವಾಗಿದೆ.

ಇವೆಲ್ಲವೂ ಪರಿಕರಗಳು ಮಾತ್ರ. ಅವುಗಳನ್ನು ಬಳಸುವವನು ಅಂತಿಮವಾಗಿ ಮನುಷ್ಯನಾದ್ದರಿಂದ ಪರಿಕರಗಳ ಬೆಳವಣಿಗೆಯ ಚರಿತ್ರೆಯನ್ನು ವಿಸ್ತರಿಸದೆ ಸಂಕಲನಕಾರನ ಆಲೋಚನಾ ಕ್ರಮದಲ್ಲಿ ಕಾಲದಿಂದ ಕಾಲಕ್ಕೆ ಆದ ಬೆಳವಣಿಗೆ ಅಥವಾ ಬದಲಾವಣೆಗಳತ್ತ ಈ ಲೇಖನ ಗಮನ ಹರಿಸಿದೆ.



(ಚಿತ್ರ ೧೩) ಅತ್ಯಾಧುನಿಕ ತಂತ್ರಜ್ಞಾನದ ನಾನ್ ಲೀನಿಯರ್ ಸಂಕಲನ ಸಲಕರಣೆಗಳೊಂದಿಗೆ ಪ್ರಶಸ್ತಿ ಪುರಸ್ಕೃತ ಸಂಕಲನಕಾರ ಸುರೇಶ್ ಅರಸ್

ಕನ್ನಡ ಚಲನಚಿತ್ರಗಳ ಸಂಕಲನ[1]

ಲೇಖನದ ಈವರೆಗಿನ ಹರಹಿನಲ್ಲಿ ಅನೇಕ ಕಡೆಗಳಲ್ಲಿ ಕನ್ನಡ ಚಿತ್ರಗಳಲ್ಲಿನ ಸಂಕಲನವನ್ನು ಕುರಿತ ಕೆಲವು ವಿವರಗಳನ್ನೂ ಕೊಟ್ಟಿದೆ. ಇಲ್ಲಿಂದಾಚೆಗೆ ಕನ್ನಡ ಚಲನಚಿತ್ರಗಳಲ್ಲಿನ ಸಂಕಲನದ ಬೆಳವಣಿಗೆಯನ್ನು ಮಾತ್ರ ಮುಖ್ಯವಾಗಿಸಿಕೊಂಡು ಸ್ಥೂಲ ವಿವರಣೆಯನ್ನು ಕೊಡುವ ಪ್ರಯತ್ನವಿದೆ.

ಕನ್ನಡ ಚಿತ್ರಗಳಿಗೇ ವಿಶಿಷ್ಟವಾದುದು ಎಂಬ ಸಂಕಲನ ತಂತ್ರವಿಲ್ಲ. ಜಾಗತಿಕ ಚಿತ್ರೋದ್ಯಮದಲ್ಲಿ ಆದ ಪ್ರಯೋಗಗಳನ್ನು, ಬಂದ ಹೊಸ ತಂತ್ರಗಳನ್ನು ನಮ್ಮಲ್ಲಿಯೂ ಉಪಯೋಗಿಸುತ್ತ ಬಂದಿದ್ದಾರೆ. ಆರಂಭಿಕ ಹಂತದಲ್ಲಂತೂ ಕನ್ನಡ ಚಿತ್ರಗಳ ತಂತ್ರಜ್ಞರು ಕನ್ನಡದವರೇ ಆಗಿರಲಿಲ್ಲ. ನಿರ್ದೇಶನ ಮಾಡುತ್ತಿದ್ದವರು ತಾವೇ ಸಂಕಲನವನ್ನು (ಕೆಲವೊಮ್ಮೆ ಛಾಯಾಗ್ರಹಣವನ್ನು) ಮಾಡುತ್ತಿದ್ದರು. ಪ್ರಾದೇಶಿಕ ಭಾಷೆ-ಸಂಸ್ಕೃತಿ ಪರಿಚಯವಿಲ್ಲದ ಈ ತಂತ್ರಜ್ಞರು ತಮ್ಮ ಕಥನಕ್ಕೆ ಪೌರಾಣಿಕ ವಸ್ತುಗಳ ಮೊರೆ ಹೋದರು.

ಇದು ಕನ್ನಡಕ್ಕೆ ಮಾತ್ರವಲ್ಲ. ಭಾರತದ ಚಿತ್ರೋದ್ಯಮದ ಪರಿಸ್ಥಿತಿಯೇ ಹಾಗಿತ್ತು. ಆ ಕಾಲದಲ್ಲಿ ವೃತ್ತಿ ರಂಗಭೂಮಿಯ ಪೌರಾಣಿಕ ನಾಟಕಗಳು ಹೆಚ್ಚು ಜನಪ್ರಿಯವಾಗಿದ್ದದು ಸಹ ಈ ಆಯ್ಕೆಗೆ ಕಾರಣವಾಗಿರಬಹುದು. ರಂಗನಟರೇ ಸಿನಿಮಾದಲ್ಲೂ ಅಭಿನಯಿಸುತ್ತಿದ್ದರು. ಹೀಗಾಗಿ ಅಭಿನಯದಲ್ಲೂ ರಂಗಭೂಮಿಯ ಅತಿರೇಕಿತ ಮಾದರಿಯೇ ಉಳಿದುಬಿಟ್ಟಿತ್ತು. ಅದಲ್ಲದೆ ಹೊಸ ಮಾಧ್ಯಮಕ್ಕೆ ಹೊಂದಿಕೊಳ್ಳುವ ಕಷ್ಟವೂ ಆ ನಟರ ಅಭಿನಯದಲ್ಲಿ ಕಾಣುತ್ತಿತ್ತು. ತಾಂತ್ರಿಕ ದೃಷ್ಟಿಯಿಂದ ಬಹುಕಾಲ ಕನ್ನಡ ಚಿತ್ರಗಳು ಹಿಂದೆ ಉಳಿದಿದ್ದವು. ಇದಕ್ಕೆ ಕನ್ನಡ ಚಿತ್ರಗಳ ಮಾರುಕಟ್ಟೆ ಸೀಮಿತವಾಗಿದ್ದದ್ದು, ಅಂತೆಯೇ ಚಿತ್ರ ತಯಾರಿಕೆಗೆ ದೊರೆಯುತ್ತಿದ್ದ ಹಣದಲ್ಲೂ ಮಿತಿ ಇದ್ದದ್ದು ಕಾರಣ. ಹೀಗಾಗಿ ಚಿತ್ರಿಕೆಗಳ ಮೂಲಕ ಕಥಾ ನಿರೂಪಣೆ ಮಾಡುವುದಕ್ಕಿಂತ, ಅಭಿನಯ ಪ್ರಧಾನವಾದ ಕಥಾ ನಿರೂಪಣೆಯ ಕ್ರಮ ಅನುಕೂಲವಾಗಿತ್ತು. ಆದ್ದರಿಂದ ಸುದೀರ್ಘ ಚಿತ್ರಿಕೆಗಳನ್ನು ಸಂಕಲನಕಾರರು ಜೋಡಣೆಗೆ ಬಳಸಬೇಕಾಗುತ್ತಿತ್ತು. ವೈಶಿಷ್ಟ್ಯವೆಂದರೆ ಬಹುತೇಕ ಚಿತ್ರಗಳಿಗೆ ನಿರ್ದೇಶಕರೇ ಸಂಕಲನಕಾರರಾಗಿದ್ದರು. ಆದರೆ ಯಾವುದೋ ಕಾರಣಕ್ಕೆ ಸಿನಿಮಾ ಯಶಸ್ವಿಯಾಗದಿದ್ದರೆ ಆಗಿನ ಜನ ಆ ಚಿತ್ರವನ್ನು ಮರೆತು ಕೂಡುತ್ತಿರಲಿಲ್ಲ. ಬದಲಿಗೆ ಅದೇ ಚಿತ್ರವನ್ನು ಮತ್ತೆ ಸಂಕಲನ ಮಾಡಿ ಮಾರುಕಟ್ಟೆಗೆ ತರುತ್ತಿದ್ದರು. ೧೯೩೭ರಲ್ಲಿ ಬಿಡುಗಡೆಯಾಗಿದ್ದ 'ರಾಜಸೂಯ ಯಾಗ' ೧೯೪೭ರಲ್ಲಿ ಮರು ಸಂಕಲಿತವಾಗಿ ಬೇರೆ ನಿರ್ಮಾಣ ಸಂಸ್ಥೆಯ ಹೆಸರಿನಲ್ಲಿ ಮತ್ತೆ ಬಿಡುಗಡೆಯಾಗಿತ್ತು. ೧೯೪೭ರಲ್ಲಿ ಬಿಡುಗಡೆಯಾಗಿದ್ದ 'ಕೃಷ್ಣ ಲೀಲ' ೧೯೫೩ರಲ್ಲಿ ಮತ್ತೆ ಬಿಡುಗಡೆಯಾಯಿತು. ೧೯೪೭ರಲ್ಲಿಯೇ ಬಿಡುಗಡೆಯಾಗಿದ್ದ 'ಮಹಾನಂದ' ೧೯೫೦ರಲ್ಲಿ 'ಶಿವ ಪಾರ್ವತಿ' ಎಂಬ ಹೆಸರಿನಲ್ಲಿ ಮತ್ತೆ ತೆರೆ ಕಂಡಿತು. ಇಂತಹ ವಿಶಿಷ್ಟಗಳನ್ನುಳಿದು ಸಂಕಲನವೆಂಬುದು ತಂತ್ರವಾಗಿ ಈ ಚಿತ್ರಗಳಲ್ಲಿ ಬಳಕೆಯಾಗಿರಲಿಲ್ಲ.

ಚಿತ್ರಿಕೆಯೊಂದಿಗೆ ಚಿತ್ರಿಕೆಯ ತಳಿಕೆಯಾಗಿತ್ತು ಎಂಬ ಸಂಕಲನದ ಮೂಲ ಕಾರ್ಯವನ್ನು ಹೊರತುಪಡಿಸಿ ವಿಶಿಷ್ಟ ಸಂಕಲನಕ್ಕೆ ಪ್ರಾಯಶಃ ಮೊದಲ ಪ್ರಯತ್ನ ನಡೆದದ್ದು ಬಿ.ಆರ್.ಪಂತುಲು ಅವರ 'ಮೊದಲ ತೇದಿ' ಚಿತ್ರದಲ್ಲಿ. ಈ ಚಿತ್ರದಲ್ಲಿ ಕನ್ನಡಕ್ಕೆ ಮೊದಲು ಎಂಬಂತೆ ಫ್ಲಾಷ್ ಫಾರ್ವರ್ಡ್ ತಂತ್ರವನ್ನು ಬಳಸಿದ್ದರು. ಒಟ್ಟಾರೆಯಾಗಿ ಆರಂಭಿಕ ಹಂತದ ಚಿತ್ರಗಳಲ್ಲಿ ಪ್ರಾಧಾನ್ಯ ಚಿತ್ರಕಥಾ ಲೇಖಕನ ಸ್ವತ್ತಾಗಿತ್ತು. ಅಂತೆಯೇ ಕನ್ನಡ ಚಿತ್ರರಂಗದ ಆರಂಭಿಕ ಹಂತವನ್ನು ಚಿತ್ರಕಥಾ ಲೇಖಕರ ಸಿದ್ಧತೆಯ ಕಾಲ ಎನ್ನಬಹುದಾಗಿದೆ. ಆಗಿನ ಲೇಖಕರು ಸಹ ತಮಗೆ ದೊರೆತಿರುವ ಹೊಸ ಮಾಧ್ಯಮದಲ್ಲಿ ಸಾಕಷ್ಟು ಮಹತ್ತನ್ನು ಸಾಧಿಸಲು ಗಂಭೀರ ಪ್ರಯತ್ನಗಳನ್ನು ಮಾಡತೊಡಗಿದರು. ಆಗಿನ ಚಿತ್ರಕಥಾ ಲೇಖಕರ ಪಟ್ಟಿಯನ್ನು ಗಮನಿಸಿ : ಹುಣಸೂರು ಕೃಷ್ಣಮೂರ್ತಿ, ಕು.ರ.ಸೀತಾರಾಮ ಶಾಸ್ತ್ರಿ, ಜಿ.ವಿ.ಅಯ್ಯರ್, ಕಣಗಾಲ್ ಪ್ರಭಾಕರಶಾಸ್ತ್ರಿ, ಚಿ.ಸದಾಶಿವಯ್ಯ, ನರೇಂದ್ರಬಾಬು, ಆರ್.ನಾಗೇಂದ್ರರಾವ್, ಎಚ್.ಎಲ್.ಎನ್. ಸಿಂಹ ಹೀಗೆ ಘಟಾನುಘಟಿಗಳೆಂದು ಕರೆಯಬಲ್ಲ ಗೀತಲೇಖಕರ, ಸಂಭಾಷಣೆಕಾರರ ದೊಡ್ಡ ಪಟ್ಟಿಯೇ ಇದೆ.

ಕನ್ನಡ ಚಿತ್ರರಂಗ ಅರುವತ್ತರ ದಶಕಕ್ಕೆ ಕಾಲಿಡುವ ಹೊತ್ತಿಗೆ ಚಿತ್ರರಂಗವನ್ನು ಹೊಸ ನಿರ್ದೇಶಕರು ಪ್ರವೇಶಿಸಿದರು. ಇವರೆಲ್ಲರೂ ಬಹುತೇಕ ಕನ್ನಡದವರೇ ಆಗಿದ್ದುದು ಇವರ ಸಿನಿಮಾಗಳಲ್ಲಿ ಪ್ರಾದೇಶಿಕ ಸಂಸ್ಕೃತಿಯ ಸೊಗಡು ಬರುವುದಕ್ಕೆ ಕಾರಣವಾಯಿತು. ಹೀಗೆ ಬಂದ ಹೊಸಬರಲ್ಲಿ ಸಿನಿಮಾವನ್ನು ಅಭ್ಯಾಸ ಮಾಡಿಕೊಂಡು ವೃತ್ತಿಗಿಳಿದ ಎಂ.ಆರ್.ವಿಠಲ್, ಎಂ.ವಿ.ಕೃಷ್ಣಸ್ವಾಮಿ, ಎನ್.ಲಕ್ಷ್ಮೀನಾರಾಯಣ್ ಅಂತಹವರಿದ್ದರು. ಇವರ ಸಿನಿಮಾಗಳು ಕೇವಲ ವಸ್ತುವಿನಿಂದಷ್ಟೇ ಅಲ್ಲದೆ ರಂಗ ತಂತ್ರಗಳಿಂದ ದೂರ ಸರಿದು ಸಿನಿಮಾ ತಂತ್ರವನ್ನು ಬಳಸಲಾರಂಭಿಸಿದವು.

ಎನ್.ಲಕ್ಷ್ಮೀನಾರಾಯಣ್ ನಿರ್ದೇಶನದ 'ನಾಂದಿ' ಚಿತ್ರದಲ್ಲಿ ದೃಶ್ಯದಿಂದ ದೃಶ್ಯಕ್ಕೆ ಸೇತುಬಂಧವಾಗಿ ದೃಶ್ಯಮಿಶ್ರಣ ಮತ್ತು ವೈಪ್‌ಗಳ ಬಳಕೆಯಾಗಿತ್ತು. ದೃಶ್ಯವೊಂದರಲ್ಲಿ ಬಳಕೆಯಾಗುವ ಧ್ವನಿಗೆ ಸಹಜ ವಾಸ್ತವದ ಸ್ವರೂಪ ಕೊಡಲು ಹಿನ್ನೆಲೆಯಲ್ಲಿ ನೈಜ ಸದ್ದುಗಳನ್ನು (ಹಕ್ಕಿಯ ಚಿಲಿಪಿಲಿ, ಬಾಗಿಲು-ಕಿಟಕಿಗಳನ್ನು ಹಾಕುವ-ತೆರೆಯುವ ಸದ್ದು, ಇತ್ಯಾದಿ) ಬಳಸಲಾಗಿತ್ತು. ಇದಕ್ಕೂ ಹಿಂದಿನ ಚಿತ್ರಗಳಲ್ಲಿ ಇವುಗಳ ಬಳಕೆ ಆಗಿರಲಿಲ್ಲ ಎಂದಲ್ಲ, ಅದು ಕಥೆಗೆ ಈ ಮಟ್ಟದಲ್ಲಿ ಪೂರಕವಾಗುವಂತೆ ಬಳಕೆಯಾಗಿರಲಿಲ್ಲ. ಇದಲ್ಲದೆ ಈ ಚಿತ್ರಗಳಲ್ಲಿ ಪ್ರಧಾನ ಪಾತ್ರಧಾರಿಗಳ ಅಭಿನಯದಲ್ಲಿ 'ರಂಗ' ಕೃತ್ರಿಮ ಎಂದು ಕರೆಸಿಕೊಳ್ಳುವಂತಹ ಸ್ಥಿತಿಯನ್ನು ದಾಟುವ ಪ್ರಯತ್ನವೂ ಇತ್ತು. ಅಲ್ಲಿಂದಾಚೆಗೆ ಕೆ.ಎಸ್.ಎಲ್.ಸ್ವಾಮಿ (ರವೀ) ಅವರ 'ತೂಗುದೀಪ', ಪುಟ್ಟಣ್ಣ ಕಣಗಾಲ್ ನಿರ್ದೇಶನದ 'ಬೆಳ್ಳಿಮೋಡ', ಎಂ.ಆರ್.ವಿಠ್ಠಲ್ ನಿರ್ದೇಶನದ 'ಮಿಸ್. ಲೀಲಾವತಿ', ಆರ್.ಎನ್.ಕೃಷ್ಣಪ್ರಸಾದ್ ನಿರ್ದೇಶನದ 'ನಗುವ ಹೂವು' ಇತ್ಯಾದಿ ಸಿನಿಮಾ ತಂತ್ರ ಬಳಕೆಯನ್ನುಳ್ಳ ಚಿತ್ರಗಳು ಬರತೊಡಗಿದವು. ವಸ್ತುವಿನ ಆಯ್ಕೆ, ನಿರೂಪಣಾ ತಂತ್ರ,

[1]. ಇಲ್ಲಿಂದಾಚೆಗೆ ಲೇಖನದಲ್ಲಿ ಅನೇಕ ಸಾಮಾನ್ಯೀಕರಣಗಳಿವೆ. ಆ ಸಾಮಾನ್ಯೀಕರಣಗಳಿಗೆ ಕೆಲವು ಅಪವಾದಗಳು ಇವೆಯಾದರೂ ಅವುಗಳನ್ನು ಗಮನಿಸದೆ ಈ ಸಾಮಾನ್ಯ ಸ್ಥಿತಿ ಒಟ್ಟು ಚಿತ್ರ ಚಳವಳಿಯ ಮೇಲೆ ಮಾಡಿದ ಪರಿಣಾಮವನ್ನು ಕುರಿತು ಗಮನಿಸಲಾಗಿದೆ.

ಹಿನ್ನೆಲೆ ಸಂಗೀತದ ಬಳಕೆಯಲ್ಲಿ ಸಾಕಷ್ಟು ಅಭಿವೃದ್ಧಿಯಾಗತೊಡಗಿತ್ತು. ಆದ್ದರಿಂದ ಕನ್ನಡ ಚಿತ್ರರಂಗದ ಎರಡನೆಯ ಹಂತವನ್ನು 'ನಿರ್ದೇಶಕರ ಕಾಲ' ಎಂದು ಗುರುತಿಸಬಹುದು. ಕ್ರಮೇಣ ನಿರ್ದೇಶಕ ತಾನೇ ಸಂಕಲಿಸುವುದನ್ನು ತೊರೆದು ಸಂಕಲನಕಾರನ ಕೆಲಸಕ್ಕೆ, ಅದರಲ್ಲಿ ಪರಿಣತಿ ಹೊಂದಿದವರನ್ನು ಬಳಸುವ ಅಭ್ಯಾಸವೂ ಆರಂಭವಾಗಿತ್ತು. ಹೀಗಾಗಿ ಬಾಲ್‌ಜಿ ಯಾದವ್, ಭಕ್ತವತ್ಸಲಂ, ಕೆ.ಬಾಲು, ರಾಮಮೂರ್ತಿ, ಕೆ.ಸುಬ್ರಹ್ಮಣ್ಯಂ ಮುಂತಾದ ಸಂಕಲನಕಾರರು ತಾವು ದುಡಿದ ಚಿತ್ರಕ್ಕೆ ಸಂಕಲನ ವಿಶಿಷ್ಟ ಎಂದೆನಿಸಿಕೊಳ್ಳುವ ತಂತ್ರಗಳನ್ನು ಬಳಸತೊಡಗಿದರು. ಕನ್ನಡದ್ದು ಎಂದು ಸ್ಪಷ್ಟವಾಗಿ ಗುರುತಿಸಬಲ್ಲ ಸಿನಿಮಾಗಳು ಬರತೊಡಗಿದವು. ಈ ಹೊತ್ತಿಗೆ ರಾಷ್ಟ್ರ ಮಟ್ಟದಲ್ಲಿ ವಿ.ಶಾಂತಾರಾಂ, ಬಿಮಲ್ ರಾಯ್, ಋತ್ವಿಕ್ ಘಟಕ್ ಮುಂತಾದವರು ಮಾಡಿದ್ದ ಜನಪ್ರಿಯ ಚಿತ್ರಗಳ ಪ್ರಯೋಗಗಳ ಪ್ರಭಾವ ಕನ್ನಡ ಚಿತ್ರರಂಗದಲ್ಲಿಯೂ ಕಾಣಿಸಿಕೊಂಡಿತು. ಅಂತಯೇ ಪೌರಾಣಿಕ ಚಿತ್ರದ ಕೃತಕ ವಾತಾವರಣವನ್ನು ತೊರೆದು ನಮ್ಮ ಚಿತ್ರರಂಗವೂ ಸಾಮಾಜಿಕ ಮತ್ತು ಐತಿಹಾಸಿಕ ಚಿತ್ರಗಳನ್ನು ನೀಡತೊಡಗಿತು. ಈ ನಿಟ್ಟಿನಲ್ಲಿ ಐತಿಹಾಸಿಕ ವಸ್ತುವುಳ್ಳ 'ರಣಧೀರ ಕಂಠೀರವ' ಚಿತ್ರವಲ್ಲಿ ಬಹುಮಟ್ಟಿಗೆ ಅಥೆಂಟಿಕ್ ಅನ್ನಿಸುವಂತೆ ಚಿತ್ರಿಸಲಾಗಿದ್ದನ್ನು ನೆನೆಯಬಹುದು. ಇಂಥಲ್ಲಿ ಎನ್.ಸಿ.ರಾಜನ್ ಅವರ ನಿರ್ದೇಶನದ ಜೊತೆಗೆ ಜಿ.ವಿ.ಅಯ್ಯರ್ ಅವರ ಅಧ್ಯಯನ, ಶ್ರದ್ಧೆಯೂ ಇತ್ತು.

ಈ ಹಂತದಲ್ಲಿ ಕ್ಯಾಮರಾವನ್ನೇ ಆಪ್ಟಿಕಲ್ ಎಫೆಕ್ಟ್‌ಗಾಗಿ ಬಳಸುವುದನ್ನು ಬಿಟ್ಟು ಆಪ್ಟಿಕಲ್ ಪ್ರಿಂಟರ್ ಯಂತ್ರದ ಬಳಕೆ ಹೆಚ್ಚಾಯಿತು. ಹೀಗಾಗಿ ಸಂಕಲನಕಾರನೊಬ್ಬ ಅತಿ ಎಚ್ಚರಿಕೆಯಿಂದ ಅವೆಲ್ಲ ವಿವರಗಳನ್ನೂ ನೋಡಿಕೊಳ್ಳಬೇಕಾದ್ದು ಅನಿವಾರ್ಯವಾಯಿತು. ಆದ್ದರಿಂದ ಸಿನಿಮಾ ಸಂಕಲನವೆಂಬುದು ಇನ್ನಿತರ ತಂತ್ರಗಳಷ್ಟೇ ಪ್ರಧಾನ ಕೆಲಸ ಎಂಬ ತಿಳಿವು ಚಿತ್ರೋದ್ಯಮಕ್ಕೆ ಬಂದಿತು. ಅದೇ ಕಾರಣವಾಗಿ ಸಂಕಲನಕ್ಕೆ ಬೇಕಾದ ಸಲಕರಣೆಗಳು, ಪರಿಕರಗಳನ್ನು ಸಹ ಆ ತಂತ್ರಜ್ಞನಿಗೆ ನಿರ್ಮಾಪಕ ಒದಗಿಸತೊಡಗಿದ. ಸಂಕಲನ ತಂತ್ರದಲ್ಲಿ ಜಾಗತಿಕವಾಗಿ ಆದ ಪ್ರಯೋಗಗಳು ಹಿಂದಿ ಚಿತ್ರಗಳ ಮೂಲಕ ಕನ್ನಡ ಚಿತ್ರಗಳಿಗೂ ಬಹು ಬೇಗ ಬಂದು ತಲುಪಿದವು. ೬೦ರ ದಶಕದ ಪೂರ್ವಾರ್ಧದಲ್ಲಿ 'ಸಿನಿಮಾ' ಎಂಬ ಹೆಸರಲ್ಲಿ ಬರುತ್ತಿದ್ದ ನಾಟಕಗಳ ಬದಲು ಸಿನಿಮಾಗಳೇ ಕಾಣಿಸಿಕೊಳ್ಳತೊಡಗಿದವು.

ಈ ಕಾಲದ ಚಿತ್ರಗಳಲ್ಲಿನ ಸಂಕಲನ ನಾವು ಈ ಲೇಖನದ ಇನ್ನಿತರ ಭಾಗದಲ್ಲಿ ಅದಾಗಲೇ ಚರ್ಚಿಸಿರುವ ಹಲವು ಸಿದ್ಧಾಂತಗಳಿಗಿಂತ ಭಿನ್ನವಾದುದೇನಾಗಿರಲಿಲ್ಲ. ಅವರು ತಾವು ನೋಡಿದ ಪಾಶ್ಚಾತ್ಯ ಮತ್ತು ರಾಷ್ಟ್ರ ಭಾಷೆಯ ಸಿನಿಮಾಗಳಿಂದ ಗ್ರಹಿಸಿದ್ದನ್ನು ತಮ್ಮ ಚಿತ್ರಗಳಲ್ಲೂ ಬಳಸಿದ್ದರು ಎನ್ನಬಹುದು.

೬೦ರ ದಶಕದ ಅಂತ್ಯ ಭಾಗದಲ್ಲಿ ಕನ್ನಡ ಸಿನಿಮಾ ಕವಲೊಡೆದು ಹೊಸಅಲೆ ಮತ್ತು ವಾಣಿಜ್ಯ ಪ್ರಧಾನ ಎಂಬ ಎರಡು ದಾರಿಗಳಲ್ಲಿ ಸಾಗಿಬಿಟ್ಟಿತು. ಹೊಸಅಲೆಯ ಚಿತ್ರ ಚಳವಳಿಗೆ ಯೂರೋಪಿನ ಕಹೆರ್ ಡು ಸಿನಿಮಾ, ಸಿನಿಮಾ ವೆರಿಟೆ, ಸಿನಿಮಾ ನೋವ ಮುಂತಾದ ವಿಭಿನ್ನ ಚಿತ್ರ ಚಳವಳಿಗಳಲ್ಲಿ ತ್ರೂಫೋ, ಗೋಡಾರ್ಡ್, ಮೈಕೆಲ್ಯಾಂಜಲೊ ಆಂಟೋನಿಯನಿ, ಜಾನ್ ರೆನ್ವಾ, ಆಂದ್ರೆ ವಾಜ್ದ, ಇಂಗ್‌ಮರ್ ಬರ್ಗ್‌ಮನ್, ವಿಮ್ ವ್ಯಾಂಡರ್ಸ್ ಮುಂತಾದ ಚಿತ್ರ ನಿರ್ದೇಶಕರ ಪ್ರಯೋಗಗಳು ಮತ್ತು ಭಾರತದವರೇ ಆದ ಸತ್ಯಜಿತ್ ರಾಯ್, ಋತ್ವಿಕ್ ಘಟಕ್, ಮೃಣಾಲ್ ಸೇನ್ ಮುಂತಾದವರ ಪ್ರಯತ್ನಗಳು ಸ್ಫೂರ್ತಿಯಾದವು. ವಾಣಿಜ್ಯಪ್ರಧಾನ ಚಿತ್ರಗಳು ರಾಷ್ಟ್ರಭಾಷಾ ಚಿತ್ರಗಳಲ್ಲಿ ಆದಂತೆ ನಾಯಕಪ್ರಧಾನ ಚಿತ್ರಗಳನ್ನು ತಯಾರಿಸತೊಡಗಿದವು. ಒಂದೆಡೆ ಕಲೆಗಾಗಿ ಕಲೆ ಎನ್ನುವವರು, ಮತ್ತೊಂದೆಡೆ ವಾಣಿಜ್ಯಕ್ಕಾಗಿ ಕಲೆ ಎನ್ನುವವರು - ಹೀಗೆ ಎರಡು ದಾರಿಯಾಯಿತು ಚಿತ್ರರಂಗ. ಇದರಿಂದಾಗಿ ಅವರೆಗಿನ ಚಿತ್ರೇತಿಹಾಸ ಕಲಿಸಿದ ಪಾಠಗಳು ವಾಣಿಜ್ಯ ಚಿತ್ರಗಳ ಜೊತೆಗೆ ಉಳಿದುಬಿಟ್ಟಿತು. ಹೊಸಅಲೆಯ ಚಳವಳಿ ವೃತ್ತಿಪರ ಕನ್ನಡ ತಂತ್ರಜ್ಞರ ಸಹಾಯವಿಲ್ಲದೆ ಸ್ವತಂತ್ರವಾಗಿ ಬೆಳೆಯಬೇಕಾಯಿತು (ಇದರಿಂದಾಗಿ ಹೊಸಅಲೆಯ ಮೇಲಾದ ಪರಿಣಾಮವನ್ನು ಮುಂದೆ ಚರ್ಚಿಸಲಾಗುವುದು.) ಕನ್ನಡ ಚಿತ್ರರಂಗದ ಪ್ರಧಾನ ವಾಹಿನಿ ನಿಧಾನವಾಗಿ ನೈಜತಯಿಂದ ದೂರ ಸರಿದು ಪ್ರಧಾನ ಪಾತ್ರಧಾರಿಯ ವೈಭವೀಕರಣಕ್ಕೆ ಒತ್ತುಕೊಟ್ಟು, ಅದೇ ಉದ್ದಿಮೆ ಅರವತ್ತರ ದಶಕದ ಆರಂಭ ಕಾಲದಲ್ಲಿ ಸಿನಿಮಾ ಕಲೆಗಾಗಿ ಮಾಡಿದ ಪ್ರಯೋಗಗಳನ್ನು ಬಿಟ್ಟು ಸಾಗಿತು. ಇದರಿಂದ ಸಂಕಲನ ತಂತ್ರ, ನಿರೂಪಣಾ ತಂತ್ರದ ಮೇಲೆ ವಿಶೇಷ ಪರಿಣಾಮವಾಯಿತು. ಅದನ್ನು ಕೆಲವು ಉದಾಹರಣೆಗಳೊಂದಿಗೆ ಸ್ಪಷ್ಟಪಡಿಸಿ ಕೊಳ್ಳೋಣ.

ನಾಯಕ ಪ್ರಾಧಾನ್ಯ

ಅರುವತ್ತರ ದಶಕದ ಅಂತ್ಯಭಾಗದಲ್ಲಿ ಕನ್ನಡ ಸಿನಿಮಾಗಳಿಗೆ ಸ್ಪರ್ಧಿಯಾಗಿ ಇತರೆ ಭಾಷೆಯಲ್ಲಿ ಜನಪ್ರಿಯವಾಗಿದ್ದ ಚಿತ್ರಗಳಿಗೆ ಕನ್ನಡ ಮಾತು ಮಾತ್ರ ಲೇಪಿಸಿದ 'ಡಬ್ಬಿಂಗ್' ಚಿತ್ರಗಳು ಬರತೊಡಗಿದ್ದವು. ಅವುಗಳ ಹಾವಳಿಯನ್ನು ತಡೆಗಟ್ಟಲು ಡಬ್ಬಿಂಗ್ ವಿರೋಧಿ ಚಳುವಳಿ ನಡೆಯಿತು. ಅ.ನ.ಕೃ., ಮ.ರಾಮಮೂರ್ತಿ ಮುಂತಾದ ಕನ್ನಡ ಜನಪ್ರಿಯ ಸಾಹಿತಿಗಳು ಈ ಚಳವಳಿಯ ನೇತೃತ್ವ ವಹಿಸಿದ್ದರು. ಹೋರಾಟದ ಫಲವಾಗಿ ಡಬ್ಬಿಂಗ್ ಚಿತ್ರಗಳು ಕರುನಾಡಿನಲ್ಲಿ ಬಿಡುಗಡೆಯಾಗುವುದೇ ನಿಂತು ಹೋಯಿತು. ಪ್ರವಾಹ ಪರಿಹಾರ ನಿಧಿಯ ಜಾಥಾ ಹಾಗೂ ಕನ್ನಡ ಚಳವಳಿ ಇತ್ಯಾದಿಗಳು ಕನ್ನಡದ ನಟ-ನಟಿಯರಿಗೆ ಜನಪ್ರಿಯತೆ ತಂದುಕೊಟ್ಟವು. ಇದೇ ಅವಧಿಯಲ್ಲಿ ಬಂದ ನಾಯಕ ಪ್ರಾಧಾನ್ಯವಿದ್ದ ಪರಭಾಷಾ ಚಿತ್ರಗಳು ನಮ್ಮ ಭಾಷೆಯ ಚಿತ್ರ ನಿರ್ಮಾಣದ ಮೇಲೆ ಪ್ರಭಾವ ಬೀರಿದವು. ಹೀಗಾಗಿ ಐವತ್ತರ ದಶಕದಿಂದಾಚೆಗಿಂತ ಅರುವತ್ತರ ದಶಕದ ಅಂತ್ಯ ಭಾಗದವರೆಗೆ ಕಥಾವಸ್ತುವನ್ನು ಆಯುವಾಗ ಇಡೀ ಕುಟುಂಬದ ಕಥೆಯನ್ನು ಹೇಳುತ್ತ, ಆ ಮೂಲಕ ಪೋಷಕ ಪಾತ್ರಗಳಿಗೂ ಜೀವ ನೀಡುತ್ತಿದ್ದ ಚಿತ್ರ ತಯಾರಕರು ಈ ಹೊಸ ಬೆಳವಣಿಗೆಯ ನಂತರ ನಾಯಕನ ಪಾತ್ರವನ್ನು ವೈಭವೀಕರಿಸಲು ಆರಂಭಿಸಿದರು. ಇದಕ್ಕೆ ಉದಾಹರಣೆ ಎಂಬಂತೆ ಮೇಲೆ ತಿಳಿಸಿದ ಅವಧಿಯಲ್ಲಿ 'ಕರುಣೆಯೇ ಕುಟುಂಬದ ಕಣ್ಣು', 'ಅಣ್ಣ-ತಂಗಿ', 'ಭೂದಾನ', 'ಚಂದವಳ್ಳಿಯ ತೋಟ', 'ಮುರಿಯದ ಮನೆ', 'ನಾಂದಿ', 'ಉಯ್ಯಾಲೆ', 'ಸರ್ವಮಂಗಳ' ಇಂತಹ ಹೆಸರಿನ ಚಿತ್ರಗಳು ಬಂದರೆ ನಂತರ ಬಂದುದು 'ಮೇಯರ್ ಮುತ್ತಣ್ಣ', 'ಭಲೇ ಬಸವ', 'ಮಿಸ್ ಲೀಲಾವತಿ', 'ಬಂಗಾರದ ಮನುಷ್ಯ'.. ಹೀಗೆ ಹೆಸರಿನಲ್ಲೂ ನಾಯಕ ಪಾತ್ರವನ್ನು ಉದಾತ್ತೀಕರಿಸುವ ಪ್ರಯತ್ನವಿದ್ದ ಚಿತ್ರಗಳು. ವಾಣಿಜ್ಯಪ್ರಧಾನ ಚಿತ್ರಗಳಲ್ಲಿ ಒಂದೆಡೆಗೆ ರಾಜಕುಮಾರ್ ಅಭಿನಯದ ಚಿತ್ರಗಳು, ಮತ್ತೊಂದೆಡೆ ಪುಟ್ಟಣ್ಣ ಕಣಗಾಲ್ ನಿರ್ದೇಶನದ ಚಿತ್ರಗಳು ಜನಪ್ರಿಯವಾಗ ತೊಡಗಿದವು. ರಾಜಕುಮಾರ್ ಅಭಿನಯದ ಚಿತ್ರಗಳಲ್ಲಿ ನಾಯಕನ ಪಾತ್ರದ ವೈಭವೀಕರಣವಿದ್ದರೆ ಪುಟ್ಟಣ್ಣ ಕಣಗಾಲ್‌ರ ಚಿತ್ರಗಳಲ್ಲಿ ನಾಯಕಿಯ ಪಾತ್ರದ ವೈಭವೀಕರಣವಿರುತ್ತಿತ್ತು. ಪುಟ್ಟಣ್ಣ ನಿರ್ದೇಶಿಸಿದ 'ಬೆಳ್ಳಿ ಮೋಡ', 'ಕಪ್ಪು-ಬಿಳುಪು', 'ಗೆಜ್ಜೆ ಪೂಜೆ', 'ಶರ ಪಂಜರ' ಚಿತ್ರಗಳಲ್ಲಿ ಕಥಾ ವಸ್ತುವಿನ ದೃಷ್ಟಿಯಿಂದ ವೈವಿಧ್ಯಮಯ ಕಾದಂಬರಿಗಳನ್ನು ಬಳಸಿದರೂ ಪುಟ್ಟಣ್ಣ ಪಾತ್ರವನ್ನು ತೆರೆಯ ಮೇಲೆ ತರುವಾಗ ನಾಯಕಿಯನ್ನು ಉದಾತ್ತೀಕರಿಸುವುದಕ್ಕೆ ಹೆಚ್ಚು ಪ್ರಯತ್ನಿಸುವುದನ್ನು ಗಮನಿಸಬಹುದು. ಇದರಿಂದಾಗಿ ಸಂಕಲನದ [illegible] ದ ಪರಿಣಾಮವನ್ನು ಕೆಲವು ಉದಾಹರಣೆಗಳ ಜೊತೆಗೆ ಗಮನಿಸೋಣ.

ಚಿತ್ರ 'ಕಸ್ತೂರಿ ನಿವಾಸ', ನಿರ್ದೇಶನ : ದೊರೆ-ಭಗವಾನ್, ಸಂಕಲನ : ಭಕ್ತವತ್ಸಲಂ. ಈ ಚಿತ್ರದ ಮೊದಲ ಇಪ್ಪತ್ತು ನಿಮಿಷಗಳಲ್ಲಿ ನಾಯಕನೊಬ್ಬ ಆಗರ್ಭ ಶ್ರೀಮಂತ, ಉದಾರಿ, ಕೊಡುಗೈ ದಾನಿ ಎಂಬೆಲ್ಲ ವಿವರಗಳು ಬಂದಿರುತ್ತವೆ. ಅನಂತರ ಕಥೆಯಲ್ಲಿ ಸಂಘರ್ಷ ಪ್ರವೇಶಿಸುವ ಹಂತದಲ್ಲಿ ಬರುವ ಒಂದು ದೃಶ್ಯವನ್ನು ಕೊಂಚ ವಿವರವಾಗಿ ಗಮನಿಸೋಣ.

೧. (ದೂರ ಚಿತ್ರಿಕೆ) ನಾಯಕ (ರಾಜಕುಮಾರ್) ತನ್ನ ಅರಮನೆಯಂತಹ ಮನೆಗೆ ತನ್ನ ಕಾರ್ಖಾನೆಯಲ್ಲಿ ದುಡಿಯುವ ಫೋರ್‌ಮನ್ (ರಾಜಾಶಂಕರ್) ಒಬ್ಬನನ್ನು ಕರೆತರುತ್ತಾನೆ. ಮನೆಯ ವಿಶಾಲ ಡ್ರಾಯಿಂಗ್ ರೂಮಿನ ನಡುವೆ ತಾನು ಮೇಲು-ಕೀಳು ಎಂಬುದನ್ನು ಗಮನಿಸುವವನಲ್ಲ ಎಂಬುದನ್ನು ತೋರಿಸಲೆಂಬಂತೆ ಕಾರ್ಮಿಕ ಪಾತ್ರವನ್ನು ಸೋಫಾ ಒಂದರಲ್ಲಿ ಕೂರಿಸುತ್ತಾನೆ. ತಾನು ಮಧ್ಯದಲ್ಲಿರುವ ಸಿಂಹಾಸನದಂತಹ ಕುರ್ಚಿಯ ಮೇಲೆ ಕಾಲ ಮೇಲೆ ಕಾಲನ್ನು ಹಾಕಿ ಕೂರುತ್ತಾನೆ. ನಾಯಕನ ಹಿಂದೆ ಅವನ ಶ್ರೀಮಂತಿಕೆಗೆ ಸಾಕ್ಷಿ ಎಂಬಂತೆ ಮಹಲಿನ ಮಹಡಿಗೆ ಹೋಗುವ ವಿಶಾಲ ಮೆಟ್ಟಿಲಿದೆ. ನಾಯಕನ ಕಣ್ಣುಸನ್ನೆಗೆ ಸಮವಸ್ತ್ರ ಧರಿಸಿದ ಆಳೊಬ್ಬ ಬಂದು ಕಾರ್ಮಿಕನಿಗೆ ಪಿಂಗಾಣಿ ಲೋಟದಲ್ಲಿ ಚಹಾ ನೀಡುತ್ತಾನೆ. mise-en-scene ತಿಳಿಸುವ ಚಿತ್ರಿಕೆಯಿದು. ಇಲ್ಲಿ ನಾಯಕ ಕುಳಿತಿರುವ ಸ್ಥಳ, ಅವನ ಅಕ್ಕಪಕ್ಕದಲ್ಲಿ ಇರುವ ವಿವರಗಳು, ವ್ಯಕ್ತಿಗಳು, ಸಂಯೋಜನೆ ಎಲ್ಲವೂ ನಾಯಕನತ್ತ ಕೇಂದ್ರೀಕರಿಸಿವೆ. ಇದೇ ಚಿತ್ರಿಕೆಯೊಳಗೆ ನಾಯಕನ ಬಲಗೈ ಬಂಟನಾದ ಆಳು (ಕೆ.ಎಸ್.ಅಶ್ವತ್ಥ್) ಬರುತ್ತಾನೆ. ನಾಯಕನ ಇತರ ಆಳುಗಳಿಗಿಂತ ಭಿನ್ನವಾಗಿ ಈತನದು ಹಳ್ಳಿಗನ ವೇಷ. ಆ ಪಾತ್ರ ಆಡುವ ಮಾತು ಸಹ ಗ್ರಾಮ್ಯವೇ. ಇಲ್ಲಿಯವರೆಗೆ ದೃಶ್ಯದಲ್ಲಿ ಕುಶಲೋಪರಿ ಮೀರಿದ ಸಂಭಾಷಣೆ ಬರುವುದಿಲ್ಲ. ಅನಂತರ ಇದೇ ಚಿತ್ರಿಕೆಯ ಎಡ ಬದಿಯಿಂದ ಮತ್ತೊಂದು ಶ್ರೀಮಂತ ಪಾತ್ರ (ಬಾಲಕೃಷ್ಣ)- ಆದರೆ ಕೊಂಚ ಕೊಳಕು ಮನಸ್ಸಿನ

ಪಾತ್ರ - ತನ್ನ ಮಗಳೊಡನೆ(ಸುರೇಖಾ) ಬರುತ್ತದೆ. ಈ ಪಾತ್ರದ ವೇಷ ಮೈಸೂರಿನ ಪೇಟ, ಕೋಟು, ಪಂಚೆ. ನಾಯಕನ ಪಾತ್ರ, ಅವರು ಉದಾರಿಗಳು, ಸಣ್ಣ ಮನಸ್ಸಿನವರಲ್ಲ ಎಂದು ತಿಳಿಸಲೆಂಬಂತೆ ಪೂರ್ಣ ಸೂಟನ್ನು ಧರಿಸಿದೆ. (ಈ ಹಂತದಲ್ಲಿ ಭಾರತೀಯ ಮನಸ್ಸುಗಳು ಅಮೆರಿಕ ದೇಶದ ಬಗ್ಗೆ ಒಲವು ಹೆಚ್ಚಿಸಿಕೊಳ್ಳುತ್ತಾ ಇದ್ದವು. ಹೀಗಾಗಿ ಆದರ್ಶ, ಉದಾರಿ ಪಾತ್ರಕ್ಕೆ ಅಮೆರಿಕನ್ ವೇಷ ಬಳಸಿರುವುದನ್ನು ಗಮನಿಸಬಹುದು.) ಬಂದಿರುವ ಹೊಸ ಪಾತ್ರ ನಾಯಕನ ಬಲಗಡೆಗೆ ಕೂರುತ್ತದೆ. ಪಕ್ಕದಲ್ಲಿ ಆತನ ಮಗಳು. ಅವಳ ವೇಷ ಆಧುನಿಕ. ಅವಳ ಕೈಯಲ್ಲಿ ಪ್ರಸಾಧನ ಸಾಮಗ್ರಿ. ಅವಳು ತನ್ನ ತಂದೆ ನಾಯಕನೊಂದಿಗೆ ಮಾತಾಡುವ ಅವಧಿಯುದ್ದಕ್ಕೂ ತನ್ನ ಮೇಕಪ್ ತೀಡಿಕೊಳ್ಳುತ್ತಾ ಇರುತ್ತಾಳೆ. ಅತಿಥಿ ಶ್ರೀಮಂತ ನಾಯಕನೊಡನೆ ಕುಶಲೋಪರಿ ಮುಗಿಸಿ ಎದುರಿಗಿರುವ ಮತ್ತೊಂದು ಪಾತ್ರ ಕಾರ್ಮಿಕ ವರ್ಗದ್ದೆಂದು ತಿಳಿದು ನಾಯಕನ ಉದಾತ್ತ ಗುಣವನ್ನು ಹೊಗಳತೊಡಗುತ್ತಾನೆ. ಈ ನಡುವೆ ಆತನಿಗೂ ಸಮವಸ್ತ್ರ ಧರಿಸಿದ ಆಳು ಪಾನೀಯ ತಂದುಕೊಡುತ್ತಾನೆ. ನಾಯಕನ ವೈಭವೀಕರಣ ಸಂಭಾಷಣೆಯಲ್ಲಿ ಮುಂದುವರೆಯುತ್ತದೆ. ಇಲ್ಲಿಯವರೆಗೆ ದೂರ ಚಿತ್ರಿಕೆಯೇ (Long Shot) ಇರುತ್ತದೆ.

೨. ಮಧ್ಯಮ ಚಿತ್ರಿಕೆಯಲ್ಲಿ ನಾಯಕನಿಗೆ ಶ್ರೀಮಂತನ ಮಾತು ಇಷ್ಟವಾಗುತ್ತಿಲ್ಲ ಎಂಬ ಪ್ರತಿಕ್ರಿಯೆ. ಆತನ ಹಿಂದಿರುವ ಬಲಗೈ ಭಂಟನಿಗೂ ನಾಯಕನ ಭಾವ ತಲುಪುತ್ತದೆ. ಆತ ಸಣ್ಣಗೆ ಕೊಸರುತ್ತಾನೆ.

೩. ಮಧ್ಯಮ ಚಿತ್ರಿಕೆ, ಇಬ್ಬರು ಪಾತ್ರಧಾರಿಗಳದ್ದು. ನಾಯಕನ ದೃಷ್ಟಿಯಲ್ಲಿ ಎಂಬಂತೆ, ಶ್ರೀಮಂತ ಮತ್ತವನ ಮಗಳು. ಕ್ಯಾಮರಾದ ಬಲಭಾಗ ನೋಡುತ್ತಾ ಶ್ರೀಮಂತ ಮಾತು ಮುಂದುವರೆಸುತ್ತಾನೆ. ನಾಯಕ ವಿಧುರ ಎಂಬುದನ್ನು ನೆನಪಿಸುತ್ತಾನೆ.

೪. ಇಲ್ಲಿ ಆತನ ಮಾತಿನಲ್ಲಿ ಹೆಂಡತಿಯ ಪ್ರಸ್ತಾಪ ಬರುವವರೆಗೆ ನಾಯಕನ ಪ್ರತಿಕ್ರಿಯೆ ಇರುವ ಕೆಲವು ಸಮೀಪ ಚಿತ್ರಿಕೆಗಳು ಬರುತ್ತವೆ. ಆ ಮಾತು ಬಂದೊಡನೆ ನಾಯಕನ ಹಿಂದಿರುವ ಭಂಟನ ಸಮೀಪ ಚಿತ್ರಿಕೆ ಬರುತ್ತದೆ. ಉತ್ತರಿಸದ ನಾಯಕನ ಬದಲಿಗೆ ಬಲಗೈ ಭಂಟ ಸೌಜನ್ಯದ ಮಾತಾಡಿ ನಾಯಕನನ್ನು ಮತ್ತಷ್ಟು ಉದಾತ್ತೀಕರಿಸುತ್ತಾನೆ.

೫. ದೃಶ್ಯ ಪರಾಕಾಷ್ಠೆಯತ್ತ ಸಾಗುತ್ತಿರುವ ಸೂಚನೆಯಂತೆ ಶ್ರೀಮಂತ ಕೃತ್ರಿಮವಾಗಿ ಕಾಣುತ್ತಿರುವ ಮಗಳನ್ನೇ ನಾಯಕನಿಗೆ ಎರಡನೆಯ ಹೆಂಡತಿಯಾಗಲಿ ಎಂಬ ಮಾತಾಡುತ್ತಾನೆ.

೬. ತಟ್ಟನೆ ಛೇದ ದೂರ ಚಿತ್ರಿಕೆಗೆ, ಅಂದರೆ ಮೊದಲ ಚಿತ್ರಿಕೆಯ ನೋಟ ರೇಖೆಗೆ (Line of Vision) ಸಾಗುತ್ತದೆ. ನಾಯಕ ದಿಢೀರನೆ ಎದ್ದು ನಿಲ್ಲುತ್ತಾನೆ. ನಡುವೆ ಎಲ್ಲೂ ನಾಯಕನಿಗೆ ಕೋಪ ಬರುತ್ತಿದೆ ಎಂಬ ಸೂಚನೆಯನ್ನು ನೀಡದೆ ಒಂದೇ ಬಾರಿಗೆ ದೂರ ಚಿತ್ರಿಕೆಯಲ್ಲಿ ಆತ ಕೋಪದಿಂದ ಏಳುವುದನ್ನು ತೋರಿಸುವ ನಿರ್ದೇಶಕ/ಸಂಕಲನಕಾರರು, ನಾಯಕ ಅತಿಥಿ ಶ್ರೀಮಂತನ ಹೆಸರನ್ನು ಕೋಪದಿಂದ ಕೂಗುವವರೆಗೆ ಕಾದು, ನಂತರ ಹಿನ್ನೆಲೆ ಸಂಗೀತವನ್ನು ಆರಂಭಿಸುತ್ತಾರೆ. ನಾಯಕ ಮತ್ತೇನೂ ಮಾತಾಡದೆ ತಿರುಗಿ, ಕ್ಯಾಮರಾಗೆ ಬೆನ್ನಾಗಿ ಹಿಂದಿರುವ ವಿಶಾಲ ಮೆಟ್ಟಿಲುಗಳನ್ನು ಏರುತ್ತಾ ಸಾಗುತ್ತಾನೆ. ನಾಯಕ ಸಂಪೂರ್ಣ ಮೆಟ್ಟಿಲೇರಿ ಸಾಗುವವರೆಗೆ ನಿಶ್ಚಲವಾಗಿರುವ ಕ್ಯಾಮರಾ ನಿಧಾನವಾಗಿ ನಾಯಕನ ಕೂಗಿಗೆ ಎದ್ದು ನಿಂತಿರುವ ಇತರ ಪಾತ್ರಗಳತ್ತ ಹಳಿ ಚಿತ್ರಿಕೆಯಲ್ಲಿ ಸಾಗುತ್ತದೆ. ಭಂಟ ಮತ್ತು ಅತಿಥಿ ಶ್ರೀಮಂತನ ಪಾತ್ರಗಳು ಮಧ್ಯಮ ಚಿತ್ರಿಕೆಗೆ ಬರುತ್ತವೆ. ಅತಿಥಿ ಶ್ರೀಮಂತ ''ನನ್ನ ತಪ್ಪೇನು'' ಎಂದಾಗ ನಾಯಕನ ಕೋಪಕ್ಕೆ ಕಾರಣವೇನೆಂದು (ನಾಯಕನಷ್ಟೇ ಕೋಪದಿಂದ) ಭಂಟ ವಿವರಿಸಿ ಅತಿಥಿಗೆ 'ಹೊರಡಿ' ಎನ್ನುತ್ತಾನೆ. ಅತಿಥಿ ಮಗಳೊಂದಿಗೆ ಕ್ಯಾಮರಾದ ಬಲಗಡೆ ನಿಷ್ಕ್ರಮಿಸಿದಾಗ ಕ್ಯಾಮರಾ ಮತ್ತಷ್ಟು ಮುಂದೆ ಚಲಿಸಿ ಬಲಕ್ಕೆ ತಿರುಗಿ ಭಂಟ ಮತ್ತು ಫೋರ್‌ಮನ್ನನ್ನು ತೋರುತ್ತದೆ. ಅತಿಥಿಯ ಕೊಂಕು ಮಾತು ನಾಯಕನ ಮನಸ್ಸನ್ನು ಕೆಡಿಸಿತು ಎಂದು ಭಂಟ ವಿವರಿಸುತ್ತಾನೆ, ವಿವರಿಸಿ, ಮೇಲೆ ಸಾಗಿದವನತ್ತ ಕ್ಯಾಮರಾದ ಎಡಬದಿಗೆ ತಲೆ ಎತ್ತಿ ನೋಡುತ್ತಾನೆ. ಥಟ್ಟನೆ ದೃಶ್ಯಕ್ಕೆ ಛೇದ ಬರುತ್ತದೆ.

೭. ನಾಯಕ ತನ್ನ ತೀರಿಕೊಂಡ ಮಡದಿಯ ಚಿತ್ರದೆದುರು ನಿಂತು ದುಃಖಿತನಾಗಿರುವ ಮಧ್ಯಮ ಚಿತ್ರಿಕೆ ಬರುತ್ತದೆ. ಕ್ಯಾಮರಾ ನಾಯಕನ ಬಳಿಗೆ ಸಾಗುತ್ತದೆ.

೮. ಇಲ್ಲಿಂದಾಚೆಗೆ ನಾಯಕನ ಪ್ರೇಮ ಕಥೆ ಫ್ಲಾಷ್‌ಬ್ಯಾಕ್‌ನಂತೆ ಬಂದು ನಾಯಕ-ನಾಯಕಿಯ ಪರಿಚಯ, ಪ್ರೇಮ, ಹಾಡು, ಮಡದಿಗೆ ಹುಟ್ಟುವ ಮಗು ಮತ್ತು ಆಕೆಯ ಸಾವಿನವರೆಗೆ ಸಂಗೀತಮಯ ಮಾಂಟಾಜ್ ಬರುತ್ತದೆ.

ಇದು ಸಂಕಲನ ಮತ್ತು ನಿರೂಪಣೆಯ ಹಾದಿ. ಇಲ್ಲಿ ಬರುವ ಪ್ರತಿ ಚಿತ್ರಿಕೆ, ಪ್ರತಿ ಮಾತು ನಾಯಕನನ್ನು ಕುರಿತಾದದ್ದು. ನಾಯಕ ಯಾವ ಮಾತೂ ಆಡದೆ ದೃಶ್ಯವೊಂದರ ಕೇಂದ್ರವಾಗುವುದನ್ನು ಆ ಮೂಲಕ ತನ್ನ ಅಭಿಮಾನಿ ವೃಂದಕ್ಕೆ ಪ್ರಿಯವಾಗುವ ಬಗೆಯನ್ನು ಇಲ್ಲಿ ಗಮನಿಸಬಹುದು. ಸಹಜತೆ, ನೈಜತೆ ಎಂದು ಯೋಚಿಸಿದಾಗ ಸ್ವತಃ ಅತಿಥಿಗೆ, ಆತನ ಮಾತಿಗೆ ನೇರ ಪ್ರತಿಕ್ರಿಯೆ ನೀಡಿ ನಾಯಕನ ಪಾತ್ರ ಸಾಗಬೇಕು. ಹಾಗೆ ಅವನು ಮಾತಾಡಿದಲ್ಲಿ ಅದು ಇನ್ನಿತರ ಪಾತ್ರಗಳಂತೆ ನೆಲಕ್ಕಂಟಿದ್ದಾಗಿಬಿಡುತ್ತದೆ. ಆದ್ದರಿಂದ ಕಥೆಯ ಅಗತ್ಯವಾದ ನಗರೀಕೃತ ಕೃತಕತೆ ಇಲ್ಲದ ಗ್ರಾಮ್ಯ ಮಾತನ್ನು ಪಾತ್ರದ ಕೈಯಲ್ಲಿ ಲೇಖಕರು ಮಾತಾಡಿಸುತ್ತಾರೆ. ಹೀಗೆ ದೃಶ್ಯ ರಚನಾ ಶೈಲಿಯಲ್ಲೇ ನಿರ್ದೇಶಕ, ಛಾಯಾಗ್ರಾಹಕ, ಸಂಕಲನಕಾರರು ಕೇಂದ್ರ ಪಾತ್ರದ ವೈಭವೀಕರಣ ಮಾಡುತ್ತ ಕಥಾ ವಿವರಗಳಿಗೆ ಹೋಗದೆ, ಪಾತ್ರದ ವಿವರಗಳನ್ನು ಮಾತ್ರ ದಾಖಲಿಸುವುದನ್ನು ಗಮನಿಸಬಹುದು.

ಇದು ಅಂದಿನಿಂದ ಇಂದಿನವರೆಗೆ ಬಂದಿರುವ ಎಲ್ಲ ನಾಯಕ ಪ್ರಧಾನ ಚಿತ್ರಗಳ ದೃಶ್ಯ ರಚನಾ ಕ್ರಮ. ಇಂತಹ ತಾರಾ ಪದ್ಧತಿಯ ಸಿನಿಮಾಗಳನ್ನು ಅಭಿಮಾನಿಗಳನ್ನು ಮೆಚ್ಚಿಸಲು, ಗಲ್ಲಾ ಪೆಟ್ಟಿಗೆ ತುಂಬಿಸಲು ಎಲ್ಲಾ ಭಾಷೆಯ ಚಿತ್ರೋದ್ಯಮಗಳು ತಯಾರಿಸುತ್ತಿವೆ. ಕನ್ನಡ ಸಿನಿಮಾ ಇದಕ್ಕೆ ಹೊರತಲ್ಲ. ವೈಯಕ್ತಿಕ ಅಥವಾ ಅನಿವಾರ್ಯ ಕಾರಣಗಳಿಗೂ ಒಮ್ಮೊಮ್ಮೆ ಅದೇ ಉದ್ಯಮ ಹೊಸ ತಾರೆಯರನ್ನು ಪೋಷಿಸುವ ಪ್ರಯತ್ನ ಮಾಡುತ್ತದೆ. ಇದಕ್ಕೆ ಉದಾಹರಣೆಯಾಗಿ ದ್ವಾರಕೀಶ್ ನಿರ್ದೇಶಿಸಿದ 'ಕೃಷ್ಣ ನೀ ಕುಣಿದಾಗ'ದಂತಹ ಚಿತ್ರವನ್ನು, ಇತ್ತೀಚೆಗೆ ಬಂದ ಹಿಂದಿಯ 'ಕಹೋ ನ ಪ್ಯಾರ್ ಹೈ' ತರಹದ ಚಿತ್ರವನ್ನು ಹೆಸರಿಸಬಹುದು. ಕನ್ನಡದಲ್ಲಿ ಬಂದ 'ಆನಂದ್', 'ಚಿರಂಜೀವಿ', 'ನಂಜುಂಡಿ ಕಲ್ಯಾಣ', 'ಶರವೇಗದ ಸರದಾರ', 'ಪ್ರೇಮ ಲೋಕ' ಚಿತ್ರಗಳಲ್ಲೂ ಹೊಸ ತಾರೆಯರನ್ನು ಉದ್ದಿಮೆಗೆ ಕೊಡುವ ಪ್ರಯತ್ನವೇ ಆಗಿತ್ತು. ಇದೇ ಉದ್ದೇಶದಿಂದ ತಯಾರಾಗದಿದ್ದರೂ ಪುಟ್ಟಣ್ಣ ಕಣಗಾಲ್ ನಿರ್ದೇಶನದ 'ನಾಗರ ಹಾವು' ಚಿತ್ರ ಕೂಡ ಇದನ್ನೇ ಸಾಧಿಸಿತ್ತು. ತಾರಾ ಪದ್ಧತಿ ಇರುವ ಚಿತ್ರೋದ್ಯಮದಲ್ಲಿ ನಿರಂತರವಾಗಿ ಹೊಸ ತಾರೆಯರನ್ನು ಆ ಮೂಲಕ ಹೊಸ ಕನಸುಗಳನ್ನು ಪ್ರೇಕ್ಷಕರಿಗೆ ತಲುಪಿಸುವ ಯತ್ನ ನಡೆಯುತ್ತಲೇ ಇರುತ್ತದೆ. 'ಆರ್ಟ್ಸ್ ಅಂಡ್ ಐಡಿಯಾಸ್' ಪತ್ರಿಕೆಯ ಸಿನಿಮಾ ವಿಶೇಷಾಂಕದಲ್ಲಿ ತಾರಾಪದ್ಧತಿ ಕುರಿತ ವಿಶೇಷ ಲೇಖನವೇ ಇದೆ.

ಇಂತಹ ಚಿತ್ರಗಳಲ್ಲಿ ಸಂಕಲನ ತಂತ್ರ, ನಿರೂಪಣಾ ವಿಧಾನಗಳು ಸಾಮಾನ್ಯೀಕರಣಗೊಂಡುಬಿಡುತ್ತವೆ. ಅವರೊಡನೆ ಆಯಾ ತಂತ್ರಜ್ಞರ ಕ್ರಿಯಾಶೀಲತೆಯು ಕೊಂಚ ಮೊಂಡಾಗುತ್ತ ಸಾಗುತ್ತದೆ ಎಂಬುದು ಇತಿಹಾಸ ಕಂಡುಕೊಂಡಿರುವ ಸತ್ಯ. ಆದರೆ ಇಂತಹ ಸಿನಿಮಾಗಳು, ಈ ರೀತಿಯ ಕಥನ, ಅತಿ ಹೆಚ್ಚು ಬಂಡವಾಳ ಹೂಡಬೇಕಾದ ಉದ್ಯಮವೊಂದರಲ್ಲಿ ಅನಿವಾರ್ಯ ಅಗತ್ಯ ಆಗಿರುತ್ತದೆ.

ನಮ್ಮಲ್ಲಿನ ನಾಯಕ ಪ್ರಧಾನ ಚಿತ್ರಗಳು ಹೆಸರಿಗಷ್ಟೇ ಐತಿಹಾಸಿಕ ಅಥವಾ ಪೌರಾಣಿಕ ಎಂಬ ಹಣೆಪಟ್ಟಿಯನ್ನು ಹಾಕಿಕೊಂಡಿರುತ್ತಿದ್ದವು. ಈ ಚಿತ್ರದ ವಸ್ತ್ರವಿನ್ಯಾಸ, ಹಿನ್ನೆಲೆ ವಿನ್ಯಾಸ, ಪರಿಕರಗಳಾವುದರಲ್ಲೂ ಐತಿಹಾಸಿಕ ತರ್ಕ ಇರುತ್ತಿರಲಿಲ್ಲ. ಹೀಗಾಗಿ ನಾಯಕನ ಹಿನ್ನೆಲೆಯಲ್ಲಿ ವಿದ್ಯುದ್ದೀಪಗಳಿದ್ದದ್ದೂ ಉಂಟು. ೧೪ನೇ ಶತಮಾನದ ಕಥೆಯಲ್ಲಿ ೧೯ನೇ ಶತಮಾನದ ಮೈಸೂರು ಸಿಂಹಾಸನ ಬಳಸಿರುವುದೂ ಉಂಟು. ಈ ಚಿತ್ರಗಳಿಗೆ ಐತಿಹಾಸಿಕ/ಪೌರಾಣಿಕ ಎಂಬ ಹಣೆಪಟ್ಟಿಯನ್ನು ತಗುಲಿಸುವುದು ಕೂಡ ಅಸಂಬದ್ಧವೆ.

ಆದರೂ ಇಂತಹ ವೈಭವೀಕರಣ ಐತಿಹಾಸಿಕ ಕಥಾವಸ್ತುವಿನ ಚಿತ್ರದಲ್ಲಿ ಹೇಗಾಗುತ್ತದೆ ಎಂಬುದಕ್ಕೆ ವಿಜಯಾ ರೆಡ್ಡಿಯವರ ನಿರ್ದೇಶನದ, ಭಕ್ತವತ್ಸಲಂ ಸಂಕಲನದ, ರಾಜಕುಮಾರ್ ಅಭಿನಯದ 'ಮಯೂರ' ಚಿತ್ರದ ಒಂದು ದೃಶ್ಯ ಗಮನಿಸಿ. ಚಿತ್ರದಲ್ಲಿ ಅರ್ಧಭಾಗ ಕಥೆ ಮುಗಿದ ನಂತರ ಈ ದೃಶ್ಯ ಬರುತ್ತದೆ. ಈ ಹೊತ್ತಿಗೆ ನಾಯಕ ಜನರಿಗಾಗಿ ಬದುಕುವವನೆಂದೂ, ಆ ನಾಡಿನ ರಾಜರ ದಬ್ಬಾಳಿಕೆಯ ವಿರುದ್ಧ ಹೋರಾಡುತ್ತಿರುವವನೆಂದೂ, ಅವನನ್ನು ಜನ ಆರಾಧಿಸುತ್ತಾರೆಂದೂ ತಿಳಿಸಲಾಗಿದೆ. ನಾಯಕನನ್ನು ಹೇಗಾದರೂ ಸೆರೆ ಹಿಡಿಯಲು ಅಧಿಕಾರಾರೂಢರು ಕಾಯುತ್ತಿದ್ದಾರೆ. ಈ ಅಧಿಕಾರಾರೂಢ ರಾಜನ ಮಗಳನ್ನೇ ನಾಯಕ ಪ್ರೀತಿಸುತ್ತಿದ್ದಾನೆ ಎಂಬ ವಿವರ ಗೊತ್ತಾಗಿದೆ. ನಾಯಕಿ ಬರೆದಿರುವ ಪತ್ರಕ್ಕೆ ಪ್ರತಿಯಾಗಿ ತಾನು ನಾಯಕಿಯನ್ನು

ಅರಮನೆಯ ಉದ್ಯಾನವನದಲ್ಲೇ ಭೇಟಿಯಾಗುವೆ ಎಂದು ನಾಯಕ ಪತ್ರ ಬರೆದಿದ್ದಾನೆ. ಇಷ್ಟಾದ ನಂತರ ನಾಯಕಿಯು ನಾಯಕನನ್ನು ಭೇಟಿಯಾಗಲು ಉದ್ಯಾನವನಕ್ಕೆ ಬರುವುದರಿಂದ ದೃಶ್ಯ ಆರಂಭವಾಗುತ್ತದೆ.

೧. ದೂರ ಚಿತ್ರಿಕೆ : ಅದೊಂದು ಕೃತಕವಾಗಿ ಅಲಂಕರಿಸಿದ, ಸ್ಟುಡಿಯೋದೊಳಗೆ ನಿರ್ಮಿಸಿದ ಉದ್ಯಾನವನದ ಸೆಟ್. ಅಲ್ಲಿಗೆ ಬರುವ ನಾಯಕಿ, ನಾಯಕನನ್ನು ಹುಡುಕುತ್ತಾ ಅತ್ತಿಂದಿತ್ತ ನೋಡುತ್ತಿದ್ದಾಳೆ. ನಾಯಕಿಯು ನಡಿಗೆಯನ್ನು ಹಿಂಬಾಲಿಸುತ್ತಾ ಲಾಳಾಕಾರವಾಗಿ ತಿರುಗುವ ಕ್ಯಾಮರಾ ಉದ್ಯಾನವನದಲ್ಲಿ ನಾಯಕಿಯನ್ನು ಹೊರತುಪಡಿಸಿ ಮತ್ತಾರೂ ಇಲ್ಲ ಎಂದು ಸ್ಪಷ್ಟಪಡಿಸುತ್ತದೆ. ನಾಯಕಿ ಉದ್ವೇಗದಲ್ಲಿದ್ದಾಳೆ. ನಾಯಕಿಗೆ ನಾಯಕನನ್ನು ಯಾರಾದರೂ ಸೆರೆ ಹಿಡಿದುಬಿಟ್ಟರೆ ಎಂಬ ಭಯವಿದೆ. ಅವಳು ಆ ಮಾತನ್ನು ಸ್ವಗತವೂ, ಪ್ರಕಟವೂ ಅಲ್ಲದ ಹಾಗೆ ಯಾರೂ ಇಲ್ಲದ ಉದ್ಯಾನವನದಲ್ಲಿ ಮಾತಾಡುತ್ತಾಳೆ.

೨. ಸಮೀಪ ಚಿತ್ರಿಕೆ : ಉದ್ಯಾನವನದ ಒಂದು ಮೂಲೆಯಲ್ಲಿ ಇರುವ ಮಂಟಪದಲ್ಲಿ ನಾಯಕ ಸೊಂಟದ ಮೇಲೆ ಕೈ ಇರಿಸಿ ನಗುತ್ತಾ ನಿಂತಿದ್ದಾನೆ. ಆತ ಅರಮನೆಯ ಕಾವಲುಗಾರರ ಕಣ್ಣು ತಪ್ಪಿಸಿ ಅಲ್ಲಿಗೆ ಹೇಗೆ ಬಂದ ಎಂಬ ವಿವರವನ್ನು ಚಿತ್ರಕಥಾ ಲೇಖಕರು ನೀಡುವುದಿಲ್ಲ. ಅವನು ನಾಯಕ. ಎಂತಹ ಅಡೆ ತಡೆಯನ್ನೂ ದಾಟಿ ಬಂದಿರುತ್ತಾನೆ ಎಂದು ಗ್ರಹಿಸಬೇಕಷ್ಟೆ. ನಾಯಕ ಉತ್ಕಟ ಪ್ರೀತಿಯೊಡನೆ ನಾಯಕಿಯನ್ನು ಕರೆಯುತ್ತಾನೆ.

೩. ಮಧ್ಯಮ ಚಿತ್ರಿಕೆ : ನಾಯಕಿ ಧ್ವನಿ ಬಂದತ್ತ ತಿರುಗಿ ನೋಡುತ್ತಾಳೆ. ನಾಯಕನನ್ನು ಕಂಡು ಅವನತ್ತ ಓಡುತ್ತಾಳೆ. ಅವಳೊಂದಿಗೆ ಕ್ಯಾಮರಾ ಲಾಳಾಕಾರವಾಗಿ ತಿರುಗುತ್ತದೆ. ದೂರದಲ್ಲಿ ನಿಂತ ನಾಯಕ ತೋಳ್ತೆರೆದು ನಾಯಕಿಯನ್ನು ತನ್ನತ್ತ ಆಹ್ವಾನಿಸುತ್ತಾನೆ. ನಾಯಕಿ ಅವನ ತೆಕ್ಕೆಯೊಳಗೆ ಅಡಗಿ, ನಾಯಕನ ಎದೆಯ ಮೇಲೆ ತಲೆ ಇರಿಸಿ ತನಗಿರುವ ಭಯಗಳನ್ನು ಹೇಳುತ್ತಾಳೆ. ಕ್ಯಾಮರಾ ನಾಯಕ-ನಾಯಕಿಯ ಬಳಿಗೆ ಟ್ರ್ಯಾಕ್ ಆಗುತ್ತದೆ. ಪ್ರೇಮಿಗಳ ಸಂಭಾಷಣೆ ಮುಂದುವರೆಯುತ್ತದೆ. ನಾಯಕಿಗೆ ತನ್ನ ಅಣ್ಣಂದಿರು ನಾಯಕನನ್ನು ಸೆರೆ ಹಿಡಿಯುವರೆಂಬ ಭಯ. ಇಲ್ಲಿ ನಾಯಕಿ ಮಾತಾಡುತ್ತಿದ್ದರೂ ಕ್ಯಾಮರಾ ನಾಯಕನ ಮುಖವನ್ನು ಪ್ರಧಾನವಾಗಿ ತೋರಿಸಿ, ನಾಯಕಿಯ ಒಂದು ಪಾರ್ಶ್ವದ ಮುಖವನ್ನು ಮಾತ್ರ ತೋರುತ್ತದೆ.

೪. ಮಧ್ಯಮ ಸಮೀಪ ಚಿತ್ರಿಕೆ : ಕ್ಯಾಮರಾಗೆ ಬೆನ್ನಾಗಿ ನಿಂತಿರುವ ನಾಯಕಿಯ ಎಡಭುಜ ಕಾಣುತ್ತದೆ. ನಾಯಕ ತನ್ನನ್ನು ಯಾರೂ ಹಿಡಿಯಲಾರರು ಎಂದು ತನ್ನ ಶಕ್ತಿಯ ಪರಿಚಯವನ್ನು ಮಾತಿನಲ್ಲಿ ಸ್ಪಷ್ಟಪಡಿಸುತ್ತಾನೆ. ಇಲ್ಲಿ ಚಿತ್ರಿಕೆಯಿಂದ ಚಿತ್ರಿಕೆಗೆ ಸಾಗುವ ಕ್ರಿಯಾ ನಿರಂತರತೆ (ಆ್ಯಕ್ಷನ್ ಕಂಟಿನ್ಯೂಯಿಟಿ) ಹೊಂದುವುದಿಲ್ಲ. ಆದರೆ ನಾಯಕನ ಮಾತಿನಲ್ಲಿ ಆ ಪಾತ್ರದ ವೈಭವೀಕರಣ ಇರುವುದರಿಂದ ಸಮೀಪ ಚಿತ್ರಿಕೆ ಬರುತ್ತದೆ.

೫. ನಾಯಕನ ಬಲಭುಜ ಕ್ಯಾಮರಾಗೆ ¾ ಸ್ಥಿತಿಯಲ್ಲಿ ನಿಂತಿರುವಾಗ ನಾಯಕಿ ದುಃಖದೊಡನೆ ದೂರ ಸರಿದು ತನ್ನ ಭಯ ಹೇಳುತ್ತಾಳೆ. ಅವಳಿಗಿರುವ ಪುಕ್ಕಲುತನವನ್ನು ಅವಳತ್ತ ಸಾಗುತ್ತ ನಾಯಕ ಖಂಡಿಸುತ್ತಾನೆ. ನಾಯಕಿಯ ನಟನೆಯ ಕೃತ್ರಿಮ ಮುಂದುವರೆದಿದೆ. ಆದರೆ ಆಕೆಯ ಅಭಿನಯ ಒಂದಿಷ್ಟು ಕಾಣಬಹುದಾಗಿದ್ದ ಚಿತ್ರಿಕೆಯಲ್ಲಿ ನಾಯಕಿಯ ಮುಖ ಕಾಣವಂತೆ ಅವಳನ್ನು ಕ್ಯಾಮರಾಗೆ ಬೆನ್ನಾಗಿಸಿ ದೂರಕ್ಕೆ ಚಲಿಸುವಂತೆ ಮಾಡಲಾಗಿದೆ. ಇದೂ ಸಹ ನಾಯಕ ಪ್ರಧಾನ ಚಿತ್ರಗಳ ಮತ್ತೊಂದು ಗುಣ. ಅಲ್ಲಿ ನಾಯಕ-ನಾಯಕಿಯರನ್ನು ಉಳಿದು ಇತರ ಪಾತ್ರಗಳು ಕೇವಲ ಫಂಕ್ಷನಲ್. ಆ ಪಾತ್ರಗಳಿಗೆ ವ್ಯಕ್ತಿತ್ವವಿದ್ದರೂ ಲೇಖಕ, ನಿರ್ದೇಶಕರು ಅವನ್ನು ಬೆಳೆಸುವುದಿಲ್ಲ. ನಾಯಕಿಯ ಮಾತುಗಳಲ್ಲಿ ತನ್ನ ಅಣ್ಣಂದಿರು ನಾಯಕನನ್ನು ಹಿಡಿಯುತ್ತಾರೆ ಎಂಬ ಮುಂದೆ ಬರಬಹುದಾದ ಅಪಾಯದ ಸೂಚನೆಯಿದೆ. ನಾಯಕ ತಾನು ಅಂತಹ ಅಡ್ಡಿಗಳನ್ನು ದಾಟಬಲ್ಲೆ ಎಂದು ನಾಯಕಿಯೊಡನೆ ಮತ್ತೊಂದು ದಿಕ್ಕಿಗೆ ಹೊರಡುತ್ತಾನೆ.

೬. ಕ್ಯಾಮರಾಗೆ ಬೆನ್ನಾಗಿ ದೂರಕ್ಕೆ ಚಲಿಸುವ ನಾಯಕ-ನಾಯಕಿ. ಹಿಂದಿನ ಚಿತ್ರಿಕೆಯೊಂದಿಗೆ ಮ್ಯಾಚ್ ಕಟ್ ಆಗಿ ಬರುತ್ತದೆ. ಚಿತ್ರಿಕೆಯ ಆರಂಭದಲ್ಲಿ ಕ್ಯಾಮರಾವನ್ನು ಮುಚ್ಚಿರುವ ಪಾತ್ರಗಳ ಬೆನ್ನುಗಳು ವೈಪ್‌ನಂತೆ ಕೆಲಸ ಮಾಡುತ್ತವೆ. ಅವರಿಬ್ಬರೂ ದೂರ ಸರಿದಂತೆ ಚಿತ್ರಿಕೆಯ ಆವರಣ ಈವರೆಗೆ ಇದ್ದ ಸ್ಟುಡಿಯೋದ ಕೃತಕ ಉದ್ಯಾನದ ಸೆಟ್‌ಗೆ ಬದಲಾಗಿ ನೈಜ ಸ್ಥಳಕ್ಕೆ ಬಂದಿದೆ. ಆದರೆ ಅಲ್ಲಿರುವುದು ಮನಸೋ ಇಚ್ಛೆ ಬೆಳೆದ ವಾಸ್ತವದ ಕಾಡು. ಹಿಂದಿನ ಚಿತ್ರಿಕೆಯಲ್ಲಿ ಇದ್ದಂತಹ ಮಾಲಿಯೊಬ್ಬನ ಅಚ್ಚುಕಟ್ಟಿನಲ್ಲಿ ಬೆಳೆದ ಉದ್ಯಾನವಲ್ಲ. ಹೀಗಾಗಿ ಸ್ಟುಡಿಯೊದಲ್ಲಿದ್ದ ನಿಯಂತ್ರಿತ ಬೆಳಕಿನ ಬದಲಿಗೆ ಪ್ರಖರ ಸೂರ್ಯನ ಬೆಳಕು ಬರುತ್ತದೆ. ಅದರಿಂದಾಗಿ ವರ್ಣ ನಿರಂತರತೆ ಹಿಂದಿನ ಚಿತ್ರಿಕೆಯಿಂದ ಈ ಚಿತ್ರಿಕೆಗೆ ಉಳಿಯುವುದಿಲ್ಲ.

ನಾಯಕ-ನಾಯಕಿ ಸಾಗುವಾಗ ಅವರಿಬ್ಬರ ಎದುರಿಗೆ ಧುತ್ತನೆ ಖಳನಾಯಕನಾದ ನಾಯಕಿಯ ಅಣ್ಣ ಮರವೊಂದರ ಮರೆಯಿಂದಾಚೆಗೆ ಬಂದು ಕಾಣಿಸುತ್ತಾನೆ. ನಾಯಕ ಸಿಕ್ಕಿಬಿದ್ದನೆಂಬ ಭಾವ ಪ್ರೇಕ್ಷಕನಲ್ಲಿ ಮೂಡಿಸುವ ಹಿನ್ನೆಲೆ ಸಂಗೀತ ಬರುತ್ತದೆ. ಖಳನಾಯಕ ಕೂಡ ನಾಯಕನಿಗೆ ಸಿಕ್ಕಿಬಿದ್ದೆ ಎಂಬ ಅರ್ಥದ ಮಾತಾಡುತ್ತಾನೆ. ಈ ದೂರ ಚಿತ್ರಿಕೆಯಲ್ಲಿ ಈ ಹಂತದವರೆಗೆ ಕ್ಯಾಮರಾಗೆ ಬೆನ್ನಾಗಿದ್ದ ನಾಯಕ ಕೊಂಚ ನಾಟಕೀಯವಾಗಿ ಕ್ಯಾಮರಾಗೆ ಮುಖ ಕಾಣುವಂತೆ ತಿರುಗಿ ನಿಂತು ಚಿತ್ರಿಕೆಯ ಕೇಂದ್ರ ಬಿಂದುವಾಗಿ ನಿಲ್ಲುತ್ತಾನೆ. ಖಳ ತನ್ನನ್ನು ಹಿಡಿಯಲಾರ ಎನ್ನುತ್ತಾನೆ. ಖಳನ ಚಪ್ಪಾಳೆಗೆ ಒಂದಷ್ಟು ಸೈನಿಕರು ಸರಸರನೆ ಮರೆಯಿಂದಾಚೆ ಬಂದು ನಾಯಕ-ನಾಯಕಿಯನ್ನು ಸುತ್ತುವರೆಯುತ್ತಾರೆ. ನಾಯಕಿ ಗಾಬರಿಯಾಗುತ್ತಾಳೆ. ಪ್ರೇಕ್ಷಕರಿಗೀಗ ನಾಯಕ ತಪ್ಪಿಸಿಕೊಳ್ಳುತ್ತಾನೆ ಎಂಬುದು ಗೊತ್ತು. ಆದರೆ ಹೇಗೆ ಎಂಬ ಪ್ರಶ್ನೆಯಿದೆ. ನಾಯಕ ಸೈನಿಕರು ತನಗೇನು ಮಾಡುತ್ತಾರೆ ಎಂಬಂತೆ ನಗುತ್ತಾನೆ. ಖಳ ಕತ್ತಿ ಹಿರಿಯುತ್ತಾನೆ. ನಾಯಕ ಹೆದರದೆ ವೀರಾವೇಶದ ಮತ್ತು ತನ್ನ ಬುದ್ಧಿಮತ್ತೆ ಪ್ರದರ್ಶಿಸುವ ಕೆಲವು ಮಾತನ್ನಾಡುತ್ತಾ ಚಪ್ಪಾಳೆ ತಟ್ಟುತ್ತಾನೆ. ಅವರು ಯಾವ ಮರದ ನೆರಳಿನಲ್ಲಿ ನಿಂತಿದ್ದರೋ ಅದೇ ಮರದ ಮೇಲೆ ಬಚ್ಚಿಟ್ಟುಕೊಂಡಿದ್ದ ನಾಯಕನ ಭಂಟರ ದಂಡು ಶಸ್ತ್ರ ಸಮೇತವಾಗಿ ಕೆಳಗೆ ಇಳಿಯಲಿಂತ್ತದೆ. ಖಳನಾಯಕ ಗಾಬರಿಯಾಗುತ್ತಾನೆ.

೭. ಸಮೀಪ ಚಿತ್ರಿಕೆಯಲ್ಲಿ ಖಳ ಹೆದರಿ ಸುತ್ತುವರಿದವರನ್ನು ನೋಡುತ್ತಾನೆ.

೮. ಮಧ್ಯಮ ಚಿತ್ರಿಕೆ : ಖಳನ ಸೇನೆಯವರು ಶಸ್ತ್ರಾಸ್ತ್ರ ಕೆಳಗಿಳಿಸುತ್ತಾರೆ. ನಾಯಕ ಖಳನ ಕೈಯಲ್ಲಿದ್ದ ಕತ್ತಿಯನ್ನು ಪಡೆದು ಇದು ರಕ್ತಪಾತದ ಸಮಯವಲ್ಲ ಎಂಬರ್ಥದ ಮಾತಾಡಿ ಖಳನಿಗೆ ತಂತ್ರ-ವ್ಯೂಹ ರಚಿಸುವುದನ್ನು ಕಲಿತುಕೋ ಎಂದು ಮೂದಲಿಸಿ ನಾಯಕಿಗೆ ವಿದಾಯ ಹೇಳಿ ಸಾಗುತ್ತಾನೆ.

ಈ ದೃಶ್ಯಮದ್ದಕ್ಕೂ ನಾಯಕ ಪಾತ್ರದ ವೈಭವೀಕರಣವನ್ನು, ಆತನ ಸುತ್ತಲೇ ಕಥನ ಹರಿಯುವುದನ್ನು ಕಾಣಬಹುದು. ಇಂತಹ ಚಿತ್ರಗಳಲ್ಲಿ ಮಾತಿನ ಬಳಕೆಯಿಂದ ಚಿತ್ರಕಥಾ ಲೇಖಕ/ಸಂಭಾಷಣೆಕಾರ (ಚಿ. ಉದಯಶಂಕರ್) ಕಾಣುತ್ತಾರೆ. ಉಳಿದ ತಂತ್ರಜ್ಞರು ಹಿಂದೆಯೇ ಚರ್ಚಿಸಿದಂತೆ ಕೇವಲ ವೈಭವೀಕರಣದ ಸಾಧನಗಳಾಗಿ ಬಳಕೆಯಾಗುತ್ತಾರೆ. ಈ ರೀತಿಯ ಕಥಾ ನಿರೂಪಣೆ ಪುಟ್ಟಣ್ಣ ಕಣಗಾಲರ ಚಿತ್ರಗಳಲ್ಲೂ ಇತ್ತು. ಆದರೆ ಅಲ್ಲಿ ನಾಯಕಿ ಪ್ರಧಾನವಾಗುತ್ತಿದ್ದಳು. ನಂತರ ಆಕೆ ಎದುರಿಸುವ ಸಮಸ್ಯೆಗಳು, ಅದಕ್ಕವಳು ಕಂಡುಕೊಳ್ಳುವ ಉತ್ತರ, ಸಹಾಯ ಮಾಡುವ ಪೋಷಕ ಪಾತ್ರಗಳು, ಕೊನೆಯಲ್ಲಿ ಆಕೆಯ ತ್ಯಾಗ ಅಥವಾ ವಿಜಯ. ಈ ರೀತಿಯ ನಿರೂಪಣೆ ಪುಟ್ಟಣ್ಣನವರ ಚಿತ್ರಗಳಲ್ಲಿರುತ್ತಿತ್ತು. ಉದಾಹರಣೆಗೆ, 'ಉಪಾಸನೆ'ಯ ಅಂತ್ಯವನ್ನು, 'ಋಣಮುಕ್ತಳು' ಚಿತ್ರದ ಅಂತ್ಯವನ್ನು ಗಮನಿಸಬಹುದು. ಇಂತಹ ನಿರೂಪಣಾ ವಿಧಾನವನ್ನು ಅವರು ಕೊಂಚ ಬದಲಿಸಿಕೊಂಡದ್ದು 'ಎಡಕಲ್ಲು ಗುಡ್ಡದ ಮೇಲೆ' ಚಿತ್ರದಲ್ಲಿ. ಆದರೆ ಅಲ್ಲಿಯೂ ನಾಯಕಿಯ ತಂಗಿಯ ಪಾತ್ರವಾದ ಉಪನಾಯಕಿಯನ್ನು ವೈಭವೀಕರಿಸುತ್ತ, ಆದರ್ಶ ನಾರಿ ಎಲ್ಲರಿಗೂ ಮಾದರಿಯಾಗಿ ಉಳಿಯುತ್ತಾಳೆ ಎಂದು ಹೇಳಲು ನಿರ್ದೇಶಕರು ಪ್ರಯತ್ನಿಸಿದ್ದರು.

ಸರಿಸುಮಾರು ೮೦ರ ದಶಕದ ಉತ್ತರಾರ್ಧದವರೆಗೂ ಕನ್ನಡದ ಪ್ರಧಾನ ವಾಹಿನಿಯ ಚಿತ್ರಗಳು, ನಿರ್ದೇಶಕ-ತಂತ್ರಜ್ಞರು ಯಾರೇ ಇದ್ದರೂ, ಇದೇ ರೀತಿಯ ನಿರೂಪಣೆಯನ್ನು ಮಾಡುತ್ತಿದ್ದವು. ಈ ನಿರೂಪಣೆಯ ಪರಾಕಾಷ್ಠೆ ಬಂದುದು ಸಿದ್ದಲಿಂಗಯ್ಯನವರ ನಿರ್ದೇಶನದ, ಭಕ್ತವತ್ಸಲಂ ಅವರ ಸಂಕಲನವಿದ್ದ 'ಬಂಗಾರದ ಮನುಷ್ಯ' ಚಿತ್ರದಲ್ಲಿ. ಅಲ್ಲಿ ನಾಯಕನ ಪಾತ್ರ ಪರಿಚಯವಾಗುವುದೇ ಆತನ ಪಾದಗಳಿಂದ.

ಸ್ವಲ್ಪ ಭಿನ್ನ ನಿರೂಪಣಾ ಶೈಲಿ ಮತ್ತು ಕಥೆಯೊಡನೆ ಸಿನಿಮಾ ಎಂಬುದು ಕೇವಲ ವ್ಯಕ್ತಿ ಕೇಂದ್ರಿತವಾಗುವ ಬದಲು ಸಮಾಜವನ್ನು ಒಳಗೊಳ್ಳಬೇಕೆಂಬ ಆಶಯದಿಂದ ತಯಾರಾದದ್ದು ಗೊರೂರು ರಾಮಸ್ವಾಮಿ ಅಯ್ಯಂಗಾರರ ಕಥೆಯನ್ನಾಧರಿಸಿದ 'ಬೂತಯ್ಯನ ಮಗ ಅಯ್ಯು' ಚಿತ್ರ (ನಿರ್ದೇಶನ : ಸಿದ್ದಲಿಂಗಯ್ಯ, ಸಂಕಲನ :

(ಚಿತ್ರ ೧೪) ವೀಡಿಯೋ ಚಿತ್ರ ವಿಶಿಷ್ಟ ಶಬ್ದಜನಕ ಯಂತ್ರ ಹಾಗೂ ಅದರ ಮುದ್ರಕವನ್ನು ಒಳಗೊಂಡ ಈ ಆಧುನಿಕ ಯಂತ್ರಸಮೂಹ ನಾಳಿನ ಸಂಕಲನಕಾರರ ಸಾಧನವಾಗಲಿದೆ.

ಭಕ್ತವತ್ಸಲಂ). ಚಿತ್ರದ ಕಥನವೇ ವ್ಯಕ್ತಿ ಕೇಂದ್ರಿತವಾಗಿರಲಿಲ್ಲವಾದ್ದರಿಂದ ಇಲ್ಲಿ ಎಲ್ಲ ಪಾತ್ರಗಳೂ ಸಶಕ್ತವಾಗಿ ರೂಪಿಸಲ್ಪಟ್ಟಿದ್ದವು. ಸಂಕಲನಕಾರ/ನಿರ್ದೇಶಕ/ಛಾಯಾಗ್ರಾಹಕರಿಗೆ ಸಿದ್ಧ ಸೂತ್ರದಿಂದ ದೂರವಿದ್ದ ಇಂತಹದೊಂದು ಚಿತ್ರವನ್ನು ಸಂಪೂರ್ಣ ಚೇತೋಹಾರಿಯಾಗಿ ನಿರೂಪಿಸುವುದು ಸಾಧ್ಯವಾಯಿತು. ಚಿತ್ರದ ಪರಾಕಾಷ್ಠೆಯಲ್ಲಿ ಬರುವ ಪ್ರವಾಹದ ದೃಶ್ಯ, ಅಲ್ಲಿ ಗ್ರಾಮ್ಯ ಪಾತ್ರಗಳಲ್ಲಿ ನೈಸರ್ಗಿಕ ಪ್ರಕೋಪದ ಜೊತೆಗೆ ಬರುವ ಸಹಾಯ ಮಾಡಬೇಕೆಂಬ ಮನೋಧರ್ಮ ಇವೆಲ್ಲವೂ ಮೇಳೆಯ್ದು ಬಂದ ಇಡೀ ದೃಶ್ಯ ಕನ್ನಡ ಪ್ರೇಕ್ಷಕನಿಗೆ ಹೊಸದೊಂದು ವಿವರವನ್ನು ಕಟ್ಟಿಕೊಟ್ಟಿತು. ಈ ಹಿಂದೆ ಬಂದಿದ್ದ 'ಚಂದವಳ್ಳಿಯ ತೋಟ'ವೂ ಸಹ ಇಂತಹುದೇ ವ್ಯಕ್ತಿ ಪ್ರಧಾನವಾಗದ ಕಥೆ ಎಂಬುದನ್ನು ನೆನೆಯುತ್ತಾ ಎರಡೂ ಚಿತ್ರಗಳ ಯಶಸ್ಸನ್ನು ಸೂತ್ರೀಕರಿಸುವುದು ಸಾಧ್ಯ. ಒಟ್ಟಾರೆಯಾಗಿ 'ಬೂತಯ್ಯನ ಮಗ ಅಯ್ಯು' ಚಿತ್ರದಿಂದ ಚಿತ್ರಕಥಾ ಲೇಖಕ/ಸಂಭಾಷಣೆಕಾರ/ನಿರ್ದೇಶಕ/ಛಾಯಾಗ್ರಾಹಕ/ಸಂಕಲನಕಾರ/ಸಂಗೀತಗಾರ ಹೀಗೆ ಚಿತ್ರವೊಂದರ ಪ್ರಧಾನ ತಂತ್ರಜ್ಞರೆಲ್ಲರೂ ಸ್ವತಂತ್ರವಾಗಿ ಕೆಲಸ ಮಾಡುವುದು ಸಾಧ್ಯವಾಯಿತು. ಇದು ಪರಂಪರೆಯಾಗುವುದು ಸಾಧ್ಯವಾಗಲಿಲ್ಲ. ನಮ್ಮ ಚಿತ್ರರಂಗ ಮತ್ತೆ ನಾಯಕ ಪ್ರಧಾನ ಚಿತ್ರಗಳಿಗೆ ಮರಳಿತ್ತು. ಬದಲಾವಣೆಯ ಗಾಳಿಯೆಂಬುದು ಮತ್ತೆ ಕಾಣಿಸಿಕೊಂಡದ್ದು ಎಸ್.ವಿ.ರಾಜೇಂದ್ರಸಿಂಗ್ ಬಾಬು ನಿರ್ದೇಶನದ 'ಅಂತ' ಚಿತ್ರದಲ್ಲಿ. ಇಲ್ಲಿ ನಾಯಕನ ಪಾತ್ರವನ್ನು ಪ್ರತಿನಾಯಕನಂತೆ ಪೋಷಿಸಿದ್ದು ವಿಶೇಷ. ಸಂಕಲನ ತಂತ್ರದ ದೃಷ್ಟಿಯಿಂದ ನಾಯಕನನ್ನು ಟಾರ್ಚರ್ ಮಾಡುವ ದೃಶ್ಯ, ನಾಯಕಿ ಬಸುರಿ ಎಂದು ತಿಳಿದೂ ಖಳರು ಒದೆಯುವುದು ಇತ್ಯಾದಿ ದೃಶ್ಯಗಳು ಕನ್ನಡಕ್ಕೆ ವಿಶಿಷ್ಟ ಎನಿಸಿಕೊಂಡವು. ಇವು ಈಗಾಗಲೇ ಚರ್ಚಿಸಿರುವ ಸಂಕಲನ ತಂತ್ರಕ್ಕಿಂತ ತೀರಾ ಭಿನ್ನವಾದುದೇನಲ್ಲ. ಆದರೆ ಕಥಾವಸ್ತು ಮತ್ತು ಕಥಾ ನಿರೂಪಣೆ ಹೊಸದೆನಿಸಿತ್ತು. ರಾಜಕೀಯ ನಾಯಕರನ್ನು ಅದೇ ಮೊದಲ ಬಾರಿಗೆ ತೆರೆಯ ಮೇಲೆ 'ಭ್ರಷ್ಟ' ಎಂದು ತೋರಿಸಲಾಗಿತ್ತು. ಇದೇ ಒಂದು ಸೂತ್ರವಾಗಿ ನಂತರ ಅನೇಕ ಚಿತ್ರಗಳಲ್ಲಿ ಭ್ರಷ್ಟ ರಾಜಕಾರಣಿಗಳು ಖಳನಾಯಕರಾಗಿ ಕಾಣಿಸಿಕೊಳ್ಳತೊಡಗಿದರು ಎಂಬುದು ಚರಿತ್ರೆಯ ದೃಷ್ಟಿಯಿಂದ ವಿಶೇಷ. ಅಂದರೆ ಪ್ರತಿ ಜನಪ್ರಿಯ ಚಿತ್ರವನ್ನು ಉದ್ಯಮ ಸೂತ್ರೀಕರಿಸಲು ಪ್ರಯತ್ನಿಸಿ, ಆ ಚಿತ್ರದಲ್ಲಿ ವಿಶೇಷ ಎನಿಸಿದ್ದನ್ನು ಸವಕಲು ಎನಿಸುವಷ್ಟು ಬಳಸುವುದು ಅಭ್ಯಾಸ ಎಂಬ ಮತ್ತೊಂದು ಸೂತ್ರಕ್ಕೆ ನಾವು ಬರಬಹುದು. ಇಂತಹ ಸೂತ್ರೀಕರಣ ನಮ್ಮ ಸಿನಿಮಾಗಳ ತಾಂತ್ರಿಕ ಬೆಳವಣಿಗೆಯ ಮೇಲೆ ನೇರ ಪರಿಣಾಮವನ್ನೇ ಬೀರಿದೆ.

ಮತ್ತೆ ಕನ್ನಡದ ನಾಯಕ ಪ್ರಧಾನ ಚಿತ್ರಗಳಲ್ಲಿ ಬದಲಾವಣೆ ಬಂದದ್ದು ೮೦ರ ದಶಕದ ಅಂತ್ಯಭಾಗದಲ್ಲಿ ಬಂದ 'ಪ್ರೇಮಲೋಕ' ಚಿತ್ರದಿಂದ. ವಿ.ರವಿಚಂದ್ರನ್ ನಿರ್ದೇಶಿಸಿ, ಕೆ.ಬಾಲು ಸಂಕಲಿಸಿದ್ದ ಈ ಚಿತ್ರದಲ್ಲಿ ಅಧಿಕ ಸಂಖ್ಯೆಯಲ್ಲಿ ಹಾಡುಗಳಿದ್ದವು. ದೃಶ್ಯವಾಗಬಲ್ಲ ಸನ್ನಿವೇಶವನ್ನು ಸಂಗೀತಮಯವಾಗಿಸಲಾಗಿತ್ತು. ಉದಾಹರಣೆಗೆ, ೧) ಕಾಲೇಜಿಗೆ ಹೊಸದಾಗಿ ಸೇರ್ಪಡೆಯಾಗುವ ನಾಯಕಿ ಇರುವ ಹಾಡಿನ ದೃಶ್ಯ. ೨) ನಾಯಕಿ ಮಾರ್ಕೆಟ್‌ಗೆ ಹೋದಾಗ ಅವಳ ಸೌಂದರ್ಯವನ್ನು ಮೆಚ್ಚಿ ಕುಣಿಯುವ ಬೀದಿ ವ್ಯಾಪಾರಿಗಾರರಿರುವ ಹಾಡಿನ ದೃಶ್ಯ. ೩) ನಾಯಕಿಗೆ ನಾಯಕನ ಮೇಲೆ ಉತ್ಕಟ ಪ್ರೇಮ ಹುಟ್ಟಿದಾಗ ಅವಳು ಹಗಲು ಎದ್ದಾಗಿನಿಂದ ಮಾಡುವ ಎಲ್ಲ ನಿತ್ಯ ಕರ್ಮಗಳಲ್ಲಿ ಕಾಣಿಸಿಕೊಳ್ಳುವ ನಾಯಕನ ಬಿಂಬವಿರುವ ಹಾಡಿನ ದೃಶ್ಯ. ಹೀಗೆ .... ಈ ರೀತಿಯ ಸಂಗೀತದ ಬಳಕೆಯಿಂದಾಗಿ ಸಹಜವಾಗಿಯೇ ನಿರೂಪಣೆಯಲ್ಲಿ ಲಯ ಬಂದಿತ್ತು. ಅಲ್ಲದೆ ಲಯಕ್ಕೆ ತಕ್ಕಂತಹ ಅಭಿನಯ, ಚಿತ್ರಿಕೆ, ಭೇದ, ಕ್ಯಾಮರಾ ಚಲನೆ ಇವೆಲ್ಲವೂ ಕೂಡಿಕೊಂಡು ಚಿತ್ರಕ್ಕೊಂದು ತಾಜಾತನ ಬಂದಿತ್ತು. ಪ್ರೇಕ್ಷಕ ತಕ್ಷಣ ಈ ಹೊಸತನ್ನು ಸ್ವೀಕರಿಸಲಿಲ್ಲವಾದರೂ ನಿಧಾನವಾಗಿ ಹೊಸ ತಲೆಮಾರಿನ ಹುಡುಗರು ಹೊಸ ರೀತಿಯ ಚಿತ್ರವನ್ನು, ಹೊಸ ನಾಯಕನನ್ನು ಒಪ್ಪಿಕೊಂಡು ತಾರಾಪಟ್ಟ ನೀಡಿದರು. ಈ ಚಿತ್ರದಲ್ಲಿನ ಕೆಲವು ಸಂಕಲನ ವಿಶೇಷಗಳನ್ನು ಈ ಹಿಂದೆಯೇ ಚರ್ಚಿಸಿದ್ದೇವೆ.

'ಪ್ರೇಮಲೋಕ'ದ ಜನಪ್ರಿಯತೆ ಕನ್ನಡ ಚಿತ್ರಗಳಲ್ಲಿ ಸಂಗೀತದ ಬಳಕೆಯನ್ನು ಬದಲಿಸಿತು. ಅಲ್ಲಿಂದಾಚೆಗೆ ಅನೇಕ ಸಂಗೀತಮಯ ಚಿತ್ರಗಳು ಕಾಣಿಸಿಕೊಂಡವು. ಇದರಿಂದಾಗಿ ಸಂಕಲನಕಾರ ಚಿತ್ರಕ್ಕೆ ಲಯ ಸಂವಾದಿ ವೇಗವನ್ನು ನೀಡುವುದು ಸಾಧ್ಯವಾಯಿತು. ಅವರೆಗೆ ರಿದಮಿಕ್ ಮಾಂಟಾಜ್‌ನ ಗುಣಗಳು ಕೇವಲ ಜಾಹಿರಾತು ಚಿತ್ರಗಳಲ್ಲಿ ಮಾತ್ರ ಬಳಕೆಯಾಗುತ್ತ ಇತ್ತು. ಈ ಪ್ರಯೋಗದ ಮೂಲಕ ಅದು ಜನಪ್ರಿಯ ಸಿನಿಮಾಕ್ಕೆ ಹಾಡುಗಳ ಮೂಲಕವೂ ಹರಿದು ಬಂದಿತು. ಇದು ಸರಕು ಸಂಸ್ಕೃತಿಯು ತಂದಿತ್ತ ಬದಲಾವಣೆ ಎಂಬ ಅಭಿಪ್ರಾಯವೂ ಇದೆ.

ಮತ್ತೆ ನಾಯಕ ಪ್ರಧಾನ ಚಿತ್ರಗಳಲ್ಲಿ ಬದಲಾವಣೆಗಳು ಬಂದದ್ದು ತೆಲುಗಿನ 'ಶಿವ' ಚಿತ್ರದ ಪ್ರಭಾವದಿಂದ. ಕನ್ನಡದಲ್ಲಿಯೂ ಗೂಂಡಾಗಳನ್ನು ಕುರಿತ ಅನೇಕ ಚಿತ್ರಗಳು ಬರತೊಡಗಿದವು. ಅವುಗಳಲ್ಲಿ ಕೊಂಚ ಭಿನ್ನ ನಿರೂಪಣೆ ಇದ್ದ ಉಪೇಂದ್ರ ನಿರ್ದೇಶನದ 'ಓಂ' ಚಿತ್ರ ಎಲ್ಲಾ ಗೂಂಡಾ ಚಿತ್ರಗಳಿಗಿಂತ ಹೆಚ್ಚು ಜನಪ್ರಿಯವಾಯಿತು. ಇಂಥಾ ಚಿತ್ರಗಳಲ್ಲಿ ಸಾಮಾನ್ಯವಾಗಿ ಸಾಹಸ ನಿರ್ದೇಶಕನ ಕೆಲಸ ಹೆಚ್ಚು. ಹೀಗಾಗಿ ಅವನ ಸಂಯೋಜನೆಯಲ್ಲಿ ಹಿಂದೆ ಚರ್ಚಿಸಿದ ಪುಡೋವ್ಕಿನ್ ಹೇಳಿದ ಬೌದ್ಧಿಕ ಸಂಕಲನದ ಗುಣ ಇರುತ್ತಿತ್ತು. ಆದರೆ ಇದಕ್ಕೆ ಬದಲಾಗಿ 'ಓಂ' ಚಿತ್ರದಲ್ಲಿನ ಸಾಹಸ ದೃಶ್ಯಗಳು ಸಂಯೋಜಿತ ಸಾಹಸ ಎನಿಸದಂತೆ, ರಸ್ತೆ ಬದಿಯ ಹೊಡೆದಾಟ ಎಂಬ ನೈಜತೆಯೊಂದಿಗೆ ಚಿತ್ರಿತವಾಗಿದ್ದವು. ಹೀಗಾಗಿ ಸಂಕಲನಕಾರನಿಗೆ ಹೊಸ ಸಂಕಲನಕ್ಕೆ ಅವಕಾಶ ದೊರೆಯಿತು. ಆತ ನೈಕಟ್ಯವನ್ನು ಮಾಡಲು ಚಿತ್ರಿಕೆಗಳಲ್ಲಿರುವ ಸಾಕ್ಷ್ಯ ಚಿತ್ರದ ಗುಣಗಳು ಸಹಾಯ ಮಾಡಿದವು. ಅಂತೆಯೇ ಧ್ವನಿಗ್ರಾಹಕನಿಗೂ, ಧ್ವನಿ ಸಂಕಲನಕಾರನಿಗೂ ಸೂತ್ರದಿಂದ ದೂರ ಸರಿದು ನೈಜ ವಾತಾವರಣ ಮೂಡಿಸುವ ಅವಕಾಶ ದೊರೆಯಿತು. ಈ ಎಲ್ಲ ಹೊಸತುಗಳು ಚಿತ್ರವನ್ನು ಜನಪ್ರಿಯ ಮಾಡಿದವು.

ಈ ಹಂತಕ್ಕೂ ಮುಂಚೆ ಇಂತಹ ವಿವರಗಳನ್ನು ಇಟ್ಟುಕೊಂಡು, ಆಧುನಿಕ ವೇಗಕಥನ ಸೂತ್ರವನ್ನು ಬಳಸಿದ್ದ ಶಿವಮಣಿ ಮತ್ತು ಓಂ ಪ್ರಕಾಶ್ ಅವರ ಚಿತ್ರಗಳನ್ನು ಸಹ ಇಲ್ಲಿ ನೆನೆಯಬೇಕು. ಇವರಿಬ್ಬರೂ ನಿರ್ದೇಶಕರು ನಾಯಕ ಪ್ರಧಾನ ಚಿತ್ರಗಳಿಂದ ದೂರ ಸರಿದು ಕಥಾವಸ್ತುವಿಗೆ ಪ್ರಾಧಾನ್ಯ ನೀಡಿದ್ದರು. ಆದರೆ ಶಿವಮಣಿಯವರ ಚಿತ್ರಗಳ ಮೊದಲರ್ಧದ ನಿರೂಪಣಾ/ಸಂಕಲನ ಕ್ರಮ ಎರಡನೆಯ ಅರ್ಧದಲ್ಲಿ ಗೊಂದಲವನ್ನು ಎಬ್ಬಿಸಿ ಅವಸರದ ಮುಕ್ತಾಯದ ಕಡೆಗೆ ಧಾವಿಸಿದರೆ ಓಂ ಪ್ರಕಾಶ್ ಅವರ ಚಿತ್ರಗಳು ಅಸಹಜ ಅಂತ್ಯದಿಂದಾಗಿ ಸಾಮಾನ್ಯ ಸ್ಥಿತಿಯಿಂದ ಮೇಲೇಳಲಿಲ್ಲ. ಆದರೆ ಈ ಮೂವರು ಹೊಸ ನಿರ್ದೇಶಕರಿಂದ ಸಂಕಲನ ಮತ್ತು ಛಾಯಾಗ್ರಹಣ ನಮ್ಮ ಚಿತ್ರಗಳಲ್ಲಿ ಸಾಕಷ್ಟು ಪ್ರಾಮುಖ್ಯತೆಯನ್ನು ಪಡೆಯಿತು.

ಇದೇ ಹಂತದಲ್ಲಿ ನಾಯಕಪ್ರಧಾನ ಚಿತ್ರಗಳನ್ನು ಕೊಂಚ ಭಿನ್ನವಾಗಿ ಪ್ರಣಯವೇ ಪ್ರಧಾನವಾಗಿ ನಿರೂಪಿಸಲು ಯತ್ನಿಸಿದ ಮತ್ತೊಬ್ಬ ನಿರ್ದೇಶಕರು ಎಸ್.ನಾರಾಯಣ್. ಇವರ ಚಿತ್ರಗಳಲ್ಲಿನ ಚಿತ್ರಿಕೆಯ ಅವಧಿ ಕಿರಿದಾಗಿರುತ್ತಿತ್ತು ಮತ್ತು ಚಿತ್ರಿಕೆಯ ಸಂಯೋಜನೆಯಲ್ಲಿ ಪ್ರೇಮ ಕಥೆಗೆ ಬೇಕಾದ ರಮ್ಯತೆಯನ್ನಾತ ಯೋಜಿಸುತ್ತಿದ್ದರು. ಹೀಗಾಗಿ ಸಂಕಲನಕಾರನಿಗೆ ಕಥೆ ಹೆಣೆಯುವುದಲ್ಲದೆ ಕಥೆಯ ಭಾವವನ್ನು ದಾಖಲಿಸುವ ವಿವರಗಳನ್ನುಳ್ಳ ಅನೇಕ ಚಿತ್ರಿಕೆಗಳು ದೊರೆಯುತ್ತಿದ್ದವು (ಉದಾ : 'ಚೈತ್ರದ ಪ್ರೇಮಾಂಜಲಿ', 'ಮೇಘಮಾಲೆ'). ಇದರಿಂದಾಗಿ ಸಂಕಲನಕಾರನ ಕೆಲಸ ಪ್ರೇಕ್ಷಕನ ಗಮನ ಸೆಳೆಯುವಂತಾಯಿತು.

ಒಟ್ಟಾರೆಯಾಗಿ ಎಂಬತ್ತರ ದಶಕದ ಉತ್ತರಾರ್ಧ ಮತ್ತು ೯೦ರ ದಶಕದ ಕನ್ನಡ ಚಿತ್ರಗಳು ತಂತ್ರದ ದೃಷ್ಟಿಯಿಂದ ಸಾಕಷ್ಟು ಮುಂದುವರೆದವು. ಕಂಪ್ಯೂಟರ್ ಗ್ರಾಫಿಕ್‌ನ

ಬಳಕೆಯನ್ನು ಕೂಡ ಅನೇಕ ಚಿತ್ರಗಳಲ್ಲಿ ಕಾಣುವಂತಾಯಿತು. ಆದರೆ ನಾಯಕ ಪ್ರಧಾನ ಕಥಾ ಚಿತ್ರಗಳಿಂದ ಪ್ರಧಾನವಾಹಿನಿಯ ಚಿತ್ರಗಳು ದೂರ ಸರಿಯಲಿಲ್ಲ. ನಿರೂಪಣೆಯ ವಿಧಾನದಲ್ಲಿ/ಸಂಕಲನದಲ್ಲಿ ವೇಗವನ್ನು ತರುವ ಪ್ರಯತ್ನ, ಚಿತ್ರದ ಶ್ರೀಮಂತಿಕೆಯನ್ನು ತೋರಲು ಅನಗತ್ಯವೆನಿಸಿದರೂ ಚಲಿಸುವ ಕ್ಯಾಮರಾಗಳು ಇದ್ದವು. ಈ ನಿಟ್ಟಿನಲ್ಲಿ ಚಲಿಸುವ ಕ್ಯಾಮರಾ ಅನೇಕ ಬಾರಿ ನೋಡುಗನ ಕಣ್ಣಿನ ಹಿತವನ್ನು ಮೀರುತ್ತಿತ್ತು. ಇದರೊಡನೆ ತೆಲುಗು ಚಿತ್ರಗಳಲ್ಲಿ ಜನಪ್ರಿಯವಾಗಿದ್ದ ಅತಿ ಮಾತು ಕನ್ನಡ ಚಿತ್ರಗಳಲ್ಲೂ ಕಾಣಿಸಿಕೊಂಡು ಪಾತ್ರದ ಔಚಿತ್ಯವನ್ನು ಮೀರಿ ಎಲ್ಲಾ ಪಾತ್ರಗಳೂ ಭಾಷಣ ಹೊಡೆಯುವ ಸ್ಥಿತಿ ತಲುಪಿತ್ತು. ಇದಕ್ಕೆ ಉದಾಹರಣೆಯಾಗಿ ಕೆ.ವಿ.ರಾಜು ನಿರ್ದೇಶನದ ಅನೇಕ ಚಿತ್ರಗಳನ್ನು ನೋಡಬಹುದು. ಕೆ.ವಿ.ರಾಜು ನಿರ್ದೇಶನದ 'ಹುಲಿಯಾ' (ಸಂಕಲನ : ಶ್ಯಾಮ್) ಆ ನಿಟ್ಟಿನಲ್ಲಿ ವಿಭಿನ್ನ ಪ್ರಯತ್ನ. ಇಲ್ಲಿ ಭಾಷೆಯನ್ನು ಭಿನ್ನವಾಗಿ ದುಡಿಸಿಕೊಳ್ಳಲಾಗಿತ್ತು. ಆದರೆ ನಾಯಕಪ್ರಧಾನ ಚಿತ್ರದ ನಿರೂಪಣಾ ತಂತ್ರ ಮುಂದುವರೆದಿತ್ತು. ಇಂತಹ ಚಿತ್ರಗಳಲ್ಲಿ ಇರುವಂತಹ ನಾಯಕ ಗೆಲ್ಲುವ ಅಂತ್ಯದ ಬದಲಾಗಿ ಪರಾಕಾಷ್ಠೆಯ ದೃಶ್ಯದಲ್ಲಿ ಸ್ವಜತೆಯನ್ನು ತರಲು ಹೋದದ್ದರಿಂದ ಚಿತ್ರ ಜನಮೆಚ್ಚುಗೆ ಪಡೆಯಲಿಲ್ಲ. ಆದರೂ ಈಚೆಗೆ ಬಂದ ಚಿತ್ರಗಳಲ್ಲಿ ಸಂಕಲನ ದೃಷ್ಟಿಯಿಂದ ಗಮನಾರ್ಹ ಎನಿಸಿದ ಚಿತ್ರವಿದು. ಕೆ.ವಿ.ರಾಜು ಸಂಭಾಷಣೆ ಹಾಗೂ ಸಂಕಲನಕಾರರೂ ಆಗಿರುವುದರಿಂದ ಅವರ ಚಿತ್ರಕಥಾ ರಚನೆ ಸಂಕಲನವನ್ನು ಗಮನದಲ್ಲಿಟ್ಟುಕೊಂಡೇ ಸಿದ್ಧವಾಗುತ್ತದೆ ಎಂಬುದನ್ನೂ ಸಹ ನಾವು ಗಮನಿಸಬಹುದು.

ಈ ಸ್ಥಿತಿಯಿಂದ ಸಂಪೂರ್ಣ ಭಿನ್ನವಾದ ಮತ್ತು ಈವರೆಗೆ ಬಳಸಿದ್ದ ನೇರ ನಿರೂಪಣಾ ತಂತ್ರವನ್ನು ತೊರೆದು ನೋಡುಗನಿಗೆ ಗೊಂದಲವನ್ನು ಉಂಟುಮಾಡಿ ಅವನನ್ನು ಕೇವಲ ತೆರೆಯತ್ತ ಸೆಳೆಯುವ ಪ್ರಯತ್ನವಿದ್ದದ್ದು ಉಪೇಂದ್ರ ನಿರ್ದೇಶಿಸಿದ 'ಎ' ಮತ್ತು 'ಉಪೇಂದ್ರ' ಚಿತ್ರಗಳಲ್ಲಿ. ಚಿತ್ರಗಳಲ್ಲಿ ಸಾಮಾನ್ಯವಾಗಿ ಗೆರೆ ಕೊರೆದಂತೆ ಬರುವ ಫ್ಲಾಶ್‌ಬ್ಯಾಕ್ ನಿರೂಪಣೆಯನ್ನು ಬಿಟ್ಟು, ಯಾವ ಹಂತದಲ್ಲಿ ಫ್ಲಾಶ್‌ಬ್ಯಾಕ್ ಆರಂಭ ಮತ್ತು ಮುಕ್ತಾಯವಾಗುತ್ತದೆ ಎಂಬುದನ್ನು ಸ್ಪಷ್ಟಪಡಿಸದೆ ಈ ಚಿತ್ರಗಳಲ್ಲಿ ನಿರೂಪಿಸಲಾಗಿತ್ತು. ಆದರೆ ದೃಶ್ಯರಚನೆ ಮತ್ತು ನಿರ್ವಹಣೆ ತೀರಾ ರೂಕ್ಷವಾಗಿದ್ದುದರಿಂದ ಈ ಚಿತ್ರಗಳನ್ನು ಕೇವಲ ಜನಮೆಚ್ಚುಗೆ ಪಡೆದ ನಾಯಕ ಪ್ರಧಾನ ಚಿತ್ರ ಎಂದು ಗುರುತಿಸಬಹುದು. ಚಿತ್ರ ತಯಾರಕರು, ತಂತ್ರಜ್ಞರ ಮಟ್ಟಿಗೂ ಇವು ತಂತ್ರದ ಬೆಳವಣಿಗೆ ಎನ್ನಿಸದೆ ತಂತ್ರದ ಗೊಂದಲಕರ ಉಪಯೋಗವಾಗಿ ಮಾತ್ರ ಉಳಿಯಿತು. ಇವುಗಳಿಗೆ ಪ್ರಯೋಗವೆಂಬ ಗೌರವ ಕೊಡುವುದಕ್ಕೂ ತಂತ್ರಜ್ಞರು ಹಿಂಜರಿದರು ಎಂಬುದು ಗಮನಿಸಬೇಕಾದ ಅಂಶ.

ಈ ಹಂತದಲ್ಲಿ ಹಿಂದಿರುಗಿ ನೋಡಿದಾಗ ನಮ್ಮಲ್ಲಿ ಬಂದು ಹೋದ ಚಿತ್ರಗಳ ಸಂಖ್ಯೆ ವಿಪುಲ. ಆದರೆ ಅವುಗಳಲ್ಲಿ ಹೆಗ್ಗುರುತು ಮೂಡಿಸಿದ ಚಿತ್ರಗಳ ಸಂಖ್ಯೆ ಕಡಿಮೆಯೆ. ಅಪವಾದವೆಂಬಂತೆ ಅನೇಕ ನಿರ್ದೇಶಕರು ಹೊಸ ಪ್ರಯತ್ನಗಳನ್ನು ಮಾಡಿದರು. ಆ ಪಟ್ಟಿಯಲ್ಲಿ ಗೀತಪ್ರಿಯ, ಕೆ.ವಿ.ಜಯರಾಂ, ಪಿ.ಎಚ್.ವಿಶ್ವನಾಥ್ ಮುಂತಾದ ಅನೇಕರು ಬರುತ್ತಾರೆ. ಆ ನಿರ್ದೇಶಕರಿಂದಾಗಿ ಆಯಾ ಚಿತ್ರಗಳ ಸಂಕಲನಕಾರರು ಒಮ್ಮೊಮ್ಮೆ ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದಿದೆ. ಆದರೆ ಈ ಪ್ರಯೋಗಗಳನ್ನು ಪ್ರಧಾನವಾಹಿನಿ ತನ್ನ ತೆಕ್ಕೆಗೆ ತೆಗೆದುಕೊಳ್ಳಲಿಲ್ಲ. ಆದರಿಂದಾಗಿ ಆ ನಿರ್ದೇಶಕರು ರಾಜಿ ಸೂತ್ರಕ್ಕಿಳಿಯುವುದು ಅನಿವಾರ್ಯವಾಯಿತು. ಹೀಗಾಗಿ ಅವರ ಚಿತ್ರಗಳ ಸಂಕಲನಕಾರರು ಮತ್ತೆ ಮೊದಲಿನ ಸ್ಥಿತಿಗೆ ಮರಳಬೇಕಾಯಿತು.

ಇವು ಪ್ರಧಾನವಾಹಿನಿಯ ಜೊತೆ ಜೊತೆಗೆ ಸಾಗಿದ ತಂತ್ರಜ್ಞರುಗಳ ಪ್ರಯತ್ನವಾದರೆ ಜನಪ್ರಿಯ ಸಿನಿಮಾಗಳ ಧಾಟಿಯಿಂದ ದೂರ ಉಳಿದು ವಿಶಿಷ್ಟ ಎನಿಸುವ ಪ್ರಯೋಗಗಳನ್ನು ಮಾಡಿದ ಕೆಲವರಿದ್ದಾರೆ. ಅವರಲ್ಲಿ ಕಾಶೀನಾಥ್ ಪ್ರಮುಖರು. ತಮ್ಮ ಚಿತ್ರಗಳಿಗೆ ತಾವೇ ನಿರ್ಮಾಪಕರೂ ಆಗಿ ಬಜೆಟ್ಟಿನ ಮಿತಿಗಳೊಡನೆ ಚಿತ್ರಕಥೆಯನ್ನು ರಚಿಸಿಕೊಂಡು ಆತ ತಮ್ಮ ಕಥೆಯನ್ನು ನಿರೂಪಿಸುತ್ತಿದ್ದರು. ಈ ಸಾಲಿನಲ್ಲಿ ಬಂದ 'ಅಪರಿಚಿತ' ಪತ್ತೇದಾರಿ ಧಾಟಿಯದ್ದಾದರೆ, 'ಅನುಭವ', 'ಅನಂತನ ಅವಾಂತರ', 'ಅಜಗಜಾಂತರ' ಚಿತ್ರಗಳು ಮಧ್ಯಮ ವರ್ಗದ ಬದುಕನ್ನು ಲೇವಡಿ ಮಾಡುತ್ತಲೇ ಅದರಲ್ಲಿನ ಹಾಸ್ಯವನ್ನು ದುಡಿಸಿಕೊಂಡವು ಮತ್ತು ಭಾರತೀಯ ಮನಸ್ಸುಗಳು ಕಾಮವನ್ನು ಮುಚ್ಚಿಟ್ಟುಕೊಳ್ಳುವ ಪ್ರವೃತ್ತಿಯಿಂದಾಗುವ ಅನಾಹುತವನ್ನು ಹೇಳ ಹೊರಟವು. ಈ ಕಥೆಗಳು ತಂದುಕೊಟ್ಟ ಹೊಸತನದೊಂದಿಗೆ, ಅನಗತ್ಯವೆನಿಸುವ ಯಾವ ದೃಶ್ಯಗಳನ್ನೂ ಬಳಸದಂತಹ ಅಚ್ಚುಕಟ್ಟಾದ ಚಿತ್ರಕಥೆಯಿಂದಾಗಿ ಇವು ಉತ್ತಮವಾಗಿ ಸಂಕಲಿತವಾದ ಚಿತ್ರಗಳಾದವು (ಸಂಕಲನ : ಸುಬ್ರಹ್ಮಣ್ಯ). ಇವುಗಳಲ್ಲಿ 'ಅಪರಿಚಿತ', 'ಅನುಭವ'ಗಳಲ್ಲಿ ಛಾಯಾಗ್ರಹಣ ಸಹ ನಿರೂಪಣೆಗೆ ಸಹಾಯ ಮಾಡಿದವು ಎಂಬುದನ್ನು ಗುರುತಿಸಬೇಕು. ಒಟ್ಟಾರೆಯಾಗಿ ಕಾಶೀನಾಥ್ ಚಿತ್ರದಲ್ಲಿನ ಸಂಕಲನವನ್ನು ತಂತ್ರದ ಬೆಳವಣಿಗೆ ಎಂದು ಗುರುತಿಸಲಾಗದಿದ್ದರೂ ತಂತ್ರದ ಸರಿಯಾದ ಬಳಕೆ ಎಂದು ಹೇಳಬಹುದು. ಅವರ ಚಿತ್ರಗಳಲ್ಲಿ ಟೈಮಿಂಗ್ ಮತ್ತು ಪೇಸಿಂಗ್ ತುಂಬಾ ಸರಿಯಾಗಿರುತ್ತಿತ್ತು. ಹೀಗಾಗಿ ಈ ಎಲ್ಲ ಚಿತ್ರಗಳೂ ಜನಮೆಚ್ಚುಗೆ ಪಡೆದವು. ಈ ಮೆಚ್ಚುಗೆಯನ್ನು ಗಮನಿಸಿದ ಚಿತ್ರೋದ್ಯಮ ಕಾಶೀನಾಥರಿಗೆ ತಾರಾಮೌಲ್ಯವನ್ನು ನೀಡಿ ಅವರನ್ನು ಸೂತ್ರಬದ್ಧ ನಾಯಕ ಪ್ರಧಾನ ಚಿತ್ರಗಳಿಗೆ ಬಳಸಿದ್ದು ಒಬ್ಬ ಕಲಾವಿದನ ಬೆಳವಣಿಗೆಯಲ್ಲಾದ ದುರಂತ ಎಂದೆನ್ನಬಹುದು.

ಕನ್ನಡದ ಹೊಸಅಲೆಯ ಚಿತ್ರಗಳು

ಪ್ರಧಾನವಾಹಿನಿಯ ಚಿತ್ರಗಳಿಂದ ಸಿನಿಮಾ ಎಂಬುದು ಕಲೆಯಾಗದೆ ಕೇವಲ ಮನರಂಜನಾ ಮಾಧ್ಯಮವಾದಾಗ ಆ ಕಲೆಗಾಗಿ ಕುಸುರಿ ಕೆಲಸ ಮಾಡುವವರು ಕಲೆಯ ಜೀವಂತಿಕೆಯನ್ನು ಉಳಿಸುವ ಯತ್ನವಾಗಿ ಮಾಡಿದ ಚಿತ್ರ ಚಳವಳಿ 'ಹೊಸಅಲೆ'. ಇದು ಕನ್ನಡಕ್ಕೆ ಮಾತ್ರ ಸೀಮಿತವಾದುದಲ್ಲ. ಅಮೆರಿಕನ್ ಸಿನಿಮಾಗಳು ತಮ್ಮ ಬಂಡವಾಳ ಹೂಡುವ ಶಕ್ತಿಯಿಂದ ಯೂರೋಪ್ ಖಂಡವನ್ನು ಆವರಿಸಿಕೊಳ್ಳ ತೊಡಗಿದಾಗ ಫ್ರಾನ್ಸಿನಲ್ಲಿ, ಜರ್ಮನಿಯಲ್ಲಿ, ಇಟಲಿಯಲ್ಲಿ, ಪೋಲೆಂಡಿನಲ್ಲಿ...... ಹೀಗೆ ಯೂರೋಪಿನಾದ್ಯಂತ ಅನೇಕ ಚಿತ್ರ ನಿರ್ದೇಶಕರು ಸಿನಿಮಾ ಕಲೆಯನ್ನು ಉಳಿಸುವಂತಹ ಹಾಗೂ ಸಿನಿಮಾ ಕೇವಲ ಮನರಂಜನೆಯಾಗದೆ ಪ್ರೇಕ್ಷಕನಿಗೆ ಹೊಸ ಅನುಭವ ನೀಡುವಂತಹ ಚಿತ್ರಗಳನ್ನು ಮಾಡತೊಡಗಿದರು. ಆ ಚಳವಳಿಗಳಿಗೆ ಕೆಹೆರ್ ಡು ಸಿನಿಮಾ, ಸಿನಿಮಾ ವೆರಿಟೆ, ಸಿನಿಮಾ ನೋವ.... ಹೀಗೆ ಅನೇಕ ಹೆಸರುಗಳು ಬಂದವು. ಇವುಗಳನ್ನು ಬೆಂಬಲಿಸುವಂತಹ ಮಾತನ್ನು ಸಿದ್ಧಾಂತಿಗಳಾದ ಆಂದ್ರೆ ಬಾಜಿನ್, ಬಾಲ್ ಜಾಕ್ ಮುಂತಾದವರು ವ್ಯಕ್ತಪಡಿಸಿದರು. ಇದರ ಪ್ರಭಾವ ಭಾರತೀಯ ಸಿನಿಮಾಗಳಲ್ಲಿ ಕಾಣಿಸಿಕೊಂಡದ್ದು ಸತ್ಯಜಿತ್ ರಾಯ್ ಅವರ ಮುಖಾಂತರ. ಆತ ನಿರ್ದೇಶಿಸಿದ ಪ್ರಥಮ ಚಿತ್ರ 'ಪಥೇರ್ ಪಾಂಚಾಲಿ' ಕೇವಲ ಭಾರತೀಯರನ್ನಲ್ಲದೆ ಭಾರತೀಯ ಸಿನಿಮಾಗಳನ್ನು ಅಂತರರಾಷ್ಟ್ರೀಯ ಮಟ್ಟಕ್ಕೆ ಒಯ್ದಿತ್ತು. ರಾಯ್ ಅವರ ಸಿನಿಮಾಗಳಿಂದ ನೇರವಾಗಿ ಪ್ರಭಾವಿತರಾಗದಿದ್ದರೂ ಯೂರೋಪಿನ ಹೊಸ ಅಲೆಯಿಂದ ಪ್ರಭಾವಿತರಾದ ಕನ್ನಡದ ಸಿನಿಮಾ ನಿರ್ದೇಶಕರು ಅಸಹಜ ವಸ್ತು ವಿನ್ಯಾಸವನ್ನು ತೊರೆದು ವಾಸ್ತವವನ್ನು ತೆರೆಗೆ ತರಲು ಪ್ರಯತ್ನಿಸಿದರು.

ಕನ್ನಡ ಸಿನಿಮಾದಲ್ಲಿ ಈ ನಿಟ್ಟಿನಲ್ಲಿ ಪ್ರಥಮ ಪ್ರಯತ್ನ ಮಾಡಿದವರು ಎನ್.ಲಕ್ಷ್ಮೀನಾರಾಯಣ್. ಇವರು ನಿರ್ದೇಶಿಸಿದ 'ನಾಂದಿ'. 'ಉಯ್ಯಾಲೆ' ಚಿತ್ರಗಳು ಜನಮೆಚ್ಚುಗೆಯನ್ನೂ ಪಡೆದವು, ಕನ್ನಡ ಸಿನಿಮಾಗಳನ್ನು ರಾಷ್ಟ್ರಮಟ್ಟಕ್ಕೂ ಕೊಂಡೊಯ್ದವು. ನಂತರ ಎಂ.ಆರ್.ವಿಠಲ್, ಕೆ.ಎಸ್.ಎಲ್.ಸ್ವಾಮಿ (ರವೀ), ಎಂ.ವಿ.ಕೃಷ್ಣಸ್ವಾಮಿ, ಪುಟ್ಟಣ್ಣ ಕಣಗಾಲ್ ಅವರ ಪ್ರವೇಶವಾಯಿತು. ಇವರ ಪರಿಶ್ರಮವನ್ನು ಕೂಡ ಜನ ಸ್ವೀಕರಿಸಿದರು. ಇವರಿಗೆ ಅಕಾಡೆಮಿಕ್ ಸಾಹಿತ್ಯದ ಹಿನ್ನೆಲೆಯಿರಲಿಲ್ಲ. ಹೀಗಾಗಿ ಇವರ ಕೆಲಸಗಳನ್ನು, ಫ್ರಾನ್ಸಿನಲ್ಲಾದಂತೆ ಆಂದ್ರೆ ಬಾಜಿನ್ ಮುಂತಾದವರ ಹಾಗೆ ಪೋಷಿಸುವ ವಿಮರ್ಶಕರು ದೊರೆಯಲಿಲ್ಲ. ಎಂ.ವಿ.ಕೃಷ್ಣಸ್ವಾಮಿ ಬಹುಬೇಗ ಕಥಾಚಿತ್ರಗಳಿಂದ ದೂರ ಸಾಗಿ ಸಾಕ್ಷ್ಯ ಚಿತ್ರಗಳ ಲೋಕ ಸೇರಿಕೊಂಡರು. ಎನ್.ಲಕ್ಷ್ಮೀನಾರಾಯಣ್ ಅವರಿಗೆ ಹೆಚ್ಚು ಚಿತ್ರ ತಯಾರಿಸುವ ಅವಕಾಶಗಳು ದೊರೆಯಲಿಲ್ಲ.

ಈ ಹೊತ್ತಿಗಾಗಲೇ ಸಾಹಿತ್ಯ ವಲಯದ ಹಲವರು ಸೇರಿ ಸಿನಿಮಾ ಮಾಡಲು ಹೊರಟಿದ್ದರು. ಹೀಗೆ ಹೊರಬಂದ ಮೊದಲ ಚಿತ್ರ 'ಸಂಸ್ಕಾರ' ಯು.ಆರ್. ಅನಂತಮೂರ್ತಿಯವರ ಕಾದಂಬರಿಯನ್ನು ಆಧರಿಸಿದ ಚಿತ್ರಕ್ಕೆ ಗಿರೀಶ್ ಕಾರ್ನಾಡರ ಚಿತ್ರಕಥೆ/ನಟನೆ ಇತ್ತು. ನಟ ವರ್ಗದಲ್ಲಿ ಇದ್ದವರು ಅನೇಕ ಸಾಹಿತಿಗಳು, ಸಾಹಿತಿ ಮಿತ್ರರು. ಚಿತ್ರವನ್ನು ನಿರ್ದೇಶಿಸಿದವರು ಪಟ್ಟಾಭಿರಾಮರೆಡ್ಡಿಯವರು. ಆದರೆ ಇಲ್ಲಿ ಸಿನಿಮಾ ತಂತ್ರವನ್ನು ಚೆನ್ನಾಗಿ ಅರಿತಿದ್ದ ಸಿಂಗೀತಂ ಶ್ರೀನಿವಾಸರಾವ್ ತರಹದ ಸಹನಿರ್ದೇಶಕರಿದ್ದರು. ಛಾಯಾಗ್ರಹಣ ಮಾಡಿದವರು ಟಾಂ ಕೋವನ್, ಸಂಕಲನ : ಸ್ಟೀವನ್ ಕಾರ್ಟ್ಫ್ರೂ. ತಂತ್ರ ತಿಳಿದವರೊಡನೆ ಸಾಹಿತ್ಯ ತಿಳಿದವರು ಬೆರೆತಾಗ ತೆರೆಯ ಮೇಲೆ ದೃಶ್ಯ ಕಾವ್ಯ ಎನ್ನಬಹುದಾದಂತಹ ಅನೇಕ ಸನ್ನಿವೇಶಗಳು ಬಂದವು. ಇದಕ್ಕೆ ಅನಂತಮೂರ್ತಿಯವರ ಕಾದಂಬರಿಗೆ ಇದ್ದ ಸಿನಿಮಾಕ್ಕೆ ಬೇಕಾದ ಘಟನಾತ್ಮಕ ಬೆಳವಣಿಗೆ, ಪರಾಕಾಷ್ಠೆಯತ್ತ ಸಾಗುವ ಗುಣ ಕೂಡ ಸಹಾಯವಾಗಿತ್ತು. ಅದಲ್ಲದೆ ಚಿತ್ರದಲ್ಲಿ ಧ್ವನಿ (Sound)ಯನ್ನು ನಿರ್ವಹಿಸಲೆಂದೇ ಧ್ವನಿ ಸಂಕಲನಕಾರ ಎಂಬ

ಅದುವರೆಗೆ ಇಲ್ಲದೆ ಇದ್ದ ಹುದ್ದೆಯೊಂದನ್ನು ಸೃಷ್ಟಿಸಿದರು. ಉಮಾನಾಥ್ ಚಿತ್ರದ ಮಾತುಗಳು ಮತ್ತು ಇನ್ನಿತರ ಧ್ವನಿಗಳನ್ನು ಸಂಕಲಿಸಿದ್ದರು.

ಇದಾದ ನಂತರ ಕನ್ನಡದಲ್ಲಿ ಹೊಸ ಅಲೆಯ ಚಿತ್ರ ಚಳವಳಿಯಲ್ಲಿ ಗುರುತಿಸಿಕೊಳ್ಳುವ ಅನೇಕ ಸಿನಿಮಾಗಳು ಬಂದವು. ಗಿರೀಶ್ ಕಾರ್ನಾಡ್ ಮತ್ತು ಬಿ.ವಿ.ಕಾರಂತರ ಜಂಟಿ ನಿರ್ದೇಶನದಲ್ಲಿ ಎಸ್.ಎಲ್.ಭೈರಪ್ಪನವರ ಕಾದಂಬರಿಯನ್ನು ಆಧರಿಸಿದ 'ವಂಶವೃಕ್ಷ' ತಯಾರಾಯಿತು. ಈ ಚಿತ್ರವನ್ನು ವಿ.ಆರ್.ಕೆ.ಪ್ರಸಾದ್ ಸಹಾಯದೊಡನೆ ಅರುಣ-ವಿಕಾಸ್ ದಂಪತಿಗಳು ಸಂಕಲನ ಮಾಡಿದ್ದರು. ಚಿತ್ರವನ್ನು ಪ್ರೀಮಿಯರ್ ಸ್ಟುಡಿಯೋದಲ್ಲಿ ಸ್ಪೈಸರ್‌ನ ಸಹಾಯವೂ ಇಲ್ಲದೆ ಸಂಕಲನ ಮಾಡಿದ್ದರು. ಸಂಕಲನ ತಂತ್ರ ಸಾಕಷ್ಟು ಬೆಳವಣಿಗೆಯಾಗಿದ್ದ ಕಾಲದಲ್ಲೂ ಈ ಚಿತ್ರಕ್ಕೆ ಬರಿಗೈಯಿಂದ ಚಿತ್ರಿಕೆಗಳನ್ನು ಜಂಟಿ ಮಾಡಿದ್ದರೆಂದು ಉಮೇಶ್ ಕುಲಕರ್ಣಿ ನಮ್ಮ ಸಂದರ್ಶನದಲ್ಲಿ ಹೇಳುತ್ತಾರೆ. ಛಾಯಾಗ್ರಾಹಕರಿಗೆ ಸಿಕ್ಕಿದ್ದ ಕ್ಯಾಮರಾದಲ್ಲಿ ವ್ಯೂ ಫೈಂಡರ್ ತೋರಿಸುತ್ತಿದ್ದ ವಿವರಕ್ಕೂ ಕ್ಯಾಮರಾ ಸೆರೆ ಹಿಡಿಯುತ್ತಿದ್ದ ವಿವರಕ್ಕೂ ವ್ಯತ್ಯಾಸ ಇರುತ್ತಿತ್ತು. ಹೀಗಾಗಿ ಛಾಯಾಗ್ರಾಹಕ (ಯು.ಎಂ.ಎನ್.ಷರೀಫ್) ಬಯಸದೆಯೂ ಪಾತ್ರಧಾರಿಗಳ ಅಕ್ಕಪಕ್ಕದಲ್ಲಿದ್ದ ಲೈಟು, ಕೆಲವೊಮ್ಮೆ ಯಾರದೋ ಕಾಲು-ಕೈಗಳು ಚಿತ್ರಿಕೆಯಲ್ಲಿ ಉಳಿದುಬಿಟ್ಟಿತ್ತು. ಹೀಗಾಗಿ ಇಡೀ ಚಿತ್ರವನ್ನು ಮದರಾಸಿನ ಲ್ಯಾಬ್ ಒಂದರಲ್ಲಿ ಮಾಸ್ಕ್ ಮಾಡಿ ಮರುಪ್ರತಿ ತೆಗೆದು ನಂತರ ಸಂಕಲನವನ್ನು ಆರಂಭಿಸಿದರು. ಇದಲ್ಲದೆ ಆ ಕಾಲದಲ್ಲಿ ಸಂಲಗ್ನಗೊಂಡ ಅಂತಿಮ ಪ್ರತಿ ತೆಗೆಯುವಾಗ ಸಂಕಲನಕಾರರು ಚಿತ್ರಪಟ್ಟಿ ಮತ್ತು ಧ್ವನಿಪಟ್ಟಿಯನ್ನು ಸಮಾನಾಂತರದಲ್ಲಿ ಇರಿಸಿ ಲ್ಯಾಬಿಗೆ ಕಳುಹಿಸುವುದು ರೂಢಿ. ಲ್ಯಾಬಿನವರು ಪ್ರತಿ ತೆಗೆಯುವ ಮುನ್ನ ಧ್ವನಿ ಪಟ್ಟಿಯನ್ನು ೧೯ ಫ್ರೇಮಿನಷ್ಟು ಮುಂದಿಟ್ಟುಕೊಳ್ಳುತ್ತಿದ್ದರು. ಈ ಅಭ್ಯಾಸದ ವಿವರ ತಿಳಿಯದ ಮುಂಬಯಿನ ಸಂಕಲನಕಾರರಾದ ಅರುಣ-ವಿಕಾಸ್ ದಂಪತಿಗಳು ಅಂತಿಮ ಪ್ರತಿಗೆ ಚಿತ್ರವನ್ನು ಸಿದ್ಧಪಡಿಸಿ ಕಳುಹಿಸುವಾಗ ಧ್ವನಿಪಟ್ಟಿಯನ್ನು ೧೯½ ಫ್ರೇಮುಗಳಷ್ಟು ಮುಂದಿಟ್ಟು ಕಳುಹಿಸಿದ್ದರು. ಇದರ ಅರಿವಿಲ್ಲದ ಲ್ಯಾಬಿನವರು ಧ್ವನಿಪಟ್ಟಿಯನ್ನು ಮತ್ತಷ್ಟು ಮುಂದಿಟ್ಟರು. ಹೀಗಾಗಿ ಚಿತ್ರದುದ್ದಕ್ಕೂ ಮಾತು ಮತ್ತು ಧ್ವನಿ ಹೊಂದಿಕೆಯಾಗದೆ ಚಿತ್ರ ವೀಕ್ಷಣೆಯೇ ಸರ್ಕಸ್ ಆಗಿಬಿಟ್ಟಿತ್ತು. ಈ ತೊಂದರೆಗೆ ತಳುಕು ಹಾಕಿದಂತೆ ಚಿತ್ರದಲ್ಲಿ ಅಗತ್ಯವಿದ್ದ ಕಾಗೆ, ಪಕ್ಷಿ ಇಂತಹ ಹಿನ್ನೆಲೆ ಸದ್ದುಗಳನ್ನು ಚಿತ್ರದ ಸಹ ನಿರ್ದೇಶಕ ಕಾನಕಾನಹಳ್ಳಿ ಗೋಪಿಯವರು ತಮ್ಮದೇ ಟೇಪ್ ರಿಕಾರ್ಡರ್ ಒಂದರಲ್ಲಿ ಮುದ್ರಿಸಿ ತಂದರು. ಸರಿಯಾದ ಧ್ವನಿಗ್ರಾಹಕ ಬಳಸದೆ ರಿಕಾರ್ಡ್ ಆದ ಆ ಸದ್ದುಗಳು ಇಂದಿಗೂ ಚಿತ್ರದಲ್ಲಿ ಹೆಚ್ಚಿದ ಶೃತಿಯೊಡನೆ (ಹೈ ಫ್ರೀಕ್ವೆನ್ಸಿ) ಕೇಳುತ್ತವೆ. ಆರಂಭಿಕ ಹಂತದ ಹೊಸಅಲೆಯ ಚಿತ್ರ ತಯಾರಕರು ಮಾಡಿದ ತಪ್ಪುಗಳೆಲ್ಲವೂ ಟಾಕಿ ಚಿತ್ರ ತಯಾರಿ ಆರಂಭವಾಗಿ ಸರಿ ಸುಮಾರು ೪೦ ವರ್ಷಗಳಾದ ನಂತರವೂ ಇದ್ದದ್ದು ಈ ತಂಡ ತನ್ನೊಂದಿಗೆ ವೃತ್ತಿಪರರನ್ನು ಬಳಸಿಕೊಳ್ಳದೆ ಇದ್ದುದರಿಂದ ಎನ್ನಬಹುದು.

ಗಿರೀಶ್ ಕಾರ್ನಾಡರು ವೃತ್ತಿಪರ ಛಾಯಾಗ್ರಾಹಕರಾದ ಗೋವಿಂದ ನಿಹಲಾನಿಯನ್ನು, ಸಂಕಲನಕ್ಕೆ ಭಕ್ತ ವತ್ಸಲಂ ಅವರನ್ನು ಬಳಸಿಕೊಂಡು ಆಲನಹಳ್ಳಿ ಕೃಷ್ಣ ಅವರ 'ಕಾಡು' ಕಾದಂಬರಿಯನ್ನು ಚಿತ್ರಿಸಿದರು. 'ಕಾಡು' ಘಟನಾ ಪ್ರಧಾನ ಚಿತ್ರವಾದ್ದರಿಂದ ಚಿತ್ರಕ್ಕೆ 'ಸಂಸ್ಕಾರ', 'ವಂಶವೃಕ್ಷ'ಕ್ಕಿಂತ ಉತ್ತಮವಾದ ಓಟ ದೊರಯಿತು. ಅಲ್ಲದೆ ಪ್ರಧಾನವಾಹಿನಿಯಿಂದ ಅನುಭವ ಪಡೆದು ಬಂದ ಸಂಕಲನಕಾರರು ಸಹ ಕಥನಕ್ಕೆ ಅನಗತ್ಯ ಎನಿಸುವ ವಿವರಗಳನ್ನು ಕೈಬಿಟ್ಟು ಮುಂದೆ ಸಾಗಿದ್ದರು. ಇಷ್ಟಾದರೂ ಸ್ವತಃ ಭಕ್ತವತ್ಸಲಂ ಅವರು 'ನಾವು ಇತರ ಚಿತ್ರಗಳಲ್ಲಿ ನೈಜ ಧ್ವನಿಯನ್ನು ಬಳಸುತ್ತಿರಲಿಲ್ಲ. ಸಿನಿಮಾಕ್ಕೆ ಅದು ಅಗತ್ಯ ಎಂಬುದು ಕಾರ್ನಾಡರೊಡನೆ ಸಂಕಲನ ಮಾಡುತ್ತ ನನಗೆ ಗೊತ್ತಾಯಿತು. ಮತ್ತು ಚಿತ್ರಿಕೆಯ ಉದ್ದವನ್ನು ಕೇವಲ ಭೌತಿಕ ಕ್ರಿಯೆ ಅಲ್ಲದೆ, ಪಾತ್ರದ ಮಾನಸಿಕ ಸ್ಥಿತಿ ನಿರ್ಧರಿಸುತ್ತದೆ ಎಂಬುದು ಸಹ ನನಗೆ ತಿಳಿಯಿತು' ಎಂದಿದ್ದಾರೆ. ಸಂಕಲನಕಾರ ಭಕ್ತವತ್ಸಲರ ಈ ಚಿತ್ರದ ಹೋಳಿಯ ದೃಶ್ಯದಲ್ಲಿರುವ ಸಂಕಲನ, ವಿಶೇಷವಾಗಿ ಕ್ರಿಯಾ ನಿರಂತರತೆ (ಆಕ್ಷನ್ ಕಂಟಿನ್ಯೂಯಿಟಿ) ಎಲ್ಲ ಕಾಲಕ್ಕೂ ನೆನಪಲ್ಲುಳಿಯುವಂತಹುದು.

ಇದಾದ ನಂತರ ವರ್ಷಕ್ಕೊಂದು ಎರಡರಂತೆ ಹೊಸಅಲೆ ಎಂಬ ಹಣೆ ಪಟ್ಟಿಯೊಡನೆ ಚಿತ್ರಗಳು ಬರತೊಡಗಿದವು. ಅವುಗಳಲ್ಲಿ ನಂಜರಾಜ ಅರಸ್ ನಿರ್ದೇಶನದ 'ಸಂಕಲ್ಪ', ಜಿ.ವಿ.ಅಯ್ಯರ್ ನಿರ್ದೇಶಿಸಿದ 'ಹಂಸಗೀತೆ', ಕೆ.ಎಂ.ಶಂಕರಪ್ಪ ನಿರ್ದೇಶನದ 'ಮಾಡಿ ಮಡಿದವರು', ಬಿ.ವಿ.ಕಾರಂತರು ನಿರ್ದೇಶಿಸಿದ 'ಚೋಮನ ದುಡಿ' ಗಿರೀಶ್ ಕಾಸರವಳ್ಳಿ ನಿರ್ದೇಶನದ 'ಘಟಶ್ರಾದ್ಧ', ಹೀಗೆ ಕೆಲವು ಸಿನಿಮಾಗಳಲ್ಲಿ ಸಿನಿಮಾವೆಂಬುದು ತಂತ್ರವಾಗಿಯೂ, ಕಲೆಯಾಗಿಯೂ ಬಳಕೆಯಾಗಿತ್ತು. ಉಳಿದವು ಜಾಳುಜಾಳಾದ ಪ್ರಯತ್ನಗಳಾಗಿದ್ದವು.

ಕನ್ನಡದ ಹೊಸಅಲೆಯ ಚಿತ್ರತಯಾರಕರು ಹೆಚ್ಚಾಗಿ ಅವಲಂಬಿಸುತ್ತಿದ್ದದ್ದು ಕನ್ನಡ ನವ್ಯ ಸಾಹಿತ್ಯ ಪ್ರೇರಣೆಗಳನ್ನು. ಹೀಗಾಗಿ ಆ ಚಿತ್ರಗಳಲ್ಲಿ ವ್ಯಕ್ತಿಗಳ ನಡುವಣ ಸಂಬಂಧ, ವ್ಯಕ್ತಿಯ ಮಾನಸಿಕ ತೊಳಲಾಟ ಇಂತಹ ವಿವರಗಳಿಗೆ ಒತ್ತು ಕೊಡುತ್ತಿದ್ದರು. ಪರಿಣಾಮವಾಗಿ ಮಾತಿಲ್ಲದ, ನಿಧಾನವಾಗಿ ಕ್ಯಾಮರಾ ಚಲಿಸುವ ಅನೇಕ ದೃಶ್ಯಗಳು ಬರುತ್ತಿದ್ದವು. ಇದಕ್ಕೆ ವ್ಯತಿರಿಕ್ತವಾಗಿ ವ್ಯಾಪಾರಿ ಚಿತ್ರಗಳು ಘಟನಾ ಪ್ರಧಾನವಾಗಿರುತ್ತಿದ್ದವು. ಅದರಿಂದಾಗಿ ಅನೇಕ ಕಡೆ ಅತಾರ್ಕಿಕ ಎನಿಸಿದರೂ ಚಿತ್ರಕ್ಕೆ ಓಟ ಇರುತ್ತಿತ್ತು. ಈ ಓಟಕ್ಕೆ ಒಗ್ಗಿದ್ದ ಪ್ರೇಕ್ಷಕರು ನಿಧಾನಗತಿಯ ನಿರೂಪಣೆಗೆ ಹೊಂದಿಕೊಳ್ಳಲೇ ಇಲ್ಲ. ಹೀಗಾಗಿ ಇಂದಿಗೂ ಸಾಮಾನ್ಯ ಪ್ರೇಕ್ಷಕರು 'ದುಡ್ಡಿಗಾಗಿ ಸಿನಿಮಾ' 'ಪ್ರಶಸ್ತಿಗಾಗಿ ಸಿನಿಮಾ' ಎಂಬ ಎರಡು ವರ್ಗೀಕರಣ ಮಾಡಿಕೊಂಡು ತಮ್ಮ ಅಭಿರುಚಿಗೆ ತಕ್ಕ ಆಯ್ಕೆ ಮಾಡಿಕೊಳ್ಳುತ್ತಾರೆ.

'ಮಾಡಿ ಮಡಿದವರು' ಚಿತ್ರದಲ್ಲಿನ ಸ್ವಾತಂತ್ರ್ಯ ಹೋರಾಟಗಾರರ ಸಿದ್ಧತೆಯ ದೃಶ್ಯಗಳಲ್ಲಿ ಹೆಚ್ಚು ಮಾತಿಲ್ಲ. ನಿಧಾನಗತಿಯ ಕ್ರಿಯೆ ಇದೆ. ಹಿನ್ನೆಲೆಗೆ ಸಂಗೀತವಿದೆ. ಇದರಿಂದಾಗಿ ಚಿತ್ರ ನೋಡುತ್ತಿದ್ದ ಪ್ರೇಕ್ಷಕರು ಗೊಂದಲಗೊಂಡು ಚಿತ್ರ ಪ್ರದರ್ಶಕನಿಗೆ 'ಸೌಂಡ್ ಕೊಡೋ ಲೋ' ಎಂದು ಕೂಗುತ್ತಿದ್ದರಂತೆ.

ಇಷ್ಟಾದರೂ 'ಮಾಡಿ ಮಡಿದವರು' ಒಟ್ಟು ಚಿತ್ರೋದ್ಯಮಕ್ಕೆ ನೀಡಿದ ಕೊಡುಗೆ ವಿಶೇಷವಾದದ್ದು. ಇದು 'ನಾಗರ' ಎಂಬ ಧ್ವನಿ ಮುದ್ರಣ ಯಂತ್ರವನ್ನು ಮೊದಲಿಗೆ ಉಪಯೋಗಿಸಿದ ಚಿತ್ರ. ಅದೊಂದು ಕ್ಯಾಮರಾಕ್ಕೆ ಸರಿ ವೇಗದಲ್ಲಿ ಚಲಿಸುವ ಟೇಪ್ ರಿಕಾರ್ಡರ್. ಆ ಯಂತ್ರವನ್ನು ಬಳಸಿ ಹಾಡಿನ ಚಿತ್ರೀಕರಣ ಮಾಡುತ್ತಿದ್ದ 'ಮಾಡಿ ಮಡಿದವರು' ತಂಡವನ್ನು ಪ್ರಧಾನವಾಹಿನಿಯ ಜನ ನೋಡಿ ನಗುತ್ತಿದ್ದರು. ತೆರೆಯ ಮೇಲೆ ಧ್ವನಿ ಹೊಂದುವುದಿಲ್ಲ ಎಂದು ಹೀಗಳೆದಿದ್ದರು. ಆದರೆ ಅದೇ 'ನಾಗರ' ಬಳಸಿ ಮಾತುಗಳ ಧ್ವನಿ ಮುದ್ರಣವನ್ನು ಮಾಡಿದ್ದ ಧ್ವನಿಗ್ರಾಹಕ ಕೃಷ್ಣಮೂರ್ತಿಯವರ ಪ್ರಯೋಗದಿಂದಾಗಿ ಇಂದು ಹಾಡಿನ ಚಿತ್ರೀಕರಣವನ್ನು ಎಲ್ಲಿ ಬೇಕಾದರೂ ಮಾಡಬಹುದಾದಂತಹ ಅನುಕೂಲ ಒದಗಿಸಿದೆ. ಇದಕ್ಕಾಗಿ ಪ್ರಧಾನವಾಹಿನಿಯ ಜನ 'ಮಾಡಿ ಮಡಿದವರು' ತಂಡಕ್ಕೆ ಕೃತಜ್ಞರಾಗಿರಬೇಕು.

ಇದೇ ಕಾಲಘಟ್ಟದಲ್ಲಿ ತ್ರಿವೇಣಿಯವರ ಕಾದಂಬರಿಯನ್ನಾಧರಿಸಿ ಎಂ.ಬಿ.ಎಸ್.ಪ್ರಸಾದ್ ನಿರ್ದೇಶಿಸಿದ 'ಕಂಕಣ' ಚಿತ್ರವೂ ಸಿದ್ಧವಾದದ್ದು. ಆ ಹೊತ್ತಿಗೆ ಪುಟ್ಟಣ್ಣ ಕಣಗಾಲರಿಂದಾಗಿ ಚಿತ್ರರಂಗದಲ್ಲಿ ತ್ರಿವೇಣಿ ಕಾದಂಬರಿಗಳಿಗೆ ಬಹು ಬೇಡಿಕೆಯಿತ್ತು. ಅಂತೆಯೇ ಈ ಕಾದಂಬರಿಯನ್ನು ತೆರೆಗೆ ತರಲು ಅನೇಕ ಪ್ರಧಾನವಾಹಿನಿಯ ಚಿತ್ರ ತಯಾರಕರು ಪ್ರಯತ್ನ ನಡೆಸಿದ್ದರು. ಆದರೆ ಅವರೆಲ್ಲರ ಕೈತಪ್ಪಿ ತ್ರಿವೇಣಿಯವರ ಈ ಕಾದಂಬರಿ ಹೊಸಅಲೆಯವರ ಗುಂಪಿಗೆ ಸಿಕ್ಕಿತ್ತು.

ಐವರು ಹುಡುಗಿಯರ ಬದುಕಿನ ವಿವರಗಳನ್ನುಳ್ಳ ಕಥೆ ಜನಪ್ರಿಯವಾಗುವ ಎಲ್ಲ ಸೂಚನೆಗಳೂ ಇದ್ದವು. ಆದರೆ ಅನಂತಮೂರ್ತಿಯವರು ಬರೆದ ಜಾಳುಜಾಳಾದ ಚಿತ್ರಕಥೆ, ಪಾತ್ರಧಾರಿಗಳ ಆಯ್ಕೆಯಲ್ಲಿ ಆದ ಎಡವುಗಳು, ಭಾವತೀವ್ರತೆ ಬೇಕಿದ್ದ ಸನ್ನಿವೇಶದಲ್ಲಿ ಭಾವಗಳನ್ನು ತಡೆಹಿಡಿದು ಚಿತ್ರಿಸಿದ್ದು, ಹಾಡನ್ನು ಅರ್ಥಪೂರ್ಣವಾಗಿ ಬಳಸುವ ಅವಕಾಶ ಇದ್ದಾಗಲೂ ಹಾಡು ಬಳಸಿದರೆ ಜನಪ್ರಿಯ ಸಿನಿಮಾದ ಮಾದರಿಯಾಗುತ್ತದೆ ಎಂದು ಬಳಸದೆ ಇದ್ದದ್ದು, ಅತ್ಯಂತ ನಿಧಾನಗತಿಯ ನಿರೂಪಣೆಯಿಂದಾಗಿ ಚಿತ್ರ ಪೇಲವವಾಯಿತು. "ಆ ಕಾಲದಲ್ಲಿ ಚಿತ್ರಗಳನ್ನು ಸಬ್ಸಿಡಿಗಾಗಿ ೧೨೦ ನಿಮಿಷ ಮಾಡಲೇಬೇಕಿತ್ತು. ಆದರೆ ಬರ್ಲಿನ್ ಚಿತ್ರೋತ್ಸವಕ್ಕೆ 'ಕಂಕಣ' ಕಳುಹಿಸುವ ಸಂದರ್ಭ ಬಂದಾಗ ಆ ಚಿತ್ರವನ್ನು ೮೦ ನಿಮಿಷಕ್ಕೆ ಇಳಿಸಲಾಯಿತು. ಆಗ ಚಿತ್ರದ ಅನೇಕ ನಿಧಾನ ಗತಿಯ ದೃಶ್ಯಗಳನ್ನು ಕತ್ತರಿಸಿದೆ. ಪ್ರಾಯಶಃ ಸಾರ್ವಜನಿಕರಿಗೆಂದು ಬಿಡುಗಡೆಯಾದ ಪ್ರತಿಯೂ ಹೀಗೇ ವೇಗದಿಂದ ಇದ್ದಿದ್ದರೆ ಕೊಂಚವಾದರೂ ಜನಮೆಚ್ಚುಗೆ ಪಡೆಯುತ್ತಿತ್ತೇನೋ ?" ಎಂದು ಆ ಚಿತ್ರದ ಸಂಕಲನಕಾರ ಉಮೇಶ್ ಕುಲಕರ್ಣಿ ಹೇಳುತ್ತಾರೆ.

. ಕನ್ನಡದ ಹೊಸ ಅಲೆ ಚಿತ್ರ ಚಳವಳಿ ಕುರಿತ ಟಿ.ಜಿ.ವೈದ್ಯನಾಥನ್ ಅವರ ವಿಮರ್ಶಾ ಲೇಖನಗಳ ಸಂಗ್ರಹ ಮತ್ತು ಕರ್ನಾಟಕ ಸರ್ಕಾರ ೧೯೯೦ರ ಬೆಂಗಳೂರಿನ ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ಸಂದರ್ಭದಲ್ಲಿ ಹೊರತಂದ 'ಕನ್ನಡ ಸಿನಿಮಾ' (ಸಂಪಾದಕರು : ವಿ.ಎನ್.ಸುಬ್ಬರಾವ್ / ಡಾ.ವಿಜಯಾ / ಎಂ.ವಿ.ರಾಮಕೃಷ್ಣಯ್ಯ) ಎಂಬ ಹೊತ್ತಗೆಯನ್ನು ಗಮನಿಸಿ.

೧೯೭೭ರಲ್ಲಿ ಬಿಡುಗಡೆಯಾದ ಗಿರೀಶ್ ಕಾಸರವಳ್ಳಿ ನಿರ್ದೇಶನದ ಚಿತ್ರ 'ಘಟಶ್ರಾದ್ಧ' (ಸಂಕಲನಕಾರ : ಉಮೇಶ್ ಕುಲಕರ್ಣಿ). ಈ ಚಿತ್ರದಲ್ಲಿ ಕಾಸರವಳ್ಳಿ ಲೂಸಿಡ್ ಅದಂತಹ ಕಥನ ಶೈಲಿಯನ್ನು ಬಳಸಿದ್ದರು. ಅಲ್ಲದೆ ಚಿತ್ರಿಕೆಯಿಂದ ಚಿತ್ರಿಕೆಗೆ ಸಾಗುವಾಗ ಸೇತುವಾಗಿ ಅನೇಕ ಕಡೆಗಳಲ್ಲಿ ಧ್ವನಿಯನ್ನು ಬಳಸಿದ್ದರು. ಚಿತ್ರದ ಉತ್ತರಾರ್ಧದಲ್ಲಿ ಬರುವ ಯಮುನಕ್ಕ ಬಸಿರು ಇಳಿಸಿಕೊಳ್ಳುವ ದೃಶ್ಯ ಅತ್ಯಂತ ವಿಶಿಷ್ಟವಾದುದು. ಇಲ್ಲಿ ಬಾಲಕನೊಬ್ಬನ ಕಣ್ಣ ಮೂಲಕ ಇಡೀ ದೃಶ್ಯವನ್ನು ನೋಡಲಾಗಿದೆ. ಒಳಗೆ ನಾಟಿ ಔಷಧಿ ಸ್ವೀಕರಿಸಿ ನರಳುತ್ತಿರುವ ಯಮುನಕ್ಕ, ಹೊರಗೆ ಕೋಳಿಯ ಬಲಿ ಇತ್ಯಾದಿ ಪ್ರತಿಮೆಗಳು ಇಡೀ ದೃಶ್ಯಕ್ಕೆ ಕಾವ್ಯಮಯತೆಯನ್ನು ತಂದು ಕೊಡುತ್ತವೆ ಎಂಬ ಅಭಿಪ್ರಾಯವನ್ನು ಟಿ.ಜಿ.ವೈದ್ಯನಾಥನ್ ಮತ್ತು ಬಿ.ವಿ. ವೈಕುಂಠರಾಜು ಅವರ ಲೇಖನಗಳಲ್ಲಿ ಹೇಳಿದ್ದಾರೆ. ಈ ಚಿತ್ರಕ್ಕಾಗಿ ಧ್ವನಿಗ್ರಾಹಕ ಕೃಷ್ಣಮೂರ್ತಿ ಮತ್ತು ಛಾಯಾಗ್ರಾಹಕ ಎಸ್.ರಾಮಚಂದ್ರ ಅವರು ಮಲೆನಾಡಿನ ಮರಗಳನ್ನೇ ಬಳಸಿ ಕ್ರೇನ್ ಮತ್ತು ಹಳೆಯ ಮನೆಯ ಪುಟ್ಟ ಬಾಗಿಲುಗಳ ನಡುವೆ ಹಳಿ ಚಿತ್ರಿಕೆ ತೆಗೆಯಲನುವಾಗುವಂತಹ ಟ್ರಾಲಿ ಸಿದ್ಧಪಡಿಸಿದ್ದರು. ಇವು ಚಿತ್ರದ ಕಡಿಮೆ ಬಜೆಟ್ಟಿಗೆ ಹೊಂದುವಂತಹ ಸಾರ್ಥಕ ಪ್ರಯೋಗಗಳಾಗಿದ್ದವು.

''ಈ ಹಂತದ ನಂತರ ಬಂದ ಅನೇಕ ಹೊಸಅಲೆಯ ಚಿತ್ರಗಳು ಸಬ್ಸಿಡಿಯ ಉದ್ದೇಕ್ಕಾಗಿ ತಯಾರಾಗಿರುತ್ತಿದ್ದವು. ನಿರ್ಮಾಪಕ/ನಿರ್ದೇಶಕರಿಗೆ ಹೇಗಾದರೂ ಚಿತ್ರದ ಉದ್ದ ೧೦ ಸಾವಿರ ಅಡಿ ಇರಬೇಕಾದರೆ ಏನು ಮಾಡಬೇಕೆಂಬ ಚಿಂತೆ ಇರುತ್ತಿತ್ತೇ ವಿನಃ, ಚಿತ್ರದ ಕಲಾತ್ಮಕತೆಗೆ ಏನು ಮಾಡಬೇಕೆಂಬ ಚಿಂತೆ ಇರುತ್ತಿರಲಿಲ್ಲ'' ಎನ್ನುವ ಸಂಕಲನಕಾರ ಉಮೇಶ್ ಕುಲಕರ್ಣಿ ಹೊಸಅಲೆ ಹಣೆಪಟ್ಟಿ ಹೊತ್ತ ಚಿತ್ರಗಳಾದ 'ಶಬ್ದಗಳು', 'ಉಡುಗೊರೆ', 'ದಾಹ', 'ಮಾನವರಾರು' ಚಿತ್ರಗಳ ಸಂಕಲನದ ಅನುಭವದಿಂದ ಬೇಸರವಾಗಿ ಕಥಾ ಚಿತ್ರದ ಗೊಡವೆಯೇ ಬೇಡ ಎಂದು ಸಾಕ್ಷ್ಯಚಿತ್ರಗಳಿಗೆ ತಿರುಗಿದರು.

ಹೊಸಅಲೆಯ ಚಿತ್ರ ನಿರ್ದೇಶಕರು ಹೊಸ ಹುಡುಗರನ್ನು ಸಂಕಲನಕಾರರಾಗಿ ಗುರುತಿಸಿದರು. ಹೀಗೆ ಬಂದವರಲ್ಲಿ ಸುರೇಶ್ ಅರಸ್, ಎಂ.ಎನ್.ಸ್ವಾಮಿ ಮೊದಲಾದವರು ಮುಖ್ಯರು. ಇನ್ನು ಕೆಲವು ನಿರ್ದೇಶಕರು ಉತ್ತರದ ಖ್ಯಾತನಾಮರಾದ ಹೃಷಿಕೇಶ್ ಮುಖರ್ಜಿಯಂತಹ ಸಂಕಲನಕಾರರನ್ನು ಕರೆಸಿ ತಮ್ಮ ಚಿತ್ರಗಳನ್ನು ಸಂಕಲಿಸಿದ್ದಿದೆ. ಪಿ.ಲಂಕೇಶ್ ನಿರ್ದೇಶನದ 'ಅನುರೂಪ' ಅಂತಹ ಚಿತ್ರಗಳಲ್ಲಿ ಒಂದು. ಈ ಚಿತ್ರದ ಸಂಕಲನದ ಅವಧಿಯಲ್ಲಿ ಮುಖರ್ಜಿಯವರು ನಿರ್ದೇಶಕರೊಡನೆ ಚಿತ್ರಕಥೆಯ ಅನುಕ್ರಮಣಿಕೆಯನ್ನಷ್ಟೇ ಕೇಳಿ, ನಂತರ ಚಿತ್ರಿತ ಮೂಲದ್ರವ್ಯವನ್ನು ನಿರ್ದೇಶಕರ ಜೊತೆಗೆ ನೋಡಿದ ನಂತರ, ಇಡೀ ಚಿತ್ರವನ್ನು ನಿರ್ದೇಶಕರನ್ನು ಹತ್ತಿರಕ್ಕೆ ಸೇರಿಸದೆ ಸಂಕಲಿಸಿದರಂತೆ. ಆದರೆ ಅಂತಿಮ ಪ್ರತಿ ಸಬ್ಸಿಡಿಗೆ ಬೇಕಾದ ಉದ್ದವಿಲ್ಲದೆ ಹೋಗಿದ್ದರಿಂದ ನಿರ್ದೇಶಕರು ಸ್ಥಳೀಯ ಸಂಕಲನಕಾರರೊಬ್ಬರನ್ನು ಹಿಡಿದು ಡಬ್ಬಿ ಸೇರಿದ್ದ ಕೆಲವು ವಿವರಗಳನ್ನು ಮತ್ತೆ ಚಿತ್ರಕ್ಕೆ ಸೇರಿಸಿದರಂತೆ. ಇವೆಲ್ಲಾ ಅಂತೆ-ಕಂತೆಗಳೇ ಆದರೂ ಅಂತಿಮವಾಗಿ 'ಅನುರೂಪ'ಕ್ಕೆ ಸಿನಿಮಾದ ಗುಣ ಇರಲಿಲ್ಲ. ಆ ದೃಷ್ಟಿಯಿಂದ ಪಿ.ಲಂಕೇಶರು ಇದಕ್ಕಿಂತ ಮುಂಚೆ ನಿರ್ದೇಶಿಸಿದ್ದ 'ಪಲ್ಲವಿ' ಸಿನಿಮಾ ಕಲೆಯ ಹತ್ತಿರಕ್ಕೆ ತಲುಪುವ ಪ್ರಯತ್ನ ಮಾಡಿತ್ತು ಎನ್ನಬಹುದು. ಇದರ ಸಂಕಲನಕಾರರು ಜೆಮಿನಿ ರಮೇಶ್.

ಹೀಗೆ ಕನ್ನಡದ ಹೊಸಅಲೆಯ ಚಿತ್ರ ಚಳವಳಿ ಚರಿತ್ರೆಯಲ್ಲಿ ಸೈದ್ಧಾಂತಿಕವಾಗಿ ತನ್ನ ಗುರುತನ್ನು ಮೂಡಿಸಿತಾದರೂ ಜನಮಾನಸದಿಂದ ದೂರವೇ ಉಳಿಯಿತು. ಈ ವಿಷಯ ಕುರಿತು ಫರೀದ್ ಕಜ್ಮಿ ಹೇಳುವ ಮಾತುಗಳನ್ನು ಗಮನಿಸಿ :

''ಗಂಭೀರ ಚಿತ್ರಗಳು (ಆಧುನಿಕ ಮತ್ತು ಪ್ರಾಯೋಗಿಕತೆಯ ಎರಡೂ ಬಣಗಳು) ಸಾಂಪ್ರದಾಯಿಕ ಚಿತ್ರಗಳಿಗಿಂತ ಸಂಪೂರ್ಣವಾಗಿ ಭಿನ್ನವಾಗಿವೆ. ಆದರೆ ಗಂಭೀರ ಚಿತ್ರಗಳು ಸಾಮಾನ್ಯ ಪ್ರೇಕ್ಷಕನನ್ನು ತಲುಪುವ ಯಾವುದೇ ಪ್ರಯತ್ನವನ್ನೂ ಮಾಡದೆಯೇ ಹೋದುದರಿಂದ ಕೆಳವರ್ಗದ ಪ್ರೇಕ್ಷಕ ಗಂಭೀರ ಚಿತ್ರಗಳ ಅಸ್ತಿತ್ವವನ್ನು ಸಹ ಒಪ್ಪಿಕೊಂಡಿಲ್ಲ. ಗಂಭೀರ ಚಿತ್ರಗಳು ತಾವು ಆಯ್ದುಕೊಳ್ಳುವ ಕಥಾವಸ್ತುವಿನಲ್ಲಿ ಸಮಕಾಲೀನ ಸಮಾಜದ ಸಂಕಷ್ಟಗಳನ್ನು ಕುರಿತು ಯಾವುದೇ ವಿವರವನ್ನು ಬಳಸಿಕೊಳ್ಳದಿರುವುದೇ ಈ ಪರಿಸ್ಥಿತಿಗೆ ಕಾರಣವಾಗಿದೆ...... ಕಳೆದ ಕೆಲವು ದಶಕಗಳಲ್ಲಿ ಬಂದ ಯಾವ ಗಂಭೀರ ಚಿತ್ರವೂ ಭಾರತೀಯ ಸಮಾಜದ ಜ್ವಲಂತ ಸಮಸ್ಯೆಯನ್ನು ಕುರಿತಂತೆ ಪ್ರಶ್ನೆಗಳನ್ನೆತ್ತಿಲ್ಲ...''.

ಅಂದರೆ ಸಮಕಾಲೀನ ಭಾರತೀಯ ಸಮಾಜದ ಸಮಸ್ಯೆಗಳನ್ನು ಕುರಿತು ಹೊಸಅಲೆಯ ಚಿತ್ರ ಚಳವಳಿಯಲ್ಲಿ ಪ್ರಶ್ನೆಗಳೇ ಎದ್ದಿಲ್ಲ ಎಂದಲ್ಲ. ಆಕಸ್ಮಿಕವಾಗಿ ಅಂತಹದೊಂದು ವಸ್ತುವನ್ನು ಹೊಸಅಲೆ ಚಿತ್ರ ಚಳವಳಿಯಡಿ ಗುರುತಿಸಿಕೊಳ್ಳುವ ನಿರ್ದೇಶಕರು ತಯಾರಿಸಿದರೂ ಅಲ್ಲಿ ಸಮಸ್ಯೆಯನ್ನು ಕುರಿತ ಚರ್ಚೆಗಿಂತ ಕಥೆಯಲ್ಲಿ ಪಾತ್ರವಾಗಿ ಬರುವ ವ್ಯಕ್ತಿಯ ಒಳತೋಟಿ ಪ್ರಧಾನವಾಗಿಬಿಡುತ್ತಿತ್ತು. ಉದಾಹರಣೆಗೆ ಮಲಯಾಳದಲ್ಲಿ ತಯಾರಾದ ಷಾಜಿ ಕರುಣ್ ಅವರ 'ಪಿರವಿ' ಚಿತ್ರವನ್ನು ಗಮನಿಸಬಹುದು. ಭಾರತದಲ್ಲಿ ತುರ್ತು ಪರಿಸ್ಥಿತಿಯಿದ್ದ ಸಂದರ್ಭದಲ್ಲಿ ಜೈಲಿನಲ್ಲಿ ತೀರಿಕೊಂಡ ವಿದ್ಯಾರ್ಥಿಯೊಬ್ಬನನ್ನು ಕುರಿತ ಘಟನೆ ಈ ಚಿತ್ರದ ವಸ್ತು. ಆದರೆ ಚಿತ್ರದಲ್ಲಿ ಆ ಘಟನೆಯ ರಾಜಕೀಯ ಮತ್ತು ಸಾಮಾಜಿಕ ವಿವರದ ಚರ್ಚೆಯಿಲ್ಲ. ಮಗನನ್ನು ಕಳೆದುಕೊಂಡ ಅಪ್ಪನ ಮಾನಸಿಕ ತುಮುಲವಿದೆ. ಇದು ಒಂದು ರೀತಿಯ ಪಲಾಯನವಾದ ಹಾಗೂ ಈ ಗುಣ ನಮ್ಮಲ್ಲಿ ಅನೇಕ ನಿರ್ದೇಶಕರ ಚಿತ್ರದಲ್ಲಿ ಇಣುಕುತ್ತದೆ. ಉದಾ : 'ಎಡಕಲ್ಲು ಗುಡ್ಡದ ಮೇಲೆ' ಚಿತ್ರದಲ್ಲಿ ಪ್ರೇಮ ತ್ರಿಕೋನಕ್ಕೆ ಸಮಾಜದ ಪ್ರತಿಕ್ರಿಯೆ ಏನು ?

ಎಲ್ಲ ಗಂಭೀರ ಅಥವಾ ಹೊಸಅಲೆಯ ಸಿನಿಮಾಗಳೂ ಇದೇ ರೀತಿಯಾಗಿ ವ್ಯಕ್ತಿಯ ಮನಸ್ಸಿನ ಹೊಯ್ದಾಟಗಳನ್ನು ಮುಖ್ಯ ಮಾಡಿಕೊಂಡು ಅವನ ಸುತ್ತಲ ಸಾಮಾಜಿಕ/ಆರ್ಥಿಕ/ರಾಜಕೀಯ ಬದುಕಿನಿಂದ ವಿಮುಖವಾದುದರಿಂದಲೇ ಹೊಸಅಲೆಯ ಚಿತ್ರ ಚಳವಳಿ ಜನರಿಂದ ದೂರ ಸರಿಯಿತು. ಈ ಮಾತಿಗೆ ಸಾಕ್ಷಿ ಎಂಬಂತೆ ೧೯೮೩ರ ಏಪ್ರಿಲ್ ೧೨ರ ಸಿನಿಯಸ್ಟ್ (CINEASTE) ಪತ್ರಿಕೆಯಲ್ಲಿರುವ ಭಾರತೀಯ ಹೊಸಅಲೆ ಚಿತ್ರಗಳ ಹರಿಕಾರ ಸತ್ಯಜಿತ್ ರಾಯ್ ಅವರ ಸಂದರ್ಶನದಲ್ಲಿ ಅವರೇ ಆಡುವ ಈ ಮಾತುಗಳನ್ನು ಗಮನಿಸಿ :

''...'ಪ್ರತಿಧ್ವನಿ' ಚಿತ್ರದಲ್ಲಿ ನನ್ನ ದೃಷ್ಟಿಕೋನವನ್ನು ನೀವು ಗಮನಿಸಬಹುದು. ಅಲ್ಲಿ ಇಬ್ಬರು ಸಹೋದರರು ಇದ್ದಾರೆ. ತಮ್ಮ ನಕ್ಸಲೈಟ್. ಅಣ್ಣನಿಗೆ ಆತನ ಬಗ್ಗೆ ಆಸ್ಥೆಯಿದೆ. ಆದರೆ ಒಬ್ಬ ಚಿತ್ರ ನಿರ್ದೇಶಕನಾಗಿ ನನ್ನ ಆಸ್ಥೆಯಿರುವುದು ಅಣ್ಣನನ್ನು ಕುರಿತು. ಯಾಕೆಂದರೆ ಆತನದು ತುಯ್ದಾಡುವ ಮನಸ್ಸುಳ್ಳ ಪಾತ್ರ. ಪಾತ್ರದ ಮಾನಸಿಕ ಗೊಂದಲಗಳು, ಮಾನವ ಸಹಜ ಅನುಮಾನಗಳು ನನ್ನನ್ನು ಆಕರ್ಷಿಸುತ್ತವೆ. ಆದ್ದರಿಂದಲೇ ಮಾನಸಿಕ ಸ್ಥಿತಿಯಿಂದ ಗೊಂದಲ-ಸಂಕಷ್ಟವನ್ನು ಅನುಭವಿಸುವ ಪಾತ್ರಗಳನ್ನು ಕುರಿತು ನಾನು ಹೆಚ್ಚು ಗಮನ ಹರಿಸುತ್ತೇನೆ.''

ಇದೇ ಅಭಿಪ್ರಾಯದ ಪ್ರಭಾವವೋ ಎಂಬಂತೆ ಕನ್ನಡದ ಸಂದರ್ಭದಲ್ಲಿ ಹೊಸಅಲೆ ಚಿತ್ರ ಚಳವಳಿಯಲ್ಲಿ ಪ್ರಮುಖರಾದ ಗಿರೀಶ್ ಕಾಸರವಳ್ಳಿ ತಮ್ಮ ನಿರ್ದೇಶನದ ಚಿತ್ರಗಳನ್ನು ಕುರಿತು ಆಡುವ ಈ ಮಾತುಗಳನ್ನು ಗಮನಿಸಿ:

''ನಾನು 'ಘಟಶ್ರಾದ್ಧ'ದಲ್ಲಿ ಖಚಿತವಾದ ಕೆಡುಕನ್ನು - ಅದು ಬ್ರಾಹ್ಮಣ್ಯದ್ದು - ಗುರುತಿಸಿದರೆ, 'ತಬರನ ಕಥೆ'ಯಲ್ಲಿ ವ್ಯಕ್ತಿಯ ಒಳಗಡೆ ಇರುವ ಕೆಟ್ಟದ್ದರ ಕಲ್ಪನೆ, 'ಮನೆ'ಯಲ್ಲಿ ಮನುಷ್ಯನ ವರ್ತನೆಯಲ್ಲ, ಮನುಷ್ಯ ಮತ್ತು ಸಮಾಜದ ನಡುವಿನ ಘರ್ಷಣೆಯಲ್ಲಿರುವ ಕೆಡುಕನ್ನು ಗುರುತಿಸಿದೆ''.

ಈ ಚಿತ್ರಗಳಲ್ಲಿ 'ಘಟಶ್ರಾದ್ಧ' ೧೯ನೇ ಶತಮಾನದ ಆದಿಯಲ್ಲಿ ಬ್ರಾಹ್ಮಣ ಮನೆಗಳಲ್ಲಿದ್ದ ಆಚರಣೆಯನ್ನು ಕುರಿತು ೭೦ರ ದಶಕದ ಉತ್ತರಾರ್ಧದಲ್ಲಿ ಹೇಳುತ್ತದೆ. ಸಮಕಾಲೀನ ಪ್ರೇಕ್ಷಕರ ಪ್ರತಿಕ್ರಿಯೆಗೆ ಸಿಗದಂತಹ ವಸ್ತುವಿದು. ಕಾದಂಬರಿಯಲ್ಲೇ ಇದ್ದ ಸರ್ವಕಾಲೀನ ಆಗಬಹುದಾಗಿದ್ದ ಒಂದು ಹೇಳಿಕೆ, ಯಮುನಕ್ಕನಿಗೆ ದುರಂತ ಕ್ಷಣಗಳಲ್ಲಿ ಕ್ರಿಶ್ಚಿಯನ್ ಪಾದ್ರಿ ನೆರವು ನೀಡಲು ಮುಂದೆ ಬರುವುದನ್ನು ಇಡೀ ಚಿತ್ರದಲ್ಲಿನ ಧ್ಯಾನವನ್ನು ಬೇರೆಡೆ ವಿಕೇಂದ್ರೀಕರಿಸುತ್ತದೆ. ಅದ್ದರಿಂದ ಈ ಅಂಶ ಕೈ ಬಿಟ್ಟೆವೆಂದು ನಿರ್ದೇಶಕರು ಸಮಜಾಯಿಷಿ ನೀಡಿದ್ದಾರೆ. 'ತಬರನ ಕಥೆ'ಯಲ್ಲಿ ತನ್ನ ನಿವೃತ್ತಿ ವೇತನ ಪಡೆಯಲು ತಬರನಂತಹ ಅವಿದ್ಯಾವಂತ ಪಡುವ ಕಷ್ಟಗಳ ಕುರಿತ ಕಥೆಯಿದ್ದರೂ, ಚಿತ್ರದಲ್ಲಿ ತಬರನ ಮಾನಸಿಕ ಒಳತೋಟಿಗಳು ಪ್ರಮುಖವಾಗಿ ನೋಡುಗನನ್ನು ಚಿತ್ರ 'ಭಾವಶೂನ್ಯ' ಸ್ಥಿತಿಗೆ ತಳ್ಳುತ್ತದೆ. ('ಭಾವಶೂನ್ಯ'ತೆ ಎಂದು ಪದ ಬಳಸಲು ಕಾರಣವಿಷ್ಟೆ. ಜನಪ್ರಿಯ ಚಿತ್ರಗಳು ಪ್ರತಿಕ್ಷಣವೂ ತಮ್ಮ ನಾಟಕೀಯತೆಯಿಂದ ಪ್ರೇಕ್ಷಕನ ಚಿಂತನೆಗೂ ಅವಕಾಶ ಕೊಡದ ವೇಗದಲ್ಲಿ ಘಟನಾತ್ಮಕವಾಗಿ ಮುಂದುವರೆಯುತ್ತವೆ. ಹೀಗಾಗಿ ತೆರೆಯ ಮೇಲಿನ ಎಲ್ಲ ಆಗು-ಹೋಗುಗಳಿಗೆ ಪ್ರೇಕ್ಷಕ ನಿಷ್ಕ್ರಿಯವಾಗಿ ಪ್ರತಿಕ್ರಿಯಿಸುತ್ತಾನೆ. ಆದರೆ ಹೊಸಅಲೆ ಇಂತಹ ಮೆಲೊಡ್ರಾಮ ಅಥವಾ ಅತಿ ನಾಟಕೀಯತೆಯಿಂದ ದೂರ ಇರುವ ಪ್ರಯತ್ನದಲ್ಲಿ ಭಾವರಾಹಿತ್ಯವನ್ನೇ ಅಭಿನಯ ಎಂದು ಭಾವಿಸಿ ಅಳವಡಿಸಿಕೊಂಡಿದ್ದರಿಂದ ಆ ಚಿತ್ರದ ನೋಡುಗನ ಪ್ರತಿಕ್ರಿಯೆ ಬಹ್ವಂಶ

ಅಕಳಿಕೆಯಾಗಿರುತ್ತದೆ. ಹೀಗೆ ಉಂಟಾದ ಪ್ರತಿಕ್ರಿಯೆಯನ್ನು ನಾನು 'ಭಾವಶೂನ್ಯ' ಎಂದಿದ್ದೇನೆ) ಇನ್ನು 'ಮನೆ' ಚಿತ್ರದಲ್ಲಿ ಮಧ್ಯಮ ವರ್ಗದ ಸಂಸಾರವೊಂದರ ನೆಮ್ಮದಿಯ ಹುಡುಕಾಟದ ವಸ್ತುವಿದೆ. ಆದರೆ ಆ ಹುಡುಕಾಟದ ಹಾದಿಯಲ್ಲಿ ಪಾತ್ರ-ಪಾತ್ರಗಳ ನಡುವಿನ ಸಂಘರ್ಷಕ್ಕಿಂತ ಪಾತ್ರದೊಳಗಣ ಮಾನಸಿಕ ಸಂಘರ್ಷಕ್ಕೆ ಒತ್ತು ಇದ್ದುದರಿಂದ 'ಮನೆ' ಚಿತ್ರವೂ ಪ್ರೇಕ್ಷಕರಿಂದ ದೂರ ಉಳಿಯಿತು.

ಹೀಗೆ ಇಡೀ ಹೊಸಅಲೆ ಚಿತ್ರ ಚಳವಳಿ ಜನರಿಂದ ದೂರ ಸರಿಯಿತು. ಆದರೆ ಈ ಚಿತ್ರಗಳಲ್ಲಿ ಸಂಕಲನ ತಂತ್ರದ ಬಳಕೆಯ ದೃಷ್ಟಿಯಿಂದ ವಿಶಿಷ್ಟ ಪ್ರಯತ್ನಗಳಾದವು. ಉದಾಹರಣೆಗೆ 'ತಬರನ ಕಥೆ' ಚಿತ್ರದಲ್ಲಿ ತಬರ ಕಚೇರಿಯಿಂದ ಕಚೇರಿಗೆ ಸಾಗುವ ಮಾಂಟಾಜ್. ಎರಡನೆಯ ಮೂಲದ್ರವ್ಯವಾದ ಧ್ವನಿ ಮತ್ತು ಉತ್ತಮ ದೃಶ್ಯ ಸಂಯೋಜನೆ ಈ ಮಾಂಟಾಜ್‌ನ ವೈಶಿಷ್ಟ್ಯ (ಸಂಕಲನ : ಎಂ.ಎನ್.ಸ್ವಾಮಿ, ಛಾಯಾಗ್ರಹಣ : ಮಧು ಅಂಬಟ್). ಇದಲ್ಲದೆ ಚಿತ್ರದ ಆರಂಭದಲ್ಲಿ ಸೂರ್ಯೋದಯದಲ್ಲಿ ಕುಳಿತ ತಬರ ಸೂರ್ಯಾಸ್ತವನ್ನೇ ನೋಡುತ್ತೇನೆ ಎಂದೆನ್ನುತ್ತಾ ಚಿತ್ರದ ಅಂತ್ಯದಲ್ಲಿ, ಹೆಂಡತಿ-ಸಾಕುಮಗ ಎಲ್ಲರನ್ನೂ ಕಳಕೊಂಡ ಸ್ಥಿತಿಯಲ್ಲಿ, ಆರಂಭದಲ್ಲಿ ಕುಳಿತೆಡೆಯಲ್ಲಿಯೇ ಕುಳಿತು ಮುಳುಗುವ ಸೂರ್ಯನನ್ನು ನೋಡುವುದು ಇಡೀ ಚಿತ್ರಕ್ಕೆ ಸ್ಪಷ್ಟ ವೃತ್ತವನ್ನು ನಿರ್ಮಿಸಿತ್ತು (ಚಿತ್ರಕಥೆ : ಗಿರೀಶ್ ಕಾಸರವಳ್ಳಿ). ಇಂತಹ ಉತ್ತಮ ಸಂಕಲನವಿದ್ದ ಗಿರೀಶ್ ಕಾಸರವಳ್ಳಿಯವರ ಮತ್ತೊಂದು ಚಿತ್ರ 'ಮನೆ'. ಚಿತ್ರದುದ್ದಕ್ಕೂ ಎಚ್ಚರಿಕೆಯಿಂದ ಬಳಸಿದ್ದ ಹಳದಿ ಬಣ್ಣ ಮತ್ತು ನಾಯಕ ಪಾತ್ರದ ಅನುಮಾನದ, ಅಂದರೆ ಕಾಮಾಲೆ ಕಣ್ಣಿನ ಮನಸ್ಸುಗಳು ಸಮೀಕರಣವಾಗಿ ಚಿತ್ರದುದ್ದಕ್ಕೂ ದೃಶ್ಯವನ್ನು ಮೀರಿದ ಧ್ವನಿಗಳನ್ನು ಹೊರಡಿಸುತ್ತಿದ್ದವು. ಚಿತ್ರದ ಆರಂಭಿಕ ಹಂತದ ದೃಶ್ಯದಲ್ಲಿ ನಾಯಕನಿಗೆ ತೊಂದರೆ ಕೊಡುತ್ತಿರುವ ಪೆಡ್ಡಿನವರು ಅವನಿಂದಲೇ ನೀರು ಪಡೆಯುವುದು ಹಳದಿ ಕೈ ಚೀಲ ಹಾಕಿಕೊಂಡು ನಾಯಕ ತನ್ನ ಮೇಲೆಯೇ ಕೈಗಾಡಿ ಬರುತ್ತಿದೆಯೋ ಎಂದು ತಪ್ಪಿಸಿಕೊಳ್ಳುವ ಸನ್ನಿವೇಶದಲ್ಲಿ ಗಾಡಿಯ ತುಂಬ ಇರುವುದು ಹಳದಿ ಬಣ್ಣದ ಡ್ರಮ್ಮುಗಳು. ನಿದ್ದೆಗೆಟ್ಟ ರಾತ್ರಿಯಲ್ಲಿ ಗಂಡ-ಹೆಂಡತಿ ಪಾರ್ಕಿನಲ್ಲಿ ಕುಳಿತಿರುವಾಗ ಅವರೆದುರು ಬಂದು ನಿಲ್ಲುವ ಕಾರು ಹಳದಿ ಬಣ್ಣದ್ದು. ನಾಯಕ ದುಡಿಯುತ್ತಿರುವ ಕಾರ್ಖಾನೆಯಲ್ಲಿರುವ ಬೃಹತ್ ಯಂತ್ರಗಳು ಹಳದಿ. ಹೀಗೆ 'ಹಳದಿ' ಎಂದು ಹೊರಗಿನಿಂದ ಬಂದು ಕಾಡುವ ಸಮಸ್ಯೆಯು ನಾಯಕನೇ 'ಮನೆಯಲ್ಲಿ ಇರುವ ಇದೆ' ಎಂಬ ಭಯಕ್ಕೆ ಇಡೀ ಮನೆಗೆ ಅರಿಶಿನ ಹಚ್ಚಿ ತಾನು ನಡುಮಧ್ಯೆ ಕುಳಿತಾಗ ಪರಾಕಾಷ್ಠೆ ತಲುಪುತ್ತದೆ. ಹೀಗೆ ಬಣ್ಣಗಳ ಮೂಲಕವೇ ಭಾವವನ್ನು ತಲುಪಿಸುವ ಯತ್ನ ಕನ್ನಡದ ಸಂದರ್ಭದಲ್ಲಿ ಪ್ರಥಮ ಎಂದೆನ್ನಬಹುದು. ಇದಕ್ಕೆ ಎಲ್ಲ ರೀತಿಯ ಹಳದಿ ವರ್ಣಗಳು ತೆರೆಯ ಮೇಲೆ ಮೂಡುವಂತೆ ವರ್ಣ ಚಿತ್ರವನ್ನು ದುಡಿಸಿಕೊಂಡ ಛಾಯಾಗ್ರಾಹಕರು (ಎಸ್.ರಾಮಚಂದ್ರ) ಸಹ ಕಾರಣರಾಗಿದ್ದಾರೆ.

ಬಣ್ಣಗಳ ಬಳಕೆ ಒಂದೆಡೆಗಾದರೆ ಇದೇ ಚಿತ್ರದಲ್ಲಿ ಧ್ವನಿ ವಿಶೇಷವಾಗಿ ಕಿವಿಗಪ್ಪಳಿಸುವ ಸದ್ದುಗಳನ್ನು ಕುರಿತ ಆಖ್ಯಾನವನ್ನು ಗಮನಿಸಬಹುದು (ಧ್ವನಿಗ್ರಹಣ: ಮಹೇಂದ್ರನ್). ಚಿತ್ರದ ನಾಯಕನ ನಿದ್ದೆಗೆಡಿಸುತ್ತಿರುವುದು ಮನೆಯ ಪಕ್ಕದಲ್ಲಿ ಇರುವ ಪೆಡ್ಡಿನಿಂದ ಹೊರಡುತ್ತಿರುವ ಸದ್ದು. ಆ ವರ್ಕ್‌ಷಾಪನ್ನು ಎತ್ತಂಗಡಿ ಮಾಡಿಸಲೆಂದು ಆತ ಕಾರ್ಪೊರೇಷನ್ನಿಗೆ ಅರ್ಜಿ ಒಯ್ಯುತ್ತಾನೆ. ಅವನು ಸಾಗುವ ಹಾದಿಯಲ್ಲಿ ಸರ್ಕಾರಕ್ಕೆ ಧಿಕ್ಕಾರ ಕೂಗುತ್ತಿರುವವರ ದೊಡ್ಡ ಗುಂಪಿದೆ. ಕಿವಿಗಪ್ಪಳಿಸುವ ಆ ಸದ್ದುಗಳನ್ನು ದಾಟಿ ನಾಯಕ ಸರ್ಕಾರಿ ಅಧಿಕಾರಿಯ ಭೇಟಿಗೆ ಸಾಗುತ್ತಾನೆ. ಅಲ್ಲಿ ಅವನಂತೆಯೇ ದೂರಿನ ಅರ್ಜಿ ಹಿಡಿದವರ ದೊಡ್ಡ ಸಾಲಿದೆ. ಅವರ ನಡುವೆ ನಿಂತವನಿಗೆ ಸರ್ಕಾರಿ ಕಟ್ಟಡದ ನಡುವೆ, ಜಗತ್ತಿನ ಸದ್ದುಗಳ ಪರಿವೆಯೇ ಇಲ್ಲದಂತೆ, ಹೂ ತೋಟಕ್ಕೆ ನೀರನ್ನುಣಿಸುತ್ತಿರುವ ಮಾಲಿ ಕಾಣುತ್ತಾನೆ. ನಗರ ಜೀವನದ ವೈರುಧ್ಯವನ್ನು ಕಾಣಿಸುವ ಈ ದೃಶ್ಯದ ನಂತರ ನಾಯಕ ಸರ್ಕಾರಿ ಅಧಿಕಾರಿಯ ಭೇಟಿಗೆ ಸಾಗುತ್ತಾನೆ. ಕಚೇರಿಯ ಒಳಗೆ ಬೃಹದಾಕಾರದ ಟೇಬಲ್ಲಿನ ಒಂದು ತುದಿಗೆ ಕುಳಿತ ಅಧಿಕಾರಿ ಇರುವುದು ಸೂಜಿ ಬಿದ್ದರೂ ಕೇಳುವಂತಹ ಮೌನವಿರುವ ಕೋಣೆಯಲ್ಲಿ. ಅದನ್ನು ಸೂಚಿಸಲೆಂಬಂತೆ ಸೂಜಿ ಬೀಳುವ ಸದ್ದನ್ನುಳ್ಳ ಚಿತ್ರಿಕೆಯೂ ದೃಶ್ಯದ ನಡುವೆ ಬರುತ್ತದೆ. ಅಧಿಕಾರಿಯ ಹಿಂದಿರುವ ಕಿಟಕಿಯಲ್ಲಿ ಧಿಕ್ಕಾರ ಕೂಗುವವರ ಕೈ ಸನ್ನೆಗಳು ಕಾಣುತ್ತಿವೆ, ಧ್ವನಿ ಇಲ್ಲ. ಇಂತಹ ಕೂಗುಗಳು ಅಧಿಕಾರದ ಕುರ್ಚಿಯಲ್ಲಿ ಕುಳಿತವರಿಗೆ ತಲುಪುವುದಿಲ್ಲ ಎಂಬುದನ್ನು ಅತ್ಯಂತ ಸೂಚ್ಯವಾಗಿ ಚಿತ್ರ ತಿಳಿಸಿಬಿಡುತ್ತದೆ. ಇಂತಹ ವಿಶಿಷ್ಟ ಧ್ವನಿ ವಿನ್ಯಾಸದ ಅನೇಕ ದೃಶ್ಯಗಳು 'ಮನೆ' ಚಿತ್ರದಲ್ಲಿವೆ. ಅವುಗಳಲ್ಲಿ ನಾಯಕ ದುಡಿಯುತ್ತಿರುವ ಕಾರ್ಖಾನೆಯ ಕಿವಿಗಡಚಿಕ್ಕುವ ಸದ್ದಿನ ನಡುವೆ ಅವನಿಗೆ ಫೋನ್ ಬಂದಿದೆ ಎಂದು ಸಹೋದ್ಯೋಗಿ ತಿಳಿಸುವುದು, ನಾಯಕ ಟೆಲಿಫೋನ್ ಬೂತಿನ ಒಳಗೆ ಸಾಗಿದಾಗ ಫ್ಯಾಕ್ಟರಿಯ ಶಬ್ದ ಕೇಳದಂತೆ ಇರುವುದು, ನಾಯಕ ತಾನು ಗೆದ್ದದ್ದಕ್ಕೆ ಬೂತಿನ ಒಳಗೆ ಸಂತಸದಿಂದ ಕುಣಿಯುವಾಗ ಹೊರಗಿನ ಸದ್ದುಗಳ ಜೊತೆ ಗಾಜಿನ ಕೋಣೆಯಲ್ಲಿ ಕುಣಿಯುವವನು ಮಂಗನಂತೆ ಕಾಣುವ ದೃಶ್ಯ. ಹೀಗೆ ಚಿತ್ರದುದ್ದಕ್ಕೂ ಧ್ವನಿ ಸಂಕಲನ ವೈಶಿಷ್ಟ್ಯವಿರುವ ಅನೇಕ ದೃಶ್ಯಗಳನ್ನು ಉದಾಹರಿಸಬಹುದು.

ಒಟ್ಟಾರೆಯಾಗಿ 'ಮನೆ' ಚಿತ್ರ ಪ್ರಜ್ಞಾಪೂರ್ವಕವಾಗಿ ಜನರನ್ನು ಮೆಲೋಡ್ರಾಮದತ್ತ ಒಯ್ಯದ ಕಥೆಯನ್ನು ನಿರುದ್ವಿಗ್ನವಾಗಿ ಬಿಡಿಸಿಡುತ್ತದೆ. ಇದು ಸಾಮಾನ್ಯ ಪ್ರೇಕ್ಷಕನಿಗೆ ಸಂಪೂರ್ಣವಾಗಿ ಅಪರಿಚಿತವಾಗಿಯೇ ಉಳಿದಂತಹ ನಿರೂಪಣಾ ಕ್ರಮ. ಹೀಗಾಗಿ 'ಮನೆ'ಯಂತಹ ಉತ್ತಮ ಸಂಕಲನವಿದ್ದ ಚಿತ್ರ ಕೇವಲ ಪ್ರಾಯೋಗಿಕವಾಗಿ ಮಾತ್ರ ಉಳಿಯುತ್ತದೆ ಮತ್ತು ಆ ಪ್ರಯೋಗ ಕುರಿತು ನಮ್ಮ ವಿಮರ್ಶಕರಿಗಿಂತ ಹೆಚ್ಚು ಸ್ಪಷ್ಟವಾಗಿ ಮಾತನಾಡಿದವರು ವಿದೇಶಿ ಉಪನ್ಯಾಸಕರು ಎಂಬುದು ನಮ್ಮ ಹೊಸಅಲೆ ಚಿತ್ರ ಚಳವಳಿ ತನ್ನ ಬೆಳವಣಿಗೆಯ ಹಾದಿಯಲ್ಲಿ ಕೇವಲ ಪ್ರೇಕ್ಷಕರನ್ನಲ್ಲ, ವಿಮರ್ಶಕರನ್ನು ರೂಪಿಸುವ ಕೆಲಸವನ್ನೂ ಮಾಡಲಿಲ್ಲ ಎಂಬುದನ್ನು ಸೂಚಿಸುತ್ತದೆ.

ಈ ಮಾತುಗಳು ಕಾಸರವಳ್ಳಿಯವರ ನಿರ್ದೇಶನದ 'ಕ್ರೌರ್ಯ', 'ತಾಯಿ ಸಾಹೇಬ' ಚಿತ್ರಗಳಿಗೂ ಅನ್ವಯಿಸುವಂತಹವು. ಇವುಗಳಲ್ಲಿ ಮೊದಲಿನದು ಇದುವರೆವಿಗೂ ಬಿಡುಗಡೆಯ ಸುಖವನ್ನೇ ಕಾಣಲಿಲ್ಲ. ಎರಡನೆಯದು ಬಿಡುಗಡೆಯಾದರೂ ಹೆಚ್ಚು ಜನ ನೋಡಲಿಲ್ಲ. ಹೀಗಾಗಿ ಸಂಕಲನ ತಂತ್ರದ ದೃಷ್ಟಿಯಿಂದ, ಕಥನದ ಸುರಳೀತ ಹರಿವಿನ (ಲೂಸಿಡ್) ದೃಷ್ಟಿಯಿಂದ ಕಾಸರವಳ್ಳಿಯವರ ಬಹುತೇಕ ಚಿತ್ರಗಳು ಅತ್ಯುತ್ತಮವಾದದ್ದು ಎನಿಸಿದರೂ ಅವುಗಳ ಕಥಾವಿನ್ಯಾಸದಲ್ಲಿ, ಕಥನದಲ್ಲಿ ಇರುವ ನಿರುದ್ವಿಗ್ನತೆಯಿಂದಾಗಿ ಆ ಪ್ರಯೋಗಗಳು ಉದ್ಯಮದ ಪ್ರಧಾನವಾಹಿನಿಯನ್ನು ತಲುಪಲೇ ಇಲ್ಲ. ''ಚಿತ್ರವೊಂದರ ಕಥನ ಮತ್ತು ಲಯ ಆಯಾ ನಿರ್ದೇಶಕನ ರಾಜಕೀಯ ಸಿದ್ಧಾಂತ'' ಎಂದು ಗಿರೀಶ್ ಕಾಸರವಳ್ಳಿಯವರು ಹೇಳುತ್ತಾರಾದರೂ ಅವರ ಪ್ರಯೋಗಗಳ ಫಲ ಕನ್ನಡದ ಸಾಮಾನ್ಯ ಪ್ರೇಕ್ಷಕನಿಗೆ ತಲುಪಲಿಲ್ಲ ಎಂಬುದು ಸರಳ ಸತ್ಯ.

ಹೊಸಅಲೆಯ ಹಣೆಪಟ್ಟಿಯೊಡನೆ ಇಂತಹ ಇನ್ನೂ ಅನೇಕ ಚಿತ್ರಗಳು ಬಂದವು. ಅವುಗಳೆಲ್ಲ ವಸ್ತುವಿನ ಆಯ್ಕೆಯ ದೃಷ್ಟಿಯಿಂದ ಪ್ರಧಾನವಾಹಿನಿಗಿಂತ ಭಿನ್ನವಾಗಿದ್ದವು. ಆದರೆ ''ನಾವು ಅವರಿಗಿಂತ ಬೇರೆಯಾಗಬೇಕು'' ಎಂಬ ಉದ್ದಿಶ್ಯ ಸಾಧನೆಯನ್ನೇ ಮುಖ್ಯವಾಗಿ ಇಟ್ಟುಕೊಂಡವರು ವಾಣಿಜ್ಯ ಪ್ರಧಾನ ಚಿತ್ರಗಳಲ್ಲಿ ಆದಾಗಲೇ ಯಶಸ್ವಿ ಎನಿಸಿಕೊಂಡಿದ್ದ ಅನೇಕ ತಂತ್ರಗಳನ್ನೂ ಬಿಟ್ಟು ಸಿನಿಮಾಕ್ಕಿರಬೇಕಾದ ಮೂಲ ವ್ಯಾಕರಣವನ್ನು ಮರೆತವರಂತೆ ಚಿತ್ರ ಸಿದ್ಧಪಡಿಸತೊಡಗಿದ್ದರಿಂದ ಹೊಸಅಲೆಯ ಚಿತ್ರ ಚಳವಳಿ ಜನರಿಂದ ಮತ್ತಷ್ಟು ದೂರ ಸರಿಯಿತು ಎನ್ನುತ್ತಾರೆ ಗಿರೀಶ್ ಕಾಸರವಳ್ಳಿ ಹೊಸಅಲೆ ಕುರಿತು ಬರೆದ ಲೇಖನದಲ್ಲಿ.

ಆದರೂ ಈ ಚಳವಳಿಯಡಿಯಲ್ಲಿ ಬಂದ ಪ್ರೇಮಾ ಕಾರಂತರ ನಿರ್ದೇಶನದ 'ಫಣಿಯಮ್ಮ', ಕಟ್ಟೆ ರಾಮಚಂದ್ರ ನಿರ್ದೇಶನದ 'ಅರಿವು', ಕೆ.ಎಸ್.ಎಲ್.ಸ್ವಾಮಿ (ರವೀ) ನಿರ್ದೇಶನದ 'ಹರಕೆಯ ಕುರಿ', ಟಿ.ಎಸ್.ರಂಗಾ ಅವರ 'ಸಾವಿತ್ರಿ', 'ಗೀಜಗನ ಗೂಡು', ಜಿ.ವಿ.ಅಯ್ಯರ್ ನಿರ್ದೇಶನದ 'ಹಂಸಗೀತೆ', 'ಆದಿಶಂಕರ', 'ಮಧ್ವಾಚಾರ್ಯ' ಚಿತ್ರಗಳು ಹಾಗು ನಾಗಾಭರಣ ನಿರ್ದೇಶನದ 'ಗ್ರಹಣ', 'ಬ್ಯಾಂಕರ್ ಮಾರ್ಗಯ್ಯ' ಚಿತ್ರಗಳು ಸಂಕಲನ / ಮಾತುಗಳ ಬಳಕೆ -ಹೀಗೆ ವಿಭಿನ್ನ ವಿಭಾಗಗಳಲ್ಲಿ ಗುರುತಿಸಬಹುದಾದ ಪ್ರಯತ್ನಗಳನ್ನು ಮಾಡಿದ್ದವು. ಈ ವಿಶಿಷ್ಟ ಪ್ರಯತ್ನಕ್ಕೆ ಸರ್ಕಾರಗಳಿಂದ ಪ್ರಶಸ್ತಿಯ ಗೌರವ ಸಿಕ್ಕಿದ್ದನ್ನು ಬಿಟ್ಟು ಮತ್ತಾವ ಅನುಕೂಲವೂ ಒಟ್ಟಾರೆಯಾಗಿ ಚಲನಚಿತ್ರ ತಂತ್ರಜ್ಞಾನಕ್ಕೆ ದೊರಕಲಿಲ್ಲ.

ಪ್ರಖ್ಯಾತ ಕಲಾವಿಮರ್ಶಕ ಹೇಡನ್ ವೈಟ್ (Hayden White) ಪ್ರಕಾರ ''ಒಂದು ಸಂಸ್ಕೃತಿಯ ಮೂಲಭೂತ ಚಟುವಟಿಕೆ ನಿರಂತರವಾಗಿ ಕಥೆ ಹೆಣೆಯುವುದು. ಕಥನ ಮತ್ತು ಸಂಸ್ಕೃತಿಗಳ ನಡುವಣ ಸಂಬಂಧವನ್ನು ಉಳಿಸುವುದು'' ಎಂದಿದ್ದರು ನಿರ್ದೇಶಕ ಭಾರ್ಗವ ಮತ್ತು ವಿ.ಸೋಮಶೇಖರ್ ಸಂದರ್ಶನವೊಂದರಲ್ಲಿ.

ಈ ನಿಟ್ಟಿನಲ್ಲಿ ಆಲೋಚಿಸಿಯೇ ೬೦ರ ದಶಕದ ಆರಂಭದಲ್ಲಿ ಫ್ರಾನ್ಸಿನಲ್ಲಾದ 'ಸಿನಿಮಾ ವೆರಿಟೆ' ಚಿತ್ರ ಚಳವಳಿಯಲ್ಲಿದ್ದ ಚಿತ್ರ ನಿರ್ದೇಶಕರೆಲ್ಲರೂ ಸೇರಿ, ತಮ್ಮ ಮುಂದಿನ ಹಾದಿಯನ್ನು ಚರ್ಚಿಸಿ ತೀರ್ಮಾನಿಸಿದಂತೆ ನಮ್ಮಲ್ಲಿನ ಹೊಸಅಲೆಯ ನೇತಾರರು ಒಂದೆಡೆ ಸೇರಿ ತಮ್ಮ ಮುಂದಿರುವ ಹಾದಿಯನ್ನು ಕುರಿತು ಯಾವುದೇ ತೀರ್ಮಾನ ತೆಗೆದುಕೊಳ್ಳಲಿಲ್ಲ. ಹೀಗಾಗಿ ಹೊಸಅಲೆ ಚಳವಳಿಯಲ್ಲಿ ಕಥನಕ್ಕೆ ಪ್ರಾಧಾನ್ಯ ದೊರೆಯದೆ ಕೇವಲ ವಸ್ತುವಿಗೆ ಮಾತ್ರ ಪ್ರಾಧಾನ್ಯ ದೊರೆಯಿತು. ಇದರಿಂದಾಗಿ ವಾಣಿಜ್ಯ

ಪ್ರಧಾನ ಚಿತ್ರಗಳು ಮತ್ತು ಹೊಸಅಲೆಯ ಚಿತ್ರ ಚಳವಳಿಗಳು ಸಮಾನಾಂತರವಾಗಿ ಬೆಳೆಯಲಾರಂಭಿಸಿದವು. ಇದಲ್ಲದೆ ೬೦ರ ದಶಕದ ಅಂತ್ಯ ಭಾಗದಿಂದ ೭೦ರ ದಶಕದ ಮೊದಲರ್ಧದವರೆಗೂ ತಮ್ಮ ಚಿತ್ರಗಳಲ್ಲಿ ಗಾಂಭೀರ್ಯವನ್ನು ಬೆರೆಸುವ ಪ್ರಯತ್ನ ಮಾಡುತ್ತಿದ್ದ ವಾಣಿಜ್ಯ ಪ್ರಧಾನ ಚಿತ್ರೋದ್ಯಮ ಆ ಗಾಂಭೀರ್ಯವೆಲ್ಲವೂ ಹೊಸಅಲೆಯದೆಂಬ ತೀರ್ಮಾನಕ್ಕೆ ಬಂದಂತೆ ಕೇವಲ ಮನರಂಜನಾ ಪ್ರಧಾನ ಚಿತ್ರಗಳನ್ನು ತಯಾರಿಸತೊಡಗಿತು. ಈ ನಿಟ್ಟಿನಲ್ಲಿ ಪುಟ್ಟಣ್ಣ ಕಣಗಾಲರಂತಹ ಹಿರಿಯ ನಿರ್ದೇಶಕರು ಸಹ 'ಬೆಳ್ಳಿಮೋಡ', 'ಗೆಜ್ಜೆಪೂಜೆ'ಯಲ್ಲಿ ದುರ್ಬಲ ವರ್ಗದ ಬಗ್ಗೆ ಸಹಾನುಭೂತಿ ಇದ್ದವರಂತ ಕಂಡರೆ ನಂತರದ 'ನಾಗರ ಹಾವು', 'ಎಡಕಲ್ಲು ಗುಡ್ಡದ ಮೇಲೆ', 'ಉಪಾಸನೆ', 'ಧರ್ಮಸೆರೆ' ಚಿತ್ರಗಳಲ್ಲಿ ಪ್ರತಿಗಾಮಿ ನಿಲುವು ತಳೆಯುವುದನ್ನು, ಸನಾತನ ವಾದವನ್ನು ಎತ್ತಿ ಹಿಡಿಯುವುದನ್ನು ಗಮನಿಸಬಹುದು.

ಈ ಪರಿಸ್ಥಿತಿಯ ಮುಂದುವರಿಕೆಯಂತೆ ಎರಡೂ ಚಿತ್ರ ಚಳವಳಿಯ ನಡುವೆ ಹೀಗಳಿಕೆ, ಮೂದಲಿಕೆಗಳ ಯತ್ನಗಳಾದವು. ಒಂದು ಗುಂಪಿನ ಜನ 'ಪ್ರಶಸ್ತಿ ಪಡೆಯಲೆಂದೇ ಚಿತ್ರ ತೆಗೆಯುವವರು ಉದ್ಯಮದ ಏಳಿಗೆಗೆ ಸಹಾಯ ಮಾಡುವವರಲ್ಲ' ಎಂಬ ನಿಲುವು ತಳೆದರು. ಮತ್ತು 'ಪ್ರಶಸ್ತಿಗಾಗಿ ಚಿತ್ರ ತೆಗೆಯುವುದು ತಮಗೆ ಬಿಟಿಕೆಯಲ್ಲಾಗುವ ಕೆಲಸ' ಎಂಬ ಭಾವ ವ್ಯಕ್ತಪಡಿಸಿದರು. ಇತ್ತ ಹೊಸಅಲೆಯಲ್ಲಿ ಗಿರೀಶ್ ಕಾಸರವಳ್ಳಿಯವರಂತಹ ಒಬ್ಬಿಬ್ಬರನ್ನು ಬಿಟ್ಟರೆ ಉಳಿದವರು ಕೇವಲ ಸೋಗಿನ ಗಾಂಭೀರ್ಯದ ಚಿತ್ರಗಳನ್ನು ನಿರ್ಮಿಸತೊಡಗಿದರು. ಈ ವಿಷಯ ಕುರಿತಂತೆ ಗಿರೀಶ್ ಕಾಸರವಳ್ಳಿಯವರು ಒಂದೆಡೆ ಹೀಗೆನ್ನುತ್ತಾರೆ. "ಹೊಸಅಲೆಯ ಹಣೆಪಟ್ಟಿಯಲ್ಲಿ ಹೊರಬಂದ ಅನೇಕ ಚಿತ್ರಗಳು ಪ್ರೇಕ್ಷಕನಿಗೆ ನೀಡ ಹೊರಟ ಜೀವನ ದರ್ಶನವಾಗಲಿ, ಕಾಣ್ಕೆಯ ಬಗ್ಗೆಯಾಗಲಿ ತಲೆ ಕೆಡಿಸಿಕೊಳ್ಳದೆ, ಆ ಅಲೆಯನ್ನು ಅದರ ತಂತ್ರಕ್ಕಾಗಿ ಮಾತ್ರ ಆರಿಸಿದ್ದು. ಅದೇಕೋ ವಿಮರ್ಶಕರ ವರ್ಗವೂ ಈ ಪಲ್ಲಟವನ್ನು ಗುರುತಿಸದೆ ಹೋದ್ದರಿಂದ ಎಷ್ಟೋ ಚಿತ್ರಗಳು ಹೊಸಅಲೆಯ ಗುಂಪಿಗೆ ಸೇರಿಕೊಂಡದ್ದು ವಿಪರ್ಯಾಸ".

ಇವೆಲ್ಲವುಗಳ ಪರಿಣಾಮ ಎಂಬಂತೆ ಕನ್ನಡದ ಹೊಸಅಲೆಯ ಚಿತ್ರ ಚಳವಳಿ ಕನ್ನಡದ ತಂತ್ರಜ್ಞರೆದುರಿಗೆ ತಂದಿಟ್ಟ ಸವಾಲುಗಳು, ಅದನ್ನು ಆ ತಂತ್ರಜ್ಞರು ನಿಭಾಯಿಸಿದ ರೀತಿಗಳು ಮುಂದಿನ ತಲೆಮಾರಿಗೆ (ಅಥವಾ ಹೊಸಬರಿಗೆ) ದೊರಕಲೇ ಇಲ್ಲ. ಇದರಿಂದಾಗಿ ಹೊಸ ಪೀಳಿಗೆಯವರು ಈಚೆಗೆ ತೆರೆಗಿತ್ತ 'ಭೂಮಿಗೀತ' (ನಿರ್ದೇಶನ : ಕೇಸರಿ ಹರವು), 'ದೇವೀರಿ' (ನಿರ್ದೇಶನ : ಕವಿತಾ ಲಂಕೇಶ್)ಯಂತಹ ಚಿತ್ರಗಳು ಚಿತ್ರಕಥಾ ರಚನೆಯ ಹಂತದಲ್ಲಿಯೇ ಗೊಂದಲಕ್ಕೆ ಸಿಲುಕಿದಂತೆ ಕಾಣುತ್ತವೆ. ಮೊದಲ ಚಿತ್ರದಲ್ಲಿ ವಾಣಿಜ್ಯ ಪ್ರಧಾನ ಚಿತ್ರಗಳಂತಹ ವೇಗ ಮತ್ತು ಘಟನಾತ್ಮಕ ಕಥನವಿದೆ. ಅದು ಛಾಯಾಗ್ರಹಣ ಮತ್ತು ಸಂಕಲನದ ಮೇಲೆ ನೇರ ಪ್ರಭಾವ ಬೀರಿರುವುದರಿಂದ ಎರಡೂ ವಿಭಾಗದಲ್ಲಿಯೂ ಸ್ವಜತೆಗೆ ಒತ್ತು ಕೊಡಬೇಕೋ, ಅಲಂಕರಣ ಅಥವಾ ಗ್ಲಾಮರೈಸೇಷನ್‌ಗೆ ಒತ್ತು ಕೊಡಬೇಕೋ ಎಂಬ ಗೊಂದಲ ಮುಂದುವರೆದಿದೆ. ಇದು ವಸ್ತ್ರವಿನ್ಯಾಸದ ಮೇಲೂ ಮಾಡಿರುವ ಪರಿಣಾಮದಿಂದಾಗಿ ಇಡೀ ಚಿತ್ರ ಭಾರತೀಯ ಸಹಜ ವಾಸ್ತವ ಎನಿಸುವ ಬದಲು ಕೃತಕ ವಾಸ್ತವವನ್ನು ನಿರ್ಮಿಸುತ್ತಾ ಸಾಗುತ್ತದೆ.

'ದೇವೀರಿ' ಆ ನಿರ್ದೇಶಕಿಯ ಪ್ರಥಮ ಪ್ರಯತ್ನವೆಂಬ ಕಾರಣಕ್ಕೆ ಅನೇಕ ರಿಯಾಯಿತಿ ಪಡೆಯುತ್ತದಾದರೂ ಚಿತ್ರಕಥಾ ರಚನೆಯ ಹಂತದಲ್ಲಿ ಅಕ್ಕನ ಕಣ್ಣ ಮೂಲಕ ಇಡೀ ಚಿತ್ರವನ್ನು ನೋಡಬೇಕೋ ಇಲ್ಲ, ಪುಟ್ಟ ಹುಡುಗನ ಮೂಲಕ ಚಿತ್ರದ ಕಥೆಯನ್ನು ಅನಾವರಣಗೊಳಿಸಬೇಕೊ ಎಂಬ ಗೊಂದಲದೊಡನೆ ದೃಶ್ಯ ಜೋಡಿಸಿದೆ. ಹೀಗಾಗಿ ಇಡೀ ಚಿತ್ರವೇ (ಈ ಹಿಂದೆ ವಿವರಿಸಿದ) ಮಾಂಟಾಜ್‌ನಂತೆ ಕಾಣುತ್ತದೆ. ಇದರಿಂದಾಗಿ ಸಂಕಲನಕಾರನ ಕೆಲಸವೂ ಕೊಲಾಜ್ ನಿರ್ಮಾಣದ ಕಸರತ್ತಾದಂತಿದೆ. ಕಥನಕ್ಕೆ ನಿರಂತರತೆ ದೊರೆಯದೆ ಇರುವುದರಿಂದ, ಯಾವ ಪಾತ್ರವೂ ಪ್ರಭಾವ ಬೀರುವ ಮಟ್ಟಕ್ಕೆ ಏರದೆ ಕೇವಲ ಬಂದು ಹೋಗುತ್ತವೆ.

ಈ ಹಂತದಲ್ಲಿ ಹಿಂದಿರುಗಿ ನೋಡಿದಾಗ ಜಿ.ವಿ.ಅಯ್ಯರ್ ಅವರ 'ಹಂಸಗೀತೆ' ಯಲ್ಲಿನ (ಸಂಕಲನ : ವಿ.ಆರ್.ಕೆ.ಪ್ರಸಾದ್) ಸಂಕಲನದ ಬಳಕೆ, ನಿರೂಪಣಾ ವಿಧಾನ - ಪ್ರೇಮಾ ಕಾರಂತರ 'ಫಣಿಯಮ್ಮ' (ಸಂಕಲನ : ಅರುಣಾ ವಿಕಾಸ್) ಚಿತ್ರದಲ್ಲಿ ಫ್ಲಾಶ್ ಬ್ಯಾಕ್ ತಂತ್ರದ ಮೂಲಕ ಬಿಚ್ಚಿಕೊಳ್ಳುವ ವೃದ್ಧ ವಿಧವೆಯ ಬದುಕು ಮತ್ತು ಬ್ರಾಹ್ಮಣ ವ್ಯವಸ್ಥೆಯ ಕ್ರೌರ್ಯದ ಪರಿಚಯ - ಗಿರೀಶ್ ಕಾಸರವಳ್ಳಿಯವರ ಬಹುತೇಕ ಎಲ್ಲಾ ಚಿತ್ರಗಳಲ್ಲಿಯೂ (ಈಚಿನ 'ತಾಯಿ ಸಾಹೇಬ'ವರೆಗೆ) ಇರುವ ಸರಳೀತ ಹಾಗೂ ಸ್ಪಷ್ಟ ಓಟ, ನಿರುದ್ವಿಗ್ನ ಅನಾವರಣ... ಇಂತಹವು ಇಡೀ ಚಿತ್ರೋದ್ಯಮ ಬಳಸಬಹುದಾಗಿದ್ದ ಸಾಧನಗಳು. ಆದರೆ ಒಂದು ಮತ್ತೊಂದಕ್ಕೆ ವಿಮುಖವಾಗಿದ್ದರ ಪರಿಣಾಮವಾಗಿ ಇಂದು ಕನ್ನಡದ ಹೊಸಅಲೆ ಮಾತ್ರವಲ್ಲ, ವಾಣಿಜ್ಯ ಪ್ರಧಾನ ಚಿತ್ರಗಳಲ್ಲೂ ಗೊಂದಲಮಯ ತಂತ್ರ ಬಳಕೆಯಾಗುತ್ತಿದೆ.

ಈ ನಿಟ್ಟಿನಲ್ಲಿ ೧೯೭೯ರಲ್ಲಿ ಭಾರತದ ಪ್ರಖ್ಯಾತ ರಂಗನಟ ಹಾಗೂ ಚಿತ್ರನಟ ಉತ್ಪಲ್‌ದತ್ ಅವರ ಮಾತುಗಳು ನಮ್ಮ ಪ್ರೇಕ್ಷಕನ ಪರಿಸ್ಥಿತಿಯನ್ನು ಸ್ಪಷ್ಟಪಡಿಸುತ್ತವೆ:

"ನಮ್ಮ ಜನರನ್ನು ವಾಣಿಜ್ಯ ಪ್ರಧಾನ ಚಿತ್ರ ತಯಾರಕರು ತಮ್ಮ ದುರಾಲೋಚನೆಯ ಮೂಲಕ ಕೊಲ್ಲುತ್ತಿದ್ದರೆ ನಮ್ಮ ಬುದ್ಧಿಜೀವಿ ಚಿತ್ರ ತಯಾರಕರು ಸಾಮಾನ್ಯ ಜನರಲ್ಲಿ ಸಣ್ಣ ಕದಲಿಕೆಯನ್ನೂ ಉಂಟುಮಾಡದಂತಹ ಚಿತ್ರ ತಯಾರಿಸಿ ಕೊಲ್ಲುತ್ತಿದ್ದಾರೆ."

ಈ ಸ್ಥಿತಿಯ ಪರಿಣಾಮದಿಂದಾಗಿ ಭಾರತದ ಚಿತ್ರೋದ್ಯಮ 'ಸಮಾನಾಂತರ ಚಿತ್ರಗಳು' ಎಂಬ ಪರ್ಯಾಯವನ್ನು ಹುಡುಕಿಕೊಂಡಿತು.

ಸಮಾನಾಂತರ ಚಿತ್ರಗಳು

ದಕ್ಷಿಣ ಅಮೆರಿಕಾದ ಚಿತ್ರ ನಿರ್ದೇಶಕರಾದ ಫರ್ನಾಂಡೋ ಸೋಲಾನಾಸ್ ಮತ್ತು ಅಕ್ಟೇವಿಯೊ ಗೆಟಿನೊ ೧೯೭೦ರಲ್ಲಿ ಹೊರತಂದ ಹೊತ್ತಿಗೆ 'ಟುವರ್ಡ್ಸ್ ಎ ಥರ್ಡ್ ಸಿನಿಮಾ'ದಲ್ಲಿ ಹಾಲಿವುಡ್‌ನ ಚಿತ್ರಗಳು ಮತ್ತು ಅವುಗಳ ಅನುಕರಣೆಗಳನ್ನು ಪ್ರಥಮ ಗುಂಪಿನ ಚಿತ್ರವೆಂದು, ವೈಯಕ್ತಿಕ ಅಭಿಪ್ರಾಯವನ್ನು ಹೊಂದಿದ ಹೊಸಅಲೆಯ ಚಿತ್ರಗಳನ್ನು ಎರಡನೆಯ ಗುಂಪಿನ ಚಿತ್ರವೆಂದು ಗುರುತಿಸಿ ಇವುಗಳಿಂದ ಮೂರನೆಯ ಗುಂಪಿನ ಚಿತ್ರ ಚಳವಳಿ ಹುಟ್ಟಬೇಕು ಎಂದು ಸೂಚಿಸಿ : "ಯಾವ ಚಿತ್ರಗಳು ಸಮಾಜದ ಅಗತ್ಯಗಳನ್ನು ಪೂರೈಸುವುದಿಲ್ಲವೋ ಮತ್ತು ಸಮಾಜದ ಗುರಿಗಿಂತ ಭಿನ್ನ ಗುರಿಯನ್ನು - ಉದ್ದೇಶವನ್ನು ಹೊಂದಿವೆಯೋ ಅವು ಸಮಾಜ ವಿರೋಧಿ ಚಿತ್ರಗಳು. ಚಿತ್ರಗಳು ನೇರವಾಗಿ ಸಾಮಾಜಿಕ ವ್ಯವಸ್ಥೆಯೊಡನೆ ಹೋರಾಡಬೇಕು. ಆಗ ಮಾತ್ರ ಆ ಚಿತ್ರಗಳು ಆಳುವ ವರ್ಗ ಮತ್ತು ಜನಸಾಮಾನ್ಯನ ನಡುವೆ ಒಡಕನ್ನು ಉಂಟುಮಾಡುತ್ತವೆ. ಇಂತಹ ಚಿತ್ರಗಳಿಂದ ಸಾಂಸ್ಕೃತಿಕ ಕ್ರಾಂತಿಯಾಗದಿರಬಹುದು. ಆದರೆ ಪ್ರಜಾಪ್ರಭುತ್ವ ವ್ಯವಸ್ಥೆಯ ಉಳಿಯುವಿಕೆ ಸಾಧ್ಯವಾಗುತ್ತದೆ. ಹೇಗೆಂದರೆ ಇಂತಹ ಚಿತ್ರಗಳು ಜನಸಾಮಾನ್ಯನ ಬುದ್ಧಿಮತ್ತೆ ಹೆಚ್ಚಿಸುತ್ತವೆ. ಆ ಮೂಲಕ ಅವರು ತಮ್ಮ ಕ್ಷೇತ್ರಗಳಲ್ಲಿನ ಸಾರ್ವಜನಿಕ ಚಳವಳಿಗಳಲ್ಲಿ ಭಾಗವಹಿಸಲು ಪ್ರೇರೇಪಿಸುತ್ತವೆ. ಇಂತಹ ಚಿತ್ರಗಳು ಮಾತ್ರ ಸಾಂಪ್ರದಾಯಿಕ ವಾಣಿಜ್ಯ ಪ್ರಧಾನ ಚಿತ್ರಗಳು ತಮ್ಮ ಸರ್ವಶಕ್ತ ಸ್ಥಿತಿಯಿಂದ ಸಮಾಜದಲ್ಲಿ ಮೂಡಿಸಿರುವ ಶೂನ್ಯವನ್ನು ತೊಡೆಯಬಲ್ಲವು. ಇಂತಹ ಚಿತ್ರಗಳು ಮಾತ್ರ ಸಾಮಾನ್ಯ ಜನರನ್ನು ಸ್ವತಂತ್ರ/ಮುಕ್ತ ಚಿಂತನೆಗೆ ಪ್ರೇರೇಪಿಸಿ ಆ ಮೂಲಕ ನಾವು ಹೆಸರಿಸಿರುವಂತಹ ಜನಪ್ರಿಯ ಸಂಸ್ಕೃತಿಯನ್ನು ಬಳಕೆಗೆ ತರಬಲ್ಲವು" ಎನ್ನುತ್ತಾರೆ ಫರೀದ್ ಕಾಜ್ಮಿ.

ಸೋಲಾನಾಸ್ ಮತ್ತು ಗೆಟಿನೊ ಹೇಳಿದ ಈ ಮಾತುಗಳು ಆ ದೇಶಗಳ ರಾಜಕೀಯ ಅಸ್ಥಿರತೆಯ ಸಂದರ್ಭದಲ್ಲಿ ಬಳಕೆಯಾದಂತಹವು. ಆದರೆ ಭಾರತದ ಸಂದರ್ಭದಲ್ಲಿ ಮೂರನೆಯ ಚಿತ್ರ ಅಥವಾ ಸಮಾನಾಂತರ ಚಿತ್ರಗಳು ಅದೇ ರೀತಿಯ ಕೆಲಸ ಮಾಡಬೇಕಾಗಿರಲಿಲ್ಲ. ಇಲ್ಲಿ ರಾಜಕೀಯ ಅಸ್ಥಿರತೆ ಇರಲಿಲ್ಲ. ಆರ್ಥಿಕ ಅಸ್ಥಿರತೆ ಇತ್ತು. ಮತ್ತು ೧೯೭೫ರ ಸುಮಾರಿಗೆ ಮಸಾಲೆ ಚಿತ್ರ ಮತ್ತು ಹೊಸಅಲೆ ಚಿತ್ರ ಎಂಬ ಗೆರೆ ಕೊರೆದಂತಹ ಎರಡು ಬಣಗಳು ಸ್ಥಾಪಿತವಾಗಿದ್ದವು. ಈ ಅಂತರ ವಿಸ್ತಾರವಾದಂತೆಲ್ಲ ಜನಪ್ರಿಯ ಸಂಸ್ಕೃತಿಯ ಹಣೆಪಟ್ಟಿ ಹೊತ್ತು ಬರುತ್ತಿದ್ದ ಮಸಾಲೆ ಚಿತ್ರಗಳು ಪ್ರತಿಗಾಮಿ ನಿಲುವುಗಳನ್ನು ಜಮೀನ್ದಾರಿ ವ್ಯವಸ್ಥೆಯನ್ನು ಬೆಂಬಲಿಸುವ ಹಂತ ತಲುಪಿದರೆ, ಹೊಸಅಲೆ ಚಿತ್ರಗಳು ಗುಣಾತ್ಮಕ ವಸ್ತುವಿದ್ದರೂ ಸಮುದಾಯದಿಂದ ದೂರ ಉಳಿದು ಬುದ್ಧಿಜೀವಿ ವರ್ಗಕ್ಕೆ ಮಾತ್ರ ತಲುಪಲಾರಂಭಿಸಿದವು. ಹೀಗಾಗಿ ಸಮಾನಾಂತರ ಚಿತ್ರ ಚಳವಳಿಯನ್ನು ಆ ಮೂಲಕ ತಮ್ಮ ಚಿತ್ರಗಳ ವಾಣಿಜ್ಯ ಶಕ್ತಿಯನ್ನು ಮಾತ್ರವಲ್ಲದೆ ಹೆಚ್ಚು ಜನರನ್ನು ತಲುಪುವ ಆಶಯವಿದ್ದ ಚಿತ್ರ ಚಳವಳಿ ಭಾರತದಲ್ಲಿ ಆರಂಭವಾಯಿತು. ಹಿಂದಿಯಲ್ಲಿ ಹೃಷಿಕೇಶ್ ಮುಖರ್ಜಿ ನಿರ್ದೇಶಿಸಿದ 'ಬಾವರ್ಚಿ', 'ಆನಂದ್', 'ನಮಕ್ ಹರಾಮ್', 'ಖೂಬ್ ಸೂರತ್' ಮುಂತಾದ ಚಿತ್ರಗಳು - ಬಸು ಚಟರ್ಜಿ ನಿರ್ದೇಶಿಸಿದ 'ಚೋಟಿ ಸಿ ಬಾತ್', 'ರಜನೀ ಗಂಧ' ತರಹದ ಚಿತ್ರಗಳು - ಸಾಯಿ ಪರಾಂಜಪೆ ನಿರ್ದೇಶಿಸಿದ 'ಕಥಾ', 'ಚಷ್ಮೆ ಬದ್ದೂರ್' ತರಹದ ಚಿತ್ರಗಳು ತಿಳಿ ಹಾಸ್ಯದ ಲೇಪದೊಡನೆ ಭಾರತದ ಮಧ್ಯಮ ವರ್ಗದ ಜನರ ಗಂಭೀರ ಸಮಸ್ಯೆಗಳನ್ನು ಮಸಾಲೆ ಚಿತ್ರಗಳಲ್ಲಿನ ಹಾಡು-ಕುಣಿತ ಬಳಸಿ, ಹೊಸಅಲೆ ಚಿತ್ರಗಳ ವಾಸ್ತವವಾದಿ ನಿರೂಪಣಾ ತಂತ್ರವನ್ನು ಬಳಸಿ ನಿರ್ಮಾಣವಾದವು.

ಈ ಹೊಸತನ್ನು ಜನ ಸ್ವಾಗತಿಸಿದರು. ಚಿತ್ರಗಳು ಯಶಸ್ವಿಯಾದವು. ಅಂತೆಯೇ ಅವೇ ಯಶಸ್ಸಿನ ಅನುಕರಣೆ ದಕ್ಷಿಣ ಭಾರತದ ಚಿತ್ರಗಳಲ್ಲಿಯೂ ಆಯಿತು. ತೆಲುಗಿನಲ್ಲಿ ಕೆ.ವಿಶ್ವನಾಥ್, ಬಾಪು, ಜಂಧ್ಯಾಲ ಮುಂತಾದ ನಿರ್ದೇಶಕರು, ತಮಿಳಿನಲ್ಲಿ ಭಾರತೀರಾಜ, ಭಾಗ್ಯರಾಜ, ಪಾಂಡ್ಯರಾಜನ್, ಕೆ.ಬಾಲಚಂದರ್ ಮುಂತಾದ ನಿರ್ದೇಶಕರು, ಕನ್ನಡದಲ್ಲಿ ನಾಗಾಭರಣ, ಶಂಕರ್‌ನಾಗ್, ಕೆ.ವಿ.ಜಯರಾಂ, ಪಿ.ಹೆಚ್.ವಿಶ್ವನಾಥ್, ಕಾಶೀನಾಥ್ ಮುಂತಾದವರು ಸಮಾನಾಂತರ ಚಿತ್ರಗಳನ್ನು ನಿರ್ಮಿಸಿದರು. ಇವುಗಳಲ್ಲಿ ಸಂಕಲನ ತಂತ್ರದ ಬೆಳವಣಿಗೆಯ ದೃಷ್ಟಿಯಿಂದ ಕೆಲವು ಚಿತ್ರಗಳನ್ನು ಇಲ್ಲಿ ಗಮನಿಸಲಾಗಿದೆ.

ಶಂಕರ್‌ನಾಗ್ ಮೂಲತಃ ಹವ್ಯಾಸೀ ರಂಗಭೂಮಿಯ ಹಿನ್ನೆಲೆಯಿದ್ದವರು. ಜೊತೆಗೆ ಸಾಯಿ ಪರಾಂಜಪೆಯವರಲ್ಲಿ ಸಹನಿರ್ದೇಶಕರಾಗಿ ದುಡಿದಿದ್ದವರು. ಕನ್ನಡಕ್ಕೆ ಗಿರೀಶ್ ಕಾರ್ನಾಡರ 'ಒಂದಾನೊಂದು ಕಾಲದಲ್ಲಿ' ಚಿತ್ರದ ಮೂಲಕ ನಟರಾಗಿ ಪರಿಚಯವಾಗಿ ಅನೇಕ ಮಸಾಲೆ ಚಿತ್ರಗಳ ನಾಯಕರಾಗಿದ್ದವರು. ಹೀಗಾಗಿ ಶಂಕರನಾಗ್ ಅವರಿಗೆ ಗಂಭೀರ, ಮಸಾಲೆ ಮತ್ತು ಸಮಾನಾಂತರ ಚಿತ್ರ ಎಂಬ ಮೂರೂ ಬಗೆಯ ನೇರ ಪರಿಚಯವಾಗಿತ್ತು. ಅಂತೆಯೇ ಅವರು ನಿರ್ದೇಶಿಸಿದ 'ಮಿಂಚಿನ ಓಟ', 'ಆ್ಯಕ್ಸಿಡೆಂಟ್', 'ನೋಡಿ ಸ್ವಾಮಿ ನಾವಿರೋದು ಹೀಗೆ', 'ಗೀತಾ', 'ಒಂದು ಮುತ್ತಿನ ಕಥೆ' ಚಿತ್ರಗಳು ಮಸಾಲೆ ಚಿತ್ರಗಳ ನಿರೂಪಣಾ ವಿನ್ಯಾಸದಿಂದ ಭಿನ್ನವಾಗಿದ್ದವು, ಮತ್ತು ವಸ್ತುವಿನ ಆಯ್ಕೆಯ ಹಂತದಲ್ಲಿಯೇ ಎಚ್ಚರಿಕೆ ವಹಿಸಿ ವಿಭಿನ್ನವಾಗಲು ಯತ್ನಿಸಿದ್ದವು. ಆ ದೃಷ್ಟಿಯಿಂದ 'ಮಿಂಚಿನ ಓಟ'. 'ಗೀತಾ', 'ಜನುಮ ಜನುಮದ ಅನುಬಂಧ' ಚಿತ್ರಗಳನ್ನು ಶಂಕರ್‌ನಾಗ್ ಅವರ ಆರಂಭಿಕ ಹಂತ ಎಂದು ಗುರುತಿಸಿ 'ಆ್ಯಕ್ಸಿಡೆಂಟ್', 'ಒಂದು ಮುತ್ತಿನ ಕಥೆ', 'ನೋಡಿ ಸ್ವಾಮಿ ನಾವಿರೋದು ಹೀಗೆ' ಚಿತ್ರಗಳನ್ನು ಪ್ರಯೋಗದ ಹಂತ ಎಂದು ಗುರುತಿಸಬಹುದು. ಈ ವಿಭಾಗೀಕರಣಕ್ಕೆ ಮೊದಲ ಬಗೆಯ ಚಿತ್ರಗಳಲ್ಲಿ ಇರುವ ಹಾಡು, ಕುಣಿತ, ಫೈಟ್ಸ್‌ನ ಬಳಕೆ ಮತ್ತು ಭಾವತೀವ್ರತೆಯನ್ನು ನಿರುದ್ವಿಗ್ನವಾಗಿ ಹೇಳದೆ ಘಟನಾತ್ಮಕವಾಗಿ, ನಾಟಕೀಯವಾಗಿ, ಕಥನ ಮುಂದುವರೆಯುವುದನ್ನು ಗಮನಿಸಬಹುದು. 'ಮಿಂಚಿನ ಓಟ' ಚಿತ್ರದಲ್ಲಿ ತೀರಾ ಢಾಳಾಗಿ ಕಾಣದ ಈ ನಿರೂಪಣಾ ಶೈಲಿ 'ಗೀತಾ' ಮತ್ತು 'ಜನುಮ ಜನುಮದ ಅನುಬಂಧ' ಚಿತ್ರಗಳಲ್ಲಿ ವೈಭವೀಕೃತವಾಗಿ ಬಹುಪಾಲು ಮಸಾಲೆ ಚಿತ್ರಗಳ ಶೈಲಿಯನ್ನೇ ತಲುಪಿತ್ತು. ಈ ಶೈಲಿಯಿಂದ ದೂರವಾಗಿ ಕಥನ ವಿಶಿಷ್ಟ ನಿರೂಪಣೆಯನ್ನು ಶಂಕರ್ ಸಾಧಿಸುವುದು 'ಆ್ಯಕ್ಸಿಡೆಂಟ್' ಚಿತ್ರದಲ್ಲಿ. ಕಾಸ್ಟ ಗಾವ್ರಾಸ 'ಝೀ' ಚಿತ್ರದ ನೇರ ಪ್ರಭಾವ ಇರುವಂತೆ ಕಾಣುವ 'ಆ್ಯಕ್ಸಿಡೆಂಟ್' ಸಮಕಾಲೀನ ರಾಜಕೀಯ ಸ್ಥಿತಿಯನ್ನು ಮಾತ್ರವಲ್ಲದೆ ಶ್ರೀಮಂತ ಮತ್ತು ಬಡ ವರ್ಗದ ನಡುವೆ ಇರುವ ವ್ಯತ್ಯಾಸಗಳನ್ನು, ಬದುಕಿನ ರೀತಿಯನ್ನು ಸ್ಪಷ್ಟವಾಗಿ ತೆರೆದಿಡುವ ಯತ್ನ ಮಾಡಿತ್ತು. ಚಿತ್ರದ ಆರಂಭದಲ್ಲಿ ಬರುವ ಮಾರುಕಟ್ಟೆಯಲ್ಲಿ ಡ್ರಗ್ ಕೊಂಡುಕೊಳ್ಳುವವರ ದೃಶ್ಯ, ನಂತರದ ಆ್ಯಕ್ಸಿಡೆಂಟ್ ದೃಶ್ಯಗಳು ಸಂಕಲನದ ದೃಷ್ಟಿಯಿಂದ ಹೊಸಅಲೆಯ ನಿರುದ್ವಿಗ್ನತೆಯ ಜೊತೆಗೆ ಮಸಾಲೆ ಚಿತ್ರಗಳ ವೇಗವನ್ನೂ ಸಾಧಿಸಿದ್ದವು (ಸಂಕಲನ : ಭಕ್ತವತ್ಸಲಂ). ಈ ಪ್ರಯೋಗಗಳ ಪರಾಕಾಷ್ಠೆ ಅಥವಾ ಪೂರ್ಣ ಬಳಕೆಯನ್ನು ಶಂಕರನಾಗ್ ನಿರ್ದೇಶಿಸಿದ 'ಮಾಲ್ಗುಡಿ ಡೇಸ್' ಮತ್ತು 'ಸ್ವಾಮಿ' ದೂರದರ್ಶನ ಧಾರಾವಾಹಿಗಳಲ್ಲಿ ಸ್ಪಷ್ಟವಾಗಿ ಗುರುತಿಸಬಹುದು. ಈ ಚಿತ್ರಗಳಲ್ಲಿರುವ ಕಾಲ್ಪನಿಕ ಕಾಲವನ್ನು ಸಾಧಿಸುವಲ್ಲಿ ಕಲಾ ನಿರ್ದೇಶಕನ (ಜಾನ್ ದೇವರಾಜ್) ಕೆಲಸವಿದ್ದರೆ, ಆ ಬಣ್ಣಗಳನ್ನು ಅಷ್ಟೇ ನೈಜವಾಗಿ ಛಾಯಾಗ್ರಾಹಕ (ಎಸ್.ರಾಮಚಂದ್ರ) ಸೆರೆಹಿಡಿದಿದ್ದರು. ಈ ಚಿತ್ರಿಕಗಳನ್ನು ನಿರೂಪಣೆಯ ಲಯಕ್ಕೆ ಚ್ಯುತಿ ಬರದಂತೆ, ಪ್ರೇಕ್ಷಕನನ್ನು - ಈ ಮುಂಚೆ ಹೊಸಅಲೆ ಚಿತ್ರ ಚಳವಳಿಯ ಬಗ್ಗೆ ಬರೆಯುವಾಗ ವಿವರಿಸಿದ - ನಿಷ್ಕ್ರಿಯತೆಗೆ ತಳ್ಳದೆ ಅವನನ್ನು ಎಚ್ಚರವಾಗಿ ಇರಿಸಿಕೊಂಡೇ ಮಾನವೀಯ ಮೌಲ್ಯಗಳನ್ನು ಕುರಿತ ಮೂಲ ಲೇಖಕರ ಮಾತುಗಳನ್ನು ನೋಡುಗನಿಗೆ ತಲುಪಿಸಲು ಸುರೇಶ್ ಅರಸ್ ಸಂಕಲನ ಸಹಾಯ ಮಾಡಿತ್ತು. ಈ ಪ್ರಯೋಗಗಳು ಚಳವಳಿಯ ಹಂತವಾಗಿ ಬಳಕೆಯಾಗುವ ಮುನ್ನವೇ ಶಂಕರನಾಗ್ ತೀರಿಕೊಂಡದ್ದರಿಂದ ಅವರೊಡನೆಯೇ ಕರ್ನಾಟಕದಲ್ಲಿ ಚಿತ್ರೋದ್ಯಮ ಉಳಿಯಲು ಆತ ಮಾಡಿದ ಪ್ರಯತ್ನಗಳೂ ಸೊರಗಿದವು ಎಂದೆನ್ನಬಹುದು.

ಸಮಾನಾಂತರ ಚಿತ್ರಗಳೆಂಬ ಹಣೆಪಟ್ಟಿಯೊಡನೆ ಚಿತ್ರ ತಯಾರಿಸದಿದ್ದರೂ ನಾಗಾಭರಣ ಅವರ ನಿರ್ದೇಶನದ ಬಹುತೇಕ ಚಿತ್ರಗಳು ('ಆಸ್ಫೋಟ', 'ಅನ್ವೇಷಣೆ', 'ಮೈಸೂರು ಮಲ್ಲಿಗೆ', 'ಶಿಶುನಾಳ ಶರೀಫ', 'ಚಿನ್ನಾರಿ ಮುತ್ತ', 'ನಾಗಮಂಡಲ' ಇತ್ಯಾದಿ.) ಈ ವಿಭಾಗದಡಿಯಲ್ಲಿಯೇ ಗಮನಿಸಲು ಯೋಗ್ಯವಾದವು. ಈ ಚಿತ್ರಗಳಲ್ಲಿ ನಿರೂಪಣಾ ಶೈಲಿಗಿಂತ ಕಥಾ ವಸ್ತುವೇ ಪ್ರಧಾನ. ಹೀಗಾಗಿ 'ಅನ್ವೇಷಣೆ'ಯಲ್ಲಿ ಚಿತ್ರಕಥೆ ರಚಿಸಿದ ಗಿರೀಶ್ ಕಾರ್ನಾಡರು ಹಾಗೂ ನಾಗಾಭರಣ ಪ್ರಮುಖರಾಗುತ್ತಾರೆ. ಕಥೆಯಲ್ಲೇ ಇರುವ ಕೌತುಕ ಮತ್ತು ಪತ್ತೇದಾರಿ ಶೈಲಿಯ ದೃಶ್ಯಗಳು ಸಹ ಚಿತ್ರಕಥಾ ಲೇಖಕರ ಪ್ರಭಾವದಿಂದಾಗಿ ದೃಶ್ಯ ನಿರ್ಮಿತಿಗೆ ಒತ್ತು ಸಿಗದೆ ಘಟನೆಗೆ ಒತ್ತು ಸಿಕ್ಕಂತಾಗಿದೆ. ಇದರಿಂದಾಗಿ ಛಾಯಾಗ್ರಾಹಕ ಎಸ್.ರಾಮಚಂದ್ರ, ಸಂಕಲನಕಾರ ಸ್ಟ್ಯಾನ್ಲಿ ಇಬ್ಬರೂ ಕೇವಲ ಚಿತ್ರಕಥೆಯ ಓಟಕ್ಕೆ ಮಾತ್ರ ಗಮನವಿತ್ತು ದೃಶ್ಯ ಸಂಯೋಜನೆ ಮತ್ತು ನೈಕಟ್ಯಗಳನ್ನು ನೆಪ ಮಾತ್ರಕ್ಕೆ ದುಡಿಸಿಕೊಂಡಂತಿದೆ. ಇದಲ್ಲದೆ (ಪ್ರಾಯಶಃ) ಚಿತ್ರೀಕರಣದ ಹಂತದಲ್ಲಿಯೇ ಅವರಿಗಿದ್ದಿರಬಹುದಾದ ಮಿತಿಗಳಿಂದಾಗಿ ಚಿತ್ರಿಕೆ ಬಿಂಗಡಣೆ ಕೇವಲ arrangement ಆಗಿಬಿಟ್ಟಿರುವುದು, 'ಅನ್ವೇಷಣೆ'ಯ ಕಥೆಗಿರುವ ಎಲ್ಲಾ ಬಣ್ಣಗಳನ್ನು ಧ್ವನಿಯಾಗಿಸುವಲ್ಲಿ ಕಷ್ಟಗಳನ್ನು ಒಡ್ಡಿದೆ ಎಂದೆನಿಸುತ್ತದೆ.[೭] 'ಆಸ್ಫೋಟ' ಚಿತ್ರದಲ್ಲಿಯೂ ಚಿತ್ರಕಥೆ (ನಾಗಾಭರಣ) ಪ್ರಾಧಾನ್ಯ ಪಡೆದು ಘಟನಾತ್ಮಕವಾಗುವುದರಿಂದ 'ಅನ್ವೇಷಣೆ'ಯ ಸ್ಥಿತಿಯಲ್ಲಿಯೇ ಛಾಯಾಗ್ರಾಹಕ ಎಸ್.ರಾಮಚಂದ್ರ ಮತ್ತು ಸಂಕಲನಕಾರರು (ಸುರೇಶ್ ಅರಸ್) ಉಳಿಯುತ್ತಾರೆ. ನಂತರ ನಾಗಾಭರಣ ಅವರು ನಿರ್ದೇಶಿಸಿದ 'ಶಿಶುನಾಳ ಶರೀಫ' ಮತ್ತು 'ಮೈಸೂರು ಮಲ್ಲಿಗೆ' ಚಿತ್ರಗಳು ಅದಾಗಲೇ ಜನಪ್ರಿಯವಾಗಿದ್ದ ಇಬ್ಬರು ಕವಿಗಳ ಹಾಡಿಗೆ ಕಥಾಹಂದರ ಜೋಡಿಸಿ ಚಿತ್ರಿತವಾಗಿದ್ದಂತಹವು. ಆದ್ದರಿಂದ ಎರಡೂ ಸಂಗೀತಮಯ ಚಿತ್ರಗಳು. ಹೊಸಅಲೆ ಪ್ರಚುರಪಡಿಸಿದ ನೈಜತೆಯನ್ನು ದೃಶ್ಯ ಸಂಯೋಜನೆಯಲ್ಲಿ 'ಶಿಶುನಾಳ ಶರೀಫ'ದ ಛಾಯಾಗ್ರಹಣ (ಎಸ್.ರಾಮಚಂದ್ರ) ಸಾಧಿಸಿದರೆ, 'ಮೈಸೂರು ಮಲ್ಲಿಗೆ' ವಾಣಿಜ್ಯ ಪ್ರಧಾನ ಚಿತ್ರಗಳ ಶೈಲಿಯ ಛಾಯಾಗ್ರಹಣ (ಗೌರಿಶಂಕರ್) ಬಳಸಿತ್ತು. ಆದರೆ ಎರಡೂ ಚಿತ್ರಗಳಲ್ಲಿ ಹಾಡನ್ನು ಬಳಸಿಕೊಂಡು ಪರಾಕಾಷ್ಠೆ ಮುಟ್ಟುವ ಧಾವಂತ (ಚಿತ್ರಕಥೆ : ನಾಗಾಭರಣ) ಮಾತ್ರ ಇತ್ತು. ಆ ಹಾದಿಯತ್ತ ನಿರುದ್ವಿಗ್ನವಾಗಿ ಸಾಗುವ ಸಹಜ ಕಥಾ ಓಟ ಇರಲಿಲ್ಲ. ಹೀಗಾಗಿ ಎರಡೂ ಚಿತ್ರಗಳೂ ಪೂರ್ಣಮಟ್ಟದ ಸಮಾನಾಂತರ ಸ್ಥಿತಿಯನ್ನು ಸಾಧಿಸುವಲ್ಲಿ ವಿಫಲವಾದವು. ಆದರೆ ಹಾಡುಗಳ ಬಳಕೆ ಮತ್ತು ಸರಳವಾಗಿ ಜನರನ್ನು ತಲುಪಬಲ್ಲ ಘಟನಾತ್ಮಕ ಕಥಾಹಂದರದಿಂದಾಗಿ ಇವೆರಡೂ ಹೆಚ್ಚು ಜನರನ್ನು ತಲುಪಿದವು. ಇವೆರಡು ಚಿತ್ರಗಳ ಸಂಕಲನಕಾರ (ಸುರೇಶ್ ಅರಸ್) ಹಾಡುಗಳ ಸಂಕಲನಾವಧಿಯಲ್ಲಿ ಸಾಕಷ್ಟು ಯಶಸ್ವಿಯಾಗಿ ಸಂಗೀತಮಯ ಮಾಂಟಾಜ್ (Musical montage) ರಚಿಸಿದ್ದರು. ಈ ಸಂಕಲನ ಪ್ರಯೋಗದ ಪೂರ್ಣ ಉಪಯೋಗ ಅವರಿಗೆ ಆದದ್ದು ತಮಿಳಿನ ಮಣಿರತ್ನಂ ಅವರ 'ರೋಜಾ' ಚಿತ್ರದ "ಚಿನ್ನ ಚಿನ್ನ ಆಸೈ..." ಹಾಡಿನ ಸಂಕಲನದಲ್ಲಿ ಎಂದೆನ್ನಬಹುದು.

ಈ ಚಿತ್ರಗಳ ನಂತರ ನಾಗಾಭರಣ ನಿರ್ದೇಶಿಸಿದ ಚಿತ್ರಗಳಲ್ಲಿ ಹೆಚ್ಚು ಸ್ಪಷ್ಟ ನಿರೂಪಣೆ ಮತ್ತು ನಿರುದ್ವಿಗ್ನ ಅನಾವರಣ ತಂತ್ರದ ಬಹುಪಾಲು ಬಳಕೆ ಇದ್ದ ಚಿತ್ರ 'ನಾಗಮಂಡಲ'. ಮೂಲತಃ ಪವಾಡಗಳಿಗೆ ಪ್ರಾಧಾನ್ಯವಿರುವ ಭಾರತೀಯ ಜಾನಪದ ಕಥೆಯೊಂದನ್ನು ಆಧರಿಸಿದ ಈ ಚಿತ್ರದಲ್ಲಿ ವರ್ಣಗಳ ಬಳಕೆ (ಛಾಯಾಗ್ರಹಣ : ಜಿ.ಎಸ್.ಭಾಸ್ಕರ್) ಮತ್ತು ಪರಿಕರಗಳ ಬಳಕೆ (ಕಲಾನಿರ್ದೇಶನ : ಶಶಿಧರ್ ಅಡಪ) ಅತ್ಯಂತ ಸಮರ್ಪಕವಾಗಿತ್ತು. ಅಸಹಜ ಕಥಾ ಬೆಳವಣಿಗೆಯನ್ನು ಸಹಜ-ನೈಜವಾಗಿಸುವ ತರ್ಕಕ್ಕಾಗಿ ಇದ್ದ ದ್ವಿಪಾತ್ರದ ಸನ್ನಿವೇಶವಿದ್ದ ದೃಶ್ಯವನ್ನು ಹೊರತುಪಡಿಸಿದರೆ ಉಳಿದೆಲ್ಲ ದೃಶ್ಯಗಳ ಸಂಯೋಜನೆ, ಸಂಕಲನಗಳು (ಸುರೇಶ್ ಅರಸ್) ಹೊಸಅಲೆ ಚಿತ್ರ ಚಳವಳಿಯ ಪ್ರಯೋಗಶೀಲತೆಯನ್ನು ಯಶಸ್ವಿಯಾಗಿ ಬಳಸಿಕೊಂಡಿದ್ದವು. ದ್ವಿಪಾತ್ರ ದೃಶ್ಯದಲ್ಲಿ mask ಚಿತ್ರಿಕೆಯ ಅಸಹಜತೆಯ ಜೊತೆಗೆ ಅಪ್ಪಣ್ಣ-ನಾಗಪ್ಪರ ನಡುವಿನ ಕುಸ್ತಿ ಸಂಯೋಜನೆಯಲ್ಲಿ, ಮಾತಿನ ಜೋಡಣೆಯಲ್ಲಿ ಕೇವಲ ತರ್ಕ ಸಿದ್ಧಿಗೆ ದೃಶ್ಯ ಸೇರಿಸಲಾಗಿದೆ ಎಂದೆನಿಸುತ್ತಿತ್ತು. ಹೀಗಾಗಿ ಜಾನಪದ ಕಥೆಯಲ್ಲಿ ಇರುವ ಪವಾಡವನ್ನು ವೈಭವೀಕರಿಸುವ ಗುಣಕ್ಕೆ ತರ್ಕ ಶುದ್ಧಿಯನ್ನು ಸೇರಿಸುವ ತೀರಾ ಅಮೆಚ್ಯುರ್ ಆದ ಪ್ರಯೋಗ ಇಲ್ಲಿತ್ತು. ಈ ಚಿತ್ರದಲ್ಲೂ ಹಾಡು-ಸಂಗೀತಕ್ಕೆ ಹೆಚ್ಚು ಪ್ರಾಧಾನ್ಯವಿದ್ದುದರಿಂದ

೭. 'ಅನ್ವೇಷಣೆ' ಚಿತ್ರದಲ್ಲಿನ ಮನೆಯೊಳಗಣ ದೃಶ್ಯಗಳನ್ನು ಮೈಸೂರಿನ ಪ್ರೀಮಿಯರ್ ಸ್ಟುಡಿಯೋದಲ್ಲಿ, ಆ ಮನೆಯಿರುವ ವಠಾರದ ದೃಶ್ಯವನ್ನು ಬೆಂಗಳೂರಿನ ಗಾಂಧಿ ಬಜಾರಿನಲ್ಲಿ, ಮನೆಯ ಹಿತ್ತಲ ರಸ್ತೆಯನ್ನು ಚಾಮರಾಜಪೇಟೆಯಲ್ಲಿ ಚಿತ್ರಿಸಿದರಂತೆ. ಹೀಗಾಗಿ ಮನೆಯಲ್ಲಿರುವ ಹಾವನ್ನು ಹೊರಗೆಸೆಯಲು ಗಂಡ-ಹೆಂಡತಿ ಮಾಡುವ ಪ್ರಯತ್ನಗಳನ್ನುಳ್ಳ ದೃಶ್ಯಗಳು Cheat Shooting ನಿಂದಾಗಿ ಕೇವಲ ಕಥೆಯ ವರದಿ ಒಪ್ಪಿಸುತ್ತಿದ್ದವು. ದೃಶ್ಯದ ಭಾವವನ್ನು ತಲುಪಿಸಲಾಗದೆ ಹೋಗಿದ್ದವು. ಹೀಗಾಗಿ ಉತ್ತಮ ಚಿತ್ರಕಥೆ ಇದ್ದೂ 'ಅನ್ವೇಷಣೆ' ಸಾಧಾರಣ ಸಂಕಲನದ ಸಿನಿಮಾ ಆಗಿಬಿಟ್ಟಿತ್ತು.

ಈ ಚಿತ್ರವನ್ನೂ ಸಂಗೀತಮಯ ಚಿತ್ರ ಎಂದೆನ್ನಬಹುದು. ಆ ಹಾಡುಗಳಲ್ಲಿ ಚಿತ್ರದಾರಂಭದಲ್ಲಿ ಬರುವ ಜ್ಯೋತಮ್ಮಗಳ ಹಾಡು, ಮಧ್ಯಭಾಗದಲ್ಲಿ ಒಂಟಿಯಾದ ಕಥಾನಾಯಕಿಯ ಹಾಡಿನ ದೃಶ್ಯಗಳಲ್ಲಿನ ಸಂಯೋಜನೆ, ದಟ್ಟ ಭಾರತೀಯ ವರ್ಣಗಳ ಬಳಕೆ ಮತ್ತು ಅವುಗಳ ಸಾಕಷ್ಟು ಉತ್ತಮವಾದ ಸಂಕಲನದಿಂದ ಗಮನ ಸೆಳೆದವು.

ಈ ಸಮಾನಾಂತರ ಚಿತ್ರ ಚಳವಳಿಯ ಮತ್ತೆರಡು ಪ್ರಮುಖ ಹೆಸರುಗಳು ಕೆ.ವಿ.ಜಯರಾಂ ಮತ್ತು ಪಿ.ಹೆಚ್.ವಿಶ್ವನಾಥ್ ಅವರದ್ದು. ಕೆ.ವಿ.ಜಯರಾಂ ಸಾಹಿತ್ಯ ಕೃತಿಗಳನ್ನು (ಜನಪ್ರಿಯ ಕಾದಂಬರಿಗಳನ್ನು) ಆಧರಿಸಿ ಚಿತ್ರಗಳನ್ನು ತಯಾರಿಸಿದರೆ, ಪಿ.ಹೆಚ್.ವಿಶ್ವನಾಥ್ ಘಟನಾ ಪ್ರಧಾನ ಕಥೆಗಳನ್ನು ಹೆಣೆದು ಚಿತ್ರ ತಯಾರಿಸಿದರು. ಪಿ.ಹೆಚ್.ವಿಶ್ವನಾಥರ ಕೆಲವು ಚಿತ್ರಗಳು ಕಾದಂಬರಿ ಆಧಾರಿತವಾಗಿದ್ದವು. ಕಥಾವಸ್ತುವಿನ ಆಯ್ಕೆಯಲ್ಲಿ ಮಾತ್ರ ನಾಯಕ ಪ್ರಧಾನ ಮತ್ತು ಮಸಾಲೆ ಚಿತ್ರಗಳಿಗಿಂತ ಭಿನ್ನವಾದ ಈ ಚಿತ್ರಗಳು ನಿರೂಪಣೆ ಮತ್ತು ತಂತ್ರಗಳ ಬಳಕೆಯ ದೃಷ್ಟಿಯಿಂದ ವಾಣಿಜ್ಯ ಪ್ರಧಾನ ಚಿತ್ರಗಳನ್ನೇ ಅನುಸರಿಸಿದ್ದವು. ಹೀಗಾಗಿ ಈ ಚಿತ್ರಗಳಲ್ಲಿ ಅತಿ ನಾಟಕೀಯತೆಯ (ಮೆಲೊಡ್ರಾಮ), ಅಸಹಜ ಸನ್ನಿವೇಶಗಳು ಹೆಚ್ಚಾಗಿದ್ದವು. ಅಂತೆಯೇ ಇವುಗಳಲ್ಲಿನ ಛಾಯಾಗ್ರಹಣ, ಸಂಕಲನ ತಂತ್ರದ ಬಳಕೆಯೂ ಸಹ ತೀರಾ ರೂಕ್ಷವಾಗಿದ್ದವು. ಇವುಗಳಲ್ಲಿ ಪಿ.ಹೆಚ್.ವಿಶ್ವನಾಥ್ ನಿರ್ದೇಶನದ 'ಶ್ರೀಗಂಧ' ಸಂಕಲನದ ದೃಷ್ಟಿಯಿಂದ ಉತ್ತಮ ಎಂದೆನ್ನಬಹುದು. ಈ ಚಿತ್ರದಲ್ಲಿ ಇದ್ದಂತಹ ಸುರಳೀತ ಹರಿವು (ಲೂಸಿಡ್) ಇವರ ಇನ್ನಿತರ ಚಿತ್ರಗಳಲ್ಲಿ ಇರಲಿಲ್ಲ.

ಈ ಸಮಾನಾಂತರ ಚಿತ್ರ ಚಳವಳಿಗೆ ಕೆ.ಎಸ್.ಎಲ್.ಸ್ವಾಮಿ (ರವೀ), ಗೀತಪ್ರಿಯ, ಸಿದ್ಧಲಿಂಗಯ್ಯ, ದಿನೇಶ್‌ಬಾಬು ಮುಂತಾದ ಇನ್ನೂ ಕೆಲವು ನಿರ್ದೇಶಕರು ಕಾಣಿಕೆಗಳನ್ನು ನೀಡಿದ್ದಾರೆ. ಅವರಲ್ಲಿ ದಿನೇಶ್‌ಬಾಬು ಚಿತ್ರಗಳನ್ನು ಹೊರತುಪಡಿಸಿ ಉಳಿದವರ ಚಿತ್ರಗಳು ಅತ್ತ ವಾಣಿಜ್ಯ ಪ್ರಧಾನ ಚಿತ್ರಗಳ ತಂತ್ರವನ್ನು ಬಿಡಲಾಗದೆ, ಇತ್ತ ಹೊಸಅಲೆಯ ಗುಣಗ್ರಾಹಿ ತಂತ್ರಗಳನ್ನು ಪೂರ್ಣ ಬಳಸಿಕೊಳ್ಳಲಾಗದೆ ಗೊಂದಲಮಯವಾಗಿಯೇ ಉಳಿದಿದ್ದವು. ದಿನೇಶ್‌ಬಾಬು ಚಿತ್ರಗಳಲ್ಲಿ ಆತ ಸ್ವತಃ ಛಾಯಾಗ್ರಾಹಕರಾಗಿದ್ದುದರಿಂದ ದೃಶ್ಯ ಸಂಯೋಜನೆ ಮತ್ತು ಮೃದು ವರ್ಣಗಳ ಬಳಕೆಗೆ ಹೆಚ್ಚು ಒತ್ತನ್ನು ನೀಡಿದ್ದರು. ಆದರೆ ಕಥಾ ಆಯ್ಕೆ ಮತ್ತು ನಿರೂಪಣಾ ತಂತ್ರಗಳಲ್ಲಿ ಹಾಲಿವುಡ್ಡಿನ ಅರೆ ವ್ಯಾಪಾರಿ ಚಿತ್ರಗಳನ್ನು ಅನುಸರಿಸಿದ್ದುದರಿಂದ ದಿನೇಶ್‌ಬಾಬು ಅವರ ಬಹುತೇಕ ಚಿತ್ರಗಳು ನಮ್ಮ ಬದುಕಿಗೆ ಆಪ್ತವಾಗದ ಎರವಲು ಸಂಸ್ಕೃತಿಯ ಪಡಿಯಚ್ಚಿನಂತೆ ಕಂಡವು. ಇದಕ್ಕೆ ಬಾಬು ಅವರ ಚಿತ್ರಗಳ ಮೂಲ ಸ್ಫೂರ್ತಿಯೂ, ಅಮೆರಿಕನ್ ಚಿತ್ರಗಳೇ ಆಗಿದ್ದದ್ದು ಕಾರಣವಾಗಿರಬಹುದು. 'ದಿ ಬರ್ಡ್' ಆಧರಿಸಿದ 'ಇದು ಸಾಧ್ಯ', 'ಎಡ್ಡಿಮೇರರ್ಸ್‌ರನ್' ಆಧರಿಸಿದ 'ಇನ್ಸ್‌ಪೆಕ್ಟರ್ ವಿಕ್ರಂ', 'ಮೈ ಫಾದರ್' ಆಧರಿಸಿದ 'ಲಾಲಿ' ಇವುಗಳನ್ನು ಉದಾಹರಣೆಯಾಗಿ ಗಮನಿಸಬಹುದು. ಆದರೆ ಸಂಕಲನದ ದೃಷ್ಟಿಯಿಂದ ದಿನೇಶ್‌ಬಾಬು ಅವರ ಬಹುತೇಕ ಚಿತ್ರಗಳು ಸುರಳೀತ ಹರಿವನ್ನು (ಲೂಸಿಡ್) ಸಾಧಿಸಿದ್ದವು. ಈ ಸಮಾನಾಂತರ ಚಿತ್ರ ಚಳವಳಿಯಲ್ಲಿ ಬರುವ ಮತ್ತೊಬ್ಬ ಬಹು ಮುಖ್ಯ ನಿರ್ದೇಶಕರು ಕಾಶೀನಾಥ್. ಅವರ ಚಿತ್ರಗಳನ್ನು ಕುರಿತು ಹಿಂದೆಯೇ ಚರ್ಚಿಸಿದ್ದೇನಾದ್ದರಿಂದ ಇಲ್ಲಿ ಮತ್ತೆ ವಿವರಿಸುತ್ತಿಲ್ಲ.

ನಮ್ಮ ಸಮಾನಾಂತರ ಚಿತ್ರ ಚಳವಳಿಯಲ್ಲಿ ಮತ್ತೊಂದು ಪ್ರಮುಖ ಪ್ರಯತ್ನ ಬಾಲುಮಹೇಂದ್ರ ಅವರ 'ಕೋಕಿಲ'. ಛಾಯಾಗ್ರಾಹಕರಾಗಿದ್ದ ಬಾಲುಮಹೇಂದ್ರ ಅವರು ಈ ಚಿತ್ರದಿಂದ ನಿರ್ದೇಶಕರೂ ಆದರು. ಭಾರತೀಯ ಮಧ್ಯಮ ವರ್ಗದವರಲ್ಲಿ ಅರಳುವ ಪ್ರೇಮ, ಸ್ಫೋಟಗೊಳ್ಳುವ ಕಾಮ ಇವುಗಳು ಹೇಗೆ ಜೀವನದ ದಿಕ್ಕನ್ನೇ ಬದಲಿಸುತ್ತವೆ ಎಂಬುದು ಚಿತ್ರದ ಕಥಾವಸ್ತು. ಸಮರ್ಥವಾದ ಕಪ್ಪು-ಬಿಳುಪು ವರ್ಣದ ಬಳಕೆ, ಸಹಜಾಭಿನಯ ಈ ಚಿತ್ರವನ್ನು ಯಶಸ್ವಿಯಾಗಿಸಿತು ಎನ್ನಬಹುದು. ಚಿತ್ರಕಥಾ ರಚನೆಯಲ್ಲಿಯೇ ಸಾಮಾನ್ಯವಾಗಿ ವಾಣಿಜ್ಯ ಪ್ರಧಾನ / ಮಸಾಲೆ ಚಿತ್ರಗಳಲ್ಲಿ ಇರದಂತಹ ದೃಶ್ಯಗಳನ್ನು ಹಾಸ್ಯ ಬೆರೆಸಿ ಹೇಳಲು ನಿರ್ದೇಶಕರು ಪ್ರಯತ್ನಿಸಿದರು. ಇದಲ್ಲದೆ ಛಾಯಾಗ್ರಹಣದಲ್ಲಿ ಟೆಲಿಫೋಟೊ ಲೆನ್ಸ್‌ಗಳನ್ನು ಹೆಚ್ಚು ಬಳಸಿ, ಹಗಲಿನ ಸೂರ್ಯ ಕಿರಣದ cross light ಅನ್ನು ಅನೇಕ ಹೊರಾಂಗಣ ದೃಶ್ಯಗಳಲ್ಲಿ ಉಪಯೋಗಿಸಿದ್ದರು. ಇದು ಪ್ರತಿ ಚಿತ್ರಿಕೆಯ ಅಂದವನ್ನು ಸಹಜವಾಗಿ ಹೆಚ್ಚಿಸಿತ್ತು. ಇದರೊಂದಿಗೆ ಕ್ಯಾಮರಾ ಚಲನೆಯನ್ನು ಮಿತಗೊಳಿಸಿ, ಹೆಚ್ಚು ಚಿತ್ರಿಕೆಗಳನ್ನು ಚಿತ್ರಿಸಿದ್ದುದರಿಂದ ಕಥನವನ್ನು ಸುರಳೀತವಾಗಿ ತಲುಪಿಸಲು ಸಂಕಲನಕಾರರಿಗೆ (ಉಮೇಶ್ ಕುಲಕರ್ಣಿ) ಸಾಧ್ಯವಾಗಿತ್ತು ಎನ್ನಬಹುದು. ಕನ್ನಡದ ಪ್ರಥಮ ಯಶಸ್ವಿ ಸಮಾನಾಂತರ ಚಿತ್ರವಾಗಿ 'ಕೋಕಿಲ' ಚಿತ್ರವನ್ನು ಸದಾ ನೆನಪಿಸಿಕೊಳ್ಳಬಹುದು.

ಇಲ್ಲಿ ಹೆಸರಿಸಿರುವವರಲ್ಲದೆ ಉಮೇಶ್ ಕುಲಕರ್ಣಿಯಂತಹವರು (ಶಂಖನಾದ, ಉತ್ತರಭೂಪ), ರಾಜೇಂದ್ರಸಿಂಗ್ ಬಾಬು (ನಾಗರಹೊಳೆ, ಹೂವು-ಹಣ್ಣು), ಕೋಡ್ಲು ರಾಮಕೃಷ್ಣ (ಉದ್ಭವ), ನಾಗತಿಹಳ್ಳಿ ಚಂದ್ರಶೇಖರ್ (ಕೊಟ್ರೇಶಿ ಕನಸು, ಹೂಮಳೆ), ಸುರೇಶ್ ಹೆಬ್ಳೀಕರ್ (ಕಾಡಿನ ಬೆಂಕಿ, ಪ್ರಥಮ ಉಷಾಕಿರಣ) ಮುಂತಾದವರು ಸಮಾನಾಂತರ ಚಿತ್ರ ಚಳವಳಿಗೆ ತಮ್ಮದೇ ರೀತಿಯಲ್ಲಿ ಪ್ರಯತ್ನಿಸಿದ್ದಾರೆ. ಈ ಚಿತ್ರಗಳು ತಂತ್ರದ ಬಳಕೆಯ ದೃಷ್ಟಿಯಿಂದ ಈ ಹಿಂದೆ ಚರ್ಚಿಸಿದ ಚಿತ್ರಗಳಿಗಿಂತ ತೀರಾ ಭಿನ್ನವಾದುವಲ್ಲ. ಸಂಕಲನದ ದೃಷ್ಟಿಯಿಂದಂತೂ ಗಮನಾರ್ಹವಾದುವೂ ಅಲ್ಲವಾದ್ದರಿಂದ ಈ ಲೇಖನದಲ್ಲಿ ಕೇವಲ ಚಿತ್ರಗಳನ್ನು ಹೆಸರಿಸಿದೆ. ಇವುಗಳಲ್ಲಿ ರಾಜೇಂದ್ರಸಿಂಗ್ ಬಾಬು ಚಿತ್ರಗಳು ತಾಂತ್ರಿಕವಾಗಿ ಗಮನಿಸಬೇಕಾದಂತಹವು. 'ಹೂವು-ಹಣ್ಣು' ಚಿತ್ರದ ಮೊದಲರ್ಧದಲ್ಲಿ ಬರುವ ಕಪ್ಪು-ಬಿಳುಪು ವರ್ಣಗಳ ಬಳಕೆ, 'ನಾಗರಹೊಳೆ'ಯ ಮೊದಲರ್ಧದಲ್ಲಿ ಬರುವ ಕಾಡಿನ ಚಿತ್ರೀಕರಣ ವಿಶಿಷ್ಟವಾದುದು. ಆದರೆ ಇವರ ಚಿತ್ರಗಳಲ್ಲಿ ಎರಡನೆಯ ಅರ್ಧದ ಚಿತ್ರಕಥೆಯಲ್ಲಿರುವ ಅಸ್ಪಷ್ಟತೆಯಿಂದಾಗಿ ಇಡೀ ಚಿತ್ರವೇ ಪರಿಣಾಮಕಾರಿಯಾಗದಂತಹ ಸ್ಥಿತಿ ತಲುಪುವುದನ್ನು ಗಮನಿಸಬಹುದು.

ರೀಮೇಕ್ ಚಿತ್ರಗಳು

ಕನ್ನಡ ಚಿತ್ರಗಳಲ್ಲಿ ಮಾತ್ರ ಗುರುತಿಸಬಹುದಾದ ಮತ್ತೊಂದು ಪ್ರಕಾರ ರೀಮೇಕ್ ಚಿತ್ರಗಳು. ಮತ್ತಾವುದೋ ಭಾಷೆಯಲ್ಲಿ ಜನಪ್ರಿಯವಾದ ಚಿತ್ರವೊಂದನ್ನು, ಇಲ್ಲಿನ ಕಲಾವಿದರನ್ನು ಬಳಸಿ ಪುನರ್ ನಿರ್ಮಿಸುವ ಈ ಚಿತ್ರಗಳಲ್ಲಿ ತಂತ್ರದ ಬಳಕೆ ಮೂಲ ಚಿತ್ರದಂತೆಯೇ ಇರುತ್ತದೆ. ಆಕಸ್ಮಿಕವೋ ಎಂಬಂತೆ ಇಂತಹ ಚಿತ್ರಗಳಲ್ಲಿ ಕೆಲವು ಮೂಲ ಚಿತ್ರಕ್ಕಿಂತ ಉತ್ತಮ ಎನಿಸುವ ತಂತ್ರಗಾರಿಕೆಯನ್ನು, ಚಿತ್ರಕಥಾ ಜಾಣ್ಮೆಯನ್ನು ಮೆರೆಯುತ್ತವೆ. ಅಂತಹ ಆಕಸ್ಮಿಕಗಳಲ್ಲಿ ವಿ.ರವಿಚಂದ್ರನ್ ನಿರ್ದೇಶನದ 'ರಣಧೀರ' ಚಿತ್ರದ ಪರಾಕಾಷ್ಠೆಯ ದೃಶ್ಯವನ್ನು ಸಂಕಲನ ತಂತ್ರದ ಬಳಕೆಯ ದೃಷ್ಟಿಯಿಂದ ಗಮನಿಸಬಹುದು. ಮೂಲ ಚಿತ್ರದ ಮಸಾಲೆ ಗುಣವೇ ಇಲ್ಲೂ ಇದೆಯಾದರೂ ದೃಶ್ಯ ಸಂಯೋಜನೆ ಮತ್ತು ನಿಜವೆನ್ನಿಸುವಂತೆ ಒಂದು ಅಸಹಜ ಸನ್ನಿವೇಶವನ್ನು ಕೂಡಿಡುವಲ್ಲಿ ಚಿತ್ರದ ನಿರ್ದೇಶಕರು (ವಿ.ರವಿಚಂದ್ರನ್), ಛಾಯಾಗ್ರಾಹಕರು (ಆರ್.ಮಧುಸೂದನ್), ಸಂಕಲನಕಾರರು (ಕೆ.ಬಾಲು) ದುಡಿದಿದ್ದಾರೆ. ಇದೇ ನಿರ್ದೇಶಕರ ಮತ್ತೊಂದು ರೀಮೇಕ್ ಚಿತ್ರ 'ಮನೆದೇವ್ರು' ಚಿತ್ರದ ಪರಾಕಾಷ್ಠೆಯ ದೃಶ್ಯಕ್ಕೆ ಮುನ್ನ ಪತ್ನಿಗೆ ತನ್ನ ಪತಿಯನ್ನು ಕುರಿತು ಉದಾತ್ತ ತಿಳಿವಳಿಕೆ ಬರುವೆಡೆಯಲ್ಲಿ ಟೇಪ್‌ರಿಕಾರ್ಡರ್‌ನ ರಿವರ್ಸ್ ಬಟನ್ ಅದುಮಿದಾಗ ನಾಯಕಿ ಗಮನಿಸುತ್ತಿರುವ ದೃಶ್ಯವೇ ರೀವೈಂಡ್ ಆಗಿ, ಅವಳಿಗೆ ತಿಳಿವಳಿಕೆ ಮೂಡಿಸುವ ವಿವರ ಬರುತ್ತದೆ. ಇದು ಕನ್ನಡದ ಸಂದರ್ಭದಲ್ಲಿ ನನಗೆ ತಿಳಿದಂತೆ ಪ್ರಥಮ ಬಾರಿಗೆ ಬಳಸಿದ ತಂತ್ರ. ಇದಲ್ಲದೆ ಈ ಚಿತ್ರದುದ್ದಕ್ಕೂ ದೃಶ್ಯ ಸಂಯೋಜನೆ ಮತ್ತು ವರ್ಣಗಳ ಬಳಕೆಯಲ್ಲಿ ಗ್ಲಾಮರೈಸೇಷನ್‌ನ ಪ್ರಯತ್ನವಿದ್ದರೂ ಛಾಯಾಗ್ರಾಹಕ (ಜಿ.ಎಸ್.ವಿ. ಸೀತಾರಾಂ)ರ ಕೆಲಸ ಗಮನಿಸುವಂತಹುದು. ಚಿನ್ನ ಹಳದಿ ಬಣ್ಣದ ಬಳಕೆ ಈ ಚಿತ್ರದ ವಿಶೇಷ ಎನ್ನಬಹುದು.

ಈ ರೀಮೇಕ್ ಪಟ್ಟಿಗೆ ಪ್ರತಿ ವರ್ಷ ಕನಿಷ್ಠ ೩೦ ಚಿತ್ರಗಳು ಸೇರುತ್ತಿವೆ. ಇವು ತಂತ್ರದ ಬೆಳವಣಿಗೆಯ ದೃಷ್ಟಿಯಿಂದ ಹಿತಕರ ಎನಿಸದೆ ಇದ್ದರೂ ಉದ್ಯಮವೊಂದರ ಉಳಿವಿನ ದೃಷ್ಟಿಯಿಂದ ಇಲ್ಲಿರುವ ಕಾರ್ಮಿಕರಿಗೆ ದೊರೆಯುವ ಕೆಲಸದ ದೃಷ್ಟಿಯಿಂದ ಅಗತ್ಯ ಎಂದೆನ್ನಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಸೃಜನಶೀಲ ವಿಕಾಸದ ದೃಷ್ಟಿಯಿಂದ ಇಂತಹ ಚಿತ್ರಗಳು ಖಂಡಿತ ಅನಗತ್ಯ. ಇವು ನಕಲು ಪ್ರವೀಣರನ್ನು ಮಾತ್ರ ಸೃಷ್ಟಿಸುತ್ತವೆ. ಹೀಗಾಗಿ ಇದೇ ಉದ್ಯಮದ ಕ್ರಿಯಾಶೀಲತೆ ಮಸುಕಾಗಿ ಯಂತ್ರಗಳಂತೆ ನೆರಳಚ್ಚು ಪ್ರತಿ ತೆಗೆಯುವವರು ತುಂಬಿ ಹೋಗುತ್ತಾರೆ. ಇದು ಒಂದು ಕ್ರಿಯಾಶೀಲ ಮಾಧ್ಯಮವನ್ನು ಆತ್ಮಹತ್ಯಾತ್ಮಕ ಸ್ಥಿತಿ ಮುಟ್ಟಿಸಬಹುದು ಎಂದಷ್ಟೇ ಹೇಳಬಹುದು.

ಒಂದು ಉಪಸಂಹಾರದ ಕಡೆಗೆ

ಒಟ್ಟಿನಲ್ಲಿ ಕರ್ನಾಟಕ ಸರ್ಕಾರ ಹೊಸ ಸಿನಿಮಾ ನೀತಿಯನ್ನು ರೂಪಿಸಿ ಸಬ್ಸಿಡಿ, ತೆರಿಗೆ ವಿನಾಯ್ತಿಯಂತಹ ಸವಲತ್ತುಗಳನ್ನು ಒದಗಿಸಿದ ನಂತರ ಅದರ ಪ್ರಯೋಜನವನ್ನು ಪಡೆಯಬೇಕಿದ್ದ ಹೊಸಅಲೆ ಚಿತ್ರ ಚಳವಳಿ ಸ್ವತಃ ನಿರಾಶಾದಾಯಕ ತಳ ಮುಟ್ಟಿತು. ವಾಣಿಜ್ಯ ಪ್ರಧಾನ ಚಿತ್ರಗಳು ಎಲ್ಲ ಮಸಾಲೆಗಳನ್ನು ಬಳಸಿಯೂ ಶೇಕಡ ಐದರಷ್ಟೇ ಯಶಸ್ಸಿನಲ್ಲಿ ಕುಂಟತೊಡಗಿತು. ಸಮಾನಾಂತರ ಚಿತ್ರಗಳು ಸಣ್ಣಮಟ್ಟದ ಯಶಸ್ಸನ್ನು ಕಂಡವಾದರೂ ಆ ಶೈಲಿಯ ಚಿತ್ರ ನಿರ್ದೇಶಕರಲ್ಲಿ ಯಾವ ಕಡೆ ವಾಲಬೇಕೆಂಬ ಬಗ್ಗೆ ಸ್ಪಷ್ಟ ನಿಲುವಿಲ್ಲದೆ ಗೊಂದಲದಲ್ಲಿ ಉಳಿದವು.

(ಚಿತ್ರ ೧೫) ಮೂವಿಯೋಲಾ-ಸಿಂಕ್ರನೋಮೀಟರ್-ಎಡಿಟಿಂಗ್ ಟೇಬಲ್‌ಗಳೊಡನೆ ಸಜ್ಜುಗೊಂಡ ಸಂಕಲನ ಕೋಣೆಯ ಒಂದು ನೋಟ

ಈ ಸ್ಥಿತಿಯಲ್ಲಿ ಸಿನಿಮಾ ಸಂಕಲನಕಾರನ ಕೆಲಸ ಚಿತ್ರದ ಆರಂಭದಿಂದ ಚಿತ್ರ ಬಿಡುಗಡೆ ಆಗುವವರೆಗೆ ನಿರಂತರ ಎಂಬ ಪರಿಸ್ಥಿತಿ ನಿರ್ಮಾಣವಾಯಿತು. ಸಂಕಲನಕಾರ (೧) ಸಬ್ಸಿಡಿಗಾಗಿ, ಅಗತ್ಯ ಉದ್ದಕ್ಕೆ ಚಿತ್ರವನ್ನು ಬೆಳೆಸಲು ಸಂಕಲನ ಮಾಡಬೇಕಾಗುತ್ತಿತ್ತು, (೨) ಸಹ (Execute) ಇಲಾಖೆಯವರ ಲೆಕ್ಕಕ್ಕಾಗಿ ಚಿತ್ರವನ್ನು ಸಂಕಲನ ಮಾಡಬೇಕಾಗಿತ್ತು, (೩) ಸೆನ್ಸಾರ್‌ನವರಿಗಾಗಿ ಪ್ರತ್ಯೇಕ ಸಂಕಲನ ಮಾಡಬೇಕಾಗಿತ್ತು, (೪) ಸೆನ್ಸಾರ್‌ನವರಿಗೆ ತೋರಿಸದ, ಪ್ರೇಕ್ಷಕ ನೋಡಬಯಸುವ ದೃಶ್ಯಗಳನ್ನು ಪ್ರತಿಗಳಿಗೆ ಸೇರಿಸಲು ಸಂಕಲನ ಮಾಡಬೇಕಾಗಿತ್ತು, (೫) ಚಿತ್ರ ಬಿಡುಗಡೆಯಾದಾಗ ಪ್ರೇಕ್ಷಕರ ಪ್ರತಿಕ್ರಿಯೆ ಗಮನಿಸಿ - ಪ್ರೇಕ್ಷಕರನ್ನು ಸಭಾಮಂದಿರದಲ್ಲಿ ನಿರಂತರವಾಗಿ ಕೂಡಿಸುವಂತೆ ಪ್ರದರ್ಶಿತ ಪ್ರತಿಯನ್ನೇ ಸಂಕಲನ ಮಾಡಬೇಕಾಗುತ್ತಿತ್ತು, (೬) ಚಿತ್ರವು ಬಿಡುಗಡೆ ಆದಾಗಿನ ರಾಜಕೀಯ ಅಥವಾ ಸಾಮಾಜಿಕ ಪರಿಸ್ಥಿತಿಗೆ ಅನುಗುಣವಾಗಿ ಚಿತ್ರದಲ್ಲಿ ಬದಲಾವಣೆ ಮಾಡಬೇಕಾಗಿ ಬಂದಾಗ ಮರು ಸಂಕಲನ ಮಾಡಬೇಕಾಗುತ್ತಿತ್ತು. ಇದಕ್ಕೆ ಉದಾಹರಣೆಯಾಗಿ ರಾಜಕುಮಾರ್ ಅಭಿನಯಿಸಿದ 'ಬಿಡುಗಡೆ' ಚಿತ್ರದ ಅಂತ್ಯವನ್ನು ಬದಲಿಸಿದ್ದನ್ನು, ಶಂಕರನಾಗ್ ನಿರ್ದೇಶನದ 'ಆ್ಯಕ್ಸಿಡೆಂಟ್' ಚಿತ್ರದ ಅಂತ್ಯವನ್ನು ಅದೇ ಸಂದರ್ಭದಲ್ಲಿ ರಾಷ್ಟ್ರದ ಪ್ರಧಾನಿ ಇಂದಿರಾಗಾಂಧಿ ಅವರ ಹತ್ಯೆಯಾಗಿದ್ದುದರಿಂದ ಬದಲಿಸಿದ್ದನ್ನು ಗಮನಿಸಬಹುದು. (೭) ಇಷ್ಟಾದ ಮೇಲೆ ಯಾವುದಾದರೂ ಅಂತರರಾಷ್ಟ್ರೀಯ ಉತ್ಸವಕ್ಕೆ ಚಿತ್ರ ಹೋಗುವಂತಾದರೆ ಆ ಉತ್ಸವದ ನಿಯಮಾವಳಿಯಂತೆ ಚಿತ್ರದ ಉದ್ದವನ್ನು ಕಡಿಮೆ ಮಾಡಲು ಮರು ಸಂಕಲನ ಮಾಡಬೇಕಾಗುತ್ತಿತ್ತು. ಹೀಗೆ ಸಂಕಲನಕಾರನ ಕೆಲಸ ಮಾತ್ರ ಚಿತ್ರ ಬಿಡುಗಡೆ ಆಗಿ ಎಷ್ಟು ದಿನವಾದರೂ ಮುಗಿಯುವುದಿಲ್ಲ ಎಂಬ ಸ್ಥಿತಿ ತಲುಪಿದ್ದೇವೆ.

ಒಟ್ಟಾರೆಯಾಗಿ ಇಂದಿಗೂ ನಮ್ಮಲ್ಲಿ ಸಿನಿಮಾಗೆ ಗೌರವಯುತ ಸ್ಥಾನ ದೊರೆತಿಲ್ಲ. ಇದಕ್ಕೆ ೧೯೨೧ರ ಅವಧಿಯಲ್ಲೇ ಮಹಾತ್ಮ ಗಾಂಧಿಯವರು ಪಾಶ್ಚಾತ್ಯವಾದುದೆಲ್ಲವನ್ನು ವಿರೋಧಿಸುತ್ತಾ ಸಿನಿಮಾ ಕಲೆಯನ್ನು ವಿರೋಧಿಸಿದ್ದು ಕಾರಣ ಆಗಿರಬಹುದು ಎಂದು ಅಭಿಪ್ರಾಯ ಪಡುತ್ತಾರೆ ವಿದ್ಯಾಶಂಕರ್ 'ಸಿನಿಮಾ ಸೈದ್ಧಾಂತಿಕ ಬೆಳವಣಿಗೆ' ಕುರಿತ ಲೇಖನದಲ್ಲಿ. ನಾಡಿನ ಹಿರಿಯರು ಮೂಡಿಸಿದ ಅಭಿಪ್ರಾಯ ಜನರ ಮನಸ್ಸಿನಿಂದ ಸಂಪೂರ್ಣ ಅಳಿಸಿಹೋಗಲು ಇನ್ನೊಂದು ತಲೆಮಾರನ್ನೇ ದಾಟಬೇಕೇನೊ. ಹೀಗಾಗಿ ಇಂದು ಸಿನಿಮಾ ಎಂಬುದು ಕಲಾಮಾಧ್ಯಮ ಎಂಬ ಸ್ಥಾನವನ್ನೇ ಸಂಪೂರ್ಣವಾಗಿ ಪಡೆದಿಲ್ಲ. ಹಾಗೆ ನೋಡಿದರೆ ಈಚಿನ ವರ್ಷಗಳಲ್ಲಿ ಪ್ರಾಯಶಃ ೧೯೭೦ರಿಂದ ಈಚೆಗೆ ಸಿನಿಮಾದಲ್ಲಿ ಸಾಧ್ಯವಾಗದೆ ಹೋದ ತಾಂತ್ರಿಕ ಬೆಳವಣಿಗೆ ಸಂಕಲನ ಕಲೆಯ ಸರಿಯಾದ ಉಪಯೋಗ ಟಿ.ವಿ. ಮಾಧ್ಯಮದಲ್ಲಿ ಆಗಿದೆ. ಆ ವಿವರ ಕುರಿತು ಪ್ರತ್ಯೇಕವಾಗಿಯೇ ಗಮನಿಸಿ, ವಿಸ್ತೃತವಾಗಿ ಚರ್ಚಿಸುವುದು ಅಗತ್ಯ. ಆ ನಿಟ್ಟಿನಲ್ಲಿ ಆಸಕ್ತರು ಯೋಚಿಸಬೇಕು.

ಈ ಹಂತದಲ್ಲಿ ನಮ್ಮ ಚಿತ್ರಗಳಲ್ಲಿನ ಸಂಕಲನ ಇಂದಿಗೂ ಬಾರೋಡ್ ಟೆಕ್ನಿಕ್ ಆಗಿಯೇ ಉಳಿದಿದೆ. ಅದು ಸ್ವತಂತ್ರವಾಗಿ ತನ್ನದು ಎಂಬ ವ್ಯಕ್ತಿತ್ವವನ್ನು ರೂಢಿಸಿಕೊಳ್ಳುವ ಯತ್ನವನ್ನು ಮಾಡಬೇಕಿದೆ. ಆ ನಿಟ್ಟಿನಲ್ಲಿ ಕನ್ನಡ ಚಿತ್ರ ನಿರ್ದೇಶಕರು ಯೋಚಿಸಬೇಕು. ಚಿತ್ರಕಥೆಯ ಹಂತದಲ್ಲಿ ಆಗಿರುವ ಅನೇಕ ಪ್ರಯತ್ನ, ಪ್ರಯೋಗಗಳು ಚಿತ್ರದ ಮತ್ತೊಂದು ಪ್ರಮುಖ ಘಟಕವಾದ ಚಿತ್ರಿಕೆ ಜೋಡಣೆ ಹಂತಕ್ಕೂ ವಿಸ್ತರಿಸುವಂತಾಗಬೇಕು. ಅದಾಗುವವರೆಗೂ ನಮ್ಮಲ್ಲಿನ ಸಂಕಲನಕಾರ ಕೇವಲ ಕಾರ್ಮಿಕನಾಗಿಯೇ ಉಳಿದಿರುತ್ತಾನೆ.

ಮುಗಿಸುವ ಮುನ್ನ

ಇಷ್ಟು ಹೇಳಿದ ಮೇಲೂ ಕನ್ನಡ ಚಿತ್ರಗಳ ಸಂಕಲನ ಹಾಗೂ ಜಾಗತಿಕ ಚಿತ್ರ ಸಂಕಲನದ ಬೆಳವಣಿಗೆ, ಪ್ರಯೋಗಗಳ ಪೂರ್ಣ ವಿವರ ಇಲ್ಲಿಲ್ಲ. ಇದನ್ನೊಂದು ಆರಂಭ ಎಂದು ಮಾತ್ರ ಭಾವಿಸಿ, ಚಾರಿತ್ರಿಕ - ಸಂಶೋಧನಾತ್ಮಕ ಆಸೆಯುಳ್ಳವರು ಈ ಲೇಖನದ ಆಶಯದೊಡನೆ ಮುಂದುವರೆಯುವುದು ಸಾಧ್ಯ. ಆದರೆ ''ಎಲ್ಲಿಯವರೆಗೆ ಚರಿತ್ರೆಕಾರ ಬೇಟೆಗಾರನಾಗಿರುತ್ತಾನೋ ಅಲ್ಲಿಯವರೆಗೆ ಸಿಂಹಗಳ ಚರಿತ್ರೆ ದೊರೆಯದು'' ಎಂಬ ಆಫ್ರಿಕನ್ ಜಾನಪದ ನಾಣ್ನುಡಿಯಂತೆ ತಂತ್ರಜ್ಞನೇ ಚರಿತ್ರಕಾರನಾಗಬೇಕಾಗಿದೆ. ಆ ಕೆಲಸ ಈವರಗೆ ನಮ್ಮ ಚಲನಚಿತ್ರ ರಂಗದಲ್ಲಿ ಆಗಿಲ್ಲ.

ಕನ್ನಡ ಚಿತ್ರರಂಗದಲ್ಲಿ ಸಂಕಲನ ಕ್ಷೇತ್ರದಲ್ಲಿನ ಇತರ ದೊಡ್ಡ ಹೆಸರುಗಳು ಸಿ.ವಿ.ರಾಜು, ಪಿ.ಎಸ್.ಮೂರ್ತಿ, ಬಾಲ್ ಜಿ.ಯಾದವ್, ವಿಕ್ಟರ್ ಯಾದವ್, ಗೌತಮ್ ರಾಜ್, ಪಿ.ಜಿ.ಮೋಹನ್, ಎಸ್.ಪಿ.ಎನ್.ಕೃಷ್ಣ, ಎನ್.ತಾತಯ್ಯ, ಎನ್.ಸಿ.ರಾಜನ್, ಎಸ್.ಮನೋಹರ್, ಆರ್.ಜನಾರ್ಧನ್ ಮತ್ತಿತರರು. ಅವರಲ್ಲಿ ಕಲವರು ನಿರ್ದೇಶಕರಾಗಿಯೂ ಉತ್ತಮ ಕೆಲಸ ಮಾಡಿದ್ದು ಉಲ್ಲೇಖನಾರ್ಹ (ಉದಾ: ಸಿ.ವಿ.ರಾಜು, ಎನ್.ಸಿ.ರಾಜನ್, ಪಿ.ಎಸ್.ಮೂರ್ತಿ, ಉಮೇಶ್ ಕುಲಕರ್ಣಿ, ಕೆ.ವಿ.ರಾಜು).

ಇನ್ನೂ ಅನೇಕ ಕನ್ನಡಿಗರು, ಕನ್ನಡೇತರರು ಈ ಕ್ಷೇತ್ರದಲ್ಲಿ ಸಕ್ರಿಯವಾಗಿ ದುಡಿದಿದ್ದಾರೆ. ಅವರಲ್ಲಿ ಗುರುತಿಸಬಹುದಾದವರು ಬಿ.ಎಸ್.ಕೆಂಪರಾಜ್, ನಾಗೇಶ್ ಯಾದವ್, ಶಶಿಕುಮಾರ್, ಬಸವರಾಜ ಅರಸ್ (ಶಿವು), ರಾಜಶೇಖರ ರೆಡ್ಡಿ, ರಾಜಾನಂದ ರೆಡ್ಡಿ, ಶ್ಯಾಂ ಯಾದವ್, ಲ್ಯಾನ್ಸಿ ಮೋಹನ್, ಕೆ.ವಿ.ಕೃಷ್ಣಾರೆಡ್ಡಿ, ರಾಜಕೀರ್ತಿ, ವಿ.ಎಸ್.ಮುರಳಿ, ಹರಿನಾರಾಯಣ್, ರಮಣರಾವ್, ಎಸ್.ಎನ್.ಬಿ.ಮೂರ್ತಿ, ಚಂದ್ರಕಾಂತ್ ಪೊದ್ದಾರ್, ಕೆ.ಮುರಳಿ, ಅನಿಲ್ ಮಲ್ನಾಡ್, ಕೆ.ಸತ್ಯಂ, ಪಿ.ಬಾಬು, ತ್ಯಾಗರಾಜು, ಪಿ.ವೆಂಕಟರಾವ್, ಸಾಂಬಶಿವರಾವ್, ವೆಂಕಟರತ್ನಂ, ಎ.ಕೆ.ರಮಣಿ, ಎಂ.ಉಮಾನಾಥ್, ಟಿ.ಆರ್.ಶ್ರೀನಿವಾಸುಲು, ಆರ್.ಹನುಮಂತರಾವ್, ಪಿ.ಜಿ.ಜಯರಾಂ, ಜಿ.ವಿಶ್ವನಾಥ್, ಕೆ.ವಿ.ಕೃಷ್ಣನ್, ಪ್ರಸಾದ್ ರಾವ್, ಎಸ್.ಸೂರ್ಯ, ಪಿ.ವಿ.ಎಲ್.ನಾರಾಯಣ್, ಬಾಬು ಉಮಾಶಂಕರ್, ಆರ್.ದೇವರಾಜನ್, ಬಿ.ಬಾಬುರಾವ್, ವೆಂಕಟರಾಮನ್, ಪಿ.ವಿ.ಬಾಬು, ಎ.ಕೆ.ರತ್ನ ಸಭಾಪತಿ, ಎಂ.ದೇವೇಂದ್ರನಾಥ್, ಎಂ.ಎಸ್.ಭಾನು, ಅನ್ವರ್ ತಾವರೆಕರೆ, ಜೋಸೆಫ್, ವೆಂಕಟರತ್ನಂ, ಭಾಸ್ಕರ್, ಶ್ರೀರಾಮುಲು, ಆರ್.ಆರ್.ರೆಡ್ಡಿ, ಬಿ.ಎನ್.ಪ್ರಕಾಶರಾವ್. ಅನಿಲ್ ದತ್ತಾತ್ರೇಯ, ಸುಬ್ಬರಾಮಿ, ಮೊಹಮದ್ ನಯೀಂ, ರಾಜಗೋಪಾಲ್. ವೀರಪ್ಪ, ಕೆ.ಗೋಪಾಲರಾವ್, ಕ.ಗೋವಿಂದಸ್ವಾಮಿ, ಬಿ.ಹರಿನಾರಾಯಣ, ಕೆ.ಸಂಕುಣ್ಣಿ, ಅಂಜಲಿ, ವಿ.ಚಕ್ರಪಾಣಿ, ಪಿ.ವಿ.ಎನ್.ಮಣಿಯಂ, ಬಿ.ಸಿ.ಕೃಷ್ಣ, ಜಿ.ಕೃಷ್ಣಸ್ವಾಮಿ, ವಾಸು, ಆರ್.ಇ.ಚಿನ್ನಪ್ಪ ಮುಂತಾದವರು.



ಸಿರಿನುಡಿಗೆ ವಾಣಿಜ್ಯ ಸಂಕರ

ಸಿನಿಮಾವನ್ನು ಯಾಂತ್ರಿಕ ಆವಿಷ್ಕಾರವೆಂದು ನೋಡುವ ದೃಷ್ಟಿಕೋನ ಒಂದೆಡೆ ಇದ್ದರೆ ಅದನ್ನು ಕಲಾ ಜಗತ್ತಿನ ಆವಿಷ್ಕಾರವೆಂದು ಗುರುತಿಸುವ ಮನೋಭಾವ ಇನ್ನೊಂದೆಡೆ ಇದೆ. ಈ ಎರಡು ದೃಷ್ಟಿಕೋನಗಳಲ್ಲಿ ಸಿನಿಮಾ ಮತ್ತು ಸಾಹಿತ್ಯದ ಸಂಬಂಧವನ್ನು ತಮ್ಮ ನಿಲುವಿಗೆ ಅನುಗುಣವಾಗಿ ವಿಶ್ಲೇಷಿಸುತ್ತಾರೆ. ಯಾಂತ್ರಿಕ ಆವಿಷ್ಕಾರ ಎಂದುಕೊಳ್ಳುವವರಿಗೆ ಸಿನಿಮಾ ಸಾಹಿತ್ಯವನ್ನು ದೃಶ್ಯರೂಪಕ್ಕೆ ಅಳವಡಿಸಿರುವ ಮಾಧ್ಯಮ ಮಾತ್ರ, ಇಂತಹವರು ಕಾದಂಬರಿ ಅಥವಾ ಸಿದ್ಧ ಸಾಹಿತ್ಯ ಕೃತಿಯ ವಿವರಗಳನ್ನು ಚಿತ್ರದ ಬೇರೆ ಬೇರೆ ಆಯಾಮಗಳಲ್ಲಿ ಹುಡುಕುತ್ತಾರೆ. ಕನಿಷ್ಟ ಸಾಹಿತ್ಯದ ಆಶಯವನ್ನಾದರೂ ಸಿನಿಮಾ ಉಳಿಸಿಕೊಳ್ಳಬೇಕೆಂದು ಬಯಸುತ್ತಾರೆ. ಇನ್ನೊಂದು ಮಾದರಿ ವಾದವನ್ನು ಮಂಡಿಸುವವರಿಗೆ ಇತರ ಕಲೆಗಳಂತೆ ಸಿನಿಮಾ ಕೂಡ ಒಂದು ಕಲೆ. ಮನುಷ್ಯನ ಭೌತಿಕ ಜಗತ್ತನ್ನು ಪುನರ್‌ಜೋಡಿಸಿ ಭೌತಿಕ ಜಗತ್ತಿನಲ್ಲಿ ದೊರಕದ ಆಯಾಮ ಸೃಷ್ಟಿಸುವ ಮೂಲಕ ಕ್ರಿಯಾಶೀಲತೆಯನ್ನು ಹೊಂದುವ ಮಾಧ್ಯಮ. ಇಂತಹವರಿಗೆ ಸಾಹಿತ್ಯ ಕೃತಿಯನ್ನು ಸಿನಿಮಾ ಅಲಂಕರಿಸಬೇಕಿಲ್ಲ. ಅಲ್ಲಿಂದ ಟೇಕ್ ಆಫ್ ಪಡೆಯುತ್ತದೆ ಅಷ್ಟೆ. ಒಂದು ಮಾಧ್ಯಮದಲ್ಲಿನ ಸ್ಥಿತ್ಯಂತರಗಳು ಇನ್ನೊಂದು ಮಾಧ್ಯಮಕ್ಕೆ ಮುಖ್ಯವಾಗಬೇಕಿಲ್ಲ. ಯಾವುದೇ ಒಂದು ಗ್ರಹಿಕೆಯನ್ನು ಪಡೆದಿರುವಷ್ಟಕ್ಕೆ ಮಾತ್ರ ಸಿನಿಮಾ ಸಾಹಿತ್ಯ ಕೃತಿಗೆ ಋಣಿ. ಉಳಿದಂತ ತನ್ನ ಸಾರ್ವಭೌಮತೆಯನ್ನು ಎಲ್ಲ ಅರ್ಥದಲ್ಲಿ ಉಳಿಸಿಕೊಳ್ಳಬೇಕು. ಸೈದ್ಧಾಂತಿಕವಾಗಿ ಈ ಎರಡು ವಾದಗಳೂ ಸರಿ. ಇವೆರಡಕ್ಕೆ ತಮ್ಮದೇ ಆದ ಇತಿಮಿತಿಗಳಿವೆ. ಇದರ ಚರ್ಚೆ ಪ್ರಸ್ತುತ ಲೇಖನದ ಉದ್ದೇಶವಲ್ಲವಾದ್ದರಿಂದ ಇಲ್ಲಿ ವಿಸ್ತರಿಸುತ್ತಿಲ್ಲ. ಆದರೆ ಕನ್ನಡದಲ್ಲಿನ ಸಿನಿಮಾ ಮತ್ತು ಸಾಹಿತ್ಯದ ಸಂಬಂಧಕ್ಕೆ ಇವೆರಡೂ ಮುಖ್ಯ ಭೂಮಿಕೆಗಳು. ಇತರ ಕಲೆಗಳಂತೆ ಚಲನಚಿತ್ರ ಮಾಧ್ಯಮಕ್ಕೆ ವಿಶಿಷ್ಟವಾದ ಕಲಾತ್ಮಕ ಸಾಧ್ಯತೆ ಒಂದು ಮುಖವಾದರೆ ಇತರ ಪ್ರಕಾರಗಳಿಂದ ಎರವಲು ತಂದ ಸಂಗತಿಗಳನ್ನು ಬಳಸಿಕೊಂಡು ಆಕರ್ಷಕ ವ್ಯಾಪಾರಿ ವಸ್ತುವನ್ನಾಗಿಸುವ ಜಾಣ್ಮೆ ಇನ್ನೊಂದು ಮುಖ. ಇವೆರಡೂ ಪ್ರಕ್ರಿಯೆಗಳಿಂದ ಉಂಟಾಗುವ ದ್ವಂದ್ವಗಳು ಇಂತಹ ತುಲನೆಯಲ್ಲಿ ಮುಖ್ಯವಾಗುತ್ತವೆ. ಜೀವನಕ್ರಮಕ್ಕೆ ಪ್ರಾದೇಶಿಕ ವೈಶಿಷ್ಟ್ಯತ, ಒಂದು ಪ್ರಾತಿನಿಧಿಕತೆ ತಂದುಕೊಡುವಂತೆಯೇ ವ್ಯಾಪಕತೆಯನ್ನೂ ತಂದುಕೊಡುತ್ತದೆ. ಸಂಸ್ಕೃತಿಯ ಈ ಸ್ವರೂಪಕ್ಕೆ ಅನುಗುಣವಾಗಿ ನಮ್ಮ ವ್ಯಾಖ್ಯಾನಗಳೂ ಎರಡೂ ಮಾಧ್ಯಮದ ಸಂಬಂಧವ ಕುರಿತು ಬದಲಾಗುತ್ತಾ ಹೋಗುತ್ತಿವೆ. (ಮೊದಲು ಪ್ರಾದೇಶಿಕ ವೈಶಿಷ್ಟ್ಯ ಬಳಸಿಕೊಳ್ಳುವ ಮೂಲಕ ಗ್ರಹಿಕೆ ಕುಂಠಿತಗೊಳ್ಳುತ್ತದೆ ಎನ್ನುವ ಕಡೆ ಇದ್ದ ನಿಲುವು ಈಗ ಜಾಗತೀಕರಣದ ಹಿನ್ನೆಲೆಯಲ್ಲಿ ಎಲ್ಲ ಕಲೆಗಳೂ ಸಾಂಸ್ಕೃತಿಕ ಏಕಾಂತದ ಕಡೆಗೆ ಹೋಗುತ್ತಿರುವಾಗ ಪ್ರಾದೇಶಿಕ ವೈಶಿಷ್ಟ್ಯ ಬಳಸಿಕೊಳ್ಳಬೇಕು ಎಂಬ ಕಡೆ ವಾಲುತ್ತಿದೆ.) ಎಲ್ಲಕ್ಕಿಂತ ಹೆಚ್ಚಾಗಿ ಮೊದಲು ಭಾವಿಸಿದ್ದಂತೆ ಮನೋರಂಜನೆ ಮಾಧ್ಯಮವಾಗಿ ಬೆಳೆಯುತ್ತ ಹೋದ ಸಿನಿಮಾಕ್ಕೆ ಸಾಹಿತ್ಯ ಸಾಂಸ್ಕೃತಿಕ ಬದ್ಧತೆಯನ್ನು ತಂದುಕೊಡುವ ಕೆಲಸ ನಿಜವಾಗಿಯೂ ಮಾಡಿದೆಯೇ ಎಂಬ ಪ್ರಶ್ನೆ ಕೂಡ ಹೌದು. ಆದ್ದರಿಂದಲೇ ಈ ತತ್ವ ಮುಖ್ಯವಾಗುತ್ತದೆ.

ಸಾಮಾನ್ಯವಾಗಿ ಸಾಹಿತ್ಯ ಕೃತಿಯನ್ನು ಸಿನಿಮಾ ಹೇಗೆ ಅವಲಂಬಿಸಿದೆ ಎಂದು ನಮ್ಮಲ್ಲಿ ಚರ್ಚಿಸಲಾಗುತ್ತಿದೆಯೇ ಹೊರತು ಕೊಡು-ಕೊಳ್ಳುವಿಕೆಯ ಕ್ರಿಯೆ ಹೇಗೆ ನಡೆದಿದೆ ಎನ್ನುವ ಅರ್ಥದಲ್ಲಿ ಅಲ್ಲ. ಆದರೆ ವಾಸ್ತವವೆಂದರೆ ಬಹುತೇಕ ನಮ್ಮ ಜನಪ್ರಿಯ ಸಾಹಿತ್ಯದ ಪ್ರಕಾರ ಅವಲಂಬಿಸಿರುವುದು ಸಿನಿಮಾದ ಮಾದರಿಗಳನ್ನೇ ಮತ್ತು ನಮ್ಮ ಬಹುತೇಕ ಕಲಾತ್ಮಕ ಚಿತ್ರಗಳೂ ನಂಬಿರುವುದು ಸಾಹಿತ್ಯದ ಚೌಕಟ್ಟನ್ನೇ. ಈ ಅಂತರ ಶಿಸ್ತಿನ ಅಧ್ಯಯನ ನಮ್ಮಲ್ಲಿ ಆಗಿಲ್ಲವೆಂದರೆ ತಪ್ಪಲ್ಲ. ಕನ್ನಡ ಚಿತ್ರರಂಗ ಬಹುತೇಕ ನೇರ ನಿರೂಪಣೆ ಮತ್ತು ಕಥನ ಪ್ರಧಾನವಾದ ಅಭಿವ್ಯಕ್ತಿಯ ಶೈಲಿಯನ್ನು ಅವಲಂಬಿಸಿದೆ. ಇದರಿಂದ ಸಾಹಿತ್ಯ ಕೃತಿಯನ್ನು ಅವಲಂಬಿಸದ ಚಿತ್ರಗಳೂ ಸಾಹಿತ್ಯದ ದೃಶ್ಯ ಸಾಧ್ಯತೆಗಳೇ ಆಗಿರುತ್ತವೆ. ಈ ಅರ್ಥದಲ್ಲಿ ಸಿದ್ಧಗೊಂಡ ಸಾಹಿತ್ಯವನ್ನು ಬಳಸಿದ ಸಂದರ್ಭವನ್ನು ಮಾತ್ರ ಎರಡೂ ಮಾಧ್ಯಮದ ಸಂಬಂಧದ ನಡುವಿನ ಚರ್ಚೆಗೆ ಬಳಸುವುದು ತಪ್ಪು. ಇದೊಂದು ರೀತಿಯ ಮಂಥನ, ಆಕರ್ಷಣೆ, ಘರ್ಷಣೆ ಎಲ್ಲವೂ ಆಗಿರುವ ಸಂಬಂಧ. ಇದೊಂದು ರೀತಿಯ ದೀರ್ಘ ಪ್ರಕ್ರಿಯೆ.

• • •

ಕನ್ನಡ ಚಿತ್ರಗಳ ಆರಂಭ ಇತರ ಭಾರತೀಯ ಚಿತ್ರಗಳಂತೆಯೇ ನಾಟಕವನ್ನು ಅವಲಂಬಿಸಿತ್ತು. ಇದೊಂದು ರೀತಿ ಸರಳವಾದ, ಸಹಜವಾದ ಕ್ರಿಯೆ. ನಾಟಕದ ದೃಶ್ಯಾವಳಿಗಳ ಒಳಗೆ ಕಂಡುಬರುವ ಚಲನೆ ಚಲನಚಿತ್ರವಾಗಲು ಸುಲಭ ಸಾಧ್ಯವಾಯಿತು. ೧೯೩೪ರಲ್ಲಿ ಬಿಡುಗಡೆಯಾದ 'ಸತಿ ಸುಲೋಚನಾ' ಮತ್ತು 'ಭಕ್ತ ಧ್ರುವ' ಎರಡೂ ನಮ್ಮ ಪೌರಾಣಿಕ ಕಥೆಗಳನ್ನು ಆಧರಿಸಿದ್ದ ನಾಟಕಗಳು. ೧೯೩೫ರಲ್ಲಿ ಬಿಡುಗಡೆಯಾದ 'ಸದಾರಮೆ', ೧೯೩೬ರಲ್ಲಿ ಬಿಡುಗಡೆಯಾದ 'ಸಂಸಾರ ನೌಕ' ಆ ಕಾಲಕ್ಕೆ ಅತ್ಯಂತ ಜನಪ್ರಿಯವಾಗಿದ್ದ ನಾಟಕಗಳನ್ನು ಆಧರಿಸಿದ್ದವು. ಹೀಗೆ ಅನೇಕ ಜನಪ್ರಿಯ ನಾಟಕಗಳು 'ವಸಂತಸೇನಾ' ಸೇರಿದಂತೆ ತೆರೆಗಿಳಿದವು. ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ನಾಟಕದ ಶಿಲ್ಪ ಚಲನಚಿತ್ರವಾಗುವಾಗ ಯಾವ ಅರ್ಥದಲ್ಲೂ ಬದಲಾಗಲಿಲ್ಲ. ಅಲ್ಲಿಯಂತೆಯೇ ಇಲ್ಲಿ ಸಂಭಾಷಣೆ ಮತ್ತು ಗೀತೆಗಳ ಮೂಲಕ ಕಥೆ ಬೆಳೆಸುವ ತಂತ್ರ ಉಳಿದುಕೊಂಡಿತು. ಮಾಧ್ಯಮದ ಸಾಧ್ಯತೆಯನ್ನು ಇದರ ಬದಲಾಗಿ ರೂಪ ಬದಲಿಸುವ, ಮಾಯವಾಗಿಬಿಡುವ ಇಂತಹ ಕೌತುಕದ ಸಂಗತಿಗೆ ಬಳಸಲಾಯಿತು. ಬಹಳ ಮುಖ್ಯವಾಗಿ 'ಸದಾರಮೆ' ಚಿತ್ರದಲ್ಲಿ ಕಳ್ಳನ ಸನ್ನಿವೇಶವನ್ನು ಮೂಲದಂತೆಯೇ ಕಾಮಿಕ್ ಆಗಿ ಬಳಸಲಾಗಿದೆ. ಹೀಗೆ ನಾಟಕದ ಹಿನ್ನೆಲೆಯಲ್ಲಿ ಆರಂಭಿಕ ಚಲನಚಿತ್ರ ನೆಲೆಗೊಂಡಿತ್ತು ಎಂಬುದನ್ನು ಗುರುತಿಸಬಹುದು.

ಆ ಕಾಲದ ಚಿತ್ರಗಳು ಬಳಸಿಕೊಂಡ ಇನ್ನೊಂದು ಮಾದರಿ ವಸ್ತುಗಳು ಪುರಾಣ ಮತ್ತು ಜಾನಪದ ಕಥೆಗಳದ್ದು. ಇಂತಹ ಕಥೆಗಳು ಚಿತ್ರವಾಗುವಾಗ ಕೂಡ ನಾಟಕದ ಚೌಕಟ್ಟನ್ನೇ ಚಿತ್ರರಂಗ ಅವಲಂಬಿಸಿತು. ಇದಕ್ಕೆ ಎರಡು ಉದಾಹರಣೆಗಳನ್ನು ಕೊಟ್ಟು ಚರ್ಚಿಸಬಹುದು. 'ನಾಗಕನ್ನಿಕಾ' (೧೯೪೯) ಮತ್ತು 'ಜಗನ್ಮೋಹಿನಿ' (೧೯೫೦) ಈ ಎರಡು ಚಿತ್ರಗಳ ಕಥೆಗಳು ಆ ಕಾಲಕ್ಕೆ ಪ್ರಸಿದ್ಧವಾದ ಕಥೆಗಳೇ. ಈ ಎರಡರಲ್ಲೂ ಹೆಣ್ಣಿನ ಸ್ವಾಭಿಮಾನ ಮತ್ತು ಅಂತಸ್ಥೈರ್ಯವನ್ನು ಗುರುತಿಸುವ ಅಂಶಗಳಿವೆ. ಮೂಲತಃ ಜಾನಪದ ಕಥೆಗಳಲ್ಲಿ ಬರುವಂತೆ ಈ ಹೆಣ್ಣುಗಳಿಗೆ ವಿವೇಚನೆ ಜಾಸ್ತಿ. ಆದರೆ ಇದರ ಬದಲು ಚಿತ್ರದಲ್ಲಿ ಇವರಿಬ್ಬರೂ ಫೂತ್ಕರಿಸುವ ಸರ್ಪಗಳಾಗುತ್ತಾರೆ. ಚಿತ್ರದಲ್ಲಿ ಮಾಟ-ಮಂತ್ರಗಳ ದೃಶ್ಯಗಳಿಗೆ ಹೆಚ್ಚಿನ ತಾಂತ್ರಿಕತೆ ಲಭ್ಯವಾಗಿ ಜನರನ್ನು ಬೆರಗುಗೊಳಿಸುವ ತಂತ್ರ ಕಥನಕ್ಕಿಂತ ಹೆಚ್ಚು ಕೆಲಸ ಮಾಡುತ್ತದೆ, ಇದರಿಂದ ಸತ್ವಶಾಲಿ ಕಥನದಿಂದ ಕೂಡಿದ್ದರೂ ಇವು ಅಥೆಂಟಿಕ್ ಅನ್ನಿಸದೆ ಹೋಗುತ್ತವೆ. ಇಂತಹದೇ ಕಥನಗಳು ಇಲ್ಲಿಂದ ಸುಮಾರು ಒಂದು ದಶಕದ ನಂತರ ತೆರೆಗೆ ಬಂದಾಗ ಸಾಹಿತ್ಯಿಕ ಅಂಶಗಳನ್ನು ಅಳವಡಿಸಿಕೊಳ್ಳುವಷ್ಟು ಮಾಧ್ಯಮ ಚಿಂತಿಸಲು ಆರಂಭಿಸಿತ್ತು. ಸೂಕ್ಷ್ಮಗಳನ್ನು ತೌಲನಿಕ ಕಾರಣಗಳಿಗೆ ಗಮನಿಸಬಹುದು.

'ಆಶಾಸುಂದರಿ' (೧೯೬೦) ಇಂತಹದೇ ವಸ್ತುವುಳ್ಳ ಜಾನಪದ ಕಥೆ. ಇಲ್ಲಿ ಭಿನ್ನವಾದ ಅಂಶವೆಂದರೆ ಫೂತ್ಕರಿಸುವ ಮಾಯಾವಿಯೊಬ್ಬಳು ರೂಪಗೊಳ್ಳುವ ಮೊದಲು ಪತಿವ್ರತೆ ಮತ್ತು ಮಾಯಾವಿ ಇಬ್ಬರೂ ಆತ್ಮೀಯ ಗೆಳತಿಯರು. ಈ ಗೆಳೆತನವನ್ನು ಉಳಿಸಿಕೊಳ್ಳಲು ಮದುವೆಯನ್ನೇ ಮಾಡಿಕೊಳ್ಳದಂತೆ

ತೀರ್ಮಾನಿಸುತ್ತಾರೆ. ಪಾಶ್ಚಾತ್ಯವೆಂದು ದೂರುವ 'ಲೆಸ್ಬಿಯನ್' ಕಲ್ಪನೆಗೆ ಹೊಂದುವಂತಿರುವ ಅಂಶದಿಂದಲೇ ಕಥನದ ಸಾಧ್ಯತೆ ಹೆಚ್ಚಿದೆ. ಇದರಲ್ಲಿಯೇ ವಿಂಧ್ಯಾ ಎನ್ನುವ ಯಕ್ಷಿಣಿ "ನಾನು ಹೆಣ್ಣು, ನನಗಿರುವ ಮನೋನಿಗ್ರಹ ನಿಮಗಿಲ್ಲ" ಎಂದು ಆ ಸಂದರ್ಭದ ನಂಬಿಕೆಗಳೇ ಬುಡ ಮೇಲಾಗುವಂತಹ ಮಾತಾಡುತ್ತಾಳೆ. ಇಲ್ಲಿಂದ ಮುಂದೆ ಕಥಾನಕ ಮತ್ತೆ ನಾಟಕ ನಿರ್ಮಿತ ಚೌಕಟ್ಟಿಗೆ ಬರುತ್ತದೆ. ಆತ್ಮೀಯ ಗೆಳತಿಯರಿಬ್ಬರಲ್ಲಿ ಒಬ್ಬಳು ಪತಿವ್ರತೆಯ ಮಾದರಿಗೂ, ಇನ್ನೊಬ್ಬಳು ಮಾಯಾವಿನಿಯ ಮಾದರಿಗೂ ಜಾರಿಕೊಳ್ಳುತ್ತಾರೆ. ಇಲ್ಲಿಂದ ಮುಂದೆ ಕಥನ ಜರುಗುವುದಿಲ್ಲ. ನಾಟಕೀಯ ಚೌಕಟ್ಟೇ ಕೆಲಸ ಮಾಡುತ್ತದೆ, ಇಲ್ಲಿ ಕೂಡ ಮಾಯಾ ಮಂತ್ರಗಳ ಬೆರಗಿಗೇ ಮಹತ್ವ ಸಿಗುತ್ತದೆ. ಆದರೆ ಇಲ್ಲಿ ಗಮನಿಸಬೇಕಾದ ಅಂಶವೆಂದರೆ ತನ್ನ ಚೌಕಟ್ಟಿನ ನಡುವೆಯೂ ಸಾಹಿತ್ಯಿಕ ಅಂಶಗಳನ್ನು ಅಳವಡಿಸಿಕೊಳ್ಳಲು ಮಾಧ್ಯಮ ಪ್ರಯತ್ನಿಸುತ್ತಿತ್ತು. 'ರಾಣಿ ಹೊನ್ನಮ್ಮ' ಚಿತ್ರದಲ್ಲೂ ಇಂತಹದೇ ಅಂಶ ಗುರುತಿಸಬಹುದು. ಇಲ್ಲಿ ಕೂಡ ಪತಿವ್ರತೆ ಮತ್ತು ಮಾಯಾವಿನಿಯರ ಎರಡು ಮಾದರಿಗಳಿವೆ. ಆದರೆ ಇವರ ಘರ್ಷಣೆಯಲ್ಲೂ ಆ ಕಾಲದಲ್ಲಿ ಪರಾಕ್ರಮಿಯಾಗಿ ಕಾಣುತ್ತಿದ್ದ ನಾಯಕ ಇವರಿಬ್ಬರ ಕೈಗೊಂಬೆಯಾಗಿದ್ದಾನೆ. ಪುರುಷ ಪಾತ್ರಕ್ಕಿಂತ ಸ್ತ್ರೀ ಪಾತ್ರಗಳೇ ಜೀವಂತವಾಗಿ ಕಾಣುತ್ತವೆ. ಇದರ ಅರ್ಥ ಇಷ್ಟೇ, ಸಿನಿಮಾದಲ್ಲಿ ಕಥನ ನಿಧಾನವಾಗಿ ಬದಲಾಗುತ್ತಾ ಬಂದಿತ್ತು; ೫೦ರ ದಶಕದ ಕೊನೆ ಅಥವಾ ೬೦ರ ದಶಕದ ಆರಂಭದಲ್ಲಿ ನಾಟಕದ ವಸ್ತುವನ್ನೇ ಬಳಸಿಕೊಂಡರೂ ಬಳಸಿಕೊಳ್ಳುವ ಕ್ರಮದಲ್ಲಿ ಬದಲಾವಣೆ ಕಾಣಲಾರಂಭಿಸಿತು.



(ಚಿತ್ರ ೧) ಬಿ.ಪುಟ್ಟಸ್ವಾಮಯ್ಯ

ಇದು ಅಚ್ಚರಿಯೂ ಅಲ್ಲ, ಆಕಸ್ಮಿಕವೂ ಅಲ್ಲ. ಒಂದು ಬಗೆಯಲ್ಲಿ ತಾಂತ್ರಿಕತೆಯಿಂದ ತಯಾರಾಗುವ ಉತ್ಪನ್ನ ಎಂದು ಎಷ್ಟೇ ಹೇಳಿದರೂ ಅದರಲ್ಲಿ ಅಡಕವಾಗಿರುವುದು ಸಾಹಿತ್ಯ ಹಾಗೂ ರಂಗಭೂಮಿ.

ಒಂದು ಅರ್ಥದಲ್ಲಿ ಹೇಳುವುದಾದರೆ ನಾಟಕ ಮತ್ತು ಸಿನಿಮಾ ಸಂಪೂರ್ಣ ಒಂದಕ್ಕೊಂದು ತದ್ವಿರುದ್ಧವಾದ ಕ್ರಿಯೆಗಳು. ರಂಗಭೂಮಿಯಲ್ಲಿ ಒಂದು ಪ್ರಸಂಗಕ್ಕೆ ಆರಂಭದಿಂದ ಕೊನೆಯವರೆಗೆ ನಿರಂತರ ಸಾಗುವ ಚಾಲನೆಯಿರುತ್ತದೆ. ಕಥೆ ಶುರುವಾಗುವುದರಿಂದ ಹಿಡಿದು ಅದು ಅಂತಿಮ ಹಂತವನ್ನು ಮುಟ್ಟುವವರೆಗೂ ಕ್ರಮಬದ್ಧವಾದ ಜಾಡಿನಲ್ಲಿ ಸಾಗುತ್ತದೆ. ಉದಾಹರಣೆಗೆ 'ಸತ್ಯ ಹರಿಶ್ಚಂದ್ರ' ನಾಟಕ. ಸತ್ಯಸಂಧನಾದ ರಾಜ, ಆತನ ಬಾಯಲ್ಲಿ ಸುಳ್ಳು ಹೇಳಿಸಲು ಪ್ರಯತ್ನಪಡುವ ಮುನಿ ವಿಶ್ವಾಮಿತ್ರ. ಇದರಿಂದಾಗಿ ಪರಿಪರಿಯ ಕಷ್ಟಗಳಿಗೆ ಒಳಗಾಗುವ ರಾಜ, ರಾಣಿ, ರಾಜಕುಮಾರ ಕೊನೆಗೆ ಹೆಂಡತಿಯನ್ನೇ ಜೀತಕ್ಕೆ ಒಡ್ಡುವಷ್ಟು ಕಷ್ಟಕ್ಕೆ ಗುರಿಯಾಗುವ ಬಗೆ, ನಂತರ ಎಲ್ಲವೂ ದೈವಬಲದಿಂದ ಸಮಾಪ್ತಿ ಹೊಂದುವುದು - ಇದು ಕ್ರಮಬದ್ಧವಾಗಿ ಒಂದಾದ ಮೇಲೊಂದರಂತೆ ಬರುವ ದೃಶ್ಯಾವಳಿಗಳು.

ನಾಟಕವಾಗಲಿ, ಸಿನಿಮಾ ಆಗಲಿ ನೋಡುಗರಿಗೆ ಎರಡೂ ಪ್ರಕಾರಗಳಲ್ಲಿ ಯಾವುದೇ ರೀತಿಯ ಕ್ರಮ ತಪ್ಪುವಿಕೆ ಕಾಣಲು ಸಾಧ್ಯವಿಲ್ಲ. ಆದರೆ ನಿರ್ಮಾಣ ಕ್ರಿಯೆಯಲ್ಲಿ ಎರಡೂ ಭಿನ್ನ. ನಾಟಕದಲ್ಲಿ ಪ್ರೇಕ್ಷಕರ ಜೊತೆ ಅಥವಾ ಎದುರು ನಿಂತು ಒಂದೊಂದೇ ದೃಶ್ಯವನ್ನು ಮುಗಿಸುತ್ತಾ ಸಾಗಬೇಕು. ಆದರೆ ಸಿನಿಮಾದಲ್ಲಿ ಹಾಗಲ್ಲ, ಯಾವುದೇ ಒಂದು ದೃಶ್ಯ ಮೊದಲಲ್ಲೇ ಸಿದ್ಧವಾಗಬಹುದು. ಮೊದಲ ದೃಶ್ಯ ಎಲ್ಲ ಮುಗಿದ ಮೇಲೆ ತಯಾರಾಗಬಹುದು. ಅಂದರೆ ನಾಟಕದಂತೆ ಮೊದಲಿನಿಂದ ಕೊನೆಯವರೆಗೂ ನಿರಂತರ ಸಾಗುವಿಕೆ ಚಿತ್ರದಲ್ಲಿಲ್ಲ. ಹಾಗೆಯೇ ಎದುರು ಕೂತವರ ಒಳಗೊಳ್ಳುವಿಕೆಯೂ ಚಲನಚಿತ್ರದಲ್ಲಿಲ್ಲ. ಎದುರಿನ ಕ್ಯಾಮರಾವನ್ನೇ ಪ್ರೇಕ್ಷಕ ವರ್ಗವೆಂದು ಗ್ರಹಿಸಿ ಅದಕ್ಕೆ ನಟನೆಯನ್ನು, ಸಂಭಾಷಣೆಯನ್ನು ಒಪ್ಪಿಸಬೇಕು. ಇಲ್ಲಿ ಸಾವಿರಾರು ಜನ ಕೂತಿರುವ ಕತ್ತಲ ಸಭಾಗೃಹದ ಮುಂದೆ ಬೆಳಕಿನಲ್ಲಿ ತನ್ನನ್ನು ತಾನು ಒಪ್ಪಿಸಿಕೊಳ್ಳುವ ಕಾರ್ಯಭಾರವಿಲ್ಲ. ಹಾಗೆಯೇ ಒಮ್ಮೆ ತಪ್ಪಾದರೆ ಮುಗಿದೇ ಹೋಯಿತು ಎಂಬ ಭಯವೂ ಇಲ್ಲ. ಒಮ್ಮೆ ಒಂದು ನಾಟಕದ ಪ್ರದರ್ಶನ ಮುಗಿದರೆ ಅದು ಮುಗಿದಂತೆಯೇ. ಅದಕ್ಕೆ ಪುನರಾವೃತ್ತಿ ಎಂಬುದಿಲ್ಲ. ಬೇಕೆಂದರೆ ಇನ್ನೊಂದು ಪ್ರದರ್ಶನವೇ ಆಗಬೇಕು, ಅದು ಮೊದಲಿನಂತಿರುವ ಖಾತ್ರಿಯೇನೂ ಇಲ್ಲ. ಹಾಗೇ ಇರಬೇಕೆಂಬ ನಿಯಮವೂ ಇಲ್ಲ, ಅದು ಮೊದಲಿನದಕ್ಕಿಂತಲೂ ಹೆಚ್ಚು ಪರಿಣಾಮಕಾರಿಯಾಗಿರಬಹುದು ಅಥವಾ ಇನ್ನಷ್ಟು ಕಳೆಗುಂದಬಹುದು. ಸಿನಿಮಾ ಹಾಗಲ್ಲ, ಒಮ್ಮೆ ಮುಗಿದ ಮೇಲೆ ಎಷ್ಟೇ ಪ್ರದರ್ಶನಗಳಾದರೂ ಯಾವುದೇ ಬದಲಾವಣೆ ಸಾಧ್ಯವಿಲ್ಲ. ಯಾಕೆಂದರೆ ಅದರಲ್ಲಿ ತೊಡಗಿಕೊಂಡ ಸಾವಿರಾರು ಜೀವಂತ ಜನರೆದುರು ಪ್ರದರ್ಶನವಾಗುತ್ತಿರುವುದು ನಿರ್ಜೀವ ವಸ್ತು. ಒಬ್ಬ ನಟ ಅಥವಾ ನಟಿ ಬಾರದಿದ್ದರೂ ಸಮಸ್ಯೆ ಎಂಬುದಿಲ್ಲ, ಅಂದರೆ ರಂಗಭೂಮಿಗೆ ಒಳಪಡುವ ಹಲವು ಸೀಮಾರೇಖೆಗಳು ಚಲನಚಿತ್ರಗಳಲ್ಲಿಲ್ಲ.

ಹೀಗೆ ಒಂದಕ್ಕೊಂದು ಹಲವು ವೈರುಧ್ಯಗಳಿದ್ದರೂ ನಾಟಕ ಮತ್ತು ಸಿನಿಮಾಗಳಿಗೆ ನಂಟು ಬೆಳೆದಿದ್ದಾದರೂ ಹೇಗೆ ಎಂಬುದಕ್ಕೆ ಕಾರಣಗಳನ್ನು ಅರಸುವ ಅಗತ್ಯವಿಲ್ಲ. ಶತಮಾನದ ಕಡೆಯ ವರ್ಷಗಳಲ್ಲಿ (೧೮೯೫) ಬೆಳಕು ಕಂಡು ಇಪ್ಪತ್ತನೆಯ ಶತಮಾನವನ್ನು ಸಾಂಸ್ಕೃತಿಕವಾಗಿ ಆಳಿದ ಚಲನಚಿತ್ರ ಪ್ರಕಾರದ ಆತ್ಮವಿರುವುದೇ ಅದರ ತವರುಮನೆಯಾದ ರಂಗಭೂಮಿಯಲ್ಲಿ. ಎರಡೂ ಪ್ರದರ್ಶನ ಕಲೆಗಳೇ, ಹಾಗೆಯೇ ಎರಡೂ ಅಭಿನಯ ಮತ್ತು ಶಬ್ದದ ಮೂಲಕ ಬೇರೊಬ್ಬರಲ್ಲಿ ನಿರ್ದಿಷ್ಟ ವಸ್ತುವನ್ನು ಪರಿಚಯಿಸುವ ಪರಕಾಯ ಪ್ರವೇಶದ ಕ್ಷೇತ್ರಗಳು. ಅಂತಿಮವಾಗಿ ಎರಡು ಕ್ಷೇತ್ರಗಳ ಗುರಿಯೂ ಒಂದೇ; ಹೊರಬರುವ ಉತ್ಪನ್ನವೂ ಒಂದೇ. ಆದರೆ ಅವು ತಯಾರಾಗುವ ವಿಧಾನ ಬೇರೆ ಉತ್ಪನ್ನದ ಮಾದರಿ ಬೇರೆ.

ಇಡೀ ಪ್ರಪಂಚದಲ್ಲಿ ಚಿತ್ರರಂಗದ ಬುನಾದಿಯನ್ನು ಭದ್ರವಾಗಿ ಕಟ್ಟಿದ್ದು ರಂಗಭೂಮಿಯೇ. ಅದು ಹಾಲಿವುಡ್ ಆಗಿರಲಿ, ಜಪಾನ್, ಹಾಂಗ್‌ಕಾಂಗ್ ಚಿತ್ರರಂಗವಾಗಿರಲಿ, ಭಾರತದ ಚಿತ್ರರಂಗವಾಗಲಿ ರಂಗಭೂಮಿಯ ರೂಪಾಂತರ ಕ್ರಿಯೆಯಾಗಿಯೇ ಚಿತ್ರರಂಗದ ಉಗಮವಾದದ್ದು. ರಂಗಭೂಮಿಯ ಜೀವಂತ ಬೊಂಬೆಗಳನ್ನು ಆಧುನಿಕ ತಾಂತ್ರಿಕತೆಯ ಮೂಲಕ ಛಾಯಾವ್ಯಕ್ತಿಗಳಾಗಿ ಇನ್ನೊಂದು ಪ್ರಕಾರದಲ್ಲಿ ಸೃಷ್ಟಿಸಿರುವುದೇ ಕಳೆದ ಶತಮಾನ ಈ ಜಗತ್ತಿಗೆ ಕೊಟ್ಟಿರುವ ಬಹು ದೊಡ್ಡ ಕೊಡುಗೆ. ಪ್ರೇಕ್ಷಕರ ಮುಂದೆ ಕಾಣುತ್ತಿದ್ದ ವ್ಯಕ್ತಿಗಳು ಅದೇ ಪಾತ್ರಗಳಾಗಿ ಚಲನೆಯುಳ್ಳ ಛಾಯಾಚಿತ್ರಗಳಾಗಿ ಕಾಣತೊಡಗಿದರು.

ಕನ್ನಡದಲ್ಲಿ ಅಥವಾ ಕರ್ನಾಟಕದಲ್ಲಿ ಸಿನಿಮಾ ಚರಿತ್ರೆಗೆ ಇನ್ನೊಂದು ಬಲವಾದ ಹಿನ್ನೆಲೆಯಿದೆ. ಭಾರತ ಚಿತ್ರರಂಗದಲ್ಲಿ ಮೂಕಿ ಯುಗ ಆರಂಭವಾದಾಗ (ಅಂದರೆ ಮಾತಿಲ್ಲದ ಚಿತ್ರಗಳು ಬೆಳಕು ಕಾಣತೊಡಗಿದಾಗ) ಅವುಗಳ ತಯಾರಿಕೆಯ ಪ್ರಮುಖ ಕೇಂದ್ರವಾಗಿದ್ದು ಬೆಂಗಳೂರು ನಗರ.

ಮೂಕಿ ಚಿತ್ರಗಳ ಕಾಲದಿಂದಲೂ ಚಲನಚಿತ್ರಕ್ಕೆ ಬೆನ್ನೆಲುಬಾಗಿ ನಿಂತದ್ದು ರಂಗಭೂಮಿಯೇ. ಇವುಗಳಲ್ಲಿ ಬಹುತೇಕ ಚಿತ್ರಗಳು ರಂಗಭೂಮಿಯಿಂದ ಅಥವಾ ನಾಟಕ ಪ್ರಕಾರದಿಂದ ಅಥವಾ ರಂಗನಟರಿಂದ ನಿರ್ಮಿತವಾದವು ಎಂಬುದು ಬಹು ಮುಖ್ಯ ಸಂಗತಿ. ಚಿತ್ರರಂಗಕ್ಕೆ ಧುಮುಕಿದವರೆಲ್ಲರಿಗೂ ರಂಗಭೂಮಿಯ ಜೊತೆ ಸನಿಹದ ಸಂಬಂಧವಿತ್ತು ಎಂಬ ಮಾತಿನಲ್ಲಿ ಯಾವುದೇ ಉತ್ಪ್ರೇಕ್ಷೆ ಇಲ್ಲ.

ಕನ್ನಡದಲ್ಲಿ ಮೊಟ್ಟಮೊದಲು ತಯಾರಾದ ಸಂಪೂರ್ಣ ಕಥಾನಕದ ಛಾಯಾರೂಪಾಂತರವೆಂದರೆ ನಾಟಕ ಶಿರೋಮಣಿ ಎ.ವಿ.ವರದಾಚಾರ್ಯರು ಆಡುತ್ತಿದ್ದ 'ನಿರುಪಮಾ' ನಾಟಕ . ಮೈಸೂರು ಅರಸರ ಸಮ್ಮುಖದಲ್ಲಿ ವರದಾಚಾರ್ಯರ ರತ್ನಾವಳಿ ಥಿಯೇಟರ್ ಕಂಪನಿ ಪ್ರದರ್ಶಿಸುತ್ತಿದ್ದ ಈ ನಾಟಕವನ್ನು ೧೯೨೧ರಲ್ಲಿ ಮೈಸೂರು ಸಂಸ್ಥಾನದ ಯುವರಾಜ ಕಂಠೀರವ ನರಸಿಂಹರಾಜ ಒಡೆಯರ್ ಚಿತ್ರೀಕರಿಸಿದ್ದರು. ಹಲವು ಬಾರಿ ವಿದೇಶ ಪ್ರಯಾಣ ಮಾಡಿ ಚಲನಚಿತ್ರದ ಆವಿಷ್ಕಾರದ ಬಗ್ಗೆ, ಕ್ಯಾಮರಾ ಬಗ್ಗೆ ತಿಳಿದಿದ್ದ ಒಡೆಯರ್ ಕೈಯಿಂದ ಸುತ್ತುವ ಕ್ಯಾಮರಾದಿಂದ 'ನಿರುಪಮಾ' ನಾಟಕವನ್ನು ಚಿತ್ರೀಕರಿಸಿದ್ದರಂತೆ. ಇಂಗ್ಲಿಷ್ ನಾಟಕವೊಂದರ ಅನುವಾದವಾಗಿದ್ದ ಈ ನಾಟಕದ ಛಾಯಾರೂಪಾಂತರವನ್ನು ಒಡೆಯರ್ ವಿದೇಶಿ ಅಥಿತಿಗಳಿಗೆ ತೋರಿಸುತ್ತಿದ್ದರಂತೆ. ವೈಯಕ್ತಿಕ ಆಸಕ್ತಿಗಳನ್ನು ಸಿನಿಮಾದ ವಿಶಾಲ ವ್ಯಾಪ್ತಿಗೆ ತೆಗೆದುಕೊಳ್ಳುವಂತಿಲ್ಲವಾದರೂ ಒಂದು ವಿಶೇಷವೆಂಬ ಕಾರಣಕ್ಕಾಗಿ ಈ ಉಲ್ಲೇಖ.

ಇದಾದ ನಾಲ್ಕು ವರ್ಷಗಳ ನಂತರ ಇದೇ ಬಗೆಯ ರೂಪಾಂತರ ಹೊಂದಿದ ನಾಟಕ 'ಮಹಾತ್ಮ ಕಬೀರ್'. ಕರ್ನಾಟಕದ ಜನಪ್ರಿಯ ನಾಟಕ ಕಂಪನಿಗಳಲ್ಲೊಂದಾದ ಹಾಗೂ ಕನ್ನಡ ರಂಗಭೂಮಿ ಮತ್ತು ಚಿತ್ರರಂಗಕ್ಕೆ ಅಪ್ರತಿಮ ಕಾಣಿಕೆ ನೀಡಿದ ಗುಬ್ಬಿ ವೀರಣ್ಣನವರ ಗುಬ್ಬಿ ಚೆನ್ನಬಸವೇಶ್ವರ ನಾಟಕ ಮಂಡಳಿ ಈ ಸಾಹಸಕ್ಕೆ ಕೈ ಹಾಕಿತ್ತು. ೧೯೨೫ರಲ್ಲಿ ತರೀಕೆರೆಯ ಸಂತೆ ಮೈದಾನದಲ್ಲಿ ಕ್ಯಾಂಪ್ ಹಾಕಿದ್ದ ನಾಟಕ ಮಂಡಳಿ 'ಮಹಾತ್ಮ ಕಬೀರ್' ನಾಟಕ ಆಡುತ್ತಿತ್ತು. ಅದಾಗಲೇ ಬಯಾಸ್ಕೋಪ್ ಎಂದೇ ಜನಪ್ರಿಯವಾಗಿದ್ದ ಸಿನಿಮಾ ನಾಟಕರಂಗವನ್ನು ತನ್ನ ಮಾಯಾಜಾಲದಿಂದ ತುಸು ಮಸುಕು ಮಾಡುತಿತ್ತು. ಈ ಆಕರ್ಷಣೆಯತ್ತ ವಾಲುವ ಸಾಧ್ಯತೆಗಳೇನೂ ಕಡಿಮೆ ಇರಲಿಲ್ಲ. ಇವೆಲ್ಲವನ್ನೂ ಮನಗಂಡ

ಕಾರಣದಿಂದಲೋ ಅಥವಾ ಬದಲಾದ ಹೊಸ ತಂತ್ರಜ್ಞಾನದಿಂದಲೋ, ಸಾಹಸ ಮಾಡುವ ಛಲದಿಂದಲೋ ತಮ್ಮ ಸಂಸ್ಥೆಯ ಪತಿಯಿಂದಲೇ ವೀರಣ್ಣನವರು ನಾಲ್ಕು ದಿನಗಳ ಕಾಲ ಈ ನಾಟಕವನ್ನು ಚಿತ್ರೀಕರಿಸಿದ್ದರು. ಹೀಗಾಗಿ ವರದಾಚಾರ್ ಮೂಕಿ ಯುಗದ ಮೊದಲ ನಾಯಕ ನಟನಾದರೆ ಕಬೀರ್ ಪಾತ್ರ ವಹಿಸುತ್ತಿದ್ದ ಸಿ.ಬಿ.ಮಲ್ಲಪ್ಪ ಎರಡನೆ ನಾಯಕ ನಟ ಎಂದು ಹೇಳಿಕೊಳ್ಳುವಂತಾಯಿತು.

ಆದರೆ ಪರಿಪೂರ್ಣವಾಗಿಯೇ ಚಿತ್ರೀಕರಣಗೊಂಡಿದ್ದು ಶೂದ್ರಕ ಕವಿಯ ಮೃಚ್ಛಕಟಿಕ ನಾಟಕ. 'ವಸಂತಸೇನ' ಹೆಸರಲ್ಲಿ ತಯಾರಾದ ಈ ನಾಟಕ ಮೂಕಿ ಚಿತ್ರಗಳ ಇತಿಹಾಸದಲ್ಲಿ ಪ್ರಥಮ ಎನಿಸಿರುವುದೇ ಈ ಕಾರಣದಿಂದ. ಇಂದಿನ ಚಿತ್ರಗಳ ಮಾದರಿಯಲ್ಲೇ ತಯಾರಾದ ಈ ಚಿತ್ರದ ಸಕಲ ಕಾರ್ಯಗಳಿಗೆ ಪ್ರಮುಖ ಶಕ್ತಿಯಾಗಿ ನಿಂತವರು ಕನ್ನಡದ ಖ್ಯಾತ ನಾಟಕಕಾರ ಟಿ.ಪಿ.ಕೈಲಾಸಂ. ಚಿತ್ರೀಕರಣದ ಹಲವು ಹಂತಗಳಲ್ಲೂ ಸಹಾಯಕರಾಗಿ ಕೆಲಸ ಮಾಡಿದ್ದ ಕೈಲಾಸಂ ಚಿತ್ರದಲ್ಲಿ ಶಕಾರನಾಗಿಯೂ ಅಭಿನಯಿಸಿದರು.

ಮೂಕಿ ಯುಗದಿಂದ ಮಾತಿನ ಯುಗಕ್ಕೆ ಬಂದಾಗಲೂ ಚಿತ್ರರಂಗ ಆಶ್ರಯಿಸಿದ್ದು ರಂಗಭೂಮಿಯನ್ನೇ. ಒಂದು ಕಡೆ ಮೈಸೂರಿನಲ್ಲಿ ವರದಾಚಾರ್ಯರ ನಾಟಕ ಮಂಡಳಿಯೇ ತಮ್ಮ ಅಗಲಿದ ಗುರುಗಳ ನೆನಪಿಗಾಗಿ ವರದಾಚಾರ್ ಮೆಮೋರಿಯಲ್ ಟ್ರಸ್ಟ್ ಒಂದನ್ನು ಸ್ಥಾಪಿಸಿಕೊಂಡು 'ಭಕ್ತಧ್ರುವ' ಚಿತ್ರ ಆರಂಭಿಸಿದರೆ ಬೆಂಗಳೂರಿನಲ್ಲಿ ಚಮನ್‌ಲಾಲ್ ಡೊಂಗಾಜಿ ಎನ್ನುವ ವ್ಯಾಪಾರಸ್ಥರು ಸೌತ್ ಇಂಡಿಯಾ ಮೂವಿಟೋನ್ ಲಾಂಛನದಲ್ಲಿ ಅಂದಿನ ಖ್ಯಾತ ರಂಗನಟ ಸುಬ್ಬಯ್ಯನಾಯ್ಡು ಅವರನ್ನು

(ಚಿತ್ರ ೨) 'ಚಂದವಳ್ಳಿಯ ತೋಟ'ದ ಸಮಾರಂಭದಲ್ಲಿ ತ.ರಾ.ಸು. ಮತ್ತು ರಾಜಕುಮಾರ್

ನಾಯಕರನ್ನಾಗಿ ಆರಿಸಿಕೊಂಡು 'ಸತಿ ಸುಲೋಚನಾ'ವನ್ನು ಶುರು ಮಾಡಿದ್ದರು. ಎರಡು ಪೌರಾಣಿಕ ಕಥೆಗಳೂ ಅಂದು ನಾಟಕವಾಗಿ ಖ್ಯಾತಿ ಹೊಂದಿದವೇ. ಹಾಗೆಯೇ ಎರಡೂ ನಾಟಕಗಳಲ್ಲಿ ಪಾತ್ರ ವಹಿಸಿದವರೂ ರಂಗನಟರು.

'ಸತಿ ಸುಲೋಚನಾ' ಚಿತ್ರಕ್ಕೆ ಚಿತ್ರಸಾಹಿತ್ಯ ಒದಗಿಸಿದವರು ಬೆಳ್ಳಾವೆ ನರಹರಿಶಾಸ್ತ್ರಿಗಳು. ಅವರದೇ ನಾಟಕವಾದ 'ಇಂದ್ರಜಿತ್ ವಧೆ' ಅಥವಾ 'ಸತಿ ಸುಲೋಚನಾ'ವನ್ನೇ ಆಧರಿಸಿ ಚಿತ್ರ ನಿರ್ಮಿಸಿದ್ದರಿಂದ ನಾಟಕದ ಹಾಡುಗಳೇ ಚಿತ್ರದಲ್ಲೂ ಹರಿದು ಬಂದವು. ಮೂಲತಃ ನಾಟಕದವರೇ ಆಗಿದ್ದ ಶಾಸ್ತ್ರಿಗಳು ಒಟ್ಟು ೪೪ ನಾಟಕಗಳನ್ನು ರಚಿಸಿದ್ದರು. ಗುಬ್ಬಿ ಕಂಪನಿಯ ಜನಪ್ರಿಯ ನಾಟಕಗಳಾದ 'ಸದಾರಮೆ', 'ಕೃಷ್ಣ ಸುಧಾಮ' ಮುಂದೆ ಚಲನಚಿತ್ರಗಳೂ ಆಗಿ ಜನಪ್ರಿಯವಾದವು. 'ಕೃಷ್ಣ ಸುಧಾಮ' ಚಿತ್ರದಲ್ಲಿ ಶಾಸ್ತ್ರಿಗಳು ನಾಯಕನಟರಾಗಿ ಅಭಿನಯಿಸಿದ್ದರು.

ಅದೇ ರೀತಿಯಲ್ಲಿ ಕನ್ನಡದ ಇನ್ನೊಂದು ಪ್ರಥಮ ಎನ್ನಬಹುದಾದ 'ಭಕ್ತಧ್ರುವ' ಚಿತ್ರದ ಸಾಹಿತ್ಯ ರಚನೆ ಸಾಹಿತ್ಯಲೋಕದ ಇನ್ನೊಬ್ಬ ದಿಗ್ಗಜ ಹಾಗು ಕನ್ನಡದ ಮಹಾಕಾದಂಬರಿಗಳಾದ 'ಮಹಾಬ್ರಾಹ್ಮಣ' ಮತ್ತು 'ಮಹಾಕ್ಷತ್ರಿಯ'ಗಳ ಕರ್ತೃ ದೇವುಡು ನರಸಿಂಹ ಶಾಸ್ತ್ರಿಗಳದ್ದು. 'ಸತಿ ಸುಲೋಚನಾ' ಚಿತ್ರ ಬಿಡುಗಡೆಯಾದ ಒಂದೇ ತಿಂಗಳ ಅಂತರದಲ್ಲಿ ತೆರೆಕಂಡ 'ಭಕ್ತಧ್ರುವ' ಕೂಡ ಕನ್ನಡ ಚಿತ್ರರಂಗದ ಇತಿಹಾಸದಲ್ಲಿ ಪ್ರಪ್ರಥಮ ಅಡಿಗಲ್ಲುಗಳಲ್ಲೊಂದು. ಇದು ಕೂಡ ಅಂದಿನ ಪ್ರಖ್ಯಾತ ನಾಟಕಗಳಲ್ಲೊಂದು.

ಬೆಳ್ಳಾವೆ ನರಹರಿ ಶಾಸ್ತ್ರಿಗಳು ನಂತರ ಚಿತ್ರರಂಗದೊಂದಿಗೇ ತಮ್ಮ ಬಾಂಧವ್ಯವನ್ನು ಮುಂದುವರಿಸಿದರು. ದೇವಿ ಫಿಲ್ಮ್ಸ್ ತಯಾರಿಸಿದ 'ಪುರಂದರದಾಸ', ಕಲೈವಾಣಿ ಫಿಲ್ಮ್ಸ್‌ರವರ 'ಭಕ್ತ ಪ್ರಹ್ಲಾದ' ಗುಬ್ಬಿ ವೀರಣ್ಣನವರ 'ಸುಭದ್ರ' ಹಾಗೂ 'ಹೇಮರೆಡ್ಡಿ ಮಲ್ಲಮ್ಮ' ಚಿತ್ರಗಳಿಗೂ ಸಾಹಿತ್ಯ, ಸಂಭಾಷಣೆ, ಗೀತೆಗಳನ್ನು ಬರೆದರು. 'ಹೇಮರೆಡ್ಡಿ ಮಲ್ಲಮ್ಮ' ಚಿತ್ರದ "ಆಸೆಯೇ ನಿರಾಸೆಯಾದುದೇ ಈಶ ಇದು ನಿನ್ನ ಶೋಧನೆಯೇ..." ಎಂಬ ಗೀತೆ ಆ ಕಾಲದಲ್ಲಿ ಅತ್ಯಂತ ಜನಪ್ರಿಯವಾಗಿತ್ತು. ಹಾಗೆಯೇ 'ಸತಿ ಸುಲೋಚನಾ' ಚಿತ್ರದ "ಭಲೆ ಭಲೆ ಪಾರ್ವತಿ ಬಲು ಚತುರೆ..." ಮತ್ತು 'ವಸಂತಸೇನಾ' ಚಿತ್ರದ "ಇದೇ ಮಹಾ ಸುದಿನಾ..." ಹಾಡುಗಳನ್ನು ಹಾಡಿದ ಲಕ್ಷ್ಮೀಬಾಯಿ ಜನರ ಮನದಲ್ಲಿ ರಾರಾಜಿಸಿದ್ದರು.

ಪ್ರಥಮ ಚಿತ್ರದಿಂದ ಚಿತ್ರರಂಗ ಬಾಲ್ಯಾವಸ್ಥೆಗೆ ಬರುವವರೆಗೂ ಕನ್ನಡದ ರಂಗಕೃತಿಗಳೇ ಚಿತ್ರ ಭಾಷೆಗೆ ತರ್ಜುಮೆಯಾದವು. 'ಸತಿ ಸುಲೋಚನಾ', 'ಸದಾರಮೆ', 'ಸಂಸಾರ ನೌಕ', 'ಭಕ್ತಧ್ರುವ', 'ವಸಂತಸೇನಾ', 'ಭಕ್ತ ಪ್ರಹ್ಲಾದ', 'ಸುಭದ್ರಾ', 'ಸತ್ಯ ಹರಿಶ್ಚಂದ್ರ'. 'ಕೃಷ್ಣ ಸುಧಾಮ', 'ಹೇಮರೆಡ್ಡಿ ಮಲ್ಲಮ್ಮ', 'ಚಂದ್ರಹಾಸ', 'ಕೃಷ್ಣಲೀಲಾ', 'ಮಹಾತ್ಮಾ ಕಬೀರ್', 'ಭಕ್ತ ರಾಮದಾಸ' ಮೊದಲಾದ ಚಿತ್ರಗಳು ರಂಗಭೂಮಿಯ ಸಾಹಿತ್ಯ ಸಂಗೀತವನ್ನೇ ತೆರೆಯ ಮೇಲೆ ಬಿಂಬಿಸಿದಂಥವು. ಈ ಸಾಹಿತ್ಯ, ನಾಟಕಗಳು ಎಷ್ಟು ಶಕ್ತಿಶಾಲಿಯಾದವು ಎಂಬುದಕ್ಕೆ ಅಂದು ತಯಾರಾದ ಚಿತ್ರಗಳು ಮತ್ತೊಮ್ಮೆ ಪುನರ್‌ರಚಿತವಾದುದೇ ಸಾಕ್ಷಿ. 'ಭಕ್ತ ಕುಂಬಾರ', 'ಭಕ್ತ ಪ್ರಹ್ಲಾದ', 'ಮಹಾಕವಿ ಕಾಳಿದಾಸ', 'ಬಸವೇಶ್ವರ', ಹಾಗೆಯೇ ಕಂಪನಿ ನಾಟಕಗಳಾದ 'ಸೊಸೆ ತಂದ ಸೌಭಾಗ್ಯ', 'ಸಂಪತ್ತಿಗೆ ಸವಾಲ್', 'ಪಟ್ಟಣಕ್ಕೆ ಬಂದ ಪತ್ನಿಯರು', 'ವೀರ ಸಿಂಧೂರ ಲಕ್ಷ್ಮಣ'. ಇತ್ತೀಚಿನ ದಿನಗಳಲ್ಲಿ ಹಲವು ನಾಟಕಗಳು ಚಲನಚಿತ್ರಗಳಾದ ಉದಾಹರಣೆ ನಮ್ಮ ಎದುರಿಗಿದೆ. ಅವುಗಳಲ್ಲಿ ಪ್ರಮುಖವಾದದ್ದು ಮಾಸ್ತಿಯವರ 'ಕಾಕನ ಕೋಟೆ'. ಮಕ್ಕಳ ಸಿನಿಮಾ ವಿಭಾಗದಲ್ಲೂ ಸಾಹಿತ್ಯ ಕೃತಿ ಬಳಸಿದ್ದಿದೆ. ಉದಾಹರಣೆಗೆ 'ಕಳಸಾಪುರದ ಹುಡುಗರು' ಮುಂತಾದವುಗಳು. ೨೦೦೦ವರೆಗೂ ನಾಟಕಗಳನ್ನು ರಂಗಭೂಮಿಗೆ ತರುವ ಪರಿಪಾಠ ಇದ್ದೇ ಇದೆ. 'ಸಿಕ್ಕು' (ದಂಗೆ), 'ಋಷ್ಯಶೃಂಗ', ಗಿರೀಶ್ ಕಾರ್ನಾಡರ 'ನಾಗಮಂಡಲ' ಹೀಗೆ ಹೇಳಿಕೊಂಡವರ ಸೌಜನ್ಯದಿಂದ ಕೆಲವರ ಕೃತಿಗಳು ಬೆಳಕಿಗೆ ಬಂದಿವೆ. ಹೇಳದೆ ಬಂದ ಸಾಹಿತ್ಯ ಕೃತಿಗಳಿಗೆ ಲೆಕ್ಕವಿಲ್ಲ.

೧೯೬೨ರವರೆಗೂ ಸಿದ್ಧಗೊಂಡ ಸಾಹಿತ್ಯ ಕೃತಿಗಳನ್ನು ಕನ್ನಡ ಚಿತ್ರರಂಗ ಬಳಸಲಿಲ್ಲ ಎಂಬ ಕಾರಣಕ್ಕೆ ಅಲ್ಲಿಯವರೆಗೂ ಸಿನಿಮಾ ಮತ್ತು ಸಾಹಿತ್ಯದ ಸಂಬಂಧ ನಮ್ಮಲ್ಲಿ ರೂಪುಗೊಂಡೇ ಇರಲಿಲ್ಲ ಎಂದು ವ್ಯಾಖ್ಯಾನಿಸುವ ಕ್ರಮವೊಂದು ನಮ್ಮಲ್ಲಿದೆ. ಸಾಹಿತ್ಯ ಕೃತಿಯನ್ನು ಚಿತ್ರರಂಗ ಬಳಸಿರಲಿಲ್ಲ ಎಂಬುದು ತಾಂತ್ರಿಕವಾಗಿ ಮಾತ್ರ ಸರಿ. ಏಕೆಂದರೆ ಅಷ್ಟು ಹೊತ್ತಿಗೆ ಚಿತ್ರರಂಗ ಅನೇಕ ಸಾಹಿತ್ಯಿಕ ಮಾದರಿಗಳನ್ನು ತನ್ನದಾಗಿಸಿಕೊಂಡಿತ್ತು, ಯಾವಾಗ ಚಿತ್ರರಂಗಕ್ಕೆ ಸಕಾರಾತ್ಮಕ ಕಥನ ಕ್ರಮ ಒಂದು ಅಗತ್ಯ ಎನ್ನಿಸಲು ಆರಂಭಿಸಿತೋ ಅವತ್ತೇ ಸಾಹಿತ್ಯಿಕ ಅಂಶಗಳು ಚಿತ್ರಗಳಲ್ಲಿ ಕಾಣಲು ಆರಂಭಿಸಿದವು. ೧೯೪೯ರಲ್ಲಿ ತೆರೆಕಂಡ 'ಭಾರತಿ' ಚಲನಚಿತ್ರದಲ್ಲಿ ಪಾಶ್ಚಾತ್ಯ ಸಂಪ್ರದಾಯಗಳನ್ನು ಪೂರ್ಣವಾಗಿ ಅಳವಡಿಸಿಕೊಂಡಿದ್ದ ವಿಧುರನೊಬ್ಬನಿಗೆ ವಯಸ್ಸಿಗೆ ಬಂದ ಮಗನಿರುತ್ತಾನೆ, ಅವನಿಗೆ ಭಾರತೀಯ ಸಂಸ್ಕೃತಿಯಲ್ಲಿ ನಂಬಿಕೆ. ತಂದೆ ಹೊಸ ಹೆಣ್ಣನ್ನು ಮದುವೆಯಾಗಿ ಪಾಶ್ಚಾತ್ಯ ಮಾದರಿಯಲ್ಲಿ ಬದುಕಲು ಹೊರಡುತ್ತಾನೆ, ತಂದೆ ಹೆಂಡತಿಗೆ ಮಗನ ಆದರ್ಶ ಮೆಚ್ಚುಗೆಯಾಗದೆ ಎರಡೂ ಕ್ರಮದ ನಡುವೆ ಘರ್ಷಣೆ ಶುರುವಾಗಿ ಕೊನೆಗೆ ಸಹಜವಾಗಿಯೇ ಭಾರತೀಯ ಸಂಸ್ಕೃತಿಗೆ ಜಯವಾಗುತ್ತದೆ. ಸಾಂಕೇತಿಕವಾಗಿ ಚಿತ್ರದ ಅಂತ್ಯದಲ್ಲಿ ದೇಶಕ್ಕೆ ಸ್ವಾತಂತ್ರ್ಯ ಲಭಿಸುತ್ತದೆ. ಇದು ಯಾವ ಹಂತದಲ್ಲೂ ನಾಟಕ ಪರಂಪರೆಯಿಂದ ಪ್ರಭಾವಿತವಾಗಿದೆ ಅನ್ನಿಸದ ಚಿತ್ರ. ಇದರಲ್ಲಿ ಪುರಾಣ ಅಥವಾ ಜಾನಪದ ಕಥೆಗಳ ಜಾಡು ಇಲ್ಲ. ಸ್ಪಷ್ಟವಾಗಿ ಸಾಹಿತ್ಯಿಕ ಮಾದರಿಯಲ್ಲೇ ಬೆಳೆಯುವ ಚಿತ್ರ. ಆ ಕಾಲದ ಬಹು ಮಹತ್ವದ ಕಾದಂಬರಿಗಳೂ ಇದೇ ಆಕೃತಿಯಲ್ಲಿದ್ದವು. ಅಂತಹ ಒಂದೆರಡು ಕಾದಂಬರಿಗಳ ಪ್ರಭಾವವನ್ನು ಈ ಚಿತ್ರದಲ್ಲಿ ಗುರುತಿಸಬಹುದು, ಇದು ನೇರವಾಗಿ ಯಾವ ಕಾದಂಬರಿಯನ್ನೂ ಆಧರಿಸಿದ್ದಲ್ಲ ಎಂಬುದನ್ನು ಬಿಟ್ಟರೆ ಉಳಿದೆಲ್ಲ ಕಾದಂಬರಿ ಆಧಾರಿತ ಸಿನಿಮಾಗಳ ಲಕ್ಷಣಗಳೂ ಇದರಲ್ಲಿವೆ.

೧೯೫೩ರಲ್ಲಿ ತೆರೆಕಂಡ 'ಚಂಚಲಕುಮಾರಿ' ಚಿತ್ರದ ಕಥೆ ಜಪಾನಿ ಚಿತ್ರ 'ಯೂಕಿವಾರಿಸು'ದಿಂದ ಪ್ರೇರಣೆ ಪಡೆದದ್ದು. ಹೀಗಾಗಿ ಕಥನದಲ್ಲೇ ಭಿನ್ನತೆ, ಹೊಸತನ ಕಾಣಿಸುತ್ತದೆ. ಒಂದು ಮಗುವಿನ ಸುತ್ತ ಹೆಣೆದ ಈ ಕಥೆಯಲ್ಲಿ ಹಾಡುಗಳನ್ನು

(ಚಿತ್ರ ೩-೫) ತ್ರಿವೇಣಿ   ಕೊರಟಿ ಶ್ರೀನಿವಾಸರಾವ್   ಸಿ.ಕೆ.ನಾಗರಾಜರಾವ್

ಸೇರಿಸಿದ್ದರು, ಕಥಾನಿರೂಪಣೆಯಲ್ಲಿ ಸಂಭಾಷಣೆಗೆ ಬದಲು ಗೆಶ್ಚರ್ ಬಳಸಿದ ಮತ್ತು ಅತ್ಯಂತ ಚಿಕ್ಕ ದೃಶ್ಯಗಳ ಮೂಲಕ ವೇಗದ ಚಾಲನೆ ನೀಡುವ ತಂತ್ರ ಕಾಣಬಹುದು. ಈ ಅಂಶದಲ್ಲಿ ಸಾಹಿತ್ಯದ ಪ್ರಭಾವ ಇದ್ದೇ ಇದೆ. ಅದೇ ವರ್ಷ ತೆರೆಕಂಡ 'ಜಾತಕ ಫಲ' ಚಿತ್ರದಲ್ಲೂ ಮದುವೆಯ ಸುತ್ತ ಹೆಣೆಯುವ ಕಥೆಯಲ್ಲಿ ಸಾಹಿತ್ಯಿಕ ರೀತಿಯಲ್ಲಿ ಕೆಲಸ ಮಾಡುವುದನ್ನು ಕಾಣಬಹುದು, ನವೋದಯ ಸಾಹಿತ್ಯ ಇಂಗ್ಲಿಷ್ ಸಾಹಿತ್ಯದ ಪ್ರೇರಣೆ ಪಡೆದು ಮುಂದಿನದನ್ನು ಕಲ್ಪಿಸಿಕೊಂಡು ನಿರ್ಧಾರ ತೆಗೆದುಕೊಳ್ಳುವ ಮಾದರಿ 'ಮೊದಲತೇದಿ'ಯಲ್ಲಿ ಬಳಕೆಯಾಗಿದೆ.ಇಲ್ಲಿ ನಾಯಕ ಆತ್ಮಹತ್ಯೆ ಮಾಡಿಕೊಂಡರೆ ಮುಂದಾಗಬಹುದಾದ ಅನಾಹುತಗಳನ್ನು ಕಲ್ಪಿಸಿಕೊಂಡು ತನ್ನ ನಿರ್ಧಾರ ಬದಲಿಸುವ ತಂತ್ರ ಬಳಸಿದ್ದರು. ಇಲ್ಲಿ ಕೂಡ ಸೃಷ್ಟಿಯಾದ ಸಾಹಿತ್ಯಿಕ ಪ್ರೇರಣೆಯನ್ನು ಗುರುತಿಸಬಹುದು. ಎ.ಎನ್.ಮೂರ್ತಿರಾಯರ ನಾಟಕ 'ಆಷಾಢಭೂತಿ'ಯನ್ನು ಆಧರಿಸಿದ 'ಸುಬ್ಬಾಶಾಸ್ತ್ರಿ' ಚಿತ್ರದಲ್ಲಿ ಒಳ ಹರುವಿನ ನಿರೂಪಣಾ ವಿಧಾನವನ್ನು ಕಾಣಬಹುದು. 'ರಾಯರ ಸೊಸೆ', 'ಸ್ಕೂಲ್ ಮಾಸ್ಟರ್', 'ಅಣ್ಣ ತಂಗಿ' ಇಂತಹ ಚಿತ್ರಗಳು ನೇರವಾಗಿ ಯಾವ ಸಾಹಿತ್ಯ ಕೃತಿಯನ್ನೂ ಅವಲಂಬಿಸದಿದ್ದರೂ ಆ ಕಾಲದಲ್ಲಿ ರೂಪಗೊಂಡಿದ್ದ ಸಾಹಿತ್ಯಿಕ ಮಾದರಿಯನ್ನೇ ಅವಲಂಬಿಸಿದ್ದವು. ಹಾಗೆಯೇ ಅನೇಕ ಸಾಹಿತ್ಯಿಕ ಕಾದಂಬರಿಗಳಿಗೆ ಋಣಿಯಾಗಿದ್ದವು. ಈ ಋಣವನ್ನು ಹೇಳಿಕೊಳ್ಳುವ ವಿಧಾನವಿನ್ನೂ ರೂಪಗೊಂಡಿರಲಿಲ್ಲ ಅಷ್ಟೆ.'ರಣಧೀರ ಕಂಠೀರವ','ಭಕ್ತ ಕನಕದಾಸ', 'ಕಿತ್ತೂರು ಚೆನ್ನಮ್ಮ','ವಿಜಯನಗರದ ವೀರಪುತ್ರ' ಇಂತಹ ಚಿತ್ರಗಳು ಕೂಡ ತಮ್ಮ ನಾಟಕೀಯ ಸ್ವರೂಪ ಕಳೆದುಕೊಳ್ಳುತ್ತ ಸಾಹಿತ್ಯಿಕ ರೂಪದತ್ತ ಕಾಲಿಡುತ್ತಿದ್ದವು. ಭಾವೋದ್ರೇಕದ ಎಳೆಯ ಸಾಹಿತ್ಯಿಕ ಸಾಧ್ಯತೆಯೊಂದು ಇಂತಹ ಚಿತ್ರಗಳಲ್ಲಿ ಆಗಲೇ ಸೂಕ್ಷ್ಮವಾಗಿ ಕೆಲಸ ಮಾಡಲು ಆರಂಭಿಸಿತು.

ಪರಿವರ್ತನೆ ಸರಳವಾಗಿರಲಿಲ್ಲ ಎಂಬ ಕಾರಣ ಮೂಲತಃ ಸಿದ್ಧಗೊಂಡ ಸಾಹಿತ್ಯ ಕೃತಿಗಳು ನೇರವಾಗಿ ಚಿತ್ರರಂಗ ಪ್ರವೇಶಿಸುವಲ್ಲಿ ವಿಳಂಬವಾಗುವುದಕ್ಕೆ ಕಾರಣವಾಯಿತು. ಜಿ.ವಿ.ಅಯ್ಯರ್ ತಮ್ಮ 'ಭೂದಾನ' ಚಿತ್ರಕಥೆಯನ್ನು ಕಾರಂತರ 'ಚೋಮನ ದುಡಿ' ಆಧಾರದಿಂದ ಸಿದ್ಧಗೊಳಿಸಿದ್ದರು. ಆದರೆ ಕಾರಂತರು ಅದನ್ನು ತಮ್ಮ ಕಥೆಯ ಆಧಾರ ಎಂದು ಒಪ್ಪದೆ ಸ್ವತಂತ್ರ ಕಥೆ ಎಂದೇ ಕರೆದಿದ್ದರಿಂದ ಅದಕ್ಕೆ ಕಾದಂಬರಿ ಆಧಾರಿತವೆಂಬ ಹೆಸರು ತಪ್ಪಿತು. ಹಾಗೆ ನೋಡಿದರೆ ಇಂತಹ ಅವಕಾಶ ತಪ್ಪಿಸಿಕೊಂಡ ಇನ್ನೂ ಅನೇಕ ಚಿತ್ರಗಳಿವೆ. ಅಲ್ಲೆಲ್ಲ ಋಣವನ್ನು ಯಾವ ರೀತಿ ಹೇಳಬೇಕು ಎಂಬ ಸಮಸ್ಯೆ ಎದ್ದಿದ್ದನ್ನು ಕಾಣಬಹುದು.

ಆ ಕಾಲದ ಚಿತ್ರರಂಗ ಸಣ್ಣಕಥೆ, ಕಾದಂಬರಿಗಳನ್ನು ಬಹುಕಾಲ ನಿರ್ಲಕ್ಷಿಸಿತು ಎಂದು ಆಪಾದಿಸುವವರು ಮರೆಯುವ ಬಹಳ ಮುಖ್ಯವಾದ ಒಂದು ಅಂಶವಿದೆ. ಅದೆಂದರೆ, ಸಣ್ಣಕತೆ ಕಾದಂಬರಿಗಳೂ ಆ ಕಾಲಕ್ಕೆ ಹೊಸ ಪ್ರಕಾರಗಳಾಗಿದ್ದವು. ಅವೂ ಕೂಡ ಪ್ರಯೋಗಶೀಲತೆಯ ಹಂತದಲ್ಲೇ ಇದ್ದವು. ನವೋದಯ ಸಾಹಿತ್ಯಕ್ಕೆ ಇದ್ದ fiction ಎಂಬ ಮಾದರಿಯಲ್ಲಿ ನಾಟಕೀಯತೆ ಕಡಿಮೆ, ವರ್ಣನೆ ಜಾಸ್ತಿ. ಇದರ ಜೊತೆಗೆ ಈ ಎರಡು ಪ್ರಕಾರಗಳಲ್ಲಿ ನಮ್ಮ ಪ್ರಾಚೀನ ಕಾವ್ಯಗಳ ಪ್ರೇರಣೆ ಪಡೆದು ಅನೇಕ ಒಳಹರುಹಿನ ತತ್ವಗಳನ್ನು ಕೂಡಿಸಿಕೊಂಡಿದ್ದವು. ಆ ಕಾಲದ ಹಲವಾರು ಕಾದಂಬರಿಗಳಲ್ಲೂ ಅನೇಕ ಕಥನಗಳು ಕೂಡಿಕೊಂಡಿರುವುದನ್ನು ಕಾಣಬಹುದು.

ಚಿತ್ರರಂಗಕ್ಕೆ ಇವರಲ್ಲಿ ಯಾವುದಾದರೂ ಒಂದು ಎಳೆಯನ್ನು ಬಳಸುವುದು ಹೇಗ ಎಂಬ ಸಂದಿಗ್ಧ ಸಹಜ. ಇದರ ಜೊತೆಗೆ ಸಾಹಿತ್ಯಕ್ಕೆ ಆಗ ಇನ್ನೂ ಜನಪ್ರಿಯ ಎಂಬ ಆಯಾಮ ಲಭ್ಯವಾಗಿರಲಿಲ್ಲ. ಅಗಾಧವಾದ ನಾಟಕ ಸಮುದಾಯವೂ ರೂಪುಗೊಂಡಿರಲಿಲ್ಲ, ಹೀಗಾಗಿ ಸಿನಿಮಾ ಮಾಧ್ಯಮ ಸಾಹಿತ್ಯದ ಯಾವ ಅಂಶವನ್ನು ಬಳಸಬೇಕು ಎಂಬ ಗೊಂದಲದಲ್ಲಿ ಸಿಲುಕಿತು. ಮುಖ್ಯವಾಗಿ ಗಮನಿಸಬಹುದಾದ ಸಂಗತಿ ಎಂದರೆ ಆರಂಭಿಕ ಕಾದಂಬರಿ ಆಧಾರಿತ ಚಿತ್ರಗಳೆಲ್ಲವೂ ಜನಪ್ರಿಯ ಸಾಹಿತ್ಯದ ಮೂಗ್ಗಿನಿಂದ ತೆರೆಗಿಳಿಯಲು ದಶಕಗಳೇ ಬೇಕಾಯಿತು. 'ಕಾನೂರು ಹೆಗ್ಗಡತಿ' ಯಂತಹ ಮಹಾನ್ ಕೃತಿ ಹೆಚ್ಚು ಕಡಿಮೆ ಅರ್ಧಶತಮಾನ ಈ ಪರಿವರ್ತನೆಯ ನಿರೀಕ್ಷೆಯಲ್ಲಿತ್ತು.

• • •

೧೯೫೦-೬೦ರ ಒಂದು ಬಹಳ ಮುಖ್ಯವಾದ ಪರಿವರ್ತನೆಯೆಂದರೆ ಸಾರ್ವತ್ರಿಕ ಶಿಕ್ಷಣ ಪರಿಣಾಮಕಾರಿಯಾದ ಅನುಷ್ಠಾನ ಕಂಡಿದ್ದು. ಇದರಿಂದ ವಾಚಕ ಸಮುದಾಯ ಹಿಗ್ಗಿತು. ಈ ಹೊಸ ಓದುಗರೆಲ್ಲರೂ ಸಾಹಿತ್ಯವನ್ನು ಗಂಭೀರ ಅರ್ಥದಲ್ಲಿ ಓದುವವರಾಗಿರಲಿಲ್ಲ, ಹೊತ್ತು ಕಳೆಯಲು ಓದುವವರಾಗಿದ್ದರು. ಇಂತಹವರ ಅವಶ್ಯಕತೆಗೆಂದೇ ನಿಯತಕಾಲಿಕೆಗಳು ಸೃಷ್ಟಿಯಾದವು. ಇವುಗಳಿಂದ ಜನಪ್ರಿಯ ಎಂದು ಕರೆಯುವ ಸಾಹಿತ್ಯ ಸೃಷ್ಟಿಯಾಯಿತು. ಅಷ್ಟು ಹೊತ್ತಿಗಾಗಲೇ ಪ್ರಗತಿಶೀಲರು ಸಾಹಿತ್ಯವನ್ನು ಸರಳೀಕರಿಸುವ ಕೆಲಸ ಮಾಡುತ್ತಿದ್ದರು. ಇವೆಲ್ಲವೂ ಸೇರಿ ಜನ ಬಯಸಿದ ಸಾಹಿತ್ಯವೊಂದು ಆಗ ರೂಪುಗೊಂಡಿತ್ತು. ಈ ಕಾಲದ ಚಲನಚಿತ್ರ ಎತ್ತಿಕೊಂಡಿದ್ದು ಈ ಪ್ರಕಾರದ ಸಾಹಿತ್ಯವನ್ನು. ಇದಕ್ಕೆ ಒಂದು ವ್ಯಾಪಾರಿ ಕಾರಣವೂ ಇತ್ತು. ಜನರ ಮನಸ್ಸಿನಲ್ಲಿ ಈಗಾಗಲೇ ನೆಲೆನಿಂತ ಕಥೆಯನ್ನು ತೆರೆಗಿಳಿಸುವ ಮೂಲಕ ಪ್ರೇಕ್ಷಕರನ್ನು ಮುಂದಾಗಿಯೇ ಸೃಷ್ಟಿಸಿಕೊಂಡ ಜಾಣ್ಮೆ ಇಲ್ಲಿ ಕೆಲಸ ಮಾಡಿತ್ತು. ಪುಟ್ಟಣ್ಣ ಕಣಗಾಲ್ ಅವರು ಗುರುತಿಸುವ ಹಾಗೆ ಕಾದಂಬರಿಯನ್ನು ಆಧರಿಸುವ ಮೂಲಕ ಚಿತ್ರಶಿಲ್ಪಕ್ಕೆ ಕಥನದ ಗಟ್ಟಿತನ ಬಂತು. ಅಲ್ಲದೆ ನೇಟಿವಿಟಿ ಮತ್ತು ಅಥೆಂಟಿಸಿಟಿಗಳೂ ಮೂಡಿದವು.

ಕೃಷ್ಣಮೂರ್ತಿ ಪುರಾಣಿಕರ 'ಧರ್ಮದೇವತೆ'ಯನ್ನು ಆಧರಿಸಿದ 'ಕರುಣೆಯೇ ಕುಟುಂಬದ ಕಣ್ಣು' (೧೯೬೨) ತಾಂತ್ರಿಕವಾಗಿ ಕಾದಂಬರಿ ಆಧಾರಿತ ಮೊದಲ ಚಿತ್ರ. ಈ ಚಿತ್ರ ಕಾದಂಬರಿಯನ್ನು ಆಧರಿಸಿದ್ದರೂ ತನ್ನ ಚೌಕಟ್ಟಿನಲ್ಲಿ ಕಾದಂಬರಿಯ ಕ್ರಿಯಾಶೀಲತೆಯನ್ನು ಬಳಸಲಿಲ್ಲ, ಹಾಡು ಸಾಹಸದೃಶ್ಯಗಳು ಸೇರಿ ಒಟ್ಟು ಚಿತ್ರದ ಶಿಲ್ಪ ಆಗಿನ ಚಲನಚಿತ್ರದ ರೂಪದಲ್ಲೇ ಇತ್ತು. ವಿವರಗಳು ಮಾತ್ರ ಕಾದಂಬರಿಯಿಂದ ಬಂದಿದ್ದವು. ನಾಯಕ ತಪ್ಪುದಾರಿ ಹಿಡಿದು ವಾತ್ಸಲ್ಯಪೂರಿತ ವಾತಾವರಣದಿಂದ ಸರಿದಾರಿಗೆ ಹಿಂತಿರುಗುವ ವಸ್ತು ಕೂಡ ಚಿತ್ರರಂಗದ ಸ್ವಂತಕ್ಕೊಂದು ಕ್ರಾಂತಿಕಾರಿ ಬದಲಾವಣೆ ನೀಡುವಷ್ಟು ಗಟ್ಟಿತನವನ್ನು ಹೊಂದಿರಲಿಲ್ಲ. ಇದರ ನಂತರ ಪುರಾಣಿಕರ 'ಕುಲವಧು'(೧೯೬೩) ಮತ್ತು ತ.ರಾ.ಸು.ಅವರ 'ಚಂದವಳ್ಳಿಯ ತೋಟ'(೧೯೬೪) ಕಾದಂಬರಿ ಆಧರಿತ ಚಿತ್ರಪರಂಪರೆಯನ್ನು ಮುಂದುವರಿಸಿದವು. ತನ್ನದಲ್ಲದ ತಪ್ಪಿಗೆ ಗಂಡನ ಮನೆಯಿಂದ ಬಂದು ತವರಿನಲ್ಲಿ ನಿಂತು ಬದಲಾವಣೆ ಸಾಧಿಸುವ 'ಕುಲವಧು'ವಿನ ನಾಯಕಿ ಆಗಿನ ಪರಿವರ್ತನಾಶೀಲ ಯುಗದ ಹೆಣ್ಣನ್ನು ಬಿಂಬಿಸುತ್ತಿದ್ದಳು. ಇದು ಒಂದು ಮಾದರಿಯನ್ನೇ ಹುಟ್ಟುಹಾಕಿತು. ಕಲಿತ ಹೆಣ್ಣು ಎಂಬ ಕಲ್ಪನೆ ಬಹುಕಾಲ ಚಿತ್ರರಂಗವನ್ನು ಕಾಡಿತ್ತು. 'ಚಂದವಳ್ಳಿಯ ತೋಟ' ಕೃತಿ ನಿರ್ಮಾಣದಲ್ಲಿ ಮಾತ್ರವಲ್ಲದೆ ಅದರ ಚಿತ್ರಕಥೆ ಸಂಭಾಷಣೆಯಲ್ಲೂ ತ.ರಾ.ಸು. ತಮ್ಮನ್ನು ತೊಡಗಿಸಿಕೊಂಡಿದ್ದರಿಂದ ಅದು ತ.ರಾ.ಸು. ಅವರ ಆಶಯದ ಚೌಕಟ್ಟಿನಲ್ಲೇ ಬೆಳೆಯಿತು. ಒಟ್ಟು ಕುಟುಂಬದ ಕಲ್ಪನೆ, ಅದನ್ನು ಒಡೆಯಲು ಬರುವ ಸೊಸೆ, ಅಣ್ಣ-ತಮ್ಮಂದಿರ ವಿರಸ, ತಂದುಹಾಕುವ ನೆರೆ-ಹೊರೆಯವರು, ವಿರಸದ ಪರಿಣಾಮ, ಕುಟುಂಬದ ದುರಂತ - ಹೀಗೆ 'ಚಂದವಳ್ಳಿಯ ತೋಟ' ಚಿತ್ರರಂಗಕ್ಕೆ ಕೊಟ್ಟ ಪರಿಕಲ್ಪನೆಗಳು ಹಲವಾರು. ಈ ಎಳೆಗಳು ಹಲವಾರು ವರ್ಷ ಬೇರೆ ಬೇರೆ ರೂಪ ಪಡೆಯುತ್ತ ಚಿತ್ರರಂಗದಲ್ಲಿ ಉಳಿದುಕೊಂಡವು. ಅಷ್ಟೇ ಏಕೆ, ಒಟ್ಟು ಕುಟುಂಬ ಒಂದು ಮೌಲ್ಯ ಎಂಬ ನಂಬಿಕೆಗಳು ಬದಲಾದವು. 'ಒಡಹುಟ್ಟಿದವರು'ನಂತಹ ಚಲನಚಿತ್ರವೂ ಬಂದಿತು. ಹೀಗೆ ಈ ಎರಡು ಕಾದಂಬರಿ ಆಧಾರಿತ ಚಿತ್ರಗಳೂ ಚಿತ್ರರಂಗದಲ್ಲಿ ಜಡ್ಡುಗಟ್ಟಿದ್ದ ಕಥನದ ಸ್ವರೂಪಕ್ಕೆ ಕೆಲಮಟ್ಟಿಗಿನ ಚಾಲನೆ ನೀಡಿ ಹೊಸತನ ತಂದವು.

೧೯೬೪ರಲ್ಲಿ ಬಿಡುಗಡೆಯಾದ ಎನ್.ಲಕ್ಷ್ಮೀನಾರಾಯಣ್ ಅವರ 'ನಾಂದಿ' ಯಾವ ಕಾದಂಬರಿಯನ್ನೂ ಆಧರಿಸಿರಲಿಲ್ಲ. ಆದರೆ ಕಿವುಡ-ಮೂಗರ ಬದುಕಿನ ದ್ವಂದ್ವಗಳನ್ನು ಹೇಳುವ ಪರಿವರ್ತನೆಯ ಆಶಯ ಹೊಂದಿದ ಈ ವಸ್ತುವಿನಲ್ಲಿ ಪ್ರಗತಿಶೀಲ ಮತ್ತು ನವ್ಯರ ನಡುವಿನ ಸಂಕೀರ್ಣ ಘಟ್ಟದಲ್ಲಿದ್ದ ಸಾಹಿತ್ಯಿಕ ಪ್ರೇರಣೆ ಕೆಲಸ ಮಾಡಿತ್ತು. ಅಭಿನಯದಲ್ಲಿ ಸಂವೇದನಾಶೀಲತೆ ಮತ್ತು ಸೂಕ್ಷ್ಮತೆಗಳು ಮುಖ್ಯವಾಗುವಂತೆಯೇ ಕಥನದ ಸೂಕ್ಷ್ಮ ಒಳನೋಟಗಳು ಈ ಚಿತ್ರವನ್ನು ಬಹಳ ಮುಖ್ಯವಾಗುವಂತ ಮಾಡಿದ್ದವು. ೧೯೬೫ರಲ್ಲಿ ತೆರೆಕಂಡ 'ಮಿಸ್ ಲೀಲಾವತಿ' ಕೊರಟಿ ಶ್ರೀನಿವಾಸರಾವ್ ಅವರ ಕಾದಂಬರಿಯನ್ನು ಆಧರಿಸಿ ಕೆ.ಎಸ್.ಜಗನ್ನಾಥ್ ನಿರ್ಮಿಸಿದ ಚಿತ್ರ. ತಂದೆಯ ಅತಿಯಾದ ಪ್ರೀತಿಯಿಂದ ಮಗಳು ಹೇಗೆ ದಾರಿ ತಪ್ಪಿದಳು ಎಂಬುದನ್ನು ಹೇಳುವುದು ಕಾದಂಬರಿಯ ಆಶಯ.ಆದರೆ ಚಲನಚಿತ್ರದಲ್ಲಿ ಕಲಿತ ಸ್ವತಂತ್ರ

ಆಲೋಚನೆಯ ಹೆಣ್ಣು ತನ್ನ ಜೀವನವನ್ನು ತಾನೇ ನಿರ್ಮಿಸಿಕೊಳ್ಳಲು ಪ್ರಯತ್ನಿಸುವ ಆಶಯ ಸೇರಿಕೊಂಡಿತು. ಪಾತ್ರದ ಇದೇ ಆಶಯವೇ ಚಲನಚಿತ್ರದಲ್ಲಿ ಮುಖ್ಯವಾಯಿತು. ಚಿತ್ರದ ಅಂತ್ಯ ಕಾದಂಬರಿಯ ಆಶಯವನ್ನು ಬಿಂಬಿಸಿದರೂ ಮನಸ್ಸಿನಲ್ಲಿ ಉಳಿಯುವುದು ಜಯಂತಿ ತಮ್ಮ ಅಥೆಂಟಿಕ್ ಅಭಿನಯದಿಂದ ಕಟ್ಟಿಕೊಟ್ಟ ಜೀವಂತ ಪಾತ್ರ. ಇವರಿಂದ ಸಾಹಿತ್ಯ ಕೃತಿಯನ್ನು ಚಲನಚಿತ್ರ ಎತ್ತರಕ್ಕೆ ಕೊಂಡೊಯ್ಯಬಲ್ಲದು ಎಂಬ ಇನ್ನೊಂದು ಅಂಶವೂ ಬೆಳಕಿಗೆ ಬಂತು. ಸಾಹಿತ್ಯದ ಆಧಾರದಿಂದ ಸಿನಿಮಾ ಟೇಕ್ ಆಫ್ ಆಗುವ ಸಾಧ್ಯತೆಗೆ 'ಮಿಸ್ ಲೀಲಾವತಿ' ಒಂದು ವಿಶಿಷ್ಟವಾದ ಮಾದರಿಯನ್ನು ಒದಗಿಸಿತು. ೧೯೬೬ರಲ್ಲಿ ತೆರೆಕಂಡ 'ಸಂಧ್ಯಾರಾಗ' ಅ.ನ.ಕೃ. ಅವರ ಕಾದಂಬರಿಯನ್ನು ಆಧರಿಸಿತ್ತು. ಅಲ್ಲಿಯವರೆಗೂ ಪ್ರಗತಿಶೀಲರ ಕಾದಂಬರಿ ಆಧರಿಸಿದ ಚಲನಚಿತ್ರಗಳು ಹೊರಗೆ ಬಂದಿದ್ದರೆ 'ಸಂಧ್ಯಾರಾಗ'ಕ್ಕೆ ಇನ್ನೊಂದು ವಿಶಿಷ್ಟ ಸಾಧ್ಯತೆಯಿತ್ತು. ಸಂಗೀತಕಾರನ ಬದುಕಿನ ತಲ್ಲಣಗಳನ್ನು ಹೇಳುವ ಈ ಕಥೆಗೆ ಹೇರಳ ಮೆಲೋಡ್ರಾಮದ ಆಯಾಮಗಳಿದ್ದವು. ಚಲನಚಿತ್ರ ಈ ಮೆಲೋಡ್ರಾಮವನ್ನೇ ಮುಖ್ಯವಾಗಿ ಆಧರಿಸಿತ್ತು. ಇದೂ ಕೂಡ ಒಂದು ಕಥನ ಸ್ವರೂಪದ ಹುಟ್ಟಿಗೆ ಕಾರಣವಾಯಿತು.

(ಚಿತ್ರ ೭-೯) ಚದುರಂಗ



ಗೊರೂರು ರಾಮಸ್ವಾಮಿ ಅಯ್ಯಂಗಾರ್

ಜಿ.ಬಿ.ಜೋಶಿ

೧೯೬೭ರಲ್ಲಿ ಪುಟ್ಟಣ್ಣ ಕಣಗಾಲರ 'ಬೆಳ್ಳಿಮೋಡ' ತೆರೆಗೆ ಬಂದಿತು. ಕಾದಂಬರಿಯೊಂದಕ್ಕೆ ದೃಶ್ಯಾತ್ಮಕ ಸಾಧ್ಯತೆ ನೀಡುವ ಹೊಸ ಪ್ರಯತ್ನಕ್ಕೆ ಇದು ನಾಂದಿಯಾಯಿತು. 'ಬೆಳ್ಳಿಮೋಡ'ದ ಸಾಧಾರಣ ಕಥನ ಚಿತ್ರದಲ್ಲಿ ಮೈತುಂಬಿಕೊಂಡು ಬಂದಿತು. ಅಂತ್ಯದಲ್ಲಿ ಪ್ರೇಮ ಸಂಕೇತವಾಗಿದ್ದ ಮರಕ್ಕೆ ಕೊಡಲಿ ಪೆಟ್ಟು ಕೊಡುತ್ತಾ 'ಬೆಳ್ಳಿ ಕರಗಿತು ಮೋಡ ಸರಿಯಿತು' ಎನ್ನುವ ಚಿತ್ರಿಕೆ ಕಾದಂಬರಿಯನ್ನು ಚಿತ್ರಮಾಧ್ಯಮ ಹೇಗೆ ಅರಗಿಸಿಕೊಂಡು ಬೆಳೆಯಬಲ್ಲುದು ಎಂಬುದಕ್ಕೆ 'ಬೆಳ್ಳಿಮೋಡ' ಒಳ್ಳೆಯ ಉದಾಹರಣೆ. ಎಸ್.ಲಕ್ಷ್ಮೀನಾರಾಯಣ ಅವರ 'ಮುಕ್ತಿ' ಚಿತ್ರದಲ್ಲಿ ವಿಫಲ ಪ್ರೇಮಕ್ಕೆ ನಿಂತುಬಿಟ್ಟಿದ್ದ ಕಾದಂಬರಿಯ (ಇನಾಂದಾರ್ ಅವರ 'ಶಾಪ') ಎಳೆ ಮದುವೆ ಎನ್ನುವ ಸಂಸ್ಥೆಯನ್ನೇ ಹೆಣ್ಣು ಪ್ರಶ್ನಿಸುವ ಎತ್ತರಕ್ಕೆ ಬೆಳೆದು ನಿಂತಿತು. ಇದನ್ನು ಸಾಕಷ್ಟು unsaid ಆಗಿ ಹೇಳುವ ಮೂಲಕ ಕಥನ ವಾಚ್ಯವಾಗದಂತೆ ಲಕ್ಷ್ಮೀನಾರಾಯಣ್ ಪ್ಲೇಸ್ ಮಾಡಿದ್ದರು.

(ಚಿತ್ರ ೭) ಕಾದಂಬರಿಗಳ ಚಿತ್ರಕಾರ ಕಾದಂಬರಿಕಾರ - ಚಿತ್ರಸಾಹಿತಿಗಳ ಸಂಗಮ
ಎಸ್.ಆರ್.ಪುಟ್ಟಣ್ಣ ಕಣಗಾಲ್, ಕೃಷ್ಣಮೂರ್ತಿ ಪುರಾಣಿಕ್ ಮತ್ತು ಹೆಚ್.ವಿ.ಸುಬ್ಬರಾವ್

೧೯೬೮ರಲ್ಲಿ ತೆರೆಕಂಡ 'ಹಣ್ಣೆಲೆ ಚಿಗುರಿದಾಗ' ತ್ರಿವೇಣಿಯವರ ಕಾದಂಬರಿಯನ್ನು ಆಧರಿಸಿದ ಚಿತ್ರ, ಇನ್ನೊಂದು ಸಾಧ್ಯತೆಯನ್ನು ಹೇಳಿತು. ಕಾದಂಬರಿ ಆಶಯವನ್ನು ತೀರಾ ವಾಚ್ಯವಾಗಿಸಿ ಹಿಂಜಿ ಎಳೆದು ಕಥನ ಕಟ್ಟುವ ಮಾದರಿಯನ್ನು ಇಲ್ಲಿ ಕಾಣಬಹುದು.

೧೯೬೯ನೇ ಇಸವಿಯಲ್ಲಿ ತೆರೆಕಂಡ 'ಮಾರ್ಗದರ್ಶಿ' ತ.ರಾ.ಸು. ಅವರ ಕಾದಂಬರಿ ಆಧಾರಿತ ಚಿತ್ರ, ಸಂಯಮ ದಿಂದ ಕಥೆ ಹೇಳುವ ಒಂದು ಸರಳ ದಾರಿಗೆ ಉದಾಹರಣೆ. ಇದೇ ವರ್ಷ ತೆರೆ ಕಂಡ ಎಸ್.ಲಕ್ಷ್ಮೀನಾರಾಯಣ್ ಅವರ 'ಉಯ್ಯಾಲೆ' ಚದುರಂಗ ಅವರ ಕಾದಂಬರಿಯನ್ನು ಆಧರಿಸಿತ್ತು, ಇದರ ವಸ್ತು ಆ ಕಾಲಕ್ಕೆ ಕ್ರಾಂತಿಕಾರಿ ಅನ್ನಿಸಬಹುದಾದ್ದು. ವಿವಾಹಿತೆಯೊಬ್ಬಳು ಪರಪುರುಷನಿಂದ ಆಕರ್ಷಿತಳಾಗಿ ತೊಳಲಾಡುವ ವಸ್ತು ಇದು. ಇದನ್ನು ಲಕ್ಷ್ಮೀನಾರಾಯಣ್ ಸೂಕ್ಷ್ಮವಾಗಿ ಹೇಳಿದ್ದರು, ಕ್ರಾಂತಿಕಾರಿಯಾಗಿ ಹೇಳಲಿಲ್ಲ. ಜನಪ್ರಿಯತೆಯ ಚೌಕಟ್ಟಿಗ ಒಗ್ಗಿಸಿಕೊಂಡು ಹೇಳಿದರು. ರಾಧ ಪಾತ್ರಕ್ಕೆ ಕಲ್ಪನಾ ಅವರನ್ನು ಬಳಸಿದರೆ ನಾಯಕನಾಗಬಹುದಾದ ರಾಜಕುಮಾರ್ ಅವರನ್ನು ಕೃಷ್ಣನ ಪಾತ್ರದಲ್ಲಿ ನಿಲ್ಲಿಸಿದರು. ಕೆ.ಎಸ್.ಅಶ್ವತ್ಥ್ ಅವರನ್ನು ಹಿರಿಯನ ಗೆಟ್‌ಅಪ್‌ನಲ್ಲಿ ಪತಿಯ ಪಾತ್ರದಲ್ಲಿ ನಿಲ್ಲಿಸಿ ಪಾತ್ರಧಾರಿಗಳ ಆಯ್ಕೆಯಲ್ಲೇ ವಿಷಮ ದಾಂಪತ್ಯದ ಸ್ವರೂಪ ಕೊಟ್ಟರು. ಇದು ಕಾದಂಬರಿ ಎತ್ತಿದ ಪ್ರಶ್ನೆಗೆ ಲಕ್ಷ್ಮೀನಾರಾಯಣ್ ಕೊಟ್ಟುಕೊಂಡ ಉತ್ತರವಾಗಿತ್ತು. ಇದಕ್ಕೆ ಹೊಂದುವಂತೆ ಕಾದಂಬರಿ ಅಂತ್ಯವನ್ನು 'ನಾವು ಕಳೆದುಕೊಳ್ಳುವುದನ್ನು ಕಲಿಯಬೇಕು' ಎಂಬ ಫಿಲಾಸಫಿ ಹೇಳುವ ಮೂಲಕ ಜನಪ್ರಿಯ ಚೌಕಟ್ಟಿನಲ್ಲಿ ನಿಲ್ಲಿಸಿದರು. ವಿಷಮ ದಾಂಪತ್ಯವಿಲ್ಲದಿದ್ದರೆ ವಿವಾಹಿತೆ ಪರಪುರುಷನಿಂದ ಆಕರ್ಷಿತಳಾಗಬಾರದೆ ಎಂಬ ಪ್ರಶ್ನೆಯನ್ನು ಇಲ್ಲಿ ದಿಕ್ಕು ತಪ್ಪಿಸಲಾಯಿತು. ಇದು ಹೇಗೆ ಸಾಂಸ್ಕೃತಿಕ ರಾಜಕೀಯ ಮಾಧ್ಯಮಗಳ ಬದಲಾವಣೆಯಲ್ಲೂ ಕೆಲಸ ಮಾಡುತ್ತದೆ ಎಂಬುದಕ್ಕೆ ಸಾಕ್ಷಿ.

೧೯೭೦ರಲ್ಲಿ ಪುಟ್ಟಣ್ಣ 'ಗೆಜ್ಜೆಪೂಜೆ'ಯನ್ನು ತೆರಗೆ ತಂದರು. ಅದರ ಮುಂದಿನ ವರ್ಷ 'ಶರಪಂಜರ' ತೆರೆಗೆ ಬಂದಿತು. ಈ ಎರಡೂ ಚಿತ್ರಗಳ ನಿರ್ವಹಣೆಯಲ್ಲಿ ಪುಟ್ಟಣ್ಣ ತಮ್ಮ ಹಿಂದಿನ ದೃಶ್ಯಾತ್ಮಕ ಸಾಧ್ಯತೆಗಳ ಕ್ರಮ ಕೈ ಬಿಟ್ಟು ಮಲೋಡ್ರಾಮದ ಎಳೆಯನ್ನು ವಿಸ್ತರಿಸುವ ಕಡೆ ಗಮನ ಹರಿಸಿದರು. ಈ ಎರಡೂ ಚಿತ್ರಗಳ ದುರಂತ ನಾಯಕಿಯರು ಅಗತ್ಯಕ್ಕಿಂತ ಹೆಚ್ಚಾಗಿ ಹಿಂಜಲ್ಪಟ್ಟ ಕಾರಣದಿಂದಲೇ disturb ಮಾಡುತ್ತಾರೆ. ಇದು ಕಥನದ ಚೌಕಟ್ಟಿನಲ್ಲೇ ಟೇಕ್ ಆಫ್ ಇಲ್ಲದ ಕ್ರಿಯೆ. ಮುಂದೆ ಕಾದಂಬರಿ ಆಧರಿಸಿದ ಚಲನಚಿತ್ರ ಮಾಡುವಾಗ ಈ ಮಾರ್ಗ ಹೆಚ್ಚು ಬಳಕೆಯಾಯಿತು ಕೂಡ. ಇದರ ಮುಂದಿನ ಘಟ್ಟದಲ್ಲಿ ಹೊಸ ಅಲೆ ಚಿತ್ರಗಳು ಕಾಲಿಟ್ಟವು, ಅವುಗಳಿಗೆ ಈವರೆಗಿನ ಬೆಳವಣಿಗೆ ಒಂದು ರೀತಿಯ ಭದ್ರ ಬುನಾದಿ ಒದಗಿಸಿತು.

• • •

೧೯೭೦ರ ಸುಮಾರಿಗೆ ಕನ್ನಡ ಚಿತ್ರರಂಗದ ಬೆಳವಣಿಗೆಯಲ್ಲಿ ಧುತ್ತನೆ ಉದ್ಭವಿಸಿದ ಒಂದು ಮಾರ್ಗದ ಚಿತ್ರಗಳಿಗೆ ಹೊಸ ಅಲೆ ಎಂದು ನಾಮಕರಣ ಮಾಡಿದ್ದು ಕನ್ನಡ ಪತ್ರಿಕೋದ್ಯಮ. ಅಲ್ಲಿಯವರೆಗಿನ ಚಿತ್ರಗಳಿಗಿಂತ ಭಿನ್ನವಾಗಿದ್ದವು ಎಂಬ ಕಾರಣದಿಂದ ಈ ಹೆಸರು ರೂಪುಗೊಂಡಿರಬಹುದು, ಹೊಸ ಅಲೆ ಎಂದು ಕರೆಯಲ್ಪಟ್ಟ ಈ ಪ್ರಕಾರ ಎಲ್ಲ ಅರ್ಥದಲ್ಲೂ ಸಾಹಿತ್ಯಕ್ಕೆ ಋಣಿಯಾಯಿತು. ನವ್ಯ ಸಾಹಿತ್ಯ ತನ್ನ ಉತ್ತುಂಗದಲ್ಲಿ ಅದುವರೆಗಿನ ಸಾಹಿತ್ಯ ಪರಂಪರೆಯ ದೋಷಗಳ ವಿರುದ್ಧ ಧ್ವನಿ ಎತ್ತಿ ಹೊಸ ಮಾರ್ಗ ತುಳಿದ ಕ್ರಮವನ್ನೇ ಹೊಸ ಅಲೆ ಬಳಸಿತು. ಅಲ್ಲಿಯವರೆಗಿನ ಚಿತ್ರಗಳು ಬಳಸುತ್ತಿದ್ದ narrative deviceಗೆ ಬದಲಾಗಿ Non-narrative deviceಗೆ ಹೊಸ ಅಲೆ ಪ್ರಾಮುಖ್ಯ ಕೊಟ್ಟಿತು. ಹೊಸ ಅಲೆ ಎಂಬ ಶಬ್ದವನ್ನು ಮೊದಲಿಗೆ ಬಳಸಿದವನು ಫ್ರಾಂಕಿಯ ಜಿರಾಡ್. ಫ್ರೆಂಚ್ ಸಿನಿಮಾರಂಗದಲ್ಲಿ ಪದೇ ಪದೇ ಅಭಿವ್ಯಕ್ತವಾಗುತ್ತಿದ್ದ ಸಿನಿಮಾ ಕ್ಲೀಶೆಗಳನ್ನು ಗಮನದಲ್ಲಿರಿಸಿ ಅವರು ಈ ಪದವನ್ನು ಬಳಸಿದರು. ಛಿದ್ರಗೊಳ್ಳುವ ಸಂಬಂಧಗಳು, ಜಾಗತೀಕರಣ ಅಥವಾ ಕೈಗಾರಿಕೀಕರಣದ ಪ್ರಭಾವ, ನಿರ್ಭಾವುಕ ಸಮಾಜದ ನಡುವೆ ಅನಾಥನಾಗುವ ವ್ಯಕ್ತಿ ಹೀಗೆ ವಾಸ್ತವವಾದಿ (realis-tic) ಪರಂಪರೆಯನ್ನು ಯುರೋಪಿನ ಹೊಸ ಅಲೆ ಚಿತ್ರಗಳು ಅವಲಂಬಿಸಿದ್ದವು. ಅವುಗಳಿಗೆ ಸ್ವಾರ್ತ್, ಕಾಮು, ಕಾಫ್ಕ ಮುಂತಾದವರ ಇಂತಹ ಬರಹಗಳು ಜೀವ ಒದಗಿಸಿದವು. ಇದೇ ಬರಹಗಾರರಿಂದ ಪ್ರೇರಿತರಾಗಿದ್ದ ಗೋಪಾಲಕೃಷ್ಣ ಅಡಿಗ, ಯು.ಆರ್.ಅನಂತಮೂರ್ತಿ, ಲಂಕೇಶ್, ತೇಜಸ್ವಿ, ಚಿತ್ತಾಲ ಮುಂತಾದ

ಬರಹಗಾರರನ್ನು ಕನ್ನಡ ಹೊಸ ಅಲೆ ಚಿತ್ರಗಳು ಅವಲಂಬಿಸಿದ್ದು ಸಹಜವಾಗಿಯೇ ಇತ್ತು. ಆದರೆ ಯುರೋಪಿನ ಹೊಸ ಅಲೆ ಚಿತ್ರಗಳು ಮಾಡಿದಂತ ಕನ್ನಡ ಚಿತ್ರಗಳು ವಾಸ್ತವ ವಿವರದ ಮೂಲಕ ಪ್ರತಿಮೆ ನಿರ್ಮಿಸುವ ಮಾರ್ಗದ ಬದಲು ನಿರ್ಮಾಣಗೊಂಡ ಪ್ರತಿಮೆಯ ಸುತ್ತ ಕಥೆ ಬೆಳೆಸುವ ತಂತ್ರವನ್ನು ಆಯ್ದುಕೊಂಡವು. ಈ ಸಿನಿಮಾ ಭಾಷೆಯ ಸಮಸ್ಯೆಯಿಂದ ಕನ್ನಡ ಹೊಸ ಅಲೆ ಚಿತ್ರಗಳು ಸಾಹಿತ್ಯದ ಪ್ರಭಾವವನ್ನು ದಾಟಿ ಬರಲಾಗಲಿಲ್ಲ. ಫಾಸ್‌ಬೈಂಡರ್ ಹೇಳುವ ''ಸಾಹಿತ್ಯ ಕೃತಿ ಈಗಾಗಲೇ ಓದುಗನ ಮನಸ್ಸಿನಲ್ಲಿ ಛಿತ್ರಿಗೊಳಿಸಿದ ಸಂಕೇತಗಳನ್ನು ಗಟ್ಟಿಗೊಳಿಸುವುದಕ್ಕೆ ಚಿತ್ರಮಾಧ್ಯಮ ಸೀಮಿತವಾಗಬಾರದು'' ಎಂಬುದಕ್ಕೆ ತದ್ವಿರುದ್ಧವಾಗಿದ್ದವು ಈ ಚಿತ್ರಗಳು.

ಭಾವೋದ್ವೇಗದ ಅಲೆಗಳ ಎದುರಾಗಿ ವಾಸ್ತವ ಮಂಡನೆಯ ಕ್ರಮ ರೂಪಿಸಿಕೊಳ್ಳುವ ಮೂಲಕ ಹೊಸ ಅಲೆ ಚಿತ್ರಗಳು ಆಗ ರೂಪುಗೊಂಡಿದ್ದ ಚಲನಚಿತ್ರ ಚೌಕಟ್ಟಿಗಿಂತ ಬೇರೆಯಾಗಲು ಪ್ರಯತ್ನಿಸಿದವು. ಕೆಲವು ಸಲ ಈ ಪ್ರಯತ್ನದಲ್ಲಿ ಅತಿ ವಾಸ್ತವತೆ ಅಥವಾ ಕಲಾತ್ಮಕ ಅಂತರವೇ ಇಲ್ಲದ ಅಸಹಜತೆ ಕಾಣಿಸಿಕೊಂಡಿತು. ಈ ಮಿತಿಗಳ ಹೊರತಾಗಿಯೂ ಹೊಸ ಅಲೆ ಚಿತ್ರಗಳು ವಸ್ತುವಿನ ಆಯ್ಕೆಯಲ್ಲಿ ಪ್ರದರ್ಶಿಸಿದ ಗಟ್ಟಿತನ ಸಾಹಿತ್ಯದ ಮೂಲದಿಂದಲೇ ಬಂದಿದ್ದರೂ ಹೊಸ ಕಾಣ್ಕೆ ನೀಡಿದ್ದರಲ್ಲಿ ಅನುಮಾನವಿಲ್ಲ. ಊಳಿಗಮಾನ್ಯ ಪದ್ಧತಿಯ ವಿರುದ್ಧ ಧ್ವನಿ ಎತ್ತಿದ ಚಿತ್ರಗಳು ಕೆಲವಾದರೆ ('ಚೋಮನ ದುಡಿ''ಒಂದಾನೊಂದು ಕಾಲದಲ್ಲಿ''ತಬರನ ಕತೆ''ಸಾವಿತ್ರಿ''ಕಾಡು ಕುದುರೆ') ವ್ಯಕ್ತಿಯ ಅಂತರ್ಗತ ಸ್ವಾತಂತ್ರ್ಯದ ಕುರಿತು ಮಾತನಾಡಿದ ಚಿತ್ರಗಳು ಕೆಲವು ('ವಂಶವೃಕ್ಷ' 'ಮೂರು ದಾರಿಗಳು''ಆಕ್ರಮಣ') ಸಮಾಜ ವ್ಯವಸ್ಥೆ ಕುರಿತು ಕೆಲ ಮಾತನಾಡಿದವು. ('ಬರ''ಪಲ್ಲವಿ''ಬೂತಯ್ಯನ ಮಗ ಅಯ್ಯು') ಹೀಗೆ ಕನ್ನಡ ಚಿತ್ರರಂಗ ಅದುವರೆಗೂ ಈ ರೀತಿಯಲ್ಲಿ ಕಂಡರಿಯದ ಅನೇಕ ವಸ್ತುಗಳು ತೆರೆಗೆ ಬಂದವು. ಹೊಸ ಅಲೆಯ

(ಚಿತ್ರ ೧೦-೧೨) ವಾಣಿ   ನುಗ್ಗೇಹಳ್ಳಿ ಪಂಕಜ   ದೇವಕಿ ಮೂರ್ತಿ

ಬಹುತೇಕ ಚಿತ್ರಗಳು ಸಾಹಿತ್ಯ ಕೃತಿಯನ್ನೇ ಅವಲಂಬಿಸಿದ್ದರಿಂದ ಪ್ರತಿಯೊಂದನ್ನು ವಿವರವಾಗಿ ಚರ್ಚಿಸುವುದು ಅಸಾಧ್ಯ ಮತ್ತು ಅನಗತ್ಯ ಕೂಡ. ಕೆಲವನ್ನು ಮಾತ್ರ ಇಲ್ಲಿ ಪ್ರಾತಿನಿಧಿಕವಾಗಿ ಚರ್ಚಿಸುತ್ತೇನೆ.

ಯು.ಆರ್.ಅನಂತಮೂರ್ತಿಯವರ ಬಹು ಚರ್ಚಿತ ಕಾದಂಬರಿ 'ಸಂಸ್ಕಾರ' ತಾಂತ್ರಿಕ ಅರ್ಥದಲ್ಲಿ ಹೊಸ ಅಲೆ ಮೂಲಕ ಬಂದ ಮೊದಲ ಸಿನಿಮಾ. ಈ ಕಾದಂಬರಿಯಲ್ಲಿ ನಾರಾಯಣಪ್ಪನ ಹೆಣ ಕೊಳೆಯುತ್ತಾ ಬೀಳುವುದು ಒಂದು ಪ್ರತಿಮೆ. ಪ್ರಾಣೇಶಾಚಾರ್ಯರ ಪತನ ಇನ್ನೊಂದು ಪ್ರತಿಮೆ. ಈ ಎರಡೂ ಕೂಡ ತೀರಾ ಸಾಹಿತ್ಯಿಕ ಪ್ರತಿಮೆಗಳು. ಅಂದರೆ ಈ ಪ್ರತಿಮೆ ನಿರ್ಮಾಣ ಒಂದು objectನಿಂದ ಆದದ್ದಲ್ಲ, ಹಲವಾರು ಪುಟಗಳ ವಿವರಣೆಯಿಂದ ಆದದ್ದು. ಸಿನಿಮಾ ಅಗುವಾಗ ಇದನ್ನು un-said ಆಗಿಸುವ ಕೆಲಸ ಆಗಲೇ ಇಲ್ಲ. ಅಂದರೆ ಚಿತ್ರಕ್ಕೆ ಬಹಳ ಅಗತ್ಯವಾಗಿದ್ದ ಪ್ರತಿಮೆಗಳು ದೃಶ್ಯ ಸಾಧ್ಯತೆಯಾಗಿ ಬೆಳೆಯಲಿಲ್ಲ. ಇದರ ಪರಿಣಾಮವಾಗಿ ಚಲನಚಿತ್ರ ಸಾಧ್ಯವಾದಷ್ಟು ಸಾಧುವಾದ ಕಾದಂಬರಿಯ ದೃಶ್ಯ ಸಾಧ್ಯವಾಯಿತು. ಈ ಮಾತು ಈ ಹಂತದ ಬಹುತೇಕ ಆರಂಭಿಕ ಹೊಸ ಅಲೆ ಚಿತ್ರಗಳ ಮಟ್ಟಿಗೂ ನಿಜ.

'ಘಟಶ್ರಾದ್ಧ' ಕೂಡ ಅನಂತಮೂರ್ತಿಯವರ ಸಣ್ಣಕತೆಯನ್ನು ಆಧರಿಸಿದ ಚಿತ್ರ. ಇದರ ಮೂಲ ಕಥೆಯಲ್ಲಿರುವ ವಿವರಗಳು ಮೂಲತಃ ಪ್ರತಿಮಾ ವಿಧಾನ. ಆದರೆ ಗಿರೀಶ್ ಕಾಸರವಳ್ಳಿ ಸಿನಿಮಾ ಆಗಿಸುವ ಈ ವಿವರಗಳಲ್ಲಿ ದೃಶ್ಯ ಸಾಧ್ಯತೆ ಇರುವುದನ್ನು ಮಾತ್ರ ಸೇರಿಸಿ ಉಳಿದವುಗಳನ್ನು ಕೈ ಬಿಟ್ಟರು. ಇದರಿಂದ ದೃಶ್ಯಾತ್ಮಕ ಪ್ರತಿಮೆ ನಿರ್ಮಾಣವಾಯಿತು. ಕಾಸರವಳ್ಳಿಯವರ ಈ ಚಿತ್ರದಲ್ಲಿ ಮಾತ್ರ Non-leading object ಪ್ರತಿಮೆಯಾಗದೆ 'ಸ್ಪರ್ಶ' ಒಂದು ಇಮೇಜ್ ಆಯಿತು. ಇದರಿಂದ ಇಡೀ ಚಿತ್ರಕ್ಕೆ ಒಂದು ಕ್ರಿಯಾಶೀಲತೆ ಪ್ರಾಪ್ತವಾಯಿತು. ಕಥೆಯಲ್ಲಿಲ್ಲದ, ಅನಂತಮೂರ್ತಿ ಇದು ತಪ್ಪು ಎಂದೇ ವಾದಿಸಿದ, ಯಮುನಕ್ಕನ ಕೇಶಮುಂಡನ ಒಂದು ವಿವರವಾಗದೆ ಒಂದು ಪ್ರತಿಮೆಯಾಗುವ ಮೂಲಕ ಪ್ರೇಕ್ಷಕನನ್ನು Disturb ಮಾಡಿತು. ಕತೆಯ ತೀರ ಸಣ್ಣ ವಿವರ, ಯಮುನಕ್ಕನ ಅಬಾರ್ಷನ್, ಚಿತ್ರದಲ್ಲಿ ಕೇಂದ್ರ ಸ್ಥಾಯಿಯಾಗುವಷ್ಟು ಪ್ರಭಾವಶಾಲಿಯಾಯಿತು. ಹೀಗೆ ಮಾಧ್ಯಮಗಳನ್ನು ದಾಟಿ ಪ್ರಭಾವಿಯಾಗುವ ಕ್ರಮಕ್ಕೆ 'ಘಟಶ್ರಾದ್ಧ' ಒಂದು ಅತ್ಯುತ್ತಮ ಉದಾಹರಣೆ. ಅನಂತಮೂರ್ತಿಯವರ ಇನ್ನೊಂದು ಸಣ್ಣಕತೆ 'ಬರ'ವನ್ನು ಎಂ.ಎಸ್.ಸತ್ಯು ಚಲನಚಿತ್ರವಾಗಿಸಿದರು. ಈ ಚಿತ್ರದ ಮಟ್ಟಿಗೆ ಸತ್ಯು ಒಂದು ಹೊಸ ತಂತ್ರ ಬಳಸಿದರು. ಇಲ್ಲಿ ಪ್ರತಿಮೆಗಳ ಬದಲು ವಿವರಗಳನ್ನೇ ಜೊತೆಯಾಗಿ ಜೋಡಿಸಿ ಗೊಂದಲ ನಿರ್ಮಿಸುವ ತಂತ್ರವಿತ್ತು. ಇದರಿಂದಾಗಿ ಮೂಲತಃ ನೇರ ನಿರೂಪಣೆಯಾದ ಕಥೆ ವಾಚ್ಯವಾಗದೆ ಸಾಂಕೇತಿಕವಾಗಿ ಬೆಳೆಯಿತು. ಈ ಚಿತ್ರ ಕೂಡ ಸಾಹಿತ್ಯದ ನೆಲೆಯಿಂದ ಹೊಸ ಸಾಧ್ಯತೆಯ ಕಡೆಗೆ ಹೊರಳಿತು.

ಚಿತ್ರಕಥಾ ರಚನೆಯಲ್ಲಿ ಸಮರ್ಥರೆಂದು ಹೆಸರಾದ ಗಿರೀಶ್ ಕಾರ್ನಾಡರು ಆಲನಹಳ್ಳಿ ಕೃಷ್ಣರ 'ಕಾಡು' ಕಾದಂಬರಿಯನ್ನು ನಿರ್ದೇಶಿಸುವಾಗ ಸೊಗಸಾದ ಚಿತ್ರಕಥೆ ರಚಿಸಿಕೊಂಡರು. ಕೆಲವು ಸನ್ನಿವೇಶಗಳು ಒಂದರೊಡನೊಂದು ಬೆಸೆದುಕೊಳ್ಳುವ ಬಗೆಯಲ್ಲಿ 'ಪಥೇರ್ ಪಾಂಚಾಲಿ'ಯ ಛಾಯೆ ಅನ್ನಿಸಿದರೂ ಬಿಗಿಯಾದ ಚಿತ್ರಕಥೆಯಾಗಿತ್ತು. ಮತ್ತು ತೆರೆಗೆ ಅಷ್ಟೇ ಚೆನ್ನಾಗಿ ಅಳವಡಿತವಾಯಿತು. ಕಾರ್ನಾಡರು ಇಮೇಜ್‌ಗಳನ್ನು ಬಳಸುವುದಿಲ್ಲ, ರಂಗನಾಟಕದಲ್ಲಿ ಅವರು ಪ್ರತ್ಯೇಕ ಧಾರೆಗಳನ್ನು ಒಂದು ಘಟ್ಟದಲ್ಲಿ ಒಂದುಗೂಡಿಸುವ ವಿಧಾನವನ್ನೇ ಚಲನಚಿತ್ರದಲ್ಲೂ ಬಳಸುತ್ತಾರೆ.

'ಹಂಸಗೀತೆ''ಸಂಧ್ಯಾರಾಗ'ಕ್ಕೆ ಕೊಂಚ ಸಮಾನವಾದ ಕಥಾವಸ್ತುವನ್ನು ಹೊಂದಿದ ಕಾದಂಬರಿ. ಈ ಕಾದಂಬರಿಯಲ್ಲಿ ಹೇರಳವಾದ ಮೆಲೋಡ್ರಾಮದ ಎಳೆಗಳಿದ್ದವು. ಮಾತ್ರವಲ್ಲ, ಸಾಕಷ್ಟು ಕಡೆ ಊಳಿಗಮಾನ್ಯ ಪದ್ಧತಿಯ ಪರವಾದ ನಿಲುವುಗಳಿದ್ದವು. ಜಿ.ವಿ.ಅಯ್ಯರ್ ಇದನ್ನು ಚಿತ್ರವಾಗಿಸುವಾಗ ಎರಡು ಅಂಶಗಳನ್ನು underplay ಮಾಡಿ ಕಾದಂಬರಿಯ ತೀರಾ ತೆಳುವಾದ ಎಳೆಯಾಗಿದ್ದ ವ್ಯಕ್ತಿಯ ಪ್ರಸ್ತುತತೆಯ ಅಂಶವನ್ನು ಚಿತ್ರದ ಪ್ರಧಾನ ಶಕ್ತಿಯಾಗಿಸಿದರು. ಈ ಗುರಿ ಸಾಧಿಸಲು ಜಿ.ವಿ.ಅಯ್ಯರ್ ಕಾದಂಬರಿಯ ಬಹುತೇಕ ವಿವರಗಳನ್ನು ಬಿಡುವುದು ಅನಿವಾರ್ಯವಾಯಿತು. ಇಡೀ ಚಿತ್ರದಲ್ಲಿ ಸಂಗೀತದ ಲಯಗಳೇ ಪ್ರಧಾನ ಪಾತ್ರ ವಹಿಸಿ ಪ್ರತಿಮೆಗಳಾದವು. ಚಂದ್ರಳಿಗೆ ಕಥೆ ಹೇಳುವಾಗಿನ ಮೂರು ಶಾಟ್‌ಗಳು ಕಾದಂಬರಿಯ ಮೂವತ್ತು ಪುಟಗಳಿಗೂ ಹೆಚ್ಚಿನ ವಿವರಣೆಯನ್ನು ಒಳಗೊಂಡಿದ್ದವು. ಚಿತ್ರದ ಕೊನೆಯಲ್ಲಿ ವೆಂಕಣ್ಣ ಭೈರವಿ ಹಾಡಿ ನಾಲಿಗೆ ಕಳೆದುಕೊಳ್ಳುವುದು, ದೀಪಸ್ತಂಭ ಉರಿಯುವುದು, ತಟ್ಟೆಯೊಳಗೆ ಬೋರಲು ಬಿದ್ದ ಪಂಚಪಾತ್ರೆ, ಸಾಂಬ್ರಾಣಿ ಹೊಗೆಯ ಮುಸುಕಿನಲ್ಲಿ ಕಥೆ ಮುಗಿಯುವ ಕ್ರಮ ಚಿತ್ರಕ್ಕೆ ಅನೇಕ ಹೊಸ ಅರ್ಥವನ್ನು ಧ್ವನಿಸುವ ಶಕ್ತಿಯಾಯಿತು. ಬಹಳ ಸೂಕ್ಷ್ಮವಾಗಿ ಗಮನಿಸಿದರೆ ಅಯ್ಯರ್ ಹೇಳಿದ್ದು ತ.ರಾ.ಸು. ಅವರ ಕಥೆಯನ್ನು ಅಲ್ಲವೇ ಅಲ್ಲ. ನಿರ್ದೇಶಕ ಒಂದು ವಸ್ತುವನ್ನು ದುಡಿಸಿಕೊಳ್ಳುವ ಅಗಾಧ ಸಾಧ್ಯತೆಗಳನ್ನು ತೋರಿಸಿದ್ದರು. ಆದರೆ ಇದೇ ತಂತ್ರ objective device ಪ್ರಧಾನವಾದ 'ಕುದುರೆ ಮೊಟ್ಟೆ' ವಿಷಯದಲ್ಲಿ ಸಾಧ್ಯವಾಗಲಿಲ್ಲ. ಈ ವಿವರಗಳಿಗೆ ತಕ್ಕಂತಹ ಬದಲಾವಣೆಯನ್ನು ಅಯ್ಯರ್ ಮಾಡಿಕೊಳ್ಳಲಿಲ್ಲ. ಹೀಗೆ ವಿವರಗಳ ಜೋಡಣೆಯಲ್ಲಿ ಮೂಡುವ ವ್ಯತ್ಯಾಸದ ಮೂಲಕ ಹೊಸ ಅರ್ಥ ಹೊರಡಿಸುವ ಪ್ರಯತ್ನ 'ವಂಶವೃಕ್ಷ' 'ಸಾವಿತ್ರಿ'ಯಂತಹ ಚಿತ್ರಗಳಲ್ಲಿ ಆಗಿದೆ. 'ವಂಶವೃಕ್ಷ'ದಲ್ಲಿ ಶ್ರೀನಿವಾಸಶಾಸ್ತ್ರಿ ಪಾತ್ರವನ್ನು underplay ಮಾಡುವ ಮೂಲಕವೇ ಕಾದಂಬರಿ ಅಂತರಿಕವಾಗಿ ನಿರ್ಮಿಸಿದ ಸಂಕೇತದ ಒತ್ತಡವನ್ನು ಮೀರಲು ಪ್ರಯತ್ನಿಸಲಾಗಿದೆ.

ಹೊಸ ಅಲೆ ಕಾಣ್ಕೆಯೊಂದಿಗೆ ರಂಜಕತೆಯೂ ಜೊತೆಗೂಡಿದ ಕೆಲವು ಚಿತ್ರಗಳು ಇನ್ನೊಂದು ನೆಲೆಯಲ್ಲಿ ಕೆಲಸ ಮಾಡಿದವು. ಗೊರೂರು ರಾಮಸ್ವಾಮಿ ಅಯ್ಯಂಗಾರ್ಯರ ನೀಳ್ಗತೆ ಆಧರಿಸಿದ 'ಬೂತಯ್ಯನ ಮಗ ಅಯ್ಯು' ಚಿತ್ರದಲ್ಲಿ ಕಥೆಯ ವಿವರಗಳನ್ನೇ ವಿಸ್ತರಿಸುತ್ತಾ ಶಕ್ತವಾಗಿಸಲು ಪ್ರಯತ್ನಿಸಲಾಗಿತ್ತು. ಕಥೆಯ ತೀರ ಸಣ್ಣ ವಿವರ ಉಪ್ಪಿನಕಾಯಿ ಜಾಡಿಯದು, ಉಳಿದ ವಿವರಕ್ಕಿಂತ ಒಂದು ಹೆಜ್ಜೆ ಮುಂದೆ ಬಂದು ನಿಂತಿತು. ಪುಟ್ಟಣ್ಣ ಕಣಗಾಲ್ ಮೂರು ಕಥೆಗಳನ್ನು ಆಧರಿಸಿ ಪ್ರಯೋಗಾತ್ಮಕವಾಗಿ ನಿರ್ಮಿಸಿದ 'ಕಥಾಸಂಗಮ'ದಲ್ಲಿ ಇಂತಹದೇ ಪರಿಣಾಮ ಉಂಟಾಗಿದ್ದನ್ನು ಕಾಣಬಹುದು. ಇಲ್ಲಿ ಪ್ರತಿಮಾ ವಿಧಾನ ಬಳಸಿ ಪುಟ್ಟಣ್ಣ ಅದನ್ನು ವಾಚ್ಯವಾಗಿಯೇ ವಿಸ್ತರಿಸಿದ್ದಾರೆ. ಈ ಮಾರ್ಗದಲ್ಲಿ ಭಿನ್ನವಾಗಿ ರೂಪುಗೊಂಡ ಚಿತ್ರ 'ತಬ್ಬಲಿಯು ನೀನಾದೆ ಮಗನೆ'. ಪ್ರಸಿದ್ಧವಾದ ಗೋವಿನ ಹಾಡು ಕವಿತೆಯ static symbolನಿಂದ ಆರಂಭವಾಗುವ ಈ ಚಿತ್ರ ಕೊನೆಗೆ ಚೆಲ್ಲಾಪಿಲ್ಲಿಯಾದ ಗೋಮಂದೆಯಲ್ಲಿ ಹಸುಗಳನ್ನು ಹುಡುಕುವ dynamic ಸಾಧ್ಯತೆಯಲ್ಲಿ ಮುಕ್ತಾಯವಾಗುತ್ತದೆ. ಇಲ್ಲಿನ ಬಹುತೇಕ ವಿವರಗಳು ಕಾದಂಬರಿಯನ್ನು ಯಥಾವತ್ತಾಗಿ ಅನುಸರಿಸಿದರೂ placementನಲ್ಲಿ

(ಚಿತ್ರ ೧೩-೧೫)ಅಶ್ವಿನಿ ನವರತ್ನರಾಂ ಉಷಾ ನವರತ್ನರಾಂ

ಕಾದಂಬರಿಯ ಉದ್ದೇಶವನ್ನು ಬದಲಾಯಿಸಲಾಗಿತ್ತು. ನಾಟಕಗಳನ್ನು ಬಳಸಿಕೊಳ್ಳುವಾಗಲೂ ಕೆಲವೊಮ್ಮೆ ನೇರವಾಗಿ ನಾಟಕವನ್ನೇ ತೆರೆಗೆ ತಂದರೆ ಇನ್ನೂ ಕೆಲವು ಕಡೆ ಅದರ ಆವರಣವನ್ನು ಬದಲಾಯಿಸಲಾಯಿತು. 'ಋಷ್ಯಶೃಂಗ' ಇದಕ್ಕೊಂದು ಅತ್ಯುತ್ತಮ ಉದಾಹರಣೆ. ಷೇಕ್ಸ್‌ಪಿಯರ್ ನಾಟಕಗಳ simple, natural, elementಗಳನ್ನು ಬಳಸಿಕೊಳ್ಳುವ ಮೂಲಕ ಈ ನಾಟಕ ತುಂಬ ಭಿನ್ನವಾದ 'ನೆಲೆ'ಯಲ್ಲಿ ಚಲನಚಿತ್ರವಾಗಿದೆ. ಇಷ್ಟು ಹೇಳಿದ ಮೇಲೂ ಬಹುತೇಕ ಹೊಸ ಅಲೆ ಚಿತ್ರಗಳು ಯುರೋಪಿನ ನಿರ್ದೇಶಕರ ತಂತ್ರಗಾರಿಕೆಯನ್ನು ಅನುಸರಿಸಿದ್ದವು ಎಂಬುದನ್ನು ವಿಷಾದದಿಂದಲೇ ಗುರುತಿಸಬೇಕಾಗಿದೆ. 'ಅರಿವು' ಒಂದು ಕಾಲದಲ್ಲಿ ಫೆಲಿನಿ, ಕುರೊಸೋವಾ ಅವರಿಂದ ಪ್ರೇರಿತವಾದ ಮಾದರಿ ಅನುಸರಿಸಿದರೆ 'ಕಾಡು', 'ಘಟಶ್ರಾದ್ಧ', 'ಪಥೇರ್ ಪಾಂಚಾಲಿ' ತಂತ್ರಗಾರಿಕೆ ಬಳಸಿದವು. ಇದರಿಂದ ಸಾಹಿತ್ಯಿಕ ಕೃತಿಗಳಿಂದ ಏನನ್ನು ಆಯ್ದುಕೊಳ್ಳಬೇಕು ಮತ್ತು ಅದನ್ನು ಹೇಗೆ ಹೇಳಬೇಕು ಎಂಬುದರ ಕುರಿತು ಹೊಸ ಅಲೆ ಚಿತ್ರಗಳ ಮಟ್ಟಿಗೆ ಕೊನೆಯವರೆಗೂ ಗೊಂದಲ ಉಳಿದುಕೊಂಡಿತು; ಈ ಗೊಂದಲವೇ ಅವುಗಳ ಸೋಲಿಗೆ ಕಾರಣವಾಯಿತು.

* * *

ಹೊಸ ಅಲೆ ಎಂದು ಕರೆಯಲಾಗುವ ಚಿತ್ರಗಳು ಹೀಗೆ ಪ್ರಯೋಗಶೀಲತೆಯಲ್ಲೇ ನೆಲೆ ನಿಂತರೆ. ಜನಪ್ರಿಯ ಎಂದು ಕರೆಸಿಕೊಂಡ ಪ್ರಕಾರ ಸ್ವಂತಿಕೆಯ ಗುಣವನ್ನೆಲ್ಲಾ ಕಳೆದುಕೊಳ್ಳುವ ಮಟ್ಟಿಗೆ ಜನಪ್ರಿಯತೆಗೆ ಬಲಿಯಾಗುತ್ತಾ ಹೋಯಿತು. ಕಲಾತ್ಮಕ ಚಿತ್ರಗಳಲ್ಲಿ ಚಲನಚಿತ್ರ ಸಾಹಿತ್ಯವನ್ನೇ ಹೆಚ್ಚಾಗಿ ಅವಲಂಬಿಸಿದ್ದರೆ ಜನಪ್ರಿಯ ಚಿತ್ರಗಳಲ್ಲಿ ಸಾಹಿತ್ಯವೇ ಚಲನಚಿತ್ರಕ್ಕೆ ಋಣಿಯಾಯಿತು. ಚಲನಚಿತ್ರ ಕೊಟ್ಟ ಫಾರ್ಮುಲಾಕ್ಕೆ ಅನುಗುಣವಾಗಿ ಕಾದಂಬರಿ ರಚಿಸುವ ಬರಹಗಾರರು ಉದ್ಭವಿಸಿದರು. ಇವರ ಬರಹವನ್ನು ಆಧರಿಸಿದ ಚಲನ ಚಿತ್ರಗಳಲ್ಲಿ ಸಾಹಿತ್ಯ ಸಾಕಷ್ಟು ಸಂದರ್ಭಗಳಲ್ಲಿ ಗುರುತಿಸಬಹುದು.

೧೯೭೨ರಲ್ಲಿ ತೆರೆಕಂಡ 'ಬಂಗಾರದ ಮನುಷ್ಯ' ಟಿ.ಕೆ.ರಾಮರಾವ್ ಅವರ ಕಾದಂಬರಿ ಆಧರಿಸಿದ್ದರೆ ಅದೇ ವರ್ಷ ತೆರೆಕಂಡ 'ಸಿಪಾಯಿ ರಾಮು' ನುಗ್ಗೇಹಳ್ಳಿ ಪಂಕಜ ಅವರ 'ಬರಲೇ ಇನ್ನು ಯಮುನೆ' ಕಾದಂಬರಿಯನ್ನು ಆಧರಿಸಿತ್ತು. ಈ ಎರಡೂ ಕಾದಂಬರಿಗಳಿಂದ ಪಡೆದ ಅಂಶಗಳು ತೀರಾ ಅಲ್ಪ. ರಾಜಕುಮಾರ್ ಅವರಿಗೆ ಆಗಲೇ ಬೆಳೆಯುತ್ತಿದ್ದ ಇಮೇಜ್ ಮತ್ತು ಆದರ್ಶದ ಫಾರ್ಮುಲಾ ಈ ಎರಡೂ ಚಿತ್ರಗಳಲ್ಲಿ ಕೆಲಸ ಮಾಡಿತ್ತು. ಯಾವ ಕಾದಂಬರಿಯನ್ನೂ ಅಧರಿಸದ 'ಕಸ್ತೂರಿ ನಿವಾಸ' ಚಿತ್ರಕ್ಕೆ ಈ ಚಿತ್ರಗಳ ಸಂವಿಧಾನಕ್ಕೆ ಇರುವ ವ್ಯತ್ಯಾಸ ತೀರಾ ಅಲ್ಪ. ಪಾತ್ರಗಳ placementನಿಂದ ಹಿಡಿದು ಕಥನದ ಯಾವ ತಿರುವುಗಳೂ ಈ ಎರಡೂ ಚಿತ್ರಗಳಲ್ಲಿ ಕಾದಂಬರಿಯಿಂದ ಪಡೆದುಕೊಂಡು ಬಂದಿದ್ದಾಗಿರಲಿಲ್ಲ.

ಇದೇ ವರ್ಷ ಪುಟ್ಟಣ್ಣ ಕಣಗಾಲ್ ಅವರ 'ನಾಗರಹಾವು' ತೆರೆ ಕಂಡಿತು. ಪುಟ್ಟಣ್ಣನವರ 'ಕಥಾಸಂಗಮ'ವನ್ನು ಮಾತ್ರ ಹೊಸ ಅಲೆ ಜೊತೆ ಜೋಡಿಸಿ ಉಳಿದ ಚಿತ್ರವನ್ನು ಈ ಭಾಗದಲ್ಲಿ ಚರ್ಚಿಸಲು ಕಾರಣ ಇಷ್ಟೇ, ಈ ಚಿತ್ರಗಳಲ್ಲಿ ಪುಟ್ಟಣ್ಣ ಪ್ರಯೋಗಶೀಲತೆಯ ಬದಲು ತಾವೇ ಸಿದ್ಧಗೊಳಿಸಿದ್ದ ಫಾರ್ಮುಲಾಗಳಿಗೆ ಹೆಚ್ಚಿನ ಮಹತ್ವ ನೀಡಿದರು. 'ನಾಗರಹಾವು' ಚಿತ್ರ ತ.ರಾ.ಸು. ಅವರ 'ನಾಗರಹಾವು' 'ಸರ್ಪಮತ್ಸರ' 'ಒಂದು ಗಂಡು ಎರಡು ಹೆಣ್ಣು' ಹೀಗೆ ಮೂರು ಕಾದಂಬರಿಗಳನ್ನು ಆಧರಿಸಿತ್ತು. ಚಿತ್ರದುರ್ಗದ ಪಾಳೆಗಾರರನ್ನು ವೈಭವೀಕರಿಸಿ ಏಕಮುಖ ಸಂವಿಧಾನದ ಅನೇಕ ಕೃತಿಗಳನ್ನು ರಚಿಸಿದ ತ.ರಾ.ಸು. ಈ ಕಾದಂಬರಿಗಳಲ್ಲಿ ಚಿತ್ರದುರ್ಗದ ಸಾಮಾನ್ಯನೊಬ್ಬನನ್ನು ಕೇಂದ್ರಪಾತ್ರವಾಗಿಸಿ ವೈಭವೀಕರಿಸುವ ಕೃತಿಯನ್ನು ರಚಿಸಿದ್ದರು. ಪುಟ್ಟಣ್ಣ ಮುಖ್ಯವಾಗಿ ಈ ವೈಭವೀಕರಣವನ್ನು ತೆಗೆದುಹಾಕಿ ರಾಮಾಚಾರಿಯನ್ನು ವಾಸ್ತವವಾದಿ ನೆಲೆಯಲ್ಲಿ ನಿಲ್ಲಿಸಿದರು. ಕಾದಂಬರಿಯಲ್ಲಿ ನಿರ್ಭಾವುಕವಾಗಿದ್ದ ಪಾತ್ರ ಇಲ್ಲಿ ಜೀವಂತವಾಯಿತು. ಹೀಗೆ ಜೀವ ಕೊಟ್ಟರೂ ಪಾತ್ರವನ್ನು underplay ಮಾಡಿ ಅದನ್ನು ನಿಯಂತ್ರಿಸಲು ಚಾಮಯ್ಯ ಮಾಸ್ತರರನ್ನು ಸೃಷ್ಟಿಸಿದರು. ಈ ಚಾಮಯ್ಯ ಮಾಸ್ತರರ ಪಾತ್ರವೇ ಕಥಾನಕಕ್ಕೆ ಸಹಜತೆ ತಂದುಕೊಟ್ಟಿತು. ಒಂದು ಅರ್ಥದಲ್ಲಿ ಅದು ಪುಟ್ಟಣ್ಣನವರ point of view ಹೇಳಿತ್ತು. ಚಲನಚಿತ್ರ ಕಾದಂಬರಿಯ ಭ್ರಾಮಕತೆಯಿಂದ ಹೊರಬಂದು ಸತ್ಯದ ಬೆಳಕಿನಲ್ಲಿ ಬದುಕನ್ನು ನೋಡಿತು. ಹೀಗೆ ನೆಪಮಾತ್ರಕ್ಕೆ ಕಾದಂಬರಿ ಆಧರಿಸಿದ್ದ ಈ ಚಿತ್ರ ಚಿತ್ರದುರ್ಗದ ಕಲ್ಲು ಬಂಡೆಗಳನ್ನೆಲ್ಲಾ ತನ್ನ ಪ್ರತಿಮೆಗಳನ್ನಾಗಿಸಿಕೊಂಡು ಹೊಸ ನೆಲೆಯಲ್ಲಿ ಬೆಳೆಯಿತು.

೧೯೭೩ರಲ್ಲಿ ತೆರೆಕಂಡ 'ಸ್ವಯಂವರ' ಮ.ನ.ಮೂರ್ತಿಯವರ ಕಾದಂಬರಿಯನ್ನು ಆಧರಿಸಿ ಆಗಲೇ ಚಿತ್ರರಂಗದಲ್ಲಿ ಬೇರೂರಲು ಆರಂಭಿಸಿದ್ದ 'ಟೇಮಿಂಗ್ ಆಫ್ ದಿ ಶ್ರೂ'ವನ್ನು ಹೋಲುವ ಫಾರ್ಮುಲಾ ಬಳಸಿಕೊಂಡ ಚಿತ್ರ; ಆ ಫಾರ್ಮುಲಾಕ್ಕೆ ನಿಷ್ಠವಾಯಿತೇ ಹೊರತು ಕಾದಂಬರಿಗಲ್ಲ. ಹೀಗಾಗಿ ಇದು ಕಾದಂಬರಿ biography ಆಧರಿಸಿದ ಸ್ವತಂತ್ರ ಚಿತ್ರವೆಂದೇ ಕರೆಯಬಹುದಾದ ರೀತಿಯಲ್ಲಿ ಚಿತ್ರಿತವಾಗಿದೆ. ಇದೇ ವರ್ಷ ತೆರೆಕಂಡ 'ಎಡಕಲ್ಲು ಗುಡ್ಡದ ಮೇಲೆ' ಭಾರತೀಸುತ ಅವರ ಅದೇ ಹೆಸರಿನ ಕಾದಂಬರಿಯನ್ನು ಅಧರಿಸಿದ ಚಿತ್ರ. ಭಾರತೀಸುತ ಅವರದ್ದು ಸರಳ ರೇಖಾತ್ಮಕ ಕಾದಂಬರಿ. ಅತೃಪ್ತ ಕಾಮಕ್ಕೆ ಸಿಲುಕಿದ ಹೆಣ್ಣು ವಿವಾಹದ ಗಡಿಯನ್ನು ದಾಟಲು ಪ್ರಯತ್ನಿಸುತ್ತಿದ್ದಾಳೆ. ಕಾದಂಬರಿಯಲ್ಲಿ ಅವಳಿಗೆ ಈ ಕುರಿತು ಯಾವ ಪಶ್ಚಾತ್ತಾಪವೂ ಇಲ್ಲ, ತನ್ನ ಪ್ರಿಯಕರ ಇನ್ನೊಂದು ಹೆಣ್ಣನ್ನು ಬಯಸಿದ್ದಕ್ಕಷ್ಟೇ ಆಕ್ರೋಶ. ಅದಕ್ಕೆ ಅವಳು ಅವನನ್ನು ಕೊಂದು ತಾನೂ ಸಾಯುತ್ತಾಳೆ. 'ಸಂಕೀರ್ಣ' ಆಯಾಮಗಳಿಲ್ಲದ ಸರಳ ನೆಲೆಯ ಕಥೆ ಇದು. ಪುಟ್ಟಣ್ಣ ಕಣಗಾಲ್ ಇದನ್ನು ಚಲನಚಿತ್ರವಾಗಿಸುವಾಗ ಮಾಧವಿಯನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿ ಅವಳ ತಂಗಿಯ point of viewನಲ್ಲಿ ಕಥೆ ಬೆಳಸಿದರು. 'ನಿಲ್ಲು ನಿಲ್ಲೇ ಪತಂಗ...' ಗೀತೆಯ ಮೂಲಕ ಬುದ್ಧಿಯನ್ನು ಹೇಳಿದರು. ಜಯಂತಿ ಈ ಚೌಕಟ್ಟನ್ನು ಮೀರಿ ಅಭಿನಯ ನೀಡಿದ್ದರಿಂದ ಕಥನಕ್ಕೆ ಹೊಸ ನೆಲೆ ಬಂದಿತು. ಈ ನೆಲೆಯನ್ನೇನಾದರೂ ಪುಟ್ಟಣ್ಣನವರು ಒಪ್ಪಿಕೊಂಡಿದ್ದರೆ ಇದೊಂದು ಮರೆಯಲಾರದ ಚಿತ್ರವಾಗುತ್ತಿತ್ತು. ಪುಟ್ಟಣ್ಣ ಸಾಂಪ್ರದಾಯಿಕ ಚೌಕಟ್ಟಿನ ಕಥೆ ಒಪ್ಪಿಸಲು ಶಕ್ತಿ ಮೀರಿ ಪ್ರಯತ್ನಿಸುತ್ತಿದ್ದರು. ವಾಸ್ತವವಾಗಿ ಕಥೆ ಭಾರತೀಸುತ, ಪುಟ್ಟಣ್ಣ ಇವರಿಬ್ಬರ ಕೈಗೂ ನಿಲುಕದ್ದಾಗಿತ್ತು.

೧೯೭೪ರಲ್ಲಿ ತೆರೆಕಂಡ 'ಎರಡು ಕನಸು' ವಾಣಿ ಅವರ ಕಾದಂಬರಿ ಆಧರಿಸಿದ ಚಿತ್ರ. ಮೂಲ ಕಾದಂಬರಿಯಲ್ಲಿ ಒಂದು ಸರಳ ಕಥೆ ಇದೆ. ತಾನು ಬಯಸಿದವಳು ಸಿಗದ ನಾಯಕ, ಆ ನಾಯಕನನ್ನು ಮದುವೆಯಾದ ನಾಯಕಿ, ಸಿನಿಮಾದಲ್ಲಿ ಕಥೆಯಲ್ಲೇನೂ ಬದಲಾವಣೆ ಕಾಣಲಿಲ್ಲ. ಆದರೆ ಒಳನೋಟಗಳೇ ಪ್ರಧಾನವಾದ ಈ ಪಾತ್ರಗಳನ್ನು ರಾಜಕುಮಾರ್, ಮಂಜುಳ, ಕಲ್ಪನ, ಮೂವರೂ ಅತ್ಯುತ್ತಮವಾಗಿ ಅಭಿನಯಿಸಿದರು. ಮೆಲೋಡ್ರಾಮದ ಅಂಚಿನಲ್ಲೇ ಸುಳಿದ ಈ ಚಿತ್ರದ ನಿರ್ವಹಣೆಯಲ್ಲಿ ಕಂಡುಬಂದ ಸಂಯಮ ಚಿತ್ರದ ಪ್ರಭಾವಿ ಅಂಶವಾಯಿತು. ಇಲ್ಲಿ ಕಾದಂಬರಿಯ ಕಾಣಿಕೆ ಏನೂ ಇಲ್ಲ. ಇಂತಹ ಸರಳ ಕಥೆಗಳು ನೂರಾರಿವೆ. ಆದರೆ ಅಭಿನಯವೇ ಚಿತ್ರವನ್ನು ಬೇರೆಯಾಗಿಸಿಬಿಟ್ಟಿತು. ೧೯೭೫ರಲ್ಲಿ ತೆರೆಗೆ ಬಂದ 'ಶುಭಮಂಗಳ' ವಾಣಿ ಅವರ ಕಾದಂಬರಿ ಆಧಾರಿತ ಚಿತ್ರ . ಮೂಲಕಥೆಯಲ್ಲಿ ಇದು ಹಠಮಾರಿ ಹೆಣ್ಣಿನ ಕಥೆ. ಇವಳು ಚಿತ್ರದಲ್ಲಿ ಸ್ವಾಭಿಮಾನಿ ಹೆಣ್ಣಾದವಳು. ಇದೇ ಪುಟ್ಟಣ್ಣನವರು ಮಾಡಿದ ಬಹಳ ಮುಖ್ಯ ಬದಲಾವಣೆ. ಇದರಿಂದ ಕಾದಂಬರಿಯ ಅಪ್ರಬುದ್ಧ ಚೆಲ್ಲು ಚೆಲ್ಲು ಹುಡುಗಿ ಹೇಮ ಚಿತ್ರದಲ್ಲಿ ಫೆಮಿನೈನ್ ನೆಲೆಯಲ್ಲಿ ನಿಲ್ಲುವ ಗಟ್ಟಿ ಪಾತ್ರವಾದಳು, ಕೊನೆಗೆ ಪಶ್ಚಾತ್ತಾಪದಿಂದ ಪ್ರಭಾಕರನ ಬಾಹುಗಳಲ್ಲಿ ಕರಗಿ



(ಚಿತ್ರ೧೬-೧೮) ಬಿ.ಎಲ್.ವೇಣು ಹೆಚ್.ಕೆ.ಅನಂತರಾವ್ ಟಿ.ಕೆ.ರಾಮರಾವ್

(ಚಿತ್ರ೧೯-೨೧)ಎಂ.ಕೆ.ಇಂದಿರಾ



ಬಿ.ಜಿ.ಎಲ್.ಸ್ವಾಮಿ

ಅನುಪಮ ನಿರಂಜನ

ಹೋದಳು. ಕಾದಂಬರಿಯಲ್ಲಿಯಂತೆ ಅಪರಾಧಿ ಸ್ಥಾನದಲ್ಲಿ ನಿಲ್ಲಲಿಲ್ಲ. ಇದು ಸರಳ ಕಾದಂಬರಿ ಗಟ್ಟಿತನ ಪಡೆದ ರೀತಿ.

೧೯೭೬ರಲ್ಲಿ ತೆರೆಕಂಡ ಅಶ್ವಿನಿಯವರ ಕಾದಂಬರಿ ಆಧರಿಸಿದ 'ಬೆಸುಗೆ' ಕಾದಂಬರಿ ಚೌಕಟ್ಟಿನಲ್ಲೇ ಸಾಗುವ ಚಿತ್ರ. ಇದೇ ಚಿತ್ರದ ಅಲ್ಲಲ್ಲಿ ತೂರಿಕೊಂಡ ಕೃತಕತೆಗೂ ಕಾರಣವಾಯಿತು. ಇದೇ ವರ್ಷ ತೆರೆಕಂಡ 'ಕಾಲೇಜು ರಂಗ' ಬಿ.ಜಿ.ಎಲ್.ಸ್ವಾಮಿಯವರ ಕಾದಂಬರಿ ಆಧರಿಸಿದ ಚಿತ್ರ. ಬಿ.ಜಿ.ಎಲ್.ಸ್ವಾಮಿ ಶೈಲಿಯೇ ಹಾಸ್ಯಪ್ರಧಾನವಾದ ಸ್ವಕೇಂದ್ರೀಕೃತ satire. ಇದೊಂದು ರೀತಿ ತಾನೊಬ್ಬ ಶ್ರೇಷ್ಠ, ಉಳಿದವರೆಲ್ಲ ತನ್ನಡಿಯಾಳುಗಳು ಎಂಬ ಮಾದರಿಯ ಚಿಂತನೆ ಪುಟ್ಟಣ್ಣ ಈ basics ಅನ್ನು ತೆಗೆದು ಕಾಲೇಜಿನ ಆಡಳಿತಾತ್ಮಕ ದುರಂತ ಹೇಳುವ ಕಥೆಯಾಗಿಸಲು ಪ್ರಯತ್ನಿಸಿದರು. ಆದರೆ ವಿವರಗಳನ್ನು ಮೂಲದಂತೆ ಬಳಸಿ point of view ಬದಲಿಸಿದ್ದರಿಂದ ಚಿತ್ರ ಯಾವ ಹಂತದಲ್ಲೂ ಅಥೆಂಟಿಕ್ ಅನ್ನಿಸದೆ ಏಕಪಾತ್ರಾಭಿನಯವಾಯಿತು. ಅತ್ತ ಕಾದಂಬರಿ ಆಶಯವೂ ಬರಲಿಲ್ಲ; ಪುಟ್ಟಣ್ಣನವರ ಚಿಂತನೆಗಳೂ ಕಾಣಲಿಲ್ಲ.

೧೯೭೭ರಲ್ಲಿ ಉತ್ತರ ಕರ್ನಾಟಕದಲ್ಲಿ ಬಹು ಜನಪ್ರಿಯವಾಗಿದ್ದ ನಾಟಕ 'ವೀರ ಸಿಂಧೂರ ಲಕ್ಷ್ಮಣ' ಚಿತ್ರವಾಯಿತು, ಚಿತ್ರವಾಗುವಾಗ ಯಾವ ಬದಲಾವಣೆಯನ್ನೂ ಮಾಡದೆ ನಾಟಕದ ಹಂದರವನ್ನೇ ಇಲ್ಲೂ ಉಳಿಸಿಕೊಳ್ಳಲಾಗಿತ್ತು. ೧೯೭೮ರಲ್ಲಿ ತೆರೆಕಂಡ 'ಹೊಂಬಿಸಿಲು' ಉಷಾ ನವರತ್ನರಾಂ ಅವರ ಕಾದಂಬರಿ ಆಧರಿಸಿದ ಚಿತ್ರ. ಇಲ್ಲಿ ಕಾದಂಬರಿಯ ಒಂದು ಎಳೆ ಮಾತ್ರ ಚಿತ್ರಕ್ಕೆ ಬಂದಿದೆ, ಉಳಿದಂತೆ ಚಿತ್ರದ ಶಿಲ್ಪಕ್ಕೂ ಕಾದಂಬರಿಗೂ ಯಾವ ಸಂಬಂಧವೂ ಇಲ್ಲ. ೧೯೭೯ರಲ್ಲಿ ತೆರೆಕಂಡ 'ಹುಲಿಯ ಹಾಲಿನ ಮೇವು' ಭಾರತೀಸುತ ಅವರ ಕಾದಂಬರಿ ಆಧರಿಸಿದ್ದು. ಇಲ್ಲಿ ಕೂಡ ಸರಳ ಕಥೆಯನ್ನು ಫಾರ್ಮುಲಾಗಳಿಗೆ ಒಗ್ಗಿಸುವ ಕೆಲಸ ನಡೆದಿದೆ. ೧೯೮೦ರಲ್ಲಿ ಬಂದ 'ಬಿಳಿಗಿರಿಯ ಬನದಲ್ಲಿ' ತ.ಪು.ವೆಂಕಟರಾಂ ಅವರ ಜನಪ್ರಿಯ ಕಾದಂಬರಿ ಆಧರಿಸಿದ ಕಾದಂಬರಿಯ ಸತ್ವಗಳಿಗೆ ಬದ್ಧವಾಗಿ ನಿರ್ಮಾಣವಾದ ಚಿತ್ರ. ಅದೇ ವರ್ಷ ತೆರೆಗೆ ಬಂದ 'ಪಟ್ಟಣಕ್ಕೆ ಬಂದ ಪತ್ನಿಯರು' ನಾಟಕವನ್ನು ಆಧರಿಸಿದ ಚಿತ್ರ. 'ಮಿಥುನ' ಎಂಬ ತಮ್ಮ ಸಣ್ಣಕತೆಯನ್ನೇ ಚಲನಚಿತ್ರವಾಗಿಸಿದರು ಮಾವಿನಕೆರೆ ರಂಗನಾಥನ್. ಐಷಾರಾಮವನ್ನು ಬೆನ್ನು ಹತ್ತಿದ ಜೋಡಿಯ ಕನಸು ಕರಗಿ ವಾಸ್ತವಕ್ಕೆ ಜಾರಿದಾಗ ನಾಯಕಿ ಸವಾಲಿನ ಸನ್ನಿವೇಶದಲ್ಲಿ ಭದ್ರ ನೆಲೆ ತಲುಪುವ ಕಥೆ ಇದು. ಆದರೆ ಚಿತ್ರವಾಗಿ ಈ ಗಟ್ಟಿತನ ಕಾಣಲಿಲ್ಲ. ಕಥೆಯ ಅನೇಕ ವಿವರಗಳು ಚಿತ್ರ ವ್ಯಾಕರಣಕ್ಕೆ ಅನುವಾದವಾಗದೆ ಕೃತಕವಾಗಿ ನಿರ್ಮಿತವಾಯಿತು.

• • •

೮೦ರ ದಶಕದ ಹೊತ್ತಿಗೆ ಹೊಸ ಅಲೆ ಪ್ರವಾಹ ತಗ್ಗಿತು. ಪ್ರಧಾನವಾಹಿನಿಯಲ್ಲಿ ಹಣದ ಹೂಡಿಕೆ ಗರಿಷ್ಠ ಪ್ರಮಾಣಕ್ಕೆ ಏರಿ ಭದ್ರವಾದ ಸ್ವರೂಪ ಬಂತು. ಈಗ ಚಲನಚಿತ್ರಕ್ಕೆ ಮನರಂಜನೆಯನ್ನು ಮೀರಿದ ಆಯಾಮಗಳು ಪ್ರಾಪ್ತವಾಗತೊಡಗಿದವು. ದೇಶದಲ್ಲಿ ತುರ್ತು ಪರಿಸ್ಥಿತಿ ನಂತರ ಜನತಾ ಸರ್ಕಾರದ ಪತನ, ಪ್ರಜಾಪ್ರಭುತ್ವದ ಬಗ್ಗೆ ಅಸಮಾಧಾನ, ಇಂತಹ ಭ್ರಮನಿರಸನದ ಕಾಲದಲ್ಲಿ ಹೆಚ್.ಕೆ.ಅನಂತರಾವ್ ಅವರ ಕಾದಂಬರಿ ಆಧರಿಸಿದ 'ಅಂತ' ತೆರೆಗೆ ಬಂತು. ಮೂಲ ಕಾದಂಬರಿ ಭ್ರಷ್ಟಾಚಾರದ ವಿರುದ್ಧ ಹೋರಾಡುವ ನಾಯಕನ ದುರಂತ ಹೇಳುವ ಕಥೆ. ಇಂತಹ ನೂರಾರು ಕಥೆಗಳು ಕನ್ನಡದಲ್ಲಿ ಆಗ ಲಭ್ಯವಿದ್ದವು. ಆದರೆ ಚಿತ್ರದಲ್ಲಿ ಪ್ರಧಾನವಾಗಿದ್ದು ಈ ಎಳೆಯಲ್ಲ. ಹಿಂಸೆ, ಹಸಿ ಹಸಿಯಾದ ಸೆಕ್ಸ್, ಗರ್ಭಿಣಿಯನ್ನು ಕೊಲ್ಲುವ, ಉಗುರುಗಳನ್ನು ಕೀಳುವ ಸ್ಯಾಡಿಸಂ ಇತ್ತು. ಈ ಅಂಶಕ್ಕೂ ಸಾಹಿತ್ಯಕ್ಕೂ ಸಂಬಂಧವೇ ಇರಲಿಲ್ಲ. ಹೀಗಾಗಿ ನೆಪಮಾತ್ರಕ್ಕೆ ಕಾದಂಬರಿ ಆಧರಿಸಿ ಸ್ವತಂತ್ರವಾದ ಭೂಮಿಕೆಯೊಂದನ್ನು ನಿರ್ಮಿಸಿಕೊಂಡ ಚಿತ್ರ ಇದು. ಈ ದಶಕದ ಬಹುತೇಕ ಚಿತ್ರಗಳ ಮಟ್ಟಿಗೆ ಇದು ನಿಜ ಕೂಡ. ಇದೇ ವರ್ಷ ತೆರೆಕಂಡ 'ಗಾಳಿಮಾತು' ಕೂಡ ಇಂತಹದೇ ವಿಶ್ಲೇಷಣೆಯಲ್ಲಿ ಬರುವ ಚಿತ್ರ. 'ಹೊಸ ಬೆಳಕು' 'ಹಾಲುಜೇನು' 'ಸಮಯದ ಗೊಂಬೆ' 'ಬಾಡದ ಹೂ' ಹೀಗೆ ನೆಪಮಾತ್ರಕ್ಕೆ ಕಾದಂಬರಿ ಆಧರಿಸಿದ ಅನೇಕ ಚಿತ್ರಗಳು ಈ ದಶಕದಲ್ಲಿ ಬಂದವು. ಇಲ್ಲೆಲ್ಲ ಪಾತ್ರದ ಹೆಸರು, ಕೆಲವು ಸಣ್ಣ ವಿಷಯಗಳನ್ನು ಕಾದಂಬರಿಯಿಂದ ಪಡೆದರೆ ಮುಗಿಯಿತು. ಉಳಿದಂತೆ ಕಾದಂಬರಿಯ ಯಾವ ಧ್ವನಿಯೂ ಚಿತ್ರದಲ್ಲಿ ಇರುತ್ತಿರಲಿಲ್ಲ. ಮಾತ್ರವಲ್ಲ, ಎಷ್ಟೋ ಕಡೆ ಕಾದಂಬರಿಗೂ ಆ ಧ್ವನಿ ಇರುತ್ತಿರಲಿಲ್ಲ. ಹೀಗಾಗಿ ಇಂತಹ ಸರಳ ರೇಖಾತ್ಮಕ ಚಿತ್ರಗಳನ್ನು ಹೊರತುಪಡಿಸಿ ಸಂಕೀರ್ಣತೆ ಕಂಡುಬಂದ ಕೆಲವು ಸಂದರ್ಭಗಳು ಮಾತ್ರ ಇನ್ನು ಮುಂದಿನ ಭಾಗದಲ್ಲಿ ಚರ್ಚೆಯಾಗಿವೆ.

'ಸಿಂಹಾಸನ' ಆ ಕಾಲದ ಪ್ರಸಿದ್ಧ ಹವ್ಯಾಸಿ ನಾಟಕ. ಮೂಲ ಮರಾಠಿ ನಾಟಕ. ಮರಾಠಿಯಲ್ಲಿ ಚಿತ್ರವೂ ಆಗಿತ್ತು. ಸಿ.ಆರ್.ಸಿಂಹ ಚಿತ್ರ ಮಾಡಿದರು. ಇದು ೧೯೮೩ರಲ್ಲಿ ಚಲನಚಿತ್ರವಾಗಿ ಮಾರ್ಪಾಟಾಯಿತು. ಈ ಮಾರ್ಪಾಟಿನಲ್ಲಿ ನಾಟಕದ ಎಲ್ಲ ಅಂಶಗಳಿದ್ದರೂ ಶಬ್ದ ಮತ್ತು ಬೆಳಕಿನ ಶಕ್ತಿಯನ್ನು ಚಿತ್ರಮಾಧ್ಯಮಕ್ಕಾಗಿ ಹೆಚ್ಚಿಸಲಾಗಿತ್ತು. ಇದರಿಂದ ನಾಟಕಕ್ಕಿಂತ ಚಿತ್ರ ಪ್ರಭಾವಿಯಾಗಿ ಕಾಣುತ್ತಿತ್ತು (ಗಲ್ಲಾಪೆಟ್ಟಿಗೆ ದೃಷ್ಟಿಯಿಂದಲ್ಲ). ಇದೇ ನಾಟಕ ಕನ್ನಡದಲ್ಲಿ 'ಮುಖ್ಯಮಂತ್ರಿ'ಯಾಗಿ ಜನಪ್ರಿಯ. ಇದನ್ನು ರಂಗದ ಮೇಲೆ ನಡೆಯುತ್ತಿರುವಾಗಲೇ ನಿರ್ಮಾಪಕ ಕೃಷ್ಣರಾಜು ಅವರು ಚಿತ್ರಿಸಿದ್ದರು. ತೆರೆಗೆ ಬರಲಿಲ್ಲ. ಇದೇ ವರ್ಷ ತೆರೆಕಂಡ 'ಬ್ಯಾಂಕರ್ ಮಾರ್ಗಯ್ಯ' ಆರ್.ಕೆ.ನಾರಾಯಣ್ ಅವರ ಪ್ರಸಿದ್ಧ ಕಾದಂಬರಿ 'ಫೈನಾನ್ಷಿಯಲ್ ಎಕ್ಸ್‌ಪರ್ಟ್' ಅನ್ನು ಆಧರಿಸಿತ್ತು. ಮೂಲದ ಕಾಲವನ್ನು ಬದಲಿಸಿ ನೇಟಿವಿಟಿ ಬಳಸಿದ ಚಿತ್ರ ಬಹುತೇಕ ಮೂಲದ ಆಶಯವನ್ನು ಉಳಿಸಿಕೊಂಡಿತು. ಹೀಗೆ ಆಶಯಕ್ಕನುಗುಣವಾಗಿ ಮಾಧ್ಯಮಕ್ಕೆ ಅಳವಡಿಸಿಕೊಳ್ಳುವ ಅಪರೂಪದ ಸಾಧ್ಯತೆಯಾಗಿಯೇ ಈ ಚಿತ್ರವನ್ನು ಗುರುತಿಸಬಹುದು. ಎಂ.ಕೆ.ಇಂದಿರಾ ಅವರ ಕಾದಂಬರಿ ಆಧರಿಸಿದ 'ಫಣಿಯಮ್ಮ' ಇದೇ ವರ್ಷ ಚಲನಚಿತ್ರವಾಯಿತು. ಮೂಲದ ಏಕಮುಖ ವೈಭವೀಕರಣದ ಕಥೆಗೆ ಚಿತ್ರದಲ್ಲಿ ಹಲವಾರು ಆಯಾಮಗಳು ಮೂಡಿದವು. ಮೂಲದಲ್ಲಿ ಅಸ್ಪಷ್ಟವಾಗಿದ್ದ 'ಧ್ವನಿ' ಇಲ್ಲಿ ಇನ್ನಷ್ಟು ಸ್ಪಷ್ಟವಾಯಿತು. ಚಿತ್ರದ ಶಕ್ತಿಯುತ ಸಾಧ್ಯತೆಗಳು ಕೆಲಸ ಮಾಡದಿದ್ದರೂ ಇದನ್ನೊಂದು ಗಮನಾರ್ಹ ಪರಿವರ್ತನೆಯಾಗಿ ಗುರುತಿಸಬಹುದು. ಶಂಕರ್‌ನಾಗ್ ಇದೇ ವರ್ಷ ಜನಪ್ರಿಯವಾಗಿದ್ದ 'ನೋಡಿ ಸ್ವಾಮಿ ನಾವಿರೋದೆ ಹೀಗೆ'ಯನ್ನು ತೆರೆಗೆ ತಂದರು. ನಾಟಕದಲ್ಲಿದ್ದ ಸನ್ನಿವೇಶಗಳನ್ನೇ ಚಿತ್ರದಲ್ಲಿ ಬಳಸಿದರು. ಒಂದು ಮುಖ್ಯ ಬದಲಾವಣೆ ಎಂದರೆ ಸಂಗೀತಗಾರನೊಬ್ಬನ ಬದುಕಿನ ದುರಂತದ ಎಳೆಯನ್ನು ಚಿತ್ರದಲ್ಲಿ ವಿಸ್ತರಿಸಲಾಯಿತು. ಇದರ ಮೂಲಕ ನುಗ್ಗೇಹಳ್ಳಿ ದಂಪತಿಗಳ ಬಿರುಕಿಗೆ ಒಂದು ತುಲನೆ ಲಭ್ಯವಾಯಿತು. ಇದರಿಂದ ಕಥಾಹಂದರ ಇನ್ನಷ್ಟು ಗಟ್ಟಿಯಾಯಿತು. ಸಿನಿಮಾ ಮತ್ತು ಸಾಹಿತ್ಯ ಎರಡೂ ಸಾಧ್ಯತೆಯಲ್ಲಿಯೇ ಸರಳವಾಗಿಯೇ ಪ್ರತಿಮೆಗಳನ್ನು ಬಳಸಿಕೊಂಡಿದ್ದ ಚಿತ್ರ ಮೂರನೇ ಪ್ರಕಾರದ ಬ್ರಿಜ್ ಸಿನಿಮಾದ ಅಸ್ಪಷ್ಟ ಸಾಧ್ಯತೆಯನ್ನು ಒಳಗೊಂಡಿತ್ತು. ದುರಂತವೆಂದರೆ ಇದರಿಂದ ಪರಂಪರೆಯೊಂದು ನಿರ್ಮಿತವಾಗಲೇ ಇಲ್ಲ.

೧೯೮೪ರಲ್ಲಿ ಪುಟ್ಟಣ್ಣ ಕಣಗಾಲ್ ಎರಡು ಕಾದಂಬರಿ ಆಧಾರಿತ ಚಿತ್ರಗಳನ್ನು ತೆರೆಗೆ ತಂದರು. ದೊಡ್ಡೇರಿ ವೆಂಕಟಗಿರಿರಾವ್ ಅವರ 'ಅವದಾನ' ಕಾದಂಬರಿ ಆಧಾರಿತ 'ಅಮೃತ ಘಳಿಗೆ' ಮೊದಲು ತೆರೆಗೆ ಬಂದಿತು. ಸರಳವಾದ ವಸ್ತುವನ್ನು ಒಳಗೊಂಡ ಈ ಚಿತ್ರವನ್ನು ಸಂಪೂರ್ಣ ಮೆಲೋಡ್ರಾಮವಾಗಿ ಪರಿವರ್ತಿಸಿ ಚಿತ್ರಕಥೆ ತಯಾರಾಗಿತ್ತು. ಕಾದಂಬರಿ ಮೂಲತಃ ವಿಧವಾ ವಿವಾಹದ ಪರವಾದ ಬಲವಾದ ಧ್ವನಿಯನ್ನು ಹೊಂದಿತ್ತು. ಈ ಅಂಶ ಚಿತ್ರದಲ್ಲಿ ಸಾಕಷ್ಟು ದುರ್ಬಲವಾಗಿ ನಾಯಕನ ತ್ಯಾಗಕ್ಕೆ ಹೆಚ್ಚಿನ ಒತ್ತು ಸಿಕ್ಕಿತು. ಎಲ್ಲಕ್ಕಿಂತ ಹೆಚ್ಚಾಗಿ ಸ್ನೇಹಿತನಿಗಾಗಿ ಆವನ ಪ್ರೇಯಸಿಯನ್ನು ಜತನದಿಂದ ಕಾಪಾಡಿ ಹಿಂತಿರುಗಿಸುವ ವಿಚಿತ್ರ ಆದರ್ಶದ ಎಳೆಯೂ ಸೇರಿಕೊಂಡಿತು. ಎಲ್ಲಕ್ಕಿಂತ ಹೆಚ್ಚಾಗಿ ಕಾದಂಬರಿಯ ಆಶಯಕ್ಕೆ ತದ್ವಿರುದ್ಧವಾಗುವಂತೆ ಇದನ್ನು ತ್ರಿಕೋಣ ಪ್ರೇಮಕತೆಯ ಫಾರ್ಮುಲಾಕ್ಕೆ ಬದಲಾಯಿಸಲಾಗಿತ್ತು. 'ಬೆಳ್ಳಿಮೋಡ'ದಂತಹ ದೃಶ್ಯಕಾವ್ಯ ಕೊಟ್ಟ ಪುಟ್ಟಣ್ಣ 'ಅವದಾನ'ದಂತಹ ಸರಳ ಕೃತಿಗೆ ನ್ಯಾಯ ಸಲ್ಲಿಸದೆ ಶಾಪಗ್ರಸ್ಥ ಗಂಧರ್ವರ ತರಹ ಕಂಡರು. 'ಋಣಮುಕ್ತಳು' ಅನುಪಮ ನಿರಂಜನ ಅವರ 'ಋಣ' ಕಾದಂಬರಿಯನ್ನು ಆಧರಿಸಿದ ಸಿನಿಮಾ. ಸ್ವಲ್ಪ ವಾಚ್ಯವಾಗಿಯಾದರೂ ತಮ್ಮ ಕಾಳಜಿಗಳನ್ನು ಶುದ್ಧವಾಗಿಟ್ಟುಕೊಂಡು ಸಾಹಿತ್ಯ ರಚನೆ ಮಾಡಿದ ಅನುಪಮಾ ಅವರ 'ಋಣ' ಕೂಡ ಇಂತಹದೇ ಧ್ವನಿಯುಳ್ಳ ಕಾದಂಬರಿ. ಹೆಣ್ಣಿನ ಬದುಕಿನುದ್ದಕ್ಕೂ ತುಂಬಿರುವ ಋಣಗಳು ಅವಳು ಸ್ವತಂತ್ರವಾಗಿರುವುದನ್ನು ನಿಯಂತ್ರಿಸುತ್ತವೆ.

ಋಣಮುಕ್ತಳಾಗಿ ಸಹಜವಾಗಿ ಬದುಕಲು ಪ್ರಯತ್ನಿಸುವ ಹೆಣ್ಣಿನ ಕಥೆ ಕಾದಂಬರಿಯಲ್ಲಿತ್ತು. ಪುಟ್ಟಣ್ಣ ಇದರ ಒಟ್ಟು ಆಶಯವನ್ನು ಬದಲಿಸದಿದ್ದರೂ ಇದು ಗಟ್ಟಿಯಾಗಿ ಕೇಳುವಂತೆ ಸಿನಿಮಾ ಮಾಡಲಿಲ್ಲ. ಯಾವ ಆ್ಯಂಗಲ್‌ಗಳಲ್ಲೂ ಸಿನಿಮಾ ಫೆಮಿನಿಸ್ಟ್ ಅನ್ನಿಸಲಿಲ್ಲ. ಕೊನೆಯ ದೃಶ್ಯ ದಲ್ಲಿ ವಾಚ್ಯವಾಗಿಯೇ ಈ ಆಶಯ ಹೇಳಿದರೂ ಅದಕ್ಕೆ ಬೇಕಾದ ಅಥೆಂಟಿಕ್ ಹಿನ್ನೆಲೆ ರೂಪುಗೊಂಡಿರಲಿಲ್ಲ. ಈ ಎರಡೂ ಚಿತ್ರಗಳಲ್ಲಿ ಮಾಧ್ಯಮಗಳ ನಡುವಿನ ಪರಿವರ್ತನೆ ಸಕಾರಾತ್ಮಕವಾಗಿ ಆಗಿರಲಿಲ್ಲ. ಇದೇ ವರ್ಷ ಶಂಕರ್‌ನಾಗ್ ಮುಂಬಯಿಯಲ್ಲಿ ನಡೆದ ಘಟನೆಯನ್ನು ಆಧರಿಸಿ ವಸಂತ ಮೊಕಾಶಿ ರಚಿಸಿದ ಕಥೆ, ಚಿತ್ರಕಥೆಯನ್ನು ಆಧರಿಸಿ 'ಆಕ್ಸಿಡೆಂಟ್' ಅನ್ನು ತೆರೆಗೆ ತಂದರು. ಬಿಗಿಯಾದ ಕಥನಕೌಶಲದಿಂದ ಕೂಡಿದ್ದ ಮೊದಲ ಭಾಗ ವಿವರಗಳನ್ನು ಹೇಗೆ unsaid ಆಗಿ ಪೋಣಿಸಬಹುದು ಎಂಬ ಕುತೂಹಲಕರ ಸಾಧ್ಯತೆಯನ್ನು ಸಾಕ್ಷಾತ್ಕರಿಸಿಕೊಂಡಿತ್ತು. ಆದರೆ ಎರಡನೇ ಭಾಗದ ಕಥನಸೌಧ ದಿಢೀರನೆ ಕುಸಿದು ವಾಚ್ಯ ಎನಿಸಿತು. ಇಷ್ಟಿದ್ದೂ 'ಆಕ್ಸಿಡೆಂಟ್' ಅನ್ನು ಇಮೇಜ್‌ಗಳ ಭರಾಟೆ ಇಲ್ಲದೆ, ಕಥನವನ್ನು ಮಾತ್ರ ಅಭಿವ್ಯಕ್ತಿ ಸಾಧ್ಯತೆಯಾಗಿಸಿಕೊಳ್ಳದೆ ಸಂವಹನ ಸಾಧಿಸಿದ ಚಿತ್ರವಾಗಿ ಗುರುತಿಸಬಹುದು. ೧೯೮೫ರಲ್ಲಿ ಯಂಡಮೂರಿ ವೀರೇಂದ್ರನಾಥ್ ಅವರ 'ತುಳಸೀದಳ' ಕಾದಂಬರಿಯನ್ನು ವೇಮಗಲ್ ಜಗನ್ನಾಥ್ ತೆರೆಗೆ ತಂದರು. ಸಾಮಾನ್ಯವಾಗಿ ಯಂಡಮೂರಿ ವೀರೇಂದ್ರನಾಥ್ ಅವರ ಕಾದಂಬರಿಗಳು ಸಾಹಿತ್ಯಿಕ ವಲಯದಲ್ಲಿ ಅಷ್ಟೇನೂ ಸ್ವೀಕೃತವಾಗದಿದ್ದರೂ ಜನಪ್ರಿಯ ಹಾಗೂ ಚಲನಚಿತ್ರದ ಸಾಧ್ಯತೆಗೆ ಅನುಗುಣವಾಗಿಯೇ ಇರುತ್ತವೆ. ಅಂತಹ visual impact ಮತ್ತು rythm ಅನ್ನು ಅವರ ಕೃತಿಗಳಲ್ಲಿ ನೋಡಬಹುದು. ಈ ಕಾದಂಬರಿಯಲ್ಲಿ ಅಂತಹ ಸಾಧ್ಯತೆಗಳಿದ್ದವು. ಮೂಲತಃ ಒಂದು ಮಗುವಿನ ಅನಾರೋಗ್ಯವನ್ನು ವೈಜ್ಞಾನಿಕವಾಗಿ ಮತ್ತು ತಾಂತ್ರಿಕ ಶಕ್ತಿಯಿಂದ ಗುಣಪಡಿಸಲು ಪ್ರಯತ್ನಿಸುವ ಸಂಘರ್ಷಣಾತ್ಮಕವಾದ ದಾರಿಗಳ 'ಹಾರರ್' ಪ್ರಕಾರಕ್ಕೆ ಸೇರಿಸಬಹುದಾದ ಕಥೆ ಇದು. ಆದರೆ ಚಲನಚಿತ್ರವಾಗುವಾಗ ಕಾದಂಬರಿ ನೀಡಿದ್ದ ಅನೇಕ ಒಳನೋಟಗಳನ್ನು ಚಿತ್ರ ನಿರ್ದೇಶಕರು ಅರ್ಥ ಮಾಡಿಕೊಳ್ಳದೆ ವಿವರಗಳ ನೆಲೆಯಲ್ಲೇ ನಿಂತರು. ಇದರಿಂದ ಒಟ್ಟು ಆಶಯದ ತೀವ್ರತೆ ಹೋಗಿ ಸರಳ ಮಂತ್ರ-ತಂತ್ರದ ಕಥೆಗೇ ಸೀಮಿತವಾಯಿತು. ಇದು ಮೂಲತಃ ಚಿತ್ರ ನಿರ್ಮಾಣ ಮಾಡುವಾಗ ಕೃತಿಯ ಅಂತರ್ಯವನ್ನು ಅರ್ಥ ಮಾಡಿಕೊಳ್ಳುವುದು ಎಷ್ಟು ಮುಖ್ಯ ಎಂಬುದನ್ನು ತೋರಿಸುತ್ತದೆ.

(ಚಿತ್ರ ೨೨-೨೩) ಸಾಯಿಸುತೆ

ರೇಖಾ ಕಾಖಂಡಕಿ

ಅನಂತಮೂರ್ತಿಯವರ ಬಹು ಚರ್ಚಿತ ಕಾದಂಬರಿ 'ಅವಸ್ಥೆ'ಯನ್ನು ೧೯೮೭ರಲ್ಲಿ ಕೃಷ್ಣ ಮಾಸಡಿ ತೆರೆಗೆ ತಂದರು. ಮೂಲತಃ ಶಾಂತವೇರಿ ಗೋಪಾಲಗೌಡರ ಬದುಕನ್ನು ಹೋಲುತ್ತದೆ ಎಂದು ಭಾವಿಸಲಾದ ಈ ಕಾದಂಬರಿ ರಾಜಕೀಯ ಮಹತ್ವಾಕಾಂಕ್ಷೆಯ ಮತ್ತು ವಾಸ್ತವಗಳ ನಡುವೆ ನಡೆಯುವ ಸಂಘರ್ಷದ ಕಥೆ. ನೇರ ಕಥಾನಕದ ರೂಪದಲ್ಲಿದ್ದ ಕಾದಂಬರಿಯಲ್ಲಿ ತಂತ್ರಗಳ ಪಾರಮ್ಯಕ್ಕಿಂತ ಭಾವನಾತ್ಮಕ ಒಳತೋಟಿಗೆ ಒತ್ತು ಜಾಸ್ತಿ. ಇದೇ ಅಂಶ ಚಿತ್ರದಲ್ಲಿ ಗಟ್ಟಿಯಾಗಿ ಮೂಡಿಬಂದಿತು. ಅದೇ ವರ್ಷ 'ಕಸ್ತೂರಿ'ಯಲ್ಲಿ ಪ್ರಕಟವಾಗಿದ್ದ ಸಣ್ಣಕತೆ ಆಧರಿಸಿ ಶಂಕರ್‌ನಾಗ್ 'ಒಂದು ಮುತ್ತಿನ ಕಥೆ' ತಯಾರಿಸಿದರು. ಮೂಲತಃ ಅನಾಥಪ್ರಜ್ಞೆ ಮತ್ತು ಐಡೆಂಟಿಟಿ ಸಾಹಿತ್ಯ ಕುರಿತ ಕಥೆಯನ್ನು ಶಂಕರ್‌ನಾಗ್ ಜನಪ್ರಿಯ ಚೌಕಟ್ಟಿನಲ್ಲಿ ಹೇಳಲು ಹೊರಟರು. ಹೀಗಾಗಿ ಅಭಿವ್ಯಕ್ತಿಯ ನೆಲೆಯಲ್ಲೇ ಬಿಕ್ಕಟ್ಟು ಕಂಡಿತು. ಇಷ್ಟಾಗಿಯೂ ಶಂಕರ್‌ನಾಗ್ ಅತ್ಯಂತ ಜನಪ್ರಿಯ ನಟನನ್ನು ಬಳಸಿ ಕೂಡ ಫಾರ್ಮುಲಾಗಳಿಲ್ಲದ ಕಥೆ ಹೇಳಲು ಪ್ರಯತ್ನಿಸಿದರು. ಅಷ್ಟರಮಟ್ಟಿಗಿನ ವಿನೂತನತೆ ಚಿತ್ರಕ್ಕೆ ಪ್ರಾಪ್ತವಾಯಿತು. ೧೯೮೬ರಲ್ಲಿ ಗಿರೀಶ್ ಕಾಸರವಳ್ಳಿಯವರು ಪೂರ್ಣಚಂದ್ರ ತೇಜಸ್ವಿಯವರ 'ತಬರನ ಕತೆ' ಸಣ್ಣಕತೆಯನ್ನು ಚಲನಚಿತ್ರವಾಗಿಸಿದರು. ಸರ್ಕಾರಿ ಆಡಳಿತ ಯಂತ್ರದ ನಿಷ್ಕ್ರಿಯತೆಯಿಂದ ನಿವೃತ್ತಿವೇತನಕ್ಕೆ ಒದ್ದಾಡುವ ಬಡಪಾಯಿಯ ಕಥೆಯನ್ನು ತೇಜಸ್ವಿ ಆಕರ್ಷಕ ಭಾಷೆಯಲ್ಲಿ ನಿರೂಪಿಸಿದ್ದರು. ಇದು ಇಡೀ ಕಥೆಯೇ ಒಂದು ಪ್ರತಿಮೆಯಾಗಬಲ್ಲ ಚಲನಶೀಲ ಕರ್ತೃತ್ವವುಳ್ಳ ಕಥೆ. ಈ ಕಥೆ ಕಟ್ಟಿಕೊಡುವ ವಿವರಗಳು ಸಾಹಿತ್ಯದ ಮಟ್ಟಿಗೆ ಪೂರ್ಣ ಅನ್ನಿಸಿದರೂ ಸಿನಿಮಾ ಮಟ್ಟಿಗೆ ಕೊಂಚ ಅಪೂರ್ಣ ಅನ್ನಿಸುವಂತಿತ್ತು. ಕಾಸರವಳ್ಳಿ Non-narrative device ಬಳಸಿ ಬಿಡಿ ಬಿಡಿ ಇಮೇಜ್‌ಗಳ ಮೂಲಕ ಪ್ರತಿಮೆಯಾಗಿಸಿದರು, ಕಥೆ ನೀಡುವ ಶಾಕ್ ಅನ್ನು ಹಂತ ಹಂತವಾಗಿ ಬಿಡುಗಡೆ ಮಾಡುವ ತಂತ್ರ ಬಳಸಿದರು. ಇದರಿಂದ ತೇಜಸ್ವಿ ಅವರ ಕಥೆಗಿಂತ ಪರಿಣಾಮಕಾರಿ ಅನುಭವ ಪ್ರೇಕ್ಷಕನಿಗೆ ಲಭ್ಯವಾಯಿತು. ತೇಜಸ್ವಿಯವರ ಕಥೆಯಲ್ಲಿ ಕಟುವಾದ ವ್ಯಂಗ್ಯ ಕೆಲಸ ಮಾಡಿದ್ದರೆ ಕಾಸರವಳ್ಳಿಯವರ ಚಿತ್ರದಲ್ಲಿ ಗಾಢ ವಿಷಾದ ಕೆಲಸ ಮಾಡಿತ್ತು. ಈ ಸ್ಥಾಯಿ ಸ್ಥಿತ್ಯಂತರ ಕಥೆಯನ್ನು ಇನ್ನಷ್ಟು ಪರಿಣಾಮಕಾರಿಯಾಗಿಸಿತು. ಇದೇ ವರ್ಷ ನಾ.ಡಿಸೋಜ ಅವರ 'ಕಾಡಿನ ಬೆಂಕಿ' ಕಾದಂಬರಿಯನ್ನು ಸುರೇಶ್ ಹೆಬ್ಳೀಕರ್ ತೆರೆಗೆ ತಂದರು. ಲೈಂಗಿಕ ಸಮಸ್ಯೆ ಸುತ್ತ ಹೆಣೆದಿದ್ದ ಈ ಅಪರೂಪದ ಕಥೆಯನ್ನು vulgarise ಆಗದಂತೆ ಎಚ್ಚರಿಕೆ ವಹಿಸಿದರೂ ಚಿತ್ರದಲ್ಲಿ ಸಮಸ್ಯೆಯತ್ತ ಕೇಂದ್ರೀಕರಿಸುವಂತೆ ಗಟ್ಟಿ ಹಂದರವನ್ನು ಕಟ್ಟಿರಲಿಲ್ಲ. ಇದರಿಂದ ಅಲ್ಲಲ್ಲಿ ಜನಪ್ರಿಯ ಹೊರಚಾಚುಗಳು ಬಂದವು. ಸಮಸ್ಯೆ ತೀವ್ರವಾಗಿ ಕಾಡುವ ಮಟ್ಟಕ್ಕೆ ಚಿತ್ರ ಇರಲಿಲ್ಲ. ಎಲ್ಲಕ್ಕಿಂತ ಮುಖ್ಯವಾಗಿ ಚಿತ್ರದಲ್ಲಿ ವಿವರಗಳನ್ನು ನೀಡುವ ಕ್ರಮವೇ ಸಾಹಿತ್ಯಿಕ ನೆಲೆಯಿಂದ ಬಂದಿತ್ತು. ಇದರಿಂದ ಒಂದು ಪರಿಣಾಮಕಾರಿ ಚಲನಚಿತ್ರವಾಗಿ ಬೆಳೆಯಲಿಲ್ಲ. ಕಾದಂಬರಿಯಲ್ಲಿ ದುರಂತವಾದ ಅಂತ್ಯ ಚಿತ್ರದಲ್ಲಿ ಸುಖಾಂತವಾದದ್ದು ಮಾತ್ರ ಸಮಸ್ಯೆಯ positive ಮುಖದತ್ತ ಕಥೆ ಚಲಿಸಲು ಕಾರಣವಾಗಿ ಕೆಲಮಟ್ಟಿಗಿನ ಜೀವಂತಿಕೆ ಕಾಣಿಸಿಕೊಂಡಿತು. ೧೯೮೯ರಲ್ಲಿ ನಾಗತಿಹಳ್ಳಿ ಚಂದ್ರಶೇಖರ್ ಅವರ 'ಬನ್ನೇರಿ' ಕಥೆಯನ್ನು 'ಸಂಕ್ರಾಂತಿ' ಎಂಬ ಹೆಸರಿನಲ್ಲಿ ನಂಜುಂಡೇಗೌಡ ಚಲನಚಿತ್ರವಾಗಿಸಿದರು. ಗ್ರಾಮೀಣ ಹೆಣ್ಣೊಬ್ಬಳ ಸ್ವಾಭಿಮಾನದ ಕಥೆ. ಚಿತ್ರವಾಗಿ ಮೂಲತಃ ದೃಶ್ಯಗಳ ಹೊಂದಾಣಿಕೆಯಲ್ಲಿ ಸಮರ್ಪಕ ಚಲನೆ ಇರಲಿಲ್ಲ. ಜೊತೆಗೆ ದೃಶ್ಯೀಕರಣದ ಶಿಥಿಲತೆ ಕಾದಂಬರಿಯ ಆಶಯವನ್ನು ಯಾವ ಮಟ್ಟಿಗೂ ಹಿಡಿದಿಡದೆ ಹೋಯಿತು. ಆದರೆ ನಿರ್ದೇಶಕರು, ಪಾತ್ರಧಾರಿಗಳು ತುಂಬಿಕೊಟ್ಟ ತಾಜಾತನದಿಂದಾಗಿ ಚಿತ್ರ ಒಂದು ಹೊಸ ಅನುಭವ ಅನ್ನಿಸಿತ್ತು.

ಈ ದಶಕದಲ್ಲಿ ಫಾರ್ಮುಲಾ ಕಥೆಗಳನ್ನು ಆಧರಿಸಿ ಬರೆದ ಅನೇಕ ಕಾದಂಬರಿಗಳು ಚಲನಚಿತ್ರವಾಗಿವೆ. ಅವುಗಳನ್ನು ಚಲನಚಿತ್ರವಾಗಿಸುವಾಗ ನೆಪಮಾತ್ರಕ್ಕೆ ಕಥೆ ಇಟ್ಟುಕೊಂಡು ಉಳಿದಂತೆ ತಮ್ಮ ಫಾರ್ಮುಲಾಗಳನ್ನು ಆಧರಿಸಿ ಕೆಲವರು ಚಿತ್ರ ತಯಾರಿಸಿದರು. ಇದಕ್ಕೆ ಒಂದೆರಡು ಉದಾಹರಣೆಗಳನ್ನು ನೀಡಿ ಚರ್ಚೆ ಬೆಳೆಸಬಹುದು. 'ಗಂಧರ್ವಗಿರಿ' ಸಾಯಿಸುತೆ ಅವರ ಕಾದಂಬರಿ. ಇಲ್ಲಿ ಎರಡು ಎಸ್ಟೇಟ್‌ಗಳ ನಡುವಿನ ವೈಮನಸ್ಯ ಮತ್ತು ಅನಾಥ ಹುಡುಗಿಯೊಬ್ಬಳ ನೋವು, ಎರಡು ಎಳೆಗಳಿವೆ. ಕಾದಂಬರಿಯಲ್ಲಿಯ ಎರಡು ಎಸ್ಟೇಟ್‌ಗಳ ನಡುವಿನ ವೈಶಿಷ್ಟ್ಯದ ಸರಳ ಎಳೆ ಚಿತ್ರಕ್ಕೆ ಮುಖ್ಯವಾಯಿತು. 'ಹುಡುಗಿ'ಯ ಪೂರ್ವಕತೆ ತೀರಾ ಅಪ್ರಸ್ತುತವಾಯಿತು ಮತ್ತು ಕಾದಂಬರಿಯ ಬಹುತೇಕ ವಿವರಗಳನ್ನು ಕೈ ಬಿಟ್ಟು ಅನೇಕ ಜನಪ್ರಿಯ ಮಸಾಲೆಗಳನ್ನು ಬಳಸಿದರು. ಪಾತ್ರಗಳ biography ಮಾತ್ರ ಪಡೆದು ಸ್ವತಂತ್ರ ಕಥೆ ರಚಿಸಿ ಸಿನಿಮಾ ತಯಾರಿಸಿದ ಅನುಭವವಾಯಿತು. ಮಧ್ಯಂತರದ ನಂತರವೂ ಕಾದಂಬರಿಗೂ ಸಿನಿಮಾಕ್ಕೂ ಯಾವ ಸಂಬಂಧವೂ ಇರಲಿಲ್ಲ. ಸಾಯಿಸುತೆ ಅವರ ಇನ್ನೊಂದು ಕಾದಂಬರಿ 'ಸುವರ್ಣ ಸೇತುವೆ' ಚಿತ್ರವಾದಾಗ ಗೀತಪ್ರಿಯ ಇಲ್ಲಿನ ಬಹುತೇಕ ವಿವರಗಳನ್ನು ಕೈಬಿಟ್ಟರೂ positive ಆದ ಅಂಶಗಳನ್ನು ಸೇರಿಸಿದರು. ಸ್ವಾಭಿಮಾನಿಯಾದ ಹೆಣ್ಣೊಬ್ಬಳು ಸಿರಿವಂತನ ಅಹಂಕಾರದ ವಿರುದ್ಧ ಹೋರಾಡುವ ಕಥೆ. ಕಾದಂಬರಿಯಲ್ಲಿ ನಾಯಕಿಯನ್ನು ರೇಪ್ ಮಾಡುವುದಕ್ಕೆ ಹಿಂಜರಿಯದ ದುರಹಂಕಾರ ನಾಯಕನಿಗಿದ್ದರೆ ಚಿತ್ರದಲ್ಲಿ ಅದನ್ನು ತಂಗಿಯ ಮೇಲಿನ ಪ್ರೀತಿ ಎಂಬ ತರ್ಕವಿಟ್ಟು ಸರಿಹೊಂದಿಸಲಾಯಿತು. ತನ್ನ ತಂಗಿಗೆ ರಕ್ತ ನೀಡಿದಳು ಎಂಬ ಕಾರಣದಿಂದ ನಾಯಕ ಬದಲಾಗುವ ವಿವರ ಎರಡೂ ಕಡೆ ಇದ್ದರೆ ಕಾದಂಬರಿಯಲ್ಲಾಗುವಂತೆ ನಾಯಕ ಇದಕ್ಕಿದ್ದಂತೆ ಕರುಣಾಳುವಾಗುವುದು, ನಾಯಕಿ ಅಸಹಾಯಕತೆಯ ಅಂಚನ್ನು ತಲುಪುವುದು ಈ ಕೃತಕತೆ ಚಿತ್ರದಲ್ಲಿ ಬರಲಿಲ್ಲ. ಸ್ವಪ್ರತಿಷ್ಠೆಯಲ್ಲಿ ಸಿಕ್ಕಿಬಿದ್ದವರಿಬ್ಬರನ್ನು ಹತ್ತಿರ ತರಲು ನಾಯಕನ ತಂಗಿ ಹೇಗೆ ಸುವರ್ಣ ಸೇತುವೆಯಾದಳು ಎಂಬುದನ್ನು ಗಟ್ಟಿಯಾದ ವಿವರಗಳಲ್ಲಿ ಹೇಳಲಾಯಿತು. ಮೂಲ ಕಾದಂಬರಿ ಸಿನಿಮಾ ಫಾರ್ಮುಲಾಗಳನ್ನೇ ಹೊಂದಿದ್ದರೂ ಆ ಫಾರ್ಮುಲಾಗಳಿಗೆ ಜೋತು ಬೀಳದೆ ಹೊಸ ಆವರಣದಲ್ಲಿ ಚಿತ್ರ ಸ್ವಲ್ಪ ಗಟ್ಟಿಯಾಗಿ ಕಾಣಿಸಿತು. ಉಷಾ ನವರತ್ನರಾಂ ಅವರ 'ಬಂಧನ' ಒಂದು ಸಾಧಾರಣ ಫಾರ್ಮುಲಾ ಕಾದಂಬರಿ. ಆದರೆ ಅದರಲ್ಲಿನ ಮೆಲೋಡ್ರಾಮ ಎಳೆಯನ್ನು ಚಿತ್ರ ವೈಭವೀಕರಿಸಿತು. ದಟ್ಟ ಮೆಲೋಡ್ರಾಮ ಆವರಣದಲ್ಲೇ ಬೆಳೆದರೂ

ಅದಕ್ಕೆ ಹೊಂದುವ ವಿವರ ಕಟ್ಟಿಕೊಳ್ಳುವ ಮೂಲಕ disturb ಮಾಡುವ ಶಕ್ತಿ ಚಿತ್ರಕ್ಕಿತ್ತು. ಇದರಿಂದ ಚಿತ್ರದ ಆಶಯ ಕಾದಂಬರಿಯ ಆಶಯಕ್ಕಿಂತ ಭಿನ್ನವಾದರೂ ದಟ್ಟವಾದ ಚಿತ್ರಣ ನೀಡುವಲ್ಲಿ ಗೆದ್ದಿತು. ರೇಖಾ ಕಾಖಂಡಕಿ ಅವರ ಕಾದಂಬರಿ ಆಧಾರಿತ 'ಅರುಣರಾಗ' ಕಾದಂಬರಿಯ ಒಂದೇ ಎಳೆ ಬಳಸಿಕೊಂಡು ಚಲನಚಿತ್ರವಾಯಿತು. ಇಲ್ಲಿ ಕೂಡ ಸ್ವಾಭಿಮಾನಿಯಾದ ನಾಯಕಿಯ ಒಳತೋಟಿಗೆ ಹೆಚ್ಚು ಒತ್ತು ಸಿಕ್ಕಿ ಗಟ್ಟಿಯಾಗಿ ಕಾಣಿಸಿತು. ಈ ನಾಲ್ಕು ಉದಾಹರಣೆಗಳ ಸಮಾನಾಂತರ ಅಂಶವೆಂದರೆ ನೆಪ ಮಾತ್ರಕ್ಕೆ ಕಾದಂಬರಿ ಆಧರಿಸಿದ ಚಿತ್ರ ತಯಾರಿಸುವುದು, ನಿರ್ದೇಶಕ ದಕ್ಷನಾದ ಕಡೆ ಕಾದಂಬರಿ ಎಳೆ ಹಿಡಿದು ಸ್ವತಂತ್ರ ಕಥೆ ನಿರ್ಮಿಸಿ ತನ್ನದೇ ಆದ ವಿವರಗಳ ಮೂಲಕ ಚಿತ್ರ ತಯಾರಿಸುವುದು. ಹೀಗಿದ್ದರೆ ಕಾದಂಬರಿಯನ್ನು ಆಧರಿಸುವುದಾದರೂ ಏಕೆ ಎಂಬ ಪ್ರಶ್ನೆ ಬರಬಹುದು. ಇದಕ್ಕೊಂದು ಸರಳವಾದ ಉತ್ತರವಿದೆ. ಈ ಕಾದಂಬರಿಗಳೆಲ್ಲ ಆ ಕಾಲದ ಜನಪ್ರಿಯ ಪತ್ರಿಕೆಗಳಲ್ಲಿ ಧಾರಾವಾಹಿಗಳಾಗಿ, ನಂತರ ಪುಸ್ತಕಗಳಾಗಿ ಓದುಗರನ್ನು ದೊಡ್ಡ ಸಂಖ್ಯೆಯಲ್ಲಿ ಹೊಂದಿದ್ದವು. ಈ ಪ್ರಭಾವಳಿಯನ್ನು ಬಳಸಿಕೊಳ್ಳುವುದೂ ಕಾದಂಬರಿ ಆಧರಿಸುವ ಉದ್ದೇಶ ಆಗಿರಬಹುದು. ಇದು ಈ ದಶಕದ ಇಂತಹ ಅನೇಕ ಚಿತ್ರಗಳ ಪಾಲಿಗೆ ಸತ್ಯ.

. . .

೮೦ರ ದಶಕದಲ್ಲೇ ಕ್ಷೀಣಿಸುತ್ತಾ ಬಂದಿದ್ದ ಸಾಹಿತ್ಯ ಮತ್ತು ಸಿನಿಮಾ ಸಂಬಂಧ ೯೦ರ ದಶಕದಲ್ಲಿ ಇನ್ನಷ್ಟು ವಿಷಮಿಸಿತು. ಬೆರಳೆಣಿಕೆಯಷ್ಟು ಚಿತ್ರಗಳು ಮಾತ್ರ ಕಾದಂಬರಿ ಅಥವಾ ಸಿದ್ಧಗೊಂಡ ಸಾಹಿತ್ಯ ರೂಪವನ್ನು ಅವಲಂಬಿಸಿದವು. ಹೀಗೆ ಆಗದ ಚಿತ್ರಗಳಲ್ಲೂ ಹಿಂದಿನ ದಶಕಗಳಲ್ಲಿದ್ದಂತೆ ಸಾಹಿತ್ಯ ರೂಪವೊಂದು ಇರುತ್ತಿರಲಿಲ್ಲ. ಕನ್ನಡ ನೆಲಕ್ಕೆ ಒಗ್ಗುವ ಚಿತ್ರಗಳು ಕಣ್ಮರೆಯಾಗಿ ಹಾಲಿವುಡ್, ಬಾಲಿವುಡ್ ಸೇರಿದಂತೆ ಮಿಕ್ಕ ಭಾರತೀಯ ಭಾಷೆಗಳ ಅಂಧಾನುಕರಣೆ ಹೆಚ್ಚಾಯಿತು.

ಡಬ್ಬಿಂಗ್‌ನ ಅಪಾಯ ಮರೆಯಾದರೂ ಅನುಕರಣೆಯೇ ಇದು ದರಿಂದ ರೀಮೇಕ್ ಮಾಡುವ ಶಾಪ ಕನ್ನಡ ಚಿತ್ರರಂಗಕ್ಕೆ ಬಡಿಯಿತು. ರೀಮೇಕ್ ಅಲ್ಲದ ಚಿತ್ರಗಳಲ್ಲೂ ಸ್ವರೂಪವೇನೂ ಈ ನೆಲಕ್ಕೆ ಹೊಂದಿಕೊಂಡಂತೆ ಇರುತ್ತಿರಲಿಲ್ಲ. ನಾಲ್ಕು ಪರಭಾಷಾ ಚಿತ್ರಗಳ ಎಳೆ ಇಟ್ಟುಕೊಂಡು ಸ್ವತಂತ್ರ ಕಥೆ ಕಟ್ಟಲಾಗುತಿತ್ತು. ಇಂತಹ ದುಃಸ್ಥಿತಿಗೆ ಅನೇಕ ಕಾರಣಗಳಿವೆ. ಮೊದಲನೆಯದಾಗಿ ಈ ದಶಕದಲ್ಲಿ ಚಲನಚಿತ್ರದ ಆಕೃತಿ ಸಂಪೂರ್ಣ ಬದಲಾಗಿ ತಾಂತ್ರಿಕತೆ ಮೇಲುಗೈ ಸಾಧಿಸಿತು. ಹಸಿ-ಬಿಸಿ ಸೆಕ್ಸ್ ದೃಶ್ಯಗಳು, ಮಾರಾಮಾರಿ ಹೊಡೆದಾಟಗಳ ನಡುವೆ ಅನೇಕ ಸಂದರ್ಭದಲ್ಲಿ ಕಥೆಯೇ ನಾಪತ್ತೆಯಾಗುತಿತ್ತು. ಇದಕ್ಕೆ ಈ ದಶಕದಲ್ಲಿನ ಆರ್ಥಿಕ ಸುಧಾರಣೆಗಳೂ ಕಾರಣ. ಜಾಗತೀಕರಣದ ಬಿರುಗಾಳಿ ಬೀಸುತ್ತಿದ್ದಂತೆ ನೋಡುವ ದೃಷ್ಟಿಯಲ್ಲೊಂದು ಪ್ರಮುಖ ಬದಲಾವಣೆ ಕಾಣಿಸಿಕೊಂಡಿತು. ಉಪಭೋಗವಾದದ ಪರಿಣಾಮ ಸಿನಿಮಾ ಅಮಿತ ಆಕಾಂಕ್ಷೆಗಳನ್ನು ತಣಿಸುವ ಕೇಂದ್ರವಾಯಿತು. ಹೆಚ್ಚಿನ ಚಿತ್ರಗಳಲ್ಲಿ ನಾಯಕಿಯರಿರುವುದೇ ಅಂಗಾಂಗ ಪ್ರದರ್ಶನಕ್ಕೆ ಎನ್ನುವ ಪರಿಸ್ಥಿತಿ ನಿರ್ಮಾಣವಾಯಿತು. ಉಳಿದ ಪಾತ್ರಗಳಿಗಾದರೂ ಅಥೆಂಟಿಸಿಟಿ ನೀಡುವ ಕೆಲಸ ನಡೆಯಲಿಲ್ಲ. ಅಸಾಧ್ಯ ವೇಗವೊಂದೇ ತಾರಕಮಂತ್ರವಾಗಿ (ಅದೂ ವೇಗ pace ಎನ್ನುವ ಅರ್ಥದಲ್ಲಲ್ಲ, speed ಎನ್ನುವ ಅರ್ಥದಲ್ಲಿ) ಸೂಕ್ಷ್ಮಗಳನ್ನು ಗುರುತಿಸುವ ಕೆಲಸ ನಡೆಯಲಿಲ್ಲ. ಸೂಕ್ಷ್ಮಗಳಿಲ್ಲದ, ಕಥನವಿಲ್ಲದ ಕಡೆ ಸಾಹಿತ್ಯಕ್ಕೆ ಕೆಲಸ ಕಮ್ಮಿ. ಪರಭಾಷಾ ಚಿತ್ರಗಳನ್ನು ಫ್ರೇಂನಿಂದ ಫ್ರೇಂಗೆ ಭಟ್ಟಿ ಇಳಿಸುವವರಿಗೆ ಬೇಕಿದ್ದದ್ದು ಅನುವಾದಕರೇ ಹೊರತು ಸಾಹಿತಿಗಳಲ್ಲ. ಸಹಜವಾಗಿಯೇ ಸಿನಿಮಾ ಮತ್ತು ಸಾಹಿತ್ಯದ ಅಂತರ ಹೆಚ್ಚುತ್ತಾ ಹೋಯಿತು, ಇದಕ್ಕೆ ಪೂರಕವಾಗಿ ಜನಪ್ರಿಯ ವಾರಪತ್ರಿಕೆಗಳು ತಮ್ಮ ಹಿಂದಿನ ಜನಪ್ರಿಯತೆಯನ್ನು ಕಳೆದುಕೊಂಡಿದ್ದವು. ಅಲ್ಲಿಯ ಮಲ್ಲಾದಿ ವೆಂಕಟಕೃಷ್ಣಮೂರ್ತಿ, ಯಂಡಮೂರಿ ವೀರೇಂದ್ರನಾಥ್ ಅಂತಹವರ ಪರಭಾಷಾ ಅನುವಾದಿತ ಕಾದಂಬರಿಗಳು ಹೆಚ್ಚಾಗಿ ಕಾಣತೊಡಗಿದವು. ಚಿತ್ರರಂಗದ ಲೆಕ್ಕಾಚಾರದಲ್ಲಿ ಕಾದಂಬರಿ ಆಧರಿಸಿದ ಚಿತ್ರ ತಯಾರಿಸುವುದು ಒಂದು ಲಾಭದಾಯಕ ಸಂಗತಿಯಾಗಿ ಉಳಿಯಲಿಲ್ಲ.

ಇತ್ತ ಸಾಹಿತ್ಯವೂ ತನ್ನ ಪ್ರಯೋಗಶೀಲತೆಯನ್ನು ಕಳೆದುಕೊಂಡಿತು, ಮಹತ್ವಾಕಾಂಕ್ಷೆಯ ಕೊರತೆ ಎಲ್ಲ ಪ್ರಕಾರವನ್ನು ಕಾಡಿತು. ದಿಢೀರ್ ಹೆಸರು ಗಳಿಸುವ ದೃಷ್ಟಿಯಿಂದ ಸಾಹಿತ್ಯ ರಚಿಸುವವರು ಹೆಚ್ಚಾದರೇ ಹೊರತು ತಾಳ್ಮೆ ಮತ್ತು ಸೂಕ್ಷ್ಮ ಸಂವೇದನೆಗಳು ಮರೆಯಾದವು. ಈ ದಶಕದಲ್ಲಿ ಕಾದಂಬರಿ ಆಧರಿಸಿ ತಯಾರಿಸಿದ ಚಿತ್ರಗಳು ಕೂಡ ಈ ದಶಕದಲ್ಲೇ ರಚಿತವಾದ ಕಾದಂಬರಿಯನ್ನು ಆಧರಿಸಿದ್ದು ಕಡಿಮೆ ಎನ್ನುವ ಅಂಶ ಈ ದಶಕ ಕಂಡ ದೊಡ್ಡ ಸಾಹಿತ್ಯಿಕ ವೈಫಲ್ಯವನ್ನು ತೋರಿಸುತ್ತದೆಯೋ ಅಂಥ ಸಾಹಿತ್ಯವನ್ನು ಬಳಸಿಕೊಳ್ಳುವ ಅಪೇಕ್ಷೆ, ಅಗತ್ಯ ಇವರಿಗಿರಲಿಲ್ಲವೋ ಜಿಜ್ಞಾಸೆಯ ಸಂಗತಿ. ಸವಾಲು ಹಾಕುವ ಕೃತಿಗಳೇ ಬಂದಿದ್ದು ಅಪರೂಪ. ಜೊತೆಗೆ ಸಿನಿಮಾದಲ್ಲಿನ ಹಣಪ್ರವಾಹ ಸಾಹಿತ್ಯದ ಮಂದಿಗೆ ದಿಗಿಲನ್ನು ತಂದಿತ್ತು. ಮೊದಲೇ ತುಂಬಿಕೊಂಡಿದ್ದ egoವನ್ನು ವಿಸ್ತರಿಸಲು ಸಿನಿಮಾ ಈಗ ಸಿದ್ಧವಿರಲಿಲ್ಲ. ಅಥವಾ ಅದರ ಅವಶ್ಯಕತೆ ಅದಕ್ಕಿರಲಿಲ್ಲ. ಸಿನಿಮಾದಲ್ಲಿ ತೊಡಗಿಸಿಕೊಂಡ ಸಾಹಿತಿಗಳು 'ಸಿನಿಮಾಗುಣ'ಗಳಿಗೆ ಬಲಿಯಾದರೇ ಹೊರತು ಸಾಹಿತ್ಯದ ಕಂಪನ್ನು ಒಯ್ಯಲಿಲ್ಲ. ಇವೆಲ್ಲದರ ಪರಿಣಾಮ ನಾವೀಗ ಎದುರಿಸುತ್ತಿರುವ ಗೊಂದಲ.

'ಕುಸುಮ ಬಾಲೆ' ಯಂತಹ ಕೃತಿ ಒಡ್ಡುವ ಸವಾಲನ್ನು ಎದುರಿಸುವ ಸ್ಥಿತಿಯಲ್ಲೇ ಒಂದು ಸಿನಿಮಾ ಇಲ್ಲ. ಅಂತಹ ಸವಾಲೊಡ್ಡುವ ಕೃತಿಗಳು ಹೆಚ್ಚಿಲ್ಲ. ಈ ಎಲ್ಲ ಪೀಠಿಕೆಯ ನಡುವೆ ಈ ದಶಕದಲ್ಲಿ ಚಿತ್ರಮಾಧ್ಯಮಕ್ಕೆ ಬಂದ ಕೆಲವು ಸಾಹಿತ್ಯ ಕೃತಿಗಳನ್ನು ಕುರಿತು ಚರ್ಚಿಸೋಣ.

೧೯೯೦ರಲ್ಲಿ ಗಿರೀಶ್ ಕಾಸರವಳ್ಳಿ, ಟಿ.ಜಿ.ರಾಘವ ಅವರ 'ಮನೆ'ಯನ್ನು ಚಲನಚಿತ್ರವಾಗಿಸಿದರು. ನವ್ಯ ಸಾಹಿತ್ಯ ಸ್ವ-ಕೇಂದ್ರೀಕೃತ ವಸ್ತುಗಳಲ್ಲೇ ಗಸ್ತು ಹೊಡೆಯುತ್ತಿದ್ದ ಕಾಲದಲ್ಲಿ 'ಏಲಿಯನೇಷನ್' ಅನ್ನು ಪರಿಸರದ ನೆಲೆಯಲ್ಲಿ ಹೇಳುವ ವಸ್ತುವನ್ನು ರಾಘವ ಆರಿಸಿಕೊಂಡಿದ್ದರು. ತಂತ್ರಗಳ ಪಾರಮ್ಯದ ಕಾಲದಲ್ಲಿ ತಂತ್ರಗಳನ್ನೇ demolish ಮಾಡುವ ಹಂದರ ಕೃತಿಯಲ್ಲಿತ್ತು. ಕಾಸರವಳ್ಳಿಯವರಿಗೆ ಇದಾವುದೂ ಮುಖ್ಯವಾಗಿರಲಿಲ್ಲ, ವಿಪರ್ಯಾಸವೆಂದರೆ ರಾಘವ ಅವರ ಕೃತಿ ಯಾವುದನ್ನು ನಿರಾಕರಿಸುವ ಮೂಲಕ ಶಕ್ತಿಯುತವಾಗಿತ್ತೋ ಅದನ್ನೇ ಕಾಸರವಳ್ಳಿಯವರು ತಮ್ಮ ಚಿತ್ರದ tone ಆಗಿಸಿದರು. ಬಣ್ಣಗಳ ಪ್ರತಿಮೆಯ ಮೂಲಕ ಕಥೆ ಹೇಳಿದರು. ಸಿನಿಮಾ 'ಭಯ'ದ ತುಡುಕಾಟವನ್ನು ತನ್ನ ಆಶಯವಾಗಿಸಿಕೊಂಡಿತ್ತು. ಈ ಮೂಲಕ ಕಾಸರವಳ್ಳಿ

(ಚಿತ್ರ ೨೪-೨೬) ಎ.ಎಸ್.ಮೂರ್ತಿ ಕುಂ.ವೀರಭದ್ರಪ್ಪ ಡಾ।ಗಿರಿಜಮ್ಮ.ಹೆಚ್

ಕಾದಂಬರಿಯ ಒಟ್ಟು ಆಶಯವನ್ನು ನಿರಾಕರಿಸಿದ್ದರು. ಇದೇ ವರ್ಷ ಶ್ರೀಕೃಷ್ಣ ಆಲನಹಳ್ಳಿಯವರ 'ಭುಜಂಗಯ್ಯನ ದಶಾವತಾರ'ವನ್ನು ಲೋಕೇಶ್ ತೆರೆಗೆ ತಂದರು. ಆಲನಹಳ್ಳಿ ಅವರ ಸಾಮಾನ್ಯ ಸೂತ್ರಗಳನ್ನು ಹೊಂದಿದ್ದ ಈ ಕಾದಂಬರಿಯ ವಿಶಾಲವಾದ ವಿವರಗಳನ್ನು ಚಿತ್ರ ಒಂದು ಏಕಸೂತ್ರಕ್ಕೆ ಪೋಣಿಸುವ ಮೂಲಕ ಚೌಕಟ್ಟನ್ನು ನಿರ್ಮಿಸಿಕೊಂಡಿತು. ಸರಳ ಸಿತ್ಯಂತರಗಳ ವಸ್ತು ಸಮರ್ಥವಾಗಿಯೇ ಚಿತ್ರದಲ್ಲಿ ಬಂದಿತ್ತು. ಕೃತಿಯ ಸೀಮಿತತೆಯನ್ನು ಸಹಜವಾಗಿ ಬಳಸಿಕೊಂಡ ಚಿತ್ರವನ್ನಾಗಿ ಇದನ್ನು ಗಮನಿಸಬಹುದು.

೧೯೯೨ರಲ್ಲಿ ಟಿ.ಎಸ್.ನಾಗಾಭರಣ ಕೆ.ಎಸ್.ನರಸಿಂಹಸ್ವಾಮಿಯವರ ಕವನ ಸಂಕಲನ 'ಮೈಸೂರು ಮಲ್ಲಿಗೆ'ಯನ್ನು ಆಧರಿಸಿ ಚಿತ್ರ ತಯಾರಿಸಿದರು. ಬಳೆಗಾರ ಚೆನ್ನಯ್ಯ, ಶ್ಯಾನುಭೋಗರ ಮಗಳು, ಮಾವನ ಮನೆಗೆ ಬಂದ ರಾಯರು ಎಲ್ಲರೂ ಇಲ್ಲಿ ಜೀವಂತವಾದರು. ಇವೆಲ್ಲವನ್ನೂ ಆಧರಿಸಿ ಒಂದು ಗಟ್ಟಿ ಹಂದರ ನಿರ್ಮಿಸಿಕೊಂಡ ಚಿತ್ರ ಕವಿತೆಗಳನ್ನು ದೃಶ್ಯ ಕಾವ್ಯವಾಗಿಸಿಕೊಂಡಿತ್ತು. ಅಸ್ಪಷ್ಟವಾಗಿದ್ದ ಕಾವ್ಯಪ್ರಪಂಚ ಇಲ್ಲಿ ಸಾಕಾರವಾಯಿತು. ಸಾಹಿತ್ಯ ಆಡದೆ ಉಳಿದ ಮಾತುಗಳನ್ನು ಚಿತ್ರ ಆಡುವ ವಿಶಿಷ್ಟ ಸಂದರ್ಭ ಇದು. ಇದರ ಯಶಸ್ಸಿಗೆ ಸಾಹಿತ್ಯವನ್ನು ಸಿನಿಮಾ ಕಣ್ಣಿನಿಂದ ನೋಡುವ ದೃಷ್ಟಿಕೋನವೊಂದು ಬಹುಮಟ್ಟಿಗೆ ಕಾರಣವಾಗಿತ್ತು. ಈ ವರ್ಷ ಎರಡು ವಿಶಿಷ್ಟ ನಾಟಕಗಳು ಚಲನಚಿತ್ರಗಳಾದವು. ಉತ್ತರ ಕರ್ನಾಟಕದಲ್ಲಿ ಬಹು ಜನಪ್ರಿಯವಾಗಿದ್ದ 'ಸಂಗ್ಯಾ ಬಾಳ್ಯ'ವನ್ನು ಸುಂದರಕೃಷ್ಣ ಅರಸ್ ಚಿತ್ರವಾಗಿಸಿದರು. ಇಲ್ಲಿ ಕೂಡ ಜಾನಪದದ ದಿಟ್ಟತನ ಕಣ್ಮರೆಯಾಗಿತ್ತು. ದಾಂಪತ್ಯದ ಗೆರೆ ದಾಟಲು ಮಕ್ಕಳಾಗದ ತರ್ಕ ಜೋಡಿಸಿ ಕಥೆಯ ಸಂಕೀರ್ಣ ಆಯಾಮಗಳನ್ನು ಚಿತ್ರ ಕಳೆದುಕೊಂಡಿತ್ತು. ಇದರ ಜೊತೆಗೆ ಕಥೆಯ ಬಹು ಮುಖ್ಯವಾದ ನಾಟಕೀಯತೆ ಚಿತ್ರದಲ್ಲಿ ಕಾಣಲಿಲ್ಲ. ಹೀಗಾಗಿ ಇದು ಒಳ್ಳೆಯ ಮಾಧ್ಯಮಾಂತರವಾಗಲಿಲ್ಲ. ಚಂದ್ರಶೇಖರ ಕಂಬಾರ ಅವರ ರಾಜಕೀಯ ನಾಟಕವಾದ

'ಹರಕೆಯ ಕುರಿ'ಯನ್ನು ರವೀ ಅವರು ತೆರೆಗೆ ತಂದರು. ಮೂಲತಃ ಅಸಂಗತ ನಾಟಕವಾದ ಇದರ ಲಕ್ಷಣಗಳು ಚಿತ್ರದಲ್ಲೂ ಉಳಿದುಕೊಂಡವು. ಮುಖ್ಯವಾಗಿ ವಿವರಗಳಿಗೆ ಒಂದು ತರ್ಕಬದ್ಧವಾದ ಅಥೆಂಟಿಸಿಟಿ ಕೊಡದೆ satire ಜೋಡಿಸಿದ್ದು ಭಿನ್ನ ಅನುಭವ ನೀಡಿತು. ನಾಗತಿಹಳ್ಳಿ ಚಂದ್ರಶೇಖರ್ ತಮ್ಮದೇ ಆದ 'ಕಮಂಗೀಪುರದ ಕಥೆ'ಯನ್ನು 'ಉಂಡೂ ಹೋದ ಕೊಂಡೂ ಹೋದ' ಚಲನಚಿತ್ರವಾಗಿಸಿದರು. ಅವರದೇ ಕಥೆಯಾದ್ದರಿಂದ ವಿವರಗಳೆಲ್ಲ ಚಾಚೂ ತಪ್ಪದೆ ಉಳಿದವು. ಚಿತ್ರ ವ್ಯಾಕರಣಕ್ಕೆ ಒಗ್ಗದಿದ್ದರೂ ಫಾರ್ಮುಲಾಗಳನ್ನು ಬಳಸದೆ ಕ್ಲೀಷೆ ರಹಿತವಾಗಿ ಕಥೆ ಹೇಳಿದ ಕಾರಣ ಇದು ವಿಶಿಷ್ಟವಾಗಿ ಕಾಣಿಸಿತು. ಆದರೆ ಈ ಕಥೆ ಹೇಳುವ ಕಲೆ ನಾಗತಿಹಳ್ಳಿಯವರ ಮುಂದಿನ ಕೆಲವು ಚಿತ್ರಗಳಲ್ಲಿ ಕಾಣುವುದಿಲ್ಲ.

ವಿಭಿನ್ನ ಶೈಲಿಯಲ್ಲಿ ಪತ್ತೇದಾರಿ ಕಥೆಗಳನ್ನು ರಚಿಸುತ್ತಾ ಬಂದ ಟಿ.ಕೆ.ರಾಮರಾವ್ ಅವರ ಅನೇಕ ಕಾದಂಬರಿಗಳು ತೆರೆಗೆ ಬಂದಿದ್ದರೂ ಕೂಡ ಮೂಲದ ಬಿಗಿಯಾದ ಬಂಧ ಕಾಣಿಸದೆ ಸಾಮಾನ್ಯವಾಗಿ ಅವರ ಕಾದಂಬರಿ ನೀಡುವ ಸಸ್ಪೆನ್ಸ್‌ನ ಅನುಭವ ಪ್ರೇಕ್ಷಕರಿಗೆ ದಕ್ಕುತ್ತಿರಲಿಲ್ಲ. ೧೯೯೨ರಲ್ಲಿ ತೆರೆಕಂಡ ಎಂ.ಎಸ್.ರಾಜಶೇಖರ್ ಅವರ 'ಮಣ್ಣಿನ ದೋಣಿ' ಎಲ್ಲ ಕಮರ್ಷಿಯಲ್ ಫಾರ್ಮುಲಾಗಳ ಮಧ್ಯೆ ಕೂಡಾ ಬಿಗಿಬಂಧವನ್ನು ಉಳಿಸಿಕೊಂಡ ಚಿತ್ರ. ಇದೇ ವರ್ಷ ಸದಾನಂದ ಸುವರ್ಣ ಪೂರ್ಣಚಂದ್ರ ತೇಜಸ್ವಿಯವರ 'ಕುಬಿ ಮತ್ತು ಇಯಾಲ'ವನ್ನು ಚಿತ್ರವಾಗಿಸಿದರು. ತೇಜಸ್ವಿಯವರ ಈ ಮೂಲಕತೆಯಲ್ಲಿ ಹಲವು ಪ್ರತಿಮೆಗಳು ಒಟ್ಟಾಗಿ ಕೆಲಸ ಮಾಡುವ ತಂತ್ರವಿದೆ. ವಾಚ್ಯವಾಗಿ ಬರುವ ವಿವರಗಳೇ ಇನ್ನೊಂದು ನೆಲೆಯಲ್ಲಿ ವಿಶಿಷ್ಟಧ್ವನಿ ಹೊರಡಿಸುತ್ತಿರುತ್ತವೆ. ಈ ಸಂಯೋಜನೆ ಚಿತ್ರದಲ್ಲಿ ಬರಲಿಲ್ಲ. ಇಯಾಲಳ ಮೇಲಿನ ಅತ್ಯಾಚಾರ, ಬಂಡಯ ಸಿಡಿತ ಎಲ್ಲವೂ ವಿವರಗಳಾಗಿ ಮಾತ್ರ ಚಿತ್ರದಲ್ಲಿ ಬಂದವು.



(ಚಿತ್ರ ೨೭-೨೯)ಬಿ.ವಿ.ವೈಕುಂಠರಾಜು ಜಿ.ಎಸ್.ಸದಾಶಿವ ವಿಜಯ ಸಾಸನೂರು

ಅದರ ಹಿಂದಿನ ಧ್ವನಿ ಅಸ್ಪಷ್ಟವಾಗಿ ಉಳಿಯಿತು. ಇದೇ ವರ್ಷ ಎಂ.ಎಸ್.ನರಸಿಂಹಮೂರ್ತಿಯವರ 'ಮಂದಸ್ಮಿತ' ಕಾದಂಬರಿಯನ್ನು ಪಿ.ಹೆಚ್.ವಿಶ್ವನಾಥ್ 'ಅತಿಮಧುರ ಅನುರಾಗ' ಎಂಬ ಹೆಸರಿನಲ್ಲಿ ಚಿತ್ರವಾಗಿಸಿದರು. ಅಪರೂಪ ಎಂಬಂತೆ ರಚಿತವಾದ ಈ ಹಾಸ್ಯ ಕಾದಂಬರಿ ಮಂದಬುದ್ಧಿಯವನೊಬ್ಬನ ಪಡಿಪಾಟಲುಗಳನ್ನು ವರ್ಣಿಸುತ್ತಾ ನಾಗರಿಕ ಹೆಣ್ಣೊಬ್ಬಳು ಅವನನ್ನು ಸುಸಂಸ್ಕೃತನಾಗಿಸಲು ಪ್ರಯತ್ನ ಮಾಡುವುದನ್ನು ನಗುವಿನ ಆಯಾಮದಲ್ಲಿ ಹೇಳಲು ಪ್ರಯತ್ನಿಸಿತ್ತು. ಜೊತೆಗೆ ಪ್ರೀತಿ ಮತ್ತು ಸಹಾನುಭೂತಿಯ ನಡುವಿನ ವ್ಯತ್ಯಾಸವೂ ಇಲ್ಲಿ ವರ್ಣಿತವಾಗಿತ್ತು. ಚಿತ್ರಕ್ಕೆ ಒಂದು ಎಳೆ ಮಾತ್ರ ಸಾಕಾಯಿತು. ಮಧ್ಯಂತರದ ನಂತರ ಕಾದಂಬರಿಯ ಆಶಯಕ್ಕೆ ತದ್ವಿರುದ್ಧವಾದ ದಿಕ್ಕಿಗೆ ಕಥೆ ಬೆಳೆಯಿತು. ಚಿತ್ರರಂಗ ರೂಪಿಸಿಕೊಂಡಿದ್ದ ಹಳಸಲು ಸೂತ್ರಗಳಿಗೆ ಕಾದಂಬರಿ ಕಟ್ಟಿಕೊಟ್ಟಿದ್ದ ತಾಜಾ ಚಿತ್ರಣಗಳನ್ನು ಬಲಿಯಾಗಿಸಿ ಕ್ಲೀಷೆಯಾದ ಭಾಷೆಯಲ್ಲಿ ಹೇಳಲಾಯಿತು. ಎಲ್ಲಕ್ಕಿಂತ ಮುಖ್ಯವಾಗಿ ಕಾದಂಬರಿ ಬಳಸಿಕೊಂಡಿದ್ದ ಸಹಜ ನಗುವಿನ ಬದಲು ಅಶ್ಲೀಲ ದ್ವಂದ್ವಾರ್ಥಗಳ ಮಾರ್ಗವನ್ನು ಚಿತ್ರ ತುಳಿಯಿತು. ಇದನ್ನು ಸಾಹಿತ್ಯದ ಅಪಕರ್ಷ ಎಂದು ಕರೆಯಬಹುದು.

'ತ್ರಿವೇಣಿ'ಯವರ 'ಹೂವು ಹಣ್ಣು' ಕಾದಂಬರಿಯನ್ನು ೧೯೯೩ರಲ್ಲಿ ಎಸ್.ವಿ.ರಾಜೇಂದ್ರಸಿಂಗ್ ಬಾಬು ಚಿತ್ರವಾಗಿಸಿದರು. ನೆಪಮಾತ್ರಕ್ಕೆ ಕಾದಂಬರಿ ಆಧರಿಸಿದ ಈ ಚಿತ್ರದಲ್ಲಿ ಬೇಬಿ ಶ್ಯಾಮಿಲಿಯ ಕ್ರೇಜ್‌ನಿಂದ ಹಿಡಿದು ಏಡ್ಸ್ ಕಥೆಯವರೆಗೆ ಹಲವು ಫಾರ್ಮುಲಾಗಳನ್ನು ತುಂಬಲಾಯಿತು. ಈ ಫಾರ್ಮುಲಾಗಳ ಭರಾಟೆಯಲ್ಲಿ ಚಿತ್ರ ಯಾವ ಹಂತದಲ್ಲಿಯೂ ಪರಿಣಾಮಕಾರಿ ಅನ್ನಿಸಲಿಲ್ಲ. ಇದೇ ವರ್ಷ ತೆರೆ ಕಂಡ ಕೆ.ವಿ.ಜಯರಾಮ್ ಅವರ 'ರಂಜಿತಾ' ಕೂಡ ನೆಪಮಾತ್ರಕ್ಕೆ ಕಾದಂಬರಿ ಎಳೆ ಹಿಡಿದ ಚಿತ್ರ. ಸ್ತ್ರೀ ಸ್ವಾತಂತ್ರ್ಯದ ಬಗ್ಗೆ ಉದ್ದುದ್ದ ಭಾಷಣ ಹೊಂದಿದ್ದ ಚಿತ್ರ ಕೊನೆಯ ದೃಶ್ಯದಲ್ಲಿ ಗಂಡಿನ ರಕ್ಷಣೆಯಿಲ್ಲದೆ ಹೆಣ್ಣು ಬದುಕಲಾರಳು ಎಂದು ನಿರೂಪಿಸಿ ಗೃಹಿಣಿಯ ಸಂಹಿತೆಗೆ ಕಥೆಯನ್ನು ಜೋಪಾನವಾಗಿ ಹಿಂತಿರುಗಿಸಿತ್ತು. ಇದು ಕಾದಂಬರಿಯ ಆಶಯಕ್ಕೆ ವಿರುದ್ಧವಾಗಿತ್ತು ಕೂಡ. ನಾಗತಿಹಳ್ಳಿ ಚಂದ್ರಶೇಖರ್ ತಮ್ಮ ಜನಪ್ರಿಯ ಕಾದಂಬರಿ 'ಬಾ ನಲ್ಲೆ ಮಧುಚಂದ್ರಕೆ'ಯನ್ನು ಇದೇ ವರ್ಷ ಚಿತ್ರವಾಗಿಸಿದರು. ನಾನು ಪ್ರೀತಿಸಿದ ಹುಡುಗಿಯ ಕೂದಲೂ ಸೋಂಕಬಾರದು ಎನ್ನುವ ಉಗ್ರ ಪ್ರೇಮಿ ಅವಳು ತನಗೆ ಅನ್ಯಾಯ ಮಾಡಿದ್ದಾಳೆ ಎಂದು ತಿಳಿದಾಗ ವ್ಯಗ್ರನಾಗಿ ನಡೆದುಕೊಳ್ಳುವ ರೀತಿಯನ್ನು ನಿರೂಪಿಸುವ ಕಾದಂಬರಿ ಡಯಲೆಕ್ಟಿಕ್ಸ್‌ನ ತಂತ್ರದಲ್ಲಿತ್ತು. ಬಿಟ್ಟವೇ ಮಾತಾಡುವ ತಂತ್ರವೇ ಇಲ್ಲಿತ್ತು. ಮೂಲತಃ ಸಿನಿಮಾ ಫಾರ್ಮುಲಾಗಳಿಗೂ ಬದ್ಧವಾಗಿದ್ದ ಕಥೆಯಲ್ಲಿ ಹೇರಳವಾದ ಅಬ್ಸಿನಿಟಿ ವಿವರಗಳಿದ್ದವು. ನಾಗತಿಹಳ್ಳಿ ಚಿತ್ರವಾಗಿಸುವಾಗ ಫಾರ್ಮುಲಾವನ್ನು ಇನ್ನೊಂದು ರೀತಿ ಬಳಸಿದರು. ಪ್ರೇಮಕತೆಯ ದುರಂತ ಒಂದು ಸಣ್ಣ ಫ್ಲ್ಯಾಶ್‌ಬ್ಯಾಕ್‌ನಿಂದ ತಟ್ಟುವುದು ಸಾಧ್ಯವಿರಲಿಲ್ಲ. ಇದಕ್ಕಾಗಿ ಪ್ರೀತಿಯ ಒಡಕನ್ನು ಮೂಲ ಫ್ರೇಂನ ಇನ್ನೊಂದು ನೆಲೆಯಲ್ಲಿ ಸಾಧ್ಯವಾಗಿಸಬೇಕಿತ್ತು. ಕಾದಂಬರಿಯಲ್ಲಿ ಬಂದಿದ್ದ ವಿಕೃತಿಯ ವಿವರಗಳು ಅಂತಿಮವಾಗಿ ದುರಂತದ ಎಳೆ ತಲುಪುವುದರಿಂದ ಅಂತಹದೊಂದು ಸಾಧ್ಯತೆಯನ್ನು ಪ್ರತಿಮೆಗಳಲ್ಲಿ ಹಿಡಿದಿಡಬಹುದಿತ್ತು. ಒಟ್ಟಾಗಿ ಕಾದಂಬರಿಯ ಗಟ್ಟಿತನ ಸಿನಿಮಾದಲ್ಲಿ ಕಾಣಲಿಲ್ಲ. ಇದೇ ವರ್ಷ ಎ.ಎಸ್.ಮೂರ್ತಿ ಅವರ ನಾಟಕ 'ಜಂಬೂಸವಾರಿ'ಯನ್ನು ರವೀ ಅವರು ಚಿತ್ರವಾಗಿಸಿದರು. ಇದೂ ಕೂಡ ಅಸಂಗತ ವಿವರಗಳಲ್ಲಿ ಚಲನೆ ಪಡೆದ ನಾಟಕ. ಈ ಶಕ್ತಿ ಚಿತ್ರದಲ್ಲಿ ತಕ್ಕ ಮಟ್ಟಿಗೆ ಸಮರ್ಥವಾಗಿಯೇ ಬಂದಿತು. ಮಕ್ಕಳ ಕುರಿತ ಮೂರು-ನಾಲ್ಕು ಫಾರ್ಮುಲಾಗಳನ್ನು ಜೋಡಿಸಿ ಸಿನಿಮಾಕ್ಕೆಂದೇ ಎಚ್.ಎಸ್.ವೆಂಕಟೇಶಮೂರ್ತಿ ಬರೆದಿದ್ದ 'ಚಿನ್ನಾರಿಮುತ್ತ'ವನ್ನು ಟಿ.ಎಸ್.ನಾಗಾಭರಣ ೧೯೯೩ರಲ್ಲಿ ತೆರೆಗೆ ತಂದರು. ಒಂದೊಂದು ಫ್ರೇಂನಲ್ಲಿ ಒಂದೊಂದು ಕಥೆ ನೆನಪಿಸುತ್ತಿದ್ದ ಚಿತ್ರದ ಕಥೆಗೆ ಸ್ವಂತಿಕೆ ಇರಲಿಲ್ಲ. ಈ ಅರ್ಥದಲ್ಲಿ ಅದೊಂದು ಸ್ವತಂತ್ರ ಸಾಹಿತ್ಯ ಕೃತಿಯಾಗದೆ ಸಿನಿಮಾ ಅವಶ್ಯಕತೆಗೆ ಸಿದ್ಧಗೊಳಿಸಿದ ಸಾಹಿತ್ಯವಾಗಿತ್ತು. ಇದಕ್ಕೆ ನಿಜವಾದ ಕ್ರಿಯಾಶೀಲತೆ ಸಿಕ್ಕಿದ್ದು ಮಕ್ಕಳಿಗೆ ಮುದ ನೀಡುವ ಗೀತೆಗಳಿಂದ. ಹಾಗೆ ನೋಡಿದರೆ ಈ ಗೀತೆಗಳೇ ಚಿತ್ರದ ನಿಜವಾದ ಜೀವಾಳ. ಕ್ಯಾಸೆಟ್ ಸಂಸ್ಕೃತಿಗೆ ತಕ್ಕನಾಗಿದ್ದ ಈ ಗೀತೆಗಳ ಸಾಹಿತ್ಯ ಗುಣ ಕೂಡ ಗಮನಾರ್ಹವಾಗಿ ಉಲ್ಲೇಖಿಸುವಂಥದಲ್ಲ. ಕೃಷ್ಣಮೂರ್ತಿ ಪುರಾಣಿಕರ 'ಹಾಲುಂಡ ತವರು' ೧೯೯೪ರಲ್ಲಿ ತೆರೆಗೆ ಬಂದಿತು. ಮೂಲದಲ್ಲೇ ಹೇರಳವಾಗಿದ್ದ ಮೆಲೋಡ್ರಾಮ ಚಿತ್ರದಲ್ಲಿ ದಟ್ಟವಾಗಿ ಬಂತು. ಆ ಮಟ್ಟಿಗೆ ಕಾದಂಬರಿಗೆ ಚಿತ್ರ ನಿಷ್ಠವಾಗಿತ್ತು.

ಶಂಕರ ಮೊಕಾಶಿ ಪುಣೇಕರ್ ಅವರ ಪ್ರಸಿದ್ಧ ಕಾದಂಬರಿ 'ಗಂಗವ್ವ ಗಂಗಾಮಾಯಿ'ಯನ್ನು ವಸಂತ ಮೊಕಾಶಿ ೧೯೯೫ರಲ್ಲಿ ತೆರೆಗೆ ತಂದರು. ದಟ್ಟ ವಿವರಗಳ ನೆಲೆಯಲ್ಲೇ ಬೆಳೆಯುವ ಕೃತಿಯನ್ನು ಚಿತ್ರ ಸಂಯಮದಿಂದ ಹೇಳಿತು. ಕೈ ಬಿಟ್ಟ ವಿವರಗಳು ಚಿತ್ರವನ್ನು ವಾಚ್ಯವಾಗದಂತೆ ಮಾಡಿತು. ಕೊಂಚ ನಾಟಕೀಯ ಛಾಯೆಯಲ್ಲಿದ್ದ ಕಥೆ ಚಿತ್ರದಲ್ಲಿ ಹೆಚ್ಚು ಸಾಂಕೇತಿಕವಾಯಿತು. ಇದರಿಂದ ಕಾದಂಬರಿಗಿಂತ ಚಿತ್ರದಲ್ಲಿ ಆಶಯ ಇನ್ನಷ್ಟು ಗಟ್ಟಿಯಾಗಿ ಕೇಳಿಸಿತು. ಯಂಡಮೂರಿ ವೀರೇಂದ್ರನಾಥ್ ಅವರ ಪ್ರಸಿದ್ಧ ಕಾದಂಬರಿ 'ಬೆಳದಿಂಗಳ ಬಾಲೆ'ಯನ್ನು ಸುನಿಲ್‌ಕುಮಾರ್ ದೇಸಾಯಿ ಈ ವರ್ಷ ಚಿತ್ರವಾಗಿಸಿದರು. ನಾಯಕಿ ಯಾರು ಎಂಬುದೇ ಸಸ್ಪೆನ್ಸ್ ಆದ, ಆ ಸಸ್ಪೆನ್ಸ್ ಒಂದು ದುರಂತದಲ್ಲಿ ಕೊನೆಗಾಣುವ ಚಮತ್ಕಾರದ ಕಥೆಯನ್ನು ದೇಸಾಯಿ ಸಾಕಷ್ಟು ಶ್ರದ್ಧೆಯಿಂದ ದೃಶ್ಯಕಾವ್ಯವಾಗಿಸಿದರು. ಮೂಲದ ಚಮತ್ಕಾರಗಳೆಲ್ಲ ತೆರೆಯ ಮೇಲೆ ಪರಿಣಾಮಕಾರಿಯಾಗಿ ಬಂದವು. ಚಿತ್ರದ ಅಂತ್ಯ ಮೂಲಕ್ಕಿಂತ ಹೆಚ್ಚು ಪರಿಣಾಮಕಾರಿಯಾಗಿತ್ತು. ಕಾದಂಬರಿ ಅನಗತ್ಯ ತಾತ್ವಿಕತೆಯ ಭಾರದಲ್ಲಿ ಕೊನೆಗೊಂಡಿದ್ದರೆ ಚಿತ್ರದಲ್ಲಿ 'ಬೆಳದಿಂಗಳ ಬಾಲೆ'ಯನ್ನು ಮನಸ್ಸಿನಲ್ಲಿ ಉಳಿಸಿಕೊಳ್ಳುವ ದೃಶ್ಯಾತ್ಮಕತೆ ಪರಿಣಾಮಕಾರಿಯಾಗಿತ್ತು. ಎಲ್ಲ ಅರ್ಥದಲ್ಲೂ ಕಾದಂಬರಿಯನ್ನು ಅತ್ಯುತ್ತಮವಾಗಿ ಸುನಿಲ್‌ಕುಮಾರ್ ದೇಸಾಯಿ ದೃಶ್ಯ ಮಾಧ್ಯಮಕ್ಕೆ ಅಳವಡಿಸಿದ್ದರು. ಈ ವರ್ಷ ಕುಂ.ವೀರಭದ್ರಪ್ಪನವರ ಎರಡು ಸಾಹಿತ್ಯಿಕ ಕೃತಿಗಳು ಸಿನಿಮಾ ಆದವು. 'ಕೊಟ್ರೇಶಿ ಸ್ಕೂಲಿಗೆ ಹೋದದ್ದು' ಕಥೆಯನ್ನು 'ಕೊಟ್ರೇಶಿ ಕನಸು' ಎಂಬ ಹೆಸರಿನಲ್ಲಿ ನಾಗತಿಹಳ್ಳಿ ಚಂದ್ರಶೇಖರ್ ತೆರೆಗೆ ತಂದರು. ಮೂಲದಲ್ಲೇ ಸಾಕಷ್ಟು ವಾಚ್ಯವಾಗಿದ್ದ ಕಥೆ ಚಿತ್ರದಲ್ಲಿ ಇನ್ನಷ್ಟು ವಾಚ್ಯವಾಯಿತು. ಎಷ್ಟೋ ಕಡೆ ಘೋಷಣೆಗಳ ಮಟ್ಟದಲ್ಲೇ ನಿಂತುಬಿಟ್ಟಿತು. 'ಬೇಲಿಯ ಹೂಗಳು' ಕಾದಂಬರಿಯನ್ನು ಶಿವಮಣಿ 'ದೊರೆ' ಎನ್ನುವ ಹೆಸರಿನಲ್ಲಿ ತೆರೆಗೆ ತಂದರು. ಮೂಲತಃ ಊಳಿಗಮಾನ್ಯ ವ್ಯವಸ್ಥೆಯ ದುರಂತ ಹೇಳುವ ಕಥೆ ಚಿತ್ರದಲ್ಲಿ ತದ್ವಿರುದ್ಧವಾಗಿ ಊಳಿಗಮಾನ್ಯ

ವ್ಯವಸ್ಥೆಯನ್ನು ವೈಭವೀಕರಿಸುವಂತೆ ಕಾಣುತ್ತಿತ್ತು. ಜೊತೆಗೆ ಜನಪ್ರಿಯ ಚೌಕಟ್ಟು ಕೂಡ ಸೇರಿತು. ಪನ್ನಾಲಾಲ್ ಪಟೇಲರ ಗುಜರಾತಿ ಕಾದಂಬರಿ 'ಜನುಮದ ಜೋಡಿ'ಯನ್ನು ೧೯೯೭ರಲ್ಲಿ ಟಿ.ಎಸ್.ನಾಗಾಭರಣ ಚಿತ್ರವಾಗಿಸಿದರು. ಸಾಮಾನ್ಯವಾಗಿ ಬೇಂದ್ರೆ ಅನುವಾದಿಸಿದ್ದಾರೆ ಎಂಬ ಈ ಕೃತಿಯನ್ನು ಕನ್ನಡಕ್ಕೆ ತಂದವರು ಯಾರು ಎಂಬುದು ಇನ್ನೂ ಕೌತುಕವೇ. ಸ್ವಾತಂತ್ರ್ಯದ ತಾರುಣ್ಯದಲ್ಲಿ ಕೈಗಾರಿಕೀಕರಣ ಕಾಲಿಡುತ್ತಿದ್ದ ಸಂದರ್ಭದಲ್ಲಿ ಮಧ್ಯಮ ವರ್ಗವೊಂದು ರೂಪುಗೊಳ್ಳಲು ಆರಂಭವಾಯಿತು. ಗುಜರಾತ್‌ನಂತಹ ಅತಿ ಶ್ರೀಮಂತರು ಮತ್ತು ಅತಿ ಬಡವರು ತುಂಬಿದ ರಾಜ್ಯದಲ್ಲಿ ಇದೊಂದು ಬಹಳ ದೊಡ್ಡ ಸಾಮಾಜಿಕ ಬದಲಾವಣೆ. ಜೊತೆಗೆ ಹಲವು ಪಂಗಡಗಳಲ್ಲಿ ಒಡೆದುಹೋಗಿದ್ದ ಸಮಾಜ ವರ್ಗಗಳಾಗಿ ಇನ್ನೊಂದು ಶ್ರೇಣೀಕೃತ ಸಾಧ್ಯತೆಯತ್ತ ಕೈ ಚಾಚುತ್ತಿತ್ತು. ಇಂತಹದೊಂದು ಸಾಂಸ್ಕೃತಿಕವಾಗಿ ಸಂಕೀರ್ಣವಾದ ಕಾಲದಲ್ಲಿ ಮಧ್ಯವಯಸ್ಕನೊಬ್ಬನ ಜೀವನದಲ್ಲಿ ಜರುಗುವ ದುರಂತಪ್ರೇಮ ಪ್ರಕರಣವನ್ನು ಮೂಲದ 'ಮಳೇಲಿ ಜೀವ' ಹೇಳಿತ್ತು. ಇದು ಮೂಲತಃ ಸಮುದಾಯದ ದುರಂತ ಕಥೆ. ಇದನ್ನು ಚಿತ್ರವಾಗಿಸುವಾಗ ಸರಳ ಪ್ರೇಮಕತೆಯ ಮಟ್ಟಕ್ಕೆ ಇಳಿಸಲಾಯಿತು. ಅದನ್ನೂ ಜನಪ್ರಿಯತೆಯ ಚೌಕಟ್ಟಿಗೆ ಅನುಗುಣವಾಗಿ ಹೇಳಲಾಯಿತು. ಚಿತ್ರದ ಯಾವ ಹಂತದಲ್ಲೂ ಮೂಲದ ಸಂಕೀರ್ಣತೆ ಕಾಣಲಿಲ್ಲ. ಮೊದಲನೆಯದಾಗಿ ಮೂಲ ಕಾದಂಬರಿಯನ್ನು ಚಿತ್ರವಾಗಿಸಲು ಆರಿಸಿಕೊಂಡಿದ್ದೇ ದೋಷವಾಯಿತು. ಏಕೆಂದರೆ ಮೂಲದ ಯಾವ ಆಶಯವೂ ಇವತ್ತು ಪ್ರಸ್ತುತವಾಗಿಲ್ಲ. ಕರ್ನಾಟಕದಲ್ಲಿ ಮಧ್ಯಮ ವರ್ಗ ಬಹಳ ಹಿಂದಿನಿಂದಲೇ ರೂಪುಗೊಂಡಿದೆ. ಇಲ್ಲಿ ಕೈಗಾರಿಕೀಕರಣ ದೊಡ್ಡ ಬದಲಾವಣೆ ತರಲಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ನಮ್ಮ ವರ್ಣ ವ್ಯವಸ್ಥೆ ಕೂಡ ಸರಳವಾಗಿಯೇ ಇತ್ತು. ಚಿತ್ರದಲ್ಲಿ ಮೂಲದ ವಾತಾವರಣ ಮತ್ತು ಪಾತ್ರಗಳ biography ಸಂಪೂರ್ಣವಾಗಿ ಬದಲಾಯಿತು, ಅದೂ ಸಂಕೀರ್ಣತೆ ಕಳೆದುಕೊಂಡ ಫಾರ್ಮುಲಾಗಳ ಮಟ್ಟಕ್ಕೆ. ವಿವರಗಳನ್ನು ಅಲ್ಲಲ್ಲಿ ಬೇಕಾಬಿಟ್ಟಿಯಾಗಿ ಬಳಸಿ ಕಥೆ ಬೆಳೆಸಲಾಯಿತು. ಇದಕ್ಕೆ ಗುಜರಾತಿಯ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಮಹಾನ್ ಕೃತಿ ಏಕೆ ಬೇಕಿತ್ತು ? ಇದು ಕೇವಲ ಮಾಧ್ಯಮಗಳ ವ್ಯತ್ಯಾಸದ ಪ್ರಶ್ನೆ ಅಲ್ಲ. ರಾಮಾಯಣವನ್ನು ಪ್ರೇಮಕತೆಯನ್ನಾಗಿ ನೋಡಬಹುದು. ಆದರೆ ಪ್ರೇಮಕತೆಯಾಗಲು ರಾಮಾಯಣವೇ ಬೇಕಿಲ್ಲ ಎಂಬುದು ನಾವು ಮರೆಯಬಾರದ ಸಂಗತಿ. ನಮ್ಮ 'ಮಲೆಗಳಲ್ಲಿ ಮದುಮಗಳು', 'ಕಾನೂರು ಹೆಗ್ಗಡಿತಿ', 'ಮರಳಿ ಮಣ್ಣಿಗೆ' ಕಾದಂಬರಿಗಳನ್ನು ಇನ್ಯಾವುದೇ ಭಾಷೆಯಲ್ಲಿ ಹೀಗೆ ಸರಳೀಕರಿಸಿ ಚಿತ್ರ ತಯಾರಿಸಿದರೆ ನಾವು ಸುಮ್ಮನಿರುತ್ತೇವೆಯೇ ಎಂಬುದು ಒಂದು ಗಂಭೀರ ಪ್ರಶ್ನೆ.

ಗಿರೀಶ್ ಕಾರ್ನಾಡರ ಪ್ರಸಿದ್ಧ ನಾಟಕ 'ನಾಗಮಂಡಲ'ವನ್ನು ೧೯೯೭ರಲ್ಲಿ ಟಿ.ಎಸ್.ನಾಗಾಭರಣ ತೆರೆಗೆ ತಂದರು. ಮೂಲತಃ ಗಿರೀಶ್ ಕಾರ್ನಾಡರ ನಾಟಕಕ್ಕೆ ಜಾನಪದ ಕಥೆಯ ಪ್ರೇರಣೆ ಇತ್ತು. ಗಂಡನಿಂದ ಅತೃಪ್ತಳಾಗಿ ಹಾವಿನೊಂದಿಗೆ ಸಂಬಂಧ ಇಟ್ಟುಕೊಂಡ ಹೆಣ್ಣಿನ ಕಥೆ. ಇವಳು ಗರ್ಭಿಣಿಯಾದಾಗ ತನ್ನ ಗಂಡನನ್ನು ಸೇರಿಸಿ ಹಲವರು ಸಂಶಯಕ್ಕೆ ಒಳಪಟ್ಟಾಗ ಅವರನ್ನು ಸಮಾಧಾನಿಸಲು ತಾನು ಅನೈತಿಕ ಸಂಬಂಧ ಇಟ್ಟುಕೊಂಡಿದ್ದ ಹಾವನ್ನೇ ಮುಟ್ಟಿ ಸತ್ಯ ಸಾಬೀತು ಮಾಡುತ್ತಾಳೆ. ಇದು ಪವಿತ್ರತೆಯ ಕಲ್ಪನೆಯನ್ನು ನಮ್ಮ ಜಾನಪದ ಪರಂಪರೆ ವ್ಯಂಗ್ಯ ಮಾಡಿದ ರೀತಿ. ಉತ್ತರ ಕರ್ನಾಟಕದ ಅನೇಕ ಭಾಗಗಳಲ್ಲಿ ದೊರೆಯುವ ಇಂತಹ ಕಥೆಯ ಶೀರ್ಷಿಕೆಯೇ 'ಹಾದರಗಿತ್ತಿ ಎಂಬೋಳ ಕಥೆ'. ಗಿರೀಶ್ ಕಾರ್ನಾಡ್ ಹಾದರ ಎಂಬ ಶಬ್ದ ಬಳಸಿಲ್ಲ. ಅದನ್ನು ಹೊಸ ಬದುಕಿಗೆ ಅಡಿ ಇಡುವ ಹೆಣ್ಣೊಬ್ಬಳ ತಲ್ಲಣದ ಕಥೆಯಾಗಿ ಮಾರ್ಪಡಿಸಿದರು. ಇಲ್ಲಿ ಕೂಡ ಹಾದರದ ಛಾಯೆ ಇತ್ತು. ಹಾವು ಅವಳ ಜಡೆಯಲ್ಲೇ ಆತ್ಮಹತ್ಯೆ ಮಾಡಿಕೊಳ್ಳುತ್ತದೆ. ಅವಳು ತನ್ನ ಮಗನ ಮೂಲಕವೇ ಅಂತ್ಯಸಂಸ್ಕಾರ ಮಾಡಿಸಿ ಸಾಂಕೇತಿಕವಾಗಿ ಸಂಬಂಧವನ್ನು ಒಪ್ಪಿಕೊಳ್ಳುತ್ತಾಳೆ. ಆದರೆ ನಾಗಾಭರಣ ಅವರ ಚಿತ್ರದಲ್ಲಿ ಆಗಿರುವುದೇ ಬೇರೆ. ನಾಯಕಿ (ರಾಣಿ) ಇಲ್ಲಿ ಪೂರ್ಣ ಪ್ರಮಾಣದ ಪತಿವ್ರತೆ. ನಾಗರಹಾವು ಗಂಡನ ವೇಷದಲ್ಲಿ ಬಂದಿದ್ದರಿಂದ ಅವಳು ಮೋಸ ಹೋಗಿದ್ದಾಳೆ. ಇದು ಕೇವಲ ಮಾಧ್ಯಮದ ವ್ಯತ್ಯಾಸವಲ್ಲ, ಇದರ ಹಿಂದೊಂದು ಸಾಂಸ್ಕೃತಿಕ ರಾಜಕೀಯವಿದೆ. ನಮ್ಮ ಜಾನಪದ ಕಥೆಗಳನ್ನೆಲ್ಲ ಪ್ರಧಾನ ವಾಹಿನಿ ಹೀಗೇ ಬದಲಾಯಿಸಿದೆ. ಅಹಲ್ಯೆಯ ಕಥೆಯ ಸಂದರ್ಭದಲ್ಲಿ ಇದನ್ನು ನೋಡಬಹುದು. ಹಾದರದ ಕಥೆಗಳೆಲ್ಲ ಪಾತಿವ್ರತ್ಯದ ಕಥೆಗಳಾಗುತ್ತವೆ. ಕೆಳವರ್ಗದ ಆಕ್ರಂದನ ಮೇಲುವರ್ಗದ ವಿಜಯ ಕೀರ್ತನೆಗಳಾಗುತ್ತವೆ. ಬಹಳ ಮುಖ್ಯವಾಗಿ ಅವಳು ನಾಗದಿವ್ಯ ಮಾಡುವುದರ ಹಿಂದಿನ ವ್ಯಂಗ್ಯವನ್ನು ಚಿತ್ರ ಕಳೆದುಕೊಂಡಿತು. ಇಂತಹ ಪ್ರಧಾನ ಅಪರಾಧ ಬಿಟ್ಟರೆ ಉಳಿದಂತೆ ನಾಟಕದ ಚಲನೆ ಸಿನಿಮಾದಲ್ಲಿ ಶಕ್ತವಾಗಿತ್ತು. ಕುರುಡವ್ವನ ಪಾತ್ರ ನಾಟಕಕ್ಕಿಂತ ಚಿತ್ರದಲ್ಲಿ ಶಕ್ತವಾಗಿ ಬಂದಿತ್ತು.

ಇದೇ ವರ್ಷ ಎನ್.ಎಸ್.ಶಂಕರ್ ಷೇಕ್ಸ್‌ಪಿಯರ್‌ನ 'ಕಾಮೆಡಿ ಆಫ್ ಎರರ್ಸ್' ಅನ್ನು ಆಧರಿಸಿ 'ಉಲ್ಟಾ ಪಲ್ಟಾ' ಚಿತ್ರವನ್ನು ತಯಾರಿಸಿದರು. ನಾಟಕಕ್ಕಿಂತ 'ಅಂಗೂರ್' ಚಿತ್ರವನ್ನೇ ಹೆಚ್ಚಾಗಿ ಅವಲಂಬಿಸಿದ ಈ ಚಿತ್ರ ತನ್ನ ಸೀಮಿತ ಸಾಧ್ಯತೆಯಲ್ಲೇ ಯಶಸ್ವಿಯಾಗಿ ಕಥೆ ಹೇಳಿತ್ತು. ಕೇಸರಿ ಹರವೂ ಈ ವರ್ಷ ಎಲ್ವಿ ನಾಗರಾಜ್ ಅವರ 'ಗೊಲ್ಲ ಗೋಕುಲ ನಡತೆ' ಮತ್ತು ರೆಡ್ ಇಂಡಿಯನ್ ನಾಯಕ ಚೀಫ್ ಸಿಯಾಟಲ್‌ನ ಭಾಷಣ ಆಧರಿಸಿ 'ಭೂಮಿಗೀತ' ಚಿತ್ರವನ್ನು ತೆರೆಗೆ ತಂದರು. ಇದು ಕೂಡ ಮೂಲಕತೆಯ ಸಂವಿಧಾನವನ್ನು ಮಾತ್ರ ಬಳಸಿ ಭಿನ್ನವಾಗಿ ಬೆಳೆದ ಹಂದರವನ್ನು ಹೊಂದಿತ್ತು. ಅಲ್ಲಲ್ಲಿ ಜನಪ್ರಿಯ ಫಾರ್ಮುಲಾಗಳನ್ನು ತುರುಕಿದರೂ ಮೂಲದ ಆಶಯ ಹಾಗೆಯೇ ಉಳಿದುಕೊಂಡಿತ್ತು. ೧೯೯೭ರ ಬಹುತೇಕ ಚಿತ್ರಗಳಲ್ಲಿ ಆಧಾರದ ನೆರಳು ಇಣುಕಿತ್ತು. 'ಅಮೃತ ವರ್ಷಿಣಿ'ಯಲ್ಲಿ 'ಇಂಟ್ರೂಡರ್'ನ ಛಾಯೆ ಇದ್ದರೆ, 'ಲಾಲಿ'ಗೆ 'ಫಾದರ್ಸ್ ಪ್ರೈಡ್'ನ ಛಾಯೆ ಇತ್ತು. ಇವಾವುದೂ ಕಾದಂಬರಿ ಆಧಾರವನ್ನು ಸೃಷ್ಟಿಸಿಕೊಳ್ಳಲಿಲ್ಲ. ಆದರೆ 'ಮುಂಗಾರಿನ ಮಿಂಚು' ಸ್ಪಷ್ಟವಾಗಿ 'ವಾಕಿಂಗ್ ಆನ್ ದಿ ಕ್ಲೌಡ್ಸ್' ಅನ್ನೇ ಆಧರಿಸಿದರೂ ಉಷಾ ನವರತ್ನರಾಂ ಅವರ ಕಥೆಯ ಆಧಾರವೆಂದು ಹೇಳಲಾಯಿತು. ಸಾಹಿತ್ಯದ ಆಧಾರ ಎಂಬುದು ತಿಪ್ಪೆ ಸಾರಿಸುವ ಕೆಲಸವಾದರೂ ಇದು ಅಪರೂಪದ ಪ್ರಕರಣ. ಏಕೆಂದರೆ ಆ ಚಿತ್ರವನ್ನು ಲೇಖಕಿಗೆ ತೋರಿಸಿ ಅದನ್ನು ನಮ್ಮ ನೆಲದ ಸೊಗಡಿನಂತೆ ಚಿತ್ರಿಸಿದ ಕಾದಂಬರಿಯಾಗಿತ್ತು 'ಮುಂಗಾರಿನ ಮಿಂಚು'.

೧೯೯೮ರಲ್ಲಿ ಗಿರೀಶ್ ಕಾಸರವಳ್ಳಿ ರಂಶಾ ಅವರ ಕಾದಂಬರಿಯನ್ನು ಆಧರಿಸಿ 'ತಾಯಿ ಸಾಹೇಬ' ಸಿನಿಮಾ ತಯಾರಿಸಿದರು. ಮೂಲತಃ ವಾಡೆಗಳ ಬದುಕಿನ ದುರಂತ ಹೇಳುವ ಸರಳ ಕಥೆಯನ್ನು ಹೊಂದಿದ ಕಾದಂಬರಿಯಿಂದ ಟೇಕ್-ಆಫ್ ತೆಗೆದುಕೊಂಡು ಹೊಸ ನೆಲೆಯಲ್ಲಿ ಬೆಳೆಸಿದರು. ಈ ಹೊಸ ನೆಲೆ ಸಾಕಷ್ಟು ಗಟ್ಟಿಯಾಗಿದ್ದರಿಂದ ಚಿತ್ರ ಕಥಾತ್ಮಕವಾಗಿಯೂ ಸದೃಢವಾಗಿ ಬೆಳೆಯಿತು. ಎಂ.ಕೆ.ಇಂದಿರಾ... ಎಂ.ಪಿ.ಉಮಾದೇವಿ ಅವರ 'ಏ ಗಂಡಸರೇ ನೀವೆಷ್ಟು ಒಳ್ಳೆಯವರು' ಕಾದಂಬರಿಯನ್ನು ಕೆ.ವಿ.ರಾಜು ಈ ವರ್ಷ ತೆರೆಗೆ ತಂದರು. ವಾಚ್ಯವಾಗಿ ಫೆಮಿನಿಸ್ಟಿಕ್ ಎನಿಸುವ ಧೋರಣೆಗಳನ್ನು ಪ್ರತಿಪಾದಿಸಿದ ಕಾದಂಬರಿ ಚಿತ್ರವಾದಾಗ ಹಿಂಸೆ ಮತ್ತು ಕ್ರೌರ್ಯದ ಮಾರ್ಗ ಅಳವಡಿಸಿಕೊಂಡಿತ್ತು. ಮಧ್ಯಂತರದವರೆಗೆ ಕಾದಂಬರಿಯ ನೆಲೆಯಲ್ಲೇ ಬೆಳೆದರೂ ನಂತರ ಜಾಳು ಜಾಳಾದ ಹಂದರದಿಂದ ದಿಕ್ಕು ತಪ್ಪಿತು. ಇದೇ ವರ್ಷ ಡಾ।ಎಚ್.ಗಿರಿಜಮ್ಮನವರ 'ಗಾಜಿನ

(ಚಿತ್ರ ೩೦-೩೫) ಕುವೆಂಪು

ಶಿವರಾಮಕಾರಂತ

ಮಾಸ್ತಿ ವೆಂಕಟೇಶ ಅಯ್ಯಂಗಾರ್

ದ.ರಾ.ಬೇಂದ್ರೆ


ಯು.ಆರ್.ಅನಂತಮೂರ್ತಿ

ಎಸ್.ಎಲ್.ಭೈರಪ್ಪ

(ಚಿತ್ರ ೩೭-೪೫) ನೀಳಾದೇವಿ

ಆರ್ಯಾಂಬ ಪಟ್ಟಾಭಿ

ಕಾಕೋಳು ಸರೋಜರಾವ್

ಮಂಗಳಾ ಸತ್ಯನ್

ಪ್ರೇಮಾ ಭಟ್

ವಿದ್ಯುಲ್ಲತಾ

ಕನ್ನಡ ಚಿತ್ರ ನಿರ್ಮಾಪಕರ ಆದ್ಯತೆ ಮಹಿಳೆಯರು ಬರೆದ ಕಥೆ-ಕಾದಂಬರಿಗಳು

ಹೆಚ್.ಕೆ.ಅನುಸೂಯ ಸಂಪತ್

ವೀಣಾ ಶಾಂತೇಶ್ವರ

ಗೀತಾ ನಾಗಭೂಷಣ

ವಿಶಾಲಾಕ್ಷಿ ದಕ್ಷಿಣಾಮೂರ್ತಿ

ಮನೆ'ಯನ್ನು ಕೆ.ವಿ.ಜಯರಾಮ್ ಚಿತ್ರವಾಗಿಸಿದರು. ಸರಳ ರೇಖಾತ್ಮಕವಾಗಿದ್ದ ಕಥೆ ಅದೇ ನೆಲೆಯಲ್ಲೇ ಚಿತ್ರದಲ್ಲೂ ಬೆಳೆಯಿತು.

೧೯೯೯ರಲ್ಲಿ ಗಿರೀಶ್ ಕಾಸರವಳ್ಳಿ ಕುವೆಂಪು ಅವರ ಮಹಾನ್ ಕೃತಿ 'ಕಾನೂರು ಹೆಗ್ಗಡತಿ' ಕಾದಂಬರಿಯನ್ನು ಚಲನಚಿತ್ರವಾಗಿಸಿದರು. ಹಲವು ಆಯಾಮಗಳ ಈ ಕೃತಿಯ ಮುಖ್ಯವಾದ ಒಂದು ಎಳೆ ಆಧರಿಸಿ ಚಿತ್ರ ಬೆಳೆಯಿತು. ಮುಖ್ಯವಾಗಿ ಕಾದಂಬರಿಯಲ್ಲಿ ಪ್ರಧಾನ ಪಾತ್ರವಾಗಿದ್ದ ಹೂವಯ್ಯನನ್ನು underplay ಮಾಡಲಾಯಿತು. ಇದು ಸರಿಯಾದ ನಿರ್ವಹಣೆಯೇ. ಹೂವಯ್ಯ ಪ್ರತಿನಿಧಿಸಿದ್ದ ಆದರ್ಶಗಳು ಅಪ್ರಸ್ತುತವಾಗಿರುವ ಸಮಕಾಲೀನ ಸಂದರ್ಭದಲ್ಲಿ ಅವು ಅಂಡರ್‌ಪ್ಲೇ ಆಗಿದ್ದರಿಂದ ಚಿತ್ರಕ್ಕೆ ಸಹಜತೆ ಲಭಿಸಿತು. ಆದರೆ ಕಾದಂಬರಿಯಿಂದ ಬದಲಾದ point of view ಸುಬ್ಬಮ್ಮನದಾಗಿದ್ದರೆ ಕಾದಂಬರಿ ಅಸ್ಪಷ್ಟವಾಗಿ ಹೇಳಿದ್ದ ಸ್ತ್ರೀಪರ ಚಿಂತನೆಗಳಿಗೆ ಜೀವ ಬರಬಹುದಾಗಿತ್ತು. ಆದರೆ ಕಾದಂಬರಿ ಚಂದ್ರಪ್ಪಗೌಡನ ಕಣ್ಣಿನಿಂದ ಕಥನವನ್ನು ನೋಡಿತು. ಇದರಿಂದ ಚಿತ್ರ ಹಲವು ಸಾಧ್ಯತೆಗಳನ್ನು ಕಳೆದುಕೊಂಡಿತು. ಎಲ್ಲಕ್ಕಿಂತ ಮುಖ್ಯವಾಗಿ ಚಿತ್ರ ಬಳಸಿದ್ದ non-narrative device ಮಹಾನ್ ಕಥಾನಕವೊಂದರ ಅಭಿವ್ಯಕ್ತಿಗೆ ಸರಿಯಾದ ಮಾರ್ಗವಾಗಿರಲಿಲ್ಲ.

೨೦೦೦ನೇ ಇಸವಿಯಲ್ಲಿ ಲಂಕೇಶ್ ಅವರ ಅಕ್ಕ ಕಾದಂಬರಿ ಆಧರಿತ 'ದೇವೀರಿ' ತೆರೆಗೆ ಬಂದಿತು. ಲಂಕೇಶ್ ಅವರ ಕಾದಂಬರಿಯ ನೆಲೆಯಲ್ಲೇ ಚಿತ್ರ ಸಾಗಿತ್ತು. ಇದು ಸಾಹಿತ್ಯದ ಅತ್ಯಂತ ನಿಷ್ಠಾವಂತ ಸಿನಿಮಾ ಸಾಧ್ಯತೆಯಾಗಿತ್ತು. ಕನ್ನಡ ಚಿತ್ರರಂಗವೂ ಸೇರಿದಂತೆ ಭಾರತೀಯ ಚಿತ್ರರಂಗಕ್ಕೇ ರಾಜಕೀಯ ಚಿತ್ರಗಳ ಮಾದರಿಯೊಂದು ನಿರ್ಮಾಣವಾಗಿ ಹೋಗಿದೆ. ಈ ಕ್ಲೀಷೆಯಿಂದ ಬೇರೆಯಾಗಿ 'ದೇವೀರಿ'ಯಂಥ ಚಿತ್ರ ರಾಜಕೀಯವನ್ನೂ ಮಾತಾಡಬೇಕಿತ್ತು. ಅದು ಸಾಧ್ಯವಾಗದಿದ್ದರಿಂದ ಸಿನಿಮಾ ಆ ಮಟ್ಟಿಗಿನ ತೀವ್ರತೆಯನ್ನು ಕಳೆದುಕೊಂಡಿತು. ಪಿ.ಶೇಷಾದ್ರಿ ೨೦೦೦ದ ಕೊನೆಯಲ್ಲಿ ಬೊಳುವಾರು ಮಹಮದ್ ಕುಂಞಿ ಅವರ ಸಣ್ಣಕತೆ ಆಧರಿಸಿದ 'ಮುನ್ನುಡಿ' ಚಿತ್ರ ತಯಾರಿಸಿದರು. ಅರಬ್ ದೇಶದ ಸಂಪರ್ಕದಿಂದ ನಲುಗುವ ಕರಾವಳಿಯ ಬ್ಯಾರಿ ಹೆಣ್ಣುಮಕ್ಕಳ ಕಥೆಯನ್ನು ಚಿತ್ರ ಸಾಕಷ್ಟು ದೃಶ್ಯಾತ್ಮಕವಾಗಿ ಹೇಳಿತ್ತು.

ಕನ್ನಡ ಚಿತ್ರರಂಗದಲ್ಲಿ ಚಿತ್ರಗೀತೆಗಳ ಚೈತ್ರಯಾತ್ರೆ

ಪಾಶ್ಚಾತ್ಯ ಸಿನಿಮಾ ಸಿದ್ಧಾಂತಗಳ ಆಧಾರದಲ್ಲಿ ಚಿಂತಿಸುವವರಿಗೆ ಚಿತ್ರಗೀತೆಗಳ ನಿಜವಾದ ಸಾಧ್ಯತೆ ಅರ್ಥವಾಗುವುದು ಕಷ್ಟ. ಕೇವಲ ಅದನ್ನೊಂದು ಪರಿಕರ ಎಂದು ಭಾವಿಸಿದುವ ದೃಷ್ಟಿಕೋನ ಚಿಂತಕರಲ್ಲಿರುವುದರಿಂದಲೇ ಈ ಕುರಿತ ಸರಿಯಾದ ಚರ್ಚೆ ನಮ್ಮಲ್ಲಿ ಸಾಧ್ಯವಾಗದೆ ಹೋಯಿತು. ಇನ್ನೊಂದು ವರ್ಗದವರಿದ್ದಾರೆ, ಅವರಿಗೆ ಚಿತ್ರಗೀತೆಗಳನ್ನು ಸಾಹಿತ್ಯದ ಚೌಕಟ್ಟಿಗೆ ತರುವ ಹುಚ್ಚು. ಇಲ್ಲೆಲ್ಲ ಕಾವ್ಯಾಂಶವಿದೆ ಎಂಬ ಉದ ಪಟ್ಟಿ ಸಿದ್ಧಪಡಿಸುತ್ತಾರೆ. ಇವರ ಜೊತೆಗೆ ಗೀತೆಗಳು ಟ್ಯೂನ್‌ಗೆ ಹೊಸೆಯುವ ಕಗ್ಗಗಳು. ಈ ಸಾಲಿಗೆ ಪಿನರ್ಥ ಎಂದು ಕೇಳುವ ಇವಕ್ಕೆ ತದ್ವಿರುದ್ಧದ ಮಂದಿ ಕೂಡ ಇದ್ದಾರೆ. ಚಿತ್ರಗೀತೆಗಳ ಸ್ಥಾನದ ಕುರಿತು ಒಂದು ಅಕಾಡೆಮಿಕ್ ಚೌಕಟ್ಟಿನ ಚರ್ಚೆ ಅಗತ್ಯವಿದ್ದರೂ ಅದು ಎಂದಿನಿಂದಲೂ ಸಾಧ್ಯವಾಗಿಲ್ಲ. ಇದಕ್ಕಿರುವ ಕಾರಣಗಳು ಹಲವಾರು. ಇಲ್ಲಿ ಸಿನಿಮಾ ಮತ್ತು ಸಾಹಿತ್ಯದ ಕುರಿತು ಚರ್ಚಿಸುವ ಲೇಖನದಲ್ಲಿ ಚಿತ್ರಗೀತೆಗಳ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ನೆಲೆಯಲ್ಲಿ ಚರ್ಚಿಸುವ, ಹೀಗೆ ಚರ್ಚಿಸುವಾಗಲೇ ಅದು ಸಾಂಸ್ಕೃತಿಕವಾಗಿ ಪಡೆಯುತ್ತ ಬಂದ ಬೇರೆ ಬೇರೆ ಆಯಾಮಗಳನ್ನೆಲ್ಲ ಗುರುತಿಸುವ ಪ್ರಯತ್ನ ಮಾಡಲಾಗಿದೆ. ಭಾರತೀಯ ನಾಟ್ಯ ಪರಂಪರೆಯಲ್ಲೇ ಗೀತೆಗೆ ಬಹಳ ಪ್ರಮುಖವಾದ ಸ್ಥಾನವಿದೆ. ಯಕ್ಷಗಾನದಂತಹ ಗೀತಪ್ರಧಾನ ಕಲೆಗಳೂ ನಮ್ಮಲ್ಲಿವೆ. ಪಾರ್ಸಿ ರಂಗಭೂಮಿ ಕೂಡ ಗೀತೆಯನ್ನು ಪ್ರಮುಖ ಭಾಗವನ್ನಾಗಿ ಹೊಂದಿತ್ತು. ಇಲ್ಲಿ ಗೀತ ಒಂದು ಪರಿಕರ ಎಂಬುದಕ್ಕಿಂತ ಹೆಚ್ಚಾಗಿ ಪ್ರಮುಖ ಆಕರ್ಷಣೆಯಾಗಿತ್ತು. ರಂಗಭೂಮಿಯಿಂದ ಪ್ರೇರಣೆ ಪಡೆದ ನಮ್ಮ ಆರಂಭಿಕ ಚಿತ್ರರಂಗದಲ್ಲಿ ರಂಗಗೀತೆಗಳ ಸ್ಥಾನವನ್ನು ಚಿತ್ರಗೀತೆಗಳು ಆಕ್ರಮಿಸಿದವು. ರಂಗಗೀತೆಗಳು ನಾಟಕ ರಚನೆಯಾಗುವ ಸಂದರ್ಭದಲ್ಲೇ ರಚನೆಯಾಗುತ್ತಿದ್ದವು. ಕೆಲವೊಮ್ಮೆ ಸಂದರ್ಭಕ್ಕನುಸಾರವಾಗಿ ಸಮಯಸ್ಫೂರ್ತಿಯಿಂದ ಸೇರಿಕೊಳ್ಳುವ ರಚನೆಗಳೂ ಇದ್ದವು. ಆರಂಭಿಕ ಚಿತ್ರರಂಗ ನಾಟಕವನ್ನು ಚಲನಚಿತ್ರವಾಗಿ ಪರಿವರ್ತಿಸಿದಂತೆಯೇ ರಂಗಗೀತೆಗಳೂ ಚಿತ್ರಗೀತೆಗಳಾದವು. ರಿ-ರಿಕಾರ್ಡಿಂಗ್ ಪದ್ಧತಿ ಬೆಳೆಯುತ್ತಿದ್ದ ಕಾಲದಲ್ಲಿ ಕಲಾವಿದರೇ ಈ ಗೀತೆಗಳನ್ನು ಹಾಡುತ್ತಿದ್ದರು. ಈ ಸೀಮಿತ ಚೌಕಟ್ಟು ಬಹಳ ಕಾಲ ಉಳಿಯಲಿಲ್ಲ. ಇವಕ್ಕೆ ಪ್ರಮುಖ ಕಾರಣವೆಂದರೆ ಸಮೂಹ ಮಾಧ್ಯಮವಾಗಿ ಆಕಾಶವಾಣಿ ದಿನೇ ದಿನೇ ಜನಪ್ರಿಯವಾಗುತ್ತಿತ್ತು. ಆಕಾಶವಾಣಿ ಮೂಲಕ ಚಿತ್ರಗೀತೆಗಳು ಜನಪ್ರಿಯವಾಗಲಾರಂಭಿಸಿದವು. ತಾಂತ್ರಿಕತೆ ಬೆಳೆದ ಮೇಲೆ ಗ್ರಾಮಫೋನ್ ಪ್ಲೇಟ್‌ಗಳು ಬಂದವು. ಸಾರ್ವಜನಿಕ ಸಮಾರಂಭಗಳಲ್ಲಿ ಚಿತ್ರಗೀತೆಗಳು ಮೊಳಗಲು ಆರಂಭಿಸಿದವು. ೬೦ರ ದಶಕದಲ್ಲಿ ವಿವಿಧ ಭಾರತಿ ನಿಲಯಗಳು ಆರಂಭವಾದಂತೆಯೇ 'ನಿಮ್ಮ ಕೋರಿಕೆ'ಯಂತಹ ಕಾರ್ಯಕ್ರಮಗಳು ಸಿದ್ಧವಾದವು. ಇದರಿಂದ ಚಿತ್ರಗೀತೆಗೆ ಜನಪ್ರಿಯತೆಯ ಚೌಕಟ್ಟು ಲಭ್ಯವಾಯಿತು. ಇದರಿಂದಾದ ಬದಲಾವಣೆ ಎಂದರೆ ಚಿತ್ರಗೀತೆ ಒಂದು ತಂತ್ರ (device)ವಾಗಿ ಮಾತ್ರ ಉಳಿಯದೆ ಅದನ್ನು ಮೀರಿ ಬೆಳೆಯಿತು. ಜನಪ್ರಿಯತೆಗೆ ಪ್ರಮುಖ ಕಾರಣ ಟ್ಯೂನ್ ಎಂಬುದನ್ನು ಈ ಹೊತ್ತಿಗೆ ಮಾಧ್ಯಮ ಗುರುತಿಸಿಕೊಂಡಿತ್ತು. ಹೀಗಾಗಿ ಸಾಹಿತ್ಯ ಹಿಂದೆ ಹೋಗಿ ಟ್ಯೂನ್‌ಗಾಗಿಯೇ ಗೀತರಚನೆ ಮಾಡುವ ಪದ್ಧತಿ ಬೆಳೆಯಿತು. ಇದರಿಂದ ಚಿತ್ರಗೀತೆಗಳಲ್ಲಿ ಗಾಯನಕ್ಕೆ ಹೆಚ್ಚು ಒತ್ತು ಸಹಜವಾಗಿಯೇ ಬಿದ್ದಿತ್ತು. ಇದೇ ಹೊತ್ತಿಗೆ ಚಿತ್ರಗೀತೆಗಳು ನಾಯಕರ ಗುಣಗಾನಕ್ಕೆ ಬಳಕೆಯಾಗುವ ಪದ್ಧತಿಯೇ ಆಗಿಹೋಗಿದ್ದರಿಂದ

ಸಂದರ್ಭವೇ ಬೇಡದ ಸಾಹಿತ್ಯವೊಂದು ಸೃಷ್ಟಿಯಾಯಿತು. ಇದು ಇವತ್ತಿಗೂ ಇರುವ ಅನಿವಾರ್ಯತೆ.

Compartmental ಯುಗದ ಪ್ರಭಾವವನ್ನು ಕನ್ನಡ ಚಿತ್ರಗೀತೆಗಳ ಮೇಲೂ ಗುರುತಿಸಬಹುದು. ಕೆಲವು ನಿರ್ದಿಷ್ಟ ಘಟ್ಟಗಳಿಗೆ ಅನುಗುಣವಾಗಿ ಸಾಹಿತ್ಯ ಇಲ್ಲಿ ಸೃಷ್ಟಿಯಾಗುತ್ತದೆ. ಹೇರಳವಾಗಿ ಚಿತ್ರಗೀತೆಗಳು ಸೃಷ್ಟಿಯಾಗಿರುವುದು ಪ್ರೇಮದ ಸುತ್ತ. ಯಾವ ಕಾಲದಿಂದಲೂ ಹೆಣ್ಣು-ಗಂಡು ಮರ ಸುತ್ತಿ ಪ್ರಣಯವನ್ನು ಅಭಿವ್ಯಕ್ತಿಸಲು ಚಿತ್ರಗೀತೆಗಳೇ ಬೇಕು. ನಂತರ ಕಾಲದ ವ್ಯತ್ಯಾಸ ತೋರಿಸಲು, ಬೆಳವಣಿಗೆ ತೋರಿಸಲು ಒಂದು device ಆಗಿ ಚಿತ್ರಗೀತೆಗಳು ಬಳಕೆಯಾಗುತ್ತವೆ. ಸಾಮಾನ್ಯವಾಗಿ ಹಲವು ವರ್ಷಗಳ ಅಂತರದ ಬೆಳವಣಿಗೆ ಹೇಳುವಾಗ ಒಂದೊಂದು ಕಾಲಘಟ್ಟವನ್ನು ಒಂದೊಂದು ಚರಣದಲ್ಲಿ ತರುವ ತಂತ್ರ ಕನ್ನಡ ಚಿತ್ರರಂಗದಲ್ಲಿ ಹೆಚ್ಚಾಗಿ ಬಳಕೆಯಾಗಿದೆ. ಉಳಿದಂತೆ ಕೆಲವು ನಿರ್ದಿಷ್ಟ ಮನೋಸ್ಥಿತಿಯನ್ನು ಚಿತ್ರಗೀತೆಗಳ ಮೂಲಕ ಹೇಳಲಾಗುತ್ತದೆ. ವಿರಹ, ಭಗ್ನಪ್ರೇಮ, ಸಂತೋಷ ಹೀಗೆ ಹಲವು ಭಾವಗಳು ಚಿತ್ರಗೀತೆಗಳ ಮೂಲಕ ಅಭಿವ್ಯಕ್ತವಾಗಿವೆ. ಇನ್ನು ಕ್ಯಾಬರೆ ಗೀತಗಳು, ಹೆಣ್ಣನ್ನು expose ಮಾಡಲು ಈ ಹಂತದ ಚಿತ್ರರಂಗ ಬಳಸಿಕೊಂಡ ತಂತ್ರ ಇದು. ಇದನ್ನು ಕಥನಕ್ಕೆ ಸಂಬಂಧಿಸಿದ ಒಳ ತಿರುವು ಅನ್ನುವವರಿದ್ದರೆ, ಈ ಒಳ ತಿರುವು ಕೂಡ ಬುದ್ಧಿವಂತಿಕೆಯಿಂದ ಸೃಷ್ಟಿಸಿಕೊಂಡದ್ದು ಎಂಬುದನ್ನು ನಾವು ಮರೆಯಬಾರದು. ಈಗಾಗಲೇ ಹೇಳಿರುವಂತೆ ನಾಯಕ-ನಾಯಕಿಯರ ಗುಣಗಳನ್ನು ಕೀರ್ತಿಸಲೂ ಚಿತ್ರಗೀತೆಗಳು ಬಳಕೆಯಾಗಿವೆ. "ನಾನೇ ರಾಜಕುಮಾರ..."ದಿಂದ "ಜನರಿಂದ ನಾನು ಮೇಲೆ ಬಂದೆ..."ವರೆಗಿನ ಇಂತಹ ಎಲ್ಲಾ ರಚನೆಗಳೂ ಚಿತ್ರದ ಸಂದರ್ಭದಿಂದ ಹೊರತಾದ ರಚನೆಗಳೇ. ಇನ್ನು ಕೊನೆಯದಾಗಿ ನಿರ್ದೇಶಕರೂ ನಿರ್ಮಾಪಕರೂ ತಮ್ಮ ವೈಯಕ್ತಿಕ ಆಸಕ್ತಿಗೆ ಬಳಕೆಯಾದ ರಚನೆಗಳಿವೆ. ಇವೂ ಕೂಡ ಚಿತ್ರವ್ಯಾಕರಣಕ್ಕೆ ಸ್ವಲ್ಪವೂ ಸಂಬಂಧವಿಲ್ಲದ ಸೃಷ್ಟಿಗಳು.

ಮುಂದಿನ ಹಂತ ಗುರುತಿಸುವಾಗ ಚಿತ್ರರಂಗ ಮನೋರಂಜನೆಯ ಮಾಧ್ಯಮ ಮಾತ್ರ ಅಲ್ಲ, ಅಪಾರ ಹಣ ತೊಡಗಿಸುವವರಿಗೆ ನೆಲೆಯಾಗಬಲ್ಲ ಉದ್ಯಮ ಎಂಬ ಅರಿವು ಬೆಳೆದಿದ್ದನ್ನು ಕಾಣಬಹುದು. ಈ ಅರಿವು ಬೆಳೆದ ಮೇಲೆ ಚಿತ್ರದ ಯಾವ ಅಂಶದಲ್ಲಿ ಮಾದಕತೆ ತುಂಬಿ ಪ್ರೇಕ್ಷಕನನ್ನು ಕನಸಿನ ಲೋಕಕ್ಕೆ ತಳ್ಳಬಹುದು ಎಂಬ ಯೋಚನೆಗೆ ಉತ್ತರವಾಗಿ ದಕ್ಕಿದ್ದು ಚಿತ್ರಗೀತೆಗಳೇ. ಕಥನದ ಎಲ್ಲ ವಾಸ್ತವಿಕ ಆಯಾಮಗಳ ನಡುವೆ ಕನಸಿಗೆ ಕೊಂಡೊಯ್ಯುವ ಸಾಧನವಾಗಿ ಚಿತ್ರಗೀತೆಗಳು ಬಳಕೆಯಾದವು. ಟ್ಯೂನ್‌ನಲ್ಲಿ ತುಂಬುವ ಮಾದಕತೆ ಪ್ರೇಕ್ಷಕನನ್ನು ವಾಸ್ತವ ಪ್ರಪಂಚದಿಂದ ದೂರ ಕರೆದೊಯ್ಯುತ್ತವೆ. ಇಲ್ಲಿಂದ ಮುಂದೆ ಅಂತಹ ಗೀತೆಗಳು ಜನಪ್ರಿಯವಾದದ್ದನ್ನು ಕಾಣುತ್ತೇವೆ.

ಈ ಹಿನ್ನೆಲೆಯಲ್ಲಿ ಚಿತ್ರಗೀತೆಗಳಲ್ಲಿನ ಸಾಹಿತ್ಯವನ್ನು ಚರ್ಚಿಸಬಹುದು. ಸಾಮಾನ್ಯವಾಗಿ ಚಿತ್ರಗೀತೆಯಲ್ಲಿನ ಶಾಬ್ದಿಕ ಶರೀರದ ಕಾರಣ ಅವುಗಳನ್ನು ಕವನದಂತೆ ಓದುವವರು ನಮ್ಮಲ್ಲಿದ್ದಾರೆ. ಕವನ ಕೆಲಸ ಮಾಡುವ ನೆಲೆ ಯಾವುದು ಎಂಬುವನ್ನು ನಾವು ಮರೆಯಬಾರದು. ಗದ್ಯ ತೀರಾ ವಾಚ್ಯವಾಗಿ ಭಾಷೆ ತನ್ನ ಸರಳ ನೆಲೆಯಲ್ಲಿ ಪರಿಣಾಮಕಾರಿಯಾಗಲಾರದು ಎನಿಸಿದ ಹೊತ್ತು ಕವನ ಜನ್ಮ ತಾಳಿತು. ಇಲ್ಲಿ ಭಾಷೆಯನ್ನೇ ವಿವಿಧ ಸಂಯೋಜನೆಯಲ್ಲಿ ಪರಿಣಾಮಕಾರಿಯಾಗಿಸುವ ಉದ್ದೇಶವಿರುತ್ತದೆ. ಅತ್ಯುತ್ತಮ ಕವನ ಹಲವು ಸಾಧ್ಯತೆಯನ್ನು ತನ್ನ ಒಡಲಲ್ಲಿ ಇಟ್ಟುಕೊಂಡು ಬಹುಮುಖಿಯಾಗಿರುತ್ತದೆ. ಹೀಗಾಗಲು ಬಹಳ ಮುಖ್ಯ ಕಾರಣವೆಂದರೆ ಕವನ ಪಠ್ಯದ ಮೂಲಕ ಸಂವಹನಗೊಳ್ಳುತ್ತದೆ. ಶ್ರೇಷ್ಠ ಕವನ ಹಲವು 'ಓದು'ಗಳನ್ನು ಬೇಡುತ್ತದೆ, ಪ್ರತಿ ಓದಿಗೂ ಹೊಸ ಅರ್ಥ ಧ್ವನಿಸುತ್ತದೆ. ಶ್ರೇಷ್ಠ ಕಾವ್ಯ ಪ್ರತಿ ಕಾಲಘಟ್ಟದಲ್ಲೂ ಹೊಸ ಅರ್ಥದ ಕಾಣ್ಕೆ ಹೊತ್ತು ಬರುತ್ತದೆ. ಇವನ್ನೆಲ್ಲ ಮರೆತು ಚಿತ್ರಗೀತೆಗಳನ್ನು ಕವನಕ್ಕೆ ಸಮೀಕರಿಸುವುದು ಸರಿಯಾದ ಮಾರ್ಗ ಅಲ್ಲ. ಮೂಲಭೂತ ವ್ಯತ್ಯಾಸವೆಂದರೆ, ಯಾವ ಸಂದರ್ಭದಲ್ಲೂ ಚಿತ್ರಗೀತೆಯ ಪಠ್ಯ ಕಣ್ಣೆದುರಿಗೆ ಇರುವುದಿಲ್ಲ. ಲಭ್ಯವಿರುವ ಅನೇಕಾನೇಕ ಚಿತ್ರಗೀತೆಗಳ ಪುಸ್ತಕಗಳು ಪಠ್ಯದ ಕಾರಣದಿಂದ ಮುದ್ರಿತವಾಗಿರುವುದಿಲ್ಲ. ಅವುಗಳ ಉದ್ದೇಶವೇ ಗಾಯನಕ್ಕೆ ಸಹಾಯವಾಗುವುದು. ಮಾತ್ರವಲ್ಲ, ಇಂತಹ ಪುಸ್ತಕಗಳಲ್ಲಿ ಹೇರಳ ಮುದ್ರಣ ದೋಷಗಳು, ಅಪಭ್ರಂಶಗಳು ತುಂಬಿಹೋಗಿರುತ್ತವೆ. ಪಾಶ್ಚಾತ್ಯರಂತೆ ನಮ್ಮಲ್ಲಿ ಚಿತ್ರಕಥೆಗಳು ಪಠ್ಯವಾಗಿ ಲಭ್ಯವಾಗುವ ಸಂದರ್ಭ ಯಾವತ್ತೂ ಇರಲಿಲ್ಲ. ಹೀಗಾಗಿ ಗಾಯನದ ಓರಿಮೆಯಿಂದ ಇಷ್ಟವಾದ ಯಾವುದೋ ಸಾಲನ್ನು ಹಿಡಿದು 'ಅಬ್ಬಾ ಎಂತಹ ಕಾವ್ಯ' ಎನ್ನುವಂತಹ ಓದು ಸರಿಯಾದ ವಿಮರ್ಶೆಯ ಮಾರ್ಗ ಅಲ್ಲ. ಚಿತ್ರಗೀತೆಗಳ ಸಾಹಿತ್ಯಿಕ ನೆಲೆ ಗುರುತಿಸುವಾಗ ಅವುಗಳ ಸಾಂದರ್ಭಿಕ ಹಿನ್ನೆಲೆಯನ್ನು ಮರೆಯಬಾರದು.

ಸಾಂದರ್ಭಿಕ ಹಿನ್ನೆಲೆ ಎಂದರೆ ಚಿತ್ರದ ಯಾವ ಸಂದರ್ಭಕ್ಕೆ ಈ ಸಾಹಿತ್ಯ ಬಳಕೆಯಾಗಿದೆ, ಎಷ್ಟರ ಮಟ್ಟಿಗೆ ಒಟ್ಟಾಗಿ ಚಿತ್ರವ್ಯಾಕರಣಕ್ಕೆ ಈ ಸಾಹಿತ್ಯ ಹೊಂದಿಕೊಂಡಿದೆ ಎಂಬ ಒಂದು ನೆಲೆ. ಇನ್ನೊಂದು ಈ ಸಾಹಿತ್ಯ ಯಾವ ಸ್ಫೂರ್ತಿಯಿಂದ ಬಂದಿದೆ, ಸಮಕಾಲೀನ ಕನ್ನಡ ಸಾಹಿತ್ಯಕ್ಕೆ ಅರ್ವಾಚೀನ ಕನ್ನಡ ಸಾಹಿತ್ಯಕ್ಕೆ ಎಷ್ಟರ ಮಟ್ಟಿಗೆ ಋಣಿಯಾಗಿದೆ, ಅದನ್ನು ಎಷ್ಟರ ಮಟ್ಟಿಗೆ ತನ್ನದಾಗಿಸಿಕೊಂಡಿದೆ ಎಂಬುದು. ಇದನ್ನು ಮೀರಿ ತನ್ನ ಸ್ವಂತಿಕೆ ಪ್ರದರ್ಶಿಸಿದ ಉದಾಹರಣೆಗಳೂ ಇವೆ. ಅದು ಎಷ್ಟರ ಮಟ್ಟಿಗೆ, ಯಾವ ನೆಲೆಯವರೆಗೆ ಎಂಬುದು ಈ ಲೇಖನದಲ್ಲಿ ಚಿತ್ರಗೀತೆಯಲ್ಲಿನ ಸಾಹಿತ್ಯಾಂಶವನ್ನು ನೋಡುವ ಕ್ರಮ. ಇನ್ನು ಸಾಮಾನ್ಯವಾಗಿ ಕನ್ನಡ ಚಿತ್ರಗೀತೆಗಳು ತನ್ನ ಆರಂಭಿಕ ಕಾಲದ ಗ್ರಾಂಥಿಕ ಚೌಕಟ್ಟನ್ನು ಬಿಟ್ಟರೆ, ಉಳಿದಂತೆ ಸಾಮಾನ್ಯ ಬಳಕೆಯ ಕನ್ನಡವನ್ನು ಬಳಸಿವೆ. ಅಲ್ಲಲ್ಲಿ ಪ್ರಾದೇಶಿಕ ಸೊಗಡು ಬಂದದನ್ನು ಬಿಟ್ಟರೆ ಒಟ್ಟಾಗಿ ನಮ್ಮಲ್ಲಿ ಚಿತ್ರಗೀತೆಗಳು ತನ್ನದೇ ಕಾವ್ಯಭಾಷೆಯನ್ನು ಯಾವ ಹಂತದಲ್ಲೂ ಸೃಷ್ಟಿಸಿಕೊಳ್ಳಲಿಲ್ಲ. ಅವುಗಳಲ್ಲಿ ಬಳಕೆಯಾದ ಪ್ರತಿಮೆ, ಸಂಕೇತ, ವರ್ಣನೆ ಇವೆಲ್ಲ ಕನ್ನಡ ಸಾಹಿತ್ಯದ ಪಡಿನೆಳಲಾಗಿಯೇ ಬೆಳೆದು ಬಂದಿವೆ. ಇದೊಂದು ಅಪರಾಧವಲ್ಲ, ಸಾಮಾನ್ಯವಾಗಿ ಜಗತ್ತಿನ ಎಲ್ಲೆಡೆಯೂ ಜನಪ್ರಿಯ ಕಲೆ ಇದೇ ರೀತಿ ವರ್ತಿಸುತ್ತದೆ. ಪ್ರಧಾನ ಕಲೆಯ ಸೊಗಡನ್ನು ಸರಳೀಕರಿಸಿ ಸಮ್ಮೋಹಕ್ಕೆ ತಲುಪಿಸುವ ಕೆಲಸವನ್ನು ಮಾಡುತ್ತಿರುತ್ತದೆ. ಭಾರತೀಯ ಚಿತ್ರರಂಗದಲ್ಲೇ ಕವನಗಳ ಜನಪ್ರಿಯ ಸಾಧ್ಯತೆಯಾಗಿ ಚಲನಚಿತ್ರ ಗೀತೆಗಳು ಕೆಲಸ ಮಾಡಿವೆ.

ವಿಕ್ಟರ್‌ನ್ಯೂಬರ್ಗ್ ತನ್ನ 'ದಿ ಪಾಪ್ಯುಲರ್ ಲಿಟರೇಚರ್ ಎ ಹಿಸ್ಟರಿ ಅಂಡ್ ಗಾಡ್' ಪುಸ್ತಕದಲ್ಲಿ ವರ್ಣಿಸಿದ ಅನೇಕ ಜನಪ್ರಿಯ ಸಾಹಿತ್ಯದ ಲಕ್ಷಣಗಳನ್ನು ಚಿತ್ರಗೀತೆಗಳಲ್ಲಿ ಗುರುತಿಸಬಹುದು. ಈ ಪ್ರಕಾರ ಪ್ರಧಾನ ಸಾಹಿತ್ಯದ ಪ್ರಯೋಗಶೀಲತೆಯನ್ನಾಗಲಿ,

(ಚಿತ್ರ ೪೬) ಆರ್. ಎನ್. ಜಯಗೋಪಾಲ್ ರಚಿಸಿದ ಜನಪ್ರಿಯ ಚಿತ್ರಗೀತಗಳ ಮೊದಲ ಎಲ್.ಪಿ. ಧ್ವನಿಮುದ್ರಿಕೆಯ ಬಿಡುಗಡೆ -ಟಿ.ಎಸ್.ನರಸಿಂಹನ್, ಶೃಂಗಾರ್ ನಾಗರಾಜ್, ಆರ್.ಎನ್.ಕೃಷ್ಣಪ್ರಸಾದ್, ಕಲ್ಪನಾ, ಆರ್.ಎನ್.ಜಯಗೋಪಾಲ್

ಶ್ರೇಷ್ಠತೆಯ ಆಕಾಂಕ್ಷೆಯನ್ನಾಗಲಿ, ಇದಕ್ಕಿಂತ ಹೆಚ್ಚಾಗಿ ಮಾಧ್ಯಮದ ಎಲ್ಲ ಸಾಧ್ಯತೆಗಳನ್ನು ಬಳಸಿಕೊಳ್ಳುವ ಮಹತ್ವಾಕಾಂಕ್ಷೆಯನ್ನಾಗಲಿ ಜನಪ್ರಿಯ ಸಾಹಿತ್ಯದಲ್ಲಿ ಗುರುತಿಸಲು ಆಗುವುದಿಲ್ಲ. ಬದಲಾಗಿ ಜನಪ್ರಿಯ ಸಾಹಿತ್ಯ ಬಹು ದೊಡ್ಡ ಸಮುದಾಯಕ್ಕೆ ಪ್ರಧಾನ ಸಾಹಿತ್ಯದ ಸತ್ವವನ್ನು ಸಂಗ್ರಹಿಸಿ ಪ್ರಸರಿಸುವ ಕೆಲಸ ಮಾಡುತ್ತದೆ. ನಮ್ಮ ಚಿತ್ರಗೀತೆಗಳು ಪ್ರಾಚೀನದಿಂದ ಅರ್ವಾಚಿನ ಸಾಹಿತ್ಯದವರೆಗಿನ ಸಾರವನ್ನು ಬಳಸಿಕೊಂಡ ಕ್ರಮ ಈ ಲಕ್ಷಣಕ್ಕೆ ಹೊಂದುತ್ತದೆ. ಹಾಗೆಯೇ ಜನಪ್ರಿಯ ಸಾಹಿತ್ಯ ಸಮಕಾಲೀನ ಸಂದರ್ಭಕ್ಕೆ ಕಚ್ಚಾ ಪ್ರತಿಕ್ರಿಯೆ ನೀಡುತ್ತದೆ. ಅದಕ್ಕೆ ತಕ್ಷಣಕ್ಕೆ ಪ್ರತಿಕ್ರಿಯಿಸುವ ಆತುರ. ಇವನ್ನು ನಮ್ಮ ಎಲ್ಲ ಕಾಲದ ಚಿತ್ರಗೀತಗಳಲ್ಲೂ ಗುರುತಿಸಬಹುದು. ಬಹಳ ಮುಖ್ಯವಾಗಿ ಗಮನಿಸಬೇಕಾದ ಅಂಶ ಎಂದರೆ ಕವಿಗಳ ಕಾವ್ಯ ಚಲನಚಿತ್ರದಲ್ಲಿ ಬಳಕೆಯಾದಾಗಲೂ ಅದನ್ನು ದೃಶ್ಯೀಕರಿಸುವ ಸಂದರ್ಭದಲ್ಲಿ ಜನಪ್ರಿಯ ಸಾಹಿತ್ಯದತ್ತ ಎಳೆದು ತರುವ ಪ್ರಯತ್ನವನ್ನು ನಮ್ಮ ಚಿತ್ರರಂಗ ಮಾಡಿದೆ.

ಸಾಹಿತ್ಯದ ಜನಪ್ರಿಯ ಸಾಧ್ಯತೆ ಚಲನಚಿತ್ರ ಅಲ್ಲ, ಬದಲಾಗಿ ಚಲನಚಿತ್ರ ಇನ್ನೊಂದು ಪ್ರಭಾವಶಾಲಿ ಮಾಧ್ಯಮ. ಅದರ ಚಿತ್ರಗೀತೆಗಳು ಮಾತ್ರ ಸಾಹಿತ್ಯದ ಜನಪ್ರಿಯ ಸಾಧ್ಯತೆ.

(ಚಿತ್ರ ೪೭) 'ಜೀವನ ನಾಟಕ', 'ಸ್ತ್ರೀ ರತ್ನ' ಚಿತ್ರಗಳಿಗೆ ಕಥೆ-ಚಿತ್ರಕಥೆ ಬರೆದ ಅ.ನ.ಕೃ. ಚಿತ್ರೋದ್ಯಮದೊಂದಿಗೆ ನಿಕಟ ಸಂಪರ್ಕ ಇಟ್ಟುಕೊಂಡವರು. ೧೯೬೪-೬೫ರ ಡಬ್ಬಿಂಗ್ ವಿರುದ್ಧ ಚಳವಳಿಯ ಮುಂಚೂಣಿಯಲ್ಲಿದ್ದವರು. 'ಸ್ತ್ರೀ ರತ್ನ' ಚಿತ್ರಣ ಸಂದರ್ಭದಲ್ಲಿ ವಿತರಕ ಸಂಪತ್, 'ಸ್ತ್ರೀ ರತ್ನ' ಗೀತರಚನಾಕಾರ ಕಣಗಾಲ್ ಪ್ರಭಾಕರಶಾಸ್ತ್ರಿಗಳೊಡನೆ ಅ.ನ.ಕೃ.

ಹೀಗಾಗಲು ಬಹಳ ಮುಖ್ಯ ಕಾರಣ ಎಂದರೆ ಕಲಾತ್ಮಕ ಚಿತ್ರಗಳು ನಮ್ಮಲ್ಲಿ ಚಿತ್ರಗೀತೆಗಳನ್ನು ತನ್ನ ಸಾಧ್ಯತೆಯಲ್ಲಿ ಒಳಗೊಳ್ಳಲಿಲ್ಲ. ಹಾಗೆ ಒಳಗೊಳ್ಳುವ ಪ್ರಯತ್ನ ಮಾಡಿದ್ದಾಗಲೂ ಅದರ ಜನಪ್ರಿಯತೆಯ ಚೌಕಟ್ಟನ್ನು ಒಡೆಯಲಿಲ್ಲ. ಹೀಗೆ ನಮ್ಮಲ್ಲಿ ಚಿತ್ರಗೀತೆಗೆ ಎರಡು ಪರಂಪರೆ ಸೃಷ್ಟಿಯಾಗಲಿಲ್ಲ. ಒಮ್ಮೆ ಹಾಗೇನಾದರೂ ಸೃಷ್ಟಿಯಾಗಿದ್ದರೆ ಚಿತ್ರಗೀತೆಗಳಲ್ಲೂ ಪ್ರಧಾನವಾಹಿನಿಯೊಂದು ನಿರ್ಮಾಣವಾಗಿ ಬಿಡುತ್ತಿತ್ತು. ಆದರೆ ಇದು ಯಾವ ಭಾರತೀಯ ಭಾಷೆಗಳಲ್ಲೂ ಸ್ಪಷ್ಟವಾಗಿ ಗುರುತಿಸಬಹುದಾದಂತೆ ಸಾಧ್ಯವಾಗಿಲ್ಲ. ಲಿರಿಕ್ ಎಂದು ಕರೆಯಬಹುದಾದ, ಭಾವಗೀತೆಯ ಪ್ರಕಾರಕ್ಕೆ ಹತ್ತಿರವಾಗಬಲ್ಲ ಲಕ್ಷಣಗಳೂ ಚಿತ್ರಗೀತೆಗೆ ಇವೆ. ಭಾರತೀಯ ಸಾಹಿತ್ಯ ಪರಂಪರೆಯಲ್ಲೇ ಗೇಯತೆಗೆ ಬಹಳ ಪ್ರಧಾನವಾದ ಸ್ಥಾನವಿದೆ. ಪ್ರಾಚೀನ ಕನ್ನಡ ಸಾಹಿತ್ಯ ಮೌಖಿಕವಾಗಿಯೇ ಹೆಚ್ಚಾಗಿ ಉಳಿದು, ಬೆಳೆದಿದೆ. ವಚನಸಾಹಿತ್ಯದ ಯಶಸ್ಸಿರುವುದೇ ಈ ಮೌಖಿಕತೆಯನ್ನು ಬಳಸಿಕೊಂಡಿದ್ದರಲ್ಲಿ. ದಾಸಸಾಹಿತ್ಯ ಸಂಗೀತವನ್ನೇ ಉಸಿರಾಗಿಸಿಕೊಂಡ ನಾದಮಯತೆಯಿಂದ ಜನಪ್ರಿಯವಾಯಿತು. ಕುಮಾರವ್ಯಾಸ ಮತ್ತು ಲಕ್ಷ್ಮೀಶನಂತಹ ಕವಿಗಳ ಕಾವ್ಯಗಳು ಮೌಖಿಕವಾಗಿಯೇ ಜನಸಮುದಾಯದಿಂದ ಸ್ವೀಕರಿಸಲ್ಪಟ್ಟವು. ನವೋದಯ ಸಾಹಿತ್ಯ ತನ್ನ ಪ್ರಯೋಗಶೀಲತೆಯ ಜೊತೆಗೇ ನಾದಮಯತೆಗೆ ಸಾಕಷ್ಟು ಮಹತ್ವ ನೀಡಿತ್ತು. ಇಂತಹ ಪ್ರಭಾವವನ್ನು ನಮ್ಮ ಆರಂಭಿಕ ಚಿತ್ರಗೀತೆಗಳಲ್ಲಿ ಕಾಣಬಹುದು. ನವ್ಯಸಾಹಿತ್ಯ ನಾದಮಯತೆಯನ್ನು ತಿರಸ್ಕರಿಸಿದ್ದರಿಂದ ಉಂಟಾದ ನಿರ್ವಾತವನ್ನು ಚಿತ್ರಗೀತೆಗಳು ಯಶಸ್ವಿಯಾಗಿ ತುಂಬಿದವು ಎನ್ನಬಹುದು. ಪ್ರತಿಮೆಗಳನ್ನು ನಾದಮಯವಾಗಿ ಹೇಳಿದ ಯಶಸ್ಸಿದೆ. ಕ್ಯಾಸೆಟ್ ಯುಗದಲ್ಲಿ ಸಂಗೀತಕ್ಕೆ ರಚಿಸಿದ ಭಾವಗೀತೆಗಳು ಬರಲಾರಂಭಿಸಿದಾಗ ಇವುಗಳಿಗಿಂತ ಎಷ್ಟೋ ಉತ್ತಮ ಸಾಹಿತ್ಯ ಚಿತ್ರಗಳಲ್ಲಿದೆ ಎನ್ನಿಸಿದ್ದುಂಟು ಸುಳ್ಳಲ್ಲ.

• • •

ಈ ಹಿನ್ನೆಲೆಯಲ್ಲಿ ಕನ್ನಡ ಚಿತ್ರಗೀತೆಗಳ ಪ್ರಧಾನ ಲಕ್ಷಣವನ್ನು ಗುರುತಿಸುವ ಪ್ರಯತ್ನ ಮಾಡಬಹುದು. ಈಗಾಗಲೇ ಚರ್ಚಿಸಿರುವಂತೆ ನಾದಮಯತೆ ಮತ್ತು ಗೇಯತೆ ಇದರ ಸಾಮಾನ್ಯ ಲಕ್ಷಣ. ಎರಡು ಸಾಲಿನ ಒಂದು ಪಲ್ಲವಿ ಮತ್ತು ನಾಲ್ಕು ಸಾಲುಗಳ ಎರಡು ಅಥವಾ ಮೂರು ಚರಣಗಳನ್ನು ಸಾಮಾನ್ಯವಾಗಿ ಎಲ್ಲ ಚಿತ್ರಗೀತೆಗಳಲ್ಲೂ ಗುರುತಿಸಬಹುದು. ಅಂತ್ಯಪ್ರಾಸ ಸಹಜವಾಗಿ, ಇಲ್ಲ ಯಾಂತ್ರಿಕವಾಗಿ ಎಲ್ಲಾ ಕಾಲದಲ್ಲೂ ಚಿತ್ರಗೀತೆಗಳಲ್ಲಿ ಬಂದಿದೆ. ಈ ಪ್ರಾಸವೇ ಗೇಯತೆಯನ್ನು ನಿರ್ಧರಿಸಿರುವ ಅಂಶವಾಗಿರುವುದನ್ನು ಕಾಣಬಹುದು. ಪ್ರಾಸವಿಲ್ಲದಿದ್ದರೂ ಗೇಯತೆ ಉಳಿದುಕೊಳ್ಳುತ್ತದೆ ಎಂಬ ಅಂಶದ ಬಗ್ಗೆ ಗೀತರಚನೆಕಾರರು ಅಷ್ಟಾಗಿ ತಲೆ ಕೆಡಿಸಿಕೊಂಡಿಲ್ಲ. ಇದಕ್ಕೆ ಕೆಲವು ಉದಾಹರಣೆಗಳು ಚಿತ್ರಗೀತೆಗಳ ಪರಂಪರೆಯಲ್ಲೇ ಸಿಕ್ಕುತ್ತವೆ.

ಹೊಸಬಾಳಿನ ಹೊಸ್ತಿಲ ಮೇಲೆ : ಸುರಿವ ಈ ಸೋನೆಯ ಲೀಲೆ
ಸುರಿವಾಗಲೂ ಅಂತಹ ಮೋಹ : ಅರ್ಭಟಿಸುವ ಹರಯದ ಬಯಕೆ
(ರಚನೆ : ಪಿ.ಲಂಕೇಶ್, ಚಿತ್ರ : 'ಅನುರೂಪ')

ಇಲ್ಲಿ ಲೀಲೆ ಮತ್ತು ಬಯಕೆ ಶಬ್ದಕ್ಕೆ ಯಾವ ರೀತಿಯ ಪ್ರಾಸವೂ ಇಲ್ಲ. ಆದರೂ ಗೇಯತೆ ತಪ್ಪಿಹೋಗಿದೆ ಎಂದು ಅನ್ನಿಸುವುದಿಲ್ಲ. ಹಾಗೆಯೇ ಇನ್ನೊಂದು ಉದಾಹರಣೆ ನೀಡುವುದಾದರೆ,

ನಗುವಾಗ ಎಲ್ಲ ನಂಟರು
ಅಳುವಾಗ ಯಾರೂ ಇಲ್ಲ
(ರಚನೆ : ಗೀತಪ್ರಿಯ, ಚಿತ್ರ : 'ಒಂದೇ ಬಳ್ಳಿಯ ಹೂಗಳು')

ಇಲ್ಲೂ ಕೂಡ ಪ್ರಾಸ ಇಲ್ಲ. ಆದರೆ ಗೇಯತೆಗೆ ಯಾವ ಪೆಟ್ಟೂ ಬಿದ್ದಿಲ್ಲ. ಬದಲಾಗಿ ಪ್ರಾಸಕ್ಕಾಗಿ ರಚಿಸಿದ ಹಾಡುಗಳಲ್ಲೇ ಗೇಯತೆ ಮಾತ್ರ ಗಟ್ಟಿಯಾಗಿ ಅರ್ಥ ಬಿದ್ದುಹೋದ ಉದಾಹರಣೆಗಳಿವೆ. ಈ ಸಾಲು ನೋಡಿ

ಕಾವೇರಿ ತಾಯಿ ನನ್ನ : ಬಾ ಎಂದು ಕೂಗಿ ನಿನ್ನ
ನೀಡಿದಳು ಬಾಳಿಗೆ ಬೆಳಕಾಗಲು
ಆ ದೇವಿಯಾಣೆ : ಸಂಗಾತಿ ನೀನೇ ಜಾಣೆ
ನೀಡುವೆನು ಭಾಷೆ : ಬಿಡು ಚಿಂತೆಯ
(ರಚನೆ : ಚಿ.ಉದಯಶಂಕರ್, ಚಿತ್ರ : 'ಹುಲಿಯ ಹಾಲಿನ ಮೇವು)

ಪ್ರಾಸದ ಅಗತ್ಯಕ್ಕಾಗಿಯೇ ಕನ್ನಡ ಚಿತ್ರಗೀತೆಗಳಲ್ಲಿ ರೂಪುಗೊಂಡು ಹಲವಾರು ಜೋಡಿ ಶಬ್ದಗಳಿವೆ. ಅವು ಸಾವಿರಾರು ಬಾರಿ ಪುನರಾವರ್ತಿತವಾಗಿವೆ, ಆಗುತ್ತಲೇ ಇರುತ್ತವೆ. ಉದಾಹರಣೆಗೆ ನಾನು-ನೀನು, ಭೂಮಿ-ಬಾನು, ಹೆಣ್ಣು-ಕಣ್ಣು, ಅಂಜಿಕೆ-ನಾಚಿಕೆ, ಒಲವು-ಗೆಲುವು, ಕನಸು-ಮನಸು, ತನುವು-ಮನವು, ಹರೆಯ-ಕರೆಯ, ಗಾನ-ತಾನ, ಬೇಕು-ಸಾಕು, ಅಂದ-ಚಂದ, ರಾಗ-ಅನುರಾಗ, ತಂದ-ಅನುಬಂಧ, ಶಕ್ತಿ-ಯುಕ್ತಿ ಹೀಗೆ ನೂರಾರು ಪದಪುಂಜಗಳನ್ನು ಉದಾಹರಣೆಯಾಗಿ ಕೊಡಬಹುದು. ಇವುಗಳನ್ನು ಇಟ್ಟುಕೊಂಡು ಗೀತೆ ಬರೆಯುವುದು ಹಲವರಿಗೆ ಸುಲಭವಾಗಿದ್ದಂತೂ ನಿಜ. ಪ್ರತಿಮೆಗಳ ಮಟ್ಟಿಗೆ ಚಿತ್ರಗೀತೆಗಳು ಕನ್ನಡ ಸಾಹಿತ್ಯದಲ್ಲಿ ಹೇರಳವಾಗಿ ಉಪಯೋಗ ಪಡೆದಿವೆ. ಕೆಲವು ಶಬ್ದಗಳ ಬದಲಾವಣೆಯೊಂದಿಗೆ ಬಳಕೆಯಾದರೆ, ಕೆಲವು ನೇರವಾಗಿ ಪ್ರತಿಮೆಗಳೇ ಅನಾಮತ್ತಾಗಿ ಬಂದುಬಿಟ್ಟಿವೆ.

ಕಾನನದಿ ಮಲ್ಲಿಗೆಯು ಮೌನದಲಿ ಬಿರಿದು
ನಿಜಸೌರಭವ ಸೂಸಿ ಮೆರೆವಂತೆ ಮಾಡೆನ್ನ ತಂದೆ
(ರಚನೆ : ಆರ್.ಎನ್.ಜಯಗೋಪಾಲ್, ಚಿತ್ರ : 'ನಮ್ಮ ಮಕ್ಕಳು')

ಈ ಪ್ರತಿಮೆ ಡಿ.ವಿ.ಜಿ.ಯವರ 'ವನಸುಮದೊಳೆನ್ನ' ರಚನೆಯಿಂದ ನೇರವಾಗಿ ಎತ್ತಿಕೊಂಡು ಬಂದದ್ದಾಗಿದೆ. ಮಾತ್ರವಲ್ಲ, "ನಿನ್ನೊಲುಮೆ ನಮಗಿರಲಿ ತಂದೆ..." ಎಂಬ ಈ ರಚನೆಯಲ್ಲಿನ ಎಲ್ಲ ಪ್ರತಿಮೆಗಳೂ ಬೇರೆ ಬೇರೆ ಸಾಹಿತ್ಯ ಪ್ರಕಾರದಿಂದಲೇ ಬಂದಿವೆ.

ಆರದಂತೆ ಜ್ಯೋತಿಯನು : ಕಾವಲಿರಿಸಿ ಕಂಗಳನು
ಬಾಳನ್ನೇ ಧಾರೆ ಎರೆಯುವಾ
(ರಚನೆ : ಚಿ.ಉದಯಶಂಕರ್, ಚಿತ್ರ : 'ಸಹೋದರರ ಸವಾಲ್')

ಎಂಬ ಪ್ರತಿಮೆ ಅಡಿಗರ 'ಭಾವತರಂಗ'ದಿಂದ ಬಂದಿದ್ದು.

ಬೆಳಕೇ ಇರದ ಹಾದಿಯಲಿ ನಾನು ನಡೆಯಬಲ್ಲೆ
(ರಚನೆ : ರವಿಚಂದ್ರನ್, ಚಿತ್ರ : 'ಓ ನನ್ನ ನಲ್ಲೆ')

ಈ ಪ್ರತಿಮೆ ಗಿರೀಶ್ ಕಾರ್ನಾಡರ 'ಯಯಾತಿ' ನಾಟಕದಿಂದ ನೇರವಾಗಿ ಎತ್ತಿಕೊಂಡದ್ದಾಗಿದೆ. ಹೀಗೆ ನೂರಾರು ಉದಾಹರಣೆಗಳು ಸಿಗುತ್ತವೆ. ಉದಯಶಂಕರ್ ಅವರೊಬ್ಬರಲ್ಲೇ ದಾಸರ, ಶರಣರ ನೂರಾರು ಪ್ರತಿಮೆಗಳು ಸಿಗುತ್ತವೆ. ಅದನ್ನು ಒಂದು ದೀಪದಿಂದ ಇನ್ನೊಂದು ದೀಪ ಹಚ್ಚುವ ಪ್ರಕ್ರಿಯೆಯೆಂದು ಒಂದೆಡೆ ಸಮರ್ಥಿಸಿಕೊಂಡಿದ್ದರು ಕೂಡ.

ವಸ್ತುವಿನ್ಯಾಸದಲ್ಲಿ ಕೂಡ ಆರಂಭಿಕ ಚಿತ್ರಗೀತೆಗಳಲ್ಲಿ ಪ್ರಕೃತಿ ಪ್ರೇಮ, ದಾಂಪತ್ಯ ಸಂತೃಪ್ತಿ ಮುಂತಾದ ನವೋದಯದ ಮೌಲ್ಯಗಳು ಕಂಡುಬಂದರೆ ನಂತರದ

ಚಿತ್ರಗೀತೆಗಳಲ್ಲಿ ಪ್ರತಿಮೆಗಳ ಬಳಕೆ, ಅತೃಪ್ತಿ, ಹತಾಶೆ ಮುಂತಾದ ನವ್ಯಸಾಹಿತ್ಯದ ಲಕ್ಷಣಗಳು ಕಂಡುಬಂದಿವೆ. ಹೀಗೆಯೇ ೮೦ರ ದಶಕದ ನಂತರದ ಚಿತ್ರಗೀತೆಗಳಲ್ಲಿ ಪ್ರತಿಭಟನೆ, ಸಮಾಜದ ವಿರುದ್ಧದ ಆಕ್ರೋಶ ಮುಂತಾದ ಬಂಡಾಯದ ಲಕ್ಷಣಗಳು ಕಾಣಿಸಿಕೊಂಡಿವೆ. ಇವೆಲ್ಲ ಜನಪ್ರಿಯ ಸಾಹಿತ್ಯದ ಮಾದರಿಯಲ್ಲೇ ಕಾಣಿಸಿಕೊಂಡಿವೆ ಎಂಬುದು ಗಮನಿಸಬೇಕಾದ ಅಂಶ.

• • •

ಈ ಭಾಗದಲ್ಲಿ ಪ್ರಧಾನ ಗೀತರಚನೆಕಾರರನ್ನು, ಅವರ ರಚನೆಗಳ ಸಾಹಿತ್ಯ ಗುಣಗಳ ನೆಲೆಯಲ್ಲಿ ಚರ್ಚಿಸುವ ಪ್ರಯತ್ನವಿದೆ.

ಆರಂಭಿಕ ಚಿತ್ರಗಳಿಗೆ ಗೀತರಚನೆ ಮಾಡಿದವರಲ್ಲಿ ಬೆಳ್ಳಾವೆ ನರಹರಿಶಾಸ್ತ್ರಿ, ಆರ್.ನಾಗೇಂದ್ರರಾವ್, ಹೆಚ್.ಎಲ್.ಎನ್.ಸಿಂಹ, ನಂಜುಕವಿ ಮುಂತಾದವರು ಪ್ರಮುಖರು. ಇವರೆಲ್ಲ ನಾಟಕದ ಹಿನ್ನೆಲೆಯಿಂದಲೇ ಬಂದವರಾದ್ದರಿಂದ ರಂಗಗೀತೆಗಳೇ ಇಲ್ಲಿ ಚಿತ್ರಗೀತೆಗಳಾದವು. ಕೆಲವೊಮ್ಮೆ ನಾಟಕಗಳೇ ಚಲನಚಿತ್ರವಾದಾಗ ಇದು ಸಹಜವಾಗಿಯೇ ನಡೆಯಿತು ಕೂಡ. 'ವಸಂತಸೇನಾ' ಚಿತ್ರಕ್ಕೆ ಆರ್.ನಾಗೇಂದ್ರರಾವ್ ರಚಿಸಿದ ''ಭಲೇ ಭಲೇ ಜೂಜುಗಾರನಲಾ...'', ''ಇದೇ ಮಹಾಸುದಿನ....'', 'ಜಾತಕಫಲ' ಚಿತ್ರಕ್ಕೆ ರಚಿಸಿದ ''ಮರುಳಾದೆ ಸಖಿ ಈ ಮುರಳಿ ನಾದಕೆ ನಾ...'' ಹಾಗೆಯೇ ನಂಜುಕವಿ ರಚಿಸಿದ ''ಶಿವಪ್ಪ ಕಾಯೋ ತಂದೆ ಮೂರುಲೋಕ ಸ್ವಾಮಿದೇವ...'' ಎಂಬ 'ಬೇಡರ ಕಣ್ಣಪ್ಪ'ದ ರಚನೆ ಮತ್ತು 'ಮಹಾಕವಿ ಕಾಳಿದಾಸ' ಚಿತ್ರಕ್ಕಾಗಿ ಬೆಳ್ಳಾವೆ ನರಹರಿಶಾಸ್ತ್ರಿಗಳು ರಚಿಸಿದ ''ರಾಜೇಂದ್ರಾ ನಾ ರಚಿಸಿಹೆನ್ನೈ ಪ್ರಭು...'' ಎಂಬ ಸುದೀರ್ಘ ಗೀತೆ ಸಾಹಿತ್ಯಿಕ ಮೌಲ್ಯದಿಂದ ಗಮನಾರ್ಹವಾದವು. ಇವರಾರೂ ಪೂರ್ಣಪ್ರಮಾಣದ ಗೀತರಚನಕಾರರಾಗಿ ಚಿತ್ರರಂಗದಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲಿಲ್ಲ, ಅಲ್ಲ ಲ್ಲಿ ತಮ್ಮ ಪ್ರತಿಭೆಯ ಕುರುಹು ಉಳಿಸಿದರು.





(ಚಿತ್ರ ೪೮-೫೩) ಕೃಷ್ಣ ಆಲನಹಳ್ಳಿ   ಚಂದ್ರಶೇಖರ ಕಂಬಾರ   ಬರಗೂರು ರಾಮಚಂದ್ರಪ್ಪ   ಎ.ಎಂ.ಇನಾಂದಾರ್   ಬನ್ನಂಜೆ ಗೋವಿಂದಾಚಾರ್ಯ   ಎಂ.ನರೇಂದ್ರಬಾಬು

ನಿರ್ದೇಶನ, ಸಂಭಾಷಣೆ, ಗೀತರಚನೆ, ದಿಗ್ದರ್ಶನ ಹೀಗೆ ಹಲವು ಪ್ರಕಾರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡ ಹುಣಸೂರು ಕೃಷ್ಣಮೂರ್ತಿಯವರು ಸಾಹಿತ್ಯವನ್ನು ಸಾಕಷ್ಟು ಗಂಭೀರವಾಗಿ ಅಧ್ಯಯನ ಮಾಡಿದವರು, ಅದರ ಸೂಕ್ಷ್ಮಗಳನ್ನು ಅರ್ಥ ಮಾಡಿಕೊಂಡವರು. ಈ ಅಂಶವನ್ನು ಅವರ ಹೆಚ್ಚಿನ ರಚನೆಗಳಲ್ಲಿ ಗುರುತಿಸಬಹುದು. ಹುಣಸೂರರ ರಚನೆಗಳಲ್ಲಿ ಪ್ರಮುಖವಾದ ಮೂರು ಪ್ರಕಾರಗಳನ್ನು ಗುರುತಿಸಬಹುದು. ಮೊದಲನೆಯದು ತತ್ವಪದಗಳದ್ದು. ಪೌರಾಣಿಕ ಮತ್ತು ಭಕ್ತಿಪ್ರಧಾನ ಚಿತ್ರಗಳನ್ನು ರಚಿಸಿದ ಹುಣಸೂರರು ಆ ಚಿತ್ರಗಳ ಅವಶ್ಯಕತೆಗೆ ತಕ್ಕಂತೆ ಅನೇಕ ತತ್ವಪದಗಳನ್ನು ರಚಿಸಿದರು. ಈ ತತ್ವಪದಗಳ ರಚನೆಯಲ್ಲಿ ದಾಸಸಾಹಿತ್ಯ, ವಚನಗಳು ಮತ್ತು ಮರಾಠಿ ಅಭಂಗಗಳ ಹಲವಾರು ಪ್ರತಿಮೆ ಮತ್ತು ಸಾಧ್ಯತೆಗಳನ್ನು ಬಳಸಿಕೊಂಡಿದನ್ನು ಕಾಣುತ್ತೇವೆ. 'ಶ್ರೀಕೃಷ್ಣಗಾರುಡಿ' ಚಿತ್ರದ ''ಬೊಂಬೆಯಾಟವಯ್ಯ...'' ಇಂತಹ ಸುಂದರ ರಚನೆಗಳಲ್ಲೊಂದು. ದಾಸರಪದಗಳ ನೆರಳಿನಲ್ಲೇ ಬೆಳೆಯುವ ಈ ರಚನೆಯಲ್ಲಿ ''ಅಂಬುಜನಾಭನ । ಅಂತ್ಯವಿಲ್ಲದಾತನ । ತುಂಬು ಮಾಯವಯ್ಯ...'' ಎಂಬ ಸಾಲುಗಳಲ್ಲಿ ನಾದಮಯವಾದ ಅರ್ಥವಂತಿಕೆ ಗುರುತಿಸಬಹುದು. ಹೀಗೆ 'ಭಕ್ತ ಸಿರಿಯಾಳ' ಚಿತ್ರದ ''ಶಿವಶಿವ ಎಂದರೆ ಭಯವಿಲ್ಲ...'' ಎಂಬ ರಚನೆಯಲ್ಲಿ ವಚನಗಳ ಸಾರವನ್ನು ಸರಳೀಕರಿಸಿ ''ಅನ್ನದಾನವ ಮರೆಯದಿರು / ನಾದ ವಿಸ್ಮೃತ ಮರೆಯದಿರು । ಕಾಯಕ ಮಾಡುತ ಎಂದೆಂದೂ ಆತ್ಮಾನಂದವ ಪಡೆಯುತಿರು....'' ಮುಂತಾದ ಚಿಂತನೆಗಳನ್ನು ನೀಡಿದ್ದಾರೆ. ಇದರಲ್ಲಿ ಹೊಸ ಚಿಂತನೆ ಇಲ್ಲವಾದರೂ ಈ ಸರಳೀಕರಣ ಕ್ರಿಯೆ ಸಹಜತೆಯ ನೆಲೆಯಲ್ಲಿರುವುದು ಗಮನಾರ್ಹ. 'ಭಕ್ತ ಕುಂಬಾರ'ದ ''ಹರಿನಾಮವೇ ಚಂದ...'' ಅವರ ಉತ್ತಮ ರಚನೆಗಳಲ್ಲಿ ಒಂದು. ಇದರಲ್ಲಿ ಭಕ್ತ ಕುಂಬಾರನ ದೈನಂದಿನ ಕಾಯಕ ಮತ್ತು ಭಕ್ತಿಯ ಭಾವಪರವಶತೆ ಎರಡಕ್ಕೂ ಹೊಂದುವಂತಹ ಕೆಲವು ಸೊಗಸಾದ ಪ್ರತಿಮೆಗಳಿವೆ.

ಮಣ್ಣಿನ ಹಾಗೆ ಮಾಗಿಸಿ ಮನವ
ಚಿನ್ಮಯನೆಂಬೊ ನಾಮದ ಜಲವ
ಸೇರಿಸಿ, ಬೆರೆಸಿ ಮುಕುತಿಯ ಗಳಿಸಿ ಗುರಿ ಸಾಧಿಸೊ ಕಂದ ॥

ಹಾಗೆಯೇ,

ಮಣ್ಣಲಿ ಮಡಿಕೆ ಕುಡಿಕೆಯ ಮಾಡೊ
ಕಾಯಕ ಹಿಡಿದ ಕುಂಬಾರ ನಾನು
ಜೀವಿಗಳೆಂಬೊ ಗೊಂಬೆಯ ಮಾಡೊ
ಬ್ರಹ್ಮನ ತಂದೆ ಕುಂಬಾರ ನೀನು

ಇಲ್ಲೆಲ್ಲ ಹುಣಸೂರರ ಸ್ವಂತಿಕೆ ಪ್ರಕಟವಾಗಿದ್ದನ್ನು ಕಾಣಬಹುದು. ಕಾವ್ಯಕುಶಲತೆಯನ್ನು ಗುರುತಿಸಬಹುದು. ಇದೇ ಚಿತ್ರದ ''ಮಾನವ ದೇಹವೂ...'' ಕಾವ್ಯಮಯತೆಗಿಂತ ತತ್ವಪದದ ಚೌಕಟ್ಟಿನಲ್ಲಿ ಯಶಸ್ವಿಯಾದ ರಚನೆ ಎಂದು ಹೇಳಬಹುದು. 'ಪಾತಾಳ ಮೋಹಿನಿ' ಚಿತ್ರದ ''ಚಿಲಿಪಿಲಿಗುಟ್ಟುವ ಹಕ್ಕಿಯ ಕಂಠದಿ ಇಂಪನು ಇಟ್ಟವರ್ಯಾರ ?....'' ವಚನಗಳಿಂದ ಬಳಸಿಕೊಂಡ ಪ್ರತಿಮೆಗಳಿಂದ 'ಬೆಡಗಿನಕಾವ್ಯ'ದ ಮಾದರಿಯಲ್ಲಿ ತಾತ್ವಿಕತೆಯನ್ನು ಹೇಳಿದೆ. ಆದರೆ ಜನಪ್ರಿಯ ಸಾಹಿತ್ಯದ ಲಕ್ಷಣದಂತೆ ಇಲ್ಲಿ ಬೆಡಗು ಮಾತ್ರ ಇಲ್ಲ, ಒಂದು ವಾಚ್ಯವಾದ ಉತ್ತರದೊಂದಿಗೆ ಗೀತ ಮುಗಿಯುತ್ತದೆ.

ಬಲ್ಲವನೊಬ್ಬ ಕುಳಿತಿಹನಮ್ಮ
ನೋಡುವ ನಮ್ಮನು ಕಣ್ಣಿಟ್ಟು

ಎಂದು ಹುಣಸೂರರು ನಿರ್ಣಯಕ್ಕೆ ಬರುತ್ತಾರೆ. ಇದರಿಂದ ಕಾವ್ಯಾತ್ಮಕತೆಗೆ ನಷ್ಟವಾದರೂ ಅದು ತಲುಪಬೇಕಾದ ಸಮುದಾಯದ ದೃಷ್ಟಿಯಿಂದ ಇಂತಹ ಅಂತ್ಯದ ಅಗತ್ಯವಿರುತ್ತದೆ. ಚಿತ್ರಗೀತೆಗಳಲ್ಲಿ ಸಾಹಿತ್ಯ ಮಾಡಿಕೊಳ್ಳುವ ರಾಜಿ ಇಂತಹದೇ.

ಹುಣಸೂರರ ರಚನೆಗಳ ಎರಡನೇ ವಿಧಾನ ಬದುಕನ್ನು ಕುರಿತ ಸರಳ ಗೀತೆಗಳದ್ದು. ಇಲ್ಲಿ ಸಾಹಿತ್ಯಾಂಶ ಕಡಿಮೆ, ಆದರೂ ಸರಳಗೊಳಿಸಿದ ತಾತ್ವಿಕತೆಯಿಂದ ಜನ-ಮನ ಸೆಳೆಯುವ ಉತ್ಸಾಹ ಕಾಣಬಹುದು. ಹುಣಸೂರರ ಒಟ್ಟು ರಚನಾಕ್ರಮದಲ್ಲೇ ಇಂತಹದೊಂದು ಉದಾತ್ತತೆ ಕೆಲಸ ಮಾಡುತ್ತದೆ. 'ಒಂದೇ ಕುಲ ಒಂದೇ ದೈವ' ಚಿತ್ರದಲ್ಲಿ ಗಾಂಧಿ ತಾತನಿಗೆ 'ಬಾಲಕಿಯೊಬ್ಬಳು ಬರೆದ ವಿನಂತಿ' ಎಂಬ device ಬಳಸಿಕೊಂಡು ಅವತ್ತಿನ ದೇಶದ ಸ್ಥಿತಿ ಕುರಿತು ಪ್ರಾದೇಶಿಕತೆ ಅಸಮಾನತೆ ಕುರಿತು ಮಾತನಾಡುತ್ತಾರೆ. ಹಾಗೆಯೇ 'ಮದುವೆ ಮಾಡಿ ನೋಡು' ಚಿತ್ರದ ''ಮದುವೆ ಮಾಡಿಕೊಂಡು, ಮನೆಯ ಹೂಡಿಕೊಂಡು ಮಡದಿಯ ಜೊತೆಯಲಿ ಇರಬೇಕು, ನೀವೆಲ್ಲರೂ ಹಾಯಾಗಿ ಇರಬೇಕು...'' ಎಂದು ವಿನೋದದಿಂದ ಆರಂಭವಾಗುವ ಹಾಡು ಬೆಳೆಯುತ್ತ ವರದಕ್ಷಿಣೆ ಸಮಸ್ಯೆಯ ವಿರುದ್ಧ ಧ್ವನಿ ಎತ್ತಿ ಸಿಡಿದೇಳಲು ಯುವಕರಿಗೆ ಕರೆ ನೀಡುತ್ತಾರೆ. ನಾಡು-ನುಡಿಗಳ ಬಗ್ಗೆ ಬಂದಿರುವ ರಚನೆಗಳಲ್ಲೂ ಇಂತಹ ವಾಚ್ಯವಾದ,

(ಚಿತ್ರ ೫೪-೫೯) ಚಿ.ಸದಾಶಿವಯ್ಯ   ಕು.ರ.ಸೀತಾರಾಮಶಾಸ್ತ್ರೀ   ಹುಣಸೂರು ಕೃಷ್ಣಮೂರ್ತಿ   ಸಂಜುಕವಿ   ಎಸ್.ಕೆ.ಕರೀಂ ಖಾನ್   ಹೆಚ್.ಕೆ.ಯೋಗಾನರಸಿಂಹ

ಆದರೆ ಉದಾತ್ತ ನೆಲೆಯುಳ್ಳ, ಚಿಂತನೆ ಕೆಲಸ ಮಾಡುವುದನ್ನು ಗಮನಿಸಬಹುದು. 'ವೀರಸಂಕಲ್ಪ' ಚಿತ್ರದ ''ಹಾಡು ಬಾ ಕೋಗಿಲೆ...'' ಗೀತೆಯಲ್ಲಿ

ಹಿಂದಿನ ಕೀರ್ತಿಯ ಗಳಿಸಲು ಎಂದು
ಮುನ್ನಡಿ ಇಡುತಾ ಬರುತಿರೆ ಇಂದು
ಮಾರ್ದನಿಗೊಳಲಿ ಕನ್ನಡನುಡಿಯು
ಮುಗಿಲಿಗೇರಲಿ ಕನ್ನಡ ಧ್ವಜವು

ಎನ್ನುವಂತಹ ಸಾಲುಗಳನ್ನು ಉದಾಹರಣೆಯಾಗಿ ನೋಡಬಹುದು. ಹಾಗೆಯೇ ಹುಣಸೂರರ ರಚನೆಗಳಲ್ಲಿ ಇಂತಹ ಉದ್ದೇಶದಿಂದ quotation ಮಾದರಿಯ ಹಲವಾರು ಸಾಲುಗಳು ಸಿಕ್ಕುತ್ತವೆ. ಉದಾಹರಣೆಗೆ,

ಪ್ರೀತಿ ಪ್ರೇಮಗಳೇ ಬದುಕಿಗೆ ಸಿರಿತನ
ಹೊಂದಿ ಬಾಳದ ಬದುಕೇ ಬಡತನ (ಭಕ್ತ ಸಿರಿಯಾಳ)

ಪ್ರೇಮಗೀತೆಗಳ ಮಟ್ಟಿಗೆ ನವೋದಯ ಅದರಲ್ಲೂ ಕೆ.ಎಸ್.ನರಸಿಂಹಸ್ವಾಮಿಯವರ ಪ್ರಭಾವ ಹುಣಸೂರರಲ್ಲಿ ಬಿದ್ದಿದೆ. ಅವರು ಬಳಸುವ ಪ್ರತಿಮೆಗಳು, ಶಬ್ದಗಳು, ಆ ಮೂಲದಿಂದ ಬಂದವು. ಇಲ್ಲಿ ಸ್ವಂತಿಕೆಯ ನೆಲೆ ಕಾಣದಿದ್ದರೂ ಅರ್ಥಪೂರ್ಣವಾಗಿ ಅವುಗಳನ್ನು ಜೋಡಿಸುವ ಔಚಿತ್ಯ ಪ್ರಜ್ಞೆ ಗುರುತಿಸಬಹುದು. ಉದಾಹರಣೆಗೆ,

ನಿಂತಲ್ಲಿ ಅವಳು, ಕುಳಿತಲ್ಲಿ ಅವಳು
ನೋಡಿದಾ ಕಡೆಯಲ್ಲ ಅವಳೇ ಅವಳು ('ಕನ್ನಿಕಾಪರಮೇಶ್ವರಿ ಮಹಾತ್ಮೆ')

ಕ್ಷೀರ ಸಾಗರದಲೆಯ ಬೆಳ್ಳಿ ಮಂಚವನಿರಿಸಿ
ಹುಣ್ಣಿಮೆಯ ತಂಬೆಳಕು ಹಾಸಿಗೆ ಹಾಸಿ
ಒಲವು ತುಂಬಿದ ಕಣ್ಣ ಪನ್ನೀರ ಸೂಸಿ
ಕಾದಿಹಳು ಸೇವಿಸಲು ಪದುಮಾವತಿ ನಾಚಿ ('ಮದುವೆ ಮಾಡಿ ನೋಡು')

ನಿನ್ನೆದೆಯೇ ನನ್ನ ಸೆರೆಮನೆಯು ಚಿನ್ನ
ಅದರಿಂದ ಎಂದು ಬಿಡುಗಡೆಯೇ ಸಿಗದು ('ಬಂಗಾರದ ಮನುಷ್ಯ')

ಮೊಗ್ಗಿನಂತೆ ಇದ್ದ ಜೀವ ಅರಳಿ ಹೂವಾಗಿದೆ
ಅದರ ತುಂಬ ಜೇನು ತುಂಬಿ ದಾರಿ ಕಾದಿದೆ ('ವೀರ ಸಿಂಧೂರ ಲಕ್ಷ್ಮಣ')

ಶಬ್ದಗಳ ಬಳಕೆಯಲ್ಲಿ ಅಪಾರ ಸಾಧ್ಯತೆ ಹೊಂದಿದ್ದ ಹುಣಸೂರರು ನಾದದ ಅಗತ್ಯಕ್ಕೆ ತಕ್ಕಂತೆ ಶಬ್ದಗಳ ಪ್ರವಾಹವನ್ನೇ ಹರಿಸುವ ಅಗತ್ಯವಿದ್ದವರು. ಅವೆಲ್ಲ ಒಟ್ಟಾಗಿ ಶ್ರುತಿಸಖ್ಯ ಎನ್ನುವ ಪರಿಣಾಮವನ್ನು ಮೂಡಿಸಿವೆ.

ಗಿಲ್‌ಗಿಲ್ ಗಿಲಕ್ಕ, ಕಾಲ್ಗೆಜ್ಜೆ ಝುಣಕ್ಕ
ಕೈಯ ಬಳೆ ಠಣಕ್ಕ ರಂಗೆದ್ದಿತೊ
ನಿನ್ನ ಕಂಡು ಹಾಡಿ ಕುಣಿಯೊ ಗುಂಗೆದ್ದಿತೊ ('ರತ್ನಮಂಜರಿ')

ಈ ಗೀತೆಯನ್ನು ಪದ್ಯವಾಗಿ ಓದಿದರೆ ಅಂತಹ ಅನುಭವವಾಗದಿದ್ದರೂ ಗೀತೆಯಾಗಿ ಕೇಳಿದರೆ ಶಬ್ದಗಳೇ ಕುಣಿದಾಡುತ್ತಿರುವ ಅನುಭವವಾಗುತ್ತದೆ. 'ವೀರಸಂಕಲ್ಪ'ದ ಜನಪದ ಛಾಯೆಯ ''ಸಿಟ್ಟ್ಯಾಕೋ ಸಿಡುಕ್ಯಾಕೋ ನನ್ನ ಜಾಣ...'' ಗೀತೆಯಲ್ಲೂ ಇಂತಹದೇ ಶಬ್ದಗಳ ಸಂಯೋಜನೆ ನೋಡಬಹುದು. ಹುಣಸೂರರಲ್ಲಿ ಸಂಭಾಷಣೆಯನ್ನೇ ಗೀತೆಯಾಗಿಸುವ ಚಮತ್ಕಾರ ಕೆಲವೆಡೆ ನೋಡಬಹುದು. ''ಯಾರು ತಿಳಿಯರು ನಿನ್ನ ಭುಜಬಲದ ಪರಾಕ್ರಮ...'' (ಬಬ್ರುವಾಹನ), ''ವೈಭವಕೆ ಮರುಳಾಗಿ ಒಲಿದವಳು ನಾನಲ್ಲ....'' (ನಳ ದಮಯಂತಿ) ಇದಕ್ಕೆ ಉದಾಹರಣೆ.

ಇನ್ನು ಕೊನೆಯ ಅಥವಾ ಮೂರನೆಯ ವಿಧ ಮತ್ತು ಹುಣಸೂರರಿಗೆ ದ್ವಂದ್ವಾರ್ಥ ಪಿತಾಮಹ ಎಂಬ ಕೆಟ್ಟ ಹೆಸರು ತಂದ ಅಶ್ಲೀಲ ಗೀತೆಗಳದ್ದು. Compartmental ಯುಗದ ಪ್ರಭಾವಕ್ಕೆ ಒಳಗಾದ ಹುಣಸೂರರ ಚಿತ್ರಗಳಲ್ಲೂ ನಾಯಕ ಇಂತಹ ಉದಾತ್ತ ವ್ಯಕ್ತಿತ್ವ ಉಳ್ಳವನಾದರೆ ಅವನ ಗೆಳೆಯ ಮುಂತಾದ ಪಾತ್ರಗಳು ಇಂತಹ ಅಶ್ಲೀಲ, ದ್ವಂದ್ವಾರ್ಥದ ಸಂಭಾಷಣೆ ಹೇಳುತ್ತಿದ್ದವು. ಒಂದು ವರ್ಗವನ್ನು ಆಕರ್ಷಿಸುವ ಚಪಲಕ್ಕೆ ಸಿಕ್ಕ ಅಥವಾ ಒತ್ತಡ ತಂದ ನಿರ್ಮಾಪಕರಿಗೆ ಮಣಿದ ಹುಣಸೂರರು ಕೆಲವೊಮ್ಮೆ ಅಗತ್ಯಕ್ಕಿಂತ ಹೆಚ್ಚಾಗಿ ಶೀಲದ ಗೆರೆ ದಾಟಿದ್ದಾರೆ. ಅವರ 'ಸತ್ಯ ಹರಿಶ್ಚಂದ್ರ', 'ಜಗನ್ಮೋಹಿನಿ', 'ಕನ್ಯಾದಾನ', 'ಪಲ್ಲಾಳಿ', 'ಭಕ್ತ ಸಿರಿಯಾಳ' ಚಿತ್ರಗಳ ಸಂಭಾಷಣೆಯಲ್ಲಿ ಕೆಲವು ಭಾಗದಲ್ಲಿ ಅತಿ ಎನ್ನಿಸುವ ಅಶ್ಲೀಲ ಇದೆ. ಅದಕ್ಕೆ ಉದಾಹರಣೆಯಾಗಿ ಈ ಕೆಲವು ಗೀತೆಗಳ ಭಾಗವನ್ನು ನೋಡಬಹುದು.

ಏರಿ ಮೇಲೆ ಏರಿ। ಆಹಾ
ಮೇಲ ಕೆಳಗೆ ಹಾರಿ ಹಕ್ಕಿ ಬಂದು
ಕುಂತ್ಕೆತಲ್ಲೋ ಮಾವ (ಜಗ ಮೆಚ್ಚಿದ ಮಗ)

ಮದುವೆ ಅಂದರೇನು ನೀ ಹೇಳು ಬೇಗನೆ
ಮೋಹದಿಂದ ಗಂಡು ಹೆಣ್ಣು ಕೂಡೋ ಅಪ್ಪಣೆ
ಕೂಡಲೇನು ಸುಖವುಂಟು ತಿಳಿಸೋ ಬೇಗನೆ
ಕೇಳಿಕೊಂಡು ಹೋಗುವೆ ಸುಮ್ಮನೆ (ಭಕ್ತ ಸಿರಿಯಾಳ)

ಮೆಚ್ಚಿದ ಹೆಣ್ಣಿನ ಮರ್ಮವ ತಿಳಿದು
ಮಂಚವ ಹತ್ತಿ ತಾಂಬೂಲ ಸವಿದು
ಮಾತಾಡಿ ಮದನನ ಜಗಳವ ಹೂಡಿ
ಜೀವ ತಣಿಸಲು ನಿನಗೇನು ಧಾಡಿ (ನಾಗಕನ್ಯೆ)

ತಾಳೆಹೂವು ತುರುಬಿನಲ್ಲಿ ಮುಡಿದುಕೊಂಡೆ
ತಂಪು ಕೆಂಪು ತಾಂಬೂಲ ಹಾಕಿಕೊಂಡೆ
ಮಳೆಗಾಲ ಮಾಡಿ ಇಳಿದು ಬರಲಾರೆ
ಮೆಲ್ಲನೆ ಬಾರಯ್ಯ ಗೋಡೆ ಏರಿ (ಸತ್ಯ ಹರಿಶ್ಚಂದ್ರ)

ಹುಣಸೂರರ ಗೀತೆಗಳ ವೈರುಧ್ಯ ಎಷ್ಟರ ಮಟ್ಟಿಗೆ ಇದೆ ಎಂದರೆ ಉಳಿದವರ ಕುರಿತು ಹೇಳುವಂತೆ ಈ ಗೀತೆ ಕೇಳುತ್ತಲೇ ಇದು ಇವರದು ಎಂದು ಗುರುತಿಸುವ ನಿಖರತೆ ಇವರ ಕುರಿತು ಸಾಧ್ಯವೇ ಇಲ್ಲ. ಅದು ಅವರ ಸಾಧನೆ ಕೂಡ ಹೌದು.

• • •

ನಟ, ನಿರ್ದೇಶಕ, ಸಾಹಿತಿ, ನಿರ್ಮಾಪಕ ಹೀಗೆ ಹಲವು ರಂಗದಲ್ಲಿ ದುಡಿದ ಕು.ರ.ಸೀತಾರಾಮಶಾಸ್ತ್ರಿ ಆ ದಿನಗಳಲ್ಲಿ ಚಿತ್ರರಂಗಕ್ಕೆ ಅಥೆಂಟಿಸಿಟಿಯ ಸ್ಪರ್ಶ ಕೊಟ್ಟವರು. ತಮ್ಮ ಕ್ಷೇತ್ರದಲ್ಲೆಲ್ಲ ನಾಟಕೀಯತೆಯ ಭಾರ ತಗ್ಗಿಸಿ ಜೀವನಕ್ಕೆ ಹತ್ತಿರವಾಗುವ ಸಹಜತೆಯ ಲಕ್ಷಣಗಳನ್ನು ತುಂಬಿದರು. ಅವರ ನಿರ್ದೇಶನದ ಚಿತ್ರಗಳಲ್ಲಿ ಈ ಅಂಶವನ್ನು ಪ್ರಧಾನವಾಗಿ ಗುರುತಿಸಬಹುದು. ತಾವು ಕೆಲಸ ಮಾಡಿದ ಎಲ್ಲ ರಂಗದಲ್ಲೂ ರಾಚನಿಕತೆಯ ಕಡೆಗೆ ಒತ್ತು ನೀಡಿದ ಕು.ರ.ಸೀ. ಚಿತ್ರಗೀತೆಗಳಲ್ಲಿ ಇಂತಹ ಲಕ್ಷಣಗಳನ್ನು ತಂದರು. ಅವರ ಗೀತೆಗಳಲ್ಲಿ ಸಾಮಾನ್ಯವಾಗಿ ಬೇರೆ ಚಿತ್ರಗೀತೆಗಳಲ್ಲಿ ಕಾಣದ ಅರ್ಥದ ಬೆಳವಣಿಗೆಯನ್ನು ಕಾಣಬಹುದು. ಪ್ರತಿಮೆಗಳ ಒಳಗೆ ಪ್ರತಿಮೆಗಳು ಬೆಳೆಯುವ Dynamic ಆದ ತಂತ್ರವಿದೆ. ಹೀಗೆಂದ ಮಾತ್ರಕ್ಕೆ ಕು.ರ.ಸೀ.ಯವರ ರಚನೆಗಳಿಗೆಲ್ಲಾ ಸಾಹಿತ್ಯಿಕ ಮೌಲ್ಯ ಇದೆ ಎಂದಲ್ಲ. ಅವರೂ ಹೇರಳ ರಾಜಿಗಳನ್ನು ಮಾಡಿಕೊಂಡಿದ್ದಾರೆ. ಆದರೆ ಆ ಹೊತ್ತಿಗೆ ಮಾಡಿದ್ದ ಏಕತಾನತೆ ಮುರಿದು ಮಣ್ಣಿನ ಸ್ಪರ್ಶ ನೀಡಿದ ಕೀರ್ತಿ ಅವರಿಗೆ ಸೇರಬೇಕು.

 

(ಚಿತ್ರ ೬೦-೬೫) ಸಿದ್ಧಲಿಂಗಯ್ಯ ಶಂಕರ ಮೊಕಾಶಿ ಪುಣೇಕರ್ ಪೂರ್ಣಚಂದ್ರ ತೇಜಸ್ವಿ ಹೆಚ್.ಎಸ್.ವೆಂಕಟೇಶಮೂರ್ತಿ ಎಂ.ಎನ್.ವ್ಯಾಸರಾವ್ ಕೆ.ಎಸ್.ನರಸಿಂಹಸ್ವಾಮಿ

ಕು.ರ.ಸೀ.ಯವರ ಗೀತೆಗಳಲ್ಲಿ ಬಹಳ ಮುಖ್ಯವಾಗಿ ಗಮನಿಸಬಹುದಾದ ಗೀತೆಗಳು ಕಥನಗೀತೆ ಎಂಬ ಪ್ರಕಾರಕ್ಕೆ ಸೇರಿದ್ದವು. ಇಂತಹ ಗೀತೆಗಳಲ್ಲಿ ಚಿತ್ರದ ಸನ್ನಿವೇಶಕ್ಕೆ ಹೊಂದಿಕೊಳ್ಳುತ್ತ ಅದನ್ನು ಮೀರಿ ಸೃಷ್ಟಿಸಿಕೊಂಡ ಕಥನದಿಂದ ಸಾರ್ವಕಾಲಿಕವಾಗಬಲ್ಲ ರಚನೆಗಳಿವೆ. ಇಂತಹ ಗೀತೆಗಳಲ್ಲಿ ಕಾವ್ಯಾತ್ಮಕತೆಯ ಜೊತೆಗೆ ಸಹಜ ನಾಟಕೀಯತೆಯೊಂದು ಕೆಲಸ ಮಾಡುವುದನ್ನು ಗಮನಿಸಬಹುದು. 'ಭೂ ಕೈಲಾಸ'ದ ''ರಾಮನ ಅವತಾರ ರಘುಕುಲ ಸೋಮನ ಅವತಾರ...'' ಗೀತೆಯಲ್ಲಿ ಇಡೀ ರಾಮಾಯಣದ ಕಥೆ ಹೇಳಲು ಪ್ರಯತ್ನಿಸಲಾಗಿದೆ. ಇಲ್ಲಿ ಕಥನದ ಜೊತೆಗೆ ಪಾತ್ರಗಳ ಬಗೆಗಿನ ವಿಮರ್ಶೆ ಕೂಡ ಬಂದಿರುವುದೊಂದು ವೈಶಿಷ್ಟ್ಯ . 'ಜೇನುಗೂಡು' ಚಿತ್ರದ ''ಜೇನಿರುಳು ಜೊತೆಗೂಡಿರಲು...'' ಗೀತೆ ಇನ್ನೊಂದು ಮಾದರಿ ವಿಶಿಷ್ಟ ಕಥನವನ್ನು ಒಳಗೊಂಡಿದೆ. ಮೊದಲ ರಾತ್ರಿಯಲ್ಲಿ ಗಂಡು-ಹೆಣ್ಣಿನ ಪಿಸುಮಾತಿನ ಹಾಡಿದು. ಹೆಣ್ಣಿನ ಲಜ್ಜೆ, ಆತಂಕ. ಗಂಡಿಗೆ ತಾನು ಅರಿತವನೆಂದು ತೋರಿಸಿಕೊಳ್ಳುವ ಹಂಬಲ. ಹೆಣ್ಣಿನ ಲಜ್ಜೆಯನ್ನು ನಿವಾರಿಸುವ ಪ್ರಯತ್ನದಲ್ಲಿ ''ಅಂಜದಿರು ಅಳುಕದಿರು ಅರಿವುದು ತಾನೆ ಸುಮ್ಮನಿರು...'' ಎಂದು ಸಮಾಧಾನ ಮಾಡುತ್ತಾನೆ. ಆದರೆ ಹೆಣ್ಣಿಗೆ ಇನ್ನೂ ಅನುಮಾನಗಳಿರುತ್ತವೆ, ''ಬಾಳುವಯಾ ಹೂಬಳ್ಳಿ ಚಿಗುರುವ ವೈಖರಿ ಹೀಗೇನೆ...'' ಎಂಬ ಮೂಲಭೂತ ಪ್ರಶ್ನೆಗೆ ಬರುತ್ತಾಳೆ. ಈ ಅನುಭವ ನಲ್ಲೆಯಷ್ಟೇ ಇವನಿಗೂ ಹೊಸದು, ಇನ್ನೇನು ಹೇಳಿಯಾನು ? ''ಕೇಳದಿರು ಇನ್ನೇನು ಹೊಸತನ ನನಗೂ ಶಿವನಾಣೆ...'' ಎಂದು ಸೋಲೊಪ್ಪಿಕೊಳ್ಳುತ್ತಾನೆ. ಇವರಿಬ್ಬರೂ ಎರಡನೇ ಚರಣದಲ್ಲಿ ಒಟ್ಟಾಗಿ ದಾಂಪತ್ಯ ಗೀತೆ ಹಾಡುತ್ತಾರೆ. ಇಲ್ಲಿ ಗಂಡು-ಹೆಣ್ಣಿನ ಮನೋಭಾವಗಳನ್ನು ಕು.ರ.ಸೀ. ಹಿಡಿದ ಕ್ರಮ ವಿಶಿಷ್ಟವಾಗಿದೆ. ಇಂತಹ ಸಹಜ ನಾಟಕೀಯತೆ ಅವರ ಬಹಳಷ್ಟು ರಚನೆಗಳಲ್ಲಿ ಸಿಕ್ಕುತ್ತದೆ. 'ವೀರಕೇಸರಿ' ಚಿತ್ರದ ''ಮೆಲ್ಲುಸಿರೇ ಸವಿಗಾನ...'' ಇಂತಹ ರಚನೆಗಳಲ್ಲೊಂದು. ಇದು ಕೂಡ ನಲ್ಲ-ನಲ್ಲೆಯರ ಸಂಭಾಷಣೆಯ ಶೈಲಿಯಲ್ಲಿದೆ. ''ಮನದಾಸೆ ದೂಡಿದ ಬಯಕೆ ಕನಸಾಗಿ ಕಾಣುವುದೇಕೆ ?...'' ಎಂದು ಹೆಣ್ಣು ಜಾಣತನದಿಂದ ಕೇಳಿದ ಪ್ರಶ್ನೆಗೆ ''ಮಧುಮಂಚಕೆ ವಿಧಿ ಹಂಚಿಕೆ ಅದಕೇಕೆ ಅಂಜಿಕೆ ಶಂಕೆ...'' ಎಂಬ ಅಷ್ಟೇ ಜಾಣತನದ ಉತ್ತರ ಕೊಡುತ್ತಾನೆ ಗಂಡು. ''ವಿರಹಾಗ್ನಿಯಿಂದ ಬೆಳದಿಂಗಳು ಬಿಸಿಲಾಗಿದೆ...'' ಎಂಬ ಪ್ರಶ್ನೆಗೆ ''ಪ್ರೇಮದ ಹೊನಲು...'' ಹರಿಸುವ ಜಾಣತನ ಇದೆ. ಗೀತೆಯ ಅಂತ್ಯ ಮಾತ್ರ ಕು.ರ.ಸೀ.ಯವರ ತಾತ್ವಿಕತೆಯಲ್ಲೇ ಸಂಗ್ರಹವಾಗಿ ಬಂದಂತೆ ದಾಂಪತ್ಯ ಮೀಮಾಂಸೆಯಾಗಿ ಮೈ ತಳೆದಿದೆ.

ಈ ದೇಹ ರಸಮಯ ಸದನ
ಈ ನೇಹ ಮಧು ಸಂಗ್ರಹಣ
ಚಿರನೂತನ, ರೋಮಾಂಚನ,
ದಾಂಪತ್ಯದ ಅನುಸಂಧಾನ.

ಕು.ರ.ಸೀ.ಯವರಲ್ಲಿ ಕಾಣುವ ಎರಡನೇ ವಿಧಾನ ನಲ್ಲ-ನಲ್ಲೆಯರ ಯುಗಳ ಗೀತೆಗಳು ಮತ್ತು ಹೆಣ್ಣನ್ನು ರೇಗಿಸುವ ತುಂಟತನದ ಗೀತೆಗಳು. ಇಂತಹ ಗೀತೆಗಳ ರಚನೆಯಲ್ಲಿ ಅವರು ಒಂದು ಪರಂಪರೆಯನ್ನೇ ನಿರ್ಮಿಸಿದ್ದಾರೆ.ಇಂದಿಗೂ ಈ ಮಾದರಿ ಗೀತೆ ರಚಿಸುವವರು ಅವರನ್ನು ಅನುಕರಿಸುವುದನ್ನು ಕಾಣಬಹುದು.

ನಲ್ಲ ನಲ್ಲೆಯರ ; ಸ್ನೇಹ ಮೋಹಗಳ
ಹಾಲು ಹೋಳಿಗೆ: ಮೆಲ್ಲುವ ವೇಳೆಗ
ಜೀವನ ಹೂವಿನ ಹಾಸಿಗ
(ಗೀತೆ : ''ಜೀವನ ಹೂವಿನ ಹಾಸಿಗೆ...'', ಚಿತ್ರ : ರಾಣಿ ಹೊನ್ನಮ್ಮ)

ತುಂಬಿ ಬಂದ ಒಲವಿನಿಂದ ಈ ಸವಿ ಬಂಧ
ಬಿಡಿಸಲಾರದಂಥ ಒಗಟು ಪ್ರೇಮದ ನಂಟು
ಅಲ್ಲೆ ಕೌಶಲ, ಅಲ್ಲೆ ತಳಮಳ
ಚಿಗುರೆ ಪ್ರೇಮ ಸಂಭ್ರಮ ಒಗರು ಸಂಯಮ
(ಗೀತೆ - ''ತುಟಿಯ ಮೇಲೆ...'', ಚಿತ್ರ - ಮನಮೆಚ್ಚಿದ ಮಡದಿ)

ಅವಳೊಲವೇ ಅಮರ ಕೃತಿ
ನನ್ನೆದೆ ತಳಮಳ ಹಿಂಗದ ತಾಳ
ಇನಿಯಳ ನೆನಪಿನ ಈ ಹಾಡು
ಚಿರತ ಜೀವದ ಸವಿ ಹಾಡು
(ಗೀತೆ: ''ನನ್ನ ಧಾಟಿಯಾ...'', ಚಿತ್ರ: ಚಿರತ ಜೀವ)

ಹೀಗೆ ಪ್ರೇಮದ ವಿವಿಧ ಮುಖಗಳನ್ನು ಬಿಂಬಿಸುವ ಸರಸ-ವಿರಸ-ವಿರಹ ಇಂತಹ ನೂರಾರು ಚಿತ್ರಣಗಳನ್ನು ಕು.ರ.ಸೀ. ಬಿಡಿಸಿಟ್ಟಿದ್ದಾರೆ. ಅವರ ಪ್ರೇಮಗೀತೆಗಳ ಮೇಲೆ ಕೆ.ಎಸ್.ನರಸಿಂಹಸ್ವಾಮಿ ಅವರ ಪ್ರಭಾವ ಅಷ್ಟಾಗಿ ಇಲ್ಲ. ಆದರೆ ಒಟ್ಟಾಗಿ ನವೋದಯ ಕಾವ್ಯದ ಮನೋಧರ್ಮವೊಂದು ಕೆಲಸ ಮಾಡುವುದನ್ನು ಕಾಣಬಹುದು. ಹೆಣ್ಣನ್ನು ಉಪಕರಣ ಎಂದು ಭಾವಿಸುವ ಮನೋಧರ್ಮವನ್ನು

ಸುಖದ ಉಪಕರ ಹೆಣ್ಣೆಂದು
ಜಗವೇ ಮರುಳಾಗಿ ನಂಬುವುದು
ಇರುವ ಒಳ ಮರ್ಮ ಬೇರೊಂದು
ಧರೆಯ ಧಾಂಡಿಗರು ಹೆಣ್ಣಿನ ಗುಲಾಮರು.
(ಗೀತೆ: ''ಕುಣಿಯುತ ಝುಣ ಝುಣ...'', ಚಿತ್ರ: ಸಂಶಯ ಫಲ)

ಎಂದು ಚುಚ್ಚಿದ್ದಾರೆ. ಅವರ ಮಟ್ಟಿಗೆ ಪ್ರೇಮದಲ್ಲಿ ಗಂಡು-ಹೆಣ್ಣು ಸಮಾನರು. 'ಚಿರತ ಜೀವ'ವಾಗುವುದು ಅವರ ಪ್ರೇಮ ಮೀಮಾಂಸೆ. ಬಹಳ ಮುಖ್ಯವಾಗಿ ಗುರುತಿಸಬೇಕಾದ ಅಂಶವೆಂದರೆ ಕು.ರ.ಸೀ. ಅಂತಹ ಹೊತ್ತಿನಲ್ಲೂ ದ್ವಂದ್ವಾರ್ಥ, ಅಶ್ಲೀಲದ ಕದ ತಟ್ಟಲಿಲ್ಲ. ಅಂತಹ ಸಂದರ್ಭವನ್ನು ಸೂಕ್ಷ್ಮವಾಗಿ ತೇಲಿಸಿಬಿಡುವ ಜಾಣತನ ಅವರದ್ದು. ಅವರ ಬಹಳ ಜನಪ್ರಿಯ ಕ್ಯಾಬರೆ ಗೀತೆ ''ದೂರದಿಂದ ಬಂದಂಥ ಸುಂದರಾಂಗ ಜಾಣ...''ದಲ್ಲಿ ಇದನ್ನು ಗುರುತಿಸಬಹುದು. ''ಬೀಸುಗಾಳಿ ಬಂದಾಗ ರಾಶಿ ತೂರಿಕೊ ಚಾಟಿ ಹೇರಿಕೆ, ದೋಚಿ ಜಾರಿಕೆ...'', ''ಅಂದ ಚಂದ ಕಂಡಾಗ ನಾಚಿಕೊಳ್ಳಬೇಡ, ಹಿಂದೆ ನಿಂತು ಕೈ-ಕೈಯ ಹಿಂಡಿಕೊಳ್ಳಬೇಡ...'', ''ಆಸೆ ಬಳ್ಳಿ ಬೆಂಡಾಗ ಬಾಡಬಾರದು, ಬೀಳಬಾರದು, ಕೀಳಬಾರದು...'' ಮುಂತಾದ ಈ ಗೀತೆಯ ಪ್ರತಿಮೆಗಳು ಅಶ್ಲೀಲ - ಶೀಲದ ಗೆರೆಯ ನಡುವೆ ಸರ್ಕಸ್ ಮಾಡಿವೆ. ಕೊನೆಗೆ ಗೆದ್ದಿರುವುದು ಕು.ರ.ಸೀ. ಅವರ ಕಾವ್ಯವೇ. ಅವರ ಕೆಣಕುವ ಎರಡು ಗೀತೆಗಳಲ್ಲಿ ಮಾತ್ರ ಕೊಂಚ ಸಂಯಮ ದಾಟಿದ್ದು ಕಾಣುತ್ತದೆ. ಅವರಲ್ಲೂ ''ಸ್ವಾಭಿಮಾನದ ನಲ್ಲೆ ಸಾಕು ಸಂಯಮ ಬಲ್ಲೆ...'' ಎಂದು ಕೆಣಕುವ 'ವೀರಕೇಸರಿ' ಗೀತೆಯಲ್ಲಿ ''ತುಂಬು ಹರಯದ ಹೊಸ ಹೆಣ್ಣೆ ಒಲೆಯ ಮೇಲಿನ ಹಸಿ ಬೆಣ್ಣೆ...'' ಎಂದಿರುವುದು, ಹಾಗೆಯೇ 'ಕನ್ಯಾ ರತ್ನ'ದ ''ಬಿಂಕದ ಸಿಂಗಾರೀ...'' ಎಂದು ಕೆಣಕುವಾಗ ''ಮಧುವಿಲ್ಲದೆ ಮದವೇರಿವ ನಿನ್ನಂದ ಚಂದ ಮಕರಂದ...'' ಎಂದು ಮತ್ತ ಹಳಿಯ ಮೇಲೆ ತಂದಿದ್ದಾರೆ.

ಕು.ರ.ಸೀ.ಯವರ ಮೂರನೇ ಪ್ರಕಾರದ ಗೀತೆಗಳು ತಾತ್ವಿಕತೆಯ ನೆಲೆಯುಳ್ಳವು. ಸರಳವಾದ ಶಬ್ದಗಳಲ್ಲಿ ಹಿರಿದಾದ ಅರ್ಥವನ್ನು ಬಹುಜನ ಗ್ರಾಹ್ಯವಾಗುವಂತೆ ಹೇಳುವ ಚಮತ್ಕಾರ ಅವರ ಗೀತೆಗಳಲ್ಲಿ ಕಾಣಬಹುದು. 'ಕಲ್ಪವೃಕ್ಷ'ದ ''ಜಯತೇ, ಜಯತೇ...'' ಗೀತೆ ಇದಕ್ಕೊಂದು ಉತ್ತಮ ಉದಾಹರಣೆ. ಹಾಗೆಯೇ

ಈ ದೇಹ ಮೂರು ದಿನ ಅಲ್ಲವೇನೋ
ಮೃತ್ಯು ಸನ್ನಾಹ ಬೆನ್ನ ಹಿಂದೆ ಬಲ್ಲೆಯೇನೋ

ಒಂದಾಗಿ ಬಾಳುವ ಒಲವಿಂದ
ಸಹ ಜೀವನ ಸವಿಜೇನಿನ ಸದನ

ಮುಂತಾದ ಗೀತೆಗಳು ಸರಳ ತಾತ್ವಿಕತೆಯ ಸುಂದರ ಪ್ರತಿಪಾದನೆಯಾಗಿವೆ. ಕು.ರ.ಸೀ.ಯವರ ಅತ್ಯುತ್ತಮ ತತ್ವಗೀತೆ ಎಂದರೆ 'ಬೆರೆತ ಜೀವ' ಚಿತ್ರದ ''ಅಂಕದ ಪರದೆಯು ಜಾರಿದ ಮೇಲೆ...'' ತಮಿಳು ಗೀತೆಯನ್ನು ಆಧರಿಸಿದ ಈ ರಚನೆ ಎಷ್ಟರ ಮಟ್ಟಿಗೆ ಕನ್ನಡದ್ದಾಗಿದೆ ಎಂದರೆ ಇದನ್ನು ಬೇರೆ ಮೂಲದ್ದು ಎಂದು ಒಪ್ಪುವುದೇ ಕಷ್ಟ.

ಅಂಕದ ಪರದೆ ಜಾರಿದ ಮೇಲೆ
ನಾಟಕವಿನ್ನೂ ಉಳಿದಿಹುದೆ ?
ವಹಿಸಿದ ಪಾತ್ರ ತೀರಿದ ಮೇಲೆ
ರಂಗದ ಬಿದದ ನಿಲಬಹುದ ?

ಕು.ರ.ಸೀ.ಯವರ ರಚನೆಗಳಲ್ಲಿ ಪುನರಾವರ್ತಿತವಾಗುವ ಶಬ್ದ 'ರಸ'. ಇದನ್ನು ಬೇರೆ ಬೇರೆ ಗೀತೆಗಳಲ್ಲಿ ಹೊಸ ಅರ್ಥದಲ್ಲಿ ಬಳಸಿದ್ದಾರೆ. 'ಪಾವನ ಮಗಳು' ಚಿತ್ರದ ನಾಯಕಿ ಪ್ರಿಯಕರನನ್ನು ಸೇರಲಾರೆ ಎಂದು ಕೊರಗುವಾಗ ''ಒಲಿಸಿದ ದೇವನ ರಸಪೂಜೆಗೆ ನಾ ನಿಲುಕದ ಹೂವಾದೆ...'' ಎಂದು ಕೊರಗುತ್ತಾಳೆ. ''ಈ ದೇಹ ರಸಮಯ ಸದನ, ರಸಪೂರ್ಣವಾಗಲಿ...'' ಹೀಗೆ ಒಂದಲ್ಲ ಒಂದು ಕಡೆ ರಸದ ಪ್ರಯೋಗವಾಗಿದೆ. ಅಷ್ಟೇಕೆ, ಕೆಣಕುವ ಹಾಡಲ್ಲಿ ''ಈ ಸವಿಗಳಿಗೆ'' ಪ್ರತ್ಯಕ್ಷವಾಗಿದೆ. ಪ್ರಾಸದ ಮಟ್ಟಿಗೆ ಕು.ರ.ಸೀ. ತೋರಿಸಿದ ನಿಯಂತ್ರಣ ಶಾಬ್ದಿಕ ಶರೀರದ ಕುರಿತು ಹೊಸ ಸಾಧ್ಯತೆಯನ್ನು ತೋರಿಸಿತು. ಅವರು ಅನುಪ್ರಾಸಗಳನ್ನು ಸಹಜವಾಗಿ ಬಳಸಿದ್ದಾರೆ. ''ಮಧುಮಂಚಕೆ ವಿಧಿ ಹಂಚಿಕೆ ಅದಕೇಕೆ ಅಂಜಿಕೆ ಶಂಕೆ ನಿನ್ನಂದ ಚಂದ ಮಕರಂದ...'' ಹೀಗೆ ಒಂದು ಅಕ್ಷರವನ್ನು ಶ್ರುತಿ ಸಹ್ಯವಾಗುವಂತೆ ಪುನರಾವರ್ತಿಸಿ ನಾದ ಹೊರಡಿಸುವ ಕ್ರಮ ಅವರ ಗೀತೆಗಳಿಗೆ ಅಪಾರ ನಾದಮಯತೆ ತಂದುಕೊಟ್ಟಿದೆ.

ಒಂದು ಕೊರಗಿನ ಸಂಗತಿ ಎಂದರೆ ಕು.ರ.ಸೀ. ಚಿತ್ರರಂಗದ ಆರಂಭಿಕ ಘಟ್ಟದಲ್ಲಿ ಬಂದವರು. ಆಗಿನ್ನೂ ತಾಂತ್ರಿಕವಾಗಿ ಯಾವ ಮಟ್ಟಿಗಿನ ಬೆಳವಣಿಗೆಯೂ ಆಗಿರಲಿಲ್ಲ. ಅವರ ಸೊಗಸಾದ ಗೀತೆಗಳು ಚಿತ್ರವ್ಯಾಕರಣದ ಒಳಕ್ಕೆ ಸೇರುವ, ಅವುಗಳ ಅರ್ಥ ಹಚ್ಚಿಸುವ ಕ್ಯಾಮರಾ ಸಾಧ್ಯತೆ ಇವೆಲ್ಲ ಲಭ್ಯವಾಗಲಿಲ್ಲ. ಅವರೇ ನಿರ್ದೇಶಕರಾದ ಚಿತ್ರಗಳಲ್ಲೂ ಗೀತೆಗಳ ದೃಶ್ಯೀಕರಣ ಮನಸ್ಸಿನಲ್ಲಿ ನಿಲ್ಲುವುದಿಲ್ಲ. ಗೀತೆಗಳ ಅರ್ಥ ಮತ್ತು ನಾದವೇ ಹೆಚ್ಚಾಗಿ ಕಾಡುತ್ತದೆ.

• • •

ಇನ್ನೊಬ್ಬ ಹಿರಿಯ ಗೀತ ರಚನಕಾರ ಕಣಗಾಲ್ ಪ್ರಭಾಕರಶಾಸ್ತ್ರಿ. ನಿರ್ದಿಷ್ಟ ಸಾತತ್ಯವುಳ್ಳ ಗೀತೆಗಳನ್ನು ಬರೆದರು. ರಂಗಗೀತೆಗಳಿಗೆ ಸಮಾನಾಂತರವಾದ ಶಬ್ದ ಶರೀರ ಬಳಸಿಕೊಂಡ ಅವರಲ್ಲಿ ಸಂಸ್ಕೃತ ಭೂಯಿಷ್ಠವಾದ ಶಬ್ದಗಳು ತುಸು ಹೆಚ್ಚು. ಹೀಗಿದ್ದರೂ ಅವುಗಳ ನಾದಮಯತೆ ಕೊಂಚವೂ ಕಮ್ಮಿಯಾಗಿರಲಿಲ್ಲ.

ಅವರ ಗೀತೆಗಳಲ್ಲೆಲ್ಲ ರಾಧಾ-ಮಾಧವರ ಪ್ರೇಮವಿಲಾಸ, ನಿರಂತರವಾಗಿ ಹರಿಯುವ ಒಲವಿನ ನದಿ, ಮನವೆಲ್ಲಾ ಮೈ ಮರೆಯುವ ಬೃಂದಾವನ ಸ್ಥಾಯಿಯಾಗಿ ಕಂಡುಬರುತ್ತದೆ. ಅವರಲ್ಲಿ ಒಲವನ್ನು ಅವರು ಬೇರೆ ಬೇರೆ ಗೀತೆಗಳಲ್ಲಿ ಬಳಸಿರುವ ಕ್ರಮವೇ ವಿಶಿಷ್ಟವಾಗಿದೆ.

ಒಲವಿನ ಪ್ರಿಯಲತೆ ಅವಳದೇ ಚಿಂತೆ
ಅವಳ ಮಾತೇ ಮಧುರ ಗೀತೆ ಅವಳೆ ನನ್ನಾ ದೇವತೆ
(ಗೀತೆ : ''ಒಲವಿನ ಪ್ರಿಯಲತೆ...'', ಚಿತ್ರ : ಕುಲವಧು)

ಒಲವ ನನ್ನ ಒಲಿದಂತೆ
ಕಲ್ಲು ಕಥೆಯ ಉಲಿದಂತೆ
(ಗೀತೆ: ''ಒಂದೇ ಒಂದು...'', ಚಿತ್ರ: ಸಾಕುಮಗಳು)

ಜೀವನವಲ್ಲ ಗೋಕುಲವಾಗಿ
ಒಲವೇ ಯಮುನಾ ನದಿಯಾಗಿ
ನಾವೇ ರಾಧಾ ಮಾಧವರಾಗಿ
ಆಡುವ ಮಾತೇ ಪ್ರೇಮ ವಿಲಾಸ
(ಗೀತೆ: ''ರಾಧಾ ಮಾಧವ...'', ಚಿತ್ರ: ಸ್ಕೂಲ್ ಮಾಸ್ಟರ್)

ಒಲವಿನ ಪೂಜೆಗೆ ಒಲವೇ ಮಂದಾರ
ಒಲವೆ ಬದುಕಿನ ಬಂಗಾರ
ಒಲವಿನ ನೆನಪೇ ಹೃದಯಕೆ ಮಧುರ
ಒಲವೇ ದೈವದ ಸಾಕ್ಷಾತ್ಕಾರ
(ಗೀತೆ: ''ಒಲವೆ ಜೀವನ...'', ಚಿತ್ರ: ಸಾಕ್ಷಾತ್ಕಾರ)

ಒಲವಿನ ಸವಿಯಾ ಸವಿಯುವ ಶುಭದಿನ
ಆತ್ಮ ಸಾಕ್ಷಿಯ ಪ್ರೇಮ ಕಲ್ಯಾಣ
(ಗೀತೆ: ''ಬಹು ಜನ್ಮದಾ...'', ಚಿತ್ರ: ಶ್ರೀಕೃಷ್ಣದೇವರಾಯ)

ಇನ್ನೊಂದು ಅರ್ಥದಲ್ಲಿ ಇದು ಅವರ ಮಿತಿಯೂ ಹೌದು. ಏಕೆಂದರೆ ಅವರ ಪ್ರೇಮಗೀತೆಗಳೆಲ್ಲಾ ಇಂತಹ ಸ್ಥಾಯಿ ಕಲ್ಪನೆಯ ಸುತ್ತಲೇ ಬೆಳೆಯುತ್ತವೆ. ಅವುಗಳಲ್ಲಿ ಸಂವಾದದ ಸೊಗಸು ಕಾಣುವುದಿಲ್ಲ. 'ಸಾಕುಮಗಳು' ಚಿತ್ರದ 'ಒಂದೇ ಒಂದು ಹೊಸ ಹಾಡು' ಎಂಬ ಪ್ರಣಯಗೀತೆ ತೆಗೆದುಕೊಂಡರೆ ಗಂಡು ''ಹೃದಯವೀಣೆ'' ಎಂದರೆ ಹೆಣ್ಣು ''ನುಡಿಸಿ ಹಾಡು'' ಎನ್ನುತ್ತಾಳೆ. ಹಾಗೆ ''ಕಣ್ಣು ಕಣ್ಣು ಕರೆದಂತೆ ಮಾತು ಮಾತು ಬೆರೆತಂತೆ'' ಎಂದರೆ ''ತುಂಗಭದ್ರೆ ಸಂಗಮದಂತೆ ನಾನು ನೀನು ಕಲೆತಂತೆ'' ಎಂಬ ಉತ್ತರ ಕೂಡ ಬರುತ್ತದೆ. ಇದನ್ನು ಅರ್ಥದಲ್ಲಿ ಗುರುತಿಸಿದರೆ ತೀರ ಅಸಹಜ ಅನ್ನಿಸುವ ಸಂಭಾಷಣೆ ಕೂಡ ಹೌದು. ಆದರೆ ಅವರ ಪ್ರೇಮಗೀತೆಗಳು ಹೊಸ ರೂಪಕಗಳನ್ನು ನೀಡದಿದ್ದರೂ ಶುಷ್ಕವಾಗಿರಲಿಲ್ಲ. ರಂಗಗೀತೆಯ ಹಿನ್ನೆಲೆಯಲ್ಲಿ ಇವನ್ನು ನೋಡಿದರೆ ಚಿತ್ರಗೀತೆಯ ಹೊಸ ಸಾಧ್ಯತೆಗೆ ಕಣಗಾಲ್ ತಮ್ಮನ್ನು ಒಪ್ಪಿಸಿಕೊಳ್ಳಲಿಲ್ಲ ಎಂದು ಹೇಳಬಹುದು ಅಷ್ಟೆ.

ಕಣಗಾಲ್ ಅವರ ಉಳಿದ ಗೀತೆಗಳಲ್ಲಿ ಬೇರೆ ಬೇರೆ ಪ್ರಕಾರಗಳನ್ನು ಗುರುತಿಸುವುದು ಕಷ್ಟ. ಅವರ ಎಲ್ಲ ಗೀತೆಗಳ ಶಬ್ದ ಶರೀರ ಒಂದೇ ಮಾದರಿಯಲ್ಲಿರುವುದು ಇದಕ್ಕೆ ಮುಖ್ಯ ಕಾರಣ. 'ಸ್ಕೂಲ್ ಮಾಸ್ಟರ್' ಚಿತ್ರದ ''ಭಾಮೆಯ ನೋಡಲು ತಾ ಬಂದ'' ಎಂಬಂತಹ ಬೃಂದಾವನದ ಪ್ರತಿಮೆ ಒಳಗೊಂಡಿದ್ದರೂ ಚಮತ್ಕಾರದ ರಚನೆ ''ನಾಗೋಲಿಯ ದಿನ ರಾಗೋಲ್ಲಾಸದಿ ಊದಿದ ಕೊಳಲಿಗೆ ಮೋಹದಿ ಮೈ ಬಿಗಿವಾಗ ಅವನೇ ಜನಾರ್ದನ'' ಎಂದು ಅರಿವಾಯಿತು ಎಂಬಲ್ಲಿ ದಾಸರಪದಗಳಲ್ಲಿ ಕಾಣುವ ಜಾಣ್ಮೆ ಇದೆ. 'ಸಾಕ್ಷಾತ್ಕಾರ'ದ ''ಕಾದಿಹಳು ರಾಧೆ'' ಕೂಡ ಹೀಗೆ ''ಚಿತ್ರದ ಚಿತ್ರದೆ ಬರೆದಳು'' ಎಂದು ಕೊನೆಗೊಳ್ಳುತ್ತದೆ. 'ಶರಪಂಜರ'ದಲ್ಲಿ ಕಾವೇರಿಯನ್ನು ನದಿಗೆ ಮತ್ತು ಹೆಣ್ಣಿಗೆ ಹೋಲಿಸುತ್ತ ಹೋಗುವ ರಚನೆ ಕುತೂಹಲಕರವಾಗಿದೆ. ಹಾಗೆಯೇ ಅದೇ ಚಿತ್ರದಲ್ಲಿ ''ಬಿಳಿಗಿರಿ ರಂಗಯ್ಯ...'' ಗೀತೆಯಲ್ಲಿ ಎರಡು ಪ್ರತಿಮೆಗಳನ್ನು ಹೋಲಿಸುತ್ತ ಹೋದರೆ ಶ್ರೇಷ್ಠತೆ ಹೇಳುತ್ತಾ ಹೋಗುವ ಸಂವಿಧಾನವಿದೆ. ಬಿಡಿ ಬಿಡಿ ಪ್ರತಿಮೆಗಳ ಮೂಲಕ ಗೀತೆ ಕಟ್ಟುವ ಅವರಲ್ಲಿ ಇಂತಹ ಚಮತ್ಕಾರದ ಗೀತೆಗಳು ಬಹಳ ಸೊಗಸಾಗಿ ಮೂಡಿ ಬಂದಿದೆ.

ಸೊಗಸಾದ ಬಿಡಿ ಬಿಡಿ ಕಾವ್ಯ ಪ್ರತಿಮೆಗಳನ್ನು ಕಟ್ಟುವಂತೆ ಅನುಪ್ರಾಸದ ನೆರವಿನಿಂದ ಸಂಕೇತಗಳ ಸರಮಾಲೆಯನ್ನು ಪ್ರತಿಮೆಯಾಗಿಸುವ ಪ್ರಯತ್ನವನ್ನು ಅವರಲ್ಲಿ ಕಾಣಬಹುದು. ''ಸತಿ ಪತಿ ಒಲಿದ ರತಿ ಪತಿ ಗಾನ'' (ಗೀತೆ : ಬಹುಜನ್ಮದ), ''ಗಾಂಧಾರ ಭಾಷೆಯ ಪಕ್ಕಿಗಳಿಂಚರ'' (ಗೀತೆ : ಒಲವೇ ಜೀವನ ಸಾಕ್ಷಾತ್ಕಾರ) ಮುಂತಾದವು ಇದಕ್ಕೆ ಉದಾಹರಣೆ. ಒಟ್ಟಿನಲ್ಲಿ ಕಣಗಾಲ್ ಅವರಲ್ಲಿ ಬೆಳವಣಿಗೆ ಕಾಣದ, ಆದರೆ ಬಹು ಆಕರ್ಷಕವಾದ 'ಗೀತ ಗೋವಿಂದ', ದಾಸರಪದ ಮುಂತಾದ ಭಾಗವತ ಪರಂಪರೆಯಿಂದ ಪ್ರೇರಿತವಾದ 'ರಾಧಾ ಮಾಧವ' ವಿನೋದ ಹಾಸ ರೂಪುಗೊಂಡಿದ್ದನ್ನು ಕಾಣಬಹುದು.

• • •

ಚಿ.ಸದಾಶಿವಯ್ಯನವರು ಹಲವು ಡಬ್ಬಿಂಗ್ ಚಿತ್ರಗಳಿಗೂ ಗೀತೆ ರಚಿಸಿದ್ದರು - ಮೂಲತಃ ನಾಟಕಕಾರರು. ಅವರ ಬಹುತೇಕ ಗೀತೆಗಳಲ್ಲಿ ಅನ್ಯ ಭಾಷೆ ಹೋಲುವ ಶಬ್ದಗಳು ಯಥೇಚ್ಛವಾಗಿ ಸಿಕ್ಕುತ್ತವೆ. ಹವ್ಯಾಸಿ ಜೊತೆಗೆ ಕನ್ನಡದ ಸಾಮಾನ್ಯ ವ್ಯಾಕರಣ ನಿಯಮಗಳನ್ನು ಉಲ್ಲಂಘಿಸುವ ಉದಾಹರಣೆಗಳೂ ಸಿಕ್ಕುತ್ತವೆ. ರಂಗಭೂಮಿಯ ಹಿನ್ನೆಲೆಯಿಂದ ಬಂದ ಅವರಲ್ಲಿ ಸಂಸ್ಕೃತದ ಪ್ರಭಾವವೂ ಹೆಚ್ಚು.

ಭಾರತೀಯ ಸಂಸ್ಕೃತಿಯಲ್ಲಿ ಗಂಡ ಹೆಂಡತಿಯನ್ನು ಏಕವಚನದಲ್ಲಿ ಕರೆಯುವುದು, ಹೆಂಡತಿ ಗಂಡನನ್ನು ಬಹುವಚನದಲ್ಲಿ ಕರೆಯುವುದು ಸಹಜ ಎಂದೇ ಪರಿಗಣಿತವಾಗಿದೆ. ಇದರ ಪರಾಮರ್ಶೆ ಏನೇ ಇದ್ದರೂ ವಾಸ್ತವ ಇರುವುದು ಹೀಗೆಯೇ. ಆದರೆ ನಲ್ಲ ಎನ್ನುವಾಗ ಬರುವ ಪ್ರೇಮದ ಕಲ್ಪನೆಯಲ್ಲಿ ಬಹುವಚನ ಅಸಹಜ

ಎನ್ನಿಸುತ್ತದೆ. 'ಕನ್ಯಾರತ್ನ'ದ ಸದಾಶಿವಯ್ಯನವರ ಗೀತೆ ''ಎಲ್ಲಿಹರೊ ನಲ್ಲ'' ಎಂದು ಸಂಬೋಧಿಸುತ್ತದೆ. ಗೀತೆ ಮುಗಿಯುವ ವೇಳೆಗೆ ಅವಳು ಎಷ್ಟು ಜನ ನಲ್ಲರನ್ನು ಕರೆಯುತ್ತಿದ್ದಾಳೆ ಎಂಬ ಅನುಮಾನ ಬರುತ್ತದೆ. 'ಮಾಯಾಬಜಾರ್' ಚಿತ್ರದ ''ನೀನೇ ನನ್ನನ್ನು ನೆನೆಸುತಿಹೆ''ಯಲ್ಲಿ ಹೆಣ್ಣು ಬಹುವಚನದಲ್ಲಿ ಗಂಡನ್ನು ಸಂಬೋಧಿಸಿದ ರೀತಿಯಲ್ಲಿ ವಿಶೇಷಣ ಗಳಿಲ್ಲದಿರುವುದರಿಂದ ಪ್ರಯೋಗ ಸಹಜವಾಗಿದೆ. ಇದು ಸದಾಶಿವಯ್ಯನವರ ರಚನೆ ಪಡೆಯಬಹುದಾದ ಸಾಧ್ಯತೆಯೂ ಹೌದು.

(ಚಿತ್ರ೬೬-೬೭)ಎಂ.ಎಸ್.ಆರಾಧ್ಯ

ಜಿ.ವಿ.ಅಯ್ಯರ್

'ಅಮರಶಿಲ್ಪಿ ಜಕಣಾಚಾರಿ' ಚಿತ್ರದ ''ಏನೋ ಎಂತೋ...'' ಗೀತೆಯಲ್ಲಿ ''ಸುಖಿಪಾಂತ ಅನುಭಾವ'' ಎಂಬ ಪ್ರಯೋಗವಿದೆ. ಬಹಳ ಸುಲಭವಾಗಿ ಸುಖವಾದ ಎಂದಾಗಬಹುದಾಗಿದ್ದ ಈ ಪ್ರಯೋಗ ಅಪಭ್ರಂಶದ ದಾರಿ ಹಿಡಿದ ಕಾರಣವೇ ಸೋಜಿಗ. ಹಾಗೆಯೇ 'ಸಂತ ತುಕಾರಾಂ' ಚಿತ್ರದ ''ಅಮೃತಕ್ಕು ತಾ ರುಚಿ ನಾಮ ನಿನ್ನ ದೇವ...'' ಗೊಂದಲಗಳು ತುಂಬಿದ ರಚನೆ. ಇದನ್ನು ''ನಿನ್ನ ನಾಮ ದೇವ'' ಎಂದು ಹೊಂದಿಸಿ ಓದಬೇಕು. ಈ ಗೀತೆಯುದ್ದಕ್ಕೂ ಇಂತಹ ಅಸಂಬದ್ಧಗಳಿವೆ. ಅವರ ಡಬ್ಬಿಂಗ್ ಮೂಲದ ''ವಿವಾಹ ಭೋಜನವಿದು...'' ''ಆಹಾ ನನ್ನ ಮದುವೆಯಂತೆ...'', ''ಆದರೇನೊ ಆಯಿತ್ಯೆ...'' ಮುಂತಾದ ಗೀತೆಗಳು ಎಷ್ಟೋ ಕಡೆ ಕನ್ನಡವೆಂದೇ ಅನ್ನಿಸದಷ್ಟು ಅನುಕರಣೆಯಲ್ಲಿ ಸಿಕ್ಕಿಕೊಂಡಿವೆ. ಆದರೆ ರಾಗಸಂಯೋಜನೆ, ಗಾಯನ ಇವನ್ನು ಮುಚ್ಚುವಂತೆ ಮಾಡಿದವು.

ಸದಾಶಿವಯ್ಯನವರ ಒಳ್ಳೆಯ ರಚನೆಗಳೂ ಇವೆ. ಉಳಿದವರಂತೆ ಕಥನ, ನಾಟಕೀಯತೆಯಂತಹ ಅಂಶ ಇವರಲ್ಲಿ ಕಾಣದಿದ್ದರೂ ಅಲ್ಲಲ್ಲಿ ಕಾವ್ಯಾತ್ಮಕ ಪ್ರತಿಮೆಗಳು ಇಣುಕಿ ಅವರ ಸಾಮರ್ಥ್ಯದ ಅರಿವುಂಟಾಗುವಂತೆ ಮಾಡುತ್ತವೆ. ''ಒಂದರಿಂದ ಇಪ್ಪತ್ತರವರೆಗೂ...'' ಎಂಬ 'ಮೊದಲ ತೇದಿ' ಚಿತ್ರದ ಗೀತೆ ಸಂಬಳ ನಂಬಿ ಬದುಕುವ ಮಧ್ಯಮ ವರ್ಗದವರ ಸಂಕಷ್ಟಗಳನ್ನು ಸರಳ ಉದಾಹರಣೆಯಲ್ಲಿ ಹೇಳಿದೆ. ಮೋಜು, ಮನರಂಜನೆ ಎರಡೂ ಸಮ್ಮಿಶ್ರಣಗೊಂಡ ಗೀತೆ ಇದು.

ನೀಲಿ ಗಗನದಿ ತೇಲಿ ಹುಡುಕಿದೆ
ಕಾಮನ ಬಿಲ್ಲನು ಏರಿ ನೋಡಿದೆ
ಚಂದ್ರ ತಾರೆಗಳ ಸೇರಿ ಕೇಳಿದೆ
ಎಲ್ಲಡಗಿರುವೆ ಬಳಿ ಸಾರಾ
(ಗೀತೆ: ''ಚೆಲುವಾಂತ ಚೆನ್ನಿಗ...'', ಚಿತ್ರ: ಅಮರಶಿಲ್ಪಿ ಜಕಣಾಚಾರಿ)

ಎಂಬ ಅಭಿಸಾರಿಕೆಯ ಹುಡುಕಾಟ ಸೊಗಸಾದ ಪರಿಕಲ್ಪನೆ.

ಮುಗುಳುನಗೆಯ ಬೆಳಕ ಬೀರಿ
ಕಂಗಳಲ್ಲೆ ಒಲವ ತೋರಿ
ಕರುಳ ಕುಣಿಸಿ ಮನವ ಕದ್ದ ಚೆಲುವೆ ಯಾರಿದು.
(ಗೀತೆ: ''ಕನಸಿನಾ ದೇವಿ...'', ಚಿತ್ರ: ಪ್ರತಿಜ್ಞೆ)

ಎಂಬ ಪ್ರೇಮಿಯ ಮುಗ್ಧತೆ ಕೂಡ ಅವರ ಗೀತೆಗಳಲ್ಲಿದೆ. ಆದರೆ 'ಪಾರ್ವತಿ ಕಲ್ಯಾಣ', 'ಮಾಯಾಬಜಾರ್' ಚಿತ್ರಗಳಲ್ಲಿನ ಸಂಸ್ಕೃತ ಭೂಯಿಷ್ಠ ರಚನೆಗಳೇ ನೆನಪಾದರೆ ಸದಾಶಿವಯ್ಯನವರ ಇಂತಹ ತಾಜಾ ಪ್ರತಿಮೆಗಳು ಅಲ್ಲೆಲ್ಲ ಎಲ್ಲಿ ಮರೆಯಾಗಿದವು ಎಂಬ ನೋವು ಕಾಡುತ್ತದೆ.

• • •

ಕನ್ನಡ ಚಿತ್ರರಂಗದ ಹಿರಿಯ ವ್ಯಕ್ತಿಗಳಲ್ಲಿ ಒಬ್ಬರಾದ ಜಿ.ವಿ.ಅಯ್ಯರ್ ಗೀತ ರಚನೆಯಲ್ಲೂ ಕೈಯಾಡಿಸಿದ್ದಾರೆ. ಸ್ವತಃ ನಿರ್ದೇಶಕರಾದ ಕಾರಣದಿಂದಲೋ ಏನೋ ಅವರ ಗೀತೆಗಳಲ್ಲಿ ಗುರುತಿಸಬಹುದಾದ ಪ್ರಧಾನ ಅಂಶ ಎಂದರೆ ಇವರ ಕೆಲವು ರಚನೆಗಳಾದರೂ ಚಿತ್ರವ್ಯಾಕರಣದ ಒಳಗೆ ಸೇರಿಕೊಳ್ಳುತ್ತವೆ. 'ಗಾಳಿಗೋಪುರ' ಚಿತ್ರದ ''ನನ್ಯಾಕೆ ನೀ ಹಾಂಗೆ ನೋಡುವೆ...'' ಚಿತ್ರದ ಸನ್ನಿವೇಶವನ್ನು ಆಧರಿಸಿ ಬೆಳೆಯುವ ನಲ್ಲ ನಲ್ಲೆಯರ ಸಂಭಾಷಣೆ ಶೈಲಿಯ ಗೀತೆ. ಹಾಗೆಯೇ 'ಅಮ್ಮ' ಚಿತ್ರದ ''ಬಂಗಾರವಾಗಲಿ ನಿನ ಬಾಳೆಲ್ಲ / ನೀನಾಗಿ ನೀಡಿದರೆ ಬೇಡ ಎನ್ನುವುದಿಲ್ಲ...'' ಅಕ್ಷರಶಃ ಸಂಭಾಷಣೆಯ ಮುಂದುವರಿಕೆಯಾಗಿ ಬರುತ್ತದೆ. 'ಕಣ್ತೆರೆದು ನೋಡು' ಚಿತ್ರದ ''ಬಂಗಾರದೊಡವೆ ಬೇಕೆ ನೀರೆ...'' ಗೀತೆ ನಾಯಕ ನದಿಯನ್ನು ಕುರಿತು ಹೇಳಿದರೂ ನಾಯಕಿ ತನ್ನ ಬಗ್ಗೆ ಎಂದುಕೊಂಡು ಅವನ ಕೆನ್ನೆಗೆ ತಟ್ಟುತ್ತಾಳೆ. ಈ ಗೀತೆಯುದ್ದಕ್ಕೂ ಈ ಎರಡು ಅರ್ಥಗಳೂ ಧ್ವನಿಸುವಂತೆ ಚಮತ್ಕಾರಪೂರ್ಣವಾಗಿ ಅಯ್ಯರ್ ಸಂಕೇತಗಳನ್ನು ಜೋಡಿಸಿದ್ದರೆ, ಸಂಭಾಷಣೆಯ ಶೈಲಿಯಲ್ಲಿ ತುಂಟತನ ಬೆರೆಸಿ ಸಹಜವಾಗಿ ಬೆಳೆಸುವುದು ಅವರ ಬಹುತೇಕ ಗೀತೆಗಳ ಲಕ್ಷಣ. ಜೊತೆಗೆ ಚಿತ್ರದ ಹಾಸ್ಯ ಪಾತ್ರಗಳಿಗೂ ಒಪ್ಪುವ ''ರಾತ್ರಿಯಲಿ ಮಳೆ ಬಂದು ನಿನ್ನ ನೆನಪ ಸುರಿದಿದೆ....'', ''ನೀನೇ ಕಿಲಾಡಿ ಹೆಣ್ಣು...'' ರಾಜ್ಯದ ಎಲ್ಲ ಜಿಲ್ಲೆಗಳು, ಜನರ ಸ್ವಭಾವ, ಉಡುಪುಗಳನ್ನೆಲ್ಲಾ ಕಣ್ಣಿಗೆ ಕಟ್ಟುವಂತೆ ಹೇಳುವ ''ಮುತ್ತಿನ ನತ್ತೊಂದು ಮೂಗಿಂದ ಜಾರಿತು...'' ಮುಂತಾದ ರಚನೆಗಳನ್ನು ಅಯ್ಯರ್ ಅವರಲ್ಲಿ ಕಾಣಬಹುದಾಗಿದೆ. ಬಿಡಿ ಬಿಡಿ ಸಂಕೇತಗಳ ಪ್ರತಿಮೆ ಕಟ್ಟುವ ಅಯ್ಯರ್ ಅವರಲ್ಲಿ ಕೆಲವೊಮ್ಮೆ ತಾಜಾ ಅನ್ನಿಸಬಲ್ಲ ಹೊಸತನ, ಹೊಳಪು ಕಂಡಿದೆ.

ಮೆಲ್ಲಗೆ ನೀ ಬಂದು ಕೈಮುಟ್ಟಿದಾಗ
ನಲ್ಲೆಯ ಈ ದೇಹ ಝಲ್ಲೆನ್ನದೆ
ನೀ ನಿಂದು ಬಳಿ ನಿಂದು ನಗೆ ಬೀರದೆ
ಜೇನಂಥ ಎದೆ ಹಿಂಡಿ ಚೆಲ್ಲಾಡಿದೆ
(ಗೀತೆ: ''ನನ್ಯಾಕೆ...'', ಚಿತ್ರ : ಗಾಳಿಗೋಪುರ)

ಈ ಕೆಸರಾಣೆ ಹಸುರಾಗಿ ತೂಗಿ
ಹೊಂಬಯಲಾಗೆ ತೆನೆಯಾಗಿ ಬಾಗಿ
ಭೂತಾಯಿ ಬಂದು ನಗೆಮೊಗದಿಂದ ನಿಂದು
ಸಂತೋಷ ಎನಗಾಗಿ ತಂದಳಿಂದು
(ಗೀತೆ: ''ಅನುರಾಗದೆ....'', ಚಿತ್ರ: ಗಾಳಿಗೋಪುರ)

ಈ ಕಣ್ಣಿನ ಆಲ್ಬಂ ಅಲ್ಲಿ
ನಿನ್ನ ಚಿತ್ರವೇ ನೂರಾರಿದೆ
ತಿರು ತಿರುವಿ ಒಂದೊಂದೆ ನಾ ನೋಡಿದೆ
ನೋಡಿದಾ ಮೇಲೆ ಇನ್ನೇನಿದೆ?
(ಗೀತೆ: ''ರಾತ್ರಿಯಲಿ...'', ಚಿತ್ರ: ಅಮ್ಮ)

ಇಂತಹ ಹಲವು ಪ್ರತಿಮೆಗಳು ಅವರಲ್ಲಿ ಸಿಕ್ಕುತ್ತವೆ.

ಅಯ್ಯರ್ ಕನ್ನಡ ನಾಡು-ನುಡಿ ಕುರಿತೇ ಹಲವು ಗೀತೆಗಳನ್ನು ರಚಿಸಿದ್ದಾರೆ. ''ಕರಿಮಣ್ಣು ನೆಲ ಹೊನ್ನು ಕಾವೇರಿ ಜಲ ಚೆನ್ನ...'', ''ಕಲಿಯಿರೊಂದು ಪಾಠವನ್ನು...'', ''ಕನ್ನಡದ ಮಕ್ಕಳೆಲ್ಲ ಒಂದಾಗಿ ಬನ್ನಿ...'', ''ಕನ್ನಡದ ಕುಲದೇವಿ ಕಾಪಾಡು ಬಾ ತಾಯೆ...'' ಇಂತಹ ರಚನೆಗಳು ನೂರಾರು. ಅವುಗಳಲ್ಲಿ ''ಯಾವ ಎಣ್ಣೆಯಾದರೂ ಬೆಳಗುವುದೇ ಗುರಿ ಎಂಬ ಸತ್ವವನು ನೀನೆತ್ತಿ ತೋರು ಬಾ ತಾಯೇ...'' ಎಂಬ ಮಾದರಿಯ ಪ್ರತಿಮೆಗಳು ಬಂದು ಅವನ್ನು ಶುಷ್ಕ ರಚನೆಯಾಗದಂತೆ ಮಾಡಿವೆ. ಇವುಗಳಿಗೆಲ್ಲ ಶಿಖರಪ್ರಾಯವಾದದು ''ಜಯ ಭಾರತ ಜನನಿಯ ತನುಜಾತೆ...'' ಮಾದರಿಯ 'ತಾಯಿಕರುಳು' ಚಿತ್ರದ ''ಬಾ ತಾಯಿ ಭಾರತಿಯೆ ಭಾವ ಭಾಗೀರಥಿಯೆ, ಹೃದಯ ವೀಣೆಯ ಮೀಟಿ ಮಧುರ ಗೀತೆಯ ನೀಡೆ....'' ಎಂಬ ರಚನೆಯಲ್ಲಿ ರಾಜ್ಯ, ರಾಷ್ಟ್ರದ ಐಕ್ಯತೆಯ ನವಿರು ಪ್ರತಿಮೆಗಳ ಮೂಲಕ ಮೈದಾಳಿದೆ.

ಜಿ.ವಿ.ಅಯ್ಯರ್ ಚಿತ್ರಗಳಲ್ಲಿ ಆಡುಭಾಷೆಯ ಬಳಕೆ ಬಗ್ಗೆ ಹೀಗೆ ಹೇಳುತ್ತಾರೆ : ''...ನಾವು ಆಡುಭಾಷೆ ಬಳಕೆಯಲ್ಲಿ ಆಸಕ್ತಿ ತೋರಿಸಲು ಸ್ಫೂರ್ತಿಯಾದದು ಕೆ.ಹಿರಣ್ಣಯ್ಯನವರ ಮಾತುಗಾರಿಕೆ. ಮೊದಲು ಹುಣಸೂರು ಕೃಷ್ಣಮೂರ್ತಿ ನಾಟಕದಲ್ಲಿ ಆಡುಮಾತನ್ನು ಬಳಸಿ, ಅನಂತರ ಸಿನಿಮಾದಲ್ಲಿ ತಂದರು. ನನಗೆ ಆಡುಮಾತಿನ ಬಳಕೆಗೆ ಪ್ರೇರಣೆ ಟಿ.ಪಿ.ಕೈಲಾಸಂ. 'ಕಿತ್ತೂರು ಚೆನ್ನಮ್ಮ', 'ರಣಧೀರ ಕಂಠೀರವ'ಗಳಲ್ಲೆಲ್ಲ ಗ್ರಾಂಥಿಕವನ್ನೇ ಬಳಸಿದ್ದೆ. ಹಾಡುಗಳಿಗೆ ಆಡುಮಾತಿನ ಬಳಕೆ ನನಗೆ ಪ್ರಿಯವಾಗಲಿಲ್ಲ. ಆದರೂ ಅಂಥ ಹಾಡುಗಳು ಜನಪ್ರಿಯವಾದವು. ಉದಾಹರಣೆಗೆ ''ಸಿಟ್ಟ್ಯಾಕೊ ಸಿಡುಕ್ಯಾಕೋ ನನ ಜಾಣ...'', ''ತನ್ನ ಜೆನ್ನ ಮೋಲಿನ ಕಪ್ಪ, ತಾನು ಕಾಣನೇ ಬೆಪ್ಪ...''ದಂಥವು.

''ಗದ್ಯವಲ್ಲದ, ವಿಶೇಷ ಕಾವ್ಯವಾಗಿ ತುಂಬಿಕೊಂಡ, ಪ್ರತಿಮೆಗಳನ್ನು ಬಳಸಿ ಹೇಳಿದಾಗಲೇ ಅದು ಅರ್ಥಪೂರ್ಣ ಗೀತೆ ಆಗುತ್ತೆ. ನಾನೂ ಕೆಲವು ಕಡೆ ರಾಜಿ ಮಾಡಿಕೊಂಡಿದೀನಿ. ಗುಂಪಿನಲ್ಲಿ ಒಬ್ಬನಾಗಿ ನಾನೂ ಉಳಿದುಕೊಳ್ಳಬೇಕಾಗಿತ್ತು. ಆಗ ಜನರಂಜನೆಯೇ ಮುಖ್ಯವಾಗಿತ್ತು.

ಕಬ್ಬು ಕಾಣದು ಬೆಲ್ಲದ ಸವಿಯ
ಬೆಲ್ಲ ಕಾಣದು ಸಕ್ಕರೆಯ ರುಚಿಯ
ಸಕ್ಕರೆ ಕಾಣದು ಜೇನಿನ ಪರಿಮಳವ
ಜೇನು ಕಾಣದು ಹೂವಿನ ಸುಗಂಧವಾ..

''ಇದರ ಅರ್ಥ ಜನ ಸಾಮಾನ್ಯರಿಗೂ ಆಗುತ್ತೆ. ಆದರೆ ಅದು ಬೇರೆ ಅರ್ಥಗಳನ್ನು ಧ್ವನಿಸುತ್ತೆ ಅನ್ನೋದು ಮುಖ್ಯ. ಒಂದರ ಆಯಸ್ಸು ಮುಗಿದಾಗಲೇ ಇನ್ನೊಂದರ ಹುಟ್ಟು, ಉಳಿವು ಎನ್ನುವ ಒಳ ಅರ್ಥವೂ ಇದೆಯಲ್ಲ.

''ನನ್ನ ಪ್ರಕಾರ ಸಿನಿಮಾದಲ್ಲಿ ಆಡುಮಾತಿನ ಬಳಕೆ ಸರಿಯಾಗಿ ಆಗಲೇ ಇಲ್ಲ. ನಗರಪ್ರಜ್ಞೆ ಅಂದರೆ ಮೇಲ್ವರ್ಗ, ಗ್ರಾಮೀಣ ಅಂದ ತಕ್ಷಣ ಕೆಳವರ್ಗ ಎಂಬ ತಪ್ಪು ಕಲ್ಪನೆ ಇಟ್ಟುಕೊಂಡು ಸಂಭಾಷಣೆಯಲ್ಲಿ ಅದನ್ನೇ ಅಳವಡಿಸಿಕೊಂಡು ಬಂದುಬಿಟ್ಟೆವು.

''ನಾವು ಎಲ್ಲಿಯವರೆವಿಗೂ ಆಡುಮಾತಿನ ಧ್ವನಿ ವಿಸ್ತಾರವನ್ನು ಮಾಡೋದಿಲ್ಲವೋ ಅಲ್ಲಿಯವರೆಗೂ ಭಾಷೆ ಬೆಳೆಯೋದಿಲ್ಲ. ಮುಖ್ಯವಾಗಿ ಸಾಹಿತ್ಯಕ್ಕೆ ಒಂದು ಮೌಲ್ಯ ಇರಬೇಕು. ಜನಸಾಮಾನ್ಯರು ಅಸಹ್ಯಪಟ್ಟುಕೊಳ್ಳದೇ ಇರೋ ರೀತಿ ಅನ್ನೋದಕ್ಕೆ

(ಚಿತ್ರ ೬೮) ಆರ್.ಎನ್.ಜಯಗೋಪಾಲ್, ಚಿ.ಉದಯಶಂಕರ್, ವಿಜಯನಾರಸಿಂಹ

ಮೊದಲು ಆದ್ಯತೆ. ಜನ ಒಪ್ಪುವುದು, ಹೊಗಳೋದು ಅನಂತರದ ಸಂಗತಿ. ಆಡುಭಾಷೆ ಆಡಬಾರದ ಭಾಷೆ (ಅಸಹ್ಯ) ಆದಾಗ ಭಾಷೆ ಬೆಳವಣಿಗೆ ಖಂಡಿತಾ ಆಗೋಲ್ಲ....''

ಅಯ್ಯರ್ ಅವರ ರಚನೆಗಳಲ್ಲಿ ಪ್ರತ್ಯೇಕವಾಗಿ ಗುರುತಿಸಬೇಕಾದ್ದು 'ದಶಾವತಾರ' ಚಿತ್ರದ ''ವೈದೇಹಿ ಏನಾದಳೋ...'' ಎಂಬ ಶ್ರೀರಾಮವಿಲಾಪ. ಪ್ರಕೃತಿಯ ಮರ, ಗಿಡ, ಪಶು-ಪಕ್ಷಿಗಳನ್ನು ವೈದೇಹಿ ಏನಾದಳು ಎಂದು ಕೇಳುವ ಈ ರಚನೆ ಹಲವು ಕಾವ್ಯಕ್ಕೆ ಋಣಿಯಾಗಿದ್ದರೂ ಕಟ್ಟಿಕೊಡುವ ಭಾವುಕ ವಾತಾವರಣ ಕಾವ್ಯಾತ್ಮಕತೆಯ ನೆಲೆ ತಲುಪಿದೆ.

''ಕನ್ನಡ ಅಂದರೆ ಏನೋ ಪುಳಕ. ಮೈಮರೆತು ಹೋಗೋದು. ಕನ್ನಡ ಕುರಿತ ಅದೆಷ್ಟು ಹಾಡೋ ಬರೆದಿದೀನಿ. 'ಕಣ್ತೆರೆದು ನೋಡು' ಚಿತ್ರದ ''ಕನ್ನಡದಾ ಮಕ್ಕಳೆಲ್ಲ ಒಂದಾಗಿ ಬನ್ನಿ...'' ಆಗಲೀ, 'ಸ್ಕೂಲ್ ಮಾಸ್ಟರ್' ಮೊದಲಾದ ಚಿತ್ರಗಳ ಕನ್ನಡಪರ ಗೀತೆಗಳು, 'ಬಂಗಾರಿ' ಚಿತ್ರದ ಪ್ರಾರಂಭದ ಗೀತೆಯಾದ ''ನಾ ಹುಟ್ಟಿ ಬೆಳೆದದ್ದು ಕನ್ನಡನಾಡು, ಎನ್ನ ನರನಾಡಿ ಕರುನಾಡ ಗೂಡು..'' ಇಂಥ ಅದೆಷ್ಟು ಗೀತೆಗಳನ್ನು ಬರೆದೆ ಅಂದ್ರೆ ವಿಮರ್ಶಕರು ''ಕನ್ನಡ ಓವರ್‌ಡೋಸ್ ಆಯ್ತು'' ಅಂತ ಟೀಕಿಸೋವರ್ಗೂ ಹೋಯಿತು'' ಎನ್ನುತ್ತಾರೆ ಅಯ್ಯರ್.

* * *

ಜಾನಪದ ವಿದ್ವಾಂಸರಾದ ಎಸ್.ಕೆ.ಕರೀಂಖಾನ್ 'ಸ್ವರ್ಣಗೌರಿ' ಚಿತ್ರಕ್ಕೆ ಸಂಭಾಷಣೆ, ಹಾಡುಗಳನ್ನು ಬರೆದರು. ಚಿತ್ರಕ್ಕೆ ರಾಷ್ಟ್ರಪ್ರಶಸ್ತಿ ಕೂಡ ದಕ್ಕಿತು. ಹಾಡುಗಳೂ ಜನಪ್ರಿಯವಾದವು. ಆದರೆ ಚಿತ್ರರಂಗಕ್ಕೆ ಎಸ್.ಕೆ.ಕರೀಂಖಾನರ ಪ್ರತಿಭೆ ಬೇಕಾಗಿರಲಿಲ್ಲ. ಅವರಿಗೆ ಉತ್ತಮ ಅವಕಾಶವೇ ಸಿಕ್ಕಲಿಲ್ಲ. ಸಿಕ್ಕ ಅವಕಾಶಗಳಲ್ಲೂ ಸಣ್ಣತನದ ಉಪಟಳ ಎದುರಾಯಿತು. ಇದರ ಗೊಡವೆಯೇ ಬೇಡ ಎಂದು ತಮ್ಮ ಪ್ರೀತಿಯ ಜನಪದ ಲೋಕಕ್ಕೆ ಹಿಂತಿರುಗಿದರು. ಅವರು ಕುರುಹಾಗಿ ಉಳಿಸಿಹೋದ ''ನಟವರ ಗಂಗಾಧರ ಉಮಾಶಂಕರ, ಈ ಲೀಲಾ ವಿನೋದ ವಿಹಾರ...'', ''ಬಾರೇ ನೀ ಚೆಲುವೆ, ನಿನ್ನೊಲವು ಚೆಲುವು ಮಕರಂದ ನಿನ್ನಂದ ಚಂದ ಮಕರಂದ....'', ''ಬಾರಾ ಚಂದ್ರಮಾ ಚೆನ್ನಾದ ಚೆಲ್ವ ತಾರಾ...'' ಸಾಹಿತ್ಯಿಕವಾಗಿಯೇ ಪ್ರಬುದ್ಧ ರಚನೆಗಳು. ನಾದಮಯತೆ ಜೊತೆ ಅನುಪ್ರಾಸಗಳ ಆಂತರಿಕ ಬಳುಕನ್ನು ಹೊಂದಿದ್ದ ಈ ರಚನೆಗಳು ಸಾಕಷ್ಟು ಕ್ರಿಯಾಶಾಲಿಯಾದ ಅರ್ಥ ಪರಂಪರೆ ಹೊಂದಿದ್ದವು. ಇಂತಹ ಇನ್ನಷ್ಟು ರಚನೆಗಳನ್ನು ಪಡೆಯಲಾರದ ದುರಂತ ಚಿತ್ರರಂಗದ್ದು.

* * *

ರಂಗಭೂಮಿಯ ದಟ್ಟ ಹಿನ್ನೆಲೆಯಿಂದ ಬಂದ ಸೋರಟ್ ಅಶ್ವತ್ಥ್ ಚಿತ್ರಕಥೆ-ಸಂಭಾಷಣೆ-ಗೀತೆಗಳು ಹೀಗೆ ಹಲವು ಪ್ರಕಾರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಸಾಕಷ್ಟು ಗೀತೆಗಳನ್ನು ರಚಿಸಿರುವ ಅವರದು ವರ್ಣಕ ಕಾವ್ಯ ಎಂದು ಕರೆಯಬಹುದಾದ ಸಾಹಿತ್ಯದ ರಚನೆ. ನಾದಕ್ಕೆ ತಕ್ಕಂತೆ ಅರ್ಥಗಳನ್ನು ಪೋಣಿಸುತ್ತ ಹೋದ ಅವರು ಕೆಲವೊಮ್ಮೆ ಅರ್ಥವನ್ನು ಕೈಬಿಟ್ಟದ್ದೂ ಉಂಟು. 'ಕಠಾರಿ ವೀರ' ಚಿತ್ರದ ''ಹಾಯಾದ ಈ ಸಂಗಮ...'' ಗೀತೆಯ ಈ ಸಾಲುಗಳನ್ನು ಗಮನಿಸಿ

ಸುಳ್ಳು ಪಳ್ಳು ಹೇಳುವಂತ ಗುಳ್ಳೇನರಿ
ಕೈಗೆ ಬಳೆಯ ತಾರದಿರೇ ಹಿಡಿ ನಿನ್ನ ದಾರಿ
ಕೈಯ್ಯಿಗೆ ಕೈ ಕೂಡಲು ಕಾದಿರುವ ನಾರಿ
ಕಳ್ಳಾಟ ಆಡುವೆಯ ಮೋಹವ ತೋರಿ

ಕನ್ನೆ ನನ್ನ ಪ್ರೇಮ ಒಂದು ಹೂವಿನ ಚೆಂಡು
ನಿನ್ನ ಕಾಲಿನಿಂದ ಒದೆಯೆ ಅಳುವನೀ ಗಂಡು
ನನ್ನೆದೆಯ ಮಂದಿರದಿ ನೀನೇಕೆ ನಿಂತೆ
ಮುತ್ತಿನ ಆರಸಿ ನಾನಾಗೆ ನಿಂತೆ
ಆಸೆಗಿಂದು ತಡವೇನು ಬಂತು
ಅಂತಾಗೆ ನಾವು ಒಂದಾದೆವು ಇಂದು.

ಇದನ್ನು ಸಾಹಿತ್ಯಿಕವಾಗಿ ಓದಲು ಪ್ರಯತ್ನಿಸಿದರೆ ಒಂದು ಸಾಮಾನ್ಯವಾದ ಅರ್ಥ ಕೂಡ ಸಿಕ್ಕುವುದು ಕಷ್ಟ. ಇಂತಹ ಅಂಶಗಳನ್ನು ಇವರ ರಚನೆಯ ಕುರಿತು ಸಾಕಷ್ಟು ಹೇಳಬಹುದಾದರೂ ಚಿತ್ರರಂಗದ ಅನಿವಾರ್ಯತೆಗೆ ತಮ್ಮನ್ನು ಒಪ್ಪಿಸಿಕೊಂಡಿದ್ದ ಸೋರಟ್ ಅವರಿಗೆ ಮಹತ್ವಾಕಾಂಕ್ಷೆ ಪ್ರಕಟಿಸುವ ಅವಕಾಶಗಳು ಸಿಕ್ಕಿದ್ದು ಕಡಿಮೆ ಎಂದೂ ಗುರುತಿಸಬಹುದು.

ಅವರ ಉತ್ತಮ ರಚನೆಗಳಲ್ಲಿ 'ಕಠಾರಿ ವೀರ'ದ ''ಚೆಂಗು ಚೆಂಗೆಂದು ಹಾರುವ ರಂಗು ರಂಗಿನ ಈ ಜಿಂಕೆ / ಸೆರೆಯಾಗಿ ನಿನ್ನ ಜಾಲಕೆ ಸೊಗದಿಂದ ಬಂತು ಸಂಧಾನಕೆ....''ಯೂ ಒಂದು. ಇಲ್ಲಿ ಜಿಂಕೆಯ ಪ್ರತಿಮೆಯಲ್ಲಿ ಮದನಿಕೆಯ ಕುರಿತು ಮಾತನಾಡುವ ವಿಶಿಷ್ಟ ತಂತ್ರ ಇದೆ. ಜೊತೆಗೆ ''ಬಾ ಇಂದೇ ಹಾಯಾದ ಸಂಭ್ರಮ ನಾಳೆ ಎಂದರೆ ಪ್ರೇಮಕೆ ನಾಮ...'' ಎಂಬ ತುಂಟತನವೂ ಇದೆ. ''ನಾಡಿನಂದ ಈ ದೀಪಾವಳಿ ಬಂತು ಸಂತೋಷ ತಾಳಿ...'', ''ನಲಿವ ಮನ ಹೊಂದಿ ಈ ದಿನ...'' (ಚಿತ್ರ : 'ನಂದಾದೀಪ') ಇಂತಹ ಸರಳವಾದ, ಆದರೆ ಚಮತ್ಕಾರಪೂರ್ಣ ರಚನೆಗಳಿವೆ.

'ಪಡುವಾರಹಳ್ಳಿ ಪಾಂಡವರು' ಚಿತ್ರಕ್ಕೆ ಸೋರಟ್ ಅಶ್ವತ್ಥ್ ಬರೆದ ಗೀತೆಗಳು ಸಾಕಷ್ಟು ವಿಭಿನ್ನವಾಗಿದ್ದವು. ಕಾವ್ಯಾತ್ಮಕ ನೆಲೆಯಲ್ಲಿ ಅಲ್ಲದಿದ್ದರೂ ಸರಳವಾಗಿ ಸಂವಹನಗೊಳ್ಳುವ ನೆಲೆಯಲ್ಲಿ ಗುರುತಿಸಬೇಕಾದ ರಚನೆಗಳಾಗಿದ್ದವು. ''ತೂಕಡಿಸಿ ತೂಕಡಿಸಿ ಬೀಳದಿರು...'' ''ಕಣ್ಣು ಮುಚ್ಚಿ ಕುಳಿತರೆ ಕಾಣುವೆ ನೀನೊಬ್ಬನೆ...'' ಇವುಗಳಲ್ಲಿ ಗಮನಿಸಬೇಕಾದಂತಹ ಗೀತೆಗಳು.

* * *

ಬಿ.ಎಂ.ಶ್ರೀ.ಸ್ವರ್ಣಪದಕ ಪಡೆದು ಸಾಹಿತ್ಯಿಕವಾದ ಹಿನ್ನೆಲೆಯಿಂದ ಬಂದ ಎಂ.ನರೇಂದ್ರಬಾಬು ದೊಡ್ಡ ಪ್ರಮಾಣದಲ್ಲೇ ಚಿತ್ರರಂಗದಲ್ಲಿ ತಮ್ಮನ್ನು ತೊಡಗಿಸಿಕೊಂಡರು. 'ಭಾರತಿ' ಚಿತ್ರಕ್ಕೆ ಕಥೆ, ಸಂಭಾಷಣೆ ಹಾಡು ರಚಿಸಿದ ಅವರು ಮಹತ್ವಾಕಾಂಕ್ಷೆಯಿಂದ 'ಸರ್ವಜ್ಞಮೂರ್ತಿ' ಚಿತ್ರ ನಿರ್ಮಿಸಿದರು. ಅವರ ಪ್ರಯತ್ನಗಳು, ಮಹತ್ವಾಕಾಂಕ್ಷೆಯಿಂದ ವಂಚಿತವಾಗಿ, ಅವರ ಪ್ರತಿಭೆಯೂ ಅಗತ್ಯವಾದ ಗುರುತಿಸುವಿಕೆಯಿಂದ ವಂಚಿತವಾಗಿ, ಅವರ ಪ್ರತಿಭೆಯೂ ಪೂರ್ಣಪ್ರಮಾಣದಲ್ಲಿ ಅರಳದೇ ಹೋಯಿತು.

ಸರಳವಾದ ಶಬ್ದಗಳಲ್ಲಿ ಸಂಕೀರ್ಣವಾದ ಅರ್ಥ ಹೇಳುವ ಅವರ ರಚನೆಗಳು ಸುಸಂಬದ್ಧ ಶಬ್ದ ಶರೀರವನ್ನು ಹೊಂದಿ ತುಸು ಭಿನ್ನ ಅನ್ನಿಸುವಂತೆ ಮೂಡಿಬಂದವು. "ಈ ಜೀವನ ಬೇವು ಬೆಲ್ಲ, ಬಲ್ಲಾತಗೆ ನೋವೇ ಇಲ್ಲ...", "ಜಾಣೆಯಾಗಿರು ನನ್ನ ಮಲ್ಲಿಗೆ 'ನೀ ಹೆಣ್ಣಾಗಿ ಬಂದಿರುವೆ ಇಲ್ಲಿಗೆ...', "ಹುಡುಗಿ ಬಲು ಜಾಣೆ ಒಳ್ಳೆ ಹುಡುಗ ಬರುತಾನೆ..." ಮುಂತಾದ ಗೀತೆಗಳು ಅರ್ಥವನ್ನು ಒಂದೇ ಗ್ರಹಿಕೆಯಲ್ಲಿ ಸ್ಫುಟವಾಗಿ ಲಭ್ಯವಾಗುವಂಥ ಸರಳ ಅರ್ಥಪೂರ್ಣ ರಚನೆಗಳು. ಈ ಮಾದರಿಯಲ್ಲೇ ರಚನೆಯಾದ 'ಎಡಕಲ್ಲು ಗುಡ್ಡದ ಮೇಲೆ' ಚಿತ್ರದ "ಗುಂಡಿನ ಮತ್ತೇ ಗಮ್ಮತ್ತು..." ಕುಡಿತದ ಖುಷಿಯ ಜೊತೆಗೇ ಅಳತೆ ಮೀರಿದರೆ ಆಗುವ ಆಪತ್ತನ್ನೂ ಹೇಳುವ ಚಮತ್ಕಾರಪೂರ್ಣ ರಚನೆ.

ಮೊಲದ ಚಿತ್ರ 'ಭಾರತಿ' ಚಿತ್ರಕ್ಕೆ ಗೀತೆಗಳನ್ನು ರಚಿಸುವಾಗಲೇ ಒಂದು ಬಿಗಿ ಬಂಧ, ಧ್ವನಿಪೂರ್ಣತೆಯನ್ನು ನರೇಂದ್ರಬಾಬುಗಳ ರಚನೆಗಳಲ್ಲಿ ಗುರುತಿಸಬಹುದಿತ್ತು.

ಮಾತಿನಲಿ ಮುಳ್ಳಿದರೂ ನಿನ್ನ
ಪ್ರೀತಿ ಪೊಳ್ಳಾಗದಿರಲಿ।
ಬೆಳದಿಂಗಳಿರುಳಲ್ಲಿ ಮಳೆ ತಂದ ಮೋಡಗಳು
ಸುಳಿವರೆ ಏನಾಯ್ತು ? ಬೆಳ್ಳಿ ಬೆಳಕಿರಲಿ

ಸಾಲುಗಳಲ್ಲಿರುವ ಕಲ್ಪನೆಯು ಸೊಗಸು ಒಂದೆಡೆಯಾದರೆ, ಪ್ರಾರಂಭದ ಹಂತವಾದ್ದರಿಂದ ಥಟ್ಟನೆ ನುಸುಳಿರಬಹುದಾದ ಉಪಮೆ-ಉಪಮಾನಗಳ ಸಡಗರವನ್ನು ಕಾಣಬಹುದು.

ಮೌನವೆಂಬ ಸಾಗರ ಮಧ್ಯದೆ
ನಿಮ್ಮರುಗಾ ನಿರೆ ತುಂಬಿರಲು
ದ್ವೇಷವೆಂಬಾ ಗಾಳಿಯು ಬೀಸಿದ
ದೋಣಿಯಿದೋಲುತ ಚೀರಿಡಲು...

ನರೇಂದ್ರ ಬಾಬುಗಳ ಕವಿತೆಯು ಸರಳ. ಆದರೆ ಅರ್ಥಪೂರ್ಣ.

"ಸರ್ವಜ್ಞ ಮತ್ತೊಮ್ಮೆ ಹುಟ್ಟಿಬಾ...", "ಜೋಪಾನ ಯೌವನ..." ಮುಂತಾದ ರಚನೆಗಳಲ್ಲಿ ಸಂಕೀರ್ಣ ಅರ್ಥ ಪರಂಪರೆಗೂ ಕೈ ಹಾಕಿದ ನರೇಂದ್ರಬಾಬು ಯಾರೂ ನಿರ್ಲಕ್ಷಿಸಲಾಗದ ಗೀತಪ್ರಕಾರವನ್ನು ಕಂಡುಕೊಂಡಿದ್ದರು.

ಇಂದೇನೋ ಏಕೋ ಭೀತಿ
ಬೇರೊಂದು ನಾಳೆ ರೀತಿ
ಕೈಗೊಳ್ಳೋ ಒಂದೇ ಧ್ಯೇಯಾ
ಪಾಲಿಸಬೇಕಯ್ಯ ನ್ಯಾಯ
ಜಗವೇ ನಗಲಿ, ಯಮನೇ ಬರಲಿ
ಒಲವೇ ನಿನ್ನಲ್ಲಿ ಬೇರಾರಲಿ
(ಗೀತೆ: "ಈ ಜೀವನ....", ಚಿತ್ರ : ಮನಸ್ಸಿದ್ದರೆ ಮಾರ್ಗ)

ಇವರ ಈ ಮಾದರಿ ರಚನೆಗಳಲ್ಲಿ ಅರ್ಥಪರಂಪರೆ ಅರಳುತ್ತಿತ್ತು.

• • •

ಬಹು ಜನಪ್ರಿಯವಾದ "ಮಧುರ ಮಧುರವೀ ಮಂಜುಳಗಾನ..." ಗೀತೆಯನ್ನು ರಚಿಸಿದ ಎಂ.ಎಸ್.ಆರಾಧ್ಯ ಗಮನಿಸಬೇಕಾದ ಇನ್ನೊಬ್ಬ ಗೀತರಚನೆಕಾರರು. ರಂಗಗೀತೆಗಳ ಮಾದರಿಯಲ್ಲೇ ಬೆಳೆದರು, ಕೆಲವೆಡೆ ಕಾವ್ಯಾತ್ಮಕ ಒಳನೋಟ ಪಡೆಯುವ ಗೀತೆಗಳನ್ನು ಕೊಟ್ಟಿದ್ದಾರೆ.

ಪರವಶ ಭಾವದ ರಾಗವ ತೂರಿ
ಪುಳಕಿತಗೊಳಿಸಿದ ಮನವೀಗ
ತುಂಬಿದ ಯೌವನ ಬಿಂಬದ ಕಾಂತಿಯು
ಸಂಭ್ರಮ ಕಾಣದೆ ಸುಮಬಾಣ
(ಗೀತೆ : "ಮಧುರ ಮಧುರ...", ಚಿತ್ರ : ಸತೀ ಸುಕನ್ಯ)

ಅರಳಿದ ಹೂಗಳು ಬಾಗಿ ಕರೆ ನೀಡೆ
ಮೊರೆಯುವ ದುಂಬಿ ತನು ತೂಗಿ ಕೊಂಡಾಡೆ
ಕಾನನ ಸಿರಿಯ ಸಾಗುವ ರವಿಯ
ಸ್ವಾಗತ ಕೋರಿ ಸಂತೋಷವ ತಳೆವ
ಜೀವನ ಶೋಭಾ ಸಂದೇಶದ ಲೀಲಾ
(ಗೀತೆ : "ಅರುಣೋದಯ...", ಚಿತ್ರ : ಸತೀ ಸುಕನ್ಯ)

ಮುಂತಾದ ಪ್ರತಿಮೆಗಳು ಅವರ ಕಾವ್ಯಸಿರಿಯನ್ನು ಹೇಳುತ್ತವೆ.

• • •

ಕನ್ನಡ ಚಿತ್ರರಂಗದಲ್ಲಿ ಈ ಘಟ್ಟದಿಂದ ಮುಂದಿನ ದಿನಗಳಲ್ಲಿ ತಾಂತ್ರಿಕತೆಯ ಅರಿವು ಹೆಚ್ಚಿದ್ದನ್ನು ನೋಡುತ್ತೇವೆ. ಇದರ ನೆರಳು ಚಿತ್ರಗೀತೆಗಳ ಮೇಲೂ ಬಿದ್ದಿತು. ಚಿತ್ರಗೀತೆಗಳನ್ನು ಚಿತ್ರವ್ಯಾಕರಣದ ಒಳಗೆ ತಂದು ಅದಕ್ಕೆ ಅರ್ಥಶ್ರೀಮಂತಿಕೆ ನೀಡುವ ಪ್ರಯತ್ನವನ್ನು ಕೆಲವು ನಿರ್ದೇಶಕರು ಮಾಡಿದರೆ ಕ್ಯಾಮರಾ ಆ್ಯಂಗಲ್‌ಗಳು ಹೊಸ ನೋಟಗಳನ್ನು ನೀಡಿ ದೃಶ್ಯಶ್ರೀಮಂತಿಕೆಗೂ ನೆರವಾಗಿದ್ದವು. ಇತ್ತ ಹಿನ್ನೆಲೆ ಸಂಗೀತದಲ್ಲಿ ಕೆಲವೇ ವಾದ್ಯಗಳ ಹಿನ್ನೆಲೆ ಹೋಗಿ ವ್ಯವಸ್ಥಿತ ಆರ್ಕೆಸ್ಟ್ರಾ ಮೈದಾಳಿತು. ಕನ್ನಡ ಸಾಹಿತ್ಯದಲ್ಲಿ ಬದಲಾವಣೆಯ ಗಾಳಿ ಬೀಸುತ್ತಿತ್ತು. ನವೋದಯದ ಕನಸಿನ ಲೋಕ ಕರಗುತ್ತ ವಾಸ್ತವದ ಕಹಿ ಬೆಚ್ಚಿ ಬೀಳಿಸುತ್ತಿತ್ತು. ಸಮಾಜದ ವಿಷಮತೆ ಹಿಡಿದಿಡಲು ಪ್ರಗತಿಶೀಲರು ಪ್ರಯತ್ನಿಸುತ್ತಿದ್ದರೆ ಪ್ರತಿಮೆಗಳ ಮೂಲಕ ಕಾವ್ಯ ಕಟ್ಟುವ ನವ್ಯದ ಪ್ರಯತ್ನಕ್ಕೆ ಚಾಲನೆ ದೊರಕಿತ್ತು. ಗೀತರಚನೆಯ ಮೇಲೆ ಈ ಎಲ್ಲ ಅಂಶಗಳೂ ಮುಂದಿನ ಹಂತದಲ್ಲಿ ಪ್ರಭಾವ ಬೀರಿದ್ದನ್ನು ನೋಡುತ್ತೇವೆ.

ಚಿತ್ರದ ಅಗತ್ಯಕ್ಕೆ ತಕ್ಕಂತೆ ಗೀತೆ ರಚಿಸುವುದರಲ್ಲಿ ವಿಜಯನಾರಸಿಂಹ ಅಗ್ರಗಣ್ಯರು. ಪಾತ್ರಗಳ ಒಳತೋಟಿ, ಸನ್ನಿವೇಶದ ಸಾಧ್ಯತೆಗಳು ಇವನ್ನೆಲ್ಲ ಅವರ ಗೀತೆಗಳು ಸುಂದರವಾಗಿ ಹಿಡಿದಿಟ್ಟಿವೆ. ಇಂತಹ ಶಕ್ತಿಯಿಂದಲೇ ಅವರು ಪುಟ್ಟಣ್ಣ ಕಣಗಾಲರ ಬಹುತೇಕ ಚಿತ್ರಗಳಿಗೆ ಜೀವ ತುಂಬಲು ಸಾಧ್ಯವಾಯಿತು. ಶಬ್ದಗಳ ಮೇಲೆ ಅಪಾರ ಹಿಡಿತ ಹೊಂದಿದ್ದ ಅವರು ಸಂಯಮದಿಂದ ಸರಳ ಶಬ್ದಗಳ ಗೀತೆಗಳನ್ನು ರಚಿಸಿದರು. ಬಿಗಿಯಾದ ಬಂಧ, ನಾದಮಯ ಶಬ್ದಗಳ ಜೋಡಣೆ ಚಿತ್ರದ ಸನ್ನಿವೇಶಕ್ಕೆ ಹೊಂದುವ ಅರ್ಥಸಂಯೋಜನೆಗಳನ್ನು ಹೊಂದಿಸಿ ಚಿತ್ರವ್ಯಾಕರಣಕ್ಕೆ ಹೊಂದುವ ಗೀತೆಗಳನ್ನು ಕೊಟ್ಟು ಹೊಸ ಪರಂಪರೆ ಸೃಷ್ಟಿಸಿದರು.

ವಿಜಯನಾರಸಿಂಹ ಅವರ ರಚನೆಗಳಲ್ಲಿ ಸರಳ ಶಬ್ದಗಳಲ್ಲಿ ತಾತ್ವಿಕತೆ ಹಿಡಿದಿಡುವ ರಚನೆಗಳದೊಂದು ವಿಶಿಷ್ಟ ಪ್ರಕಾರ. ಒಂದೇ ಕೇಳುವಿಕೆಗೆ ಮನಸ್ಸಿನಲ್ಲಿ ಇಳಿಯುವ, ಇಳಿದ ಮೇಲೆ ಕ್ಷಣಕಾಲವಾದರೂ ಚಿಂತಿಸುವ ಅಗತ್ಯ ಬೀಳುವಂತಹ, ಆದರೆ ಮಸ್ಕವಾಗದಂತಹ ರಚನೆಗಳು ಈ ಪ್ರಕಾರದಲ್ಲಿವೆ. "ಉಸಿರಾಟ ನೀನು ಬಿಸಿ ಮಿಡುಕಾಟ ನಾನು..." ಎಂಬ 'ಅನುರಾಗ ಬಂಧನ' ಚಿತ್ರದ "ನಿನ್ನ ಸವಿ ನೆನಪೇ..." ಗೀತೆಯ ಸಾಲು ಕಾವ್ಯವಾಗಿಯೂ ಗೆಲ್ಲುವ ಸಾಧ್ಯತೆ ಹೊಂದಿದೆ. ಅವರ ಈ ಬಗೆಯ ಕೆಲವು ಮೋಹಕ ಸಾಲುಗಳನ್ನು ನೆನಪಿಸಿಕೊಂಡರೆ

ಹರಯ ತುಂಬಿ ನಗುವಾಗ
ಜೊತೆಗೆ ನೀವು ಇರುವಾಗ
ಸರಸ ಸಲಿಗೆ ಬೆಳೆಯುವಾಗ
ಬಾಳು ಮಧುರ ಭಾವ ತರಂಗ
(ಗೀತೆ : "ಮನದ ಮಾತಿಗೆ...", ಚಿತ್ರ : ನಂದಗೋಕುಲ)

ತ್ಯಾಗ ನಿನ್ನ ರಕ್ಷೆಯು ಎಂಬ ನಂಬಿಕೆ ಬಿಡಬೇಡ
ತಾಳಿದವನೇ ಬಾಳುವನೆಂಬ ಸತ್ಯವ ಮರೀಬೇಡ
ವೇದನೆ ಕ್ಷಣ ಮಾತ್ರ - ಇದು ಜೀವನದಾ ಸೂತ್ರ
(ಗೀತೆ : "ಕಾಲ ನಮ್ಮ....", ಚಿತ್ರ : ಗಾಳಿಗೋಪುರ)

ಹಿಡಿ ಮಣ್ಣ ಈ ಕಾಯ ಇದರಲ್ಲಿ ಅನ್ಯಾಯ
ಸುಖ ದುಃಖ ಕಂಡಾಯ ಯಾರಲ್ಲೂ ನಂದಾಯ
(ಗೀತೆ : "ಕಣ್ಣಿಲ್ಲವೇನೋ...", ಚಿತ್ರ : ಮಾರ್ಗದರ್ಶಿ)

ಹಾಗೆ ನೋಡಿದರೆ ವಿಜಯನಾರಸಿಂಹ ಅವರ ಪ್ರಥಮ ಗೀತೆ "ಈ ದೇಹದಿಂದ ದೂರವಾದೆ ಏಕೆ ಆತ್ಮನೆ..." ಗೀತೆಯೇ ಈ ಮಾರ್ಗದ ಉತ್ತಮ ರಚನೆ. ವಚನಗಳಿಂದ ಪಡೆದ ಪ್ರತಿಮೆಗಳನ್ನು ಉತ್ತಮವಾಗಿ ಬಳಸಿಕೊಂಡಿರುವ ಅವರು ಸನ್ನಿವೇಶದ ವಿಷಾದವನ್ನು ಸಮರ್ಥವಾಗಿ ಹಿಡಿದಿಟ್ಟಿದ್ದಾರೆ. "ತಾಯ ಹಾಲೆ ವಿಷವಾದರೆ ನ್ಯಾಯವೆಲ್ಲಿದೆ, ಕಾಯ್ವ ದೇವ ಸಾವು ತರಲು ಎಲ್ಲಿ ರಕ್ಷಣೆ..." ಹೀಗೆ ಈ ಗೀತೆ ಬಿಚ್ಚಿಡುವ

ಒಳತೋಟಿಗಳು ದೀರ್ಘಕಾಲ ಕಾಡುವಂತಹವು. ಇಂತಹದೇ ಇನ್ನೊಂದು ರಚನೆ 'ಬಾಳು ಬೆಳಗಿತು' ಚಿತ್ರದ ''ನೀತಿವಂತ ಬಾಳಲೇ ಬೇಕು...'' ಇದೂ ದಟ್ಟ ವಿಷಾದದಲ್ಲಿ ಬೆಳೆಯುವ ಗೀತೆ.

ನಲ್ಲ-ನಲ್ಲೆಯರ ಸಂಭಾಷಣೆ, ಕೆಣಕಾಟ, ಇವೆಲ್ಲವನ್ನೂ ಹಿಡಿದಿಡುವ ನೂರಾರು ಗೀತೆಗಳನ್ನು ವಿಜಯನಾರಸಿಂಹ ಅವರ ಇನ್ನೊಂದು ಪ್ರಕಾರದಲ್ಲಿ ಗುರುತಿಸಬಹುದು. ''ಪಂಚಮ ವೇದ ಪ್ರೇಮದ ನಾದ / ಪ್ರಣಯದ ಸರಿಗಮ ಭಾವಾನಂದ...'' ಎನ್ನುವುದೇ ಹಾಗೆ ನೋಡಿದರೆ ಪ್ರೇಮದ ಕುರಿತ ಅವರ ಚಿಂತನೆ. 'ಬೀದಿ ಬಸವಣ್ಣ' ಚಿತ್ರದ ''ಏಕಾಂತವಾಗಿ ಮಾತಾಡೆ ಬಂದೆ ನಾನು...'' ಸಂಭಾಷಣೆಯಲ್ಲಿ ಬೆಳೆಯುವ ಗೀತೆ

''ನಿನಗಾಗಿ ಮುಡಿಪಾದ ಬಿಡಿ ಹೂವನು
ಬೇರೊಬ್ಬ ಬೇಕೆಂದು ಕೇಳಿ ಬಂದನು...''

ಎಂದು ಹೆಣ್ಣು ತನ್ನ ದುಗುಡವನ್ನು ತೋಡಿಕೊಂಡಿದ್ದಕ್ಕೆ, ಗಂಡು ''ಅದಕ್ಕಾಗಿ ನಾನು ಓಡಿಬಂದೆ...'' ಎಂದು ಸಮಾಧಾನ ಮಾಡುತ್ತಾನೆ. ಹೆಣ್ಣಿಗೆ ಇಷ್ಟರಿಂದಲೇ ಸಮಾಧಾನವಾಗುವುದಿಲ್ಲ. ಒಮ್ಮೆ ಅವನು, ಇನ್ನೊಮ್ಮೆ ಅವಳು ''ಕೈಗೊಂಬೆ ಹೆಣ್ಣೆಂದು ಈ ಆಟವೆ ?'' ಎಂದು ಖಾರವಾಗಿ ಪ್ರಶ್ನಿಸುತ್ತಾಳೆ. ಹೆಣ್ಣಿನ ಈ ಸ್ವಾಭಿಮಾನದ ನೋವು ಗಂಡಿಗೆ ಅರ್ಥವಾಗುವುದಿಲ್ಲ. ತನ್ನ ಭಾವಲೋಕದಲ್ಲೇ ಅವನಿದ್ದಾನೆ. ಇವಳಿಗೆ ನನ್ನ ರಕ್ಷಣೆ ಅನಿವಾರ್ಯ ಎಂಬ ಹಮ್ಮಿನಲ್ಲಿ ''ಈ ಗಂಡೆಂಥ ಬಲೆಯೆಂದು ಗೊತ್ತಾಯಿತೆ ?'' ಎಂದು ಕೊಚ್ಚಿಕೊಳ್ಳುತ್ತಾನೆ. ಹೆಣ್ಣಿಗೆ ಈ ಮಾತು ನೋವನ್ನೇ ತಂದರೂ ಅವನ ರಕ್ಷಣೆ ಅನಿವಾರ್ಯ. ಸ್ವಗತ ಎನ್ನುವಂತೆ ''ಸೋತೀಗ ನಿನ ಮನವ ನಾ ಗೆಲ್ಲುವೆ'' ಎಂದು ನಿನ್ನ ಮಾತನ್ನು ನಾನು ಒಪ್ಪುವುದಿಲ್ಲವಾದರೂ ನಿನ್ನ ಮನಸ್ಸನ್ನು ಗೆಲ್ಲಲು ಸೋಲುತ್ತೇನೆ ಎನ್ನುತ್ತಾಳೆ. ಈ ಮಾತು ಗಂಡಿನ ಮನಸ್ಸನ್ನು ಕದಡಿ ''ಗೆದ್ದಾಗ ಸೋತಾಗ ನಾವೊಂದೇ ಅಲ್ಲವೆ ?'' ಎಂಬ ರಾಜಿಗೆ ಬರುತ್ತಾನೆ. ಹೀಗೆ ಕಥನದ ಚೌಕಟ್ಟಿನಲ್ಲಿ ಸರಸಮಯವಾಗುವ ಅನೇಕ ರಚನೆಗಳು ವಿಜಯನಾರಸಿಂಹ ಅವರಲ್ಲಿವೆ. ''ಸಂಗಮ.... ಸಂಗಮ....'', ''ಈ ಸಂಭಾಷಣೆ ನಮ್ಮ ಈ ಪ್ರೇಮ ಸಂಭಾಷಣೆ....'', ''ಸಂತೋಷ... ಸಂಗೀತ....'' ಹೀಗೆ ಅನೇಕ ರಚನೆಗಳನ್ನು ಇದಕ್ಕೆ ಉದಾಹರಣೆಯಾಗಿ ನೀಡಬಹುದು.

ಇನ್ನು ಬಹಳ ಮುಖ್ಯವಾಗಿ ಗುರುತಿಸಬೇಕಾದ ಪ್ರಕಾರ ಕಥನವನ್ನು, ಪಾತ್ರಗಳ ಒಳತೋಟಿಯನ್ನು ವಿಜಯನಾರಸಿಂಹ ಅವರ ರಚನೆಗಳು ತೆರೆದಿಡುವ ಕ್ರಮ. ಇದು ಪುಟ್ಟಣ್ಣ ಕಣಗಾಲ್ ಚಿತ್ರಗಳಲ್ಲಿ ಹೆಚ್ಚಾಗಿ ಕಾಣುತ್ತದೆಯಾದರೂ ಬೇರ ಚಿತ್ರಗಳಲ್ಲೂ ಈ ಅಂಶ ಸಾಕಷ್ಟಿದೆ. 'ಗಾಳಿಗೋಪುರ' ಚಿತ್ರದ ಶೀರ್ಷಿಕೆ ಗೀತೆಯಲ್ಲಿ ಬರುವ ಎರಡು ಚರಣ ''ನಂಬಿದುದಲ್ಲ ನಡೆವುದು ಎಂಬುದು ಮೂರ್ಖನ ಮತವಯ್ಯ...'' ಎಂಬ ಚರಣ ಒಂದು ಪಾತ್ರ ದುರಂತಕ್ಕೆ ಬರಲು ಅತಿ ಆಸೆ ಹೇಗೆ ಕಾರಣವಾಯಿತು ಎಂಬುದನ್ನು ವಿವರಿಸಿದರೆ ಇನ್ನೊಂದು ಚರಣ ಇನ್ನೊಂದು ಪಾತ್ರದ ತ್ಯಾಗದ ಕುರಿತು ಮಾತನಾಡುತ್ತದೆ. 'ಮಾರ್ಗದರ್ಶಿ' ಚಿತ್ರದ ''ಕಣ್ಣಿಲ್ಲವೇನು, ನಿಜ ಕಾಣದೇನು...'' ಗೀತೆ ಆದರ್ಶ ಸಾಧಿಸಲು ಪಾತ್ರ ಪಡುವ ಪರಿಶ್ರಮವನ್ನು ವಿವರಿಸುತ್ತದೆ. 'ಬಾಳು ಬೆಳಗಿತು' ಚಿತ್ರದ ''ನೀತಿವಂತ ಬಾಳಲೇ ಬೇಕು...'' ಎಂಬ ಗೀತೆ ನಾಯಕನ ದ್ವಂದ್ವಗಳನ್ನು ಹೇಳುತ್ತದೆ. ''ಆಳಾಗಿ ದುಡಿವ ಅರಸಾಗಿ ಮೆರೆವ...'' ಗೀತೆ ಎರಡು ಪಾತ್ರ ನಿರ್ವಹಿಸಲು ಅವನು ಪಡುವ ಶ್ರಮವನ್ನು ಹೇಳುತ್ತದೆ. 'ನಾಗರಹಾವು' ಚಿತ್ರದ ''ಹಾವಿನ ದ್ವೇಷ ಹನ್ನೆರಡು ವರುಷ...'' ಕೇಂದ್ರ ಪಾತ್ರದ ಸ್ವಕೇಂದ್ರಿತ ಚಿಂತನೆಯನ್ನು ಹೇಳುತ್ತದೆ. ಆ ಪಾತ್ರದ ಸೋಲಿಗೂ ಇಂತಹ ಅತಿಯಾದ ವಿಶ್ವಾಸವೇ ಕಾರಣವಾಗುತ್ತದೆಯಾದ್ದರಿಂದ ಕೆಲವು ಅಸಾಧ್ಯಗಳನ್ನು ಕೊಚ್ಚಿಕೊಳ್ಳುವ ಮಾದರಿಯಲ್ಲಿ ಹೇಳಿಸಿ, ಅದನ್ನು ಸೆಟೈರ್ ಆಗಿಸುವ ತಂತ್ರ ಈ ಗೀತೆಯಲ್ಲಿದೆ. 'ಎಡಕಲ್ಲು ಗುಡ್ಡದ ಮೇಲೆ' ಚಿತ್ರದ ''ವಿರಹಾ ನೂರು ನೂರು ತರಹಾ...'' ಗೀತೆ ನಾಯಕಿಯ ನೋವನ್ನು ಹೇಳುವ ಹಾಗೆ,

''ಗಂಧರ್ವಲೋಕದಲ್ಲಿ ರೋಮಾಂಚ ರಾತ್ರಿ
ಮಧುಚಂದ್ರ ಮಂಚದಲ್ಲಿ ರಸಹೀನ ರಾತ್ರಿ....''

ಹೀಗೆ ಸೂಕ್ಷ್ಮಗಳನ್ನು ಹೇಳುವ ಗೀತೆ ''ಪರೆಯ ಉಕ್ಕಿ ಕರೆವ ಹಕ್ಕಿ....'' ಏಕೆ ಇನ್ನೊಬ್ಬನ ತೋಳ್ತೆಕ್ಕೆ ಬಯಸಿತು ಎಂಬುದಕ್ಕೆ ಭೂಮಿಕೆಯನ್ನು ಸಿದ್ಧಪಡಿಸುತ್ತದೆ. ಇದೇ ಚಿತ್ರದ ''ನಿಲ್ಲು ನಿಲ್ಲೇ ಪತಂಗ...'' ನಾಯಕಿ ಕುರಿತ ನಿರ್ದೇಶಕರ ಧೋರಣೆಯನ್ನು ಬಿಂಬಿಸುವ ಗೀತೆ. ಅವಳನ್ನು ಅಪರಾಧಿಯಾಗಿ ನಿಲ್ಲಿಸಿ ಶಿಕ್ಷೆ ವಿಧಿಸುವ ನಿರ್ದೇಶಕರ ಧೋರಣೆಗೆ ಅನುಗುಣವಾಗಿ

ಕ್ಷಣಿಕದ ಚಪಲಕೆ ಬಲಿಯಾಗುವೆಯಾ
ಶ್ರೀಮತಿ ಎನಿಸಿ ಮಿತಿ ಮೀರುವೆಯಾ
ಕಾರ್ಕೋಟಕ ವಿಷ ನೀ ಧರಿಸುವೆಯಾ
ಅಮೃತವಾಹಿನಿ ನೀನಾಗುವೆಯಾ

ಹೀಗೆ ಪುಂಖಾನುಪುಂಖವಾಗಿ ಪ್ರಶ್ನಿಸಿ, ಕೊನೆಗೆ ತೀರ್ಮಾನವನ್ನು ಹೀಗೆ ಹೇಳಿದೆ:

ವಿಲಾಸದ ಸುಳಿಗೆ ಸಿಲುಕದೆ ಬಾ
ವಿಷಾದದ ಕೂಪಕೆ ಜಾರದೆ ಬಾ ಬಾ
ವಿವೇಕದ ಗಡಿಯ ಮೀರದೆ ಬಾ
ವಿವಾಹ ಜೀವನ ಪೂಜೆಗೆ ಬಾ ಬಾ

ಇದರ ಔಚಿತ್ಯದ ಪ್ರಶ್ನೆ ಗೀತರಚನಕಾರರಿಗೆ ಸಂಬಂಧಿಸಿದಲ್ಲ. ಆದರೆ ನಿರ್ದೇಶಕರ ತಾತ್ವಿಕತೆಯನ್ನು ಹೇಗೆ ಬಿಚ್ಚಿಟ್ಟಿದ್ದಾರೆ ಎಂಬುದನ್ನು ಈ ಗೀತೆಯಲ್ಲಿ ಗುರುತಿಸಬಹುದು. 'ಶರಪಂಜರ' ಚಿತ್ರದ ''ಹದಿನಾಲ್ಕು ವರ್ಷ ವನವಾಸದಿಂದ....'' ಗೀತೆ ವನವಾಸದಿಂದ ಬಂದ ಸೀತೆ ಅನುಭವಿಸಿದ ನೋವನ್ನು ಹುಚ್ಚಾಸ್ಪತ್ರೆಯಿಂದ ಬಂದ ನಾಯಕಿ ಅನುಭವಿಸಿದ ನೋವಿಗೆ ಸಮೀಕರಿಸುತ್ತಾ ಹೋಗಿ ಆ ಪಾತ್ರದ ದುರಂತವನ್ನು ಬಿಚ್ಚಿಡುತ್ತದೆ. ''ಚಿರ ವಿರಹವೆ ಜಾನಕಿ ಜೀವನ...'' ಎಂಬ ವಿಷಾದ ಕಥಾನಾಯಕಿ ಕಾವೇರಿಯದ್ದೂ ಆಗಿರುವುದರಿಂದ ಚಿತ್ರದ ಹಿನ್ನೆಲೆಯಲ್ಲಿ ಪರಿಣಾಮಕಾರಿಯಾಗಿ ಮೂಡಿಬಂದಿದೆ. ಇದೇ ಚಿತ್ರದ ''ಬಂಧನ...'' ಗೀತೆ ಇದನ್ನು ಇನ್ನಷ್ಟು ವಾಚ್ಯವಾಗಿ ಹೇಳಿದೆ.

ಸ್ವಾರ್ಥದ ಸಂಚಿನ ವಂಚನೆ ಬಾಣ
ಮಾತ್ಸರ್ಯದ ವಿಷಪೂರಿತ ಬಾಣ
ತಾತ್ಸಾರದ ಬಗೆ ಬಗ ನಗಬಾಣ
ನಾನಾ ಭಾವದ ರುದ್ರ ಭೀಕರ
ಶರಪಂಜರದಾ ಬಂಧನಾ

ಹೀಗೆ ಬೆಳೆಯುವ ಗೀತ ''ಹದಿನಾಲ್ಕು ವರ್ಷ...'' ಗೀತೆ ಕಾವ್ಯಮಯವಾಗಿ ಹೇಳಿದ್ದನ್ನೇ ವಾಚ್ಯವಾಗಿ ಪ್ರತಿಪಾದಿಸಿದೆ. 'ಮಾನಸ ಸರೋವರ' ಚಿತ್ರದಲ್ಲಿ ಪುಟ್ಟಣ್ಣನವರ ಹತಾಶೆಯನ್ನೂ ಬಿಂಬಿಸುವಂತ ರಚಿತವಾಗಿರುವ ''ನೀನೇ ಸಾಕಿದಾ ಗಿಣಿ...'' ಇದೇ ಪ್ರಕಾರಕ್ಕೆ ಸೇರಬಹುದಾದದ್ದು.

ವಿಜಯನಾರಸಿಂಹ ಶಬ್ದಗಳನ್ನು ಕೆಲವೆಡೆ ವಿಜೃಂಭಿಸಲು ಪ್ರಯತ್ನಿಸಿದ್ದಾರೆ. 'ಉಪಾಸನೆ' ಚಿತ್ರದ ''ಭಾರತ ಭೂಶಿರ ಮಂದಿರ ಸುಂದರಿ...'' ಗೀತೆಯಲ್ಲಿ ಬರುವ,

ಸಾಮಗಾನ ಪ್ರಿಯ ಸಾಂಬರೂಪಿಣಿ
ಪಾಲಗಡಲ ಸ್ವರ ಪಂಚಮಧಾರಿಣಿ
ಸಾಕಾರ ಷಡ್ಜದ ಶರಧಿ ತರಂಗಿಣಿ
ಸಾಗರ ಸಂಗಮ ಸರಸ ವಿಹಾರಿಣಿ

ಎಂಬ ಸಾಲುಗಳಲ್ಲಿ ಅರ್ಥಕ್ಕಿಂತ ಶಬ್ದಗಳ ಮೆರೆದಾಟವೇ ಹೆಚ್ಚು. 'ಧರ್ಮಸೆರೆ' ಚಿತ್ರದ ''ಈ ಸಂಭಾಷಣ...'' ಗೀತೆಯ ''ಪ್ರೇಮಗಾನ ಪದಲಾಸ್ಯ, ಮೃದುಹಾಸ್ಯ ಶೃಂಗಾರ ಭಾವಗಂಗಾ'' ವಂತಹ ಸಾಲುಗಳು, ಹೀಗೆ ಶಬ್ದಗಳ ಮೆರೆದಾಟದಲ್ಲಿ ಕಳೆದು ಹೋಗಿವೆ. ಇದರ ಜೊತೆ ಜೊತೆಗೆ ಶಬ್ದಗಳನ್ನು ಕುಣಿಸಿ, ಅನುಪ್ರಾಸ ಸೃಷ್ಟಿಸಿ ನಾದಮಯತೆ ತಂದ ಕಡೆ ಅರ್ಥ ಕೈ ತಪ್ಪಿದರೂ ಮಧುರವಾಗಿ ಕೇಳುತ್ತದೆ. ''ಉಸಿರಾಟ ನೀನು, ಅದರ ಬಿಸಿ ಮಿಡುಕಾಟ ನಾನು...'', ''ಹರೆಯ ಉಕ್ಕಿ ಕರೆವ ಹಕ್ಕಿ...'' ಮುಂತಾದವು ಅರ್ಥಪೂರ್ಣ ಪ್ರತಿಮೆಗಳಾದರೆ, ''ಉಬ್ಬಿಹಬ್ಬಿ ಬಾಚಿತಬ್ಬಿ ನಾಚಿನಿಂತ ಹೂವುಬಳ್ಳಿ ಹಾದಿ ಹಾದಿ ಮೂಡಿಬಂತು ಏನೋ ಮೋಡಿ...'' ಅರ್ಥವಿಲ್ಲದೆಯೇ ನಾದಮಯತೆಯಲ್ಲಿ ಮೆರೆದ ಸಾಧ್ಯತೆಗಳಾಗಿವೆ. ಕುತೂಹಲದ ಸಂಗತಿ ಎಂದರೆ 'ಚಿನ್ನದ ಗೊಂಬೆ' ಚಿತ್ರದ ''ಸೇವಂತಿಗೆ ಚೆಂಡಿನಂಥ ಮುದ್ದು ಕೋಳಿ...'' ಪ್ರತಿಮಾಪ್ರಧಾನ ಗೀತೆಯಲ್ಲಿ ''ಅಮ್ಮನಿತ್ತುದೇ ಅಮೃತ'' ಎನ್ನುವ ಒಂದು ಕಡೆ ಬಿಟ್ಟರೆ ಸರಳ ಶಬ್ದಗಳಲ್ಲೇ ವಿಜಯನಾರಸಿಂಹ ಸೊಗಸಾದ ಪ್ರತಿಮೆ ಕಟ್ಟಿದ್ದಾರೆ. ಹಾಗೆಯೇ 'ಬಂಗಾರದ ಹೂವು' ಚಿತ್ರದ ''ನೀ ನಡೆವ ಹಾದಿಯಲ್ಲಿ...'' ಎಂಬ ವಿಶಿಷ್ಟ ಬಗೆಯ ವಿರಹಗೀತೆಯಲ್ಲಿ ಸರಳ ಶಬ್ದಗಳೇ ಹಿರಿದಾದ



(ಚಿತ್ರ ೬೮-೭೦) ಗೀತಪ್ರಿಯ ಅಬ್ದುಲ್ ರಹಮಾನ್ ಪಾಷ ಸು.ರುದ್ರಮೂರ್ತಿಶಾಸ್ತ್ರಿ

ಅರ್ಥ ಹೇಳಿವೆ. ವಿಜಯನಾರಸಿಂಹ ಅವರ ಗೀತೆಗಳ ಕೆಲವು ಸಾಧ್ಯತೆಗಳನ್ನು ಮಾತ್ರ ಇಲ್ಲಿ ಗುರುತಿಸಿದೆ. ಅವರದು ಅಂತಹ ಅನೇಕ ಆಯಾಮಗಳುಳ್ಳ ಗೀತಪ್ರಕಾರ.

* * *

ಭಾವಾಭಿವ್ಯಕ್ತಿಗೆ ತುಸುವಾದರೂ ಕಾವ್ಯಮಯತೆ ಬೇಕು ಎಂಬ ಅದುವರೆಗಿನ ನಂಬಿಕೆ ಬ್ರೇಕ್ ಮಾಡುವ ಮಾದರಿಯ ಗೀತೆಗಳನ್ನು ರಚಿಸಿದವರು ಗೀತಪ್ರಿಯ. ನಿರ್ದೇಶಕರಾಗಿಯೂ ನೇರ ನಿರೂಪಣಾ ವಿಧಾನವನ್ನು ಹೆಚ್ಚಾಗಿ ಬಳಸಿಕೊಂಡ ಅವರಿಗೆ ಗೀತರಚನೆಯಲ್ಲೂ ಅದೇ ಸಮಂಜಸ ದಾರಿ ಎನ್ನಿಸಿರಬೇಕು. ಶಬ್ದಗಳಿಗೆ ಒಂದು ನಾದಮಯತೆ ಬೇಕು ಎಂಬ ಅಂಶವನ್ನು ಸಂಪೂರ್ಣ ಕೈಬಿಟ್ಟು ಗದ್ಯಮಯ ಎನಿಸಬಲ್ಲ ರಚನೆಗಳಿಗೆ ಕೈ ಹಾಕಿದರು. ಬಂಡಾಯ ಸಾಹಿತ್ಯ 'ಖಡ್ಗವಾಗಲಿ ಕಾವ್ಯ' ಎಂದು ಘೋಷಿಸುವ ಎಷ್ಟೋ ಮೊದಲೇ ಗೀತಪ್ರಿಯ ಈ ಕೆಲಸವನ್ನು ಯಶಸ್ವಿಯಾಗಿಯೇ ಮಾಡಿದರು. ಗದ್ಯಮಯ ಎನಿಸಿದರೂ ಶುಷ್ಕವಾಗದ ರೀತಿ ಸಮಾಜದ ಅನ್ಯಾಯ, ತಾರತಮ್ಯದ ವಿರುದ್ಧ ಧ್ವನಿ ಎತ್ತಿದ ಅವರ ಗೀತೆಗಳು ಅಲ್ಲಲ್ಲಿ ಘೋಷಣೆಗಳ ಅಂಚಿನಲ್ಲೇ ಸುಳಿದು ಕಾಳಜಿಯ ಪ್ರಾಮಾಣಿಕತೆಯ ಹಿನ್ನೆಲೆಯಲ್ಲಿ ಗಟ್ಟಿಯಾಗಿ ನಿಂತುಕೊಳ್ಳುತ್ತವೆ.

ಒಬ್ಬನು ತನ್ನಯ ಸಲುವಾಗಿ
ಹಲವರ ದೋಚಿ ನಗುವಂಥ
ಒಬ್ಬನೆಲ್ಲೋ ನಗುತಿರಲು
ಕೋಟಿ ಮಂದಿ ಅಳುವಂಥ
(ಗೀತೆ: ''ಅಡುತಿರುವ ಮೋಡಗಳೇ...'', ಚಿತ್ರ : ಬೆಟ್ಟದ ಹುಲಿ)

ಒಂದು ಮನೆಯ ಉರುಳಿಸಿ ತಾನು ಮಹಡಿ ಕಟ್ಟುವ
ತಾನು ಮಾತ್ರ ಮೆರೆಯಲು ಪರರ ತಲೆಯ ಮೆಟ್ಟುವ
ಪರರ ಸುಖವ ಅಳಿಸುತ ತನ್ನ ಸುಖವ ಬೆಳೆಸುತ
ವಂಚಕರ ಆಶ್ರಯದಿ ಬೆಳೆಯುತಿರೆ ಧೂರ್ತತೆ
ಸೋತೆಯಾ ಅಧರ್ಮಕೆ ಧರ್ಮ ದೇವತೆ
(ಗೀತೆ : ''ಅಳುತಿದೆ...'', ಚಿತ್ರ : ಮಣ್ಣಿನ ಮಗ)

ನೆರಳನ್ನೇ ನೀಡುವಂತಹ ಮರವನ್ನೇ ಕಡಿವರಲ್ಲ
ನಿಸ್ವಾರ್ಥ ಜೀವಿಗಳಿಗೆ ಜಗದ ಕಹಿಯೆ ಅಪಾರ
ಅಪಕಾರವನ್ನೇ ಕಾಣುವೆ ಉಪಕಾರವನ್ನೇ ಕಾಣೆ
ಅನುರಾಗವೆಲ್ಲಿ ಇಲ್ಲವೆ ? ಮನದೆ ಇದುವೆ ವಿಚಾರ
(ಗೀತೆ : ''ನೀನೆಲ್ಲಿ ನಡೆವೆ ದೂರ...'', ಚಿತ್ರ : ಒಂದೇ ಬಳ್ಳಿಯ ಹೂಗಳು)

'ಮಣ್ಣಿನ ಮಗ' ಚಿತ್ರದ ''ಬರೆಯದ ಕೈಗಳು ಬರೆಯುತಿವೆ...'', ''ಇದೇನು ಸಭ್ಯತೆ ಇದೇನು ಸಂಸ್ಕೃತಿ...'', 'ಬೆಳುವಲದ ಮಡಿಲಲ್ಲಿ' ಚಿತ್ರದ ''ಬೆಳುವಲದ ಮಡಿಲಲ್ಲಿ ಜೆವರ ಹಸಿ ಬಿದ್ದಾಗ...'' ಮುಂತಾದ ಗೀತೆಗಳು ಸಂಪೂರ್ಣ ವಾಚ್ಯವಾಗಿಯೇ ಮಾತನಾಡುತ್ತವೆ, ಚಿತ್ರದ ಆಶಯವನ್ನು ಪ್ರತಿಧ್ವನಿಸುತ್ತವೆ. ಇನ್ನೊಂದು ಅರ್ಥದಲ್ಲಿ ನಿರ್ದೇಶಕ ಗೀತಪ್ರಿಯ ತಮ್ಮ ಚಿತ್ರದ ಆಶಯವನ್ನು ಪ್ರೇಕ್ಷಕರಿಗೆ ಹೇಳಲು ಬಳಸಿದ ತಂತ್ರವಾಗಿಯೇ ಇದನ್ನು ನೋಡಬಹುದು.

ಗೀತಪ್ರಿಯ ಅವರಲ್ಲಿ ಕಾವ್ಯಮಯತೆ ಇಲ್ಲವೇ ಇಲ್ಲ ಎಂದಲ್ಲ, ಅಂತಹ ರಚನೆಗಳು ಅವರಲ್ಲಿ ಕಡಿಮೆ. 'ಕಲ್ಯಾಣಿ' ಚಿತ್ರದ ''ವೀಣಾ ನಿನಗೇಕೋ ಈ ಕಂಪನ...'' ಗೀತೆಯ ಕಾವ್ಯಮಯತೆಯನ್ನು ಮರೆಯುವಂತೆಯೇ ಇಲ್ಲ. ಅದರಲ್ಲೂ

ಭಾವನೆ ಬೆರೆತ ಮೋಹಕ ಸೆಳೆತ
ಹಿತವೇ ನಿನಗೆ ಈ ಪರಿ ಮಿಡಿತ ?
ಸೂಚನೆ ಏನೋ ಯೋಚನೆ ಏನೋ
ಅರಿಯೆ ಏಕೊ ಈ ಭಾವನಾ

ಎಂಬ ಸಾಲುಗಳು ಅಪ್ಪಟ ಕಾವ್ಯಮಯವಾಗಿ ಮೈದಾಳಿವೆ. 'ಹೊಂಬಿಸಿಲು' ಚಿತ್ರದ ''ಜೀವ ವೀಣೆ ನೀಡೊ ಮಿಡಿತದ ಸಂಗೀತ...'' ಇಂತಹ ಇನ್ನೊಂದು ಕಾವ್ಯಮಯವಾದ ರಚನೆ. 'ಒಂದೇ ಬಳ್ಳಿಯ ಹೂಗಳು' ಚಿತ್ರದ ''ಅಣ್ಣ ನಿನ್ನ ಸೋದರಿಯನ್ನ, ಮರೆಯದಿರು....'' ಎಂಬ ಕೋರಿಕೆ, 'ಭಾಗ್ಯಚಕ್ರ' ಚಿತ್ರದ ''ಲೋಕಕ್ಕೆಲ್ಲ ಒಬ್ಬನೇ ಸೂರ್ಯ...'' ಎಂಬ ಉದಾತ್ತತೆ ''ನಗುತ ಹಾಡಲೆ, ಅಳುತ ಹಾಡಲೆ...'' ಎಂಬ ವಿರಹ ಇವೆಲ್ಲ ಗೀತಪ್ರಿಯರ ರಚನೆಯಲ್ಲಿ ಪ್ರಿಯವಾಗುವಂತಹವು.

* * *

ಭಾವಗೀತೆ ಎಂಬ ಪ್ರಕಾರ ಅಸ್ಪಷ್ಟವಾಗಿ ಮೂಡುತ್ತಿದ್ದ ಕಾಲದಲ್ಲೇ ಭಾವಾತ್ಮಕ ರಚನೆಗಳ ಪರಂಪರೆಯನ್ನು ಆರಂಭಿಸಿದವರು ಆರ್.ಎನ್.ಜಯಗೋಪಾಲ್. ನವೋದಯ ಸಂದರ್ಭದಲ್ಲಿ ಭಾವಪ್ರಧಾನವಾದ ಗೀತೆಗಳು ಸಾಕಷ್ಟು ಬಂದಿವೆ. ಕೆ.ಎಸ್.ನರಸಿಂಹಸ್ವಾಮಿಯವರ ಒಲವಿನ ಕವಿತೆಗಳು ಬಂದಿವೆ. ಆದರೆ ನವ್ಯಕಾವ್ಯ ಭಾವತೀವ್ರತೆಯನ್ನು ಒಂದು ದೋಷ ಎಂದು ನೋಡಲು ಪ್ರಾರಂಭಿಸಿದ ಮೇಲೆ ಅಂತಹ ರಚನೆಗಳ ಸಂಖ್ಯೆ ಕುಸಿಯಿತು. ಇದಕ್ಕೆ ಪರ್ಯಾಯವಾಗಿ ಭಾವಪ್ರಧಾನವಾದ ಕ್ಯಾಸೆಟ್ ಸಂಸ್ಕೃತಿ ಇನ್ನೂ ಆರಂಭವಾಗಿರಲಿಲ್ಲ. ಈ ಹಂತದಲ್ಲಿ ಆರ್.ಎನ್.ಜಯಗೋಪಾಲ್ ಬರೆದರು. ಅವರು ಈ ಹಂತದಲ್ಲಿ ಬರೆದಿರುವ ಅನೇಕ ಗೀತೆಗಳು ಇಂದಿನ ಕ್ಯಾಸೆಟ್ ಭಾವಗೀತೆಗಳಿಗಿಂತ ಎಷ್ಟೋ ಪಟ್ಟು ಉತ್ತಮವಾಗಿವೆ. ಸ್ವತಃ ನಿರ್ದೇಶಕರಾಗಿದ್ದ ಜಯಗೋಪಾಲ್ ಚಿತ್ರದ ಸನ್ನಿವೇಶವನ್ನು ಭಾವನಾತ್ಮಕ ಕೋನಗಳಿಂದ ನೋಡುವ ಒಂದು ಸಾಧನವಾಗಿ ಚಿತ್ರಗೀತೆಗಳನ್ನು ಬಳಸಿಕೊಂಡರು. 'ನಾ ಮೆಚ್ಚಿದ ಹುಡುಗ' ಚಿತ್ರದಲ್ಲಿ ಗೀತೆಗಳೇ ಕಥನದ ಕೆಲವು ಆಯಾಮವನ್ನು ನಿರ್ವಹಿಸುವುದನ್ನು ಇಲ್ಲಿ ಗಮನಿಸಬಹುದು.

ಭಾವಪ್ರಧಾನ ಸಾಹಿತ್ಯ ಮುಖ್ಯವಾಗುವುದೇ ಯುಗಳ ಗೀತೆಗಳಲ್ಲಿ. ಜಯಗೋಪಾಲ್ ಅವರಲ್ಲಿ ಸಿಕ್ಕುವ ರಚನೆಗಳಲ್ಲಿ ಉತ್ತಮ ಎನ್ನಿಸುವ ಹೆಚ್ಚಿನವು ಯುಗಳಗೀತೆಗಳೇ. ಕಾವ್ಯದ ದೃಷ್ಟಿಯಿಂದ ಅವರು ಹೊಚ್ಚ ಹೊಸ ಎಂಬ ಪ್ರತಿಮೆಗಳನ್ನೇನು ಬಳಸಲಿಲ್ಲ. ನವೋದಯ ಕಾವ್ಯದಲ್ಲಿ ಬಳಕೆಯಾದ ಕಲ್ಪನೆಗಳನ್ನೇ ಅವರು ಬಳಸಿಕೊಂಡರು. ಕೆ.ಎಸ್.ನರಸಿಂಹಸ್ವಾಮಿಯವರ ಪ್ರೇಮಗೀತೆಗಳ ಪ್ರಭಾವವನ್ನು ಅವರಲ್ಲಿ ಸಾಕಷ್ಟು ನೋಡಬಹುದು. ಗೀತೆಯ ಸಾಧ್ಯತೆಗೆ ಅವನ್ನು ಒಗ್ಗಿಸಿ ನಾದಮಯತೆ ಸೃಷ್ಟಿಸಿರುವುದರಲ್ಲಿ ಆರ್.ಎನ್.ಜಯಗೋಪಾಲ್ ಅವರ ಸ್ವಂತಿಕೆ ಎದ್ದು ಕಾಣುತ್ತದೆ. 'ಬೆಳ್ಳಿಮೋಡ' ಚಿತ್ರದ ''ಇದೇ ನನ್ನ ಉತ್ತರ...'' ನಾಯಕಿಯ ಪ್ರಶ್ನೆಗೆ ಉತ್ತರ ರೂಪದಲ್ಲಿ ಪ್ರಣಯದ ಬೇರೆ ಬೇರೆ ಪ್ರತಿಮೆಗಳನ್ನು ಬಳಸಿದ ರಚನೆ. ಇದರ ಕೊನೆ ''ಮನವ ಸೆಳೆದಾ ನಲ್ಲೆಗೆ ಇನಿಯ ಕೊಡುವಾ ಉತ್ತರ...'' ಎಂಬ ಅರ್ಥಪೂರ್ಣ ನೆಲೆ. ಇದೇ ಚಿತ್ರದ ''ಬೆಳ್ಳಿಮೋಡದ ಅಂಚಿನಿಂದ...'' ಇನ್ನೊಂದು ಸೊಗಸಾದ ಯುಗಳಗೀತೆ. ಸಂಭಾಷಣೆಯ ನೆಲೆಯಲ್ಲಿ ಬೆಳೆಯುವ ಈ ಗೀತೆಯಲ್ಲಿ,

ಪ್ರಣಯದ ಕಾವ್ಯ ರಚಿಸಿದೆ ನೀನು
ಪುಟ ಪುಟವೆಲ್ಲ ತುಂಬಿದೆ ಜೇನು
ಜೇನಿನ ಧಾರೆ ಸವಿಯುವ ಬಾರ
ನೀನೆ ನನ್ನ ಮಿನುಗುತಾರೆ

ಎಂಬ ಸಾಲುಗಳು ಚೆನ್ನಾಗಿವೆ. 'ಸ್ವಯಂವರ' ಚಿತ್ರದ ''ನಿನ್ನ ಕಣ್ಣ ಕನ್ನಡಿಯಲ್ಲಿ....'' ನಾದಮಯ ಯುಗಳಗೀತೆ. ಇದರ ಯಾವ ಪ್ರತಿಮೆಯೂ ಹೊಸತು ಅನ್ನಿಸದಿದ್ದರೂ ಅವು ಒಟ್ಟಾಗಿ ನಿರ್ಮಿಸಿರುವ ಕಾವ್ಯಶಿಲ್ಪ ಪರಿಣಾಮಕಾರಿಯಾಗಿದೆ. 'ನಾ ಮೆಚ್ಚಿದ ಹುಡುಗ' ಚಿತ್ರದ ''ಬೆಳದಿಂಗಳಿನಾ ನೊರೆ ಹಾಲು....'' ಇಂತಹದೇ ಇನ್ನೊಂದು ಗೀತೆ. ''ಅನುರಾಗಾಮೃತ ಝುರಿಯಲಿ ಮಿಂದ ಚೆಲುವ ಚೆನ್ನಿಗನೇ...'', ''ಹೂವಿನ ತೇರಲಿ ಮೆರೆಯುತ ಬಂದ ದೇವ ಕನ್ನಿಕೆಯೋ....'' ಆಗಿ ನಲಿಯುವ ಈ ಪ್ರಣಯಿಗಳು

ಆಸೆಗಳೆಂಬ ಕಾರಂಜಿಗಳು
ಹೊಮ್ಮುವ ನಂದನವೂ
ನಿನ್ನ ಕಿರುನಗೆ ಎಂಬ
ಹೂವುಗಳಿಂದ ಮರೆಯುವ ಹೂಬನವೂ
ಪ್ರಣಯಗಳ ಮಧುರ ವಿಹಾರವೂ ॥ ಪ್ರೇಮಕಾಶ್ಮೀರವೂ

ತಾಣದಲ್ಲಿ ಸ್ವರ್ಗವನ್ನೇ ಕಾಣುತ್ತಾರೆ. ಇಲ್ಲಿನ ಪ್ರೇಮಕಾಶ್ಮೀರ ಎಂಬ ಪ್ರತಿಮೆ ಕುವೆಂಪು ಅವರಿಂದ ಪ್ರೇರಿತವಾಗಿರುವುದನ್ನು ಗಮನಿಸಬಹುದು. 'ಹೃದಯ ಸಂಗಮ' ಚಿತ್ರದ



(ಚಿತ್ರ ೭೨-೭೪) ಹಂಸಲೇಖ ಶ್ಯಾಮಸುಂದರ ಕುಲಕರ್ಣಿ ಎ.ಮನೋಹರ್

''ನೀ ತಂದ ಕಾಣಿಕೆ...'' ಇದೇ ಪರಂಪರೆಯ ಸೊಗಸಾದ ರಚನೆ. ಕಣ್ಣಲ್ಲೇ ಒಲವಿನ ಪೀಠಿಕೆ ಬರೆದ ನಲ್ಲೆ ನೋಟಕೆ ಮೈಮರೆತು ನಿಂತಾಗ ಪ್ರಿಯತಮ ಕರೆಯನ್ನು ಸ್ಪಂದಿಸುವ ರೀತಿ ಮತ್ತು ನಲ್ಲೆ ಉತ್ತರಿಸುವ ರೀತಿ

ನಲ್ಲ : ಕರೆದೇ ನನ್ನ ಕನಸಿನ ತೀರಕೆ
ಆಸೆಯ ಹೂಗಳು ಅರಳಿದ ತೋಟಕೆ

ನಲ್ಲೆ : ಈ ಬಾಳ ಗುಡಿಗೆ ನೀನಾದೆ ದೀಪಿಕೆ
ಬೆಳಕಾಗಿ ಬಂದೆ ನೀ ನನ್ನ ಜೀವಕೆ

ಕಾವ್ಯಾತ್ಮಕವಾಗಿ ಅರಳಿವೆ. 'ಕಸ್ತೂರಿ ನಿವಾಸ' ಚಿತ್ರದ ''ನೀ ಬಂದು ನಿಂತಾಗ...'' ಬದುಕಿನ ವಿವಿಧ ಘಟ್ಟಗಳನ್ನು ಪ್ರೇಮದ ನೆಲೆಯಿಂದ ವಿಶ್ಲೇಷಿಸುವ ಕಥನದ ಸೂಕ್ಷ್ಮವನ್ನು ಒಳಗೊಂಡ ರಚನೆ. ''ಜೇನಂಥ ಮಾತಲ್ಲಿ, ಕುಡಿಗಣ್ಣ ಸಂಚಲ್ಲಿ ನಗುವೆಂಬ ಹೂ ಚೆಲ್ಲಿ ನಿಂತೆ ನೀ ಮನದಲ್ಲಿ'' ಎಂಬ ಕಾಡುವ ಪ್ರಣಯ, ''ಒಡಲಲ್ಲಿ ಹೊಸದೊಂದು ನವಜೀವ ಬಂದಾಗ'' ಪಲ್ಲವಿಯಲ್ಲಿ ಮಡಿಲನ್ನು ತುಂಬುತ್ತದೆ. ಇದಕ್ಕೆ ''ಎದುರಾದೆ ಹಗಲಲ್ಲಿ ಮರೆಯಾದೆ ಇರುಳಲ್ಲಿ ನೀ ತಂದ ನೋವಿಗೆ ಕೊನೆ ಎಲ್ಲಿ, ಮೊದಲಲ್ಲಿ'' ಎಂಬ ವಿಷಾದದ ನೆಲೆಯೂ ಇದೆ. ಇದು ತನ್ನ ಗತಿಸಿದ ಮಡದಿಯನ್ನು ನೆನಪಿಸಿಕೊಳ್ಳುವ ಹಾಡು ಎಂಬ ನೆಲೆಯಲ್ಲಿ ಈ ಪ್ರತಿಮೆಗೆ ಹೊಸ ಅರ್ಥಗಳು ಬರುತ್ತವೆ. ಸಾಹಿತ್ಯಿಕವಾಗಿಯೇ ಚಿತ್ರಗೀತೆಗಳ ಅಂದಿನ ಶಿಲ್ಪವನ್ನು ಮುರಿದು ಹೊಸ ಕಾವ್ಯಶಿಲ್ಪ ಕಟ್ಟುವ ಕುಶಲತೆಗೂ ಈ ಗೀತೆಯನ್ನು ನೋಡಬಹುದು. ದುರಂತವೆಂದರೆ ಆರ್.ಎನ್.ಜಯಗೋಪಾಲ್ ಬಹಳ ಕಾಲ ಈ ಜಾಣತನ ಉಳಿಸಿಕೊಳ್ಳಲಿಲ್ಲ. ಅದೇ-ಅದೇ ಪ್ರತಿಮೆಗಳು ಅವರ ಮುಂದಿನ ಗೀತೆಯಲ್ಲಿ ಮುಂದುವರೆಯುತ್ತ ಅವರಿಗೆ ಅವರೇ ಕ್ಲೀಷೆಯಾಗಲು ಆರಂಭಿಸಿದರು. ''ಈ ಬಂಧನ ಜನುಮ ಜನುಮದ ಅನುಬಂಧನ...''ದಂತಹ ಸಾಧಾರಣ ರಚನೆಗಳೂ ಅವರ ಲೇಖನಿಯಿಂದ ಬಂದವು.

ಆರ್.ಎನ್.ಜಯಗೋಪಾಲ್ ಭಾವತೀವ್ರತೆಯನ್ನು ಬಿಂಬಿಸುವ ಪ್ರೇಮಗೀತೆ, ವಿರಹಗೀತೆ, ಶೋಕಗೀತೆಗಳನ್ನು ಬರೆದಿದ್ದಾರೆ. ಅವುಗಳಲ್ಲಿ ಕೆಲವೊಂದು ಚಿತ್ರದ ಸ್ಥಾಯಿಯನ್ನು ಗಾಢವಾಗಿ ಹಿಡಿದಿಡಬಲ್ಲಷ್ಟು ದಟ್ಟವಾಗಿ ಬಂದಿವೆ. 'ಬೆಳ್ಳಿಮೋಡ'ದ ಮಿನುಗುತಾರೆಯ ದುರಂತವನ್ನು ಬಿಂಬಿಸುವ ''ಒಡೆಯಿತು ಒಲವಿನ ಕನ್ನಡಿ, ಬರೆಯಿತು ಶೋಕದ ಮುನ್ನುಡಿ...'' ಒಂದು ಅರ್ಥಪೂರ್ಣ ಗೀತೆ

ಬೆಳ್ಳಿಮೋಡದ ಮಿನುಗುತಾರೆ
ನಿನ್ನ ಪ್ರೇಮದ ಅರಿತವರಾರೆ

ಹೀಗೆ ಇದು ಚಿತ್ರದ ಸಾಲು ದುರಂತವನ್ನು ಹಿಡಿದಿದೆ. 'ನಾ ಮೆಚ್ಚಿದ ಹುಡುಗ' ಚಿತ್ರದಲ್ಲಿ ಅಪ್ಪ ಅಮ್ಮನ ಜಗಳದ ಹಿನ್ನೆಲೆಯಲ್ಲಿ ಬಂದಿರುವ ''ಅಪ್ಪ-ಅಮ್ಮ ಜಗಳದಲಿ ಕೂಸು ಬಡವಾಯ್ತು, ಮೂಗಿನ ತುದಿಯಾ ಕೋಪದಲಿ ಮೂಗೇ ಬಲಿಯಾಯ್ತು...'' ಚಿತ್ರದ ಸ್ಥಾಯಿಭಾವವನ್ನು ಬಿಂಬಿಸಿದೆ. 'ಮಮತೆ' ಚಿತ್ರದ ''ತಾರೆ ಸಾವಿರ ಸೇರಿ ಚಂದಿರಗೆ ಸಾಟಿಯೆ? ತಾಯಿ ಎಂಬ ದೈವಕೆ ಬೇರಾರು ಸಾಟಿಯೇ...'' ಎಂಬ ಗೀತೆ ತಾಯಿಯನ್ನು ಕಳೆದುಕೊಂಡ ರವಿಯ ಮನಃಸ್ಥಿತಿ ಬಿಂಬಿಸಿದರೆ, ಸವತಿಯ ಮಕ್ಕಳಿಗೆ ತಾಯಿಯಾಗಲು ಹೊರಟ ಪ್ರಯೋಗಶೀಲೆ ಪಾತ್ರದಲ್ಲಿ ಮಂಜುಳಾ ಅನುಭವಿಸುವ ಯಾತನೆಯನ್ನು 'ಆಟದಗೊಂಬೆ ನಾವೆಲ್ಲ ನಿನಗೆ...'' ಗೀತೆ ಬಿಂಬಿಸುತ್ತದೆ. ಈ ಗೀತೆಯಲ್ಲಿ ಬರುವ

ತಾಯಾಗ ಬಂದೆ ನಾ ಒಲವಿಂದೆ ಅಂದು ಈ ಮನೆಗೆ
ತೋರಿದ ಪ್ರೀತಿಗೆ ಹಗೆಯ ಫಲವೇ ಸಿಕ್ಕಿದು ವಿಷಗಳಿಗೆ

ಸಾಲುಗಳು ಮನೋಜ್ಞವಾಗಿವೆ. 'ನಾಂದಿ' ಚಿತ್ರದ ''ಹಾಡೊಂದು ಹಾಡುವೆ...'' ಗಾಢ ವಿಷಾದದಿಂದ ಸ್ಥಾಯಿಯನ್ನು ಬಿಂಬಿಸುವ ಗೀತೆ. ಇದರಲ್ಲಿ

ಸೀಮಂತದಾನಂದ ನಾ ನೀಡಲಿಲ್ಲ
ನಿನಗಾಗಿ ಮಹಿಳೆಯರು ತಾ ಹಾಡಲಿಲ್ಲ
ಸಿರಿವಂತರಾ ಭೋಗ ನಿನಗಿಲ್ಲಿ ಇಲ್ಲ
ಸಿರಿಯಾಗಿ ನಿಧಿಯಾಗಿ ನೀ ಬರುವೆಯಲ್ಲ
ಅದಕೇನೋ ಸೌಭಾಗ್ಯ ಈ ತಾಯಿಗಿಲ್ಲ
ಇವಳಾಸೆ ಆಕಾಂಕ್ಷೆ ನೀನಾದೆ ಎಲ್ಲಾ

ಎಂಬ ಮನಕಲಕುವ ಸಾಲುಗಳಿವೆ. ಆರ್.ಎನ್.ಜಯಗೋಪಾಲ್ ಅವರ ಪ್ರಣಯಗೀತೆ, ವಿರಹಗೀತೆಗಳೂ ಸಹ ಇಂತಹ ದಟ್ಟ ಭಾವುಕ ವಾತಾವರಣದಲ್ಲಿ ಬೆಳೆಯುವ ಮೂಲಕ ಕೆಲವೆಡೆ ಗಾಢ ಅನುಭೂತಿ ನೀಡುತ್ತವೆ. ಕೆ.ಎಸ್.ನ. ಅವರ 'ಹೆಂಡತಿಯ ಕಾಗದ'ವನ್ನು ಹೋಲುವ ತಂತ್ರಗಾರಿಕೆ ಹೊಂದಿದ ''ನಾ ಮೆಚ್ಚಿದ ಹುಡುಗನಿಗೆ....'' ಎಂಬ 'ನಾ ಮೆಚ್ಚಿದ ಹುಡುಗ' ಚಿತ್ರದ ಗೀತೆ ಮೇಲ್ನೋಟಕ್ಕೆ ಭಿನ್ನವಾಗಿದೆ.

ಪದಗಳು ತುಂಬಿದ ಕವನವಿದಲ್ಲ
ಹೃದಯವೆ ಅಡಗಿದೆ ಇದರಲಿ
ಇದರ ಒಡೆತನ ನಿನದೇ ಎಲ್ಲ
ಕೋಮಲ ಎಚ್ಚರವಿರಲಿ
ತಗಲದೇ ನಿನ್ನ ಕೈಗಳಿಗೀಗ
ವಿರಹದ ಈ ಬಿಸಿ ಉಸಿರು
ನನ್ನಯ ದೇಹದ ನರನಾಡಿಗಳು
ಮಿಡಿದಿವೆ ನಿನ್ನಯ ಹೆಸರು

ಎನ್ನುವ ಭಾವನಾತ್ಮಕ ಸಾಲುಗಳು ಗೀತೆಯನ್ನು ಕಾವ್ಯಾತ್ಮಕ ನೆಲೆಗೆ ಕೊಂಡೊಯ್ದಿವೆ. 'ತೂಗುದೀಪ' ಚಿತ್ರದ ''ಮೌನವೇ ಆಭರಣ, ಮುಗುಳ್ನಗೇ ಶಶಿಕಿರಣ, ನೋಟವೇ ಹೂ ಬಾಣ ಚೆಲುವಿನ ಮಧುವನ...'' ಎಂಬ ಗೀತೆಯಲ್ಲಿ ಪ್ರತಿಮೆಗಳ ಭಿನ್ನ ಸಂಯೋಜನೆ ಇದೆ. ''ಕಡಲಿನ ಆಳವ ಅಳೆದವರಿಲ್ಲ, ಹೆಣ್ಣಿನ ಮನವನು ಅರಿತವರಿಲ್ಲ...'' ಹೀಗೆ ಹೊಸತನದ ಸ್ಪರ್ಶ ಇದೆ. 'ಹಸಿರು ತೋರಣ' ಚಿತ್ರದ ''ಒಂದು ದಿನ ಎಲ್ಲಿಂದಲೋ ನೀ ಬಂದೆ...'' ಇದೇ ಪರಂಪರೆಯಲ್ಲಿ ಬಂದ ಗೀತೆ.

ಮೈತ್ರಿಯ ವೀಣೆ ಮಿಡಿದ ಮಧುರ ತಾನಕೆ
ಹಾಡಿರೆ ನೀ ಅನುರಾಗದ ರಾಗ ಮಾಲಿಕೆ

ಎಂಬ ಸಾಲುಗಳಲ್ಲಿ ಅಪ್ಪಟ ಕಾವ್ಯಮಯತೆ ಇದೆ. 'ನಾಂದಿ' ಚಿತ್ರದ ''ಉದುಗೊರೆಯೊಂದ ತಂದ...'' ಚಮತ್ಕಾರಪೂರ್ಣ ರಚನೆ.

ನೀನೆ ನನ್ನವಳೆಂದ
ಕಿವಿಯಲಿ ಪಿಸು ಮಾತಿಂದ
ಮೊಗವೆಂಬ ಅರವಿಂದ
ಕೆಂಪಾಯಿತು ನಾಚಿಕೆಯಿಂದ

ಎಂಬ ಸಾಲುಗಳಿಗೆ ಕಾವ್ಯ ಸ್ಪರ್ಶವಿದೆ. ಮುಖವನ್ನು ಕಮಲಕ್ಕೆ ಹೋಲಿಸುವ ಸಾವಿರಾರು ಕವಿತೆಗಳು ನಮ್ಮಲ್ಲಿ ಬಂದಿವೆ. ಆದರೆ ಅರವಿಂದ ಎಂಬ ಪರ್ಯಾಯ ಪದ ಬಳಕೆಯಾದದ್ದು ಕಡಿಮೆ. ಇಲ್ಲಿ 'ಕೆಂಪಾಗುವ' ಕ್ರಿಯೆಗೆ ಆ ಪದ ಸೂಕ್ಷ್ಮ ಸಂವೇದಿಯಾಗಿ ಬಂದಿದೆ. ಆದರೆ ಇದೇ ಗೀತೆ ''ಜಡೆಯಳೆದ ಮುದದಿಂದ'' ಎಂದೆಲ್ಲ ಬೆಳೆಯುತ್ತ ಹೋಗಿ ಕಾವ್ಯಾತ್ಮಕತೆಯನ್ನು ಅದೇ ವೇಗದಲ್ಲಿ ಕಳೆದುಕೊಂಡಿದೆ. 'ಪುನರ್ಜನ್ಮ' ಚಿತ್ರದ ''ಒಲುಮೆಯ ಹೂವೇ ನೀ ಹೋದೆ ಎಲ್ಲಿಗೆ....'' ಒಂದು ಅಪರೂಪದ ವಿರಹ ಗೀತೆ. ಈ ಗೀತೆಯಲ್ಲಿ ಬರುವ

''ಮಧುಮಯ ಗಾನವದು ನಡುವಲ್ಲೆ ನಿಂದುದೇಕೆ
ಹಗಲಿನ ರಾಜ್ಯದಲಿ ಕಾರಿರುಳು ಬಂದುದೇಕೆ....''
''ಬಾಳಿನ ನಂದನದೆ ಹೂವಾಗಿ ನೀ ಬಂದೆ
ಇಂದಲ್ಲಿ ಉಳಿದಿಹುದು ಸೌಗಂಧವೊಂದೆ...''

(ಚಿತ್ರ ೭೫-೭೭) ರವಿ ಶ್ರೀವತ್ಸ

ಕುಣಿಗಲ್ ನಾಗಭೂಷಣ

ಸಿ.ವಿ.ಶಿವಶಂಕರ್

ಎಂಬ ಪ್ರತಿಮೆಗಳು ಗಾಢವಾಗಿವೆ. ಆರ್.ಎನ್.ಜಯಗೋಪಾಲ್ ಅವರ ಭಾವಾತ್ಮಕ ನೆಲೆ ಇಲ್ಲದ ಗೀತೆಗಳಲ್ಲಿ ಕೊಂಚ ಮಟ್ಟಿಗಿನ ಕೃತ್ರಿಮತೆ ಕಾಣಿಸುತ್ತದೆ. ''ಒಂದಾನೊಂದು ಊರು, ಆ ಊರಲಿ ಇಲಿಗಳು ನೂರು...'', ''ಏಳು ಬಣ್ಣ ಸೇರಿ ಬಿಳಿಯ ಬಣ್ಣವಾಯಿತು...'', ''ಹಾಡೊಂದ ಹಾಡುವೆನು ಹೃದಯರಾಗದಲ್ಲಿ...'' ಮುಂತಾದ ರಚನೆಗಳು ಅನೇಕ ಕಡೆ ಶುದ್ಧ ಶಬ್ದ ಚಮತ್ಕಾರ ಎನ್ನಿಸುತ್ತದೆ. ''ಶುಭಾಶಯ ಮದುಮಗನಿಗು, ಮದುಮಗಳಿಗೂ...'' ಎಂಬ ಜನಪ್ರಿಯ ಗೀತೆ ಕೂಡ ಅರ್ಥದ ದೃಷ್ಟಿಯಿಂದ ಶುಷ್ಕ ರಚನೆಯೇ. ಇದಕ್ಕೆ ಅವರು ತಮ್ಮ ಕಾವ್ಯ ಸಾಧ್ಯತೆಗಳನ್ನು ಹಿಗ್ಗಿಸಿಕೊಳ್ಳದೇ ಹೋದದ್ದು ಬಹಳ ಮುಖ್ಯವಾದ ಒಂದು ಕಾರಣವಾಗಿರಬಹುದು.

ತುಸು ವಿಷಾದದಿಂದಲೇ ಸಾಹಿತ್ಯಿಕ ನೆಲೆ ಎಂಬ ಕಾರಣದಿಂದ ಹೇಳಲೇಬೇಕಾದ ಅಂಶ ಆರ್.ಎನ್.ಜಯಗೋಪಾಲ್ ಅವರಲ್ಲಿ ಸಿಕ್ಕುವ ಅಪಭ್ರಂಶಗಳು. 'ವಿಜಯನಗರದ ವೀರಪುತ್ರ' ಚಿತ್ರದ ''ಅಪಾರ ಕೀರ್ತಿ ಗಳಿಸಿ ಮೆರೆವ...'' ಗೀತೆಯಲ್ಲಿ 'ಕರ್ನಾಟವಿದುವೆ' ಎಂಬ ಪ್ರಯೋಗವಿದೆ. 'ನಾ ಮೆಚ್ಚಿದ ಹುಡುಗ'ದ ಶೀರ್ಷಿಕೆ ಗೀತೆಯಲ್ಲಿ ''ಹೃದಯವೆ ಅಡಗಿದೆ ಇದರಲಿ...'' ಎಂಬ ಪ್ರಯೋಗವಿದೆ. 'ಬೇಡಿ ಬಂದವಳು' ಚಿತ್ರದ ''ನೀರಿನಲ್ಲಿ ಅಲೆಯ ಉಂಗುರ...'' ಗೀತೆಯಲ್ಲಿ ಬರುವ

ಆಗ ನಿನ್ನ ಕೈಯ ಸಂಚರ
ನನ್ನ ಹೃದಯವೊಂದು ಡಂಗುರ
ನಾನು ನುಡಿಯೆ ನಿನ್ನ ಕಿವಿಯೊಳಂತರ
ಹಣೆಯ ಮೇಲೆ ಬೆವರಿನುಂಗುರ

ಎಂಬ ಸಾಲುಗಳಿಗೆ ಅರ್ಥ ಹೇಳುವುದೇ ಕಷ್ಟ.

ಚಿತ್ರರಂಗದ ವಿವಿಧ ನೆಲೆಗಳಲ್ಲಿ ಕೆಲಸ ಮಾಡಿದ ಆರ್.ಎನ್.ಜಯಗೋಪಾಲ್ ಚಿತ್ರಗೀತೆಗೆ ನೀಡಿದ ಭಾವಾತ್ಮಕ ಆಯಾಮ ಮತ್ತು ಆ ಮೂಲಕ ನಿರ್ಮಿಸಿದ ಒಂದು ಪರಂಪರೆಯಾಗಿ ಗಮನಾರ್ಹರಾಗುತ್ತಾರೆ. ಇವತ್ತಿಗೂ ಹಲವು ಪ್ರಣಯಗೀತೆಗಳಲ್ಲಿ ಆರ್.ಎನ್.ಜಯಗೋಪಾಲ್ ಅವರ ಪ್ರಭಾವ, ಪ್ರಯೋಗಗಳು ಕಾಣುತ್ತಿರುವುದು ಇದಕ್ಕೆ ಸಾಕ್ಷಿ. ಜೊತೆಗೆ ಒಂದು ಹಂತದ ನಂತರ ಜಯಗೋಪಾಲ್ ಅವರೇ ತಮ್ಮ ನೆರಳಿನಂತಾದರು ಎಂಬುದೂ ದಾಖಲಿಸಬೇಕಾದ ಸಂಗತಿ.

• • •

ಕನ್ನಡ ಚಿತ್ರರಂಗದಲ್ಲಿ ಚಿ.ಉದಯಶಂಕರ್ ಒಂದು ಅವಿಭಾಜ್ಯ ಅಂಗ ಎಂದು ಕರೆಯಬಹುದಾದಷ್ಟು ಮುಖ್ಯವಾದ ವ್ಯಕ್ತಿತ್ವ ಹೊಂದಿದವರು. ಕಥೆ, ಚಿತ್ರಕಥೆ, ಸಂಭಾಷಣೆ ಹೀಗೆ ಹಲವು ರಂಗಗಳಲ್ಲಿ ದುಡಿದ ಉದಯಶಂಕರ್ ಸುಮಾರು ನಾಲ್ಕು ದಶಕಗಳ ಕಾಲ ಸಾವಿರಾರು ಗೀತೆಗಳನ್ನು ರಚಿಸಿದ್ದಾರೆ. ''ಕನ್ನಡ ಕಾವ್ಯವನ್ನು ಅನೇಕರು ಅನೇಕ ರೀತಿ ದೀಪಗಳಂತೆ ಬೆಳಗಿದ್ದಾರೆ. ಆ ದೀಪಗಳಿಂದ ದೀಪ ಹಚ್ಚುವ ಕೆಲಸ ನಾನು ಮಾಡಿದ್ದೇನೆ'' ಎಂದು ಒಂದು ಕಡೆ ಅವರೇ ಒಪ್ಪಿಕೊಂಡಂತೆ ವಚನ, ದಾಸರ ಪದ, ಆಧುನಿಕ ಕನ್ನಡ ಕವಿಗಳು ಸೇರಿದಂತೆ ಕಾವ್ಯ ಪರಂಪರೆಯಿಂದ ಸಾಕಷ್ಟು ಅಂಶಗಳನ್ನು ಬಳಸಿಕೊಂಡ ಉದಯಶಂಕರ್ ಅವೆಲ್ಲದರ ನೆರವಿನಿಂದ ಗೀತಸೌಧ ನಿರ್ಮಿಸಿದವರು. ಸರಳ, ಸ್ಪಷ್ಟತೆ ಬಹಳ ಮುಖ್ಯ ಲಕ್ಷಣವಾಗಿರುವ ಅವರ ಗೀತೆಗಳು ಈ ಕಾರಣಕ್ಕೇ ಜನಪ್ರಿಯವಾದವು. ಕಣ್ಣು, ನೋಟ, ಚೆಲುವೆ, ಭೂಮಿ, ಬಾನು ಹೀಗೆ ಕೆಲವು ಸೀಮಿತ ಶಬ್ದಗಳನ್ನು ಅನೇಕ ರೀತಿ ಸಂಯೋಜಿಸಿದ ಉದಯಶಂಕರ್ ಈ ಮೂಲಕವೇ ಹೊಸ ಅರ್ಥದ ನೆಲೆಗಳನ್ನು ಹುಡುಕಿದರು.

ಸರಳ ಸಾತ್ವಿಕತೆ ಹೇಳುವ ಗೀತೆಗಳನ್ನು ರಚಿಸುವಲ್ಲಿ ಚಿ.ಉದಯಶಂಕರ್ ಸಿದ್ಧಹಸ್ತರು. ''ಗುಟ್ಟೊಂದ ಹೇಳುವೆ ಪುಟಾಣಿ ಮಕ್ಕಳೇ...'' ಇಂತಹ ಸೊಗಸಾದ ರಚನೆಗಳಲ್ಲಿ ಒಂದು.

''ನಿಜವ ಕೇಳು ಜಗದಿ ಅನಾಥರಾರೂ ಇಲ್ಲ
ತಂದೆಯಾಗಿ ಮೇಲೆ ಆ ದೇವನಿರುವನಲ್ಲ...''

ಎಂಬ ಉದಾತ್ತ ಚಿಂತನೆ ಇದರ ಕಾವ್ಯಮಯತೆಯನ್ನು ಹೆಚ್ಚಿಸಿದೆ. 'ನ್ಯಾಯವೇ ದೇವರು' ಚಿತ್ರದ ''ಎಂದೆಂದು ನೀವು ಸುಖವಾಗಿರಿ...'' ಗೀತೆ ವಿನೂತನ ಸಂವಿಧಾನ ಹೊಂದಿದೆ. ತನ್ನನ್ನು ಮರೆಯಬೇಡಿ ಎಂದು ಬೇಡುವ ಬದಲು ಇಲ್ಲಿ ಅಭಿಸಾರಿಕೆ ತನ್ನನ್ನು ಮರೆತು ಹಾಯಾಗಿರಿ ಎಂದು ಕೇಳಿಕೊಳ್ಳುತ್ತಿದ್ದಾಳೆ. ಚಿತ್ರದ ಹಿನ್ನೆಲೆಯಲ್ಲಿ ಇದರ ಅರ್ಥವಂತಿಕೆ ಇನ್ನೂ ಹೆಚ್ಚುತ್ತದೆ.

''ನೀವೆಲ್ಲೋ ನಾನೆಲ್ಲೋ ಬದುಕೆಲ್ಲ ಇರುಳು
ನಮ್ಮಿಬ್ಬರ ನಡುವೆ ಕಣ್ಣೀರ ಕಡಲು
ಎಂದೆಂದು ನಿಮ್ಮ ನಾ ಸೇರಲಾರೆ
ನಿಮ್ಮ ಈ ನೆನಪೊಂದೇ ನನಗಾಸರೆ...''

ಎಂಬ ಮನಮಿಡಿವ ಸಾಲುಗಳು ಈ ಗೀತೆಯಲ್ಲಿವೆ. 'ಉಪಾಸನೆ' ಚಿತ್ರದ ''ಭಾವವೆಂಬ ಹೂವು ಅರಳಿ...'' ಸಂಗೀತದ ಮಹತ್ವವನ್ನು ಸರಳವಾಗಿ ಹೇಳುವ ಗೀತೆ. ಇದರ ಪ್ರತಿಮೆಗಳಲ್ಲಿ ಹೊಸತಿಲ್ಲದಿದ್ದರೂ ಸರಳತೆಯೇ ಇದರ ಸೌಂದರ್ಯ ಹೆಚ್ಚಿಸಿದೆ. 'ದೇವರ ಗುಡಿ' ಚಿತ್ರದ ''ಮಾಮರವೆಲ್ಲೋ ಕೋಗಿಲೆಯಲ್ಲೋ ಏನೀ ಸ್ನೇಹ ಸಂಬಂಧ...'' ಹೀಗೆ ಪರಂಪರೆಯ ಪ್ರತಿಮೆಗಳಲ್ಲೇ ಹೊಸ ಅರ್ಥ ಶೋಧಿಸುವಂತಹುದು. ಅಮ್ಮನನ್ನು ಕುರಿತು, ನಾಡು-ನುಡಿಗಳ ಕುರಿತು ಹೇರಳವಾದ ಸರಳ ಗೀತೆಗಳನ್ನು ಚಿ.ಉದಯಶಂಕರ್ ರಚಿಸಿದ್ದಾರೆ. ಇಂತಹ ತಾತ್ವಿಕ ಗೀತೆಗಳು ಕೆಲವು ಕಡೆ ದೃಶ್ಯಕ್ಕೆ ಪೂರಕವಾಗಿ ಚಿತ್ರದ ಸಾಧ್ಯತೆಯನ್ನು ಹಿಗ್ಗಿಸಿದರೆ ಕೆಲವು ಕಡೆ ಅಸಂಬದ್ಧತೆಗೂ ಕಾರಣವಾಗಿವೆ. 'ಕಸ್ತೂರಿ ನಿವಾಸ'ದ ''ಆಡಿಸಿ ನೋಡು ಬೀಳಿಸಿ ನೋಡು...'' ನಾಯಕನ ಆದರ್ಶ, ಉದಾತ್ತತೆಯನ್ನು ಅರ್ಥಪೂರ್ಣವಾಗಿ ಹೇಳಿದ ರಚನೆ. ಈ ಗೀತೆಯಲ್ಲಿ ಬರುವ ಪ್ರತಿಮೆಗಳೆಲ್ಲ ನಾಯಕನ ವ್ಯಕ್ತಿತ್ವವನ್ನು ಬಿಂಬಿಸಿ ಚಿತ್ರದ ಒಟ್ಟು ಆಶಯವನ್ನು ಹೇಳುತ್ತದೆ. ಆದರೆ 'ಎರಡು ಕನಸು' ಚಿತ್ರದ ''ಬಾಡಿ ಹೋದ ಬಳ್ಳಿಯಿಂದ ಹೂವು ಅರಳಬಲ್ಲುದೆ...'' ಎಂಬ ಗೀತೆ ಒಟ್ಟಾಗಿ ಒಂದು ಅಸಂಬದ್ಧತೆಯನ್ನು ಚಿತ್ರದ ಹಿನ್ನೆಲೆಯಲ್ಲಿ ಪಡೆದಿದೆ. ಬಿಡಿಯಾಗಿ ಸೊಗಸಾದ ಗೀತೆಯಾಗಿ ಕಾಣುವ ಇದನ್ನು ನಾಯಕ ವಿವಾಹವಾದ ಸಂದರ್ಭದಲ್ಲಿ ಕಾಲೇಜ್ ವಿದ್ಯಾರ್ಥಿಗಳಿಗೆ ಹೇಳುತ್ತಾನೆ. ಬಯಸಿದ ಹುಡುಗಿಯನ್ನು ಕೈಹಿಡಿಯಲಾಗದ ಹತಾಶೆ ಅವನಲ್ಲಿ ಎಷ್ಟೇ ಇದ್ದರೂ ತಾನು ಆದರ್ಶನಾಗಿರಬೇಕಾದ ವಿದ್ಯಾರ್ಥಿಗಳ ಎದುರು, ಹೀಗೆ ಬದುಕಿನ ಅಲೌಕಿಕ ಆತ್ಯಂತಿಕ ದುರಂತದ ಪ್ರತಿಮೆಗಳನ್ನು ಅದೂ ಅವನ ವಿವಾಹ ಸಂದರ್ಭವನ್ನು ಅಭಿನಂದಿಸಲು ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಹೇಳಲು ಸಾಧ್ಯವೆ ? ಹೇಳಿದರೆ ಅವನ ಮನಸ್ಥಿತಿ ಸ್ತಿಮಿತದಲ್ಲಿಲ್ಲವೆಂದು ಉಳಿದವರು ಭಾವಿಸುವುದಿಲ್ಲವೆ ? ಅದರಲ್ಲಿ ''ಧರೆ ಹತ್ತಿ ಉರಿಯುವ...'' ದುರಂತ ನಾಯಕನಿಗೆ ಆಗಿರುವುದಾದರೂ ಏನು ? ವಚನಸಾಹಿತ್ಯ ಅತ್ಯಂತ ಹಿರಿಯ ಅರ್ಥದಲ್ಲಿ ಕಟ್ಟಿಕೊಟ್ಟ ಪ್ರತಿಮೆಗಳ ಅಪಕರ್ಷ ಇಲ್ಲಾಗಿದೆ ಅಷ್ಟೆ. ಕನಿಷ್ಟ ಇದನ್ನು ಹಿನ್ನೆಲೆ ಗೀತೆಯಾಗಿಸುವ ಬುದ್ಧಿವಂತಿಕೆಯನ್ನಾದರೂ ಮಾಡಿದ್ದರೆ ಚಿತ್ರಕ್ಕೆ ಕನಿಷ್ಟ ಪ್ರಮಾಣದ ಸುಸಂಬದ್ಧತೆಯಾದರೂ ಬರುತ್ತಿತ್ತು. 'ಪ್ರೇಮದ ಕಾಣಿಕೆ' ಚಿತ್ರದ ''ಬಾನಿಗೊಂದು ಎಲ್ಲೆ ಎಲ್ಲಿದೆ...'' ಗೀತೆಯೂ ಅಷ್ಟೆ. ಈ ಗೀತೆಯಲ್ಲಿ ಬರುವ ಯಾವ ಪ್ರತಿಮೆಯೂ ಚಿತ್ರದ ಕಥಾನಕಕ್ಕಾಗಲಿ, ಸನ್ನಿವೇಶಕ್ಕಾಗಲಿ ಹೊಂದುವುದಿಲ್ಲ. ಇಂತಹ ನೂರಾರು ಉದಾಹರಣೆಗಳನ್ನು ಕೊಡಬಹುದು. ಉದಯಶಂಕರ್ ಅವರ ರಚನೆಗಳ ನಿಜವಾದ ಮಿತಿ ಇದು.

ಉದಯಶಂಕರ್ ಅವರ ಪ್ರಣಯಗೀತೆಗಳಲ್ಲಿ ಭಾವಾತ್ಮಕತೆ ಕಡಿಮೆ, ಸರಳತೆ ಎಲ್ಲೆಡೆ ಕೆಲಸ ಮಾಡುತ್ತದೆ. ಆದರೆ ಕಲ್ಪಕತೆಯಲ್ಲಿ ಅವು ಯಾರಿಗೇನೂ ಕಡಿಮೆ ಇಲ್ಲದಷ್ಟು ಶ್ರೀಮಂತವಾಗಿವೆ. 'ದೂರದ ಬೆಟ್ಟ' ಚಿತ್ರದ 'ಪ್ರೀತಿನೇ ಆ ದ್ಯಾವ್ರು ತಂದ ಆಸ್ತಿ ನಮ್ಮ ಪಾಲಿಗೆ...'' ಕಟ್ಟಿಕೊಡುವ ಸುಖೀ ದಾಂಪತ್ಯದ ಕನಸು ಮೋಹಕವಾಗಿದೆ. 'ಭಲೇ ಭಾಸ್ಕರ್' ಚಿತ್ರದ ''ನನ್ನೆದೆಯ ಮಾತೆಲ್ಲ ನೀನಾಗಬೇಕು...'' ಸರಳ ಶಬ್ದಗಳಲ್ಲೇ ನಾದಮಯತೆ ತುಂಬಿದ ರಚನೆ.

''ನೀನೊಂದು ಗಿಣಿಯಾಗಿ ಹಾರಾಡಬೇಕು
ಹಸುರಾಗಿ ಒಡಲೆಲ್ಲ ನಾ ತುಂಬಬೇಕು...''

ಎಂಬ ಸಾಲುಗಳಲ್ಲಿ ಕಾವ್ಯದ ಕುರುಹನ್ನು ಗುರುತಿಸಬಹುದು. ಇದೇ ಧಾಟಿಯ ಉದಯಶಂಕರ್ ಅವರ ಅನೇಕ ರಚನೆಗಳಿವೆ. ''ನೀನೆಲ್ಲೊ ನಾನಲ್ಲೆ...'', ''ನಿನಗಾಗಿ

(ಚಿತ್ರ:೭೮-೮೦)ದೊಡ್ಡರಂಗೇಗೌಡ

ಹೆಚ್.ಎಲ್.ಎನ್.ಸಿಂಹ

ಬಸವರಾಜ ಕೆಸ್ತೂರು

ಓಡೋಡಿ ಬಂದೆ...'', ''ನಿನದೇ ನೆನಪು ದಿನವೂ ಮನದಲ್ಲಿ...'', ''ನನ್ನಾಸೆಯ ಹೂವೇ...'' ಹೀಗೆ ಈ ರಚನೆಗಳಲ್ಲೆಲ್ಲ ಒಂದೇ ಮಾದರಿಯ ಸಂವಾದ, ಪ್ರತಿಮೆಗಳು ಕೆಲಸ ಮಾಡುವುದನ್ನು ಗುರುತಿಸಬಹುದು. ''ಸುತ್ತ ಮುತ್ತ ಯಾರೂ ಇಲ್ಲ....'' ಮಾದರಿಯ ರಚನೆಗಳು ಇನ್ನೊಂದು ಬಗೆ. ಅವರಲ್ಲೂ ''ಹೂವು ಎಂದಿಗೂ ಮುಡಿವು ದೇವರಿಗೆ ಏಕೆ ಕಾತುರ ನಾನು ನಿನ್ನವಳು ನೀನು ನನ್ನವನು ಬೇಡ ಅವಸರ...''ದಂಥ ಮಾದರಿ ಅನೇಕ ಗೀತೆಗಳಲ್ಲಿ ಪುನರಾವರ್ತಿತವಾಗಿದೆ.

''ಎಂದೂ ನಿನ್ನ ನೋಡುವೆ ಎಂದೂ ನಿನ್ನ ಸೇರುವೆ...'' ಎಂಬ ಕಾತರತೆಯದು ಇನ್ನೊಂದು ಮಾದರಿ. ''ಕಣ್ಣಲ್ಲೇ ಏನೋ ಮಿಂಚೊಂದು ಕಾಡಿತಲ್ಲ...'' ಎಂದು ಹೆಣ್ಣನ್ನು ರೇಗಿಸುವ ಗೀತೆಗಳದ್ದು ಇನ್ನೊಂದು ಮಾದರಿ. ಹೀಗೆ ಹಲವು ಮಾದರಿಗಳನ್ನು ಉದಯಶಂಕರ್ ಪುನರಾವರ್ತಿತವಾಗಿ ಬಳಸಿದ್ದಾರೆ. ತುಸು ಭಿನ್ನ ಅನ್ನಿಸುವುದು ''ಆಕಾಶವೆ ಬೀಳಲಿ ಮೇಲೆ...'' ಎಂಬ 'ನ್ಯಾಯವೇ ದೇವರು' ಚಿತ್ರದ ಗೀತೆ. ಅದರಲ್ಲಿನ

ಹಸಮಣೆಯು ನಮಗ ಇಂದು
ನಾವು ನಿಂತ ತಾಣವು
ತೂಗಾಡುವ ಹಸಿರೆಲೆಯೇ
ಶುಭ ಕೋರುವ ತೋರಣವು
ಹಕ್ಕಿಗಳ ಚಿಲಿಪಿಲಿ ಗಾನ
ಮಂಗಳಕರ ನಾದವು
ಈ ನದಿಯ ಕಲರವವೇ
ಮಂತ್ರಗಳ ಘೋಷವು
ಸಪ್ತಪದಿ ಈ ನಡೆಯಾಯ್ತು
ಸಂಜೆರಂಗು ಆರತಿಯಾಯ್ತು
ಇಂದೀಗ ಎರಡೂ ಜೀವ ಬೆರೆತು ಸ್ವರ್ಗವಾಯ್ತು

ಎಂದು ಪ್ರಕೃತಿಯನ್ನೇ ಮದುವೆ ಮಂಟಪವಾಗಿಸುವ ಕಲ್ಪನೆಯ ಸೊಬಗು ಮನಸೆಳೆಯುತ್ತದೆ. 'ಬಾಳು ಬೆಳಗಿತು' ಚಿತ್ರದ ''ಕಮಲದ ಹೂವಿಂದ ಕೆನ್ನೆಯ ಮಾಡಿದನು...'' ಇಂತಹ ಕುಶಲತೆಯಲ್ಲಿ ಬೆಳೆಯುವ ಗೀತೆ. ಅದೇ ಕಮಲ, ದುಂಬಿ, ಮುಂಗುರುಳು ಜೇನು, ಕಾಮನಬಿಲ್ಲುಗಳಲ್ಲಿ ತುಂಬಿದ ನಾದಮಯತೆ ಅವನ್ನು ಭಿನ್ನವಾಗಿಸಿದೆ. ಉದಯಶಂಕರ್ ಅವರಲ್ಲಿ ಅನೇಕ ಕಡೆ ಬಿಡಿ ಬಿಡಿ ಪ್ರತಿಮೆಗಳು ಒಟ್ಟು ಗೀತೆಗಿಂತ ಹೆಚ್ಚು ಕಾವ್ಯಾತ್ಮಕವಾಗಿ ಬಂದಿವೆ.

ಕುಡೀ ಅಂದ ತೀರ್ಥ ಕುಡಿದೆ ಚಿಂತೆ ಮರೆಸಿತು
ಹೊಟ್ಟೆ ಒಳಗೆ ಕುರುಕ್ಷೇತ್ರ ಯುದ್ಧ ನಡೆಸಿತು
(ಗೀತೆ : ''ಪರಮಾತ್ಮ...'', ಚಿತ್ರ : ನ್ಯಾಯವೇ ದೇವರು)

ಬಯಕೆಯು ತುಂಬಿ ಆಸೆಯು ದುಂಬಿ
ಎದೆಯನು ಕೊರೆದು ಕಾಡುವುದೇನು
(ಗೀತೆ : ''ಮಾಮರವೆಲ್ಲೋ...'', ಚಿತ್ರ : ದೇವರ ಗುಡಿ)

ಹಗಲಿನ ಬೆನ್ನೇ ಇರುಳು
ಕಷ್ಟವು ಸೌಖ್ಯದ ನೆರಳು
ಒಂದರ ಹಿಂದೆ ಇನ್ನೊಂದೆಂಬ
ಅರಿವೇ ಬಾಳಿನ ತಿರುಳು
(ಗೀತೆ : ''ನೀ ಬಂದ ಸೇರಿದ...'', ಚಿತ್ರ : ನಂದಗೋಕುಲ)

ಒಲವನ್ನು ಕದ್ದವನು ಬಳಿಯಲ್ಲಿ ಕಾದಿಹನು
ಕೈ ಹಿಡಿದು ಬರಸೆಳೆದೆ ದಂಡನೆ ಕೊಡದಿರೆ ನಾ ಬಿಡೆನು
(ಗೀತೆ : ''ನಾನೊಬ್ಬ ಕಳ್ಳನು...'', ಚಿತ್ರ : ನಾನೊಬ್ಬ ಕಳ್ಳ)

ಅಲ್ಲದೆ ''ಕಂಗಳೇ ಕರಗಿ ನೀರಾದಾಗ ಕಾಣುವುದುಂಟೇನು...'', ''ಚಂದಿರ ಭೂಮಿಗೆ ಬೆಳಕನು ಚೆಲ್ಲಲು ಹುಣ್ಣಿಮೆ ಬರಬೇಕು, ಹೆಣ್ಣಿನ ಬಾಳಿನ ಜೋಗುಳ ಪಲ್ಲವಿಯಾಗಲು ತಾಯ್ತನ ಬರಬೇಕು...'' ಇಂತಹ ಅನೇಕ ಉದಾಹರಣೆಗಳಿವೆ.

ಚಿ.ಉದಯಶಂಕರ್ ಅವರಲ್ಲಿ ಶೃಂಗಾರ, ದ್ವಂದ್ವಾರ್ಥ ತುಸು ಹೆಚ್ಚೇ ಅನ್ನಿಸುವಷ್ಟು ಇಣುಕಿವೆ. ರಾಜಕುಮಾರ್ ಅವರಿಗೆ ಬರೆದ ಗೀತೆಗಳಲ್ಲಿ ''ಪ್ರತಿ ರಾತ್ರಿಯಲಿ ಬಳಿ ಸೇರುತಲಿ ಲ್ಲಾಲ್ಲಾಲ್ಲಾ...'' (ಗೀತೆ : ''ಬಂಗಾರಿ...'', ಚಿತ್ರ : ಅಪೂರ್ವ ಸಂಗಮ), ''ನೀನು ನಿಜವಾದ ಹೆಣ್ಣೆ ಅಲ್ಲವೆ, ನಿನ್ನ ಮನದಲ್ಲಿ ಆಸೆ ಇಲ್ಲವೆ...'' (ಗೀತೆ : ''ಚಿನ್ನ ಬಾಳಲ್ಲಿ...'', ಚಿತ್ರ : ಶಂಕರ್‌ಗುರು)ನಂತಹ ಸಾಲುಗಳು ಇಣುಕಿವೆ.

ಮನ ಹಿಗ್ಗಿ ಹಗುರಾಗಿ
ತನು ಕಾದು ಕೆಂಪಾಗಿ
ಮೈ ಬಟ್ಟೆ ಬಿಗಿಯಾಗಿ ರಾಮ
(ಗೀತೆ : ''ಅರೆರೆ ಗಿಳಿರಾಮ...'', ಚಿತ್ರ : ಗಂಧದ ಗುಡಿ)

ಇಂತಹ ಕಡೆ ಸೂಕ್ಷ್ಮವಾಗಿ ಬರುವ ಶೃಂಗಾರ, ''ಚಳಿ ಚಳಿ ತಾಳೆನು...'' ಅಂತಹ ಕಡೆ ವ್ಯಾಪಕವಾಗಿ ಬಂದಿದೆ. 'ಬೋರೇಗೌಡ ಬೆಂಗಳೂರಿಗ ಬಂದ' ಚಿತ್ರದಷ್ಟು ಹಿಂದೆಯೇ ''ಅಲ್ಲಿ ಇಲ್ಲಿ ಹುಡುಕುತ ಕಣ್ಣು....'' ಗೀತೆ ನೋಡಿದರೆ, ಉದಯಶಂಕರ್ ಅವರ ಶೃಂಗಾರ 'ಅಶ್ಲೀಲ'ದ ಸನಿಹಕ್ಕೆ ಬರುವ ಪರಂಪರೆ, ದೀರ್ಘವಾಗಿಯೇ ಇದೆ ಅನ್ನಿಸುತ್ತದೆ.

ಕಾಣದ ಸುಖಕೆ ಹೊಸ ಅನುಭವಕೆ
ಎದೆ ಜುಂ ಎಂದಿದೆ
ಮೆತ್ತನೆ ಮೈಯಿ ಒತ್ತಲು ನನ್ನ
ಮತ್ತು ಏರಿದೆ
ಮೊಗ್ಗೊಂದು ಹೂವಾಗಿದೆ, ನನ್ನಾಸೆ ಪೂರೈಸಿದೆ
ಹಿತವಾಗಿದೆ, ಹಾಯಾಗಿದೆ, ತೇಲಾಡುವಂತಾಗಿದೆ

ಎನ್ನುವ ಈ ಬಗೆಯ ಸಾಲಿನ ಮಾದರಿ ಉದಯಶಂಕರ್‌ರಲ್ಲಿ ಪದೇ ಪದೇ ಸಿಗುತ್ತದೆ.

ಚಿತ್ರದ ಕಥನ ಸಂವಿಧಾನವನ್ನು ಮೀರಿ ನಾಯಕ ಅಥವಾ ನಾಯಕಿಯ ಇಮೇಜ್ ಅನ್ನು ಬಿಂಬಿಸುವ ಗೀತೆಗಳನ್ನು ರಚಿಸುವ ಪರಂಪರೆಯನ್ನು ಉದಯಶಂಕರ್ ಪ್ರಾರಂಭಿಸಿದರು. ''ನಾನೇ ರಾಜಕುಮಾರ...''ದಿಂದ ಆರಂಭಿಸಿ ರಾಜಕುಮಾರ್ ಅವರನ್ನು ಕುರಿತ ಅನೇಕ ಗೀತೆಗಳಿವೆ. ಹೆಚ್ಚೇಕೆ, ೮೦ರ ದಶಕದ ರಾಜ್ ಅಭಿನಯದ ಚಿತ್ರಗಳಲ್ಲಿ ಇಂತಹ ಒಂದಾದರೂ ಗೀತೆ ಇರುತ್ತಿತ್ತು. ಇದು ಮುಂದೆ ಕನ್ನಡದ ಎಲ್ಲಾ ನಟ-ನಟಿಯರಿಗೂ ಅನ್ವಯವಾಯಿತು. ನಟಿಯರಿಗೆ ಬಳಕೆಯಾದದ್ದು ಕಡಿಮೆ. ಚಿತ್ರಗೀತೆಯನ್ನು ಅದು device ಅನ್ನುವ ಅರ್ಥದಿಂದ ಬೇರ್ಪಡಿಸಿದ ಕೀರ್ತಿ ಕೂಡ ಉದಯಶಂಕರ್‌ಗೇ ಸೇರಬೇಕು.

. . .

ಕನ್ನಡ ಸಾಹಿತ್ಯ ಆದರ್ಶ ಪ್ರೇಮದ ಕಲ್ಪನೆಯಿಂದ ದೂರವಾಗಿ, ಶಬ್ದಜಾಲದಿಂದ ಹೊರಬಂದು ಹೊಸತಿಗಾಗಿ ಹುಡುಕುತ್ತಿರುವ ಕಾಲ ಕನ್ನಡ ಚಿತ್ರಗೀತೆಗಳ ವಿಷಯದಲ್ಲೂ ಸಂಭವಿಸಿತು. ಅದೇ ಬಳ್ಳಿ, ಮೊಗ್ಗು, ತಾರೆ, ಚಂದಿರ ಬಿಟ್ಟರೆ ಬೇರೆ ಇಲ್ಲವೆ ಎಂಬ ಏಕತಾನತೆಯು ಹೆಚ್ಚಾಯಿತೆಂಬ ಕೊರಗು ಕಾಣಲಾರಂಭಿಸಿತು. ಹಿರಿಯ ಗೀತರಚನೆಕಾರರೂ ಅಲ್ಲಲ್ಲಿ ಈ ಹೊತ್ತಿಗೆ ಹೊಸ ಭಾಷೆಗಾಗಿ ಪ್ರಯತ್ನಿಸಲಾರಂಭಿಸಿದ್ದರು. ಗ್ರಾಮ್ಯ ಬೆರೆಸಿ ಶಿಷ್ಟಭಾಷೆಯ ಸರ್ವಾಧಿಕಾರ ಮುರಿದು ಅಗತ್ಯ ಬ್ರೇಕ್ ತಂದವರು ದೊಡ್ಡರಂಗೇಗೌಡ. ಅವರ 'ಪರಸಂಗದ ಗಂಡತಿಮ್ಮ'ಚಿತ್ರದ ರಚನೆಗಳು ಕನ್ನಡ ಚಿತ್ರಗೀತೆಗಳಿಗೆ ಹೊಸತನವನ್ನು ಕೊಟ್ಟವು. ''ತೇರಾನೇರಿ ಅಂಬರದಾಗೆ ನೇಸರ ನಗುತಾನೆ...'' ಎಂಬ ಗೀತೆಯ ಸೊಗಸು. ಗ್ರಾಮ್ಯತೆ ಹೊಸ ಅರ್ಥವಂತಿಕೆಯ ಪ್ರಪಂಚವನ್ನು ಚಿತ್ರಗೀತೆಗಳಿಗೆ ತೆರೆದವು. ಈ ಗೀತೆಗಳ ಯಶಸ್ಸು ದೊಡ್ಡರಂಗೇಗೌಡರ ಮೇಲೆ ಒತ್ತಡ ತಂದಿತು. ಪರಿಣಾಮ ಅವರ ಮುಂದಿನ ಗೀತೆಗಳೆಲ್ಲ ಒಂದಲ್ಲ ಒಂದು ಮಾದರಿಯಲ್ಲಿ 'ಪರಸಂಗದ ಗೆಂಡೆತಿಮ್ಮ'ದ ಧಾಟಿಯನ್ನೇ ಅನುಸರಿಸಿದವು. ಅಲ್ಲಲ್ಲಿ ''ಮುಸುಕಾದ ಮನಸಿನಾ ಆಕಾಶಕೆ ಮಿನುಗುವ ಚುಕ್ಕಿಯಂತೆ ನೀ ಬಂದೆ...'',



(ಚಿತ್ರ೮೧-೮೩)ಕೋಡಹಳ್ಳಿ ಶಿವರಾಂ



ಎಸ್.ಸುರೇಂದ್ರನಾಥ್



ನಾಗತಿಹಳ್ಳಿ ಚಂದ್ರಶೇಖರ

''ಹೊತ್ತಾರೆ ಸೂರ್ಯಣ್ಣಂಗೆ ಹತ್ತಿರ ಶೂರಣ್ಣಂಗೆ ಚಿತ್ತಾವ ಕಲಕಿ ನಿಂತ ಗೆಣಕಾರ...''ದಂತಹ ಗೀತೆಗಳನ್ನು ಬಿಟ್ಟರೆ ಗ್ರಾಮ್ಯತೆ ಅರಳಲಿಲ್ಲ. ''ನಿನ್ನ ರೂಪು ಎದೆಯ ಕಲಕಿ ಕಣ್ಣು ಮಿಂಚಿದಾಗ...'' ''ನಾನೊಂದು ತೀರ ನೀನೊಂದು ತೀರ...''ದಂತಹ ಇನ್ನೊಂದು ಮಾದರಿಯಲ್ಲಿ ದೊಡ್ಡರಂಗೇಗೌಡ ಹೊಸತನ ಪ್ರದರ್ಶಿಸಲಿಲ್ಲ. ಎಷ್ಟೋ ದಿನಗಳಾದ ಮೇಲೆ ''ಕೋಲುಮಂಡೆ ಜಂಗಮದ....'' ಜಾನಪದ ಗೀತೆ ಮುಂದುವರಿಸಿದ ಕ್ರಮ ಅವರ ಕಾವ್ಯ ಜೀವಂತಿಕೆಯನ್ನು ಪ್ರತಿಪಾದಿಸಿತು.

• • •

'ಶುಭ ಮಂಗಳ'ದ ''ನಾಕೊಂದ್ಲ...'' ಹಾಡಿನಿಂದ ಗೀತರಚನೆ ಆರಂಭಿಸಿದ ಎಂ.ಎನ್.ವ್ಯಾಸರಾವ್ ಆ ಗೀತೆಯಲ್ಲಿ ಗಣಿತವನ್ನೇ ಅರ್ಥವತ್ತಾಗಿ ತೆರೆದಿಟ್ಟರು.

ಮಳೆಗರೆವ ಹಸಿಹಸಿಗೆ ಭೂತಾಯಿ ಬರೆದಳೇ ಲೆಖ್ಖಾ
ಚಿಗುರೊಡೆವ ಎಲೆಎಲೆಗೆ ವನದೇವಿ ಇಡುವಳೇ ಲೆಖ್ಖ

ಎನ್ನುವ ಮಾದರಿ ಜನಪ್ರಿಯವಾಯಿತು. ಇದೇ ಚಿತ್ರದ ''ಸೂರ್ಯಂಗೂ ಚಂದ್ರಂಗೂ ಬಂದಾರೆ ಮುನಿಸು...'' ಗ್ರಾಮ್ಯತೆಯ ಸೊಗಡಿನಲ್ಲಿ ಬೆಳೆದ ರಚನೆ.

ಬೆಳದಿಂಗಳು ಚೆಲ್ಲೈತೆ ಅಂಗಳದಾ ಒರಗೇ
ಕರಿಮೋಡ ಮುಸುಕೈತೆ ಮನಸಿನಾ ಒಳಗೇ
ಬಯಲಾಗೆ ತುಳುಕೈತೆ ಆರುಸದಾ ಒನಲು
ಪ್ರೀತಿಯ ತೇರಿಗೇ ಬಡಿದೈತೆ ಸಿಡಿಲು

ಎಂಬ ಕಲ್ಪನೆ ಸಾಹಿತ್ಯಿಕವಾಗಿಯೂ ಸೊಗಸಾಗಿತ್ತು. ಆದರೆ ವ್ಯಾಸರಾವ್ ಅವರಿಗೆ ಕಾವ್ಯಪ್ರತಿಭೆ ಮೆರೆಸುವಂಥ ಅವಕಾಶಗಳು ಸಿಕ್ಕಿದ್ದು ಕಮ್ಮಿ. ತಮ್ಮ ''ನಗುನಗುತಿರುವಾ ಮನದಲಿ...'' (ದೀಪ), ''ಉಪ್ಪಿಲ್ಲ, ಮೆಣಸಿಲ್ಲ....'' (ಪರಮೇಶಿ ಪ್ರೇಮಪ್ರಸಂಗ) ದಂತಹ ಕೆಲವು ಕಡೆ ಬಿಟ್ಟರೆ ಪೂರ್ಣ ಅವರ ಕಾವ್ಯ ಪ್ರತಿಭೆ ಅರಳಿದ ಗೀತೆಗಳು ಸಿಕ್ಕುವುದೇ ಅಪರೂಪ.

• • •

ಪತ್ರಕರ್ತರಾದ ಶ್ಯಾಮಸುಂದರ ಕುಲಕರ್ಣಿ ಹಲವು ಗೀತೆಗಳನ್ನು ರಚಿಸಿದ್ದಾರೆ. 'ಬೆಸುಗೆ' ಚಿತ್ರದ ''ಯಾವ ಹೂವು ಯಾರ ಮುಡಿಗೋ...'' ಗೀತೆ ಸಂಬಂಧಗಳ ದ್ವಂದ್ವವನ್ನು ಉತ್ತಮವಾಗಿ ಓಡಿದಿಟ್ಟಿದೆ,

ಎಂದೋ ಹುಟ್ಟಿದಾಸೆಯು
ಇಂದು ಮನವ ತಟ್ಟಿತು
ಮನದ ಕದವ ತೆರೆಯಲು
ಬೇರೆ ಗುರಿಯ ಮುಟ್ಟಿತು
ಯಾರು ಹೇಳಬಲ್ಲರು
ಯಾರ ಪಯಣ ಎಲ್ಲಿಗೂ

ಎಂಬ ಅಗಮ್ಯತೆ ಸುಂದರವಾಗಿತ್ತು. ಮುಂದೆ ''ಹೀರೋ ಹೀರೋ ನಾನೇ ನಾನೇ...'', ''ಅಲ್ಲಿಯ ಚಂದಿರ ಇಲ್ಲಿಯೇ ಸುಂದರ....''ದಂತಹ ಗೀತೆಗಳು ಹೆಚ್ಚಾಗಿ ''ಮೂಡಣದ ರವಿ ಮೂಡಲು ಮಮತೆಯಲಿ....'' ಎನ್ನುವ ಕಾವ್ಯಾತ್ಮಕತೆ ಅಪರೂಪವಾಯಿತು.

• • •

ಚಿತ್ರಗೀತೆಗಳಿಗೆ ಅಗತ್ಯವಾಗಿದ್ದ ನಿಜವಾದ ಬ್ರೇಕ್ ತಂದವರು ಹಂಸಲೇಖ. ೭೦ರ ದಶಕದಿಂದಲೇ ಕನ್ನಡ ಚಿತ್ರಗೀತೆಗಳಲ್ಲಿ ಇಂಗ್ಲಿಷ್ ಶಬ್ದಗಳು ಇಣುಕಲು ಆರಂಭಿಸಿದ್ದವು. ಆರ್.ಎನ್.ಜಯಗೋಪಾಲ್ ಮತ್ತು ಚಿ.ಉದಯಶಂಕರ್ ಇಂತಹ ಸಾಕಷ್ಟು ಗೀತೆಗಳನ್ನು ರಚಿಸಿದ್ದರು. ಆರ್.ಎನ್.ಜಯಗೋಪಾಲ್ 'ಬೆಸುಗೆ' ಚಿತ್ರಕ್ಕೆ "Life is a merry melody...." ಎಂಬ ಸಂಪೂರ್ಣ ಇಂಗ್ಲಿಷ್ ಗೀತೆ ರಚಿಸಿದರೆ ಉದಯಶಂಕರ್ 'ಆಪರೇಷನ್ ಡೈಮಂಡ್ ರಾಕೆಟ್' ಚಿತ್ರಕ್ಕೆ "If you come today...." ಎಂಬ ಇಂಗ್ಲಿಷ್ ಗೀತೆ ರಚಿಸಿದ್ದರು. ಇಲ್ಲೆಲ್ಲ ಇಂಗ್ಲಿಷ್ ಬಳಕೆ ಭಿನ್ನತೆ ನೀಡುವ ಪ್ರಯತ್ನವಾಗಿತ್ತು. ಆದರೆ ಹಂಸಲೇಖ ಆಡುಮಾತಿನಲ್ಲಿ ಇಂಗ್ಲಿಷ್ ಬೆರೆಸಿದ ಕೆಲಮಟ್ಟಿಗೆ ಸಹಜತೆಯ ಸ್ಪರ್ಶವನ್ನು ಭಾಷೆಗೆ ತಂದರು. 'ಪ್ರೇಮಲೋಕ'ದ ''ನೋಡಮ್ಮ ಹುಡುಗಿ ಕೇಳಮ್ಮ ಸರಿಯಾಗಿ...'' ಗೀತೆಯಲ್ಲಿ ''ನಾನ್ ತುಂಬಾ ಕಟ್‌ನಿಟ್ಟು, ತಲೆ ಕೆಟ್ರೆ ಕಿಕ್‌ಔಟ್...'' ಮಾದರಿ ಪ್ರಯೋಗಗಳು ವಿಶಿಷ್ಟವಾಗಿ ಕೇಳುತ್ತಿದ್ದವು. ''ಈ ಪಬ್ಲಿಕ್ ರೋಡಿನಲಿ ಜಿಂಕೆ ಬಂದೈತಲ್ಲೊ'' ''ಈ ಸೂರ್ಯ ಕೂಡ ಕಣ್ ಹೊಡಿತಾನಲ್ಲೊ'' ಮುಂತಾದ ಹೊಸ ಮಾದರಿ ಪ್ರತಿಮೆಗಳನ್ನು ಬಳಕೆಗೆ ತಂದು, ಭಿನ್ನತೆ ಸಾಧಿಸಿದರು. ಹಂಸಲೇಖ ಉತ್ತುಂಗಕ್ಕೆ ಬರುವ ಹೊತ್ತಿಗೆ ಚಿ.ಉದಯಶಂಕರ್ ಜೀವನರಂಗದಿಂದ ನಿರ್ಗಮಿಸಿ ಗೀತರಚನೆಯಲ್ಲಿ ನಿರ್ಮಾಣವಾಗಿದ್ದ ಶೂನ್ಯತೆಯನ್ನು ಬಳಸಿಕೊಂಡರು. ಒಂದು ದಶಕವೆಲ್ಲ ಹಂಸಲೇಖಮಯವಾಗಿ ಹೋಯಿತು. ಹೀಗಾಗಿ ಚಿತ್ರರಂಗದ ಎಲ್ಲಾ ಅಗತ್ಯಕ್ಕೆ ಒಗ್ಗುವ ಮಾದರಿಗಳು ಹಂಸಲೇಖ ಅವರಲ್ಲಿ ಕಾಣಿಸಿಕೊಂಡಿವೆ.

''ಯಾರೆ ನೀನು ಚೆಲುವೆ...'' ಎಂಬ 'ನಾನು ನನ್ನ ಹೆಂಡ್ತಿ' ಚಿತ್ರದ ಮಧುರ ಗೀತೆಯನ್ನು ಹೋಲುವ ರಚನೆಗಳದ್ದೊಂದು ಪ್ರಮುಖ ಮಾದರಿ. ಪ್ರಕೃತಿ, ಸೌಂದರ್ಯಗಳನ್ನು ವರ್ಣಿಸುವಂತೆ ಜೀವನದ ಸಂಕೀರ್ಣತೆಗಳನ್ನು ಹಂಸಲೇಖ ವರ್ಣಿಸಿದ್ದಾರೆ. ''ಸ್ವಾತಿ ಮುತ್ತಿನ ಮಳೆ ಹನಿಯೇ...'', ''ಈ ಭೂಮಿ ಬಣ್ಣದ ಬುಗುರಿ....'', ''ದೇವರು ಬೆಸೆದ ಪ್ರೇಮದ ಮುತ್ತಿನ ದಾರಾ...'', ''ನಮ್ಮೂರ ಯುವರಾಣಿ ಕಲ್ಯಾಣವಂತೆ...'' ಮುಂತಾದ ರಚನೆಗಳಲ್ಲಿ ಕಾವ್ಯಮಯತೆ ಎದ್ದು ಕಾಣುತ್ತದೆ. ''ಸಂಗೀತದ ಅಲೆಗಳ ಮೇಲೆ ಪ್ರೀತಿಯ ಮೆರವಣಿಗೆ....'' ಎನ್ನುತ್ತ ಗೀತೆಗಳಲ್ಲಿ 'ರಣಧೀರ' ಕಥನವನ್ನು ಬೆಸೆದ ಕ್ರಮ ಅರ್ಥಪೂರ್ಣವಾಗಿತ್ತು. ರೋಮಿಯೋ-ಜೂಲಿಯಟ್ ಮತ್ತು ಸಲೀಂ-ಅನಾರ್ಕಲಿಯ ಪ್ರೇಮಕತೆಗಳನ್ನು ಬೆಸೆದು ನಿರ್ಮಿಸಿದ ''ಲೋಕವೆ ಹೇಳಿದ ಮಾತಿದು...'' ಸುಂದರವಾದ ಪ್ರೇಮದ ವ್ಯಾಖ್ಯಾನ. ಸ್ವತಃ ಸಂಗೀತ ನಿರ್ದೇಶಕರಾದ ಹಂಸಲೇಖ ಅಪ್ಪಟ ಗದ್ಯಮಯವಾದ ಸಾಲುಗಳಿಗೂ ನಾದಮಯತೆ ಬೆರೆಸಿ ಸೊಗಸಾಗಿ ಕೇಳುವಂತೆ ಮಾಡುತ್ತಿದ್ದರು. ''ಪೂರ್ವದಲ್ಲಿ ಚಂದ್ರ ಬಂದರೂ ಪಶ್ಚಿಮದಲ್ಲಿ ಸೂರ್ಯ ಬಂದರೂ ಹೆಣ್ಣಿಗೆ ಗಂಡು ಸಿಗುವುದಿಲ್ಲ, ಗಂಡಿಗೆ ಕೆಲಸ ಸಿಗುವುದಿಲ್ಲ....'', ''ಮಾತಿನಲಿ ಹೇಳಿದರೆ ತಾಳಕೆ ಸಿಗದು ಹಾಡಲಿ ಕೇಳು ಈ ಅಂದದ ಸಾಲು...'' ಇದಕ್ಕೆ ಉದಾಹರಣೆಯಾಗಿ ನೀಡಬಹುದು.

ಅತಿಯಾದ ಪ್ರಾಸಪ್ರಿಯತೆ ಇನ್ನೊಂದು ಪ್ರಕಾರದ ಅರ್ಥಹೀನ ಹಾಡುಗಳಿಗೆ ಕಾರಣವಾಯಿತು. ತಮ್ಮ ಯಶಸ್ಸಿಗೆ ಕಾರಣವಾಗಿದ್ದ ಇಂಗ್ಲಿಷ್ ಬೆರಕೆಯನ್ನು ಅತಿಯಾಗಿಸಿ ಅಸಂಬದ್ಧಗಳನ್ನು ಹಂಸಲೇಖ ಸೃಷ್ಟಿಸಿದರು. 'ಕಲಿಯುಗ ಭೀಮ' ಚಿತ್ರದ ಮದರ್ ಇಂಡಿಯಾ ಹಾಡು ಇಂತಹ ಅಸಂಬದ್ಧತೆಗೆ ಸಾಕ್ಷಿಯಾಗಿತ್ತು. ''ಕಮಾನು ಡಾರ್ಲಿಂಗ್ ಅಯ್ಯೋ ಅಯ್ಯೋ...'', ''ಧುಂ ಧುಂ ರೋಲ್ ರಾಕ್ ಅಂಡ್ ರೋಲ್...' ನಂತಹ ಅನೇಕ ಹಾಡುಗಳು ಈ ಪರಂಪರೆಯಲ್ಲಿವೆ.

ನಾವಿಂದು ಹಾಡೋ ಹಾಡಿಗೆ ಕೊನೆಯಿಲ್ಲ
ಕೊನೆಯಿಲ್ಲ ಸರಿ, ಮಧ್ಯಮ ಯಾವುದು ?
ಯಾವುದು ಎಂದರೆ ಬಂತು ತೊಂದರೆ

ಹೀಗೆ ಅರ್ಥಹೀನವಾಗಿ ಪ್ರಾಸ ಒಂದನ್ನೇ ನಂಬಿ ಬೆಳೆಯುವ ಅನೇಕ ಗೀತೆಗಳನ್ನು ರಚಿಸಿ ಹಂಸಲೇಖ ಅಸಂಬದ್ಧತೆಗೂ ದಾರಿ ಮಾಡಿಕೊಟ್ಟರು.

ಅಶ್ಲೀಲ, ದ್ವಂದ್ವಾರ್ಥದ ಜೊತೆಗೆ ಸಂಗೀತದ ಮಾದಕತೆಯನ್ನು ಬೆರೆಸಿದ ಕೀಳು ಅಭಿರುಚಿಗೂ ಹಂಸಲೇಖ ಅವರ ಗೀತೆಗಳ ಇನ್ನೊಂದು ಪ್ರಕಾರ ರಾಜಮಾರ್ಗ ಹಾಡಿತು. ''ಇದೇನಿದು ಇದೇನಿದು ಐಸಾ...'', ''ಬಿರಿಯಾನಿ ಬಾಯಲ್ಲಿ ನೀರು ಸುರಿಯಾನಿ...'', ''ರಾತ್ರಿ ಆಯ್ತು ಮಲಗೋಣ...'', ''ದೇಖೋರೇ ದೇಖೋರೇ ಬಾಳೆದಿಂಡು ಯಾವ ಕಡೆ ನೋಡಿದರೂ ದುಂಡು ದುಂಡು...'' ಮುಂತಾದ ಗೀತೆಗಳಲ್ಲಿ ಎಗ್ಗಿಲ್ಲದೆ ಅಶ್ಲೀಲ ಬೆರೆಸಿದರು. ಚಿತ್ರರಂಗದ ಅಧಃಪತನ ಕಾಲದಲ್ಲಿ ವೃತ್ತಿಪರತೆಗಷ್ಟೇ ತೃಪ್ತಿಪಟ್ಟ ಕಾರಣ ಹಂಸಲೇಖ ಇಂತಹದೊಂದು ಪರಂಪರೆಗೆ ನಾಂದಿ ಹಾಡಿದರು.



(ಚಿತ್ರ ೮೪-೮೬) ರಿಚರ್ಡ್ ಲೂಯಿಸ್ ಕೋಟಿಗಾನಹಳ್ಳಿ ರಾಮಯ್ಯ ಸುನಿಲ್‌ಕುಮಾರ್ ದೇಸಾಯಿ

ಚಿತ್ರದ ಅಗತ್ಯ ಮೀರಿ ನಾಯಕ-ನಾಯಕಿ ಇಮೇಜ್ ಬೆಳೆಸುವ ವಿಧಾನವನ್ನು ಉದಯಶಂಕರ್ ಸಣ್ಣ ಪ್ರಮಾಣದಲ್ಲಿ ಅರಂಭಿಸಿದ್ದರೆ ಹಂಸಲೇಖ ದೊಡ್ಡ ಪ್ರಮಾಣದಲ್ಲಿ ಆರಂಭಿಸಿದರು. ''ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು...'', ''ಜನರಿಂದ ನಾನು ಮೇಲೆ ಬಂದೆ...'' ಹೀಗೆ ರಾಜಕುಮಾರ್ ಅವರಿಗೆ ಗೀತೆ ರಚಿಸಿದಂತೆ ವಿಷ್ಣುವರ್ಧನ್, ರವಿಚಂದ್ರನ್, ಅಂಬರೀಷ್, ಶಿವರಾಜಕುಮಾರ್ ಎಲ್ಲರಿಗೂ ಗೀತೆಗಳು ನಿರ್ಮಾಣವಾಗಿ ಅದೇ ಒಂದು ಪರಂಪರೆಯಾಯಿತು. 'ರಣಧೀರ'ದ ''ಒಂದಾನೊಂದು ಕಾಲದಲ್ಲಿ ಆರಂಭ....'' ಮಾದರಿಯಲ್ಲಿ ಚಿತ್ರಗಳ ಹೆಸರು ಸೇರಿಸಿ ಹಾಡು ಮಾಡುವ ಅಗ್ಗದ ತಂತ್ರಗಳೂ ನುಗ್ಗಿದವು. ಇದಕ್ಕೆಲ್ಲ ಹಿಂದಿ ಚಿತ್ರಗೀತೆಗಳ ಪರಂಪರೆಯ ಹಿನ್ನೆಲೆಯಿತ್ತು.

* * *

'ಅನುಭವ' ಚಿತ್ರದ ''ಹೋದೆಯ ದೂರ ಓ ಜೊತೆಗಾರ...'' ಹಾಡಿನ ಮೂಲಕ ಗೀತರಚನೆ ಆರಂಭಿಸಿದ ಮನೋಹರ್ ಸಂಗೀತ ನಿರ್ದೇಶಕರಾಗಿಯೂ ಬಡ್ತಿ ಪಡೆದರು. ಹಾಗೆಯೇ ಗೀತರಚನೆಯ ಕೈಂಕರ್ಯವನ್ನು ಮುಂದುವರಿಸಿದರು. 'ಅನುರಾಗ ಸಂಗಮ'ದ ''ಓ ಮಲ್ಲಿಗೆ, ಓ ಮಲ್ಲಿಗೆ ನಾನಿಲ್ಲವೆ ಸದಾ....'', 'ಓ ಮಲ್ಲಿಗೆ' ಚಿತ್ರದ ''ಮಲಗು ಮಲಗು ಚಾರುಲತೆ ನಿನಗೂ ನೆರಳಿದೆ...'', 'ಸೂರ್ಯವಂಶ' ಚಿತ್ರದ ''ಸೇವಂತಿಯೇ ಸೇವಂತಿಯೇ...'' ಮುಂತಾದ ಮಧುರಗೀತೆಗಳನ್ನು ರಚಿಸಿರುವ ಮನೋಹರ್ ಅವರ ಗೀತರಚನೆಗೆ ಸ್ಪಷ್ಟವಾದ ಆಯಾಮ ಮತ್ತು ಸ್ವಂತಿಕೆಗಳು ಇನ್ನು ಮೂಡಬೇಕಾಗಿವೆ.

ಯುವ ಸಾಹಿತಿ ಕಲ್ಯಾಣ್ 'ಅಮೃತ ವರ್ಷಿಣಿ' ಚಿತ್ರದಲ್ಲಿ ಕೊಂಚ ಭಾರವಾದ ಶಬ್ದಗಳನ್ನು ಬಳಸಿಯೂ ಕಾವ್ಯಮಯವಾದ ಗೀತೆಗಳನ್ನು ರಚಿಸಿದ್ದಾರೆ. 'ಯಜಮಾನ' ಚಿತ್ರದಲ್ಲಿನ ಗೀತೆಗಳು ಅವರ ಕುರಿತು ಭರವಸೆ ಹುಟ್ಟಿಸುವಂತಿವೆ.

ಕಥನ ಕವನಗಳ ಪ್ರಪಂಚ

ಚಿತ್ರಕಥೆಗಳ ಮಾತೇ ಬೇರೆ; ಕಥನ ಕವನಗಳ ಸೊಗಸೇ ಬೇರೆ. ಹಾಗೆ ನೋಡಿದರೆ ಕನ್ನಡ ಚಿತ್ರಗಳಲ್ಲಿ ಅಂದಿನಿಂದ ಇಂದಿನವರೆಗೆ ಕಥನ ಕವನಗಳು ಸಾಲುಸಾಲಾಗಿ ಹರಿದಿವೆ. ಇವು ಕೆಲವೊಮ್ಮೆ ಚಿತ್ರದ ಒಂದು ಭಾಗವಾಗಿ ಬಂದಿರಬಹುದು; ಅಥವಾ ಚಿತ್ರದ ಕಥೆಗೆ ಪೂರಕವಾಗಿ ಕಲೆಯನ್ನು ಬೆಳೆಸುವ, ಇಲ್ಲವೇ ಕಥೆಗೆ ಸಾದೃಶ್ಯವಾದ ರೂಪಕವಾಗಿಯೋ ಬಳಕೆಯಾಗಿರಬಹುದು. ಹಲವು ಸಂದರ್ಭಗಳಲ್ಲಿ ಈ ಕಥನ-ಕವನಗಳೇ ಚಿತ್ರದ ಬಹು ಮುಖ್ಯ ಭಾಗವಾಗಿಯೂ ಬಂದಿರುವುದುಂಟು. ಇದರ ಸಾಹಿತ್ಯ, ದೃಶ್ಯರೂಪಕ ಎರಡೂ ಮಿಳಿತವಾದಾಗಲೇ ಅವು ಚಿತ್ರಗಳಲ್ಲಿ ಗೆಲುವು ಸಾಧಿಸಿದ್ದು ಎಂದು ಮತ್ತೊಮ್ಮೆ ಹೇಳಬೇಕಾಗಿಲ್ಲ. ಪುರಾಣ ಕಥೆಗಳು, ಜಾನಪದ ಚಿತ್ರಗಳು, ಐತಿಹಾಸಿಕ ಘಟನೆಗಳೆಲ್ಲ ಕಥನ-ಕವನ ರೂಪಕಗಳಾಗಿ ಜನರನ್ನು ರಂಜಿಸಿವೆ. ಈ ರೂಪಕದ ಹಾಡಿನ ಸಾಲುಗಳು ಅಂದಿನಿಂದ ಇಂದಿನವರೆಗೂ ಜನರ ಬಾಯಲ್ಲಿ, ಮನದಲ್ಲಿ ಅಚ್ಚಳಿಯದಂತೆ ನಿಂತಿವೆ.

ಎಲ್ಲರಿಗೂ ನೆನಪಿರುವಂತೆ 'ಭೂಕೈಲಾಸ' ಚಿತ್ರದ ''ರಾಮನ ಅವತಾರ / ರಘುಕುಲ ಸೋಮನ ಅವತಾರ....'' ಹಾಡು ಒಂದು ರೀತಿಯಲ್ಲಿ ಇದು ತೆಲುಗು-ತಮಿಳು ಮಿಶ್ರಿತ ಹಾಡಿನಂತೆ ಕಂಡರೂ ಅದು ಉಂಟುಮಾಡಿದ ಪರಿಣಾಮ ಇವತ್ತಿಗೂ ಕಣ್ಣಿಗೆ ಕಟ್ಟಿದಂತಿದೆ. ಇಡೀ ರಾಮಾಯಣದ ಕಥೆಯನ್ನು ಅಂದರೆ ರಾಮನ ಹುಟ್ಟಿನಿಂದ ಹಿಡಿದು, ವನವಾಸದ ಕಾಲವನ್ನೂ ದಾಟಿ, ರಾವಣನೊಂದಿಗೆ ಯುದ್ಧವೂ ಮುಗಿದು, ಸೀತೆಯನ್ನು ರಾವಣನ ಸೆರೆಯಿಂದ ಬಿಡಿಸುವವರೆಗ ಆರೇಳು ನಿಮಿಷದ ಹಾಡಿನಲ್ಲಿ ಎಲ್ಲವೂ ಮುಗಿಯುತ್ತದೆ. ''ಆಹಾ! ನೋಡದು ಹೊನ್ನಿನ ಜಿಂಕೆ... ಹಾಳಾಗುವುದಯ್ಯೋ ಲಂಕೆ'' ಎಂಬ ಸಾಲುಗಳು ಕೇಳುಗನ ಮನದಲ್ಲೇ ಲಂಕೆಯ ಧ್ವಂಸದ ಚಿತ್ರಣವನ್ನು ನೀಡುತ್ತವೆ. ದೃಶ್ಯಕ್ಕೂ, ಧ್ವನಿಗೂ, ಸಾಹಿತ್ಯಕ್ಕೂ ನಡುವಣ ಪರಿಣಾಮಕಾರಿ ಸಂಬಂಧವೇರ್ಪಡಿಸುವ ಈ ಹಾಡು ಬಹುಶಃ ಕನ್ನಡ ಚಿತ್ರರಂಗದ ಕಥನ-ಕವನಗಳ ಸಾಲಿನಲ್ಲಿ ಅದ್ವಿತೀಯ ಎನಿಸುವಷ್ಟು ಸೊಗಸಾಗಿದೆ.

ಅದೇ ಜಗೆಯಲ್ಲಿ ವಿಶ್ವಾಮಿತ್ರ-ಮೇನಕೆಯ ಕಥೆಯೂ ಒಂದೆರಡು ಚಿತ್ರಗಳಲ್ಲಿ ಕಾಣಿಸಿದ್ದುಂಟು. ಆದರೆ 'ಭಾಗ್ಯಜ್ಯೋತಿ' ಚಿತ್ರದ ವಿಕ್ರಮ-ಊರ್ವಶಿಯರ ಪ್ರೇಮವನ್ನು ಕುರಿತ ಸಂಸ್ಕೃತದ ಗೀತನಾಟಕದಲ್ಲಿ ''ಪಂಕಜನೇತ್ರೀ ಮಧುಮಯಗಾತ್ರೀ ಪ್ರಣಯ ಚಂದ್ರಿಕಾ ಧವಳಿತರಾತ್ರೀ...'' (ರಚನೆ : ಪಿ.ಬಿ.ಶ್ರೀನಿವಾಸ್) ಇಂದಿಗೂ ಕಿವಿಯಲ್ಲಿ ಗುನುಗುನಿಸುತ್ತದೆ. ಮದನನನ್ನು ಈಶ್ವರ ತನ್ನ ಮೂರನೇ ಕಣ್ಣಿನಿಂದ ಸುಟ್ಟು ಭಸ್ಮ ಮಾಡುವ ''ಮದನ... ಪ್ರೇಮ ಸದನ...'' ಹಾಡಿನ (ಚಿತ್ರ : ಕಳ್ಳ ಕುಳ್ಳ) ಸಾಲುಗಳು ಎಂದೂ ಮರೆಯಲಾರದಂಥವು.

ಪೌರಾಣಿಕ ಕಥನ-ಕವನಗಳಷ್ಟೇ ಖ್ಯಾತವಾದವು ಐತಿಹಾಸಿಕ ಕಥನ ಕವನಗಳು. ಬಹುಶಃ ಈ ಹಾಡುಗಳಲ್ಲೆಲ್ಲ ಪ್ರಪ್ರಥಮವಾಗಿ ನಿಲ್ಲುವಂಥದು. ಒನಕೆ ಓಬವ್ವನ ಕಥೆಯಿರುವ 'ನಾಗರಹಾವು' ಚಿತ್ರದ ''ಕನ್ನಡನಾಡಿನ ವೀರರಮಣಿಯ ಗಂಡುಭೂಮಿಯ ವೀರನಾರಿಯ ಚರಿತೆಯ ನಾನು ಹಾಡುವೆ...'' ಎಂಬ ಹಾಡು. ಇಡೀ ಹಾಡು ದುರ್ಗದ ಕೋಟೆಯಲ್ಲಿ ತನ್ನ ಹೆಸರನ್ನು ಉಳಿಸಿರುವ ಓಬವ್ವನ ಕುರಿತದ್ದು. ಮದಕರಿ ನಾಯಕನ ಕೋಟೆಯನ್ನು ಭೇದಿಸಲು ಹೈದರಾಲಿಯ ಸೇನೆ ಕಳ್ಳಗಿಂಡಿಯನ್ನು ಆರಿಸಿಕೊಂಡದ್ದು, ಕಾವಲುಗಾರನ ಹೆಂಡತಿಯಾಗಿದ್ದ ಸಾಮಾನ್ಯ ಮಹಿಳೆ ಓಬವ್ವ ಒನಕೆಯಿಂದ ವೈರಿಪಡೆಯನ್ನು ಧ್ವಂಸ ಮಾಡಿದ್ದು... ಇದಿಷ್ಟು ಕಥೆ ಅತ್ಯಂತ ಸರಳ ಕನ್ನಡ ಪದಸಮೂಹದೊಂದಿಗೆ ಕಣ್ಣಿಗೆ ಕಟ್ಟುವ ಚಿತ್ರಣ ನೀಡುತ್ತದೆ. ಹಾಗೆಯೇ ''ಕರ್ನಾಟಕದ ಇತಿಹಾಸದಲಿ...'' ಎಂಬ 'ಕೃಷ್ಣ ರುಕ್ಮಿಣಿ' ಚಿತ್ರದ ಹಾಡು ಕೃಷ್ಣದೇವರಾಯನ ವೈಭವವನ್ನು ಮೆರೆಸುತ್ತದೆ.

'ಅರಿಶಿನ ಕುಂಕುಮ' ಚಿತ್ರದ ಒಂದು ಹಾಡಿನಲ್ಲಿ ಇನ್ನೊಂದು ವಿಶೇಷವಿದೆ. ಈ ಹಾಡನ್ನು ಬರೆದವರು ಕನ್ನಡದ ಖ್ಯಾತ ಕವಿ ಬೇಂದ್ರೆ. ಹಾಡಿನಲ್ಲಿರುವುದು ಗಂಗೆಯನ್ನು ಭೂಮಿಗಿಳಿಸಿದ ಸಂಭ್ರಮದ ಕಥಾನಕ. ಆದರೆ ಇಲ್ಲಿ ಮಾಮೂಲಿ ದೃಶ್ಯರೂಪಕವಿಲ್ಲದೆ ಕೇವಲ ನಾಟ್ಯದಲ್ಲೇ ''ಇಳಿದು ಬಾ ತಾಯಿ ಇಳಿದು ಬಾ...'' ಎಂದು ಗಂಗೆಯನ್ನು ಭೂಮಿಗೆ ತಂದಿರುವ ರೂಪಕ ನಿಜಕ್ಕೂ ಸುಂದರವಾದದ್ದು.

ಹಾಗೆಯೇ ಎಚ್ಚಮನಾಯಕ, ಕಿತ್ತೂರು ಚೆನ್ನಮ್ಮನ ಪ್ರಸಂಗಗಳು ಕೆಲವು ಚಿತ್ರಗಳಲ್ಲಿ ಬಂದಿವೆ.

ಈ ಹಾಡಿಗೆ ಸಂಬಂಧಿಸಿದ ಕಥೆ ನಿಜವೋ ಅಥವಾ ದಂತಕತೆಯೋ ಒಟ್ಟಿನಲ್ಲಿ ಮೈಸೂರು ಅರಸರಿಗೆ ಮಕ್ಕಳಾಗದ ಶಾಪದ ಕಥೆಯೂ 'ಭಾಗ್ಯಜ್ಯೋತಿ' ಚಿತ್ರದಲ್ಲಿ ಮೂಡಿಬಂದಿವೆ. ''ಅಂದು ನಡೆದವರೂ ಇಂದಿಗೂ ಉಂಟು ಈ ಕಥೆ ಜನರ ಮನದಲ್ಲಿ.. ಕಂಬನಿ ತರುವುದು ಕಣ್ಣಲ್ಲಿ...'' ಎಂಬ ಈ ಹಾಡು ''ಮಾಲಿಂಗಿ ಮಡುವಾಗಿ, ತಲಕಾಡು ಮರಳಾಗಿ, ಮೈಸೂರು ಅರಸರಿಗೆ ಮಕ್ಕಳಾಗದಿರಲಿ'' ಎಂಬ ಶಾಪದೊಡನೆ

(ಚಿತ್ರ ೮೭) 'ನಾಗರಹಾವು' - ಒನಕೆ ಓಬವ್ವ ಗೀತರೂಪಕದಲ್ಲಿ ಜಯಂತಿ

ಮುಕ್ತಾಯವಾಗುತ್ತದೆ. ಮಾಲಿಂಗಿಯ ಮಡು; ತಲಕಾಡಿನ ಮರಳು.... ಈ ದಂತಕತೆಗೆ ಪುಷ್ಟಿ ಕೊಡುವಂತೆ ದೃಶ್ಯರೂಪದಲ್ಲಿ ಬಿಂಬಿತವಾಗಿರುವುದೇ ಈ ಹಾಡಿನ ವಿಶೇಷ. 'ರಾಮ ಲಕ್ಷ್ಮಣ' ಚಿತ್ರದಲ್ಲಿ ಹಾವು, ಮುಂಗಸಿಯ ಕಥೆಯನ್ನೇ ಹೆಣೆದ ಗೀತೆ. ಹಾಗೆಯೇ 'ಹುಲಿ ಹೆಜ್ಜೆ' ಚಿತ್ರದಲ್ಲಿ ಒಂದು ಬ್ಯಾಲೆ ಅಳವಡಿಕೆಯಾಗಿದೆ.

ಇವು ಚರಿತ್ರೆ, ಪುರಾಣಗಳ ಮಾತಾದರೆ ಜಾನಪದ, ಪಂಚತಂತ್ರದ ಕಥನ-ಕವನಗಳ ಚೆಲುವೇ ಬೇರೆ. ಹಾಗೇ ಕೇಳುವುದಕ್ಕೂ ಸುಂದರವಾಗಿರುವ ಈ ಹಾಡುಗಳು ತಮ್ಮ ದೃಶ್ಯದೊಂದಿಗೆ ಇನ್ನಷ್ಟು ಸಮರ್ಥವಾಗಿ ಮೂಡಿಬಂದಿವೆ. ನೀತಿಕತೆಯನ್ನು ಆಧರಿಸಿದ ಹಾಡು ಮಕ್ಕಳ ಹಾಡಿನಂತಿದ್ದರೂ ದೊಡ್ಡವರನ್ನೂ ರಂಜಿಸಿವೆ. ಅದೇ ರೀತಿಯಲ್ಲಿ ಕುವೆಂಪು ಅವರ ಕಿಂದರಜೋಗಿಯಿಂದ ಪ್ರೇರಿತವಾಗಿರಬಹುದಾದ ''ಒಂದಾನೊಂದು ಊರು ಆ ಊರಲ್ಲಿ ಇಲಿಗಳು ನೂರು...'', ''ಕಾವೇರಿ ತೀರದಲ್ಲಿ ಒಂದು ಕಾಡು....'' ಹಾಡುಗಳು ಹಾಲಿವುಡ್‌ನ 'ಲಯನ್ ಕಿಂಗ್' 'ಜಂಗಲ್ ಬುಕ್' ಕಾರ್ಟೂನು ಚಿತ್ರಗಳ ಹಾಡಿನ ಮಾದರಿಯವು.

ಇದೇ ಬಗೆಯಲ್ಲಿ ಬಳಕೆಯಾದ ಇನ್ನೊಂದು ಹಾಡೆಂದರೆ 'ತಬ್ಬಲಿಯು ನೀನಾದೆ ಮಗನೆ' ಚಿತ್ರದ ಗೋವಿನ ಹಾಡು. ಕರ್ನಾಟಕದ ತುಂಬ ಜನಪ್ರಿಯವಾಗಿರುವ ಪುಣ್ಯಕೋಟಿ ಎಂಬ ಹಸುವಿನ ಕಥೆಯ ''ಧರಣಿ ಮಂಡಲ ಮಧ್ಯದೊಳಗೆ...'' ಅದರ ಸರಳ ಸುಂದರ ಅರ್ಥವಂತಿಕೆಗೆ ಹೆಸರಾದದ್ದು. ಅದು ಚಿತ್ರದಲ್ಲಿ ಬಳಕೆಯಾದ ಪರಿಯೂ ಅರ್ಥಪೂರ್ಣವಾದದ್ದು.

ಒಂದು ಕಥೆಯನ್ನು ಆಧಾರವಾಗಿರಿಸಿಕೊಂಡು ಅದನ್ನು ಹಾಡಿನ ರೂಪದಲ್ಲಿ ಹೇಳುವುದು ಒಂದು ಬಗೆಯಾದರೆ ಜಾನಪದದ ಸೊಗಡು ಕನ್ನಡ ಚಿತ್ರಗಳ ಹಾಡುಗಳಲ್ಲಿ ಹರಿದದ್ದು ಹಲವು ಬಗೆಗಳಲ್ಲಿ. ಜಾನಪದದ ಗಾದೆ, ಒಗಟು ಇವೆಲ್ಲ ಚಿತ್ರದ ಮಾತುಗಳಲ್ಲಿ ಬಳಕೆಯಾದುದಕ್ಕಿಂತಲೂ ಹಾಡುಗಳಲ್ಲಿ ಬಳಕೆಯಾದುದೇ ಹೆಚ್ಚು. ಅವರಲ್ಲೂ ಒಗಟುಗಳ ಮೂಲಕ ಬುದ್ಧಿಗೆ ಒರೆ ಹಚ್ಚುವ ಜಾನಪದದ ತುಂಟತನ, ತಮಾಷೆ ಚಿತ್ರದ ಹಾಡುಗಳಲ್ಲೂ ಕಂಡುಬರುತ್ತದೆ.

''ಕಂಡ್ಯಾ ಕಂಡ್ಯೇನೋ ಚೆಲುವಾ
ನನ್ ಜಾಣತನವ ಕೇಳು ಕೇಳಲೆ ಜಸವಾ...''

ಎಂಬ ಹಾಡಿನಲ್ಲಿ ''ಒಬ್ಬಂಗೆ ಕೈ ಕೊಟ್ಟೆ ಒಬ್ಬಂಗ ಕಾಲ್ಕೊಟ್ಟೆ / ಒಬ್ಬಂಗೆ ಸೀರೆಯನ್ನು ಬಿಚ್ಚಿಕೊಟ್ಟೆ ಚೆಲುವಾ...'' ಎಂಬ ಹುಡುಗಿಯ ಹಾಡನ್ನು ಜಾನಪದದ ಪದಚಮತ್ಕಾರ ತುಂಬಿ ತುಳುಕುತ್ತದೆ. ಇದು ಬರಬರುತ್ತ ಅದೇ ಅರ್ಥದಲ್ಲಿ ದ್ವಂದ್ವಾರ್ಥವಾಗಿ ಪರಿಣಮಿಸಿದ್ದೂ ನಮ್ಮ ಕಣ್ಣ ಮುಂದೆಯೇ ಇದೆ.

'ಉತ್ತರ-ದಕ್ಷಿಣ' ಚಿತ್ರದಲ್ಲಿ ಗಂಗ-ಕಾವೇರಿಯರ ಸಂಗಮ ಕುರಿತು ಯುವತಿಯರಿಬ್ಬರ ಸಂಭಾಷಣೆಯ ರೂಪದ ಹಾಡೊಂದಿತ್ತು. ಹಾಗೆಯೇ 'ಗಂಗೆ-ಗೌರಿ' ಚಿತ್ರದಲ್ಲಿ ನಾರದ-ಗಿರಿಜೆಯರ ನಡುವೆ ಹರಿ-ಶಿವರ ವಿಶೇಷವನ್ನು ಕುರಿತ ಸಂವಾದವೊಂದು ಸೊಗಸಾಗಿ ರೂಪುಗೊಂಡಿದೆ. ರಾಜಾ ವೆಂಕಟಪ್ಪನಾಯಕ ಕಥನ-ಕವನವನ್ನು ಅಳವಡಿಸಿ ಅಂಬರೀಷ್ ಮೇಲೆ ಚಿತ್ರಿಸಿದ್ದು 'ಕಿಂದರಿಜೋಗಿ', 'ಶಾಂತಿ ಕ್ರಾಂತಿ' ಮೊದಲಾದ ಚಿತ್ರಗಳಲ್ಲಿ ಮಕ್ಕಳೇ ಅಭಿನಯಿಸಿದ ಚಿತ್ರಿಕೆಗಳು, ಇತ್ಯಾದಿ ನೆನೆಯಬಹುದು.

ಅದೇ ರೀತಿಯಲ್ಲಿ ''ಮುಗಿಲೆತ್ತ ಓಡುತಿದೆ ಗಿರಿಗಳ ಕಡೆಗೆ...'' ಎಂಬ 'ತಂದೆ ಮಕ್ಕಳು' ಚಿತ್ರದ ಹಾಡಿನಲ್ಲಿಯೂ ಗಂಡು-ಹೆಣ್ಣಿನ ಒಗಟಿನ ಸಂವಾದ ಕಾಣುತ್ತದೆ. ಇತ್ತೀಚಿನ ದಿನಗಳಲ್ಲಿ ಜಾನಪದದ ಬಳಕೆ ಕಡಿಮೆಯಾಗುತ್ತಿದ್ದರೂ ಒಂದೆರಡು ವರ್ಷಗಳ ಹಿಂದೆ ಜನಪ್ರಿಯವಾದ 'ಜನುಮದ ಜೋಡಿ' ಚಿತ್ರ ''ಮಣಿ ಮಣಿ ಮಣಿ ಮಣಿ ಮಣಿಗೊಂದು ದಾರ...'' ಹಾಡಿನ ಮೂಲಕ ಗಂಡು ಮತ್ತು ಹೆಣ್ಣು ಪರಸ್ಪರ ಹೆಸರು ಕೇಳುವ, ಅವರು ಹೇಳುವ ಚತುರೋಕ್ತಿಯಲ್ಲಿ ಹೆಸರು ಕಂಡುಹಿಡಿಯುವ ವಿನೋದ ಕಾಣುತ್ತದೆ.

ಇವು ಕಥನ-ಕವನದ ಪ್ರಕಾರಕ್ಕೆ ಪೂರ್ಣವಾಗಿ ಹೊಂದುತ್ತದೋ ಇಲ್ಲವೋ ಎಂದು ಜಿಜ್ಞಾಸೆ ಮಾಡುವುದಕ್ಕಿಂತ ಸಣ್ಣ ವಿಚಾರವೊಂದನ್ನು ವಿನೋದಪೂರ್ಣವಾಗಿ, ಮನುಷ್ಯನ ತುಂಟತನ, ಲವಲವಿಕೆ, ಜೀವನೋತ್ಸಾಹದ ಬೇರೆ ಬೇರೆ ವಿಧಾನಗಳನ್ನು ಹಾಡುಗಳ ಮೂಲಕ ದೃಶ್ಯೀಕರಿಸುವ ಕ್ರಿಯೆಯನ್ನು ಗುರುತಿಸುವುದು ಮುಖ್ಯ.

ಜಾನಪದ, ಪೌರಾಣಿಕ, ಐತಿಹಾಸಿಕದ ಜಾಡುಗಳನ್ನೆಲ್ಲ ಬಿಟ್ಟು ಬೇರೆ ಬೇರೆ ಬಗೆಯ ಕಥನ-ಕವನಗಳನ್ನು ಹಲವು ಚಿತ್ರಗಳಲ್ಲಿ ಅತ್ಯಂತ ವಿಶಿಷ್ಟ ರೀತಿಯಲ್ಲಿ ತೋರಲಾಗಿದೆ. ಕೆಲವೊಮ್ಮೆ ಇವುಗಳು ತತ್ವಚಿಂತನೆಯಂತೆ ಕಾಣಬಹುದು; ವಾಸ್ತವದ ರೂಪಕಗಳಾಗಬಹುದು; ಅಥವಾ ಮಾತಿನಲ್ಲಿ ಹೇಳುವ ಕ್ರಿಯೆಗೆ ಹಾಡಿನ ರೂಪ ನೀಡಿ ಭಿನ್ನವಾಗಿಸಿರಬಹುದು.

ಉದಾಹರಣೆಗೆ 'ಬಂಗಾರದ ಮನುಷ್ಯ' ಚಿತ್ರದ ಎರಡು ಹಾಡುಗಳು. ''ನಗು ನಗುತಾ ನಲೀ ನಲಿ... ಎಲ್ಲಾ ದೇವನ ಕಲೆಯೆಂದೇ ನೀ ತಿಳಿ... ಅದರಿಂದ ನೀ ಕಲಿ...'' ಹಾಡಿನಲ್ಲಿ ಮನುಷ್ಯನ ಬಾಲ್ಯದಿಂದ ಓದು, ಹರೆಯ, ದಾಂಪತ್ಯ, ಮುಪ್ಪು, ಸಾವಿನವರೆಗಿನ ಮನುಷ್ಯ ಬದುಕಿನ ಬೇರೆ ಬೇರೆ ಮೆಟ್ಟಿಲುಗಳನ್ನು ತೋರುವ ತಾತ್ವಿಕ ಪದವಿದೆ. ಅದೇ ರೀತಿ ''ಆಗದು ಎಂದು ಕೈ ಕಟ್ಟಿ ಕುಳಿತರೆ...'' ಹಾಡಿನಲ್ಲಿ ಕರ್ನಾಟಕದ ಅಭಿವೃದ್ಧಿ ಪಥದ ಹೆಜ್ಜೆಯ ದಾಖಲೆಗಳಿವೆ. ಕಥೆಯೂ ಅಲ್ಲದ, ಚರಿತ್ರೆಯೂ ಅಲ್ಲದ, ನಾವು ಕೇಳಿ, ನೋಡಿದ ಈ ದಾಖಲೆಗಳು ಹಾಡಿನಲ್ಲಿ ಅರ್ಥಪೂರ್ಣವಾಗಿಯೂ ಕಾಣುತ್ತವ, ಕೇಳುತ್ತವೆ. ಇದೇ ಜಾಡಿನಲ್ಲಿ 'ಬೂತಯ್ಯನ ಮಗ ಅಯ್ಯು' ಚಿತ್ರದ ''ವಿರಸವೆಂಬ ವಿಷಕೆ ಬಲಿಯಾದೆ ಏತಕೆ ?...'' ಹಾಡು ಕೆಲವು ಕಾಲದ ಘಟ್ಟವನ್ನು ಮೂರು-ನಾಲ್ಕು ನಿಮಿಷದ ಹಾಡಿನಲ್ಲಿ ಹಿಡಿದಿಡುವಷ್ಟು ಪರಿಣಾಮಕಾರಿಯಾಗಿದೆ.

ಅಲಮೇಲು ತಾನು ಮದುವೆಯಾದ ನಂತರ ಹಲವು ವರ್ಷಗಳವರೆಗೆ ಅನುಭವಿಸಿದ ನೋವುಗಳನ್ನು ''ಕತೆ ಹೇಳುವೆ, ನನ್ನ ಕಥೆ ಹೇಳುವೆ...'' ಹಾಡಿನಲ್ಲಿ ಕೆಲವೇ ಕ್ಷಣಗಳಲ್ಲಿ ವಿಷಾದವಾಗಿ ಹೇಳುವ ವಿಧಾನ 'ನಾಗರಹಾವು' ಚಿತ್ರದ ಇನ್ನೊಂದು ವಿಶೇಷವಾಗಿ ಪರಿಣಮಿಸಿದೆ.

ಈ ಮಧ್ಯೆ ಇನ್ನೊಂದು ವಿಶೇಷ ಕಥನ-ಕವನವನ್ನು ಇಲ್ಲಿ ದಾಖಲಿಸದಿದ್ದರೆ ತಪ್ಪಾಗಬಹುದು. ಅದು 'ಮುತ್ತಿನ ಹಾರ' ಚಿತ್ರದ ''ದೇವರು ಬೆಸೆದ ಪ್ರೇಮದ ದಾರಾ...'' ಹಾಡು ಆರು ಋತುಗಳನ್ನು ಬೆಸೆದ ಈ ಗೀತೆ ಪ್ರಕೃತಿಯ ಸರ್ವಕಾಲೀನ ಚಿತ್ರಣ ನೀಡುತ್ತದೆ.

ಕಾಲಚಕ್ರ ಉರುಳಿದಂತೆ ಈ ಬಗೆಯ ಪ್ರಯೋಗಶೀಲತೆಯಲ್ಲೂ ಬದಲಾವಣೆ ಕಂಡುಬಂದಿರುವುದನ್ನು ಗುರುತಿಸಬಹುದು. ರವಿಚಂದ್ರನ್ ಅವರ 'ಪ್ರೇಮಲೋಕ' ಚಿತ್ರದಲ್ಲಿ ಇಂಥದೊಂದು ಪ್ರಯೋಗವಿದೆ. ಇದರಲ್ಲಿ ಮೂರು ಸನ್ನಿವೇಶಗಳು. ಒಂದು, ಹೊಸದಾಗಿ ಕಾಲೇಜಿಗೆ ಸೇರುವ ತರುಣಿಗೆ ಪ್ರಿನ್ಸಿಪಾಲರ ಬೋಧನೆ; ಎರಡು, ಆಕೆ ಕಾಲೇಜಿನ ಕಾರಿಡಾರ್‌ನಲ್ಲಿ ಬರುವಾಗ ಹುಡುಗರ ಚುಡಾವಣೆ; ಮೂರು, ಅಧ್ಯಾಪಕರು ದುಷ್ಯಂತ-ಶಕುಂತಲೆಯ ಪಾಠ ಮಾಡುತ್ತಿದ್ದ ತರಗತಿಯ ಕೋಣೆಯೊಳಕ್ಕೆ ಆಕೆಯ ಪ್ರವೇಶ. ಈ ಮೂರು ಸನ್ನಿವೇಶವನ್ನು ಒಂದೇ ಹಾಡಿನಲ್ಲಿ ಬೆಸೆದಿರುವುದು ಕನ್ನಡ ಚಿತ್ರರಂಗದಲ್ಲೇ ವಿನೂತನ ಪ್ರಯೋಗ. ಕಾಶೀನಾಥ್ 'ಅನಂತನ ಅವಾಂತರ'ದಲ್ಲಿ ಕೂಡ ಇದೇ ಬಗೆಯ ಪ್ರಯೋಗ ಮಾಡಿದರು.

ಮುಂದಿನ ದಿನಗಳಲ್ಲಿ ಕಥನ-ಕವನಗಳನ್ನು ನಿರೀಕ್ಷಿಸುವುದು ಕಷ್ಟವಾಗಬಹುದು. ಅಂಥ ಸಂಸ್ಕೃತಿ ಮರೆಯಾಗುತ್ತಿದೆಯೆ ?

ಸಂಭಾಷಣೆ; ಸಂಭಾಷಣೆಕಾರ

ನೇರ ಅಭಿವ್ಯಕ್ತಿ ಪ್ರಕಾರದಲ್ಲಿ ಭಾಷೆ ಅಭಿವ್ಯಕ್ತಿ ಪಡೆದುಕೊಳ್ಳುವ ದಾರಿ ಸಂಭಾಷಣೆ. ತಾತ್ವಿಕವಾಗಿ ಭಾಷೆ ಕುರಿತು ಮಾಡಿದ ಚರ್ಚೆ ಸಂಭಾಷಣೆಗೂ ಅನ್ವಯಿಸುವುದರಿಂದ ಪುನರಾವರ್ತನೆ ಬದಲು ಸಂಭಾಷಣೆಯ ರಾಚನಿಕತೆ ಕುರಿತು ಚರ್ಚಿಸಬಹುದು. ಆರಂಭಿಕ ಚಿತ್ರಗಳಲ್ಲಿ ನಾಟಕದ ಪ್ರಭಾವದಿಂದ ಸಂಭಾಷಣೆಗಳು ದೀರ್ಘವಾಗಿರುತ್ತಿದ್ದವು. ವಾಚಿಕವನ್ನು ಭಾರತೀಯ ರಂಗಭೂಮಿ ಒಂದು ಅಭಿನಯದ ಪ್ರಕಾರವಾಗಿಯೇ ಪರಿಗಣಿಸಿದೆ. ಹೀಗಾಗಿ ಸಂಭಾಷಣೆಗೆ ಇಂತಹದೊಂದು ಆಯಾಮ ಸಹಜವಾಗಿಯೇ ಪ್ರಾಪ್ತವಾಯಿತು. ನಾಟಕ ಕಂಪನಿಗಳಲ್ಲಿ ಸಂಭಾಷಣೆ ಹೇಳುವುದಕ್ಕೆ ವಿಶೇಷ ಶಿಕ್ಷಣ ನೀಡುತ್ತಿದ್ದರು. ಸಂಭಾಷಣೆ ಹೇಳುವಾಗ ಕೂಡ ಅನುದಾತ್ತ-ಉದಾತ್ತಗಳ ಕುರಿತು ಕಲಿಸಲಾಗುತ್ತಿತ್ತು. ಭಾಷಾಶುದ್ಧಿಗೆ ಮಹತ್ವ ನೀಡಲಾಗುತ್ತಿತ್ತು. ದೀರ್ಘ ಸಂಭಾಷಣೆಗಳನ್ನು ಹೇಳಲು ಪರಿಶ್ರಮ ಮತ್ತು ಜ್ಞಾಪಕಶಕ್ತಿಗಳು ಬೇಕಾಗುತ್ತಿದ್ದುದರಿಂದ ಅದನ್ನು ಕಲಾವಿದನ ಶಕ್ತಿ ಎಂದೇ ಪರಿಗಣಿಸಲಾಗುತ್ತಿತ್ತು. ಈ ಎಲ್ಲ ಅಂಶಗಳೂ ನಾಟಕದ ಹಿನ್ನೆಲೆಯಿಂದಲೇ ಬಂದ ಸುಬ್ಬಯ್ಯನಾಯ್ಡು, ಕೆಂಪರಾಜ ಅರಸ್, ಹೊನ್ನಪ್ಪ ಭಾಗವತರ್, ರಾಜಕುಮಾರ್, ಬಾಲಕೃಷ್ಣ, ನರಸಿಂಹರಾಜು ಇಂತಹ ಕಲಾವಿದರಲ್ಲಿತ್ತು. ಅವರ ವಾಚಿಕ ಅಭಿನಯದಲ್ಲಿ ಈ ಅಂಶವನ್ನು ಸಹಜವಾಗಿ ಗುರುತಿಸಬಹುದು. ಪ್ರಧಾನ ಪಾತ್ರಗಳ ಸಂಭಾಷಣೆಗೆ ಗಾಂಭೀರ್ಯ ಜಾಸ್ತಿ. ಪೌರಾಣಿಕ, ಭಕ್ತಿಪ್ರಧಾನ, ಐತಿಹಾಸಿಕ ಚಿತ್ರಗಳಲ್ಲಿಯಂತೂ ಒಂದು ಸನ್ನಿವೇಶದ ಕಥಾಭಾಗವನ್ನೇ ಸಂಭಾಷಣೆ ಹೇಳಿಬಿಡುತ್ತಿತ್ತು. ಹೇರಳವಾದ ಸಂಸ್ಕೃತ ಭೂಯಿಷ್ಠ ಭಾಷೆ ತಾಂಡವವಾಡುತ್ತಿತ್ತು.

ಇಂತಹ ಭಾಷೆ ಪಾತ್ರಕ್ಕೊಂದು ಘನತೆ, ಗಾಂಭೀರ್ಯವನ್ನು ತಂದುಕೊಡುತ್ತಿತ್ತು ಅನ್ನುವುದು ಸುಳ್ಳಲ್ಲ. ಹಾಗೆಯೇ ಶುಷ್ಕತೆಯನ್ನು ತಂದುಕೊಡುತ್ತಿತ್ತು. ಕೆಲವು ಸಂದರ್ಭದಲ್ಲಿ ಸಾಮಾನ್ಯವಾಗಿ ಈ ಕಾಲದ ಚಿತ್ರದಲ್ಲಿ ಆಂಗಿಕ ಮತ್ತು ವಾಚಿಕ ಅಭಿನಯಗಳು ಒಟ್ಟಾಗಿ ಚಲಿಸುತ್ತಿರಲಿಲ್ಲ. ದೀರ್ಘ ಸಂಭಾಷಣೆ, ಚಿತ್ರಗೀತೆ, ಕಂದಪದ್ಯ ಇವುಗಳು ಬಂದಾಗ ಪಾತ್ರಧಾರಿಗಳು ನಿಶ್ಚಲವಾಗಿ ನಿಂತುಬಿಡುತ್ತಿದ್ದರು. ಪ್ರಯೋಗಶೀಲರಾದವರು ಅವರಲ್ಲಿ dynamic ಅಂಶ ಕಂಡುಕೊಳ್ಳುತ್ತಿದ್ದರು. ಇದಕ್ಕೆ ಉದಾಹರಣೆಯಾಗಿ 'ಮಧು ಮಾಲತಿ', 'ಜಗಜ್ಯೋತಿ ಬಸವೇಶ್ವರ'ದಂತಹ ಚಿತ್ರಗಳಲ್ಲಿ ರಾಜಕುಮಾರ್ ಮತ್ತು ಹೊನ್ನಪ್ಪ ಭಾಗವತರ್ ನೀಡಿದ ಅಭಿನಯವನ್ನು ತುಲನಾತ್ಮಕವಾಗಿ ಪರಿಶೀಲಿಸಬಹುದು. ಈ ಹಂತದ ಕೆಳವರ್ಗದ ಪಾತ್ರಗಳು ಸಹಜವಾದ ಭಾಷೆ ಬಳಸುತ್ತಿದ್ದರು. ಅಲ್ಲೆಲ್ಲ ದೀರ್ಘ ಸಂಭಾಷಣೆ ಕಡಿಮೆ, ಚುರುಕಾದ ಸಂಭಾಷಣೆ ಜಾಸ್ತಿ. ಹೀಗಾಗಿ ಎಷ್ಟೋ ಕಡೆ ಈ ಪಾತ್ರಗಳೇ ಹೆಚ್ಚು ಜೀವಂತ ಅನ್ನಿಸುತ್ತಿದ್ದವು. ಆದಿವಾಸಿಗಳ, ಕಾಡುಜನರ ಸಂಭಾಷಣೆಗೆ ಬಂದರೆ ಡಬ್ಬಿಂಗ್ ಸಿನಿಮಾಗಳಲ್ಲಿ ಇದು ತೆಲುಗು ಮಿಶ್ರಿತ ಕನ್ನಡವಾಗಿರುತ್ತಿತ್ತು. ಇನ್ನುಳಿದ ಚಿತ್ರಗಳಲ್ಲಿ ಉತ್ತರ ಕರ್ನಾಟಕದ ಭಾಷೆಯನ್ನು ಹೋಲುತ್ತಿತ್ತು (ಇದಕ್ಕೆ 'ಆಶಾಸುಂದರಿ'ಯನ್ನು ಉದಾಹರಣೆಯಾಗಿ ನೋಡಬಹುದು). ಈ ಪಾತ್ರಗಳ ಸಂಭಾಷಣೆಯಲ್ಲಿ ಉದ್ದೇಶಪೂರ್ವಕವಾಗಿಯೇ ಅಪಭ್ರಂಶ ಬೆರೆಸಿ ಒರಟಾಗಿ ಕೇಳುವಂತೆ ಮಾಡಲಾಗುತ್ತಿತ್ತು.

ಸಾಮಾಜಿಕ ಚಿತ್ರಗಳು ತೆರೆಗೆ ಬಂದ ಮೇಲೆ ಈ ಪದ್ಧತಿ ಕೊಂಚ ಬದಲಾಗುತ್ತ ಬಂದಿತು. ಸಂಭಾಷಣೆಗಳ ದೀರ್ಘತೆ ಕಡಿಮೆಯಾಗುತ್ತ ಬಂದಿತು. ರಿ-ರೆಕಾರ್ಡಿಂಗ್ ಜಾರಿಗೆ ಬಂದ ಮೇಲಂತೂ ಸಂಸ್ಕರಣಕ್ಕೆ ಹೆಚ್ಚು ಅವಕಾಶವಿತ್ತು. ಹೀಗಾಗಿ ಮೊದಲಿನಂತೆ ಕಥಾಭಾಗದ ಸಾರಾಂಶವನ್ನು ಸಂಭಾಷಣೆ ಹೇಳುತ್ತಿರಲಿಲ್ಲ. ಪಾತ್ರಗಳ ಒಳತೋಟಿ ಹೇಳಲು ಸಂಗೀತದ ಬಳಕೆ ಹೆಚ್ಚಾಗುತ್ತ ಹೋದಂತೆ ಸಂಯಮ ತಾನಾಗಿಯೇ ರೂಪುಗೊಂಡಿತು. ೬೦ರ ದಶಕದಲ್ಲಿ ಇದಕ್ಕೊಂದು ಸ್ಪಷ್ಟ ಸ್ವರೂಪ ಬಂದಿತು. ದೃಶ್ಯದಲ್ಲಿ ಬೆಳಕಿನ ಸಂಯೋಜನೆ, ಕ್ಯಾಮರಾ ಕೋನ, ಹಿನ್ನೆಲೆ ಸಂಗೀತ ಇವಿಷ್ಟೂ ಸಂಭಾಷಣೆಯ ಜವಾಬ್ದಾರಿಯನ್ನು ವಹಿಸಿಕೊಂಡವು. ಇದರಿಂದ ಚಿತ್ರವ್ಯಾಕರಣಕ್ಕೆ ಸೂಕ್ಷ್ಮತೆ ಮತ್ತು ರೂಕ್ಷಪ್ರಜ್ಞೆಗಳೂ ಲಭ್ಯವಾದವು. 'ಬೆಳ್ಳಿಮೋಡ' 'ಉಯ್ಯಾಲೆ' 'ಮಿಸ್ ಲೀಲಾವತಿ'ಯಂತಹ ಚಿತ್ರಗಳಲ್ಲಿ ಸಂಭಾಷಣೆ ಪ್ರಧಾನ ಪಾತ್ರಗಳ ಮಟ್ಟಿಗೆ ಸಾಕಷ್ಟು ಸಂಯಮಪೂರ್ಣವಾಗಿ ಬಳಕೆಯಾಗಿತ್ತು. ಬಹುತೇಕ ಕಾದಂಬರಿಯೊಳಗಿನ ಸಾಲುಗಳೇ ಬಳಕೆಯಾದವು. ಇಷ್ಟಿದ್ದೂ ಈ ಚಿತ್ರಗಳು ಎರಡನೇ ಪಾತ್ರದ ವಿಷಯದಲ್ಲಿ ದುಂದುವೆಚ್ಚದ ಆಯಾಮವನ್ನೇ ಉಳಿಸಿಕೊಂಡವು. ಒಟ್ಟಾಗಿ ಈ ಹಂತದಲ್ಲಿ ಸಂಭಾಷಣೆ ಭಾಷಾಶುದ್ಧತೆಯನ್ನು ಕಳೆದುಕೊಂಡಿರಲಿಲ್ಲ ಮಾತ್ರವಲ್ಲ, ಸ್ಪಷ್ಟ ಆಕೃತಿಯನ್ನು ಪಡೆದುಕೊಂಡು ಹೊಸ ಸಾಧ್ಯತೆಯತ್ತ ಹೊರಟಿದ್ದವು. ಈ ಹೊಸ ಸಾಧ್ಯತೆಯ ಕುರುಹುಗಳನ್ನು 'ಬಂಗಾರದ ಮನುಷ್ಯ' 'ನಾಗರಹಾವು' 'ಬೂತಯ್ಯನ ಮಗ ಅಯ್ಯು'ದಂತಹ ಚಿತ್ರಗಳಲ್ಲೂ ಗುರುತಿಸಬಹುದು. ಆದರೆ ಇದನ್ನು ಯಾವತ್ತೂ ಪೂರ್ಣಪ್ರಮಾಣದಲ್ಲಿ ಕನ್ನಡ ಚಿತ್ರರಂಗ ದಕ್ಕಿಸಿಕೊಳ್ಳಲೇ ಇಲ್ಲ.

ಹೊಸ ಅಲೆ ಚಿತ್ರಗಳು ಮತ್ತು ಹವ್ಯಾಸಿ ರಂಗಭೂಮಿ ಸಂಭಾಷಣೆಯನ್ನು ಒಂದು ಕಲೆ ಎಂದು ಒಪ್ಪಿಕೊಳ್ಳಲೇ ಇಲ್ಲ. ''ಸಿನಿಮಾದಲ್ಲಿನ ವಾಚಿಕ (ಅದು ಸಂಭಾಷಣೆಯಾಗಿರಲಿ, ನಿರೂಪಣೆಯಾಗಿರಲಿ) ಅದರ ಅಭಿವ್ಯಕ್ತಿಯನ್ನು ಅಮೂರ್ತಗೊಳಿಸಿ ಕೊಡುತ್ತದೆ. ಸಾಧಾರಣೀಕೃತವಾಗಿಸುತ್ತದೆ. ಸಿನಿಮಾದಲ್ಲಿ ದೃಶ್ಯದ ನಿಬಿಡತೆಯನ್ನು ಕಡಿಮೆಗೊಳಿಸಿ, ಅದನ್ನು ಕೆಲಮಟ್ಟಿಗೆ ಅಮೂರ್ತಗೊಳಿಸಲು ಶಾಬ್ದಿಕ ಭಾಷೆಯನ್ನು ಬಳಸುವುದರಿಂದ ಸಿನಿಮಾ ದೃಶ್ಯ-ಶ್ರಾವ್ಯವಾದ ಭಾಷೆ ಸಾಕಷ್ಟು ಅಮೂರ್ತಗೊಳ್ಳಲು ಸಾಧ್ಯವಾಗುತ್ತದೆ'' (ಚಲನಚಿತ್ರದ ಸ್ವರೂಪ-ವಿಮರ್ಶೆ, ಮೂಲ : ಸತೀಶ್ ಬಹದ್ದೂರ್, ಅನುವಾದ : ಕೆ.ವಿ.ಸುಬ್ಬಣ್ಣ) ಎಂಬ ಧೋರಣೆ ಈ ಪ್ರಕಾರದ್ದಾಗಿತ್ತು. ಇದರಿಂದ ಸಂಭಾಷಣೆಗಳ ಬಳಕೆ ಒಂದು ದೋಷ ಎಂಬ ಭಾವನೆ ಬೆಳೆಯಿತು. ಸಂಭಾಷಣೆಗಳೇ ಪ್ರಧಾನವಾದ ಚಿತ್ರವನ್ನು ಅಪಹಾಸ್ಯ ಮಾಡುವ ವಾತಾವರಣವೂ ಸೃಷ್ಟಿಯಾಯಿತು. ಇದರಿಂದ ಹಿರಿಯ ನಿರ್ದೇಶಕರೇ ಸಂಭಾಷಣೆಗೆ ಒತ್ತು ನೀಡುವ ಬದಲು ಅಮೂರ್ತ ಕಲ್ಪನೆಗಳತ್ತ ಕೈ ಚಾಚಿದರು. ಹೀಗಾಗದ ಕಡೆ ಸಂಭಾಷಣೆ ವಾಚ್ಯವಾಗಿ ಕಾರ್ಯ ನಿರ್ವಹಿಸಲು ಆರಂಭಿಸಿತು. ಈ ಕಾರಣದಿಂದಲೇ ಕಲಾವಿದರ ಭಾಷಾಶುದ್ಧತೆ ಪ್ರಧಾನ ಅಂಶವಾಗಿ ಕಾಣಲಿಲ್ಲ. ಅದೊಂದು ನಿಯಂತ್ರಣಕ್ಕೆ ಒಳಪಟ್ಟ ಸಂಗತಿಯಾಗಲಿಲ್ಲ. ಇದು ವೈಯಕ್ತಿಕ ಶೈಲಿಯ (style) ಸೃಷ್ಟಿಗೆ ಕಾರಣವಾಯಿತು. ನರಸಿಂಹರಾಜು, ಬಾಲಕೃಷ್ಣ ಅಂತಹವರು ಸಂಭಾಷಣೆ ಹೇಳುವಲ್ಲಿ ಆಗಲೇ ತಮ್ಮದೇ ಶೈಲಿಯನ್ನು ರೂಢಿಸಿಕೊಂಡಿದ್ದರು. ಆದರೆ ಅದು ಹಾಸ್ಯಪಾತ್ರಗಳ ಮಟ್ಟಿಗೆ ಸೀಮಿತವಾಗಿದ್ದು, ನಾಯಕ-ನಾಯಕಿಯರ ಅಭಿವ್ಯಕ್ತಿಯ ಮೇಲೆ ಒಂದು ನಿಯಂತ್ರಣ ರೂಪಿಸಲಾಗಿತ್ತು. ಈ ನಿಯಂತ್ರಣ ಈಗ ಕಳಚಿ ಬಿತ್ತು. ಅದೇ ಕಾಲಕ್ಕೆ ಇಮೇಜ್‌ನ ಯುಗ ಪ್ರಾರಂಭವಾದ್ದರಿಂದ ಸಂಭಾಷಣೆ ಹೇಳುವ ಶೈಲಿಗೂ ಇಮೇಜ್‌ಗೂ ಒಂದು ನೇರ ಸಂಬಂಧ ಸ್ಥಾಪಿತವಾಯಿತು. ಭಾಷಾಶುದ್ಧತೆಗೆ ಗಮನ ಕಡಿಮೆಯಾಯಿತು. ಅಶ್ಲೀಲ ದ್ವಂದ್ವಾರ್ಥಗಳ ಯುಗದಲ್ಲಂತೂ ಸಂಭಾಷಣೆ ಹೇಳುವಾಗ ಉನ್ಮಾದ ಪ್ರಕಟಿಸುವ provoking style ಸಾಮಾನ್ಯವಾಯಿತು. ಹಾಸ್ಯಪಾತ್ರಗಳು ಸಂಭಾಷಣೆ ಹೇಳುವ ಶೈಲಿಯಲ್ಲೇ ಸೆಕ್ಸ್ ಸಂಜ್ಞೆಗಳು ಚಿಮ್ಮುತ್ತಿದ್ದವು. ಕಾಲಕ್ರಮೇಣ ಇವನ್ನು ಪ್ರಧಾನ ಪಾತ್ರಗಳೂ ಅನುಸರಿಸಲು ಆರಂಭಿಸಿದವು. 'ವೀರಾಧಿವೀರ' ಚಿತ್ರದಲ್ಲಿ ವಿಷ್ಣುವರ್ಧನ್ ಈ ಮಾದರಿಯಲ್ಲೇ ಸಂಭಾಷಣೆ ಹೇಳುವುದರಿಂದ ಒಟ್ಟು ಪಾತ್ರದ ಗಾಂಭೀರ್ಯವೇ ನಷ್ಟವಾದದ್ದನ್ನು ಕಾಣಬಹುದು. ಮುಂದೆ ತಾಂತ್ರಿಕತೆ ಇನ್ನೂ ಬೆಳೆದಂತೆ ಧ್ವನಿಯನ್ನು ನೀಡುವ ಕಂಠದಾನ ಪದ್ಧತಿ ಜಾರಿಗೆ ಬಂದಿತು. ಈಗ ಸಂಭಾಷಣೆ ಹೇಳುವವರೇ ಬೇರೆಯಾದರೂ ಕನ್ನಡ ಭಾಷೆಯೇ ಗೊತ್ತಿಲ್ಲದವರು ಅಭಿನಯಿಸುವುದು ಇದರಿಂದ ಸಾಧ್ಯವಾಯಿತು. ಹೀಗಾಗಿ ೮೦-೯೦ರ ದಶಕದಲ್ಲಿ ಸಂಭಾಷಣೆ ಒಂದು ಪ್ರಧಾನ ಅಂಶವಾಗಿ ಉಳಿಯಲಿಲ್ಲ. ಶಕ್ತವಾಗಿ ಸಂಭಾಷಣೆ ಹೇಳಲಾಗದವರೂ ಪ್ರಧಾನ ಪಾತ್ರಧಾರಿಗಳಾಗಿ ಯಶಸ್ವಿಯಾಗುವುದು ಸಾಧ್ಯವಾಯಿತು.

ಹೀಗಾಗಿ ಒಟ್ಟು ಚಲನಚಿತ್ರದ ಆಕೃತಿಯಲ್ಲಿ ಸಂಭಾಷಣೆ ಕ್ರಮೇಣ ತನ್ನ ಮಹತ್ವವನ್ನು ಕಳೆದುಕೊಳ್ಳುತ್ತ ಬಂದಿತು. Narative device ಅನ್ನೇ ಪ್ರಧಾನವಾಗಿ ಉಳ್ಳ ಚಿತ್ರಗಳೂ ಕೂಡ ಕ್ರಮೇಣ ಈ ಕಾರಣದಿಂದ realistic logic ಅನ್ನು ಕಳೆದುಕೊಳ್ಳುತ್ತಾ ಬಂದವು. ನೆರೆಯ ತಮಿಳುನಾಡು, ಆಂಧ್ರ ಪ್ರದೇಶಗಳಲ್ಲಿ ಮೊದಲಿನಿಂದಲೂ ಬೆಳೆದುಬಂದಿದ್ದ ಜಾಳುಜಾಳಾದ ಆಕೃತಿಯನ್ನು ಕನ್ನಡ ಚಿತ್ರರಂಗ ಅನುಕರಿಸಲು ಆರಂಭಿಸಿದ ಮೇಲೆ ಸಂಭಾಷಣೆಯ ಮಹತ್ವ ತಾನಾಗಿಯೇ ತಗ್ಗಿತು.

• • •

ಚಲನಚಿತ್ರದ ನಿರ್ಮಾಣ ಸಂದರ್ಭದಲ್ಲಿ ಕಥೆಯ ಆಯ್ಕೆಯಾದ ಮೇಲೆ ಆ ಕಥೆಯನ್ನು ನೋಡುಗನಿಗೆ ಅರ್ಥವಾಗುವಂತೆ ತೆರೆಯ ಮೇಲೆ ನಿರೂಪಿಸಲು ಆ ಕಥೆಗೊಂದು ಚಿತ್ರನಾಟಕದ ರೂಪ ನೀಡಬೇಕು. ಕಥೆಯ ಘಟ್ಟಗಳಿಗೆ ಅನುಗುಣವಾಗಿ ದೃಶ್ಯಗಳ ವಿಂಗಡಣೆಯಾಗಬೇಕು; ಚಿತ್ರನಾಟಕ ರಚನೆಯಾಗಬೇಕು. ಕನ್ನಡದಲ್ಲಿ ಚಿತ್ರನಾಟಕದ ಕಲ್ಪನೆ ಸಾಮಾನ್ಯವಾಗಿ ಚಿತ್ರದ ನಿರ್ದೇಶಕನದೇ ಆಗಿರುತ್ತದೆ. ಹಿಂದಿ ಚಿತ್ರರಂಗದಲ್ಲಿ ಚಿತ್ರನಾಟಕ ಬರೆಯುವವರೇ ಬೇರೆ ಇರುತ್ತಾರೆ. ಹೀಗೆ ಸಿದ್ಧವಾದ ಚಿತ್ರನಾಟಕವನ್ನು ಆಧರಿಸಿ ಸಂಭಾಷಣೆ ಬರೆಯುವ ಹೊಣೆ ಸಂಭಾಷಣೆ ರಚನೆಕಾರರದು. ಸಾಹಿತ್ಯದ ಭಾಷೆಯಿಂದ ವಸ್ತುವನ್ನು ಚಲನಚಿತ್ರ ಭಾಷೆಗೆ ಪರಿವರ್ತಿಸುವ ಜವಾಬ್ದಾರಿ ಮಹತ್ವದ್ದು. ಕಾರಣ ಚಲನಚಿತ್ರ ಒಂದು ದೃಶ್ಯ ಹಾಗೂ ಶ್ರಾವ್ಯ ಮಾಧ್ಯಮ. ಚಲನಚಿತ್ರದಲ್ಲಿ ದೃಶ್ಯವಾಗಲೀ, ಶ್ರಾವ್ಯವಾಗಲೀ ಒಂದನ್ನು ಬಿಟ್ಟು ಇನ್ನೊಂದು, ಒಂದನ್ನು ಮೀರಿ ಇನ್ನೊಂದು ಇರುವಂತಿಲ್ಲ. ದೃಶ್ಯದಲ್ಲಿ ಕಣ್ಣಿಗೆ ಕಾಣಿಸುತ್ತಿರುವುದನ್ನು ಮತ್ತೆ ಶ್ರಾವ್ಯದಲ್ಲಿಯೂ ದಾಖಲಿಸಬೇಕಾದ ಪ್ರಮೇಯವಿರುವುದಿಲ್ಲ. ಚಲನಚಿತ್ರವೊಂದರಲ್ಲಿನ ಸಂಭಾಷಣೆ ಸನ್ನಿವೇಶಕ್ಕೆ ತಕ್ಕಂತೆ ಹಿತ-ಮಿತವಾಗಿರಬೇಕು. ಸುಮಾರು ೧೩೦ರಿಂದ ೧೫೦ ನಿಮಿಷಗಳ ಅವಧಿಯಲ್ಲಿ ಚಿತ್ರದ ಕಥೆಯೊಂದರ ನಿರೂಪಣೆಯಾಗಬೇಕು. ಆದರಲ್ಲಿ ಹಾಡು-ನೃತ್ಯ-ಪ್ರೇಮ-ಸಾಹಸ-ಹೊಡೆದಾಟಗಳಿಗೆ ಒಂದಷ್ಟು ಸಮಯ ಕಳೆದು, ಉಳಿದ ಸಮಯದಲ್ಲಿ ಸಂಭಾಷಣೆ ಹಾಗೂ ಭಾವಗಳ ಮೂಲಕ, ಅಭಿನಯದ ಮೂಲಕ ಕಥೆ ಹೇಳಬೇಕು. ಸಂಭಾಷಣೆ ನಾಟಕೀಯವಾಗಿರಬಾರದು; ಗ್ರಾಂಥಿಕವಾಗಿರಬಾರದು; ಆಡುಮಾತಿನಲ್ಲಿ ಅರ್ಥಪೂರ್ಣವಾಗಿರಬೇಕು. ನೋಡುಗನ ಹೃದಯವನ್ನು ನೇರವಾಗಿ ಮುಟ್ಟುವಂತಿರಬೇಕು. ದೀರ್ಘ ಸಂದೇಶಗಳ ಬಿತ್ತರವಾಗುವಂತಿಲ್ಲ; ಭಾಷಣಗಳಾಗಬಾರದು; ಉಪದೇಶಗಳಾಗಕೂಡದು; ಸರಳ-ಸಹಜತೆಯಿಂದಿರಬೇಕು. ಅಂದಾಗ ಚಿತ್ರ ಸಂಭಾಷಣೆಕಾರನದು ಹಗ್ಗದ ಮೇಲೆ ನಡೆಯುವವನ ಕಸರತ್ತಿಗಿಂತ ಭಿನ್ನವೇನಲ್ಲ.

ಅಳತೆ ತೆಗೆದುಕೊಂಡು ಟೈಲರ್ ಬಟ್ಟೆ ಕತ್ತರಿಸಿ ಅಂಗಿ-ಚಡ್ಡಿ ಹೊಲಿಯುವಂತೆ, ಸಂಭಾಷಣೆ ರಚನೆಕಾರ ಸನ್ನಿವೇಶಕ್ಕೆ ಅಗತ್ಯವಾಗಿ, ಕ್ಲುಪ್ತವಾಗಿ ಮಾತುಗಳನ್ನು ಸೃಷ್ಟಿಸಬೇಕಾಗುತ್ತದೆ. ಹೆಜ್ಜೆ ಹೆಜ್ಜೆಗೂ ಅಳತೆ ಮೀರದಂತೆ ಎಚ್ಚರವಹಿಸಬೇಕಾಗುತ್ತದೆ. ಯಾವ ಮಾತು ಎಷ್ಟು ಬೇಕು ಎಂಬ ವಿವೇಚನೆ ಉಪಯೋಗಿಸಬೇಕಾಗುತ್ತದೆ.

ರಂಗಭೂಮಿಯ ನಾಟಕಗಳ ಸಂಭಾಷಣೆಗಿಂತಲೂ ಚಲನಚಿತ್ರ ಸಂಭಾಷಣೆ ಭಿನ್ನ. ಕಥೆಯ ಹಲವು ಭಾವಗಳನ್ನು, ಪ್ರಕೃತಿ-ನಿಸರ್ಗ ಅಥವಾ ಮನೆಯ ಪರಿಕರ ಅಥವಾ ಸೆಟ್ ಹೇಳುವ ಸಾಧ್ಯತೆ ಇರುವುದನ್ನು ಸಂಭಾಷಣೆ ರಚನೆಕಾರ ಗಮನಿಸಬೇಕು. ಹಿಂದೆಲ್ಲಾ ಚಿತ್ರದ ಸಂಭಾಷಣೆ ಮತ್ತು ಹಾಡುಗಳನ್ನು ಚಿತ್ರಸಾಹಿತಿಯೊಬ್ಬರೇ ಬರೆಯುತ್ತಿದ್ದರು. ನಂತರದಲ್ಲಿ ಹಾಡುಗಳನ್ನು ಮಾತ್ರ ಬರೆಯುವವರೂ ಬಂದರು. ಸಂಭಾಷಣೆಕಾರ ಮಾತುಗಳನ್ನಷ್ಟೇ ಬರೆದರೆ ಸಾಕಾಯಿತು.

ಆರಂಭದ ದಿನಗಳಲ್ಲಿ ಚಲನಚಿತ್ರ ಸಾಹಿತ್ಯ ಕೃಷಿಯಲ್ಲಿ ತೊಡಗಿಕೊಂಡವರೆಲ್ಲರೂ ಬಹುತೇಕ ರಂಗಭೂಮಿಯಲ್ಲಿಯೂ ಸಾಹಿತ್ಯ ಕೃಷಿ ನಡೆಸಿದವರಾಗಿದ್ದರು. ಕನ್ನಡ ಸಾರಸ್ವತ ಲೋಕದ ಹಲ ಕೆಲವು ಪ್ರಸಿದ್ಧರೂ ಚಲನಚಿತ್ರಗಳ ಸಂಭಾಷಣೆ ಬರೆದರು. ನಂತರದಲ್ಲಿ ಚಲನಚಿತ್ರ ಸಾಹಿತ್ಯದ, ಮಿಗಿಲಾಗಿ ಸಂಭಾಷಣೆ ರಚನೆಯ ನಾಡಿ ಮಿಡಿತ ಹಿಡಿದ ಹಲವರು ಕನ್ನಡ ಚಿತ್ರರಂಗದಲ್ಲಿ ಸಂಭಾಷಣೆಕಾರರಾಗಿ ಮಿಂಚಿದರು. ಚಲನಚಿತ್ರ ಸಾಹಿತ್ಯ ರೂಪಾಂತರ ಮತ್ತು ಭಾಷಾಂತರದ ಸೂಕ್ಷ್ಮಗಳೆರಡೂ ಬೆರೆತ ಮಧ್ಯಂತರದ ಕ್ರಿಯೆ ಎಂದು ಕರೆಯಬಹುದು.

ಕಥೆ-ಚಿತ್ರಕಥೆಗಳೆರಡರಲ್ಲೂ 'ಕಥನ' ಇರುತ್ತದೆ. ಆದರೆ ಸಂಭಾಷಣೆಯಲ್ಲಿ ಕಥನಕ್ಕೆ ಮಾತಿನ, ದೃಶ್ಯದ ಆಯಾಮಗಳು ಸೇರ್ಪಡೆಯಾಗುತ್ತದೆ. ಹೀಗಾಗಿ ಸಂಭಾಷಣೆಕಾರನಿಗೆ ಸಾಹಿತ್ಯದ ಅರಿವು ಮಾತ್ರ ಇದ್ದರೆ ಸಾಲದು. ಚಲನಚಿತ್ರ ಮಾಧ್ಯಮದ ಸೂಕ್ಷ್ಮಗಳ ಅರಿವೂ ಇರಬೇಕು. ಸಂಭಾಷಣೆಕಾರರದ್ದು ಈ ಅರ್ಥದಲ್ಲಿ ಬಹಳ ಪ್ರಮುಖವಾದ ಪಾತ್ರ. ಆದರೆ ಕನ್ನಡ ಚಿತ್ರರಂಗದ ಮಟ್ಟಿಗೆ ಈ ಪಾತ್ರವನ್ನು ಯಶಸ್ವಿಯಾಗಿ ನಿರ್ವಹಿಸಿದವರ ಸಂಖ್ಯೆ ಕಡಿಮೆ. ವ್ಯವಸ್ಥಿತವಾಗಿ ಕೆಲಸ ಮಾಡುವ ಕೆಲವು ನಿರ್ದೇಶಕರ ಬಳಿ ಮಾತ್ರ ಸಿದ್ಧಗೊಳಿಸಿದ ಸಂಭಾಷಣೆಗಳಿರುತ್ತದೆ. ಉಳಿದವರ ಮಟ್ಟಿಗೆ ಅದು ಸ್ವಯಂ ಸ್ಫೂರ್ತಿಯೇ. ತಾವೇ ಪ್ರತಿಭಾವಂತರೆಂಬ ಭ್ರಮೆಯಲ್ಲಿರುವ ಕಲಾವಿದರು ಸಂಭಾಷಣೆಯನ್ನು ತಮ್ಮ ಶೈಲಿಗೆ ಬದಲಾಯಿಸಿಕೊಳ್ಳುವುದು ಸಾಮಾನ್ಯ. ವ್ಯವಸ್ಥಿತ ಚೌಕಟ್ಟಿಲ್ಲದ ನಿರ್ಮಾಣದಲ್ಲಿ ಸಂಭಾಷಣೆಯಲ್ಲಿ ಎಷ್ಟು ಉಳಿಯುತ್ತದೆ ಎಂಬುದು ಸಂಕಲನದ ಸಂದರ್ಭದಲ್ಲಿ ನಿರ್ಧಾರವಾಗುತ್ತದೆ. ಸಂಕಲನದ ಮನೆಯಲ್ಲಿ ನಿಜವಾದ ಸಂಭಾಷಣೆ ರಚನೆ ನಡೆಯುವ ಸಂದರ್ಭಗಳೂ ನಮ್ಮಲ್ಲಿ ಅಪರೂಪವೇನೂ ಅಲ್ಲ. ಈ ಎಲ್ಲ ವಿಪರ್ಯಾಸಗಳ ನಡುವೆ ಸಂಭಾಷಣೆಕಾರ ತನ್ನ ಛಾಪನ್ನು ಮೂಡಿಸುವುದು ದುಸ್ಸಾಹಸವೇ. ನಮ್ಮಲ್ಲಿ ಸಂಭಾಷಣೆಗಳನ್ನು ಅಧ್ಯಯನ ಮಾಡಲು ಯಾವ ಸಾಮಗ್ರಿಗಳೂ ಲಭ್ಯವಿಲ್ಲ. ಚಿತ್ರಗೀತೆಗಳಿಗಾದರೆ ಅಪಭ್ರಂಶದ ಪುಸ್ತಕಗಳಿವೆ. ಚಲನಚಿತ್ರ ಸಂಭಾಷಣೆ ಸಾಹಿತ್ಯವೆಂದೇ ಒಪ್ಪಿಕೊಳ್ಳದ ಸಂದರ್ಭದಲ್ಲಿ ಅದು ಪುಸ್ತಕ ರೂಪದಲ್ಲಿ ಬರುವುದು ದೂರವೇ ಉಳಿಯಿತು. ('ಘಟಶ್ರಾದ್ಧ'ದ ಸಂಭಾಷಣೆಗಳು ಪುಸ್ತಕ ರೂಪದಲ್ಲಿ ಪ್ರಕಟವಾಗಿರುವುದು ಅಪರೂಪದ ಸಂಗತಿ). ಇದರ ನಡುವೆ ದಕ್ಕಿದ ಸಾಮಗ್ರಿಗಳನ್ನು ಆಧರಿಸಿ ಈ ಸಂಭಾಷಣೆಕಾರರ ಇತಿಹಾಸ ರೂಪಿಸಲಾಗಿದೆ.

ಕನ್ನಡದಲ್ಲಿ ಚಿತ್ರನಿರ್ಮಾಣ ಆರಂಭವಾದಾಗಿನಿಂದ ಹಿಡಿದು ೩೦ರ ದಶಕದವರೆಗಿನ ಕಾಲವನ್ನು ಬಾಲ್ಯಾವಸ್ಥೆ ಎಂದು ಕರೆಯಬಹುದು. ಆಗ ಚಲನಚಿತ್ರವೇ ಇನ್ನೂ ರೂಪುಗೊಳ್ಳಬೇಕಾಗಿದ್ದ ಮಾಧ್ಯಮ. ಅದರಲ್ಲಿ ಸಂಭಾಷಣೆಕಾರರು ಎಂಬ ವೃತ್ತಿಯ ಕಲ್ಪನೆ ತೀರಾ ಅಸ್ಪಷ್ಟವಾಗಿತ್ತು. ನಾಟಕದ ಸಂದರ್ಭದಲ್ಲಿ ಕಥನದ ಸಾಹಿತ್ಯ ರೂಪದ ಸಂಭಾಷಣೆಗಳಿರುತ್ತವೆ. ಅಭಿನಯದ ನಿರ್ದೇಶನಗಳೂ ಈ ಸಾಹಿತ್ಯ ರೂಪದಲ್ಲೇ ಬರುತ್ತವೆ. ಹೀಗಾಗಿ ಚಿತ್ರಕಥೆ ಮತ್ತು ಸಂಭಾಷಣೆಗಳೆರಡೂ ಆರಂಭಿಕ ಚಿತ್ರಗಳಲ್ಲಿ ಪ್ರತ್ಯೇಕ ಘಟಕಗಳಾಗಿರಲಿಲ್ಲ. ಆರಂಭಿಕ ಚಿತ್ರಗಳ ಸಂಭಾಷಣೆಕಾರರಾದ ಬೆಳ್ಳಾವೆ ನರಹರಿಶಾಸ್ತ್ರಿ, ದೇವುಡು ನರಸಿಂಹಶಾಸ್ತ್ರಿ, ನಂಜನಗೂಡು ಶ್ರೀಕಂಠಶಾಸ್ತ್ರಿ, ಬಿ.ಪುಟ್ಟಸ್ವಾಮಯ್ಯ, ಹೆಚ್.ಎಲ್.ಎನ್.ಸಿಂಹ, ಆರ್.ನಾಗೇಂದ್ರರಾವ್ ಮುಂತಾದವರ ಸಂಭಾಷಣೆಗಳಲ್ಲಿ ಸಂಸ್ಕೃತಜ ಬಳಕೆ, ದೀರ್ಘತೆ, ಗ್ರಾಂಥಿಕ ಭಾಷೆ ಇವುಗಳನ್ನೆಲ್ಲ ಗುರುತಿಸಬಹುದು. ಆದಾಗ್ಯೂ ಆಗ ಕಂಪಾರ್ಟ್‌ಮೆಂಟಲ್ ಅಭಿನಯದ ಕಲ್ಪನೆ ಇದ್ದಿದ್ದರಿಂದ ಈ ಅಂಶಗಳು ಹೆಚ್ಚಾಗಿ ಪ್ರಧಾನ ಪಾತ್ರಗಳ ಸಂಭಾಷಣೆಯಲ್ಲಿ ಕಂಡುಬರುತ್ತಿದ್ದವು. ಪೋಷಕ ಪಾತ್ರಗಳ ಸಂಭಾಷಣೆ ಕೆಲಮಟ್ಟಿಗಾದರೂ ಸಹಜವಾಗಿತ್ತು.

ತಮ್ಮ ಛಾಪು ಮೂಡಿಸಿದ ಸಂಭಾಷಣೆಕಾರರಲ್ಲಿ ಹುಣಸೂರು ಕೃಷ್ಣಮೂರ್ತಿ ಅವರು ಪ್ರಮುಖರು. ಅವರು ತಮ್ಮ ನಿರ್ದೇಶನವಲ್ಲದೆ ಬೇರೆ ಚಿತ್ರಗಳಿಗೂ ಸಂಭಾಷಣೆ ರಚಿಸಿದ್ದಾರೆ. ದೀರ್ಘ ಸಂಭಾಷಣೆಕಾರರಾಗಿ ಅವರ ಕೈಂಕರ್ಯವನ್ನು ಗಮನಿಸಿದರೆ ಎರಡು ಘಟ್ಟಗಳನ್ನು ಗುರುತಿಸಬಹುದು. ಮೊದಲ ಘಟ್ಟದ ಅವರ ಸಂಭಾಷಣೆಗಳಲ್ಲಿ ನಾಟಕೀಯತೆ, ಕೃತಕತೆ ಮತ್ತು ಗ್ರಾಂಥಿಕತೆ ಕಾಣಿಸಿಕೊಂಡಿದ್ದರೆ, ಎರಡನೆಯ ಘಟ್ಟದಲ್ಲಿನ ಸಂಭಾಷಣೆಗಳಲ್ಲಿ ಸಹಜತೆ ಕಂಡುಬಂದಿತ್ತು. ಭಕ್ತಿಪ್ರಧಾನ ಚಿತ್ರಗಳಿಗೆ ಬೇಕಾದ ಕ್ಷಾತ್ರತೇಜ ಅವರಲ್ಲಿ ಬೆಳಗಿದಂತೆಯೇ, ಸಾಮಾಜಿಕ ಚಿತ್ರಗಳಲ್ಲಿ ಭಾವತೀವ್ರತೆಯೂ ತುಂಬಿರುತ್ತಿತ್ತು. ಅಶ್ಲೀಲತೆ-ದ್ವಂದ್ವಾರ್ಥಗಳೂ ಅವರಲ್ಲಿ ಅಪರೂಪವೇನಲ್ಲ. ಹುಣಸೂರರ ಸಂಭಾಷಣೆಗಳಲ್ಲಿ ನಾಣ್ಣುಡಿಗಳ ಉದಾಹರಣೆ, ನೀತಿ ವಾಕ್ಯದ ಪ್ರತಿಪಾದನೆಯೂ ಅಲ್ಲಲ್ಲಿ ಕಾಣಿಸುತ್ತದೆ. ಇವರ ಸಮಕಾಲೀನರಾದ ಕಣಗಾಲ್ ಪ್ರಭಾಕರಶಾಸ್ತ್ರಿಯವರದು ಅಲಂಕಾರಿಕ ಭಾಷೆ. ತೀವ್ರತೆಯಂತೆಯೇ ಸಾಂದ್ರತೆ ಕೂಡ ಗಾಢವಾಗಿ ಮೂಡಬಲ್ಲ ಸಂಭಾಷಣೆಗಳನ್ನು ಅವರು ರಚಿಸಿದ್ದಾರೆ.

'ಸತಿಶಕ್ತಿ'ಯಂತಹ ಚಿತ್ರಗಳ ಸಂಭಾಷಣೆಗಳಲ್ಲಿ ಭಾಷೆಯ ಹೊಸ ಸಾಧ್ಯತೆಗಳನ್ನು ಅವರು ಪ್ರಯೋಗಿಸಿದ್ದಾರೆ. ಇವರಿಬ್ಬರಿಗೆ ಹೋಲಿಸಿದರೆ ಜಿ.ವಿ.ಅಯ್ಯರ್ ಸಹಜ ಎನ್ನಿಸಬಲ್ಲ ಭಾಷೆ ಬಳಸಿದವರು. ಅವರ ಸಂಭಾಷಣೆಗಳಲ್ಲಿ ಭಾಷೆಯ ದುಂದುವೆಚ್ಚ ಕಾಣುವುದಿಲ್ಲ. ಬಾಣದ ಮೊನೆಯಂತೆ ತೀಕ್ಷ್ಣವಾಗಿ, ನಿಖರವಾಗಿ ಗುರಿ ತಲುಪುವ ಸಂಭಾಷಣೆ ಅವರದ್ದು. ಎಂ.ನರೇಂದ್ರಬಾಬು ಅವರ ಸಂಭಾಷಣೆಗಳಲ್ಲಿ ಲವಲವಿಕೆ ಜಾಸ್ತಿ. ಆಧುನಿಕ ಕನ್ನಡ ಸಾಹಿತ್ಯದ ಪ್ರಭಾವವೂ ಕಾಣಿಸುವುದರಿಂದ ಸಂಸ್ಕೃತ-ಇಂಗ್ಲಿಷ್ ಭಾಷೆಗಳೂ ಅವರ ಸಂಭಾಷಣೆಗಳ ನಡುವೆ ಹಿತವಾಗಿ ಮಿಶ್ರವಾಗಿವೆ.

೬೦ರ ದಶಕದ ಚಲನಚಿತ್ರಗಳಲ್ಲಿ ಮಾಧ್ಯಮದ ಪರಿಕಲ್ಪನೆ ಮೂಡಲು ಆರಂಭವಾಗಿದ್ದನ್ನು ಕಾಣಬಹುದು. ಜೊತೆಗೆ ಮಣ್ಣಿನ ಗುಣ ತರಬೇಕೆಂಬ ಪ್ರಯತ್ನಗಳೂ ಕಾಣಿಸಿಕೊಳ್ಳತೊಡಗಿದವು. ಇಂತಹ ಸಂದರ್ಭದಲ್ಲಿ ಬಂದ ಪ್ರಮುಖ ಸಂಭಾಷಣೆಕಾರರೆಂದರೆ ಕು.ರ.ಸೀತಾರಾಮಶಾಸ್ತ್ರಿಯವರು. ಅಲ್ಲಿಯವರೆಗೂ ನಿರ್ಜೀವ ಎನ್ನಿಸುತ್ತಿದ್ದ ಹಲವು ಪಾತ್ರಗಳಿಗೆ ಗ್ರಾಮ್ಯದ ಸ್ಪರ್ಶ ನೀಡಿ ಸಹಜತೆ ತಂದವರು ಅವರು.

'ಅಣ್ಣ ತಂಗಿ', 'ಮನ ಮೆಚ್ಚಿದ ಮಡದಿ'ಯಂತಹ ಚಿತ್ರಗಳಲ್ಲಿ ಮೈಸೂರಿನ ಸುತ್ತಮುತ್ತಲಿನ ಗ್ರಾಮೀಣ ಪ್ರದೇಶದ ಸೊಗಡನ್ನು ಬಳಸಿರುವುದನ್ನು ನೋಡಬಹುದಾಗಿದೆ. ಇಷ್ಟಿದ್ದರೂ ಕು.ರ.ಸೀ. ಒಂದು ಸ್ತರದ ಸಹಜತೆಯನ್ನು ಮಾತ್ರ ಗ್ರಹಿಸಿದ್ದರು. ಹೀಗಾಗಿ ಅವರ ಸಂಭಾಷಣೆಗಳಲ್ಲಿ ಒಂದೇ ಮಾದರಿ ಪುನರಾವರ್ತಿತವಾಗುವುದನ್ನು ನೋಡಬಹುದಾಗಿದೆ. ಆರ್.ಎನ್.ಜಯಗೋಪಾಲ್ ಅವರು ಸಹಜತೆ ತರಲು ಪ್ರಯತ್ನಿಸಿದ ಇನ್ನೊಬ್ಬ ಸಂಭಾಷಣೆಕಾರ. ಅವರ ಸಂಭಾಷಣೆಗಳಲ್ಲಿ, ಸಮಕಾಲೀನ ಸಂದರ್ಭಗಳಲ್ಲಿ ಕನ್ನಡ ಬದಲಾಗುತ್ತ ಬಂದುದನ್ನು ಬಳಸಿಕೊಂಡ ಕ್ರಮವನ್ನು ನೋಡಬಹುದಾಗಿದೆ. ಜೊತೆಗೆ ಭಾವತೀವ್ರತೆಯನ್ನು ಭಾಷೆಯ ದುಂದುವೆಚ್ಚವಿಲ್ಲದೆ ಅಭಿವ್ಯಕ್ತಿಸುವ ಕ್ರಮವನ್ನು ಕಾಣಬಹುದು. ಆರ್.ಎನ್.ಜಯಗೋಪಾಲ್ ನಿರ್ದೇಶಕರಾಗಿಯೂ ದುಡಿದವರಾದ್ದರಿಂದ ಅವರ ಸಂಭಾಷಣೆಗಳಲ್ಲಿ ದೃಶ್ಯ ಸಾಧ್ಯತೆ ಕುರಿತ ಸ್ಪೇಸ್ ಕೂಡ ನಿರ್ಮಾಣವಾಗುವುದನ್ನು ಕಾಣಬಹುದಾಗಿದೆ. ಚಿ.ಸದಾಶಿವಯ್ಯ ಆರಂಭದಲ್ಲಿ ಹೆಚ್ಚಾಗಿ ಡಬ್ಬಿಂಗ್ ಚಿತ್ರಗಳಿಗೆ ಸಂಭಾಷಣೆ ರಚಿಸಿದರೂ ತಮ್ಮದೇ ಛಾಪು ಉಳಿಸಿಕೊಂಡ ಸಂಭಾಷಣೆಕಾರ. ಪ್ರಧಾನ ಪಾತ್ರಗಳಿಗೆ ಅವರು ರಚಿಸಿದ ಸಂಭಾಷಣೆ ಗಟ್ಟಿಯಾಗಿ ಉಳಿದ ಪಾತ್ರಗಳ ಸಂಭಾಷಣೆಯಲ್ಲಿ ತೆಲುಗು ಮಿಶ್ರಣ, ಕೃತ್ರಿಮತ್ವ, ಅಸಹಜತೆಗಳು ಕಂಡುಬರುತ್ತದೆ. ಈ ದಶಕದಲ್ಲಿ ಸೋರಟ್ ಅಶ್ವತ್ಥ್, ತ.ರಾ.ಸು., ಎಸ್.ಕೆ.ಕರೀಂಖಾನ್, ಬಿ.ವಿ.ಆಚಾರ್ಯ, ಎಸ್.ಎನ್.ಸಂಜಪ್ಪ ಮೊದಲಾದವರು ಕೆಲವೇ ಚಿತ್ರಗಳಿಗಾದರೂ ಮರೆಯಲಾರದ ಗಟ್ಟಿ ಸಂಭಾಷಣೆಗಳನ್ನು ರಚಿಸಿದ್ದಾರೆ.

೭೦ರ ದಶಕಕ್ಕಿಂತ ಮೊದಲೇ ತಮ್ಮ ದುಡಿಮೆ ಆರಂಭಿಸಿ ಈ ದಶಕದಲ್ಲಿ ಬಹಳ ದೊಡ್ಡ ಗಾತ್ರದಲ್ಲಿ ಬೆಳೆದವರಲ್ಲಿ ಚಿ.ಉದಯಶಂಕರ್ ಮತ್ತು ಗೀತಪ್ರಿಯ ಪ್ರಮುಖರು. ಕನ್ನಡ ಚಿತ್ರರಂಗದಲ್ಲಿ ಚಿ.ಉದಯಶಂಕರ್ ಅವರದ್ದು ಪ್ರತ್ಯೇಕ ಅನ್ನಿಸಬಲ್ಲ ಅಧ್ಯಾಯ. ಸಂಭಾಷಣೆ ರಚನೆಯಲ್ಲಿ ಉದಯಶಂಕರ್ ಹಲವು ಮಹತ್ವದ ಪ್ರಯೋಗಗಳನ್ನು ಮಾಡಿದರು. ಚಿತ್ರರಂಗದ ಬಹುಮುಖ್ಯ ಸ್ಥಿತ್ಯಂತರದಲ್ಲಿ ವಸ್ತುವಿನ ರಾಚನಿಕ ಸ್ವರೂಪ ಬದಲಾಗುತ್ತ ಹೋದಂತೆಲ್ಲ ಸರಿಹೊಂದುವ ಸಂಭಾಷಣೆ ಒದಗಿಸುತ್ತ ಹೋದ ಕೀರ್ತಿ ಅವರದ್ದು. ಬಾಂಡ್ ಚಿತ್ರಗಳಿಂದ ಪೌರಾಣಿಕ ಚಿತ್ರಗಳವರೆಗೆ, ಸಂಗೀತ ಚಿತ್ರಗಳಿಂದ ರಾಜಕೀಯ ಚಿತ್ರಗಳವರೆಗೆ ಬಂದ ವಿಭಿನ್ನ ನೆಲೆಯ ಪಾತ್ರಗಳಿಗೆ ಹೊಂದುವಂತಹ, ಪಾತ್ರಗಳಿಗೆ ಸರಿಹೊಂದುವಂತಹ ಸಂಭಾಷಣೆ ರಚಿಸಿದ ಅವರ ದೈತ್ಯ ದುಡಿಮೆ ಇಲ್ಲದೆ ಹೋದಲ್ಲಿ ಇಂತಹ ಹಲವು ಆಯಾಮಗಳನ್ನೇ ಕನ್ನಡ ಚಿತ್ರರಂಗ ಕಾಣುತ್ತಿರಲಿಲ್ಲವೇನೋ. ಉದಯಶಂಕರ್ ಅವರ ಸಂಭಾಷಣೆಗಳು ಕನ್ನಡದ ಮಟ್ಟಿಗೆ

ಹಲವು ಫಾರ್ಮುಲಾಗಳ ಹುಟ್ಟಿಗೆ ಕಾರಣವಾದವು. ಜನ ಏನು ಮೆಚ್ಚುತ್ತಾರೆ ಎಂಬುದನ್ನು ಚೆನ್ನಾಗಿ ಅರಿತಿದ್ದ ಉದಯಶಂಕರ್, ಚೆಲುವಿಂದ ಚಪಲದವರೆಗೆ ಎಲ್ಲವನ್ನೂ ತಣಿಸಿದರು.

ಗೀತಪ್ರಿಯ ಅವರಲ್ಲಿ ದಲಿತ-ಬಂಡಾಯದ ಕ್ರಾಂತಿಕಾರಿ ಮನೋಧರ್ಮ ಕೆಲಸ ಮಾಡುತ್ತದೆ. ಅವರ ಸಂಭಾಷಣೆಗಳಲ್ಲಿ ಸರಳತೆ, ನಾಟ್ಯಾಭಿವ್ಯಕ್ತಿ ಹೆಚ್ಚಾಗಿ ಗುರುತಿಸಬಹುದಾಗಿದೆ. ಈ ದಶಕದಲ್ಲಿ ಸಂಭಾಷಣೆ ಬರೆಯಲು ತೊಡಗಿದವರ ಸಂಖ್ಯೆ ಹೆಚ್ಚಿದರೂ ಅವರಲ್ಲೆಲ್ಲ ಉದಯಶಂಕರ್ ಪ್ರಭಾವ ಗುರುತಿಸಬಹುದಾಗಿದೆ. ಈ ದಶಕದಲ್ಲಿ ಕಲಾತ್ಮಕ ಚಿತ್ರಗಳ ಚಳವಳಿ ಆರಂಭವಾಯಿತು. ಆ ಸಂದರ್ಭದಲ್ಲಿ ಈ ಮಾದರಿ ಚಿತ್ರಗಳಿಗೆ ಸರಿಹೊಂದುವ ಅನೇಕ ಸಂಭಾಷಣೆಕಾರರು ರೂಪುಗೊಂಡರು. ಪರ್ವತವಾಣಿ, ಯೋಗಾನರಸಿಂಹ, ಪಿ.ಲಂಕೇಶ್, ವಿ.ಆರ್.ಕೆ.ಪ್ರಸಾದ್, ಕೆ.ವಿ.ಸುಬ್ಬಣ್ಣ, ಟಿ.ಎಸ್.ರಂಗ ಇವರಲ್ಲಿ ಪ್ರಮುಖರು. ಇವರ್ಯಾರೂ ಒಂದು ಪರಂಪರೆ ಎಂದು ಗುರುತಿಸುವಷ್ಟು ಚಿತ್ರಗಳಿಗೆ ಸಂಭಾಷಣೆ ರಚಿಸಲಿಲ್ಲ. ಸಂಭಾಷಣೆ ರಚನೆಯನ್ನು ಪ್ರಮುಖ ಚಟುವಟಿಕೆಯಾಗಿಯೂ ಪರಿಗಣಿಸಲಿಲ್ಲ. ಹೀಗಾಗಿ ಅವರ ಯತ್ನ ಆ ಚಿತ್ರಗಳ ಅಭಿವ್ಯಕ್ತಿಗೆ ನೆರವಾದದ್ದು ಮಾತ್ರವಾಗಿದೆ. ಕಲಾತ್ಮಕ ಚಿತ್ರಗಳಿಂದ ಒಬ್ಬ ಸಂಭಾಷಣೆಕಾರ ಹುಟ್ಟದೇ ಹೋದದ್ದು ಒಂದು ದುರಂತ ಕೂಡ ಹೌದು. ಇಲ್ಲಿನ ಬಹುತೇಕ ಸಂಭಾಷಣೆಕಾರರಿಗೆ ಅದೊಂದು ಹವ್ಯಾಸ ಮಾತ್ರವಾಗಿ ಉಳಿದಿದ್ದರಿಂದ. ದೀರ್ಘಕಾಲದವರೆಗೆ ಅದರ ಸಾತತ್ಯ ಉಳಿಸಿಕೊಂಡವರು ಬರಗೂರು ರಾಮಚಂದ್ರಪ್ಪ ನವರೊಬ್ಬರೇ ಏನೋ.

೮೦ರ ದಶಕದಲ್ಲಿ ಚಿತ್ರರಂಗ ಹೆಚ್ಚು ವಾಣಿಜ್ಯೀಕರಣಗೊಂಡಿತು. ಇಲ್ಲಿ ಶ್ರೀಮಂತಿಕೆ ಹಣಕಾಸಿನ ಅರ್ಥದಲ್ಲಾದರೂ ಹೆಚ್ಚಾಯಿತು. ಹೀಗಾಗಿ ಈ ದಶಕದಲ್ಲಿ ಸಂಭಾಷಣೆ ಒಂದು ಪ್ರತ್ಯೇಕ ವಿಭಾಗವಾಗಿ ಗಟ್ಟಿಯಾಯಿತು. ಎಸ್.ಎಸ್.ರಾವ್, ಮುಸುರಿ ಕೃಷ್ಣಮೂರ್ತಿ, ಎಸ್.ರಾಮಸ್ವಾಮಿ, ಕುಣಿಗಲ್ ನಾಗಭೂಷಣ್, ಕಾಶೀನಾಥ್, ಬಿ.ಎಲ್.ವೇಣು, ಕೆ.ವಿ.ರಾಜು, ವಸಂತ ಮೊಕಾಶಿ, ಕೇಸರಿ ಹರವು ಅಂತಹ ಹಲವರು ಸಂಭಾಷಣೆಗಳನ್ನು ರಚಿಸಿದರು. ಇವರಲ್ಲಿ ತಮ್ಮ ಛಾಪು ಮೂಡಿಸಿದವರು ಕಮ್ಮಿಯಾದರೂ ತಮ್ಮ ಮಿತಿಗಳಲ್ಲಿ ಉತ್ತಮ ಎನ್ನಿಸಬಲ್ಲ ಪ್ರಯತ್ನಗಳನ್ನು ಮಾಡಿದ್ದಾರೆ. ಈ ದಶಕಗಳಲ್ಲಿ ಹಲವು ವರ್ಗದ ಜನರು ಕಥೆಗಳಲ್ಲಿ ಕಾಣಿಸಿಕೊಂಡಿದ್ದರಿಂದ ವೈವಿಧ್ಯಮಯ ಭಾಷೆ ಬಳಕೆಯಾಗಲು ಆರಂಭಿಸಿತು. ಕೆಲವರ್ಗದವರು ಮಾತನಾಡುವ ಭಾಷೆ ರೂಪುಗೊಂಡ ಹಾಗೆಯೇ, ಜವಾನ, ನರ್ಸ್, ಫುಟ್‌ಪಾತ್ ವ್ಯಾಪಾರಿ ಇಂತಹ ವರ್ಗಕ್ಕೊಂದು ಭಾಷೆ ನಿರ್ಮಾಣವಾಯಿತು. ಈಗ ತಾರಾಪದ್ಧತಿ ಅಸ್ಪಷ್ಟವಾಗಿ ಜಾರಿಗೆ ಬಂದಿದ್ದರಿಂದ ನಾಯಕ ಯಾವುದೇ ವರ್ಗಕ್ಕೆ ಸೇರಿರಲಿ ಅವನಾಡುವ ಸಂಭಾಷಣೆಗೆ ಒಂದು ಸ್ಪಷ್ಟ ಶೈಲಿ. ಇಂತಹ ವಿಂಗಡಣೆ ಆರಂಭವಾಯಿತು. ಈ ಅಪವಾದಗಳ ನಡುವೆಯೂ ಈ ದಶಕದ ಸಂಭಾಷಣೆಗಳು ಸಾಮಾಜಿಕ ಬದಲಾವಣೆಯನ್ನು ತಮ್ಮೊಳಗೆ ಅಡಗಿಸಿಕೊಂಡಿದ್ದವು. ಫಾರ್ಮುಲಾಗಳು ನಿರ್ಮಾಣವಾಗುತ್ತಿದ್ದಂತೆಯೇ ಅದನ್ನು ಮುರಿಯುವ ಪ್ರಯತ್ನಗಳೂ ನಡೆಯುತ್ತಿದ್ದವು. ಹೀಗಾಗಿ ಈ ದಶಕದ ಅಂತ್ಯದವರೆಗೂ ಆಶಾಕಿರಣಗಳು ಅಲ್ಲಲ್ಲಿ ಚಿಮ್ಮಿ ಸಂಭಾಷಣೆಕಾರರಿಗೆ ಚೇತನ ನೀಡುತ್ತಿದ್ದವು.

೯೦ರ ದಶಕದಲ್ಲಿ ಜಾಗತೀಕರಣದ ಅಲೆ ಅಪ್ಪಳಿಸುತ್ತಿದ್ದಂತೆ ಸಮಾಜದಲ್ಲಿನ ಭಿನ್ನತೆಗಳು ಮಾಯವಾಗಿ ಏಕರೂಪತೆ ತಾಂಡವವಾಡಲಾರಂಭಿಸಿದ್ದವು. ೮೦ರ ದಶಕದ ಹೊಸತನಗಳೂ ಸಂಭಾಷಣೆಯಲ್ಲಿ ಮೃದುವಾಗಿ ತಿಪ್ಪೆ ಸಾರಿಸುವ ಕೆಲಸ ಜನಪ್ರಿಯವಾಯಿತು. ಈ ದಶಕದ ಬಹುತೇಕ ಚಿತ್ರಗಳಲ್ಲಿ ಸಂಭಾಷಣೆಗಳು ಅಸಂಬದ್ಧತೆಯ ಕಂತೆಗಳಾಗಿವೆ. ಕನಿಷ್ಠ ಅಥೆಂಟಿಸಿಟಿಯನ್ನೂ ಅಳವಡಿಸಿಕೊಳ್ಳದೆ ತೋಚಿದ್ದೇ ಸಂಭಾಷಣೆ ಎಂಬುದು ಬಹುತೇಕ ಎಲ್ಲರ ಧೋರಣೆಯಾಯಿತು. ಈ ದಶಕದಲ್ಲಿ ನಾಯಕನ ಪಾತ್ರಕ್ಕಿದ್ದ ಕನಿಷ್ಠ ಗಾಂಭೀರ್ಯತೆಯೂ ಕಳಚಿ ಹೋಗಿ, ಅಶ್ಲೀಲ-ಅಸಂಬದ್ಧಗಳು ಎಲ್ಲಾ ಮಾದರಿ ಪಾತ್ರಗಳಲ್ಲಿ ಸಹಜವಾಗಿ ಕಾಣಿಸಿಕೊಂಡಿತು. ಈ ದಶಕದ ಅಂತ್ಯಕ್ಕೆ ರಿಮೇಕ್ ಚಿತ್ರಗಳ ಭರಾಟೆ ಅತಿಯಾಗಿ ಸಂಭಾಷಣೆಕಾರನಿಗಿದ್ದ ಅಸ್ವಸ್ಪಲ್ಪ ಸೃಜನಶೀಲತೆಯೂ ನಾಸ್ತಿಯಾಯಿತು. ಹೊಸ ಶತಮಾನದ ಆರಂಭದ ವೇಳೆಗೆ ಸಂಭಾಷಣೆಕಾರರ ಕೆಲಸ ಭಾಷಾಂತರಕ್ಕೆ ಮಾತ್ರ ಸೀಮಿತವಾಗಿದೆ. ಇದರಿಂದ ಮುಂದಿನ ಹಾದಿ ದುರ್ಗಮ, ದಯನೀಯ, ದುರಾದೃಷ್ಟಕರದಾಗಿದೆ.

ಈ ಕಗ್ಗತ್ತಲ ಯುಗದಲ್ಲಿ ಅಲ್ಲಲ್ಲಿ ಬೆಳ್ಳಿಕಿರಣಗಳು ಗೋಚರವಾಗಿವೆ. 'ಕಾಡಿನ ಬೆಂಕಿ' ಮೂಲಕ ಸಂಭಾಷಣೆಕಾರರಾದ ನಾಗತಿಹಳ್ಳಿ ಚಂದ್ರಶೇಖರ್ ತಮ್ಮ ನಿರ್ದೇಶನದಲ್ಲಿನ ಚಿತ್ರಗಳಲ್ಲಿ ಭಿನ್ನ ಅನ್ನಿಸುವ ಸಂಭಾಷಣೆಗಳನ್ನು ರಚಿಸಿದ್ದಾರೆ. ಸಾಹಿತ್ಯದ ಸೊಗಡನ್ನು ಬೆರೆಸಿದ್ದಾರೆ. ಸುನಿಲ್ ಕುಮಾರ್ ದೇಸಾಯಿ, ದಿನೇಶ್ ಬಾಬು ಅಂತಹವರು ತಮ್ಮ ನಿರ್ದೇಶನದಲ್ಲಿ ಸಂಭಾಷಣೆಯನ್ನು ಪ್ರಮುಖ ಘಟಕವಾಗಿ ಪರಿಗಣಿಸಿ ನ್ಯಾಯ ಸಲ್ಲಿಸಿದ್ದಾರೆ. ಇವರಲ್ಲದೆ ಬಿ.ಸುರೇಶ್, ಸು.ರುದ್ರಮೂರ್ತಿಶಾಸ್ತ್ರಿ, ವೀರಪ್ಪ ಮರಳವಾಡಿ, ಉಪೇಂದ್ರ, ಬಿ.ಎಲ್.ಸುರೇಶ್, ಬಿ.ಎ.ಮಧು, ಅಬ್ದುಲ್ ರೆಹಮಾನ್ ಪಾಷಾ, ಕೋಟಿಗಾನಹಳ್ಳಿ ರಾಮಯ್ಯ, ಹೆಚ್.ಎಸ್.ವೆಂಕಟೇಶಮೂರ್ತಿ, ರವಿ ಶ್ರೀವತ್ಸ, ಪಿ.ಶೇಷಾದ್ರಿ, ಎಸ್.ಎಸ್.ಡೇವಿಡ್, ಜೆ.ಎಂ.ಪ್ರಹ್ಲಾದ್ ಮುಂತಾದವರು ನಿರ್ಲಕ್ಷಿಸಲಾಗದ ಸಾಧನೆ ಮಾಡಿ, ನಿರಾಶಾವಾದಕ್ಕೆ ಅಲ್ಪಸ್ವಲ್ಪ ಮಟ್ಟಿಗಾದರೂ ಸ್ವಂತಿಕೆ ಪ್ರದರ್ಶಿಸಿದ್ದಾರೆ.

ಕಾದಂಬರಿ - ಸಿನಿಮಾ - ಅಪಸ್ವರ

ಕಥೆ, ಕಾದಂಬರಿ, ಗೀತ ಸಾಹಿತ್ಯದ ಬಳಕೆ ಒಂದೆಡೆಯಾದರೆ, ಅವುಗಳ ಸರಿ-ತಪ್ಪು, ಸ್ವಾಮ್ಯ ಕುರಿತ ವಿವಾದಗಳೇ ಒಂದು ಕಥೆ.

''ನಾನು ಬರೆದದ್ದು ನಾಗರಹಾವು. ಆದರೆ ಚಿತ್ರವಾಗಿ ಹೊರಬಂದದ್ದು ಕೇರೆಹಾವು'' - ಇದು ಕನ್ನಡ ಚಿತ್ರರಂಗದಲ್ಲಿ ಅಜರಾಮರವಾಗಿ ಉಳಿಯಬಲ್ಲ ಒಂದು ಟೀಕೆ. ಇದನ್ನು ಹೊರಗೆಡಹಿದವರು ಖ್ಯಾತ ಬರಹಗಾರರಾದ ತ.ರಾ.ಸುಬ್ಬರಾವ್. ತಮ್ಮ ಮೂರು ಕಾದಂಬರಿಗಳನ್ನು ಆಧರಿಸಿ ಪುಟ್ಟಣ್ಣ ಕಣಗಾಲ್ ನಿರ್ದೇಶಿಸಿದ 'ನಾಗರಹಾವು' ಚಿತ್ರಕ್ಕೆ ಸಂಬಂಧಿಸಿದಂತೆ ಅದು ಬಿಡುಗಡೆಯಾದ ಕೆಲವೇ ದಿನಗಳಲ್ಲಿ ನುಡಿದಿದ್ದರು ತ.ರಾ.ಸು. ಆದರೆ 'ನಾಗರಹಾವು' ಚಿತ್ರವನ್ನು ಮನಸಾರೆ ಒಪ್ಪಿಕೊಂಡಿದ್ದ ಜನತೆ ಈ ಮಾತುಗಳಿಗೆ ಸಹಜ ಪ್ರತಿಭಟನೆ ತೋರಿದರು. ಕೆಲವರಂತೂ ಪತ್ರಿಕೆಗಳಲ್ಲಿ ''ತ.ರಾ.ಸು. ಬರೆದದ್ದೇ ಕೇರೆಹಾವು'' ಎಂದು ಅತಿ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದರು.

ಇದು ಒಂದು ಹಂತ. ಬರಹಗಾರನೊಬ್ಬನಿಗೆ ತಾನು ಬರೆದದ್ದು ಉತ್ಕೃಷ್ಟವೆನಿಸಿ, ಅದು ದೃಶ್ಯವಾದಾಗ ಎಲ್ಲೋ ತನ್ನ ಕಾದಂಬರಿ ಈ ಚಿತ್ರದ ಮೂಲಕ ಕಳೆದೆ ಹೋಯಿತು ಎಂದು ಅನ್ನಿಸಬಹುದು. ಅದು ಸಹಜ ಕೂಡ. ಯಾಕೆಂದರೆ ಅಕ್ಷರಮಾಧ್ಯಮ ಮತ್ತು ದೃಶ್ಯಮಾಧ್ಯಮ ಸಂಪೂರ್ಣ ಭಿನ್ನವಾದ ಮಾಧ್ಯಮಗಳೇ. ದೃಶ್ಯಮಾಧ್ಯಮಕ್ಕೆ ಅಕ್ಷರದ ಹಂಗು ಬೇಕೇ ವಿನಹ, ಅಕ್ಷರ ಮಾಧ್ಯಮಕ್ಕಲ್ಲ. ಹಾಗೆಂದ ಮಾತ್ರಕ್ಕೆ ದೃಶ್ಯಮಾಧ್ಯಮ ಪರೋಪಜೀವಿಯೇನಲ್ಲ. ಅಕ್ಷರದಿಂದಲೇ ಬೆಳೆದ ಇನ್ನೊಂದು ಪ್ರಕಾರವಾದ ದೃಶ್ಯಮಾಧ್ಯಮದ ಹರವು ಹಾಗೂ ಅದರ ಸೀಮೆ ಅದಕ್ಕೆ ಮಾತ್ರ ಸಂಬಂಧಿಸುವಂಥದು. ಹಾಗಾಗಿ ಎರಡೂ ಮಾಧ್ಯಮಗಳನ್ನು ಹೋಲಿಸುವುದು ಅಷ್ಟು ಸರಿಯಾಗಲಾರದು. ನೂರಾರು ಪುಟಗಳ ವರ್ಣನೆಯನ್ನು ಎರಡೇ ನಿಮಿಷದ ದೃಶ್ಯದಲ್ಲಿ ನೋಡುಗರ ಮನದೊಳಗೆ ನಾಟಿಸಬಹುದು; ಹಾಗೆಯೇ ಎರಡೇ ಶಬ್ದದ ಅರ್ಥವಂತಿಕೆಯನ್ನು ನೂರಾರು ಅಡಿಗಳ ದೃಶ್ಯವೂ ವಿವರಿಸಲಾರದು. ಇದು ಆಯಾ ಮಾಧ್ಯಮಗಳ ಹಿರಿಮೆ ಹಾಗೂ ಮಿತಿ. ಬಹುಶಃ ಕಾದಂಬರಿಯೊಂದು ಚಿತ್ರವಾದಾಗ ಈ ತಾಕಲಾಟಗಳೇ ಬಹುಪಾಲು ಎದುರುಬದಿರಾಗಿ ನಿಲ್ಲುತ್ತವೆ. ಆದರೆ ಒಂದು ಮಾತನ್ನು ಇಲ್ಲಿ ಹೇಳಬಹುದು. ಕಾದಂಬರಿಯೊಂದನ್ನು ಚಿತ್ರವಾಗಿಸುವ ನಿರ್ದೇಶಕನೊಬ್ಬ ಆ ಕೃತಿಯ ಮೂಲ ಅಂತಃಸತ್ವಕ್ಕೆ ಎಷ್ಟರ ಮಟ್ಟಿಗೆ ನ್ಯಾಯ ಸಲ್ಲಿಸಿದ್ದಾನೆ, ಅಥವಾ ಪ್ರಾಮಾಣಿಕನಾಗಿದ್ದಾನೆ ಎಂಬುದಷ್ಟೇ ಸಾಹಿತ್ಯ ಕೃತಿಯೊಂದು ಚಲನಚಿತ್ರವಾದಾಗ ವಿಶ್ಲೇಷಿಸಬೇಕಾದ ಅಂಶ ಎಂದು.

ಬಹುತೇಕ ಕಾದಂಬರಿಗಳನ್ನೇ ಚಿತ್ರವನ್ನಾಗಿಸಿದ ಪುಟ್ಟಣ್ಣ ಕಣಗಾಲ್ ಹಲವು ಲೇಖಕರಿಂದ ಇಂಥ ಟೀಕೆಗೆ ಒಳಗಾಗಿದ್ದಾರೆ. 'ನಾಗರಹಾವು', 'ಎಡಕಲ್ಲು ಗುಡ್ಡದ ಮೇಲೆ', 'ಶುಭಮಂಗಳ' ಹೀಗೆ ಬಹುತೇಕ ಎಲ್ಲ ಚಿತ್ರಗಳಿಗೂ ಲೇಖಕರ ವಾಗ್ದಾಳಿ ಎದುರಿಸಿದ್ದಾರ.

ಭಾರತೀಸುತ ಒಂದು ಕಡೆ ಬರೆದಿದ್ದಾರೆ : ''ಎಡಕಲ್ಲು ಗುಡ್ಡ ಕಾದಂಬರಿ ಒಂದು ಪ್ರತಿಮೆಯಾಗಿ ನಿಂತಿದೆ. ಅದು ಅಮಿತಭೋಗದ ಆಕಾಂಕ್ಷೆಯ ಒಂದು ಸಂಕೇತ.... ಜನಸಾಮಾನ್ಯರ ದೃಷ್ಟಿಯಲ್ಲಿ ಚಿತ್ರವೇನೋ ರಂಜಕವಾಗಿದೆ, ಯಶಸ್ವಿಯಾಗಿದೆ. ಆದರೆ ಒಬ್ಬ ಸಾಹಿತಿಯ ದೃಷ್ಟಿಯಿಂದ ನೋಡಿದಾಗ ಚಿತ್ರ ಮೂಲ ಕಾದಂಬರಿಯ ಮಟ್ಟಕ್ಕೆ ಏರಿಲ್ಲವೆಂದು ಹೇಳಬೇಕಾಗುತ್ತದೆ. ಚಿತ್ರನಿರ್ಮಾಪಕರು ಕಾದಂಬರಿಕಾರನ ಅನುಮತಿ ಪಡೆದ ಮೇಲೆ ಇನ್ನು ಕಾದಂಬರಿಕಾರನ ಹಂಗೇನು ಎಂಬಂತೆ ವರ್ತಿಸುವುದು ನನಗಾದ ಅನುಭವ. ಇಂಥ ವರ್ತನೆ ಚಲನಚಿತ್ರ ನಿರ್ಮಾಣಕ್ಕೆ ಪ್ರೋತ್ಸಾಹಕರವಲ್ಲ....''

ಕಾದಂಬರಿಯ ಪಾತ್ರಗಳ ಔಚಿತ್ಯವೇನು ? ಅವುಗಳ ಹಿನ್ನೆಲೆಯೇನು ? ಇತ್ಯಾದಿಗಳನ್ನೆಲ್ಲ ಕಾದಂಬರಿಕಾರ ಭಾರತೀಸುತರು ಪತ್ರಿಕೆಯೊಂದರಲ್ಲಿ ಬರೆದ ಒಂದು ಲೇಖನದಲ್ಲಿ ವಿವರಿಸಿದ್ದಾರೆ.

ಅದೇನೇ ಇರಲಿ, ನಿರ್ದೇಶಕ ಪುಟ್ಟಣ್ಣ ಕಣಗಾಲ್ ಹೇಳುವ ಮಾತೇ ಬೇರೆ : "ಒಂದು ಕಾದಂಬರಿಯಲ್ಲಿ ನಿರ್ದೇಶಕನಿಗೆ ಒಪ್ಪಿತವಾಗುವ ಒಂದು ಕಥೆಯ ಎಳೆ ಇರುತ್ತದೆ. ಅದು ಆತನಿಗೆ ತುಂಬಾ ಮುಖ್ಯ. ಉಳಿದ ವಿವರಗಳೆಲ್ಲವನ್ನು ಆ ಎಳೆಯ ಸುತ್ತ ನಿರ್ದೇಶಕನೊಳಗಿರುವ ಕಥಾಲೇಖಕನೇ ಸಿದ್ಧಪಡಿಸುತ್ತಾನೆ. ಬಹಳಷ್ಟು ಕಡೆ ಕಾದಂಬರಿಕಾರ ಕಥೆಯಲ್ಲಿ ಕೊಡುವ ವಿವರಗಳು ದೃಶ್ಯದಲ್ಲಿ ತಾರ್ಕಿಕವಾಗಿ ಸರಿಯಾಗುವುದಿಲ್ಲ. ಹಾಗಾಗಿ ದೃಶ್ಯಮಾಧ್ಯಮದ ಕಲ್ಪನೆ ಇರುವಂಥವನ್ನು, ತನಗೆ ಸರಿ ಅನ್ನಿಸಿದ ಪೂರಕ ಅಂಶಗಳನ್ನು ಆ ಎಳೆಯ ಸುತ್ತ ಹೆಣೆಯಲೇಬೇಕಾಗುತ್ತದೆ. ಇದರಿಂದ ಕಥೆಯ ಮೂಲಸತ್ವಕ್ಕೆ ಪುಷ್ಟಿ ದೊರಕುವುದೇ ವಿನಃ ಅದಕ್ಕೆ ಅನ್ಯಾಯವಾಗುವುದಿಲ್ಲ. ಬರಹದಲ್ಲಿ ಒಂದು ಕ್ರಿಯೆಗೆ ಕೊಡುವ ತೀವ್ರತೆ ದೃಶ್ಯದಲ್ಲಿ ಪೇಲವವಾಗಬಹುದು. ಹಾಗಾಗಿ ನಿರ್ದೇಶಕನೊಬ್ಬ ದೃಶ್ಯದ ಚೌಕಟ್ಟನ್ನು ಯೋಚಿಸುತ್ತಾನೆ..."

ಪುಟ್ಟಣ್ಣ ಇದನ್ನು ಹೇಳಿದ್ದು ಒಂದು ಸಾಮಾನ್ಯ ಮಾತುಕತೆಯ ಸಂದರ್ಭದಲ್ಲಿ.

ಬಹುಪಾಲು ಲೇಖಕರು ಹೇಳುವುದೂ ಇದನ್ನೇ. "ಸಿನಿಮಾ ಅಂದ ಮೇಲೆ ಸಾಕಷ್ಟು ಬದಲಾವಣೆಗಳಾಗಲೇಬೇಕು. ಅಂಥ ಬದಲಾವಣೆಗಳನ್ನು ನಾವೂ ಒಪ್ಪಲೇಬೇಕು. ಆದರೆ ಈ ಬದಲಾವಣೆಗಳು ಅತಿಯಾಗಿ ಚಿತ್ರದ ಮೂಲ ಉದ್ದೇಶವೇ ಹಾಳಾಗಬಾರದು. ಕಡೆಯ ಪಕ್ಷ ಬದಲಾವಣೆ ಮಾಡಿಕೊಳ್ಳುವ ಸಂದರ್ಭದಲ್ಲಿ ಮೂಲ ಲೇಖಕರೊಂದಿಗೆ ಚರ್ಚಿಸಬೇಕು." ಹಲವು ಚಲನಚಿತ್ರಗಳಿಗೆ ಕಾದಂಬರಿಯ ಆಧಾರ ಒದಗಿಸಿದ ವಾಣಿ, ಆರ್ಯಾಂಬ ಪಟ್ಟಾಭಿ ಮುಂತಾದ ಲೇಖಕಿಯರೂ ಇದೇ ಅಭಿಪ್ರಾಯವನ್ನು ಎರಡೂವರೆ ದಶಕಗಳ ಹಿಂದೆಯೇ ವ್ಯಕ್ತಪಡಿಸಿದ್ದರು.

ಆದರೆ ಖ್ಯಾತ ಲೇಖಕ ಪೂರ್ಣಚಂದ್ರ ತೇಜಸ್ವಿ ತುಸು ಭಿನ್ನವಾದ ಅಭಿಪ್ರಾಯವನ್ನು ಹೇಳುತ್ತಾರೆ : "ಒಮ್ಮೆ ಲೇಖಕ ತನ್ನ ಕೃತಿಯನ್ನು ಚಲನಚಿತ್ರ ಮಾಡಲು ಅನುಮತಿ ನೀಡಿದ ಮೇಲೆ ಅದರ ಬಗ್ಗೆ ಪ್ರತಿಕ್ರಿಯಿಸುವುದನ್ನು ಬಿಡಬೇಕು. ಕಾದಂಬರಿಕಾರನ ವಲಯವೇ ಬೇರೆ; ಸಿನಿಮಾದ ವ್ಯವಸ್ಥೆಗಳೇ ಬೇರೆ. ಎರಡನ್ನೂ ತೂಗಿ ನೋಡುವ ಕೆಲಸ ಮಾಡಬಾರದು. ನಿರ್ದೇಶಕ ಕಾದಂಬರಿಯನ್ನು ಸರಿಯಾಗಿ ಹೇಳುತ್ತಿದ್ದಾನೋ, ತಪ್ಪಾಗಿ ಅರ್ಥೈಸುತ್ತಿದ್ದಾನೋ ಎನ್ನುವುದನ್ನು ಕಾದಂಬರಿ ಓದಿದವರು ತಾಳೆ ಹಾಕುತ್ತಾರೆ. ಕಾದಂಬರಿ ಎಂದಿದ್ದರೂ ಕಾದಂಬರಿಯಾಗಿಯೇ ಉಳಿಯುತ್ತದೆ. ಒಂದು ವೇಳೆ ಕಾದಂಬರಿಕಾರನಿಗೆ ಇಷ್ಟವಿಲ್ಲ ಅಂದರೆ ಅನುಮತಿ ನೀಡಬಾರದು, ಅಷ್ಟೆ. ಅದನ್ನು ಬಿಟ್ಟು ಅದು ಸರಿಯಲ್ಲ, ಇದು ಸರಿಯಲ್ಲ ಎಂದು ವಿವಾದ ಎಬ್ಬಿಸುವುದು ತಪ್ಪು."

ಈ ಮಾತುಗಳನ್ನು ಹೇಳುವ ತೇಜಸ್ವಿ ಇನ್ನೊಂದು ಮಾತನ್ನೂ ಸೇರಿಸುತ್ತಾರೆ : "ಒಂದು ಕಾದಂಬರಿಯನ್ನು ಚಿತ್ರ ಮಾಡಲು ಉದ್ದೇಶಿಸುವ ನಿರ್ದೇಶಕ ಅದನ್ನು ದೃಶ್ಯಕ್ಕೆ ಅಳವಡಿಸಲು ಸಾಧ್ಯವೆ ಎಂಬುದನ್ನು ಮೊದಲು ಯೋಚಿಸಬೇಕು. ಎಷ್ಟೋ ಕಥೆಗಳು, ಕಾದಂಬರಿಗಳು ದೃಶ್ಯದಲ್ಲಿ ಹೇಳಲು ಸಾಧ್ಯವೇ ಇಲ್ಲದಂಥವು. ಅಂಥವನ್ನು ನಿರ್ದೇಶಕ ವೃಥಾ ಪ್ರಯತ್ನ ಮಾಡಿ ಚಿತ್ರ ಮಾಡಲು ಹೋಗದೆ ಕೈಬಿಡುವುದು ಒಳಿತು. ಉದಾಹರಣೆಗೆ 'ತುಬಿ ಮತ್ತು ಇಯಾಲ' ಕಥೆಯ ಕೊನೆಯಲ್ಲಿ ಡೈನಮೈಟ್ ಸಿಡಿದು ಆಸ್ಪತ್ರೆ ಸೇರುವ ಇಬ್ಬರು, ಅವರು ಇಯಾಲಾಳ ಮೇಲೆ ಅತ್ಯಾಚಾರ ಎಸಗಿದ ವಿಚಾರ ಕೊನೆಗೂ ಪ್ರೇಕ್ಷಕನಿಗೆ ತಲುಪುವುದಿಲ್ಲ. ಕಥೆಯಲ್ಲಿ ಋತುಮತಿಯಾದ ಹೆಣ್ಣಿನೊಡನೆ ಸಂಭೋಗ ಮಾಡಿದರೆ ತಮಗಿರುವ ಗುಪ್ತರೋಗ ವಾಸಿಯಾಗುತ್ತದೆ ಎಂಬ ಮೌಢ್ಯದಿಂದಾಗಿ ಇಯಾಲಳ ಮೇಲೆ ಅವರು ಅತ್ಯಾಚಾರ ಎಸಗಿದ್ದು ಕೊನೆಗೂ ಪ್ರೇಕ್ಷಕನಿಗೆ ಕನ್ವಿನ್ಸ್ ಆಗುವುದೇ ಇಲ್ಲ. ಇಲ್ಲಿ ನಾನು ನಿರ್ದೇಶಕ ಸುವರ್ಣ ಅಸಮರ್ಥರು ಎಂದು ಹೇಳುತ್ತಿಲ್ಲ. ಆ ಕಥೆಯ ಈ ವಿವರಗಳನ್ನು ಸಿನಿಮಾದಲ್ಲಿ ಹೇಳಲು ಸಾಧ್ಯವೇ ಇರಲಿಲ್ಲ. ಹಾಗಾಗಿ ದೃಶ್ಯಕ್ಕೆ ಒಗ್ಗದ ಇಂಥ ಸೂಕ್ಷ್ಮ ವಿವರಗಳಿರುವ ಕಥೆಗಳನ್ನು ಚಿತ್ರ ಮಾಡುವ ತಂಟೆಗೇ ಹೋಗಬಾರದು. ಅದು ಎಷ್ಟೇ ದೊಡ್ಡ ಕೃತಿಯಾಗಿರಲಿ.."

ಶಿವರಾಮ ಕಾರಂತರೂ 'ಚೋಮನ ದುಡಿ' ಚಿತ್ರ ಮಾಡಲು ನಿರ್ಮಾಪಕರು ಅನುಮತಿ ಕೇಳಿದಾಗ, ಬಿ.ವಿ.ಕಾರಂತರು ಮಾಡುವ ಹಾಗಿದ್ದರೆ ಅನುಮತಿ ನೀಡುವುದಾಗಿ ಹೇಳಿದ್ದರು. ಆದರೆ ಚಿತ್ರ ಬಿಡುಗಡೆಯಾದ ಮೇಲೆ ಶಿವರಾಮ ಕಾರಂತರು ಚೋಮ ತನ್ನ ದುಡಿಯನ್ನು ಬಡಿಯುತ್ತ ನಿಲ್ಲುವ ಕ್ರಿಯೆಯನ್ನು ತೀಕ್ಷ್ಣವಾದ ಹಾಸ್ಯದ ನುಡಿಗಳಿಂದ ಟೀಕಿಸಿದ್ದರು. "ಅದು ಎದೆಯಲ್ಲಿ ಪ್ರತಿಧ್ವನಿಸುವ ದುಡಿ; ಕೈಯಲ್ಲಿ ಬಾರಿಸುವ ದುಡಿಯಲ್ಲ" ಎಂದು ಹೇಳಿದ್ದರು.

ಹಾಗೆಯೇ ೧೯೭೭ರಲ್ಲಿ ಲೇಖಕ ಮ.ನ.ಮೂರ್ತಿಯವರು ಆಕಾಶವಾಣಿಯಲ್ಲಿ ನೀಡಿದ ವಿಚಾರ ವಿನಿಮಯ ಕಾರ್ಯಕ್ರಮದಲ್ಲಿ ತಮ್ಮ ಎರಡು ಕಾದಂಬರಿಗಳು ಚಿತ್ರವಾದ ಬಗ್ಗೆ ಒಂದು ಮಾತು ಹೇಳಿದರು. ಅವರ 'ಸ್ವಯಂವರ' ಮತ್ತು 'ದೇವರ ಮಕ್ಕಳು' ಚಲನಚಿತ್ರವಾಗಿದ್ದರಿಂದ ಕಾದಂಬರಿಯಲ್ಲಿನ ನಿಜವಾದ ಸತ್ವ ಹಾಗೂ ಪಾತ್ರಗಳು ಬೇರೆಯವೇ ಆದವು ಎಂಬುದನ್ನು ವಿವರಿಸುತ್ತ "ಕಾದಂಬರಿಯ ಪಾತ್ರಗಳನ್ನು ನಿರ್ದೇಶಕರು ಅರ್ಥ ಮಾಡಿಕೊಂಡಿಲ್ಲ ಎಂಬುದಕ್ಕೆ ಇವೆರಡು ನಿದರ್ಶನಗಳು ಸಾಕು. ಚಿತ್ರತಯಾರಿಕೆಗೆ ಕಾದಂಬರಿ ಒಗ್ಗುವುದಿಲ್ಲ ಎಂಬ ಅಪವಾದ ನಮ್ಮ ಚಿತ್ರರಂಗದಲ್ಲಿ ಬಹಳ ಕಾಲ ಇತ್ತು. ಆ ಅಪವಾದದ ಮೂಲ ಎಲ್ಲಿದೆ ಎಂಬುದು ನನ್ನ ಎರಡು ಕಾದಂಬರಿಗಳ ಕೊಲೆಯಾದಾಗ ತಿಳಿಯಿತು. ಕಾದಂಬರಿಯನ್ನು ಚಿತ್ರೀಕರಿಸ ಬಯಸುವ ನಿರ್ದೇಶಕರು ಮೊದಲು ಕಾದಂಬರಿಯನ್ನು ಅರ್ಥ ಮಾಡಿಕೊಳ್ಳ ಬಲ್ಲವರಾಗಿರಬೇಕು. ಮಾಮೂಲು ಸೂತ್ರಗಳನ್ನು ಹಿಡಿದು ಚಿತ್ರ ನಿರ್ದೇಶಿಸುವವರಿಗೆ ಅದು ಅರ್ಥವಾಗುವುದು ಕಷ್ಟ."

ಗೀತಾ ನಾಗಭೂಷಣ ಅವರು ಬಂಡೆದ್ದ ವ್ಯಕ್ತಿಯ ಮನೋಧರ್ಮವನ್ನು ಚಿತ್ರಿಸಿರುವ 'ಹಸಿಮಾಂಸ ರಣಹದ್ದುಗಳು' ಕಾದಂಬರಿಯ ಶೀರ್ಷಿಕೆಯೇ ಅದರ ಉಗ್ರತೆಯನ್ನು ಹೇಳುತ್ತದೆ. ಇದನ್ನು ಕಾದಂಬರಿ ಚಿತ್ರಣದಲ್ಲಿ ಖ್ಯಾತರಾದ ದೊರೆ-ಭಗವಾನ್ 'ಹೆಣ್ಣಿನ ಕೂಗು' ಚಿತ್ರ ಮಾಡಿದರೂ ಒಳಗಿನ ಕಾವು, ತುಡಿತಗಳು ಉಕ್ಕಲಿಲ್ಲವೆಂಬ ಮಾತು ಬಂತು.

ಮಾಸ್ತಿಯವರೂ 'ಕಾಕನ ಕೋಟೆ' ಸಿನಿಮಾ ಆದಾಗ ಆಕ್ಷೇಪಿಸಿದ್ದರು.

ಇಲ್ಲಿ ಎರಡು ಮಾತುಗಳಂತೂ ಸ್ಪಷ್ಟವಾಗುತ್ತದೆ. ಕಾದಂಬರಿಯೊಂದರ ನಿಜವಾದ ಆತ್ಮವನ್ನು ಹಿಡಿಯುವ ಲೇಖಕ ಅದರಲ್ಲಿ ಎಂಥ ಮಾರ್ಪಾಡನ್ನು ಮಾಡಿಕೊಂಡರೂ ಅದಕ್ಕೊಂದು ಖಚಿತ ಚಿತ್ರಣ ನೀಡುತ್ತಾನೆ. ಹಾಗಾಗಿ ಆತ ತನ್ನ ಈ ಸಾಧನೆಗಾಗಿ ಕಾದಂಬರಿಕಾರನ ಗಡಿಗಳನ್ನು ಮೀರುವುದು ಅಗತ್ಯವಾಗುತ್ತದೆ. ಲೇಖಕರು ಮೂಲ ಕಾದಂಬರಿಗೆ ಧಕ್ಕೆಯಾಗಬಾರದು ಎಂಬ ನಿಲುವಿಗಷ್ಟೇ ಅಂಟಿಕೊಳ್ಳುವುದರಿಂದ ಇಂಥ ವಿವಾದಗಳಿಗೆ ದಾರಿಯಾಗುತ್ತದೆ. ಕಾದಂಬರಿಯೊಂದು ತೀರಾ ಅಧ್ವಾನದ ಚಿತ್ರವಾದಾಗ ನೋಡುಗರೇ ಅದರತ್ತ ತಿರುಗಿ ಬಿದ್ದಿರುವುದನ್ನು ಕಾಣಬಹುದು. ಕೆ.ಟಿ.ಗಟ್ಟಿಯವರ 'ಶಬ್ದಗಳು' ಕಾದಂಬರಿ ಓದಿದವರಿಗೆ ಅದು ಚಲನಚಿತ್ರವಾಗುವ ವಿಚಾರ ಕೇಳಿ ಸಂತಸವಾಗಿತ್ತು. ಆದರೆ ಚಿತ್ರ ಹೊರಬಂದಾಗ ಅದನ್ನು ಜನ ವಾಚಾಮಗೋಚರವಾಗಿ ನಿಂದಿಸಲಾರಂಭಿಸಿದರು. ಕೊನೆಗೂ ಅಲ್ಲಿ ಗೆಲುವಾದುದು ಕಥಾಲೇಖಕರಿಗೇ.

ಸಾಮಾನ್ಯವಾಗಿ ಲೇಖಕನೊಬ್ಬ ತಾನೇ ನಿರ್ದೇಶಕನಾದಾಗ ಬಹುತೇಕ ತನ್ನದೇ ಕಥೆಯನ್ನು ಆರಿಸಿಕೊಂಡಿರುವುದೇ ಹೆಚ್ಚು. ಬಹುಶಃ ಎಲ್ಲ ಸಾಹಿತಿಗಳೂ ಇದನ್ನೇ ಮಾಡಿದರು. ಈ ಬಗ್ಗೆ ಲೇಖಕ-ನಿರ್ದೇಶಕ ಲಂಕೇಶ್ ಹೇಳುವುದೇ ಬೇರೆ : "ನಿರ್ದಿಷ್ಟ ಉದ್ದೇಶಕ್ಕಾಗಿ ನಾನು ನನ್ನದೇ ಕಥೆಯನ್ನು ಆರಿಸಿಕೊಂಡೆ. ಆದರೆ ನಿಜಸ್ಥಿತಿ ಎಂದರೆ ಬೇರೆಯವರ ಕಥೆಯನ್ನು ಆರಿಸಿಕೊಂಡರೆ ಆ ಚಿತ್ರ ಇನ್ನಷ್ಟು ಉತ್ತಮವಾಗುವ ಅವಕಾಶವಿದೆ. ಕಥೆಗಾರನ ಯೋಚನೆಯ ಜೊತೆಗೆ ನಿರ್ದೇಶಕನ ಕಲ್ಪನೆ ಸೇರಿ ಚಿತ್ರಕ್ಕೆ ಹೊಸ ಬಗೆಯ ಆಯಾಮ ದೊರೆಯುತ್ತದೆ. ಬೇರೆಯವರ ಕಥೆ ತೆಗೆದುಕೊಂಡರೆ ಅದರಿಂದ ಕಥೆಗೇ ಲಾಭ." ಇದು ನಿಜವೂ ಇರಬಹುದು.

ಕಥೆಗಾಗಿ ಕಿತ್ತಾಟ

ಹೆಚ್ಚು ಕಡಿಮೆ ಐವತ್ತರ ದಶಕದ ಕೊನೆಯ ಭಾಗದಲ್ಲಿ ಕನ್ನಡ ಚಿತ್ರಗಳಿಗೆ ಕಥೆಗಳ ಅಭಾವ ಪ್ರಬಲವಾಗಿ ಕಾಡಿದಂತೆ ಕಾಣುತ್ತದೆ. ಯಾಕೆಂದರೆ ಅಲ್ಲಿಯವರೆಗೆ ಎಲ್ಲ ಚಿತ್ರನಿರ್ಮಾಣ ಸಂಸ್ಥೆಗಳೂ ನಾಟಕಗಳಾಗಿ ರಚಿತವಾಗಿದ್ದ ಪುರಾಣ ಕಥೆಗಳು, ಐತಿಹಾಸಿಕ ಚಿತ್ರಗಳ ಮೇಲೇ ಅವಲಂಬಿತವಾಗಿದ್ದವು. ಜನಪ್ರಿಯ ನಾಟಕಗಳೆಲ್ಲ ಚಲನಚಿತ್ರಗಳಾಗಿ ಬೆಳ್ಳಿ ಪರದೆಯ ಮೇಲೆ ರಾರಾಜಿಸುತ್ತಿದ್ದವು. ಇನ್ನೂ ಚಿತ್ರರಂಗ ಕಾದಂಬರಿಯ ಕಡೆ ಕಣ್ಣು ಹಾಯಿಸಿರಲಿಲ್ಲ. ಹಾಗಾಗಿ ಸಿನಿಮಾಗಳಿಗೆ ಕಥೆಯ ಅಭಾವವೇ ಹೆಚ್ಚು ಕಾಣುತ್ತಿತ್ತು.

ಹಾಗೆ ನೋಡಿದರೆ ಇದು ಸರ್ವಕಾಲಿಕ ಅಭಾವ. ಯಾಕೆಂದರೆ ಚಿತ್ರರಂಗದ ಬೆನ್ನು ಹತ್ತಿದ ಹಲವರಿಗೆ ಕಥೆಗಳೇ ಕಾಣುವುದಿಲ್ಲ. ಕಂಡರೂ ಅದನ್ನು ತೆರೆಗೆ ಅಳವಡಿಸುವ ಕಷ್ಟದ ಕೆಲಸ ಯಾರಿಗೂ ಬೇಕಿಲ್ಲ. ಹಾಗಾಗಿ ಎಲ್ಲರಿಗೂ ಸಿದ್ಧಗೊಂಡ ನಾಟಕದ ಕಥೆಗಳು, ಬೇರೆ ಭಾಷೆಯಲ್ಲಿ ಬಂದ ಕಥೆಗಳು ಹೆಚ್ಚು ಉಪಯುಕ್ತವಾಗಿ ಕಾಣುತ್ತಿದ್ದವು. ಇದು ಎಲ್ಲರೂ ಮಾಡುತ್ತಿದ್ದ ಕೆಲಸ ಎಂದಲ್ಲ. ಕೆಲವು ಗಂಭೀರ ನಿರ್ಮಾಪಕರು ಏನೇ ಕಷ್ಟ ಬಂದರೂ ಹೊಸ ಹೊಸ ಕಥೆಗಳಿಗಾಗಿ ಹುಡುಕುತ್ತಿದ್ದರು. ಬೇರೆ ಸಾಹಿತಿಗಳಿಂದ, ಲೇಖಕರಿಂದ ಬರೆಯಿಸುತ್ತಿದ್ದರು. ಇಲ್ಲವೇ ತಡವಾದರೂ ಸಹನೆಯಿಂದ ಉತ್ತಮ ಕಥೆಗಳಿಗಾಗಿ ಕಾಯುತ್ತಿದ್ದರು.

ಕೆಲವು ಚಿತ್ರನಿರ್ಮಾಣ ಕಂಪನಿಗಳಿಗೆ ನಿರಂತರ ಕೆಲಸ ನಡೆಯಬೇಕಿದ್ದ ಕಾರಣ ಒಂದಿಲ್ಲೊಂದು ಚಿತ್ರದ ಚಿತ್ರೀಕರಣ ನಡೆಯಲೇಬೇಕಿತ್ತು. ಹಾಗಾಗಿ ಒಂದು ಚಿತ್ರ ಮುಗಿಯುತ್ತಲೇ ಕಂಪನಿಯ ಕೆಲಸಗಾರರಿಗೆ ಸಂಬಳ ಕೊಡುವ ಸಲುವಾಗಿಯಾದರೂ ಚಿತ್ರನಿರ್ಮಾಣ ಆರಂಭಿಸುತ್ತಿದ್ದರು. ಇಂಥ ಪೈಪೋಟಿಯ ಸಮಯದಲ್ಲಿ ಕಥೆಗಳಿಗಾಗಿ ಕಿತ್ತಾಟ ಶುರುವಾಗುತ್ತಿದ್ದುದು ಸಹಜವೇ ಆಗಿತ್ತು. ಕೆಲವೊಮ್ಮೆ ವಸ್ತುವಿನ ಪ್ರಾಮುಖ್ಯದ ದೃಷ್ಟಿಯಿಂದಲೂ ಕಥೆಗಾಗಿ ಕದನ ನಡೆಯುತ್ತಿತ್ತು.

ಇದೇ ಬಗೆಯಲ್ಲಿ ೧೯೫೭ರಲ್ಲಿ 'ರಾಯರ ಸೊಸೆ' ಎಂಬ ಜನಪ್ರಿಯ ಸಾಮಾಜಿಕ ನಾಟಕವನ್ನು ತೆರೆಗೆ ತರಲು ಶಂಕರ್‌ಸಿಂಗ್‌ರ ಮಹಾತ್ಮಾ ಪಿಕ್ಚರ್ಸ್ ಸಂಸ್ಥೆ ಹಾಗೂ ಪಾಂಡುರಂಗ ಪ್ರೊಡಕ್ಷನ್ಸ್‌ರವರು ಶತಾಯಗತಾಯ ಪ್ರಯತ್ನಿಸಿದ್ದರು. ಅದಾಗಲೇ ಪಾಂಡುರಂಗ ಪ್ರೊಡಕ್ಷನ್ ಎಲ್ಲವನ್ನೂ ಸಿದ್ಧಪಡಿಸಿಕೊಂಡು ಕೆಲವು ದಿನಗಳ ಚಿತ್ರೀಕರಣವನ್ನು ಮುಗಿಸಿದ್ದರಿಂದ ಮಹಾತ್ಮ ಪಿಕ್ಚರ್ಸ್‌ನವರು ನಂತರ ಆ ಕಥೆಯ ಗೊಡವೆಗೆ ಹೋಗಲಿಲ್ಲ.

೧೯೫೫ರಲ್ಲಿ ಮೈಸೂರಿನ ಶಂಕರ್‌ಸಿಂಗ್ ಅವರ ಮಹಾತ್ಮಾ ಪಿಕ್ಚರ್ಸ್ ಸಂಸ್ಥೆಗೂ ಬಿ.ಆರ್.ಪಂತುಲು ಅವರ ಪದ್ಮಿನಿ ಪಿಕ್ಚರ್ಸ್ ಸಂಸ್ಥೆಗೂ ಕಥೆಯೊಂದಕ್ಕಾಗಿ ತೀವ್ರವಾದ ಹಣಾಹಣಿ ನಡೆಯಿತು. ಪ್ರಮುಖ ವಚನಗಾರ್ತಿಯರಲ್ಲಿ ಒಬ್ಬರಾದ ಶಿವಶರಣೆ ನಂಬಿಯಕ್ಕನ ಕಥೆಯ ಆಧಾರದಲ್ಲಿ ಚಿತ್ರ ತಯಾರಿಸಲು ಎರಡೂ ಸಂಸ್ಥೆಗಳು ಪೈಪೋಟಿಗಿಳಿದವು. ಇದಕ್ಕೆ ಮುಖ್ಯ ಕಾರಣ ಸಾಹಿತಿ ಗುಂಡೂರಾವ್ ಒಂದೇ ಕಥೆಯನ್ನು ಇಬ್ಬರೂ ನಿರ್ಮಾಪಕರಿಗೆ ಕೊಟ್ಟಿದ್ದು.

ಮಹಾತ್ಮಾ ಪಿಕ್ಚರ್ಸ್‌ನವರದು 'ಶಿವಶರಣೆ ನಂಬಿಯಕ್ಕ'. ಪದ್ಮಿನಿ ಪಿಕ್ಚರ್ಸ್‌ನವರದು 'ಶಿವಶರಣೆ ನಂಬೆಕ್ಕ'. ಎರಡೂ ಚಿತ್ರಗಳು ಹೆಚ್ಚು ಕಡಿಮೆ ಒಂದೇ ಅವಧಿಯಲ್ಲಿ ಚಿತ್ರೀಕರಣವಾದವು, ಕೊಂಚ ಅಂತರದಲ್ಲಿ ಬಿಡುಗಡೆ ಆದವು. ಆದರೆ ಮಹಾತ್ಮಾ ಪಿಕ್ಚರ್ಸ್‌ನವರ 'ಶಿವಶರಣೆ ನಂಬಿಯಕ್ಕ' ಅದ್ಭುತ ಯಶಸ್ಸು ಸಾಧಿಸಿತು. ಪದ್ಮಿನಿ ಪಿಕ್ಚರ್ಸ್ ಈ ಚಿತ್ರದಿಂದ ನಷ್ಟ ಅನುಭವಿಸಬೇಕಾಯಿತು.

ಪುರಂದರದಾಸರನ್ನು ಕುರಿತ ಚಿತ್ರವೊಂದು ಏಕಕಾಲದಲ್ಲಿ ಪ್ರಾರಂಭವಾಯಿತು. ಕೆ.ಎಸ್.ಅಶ್ವತ್ಥ್ ಅವರೂ ರಾಜಕುಮಾರ್ ಅವರೂ ಅಭಿನಯಿಸಿದ್ದರು. ನಿರ್ಮಾಪಕರು ಒಂದು ಶಿಸ್ತು, ನಿಯಮ ಇಟ್ಟುಕೊಂಡೂ ಇಂಥ ಎಡವಟ್ಟುಗಳಾಗಿವೆ.

ಬಸವೇಶ್ವರರ ಬಗ್ಗೆ ನಾಲ್ಕಾರು ಪ್ರಯತ್ನಗಳಾದವು. ಏಕಕಾಲದಲ್ಲಿ ಎರಡು ಕಡೆ ಪ್ರಯತ್ನವಾದಾಗ ಹಿರಿಯರು ಮಧ್ಯೆ ಪ್ರವೇಶಿಸಿ ರಾಜಿ ಮಾಡಿಸಿದರು. ಆದರೆ ಈ ಹೊತ್ತಿಗಾಗಲೇ ಇದಾವುದಕ್ಕೂ ಗಮನ ಕೊಡದೆ ಶಂಕರ್‌ಸಿಂಗ್ ಅವರು 'ಪ್ರಭುಲಿಂಗಲೀಲೆ' ಚಿತ್ರಿಸುತ್ತಿದ್ದರು.

೬೦ರ ದಶಕದಲ್ಲಿ ತೆಲುಗಿನ 'ಮಾವ ಅಲ್ಲುಳ್ಳ ಸವಾಲ್' ಎಂಬ ಕಥೆಯ ಹಕ್ಕಿಗಾಗಿ ನಿರ್ದೇಶಕ ಕೆ.ಎಸ್.ಎಲ್.ಸ್ವಾಮಿ (ರವೀ) ಮತ್ತು ಎ.ಆರ್.ರಾಜು ನಡುವೆ ಭಾರಿ ವಿವಾದವಾಗಿ ರಂಪವೇ ಆಯಿತು.

ಮಲಯಾಳಂನಲ್ಲಿ ಅತ್ಯಂತ ಯಶಸ್ವಿ ಚಿತ್ರವಾದ 'ಮಾರ್ಚುರಿ'ಯನ್ನು ನಿರ್ದೇಶಕ ಭಾರ್ಗವ ಅವರು ಲೇಖಕ ಬಿ.ಎಲ್.ವೇಣು ಅವರ ಕೈಯಲ್ಲಿ 'ಪ್ರೀತಿ ವಾತ್ಸಲ್ಯ' ಎಂಬ ಕಾದಂಬರಿಯಾಗಿ ಬರೆಸಿ ವಾರಪತ್ರಿಕೆಯೊಂದರಲ್ಲಿ ಅದು ವೇಣು ಅವರ ಸ್ವತಂತ್ರ ಕಾದಂಬರಿ ಎಂಬಂತೆ ಧಾರಾವಾಹಿಯಾಗಿಯೂ ಪ್ರಕಟವಾಯಿತು. ೧೯೮೪ರಲ್ಲಿ ಬಿಡುಗಡೆಯಾದ 'ಪ್ರೀತಿ ವಾತ್ಸಲ್ಯ' ಚಿತ್ರವೇನೋ ಸಾಕಷ್ಟು ಯಶಸ್ಸು ಪಡೆಯಿತು. ಆದರೆ ಲೇಖಕ ಬಿ.ಎಲ್.ವೇಣು ಮತ್ತು ನಿರ್ದೇಶಕ ಭಾರ್ಗವ ಅವರ ಮೇಲೆ ಬಂದ ಅಪವಾದ ಹಾಗೇ ಉಳಿಯಿತು. 'ಮುಂಗಾರಿನ ಮಿಂಚು' ವಿಷಯದಲ್ಲಿ ಉಷಾನವರತ್ನ ರಾಮ್-ರಾಜೇಂದ್ರಸಿಂಗ್ ಬಾಬು ಬಗ್ಗೆ ಇಂಥ ಅಪವಾದ ಉಳಿದುಕೊಂಡಿತು.

ಒಂದು ಹಂತದಲ್ಲಿ ತಮಿಳಿನ ಎಂ.ಡಿ.ಸುಂದರ್ ಅವರಿಗೆ ಬಹು ಬೇಡಿಕೆ. ಚಿತ್ರಕಥೆ ರಚಿಸುವಲ್ಲಿ ಮಹಾ ನಿಪುಣ, ಆತ ಸಿದ್ಧಪಡಿಸಿದರೆ ಯಶಸ್ಸು ಖಚಿತ ಎಂಬ ನಂಬಿಕೆ, ಅತಿ ಹೆಚ್ಚು ಚಿತ್ರಗಳಿಗೆ ಕಥೆ, ಚಿತ್ರಕಥೆ ಒದಗಿಸಿದ್ದಾರೆ. ಮಾರಾ, ವಲಂಪುರಿ ಸೋಮನಾಥನ್ ಮೊದಲಾದವರೂ ಕನ್ನಡಕ್ಕೆ ಕೆಲಸ ಮಾಡಿದ್ದಾರೆ.

ಕೆಲವರು ತಾವು ಯೋಚಿಸಿದ್ದ ಕಥೆಯ ಪ್ಲಾಟ್ ಅನ್ನೇ ವಿಸ್ತರಿಸಿ ಇನ್ನೊಬ್ಬರು ಚಿತ್ರ ಮಾಡಿದರೆಂದು ವಿವಾದ ಎಬ್ಬಿಸಿದರು. ಎಲ್ಲೆಲ್ಲೂ ಒಳ್ಳೆಯ ಕಥೆಗಾಗಿ ತಹತಹಿಕೆ. ಹೇಗಾದರೂ ತನ್ನದಾಗಿಸಿಕೊಳ್ಳುವ ಬಯಕೆ ಕಂಡುಬಂದಿತು.

ಉಪೇಂದ್ರ ನಿರ್ದೇಶಿಸಿದ 'A' ಚಿತ್ರ ಅವರ ಮತ್ತು ನಟಿ ಪ್ರೇಮಾ ನಡುವಿನ ಪ್ರೇಮದ ದುರಂತ ಕಥೆ ಎಂದು ಪ್ರಚಾರ ಪಡೆದು ಅದಕ್ಕೆ ವಿರುದ್ಧವಾಗಿ ಪ್ರವೀಣ್ ನಾಯಕ್ ನಿರ್ದೇಶನದಲ್ಲಿ 'Z' ಎಂಬ ಚಿತ್ರವೂ ತೆರೆಗೆ ಬಂತು. ಆದರೆ ಈ ಚಿತ್ರ ಗೆಲುವು ಪಡೆಯಲಿಲ್ಲ. 'Z' ಚಿತ್ರದ ಕಥೆ ಯಾರ ವಿರುದ್ಧವೂ ಅಲ್ಲ ಎಂದು ಪ್ರೇಮ ಹೇಳಿದರು. ಉಪೇಂದ್ರ ಎಂದೂ ಈ ಬಗ್ಗೆ ಸ್ಪಷ್ಟಪಡಿಸಲಿಲ್ಲ.

ಒಂದು ಚಿತ್ರದ ರೀಮೇಕ್ ಹಕ್ಕಿಗಾಗಿ ಇತ್ತೀಚೆಗೆ ಗಲಾಟೆ ನಡೆದದ್ದು ಫೈನಾನ್ಶಿಯರ್ ನಂಜುಂಡಿ ಮತ್ತು ನಿರ್ಮಾಪಕ ಧನರಾಜ್ ನಡುವೆ. ತಮಿಳು ಚಿತ್ರದ ಹಕ್ಕುಗಳನ್ನು ಪಡೆದು ಅದನ್ನು ನಂಜುಂಡಿ ಹತ್ತಿರ ಹಣಕ್ಕಾಗಿ ಒತ್ತೆ ಇಟ್ಟು ಹಣ ವಾಪಸು ಕೊಡದೇ ಇದ್ದಾಗ ನಂಜುಂಡಿಯೇ ಚಿತ್ರನಿರ್ಮಾಣಕ್ಕೆ ತೊಡಗಿದರು. ಆದರೆ ಪತ್ರಿಕೆಗಳ ಮೂಲಕ ಧನರಾಜ್ ನೋವು ತೋಡಿಕೊಂಡ ನಂತರ ಪಂಚಾಯಿತಿಯಾಗಿ ಕಥೆಯನ್ನು ಧನರಾಜ್ ಅವರಿಗೆ ಮರಳಿಸುವ ತೀರ್ಮಾನವಾಯಿತು. ಆದರೂ ಧನರಾಜ್ ವಾಯಿದೆಗೆ ಹಣ ಕೊಡದಾಗ ಮಧ್ಯೆ ಪ್ರವೇಶಿಸಿದ ನಿರ್ಮಾಪಕ ತಾವೇ ಆ ಚಿತ್ರದ ಹಕ್ಕುಗಳನ್ನು ಕೊಂಡು ಸಾಲ ತೀರಿಸಿದರು. ಇಂಥ ನೂರಾರು ಉದಾಹರಣೆಗಳಿವೆ.

ಕನ್ನಡ ಚಿತ್ರ ಒಂದು ನೆಲದ ಸಂಸ್ಕೃತಿಗೆ ಕನ್ನಡಿಯಾಗಬೇಕೆಂಬ, ಅದಕ್ಕಾಗಿ ಪ್ರತಿ ಕ್ಷಣವೂ ಸೃಜನಶೀಲವಾಗಿರಬೇಕೆಂಬ ಉದ್ದೇಶ ಹಿಂದೆ ಸರಿದು ವಾಣಿಜ್ಯಕ್ಕಾಗಿ ಏನಾದರೂ ಕಬಳಿಸಿಬಿಡುತ್ತೇವೆಂಬ ಪ್ರವೃತ್ತಿ ಇಂಥ ಅಧೋಗತಿಗೆ ಕಾರಣ.

ಡಬ್ಬಿಂಗ್

ಚಿತ್ರನಿರ್ಮಾಣ ಎಂಬುದು ಅಧಿಕ ಹಣ ಬೇಡುವ ಅದೃಷ್ಟ ಪರೀಕ್ಷೆಯ ಒಂದು ಉದ್ಯಮ ಎನ್ನುವುದು ಎಲ್ಲರೂ ಬಲ್ಲ ಸಂಗತಿ. ಯಾಕೆಂದರೆ ಹಾಕಿದ ಹಣ ಮರಳಿ ಬರುವ ಖಾತರಿ ಯಾರಿಗೂ ಇರುವುದಿಲ್ಲ. ಆದರೆ ಎಲ್ಲರಿಗೂ ಅದೇ ದೃಢ ವಿಶ್ವಾಸ. ಹಾಗಾಗಿ ಹಣ ಹಾಕುವ ದಂಧೆಗೆ ಸರಿಯಾದ ಸಲಕರಣೆಗಳಿರಬೇಕು; ಹೆಚ್ಚು ಹೆಚ್ಚು ಜನ ನೋಡಬೇಕು; ಅದರಿಂದಾಗಿ ಈ ವ್ಯಾಪಾರ ನಡೆಯಬೇಕು ಎಂದು ಎಲ್ಲ ನಿರ್ಮಾಪಕರೂ ಯೋಚಿಸುವುದರಲ್ಲಿ ಅರ್ಥವಿದೆ. ಒಮ್ಮೆ ಕೈಸುಟ್ಟುಕೊಂಡ ನಿರ್ಮಾಪಕನಂತೂ ಹಣವನ್ನು ನಷ್ಟ ಮಾಡಿಕೊಳ್ಳದಂಥ ಸುಲಭ ದಾರಿಗಳಿಗಾಗಿ ಸದಾ ಹುಡುಕುತ್ತಿರುತ್ತಾನೆ. ಇದು ಒಮ್ಮೊಮ್ಮೆ ನಷ್ಟವನ್ನು ಭರಿಸುವ ಬದಲಾಗಿ ಸುಲಭವಾಗಿ ಲಾಭ ಮಾಡುವ ಆಸೆಯಿಂದಲೇ ಕಳ್ಳ ಮಾರ್ಗಗಳನ್ನು ಹುಡುಕುವ ಪ್ರಯತ್ನವಾಗತೊಡಗುತ್ತದೆ.

ಡಬ್ಬಿಂಗ್ ಸಂಸ್ಕೃತಿ ಚಿತ್ರರಂಗದಲ್ಲಿ ತಲೆ ಎತ್ತಿರುವುದೇ ಸುಲಭ ಲಾಭದ ದುರಾಸೆಯಿಂದ. ಒಂದು ಭಾಷೆಯಲ್ಲಿ ಒಂದು ಚಿತ್ರ ಯಶಸ್ಸು ಪಡೆದರೆ ಸಾಕು, ಅದಕ್ಕೆ ಇನ್ನೊಂದು ಭಾಷೆಯ ಮಾತುಗಳನ್ನು ಮಾತ್ರ ಪೋಣಿಸಿ ಹೊಸ ಚಿತ್ರವೆಂದು ಪ್ರೇಕ್ಷಕರಿಗೆ ಉಣಬಡಿಸುವ ಕಾರ್ಯ ಆರಂಭವಾಯಿತು. ಬರಬರುತ್ತ ಇದೇ ಒಂದು ವ್ಯಾಪಾರವಾಯಿತು. ನಿಜವಾಗಿ ಚಿತ್ರನಿರ್ಮಾಣವೂ ಒಂದು ಸೃಜನಶೀಲ ಕಲೆಯೆಂದು ಪರಿಗಣಿಸಿದ ಸಾಹಸಿಗರಿಗೆ ಈ ಅಡ್ಡದಾರಿಯೇ ರಾಜಮಾರ್ಗವಾಯಿತು. ಹಾಗಾಗಿ ಯಾವುದೋ ಭಾಷೆಯ, ಯಾವುದೋ ಸಂಸ್ಕೃತಿಯ ವರಸೆಗಳೆಲ್ಲ ಅದರ ಗಂಧ, ಗಾಳಿಯೂ ಇರದ ಬೇರೊಂದು ಭಾಷಾ ಸಂಸ್ಕೃತಿಗೆ ಅಮರಿಕೊಳ್ಳತೊಡಗಿದವು. ಕ್ರಮೇಣ ಇಲ್ಲಿನ ಭಾಷೆ, ಸಂಸ್ಕೃತಿ, ನಡಾವಳಿಗಳೆಲ್ಲ ಬೇರೆ ಭಾಷೆಯ ವರಸೆಗಳಿಗೆ ಬದಲಾದವು. ಇಲ್ಲೇ ಬೇರುಬಿಟ್ಟ ಭಾಷೆ, ಸಂಸ್ಕೃತಿ, ಜಾನಪದ, ಸಂಪ್ರದಾಯಗಳು ನಾಶವಾಗತೊಡಗಿದವು. ಜನರ ಯೋಚನಾಲಹರಿಯೇ ಅನ್ಯ ಸಂಸ್ಕೃತಿಯ ಗುಲಾಮಗಿರಿಗೆ ಬಲಿಯಾಗಬೇಕಾಯಿತು.

ಇದು ಕೇವಲ ಸಿನಿಮಾದಿಂದ ಮಾತ್ರವಲ್ಲ, ಜಗತ್ತಿನ ಹಲವು ಮೂಲನಿವಾಸಿಗಳು ಪರದೇಸಿಗರ ಸಾಂಸ್ಕೃತಿಕ ಗುಲಾಮಗಿರಿಗೆ ಬಲಿಯಾದದ್ದು ಹೀಗೆ. ಸಿನಿಮಾ ಅಥವಾ ಚಲನಚಿತ್ರ ಒಂದು ಪ್ರಬಲ ಮಾಧ್ಯಮವಾಗಿರುವುದರಿಂದ ಈ ಮಾಧ್ಯಮದ ಮೂಲಕ ಒಂದು ಸಂಸ್ಕೃತಿಯನ್ನು ಇನ್ನಷ್ಟು ಶ್ರೀಮಂತಗೊಳಿಸಬಹುದು ಅಥವಾ ಬೇರು ಸಹಿತ ನಾಶ ಮಾಡಬಹುದು.

ಕನ್ನಡದ ವಿಚಾರದಲ್ಲಿ ಡಬ್ಬಿಂಗ್ ಚಿತ್ರಗಳಿಗೆ ಮೊದಲ ವಿರೋಧ ಬಂದುದು ಈ ಕಾರಣದಿಂದ. ಈ ವಿರೋಧ ವ್ಯಕ್ತವಾದುದೂ ಸಾಹಿತಿಗಳ ವಲಯದಿಂದ. ಸಾಹಿತಿಯಾದವನಿಗೆ ಕೆಲವು ಮೂಲಭೂತ ಜವಾಬ್ದಾರಿಗಳಿವೆ. ಸಾಂಸ್ಕೃತಿಕ ರಾಯಭಾರಿಯಾಗಿರುವ ಸಾಹಿತಿ ಕೆಲವು ಕನಿಷ್ಠ ಜವಾಬ್ದಾರಿಗಳಿಗಾದರೂ ಹೆಗಲು ಕೊಡಲೇಬೇಕು. ಜಾಗತಿಕ ಬದಲಾವಣೆಗಳೇನೇ ಅದರೂ ಈ ನೆಲದ ಭಾಷೆ, ಸಂಸ್ಕೃತಿ, ಜಾನಪದವನ್ನು ನಾಶವಾಗದಂತೆ ತಡೆಯುವ ಪ್ರಯತ್ನಕ್ಕಾದರೂ ಬದ್ಧವಾಗಿರಲೇಬೇಕು.

೧೯೬೪-೬೫ರಲ್ಲಿ ಕನ್ನಡ ಚಳವಳಿಯ ಮುಂಚೂಣಿಯಲ್ಲಿದ್ದ ಸಾಹಿತಿಗಳಾದ ಅ.ನ.ಕೃಷ್ಣರಾವ್, ಮ.ರಾಮಮೂರ್ತಿ ಮುಂತಾದ ಹಿರಿಯರಿಗೆ ಅಗಾಧವಾಗಿ ಕಾಡಿದ್ದು ಈ ಡಬ್ಬಿಂಗ್ ಭೂತ. ತಮಿಳು, ತೆಲುಗಿನಲ್ಲಿ ತಯಾರಾದ ಚಿತ್ರಗಳು ಬರೀ ಕನ್ನಡ ಚಿತ್ರಗಳ ಲೇಪನ ಪಡೆದು ಇಲ್ಲಿ ಪ್ರದರ್ಶನಗೊಳ್ಳುತ್ತಿದ್ದಾಗ ಸಹಜವಾಗಿಯೇ ಸಾಹಿತಿಗಳು ಇಂಥ ಅಸಾಂಸ್ಕೃತಿಕ ಪದ್ಧತಿಯನ್ನು ಬಹಿಷ್ಕರಿಸಲು ದೃಢ ನಿರ್ಧಾರದ ಹೋರಾಟ ನಡೆಸಿದರು. ಪರ-ವಿರೋಧಗಳು ಇದ್ದವು.

ಈ ಹೋರಾಟದ ಫಲವೇ ನಂತರದ ದಿನಗಳಲ್ಲಿ ಸರ್ಕಾರ ಡಬ್ಬಿಂಗ್ ಸಂಸ್ಕೃತಿಯನ್ನು ಕಡ್ಡಾಯವಾಗಿ ರದ್ದುಪಡಿಸಿದ್ದು. ಆದರೆ ೩೪ ವರ್ಷಗಳ ನಂತರ ರಾಜೇಂದ್ರಸಿಂಗ್ ಬಾಬು ನಿರ್ದೇಶನದ 'ಭಾರತ್ ೨೦೦೦' ಚಿತ್ರ ತೆಲುಗಿನಿಂದ ಕನ್ನಡಕ್ಕೆ ಡಬ್ ಆಗಿ ಚಿತ್ರರಂಗದ ಇತಿಹಾಸದ ಇತ್ತೀಚಿನ ಪುಟಗಳಲ್ಲಿ ದಾಖಲಾದುದು ವಿಪರ್ಯಾಸ.

ಅಂದ ಹಾಗೆ, ಚಿತ್ರರಂಗದ ವಾಕ್ಚಿತ್ರ ಯುಗ ಆರಂಭವಾಗಿ ಒಂಬತ್ತು ವರ್ಷಗಳವರೆಗೆ ಡಬ್ಬಿಂಗ್ ವಿಚಾರ ಕನ್ನಡ ಚಿತ್ರರಂಗಕ್ಕಂತೂ ಹೊಸತಾಗಿತ್ತು. ಕನ್ನಡಕ್ಕೆ ಡಬ್ ಆಗುವ ಮುನ್ನ ಕನ್ನಡದಿಂದಲೇ ತಮಿಳಿಗೆ ಚಿತ್ರವೊಂದು ಡಬ್ ಆದುದೇ ಡಬ್ಬಿಂಗ್ ಸಂಸ್ಕೃತಿಯ ಮೊದಲ ಪ್ರಕರಣವೆನ್ನಬಹುದು. ಇದು ಬರೀ ದಕ್ಷಿಣ ಚಿತ್ರರಂಗದ ದಾಖಲೆಯಲ್ಲ, ಇಡೀ ಭಾರತೀಯ ಚಿತ್ರರಂಗದ್ದು. ಆ ಚಿತ್ರ 'ಸತ್ಯ ಹರಿಶ್ಚಂದ್ರ'. ಈ ಚಿತ್ರವನ್ನು ನಿರ್ದೇಶಿಸಿದವರು ಆರ್.ನಾಗೇಂದ್ರರಾಯರು. ಹುಬ್ಬಳ್ಳಿಯ ಮಲ್ಲಿಕಾರ್ಜುನ ಚಿತ್ರಮಂದಿರದಲ್ಲಿ ಮೂವತ್ತು ವಾರ, ಮೈಸೂರು, ಬಾಗಲಕೋಟೆಗಳಲ್ಲಿ ಶತದಿನ ಕಂಡ, ಮೊಟ್ಟಮೊದಲ ರಜತೋತ್ಸವ ಆಚರಿಸಿದ ಚಿತ್ರವಿದು. ಹಾಗೆಯೇ ಕನ್ನಡದಿಂದ ಹಿಂದಿಗೆ ಡಬ್ ಆದ ಮೊದಲ ಚಿತ್ರವೂ ಇದೇ ಎಂದು ನಾಗೇಂದ್ರರಾವ್ ತಮ್ಮ 'ಇದು ನನ್ನ ಕಥೆ'ಯಲ್ಲಿ ಉಲ್ಲೇಖಿಸುತ್ತಾರೆ.

ಹುಬ್ಬಳ್ಳಿಗೆ ಈ ಚಿತ್ರದ ಶತದಿನೋತ್ಸವ ಸಮಾರಂಭಕ್ಕೆ ನಾಗೇಂದ್ರರಾಯರು ಹೋಗಿದ್ದಾಗ ಚಿತ್ರಮಂದಿರದ ಮಾಲಿಕರು "ನೀವೇಕೆ ಈ ಚಿತ್ರವನ್ನು ಹಿಂದಿಗೆ ಡಬ್ ಮಾಡಬಾರದು ?" ಎಂದು ಪ್ರಶ್ನಿಸಿದರು. ಈ ಬಗ್ಗೆ ನಾಗೇಂದ್ರರಾವ್ ಅವರೇ ಬರೆದ ಮಾತುಗಳು ಇಲ್ಲಿವೆ :

ಡಬ್ ಮಾಡುವ ವಿಷಯ ಚೆಟ್ಟಿಯಾರರ ಬಳಿ ಪ್ರಸ್ತಾಪಿಸಿದಾಗ "ಹಿಂದಿ ಭಾಷೆಯ ಪರಿಚಯ ನಮಗೆ ಅಷ್ಟಿಲ್ಲ; ತಮಿಳಿಗೇ ಡಬ್ ಮಾಡೋಣ ಎಂದರು. ಅದಕ್ಕಾಗಿ ನಿರ್ದೇಶಕ ಎ.ಟಿ.ಕೃಷ್ಣಸ್ವಾಮಿ ಅಯ್ಯಂಗಾರ್ ಅವರೊಡಗೂಡಿ ಲಿಪ್ ಮೂವ್‌ಮೆಂಟಿಗೆ ಸರಿಯಾಗುವಂತೆ ತಮಿಳು ಭಾಷೆಗ ಸೀನ್ ಬರೆದೆ. ಅದು ಯಶಸ್ವಿಯಾದರೆ ಮುಂದೆ ಪ್ರಯತ್ನ ಮಾಡೋಣ ಎಂದು ಚೆಟ್ಟಿಯಾರರು ಹೇಳಿದರು. ಅವರಂತೆ ಚಂದ್ರಮತಿ ಪಾತ್ರದ ಲಕ್ಷ್ಮೀಬಾಯಿಯವರಿಗೆ ದೃಶ್ಯವೊಂದನ್ನು ಅಭ್ಯಾಸ ಮಾಡಿಸಲಾಯಿತು. ಇದನ್ನು ಡಬ್ ಮಾಡಿ ನೋಡಿದ ಬಳಿಕ ಪೂರ್ತಿ ಚಿತ್ರವನ್ನು ಡಬ್ ಮಾಡಬಹುದು ಎಂಬ ತೀರ್ಮಾನಕ್ಕೆ ಬಂದೆವು. ಇದರಿಂದಾಗಿ ಭಾರತದಲ್ಲೇ ಮೊಟ್ಟಮೊದಲ ಬಾರಿಗೆ ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಚಿತ್ರವನ್ನು ಡಬ್ ಮಾಡಿದ ಯಶಸ್ಸು ನಮ್ಮದಾಯಿತು." ಈ ಮೊದಲ ಪ್ರಯತ್ನದಲ್ಲಿ ತಂತ್ರಜ್ಞನೊಬ್ಬನ ಜಾಣ್ಮೆಯೂ ಇತ್ತು.

ಆ ಕಾಲದಲ್ಲಿ ಇದೊಂದು ಸಾಹಸವೇ ಆಗಿರಬಹುದು. ಆದರೆ ಅದು ಒಂದು ಭಾಷೆಯ ಕಲಾಸಂಸ್ಕೃತಿಯನ್ನೇ ನಾಶಪಡಿಸುವಷ್ಟು ಶಕ್ತಿಯುತವಾಗಿತ್ತು ಎಂಬುದನ್ನು ಅಂದೇ ಕೆಲವರಾದರೂ ಮನಗಂಡಿದ್ದರು. ೧೯೪೪ರ ಜನವರಿ ತಿಂಗಳ 'ಚಿತ್ರ ಸಮಾಚಾರ್' ಪತ್ರಿಕೆಯಲ್ಲಿ ಡಬ್ಬಿಂಗ್ ಕುರಿತು ಬರೆಯಲಾಗಿರುವ ಒಂದು ಬರಹ ಈ ಕೆಟ್ಟ ಪರಂಪರೆಯಿಂದಾಗುವ ಮುನ್ಸೂಚನೆಯನ್ನು ಕೊಡುತ್ತದೆ.

"ಮದರಾಸಿನ ಪ್ರಗತಿ ಪಿಕ್ಚರ್ಸ್‌ನವರು ತಮ್ಮ ಕನ್ನಡ 'ಹರಿಶ್ಚಂದ್ರ'ವನ್ನು ತಮಿಳಿಗೆ ಪರಿವರ್ತಿಸಿ ಚಿತ್ರರಂಗದಲ್ಲೇ ಕ್ರಾಂತಿ ಎಬ್ಬಿಸಿದುದಲ್ಲದೆ ಹಲವಾರು ತರ್ಕವಿತರ್ಕಗಳಿಗೆ ಎಡೆಕೊಟ್ಟಿದ್ದಾರೆ. ಈ ತರಹ ಅವರದ್ದು ಪ್ರಥಮ ಉದ್ಯಮವಾದ್ದರಿಂದ ಬೇಕಾದಷ್ಟು ಹಣ ಗಳಿಸಬಹುದು. ಆದರೆ ಅವರು ತಮ್ಮ ಈ ಹೊಸ ಯೋಜನೆಯಿಂದ ತಮಗೆ ತಾವೇ ದ್ರೋಹ ಮಾಡಿಕೊಂಡಿದ್ದಾರೆಂದು ನನ್ನ ಅಭಿಮತ. ಈ ಭಾಷಾ ಮಾರ್ಪಾಡು ಹೀಗೆಯೇ ಬೆಳೆಯುತ್ತ ಬಂದಲ್ಲಿ ದಕ್ಷಿಣ ಭಾರತೀಯ ಚಿತ್ರರಂಗ ನಾಶವಾಗುವುದು ಖಂಡಿತ. ಭಾರತದ ಸುಪ್ರಸಿದ್ಧ ತಯಾರಿಕೆಗಾರರಾದ ಬಾಂಬೆ ಟಾಕೀಸ್, ನ್ಯೂ ಥಿಯೇಟರ್ಸ್, ರಾಜಕಮಲ್ ಕಲಾಮಂದಿರ ಮೊದಲಾದವರು ತಮ್ಮ ಹಿಂದಿ ಚಿತ್ರಗಳನ್ನು ತೆಲುಗು, ತಮಿಳು ಮತ್ತು ಕನ್ನಡ ಭಾಷೆಗಳಿಗೆ ಬದಲಾಯಿಸುತ್ತ ಬಂದಲ್ಲಿ ದಕ್ಷಿಣ ನಿರ್ಮಾತೃಗಳು ಚಿತ್ರರಂಗದಿಂದ ಶೀಘ್ರದಲ್ಲೇ ಹೊರಗಾಗಬೇಕಾಗುತ್ತದೆ, ಅಷ್ಟೆ.

"ಈ ಭಾಷಾ ಮಾರ್ಪಾಟಿನ ಆತ್ಮಘಾತುಕ ಉದ್ಯಮಕ್ಕೆ ದಕ್ಷಿಣ ಭಾರತೀಯ ಚಲನಚಿತ್ರ ವಾಣಿಜ್ಯ ಮಂಡಳಿಯವರು ಅದು ಹೇಗೆ ತಾನೆ ಒಪ್ಪಿಗೆ ಇತ್ತರೋ ತಿಳಿಯದು. ಈಗ ಆಗಬಾರದ್ದು ಆಗಿಹೋಯಿತು. ಇನ್ನು ಮೇಲೆಯಾದರೂ ಇತರರು ಈ ಮೇಲ್ಪಂಕ್ತಿ ಅನುಸರಿಸದಂತೆ ನೋಡಿಕೊಳ್ಳಬೇಕು. ಈಗಾಗಲೇ ತಯಾರಾದ ಕೆಲವು ಕನ್ನಡ ಚಿತ್ರಗಳನ್ನು ತಮಿಳಿಗೆ ಬದಲಾಯಿಸುವ ಸಿದ್ಧತೆ ನಡೆದಿದೆಯಂತೆ. ಚಲನಚಿತ್ರ ವಾಣಿಜ್ಯ ಮಂಡಳಿಯವರು ಕೂಡಲೇ ಆ ಕಡೆ ತಮ್ಮ ಗಮನ ತಿರುಗಿಸಿ ಅವರ ಆತ್ಮಘಾತುಕ ಉದ್ಯಮವನ್ನು ತಡೆಗಟ್ಟಬೇಕು. ಇಲ್ಲವಾದಲ್ಲಿ ಇದು ಅಂಟುಜಾಡ್ಯವಾಗಿ ಪರಿಣಮಿಸಿ ಮೇಲೆ ಹೇಳಿದಂತೆ ಪ್ರಸಿದ್ಧ ತಯಾರಕರೂ ನಮ್ಮವರು ಹಾಕಿದ ಈ ಹೆಜ್ಜೆಯಲ್ಲಿ ಮುಂದುವರಿದು ಭಾರತದಾದ್ಯಂತ ಚಿತ್ರರಂಗವನ್ನು ತಾವೇ ಆಳುತ್ತ ಬಂದು, ಪ್ರಾಂತಿಕ ನಿರ್ಮಾತೃಗಳನ್ನು ಹೊಡೆದು ಅಟ್ಟುವುದರಲ್ಲಿ ಎಳ್ಳಷ್ಟೂ ಸಂದೇಹವಿಲ್ಲ. ಆದ್ದರಿಂದ ದಕ್ಷಿಣ ದೇಶೀಯ ನಿರ್ಮಾತೃಗಳು ಈಗಲೇ ಜಾಗರೂಕರಾಗಿರುವುದು ಒಳ್ಳೆಯದು."

'ಸತ್ಯ ಹರಿಶ್ಚಂದ್ರ' ತಮಿಳಿಗೆ ಡಬ್ ಆದ ಬೆನ್ನಲ್ಲೇ ಪತ್ರಿಕೆ ನುಡಿದ ಈ ಮಾತುಗಳ ನಂತರವೂ ಕನ್ನಡದಲ್ಲಿ ಡಬ್ ಪ್ರಕರಣಗಳು ನಡೆದೇ ಇತ್ತು. ಇದು ಎಷ್ಟು ವಿಪರೀತ ಸ್ಥಿತಿಗೆ ಹೋಯಿತೆಂಬುದನ್ನು ೧೯೫೭ರಲ್ಲಿ 'ಮಾಯಾಬಜಾರ್' ಎಂಬ ತೆಲುಗು ಚಿತ್ರ ಕನ್ನಡಕ್ಕೆ ಡಬ್ ಆದಾಗ ಪತ್ರಿಕೆಗಳು ಹೀಗೆ ಟೀಕಿಸಿದವು :

"ಮಾಯಾಬಜಾರ್ ತೆಲುಗು ಚಿತ್ರವನ್ನು ಕನ್ನಡಕ್ಕೆ ಡಬ್ ಮಾಡಿದರು. ಎಲ್ಲ ತೆಲುಗು ನಟರು, ಕನ್ನಡ ನಟರ ಕಂಠದಾನ. ಹೀಗಾದಾಗ ತೆಲುಗು ಮಾತಿನ ತುಟಿ ಚಲನೆಗೆ ಕನ್ನಡ ಮಾತು ಹೊಂದದೆ ಆಭಾಸವಾಗುತ್ತದೆ. ಆ ಶೈಲಿ ಬೇರೆ - ಈ ಶೈಲಿ ಬೇರೆ. ಸದಾಶಿವಯ್ಯನವರು ಬಹುವಾಗಿ ಶ್ರಮಿಸಿದ್ದಾರೆ. ಆದರೂ ಅದು ಸಾಹಿತ್ಯದ ದೊಂಬರಾಟವೆನಿಸುತ್ತದೆ.

"ಮೂಲದಲ್ಲಿ ಕೃಷ್ಣನು ಅಭಿಮನ್ಯುವನ್ನು 'ರಾ ಅಲ್ಲುಡು' ಎಂದರೆ ಕನ್ನಡದಲ್ಲಿ 'ಬಾ ಅಳಿಯ' ಎಂದಿದಾರೆ. ತುಟಿ ಚಲನೆ ಸರಿ ಬರುವುದೆಂತು ?

ಸಾಹಿತ್ಯದ ಸರ್ಕಸ್ :

ಘಟೋತ್ಕಜನ ಹಾಡು ನೋಡಿ,

ತೆಲುಗು : ವಿವಾಹ ಭೋಜನಂಬು
ವಿಂತೈನ ವಂಟಕಂಬು
ವಿಯ್ಯಾಲ ವಾರಿವಿಂದು
ಓ ಹೋ ಹೋ ನಾಕೆ ಮುಂದು

ಕನ್ನಡ : ವಿವಾಹ ಭೋಜನವಿದು
ವಿಚಿತ್ರ ಭಕ್ಷ್ಯಗಳಿವು
ಬೀಗರಿಗೆ ಔತಣವಿದು
ದೊರೆಕೊಂಡಿತೆನಗೆ ಬಂದು

"ಇದು ತುಟಿ ಚಲನೆಗೆ ಹೊಂದಬಲ್ಲುದೆ ? ಇದನ್ನು ಎರಡು ಭಾಷೆಯ ಸಾಹಿತ್ಯ ಜ್ಞಾನವುಳ್ಳ ಯಾರೂ ಮಾಡಿಯಾರು. ಸಾಹಿತಿಯಾದವನ ಜವಾಬ್ದಾರಿ ಇದಕ್ಕಿಂತ ಹೆಚ್ಚಿನದು. ಇದು ವಿವರಣಾತ್ಮಕ ಸಂಭಾಷಣೆ ಒಳಗೊಂಡ ಒಂದು ಮೂಕಿಚಿತ್ರ ವಾಗುತ್ತದೆ. ಎರಡು ಪಾತ್ರಗಳಿಗೆ ಒಂದೇ ಕಂಠವಿದೆ. ಮೂಲ ಚಿತ್ರ ನೋಡಿದವರಿಗೆ ಕನ್ನಡದ ಅನುವಾದ ತಾತ್ಸಾರ ಅನ್ನಿಸುತ್ತದೆ...."

ಇವು ಪತ್ರಿಕೆಗಳಲ್ಲಿ ಬಂದ ಡಬ್ಬಿಂಗ್ ಕುರಿತಾದ ಪ್ರಸ್ತಾಪಗಳ ಉದಾಹರಣೆ. ಒಂದು ಕಡೆ ಡಬ್ಬಿಂಗ್ ವಿರೋಧಿಸುವ ಸಾಹಿತಿ-ಪತ್ರಕರ್ತರ ತಂಡ, ಇನ್ನೊಂದೆಡೆ ಡಬ್ಬಿಂಗ್ ಮೂಲಕ ಸುಲಭ ದಾರಿಯಲ್ಲಿ ಹಣ ಗಳಿಸುವ ಚಿತ್ರೋದ್ಯಮಿಗಳ ಗುಂಪು. ಕೊನೆಗೂ ಸಾಹಿತಿಗಳ ವಾದವೇ ಮುಖ್ಯವಾಗಿ ಡಬ್ಬಿಂಗ್ ಚಿತ್ರಗಳಿಗೆ ಸರ್ಕಾರ ನಿಷೇಧ ಹೇರಿತು. ಸದ್ಯ ಒಂದು ಅನಿಷ್ಟ ಪರಂಪರೆಗೆ ಅಂದಿನಿಂದ ಮಂಗಳ ಹಾಡಲಾಯಿತು. ಇವತ್ತು ಚಿತ್ರಗಳಿರಲಿ, ದೂರದರ್ಶನ ಧಾರಾವಾಹಿಗಳನ್ನೂ ಡಬ್ ಮಾಡುವಂತಿಲ್ಲ. ಹಾಗೆಂದು ಸರ್ಕಾರದ ಒತ್ತಡವೇನೂ ಇಲ್ಲ. ಸಾಹಿತಿ, ಕಲಾವಿದರು, ತಂತ್ರಜ್ಞರೇ ಇಂದು ಇದರ ವಿರುದ್ಧವಾಗಿ ನಿಂತಿದ್ದಾರೆ. ಆದರೂ ಅಲ್ಲೊಂದು ಇಲ್ಲೊಂದು ಪ್ರಕರಣಗಳು ನಡೆಯುವ ಪ್ರಯತ್ನಗಳಂತೂ ನಡೆದೇ ಇದೆ.

ರೀಮೇಕ್

ರೀಮೇಕ್ ಚಿತ್ರಗಳಲ್ಲಿ ಎರಡು ವಿಧ. ಒಂದು ಭಾಷೆಯಲ್ಲಿ ತಯಾರಾದ ಚಿತ್ರದ ಕಥೆಯ ಹಕ್ಕು ಪಡೆದು ಅದನ್ನು ನಮ್ಮ ಭಾಷೆಗೆ, ಇಲ್ಲಿನ ಮಣ್ಣಿನ ಸಂಸ್ಕೃತಿಗೆ ತಕ್ಕಂತೆ

ಬದಲಾವಣೆ ಮಾಡುವುದು. ಅಂದರೆ ಮೂಲಕತೆಯ ಮುಖ್ಯ ತಿರುಳನ್ನು ಮಾತ್ರ ಉಳಿಸಿಕೊಂಡು ಇಲ್ಲಿನ ಪರಿಸರಕ್ಕೆ ಹೊಂದಿಸುವುದು. ಇದು ಎಷ್ಟೋ ವೇಳೆ ಸಹ್ಯ ಅನ್ನಿಸಿದರೂ ಇಲ್ಲೇ ಬೇಕಾದಷ್ಟು ಕಥೆಗಳಿರುವಾಗ ಪರರ ಹಂಗೇಕೆ ? ಒಂದು ವೇಳೆ ಆ ಕಥೆ ಅತ್ಯಂತ ಉತ್ತಮ ಕಥೆಯಾದಲ್ಲಿ ನಾವು ಅನುವಾದ ಸಾಹಿತ್ಯದಂತೆ ಆ ಹೊಸ ಕಥೆಯ ಚಿತ್ರವನ್ನು ಬೇರೆ ಭಾಷೆಯದಾದರೂ ನೋಡಬಹುದು. ಹಾಗೆಯೇ ಜಗತ್ತಿನ ಉದ್ದಾಮ ಲೇಖಕರ ಕಥೆಗಳಾದರೆ ಅದನ್ನು ಚಿತ್ರಕ್ಕೆ ಅಣಿಗೊಳಿಸುವುದರಲ್ಲಿ ಹೆಚ್ಚಿನ ವಿರೋಧವೇನೂ ಕಂಡುಬರುವುದಿಲ್ಲ.

ಆದರೆ ರೀಮೇಕ್‌ನ ಎರಡನೇ ಬಗೆ ತೀರಾ ಅಸಹ್ಯವಾದುದು. ಮೂಲ ಚಿತ್ರದ ಚಿತ್ರ-ಪ್ರತಿ-ಚಿತ್ರ, ಹಾಡು, ಪಾತ್ರ ಎಲ್ಲವನ್ನೂ ಅದೇ ರೀತಿಯಲ್ಲಿ ಒಂದು ಚೂರೂ ಶ್ರಮ ಇಲ್ಲದಂತೆ ಭಟ್ಟಿ ಇಳಿಸುವುದು. ಅಂದರೆ, ಮೂಲಕತೆಯಲ್ಲಿ ನಾಯಕನ ಎಡಭುಜದ ಮೇಲೆ ಶಲ್ಯ ಇದ್ದರೆ ಇಲ್ಲೂ ಅದೇ; ಅವನು ತಮಿಳು ಅಥವಾ ತೆಲುಗು ಮಾದರಿಯಲ್ಲಿ ಕಚ್ಚೆ ಪಂಚೆ, ಕೋಟು ಧರಿಸಿದ್ದರೆ ಇಲ್ಲೂ ಅದೇ; ಕೈಗೆ ಕಡಗ ತೊಟ್ಟಿದ್ದರೆ ಇಲ್ಲಿನ ಪಾತ್ರಧಾರಿಗೂ ಅದೇ.

ಇದು ಡಬ್ಬಿಂಗ್‌ನ ಇನ್ನೊಂದು ಮುಖವಷ್ಟೆ. ಯಾಕೆಂದರೆ ಮೂಲದ ಸೋಂಕು ಇಲ್ಲೂ ತಗುಲಿರುತ್ತದೆ. ಅಭಿನಯಿಸುವ ಕಲಾವಿದರಿಗಾಗಲಿ, ನಿರ್ದೇಶಕನಿಗಾಗಲಿ, ಛಾಯಾಗ್ರಾಹಕನಿಗಾಗಲಿ ಯಾವುದೇ ಬಗೆಯ ಸೃಜನಶೀಲ ಕೆಲಸವಿಲ್ಲ. ಸಂಭಾಷಣೆ ಬರೆಯುವವನೂ ಮೂಲದ ಕಾಪಿ ನೋಡಿ ನಕಲು ಮಾಡಬೇಕಷ್ಟೆ. ಐವತ್ತರ ದಶಕದಿಂದ ಈ ಪಿಡುಗು ಕನ್ನಡ ಚಿತ್ರರಂಗವನ್ನು ವ್ಯಾಪಿಸಿರುವುದನ್ನು ಸ್ವಯಂ ಚಲನಚಿತ್ರ ಸಾಹಿತಿಗಳೇ ಖಂಡಿಸಿದ್ದಾರೆ; ಖಂಡಿಸುತ್ತಿದ್ದಾರೆ.

ರೀಮೇಕ್ ಚಿತ್ರಗಳ ಕುರಿತು ಚಿತ್ರಸಾಹಿತಿ ಎಂ.ನರೇಂದ್ರಬಾಬು ಒಂದು ಕಡೆ ಹೀಗೆ ಬರೆಯುತ್ತಾರೆ. ಅವರ ಬರಹದಲ್ಲಿ ಎರಡೂ ಬಗೆಯ ರೀಮೇಕ್ ಚಿತ್ರಗಳ ಉದಾಹರಣೆ ಬರುತ್ತದೆ. ಒಂದು, ಬೇರೊಂದು ಭಾಷೆಯ ಚಿತ್ರದಿಂದ ಪ್ರಭಾವಿತವಾಗಿ ಅದನ್ನು ಆಧಾರವಾಗಿಟ್ಟುಕೊಂಡು ಚಿತ್ರ ತಯಾರಿಸುವವರು; ಎರಡು, ಯಥಾವತ್ತಾಗಿ ನಕಲು ಮಾಡುವವರು. ಮಹಾತ್ಮಾ ಪಿಕ್ಚರ್ಸ್‌ನವರು ನಿರ್ಮಿಸಿದ 'ಚಂಚಲಕುಮಾರಿ'ಯ ಬಗ್ಗೆ ಅವರ ಮಾತುಗಳು ಹೀಗಿವೆ :

''ನಾಟಕದಂತೆ ಚಿತ್ರದ ದೃಶ್ಯಗಳನ್ನು ಅಳವಡಿಸಿಕೊಂಡು ಚಿತ್ರೀಕರಿಸುತ್ತಿದ್ದುದನ್ನು ಬಿಟ್ಟು ಚಿತ್ರ ಮಾಧ್ಯಮಕ್ಕೊಂದೇ ಕಥಾ ನಿರೂಪಣೆ ಮಾಡತೊಡಗಿದುದು ಕನ್ನಡದಲ್ಲಿ ೧೯೫೩ರಲ್ಲಿ. ಮೈಸೂರು ಮಹಾತ್ಮಾ ಪಿಕ್ಚರ್ಸ್ ಅಧೀನದಲ್ಲಿ 'ಚಂಚಲಕುಮಾರಿ' ಎಂಬ ಚಿತ್ರದ ನಿರ್ಮಾಣ ಆರಂಭವಾಯಿತು. ಅದರ ಕಥೆಯನ್ನು ಜಪಾನಿ ಚಿತ್ರ 'ಯೂಕಿವಾರಿಸು' ಇಂದ ಎರವಲು ಪಡೆಯಲಾಗಿತ್ತು. ವಸ್ತು ತಪ್ಪಿಸಿಕೊಂಡ ಒಂದು ಮಗುವಿನ ಸುತ್ತ ಹೆಣೆಯಲಾಗಿತ್ತು. ಅದನ್ನು ಹೊಸ ದೃಷ್ಟಿಯಲ್ಲಿ ನೋಡುವುದು ಅನಿವಾರ್ಯವಾಗಿತ್ತು. ಆದರೂ ಹಾಡುಗಳನ್ನು ಸೇರಿಸದೆ ಇರಲಾಗಲಿಲ್ಲ...''

ಹಾಗೆಯೇ ನರೇಂದ್ರಬಾಬು ಅವರು 'ಅಣ್ಣ ತಂಗಿ' ಚಿತ್ರದ ಬಗ್ಗೆ ಹೀಗೆ ಬರೆಯುತ್ತಾರೆ:

''ಇತರ ಭಾಷಾ ಚಿತ್ರಗಳಿಗೆ ಪಾತ್ರಗಳ ತುಟಿಯ ಚಲನೆಗನುಗುಣವಾಗಿ ಕನ್ನಡ ಸಂಭಾಷಣೆಯನ್ನು ಹೊಂದಿಸುವ ವೃತ್ತಿಯು ಕನ್ನಡಪ್ರಿಯರ ಒಕ್ಕೊರಲಿನ ವಿರೋಧದಿಂದಾಗಿ ಬಹಳ ಹಿಂದೆಯೇ ನಿಂತುಹೋಗಿತ್ತು. ಇತರ ಭಾಷಾಚಿತ್ರಗಳ ಬಹುತೇಕ ಎಲ್ಲ ದೃಶ್ಯಗಳನ್ನು ಯಥಾವತ್ತಾಗಿ ಕನ್ನಡ ಕಲಾವಿದರನ್ನಿಟ್ಟು ಕನ್ನಡ ಚಿತ್ರವನ್ನು ಚಿತ್ರಿಸುವ ದಂಧೆ ೧೯೫೮ರ 'ಅಣ್ಣ ತಂಗಿ' ಚಿತ್ರದಿಂದ ಆರಂಭವಾಗಿತ್ತು. 'ಮಕ್ಕಳ್ಳೈ ಪೆಟ್ರ ಮಹರಾಸಿ' ಎಂಬ ಚಿತ್ರದ ಕನ್ನಡ ಅವತರಣಿಕೆ ಅದು...''

ಹೀಗೆ ಎರಡು ಬಗೆಯ ರೀಮೇಕ್ ಚಿತ್ರಗಳನ್ನು ಕನ್ನಡ ಚಿತ್ರರಂಗದ ಆರಂಭದ ದಿನಗಳಿಂದ ಪೋಷಿಸುತ್ತ ಬಂದ ಬಗೆಯನ್ನು ನರೇಂದ್ರಬಾಬು ನಿರ್ಭಿಡೆಯಿಂದ ದಾಖಲಿಸುತ್ತಾರೆ. ಮೊದಲನೆಯದಾದರೆ ಪರವಾಗಿಲ್ಲ ಎಂಬುದನ್ನು ಹೇಳುತ್ತ, ''ಕಲಾವಿದರನ್ನು ಆಯ್ಕೆ ಮಾಡುವ ಕೆಲಸ, ಪೂರ್ಣ ಚಿತ್ರದ ನಿರ್ಮಾಣ ಯೋಜನೆ, ಆರ್ಥಿಕ ಅಂದಾಜು, ನಿರ್ಮಾಣ ಕಾಲ ಪರಿಮಿತಿ, ಆ ಭಾಷೆಯಲ್ಲಿ ಆ ಚಿತ್ರಕ್ಕೆ ದೊರೆಯುವ ಯಶಸ್ಸಿನ ಭರವಸೆ ಈ ಎಲ್ಲ ಸೌಲಭ್ಯಗಳೂ ದೊರಕುವುದರಿಂದ ಈ ಕನ್ನಡ ಅವತರಣಿಕೆಗಳ ತಯಾರಿಕೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಾ ಬರುತ್ತಿದೆ. ಕಥೆ, ನಿರೂಪಣೆ, ತಯಾರಿಕೆ ಈ ದೃಷ್ಟಿಯಲ್ಲಿ ಅಂತಹ ಚಿತ್ರಗಳನ್ನು ಪರಿಗಣಿಸಬೇಕಾದ ಅವಶ್ಯಕತೆಯೇ ಇಲ್ಲ....''

ಕನ್ನಡದ ಖ್ಯಾತ ನಿರ್ದೇಶಕರಲ್ಲೊಬ್ಬರಾದ ವೈ.ಆರ್.ಸ್ವಾಮಿ ರೀಮೇಕ್ ವಿರುದ್ಧ ಪತ್ರಿಕೆಗಳು ಬರೆಯುವುದನ್ನು ಸಹಿಸುತ್ತಿರಲಿಲ್ಲವಂತೆ. 'ಕನಕದಾಸ'ದಂಥ ರಾಷ್ಟ್ರಪ್ರಶಸ್ತಿ ವಿಜೇತ ಚಿತ್ರಗಳನ್ನು ನೀಡಿದ ಸ್ವಾಮಿ, 'ಜೇನುಗೂಡು', 'ಮುರಿಯದ ಮನೆ', 'ವಾತ್ಸಲ್ಯ'ಗಳಂಥ ರೀಮೇಕ್ ಚಿತ್ರಗಳನ್ನೇಕೆ ಮಾಡಿದರು ಎಂಬುದು ಪತ್ರಿಕೆಗಳಲ್ಲಿ ಚರ್ಚಿತವಾಗುತ್ತಿದ್ದರೆ ಅವರಿಗೆ ಸಹ್ಯವಾಗುತ್ತಿರಲಿಲ್ಲ. ''ಚಲನಚಿತ್ರ ಮಾಡುವುದೇ ವ್ಯಾಪಾರಕ್ಕೆ. ಎಂದ ಮೇಲೆ ಬೇರೆ ಭಾಷೆಯಿಂದ ಏಕೆ ಕನ್ನಡಕ್ಕೆ ತರಬಾರದು ? ಇದರಿಂದ ಪ್ರಾದೇಶಿಕ ಚಿತ್ರೋದ್ಯಮದ ವ್ಯಾಪಾರಕ್ಕೆ ಸುಭದ್ರ ತಳಹದಿ ಸಿಗುತ್ತದೆ'' ಎನ್ನುತ್ತ ಎ.ವಿ.ಮೇಯಪ್ಪ ಚೆಟ್ಟಿಯಾರ್, ಎಸ್.ಎಸ್.ವಾಸನ್, ನಾಗಿರೆಡ್ಡಿಯವರುಗಳನ್ನು ಉದಾಹರಣೆಯಾಗಿ ನೀಡಿ, ''ಅವರುಗಳು ವಿವಿಧ ಭಾಷೆಗಳಿಂದ ಚಿತ್ರ ಮಾಡಿಯೇ ಹಣ ಮಾಡಿದ್ದಾರೆ. ಇದರಿಂದಲೇ ಮದರಾಸಿನ ಚಿತ್ರೋದ್ಯಮ ಎತ್ತರಕ್ಕೇರಿದ್ದು. ಬಂಗಾಳಿ, ಮರಾಠಿ ಬಿಟ್ಟರೆ ಬೇರೆಲ್ಲ ಭಾಷೆಗಳಲ್ಲಿ ರೀಮೇಕ್ ಇದ್ದೇ ಇದೆ. ಎಲ್ಲಾ ಕಾಲಕ್ಕೂ ಅದೇ ಆಗಲಾರದು. ಸದಾ ಬದಲಾವಣೆ ಬಯಸುವ ಪ್ರೇಕ್ಷಕ ಯಾವುದನ್ನೂ ಹಾಗೇ ಬಿಡಲಾರ'' ಎಂದು ೧೯೬೦ನೇ ಇಸವಿಯಲ್ಲೇ ಖಾರವಾಗಿ ಪ್ರತಿಕ್ರಿಯಿಸಿದ್ದರು.

ಈ ಸನ್ನಿವೇಶ ಯಾವುದೇ ರೀತಿಯಲ್ಲೂ ಬದಲಾಗಲಿಲ್ಲ. ನಿರ್ದೇಶಕರು, ನಿರ್ಮಾಪಕರು ಅಂದು ವೈ.ಆರ್.ಸ್ವಾಮಿಗಳು ಕೇಳಿದ ಪ್ರಶ್ನೆಯನ್ನೇ ಇನ್ನಷ್ಟು ಗರಂ ಆಗಿ ಕೇಳುತ್ತಲೇ ಬಂದರು. ಅದಿರಲಿ, ಆ ಕಾಲದಲ್ಲಿ ಕಲಾವಿದರು ಈ ತಂಟೆಗೆ ಬರುತ್ತಿರಲಿಲ್ಲ. ಆದರೆ ಕ್ರಮೇಣ ತಮ್ಮ ಚಿತ್ರಗಳ ವೈಭವಕ್ಕೆ, ಅದ್ದೂರಿಗೆ ಕಲಾವಿದರೂ ರೀಮೇಕ್ ಚಿತ್ರಗಳ ಪರ ನಿಂತರು.

ಸಿನಿಮಾ ಮತ್ತು ಸಾಹಿತ್ಯ - ಅಂತರಶಿಸ್ತಿನ ಅಧ್ಯಯನ

ಸಿನಿಮಾ ಒಂದು ಕಲೆ ಹೇಗೋ ಅದೇ ಸಂದರ್ಭದಲ್ಲಿ ಹಲವು ಕಲೆಗಳ ಸಂಯೋಜನೆ ಕೂಡ ಹೌದು. ಇಲ್ಲಿ ಬಳಕೆಯಾಗುವ ಸಾಹಿತ್ಯ, ಸಂಗೀತ, ಛಾಯಾಗ್ರಹಣ ಇವೆಲ್ಲ ಸ್ವತಂತ್ರ ಕಲೆಗಳೂ ಹೌದು. ಹೀಗೆ ಕಲೆಗಳ ಸಮ್ಮಿಲನ ಎಂಬ ನೆಲೆಯಲ್ಲೇ ಸತ್ಯಜಿತ್‌ರಾಯ್ ಸಿನಿಮಾವನ್ನು ಸಾಹಿತ್ಯಕ್ಕಿಂತ ಸಂಗೀತಕ್ಕೆ ಹೆಚ್ಚು ಹತ್ತಿರವಾದ ಕಲೆ ಎಂದಿದ್ದರು. ಇದು ಇನ್ನೊಂದು ನೆಲೆಯಲ್ಲಿ ಸಿನಿಮಾವನ್ನು ಅಮೂರ್ತ ಕಲೆ ಎಂಬ ಅರ್ಥವನ್ನು ಹೊರಡಿಸುತ್ತದೆ. ಈ ಅರ್ಥವನ್ನೇ ಹೊಸ ಅಲೆ ಚಿತ್ರಗಳಲ್ಲಿ ತೊಡಗಿದವರು ಪ್ರತಿಪಾದಿಸುತ್ತಾರೆ. ಆದರೆ ಅದು ಸಂಪೂರ್ಣ ಸತ್ಯವಲ್ಲ, ಎಲ್ಲ ಕಲೆಗಳಿಗೂ ಮೂರ್ತ ಮತ್ತು ಅಮೂರ್ತ ಎಂಬ ಎರಡು ನೆಲೆಗಳಿವೆ. ಮೂರ್ತ ಕಲೆ ಎಂದೇ ವ್ಯಾಖ್ಯಾನಿಸಲ್ಪಡುವ ಸಾಹಿತ್ಯಕ್ಕೆ ಕೂಡ ಅಮೂರ್ತ ಮುಖವಿದೆ. ನವ್ಯಸಾಹಿತ್ಯ ಈ ಅಮೂರ್ತ ನೆಲೆಯಲ್ಲೇ ಹುಟ್ಟಿದ್ದು.

ಸಿನಿಮಾ ಮತ್ತು ಸಾಹಿತ್ಯ ಮೂಲತಃ ಸಂಧಿಸುವ ಒಂದು ಭಾಷೆ. ಸಾಹಿತ್ಯಕ್ಕೆ ಭಾಷೆಯೇ ಸರ್ವಸ್ವ. ಅದರ ಅಭಿವ್ಯಕ್ತಿ ಸಾಧ್ಯತೆಯೆಲ್ಲ ಭಾಷೆಯ ಮೂಲಕವೇ ಆಗಬೇಕು. ಅದು ಕಥೆ ಕಟ್ಟುವ ಜಾಗ ಕೂಡ ಭಾಷೆಯೇ. ಸಿನಿಮಾದಲ್ಲಿ ಭಾಷೆ ಕೆಲಸ ಮಾಡುವುದು ಸಂಭಾಷಣೆಗಳ ನೆಲೆಯಲ್ಲಿ. ಈ ವಾದದ ಜಾಡನ್ನೇ ಹಿಡಿದರೆ ಸಿನಿಮಾ ಮತ್ತು ಸಾಹಿತ್ಯದ ಸಂಬಂಧ ತುಸು ದೂರಕ್ಕೇ ಹೋಗಬಹುದು. ಆದರೆ ವಾಸ್ತವ ಇಷ್ಟು ಸರಳವಾಗಿಲ್ಲ. ಕನ್ನಡವೂ ಸೇರಿದಂತೆ ಭಾರತೀಯ ಭಾಷೆಗಳ ಸಿನಿಮಾ ಆಕೃತಿ ಅವಲಂಬಿಸಿರುವುದು ಸಾಹಿತ್ಯ ರೂಪವನ್ನೇ. ನಾಟಕದಿಂದ ಪ್ರಭಾವಿತವಾದ ಕಾಲದಿಂದಲೂ ತೀರ ಇತ್ತೀಚಿನವರೆಗೂ ಇದು ನಿಜ. ಈ ಚಿತ್ರಗಳು ವಸ್ತುವನ್ನು ನಿರ್ವಹಿಸುವ ಕ್ರಮ ಮೂಲತಃ ಬಂದಿದ್ದು ಸಾಹಿತ್ಯದಿಂದ. ಎಷ್ಟೋ ಕಡೆ ಸಂಭಾಷಣೆಗಳೇ ಚಿತ್ರಗಳ ಕೇಂದ್ರವನ್ನು ನಿರ್ಧರಿಸುತ್ತವೆ. ಎಷ್ಟೋ ಕಡೆ ಚಲನಚಿತ್ರಗಳೂ ಸಾಹಿತ್ಯದ ದೃಶ್ಯರೂಪಗಳಂತೆ ಕಾಣುತ್ತವೆ. ಈ ಅಂಶವನ್ನು ಪ್ರಧಾನವಾಗಿರಿಸಿಕೊಂಡು ಭಾರತೀಯ ಸಿನಿಮಾಗಳ ವಿಶಾಲ ಹಿನ್ನೆಲೆಯಲ್ಲಿ ಕನ್ನಡ ಚಿತ್ರಗಳನ್ನು ಎರಡು ಭಾಗಗಳನ್ನಾಗಿ ವಿಭಜಿಸಬಹುದು.

೧) ನೇರ ನಿರೂಪಣಾ ಚಿತ್ರಗಳು (Narrative Films)

೨) ಪರೋಕ್ಷ ನಿರೂಪಣಾ ಚಿತ್ರಗಳು (Non-Narrative Films)

ಈ ಎರಡರಲ್ಲೂ ಸಾಹಿತ್ಯದ ಸಂಬಂಧ ಬೇರೆ ಬೇರೆ ರೀತಿಯಾಗಿರುವುದರಿಂದಲೇ ಪ್ರತ್ಯೇಕತೆಯ ಅಗತ್ಯ ಕಾಣುತ್ತಿರುವುದು. ಕನ್ನಡದ ಮಟ್ಟಿಗೆ ಈ ಎರಡೂ ಪ್ರಕಾರಕ್ಕೂ ಸಾಹಿತ್ಯದ ಗಾಢ ಸಂಬಂಧವಿದೆ. ಎರಡೂ ಸಾಹಿತ್ಯದ ಬೇರೆ ಬೇರೆ ಪರಿಕಲ್ಪನೆಗಳನ್ನು ಪಡೆದುಕೊಂಡೇ ತಮ್ಮ ಆಕೃತಿಯನ್ನು ನಿರ್ಮಾಣ ಮಾಡಿಕೊಂಡಿವೆ. ಈ ಕುರಿತು ಸ್ಥೂಲವಾಗಿ ಹೀಗೆ ಚರ್ಚಿಸಬಹುದು.

ಕಥಾಪ್ರಧಾನವಾದ ಅಂದರೆ ನೇರ ನಿರೂಪಣಾ ಚಿತ್ರಗಳಲ್ಲಿ ಭಾಷೆಯ ಬಳಕೆಗೇ ಒತ್ತು. ಇಲ್ಲಿ ಬಳಕೆಯಾಗುವ ಭಾಷೆ ಹೇಗಿರಬೇಕು ಎಂಬುದರ ಕುರಿತು ಎಂದಿನಿಂದಲೂ ಚರ್ಚೆ ನಮ್ಮಲ್ಲಿ ನಡೆದುಕೊಂಡು ಬಂದಿದೆ. ಪಾರ್ಸಿ ರಂಗಭೂಮಿ ನಿರ್ಮಾಣಗೊಂಡಾಗ

ಸಂಸ್ಕೃತಭೂಯಿಷ್ಠವಾದ ಗ್ರಂಥಸ್ಥ ಕನ್ನಡವೊಂದು ಪ್ರಧಾನ ಪಾತ್ರಗಳ ಸಂಭಾಷಣೆಯಲ್ಲಿ ಬಳಕೆಯಲ್ಲಿತ್ತು. ಹಾಸ್ಯ ಮುಂತಾದ ಎರಡನೇ ಹಂತದ ಪಾತ್ರಗಳು ಸಾಮಾನ್ಯ ಜನರ ಆಡುಮಾತುಗಳನ್ನೇ ಬಳಸುತ್ತಿದ್ದವು. ಇದೇ ಪದ್ಧತಿ ಆರಂಭಿಕ ಚಲನಚಿತ್ರಗಳಲ್ಲೂ ಜಾರಿಗೆ ಬಂದಿತು. ಆರಂಭಿಕ ಪೌರಾಣಿಕ, ಭಕ್ತಿಚಿತ್ರಗಳು ಮುಂತಾದ ಸಮಕಾಲೀನ ವಸ್ತುವನ್ನು ಹೊಂದಿಲ್ಲದ ಚಿತ್ರಗಳು ಈ ಕುರಿತು ಅಷ್ಟಾಗಿ ತಲೆ ಕೆಡಿಸಿಕೊಳ್ಳಬೇಕಾಗಲಿಲ್ಲ. ನಿಜವಾದ ಸಮಸ್ಯೆ ಆರಂಭವಾಗಿದ್ದು ಸಾಮಾಜಿಕ ಚಿತ್ರಗಳು ತೆರೆಗೆ ಬಂದಾಗ. ಇಲ್ಲಿನ ಪಾತ್ರಗಳು ಆರಂಭದಲ್ಲಿ ನಾಟಕೀಯ ಶೈಲಿಯನ್ನೇ ಬಳಸುತ್ತಿದ್ದರೂ ಕ್ರಮೇಣ ಚಿತ್ರರಂಗದಲ್ಲಿ ತೊಡಗಿದವರಿಗೇ ಇದು ಅಸಹಜ ಅನ್ನಿಸಿ ಪರಿಹಾರಕ್ಕಾಗಿ ಸಾಹಿತ್ಯದತ್ತ ಮುಖ ಮಾಡಿದರು. ಸಾಹಿತ್ಯದಲ್ಲಿ ಅಷ್ಟು ಹೊತ್ತಿಗಾಗಲೇ ಉತ್ತರವೂ ಸಿದ್ಧವಾಗಿತ್ತು. ನವೋದಯ ಸಾಹಿತ್ಯದಲ್ಲಿ ಈ ಕುರಿತು ಪ್ರಯೋಗಗಳು ಆರಂಭವಾಗಿದ್ದವು. ಇಂಗ್ಲಿಷ್ ಮತ್ತು ಸಂಸ್ಕೃತಗಳೆರಡರ ಪ್ರಭಾವದಿಂದ ರೂಪುಗೊಂಡ ಭಾಷೆ ಆಗ ನವೋದಯದ ಪ್ರಧಾನ ಬರಹಗಾರರಲ್ಲಿ ಕಂಡುಬರುತ್ತಿತ್ತು. ಡಾ|ಶಿವರಾಮಕಾರಂತರು ಸಾಹಿತ್ಯದಲ್ಲಿ ಪ್ರಾದೇಶಿಕ ಸೊಗಡನ್ನು ಬಳಸುವುದನ್ನು ಸ್ಪಷ್ಟವಾಗಿ ವಿರೋಧಿಸುತ್ತಿದ್ದರು. ಕುವೆಂಪು ಅವರ ಪ್ರಧಾನ ಪಾತ್ರಗಳು ಇಂತಹ ಭಾಷೆಯನ್ನೇ ಬಳಸುತ್ತಿದ್ದವು. ಪ್ರಾದೇಶಿಕತೆ ಕೆಲವು ಪಾತ್ರಗಳಿಗೇ ಸೀಮಿತವಾಗಿತ್ತು. ಇಂತಹ ಧೋರಣೆ ಮಾಸ್ತಿ, ಕೆ.ಎಸ್.ನರಸಿಂಹಸ್ವಾಮಿ, ಪು.ತಿ.ನ. ಅವರಲ್ಲಿ ಕಾಣಬಹುದು. ಬೇಂದ್ರೆಯರ ನೇತೃತ್ವದಲ್ಲಿ ಇನ್ನೊಂದು ಬಳಗ ಉತ್ತರ ಕರ್ನಾಟಕದ ಸೊಗಡನ್ನು ಬಳಸಲು ಆರಂಭಿಸಿದ್ದರೂ ಕನ್ನಡ ಚಿತ್ರರಂಗದ ಕೇಂದ್ರ ಹಳೇ ಮೈಸೂರು ಪ್ರಾಂತ್ಯಗಳಲ್ಲೇ ಇದ್ದಿದ್ದರಿಂದ ಅವರ ಪ್ರಭಾವ ಕಾಣಲಿಲ್ಲ. ಹೀಗಾಗಿ ೫೦ ಮತ್ತು ೬೦ರ ದಶಕದ ಆರಂಭದ ಬಹುತೇಕ ಚಿತ್ರಗಳಲ್ಲಿ ಈ ನವೋದಯದಿಂದ ಪ್ರೇರಣೆ ಪಡೆದ ಭಾಷೆ ಬಳಕೆಯಾಗಿರುವುದು ಕಾಣಬಹುದು. ಒಂದೇ ಪ್ರಮುಖ ವ್ಯತ್ಯಾಸವೆಂದರೆ ಚಿತ್ರರಂಗದಲ್ಲಿ ಈ ಭಾಷೆ ಬಳಕೆಯಾದಾಗ ತುಸು ನಾಟಕೀಯತೆ ಬೆರೆಯುತ್ತಿತ್ತು.

೬೦ರ ದಶಕದಲ್ಲಿ ಚಿತ್ರರಂಗಕ್ಕೆ ನೇಟಿವಿಟಿಯ ಸ್ಪರ್ಶ ಸಿಕ್ಕಿತು. ಆಗ ಚಿತ್ರರಂಗದಲ್ಲಿ ತಮ್ಮನ್ನು ತೊಡಗಿಸಿಕೊಂಡ ಕು.ರ.ಸೀತಾರಾಮಶಾಸ್ತ್ರಿ, ಜಿ.ವಿ.ಅಯ್ಯರ್, ಸೋರಟ್ ಅಶ್ವತ್ಥ್ ಅವರು ಕನ್ನಡ ಸಾಹಿತ್ಯದಲ್ಲಿ ನಡೆಯುತ್ತಿದ್ದ ಪ್ರಯೋಗಗಳನ್ನು ಗಮನಿಸುತ್ತಿದ್ದರು. ಅಷ್ಟು ಹೊತ್ತಿಗಾಗಲೇ ಶಿಷ್ಟ ಭಾಷೆಯನ್ನು ಬ್ರೇಕ್ ಮಾಡಿದ ಕೈಲಾಸಂ ನಾಟಕಗಳು ಜನಪ್ರಿಯವಾಗಿದ್ದವು. ಇವರ ಜೊತೆಗೆ ಅ.ನ.ಕೃ., ತ.ರಾ.ಸು. ಅವರಂತಹ ಪ್ರಗತಿಶೀಲರು ಚಿತ್ರರಂಗ ಪ್ರವೇಶಿಸಿದ್ದರು. ಇದೆಲ್ಲದರ ಜೊತೆಗೆ ಆಗ ಸಾರ್ವತ್ರಿಕ ಶಿಕ್ಷಣದ ವ್ಯಾಪಕ ಅನುಷ್ಠಾನ ಕಂಡು ಭಾಷೆ ಹಲವು ವರ್ಗದವರ ಸ್ವತ್ತಾಯಿತು. ಈ ಎಲ್ಲ ವರ್ಗದವರೂ ತಂತಮ್ಮ ಪ್ರಾದೇಶಿಕ ಸೊಗಡನ್ನು ಭಾಷೆಗೆ ಕೊಟ್ಟರು. ಇದರಿಂದ ಕನ್ನಡ ಸುಲಭಗ್ರಾಹ್ಯವೂ ಸರ್ವ ವ್ಯಾಪಕವೂ ಆದ ಆಯಾಮವನ್ನು ಪಡೆಯಿತು. ಈ ಆಯಾಮವೇ ಚಿತ್ರರಂಗದ ಭಾಷೆಯಾಗಿದ್ದು ಒಂದು ಸರಳ ಕ್ರಿಯೆ ಕೂಡ ಆಗಿತ್ತು. ಇಂತಹದೊಂದು ಭಾಷೆ ಪ್ರಧಾನವಾಹಿನಿಯಾಗಿ ಪ್ರವಹಿಸುತ್ತಿದ್ದರೆ ಪ್ರಾದೇಶಿಕ ವೈಶಿಷ್ಟ್ಯ ತರುವ ಪ್ರಯತ್ನವೂ ಅಲ್ಲಲ್ಲಿ ನಡೆಯುತ್ತಿತ್ತು. 'ಅಣ್ಣ ತಂಗಿ', 'ಚಂದವಳ್ಳಿಯ ತೋಟ' ಇಂತಹ ಚಿತ್ರಗಳಲ್ಲಿ ಮೈಸೂರು ಪ್ರಾಂತ್ಯದ ಪ್ರಾದೇಶಿಕ ಸೊಗಡು ಸೊಗಸಾಗಿಯೇ ಬಂದಿತು. ಆದರೆ ಈ ಪ್ರಯೋಗ ಹಳೇ ಮೈಸೂರು ಪ್ರಾಂತ್ಯಕ್ಕಷ್ಟೇ ಸೀಮಿತವಾಯಿತು. ಕಲಾವಿದರಲ್ಲಿ ಉತ್ತರ ಕರ್ನಾಟಕವೂ ದಕ್ಷಿಣ ಕನ್ನಡವೂ ಆದರವರ ಭಿನ್ನ ಹಿನ್ನೆಲೆ ಹೊಂದಿದ್ದರೆ ಅಲ್ಲಲ್ಲಿ ಅವರ ಸ್ವ-ಸಂಭಾಷಣೆಗೆ ಅವಕಾಶ ಕೊಟ್ಟ (ಹನುಮಂತಾಚಾರ್ ಉದಾಹರಣೆಯನ್ನು ಇದಕ್ಕೆ ನೀಡಬಹುದು) 'ಕಿತ್ತೂರು ಚೆನ್ನಮ್ಮ' 'ಸಂಗೊಳ್ಳಿ ರಾಯಣ್ಣ' ಇಂತಹ ಉತ್ತರ ಕರ್ನಾಟಕದಲ್ಲಿ ನಡೆಯುವ ಕಥೆಗಳನ್ನು ಆಯ್ದುಕೊಂಡಾಗಲೂ ಅಲ್ಲಿನ ಭಾಷೆ ಬಳಸಲು ಸಂಬಂಧಪಟ್ಟವರು ಹಿಂಜರಿದರು. ಇದಕ್ಕೆ ಬಹಳ ಮುಖ್ಯವಾಗಿ ತಲುಪುವ ಬಿಂದುವಿನ ಕುರಿತು ಇದ್ದ ಭಯವೇ ಕಾರಣ. ಈ ಅಂಶ ಕೇವಲ ಭಾಷೆಗೆ ಮಾತ್ರ ಸೀಮಿತವಾಗದೆ ಸಂಪ್ರದಾಯ-ಆಚರಣೆಗಳಿಗೂ ವ್ಯಾಪಿಸಿದ್ದನ್ನು ಗುರುತಿಸಬಹುದು. ಅಂದಿನ ಚಿತ್ರಗಳಲ್ಲಿ ಬಳಕೆಯಾದ ಸಂಪ್ರದಾಯ-ಆಚರಣೆ ವಿವರಗಳು ಹಳೇ ಮೈಸೂರು ಪ್ರಾಂತ್ಯಕ್ಕೆ ಸಂಬಂಧಿಸಿದವಾಗಿದ್ದವು.

ಚಿತ್ರರಂಗದ ಆರಂಭಿಕ ಹಂತದಲ್ಲಿ ಆಂಗ್ಲ ಮಿಶ್ರಿತವಾಗಿ ತಪ್ಪು ತಪ್ಪು ಕನ್ನಡ ಮಾತನಾಡುವ ಬ್ರಿಟಿಷ್ ಪಾತ್ರಧಾರಿಗಳನ್ನು ಕಂಡಿತ್ತು. ಮೂಲತಃ ನಾಟಕದ ನೆಲೆಯಿಂದ ಬಂದ ಇಂತಹ ಪಾತ್ರಗಳು ಅಂದಿನ ದಿನಗಳಲ್ಲಿ ಒಂದು ವಿಶಿಷ್ಟ ಮಾದರಿಯನ್ನು ನಿರ್ಮಿಸಿದ್ದವು. ಇಂಗ್ಲಿಷ್ ಶಿಕ್ಷಣ ವ್ಯಾಪಕವಾಗುತ್ತಾ ಹೋದಂತೆ ಇದಕ್ಕೆ ವಿರುದ್ಧವಾಗಿ ಇಂಗ್ಲಿಷ್ ಬಳಕೆಯಲ್ಲಿ ಬುದ್ಧಿವಂತಿಕೆಯ ಲಕ್ಷಣ ಕಾಣಲು ಆರಂಭಿಸಿತು. ೬೦ರ ದಶಕದ ಚಿತ್ರಗಳಲ್ಲಿ ಕಲಿತ ಗಂಡು-ಹೆಣ್ಣುಗಳು ಕನ್ನಡದ ನಡುವೆ ಇಂಗ್ಲಿಷ್ ಬಳಸುತ್ತಿದ್ದರು. ಅಲ್ಲಲ್ಲಿ ದೀರ್ಘ ಇಂಗ್ಲಿಷ್ ವಾಕ್ಯಗಳೂ ಇರುತ್ತಿದ್ದವು. ಆದರೆ ಇದು ಕನ್ನಡತನವನ್ನು ಕೆಡಿಸುವ ಮಟ್ಟದಲ್ಲಿರಲಿಲ್ಲ. ''ಕೆಂಪು ರೋಜಾ ಮೊಗದವಳೆ...'' ಗೀತೆಯಲ್ಲಿ "Oh dear / please here / come near / my lover..." ಮಾದರಿ ಪ್ರಯೋಗವಿತ್ತಲ್ಲ, ಇದಕ್ಕೆ ಸಮೀಪವಾದ ಕ್ರಮದಲ್ಲಿ ಇಲ್ಲಿ ಇಂಗ್ಲಿಷ್ ಬಳಕೆಯಾಗಿತ್ತು. ಇಂತಹ ಹಿತ-ಮಿತವಾದ ಬಳಕೆ ಒಂದು ಮಾದರಿ ಅಥೆಂಟಿಸಿಟಿಯನ್ನು ಚಿತ್ರಕ್ಕೆ ತಂದುಕೊಟ್ಟಿತ್ತೆಂದರೆ ತಪ್ಪಲ್ಲ. ಈ ಮೂಲಕ ಆಗ ತಾನೆ ವಿದ್ಯಾವಂತರಾಗುತ್ತಿದ್ದ ಒಂದು ವರ್ಗವನ್ನು ಒಲಿಸಿಕೊಳ್ಳುವ ಹಂಚಿಕೆ ಇತ್ತು. ಒಟ್ಟಾಗಿ ಮಧ್ಯಮವರ್ಗ ಉಪಯೋಗಿಸಲು ಆರಂಭಿಸಿದ್ದ ಭಾಷೆ ಆ ಕಾಲದ ಸಿನಿಮಾ ಭಾಷೆಯಾಯಿತು ಎಂದು ವಿಶ್ಲೇಷಿಸಬಹುದು. ಇಷ್ಟಾದರೂ ೬೦ರ ದಶಕದ ಆರಂಭಕ್ಕೂ ಮತ್ತು ಅಂತ್ಯಕ್ಕೂ ಭಾಷೆ ಹೆಚ್ಚು ಸರಳವಾಗಿತ್ತು. ಮಣ್ಣಿನ ಗುಣ ಹೊಂದುವ ಉತ್ಸಾಹ ಕೆಲವೆಡೆ ಶೈಥಿಲ್ಯಕ್ಕೆ ಕಾರಣವಾಗಿತ್ತು.

ಪ್ರಗತಿಶೀಲ ಸಾಹಿತ್ಯ ನವೋದಯವನ್ನು ಗಂಭೀರವಾಗಿ ಪ್ರಶ್ನಿಸಿದ ಅಂಶಗಳಲ್ಲಿ ಭಾಷೆ ಕೂಡ ಒಂದು. ಆದರೆ ಪ್ರಗತಿಶೀಲರು ಅದಕ್ಕೆ ಸೂಕ್ತ ಪರ್ಯಾಯವನ್ನು ನಿರ್ಮಿಸದೆ ಹೋದರು. ತ.ರಾ.ಸು., ಅ.ನ.ಕೃ. ಇಂತಹ ಬರಹಗಾರರು ಭಾಷೆಯ ನಾಟಕೀಯತೆಗೆ ಗಮನ ನೀಡಿದರೆ ನಿರಂಜನ, ಚದುರಂಗ, ಬಲ್ಲಾಳರಂತಹ ಬರಹಗಾರರು ಗಾಂಭೀರ್ಯಕ್ಕೆ ಗಮನ ನೀಡಿದರು. ಇವರಲ್ಲಿ ತ.ರಾ.ಸು., ಅ.ನ.ಕೃ. ಚಿತ್ರರಂಗದಲ್ಲಿ ಹೆಚ್ಚಾಗಿ ತೊಡಗಿಕೊಂಡಿದ್ದರಿಂದ ಆ ಹೊತ್ತಿಗಾಗಲೇ ಚಿತ್ರರಂಗದಲ್ಲಿ ಸ್ಥಾಯಿಯಾಗಿದ್ದ ನಾಟಕೀಯತೆಯಲ್ಲಿ ಬದಲಾವಣೆ ಕಾಣಲಿಲ್ಲ. ಚದುರಂಗರ 'ಉಯ್ಯಾಲೆ'ಯನ್ನು ಲಕ್ಷ್ಮೀನಾರಾಯಣ್ ಚಿತ್ರವಾಗಿಸಿದರು. 'ಸರ್ವಮಂಗಳ'ವನ್ನು ಸ್ವತಃ ಚದುರಂಗರೇ ತೆರೆಗೆ ತಂದರು. ಆದರೂ ಮೂಲ ಕಾದಂಬರಿಯಲ್ಲಿದ್ದ ಭಾಷೆಯ ಗಾಂಭೀರ್ಯ ಚಿತ್ರದಲ್ಲಿ ಬರಲಿಲ್ಲ. ಆ ಭಾಷೆ ಚಿತ್ರಮಾಧ್ಯಮಕ್ಕೆ ಹೊಂದದು ಎಂಬ ಭಾವನೆ ಇಬ್ಬರನ್ನೂ ಕಾಡಿರಬೇಕು. ಹೀಗೆ 'ಮಿಸ್ ಲೀಲಾವತಿ'ಯನ್ನು ಚಿತ್ರವಾಗಿಸುವಾಗ ಕಲಿತ ಹೆಣ್ಣು ಲೀಲಾವತಿಯ ಭಾಷೆಯ ಬಳಕೆಯಲ್ಲಿ ಕಾಣಬೇಕಿದ್ದ ಕ್ರಮಬದ್ಧತೆ ಕಾಣಲಿಲ್ಲ. ಇದರಿಂದ ಅವಳ ಚಿಂತನಾಕ್ರಮದ ತಾತ್ವಿಕತೆಗೂ ಭಾಷೆಗೂ ಹೊಂದಾಣಿಕೆ ಕಾಣದೆ ಬಿಕ್ಕಟ್ಟು ಮೂಡಿದ್ದನ್ನು ಕಾಣಬಹುದು.

ನವ್ಯಸಾಹಿತ್ಯ ತನ್ನ ಪ್ರಯೋಗಶೀಲತೆಯನ್ನು ಕಂಡುಕೊಂಡ ನೆಲೆಗಳಲ್ಲಿ ಭಾಷೆ ಬಹಳ ಪ್ರಮುಖವಾದದ್ದು. ಸಾಹಿತ್ಯ ಅಭಿವ್ಯಕ್ತಿ ಕ್ರಮದಲ್ಲಿ ಭಾಷೆಗೆ ಅಗತ್ಯಕ್ಕಿಂತ ಹೆಚ್ಚು ಮಹತ್ವ ನೀಡಿ ವಾಚ್ಯವಾಗುತ್ತಿದೆ ಎಂಬ ಭಯ ಆ ಪಂಥದ ರೂವಾರಿಗಳಿಗೆ ಕಾಡುತ್ತಿತ್ತು. ಹೀಗಾಗಿ ಸರಳ ನೆಲೆಯನ್ನು ಬದಲಿಸಿ ಪ್ರತಿಮೆಗಳ ಸಂಯೋಜನೆಯ ಮೂಲಕ ಹೊಸ ಹಾದಿಯನ್ನು ನವ್ಯಸಾಹಿತ್ಯ ತುಳಿಯಿತು. ನವ್ಯಸಾಹಿತ್ಯ ಕಟ್ಟಿಕೊಟ್ಟ ಪ್ರತಿಮಾ ವಿಧಾನವನ್ನು ಹೊಸ ಅಲೆ ಚಿತ್ರಗಳು ಅಳವಡಿಸಿಕೊಂಡವು. ಈ ಕುರಿತು ಮುಂದೆ ಚರ್ಚಿಸಲಾಗಿದೆ. ಆದರೆ ನವ್ಯಸಾಹಿತ್ಯ ಭಾಷೆಯ ಬಳಕೆ ಕುರಿತು ಇಟ್ಟುಕೊಂಡ ಧೋರಣೆಗಳು ಪ್ರಧಾನ ಸಾಹಿತ್ಯಕ್ಕೆ ಪ್ರವೇಶಿಸಿದಾಗ ಭಾಷೆಯ ಬಳಕೆ ಕುರಿತ ಸಂಯಮ ವಿಸ್ತಾರಗೊಂಡು ಭಾಷೆ ಬಳಸುವ ಕ್ರಮಕ್ಕೊಂದು ಕಡಿವಾಣ ಬಿದ್ದಿತು. 'ಸಾಕ್ಷಾತ್ಕಾರ' 'ಸೋತು ಗೆದ್ದವಳು' 'ಬಂಗಾರದ ಮನುಷ್ಯ'ದಂತಹ ಚಿತ್ರಗಳ ಹೊತ್ತಿಗಾಗಲೇ ಇಂತಹ ಸಂಯಮ ಕಾಣಲು ಆರಂಭಿಸಿತ್ತು. ಎರಡನೆಯದು ನವೋದಯ ಸಾಹಿತ್ಯ ಯಾವುದನ್ನು ಅಭಿವ್ಯಕ್ತಿಸಬಾರದು ಎಂದು ನಂಬಿತ್ತೋ ಅದನ್ನು ನವ್ಯಸಾಹಿತ್ಯ ಮುಕ್ತವಾಗಿಸಿತು. ಕಾಮದ ಕುರಿತ ನವ್ಯಸಾಹಿತ್ಯದ ಧೋರಣೆ ಹೊಸ ಅಲೆ ಚಿತ್ರಗಳಿಗಿಂತ ಪ್ರಧಾನ ಚಿತ್ರಗಳಲ್ಲಿ ಎದ್ದು ಕಾಣುತ್ತದೆ. ಅದು ಭಾಷೆಯ ಮಟ್ಟಿಗೂ ಕಾಣಿಸಿತು. ಹೀಗೆಂದ ಮಾತ್ರಕ್ಕೆ ಇದು ಹೊಸ ಬೆಳವಣಿಗೆಯೇನಲ್ಲ. ಅಶ್ಲೀಲ, ದ್ವಂದ್ವಾರ್ಥಗಳು ಹಿಂದೆ ಕೂಡ ಅಲ್ಲಲ್ಲಿ ಕಂಡುಬರುತ್ತಿದ್ದವು. ಆದರೆ ನೇರವಾಗಿ ಭಾಷೆಯ ಮೂಲಕ ಅಭಿವ್ಯಕ್ತಿಸುವುದು - ಅದೂ ಇಂದ್ರಿಯಗಮ್ಯ ವಿವರಗಳೊಂದಿಗೆ - ಈ ಕಾಲದ ಬೆಳವಣಿಗೆ. ಇಂತಹ ಸಂದರ್ಭದಲ್ಲಿ ನವ್ಯಸಾಹಿತ್ಯ ಬೆಳೆಸಿಕೊಂಡಿದ್ದ ಕಲೆಗಾರಿಕೆ ಮತ್ತು ಸೂಕ್ಷ್ಮತೆಗಳನ್ನು ಈ ಚಿತ್ರಗಳು ದಕ್ಕಿಸಿಕೊಳ್ಳಲಿಲ್ಲ. ಇದರ ಪರಿಣಾಮ ಕಚ್ಚಾ ಅಭಿವ್ಯಕ್ತಿ ಪ್ರಕಾರವಾಗಿ ಭಾಷೆ ಮಾರ್ಪಾಟಾಯಿತು. ಸಹಜತೆಯ ಹೆಸರಿನಲ್ಲಿ ಮೆಲ್ಲನೆ ಅಶ್ಲೀಲ ಶಬ್ದಗಳು ಜಾಗ ಪಡೆದವು. ಇದು ಮುಂದೆ ಒಂದು ಪರಂಪರೆಯ ಸೃಷ್ಟಿಗೆ ಕಾರಣವಾಯಿತು. ಈ ದಶಕದಲ್ಲಿ ಪ್ರಧಾನವಾಹಿನಿ ಸಿನಿಮಾಗಳು ಸೃಷ್ಟಿಸಿಕೊಂಡ ಸಾಹಿತ್ಯ ರೂಪ ಪ್ರೇರಣೆ ಪಡೆದದ್ದು ಅಂದಿನ ಜನಪ್ರಿಯ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದ ಧಾರಾವಾಹಿಗಳಿಂದ. ಈ ಧಾರಾವಾಹಿಗಳ ಭಾಷೆಗೂ, ಪತ್ರಿಕೋದ್ಯಮ ಸೃಷ್ಟಿಸಿಕೊಂಡ ಭಾಷೆಗೂ ನೇರವಾದ ಸಂಬಂಧವಿದೆ. ಕನ್ನಡ ಪತ್ರಿಕೋದ್ಯಮ ಆರಂಭದಿಂದಲೂ ಪ್ರಾದೇಶಿಕ

ಹೊರಚಾಚುಗಳಿಂದ ಸಾಮಾನ್ಯ ಸರಳ ಭಾಷೆಯೊಂದನ್ನು ರೂಪಿಸಿಕೊಂಡಿತು. ದೈನಿಕಗಳ ನೆರವಿನಿಂದ ಅದು ಬರವಣಿಗೆಯ ಭಾಷೆ ಕೂಡ ಆಗಿಬಿಟ್ಟಿತು. ಈ ಭಾಷೆಯನ್ನೇ ಚಲನಚಿತ್ರ ಪಡೆದುಕೊಂಡಿತು. ಈ ಕಾರಣದಿಂದಲೇ ಪ್ರಾದೇಶಿಕ ಸನ್ನಿವೇಶ ಬದಲಾದರೂ ಭಾಷೆ ಬದಲಾಗದೆ ಉಳಿದುಕೊಂಡಿತು. 'ಸಿಪಾಯಿ ರಾಮು' ಚಿತ್ರದಲ್ಲಿ ಹಿಂದಿ ಭಾಗದಲ್ಲಿ ನಡೆಯುವ ಕಥಾನಕದ ಸಂದರ್ಭದಲ್ಲಿ ''ಅಚ್ಛಾ ಹೈ'' ಅಥವಾ ಹೀಗೆ ಒಂದೆರಡು ಹಿಂದಿ ಶಬ್ದ ಬಳಸಿ ಉಳಿದಂತೆ ಈ ಸಾಮಾನ್ಯ ಭಾಷೆಯ ಬಳಕೆಯಾಗಿದ್ದನ್ನು ಕಾಣಬಹುದು. 'ದೂರದ ಬೆಟ್ಟ' ಚಿತ್ರದ ದಟ್ಟ ಹಳ್ಳಿಯ ಹಿನ್ನೆಲೆಯಲ್ಲಿ ಕೂಡ ಗ್ರಾಮ್ಯದ ಸೊಗಡು ಸಂಪೂರ್ಣವಾಗಿ ಕಾಣಲಿಲ್ಲ. 'ಸಂಪತ್ತಿಗೆ ಸವಾಲ್'ನಂತಹ ಉತ್ತರ ಕರ್ನಾಟಕದ ಜನಪ್ರಿಯ ನಾಟಕ ಚಲನಚಿತ್ರವಾದಾಗಲೂ ಉತ್ತರ ಕರ್ನಾಟಕದ ಭಾಷೆ ಯಾವ ಹಂತದಲ್ಲೂ ಬಳಕೆಯಾಗದೆ, ಕನಿಷ್ಠ ಹಳೇ ಮೈಸೂರು ಪ್ರಾಂತ್ಯದ ಭಾಷೆಯೂ ಬಳಕೆಯಾಗದೆ ಈ ಸಾಮಾನ್ಯ ಕನ್ನಡವೇ ಬಳಸಲ್ಪಟ್ಟಿತು. ಇದೇ ಅಂಶವನ್ನು 'ಬಹದ್ದೂರು ಗಂಡು' ಚಿತ್ರದ ವಿಷಯದಲ್ಲೂ ಹೇಳಬಹುದು. 'ಗಿರಿಕನ್ಯೆ' ಎಸ್ಟೇಟ್‌ನ ಪ್ರಾದೇಶಿಕ ಕಥೆ ಹೇಳಿದರೂ ಅಲ್ಲಿ ಎಸ್ಟೇಟ್‌ಗಳಿರುವ ಚಿಕ್ಕಮಗಳೂರಿನ ಸುತ್ತಮುತ್ತಲಿನ ಪ್ರಾದೇಶಿಕ ಭಾಷೆ ಕಾಣುವುದಿಲ್ಲ. 'ಹುಲಿಯ ಹಾಲಿನ ಮೇವು' ಚಿತ್ರದ ಯಾವ ಭಾಗದಲ್ಲೂ ಕೊಡಗಿನ ಭಾಷೆಯ ಸೊಲ್ಲೂ ಕೇಳುವುದಿಲ್ಲ. ಅಷ್ಟೇ ಏಕೆ, ಬಹಳ ಸುಸಂಬದ್ಧ ಭಾಷೆಯ ಬಳಕೆ ಹೊಂದಿದೆ ಎಂದು ಗುರುತಿಸಲಾದ 'ನಾಗರಹಾವು' ಚಿತ್ರದಲ್ಲಿ ಕೂಡ ಚಿತ್ರದುರ್ಗದ ಭಾಷೆ ಬಳಕೆ ಆಗಲಿಲ್ಲ. ಇಲ್ಲೆಲ್ಲ ಪ್ರಾದೇಶಿಕ ಭಾಷೆ ಬಳಸಿದರೆ ಎಲ್ಲಿ ತಮ್ಮ ಪ್ರೇಕ್ಷಕವರ್ಗ ಕುಗ್ಗುತ್ತದೋ ಎಂಬ ಭಯ ಎದ್ದು ಕಾಣುತ್ತದೆ.

ಇಂಗ್ಲಿಷ್ ಭಾಷೆಯ ಬಳಕೆ ಇದಕ್ಕೆ ವಿರುದ್ಧವಾಗಿ ಹೆಚ್ಚು ಹೆಚ್ಚು ಬಳಕೆಯಾಗುತ್ತಾ ಹೋಯಿತು. ಇಂಗ್ಲಿಷ್ ಬಳಕೆಗೆ ಆರಂಭದಲ್ಲಿದ್ದ ಸಣ್ಣಪುಟ್ಟ ಹಿಂಜರಿತವೂ ಕ್ರಮೇಣ ಮಾಯವಾಗುತ್ತ ಬಂದಿತು. ಬಾಂಡ್ ಚಿತ್ರಗಳು ಬಂದ ನಂತರವಂತೂ ಇಂಗ್ಲಿಷ್ ಬಳಕೆಗೆ ಸೊಗಸಾದ ತಾತ್ವಿಕ ಹಿನ್ನೆಲೆಯೇ ಒದಗಿತು. ಕಲಿತವನು ಎಂಬುದು ಗೊತ್ತಾಗಲು ಆತ ಇಂಗ್ಲಿಷ್ ಮಿಶ್ರಿತ ಕನ್ನಡದಲ್ಲಿ ಮಾತನಾಡಬೇಕು ಎಂಬ ನಂಬಿಕೆಯೊಂದು ಈ ಹಂತದಲ್ಲಿ ಕೆಲಸ ಮಾಡಿದ್ದನ್ನು ನೋಡಬಹುದು. ಇನ್ನೊಂದು ನೆಲೆಯಲ್ಲಿ ಇದು sophisticationನ ಚಿಹ್ನೆಯಾಗಿ ಕೂಡ ಕೆಲಸ ಮಾಡುತ್ತದೆ.

ಭಾಷೆ ಕಡಿಮೆ ಬಳಕೆಯೊಂದಿಗೆ ಪ್ರತಿಮಾ ವಿಧಾನ ಬಳಸಿದ ಹೊಸ ಅಲೆ ಚಿತ್ರಗಳೇ ಹಾಗೆ ನೋಡಿದರೆ ಪ್ರಾದೇಶಿಕ ಸೊಗಡಿಗೆ ಜಾಗ ನೀಡಿದ್ದವು. 'ಅಬಚೂರಿನ ಪೋಸ್ಟಾಫೀಸು'ನಲ್ಲಿ ಸರಳವಾದ, ಆದರೆ ಹಳ್ಳಿಯ echo ಕೇಳಿಬರುವ ಮಾದರಿಯ ಭಾಷೆ ಬಳಕೆಯಾಗಿತ್ತು. 'ಕಾಡು' ಪೂರ್ಣ ಪ್ರಮಾಣದಲ್ಲಿ ಮೈಸೂರಿನ ಗ್ರಾಮ್ಯಭಾಷೆ ಬಳಸಿತ್ತು. 'ಪರಸಂಗದ ಗೆಂಡೆತಿಮ್ಮ' ಮತ್ತು 'ಪಡುವಾರಳ್ಳಿ ಪಾಂಡವರು' ಈ ಎರಡೂ ಚಿತ್ರಗಳಲ್ಲಿ ಭಾಷೆಯೇ ಗ್ರಾಮ್ಯ ವಾತಾವರಣವನ್ನು ಸೃಷ್ಟಿಸಿತ್ತು. ಆದರೆ ಹೊಸ ಅಲೆ ಚಿತ್ರಗಳು ಭಾಷೆಯನ್ನು ಪರಿವರ್ತನೆಯ ಮಾಪಕವಾಗಿ ಮಾತ್ರ ಬಳಸುತ್ತಿದ್ದುದರಿಂದ ಪೂರ್ಣ ಪ್ರಮಾಣದ ಬಳಕೆ ಅಲ್ಲಿ ಸಾಧ್ಯವಾಗಲಿಲ್ಲ. ಇದರಿಂದ ಒಟ್ಟಾಗಿ ಈ ಕಾಲದಲ್ಲಿ ಸರಳ ಸಾಮಾನ್ಯ ಕನ್ನಡ ವ್ಯಾಪಕವಾಗಿ ಬಳಕೆಯಾಯಿತು.

೮೦ರ ದಶಕದ ಹೊತ್ತಿಗೆ ಸಿನಿಮಾದ ಆಕೃತಿ ಬದಲಾಗಿತ್ತು. ಇಲ್ಲಿ ದೊಡ್ಡ ಪ್ರಮಾಣದ ಹಣಕಾಸಿನ ಹರಿವು ಬರುವುದು ಸಾಧ್ಯವಾದದ್ದು ಗುಣಮಟ್ಟದ ಹೆಚ್ಚಳಕ್ಕಿಂತ ಶೈಥಿಲ್ಯಕ್ಕೆ ಕಾರಣವಾಯಿತು. ತಾಂತ್ರಿಕತೆಯಲ್ಲಿ (technology) ವೈಭವ ಬಂದಿತೇ ಹೊರತು ತಂತ್ರಗಾರಿಕೆ (technique)ಯಲ್ಲಿ ಬರಲಿಲ್ಲ. ಸಿನಿಮಾದ ಜನಪ್ರಿಯ ಭಾಗವಂತೂ ಕಲೆಯಾಗುವುದಕ್ಕಿಂತ ಸರಕಾಗುವುದರ ಕಡೆಗೆ ಹೆಚ್ಚು ಸರಿಯಿತು. ಇದರ ಪರಿಣಾಮ ಭಾಷೆಯ ಮೇಲೆ ಕೂಡ ಆಯಿತು. ಭಾಷೆಯ ಒಟ್ಟು ಗಾಂಭೀರ್ಯ ಕಳಚಿ ಅಶ್ಲೀಲ, ದ್ವಂದ್ವಾರ್ಥಗಳು ರಾಜಮಾರ್ಗವನ್ನು ಪ್ರವೇಶಿಸಿದವು. ಹಿಂದೆಲ್ಲ ಇಂತಹ ಪ್ರಯೋಗಗಳು ಪೋಷಕಪಾತ್ರಗಳ ಮಟ್ಟದಲ್ಲಿರುತ್ತಿದ್ದವು. ಈಗ ನಾಯಕ-ನಾಯಕಿಯರೇ ಎಗ್ಗಿಲ್ಲದೆ ಅಶ್ಲೀಲವನ್ನು ಬಳಸಲು ಆರಂಭಿಸಿದರು. ಇದರಿಂದ ಭಾಷೆಗೆ ಇದ್ದ ಶಿಷ್ಟ ಆಯಾಮವೂ ಕಳಚಿ ಹೋಯಿತು. ಸೋರೆಕಾಯಿ, ಕುಂಬಳಕಾಯಿ, ಸೆಟ್-ಅಪ್, ಗ್ಯಾಸ್ ಲೈಟ್, ಪಂಚ್, ಡಗಾರ್, ಪೀಸ್, ಡಕೋಟ ಹೀಗೆ ಪಡ್ಡೆ ಹುಡುಗರ ಅಶ್ಲೀಲ ಶಬ್ದಗಳೆಲ್ಲವನ್ನೂ ನಾಯಕ ಪಾತ್ರಧಾರಿಗಳೇ ಆಡಲು ಆರಂಭಿಸಿದರು. 'ಅಪ್ಪ' 'ಅಕ್ಕ' ಚೈಗುಳ ಮಾದರಿ ಸಂಭಾಷಣೆಗಳು ಮಾಮೂಲಿಯಾಗಿ ಬಿಟ್ಟವು. ಇದರಿಂದ ಶಿಷ್ಟಸಾಹಿತ್ಯದ ಸಂಪರ್ಕವನ್ನು ಸಿನಿಮಾ ಕಳೆದುಕೊಳ್ಳುವ ಸ್ಥಿತಿ ಕೂಡ ಬಂದೊದಗಿತು.

ಈಗ ಸಿನಿಮಾ ಸರಕಾದ (product) ಮೇಲೆ ಅದನ್ನು ಮಾರಲು ಬೇಕಾದ ತಂತ್ರಗಳು ಬಳಕೆಯಾಗತೊಡಗಿದವು. ಪ್ರಾದೇಶಿಕ ಭಾಷೆಗಳನ್ನು ಅಲ್ಲಲ್ಲಿ ಉಳಿಸಿಕೊಂಡು ಆ ಭಾಗದ ಜನರನ್ನು ಆಕರ್ಷಿಸುವ ಪ್ರಯತ್ನ ಆರಂಭವಾಯಿತು. ದಕ್ಷಿಣ ಕನ್ನಡದ ಭಾಷೆ, ಉತ್ತರ ಕರ್ನಾಟಕದ ಭಾಷೆಯಾಡುವ ವ್ಯಕ್ತಿ ಹಾಸ್ಯ ಪಾತ್ರದಲ್ಲೋ, ಖಳನ ಪಾತ್ರದಲ್ಲೋ ಇರುತ್ತಿದ್ದ. 'ಕಿಟ್ಟು ಪುಟ್ಟು' ಚಿತ್ರದಲ್ಲಿ ಮಂಗಳೂರು ಭಾಷೆ ಮಾತನಾಡುವ ಕಳ್ಳ ಸೃಷ್ಟಿಯಾದ. ಅದು ಒಂದು ಮಾದರಿಯ ಹಾಸ್ಯ ಪಾತ್ರಗಳಿಗೂ ಪ್ರೇರಣೆ ಒದಗಿಸಿತು. ''ನೀವು ಯಂಥಹದು ಮಾರಾಯರೆ'' ಎಂದು ರಾಗ ಎಳೆಯುವ ಹಾಸ್ಯಪಾತ್ರಗಳನ್ನು ನಾವು ಇಂದಿಗೂ ನೋಡುತ್ತೇವೆ. ಹಾಗೆಯೇ ''ಹಾಗಲ್ರೀ ಸಾಹೇಬ್ರ, ಇಲ್ ಸ್ವಲ್ಪ್ ನನ್ನ ಮಾತ್ ಕೇಳ್ರಿ'' ಎಂಬ ಧಾರವಾಡ ಸೀಮೆ ಖಳರು, ''ಹಂಗೇನಲ್ರಾ'' ಎನ್ನುವ ಮಂಡ್ಯದ ಗಂಡುಗಳು, ''ಹಂಗಲ್ಲ ಮಾರಾಯಿತಿ'' ಎನ್ನುವ ಉತ್ತರ ಕನ್ನಡದವರು ಇವರೆಲ್ಲರ ಪ್ರವೇಶದ ನಂತರ ಕೂಡ ಈ ಆಯಾಮ ಚಿತ್ರ ವ್ಯಾಕರಣದ ಒಳಗೆ ಸೇರಲಿಲ್ಲ. ಇವೆಲ್ಲವೂ ಕೆಲವು ಕಲಾವಿದರ ವೈಯಕ್ತಿಕ ಅಭಿವ್ಯಕ್ತಿ ವಿಶಿಷ್ಟತೆಯಾಗಿಯೇ ಉಳಿದು ಚಿತ್ರದ ಆಕೃತಿ ಗಮನಾರ್ಹ ಬದಲಾವಣೆ ಕಂಡುಕೊಳ್ಳದೆ ಹಾಗೆಯೇ ಉಳಿದುಕೊಂಡಿತು. ಇಷ್ಟು ಹೊತ್ತಿಗೆ ಕರ್ನಾಟಕಕ್ಕೆ ಕನ್ನಡವೊಂದೇ ಸಾಲದು ಎಂಬ ಭ್ರಮೆ ಕೂಡ ಚಿತ್ರನಿರ್ಮಾತೃಗಳನ್ನು ಆವರಿಸಲು ಆರಂಭಿಸಿತ್ತು. ಹೀಗಾಗಿ ಹಿಂದಿ, ತಮಿಳು, ತೆಲುಗು ಮುಖ್ಯವಾಗಿ ಈ ಭಾಷೆಯನ್ನು ಆಡುವ ಪಾತ್ರಧಾರಿಗಳು ಚಿತ್ರದಲ್ಲಿ ಕಾಣಿಸಿಕೊಂಡರು. ಶೆಟ್ಟರು, ಸೇಠುಗಳು ಇಂತಹ ಪಾತ್ರಗಳಲ್ಲಿದ್ದು ಸಹಜತೆ ಹೆಸರಿನಲ್ಲಿ ಪರಭಾಷೆಯ ಬಳಕೆ ಆರಂಭವಾಯಿತು. ಇಂಗ್ಲಿಷ್ ಬಳಕೆಯಂತೂ ಅಪರಾಧವೆಂಬ ಹಿಂಜರಿಕೆ ಕೂಡ ಕಾಣದಂತೆ ಸೇರಿಕೊಂಡುಬಿಟ್ಟಿತ್ತು. ಹೀಗೆ ಪ್ರಧಾನವಾಹಿನಿ ತನ್ನದಾದ ಗುಣಗಳನ್ನೆಲ್ಲ ಕಳೆದುಕೊಳ್ಳುವಷ್ಟರ ಮಟ್ಟಿಗೆ ಜನಪ್ರಿಯತೆಗೆ ಬಲಿಯಾಗುತ್ತ ಸಾಗಿದರೆ ಇನ್ನೊಂದು ಭಾಗ ಪ್ರಯೋಗಶೀಲತೆಯಲ್ಲೇ ನೆಲೆ ನಿಂತಿತು. ಇಲ್ಲಿ ಅತಿ ಸಹಜ ಎನ್ನುವಂತೆ ಪ್ರಾದೇಶಿಕ ಭಾಷೆ ಬಳಸಲು ಹೋಗಿ ಸಾಕ್ಷ್ಯಚಿತ್ರ ತರಹದ ಚಿತ್ರಗಳು ಬರಲು ಆರಂಭವಾದವು. ಇಲ್ಲಿ ಕೂಡ ಭಾಷೆ ಚಿತ್ರದ ಆಕೃತಿಯ ಹೊರಗೇ ನಿಂತು ಕೆಲಸ ಮಾಡಿ ಸಹಜತೆಯಿಂದ ದೂರವಾಗಿತ್ತು. ಈ ನಡುವೆ 'ಸುಬ್ಬಿ ಸುಬ್ಬಕ್ಕ ಸುವ್ವಲಾಲಿ', 'ವೀರ ಸಿಂಧೂರ ಲಕ್ಷ್ಮಣ'ದಂತಹ ಚಿತ್ರಗಳಲ್ಲಿ ಹಳ್ಳಿ ಪರಿಸರಕ್ಕೆ ಹೊಂದುವ ಭಾಷೆಯ ಬಳಕೆ ಕಾಣಿಸಿತು. ಈ ದಶಕದ ಅಂತ್ಯದ ಹೊತ್ತಿಗಾಗಲೇ ಚಿತ್ರಕ್ಕಿಂತ ಸಾಮಾನ್ಯ ಭಾಷೆಯ ಕಲ್ಪನೆ ಕುಸಿಯಲು ಆರಂಭಿಸಿತು.

೯೦ರ ದಶಕದ ಹೊತ್ತಿಗೆ ಕರ್ನಾಟಕದ ಭಿನ್ನ ಭಾಷಾಭಿವ್ಯಕ್ತಿಗಳು ಪ್ರಧಾನವಾಹಿನಿ ಪ್ರವೇಶಿಸಿದವು. 'ಸಂಗ್ಯಾ ಬಾಳ್ಯಾ' 'ಹುಲಿಯಾ'ದಂತಹ ಚಿತ್ರಗಳು ಸಂಪೂರ್ಣ ಉತ್ತರ ಕರ್ನಾಟಕದ ಭಾಷೆಯನ್ನೇ ಬಳಸಿದವು. 'ನಮ್ಮೂರ ಮಂದಾರ ಹೂವೆ' ಹೆಚ್ಚಿನ ಭಾಗದಲ್ಲಿ ಉತ್ತರ ಕನ್ನಡದ ಭಾಷೆ ಬಳಸಿತು. ಈಗ ಇದೊಂದು ಸಮಸ್ಯೆಯೇ ಅಲ್ಲ ಎನ್ನುವಷ್ಟು ಮುಕ್ತತೆ ಕಾಣಿಸಿಕೊಂಡಿತು. ಈ ಮುಕ್ತತೆಗೆ ಬಹುಬೇಗ ಇನ್ನೊಂದು ಮಗ್ಗುಲು ಕೂಡ ಕಾಣಿಸಿಕೊಂಡಿತು. ಕನ್ನಡ ಮಾತ್ರವಲ್ಲದೆ ಬೇರೆ ಭಾಷೆಯ ಬಳಕೆ ಕೂಡ ಸಹಜತೆಯ ಹೆಸರಿನಲ್ಲಿ ದೀರ್ಘವಾಗಿಯೇ ಬರಲು ಆರಂಭಿಸಿತು. ಎಂ.ಎಸ್.ಸತ್ಯು ತಮ್ಮ 'ಗಳಿಗೆ' ಚಿತ್ರದಲ್ಲಿ ಪಂಜಾಬ್‌ನಲ್ಲಿ ನಡೆಯುವ ಕಥಾಭಾಗವನ್ನೆಲ್ಲ ಪಂಜಾಬಿಯಲ್ಲೇ ಚಿತ್ರಿಸಿದರು. 'AK 47'ನಲ್ಲಿ ಮುಂಬೈನಲ್ಲಿ ನಡೆಯುವ ಕಥೆಯಲ್ಲಿ ಹಿಂದಿ ಸಂಭಾಷಣೆಗಳಿದ್ದವು. 'ಆಂಧ್ರ ಹೆಂಡ್ತಿ' ಚಿತ್ರದಲ್ಲಿ ತೆಲುಗು ಸಂಭಾಷಣೆಗಳಿದ್ದವು. ಹೀಗೆ ಕನ್ನಡ ಚಿತ್ರದಲ್ಲಿ ಪರಭಾಷೆ ಬಳಸುವ ಕ್ರಮಕ್ಕೆ ಎರಡು ತಾತ್ವಿಕ ನೆಲೆಗಳಿವೆ. ಒಂದು ಅಥೆಂಟಿಸಿಟಿಯದು. ಇದು ಪಾತ್ರಕ್ಕೆ ಸಹಜತೆ ತಂದುಕೊಡುವುದಲ್ಲದೆ ಕಥಾನಕಕ್ಕೆ ಜೀವಂತಿಕೆ ನೀಡುತ್ತದೆ. 'ಗಳಿಗೆ'ಯಲ್ಲಿ ಪಂಜಾಬಿ ಬಳಕೆ ಮಾತ್ರವಲ್ಲ ನಾಯಕ-ನಾಯಕಿ ಸಂಭಾಷಣೆಯಲ್ಲಿ ಬೆಂಗಳೂರಿನವಳಾದ ನಿತ್ಯಾ ಮಾತನಾಡುವ ಹಿಂದಿಗೆ ಕನ್ನಡದ echo ಇದ್ದರೆ, ರೂಪ್‌ಸಿಂಗ್ ಮಾತನಾಡುವ ಹಿಂದಿಗೆ ಪಂಜಾಬಿ echo ಇರುವಂತೆ ಮಾಡಲಾಗಿತ್ತು. ಇದು ಭಾಷೆಯ ಸೂಕ್ಷ್ಮಗಳನ್ನು ದಕ್ಷವಾಗಿ ಬಳಸಿಕೊಂಡ ಕ್ರಮವೂ ಹೌದು. ವ್ಯಾಪಾರಿ ಚಿತ್ರರಂಗಕ್ಕೆ ಅದೊಂದು ವ್ಯಾಪಾರಿ ಜಾಣ್ಮೆ. ಹೀಗೆ ದೀರ್ಘ ಪರಭಾಷಾ ಸಂಭಾಷಣೆ ಇದ್ದರೆ ಅದನ್ನು ಪರಭಾಷೆಗೆ ಡಬ್ ಮಾಡುವುದು ಸುಲಭ. ಈ ಮೂಲಕ ಪರಭಾಷೆಯ ಜನರನ್ನೂ ತಮ್ಮ ಚಿತ್ರಕ್ಕೆ ಸೆಳೆದುಕೊಳ್ಳಬಹುದು. ಇಂತಹ ಹುಚ್ಚಾಟ ಅಂತಿಮವಾಗಿ ಕನ್ನಡ ತನ್ನ ಸ್ವಂತಿಕೆ ಕಳೆದುಕೊಂಡು patch-up ಭಾಷೆಯಾಗಿಬಿಡುವ ಆತಂಕ ಕಾಣುತ್ತಿದೆ. ಇದೇ ಸ್ಥಿತಿ ಮುಂದುವರೆದಲ್ಲಿ ಕಾಲಾನುಕ್ರಮ ಕನ್ನಡ ಭಾಷೆಯ ಸ್ಥಿತಿ ಏನಾಗಬಹುದು ಎಂದು ಭಯ ಹುಟ್ಟಿಸುವಷ್ಟು ಅಪಭ್ರಂಶ ಸಾಹಿತ್ಯಗಳು ಈಗಾಗಲೇ ತಾಂಡವವಾಡಲು ಆರಂಭಿಸಿವೆ.

ಭಾಷೆ ಸೈದ್ಧಾಂತಿಕವಾಗಿ ಚಿತ್ರಮಾಧ್ಯಮದಲ್ಲಿ ಮಾತ್ರ ಸಾಧ್ಯತೆಯಾಗಿ ಬಳಕೆಯಾಯಿತು. ಆ ಮೂಲಕ ಸಂವಹನದ ಸಾಧ್ಯತೆ ಹಿಗ್ಗಬೇಕು. ಈ ನೆಲೆಯಲ್ಲಿ ಕನ್ನಡ

ಚಿತ್ರರಂಗದಲ್ಲಿ ಭಾಷೆ ಬಳಕೆಯಾಗಿದ್ದು ಕಡಿಮೆ. ಅದೊಂದು ನಿಯಂತ್ರಣಕ್ಕೊಳಪಟ್ಟ ಪರಿಕರವಾಗುವ ಬದಲು ನಿಯಂತ್ರಿಸುವ ಪರಿಕರವಾಗಿ ಬಳಕೆಯಾಯಿತು. ಇದಕ್ಕೆ ಮಾಧ್ಯಮದಲ್ಲಿ ಆರಂಭದಿಂದಲೂ ಕಂಡುಬಂದ ಸೂಕ್ಷ್ಮಗ್ರಹಿಕೆಯ ಕೊರತೆಯೇ ಕಾರಣ. ಇಂತಹ ಸೂಕ್ಷ್ಮಗ್ರಹಿಕೆ ಇದ್ದ ಕಡೆ ಭಾಷೆಗೆ ಪ್ರಾಮುಖ್ಯತೆ ಕಡಿಮೆ ಇರುತ್ತದೆ. ಹೀಗಾಗಿ ಸಾಹಿತ್ಯದಲ್ಲಿ ನಡೆಯುತ್ತಿದ್ದ ಭಾಷಾ ಪ್ರಯೋಗಗಳು ಚಿತ್ರರಂಗದ ಕದ ತಟ್ಟಲೇ ಇಲ್ಲ. ಶೈಥಿಲ್ಯವೇ ಎಂದಿನಿಂದಲೂ ಪ್ರವಹಿಸುತ್ತ ಬಂತು.

* * *

ಸಿನಿಮಾ ಎನ್ನುವುದು ನಾಟಕಕ್ಕಿಂತ ಭಿನ್ನ ಮಾಧ್ಯಮ ಎಂಬ ಅರಿವು ಬೆಳೆಯಲು ಆರಂಭಿಸಿದಾಗಲೇ Non-narrative filmಗಳು ಕನ್ನಡದಲ್ಲಿ ಕಾಣಿಸಿಕೊಂಡವು. ನೇರ ಕಥನಕ್ರಮ ವಾಚ್ಯವಾಗಿ ಆಕೃತಿಯ ಸೂಕ್ಷ್ಮವನ್ನು ಹಿಡಿದಿಡಲಾರದು ಎಂಬ insight ಈ ಮಾದರಿಯ ಹುಟ್ಟಿಗೆ ಪ್ರಧಾನ ಕಾರಣವಾಯಿತು. ಇವರ ಪ್ರೇರಕ ಸ್ಥಾನದಲ್ಲಿದ್ದ ಇಟಲಿ ಮತ್ತು ಫ್ರೆಂಚ್ ಸಿನಿಮಾಗಳು ಪ್ರತಿಮಾ ವಿಧಾನವನ್ನು ಬಳಸುತ್ತಿದ್ದವು. ಕನ್ನಡದಲ್ಲಿ ಈ ಚಳವಳಿಗೆ ಪ್ರೇರಣೆ ಒದಗಿಸಿದ್ದ ನವ್ಯ ಸಾಹಿತ್ಯ ಕೂಡ ಪ್ರತಿಮಾ ವಿಧಾನವನ್ನು ಪ್ರಧಾನವಾಗಿ ಬಳಸುತ್ತಿತ್ತು. ಹೀಗಾಗಿ Non-narrative filmಗಳು ಪ್ರತಿಮೆ (Image)ಗಳ ಮೂಲಕ ಮಾತನಾಡಲು ಆರಂಭಿಸಿದವು.

ಈ ಚರ್ಚೆಗೆ ಮೊದಲು ಪ್ರತಿಮೆ ಎಂಬ ಪರಿಕಲ್ಪನೆ ಮುಖ್ಯವಾಗಿ ಕನ್ನಡ ಚಲನಚಿತ್ರದಲ್ಲಿ ಸಾಹಿತ್ಯಕ್ಕೆ ಎಷ್ಟು ಹತ್ತಿರವಾಗಿ ಮತ್ತು ಎಷ್ಟು ದೂರವಾಗಿ ಬಳಕೆಯಾಗುತ್ತದೆ ಎಂಬ ಅಂಶವನ್ನು ಗುರುತಿಸಿಕೊಳ್ಳಬೇಕು. ಸಾಮಾನ್ಯವಾಗಿ ಪ್ರತಿಮೆ (Image) ಮತ್ತು ಸಂಕೇತ (Symbol) ಇವೆರಡನ್ನು ಒಂದೇ ಅರ್ಥದಲ್ಲಿ ಬಳಸಲಾಗುತ್ತದೆ. ಸಾಹಿತ್ಯಿಕವಾಗಿ ಕೂಡ ಇವೆರಡೂ ಭಿನ್ನವಾದ ಪರಿಕಲ್ಪನೆಗಳು. ಪ್ರತಿಮೆ ಭಾರತೀಯ ಕಾವ್ಯಮೀಮಾಂಸೆಯಿಂದ ಮೂಡಿಬಂದ ಕಲ್ಪನೆಯಾದರೆ ಸಂಕೇತ ಪಾಶ್ಚಾತ್ಯ ಕಾವ್ಯಮೀಮಾಂಸೆಯಿಂದ ಬಂದಿದ್ದು. ಎರಡೂ ಕೂಡ ಬೇರೆ ಬೇರೆ ನೆಲೆಗಳಲ್ಲಿ ಬಳಕೆಯಾಗುವ ಶಬ್ದ. ಸಂಕೇತ ಭಾಷೆ ತನ್ನ ಸರಳ ಸಾಧ್ಯತೆಗಳನ್ನು ದಾಟಿ ಪರಂಪರೆಯ ನೆನಪುಗಳನ್ನು ಸಂಯೋಜಿಸಿದಾಗ ರೂಪುಗೊಳ್ಳುತ್ತದೆ. ಇದು ಉಪಮೆಗಿಂತ ಕೊಂಚ ಭಿನ್ನವಾದ ಬಳಕೆ. ಉಪಮೆಯಲ್ಲಿ ಉಪಮಾನ, ಉಪಮೇಯಗಳು ಇದ್ದರೆ (ಕಮಲದಂಥ ಕಣ್ಣು, ದಾಳಿಂಬೆಯಂಥ ದಂತ ಪಂಕ್ತಿ, ತಾವರೆ ಹೂವಿನ ಎಸಳಾದ ತುಟಿ) ಸಂಕೇತದಲ್ಲಿ ಒಂದು ಪ್ರಾತಿನಿಧಿಕ ಕಲ್ಪನೆ ಇರುತ್ತದೆ. "ದೋಣಿ ಸಾಗಲಿ ಮುಂದೆ ಸಾಗಲಿ..." ಗೀತೆಯಲ್ಲಿ ದೋಣಿ ತನ್ನ ಸರಳ ನೆಲೆ ಮೀರುತ್ತಲೇ ಜೀವನಕ್ಕೆ ಸಂಕೇತವಾಗುತ್ತದೆ. ಸಂಕೇತಕ್ಕೆ ಎರಡು ಮಾದರಿ ಅರ್ಥಗಳಿವೆ. ಒಂದು ವಾಚ್ಯವಾದದ್ದು, ಇನ್ನೊಂದು ಧ್ವನಿಯಾತ್ಮಕವಾದದ್ದು. ಆದರೆ ಪ್ರತಿಮೆ ಎಂಬ ಕಲ್ಪನೆ dynamic ಆದದ್ದು. ಅನೇಕ ಮಾದರಿ ಸಂಕೇತ, ಉಪಮೆ ಎಲ್ಲವೂ ಸೇರಿ ಈ ಪ್ರತಿಮೆ ನಿರ್ಮಾಣವಾಗುತ್ತದೆ. ಅಡಿಗರ 'ಭೂಮಿಗೀತ' ಕವನದಲ್ಲಿ 'ಭೂಮಿ' ಬರೀ ಶಬ್ದವಲ್ಲ, ಒಂದು ಅರ್ಥಪರಂಪರೆ ಹೊಂದಿದ ಪ್ರತಿಮೆ. ಸಂಕೇತ ಮತ್ತು ಪ್ರತಿಮೆಗಳನ್ನು ಬಳಸುವ ಉದ್ದೇಶ ಪರಂಪರೆ ಮತ್ತು ಸಮಕಾಲೀನ ಅನುಭವದ ಪಾತ್ರವನ್ನು ಹಿನ್ನೆಲೆಯಾಗಿಸಿ ಅರ್ಥ ಹಿಗ್ಗಿಸುವುದು. ಇದು ಗ್ರಹಿಕೆಯ ನೆಲೆಯಲ್ಲಿ ಕೆಲಸ ಮಾಡುವ ಪರಿಭಾಷೆ. ಇದು ಒಂದು ಶಬ್ದ, ಅದಕ್ಕೊಂದು ಅರ್ಥ ಎಂಬ ಮೂರ್ತ ಸ್ಥಿತಿ ಮೀರಿ ಅಮೂರ್ತದೆಡೆಗೆ ಸಾಹಿತ್ಯವನ್ನು ಕರೆದೊಯ್ಯುತ್ತದೆ.

ಚಲನಚಿತ್ರ ಕೂಡ ಸಂಕೇತ ಮತ್ತು ಪ್ರತಿಮೆಗಳನ್ನು ಇದೇ ಸ್ತರದಲ್ಲಿ ಬಳಸುತ್ತದೆ. ಸಾಮಾನ್ಯ ಚರ್ಚೆಗಳಲ್ಲಿ ಇಲ್ಲಿ ಕೂಡ ಇವೆರಡು ಶಬ್ದಗಳು ಗೊಂದಲ ಸೃಷ್ಟಿಸುವಂತೆ ಬಳಕೆಯಾಗುತ್ತವೆ. ಪ್ರಧಾನಧಾರೆ ಚಿತ್ರಗಳೂ ಕೂಡ ತಮಗೆ ಅರಿವಿಲ್ಲದೆ ಅನೇಕ ಸಂಕೇತಗಳನ್ನು ಬಳಸುತ್ತಾ ಬಂದಿವೆ. ಬಳೆ ಒಡೆಯುವುದನ್ನು ಸಾವಿಗೆ ಸಂಕೇತವಾಗಿ, slow close-up ಅನ್ನು ಕನಸಿಗೆ ಸಂಕೇತವಾಗಿ, ದೀಪಗಳು ಚಲಿಸುವುದನ್ನು ಕಾಲಕ್ಕೆ ಸಂಕೇತವಾಗಿ, ಚಿತ್ರದ ಬಣ್ಣ ಇಲ್ಲವೆ ಮಸಿ ಚೆಲ್ಲುವುದನ್ನು ಅತ್ಯಾಚಾರಕ್ಕೆ ಸಂಕೇತವಾಗಿ ಹೀಗೆ ಅನೇಕ ಸಂಕೇತಗಳು ಬಳಕೆಯಾಗುತ್ತಲೇ ಬಂದಿವೆ. ಅವುಗಳಲ್ಲಿ ಅನೇಕವು ಕ್ಲೀಷೆಯಾಗಿವೆ ಕೂಡ. ಇಲ್ಲೆಲ್ಲ ಸಂಕೇತ ಎನ್ನುವುದು ಸರಳ ವಿವರಗಳನ್ನು ದಾಖಲಿಸುವಲ್ಲಿ ಒದಗಿಸಿಕೊಳ್ಳುವ ವೇಗ (pace)ವನ್ನು ಹೇಳುತ್ತದೆ. ಅನೇಕ ಕಡೆ ಬೆಳಕು ಮತ್ತು ಕ್ಯಾಮರಾ ಕೋನಗಳೇ ಈ ಸಂಕೇತದ ಕೆಲಸವನ್ನು ಮಾಡುತ್ತವೆ. ಗುರುತಿಸಬೇಕಾದ ಸಂಗತಿ ಎಂದರೆ ಸಾಹಿತ್ಯದಲ್ಲಿ ಸಂಕೇತವಾಗಿ ಬಳಕೆಯಾಗಿದ್ದು ಚಲನಚಿತ್ರದಲ್ಲಿ ಆಗಬೇಕಾಗಿಲ್ಲ. ಇದಕ್ಕೆ ಉದಾಹರಣೆಯಾಗಿ ಈ ಸಾಹಿತ್ಯ ಭಾಗವನ್ನು ಗುರುತಿಸಬಹುದು.

"ಉದ್ಯಾನವನದಲ್ಲಿ ತಂಗಾಳಿ ಮಧುರವಾಗಿ ಆವರಿಸಿತ್ತು. ಸೂರ್ಯ ಪ್ರಕಾಶ ಪಶ್ಚಿಮದಲ್ಲಿ ಕರಗುತ್ತಾ ಕೊನೆ ರಂಗನ್ನು ಚೆಲ್ಲುತ್ತಿತ್ತು. ಆ ರಂಗು ಅವಳ ಮುಖದಲ್ಲೂ ಚಿಮ್ಮುತ್ತಿತ್ತು. ನಲ್ಲನ ಆಗಮನ ವಿಳಂಬವಾಗುತ್ತಿದ್ದಂತೆ ರಂಗು ಕರಗುತ್ತ ಅವಳ ಮುಖ ತಾವರೆ ಹೂವಿನಂತೆ ಮುದುಡುತ್ತಿತ್ತು. ಆಗ ಸಕಾಲಿಕ ವಸಂತನಂತೆ ಅವಳ ನಲ್ಲ ಆಗಮಿಸಿದ. ಅವನನ್ನು ನೋಡುತ್ತಿದ್ದಂತೆ ಶಿಷ್ಟಾಚಾರವನ್ನು ಮರೆತು ಹೂವನ್ನು ಸೇರುವ ದುಂಬಿಯಂತೆ ಓಡಿಬಂದು ಬಿಗಿಯಾಗಿ ಅಪ್ಪಿ, ಮತ್ತೆ ಮತ್ತೆ ಚುಂಬಿಸಿದಳು."

ಈ ಸಾಹಿತ್ಯ ಭಾಗ ಚಿತ್ರವಾಗುವಾಗ ಇಲ್ಲಿನ ಸಂಕೇತಗಳೆಲ್ಲ ಭಿನ್ನವಾಗುತ್ತವೆ. ಮುಖ್ಯವಾಗಿ ಇಷ್ಟು ದೀರ್ಘ ಸಾಹಿತ್ಯ ಭಾಗದಲ್ಲಿ ಈ ಇಬ್ಬರು ಪ್ರಣಯಿಗಳು ಯಾರು, ಅವರ ಸಂಬಂಧ ಏನು, ಅವರ ವಯಸ್ಸು ಎಷ್ಟು ಎಂಬ ವಿವರಗಳು ಬಂದಿಲ್ಲ. ಆದರೆ ಚಿತ್ರದಲ್ಲಿ ದೃಶ್ಯದ ಆರಂಭಕ್ಕೆ ಮೊದಲೇ ಈ ಅಂಶ ನಿರ್ಧಾರವಾಗಿರಬೇಕು. ಸಾಮಾನ್ಯವಾಗಿ ಕನ್ನಡ ಚಿತ್ರರಂಗ ಬಳಸುವ ಸಂಕೇತಗಳ ನೆಲೆಯಲ್ಲಿ ವಿಶ್ಲೇಷಿಸಿದರೆ ನಾಯಕಿ ಸ್ಕರ್ಟ್ ಇಲ್ಲವೆ ಮಿಡಿ ತೊಟ್ಟು ೨೦ರ ಹರೆಯದಲ್ಲಿದ್ದರೆ ಅವಳು ನಾಯಕನನ್ನು ಅಡ್ಡದಾರಿಗೆ ಎಳೆಯಲು ಬಂದವಳಾಗಿರುತ್ತಾಳೆ. ಇಲ್ಲವೆಂದರೆ ಸೀರೆ ಉಟ್ಟು, ಹಣೆ ತುಂಬ ಕುಂಕುಮ ಇಟ್ಟವಳಾಗಿದ್ದರೆ ಪ್ರಣಯಿಯಾಗಿರುತ್ತಾಳೆ. ಎಷ್ಟೋ ಬಾರಿ ಈ ವಿವರಗಳೂ ಪಾತ್ರಧಾರಿಯ ಆಯ್ಕೆಯಲ್ಲೇ ನಿರ್ಧಾರವಾಗಿಬಿಡುತ್ತವೆ. ತಂಗಾಳಿ ನಾಚಿಕೆಯ ರಂಗು ಇಲ್ಲಿ ಸಾಹಿತ್ಯದ ಸಂಕೇತ ನೀಡುವುದಿಲ್ಲ. ಸಿನಿಮಾ ಬೇರೆ ಸಂಕೇತಗಳಿಗೆ ಮೊರೆ ಹೋಗುತ್ತದೆ. ಅವಳೇನಾದರೂ ಬಿಳಿ ಸೀರೆ ಉಟ್ಟಿದ್ದರೆ ಖಂಡಿತಾ ಮಳೆಯಲ್ಲಿ ನೆನೆಯುವ ದೃಶ್ಯ ಇರುತ್ತದೆಂದು ಪ್ರೇಕ್ಷಕನಿಗೆ ಗೊತ್ತು. ಸಿನಿಮಾ ಬಳಸುವ ಸಂಕೇತಗಳೇ ಈ ಮಾದರಿಯವು. ಚಿತ್ರದಲ್ಲಿ ಅವಳ ಪಾತ್ರವನ್ನು ಅನುಸರಿಸಿ ಶಾಟ್‌ನ ಕಾಲಾವಧಿ ನಿರ್ಧಾರವಾಗುತ್ತದೆ. ಅವಳನ್ನು expose ಮಾಡುವ ಕ್ರಮವೂ ನಿರ್ಧಾರವಾಗುತ್ತದೆ. ಇನ್ನು ಸಾಹಿತ್ಯ ಸರಳ ನೆಲೆಯಲ್ಲಿ ಚುಂಬನವನ್ನು ಪ್ರೇಮದ ಸಂಕೇತವಾಗಿ ಹೇಳುತ್ತದೆ. ಭಾರತೀಯ ಚಿತ್ರರಂಗದ ಮಟ್ಟಿಗೆ ಅದು ಸರಳ ಸಂಗತಿಯಲ್ಲ. ಇಂತಹ ಸಣ್ಣ ಪುಟ್ಟ ದೃಶ್ಯಗಳಲ್ಲಿ ಚುಂಬನ ಬರುವುದಿಲ್ಲ. ಅದಕ್ಕೊಂದು ಮಾದಕವಾದ ವಾತಾವರಣ ಬರಬೇಕು. ಹೀಗೆ ಇಂತಹ ಸಂಕೇತಗಳು ತುಂಬಿದ ಸಾಹಿತ್ಯ ಭಾಗ ಚಲನಚಿತ್ರಕ್ಕೆ ಬೇಕಾದ ವಿವರವೇ ಅಲ್ಲ. ಇಲ್ಲಿ ಗುರುತಿಸಬೇಕಾದ ಸಂಗತಿ ಎಂದರೆ ವಿವರಗಳನ್ನು ನೀಡುವ ಕ್ರಮದಲ್ಲೇ ಸಿನಿಮಾ ಮತ್ತು ಸಾಹಿತ್ಯಕ್ಕೆ ಅಗಾಧ ವ್ಯತ್ಯಾಸವಿದೆ. ವಿವರಗಳನ್ನು ನೀಡುವ ಕ್ರಮವೇ ಸಿನಿಮಾದಲ್ಲಿ ಸಂಕೇತ ಬಳಕೆಯಾಗುವ ರೀತಿ. ಸಾಹಿತ್ಯದಲ್ಲಿ ಸಂಕೇತಗಳ ಬಳಕೆ ಕಥೆ-ಕಾದಂಬರಿಗಳಲ್ಲಿ ತೀರಾ ಅಗತ್ಯವಾದ ಸಂಗತಿಯಲ್ಲ. ಕವನಗಳಲ್ಲಿ ಅದಕ್ಕೆ ಪ್ರಾಧಾನ್ಯವಿದೆ. ಆದರೆ ಚಲನಚಿತ್ರದಲ್ಲಿ ಹಾಗಲ್ಲ, ವಿವರಗಳನ್ನು ನೀಡುವ ಕ್ರಮದಲ್ಲೇ ಸಂಕೇತದ ಅಗತ್ಯವಿದೆ. ಸಾವಿನ ದೃಶ್ಯ ದೀರ್ಘವಾಗಿರಬೇಕು ಎಂದು ಭಾವಿಸಿದರೆ ಅದು ಸಂಭಾಷಣೆಯಲ್ಲಿರುತ್ತದೆ. ಇಲ್ಲದಿದ್ದರೆ ಬಳೆ ಒಡೆಯುವುದು, ದೀಪ ಆರುವುದು ಮೊದಲಾದ ಸಂಕೇತ ಸಾಕು. ಅತ್ಯಾಚಾರದ ದೃಶ್ಯದಲ್ಲಿ expose ಮಾಡುವುದೇ ಉದ್ದೇಶವಾಗಿದ್ದರೆ ಅದರ ವಿವರಗಳು ದಾಖಲಾಗುತ್ತವೆ. ಇಲ್ಲದಿದ್ದರೆ ಅವಳ ಚಿತ್ರದ ಮೇಲೆ ಏನಾದರೂ ಬಣ್ಣ ಚೆಲ್ಲುವುದೋ ಅಥವಾ ಬಿಚ್ಚಿದ ಸೀರೆಯ ತುದಿಯಲ್ಲಿ ಅವಳು ಕುಳಿತಿರುವ ಲಾಂಗ್‌ಶಾಟ್‌ನ ಸಂಕೇತವೋ ಸಾಕಾಗುತ್ತದೆ. ಕಾಲದ ವೇಗ ಹೆಚ್ಚಿಸಬೇಕಾದರೆ ಒಂದು ದೃಶ್ಯ ಬದಲಾವಣೆಯಲ್ಲಿ ಪಾತ್ರದ ಗೆಟ್‌ಅಪ್ ಬದಲಾವಣೆ ಮಾಡುವ ಸಂಕೇತ ಬಳಕೆಯಾಗುತ್ತದೆ. ಇಲ್ಲೆಲ್ಲ ವಿವರ ಎಷ್ಟು ಸಾಂದ್ರವಾಗಿರಬೇಕು ಎಂಬ ಅಂಶದ ಮೇಲೆ ಸಂಕೇತ ನಿರ್ಧಾರವಾಗುತ್ತದೆ. ಚಲನಚಿತ್ರದ ಮಟ್ಟಿಗೆ ಸಂಕೇತ ಕೂಡ ವಿವರಗಳನ್ನು ಜೋಡಿಸುವ ಒಂದು ಕ್ರಮ. ಇನ್ನು ಸಾಹಿತ್ಯದ ಸಂಕೇತಗಳು ಚಲನಚಿತ್ರವಾಗಿ ಚಿತ್ರಿತವಾಗುವ ಕ್ರಮ ನೋಡೋಣ. ಈ ಅಂಶ ಸಾಮಾನ್ಯವಾಗಿ ಚಿತ್ರಗೀತೆಗಳ ದೃಶ್ಯೀಕರಣದಲ್ಲಿ ಬರುತ್ತದೆ. ಚಿತ್ರಗೀತೆಯಲ್ಲಿ ಬಳಕೆಯಾದ ಸಾಹಿತ್ಯಿಕ ಸಂಕೇತವನ್ನು ಸಾಮಾನ್ಯವಾಗಿ ವಾಚ್ಯವಾಗಿಸಲಾಗುತ್ತದೆ. "ತಿರುಗುವ ಭೂಮಿ" ಎಂದರೆ ಭೂಮಿ ತಿರುಗುವುದನ್ನು ತೋರಿಸುವುದು, "ಹೆಜ್ಜೆ ನೆರಳಾಗಿ" ಎಂದರೆ ಹೆಜ್ಜೆ ನೆರಳಾಗಿರುವುದನ್ನು ತೋರಿಸುವುದನ್ನು ನೋಡಬಹುದು. "ಪ್ರೇಮವೆಂಬ ರಂಗವಲ್ಲಿ ಹಾಕಿದೆ ಇಲ್ಲಿ" ಎನ್ನುವಾಗ ಲವ್ ಎಂಬ ರಂಗೋಲಿ ಹಾಕಿದ ಉದಾಹರಣೆ ಇದೆ. ಇದು ಸಂಕೇತವನ್ನು ಚಿತ್ರಿಸುವ ಸರಿಯಾದ ಕ್ರಮವಲ್ಲ. ಸಾಹಿತ್ಯಿಕವಾದ ಸಂಕೇತ ಆಗಲೇ ವಾಚ್ಯವಾಗಿ ಹೇಳಲ್ಪಟ್ಟಿರುತ್ತದೆ. ಅದನ್ನೇ ದೃಶ್ಯದಲ್ಲಿ ಪುನರಾವರ್ತಿಸುವುದು ಯಾವ ಪರಿಣಾಮವನ್ನು ಉಂಟುಮಾಡುವುದಿಲ್ಲ. ಕೆಲವೊಮ್ಮೆ ಸಾಹಿತ್ಯದ ಸಂಕೇತಕ್ಕೂ ದೃಶ್ಯೀಕರಣಕ್ಕೂ ಯಾವ ಸಂಬಂಧವೂ ಇರುವುದಿಲ್ಲ. 'ಅಮೆರಿಕಾ ಅಮೆರಿಕಾ' ಚಿತ್ರದಲ್ಲಿ ಬಳಕೆಯಾಗಿರುವ ಡಾ।ಎಚ್.ಎಸ್.ವೆಂಕಟೇಶಮೂರ್ತಿ ಅವರ "ಬಾನಲ್ಲಿ ಓಡೋ ಮೇಘ ಗಿರಿಗೂ ನಿಲ್ಲುವ ಯೋಗ.." ಕವಿತೆಯಲ್ಲಿ ಸ್ಥಾಯಿ ಮತ್ತು ಸಂಚಾರಿ ಭಾವಗಳನ್ನು

ಸಾಂಕೇತಿಕವಾಗಿ ಹೇಳಲಾಗಿದೆ. ಆದರೆ ದೃಶ್ಯೀಕರಣದ ಯಾವ ಹಂತದಲ್ಲೂ ಗೀತೆಯಲ್ಲಿ ಬಳಕೆಯಾದ ಯಾವ ಸಂಕೇತಗಳೂ ಅರಿವಿಗೆ ಬರುವುದಿಲ್ಲ. ಮಾತ್ರವಲ್ಲ, ಗೀತೆಯನ್ನು ಗಮನವಿಟ್ಟು ಕೇಳದಿದ್ದರೆ ಅದರಲ್ಲಿ ಅಷ್ಟೊಂದು ಸಂಕೇತಗಳಿವೆ ಎಂಬುದು ಅರಿವಿಗೂ ಬರುವುದಿಲ್ಲ. ಇದು ಸರಿಯಾದ ಕ್ರಮವಲ್ಲ. ಸಂಕೇತಗಳನ್ನು ದೃಶ್ಯೀಕರಿಸಲು ಎರಡೂ ಮಾಧ್ಯಮದ ಸೂಕ್ಷ್ಮಗಳು ಗೊತ್ತಿರಬೇಕು. ಇದಕ್ಕೆ ಉತ್ತಮ ಉದಾಹರಣೆಯಾಗಿ 'ಮೈಸೂರು ಮಲ್ಲಿಗೆ'ಯ ಎರಡು ಉದಾಹರಣೆಗಳನ್ನು ನೋಡಬಹುದು. ಒಂದು ''ಹುಣ್ಣಿಮೆ ರಾತ್ರಿಯಲಿ ಉಕ್ಕುವುದು ಕಡಲಾಗಿ ನಿನ್ನ ನೆನಪು'' ಎಂಬ ಸಂಕೇತ. ಇದನ್ನು ದೃಶ್ಯೀಕರಿಸುವಾಗ ಹುಣ್ಣಿಮೆಯಲ್ಲಿ ಉಕ್ಕುವ ಕಡಲಿನ ಮೇಲೆ ಅವಳ ನೆರಳು ಬೀಳುವಂತೆ ಚಿತ್ರೀಕರಿಸಲಾಗಿದೆ. ಇನ್ನೊಂದು ''ದೀಪದಲ್ಲಿ ಬಿಡುಗಣ್ಣ ನಿಲಿಸಿ'' ಎಂಬ ಸಂಕೇತ. ಇಲ್ಲಿ ದೀಪದ ಮೂಲಕ ಅವಳ ಕಣ್ಣುಗಳನ್ನು close-upನಲ್ಲಿ ತೋರಿಸಲಾಗಿದೆ. ಈ ಎರಡೂ ಉದಾಹರಣೆಗಳಲ್ಲಿ ಸಾಹಿತ್ಯ ಕಟ್ಟಿದ ಸಂಕೇತಗಳ ಅನುಭವ ತೀವ್ರವಾಗುವ ಮೂಲಕ ಅದರ ಸಾಧ್ಯತೆ ಹಿಗ್ಗಿದೆ. ಇದು ಹಿಂದಿನ ಉದಾಹರಣೆಗಳಿಗಿಂತ ಉತ್ತಮ ಮಾರ್ಗವೇ ಹೊರತು ಸರಿಯಾದ ಮಾರ್ಗವಲ್ಲ. ಸರಿಯಾದ ಮಾರ್ಗವೆಂದರೆ ಸಾಹಿತ್ಯಿಕ ಸಂಕೇತಗಳನ್ನು ಅದರ ಶಕ್ತಿಯೊಡನೆ ಬಳಸಿಕೊಂಡು ಇನ್ನೊಂದು ನೆಲೆಯಲ್ಲಿ ದೃಶ್ಯಗಳನ್ನು ಜೋಡಿಸುತ್ತ ಹೋಗುವುದು. ಇದಕ್ಕೆ 'ಎಡಕಲ್ಲು ಗುಡ್ಡದ ಮೇಲೆ' ಚಿತ್ರದ ''ವಿರಹಾ ನೂರು ನೂರು ತರಹ...'' ಗೀತೆಯನ್ನು ನೋಡಬಹುದು. ಈ ಗೀತೆಯಲ್ಲಿ ''ಹರೆಯ ಉಕ್ಕಿ ಕರೆವ ಹಕ್ಕಿ'' ''ಗಂಧರ್ವ ಲೋಕದಲ್ಲಿ ರೋಮಾಂಚ ರಾತ್ರಿ / ಮಧುಚಂದ್ರ ಮಂಚದಲ್ಲಿ ರಸಹೀನ ರಾತ್ರಿ'' ಮುಂತಾದ ಸೊಗಸಾದ ಸಂಕೇತಗಳಿವೆ. ಆದರೆ ದೃಶ್ಯೀಕರಣದಲ್ಲಿ ಈ ವಿವರಗಳಿಗೆ ದೃಶ್ಯ ಜೋಡಿಸುವ ಕೆಲಸವಾಗಿಲ್ಲ. ಬದಲಾಗಿ ಉನ್ಮಾದಕ್ಕೊಳಗಾದ ಹೆಣ್ಣೊಬ್ಬಳ ಅವಸ್ಥೆಯನ್ನು ಕ್ಯಾಮರಾ ಚಲನೆ ಮತ್ತು ಅಭಿನಯದಲ್ಲಿ ತೋರಿಸಲಾಗಿದೆ. ಇದಕ್ಕೆ ಪೂರಕವಾಗಿ ಸಾಹಿತ್ಯವೂ ಕೆಲಸ ಮಾಡಿದೆ. ಈ ದೃಶ್ಯೀಕರಣ ಮಾಧವಿಯ ನಿರ್ಧಾರಕ್ಕೆ ಮುಂದೆ ಕಾರಣವಾಗುವುದನ್ನು ಗಮನಿಸಿದರೆ ಇದು ಸಂಕೇತವನ್ನು ಬಳಸುವ ಸರಿಯಾದ ಕ್ರಮ ಎನ್ನಬಹುದು.

Non-narrative filmಗಳಲ್ಲಿ ವಿವರಗಳನ್ನು ಅತಿಯಾಗಿಸಿ ಕಥಾನಕದ ಹಾದಿಯಲ್ಲಿ ಸಾಗಬಾರದು ಎಂಬ ತಾತ್ವಿಕ ಹಿನ್ನೆಲೆಯೇ ಇರುವುದರಿಂದ ಇದರಲ್ಲಿ ಸಾಂಕೇತಿಕತೆಗೆ ಮಹತ್ವ ಜಾಸ್ತಿ. ಕನ್ನಡ ಚಿತ್ರರಂಗದ ಈ ಮಾದರಿ ಚಿತ್ರಗಳಲ್ಲಿ ಸಾಂಕೇತಿಕತೆ ಬಳಸುವಲ್ಲಿ ಮೆಲೋಡ್ರಾಮ ದಿಕ್ಕಿಗೆ ಹೋಗಬಾರದು ಎಂಬ ಎಚ್ಚರಿಕೆ ಕೂಡ ಕೆಲಸ ಮಾಡುವುದನ್ನು ಕಾಣಬಹುದು. ಕೆಲವು ಸಂದರ್ಭದಲ್ಲಿ ಸಾಹಿತ್ಯದ ಸಂಕೇತಗಳೇ ನೇರವಾಗಿ ಚಿತ್ರರಂಗ ಪ್ರವೇಶಿಸಿದ್ದೂ ಇದೆ. ಹಾವನ್ನು ಕಾಮಕ್ಕೆ, ಮಳೆಯನ್ನು ನೆನಪಿಗೆ ಸಂಕೇತವಾಗಿಸುವ ಸಂದರ್ಭ ಹೊಸ ಅಲೆ ಚಿತ್ರಗಳಲ್ಲಿ ನೋಡಬಹುದು. ಇದಲ್ಲದೆ ಬೆಳಕನ್ನು ಬಿಡುಗಡೆಗೆ, ಕತ್ತಲನ್ನು ಬಂಧನಕ್ಕೆ - ಹೀಗೆ ಅನೇಕ suitable ಆದ ಸಾಂಕೇತಿಕ ಮಾರ್ಗಗಳೂ ಚಿತ್ರದಲ್ಲಿ ಬಳಕೆಯಾಗಿವೆ. ಇಂತಹದೊಂದು ಸಾಂಕೇತಿಕ ಮಾರ್ಗ ಚಿತ್ರದ ಅಭಿವ್ಯಕ್ತಿಗೆ ಒಂದು ಮಾದರಿಯ ಸಂಯಮ ತಂದುಕೊಟ್ಟಿದ್ದು ನಿಜ.

ಪ್ರತಿಮೆಗಳು Non-narrative ಚಿತ್ರಗಳ ಕೇಂದ್ರವಾಗಿ ಕೆಲಸ ಮಾಡುವಂತಹವು. ಚಿತ್ರದಲ್ಲಿ ಈ ಪ್ರತಿಮೆ ಒಂದು ಪರಂಪರೆಯನ್ನು ಮಾತ್ರ ಎರವಲು ಪಡೆಯುವುದಿಲ್ಲ. ಬದಲಾಗಿ ಒಂದು ಅನುಭವ ನಿರ್ಮಾಣಕ್ಕೆ ಪ್ರಯತ್ನಿಸುತ್ತಿರುತ್ತವೆ. ಈ ಸಂದರ್ಭದಲ್ಲಿ ಪಾಶ್ಚಿಮಾತ್ಯ ಹೊಸ ಅಲೆ ಚಿತ್ರಗಳು ಕನ್ನಡ ಚಿತ್ರರಂಗಕ್ಕೆ ಒಂದು ಮಾದರಿ ನಿರ್ಮಿಸಿದವು. ಈ ಚಿತ್ರಗಳಲ್ಲಿ ಸಾಮಾನ್ಯವಾಗಿ ಕಾರ್ಯಕ್ರಮವೇ ಬೇರೆಯಾಗಿರುತ್ತದೆ. ಭಾರತೀಯ ಕಥನ ಕಲೆಗಿಂತ ಅವರ ಅಭಿವ್ಯಕ್ತಿ ಕ್ರಮವೇ ಬೇರೆ. ಅದರಲ್ಲೂ ಕನ್ನಡದಲ್ಲಿ realistic story stigma ಮೊದಲಿನಿಂದ ಕೆಲಸ ಮಾಡಿರುವುದರಿಂದ ಪಾಶ್ಚಾತ್ಯ ಪ್ರತಿಮಾ ವಿಧಾನವನ್ನು ಇಲ್ಲಿಗೆ ನೇರವಾಗಿ ಅಳವಡಿಸುವುದು ಹಲವು ಮಾದರಿ ಬಿಕ್ಕಟ್ಟಿಗೂ ಕಾರಣವಾದದ್ದಿದೆ. ಉದಾಹರಣೆಗೆ 'ಋಷ್ಯಶೃಂಗ'ದಲ್ಲಿ ಷೇಕ್ಸ್‌ಪಿಯರ್‌ನ super-natural element ಅನ್ನು ಬಳಸಿದ್ದು ಪರಿಣಾಮಕಾರಿಯಾದ ಪ್ರತಿಮೆಯಾಗದೆ ಹೋಯಿತು.

ಕನ್ನಡದ ಮಟ್ಟಿಗೆ ಪ್ರತಿಮಾ ವಿಧಾನವನ್ನು ಅತ್ಯಂತ ಸಮರ್ಥವಾಗಿ ಬಳಸಿಕೊಂಡವರು ಗಿರೀಶ್ ಕಾಸರವಳ್ಳಿ. ಅವರ ಚಿತ್ರಗಳಲ್ಲಿ ಸ್ಥಾಯಿಯಾಗಿ ಕೆಲಸ ಮಾಡುವ ಪ್ರತಿಮೆ ಚಿತ್ರದ ಸಂವಿಧಾನವನ್ನೇ ನಿರ್ಧರಿಸುತ್ತದೆ. 'ಘಟಶ್ರಾದ್ಧ'ದಲ್ಲಿನ ಯಮುನಕ್ಕನ ಅಬಾರ್ಷನ್, ಕೇಶಮುಂಡನದ ಪ್ರತಿಮೆಗಳು, 'ಮನೆ' ಚಿತ್ರದ ಬಣ್ಣದ ಪ್ರತಿಮೆ, 'ಬಣ್ಣದ ವೇಷ'ದಲ್ಲಿನ ಬೆಟ್ಟದ ಕಲ್ಪನೆ, 'ಕ್ರೌರ್ಯ'ದಲ್ಲಿನ ಮೊಲದ ಪ್ರತಿಮೆ, 'ತಾಯಿ ಸಾಹೇಬ'ದಲ್ಲಿನ ಅತ್ತರಿನ ಪ್ರತಿಮೆ - ಇವೆಲ್ಲ ಪ್ರತಿಮಾ ವಿಧಾನದ ಉತ್ಕೃಷ್ಟ ಮಾದರಿಗಳೇ. ಪ್ರತಿಮೆಗಳನ್ನು ವಿವರವಾಗಿ ಪರಿವರ್ತಿಸುವಲ್ಲಿ ಕಾಸರವಳ್ಳಿ ತೋರಿಸುವ ಶ್ರದ್ಧೆ ಇದಕ್ಕೆ ಮುಖ್ಯ ಕಾರಣ. ಈ ಅಂಶವನ್ನು ಕಾಸರವಳ್ಳಿಯವರಲ್ಲಿ ಮಾತ್ರವಲ್ಲ, ಹೊಸ ಅಲೆಯ ಎಲ್ಲಾ ಉತ್ತಮ ಚಿತ್ರಗಳಲ್ಲೂ ಗುರುತಿಸಬಹುದು. 'ಹಂಸಗೀತೆ' ಚಿತ್ರದಲ್ಲಿ ಬಳಕೆಯಾದ ಉಯ್ಯಾಲೆ ಪ್ರತಿಮೆ, 'ಕಾಡು ಕುದುರೆ' ಚಿತ್ರದಲ್ಲಿ ಬಳಕೆಯಾದ ಕುದುರೆ, 'ಕನ್ನೇಶ್ವರ ರಾಮ'ದಲ್ಲಿ ಬಳಕೆಯಾದ ಬೆಂಕಿ, 'ತಬ್ಬಲಿಯು ನೀನಾದೆ ಮಗನೆ' ಚಿತ್ರದಲ್ಲಿ ಬಳಕೆಯಾದ ಗೋಮಂಡೆ - ಇವೆಲ್ಲ ಉತ್ತಮ ಪ್ರತಿಮೆಗಳ ಮಾದರಿಗಳು. ಇಂತಹ ಪ್ರತಿಮೆಗಳು ಹಲವು ಪುಟಗಳ ಸಾಹಿತ್ಯಿಕ ವಿವರಗಳನ್ನು ನೀಡಲಾಗದ್ದನ್ನು ಸಮರ್ಥವಾಗಿ ಹೇಳಿದ್ದವು.

ಆದರೆ ಸಾಹಿತ್ಯದಲ್ಲಿ ಉತ್ತಮವಾಗಿ ಬಳಕೆಯಾದ ಪ್ರತಿಮೆಯನ್ನು ಚಿತ್ರಮಾಧ್ಯಮಕ್ಕೆ ಪರಿವರ್ತಿಸುವಾಗ ಕೆಲವೊಮ್ಮೆ ಬಿಕ್ಕಟ್ಟು ನಿರ್ಮಾಣವಾಗಿದ್ದೂ ಇದೆ. ಸಾಹಿತ್ಯ ತನ್ನ ಉತ್ತಮ ಮಾದರಿಯಲ್ಲಿ ನಿರ್ಮಾಣಗೊಳಿಸಿದ ಪ್ರತಿಮೆಗಳನ್ನು ದೃಶ್ಯವಾಗಿಸುವಾಗ ಸಿನಿಮಾ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಬೇಕು. ಅದು ಕೆಲವು ಸಂದರ್ಭದಲ್ಲಿ ಸವಾಲು ಎದುರಿಸುವ ಜಾಣ್ಮೆಯನ್ನು ಬೇಡುತ್ತದೆ. 'ಸಂಸ್ಕಾರ'ದ ನಾರಾಯಣಪ್ಪನ ಶವ ಕೊಳೆಯುತ್ತಿರುವ ಸಂಸ್ಕೃತಿಗೆ ಪ್ರತಿಮೆಯಾಗಿತ್ತು (ಸಂಸ್ಕಾರಕ್ಕಿರುವ ಇನ್ನೊಂದು ಶ್ಲೇಶಾರ್ಥ ಕೂಡ ಹೌದು). ಈ ಸಾಧ್ಯತೆಯನ್ನು ಚಿತ್ರ ಸಾಧಿಸಿಕೊಳ್ಳಲಿಲ್ಲ. 'ಹಂಸಗೀತೆ'ಯಲ್ಲಿ ಭೈರವಿ ವೆಂಕಟಸುಬ್ಬಯ್ಯ ನಾಲಿಗೆ ಕತ್ತರಿಸಿಕೊಳ್ಳುವುದು ಒಂದು ಉತ್ಕೃಷ್ಟ ಪ್ರತಿಮೆ. ಚಿತ್ರದಲ್ಲಿ ಇದಕ್ಕೆ ಈ ಪರಿಣಾಮ ಸಿಕ್ಕಲಿಲ್ಲ. 'ಚೋಮನ ದುಡಿ'ಯಲ್ಲಿ ಕೂಡ ದುಡಿಯ ಸಂಕೇತ ಚಿತ್ರದಲ್ಲಿ ಪರಿಣಾಮಕಾರಿಯಾಗಿ ಬರಲಿಲ್ಲ. ಇಲ್ಲೆಲ್ಲ ಬಿಕ್ಕಟ್ಟಿಗೆ ಕಾರಣವೂ ಸ್ಪಷ್ಟ. ಸಾಹಿತ್ಯದ ಪ್ರತಿಮೆಗಳು ಚಿತ್ರಕ್ಕೆ ಬಂದಾಗ ಮೂರ್ತ ರೂಪ ಪಡೆಯುತ್ತವೆ. ಇದರಿಂದ ಅಮೂರ್ತ ನೆಲೆಯಲ್ಲಿ ಅವು ಸೃಷ್ಟಿಸಿದ್ದ ಅರ್ಥಪರಂಪರೆ ನಷ್ಟವಾಗುತ್ತದೆ. ಈ ಬಿಕ್ಕಟ್ಟಿನಿಂದ ಪಾರಾಗಲು ಪ್ರತಿಮೆ ಮೂರ್ತವಾದಾಗಲು ಅಮೂರ್ತದ ಎಳೆ ಜೀವಂತವಾಗಿಸುವ ಜಾಣ್ಮೆ ಬೇಕು. 'ಬರ' 'ಅಬಚೂರಿನ ಪೋಸ್ಟಾಫೀಸು' 'ತಬರನ ಕತೆ'ಯಂತಹ ಚಿತ್ರಗಳಲ್ಲಿ ಅದು ಸಾಧ್ಯವಾಗಿದೆ.

ಈ ಚರ್ಚೆಯ ನಂತರ ಕೂಡ ಪ್ರತಿಮಾ ವಿಧಾನ ಕನ್ನಡ ಚಿತ್ರರಂಗದ ಪ್ರಮುಖ ಅಭಿವ್ಯಕ್ತಿ ಮಾಧ್ಯಮವಾಗದಿದ್ದನ್ನು ಒಪ್ಪಿಕೊಳ್ಳಲೇಬೇಕು. 'ಶರಪಂಜರ' ಎಂಬ ಕಲ್ಪನೆ ತನ್ನ ಅಮೂರ್ತ ನೆಲೆಯಲ್ಲಿ ಒದಗಿಸುವ ಅರ್ಥ ಪರಂಪರೆ, ಬಾಣದ ಪಂಜರದಲ್ಲಿ ಕಾವೇರಿಯನ್ನು ನಿಲ್ಲಿಸಿ ಲಾಂಗ್‌ಶಾಟ್‌ನಲ್ಲಿ ತೋರಿಸಿದರೆ ಅಮೂರ್ತಕ್ಕಿಂತ ಅರ್ಥಹೀನವಾಗುತ್ತದೆ ಎಂಬುದನ್ನು ಮರೆಯಬಾರದು. ಕಥನ ಕ್ರಮ ಸವಕಲಾಗುತ್ತಿರುವ ಹೊತ್ತಿನಲ್ಲಿ ಪ್ರತಿಮಾ ವಿಧಾನಕ್ಕೆ ಪ್ರವೇಶಿಸಲು ಇದು ಸಕಾಲ.

• • •

ಈ ಭಾಗದಲ್ಲಿ ಇನ್ನು ಕೆಲವು ಪರಿಕಲ್ಪನೆಗಳು ಚಿತ್ರಮಾಧ್ಯಮದಲ್ಲಿ ಬಳಕೆಯಾಗುವ ಕ್ರಮ ನೋಡೋಣ :

ವೇಗ (pace), ಈ ಕುರಿತು ಸಾಮಾನ್ಯವಾಗಿ ಸಾಹಿತ್ಯದಲ್ಲಿ ಜನಪ್ರಿಯ ಕೃತಿಗಳು 'ವೇಗವಾಗಿ ಓಡಿಸಿಕೊಂಡು ಹೋಗುತ್ತವೆ'' ಎಂದು ಹೇಳಲಾಗುತ್ತದೆ. ಕಲಾತ್ಮಕ ಸಾಹಿತ್ಯ ಅಳಕ್ಕಿಳಿದು ವಿವರಗಳ ಅಥೆಂಟಿಸಿಟಿಗೆ ಪ್ರಯತ್ನಿಸುವುದರಿಂದ ಅಲ್ಲಿ ವೇಗ ಕಡಿಮೆ ಎಂದು ಹೇಳಲಾಗುತ್ತದೆ. ಸೈದ್ಧಾಂತಿಕವಾಗಿಯೇ ಇದು ಸರಿಯಾದ ವಿಶ್ಲೇಷಣೆ. ಒಂದು ಸಾಹಿತ್ಯ ಕೃತಿಯ ವೇಗ ನಿರ್ಧಾರವಾಗುವುದು ಅದು ವಿವರಗಳನ್ನು ನೀಡುವ ಕ್ರಮದಲ್ಲಿ. ಸಿನಿಮಾದಲ್ಲೂ ಕೂಡ ಆರ್ಟ್ ಫಿಲಮ್‌ಗಳು ಬೋರ್ ಹೊಡೆಯುತ್ತವೆ, ಅಲ್ಲಿ ವೇಗ ಕಡಿಮೆ ಎಂಬ ಕಲ್ಪನೆ ಇದೆ. ಆದರೆ ಇಲ್ಲಿ ಜರುಗುವ ಕ್ರಿಯೆ ಬೇರೆ. ವಾಸ್ತವವಾಗಿ ಘಟನೆಗಳನ್ನು ಅಭಿವ್ಯಕ್ತಿಸುವಲ್ಲಿ ಕಲಾತ್ಮಕ ಚಿತ್ರಗಳ ವೇಗ ವ್ಯಾಪಾರಿ ಚಿತ್ರಗಳಿಗಿಂತ ಹೆಚ್ಚಾಗಿಯೇ ಇರುತ್ತದೆ. ಉದಾಹರಣೆಗೆ ಒಬ್ಬ ಕೊಲೆ ಮಾಡಿದ ನಂತರ ವಿಚಾರಣೆ ನಡೆದು ಜೈಲಿಗೆ ಹೋದ ಎಂಬ ವಾಕ್ಯ ವ್ಯಾಪಾರಿ ಚಿತ್ರದಲ್ಲಿ ಇಡೀ ಚಿತ್ರವನ್ನೇ ಆಕ್ರಮಿಸಿಕೊಳ್ಳಬಹುದು. ಕೊಲೆ ಮಾಡಿದವನಿಗೊಂದು flash back, ವಿಚಾರಣೆ ನಡುವೆ ನಾಯಕ ತಪ್ಪಿಸಿಕೊಂಡು ಹೋಗಿ ನಡೆಸುವ ಸಾಹಸ, ಕೊನೆಗೆ ಜೈಲಿಗೆ ಹೋಗುವುದು ಇದು ಒಂದು ಜನಪ್ರಿಯ ಫಾರ್ಮುಲಾ ಕೂಡ. ಆದರೆ ಕಲಾಚಿತ್ರದಲ್ಲಿ ಕೊಲೆ ಮಾಡುವ ಒಂದು ಶಾಟ್, ವಿಚಾರಣೆಯ ಶಾಟ್, ಕೊನೆಗೆ ಅವನು ಜೈಲಿನಲ್ಲಿರುವ ಶಾಟ್ ಹೀಗೆ ಕೇವಲ ಮೂರು ಶಾಟ್‌ಗಳಲ್ಲಿ ಕಥೆ ಹೇಳಿಬಿಡಬಹುದು. ಇಲ್ಲಿ ವೇಗ ಜಾಸ್ತಿಯೇ ಇದೆ. ಆದರೂ ಇದು ಮುಂದುವರಿಯುವುದಿಲ್ಲ. ಕಾರಣ ಸಿನಿಮಾ ನಡೆಯುವುದು ಪ್ರೇಕ್ಷಕನ psychological realityಯಲ್ಲಿ ಅಲ್ಲ, ಅವನನ್ನು ಒಂದು

ಫ್ರೇಮ್ ಎಷ್ಟರ ಮಟ್ಟಿಗೆ disturb ಮಾಡುತ್ತದೆ ಎಂಬುದಕ್ಕೆ ಮಹತ್ವ ಜಾಸ್ತಿ. ನೇರ ಪರಿಣಾಮದಲ್ಲಿ ಯಾವತ್ತಿಗೂ ಶಾಕ್ ಕಡಿಮೆ. ಘಟನೆಯನ್ನು ಸಾಂದ್ರೀಕರಿಸಿ ಹಂತ ಹಂತವಾಗಿ ಬಿಡುಗಡೆ ಮಾಡುವ ಮೂಲಕ ಈ ಪರಿಣಾಮ ಸಾಧಿಸಬಹುದು. ವಾಸ್ತವವಾಗಿ ಕಮರ್ಷಿಯಲ್ ಸಿನಿಮಾಗಳು ಮಾಡುವುದು ಇದನ್ನೇ. ಉದಾಹರಣೆಗೆ ಸಾವಿನ ದೃಶ್ಯವನ್ನು ಹಿಗ್ಗಿಸಿ ಅದರಿಂದ ಮೆಲೋಡ್ರಾಮದ ಆಯಾಮವನ್ನು ಪಡೆಯಬಹುದು. ಅತ್ಯಾಚಾರದ ದೃಶ್ಯದ ಪ್ರತಿ ವಿವರಗಳನ್ನು ದಾಖಲಿಸಿ ಸ್ಯಾಡಿಸ್ಟ್ ಉದ್ದೇಶ ಸಾಧಿಸಿಕೊಳ್ಳಬಹುದು. ಹೀಗೆ ಓಟವನ್ನು ಇಡುವ ಕ್ರಮದಲ್ಲೇ ಈ ಚಿತ್ರಗಳು ತಮ್ಮ ರಂಜಕತೆ ಸಾಧಿಸುತ್ತವೆ. ಇಲ್ಲಿ ವೇಗವನ್ನು ನಿರ್ಧರಿಸುವ ಅಂಶ ರಂಜಕತೆ.

ಆದರೆ ಒಳ್ಳೆಯ ಸಿನಿಮಾದಲ್ಲಿ ವೇಗ ಹೀಗೆ ಕೆಲಸ ಮಾಡುವುದಿಲ್ಲ. Micro levelನಲ್ಲಿ ಬಿಡಿ ಬಿಡಿ ವಿವರಗಳನ್ನು ತಾನು ಅನುಭವ ಮಾಡಿಸಬೇಕಾದ ಕ್ರಮಕ್ಕೆ ಅನುಗುಣವಾಗಿ ಜೋಡಿಸುತ್ತ ಹೋಗುತ್ತದೆ. Boredom ಸೃಷ್ಟಿಸುವ ಉದ್ದೇಶವಿದ್ದಾಗ ಚಿತ್ರದ ವೇಗ ತಗ್ಗುತ್ತದೆ. ಉದಾಹರಣೆಗೆ 'ಬರ' ಚಿತ್ರದಲ್ಲಿ ನಾಯಕ ಗಲಭೆಯಲ್ಲಿ ಸಿಕ್ಕಿಕೊಂಡ ತನ್ನ ಮಗನಿಗಾಗಿ ಉದ್ವಿಗ್ನವಾಗಿ ಕಾಯುವ ದೃಶ್ಯ. ಈ ದೃಶ್ಯ ಎಷ್ಟು ನಿಧಾನವಾಗಿ ಚಿತ್ರಿತವಾಗಿದೆ ಎಂದರೆ ಪ್ರೇಕ್ಷಕನಿಗೇ ಚಡಪಡಿಕೆ ಹುಟ್ಟಲಾರಂಭಿಸುತ್ತದೆ. ಸತ್ಯು ಅವರ ಉದ್ದೇಶವೇ ಅದಾಗಿದ್ದರಿಂದ ಇದನ್ನೊಂದು ಯಶಸ್ವಿ ತಂತ್ರ ಎನ್ನಬಹುದು. ಹಾಗೆಯೇ 'ತಾಯಿ ಸಾಹೇಬ'ದ ಅಂತ್ಯದಲ್ಲಿ "ಪೊಲೀಸರು ಬಂದಿದ್ದಾರೆ" ಎಂಬ ಸಂಭಾಷಣೆಯನ್ನು ಅಸ್ಪಷ್ಟವಾಗಿ ಹೇಳಲಾಗಿದೆ. ಇದರಿಂದ ದೃಶ್ಯ ಏಕಕಾಲಕ್ಕೆ ಬಂಧನ ಮತ್ತು ಬಿಡುಗಡೆ ಎರಡಕ್ಕೂ ಸಂಕೇತವಾಗುತ್ತದೆ. ವಾಚ್ಯವಾಗಿ ಪೇಲವವಾಗುವುದನ್ನು ತಪ್ಪಿಸಿದೆ. 'ಮುಂದೇನು' ಎಂದು ಕಾತರದಿಂದ ಕಾಯುವಂತೆ ಮಾಡುವ ಜನಪ್ರಿಯ ಉದ್ದೇಶದ ವೇಗ ರಂಜಕತೆಯನ್ನು ಗುರಿಯಾಗಿರಿಸಿದ್ದರೆ, ದೃಶ್ಯಸಂಯೋಜನೆಯಲ್ಲಿ ಕಲಾತ್ಮಕ ಚಿತ್ರಗಳು ಸಾಧಿಸುವ ವೇಗ ಅನುಭವವನ್ನು ಗಟ್ಟಿಯಾಗಿಸುವ ಉದ್ದೇಶ ಹೊಂದಿರುತ್ತವೆ. ಸಾಹಿತ್ಯದಲ್ಲೂ ವೇಗ ಈ ಎರಡೂ ಅರ್ಥದಲ್ಲಿ ಬಳಕೆಯಾಗುತ್ತದೆ.

ನಂತರ ಆಕೃತಿ ಎಂಬ ಪರಿಕಲ್ಪನೆ ಪರಿಶೀಲಿಸಿದರೆ ಸಾಹಿತ್ಯಕ್ಕೆ ಅನೇಕ ಮಾದರಿ ಆಕೃತಿಗಳಿವೆ. ಕಥೆ, ಕಾದಂಬರಿ, ಕವಿತೆ, ಕಾವ್ಯ ಇತ್ಯಾದಿ, ಇಲ್ಲೆಲ್ಲ ಆಕೃತಿಗೆ ಬೇರೆ ಬೇರೆ ಸಾಧ್ಯತೆಗಳಿವೆ. ಒಂದು ಸಮಾನಾಂತರ ಅಂಶವೆಂದರೆ ಸಾಹಿತ್ಯದ ಆಕೃತಿಗಳೆಲ್ಲ ಮೂರ್ತರೂಪವಾದವು. ಅಮೂರ್ತವನ್ನೂ ಈ ನೆಲೆಯಿಂದಲೇ ನೋಡಬೇಕು. ಸಿನಿಮಾದಲ್ಲಿ ಹಾಗಲ್ಲ, ಅದರ ಮೂಲ ಆಕೃತಿಯೇ (basic structure) ಅಮೂರ್ತವಾದದು. ಅದರಲ್ಲಿ ವಿವರಗಳನ್ನು ತುಂಬುವ ಮೂಲಕ ಮೂರ್ತವಾಗಿಸುತ್ತವೆ. ಕಮರ್ಷಿಯಲ್ ಚಿತ್ರಗಳು ಅತಿಯಾಗಿ ವಿವರಗಳನ್ನು ನೀಡುವ ಮೂಲಕ ಮೂರ್ತವಾದ ಆಕೃತಿಯನ್ನು ಹೊಂದುತ್ತವೆ. ಸಂಭಾಷಣೆ ಪ್ರಧಾನವಾದ ಕಡೆ ಪ್ರತಿಯೊಂದೂ ವಾಚ್ಯವಾಗುವುದರಿಂದ ಆಕೃತಿ ಮೂರ್ತರೂಪ ತಾಳುತ್ತದೆ. ಹಾಗೆಯೇ ಕಲಾತ್ಮಕ ಚಿತ್ರಗಳು ಸಾಧ್ಯವಾದಷ್ಟೂ unsaid ಆಗಿ ವಿವರಗಳನ್ನು ಪೋಣಿಸುವ ಮೂಲಕ ಅಮೂರ್ತ ನೆಲೆಯನ್ನು ತಲುಪುತ್ತವೆ. ಏನೂ ಮಾಡದೆಯೇ ಬರ್ಗ್‌ಮನ್ ಮಹತ್ವದ ಚಿತ್ರ ಕೊಟ್ಟಿದ್ದಾರೆ. ಅವರ ಕಟಿಂಗ್ ಪ್ಯಾಟರ್ನ್‌ನಲ್ಲೇ ಚಿತ್ರದ ಆಕೃತಿ ನಿರ್ಧಾರವಾಗಿಬಿಡುತ್ತದೆ. Close-upಗಳು ಒಳತೋಟಿಗಳನ್ನು ಎಷ್ಟೋ ಬಾರಿ ಭಾವಗಿಂತ ಪ್ರಭಾವಶಾಲಿಯಾಗಿ ಹೇಳುತ್ತವೆ. ಸಿನಿಮಾ ಕೂಡ ಸಾಹಿತ್ಯದಂತೆ ಹೊಂದಬೇಕಾದ perfect structure ಎಂದರೆ ಅದರಲ್ಲಿನ ಒಂದು ದೃಶ್ಯ ತೆಗೆದರೂ ಇಡೀ ಚಿತ್ರದ ಉದ್ದೇಶವೇ ವಿಫಲವಾಗಿಬಿಡುವ ಬಿಗಿ ಬಂಧ. ಆದರೆ ಎಷ್ಟೋ ಸಿನಿಮಾಗಳಲ್ಲಿ ಒಂದು ಪಾತ್ರವನ್ನು ತೆಗೆದರೂ ಯಾವ ಧಕ್ಕೆಯಾಗುವುದಿಲ್ಲ. ಹೀಗಾಗಲು ಮುಖ್ಯ ಕಾರಣ ಭಾರತೀಯ ಚಿತ್ರಗಳ ಆಕೃತಿ compartmental ಪರಿಕಲ್ಪನೆಯ ಮೇಲೆ ನಿಂತಿರುವುದು. ನಾಯಕ ನಾಯಕಿ, ಹಾಸ್ಯಪಾತ್ರ, ಖಳರು ಹೀಗೆ ಪ್ರತ್ಯೇಕ ಅಸ್ತಿತ್ವ ಹೊಂದಿದ ಕಥಾವಾಹಿನಿಗೂ ಹಾಸ್ಯಪಾತ್ರಕ್ಕಾಗಿ ಸೃಷ್ಟಿಸಿದ ಕಥಾವಾಹಿನಿಗೂ ಯಾವ ಸಂಬಂಧವೂ ಇಲ್ಲ. ಎರಡೂ ಭಿನ್ನ ನೆಲೆಯಲ್ಲಿ ಬೆಳೆಯುತ್ತ ಹೋಗಿ ಪರಸ್ಪರ ಎಲ್ಲಿಯೂ ಸೇರುವುದೇ ಇಲ್ಲ. ಬಹುತೇಕ ಚಿತ್ರಗಳಲ್ಲಿ ವಿವರಗಳು ಹೀಗೆ ಪ್ರತ್ಯೇಕವಾಗಿ ಉಳಿಯುತ್ತವೆ. ಇದರಿಂದ ಉದಾತ್ತಗುಣಗಳೇ ಮೈವೆತ್ತ ನಾಯಕ, ಪಾತಿವ್ರತ್ಯದ ಪ್ರತಿನಿಧಿ ನಾಯಕಿ, ದುಷ್ಟಗುಣಗಳ ಸಾಕಾರ ರೂಪ ಖಳ, ನಗಿಸಲೆಂದೇ ಹುಟ್ಟಿದ ಹಾಸ್ಯನಟ ಹೀಗೆ black and whiteನಲ್ಲಿ ವಿವರಗಳು ದಾಖಲಾಗುತ್ತವೆ. ನಿಜವಾದ ಚಿತ್ರದ ಆಕೃತಿ ಹೀಗೆ ಸರಳ ನೆಲೆಯಲ್ಲಿರುವುದಿಲ್ಲ. ಒಳ್ಳೆಯವನಲ್ಲಿರುವ ಕೆಟ್ಟತನ, ಕೆಟ್ಟವನ ಒಳ್ಳೆಯತನ ಹೇಳಬಲ್ಲ ಸಂಕೀರ್ಣತೆ ಪಡೆದಿರುತ್ತದೆ. ವಿವರಗಳನ್ನು ಎಲ್ಲಿ ಜೋಡಿಸಬೇಕು, ಅನುಭವವನ್ನು ಹೇಗೆ ಬಿಡುಗಡೆ ಮಾಡಬೇಕು ಎಂಬ ಸ್ಪಷ್ಟ ಗೊತ್ತಾದ ಉದ್ದೇಶದ ಬಂಧವನ್ನು ಹೊಂದಿರುತ್ತದೆ.

ಲಯ (rhythm) ಮೂಲತಃ ಸಂಗೀತದಿಂದ ಬಂದ ಕಲ್ಪನೆ. ಸಾಹಿತ್ಯದಲ್ಲೂ ಇದೇ ಅರ್ಥದಲ್ಲಿ ಬಳಕೆಯಾಗುತ್ತದೆ. ಕವಿತೆಗಳ ಲಯದ ಬಗ್ಗೆ ಮಾತನಾಡಿದರೆ ಅದು ಆ ನೆಲೆಯಲ್ಲೇ. ಆದರೆ ಸಿನಿಮಾದಲ್ಲಿ ಈ ಶಬ್ದ ಸಂಗೀತದ ಬಳಕೆಯಾದ ಕಡೆ ಇದೇ ಅರ್ಥ ಹೊರಡಿಸುತ್ತದೆ. ಆದರೆ ಅದಕ್ಕೆ ಭಿನ್ನವಾದ ಇನ್ನೊಂದು ನೆಲೆ ಕೂಡ ಇದಕ್ಕಿದೆ. ದೃಶ್ಯ ಸಂಯೋಜನೆ ಕುರಿತು ಈ ಪರಿಕಲ್ಪನೆ ಬಳಸಬಹುದು. 'ಮನೆ' ಚಿತ್ರದಲ್ಲಿ ಇರುವೆ ಹರಿದಾಡುವ ಜಾಗಕ್ಕೆಲ್ಲ ಅರಿಶಿನ ಬಳಿದ ನಾಯಕ ಕೊನೆಗೆ ಒಂದು ಮೂಲೆಯಲ್ಲಿ ಕುಳಿತುಬಿಡುತ್ತಾನೆ. ದೃಶ್ಯದಲ್ಲಿ ಹಳದಿ ಬಣ್ಣ ತುಂಬಿ ಹೋಗಿ ಮೂಲೆಯಲ್ಲಿ ಕುಳಿತ ನಾಯಕ ಒಂದು ವಿವರ ಮಾತ್ರವಲ್ಲ, ಒಂದು uncomfortable ಭಾವನೆ ಹುಟ್ಟಿಸುವ ವಿಕ್ಷಿಪ್ತತೆ ಕೂಡ ಹೌದು. ನಾಯಕನ ಮನೋಸ್ಥಿತಿಯನ್ನು ಈ ದೃಶ್ಯ suggest ಮಾಡುತ್ತದೆ. ಜನಪ್ರಿಯ ಚಿತ್ರಗಳಲ್ಲಿ ಕೂಡ ನಾಯಕ-ನಾಯಕಿ ದೃಶ್ಯದಲ್ಲಿ ಪ್ರಧಾನವಾಗಿ ಕಾಣುತ್ತಾರೆ. ಮಿಕ್ಕ ಪಾತ್ರಗಳು ಗೌಣವಾಗಿ ಕಾಣುತ್ತವೆ. ಹೀಗೆ ದೃಶ್ಯಸಂಯೋಜನೆಯಲ್ಲಿ ಉದ್ದೇಶಿತ ಅರ್ಥ ಹೊರಡಿಸುವ ಕ್ರಮವನ್ನು ಚಿತ್ರಗಳಲ್ಲಿ ಲಯ ಎಂದು ಗುರುತಿಸಬಹುದು. ತಾರಾ ವ್ಯವಸ್ಥೆಯಲ್ಲಿ (Star System) ತಾರೆಗೆ ಚಿತ್ರದ ಲಯ trap ಆಗಿರುತ್ತದೆ. ಇದರಿಂದ ಹೊರಬೀಳುವ ಸಂವೇದನಾ ಚೈತನ್ಯ ಈ ಚಿತ್ರಗಳಿಗಿರುವುದಿಲ್ಲ. ಆದರೆ ಒಳ್ಳೆಯ ಚಿತ್ರಗಳು ಹೀಗೆ ಪಾತ್ರಗಳಿಗೆ trap ಆಗದೆ flexible ಆಗಿರುತ್ತವೆ.

ಕೊನೆಯದಾಗಿ ಬಹಳ ಮುಖ್ಯವಾದ ಪರಿಕಲ್ಪನೆ ಧ್ವನಿಯದು. ಇದನ್ನು ಪಾಶ್ಚಾತ್ಯ ಮೀಮಾಂಸೆಯ ಟೋನ್ ಎಂಬ ಪರಿಕಲ್ಪನೆಗೆ ಸಾಮಾನ್ಯವಾಗಿ ಸಮೀಕರಿಸಲಾಗುತ್ತದೆ. ಆದರೆ ಟೋನ್ ಎಂಬ ಕಲ್ಪನೆಗೆ ಸಾಮಾನ್ಯವಾಗಿ ಆಶಯ ಎಂಬ ಅರ್ಥವಿದೆ. ಆದರೆ ಧ್ವನಿ ಇಷ್ಟು ಸರಳವಾದ ಕಲ್ಪನೆಯಲ್ಲ. ಅದು ಭಾರತೀಯ ಕಾವ್ಯಮೀಮಾಂಸೆಯ ಬಹು ಶತಮಾನಗಳ ಫಲ. ಆನಂದವರ್ಧನ ತನ್ನ 'ಧ್ವನ್ಯಾಲೋಕ'ದಲ್ಲಿ ಪರಿಕಲ್ಪನೆ ಹೇಳಿದ ನಂತರ ಒಂದು ಹೊಸ ಮಾದರಿಯ ಚಿಂತನಾಕ್ರಮವೇ ರೂಪುಗೊಂಡಿತು. ಇದನ್ನು ಸರಳವಾಗಿ ಹೇಳಬೇಕೆಂದರೆ ಕೃತಿ ತನ್ನ ನಿರ್ಮಾಣಕ್ಕೆ ಒಂದು ಉದ್ದೇಶವನ್ನು ಹೊಂದಿರುತ್ತದೆ. ಪ್ರತಿ ಹಂತದಲ್ಲೂ ಆ ಉದ್ದೇಶ ಸಾಧನೆಗಾಗಿ ಕ್ರಮಿಸುತ್ತಿರುತ್ತದೆ.

(ಚಿತ್ರ ೮೮) ಕಲೆ ಸಾಹಿತ್ಯ ಸಂಗೀತ ತಂತ್ರಗಳ ಸಮ್ಮಿಲನ : ೧೯೫೭ರಲ್ಲಿ ಬೆಂಗಳೂರಿನಲ್ಲಿ ನಡೆದ ಸಮಾರಂಭವೊಂದರಲ್ಲಿ ನಿರ್ದೇಶಕ ಟಿ.ವಿ. ಸಿಂಗ್ ಠಾಕೂರ್, ಛಾಯಾಗ್ರಾಹಕ ಆರ್. ಮಧುಸೂದನ್, ಸಂಗೀತ ನಿರ್ದೇಶಕ ಜಿ.ಕೆ.ವೆಂಕಟೇಶ್, ಸಾಹಿತಿ ಎಸ್.ಕೆ. ಕರೀಂಖಾನ್, ನಿರ್ಮಾಪಕ ಎ.ಸಿ. ನರಸಿಂಹಮೂರ್ತಿ ಹಾಗೂ ನಟ-ಸಾಹಿತಿ ಸಂಗೀತ ಮತ್ತು ಚಿತ್ರ ನಿರ್ದೇಶಕ ಆರ್.ನಾಗೇಂದ್ರರಾವ್

(ಚಿತ್ರ ೮೯) **ಸಾಹಿತಿಯ ಸಂಗಾತಿಗೆ ಬಾಗಿನ ಸಮರ್ಪಣೆ** : ಪ್ರಸಿದ್ಧ ಕಾದಂಬರಿಕಾರ ತ. ರಾ. ಸು. ಅವರ ಅಭಿನಂದನಾ ಸಮಾರಂಭದಲ್ಲಿ ಪಾರ್ವತಮ್ಮ ರಾಜಕುಮಾರ್ ಅವರಿಂದ ಶ್ರೀಮತಿ ಅಂಬುಜಾ ತ.ರಾ.ಸು ಅವರಿಗೆ ಬಾಗಿನ

ನಿರುದ್ದಿಶ್ಯವಾದ ಯಾವ ಕೃತಿಯೂ ಇರಲು ಸಾಧ್ಯವಿಲ್ಲ. ಇಂತಹ ಉದ್ದೇಶವೇ ಕೃತಿಯ ಧ್ವನಿ. ಈ ಉದ್ದೇಶಕ್ಕೆ ಸಾಮಾಜಿಕ ಜವಾಬ್ದಾರಿ, ಹೊಸತನದ ಕಾಣ್ಕೆ ಇವೆರಡೂ ಇರಬೇಕು ಎಂದು ಮೀಮಾಂಸಕರು ಅಭಿಪ್ರಾಯ ಪಟ್ಟಿದ್ದರು. ಇಂತಹದೊಂದು ಧ್ವನಿ ನಿರ್ಮಿತವಾಗಲು ಧ್ಯಾನಸ್ಥ ಮನೋಸ್ಥಿತಿ ಬೇಕೆಂದು ಗುರುತಿಸಿದ್ದರು.

ಈಗ ಸಿನಿಮಾ ವಿಷಯಕ್ಕೆ ಬಂದಾಗ ಎರಡು ಅಂಶಗಳನ್ನು ಚರ್ಚಿಸುತ್ತೇವೆ. ಒಂದು, ಸಿನಿಮಾದಲ್ಲಿ ಧ್ವನಿ ಯಾವ ಅರ್ಥದಲ್ಲಿ ಬಳಕೆಯಾಗುತ್ತದೆ. ಇನ್ನೊಂದು, ಸಾಹಿತ್ಯ ಕೃತಿ ಸಿನಿಮಾ ಆಗುವಾಗ ಅದರ ಧ್ವನಿ ಎಷ್ಟರಮಟ್ಟಿಗೆ ಹಾಗೇ ಉಳಿದುಕೊಳ್ಳುತ್ತದೆ, ಎಷ್ಟರ ಮಟ್ಟಿಗೆ ಬದಲಾಗುತ್ತದೆ ಎಂಬ ಪ್ರಶ್ನೆ. ಸಾಮಾನ್ಯವಾಗಿ ಸಿನಿಮಾ ಸಾಹಿತ್ಯ ಕೃತಿಯನ್ನು ಬದಲಾಯಿಸುವಾಗ ಏನನ್ನು ಬದಲಾಯಿಸಿದರೂ ಧ್ವನಿಯನ್ನು ಬದಲಾಯಿಸಬಾರದು ಎಂಬ ವಾದವಿದೆ. ಇದು ಸರಿಯಾದ ವಾದವಾದರೂ ಕಾಲದ ಅಂತರದಲ್ಲಿ ಇಂತಹ ಬದಲಾವಣೆ ಅಗತ್ಯವಾಗುತ್ತದೆ. ಇದಕ್ಕೆ 'ಕಾನೂರು ಹೆಗ್ಗಡಿತಿ' 'ಅವಸ್ಥೆ'ಯಂತಹ ಚಿತ್ರಗಳನ್ನು ಉದಾಹರಣೆಯಾಗಿ ನೀಡಬಹುದು. ಸಿನಿಮಾದಲ್ಲಿ ಕೂಡ ಧ್ವನಿ ಸಾಹಿತ್ಯದ ಅರ್ಥದಲ್ಲೇ ಬಳಕೆಯಾಗುತ್ತದೆ. ಆದರೆ ಎರಡೂ ಮಾಧ್ಯಮಗಳು ಇದನ್ನು ಸಾಧಿಸಿಕೊಳ್ಳುವ ದಾರಿ ಮಾತ್ರ ಬೇರೆಯಾಗಿದೆ. ಸಾಹಿತ್ಯ ತನ್ನ ವಿವರಗಳ ಸಾಂದ್ರೀಕರಣದಲ್ಲಿ ಇದನ್ನು ಸಾಧಿಸಿದರೆ ಸಿನಿಮಾ ತನ್ನ ಕಟಿಂಗ್ ಪ್ಯಾಟರ್ನ್‌ನಲ್ಲಿ ಸಾಧಿಸುತ್ತದೆ. ಹೀಗಾಗಿ ಸಿನಿಮಾದ ಧ್ವನಿ ದಟ್ಟವಾಗುವುದು ಸಂಕಲನದ ಸಂದರ್ಭದಲ್ಲಿ ಎಂಬ ಮಾತಿದೆ. ಈ ಹಂತದಲ್ಲಿ ವಿವರಗಳ ಆಯ್ಕೆ, ಜೋಡಣೆಯಂತಹ ಬಹಳ ಮುಖ್ಯವಾದ ಕೆಲಸ ನಡೆಯುತ್ತದೆ ಎಂಬುದು ಈ ಧೋರಣೆಯ ಅರ್ಥ.

ಹೆಚ್ಚಿನ ಸಂದರ್ಭದಲ್ಲಿ ಸಿನಿಮಾ ಸಾಹಿತ್ಯ ಕೃತಿಯನ್ನು ಆಧರಿಸಿದ್ದರೆ ಆ ಕೃತಿಯ ಧ್ವನಿಯನ್ನೇ ಹೇಳುತ್ತದೆ. 'ಘಟಶ್ರಾದ್ಧ' 'ಸಂಸ್ಕಾರ' 'ಬರ' 'ಬೆಳ್ಳಿಮೋಡ' ಇಂತಹ ಚಿತ್ರಗಳೆಲ್ಲ ಮೂಲದ ಧ್ವನಿಯನ್ನೇ ಬೇರೆ ಮಾದರಿಯಲ್ಲಿ ಹೇಳಿವೆ. ಕೆಲವು ಸಲ ಮೂಲದಲ್ಲಿ ಮುಖ್ಯವಾಗದ ಧ್ವನಿ ಸಿನಿಮಾದಲ್ಲಿ ಮುಖ್ಯವಾಗುತ್ತದೆ. 'ಮಿಸ್ ಲೀಲಾವತಿ'ಯ ಸಾಹಿತ್ಯ ಧ್ವನಿ ಅಪ್ಪನ ಮುದ್ದಿನಿಂದ ಮಗಳು ಹಾಳಾಗುವುದಾಗಿದ್ದರೆ, ಚಿತ್ರದಲ್ಲಿ ಕಲಿತ ಹೆಣ್ಣಿನ ಸ್ವಾಭಿಮಾನದ ಧ್ವನಿ ದಟ್ಟವಾಗಿ ಬಂತು. 'ನಾಗರಹಾವು' ಮೂಲಕತೆ ಸಾಮಾನ್ಯನೊಬ್ಬನ ವೈಭವೀಕರಣದ ಧ್ವನಿ ಹೊಂದಿದ್ದರೆ ಚಿತ್ರದಲ್ಲಿ ನಿರೀಕ್ಷೆ ಮತ್ತು ವಾಸ್ತವದ ನಡುವಿನ ಸಂಘರ್ಷದ ಧ್ವನಿ ಬಂದಿತು. ಜನಪ್ರಿಯ ಚಿತ್ರಗಳು ತಮ್ಮ ಚೌಕಟ್ಟಿಗೇ ಕಥಾವಸ್ತು ಒಗ್ಗಿಸಿಕೊಳ್ಳಲು ಹೋಗಿ ಮೂಲದ ಧ್ವನಿಯನ್ನೇ ಮರೆಯುವ ಸಂದರ್ಭವಿರುತ್ತದೆ. ಇದಕ್ಕೆ 'ಜನುಮದ ಜೋಡಿ' ಉತ್ತಮ ಉದಾಹರಣೆ. ಹಾಗೆಯೇ ಕಲಾತ್ಮಕ ಚಿತ್ರಗಳು ತಮ್ಮ working philosophyಗೆ ಅನುಗುಣವಾಗಿ ವಿವರ ಜೋಡಿಸಿ ಮೂಲದ ಧ್ವನಿಯನ್ನು ಗೌಣವಾಗಿಸುವ ಸಂದರ್ಭಗಳಿರುತ್ತವೆ. ಇದಕ್ಕೆ 'ಮನೆ' ಉತ್ತಮ ಉದಾಹರಣೆ. ಕೆಲವು ಸಲ ತನ್ನ ಧ್ವನಿ ಹೊಂದಿಕೆ ಆಗಲಿಲ್ಲ, ಹಲವು ಕಥೆಗಳ ಎಳೆ ಹಿಡಿದುಕೊಳ್ಳಬಹುದು. ಇನ್ನೂ ಕೆಲವು ಸಲ ಹಲವು ಕಥೆಗಳನ್ನು ತನ್ನದೇ ಧ್ವನಿಯಲ್ಲಿ ಮಾತಾಡಬಹುದು. ಸಾಹಿತ್ಯಿಕ ರಚನೆ ಬಳಸದ ಕಡೆ ಕೂಡ ಚಿತ್ರಕ್ಕೆ ಗಟ್ಟಿಯಾದ ಧ್ವನಿ ಇರುವ ಸಾಧ್ಯತೆಗಳೂ ಸಾಕಷ್ಟಿವೆ. 'ನಾಂದಿ'ಯಂತಹ ಚಿತ್ರ ಇದಕ್ಕೆ ಉತ್ತಮ ಉದಾಹರಣೆ. ಪ್ರಜ್ಞಾಪೂರ್ವಕವಾಗಿಯೂ ಅಪ್ರಜ್ಞಾಪೂರ್ವಕ ವಾಗಿಯೂ ಸಿನಿಮಾಕ್ಕೆ ಧ್ವನಿ ಇದ್ದೇ ಇರುತ್ತದೆ. ಅದನ್ನು ಗುರುತಿಸಿ ಬೆಳೆಸುವ ಜವಾಬ್ದಾರಿ ನಿರ್ದೇಶಕನದು.

ಇನ್ನು ಕೊನೆಯದಾಗಿ ಧ್ವನಿ ಬದಲಾಯಿಸುವಲ್ಲಿ ಒಂದು ಸಾಂಸ್ಕೃತಿಕ ರಾಜಕೀಯ (cultural politics) ಕೆಲಸ ಮಾಡುತ್ತದೆ. ಅದು ಕ್ರಾಂತಿಕಾರಿ ಧ್ವನಿಗಳನ್ನು ಸಮಾಜದ ರೂಢಿಗತ ಮೌಲ್ಯಗಳಿಗೆ ಹೊಂದಿಸುವುದು. ಈಗ 'ಆಶಾಸುಂದರಿ' ಚಿತ್ರದಲ್ಲಿ ಗೆಳೆತನಕ್ಕಾಗಿ ಮದುವೆಯಾಗದಿರುವ ಗೆಳತಿಯರಿದ್ದರೆ ಇದು ಸ್ಪಷ್ಟವಾಗಿ 'ಲೆಸ್‌ಬಿಯನ್' ಕಲ್ಪನೆ. ಆದರೆ ಜನ ಇದನ್ನು ಒಪ್ಪಿಕೊಳ್ಳಲಾರರು ಎಂಬ ಕಾರಣ ಇಬ್ಬರಿಗೂ ಪ್ರಿಯಕರರನ್ನು ಸೃಷ್ಟಿಸಿ ರೂಢಿಗತ ಕಲ್ಪನೆಯ ಚೌಕಟ್ಟಿಗೆ ತರಲಾಗಿದೆ. 'ಉಯ್ಯಾಲೆ' ಚಿತ್ರದ ಮೂಲದಲ್ಲಿ ವಿವಾಹಬಾಹಿರ ಸಂಬಂಧಕ್ಕೆ ಎಳೆಸುವ ಹೆಣ್ಣೊಬ್ಬಳ ಚಡಪಡಿಕೆ ಇದೆ. ಇದಕ್ಕೆ ಮೂಲ ಕಾದಂಬರಿಕಾರ ಚದುರಂಗರು ರೂಢಿಗತ ಕಾರಣ ಕೊಟ್ಟಿಲ್ಲದಿದ್ದರೂ ಅಂತ್ಯದಲ್ಲಿ ರಾಧಾಳಿಗೆ ಆದ ಸತತ ಗರ್ಭಪಾತದ ವಿವರ ನೀಡಿ ಅಸ್ಪಷ್ಟ ಸುಳಿವು ಕೊಟ್ಟಿದ್ದಾರೆ. ಇದನ್ನು ಆಧರಿಸಿ ಲಕ್ಷ್ಮೀನಾರಾಯಣ್ ಕಲ್ಪನಾ ಅವರಿಗೆ ಹಿರಿಯರಾದ ಕೆ.ಎಸ್.ಅಶ್ವತ್ಥ್ ಅವರ ಜೋಡಿ ಆರಿಸಿ ರಾಜಕುಮಾರ್ ಅವರನ್ನು ಮಿತ್ರನ ಪಾತ್ರದಲ್ಲಿಟ್ಟಿದ್ದಾರೆ. ಇದರಿಂದಾಗಿ ಕಲ್ಪನಾ ರಾಜಕುಮಾರ್ ಅವರತ್ತ ಆಕರ್ಷಿತರಾಗುವುದು ಸಿನಿಮಾ ರೂಢಿಗತ ನೆಲೆಯಲ್ಲಿ ಸಹಜವಾಗಿಯೇ ಕಾಣುತ್ತದೆ. ಹೀಗೆ ಮೂಲದ ಟೋನ್ ಎತ್ತಿದ ಪ್ರಶ್ನೆಗೆ ವಿಷಮ ದಾಂಪತ್ಯದ logic ಕೊಟ್ಟು ರೂಢಿಗತ ಟೋನ್‌ಗೇ ಕಥೆ ಬದಲಾಯಿಸಲಾಗಿದೆ. 'ಎಡಕಲ್ಲು ಗುಡ್ಡದ ಮೇಲೆ' ಚಿತ್ರದ ಮೂಲ ಕಾದಂಬರಿಯ ಅತೃಪ್ತಕಾಮಿ ಮಾಧವಿ ಚಿತ್ರದಲ್ಲಿ ಎಡವಿ ಪಶ್ಚಾತ್ತಾಪ ಪಡುವ ಗೃಹಿಣಿಯಾಗಿದ್ದಾಳೆ. ಕಾದಂಬರಿ ಧ್ವನಿಯನ್ನು ಇಲ್ಲೂ ಕೂಡ ರೂಢಿಗತ ಚೌಕಟ್ಟಿಗೆ ಬದಲಾಯಿಸಲಾಗಿದೆ. 'ನಾಗಮಂಡಲ'ದ ಮೂಲಕತೆಯಲ್ಲಿನ ಹಾದರದ ಹೆಣ್ಣು ಪತಿವ್ರತೆಯಾಗಿ ಬದಲಾಗಿದ್ದಾಳೆ. ಗಂಡನ ವೇಷದಲ್ಲಿ ಹಾವು ಬಂದ ಕಾರಣದಿಂದ ಅವಳು ಮೋಸ ಹೋಗಿದ್ದಾಳೆ (ಅಹಲ್ಯೆಯ ಹಾಗೆ). ದಾಂಪತ್ಯದ ಎಳೆಯನ್ನು ಹೆಣ್ಣು ಸಹಜವಾಗಿ ದಾಟಲಾರಳು, ಗಂಡು ಬೇರೆ ಹೆಣ್ಣನ್ನು ಬಯಸಿದರೆ ತಪ್ಪಲ್ಲ, ಆದರೆ ಹೆಣ್ಣು ಮಾತ್ರ ಸದಾ ಗಂಡನನ್ನೇ ಏಕಾಗ್ರಚಿತ್ತದಿಂದ ಜಪಿಸಬೇಕೆಂಬ ಗೃಹಿಣಿ ಮೀಮಾಂಸೆಗೆ ಇಲ್ಲೆಲ್ಲ ಮೂಲದ ಧ್ವನಿ ಬದಲಾಗಿರುವುದನ್ನು ನೋಡಬಹುದು. ಸಿನಿಮಾದಂತಹ ಪ್ರಭಾವಶಾಲಿ ಮಾಧ್ಯಮದ ವಿಷಯದಲ್ಲಿ ಇದು ಸಹಜ, ಸತ್ಯ ಕೂಡ.

• • •

ಉದ್ಯಮದ ಸ್ಥಾನಮಾನಕ್ಕೆ ಹೋರಾಡುತ್ತಿರುವ ಕನ್ನಡ ಚಿತ್ರರಂಗ ತನ್ನ ಘಟಕಗಳ ಕ್ರಮದ ಬಗ್ಗೆ ಗಂಭೀರವಾಗಿ ಚಿಂತಿಸಬೇಕಾದ ಕಾಲ ಬಂದಿದೆ. ತಾರಾ ವ್ಯವಸ್ಥೆಯ ಅಮಲಿನಲ್ಲಿ ತೇಲುತ್ತ ಕಥೆ ಇಲ್ಲದೆಯೇ ರೀಲು ಸುತ್ತಬಹುದು ಎಂಬ ಧೋರಣೆ ಮುಂದುವರಿದಿದ್ದೇ ಆದರೆ ಚಲನಚಿತ್ರ - ಸೃಜನಶೀಲ ಕಲೆಗಳಿಂದ ಗಾವುದ ದೂರ ನಿಲ್ಲುವುದು ಖಚಿತ. ತನ್ನ ಅಹಂಕಾರದ ಅರಮನೆಯಲ್ಲಿ ಸುಟ್ಟು ಸಾಯುವುದನ್ನು ತಪ್ಪಿಸಿಕೊಳ್ಳಲು ಇರುವ ಏಕೈಕ ಮಾರ್ಗವೆಂದರೆ ಕಥೆ-ಚಿತ್ರಕಥೆ-ಸಂಭಾಷಣೆ ಮುಂತಾದ ಸಾಹಿತ್ಯಿಕ ಅಂಶಗಳಿಗೆ ವೃತ್ತಿಪರತೆಯನ್ನು ನೀಡುವುದು.



ನಾದ, ಲಯದ ಹೊನಲು

'ಗೀತಂ ಚ ವಾದ್ಯಂ ಚ ನೃತ್ಯಂ ಚ ತ್ರಯಂ ಸಂಗೀತ ಮುಚ್ಯತೇ' - ಎಂದಿದ್ದಾನೆ ಸಂಗೀತ ಶಾಸ್ತ್ರಜ್ಞ ಶಾರ್ಙ್ಗದೇವ. ಗೀತ, ವಾದ್ಯ, ನೃತ್ಯ ಇವು ಮೂರೂ ಸೇರಿ ಸಂಗೀತವಾಗಿದೆ. ಸಂಗೀತಕ್ಕೆ ಸ್ವರ ಮತ್ತು ಲಯ ಎರಡೇ ಆಧಾರವಾಗಿವೆ. ಗಾಯನ ಮತ್ತು ವಾದನಕ್ಕೆ ಸ್ವರವೇ ಆಧಾರ. ನರ್ತನಕ್ಕೆ ಲಯವೇ ಆಧಾರ. ಸ್ವರವೆಂದರೆ ತಾನೇ ತಾನಾಗಿ ಇಂಪನ್ನುಂಟುಮಾಡುವುದೆಂದು ಅರ್ಥ. ಸಂಗೀತದಲ್ಲಿ ಸ್ವರವು ಶರೀರವಾದರೆ ಅದರ ಆತ್ಮವೇ ಲಯ. ಹೃದಯದ ತೀವ್ರ ಮತ್ತು ಸೂಕ್ಷ್ಮ ಭಾವನೆಗಳನ್ನು ಪ್ರಕಟಿಸಲಾಗದ ಭಾಷೆಗಿಂತ, ಹೆಚ್ಚು ಸಾಂದ್ರತೆಯಿಂದ ಭಾವಾಭಿವ್ಯಕ್ತಿ ಮೂಡಿಸುವ ಸಂಗೀತದ ಮಹತ್ತರ ಗುಣದಿಂದಾಗಿ ಅದು ದೃಶ್ಯ ಮಾಧ್ಯಮವನ್ನು ಪ್ರವೇಶಿಸಲು ಕಾರಣವಾಯಿತು. ಪ್ರೇಕ್ಷಕನನ್ನು ಕಾಲ್ಪನಿಕ ಸ್ತರಕ್ಕೆ ಒಮ್ಮೆಲೇ ಕೊಂಡೊಯ್ಯುವ, ಭಾವಲೋಕ ತೆರೆಯುತ್ತ ಅಚ್ಚರಿ ಮತ್ತು ಬೆರಗನ್ನು ಅದ್ಭುತವಾಗಿ ನೆಲೆಗೊಳಿಸಬಲ್ಲ ಸಂಮೋಹನ ಶಕ್ತಿಯಾಯಿತು. ಪ್ರಾಚೀನ ರೂಪಕ, ನಾಟಕಗಳಿಂದ ಚಲನಚಿತ್ರದವರೆಗೆ ತಂತ್ರ, ವಸ್ತು, ಪ್ರಯೋಗ, ಈ ಮೂರು ದೃಷ್ಟಿಗಳಿಂದ ಅನನ್ಯವಾಗಿ ಬೆಳೆಯಿತು.

ಚಲನಚಿತ್ರ ದೃಶ್ಯ ಮಾಧ್ಯಮ. ಅದು ಪ್ರಾರಂಭವಾದದ್ದು ಮನರಂಜನಾ ಸಾಧನವಾಗಿ. ಅಂದಮೇಲೆ ಅದಕ್ಕೆ ಒಂದು ಕಥೆ, ನಿರೂಪಣೆಗೆ ಮಾತು ಅಥವಾ ಸಂಭಾಷಣೆ ಹಾಗೂ ಕಥೆಯ ಪರಿಣಾಮಕಾರಿತ್ವವನ್ನು ಹೆಚ್ಚಿಸಲು ಸಂದರ್ಭಕ್ಕೆ ಸೂಕ್ತವಾದಂಥ ಸಂಗೀತ ಅಗತ್ಯವಾಯಿತು. ಸಂಗೀತಕ್ಕೆ ಮೂಲವೇ ಧ್ವನಿ ಅಥವಾ ನಾದ. ಅದು ಗಾಳಿಗೆ ತುಯ್ದಾಡಿ ಬಿದಿರಿನ ಮೆಳೆಗಳು ಉತ್ಪಾದಿಸುವ ಶಬ್ದವಾಗಿರಬಹುದು, ಪಕ್ಷಿಗಳ ಕಲರವವಾಗಿರಬಹುದು, ಇಲ್ಲವೇ ಹರಿಯುವ ನೀರಿನ ಜುಳು ಜುಳು ಶಬ್ದವಾಗಿರಬಹುದು. ಈ ಎಲ್ಲ ಶಬ್ದಗಳ ಸಂಯೋಗದಿಂದಲೇ ಸಂಗೀತ ಉದ್ಭವವಾಯಿತು. ಮೊದಲು ತಲೆದೋರಿದ್ದು ಯಾವುದೇ ಕಟ್ಟುನಿಟ್ಟುಗಳ ಹಂಗಿಲ್ಲದ ಸ್ವಚ್ಛಂದವಾಗಿ ಹೊರಹೊಮ್ಮಿದ ಜಾನಪದ ಸಂಗೀತ. ಅದಕ್ಕೆ ಒಂದು ಚೌಕಟ್ಟು, ವ್ಯಾಕರಣ ಸೇರಿ ಮೂಡಿ ಬಂದದ್ದು ಶಾಸ್ತ್ರೀಯ ಸಂಗೀತ. ಅದನ್ನು ಆಧರಿಸಿದ ರಂಗ ಸಂಗೀತ. ಕವಿಗಳ ಕಲ್ಪನೆಗೆ ಅಭಿವ್ಯಕ್ತಿ ನೀಡಲು ಹುಟ್ಟಿಕೊಂಡದ್ದು ಲಘು ಶಾಸ್ತ್ರೀಯ ಸಂಗೀತ ಅಥವಾ ಸುಗಮ ಸಂಗೀತ.

ಈ ಎಲ್ಲ ಪ್ರಕಾರಗಳ ವಿಶಿಷ್ಟ ಸಂಯೋಜನೆಯೇ ಚಿತ್ರ ಸಂಗೀತ ಎಂದು ಅರ್ಥೈಸಬಹುದು. ಇದು ವಿಶ್ವವ್ಯಾಪಿಯಾಗಿ ಎಲ್ಲ ಭಾಷೆಗಳಿಗೂ ಅನ್ವಯಿಸುವಂಥದು. ಹಾಡುಗಳು ಭಾರತೀಯ ಚಿತ್ರ ಸಂಗೀತದ ವೈಶಿಷ್ಟ್ಯ. ಆಯಾ ಸಂದರ್ಭಕ್ಕೆ ತಕ್ಕ ಪರಿಣಾಮಗಳನ್ನು ಉಂಟುಮಾಡುವಂಥ ರಾಗಗಳ ಬಳಕೆ ಇಲ್ಲಿ ಬಹಳ ಮುಖ್ಯ. ಭಾರತೀಯ ಸಂಗೀತದಲ್ಲಿ ಚಿತ್ರದ ಸನ್ನಿವೇಶಗಳಿಗೆ ತಕ್ಕಂತೆ ಭಾವ (ಮೂಡ್) ಸೃಷ್ಟಿಸಬಲ್ಲ, ಶೃಂಗಾರ, ಕರುಣ, ಭೀಭತ್ಸ, ರೌದ್ರ, ವೀರ ಮೊದಲಾದ ರಸಗಳನ್ನು ಹೊರಹೊಮ್ಮಿಸಬಲ್ಲ ರಾಗಗಳಿವೆ.

ಚಿತ್ರ ಸಂಗೀತದಲ್ಲಿ ಅತಿ ಮುಖ್ಯವಾದ ಅಂಶವೆಂದರೆ ಹಿನ್ನೆಲೆ ಸಂಗೀತದ ಸಂಯೋಜನೆ. ಹಾಡುಗಳಿರಲಿ, ಇಲ್ಲದಿರಲಿ ಚಿತ್ರದ ಆಯಾ ಸಂದರ್ಭ ಸನ್ನಿವೇಶಗಳ ಅಭಿವ್ಯಕ್ತಿಗೆ ಇದು ಬಹಳ ಅಗತ್ಯ. ಈ ದೃಷ್ಟಿಯಿಂದಲೇ ಚಿತ್ರ ಸಂಗೀತ ಇತರ ಸಂಗೀತ ಪ್ರಕಾರಗಳಿಗಿಂತ ವಿಭಿನ್ನವಾದುದು.

ಚಲನಚಿತ್ರದಲ್ಲಿ ದೃಶ್ಯಗಳಷ್ಟೇ ಮೂಡಿ ಬರುವುದಿಲ್ಲ, ಪೂರಕವಾಗಿ ಶಬ್ದಗಳು ಇರುತ್ತವೆ. ಈ ಶಬ್ದ ಕೇವಲ ಸಂಭಾಷಣೆ ಮಾತ್ರವಾಗಿರುವುದಿಲ್ಲ. ಅದನ್ನು ಅನುಸರಿಸಿದ ಸಂಗೀತಾತ್ಮಕ ಹಿನ್ನೆಲೆಯ ಪ್ರಭಾವಳಿ ಇರುತ್ತದೆ. ಸಂಗೀತ ವಾದ್ಯ ವಿಶೇಷವಾಗಿರಬಹುದು. ಪೂರಕ ಸ್ವರ ಸಂಯೋಜನೆ ಇರಬಹುದು. ಅಗತ್ಯ ಹಿನ್ನೆಲೆಯ ಭಾಷಾತೀತ ಶಬ್ದ ಇರಬಹುದು. ಇವೆಲ್ಲದರ ನಡುವೆ ಬಳಸಿದ ಪ್ರತ್ಯೇಕ ಸ್ಫುರಣದೊಂದಿಗೆ ಪ್ರಯೋಗಿಸಿದ ನಿಶ್ಶಬ್ದವೂ ಆಗಬಹುದು. ಇವೆಲ್ಲವನ್ನೂ ಹಿನ್ನೆಲೆ ಸಂಗೀತವೆಂದು ಕರೆಯುತ್ತೇವೆ. ಇದನ್ನು ಕೊಂಚ ತಾತ್ವೀಕರಿಸಿದರೆ ನಾವು ಮಾತನಾಡುವಾಗ ನಮ್ಮ ದೇಹದ ಪ್ರತಿ ಅಂಗವೂ ಇದಕ್ಕೆ ಪೂರಕವಾಗಿ ಕೆಲಸ ಮಾಡುತ್ತಿರುತ್ತದೆ. ಇದನ್ನೇ ಕಲಾತ್ಮಕವಾಗಿ ಹೇಳಿದಾಗ ಅಭಿನಯ ಎಂದು ಕರೆಸಿಕೊಳ್ಳುತ್ತದೆ. ಹೀಗೆಯೇ ಭಾವನೆ ಕೂಡ ಕೆಲಸ ಮಾಡುತ್ತಿರುತ್ತದೆ. ಭಾವನೆ ವೈಯಕ್ತಿಕವಾದದ್ದಾಗಿರಬಹುದು, ಒಟ್ಟಾಗಿ ಸಮೂಹಕ್ಕೆ ಸಂಬಂಧಪಟ್ಟಂತಿರಬಹುದು. ಇದನ್ನು 'ಕಲಾತ್ಮಕ'ವಾಗಿ ಅಭಿವ್ಯಕ್ತಿಸುವ ಕ್ರಮವನ್ನು ಹಿನ್ನೆಲೆ ಸಂಗೀತ ಮಾಡುತ್ತದೆ. ಸಂಗೀತವೆಂದರೆ ವಾದ್ಯ ವಿಶೇಷದೊಡನಾಗಲಿ, ಕಂಠ ಸ್ವರಗಳೊಂದಿಗಾಗಲಿ ಅವುಗಳ ಸಂಯೋಜನೆಯೊಡನಾಗಲಿ ಬಹುಪಟ್ಟಿಗೆ ಶ್ರುತಿಬದ್ಧವಾಗಿ ಕೇಳಿಬರುವ ನಾದ ಸಮುಚ್ಚಯ. ಈ ನಾದಕ್ಕೆ ವೀಣೆ, ಸಿತಾರ್, ತಬಲ, ತಾಳಗಳಂತಹ ವಾದ್ಯಗಳು ಕಾರಣವಾಗಿರಬಹುದು. ಕ್ಲೇ ವೈಲಿನ್, ಮೂಗ್‌ಸಿಂಥಸೈಸರ್, ಕೇಸಿಯಾಟಿನ್‌ನಂಥ ತಾಂತ್ರಿಕತೆ ಸೃಷ್ಟಿಸಿದ ಎಲೆಕ್ಟ್ರಾನಿಕ್ ವಾದ್ಯಗಳಾಗಬಹುದು. ಕಂಠ ಸ್ವರಗಳು ಕೂಡ ಸಾಂಪ್ರದಾಯಿಕವಾದ ಜಾನಪದ, ರಾಷ್ಟ್ರೀಯ ಪದ್ಧತಿಗಳಲ್ಲಿ ಉಚ್ಚರಿಸಲ್ಪಟ್ಟ ವಾಗಿರಬಹುದು. ಅದು ಕೇವಲ ರಿದಂ, ಕೋರಸ್ ಅಥವಾ ಆಲಾಪದ ಮಾದರಿಯಲ್ಲಿರಬಹುದು. ಸಂಗೀತ ನಿರ್ದೇಶಕರ ಕಲ್ಪನೆಯನ್ನು ಅನುಸರಿಸಿದ ಅನಿಬದ್ಧವಾಗಿರಬಹುದು. ಇವೆಲ್ಲ ಚಲನಚಿತ್ರದಲ್ಲಿ ಭಾವನೆಯ ಸ್ಫುರಣವನ್ನು ಮನ ತಟ್ಟುವಂತೆ ಮಾಡುತ್ತವೆ.

ಹಿನ್ನೆಲೆ ಸಂಗೀತದಲ್ಲಿನ ಇನ್ನೊಂದು ಮುಖ್ಯ ಅಂಗವೆಂದರೆ ಶಾಸ್ತ್ರೀಯ ಸಂಗೀತದ ತಾಳಮಟ್ಟುಗಳಲ್ಲದೆ ಸಂದರ್ಭಕ್ಕೆ ಅನುಸಾರವಾಗಿ ಬಳಸಲ್ಪಟ್ಟ ಸಾಂದರ್ಭಿಕ ನಾದಗಳು. ಅದು ಆರ್ತನಾದವಾಗಿರಬಹುದು, ತಟ್ಟೆ ಕೆಳಗೆ ಬಿದ್ದಂತೆ, ಗಾಜು ಒಡೆದಂತೆ, ಚಾಟಿ ಬೀಸಿದಂತೆ ಮುಂತಾದ ಕೃತಕ ನಾದಗಳಿರಬಹುದು ಅಥವಾ ನೀರು ಕಲಕಿದಂತೆ, ಗಾಳಿ ಬೀಸಿದಂತೆ, ಜೀರುಂಡೆಗಳ ಝೇಂಕಾರ ಮುಂತಾದ ಪ್ರಾಕೃತಿಕ ವಿದ್ಯಮಾನಗಳಿರಬಹುದು. ಇವನ್ನೆಲ್ಲ ಹಿನ್ನೆಲೆ ಸಂಗೀತ 'ಘನೀಕೃತಗೊಳಿಸಿ' ದೃಶ್ಯಕ್ಕೆ ಜೋಡಿಸಿ ಒಂದು ಅನುಭವವಾಗಿ ಮಾರ್ಪಡಿಸುವಲ್ಲಿ ಪ್ರಮುಖ ಸ್ಥಾನ ವಹಿಸುತ್ತದೆ. ಹೀಗಾಗಿ ಮೇಲಿನ ದೃಶ್ಯದ ಯಶಸ್ಸಿಗೆ ಸಿನಿಮಾದಲ್ಲಿ ಅಭಿನಯ ಮತ್ತು ಸಂಭಾಷಣೆಗಳು ಮಾತ್ರ ಸಾಕಾಗುವುದಿಲ್ಲ, ಅರ್ಥಪೂರ್ಣ ಕ್ಯಾಮರಾ ಕೋನ ಮತ್ತು ಹಿನ್ನೆಲೆ ಸಂಗೀತ ಕೂಡ ಬೇಕಾಗುತ್ತದೆ. ಇವೆಲ್ಲವೂ ಒಟ್ಟಾಗಿ ಮೇಳೈಸಿದಾಗ ಮಾತ್ರ ಒಂದು ದೃಶ್ಯ ಪರಿಣಾಮಕಾರಿಯಾಗಿ ಮೂಡಿಬರುವುದು ಸಾಧ್ಯ. ಇವೆಲ್ಲವೂ ಅಲ್ಲದೆ ಕಾಲ ಗಮನ, ಫ್ಲಾಶ್‌ಬ್ಯಾಕ್, ಹಗಲುಗನಸು ಮುಂತಾದವುಗಳನ್ನು ಶಬ್ದ ರೂಪದಲ್ಲೇ ಅನುಭವಕ್ಕೆ ಬರುವಂತೆ ಮಾಡುವುದು ಚಲನಚಿತ್ರ ಸಂಗೀತದ ಮುಖ್ಯ ಜವಾಬ್ದಾರಿಗಳಲ್ಲಿ ಒಂದಾಗಿದೆ.

ಭಾವವನ್ನು ಅಭಿವ್ಯಕ್ತಿಗಿಳಿಸುವುದಕ್ಕಾಗಿ ಸಂಗೀತವನ್ನು ಪರಿಣಾಮಕಾರಿಯಾಗಿ ಬಳಸಲು ಚಲನಚಿತ್ರರಂಗದಲ್ಲಿ ಸಿಕ್ಕಷ್ಟು ಅವಕಾಶ ಬೇರೆ ಯಾವ ಮಾಧ್ಯಮ ದಲ್ಲಿಯೂ ಸಿಕ್ಕಲಾರದೇನೋ. ಉದಾಹರಣೆಗೆ ಬಾಗಿಲು ಹಾಕಿದರೆ, ನೀರಿಗೆ ಹಾರಿದರೆ, ಕಾರು ಚಲಿಸಿದರೆ, ಅಪಘಾತವಾದರೆ ವಾಸ್ತವ ಪ್ರಕಾರದಲ್ಲಿ ಉಂಟಾಗುವ ಶಬ್ದಗಳಲ್ಲಿ ಯಾವ ನಾದಮಯತೆಯೂ ಇರುವುದಿಲ್ಲ. ಅದರಲ್ಲಿ ಅಂತಹ ವೈವಿಧ್ಯವೂ ಇರುವುದಿಲ್ಲ. ಆದರೆ ಚಲನಚಿತ್ರದಲ್ಲಿ ಇದಕ್ಕೆ ನಾದಮಯ ಹಿನ್ನೆಲೆ ನೀಡುವ ಮೂಲಕ ಅನಿರೀಕ್ಷಿತ

ಪರಿಣಾಮ ಸೃಷ್ಟಿಸಬಹುದಾಗಿದೆ. ಆದರೆ ಇಂತಹ ಧ್ವನಿ ಪರಿಣಾಮವನ್ನು ಕಲಾತ್ಮಕವಾಗಿ ಮೂಡಿಸುವುದು ಪರಿಣತರಿಗೆ ಮಾತ್ರ ಸಾಧ್ಯ.

ಚಲನಚಿತ್ರಗಳಲ್ಲಿ ಹಿನ್ನೆಲೆ ಸಂಗೀತ ಎಲ್ಲ ಕಾಲದಲ್ಲೂ ಎಲ್ಲ ದೇಶಗಳಲ್ಲೂ ಒಂದೇ ಆಗಿರುವುದಿಲ್ಲ. ಮಾತ್ರವಲ್ಲ, ಒಂದೇ ದೇಶದಲ್ಲೇ ಒಂದೇ ಮಾದರಿಯ ಸ್ವರ ಸಂಯೋಜನೆ ಪರಿಣಾಮದ ತಾಜಾತನವನ್ನು ಕಳೆದುಕೊಂಡು ಬಿಡುತ್ತದೆ. ಹೀಗಾಗಿ ಇವಕ್ಕೆ ಎಲ್ಲ ಕಲೆಗಳಿಗಿರುವಂತೆ ದೇಶ, ಕಾಲ, ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಪ್ರಯೋಗಶೀಲತೆಯನ್ನು ಉಳಿಸಿಕೊಳ್ಳಬೇಕಾದ ಅಗತ್ಯವಿದೆ. ಉದಾಹರಣೆಗೆ ಭೂಪಾಲಿ, ಮಲಯ ಮಾರುತ, ಮಾಯಾಮಾಳವಗೌಳ ಮುಂತಾದ ರಾಗಗಳನ್ನು ವೀಣೆ, ಪಿಟೀಲು, ಕೊಳಲುಗಳ ಮೂಲಕ ಮೂಡಿಸಿ ಉದಯರಾಗವನ್ನು ಸಂಕೇತಿಸಬಹುದು. ಕರ್ನಾಟಕ ಸಂಗೀತದ ಪ್ರಭಾವವಿರುವ ಕಡೆ ಈ ವಾದ್ಯ ವಿಶೇಷ ಅಗತ್ಯ ಪರಿಣಾಮವನ್ನು ಮೂಡಿಸುತ್ತದೆ. ಹಿಂದೂಸ್ಥಾನಿ ಪ್ರಭಾವವಿರುವ ಕಡೆ ಭೂಪ್, ಭಿಭಾಸ್, ಭೈರವ್ ಮುಂತಾದ ರಾಗಗಳು ಈ ಪರಿಣಾಮವನ್ನು ಮೂಡಿಸುತ್ತವೆ. ಆದರೆ ಇಂತಹದೊಂದು ಹಿನ್ನೆಲೆ ಗೊತ್ತಿಲ್ಲದ ಪಾಶ್ಚಾತ್ಯ ಸಂದರ್ಭದಲ್ಲಿ ಅದೇ ಮಾದರಿಯ ಪರಿಣಾಮ ಸಿಕ್ಕುವುದು ಕಷ್ಟ. ಪಾಶ್ಚಾತ್ಯ ಚಲನಚಿತ್ರ ಭಾಷೆಯಲ್ಲಿ ಬೆಳಗು, ಬೈಗುಗಳನ್ನು ತೋರಿಸುವ ಅಗತ್ಯ ಇದ್ದಂತೆಯೇ ಭಾರತೀಯ ಸಂದರ್ಭದಲ್ಲಿ ಇರುವುದಿಲ್ಲ. ಒಂದು ಪ್ರದೇಶದಲ್ಲಿ ಅಂತ್ಯ ಸಂಸ್ಕಾರಕ್ಕೆ ಬಳಸುವ ಶಬ್ದ ವಿಧಾನ ಇನ್ನೊಂದು ಪ್ರದೇಶದಲ್ಲಿ ಪೂಜಾ ಕೈಂಕರ್ಯಕ್ಕೆ ಬಳಕೆಯಾಗಬಹುದು. ಹೀಗಾಗಿ ಕಾಲ-ದೇಶಗಳ ಪ್ರಜ್ಞೆ ಸಂಗೀತಗಾರನಿಗೆ ಬಹಳ ಮುಖ್ಯ. ಇಂತಹದೊಂದು ಸಾಧ್ಯತೆಯನ್ನು ಅರ್ಥ ಮಾಡಿಕೊಳ್ಳದೆ ಹೋದರೆ ಕನ್ನಡ ಚಲನಚಿತ್ರಕ್ಕೆ ತನ್ನದೇ ಆದ ಭಾಷೆ, ವ್ಯಾಕರಣಗಳು ನಿರ್ಮಾಣವಾಗುವ ಸಾಧ್ಯತೆಯೇ ಇಲ್ಲ ಎನ್ನಬಹುದಾಗಿದೆ. ಎಲ್ಲ ಕಾಲದಲ್ಲೂ ಪ್ರಭಾವ ಬೀರಬಲ್ಲ ಅಥವಾ ಒಂದೇ ಅರ್ಥವನ್ನು ಸಂವಹನಗೊಳಿಸುವ ಶಬ್ದ ವಿಶೇಷಗಳೇ ಇಲ್ಲವೆ ಎಂಬ ಪ್ರಶ್ನೆಯೂ ಸಹಜವಾಗಿಯೇ ಏಳುತ್ತದೆ. ಇದು ಸಾರ್ವಕಾಲಿಕ ಮೌಲ್ಯ ಇರುವ ಸಂಗೀತಕ್ಕೆ ಮಾತ್ರ ಸಾಧ್ಯ. ಏಕೆಂದರೆ ನಾದಕ್ಕೆ ಮೂಲತಃ ಇರುವುದು ಅನುಭೂತಿಯನ್ನು ಕೇಳುಗರ ಮನದಾಳದಲ್ಲಿ ಮೂಡಿಸುವ ಶಕ್ತಿ. ಇದಕ್ಕೆ ಸಹಜವಾಗಿಯೇ ಭಾಷೆಯ ಅಡ್ಡಗೋಡೆ ಇಲ್ಲ. ಹೀಗಾಗಿ ಒಂದು ಅನುಭವವನ್ನು ತನ್ನದೇ ಆದ ರೀತಿಯಲ್ಲಿ ಮೂಡಿಸಿ ನಾದದ ಗುಂಗನ್ನು ಸಂಗೀತದ ಮೂಲಕ ತಂದುಕೊಳ್ಳಬಹುದು. ಉದ್ವಿಗ್ನತೆ, ಕಾತರ, ಹತಾಶೆ, ಉನ್ಮಾದ, ಪ್ರಣಯ ಅಥವಾ ವಿರಹದ ತೀವ್ರ ಅಭಿವ್ಯಕ್ತಿ - ಇಂತಹ ಮಾನವಸಹಜ ಭಾವಗಳಿಗೆ ಸಂಗೀತ ಹೇಗೆ ಜೀವ ತುಂಬಬಲ್ಲುದು ಎಂಬುದು ಪ್ರತಿಯೊಬ್ಬ ಸಂಗೀತ ನಿರ್ದೇಶಕನ ಸೃಜನಶೀಲತೆಯನ್ನು ಅವಲಂಬಿಸಿದೆ. ಇಲ್ಲೆಲ್ಲ ಸಂಗೀತ ನಿರ್ದೇಶಕ ಎಷ್ಟು ಸೂಕ್ಷ್ಮವಾಗಿ ಅಭಿವ್ಯಕ್ತಿಸುತ್ತಾನೋ, ಎಷ್ಟು ಸೂಕ್ಷ್ಮವಾಗಿ ಇನ್ನೊಬ್ಬರ ಮನಸ್ಸನ್ನು ತಟ್ಟುತ್ತಾನೋ ಅಷ್ಟು ಯಶಸ್ವಿಯಾಗುತ್ತಾನೆ. ವಾಸ್ತವವಾಗಿ ಹಿನ್ನೆಲೆ ಸಂಗೀತ ಮುಖ್ಯವಾಗುವುದೇ ಇಂತಹ ಸಂದರ್ಭದಲ್ಲಿ.

ಪರಂಪರೆಯಿಂದಲೇ ಜನಪ್ರಿಯವಾದ ಕೆಲವು ನಾದ ಸಮುಚ್ಚಯಗಳಿವೆ. ಮುಖ್ಯವಾಗಿ ಕೆಲವು ಪದ್ಧತಿಗಳ ಹಿನ್ನೆಲೆಯಲ್ಲಿ ಬರುವಂಥವು. ಎಂದರೆ ಗಂಟೆಯ ನಾದ, ಇದರಲ್ಲಿ ಹಲವು ಬಗೆ. ದೇವಸ್ಥಾನದ ಗಂಟೆ, ಮನೆಯಲ್ಲಿ ಪೂಜಾ ಉಪಕರಣಗಳಾದ ಗಂಟೆ, ಜಾಗಟೆ, ಶಾಲೆಯ ಗಂಟೆಯವರೆಗೆ ಎಲ್ಲವೂ. 'ಶಬ್ದ'ವನ್ನು ಕೇಳಿದ ಕೂಡಲೇ ಇಂಥದೇ ಎಂದು ಭಾಸವಾಗುತ್ತದೆ. ಹೀಗೆ ನಮ್ಮ ಅನೇಕ ಸಾಂಪ್ರದಾಯಿಕ ಆಚಾರ-ವಿಚಾರಗಳು ಶಬ್ದ ಸಂಕೇತಗಳಲ್ಲಿ ಸೂಚಿತವಾಗುತ್ತವೆ. ಅಂಥ ಶಬ್ದಗಳನ್ನು ನಿರ್ವಹಿಸುವುದು ಎಂದರೆ ಒಂದು ವಾತಾವರಣವನ್ನು ಕಟ್ಟಿಕೊಟ್ಟ ಹಾಗಾಯಿತು. ಇನ್ನೂ ಕೆಲವು ಆಧುನಿಕ ಎನ್ನಬಹುದಾದ, ಆದರೆ ನಮಗಾಗಲೇ ಅಭ್ಯಾಸವಾಗಿ ಹೋದ, ಶಬ್ದ ಸಂಕೇತಗಳೂ ಇವೆ. ಒಂಟಿತನವನ್ನು ಸೂಚಿಸಲು ದೂರ ಹೋಗುತ್ತಿರುವ ರೈಲಿನ ಕೂಗು, ನದಿಗೆ ಅಥವಾ ಕೆಳಕ್ಕೆ ಎತ್ತಿ ಹಾಕುವ ಕಲ್ಲಿನ ಶಬ್ದ ಅಥವಾ ಉಂಟಾಗುವ ತರಂಗಗಳು ಗೊಂದಲಗೊಂಡ ಮನಸ್ಥಿತಿಯನ್ನು ಹೇಳುತ್ತಿರಬಹುದು. ಪ್ರಕೃತಿಯ ವಿಷಮತೆಯನ್ನು ಸೂಚಿಸಲು ಭೀಕರ ಮಳೆ ಅಥವಾ ಬಿರುಗಾಳಿಯ ಶಬ್ದ. ಪ್ರಣಯೋತ್ಸಾಹಕ್ಕೆ ಕೋಗಿಲೆಯ ಕುಕಿಲು ಇತ್ಯಾದಿಗಳು. ಇವನ್ನೆಲ್ಲ ಸೂಕ್ತ ಸ್ಥಾನದಲ್ಲಿ ಪ್ರಯೋಗಶೀಲವಾಗಿ ಬಳಸುವ ಮೂಲಕ ಸಂಗೀತ ನಿರ್ದೇಶಕ ತನ್ನ ಸೃಜನಶೀಲತೆಯನ್ನು ಮೆರೆಸಬಲ್ಲ.

ಹಿನ್ನೆಲೆ ಸಂಗೀತದಲ್ಲಿ ವಿಶಿಷ್ಟ ಪರಿಣಾಮಗಳಿಗಾಗಿ ಸಂಗೀತ ನಿರ್ದೇಶಕರು ರಾಗಗಳನ್ನು, ಸ್ವರಗಳನ್ನು ಬಳಸುತ್ತಾರೆ. ಮತ್ತೆ ಕೆಲವರು ಮಾನವ ಧ್ವನಿಯನ್ನು ಬಳಸುತ್ತಾರೆ, ಇನ್ನೂ ಕೆಲವರು ಪ್ರಕೃತಿಯ ವಿದ್ಯಮಾನಗಳಾದ ಗಾಳಿಯ ಸುಯ್ ಶಬ್ದ, ಪಶು-ಪಕ್ಷಿಗಳ ಧ್ವನಿಗಳನ್ನು ಪರಿಣಾಮಕಾರಿಯಾಗಿ ಬಳಸುತ್ತಾರೆ.

ಶಬ್ದ ಮೂಲತಃ ಶಕ್ತಿಯ ಒಂದು ರೂಪ. ನಮ್ಮ ಶ್ರವಣೇಂದ್ರಿಯದಿಂದ ಗ್ರಹಿಸಬಹುದಾದ ಈ ಶಬ್ದ ವಸ್ತುಗಳ ಕಂಪನದಿಂದ ಉತ್ಪತ್ತಿಯಾಗುತ್ತದೆ. ಹೀಗೆ ಉತ್ಪತ್ತಿಯಾದ ಶಬ್ದದಲ್ಲಿ ನಾನಾ ಬಗೆಯ, ಅತ್ಯಂತ ವೇಗದಲ್ಲಿ ವ್ಯತ್ಯಯವಾಗುವ, ಅಥವಾ ವಿಚ್ಛಿನ್ನವಾದ ಕಂಪನಗಳಿದ್ದರೆ ಅಂತಹ ಶಬ್ದ ಕಿವಿಗಳಿಗೆ ಕರ್ಕಶವಾಗಿದ್ದು ಸದ್ದು ಅಥವಾ ಗದ್ದಲ ಎಂದೆನಿಸಿಕೊಳ್ಳುತ್ತದೆ. ಇದಕ್ಕೆ ಬದಲಾಗಿ ಶಬ್ದದಲ್ಲಿ ಒಂದು ಅಥವಾ ಹಲವು ಶುದ್ಧ ಕಂಪನಾವರ್ತನ ಸಂಖ್ಯೆಯುಳ್ಳ ಕಂಪನಗಳಿದ್ದರೆ ಅಂತಹ ಶಬ್ದ ನಾದ ಎಂದು ಕರೆಸಿಕೊಳ್ಳುತ್ತದೆ. ಈ ನಾದಕ್ಕೆ ಸ್ವರ ಎಂದು ಹೆಸರು. ನಾದಕ್ಕೆ ಸ್ವರವೇ ಮೂಲಾಧಾರ. ಈ ನಾದವನ್ನು ಬಳಸದೆ ಕೇವಲ ಶಬ್ದದಿಂದಲೇ ಚಿತ್ರಕ್ಕೆ ಬೇಕಾದ ಹಿನ್ನೆಲೆ ಪರಿಣಾಮಗಳನ್ನು ಅಲ್ಲಲ್ಲಿ ಬಳಸಿಕೊಂಡಿದ್ದಾರೆ.

ಭಾರತೀಯ ಚಿತ್ರರಂಗದಲ್ಲಿ ಇಂಥ ಶಬ್ದಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡವರಲ್ಲಿ ಸತ್ಯಜಿತ್ ರಾಯ್ ಅವರಿಂದಲೂ ಮೆಚ್ಚುಗೆ ಪಡೆದ ಋತ್ವಿಕ್ ಘಟಕ್ ಮುಖ್ಯರು. ಅವರ ನಿರ್ದೇಶನದ 'ಮೇಘ ಡಾಕಾ ತಾರಾ' ಚಿತ್ರದ ಒಂದು ದೃಶ್ಯ :

ಲೈಂಗಿಕ ಸಂಪರ್ಕವನ್ನು ಪಾವಿತ್ರ್ಯದ ಲೇಪ ಹಚ್ಚಿ ನೋಡುವ, ವಿವಾಹ ವ್ಯವಸ್ಥೆಯಲ್ಲಿ ಪೂರ್ಣ ನಂಬಿಕೆಯುಳ್ಳ ಸಂಪ್ರದಾಯಸ್ಥ ಯುವತಿ. ಒಬ್ಬ ವ್ಯಕ್ತಿಯೊಂದಿಗೆ ಆಕೆಯ ಮದುವೆಯ ನಿಶ್ಚಿತಾರ್ಥ ಆಗಿರುತ್ತದೆ. ಒಮ್ಮೆ ಆಕೆ ಮಹಡಿಯ ಮೇಲೆ ಹೋದಾಗ ತನ್ನ ಭಾವಿ ಪತಿ ತಂಗಿಯೊಂದಿಗೆ ಲೈಂಗಿಕ ಕ್ರಿಯೆಯಲ್ಲಿ ತೊಡಗಿರುವುದು ಅವಳ ಕಣ್ಣಿಗೆ ಬೀಳುತ್ತದೆ. ಆಕೆ ಅಲ್ಲಿಂದ ಒಂದೊಂದೇ ಮೆಟ್ಟಲಿಳಿದು ಹೋಗುವಾಗ ಒಂದೊಂದು ಹೆಜ್ಜೆಗೂ ಚಾವಟಿ ಏಟಿನ ಶಬ್ದ ಕೇಳುತ್ತದೆ. ಇಲ್ಲಿ ಸಂಗೀತದ ಕೆಲಸವನ್ನು ಆ ಶಬ್ದ ಪರಿಣಾಮಕಾರಿಯಾಗಿ ನಿರ್ವಹಿಸುತ್ತದೆ. ಇಂಥ ಹಲವು ನಿರ್ದೇಶಕರಿಂದ ಪ್ರಭಾವಿತರಾಗಿರುವ ಬಿ.ವಿ.ಕಾರಂತರು ತಮ್ಮ ಸಂಗೀತ ನಿರ್ದೇಶನದ ಚಿತ್ರಗಳಲ್ಲಿ ಪಶು ಪಕ್ಷಿಗಳ ಧ್ವನಿಯನ್ನು, ಜೀರುಂಡೆಯ ಮೊರೆಯುವ ಶಬ್ದವನ್ನು, ಚಂಡೆಯಂಥ ಲಯ ವಾದ್ಯಗಳನ್ನು ಹಾಗೂ ಮಾನವ ಧ್ವನಿಯನ್ನು ಹಿನ್ನೆಲೆ ಸಂಗೀತಕ್ಕೆ ಪರಿಣಾಮಕಾರಿಯಾಗಿ ಬಳಸಿಕೊಂಡಿದ್ದಾರೆ. ಅದೇ ರೀತಿ ವಿಜಯಭಾಸ್ಕರ್, ಜಿ.ಕೆ.ವೆಂಕಟೇಶ್, ರಾಜೀವ ತಾರಾನಾಥ್, ಸಿ.ಅಶ್ವತ್ಥ್ ಮುಂತಾದವರು ಪ್ರಕೃತಿಯ ಶಬ್ದಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡಿದ್ದಾರೆ. ಈ ದೃಷ್ಟಿಯಿಂದ ಕನ್ನಡ ಚಿತ್ರರಂಗದಲ್ಲಿ ಹಿನ್ನೆಲೆ ಸಂಗೀತ ಬೆಳೆದು ಬಂದ ಕ್ರಮ ಚರ್ಚಿಸಲು ಒಂದು ತಾತ್ವಿಕ ಹಿನ್ನೆಲೆ ಅಗತ್ಯ.

ಕನ್ನಡ ಚಿತ್ರರಂಗ ಇತರ ಭಾರತೀಯ ಭಾಷೆಯ ಚಿತ್ರರಂಗಗಳಂತೆಯೇ ವೃತ್ತಿ ನಾಟಕ ಪರಂಪರೆಯ ಹಿನ್ನೆಲೆಯಿಂದ ಸೃಷ್ಟಿಯಾದದ್ದು. ನಾಟಕದಲ್ಲಿ ಅಭಿನಯ ಮತ್ತು ಸಂಭಾಷಣೆಗೆ ಹಿನ್ನೆಲೆಯಾಗಿ ಬರುವ ನಾದ ಹಾರ್ಮೋನಿಯಂ, ತಬಲ ಮುಂತಾದ ವಾದ್ಯಗಳ ಸಂಯೋಜನೆ. ಇಲ್ಲಿ ಪರಿಣಾಮಕ್ಕಾಗಲಿ, ವೈವಿಧ್ಯಕ್ಕಾಗಲಿ ಅವಕಾಶ ಕಡಿಮೆ. ಇನ್ನೂ ಸೂಕ್ಷ್ಮವಾದರೆ ಪ್ರೇಕ್ಷಕನ ಏಕಾಗ್ರತೆ ತಪ್ಪಿ ಪರಿಣಾಮವೇ ನಷ್ಟವಾಗಿಬಿಡುವ ಸಾಧ್ಯತೆ ಇತ್ತು. ಇಂತಹ ಕಾರಣಕ್ಕಾಗಿಯೇ ರಂಗಗೀತೆಗಳು ಸೃಷ್ಟಿಯಾದವು. ೨೦-೪೦ ರಂಗಗೀತೆಗಳುಳ್ಳ ನಾಟಕಗಳು ನಮ್ಮಲ್ಲಿವೆ. ಎಲ್ಲಾ ಮಾದರಿಯ ಭಾವಗಳೂ ರಂಗಗೀತೆಗಳ ಮೂಲಕವೇ ಅಭಿವ್ಯಕ್ತವಾಗುತ್ತಿದ್ದವು. ಹಾಗೆ ನೋಡಿದರೆ ರಂಗಗೀತೆಗಳೇ ಅಖಂಡ ಹಿನ್ನೆಲೆ ಸಂಗೀತವಾಗಿ ನಾಟಕದಲ್ಲಿ ಕೆಲಸ ಮಾಡುತ್ತಿದ್ದವು. ವಿಶಾಲ ಅರ್ಥದಲ್ಲಿ ಅವುಗಳನ್ನು ಹಿನ್ನೆಲೆ ಸಂಗೀತ ಎನ್ನುವುದೂ ಕಷ್ಟವೇ. ಏಕೆಂದರೆ ಈ ರಂಗಗೀತೆಗಳನ್ನು ನಟ-ನಟಿಯರೇ ಹಾಡುತ್ತಿದ್ದರು. ಅವು ಅನೇಕ ಬಾರಿ ಸಂಭಾಷಣೆಗಳಿಗೆ ಪೂರಕವಾಗಿ, ಇಲ್ಲವೆ ಸಂಭಾಷಣೆಯ ಜೊತೆಯಲ್ಲಿ ಬಳಕೆಯಾಗುತ್ತಿದ್ದವು.

ಕನ್ನಡದ ಆರಂಭಿಕ ಚಿತ್ರ ತಯಾರಕರಲ್ಲಿ ಬಹುಮಂದಿ ನಾಟಕರಂಗದಿಂದಲೇ ಬಂದವರಾದ್ದರಿಂದ ನಾಟಕರಂಗದ ಪರಿಸ್ಥಿತಿ ಚಿತ್ರರಂಗಕ್ಕೆ ನೇರವಾಗಿ ಹೈಜಾಕ್ ಆಯಿತು. ಆರಂಭದ ಚಿತ್ರರಂಗದಲ್ಲಿ ತೊಡಗಿದ್ದವರಲ್ಲಿ ಹೆಚ್ಚಿನವರು 'ಚಲನಚಿತ್ರಗಳು ನಾಟಕವನ್ನು ಪ್ರತಿಸೃಷ್ಟಿಸುವ ಯಂತ್ರಸಾಧ್ಯತೆ' ಎಂದು ತಿಳಿದಿದ್ದರು. ಹೀಗಾಗಿ ಹಿನ್ನೆಲೆ ಸಂಗೀತ ಎಂಬ ಕಲ್ಪನೆಯೇ ಆರಂಭದಲ್ಲಿ ಅಸ್ಪಷ್ಟವಾಗಿತ್ತು. ಮತ್ತು ಚಲನೆ ಇಲ್ಲದೆ ಹೋಗಿ ಬರಿಯ ಗೀತಗಾಯನ ಹೊಸದೇನನ್ನೋ ನೋಡುತ್ತಿದ್ದೇವೆ ಎಂಬ ಕುತೂಹಲದ ಮನಃಸ್ಥಿತಿಯಿಂದಷ್ಟೇ ಸಹ್ಯವಾಯಿತು.

ಈ ಪ್ರಾರಂಭದ ಹಂತದಲ್ಲಿ ಇದ್ದ ತಾಂತ್ರಿಕತೆ ತೀರಾ ಮಿತಿಯುಳ್ಳದ್ದು. ಈಗಿನಂತೆ ಹಾಡುಗಳನ್ನು ಪ್ರತ್ಯೇಕವಾಗಿ ಧ್ವನಿ ಮುದ್ರಿಸಿ ಅನಂತರ ಚಿತ್ರೀಕರಣದಲ್ಲಿ ಬಳಸಿಕೊಳ್ಳುವ ವ್ಯವಸ್ಥೆ ಇರಲಿಲ್ಲ. ಕಲಾವಿದರು ಅಭಿನಯಿಸುವಾಗಲೇ ತಾವೇ ಹಾಡಿಕೊಂಡು

ಅಭಿನಯಿಸಬೇಕಿತ್ತು. ಅವರ ತಲೆಯ ಮೇಲೆ ಅಥವಾ ಮುಂದೆ ತುಸು ಎತ್ತರದಲ್ಲಿ ಕ್ಯಾಮರಾ ವ್ಯಾಪ್ತಿಯಿಂದ ಹೊರಗೆ - ಮೈಕ್ ಇರುತ್ತಿತ್ತು. ಇವು ಅತ್ಯಂತ ಶಕ್ತಿಯುತ ಧ್ವನಿವರ್ಧಕಗಳಾಗಿರುತ್ತಿದ್ದವು. ಕಲಾವಿದರು ಹಾಡುವಾಗ ಕ್ಯಾಮರಾ ವ್ಯಾಪ್ತಿಯಿಂದ ಹೊರಗಿರುವ ಆಯಕಟ್ಟಿನ ಸ್ಥಾನದಲ್ಲಿ ವಾದ್ಯಗಾರರು ಕೂಡುತ್ತಿದ್ದರು. ಸಾಮಾನ್ಯವಾಗಿ ಒಂದು ಹಾರ್ಮೋನಿಯಂ, ಒಂದು ಕೊಳಲು, ತಬಲ ಇವಿಷ್ಟೇ ವಾದ್ಯಗಳಾಗಿರುತ್ತಿದ್ದವು. ಒಮ್ಮೊಮ್ಮೆ ಕಲಾವಿದರು ಹಾಡುತ್ತ ಚಲಿಸಬೇಕಾಗಿ ಬಂದಾಗ ವಾದ್ಯಗಾರರು ಟ್ರ್ಯಾಲಿಯಲ್ಲಿ ಕುಳಿತು ಅವರು ಚಲಿಸಿದಂತೆಲ್ಲ ಚಲಿಸುತ್ತ ವಾದ್ಯ ಶ್ರುತಿ ಕೊಡಬೇಕಾಗಿತ್ತು. ಕೆಲವು ಸಂದರ್ಭಗಳಲ್ಲಿ ಸ್ಟೂಲ್ ಮೇಲೆ ಮೈಕ್ ಹಿಡಿದವನನ್ನು ನಿಲ್ಲಿಸಿ ಹಗ್ಗ ಕಟ್ಟಿ ಎತ್ತುತ್ತಿದ್ದರು. ಇಷ್ಟೆಲ್ಲ ಪ್ರಯಾಸದಿಂದ ಮುದ್ರಿಸಿಕೊಂಡ ಮೇಲೆ ಅದು ಹೇಗ ಬಂದಿದೆ ಎಂದು ಕೇಳುವ ಯಾವ ವ್ಯವಸ್ಥೆಯೂ ಇರಲಿಲ್ಲ. ಸಂಗೀತದ ತಪ್ಪುಗಳು ಸ್ವತಃ ಸಂಗೀತ ನಿರ್ದೇಶಕನಿಗೆ ಗೊತ್ತಾಗುತ್ತಿದ್ದುದೇ ಚಿತ್ರ ತೆರೆಯ ಮೇಲೆ ಮೂಡಿ ಬಂದ ಮೇಲೆ. ಇಂದಿನ ಆಧುನಿಕ ಯುಗದಲ್ಲಿ ಇವೆಲ್ಲ ದಂತಕತೆಯಂತ ಕಾಣಬಹುದು. ಆದರೆ ಚಾರಿತ್ರಿಕವಾಗಿ ಹಿನ್ನೆಲೆ ಸಂಗೀತ ಎಂಬ ಪರಿಕಲ್ಪನೆ ಹುಟ್ಟಿದ್ದು ಇಂತಹ ಶಿಥಿಲ ಹಿನ್ನೆಲೆಯೊಂದಿಗೆ.

(ಚಿತ್ರ ೧) ಪಾಶ್ಚಾತ್ಯ ಹಾಗೂ ದೇಶೀಯ ಶಾಸ್ತ್ರೀಯ ಸಂಗೀತಪ್ರಿಯರಾದ ಮೈಸೂರಿನ ಅರಸರ ಆಸ್ಥಾನದಲ್ಲಿ ಪ್ರತಿಭಾವಂತ ಕಲಾವಿದರಿಂದ ಕೂಡಿದ ವಾದ್ಯಗೋಷ್ಠಿಗಳು ಇದ್ದವು. ಅವು ವಾರಕ್ಕೊಮ್ಮೆ ಮೈಸೂರಿನಲ್ಲಿ ಸಾರ್ವಜನಿಕ ಉದ್ಯಾನಗಳಲ್ಲಿ ಕಾರ್ಯಕ್ರಮ ನೀಡುತ್ತಿದ್ದವು. ಇದರಿಂದಾಗಿ ಮೈಸೂರಿನಲ್ಲಿ ದೇಶೀಯ ವಾದ್ಯಗೋಷ್ಠಿಗಳು ರೂಪುಗೊಂಡವು. ಮುಂಬೈ ಚಿತ್ರರಂಗದಲ್ಲಿ ತಂತ್ರಜ್ಞರಾಗಿ ತರಬೇತಿ ಪಡೆದು ಬಂದಿದ್ದ ದ್ವಾರಕಾನಾಥ್ ಅವರು ಮದರಾಸಿನಲ್ಲಿ ಚಿತ್ರನಿರ್ಮಾಪಕರಾಗಿ ನಿರ್ದೇಶಕರಾಗಿದ್ದಾಗ, ಚಿತ್ರಗಳ ಹಾಡುಗಳ ಧ್ವನಿಮುದ್ರಣ ಮಾಡಲು ಮೈಸೂರು-ಬೆಂಗಳೂರಿನ ವಾದ್ಯಗೋಷ್ಠಿಯನ್ನು ಕರೆದುಕೊಂಡು ಹೋಗುತ್ತಿದ್ದರೆಂದು ದ್ವಾರಕಾನಾಥ್ ಅವರ ಪತ್ನಿ ಕಮಲಾ ದ್ವಾರಕಾನಾಥ್ ಹೇಳುತ್ತಾರೆ. ಅಂತಹ ಮೈಸೂರಿನ ವಾದ್ಯಗೋಷ್ಠಿಯ ಈ ಚಿತ್ರ ಶ್ರೀಮತಿ ಕಮಲಾ ಅವರ ಬಳಿ ಇರುವ ದ್ವಾರಕಾನಾಥ್ ಸ್ಮೃತಿಚಿತ್ರ ಸಂಪುಟದಿಂದ ಆಯ್ದುದು. ಮೈಸೂರಿನ ವಾದ್ಯಗೋಷ್ಠಿಯ ನೆರವನ್ನು ಮದರಾಸಿನ ಇತರ ನಿರ್ಮಾಪಕರು ಪಡೆಯುತ್ತಿದ್ದರು.

ಇಲ್ಲಿಂದ ಮುಂದೆ ತಾಂತ್ರಿಕವಾಗಿ ಕೊಂಚ ಬೆಳವಣಿಗೆ ಆದ ಮೇಲೆ ಗೀತೆಗಳನ್ನು ರಿಕಾರ್ಡ್ ಮಾಡಿ ಬಳಸುವ ಪದ್ಧತಿ ಜಾರಿಗೆ ಬಂದಿತು. ಹಾಗೆ ನೋಡಿದರೆ 'ಸಂಗೀತ ನಿರ್ದೇಶಕ' ಎಂಬ ವೃತ್ತಿಯ ಪ್ರವೇಶವಾದದ್ದೇ ಈ ಸಂದರ್ಭದಲ್ಲಿ. ಹಿನ್ನೆಲೆ ಗಾಯಕ-ಗಾಯಕಿಯರೂ ಈ ಸಂದರ್ಭದಲ್ಲಿ ಪ್ರವೇಶ ಮಾಡಿದರು. ಈ ಹಂತದಲ್ಲಿದ್ದ ರಿಕಾರ್ಡಿಂಗ್ ರೂಮ್ ಎಂದರೆ ಅದು ಸ್ಟುಡಿಯೋದ ಒಂದು ಷೆಡ್. ಇಲ್ಲಿ ರಿಕಾರ್ಡಿಂಗ್ ನಡೆಯುತ್ತಿದ್ದುದೂ ರಾತ್ರಿಯ ಸಂದರ್ಭದಲ್ಲಿ ಮಾತ್ರ. ಹಗಲು ಹೊತ್ತಿನಲ್ಲಿ ಬಸ್, ಕಾರುಗಳು, ಮುಂತಾದ ವಾಹನಗಳ ಶಬ್ದ ಕೇಳಿಬರುತ್ತಿದ್ದುದರಿಂದ ರಾತ್ರಿಯ ಶಾಂತ ವಾತಾವರಣದಲ್ಲೇ ಈ ಪ್ರಕ್ರಿಯೆ ನಡೆಯುತ್ತಿತ್ತು. ಮುಂದೆ ಇನ್ನೂ ಕೊಂಚ ತಾಂತ್ರಿಕ ಬೆಳವಣಿಗೆ ಆಗಿದ್ದರಿಂದ ಹಗಲಿನಲ್ಲಿ ತಗಡಿನ ಷೆಡ್‌ಗಳಲ್ಲಿ ರಿಕಾರ್ಡಿಂಗ್ ಮಾಡುವ ವ್ಯವಸ್ಥೆ ಜಾರಿಗೆ ಬಂದಿತು. ಇದು ಕೂಡ ಯಾವ ಮಾದರಿಯ ಶಬ್ದವೂ ಆಗಬಾರದೆಂಬ ಎಚ್ಚರಿಕೆಯನ್ನು ಆಧರಿಸಿದ ರಿಕಾರ್ಡಿಂಗ್. ಅಂದಿನ ದಿನಗಳಲ್ಲಿ ವಾದ್ಯಗಾರರ ಕೊರತೆ ಬಹಳವಾಗಿತ್ತು. ಚಲನಚಿತ್ರ ಸಂಗೀತಕ್ಕೆ ನುಡಿಸಬಲ್ಲ ಪ್ರತ್ಯೇಕ ವಾದ್ಯಗಳೂ ಇರಲಿಲ್ಲ. ನುಡಿಸುವ ವಾದ್ಯಗಾರರೂ ಇರಲಿಲ್ಲ. ಸಂಗೀತ ನಿರ್ದೇಶಕರೇ ವಾದ್ಯಗಾರರನ್ನು ಹುಡುಕಿಕೊಂಡು ಅಲೆಯಬೇಕಾಗುತ್ತಿತ್ತು. ವಾದ್ಯಗಾರರಿಗೆ ಸಂಭಾವನೆ ನೀಡುವ ವಿಷಯದಲ್ಲಿ ಸಾಕಷ್ಟು ತಕರಾರುಗಳು ಎದ್ದವು. ಕಾಲಕ್ರಮೇಣ ವಾದ್ಯಗಾರರ ಯೂನಿಯನ್ ಮಾಡಿದ್ದರಿಂದ ಸಂಭಾವನೆ ತಕರಾರು ಪರಿಹಾರವಾಯಿತು. ಮುಂದಿನ ಸಂದರ್ಭದಲ್ಲಿ ವಾದ್ಯಗಾರರ ಸಮಯಕ್ಕೆ ಸಂಗೀತ ನಿರ್ದೇಶಕರು ಹೊಂದಿಕೊಳ್ಳಬೇಕಾಯಿತು.

"...ಮೊದಲು ರಿ-ರಿಕಾರ್ಡಿಂಗ್ ಅಂದರೇನೇ ನಡುಗುತ್ತಿದ್ದೆವು. ವಾದ್ಯಗಾರರು ವಿಪರೀತ ಡಿಮ್ಯಾಂಡ್ ಮಾಡೋರು. ಇವರಿಗೆಂತಲೇ ನಾಲ್ಕು ಕಾರು ಇಡಬೇಕಿತ್ತು. ಒಬ್ಬೊಬ್ಬರಿಗ ಪ್ರತ್ಯೇಕ ವಾಹನ ಕಳುಹಿಸಬೇಕು. ಅವರವರಿಗೆ ಇಷ್ಟವಾದ ಹೋಟೇಲ್‌ನಿಂದ ಊಟ ತರಿಸಬೇಕು. ಅಡಿಕೆ-ಎಲೆ ಕೂಡಾ ತರಿಸಿಕೊಡಬೇಕಿತ್ತು.

"ಶೂಟಿಂಗ್ ಬೇಕಾದ್ರ ಒಂದೇ ಕಾರಲ್ಲಿ ಮ್ಯಾನೇಜ್ ಮಾಡ್ತಿದ್ವಿ. ರೀ-ರಿಕಾರ್ಡಿಂಗ್ ಅಷ್ಟು ಸುಲಭವಿರಲಿಲ್ಲ. ಸ್ಟುಡಿಯೋ ಕಾಲ್‌ಶೀಟ್ ಜಾಸ್ತಿ ಆಗಿಬಿಡೋದು. ನಾವು ನಾಟಕದ ಥಿಯೇಟರ್‌ನಲ್ಲಿ ರಿಹರ್ಸಲ್ ಮಾಡ್ತಿದ್ವಿ. ಹಾಗೆ ಕಾಲ್‌ಶೀಟ್ ಉಳಿಸೋದು ಅನಿವಾರ್ಯವಾಗಿತ್ತು. ಹಾಡೋರೆಲ್ಲ ನಮ್ಮ ಮನೆಗೇ ಬರೋರು.. ಬಾಟಾ ಸಿಸ್ಟಂ ಬಂದ ಮೇಲೆ ಬಹಳ ರಿಲೀಫ್ ಸಿಕ್ತು. ಇಷ್ಟೊಂತ ಕೊಟ್ಬಿ ಬಿಟ್ರೆ ಅವರೇ ಆ ಹೊತ್ತಿಗ ಸ್ಟುಡಿಯೋದಲ್ಲಿ ಹಾಜರಾಗೋರು. ಯಾಕೆ, ಬೈಟು ಕಾಫೀಗೂ ಹೊಂದಿಕೊಂಡು ಬಿಟ್ರಲ್ಲ..." ಎಂದು ತಮ್ಮ ದಿನಗಳಲ್ಲಿ ಚಿತ್ರಗಳಿಗ ಸಂಗೀತ ನೀಡಲು ಎದುರಿಸಬೇಕಾಗಿದ್ದ ಕಷ್ಟಗಳನ್ನು ವಿವರಿಸುತ್ತಾರೆ ವಾದಿರಾಜ್.

ಇಲ್ಲಿಂದ ಮುಂದೆ ಎರಡು ಮೈಕ್‌ಗಳ ಮೂಲಕ ರಿಕಾರ್ಡಿಂಗ್ ನಡೆಸುವ ಪದ್ಧತಿ ಬಂದಿತು. ಇಲ್ಲಿ ಒಂದು ಮೈಕ್ ಗಾಯಕ ಗಾಯಕಿಯರಿಗಿದ್ದರೆ, ಇನ್ನೊಂದು ಮೈಕ್ ವಾದ್ಯಗಾರರಿಗಿತ್ತು. ಈ ಹಂತದಲ್ಲಿ ರಿಕಾರ್ಡ್ ಆದದ್ದನ್ನು ಕೇಳುವ ಸೌಲಭ್ಯವಿರಲಿಲ್ಲ. ಎರಡೂ ಧ್ವನಿಗಳನ್ನು ಗ್ರಹಿಸಿದ ಧ್ವನಿಮುದ್ರಣ ಯಂತ್ರ ನೇರವಾಗಿ ನೆಗೆಟಿವ್ ಫಿಲಂ ಮೇಲೆ ದಾಖಲಾಗುತ್ತಿತ್ತು. ಇಂತಹ ನೆಗಟಿವ್ ಫಿಲಂ ಅನ್ನು ಲ್ಯಾಬ್‌ಗ ಕಳುಹಿಸಿ ಅದನ್ನು ಡೆವಲಪ್ ಮಾಡಿಸಿ ಪಾಸಿಟಿವ್ ಮೇಲೆ ಪ್ರಿಂಟ್ ಮಾಡಿ ಯಾವುದಾದರೂ ಚಿತ್ರಮಂದಿರದಲ್ಲಿ ಪ್ರೊಜೆಕ್ಟರ್ ಮೂಲಕ ನೋಡಬೇಕಾಗುತ್ತಿತ್ತು. ಹೀಗ ಆಯ್ದ ಭಾಗವನ್ನು ಚಿತ್ರೀಕರಣಕ್ಕಾಗಿ ಕಳುಹಿಸಲಾಗುತ್ತಿತ್ತು. ನಮ್ಮಲ್ಲಿ ಆಗ ರಿ-ರಿಕಾರ್ಡಿಂಗ್ ಸೌಲಭ್ಯವಿಲ್ಲದರಿಂದ ಎಲ್ಲಾ ಕೆಲಸಕ್ಕ ಮದರಾಸನ್ನೇ ಅವಲಂಬಿಸಬೇಕಾಗುತ್ತಿತ್ತು. ವಾದ್ಯಗಾರರ ಲಭ್ಯತೆ, ಸ್ಟುಡಿಯೋ ಕಾಲ್‌ಶೀಟ್ ಎಲ್ಲಕ್ಕೂ ಪರಾವಲಂಬನೆ ಪ್ರಧಾನವಾಗಿದ್ದ ಕಾಲ ಅದು.

ಕಾಲ ಕ್ರಮೇಣ ಮ್ಯಾಗ್ನಟಿಕ್ ಟೇಪ್‌ಗಳ ಸೌಲಭ್ಯ ಲಭ್ಯವಾಯಿತು. ಇದರಿಂದ ಹಲವು ಮೈಕ್‌ಗಳ ಮೂಲಕ ರಿಕಾರ್ಡಿಂಗ್ ಮಾಡುವುದು ಸಾಧ್ಯವಾಯಿತು. ಇದರಲ್ಲೂ ಕೆಲವು ಲೋಪಗಳಿದ್ದವು. ಮ್ಯಾಗ್ನೆಟಿಕ್ ಟೇಪ್‌ನ ಒಂದೇ ಟ್ರ್ಯಾಕ್‌ನಲ್ಲಿ ಏಕಕಾಲಕ್ಕೆ ಧ್ವನಿ ಮುದ್ರಣ ಮಾಡಬೇಕಾಗುತ್ತಿತ್ತು. ಇದರಿಂದ ಆಯ್ದ ಭಾಗಗಳನ್ನು ನೆಗೆಟಿವ್ ಫಿಲಂನ ಮೂಲಕ ಜೋಡಿಸಿ ಪಾಸಿಟಿವ್ ಫಿಲಂಗಳ ಮೇಲೆ ಪ್ರಿಂಟ್ ಆಗಿ ಬಂದ ಸಂಗೀತವನ್ನು ಮೂವಿಯೋಲಾ ಮೂಲಕ ಜೋಡಣೆ ಮಾಡಿ ಚಿತ್ರೀಕರಣಕ್ಕೆ ಕಳುಹಿಸುತ್ತಿದ್ದರು. ಇದರಲ್ಲಿದ್ದ ಮತ್ತೊಂದು ಅನುಕೂಲವೆಂದರೆ ಮ್ಯಾಗ್ನೆಟಿಕ್ ರೇಂಜ್‌ಗೂ ಚಿತ್ರಮಂದಿರದ ಆಪ್ಟಿಕಲ್ ರೇಂಜ್‌ಗೂ ವೇಗದಲ್ಲಿ ವ್ಯತ್ಯಾಸ ಮಾಡಲು ಇದ್ದ ಸಾಧ್ಯತೆ. ಈ ತಂತ್ರದಿಂದಾಗಿ ಮಂದಗತಿಯಲ್ಲಿ ಗೀತೆಯನ್ನು ಧ್ವನಿಮುದ್ರಿಸಿ, ಸಹಜಗತಿಯಲ್ಲಿ ಅದನ್ನು ಸೌಂಡ್ ನೆಗೆಟಿವ್‌ಗೆ ಮ್ಯಾಗ್ನೆಟಿಕ್ ಟೇಪ್‌ನಿಂದ ವರ್ಗಾಯಿಸಿ, ಅಂತಿಮವಾಗಿ ಪ್ರದರ್ಶಿಸಿದಾಗ ಅದು ಕಾರ್ಟೂನ್ ಚಿತ್ರಗಳಿಗೆ ಬೇಕಾಗುವಂತಹ

ಹಾಸ್ಯಮಯ ಧ್ವನಿಯನ್ನು ಉತ್ಪಾದಿಸಬಲ್ಲುದು. ಇದನ್ನೇ ಗುಣವನ್ನಾಗಿ ಮಾಡಿದ ಕೀರ್ತಿ ರಾಜನ್-ನಾಗೇಂದ್ರ ಅವರಿಗೆ ಸೇರಬೇಕು. 'ಕುಳ್ಳ ಏಜೆಂಟ್ ೦೦೦' ಚಿತ್ರದಲ್ಲಿ 'ಸಿಂಗಾಪೂರದಿಂದ ಬಂದೆ, ಬಂಗಾರ ಹೊತ್ತು ತಂದೆ...' ಎಂಬ ಹಾಡು ಕಾಮಿಕ್ ಆಗಿ ಕೇಳಿಬರುವಂತೆ ಮಾಡಲು ಈ ತಂತ್ರಜ್ಞಾನವೇ ನೆರವಾಯಿತು.

(ಚಿತ್ರ ೨-೩) ಬೆಳ್ಳಾವೆ ನರಹರಿಶಾಸ್ತ್ರಿ

ಶೇಷಗಿರಿರಾವ್

ಮುಂದೆ ಕಾಲಕ್ರಮೇಣ ತಾಂತ್ರಿಕ ಬೆಳವಣಿಗೆಯಿಂದ ಈ ಸಮಸ್ಯೆ ನಿವಾರಣೆ ಆಯಿತು. ರಿಕಾರ್ಡಿಂಗ್ ತಂತ್ರಜ್ಞಾನ ಬೆಳೆದಂತೆಲ್ಲ ಮ್ಯಾಗ್ನೆಟಿಕ್ ಫಿಲಂನಲ್ಲಿ ನಾಲ್ಕು ಟ್ರ್ಯಾಕ್‌ಗಳ ಮೇಲೆ ರಿಕಾರ್ಡಿಂಗ್ ಮಾಡುವ ಸೌಲಭ್ಯ ದೊರೆಯಿತು. ಇದರಿಂದ ವಾದ್ಯ ಸಂಗೀತ ಸ್ಪಷ್ಟವಾಗಿ ಕೇಳುವಂತಾಯಿತು. ಈ ಹಂತದಲ್ಲಿ 'ಸ್ಟೀರಿಯೋಫೋನಿಕ್ ಸೌಂಡ್' ಕ್ರಮೇಣ ಬಳಕೆಯಲ್ಲಿ ಬಂತು. ಇದರಿಂದ ಸಂಭಾಷಣೆ, ಹಾಡುಗಳು ಆಯಾ ಪಾತ್ರಧಾರಿಗಳಿಂದಲೇ ಸ್ಪಷ್ಟವಾಗಿ ಮೂಡಿ ಬರುವುದು ಸಾಧ್ಯವಾಯಿತು. ಈ ತಂತ್ರಜ್ಞಾನದಲ್ಲಿ ಸಹಜವಾಗಿ ಧ್ವನಿಮುದ್ರಣ ಮಾಡಿಕೊಂಡು ತಾಂತ್ರಿಕತೆಯಿಂದ ಎರಡೂ ಬದಿಯಲ್ಲಿ ಕೇಳುವಂತೆ ಮಾಡುತ್ತಾರೆ. ತೆರೆಯ ಮೇಲೆ ನಾಲ್ಕಾರು ವ್ಯಕ್ತಿಗಳನ್ನು ಸಂಗೀತ ಸಂಕೇತಿಸಬೇಕಾದಾಗ ಕಲಸುಮೇಲೋಗರವಾಗುವ ಸ್ಥಿತಿ ಇದರಿಂದ ದೂರವಾಯಿತು. ಈ ತಂತ್ರಜ್ಞಾನದಿಂದ ರಿಕಾರ್ಡಿಂಗ್ ಮಾಡುವುದು ಗ್ರಾಮಫೋನ್‌ಗಳಿಂದ ಕ್ಯಾಸೆಟ್ ಯುಗಕ್ಕೆ ಚಿತ್ರರಂಗವನ್ನು ತರುವಲ್ಲಿ ಪ್ರಮುಖ ಪಾತ್ರ ವಹಿಸಿದವು. ಹೀಗೆಯೇ ವಾದ್ಯಗಳಲ್ಲಿ ಸಾಕಷ್ಟು ಬದಲಾವಣೆಗಳಾದವು. ಭಾರತೀಯ ವಾದ್ಯಗಳ ಜಾಗದಲ್ಲಿ ಎಲೆಕ್ಟ್ರಾನಿಕ್ ವಾದ್ಯಗಳು ಬಂದು ನಿಂತವು. ಇವುಗಳಿಂದ ಸುಸಜ್ಜಿತವಾದ ಆರ್ಕೆಸ್ಟ್ರಾ ಸಿದ್ಧವಾಯಿತು. ಇದರಿಂದ ಸಂಗೀತ ನಿರ್ದೇಶಕರ ಜೊತೆಯಲ್ಲಿ 'ಮ್ಯೂಸಿಕ್ ಕಂಡಕ್ಟರ್' ಎಂಬ ವ್ಯಕ್ತಿಯ ಸೃಷ್ಟಿಯಾಯಿತು. ಸಂಗೀತಗಾರನ ಮನಸ್ಸಿನಲ್ಲಿ ಅಸ್ಪಷ್ಟವಾಗಿದ್ದ ನಾದ ತರಂಗಗಳು ವಾದ್ಯಗಳ ಮೂಲಕ ಹೊರಹೊಮ್ಮುವಂತೆ ಮಾಡುವವರು ಈ ಕಂಡಕ್ಟರ್ಸ್ (ಮುಂದಿನ ಭಾಗದಲ್ಲಿ ವಿವರಗಳಿವೆ).

ಇಲ್ಲಿಂದ ಮುಂದೆ ಬಂದ ಮುಖ್ಯ ಬೆಳವಣಿಗೆ ಮ್ಯೂಸಿಕ್ ಟ್ರ್ಯಾಕ್ ರಿಕಾರ್ಡಿಂಗ್. ಈ ಬೆಳವಣಿಗೆ ಬಂದ ಮೇಲೆ ವಾದ್ಯಗಾರರು, ಗಾಯಕರು ಒಟ್ಟಾಗಿ ಗೀತೆ ಕೂಡಿಸುವ ಅಗತ್ಯ ಬೀಳಲಿಲ್ಲ. ಯಾವಾಗಲೋ ಸಿದ್ಧಪಡಿಸಿಟ್ಟಿದ್ದ ವಾದ್ಯಗಳ ಟ್ಯೂನ್‌ಗೆ ಗಾಯಕರು ಹಾಡಬಹುದಾಗಿತ್ತು. ಇದು ಸಾಮಾನ್ಯವಾಗಿ ಕಾಲ್‌ಶೀಟ್ ಸಮಸ್ಯೆಯಿಂದಾಗಿ ಉದ್ಭವಿಸುತ್ತಿದ್ದ ಸಮಸ್ಯೆಗಳಿಗೆ ಸುಲಭ ಪರಿಹಾರ ಒದಗಿಸಿತು. ಆಕ್ಷೇಪಗಳೇ ಇಲ್ಲವೆಂದಲ್ಲವಾದರೂ ಈಗ 'ಹಿನ್ನೆಲೆ ಸಂಗೀತ' ಒಂದು ತಾಂತ್ರಿಕ ನೆಲೆಗಟ್ಟಿಗೆ ಬಂದು ನಿಂತಿದೆ. ವಿವಿಧ ಮಾದರಿ ಧ್ವನಿ ಭಂಡಾರವೇ ನಮ್ಮಲ್ಲಿ ಲಭ್ಯವಿದೆ. ಹಿನ್ನೆಲೆ ಸಂಗೀತದಿಂದಲೇ ಚಲನಚಿತ್ರದ ಸಾಧ್ಯತೆ ಬದಲಿಸಲು ಬೇಕಾದಷ್ಟು ತಾಂತ್ರಿಕ ಬದಲಾವಣೆ, ಹೊಸ ಆವಿಷ್ಕಾರಗಳು ನಮ್ಮಲ್ಲಿ ಆಗಿವೆ.

* * *

ಕನ್ನಡದ ಮೊಟ್ಟಮೊದಲನೆಯ ವಾಕ್ಚಿತ್ರ 'ಸತಿ ಸುಲೋಚನಾ' (೧೯೩೪). ಆ ಚಿತ್ರದ ಸಂಗೀತ ನಿರ್ದೇಶಕರು ಕನ್ನಡ ರಂಗಭೂಮಿ-ಚಿತ್ರರಂಗಗಳ ಭೀಷ್ಮ ಆರ್.ನಾಗೇಂದ್ರರಾಯರು. ಅವರು ಸ್ವತಃ ಶಾಸ್ತ್ರೀಯ ಸಂಗೀತವನ್ನು ಅಭ್ಯಾಸ ಮಾಡಿದ್ದವರು, ವೃತ್ತಿ ರಂಗಭೂಮಿಯಲ್ಲಿ ತಮ್ಮ ಸುಶ್ರಾವ್ಯ ಗಾಯನದಿಂದ ಪ್ರಸಿದ್ಧರಾಗಿದ್ದವರು. 'ಸತಿ ಸುಲೋಚನಾ' ಚಿತ್ರದ ಸಾಹಿತ್ಯ, ಗೀತೆಗಳನ್ನು ಒದಗಿಸಿದವರು ರಂಗಭೂಮಿಯಲ್ಲಿ ಶ್ರೇಷ್ಠ ನಾಟಕಕಾರರಾಗಿದ್ದ ಬೆಳ್ಳಾವೆ ನರಹರಿ ಶಾಸ್ತ್ರಿಗಳು. ಸಹಜವಾಗಿಯೇ ಈ ಚಿತ್ರದ ಸಂಗೀತವೂ ಶಾಸ್ತ್ರೀಯ ಸಂಗೀತ ಆಧರಿಸಿದ ರಂಗ ಸಂಗೀತವೇ ಆಗಿತ್ತು.

ಇದಕ್ಕೂ ಮುಂಚೆ ಮೂಕಿಚಿತ್ರಗಳಲ್ಲಿ ಸಂಗೀತಕ್ಕೆ ಅವಕಾಶವಿರಲಿಲ್ಲವಾದರೂ ಚಿತ್ರಗಳ ಪ್ರದರ್ಶನದ ಸಮಯದಲ್ಲಿ ಪರದೆಯ ಹಿಂದೆ ಅಥವಾ ಪಕ್ಕದಲ್ಲಿ ಕುಳಿತು ಆಯಾ ಸನ್ನಿವೇಶಗಳಿಗೆ ತಕ್ಕಂತೆ ಸಂಗೀತ ವಾದ್ಯಗಳನ್ನು ನುಡಿಸಲಾಗುತ್ತಿತ್ತು. ಹೀಗೆ ಚಿತ್ರಗಳಲ್ಲಿ ಸಂಗೀತ ಒದಗಿಸುತ್ತಿದ್ದ ಪ್ರಮುಖರಲ್ಲಿ ಒಬ್ಬರು ಕನ್ನಡಿಗರೇ ಆದ ಎಚ್.ಆರ್.ಪದ್ಮನಾಭಶಾಸ್ತ್ರಿಗಳು. ವಾಕ್ಚಿತ್ರ ಯುಗದ ಪ್ರಾರಂಭವಾದಾಗ ಹಲವು ತಮಿಳು ಚಿತ್ರಗಳಿಗೆ ಸಂಗೀತ ಸಂಯೋಜಿಸಿದ ಅನುಭವಿ. ಇವರು 'ಸತಿ ಸುಲೋಚನಾ' ಚಿತ್ರದಲ್ಲಿ ನಾಗೇಂದ್ರರಾಯರಿಗೆ ತಾಂತ್ರಿಕ ಸಹಾಯಕರಾಗಿ ಕೆಲಸ ಮಾಡಿದರು.

ಕನ್ನಡ ಚಿತ್ರರಂಗದ ಪ್ರಥಮ ಗಾಯಕಿ 'ಸತಿ ಸುಲೋಚನಾ' ಚಿತ್ರದ ನಟಿ ಉಡುಪಿ ಲಕ್ಷ್ಮೀಬಾಯಿ. ಅವರು ಹಾಡಿದ ಮೊದಲ ಹಾಡು 'ಭಲೆ ಭಲೆ ಪಾರ್ವತಿ ಬಲು ಚತುರೆ...' ಎಂದು ಪ್ರಾರಂಭವಾಗುವ ಗೀತೆ. ತ್ರಿಪುರಾಂಬ ಇನ್ನೊಬ್ಬ ಗಾಯಕಿ. ಆ ದಿನಗಳಲ್ಲಿ ಹಿನ್ನೆಲೆ ಗಾಯನ ವ್ಯವಸ್ಥೆ ಇರಲಿಲ್ಲವಾದ್ದರಿಂದ ಚಿತ್ರದ ಮುಖ್ಯ ಕಲಾವಿದರುಗಳೆಲ್ಲ ಹಾಡಲು ಬಲ್ಲವರೇ ಆಗಿರಬೇಕಾಗಿತ್ತು. ರೂಪು, ಅಭಿನಯ ಸಾಮರ್ಥ್ಯ ಇವುಗಳಿಗಿಂತ ಹಾಡುಗಾರಿಕೆಗೇ ಹೆಚ್ಚು ಪ್ರಾಧಾನ್ಯ.

ಅದೇ ವರ್ಷ ಬಿಡುಗಡೆಯಾದ 'ಭಕ್ತ ಧ್ರುವ' ಚಿತ್ರದ ಹಾಡುಗಳನ್ನು ಗಮನಿಸಿದರೆ ಈ ಅಂಶ ಸುಸ್ಪಷ್ಟ. ಆ ಚಿತ್ರದಲ್ಲಿ ಅಭಿನಯಿಸಿದ್ದ ಜಿ.ನಾಗೇಶರಾಯರು, ಎಂ.ಜಿ.ಮರಿರಾವ್ ರಂಗಭೂಮಿಯಲ್ಲಿ ಹೆಸರಾಂತ ಗಾಯಕರಾಗಿದ್ದವರು. ಆ ಕಾಲದಲ್ಲೇ ಗ್ರಾಮಫೋನ್ ರಿಕಾರ್ಡ್‌ಗಳಲ್ಲಿ ಗಾನಮುದ್ರಿಕೆಗಳನ್ನು ಕೇಳಿದ ಜನರಿಂದಾಗಿ ಪ್ರಸಿದ್ಧರಾಗಿದ್ದವರು. ಚಿತ್ರಕ್ಕೆ ಸಂಗೀತ ನಿರ್ದೇಶನ ಮಾಡಿದವರು ರಂಗಭೂಮಿಯ ಪ್ರಸಿದ್ಧ ಹಾರ್ಮೋನಿಯಂ ವಾದಕ ಶೇಷಗಿರಿರಾಯರು. ೧೯೩೫ರಲ್ಲಿ ತೆರೆಕಂಡ ಜಾನಪದ ಕಥಾವಸ್ತುವುಳ್ಳ 'ಸದಾರಮೆ' ಚಿತ್ರದಲ್ಲಿ ಅಭಿನಯಿಸಿದ್ದ ಕೆ.ಅಶ್ವತ್ಥಮ್ಮ ಹೆಸರಾಂತ ಗಾಯಕಿ. ಅವರು ಹಾಡಿದ್ದ 'ಹಾ ಪ್ರಿಯಾ ಪ್ರಶಾಂತ ಹೃದಯಾ...' ಮೊದಲಾದ ಹಾಡುಗಳು ಕನ್ನಡ ನಾಡಿನಲ್ಲಷ್ಟೇ ಅಲ್ಲದೆ ತಮಿಳುನಾಡಿನಲ್ಲೂ ಗ್ರಾಮಫೋನ್ ತಟ್ಟೆಗಳ ಮೂಲಕ ಅತ್ಯಂತ ಜನಪ್ರಿಯವಾಗಿದ್ದವು. 'ಸದಾರಮೆ' ಚಿತ್ರದಲ್ಲಿ ಆಕೆ ಹಾಗೂ ಮುರಾರಾಚಾರ್ ಹಾಡಿದ ಹಾಡುಗಳು ಆ ದಿನಗಳಲ್ಲಿ ಮತ್ತೆ ಮತ್ತೆ ಮೆಲುಕು ಹಾಕುವಂತಿದ್ದವು. ಆ ಚಿತ್ರಕ್ಕೆ ಸಂಗೀತ ನೀಡಿದವರು ವೆಂಕಟರಾಮಯ್ಯ (ಪಾಪಣ್ಣ) ಎಂಬುವವರು.

'ಸದಾರಮೆ' ಚಿತ್ರದಲ್ಲಿ ಕೆ.ಅಶ್ವತ್ಥಮ್ಮ ಹಾಡಿದ 'ಭಂಗಿ ಆನಂದವೇನೆಂಬೆ ಲೋಕದಿ, ನಾನಿಂದು ಸೇದುವೆ ಮೋದದಿ...' ಹಾಡು ಅಪಾರ ಜನಪ್ರಿಯತೆ ಗಳಿಸಿತು. ಮೋಹಕ ಕಂಠದ ನಟಿ ಅಶ್ವತ್ಥಮ್ಮ ಚಿಕ್ಕ ವಯಸ್ಸಿನಲ್ಲೇ ನಿಧನರಾದರು. ಆದರೆ ಅವರು ಹಾಡಿದ ಚಿತ್ರಗೀತೆಗಳು ಹಾಗೂ ಶಾಸ್ತ್ರೀಯ ಸಂಗೀತ ಧ್ವನಿಮುದ್ರಿಕೆಗಳು ಬಹುಕಾಲ ನೆನಪಿನಲ್ಲಿ ಉಳಿಯುವಂಥವು. ಬಿ.ಜಯಮ್ಮನವರೂ ತಮ್ಮ ಪಾತ್ರಗಳಿಗೆ ತಾವೇ ಹಾಡುತ್ತಿದ್ದರು.

ಅನಂತರ ತೆರೆಕಂಡ 'ಸಂಸಾರನೌಕ' (೧೯೩೬), ಕನ್ನಡದ ಪ್ರಥಮ ಸಾಮಾಜಿಕ ಚಿತ್ರಕ್ಕೆ ಸಂಗೀತ ನೀಡಿದವರು ಖ್ಯಾತ ನಟ ಡಿಕ್ಕಿ ಮಾಧವರಾಯರ ಸೋದರ ಎಂ.ನಾಗರಾಜ ಎಂಬುವರು. ಚಿತ್ರ ಸಾಮಾಜಿಕವಾದರೂ ಅದರ ಸಂಗೀತ ರಂಗ ಸಂಗೀತಕ್ಕಿಂತ ಬೇರೆಯಾಗೇನೂ ಇರಲಿಲ್ಲ. ಪಾತ್ರಧಾರಿಗಳೇ ಹಾಡುಗಳನ್ನು ಹಾಡಿದ್ದರು. ಆದರೂ ಚಿತ್ರದ ಹಾಡುಗಳು ಬಹಳ ಜನಪ್ರಿಯವಾಗಿದ್ದವು. ಸಿಂಹ ಅವರೇ ಗೀತೆಗಳನ್ನು ರಚಿಸಿದ್ದರು.

ಅನಂತರ ತಯಾರಾದದ್ದು 'ಚಿರಂಜೀವಿ' ಅಥವಾ 'ಭಕ್ತ ಮಾರ್ಕಂಡೇಯ' ಚಿತ್ರ. ಕನ್ನಡ ರಂಗಭೂಮಿಯ ಹೆಸರಾಂತ ಗಾಯಕಿ-ನಟಿ ಮಳವಳ್ಳಿ ಸುಂದರಮ್ಮ, ಮತ್ತೊಬ್ಬ ಗಾಯಕಿ-ಅಭಿನೇತ್ರಿ ಅಮೀರ್ ಬಾಯಿ ಕರ್ನಾಟಕಿ, ಖ್ಯಾತ ಹಿಂದೂಸ್ತಾನಿ ವಿದ್ವಾಂಸ ಬಸವರಾಜ ಮನ್ಸೂರ್ ಮುಂತಾದವರು ಅಭಿನಯಿಸಿದ್ದ ಈ ಚಿತ್ರವನ್ನು ಒಂದು ಅರ್ಥದಲ್ಲಿ ಸಂಗೀತ ಪ್ರಧಾನ ಚಿತ್ರ ಎಂದೇ ಕರೆಯಬಹುದು. ಹಾರ್ಮೋನಿಯಂ ಶೇಷಗಿರಿರಾಯರು ಸಂಗೀತ ನೀಡಿದ್ದ ಈ ಚಿತ್ರದಲ್ಲಿ ಮೇಲ್ಕಂಡ ನಟ-ನಟಿಯರ ಹಾಡುಗಳು ಬಹಳ ಜನಪ್ರಿಯವಾಗಿದ್ದವು. ಇನ್ನೂ ಹಿನ್ನೆಲೆ ಗಾಯನ ಪದ್ಧತಿ, ಆಧುನಿಕ ಧ್ವನಿಮುದ್ರಣ ಸೌಲಭ್ಯವಿಲ್ಲದಿದ್ದ ಆ ಕಾಲದಲ್ಲೂ ಆ ಚಿತ್ರದ ಹಾಡುಗಳ ಸ್ಪಷ್ಟತೆ (ಕ್ಲಾರಿಟಿ) ಗಮನಿಸಿದರೆ ಆಶ್ಚರ್ಯವಾಗುತ್ತದೆ.

ಅನಂತರ ಬಂದ 'ಪುರಂದರದಾಸ' ಹಾಗೂ 'ರಾಜಸೂಯ ಯಾಗ' ಚಿತ್ರಗಳೂ ಸಂಗೀತ ಪ್ರಧಾನವಾಗಿದ್ದ ಚಿತ್ರಗಳಾಗಿದ್ದವು. ತದನಂತರ 'ಸಂಗೀತ ಸುಭದ್ರ'

ನಾಟಕವನ್ನಾಧರಿಸಿದ 'ಸುಭದ್ರಾ' (೧೯೪೧) ಕೂಡಾ ಪ್ರಖ್ಯಾತ ಗಾಯಕ-ನಟರ ಅಭಿನಯದ ಸಂಗೀತಮಯ ಚಿತ್ರ. ಚಿತ್ರಕ್ಕೆ ಸಂಗೀತ ನೀಡಿದವರು ಆಸ್ಥಾನ ವಿದ್ವಾನ್ ಬಿ.ದೇವೇಂದ್ರಪ್ಪ ಮತ್ತು ಎಚ್.ಆರ್.ಪದ್ಮನಾಭಶಾಸ್ತ್ರಿಗಳು. ನಾರದನ ಪಾತ್ರದಲ್ಲಿ ಸ್ವತಃ ಸಂಗೀತ ನಿರ್ದೇಶಕರೇ ಇದ್ದುದರಿಂದ ಸಂಗೀತದ ಹೊನಲೇ ಹರಿದಿತ್ತು. ಬಹುಕಾಲ ಜನರ ಮನಸ್ಸಿನಲ್ಲಿ ಒಂದು 'ಗುಂಗು' ಆಗಿ ಉಳಿಯಲು ಇದೂ ಒಂದು ಕಾರಣ.

೧೯೪೨ರಲ್ಲಿ ತೆರೆಕಂಡ 'ವಸಂತಸೇನಾ'ಗೆ ಶಾಸ್ತ್ರೀಯ ಸಂಗೀತವನ್ನು ಜಾನಪದ ಧಾಟಿಯೊಂದಿಗೆ ಮಧುರವಾಗಿ ಸಂಯೋಜಿಸುವುದರಲ್ಲಿ ಖ್ಯಾತರಾಗಿದ್ದ ಎಸ್.ರಾಜೇಶ್ವರರಾವ್ ಸಂಗೀತ ನೀಡಿದ್ದರು. ಸುಬ್ಬಯ್ಯನಾಯ್ಡು ಅವರು ಹಾಡಿದ ಹಾಡುಗಳು, ಲಕ್ಷ್ಮೀಬಾಯಿ ಹಾಡಿದ 'ಇದೇ ಮಹಾಸುದಿನಾ....' ಮತ್ತು 'ಭಲೆ ಭಲೇ ಜೂಜುಗಾರನಲಾ...' ಹಾಗೂ ಶಕಾರನ ಪಾತ್ರದಲ್ಲಿ ನಾಗೇಂದ್ರರಾಯರು ಹಾಡಿದ 'ಕತ್ತೆಗಳು ನಾಯಿಗಳು ನನ್ನ ಹಾಡನು ಕೇಳಿ....' ಹಾಡುಗಳು ಅತ್ಯಂತ ಜನಪ್ರಿಯವಾಗಿದ್ದವು. ಕಾಳಿಂಗರಾಯರೂ ಹಾಡಿದ್ದರು. ನಾಗೇಂದ್ರರಾಯರೇ ಕೆಲವು ಹಾಡುಗಳನ್ನು ಬರೆದಿದ್ದರು.

ಆಗೆಲ್ಲ ಚಿತ್ರ ಸಂಗೀತದಲ್ಲಿ ಹಾಡುಗಳೇ ಪ್ರಧಾನವಾಗಿದ್ದವು. ಹಿನ್ನೆಲೆ ಸಂಗೀತಕ್ಕೆ, ಸನ್ನಿವೇಶಕ್ಕೆ ತಕ್ಕಂತೆ ಶಾಸ್ತ್ರೀಯ ರಾಗಗಳನ್ನೇ ವಾದ್ಯಗಳಲ್ಲಿ ಬಳಸಲಾಗುತ್ತಿತ್ತೇ ವಿನಹ ಹೊಸ ಬಗೆಯ ಪ್ರಯೋಗಗಳಾವುವೂ ನಡೆಯುತ್ತಿರಲಿಲ್ಲ.

ಅನಂತರ ಬಂದದ್ದು ವೀರಣ್ಣನವರೇ ತಯಾರಿಸಿದ ಗುಬ್ಬಿ ಫಿಲಂಸ್ ಅವರ 'ಜೀವನ ನಾಟಕ' ಸಾಮಾಜಿಕ ಚಿತ್ರ. ಈ ಚಿತ್ರಕ್ಕೆ ಸಂಗೀತ ನೀಡಿದವರು ರಾಮಯ್ಯರ್ ಮತ್ತು ಹಾರ್ಮೋನಿಯಂ ಶೇಷಗಿರಿರಾಯರು. ಹಿಂದೀ ಚಿತ್ರ ನಟಿ ಶಾಂತಾ ಹುಬ್ಳೀಕರ್ ಈ ಚಿತ್ರದಲ್ಲಿ ನಾಯಕಿಯ ಪಾತ್ರ ವಹಿಸುವುದರ ಜೊತೆಗೆ ಹಾಡಿದ್ದರು. ಹಾಡುಗಳನ್ನು ಬರೆದವರು ಕು.ರ.ಸೀತಾರಾಮಶಾಸ್ತ್ರಿಗಳು.


(ಚಿತ್ರ ೪೫) ಎಸ್.ರಾಜೇಶ್ವರರಾವ್

ಮಲ್ಲಿಕಾರ್ಜುನ ಮನ್ಸೂರ್

'ಪ್ರಹ್ಲಾದ' ಮತ್ತು 'ಕೃಷ್ಣ ಸುಧಾಮ' ಚಿತ್ರಗಳು. 'ಪ್ರಹ್ಲಾದ' ಚಿತ್ರದಲ್ಲಿ ಎಂ.ವಿ. ರಾಜಮ್ಮನವರು ನೀಲಾಂಬರಿ ರಾಗದಲ್ಲಿ ಹಾಡಿದ ಹಾಡು ಜನಪ್ರಿಯ ವಾಯಿತು.

೧೯೪೩ರಲ್ಲಿ ಬಿಡುಗಡೆಯಾದ 'ಹರಿಶ್ಚಂದ್ರ' ಚಿತ್ರದಲ್ಲಿ ಸುಬ್ಬಯ್ಯನಾಯ್ಡು, ಲಕ್ಷ್ಮೀಬಾಯಿ ಹಾಗೂ ನಾರದನ ಪಾತ್ರದಲ್ಲಿ ಸಂಗೀತ ವಿದ್ವಾನ್ ಬಿ.ಎಸ್.ರಾಜಯ್ಯಂಗಾರ್ ಹಾಡಿದ ಹಾಡುಗಳು ಬಹಳ ಜನಪ್ರಿಯವಾದವು. ಈ ಯಶಸ್ವಿ ಚಿತ್ರ ಅನಂತರ ತಮಿಳು ಭಾಷೆಗೆ ಡಬ್ ಆಯಿತು. ಹೀಗೆ ಒಂದು ಭಾಷೆಯಿಂದ ಮತ್ತೊಂದು ಭಾಷೆಗೆ ಡಬ್ ಆದ ಪ್ರಥಮ ದಕ್ಷಿಣ ಭಾರತ ಚಿತ್ರ 'ಹರಿಶ್ಚಂದ್ರ'. ಅಷ್ಟು ಹೊತ್ತಿಗೆ ಸ್ವಲ್ಪಮಟ್ಟನ ಧ್ವನಿಮುದ್ರಣ ಸೌಲಭ್ಯಗಳು, ಹಿನ್ನೆಲೆ ಗಾಯನ ಪದ್ಧತಿ ಬಳಕೆಗೆ ಬಂದಿದ್ದರಿಂದ ಇದು ಸಾಧ್ಯವಾಯಿತು.

ಎಚ್.ಆರ್.ಜಿ.ಸಿ. ಶ್ರೀ ಪಿಕ್ಚರ್ಸ್ ಅವರ 'ವಾಣಿ' ಸಂಗೀತಗಾರನೊಬ್ಬನ ಕಥೆಯನ್ನು ಕುರಿತ ಚಿತ್ರ. ಅಂತೆಯೇ ಸಂಗೀತ ಪ್ರಧಾನ ಚಿತ್ರ ಎನ್ನಬಹುದು. ಚೌಡಯ್ಯನವರೇ ಪದ್ಮನಾಭಶಾಸ್ತ್ರಿಗಳ ನೆರವಿನೊಡನೆ ಸಂಗೀತವನ್ನು ನೀಡಿದರು. ಈ ಚಿತ್ರದ ಹಾಡುಗಳನ್ನು ಕೆ.ಹಿರಣ್ಣಯ್ಯನವರೇ ಬರೆದಿದ್ದರು. ಚಿತ್ರದ ಒಂದು 'ಹೈಲೈಟ್' ಅಂದರೆ ಸುಪ್ರಸಿದ್ಧ ಸಂಗೀತ ವಿದ್ವಾಂಸರಾಗಿದ್ದ ಗಾಯನ ಗಂಧರ್ವ ಚೆಂಬೈ ವೈದ್ಯನಾಥ ಅಯ್ಯರ್ ಅವರ ಸಂಗೀತ ಕಛೇರಿ. ಅವರೊಂದಿಗೆ ಪಕ್ಕವಾದ್ಯಗಳಲ್ಲಿ ಕರ್ನಾಟಕ ಸಂಗೀತದ ದಿಗ್ಗಜಗಳೆನಿಸಿದ್ದ ಟಿ.ಚೌಡಯ್ಯ (ಪಿಟೀಲು), ಪಾಲ್‌ಘಾಟ್ ಮಣಿ ಅಯ್ಯರ್ (ಮೃದಂಗ) ಮುಂತಾದವರು ಭಾಗವಹಿಸಿದ್ದರು.

ಕನ್ನಡದ ಪ್ರಥಮ ನಿರ್ಮಾಪಕಿ ಎಂ.ವಿ.ರಾಜಮ್ಮ ತಯಾರಿಸಿದ 'ರಾಧಾರಮಣ' ಪೌರಾಣಿಕ ಚಿತ್ರಕ್ಕೂ ಹಾರ್ಮೋನಿಯಂ ಶೇಷಗಿರಿರಾಯರೇ ಸಂಗೀತ ನೀಡಿದ್ದರು.

ಅನಂತರ ಗುಬ್ಬಿ ವೀರಣ್ಣನವರ 'ಹೇಮರೆಡ್ಡಿ ಮಲ್ಲಮ್ಮ'ಕ್ಕೆ ತೆಲುಗು ಚಿತ್ರರಂಗದ ಖ್ಯಾತ ಗಾಯಕ-ನಟ ಚಿತ್ತೂರು ವಿ.ನಾಗಯ್ಯ ಸಂಗೀತ ನೀಡಿದ್ದರು. ಪ್ರಧಾನ ಭೂಮಿಕೆಯಲ್ಲಿದ್ದ ಬಿ.ಜಯಮ್ಮ, ಹೊನ್ನಪ್ಪ ಭಾಗವತರು, ಸಿ.ಬಿ.ಮಲ್ಲಪ್ಪನವರು ಹಾಡಿದ ಹಾಡುಗಳು ಅತ್ಯಂತ ಸುಶ್ರಾವ್ಯವಾಗಿದ್ದು ಜನಪ್ರಿಯವೂ ಆದುವು. ಜಯಮ್ಮನವರು ಹಾಡಿದ 'ಈ ಶಿವರಾತ್ರಿ ರಮೇಶನ ದರುಶನ ಭಾಗ್ಯವು ಲಭಿಸುವುದೇ...' ಎಂಬ ಹಾಡು ಕರುಣಾರಸಪೂರಿತವಾಗಿ ಭಾವುಕರ ಹೃದಯಗಳನ್ನು ಮೀಟಿತು.

೧೯೪೭ರಲ್ಲಿ ಕನ್ನಡ ಸುಗಮ ಸಂಗೀತ ಕ್ಷೇತ್ರದ ಮಧುರಗಾಯಕ ಪಿ.ಕಾಳಿಂಗರಾಯರು ಪ್ರಥಮ ಬಾರಿಗೆ ಸಂಗೀತ ನಿರ್ದೇಶಕರಾಗಿ ಚಿತ್ರರಂಗಕ್ಕೆ ಬಂದರು. ಕನ್ನಡದಲ್ಲಿ ವ್ಯವಸ್ಥಿತವಾಗಿ ವಾದ್ಯಗೋಷ್ಠಿಯ (ಆರ್ಕೆಸ್ಟ್ರಾ) ನಿರ್ವಹಣೆಯನ್ನು ಬಳಕೆಗೆ ತಂದವರು ಕಾಳಿಂಗರಾಯರು. ಅವರು ಸಂಗೀತ ನೀಡಿದ ಪ್ರಥಮ ಚಿತ್ರ ಮಹಾತ್ಮ ಪಿಕ್ಚರ್ಸ್ ಅವರ ಚೊಚ್ಚಲ ತಯಾರಿಕೆ 'ಕೃಷ್ಣಲೀಲಾ'. ಆಗ ತಾನೇ ಸುಸಜ್ಜಿತಗೊಂಡಿದ್ದ ಮೈಸೂರಿನ ನವಜ್ಯೋತಿ ಸ್ಟುಡಿಯೋದಲ್ಲಿ ತಯಾರಾದ ಪ್ರಥಮ ಚಿತ್ರ. ಹಾಡುಗಳ ಧ್ವನಿಮುದ್ರಣ ಅಲ್ಲಿಯೇ ನಡೆದಿತ್ತು. ಈಗಿನಂತೆ ರಿಕಾರ್ಡಿಂಗ್ ಥಿಯೇಟರುಗಳಾಗಲಿ, ಇತರ ಸೌಲಭ್ಯಗಳಾಗಲಿ ಆಗ ಇರಲಿಲ್ಲ. ಸ್ಟುಡಿಯೋದಲ್ಲೇ ಒಂದು ಷೆಡ್‌ನಲ್ಲಿ ಹಾಡುಗಳ ಧ್ವನಿಮುದ್ರಣ ನಡೆಯುತ್ತಿತ್ತು.

ಆ ದಿನಗಳಲ್ಲಿ ಧ್ವನಿಮುದ್ರಣ ಕಾರ್ಯಕ್ರಮ ಹೇಗೆ ನಡೆಯುತ್ತಿತ್ತು ಎಂಬ ಬಗೆಗೆ ಸುಪ್ರಸಿದ್ಧ ಸಂಗೀತ ನಿರ್ದೇಶಕದ್ವಯರಾದ ರಾಜನ್-ನಾಗೇಂದ್ರ ಹೇಳುತ್ತಾರೆ :

''ಹಿಂದಿನ ದಿನಗಳಲ್ಲಿ ರಿಕಾರ್ಡಿಂಗ್ ಕಾರ್ಯ ಮೈಸೂರಿನ ನವಜ್ಯೋತಿ ಸ್ಟುಡಿಯೋದಲ್ಲಿ ಒಂದು ಸಾಧಾರಣ ಶೂಟಿಂಗ್ ಷೆಡ್‌ನಲ್ಲಿ ನಡೆಯುತ್ತಿತ್ತು. ನಿಶ್ಶಬ್ದ ವಾತಾವರಣದಲ್ಲಿ ಕೇವಲ ಎರಡೇ ಮೈಕ್‌ಗಳ ಮೂಲಕ ಧ್ವನಿಮುದ್ರಣ ಕೆಲಸ ನಡೆಯುತ್ತಿತ್ತು. ಒಂದು ಮೈಕ್‌ನ ಮೂಲಕ ಗಾಯಕ ಗಾಯಕಿಯರು, ಮತ್ತೊಂದು ಮೈಕಿನ ಮೂಲಕ ವಾದ್ಯವೃಂದದವರು ಸಂಗೀತ ಒದಗಿಸುತ್ತಿದ್ದರು. ಹೊರಗೆ ಒಂದು ವ್ಯಾನ್‌ನಲ್ಲಿ ಅಳವಡಿಸಲ್ಪಟ್ಟ ಧ್ವನಿಮುದ್ರಣ ಯಂತ್ರಗಳ ಮೂಲಕ ರಿಕಾರ್ಡಿಂಗ್ ಕಾರ್ಯ ನಡೆಯುತ್ತಿತ್ತು. ಧ್ವನಿಮುದ್ರಣವಾಗುತ್ತಿರುವ ಸಂಗೀತವನ್ನು ಏಕಕಾಲದಲ್ಲಿ ಅಂದರೆ ಅದೇ ಸಮಯದಲ್ಲಿ ಕೇಳಲು ಸಾಧ್ಯವಾಗುತ್ತಿರಲಿಲ್ಲ. ಏಕೆಂದರೆ ನೇರವಾಗಿ ನೆಗೆಟಿವ್ ಫಿಲಂ ಮೇಲೆ ಧ್ವನಿಮುದ್ರಣವನ್ನು ಮಾಡಲಾಗುತ್ತಿತ್ತು. ಈ ಸಂಗೀತವನ್ನು ಕೇಳಬೇಕಾದರೆ ಹಲವು ರೂಪಾಂತರಗಳಾಗಬೇಕಿತ್ತು. ಮೊದಲು ಈ ನೆಗೆಟಿವ್ ಫಿಲಂಗಳನ್ನು ಲ್ಯಾಬ್‌ಗೆ ಕಳುಹಿಸಿ ಅಲ್ಲಿ ಅವುಗಳನ್ನು ಡೆವಲಪ್ ಮಾಡಿ ನಂತರ ಪಾಸಿಟಿವ್ ಫಿಲಂ ಮೇಲೆ ಪ್ರಿಂಟ್ ಮಾಡಿ ಅದನ್ನು ಯಾವುದಾದರೂ ಸಿನಿಮಾ ಥಿಯೇಟರ್‌ಗೆ ತೆಗೆದುಕೊಂಡು ಹೋಗಿ ಅಲ್ಲಿ ಪ್ರೊಜೆಕ್ಟರ್‌ಗಳ ಮೂಲಕ ಕೇಳಬೇಕಾಗಿತ್ತು. ಅನಂತರ ಅದನ್ನು ಎಡಿಟಿಂಗ್ ಕೊಠಡಿಗೆ ತೆಗೆದುಕೊಂಡು ಹೋಗಿ ಅಲ್ಲಿ ಅವುಗಳ ಆಯ್ದ ಒಳ್ಳೆಯ ಭಾಗಗಳನ್ನು ಜೋಡಿಸುವ ಕೆಲಸ ಮೂವಿಯೋಲ ಮೂಲಕ ನಡೆಯುತ್ತಿತ್ತು. ಹೀಗೆ ಸಿದ್ಧವಾದ ಸಂಗೀತವನ್ನು ಚಿತ್ರೀಕರಣಕ್ಕಾಗಿ ಕಳುಹಿಸಲಾಗುತ್ತಿತ್ತು. ಶೂಟಿಂಗ್ ಕೆಲಸ ಮುಗಿದ ನಂತರ ಹಿನ್ನೆಲೆ ಸಂಗೀತ ಒದಗಿಸಲು ಆಗ ಮದರಾಸಿಗೇ ಹೋಗಬೇಕಾಗಿತ್ತು. ಏಕೆಂದರೆ ಅದಕ್ಕೆ ಅಗತ್ಯವಾದ ಯಂತ್ರೋಪಕರಣಗಳು ಕರ್ನಾಟಕದಲ್ಲಿ ಲಭ್ಯವಿರಲಿಲ್ಲ.''

ಆಗ ಮದರಾಸಿನಲ್ಲೂ ಪರಿಸ್ಥಿತಿ ಹೆಚ್ಚು ಭಿನ್ನವಾಗಿರಲಿಲ್ಲ ಎಂದು ರಾಜನ್-ನಾಗೇಂದ್ರ ವಿವರಿಸುತ್ತಾರೆ :

''ನಾವು ಸಂಗೀತ ನಿರ್ದೇಶಕರಾಗುವುದಕ್ಕೆ ಮೊದಲು ಅದಕ್ಕೆ ಬೇಕಾದ ಅನುಭವವನ್ನು ಗಳಿಸಲು ಮದರಾಸಿನಲ್ಲಿ ವಾದ್ಯಗಾರರಾಗಿ ಕೆಲಸ ಮಾಡುತ್ತಿದ್ದೆವು. ಆ ದಿನಗಳಲ್ಲಿ ರಿಕಾರ್ಡಿಂಗ್ ಕೆಲಸಗಳು ರಾತ್ರಿಯ ಹೊತ್ತು ಒಂದು ಗುಡಿಸಿಲಿನಲ್ಲಿ ನಡೆಯುತ್ತಿದ್ದವು. ಕಾರಣ ಅಲ್ಲಿ ಹಗಲಿನಲ್ಲಿ ಟ್ರಾಮ್, ಬಸ್ಸುಗಳು, ಕಾರುಗಳು ಇತ್ಯಾದಿ ವಾಹನಗಳ ಶಬ್ದ ಹೆಚ್ಚಾಗಿ ಕೇಳಿಬರುತ್ತಿದ್ದವು. ನಿಶ್ಶಬ್ದ ವಾತಾವರಣಕ್ಕಾಗಿ ಕಾದು ರಾತ್ರಿ ೧೦ ಗಂಟೆಯ ಮೇಲೆ ರಿಕಾರ್ಡಿಂಗ್ ಕೆಲಸ ಪ್ರಾರಂಭವಾಗುತ್ತಿತ್ತು. ಹೀಗೆ ರಾತ್ರಿಯ ಮೇಲೆ ರಿಕಾರ್ಡಿಂಗ್ ನಡೆಯುತ್ತಿದ್ದ ಸಮಯದಲ್ಲಿ ಜರುಗಿದ ಒಂದು ಘಟನೆ ಎಂದಿಗೂ ಮರೆಯುವಂತಿಲ್ಲ. ಗುಡಿಸಿಲಿನಲ್ಲಿ 'ಟೇಕ್' ನಡೆಯುತ್ತಿದ್ದ ಸಮಯಕ್ಕೆ ಸರಿಯಾಗಿ ಎಲ್ಲಿಂದಲೋ ಒಂದು ನಾಗರಹಾವು ಕಪ್ಪೆಯನ್ನು ಓಡಿಸಿಕೊಂಡು ಒಳಗೆ ನೇರವಾಗಿ

(ಚಿತ್ರ ೬) ಸಂಗೀತ ನಿರ್ದೇಶಕ ಪಿ.ಶಾಮಣ್ಣನವರ ಪಿಟೀಲು ವಾದನಕ್ಕೆ ಮೋಹನ್ ಕುಮಾರಿ, ಸೋಹನ್ ಕುಮಾರಿ ಜೊತೆಯಲ್ಲಿ ಹಾಡುತ್ತಿರುವ ಕಾಳಿಂಗರಾವ್

ಪ್ರವೇಶಿಸಿ ನಮ್ಮ ಕಾಲುಗಳ ಬಳಿ ಮುಂದೆ-ಹಿಂದೆ ಚಲಿಸದಂತೆ ಹೆಡೆಯೆತ್ತಿಕೊಂಡು ನಿಂತುಬಿಟ್ಟಿತು. ಇದರಿಂದಾಗಿ ಎಲ್ಲರಿಗೂ ಗಾಬರಿಯಾಗಿ ಕೂಡಲೇ ರಿಕಾರ್ಡಿಂಗ್ ಕೆಲಸವನ್ನು ನಿಲ್ಲಿಸಬೇಕಾಯಿತು. ಆ ನಂತರ ಅವೆರಡನ್ನೂ ಹೊರಹಾಕಿದ ನಂತರವೇ ರಿಕಾರ್ಡಿಂಗ್ ಕಾರ್ಯ ಮುಂದುವರೆಯಿತು.

''ಕಾಲಕ್ರಮೇಣ ರಿಕಾರ್ಡಿಂಗ್ ಕೆಲಸಗಳು ಹಗಲಿನಲ್ಲೇ ತಗಡಿನ ಷೆಡ್‌ಗಳಲ್ಲಿ ಮಾಡುವ ಪದ್ಧತಿ ಜಾರಿಗೆ ಬಂದಿತು. ಮೊದಲೇ ಮದರಾಸಿನ ವಾತಾವರಣ ಬೇಸಿಗೆಯಲ್ಲಿ ಬೆಂಕಿಯಂತಿರುತ್ತದೆ. ಇನ್ನು ರಿಕಾರ್ಡಿಂಗ್ ಸಮಯದಲ್ಲಿ ಫ್ಯಾನ್‌ಗಳಿದ್ದರೂ ಯಾವುದೇ ಶಬ್ದದಿಂದ ಅಡಚಣೆಯಾಗಬಾರದೆಂದು ಸ್ವಿಚ್ ಆಫ್ ಮಾಡಲಾಗುತ್ತಿತ್ತು. ಎಲ್ಲರಿಗೂ ಒಂದೇ ಸಮನೆ ಬೆವರು ಸುರಿದು ಬಟ್ಟೆಯೆಲ್ಲ ಒದ್ದೆಯಾಗುತ್ತಿತ್ತು. ಹಾಗೂ ಗಾಯಕ-ಗಾಯಕಿಯರುಗಳ ಹಣೆಯ ವಿಭೂತಿ, ಕುಂಕುಮ ಕರಗಿ ಮುಖವೆಲ್ಲ ಬಣ್ಣ ಬಣ್ಣವಾಗುತ್ತಿತ್ತು''.

ಇಲ್ಲಿ ಇನ್ನೊಂದು ಮುಖ್ಯ ವಿಷಯವನ್ನು ಗಮನಿಸಬೇಕು. ೧೯೫೦ರವರೆಗೆ ಹಿನ್ನೆಲೆ ಗಾಯಕ-ಗಾಯಕಿಯರಿಗಾಗಿ ಮದರಾಸನ್ನು ಅವಲಂಬಿಸಬೇಕಾಗಿರಲಿಲ್ಲ. ಮುಖ್ಯ ಪಾತ್ರಧಾರಿಗಳು ತಮ್ಮ ಪಾತ್ರದ ಹಾಡುಗಳನ್ನು ಅವರೇ ಹಾಡುತ್ತಿದ್ದು, ಉಳಿದಂತೆ ಸ್ಥಳೀಯ ಗಾಯಕ-ಗಾಯಕಿಯರೇ ಹಾಡುತ್ತಿದ್ದರು. 'ಭಾರತಿ' (೧೯೪೮) ಚಿತ್ರದಲ್ಲಿ ಮಾತ್ರ ತೆಲುಗಿನ ಟಿ.ಸೂರ್ಯಕುಮಾರಿ ಹಾಡಿದ್ದರು. ಅದೂ ಅವರು ಮುಖ್ಯ ಪಾತ್ರಧಾರಿಯಾಗಿದ್ದುದರಿಂದ. ಉಳಿದಂತೆ ಎಂ.ಜಿ.ಸರೋಜ, ಖ್ಯಾತ ಸಂಗೀತ ವಿದುಷಿ ನೀಲಮ್ಮ ಕಡಾಂಬಿ, ಲೀಲಾವತಿ ಮುಂತಾದವರು ಹಿನ್ನೆಲೆ ಗಾಯನ ಹಾಡುತ್ತಿದ್ದರು. ವಿದ್ವಾನ್ ಆರ್.ಕೆ.ಶ್ರೀಕಂಠನ್ ಸಹ ಹಾಡಿದ್ದುಂಟು.

ಮುಂದೆ ಕನ್ನಡದಲ್ಲಿ ಸುಗಮ ಸಂಗೀತದ ಪರಿಕಲ್ಪನೆಯನ್ನು ಹುಟ್ಟುಹಾಕಿದ ಪಿ.ಕಾಳಿಂಗರಾವ್ ಹಿನ್ನೆಲೆ ಸಂಗೀತಕ್ಕೆ ಕೈಹಾಕಿದ್ದು ಚಾರಿತ್ರಿಕವಾಗಿ ಮುಖ್ಯ ಸಂಗತಿ. ಇಷ್ಟು ಹೊತ್ತಿಗೆ ಪಾತ್ರಧಾರಿಗಳೇ ಹಾಡುವ ಪದ್ಧತಿಯಿಂದ ಷೆಡ್‌ಗಳಲ್ಲಿ ರಿಕಾರ್ಡಿಂಗ್ ಮಾಡುವ ಹಂತಕ್ಕೆ ಚಿತ್ರರಂಗ ಬೆಳೆದಿತ್ತು. ಹೀಗಾಗಿ ಕಾಳಿಂಗರಾಯರ ಸೃಜನಶೀಲತೆಗೂ ಸರಿಯಾದ ಅವಕಾಶ ಲಭ್ಯವಿತ್ತು. ಈ ಮುಂಚೆಯೂ ಕಾಳಿಂಗರಾಯರು ಚಿತ್ರದಲ್ಲಿ ತೊಡಗಿದ್ದರೂ ಈಗಿನ ರಂಗೇ ಬೇರೆ. ಮೊದಲ ಬಾರಿಗೆ ಅವರು ವಾದ್ಯಗೋಷ್ಠಿಯ ನಿರ್ವಹಣೆಯನ್ನು ತಂದರು. ಅವರು ಸಂಗೀತ ನೀಡಿದ 'ಕೃಷ್ಣಲೀಲಾ' (೧೯೪೭) ಇಂತಹದೊಂದು ಪ್ರಯೋಗವನ್ನು ಒಳಗೊಂಡಿತ್ತು. ಅನಂತರ 'ಭಕ್ತ ರಾಮದಾಸ್' (೧೯೪೮), 'ಮಂಗಳಗೌರಿ' (೧೯೫೩) ಬಿಟ್ಟರೆ ಕಾಳಿಂಗರಾಯರು ಬೇರೆ ಚಿತ್ರಗಳಿಗೆ ಸಂಗೀತ ನಿರ್ದೇಶನ ಮಾಡಲಿಲ್ಲ. ಮುಂದೆ ಹದಿನೈದು ವರ್ಷಗಳ ದೀರ್ಘ ಅವಧಿಯ ನಂತರ 'ಮಹಾಶಿಲ್ಪಿ'ಗೆ ಸಂಗೀತ ನೀಡಲು ಮರಳಿ ಬಂದರು. ಆ ದಿನಗಳಲ್ಲೇ ಅವರು ಆಧುನಿಕ ಸಂಗೀತ, ಶಾಸ್ತ್ರೀಯ ಸಂಗೀತಗಳನ್ನು ಬೆರೆಸಿದ್ದು, ಪೂರ್ತಿ ಪಾಶ್ಚಿಮಾತ್ಯ ಸಂಗೀತವನ್ನೇ ಬಳಸಿದ್ದು ಇತ್ಯಾದಿಗಳನ್ನು ಮರೆತಿದ್ದೇವ. ಕಾಳಿಂಗರಾಯರು ಗಾಯಕರಾಗಿ ಮಾತ್ರ ಪರಿಚಿತರಾದರಾಗಲಿ ಹಿನ್ನೆಲೆ ಸಂಗೀತ ನಿರ್ದೇಶಕರಾಗಿ ಅಲ್ಲ.

ಏಕೆಂದರೆ ಈ ಮಧ್ಯದ ಅವಧಿಯಲ್ಲಿ ಅವರು 'ಕಿತ್ತೂರು ಚೆನ್ನಮ್ಮ', ತುಂಬಿದ ಕೊಡ', 'ಕೈವಾರ ಮಹಾತ್ಮೆ' ಮೊದಲಾದ ಚಿತ್ರಗಳಲ್ಲಿ ಹಾಡಿದ್ದರು. 'ಕಿತ್ತೂರು ಚೆನ್ನಮ್ಮ' ಚಿತ್ರದಲ್ಲಿ ಅವರು ಹಾಡಿದ 'ತಾಯಿ ದೇವಿಯನು ಕಾಣೆ ಹಂಬಲಿಸಿ....' ಗೀತೆ ಅವರ ಮಧುರ ಕಂಠದಲ್ಲಿ ಅತ್ಯಂತ ಭಾವಪೂರ್ಣವಾಗಿ ಮೂಡಿಬಂದು ಜನಪ್ರಿಯವಾಯಿತು. 'ಕೈವಾರ ಮಹಾತ್ಮೆ' ಚಿತ್ರಕ್ಕೆ ವಾಸ್ತವವಾಗಿ ಕಾಳಿಂಗರಾಯರೇ ಸಂಗೀತ ನಿರ್ದೇಶಕರಾಗಿ ಗೊತ್ತಾಗಿ ಕೆಲವು ಹಾಡುಗಳ ಧ್ವನಿಮುದ್ರಣವೂ ಆಗಿತ್ತು. ಅಷ್ಟರಲ್ಲಿ ಚಿತ್ರ ತಯಾರಿಕೆ ಹಸ್ತಾಂತರವಾಗಿ ಮುಖ್ಯ ಕಲಾವಿದರೆಲ್ಲ ಬದಲಾಗಿ ಜಿ.ಕೆ.ವೆಂಕಟೇಶ್ ಆ ಚಿತ್ರದ ಸಂಗೀತ ನಿರ್ದೇಶಕರಾದರು. ಆದರೂ ರಾಯರು ರಾಗ ಸಂಯೋಜಿಸಿದ ಹಾಡುಗಳನ್ನು ಚಿತ್ರದಲ್ಲಿ ಬಳಸಿಕೊಳ್ಳಲಾಗಿತ್ತು. ಆ ಚಿತ್ರಕ್ಕೆ ಕಣಗಾಲ್ ಪ್ರಭಾಕರಶಾಸ್ತ್ರಿ ರಚಿಸಿ ಹೊನ್ನಪ್ಪ ಭಾಗವತರು ಹಾಡಿದ್ದ ಹಾಡುಗಳು ಬಹಳ ಜನಪ್ರಿಯವಾಗಿದ್ದವು.

೧೯೪೭ರಲ್ಲಿ ತಯಾರಾದ 'ಚಂದ್ರಹಾಸ' ಚಿತ್ರಕ್ಕೆ ಖ್ಯಾತ ಹಿಂದೂಸ್ತಾನಿ ಗಾಯಕ ಮಲ್ಲಿಕಾರ್ಜುನ ಮನ್ಸೂರ್ ಸಂಗೀತ ನೀಡಿದ್ದರು. ಈ ಚಿತ್ರದ ಹಾಡುಗಳು ಮೆಲುಕು ಹಾಕುವಂತಿದ್ದವು. ಚಿತ್ರದ ಹಾಡುಗಳನ್ನು ಗಂಗಪ್ಪ ವಾಲಿ ಮತ್ತು ಶ್ರೀಕಂಠಶಾಸ್ತ್ರಿ ರಚಿಸಿದ್ದರು. ಜೊತೆಗೆ ಜನಪದ ಸಾಹಿತ್ಯದಲ್ಲಿ ಬರುವ ಬೀಸುವ, ಕುಟ್ಟುವ ಪದಗಳನ್ನು ಚಿತ್ರದಲ್ಲಿ ಬಳಸಿಕೊಳ್ಳಲಾಗಿತ್ತು. ಅಮೀರ್‌ಬಾಯಿ ಕರ್ನಾಟಕಿ ಹಾಡಿದ ಜೋಗುಳದ ಹಾಡು 'ಬಾ ಬಾ ಬನಸಿರಿಯೆ...' ಬಹಳ ಜನಪ್ರಿಯವಾಯಿತು.

ಸ್ವಾತಂತ್ರ್ಯ ಬಂದ ತರುಣದಲ್ಲಿ ಅದೇ ಹಿನ್ನೆಲೆಯ ವಸ್ತುವನ್ನೊಳಗೊಂಡ ಸರಳ ಸಾಮಾಜಿಕ ಚಿತ್ರ 'ಭಾರತಿ' (೧೯೪೮). ಚಿತ್ರಕ್ಕೆ ಸಂಗೀತ ನೀಡಿದವರು ಆಸ್ಥಾನ ಸಂಗೀತ ವಿದ್ವಾನ್ ಚಂದ್ರಶೇಖರಯ್ಯ. ಅಂದಮೇಲೆ ಶಾಸ್ತ್ರೀಯ ಸಂಗೀತಕ್ಕೆ ಪ್ರಾಧಾನ್ಯ. ಟಿ.ಸೂರ್ಯಕುಮಾರಿ ಹಾಡಿರುವ ಮಲಯ ಮಾರುತ ರಾಗದ 'ದಿನಕರನು ದಯಿಸುವಾ...' ಹಾಗೂ 'ಭೋರೆಂದು ಜಯಭೇರಿ....' ಹಾಡುಗಳು ಶಾಸ್ತ್ರೀಯ ಸಂಗೀತ ಸೌರಭವನ್ನೊಳಗೊಂಡು ಬಹಳ ಸುಶ್ರಾವ್ಯವಾಗಿದ್ದವು. ಈ ಹಾಡುಗಳನ್ನು ಬರೆದವರು ಚಿತ್ರದ ಸಾಹಿತಿ ಎಂ.ನರೇಂದ್ರಬಾಬು. ಇದಲ್ಲದೆ ಸ್ತ್ರೀ ನಾಟಕ ಮಂಡಳಿಯ ನಾಗರತ್ನಮ್ಮನವರ ಸೋದರ ಪರಮಶಿವು ಹಾಡಿದ ಕೆಲವು ದಾಸರ ಪದಗಳ ತುಣುಕುಗಳು ಮೆಲುಕು ಹಾಕುವಂತಿದ್ದವು. ಪರಮಶಿವು 'ಕೃಷ್ಣಲೀಲಾ' 'ಸುಭದ್ರ' ಮೊದಲಾದ ಚಿತ್ರಗಳಿಗೂ ಸಂಗೀತ ನಿರ್ದೇಶಕರಿಗೆ ನೆರವಾದರು.

ಈವರೆಗಿನ ಹಿನ್ನೆಲೆ ಸಂಗೀತ ಚರಿತ್ರೆ ನೋಡಿದರೆ ಅಂಕಿ-ಅಂಶಗಳೇ ತುಂಬಿ ಹೋದ ಹಾಗೆ ಕಾಣಿಸುತ್ತದೆ. ಅದು ಸಹಜ. ಇದಕ್ಕೆ ಕಾರಣವೆಂದರೆ ತಾಂತ್ರಿಕವಾಗಿ ಇನ್ನೂ ಶೈಶವಾವಸ್ಥೆಯಲ್ಲೇ ಇದ್ದ ಚಿತ್ರರಂಗಕ್ಕೆ ಸಂಗೀತ ನಿರ್ದೇಶನ ಅಥವಾ ಹಿನ್ನೆಲೆ ಸಂಗೀತ ಎನ್ನುವುದು ಪ್ರತ್ಯೇಕ ಪರಿಕಲ್ಪನೆಯಾಗಿ ಬೆಳೆದಿರಲಿಲ್ಲ. ರಿಕಾರ್ಡಿಂಗ್ ಸೌಲಭ್ಯವೇ ಇಲ್ಲದಿರುವಾಗ ಪ್ರಯೋಗಶೀಲತೆಗೆ ಅವಕಾಶವಾದರೂ ಎಲ್ಲಿ ಸಾಧ್ಯ ? ಅದಕ್ಕೂ ಮಿಗಿಲಾಗಿ ಚಿತ್ರರಂಗ ನಾಟಕರಂಗಕ್ಕಿಂತ ಭಿನ್ನವಾದ ಮಾಧ್ಯಮ ಎಂದು ಗ್ರಹಿಸಿಯೂ ಇರಲಿಲ್ಲ. ಹೀಗಾಗಿ ನಾಟಕ ರಂಗದ ಹ್ಯಾಂಗೋವರ್ ಆಗಿಯೇ ಈವರೆಗಿನ ಬೆಳವಣಿಗೆಗಳು ಕಾಣಿಸುತ್ತವೆ. ಇದರ ಫಲ ಸಂಗೀತ ನಿರ್ದೇಶನ ಒಂದು ಹವ್ಯಾಸವೆಂದೇ ಉಳಿಯಿತು. ಅದನ್ನು ನಂಬಿ ಇಲ್ಲಿ ನೆಲೆಯೂರಲು ಸಾಧ್ಯವಿರಲಿಲ್ಲ.

ಹೊನ್ನಪ್ಪ ಭಾಗವತರ್ ತಯಾರಿಸಿದ 'ಭಕ್ತ ಕುಂಬಾರ' ಮತ್ತೊಂದು ಶಾಸ್ತ್ರೀಯ ಸಂಗೀತ ಪ್ರಧಾನ ಚಿತ್ರ. ಇದಕ್ಕಾಗಿ ಬೆಂಗಳೂರಿನಿಂದ ಆರ್ಕೆಸ್ಟ್ರಾ ತಂಡವನ್ನೇ ಕರೆಸಿ ತಿಂಗಳುಗಟ್ಟಲೆ ಕೆಲಸ ಮಾಡಲಾಯಿತು.

ಆರ್.ನಾಗೇಂದ್ರರಾಯರ ನಿರ್ದೇಶನದಲ್ಲಿ ತಯಾರಾದ 'ಭಕ್ತ ಕಬೀರ್' ಭಕ್ತಿ ಪ್ರಧಾನ ಚಿತ್ರ. ಸಂಗೀತ ನಿರ್ದೇಶಕರು ಎಸ್.ಸುಬ್ಬರಾಮನ್. ಕಬೀರನ ಪಾತ್ರದಲ್ಲಿ ಸುಬ್ಬಯ್ಯನಾಯ್ಡು ಮತ್ತು ಅವನ ಮಡದಿಯ ಪಾತ್ರದಲ್ಲಿ ಲಕ್ಷ್ಮೀಬಾಯಿ ಹಾಡಿದ ಹಾಡುಗಳು ಶಾಸ್ತ್ರೀಯ ಸಂಗೀತದ ಸೊಗಡಿನಿಂದ ಕೂಡಿ ರಂಜಿಸಿದವು.

(ಚಿತ್ರ ೭) 'ಸಂಗೀತಾ' ಸಂಸ್ಥೆ ಹೊರತಂದ ರಾಜನ್-ನಾಗೇಂದ್ರ ಸಂಗೀತ ನಿರ್ದೇಶನದ ಜನಪ್ರಿಯ ಚಿತ್ರಗೀತೆಗಳ ಎಲ್.ಪಿ. ಧ್ವನಿಮುದ್ರಿಕೆ ಬಿಡುಗಡೆ. ಚಿತ್ರದಲ್ಲಿ ಪಾರ್ವತಮ್ಮ ರಾಜಕುಮಾರ್, ರಾಜಕುಮಾರ್, ರಾಜನ್, ದ್ವಾರ್ಕಿ ರಾಜ್, ಭಗವಾನ್, ನಾಗೇಂದ್ರ, ಚಿ.ಉದಯಶಂಕರ್ ಇದ್ದಾರೆ.

ಮಹಾತ್ಮ ಪಿಕ್ಚರ್ಸ್ ಅವರ 'ನಾಗಕನ್ನಿಕಾ' ಚಿತ್ರಕ್ಕೆ ಮದರಾಸಿನ ಪಲವಾಂಗುಡಿ ಶ್ಯಾಮ ಅಯ್ಯರ್ ಎಂಬುವರು ಸಂಗೀತ ನೀಡಿದರು. ಈ ಯಶಸ್ವಿ ಚಿತ್ರದ ಹಾಡುಗಳು ಬಹಳ ಜನಪ್ರಿಯವಾದವು.

ಅವರ ೧೯೫೦ರ ದಶಕದಲ್ಲಿ ಚಿತ್ರರಂಗ ಬೆಳವಣಿಗೆಯಲ್ಲಿ ಮತ್ತೊಂದು ಮಜಲನ್ನು ಕಂಡಿತು. ಈ ದಶಕದಲ್ಲಿ ಸಂಗೀತ ನಿರ್ದೇಶಕರೂ ನೆಲೆಯೂರಿದರು. ಚಿತ್ರಗಳಿಗೆ ಸಂಗೀತದ ಮೂಲಕ ಚೇತನ ನೀಡಬಹುದಾದ ಬಹು ಮುಖ್ಯ ಸಂಗತಿಯ ಕಡೆಗ ಅರಿವು ಬೆಳೆಯಿತು.

೧೯೫೧ರಲ್ಲಿ ಮಹಾತ್ಮ ಪಿಕ್ಚರ್ಸ್ ಅವರ 'ಜಗನ್ಮೋಹಿನಿ' ಚಿತ್ರದ ಮೂಲಕ ಸಂಗೀತ ನಿರ್ದೇಶಕ ಪಿ.ಶಾಮಣ್ಣನವರ ಪ್ರವೇಶವಾಯಿತು.

ಮೈಸೂರಿನ ಪಿಟೀಲು ರಾಮಸ್ವಾಮಿ ಅವರ ಮಗ ಶಾಮಣ್ಣ ಚಿಕ್ಕಂದಿನಲ್ಲೇ ಪಿಟೀಲು ನುಡಿಸುವುದರಲ್ಲಿ ನಿಷ್ಣಾತರಾಗಿ ಸಂಗೀತ ಕಛೇರಿಗಳಲ್ಲಿ ಪಿಟೀಲು ನುಡಿಸುವುದಲ್ಲದೆ ಆಗ ನವಜ್ಯೋತಿ ಸ್ಟುಡಿಯೋದಲ್ಲಿ ನಡೆಯುತ್ತಿದ್ದ ಹಾಡುಗಳ ಧ್ವನಿಮುದ್ರಣ ಸಮಯದಲ್ಲಿ ವಾದ್ಯವೃಂದದ ಮುಖ್ಯಸ್ಥರಾಗಿ ಕೆಲಸ ಮಾಡುತ್ತಿದ್ದರು. ಅವರ ಕಾರ್ಯವೈಖರಿ ನೋಡಿ ಶಂಕರ್‌ಸಿಂಗ್ 'ಜಗನ್ಮೋಹಿನಿ' ಚಿತ್ರದ ಸಂಗೀತ ನಿರ್ದೇಶನದ ಹೊಣೆಯನ್ನು ವಹಿಸಿದರು. ಶಾಮಣ್ಣನವರಿಗೆ ತಮ್ಮ ಕನಸು ನನಸಾದಂತೆ ಸಂತೋಷವಾಯಿತು. ಅದೇ ಸಮಯದಲ್ಲಿ ಹಿಂದಿ ಚಿತ್ರಗಳ ಹಾಡುಗಳ ಜನಪ್ರಿಯ ಧಾಟಿಗಳನ್ನೇ ಅನುಕರಿಸಿ ಹಾಡುಗಳನ್ನು ಸಿದ್ಧಪಡಿಸಬೇಕೆಂದು ಸೂಚಿಸಿದಾಗ ಮಾತ್ರ ಬೇಸರವಾಯಿತು. ಆದರೆ ದೊರೆತ ಮೊದಲ ಅವಕಾಶವನ್ನು ಕಳೆದುಕೊಳ್ಳಬಾರದು ಎಂದು ಸಂಗೀತ ನೀಡಲು ಒಪ್ಪಿಕೊಂಡರು. ಆ ರಾಗಗಳಲ್ಲಿ ಅನುಕರಣೆ ಇದ್ದರೂ ಬಹಳ ಜನಪ್ರಿಯವಾದವು. 'ಮಹಲ್' ಚಿತ್ರದ 'ಆಯೆಗಾ ಆಯೆಗಾ...' ಗೀತೆಯ ಅನುಕರಣೆಯಾದ 'ಎಂದೋ ಎಂದೋ...' ಹಾಡು ಆ ದಿನಗಳಲ್ಲಿ ಬಹಳ ಜನಪ್ರಿಯವಾಗಿ ಎಲ್ಲರ ನಾಲಿಗೆಯ ಮೇಲೆ ನಲಿಯುತ್ತಿತ್ತು. ಹಾಡುಗಳನ್ನು ಬರೆದವರು ಹುಣಸೂರು ಕೃಷ್ಣಮೂರ್ತಿ. 'ಜಗನ್ಮೋಹಿನಿ' ಚಿತ್ರದ ಅಭೂತಪೂರ್ವ ಯಶಸ್ಸಿನಲ್ಲಿ ಸಂಗೀತವೂ ಮಹತ್ವದ ಪಾತ್ರ ನಿರ್ವಹಿಸಿತು.

'ಶ್ರೀನಿವಾಸ ಕಲ್ಯಾಣ', 'ಮುಟ್ಟಿದ್ದೆಲ್ಲ ಚಿನ್ನ', 'ಅಪಾಢಭೂತಿ', 'ಶಿವಶರಣೆ ನಂಬಿಯಕ್ಕ', 'ಚಿಂತಾಮಣಿ' ಮುಂತಾದ ಸುಮಾರು ೩೦ ಚಿತ್ರಗಳಿಗೆ ಸಂಗೀತ ನೀಡಿದ ಶಾಮಣ್ಣನವರು ಕ್ರಮೇಣ ತಮ್ಮ ಸ್ವಂತಿಕೆಯನ್ನು ಬಳಸಿಕೊಂಡು ಒಳ್ಳೆಯ ರಾಗಗಳನ್ನು ಸಂಯೋಜಿಸಿದರು.

ಮೈಸೂರಿನ ನವಜ್ಯೋತಿ ಸ್ಟುಡಿಯೋ ಮುಚ್ಚಿಹೋದಾಗ ಕನ್ನಡ ಚಿತ್ರ ನಿರ್ಮಾಪಕರು ಮದರಾಸಿಗೆ ವಲಸೆ ಹೋಗಬೇಕಾಯಿತು. ಆಗ ಮೈಸೂರಿನಲ್ಲಿ ಪ್ರಾರಂಭವಾದ ಪ್ರೀಮಿಯರ್ ಸ್ಟುಡಿಯೋದಲ್ಲಿ ಅಲ್ಲೊಂದು ಇಲ್ಲೊಂದು ಚಿತ್ರಗಳ ಧ್ವನಿಮುದ್ರಣ ನಡೆಯುತ್ತಿತ್ತು. ಅದೇ ಸಮಯದಲ್ಲಿ ಹಿಂದಿ ಚಿತ್ರಗಳ ಸಂಗೀತ ನಿರ್ದೇಶಕರೂ ಆಗಿದ್ದ ಅಮೀರ್ ಬಾಯಿ ಕರ್ನಾಟಕಿ ಶಾಮಣ್ಣನವರನ್ನು ತಮ್ಮ ಸಹಾಯಕರಾಗಿರಲು ಮುಂಬಯಿಗೆ ಆಹ್ವಾನಿಸಿದರು. ಮದರಾಸಿನಿಂದಲೂ ಕರೆಗಳು ಬರತೊಡಗಿದವು. ಆದರೆ ಅವರ ವಯಸ್ಸಾದ ತಂದೆಗೆ ಮಗ ಊರು ಬಿಟ್ಟು ಹೋಗಿ ಜೀವನ ನಡೆಸುವುದು ಬೇಕಾಗಿರಲಿಲ್ಲ. ಹೀಗಾಗಿ ಶಾಮಣ್ಣನವರು ಅವಕಾಶಗಳನ್ನು ಕಳೆದುಕೊಂಡರು. ಅವರ ತಮ್ಮ ಈ ಅಲ್ಪ ಕಾಲಾವಧಿಯಲ್ಲೇ ಶಾಮಣ್ಣನವರು ಹಿನ್ನೆಲೆ ಸಂಗೀತ ಎಂಬ ಕಲ್ಪನೆ ಗೋಜಲು ಗೋಜಲಾಗಿದ್ದ ಸಂದರ್ಭವನ್ನು ಬದಲಾಯಿಸಲು ಪ್ರಯತ್ನಿಸಿ, ತಮ್ಮದೇ ಆದ ಪರಂಪರೆಯನ್ನು ನಿರ್ಮಿಸಿದ್ದರು. ಕ್ರಮೇಣ ಚಿತ್ರರಂಗ ಅವರನ್ನು ಮರೆತುಬಿಟ್ಟಿತು. ಅವರು ಮೈಸೂರಿನಲ್ಲೇ ವಿಶ್ರಾಂತಿ ಜೀವನ ನಡೆಸತೊಡಗಿದರು. ಚಲನಚಿತ್ರ ನಿರ್ದೇಶಕರ ಸಂಘ ಅವರಿಗೆ ೨೦೦೦ನೇ ಇಸವಿಯಲ್ಲಿ ಹಿರಿಯ ಸಂಗೀತ ನಿರ್ದೇಶಕನೆಂದು ಗೌರವಿಸಿತು.

ಮದರಾಸಿನಲ್ಲಿ ತಯಾರಾದ ಕೆಂಪರಾಜ ಅರಸು ಅವರ 'ರಾಜಾ ವಿಕ್ರಮ' ಚಿತ್ರಕ್ಕೆ ಸಂಗೀತ ನೀಡಿದವರು ವೀಣಾ ಬಾಲಚಂದರ್ ಅವರ ಸಹೋದರ ಖ್ಯಾತ ಸಂಗೀತ ವಿದ್ವಾಂಸ ಎಸ್.ರಾಜಂ. ಇವರು ಚಿತ್ರಕಲಾವಿದರೂ ಆಗಿದ್ದು ಕನ್ನಡವೂ ಸೇರಿದಂತೆ ಅನೇಕ ಪತ್ರಿಕೆಗಳಿಗೆ ಮುಖಪುಟ ಚಿತ್ರಗಳನ್ನೂ, ಸಂಗೀತಕ್ಕೆ ಸಂಬಂಧಿಸಿದ ಚಿತ್ರಗಳನ್ನು ರಚಿಸಿ ಕೊಟ್ಟಿದ್ದರು.

ಈ ಚಿತ್ರದಲ್ಲಿನ ಎಲ್ಲ ಹಾಡುಗಳನ್ನೂ ರಾಜಂ ಮತ್ತು ಕಾಂತಿಮತಿ ಹಾಡಿದ್ದಾರೆ. ಎಲ್ಲ ಹಾಡುಗಳೂ ಶಾಸ್ತ್ರೀಯ ಧಾಟಿಯಲ್ಲಿದ್ದು ಕೇಳಲು ಇಂಪಾಗಿವೆ. ಪ್ರಾಯಶಃ ಇಲ್ಲಿಂದಲೇ ಕನ್ನಡ ಚಿತ್ರಗಳಿಗೆ ಹಿನ್ನೆಲೆ ಗಾಯನಕ್ಕೆ ಮದರಾಸಿನ ಗಾಯಕ-ಗಾಯಕಿಯರನ್ನು ಅವಲಂಬಿಸುವುದಕ್ಕೆ ಪ್ರಾರಂಭವಾಯಿತು ಎನ್ನಬಹುದು.

೧೯೫೦ ಚಿತ್ರಸಂಗೀತದ ದೃಷ್ಟಿಯಿಂದ ಅತ್ಯಂತ ಮಹತ್ವದ ದಶಕ ಎನ್ನಬಹುದು. ಚಿತ್ರ ಸಂಗೀತದಲ್ಲಿ ಹೊಸ ಹೊಸ ಪ್ರಯೋಗಗಳನ್ನು ಮಾಡಿದ ಹಾಗೂ ನಾಲ್ಕು ದಶಕಗಳಿಗೂ ಹೆಚ್ಚು ಕಾಲ ಕನ್ನಡ ಚಿತ್ರರಂಗದ ಜನಪ್ರಿಯ ಸಂಗೀತ ನಿರ್ದೇಶಕರಾಗಿ ಬಂದ ನಾಲ್ವರು ಪ್ರತಿಭಾವಂತ ಸಂಗೀತ ನಿರ್ದೇಶಕರುಗಳು ರಾಜನ್-ನಾಗೇಂದ್ರ, ವಿಜಯಭಾಸ್ಕರ್, ಜಿ.ಕೆ.ವೆಂಕಟೇಶ್ ಹಾಗೂ ಟಿ.ಜಿ.ಲಿಂಗಪ್ಪ ಈ ದಶಕದಲ್ಲೇ ಕನ್ನಡ ಚಿತ್ರರಂಗ ಪ್ರವೇಶಿಸಿದರು.

ಬಿ.ವಿಠಲಾಚಾರ್ಯರ ನಿರ್ದೇಶನದ ಮಹಾತ್ಮ ಸಂಸ್ಥೆಯ 'ಸೌಭಾಗ್ಯಲಕ್ಷ್ಮಿ' ಚಿತ್ರದ ಮೂಲಕ ರಾಜನ್-ನಾಗೇಂದ್ರ ಜೋಡಿ ಸಂಗೀತ ನಿರ್ದೇಶಕರಾದರು.

ರಾಜನ್-ನಾಗೇಂದ್ರ ಅವರ ತಂದೆ ಮೈಸೂರಿನಲ್ಲಿ ಸಂಗೀತ ವಿದ್ವಾಂಸರಾಗಿದ್ದ ಬಿ.ರಾಜಪ್ಪನವರು. ಅವರು ಅನೇಕ ಮಂದಿ ಶಿಷ್ಯರಿಗೆ ಸಂಗೀತ ಪಾಠ ಹೇಳಿಕೊಡುತ್ತಿದ್ದರಲ್ಲದೆ ನಾಟಕಗಳನ್ನೂ ಕಲಿಸಿ ಆಡಿಸುತ್ತಿದ್ದರು. ಅವರು ಮೂಕಿಚಿತ್ರಗಳ ಕಾಲದಲ್ಲೇ ಚಿತ್ರಗಳ ಪ್ರದರ್ಶನದ ಸಮಯದಲ್ಲಿ ಸಿನಿಮಾ ಪರದೆಯ ಬಳಿ ಕುಳಿತು ಚಿತ್ರದ ಸಂದರ್ಭ ಸನ್ನಿವೇಶಗಳಿಗೆ ತಕ್ಕಂತೆ ವಾದ್ಯಗಳನ್ನು ನುಡಿಸುತ್ತಿದ್ದರು. ಹಾರ್ಮೋನಿಯಂ ಮತ್ತು ಕೊಳಲು ವಾದ್ಯಗಳನ್ನು ಸಂದರ್ಭಾನುಸಾರವಾಗಿ ನುಡಿಸುವ ಮೂಲಕ ಆ ದಿನಗಳಲ್ಲೇ ಹಿನ್ನೆಲೆ ಸಂಗೀತ ಒದಗಿಸುತ್ತಿದ್ದರು. ನಾಗೇಂದ್ರ ತಮ್ಮ ತಂದೆಯವರಿಂದಲೇ ಹಾಡುಗಾರಿಕೆಯನ್ನು ಕಲಿತರು. ತಾಯಿಯವರ ಜತೆ ದೇವರ ನಾಮಗಳನ್ನು ಹಾಡಿ ಕಲಿತರು. ಇವರ ಹಿರಿಯಣ್ಣ ರಾಜನ್ ಪಿಟೀಲು ವಾದನದಲ್ಲಿ ಪರಿಣತಿ ಗಳಿಸಿ ಪರೀಕ್ಷೆಯಲ್ಲಿ ರ್‍ಯಾಂಕ್ ಗಳಿಸಿದ್ದರು. ನಾಗೇಂದ್ರ ಜಲತರಂಗ್ ನುಡಿಸುವುದನ್ನು ಕಲಿತರು.

ಮುಂದೆ ಈ ಸಹೋದರರು ಬೆಂಗಳೂರಿನ ಜಯಮಾರುತಿ ವಾದ್ಯ ವೃಂದದಲ್ಲಿ ಸೇರಿ ಅಲ್ಲಿ ಉತ್ತರಾದಿ ಸಂಗೀತ, ನೃತ್ಯ ಸಂಗೀತ ಹಾಗೂ ಲಘು ಸಂಗೀತಗಳನ್ನು ಅಭ್ಯಾಸ ಮಾಡಿ ಕರ್ನಾಟಕದಲ್ಲಿ ಅನೇಕ ಕಛೇರಿಗಳನ್ನು ನಡೆಸಿ ಅನುಭವ ಗಳಿಸಿದರು. ಅನಂತರ ಜಯಮಾರುತಿ ವಾದ್ಯ ವೃಂದದ ಜತೆ ಮದರಾಸಿಗೆ ಹೋಗಿ ಚಲನಚಿತ್ರ ಸಂಗೀತ ನಿರ್ದೇಶಕರಾದ ಎಚ್.ಆರ್.ಪದ್ಮನಾಭಶಾಸ್ತ್ರಿ ಅವರ ನೇತೃತ್ವದಲ್ಲಿ ತಮಿಳು,

ತೆಲುಗು ಚಿತ್ರಗಳ ಹಾಡುಗಳ ಧ್ವನಿಮುದ್ರಣ ಪದ್ಧತಿಗಳನ್ನು ಕಲಿತು ಅನುಭವ ಗಳಿಸಿದರು. ಅನಂತರ ಮದರಾಸಿನಿಂದ ಹಿಂದಿರುಗಿ ವಿದ್ಯಾಭ್ಯಾಸ ಮುಂದುವರಿಸಿದರು. ನಾಗೇಂದ್ರ ಮಾತ್ರ ಮೈಸೂರಿಗೆ ಹೋಗಿ ನವಜ್ಯೋತಿ ಸ್ಟುಡಿಯೋದಲ್ಲಿ ಪಿ.ಕಾಳಿಂಗರಾಯರ ಸಂಗೀತ ನಿರ್ದೇಶನದಲ್ಲಿ 'ಕಲಾವಿದ' ಮತ್ತು 'ರಾಮದಾಸ್' ಚಿತ್ರಗಳಲ್ಲಿ ಜಲತರಂಗ್ ನುಡಿಸಿ, ಹಾಡುಗಳನ್ನು ಅಳವಡಿಸುವ ಪದ್ಧತಿಯನ್ನು ಕಲಿತರು. ಮತ್ತು ಮಹಾತ್ಮ ಪಿಕ್ಚರ್ಸ್ ಅವರ 'ಶ್ರೀನಿವಾಸ ಕಲ್ಯಾಣ' ಚಿತ್ರದಲ್ಲಿ ಪಿ.ಶಾಮಣ್ಣನವರ ಸಂಗೀತ ನಿರ್ದೇಶನದಲ್ಲಿ ಅಮೀರ್‌ಬಾಯಿ ಕರ್ನಾಟಕಿ ಅವರೊಂದಿಗೆ ಎರಡು ಯುಗಳ ಗೀತೆಗಳನ್ನು ಹಾಡಿ ಚಿತ್ರರಂಗದ ಹಿನ್ನೆಲೆ ಗಾಯಕರಾದರು.

೧೯೫೩ರಲ್ಲಿ ಮಹಾತ್ಮ ಪಿಕ್ಚರ್ಸ್ ಅವರು ತಯಾರಿಸಲಿದ್ದ 'ಸೌಭಾಗ್ಯಲಕ್ಷ್ಮಿ' ಚಿತ್ರಕ್ಕೆ ಸಂಗೀತ ನೀಡುವ ಅವಕಾಶವೂ ರಾಜನ್-ನಾಗೇಂದ್ರರಿಗೆ ದೊರೆಯಿತು. ಚಿತ್ರದ ಹಾಡುಗಳನ್ನು ಹುಣಸೂರು ಕೃಷ್ಣಮೂರ್ತಿ ರಚಿಸಿದ್ದರು. ಪಿ.ಲೀಲಾ ಹಾಡಿದ "ಝುಮತಕ ಝುಮತಕ ಹೊಡೀ ಕಣ್ಣಳ..." ಎಂಬ ಹಾಡು ಬಹಳ ಜನಪ್ರಿಯವಾಯಿತು. "ತೌರೂರ ತೋಟದಲ್ಲಿ..." ಹಾಗೂ "ಕನಸಲ್ಲಿ ಒಬ್ಬ ಕಳ್ಳ ಬಂದ..." ಜನಪ್ರಿಯವಾದ ಹಾಡುಗಳು.

(ಚಿತ್ರ ೭) ಪ್ರಶಸ್ತಿ ಪುರಸ್ಕೃತ 'ಬಂಗಾರದ ಹೂವು' ಚಿತ್ರದ ಹಾಡಿನ ಧ್ವನಿಮುದ್ರಣ ಸಂದರ್ಭದಲ್ಲಿ ಚಿತ್ರದ ನಿರ್ಮಾಪಕ ಬಿ.ಎ.ಅರಸುಕುಮಾರ್, ಪಿ.ಸುಶೀಲಾ,

ಅನಂತರ ವಿಠಲಾಚಾರ್ಯರ ನಿರ್ದೇಶನದ 'ಚಂಚಲಕುಮಾರಿ' ಚಿತ್ರದ ಸಂಗೀತ ನಿರ್ದೇಶನಕ್ಕಾಗಿ ಈ ಸಹೋದರರನ್ನು ಮದರಾಸಿಗೆ ಕರೆದೊಯ್ಯಲಾಯಿತು. ವಿಠಲಾಚಾರ್ಯರ 'ರಾಜಲಕ್ಷ್ಮಿ', 'ಕನ್ಯಾದಾನ' ಮತ್ತು 'ಮುತ್ತೈದೆ ಭಾಗ್ಯ' ಈ ಮೂರೂ ಚಿತ್ರಗಳಿಗೆ ಸಂಗೀತ ನಿರ್ದೇಶನ ಮಾಡುವ ಅವಕಾಶ ದೊರೆಯಿತು. ಅಲ್ಲಿಂದ ಮುಂದೆ ಮದರಾಸಿನಲ್ಲೇ ನೆಲೆಸಿದ ರಾಜನ್-ನಾಗೇಂದ್ರ ಸೋದರರು ಕನ್ನಡ, ತಮಿಳು, ತೆಲುಗು ಭಾಷೆಗಳು ಸೇರಿದಂತೆ ೩೦೦ಕ್ಕೂ ಹೆಚ್ಚು ಚಿತ್ರಗಳಿಗೆ ಸಂಗೀತ ನಿರ್ದೇಶನ ಮಾಡಿದರು. 'ಕನ್ಯಾದಾನ' ಚಿತ್ರದಲ್ಲಿ ಎ.ಎಂ.ರಾಜ ಹಾಡಿರುವ "ಬಣ್ಣದ ಲೇನಿದೆಯೋ...." ಬಹಳ ಜನಪ್ರಿಯವಾಯಿತು. ಮುಂದೆ ಅವರ ಸಂಗೀತದ ನೂರಾರು ಹಾಡುಗಳು ಅತ್ಯಂತ ಜನಪ್ರಿಯವಾದವು. ಬಹುತೇಕ ಎಲ್ಲ ಚಿತ್ರಸಾಹಿತಿಗಳ ಹಾಡುಗಳಿಗೆ ರಾಗ ಸಂಯೋಜಿಸಿದ್ದಾರೆ. ಚಿ.ಉದಯಶಂಕರ್ ಸಾಹಿತ್ಯದ ೮೦ಕ್ಕೂ ಹೆಚ್ಚು ಚಿತ್ರಗಳಿಗೆ ಈ ಸೋದರರು ಸಂಗೀತ ಸಂಯೋಜಿಸಿದ್ದಾರೆ. 'ವೀರ ವಿಜಯ' ಎಂಬ ಸಿಂಹಳೀಯ ಭಾಷೆಯ ಚಿತ್ರಕ್ಕೂ ಸಂಗೀತ ನೀಡಿದ್ದಾರೆ.

ನಾಗೇಂದ್ರ ಹಾಡಿದ "ನಮ್ಮೂರ ಚೆಂದ..." ಹಾಡು ಎಷ್ಟು ಜನಪ್ರಿಯವಾಗಿತ್ತೆಂದರೆ ೧೯೬೧ರಲ್ಲಿ ಸಂಭವಿಸಿದ ಪ್ರವಾಹದ ಹಾವಳಿಯ ಸಂತ್ರಸ್ತರಿಗಾಗಿ ರಾಜ್ಯದಾದ್ಯಂತ ಕೈಗೊಂಡ ಪ್ರವಾಹ ಪರಿಹಾರ ಯಾತ್ರೆಯಲ್ಲಿ ಹೋದೆಡೆಯಲ್ಲೆಲ್ಲ ಜನ ಅವರಿಂದ ಈ ಹಾಡನ್ನು ಹಾಡಿಸಿ ಖುಷಿ ಪಡುತ್ತಿದ್ದರು.

ರಾಜನ್-ನಾಗೇಂದ್ರ ಸಂಗೀತ ನಿರ್ದೇಶಕರಾಗಿ ಚಿತ್ರರಂಗ ಪ್ರವೇಶಿಸಿದ ಸಮಯದಲ್ಲಿ ಹಾಡುಗಳ ರಿಕಾರ್ಡಿಂಗ್ ಹಾಗೂ ರೀ-ರಿಕಾರ್ಡಿಂಗ್ ಕಾರ್ಯಗಳಿಗೆ ಸರಿಯಾದ ಸೌಲಭ್ಯಗಳಿರಲಿಲ್ಲ. ಜತೆಗೆ ಹಲವಾರು ಸಮಸ್ಯೆಗಳೂ ಇದ್ದವು. ಮೈಸೂರಿನಲ್ಲೇ ಹಾಡುಗಳ ಧ್ವನಿಮುದ್ರಣ ನಡೆಸಿದರೂ ನೆಗೆಟಿವ್‌ಗಳನ್ನು ಮದರಾಸಿಗೆ ಕಳುಹಿಸಿ ಡೆವಲಪ್ ಮಾಡಿಸಿ ಪಾಸಿಟಿವ್ ಫಿಲಂ ಮೇಲೆ ಪ್ರಿಂಟ್ ಮಾಡಿಸಿ ತರಿಸಬೇಕಾಗಿತ್ತು. ಆದರೆ ರೀ-ರಿಕಾರ್ಡಿಂಗ್‌ಗೆ ಮಾತ್ರ ಮದರಾಸಿಗೇ ಹೋಗಬೇಕಾಗಿತ್ತು. ಈ ಸಮಸ್ಯೆಗಳ ಬಗೆಗೆ ರಾಜನ್-ನಾಗೇಂದ್ರ ಹೀಗೆ ಹೇಳುತ್ತಾರೆ :

"ರೀ-ರಿಕಾರ್ಡಿಂಗ್ ಕೆಲಸಗಳೆಲ್ಲಾ ಯಾವಾಗಲೂ ರಾತ್ರಿಯ ವೇಳೆ ನಡೆಯುತ್ತಿತ್ತು. ಇದಕ್ಕೆ ಮುಖ್ಯ ಕಾರಣ ಹಗಲಿನಲ್ಲಿ ಸಂಗೀತ ವಾದ್ಯಗಾರರ ಕೊರತೆ. ಕೆಲವರು ಹಗಲೆಲ್ಲಾ ಹಾಡುಗಳ ರಿಕಾರ್ಡಿಂಗ್ ಕಾರ್ಯದಲ್ಲಿ ಭಾಗವಹಿಸುತ್ತಿದ್ದು ರಾತ್ರಿ ವೇಳೆಯಲ್ಲೇ ಅವರು ದೊರಕುತ್ತಿದ್ದರು. ಹೀಗಾಗಿ ರೀ-ರಿಕಾರ್ಡಿಂಗ್ ಕೆಲಸಗಳು ವಾದ್ಯಗಾರರಿಗಾಗಿ ಕಾಯುವಂತಾಗಿ ರಾತ್ರಿ ಹೊತ್ತಿನಲ್ಲೇ ಚಿತ್ರವನ್ನು ನೋಡಿ ಆಯಾ ಸನ್ನಿವೇಶಗಳಿಗೆ ತಕ್ಕಂತೆ ಸಂಗೀತವನ್ನು ಕಂಪೋಸ್ ಮಾಡಿ ವಾದ್ಯಗಾರರೊಂದಿಗೆ ಸತತ ಅಭ್ಯಾಸ ನಡೆಸಿದ ನಂತರವೇ ಮಾಡಬೇಕಾಗಿತ್ತು. ಕೆಲವೊಮ್ಮೆ ನಮಗೆ ಅಗತ್ಯವಾದ ವಾದ್ಯಗಾರರು ಸಮಯಕ್ಕೆ ಸಿಕ್ಕದಿದ್ದಲ್ಲಿ ಅವರಿಗಾಗಿ ಕಾದು ಸ್ಟುಡಿಯೋ ಕಾಲ್‌ಶೀಟ್ ದೊರಕಿದಾಗ ರೀ-ರಿಕಾರ್ಡಿಂಗ್ ಕೆಲಸ ಮುಗಿಸಬೇಕಾಗಿತ್ತು. ಇದಾದ ನಂತರ ಸಂಗೀತ, ಸಂಭಾಷಣೆ ಮತ್ತು ಎಫೆಕ್ಟ್‌ಗಳ ಧ್ವನಿ ಮುದ್ರಣವಾಗಿ ಮೊದಲನೆ ಚಿತ್ರ ಪ್ರತಿ ತಯಾರಾಗುತ್ತಿತ್ತು.

"ಕೆಲವು ಕಾಲದ ನಂತರ ಮ್ಯಾಗ್ನೆಟಿಕ್ ಟೇಪ್‌ಗಳ ಸೌಲಭ್ಯ ಉಂಟಾಗಿ ಥಿಯೇಟರುಗಳಲ್ಲಿಯೇ ಹಲವು ಮೈಕ್‌ಗಳ ಮೂಲಕ ರಿಕಾರ್ಡ್ ಮಾಡುವ ಪದ್ಧತಿ ಜಾರಿಗೆ ಬಂತು. ರಿಕಾರ್ಡಿಂಗ್ ಸಮಯದಲ್ಲಿ ವಾದ್ಯಗಳ ಮತ್ತು ಗಾಯಕ-ಗಾಯಕಿಯರುಗಳ ಸಂಗೀತವನ್ನು ದೊಡ್ಡ ದೊಡ್ಡ ಸ್ಪೀಕರ್‌ಗಳ ಮೂಲಕ ಕೇಳುವಂತಾಯಿತು, ಹಾಗೂ ಉತ್ತಮ ಸಂಗೀತ ಸೃಷ್ಟಿಸುವ ಅವಕಾಶ ದೊರೆತಂತಾಯಿತು. ಆದರೆ ಇದರಲ್ಲಿ ಒಂದು ನ್ಯೂನತೆ ಇತ್ತು. ಅದೇನೆಂದರೆ ಧ್ವನಿಮುದ್ರಣವೆಲ್ಲವನ್ನೂ ಮ್ಯಾಗ್ನೆಟಿಕ್ ಟೇಪಿನ ಒಂದೇ ಟ್ರ್ಯಾಕ್‌ನ ಮೇಲೆ ಏಕಕಾಲದಲ್ಲಿ ಮಾಡಬೇಕಾಗಿತ್ತು. ಅನೇಕ ಬಾರಿ ರಿಕಾರ್ಡ್ ಮಾಡಿದ ಟೇಕ್‌ಗಳಲ್ಲಿ ಸಂಗೀತದ ಆಯ್ದ ಭಾಗಗಳನ್ನು ನೆಗೆಟಿವ್ ಫಿಲಂ ಮೇಲೆ ಟ್ರಾನ್ಸ್‌ಪೋಸ್ ಮಾಡಿಸಿ ಅದನ್ನು ಪಾಸಿಟಿವ್ ಫಿಲಂಗಳ ಮೇಲೆ ಪ್ರಿಂಟಾಗಿ ಬಂದ ಸಂಗೀತವನ್ನು ಮೂವಿಯೋಲಾದ ಮೂಲಕ ಜೋಡಣೆ ಕೆಲಸ ಮಾಡಿಸಿ ಚಿತ್ರೀಕರಣಕ್ಕೆ ಕಳುಹಿಸುತ್ತಿದ್ದೆವು. ಮ್ಯಾಗ್ನೆಟಿಕ್ ಫಿಲಂ ಮೇಲೆ ಮಾಡುತ್ತಿದ್ದ ರಿಕಾರ್ಡಿಂಗ್‌ನಲ್ಲಿ ಮತ್ತೊಂದು ನ್ಯೂನತೆ ಕಂಡುಬರುತ್ತಿತ್ತು. ಅದೇನೆಂದರೆ ಮ್ಯಾಗ್ನೆಟಿಕ್ ರೇಂಜಿಗೂ ಥಿಯೇಟರ್‌ನ ಆಪ್ಟಿಕಲ್ ಫಿಲಂನ ರೇಂಜಿಗೂ ಬರುತ್ತಿದ್ದ ವ್ಯತ್ಯಾಸ. ಇದರ ಪರಿಣಾಮವಾಗಿ ಸೌಂಡ್ ರಿಕಾರ್ಡಿಂಗ್ ಅಬ್ಬರವಾಗಿಯೋ ಅಥವಾ ಕೀಚುಧ್ವನಿಯಲ್ಲೋ ಕೇಳಿಸುತ್ತಿತ್ತು. ಕಾಲಕ್ರಮೇಣ ಕೆಲವು ಮಹತ್ತರ ಸುಧಾರಣೆಗಳಿಂದಾಗಿ ಎಲ್ಲವೂ ಸರಿಹೋಯಿತು.

"ರಿಕಾರ್ಡಿಂಗ್ ತಂತ್ರಜ್ಞಾನ ಬೆಳೆದಂತೆಲ್ಲಾ ಮ್ಯಾಗ್ನೆಟಿಕ್ ಫಿಲಂಗಳಲ್ಲಿ ಒಂದು ಟ್ರ್ಯಾಕಿನಿಂದ ನಾಲ್ಕು ಟ್ರ್ಯಾಕ್‌ಗಳ ಮೇಲೆ ರಿಕಾರ್ಡ್ ಮಾಡುವ ಸೌಲಭ್ಯ ಉಂಟಾಯಿತು. ಇದರಿಂದಾಗಿ ರಿದಮ್ ಸೆಕ್ಷನ್ (ತಾಳ ವಾದ್ಯಗಳು : ತಬಲ, ಮೃದಂಗ, ಘಟಂ ಇತ್ಯಾದಿ), ಸ್ಟ್ರಿಂಗ್ ಸೆಕ್ಷನ್ (ತಂತಿ ವಾದ್ಯಗಳು : ಸಿತಾರ್, ವೀಣೆ ಇತ್ಯಾದಿ), ವಿಂಡ್ ಸೆಕ್ಷನ್ (ಕೊಳವೆ ವಾದ್ಯಗಳು : ಕೊಳಲು, ಷಹನಾಯ್ ಇತ್ಯಾದಿ), ವಾದ್ಯ ವೃಂದಗಳ ಅನುಸಾರ ವಿಭಾಗಿಸಿ ಪ್ರತಿ ವಿಭಾಗವನ್ನು ಅನುಕೂಲಕ್ಕೆ ತಕ್ಕಂತೆ ಪ್ರತ್ಯೇಕವಾಗಿ ರಿಕಾರ್ಡ್ ಮಾಡುವ ಕೆಲಸ ಪ್ರಾರಂಭವಾಯಿತು. ಈ ಆಧುನಿಕ ತಂತ್ರಜ್ಞಾನದ ಮೂಲಕ ಚಲನಚಿತ್ರ ಧ್ವನಿಮುದ್ರಣದ ಕುಶಲತೆ ವೃದ್ಧಿಯಾಗಿ ಉತ್ತಮ ರಿಕಾರ್ಡಿಂಗ್ ಗುಣಮಟ್ಟ ದೊರೆತಂತಾಯಿತು."

ರಾಜನ್-ನಾಗೇಂದ್ರ ಸಂಗೀತ ನಿರ್ದೇಶನದ ಒಂದು ವೈಶಿಷ್ಟ್ಯವೆಂದರೆ ರಾಜನ್ ಅವರು ಹಾಡುಗಳಿಗೆ ರಾಗ ಸಂಯೋಜನೆ ಮಾಡಿದರೆ ನಾಗೇಂದ್ರ ಅವರು ಗಾಯಕ-ಗಾಯಕಿಯರಿಗೆ ಅದನ್ನು ಸ್ವರಸಹಿತ ಹೇಳಿಕೊಡುವ ಹಾಗೂ ವಾದ್ಯಗಾರರಿಗೆ ಸ್ವರ ಸಂಜ್ಞೆ ಕೊಡುವ ಕಾರ್ಯ ನಿರ್ವಹಿಸುತ್ತಿದ್ದರು. ನಾಗೇಂದ್ರ ಗಾಯಕರೂ ಆಗಿದ್ದುದರಿಂದ ಸ್ವತಃ ಹಾಡಿ ತೋರಿಸುತ್ತಿದ್ದರು. ಕನ್ನಡ ಚಿತ್ರರಂಗದಲ್ಲಿ ಇದೊಂದು ಅಪೂರ್ವ ಜೋಡಿ. 'ಎರಡು ಕನಸು', 'ಪರಸಂಗದ ಗೆಂಡೆತಿಮ್ಮ' ಚಿತ್ರಗಳ ಸಂಗೀತಕ್ಕಾಗಿ ಎರಡು ಬಾರಿ ರಾಜ್ಯ ಪ್ರಶಸ್ತಿಗಳನ್ನು ಪಡೆದ ಜೋಡಿ. "ಎಲ್ಲ ಸಂಗೀತಕ್ಕೂ ಶಾಸ್ತ್ರೀಯ ಸಂಗೀತವೇ ಮೂಲ" ಎನ್ನುವ ರಾಜನ್-ನಾಗೇಂದ್ರ "ಶಾಸ್ತ್ರೀಯ ಸಂಗೀತದ ಪರಿಜ್ಞಾನವಿಲ್ಲದೆ ಚಲನಚಿತ್ರ ಸಂಗೀತ ಸಂಯೋಜಿಸುವುದು ಅರ್ಥಹೀನ" ಎಂದು ಅಭಿಪ್ರಾಯ ಪಡುತ್ತಾರೆ. ಅವರು ಸಂಗೀತ ನೀಡಿದ ಚಿತ್ರಗಳ ಯಾವ ಗೀತೆಗೆ ಯಾವ ಶಾಸ್ತ್ರೀಯ ರಾಗದ ಬಳಕೆ ಆಗಿದೆ ಎಂತಲೂ ವಿವರಿಸುತ್ತಾರೆ.

ರಾಜನ್-ನಾಗೇಂದ್ರ ಅವರ ಸಂಗೀತದ ವೈಶಿಷ್ಟ್ಯವೆಂದರೆ ಶಾಸ್ತ್ರೀಯ ವಾದ್ಯಗಳನ್ನು ಭಿನ್ನ ಸಾಧ್ಯತೆಗಳಲ್ಲಿ ಬಳಸಿರುವುದು ಮತ್ತು ಜಾನಪದ ಹಾಡಿನ ಗುಣವನ್ನು ಯಶಸ್ವಿಯಾಗಿ ಅಳವಡಿಸಿರುವುದು. 'ಮಂತ್ರಾಲಯ ಮಹಾತ್ಮೆ' ಚಿತ್ರದುದ್ದಕ್ಕೆ ಹಿನ್ನೆಲೆ ಸಂಗೀತವಾಗಿ ವೀಣೆ ಮತ್ತು ಕೊಳಲನ್ನು ಮಾತ್ರ ದುಡಿಸಿಕೊಂಡು ಚಿತ್ರಕ್ಕೆ ಒಂದು ಪಾವಿತ್ರ್ಯತೆಯ ಹಿನ್ನೆಲೆ ತಂದಿರುವ ಕ್ರಮ ಇದಕ್ಕೆ ಉದಾಹರಣೆ. ಇವು ಸುಕೋಮಲ ವಾದ್ಯಗಳು, ದುಗುಡವನ್ನು ಅಭಿವ್ಯಕ್ತಿಸಲು ಅಸಮರ್ಥವಾದ ವಾದ್ಯಗಳು ಎಂಬ ವಾದವಿತ್ತು. ಆದರೆ ಈ ಚಿತ್ರದ ಭಾವಾವೇಶದ ಸಂದರ್ಭದಲ್ಲಿ ವೀಣೆ ಬಳಕೆಯಾಗಿರುವ ಕ್ರಮ ನೋಡಿದರೆ ಅದು ಎಷ್ಟು ಅಸಮರ್ಥನೀಯ ತರ್ಕ ಎಂದು ಗೊತ್ತಾಗುತ್ತದೆ. 'ಹೊಂಬಿಸಿಲು' ಚಿತ್ರದ "ಜೀವ ವೀಣೆ..." ಎಂಬ ಗೀತೆ ಕೂಡಾ ಕೆಲವೇ ವಾದ್ಯಗಳ ಹಿನ್ನೆಲೆಯಿಂದ ಸುಂದರ ಭಾವಗೀತೆಯಾಗಿ ಹೊಮ್ಮಿದೆ. ಈ ಚಿತ್ರದಲ್ಲಿ ಪುನರಾವರ್ತಿತವಾಗುವ ಕೆಲವು ವಾದ್ಯಧ್ವನಿಗಳು ಭಾವನೆಯ ತಾಕಲಾಟವನ್ನು ಸಮರ್ಥವಾಗಿ ಹಿಡಿದಿಟ್ಟಿವೆ. ರಾಜನ್-ನಾಗೇಂದ್ರ ಭಾವಗಳ ತಾಕಲಾಟವನ್ನು ಉತ್ತಮವಾಗಿ ಹಿಡಿದಿಡಬಲ್ಲವರಾದ್ದರಿಂದ ಮುಖ್ಯವಾಗಿ ಮೆಲೋಡ್ರಾಮ ಚಿತ್ರಗಳಲ್ಲಿ ಅವರ ಸಂಗೀತ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿತ್ತು. 'ಎರಡು ಕನಸು', 'ಬಯಲು ದಾರಿ', 'ಗಾಳಿ ಮಾತು', 'ಹೊಂಬಿಸಿಲು' ಮುಂತಾದ ಚಿತ್ರಗಳು ಈ ಮಾತಿಗೆ ಉದಾಹರಣೆ. 'ಪರಸಂಗದ ಗೆಂಡೆತಿಮ್ಮ' ಚಿತ್ರಕ್ಕಾಗಿ ಸಂಗೀತ ನಿರ್ದೇಶಕರೆಂದು ರಾಜನ್-ನಾಗೇಂದ್ರ ಆಯ್ಕೆಯಾದ ಸಂದರ್ಭದಲ್ಲಿ ಆ ಚಿತ್ರಕ್ಕೆ ಗೀತೆಗಳನ್ನು ಅಳವಡಿಸುವ ಉದ್ದೇಶವೇ ಇರಲಿಲ್ಲವೆಂದೂ ಇಷ್ಟು ಪ್ರಸಿದ್ಧ ಸಂಗೀತ ನಿರ್ದೇಶಕರನ್ನು ಇಟ್ಟುಕೊಂಡು ಹಾಡುಗಳಿಲ್ಲದಿದ್ದರೆ ಹೇಗೆ ಎಂದು ಯಾರೋ ತಕರಾರು ತೆಗೆದಿದ್ದರಿಂದ ಕೊನೆಗೆ ದೊಡ್ಡರಂಗೇಗೌಡರಿಂದ ಗೀತೆಗಳನ್ನು ಬರೆಸುವ ನಿರ್ಧಾರಕ್ಕೆ ಬರಲಾಯಿತೆಂದೂ ಹೇಳುತ್ತಾರೆ. ಈ ಚಿತ್ರದಲ್ಲಿ ಅಳವಡಿಕೆಯಾದ "ತೇರನೇರಿ ಅಂಬರದಾಗೆ...", "ನೋಟದಾಗೆ ನಗೆಯ...", "ನಿನ್ನ ನೆನಪು ಎದೆಯ ಕಲಕಿ..." ಮುಂತಾದ ಗೀತೆಗಳು ಅತ್ಯಂತ ಜನಪ್ರಿಯವಾದವು. ಇವುಗಳಲ್ಲಿ "ನಿನ್ನ ನೆನಪು..." ಹಾಡಿಗೆ ಸಂಗೀತ ಸಂಯೋಜನೆ ಮಾಡುವುದು ಎಂತಹ ನಿರ್ದೇಶಕರಿಗಾದರೂ ಸವಾಲಿನ ಕೆಲಸವೇ. ಇದು ಒಂದು ವಿಚಿತ್ರ ಪ್ರೇಮಗೀತೆ. ಇಲ್ಲಿ ನಾಯಕಿ ಆರಾಧಿಸುತ್ತಿರುವುದು ತನ್ನ ಗಂಡನನ್ನಲ್ಲ, ಪರಪುರುಷನನ್ನು. ಹೀಗಾಗಿ ಅವಳಲ್ಲಿ ಪೂರ್ತಿ ಅರ್ಪಣೆಯ ಭಾವವಿಲ್ಲ, ದ್ವಂದ್ವಗಳಿವೆ. ರಾಜನ್-ನಾಗೇಂದ್ರ ಈ ದ್ವಂದ್ವಗಳನ್ನು ಯಶಸ್ವಿಯಾಗಿ ಹಿಡಿದರು, ತಾಕಲಾಟಗಳನ್ನು ಸೂಚಿಸಲು ವಾದ್ಯಗಳ ಭಿನ್ನ ಸಂಯೋಜನೆ ಬಳಸಿದರು.

'ಕುಳ್ಳ ಏಜೆಂಟ್ ೦೦೦' ಚಿತ್ರಕ್ಕೆ ಕಿಶೋರ್ ಕುಮಾರ್ ಅವರಿಂದ ಮೊದಲ ಬಾರಿಗೆ ಕನ್ನಡದಲ್ಲಿ ಹಾಡಿಸಿದ ಖ್ಯಾತಿ ಈ ಜೋಡಿಯದ್ದೆ. ಮುಂಬಯಿಯಲ್ಲೇ ಧ್ವನಿಮುದ್ರಣಗೊಂಡ "ಆಡೂ ಆಟ ಆಡೂ..." ಕನ್ನಡದ ಜನಪ್ರಿಯ ಗೀತೆಗಳಲ್ಲಿ ಒಂದು.

ರಾಜನ್-ನಾಗೇಂದ್ರ ಅವರ ಸೂಕ್ಷ್ಮ, ಆದರೆ ಮುಖ್ಯ ಸಾಧನೆಗಳಲ್ಲಿ ಕೆಲವು ಅವರದೇ ಮಾತುಗಳಲ್ಲಿ "ಮುಂಬಯಿಯಲ್ಲಿ ಕಿಶೋರ್‌ಕುಮಾರ್ ಅವರು ಹಾಡಬೇಕಾಗಿದ್ದ "ಆಡೂ ಆಟ ಆಡೂ..." ಹಾಡಿನ ರಿಕಾರ್ಡಿಂಗ್‌ಗೆ ಹೋಗಿದ್ದಾಗ ಆಕಸ್ಮಿಕವಾಗಿ ಅಲ್ಲಿ ಹಾಡುತ್ತಿದ್ದ ವಾಣಿಜಯರಾಂ ಅವರ ಕಂಠಸಿರಿ ಮೆಚ್ಚುಗೆಯಾಗಿ 'ಕೌಬಾಯ್ ಕುಳ್ಳ' ಚಿತ್ರದ "ಮಾಗಿಯ ಚಳಿಯಲ್ಲಿ ಮೈ ಬಿಸಿಯೇಕೋ..." ಎಂಬ ಹಾಡನ್ನು ಹಾಡಿಸುವ ಮೂಲಕ ಆಕೆಯನ್ನು ಕನ್ನಡ ಚಿತ್ರರಂಗಕ್ಕೆ ಪರಿಚಯಿಸಿದೆವು. 'ಒಂದೇ ಕುಲ ಒಂದೇ ದೈವ' ಚಿತ್ರದ "ಗಾಂಧಿತಾತನ ಸನ್ನಿಧಿಗೆ ಬಾಲಕಿ ಬರೆದ ವಿನಂತಿ..." ಹಾಡನ್ನು ಬಿ.ಕೆ.ಸುಮಿತ್ರ ಪುಟ್ಟಮಗುವಿನ ಧ್ವನಿಯಲ್ಲಿ ಕೇವಲ ೧೦ ನಿಮಿಷದಲ್ಲಿ ಒಂದೇ ಟೇಕ್‌ನಲ್ಲಿ ಹಾಡಿ ಎಲ್ಲರನ್ನೂ ರಂಜಿಸಿದರು. ಅಂದು ಆರ್.ಡಿ.ಬರ್ಮನ್ ಕೂಡಾ ಇದ್ದರು. ಅವರಿಗೆ ಆ ಹಾಡು ತುಂಬ ಹಿಡಿಸಿತ್ತು. ಅವರಿಗೆ ಆ ಹಾಡು ಬಹಳವಾಗಿ ಹಿಡಿಸಿತು.

"...'ಮಹಾತ್ಯಾಗ' ಚಿತ್ರಕ್ಕೆಂದು ವಿ.ಸೀತಾರಾಮಯ್ಯ ಬರೆದ "ಯಾವ ಜನ್ಮದ ಗೆಳೆಯೊ ಕಾಣೆನು..." ಕವಿತೆಯನ್ನು ಅಳವಡಿಸಿ ಅದು ಅತ್ಯಂತ ಯಶಸ್ವೀ ಗೀತೆಯಾಯಿತು. ಅದೇ ಚಿತ್ರದಲ್ಲಿ ಚಂದ್ರಶೇಖರ ಕಂಬಾರರ "ಚಿನ್ನಾ ರನ್ನ ಬಾ..." ಎಂಬ ಕವಿತೆಯನ್ನು ಅಳವಡಿಸಲಾಯಿತು.

"...'ಅಪರಾಜಿತೆ' ಚಿತ್ರದಲ್ಲಿ ಮೊದಲ ಬಾರಿಗೆ ತ.ರಾ.ಸು. ಅವರು ಬರೆದ "ಅರಳು ಮಲ್ಲಿಗೆ ಅರಳು..." ಕವಿತೆಯನ್ನು ಅಳವಡಿಸಿಕೊಂಡಿದ್ದೆವು.

"...'ಪಾತಾಳ ಮೋಹಿನಿ' ಚಿತ್ರದಲ್ಲಿ "ಹಗಲು ಇರುಳು..." ಎಂಬ ಮೋಹಿನಿ ಮಾದರಿಯ ಗೀತೆಯನ್ನು ಪ್ರಥಮ ಬಾರಿಗೆ ಕನ್ನಡದಲ್ಲಿ ಅಳವಡಿಸಲಾಗಿತ್ತು.

"...'ವೀರಸಂಕಲ್ಪ' ಚಿತ್ರದಲ್ಲಿ ಯುದ್ಧಕ್ಕೆ ಅಣಿಯಾದ ರಾಜನಿಗೆ ರಾಣಿಯು ಹಾಡುವ "ದುಡುಕದಿರು ದುಡುಕದಿರು ಹೃದಯೇಶ..." ಎಂಬ ಹಾಡಿಗೆ ಮಾಮೂಲಿಯ ಜಾಡಿನಿಂದ ಹೊರಬಂದು ದೊಡ್ಡ ನಗಾರಿಯನ್ನು ಉಪಯೋಗಿಸಿ ರಿಕಾರ್ಡಿಂಗ್ ಮಾಡಿದ್ದೇವೆ.

"...'ಕನ್ನಿಕಾ ಪರಮೇಶ್ವರಿ' ಚಿತ್ರದಲ್ಲಿ "ಅಯಗಿರಿ ನಂದಿನಿ..." ಎಂಬ ಆದಿಶಂಕರಾಚಾರ್ಯರ ಸಾಹಿತ್ಯವನ್ನು ಹಂಸಧ್ವನಿ ರಾಗದಲ್ಲಿ ಅಳವಡಿಸಲಾಗಿದೆ.

"...'ಮಂತ್ರಾಲಯ ಮಹಾತ್ಮೆ' ಚಿತ್ರದಲ್ಲಿ ರಾಘವೇಂದ್ರಸ್ವಾಮಿಗಳು ರಚಿಸಿದ ಏಕಮಾತ್ರ ಗೀತೆ "ಇಂದು ಎನಗೆ ಗೋವಿಂದ..."ವನ್ನು ಅಳವಡಿಸಲಾಗಿದೆ.

"...'ಕಿಟ್ಟು ಪುಟ್ಟು' ಚಿತ್ರಕ್ಕಾಗಿ ಕನ್ನಡದಲ್ಲಿ ಮೊಟ್ಟಮೊದಲಿಗೆ ಸ್ಟೀರಿಯೋಫೋನಿಕ್ ಸೌಂಡ್ ತಂತ್ರಜ್ಞಾನವನ್ನು ಬಳಸಿ "ಕಾಲವನ್ನ ತಡೆಯೋರು ಯಾರೂ ಇಲ್ಲ..." ಎಂಬ ಹಾಡನ್ನು ನಾಲ್ಕು ಟ್ರ್ಯಾಕ್‌ಗಳನ್ನು ಉಪಯೋಗಿಸಿ ಹೆಚ್.ಎಂ.ವಿ.ಯಲ್ಲಿ ರಿಕಾರ್ಡ್ ಮಾಡಲಾಯಿತು. ಈ ಹಾಡನ್ನು ಮೊದಲ ಬಾರಿಗೆ ಓಡುವ ರೈಲಿನ ಮೇಲೆ ಚಿತ್ರಿಸಲಾಗಿತ್ತು.

"...'ಶ್ರೀನಿವಾಸ ಕಲ್ಯಾಣ' ಚಿತ್ರದಲ್ಲಿ ಪೂರಾ ಭಾರತೀಯ ಪರಂಪರೆಯ ಸಂಗೀತ ಪರಿಕರಗಳನ್ನು ಉಪಯೋಗಿಸಿ ರಿಕಾರ್ಡಿಂಗ್ ಮಾಡಲಾಯಿತು.

"...'ಮಧುರ ಸಂಗಮ' ಚಿತ್ರಕ್ಕಾಗಿ ಮೊದಲ ಬಾರಿಗೆ ಅರುವತ್ತು ಮಂದಿಯ ದೊಡ್ಡ ಆರ್ಕೆಸ್ಟ್ರಾ ತಂಡದ ಹಿನ್ನೆಲೆ ವಾದ್ಯದಿಂದ "ಯೌವ್ವನ ಕಾಲ..." ಎಂಬ ಹಾಡನ್ನು ರಿಕಾರ್ಡ್ ಮಾಡಿದ್ದೂ ಕನ್ನಡ ಚಿತ್ರರಂಗದ ಮಟ್ಟಿಗೆ ಬಹುತೇಕ ಪ್ರಥಮ ಪ್ರಯತ್ನವಾಗಿತ್ತು.

"...'ಮರಳಿ ಗೂಡಿಗೆ' ಚಿತ್ರದಲ್ಲಿ ಕವಿ ನಿಸಾರ್ ಅಹಮದ್ ಅವರ "ನೀ ನುಡಿಯದಿರಲೇನು ಬಯಲಾಗಿಹುದು ಎಲ್ಲಾ..." ಎಂಬ ಕವನವನ್ನು ಚಲನಚಿತ್ರಗೀತೆಯಾಗಿ ಅಳವಡಿಸಿಕೊಂಡಿದ್ದೇವೆ."

"...'ಮೂರು ಜನ್ಮ' ಚಿತ್ರದಲ್ಲಿ "ನೀ ಬಂದರೆ ಮೆಲ್ಲನೆ..." ಎಂಬ ಹಾಡಿಗೆ ಪಲ್ಲವಿ ಹಾಗೂ ಚರಣಗಳಿಗೆ ಸ್ಕೇಲ್‌ಗಳನ್ನು ಬದಲಾಯಿಸಿ ಒಂದೇ ರಾಗದಲ್ಲಿ ರಿಕಾರ್ಡ್ ಮಾಡಲಾಗಿತ್ತು. ಇದು ಕೂಡ ಸಂಗೀತದಲ್ಲಿ ಹೊಸ ಪ್ರಯತ್ನವಾಗಿತ್ತು.

'ಮುತ್ತೈದೆ ಭಾಗ್ಯ' ಚಿತ್ರದ "ನಮ್ಮೂರ ಚಂದ...", 'ರತ್ನಮಂಜರಿ' ಚಿತ್ರದ "ಗಿಲಿಗಿಲಿ ಗಿಲಿ ಗಿಲಕ್...", 'ಬಂಗಾರದ ಹೂವು' ಚಿತ್ರದ "ಆ ಮೊಗವು ಎಂಥಾ ಚೆಲುವು...", 'ವೀರ ಸಂಕಲ್ಪ' ಚಿತ್ರದ "ಹಾಡು ಬಾ ಕೋಗಿಲೆ...", 'ಮಂತ್ರಾಲಯ ಮಹಾತ್ಮೆ' ಚಿತ್ರದ "ಇಂದು ಎನಗೆ ಗೋವಿಂದ...", 'ಗಂಧದ ಗುಡಿ' ಚಿತ್ರದ "ನಾವಾಡುವ ನುಡಿಯೇ....", 'ಎರಡು ಕನಸು' ಚಿತ್ರದ "ಎಂದೆಂದೂ ನಿನ್ನನು ಮರೆತು...", 'ಬಯಲು ದಾರಿ' ಚಿತ್ರದ "ಬಾನಲ್ಲು ನೀನೆ ಭುವಿಯಲ್ಲು ನೀನೆ...", 'ಪರಸಂಗದ ಗೆಂಡೆತಿಮ್ಮ' ಚಿತ್ರದ "ತೇರನೇರಿ ಅಂಬರದಾಗೆ...", 'ಗಾಳಿಮಾತು' ಚಿತ್ರದ "ನಮ್ಮೂರ ಸಂತೇಲಿ...", 'ಚಲಿಸುವ ಮೋಡಗಳು' ಚಿತ್ರದ "ಹಾಲಿನ ಹೊಳೆಯೊ...", 'ಹೊಂಬಿಸಿಲು' ಚಿತ್ರದ "ಜೀವ ವೀಣೆ...", ಈ ಜೋಡಿ ನೀಡಿದ ಮರೆಯಲಾರದ ಗೀತ ಕಾಣಿಕೆಗಳು. 'ದೇವರ ದುಡ್ಡು' ಚಿತ್ರದ "ತರೀಕೆರೆ ಕೆರೆ ಏರಿ ಮೇಲೆ ಕರಿ ಕುರಿಮರಿ..." ಗೀತೆ ಟಂಗ್ ಟ್ವಿಸ್ಟರ್ ಆಗಿ ಬಲು ಜನಪ್ರಿಯ. ಶಾಸ್ತ್ರೀಯ ಸಂಗೀತದ ಹಿನ್ನೆಲೆಯಲ್ಲಿ ಹಿನ್ನೆಲೆ ಸಂಗೀತವನ್ನು ರೂಢಿಸುವುದನ್ನು ಸೈದ್ಧಾಂತಿಕವಾಗಿ ಬಲವಾಗಿ ನಂಬಿದ್ದ ಈ ನಿರ್ದೇಶಕ ಜೋಡಿ ತಮ್ಮ ನಂಬಿಕೆಯಲ್ಲಿ ಯಶಸ್ಸನ್ನು ಕಂಡಿತ್ತು. ರಾಜನ್ ಅವರು ನಾಗೇಂದ್ರರ ನಿಧನದಿಂದಾಗಿ ಒಂಟಿಯಾದರು.

'ಶ್ರೀರಾಮ ಪೂಜಾ' ಚಿತ್ರದ ಮೂಲಕ ಸಂಗೀತ ನಿರ್ದೇಶಕರಾಗಿ ಪರಿಚಯವಾದ ವಿಜಯಭಾಸ್ಕರ್ ಪ್ರಯೋಗಶೀಲ, ಪ್ರತಿಭಾವಂತ. ಇಂಜಿನಿಯರಿಂಗ್ ಪದವೀಧರ ಸಂಗೀತದತ್ತ ವಾಲಿದ್ದು ವಿಶೇಷ.

ವಿಜಯಭಾಸ್ಕರ್ ಬಾಲ್ಯದಲ್ಲಿಯೇ ಸಂಗೀತದತ್ತ ಆಕರ್ಷಿತರಾದರು. ತಂದೆಗೆ ಮಗ ಎಂಜಿನಿಯರ್ ಆಗುತ್ತಾನೆ ಎಂಬ ನಿರೀಕ್ಷೆ. ಆದರೆ ಮಗ ಸಂಗೀತದ ಹುಚ್ಚು ಹಿಡಿಸಿಕೊಂಡಿದ್ದರು. ಮನೆಯಲ್ಲೇ ಕರ್ನಾಟಕ ಸಂಗೀತ ಕಲಿತ ಅವರು ಶ್ಯಾಮಲಾ ಭಾವೆ ಅವರ ತಂದೆ ಜಿ.ಕೆ.ಭಾವೆ ಅವರಿಂದ ಹಿಂದೂಸ್ತಾನಿ ಸಂಗೀತ ಕಲಿತರು.

(ಚಿತ್ರ ೮)'ಭಾಗ್ಯಚಕ್ರ' ಹಾಡಿನ ಧ್ವನಿಮುದ್ರಣ - ಗಾಯಕಿ ಜಿಕ್ಕಿ, ವಿಜಯಭಾಸ್ಕರ್, ನಿರ್ದೇಶಕ ವೈ.ವಿ.ರಾವ್ ಮತ್ತು ಛಾಯಾಗ್ರಾಹಕ ಎಸ್.ಜಿ.ರಾವ್

ಪಾಶ್ಚಾತ್ಯ ಸಂಗೀತದತ್ತಲೂ ಆಸಕ್ತರಾದ ವಿಜಯಭಾಸ್ಕರ್ ಪಿಯಾನೋ ನುಡಿಸುವುದರಲ್ಲಿ ಪರಿಣತರಾದರು.

ಹಿಂದಿ ಚಿತ್ರ ಸಂಗೀತದ ಅತಿರಥ ಮಹಾರಥರ ಸಂಗೀತದ ಬಗ್ಗೆ ಒಲವು ಬೆಳೆಸಿಕೊಂಡಿದ್ದ ಅವರು ಒಳ್ಳೆಯ ಅವಕಾಶವನ್ನರಸಿ ಮುಂಬೈಗೆ ಹೋದರು. ಸುಪ್ರಸಿದ್ಧ ಸಂಗೀತ ನಿರ್ದೇಶಕ ನೌಷಾದ್ ಬಳಿ ಇದ್ದು ಚಿತ್ರ ಸಂಗೀತದ ಹಿನ್ನೆಲೆ, ರೂಪುರೇಷಗಳನ್ನು ಕಲಿತು ಬೆಂಗಳೂರಿಗೆ ಹಿಂದಿರುಗಿದರು.

೧೯೫೪ರಲ್ಲಿ ಬಿ.ಆರ್.ಕೆ.ಫಿಲಂಸ್ ಅವರ 'ಶ್ರೀರಾಮ ಪೂಜಾ' ಚಿತ್ರದ ನಿರ್ಮಾಪಕ-ನಿರ್ದೇಶಕ ಬಿ.ಆರ್.ಕೃಷ್ಣಮೂರ್ತಿ ಅವರು ತಮ್ಮ ಚಿತ್ರಕ್ಕೆ ಸಂಗೀತ ನಿರ್ದೇಶಿಸಲು ವಿಜಯಭಾಸ್ಕರ್ ಅವರಿಗೆ ಅವಕಾಶ ನೀಡಿದರು. ನಾಟಕದ ಹಾಡುಗಳನ್ನು ಹಾಗೆಯೇ ಬಳಸಿಕೊಳ್ಳುವುದು, ಅಥವಾ ಹಿಂದಿಯ ಪ್ರಸಿದ್ಧ ಚಿತ್ರಗೀತೆಗಳ ಟ್ಯೂನ್‌ಗಳ ಅನುಕರಣೆ ಆಗಿನ ಕನ್ನಡ ಚಿತ್ರಸಂಗೀತದ ಕ್ರಮವಾಗಿತ್ತು. ಏನಾದರೂ ಹೊಸದಾಗಿ ಮಾಡಬೇಕೆಂಬ ಸ್ಫೂರ್ತಿಯ ವಿಜಯಭಾಸ್ಕರ್ ಈ ಅವಕಾಶವನ್ನು ಸವಾಲಾಗಿ ಸ್ವೀಕರಿಸಿದರು.

ಮೈಸೂರಿನ ನವಜ್ಯೋತಿ ಸ್ಟುಡಿಯೋದ ಚಿತ್ರೀಕರಣದ ಫ್ಲೋರ್‌ನಲ್ಲಿಯೇ 'ಶ್ರೀರಾಮ ಪೂಜಾ' ಚಿತ್ರದ ಹಾಡುಗಳನ್ನು ಧ್ವನಿಮುದ್ರಿಸಿದರು. ತಾಂತ್ರಿಕ ಸೌಲಭ್ಯಗಳಾವುವೂ ಇಲ್ಲದಿದ್ದ ಆ ದಿನಗಳಲ್ಲಿ ಸ್ಟುಡಿಯೋ ಫ್ಲೋರ್‌ನಲ್ಲಿ ಹಾಡಿನ ಧ್ವನಿಮುದ್ರಣ ಹೇಗೆ ಮಾಡಬೇಕೆಂಬ ಬಗೆಗೆ ಮೂರು ತಿಂಗಳ ಮುಂಚೆಯೇ ಸ್ಕೆಚ್ ತಯಾರಿಸಿ, ಅಂದು ಪ್ರಸಿದ್ಧವಾದ ಜಯಮಾರುತಿ ಆರ್ಕೆಸ್ಟ್ರಾ ವೃಂದಕ್ಕೆ ಹಾಗೂ ಗಾಯಕ-ಗಾಯಕಿಯರಿಗೆ ಎರಡು ತಿಂಗಳ ಕಾಲ ಅಭ್ಯಾಸ ಮಾಡಿಸಿ ಹಾಡುಗಳನ್ನು ರಿಕಾರ್ಡ್ ಮಾಡಿದರು. ಮುಂದೆ ರೀ-ರಿಕಾರ್ಡಿಂಗ್ ಕೆಲಸ ಮದರಾಸಿನ ರೇವತಿ ಸ್ಟುಡಿಯೋದಲ್ಲಿ ನಡೆದಾಗಲೂ ಅವರು ಶೇಕಡಾ ೯೫ರಷ್ಟು ವಾದ್ಯಗಾರರನ್ನು ಮೈಸೂರಿನಿಂದಲೇ ಮದರಾಸಿಗೆ ಕರೆಸಿಕೊಂಡು ಕೆಲಸ ಮಾಡಿದರು. ಹೀಗೆ ತಮ್ಮ ಮೊದಲ ಚಿತ್ರದಲ್ಲೇ ದಿಟ್ಟತನದಿಂದ ಹೊಸ ಪ್ರಯೋಗವನ್ನು ಮಾಡಿ ಸೈ ಎನಿಸಿಕೊಂಡವರು ವಿಜಯಭಾಸ್ಕರ್. 'ಶ್ರೀರಾಮ ಪೂಜಾ' ಚಿತ್ರ ಯಶಸ್ವಿಯಾಗದಿದ್ದರೂ ಕನ್ನಡ ಚಿತ್ರರಂಗಕ್ಕೆ ಒಬ್ಬ ಪ್ರತಿಭಾವಂತ ಸಂಗೀತ ನಿರ್ದೇಶಕನನ್ನು ನೀಡಿದ ಕೀರ್ತಿ ಈ ಚಿತ್ರಕ್ಕೆ ಸಲ್ಲುತ್ತದೆ. ಜೊತೆಗೆ ಸಳೀಯ ಕಲಾವಿದರಿಂದಲೇ ಹಾಡುಗಳನ್ನು ಹಾಡಿಸಿದರು ವಿಜಯಭಾಸ್ಕರ್. ಚಿತ್ರದ ೧೧ ಗೀತೆಗಳನ್ನು ಹಾಡಿದವರು ಕಾಳಿಂಗರಾಯರ ಜತೆ ಹಾಡುತ್ತಿದ್ದ ಮೋಹನಕುಮಾರಿ, ರಜನಿ, ಗೋವಿಂದ ಸಾ ಹಾಗೂ ಮೈಸೂರಿನವರೇ ಆದ ನಾರಾಯಣದಾಸ್.

ವಿಜಯಭಾಸ್ಕರ್ ಅವರ ಎರಡನೆಯ ಸಾಹಸವೆಂದರೆ 'ಭಾಗ್ಯಚಕ್ರ' ಚಿತ್ರಕ್ಕೆ ಸಂಗೀತ ಒದಗಿಸುವುದರ ಜತೆಗೆ ಚಿತ್ರದ ಕಥೆ, ಚಿತ್ರಕಥೆಯನ್ನೂ ಅವರೇ ರಚಿಸಿದ್ದು. ಗೀತೆ ಮತ್ತು ಸಂಭಾಷಣೆ ಬರೆದವರು ಗೀತಪ್ರಿಯ. ಈ ಚಿತ್ರದಲ್ಲಿ ಘಂಟಸಾಲ ಹಾಡಿದ "ದೇವ ನಿನ್ನ ರಾಜ್ಯದಾ..." ಹಾಗೂ ತಮಿಳು ಚಿತ್ರರಂಗದ ಹಾಸ್ಯನಟ ಚಂದ್ರಬಾಬು ಹಾಡಿದ "ಫುಟ್‌ಪಾತ್ ವಾಸಿ ಹಾಕುವೆ ಸೀಟಿ..." ಹಾಡುಗಳು ಪ್ರೇಕ್ಷಕರ ಮೆಚ್ಚುಗೆ ಗಳಿಸಿದವು. ಅಲ್ಲಿಂದ ಮುಂದೆ ಅವರ ಸಂಗೀತ ನಿರ್ದೇಶನದ ನೂರಾರು ಹಾಡುಗಳು ಬಹಳ ಜನಪ್ರಿಯವಾದುವು.

೧೯೬೦ರಲ್ಲಿ ತೆರೆಕಂಡ 'ರಾಣಿ ಹೊನ್ನಮ್ಮ' ಅವರಿಗೆ ಸಾಕಷ್ಟು ಬ್ರೇಕ್ ತಂದುಕೊಟ್ಟ ಚಿತ್ರ. ಆಗ ತಾನೇ ವಿದೇಶದಿಂದ ಬಂದಿದ್ದ ಕು.ರ.ಸೀತಾರಾಮಶಾಸ್ತ್ರಿಗಳು ಪಾಶ್ಚಾತ್ಯ ಸಂಗೀತಕ್ಕೆ ಹೊಂದುವ ರೀತಿಯಲ್ಲಿ ಬರೆದಿದ್ದ "ಹಾರುತ ದೂರ ದೂರಾ ಮೇಲೇರುವ ಬಾರಾ ಬಾರಾ..." ಗೀತೆಗೆ ಒಪ್ಪುವಂತಹ ಸಂಗೀತ ಕೊಟ್ಟರು ವಿಜಯಭಾಸ್ಕರ್.

೧೯೬೩ರಲ್ಲಿ ಇವರು ಸಂಗೀತ ನೀಡಿದ 'ಮನ ಮೆಚ್ಚಿದ ಮಡದಿ' ಮತ್ತು 'ಸಂತ ತುಕಾರಾಂ' ಎರಡೂ ಭಾರಿ ಯಶಸ್ಸನ್ನು ಗಳಿಸಿದವು. 'ಮನ ಮೆಚ್ಚಿದ ಮಡದಿ' ಚಿತ್ರದಲ್ಲಿ ಕುವೆಂಪು ಅವರ "ಜಯ ಭಾರತ ಜನನಿಯ ತನುಜಾತೇ..." ಆರಂಭ ಗೀತೆ ಹಾಗೂ ಕು.ರ.ಸೀ. ರಚಿಸಿದ "ತುಟಿಯ ಮೇಲೆ ತುಂಟ ಕಿರುನಗೆ...", "ಸಿರಿತನ ಬೇಕೇ ಬಡತನ ಸಾಕೇ..." ಮುಂತಾದ ವಿಭಿನ್ನ ಗೀತೆಗಳ ರಾಗ ಸಂಯೋಜನೆಯಿಂದ ವಿಜಯಭಾಸ್ಕರ್ ಬಹಳ ಜನಪ್ರಿಯರಾದರು. ಅದೇ ೧೯೬೩ರಲ್ಲಿ 'ಸಂತ ತುಕಾರಾಂ' ಚಿತ್ರಕ್ಕೆ ಅವರು ನೀಡಿದ ಸಂಗೀತ ಮತ್ತೂ ವಿಶೇಷ, ವಿಶಿಷ್ಟ. ಮರಾಠಿಯ ಅಭಂಗ್‌ಗಳ ಶೈಲಿಯನ್ನು ಅನುಸರಿಸಲಾಗಿತ್ತು. ಈ ಚಿತ್ರದ ಯಶಸ್ಸು, ಪ್ರಶಸ್ತಿಯ ಕಾರಣಗಳಲ್ಲಿ ಮುಖ್ಯರೆಂದು ವಿಜಯಭಾಸ್ಕರ್, ಗಾಯಕ ಪಿ.ಬಿ.ಶ್ರೀನಿವಾಸ್‌ರನ್ನು ಜನತೆ ಅಭಿಮಾನದಿಂದ ಗುರುತಿಸಿತು. ಈ ಚಿತ್ರದ ಹಾಡುಗಳದ್ದೇ ಒಂದು ಇತಿಹಾಸ. ಚಿತ್ರ ಬಿಡುಗಡೆಯಾದ ೨೪ ವರ್ಷಗಳ ನಂತರ ೧೯೮೭ರಲ್ಲಿ ಎಚ್.ಎಂ.ವಿ. ಸಂಸ್ಥೆ ಸುಮಾರು ೧೨೦ ನಿಮಿಷಗಳ ಡಬ್ಬಲ್ ಕ್ಯಾಸೆಟ್ ಆಲ್ಬಂ ಹೊರತಂದಿತು. ಈ ಮೊದಲೇ ಆ ಸಂಸ್ಥೆಯ ಧ್ವನಿಮುದ್ರಿಕೆಗಳ ಮೂಲಕ 'ಸಂತ ತುಕಾರಾಂ' ಚಿತ್ರದ ಹಾಡುಗಳು ಜನಪ್ರಿಯವಾಗಿದ್ದವು. ಈ ಡಬಲ್ ಆಲ್ಬಮ್‌ನಲ್ಲಿ ಹಾಡು-ಸಂಭಾಷಣೆ ಎರಡೂ ಇತ್ತು. ಇದು ಕನ್ನಡ ಧ್ವನಿಮುದ್ರಿಕೆಗಳ ಇತಿಹಾಸದಲ್ಲೇ ಮೊದಲು; ಈ ಆಲ್ಬಮ್ ಬಿಡುಗಡೆಗಾಗಿ ಎಚ್.ಎಂ.ವಿ. ಸಂಸ್ಥೆ ಬೆಂಗಳೂರಿನಲ್ಲಿ ಅದ್ದೂರಿ ಸಮಾರಂಭ

(ಚಿತ್ರ ೯)'ನಾಗರಹಾವು' ಹಾಡಿನ ಧ್ವನಿಮುದ್ರಣದಲ್ಲಿ ಪಿ.ಸುಶೀಲ, ವಿಷ್ಣುವರ್ಧನ್, ಪಿ.ಬಿ.ಶ್ರೀನಿವಾಸ್, ಗಂಗಪ್ಪ, ಎನ್.ವೀರಾಸ್ವಾಮಿ, ಪುಟ್ಟಣ್ಣ ಕಣಗಾಲ್, ವಿಜಯಭಾಸ್ಕರ್ ಮತ್ತು ಮೋಹನಸುಂದರಂ

ಏರ್ಪಡಿಸಿತ್ತು. 'ಸಂತ ತುಕಾರಾಂ'ನಿಂದ ಮುಂದೆ 'ಪೋಸ್ಟ್ ಮಾಸ್ಟರ್', 'ಪತಿಯೇ ದೈವ', 'ನಾಂದಿ', 'ಚಿರಂಜೀವಿ', 'ಅಮರ ಜೀವಿ', 'ತೂಗುದೀಪ' ಹೀಗೆ ಮಧುರ ಸಂಗೀತದ ಪ್ರವಾಹವೇ ಹರಿಯಿತು.

೧೯೬೬ರಲ್ಲಿ ಪುಟ್ಟಣ್ಣ ಕಣಗಾಲರ 'ಬೆಳ್ಳಿಮೋಡ' ಚಿತ್ರಕ್ಕೆ ಸಂಗೀತ ನೀಡಿದರು. ಸದಾ ಪ್ರಯೋಗಶೀಲ ಮನಸ್ಸನ್ನು ಹೊಂದಿದ್ದ ಪುಟ್ಟಣ್ಣನವರ ಮನಃಸ್ಥಿತಿಗೆ ವಿಜಯಭಾಸ್ಕರ್ ಚೆನ್ನಾಗಿ ಹೊಂದಿಕೊಂಡರು. ಈ ಜೋಡಿಗೆ ಮುಂದೆ 'ಗೆಜ್ಜೆಪೂಜೆ', 'ಶರಪಂಜರ', 'ನಾಗರಹಾವು', 'ಕಥಾಸಂಗಮ', 'ಪಡುವಾರಳ್ಳಿ ಪಾಂಡವರು' ಮುಂತಾದ ಚಿತ್ರಗಳು ಸೇರಿದವು. ಪುಟ್ಟಣ್ಣನವರಿಗೆ ವಿಜಯಭಾಸ್ಕರ್ ಸಂಗೀತ ಮತ್ತು ವಿಜಯನಾರಸಿಂಹ ಅವರ ಸಾಹಿತ್ಯ ಎರಡೂ ತೀರ ಅನಿವಾರ್ಯವಾದ ಅಂಶಗಳಾಗಿದ್ದವು. ವಿಜಯಭಾಸ್ಕರ್ ವೈಶಿಷ್ಟ್ಯವೆಂದರೆ ಅದ್ದೂರಿ ಚಲನಚಿತ್ರಗಳಿಗೆ ಮಾತ್ರವಲ್ಲ ಹೊಸ ಅಲೆಯ ಮತ್ತು ಪ್ರಯೋಗಶೀಲ ಚಿತ್ರಗಳಿಗೂ ಸಂಗೀತ ನೀಡಿರುವುದು. 'ನಾಂದಿ', 'ಎಲ್ಲಿಂದಲೋ ಬಂದವರು', 'ಗ್ರಹಣ' ಮುಂತಾದ ಚಿತ್ರಗಳು ಇದಕ್ಕೆ ಉದಾಹರಣೆ. ಇಲ್ಲೆಲ್ಲ ಭಾವಗಳನ್ನು ವೈಭವೀಕರಿಸುವ ಬದಲಾಗಿ ಗೊಂದಲಗಳನ್ನು ಹಿಡಿಯಲು ಪ್ರಯತ್ನಿಸುವ ಮೂಲಕ ವಿಜಯಭಾಸ್ಕರ್ ಪ್ರಯೋಗಶೀಲತೆಗೆ ಸಲ್ಲುತ್ತಿದ್ದರು. ಇಂತಹ ಚಿತ್ರಗಳಿಗೆ ಕಡಿಮೆ ವಾದ್ಯಗಳನ್ನು ಬಳಸಿ ವೆಚ್ಚ ಕಡಿಮೆಯಾಗುವಂತೆ ಮಾಡಿದ ಕೀರ್ತಿಯೂ ಅವರಿಗಿದೆ. ಗೀತೆಗೆ ಸಂಗೀತ ನೀಡುವುದು ಮಾತ್ರವಲ್ಲದೆ, ಚಿತ್ರದಲ್ಲಿ ಕೆಲವು ಸ್ಪೆಷಲ್ ಎಫೆಕ್ಟ್ ಅನ್ನು ನೀಡುವಲ್ಲಿ ವಿಜಯಭಾಸ್ಕರ್ ಹೆಸರಾದರು. ಚಿತ್ರಕಥೆ ರಚನೆಯಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳುತ್ತಿದ್ದ ಅವರು ಎಷ್ಟೋ ಕಡೆ ಸಂಭಾಷಣೆಗಳ ಬದಲು ತಮ್ಮ ಸಂಗೀತದಿಂದಲೇ ಅರ್ಥ ತುಂಬಿದರು. ಮುಖ್ಯವಾಗಿ 'ಟೈಟಲ್ ಕಾರ್ಡ್' ತೋರಿಸುವಲ್ಲಿ ವಿಶೇಷ ಪರಿಣಾಮ ಬೀರಬಲ್ಲ ಸಂಗೀತ ಸಂಯೋಜಿಸಲು ಪ್ರಯತ್ನಿಸಿದ ಮೊದಲಿಗರು ಅವರು. ಕವಿಯ ಕವಿತೆಗೆ ಗೌರವ ಕೊಟ್ಟು ಶಬ್ದದ ಅರ್ಥ ತಿಳಿದು ಸಂಗೀತ ನೀಡುತ್ತಿದ್ದ ಅವರ ಒಲವಿನಿಂದಲೇ ಕನ್ನಡ ಕವಿಗಳ ಹೆಚ್ಚಿನ ರಚನೆಗಳು ಚಿತ್ರರಂಗ ಪ್ರವೇಶಿಸಿದವು. 'ಮನ ಮೆಚ್ಚಿದ ಮಡದಿ' ಚಿತ್ರದ 'ಜಯ ಭಾರತ ಜನನಿಯ ತನುಜಾತೆ...'', 'ಬೆಳ್ಳಿಮೋಡ' ಚಿತ್ರದ ''ಮೂಡಣ ಮನೆಯ...'', 'ಅರಿಶಿನ ಕುಂಕುಮ' ಚಿತ್ರದ ''ಇಳಿದು ಬಾ ತಾಯಿ ಇಳಿದು ಬಾ...'', 'ಶರಪಂಜರ' ಚಿತ್ರದ ''ಉತ್ತರ ಧ್ರುವದಿಂ...'', 'ಮುಕ್ತಿ' ಚಿತ್ರದ ''ಎಂಥಾ ಕಣ್ಣು ಎಂಥಾ ಕಣ್ಣು...'' ಮುಂತಾದವು ಇದಕ್ಕೆ ಉದಾಹರಣೆ. ದಾಸರ ಪದಗಳು ಚಿತ್ರರಂಗ ಪ್ರವೇಶಿಸಿದ್ದೂ ಇವರಿಂದಲೇ.

ಅಶಾಸ್ತ್ರೀಯ ಸಂದರ್ಭಕ್ಕೆ ಶಾಸ್ತ್ರೀಯ ಹಿನ್ನೆಲೆ ಕಲ್ಪಿಸಿದ ಅಪರೂಪದ ಪ್ರತಿಭೆ ಅವರದ್ದು. ಉದಾಹರಣೆಗೆ ಕ್ಯಾಬರೆ ಹಾಡುಗಳಿಗೆ ಭೈರವಿ ರಾಗ ಹೊಂದುತ್ತದೆ ಎಂದು ಗುರುತಿಸಿಕೊಂಡ ಅವರು ಆ ರಾಗವನ್ನು ಪರಿಣಾಮಕಾರಿಯಾಗಿ 'ಮಣ್ಣಿನ ಮಗ' ಚಿತ್ರದಲ್ಲಿ ಬಳಸಿಕೊಂಡರು. ಫೈಟ್ಸ್‌ಗೆ ಸಿತಾರ್ ಅನ್ನು ಬಳಸಿದ ಕ್ರಮಕ್ಕೆ ಸುನಿಲ್‌ದತ್ ಅವರಂತಹ ಹಿರಿಯ ನಟರೇ ಬೆರಗಾಗಿದ್ದರು. ಪ್ರಾದೇಶಿಕ ಹಿನ್ನೆಲೆ ಮತ್ತು ಭಾಷೆಯನ್ನು ಗಮನದಲ್ಲಿಟ್ಟುಕೊಂಡು ವಾದ್ಯಗಳನ್ನು ಬಳಸಿದಾಗಲೇ ಕಥಾವಸ್ತು ಎಲಿವೇಟ್ ಆಗುತ್ತದೆ ಎನ್ನುವ ನಂಬಿಕೆ ಅವರದ್ದು.

'ರಾಣಿ ಹೊನ್ನಮ್ಮ' ಚಿತ್ರದ ''ಹಾರುತ ದೂರ ದೂರ...'', 'ಮನ ಮೆಚ್ಚಿದ ಮಡದಿ' ಚಿತ್ರದ ''ತುಟಿಯ ಮೇಲೆ ತುಂಟ ಕಿರುನಗೆ...'', 'ಸಂತ ತುಕಾರಾಂ' ಚಿತ್ರದ ''ಜಯತು ಜಯ ವಿಠಲ...'', 'ನಾಂದಿ' ಚಿತ್ರದ ''ಹಾಡೊಂದ ಹಾಡುವೆ...'', 'ಚಿರಂಜೀವಿ' ಚಿತ್ರದ ''ಏನು ಬೇಕು ಏನು ಬೇಕು...'', 'ಪೋಸ್ಟ್ ಮಾಸ್ಟರ್' ಚಿತ್ರದ ''ಇಂದೇನು ಹುಣ್ಣಿಮೆಯೊ...'', 'ಬೆಳ್ಳಿ ಮೋಡ' ಚಿತ್ರದ ''ಮೂಡಣ ಮನೆಯ...'', 'ಗೆಜ್ಜೆಪೂಜೆ' ಚಿತ್ರದ ''ಗಗನವು ಎಲ್ಲೋ ಭೂಮಿಯು ಎಲ್ಲೋ...'', 'ಶರಪಂಜರ' ಚಿತ್ರದ ''ಹದಿನಾಲ್ಕು ವರ್ಷ ವನವಾಸದಿಂದ...'', 'ನಾಗರಹಾವು' ಚಿತ್ರದ 'ಹಾವಿನ ದ್ವೇಷ ಹನ್ನೆರಡು ವರುಷ...'', 'ಶುಭಮಂಗಳ' ಚಿತ್ರದ ''ಶುಭಮಂಗಳ ಸುಮುಹೂರ್ತವೇ...'', 'ಅಮೃತ ಘಳಿಗೆ' ಚಿತ್ರದ ''ಹಿಂದೂಸ್ಥಾನವು ಎಂದೂ ಮರೆಯದ...'' ಇವರ ಸಂಯೋಜನೆಯ ಮರೆಯಲಾಗದ ಹಾಡುಗಳಲ್ಲಿ ಕೆಲವು.

ಆರ್.ಸಿ.ಬೋರಾಲ್ ಮತ್ತು ಮುಕುಲ್ ಮಿಶ್ರ ಅವರು ಚಿತ್ರಗಳಿಗೆ ಸಂಗೀತ ಸಂಯೋಜಿಸುತ್ತಿದ್ದ ರೀತಿಯಿಂದ ಪ್ರಭಾವಿತರಾದ ವಿಜಯಭಾಸ್ಕರ್ ತಮ್ಮದೇ ಆದ ಶೈಲಿಯನ್ನು ರೂಪಿಸಿಕೊಂಡರು. ಚಿತ್ರದ ದೃಶ್ಯಗಳಿಗೆ ಏನೋ ಒಂದನ್ನು ಹಿನ್ನೆಲೆಗೆ ತುಂಬದೆ ಅವರದೇ ಆದ ಒಂದು ಹೊಸ ಆಯಾಮವನ್ನು ಕೊಟ್ಟರು. ಕನ್ನಡದಲ್ಲೂ 'ಥೀಮ್ ಮ್ಯೂಸಿಕ್' ಇರಲು ಸಾಧ್ಯ ಎಂದು ತೋರಿಸಿದರು. ಚಿತ್ರದ ಶೀರ್ಷಿಕೆಗಳನ್ನು ತೋರಿಸುವಾಗ ಇಡೀ ಚಿತ್ರದ ಕಥೆಯ ಮೂಡ್‌ಗೆ ಸರಿ ಹೊಂದುವಂತೆ ಆ ಚಿತ್ರಕ್ಕೆ ಆದಾಗಲೇ ತಾವು ನೀಡಿದ್ದ ಸಂಗೀತವನ್ನೇ ಒಂದು ಥೀಮ್ ಆಗಿ ಸಂಯೋಜಿಸುವ ಪದ್ಧತಿಯನ್ನು ಜಾರಿಗೆ ತಂದರು.

ಕನ್ನಡ, ತಮಿಳು, ತೆಲುಗು, ಮಲೆಯಾಳಂ, ಮರಾಠಿ, ತುಳು, ಕೊಂಕಣಿ ಸೇರಿದಂತೆ ೫೦೦ಕ್ಕೂ ಹೆಚ್ಚು ಚಿತ್ರಗಳಿಗೆ ಸಂಗೀತ ನೀಡಿರುವ ವಿಜಯಭಾಸ್ಕರ್ ದೃಶ್ಯಗಳನ್ನು ಕಲ್ಪಿಸಿಕೊಳ್ಳುತ್ತಾರೆ, ಅನುಭವಿಸುತ್ತಾರೆ, ಅನಂತರ ಸಂಗೀತವನ್ನು ಸೃಷ್ಟಿಸುತ್ತಾರೆ. ಇಂಥ ಸೂಕ್ಷ್ಮ ಸಂವೇದನೆಯೊಂದಿಗೆ ಸೃಷ್ಟಿಯಾದ ಸಂಗೀತ ಚಿತ್ರದಲ್ಲಿ ಎಷ್ಟು ಸೊಗಸಾಗಿ ಮೂಡಿ ಬರುತ್ತದೆ ಎಂಬುದಕ್ಕೆ ನಿದರ್ಶನ 'ಬೆಳ್ಳಿಮೋಡ' ಚಿತ್ರದ ''ಮೂಡಣ ಮನೆಯಾ ಮುತ್ತಿನ ನೀರಿನ...'' ಗೀತೆಗೆ ಸ್ವರ ಸಂಯೋಜಿಸಿರುವ ರೀತಿ. ಆದರೆ ಇಂಥ ಪ್ರಯತ್ನಗಳಿಗೆ ಸ್ಪಂದಿಸಬಲ್ಲ ಸೂಕ್ಷ್ಮ ಸಂವೇದನೆಯ ನಿರ್ದೇಶಕರಿದ್ದರೆ ಮಾತ್ರ ಯಶಸ್ಸು ದೊರೆಯುವುದು. ಅಂಥ ಒಬ್ಬ ನಿರ್ದೇಶಕನನ್ನು ವಿಜಯಭಾಸ್ಕರ್ ಕಣಗಾಲ್ ಪುಟ್ಟಣ್ಣನವರಲ್ಲಿ ಕಂಡರು. ಹೀಗಾಗಿ ಪುಟ್ಟಣ್ಣ-ವಿಜಯಭಾಸ್ಕರ್ ಜೋಡಿಯ ಎಲ್ಲ ಚಿತ್ರಗಳ ಸಂಗೀತ ಶ್ರೇಷ್ಠವಾಯಿತು.

(ಚಿತ್ರ ೧೦) ಆರ್.ಎನ್.ಕೃಷ್ಣಪ್ರಸಾದ್, ನಾಗೇಂದ್ರರಾಯರು, ವಿಜಯಭಾಸ್ಕರ್, ಸುದರ್ಶನ್, ಆರ್.ಎನ್.ಜಯಗೋಪಾಲ್ ಮತ್ತು ಮೋಹನ ಸುಂದರಂ

ವಿಜಯಭಾಸ್ಕರ್ ಅವರ ನಿರಂತರ ಪ್ರಯೋಗಶೀಲ ಪ್ರತಿಭೆಯೇ ಪಿ.ಲಂಕೇಶ್ ರಂಥ ಪ್ರಯೋಗಾತ್ಮಕ ಮನಸ್ಸಿನವರನ್ನೂ ತಮ್ಮ ಚಿತ್ರಕ್ಕೆ ಇವರಿಂದ ಸಂಗೀತ ಕೊಡಿಸಲು ಪ್ರೇರೇಪಿಸಿತು. ಹೊಸ ಅಲೆಯ ವರ್ಗಕ್ಕೆ ಸೇರುವ ನಾಗಾಭರಣರ ಪ್ರಥಮ ಚಿತ್ರ 'ಗ್ರಹಣ'ಕ್ಕೂ ವಿಜಯಭಾಸ್ಕರ್ ವಿಶಿಷ್ಟ ರೀತಿಯಲ್ಲಿ ಸಂಗೀತ ಸಂಯೋಜಿಸಿದ್ದಾರೆ.

ಭಾರತೀಯ ಚಿತ್ರರಂಗದ ಅತ್ಯಂತ ಪ್ರತಿಭಾವಂತ ನಿರ್ದೇಶಕ ಅಡೂರು ಗೋಪಾಲಕೃಷ್ಣನ್ ತಮ್ಮ ಚಿತ್ರಗಳಿಗೆ ವಿಜಯಭಾಸ್ಕರ್ ಅವರನ್ನೇ ಆಯ್ಕೆ ಮಾಡುತ್ತಿದ್ದರು. ಹಾಡುಗಳೇ ಇಲ್ಲದ ಅವರ 'ಮದಿಲುಗಳ್' ಮಲೆಯಾಳಂ ಚಿತ್ರಕ್ಕೆ ವಿಜಯಭಾಸ್ಕರ್ ನೀಡಿದ ಅತ್ಯಂತ ಸೃಜನಾತ್ಮಕ ಸಂಗೀತ ಸಂಯೋಜನೆಯಿಂದ ಪ್ರಭಾವಿತರಾದ ಅಡೂರ್ ಗೋಪಾಲಕೃಷ್ಣನ್ ವಿಜಯಭಾಸ್ಕರ್ ಅವರ ಪ್ರತಿಭೆ ಬಗ್ಗೆ ಬಹಳ ವಿಶ್ವಾಸ ಹೊಂದಿದ್ದಾರೆ. ಮಲೆಯಾಳಿ ಚಿತ್ರರಂಗ ಬಹಳಷ್ಟು ಗೌರವಿಸುವ ವಿಮರ್ಶಕ ಪ್ರಶಸ್ತಿ ಇವರಿಗೆ ಸಂದಿದೆ. ಚಿತ್ರರಂಗಕ್ಕೆ ಸಲ್ಲಿಸಿದ ಇವರ ಸೇವೆಗೆ ಸರ್ಕಾರ ರಾಜಕುಮಾರ್ ಹೆಸರಿನಲ್ಲಿ ಕೊಡುತ್ತಿರುವ ಪ್ರಶಸ್ತಿ ೨೦೦೦ ಇಸವಿಯಲ್ಲಿ ಇವರಿಗೆ ಸಂದಿದೆ. ಹಲವು ಬಾರಿ ರಾಜ್ಯ ಪ್ರಶಸ್ತಿಗಳು ಲಭಿಸಿವೆ. ಪ್ರತಿಷ್ಠಿತ ಸುರಸಿಂಗಾರ್ ಪ್ರಶಸ್ತಿಗೂ ಎರಡು ಬಾರಿ ಭಾಜನರಾದರು.

೧೯೫೫ರಲ್ಲಿ ಪದ್ಮಿನಿ ಪಿಕ್ಚರ್ಸ್ ಅವರ 'ಮೊದಲ ತೇದಿ' ಚಿತ್ರದಿಂದ ಖ್ಯಾತರಾದ ಟಿ.ಜಿ.ಲಿಂಗಪ್ಪ ಮುಂದೆ ಪಂತುಲು ಅವರ ಹೆಚ್ಚು ಕಡಿಮೆ ಎಲ್ಲಾ ಕನ್ನಡ ಮತ್ತು ಕೆಲವು ತಮಿಳು ಚಿತ್ರಗಳಿಗೆ ಸಂಗೀತ ನಿರ್ದೇಶಕರಾಗಿ ನೆಲೆನಿಂತರು. ಮುಖ್ಯವಾಗಿ ಭಕ್ತಿಪ್ರಧಾನ ಚಿತ್ರಗಳಿಗೆ ಒಗ್ಗುವಂತಹ ವಾದ್ಯ ಸಂಯೋಜನೆ ಮತ್ತು ತರಂಗಗಳನ್ನು ಸೃಷ್ಟಿಸುವಲ್ಲಿ ಹೆಸರು ಮಾಡಿದ ಲಿಂಗಪ್ಪನವರು ಹಲವು ಇಂಪಾದ ಗೀತೆಗಳನ್ನು ನೀಡಿದ್ದಾರೆ. 'ರತ್ನಗಿರಿ ರಹಸ್ಯ' ಪಂತುಲು ಅವರಿಗೆ ಸಾಕಷ್ಟು ಹೆಸರು ತಂದುಕೊಟ್ಟ ಚಿತ್ರ. ಈ ಚಿತ್ರದ

(ಚಿತ್ರ ೧೧) ಹಾಡುಗಳ ಧ್ವನಿಮುದ್ರಣ ಸಂದರ್ಭದಲ್ಲಿ ಸಂಗೀತ ನಿರ್ದೇಶಕ ಟಿ.ಜಿ.ಲಿಂಗಪ್ಪ, ಪಿ.ಸುಶೀಲ ಮತ್ತು ಆರ್.ಎನ್.ಜಯಗೋಪಾಲ್

ಹೆಸರು ಕೇಳಿದೊಡನೆಯೇ ಹಳೆಯ ಪೀಳಿಗೆಯ ಮೈ-ಮನಗಳು ಜುಂ ಎನ್ನುತ್ತವೆ. "ಅನುರಾಗದಾ ಅಮರಾವತಿ...", "ಅಮರ ಮಧುರ ಪ್ರೇಮ..." ಮುಂತಾದ ಗೀತೆಗಳು ಇಂದಿಗೂ ರಸಿಕರ ಪಾಲಿಗೆ ಅನರ್ಘ್ಯ ರತ್ನಗಳು. 'ಸ್ಕೂಲ್ ಮಾಸ್ಟರ್' ಚಿತ್ರದ "ಸ್ವಾಮಿ ದೇವನೆ ಲೋಕ ಪಾಲನೆ...", 'ಸತಿಶಕ್ತಿ' ಚಿತ್ರದ "ಪವಡಿಸು ಫಾಲಾಕ್ಷ...", 'ಶ್ರೀಕೃಷ್ಣದೇವರಾಯ' ಚಿತ್ರದ "ಬಹು ಜನ್ಮದಾ ಪೂಜಾಫಲ...", "ತಿರುಪತಿ ಗಿರಿವಾಸ...", 'ಕಿತ್ತೂರು ಚೆನ್ನಮ್ಮ'ದ "ತನು ಕರಗದವರಲ್ಲಿ...", 'ಚಕ್ರತೀರ್ಥ'ದ "ನಿನ್ನ ರೂಪ ಕಣ್ಣಲಿ...", 'ಚಂದವಳ್ಳಿ ತೋಟ'ದ "ಓ ನನ್ನ ಬಾಂಧವರೇ...", "ಮಳ್ಳಿಯಂಗೆ ನೋಡುತಲಿ..." ಟಿ.ಜಿ.ಲಿಂಗಪ್ಪನವರ ಮನ ಸೆಳೆಯುವ ಗೀತೆಗಳಲ್ಲಿ ಕೆಲವು. 'ಬಬ್ರುವಾಹನ' ಚಿತ್ರದಲ್ಲಿ ಕೆಲವು ಸೀಸ, ಕಂದ ಪದ್ಯಗಳಿಗೆ ಮತ್ತು "ಆರಾಧಿಸುವೆ ಮದನಾರಿ..." ಎಂಬ ಶಾಸ್ತ್ರೀಯ ಗಾಯನಕ್ಕೆ ಅವರು ರಾಗ ಸಂಯೋಜಿಸಿರುವ ರೀತಿ ಸಂಗೀತ ನಿರ್ದೇಶನದಲ್ಲಿನ ಅವರ ಕುಶಲತೆಗೆ ಸಾಕ್ಷಿಯಾಗಿದೆ. 'ಶ್ರೀಕೃಷ್ಣದೇವರಾಯ' ಚಿತ್ರಕ್ಕಾಗಿ ಟಿ.ಜಿ.ಲಿಂಗಪ್ಪ ರಾಜ್ಯ ಪ್ರಶಸ್ತಿ ಪಡೆದರು.

೧೯೫೫ರಲ್ಲಿ 'ಸೋದರಿ' ಚಿತ್ರಕ್ಕೆ ಪದ್ಮನಾಭ ಶಾಸ್ತ್ರಿಗಳ ಜತೆಗೆ ಸಂಯುಕ್ತವಾಗಿ ಸಂಗೀತ ನೀಡಿದ ಜಿ.ಕೆ.ವೆಂಕಟೇಶ್ ೧೯೫೬ರಲ್ಲಿ ಪೂರ್ಣ ಪ್ರಮಾಣದ ಸಂಗೀತ ನಿರ್ದೇಶಕರಾದರು. ಅದಕ್ಕೆ ಮುಂಚೆಯೇ ತಮಿಳು ಚಿತ್ರರಂಗದಲ್ಲಿ ಎಸ್.ವಿ.ವೆಂಕಟರಾಮನ್ ಅವರ ಶಿಷ್ಯರಾಗಿ ಹಲವು ಚಿತ್ರಗಳಿಗೆ ಸಂಗೀತ ನಿರ್ದೇಶಕರಾಗಿ ಕೆಲಸ ಮಾಡಿದ್ದರು.

ಜಿ.ಕೆ.ವೆಂಕಟೇಶ್ ೫೦ರ ದಶಕದಲ್ಲಿ ಕನ್ನಡ ಚಿತ್ರರಂಗಕ್ಕೆ ಸಂಗೀತ ನಿರ್ದೇಶಕರಾಗಿ ಬಂದ ಪ್ರತಿಭಾವಂತರಲ್ಲೊಬ್ಬರು. ವೀಣಾ ವಿದ್ವಾಂಸರಾಗಿದ್ದ ವೆಂಕಟೇಶ್‌ಗೆ ಹಿಂದೂಸ್ತಾನಿ ಸಂಗೀತದ ಪರಿಚಯವೂ ಇತ್ತು. ಶಾಸ್ತ್ರೀಯ, ಜಾನಪದ ಸಂಗೀತಗಳನ್ನು ಮಧುರವಾಗಿ ಮಿಶ್ರಣ ಮಾಡಿ ಸಂಗೀತ ಸೃಷ್ಟಿಸುವುದು ಅವರ ವೈಶಿಷ್ಟ್ಯ. ಜತಗೆ ಒಳ್ಳೆಯದನ್ನು ಪ್ರೋತ್ಸಾಹಿಸುವ ಸಹೃದಯಿ.

"ಚಿತ್ರಸಂಗೀತ ರಂಗಸಂಗೀತದಿಂದ ಪ್ರಭಾವಿತ. ಮತ್ತು ಅದೇ ಜಾಡಿನಲ್ಲಿ ಸಾಗಿದೆ. ಅದನ್ನು ನಾವು ಬದಲಾಯಿಸಬೇಕು" ಎಂದು ವೆಂಕಟೇಶ್ ಆಗಾಗ ತಮ್ಮ ಕಿರಿಯ ಸಹೋದರ ಜಿ.ಕೆ.ರಘು ಅವರೊಂದಿಗೆ ಹೇಳುತ್ತಿದರಂತೆ. ಅವರಿಗೆ ತಮಿಳಿನ ವಿಶ್ವನಾಥನ್-ರಾಮಮೂರ್ತಿ ಅವರೊಂದಿಗೆ ಕೆಲಸ ಮಾಡಿದ ಅನುಭವವೂ ಇತ್ತು. ವಾದ್ಯ ಸಂಯೋಜನೆಯಲ್ಲಿ ಅವರಿಗಿದ್ದ ವಿಶೇಷ ಪ್ರಾವೀಣ್ಯದಿಂದಾಗಿ ವಿಶ್ವನಾಥನ್-ರಾಮಮೂರ್ತಿ ಹಿನ್ನೆಲೆ ಸಂಗೀತ ಕಾರ್ಯವನ್ನು ವೆಂಕಟೇಶ್ ಅವರಿಗೇ ವಹಿಸುತ್ತಿದ್ದರು.

ದೊರೆತ ಮೊದಲ ಅವಕಾಶದಲ್ಲೇ ವೆಂಕಟೇಶ್ ಹಲವು ಪ್ರಯೋಗಗಳನ್ನು ಮಾಡಿದರು. ರಾಜಕುಮಾರ್ ಅವರ ಗಾಯನ ವೈಖರಿಯ ಪರಿಚಯವಿದ್ದ ವೆಂಕಟೇಶ್ ಮೊದಲ ಬಾರಿಗೆ ರಾಜ್ ಅವರಿಂದ ಒಂದು ಪದ್ಯವನ್ನು ಹಾಡಿಸಿದರು.

ಸಾಹಿತಿ ವಿಜಯನಾರಸಿಂಹ ಅವರ ಮೊದಲ ಗೀತೆ "ಈ ದೇಹದಿಂದ ದೂರನಾದೆ ಏಕೆ ಆತ್ಮನೆ...". ಈ ಗೀತೆಗೆ ವೆಂಕಟೇಶ್ ನೀಡಿದ ಸ್ವರ ಸಂಯೋಜನೆ ಬಹುಕಾಲ ನೆನಪಿನಲ್ಲಿ ಉಳಿಯುವಂಥದು. ಮತ್ತೆ ಬಿ.ಎಸ್.ರಂಗಾ ಅವರ 'ಮಹಿಷಾಸುರಮರ್ದಿನಿ' ಚಿತ್ರಕ್ಕಾಗಿ ರಾಜಕುಮಾರ್-ಎಸ್.ಜಾನಕಿಯವರಿಂದ ಒಂದು ಯುಗಳ ಗೀತೆಯನ್ನು ಹಾಡಿಸಿದರು.

ಕನ್ನಡ ಚಿತ್ರರಸಿಕರ ಮನದಲ್ಲಿ ಚಿರಕಾಲ ಉಳಿಯುವಂಥ ಕೆಲವು ಅಮರ ಗೀತೆಗಳನ್ನು ವೆಂಕಟೇಶ್ ಸಂಯೋಜಿಸಿದ್ದಾರೆ. 'ಗೌರಿ' ಚಿತ್ರದಲ್ಲಿ ಕುವೆಂಪು ಅವರ "ಯಾವ ಜನ್ಮದ ಮೈತ್ರಿ...", 'ಸಂಧ್ಯಾರಾಗ' ಚಿತ್ರದಲ್ಲಿ ಬಾಲಮುರಳಿ ಕೃಷ್ಣ, ಎಸ್.ಜಾನಕಿ ಹಾಗೂ ಭೀಮಸೇನ ಜೋಷಿ ಹಾಡಿರುವ "ನಂಬಿದೆ ನಿನ್ನ ನಾದ ದೇವತೆಯೆ...", "ಈ ಪರಿಯ ಸೊಬಗು..." ಮುಂತಾದ ಗೀತೆಗಳು, 'ಭೂದಾನ' ಚಿತ್ರದ "ನೆಂಟ ಕೇಳೋ ಕಿವಿಗೊಟ್ಟು...", 'ಸನಾದಿ ಅಪ್ಪಣ್ಣ' ಚಿತ್ರದ ಎಲ್ಲ ಹಾಡುಗಳು, 'ಭಕ್ತ ಕುಂಬಾರ'ದ "ಮಾನವಾ ಮೂಳೆ ಮಾಂಸದ ತಡಿಕೆ..." ಮುಂತಾದ ಹಾಡುಗಳು ಎಂದೆಂದಿಗೂ ನೆನಪಿನಲ್ಲಿ ಉಳಿಯುವಂಥವು. 'ಬಂಗಾರದ ಮನುಷ್ಯ' ಚಿತ್ರದ ಯಶಸ್ಸಿನಲ್ಲಿ ವೆಂಕಟೇಶ್‌ರ ಸಂಗೀತದ ಪಾತ್ರವೂ ಇದೆ.

ಹೊಸ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸುವ ಮನೋಭಾವದ ವೆಂಕಟೇಶ್ ೧೯೬೧ರಲ್ಲಿ 'ಕಣ್ತೆರೆದು ನೋಡು' ಚಿತ್ರದ ಮೂಲಕ ಬೆಂಗಳೂರು ಲತಾ ಅವರನ್ನು ಹಿನ್ನೆಲೆ ಗಾಯಕಿಯಾಗಿ ಪರಿಚಯಿಸಿದರು. 'ನಾಂದಿ', 'ಹಣ್ಣೆಲೆ ಚಿಗುರಿದಾಗ', 'ಧ್ರುವತಾರೆ' ಮುಂತಾದ ಚಿತ್ರಗಳಲ್ಲಿ ಹಾಡಿದ ಲತಾ ಕೆಲವು ತಮಿಳು-ತೆಲುಗು ಚಿತ್ರಗಳಲ್ಲೂ ಹಾಡಿ ಪ್ರಸಿದ್ಧರಾದರು. ಚಿಕ್ಕ ವಯಸ್ಸಿನಲ್ಲೇ ಸಾವನ್ನಪ್ಪಿದರು.

೧೯೬೫ರಲ್ಲಿ 'ಕವಲೆರಡು ಕುಲವೊಂದು' ಚಿತ್ರದ ಮೂಲಕ ಬಿ.ಕೆ.ಸುಮಿತ್ರಾ ಅವರನ್ನು ಪರಿಚಯಿಸಿದರು. ಮುಂದೆ ಸುಮಾರು ೧೫ ವರ್ಷಗಳ ಕಾಲ ಆಕೆ ಅನೇಕ ಚಿತ್ರಗಳಲ್ಲಿ ಹಾಡಿ 'ಕನ್ನಡದ ಕೋಗಿಲೆ' ಬಿರುದಿಗೆ ಪಾತ್ರರಾದರು. 'ಒಂದೇ ಬಳ್ಳಿಯ

(ಚಿತ್ರ ೧೨) 'ರಾಜ ನನ್ನ ರಾಜ' ಚಿತ್ರದ ಹಾಡಿನ ಧ್ವನಿಗ್ರಹಣ ಸಂದರ್ಭ. ಸಂಗೀತ ನಿರ್ದೇಶಕ ಜಿ.ಕೆ.ವೆಂಕಟೇಶ್, ರಾಜಕುಮಾರ್, ಚಿ.ಉದಯಶಂಕರ್, ಅಬ್ಬಾಯಿನಾಯ್ಡು ಮತ್ತು ಎಸ್.ಜಾನಕಿ

(ಚಿತ್ರ ೧೩)'ಸಂಧ್ಯಾರಾಗ' ಚಿತ್ರದ ಹಾಡುಗಳ ಧ್ವನಿಮುದ್ರಣ ಸಂದರ್ಭ ಭೀಮಸೇನ ಜೋಷಿ, ಬಿ.ದೊರೈರಾಜ್, ಜಿ.ಕೆ.ವೆಂಕಟೇಶ್, ಜಿ.ವಿ.ಅಯ್ಯರ್, ಎ.ಸಿ.ನರಸಿಂಹಮೂರ್ತಿ, ಎಸ್.ಕೆ.ಭಗವಾನ್ ಮತ್ತು ಬಾಲಮುರಳಿಕೃಷ್ಣ

ಹೂಗಳು', 'ಸತಿ ಸುಕನ್ಯ', 'ಗೆಜ್ಜೆ ಪೂಜೆ', 'ಎರಡು ಮುಖ', 'ಉಪಾಸನೆ' ಮುಂತಾದವು ಸುಮಿತ್ರಾ ಹಾಡಿದ ಕೆಲವು ಚಿತ್ರಗಳು. ೧೯೬೫ರಲ್ಲಿ ಸಿ.ಅಶ್ವತ್ಥ್ ಮತ್ತು ಸುಲೋಚನಾ ವೆಂಕಟೇಶ್ ಅವರುಗಳನ್ನು ಪರಿಚಯಿಸಿದ ಕೀರ್ತಿಯೂ ವೆಂಕಟೇಶ್ ಅವರದ್ದೆ.

'ಸನಾದಿ ಅಪ್ಪಣ್ಣ' ಚಿತ್ರಕ್ಕಾಗಿ ಬಿಸ್ಮಿಲ್ಲಾಖಾನ್ ಅವರ ಷಹನಾಯ್ ವಾದನಕ್ಕೆ ಒಗ್ಗುವಂಥ ರಾಗ ಸಂಯೋಜನೆ ಮಾಡಿದ್ದು ವೆಂಕಟೇಶ್. ಷಹನಾಯ್ ವಾದನದೊಂದಿಗೆ ಎಸ್.ಜಾನಕಿಯವರ ಗಾಯನವನ್ನು ಹೊಂದಿಸುವ ಸಲುವಾಗಿ ಉದಯಶಂಕರ್ ಅವರಿಂದ 'ಕರೆದರೂ ಕೇಳದೆ...' ಗೀತೆಯನ್ನು ಬರೆಸಿ ಮಾರುಬೇಹಾಗ್ ರಾಗದಲ್ಲಿ ಸ್ವರ ಸಂಯೋಜಿಸಿ ಬಿಸ್ಮಿಲ್ಲಾಖಾನ್‌ರಿಂದಲೇ ಶಹಭಾಸ್‌ಗಿರಿ ಪಡೆದವರು ಜಿ.ಕೆ.ವೆಂಕಟೇಶ್. ಸ್ವತಃ ಗಾಯಕರಾಗಿದ್ದ ವೆಂಕಟೇಶ್ 'ಕಣ್ತೆರೆದು ನೋಡು' ಚಿತ್ರಕ್ಕಾಗಿ ''ಕನ್ನಡದ ಮಕ್ಕಳೆಲ್ಲ ಒಂದಾಗಿ ಬನ್ನಿ...'', 'ಬೂತಯ್ಯನ ಮಗ ಅಯ್ಯು' ಚಿತ್ರಕ್ಕಾಗಿ ''ವಿರಸವೆಂಬ ವಿಷಕೆ...'', 'ಕಸ್ತೂರಿ ನಿವಾಸ'ದಲ್ಲಿ ''ಆಡಿಸಿದಾತ ಬೇಸರ ಮೂಡಿ ಆಟ ಮುಗಿಸಿದಾ...'' ಮುಂತಾದ ಗೀತೆಗಳನ್ನು ಅತ್ಯಂತ ಭಾವಪೂರ್ಣವಾಗಿ ಹಾಡಿ ಕನ್ನಡ ಚಿತ್ರರಸಿಕರ ಮನಸ್ಸಿನಲ್ಲಿ ಶಾಶ್ವತ ಸ್ಥಾನ ಗಳಿಸಿದ್ದಾರೆ.

ವೆಂಕಟೇಶ್ ಅವರ ಇನ್ನೊಂದು ಸಾಧನೆಯೆಂದರೆ ತಮ್ಮ ಹೆಸರನ್ನು ಉಳಿಸುವಂಥ ಶಿಷ್ಯರನ್ನು ತಯಾರು ಮಾಡಿರುವುದು. ಇಂದು ಇಡೀ ಭಾರತೀಯ ಚಿತ್ರರಂಗದಲ್ಲಿ ಬಹಳಷ್ಟು ಹೆಸರು ಮಾಡಿರುವ ಎಲ್.ವೈದ್ಯನಾಥನ್ (ವೈದಿ), ಇಳಯರಾಜ, ಶಂಕರ್- ಗಣೇಶ್ ಮುಂತಾದವರು ವೆಂಕಟೇಶ್ ಅವರ ಬಳಿ ದುಡಿದವರು.

ದೊರೆ-ಭಗವಾನ್ ನಿರ್ದೇಶನದ ಬಾಂಡ್ ಶೈಲಿಯ ಚಿತ್ರಗಳಲ್ಲಿ ಜಿ.ಕೆ.ವೆಂಕಟೇಶ್ ವಿಶಿಷ್ಟ ರೀತಿಯಲ್ಲಿ ಸಂಗೀತ ಸಂಯೋಜಿಸಿದ್ದಾರೆ. 'ಭಕ್ತ ಕುಂಬಾರ' ಮತ್ತು 'ಹೊಸ ನೀರು' ಚಿತ್ರಗಳ ಸಂಗೀತಕ್ಕೆ ಎರಡು ಬಾರಿ ರಾಜ್ಯ ಪ್ರಶಸ್ತಿ ಗಳಿಸಿದರು. ಜಿ.ಕೆ.ವೆಂಕಟೇಶ್ ಚಿತ್ರ ನಿರ್ಮಿಸಿದ್ದೂ ಉಂಟು. ಅವರ ನಿರ್ಮಾಣದ 'ತುಂಬಿದ ಕೊಡ' ಚಿತ್ರದಲ್ಲಿ ಕಾಳಿಂಗರಾಯರಿಂದ ''ಅಂತಿಂಥ ಹೆಣ್ಣು ನೀನಲ್ಲ...'' ಗೀತೆ ಹಾಡಿಸಿ ತೆರೆಯ ಮೇಲೂ ಅವರನ್ನು ತಂದರು.

'ಶ್ರೀರಾಮಾಂಜನೇಯ ಯುದ್ಧ' ಚಿತ್ರದಿಂದ ಸಂಗೀತ ನಿರ್ದೇಶನಕ್ಕೆ ತೊಡಗಿದವರು ಸತ್ಯಂ. ಸಂಗೀತವನ್ನು ಶಾಸ್ತ್ರೀಯವಾಗಿ ಅಭ್ಯಾಸ ಮಾಡದಿದ್ದರೂ ಆ ಬಗ್ಗೆ ಬಹಳಷ್ಟು ತಿಳಿದು ಕೊಂಡಿದ್ದರು. ಆದಿನಾರಾಯಣ್ ಅವರ ತಂಡದಲ್ಲಿ ಡೋಲಕ್ ವಾದಕರೂ ಆಗಿದ್ದರು. ಬಾಲ್ಯದಿಂದ ರಂಗಭೂಮಿಯ ಸಂಪರ್ಕವಿತ್ತು.

''ನಾನು ಶಾಸ್ತ್ರೀಯ ಸಂಗೀತದಿಂದ ಮಾಡರ್ನ್‌ರಿದಂವರೆಗೆ ಎಲ್ಲಾ ಬಗೆಯ ಸಂಗೀತ ನೀಡಿದ್ದೇನೆ. ಸಿನಿ ಸಂಗೀತ ಎಂದರೆ ಕ್ಲಾಸಿಕಲ್ ಚಿತ್ರಗಳಿಗೆ ಲಘುಶಾಸ್ತ್ರೀಯ ಸಂಗೀತ, ಸೆಂಟಿಮೆಂಟಲ್ ಹಾಗೂ ಫ್ಯಾಮಿಲಿ ಸಬ್ಜೆಕ್ಟ್‌ಗಳಿಗೆ ಮೆಲೊಡಿ ಅಗತ್ಯ. ಆ್ಯಕ್ಷನ್ ಚಿತ್ರಗಳಿಗೆ ಮಾಡ್ರನ್ ಮತ್ತು ವೆಸ್ಟರ್ನ್ ಮಿಶ್ರಣವಿರಬೇಕು. ಆ್ಯಕ್ಷನ್ ಚಿತ್ರಗಳಲ್ಲಿ ರೀ-ರಿಕಾರ್ಡಿಂಗ್ ಮುಖ್ಯ...'' ಹೀಗೆ ತಮ್ಮ ನಿಲುವುಗಳಲ್ಲಿ ಸ್ಪಷ್ಟತೆಯನ್ನು ರೂಢಿಸಿಕೊಂಡಿದ್ದ ಸತ್ಯಂ ಅವರು ೧೫೦ಕ್ಕೂ ಹೆಚ್ಚು ಕನ್ನಡ ಚಿತ್ರಗಳಿಗೆ ಸಂಗೀತ ನೀಡಿದ್ದಾರೆ. ಇತರ ಎಲ್ಲಾ ಭಾಷೆಗಳಲ್ಲೂ ಅವರು ಸಂಗೀತ ನಿರ್ದೇಶಕರಾಗಿ ದುಡಿದಿದ್ದರು.

ಚದುರಂಗರು ನಿರ್ದೇಶಿಸಿದ್ದ 'ಸರ್ವಮಂಗಳ' ಚಿತ್ರದ ಜನಪದ ಧಾಟಿಯ ಗೀತೆ ''ಉಂಡಾಡಬಹುದೂ ಓಡಿ ಬಾ ಎನ್ನಪ್ಪ...'', 'ಒಂದೇ ಬಳ್ಳಿಯ ಹೂಗಳು' ಚಿತ್ರದ ''ಅಣ್ಣಾ ನಿನ್ನ ಸೋದರಿಯನ್ನ...'' ಮತ್ತು ಮಹಮದ್ ರಫಿ ಹಾಡಿರುವ ''ನೀನೆಲ್ಲಿ ನಡೆವೆ ದೂರಾ...'', 'ಗಾಂಧಿನಗರ' ಚಿತ್ರದ ''ನೀ ಮುಡಿದಾ ಮಲ್ಲಿಗೆ ಹೂವಿನ ಮಾಲೆ...'', 'ಚೂರಿಚಿಕ್ಕಣ್ಣ' ಚಿತ್ರಕ್ಕೆ ಬೆಂಗಳೂರು ಲತಾ ಮತ್ತು ಎಸ್.ಪಿ.ಬಾಲಸುಬ್ರಹ್ಮಣ್ಯಂ ಹಾಡಿದ್ದ ''ನೀ ಮೊದಲು ಮೊದಲು ನನ್ನ ನೋಡಿದಾಗಾ...'', ಗೀತಪ್ರಿಯ ರಚಿಸಿದ್ದ 'ಶ್ರೀರಾಮಾಂಜನೇಯ ಯುದ್ಧ' ಚಿತ್ರದ ''ಜಯ ಜಯ ರಾಮ ಜಯ ಘನಶ್ಯಾಮ; ಪ್ರಭೋ ರಘುರಾಮ...'' ಮೊದಲಾದ ಗೀತೆಗಳು ಜನಪ್ರಿಯವಾದವು.

(ಚಿತ್ರ ೧೪)'ಭಾಗೀರಥಿ' ಚಿತ್ರದ ''ಓಂಕಾರಿ ಕಲ್ಯಾಣಿ, ಶೃಂಗೇರಿ ಸಿರಿರಾಣಿ...'' ಹಾಡು ರೂಪುಗೊಳ್ಳುವಾಗ ವಾದ್ಯಗೋಷ್ಠಿಯೊಂದಿಗೆ ಗಾಯಕಿ ಸೂಲಮಂಗಲಂ ರಾಜಲಕ್ಷ್ಮಿ, ಜಿ.ಕೆ.ವೆಂಕಟೇಶ್, ಟಿ.ವಿ.ಸಿಂಗ್ ಠಾಕೂರ್, ಜಿ.ಎನ್.ವಿಶ್ವನಾಥಶೆಟ್ಟಿ

(ಚಿತ್ರ ೧೫)'ಪಟ್ಟಣಕ್ಕೆ ಬಂದ ಪತ್ನಿಯರು' ಚಿತ್ರದ ಹಾಡುಗಳ ಧ್ವನಿಮುದ್ರಣ - ಟಿ.ಉದಯಶಂಕರ್, ಎಂ.ರಂಗರಾವ್, ಎಸ್.ಡಿ.ಅಂಕಲಗಿ ಮತ್ತು ಮೋಹನಸುಂದರಂ

'ಸಕ್ಕರೆ ಅದೇ ಸ್ವರ್ಗ' ಚಿತ್ರದ ಮೂಲಕ ಬಂದ ಪ್ರತಿಭಾವಂತ ಸಂಗೀತ ನಿರ್ದೇಶಕ ಎಂ.ರಂಗರಾವ್. ಕನ್ನಡ ಚಿತ್ರರಂಗ ಕಂಡ ವಿಭಿನ್ನ ಸಂಗೀತ ನಿರ್ದೇಶಕ. ಅಬ್ಬರದ ಸಂಗೀತದಿಂದ ದೂರವಾಗಿ ಸರಳ ಶಾಸ್ತ್ರೀಯ ವಾದ್ಯಗಳಿಂದಲೇ ಸಂಗೀತವನ್ನು ರೂಪಿಸಿಕೊಂಡಿದ್ದು ಇವರ ಸಾಧನೆ. ರಂಗರಾವ್ ಮೂಲತಃ ವೀಣಾ ವಿದ್ವಾಂಸರು. ಅವರನ್ನು ಎಲ್ಲರೂ ವೀಣಾ ರಂಗರಾವ್ ಎಂದೇ ಗುರುತಿಸುತ್ತಿದ್ದರು. ಭೀಮ್‌ಪಲಾಸ್ ಅವರ ಪ್ರಿಯವಾದ ರಾಗ. ಅವರ ಸಂಗೀತ ನಿರ್ದೇಶನದ ಚಿತ್ರಗಳಲ್ಲಿ ಈ ರಾಗದ ಬಳಕೆಯೇ ಅಧಿಕ.

'ಹಣ್ಣೆಲೆ ಚಿಗುರಿದಾಗ', 'ಕರುಳಿನ ಕರೆ', 'ಸಾಕ್ಷಾತ್ಕಾರ', 'ಎಡಕಲ್ಲು ಗುಡ್ಡದ ಮೇಲೆ', 'ಬಹದ್ದೂರ್ ಗಂಡು', 'ವಸಂತಗೀತಾ', 'ಕವಿರತ್ನ ಕಾಳಿದಾಸ', 'ಬಂಧನ', 'ರಂಗನಾಯಕಿ' ಮೊದಲಾದವು ರಂಗರಾವ್ ಸಂಗೀತ ನಿರ್ದೇಶನವಿರುವ ಮುಖ್ಯ ಚಿತ್ರಗಳು. 'ಜೀವನಚೈತ್ರ'ದಲ್ಲಿ ಬಳಸಿಕೊಂಡಿರುವ ಅತ್ಯಂತ ಜನಪ್ರಿಯ ಗೀತೆ ''ನಾದಮಯಾ...'' ಕೂಡಾ ಆ ಮೊದಲೇ ರಾಜಕುಮಾರ್ ಅವರ ಬೇರೊಂದು ಚಿತ್ರಕ್ಕಾಗಿ ರಂಗರಾವ್ ಸಂಯೋಜಿಸಿ, ಧ್ವನಿಮುದ್ರಿಸಿದ್ದ ಗೀತೆ. 'ಜೀವನಚೈತ್ರ'ದಲ್ಲಿ ಅತ್ಯಂತ ಸೂಕ್ತವಾಗಿ ಬಳಕೆ ಆಯಿತು. ಆ ಗೀತ ಗಾಯನಕ್ಕೆ ರಾಜಕುಮಾರ್ ಅವರಿಗೆ ಶ್ರೇಷ್ಠ ಗಾಯನಕ್ಕಾಗಿ ರಾಷ್ಟ್ರ ಪ್ರಶಸ್ತಿಯೂ ಬಂದಿತು.

'ಹಣ್ಣೆಲೆ ಚಿಗುರಿದಾಗ' ಮತ್ತು 'ಬಂಧನ' ಚಿತ್ರಗಳ ಸಂಗೀತಕ್ಕೆ ರಾಜ್ಯ ಪ್ರಶಸ್ತಿ ಪಡೆದರು ರಂಗರಾವ್. ಅವರ 'ಹಣ್ಣೆಲೆ ಚಿಗುರಿದಾಗ' ಚಿತ್ರದ ''ಹೂವು ಚೆಲುವೆಲ್ಲ ನಂದೆಂದಿತು...'', 'ಕರುಳಿನ ಕರೆ' ಚಿತ್ರದ ''ತಾಜಾ ತಾಜಾ ಕಡ್ಲೆ ಕಾಯ್...'', 'ಸಾಕ್ಷಾತ್ಕಾರ' ಚಿತ್ರದ ''ಒಲವೆ ಜೀವನ ಸಾಕ್ಷಾತ್ಕಾರ...'', 'ಎಡಕಲ್ಲು ಗುಡ್ಡದ ಮೇಲೆ' ಚಿತ್ರದ 'ವಿರಹಾ ನೂರು ನೂರು ತರಹಾ...'', 'ಬಹದ್ದೂರ್ ಗಂಡು' ಚಿತ್ರದ ''ಹೇ ನಿನಗಾಗಿಯೇ...''. 'ವಸಂತಗೀತ' ಚಿತ್ರದ ''ಆಟವೇನು ನೋಟವೇನು...''. 'ಕವಿರತ್ನ ಕಾಳಿದಾಸ' ಚಿತ್ರದ ''ಓ ಪ್ರಿಯತಮಾ ಕರುಣೆಯಾ ತೋರೆಯಾ...'', 'ಬಂಧನ' ಚಿತ್ರದ ''ಬಣ್ಣ ನನ್ನ ಒಲವಿನ ಬಣ್ಣ...'', 'ರಂಗನಾಯಕಿ' ಚಿತ್ರದ ''ಕನ್ನಡ ನಾಡಿನ ರಸಿಕರ...'' ಮುಂತಾದ ಗೀತೆಗಳಿಂದ ಜನಮನದಲ್ಲಿ ಒಂದು ಗುಂಗಿನಂತೆ ಉಳಿದಿದ್ದಾರೆ.

೧೯೫೪ರಲ್ಲಿ ರಾಜಕುಮಾರ್ ಅವರ ಪ್ರಥಮ ಚಿತ್ರ 'ಬೇಡರ ಕಣ್ಣಪ್ಪ' ಚಿತ್ರಕ್ಕೆ ಸಂಗೀತ ನೀಡಿದ ಆರ್.ಸುದರ್ಶನ್ ಮತ್ತು ೧೯೫೩ರಲ್ಲಿ 'ಜಾತಕಫಲ' ಚಿತ್ರಕ್ಕೆ ಸಂಗೀತ ನೀಡಿದ ಆರ್.ಗೋವರ್ಧನ್ ಇಬ್ಬರೂ ಅಣ್ಣ-ತಮ್ಮಂದಿರು. ಸುದರ್ಶನ್ ಸಂಗೀತ ನೀಡಿದ ಬಹುತೇಕ ಚಿತ್ರಗಳಿಗೆ ಗೋವರ್ಧನ್ ಸಹಾಯಕರೂ ಆಗಿದ್ದರು. ಸ್ವತಂತ್ರವಾಗಿಯೂ ಸಂಗೀತ ನೀಡಿದ್ದಾರೆ. ಇವರಿಬ್ಬರೂ ಸಂಗೀತ ನೀಡಿದ ಚಿತ್ರ 'ಸದಾರಮೆ'. ಗುಬ್ಬಿ ವೀರಣ್ಣನವರ ಈ ಚಿತ್ರವನ್ನು ಕು.ರ.ಸೀತಾರಾಮಶಾಸ್ತ್ರಿ ನಿರ್ದೇಶಿಸಿದರು. ಅವರೇ ರಚಿಸಿದ ''ಬಾರೆ ಬಾರೆ ನನ್ನ ಹಿಂದೇ ಹಿಂದೇ ಮೆಚ್ಚಿ ಬಂದ ಪುರುಷರಲ್ಲ ಒಂದೇ ಒಂದೇ...'' ಗೀತ ಸೊಗಸಾದ ರಾಗಸಂಯೋಜನೆಯಿಂದಾಗಿ ಬಹುಕಾಲ ಜನಮನದಲ್ಲಿ ನಿಂತಿತು. ಆರ್.ಸುದರ್ಶನ್ 'ಮಿಸ್ ಲೀಲಾವತಿ' ಚಿತ್ರಕ್ಕೆ ಕುವೆಂಪು ಅವರ ''ದೋಣಿ ಸಾಗಲಿ ಮುಂದೆ ಹೋಗಲಿ ದೂರ ತೀರವ ಸೇರಲಿ...'' ಗೀತೆಗೆ ಚೆನ್ನಾದ ರಾಗ ಸಂಯೋಜನೆ ಮಾಡಿದ್ದರು. ಎಸ್.ಜಾನಕಿ ಮತ್ತು ರಾಮಚಂದ್ರರಾವ್ ಹಾಡಿದ್ದರು.

'ಭಕ್ತ ಕನಕದಾಸ' ಚಿತ್ರದಲ್ಲಿ ಎಂ.ವೆಂಕಟರಾಜು ಸಂಗೀತ ನಿರ್ದೇಶನದಲ್ಲಿ ಎಲ್ಲ ಹಾಡುಗಳೂ ಸುಶ್ರಾವ್ಯವೆನಿಸಿದವು. ಅಪರೂಪದ ಪ್ರತಿಭೆ ವೆಂಕಟರಾಜು. ಕೇವಲ ಎಂಟು ಚಿತ್ರಗಳಿಗೆ ಸಂಗೀತ ನೀಡಿದರು. ''ಮಿತಭಾಷಿ, ಸದಾ ಅಂತರ್ಮುಖಿ. ಅನಾರೋಗ್ಯ ಕಾಡುತ್ತಿತ್ತು. ಅದಕ್ಕಾಗಿ ಸೂಕ್ತ ವೈದ್ಯಕೀಯ ನೆರವನ್ನೂ ಪಡೆದುಕೊಳ್ಳದೆ ಕೆಲಸದಲ್ಲಿ ತಲ್ಲೀನರಾಗಿಬಿಡುತ್ತಿದ್ದರು'' ಎಂದು ವಾದಿರಾಜ್ ನೆನಪು ಮಾಡಿಕೊಳ್ಳುತ್ತಾರೆ. ವೆಂಕಟರಾಜು ಬಹಳ ಬೇಗ ವಿಧಿವಶರಾದರು. ಅವರು 'ಸ್ವರ್ಣಗೌರಿ', 'ನಂದಾದೀಪ' ಮುಂತಾದ ಚಿತ್ರಗಳಿಗೆ ನೀಡಿದ ಸಂಗೀತ ಬಹುಕಾಲ ನೆನಪಿನಲ್ಲಿ ಉಳಿಯುವಂಥದ್ದು. ಎಸ್.ಕೆ.ಕರೀಂಖಾನ್ 'ಸ್ವರ್ಣಗೌರಿ' ಚಿತ್ರಕ್ಕೆ ಬರೆದ ಗೀತೆಗೆ ವೆಂಕಟರಾಜು ಸಂಗೀತ, ಬಾಲಮುರಳಿಕೃಷ್ಣ ಅವರ ಗಾಯನ ಇರುವ ''ನಟವರ ಗಂಗಾಧರ...'', 'ನಂದಾದೀಪ' ಚಿತ್ರಕ್ಕೆ ಅವರದೇ ಸಂಗೀತವಿದ್ದು, ಸೋರಟ್ ಅಶ್ವತ್ಥ್ ರಚಿಸಿದ ಗೀತೆ ''ಗಾಳಿ ಗೋಪುರಾ ನಿನ್ನಾಶಾ ತೀರ ನಾಳೆ ನೋಡುವಾ...'' ಮತ್ತು ''ನಾಡಿನಂದ ಈ ದೀಪಾವಳಿ...'' ಸಾಹಿತ್ಯ-ಮಾಧುರ್ಯಗಳಿಗಾಗಿ ಮೆಚ್ಚಾದವು.

೧೯೬೬ರಲ್ಲಿ ಸಿ.ವಿ.ಶಿವಶಂಕರ್ ಅವರ 'ಮನೆ ಕಟ್ಟಿ ನೋಡು' ಚಿತ್ರದ ಮೂಲಕ ಪರಿಚಯವಾದ ಆರ್.ರತ್ನ ಮತ್ತೊಬ್ಬ ಪ್ರತಿಭಾವಂತ ಸಂಗೀತ ಸಂಯೋಜಕರು. ಆ ಚಿತ್ರದ ಹಾಡುಗಳು ಬಹಳ ಜನಪ್ರಿಯವಾದುವು. ಆ ಚಿತ್ರದ ಯಶಸ್ಸಿನಲ್ಲಿ ಸಂಗೀತದ ಪಾತ್ರವೂ ಮುಖ್ಯವಾಗಿತ್ತು. ''ಬೆಳೆದಿದೆ ನೋಡಾ ಬೆಂಗಳೂರು ನಗರ...'' ಮುಂತಾದ ಹಾಡುಗಳನ್ನು ಇಂದಿಗೂ ಚಿತ್ರರಸಿಕರು ನೆನಪು ಮಾಡಿಕೊಳ್ಳುತ್ತಾರೆ. ಈ ಚಿತ್ರದಲ್ಲಿ ಪ್ರಥಮ ಬಾರಿಗೆ ಹಾಡಿದ ಕೆ.ಎಸ್.ಎಲ್.ಸ್ವಾಮಿ (ರವೀ) ಮುಂದೆ 'ಸಂಘರ್ಷ' (೧೯೬೯), 'ಶುಭಮಂಗಳ' (೧೯೭೫) ಚಿತ್ರಗಳಲ್ಲಿ ಹಾಡಿದ್ದಾರೆ. ''ಯೌವ್ವನದಾ ಹೊಳೆಯಲ್ಲಿ...'', ''ಸೂರ್ಯಂಗೂ ಚಂದ್ರಂಗೂ...'', ''ಇಲ್ಲೇ ಸ್ವರ್ಗ ಇಲ್ಲೇ ನರಕ...'' ಮೊದಲಾದ ಗೀತೆಗಳು ರವೀ ಅವರಿಗೆ ಹೆಸರು ತಂದುಕೊಟ್ಟಿವೆ. ಶಿವಶಂಕರ್ ಅವರ ಬಹುತೇಕ ಎಲ್ಲ ಚಿತ್ರಗಳಿಗೆ ಆರ್.ರತ್ನ ಅವರೇ ಸಂಗೀತ ನಿರ್ದೇಶಕರು. ರಾಜಕುಮಾರ್ ಅಭಿನಯದ 'ಭಲೇ ಜೋಡಿ' ಮುಂತಾದ ಚಿತ್ರಗಳಿಗೆ ರತ್ನ ಸಂಗೀತ ನೀಡಿದ್ದಾರೆ.

ಒರಿಸ್ಸಾದ ಖ್ಯಾತ ಪಿಟೀಲು ವಾದಕ ಭುವನೇಶ್ವರ ಮಿಶ್ರ ಅವರ ಬಳಿ ಹಿಂದೂಸ್ತಾನಿ ಅಭ್ಯಾಸ ಮಾಡಿದ ಉಪೇಂದ್ರಕುಮಾರ್ ಉತ್ಕಲ ಸಂಗೀತ ನೃತ್ಯ ಕಾಲೇಜ್‌ನಿಂದ ಪದವಿ ಪಡೆದು ಅಲ್ಲೇ ಉಪನ್ಯಾಸಕರಾಗಿಯೂ ಕೆಲ ಕಾಲ ಕೆಲಸ ಮಾಡಿದರು. ಸಂಗೀತದ ಹುಚ್ಚು ಇವರನ್ನು ಮದರಾಸಿಗೆ ಎಳೆದುತಂದಿತು. ಸಂಗೀತ ಪಾಠ ಮಾಡುತ್ತ ಅವಕಾಶಗಳನ್ನು ಎದುರು ನೋಡುತ್ತಿದ್ದ ಇವರಿಗೆ ೧೯೬೬ರಲ್ಲಿ ವೈ.ಆರ್.ಸ್ವಾಮಿ

(ಚಿತ್ರ ೧೬)'ಇಂಕಿಲಾಬ್ ಜಿಂದಾಬಾದ್'(ತುಳು) ಚಿತ್ರದ ಹಾಡಿನ ಧ್ವನಿಮುದ್ರಣ ಪಿ.ಎಸ್.ಮೂರ್ತಿ, ದೊಡ್ಡಣ್ಣ ಶೆಟ್ಟಿ, ಪಿ.ಎಸ್.ರಾವ್, ರಾಮಮೂರ್ತಿ, ಪಿ.ಬಿ.ಶ್ರೀನಿವಾಸ್, ಎಸ್.ಪಿ.ರಾಮನಾಥನ್, ಉಪೇಂದ್ರಕುಮಾರ್

(ಚಿತ್ರ ೧೭) ಎಸ್.ಪಿ.ವರದರಾಜ್, ಸಿದ್ಧಲಿಂಗಯ್ಯ ಮತ್ತು ಎಲ್.ವೈದ್ಯನಾಥನ್

'ಕಠಾರಿ ವೀರ' ಚಿತ್ರದ ಮೂಲಕ ಸಂಗೀತ ನಿರ್ದೇಶನಕ್ಕೆ ಅವಕಾಶ ನೀಡಿದರು. ಒರಿಯಾ ನಾದಮಾಧುರ್ಯವನ್ನು ಬಳಸಿ ಇವರು ಸಂಯೋಜಿಸಿದ "ಚಂಗು ಚಂಗೆಂದು ಹಾರುವಾ..." ಗೀತೆ ಜನಪ್ರಿಯವಾಯಿತು. ಕನ್ನಡದಲ್ಲಿ ಉಪೇಂದ್ರಕುಮಾರ್ ನೆಲೆನಿಂತರು. ಮೂರು ದಶಕಗಳಲ್ಲಿ ೨೦೦ಕ್ಕೂ ಹೆಚ್ಚು ಚಿತ್ರಗಳಿಗೆ ರಾಗ ಸಂಯೋಜನೆ ಮಾಡಿರುವ ಅವರು 'ನಂಜುಂಡಿ ಕಲ್ಯಾಣ' ಮತ್ತು 'ಜೀವನಚೈತ್ರ' ಚಿತ್ರಗಳಿಗಾಗಿ ಎರಡು ಬಾರಿ ರಾಜ್ಯ ಪ್ರಶಸ್ತಿಯನ್ನು ಪಡೆದರು.

'ಕಠಾರಿ ವೀರ' ಚಿತ್ರದ "ಚಂಗು ಚಂಗೆಂದು ಹಾರುವಾ...", 'ಪರೋಪಕಾರಿ' ಚಿತ್ರದ "ಗುಟ್ಟೊಂದು ಹೇಳುವೆ ಪುಟಾಣಿ ಮಕ್ಕಳೆ...", 'ಪ್ರೇಮದ ಕಾಣಿಕೆ' ಚಿತ್ರದ "ಬಾಳಿಗೊಂದು ಎಲ್ಲೆ ಎಲ್ಲಿದೆ...", 'ಶಂಕರ್ ಗುರು' ಚಿತ್ರದ "ಚನ್ನ ಬಾಳಲ್ಲಿ ಈ ರಾತ್ರಿ...", 'ನಂಜುಂಡಿ ಕಲ್ಯಾಣ' ಚಿತ್ರದ "ಒಳಗೆ ಸೇರಿದರೆ ಗುಂಡು..." ಉಪೇಂದ್ರಕುಮಾರ್ ಅವರ ಕೆಲವು ಗಮನಾರ್ಹ ಹಾಡುಗಳು.

ಕಮರ್ಷಿಯಲ್ ಅಥವಾ ಪ್ರಧಾನವಾಹಿನಿ ಚಿತ್ರಗಳಲ್ಲಿ ಸಂಗೀತ ನಿರ್ದೇಶಕನ ಯಶಸ್ಸು ಗೀತೆಗಳನ್ನು ಅವಲಂಬಿಸಿದ್ದರೆ ಹೊಸ ಅಲೆ ಚಿತ್ರದಲ್ಲಿ ಹಾಗಲ್ಲ, ಇಡೀ ಚಿತ್ರವೇ ಸಂಗೀತವನ್ನು ಅವಲಂಬಿಸಿರುತ್ತದೆ. ಇಂತಹ ಚಿತ್ರಕ್ಕೆ ವಾದ್ಯದ ಎಲ್ಲ ಅಂಗಗಳೂ ಮುಖ್ಯ. ಅವುಗಳಲ್ಲಿ ಪರಿಪೂರ್ಣತೆ ಪಡೆಯಲು ಚಿತ್ರ ನಿರ್ದೇಶಕ ಪ್ರಯತ್ನಿಸುತ್ತಿರುತ್ತಾನೆ.

ಕನ್ನಡದಲ್ಲಿ ಬಿ.ವಿ.ಕಾರಂತರು ಈ ಮಾದರಿ ಚಿತ್ರಗಳಿಗೆ ಸಂಗೀತ ನೀಡುವಲ್ಲಿ ಪ್ರಖ್ಯಾತರಾಗಿದ್ದಾರೆ. ಉದ್ದೇಶಿತ ಪರಿಣಾಮಕ್ಕೆ ವಾದ್ಯಗಳನ್ನಷ್ಟೇ ಅಲ್ಲದೆ ಮಾನವ ಧ್ವನಿಗಳನ್ನು, ಪಶು-ಪಕ್ಷಿಗಳ ಧ್ವನಿಗಳನ್ನು ಯಶಸ್ವಿಯಾಗಿ ಬಳಸಿಕೊಂಡಿದ್ದಾರೆ. 'ಕಾಡು' ಚಿತ್ರದ ಮೂಲಕ ಸಂಗೀತ ನಿರ್ದೇಶನ ಆರಂಭಿಸಿದ ಕಾರಂತರು ರಂಗಭೂಮಿಯ ದಟ್ಟ ಹಿನ್ನೆಲೆಯಿಂದ ಬಂದಿದ್ದರು. ಮಾಧ್ಯಮದ ವ್ಯತ್ಯಾಸವನ್ನು ಬಹುಬೇಗ ಗುರುತಿಸಿಕೊಂಡರು. ನಿರ್ದೇಶನದ ಜವಾಬ್ದಾರಿ ಇದ್ದಾಗಲೂ ಸಂಗೀತ ನಿರ್ದೇಶಕನ ಪಾತ್ರವನ್ನು ಯಶಸ್ವಿಯಾಗಿಯೇ ನಿರ್ವಹಿಸಿದರು. ಈ ಬಗೆಗೆ ಕಾರಂತರೇ ಒಂದೆಡೆ ಹೀಗೆ ಹೇಳಿದ್ದಾರೆ: "ಸಿನಿಮಾಗೆ ಶಾಸ್ತ್ರೀಯ ಸಂಗೀತಕ್ಕಿಂತ ಮುಖ್ಯವಾಗಿ ಧ್ವನಿವಿನ್ಯಾಸದ ಅಗತ್ಯವಿರುವುದರಿಂದ ನಾನು ಈ ದಿಕ್ಕಿನಲ್ಲಿ ಹೆಜ್ಜೆಯಿಡಲು ಆರಂಭಿಸಿದೆ. 'ಕಾಡು' ಸಿನಿಮಾವನ್ನು ಈಗ ಅವಲೋಕಿಸಿದರೆ ಅನೇಕ ತಪ್ಪುಗಳು ಕಂಡುಬರುತ್ತವೆ. ಆದರೆ ಈ ದಿಸೆಯಲ್ಲಿ ಪ್ರಾರಂಭಿಸಿದ ಮೊದಲ ಸಿನಿಮಾ ಅದು. 'ಹಂಸಗೀತೆ'ಯಲ್ಲಿ ನಾನು ಮನುಷ್ಯ ಸ್ವರಗಳನ್ನು ಬಳಸಿಕೊಂಡೆ. ಇದು ಹೊಸದೇನೂ ಅಲ್ಲ. 'ನೀಚನಗರ್' ಚಿತ್ರದಲ್ಲಿ ಮನುಷ್ಯನ ಧ್ವನಿವಿನ್ಯಾಸದ ಪ್ರಯೋಗ ಮಾಡಿದರು. ಆದರೆ ಆ ಸ್ವರಗಳನ್ನು ಬಳಸಿಕೊಂಡದ್ದು ವಾದ್ಯಗಳ ಮೂಲಕ. 'ಹಂಸಗೀತೆ'ಯಲ್ಲಿ ಪ್ರಧಾನ ಪಾತ್ರವೇ ಹಾಡುತ್ತದೆ. ಅಲ್ಲಿ ಪ್ರಾಕೃತಿಕ ಸಂಗೀತವನ್ನು ಉಪಯೋಗಿಸಿದ್ದೇನೆ, ಆದರೆ ಮನುಷ್ಯ ಸ್ವರಗಳ ಮೂಲಕ. 'ಚೋಮನ ದುಡಿ'ಯಲ್ಲಿ ನನ್ನ ಧ್ವನಿ ಸಂಯೋಜನೆಯು ಚಿತ್ರೀಕರಣದೊಂದಿಗೇ ಪ್ರಾರಂಭವಾಯಿತು. ಕೆಲವು ದೃಶ್ಯಗಳ ಧ್ವನಿವಿನ್ಯಾಸಕ್ಕೆ ಋತ್ವಿಕ್ ಘಟಕ್ ಅವರಿಂದ ಸ್ಫೂರ್ತಿ ಪಡೆದು, ಹೆಂಗಸರು ಭತ್ತ ಕುಟ್ಟುವಾಗ ಉದ್ಭವಿಸುವ ಧ್ವನಿ, ದಕ್ಷಿಣ ಭಾರತದ ಮದುವೆ ಸಮಾರಂಭದ ಗದ್ದಲ ಧ್ವನಿ, ಸ್ಮಶಾನದ ಶ್ರುತಿ ಮುಂತಾದುವನ್ನು ಬಳಸಿಕೊಂಡೆ. 'ಋಷ್ಯಶೃಂಗ' ಚಿತ್ರದಲ್ಲಿ ಬರುವ ಸೂರ್ಯನ ಉರಿಬಿಸಿಲಲ್ಲಿ ಹೆಣಗಳು ಬಿದ್ದಿದ್ದ ದೃಶ್ಯಕ್ಕೆ ತಾನ್‌ಪುರವನ್ನು ಅಪಶ್ರುತಿಯಲ್ಲಿ ನುಡಿಸಿದಾಗ ಹುಟ್ಟುವ ವಿಶಿಷ್ಟ ಧ್ವನಿಯನ್ನು ಹಾಕಿಕೊಂಡೆ."

'ಹಂಸಗೀತೆ' ಚಿತ್ರಕ್ಕಾಗಿ ಬಾಲಮುರಳಿಕೃಷ್ಣ ಅವರೊಡನೆ ರಾಜ್ಯ ಪ್ರಶಸ್ತಿಯನ್ನು ಹಂಚಿಕೊಂಡಿದ್ದ ಕಾರಂತರು 'ಚೋಮನ ದುಡಿ' ಮತ್ತು 'ಘಟಶ್ರಾದ್ಧ' ಚಿತ್ರಕ್ಕಾಗಿ ರಾಷ್ಟ್ರಪ್ರಶಸ್ತಿ ಪಡೆದರು.

ಸುಗಮ ಸಂಗೀತ ಕ್ಷೇತ್ರದಲ್ಲಿ ಸಿ.ಅಶ್ವತ್ಥ್ ಅವರದ್ದು ಬಹಳ ದೊಡ್ಡ ಹೆಸರು. ಭಾವಕ್ಕ ತಕ್ಕಂತೆ ನಾದವನ್ನು ಬೆಸೆಯುವುದನ್ನು ತಾತ್ವಿಕವಾಗಿ ಚರ್ಚಿಸಿರುವ ಅವರು ಭಾವಗೀತೆ ಪ್ರಕಾರ ಕನ್ನಡದಲ್ಲಿ ನೆಲೆ ನಿಲ್ಲಲು ಬಹಳವಾಗಿ ಶ್ರಮಿಸಿದವರು. ಚಿತ್ರರಂಗದಲ್ಲಿ ಅವರ ಹೆಸರು ಅಷ್ಟೊಂದು ಮುಖ್ಯವಾಗಿ ಬೆಳಗಲಿಲ್ಲ. ಇದಕ್ಕೆ ಚಿತ್ರರಂಗ ಮತ್ತು ಸಿ.ಅಶ್ವತ್ಥ್ ಇಬ್ಬರೂ ಕಾರಣರೇ.

೧೯೭೭ರಲ್ಲಿ 'ಕಾಕನ ಕೋಟೆ' ಚಿತ್ರಕ್ಕೆ ಸಂಗೀತ ನಿರ್ದೇಶನ ಮಾಡಿದ ಸಿ.ಅಶ್ವತ್ಥ್ ಮುಂದೆ ಎಲ್.ವೈದ್ಯನಾಥನ್ ಅವರ ಜೊತೆಗೂಡಿ ಅಶ್ವತ್ಥ್-ವೈದಿ ಎಂದು ಸಂಗೀತ ನಿರ್ದೇಶಿಸಲಾರಂಭಿಸಿದರು. ಈ ಜೋಡಿ 'ಏನೇ ಬರಲಿ ಪ್ರೀತಿ ಇರಲಿ', 'ಕಾಡಿಗೆ ಹೋದವರು', 'ಅನುರಕ್ತೆ', 'ಅನುಪಮಾ' ಮುಂತಾದ ಚಿತ್ರಗಳಿಗೆ ಸಂಗೀತ ನೀಡಿದರೂ ಜೋಡಿಯಾಗಿಯೇ ಬಹಳ ಕಾಲ ಮುಂದುವರಿಯಲಿಲ್ಲ. ಮುಂದೆ ಸಿ.ಅಶ್ವತ್ಥ್ 'ಸ್ಪಂದನ', 'ಸಂತ ಶಿಶುನಾಳ ಷರೀಫ', 'ಮೈಸೂರು ಮಲ್ಲಿಗೆ', 'ಚಿನ್ನಾರಿ ಮುತ್ತ', 'ಕೊಟ್ರೇಶಿ ಕನಸು', 'ನಾಗಮಂಡಲ'ದಂತಹ ಚಿತ್ರಗಳಿಗೆ ಸಂಗೀತ ನೀಡಿದರು. 'ಸ್ಪಂದನ' ಮತ್ತು 'ಚಿನ್ನಾರಿ ಮುತ್ತ'ಕ್ಕೆ ರಾಜ್ಯ ಪ್ರಶಸ್ತಿ ಪಡೆದಿದ್ದಾರೆ. ತಮ್ಮದೇ ಆದ ಭಾವಲೋಕ ವಿಹಾರಿಯಾದ ಸಿ.ಅಶ್ವತ್ಥ್‌ಗೆ ಚಿತ್ರೋದ್ಯಮದ ವಾಣಿಜ್ಯ ದೃಷ್ಟಿ, ರಾಜಿ ಕಬೂಲಿಗಳು, ಬೇರೆ ಬೇರೆ ಹೊಂದಾಣಿಕೆಗಳು ಒಗ್ಗಿ ಬರಲಿಲ್ಲ. ಅವರೇ ಸರ್ವತಂತ್ರ ಸ್ವತಂತ್ರರಾದಾಗ ವಿಜೃಂಭಿಸುತ್ತಾರೆ, ಒಲವಿನಿಂದ ಸಂಗೀತ ನಿರ್ವಹಿಸುತ್ತಾರೆ. ಮತ್ತೆ ಅವರು ಕೆಲವು ಚಿತ್ರಗಳಿಗೆ ವಿ.ಮನೋಹರ್ ಜೋಡಿಯಾದರು. ಸಿ.ಅಶ್ವತ್ಥ್ ಅವರ ಇಂಥ ಉತ್ಸಾಹಗಳು ಬುರುಗಿನ ಹಾಗೆ, ಬೇಗ ಕರಗಿ ಮಾಯವಾಗುತ್ತವೆ. ಅಶ್ವತ್ಥ್ ಉತ್ತಮ ಗಾಯಕ. ಅವರೇ ರಾಗ ಸಂಯೋಜಿಸಿ ಹಾಡುವುದಕ್ಕಿಂತ ಇನ್ನೊಬ್ಬರ ನಿರ್ದೇಶನದಲ್ಲಿ ಗಾಯನ ಮಾಡಿದಾಗಿನ ಸೊಗಸೇ ಬೇರೆ. ಅವರಿಂದ ಹಂಸಲೇಖ ಹಾಡಿಸಿದ 'ಹೂವು ಹಣ್ಣು' ಚಿತ್ರದ "ನಿಂಗಿ ನಿಂಗಿ..." ಗೀತೆ ಜನಪ್ರಿಯವಾಗಿತ್ತು. ಅಶ್ವತ್ಥ್ ಸಂಗೀತ ನಿರ್ದೇಶನದ ಚಿತ್ರಗೀತೆಗಳಲ್ಲಿ 'ಸ್ಪಂದನ' ಚಿತ್ರದ "ಎಂಥಾ ಮರುಳಯ್ಯಾ ಇದು ಎಂಥಾ...", 'ಕಾಕನಕೋಟೆ' ಚಿತ್ರದ "ನೇಸರ ನೋಡು ನೇಸರ ನೋಡು...", 'ನಾಗಮಂಡಲ' ಚಿತ್ರದ "ಕಂಬದ ಮೇಲಿನ ಚಿತ್ತಾರವ...", 'ಸಂತ ಶಿಶುನಾಳ ಷರೀಫ' ಚಿತ್ರದ "ಕೋಡಗನ ಕೋಳಿ ನುಂಗಿತ್ತ...", 'ಮೈಸೂರು ಮಲ್ಲಿಗೆ' ಚಿತ್ರದ "ದೀಪವು ನಿನ್ನದು ಗಾಳಿಯೂ ನಿನ್ನದು...", "ಬಳೆಗಾರ ಚನ್ನಯ್ಯ ಬಾಗಿಲಿಗೆ ಬಂದಿಹನು...", "ರಾಯರು ಬಂದರು ಮಾವನ ಮನೆಗೆ...", "ನಮ್ಮೂರು ಚೆಂದವೋ ನಿಮ್ಮೂರು ಚೆಂದವೋ...", 'ಚಿನ್ನಾರಿ ಮುತ್ತ' ಚಿತ್ರದ "ಹೇಗಿದ್ದ ಹೇಗಾದ ಗೊತ್ತಾ ನಮ್ಮ ಚಿನ್ನಾರಿ ಮುತ್ತ..." ಮತ್ತು ಹಲವು ಹಾಡುಗಳು ಮೆಚ್ಚುವಂಥವು.

(ಚಿತ್ರ ೧೮) ನಿರ್ಮಾಪಕ ಸಮೀಉಲ್ಲಾ ಮತ್ತು ಸಲೀಲ್ ಚೌಧರಿ

'ಹೇಮಾವತಿ' ಚಿತ್ರದ ಮೂಲಕ ಸಂಗೀತ ನಿರ್ದೇಶನ ಆರಂಭಿಸಿದ ಎಲ್.ವೈದ್ಯನಾಥನ್ ಶಾಸ್ತ್ರೀಯ ಸಂಗೀತ ಕ್ಷೇತ್ರದಲ್ಲಿ ಸಾಕಷ್ಟು ಹೆಸರು ಮಾಡಿದವರು. ಈ ಚಿತ್ರದ 'ಈಶ್ವರನೆಂದರೆ ಶಾಶ್ವತ ಸುಖವು...' ಗೀತೆಯನ್ನು ರಚಿಸಿದವರು ಚಿ.ಉದಯಶಂಕರ್. ಗೀತೆಗೆ ವೈದ್ಯನಾಥನ್ ಆಭೋಗಿ-ತೋಡಿ ರಾಗಗಳನ್ನು ಸೇರಿಸಿ ಸಂಯೋಜಿಸಿದ್ದರು. ಮೊದಲಿನಿಂದ ಕೊನೆಯ ತನಕ ಒಂದೊಂದು ಸಾಲೂ ಈ ರಾಗದಿಂದ ಆ ರಾಗಕ್ಕೆ, ಆ ರಾಗದಿಂದ ಈ ರಾಗಕ್ಕೆ ಬದಲಾಗುತ್ತಲೇ ಇರುತ್ತದೆ. ಕೊನೆಯಲ್ಲಿ ಅತಿ ವೇಗದ ನಡೆಗಳಿವೆ. ಈ ಹಾಡಿಗೆ ಖ್ಯಾತ ವಿದ್ವಾಂಸರಾದ ಎಂ.ಎಸ್.ಗೋಪಾಲಕೃಷ್ಣನ್ ಅವರ ವೈಲಿನ್ ವಾದನವಿತ್ತು. ಈ ಗೀತೆಯನ್ನು ಹಾಡಿದ ಎಸ್.ಜಾನಕಿ ಅವರು ''ಇಷ್ಟು ವರ್ಷಗಳ ನನ್ನ ಚಿತ್ರರಂಗದ ಅನುಭವದಲ್ಲಿ ಕಷ್ಟಪಟ್ಟು ಹಾಡಿದ ಗೀತೆ ಎಂದರೆ 'ಹೇಮಾವತಿ'ಯ ''ಶಿವ ಶಿವ...'' ಗೀತೆಯೊಂದೇ'' ಎಂದು ಸಂದರ್ಶನದಲ್ಲಿ ಹೇಳಿಕೊಂಡಿದ್ದಾರೆ. ಮುಂದೆ ಸಂಭಾಷಣೆಗಳಿಲ್ಲದ 'ಪುಷ್ಪಕ ವಿಮಾನ' ಚಿತ್ರಕ್ಕೆ ತಮ್ಮ ಸಂಗೀತದಿಂದ ಜೀವ ತುಂಬಿದ ವೈದ್ಯನಾಥನ್ ಈ ಚಿತ್ರಕ್ಕಾಗಿ ರಾಜ್ಯಪ್ರಶಸ್ತಿ ಪಡೆದರು. ಶಂಕರ್‌ನಾಗ್ ನಿರ್ದೇಶನದ 'ಮಾಲ್ಗುಡಿ ಡೇಸ್' ಧಾರಾವಾಹಿಗೆ ಇವರು ಕೊಟ್ಟ ಸಿಗ್ನೇಚರ್ ಟ್ಯೂನ್ ಸದಾ ಗುನುಗುಟ್ಟುವಂತಿತ್ತು, ಜನಪ್ರಿಯವಾಯಿತು. ಹೊಸ ಅಲೆಯ ಚಿತ್ರ ತಯಾರಕರಿಗೂ ವೈದ್ಯನಾಥನ್ ತುಂಬ ಹತ್ತಿರವಾದರು.

ತಮ್ಮ ಮೊದಲ ಕನ್ನಡ ಚಿತ್ರ 'ಸಂಶಯಫಲ'ದ ಸಂಗೀತಕ್ಕಾಗಿ ರಾಜ್ಯಪ್ರಶಸ್ತಿ ಪಡೆದವರು ಸಲೀಲ್ ಚೌಧುರಿ. ಪುಟ್ಟ ಮಗಳಿಂದಲೂ ಹಾಡಿಸಿ, ದೊಡ್ಡವರು ಪುಟ್ಟವರ ಹಾಗೆ ಹಾಡುವಾಗಿನ ಕೃತಕತೆ ತಪ್ಪಿಸಿದರು. 'ಚಿನ್ನ ನಿನ್ನ ಮುದ್ದಾಡುವೆ' ಚಿತ್ರದ ಲಾಲಿ ಹಾಡು ''ಜೋ ಜೋ ಲಾಲಿ ನಾ ಹಾಡುವೆ...'' ಇಂದಿಗೂ ಜೋಗುಳದ ಹಾಡೆಂದೇ ಪ್ರಸಿದ್ಧವಾಗಿದೆ.

''ನಮ್ಮ ಸಂಸ್ಕೃತಿ ಏನಾದರೂ ಉಳಿದಿದ್ದರೆ ಅದು ಪ್ರಾದೇಶಿಕ ಭಾಷಾ ಚಿತ್ರಗಳಲ್ಲಿ ಮಾತ್ರ'' ಎನ್ನುವ ಸಲೀಲ್ ಚೌಧುರಿ ಅವರ ನೆಚ್ಚಿನ ಹವ್ಯಾಸ ಎಲ್ಲ ಭಾಷೆಗಳ ಜಾನಪದ ಗೀತೆಗಳನ್ನು ಸಂಗ್ರಹಿಸುವುದು. ಕನ್ನಡ ಚಿತ್ರನಿರ್ಮಾಪಕ ಸಮೀಉಲ್ಲಾ ಅವರ ಚಿತ್ರಗಳಲ್ಲದೆ ಬಾಲುಮಹೇಂದ್ರ ನಿರ್ದೇಶನದ 'ಕೋಕಿಲಾ' ಮುಂತಾದ ಚಿತ್ರಗಳಿಗೆ ಅವರು ಸಂಗೀತ ನೀಡಿದ್ದಾರೆ.

(ಚಿತ್ರ ೧೯) 'ಭಕ್ತ ಚೇತ' ಚಿತ್ರಕ್ಕಾಗಿ ಎಚ್.ಎಲ್.ನಾರಾಯಣರಾವ್ ಅವರ ರಚನೆಯ ಹಾಡಿಗೆ ಘಂಟಸಾಲ ರಾಗಸಂಯೋಜನೆ.

ಹೊಸದೇನೋ ಬೇಕೆಂಬ ಭಾವನೆ ಜನಸಾಮಾನ್ಯರಲ್ಲಿ ಬರುತ್ತಿದೆ ಎನ್ನಿಸಿದ ಕಾಲಕ್ಕೆ ಮೂಡಿಬಂದ ಹೆಸರು ಹಂಸಲೇಖ ಅವರದ್ದು. ಅವರೇ ಒಂದು ಕಡೆ ಹೇಳಿಕೊಂಡಿರುವಂತೆ ''ಹೊಸಬರಾದ ಕಾಲಕ್ಕೇ ಅವರು ಹೊಸ ಪೀಳಿಗೆಗೆ ಹಿರಿಯರು'' ಎನ್ನಿಸಿಕೊಂಡು ಬಿಟ್ಟರು. ಗಂಗರಾಜು ಎನ್ನುವುದು ಅವರ ನಿಜವಾದ ಹೆಸರು. ೧೯೭೩ರಲ್ಲಿ 'ತ್ರಿವೇಣಿ' ಚಿತ್ರಕ್ಕೆ ''ನೀನಾ ಭಗವಂತಾ...'' ಎಂಬ ಗೀತೆ ಬರೆದಿದ್ದ ಹಂಸಲೇಖ ಗೀತೆ ಜನಪ್ರಿಯವಾದರೂ ಕನ್ನಡ ಚಿತ್ರರಂಗದಲ್ಲಿ ಉತ್ತಮ ಅವಕಾಶ ಪಡೆಯದೆ ರಂಗಭೂಮಿಗೆ ಮರಳಿದರು. ರಂಗಭೂಮಿಯಲ್ಲಿ ಸದಾ ಪ್ರಯೋಗಶೀಲರಾಗಿ ತಮ್ಮನ್ನು ತೊಡಗಿಸಿಕೊಂಡಿದ್ದರು. ತಮ್ಮ 'ರಾಹುಚಂದ್ರ' ಎಂಬ ಜನಪ್ರಿಯ ನಾಟಕವನ್ನು ಚಿತ್ರವಾಗಿಸಲು ಪ್ರಯತ್ನಿಸಿದ್ದರು. ಚಿತ್ರ ಅರ್ಧಕ್ಕೇ ನಿಂತಿತು. ಇವರು ಟಿ.ಎಸ್.ಬಾಲಕೃಷ್ಣ ಅವರ ಮಗ ಶ್ರೀನಿವಾಸ್‌ಗೆ 'ಪ್ರಣಯಕಾವ್ಯ' ಎಂಬ ಸ್ಕ್ರಿಪ್ಟ್ ಬರೆದರೂ ಅದು ಮುಂದೆ ಜೀವ ಪಡೆಯಲಿಲ್ಲ. ಬಿ.ಎಸ್.ಗಂಗಾಧರ್ ಅವರು ನಿರ್ಮಿಸಿದ 'ಹೆಣ್ಣೇ ನಿನಗೇನು ಬಂಧನ' ಚಿತ್ರದ ಸಂಗೀತ ನಿರ್ದೇಶಕರೂ ಆದರು. ಇವರ ನೆರವಿಗೆ ಬಂದದ್ದು 'ನಾನು ನನ್ನ ಹೆಂಡ್ತಿ' ಚಿತ್ರಕ್ಕೆ ಬರೆದ 'ಯಾರೇ ನೀನು ಚೆಲುವೆ....' ಎಂಬ ಹಾಡಿನ ಜನಪ್ರಿಯತೆ. ಆದರೆ ಹಂಸಲೇಖ ಸಂಗೀತ ನಿರ್ದೇಶಕರಾಗಿ ತುಂಬ ಹೆಸರಾದದ್ದು 'ಪ್ರೇಮಲೋಕ' ಚಿತ್ರದಿಂದ. ಚಿತ್ರದ ಸ್ಕ್ರಿಪ್ಟ್, ಸಂಭಾಷಣೆ ಜೊತೆಗೆ ಗೀತರಚನೆಯ ಜವಾಬ್ದಾರಿಯೂ ಹಂಸಲೇಖ ಅವರದಾಗಿದ್ದರಿಂದ ಅಲ್ಲಿ ಸಂಗೀತವನ್ನು ಭಿನ್ನವಾಗಿ ಬಳಸುವುದು ಅವರಿಗೆ ಸಾಧ್ಯವಾಗಿತ್ತು. ಸ್ವತಃ ಸಂಗೀತ ವಾದ್ಯಗಳನ್ನು ನುಡಿಸಬಲ್ಲ ಅವರು ಸಾಹಿತ್ಯದಲ್ಲಿ ಮಾಡಿದಂತೆಯೇ ಸೂತ್ರ ರಹಿತವಾಗಿ ವಾದ್ಯ ಬಳಕೆ ಮಾಡಿ ಹೊಸತನ ಸೃಷ್ಟಿಸಿದರು. 'ಪ್ರೇಮಲೋಕ'ದಲ್ಲಿ ಈ ತಂತ್ರ ಯಶಸ್ವಿಯಾಯಿತು. 'ರಣಧೀರ'ದಲ್ಲಿ ಕಡೆಯ ಭಿನ್ನ ಭಾಗಗಳನ್ನು ಹಾಡಿನ ಮೂಲಕವೇ ಜೋಡಿಸುವ ಪ್ರಯತ್ನ ಯಶಸ್ವಿಯಾಯಿತು. ರಂಗಭೂಮಿಯಿಂದ ಹೆಚ್ಚು ಪ್ರಭಾವಿತರಾಗಿದ್ದರಲ್ಲದೆ ಹಂಸಲೇಖ ಪಾಶ್ಚಾತ್ಯ ಸಂಗೀತದ ರಿದಂ ಅನ್ನೂ ಹೆಚ್ಚು ಬಳಕೆಗೆ ತಂದರು. ಅಬ್ಬರದ ಯುಗದಲ್ಲಿ ಅಂಥ ಪ್ರಯೋಗಕ್ಕೆ ಸಹಜವಾಗಿಯೇ ಸ್ವಾಗತ ಸಿಕ್ಕಿತು. ವಾದ್ಯಗಳನ್ನೇ ಬಳಸದೆ ಕೆಲವೇ ವಾದ್ಯಗಳನ್ನು ಬಳಸಿ, ವಾದ್ಯ ಸಮುಚ್ಚಯವನ್ನೇ ಬೆರೆಸಿ ಹೀಗೆ ಹಂಸಲೇಖ ಸದಾ ಪ್ರಯೋಗಶೀಲರು. ಮುನ್ನೂರಕ್ಕೂ ಹೆಚ್ಚು ಚಿತ್ರಗಳಿಗೆ ಸಂಗೀತ ನೀಡಿದ್ದಾರೆ. 'ಗಾನಯೋಗಿ ಪಂಚಾಕ್ಷರ ಗವಾಯಿ' ಚಿತ್ರದ ಸಂಗೀತಕ್ಕಾಗಿ ರಾಷ್ಟ್ರಪ್ರಶಸ್ತಿ ಪಡೆದಿದ್ದಾರೆ.

''...ನಾನು ಬಂದ ಹೊಸತರಲ್ಲಿ ಬೆಂಗಳೂರಿನಲ್ಲಿ ಇದ್ದದ್ದೇ ಚಾಮುಂಡೇಶ್ವರಿ ಮತ್ತು ಸಂಕೇತ್ ಮಾತ್ರ. ಸಂಕೇತ್‌ನಲ್ಲಿ ೮ ಟ್ರ್ಯಾಕ್ ಸಿಸ್ಟಮ್ ಇದ್ದರೂ ನಾಲ್ಕೇ ಟ್ರ್ಯಾಕ್‌ನಲ್ಲಿ ಕೆಲಸ ನಿರ್ವಹಿಸುತ್ತಿದ್ದರು. ನನ್ನ ಎರಡನೇ ಚಿತ್ರದ ಕೆಲಸ ಚಾಮುಂಡೇಶ್ವರಿ ಸ್ಟುಡಿಯೋದಲ್ಲಿ ಮಾಡಬೇಕಾಗಿತ್ತು. ಆಧುನಿಕ ಯಂತ್ರಗಳು ಇದ್ದುವಾದರೂ ಹಾಡುಗಳ ಧ್ವನಿಮುದ್ರಣಕ್ಕೆ ಬೇಕಾದ ಪರಿಸರ ಇರಲಿಲ್ಲ ಅನ್ನಿಸಿತ್ತು. ಸಾಲದ್ದಕ್ಕೆ ನನಗೆ ಆ ಯಂತ್ರಗಳನ್ನು ಹೇಗೆ ಬಳಸಬೇಕೆಂಬ ತಿಳಿವಳಿಕೆಯೂ ಇರಲಿಲ್ಲ. 'ಮಿ|ರಾಜಾ' ಚಿತ್ರಕ್ಕಾಗಿ ''ಡಿಸ್ಕೋ ರುಕ್ಕಮ್ಮ..'' ಹಾಡನ್ನು ತಿಳಿದ ಹಾಗೆ ಧ್ವನಿ ಮುದ್ರಿಸಿದ್ದೆ. ಆ ಹಾಡೇನೋ ಆ ವರ್ಷದ ಸೂಪರ್‌ಹಿಟ್ ಆಯಿತು. ಆ ದಿನಗಳಲ್ಲಿ ನಾವೇನೋ ಸಾಧಿಸಿದೆವು, ನಾವು ಸ್ವಾವಲಂಬಿಗಳಾಗುವ ಮಾರ್ಗ ಹುಡುಕಿಕೊಂಡೆವು ಎಂಬ ಸಡಗರ. ತಂತ್ರಜ್ಞಾನದ ಬಗ್ಗೆ ತಿಳಿವಳಿಕೆ ಬಂದ ಹಾಗೆಲ್ಲ ಯೋಚಿಸಿದರೆ ಅವತ್ತಿನ ಆ ಧ್ವನಿಮುದ್ರಣದ ಗುಣಮಟ್ಟ ಕಳಪೆ ಎಂದು ತಿಳಿಯುತ್ತದೆ...'' ಎಂದಿದ್ದಾರೆ ಹಂಸಲೇಖ.

ಹಂಸಲೇಖ ಕೆಲವು ಹೊಸದೆನ್ನುವ ಪ್ರಯತ್ನಗಳನ್ನು ಮಾಡಿದರು. ಮಹತ್ವಾಕಾಂಕ್ಷೆಯಿಂದಲೇ ಕಣಕ್ಕಿಳಿದರು. ಒಂದು ಅರ್ಥದಲ್ಲಿ ಸೃಷ್ಟಿಯಾಗಲಿದ್ದ 'ನಿರ್ವಾತ'ಕ್ಕೆ ಚೈತನ್ಯ ಕೊಟ್ಟರು. ಅವರು ಮಾಡಿದ ಎಲ್ಲ ಕೆಲಸಗಳಿಗೂ ಮೆಚ್ಚಿಗೆಯಿಲ್ಲ. ಹಲವು ಭಿನ್ನಾಭಿಪ್ರಾಯಗಳ, ಆಕ್ಷೇಪಗಳ ನಡುವೆಯೂ ಕನ್ನಡ ಚಿತ್ರಸಂಗೀತಕ್ಕೆ ಹಂಸಲೇಖ ಟಚ್ ಅಂತೂ ಪುಟಿದು ಬಂತು.

ಅವರು ಆಡುಭಾಷೆ, ಕನ್ನಡದ ನುಡಿಗಟ್ಟುಗಳು, ಇಂಗ್ಲಿಷ್ ಎಲ್ಲವನ್ನೂ ಬೆರೆಸಿ ತುಂಬ ಸರಳವಾಗಿ ಸಾಹಿತ್ಯ, ಗೀತಸಾಹಿತ್ಯ ಕೊಡುವ ಪ್ರಯತ್ನ ಮಾಡಿದರು. ದೃಶ್ಯಗಳನ್ನು ಹಾಡಾಗಿಸಿದ ರೀತಿ ಎಂದರೆ ಪುಟ್ಟಣ್ಣ ಕಣಗಾಲರು ಕಾದಂಬರಿಯ ಹಲವು ಪುಟಗಳನ್ನು ಅಥವಾ ಕಥೆಯನ್ನು ಹಾಡಾಗಿಸಿದರೆ ಹಂಸಲೇಖ ದೃಶ್ಯಗಳನ್ನೇ ಹಾಡಾಗಿಸಿದರು. ಆದಾಗಲೇ ಇರುವ, ನಡೆದು ಬಂದಿರುವ ಹಾದಿಯನ್ನೇ ತುಳಿಯದೆ ಹೊಸ ದಾರಿಯನ್ನು ತೋಡುತ್ತ ಹೋದರು. ''ವ್ಯಾಕರಣವನ್ನು ಮುರಿಯುವುದು ಚೆನ್ನ, ಆದರೆ ವ್ಯಾಕರಣವನ್ನು ಚೆನ್ನಾಗಿ ತಿಳಿದುಕೊಂಡು, ಆ ಫ್ರೇಂ ವರ್ಕ್‌ನಿಂದ ಬಹಳ ದೂರ ಹೋಗದೆ ಶಾಸ್ತ್ರಜ್ಞರಿಗೂ ಒಪ್ಪಾಗುವ ಹಾಗೆ, ಥಟ್ಟನೆ ವಿಭಿನ್ನ ಅನ್ನಿಸುವ ಹಾಗೆ ಮಾಡುವುದು ನನ್ನ ಪ್ರಯೋಗಗಳ ಆಶಯ...'' ಎನ್ನುವ ಅವರು ಬಹಳ ಹಿಂದಿನಿಂದ ಸಂಗೀತ ಕ್ಷೇತ್ರದಲ್ಲಿ ಚಲಾವಣೆಯಲ್ಲಿದ್ದ ಸೂತ್ರವನ್ನು ಮುರಿದದ್ದು ಹೀಗೆ : ''ಎಲ್ಲರೂ ಸರಿಸಂಖ್ಯೆ (ಈವನ್ ನಂಬರ್ಸ್)ಗೆ ಸಂಗೀತ ಬದಲಾವಣೆ ಆಗುತ್ತೆ ಅನ್ನೋ ಸಿದ್ಧಾಂತ ಒಪ್ಪಿ, ಒಗ್ಗಿ ಹೋಗಿದ್ದರು. ಆ ಮೆಷರ್ಸ್‌ನ ಬದಲಾಯಿಸಿ ಆ ಏಕಾಗ್ರತೆಯ ಭಂಗ ಮಾಡಲು ಹೊರಟೆ. ಸಂಗೀತದ ಒಂದು ಆವರ್ತದಲ್ಲಿ ಎಂಟು ಸಂಖ್ಯೆಗಳು (ಬಾರ್ಸ್) ಇರುತ್ತವೆ. ಒಂಬತ್ತನೇ ಸಂಖ್ಯೆಗೆ ಸಂಗೀತ ಬದಲಾಗಬೇಕು. ಇದೇ ನಿಯಮ ಅಂತ ನಡೆದು ಬರುತ್ತಿತ್ತು. ಆಗ ೩-೫ ಆವರ್ತಕ್ಕೆ, ೫-೭ ಆವರ್ತಕ್ಕೆ ಬದಲಾಯಿಸಿ ಸಂಯೋಜಿಸಿದೆ. ಹಾಗೆ ಮಾಡಿದ್ದರ ಉದ್ದೇಶ ಗಾಯಕರ, ಕೇಳುಗರ ಏಕಾಗ್ರತೆಯನ್ನು ಸಡಿಲ ಮಾಡಿ ಸಂಗೀತದಲ್ಲಿ ಹೊಸ ಪ್ರಯೋಗ ಮಾಡುವುದಾಗಿತ್ತು. ಇದನ್ನು ವಾಣಿಜಯರಾಂ ಮೊದಲು ವಿರೋಧಿಸಿದರು. ಎಸ್.ಪಿ.ಬಾಲಸುಬ್ರಹ್ಮಣ್ಯಂ ಸಹ ಪ್ರಶ್ನಿಸಿದರು. ಅವರೆದುರು ಒಟ್ಟು ಆವರ್ತಗಳ ಮೊತ್ತವನ್ನು ತೋರಿಸಿ ಅದು ಮೊದಲಿನ ಪದ್ಧತಿಯ ಆವರ್ತಗಳ ಮೊತ್ತಕ್ಕೆ ಸಮಾನವಾಗಿದ್ದುದನ್ನು ವಿವರಿಸಿದಾಗ ಅವರೆಲ್ಲ ಬೆರಗಿನಿಂದಲೇ ಮೆಚ್ಚುಗೆಯನ್ನು

(ಚಿತ್ರ ೨೦) ಸಂಗೀತ ನಿರ್ದೇಶಕ ಹಂಸಲೇಖ ಅವರು ೧೯೯೨ರಲ್ಲಿ ಕಾವೇರಿ ಜಲವಿವಾದ ಭುಗಿಲೆದ್ದಾಗ ಸಂಗೀತ ಸಂಘವೊಂದನ್ನು ಕಟ್ಟಿ, ತಮಟೆ ಹಿಡಿದು ಆಂದೋಲನಕ್ಕೆ ಬಲ ತುಂಬಿದರು. 'ಸಂ ಸಂ' (ಸಂಗೀತ ಸಂಘ)ದ ಆಂದೋಲನ ಕಾರ್ಯಕ್ರಮವೊಂದರಲ್ಲಿ ತಮಟೆ ಹಿಡಿದ ಹಂಸಲೇಖರೊಂದಿಗೆ ನಿರ್ದೇಶಕ ಎಸ್.ವಿ.ರಾಜೇಂದ್ರಸಿಂಗ್ (ಬಾಬು) ಮತ್ತಿತರರು.

ನಿರ್ಮಾಪಕರು ಪಾಳೇಗಾರರಂತೆ ವರ್ತಿಸುತ್ತಿದರು. ನಿರ್ಮಾಪಕರನ್ನುಳಿದು ಮಿಕ್ಕವರೆಲ್ಲ ಕೀಳೆಂಬ ಭಾವನೆ ಇದ್ದಂಥ ಸಂದರ್ಭದಲ್ಲಿ ಸಂಗೀತ ನಿರ್ದೇಶಕರು ಸಂಗೀತವನ್ನು ಉಳಿಸಲು ಕಣ್ಣುಮುಚ್ಚಿ ಸಂಧಿಸಿ, ಉಸಿರು ಕಟ್ಟುವಂಥ ವಾತಾವರಣದಲ್ಲಿ ಬದುಕುತ್ತಿದ್ದರು. ನಂತರದ ದಿನಗಳಲ್ಲಿ ಸಂಗೀತ ನಿರ್ದೇಶಕರು ಎಂಥ ಸ್ಥಾನಕ್ಕೆ ಏರಿದರೆಂದರೆ ಸರ್ವಾಧಿಕಾರಿಗಳಂತೆ ವರ್ತಿಸಿದ ಉದಾಹರಣೆಗಳೂ ಉಂಟು. ನಿರ್ಮಾಪಕರು ಸಂಗೀತ ನಿರ್ದೇಶಕರು ಹೇಳಿದಂತೆ ಕೇಳುವ ದಿನಗಳು ಬಂದವು. ನಿರ್ಮಾಪಕರು ಹಾಗೂ ನಿರ್ದೇಶಕರ ನಡುವಿದ್ದ ಭಿನ್ನಾಭಿಪ್ರಾಯ ಹೆಚ್ಚತೊಡಗಿತು. ರಾಜಿ ಆಗುವುದೇ ಸಾಧ್ಯ ಇಲ್ಲವೇನೋ ಎಂಬಂಥ ಸಂದರ್ಭದಲ್ಲಿ ಕೀಬೋರ್ಡ್ ಕಡೆಗೆ ಒಲವು ಹರಿಸಿದರು. ಇದರಿಂದ ಸಂಗೀತದಲ್ಲಿ ಏಳುಬೀಳುಗಳು ಕಾಣಿಸಿಕೊಂಡು live ನುಡಿಸುತ್ತಿದ್ದ ವಾದ್ಯಗಾರರಿಗೆ ಏಟು ಬಿದ್ದಿತು. ಸಂಗೀತದ ಪರಂಪರೆಯೇ ನಾಶವಾಗುವ ಸಂದರ್ಭ ಒದಗಿದಾಗ ಕೆಲವು ಸಂಗೀತ ನಿರ್ದೇಶಕರು ಸೇರಿ, ಅಲಿಖಿತ ಒಪ್ಪಂದಕ್ಕೆ ಬಂದರು. ತಮ್ಮ ಸಂಗೀತ ನಿರ್ದೇಶನದಲ್ಲಿ ಶೇಕಡ ೫೦ರಷ್ಟು ವಾದ್ಯಗಳನ್ನು, ವಾದಕರನ್ನು ಬಳಸಿಕೊಳ್ಳಲು ಆರಂಭಿಸಿದರು. ಹಂಸಲೇಖ ಶೇಕಡ ೭೦ರಷ್ಟು ವಾದ್ಯಗಳನ್ನು, ವಾದಕರನ್ನು ಮತ್ತು ಶೇಕಡ ೩೦ರಷ್ಟು ಇಲೆಕ್ಟ್ರಾನಿಕ್ ವಾದ್ಯ ಉಪಕರಣಗಳನ್ನು (Eelectronic keyboard) ಬಳಸಿಕೊಂಡಿದ್ದಾರೆ. ಇದರಿಂದ ಹಲವಾರು ಮಂದಿಗೆ ಜೀವನ ನಿರ್ವಹಣೆ ಸಾಧ್ಯವಾಗುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದಿದ್ದಾರೆ.

ಹಂಸಲೇಖ ಪ್ರಕಾರ ''live artisteಗಳಿಂದ ಹೊರಹೊಮ್ಮುವ ಸಂಗೀತ ಮನಸ್ಸಿಗೆ ಸಮಾಧಾನ ತರುತ್ತದೆ. ಆದರೆ ವಾಸ್ತವವಾಗಿ ಡಿ.ಟಿ.ಎಸ್. ತಂತ್ರಜ್ಞಾನದಲ್ಲಿ ಲೈವ್ ಹಾಗೂ ಕೀಬೋರ್ಡ್‌ನಿಂದ ಹೊರಹೊಮ್ಮುವ ಸಂಗೀತವೆಂಬ ವರ್ಗೀಕರಣ ಇರುವುದಿಲ್ಲ''.

ಸೂಚಿಸಿದರು. ಹಾಗೆ ಬೆಸಸಂಖ್ಯೆಯಲ್ಲಿ (Odd number) ಪ್ರಯೋಗ ಮಾಡಿ ರಿಕಾರ್ಡ್ ಮಾಡಿದ್ದು 'ರಣಧೀರ' ಚಿತ್ರದ ''ನಾವಿಂದು ಹಾಡೋ ಹಾಡಿಗೆ ಕೊನೆಯಿಲ್ಲ...'' ಗೀತೆಗೆ. ಆಮಟ್ಟಿಗೆ ಇದು ಸಂಗೀತ ಕ್ಷೇತ್ರದಲ್ಲಿ ಆದ ಕ್ರಾಂತಿ ಎಂತಲೇ ನಾನು ಭಾವಿಸುತ್ತೇನೆ'' ಎನ್ನುವ ಹಂಸಲೇಖ ಕ್ಯಾಸೆಟ್ ಮಾರಾಟದಲ್ಲಿ ದಾಖಲೆಯಾಗುವಂಥ ಹೆಚ್ಚಳಕ್ಕೆ ಕಾರಣರಾದರು. ನಿರ್ಮಾಪಕರಿಗೆ ಹೆಚ್ಚು ಗೌರವಧನ ಬರುವ ಹಾಗೆ ಮಾಡಿದವರೂ ಅವರೇ ಎಂದೂ ಹೇಳುತ್ತಾರೆ.

''ಸಂಗೀತ ಕ್ಷೇತ್ರದಲ್ಲಿ ಟ್ರ್ಯಾಕ್ ರಿಕಾರ್ಡಿಂಗ್ ಪದ್ಧತಿಯನ್ನು ಜಾರಿಗೆ ತಂದ ಮೇಲೆ ಎಲ್ಲಾ ಸಂಗೀತ ಪರಿಕರಗಳ ಧ್ವನಿಪರೀಕ್ಷೆ ಮಾಡುವ ಪರಿಪಾಠ ಆರಂಭವಾಯಿತು. ಮೊದಲ ಕ್ಲಿಪ್‌ನಲ್ಲಿ ತಾಳ, ಶ್ರುತಿಗಳನ್ನು ಬೇರೆ ಬೇರೆಯಾಗಿ ಮುದ್ರಿಸಿ ನಂತರ ವಯೊಲಿನ್ ನುಡಿಸಿ ಅದರ ಧ್ವನಿ ಮುದ್ರಿಸಿಕೊಂಡು ಕಡೆಯಲ್ಲಿ ಹಾಡುಗಳನ್ನು ಧ್ವನಿಮುದ್ರಿಸಿಕೊಳ್ಳುವಂತಹ ಪರಿಪಾಠ ಆರಂಭವಾದಾಗಿನಿಂದ ಗುಣಮಟ್ಟದಲ್ಲಿ ಸಾಕಷ್ಟು ಸುಧಾರಣೆಯಾಗಿದೆ. ನಂತರದ ದಿನಗಳಲ್ಲಿ ಉತ್ಕೃಷ್ಟ ಮಟ್ಟದ ಸಂಗೀತ ಹೊರಹೊಮ್ಮಿದೆ.''

ಅನಂತರ ಸಂಗೀತ ಕ್ಷೇತ್ರದಲ್ಲಿ ಆಗಿರುವ ಹೊಸ ಆವಿಷ್ಕಾರದಿಂದ ಮೊದಲು ಡಾಲ್ಬಿ (dolby), ನಂತರ ಡಿ.ಟಿ.ಎಸ್. (dts) ತಂತ್ರಜ್ಞಾನದ ಅಳವಡಿಕೆಯಿಂದ ಸಂಗೀತ ಪ್ರಪಂಚದಲ್ಲಿ ಕ್ರಾಂತಿಯೇ ಆಗಿದೆ. ಇದರಿಂದ ಅನುಕೂಲವೂ ಆಗಿದೆ, ಅನಾನುಕೂಲವೂ ಆಗಿದೆ. ಡಾಲ್ಬಿ ಮತ್ತು ಡಿ.ಟಿ.ಎಸ್. ತಂತ್ರಜ್ಞಾನದಲ್ಲಿ full side effects, sound roll ಹಾಗೂ electronics ಉಪಕರಣಗಳ ಬಳಕೆಯಿಂದ ಬೇಕಾದ ಹಾಗೆ ಎಫೆಕ್ಟ್, ಫ್ಯಾಂಟಸಿಗಳನ್ನು ಸೃಷ್ಟಿಸಬಹುದು. ಸಾಮಾನ್ಯವೆನ್ನುವ ಆ್ಯಕ್ಷನ್ ಹಾಗೂ ಶಬ್ದವನ್ನು ಬಳಸಿ, ಬಹುತೇಕ ಸಂಗೀತತಜ್ಞರು ಕೀ ಬೋರ್ಡ್‌ಗೆ ಅವಲಂಬಿತರಾಗುವಂತಾಯಿತು. ಇದು ಪ್ರೇಕ್ಷಕರನ್ನು ಸೆಳೆಯುವಲ್ಲಿ ಯಶಸ್ವಿಯಾಯಿತಾದರೂ ಪ್ರತ್ಯಕ್ಷ ಅಥವಾ ನೇರ (live) ವಾದ್ಯವೃಂದದವರ ಹೊಟ್ಟೆ ಪಾಡಿಗೆ ಕುತ್ತು ತಂದಿತು. ಸಂಗೀತ ಸಂಘದ (ಸಂ.ಸಂ.) ಸ್ಥಾಪನೆಗೂ ಮೊದಲು

ಹಂಸಲೇಖ ಅವರ ಹೇಳುವಂತೆ ಅವರೆಂದೂ ಪರಭಾಷಾ ಗಾಯಕರನ್ನು ಬೆಂಬಲಿಸಲಿಲ್ಲ. ಆದರೂ ಅವರ ಅನೇಕ ಸಂಗೀತ ನಿರ್ದೇಶನದಲ್ಲಿ ಹಲವಾರು ಪರಭಾಷಾ ಗಾಯಕರು ಹಾಡಿದ್ದಾರೆ. ಅಲ್ಲೆಲ್ಲ ಅದು ಅವರ ಇಚ್ಛೆಗೆ ವಿರುದ್ಧವಾಗಿ ಮಾತ್ರ. ಆದರೂ ಪ್ರತಿ ಬಾರಿ ಮೂಲವ್ಯಕ್ತಿ ಅವರೇ ಆದ್ದರಿಂದ ಎಲ್ಲಾ ತಪ್ಪಿನ ಜವಾಬ್ದಾರಿಯನ್ನು ತಮ್ಮ ಮೇಲೆ ಹಾಕಿಕೊಂಡಿದ್ದಾರೆ. ಪರಭಾಷಾ ಗಾಯಕನ ಆಯ್ಕೆ ಚಿತ್ರದ ನಿರ್ಮಾಪಕನ ನಿರ್ಧಾರವಾಗಿದ್ದು ಸಂಗೀತ ಇಲಾಖೆಯ ಮುಖ್ಯರಾದ್ದರಿಂದ ಅದೆಲ್ಲ ಅಪವಾದ ಸಂಗೀತ ನಿರ್ದೇಶಕ ಹೊರಬೇಕಾಗಿ ಬರುವುದು ವಿಪರ್ಯಾಸ. ಇಲ್ಲಿಯವರೆಗೂ ೨೫ಕ್ಕೂ ಹೆಚ್ಚು ಗಾಯಕರನ್ನು ಪರಿಚಯಿಸಿದ ಕೀರ್ತಿ ಹಂಸಲೇಖ ಅವರದು. ಅವರು ಹೇಳುವಂತೆ ಇಲ್ಲಿಯವರೆಗೂ ಪರಭಾಷಾ ಗಾಯಕರ ಮೇಲೆ ಅಘೋಷಿತ ಸಮರವನ್ನು ಸಾರಿರುವ ಹಂಸಲೇಖ ಇಲ್ಲಿನ ಸ್ಥಳೀಯ ಗಾಯಕರು, ಚಿತ್ರಗೀತೆ ರಚನೆಕಾರರನ್ನು ಪ್ರೋತ್ಸಾಹಿಸಿದ್ದಾರೆ. ಇಷ್ಟಾದರೂ ಹೊರಗಿನವರನ್ನು ಹೆಚ್ಚಾಗಿ ಕರೆಸಿ ಹಾಡಿಸಿದ ಖ್ಯಾತಿ, ಅಪಖ್ಯಾತಿಗಳಿಗೂ ಗುರಿಯಾಗಿದ್ದಾರೆ. ಕೆಲವೊಮ್ಮೆ ಅವರದಲ್ಲದ ವಿಭಾಗಗಳ ಉಸಾಬರಿಗೂ ಹೋಗಿ ಎಲ್ಲರ ದೃಷ್ಟಿಯಲ್ಲಿ 'ವಿಲನ್' ಆದರು.

ರಂಗಭೂಮಿಯಲ್ಲಿ ಒಲವುಳ್ಳ ಹಂಸಲೇಖ ಪಾಶ್ಚಾತ್ಯ ರಂಗಭೂಮಿಯಲ್ಲಿ ಆಗುತ್ತಿರುವ ಪ್ರಯೋಗಗಳನ್ನು, ರೂಪಕಗಳನ್ನು ಗೀತನಾಟಕಗಳನ್ನು ಕರ್ನಾಟಕದ ಜನಪದ ಸೊಗಡಿಗೆ ಸರಿಹೊಂದಿಸಿ ಸಿನಿಮಾಗೆ ಅಳವಡಿಸುವ, ಸಂಗೀತವೇ ಪ್ರಧಾನವಾದ ಚಿತ್ರಗಳನ್ನು ನಿರ್ದೇಶಿಸುವ ಪ್ರಯತ್ನದಲ್ಲಿದ್ದಾರೆ. ತಮ್ಮದೇ ಆಧುನಿಕ ರೀತಿಯ ರಿಕಾರ್ಡಿಂಗ್ ಸ್ಟುಡಿಯೋ ಪ್ರಾರಂಭಿಸಿದ್ದಾರೆ. ೧೨೮ ಕ್ಯಾಸೆಟ್‌ಗಳನ್ನು ಒಂದೇ ಥೀಮ್‌ನಲ್ಲಿ ತರುವ, ಅಷ್ಟು (೧೨೫) ದೇಶಗಳಲ್ಲಿ ಚಿತ್ರಿಸಿದ ಅವುಗಳ ಆಲ್ಬಮ್ ಅನ್ನು ಹೊರ ತರುವ ಯೋಜನೆ ಹಾಕಿಕೊಂಡಿದ್ದಾರೆ.

(ಚಿತ್ರ ೨೧) ಪಿ.ಸುಶೀಲ, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಪಿ.ಬಿ.ಶ್ರೀನಿವಾಸ್, ರಾಮಮೂರ್ತಿ, ಸತ್ಯಂ ಮತ್ತು ಟಿ.ಉದಯಶಂಕರ್

ಹಂಸಲೇಖ ಅವರ ಕೆಲವು ಮುಖ್ಯ ಪ್ರಯೋಗ, ಸಾಧನೆಗಳನ್ನು ಹೀಗೆ ಗುರುತಿಸಬಹುದು. ಅವರು ರೂಪಿಸಿದ ಹಾಡುಗಳ ಸಂಖ್ಯೆಯೇ ಸುಮಾರು ಎರಡು ಸಾವಿರಕ್ಕೂ ಹೆಚ್ಚು. ಗೀತೆಗಳ ಸಾಹಿತ್ಯದಲ್ಲಿ ನಿರ್ಮಾಪಕರ ಒತ್ತಡಕ್ಕೆ ಮಣಿದು ಕೆಲವೊಮ್ಮೆ ಸಭ್ಯತೆಯ ಎಲ್ಲೆ ಮೀರಿದರೂ ಮತ್ತೆ ಮತ್ತೆ ನೆನಯುವಂಥ ಉತ್ತಮ ಸಾಹಿತ್ಯ ಇರುವ ಗೀತೆಗಳನ್ನು ರಚಿಸಿದ್ದಾರೆ. ಕೇವಲ ೧೨ ವರ್ಷಗಳ ಅವಧಿಯಲ್ಲಿ, ಪ್ರತಿಸ್ಪರ್ಧಿಯೂ ಇಲ್ಲದ ನೆಲೆಯಲ್ಲಿ ಹಂಸಲೇಖ ಚಿತ್ರರಥವನ್ನು ಎಳೆದರು. 'ಚೈತ್ರದ ಪ್ರೇಮಾಂಜಲಿ' ಚಿತ್ರದ ''ಓ ಕೋಗಿಲೆ ನಾ ಹಾಡಲೆ...'' ಗೀತೆಯ ರಾಗಸಂಯೋಜನೆಯ ಜೊತೆಗೆ ನೀರು, ಗಾಳಿ, ಪ್ರಾಣಿಗಳು, ಹಕ್ಕಿಗಳ ಕಲರವ ಮೊದಲಾದ ಪರಿಸರದ ಶಬ್ದಗಳನ್ನು ವಿಶೇಷ ರೀತಿಯಲ್ಲಿ ಬಳಸಿದ್ದರು. 'ಕೋಣ ಈದೈತೆ' ಚಿತ್ರದ ಹಾಡುಗಳಿಗೆಲ್ಲ ವಾದ್ಯಗಳ ಬದಲಿಗೆ ಅಣಕು ಕಲಾವಿದರ ಕಂಠವನ್ನು ಬಳಸಿ ವಸ್ತುವಿನಲ್ಲಿರುವ ವಿಡಂಬನೆಯನ್ನು ಮತ್ತಷ್ಟು ಧ್ವನಿಪೂರ್ಣಗೊಳಿಸುವ ಪ್ರಯೋಗ ಮಾಡಿದರು. 'ಎ.ಕೆ.47' ಚಿತ್ರದ ರೀ-ರಿಕಾರ್ಡಿಂಗ್ ಸಮಯದಲ್ಲಿ ಕೆಲವು ಸನ್ನಿವೇಶಗಳಿಗೆ ಹಾಡುಗಳನ್ನು ಸೇರ್ಪಡೆ ಮಾಡುವ ಆಗತ್ಯ ಕಂಡುಕೊಂಡು, ಸೇರಿಸಿದರು. ಅವು ಆ ಸನ್ನಿವೇಶಕ್ಕೆ, ವಸ್ತುವಿಗೆ ಪೂರಕವಾಗಿ ನಿಂತವು.

'ಮುತ್ತಿನ ಹಾರ' ಚಿತ್ರಕ್ಕೆ ಕೊಡವ ಭಾಷೆಯನ್ನು ಸೇರಿಸಿ ಒಂದು ಗೀತರಚನೆ ಮಾಡಿದ್ದರು. ಸಂಗೀತ ವಿದ್ವಾನ್ ಬಾಲಮುರಳಿಕೃಷ್ಣ ಸಂಗೀತಶಾಸ್ತ್ರ ರೂಪವಾದ "...writing Indian music on western five lines which enlights the foundation to the learning and developing of Indian folk music..." ಪರಿಕಲ್ಪನೆಯನ್ನು 'ಮುತ್ತಿನಹಾರ' ಚಿತ್ರದ ''ದೇವರು ಹೊಸೆದ ಪ್ರೇಮದ ದಾರಾ...'' ಗೀತೆಯಲ್ಲಿ ರಂಗಗೀತೆ, ಕರ್ನಾಟಕ-ಹಿಂದೂಸ್ಥಾನೀ ಸಂಗೀತ ಹಾಗೂ ಪಾಶ್ಚಿಮಾತ್ಯ ಸಂಗೀತಗಳನ್ನು ಮೇಳವಿಸಿ ವಿಶೇಷವಾಗಿ ರೂಪಿಸುವ ಮೂಲಕ ಬಳಸಿಕೊಂಡಿದ್ದರು. ಆ ಪ್ರಯೋಗ ಬಾಲಮುರಳಿಕೃಷ್ಣ ಅವರಿಗೆ ತುಂಬ ಮೆಚ್ಚುಗೆಯಾಗಿತ್ತು. ಈಗಾಗಲೇ ಪ್ರಸ್ತಾಪಿಸಿರುವ 'ಪ್ರೇಮಲೋಕ' ಚಿತ್ರದಲ್ಲಿ ದೃಶ್ಯವನ್ನು ಹಾಡಿನಲ್ಲಿ ನಿರೂಪಿಸಿದ್ದು, ಗೀತರಚನೆಯನ್ನು ಆಡುಭಾಷೆಗೆ ಅಳವಡಿಸಿದ್ದು, ಭಾಷೆಯಲ್ಲಿ ಮೈಸೂರು ಪ್ರದೇಶದ ವೈಶಿಷ್ಟ್ಯವೇ ಆದ 'ಕನ್ನಡಾಂಗ್ಲೊ' ಮಾಡಿ ಮಡಿಸಿಕೊಂಡದ್ದು ಮತ್ತು 'ರಣಧೀರ' ಚಿತ್ರದಲ್ಲಿ ''ನಾವಿಂದು ಹಾಡೋ ಹಾಡಿಗೆ...'' ಗೀತೆಯಲ್ಲಿ ಆವರ್ತಗಳ ಸಮಸಂಖ್ಯೆ ಬದಲಾಯಿಸಿದ್ದು ಗಮನಾರ್ಹ ಪ್ರಯೋಗಗಳು. 'ನವತಾರೆ' ಚಿತ್ರದಲ್ಲಿ ಅಳವಡಿಸಿದ ''ನೀರಿನಂತೆ ನಿರ್ಮಲ...'' ಗೀತೆಯ ಬಗ್ಗೆ ಪಲ್ಲವಿಯ ಮೊದಲರ್ಧ ಆವರ್ತವನ್ನು ವಾದ್ಯದಲ್ಲೂ, ಅಂದರೆ

ಪಮಪದ । ಪಮಪಾ
ನೀರಿನಂತೆ ನಿರ್ಮಲಾ

ರೀತಿಯಲ್ಲಿ ಬಳಸಿದೆ. ಇಲ್ಲಿಯ ವಿಶೇಷವೆಂದರೆ ಸಾಮಾನ್ಯವಾಗಿ ದನಿ ಮುಂದೆ, ವಾದ್ಯ ಹಿಂದೆ ಇರುತ್ತದೆ. ಇಲ್ಲಿ ದನಿಗೆ ಉತ್ತರವೋ ಎಂಬಂತೆ ಮೊದಲು ದನಿ, ಅನಂತರ ವಾದ್ಯವನ್ನೂ ಬಳಸಿದೆ. 'ಎಸ್.ಪಿ.ಸಾಂಗ್ಲಿಯಾನ' ಚಿತ್ರದಲ್ಲಿ ಮೊದಲು ಸ್ಯಾಕ್ಸೊಫೋನ್ ನುಡಿಸಿ ಅನಂತರ ಹಾಡುವುದು. ಉದಾಹರಣೆಗೆ :

ಸ್ಯಾಕ್ಸಫೋನ್
ಸಾರಿ । ಗಪಪಗ । ರಿಗ

ಒಂದು । ಮುತ್ತಿನಂಥ । ಮುತ್ತು
ಸ್ಯಾಕ್ಸಫೋನ್

ಇದು ನನ್ನ ಮಟ್ಟಿಗೆ ಏಕತಾನತೆಯನ್ನು ಮುರಿದು ಶಾಸ್ತ್ರಕ್ಕೆ ಭಂಗ ತಾರದೆ ಸೊಗಸನ್ನು ಉಳಿಸಿಕೊಳ್ಳುವ ರೀತಿ'' ಎನ್ನುತ್ತಾರೆ ಹಂಸಲೇಖ.

''...'ಕೌರವ' ಚಿತ್ರಕ್ಕೆ ಬಿ.ಜಯಶ್ರೀ ಅವರಿಂದ ಹಾಡಿಸಿದ ತತ್ವಪದಗಳ ರಚನೆಯಲ್ಲೇ ಒಂದು ವಿಶೇಷ, ಜಾಣಕ್ರಮ ಇತ್ತು. ಕೇಂದ್ರವ್ಯಕ್ತಿಯ ಹೆಸರನ್ನೇ ಹೇಳದೆ ಒಂದು ಪೌರಾಣಿಕ ಘಟನೆಯನ್ನು ಬಿಡಿಸಿಡುವ ಪ್ರಯತ್ನ. ಇಲ್ಲಿ ಗ್ರಾಮೀಣ ಜನಮಾನಸದಲ್ಲಿ ಮುಕ್ಕಾಗದೆ, ಮಸುಕಾಗದೆ ಉಳಿದುಕೊಂಡು ಬಂದ ಪುರಾಣಪ್ರಜ್ಞೆಯನ್ನು ಮಡಿಸಿಕೊಳ್ಳುವ ಪ್ರಯತ್ನ ಮಾಡಿದೆ. ಆ ಪದಗಳು ಹೀಗಿವೆ :

ಅವಳ್ಯಾವಳೋ ನಕ್ಕು
ವನವಾಸ ಪೊಕ್ಕು
ಕೌರವನ ಮಂಡಿ ಮುರುದಳಂತೆ ॥

ಅವರ್‍ಯಾರೋ ಮೂವ್ರು
ಜಗಕಾಯೊ ದ್ಯಾವ್ರು
ತಾಯಿಗೆ ಪರೀಕ್ಷೆ ಇಟ್ರಂತೆ ॥
ತಾಯ್ ಸುಮ್ನೆ ನಕ್ಕು
ದ್ಯಾವ್ರಾದ್ರು ಮಕ್ಳು
ಎತ್ಕೊಂಡೆದೆ ಹಾಲ್ ಕೊಟ್ಳಂತೆ ॥

ಇಂಥ ಅನೇಕ ಪ್ರಯೋಗಗಳನ್ನು ಮಾಡುತ್ತಲೇ ಬಂದ ಹಂಸಲೇಖ ಅವರಿಗೆ ಬಹುಕಾಲ ಸ್ಪರ್ಧಿಗಳೂ ಇರಲಿಲ್ಲ. ಒಂದು ರೀತಿಯ ಹಳೆ-ಹೊಸ ತಲೆಮಾರಿನ ನಡುವೆ ಏರ್ಪಟ್ಟ ಶೂನ್ಯವನ್ನು ಶಬ್ದದಲ್ಲಿ ತುಂಬಿದರು. ಹೊಸ ಪೀಳಿಗೆ ಬರತೊಡಗಿದ ಮೇಲೂ ಹಂಸಲೇಖ ಸೃಜನಶೀಲತೆ ಚೈತನ್ಯ ದಾಯಿಯಾಗೇ ಇದ್ದುದು ವಿಶೇಷ.

ಕನ್ನಡ ಚಲನಚಿತ್ರ ಸಂಗೀತ, ಸಾಹಿತ್ಯ ವಿಭಾಗ ಮುಖ್ಯವಾಗಿ ಮಾರುಕಟ್ಟೆ ವಿಭಾಗದಲ್ಲಿ ದಾಖಲೆಗಳನ್ನು ಕೊಟ್ಟರು ಹಂಸಲೇಖ. ಕಾಲದ ಜೊತೆಗೆ ಅದು ಬೀಸಿ ಬೀಸಿ ಎಸೆದ ಬದಲಾವಣೆಯ ವೇಗಕ್ಕೆ ಸ್ಪಂದಿಸುತ್ತ ಬಂದರು.

ಗೀತರಚನೆ ಮೂಲಕ ಚಿತ್ರರಂಗಕ್ಕೆ ಬಂದ ವಿ.ಮನೋಹರ್ ಪತ್ರಿಕೋದ್ಯಮ, ವ್ಯಂಗ್ಯಚಿತ್ರ ಹೀಗೆ ಹಲವು ಹತ್ತು ಕಡೆ ತಮ್ಮ ಸೃಜನಶೀಲತೆ ಹರಿಬಿಟ್ಟಿದ್ದವರು. ಕಾಶೀನಾಥ್ ಸಹಾಯಕರಾಗಿ ಚಿತ್ರರಂಗದಲ್ಲಿ ಬೆಳೆಯುತ್ತಾ ಬಂದ ಅವರು 'ಅನುಭವ' ಚಿತ್ರಕ್ಕೆ ''ಹೋದೆಯ ದೂರ ಓ ಜೊತೆಗಾರ...'' ಎಂಬ ಗೀತೆಯನ್ನು ಬರೆದಿದ್ದರು. ಈ ಸಂದರ್ಭದಲ್ಲಿ ಅವರಿಗೆ ಪರಿಚಿತರಾಗಿದ್ದ ಉಪೇಂದ್ರ ತಮ್ಮ 'ತರ್ಲೆ ನನ್ಮಗ' ಚಿತ್ರದ ಸಂಗೀತ ನಿರ್ದೇಶನಕ್ಕೆ ಅವಕಾಶ ನೀಡಿದರು. ಮುಂದೆ ಜಗ್ಗೇಶ್ ಚಿತ್ರಗಳಲ್ಲಿ ಅವರಿಗೆ ಅವಕಾಶ ಲಭಿಸುತ್ತ ಹೋಯಿತು. ಆದರೂ 'ಗೆಜ್ಜೆನಾದ'ದಲ್ಲಿ ಸದಭಿರುಚಿಯ ಸರಳ ಸಂಗೀತ ನೀಡುವ ಮೂಲಕ ವಿ.ಮನೋಹರ್ ಕನ್ನಡ ಚಿತ್ರರಂಗದ ಕಣ್ಣಿಗೆ ಢಾಳಾಗಿ ಕಂಡರು. 'ಜನುಮದ ಜೋಡಿ' ಅವರಿಗೆ ನಿಜವಾದ ಅರ್ಥದಲ್ಲಿ ಬ್ರೇಕ್ ನೀಡಿದ ಚಿತ್ರ. ಕಂಸಾಳೆ ಪದವನ್ನು ಸಮರ್ಥವಾಗಿ ಬಳಸಿಕೊಂಡ ''ಕೋಲುಮಂಡೆ ಜಂಗಮದೇವರು...'' ನಾಡಿನಾದ್ಯಂತ ಗುನುಗಿತು. 'ಜನುಮದ ಜೋಡಿ' ಮತ್ತು 'ಜೋಡಿ ಹಕ್ಕಿ' ಚಿತ್ರಗಳಿಗೆ ಎರಡು ಬಾರಿ ರಾಜ್ಯ ಪ್ರಶಸ್ತಿ ಪಡೆದಿರುವ ಮನೋಹರ್ ಭರವಸೆ ಮೂಡಿಸಿರುವ ಸಂಗೀತ ನಿರ್ದೇಶಕ.

ಗುರುಕಿರಣ್ ನಿರ್ದೇಶಕ ಉಪೇಂದ್ರರ ಚಿತ್ರಗಳಿಂದ ಮುಂಚೂಣಿಗೆ ಬಂದ ಯುವ ಸಂಗೀತನಿರ್ದೇಶಕ. ಮೂಲತಃ ವಾದ್ಯಗೋಷ್ಠಿಗಳಲ್ಲಿ ಗಾಯನ, ವಾದನಗಳಲ್ಲಿ ಪರಿಣತರಾಗಿದ್ದವರು. ಅಭಿನಯಕ್ಕಾಗಿ ಬಂದವರು 'ಮಜ್ನು' ಚಿತ್ರಕ್ಕೆ ಸಂಗೀತ ನಿರ್ದೇಶಿಸಿದರು. ಆ ಚಿತ್ರ ಬಿಡುಗಡೆ ಆಗಲಿಲ್ಲ. ಹಾಡುಗಳ ಬಗ್ಗೆ ತುಂಬ ಒಳ್ಳೆಯ ಅಭಿಪ್ರಾಯವಿತ್ತು. 'ಹಾಲಿವುಡ್' ಚಿತ್ರಕ್ಕೆ ಇವರ ಸಂಗೀತ ಇನ್ನು ಆಗುತ್ತಿರುವಾಗಲೇ ಅತ್ಯಧಿಕ ಬೆಲೆಗೆ ವ್ಯಾಪಾರವೂ ಆಗಿಹೋಗುವಷ್ಟು ಆತನ ಸಂಗೀತದ ಬಗ್ಗ ಆಸಕ್ತಿ ಬೆಳೆಯಿತು. ಗುರುಕಿರಣ್ ಅವರನ್ನು ಈ ಪ್ರಮಾಣದ ಬೇಡಿಕೆಯತ್ತ ಒಯ್ದದ್ದು 'A' ಮತ್ತು 'ಉಪೇಂದ್ರ' ಚಿತ್ರ ಸಂಗೀತದ ಜನಪ್ರಿಯತೆ. ಇವರ ಸಂಯೋಜನೆಯ ''ಮಾರಿಕಣ್ಣು ಹೋರಿಮ್ಯಾಗೆ...'', ''ಸುಮ್ ಸುಮ್ನೆ ನಗ್ತಾಳೆ...''

ಗೀತೆಗಳು ಒಂದು ಮತ್ತೊಂದಕ್ಕಿಂತ ಭಿನ್ನವಾಗಿದ್ದವು. ''ಪಾರಿಕಣ್ಣು...'' ಜನಪ್ರಿಯವಾಯಿತು. ''ಸುಮ್ ಸುಮ್ನೆ...'' ಮಧುರವಾಗಿತ್ತು. ಗುರುಕಿರಣ್ ನನ್ನ ಒಲವು ಮೆಲೋಡಿ ಕಡೆಗೇ ಎನ್ನುತ್ತಾರೆ.

ಕಲ್ಯಾಣ್ ಗೀತರಚನೆ, ಸಂಗೀತ ನಿರ್ದೇಶನ ಎರಡರಲ್ಲೂ ತೊಡಗಿಕೊಂಡವರು. ಒಳ್ಳೆಯ ಸಾಹಿತ್ಯ, ಮಾಧುರ್ಯವುಳ್ಳ ಸಂಗೀತ ಇವರ ಶೈಲಿ. 'ಅಮೃತವರ್ಷಿಣಿ' ಚಿತ್ರಕ್ಕೆ ಎಲ್ಲ ಗೀತೆಗಳನ್ನು ಕಲ್ಯಾಣಿರಾಗವನ್ನೇ ಬಳಸಿ ಸಂಯೋಜಿಸಿದ್ದರು. ರಾಜೇಶ್ ರಾಮನಾಥನ್ ಈಚೆಗೆ ಪ್ರಸಿದ್ಧರಾಗಿರುವ ಜನಪ್ರಿಯ ಸಂಗೀತ ನಿರ್ದೇಶಕರು.

ಸಾಧುಕೋಕಿಲ ಸಂಗೀತಕ್ಷೇತ್ರದಲ್ಲಿ ಗಮನಾರ್ಹರು. ಹಲವರ ಬೆನ್ನ ಹಿಂದೆ ಇದ್ದು ದುಡಿದ ದಿನಗಳು ಕಳೆದು ಸ್ವತಂತ್ರ ಸಂಗೀತ ನಿರ್ದೇಶಕರಾದರು. ಹಲವು ಚಿತ್ರಗಳಿಗೆ ಉತ್ತಮ ಸಂಗೀತ ಕೊಟ್ಟರು. ಕೆಲವೊಮ್ಮೆ ಆಕ್ಷೇಪಕ್ಕೂ ಗುರಿಯಾದರು. ಅಭಿನಯದ ಒಲವು ಹೆಚ್ಚಿ, ಸಂಗೀತ ಹಿಂದೆ ಸರಿಯಿತು.

* * *

ಹಿಂದಿನ ಅಧ್ಯಾಯದಲ್ಲಿ ಕೆಲವು ಪ್ರಮುಖ ಸಂಗೀತ ನಿರ್ದೇಶಕರ ಕುರಿತು ಚರ್ಚಿಸಿದ್ದೇವೆ. ಇತಿಹಾಸದಲ್ಲಿ ಸೇರಲೇಬೇಕಾದ ಇನ್ನೂ ಅನೇಕ ಪ್ರತಿಭಾವಂತರನ್ನು ಕನ್ನಡ ಚಿತ್ರರಂಗ ಕಂಡಿದೆ. ಕನ್ನಡ ಚಿತ್ರ ಸಂಗೀತ ಕ್ಷೇತ್ರಕ್ಕೆ ಇವರ ಕೊಡುಗೆ ಮಹತ್ವದ್ದು. ೧೯೫೫ರಲ್ಲಿ 'ಮಹಾಕವಿ ಕಾಳಿದಾಸ' ಚಿತ್ರದ ಮೂಲಕ ಸಂಗೀತ ನಿರ್ದೇಶಕರಾದ ಹೊನ್ನಪ್ಪ ಭಾಗವತರ್ ತಮ್ಮ ಅಭಿನಯ ಮತ್ತು ನಿರ್ದೇಶನ, ಕಂಚಿನ ಕಂಠದ ಗಾಯನ ಇವಕ್ಕೇ ಕನ್ನಡ ಚಿತ್ರರಂಗದಲ್ಲಿ ಮುಖ್ಯರಾದವರು. ಸಂಗೀತ ನಿರ್ದೇಶನದಲ್ಲೂ ಅವರದ್ದು ಸಮಾನ ಕೀರ್ತಿ. ಭಾಗವತರು ಆ ಹೊತ್ತಿಗೆ ಕನ್ನಡದಲ್ಲಿ 'ಸುಭದ್ರಾ' ಚಿತ್ರದಲ್ಲಿ ಅಭಿನಯಿಸಿ ಹಾಡಿದ್ದು ಗಮನ ಸೆಳೆದಿತ್ತು. 'ಮಹಾಕವಿ ಕಾಳಿದಾಸ'ದಲ್ಲಿ ಕು.ರ.ಸೀ. ಅವರು ರಚಿಸಿದ್ದ ''ಶೃಂಗಾರವಾಹಿನಿ ಮನಮೋಹಿನೀ...'' ಮತ್ತು ಬೆಳ್ಳಾವೆ ನರಹರಿಶಾಸ್ತ್ರಿಗಳ ರಚನೆ ''ರಾಜೇಂದ್ರ ನಾ ರಚಿಸಿಹೆನ್ನೈ...'' ಅಲ್ಲದೆ ''ಚೆಲ್ವಯ್ಯ ಚೆಲ್ವೊ...'' ಎಂಬ ಜನಪದ ಧಾಟಿಯ ಕೋಲಾಟದ ಹಾಡು ಕೂಡ ಇವರ ಗಾಯನದಲ್ಲಿ ಜನಮನ ಮುಟ್ಟಿತ್ತು. 'ಮಹಾಕವಿ ಕಾಳಿದಾಸ' ಚಿತ್ರದ ಹಿನ್ನೆಲೆ ಸಂಗೀತಕ್ಕೆ ಪಿಟೀಲು ವಾದನವನ್ನೇ ಬಳಸಿದ್ದುದೂ ವಿಶೇಷವಾಗಿತ್ತು. ಪಿಟೀಲು ವಾದಕರು ಸಂಗೀತ ವಿದ್ವಾನ್ ಪಿ.ಭುವನೇಶ್ವರಯ್ಯ.

'ಸದಾರಮೆ' ಚಿತ್ರಕ್ಕೆ ಕೆಲಸ ಮಾಡಿದ ವೆಂಕಟರಾಮಯ್ಯ, 'ಸಂಸಾರನೌಕ' ಚಿತ್ರಕ್ಕೆ ಸಂಗೀತ ನೀಡಿದ್ದ ನಾಗರಾಜ್ ಮತ್ತು ಶರ್ಮ ಬ್ರದರ್ಸ್, 'ಜೀವನನಾಟಕ' ಚಿತ್ರಕ್ಕೆ ಸಂಗೀತ ನೀಡಿದ ಎಸ್.ವಿ.ವೆಂಕಟರಾಮನ್ ಮತ್ತು ರಾಮಯ್ಯರ್ ಶಿರೂರ್, 'ವಾಣಿ' ಚಿತ್ರದ ಟಿ.ಚೌಡಯ್ಯ, 'ಹೇಮರೆಡ್ಡಿ ಮಲ್ಲಮ್ಮ' ಚಿತ್ರದ ಚಿತ್ತೂರು ವಿ.ನಾಗಯ್ಯ, 'ಚಂದ್ರಹಾಸ'ದ ಮಲ್ಲಿಕಾರ್ಜುನ ಮನ್ಸೂರ್, 'ಮಹಾನಂದ'ದ ಬಿ.ದಯಾನಿಧಿ, 'ಮಹಾತ್ಮಾ ಕಬೀರ್' ಚಿತ್ರದ ಎಸ್.ಸುಬ್ಬರಾಮನ್, 'ಭಾರತಿ' ಚಿತ್ರದ ಎಸ್.ಎಸ್.ಚಂದ್ರಶೇಖರಯ್ಯ,, 'ರಾಜಾವಿಕ್ರಮ'ದ ಎಸ್.ರಾಜಂ, 'ಮಂಗಳಗೌರಿ' ಚಿತ್ರದ ಜಿ.ರಾಮನಾಥನ್, 'ಭಕ್ತ ಮಲ್ಲಿಕಾರ್ಜುನ'ದ ಸಿ.ಎನ್.ಪಾಂಡುರಂಗನ್, 'ಸಂತ ಸಖು' ಚಿತ್ರದ ಪಿ.ಗೋವಿಂದರಾಜುಲುನಾಯ್ಡು, 'ಸ್ತ್ರೀರತ್ನ' ಚಿತ್ರದ ಗೋಟುವಾದ್ಯಂ ಶ್ರೀನಿವಾಸ ಅಯ್ಯಂಗಾರ್, 'ಭಾಗ್ಯೋದಯ'ದ ಎಲ್.ಮಲ್ಲೇಶ್ವರರಾವ್, 'ಭಕ್ತ ವಿಜಯ'ದ ಪಿ.ಶ್ಯಾಮ್-ಆತ್ಮನಾಥ್, 'ಕಚದೇವಯಾನಿ'ಯ ಪಾಂಡು ಮತ್ತು ಮೀನಾಕ್ಷಿ ಸುಬ್ರಹ್ಮಣ್ಯಂ, 'ಭಕ್ತ ಮಾರ್ಕಂಡೇಯ'ದ ವಿಶ್ವನಾಥನ್ ಮತ್ತು ರಾಮಮೂರ್ತಿ, 'ನಳದಮಯಂತಿ'ಯ ಜಿ.ಗೋಪಾಲಂ, 'ಶುಕ್ರದೆಸೆ' ಚಿತ್ರದ ಟಿ.ಎ.ಕಲ್ಯಾಣಂ, 'ರಾಯರ ಸೊಸೆ' ಚಿತ್ರದ ಆರ್.ದಿವಾಕರ್, 'ಶ್ರೀಕೃಷ್ಣಗಾರುಡಿ'ಯ ಪೆಂಡ್ಯಾಲ ನಾಗೇಶ್ವರರಾವ್, 'ಆಶಾಸುಂದರಿ'ಯ ದಕ್ಷಿಣಾಮೂರ್ತಿ, 'ದೈವಲೀಲೆ'ಯ ಬಿ.ಎಂ.ಎಸ್.ಮೂರ್ತಿ ಮತ್ತು ಸಿ.ಕೆ.ಎಸ್.ರಾವ್, 'ಮಹಾತ್ಮಾ ಕಬೀರ್'ನ ಅನಸೂಯಾದೇವಿ, 'ವಿಧಿವಿಲಾಸ'ದ ಟಿ.ಪದ್ಮನ್, 'ಪಾಲಿಗೆ ಬಂದದ್ದು ಪಂಚಾಮೃತ'ದ ಎ.ಆರ್.ಕೆ.ಸ್ವಾಮಿ, 'ನವಕೋಟಿ ನಾರಾಯಣ'ದ ಶಿವಪ್ರಸಾದ್, 'ಕಲಾವತಿ' ಚಿತ್ರಕ್ಕೆ ಜಿ.ಕೆ.ವೆಂಕಟೇಶ್ ಜೊತೆ ಸಂಗೀತ ನೀಡಿದ್ದ ಲಕ್ಷ್ಮಣ ಬರ್ಲೇಕರ್, 'ಪ್ರತಿಜ್ಞೆ'ಯ ಎಸ್.ಹನುಮಂತರಾವ್, 'ವೀರ ವಿಕ್ರಮ'ದ ಟಿ.ಎ.ಮೋತಿನಾಥ್, 'ಇದೇ ಮಹಾಸುದಿನ'ದ ಬಿ.ಗೋಪಾಲ್, 'ದೇವಮಾನವ' ಚಿತ್ರಕ್ಕೆ ಸಂಗೀತ ನೀಡಿದ ಎಸ್. ಎಂ. ಸುಬ್ಬಯ್ಯನಾಯ್ಡು.

ಎಸ್.ಕೆ.ಎ.ಚಾರಿಯವರ 'ಮನೆ ಅಳಿಯ', 'ಮಾವನ ಮಗಳು' ಚಿತ್ರಗಳಿಗೆ ಸಂಗೀತ ನಿರ್ವಹಿಸಿದ ತೆಲುಗಿನವರಾದ ಟಿ.ಚಲಪತಿರಾವ್, 'ಶಿವರಾತ್ರಿ ಮಹಾತ್ಮೆ' ಚಿತ್ರಕ್ಕೆ ಉದಯಶಂಕರ್ ಬರೆದ ಮೊದಲ ಗೀತೆಯನ್ನು ಅಳವಡಿಸಿಕೊಂಡ ಸಂಗೀತ ನಿರ್ದೇಶಕ ಹನುಮಂತರಾವ್ ಮೊದಲಾದವರನ್ನು ಸ್ಮರಿಸಬೇಕು.

ಶಾಸ್ತ್ರೀಯ ಸಂಗೀತಕ್ಷೇತ್ರದಲ್ಲಿ ಎತ್ತರದ ಸ್ಥಾನದಲ್ಲಿರುವ ವೇಣುವಾದನ ನಿಪುಣ, 'ಸಂಗೀತ ಕಲಾನಿಧಿ' ಬಿರುದಾಂಕಿತರಾದ ಎನ್.ರಮಣಿ ಅವರು 'ಮಂತ್ರಾಲಯ ಮಹಾತ್ಮೆ' ಚಿತ್ರದ ಹಲವು ಗೀತೆಗಳಿಗೆ, ಕೆಲವು ಸನ್ನಿವೇಶಗಳಿಗೆ ಕೊಳಲು ನುಡಿಸಿದ್ದೂ ವಿಶೇಷವೇ.

ತೆಲುಗಿನ ಪ್ರಖ್ಯಾತ ಗಾಯಕ ಘಂಟಸಾಲ ಅವರೂ ಕನ್ನಡದಲ್ಲಿ ಕೆಲವು ಚಿತ್ರಗಳಿಗೆ ಸಂಗೀತ ನಿರ್ದೇಶನ ಮಾಡಿದ್ದಾರೆ. ಅವುಗಳಲ್ಲಿ 'ವೀರಕೇಸರಿ' ಮತ್ತು 'ವಾಲ್ಮೀಕಿ' ಮುಖ್ಯವಾದವು. ಈ ಚಿತ್ರದಲ್ಲಿ ''ಸ್ವಾಭಿಮಾನದ ನಲ್ಲೆ...'', ''ಮೆಲ್ಲುಸಿರೇ ಸವಿಗಾನ...'', ''ಮದುವೆ ಮಾಡಿ ಕೊಡು...'' ಮಧುರವಾಗಿ ಮೂಡಿ ಬಂದಿವೆ.

'ಜೇನುಗೂಡು', 'ವಾತ್ಸಲ್ಯ', 'ವಾಗ್ದಾನ' ಚಿತ್ರಗಳಿಗೆ ಸಂಗೀತ ನೀಡಿದ ವಿಜಯಾಕೃಷ್ಣಮೂರ್ತಿಯವರದು ಗಮನಿಸಬೇಕಾದ ಹೆಸರು. ಕೃಷ್ಣಮೂರ್ತಿಗಳು ವಿಜಯಾ ಸಂಸ್ಥೆಯಲ್ಲಿದ್ದುದರಿಂದ ಹೆಸರಿನ ಹಿಂದೆ ಸಂಸ್ಥೆಯ ಹೆಸರೂ ಸೇರಿಕೊಂಡಿತ್ತು. 'ಜೇನುಗೂಡು' ಚಿತ್ರದಲ್ಲಿ ಇವರ ಸಂಯೋಜನೆಯ ''ಜೇನಿರುಳು ಜೊತೆಗೂಡಿರಲು...'' ಗೀತೆ ಕೇಳಿದರೆ ಮೈಮನಗಳು ಜುಂ ಎನ್ನುವಂತಿದೆ. 'ಶಿವಗಂಗೆ ಮಹಾತ್ಮೆ' ಚಿತ್ರಕ್ಕೆ ಸಂಗೀತ ನೀಡಿದ ಜಿ.ಕೆ.ವೆಂಕಟೇಶ್ ಅವರ ಸೋದರ ಜಿ.ಕೆ.ರಘು ಅನೇಕ ಚಿತ್ರಗಳಲ್ಲಿ ಜಿ.ಕೆ.ವೆಂಕಟೇಶ್‌ರ ಸಹಾಯಕರಾಗಿ ದುಡಿದವರು. 'ಮಾವನ ಮಗಳು' ಚಿತ್ರದ ''ಒಲಿಸಿದ ದೇವನ ರಸ ಪೂಜೆಗೆ...'' ಹಲವು ದಶಕ ಗುನುಗಿದ ಹಾಡು.

೧೯೬೬ರಲ್ಲಿ ಮೂರ್ತಿರಾಯರ ಆಷಾಢಭೂತಿ ಕಾದಂಬರಿ ಆಧರಿಸಿದ 'ಸುಬ್ಬಾಶಾಸ್ತ್ರಿ' ಚಿತ್ರಕ್ಕೆ ವೀಣೆ ದೊರೆಸ್ವಾಮಿ ಅಯ್ಯಂಗಾರ್ ಮತ್ತು ಎಸ್.ಕೃಷ್ಣಮೂರ್ತಿ ಸಂಗೀತ ನೀಡಿದರು. 'ಪಾಪ ಪುಣ್ಯ' ಚಿತ್ರಕ್ಕೆ ಸಂಗೀತ ನೀಡಿದ ಪದ್ಮಚರಣ್ (ಎ.ವಿ.ಕೃಷ್ಣಮಾಚಾರಿ), ಶಿವರಾಮ ಕಾರಂತರ 'ಮಲೆಯ ಮಕ್ಕಳು' ಚಿತ್ರಕ್ಕೂ ಸಂಗೀತ ನೀಡಿದರು. ಆದರೆ ಚಿತ್ರಮಾಧ್ಯಮದಲ್ಲಿ ನೆಲೆ ನಿಲ್ಲಲಿಲ್ಲ.

ಹೊಸ ಅಲೆ ಚಿತ್ರಗಳು ಬಂದಾಗ ಅದಕ್ಕೆ ಹೊಂದಿಕೊಂಡಂತೆ ಕೆಲವು ಪ್ರಯೋಗಶೀಲ ಸಂಗೀತ ನಿರ್ದೇಶಕರು ಬಂದರು. ಈಗಾಗಲೇ ಚರ್ಚಿಸಿರುವ ಬಿ.ವಿ.ಕಾರಂತ್ ಮತ್ತು ಅಶ್ವತ್ ಅವರನ್ನು ಹೊರತುಪಡಿಸಿ ಗಮನಿಸಬೇಕಾದ ಹೆಸರುಗಳಲ್ಲಿ ರಾಜೀವ ತಾರಾನಾಥ್ ಪ್ರಮುಖರು. 'ಸಂಗೀತ'ದ ಬಗ್ಗೆ ತಮ್ಮದೇ ಚಿಂತನೆ ಹೊಂದಿರುವ ಅವರು ಚಿತ್ರಕ್ಕೊಂದು ಪ್ರತ್ಯೇಕ ಭಾಷೆಯಿದೆ, ಆ ಭಾಷೆಗೆ ಸಂಗೀತ ವ್ಯಾಕರಣ ಕೊಡುತ್ತದೆ ಎಂದು ಬಲವಾಗಿ ನಂಬಿದವರು. 'ಸಂಸ್ಕಾರ' ಚಿತ್ರದ ಮೂಲಕ ಚಿತ್ರರಂಗ ಪ್ರವೇಶಿಸಿದ ಅವರು 'ಪಲ್ಲವಿ' ಮತ್ತು 'ಶೃಂಗಾರಮಾಸ' ಚಿತ್ರಗಳಿಗೆ ರಾಜ್ಯಪ್ರಶಸ್ತಿ ಪಡೆದಿದ್ದಾರೆ. ಸರೋದ್, ಸಿತಾರ್‌ಗಳನ್ನು ಸಮರ್ಥವಾಗಿ ಬಳಸಿದ ಅವರ ಪ್ರತಿಭೆಯ ಲಾಭ ಕನ್ನಡ ಚಿತ್ರರಂಗಕ್ಕೆ ದೊಡ್ಡ ಪ್ರಮಾಣದಲ್ಲಿ ಆಗದಿದ್ದುದು ಒಂದು ನಷ್ಟವೇ ಸರಿ. 'ವಂಶವೃಕ್ಷ', 'ಮಾಡಿ ಮಡಿದವರು' ಚಿತ್ರಗಳಿಗೆ ಭಾಸ್ಕರ್ ಚಂದಾವರ್ಕರ್, 'ಕರಿಮಾಯಿ' ಮತ್ತು 'ಕಾಡುಕುದುರೆ'ಗೆ ಚಂದ್ರಶೇಖರ ಕಂಬಾರ ಸಂಗೀತ ನೀಡಿದ್ದಾರೆ. ಈ ಪೈಕಿ 'ಕಾಡುಕುದುರೆ'ಯ ಹಾಡಿಗೆ ಶಿವಮೊಗ್ಗ ಸುಬ್ಬಣ್ಣನವರಿಗೆ ರಾಷ್ಟ್ರಪ್ರಶಸ್ತಿ ಬಂದಿತ್ತು. 'ಬೆಂಗಳೂರು ಭೂತ'ದ ಮೂಲಕ ಸಂಗೀತ ನೀಡಿದ ಗುಣಸಿಂಗ್ ಕೂಡ ಇಂತಹುದೇ ಪಟ್ಟಿಗೆ ಸೇರಿರುತ್ತಾರೆ. ಗುಣಸಿಂಗ್ ಉತ್ತಮ ಕೊಳಲು ವಾದಕ, ಹೆಸರಾಂತ ವಾದ್ಯ ಸಂಯೋಜಕರು. ಸ್ವತಂತ್ರವಾಗಿ ಹೆಚ್ಚಿನ ಚಿತ್ರಗಳಿಗೆ ದುಡಿದಿಲ್ಲ. ಆದರೆ ಹೊಸ ಸಂಗೀತ ನಿರ್ದೇಶಕರ ಬೆನ್ನ ಹಿಂದೆ ಇದ್ದು, ನಿಜವಾದ ಕೆಲಸ ಮಾಡಿದ್ದಾರೆ. ಮುಖ್ಯವಾಗಿ ರಾಜೀವ ತಾರಾನಾಥರೊಂದಿಗೆ ಕೆಲಸ ಮಾಡಿದ್ದರು.

ಹಳೆಯ ಪೀಳಿಗೆಯಲ್ಲಿ ಹಂಜು ಇಮಾಮ್, ಡಿ.ವಜ್ರಪ್ಪ, ಬಾಗೇಪಲ್ಲಿ ಸುಬ್ರಹ್ಮಣ್ಯಂ, ಸುಖದೇವ್ ಸಂಗೀತ ನಿರ್ದೇಶಕರ ಪಟ್ಟಿಯಲ್ಲಿ ಉಲ್ಲೇಖಿಸಬಹುದಾದ ಕೆಲವು ಹೆಸರುಗಳು. ಅಂತೆಯೇ ಪರಭಾಷಾ ಪ್ರಮುಖ ಸಂಗೀತ ನಿರ್ದೇಶಕರಾದ ಇಳಯರಾಜ, ಶಂಕರ್-ಗಣೇಶ್, ಕೆ.ವಿ.ಮಹಾದೇವನ್, ರಮೇಶ್‌ನಾಯ್ಡು, ರಮಣನಾಯ್ಡು, ಚಕ್ರವರ್ತಿ ಮುಂತಾದವರು. ಸುಗಮ ಸಂಗೀತ ಕ್ಷೇತ್ರದಲ್ಲಿ ಪ್ರಮುಖರಾದ ಮೈಸೂರು ಅನಂತಸ್ವಾಮಿ, ಇಂದು ವಿಶ್ವನಾಥ್, ಬಿ.ಎಂ.ಸೀತಾರಾಮರಾಜು, ಮದನ್ ಮಲ್ಲು, ಮನೋರಂಜನ್ ಪ್ರಭಾಕರ್ ಕೆಲವು ಚಿತ್ರಗಳಿಗೆ ಸಂಗೀತ ನೀಡಿದ್ದಾರೆ. ತಮಿಳಿನ

(ಚಿತ್ರ ೨೨) ವಾಣಿಜಯರಾಂ, ರವೀ ಮತ್ತು ಕಸ್ತೂರಿಶಂಕರ್

ಇಳಯರಾಜ, ಶಂಕರ್-ಸುಂದರ್, ಚಿತ್ತೂರು ವಿ.ನಾಗಯ್ಯ, ವೀಣಾ ಚಿಟ್ಟಿಬಾಬು, ಕೆ.ವಿ.ಮಹಾದೇವನ್, ಚಕ್ರವರ್ತಿ ಮೊದಲಾದವರೆಲ್ಲ ಒಂದೆರಡು ಚಿತ್ರಗಳಿಗೆ ಸಂಗೀತ ನೀಡಿದ್ದಾರೆ.

ಹಿನ್ನೆಲೆ ಗಾಯಕರು

ಹಿನ್ನೆಲೆ ಗಾಯಕರು ಎಂಬ ಪದ ಪ್ರತ್ಯೇಕವಾಗಿ ಕೇಳಿ ಬಂದಿದ್ದೇ ೫೦ರ ದಶಕದಲ್ಲಿ. ಅಲ್ಲಿಯವರೆಗೂ ನಟ-ನಟಿಯರೇ 'ಗಾಯಕ'ರ ಕೆಲಸವನ್ನು ಮಾಡುತ್ತಿದ್ದರು. ನಾಟಕದ ಹಿನ್ನೆಲೆಯಿಂದ ಬಂದ ಅವರಿಗೆ ಗಾಯನ ಸಹಜ ಕಾಯಕವಾದ್ದರಿಂದ ಗಾಯನ ಎನ್ನುವುದು ಪ್ರತ್ಯೇಕವಾಗಿ ಬೇಕು ಎನ್ನಿಸಿಯೇ ಇರಲಿಲ್ಲ. ಆರ್.ನಾಗೇಂದ್ರರಾವ್, ಜಿ.ನಾಗೇಶರಾಯರು, ಎಂ.ಜಿ.ಮರಿರಾವ್, ಉಡುಪಿ ಲಕ್ಷ್ಮೀಬಾಯಿ, ತ್ರಿಪುರಾಂಬ, ಅಶ್ವತ್ಥಮ್ಮ ಇವರುಗಳು ಕನ್ನಡ ಚಿತ್ರರಂಗದ ಆರಂಭದಲ್ಲಿ ಗಾಯಕ-ಗಾಯಕಿ ಕಮ್ ತಾರೆಯರು. ಅವರು ಹಾಡಿದ ಹಾಡುಗಳು ಕೂಡಾ ಸಾಕಷ್ಟು ಕಾಲ ಮಲುಕು ಹಾಕುವಂತಿದ್ದವು. ಮುಂದೆ ಮಳವಳ್ಳಿ ಸುಂದರಮ್ಮ, ಬಿ.ಜಯಮ್ಮ, ಅಮೀರ್‌ಬಾಯಿ ಕರ್ನಾಟಕಿ ಅವರುಗಳು ಕಾಣಿಸಿಕೊಂಡರು. ಸುಬ್ಬಯ್ಯನಾಯುಡು ಈ ಕಾಲಕ್ಕೆ ಹೆಸರುವಾಸಿಯಾದ ಗಾಯಕರಾಗಿದ್ದರು. ಧ್ವನಿಮುದ್ರಣ ಮದರಾಸಿಗೆ ವರ್ಗಾವಣೆಗೊಂಡ ಮೇಲೆ ಹೆಚ್ಚಿನಂಶ ಕನ್ನಡೇತರರೇ ಹಿನ್ನೆಲೆ ಗಾಯಕರಾಗಿರುತ್ತಿದ್ದರು. ಅವರ ನಡುವೆ ಹೊನ್ನಪ್ಪ ಭಾಗವತರ್, ನೀಲಮ್ಮ ಕಡಾಂಬಿ, ಸರೋಜ, ಸಿ.ಎಸ್.ಸರೋಜಿನಿ, ಪಿ.ಕಾಳಿಂಗರಾವ್, ನಾಗೇಂದ್ರ ಮುಂತಾದ ಕನ್ನಡಿಗರು ಅಲ್ಲೊಂದು ಇಲ್ಲೊಂದು ಹಾಡನ್ನು ಹಾಡುತ್ತಿದ್ದರು.

ಕನ್ನಡದ ಮೊದಲ ಗಾಯಕ-ನಟರಲ್ಲಿ ಹೊನ್ನಪ್ಪ ಭಾಗವತರ್ ಬಹಳ ಮುಖ್ಯರಾದವರು. ೧೯೧೫ರ ಮಕರ ಸಂಕ್ರಾಂತಿ ದಿನ ಹುಟ್ಟಿದ ಹೊನ್ನಪ್ಪ ಕೆಲಸ ಹುಡುಕಿಕೊಂಡು ಬೆಂಗಳೂರಿಗೆ ಬಂದರು. ಎರಡು ರೂಪಾಯಿ ತಿಂಗಳ ಸಂಬಳದ ನೌಕರಿ ಹಿಡಿದು ನೆಲೆ ನಿಂತವರನ್ನು ಸಂಗೀತ ಸೆಳೆಯಿತು. ಪಾರ್ಥಸಾರಥಿ ಭಾಗವತರ ಬಳಿ ಸಂಗೀತ ಕಲಿತವರಿಗೆ ಸಿನಿಮಾ ಕರೆ ಬಂದಿತು. ಅದೂ ತಮಿಳು ಚಿತ್ರರಂಗದಿಂದ. ಅಲ್ಲಿ ಗೆದ್ದ ಹೊನ್ನಪ್ಪ ಭಾಗವತರ್ ಕನ್ನಡ ಚಿತ್ರರಂಗಕ್ಕೆ ಬಂದರು. 'ಭಕ್ತ ಕುಂಬಾರ', 'ಹೇಮರೆಡ್ಡಿ ಮಲ್ಲಮ್ಮ', 'ಗುಣಸಾಗರಿ', 'ಜಗಜ್ಯೋತಿ ಬಸವೇಶ್ವರ', 'ಮಹಾಕವಿ ಕಾಳಿದಾಸ' ಮುಂತಾದ ಪ್ರಮುಖ ಚಿತ್ರಗಳಲ್ಲಿ ಅಭಿನಯದೊಂದಿಗೆ ಗಾಯನವನ್ನು ನೀಡಿದರು. ಇದರಲ್ಲಿ ಕೆಲವು ಅವರ ಸ್ವಂತ ತಯಾರಿಕೆಯ ಚಿತ್ರಗಳೂ ಇದ್ದವು. 'ಮಹಾಕವಿ ಕಾಳಿದಾಸ'ದ "ಶೃಂಗಾರವಾಹಿನಿ ಮನಮೋಹಿನಿ...." ಒಂದು ಮರೆಯಲಾಗದ ಗೀತೆ.

(ಚಿತ್ರ ೨೩) ಆರ್.ರತ್ನ ಮತ್ತು ಎಲ್.ಆರ್.ಈಶ್ವರಿ

ಸುಗಮ ಸಂಗೀತ ಕ್ಷೇತ್ರದ ದಿಗ್ಗಜ ಕಾಳಿಂಗರಾವ್ 'ಕೃಷ್ಣಲೀಲಾ', 'ಮಂಗಳಗೌರಿ', 'ಕಿತ್ತೂರು ಚೆನ್ನಮ್ಮ', 'ತುಂಬಿದ ಕೊಡ', 'ಕೈವಾರ ಮಹಾತ್ಮೆ', 'ಮಹಾಶಿಲ್ಪಿ' ಮುಂತಾದ ಚಿತ್ರಗಳಲ್ಲಿ ಹಾಡಿದ್ದಾರೆ. "ಅಂತಿಂಥ ಹೆಣ್ಣು ನೀನಲ್ಲ..." ರಾಯರ ಪ್ರತಿಭೆಗೆ ಸಾಕ್ಷಿಯಾದ ಗೀತೆ. ಇವರ ಪ್ರಿಯ ಬಾಂಧವಿ ಮೋಹನಕುಮಾರಿ 'ಮಂಗಳಗೌರಿ'ಯಲ್ಲಿ, ಸಿ.ಎಸ್.ಸರೋಜಿನಿ 'ಸರ್ವಜ್ಞಮೂರ್ತಿ' ಚಿತ್ರದಲ್ಲೂ, ಹೆಚ್.ಆರ್.ಲೀಲಾವತಿ 'ಪ್ರಭುಲಿಂಗಲೀಲೆ'ಯಲ್ಲಿ ಹಾಡಿದರು. ಇವರ ಪ್ರತಿಭೆಯನ್ನು ಕನ್ನಡ ಚಿತ್ರರಂಗ ಸರಿಯಾಗಿ ಬಳಸಿಕೊಳ್ಳಲಿಲ್ಲ.

ರಾಜನ್ ನಾಗೇಂದ್ರ ಜೋಡಿಯ ನಾಗೇಂದ್ರ ಗಾಯಕರೂ ಹೌದು. 'ನಮ್ಮೂರೇ ಚೆಂದ ನಮ್ಮವರೇ ಅಂದ..', 'ಯಾರು ಯಾರು ನೀ ಯಾರು..', 'ಭಾಮಾ ಭಾಮಾ ನಾನರಿಯೆ ಮನದ ಮರ್ಮ...', 'ಬಾನಲಿ ತಾರಾವೃಂದದ ನಡುವೆ...' ಮುಂತಾದ ಮಧುರ ಗೀತೆಗಳನ್ನು ಅವರು ಹಾಡಿದ್ದಾರೆ.

ಸಂಗೀತ ನಿರ್ದೇಶಕ ಜಿ.ಕೆ.ವೆಂಕಟೇಶ್ ಕೂಡ ತಮ್ಮ ಗಾಯನದ ಪ್ರಯೋಜನವನ್ನು ಅಲ್ಲಲ್ಲಿ ನೀಡಿದ್ದಾರೆ. 'ಕನ್ನಡದಾ ಮಕ್ಕಳೆಲ್ಲ ಒಂದಾಗಿ ಬನ್ನಿ...' (ಕಣ್ತೆರೆದು ನೋಡು), 'ನೆಂಟ ಕೇಳೊ ಕಿವಿಗೊಟ್ಟು...' (ಭೂದಾನ), 'ವಿರಸವೆಂಬ ವಿಷಕೆ...' (ಬೂತಯ್ಯನ ಮಗ ಅಯ್ಯು) ಅವರ ಕಂಠದಲ್ಲಿ ಮಿಂಚಿದ ಕೆಲವು ಗೀತೆಗಳು.

ಇವರು ನಮ್ಮವರೇ ಎಂದು ಯಾವ ಕನ್ನಡಿಗರೂ ಒಪ್ಪಿಕೊಳ್ಳುವಷ್ಟು ನಮ್ಮವರಾದ ಗಾಯಕ ಪಿ.ಬಿ.ಶ್ರೀನಿವಾಸ್ ಆರ್.ನಾಗೇಂದ್ರರಾಯರ ಶೋಧ. ಅವರೇ ರಚಿಸಿದ ಗೀತೆಗಳನ್ನು ಹಾಡಿಸಿದರು. 'ಜಾತಕ ಫಲ' ಇವರು ಕಂಠ ನೀಡಿದ ಮೊದಲ ಚಿತ್ರ. ಆರ್.ಗೋವರ್ಧನ್ ಸಂಗೀತ ನಿರ್ದೇಶನದಲ್ಲಿ "ಚಿಂತಿಸದಿರು ರಮಣೀ..." ಗೀತೆಯನ್ನು ಮೊಟ್ಟಮೊದಲು ಹಾಡಿದರು. ನಂತರ 'ಭಕ್ತ ಕನಕದಾಸ' ಮತ್ತು 'ಸಂತ ತುಕಾರಾಂ' ಶ್ರೀನಿವಾಸ್ ಅವರಿಗೆ ದೊಡ್ಡ ಪ್ರಮಾಣದಲ್ಲಿ ಹೆಸರು ತಂದುಕೊಟ್ಟಿತು. ಭಕ್ತಿರಸವನ್ನು ಈ ಗಾಯಕ ಹೃದಯಾರ್ದ್ರವಾಗಿ ಹೇಳಿದ ರೀತಿಗೆ ಎಲ್ಲರೂ ಬೆರಗಾದರು. ಆಂಧ್ರಪ್ರದೇಶದ ಕಾಕಿನಾಡದವರಾದ ಅವರ ಮನೆಮಾತು ತೆಲುಗು. ಬಿ.ಕಾಂ. ಪದವೀಧರರಾದ ಇವರು ಚಿತ್ರರಂಗಕ್ಕೆ ಬಂದದ್ದೇ ವಿಶೇಷ. ಪಿ.ಬಿ.ಶ್ರೀನಿವಾಸ್ ಹಾಡಿದ 'ಓಹಿಲೇಶ್ವರ'ದ "ನಾ ಪಾಪವದೇನ ಮಾಡಿದೆ..." ಪ್ರಥಮ ಬಾರಿಗೆ ರಾಜಕುಮಾರ್ ಅವರಿಗೆ ಹಾಡಿದ ಗೀತೆ. ಅನಂತರ ಈ ಜೋಡಿ ಬಹುಕಾಲ ಜನಮನ ಸೂರೆಗೊಂಡಿತು. ರಾಜ್ ಅವರ ಶಾರೀರವೆಂದೇ ಹೆಸರಾದ ಪಿ.ಬಿ.ಶ್ರೀನಿವಾಸ್ ಮುಂದೆ ರಾಜಕುಮಾರ್ ತಾವೇ ಹಾಡುವವರೆಗೂ ಅವರ ಸೊಗಸಾದ ಜೋಡಿಯಾಗಿ ನೂರಾರು ಗೀತೆಗಳನ್ನು ಹಾಡಿದರು. ಇದಲ್ಲದೆ ಎಂಟು ಭಾಷೆಗಳಲ್ಲಿ ಅವರು ಹಾಡಿರುವ ಸಾವಿರಾರು ಗೀತೆಗಳು ರಸಿಕರ ಮನ ಗೆದ್ದಿತು. ಪಿ.ಬಿ.ಶ್ರೀನಿವಾಸ್ ಎಂದೂ ಗಾಯನದಲ್ಲಿ ಗಿಮಿಕ್ಸ್ ಮಾಡಿದವರಲ್ಲ. ಸ್ವತಃ ಕವಿ ಹೃದಯಿಯಾದ ಅವರು ಭಾವಗಳನ್ನು ಅನುಭವಿಸಿ ಹಾಡುತ್ತಿದ್ದರು. 'ಭಾಗ್ಯಜ್ಯೋತಿ' ಚಿತ್ರಕ್ಕೆ ಸಂಸ್ಕೃತದಲ್ಲಿ ಬ್ಯಾಲೆಯನ್ನು ರಚಿಸಿದ್ದರು. ಕನ್ನಡವೂ ಸೇರಿದಂತೆ ಎಂಟು ಭಾಷೆಗಳಲ್ಲಿ ಘಜಲ್‌ಗಳನ್ನು ಬರೆದಿದ್ದಾರೆ.

'ಕಣ್ತೆರೆದು ನೋಡು', 'ರಣಧೀರ ಕಂಠೀರವ', 'ಕಸ್ತೂರಿ ನಿವಾಸ', 'ಮಂತ್ರಾಲಯ ಮಹಾತ್ಮೆ', 'ಸತಿಶಕ್ತಿ', 'ಶ್ರೀಕೃಷ್ಣದೇವರಾಯ', 'ಎರಡು ಕನಸು', 'ಗೌರಿ', 'ಭಕ್ತ ಕುಂಬಾರ' ಮೊದಲಾದ ಚಿತ್ರಗಳಿಗೆ ಇವರು ಹಾಡಿದ ಗೀತೆಗಳನ್ನು ಜನ ಮರೆಯಲಾರರು.

'ಕನಕದಾಸ' ಚಿತ್ರದ "ಬಾಗಿಲನು ತೆರೆದು...", "ಕುಲ ಕುಲವೆಂದು ಹೊಡೆದಾಡದಿರಿ...", "ಈತನೀಗ ವಾಸುದೇವನೋ...", 'ಸಂತ ತುಕಾರಾಂ' ಚಿತ್ರದ ಎಲ್ಲ ಹಾಡುಗಳು, 'ಅನುರಾಧ' ಚಿತ್ರದ "ಗುಮ್ಮನ ಕರೆಯದಿರೇ...", 'ನ್ಯಾಯವೇ ದೇವರು' ಚಿತ್ರದ "ಆಕಾಶವೆ ಬೀಳಲಿ ಮೇಲೆ..." ಹೀಗೆ ಅವರು ಹಾಡಿರುವ ಶ್ರೇಷ್ಠ ಗೀತೆಗಳು ಸಾವಿರಾರು. ಕರ್ನಾಟಕ ಸಂಗೀತದ ೭೨ ಮೇಳಕರ್ತ ರಾಗಗಳನ್ನು ಸುಲಭವಾಗಿ ಗುರುತಿಸಲು ಸಾಧ್ಯವಾಗುವಂತೆ ಸಿದ್ಧಪಡಿಸಿರುವ 'ಡೈಮಂಡ್ ಕೀ' ಸಂಗೀತ ಕ್ಷೇತ್ರಕ್ಕೆ ಇವರ ಕೊಡುಗೆ.

ಅರಿಜೋನಾದ ಟಸ್ಕರ್ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಮತ್ತು ಕರ್ನಾಟಕ ಸರ್ಕಾರ ರಾಜ್ಯೋತ್ಸವ ಪ್ರಶಸ್ತಿ ಲಭಿಸಿದೆ.

ಎಸ್.ಪಿ.ಬಾಲಸುಬ್ರಹ್ಮಣ್ಯಂ ಕೂಡ ಕನ್ನಡ ಗೀತೆಗಳನ್ನು ಭಾವಪೂರ್ಣವಾಗಿ ಹಾಡಿ ಕನ್ನಡಿಗರ ಮನದಲ್ಲಿ ನೆಲೆನಿಂತ ಇನ್ನೊಬ್ಬ ಶ್ರೇಷ್ಠ ಗಾಯಕರು. ಅಭಿನಯಿಸುವ ನಟರನ್ನು ಗಮನದಲ್ಲಿಟ್ಟುಕೊಂಡು ಹೊಂದುವಂತೆ ಹಾಡುವ ಎಸ್.ಪಿ.ಬಾಲಸುಬ್ರಹ್ಮಣ್ಯಂ ಅವರು ಇಂದು ಬಹು ಬೇಡಿಕೆಯ ಗಾಯಕ, ಜೊತೆಗೆ ನಟ ಕೂಡ. ಅಪರೂಪಕ್ಕೆ 'ಸಂದರ್ಭ' ಚಿತ್ರಕ್ಕೆ ಸಂಗೀತ ನಿರ್ದೇಶನವನ್ನೂ ಮಾಡಿದ್ದರು. ಎಸ್.ಪಿ.ಬಾಲಸುಬ್ರಹ್ಮಣ್ಯಂ ಗಾಯಕರಾಗಿ ನಮ್ಮನ್ನು ಕನಸುಗಳಲ್ಲೂ ಕಾಡುತ್ತಾರೆ. ನಂತರ ಜೇಸುದಾಸ್ ಖ್ಯಾತ ಗಾಯಕರಾಗಿ ತಮ್ಮದೇ ಛಾಪು ಮೂಡಿಸಿದವರು. ಶಾಸ್ತ್ರೀಯ ಸಂಗೀತ-ಚಲನಚಿತ್ರ ಸಂಗೀತ ಎರಡೂ ಪ್ರಕಾರಗಳಲ್ಲಿ ಮಿಂಚಿ ದೂರ ಕಾಯ್ದುಕೊಂಡವರು.

(ಚಿತ್ರ ೨೪-೨೫) ಜೇಸುದಾಸ್

ರಾಜಕುಮಾರ್ ಭಾರತಿ

ಮಹಮದ್ ರಫಿ ಹಾಡಿರುವ 'ನೀನೆಲ್ಲಿ ನಡೆವೆ ದೂರ...' (ಒಂದೇ ಬಳ್ಳಿಯ ಹೂಗಳು), ಮನ್ನಾಡೆ ಹಾಡಿರುವ 'ಕುಹೂ ಕುಹೂ...' (ಕಲಾವತಿ), ಲತಾ ಮಂಗೇಶ್ಕರ್ ಹಾಡಿರುವ 'ಬೆಳ್ಳನೆ ಬೆಳಗಾಯಿತು...' (ಸಂಗೊಳ್ಳಿ ರಾಯಣ್ಣ), ಕೃಷ್ಣಾಕಲ್ಲೆ ಹಾಡಿರುವ 'ಒಂದೊಂದಾಗಿ ಜಾರಿದರೆ...' ನೆನಪಿನಲ್ಲುಳಿಯುವ ಗೀತೆಗಳು.

ಖ್ಯಾತ ಹಿಂದೂಸ್ಥಾನಿ ಗಾಯಕ ಭೀಮಸೇನ ಜೋಷಿ 'ಸಂಧ್ಯಾರಾಗ', 'ನೋಡಿ ಸ್ವಾಮಿ ನಾವಿರೋದು ಹೀಗೆ' ಮುಂತಾದ ಚಿತ್ರಗಳಲ್ಲಿ ಹಾಡಿದ್ದಾರೆ.

ಕನ್ನಡ ಚಿತ್ರರಂಗ ಕಂಡ ಮತ್ತೊಂದು ಪೀಳಿಗೆಯ ಗಾಯಕಿಯರಲ್ಲಿ ಪಿ.ಲೀಲಾ, ಜಿಕ್ಕಿ, ಜಮುನಾರಾಣಿ, ಬಾಲಸರಸ್ವತಿ, ಪಿ.ಸುಶೀಲ, ಎಸ್.ಜಾನಕಿ, ವಾಣಿಜಯರಾಂ ಮುಖ್ಯರಾದವರು. ಇವರು ದಕ್ಷಿಣ ಭಾರತದ ಎಲ್ಲಾ ಭಾಷೆಯಲ್ಲಿ ತಮ್ಮ ಕಂಠಸಿರಿ ಮೆರೆದಿರುವುದಲ್ಲದೆ ತಮ್ಮದೇ ಅನನ್ಯತೆಯನ್ನು ಉಳಿಸಿದ್ದಾರೆ. ಜಾನಕಿ ಅವರು ಸ್ವರದ ಆರೋಹಣ, ಅವರೋಹಣದ ಶಿಖರಗಳನ್ನು ಸಲೀಸಾಗಿ ಹತ್ತಿ ಇಳಿಯಬಲ್ಲಂಥವರು. ಹೀಗಾಗಿ ಸಣ್ಣ ಮಕ್ಕಳ ಸ್ವರದಲ್ಲೂ ಹಾಡಬಲ್ಲವರಾಗಿದ್ದರು. ವಾಣಿಜಯರಾಂ ಸುಶ್ರಾವ್ಯವಾಗಿ ಹಾಡಿದರೆ ಪಿ.ಸುಶೀಲ ಭಾವನಾತ್ಮಕ ಗೀತೆಗಳಲ್ಲಿ ಪ್ರಮುಖವಾಗಿ ಗೆದ್ದರು. ಹೀಗಾಗಿ ಯುಗಳ ಗೀತೆಗಳಲ್ಲಿ ಪಿ.ಸುಶೀಲಾ ಅವರ ಹೆಸರು ಹೆಚ್ಚು ಕೇಳಿಬರುತ್ತದೆ.

ದಾಕ್ಷಿಣಾತ್ಯ ಚಿತ್ರಗಳಿಗೆ ಕನ್ನಡದ ಪ್ರಮುಖ ಕೊಡುಗೆ ಬೆಂಗಳೂರು ಲತಾ. ಇವರು 'ಕಣ್ತೆರೆದು ನೋಡು', 'ಕೈವಾರ ಮಹಾತ್ಮೆ', 'ಮಹಾತ್ಮಾ ಕಬೀರ್', 'ಸಂಪೂರ್ಣ ರಾಮಾಯಣ' (ತ್ರಿಭಾಷಾ ಚಿತ್ರ), 'ಜೇನು ಗೂಡು'. 'ಮನ ಮೆಚ್ಚಿದ ಮಡದಿ', 'ಜ್ವಾಲಾಮುಖಿ', 'ಧ್ರುವತಾರೆ' ಮುಂತಾದ ಚಿತ್ರಗಳಲ್ಲಿ ಹಾಡಿದ್ದಾರೆ. ಆದರೆ ಎರಡು ದಶಕಗಳ ಕಾಲದ ವೃತ್ತಿಪರ ಜೀವನದಲ್ಲಿ ಅಲ್ಲೊಂದು ಇಲ್ಲೊಂದು ಉಲ್ಲೇಖಗಳು ಕಾಣುವುದು ವಿಪರ್ಯಾಸವೇ ಸರಿ.

೧೯೭೫ರಲ್ಲಿ 'ಭಾಗ್ಯಜ್ಯೋತಿ' ಮೂಲಕ ಪರಿಚಿತರಾದ ಕಸ್ತೂರಿಶಂಕರ್ ಸುಗಮ ಸಂಗೀತಕ್ಷೇತ್ರದ ಜೊತೆಯಲ್ಲೇ ಚಿತ್ರರಂಗಕ್ಕೆ ಬಂದವರು. 'ಬಿಳೀ ಹೆಂಡ್ತಿ', 'ಪಡುವಾರಳ್ಳಿ ಪಾಂಡವರು', 'ಕಥಾಸಂಗಮ', 'ಮಾಗಿಯ ಕನಸು', 'ತಾಯಿಗೆ ತಕ್ಕ ಮಗ', 'ತುಳಸಿ' ಮುಂತಾದ ಚಿತ್ರಗಳಲ್ಲಿ ಇವರ ಗಾಯನವಿದೆ. ಇದೇ ದಶಕದಲ್ಲಿ ಪರಿಚಿತರಾದ ಸುಲೋಚನಾ 'ಕೂಡಿ ಬಾಳೋಣ'ದಿಂದ ಚಿತ್ರರಂಗಕ್ಕೆ ಬಂದವರು. 'ಕಾಕನ ಕೋಟೆ', 'ರವಿಚಂದ್ರ', 'ಹಾಲುಜೇನು', 'ಮುನಿಯನ ಮಾದರಿ', 'ಕಾಮನಬಿಲ್ಲು' ಮುಂತಾದ ಚಿತ್ರಗಳಲ್ಲಿ ಹಾಡಿದ್ದಾರೆ. ಈ ಇಬ್ಬರನ್ನು ಕನ್ನಡ ಚಿತ್ರರಂಗ ಸರಿಯಾಗಿ ಬಳಸಿಕೊಳ್ಳಲಿಲ್ಲ ಎಂಬುದು ವಿಷಾದದ ಸಂಗತಿ.

'ಸಂಪತ್ತಿಗೆ ಸವಾಲ್' ಚಿತ್ರದಿಂದ ಗಾಯನವನ್ನೂ ತಮ್ಮ ವೃತ್ತಿಜೀವನದಲ್ಲಿ ಅಳವಡಿಸಿಕೊಂಡ ರಾಜಕುಮಾರ್ ಗಾಯಕರಾಗಿಯೂ ಚಿತ್ರರಂಗದಲ್ಲಿ ದೊಡ್ಡ ಪ್ರಮಾಣದಲ್ಲಿ ಬೆಳೆದಿದ್ದಲ್ಲದೆ ರಾಷ್ಟ್ರಪ್ರಶಸ್ತಿಯನ್ನು ಪಡೆದರು. ಈ ಹಿಂದೆ 'ಓಹಿಲೇಶ್ವರ'ದಲ್ಲಿ "ಶರಣು ಶಂಭೋ ಶಿವ...", 'ಮಹಿಷಾಸುರ ಮರ್ದಿನಿ'ಯಲ್ಲಿ "ತುಂಬಿತು ಮನವ ತಂದಿತು ಸುಖವ..." ಮುಂತಾದ ಗೀತೆಗಳನ್ನು ಹೇಳಿದರೂ ಅವರು ಗಾಯಕರಾಗಿ ವೃತ್ತಿಪರರಾದದ್ದು "ಯಾರೇ ಕೂಗಾಡಲಿ..." ಎನ್ನುವ ಹಾಡಿನಿಂದಲೇ. ಇಲ್ಲಿಂದ ಮುಂದೆ ರಾಜಕುಮಾರ್ ನೂರಾರು ಗೀತೆಗಳನ್ನು ಹಾಡಿದ್ದಾರೆ. "ಬಾನಿಗೊಂದು ಎಲ್ಲೆ ಎಲ್ಲಿದೆ...", "ಆರಾಧಿಸುವೆ ಮದನಾರಿ...", "ನಗುವೆಯಾ ಹೆಣ್ಣೆ ನೀನು ಜಾರಿ ಬೀಳುವಾಗ...", "ಈ ಸಮಯ ಆನಂದಮಯ...", "ಓ ಪ್ರಿಯತಮ...", "ಅನುರಾಗದಾ ಭೋಗ...", "ಮಾಣಿಕ್ಯ ವೀಣಾ...", "ಚಿನ್ನ ಬಾಳಲ್ಲಿ ಈ ರಾತ್ರಿ...", "ಒಂದು ಮಾತು...", "ಹೂವಿಂದ ಬರೆದ ಕಥೆಯು...", "ನಗಲಾರದೆ ಅಳಲಾರದೆ...", "ನಾದಮಯ ಈ ಲೋಕವೆಲ್ಲ...", "ಹುಟ್ಟಿದರೆ ಕನ್ನಡ ನಾಡಲ್ಲಿ...", "ಜನರಿಂದ ನಾನು ಮೇಲೆ ಬಂದೆ..." ಹೀಗೆ ಅವರ ಹಲವು ಹತ್ತು ಹಾಡುಗಳು ಜನರನ್ನು ರಂಜಿಸಿವೆ. ತಮ್ಮ ಪಾತ್ರಕ್ಕೆ ಮಾತ್ರವೇ ಅಲ್ಲದೆ ಇತರರಿಗೆ ಮತ್ತು ಹಿನ್ನೆಲೆಗೆ ಹಾಡಿದ ಗೀತೆಗಳೂ ಅಧಿಕ ಸಂಖ್ಯೆಯಲ್ಲಿವೆ.

ಹಿನ್ನೆಲೆ ಗಾಯನಕ್ಕಾಗಿ ಕನ್ನಡಕ್ಕೆ ಮೊದಲ ರಾಷ್ಟ್ರಪ್ರಶಸ್ತಿ ತಂದುಕೊಟ್ಟ ಶಿವಮೊಗ್ಗ ಸುಬ್ಬಣ್ಣ ಕನ್ನಡ ಚಿತ್ರರಂಗದಲ್ಲಿ ಪ್ರತಿಭೆಯಿದ್ದೂ ಅವಕಾಶ ವಂಚಿತರಾದ ಗಾಯಕ. 'ಕಾಡು ಕುದುರೆ', 'ಸಂಗೀತಾ', 'ತ್ರಿಶೂಲ', 'ಸಂತ ಶಿಶುನಾಳ ಷರೀಫ' ಮುಂತಾದ ಚಿತ್ರಗಳಲ್ಲಿ ಹಾಡಿದರೂ ಅದು ಅಲ್ಲೊಂದು ಇಲ್ಲೊಂದು ಅನ್ನುವಂತೆ ಹರಿದು ಹಂಚಿ ಹೋಯಿತು.. ಇವರಂತೆಯೇ ಇನ್ನೊಬ್ಬ ಸುಗಮ ಸಂಗೀತ ಕಲಾವಿದ ಸಿ.ಅಶ್ವತ್ಥ್ 'ಸ್ಪಂದನ', 'ಆಲೆಮನೆ', 'ಸಂತ ಶಿಶುನಾಳ ಷರೀಫ', 'ಮೈಸೂರು ಮಲ್ಲಿಗೆ', 'ಚಿನ್ನಾರಿ ಮುತ್ತ', 'ಹೂವು ಹಣ್ಣು' ಮುಂತಾದ ಚಿತ್ರಗಳಲ್ಲಿ ಹಾಡಿದರು.

೧೯೮೮ರಲ್ಲಿ 'ರೌಡಿರಾಜ' ಚಿತ್ರದ ಮೂಲಕ ಹಿನ್ನೆಲೆ ಗಾಯಕಿಯಾಗಿ ಚಿತ್ರರಂಗ ಪ್ರವೇಶಿಸಿದ ಮಂಜುಳಾ ಗುರುರಾಜ್ ಪ್ರತಿಭಾವಂತೆ. ಅನೇಕ ಗೀತೆಗಳನ್ನು ಹಾಡಿದರೂ 'ಸಂಜುಂಡಿ ಕಲ್ಯಾಣ' ಚಿತ್ರದ "ಒಳಗ ಸೇರಿದರೆ ಗುಂಡು ಹುಡುಗಿ ಆಗುವಳು ಗಂಡು..." ಜನಪ್ರಿಯವಾಯಿತು. ಮುಂದೆ ಕೆಲಕಾಲ ಮಂಜುಳಾ ಅವರಿಗೆ ಅಂಥವೇ ಗೀತೆಗಳನ್ನು ಹಾಡುವ ಅನಿವಾರ್ಯವೂ ಬಂತು. ಮಂಜುಳಾ ಅಂಥ ತೊಡಕುಗಳನ್ನು ನಿವಾರಿಸಿಕೊಂಡು ಎಲ್ಲ ಬಗೆಯ ಹಾಡಿಕೆಯನ್ನೂ ನಿರ್ವಹಿಸಿದರು. 'ಬೆಳದಿಂಗಳ ಬಾಲೆ' ಚಿತ್ರದಲ್ಲಿ ಅದೃಶ್ಯ ನಾಯಕಿಯನ್ನು ತಮ್ಮ ಕಂಠದಲ್ಲೇ ಪರಿಚಯಿಸಿದರು ಮಂಜುಳಾ ಗುರುರಾಜ್. ಅವರ ವಿಶಿಷ್ಟ ಧ್ವನಿಗಾಗಿ ರಾಜ್ಯ ಪ್ರಶಸ್ತಿಯನ್ನು ಪಡೆದರು.

೮೦ರ ದಶಕದಲ್ಲಿ ಬಂದ ಗಾಯಕಿ ಬಿ.ಆರ್.ಛಾಯಾ. 'ಅಮೃತ ಘಳಿಗೆ'ಯಿಂದ ಚಿತ್ರರಂಗಕ್ಕೆ ಬಂದ ಇವರು 'ಕಾಡಿನ ಬೆಂಕಿ', 'ದೇವತಾ ಮನುಷ್ಯ', 'ಇಂದ್ರಜಿತ್' ಮುಂತಾದ ಚಿತ್ರಗಳಲ್ಲಿ ಹಾಡಿದ್ದಾರೆ. ನೂರು ಚಿತ್ರಗಳಲ್ಲಿ ಹಾಡಿದ್ದಾರೆ ಎಂಬ ದಾಖಲೆ ಇದ್ದರೂ ಅವುಗಳಲ್ಲಿ ಹೆಚ್ಚಿನವು ಕನ್ನಡಿಗರಿಗೆ ತಲುಪಲೇ ಇಲ್ಲ. ಸಪ್ತಭಾಷಾ ಗಾಯಕಿಯಾದ ಇವರು 'ಹೃದಯ ಹಾಡಿತು', 'ಜೀವನ ಚೈತ್ರ', 'ಆಕಸ್ಮಿಕ', 'ಚಿನ್ನಾರಿ ಮುತ್ತ' ಮುಂತಾದ ಚಿತ್ರಗಳಲ್ಲಿ ಸೊಗಸಾಗಿ ಹಾಡಿದ್ದಾರೆ, ಪ್ರಶಸ್ತಿಗಳನ್ನು ಪಡೆದಿದ್ದಾರೆ.

ರಂಗಭೂಮಿಯಲ್ಲಿ ಸಾಕಷ್ಟು ಹೆಸರು ಮಾಡಿರುವ ನಟಿ ಗಾಯಕಿ-ನಿರ್ದೇಶಕಿ ಬಿ.ಜಯಶ್ರೀ ತಮ್ಮ ಮಾದಕ ಹಾಗೂ ವಿರುದ್ಧ ಧ್ವನಿಯಿಂದ ಗಮನ ಸೆಳೆದರು. ಇವರ ಕಂಠಸಿರಿಗೆ ಮಾರುಹೋದ ಸಂಗೀತ ನಿರ್ದೇಶಕರು ಇವರನ್ನು ಚಲನಚಿತ್ರ ಹಿನ್ನೆಲೆ ಗಾಯನಕ್ಕೆ ಕರೆತಂದರು. ಕಂಠದಾನ ಕಲಾವಿದೆಯಾಗಿ ಸಾಕಷ್ಟು ಕಲಾವಿದೆಯರ ಭಾವಕ್ಕೆ ಜೀವತುಂಬಿದ ಜಯಶ್ರೀ ತಮ್ಮ ಕಂಠಸಿರಿಯಿಂದ ಮಾಲಾಶ್ರೀ ಶುಭ ಅವರನ್ನು ಹಿಂದೆ ಸರಿಯುವಂತೆ ಮಾಡಿದರು. ಈಕೆ ಹಾಡಿರುವ 'ಆದಿತ್ಯ' ಚಿತ್ರದ "ರಂಭೆ ನೀ ಬಿಯ್ಯಾರದ ರಂಭೆ...", 'ಯಾರೇ ನೀನು ಚೆಲುವೆ' ಚಿತ್ರದ "ಚಕ್ಕೋತ ಚಕ್ಕೋತ...", 'ನಾಗಮಂಡಲ'ದ "ಗವಿಯಬೇಕು ಮಗಳೆ ಗವಿಯಬೇಕು..." ಮುಂತಾದ ಹಾಡುಗಳಿಂದ ಎಪ್ಪತ್ತರ ದಶಕದಲ್ಲಿ ಅನಿವಾರ್ಯವಾಗಿದ್ದ ಎಲ್.ಆರ್.ಈಶ್ವರಿ ಅವರನ್ನು ನೆನಪಿಸುತ್ತಾರೆ.

(ಚಿತ್ರ೨೬ ೨೮) ಬಿ.ಜಯಶ್ರೀ ಬಿ.ಆರ್.ಛಾಯಾ ಮಂಜುಳಾ ಗುರುರಾಜ್

ದಾಖಲೆಯ ದೃಷ್ಟಿಯಿಂದ ಅಲ್ಲೊಂದು ಇಲ್ಲೊಂದು ಹಾಡನ್ನು ಹೇಳಿ ತಮ್ಮ ಪ್ರತಿಭೆಯನ್ನು ಮೆರೆದ ಅನೇಕ ಕನ್ನಡ ಗಾಯಕ ಗಾಯಕಿಯರಿದ್ದಾರೆ. ಅವರೆಂದರೆ ಕೆಂಪರಾಜ ಅರಸ್ (ಜೀವನ ನಾಟಕ), ಮೈನಾವತಿ (ಭಕ್ತ ವಿಜಯ), ಮುಸುರಿ ಕೃಷ್ಣಮೂರ್ತಿ (ಶಿವಶರಣೆ ನಂಬಿಯಕ್ಕ), ಚಂದ್ರಕಲಾ (ಮನಶ್ಶಾಂತಿ), ಆರ್.ಎನ್.ಸುದರ್ಶನ್ (ನಗುವ ಹೂವು), ವಿಷ್ಣುವರ್ಧನ್ (ಜಿಮ್ಮಿಗಲ್ಲು), ಪುನೀತ್ ರಾಜಕುಮಾರ್ (ಚಲಿಸುವ ಮೋಡಗಳು), ಸುರೇಶ್ ಹೆಬ್ಳೀಕರ್ (ಆಗಂತುಕ), ಜ್ಯೋತಿ (ಬಾಂಧವ್ಯ), ಹೆಚ್.ಪಿ.ಗೀತಾ (ತ್ರಿವೇಣಿ), ಎಸ್.ವಿದ್ಯಾರಾಣಿ (ಬಯಸದೇ ಬಂದ ಭಾಗ್ಯ), ಮೈಸೂರು ದೇವದಾಸ್ (ಶರಪಂಜರ), ಎಂ.ಎಲ್.ಸುಧಾಕರ್ (ಕಲ್ಯಾಣಿ), ಜಿ.ಬಾಲಕೃಷ್ಣ (ತ್ರಿವೇಣಿ), ರತ್ನಮಾಲಾ (ಗುರಿ), ನರಸಿಂಹನಾಯಕ್ (ಅವಸ), ಸಂಗೀತಾಕಟ್ಟಿ (ಕಿತ್ತೂರಿನ ಹುಲಿ), ಚಂದ್ರಿಕಾ ಗುರುರಾಜ್ (ಇಂದ್ರಜಿತ್), ಎಂ.ಎಸ್.ಶೀಲಾ (ಸುಭದ್ರಾ ಕಲ್ಯಾಣ), ಎ.ಎಂ.ಗೌರಿ (ಸಂದರ್ಭ), ಬಾಲಕೃಷ್ಣ (ಚಿರಂಜೀವಿ), ಸೌಮ್ಯ, ಶಶಿಧರಕೋಟೆ, ಅರ್ಚನಾ ಉಡುಪ ಹೀಗೆ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಇವರೆಲ್ಲ ಇಲ್ಲಿ ಹೇಳಿದ ಚಿತ್ರಗಳಿಗೆ ಮಾತ್ರವೇ ಅಲ್ಲ, ಮತ್ತೂ ಕಲವು ಚಿತ್ರಗಳಿಗೆ ಹಾಡಿದ್ದಾರೆ. ಹೊಸ ಪೀಳಿಗೆಯಲ್ಲಿ ರಾಘವೇಂದ್ರ ರಾಜಕುಮಾರ್ ತಮ್ಮ ತಂದೆಯಂತೆಯೇ ಅಭಿನಯದ ಜೊತೆಯಲ್ಲಿ ಗಾಯನವನ್ನೂ ಮಾಡುತ್ತಿದ್ದಾರೆ. ಆದರೆ ಅವರ ಪ್ರತಿಭೆಗೆ ಸವಾಲಾಗುವ ಸಂಗೀತಮಯ ಚಿತ್ರ ಇದುವರೆಗೆ ಬರಲಿಲ್ಲ.



(ಚಿತ್ರ೨೯-೩೦) ಶಿವಮೊಗ್ಗ ಸುಬ್ಬಣ್ಣ

ಲತಾ ಹಂಸಲೇಖ

ಆಕಾಶವಾಣಿ

ಕಳೆದ ಶತಮಾನದ ಆರಂಭದಲ್ಲಿ ಲಭ್ಯವಿದ್ದ ಏಕೈಕ ಸಂಪರ್ಕ ಸಾಧನ ಎಂದರೆ ರೇಡಿಯೋ. ವಾರ್ತೆಯಿಂದ ಮನೋರಂಜನೆಯವರೆಗೂ ಇದರ ಪ್ರಭಾವ ಎಲ್ಲಾ ವರ್ಗದ ಮೇಲೂ ಇತ್ತು. ೧೯೩೦ರ ಏಪ್ರಿಲ್ ೧ರಂದು ಆಗಿನ ಸರ್ಕಾರ ತನ್ನ ವಶಕ್ಕೆ ತೆಗೆದುಕೊಂಡು 'ಇಂಡಿಯನ್ ಬ್ರಾಡ್‌ಕಾಸ್ಟಿಂಗ್ ಸರ್ವಿಸ್' ಎಂದು ಕರೆಯಿತು. ಇದು ಉದ್ಯಮ ಮತ್ತು ಕಾರ್ಮಿಕರ ಇಲಾಖೆಯ ವ್ಯಾಪ್ತಿಯಲ್ಲಿತ್ತು.

ಮೈಸೂರಿನಲ್ಲಿ ಆಕಾಶವಾಣಿಯನ್ನು ೧೯೩೫ರ ಸೆಪ್ಟೆಂಬರ್ ೩೦ರಂದು ಮೈಸೂರು ವಿಶ್ವವಿದ್ಯಾಲಯದ ಮಾನಸಶಾಸ್ತ್ರದ ಪ್ರಾಧ್ಯಾಪಕರಾದ ಡಾ|ಗೋಪಾಲಸ್ವಾಮಿಯವರು ೨೦ ವ್ಯಾಟ್ ಟ್ರಾನ್ಸ್‌ಮಿಟರ್‌ನೊಂದಿಗೆ ತಮ್ಮ ಮನೆಯಲ್ಲೇ ಆರಂಭಿಸಿದರು. ೧೯೪೧ರಲ್ಲಿ ಮೈಸೂರು ರಾಜ್ಯ ಸುಪರ್ದಿಗೆ ತಗೆದುಕೊಂಡಿತು. ೧೯೩೬ರ ಜೂನ್ ೮ರಿಂದ ರೇಡಿಯೋ ಕೇಂದ್ರಗಳಿಗೆ ಆಲ್ ಇಂಡಿಯಾ ರೇಡಿಯೋ ಎಂಬ ಹೆಸರಿನಿಂದ ಕರೆಯಲು ತೀರ್ಮಾನಿಸಿದರು. ಅನಂತರ ೨೫೦ ವ್ಯಾಟ್ ಟ್ರಾನ್ಸ್ ಮಿಟರ್ ಅಮದು ಮಾಡಿಕೊಂಡು ಸಾರ್ವಜನಿಕರ, ಸ್ಥಳೀಯ ಮುನಿಸಿಪಾಲಿಟಿಯ ಬೆಂಬಲದಿಂದ ಕಾರ್ಯ ಮುಂದುವರಸಲಾಯಿತು.

ಪಾಶ್ಚಿಮಾತ್ಯ ಸಂಗೀತ ತಜ್ಞ ಜಾನ್ ಫೌಲ್ಸ್ (John Foulds) ಎಂಬಾತ ಭಾರತದ ರೇಡಿಯೋ ಸಂಗೀತದಲ್ಲಿ ಹಾರ್ಮೋನಿಯಂ ಬಳಕೆಯನ್ನು ವಿರೋಧಿಸಿ ಹಾರ್ಮೋನಿಯಂನಲ್ಲಿರುವ ೧೨ ತಾಂತ್ರಿಕ ಪಟ್ಟಿ (scale) ಭಾರತೀಯ ಸಂಗೀತಕ್ಕೆ ಆಧಾರವಾದ ಶ್ರುತಿ (Micro Tunes) ಯನ್ನು ಉತ್ಪಾದಿಸಲು ಸೂಕ್ತವಾಗಿಲ್ಲ ಎಂದು ಆಕ್ಷೇಪಿಸಿದರು. ೧೯೪೦ರ ಮಾರ್ಚ್ ೧ರಿಂದ ಆಕಾಶವಾಣಿಯಲ್ಲಿ ಹಾರ್ಮೋನಿಯಂ ಬಳಸುವುದನ್ನೇ ನಿಷೇಧಿಸಲಾಯಿತು. ಈ ವಾದ್ಯವನ್ನು ಹರಾಜಿನಲ್ಲಿ ಮಾರಿ ಬಿಡಿ, ರಿಹರ್ಸಲ್‌ಗಳಿಗಾಗಲಿ, ನಾಟಕದಲ್ಲಿಯ ಧ್ವನಿ ಪರಿಣಾಮಕ್ಕಾಗಲಿ ಯಾವುದೇ ರೀತಿಯಲ್ಲೂ ಹಾರ್ಮೋನಿಯಂ ಬಳಸಕೂಡದು ಎಂದು ಆಜ್ಞೆ ಬಂದಿತು. ಹಲವಾರು ಕಲಾವಿದರು ತಮ್ಮ ಕಂಠದೋಷವನ್ನು ಮುಚ್ಚಲು ಈ ವಾದ್ಯವನ್ನು ಕಲಿತು ಬಳಸುತ್ತಿದ್ದರು. ಅಂಥವರು ಹಾಗೂ ವಾದ್ಯ ತಯಾರಿಕರು, ಮಾರಾಟಗಾರರೂ ಸರ್ಕಾರದ ನಿಲುವನ್ನು ವಿರೋಧಿಸಿದರು. ರವೀಂದ್ರನಾಥ ಠಾಕೂರ್, ಡಾ|ಜಾಕೀರ್ ಹುಸೇನ್, ಕೇರಳದ ಟಿ.ಲಕ್ಷ್ಮಣಪಿಳ್ಳೆ ಮೊದಲಾದ ಪ್ರಸಿದ್ಧ ಬರಹಗಾರರು, ಕಲಾವಿದರು ಈ ತೀರ್ಮಾನವನ್ನು ಬೆಂಬಲಿಸಿದ್ದೂ ಉಂಟು. ಆದರೆ ಈ ನಿಯಮವನ್ನು ವಿರೋಧಿಸಿಯೂ ಸಾಕಷ್ಟು ಪ್ರತಿಭಟನೆಗಳಾದವು.

ಹಾರ್ಮೋನಿಯಂ ಸಿನಿಮಾ ಸಂಗೀತಕ್ಕೆ ಅಗತ್ಯವಾಗಿ ಬೇಕಾಗಿದ್ದ ವಾದ್ಯ. ಆಗ ಡಾ|ಬಿ.ವಿ.ಕೇಸ್ಕರ್ ಅವರು ವಾರ್ತಾ ಮತ್ತು ಪ್ರಸಾರ ಖಾತೆಯಲ್ಲಿ (೧೯೫೨-೧೯೬೧) ಸಚಿವರಾಗಿದ್ದರು. ಇವರ ಕಾಲದಲ್ಲೇ ಹಾರ್ಮೋನಿಯಂ ಹಗರಣ ನಡೆದದ್ದು. ಅವರು ಸಿನಿಮಾಗಳ 'ಕೀಳು'ಮಟ್ಟದ ಅಭಿರುಚಿಯ ಹಾಡುಗಳ ಸಮಯವನ್ನು ಕಡಿತಗೊಳಿಸಿದರು. ಪ್ರತಿಭಟನೆಗಳಿಗೆ ಅವರೂ, ಅನಂತರ ಸಚಿವರಾಗಿ ಬಂದ ಗೋಪಾಲರೆಡ್ಡಿ ಅವರೂ ಮಣಿಯಲಿಲ್ಲ. ಅವರ ನಂತರ ಬಂದ ಕೆ.ಕೆ.ಶಹಾ ಈ ಒತ್ತಡಗಳನ್ನು ಗಂಭೀರವಾಗಿ ಪರಿಗಣಿಸಿ ೧೯೭೧ರಲ್ಲಿ ಒಂದು ವಿಚಾರ ಸಂಕಿರಣ ನಡೆಸಿದರು. ತಜ್ಞರ ಸಲಹೆ, ಅಪೇಕ್ಷೆಯನ್ನು ಪುರಸ್ಕರಿಸಿ ಹಾರ್ಮೋನಿಯಂಗೆ ಅವಕಾಶ ನೀಡಿದರು. ಅಲ್ಲಿಂದಾಚೆಗೆ ಶ್ರೇಷ್ಠ ಹಾರ್ಮೋನಿಯಂ ವಾದಕರ ಏಕವ್ಯಕ್ತಿ ಕಾರ್ಯಕ್ರಮಗಳೂ ನಡೆಯುವಂತಾಯಿತು. ಇದಕ್ಕೂ ಮೊದಲು ಆರಂಭ ಕಾಲದಲ್ಲಿ ಸರ್ದಾರ್ ಪಟೇಲರು ಸಚಿವರಾಗಿದ್ದಾಗ 'ನಾಚ್' ಮಾಡುವ ಸಮಾಜದ ಕೆಳವರ್ಗದವರನ್ನು ಕುರಿತು "ಯಾರ ಖಾಸಗೀ ಬದುಕು ಸಾರ್ವಜನಿಕರ ಹಗರಣವಾಗಿ ಹೋಗಿದೆಯೋ ಅಂತಹವರಿಗೆ ಆಕಾಶವಾಣಿಯಲ್ಲಿ ಅವಕಾಶ ನೀಡಕೂಡದು" ಎಂದು ಗುಡುಗಿದ್ದರು. ಇದರ ಫಲ ನಾಚ್ ಮಾಡುವ 'ಬಾಯಿ'ಗಳಾಗಿದ್ದ ಎನ್ನುವ ಕಲಾವಿದೆಯರೆಲ್ಲ 'ದೇವಿ'ಗಳನ್ನಂಟಿಸಿ ಕೊಂಡು ಪ್ರವೇಶಿಸಿದರು. ಇಂಥ ಪರಿಣಿತಗಳು, ಮುನ್ನೋಟಗಳಿಲ್ಲದ ತೀರ್ಮಾನಗಳು ಮಾಧ್ಯಮ -ಕಲೆಯ ಬೆಳವಣಿಗೆಯ ಮೇಲೆ ಕೆಟ್ಟ ಪರಿಣಾಮ ಬೀರಿದವು.

ಬಿ.ವಿ.ಕೇಸ್ಕರ್ ಅವರ ಅವಧಿಯಲ್ಲೇ ಸಿನಿಮಾ ಹಾಡುಗಳಿಗೆ ಮೊದಲು ಶೇ.೧೦ರಷ್ಟು ಸಮಯ ನೀಡಲಾಯಿತು. ಆದಾದ ೧೮ ತಿಂಗಳಲ್ಲಿ ಅವರೂ "ಸಿನಿಮಾ ಹಾಡುಗಳನ್ನೇ ನಿಲ್ಲಿಸಿ ಬಿಡಿ, ಹೊರಹಾಕಿ" ಎಂತಲೂ ಹೇಳಿಬಿಟ್ಟರು.ಆದರೆ "ಧಾರ್ಮಿಕ, ಭಕ್ತಿರಸ ಪ್ರಧಾನ ಪಾತ್ರದ ಹಾಡುಗಳಿಗೆ, ಜಾನಪದ ಗೀತಗಳಿಗೆ ಆ ಮಾತು ಅನ್ವಯವಾಗುವುದಿಲ್ಲ" ಎಂದರು. ಈ ಎಲ್ಲ ಗದ್ದಲದಲ್ಲಿ ಸಿನಿಮಾ ಹಾಡುಗಳು ತತ್ತರಿಸಿದವು.

ಸಮೂಹದ ಮೇಲೆ ಪ್ರಭಾವ ಬೀರುವ ಲಕ್ಷಣದಿಂದಲೇ ಆಕಾಶವಾಣಿ ಚಿತ್ರಗೀತೆಗಳ ಪ್ರಸಾರದಲ್ಲಿ ಪ್ರಮುಖ ಪಾತ್ರವಹಿಸಿತು. ಈಗಿನಂತೆ ಕ್ಯಾಸೆಟ್‌ಗಳಿಲ್ಲದ ಕಾಲದಲ್ಲಿ

(ಚಿತ್ರ೩೧-೩೩) ಸಂಗೀತಾ ಕಟ್ಟಿ ಬೆಂಗಳೂರು ಲತಾ ಬಿ.ಕೆ.ಸುಮಿತ್ರಾ

(ಚಿತ್ರ೩೪-೩೭) ಕೆ.ಎಸ್.ಚಿತ್ರಾ ಅನುರಾಧ ಶ್ರೀರಾಂ ಎಲ್.ಎನ್.ಶಾಸ್ತ್ರಿ ರಮೇಶ್ ಚಂದ್ರ

ತಿರಸ್ಕರಿಸಲ್ಪಡುತ್ತಿದ್ದವು. ಪ್ರಸಾರಕ್ಕೆ ಆಕಾಶ ವಾಣಿ ಕೊಡುತ್ತಿದ್ದ ರಾಯಧನ ಕೇವಲ ಒಂದು ರೂಪಾಯಿ ಮಾತ್ರ. ಇವೆಲ್ಲವೂ ಪದೇ ಪದೇ ಚರ್ಚೆಯಾದವು. ಪುನರ್ ಪರಿಶೀಲಿಸಲು ಬೇಡಿಕೆಗಳು, ಒತ್ತಡಗಳು ಬರುತ್ತಲೇ ಇದ್ದವು.

ಚಿತ್ರಗೀತೆಗಳು ಆರಂಭಿಕ ದಿನಗಳಲ್ಲಿ ಪ್ರಸಾರಕ್ಕಾಗಿ ಗ್ರಾಮಫೋನ್ ರಿಕಾರ್ಡ್‌ಗಳನ್ನು ಅವಲಂಬಿಸಿದ್ದವು. ೭೮ ಆರ್.ಪಿ.ಎಂ.ನ ಈ ರಿಕಾರ್ಡ್‌ನಲ್ಲಿ ಕೇವಲ ಮೂರು ನಿಮಿಷದಷ್ಟು ಮಾತ್ರ ಗೀತೆಗಳಿಗೆ ಕಾಲಾವಕಾಶವಿರುತ್ತಿತ್ತು. ಸಾಮಾನ್ಯವಾಗಿ ಚಿತ್ರಗಳಿಗೆ ಧ್ವನಿ ಮುದ್ರಿಸುತ್ತಿದ್ದ ಗೀತೆಗಳು ನಾಲ್ಕರಿಂದ ಆರು ನಿಮಿಷ ಇರುತ್ತಿದ್ದವು. ಆರು ನಿಮಿಷದ ಗೀತೆಗಳನ್ನು ರಿಕಾರ್ಡ್‌ನ ಎರಡೂ ಪಕ್ಕದಲ್ಲಿ ಧ್ವನಿಮುದ್ರಣ ಮಾಡಬಹುದಿತ್ತು. ಆದರೆ ಅದಕ್ಕಿಂತ ತಮ್ಮ ಅವಧಿಯ ಹಾಡುಗಳನ್ನು ಅರ್ಥ ವ್ಯತ್ಯಾಸ ಬಾರದಂತೆ ಕತ್ತರಿಸಿ ಮೂರು ನಿಮಿಷದ ಅವಧಿಗೆ ತರಬೇಕಾಗುತ್ತಿತ್ತು. ಗ್ರಾಮಫೋನ್ ಕಂಪನಿಗೆ ಹೀಗೆ ಕತ್ತರಿಸಿ ಕೊಡಲು ಪ್ರತ್ಯೇಕ ಸೌಂಡ್ ಪಾಸಿಟಿವ್ ಫಿಲ್ಮ್ ಅನ್ನು ಸಿದ್ಧಪಡಿಸಬೇಕಾಗುತ್ತಿತ್ತು. ಅದನ್ನು ಪಡೆದ ನಂತರ ಗ್ರಾಮೊಫೋನ್ ಕಂಪನಿಯವರು ಅದನ್ನು ಕಲ್ಕತ್ತಾಕ್ಕೆ ಕಳುಹಿಸಿ ಅಲ್ಲಿಂದ ಇವುಗಳನ್ನು ರಿಕಾರ್ಡ್‌ಗಳಲ್ಲಿ ಧ್ವನಿ ಮುದ್ರಿಸಿ ತರುತ್ತಿದ್ದರು. ಇದೀ ವ್ಯವಹಾರ ದುಬಾರಿಯಾದ್ದರಿಂದ ಕಡಿಮೆ ಬಡ್ಜೆಟ್‌ನಲ್ಲಿ ತಯಾರಾಗುತ್ತಿದ್ದ ಅಂದಿನ ಕನ್ನಡ ಚಿತ್ರಗಳಿಗೆ ಇದು ಗಗನ ಕುಸುಮವಾಗಿ ಎಲ್ಲೋ ವಿಕ್ರಂ ಪ್ರೊಡಕ್ಷನ್ಸ್, ಪದ್ಮಿನಿ ಪಿಕ್ಚರ್ಸ್‌ನಂತಹವರು ಮಾತ್ರ ಈ ಸಾಹಸಕ್ಕೆ ಇಳಿಯುತ್ತಿದರು. ಹೀಗಾಗಿ ಅಂದಿನ ಎಷ್ಟೋ ಗೀತೆಗಳು ಇಂದು ಕೇಳಲೂ ಸಹ ಲಭ್ಯವಿಲ್ಲ. ವಾಣಿಜ್ಯಾತ್ಮಕವಾಗಿಯೂ ಗ್ರಾಮಫೋನ್ ರಿಕಾರ್ಡ್‌ಗಳು ಲಾಭದಾಯಕವಾಗಿರಲಿಲ್ಲ. ಇದಕ್ಕಿರುವ ಮುಖ್ಯ ಕಾರಣವೆಂದರೆ ಗ್ರಾಮಫೋನ್ ಪ್ಲೇಟ್‌ಗಳು ಸಾರ್ವಜನಿಕ ಸ್ಥಳದಲ್ಲಿ ಮಾತ್ರ ಮುಖ್ಯವಾಗಿ ಉಪಯೋಗವಾಗುತ್ತಿದ್ದವು. ಸರ್ಕಸ್, ನಾಟಕ ಇಂತಹ ಮನೋರಂಜನೆ ಕೇಂದ್ರಗಳಲ್ಲಿ ಹೆಚ್ಚಾಗಿ ಉಪಯೋಗವಾಗುತ್ತಿದ್ದವು. ದಕ್ಷಿಣ ಭಾರತದ ಪ್ರತಿನಿಧಿಗಳಾಗಿ ಗ್ರಾಮಫೋನ್‌ಗಳ ಕೊಲಂಬಿಯಾ ಬ್ರಾಂಡ್‌ಗೆ ಎ.ವಿ.ಎಂ.ಚೆಟ್ಟಿಯಾರ್ ರವರ 'ಸರಸ್ವತಿ ಸ್ಟೋರ್ಸ್' ಇತ್ತು. ಆ ಸಮಯದಲ್ಲಿ ಸರಸ್ವತಿ ಸ್ಟೋರ್ಸ್‌ನಲ್ಲಿ ಎಲ್ಲಾ ಭಾಷೆಗಳಿಗೂ ಒಬ್ಬೊಬ್ಬ ಪ್ರತಿನಿಧಿ ಇದ್ದರು. ಕನ್ನಡಕ್ಕೆ ಮಾತ್ರ ಸಂಸ್ಥೆಯ ಮ್ಯಾನೇಜರ್ ಆಗಿದ್ದ ಕಣ್ಣನ್‌ರವರೇ ನೋಡಿಕೊಳ್ಳುತ್ತಿದ್ದರು. ಅವರ ಹೆಚ್ಚಿನ ಜವಾಬ್ದಾರಿ ತಮಿಳು ಚಿತ್ರಗಳ ಗೀತೆ ನಿರ್ವಹಣೆಯಲ್ಲೇ ಆಗುತ್ತಿದ್ದುದರಿಂದ ಕನ್ನಡ ಚಿತ್ರಗೀತೆಗಳ ಶಾಖೆ ಸೊರಗಿಹೋಗಿತ್ತು. ಮತ್ತು ಕನ್ನಡ ಬಾರದವರು ನಿರ್ವಹಿಸಿದಾಗ ಅಕ್ಷರಗಳು ತಪ್ಪಾಗಿ ಬರುತ್ತಿದ್ದವು. ಇವೆಲ್ಲ ಆಕ್ಷೇಪಣೆಗಳೂ ಬಂದವು.

ಏಕಸ್ವಾಮ್ಯ ಪಡೆದಿದ್ದ ಮೇಯಪ್ಪ ಚೆಟ್ಟಿಯಾರರ ಸರಸ್ವತಿ ಸ್ಟೋರ್ಸ್ ಕನ್ನಡ ಚಿತ್ರಗೀತೆಗಳ ಬಗ್ಗೆ ಸದಾ ದಿವ್ಯನಿರ್ಲಕ್ಷ್ಯ ತೋರುತ್ತಿತ್ತು. ಅದಕ್ಕೆ ರಿಕಾರ್ಡ್‌ಗಳು ಅಧಿಕ ಸಂಖ್ಯೆಯಲ್ಲಿ ಮಾರಾಟವಾಗುವುದಿಲ್ಲ ಎಂಬುದು ಕಾರಣ. ೧೯೬೫-೬೬ರ ಸುಮಾರಿನಲ್ಲಿ ಕನ್ನಡ ವಿಭಾಗ ಮುಚ್ಚಿಬಿಡುವ ನಿರ್ಧಾರಕ್ಕೂ ಬರಲಾಗಿತ್ತು. ಇಂಥ

ಗ್ರಾಮಫೋನ್ ಪ್ಲೇಟ್‌ಗಳು ಎಲ್ಲರಿಗೂ ಲಭ್ಯವಿರಲಿಲ್ಲ. ಹೀಗಾಗಿ ಆಕಾಶವಾಣಿಯೊಂದೇ ಲಭ್ಯವಿರುವ ಪ್ರಸಾರದ ಸಾಧನ. ಹಾಡುಗಳ ಜನಪ್ರಿಯತೆಗೆ ಆಕಾಶವಾಣಿಯೇ ಪ್ರಮುಖವಾಹಿನಿಯಾಗಿತ್ತು. ಆಕಾಶವಾಣಿ ಕೂಡ ಈ ಸಂಗತಿಯನ್ನು ಬಹುಬೇಗ ಗುರುತಿಸಿಕೊಂಡು ಚಿತ್ರಗೀತೆಗಳನ್ನು, ಅವುಗಳನ್ನು ಆಧರಿಸಿದ ಕಾರ್ಯಕ್ರಮಗಳನ್ನು ಬೇಗನೆ ರೂಪಿಸಿಕೊಂಡಿತು. ಸಿಲೋನ್ ಆಕಾಶವಾಣಿ ಕೇಂದ್ರ ಈ ಕಾರಣಕ್ಕಾಗಿಯೇ ಜನಪ್ರಿಯವಾಯಿತು. ಹೊಸ ಚಿತ್ರಗೀತೆಗಳನ್ನು ಪ್ರಸಾರ ಮಾಡುತ್ತಿದ್ದುದರಿಂದ ಇದಕ್ಕಾಗಿ ಕಾಯುತ್ತಿದ್ದವರು ಅನೇಕರಿದರು. ಚಿತ್ರಗೀತೆಗಳ ಜನಪ್ರಿಯತ ಗುರುತಿಸಿಯೇ ವಿವಿಧ ಭಾರತಿ ಆರಂಭವಾಯಿತು. ಇದರಲ್ಲಿ ಪ್ರಸಾರವಾಗುತ್ತಿದ್ದ 'ಬಿನಾಕಾ ಗೀತಮಾಲಾ'ದ ರೇಟಿಂಗ್‌ಗೆ ಅನೇಕರು ಕಾಯುತ್ತಿದರು. ಮಧುರ ಸಂಗೀತದ ಹೊಳೆಯನ್ನೇ ಈ ಮಾಲಿಕೆ ಹರಿಸಿತು ಎನ್ನಬಹುದು. ೧೯೬೧ರಿಂದ ೬೬ರ ಅವಧಿಯಲ್ಲಿ ೨೬ ವಿವಿಧ ಭಾರತಿ ಕೇಂದ್ರಗಳು ಆರಂಭವಾದವು. ಇದು ಪ್ರಾದೇಶಿಕ ಭಾಷೆಗಳ ಗೀತಗಳ ಬೆಳವಣಿಗೆಗೆ ಸಹಾಯಕವಾಯಿತು. ಕನ್ನಡದ ವಿವಿಧ ಬಾನುಲಿ ಕೇಂದ್ರಗಳು 'ನಿಮ್ಮ ಕೋರಿಕೆ'ಯಂತಹ ಕಾರ್ಯಕ್ರಮವನ್ನು ತಮ್ಮ ಜನಪ್ರಿಯತೆಗಾಗಿ ರೂಪಿಸಿಕೊಂಡವು. ಇದಲ್ಲದ ಗೀತಗಳ ಕುರಿತ ಓದುಗರ ಅಭಿಪ್ರಾಯ ಆಧರಿಸಿದ ಕಾರ್ಯಕ್ರಮಗಳು, ಒಂದೇ ವಸ್ತುವನ್ನು-ಶಬ್ದವನ್ನು ಹೊಂದಿದ ಗೀತೆಗಳನ್ನು ಜೋಡಿಸುವಂತಹ ಕಾರ್ಯಕ್ರಮಗಳು, ಒಂದೇ ರಾಗದ ಗೀತೆಗಳನ್ನು ಒಟ್ಟಾಗಿಡುವ ಮಾದರಿಯ ಕಾರ್ಯಕ್ರಮಗಳೂ ಆಕಾಶವಾಣಿ ಹೆಚ್ಚು ಸೃಜನಶೀಲವಾಗಲು ಕಾರಣವಾಯಿತು. ಆಕಾಶವಾಣಿಯಲ್ಲಿ ಗೀತರಚನೆಕಾರ, ಸಂಗೀತ ನಿರ್ದೇಶಕ ಮತ್ತು ಗಾಯಕ ಈ ಎಲ್ಲರ ಹಸರು ಹೇಳುವ ಪದ್ಧತಿ ಇತ್ತು. ಇದರಿಂದ ಮಾಧ್ಯಮದಲ್ಲಿ ದುಡಿದವರೆಲ್ಲರಿಗೂ ಬೆಲೆ ಬರುತ್ತಿತ್ತು. ಒಂದು ಹಂತದಲ್ಲಿ ನಿರ್ಮಾಣ ಸಂಸ್ಥೆ ಅಥವಾ ನಿರ್ಮಾಪಕರ ಹೆಸರು ಹೇಳುತ್ತಿರಲಿಲ್ಲ. ಅದಕ್ಕಾಗಿ ಕೂಡ ಆಕಾಶವಾಣಿ ಸಾಕಷ್ಟು ವಿರೋಧವನ್ನು ಎದುರಿಸಬೇಕಾಯಿತು.

ಆಕಾಶವಾಣಿಗೆ ಚಿತ್ರಗೀತಗಳು ಸಾಕಷ್ಟು ಜಾಹಿರಾತನ್ನು ಒದಗಿಸಿಕೊಟ್ಟು ವಾಣಿಜ್ಯಾತ್ಮಕವಾಗಿ ನೆರವಾದರೆ ಆಕಾಶವಾಣಿ ಚಿತ್ರಗೀತಗಳಿಗೆ ಪ್ರಚಾರ ಕೊಟ್ಟು ಜನಪ್ರಿಯವಾಯಿತು. ಇದು ಕೊಡು-ಕೊಳ್ಳುವಿಕೆಯಲ್ಲಿ ಕಂಡು ಬಂದ ಬೆಳವಣಿಗೆ. ಚಿತ್ರಗೀತೆಗಳಲ್ಲದ ಚಲನಚಿತ್ರ ಧ್ವನಿವಾಹಿನಿಗಳೂ ಆಕಾಶವಾಣಿಯಲ್ಲಿ ಪ್ರಸಾರವಾಗುತ್ತಿದವು. ಇವೂ ಆ ಕಾಲಕ್ಕೆ ಬಹು ಜನಪ್ರಿಯವಾದ ಪ್ರಸರಣವಾಗಿತ್ತು.

ಧ್ವನಿ ಸುರುಳಿಗಳು ಬರಲು ಆರಂಭಿಸಿದಾಗಿನಿಂದ ಆಕಾಶವಾಣಿಯಲ್ಲಿ ಚಿತ್ರಗೀತ ಪ್ರಸಾರ ಕಷ್ಟವಾಗಲು ಆರಂಭಿಸಿತು. ಇ.ಪಿ.ಎಲ್.ಡಿ.ಡಿಸ್ಕ್‌ಗಳನ್ನು ಕಟ್ ಮಾಡುವುದು ನಿಲ್ಲುತ್ತ ಬಂತು. ಡಿಸ್ಕ್‌ಗಳಿಗೆ ಮಾರ್ಕೆಟ್ ಇರಲಿಲ್ಲ. ಆಕಾಶವಾಣಿಯಲ್ಲಿ ಧ್ವನಿಸುರುಳಿ ಬಳಸುವುದು ತಾಂತ್ರಿಕವಾಗಿ ಸಾಧ್ಯವಿರಲಿಲ್ಲ. ಹೀಗಾಗಿ ಆಕಾಶವಾಣಿಗಾಗಿಯೇ 'ಡಿಸ್ಕ್' ಮಾಡಿಸಿದವರ ಗೀತಗಳು ಮಾತ್ರ ಪ್ರಸಾರವಾಗುವ ಸನ್ನಿವೇಶ ಒದಗಿತು. ಇದರಿಂದ ಹಲವು ಮಧುರ ಗೀತಗಳು ಆಕಾಶವಾಣಿ ಮೂಲಕ ಪ್ರಸಾರವಾಗುವುದು ತಪ್ಪಿಹೋಯಿತು. ಇದು ಆಕಾಶವಾಣಿಗ ಮತ್ತು ಚಿತ್ರಗೀತೆಗಳಿಗ ಇದ್ದ ಬಂಧ ಕೆಲ ಮಟ್ಟಿಗ ಸಡಿಲಗೊಳ್ಳಲು ಕಾರಣವಾಯಿತು. ಕಾಂಪ್ಯಾಕ್ಟ್ ಡಿಸ್ಕ್‌ಗಳು ಬಂದ ಮೇಲೆ ಪರಿಸ್ಥಿತಿ ಸುಧಾರಿಸಿತು. ಸಿ.ಡಿ.ಗಳನ್ನು ಆಕಾಶವಾಣಿ ಸುಲಭದಲ್ಲಿ ಪ್ರಸಾರ ಮಾಡಬಲ್ಲುದು ಮತ್ತು ಈಗ ಹೆಚ್ಚಿನ ಚಿತ್ರಗಳ ಗೀತಗಳು ಸಿ.ಡಿ.ಗಳ ಮೂಲಕ ಲಭ್ಯ. ಮುಂದೆ ಕಂಪ್ಯೂಟರ್ ಡಿಸ್ಕ್ ಬರುವ ಪ್ರಸ್ತಾಪ ಕೇಳಿ ಬರುತ್ತಿರುವುದರಿಂದ ಆಕಾಶವಾಣಿ ಜೊತೆಗಿನ ಹಿನ್ನಲೆ ಸಂಗೀತದ ಬೆಸುಗ ಇನ್ನಷ್ಟು ಗಟ್ಟಿಯಾಗಬಹುದು. ಚಿತ್ರಗೀತೆಗಳನ್ನು ಪ್ರಸಾರ ಮಾಡುವ ಮೊದಲು ನಿಯೋಜಕ ಸಮಿತಿಯ ಸದಸ್ಯರು ಸೆನ್ಸಾರ್ ಮಾಡುತ್ತಿದ್ದರು. ಬಹಳಷ್ಟು ಗೀತಗಳು ಪ್ರಸಾರ ಯೋಗ್ಯವಲ್ಲವೆಂದು

(ಚಿತ್ರ ೩೮) ಶಂಕರ್ ಗಣೇಶ್, ಎಸ್.ಪಿ.ಬಾಲಸುಬ್ರಹ್ಮಣ್ಯಂ ಮತ್ತು ಬಿ.ಎಸ್.ರಂಗಾ

ಹೊತ್ತಿನಲ್ಲಿ ಕನ್ನಡ ವಿಭಾಗವನ್ನು ನೋಡಿಕೊಳ್ಳಲು ಮಹೇಶ್ ಅವರನ್ನು ಉದಯಶಂಕರ್ ಕರೆತಂದರು. ಹಿನ್ನೆಲೆ ಗಾಯಕನಾಗಲು ಬಂದು ಚಿತ್ರಗಳಿಗೆ ಹಾಡುತ್ತಿದ್ದ ಮಹೇಶ್ ಕರ್ನಾಟಕದ ಪತ್ರಿಕೆಗಳಿಗೆ ಮದರಾಸಿನ ಕನ್ನಡ ಸಿನಿಮಾ ಚಟುವಟಿಕೆಗಳನ್ನು ಬರೆದು ಕಳುಹಿಸುತ್ತಿದ್ದರು. ಸರಸ್ವತಿ ಸ್ಟೋರ್ಸ್ ಸೇರಿದ ನಂತರ ಹಾಡುಗಳ ಧ್ವನಿಮುದ್ರಣ ನಡೆಯುತ್ತಿದ್ದ ಕಡೆಗಳಿಗೆಲ್ಲ ಹೋಗಿ ಆ ದಿನದಿಂದಲೇ ಆ ಹಾಡುಗಳ ಪ್ರತಿಗಳನ್ನು ಸಿದ್ಧಪಡಿಸುವಂತೆ ಮಾಡಿದರು. ಕಡಿಮೆ ಮಾರಾಟವಾಗುತ್ತಿದ್ದ ಕನ್ನಡದ

(ಚಿತ್ರ೪೯-೫೦) ಇಂದು ವಿಶ್ವನಾಥ್

ಜಯಶ್ರೀ ಅರವಿಂದ್

ರಿಕಾರ್ಡ್‌ಗಳ ಬಗ್ಗೆ ಲಕ್ಷ್ಯವಿಟ್ಟರು. ಮನೆ ಮನೆಗೆ ಹೋಗಿ ಪ್ರಚಾರ ಮಾಡಿದರು. ಡೀಲರ್‌ಗಳ ಬಳಿ ಅವರ ಕುಂದುಕೊರತೆ ವಿಚಾರಿಸಿ ಭರವಸೆ ಕೊಟ್ಟ, ಕನ್ನಡದ ಹೊಸ ಚಿತ್ರ ಬಿಡುಗಡೆಯಾಗುವ ಸಮಯಕ್ಕೆ ಸರಿಯಾಗಿ ಅವುಗಳ ರಿಕಾರ್ಡ್‌ಗಳೂ ಸಿಗುವಂತೆ ಮಾಡಿದರು. ವ್ಯವಹಾರ, ಕೊಡು-ಕೊಳ್ಳುವಿಕೆಯನ್ನು ಬಹು ಜಾಣ್ಮೆಯಿಂದ ನಿರ್ವಹಿಸಿ ಮೇಯಪ್ಪ ಚೆಟ್ಟಿಯಾರರ ಮೆಚ್ಚಿನ ಬಾಲಕನೂ ಆದರು. ಮಹೇಶ್‌ಗೆ ಪೂರ್ಣ ಸ್ವಾತಂತ್ರ್ಯವೂ ಸಿಕ್ಕಿತು. ಅತಿ ಬೇಡಿಕೆಯ ನಟರಾದ ರಾಜಕುಮಾರ್ ಅವರನ್ನು ಒಲಿಸಿ, ಅವರ ಅಭಿನಯದ ಎಲ್ಲ ಚಿತ್ರಗೀತೆಗಳ ರಿಕಾರ್ಡ್‌ಗಳ ಮಾರಾಟದ ಹಕ್ಕನ್ನು ಪಡೆದರು. ಅವುಗಳ ಶೀಘ್ರ ಮಾರಾಟ ಈ ವ್ಯವಹಾರದಲ್ಲಿ ಹೊಸ ದಿಕ್ಕನ್ನು ತೆರೆಸಿತ್ತು. ಇದೇ ಸಂದರ್ಭದಲ್ಲಿ ಪಾಲಿಡಾರ್ ಎಂಬ ಸಂಸ್ಥೆ ಪ್ರಾರಂಭವಾಗಿ ರಾಜಕುಮಾರ್ ಅಭಿನಯದ 'ದಾರಿ ತಪ್ಪಿದ ಮಗ' ಮತ್ತು 'ಶ್ರೀನಿವಾಸ ಕಲ್ಯಾಣ' ಚಿತ್ರಗಳ ರಿಕಾರ್ಡ್‌ಗಳ ಮಾರಾಟದ ಹಕ್ಕು ಪಡೆದಾಗ ಮಹೇಶ್‌ಗೆ ಅದೊಂದು ದೊಡ್ಡ ಸವಾಲೇ ಆಗಿತ್ತು. ಸಾಲದ್ದಕ್ಕೆ ಪಾಲಿಡಾರ್ ಸಂಸ್ಥೆ ನಷ್ಟಕ್ಕೆ ಸಿಲುಕಿಕೊಂಡಿತು. ವ್ಯಾಪಾರವೂ ಆಗುತ್ತಿರಲಿಲ್ಲ. ಮತ್ತೆ ಮಹೇಶ್ ರಾಜಕುಮಾರ್‌ರ ಮನವೊಲಿಸಿ ಮೊದಲಿನ ಸ್ಥಿತಿಗೇ ತಂದರು.

ಇತರ ಭಾಷೆಗಳಲ್ಲಿ ಸಂಗೀತಗಾರರ ಗಾಯನದ ಧ್ವನಿಮುದ್ರಿಕೆ, ಭಕ್ತಿಗೀತೆಗಳ ಧ್ವನಿಮುದ್ರಿಕೆಗಳು ಬರುತ್ತಿದ್ದವು. ಆದರೆ ಸಂಸ್ಥೆ ಕನ್ನಡದ ಧ್ವನಿಮುದ್ರಿಕೆಗೆ ಆಸಕ್ತಿ ತೋರಲಿಲ್ಲ. ಮತ್ತೆ ಚೆಟ್ಟಿಯಾರರ ಮನವೊಲಿಸಿ ಚಿ.ಉದಯಶಂಕರ್ ರಚಿಸಿದ ಗುರುರಾಯನನ್ನು ಕುರಿತ ಭಕ್ತಿಗೀತೆಗಳಾದ "ಹಾಡು ಕೋಗಿಲೆ...", "ಏನು ಮೋಹ ಯಾವ ದಾಹ..." ಮೊದಲಾದ ಗೀತೆಗಳನ್ನು ರಾಜಕುಮಾರ್ ಅವರಿಂದ ಹಾಡಿಸಿ ಧ್ವನಿಮುದ್ರಿಸಿದರು. ಆ ಧ್ವನಿಮುದ್ರಿಕೆಗಳು ಮಾರಾಟದಲ್ಲಿ ದಾಖಲೆ ನಿರ್ಮಿಸಿದವು.

ಇಷ್ಟು ಹೊತ್ತಿಗೆ ಕ್ಯಾಸೆಟ್ ಯುಗ ಆರಂಭವಾಗಿತ್ತು. ಸರಸ್ವತಿ ಸ್ಟೋರ್ಸ್ ಕೂಡ ಕ್ಯಾಸೆಟ್‌ಗಳನ್ನು ತಯಾರಿಸಲು ಸಿದ್ಧತೆ ನಡೆಸಿದ್ದರೂ ಕನ್ನಡ ಭಾಷೆಯಲ್ಲಿ ಮಾತ್ರ ಈ ಸಾಹಸಕ್ಕೆ ಸಿದ್ಧವಾಗಲಿಲ್ಲ. ಕನ್ನಡದ ಬಗ್ಗೆ ತಳೆದ ಮಲತಾಯಿ ಧೋರಣೆಯನ್ನು ಕೊಂಚ ಗಟ್ಟಿಯಾಗಿಯೇ ಪ್ರಶ್ನಿಸಿದ ಗೋಪಾಲ್ ಲಕ್ಷ್ಮಣ್ ಅವರ ವಾದಕ್ಕೆ ಮಣಿದು ಮಹೇಶ್ ಅವರನ್ನು ಅಸಿಸ್ಟೆಂಟ್ ರಿಕಾರ್ಡಿಸ್ಟ್ ಎಂದು ಕರೆದರು. ಮಹೇಶ್‌ರ ಕನ್ನಡಪರ ನಿಲುವು ಅತ್ತಲವರ ಟೀಕೆಗೆ ಒಳಗಾಗುತ್ತಲೇ ಇತ್ತು. ಕನ್ನಡ ಗೀತೆಗಳ ಕ್ಯಾಸೆಟ್ಸ್ ಬಗ್ಗೆ ದಿವ್ಯನಿರ್ಲಕ್ಷ್ಯ ತೋರಿದಾಗ ಮಹೇಶ್ ಇದನ್ನು ಪ್ರಶ್ನಿಸಿದರು. ಸರಿಯಾದ ಉತ್ತರ ಸಿಕ್ಕಲಿಲ್ಲ. ಧ್ವನಿಮುದ್ರಿಕೆ ಪಡೆಯುತ್ತಿದ್ದ ಡೀಲರ್‌ಗಳು ಧ್ವನಿಸುರುಳಿಗಾಗಿ ಬೇಡಿಕೆ ಮುಂದಿಟ್ಟರು. ಧ್ವನಿಮುದ್ರಿಕೆಯಿಂದ ಧ್ವನಿಸುರುಳಿಗೆ ವರ್ಗಾಯಿಸುವುದು ಕಾನೂನು ಪ್ರಕಾರ ಅಪರಾಧ ಎಂದು ಮಹೇಶ್ ತಿಳಿಹೇಳಿದರೂ ಒತ್ತಾಯಗಳು ಬರುತ್ತಲೇ ಇದ್ದವು. ಸರಸ್ವತಿ ಸ್ಟೋರ್ಸ್ ಕನ್ನಡದ ಧ್ವನಿಸುರುಳಿಗೆ ಮನಸ್ಸು ಮಾಡಲೇ ಇಲ್ಲ. ಮಹೇಶ್ ಕೆಲಸಕ್ಕೆ ರಾಜೀನಾಮೆ ಕೊಟ್ಟು ತಾವೇ ಈ ಕಾರ್ಯ ಕೈಗೆತ್ತಿಕೊಂಡರು.

ಇದೇ ಸಮಯದಲ್ಲಿ ಜಪಾನಿನ ಸೋನಿ ಸಂಸ್ಥೆ ಹೈಸ್ಪೀಡ್ ಕ್ಯಾಸೆಟ್ ಕಾಪಿಯಿಂಗ್ ಯಂತ್ರವನ್ನು ತಯಾರಿಸುತ್ತಿತ್ತು. ಭಾರತಕ್ಕೆ ಅದರ ಆಮದಿಗೆ ಅನುಮತಿ ಇರಲಿಲ್ಲ. ಎಡೆಬಿಡದ ಪ್ರಯತ್ನದಿಂದ ಮಹೇಶ್ ಅಂದಿನ ವಾರ್ತಾ ಮತ್ತು ಪ್ರಸಾರ ಅಧಿಕಾರಿಯಾಗಿದ್ದ ಎಚ್.ರಾಮಕೃಷ್ಣ ಅವರ ಸಲಹೆ ಪಡೆದು ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಸ್ ವರ್ಗದಲ್ಲಿ ರಿಜಿಸ್ಟರ್ ಮಾಡಿಸಿ ಆ ಯಂತ್ರವನ್ನು ಆಮದು ಮಾಡಿಕೊಂಡರು. ೧೯೮೦ರ ಮಾರ್ಚ್ ತಿಂಗಳಲ್ಲಿ ಕ್ಯಾಸೆಟ್ ತಯಾರಿಕೆಗೆ ಅನುಮತಿ ದೊರಕಿತು. ಹೀಗೆ ಕ್ಯಾಸೆಟ್‌ಗಳನ್ನು ತಯಾರಿಸಲು ಇಡೀ ದಕ್ಷಿಣ ಭಾರತದಲ್ಲಿ ಸರ್ಕಾರದ ಅಂಗೀಕಾರ (ಲೈಸೆನ್ಸ್) ಪಡೆದ ಮೊದಲ ಸಂಸ್ಥೆ ಸಂಗೀತಾ.

ಹೀಗೆ ಹುಟ್ಟಿದ್ದು ಸಂಗೀತ ಕ್ಯಾಸೆಟ್ ಸಂಸ್ಥೆ. ದಕ್ಷಿಣ ಭಾರತದಲ್ಲೇ ಕಾನೂನು ಸಮ್ಮತಿ ಪಡೆದ ಮೊದಲ ಸಂಸ್ಥೆ ಇದು. ಇದರಿಂದ ನಿರ್ಮಾಪಕರು ಖರ್ಚು ಮಾಡಿ 'ಸೌಂಡ್ ಪಾಸಿಟಿವ್' ಅನ್ನು ಅಂದಿನ ಗ್ರಾಮಫೋನ್ ಸಂಸ್ಥೆಗಳಿಗೆ ತಲುಪಿಸುತ್ತಿದ್ದ ಕಾಲ ಹೋಗಿ ಧ್ವನಿ ಮುದ್ರಣ ಮಾಡಿದ ಸ್ಟುಡಿಯೋದಿಂದ ಇವರ ರಿಕಾರ್ಡಿಂಗ್ ಸಲಕರಣೆಯ ಮೂಲಕ ಕ್ಯಾಸೆಟ್‌ಗಳಲ್ಲಿ ಅಳವಡಿಸುವ ಹೊಸ ಯುಗ ಆರಂಭವಾಯಿತು. ಇದು ಚಿತ್ರಗೀತೆಗಳ ತ್ವರಿತ ಪ್ರಚಾರಕ್ಕೆ, ಎಲ್ಲಕ್ಕಿಂತ ಹೆಚ್ಚಾಗಿ ಬಯಸಿದವರ ಮನೆ ಬಾಗಿಲಿಗೆ ಇಳಿಯುವುದಕ್ಕೆ ಅನುಕೂಲವಾಯಿತು. ಸಂಗೀತದ ಜೊತೆಗೆ ಮುಂದೆ ಲಹರಿ, ಆಕಾಶ್, ಝೇಂಕಾರ್ ಮುಂತಾದ ಕ್ಯಾಸೆಟ್ ಸಂಸ್ಥೆಗಳೂ ಆರಂಭವಾಗಿ ಸ್ಪರ್ಧಾತ್ಮಕ ಯುಗ ಆರಂಭವಾಯಿತು.

ಕ್ಯಾಸೆಟ್ ಯುಗ ಆರಂಭವಾದ ಕೂಡಲೇ ಸಂಗೀತಾ ಸಂಸ್ಥೆಯವರು ಕ್ಯಾಸೆಟ್‌ಗಳಿಗೆ ರಾಯಲ್ಟಿ ನೀಡುವ ಪದ್ಧತಿ ಜಾರಿಗೆ ತಂದರು. ಈ ಮೂಲದಿಂದ ಹಣವನ್ನು ನಿರೀಕ್ಷಿಸಿರದ ಚಿತ್ರದ ಮಂದಿಗೆ ಇದು ದೊಡ್ಡ ವಿಷಯವೇ ಆಗಿಬಿಟ್ಟಿತು. ಮುಂಗಡ ಕೊಡುವ ಪದ್ಧತಿ ಬಂದಾಗಲಂತೂ ಅದ್ಭುತ ಎಂದು ವರ್ಣಿಸಿದವರು ಅನೇಕ. ಇದರ ಜೊತೆಗೇ ಮುಂಗಡ ತೆಗೆದುಕೊಂಡು ಕೈಕೊಟ್ಟವರೂ ಹಲವರಿದ್ದರು. ಇಂತಹ ಗೊಂದಲದ ದಿನ ಮುಂದುವರೆಯುತ್ತ ಕೊನೆಗೆ ಆಳ-ಅಗಲ ತಿಳಿಯದೆ ಚಿತ್ರರಂಗ ಕ್ಯಾಸೆಟ್ ನಿರ್ಮಾತೃಗಳ ಕಬಂಧಬಾಹುವಿನಲ್ಲಿ ಸಿಕ್ಕಿಕೊಂಡುಬಿಟ್ಟಿತು. ಆರಂಭದಲ್ಲಿ ಐದು ಸಾವಿರ, ಹತ್ತು ಸಾವಿರ ಹೀಗೆ ನೀಡುತ್ತಿದ್ದ ರಾಯಲ್ಟಿ ಲಕ್ಷಾಂತರ ರೂಪಾಯಿಗಳು ಬರಲು ಆರಂಭಿಸಿದಾಗಲೂ ಬದಲಾಗಲಿಲ್ಲ. ಅತ್ಯಂತ ಜನಪ್ರಿಯವಾದ ಚಿತ್ರಗಳಿಗೂ ಇದೇ ಮಾದರಿ ಗೌರವಧನ (ರಾಯಲ್ಟಿ) ಸಿಕ್ಕಿ ಒಂದು ಮಾದರಿಯ ಶೋಷಣೆಯೂ ಆರಂಭವಾಯಿತು. ಇದಕ್ಕೆ ತೆರೆಬಿದ್ದಿದ್ದು 'ಪ್ರೇಮಲೋಕ' ಚಿತ್ರದ ಸಂದರ್ಭದಲ್ಲಿ ರವಿಚಂದ್ರನ್ ಮಾಡಿದ ಸಾಹಸದಿಂದ. ಹತ್ತು ಸಾವಿರದ ಸುತ್ತ ಇದ್ದ ರಾಯಲ್ಟಿ ಸಮಸ್ಯೆ ಆಗ ಇದ್ದಕ್ಕಿದ್ದಂತೆ ಲಕ್ಷಕ್ಕೆ ಏರಿ ಬಿಟ್ಟಿತು. ಚಿತ್ರರಂಗದವರೇ ಈ ಬಗ್ಗೆ ಆಶ್ಚರ್ಯದಿಂದ ಕಣ್ಣು ಬಿಡುವಂತಾಯಿತು.

ಕ್ಯಾಸೆಟ್ ಸಂಸ್ಥೆಯವರು ಎದುರಿಸುವ ದೊಡ್ಡ ಸಮಸ್ಯೆ ಎಂದರೆ ನಕಲಿ ಕ್ಯಾಸೆಟ್‌ಗಳ ಹಾವಳಿ. ಅಸಲಿ ಕ್ಯಾಸೆಟ್‌ಗಳ ಅರ್ಧಕ್ಕಿಂತ ಕಡಿಮೆ ಬೆಲೆಗೆ ದೊರೆಯುವ ಈ ಕ್ಯಾಸೆಟ್‌ಗಳಿಗೆ ಜನ ಗುಣಮಟ್ಟದ ಬಗ್ಗೆ ಚಿಂತಿಸದೆ ಮುಗಿ ಬೀಳುತ್ತಾರೆ. ಇದನ್ನು ತಡೆಯಲು ಅಸೋಸಿಯೇಷನ್ ಮೂಲಕ ಹೋರಾಟ, ಮಾಧ್ಯಮಗಳ ಮೂಲಕ ಪ್ರಚಾರ ಎಲ್ಲವೂ ನಡೆಯಿತು. ಎಲ್ಲಕ್ಕಿಂತ ಹೆಚ್ಚಾಗಿ 'ಬಿನ್‌ಲೂಪ್ ಕ್ಯಾಸೆಟ್ ಕಾಪಿಯಿಂಗ್ ಮಿಷಿನ್' (Binloop Casette Copying Machine) ಮೂಲಕ ರಿಕಾರ್ಡ್ ಶಬ್ದ ತರಂಗಗಳ ಗುಣಮಟ್ಟವನ್ನೇ ಹೆಚ್ಚಿಸಲು ಪ್ರಯತ್ನಿಸಲಾಯಿತು. ಇದು ಇನ್ನೊಂದು ಅಪಾಯಕಾರಿ ತಿರುವು ಪಡೆದು ಇದಕ್ಕೆ ಸಂಕಷ್ಟವೂ ಬಿದ್ದು ಅದರ ವಿರುದ್ಧ ಹೋರಾಡಬೇಕಾಯಿತು. ಇದೆಲ್ಲದರ

(ಚಿತ್ರ ೫೧-೫೪) ಹಂಸಲೇಖ

ವಿ.ಮನೋಹರ್

ರಾಜೇಶ್ ರಾಮನಾಥ್

ಗುರುಕಿರಣ್

(ಚಿತ್ರ ೪೫) 'ಕವಿರತ್ನ ಕಾಳಿದಾಸ' ಚಿತ್ರದ ರಜತಮಹೋತ್ಸವ ಸಂದರ್ಭದಲ್ಲಿ ಮಾಸ್ಟರ್ ರೆಕಾರ್ಡಿಂಗ್ ಕಂಪನಿಯ ಹೆಚ್.ಎಂ.ಮಹೇಶ್‌ರವರಿಂದ ಉದಯಶಂಕರ್‌ಗೆ ನೆನಪಿನ ಕಾಣಿಕೆ

ಪರಿಣಾಮ ಅಂತಿಮವಾಗಿ ಕೆಲ ಮಟ್ಟಿಗೆ ಸರಿ ಹೋದಂತೆ ಕಂಡರೂ ನಕಲಿ ಕ್ಯಾಸೆಟ್‌ಗಳ ಹಾವಳಿ ಎಂದಿಗೂ ಜ್ವಲಂತ ಸಮಸ್ಯೆಯೇ ಸರಿ.

ನಕಲಿ ಕ್ಯಾಸೆಟ್ ಹಾವಳಿ

ಯಾವುದೇ ಒಂದು ಕ್ಯಾಸೆಟ್ ಕಂಪೆನಿಗೆ ೫ ಲಕ್ಷ ಹಕ್ಕು ಇರುತ್ತದೆ. ಅದರ ಜೊತೆಗೆ ೨೦ ಲಕ್ಷ ನಕಲಿ ಕ್ಯಾಸೆಟ್‌ಗಳು ಬರುತ್ತವೆ. ಗುಣಮಟ್ಟಕ್ಕೆ ಆದ್ಯತೆ ಎನ್ನುವುದಾದರೆ ಒರಿಜಿನಲ್‌ಗೆ ಹೋಗಬೇಕಾಗುತ್ತದೆ. ಮೈಕ್ರೋಸ್ಪಾರ್ಕ್ ಪ್ಲಗ್ ಬಳಸುವ ಕ್ಯಾಸೆಟ್ ಬೆಲೆ ಐವತ್ತು ರೂಪಾಯಿ ಆಗುತ್ತದೆ. ಅದನ್ನು ಮಾರುವ ಡೀಲರ್ ಅದರ ಬದಲು ಅದೇ ಬೆಲೆಗೆ ಎರಡು ಕ್ಯಾಸೆಟ್ ಕೊಡಲು ಮುಂದಾಗುತ್ತಾನೆ. ಒಂದು ಮೈಕ್ರೋಸ್ಪಾರ್ಕ್ ಪ್ಲಗ್ ಆರು ತಿಂಗಳು ಬಂದರೆ, ಸಾಮಾನ್ಯ ಕ್ಯಾಸೆಟ್ ಮೂರು ತಿಂಗಳು ಬಾಳಿಕೆ ಬರುತ್ತದೆ. ಮಾರುಕಟ್ಟೆಯಲ್ಲಿ ನಕಲಿ ಕ್ಯಾಸೆಟ್‌ಗಳು ಹತ್ತು ರೂಪಾಯಿಗೊಂದರಂತೆ ಮಾರಾಟವಾಗುತ್ತದೆ. ನಕಲಿ ಕ್ಯಾಸೆಟ್‌ಗಳ ಹಾವಳಿಯನ್ನು ತಡೆಯಲು ದೊಡ್ಡ ದೊಡ್ಡ ಕಂಪೆನಿಗಳು ಮುಂದೆ ಬಂದು ಹದಿನೆಂಟು ರೂಪಾಯಿಗೆ ಕೊಡಲು ತೊಡಗಿರುವುದರಿಂದ ಕೊಂಚಮಟ್ಟಿಗೆ ಸುಧಾರಣೆಯಾಗಿದೆ. ಈ ನಿಟ್ಟಿನಲ್ಲಿ ಸರ್ಕಾರದ ಪ್ರಯತ್ನ ಬಹಳ ಕಷ್ಟವೇ ಸರಿ. ಟಿ.ವಿ. ಈ ನಿಟ್ಟಿನಲ್ಲಿ ಬಹಳ ಸಹಕಾರಿಯಾಗಿದೆ. ಬಿ.ಕೆ.ಟಿ. ಏರಿಯಾ, ಸ್ಯಾಟಲೈಟ್ ಏರಿಯಾಗೆ ಮಾರಾಟವಾಗುವುದರಿಂದ ಐದು ಲಕ್ಷದಿಂದ ಇಪ್ಪತ್ತು ಲಕ್ಷದವರೆಗೂ ಹೆಚ್ಚಾಗುತ್ತದೆ. ಟಿ.ವಿ. ಹಾಗೂ ಕ್ಯಾಸೆಟ್ ಕಂಪೆನಿಗಳ ನಡುವಿನ ಒಪ್ಪಂದದಿಂದ ನಕಲಿ ಹಾವಳಿಯನ್ನು ತಡೆಯಬಹುದು. ಚಾನಲ್‌ಗಳು ಕೂಡ ಈ ನಿಟ್ಟಿನಲ್ಲಿ ಬಹಳ ಸಹಕಾರಿಯಾಗಿ ಕಾರ್ಯನಿರ್ವಹಿಸುತ್ತಿವೆ.

ಆಡಿಯೋ ಸಂಸ್ಥೆ

ಹಂಸಲೇಖ ಅವರ ಪ್ರಕಾರ ಸಮಾಜಕ್ಕೆ ಒಳ್ಳೆಯ ಸಂದೇಶವನ್ನು ನೀಡಲು ಚಿತ್ರಮಾಧ್ಯಮಕ್ಕೆ ಸಿನಿಮಾ ಸೆನ್ಸಾರ್ ಇರುವ ಹಾಗೆ. ಆಡಿಯೋ ಸೆನ್ಸಾರ್ ಜಾರಿಗೆ ಬರಬೇಕು. ಅದಾದ ನಂತರ ಆಡಿಯೋ ಅನ್ನು ಇಂಡಸ್ಟ್ರಿ ಎಂದು ಘೋಷಿಸಬೇಕು. ಸಾಮಾನ್ಯ ಮನುಷ್ಯರಲ್ಲಿ ಸಂಗೀತವನ್ನು ಆರಾಧಿಸುವ ಪರಿಯನ್ನು ಹುಟ್ಟು ಹಾಕಬೇಕು. ಅವರಿಗೆ ಸಂಗೀತದ ನಿಜವಾದ ಜ್ಞಾನವನ್ನು ವಿಶದವಾಗಿ ತಿಳಿಯಪಡಿಸುವ ಕಾರ್ಯ ಆಗಬೇಕಾಗಿದೆ. ಇಂದು ಯಾರು ಬೇಕಾದರೂ ಅವರಿಗೆ ಇಷ್ಟ ಬಂದಂತೆ ಆಲ್ಬಮ್ ಮಾಡಿ ಸಂಗೀತದ ಗುಣಮಟ್ಟವನ್ನು ಹಾಳು ಮಾಡಿದ್ದಾರೆ. ಜನಪದದ ಹೆಸರಿನಲ್ಲಿ ಅಪಭ್ರಂಶ, ಅಶ್ಲೀಲ ಸಾಹಿತ್ಯ ಹೆಚ್ಚಾಗಿ, ಅದನ್ನೇ ಆಡುಭಾಷೆ, ಸಹಜಭಾಷೆ ಎಂದು ಜನರಲ್ಲಿ ಬಿಂಬಿಸುತ್ತಿದ್ದಾರೆ. ಇದರಿಂದಾಗಿ ಸಾಮಾನ್ಯ ಪ್ರೇಕ್ಷಕನ ಚಿಂತನೆ, ಅಭಿರುಚಿ ಬದಲಾವಣೆ ಆಗಿ, ಅಂತಹ ಕೀಳುಮಟ್ಟದ ಸಾಹಿತ್ಯವನ್ನೇ ಪ್ರೇಕ್ಷಕ ಚಿತ್ರಗಳಲ್ಲಿ ಬಯಸುವಂತಾಗಿದೆ. ಇಂತಹ ಬದಲಾದ ಪರಿಸ್ಥಿತಿಯಲ್ಲಿ ಆಡಿಯೋ ಸೆನ್ಸಾರ್ ನಿಜವಾಗಿ ಪರ್ಯಾಯ ವ್ಯವಸ್ಥೆಯಾಗಬಲ್ಲದಾಗಿದೆ. ಇದರಿಂದ ಗುಣಮಟ್ಟವನ್ನು ಆಗಬಹುದಾದ ಕುಸಿತವನ್ನು ತಡೆಯಬಹುದಾಗಿದೆ.

ಕನ್ನಡ ಚಿತ್ರರಂಗಕ್ಕೆ ಹೋಲಿಸಿದರೆ ಹಿಂದಿ ಚಿತ್ರರಂಗದಲ್ಲಿ ಕ್ಯಾಸೆಟ್ ಮಾರಾಟ ಪ್ರಚಂಡವಾಗಿ ಆಗುತ್ತದೆ. ಇದಕ್ಕೆ ಕಾರಣ ಅವರು ಮೊದಲು ಕ್ಯಾಸೆಟ್ ಬಿಡುಗಡೆ ಮಾಡಿ ನಂತರ ಅದರ ಚಿತ್ರಣ ನಡೆಸುತ್ತಾರೆ. ಚಿತ್ರ ಬಿಡುಗಡೆಯಾಗುವ ಒಂದು ವರ್ಷದ ಮೊದಲೇ ಕ್ಯಾಸೆಟ್ ಬಿಡುಗಡೆಯಾಗಿ ಪ್ರೇಕ್ಷಕರಲ್ಲಿ ಒಂದು ರೀತಿಯ ಕ್ರೇಜ್ ಸೃಷ್ಟಿಸಿ ಚಿತ್ರ ನೋಡುವಂತೆ ಮಾಡುತ್ತಾರೆ. ಹೀಗಾಗಿ ಈ ಗ್ಯಾಪ್‌ನಲ್ಲಿ, ಅಂದರೆ ಕ್ಯಾಸೆಟ್ ಬಿಡುಗಡೆಯಾಗಿ ಚಿತ್ರ ಬಿಡುಗಡೆಯಾಗುವ ಅವಧಿಯಲ್ಲಿ ಕ್ಯಾಸೆಟ್ ಮಾರಾಟ ಒಳ್ಳೆಯ ರೀತಿಯಲ್ಲಿ ಆಗಿರುತ್ತದೆ. ಆದರೆ ಕನ್ನಡದಲ್ಲಿ ಚಿತ್ರ ಬಿಡುಗಡೆಯಾಗುವ ೧೫ ದಿನ ಮುಂಚೆ ಕ್ಯಾಸೆಟ್ ಬಿಡುಗಡೆ ಮಾಡುತ್ತಾರೆ. ಚಿತ್ರ ಬಿಡುಗಡೆಯಾಗಿ ಕೆಲವೊಮ್ಮೆ ಸೋತಿತೆಂದರೆ ಕ್ಯಾಸೆಟ್‌ಗಳು ಕೂಡ ಹೋಗುವುದಿಲ್ಲ.

ಮತ್ತೊಂದು ಬೆಳವಣಿಗೆಯಲ್ಲಿ ಇತ್ತೀಚಿನ ದಿನಗಳಲ್ಲಿ ಆಡಿಯೋ ಕ್ಯಾಸೆಟ್ ಮುಖಾಂತರ ಪ್ರೇಕ್ಷಕನಿಗೆ ನೀಡುವ ಆಹ್ವಾನ ಪತ್ರಿಕೆಯಿಂದಾಗಿ ಕ್ಯಾಸೆಟ್ ಖರೀದಿಸುವ ವ್ಯಕ್ತಿ ಸಿನಿಮಾದ ಸಾಧ್ಯಾಸಾಧ್ಯತೆಗಳನ್ನು, ರೂಪುರೇಷೆಗಳನ್ನು ಜೊತೆಗೆ ಸ್ಫೂರ್ತಿ, ಸೊಗಸು ಎಲ್ಲವನ್ನೂ ತಿಳಿದು ಚಿತ್ರವನ್ನು ನೋಡುವುದೇ ಬಿಡುವುದೇ ಎಂದು ಚಿತ್ರ ಬಿಡುಗಡೆಗೆ ಮೊದಲೇ ನಿರ್ಧರಿಸಿಬಿಡುತ್ತಾನೆ. ಇದರಿಂದ ಚಿತ್ರಗಳಿಗೆ ಸರಿಯಾದ ಪ್ರತಿಕ್ರಿಯೆ ಸಿಗುವುದಿಲ್ಲ. ಆದ್ದರಿಂದ ಇಲ್ಲಿಯೂ ಆಡಿಯೋ ಸೆನ್ಸಾರ್ ಪರ್ಯಾಯ, ಪರಿಣಾಮಕಾರಿ ವ್ಯವಸ್ಥೆಯಾಗಿ ಕಂಡುಬಂದರೆ ಅದರಲ್ಲಿ ಆಶ್ಚರ್ಯವೇನಿಲ್ಲ.

''ಭಾರತೀಯ ಚಿತ್ರರಂಗದಲ್ಲಿ ಸಂಗೀತ ನಿರ್ದೇಶಕ, ಗೀತ ರಚನಕಾರರ ಹಿತಾಸಕ್ತಿ ಕಾಯುವುದಕ್ಕೋಸ್ಕರ ಹುಟ್ಟಿಕೊಂಡ ಐಆರ್‌ಪಿಎಸ್ (Indian Performers Rights Society) ಈ ನಿಟ್ಟಿನಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. ಇದರಿಂದಾಗಿ ಸಂಗೀತ ನಿರ್ದೇಶಕ, ಗೀತರಚನಕಾರ ಎಂಟು ವರ್ಷಕ್ಕೊಮ್ಮೆ ಇಂತಿಷ್ಟು ಹಣವೆಂದು ಕಾಣುತ್ತಿದ್ದಾನೆ. ರೇಡಿಯೋ, ದೂರದರ್ಶನಗಳಲ್ಲಿ ಪ್ರಸಾರವಾಗುವ ಹಾಡುಗಳಿಗೆ ಪ್ರತಿ ಬಾರಿ ಇಂತಿಷ್ಟು ಗೌರವ ಧನವೆಂದು ನಿಗದಿಯಾಗಿರುತ್ತದೆ. ಐಆರ್‌ಪಿಎಸ್ ಈ ಧನವನ್ನು ಸಂಗ್ರಹಣೆ ಮಾಡಿ ಆಯಾ ಸಂಬಂಧಪಟ್ಟ ವ್ಯಕ್ತಿಗಳಿಗೆ ತಲುಪಿಸುತ್ತದೆ. ಸಂಗೀತ ನಿರ್ದೇಶನದಿಂದ, ಸಾಹಿತ್ಯದಿಂದ ಲಕ್ಷ ಲಕ್ಷ ಸಂಪಾದನೆ ಮಾಡಿದರೂ ಐಆರ್‌ಪಿಎಸ್‌ನಿಂದ ಬರುವ ೨೦-೩೦ ಸಾವಿರರೂಪಾಯಿ ತುಂಬಾ ಖುಷಿ ಕೊಡುತ್ತದೆ, ಐಆರ್‌ಪಿಎಸ್ ಒಂದು ವರ'' ಎನ್ನುತ್ತಾರೆ ಮನೋಹರ್.

ತಂತ್ರಜ್ಞಾನ ಒಂದು ಹೆಜ್ಜೆ ಮುಂದಿಟ್ಟಿತು. ಕಾಂಪ್ಯಾಕ್ಟ್ ಡಿಸ್ಕ್‌ಗಳ ಪದ್ಧತಿ ಜಾರಿಗೆ ಬರುತ್ತಿದೆ. ಇವುಗಳ ಮೂಲಕ ಮ್ಯೂಸಿಕ್ ಆಲ್ಬಂಗಳು ತಯಾರಾಗುತ್ತಿವೆ. ಟಿ.ವಿ. ಪರದೆಯ ಉದ್ದಗಲಕ್ಕೆ ಹತ್ತಾರು ಚಾನಲ್‌ಗಳು ಹುಟ್ಟಿವೆ. ಈಗ ಪ್ರಸಾರದ ಸೌಲಭ್ಯ ಹೆಚ್ಚಿದೆ. ಅಭಿರುಚಿ ಮಟ್ಟ ಕುಸಿದಿದೆ ಎಂಬ ಅಳುಕೂ ಇಲ್ಲದಿಲ್ಲ.

ರಾಗಗಳು

ಸಪ್ತಸ್ವರ ಸಂಜಾತವಾದುದು ಸಂಗೀತ. ಆದರೆ ಕಾಲ ಕ್ರಮೇಣ ಸಪ್ತಸ್ವರಗಳನ್ನು ವಿಭಜಿಸಿ ದ್ವಾದಶಸ್ವರಗಳನ್ನಾಗಿಸಿದ್ದಾರೆ. ಈ ಎಲ್ಲ ದ್ವಾದಶಸ್ವರಗಳೂ ಸರ್ವಮಾನ್ಯವಾಗಿವೆ. ನಂತರದಲ್ಲಿ 'ದ್ವಾವಿಂಶತ್' ಅಂದರೆ ಇಪ್ಪತ್ತೆರಡು ಸ್ವರಗಳಾಗಿ ಅತಿ ಸೂಕ್ಷ್ಮ ವಿಭಜನೆಗೊಂಡಿವೆ. ರಾಗಗಳ ಪರಸ್ಪರ ಸಂಯೋಗ-ವಿಯೋಗಗಳಿಂದಾಗಿ ಲೆಕ್ಕವಿಲ್ಲದಷ್ಟು ರಾಗಗಳು ರೂಪುಗೊಳ್ಳುತ್ತವೆ. ನಿಷ್ಣಾತ ಸಂಗೀತಗಾರರು ಮತ್ತು ಹಾಡುಗಾರರಿಂದ ಮಾತ್ರ ಇವುಗಳು ಸ್ಪಷ್ಟ ರೂಪಗಳನ್ನು ಹೊಂದಿ ಬದಲಾವಣೆಗಳನ್ನು ಹೊಂದುತ್ತವೆ. ಆದರೆ ಸಿನಿಮಾ ಸಂಗೀತದಲ್ಲಿ ಕೆಲವೇ ಪ್ರಧಾನ ರಾಗಗಳಿಗೆ ಮಾತ್ರ ಬೇಡಿಕೆ ಬೆಳೆಯುತ್ತಿರುವುದನ್ನು ನಾವು ಕಾಣುತ್ತೇವೆ.

ಉದಾ : ೧) ಮೋಹನ ರಾಗ, ೨) ಹಿಂದೋಳ, ೩) ಕಲ್ಯಾಣಿ, ೪) ಶುದ್ಧ ಸಾವೇರಿ, ೫) ಬಿಲಹರಿ, ೬) ಪಂತುವರಾಳಿ, ೭) ಅಭೇರಿ, ೮) ಚಾರುಕೇಶಿ, ೯) ಶಂಕರಾಭರಣ, ೧೦) ಖರಹರಪ್ರಿಯ, ೧೧) ಮಾಯಾಮಾಳವಗೌಳ, ೧೨) ಸಿಂಧುಭೈರವಿ, ೧೩) ಕಲಾವತಿ, ೧೮) ರಾಗೇಶ್ರೀ, ೧೯) ಬಾಗೇಶ್ರೀ, ೨೦) ರೇವತಿ, ೨೧) ಶುಭಪಂತುವರಾಳಿ, ೨೨) ಶಿವರಂಜಿನಿ, ೨೩) ಬೇಹಾಗ್, ೨೪) ಚಕ್ರವಾಕ, ೨೫) ಸಾರಂಗ, ೨೬) ಮಾಂಡ್ ಇತ್ಯಾದಿಗಳು.

ಇಷ್ಟೆಲ್ಲ ರಾಗಗಳಿವೆಯಾದರೂ ಪ್ರಭಾವ ಜನಕವಾದ ಭಾವ ಪ್ರವರ್ತನ ಹಾಡುವ ರೀತಿ ಮುಖ್ಯ. ರಚನೆ ಎಷ್ಟೇ ಚೆನ್ನಾಗಿದ್ದರೂ ಗಾಯನವನ್ನು ಶ್ರುತಿ ಪಕ್ವ, ಸುಮಧುರ ಕಂಠವಿಲ್ಲದೆ ಶುದ್ಧವಾಗಿ ಕೇಳಲಾಗುವುದಿಲ್ಲ. ಇಲ್ಲದಿದ್ದರೆ ಕೇಳುಗರಿಗೆ ವೇದನೆ ನೀಡುವ ಸಂದರ್ಭವೇ ಹೆಚ್ಚು. ಷಣ್ಮುಖಪ್ರಿಯ, ಪೂರ್ವಿಕಲ್ಯಾಣಿ, ತೋಡಿ, ಧನ್ಯಾಸಿ, ಋಷಭಪ್ರಿಯ, ಹಿಮಾಂದ್ರಮಧ್ಯಮ, ಕೀರವಾಣಿ, ಕಾಂಭೋಜಿ, ಬಿಲಹರಿ ಮುಂತಾದ ಅತಿ ಶಾಸ್ತ್ರೀಯ ರಾಗಗಳಿವೆಯಾದರೂ ಸಿನಿಮಾದಲ್ಲಿ ಹೆಚ್ಚು

ಬಳಕೆಯಲ್ಲಿಲ್ಲ. ಶಾಸ್ತ್ರೀಯ ಸಂಗೀತಕ್ಕೆ ಪ್ರಾಧಾನ್ಯ ನೀಡಬೇಕಾದ ಸಂದರ್ಭದಲ್ಲಿ ಮಾತ್ರ ಸಂಗೀತ ಸಂಯೋಜಕರು ಈ ರಾಗಗಳನ್ನು ಬಳಸುತ್ತಾರೆ.

ಅನೇಕ ಚಿತ್ರಗಳಲ್ಲಿ ಹಾಡುಗಳು ಸಾಮಾನ್ಯವಾಗಿ ಮಿಶ್ರರಾಗಗಳಲ್ಲೇ ರಚಿತವಾಗಿರುತ್ತವೆ. ಶಾಸ್ತ್ರೀಯ ಸನ್ನಿವೇಶಕ್ಕಾಗಿ ಕೆಲವು ಬಾರಿ ರಾಗ ಮಾಲಿಕೆಯಾಗಿ ಧಾಟಿ ರೂಪುಗೊಳ್ಳುವುದು. ವಾದ್ಯ ಸಂಯೋಜನೆ ಮಾಡುವಾಗ ಕೆಲವೊಮ್ಮೆ ವಾದ್ಯ ತಂತಿ (chords) ಸಮರಸಗೊಳ್ಳುವಾಗ ರಾಗಗಳು ಬದಲಾಗುತ್ತವೆ. ಅದಲ್ಲದೆ ಪಾಶ್ಚಾತ್ಯ ಸಂಗೀತಗಳ ಅನುಕರಣೆಯಿಂದಲೂ ಕೂಡ ಕೆಲವು ಬಾರಿ ರಾಗಗಳು ಎಲ್ಲೋ ಸಾಗಿ ಮತ್ತೆ ಹೊರಟಿದ್ದ ರಾಗಗಳಿಗೇ ತಿರುಗಿ ಬಂದು ಸೇರುವುದುಂಟು.

ಪಿ.ಬಿ.ಶ್ರೀನಿವಾಸ್ ಅವರಿಂದ ರಚಿತವಾದ ನಲವತ್ತನೇ 'ಮೇಳಕರ್ತರಾಗ' 'ಜನಿತಜನ್ಯರಾಗ'ವೆಂಬ ಹೆಸರುಳ್ಳ ಈ ರಾಗ ಆರೋಹಣದಲ್ಲಿ 'ನವನೀತ' ರಾಗದ ಆರೋಹಣವನ್ನು ಪಡೆದು, ಅವರೋಹಣದಲ್ಲಿ 'ಶುದ್ಧಮಧ್ಯಮ' ಗತಿಯನ್ನು ಪಡೆದುಕೊಂಡು ಸಾಗುತ್ತದೆ. ಒಟ್ಟಾರೆ ಸಿನಿಮಾ ಸಂಗೀತದಲ್ಲಿ ಸನ್ನಿವೇಶಕ್ಕೆ ಅನುಸಾರವಾಗಿ ಯಾವ ರಾಗವನ್ನಾದರೂ ಸರಿ, ಸರಿಯಾದ ರೀತಿಯಲ್ಲಿ ಉಪಯೋಗಿಸಿದರೆ ಹಾಡು ಬಹುಕಾಲ ನೆನಪಿನಲ್ಲಿ ಉಳಿಯುತ್ತದೆ.

ವಿವಿಧ ರಾಗಗಳನ್ನು ಆಧರಿಸಿದ ಕೆಲವು ಚಿತ್ರಗೀತೆಗಳು

೧) 'ಭಕ್ತ ಕನಕದಾಸ' ಚಿತ್ರದ ''ಬದುಕಿದೆನು ಬದುಕಿದೆನು...'' (ನಟಭೈರವಿ), ''ಬಾಗಿಲನು ತೆರೆದು ಸೇವೆಯನು ಕೊಡು ಹರಿಯೆ....''(ಹಿಂದೋಳ),''ಕುಲ ಕುಲ ಕುಲವೆಂದು ಹೊಡೆದಾಡದಿರಿ...''(ಸಿಂಧುಭೈರವಿ).''ಈತನೀಗ ವಾಸುದೇವನು...'' (ಕಲ್ಯಾಣಿ), ೨) 'ಶ್ರೀಕೃಷ್ಣದೇವರಾಯ' ಚಿತ್ರದ ''ತಿರುಪತಿ ಗಿರಿವಾಸ ಶ್ರೀ ವೆಂಕಟೇಶ...'' (ಮಾಯಾಮಾಳವಗೌಳ), ''ಬಹು ಜನ್ಮದಾ ಪೂಜಾಫಲ...'' (ಕಾನಡಾ), ೩) 'ಶ್ರೀ ರಾಮಾಂಜನೇಯ ಯುದ್ಧ' ಚಿತ್ರದ ''ಜಗದೀಶನಾಡುವಾ ಜಗವೇ ನಾಟಕರಂಗ...''(ಭೀಮ್ ಪಲಾಸ್), ೪)'ನಾಗರಹಾವು' ಚಿತ್ರದ ''ಬಾರೇ ಬಾರೇ ಚಂದದ ಚೆಲುವಿನ ತಾರೆ...'' (ಭೀಮ್ ಪಲಾಸ್), ೫)'ಗೆಜ್ಜೆಪೂಜೆ' ಚಿತ್ರದ ''ಪಂಚಮ ವೇದ ಪ್ರೇಮದ ನಾದ...'' (ಭೀಮ್‌ಪಲಾಸ್), ೬) 'ಸಂತತುಕಾರಾಂ' ಚಿತ್ರದ ''ಜಯತು ಜಯ ವಿಠಲಾ...'' (ಮೋಹನರಾಗ), ''ಹೇ ಪಾಂಡುರಂಗಾ ಎನ್ನಾತ್ಮ ಗಂಗಾ...'' (ಶಿವರಂಜಿನಿ), ೭) 'ಗಂಧದಗುಡಿ' ಚಿತ್ರದ ''ನಾವಾಡುವ ನುಡಿಯೇ ಕನ್ನಡ ನುಡಿ...'' (ಮೋಹನರಾಗ), ೮) 'ಭಕ್ತ ಕುಂಬಾರ' ಚಿತ್ರದ ''ಹರಿನಾಮವೇ ಚಂದ...'' (ಮೋಹನರಾಗ), ೯) 'ದಾರಿ ತಪ್ಪಿದ ಮಗ' ಚಿತ್ರದ ''ಕಣ್ಣಂಚಿನ ಈ ಮಾತಲಿ...'' (ಕಲ್ಯಾಣಿ), ೧೦)'ದೇವರ ದುಡ್ಡು' ಚಿತ್ರದ ''ನಾನೇ ಎಂಬ ಭಾವ ನಾಶವಾಯಿತು...'' (ಶಿವರಂಜಿನಿ), ೧೧)'ಭಲೇ ಕಿಲಾಡಿ... ' ಚಿತ್ರದ ''ಬಾರಿಸು ಕನ್ನಡ ಡಿಂಡಿಮವ...'' (ಶಿವರಂಜಿನಿ), ೧೨) 'ನಾಂದಿ' ಚಿತ್ರದ ''ಹಾಡೊಂದು ಹಾಡುವೆ ನೀ ಕೇಳು ಮಗುವೆ...'' (ಮಧ್ಯಮಾವತಿ), ೧೩) 'ನನ್ನ ತಮ್ಮ' ಚಿತ್ರದ ''ಇದೇ ಹೊಸ ಹಾಡು ಹೃದಯಸಾಕ್ಷಿ ಹಾಡು...'' (ಶುದ್ಧಧನ್ಯಾಸಿ), ೧೪) 'ಬಂಗಾರದ ಮನುಷ್ಯ' ಚಿತ್ರದ ''ಆಗದು ಎಂದು ಕೈಲಾಗದು ಎಂದು ಕೈಕಟ್ಟಿ ಕುಳಿತರೆ...'' (ಸಿಂಧುಭೈರವಿ), ೧೫) 'ಶ್ರೀ ಪುರಂದರದಾಸರು' ಚಿತ್ರದ ''ಸಕಲ ಗ್ರಹಬಲ ನೀನೆ ಸರಸಿಜಾಕ್ಷ...'' (ಹರಿಕಾಂಬೋಧಿ), ೧೬) 'ಶ್ರೀ ರಾಘವೇಂದ್ರ ಮಹಾತ್ಮೆ' ಚಿತ್ರದ ''ಇಂದು ಎನಗೆ ಗೋವಿಂದಾ....'' (ಭೈರವಿ, ಈ ಹಾಡು ಭೈರವಿ ರಾಗದಿಂದ ಹೊರಟು, ಚರಣದಲ್ಲಿ 'ರಂಜನಿ'ಯ ರಂಜಕ ರಾಗವನ್ನು ತಲುಪಿ ಮತ್ತೆ ಪಲ್ಲವಿಯ ಭೈರವಿಗೆ ಸೇರಿಕೊಂಡು ಬಿಡುವ ಹಾಡು) ಹೀಗೆ ಹಲವು ಗೀತೆಗಳನ್ನು ಹೆಸರಿಸಬಹುದು.

ಕನ್ನಡ ಚಿತ್ರರಂಗದ ಜೊತೆಗೆ ಹಿನ್ನೆಲೆ ಸಂಗೀತ ಅಬ್ಬರ ಇಳಿತಗಳೊಂದಿಗೆ ಬೆಳೆದು ಬಂದಿದೆ. ತಂತ್ರಜ್ಞಾನದ ಜೊತೆಗೆ ತನ್ನನ್ನು ಬೆಳೆಸಿಕೊಳ್ಳುತ್ತ ಬಂದಿದೆ. ಆರಂಭದಲ್ಲಿದ್ದ ಕೀಳರಿಮೆ, ಹಿಂಜರಿಕೆಗಳು ಕ್ರಮೇಣ ಹಿಂದ ಸರಿದು ಎಲ್ಲರೊಂದಿಗೆ ತಲೆ ಎತ್ತಿ ನಿಲ್ಲುವ ವಾತಾವರಣ ಸೃಷ್ಟಿಯಾಗಿದೆ. ಹಲವು ಸಂಗೀತ ನಿರ್ದೇಶಕರು, ಗಾಯಕರು ಇದರ ಬೆಳವಣಿಗೆಗೆ ದುಡಿದಿದ್ದಾರೆ. ಚರಿತ್ರೆ ಎಂದರೆ ಅದಕ್ಕೊಂದು ತಾತ್ವಿಕ ಹಿನ್ನೆಲೆ ಇರಬಹುದು. ಇಂತಹ ತಾತ್ವಿಕ ಚೌಕಟ್ಟನ್ನು ಹುಡುಕುವುದು ಸಂಶೋಧನೆಯ ಮೊದಲ ಕೆಲಸವಾಗಬೇಕು. ಇದು ಒಂದು ಅಭಿಪ್ರಾಯವಾದರೆ ಇನ್ನೊಂದು ವಾದ ಕೊಂಚ ಭಿನ್ನ ರೀತಿಯದಾಗಿದೆ.

ಚಿತ್ರಗೀತೆಗಳು ರಾಗವನ್ನು ಅವಲಂಬಿಸಿರುತ್ತವೆ ಎಂಬ ಮಾತಿದೆ. ಇದರ ಆಧಾರದ ಮೇಲೆ ರಾಗಮಾಲಿಕೆಯಂತಹ ಕಾರ್ಯಕ್ರಮಗಳೂ ನಡೆಯುತ್ತವೆ. ಆದರೂ ''ವಿರಹ ನೂರು ನೂರು ತರಹ...'', ಭೀಮ್‌ಪಲಾಸ್ ರಾಗದ ಕೃತಿ ಎಂದರೆ ಸಂಗೀತದ ಪ್ರಾಥಮಿಕ ಜ್ಞಾನ ಉಳ್ಳವರಿಗೆ ಆ ರಾಗದ ಆರೋಹಣ, ಅವರೋಹಣವನ್ನೆಲ್ಲ ತಡಕಾಡಿದರೂ ಪತ್ತೆಯಾಗುವುದಿಲ್ಲ. ಇದಕ್ಕೆ ಮುಖ್ಯ ಕಾರಣವೆಂದರೆ 'ಹಿನ್ನೆಲೆ ಸಂಗೀತ'ದಲ್ಲಿ ರಾಗ ಹೇಗೆ ಬಳಕೆಯಾಗುತ್ತದೆ ಎಂಬುದರ ಬಗ್ಗೆ ಸ್ಪಷ್ಟ ಕಲ್ಪನೆ ಇಲ್ಲದಿರುವುದು. ಚಲನಚಿತ್ರ ಸಂಗೀತವನ್ನು ಒಂದು ನಿಗದಿತ ಚೌಕಟ್ಟಿನಲ್ಲಿಟ್ಟು ನೋಡುವುದಕ್ಕಿಂತ ಬೇರೆಯಾದ ಮಾರ್ಗವನ್ನು ಹುಡುಕುವುದು ಸೂಕ್ತ.

ರಾಗ ಶಾಸ್ತ್ರೀಯ ಸಂಗೀತದಲ್ಲಿ ಬಳಕೆಯಾಗುವ ಕ್ರಮ ನೋಡೋಣ. ಆರೋಹಣ, ಅವರೋಹಣ ನಡುವಿನ ಹಲವು ಬಳಸು ದಾರಿಯನ್ನು ಆಧರಿಸಿ ಕೃತಿಗಳನ್ನು ರಚಿಸಲಾಗಿರುತ್ತದೆ. ಎರಡು ಸಾಹಿತ್ಯಿಕ ಸಾಲುಗಳ ನಡುವೆ 'ಸ್ವರ ಸಂಚಾರ' ನಿಯಮಿತವಾಗಿರುತ್ತದೆ. ಮುಖ್ಯವಾಗಿ ಗಮನಿಸಬೇಕಾದ ಸಂಗತಿ ಎಂದರೆ ಇಲ್ಲಿ ಪ್ರಾಮುಖ್ಯ ಇರುವುದು ಸ್ವರ ಸಂಚಾರಕ್ಕೇ ಹೊರತು ಸಾಹಿತ್ಯಕ್ಕಲ್ಲ. ಈ ಪರಿಸ್ಥಿತಿ ಚಿತ್ರಗೀತೆಗೆ ಬಂದಾಗ ಬದಲಾಗುತ್ತದೆ. ಶಾಸ್ತ್ರೀಯ ಹಿನ್ನೆಲೆ ಇರುವ ಕೆಲವು ಗೀತೆ ಬಿಟ್ಟರೆ ಬಹುತೇಕ ಗೀತೆಗಳ ಸಂದರ್ಭದಲ್ಲಿ ಮುಖ್ಯವಾಗುವುದು ಭಾವವೇ ಹೊರತು ಸ್ವರವಲ್ಲ. ಚಿತ್ರಗೀತೆಗಳನ್ನು ರಚಿಸುವಾಗಲೂ ಆಧಾರವಾಗಿಟ್ಟುಕೊಳ್ಳುವುದೇ ಒಂದು ಹಮ್ಮಿಂಗ್ ಅನ್ನೇ ಹೊರತು ಸ್ವರ ಸಂಚಾರವನ್ನಲ್ಲ. ಹಮ್ಮಿಂಗ್ಸ್‌ಗೂ ರಾಗಕ್ಕೂ ಇರುವ ವ್ಯತ್ಯಾಸ ತಿಳಿದುಕೊಂಡರೆ ಈ ಗೊಂದಲಕ್ಕೆ ಪರಿಹಾರ ಸಿಕ್ಕುತ್ತದೆ. ಕರ್ನಾಟಕೀಯ ಜನಕ ಮತ್ತು ಜನ್ಯ ರಾಗಗಳು ಮತ್ತು ಉತ್ತರಾದಿಯ ರಾಗ ರಾಗಿಣಿಯರು ಏಳು ಸ್ವರಗಳ ಪೂರ್ಣ ಪಾರಕ್ಕೆ ಬದ್ಧವು. ಔಡವ, ಷಾಡವಗಳಿಗೂ ಇಲ್ಲೇ ತವರು ಮನೆ. ಹಮ್ಮಿಂಗ್ಸ್‌ಗೆ ಈ ಸೂತ್ರಬದ್ಧತೆ ಬೇಡ. ಮೂರು ಸ್ವರಗಳೂ ಸರಿಮ, ಸದನಿ, ರಿಗರಿಗಳು ಹಮ್ಮಿಂಗ್ಸ್ ಹುಟ್ಟಿಸಬಲ್ಲವು. ಈ ಮೂರು ಸ್ವರಗಳ ಪಾತ್ರ ಕನಿಷ್ಟ ಹದಿನೈದು ರಾಗಗಳಿಗೆ ಒಪ್ಪುವಂತಿರುತ್ತದೆ. ಹಮ್ಮಿಂಗ್ ಅನ್ನು ಆಧರಿಸಿ ಒಂದು ಚಿತ್ರಗೀತೆ ರಚನೆಯಾದರೆ ಅದರಲ್ಲಿ ಕನಿಷ್ಟ ಮೂರು ರಾಗಗಳಿರುತ್ತವೆ. ಸಾಮಾನ್ಯವಾಗಿ ಪಲ್ಲವಿ ಯಾವ ರಾಗದಲ್ಲಿರುತ್ತದೆಯೋ ಅದನ್ನೇ ಗೀತೆಯ ರಾಗ ಎಂದು ಹೇಳುವುದು ರೂಢಿಯಲ್ಲಿದ್ದರೂ ಅದು ಹಲವು ರಾಗಗಳ ಸಂಯೋಜನೆ ಎನ್ನುವುದು ಹೆಚ್ಚು ಸೂಕ್ತವಾದ ವಿಶ್ಲೇಷಣೆ.

ಇದನ್ನು ಇಲ್ಲಿ ಉಲ್ಲೇಖಿಸುವ ಅಗತ್ಯವೆಂದರೆ ಹಿನ್ನೆಲೆ ಸಂಗೀತವನ್ನು ಇಂತಹ ಸರಳ ಪಾತ್ರಗಳೇ ಹೆಚ್ಚಾಗಿ ಪ್ರಭಾವಿಸಿವೆ. ವಿಷಾದದ ಸನ್ನಿವೇಶ ಬಂದಾಗಲೆಲ್ಲ ಹಿನ್ನೆಲೆಯಲ್ಲಿ ಮೂಡಿಬರುವ ಹಮ್ಮಿಂಗ್ ಶಿವರಂಜಿನಿ ರಾಗಕ್ಕೆ ಹತ್ತಿರವಾದದ್ದಾಗಿರುತ್ತದೆ. ಉತ್ಸಾಹ, ಸಂಭ್ರಮಗಳನ್ನು ಹಂಸಧ್ವನಿ ಹೇಳಿದರೆ ಉದಯರಾಗವನ್ನು ಕಲ್ಯಾಣಿ ಅಥವಾ ಮಲಯಮಾರುತ ಹೇಳುತ್ತದೆ. ವಿರಹ, ಅಗಲುವಿಕೆ ಇಂತಹ ಮೆಲೋಡ್ರಾಮಗಳಲ್ಲಿ ಭೀಮ್‌ಪಲಾಸ್ ಬಳಕೆಯಾಗಿದೆ. ಪ್ರಣಯ, ಉನ್ಮಾದ, ಮಿಥುನ, ಭಾವೋದ್ವೇಗಗಳಲ್ಲಿ ಮೇಘಮಲ್ಹಾರ್ ಬಳಕೆಯಾಗಿದೆ. ಭಕ್ತಿ ಸಂದರ್ಭದಲ್ಲಿ ಭೈರವಿ ಕಂಡುಬಂದಿದೆ. ಅಲ್ಲಲ್ಲಿ ಹರಿಕಾಂಬೋಜಿ ಬಳಕೆಯಾಗಿದೆ. ಕನ್ನಡ ಚಿತ್ರರಂಗದಲ್ಲಿ ಹೀಗೆ ನಿಯಮಿತವಾಗಿ ಕೆಲವು ರಾಗಗಳನ್ನು ಕೆಲವು ಸನ್ನಿವೇಶಕ್ಕೆ ಬಳಸುತ್ತ ಬಂದಿದ್ದರಿಂದ ಅವುಗಳಿಗೊಂದು ಪರಂಪರೆ ಸೃಷ್ಟಿಯಾಗಿದೆ. ಈ ರಾಗ ಹೊಮ್ಮುತ್ತಲೇ ಪ್ರೇಕ್ಷಕರಲ್ಲೊಂದು ಪೂರ್ವನಿರ್ಧಾರಿತ ಭಾವನೆ ಹುಟ್ಟುವುದು ಸಾಧ್ಯವಾಗಿದೆ. ಚಿತ್ರಸಂಗೀತಕ್ಕಿರುವ ಸ್ಥಿತಿಸ್ಥಾಪಕತೆ (ಎಲಾಸ್ಟಿಸಿಟಿ)ಯಿಂದಾಗಿ ಹಲವು ಅಭಿಪ್ರಾಯಗಳು, ವಾದಗಳು ಏರ್ಪಡುತ್ತವೆ. ಎಲ್ಲವನ್ನೂ ಶಾಸ್ತ್ರದ ಚೌಕಟ್ಟಿನಲ್ಲಿಯೇ ನೋಡುವ ಹಠಕ್ಕಿಂತ ಮನೋಧರ್ಮವನ್ನಷ್ಟೇ ಗಮನಿಸುವುದು ಉಚಿತವೆನ್ನಿಸುತ್ತದೆ.

ಚಿತ್ರಸಂಗೀತ ಮತ್ತು ಗೀತರಚನೆ

ಚಿತ್ರಗೀತೆಗಳನ್ನು ರಚಿಸುವಾಗ ಎರಡು ಮುಖ್ಯ ವಿಧಾನಗಳಿವೆ. ಸನ್ನಿವೇಶದ ಭಾವನೆಗಳಿಗೆ ತಕ್ಕಂತೆ ಸಂಗೀತ ನಿರ್ದೇಶಕ ಟ್ಯೂನ್ ಮಾಡುತ್ತಾನೆ. ಗೀತಸಾಹಿತಿ ಅದಕ್ಕೆ ತಕ್ಕಂತೆ ಗೀತೆ ರಚಿಸುತ್ತಾನೆ. ಇದು ಹೆಚ್ಚು ಬಳಕೆಯಲ್ಲಿರುವ ವಿಧಾನ. ಇದರ ಮುಖ್ಯ ಪ್ರಯೋಜನವೆಂದರೆ ಗೀತಸಾಹಿತಿ ಟ್ಯೂನ್‌ನ ಪರಿಳಿತಕ್ಕೆ ತಕ್ಕಂತೆ ಗೀತೆ ಮೂಡಿಸಿ ಅವು ಅಪಭ್ರಂಶವಾಗದಂತೆ ಎಚ್ಚರ ವಹಿಸಬಹುದು. ಜೊತೆಗೆ ಟ್ಯೂನ್‌ನ ಭಾವನೆಯನ್ನು ಸಾಹಿತ್ಯದಲ್ಲಿ ಬೆರೆಸಲು ಪ್ರಯತ್ನಿಸಬಹುದು. ಇದು ಸೃಜನಶೀಲತೆಗೆ ಮಿತಿ ಕಲ್ಪಿಸುತ್ತದೆ ಎಂಬ ವಾದವೂ ಇದೆ. ಮುಖ್ಯವಾಗಿ ಈಗಾಗಲೇ ರಚಿತವಾದ ಕವಿತೆಗಳನ್ನು ಅಳವಡಿಸಿಕೊಳ್ಳುವಾಗ ಸಾಹಿತ್ಯಕ್ಕೆ ತಕ್ಕಂತೆ ಟ್ಯೂನ್ ಮಾಡಬೇಕಾಗುತ್ತದೆ. ಹೀಗೆ ಮಾಡಿದಾಗ ಅಪಭ್ರಂಶ ಹುಟ್ಟಿದ ಬೇಕಾದಷ್ಟು ಉದಾಹರಣೆಗಳು ನಮ್ಮ

ಮುಂದಿವೆ. ಇಷ್ಟಾದರೂ ಟ್ಯೂನ್‌ಗೆ ಗೀತೆ ಬರೆಯುವ ಪರಿಪಾಠ ನಮ್ಮಲ್ಲಿ ಜನಪ್ರಿಯ. ಏಕೆಂದರೆ ಚಲನಚಿತ್ರದಲ್ಲಿ ಸಾಹಿತ್ಯ ಒಟ್ಟು ಪರಿಣಾಮದ ಒಂದು ಭಾಗ ಸಂಗೀತ. ಅಭಿನಯ ದೃಶ್ಯೀಕರಣ ಎಲ್ಲವೂ ತೆರೆಯ ಮೇಲೆ ಪ್ರಮುಖ ಪಾತ್ರ ವಹಿಸುತ್ತವೆ. ಇವುಗಳಲ್ಲಿ ಉಳಿದವಕ್ಕಿರುವ ಮಹತ್ವ ಗಮನಿಸಿದರೆ ಸಾಹಿತ್ಯದ್ದು ಕೊನೆಯ ಸ್ಥಾನವೇ. ಹೀಗಾಗಿದ್ದು ತಪ್ಪೋ ಸರಿಯೋ ಎಂಬ ಪ್ರಶ್ನೆ ಬೇರೆ. ಆದರೆ ಹೀಗಾಗಿರುವುದು ಯಾವ ಚರಿತ್ರಕಾರನೂ ಅಲ್ಲಗಳೆಯಲಾರದ ವಾಸ್ತವ.

ಚಿತ್ರಗೀತೆಗಳಿಗೆ ಸಾಹಿತಿಗಳ ಕೊಡುಗೆಯನ್ನು ಕೃತಜ್ಞತೆಯಿಂದ ನೆನೆಯಬೇಕು. ಪ್ರಸಿದ್ಧ ಕವಿಗಳ ರಚನೆಯನ್ನು ಬಳಸಿಕೊಂಡದ್ದು ಒಂದು ಕಡೆಯಾದರೆ ಚಿತ್ರಕ್ಕಾಗಿ ಗೀತೆಗಳನ್ನು ರಚಿಸಿ ಕಾವ್ಯಗುಣವನ್ನು ತುಂಬಿದ ಹಲವರಿದ್ದಾರೆ. ಸಂಗೀತ ನಿರ್ದೇಶಕರು ಸೂಚಿಸುವ ರಾಗಕ್ಕೆ ಹೊಂದುವಂತೆ ಶಬ್ದಗಳನ್ನು ಹೊಂದಿಸುತ್ತ ಅಲ್ಲಿ ಅರ್ಥವೂ, ಕಾವ್ಯಗುಣವೂ ಸೇರುವಂತೆ ಎಚ್ಚರ ವಹಿಸಿದವರಿದ್ದಾರೆ.

ಕನ್ನಡ ಚಿತ್ರರಂಗದ ಪ್ರಥಮ ಸಾಹಿತಿ, ಗೀತರಚನಕಾರರು, ಕವಿ ಬೆಳ್ಳಾವೆ ನರಹರಿಶಾಸ್ತ್ರಿ ನಾಟಕಕ್ಕಾಗಿ ತಾವು ರಚಿಸಿದ್ದ ಹಾಡುಗಳನ್ನು ಕೊಂಚ ಬದಲಾಯಿಸಿ ಚಿತ್ರಗಳಿಗೆ ಬಳಸಿದರು. ಚಿತ್ರ ಸನ್ನಿವೇಶಕ್ಕೆ ಅನುಗುಣವಾಗಿ ಹೊಸ ಗೀತೆಗಳನ್ನು ರಚಿಸಿದರು. ಮುಖ್ಯವಾದ ಚಿತ್ರಗಳು - 'ಸದಾರಮೆ', 'ಕೃಷ್ಣ ಸುಧಾಮ', 'ಹೇಮರೆಡ್ಡಿ ಮಲ್ಲಮ್ಮ'.

ದೇವುಡು ನರಸಿಂಹಶಾಸ್ತ್ರಿಗಳು, ಜಿ.ಪುಟ್ಟಸ್ವಾಮಯ್ಯನವರು, ನಾಗೇಂದ್ರರಾಯರು, ಎಚ್.ಎಲ್.ಎನ್.ಸಿಂಹ, ಕೆ.ಹಿರಣ್ಣಯ್ಯ, ಕಣಗಾಲ್ ಪ್ರಭಾಕರಶಾಸ್ತ್ರಿ ಮೊದಲಾದವರು ಪ್ರಾರಂಭದ ದಿನಗಳಿಂದಲೂ ಚಿತ್ರಗೀತೆಗಳ ಕ್ಷೇತ್ರಕ್ಕೆ ದುಡಿದಿದ್ದಾರೆ.

ಗ್ರಾಂಥಿಕ, ಕೊಂಚ ಕ್ಲಿಷ್ಟ ಅನ್ನಿಸುವಂತಿದ್ದ ಗೀತೆಗಳನ್ನು ಆಡುಮಾತಿಗೆ ಕರೆತಂದು ಆಪ್ತವಾಗಿಸಿದವರು ಹುಣಸೂರು ಕೃಷ್ಣಮೂರ್ತಿ. ಕು.ರ.ಸೀತಾರಾಮಶಾಸ್ತ್ರಿ ಸರಳ, ಅರ್ಥಪೂರ್ಣ ಗೀತರಚನೆಕಾರ. ಎಂ.ನರೇಂದ್ರಬಾಬು, ಚಿ.ಸದಾಶಿವಯ್ಯ, ಗೀತಪ್ರಿಯ, ಆರ್.ಎನ್.ಜಯಗೋಪಾಲ್, ಜಿ.ವಿ.ಅಯ್ಯರ್, ಎಸ್.ಕೆ.ಕರೀಂಖಾನ್, ಉದಯಶಂಕರ್ ಮೊದಲಾದವರು ೬೦ರ ದಶಕದಲ್ಲಿ ಕನ್ನಡ ಚಿತ್ರರಂಗಕ್ಕೆ ಗೀತ ಸಮೃದ್ಧಿಯನ್ನೇ ತಂದವರು.

ಉತ್ತಮ ಸಾಹಿತ್ಯ, ಸ್ವರ ಸಂಯೋಜನೆಯಿಂದ 'ಭಾರತಿ' ಚಿತ್ರದ ಹಾಡುಗಳು ರಂಜಿಸಿದ್ದವು. 'ರಾಜಾವಿಕ್ರಮ', 'ದಲ್ಲಾಳಿ', 'ಸೌಭಾಗ್ಯಲಕ್ಷ್ಮಿ', 'ನಾಗಕನ್ನಿಕಾ' ಚಿತ್ರದ ಹಾಡುಗಳು ಹುಣಸೂರು ಕೃಷ್ಣಮೂರ್ತಿಯವರ ಪ್ರತಿಭೆಯನ್ನು ಎತ್ತಿ ಹಿಡಿದವು. 'ಮೊದಲ ತೇದಿ', 'ಭಕ್ತ ಮಾರ್ಕಂಡೇಯ' ಚಿತ್ರದ ಸದಾಶಿವಯ್ಯನವರ ಗೀತೆಗಳು ಶಿಷ್ಟಸಾಹಿತ್ಯದ ಸೊಗಸನ್ನು ತೋರಿದ್ದವು. 'ಮಹಾಕವಿ ಕಾಳಿದಾಸ' ಚಿತ್ರದ ಹಾಡುಗಳು ಕು.ರ.ಸೀ. ಅವರ ಪ್ರತಿಭೆಗೆ ಸಾಕ್ಷಿಯಾದವು. ಈ ಚಿತ್ರದಲ್ಲಿ ಬೆಳ್ಳಾವೆ ನರಹರಿಶಾಸ್ತ್ರಿಗಳ ಒಂದು ಸುದೀರ್ಘ ಗೀತೆಯೂ ಇತ್ತು.

'ಓಹಿಲೇಶ್ವರ' ಚಿತ್ರದ "ಈ ದೇಹದಿಂದ ದೂರನಾದೆ ಏಕೆ ಆತ್ಮನೆ..."ಯಿಂದ ಪ್ರಾರಂಭಿಸಿದ ವಿಜಯನಾರಸಿಂಹ ಮುಂದೆ ನೂರಾರು ಉತ್ತಮ ಕೃತಿಗಳನ್ನಿತ್ತರು. 'ಪ್ರೇಮದ ಪುತ್ರಿ'ಯಿಂದ ಪ್ರಾರಂಭಿಸಿದ ಆರ್.ಎನ್.ಜಯಗೋಪಾಲ್ ಅವರ ಪ್ರೇಮಮಯ ಕವಿತೆಗಳು ಬಹು ಮೆಚ್ಚುಗೆ ಗಳಿಸಿದವು. ಜಿ.ವಿ.ಅಯ್ಯರ್ ವಿಶಿಷ್ಟ ರೀತಿಯ ರಚನೆ, ಕಾವ್ಯಾರ್ಥಗಳ ಹೊಸತನದಿಂದ ಮುಖ್ಯರೆನಿಸಿದಾಗ ಆ ದಿನಗಳಲ್ಲಿ 'ಕಣ್ತೆರೆದು ನೋಡು' ಚಿತ್ರದ "ಕನ್ನಡದಾ ಮಕ್ಕಳೆಲ್ಲ ಒಂದಾಗಿ ಬನ್ನಿ...", 'ಭೂದಾನ', 'ಬಂಗಾರಿ' ಚಿತ್ರದ ಹಾಡುಗಳು, ಹೀಗೆ ಉತ್ತಮ ಗೀತೆಗಳ ಸರಮಾಲೆಯೇ ಇದೆ.

'ಮನೆಗೆ ಬಂದ ಮಹಾಲಕ್ಷ್ಮಿ' ಚಿತ್ರದಿಂದ ಗೀತರಚನಕಾರರೂ ಆಗಿ ಚಿತ್ರರಂಗದಲ್ಲಿ ತೊಡಗಿಕೊಂಡ ಸೋರಟ್ ಅಶ್ವತ್ಥ್, 'ಶಿವರಾತ್ರಿ ಮಹಾತ್ಮೆ' ಚಿತ್ರದಿಂದ ಪ್ರಾರಂಭಿಸಿದ ಚಿ.ಉದಯಶಂಕರ್, ಬದ್ಧತೆಗೆ ಒಪ್ಪಿಸಿಕೊಂಡ ಗೀತಪ್ರಿಯ, ನಾಡು-ನುಡಿ ಕುರಿತು ಬರೆದ ಸಿ.ವಿ.ಶಿವಶಂಕರ್, ಹಂಸಲೇಖ, ದೊಡ್ಡರಂಗೇಗೌಡ ವಿ.ಮನೋಹರ್, ಸು. ರುದ್ರಮೂರ್ತಿಶಾಸ್ತ್ರಿ, ಭಂಗಿರಂಗ, ಕಲ್ಯಾಣ್, ಟಿ.ಎನ್.ನರಸಿಂಹನ್, ಎಚ್.ಎಸ್. ವೆಂಕಟೇಶ್ವರಮೂರ್ತಿ, ಎಂ.ಎನ್.ವ್ಯಾಸರಾವ್, ಶ್ಯಾಮಸುಂದರ ಕುಲಕರ್ಣಿ, ಜಿ.ಎಂ.ಪ್ರಹ್ಲಾದ್, ಬರಗೂರು ರಾಮಚಂದ್ರಪ್ಪ ಮೊದಲಾದವರಿಗೆ ಚಿತ್ರರಂಗ ಕೃತಜ್ಞವಾಗಿದೆ. ಕವಯಿತ್ರಿಯರಲ್ಲಿ ರೇವತಿ ಕಲ್ಯಾಣ್‌ಕುಮಾರ್, ಜಯಶ್ರೀ ಅರವಿಂದ್, ಪ್ರತಿಭಾ ನಂದಕುಮಾರ್, ಮಧುಮತಿ ಗೀತೆಗಳನ್ನು ಬರೆದಿದ್ದಾರೆ. (ನೋಡಿ : ಚಲನಚಿತ್ರ ಸಾಹಿತ್ಯ)

ಚಿತ್ರ ಸಂಗೀತ ಮತ್ತು ದೃಶ್ಯೀಕರಣ

ಉತ್ತಮವಾದ ಟ್ಯೂನ್, ಉತ್ತಮವಾದ ಸಾಹಿತ್ಯ, ಸೊಗಸಾದ ಗಾಯನ ಇವಿಷ್ಟೇ ಚಿತ್ರಗೀತೆಯೊಂದರ ಯಶಸ್ಸಿಗೆ ಸಾಕಾಗುವುದಿಲ್ಲ.. ಅದನ್ನು ಸರಿಯಾದ ರೀತಿಯಲ್ಲಿ ಚಿತ್ರೀಕರಿಸಬೇಕು, ಟ್ಯೂನ್ ಬಂದರಿಂದಲೇ ಸಾಹಿತ್ಯ ಹೇಗೋ ಆಗಿ ಅದನ್ನು ಹೇಗೂ ತುರುಕಿಸಿದರೆ ಆಯಿತು ಎನ್ನುವಂಥ ಸಾಧ್ಯತೆಗಳು ನಮ್ಮಲ್ಲಿ ಕಡಿಮೆ ಏನಿಲ್ಲ. ಅಷ್ಟೇಕೆ, "ಮೂಡಣ ಮನೆಯ...", "ಉತ್ತರ ಧ್ರುವದಿಂ...", "ಜಯ ಭಾರತ ಜನನಿಯ ತನುಜಾತೆ...", "ಇಳಿದು ಬಾ ತಾಯಿ.." ಮುಂತಾದ ಸಾರ್ವಕಾಲಿಕ ಶ್ರೇಷ್ಠ ರಚನೆಗಳು ಚಲನಚಿತ್ರದಲ್ಲಿ ಹೇಗೋ ಸೇರಿಸಲ್ಪಟ್ಟ ದೃಶ್ಯಗಳೇ ಹೊರತು ಅವರ ಭಾಷೆಯಲ್ಲಿ ಬಂದಂತಹವುಗಳಲ್ಲವೇ ಅಲ್ಲ. "ತೆರೆದಿದೆ ಮನೆ ಓ ಬಾ ಅತಿಥಿ..." ಎನ್ನುವಂತಹ ಹಾಡುಗಳ ಸಂದರ್ಭದಲ್ಲಿ ಅದರ ಅರ್ಥವ್ಯಾಪ್ತಿಯೇ ಕುಗ್ಗಿದೆ.

ಚಿತ್ರಗೀತೆಗಳು ಎರಡು ವಿಧದಲ್ಲಿ ಚಲನಚಿತ್ರದಲ್ಲಿ ಬಳಕೆಯಾಗುತ್ತವೆ. ಮೊದಲನೆಯದು ಚಲನಚಿತ್ರದಲ್ಲಿ ರಂಜನೆಗಾಗಿ ಬಳಕೆಯಾಗುವಂತಹವುಗಳು. ಕೆಲವು ಚಿತ್ರದ ವ್ಯಾಪ್ತಿ ಮೀರಿ ನಟಿಸುವ ನಟ ಅಥವಾ ನಟಿಯ ಗುಣಗಾನಕ್ಕೆ ಮೀಸಲಾಗಿರುತ್ತವೆ. ಸಹಜವಾಗಿಯೇ ಇಂತಹವುಗಳ ಬಗ್ಗೆ ಚರ್ಚೆ ಅಗತ್ಯವಿಲ್ಲ. ಇನ್ನೊಂದು ಚಿತ್ರದ ಭಾಗವಾಗಿ ಕಥೆಯ ಮುಂದುವರಿಕೆ ತಂತ್ರ, ಭಾವನೆಗಳ ತೊಳಲಾಟ ತಿಳಿಸುವ ಸಂಗತಿ ಅಥವಾ ಫ್ಲಾಶ್‌ಬ್ಯಾಕ್ ಆಗಿ ಬಳಕೆಯಾಗುತ್ತವೆ. ಹಿನ್ನೆಲೆ ಸಂಗೀತಕ್ಕೆ ಮಹತ್ವವಿರುವುದೂ ಇಂತಹ ಕಡೆಯೇ, ದೃಶ್ಯೀಕರಣ ಬೇಕಾಗುವುದೂ ಇಂತಹ ಕಡೆಯೇ. ನಿರ್ದೇಶಕ ಪ್ರತಿಭಾವಂತನಾಗಿದ್ದರೆ ತನ್ನ ದೃಶ್ಯೀಕರಣದಿಂದಲೇ ಗೀತೆಯ ಅರ್ಥವನ್ನು ಹಿಗ್ಗಿಸಿಬಿಡಬಲ್ಲ. 'ಶುಭಮಂಗಳ' ಚಿತ್ರದ "ಈ ಶತಮಾನದ ಮಾದರಿ ಹೆಣ್ಣು..." ಎಂಬ ಗೀತೆಯನ್ನು ಇದಕ್ಕೆ ಉದಾಹರಣೆಯಾಗಿ ನೀಡಬಹುದು. ಈ ಗೀತೆಯ ಸಾಹಿತ್ಯ ಮತ್ತು ಸಂಗೀತ ಎರಡೂ ನಾಯಕಿಯನ್ನು ಮಾದರಿಯಾಗಿ ವರ್ಣಿಸುತ್ತವೆ. ಈ ಹಾಡು ತೆರೆಯ ಮೇಲೆ ಬರುವಾಗ ನಾಯಕಿಯ ಪರ್ಸ್ ಕದಿಯುವ ಸಾಹಸ ನಡೆಯುತ್ತದೆ. ನಾಯಕಿ ತನ್ನ ಸಹಾಯಕರೊಂದಿಗೆ ಅದನ್ನು ದಿಟ್ಟವಾಗಿ ಎದುರಿಸುತ್ತಾಳೆ. ಹಾಡು ಮುಗಿದ ಮೇಲೆ ಪರ್ಸ್ ಅವಳ ಕೈಯಲ್ಲಿ ಇದ್ದರೆ ಹಣ ದರೋಡೆಯಾಗಿರುತ್ತದೆ. ತೆರೆಯ ಮೇಲೆ ಬರುವ ಈ ಅಂಶ ಹಾಡಿನ 'ಹಿರೋಯಿಕ್' ಅಂಶಗಳನ್ನೆಲ್ಲ 'ಕಾಮಿಕ್' ಮಾಡಿಬಿಡುತ್ತದೆ. 'ಈ ಶತಮಾನದ ಮಾದರಿ ಹೆಣ್ಣ'ನ ಗುಣಗಾನ ಬಲೂನಿಗೆ ಸೂಜಿ ಚುಚ್ಚಿದಂತೆ ಠುಸ್ ಎನ್ನುತ್ತದೆ.

ಆದರೆ ಸಾಮಾನ್ಯವಾಗಿ ಹೀಗಾಗುವ ಸಂದರ್ಭ ಕಡಿಮೆ. ಹಾಡಿನ ಪ್ರತಿ ಶಬ್ದದ ಅರ್ಥವನ್ನು ತೆರೆಯ ಮೇಲೆ ದೃಶ್ಯ ರೂಪದಲ್ಲಿ ತೋರಿಸಿ ಕೈ ತೊಳೆದುಕೊಳ್ಳುವ ನಿರ್ದೇಶಕರೇ ಬಹಳ. 'ಬಂಧನ' ಚಿತ್ರದ "ಬಣ್ಣಾ ನನ್ನ ಒಲವಿನ ಬಣ್ಣಾ..." ಎಂಬ ಹಾಡಿನ ದೃಶ್ಯೀಕರಣ ಗಮನಿಸಬಹುದು. ಈ ಗೀತೆಯಲ್ಲಿ ಕ್ಯಾಮರಾ ಸುಹಾಸಿನಿ ಮತ್ತು ವಿಷ್ಣುವರ್ಧನ್ ಸುತ್ತಲೇ ಸುತ್ತುತ್ತಿದೆ. ಅದರಲ್ಲಿ ಅವರು ಬಣ್ಣದ ನೀರಿನಲ್ಲಿ ತೊಯ್ಯುವುದನ್ನು ತೋರಿಸುವ 'ಕ್ಲೋಸ್-ಅಪ್'ಗಳದ್ದೇ ವಿಜೃಂಭಣೆ. ಉಳಿದಂತೆ "ಪ್ರೇಮವೆಂಬ ರಂಗವಲ್ಲಿ ಹಾಕಿದೆ ಇಲ್ಲಿ..." ಎನ್ನುವ ಸಾಲಿಗೆ LOVE ಎಂದು ರಂಗೋಲಿ ಹಾಕಿದ್ದನ್ನು ತೋರಿಸುವುದು, "ಮುತ್ತು ರತ್ನ ಪಚ್ಚೆಯಂತ ನಿನ್ನ ಪ್ರೇಮವು..." ಎಂದ ಕೂಡಲೇ ದೂರದಲ್ಲಿ ಮುತ್ತಿನಹಾರ ತೋರಿಸುವುದು ನಡೆಯುತ್ತದೆ. ಇದು ಹಾಡಿಗಿರುವ ಅರ್ಥವನ್ನೇ ಹಿಸುಕುವ ಪ್ರಯತ್ನ. "ತಿರುಗೋ ಭೂಮಿಯಲ್ಲಿ..." ಎಂದ ಕೂಡಲೇ ಗ್ಲೋಬ್ ತಿರುಗಿಸುವ ದೃಶ್ಯ ತೋರಿಸುವ ಚಿತ್ರರಂಗದಲ್ಲಿ ಇಂತಹ ಸಾಧ್ಯತೆಗಳೇ ಹೆಚ್ಚು.

ಬಿಡಿ ಬಿಡಿ ದೃಶ್ಯಗಳೂ ಕೂಡ ಚಿತ್ರೀಕರಣದಲ್ಲಿ ಸೋತರೆ ಅರ್ಥವನ್ನು ನೀಡುವುದಿಲ್ಲ. 'ಭಕ್ತ ಕನಕದಾಸ' ಚಿತ್ರದ "ಬಾಗಿಲನು ತೆರೆದು..." ಉತ್ತಮ ಹಿನ್ನೆಲೆ ಸಂಗೀತ ಹೊಂದಿದ ಗೀತೆ. ಇಷ್ಟಿದ್ದೂ ಇದು ತೆರೆಯ ಮೇಲೆ ಬಂದಾಗ ಹಾಡನ್ನು ಬಿಟ್ಟು ಉಳಿದಂತೆ ಸ್ತಬ್ಧ ಚಿತ್ರ ಕಾಣಿಸುತ್ತದೆ. ಅಂದರೆ ಹಾಡು ಮುಗಿಯುವವರೆಗೂ ಯಾವ ಕ್ರಿಯೆಯೂ ಜರುಗುವುದಿಲ್ಲ. ಇದು ಗೀತೆಯ ಪರಿಣಾಮವನ್ನೇ ಗಮನಾರ್ಹವಾಗಿ ಕುಗ್ಗಿಸಿದೆ. "ಕತೆ ಹೇಳುವೆ ನನ್ನ ಕತೆ ಹೇಳುವೆ..." 'ನಾಗರಹಾವು' ಚಿತ್ರದ ಒಂದು ಮನಮಿಡಿಯುವ ಫ್ಲಾಶ್‌ಬ್ಯಾಕ್. ಇಲ್ಲಿ ಕೂಡ ಉತ್ತಮ ಸಾಹಿತ್ಯ ಮತ್ತು ಸಂಗೀತಗಳಿದ್ದೂ ತೆರೆಯ ಮೇಲಿನ ದೃಶ್ಯಗಳು ಪರಿಣಾಮಕಾರಿಯಾಗದೆ ಹೋಗಿವೆ. 'ರಣಧೀರ' ಚಿತ್ರದ "ಲೋಕವೆ ಹೇಳಿದ ಮಾತಿದು..." ಕೂಡ ಉತ್ತಮ ಸಂಗೀತ ಹೊಂದಿದ್ದರೂ ತೆರೆಯ ಮೇಲೆ ಕಾಲೇಜು ದಿನಗಳ ಅಣಕು ಪ್ರದರ್ಶನದ ದೃಶ್ಯ ಬರುವುದರಿಂದ ಸಂಗೀತದ ಸಾಧ್ಯತೆಯೆಲ್ಲ ಮಿಮಿಕ್ರಿಯಾಗಿ ಪರಿವರ್ತಿತವಾಗಿದೆ.

ಹಾಗಾದರೆ ಚಿತ್ರಗೀತೆಗಳು ಹೇಗೆ ಪರಿಣಾಮಕಾರಿಯಾಗಬಲ್ಲವು ಎಂಬ ಪ್ರಶ್ನೆ ಬರಬಹುದು. ಮುಖ್ಯವಾಗಿ ಅವು ಒಟ್ಟು ಚಲನಚಿತ್ರದ ಛಾಪೆಗೆ ಪೂರಕವಾಗಿರಬೇಕು. ಎರಡನೆಯದಾಗಿ ಉತ್ತಮ ಸಂಗೀತ ಮತ್ತು ಅದಕ್ಕೆ ಪೂರಕವಾದ ಸಾಹಿತ್ಯ ಹೊಂದಿರಬೇಕು. ಕೊನೆಯದಾಗಿ ಅಷ್ಟೇ ಪರಿಣಾಮಕಾರಿಯಾಗಿ ತೆರೆಯ ಮೇಲೆ ಚಿತ್ರೀಕರಣಗೊಂಡಿರಬೇಕು. ಅಂತಹ ಕೆಲವು ಗೀತಗಳನ್ನು ನಾವು ಕನ್ನಡ ಚಿತ್ರರಂಗದ ಇತಿಹಾಸದಲ್ಲಿ ನೋಡಬಹುದು. ಉದಾಹರಣೆಗೆ 'ಶರಪಂಜರ' ಚಿತ್ರದ "ಹದಿನಾಲ್ಕು ವರ್ಷ ವನವಾಸದಿಂದ..." ಎಂಬ ಗೀತೆ. ಈ ಚಿತ್ರದ ನಾಯಕಿ ಹುಚ್ಚಾಸ್ಪತ್ರೆಯಿಂದ ಗುಣವಾಗಿ ಹೊರಬಂದಿದ್ದಾಳೆ. ಗುಣವಾದರೂ ಅವಳನ್ನು ಸಮಾಜ ಚುಚ್ಚಿ ಚುಚ್ಚಿ ನೋಯಿಸುತ್ತಿದೆ. ಈ ಗೀತೆಯಲ್ಲಿ ಅವಳ ನೋವನ್ನು ಸೀತೆಗೆ ಸಮೀಕರಿಸಲಾಗುತ್ತಿದೆ. ಹಿನ್ನೆಲೆ ಸಂಗೀತ ಮಂದರದಲ್ಲಿ ಆರಂಭವಾಗಿ ತಾರಕಕ್ಕೇರುವ ಆರೋಹಣವನ್ನು ಆಧಾರವಾಗಿಟ್ಟುಕೊಂಡಿದೆ. ದೃಶ್ಯದಲ್ಲಿ ದಸರಾ ಹಬ್ಬಕ್ಕೆಂದು ಜೋಡಿಸಲಾದ ಗೊಂಬೆಗಳ ಎದುರು ಕುಳಿತು ನಾಯಕಿ ಹಾಡು ಹೇಳುತ್ತಾಳೆ. ಕಿಟಕಿ ಆಚೆಗೆ ಬೆಂಕಿ ಉರಿಯುತ್ತಿದೆ. ಇದಿಷ್ಟು ಸಹಜವಾದ ಹಿನ್ನೆಲೆ. ಕ್ಯಾಮರಾ ತನ್ನ ಚಲನೆಯನ್ನು ನಿಧಾನವಾಗಿ ಆರಂಭಿಸಿ "ಅಗ್ನಿ ಪರೀಕ್ಷೆಗೆ ಸತ್ವ ಪರೀಕ್ಷೆಗೆ..." ಎಂಬ ಸಾಲಿಗೆ ಕಿಟಕಿ ಆಚೆಗೆ ಉರಿಯುತ್ತಿರುವ ಬೆಂಕಿಗೆ ಕ್ಲೋಸ್-ಅಪ್ ಆಗುತ್ತದೆ. "ನಿರ್ದಯಿ ರಾಮ..." ಎನ್ನುವಾಗ ರಾಮನ ಗೊಂಬೆಯತ್ತ ಕ್ಯಾಮರಾ ಅಸಾಧ್ಯ ವೇಗವಾಗಿ ಚಲಿಸಿದೆ. ಹೀಗೆ ಸೀಮಿತ ಪರಿಧಿಯಲ್ಲಿಯೇ ಮಹತ್ವವನ್ನು ಹೇಳಿದ ಗೀತೆ ಇದು.

ಕೆಲವು ಬಾರಿ ಉತ್ತಮ ಪ್ರತಿಮೆಗಳನ್ನು ಕ್ಯಾಮರಾ ದೃಶ್ಯಕಾವ್ಯವಾಗಿ ಮಾರ್ಪಡಿಸಿದ ಉದಾಹರಣೆಗಳು ನಮ್ಮಲ್ಲಿವೆ. 'ಮೈಸೂರು ಮಲ್ಲಿಗೆ' ಚಿತ್ರವಲ್ಲಿ "ದೀಪದಲಿ ಬಿಡುಗಣ್ಣಾ ನಿಲಿಸಿ..." ಎಂಬ ಸಾಲಿಗೆ ದೀಪದ ಮರೆಯಲ್ಲಿ ಕಣ್ಣು ಕಾಣುವ ಹಾಗೆ ದೃಶ್ಯೀಕರಿಸಿರುವ ರೀತಿ, "ನಿನ್ನ ನೆನಪು ಉಕ್ಕುವುದು ಕಡಲಾಗಿ..." ಎನ್ನುವ ಸಾಲಿಗೆ ಉಕ್ಕುವ ಕಡಲಿನ ಮೇಲೆ ನಾಯಕಿಯ ನೆರಳು ಬೀಳುವಂತೆ ದೃಶ್ಯೀಕರಿಸಿರುವ ರೀತಿ, 'ಉಪೇಂದ್ರ' ಚಿತ್ರದಲ್ಲಿ "ಅಪ್ಪ ಅಮ್ಮ ನನಗೆ ಯಾರೂ ಇಲ್ಲ..." ಎಂಬ ಸಾಲಿಗೆ ಲಾಂಗ್ ಶಾಟ್‌ನಲ್ಲಿ ನಾಯಕ ತನ್ನನ್ನು ತಾನೇ ತಬ್ಬಿಕೊಳ್ಳುತ್ತಾ ಮೂಲೆಯಲ್ಲಿ ಮಲಗಿದ ದೃಶ್ಯ ನಮ್ಮ ನೆನಪಿನಲ್ಲಿ ಮಿಂಚುತ್ತದೆ. ಹಾಗೆಯೇ 'ಮುತ್ತಿನ ಹಾರ' ಚಿತ್ರದ "ದೇವರು ಹೊಸೆದಾ ಪ್ರೇಮದ ದಾರಾ..." ಎಂಬ ಹಾಡು ಚಿತ್ರದ ಬಹುಮುಖ್ಯ ಕ್ರಿಯೆಯನ್ನು ನಿರ್ವಹಿಸಿದ ಕ್ರಮ ಗಮನಾರ್ಹವಾಗಿದೆ. ಕೆಲವೊಮ್ಮೆ ಹಾಡಿನ ಮೇಲ್ಪದರದ ಅರ್ಥಕ್ಕೆ ಸಂಬಂಧವಿಲ್ಲದ ದೃಶ್ಯ ಕೂಡ ಅಂತರ್ಯದಲ್ಲಿ ಪರಿಣಾಮಕಾರಿಯಾಗಿ ಅರ್ಥವನ್ನು ಹೊಳೆಯಿಸಬಹುದು. "ಕಾಡು ಕುದುರೆ ಓಡಿ ಬಂದಿತ್ತಾ..." ಎಂಬ ಹಾಡಿನಲ್ಲಿ ಎಲ್ಲಿಯೂ ಬಾರದ ನಾಯಕ-ನಾಯಕಿಯ ಒಳತೋಟಗಳು ಹಾಡಿನ ಹಿನ್ನೆಲೆಯಲ್ಲಿ ತೆರೆಯ ಮೇಲೆ ಶ್ರೀಮಂತವಾಗಿ ಬಂದಿದೆ.

"ಸಂಗೀತದ ವಿಷಯದಲ್ಲಿ ನಾರಾಯಣ್, ಉಪೇಂದ್ರ ಬಹಳ co-operative. ಕೆಲವೊಮ್ಮೆ ಕೆಲವೊಂದು ಸನ್ನಿವೇಶಕ್ಕೆ ಪಿಕ್ಚರೈಸೇಷನ್ ಮಾಡಲು ಶ್ರದ್ಧೆಯಿಂದ ಕಲ್ಪನೆಗಳನ್ನು ಒಟ್ಟುಗೂಡಿಸಿ ಅದಕ್ಕೆಂದೇ ಪಲ್ಲವಿ ನಂತರ ಚರಣಗಳ ನಡುವೆ interload ಮಾಡಿಕೊಟ್ಟಿರುತ್ತೇವೆ. ಆದರೆ ನಿರ್ಮಾಪಕ-ನಿರ್ದೇಶಕ ಮಾಮೂಲಿ ರಾಜಿಸೂತ್ರಗಳಿಗೆ ಶರಣಾಗಿ ಆ ಇಂಟರ್‌ಲೋಡ್‌ನಲ್ಲಿ ಕುಣಿತ, ಪ್ರೀತಿ-ಪ್ರೇಮ ಎಂದೆಲ್ಲ ತುಂಬಿಸಿ ಕಲ್ಪನೆಯನ್ನು ಹಾಳು ಮಾಡುತ್ತಾರೆ. ಹೀಗಾಗಿ ಒಂದು ಸುಂದರವಾದ ಹಾಡು ಹಾಳಾಗುತ್ತದೆ. ನಾನು ಸಾಕಷ್ಟು ಕಷ್ಟಪಟ್ಟು 'ಇಂದ್ರಧನುಷ್' ಚಿತ್ರದ ಓಪನಿಂಗ್ ಮ್ಯೂಸಿಕ್‌ಗಾಗಿ ಅಳವಡಿಸಿದ್ದ ಅಪೆರಾ ಸಿಂಫೋನಿ ಮ್ಯೂಸಿಕ್ ಕೆಟ್ಟ ಪಿಕ್ಚರೈಸೇಷನ್‌ನಿಂದ ಹಾಳಾದ ಚಿತ್ರಗಳಿಗೆ ಉದಾಹರಣೆ" ಎಂದು ಸಂಕೋಚವಿಲ್ಲದೆ ವಿಶ್ಲೇಷಿಸುತ್ತಾರೆ ಮನೋಹರ್.

ಚಿತ್ರಗೀತೆ, ಸಾಹಿತ್ಯ, ಸಂಗೀತ, ಗಾಯನ, ಅಭಿನಯ, ದೃಶ್ಯೀಕರಣ ಹೀಗೆ ಭಿನ್ನವಾದ ಪ್ರತಿಭೆಗಳ ಸಂಯೋಜನೆ. ಇದೆಲ್ಲವೂ ಪರಸ್ಪರ ಪೂರಕವಾದರೆ ದೃಶ್ಯಕಾವ್ಯ ಮೈದಾಳುತ್ತದೆ. ಕನ್ನಡದ ಸಂದರ್ಭದಲ್ಲಿ ಇಂತಹ ಉದಾಹರಣೆಗಳು ವಿರಳ ಎಂಬುದು ಮಾತ್ರ ವಿಷಾದದ ಸಂಗತಿ.

ಸಂಗೀತ ಸಂಯೋಜಕರು (Arrangers)

ಚಿತ್ರಗೀತೆಯ ಹಾಡಿಗೆ ವಾದ್ಯ ಸಂಗೀತದ ಮೂಲಕ ಒಂದು ಆವರಣವನ್ನು ಸಂಯೋಜಿಸುವವರಿಗೆ ಮ್ಯೂಸಿಕ್ ಅರೇಂಜರ್ಸ್ ಎನ್ನುವ ಪರಿಪಾಠವಿದೆ. ಗೀತೆಯ ಪಲ್ಲವಿಗೆ ಮೊದಲು ಮತ್ತು ಚರಣಗಳ ನಂತರ ಬರುವ ನಡುವಿನ ಸನ್ನಿವೇಶವನ್ನು ವಾದ್ಯ ಸಂಯೋಜನೆಯ ಮೂಲಕ ಬಿಂಬಿಸಿ ಗೀತೆಗೆ ಹದವಾದ ಸಾಂದರ್ಭಿಕ ಆಯಾಮವನ್ನು ಕಲ್ಪಿಸಿಕೊಡುವ ಹೊಣೆಗಾರಿಕೆ ವಾದ್ಯ ಸಂಯೋಜಕರದು. ಹಾಗೆಯೇ ವಾದ್ಯಗಾರರನ್ನು ಸಂಗೀತ ನಿರ್ದೇಶಕನಿಗೆ ಸಮಯಕ್ಕೆ ಸರಿಯಾಗಿ ಹೊಂದಿಸಿಕೊಡುವವರಿಗೂ ಅರೇಂಜರ್ಸ್ ಎನ್ನುವ ರೂಢಿ ಇದೆ. ಇಲ್ಲಿ ಸಂಯೋಜಕರು ಮತ್ತು ವಾದ್ಯ ಸಂಯೋಜಕರೆಂದು ವಿಂಗಡಿಸಿಕೊಳ್ಳುವುದು ಆವಶ್ಯಕವಾದುದು. ವಾದ್ಯ ಸಂಗೀತ ಸಂಯೋಜಕರ ಸಹಾಯವಿಲ್ಲದೆ ಸಂಗೀತ ನಿರ್ದೇಶಕರೇ ತಮ್ಮ ಗೀತೆಗಳ ಪಲ್ಲವಿ ಮತ್ತು ಚರಣಗಳ ನಡುವೆ ವಾದ್ಯ ಸಂಯೋಜಿಸುವುದೂ ರೂಢಿಯಲ್ಲಿದೆ. ಅವರು ಸಂಯೋಜಿಸಿದ ಸ್ವರಗಳ ಟಿಪ್ಪಣಿಯನ್ನು ವಾದ್ಯಗಾರರಿಗೆ ನೀಡಿ ಅವರನ್ನು ನಿಯಂತ್ರಿಸುವವರಿಗೆ ಕಂಡಕ್ಟರ್, ಮ್ಯೂಸಿಕ್ ಕಂಡಕ್ಟರ್ ಎನ್ನುವ ಹೆಸರಿದೆ. ಸಂಗೀತ ಸಹಾಯಕರೆಂದೂ ಕರೆಯುವ ವಾಡಿಕೆ ಇದೆ. ಪಾಶ್ಚಾತ್ಯ ಸಂಗೀತ ಪದ್ಧತಿಯಲ್ಲಿ ಮ್ಯೂಸಿಕ್ ಕಂಡಕ್ಟರ್‌ಗೆ ವಿಶಿಷ್ಟವಾದ ಸ್ಥಾನಮಾನಗಳಿವೆ. ನೂರಾರು ವಾದ್ಯಗಳನ್ನು ಒಮ್ಮೆಲೆ ನಿಯಂತ್ರಿಸುತ್ತ ಎರಡೂ ಕೈಗಳನ್ನು ಮೇಲೆತ್ತಿ ಇಳಿಸಿ ಸ್ವರಗಳ ಏರಿಳಿತಗಳನ್ನು ಸಂಜ್ಞೆಯ ಮೂಲಕ ತೋರಿಸುವ ಕಲೆಯಾಗಿದೆ. ಸಾಮಾನ್ಯವಾಗಿ ಯಾವುದೇ ವಾದ್ಯದಲ್ಲಿ ಅದ್ವಿತೀಯ ನೈಪುಣ್ಯ ಗಳಿಸಿರುವವರೇ ಮ್ಯೂಸಿಕ್ ಕಂಡಕ್ಟರ್ ಆಗಿರುತ್ತಾರೆ. ವಾದ್ಯಗಳ ಆಂತರಿಕ ಮೇಳದಲ್ಲಿ ಅವರಿಗೆ ಅಪಾರವಾದ ಜ್ಞಾನವಿರುತ್ತದೆ. ರಾಗಸಂಯೋಜನೆಯಲ್ಲಿ ಅವರಿಗೆ ನೈಪುಣ್ಯವಿಲ್ಲದಿದ್ದರೂ ವಾದ್ಯಗಳ ಲಯ, ಸ್ವರಗಳ ಹೊಂದಾಣಿಕೆಯಲ್ಲಿ ಖಚಿತವಾದ ಲೆಕ್ಕಾಚಾರ ಜ್ಞಾನವಿರುತ್ತದೆ. ಕೆಲವೊಮ್ಮೆ ರಾಗಸಂಯೋಜನೆಯಲ್ಲಿ ಅದ್ವಿತೀಯವಾದ್ದನ್ನು ಸಾಧಿಸಿದವರೂ ಉಂಟು.

ವಾಕ್ಚಿತ್ರದ ಆರಂಭದ ದಿನಗಳೇ ಬೇರೆ. ಅಲ್ಲಿ ಹಾಡೆಂದರೆ ಪಲ್ಲವಿಯಿಂದ ಮುಗಿಯುವ ತನಕವೂ ನಿರಂತರ ಹಾಡೇ. ಅದಕ್ಕೆ ಮಧ್ಯದಲ್ಲಿ ವಾದ್ಯಸಂಗೀತದ ವಿರಾಮವೇ ಇಲ್ಲ. ಕ್ಯಾಮರಾದ ಮುಂದೆ ನಟಿಸುವವರೇ ಹಾಡುತ್ತಿದ್ದುದರಿಂದ ಕ್ಯಾಮರಾ ಕಣ್ಣಿನ ವ್ಯಾಪ್ತಿಗೆ ಬರದಂತೆ ವಾದ್ಯಗಾರರು ಹಾರ್ಮೋನಿಯಂ, ತಾಳ, ತಬಲ, ಮೃದಂಗಗಳನ್ನು ಆ ಹಾಡಿನ ಹಿನ್ನೆಲೆಗೆ ನುಡಿಸುತ್ತಿದ್ದರು. ಇದು ಹೆಚ್ಚು ಕಡಿಮೆ ಅಂದಿನ ನಾಟಕಗಳಲ್ಲಿ ಬರುವ ಗೀತೆಗಳನ್ನು ಹೋಲುತ್ತಿದ್ದವು.

ಚಲನಚಿತ್ರದ ತಾಂತ್ರಿಕತೆ ಬೆಳೆದಂತೆ ಚಿತ್ರಸಂಗೀತದ ಜಾಡೂ ಬದಲಾಯಿತು. ಧ್ವನಿಮುದ್ರಣದ ಸೌಕರ್ಯಗಳು ಬಂದಂತೆ ಹಾಡುಗಳೇ ಪ್ರತ್ಯೇಕವಾಗಿ ಧ್ವನಿಮುದ್ರಿಸಲ್ಪಟ್ಟು ನಟ ಅಥವಾ ನಟಿ ಆ ಸಾಲುಗಳ ಪದಗಳಿಗೆ ತುಟಿಯ ಚಲನೆ ನೀಡುತ್ತಿದ್ದರು. ಆಗೆಲ್ಲ ಸಾಮಾನ್ಯವಾಗಿ ಶಾಸ್ತ್ರೀಯ ಸಂಗೀತದ ರಾಗಗಳನ್ನೇ ಆಶ್ರಯಿಸುತ್ತಿದ್ದುದರಿಂದ ಅದೇ ನಡೆಯಲ್ಲಿ ಹಾಡುಗಳೂ ಸಾಗುತ್ತಿದ್ದವು. ಹಾಡುವವರ ಧ್ವನಿಯ ಜೊತೆಗೆ ಹತ್ತಾರು ವಾದ್ಯಗಳು ಹಾಡಿನ ಗತಿಗೆ, ಸ್ವರಕ್ಕೆ ತಕ್ಕಂತೆ ನುಡಿಸಲ್ಪಡುತ್ತಿದ್ದವು. ಶಾಸ್ತ್ರೀಯ ಸಂಗೀತವನ್ನು ತಿಳಿದ ಸಂಗೀತ ನಿರ್ದೇಶಕರು ತಾವು ಕಲಿತ ಸಂಗೀತ ನೈಪುಣ್ಯಕ್ಕೆ ತಕ್ಕಂತೆ ತಾಳ ಜ್ಞಾನ, ಸ್ವರ ಜ್ಞಾನಗಳಿಗೆ ಕೊಂಚವೂ ಚ್ಯುತಿ ಬಾರದಂತೆ ಹಾಡುಗಳನ್ನು ರಾಗ ಸಂಯೋಜನೆ ಮಾಡುತ್ತಿದ್ದರು.

ಈ ತಂತ್ರಜ್ಞಾನ ಬೆಳೆದ ಹಾಗೆ ಒಂದು ಹಾಡು ಬರೀ ಹಾಡಾಗದೆ ಅದು ಒಂದು ದೃಶ್ಯ ಕಥಾನಕವನ್ನು ಒಳಗೊಳ್ಳುವ ಪರಿಪಾಠ ಬೆಳೆಯತೊಡಗಿತು. ಅಂದರೆ ಹಾಡಿನ ಒಂದು ಸಾಲನ್ನು ಗಾಯಕರು ಹಾಡಿದರೆ ಅದರ ಪರಿಣಾಮವನ್ನು ಅಥವಾ ಅದರ ದೃಶ್ಯ ರೂಪವನ್ನು ಸಾಲುಗಳ ಮಧ್ಯೆ ತೋರಿಸುವ ಕ್ರಿಯೆ ಆರಂಭವಾಯಿತು. ಹಾಗಾಗಿ ನಿರಂತರವಾಗಿ ಪಲ್ಲವಿ, ಚರಣಗಳು ಪುಂಖಾನುಪುಂಖವಾಗಿ ಸಾಗುತ್ತಿದ್ದುದಕ್ಕೆ ತಡೆ ಒಡ್ಡಿ ಮಧ್ಯೆ ಮಧ್ಯೆ ದೃಶ್ಯವನ್ನು ತೋರಿಸುವ ತಾಂತ್ರಿಕ ಬದಲಾವಣೆ ಬೆಳೆಯುತ್ತ ಬಂತು. ಹಾಡಿನ ಗತಿಗೂ ಲೋಪ ಬಾರದೆ, ಅದೇ ಹಾಡಿನ ಭಾಗವಾಗಿ ದೃಶ್ಯದಲ್ಲಿ ಮಾತ್ರ ಹೊಮ್ಮುವ ಸಂಗೀತ ಶುರುವಾದದ್ದೇ ಹಾಗೆ. ಹಾಡಿಗೂ ಅದರ ಸಂಗೀತಕ್ಕೂ, ಈ ನಡುವಿನ ಸಂಗೀತಕ್ಕೂ ಎಲ್ಲೂ ಬೇರೆ ಅನಿಸದ ಹಾಗೆ; ಧಕ್ಕೆ ಬಾರದ ಹಾಗೆ ಸಂಗೀತ ಸಿದ್ಧವಾಗಬೇಕಿತ್ತು.

ಆರಂಭದ ಸಂಗೀತ ನಿರ್ದೇಶಕರು ಕೇವಲ ಶಾಸ್ತ್ರೀಯ ಸಂಗೀತವನ್ನು ಮಾತ್ರ ಬಲ್ಲವರಾದ್ದರಿಂದ ಪಲ್ಲವಿ-ಚರಣ, ಚರಣ-ಚರಣಗಳ ನಡುವಣ ಸಂಗೀತದ ತಾಂತ್ರಿಕತೆಗೆ ಅಷ್ಟು ಒಗ್ಗಿದವರಾಗಿರಲಿಲ್ಲ. ಆದ್ದರಿಂದ ಸೃಷ್ಟಿಯಾದವರು ಅರೇಂಜರ್ಸ್. ಚಿತ್ರ ಸಂಗೀತದಲ್ಲಿ ಸಂಗೀತ ನಿರ್ದೇಶಕರ ಪಾತ್ರದಷ್ಟೇ ಮುಖ್ಯವಾದುದು ಈ ಸಂಯೋಜಕರ ಪಾತ್ರ. ಗೀತೆಯ ಸಾಲುಗಳಿಗೆ ರಾಗ ಸಂಯೋಜನೆ ಸಂಗೀತದ ಸ್ವರ ಟಿಪ್ಪಣಿ (ನೊಟೇಷನ್ಸ್) ಕೊಡುವುದು ಸಂಗೀತ ನಿರ್ದೇಶಕರಾದರೆ, ಮಧ್ಯದ ಸಂಗೀತವನ್ನು ಅಳವಡಿಸುವುದು ಸಂಯೋಜಕರ ಕೆಲಸ.

ಇದಕ್ಕಿಂತ ಮುಖ್ಯವಾದುದೆಂದರೆ ಹತ್ತಾರು ಬಗೆಯ ವಾದ್ಯಗಳು, ಐವತ್ತು-ಅರವತ್ತು ಕಲಾವಿದರಲ್ಲಿ ಎಲ್ಲರಿಗೂ ಸರಿಯಾದ ಸೂಚನೆ, ಟಿಪ್ಪಣಿ ಕೊಡುವುದು ಒಬ್ಬ ಸಂಗೀತ ನಿರ್ದೇಶಕನಿಗೆ ಅಸಾಧ್ಯವಾದುದರಿಂದ ಈ ಸಂಯೋಜಕರು ಅತಿ ಮುಖ್ಯ.

ಒಂದು ಚಿತ್ರದ ಹಾಡಿನ ಸಂದರ್ಭದಲ್ಲಿ ಬರಬಹುದಾದ ಭಾವ, ರಸ, ದೃಶ್ಯಾವಳಿಗಳ ಆಧಾರದ ಮೇಲೆ ಈ ನಡು ಸಂಗೀತ ಸಾಗುತ್ತಿರುತ್ತದೆ. ಉದಾಹರಣೆಗೆ ಬರಗಾಲದ ಸಂಬಂಧದ ಹಾಡಾದರೆ ಹಾಡಿನ ಸಾಲಿನ ಮಧ್ಯೆ ಒಣಗಿದ ಭೂಮಿಯ ದೃಶ್ಯಕ್ಕೆ, ಸತ್ತ ದನ ಕರುಗಳ ದೃಶ್ಯಕ್ಕೆ, ಖಾಲಿಯಾದ ಪಾತ್ರೆ ಪಗಡಿಗಳ ದೃಶ್ಯಕ್ಕೆ ತಕ್ಕುದಾದ ಪರಿಣಾಮ ತೋರುವುದೇ ಈ ನಡು ಸಂಗೀತ (Bit Music)ದ ಪ್ರಮುಖ ಪಾತ್ರ.

ಕನ್ನಡದ ಪ್ರತಿಭಾವಂತ ಸಂಗೀತ ನಿರ್ದೇಶಕರೆಲ್ಲರೂ ತಮ್ಮ ಹಾಡುಗಳ ಧ್ವನಿ ಸಂಯೋಜನೆ ಮಾಡುವಾಗ ಸಂಯೋಜಕರ ನೆರವನ್ನು ಅಂದಿನಿಂದ ಇಂದಿನವರೆಗೂ ಪಡೆಯುತ್ತಿದ್ದಾರೆ. ಅಂದರೆ ಸಂಗೀತ ನಿರ್ದೇಶಕರಿಗೆ ಇದು ತಿಳಿಯದ ಸಂಗತಿ ಎಂದಲ್ಲ. ಆದರೆ ಐವತ್ತಕ್ಕಿಂತ ಹೆಚ್ಚು ಜನರನ್ನು ಒಂದೇ ಮನೋಧರ್ಮದ ಅಡಿಯಲ್ಲಿ ತರುವಂತೆ ಆರ್ಕೆಸ್ಟ್ರಾಗಳನ್ನು ಸಜ್ಜುಗೊಳಿಸಲು ಈ ಸಂಯೋಜಕರ ನೆರವು ಪಡೆಯುತ್ತಿದ್ದರು. ಇದು ಅತ್ಯಂತ ಅನಿವಾರ್ಯ, ಅಗತ್ಯವೂ ಆಗಿತ್ತು. ಅದು ಶಾಸ್ತ್ರೀಯ ಆಗಿರಬಹುದು, ಜಾನಪದ ಅಥವಾ ಪಾಶ್ಚಿಮಾತ್ಯ ಸಂಗೀತ ಆಗಿರಬಹುದು. ಸಂಗೀತ ನಿರ್ದೇಶಕರಿಗೆ ಸಂಗೀತ ಸಂಯೋಜಕರ ನೆರವು ಬೇಕೇ ಬೇಕು.

ಕೆಲವೊಮ್ಮೆ ಇದು ಆಭಾಸವಾದುದೂ ಇದೆ. ಬರೀ ಹಾಡಿಗೆ ಮಾತ್ರ ಟ್ಯೂನ್ ಹಾಕಲು ಬಲ್ಲ ಸಂಗೀತ ನಿರ್ದೇಶಕರಿಗೆ ಉಳಿದಂತೆ ಸಂಗೀತ ವಾದ್ಯಗಳನ್ನು ಅಳವಡಿಸಲು ಸಂಯೋಜಕ ಅಗತ್ಯ. ಇಂಥ ಉದಾಹರಣೆಗಳೂ ಚಿತ್ರರಂಗದಲ್ಲಿ ಇಲ್ಲದಿಲ್ಲ, ಆದರೆ ಕಡಿಮೆ. ಕನ್ನಡದಲ್ಲಿ ಖ್ಯಾತರಾದ ಕೆಲವು ಸಂಗೀತ ನಿರ್ದೇಶಕರನ್ನು ಹೊರತುಪಡಿಸಿದರೆ ಉಳಿದಂತೆ ಹಲವರು ಸ್ವತಂತ್ರ ಸಂಗೀತ ನಿರ್ದೇಶಕರಾಗುವ ಮೊದಲು ಒಂದಷ್ಟು ಚಿತ್ರಗಳಿಗೆ, ಕೆಲವು ಸಂಗೀತ ನಿರ್ದೇಶಕರಿಗೆ ಅರೇಂಜರ್ ಆಗಿ ಕೆಲಸ ಮಾಡಿದ್ದರು.

ಕನ್ನಡದಲ್ಲಿ ವಿಭಿನ್ನ ಬಗೆಯ ಸಂಗೀತ ನಿರ್ದೇಶಕ ಎಂದೇ ಖ್ಯಾತರಾದ ಜಿ.ಕೆ.ವೆಂಕಟೇಶ್ ಕೈ ಕೆಳಕೆಗೆ ಅರೇಂಜರ್ ಆಗಿ ಕೆಲಸ ಮಾಡಿದವರೆಲ್ಲ ಇಂದು ಖ್ಯಾತನಾಮರೆ. ಜನಪ್ರಿಯ ಹಾಡುಗಳ 'ಕಸ್ತೂರಿ ನಿವಾಸ'ದಿಂದ ಆರಂಭಿಸಿ 'ಬಂಗಾರದ ಮನುಷ್ಯ', 'ಹುಲಿಯ ಹಾಲಿನ ಮೇವು' ಚಿತ್ರದವರೆಗೆ ಹಲವು ಚಿತ್ರಗಳಿಗೆ ಜಿ.ಕೆ.ವೆಂಕಟೇಶ್ ಜೊತೆ ಅರೇಂಜರ್ ಆಗಿ ಕೆಲಸ ಮಾಡಿದವರು ಎಲ್.ವೈದ್ಯನಾಥನ್. ನಂತರ ಎಲ್.ವೈದ್ಯನಾಥನ್ ಇನ್ನೊಬ್ಬ ಸಂಗೀತ ನಿರ್ದೇಶಕ ಅಶ್ವತ್ಥ್ ಜೊತೆಗೂಡಿ ಅಶ್ವತ್ಥ್-ವೈದಿ ಎಂದು ಖ್ಯಾತರಾದರು. ಈ ಜೋಡಿ ಹಲವು ಚಿತ್ರಗಳಿಗೆ ಸಂಗೀತ ನಿರ್ದೇಶನ ಮಾಡಿತು.

ಜಿ.ಕೆ.ವೆಂಕಟೇಶ್ ಜೊತೆಗೆ ಕೆಲಸ ಮಾಡಿದ ಇನ್ನೊಬ್ಬ ಖ್ಯಾತ ಅರೇಂಜರ್ ಎಂದರೆ ದಕ್ಷಿಣ ಭಾರತದ ಖ್ಯಾತಿಯ ಇಳಯರಾಜಾ. ತಾವು ಜಿ.ಕೆ.ವೆಂಕಟೇಶ್ ಅವರ ಶಿಷ್ಯರೆಂದೇ ಹೇಳಿಕೊಳ್ಳುತ್ತಿದ್ದ ಇಳಯರಾಜಾ ತಾವು ಬಹು ದೊಡ್ಡ ಸಂಗೀತ ನಿರ್ದೇಶಕರಾದರೂ ಗುರುವಿನ ಬಗ್ಗೆ ಅದೇ ಪ್ರೀತಿ ಇಟ್ಟುಕೊಂಡಿದ್ದರು. ಇಳಯರಾಜಾ ಜೊತೆಗೆ ಭಾರತದ ಖ್ಯಾತಿಯ ಎ.ಆರ್.ರೆಹಮಾನ್ ಕೆಲಸ ಮಾಡಿದ್ದರು. ಹಾಗೆ ಒಂದು ದೊಡ್ಡ ಸಂಗೀತ ಜಾಲವನ್ನೇ ಜಿ.ಕೆ.ವೆಂಕಟೇಶ್ ಸೃಷ್ಟಿಸಿ ಹೋಗಿದ್ದಾರೆ.

ಎಂ.ರಂಗರಾವ್ ಜೊತೆ ಅರೇಂಜರ್ ಆಗಿ ಕೆಲಸ ಮಾಡಿದ ಜೋಸೆಫ್ ಕೃಷ್ಣ ಬಹು ಪ್ರತಿಭೆಯ ಕೆಲಸಗಾರ. 'ಸಾಕ್ಷಾತ್ಕಾರ', 'ಎಡಕಲ್ಲು ಗುಡ್ಡದ ಮೇಲೆ', 'ರಂಗನಾಯಕಿ' ಚಿತ್ರಗಳಲ್ಲದೆ ಹಲವು ಚಿತ್ರಗಳಿಗೆ ಸಂಯೋಜಕರಾಗಿದ್ದರು.

ಜಿ.ಕೆ.ವೆಂಕಟೇಶ್ ಜೊತೆ ಕೆಲಸ ಮಾಡಿದ ಎಲ್.ವೈದ್ಯನಾಥನ್ ರಾಜನ್-ನಾಗೇಂದ್ರ ಜೋಡಿಯೊಂದಿಗೂ ಅರೇಂಜರ್ ಆಗಿ ದುಡಿದರು. 'ನ್ಯಾಯವೇ ದೇವರು', 'ಗಂಧದ ಗುಡಿ', 'ಎರಡು ಕನಸು', 'ಬಯಲು ದಾರಿ', 'ಹೊಂಬಿಸಿಲು', 'ಗಿರಿಕನ್ಯೆ' ಚಿತ್ರಗಳಲ್ಲಿ ವೈದ್ಯನಾಥನ್ ಅರೇಂಜರ್ ಆಗಿದ್ದರು. ವೈದಿ ಇಲ್ಲದ ಸಂದರ್ಭದಲ್ಲಿ ರಾಜನ್-ನಾಗೇಂದ್ರ ಜೋಡಿಗೆ ಅರೇಂಜರ್ ಆಗಿ ಕೆಲಸ ಮಾಡಿದವರು ಎ.ಎ.ರಾಜ್.

ಕನ್ನಡದ ಇನ್ನೊಬ್ಬ ಪ್ರತಿಭಾವಂತ ಸಂಗೀತ ನಿರ್ದೇಶಕ ವಿಜಯಭಾಸ್ಕರ್ ಅವರೊಂದಿಗೆ ಕೆಲಸ ಮಾಡಿದ ಅರೇಂಜರ್‌ಗಳೆಂದರೆ ಬಹುಮುಖ್ಯವಾಗಿ ಗೋವರ್ಧನ್. ಇವರಲ್ಲದೆ ಅಪ್ಪಲರಾಜು, ನರಹರಿ, ವೆಂಕಟೇಶ್ ಕೂಡ ಕೆಲವು ಚಿತ್ರಗಳಿಗೆ ಅರೇಂಜರ್ ಆಗಿದ್ದರು.

ಈ ಅರೇಂಜರ್‌ಗಳಲ್ಲಿ ಅತಿ ಪ್ರಮುಖವಾದ ಹೆಸರೆಂದರೆ ಕೊಳಲುವಾದಕ ಗುಣಸಿಂಗ್ ಅವರದು. ಕನ್ನಡದಲ್ಲಿ ಮುನ್ನೂರಕ್ಕೂ ಹೆಚ್ಚು ಚಿತ್ರಗಳಿಗೆ ಅರೇಂಜರ್ ಆಗಿದ್ದ ಅವರು ಕೆಲವು ಚಿತ್ರಗಳ ರೀ-ರಿಕಾರ್ಡಿಂಗ್ ಕೆಲಸವನ್ನೂ ಸ್ವತಂತ್ರವಾಗಿ ಮಾಡಿದ್ದಾರೆ. ಸಂಗೀತ ನಿರ್ದೇಶಕರಾಗಿ ಬೆಳಕಿಗೆ ಬಾರದ ಗುಣಸಿಂಗ್ ವಾದ್ಯಗೋಷ್ಠಿ ಸಂಯೋಜಿಸುವುದರಲ್ಲಿ ಬಹು ದೊಡ್ಡ ಹೆಸರು. ಶೇಖರ್ ಮತ್ತು ದಕ್ಷಿಣಾಮೂರ್ತಿ ಎಂಬ ಇಬ್ಬರು ಸಂಯೋಜಕರು ಹಲವು ಸಂಗೀತ ನಿರ್ದೇಶಕರಿಗೆ ಸಹಾಯಕರಾಗಿ ಸಂಗೀತ ಸಂಯೋಜಿಸುವ ಕೆಲಸ ಮಾಡಿದ್ದಾರೆ.

ಎಂಬತ್ತರ ದಶಕದಿಂದ ಬಿರುಗಾಳಿ ಬೀಸಿದಂತೆ ಬಂದ ಸಂಗೀತ ನಿರ್ದೇಶಕ ಹಂಸಲೇಖ ಅವರಿಗೆ ಆರಂಭದ ದಿನಗಳಿಂದ ಇತ್ತೀಚಿನವರೆಗೂ ಅರೇಂಜರ್ ಆಗಿದ್ದವರು ಸ್ಯಾಕ್ಸ್ ರಾಜಾ. ಅಪ್ರತಿಮ ವಾದ್ಯ ಸಂಯೋಜಕರಾದ ಸ್ಯಾಕ್ಸ್ ರಾಜಾ ಅವರದೂ ಒಂದು ರೀತಿಯಲ್ಲಿ ಗುಣಸಿಂಗ್ ಅವರ ರೀತಿಯ ಎಲೆಮರೆಯ ಕೆಲಸ. ಆ ನಂತರದಲ್ಲಿ ಸಾಧುಕೋಕಿಲ ಮೊದಲಾದವರು ಹಂಸಲೇಖರ ಜೊತೆ ಕೆಲಸ ಮಾಡಿದ್ದಾರೆ.

ಹಲವು ಸಂಗೀತ ನಿರ್ದೇಶಕರಿಗೆ ಅರೇಂಜರ್ ಆಗಿದ್ದ ಸ್ಟೀಫನ್ ಕೂಡ ಒಂದು ಚಿತ್ರಕ್ಕೆ ಸಂಗೀತ ನಿರ್ದೇಶನ ಮಾಡಿದ್ದಾರೆ. ಇನ್ನೊಬ್ಬ ಪ್ರಖ್ಯಾತ ಸಂಗೀತ ನಿರ್ದೇಶಕರಾದ ವಿ.ಮನೋಹರ್ ಅವರಿಗೆ ಸ್ಯಾಕ್ಸ್‌ರಾಜಾ, ದಿನಕರ್, ಜಯರಾಂ ಅರೇಂಜರ್ಸ್ ಆಗಿದ್ದರೆ, ಎಲ್.ಎನ್.ಶಾಸ್ತ್ರಿ, ಶಂಕರ್ ಶಾನುಭೋಗ್ ಮೊದಲಾದವರು ಸಹಾಯಕರು. ಎಲ್.ಎನ್.ಶಾಸ್ತ್ರಿ ಅನಂತರ ರವಿಚಂದ್ರನ್ ಅವರ ಸಂಗೀತ ನಿರ್ದೇಶನದಲ್ಲಿ ಅರೇಂಜರ್ ಆಗಿ ಕೆಲಸ ಮಾಡಿದರು. ಹಲವು ಚಿತ್ರಗಳಿಗೆ ಅರೇಂಜರ್ ಆಗಿ ದುಡಿದಿದ್ದ ಯುವಕ ದಿನಕರ್ ಕನ್ನಡದ 'ಗ್ರಾಮದೇವತೆ' ಚಿತ್ರಕ್ಕೆ ಮೊದಲ ಬಾರಿಗೆ ಸ್ವತಂತ್ರ ಸಂಗೀತ ನಿರ್ದೇಶಕರಾದರು. ಎಲೆಕ್ಟ್ರಾನಿಕ್ ಇನ್‌ಸ್ಟ್ರುಮೆಂಟ್ ಕ್ಲೇವಯಲಿನ್ ಅಥವಾ ಯೂನಿವಾಕ್ಸ್ ಮೊದಲ ಬಾರಿಗೆ ಸಿನಿಮಾದಲ್ಲಿ ನುಡಿಸಿದವರೆಂದರೆ ಬಿ.ಹನುಮಂತಾಚಾರ್.

ಬರಬರುತ್ತ ಕಂಪ್ಯೂಟರ್ ದಿನಗಳು ಹೆಚ್ಚಾಗಿ ಬೇರೆ ಬೇರೆ ಬಗೆಯ ವಾದ್ಯಗಳ ಧ್ವನಿಗಳನ್ನು ಅಲ್ಲೇ ಮಿಶ್ರ ಮಾಡುವ ಪ್ರಕ್ರಿಯೆ ಬೆಳೆಯುತ್ತಿರುವುದರಿಂದ ಅರೇಂಜರ್‌ಗಳ ಕೆಲಸ ಕಡಿಮೆ ಆಗುತ್ತಿದೆ. ಆದರೆ ಅದು ಅಳಿಯಲು ಸಾಧ್ಯವಿಲ್ಲ. ಬೇರೊಂದು ರೂಪ ಪಡೆಯಬಹುದು, ಅಷ್ಟೆ.

ಟ್ರ್ಯಾಕ್‌ಗೆ ಹಾಡುವ ಪದ್ಧತಿ

ಸಂಗೀತದಲ್ಲಿ ಟ್ರ್ಯಾಕ್‌ಗೆ ಹಾಡುವುದು ಎಂಬ ಒಂದು ವಿಧಾನ ಇದೆ. ೧೯೮೦ರಲ್ಲಿ ಬೇರೆ ಬೇರೆ ಟ್ರ್ಯಾಕ್‌ಗಳಲ್ಲಿ ಧ್ವನಿ ಮುದ್ರಿಸುವ ಪದ್ಧತಿ ಬಂದಿತು. ಆಗಲೇ ಈ 'ಟ್ರ್ಯಾಕ್ ಸಿಂಗಿಂಗ್' ವಿಧಾನವೂ ಪ್ರಾರಂಭವಾಯಿತು.

ತಾಂತ್ರಿಕತೆಯ ಅಭಿವೃದ್ಧಿಯಾದಂತೆ ಎಲ್ಲ ವಾದ್ಯಗಳನ್ನು ಬೇರೆ ಬೇರೆ ಟ್ರ್ಯಾಕ್‌ಗಳಲ್ಲಿ ಧ್ವನಿ ಮುದ್ರಿಸಲು ಅವಕಾಶವಾಯಿತು. ಹಾಗೆಯೇ ಗೀತ ಸಾಹಿತ್ಯದ ಗಾಯನವನ್ನು ಪ್ರತ್ಯೇಕವಾಗಿ ಮುದ್ರಿಸಲು ಸಾಧ್ಯವಾಯಿತು. ಈ ಹಂತದಲ್ಲಿ ಗಾಯನ ಪ್ರತಿಭೆ ಇರುವವರನ್ನು ಕರೆತಂದು ಟ್ರ್ಯಾಕ್‌ಗಳಿಗೆ ಹಾಡಿಸಲು ಪ್ರಾರಂಭಿಸಿದರು.

ಮುಖ್ಯವಾಗಿ ನಾವು ಬಹುತೇಕ ಪರಭಾಷೆಯ ಗಾಯಕರನ್ನು, ಅತ್ಯಂತ ಜನಪ್ರಿಯ ಗಾಯಕರನ್ನು ಅವಲಂಬಿಸುತ್ತೇವಾದ್ದರಿಂದ ಅವರುಗಳ ಸಮಯಾವಕಾಶ (ಕಾಲ್‌ಶೀಟ್) ಸಿಗುವುದೇ ಕಷ್ಟ. ಹೀಗಾಗಿ ಮೊದಲೇ ಹಾಡುಗಳ ರಾಗ ಸಂಯೋಜನೆ, ವಾದ್ಯ ಸಂಯೋಜನೆ ಎಲ್ಲವನ್ನೂ ಸಿದ್ಧಮಾಡಿ ಧ್ವನಿ ಮುದ್ರಿಸಿರುತ್ತಾರೆ. ಇಲ್ಲಿ ಗಾಯನ ಮಾಡಿರುವವರು ಬೇರೆ. ಆ ಗಾಯನವನ್ನು ಕೇಳಿ ಪ್ರಸಿದ್ಧ ಗಾಯಕರು ಮತ್ತೆ ಟ್ರ್ಯಾಕ್‌ಗೆ ಹಾಡುತ್ತಾರೆ. ಪ್ರಾರಂಭದಲ್ಲಿ ಇದು ಅನುಕೂಲಕ್ಕಾಗಿ ಮಾಡಿಕೊಂಡ ವಿಧಾನ. ಆದರೆ ಕ್ರಮೇಣ ಈ ಟ್ರ್ಯಾಕ್ ಸಿಂಗರ್ಸ್ ಎಂಬ ಪರಂಪರೆಯೇ ಹುಟ್ಟಿಕೊಂಡಿತು. ಮತ್ತು ಗಾಯಕರಿಗೆ ಬೇಡಿಕೆಯೂ ಹೆಚ್ಚಿತು. ಸಾಮಾನ್ಯವಾಗಿ ಗಾಯಕರಾಗಿ ಚಿತ್ರರಂಗ ಪ್ರವೇಶಿಸಲು ಬಯಸಿ ಬರುವ ಹೊಸಬರಿಗೆ ಒಂದು ಪ್ರಯೋಗದ ಹಾಗೆ, ಏರು ಮೆಟ್ಟಿಲಿನಂತೆ ಈ ಟ್ರ್ಯಾಕ್ ಗಾಯನ ಅವರ ನೆರವಿಗೆ ಬಂದುದುಂಟು. ಆದರೆ ಅಂಥ ಅವಕಾಶಗಳು ತೀರಾ ಕಡಿಮೆ. ಟ್ರ್ಯಾಕ್‌ನಲ್ಲಿ ಹಾಡಿದ ಗೀತೆಯೇ ತುಂಬ ಚೆನ್ನಾಗಿದೆ ಅನ್ನಿಸಿ ಅದನ್ನೇ ಉಳಿಸಿಕೊಂಡ ಒಂದೆರಡು ಪ್ರಸಂಗಗಳೂ ಇವೆ. ಹಾಗೆ ಟ್ರ್ಯಾಕ್ ಗಾಯನದಿಂದ ಪ್ರಧಾನ ಗಾಯಕರಾಗಿ ಮುಂದುವರಿದ ಒಂದೆರಡು ಗಾಯಕರ ಉದಾಹರಣೆಗಳೂ ಇವೆ.

ಟ್ರ್ಯಾಕ್‌ಗೆ ಹಾಡುವ ಮೂಲಕ ಪ್ರವೇಶಿಸಿದ ಹಲವರು ಮುಖ್ಯವಾಹಿನಿಗೆ ಬಹಳ ಬೇಗ ಬಂದರು. ಈ ಟ್ರ್ಯಾಕ್‌ಗೆ ಹಾಡುವವರು ಎಷ್ಟೇ ಉತ್ತಮ ಗಾಯಕರಾದರೂ ಮಾರುಕಟ್ಟೆ ನಿಲ್ಲುವುದು ಜನಪ್ರಿಯತೆಯನ್ನು ಆಧರಿಸಿಯೇ ಆದ್ದರಿಂದ ನಿರ್ಮಾಪಕರು ಪ್ರಸಿದ್ಧ, ಬಹು ಬೇಡಿಕೆಯ ಗಾಯಕ ಗಾಯಕಿಯರನ್ನೇ ಬಯಸುತ್ತಾರೆ. ಗಾಯಕರಿಗೂ ತಾರಾಮೌಲ್ಯ ಇರುವುದರಿಂದಾಗಿ ಎಷ್ಟೋ ಬಾರಿ ಪ್ರತಿಭಾವಂತರಿಗೆ ಅವಕಾಶಗಳು ತಪ್ಪಿ ಹೋಗುತ್ತವೆ.

ಸ್ಥಳೀಯ ಪ್ರತಿಭೆಗಳನ್ನು ಬಳಸಿಕೊಳ್ಳಬೇಕೆಂಬ ಒತ್ತಡಗಳಿದ್ದರೂ ಕೆಲವು ಬಾರಿ ನಿರ್ಮಾಪಕರ ಮಾರುಕಟ್ಟೆಯ ಕಾರಣವಾದರೆ ಹಲವು ಬಾರಿ ಸಂಗೀತ ನಿರ್ದೇಶಕರ ಒಲವುಗಳು ಅಡ್ಡಗಾಲಾಗುತ್ತವೆ. ಆದರೆ ಹಿರಿಯ, ಜನಪ್ರಿಯ ಗಾಯಕ ಎಸ್.ಪಿ.ಬಾಲಸುಬ್ರಹ್ಮಣ್ಯಂ ಕೆಲವು ಬಾರಿ ಟ್ರ್ಯಾಕ್‌ನಲ್ಲಿರುವ ಗೀತೆಯನ್ನು ಕೇಳಿ ''ಅದೇ ಉತ್ತಮವಾಗಿದೆ, ಹಾಗೇ ಇಟ್ಟು ಕೊಳ್ಳಿ. ನಾನು ಮತ್ತೆ ಹಾಡುವ ಅಗತ್ಯವಿಲ್ಲ'' ಎಂದದ್ದುಂಟು. ಕೆಲವೊಮ್ಮೆ ಗಾಯಕರಿಗೆ ಬಿಡುವಿಲ್ಲದೆ ಟ್ರ್ಯಾಕ್ ಅಷ್ಟೇ ಬಳಸಿಕೊಂಡಿರಬಹುದು. ಅಂಥ ಸಂದರ್ಭಗಳಲ್ಲಿ ಹೊಸ ಪ್ರತಿಭೆಗಳು ಬೆಳಕಿಗೆ ಬಂದಿವೆ. ಕೆಲವೊಮ್ಮೆ ಸಂಗೀತ ನಿರ್ದೇಶಕರೇ ಹೊಸಬರಿಗೆ ಅವಕಾಶ ಮಾಡುತ್ತಾರೆ. ಹಾಗೆ ಬೆಳಕಿಗೆ ಬಂದವರಲ್ಲಿ ರಾಜೇಶ್ ಕೃಷ್ಣ, ಎಲ್.ಎನ್.ಶಾಸ್ತ್ರಿ, ಚಂದ್ರಿಕಾ ಗುರುರಾಜ್, ರಮೇಶ್ ಚಂದ್ರ, ವಿಷ್ಣು, ಹೇಮಂತ್ ಕುಮಾರ್, ಮನು ಪ್ರಮುಖರು. ಪ್ರಸಿದ್ಧ ಸಂಗೀತ ವಿದುಷಿ ಸಂಗೀತಾ ಕಟ್ಟಿ ಅವರೂ ಒಂದೊಮ್ಮೆ ಟ್ರ್ಯಾಕ್‌ಗೆ ಹಾಡಿದ್ದುಂಟು. ಇವರೆಲ್ಲ ಸ್ವತಂತ್ರ ಗಾಯಕರೂ ಆಗಿ ಪ್ರಶಸ್ತಿಗಳನ್ನು ಪಡೆದರು.

''ಸಂಗೀತ ಕ್ಷೇತ್ರದಲ್ಲಿ ತಂತ್ರಜ್ಞಾನ ಬೆಳೆದಂತೆಲ್ಲ ಅನುಕೂಲದ ಜೊತೆ ಅನಾನುಕೂಲವೂ ಆಗಿದೆ. ಹಿಂದಿನ ದಿನಗಳ ಭಾವ, ಮಾಧುರ್ಯ ಈಗ ಸಾಧ್ಯವಾಗುತ್ತಿಲ್ಲ. ಹಲವಾರು ವಾದ್ಯಗಳನ್ನು ಬಳಸಿ ಹೊರಹೊಮ್ಮಿಸುತ್ತಿದ್ದ ಸಂಗೀತ ಮಾಧುರ್ಯವನ್ನು ಇಂದು ಕೀಬೋರ್ಡ್ ಒಂದರಿಂದಲೇ ಪಡೆಯಬಹುದಾಗಿದೆ. ಕೀಬೋರ್ಡ್ ವಾದ್ಯದಿಂದ ಹೊಸ ಹೊಸ ಟ್ಯೂನ್‌ಗಳನ್ನು ಪಡೆಯಬಹುದು, ನಂತರ ಅದಕ್ಕೆ ಹಾಡುಗಳನ್ನು ಬರೆಯಬಹುದು. ಹಳೆಯ ಹಾರ್ಮೋನಿಯಂ, ಸಿತಾರ್, ವೀಣೆ ಧ್ವನಿಗಳು ಬೇಡವಾಗಿವೆ. ಅವರ ಜಾಗದಲ್ಲಿ ಕೀಬೋರ್ಡ್ ಬಂದಿದೆ. ಕೀಬೋರ್ಡ್‌ನಿಂದ ಟ್ಯೂನ್ ಪಡೆಯಬೇಕೆಂದರೆ ಅದನ್ನು ನುಡಿಸುವ ಪರಿಣಿತನಿರಬೇಕು. ಪರಿಣತಿಯಿಲ್ಲದಿದ್ದರೆ ಅದರಿಂದ ಹೊರಹೊಮ್ಮುವ ಟ್ಯೂನ್‌ನಿಂದ ಪಡೆದ ಸಾಹಿತ್ಯವೂ ಚೆನ್ನಾಗಿರುವುದಿಲ್ಲ. ಎ.ಆರ್.ರೆಹಮಾನ್ ಮಾತ್ರ ಅದ್ಭುತ ಕೀಬೋರ್ಡ್ ತಂತ್ರಜ್ಞ. ಆತನಿಂದ ಹೊರಹೊಮ್ಮಿದ ಟ್ಯೂನ್‌ಗಳಲ್ಲಿನ ಮಾಧುರ್ಯ ಒಮ್ಮೊಮ್ಮೆ ಲೈವ್ ಇನ್‌ಸ್ಟ್ರುಮೆಂಟ್‌ನಿಂದ ಪಡೆದದ್ದೇನೋ ಎಂಬಂತಹ ಅನುಮಾನವನ್ನು ಹುಟ್ಟುಹಾಕುತ್ತದೆ. ಕನ್ನಡದಲ್ಲಿ ಆ ಮಟ್ಟಕ್ಕೆ ಬರಬಲ್ಲ ಪ್ರತಿಭಾವಂತ ಸಾಧುಕೋಕಿಲ. ಕೀಬೋರ್ಡ್ ಅನ್ನು ಉಪಯೋಗಿಸಿ ಸ್ಯಾಕ್ಸೋಫೋನ್ ಎಂಬ ಊದುವ ವಾದ್ಯವನ್ನು ಅತ್ಯಂತ ಯಶಸ್ವಿಯಾಗಿ ಬೆರಳುಗಳಲ್ಲಿ ನುಡಿಸಬಲ್ಲ ಸಮರ್ಥ'' ಎನ್ನುವ ವಿ.ಮನೋಹರ್ ನಾಳೆಗಳಲ್ಲಿ ಏನಾದರೂ ಭರವಸೆ ಉಂಟೇ ಎಂದು ಚಿಂತಿಸುತ್ತಾರೆ.

ಚಿತ್ರವೊಂದರ ಯಶಸ್ಸಿಗೆ ಹಾಡುಗಳೇ ಕಾರಣ ಎಂಬ ವಾದವನ್ನು ಅವರು ಒಪ್ಪುವುದಿಲ್ಲ. ಅವರ ಸಂಗೀತವನ್ನೇ ಬೊಟ್ಟು ಮಾಡಿ ತೋರಿ ''...'ಜನುಮದ ಜೋಡಿ' ಚಿತ್ರದ ಯಶಸ್ಸಿಗೆ ಸಂಗೀತ, ಗೀತೆಗಳಿಂದ ಮಾತ್ರವಲ್ಲ ಹಲವು ಕಾರಣಗಳು, ಮುಖ್ಯವಾಗಿ ತತ್ಕಾಲೀನ ಸಮಾಜವನ್ನು ಕಾಣಿಸಬಲ್ಲ, ಪ್ರಶ್ನಿಸಬಲ್ಲ ವಸ್ತು-ನಿರೂಪಣೆ, ಅದನ್ನು ಒಗ್ಗೂಡಿಸುವ ಉತ್ತಮ ಕಥೆ ಕಾರಣವಾಗುತ್ತದೆ ಎಂಬುದು ಅವರ ಅಭಿಪ್ರಾಯ. ಅದಕ್ಕೆ ಅವರೇ ತುಂಬ ಶ್ರಮ-ಶ್ರದ್ಧೆಯಿಂದ ಸಂಯೋಜಿಸಿದ ಹನ್ನೊಂದು ಗೀತೆಗಳು 'ರಂಗೋಲಿ' ಚಿತ್ರದಲ್ಲಿದ್ದವು. ''ಜೀವ ಜೀವ ಸೇರಿಸೋ ಒಲವೇ ರಂಗೋಲಿ...'', 'ಹೇ ಗುಲಾಬಿ...'' ಮೊದಲಾದ ಗೀತೆಗಳು ಚೆನ್ನಾಗಿದ್ದವು. ಆದರೆ ಚಿತ್ರ ಸೋತಿತು. 'ಬೆಳದಿಂಗಳ ಬಾಲೆ'ಯ ಹಾಡುಗಳಲ್ಲಿ ಮಾಧುರ್ಯವಿರಲಿಲ್ಲ. ಆದರೆ ಅದನ್ನು ಉಳಿಸಿದ್ದು ನಿರೂಪಣೆಯ ಹೊಸತನ-ಬಿಗಿಯಾದ ನಿರ್ದೇಶನ'' ಎಂದು ಭಾವಿಸುತ್ತಾರೆ ಮನೋಹರ್.

ಅವರ ಸಂಗೀತ ನಿರ್ದೇಶನದ ಬಗ್ಗೆ ವಿಶೇಷವಾಗಿ ಹೇಳುವ ಮಾತುಗಳು : ''...'ಜನುಮದ ಜೋಡಿ' ಚಿತ್ರಕ್ಕೆ ಕಂಸಾಳೆ ಮಾದಯ್ಯನವರು ಹಾಡಿದ್ದ ಕ್ಯಾಸೆಟ್ ಕೇಳಿ ಹಾಡಿನ ಮೊದಲ ಎರಡು ಸಾಲು ''ಕೋಲುಮಂಡೆ ಜಂಗಮದೇವರು ಗುರುವೆ ಕೊರಣ್ಯಕೆ ದಯ ಮಾಡಪ್ಪ...'' ಮಾತ್ರ ಉಳಿಸಿಕೊಂಡೆ, ಉಳಿದಂತೆ ಬೇರೆ ರಾಗ ಹಾಕಿದೆ. ದೊಡ್ಡರಂಗೇಗೌಡರು ನನ್ನ ಕೋರಿಕೆ ಮನ್ನಿಸಿ ಆ ರಾಗಕ್ಕೆ ಸಾಹಿತ್ಯ ತುಂಬಿಕೊಟ್ಟರು. ಮೇಲುನೋಟಕ್ಕೆ ಅದು ಭಕ್ತಿಗೀತೆಯಂತಿದೆ. ಆದರೆ ಅದೊಂದು ಭಕ್ತಿಯ ಲೇಪವಿದ್ದ ಪ್ರೇಮಗೀತೆಯಾಗಿತ್ತು. ಉದ್ದಕ್ಕೂ ಒಂದೇ ತೆರನಾದ ರಾಗ ಬೇಡವೆಂದು ''ಶುಭವಾಗುತ್ತೈತಮ್ಮೊ...'' ಎಂಬ ಕಡೆ ಬದಲಾಯಿಸಿ ಬೇರೆಯದೇ ರಾಗ ಸಂಯೋಜನೆ ಮಾಡಿದೆ. ಬರಗೂರು ರಾಮಚಂದ್ರಪ್ಪನವರ ಮಾತೇ ಚೆನ್ನ. ಅವರ ನಾಲ್ಕು ಪುಟದ ಸಂಭಾಷಣೆಯನ್ನೇ ಒಂದು ಹಾಡು ಮಾಡಿದೆ. ಅರ್ಧ ಗಂಟೇಲಿ ಹಾಡು, ರಾಗ ಸಂಯೋಜನೆ ಮುಗಿಸಿ ಎಲ್.ಎನ್.ಶಾಸ್ತ್ರಿ ಅಭ್ಯಾಸ ಮಾಡಿ ಹಾಡಿಯೂ ಆಗಿತ್ತು. ''ಮಣಿ ಮಣಿ ಮಣಿಗೊಂದು ದಾರ...'' ತುಂಬ ಜನಪ್ರಿಯವಾಯಿತು...'' ಎಂದು ವಿವರಿಸುತ್ತಾರೆ ಮನೋಹರ್. 'ಜನುಮದ ಜೋಡಿ' ಚಿತ್ರದ ಸಂಗೀತವನ್ನು ರಸಿಕರು ಬಹುಕಾಲ ನೆನೆಯುತ್ತಾರೆ.

ಪ್ರಯೋಗಗಳಲ್ಲಿ ಒಲವುಳ್ಳ ಮನೋಹರ್ 'ಓ ಮಲ್ಲಿಗೆ' ಚಿತ್ರದಲ್ಲಿ ''ಓ ಸೀತಕ್ಕ...'' ಎಂದು ಹಾಡುತ್ತ ಪತ್ರಿಕೆ ಓದಿ ಹೇಳುತ್ತಲೇ ತಾನು ಮದುವೆಯಾಗಬೇಕೆಂದಿರುವ ಹುಡುಗನ ಬಗ್ಗೆ ವಿವರಿಸಿರುತ್ತಾಳೆ. ಖ್ಯಾತ ಪತ್ರಕರ್ತ ವೈ.ಎನ್.ಕೃಷ್ಣಮೂರ್ತಿ (ವೈಎನ್ಕೆ) ಅವರ ಅಂಕಣ ಬರಹದಲ್ಲಿ ಬಂದ ''ವಸಂತದಲ್ಲಿ ಸಂತನಾಗಬೇಡ...'' ಎಂಬ ಸಾಲನ್ನು ಪಲ್ಲವಿ ಮಾಡಿ ಚಂದವಾದ ಹಾಡು ಬರೆದದ್ದು 'ಮುಂಗಾರಿನ ಮಿಂಚು' ಚಿತ್ರಕ್ಕೆ. ಮನೋಹರ್ ಅಲ್ಪ ಅವಧಿಯಲ್ಲೇ ಇಂಥ ಹಲವು ಪ್ರಯೋಗ ಮಾಡಿದ್ದಾರೆ, ಮಾಡುತ್ತಿದ್ದಾರೆ.

ವಿ.ಮನೋಹರ್ ಹೊಸ ಗಾಯಕರನ್ನು ಪರಿಚಯಿಸಿದ್ದರೂ, ''ಎಸ್.ಪಿ.ಬಾಲಸುಬ್ರಹ್ಮಣ್ಯಂ ಒಮ್ಮೊಮ್ಮೆ ಒಂದೇ ದಿನದಲ್ಲಿ ಹದಿನೈದು ಹಾಡುಗಳನ್ನು ಹಾಡುತ್ತಾರೆ. ಅಂಥ ಸಂದರ್ಭದಲ್ಲಿ ಅವರೊಬ್ಬರಿಂದ ಮಾತ್ರ ಭಾವ ತುಂಬಿದ ಹಾಡುಗಳನ್ನು ಅಪೇಕ್ಷಿಸಬಹುದು. ಭಾವ ತುಂಬಿ ಹಾಡಬಲ್ಲ ಗಾಯಕರು ನಮ್ಮಲ್ಲಿ ವಿರಳ'' ಎನ್ನುತ್ತಾರೆ.

''ಚಿತ್ರಾ The best singer for all over India. ಆಕೆಯ ಧ್ವನಿಗಿಂತ ಆಕೆಯ ನಡೆ-ನುಡಿ behaviour ತುಂಬ ಉತ್ತಮ ಮಟ್ಟದ್ದು. ನಮ್ಮ ಹೆಚ್ಚಿನ ಗಾಯಕರು ಬಹು ಬೇಗ desperate ಆಗ್ತಾರೆ. ಅವರಿಗೆ ತಕ್ಷಣದ success ಬೇಕು. Hit ಕೊಡಬೇಕೆನ್ನುವ ತೀವ್ರತೆಯಲ್ಲಿ ಮಾಧುರ್ಯಕ್ಕೆ ಕುತ್ತು ಬರುವ ಸಾಧ್ಯತೆ ಹೆಚ್ಚು. ವಿನಯಶೀಲತೆ ಒಬ್ಬ ಗಾಯಕನ ಜನಪ್ರಿಯತೆ, ಆಯಷ್ಯ ಎರಡನ್ನೂ ಹೆಚ್ಚಿಸುತ್ತದೆ.

''ನಮ್ಮ ಮಂಡಿಪೇಟೇಲಿ ಮೂಟೆ ಹೊರುವ ಒಬ್ಬ ಕೂಲಿಯಾಳಿಗೂ ನನ್ನತನ, ನನ್ನ ನೆಲ, ನನ್ನ ಜನ ಎಂಬ ಅಭಿಮಾನ ಇದೆ ಎಂದರೆ ಅವನಿಗೆ ಮುಂಬಯಿಯಿಂದ ಬಂದ ಸೋನು ನಿಗಮ್, ಅಲ್ಕಾ ಯಾಗ್ನಿಕ್ ಅನುರಾಧಾ ಪೋಡ್ವಾಲ್ ಅವರಂತಹ ಅತಿರಥ ಮಹಾರಥರು ಕಡೆಗೆ ನೆರೆಯ ಚಿತ್ರಾ ಕೂಡ ಗೊತ್ತಿಲ್ಲ. ಅವರಿಗೆ ಎಸ್.ಜಾನಕಿ ಗೊತ್ತು, ಪಿ.ಬಿ.ಶ್ರೀನಿವಾಸ್, ಬಾಲಸುಬ್ರಹ್ಮಣ್ಯಂ ಅಂದರ ಗೊತ್ತು. ಛಾಯಾ, ಮಂಜುಳಾ ಅಂದರೆ ಇನ್ನೂ ಪರಿಚಯ. ಇದೆಲ್ಲ built in ಅಂದ್ರೆ ರಕ್ತಗತ. ಯಾವಾಗ common man ಸ್ವೀಕರಿಸುವುದಿಲ್ಲವೋ ಆಗ ಎಂತಹ ಗಾಯಕರೂ ಸೇಲಬಲ್ ಅಲ್ಲ. ಸ್ಥಳೀಯ ಗಾಯಕರು ಇಂಥ ಸಮಯದಲ್ಲಿ ಹೆಚ್ಚು ಪ್ರಸ್ತುತ'' - ಎನ್ನುತ್ತಾರೆ ವಿ.ಮನೋಹರ್.

ಧ್ವನಿಮುದ್ರಣದಲ್ಲಿ ಆಧುನಿಕ ವಿಧಾನ ಬಂದಾಗಲೂ ಉಂಟಾಗುವ ಜೀವರಾಹಿತ್ಯವನ್ನು ಹೀಗೆ ಗುರುತಿಸುತ್ತಾರೆ : ''ರಿಕಾರ್ಡಿಂಗ್‌ನಲ್ಲಿ ಪಂಚಿಂಗ್ ಮೆಷಿನ್ ಬಂದಾಗಿನಿಂದ ಹಾಡುಗಳ ಭಾವದಲ್ಲಿ ಕೊಂಚ ಬದಲಾವಣೆ ಬಂದಿದೆ. ಮೊದಲೆಲ್ಲ ರಿಕಾರ್ಡಿಂಗ್‌ಗೆ ಒಂದೇ ಬಾರಿಗೆ ಹಾಡಿ ಓಕೆ ಮಾಡಲಾಗುತ್ತಿತ್ತು. ಬರಬರುತ್ತ ಗಾಯಕರಿಗೆ ಒಂದೇ ಬಾರಿಗೆ ಹಾಡಲು ಕಷ್ಟವಾಗತೊಡಗಿ ಪಂಚಿಂಗ್ ಸಿಸ್ಟಂ ಜಾರಿಗೆ ತರಲಾಯಿತು. ಒಂದೇ ಶ್ವಾಸದಲ್ಲಿ ಹಾಡುವ ತಾಕತ್ತು ಯಾವ ಯುವ ಗಾಯಕರಿಗೂ ಇಲ್ಲ. ಇದರಿಂದಾಗಿ ಒಂದು ಪ್ಯಾರಾ ನಂತರ ಅದಕ್ಕೂ ಶ್ವಾಸ ಇಲ್ಲದಾಗಿ ಅದನ್ನು ಒಂದು ಸಾಲು, ನಂತರ ನಾಲ್ಕು ನಾಲ್ಕು ಪದಗಳಿಗೆ ಪಂಚ್ ಮಾಡಿ ನಂತರ ಎಲ್ಲವನ್ನೂ ಜೋಡಿಸಿ ಒಂದು ಪೂರ್ತಿ ಹಾಡನ್ನು ಮಾಡಲಾಗುತ್ತಿದೆ. ಇದು ಒಂದು ರೀತಿ ಇಟ್ಟಿಗೆ ಜೋಡಿಸಿದ ಕೆಲಸದಂತಾಗಿದೆ. ಮುಖ್ಯವಾಗಿ ಕನ್ನಡದಲ್ಲಿ ಚಿತ್ರಗಳಿಗೆ ಹಾಡುವಂಥ ಗಾಯಕರ ಅಭಾವವಿದೆ. ಅವರೆಷ್ಟೇ ಸುಶ್ರಾವ್ಯ ಕಂಠವಿದ್ದವರಾದರೂ ಈಗಿನ ನೊಟೇಷನ್ (Notation) ಪದ್ಧತಿಯಲ್ಲಿ ಸಂಗೀತದ ಅಭ್ಯಾಸ ಇರುವುದಿಲ್ಲವಾದ್ದರಿಂದ ಇಲ್ಲಿ ಬೇಗ ಹೊಂದಿಕೊಳ್ಳುವುದಿಲ್ಲ.''

ಧ್ವನಿ ಮುದ್ರಣದ ಬಗ್ಗೆ ಮತ್ತಷ್ಟು

ಮೂಕಿ ಚಿತ್ರಗಳ ಕಾಲದಲ್ಲಿ ಚಲನಚಿತ್ರ ಪರದೆಯ ಮೇಲೆ ಮೂಡಿದ್ದಕ್ಕೇ ಪ್ರೇಕ್ಷಕ ಸಂತೋಷ ಪಟ್ಟಿರಬಹುದು. ೧೯೨೬ರ ಹೊತ್ತಿಗೇ ವಾರ್ನರ್ ಸಹೋದರರು 'ಡಾನ್ ಜಾನ್' ಚಿತ್ರದ ಜೊತೆಗೆ ಗ್ರಾಮಫೋನ್ ತಟ್ಟೆಗಳನ್ನು ಹಾಡಿಸಿ ಸರಿಹೊಂದಿಸಲು

ಪ್ರಯತ್ನಿಸಿದರು. ಚಲಿಸುವ ಬಿಂಬಗ್ರಹಣ ತಂತ್ರವೂ ಇತ್ತು. ಧ್ವನಿಗ್ರಹಣ ತಿಳಿದಿತ್ತು. ಅವೆರಡನ್ನೂ ಒಂದೆಡೆ ಜೋಡಿಸುವ ವಿಧಾನವಿನ್ನೂ ತಿಳಿದಿರಲಿಲ್ಲ.

ಮೂಕಿ ಚಿತ್ರಗಳು ನಡೆಯುವಾಗ ಕಥೆ ಹೇಳುವವರು, ಮುಂದೆ ಕುಳಿತು ವಾದ್ಯ ನುಡಿಸುವವರು ಇದ್ದರೆಂಬುದು ತಿಳಿದಿರುವ ಸಂಗತಿ. ಇವೆಲ್ಲ ಒಂದು ಅರ್ಥದಲ್ಲಿ ರಂಗಭೂಮಿಯ ಪ್ರಭಾವವೇ ಆಗಿತ್ತು. ಒಟ್ಟಾರೆ ವಾದ್ಯಗಳ ಹಿನ್ನೆಲೆ ಬೇಕು ಎಂಬುದಂತೂ ಮನದಟ್ಟಾಗಿತ್ತು. ಹೀಗಾಗಿ ವಾರ್ನರ್ ಬ್ರದರ್ಸ್ ಮಾಡಿದ ಪ್ರಯೋಗವೇ ಜಗತ್ತಿನಲ್ಲಾದ ಸಿಂಕ್ರೊನೈಸೇಷನ್ನಿನ ಮೊದಲ ಪ್ರಯತ್ನ. ಕಲಾವಿದರ ತುಟಿಯ ಚಲನೆಗೆ ಮಾತುಗಳು ತಾಳೆಯಾಗುತ್ತಿರಲಿಲ್ಲವಾದ್ದರಿಂದ ಇದೇ ಯಶಸ್ವಿ ಪ್ರಯೋಗ ಎನ್ನಲಾಗುವುದಿಲ್ಲ. ೧೯೨೭ರ ಆನಂತರ ಬಂದ 'ಜಾಸ್ ಸಿಂಗರ್' ಚಿತ್ರದ ಹೊತ್ತಿಗೆ ಧ್ವನಿ ಸಂಯೋಗದ ತಂತ್ರ ತಿಳಿದುಕೊಂಡು ಪ್ರಯೋಗಿಸಲಾಗಿತ್ತು. ಮುಂದಿನದೆಲ್ಲ ಟಾಕಿ ಚಿತ್ರಗಳ ಸಂಭ್ರಮ. (ನೋಡಿ 'ಪ್ರವೇಶ' ಲೇಖನ)

ಭಾರತದ ಮೊದಲ ಟಾಕಿ ಚಿತ್ರ 'ಆಲಂ ಆರಾ'ದ ನಿರ್ದೇಶಕ ಅರ್ದೇಶಿರ್ ಇರಾನಿ ಅವರಿಗೂ ಧ್ವನಿ ತಂತ್ರದ ಬಗ್ಗೆ ಸರಿಯಾದ ತಿಳಿವಳಿಕೆ ಇರಲಿಲ್ಲ. ಅವರು ವಿದೇಶದಿಂದ ಸಿಂಗಲ್ ಸಿಸ್ಟಮ್ ಸೌಂಡ್ ಆನ್ ಫಿಲಂಸ್ (TANAR) ಎಂಬ ಪೋರ್ಟಬಲ್ ಯಂತ್ರವನ್ನು ತರಿಸಿದ್ದರು. ಆ ಯಂತ್ರದ ಜೋಡಣೆಗೆ ಬಂದಿದ್ದ ವಿಲ್‌ಫ್ರೆಡ್ ಅವರ ಬಳಿ ಕೊಂಚ ಮಾಹಿತಿ ಪಡೆದುಕೊಂಡು ತಾವೇ ಶಬ್ದಗ್ರಹಣ ಮಾಡಿ ಚಿತ್ರ ಬಿಡುಗಡೆ ಮಾಡಿದರು. ಆಗೆಲ್ಲ ಸೌಂಡ್ ಪ್ರೂಫ್ ವ್ಯವಸ್ಥೆ ಸ್ಟುಡಿಯೋಗಳಲ್ಲಿ ಇರಲಿಲ್ಲ. ಹೆಚ್ಚು ಕಡಿಮೆ ರಾತ್ರಿ ವೇಳೆಯೇ ಸದ್ದಡಗಿದ ನಂತರ ಫ್ಯಾನ್‌ಗಳನ್ನು ನಿಲ್ಲಿಸಿ ಧ್ವನಿಗ್ರಹಣ ಕೆಲಸ ಮಾಡಿದರು. ಅದೊಂದು ಅದ್ಭುತವಾದ ಯಶಸ್ಸಾಗಿತ್ತು.

೧೯೩೪ರಲ್ಲಿ ಬಿಡುಗಡೆಯಾದ 'ಸತಿ ಸುಲೋಚನಾ' ಚಿತ್ರದಿಂದ ಕನ್ನಡ ಚಿತ್ರ ಪ್ರೇಕ್ಷಕರಿಗೆ ಮಾತನಾಡುವ ಚಿತ್ರಗಳನ್ನು ನೋಡುವ ಅವಕಾಶ ಲಭ್ಯವಾಯಿತಷ್ಟೆ. ಈ ಚಿತ್ರವೂ ಮಾತು ಪಡೆದುಕೊಂಡದ್ದು ಕೊಲ್ಹಾಪುರದ ಸಿನಿಟೋನ್ ಸ್ಟುಡಿಯೋದಲ್ಲಿ.

ಕರ್ನಾಟಕದ ಪ್ರಥಮ ಸೌಂಡ್ ಸ್ಟುಡಿಯೋವಾದ ಮೈಸೂರು ಸೌಂಡ್ ಸ್ಟುಡಿಯೋ ಬೆಂಗಳೂರಿನ ಮಲ್ಲೇಶ್ವರದಲ್ಲಿ ಪ್ರಾರಂಭವಾಯಿತು. ಇಲ್ಲಿ ತಯಾರಾದ ಪ್ರಥಮ ಚಿತ್ರ 'ರಾಜಸೂಯ ಯಾಗ'. ಆಗ ಇದ್ದದ್ದು ಆಡಿಯೋ ಕಾಮೆಕ್ಸ್ (Audio Comex) ಎಂಬ ಧ್ವನಿಮುದ್ರಣ ಯಂತ್ರ. ಆಗ ಇಲ್ಲಿದ್ದ ಯಶವಂತರಾವ್ ಧ್ವನಿಮುದ್ರಣ ತಂತ್ರಜ್ಞರಾಗಿದ್ದರು. ಸ್ಟುಡಿಯೋ ಸರಿಯಾಗಿ ನಡೆದಿದ್ದರೆ ಕನ್ನಡಕ್ಕೆ ಬಹು ದೊಡ್ಡ ನೆರವು ಸಿಗಬಹುದಿತ್ತು. ಹಾಗಾಗಲಿಲ್ಲ, ಮುಚ್ಚಿತು.

೧೯೪೧ರ 'ವಸಂತಸೇನಾ', ೧೯೪೩ರ 'ಸತ್ಯ ಹರಿಶ್ಚಂದ್ರ' ಚಿತ್ರಗಳು ಮದರಾಸಿನ ಪ್ರಗತಿ ಸ್ಟುಡಿಯೋದಲ್ಲಿ ತಯಾರಾದವು. ಭಾರತದಲ್ಲೇ ಪ್ರಥಮ ಬಾರಿಗೆ ಡಬ್ಬಿಂಗ್ ವಿಧಾನವನ್ನು ಆಕಸ್ಮಿಕವೋ ಎಂಬಂತೆ ಕಂಡುಕೊಂಡು, ಪ್ರಯೋಗಿಸಿ ಯಶಸ್ವಿಯಾದವರು ಆರ್.ನಾಗೇಂದ್ರರಾಯರು.

ಮೈಸೂರಿನಲ್ಲಿ ನವಜ್ಯೋತಿ ಪ್ರಾರಂಭವಾಗಿ ೧೯೪೭ರಲ್ಲಿ 'ಕೃಷ್ಣಲೀಲ' ಪ್ರಥಮ ಚಿತ್ರವಾಗಿ ತೆರೆಗೆ ಬಂತು. ೧೯೫೩ನೇ ಮೇ ತಿಂಗಳಲ್ಲಿ ತಾರೀಖು ೨೨, ೨೩ರಂದು 'ಶ್ರೀರಾಮಪೂಜಾ' ಚಿತ್ರಕ್ಕಾಗಿ ಧ್ವನಿಮುದ್ರಣ ಕಾರ್ಯ ನಡೆಯಿತು. ಒಂದು ಟ್ರ್ಯಾಕ್‌ನಲ್ಲಿ ಆರ್.ಸಿ.ಎ. ಕಂಪನಿಯ ಪಿ.ಎಂ.೪೪ ಎಂಬ ಯಂತ್ರವಿತ್ತು. ಇದೇ ಟ್ರ್ಯಾಕ್ ಅನ್ನೇ ಸಂಭಾಷಣೆಯ ಧ್ವನಿಮುದ್ರಣಕ್ಕೂ ಬಳಸಬೇಕಾಗಿತ್ತು. ಎರಡೇ ಎರಡು ಮೈಕ್‌ಗಳಿದ್ದವು. ಒಂದು ವೆಲಾಸಿಟಿ (Velocity) ಮೈಕ್, ಇನ್ನೊಂದು ಪ್ರೆಷರ್ (presure) ಮೈಕ್. ಹಾಡುವವರಿಗೆ ಒಂದು ಮೈಕನ್ನೂ ವಾದ್ಯಗಾರರಿಗೆ ಒಂದು ಮೈಕನ್ನೂ ಕೊಡಲಾಗುತ್ತಿತ್ತು. ಏನಾದರೂ ತಪ್ಪುಗಳಾಗಿದ್ದರೂ ಸಿನಿಮಾ ಪ್ರೊಜೆಕ್ಷನ್ ಹಾಕಿ ನೋಡುವವರೆಗೆ ತಿಳಿಯುತ್ತಿರಲಿಲ್ಲ. ಆನಂತರ ಆಗಿರುವ ತಪ್ಪು ಸರಿಪಡಿಸಿ ಪುನಃ ಧ್ವನಿ ಮುದ್ರಿಸಬೇಕಾಗಿತ್ತು.

೧೯೫೫ರ ಆನಂತರ ಮದರಾಸಿನ ಸ್ಟುಡಿಯೋಗಳಲ್ಲಿ ಆಧುನಿಕ ತಂತ್ರಜ್ಞಾನ ಕಾಲಿಟ್ಟಿತು. ಪರಿಣತ ಧ್ವನಿ ತಂತ್ರಜ್ಞರು, ಸೌಂಡ್ ಪ್ರೂಫ್ ಇರುವ ರಿಕಾರ್ಡಿಂಗ್ ಸ್ಟುಡಿಯೋಗಳು ಪ್ರಾರಂಭವಾದವು. ಆಗ ಮದರಾಸಿನ ವಿಜಯವಾಹಿನಿ ಸ್ಟುಡಿಯೋದಲ್ಲಿ ವೆಸ್ಟ್ರೆಕ್ಸ್ (Westrex) ಎಂಬ ಧ್ವನಿಗ್ರಹಣ ಯಂತ್ರವಿತ್ತು. ಇದಕ್ಕೆ ಎಂಟು ಚಾನಲ್‌ಗಳಿದ್ದವು. ಮ್ಯಾಗ್ನೆಟಿಕ್ ಟೇಪ್‌ನ ರಿಕಾರ್ಡಿಂಗ್ ಸೌಲಭ್ಯವೂ ಇತ್ತು. ಆದ್ದರಿಂದ ಬೇರೆ ಬೇರೆ ಮೈಕ್‌ಗಳನ್ನು ಬಳಸಿ ಚಾನಲ್‌ಗಳ ಪರಿಮಿತಗಳನ್ನು ಸರಿಹೊಂದಿಸಿ ಮ್ಯಾಗ್ನೆಟಿಕ್ ಟೇಪ್‌ನ ಮೇಲೆ ರಿಕಾರ್ಡಿಂಗ್ ಮಾಡಿಕೊಂಡರೂ ಟ್ರ್ಯಾಕ್ ಮಾತ್ರ ಒಂದೇ ಇರುತ್ತಿತ್ತು.

ಇದೇ ಸಮಯದಲ್ಲಿ ಎ.ವಿ.ಎಂ., ಗೋಲ್ಡನ್, ಫಿಲಂ ಸೆಂಟರ್ ಸ್ಟುಡಿಯೋಗಳಲ್ಲಿ ಇನ್ನೂ ಹೆಚ್ಚಿನ ತಾಂತ್ರಿಕ ಸೌಲಭ್ಯಗಳು ಇದ್ದವು. ಮುಖ್ಯವಾಗಿ ನಾಲ್ಕು ಟ್ರ್ಯಾಕ್ ಧ್ವನಿಮುದ್ರಣ ವ್ಯವಸ್ಥೆ ಇತ್ತು. ಇದರಿಂದಾಗಿ ಸಂಗೀತಕ್ಕೆ ಹೆಚ್ಚು ಹೆಚ್ಚು ವಾದ್ಯಗಳನ್ನು ಬಳಸಿ ಶ್ರೀಮಂತವಾಗಿಸಲು ಸಾಧ್ಯವಾಯಿತು. ವಾಳ್ಕೆ, ಜೀವ, ಜಿ.ಆರ್.ಪಿಳ್ಳೆ, ರಂಗಸ್ವಾಮಿ, ಮೋಹನಸುಂದರಂ, ರಾಮಸ್ವಾಮಿ, ಎಸ್.ಪಿ.ರಾಮನಾಥನ್, ಮಹದೇವ, ರಂಗನಾಥನ್ ಮುಂತಾದವರು ಆಗಿನ ಸೌಂಡ್ ಇಂಜಿನಿಯರುಗಳಲ್ಲಿ ಪ್ರಮುಖರಾದವರು. (ನೋಡಿ : ಧ್ವನಿಮುದ್ರಣ)

೧೯೭೬-೭೭ರ ನಂತರ ಕರ್ನಾಟಕ ಸರ್ಕಾರದ ಸಹಾಯಧನ ಯೋಜನೆಯಿಂದಾಗಿ ಅನೇಕರು ಮದರಾಸಿನಿಂದ ಬೆಂಗಳೂರಿಗೆ ಹಿಂತಿರುಗುವಂತೆ ಮಾಡಿತು. ಮೊದಲು ಹೊರಾಂಗಣದಲ್ಲಿ ಹಾಡುಗಳ ಚಿತ್ರೀಕರಣ ಮಾಡುವಾಗ ಪೆಟ್ರೋಲ್‌ನಿಂದ ಚಾಲನೆ ಹೊಂದುವ ಮಿನಿ ಜನರೇಟರ್ ಅನ್ನು ಬಳಸಿ ಪ್ಲೇಬ್ಯಾಕ್ ಯಂತ್ರವನ್ನು ಚಲಿಸುವಂತೆ ಮಾಡುತ್ತಿದ್ದರು. ಈ ಉಪಕರಣವನ್ನು ಸ್ಥಳದಿಂದ ಸ್ಥಳಕ್ಕೆ ಸಾಗಿಸುವುದು ತುಂಬಾ ಕಷ್ಟಕರವಾದ ಕೆಲಸವಾಗಿತ್ತು. ನಂತರ ಬ್ಯಾಟರಿ ಸೆಲ್‌ಗಳ ಮೂಲಕ ಚಲನೆಯಾಗುವ ನಾಗರ ಎಂಬ ಪೋರ್ಟಬಲ್ ಧ್ವನಿಪೆಟ್ಟಿಗೆ ಬಂದು ಹಾಡುಗಳ ಚಿತ್ರೀಕರಣ ಸುಲಭವಾಯಿತು. ಹೊರಾಂಗಣ ಚಿತ್ರೀಕರಣಕ್ಕೂ ಇದರಿಂದ ಅನುಕೂಲವಾಯಿತು.

ವಯೊಲಿನ್, ಪಿಯಾನೋ, ಯೂನಿವಾಕ್ಸ್, ಡಬಲ್ ಬೇಸ್ ಇಂತಹ ವಾದ್ಯಗಳು ಕ್ರಮೇಣ ಮರೆಯಾದವು. ಸಿಂಥೊಸೈಸರ್ಸ್, ಎಲೆಕ್ಟ್ರಾನಿಕ್ ಆರ್ಗನ್‌ಗಳು ಪ್ರವೇಶಿಸಿದವು. ಹಾಡುವವರ ಕಂಠದಲ್ಲಿ ಸಣ್ಣ ಪುಟ್ಟ ನ್ಯೂನತೆ ಇದ್ದರೂ ಸರಿಪಡಿಸಿ ಮಾಧುರ್ಯವನ್ನು ಮಾತ್ರ ಉಳಿಸಿಕೊಳ್ಳಲು ನೆರವಾಗುವಂಥ ಶಕ್ತಿಶಾಲಿ ಮೈಕ್ರೋಫೋನ್‌ಗಳು, ಕಂಪ್ರೆಸರ್ಸ್ ಲಿಮಿಟರ್ಸ್, ರಿವರ್ಟ್ ಮತ್ತು ಡಿಲೇ (Delay) ಮೊದಲಾದ ಉಪಕರಣಗಳು ಬಳಕೆಗೆ ಬಂದವು. ೧೯೮೨ರ ನಂತರ ಸ್ಟೀರಿಯೋಫೋನಿಕ್ ಮಲ್ಟಿ ಟ್ರ್ಯಾಕ್ ರಿಕಾರ್ಡಿಂಗ್ ಮತ್ತು ಪಂಚಿಂಗ್ (Multi track recording and punching) ತಂತ್ರಜ್ಞಾನ ಬಂದಿತು. ಎಂದರೆ ತುಂಡು ತುಂಡಾಗಿ ಧ್ವನಿಮುದ್ರಿಸಿ ಗಾಯಕರ ಸ್ವರವನ್ನು ಹೊಂದಿಸುವ 'ಮಿಕ್ಸಿಂಗ್' ವಿಧಾನ.

೧೯೪೪-೪೫ರಲ್ಲಿ ಶ್ರೀ ಜಯಚಾಮರಾಜೇಂದ್ರ ಪಾಲಿಟೆಕ್ನಿಕ್ ಸಂಸ್ಥೆಯಲ್ಲಿ ಧ್ವನಿಮುದ್ರಣ ಕೇಂದ್ರ ಪ್ರಾರಂಭವಾಯಿತು. ನಂತರ ೧೯೭೭ರಲ್ಲಿ ಪ್ರಭಾತ್, ೧೯೮೨ರಲ್ಲಿ ಅರವಿಂದ್, ೧೯೮೩ರಲ್ಲಿ ಡೆಕ್ಕನ್, ೧೯೮೬ರಲ್ಲಿ ಸಂಕೇತ್ ಮತ್ತು ಪ್ರಸಾದ್ ಧ್ವನಿಮುದ್ರಣ ಕೇಂದ್ರಗಳು ಕರ್ನಾಟಕದಲ್ಲಿ ಪ್ರಾರಂಭವಾದವು. ೧೯೯೨ರಲ್ಲಿ ಚಾಮುಂಡೇಶ್ವರಿ ಸ್ಟುಡಿಯೋದಲ್ಲಿ ಎರಡು ಫ್ಲೋರ್‌ಗಳು ಧ್ವನಿಮುದ್ರಣಕ್ಕೆ ಮಾತ್ರ ಮೀಸಲಾದವು. ಒಂದು ಗೀತ ಸಂಗೀತ, ರೀ-ರಿಕಾರ್ಡಿಂಗ್‌ಗಳಿಗಾದರೆ ಮತ್ತೊಂದನ್ನು ಮಾತುಗಳನ್ನು ಧ್ವನಿ ಮುದ್ರಿಸಲು ಬಳಸಲಾಯಿತು. ಮ್ಯಾಗ್ನಟೆಕ್ (magnatech) ಎಂಬ ನಾಲ್ಕು ಟ್ರ್ಯಾಕ್‌ನ ರಿಕಾರ್ಡರ್ ಮತ್ತು ನಾಲ್ಕು ಟ್ರ್ಯಾಕ್‌ನ ಡಬ್ಬಲ್ ಸೌಂಡ್ ಕ್ರ್ಯಾಫ್ಟ್ ಎಂಬ ೨೪ ಚಾನಲ್‌ಗಳುಳ್ಳ ಗಣಕೀಕೃತ (Computerised) ಮಿಕ್ಸಿಂಗ್ ತಂತ್ರಜ್ಞಾನ ಬಳಕೆಯಲ್ಲಿತ್ತು. Westrex Optical Recorder J B L ಹಾಗೂ Altech ಎಂಬ ಸ್ಪೀಕರ್‌ಗಳು, TASCOM ಎಂಬ ೧೬ ಟ್ರ್ಯಾಕ್‌ನ ಡಿಜಿಟಲ್ ಧ್ವನಿಮುದ್ರಣ ಯಂತ್ರಗಳನ್ನು ಈ ಕೇಂದ್ರ ಪಡೆದುಕೊಂಡಿತು.

ಮುಂದೆ ಪ್ರಸಾದ್ ಸ್ಟುಡಿಯೋ ಈ ಮಾದರಿಯ ಉಪಕರಣಗಳನ್ನೆಲ್ಲ ಪಡೆದು ದೊಡ್ಡ ಹೆಸರಾಯಿತು.

ಮುಂದಿನ ದಿನಗಳಲ್ಲಿ ಸಂಕೇತ್, ಅರವಿಂದ್, ಡೆಕ್ಕನ್ ಮೊದಲಾದ ಹಲವಾರು ಸಣ್ಣ ಸಣ್ಣ ಕೇಂದ್ರಗಳಲ್ಲಿ ಹಾಡಿನ ಧ್ವನಿಮುದ್ರಣವನ್ನು ಮಾಡಿಕೊಳ್ಳಲು ಸೌಕರ್ಯಗಳಾದವು. ಇಲ್ಲೆಲ್ಲ ಮಲ್ಟಿ ಟ್ರ್ಯಾಕ್ (Multi Track) ರಿಕಾರ್ಡಿಂಗ್ ಸೌಲಭ್ಯವೂ ಬಂತು.

ಡಿ.ಟಿ.ಎಸ್. ತಂತ್ರಜ್ಞಾನ

ಅತ್ಯಾಧುನಿಕ ತಂತ್ರಜ್ಞಾನದಲ್ಲಿ ಡಾಲ್ಬಿ, ಡಿ.ಟಿ.ಎಸ್.ಗಳು ಬಂದಿವೆ. ಈ ತಂತ್ರದ ಅಳವಡಿಕೆಯನ್ನು ಉಪಯೋಗಿಸಿ ತಯಾರಾದ ಚಿತ್ರಗಳು ಇದೇ ತಂತ್ರಜ್ಞಾನದ ಉಪಕರಣಗಳಿರುವ ಚಿತ್ರಮಂದಿರಗಳು, ಶಬ್ದ ಸಂಗೀತ ವೈಭವೀಕೃತವಾಗಿ ವೀಕ್ಷಕನ ಮನಸ್ಸನ್ನು ದಿಗ್ಭ್ರಮೆ, ಬೆರಗು, ಆಹ್ಲಾದ, ಆನಂದವನ್ನುಂಟು ಮಾಡಿ ಚಿತ್ರ ಚೆನ್ನಾಗಿ ಮೂಡಿಬರುವಂತಾಗಿ ನೋಡಿದ ಪ್ರೇಕ್ಷಕರನ್ನು ಮತ್ತೆ ಮತ್ತೆ ಬರುವಂತೆ ಮಾಡಿವೆ.

'ಸಂಗೀತ'ದ ಉಗಮವೇ ಸ-ರಿ-ಗ-ಮ-ಪ-ದ-ನಿ ಎಂಬ ಸಪ್ತಸ್ವರಗಳಿಂದ ಆದದ್ದು. ಎಲ್ಲವೂ ವಾದ್ಯಗಳಿಂದಲೇ ಎನ್ನುವುದು ತಪ್ಪಾಗುತ್ತದೆ. ನಾವು ಮಾತನಾಡುವಾಗಿನ ವಾಕ್ಯಗಳ ಪರಿಳಿತದಲ್ಲೇ ಒಂದು ಲಯ, ಭಾವ, ಸಂಗೀತ ಇದೆ. ಇವೆಲ್ಲವೂ ಮಥಿಸಿ ಮಥಿಸಿ ಹಲವು ರೂಪಗಳನ್ನು ತಾಳಿ ಶಾಸ್ತ್ರೀಯವಾಗುತ್ತ ಬಂದಿದೆ ಎನ್ನಬಹುದು. ವಾದ್ಯ, ಶಾಸ್ತ್ರೀಯ ಸಂಗೀತ, ಜನಪದ, ಪಾಶ್ಚಾತ್ಯ ಸಂಗೀತ ಮೊದಲಾದ ಹತ್ತಾರು ಮೂಲೆಯಿಂದ ಆಯ್ದು ಕಟ್ಟಿಕೊಂಡ ಒಂದು ಪ್ರಕಾರವೇ ಸಿನಿಮಾ ಸಂಗೀತ. ಇಲ್ಲಿ ಎಷ್ಟು ಬೇಕಾದರೂ ಜಿಗಿಯುವ, ಕುಗ್ಗುವ, ಒಗ್ಗೂಡುವ ಸಾಧ್ಯತೆಗಳು ತೆರೆದುಕೊಂಡಿವೆ. ಒಂದು ಚೌಕಟ್ಟಿನ ಒಳಗೆ ಬಂಧಿತವಾಗಿಲ್ಲ. ಆದ್ದರಿಂದಲೇ ಪ್ರಕೃತಿಯ, ಮಾನವ ನಿರ್ಮಿತ ಸದ್ದು, ಶಬ್ದಗಳೂ ಸಂಗೀತವಾಗಿ ಬಿಡಬಲ್ಲವು. ಇಲ್ಲಿರುವ ಮುಖ್ಯವಾದ ಬುನಾದಿಯೇ ಸಪ್ತಸ್ವರಗಳು.

ಈ ಹಿನ್ನೆಲೆಯಲ್ಲಿ ವಿಜಯಭಾಸ್ಕರ್ ಅವರ ಅನುಭವದ ಕೆಲವು ನುಡಿಗಳನ್ನು ಹೀಗೆ ಸಂಗ್ರಹಿಸಬಹುದಾಗಿದೆ : ''ಪ್ರತಿಯೊಂದು ರಾಗಕ್ಕೂ ಅದರದ್ದೇ ಆದ ಅಸ್ತಿತ್ವವಿದೆ. ಸಿನಿಮಾ ಸಂಗೀತವಾಗಲಿ, ಲಘು ಸಂಗೀತವಾಗಲಿ ಅಲ್ಲೆಲ್ಲ ರಾಗದ ಪಾತ್ರವೇ ಮುಖ್ಯ. ಸಿನಿಮಾ ಸಂಗೀತದಲ್ಲಿ ಶಾಸ್ತ್ರೀಯ ಸಂಗೀತದ ಅಂಶ ಶಾಸ್ತ್ರೀಯವಾಗಿಯೇ ಇರುವುದು ಬಹಳ ಕಡಿಮೆ. ಪ್ರಾರಂಭದಲ್ಲಿ ರಂಗಗೀತೆಯೇ ಚಿತ್ರಗೀತೆಗಳೂ ಆದವು. ಅಲ್ಲಿ ಶಾಸ್ತ್ರೀಯ ಅಂಶಗಳು ಇಲ್ಲವೆಂದಲ್ಲ, ರಂಗಭೂಮಿಯ ಸಲುವಾಗಿ ಶಾಸ್ತ್ರೀಯವಾದ್ದಕ್ಕೆ ಅತಿಯಾಗಿ ಅಂಟಿಕೊಳ್ಳದೆ ಕೊಂಚ ಬಾಗು-ಬಳುಕು ಬೆರೆಸಿರುವುದು ಕೇವಲ ಸಹಜ. ರಂಗಭೂಮಿಯಲ್ಲೂ ಪಾತ್ರದ, ಸನ್ನಿವೇಶದ ಭಾವವನ್ನು ಆಧರಿಸಿ ರಾಗವನ್ನು ಅಥವಾ ಧಾಟಿಯನ್ನು ಬಳಸಲಾಗುತ್ತದೆ. ದುಃಖಕ್ಕೆ ಗೊತ್ತಾದ ರಾಗ ಉಲ್ಲಾಸದಲ್ಲೂ ಬಳಕೆಯಾದ, ಹಾಗೆ ಆಗಿಯೂ ಯಶಸ್ವಿಯಾದ ಉದಾಹರಣೆಗಳೂ ಉಂಟು. ಚಲನಚಿತ್ರದಲ್ಲಿ ಇದು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಗಮನಿಸಬೇಕಾದ ಅಂಶ.

''...'ಎಡಕಲ್ಲು ಗುಡ್ಡದ ಮೇಲೆ' ಚಿತ್ರದ ''ವಿರಹಾ ನೂರು ನೂರು ತರಹಾ...'' ಗೀತೆಯಲ್ಲಿ ಭೀಮ್‌ಪಲಾಸ್ ರಾಗದ ಬಳಕೆ ಆಗಿದೆ. ಗೀತೆ ಏಕಪ್ರಕಾರವಾಗಿ ಸಾಗಿ ಬರುತ್ತದೆ. ಎಲ್ಲಿಯೂ ಕ್ಲಿಷ್ಟವೆನ್ನಿಸುವ ಸ್ವರ ವೈವಿಧ್ಯ ಕಾಣುವುದಿಲ್ಲ. ಏಕೆಂದರೆ ಇಲ್ಲಿ ಮುಖ್ಯವಾಗಿ ಬೇಕಾಗಿರುವುದು ಕಥೆಯ ಓಟಕ್ಕೆ ಅಗತ್ಯವಿರುವ ಭಾವ (ಮೂಡ್)ವನ್ನು ಸೃಷ್ಟಿಸುವ ಕೆಲಸ ಮಾತ್ರ. ಕ್ಲಿಷ್ಟವಾದ್ದನ್ನು ಬಳಸಿ ಶಾಸ್ತ್ರ ಪರಿಣತಿಯನ್ನು ಮೆರೆಯುವ ಅಗತ್ಯವಿಲ್ಲ ಮತ್ತು ಇದು ಸಂಗೀತ ಕಛೇರಿಯೂ ಅಲ್ಲ.

''...ಜನ ಸುಲಭವಾಗಿ ಮೆಲುಕು ಹಾಕುವಂಥ ರಾಗ ಸಾಹಿತ್ಯ ಇರಬೇಕು. ಆಗಲೇ ಜನಪ್ರಿಯತೆಗೆ ಕಾರಣವಾಗುತ್ತೆ. ಕೇಳುವವನ ಮನಸ್ಸಿನಲ್ಲೂ ಪಾತ್ರ ಅನುಭವಿಸುವ ಭಾವವೇ ಉತ್ಪತ್ತಿಯಾಗಬೇಕು. ಆ ತಲ್ಲೀನತೆಯ ಫಲವೇ ಸಾಮಾನ್ಯ ಪ್ರೇಕ್ಷಕನೂ ಆ ಗೀತೆಯನ್ನು ಗುನುಗುನಿಸುವಂತಾಗುವುದು. ಸುಲಭವಾಗಿ ಹಮ್ಮಿಂಗ್ಸ್/ಟ್ಯೂನಿಂಗ್ ಎಂಬುದೇ ಇಂಥ ಸಂಗೀತದ ಒಂದು ಮುಖ್ಯ ವಿಷಯ.

''...'ನಾಗರಹಾವು' ಚಿತ್ರಕ್ಕೆ ಗಿರಿಯಪ್ಪ ಎಂಬುವವರ ಬಳಿ ಇದ್ದ ಇಟಲಿಯಿಂದ ತರಿಸಿದ್ದ ವಾದ್ಯವೊಂದನ್ನು ಬಳಸಿಕೊಂಡಿದ್ದೆವು. ''ಬಾರೆ ಬಾರೆ ಚಂದದ ಚೆಲುವಿನ ತಾರೆ...'' ಗೀತೆಯ ಹಿನ್ನೆಲೆ ಸಂಗೀತ ಗಮನಿಸಿ. ಅದೊಂದು ವಿಶಿಷ್ಟ ರೀತಿಯ ಹಮ್ಮಿಂಗ್ ಸಿಗುತ್ತದೆ. ಆ ವಾದ್ಯದ ಮರು ಬಳಕೆ ಆಗಲಿಲ್ಲ. ನಾವಾಡುವ ಪ್ರತಿಯೊಂದು ಸಂಭಾಷಣೆಯಲ್ಲೂ ರಾಗ ಛಾಯೆ ಇರುತ್ತದೆ. ಆದ್ದರಿಂದಲೇ ಮಾತು ಗೊಂದಲ ವಿಲ್ಲದ ಭಾವಾರ್ಥವನ್ನು ಕೊಡುತ್ತದೆ. ಆದ್ದರಿಂದಲೇ ನಾವಾಡುವ ಮಾತೂ ಸಂಗೀತವಾಗುವುದು. ಚಿತ್ರಸಂಗೀತದ ಯಶಸ್ಸಿಗೆ ಆಯಾ ಗೀತೆಯ, ಮುಖ್ಯವಾಗಿ ಭಾಷೆಯ ಜ್ಞಾನ ಅತ್ಯಗತ್ಯ. ಚಿತ್ರದ ನಿರ್ದೇಶಕನಿಗೂ ಸಂಗೀತದ ತಿಳಿವಳಿಕೆ ಇದ್ದರೆ ಮತ್ತೂ ಒಳಿತು. ಆಗ ದೃಶ್ಯಗಳನ್ನು ಕಾವ್ಯಮಯವಾಗಿಸುವುದು ಸುಲಭ.

''೧೯೭೦ರ ಸುಮಾರಿಗೆ ಸಂಗೀತ ಪ್ರಧಾನ ವಿದೇಶಿ ಚಿತ್ರಗಳಾದ 'ಬೋನಿ ಎಮ್' (Boney-M), 'ಅಬ್ಬಾ' (Abba), 'ಸಾಟರ್ಡೆ ನೈಟ್ ಫೀವರ್' (Saturday Night Fever) ಮೊದಲಾದ ಜನಪ್ರಿಯ ಚಿತ್ರಗಳು ಬಂದವು. ಪಾಶ್ಚಾತ್ಯ ಮಾದರಿಯ ತಾಳ-ಲಯಬದ್ಧ (ರಿದಂ ಬೇಸ್ಡ್) ಗೀತೆಗಳತ್ತ ಒಲವು ಹೆಚ್ಚಿತು. ಇಂಥ ತಾಳವೇ ಪ್ರಧಾನವಾದ ಹಾಡುಗಳಿಗೆ ಒಂದು ಗೊತ್ತಾದ ರಾಗ ಇರಬೇಕೆಂದಿಲ್ಲ. ಅದು ಮುಖ್ಯವೂ ಅಲ್ಲ. ಧಕ್-ಧಕ್ ತಾಳಗಳೇ ಪ್ರಧಾನ. ಇತ್ತ ಜನರ ಒಲವು ಮುಖ್ಯವಾಗಿ ಯುವ ಜನಾಂಗದ ಆಸಕ್ತಿ ಹರಿದ ಕಾರಣ ನಮ್ಮ ಚಿತ್ರಗಳಲ್ಲೂ ಅಂಥ ರಾಗ ಸಂಯೋಜನೆ ಹೆಚ್ಚಾಯಿತು. ಕ್ರಮೇಣ ಇವೂ ಕೂಡ ಆಕರ್ಷಣೆ ಕಳೆದುಕೊಂಡು ಮಾಧುರ್ಯಕ್ಕೇ ಹಿಂತಿರುಗಿದೆವು. ಇಂಥ ಹೊತ್ತಿನಲ್ಲೇ ಪದ್ಯಕ್ಕೆ ಗದ್ಯ ಸಾಹಿತ್ಯವನ್ನು ಬೆಸೆಯುವ ಪ್ರಯೋಗ ಮಾಡಿ ಯಶಸ್ವಿಯಾದರು ಹಂಸಲೇಖ.

''ಹತ್ತಾರು ವಾದ್ಯಗಳ ಜೊತೆಯಲ್ಲಿ ರಾಗ ಸಂಯೋಜನೆ ಆಗುತ್ತಿತ್ತು. ಈಗ 'ಕೀ ಬೋರ್ಡ್' ಎಂಬ ಉಪಕರಣ ಬಂದಿತು. ಎಲ್ಲ ವಾದ್ಯಗಳನ್ನು ತುಂಬ ಹತ್ತಿರದಿಂದ ಸೇರಿಸಿ, ಒಂದೇ ಬೋರ್ಡ್‌ನಲ್ಲಿ ಧ್ವನಿ ಮುದ್ರಿಸಲು ಸಾಧ್ಯವಾಯಿತು. ಈಗ ಅತಿ ಹೆಚ್ಚು ವಾದ್ಯಗಳ ಬಳಕೆ ಹೆಚ್ಚು ಶ್ರಮವಿಲ್ಲದೆ ಸಾಧ್ಯವಾಗುತ್ತಿದೆ.

''ಸಾಮಾನ್ಯವಾಗಿ ಗೀತರಚನೆಕಾರ, ನಿರ್ದೇಶಕ, ಸಂಗೀತ ನಿರ್ದೇಶಕರ ಜೊತೆಯಲ್ಲಿ ಚರ್ಚಿಸಿ ಬೇಕಾದುದನ್ನು ಪಡೆಯುವ ಪರಿಪಾಠವಿತ್ತು. ಈಗ ಟ್ರ್ಯಾಕ್‌ಗಳು ಸಿದ್ಧವಾಗಿರುತ್ತವೆ, ಅದಕ್ಕೆ ಸಾಹಿತ್ಯ, ಗಾಯನಗಳನ್ನು ಸೇರಿಸಲಾಗುತ್ತದೆ. ಅನೇಕ ಬಾರಿ ಟ್ರ್ಯಾಕ್‌ಗೆ ಬರೀ ಆಲಾಪ ಮಾಡಿಸಿಟ್ಟುಕೊಂಡು, ಅನಂತರ ಸಾಹಿತ್ಯ ತುಂಬುವುದೂ ಇದೆ. ಹಿಂದೆ ಸನ್ನಿವೇಶಕ್ಕೆ ಅನುಗುಣವಾಗಿ ಇರುತ್ತಿತ್ತು. ಉದಾಹರಣೆಗೆ ''ಅ ಆ ಇ ಈ ಕನ್ನಡದಾ ಅಕ್ಷರ ಮಾಲೆ...'', ''ಏಳು ಸ್ವರವು ಸೇರಿ ಸಂಗೀತವಾಯಿತು...'', ''ಗುಟ್ಟೊಂದ ಹೇಳುವೆ ಪುಟಾಣಿ ಮಕ್ಕಳೆ...'', ''ಮಕ್ಕಳ ಮನವು ಪಾವನವಾದ ಗುಡಿಯಂತಿರಬೇಕು...'', ''ಆಗದು ಎಂದು ಕೈಲಾಗದು ಎಂದು...'', ''ಗುಡಿಯಲಿರುವ ಶಿಲೆಗಳೆಲ್ಲ ದೇವರಂತೆ...'', ''ಯುಗ ಯುಗಾದಿ ಕಳೆದರೂ ಯುಗಾದಿ ಮರಳಿ ಬರುತಿದೆ...'', ''ನಾಡಿನಂದ ಈ ದೀಪಾವಳಿ...'', ''ಮೈಸೂರು ದಸರಾ ಎಷ್ಟೊಂದು ಸುಂದರಾ...'', ''ಈ ಚಂದದ ಮನೆಯಲ್ಲಿ ಶ್ರೀಗಂಧದ...'', ''ಚಂದ್ರಮುಖಿ ಪ್ರಾಣಸಖಿ ಚತುರೆಯೆ ನೀ...'', ''ಸೋಬಾನ ಸೋಬಾನ ಸೋಬಾನವೇ...'', ''ಹಾವಿನ ದ್ವೇಷ ಹನ್ನೆರಡು ವರುಷ...'', ''ನಮ್ಮೂರೆ ಚಂದ ನಮ್ಮವರೇ ಅಂದಾ...'', ''ಕನ್ನಡವೇ ತಾಯ್ನುಡಿಯು ಕರುನಾಡು ತಾಯ್ನಾಡು...'', ''ಕನ್ನಡದ ಕುಲದೇವಿ ಕಾಪಾಡು ಬಾ ತಾಯಿ...'', ''ಕನಸೊಂದ ಕಂಡೆ ಕನ್ನಡ ಮಾತೆ''. ಕನ್ನಡ ನಾಡಿನ ಐತಿಹಾಸಿಕ ಸ್ಥಳಗಳು, ಪುಣ್ಯಕ್ಷೇತ್ರಗಳನ್ನು ಕುರಿತು ಚಿತ್ರಗೀತೆಗಳು ಬಂದಿವೆ : ''ಕನ್ನಡ ನಾಡಿನ ಕರಾವಳಿ...'', ''ನಾ ನೋಡಿ ನಲಿಯುವ ಕಾರವಾರಾ...'', ''ಜೇನಿನ ಹೊಳೆಯೊ ಹಾಲಿನ ಮಳೆಯೋ...''. ದಾಸ ಸಾಹಿತ್ಯವನ್ನು ಬಳಸಿಕೊಂಡ ಗೀತೆಗಳಿವೆ :

''ನಿನ್ನನಾಶ್ರಯಿಸುವೆ ನಿಗಮಗೋಚರ ಸತ್ಯ...'', ''ಬಾಗಿಲನು ತೆರೆದು ಸೇವೆಯನು ಕೊಡೊ ಹರಿಯೆ...'', ''ಸತ್ಯವೆಂಬುದೆ ಸ್ನಾನ ಉಪವಾಸ ಜಪನೇಮ...'', ''ಭಾಗ್ಯದಾ ಲಕ್ಷ್ಮೀ ಬಾರಮ್ಮಾ...'', ''ಈ ಪರಿಯ ಸೊಬಗು ಇನ್ನಾವ ದೇವರಲಿ ಕಾಣೆ...'', ''ಗುಮ್ಮನ ಕರೆಯದಿರೆ...'', ''ಕಂಡು ಕಂಡು ನೀ ಎನ್ನ...'', ''ಆಚಾರವಿಲ್ಲದ ನಾಲಿಗೆ...'', ''ಧರ್ಮವೆ ಜಯವೆಂಬ ದಿವ್ಯಮಂತ್ರ...''. ಹೀಗೆ ಸಾಲುಸಾಲಾಗಿ ಪಟ್ಟಿ ಮಾಡಬಹುದು. ಆದರೆ ಇವುಗಳ ಮಧ್ಯೆ ದ್ವಂದ್ವಾರ್ಥ, ಪ್ರಾಸದ ನಾಜೂಕು ಮಾತ್ರ ತುಂಬಿದ್ದ ಗೀತೆಗಳು ಪ್ರವೇಶ ಮಾಡಿದ್ದವು. ಅಲ್ಲೊಂದು ಇಲ್ಲೊಂದು ಇದ್ದ ಕಾಲ ಹೋಗಿ ಈಗ ಎಲ್ಲವೂ ಅವೇ ಆದದ್ದು ವಿಷಾದದ ಸಂಗತಿ''.

ಚಲನಚಿತ್ರ ಸಂಗೀತ ನಿರ್ದೇಶನ ಕ್ಷೇತ್ರಕ್ಕೆ ಮಹಿಳೆಯರ ಕೊಡುಗೆ ಏನೆಂದು ಹುಡುಕಿ ಹೊರಟಾಗ, ಪ್ರಾರಂಭದ ದಿನಗಳಲ್ಲೇ 'ಬಿಂದು ಬಿ.ಎ.' ಚಿತ್ರಕ್ಕೆ ಮುಸ್ಲಿಂ ಮಹಿಳೆಯೊಬ್ಬರು ಸಂಗೀತ ನೀಡಿದ್ದರೆಂದು ಆ ಚಿತ್ರದ ನಿರ್ದೇಶಕರಲ್ಲೊಬ್ಬರಾದ ದೊರೆಸ್ವಾಮಿ ಹೇಳುತ್ತಾರೆ. 'ಮಹಾತ್ಮಾ ಕಬೀರ್' (೧೯೬೨) ಚಿತ್ರಕ್ಕೆ ಅನುಸೂಯಾದೇವಿ ಸಂಗೀತ ನೀಡಿದ್ದಾರೆ. ಶ್ಯಾಮಲಾ ಜಿ.ಭಾವೆ, ಇಂದು ವಿಶ್ವನಾಥ್, ಜಯಶ್ರೀ ಅರವಿಂದ್, ಬಿ.ವಸಂತ ಮೊದಲಾದ ಕೆಲವೇ ಮಂದಿ ಮಹಿಳೆಯರು ಚಲನಚಿತ್ರಗಳಿಗೆ ಸಂಗೀತ ನಿರ್ದೇಶಕಿಯರಾಗಿ ಶ್ರಮಿಸಿದ್ದಾರೆ.

ನಮ್ಮ ಸಂಗೀತ ನಿರ್ದೇಶಕರಲ್ಲಿ ಹಲವರು ಉಪಭಾಷೆಗಳಾದ ತುಳು, ಕೊಡವ, ಕೊಂಕಣಿ ಚಿತ್ರಗಳಿಗೆ ಸಂಗೀತ ನೀಡಿದ್ದಾರೆ. ವಿಜಯಭಾಸ್ಕರ್, ರಾಜನ್-ನಾಗೇಂದ್ರ, ಸರೋಜಿನಿ, ಪ್ರಭಾಕರ್ ಬದ್ರಿ, ಅಶೋಕ್-ಚರಣ್ ಮತ್ತು ಸಾಧು ಈ ಪೈಕಿ ಮುಖ್ಯರು.

ಬದಲಾಗುತ್ತಿರುವ ಅಭಿರುಚಿ

ಚಲನಚಿತ್ರಗಳಲ್ಲಿ ಸಂಗೀತದಷ್ಟೇ ಮುಖ್ಯ ನೃತ್ಯ. ಸಿನಿಮಾ ಮಾಧ್ಯಮದ ಪ್ರಾರಂಭದಿಂದಲೂ ಒಂದಲ್ಲ ಒಂದು ರೂಪದಲ್ಲಿ ನೃತ್ಯ ಬಳಕೆಯಲ್ಲಿದೆ. ಆದರೆ ಅದರ ಸ್ವರೂಪ ಮಾತ್ರ ಅಂದಿಗೂ ಇಂದಿಗೂ ಬಹಳ ವಿಭಿನ್ನ. ಇತರ ಕಲಾಪ್ರಕಾರಗಳಂತೆಯೇ ನೃತ್ಯದಲ್ಲೂ ಸಾಕಷ್ಟು ಸುಧಾರಣೆಯಾಗಿದೆ. ಭಾರತೀಯ ಚಿತ್ರಗಳಲ್ಲಿ ಪ್ರಾರಂಭಕ್ಕೆ ಶಾಸ್ತ್ರೀಯ ನೃತ್ಯ ಬಳಕೆಯಾಗುತ್ತಿತ್ತು. ಕ್ರಮೇಣ ಚಿತ್ರ ಸಂಗೀತದಂತೆಯೇ ನೃತ್ಯದಲ್ಲೂ ಹೊಸ ಹೊಸ ಪ್ರಯೋಗಗಳು ಆಗಿವೆ. ಜತೆಗೆ ವಿವಿಧ ನೃತ್ಯ ಪ್ರಕಾರಗಳು, ರಾಕ್ ಅಂಡ್ ರೋಲ್, ಟ್ವಿಸ್ಟ್, ಷೇಕ್, ಕ್ಯಾಬರೆ ಮುಂತಾದ ಪಾಶ್ಚಾತ್ಯ ನೃತ್ಯಗಳ ಕಲಬೆರಕೆಯೂ ಆಗಿದೆ.

ಸಂಗೀತದಂತೆಯೇ ನೃತ್ಯವು ಮಾನವ ನಾಗರಿಕತೆಯೊಂದಿಗೇ ಬೆಳೆದು ಬಂದಿದೆ. ವಿಶ್ವದ ಎಲ್ಲ ನೃತ್ಯ ಪ್ರಕಾರಗಳಿಗೂ ಜಾನಪದವೇ ಮೂಲ. ಅನಂತರ ಅದಕ್ಕೆ ಶಾಸ್ತ್ರೀಯ ಚೌಕಟ್ಟು. ಭಾರತದ ಸಂದರ್ಭದಲ್ಲಿ ಹೇಳುವುದಾದರೆ ಭರತ ಮುನಿಯ ನಾಟ್ಯ ಶಾಸ್ತ್ರವೇ ನಮ್ಮ ಶಾಸ್ತ್ರೀಯ ನೃತ್ಯಕ್ಕೆ ಆಧಾರ. ಮೊದಲಿಗೆ 'ಸದಿರ್' ಎಂದು ಕರೆಯಲಾಗುತ್ತಿದ್ದ ನೃತ್ಯಕ್ಕೆ ಇಂದಿನ ಸ್ವರೂಪ ನೀಡಿದವರಲ್ಲಿ ಅಗ್ರಗಣ್ಯರು ಶ್ರೀಮತಿ ರುಕ್ಮಿಣಿದೇವಿ ಅರುಂಡೇಲ್. ಹಿಂದೆ ಇದು ದೇವದಾಸಿಯರಿಗೇ ಮುಡಿಪಾದ ಕಲೆ, ಮಾನವಂತ ಸದ್ಗೃಹಿಣಿಯರಿಗಲ್ಲ ಎಂಬ ಆರೋಪವಿತ್ತು. ಅದನ್ನು ತೊಡೆದುಹಾಕಿ ಸದ್ಗೃಹಿಣಿಯರೂ ನೃತ್ಯ ಕಲಿಯುವಂತೆ ಮಾಡಿದ ಕೀರ್ತಿ ರುಕ್ಮಿಣಿದೇವಿಯವರಿಗೆ ಸಲ್ಲುತ್ತದೆ.

ಉತ್ತರಭಾರತದಲ್ಲಿ ಕಥಕ್, ಮಣಿಪುರಿ, ಇತ್ಯಾದಿ ನೃತ್ಯ ಪ್ರಕಾರಗಳೂ ದಕ್ಷಿಣದಲ್ಲಿ ಭರತನಾಟ್ಯ, ಕೂಚಿಪುಡಿ, ಮೋಹಿನಿ ಆಟ್ಟಂ, ಕಥಕ್ಕಳಿ ಮುಂತಾದ ನೃತ್ಯ ಪ್ರಕಾರಗಳೂ ಬಳಕೆಯಲ್ಲಿವೆ. ಕರ್ನಾಟಕದ ಯಕ್ಷಗಾನ ನೃತ್ಯ ಕಥಕ್ಕಳಿಗಿಂತ ಹಿಂದಿನದು ಎಂಬ ಮಾತಿದೆ. ಏನೇ ಇರಲಿ, ಈ ಎಲ್ಲ ನೃತ್ಯ ಪ್ರಕಾರಗಳೂ ಒಂದಲ್ಲ ಒಂದು ರೀತಿಯಲ್ಲಿ ನಮ್ಮ ಚಿತ್ರಗಳಲ್ಲಿ ಉಪಯೋಗಿಸಲ್ಪಡುತ್ತಿವೆ. ಶಾಸ್ತ್ರೀಯ ನೃತ್ಯ ಪ್ರಧಾನ ಚಿತ್ರಗಳು ಭಾರತದಲ್ಲಿ ತಯಾರಾಗುತ್ತಿವೆ. ನೆರೆಯ ತಮಿಳು, ತೆಲುಗು ಚಿತ್ರಗಳಿಗೆ ಹೋಲಿಸಿದರೆ ಕನ್ನಡದಲ್ಲಿ ನೃತ್ಯ ಪ್ರಧಾನ ಚಿತ್ರಗಳು ಕೇವಲ ಒಂದೆರಡು ಇರಬಹುದು.

ನಲವತ್ತರ ದಶಕದಲ್ಲಿ ನೃತ್ಯ ನಿರ್ದೇಶಕ ಸೋಹನ್‌ಲಾಲ್ ತಾವೇ ಕಥೆ ಬರೆದು ನೃತ್ಯ ನಿರ್ದೇಶನ ಮಾಡಿ ತಯಾರಿಸಿದ 'ಕಲಾವಿದ' ಮತ್ತು ೧೯೬೦ರ ದಶಕದ ಪ್ರಾರಂಭದಲ್ಲಿ ತಯಾರಾದ 'ಕಲಾವತಿ' ೧೯೯೦ರ ದಶಕದಲ್ಲಿ ತಯಾರಾದ ''ಆನಂದ ಭೈರವಿ'' ಚಿತ್ರಗಳನ್ನು ಬಿಟ್ಟರೆ ನೃತ್ಯ ಪ್ರಧಾನ ಚಿತ್ರಗಳು ಯಾವುವೂ ಕಂಡುಬರುವುದಿಲ್ಲ. ಆದರೆ ನಮ್ಮ ಹಿಂದಿನ ಪೌರಾಣಿಕ, ಜಾನಪದ, ಐತಿಹಾಸಿಕ ಚಿತ್ರಗಳಲ್ಲಿ ಶಾಸ್ತ್ರೀಯ ನೃತ್ಯವನ್ನು ಚೆನ್ನಾಗಿಯೇ ಬಳಸಿಕೊಳ್ಳಲಾಗಿದೆ.

ಕನ್ನಡ ಚಿತ್ರಗಳಲ್ಲಿ ನೃತ್ಯದ ಬಗೆಗೆ ಸಿಂಹಾವಲೋಕನ ಮಾಡಿದಾಗ ಕಂಡುಬರುವ ಕೆಲವು ಅಂಶಗಳನ್ನು ಇಲ್ಲಿ ಚರ್ಚಿಸುವುದು ಪ್ರಸ್ತುತವೆನ್ನಿಸುತ್ತದೆ.

(ಚಿತ್ರ ೧) ಆರಂಭ ದಿನಗಳಲ್ಲಿ ಶಾಸ್ತ್ರೀಯ ನೃತ್ಯಕ್ಕೆ ಆದ್ಯತೆ
ಕುಮಾರಿ ಕಮಲಾ

ಆರಂಭದ ಹಂತದಲ್ಲಿ ಚಲನಚಿತ್ರಗಳಲ್ಲಿ ನಟನಟಿಯರಿಗೆ ಅಭಿನಯದ ಜತೆಗೆ ಹಾಡುಗಾರಿಕೆ ಹಾಗೂ ಕೆಲವೊಮ್ಮೆ ನೃತ್ಯದ ಪರಿಶ್ರಮ ಕೂಡ ಇರಬೇಕಾಗಿತ್ತು. ಹಾಗೆ ನೋಡಿದರೆ ಪ್ರಾರಂಭದ ಚಿತ್ರಗಳಲ್ಲಿ ನೃತ್ಯಕ್ಕೆ ಅಷ್ಟು ಪ್ರಾಮುಖ್ಯತೆ ಇರಲಿಲ್ಲ. ಇದಕ್ಕೆ ಮುಖ್ಯಕಾರಣ ಆ ಕಾಲದ ನಟನಟಿಯರು ವೃತ್ತಿ ರಂಗಭೂಮಿಯಿಂದ ಬಂದವರು. ರಂಗಭೂಮಿಯಲ್ಲಿ ಸಂಗೀತಕ್ಕಿದ್ದಷ್ಟು ಪ್ರಾಮುಖ್ಯ ನೃತ್ಯಕ್ಕಿರಲಿಲ್ಲ. ನಾಯಕಿಯೋ ಅವಳ ಸಂಗಾತಿಗಳೋ ನೃತ್ಯ ಮಾಡುವುದೆಂದರೆ ಹಿನ್ನೆಲೆ ಸಂಗೀತಕ್ಕೆ ಲಯಬದ್ಧವಾಗಿ ಹೆಜ್ಜೆ ಹಾಕುತ್ತ, ಸೊಂಟ ಬಳುಕಿಸುತ್ತಾ ಕತ್ತಿಗೆ ಅಲ್ಲಾಡಿಸುತ್ತಾ ಸಾಗುವುದಷ್ಟೇ ಆಗಿತ್ತು. ಕ್ರಮೇಣ ಚಿತ್ರಗಳಲ್ಲಿ ಶಾಸ್ತ್ರೀಯ ನೃತ್ಯದ ಸಮಯೋಚಿತ ಬಳಕೆ ಪ್ರಾರಂಭವಾಯಿತು.

ದಕ್ಷಿಣದ ಇತರ ಭಾಷಾ ಚಿತ್ರಗಳಲ್ಲಿ ನೃತ್ಯ ಹೆಚ್ಚು ಬಳಕೆಯಲ್ಲಿತ್ತು. ಸುಪ್ರಸಿದ್ಧ ನೃತ್ಯಗಾತಿಯರು ಚಿತ್ರಗಳಲ್ಲಿ ನರ್ತಿಸುತ್ತಿದ್ದರು. ಹೀಗಾಗಿ ಇತರ ಭಾಷಾ ಚಿತ್ರಗಳೊಂದಿಗೆ ಪೈಪೋಟಿಗೆ ನಿಲ್ಲಬೇಕಾಗಿ ಬಂದಾಗ ನೃತ್ಯದ ಆಕರ್ಷಣೆ ಅಗತ್ಯವೆಂದು ಕಂಡುಬಂತು. ಇಂಥ ಹಲವಾರು ಕಾರಣಗಳಿಂದಾಗಿ ನೃತ್ಯ ಆಯಾ ಕಾಲಮಾನಕ್ಕೆ, ಅಗತ್ಯಕ್ಕೆ ಅನುಗುಣವಾಗಿ ಬಳಕೆಯಾಯಿತು. ಕ್ರಮೇಣ ಸಿನಿಮಾ ನೃತ್ಯ ಒಂದು ಪ್ರಕಾರವಾಗಿ ಬೆಳೆದು ಬಂದಿತು.

ನಲವತ್ತರ ದಶಕದ ಪ್ರಾರಂಭದಲ್ಲಿ ಬಂದ 'ಜೀವನ ನಾಟಕ', 'ರಾಧಾರಮಣ' (ನೃತ್ಯ:ಶ್ರೀನಿವಾಸ ಕುಲಕರ್ಣಿ), 'ವಾಣಿ' (ನೃತ್ಯ:ಕೆ.ಮಹಾದೇವನ್, ಧನಭಾಗ್ಯ), 'ಚಂದ್ರಹಾಸ' (ಲಕ್ಷ್ಮೀನಾರಾಯಣ ಭಟ್), 'ಮಹಾತ್ಮಾ ಕಬೀರ್' (ಗೋಪಿನಾಥ್) ಹಾಗೂ 'ಭಕ್ತ ಕುಂಬಾರ' (ದಂಡಾಯುಧಪಾಣಿ ಪಿಳ್ಳೆ) ಚಿತ್ರಗಳಲ್ಲಿ ನೃತ್ಯವನ್ನು ಸಂದರ್ಭೋಚಿತವಾಗಿ ಬಳಸಿಕೊಳ್ಳಲಾಗಿದೆ. ಮೊದ ಮೊದಲಿಗೆ ಕನ್ನಡ ಚಿತ್ರಗಳಲ್ಲಿ ನರ್ತಿಸಿದವರು ಬೇಬಿ ಕಮಲ ('ಭೂಕೈಲಾಸ'), ತಿರುವಾಂಕೂರು ಸೋದರಿಯರೆಂದು ಹೆಸರಾದ ಲಲಿತ-ಪದ್ಮಿನಿ (ಚಿತ್ರ: 'ಭಾರತಿ'), ರಾಜಸುಲೋಚನ ಮುಂತಾದವರು. ಇವರೆಲ್ಲ ಪರಭಾಷೆಯವರೇ. ಆ ದಿನಗಳಲ್ಲಿ ಕನ್ನಡ ಚಿತ್ರಗಳ ತಯಾರಿಕೆ ಸಂಪೂರ್ಣವಾಗಿ ಮದರಾಸನ್ನೇ ಅವಲಂಬಿಸಿದ್ದರಿಂದ ಅದು ಅನಿವಾರ್ಯವೂ ಆಗಿತ್ತು. ಜತೆಗೆ ನೃತ್ಯ ನಿರ್ದೇಶಕರೂ ಬಹುತೇಕ ಅಲ್ಲಿಯವರೇ ಆಗಿದ್ದರು. ಮೈಸೂರಿನಲ್ಲಿ ನವಜ್ಯೋತಿ ಸ್ಟುಡಿಯೋ ಪ್ರಾರಂಭವಾಗಿ ಮಹಾತ್ಮ ಪಿಕ್ಚರ್ಸ್ ಅವರ ಚಿತ್ರಗಳು ಅಲ್ಲಿಯೇ ತಯಾರಾಗಲಾರಂಭಿಸಿದಾಗ ಮೈಸೂರಿಗೆ ಬಂದ ನೃತ್ಯ ನಿರ್ದೇಶಕ ಸೋಹನ್‌ಲಾಲ್ ಸುಮಾರು ಸಮಯ ಅಲ್ಲಿಯೇ ನೆಲೆಸಿ ಮಹಾತ್ಮ ಸಂಸ್ಥೆಯ ಹಲವಾರು ಚಿತ್ರಗಳಿಗೆ ನೃತ್ಯ ನಿರ್ದೇಶನ ಮಾಡಿದುದಲ್ಲದೆ ಸ್ವತಃ ಅವರೇ ನೃತ್ಯ ಪ್ರಧಾನ 'ಕಲಾವಿದ' ಚಿತ್ರವನ್ನು ತಯಾರಿಸಿದರು. ಆ ದಿನಗಳಲ್ಲಿ ನೃತ್ಯ ನಿರ್ದೇಶನದ ಮಾಟದ ಅಚ್ಚ ಕನ್ನಡಿಗರೆಂದರ ಎಂ.ಸಿ.ವೀರ್ (ಚನ್ನವೀರಪ್ಪ)., ಶ್ರೀನಿವಾಸ್ ಕುಲಕರ್ಣಿ ಮುಂತಾದವರು.

ಮುಂದೆ ಈ ಕ್ಷೇತ್ರವನ್ನು ಪ್ರವೇಶಿಸಿ ದೀರ್ಘಕಾಲ ಕನ್ನಡ ಚಿತ್ರರಂಗದ ಅತ್ಯಂತ ಜನಪ್ರಿಯ ನೃತ್ಯ ನಿರ್ದೇಶಕರಾದವರು ಉಡುಪಿ ಜಯರಾಂ. ಅವರೊಂದಿಗೆ ಸಹಾಯಕರಾಗಿ ಕೆಲಸ ಮಾಡಿದ ಉಡುಪಿ ಲಕ್ಷ್ಮೀನಾರಾಯಣ್ ಹಲವು ಚಿತ್ರಗಳಿಗೆ ನೃತ್ಯ ನಿರ್ದೇಶಕರಾಗಿ ಕೆಲಸ ಮಾಡಿದರು. ಇವರು ಮೂಲತಃ ಭರತ ನಾಟ್ಯ ಕಲಾವಿದ ಹಾಗೂ ನಾಟ್ಯಾಚಾರ್ಯರು.

ಮೂಗೂರು ಸುಂದರ್ ಅವರು ಕ್ರಮೇಣ ತಮಿಳು ಚಿತ್ರರಂಗದಲ್ಲಿ ಪ್ರಖ್ಯಾತರಾದರು. ಅವರ ಪುತ್ರ ಪ್ರಭುದೇವ ಕೂಡ ಈ ಕ್ಷೇತ್ರದಲ್ಲಿ ಪ್ರಸಿದ್ಧರಾಗಿದ್ದಾರೆ. ಪ್ರಾರಂಭದ ದಿನಗಳಿಂದ ಕನ್ನಡ ಚಿತ್ರಗಳಿಗೆ ಕೆಲಸ ಮಾಡಿದ ಪರಭಾಷಾ ನೃತ್ಯ ನಿರ್ದೇಶಕರಲ್ಲಿ ಪ್ರಮುಖರು ಹೀರಾಲಾಲ್, ಎ.ಕೆ.ಛೋಪ್ರ, ಚಿನ್ನಿ-ಸಂಪತ್, ವೆಂಪಟಿ ಸತ್ಯಂ ಮತ್ತು ಸ್ವತಃ ಒಂದೆರಡು ಕನ್ನಡ ಚಿತ್ರಗಳನ್ನು ತಯಾರಿಸಿದ ಪಿ.ಎಸ್. ಗೋಪಾಲಕೃಷ್ಣ ಮುಂತಾದವರು. ಕನ್ನಡಿಗ ಕೃಷ್ಣಕುಮಾರ್ (ಧಾರವಾಡ) ಕೆಲವು ತಮಿಳು, ಹಿಂದೀ ಚಿತ್ರಗಳಿಗೂ ನೃತ್ಯ ನಿರ್ದೇಶನ ಮಾಡಿದರು. 'ರಣಧೀರ ಕಂಠೀರವ', 'ಹರಿಭಕ್ತ', 'ಕೃಷ್ಣದೇವರಾಯ', ಮುಂತಾದ ಚಿತ್ರಗಳಲ್ಲಿ ಪಿ.ಎಸ್. ಗೋಪಾಲಕೃಷ್ಣ ಅವರು ಶಾಸ್ತ್ರೀಯ ನೃತ್ಯಕ್ಕೆ ಹೆಚ್ಚು ಮಹತ್ವ ಕೊಟ್ಟಿರುವುದು ಕಂಡುಬರುತ್ತದೆ.

(ಚಿತ್ರ ೨) ಜಾನಪದ, ಐತಿಹಾಸಿಕ, ಪೌರಾಣಿಕ ಚಿತ್ರಗಳಲ್ಲೂ ಇಣುಕಿದ ಶಾಸ್ತ್ರೀಯ ನೃತ್ಯ - ಬಿ.ಸರೋಜಾದೇವಿ

ಮೂಲತಃ ಕಥಕ್ ನೃತ್ಯ ಕಲಾವಿದರಾಗಿದ್ದ ಸೋಹನ್‌ಲಾಲ್ ಅವರೇ 'ಕೃಷ್ಣ ಲೀಲಾ' 'ನಾಗಕನ್ನಿಕಾ', ಜಗನ್ಮೋಹಿನಿ', 'ದಲ್ಲಾಳಿ', 'ಮುಟ್ಟಿದ್ದೆಲ್ಲ ಚಿನ್ನ', 'ಗಂಧರ್ವ ಕನ್ಯೆ' ಚಿತ್ರಗಳಲ್ಲಿ ಸಾಂಪ್ರದಾಯಿಕ ನೃತ್ಯವನ್ನು ಅಳವಡಿಸಿದ್ದಾರೆ. ಪ್ರಾರಂಭಿಕ ಹಂತವಾಗಿದ್ದುದರಿಂದ ಈ ಚಿತ್ರಗಳಲ್ಲಿನ ನೃತ್ಯದಲ್ಲಿ ಹೇಳಿಕೊಳ್ಳುವಂಥ ವೈವಿಧ್ಯಗಳೇನೂ ಕಂಡುಬರುವುದಿಲ್ಲ.

ಎ.ಕೆ.ಛೋಪ್ರಾ-ರತ್ನಕುಮಾರ್ ಜೋಡಿಯು ನೃತ್ಯ ನಿರ್ದೇಶನವಿದ್ದ 'ರತ್ನ ಮಂಜರಿ', 'ವೀರಸಂಕಲ್ಪ' ಮೊದಲಾದ ಚಿತ್ರಗಳಲ್ಲಿ ಜಾನಪದ ಧಾಟಿಯ ಹಾಡುಗಳಿಗೆ ತೀವ್ರಗತಿಯ ನೃತ್ಯ ಸಂಯೋಜಿಸಿದ್ದರು. 'ಗಿಲ್ ಗಿಲ್ ಗಿಲಕ್ಕೊ...'(ರತ್ನ ಮಂಜರಿ) ಮತ್ತು 'ಸಿಟ್ಯಾಕೋ ಸಿಡುಕ್ಯಾಕೋ ನನ ಜಾಣ...'(ವೀರಸಂಕಲ್ಪ) ನೃತ್ಯಗಳು ಬಹಳ ಜನಪ್ರಿಯವಾಗಿದ್ದವು. ಇದೇ ಜೋಡಿ 'ಕಲಾವತಿ' ಚಿತ್ರದಲ್ಲಿ 'ಗಾನ ನಾಟ್ಯ ರಸಧಾರೆ...' ಹಾಗೂ 'ಒಡನಾಡಿ ಬೇಕೆಂದು...' ಗೀತೆಗಳಿಗೆ ಶಾಸ್ತ್ರೀಯ ನೃತ್ಯವನ್ನು ಸೊಗಸಾಗಿ ಅಳವಡಿಸಿದ್ದರು.

ಸ್ವತಃ ನೃತ್ಯಪಟುವಾಗಿದ್ದ ಎಂ.ಸಿ.ವೀರ್ 'ಭಕ್ತ ರಾಮದಾಸ್', 'ಭಾರತಿ', 'ಮಹಾನಂದ' ಹಾಗೂ 'ಭಕ್ತ ಕುಂಬಾರ' ಚಿತ್ರಗಳಲ್ಲಿ ಶಾಸ್ತ್ರೀಯ ನೃತ್ಯದ ಜತೆಗೆ ಗ್ರಾಮೀಣ ಸೊಡಗಿನ ನೃತ್ಯವನ್ನೂ ಸಂಯೋಜಿಸಿದ್ದರು.

'ವಿಜಯನಗರದ ವೀರಪುತ್ರ'ದ 'ಮಾತಿನಮಲ್ಲ ತೋರುತ ಹಲ್ಲ...' ಗ್ರಾಮೀಣ ಶೈಲಿಯ ಹಾಡು, 'ಅಮರ ಶಿಲ್ಪಿ ಜಕಣಾಚಾರಿ'ಯ 'ನಿಲ್ಲು ನೀ ನಿಲ್ಲು ನೀ...' ಹಾಗೂ 'ಚೆಲುವಾಂತ ಚನ್ನಿಗನೆ...' ಅಂತಹ ಶೃಂಗಾರಮಯ ಹಾಡುಗಳಿಗೆ ನೃತ್ಯ ಸಂಯೋಜನೆ ಮಾಡಿದ ಹೀರಾಲಾಲ್ 'ನಳ ದಮಯಂತಿ' ಚಿತ್ರದಲ್ಲಿ ಚಿನ್ನಿಲಾಲ್ ಹಾಗೂ ಸಂಪತ್ ಅವರೊಡಗೂಡಿ ನೃತ್ಯ ಸಂಯೋಜನೆ ಮಾಡಿದ್ದಾರೆ.

ಚಿನ್ನಿ-ಸಂಪತ್ತು ಜೋಡಿ ಸಾಕಷ್ಟು ಹೆಸರು ಮಾಡಿದ ನೃತ್ಯ ನಿರ್ದೇಶಕರ ಜೋಡಿ. ಈ ಜೋಡಿ ನಿರ್ದೇಶಿಸಿದ 'ವೀರಕೇಸರಿ', 'ಅಮರ ಜೀವಿ', 'ಬಾಲ ನಾಗಮ್ಮ', 'ಸಿಪಾಯಿ ರಾಮು', 'ಸ್ನೇಹಸೇತು' ಹಾಗೂ 'ಒಂದೇ ರೂಪ ಎರಡು ಗುಣ' ಮೊದಲಾದ ಚಿತ್ರಗಳಲ್ಲಿನ ನೃತ್ಯ ಸಂಯೋಜನೆ ಅವರ ಪ್ರತಿಭೆಗೆ ಹಿಡಿದ ಕನ್ನಡಿಯಾಗಿದೆ. 'ಸಿಪಾಯಿ ರಾಮು' ಚಿತ್ರದ 'ಪಹಾರೆ ಮೇರ ಮುರುಗ...', 'ಒಂದೇ ರೂಪ ಎರಡು ಗುಣ' ಚಿತ್ರದ 'ಓ ಉಡಾಳ ಸರಾಳ...' ನೃತ್ಯ ಸಂಯೋಜನೆಯಲ್ಲಿ ಮೊಘಲ್ ಶೈಲಿಯ ಕಥಕ್ ಸಂಯೋಜನೆಯನ್ನು ಬಹಳ ಸಮರ್ಥವಾಗಿ ಬಳಸಿದ್ದಾರೆ.

ಕನ್ನಡ ಚಲನಚಿತ್ರಗಳಲ್ಲಿ ನೃತ್ಯದ ವಿಚಾರ ಬಂದಾಗ ಬಹಳವಾಗಿ ಕೇಳಿಬರುವ ಹೆಸರು ಉಡುಪಿ ಜಯರಾಂ. ಚಿತ್ರರಂಗಕ್ಕೆ ಪ್ರವೇಶವಾದಂದಿನಿಂದ ಒಂದು ರೀತಿಯಲ್ಲಿ ಮಾಧ್ಯಮಕ್ಕೆ ಅನಿವಾರ್ಯವೇನೋ ಅನ್ನುವಷ್ಟರ ಮಟ್ಟಿಗೆ ಬೆಳೆದವರು ಉಡುಪಿ ಜಯರಾಂ. ಶಾಸ್ತ್ರೀಯ, ಜಾನಪದ, ಕ್ಯಾಬರೆ, ನೃತ್ಯರೂಪಕ, ನಾಗನೃತ್ಯ, ಪ್ರಾಂತೀಯ ಸೊಗಡಿನ ಯಾವುದೇ ಸಾಂಪ್ರದಾಯಿಕ ನೃತ್ಯಶೈಲಿಯಾಗಲಿ ಎಲ್ಲದರಲ್ಲೂ ಸಿದ್ಧಹಸ್ತರೆನಿಸಿದ ಉಡುಪಿ ಜಯರಾಂ ನೃತ್ಯ ನಿರ್ದೇಶನ ಮಾಡದ ನಟ-ನಟಿಯರೆ ಇಲ್ಲವೆನ್ನಬಹುದು. ಸುಮಾರು ಮೂರು ದಶಕಗಳಿಗೂ ಹೆಚ್ಚು ಕಾಲದಿಂದ ನೃತ್ಯ ನಿರ್ದೇಶಕರಾಗಿ ಅವರು ಸಲ್ಲಿಸುತ್ತಿರುವ ಸೇವೆ ಶ್ಲಾಘನೀಯ. ಕನ್ನಡ, ತೆಲುಗು, ತಮಿಳು, ಮಲೆಯಾಳಂ ಭಾಷೆಗಳ ಚಿತ್ರಗಳಲ್ಲದೆ ಅನೇಕ ಸಿಂಹಳೀ ಚಿತ್ರಗಳಲ್ಲಿಯೂ ನೃತ್ಯ ನಿರ್ದೇಶನ ಮಾಡಿದ್ದಾರೆ. ದಕ್ಷಿಣದಲ್ಲೇ ಅತಿ ಹೆಚ್ಚು ಸಂಖ್ಯೆಯ ಚಿತ್ರಗಳಲ್ಲಿ ನೃತ್ಯ ನಿರ್ದೇಶನ ನೀಡಿದ ದಾಖಲೆಯೂ ಉಡುಪಿ ಬಿ.ಜಯರಾಂ ಅವರದು. 'ಇಮ್ಮಡಿ ಪುಲಕೇಶಿ', 'ಕುಲಗೌರವ', 'ಸನಾದಿ ಅಪ್ಪಣ್ಣ', 'ಕಳ್ಳ ಕುಳ್ಳ', 'ಬಬ್ರುವಾಹನ', 'ಗುರುಶಿಷ್ಯರು', 'ಮಲಯಮಾರುತ' ಶಾಸ್ತ್ರೀಯ ನೃತ್ಯದ ಅಳವಡಿಕೆಯಿದ್ದ ಚಿತ್ರಗಳು. 'ಮಕ್ಕಳ ಭಾಗ್ಯ', 'ಗೀತಾ', 'ಪುಟಾಣಿ ಏಜೆಂಟ್ ೧, ೨, ೩' ಮೊದಲಾದ ಚಿತ್ರಗಳಲ್ಲಿ ನೃತ್ಯ ರೂಪಕಗಳನ್ನು ಅಳವಡಿಸಿದ್ದಾರೆ. ಕ್ಯಾಬರೆ ನೃತ್ಯಗಳನ್ನು 'ಕೌಬಾಯ್ ಕುಳ್ಳ', 'ಕಳ್ಳ ಕುಳ್ಳ', 'ಚಂಡಿ ಚಾಮುಂಡಿ' ಮೊದಲಾದ ಚಿತ್ರಗಳಲ್ಲಿ ಅಳವಡಿಸಿ ತಾವೊಬ್ಬ ಪರಿಪೂರ್ಣ ನೃತ್ಯ ಸಂಯೋಜಕರೆಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದಾರೆ. ಜಯರಾಮ್ ಅವರ ಸಹಾಯಕಿಯಾಗಿ ಹೆಚ್ಚು ಕಡಿಮೆ ಮೂರು ದಶಕಗಳ ಕಾಲದಿಂದ ದುಡಿದಿರುವ ದೇವಿ ಕೂಡ ಪ್ರತಿಭಾವಂತ ನೃತ್ಯ ಸಂಯೋಜಕಿ. ಉಡುಪಿ ಜಯಾರಾಂ-ದೇವಿ ಜೋಡಿ ಮಾಡಿದಷ್ಟು ಮೋಡಿ ಬಹುಶಃ ಇನ್ನಾವುದೇ ಜೋಡಿಗೆ ಸಾಧ್ಯವಾಗಿಲ್ಲವೆನ್ನಬಹುದು.

'ಇಂದು ಜನಜೀವನ ತುಂಬಾ ಫಾಸ್ಟ್. ಆದ್ದರಿಂದಲೇ ಎಲ್ಲವೂ ಚಿಟಿಕೆ ಹಾಕುವುದರಲ್ಲೇ ಇರಬೇಕು, ಮುಗಿಯಬೇಕು. ಸಿನಿಮಾದಲ್ಲಿ ನೃತ್ಯದ ಸ್ಥಾನ ಹಾಗೂ ಅದರ ಅಗತ್ಯವೇ ಬೇರೆ. ಸಾರ್ವಜನಿಕವಾಗಿ, ಕಚೇರಿಗಳಲ್ಲಿ ಎಂಟು ಹತ್ತು ನಿಮಿಷ ನಡೆಯುವ ನೃತ್ಯ, ಸಿನಿಮಾದಲ್ಲಿ ಮೂರು ನಾಲ್ಕು ನಿಮಿಷಗಳಲ್ಲಿ ಮುಗಿಯಬೇಕು. ಹಾಗಾಗಿ ಸಿನಿಮಾದಲ್ಲಿ ನೃತ್ಯ ಸಂಯೋಜನೆ ತುಂಬಾ ಹೊಣೆಗಾರಿಕೆಯದ್ದಾಗಿದೆ. ಸಿನಿಮಾ ಡ್ಯಾನ್ಸ್ ಎಂದರೆ ಶಾಸ್ತ್ರೀಯವಾಗಿ ನೃತ್ಯಾಭ್ಯಾಸ ಮಾಡಿದವರ ದೃಷ್ಟಿಯಲ್ಲಿ ಅಗ್ಗದ ಕುಣಿತವೆನಿಸಬಹುದು. ಆದರೆ ಶಾಸ್ತ್ರೀಯ ನೃತ್ಯಪ್ರಕಾರಕ್ಕಿಂತ ಸಿನಿಮಾ ನೃತ್ಯ ತುಂಬಾ ಕಷ್ಟಸಾಧ್ಯ. ಶಾಸ್ತ್ರೀಯದಲ್ಲಿ ಸೊಗಸಿರುತ್ತದೆ. ಪ್ರಯೋಗದಲ್ಲಿ ಹೊಸತನ, ಕ್ರಿಯೇಟಿವಿಟೀ ಬಹಳ ಕಡಿಮೆ. ಸಿನಿಮಾದಲ್ಲಿ ಶಾಸ್ತ್ರೀಯ ಆಧಾರ ಇಟ್ಟುಕೊಂಡು

(ಚಿತ್ರ ೩) ಮೂರು ದಶಕಗಳ ಕಾಲದಿಂದಲೂ ಕನ್ನಡ ಚಿತ್ರರಂಗಕ್ಕೆ ಸೇವೆ ಸಲ್ಲಿಸುತ್ತಿರುವ ನೃತ್ಯ ನಿರ್ದೇಶಕರು - ಉಡುಪಿ ಜಯರಾಂ-ದೇವಿ. ಜಾನಪದ ತಂಡಕ್ಕೆ ಮಾರ್ಗದರ್ಶನ ನೀಡುತ್ತಿದ್ದಾರೆ

ಹೊಸದನ್ನು ಸೃಷ್ಟಿಸಬೇಕು. ಆ ಸೃಷ್ಟಿ ಸುಲಭವೇನಲ್ಲ. ಅದನ್ನು ಸಾಧಿಸಲು ನೃತ್ಯ ನಿರ್ದೇಶಕನಿಗೆ ಕ್ಯಾಮರ ಬಗೆಗಿನ ಜ್ಞಾನ, ತಾಳಜ್ಞಾನ, ಸೃಜನಶೀಲ ಮನೋಧರ್ಮ ಇರಬೇಕು. ಪ್ರತಿಯೊಂದು ಚಿಕ್ಕ ವಿಷಯಕ್ಕೂ ಗಮನ ಕೊಡಬೇಕು. ಪ್ರತಿ ಸಂದರ್ಭದಲ್ಲೂ ಹೊಸ ಹೊಸ ಪ್ರಯೋಗಗಳಿಗೆ ಸ್ಪಂದಿಸುವ ಸಾಮರ್ಥ್ಯ ನೃತ್ಯ ನಿರ್ದೇಶಕನಿಗೆ ಇರಬೇಕು' ಎಂದು ಉಡುಪಿ ಜಯರಾಂ ಅಭಿಪ್ರಾಯ ಪಡುತ್ತಾರೆ.

ಉಡುಪಿ ಜಯರಾಂ ಅವರ ಜೊತೆ ಜೊತೆಯಲ್ಲೇ ನೃತ್ಯ ಸಂಯೋಜಕರಾಗಿ ಬೆಳಕಿಗೆ ಬಂದ ಮತ್ತೊಂದು ಹೆಸರು ಮೂಗೂರು ಸುಂದರ್. 'ನೀ ನನ್ನ ಗೆಲ್ಲಲಾರೆ', 'ಬಾಡದ ಹೂ','ರಾಗತಾಳ','ಪ್ರೇಮಪರ್ವ','ಪ್ರಚಂಡ ಪುಟಾಣಿಗಳು','ಆರದ ಗಾಯ' ಹೀಗೆ ಬಹುತೇಕ ಮಸಾಲೆ ಚಿತ್ರಗಳಲ್ಲಿ ರಂಜನೀಯ ನೃತ್ಯಗಳನ್ನು ಅಳವಡಿಸಿದ್ದರು. 'ಬಾಡದ ಹೂ' ಚಿತ್ರದ ಕವ್ವಾಲಿ ಮಾದರಿಯ ನೃತ್ಯ. 'ರಾಗತಾಳ' ಚಿತ್ರದ ಶಾಸ್ತ್ರೀಯ ಮಾದರಿಯ ನೃತ್ಯಗಳು ಅವರಿಗೆ ಸಾಕಷ್ಟು ಹೆಸರನ್ನು ತಂದುಕೊಟ್ಟವು.

ಕೃಷ್ಣಕುಮಾರ್ (ಧಾರವಾಡ) ಇವರು ನೃತ್ಯ ಸಂಯೋಜಕರಾಗಿ ದುಡಿದ ಹಲವಾರು ಯಶಸ್ವಿ ಚಿತ್ರಗಳಲ್ಲಿ 'ನಾಗಕನ್ಯೆ', 'ದುಡ್ಡೇ ದೊಡ್ಡಪ್ಪ', 'ರಂಗನಾಯಕಿ', 'ಕಠಾರಿ ವೀರ', 'ಗಂಗ ಗೌರಿ' ಮೊದಲಾದವು. 'ನಾಗಕನ್ಯೆ' ಚಿತ್ರದ 'ನೋಡೋರ ಕಣ್ಣೆಲ್ಲಾ ನನ್ನ ಮೇಲೆ','ಗಂಗೆಗೌರಿ' ಚಿತ್ರದ 'ಚೆಲುವರಲ್ಲಿ ಚೆಲುವ...' ಹಾಗೂ 'ಎನಗೂ ನಿನಗೂ ಅಂತರವೆಲ್ಲಿದೆ...'ಗಳಲ್ಲಿನ ನವಿರಾದ ನೃತ್ಯ ಸಂಯೋಜನೆಯಿಂದ ಸಾಕಷ್ಟು ಗಮನ ಸೆಳೆದರು.

(ಚಿತ್ರ ೪) ಮುಜಿರಾ ಶೈಲಿಯೂ ಜನಪ್ರಿಯ -ಚಿಂದೋಡಿ ಲೀಲಾ

ಲಕ್ಷ್ಮೀನಾರಾಯಣ್ ನೃತ್ಯ ನಿರ್ದೇಶನದ 'ಕ್ರಾಂತಿವೀರ' ಚಿತ್ರದ 'ಕರಿನಾಗ ಮಿಡಿನಾಗ...', 'ಜಯಸದೇ ಬಂದ ಭಾಗ್ಯ' ಚಿತ್ರದ 'ನನ್ನ ಸಮಾನನಾರಿಹರು...' ಎನ್ನುವ ಹಾಡುಗಳಲ್ಲಿನ ನೃತ್ಯ ಸಂಯೋಜನೆ ಬಹಳ ಸಮರ್ಥವಾಗಿತ್ತು. 'ಕವಿರತ್ನ ಕಾಳಿದಾಸ' ಚಿತ್ರದ ಕುರುಬನ ನೃತ್ಯ ಹಾಗೂ 'ಹಾಲುಜೇನು' ಚಿತ್ರದ 'ಆನೆಯ ಮೇಲೆ ಅಂಬಾರಿ ಕಂಡೆ...', 'ಪೋಗದಿರಲೋ ರಂಗ...' ಹಾಡುಗಳಿಗೆ ನೃತ್ಯ ನಿರ್ದೇಶನ ಮಾಡಿದ ವೇಣುಗೋಪಾಲ್ ಯಾವುದೇ ಸಾಂಪ್ರದಾಯಿಕ ಮಿತಿಗಳಿಗೆ ಅಂಟಿಕೊಳ್ಳದೆ ಸರಳವೆನಿಸುವ ರೀತಿಯಲ್ಲಿ ನೃತ್ಯ ಸಂಯೋಜಿಸಿದರು.

ಚಿತ್ರರಂಗ ಎದೆಗಾರಿಕೆಯುಳ್ಳವರಿಗಾಗಿ ಇರುವ ಉದ್ಯಮ ಎಂದು ಅಭಿಪ್ರಾಯವಿದ್ದಂಥ ಕಾಲದಲ್ಲಿ, ಅಲ್ಲೊಮ್ಮೆ ಇಲ್ಲೊಮ್ಮೆ ಹೆಸರಾಂತ ನೃತ್ಯ ಪಟುಗಳು ಚಿತ್ರಗಳಲ್ಲಿ ನೃತ್ಯ ನಿರ್ದೇಶನ ಮಾಡಿ ಸ್ವತಃ ತಾವೂ ನರ್ತಿಸಿರುವ ಹಲವಾರು ಪ್ರಸಂಗಗಳಿವೆ. ಅಂತಹ ಒಂದು ಉದಾಹರಣೆ ನಾಟ್ಯಾಚಾರ್ಯ ಶ್ರೀನಿವಾಸ ಕುಲಕರ್ಣಿಯವರದು. ೧೯೫೭ರಲ್ಲಿ ತೆರೆಕಂಡ 'ಪ್ರಭುಲಿಂಗಲೀಲೆ' ಚಿತ್ರದಲ್ಲಿ ಅವರು ಮತ್ತೊಬ್ಬ ನೃತ್ಯಪಟು ಪ್ರಿಯಂವದಾ ಅವರೊಂದಿಗೆ 'ಶಿವಪಾರ್ವತಿ' ನೃತ್ಯದಲ್ಲಿ ಅಭಿನಯಿಸಿದ್ದರು. ಪ್ರಿಯಂವದಾ 'ರಾಧಾರಮಣ','ಶಿವಶರಣೆ ನಂಬಿಯಕ್ಕ' ಚಿತ್ರಗಳಲ್ಲಲ್ಲದೆ 'ಕನ್ಯಾದಾನ' ಚಿತ್ರದ 'ನಟರಾಜನಾ ನಾಟ್ಯದಾ ವೈಖರಿಯಾ...' ಎಂಬ ನೃತ್ಯದಲ್ಲಿ ಭಾಗವಹಿಸಿದ್ದರು. ಹೆಸರಾಂತ ನೃತ್ಯಪಟುಗಳು ಹಾಗೂ ದಂಪತಿಗಳೂ ಆದ ಪ್ರೊ।ಯು.ಎಸ್. ಕೃಷ್ಣರಾವ್ ಚಂದ್ರ ಭಾಗಾದೇವಿ 'ಪಾಪ ಪುಣ್ಯ' ಚಿತ್ರದಲ್ಲಿ ನೃತ್ಯ ನಿರ್ದೇಶನ ಮಾಡಿದ್ದಾರೆ. ಅದೇ ರೀತಿ 'ಗುಣಸಾಗರಿ' ಚಿತ್ರದಲ್ಲಿ ನೃತ್ಯಪಟು ಕುಮಾರಿ ಕಮಲಾ ಮುಂದೆ ಕಮಲಾ ಲಕ್ಷ್ಮಣ್, 'ಭೂ ಕೈಲಾಸ' ಚಿತ್ರದಲ್ಲಿ ಖ್ಯಾತ ನೃತ್ಯಪಟು ಗೋಪಿಕೃಷ್ಣ, 'ಮಿಸ್ಟರ್ ರಾಜ್‌ಕುಮಾರ್' ಚಿತ್ರದಲ್ಲಿ ರಾಧಿಕಾ, 'ಮೊದಲ ತೇದಿ' ಚಿತ್ರದಲ್ಲಿ ಬೇಬಿ ಸರಸ್ವತಿ ಹಾಗೂ ಖ್ಯಾತ ತಾರೆ ರಾಗಿಣಿ, 'ಭಾರತಿ' ಚಿತ್ರದಲ್ಲಿ ಖ್ಯಾತ ನೃತ್ಯ ತಾರೆಯಾದ ಲಲಿತಾ ಮತ್ತು ಪದ್ಮಿನಿ ನೃತ್ಯಗಳಲ್ಲಿ ಭಾಗವಹಿಸಿದ್ದಾರೆ.

(ಚಿತ್ರ ೫) ಗುರು ಉಷಾದಾತಾರ್ ಭರತನಾಟ್ಯ ಮತ್ತು ಕೂಚಿಪುಡಿ ನೃತ್ಯಕಲೆಯಲ್ಲಿ ಸಿದ್ಧಹಸ್ತರು. ಕನ್ನಡ ಚಿತ್ರಗಳಿಗಾಗಿ ವೈವಿಧ್ಯಮಯ ನೃತ್ಯಗಳನ್ನು ಸಂಯೋಜಿಸಿದ್ದಾರೆ

ಅವಕಾಶಗಳು ಬಂದಾಗ ಅದನ್ನು ಸಮರ್ಥವಾಗಿ ಬಳಸಿಕೊಂಡವರು ಶಾಸ್ತ್ರೀಯ ನೃತ್ಯಕಲಾವಿದೆ ಉಷಾ ದಾತಾರ್. 'ಮಾಡಿ ಮಡಿದವರು', 'ಕಾಡು ಕುದುರೆ', 'ಕೂಡಿ ಬಾಳಿದರೆ ಸ್ವರ್ಗ ಸುಖ','ಬಿಳಿಗಿರಿಯ ಬನದಲ್ಲಿ', 'ಅಮರ ಮಧುರ ಪ್ರೇಮ', 'ಅನುಭವ' ಮೊದಲಾದ ಚಿತ್ರಗಳಿಗೆ ನೃತ್ಯ ನಿರ್ದೇಶನ ಮಾಡಿರುವ ಉಷಾ ದಾತಾರ್, ಎಲ್ಲಿಯೂ ಶಾಸ್ತ್ರೀಯ ಚೌಕಟ್ಟಿಗೆ ತಮ್ಮನ್ನು ಸೀಮಿತಗೊಳಿಸಿಕೊಂಡಿಲ್ಲ. ಬದಲಾಗಿ ಮಾಧ್ಯಮದ ಅಪೇಕ್ಷೆಯಂತೆ ನೃತ್ಯ ಸಂಯೋಜನೆ ಮಾಡಿರುವುದು ಆಕೆಯ ನೃತ್ಯ ಕೌಶಲ್ಯಕ್ಕೆ ನಿದರ್ಶನವಾಗಿದೆ. 'ಕಾಡು ಕುದುರೆ'ಯಲ್ಲಿ ವೇಗವಾದ ನಡೆಗಳಿದ್ದ ಜನಪದ ಧಾಟಿಯ ಸಂಯೋಜನೆಯಿದ್ದರೆ, 'ಅನುಭವ'ದಲ್ಲಿ ಶೃಂಗಾರದ ಕನಸುಗಳಿಗೆ ಶಾರೀರಕ ಚಲನೆಗಳ ಸಂಯೋಜನೆಯಿದೆ. 'ಅಮರ ಮಧುರ ಪ್ರೇಮ' ಚಿತ್ರದಲ್ಲಿ ಅತಿ ಭಾವುಕ ಪಾತ್ರಕ್ಕೆ ಸ್ವಲ್ಪ ನಿರ್ಲಿಪ್ತವೇನೋ ಎನ್ನುವಂತೆ ಸಂಯೋಜನೆಯಿದ್ದರೆ, 'ಬಿಳಿಗಿರಿಯ ಬನದಲ್ಲಿ' ಚಿತ್ರದಲ್ಲಿ ಮುಗ್ಧ ಪ್ರೇಮಿ ಸಂಕೋಚ ಮರೆತು ತಾನೇ ತಾನಾಗಿ ಕುಣಿಯುವ ಪರಿಕಲ್ಪನೆ ಸೋಲಿಗರ ನೃತ್ಯದಲ್ಲಿದೆ.

ಎಂಬತ್ತರ ದಶಕದ ಕೊನೆ ಕೊನೆಯಲ್ಲಿ ಬೆಳಕಿಗೆ ಬಂದ ಚಿನ್ನಿಪ್ರಕಾಶ್, ಕೈಲಾಸಂ, ತಾರಾ, ಬೃಂದಾ ಶಿವಶಂಕರ್ ನಂತರದ ತೊಂಬತ್ತರ ದಶಕದಲ್ಲಿ ರಘುರಾಂ-ಗಿರಿಜಾ, ಅನುರಾಧ-ಸತೀಶ್, ಜಾನ್ ಬಾಬು, ಕಮಲ, ರೇಖಾ ಪ್ರಕಾಶ್, ಸುಜಾತಾ-ಬಾಬು, ದೇವಾ ಸಂಪತ್ತು, ಮದನ್-ಹರಿಣಿ, ಪ್ರಸಾದ್, ಮೂಗೂರು ಸುಂದರ್, ಮೂಗೂರು ಬಸವರಾಜ್ ಹೀಗೆ ಹಲವಾರು ಪ್ರತಿಭೆಗಳು ನೃತ್ಯ ನಿರ್ದೇಶಕರಾಗಿ ಜನಪ್ರಿಯರಾಗಿದ್ದಾರೆ.

ವಿಶೇಷವಾಗಿ ಚಿನ್ನಿಪ್ರಕಾಶ್ ಅವರು ಹೆಸರಿಸಬಹುದಾದಂಥ ಚಿತ್ರಗಳಲ್ಲಿ ನೃತ್ಯ ಸಂಯೋಜನೆ ಮಾಡಿದ್ದಾರೆ. ಅವುಗಳಲ್ಲಿ 'ಪೂಜಾಫಲ' ಚಿತ್ರದ ನಾಗನೃತ್ಯ, 'ಖೈದಿ' ಚಿತ್ರದ 'ತಾಳೆಗರಿಯ ಪೊದೆಯಿಂದ...' ಎಂಬ ವಿಷ್ಣು-ಮಾಧವಿ ಜೋಡಿಯ ನಾಗನೃತ್ಯ ಎಷ್ಟರಮಟ್ಟಿಗೆ ಜನಪ್ರಿಯವಾಯಿತೆಂದರೆ ವಿಷ್ಣು-ಮಾಧವಿ ಜೋಡಿ ಬಹು ಬೇಡಿಕೆಯನ್ನು ಪಡೆಯಿತು. ನೃತ್ಯದಲ್ಲಿ ಅಳವಡಿಸಿದ್ದ ಕೆಲವು ವಿಶೇಷ ಭಂಗಿಗಳು ಅತೀ ಉದ್ರೇಕಕಾರಿ ಎನ್ನುವಂತೆ ಇತ್ತಾದರೂ ಜನಪ್ರಿಯತೆ ದೃಷ್ಟಿಯಿಂದ ಹೆಸರಿಸಲೇಬೇಕಾದಂಥದ್ದು. ನಂತರ ದಿನಗಳಲ್ಲಿ ಚಿನ್ನಿ ಪ್ರಕಾಶ್ ರವಿಚಂದ್ರನ್ ನಾಯಕತ್ವದ ಬಹುತೇಕ ಚಿತ್ರಗಳಿಗ ನೃತ್ಯ ನಿರ್ದೇಶನ ಮಾಡಿದ್ದಾರೆ. ಅವುಗಳಲ್ಲಿ ಮುಖ್ಯವಾದವು 'ಬಣ್ಣದ ಗೆಜ್ಜೆ','ಪ್ರೇಮಲೋಕ','ರಣಧೀರ','ಅಂಜದ ಗಂಡು' ಇತ್ಯಾದಿ.

ನೃತ್ಯ ನಿರ್ದೇಶಕರಲ್ಲಿ ತಮ್ಮ ಸ್ಥಾನಕ್ಕೆ ಎಷ್ಟು ಮಹತ್ವ ಇದೆ ಎಂದು ನಿರೂಪಿಸಿದ ಚಿನ್ನಿಪ್ರಕಾಶ್ 'ನಾವು ನಿರ್ದೇಶಿಸಿದ ನೃತ್ಯ ಸಂಯೋಜನೆಯ ಸಂಕಲನದ ಸಂದರ್ಭದಲ್ಲಿ ನಾವೇ ಇದ್ದು ಅದನ್ನು ನಿರ್ವಹಿಸುತ್ತೇವೆ. ಸಂಕಲನಕಾರ ತನಗೆ ಬೇಕಾದಂತೆ ಜೋಡಿಸಿದಲ್ಲಿ ನಮ್ಮ ಶ್ರಮವೆಲ್ಲ ವ್ಯರ್ಥವಾಗುವ ಅವಕಾಶಗಳೇ ಹೆಚ್ಚು. ಅದಕ್ಕ ನಾವು ಅವಕಾಶ ಕೊಡುವುದಿಲ್ಲ' ಎಂದು ಹೇಳುತ್ತಾರ.

ಚಿನ್ನಿಪ್ರಕಾಶ್‌ರಂತೆ ಹೆಸರು ಮಾಡಿದವರು ಕೈಲಾಸಂ. ಯುವಜನತೆಗೆ ಹೊಸ ರೀತಿಯ ನೃತ್ಯವನ್ನು, ಆ ಮೂಲಕ ಹೊಸ ಡ್ಯಾನ್ಸಿಂಗ್ ಹೀರೋ ಆಗಿ ಶಿವರಾಜ್‌ಕುಮಾರ್ ಅವರನ್ನು ರೂಪಿಸಿದ ಕೀರ್ತಿ ಕೈಲಾಸಂ ಅವರದೆಂದರೆ ಉತ್ಪ್ರೇಕ್ಷೆಯೆನಿಸುವುದಿಲ್ಲ. 'ಆನಂದ್', 'ರಥಸಪ್ತಮಿ', 'ಮನಮೆಚ್ಚಿದ ಹುಡುಗಿ', 'ಸಂಯುಕ್ತ' ಮೊದಲಾದವು ಶಿವರಾಜ್‌ಕುಮಾರ್ ಒಬ್ಬ

(ಚಿತ್ರ ೬) ನಾಗನೃತ್ಯ ಕನ್ನಡ ಚಿತ್ರಗಳಲ್ಲಿ ಅತ್ಯಂತ ಜನಪ್ರಿಯವಾದ ನೃತ್ಯ
ಪ್ರಸಾದ್-ಮಾಧವಿ

ಒಳ್ಳೆಯ ನೃತ್ಯಗಾರ ಎಂದು ನಿರೂಪಿಸಿತು. ಕೈಲಾಸಂ ಅವರಿಗೆ ಭಾರಿ ಜನಪ್ರಿಯತೆ ತಂದು ಕೊಟ್ಟ ಮತ್ತೊಂದು ಚಿತ್ರ 'ನಂಜುಂಡಿ ಕಲ್ಯಾಣ'.

ಚಲನಚಿತ್ರರಂಗದಲ್ಲಿ ಸಹಾಯಕ ನೃತ್ಯ ನಿರ್ದೇಶಕಿಯಾಗಿ ಕೆಲಸ ಮಾಡಿ, ಸ್ವಂತ ಪರಿಶ್ರಮ ದಿಂದ ಸ್ವತಂತ್ರ ನೃತ್ಯ ನಿರ್ದೇಶಕಿಯಾದವರು ತಾರಾ. ಸಾಂಪ್ರದಾಯಿಕವಾಗಿ ನೃತ್ಯದಲ್ಲಿ ಪರಿಶ್ರಮ ಹೊಂದಿದ್ದ ತಾರಾ, 'ಹೊಸಬೆಳಕು' ಚಿತ್ರದ 'ಚಂದಿರ ತಂದ...', 'ಅದೇ ಕಣ್ಣು' ಚಿತ್ರದ 'ಇದೇ ನೋಟ ಇದೇ ಆಟ...', 'ಆಕಸ್ಮಿಕ', 'ಸಮರ', 'ಸುಖ ಸಂಸಾರಕ್ಕೆ ೧೨ ಸೂತ್ರಗಳು' ಮೊದಲಾದ ಚಿತ್ರಗಳಲ್ಲಿ ನವೀನ ರೀತಿಯಲ್ಲಿ ನೃತ್ಯ ಸಂಯೋಜನೆ ಮಾಡಿದ್ದಾರೆ. ತಾರಾ, 'ಜನುಮದ ಜೋಡಿ' ಚಿತ್ರದ 'ಕೋಲುಮಂಡೆ ಜಂಗಮದೇವರು...' ಹಾಡಿಗೆ ಕಂಸಾಳೆ ನೃತ್ಯದ ಸಂಯೋಜನೆಯಿಂದ ಅತಿ ಹೆಚ್ಚು ಗಮನ ಸೆಳೆದ ನೃತ್ಯ ನಿರ್ದೇಶಕಿ.

(ಚಿತ್ರ ೭) ಚಿನ್ನಿಪ್ರಕಾಶ್ ಜನಪ್ರಿಯ ಶೈಲಿಯ ನೃತ್ಯ ಸಂಯೋಜನೆ

''ನೃತ್ಯ ಸಂಯೋಜಕರಿಗೆ ತಾಂತ್ರಿಕ ಪರಿಶ್ರಮ ಅಗತ್ಯ. ಜೊತೆಗೆ ಸಮಯ ಪ್ರಜ್ಞೆ ಹಾಗೂ ತಾದಾತ್ಮ್ಯತೆಯೂ ಕೂಡ. ಆಗ ಅವರಿಂದ ಉತ್ತಮ ಪ್ರಯತ್ನ-ಪ್ರಯೋಗ ಸಾಧ್ಯ. ಇವುಗಳೊಂದಿಗೆ ಸಮಯಸ್ಫೂರ್ತಿ ಇದ್ದರಂತೂ ಇನ್ನೂ ಹೆಚ್ಚು ಅನುಕೂಲ'' ಎಂಬುದು ತಾರಾ ಅಭಿಪ್ರಾಯ.

ಹೊಸ ಪೀಳಿಗೆಯವರಾದ ಸತೀಶ್ 'ಪ್ರತಾಪ್', 'ಚಿತ್ರಲೇಖ', 'ರಣಚಂಡಿ', 'ಬೆಳ್ಳಿ ಕಾಲುಂಗರ' ಮೊದಲಾದ ಚಿತ್ರಗಳಲ್ಲಿ ನೃತ್ಯ ಸಂಯೋಜನೆ ಮಾಡಿದರು. ಜಾನ್ ಬಾಬು 'ಬಾರೆ ನನ್ನ ಮುದ್ದಿನ ರಾಣಿ', 'ನಾಯಕ', 'ಗುಲಾಬಿ' ಚಿತ್ರಗಳಿಗೆ, ಶಿವಶಂಕರ್ 'ಭೈರವಿ', 'ಬೊಂಬಾಟ್ ಹೆಂಡ್ತಿ', 'ಆತ್ಮಬಂಧನ' ಚಿತ್ರಗಳಿಗೆ ನೃತ್ಯ ಸಂಯೋಜಿಸಿದರು. ಗಿರಿಜಾ ಅವರು 'ನವತಾರೆ', 'ತೇಜ', 'ಝೇಂಕಾರ', 'ಭೂಮಿಗೀತ' ಚಿತ್ರಗಳಿಗೆ, ಸುಜಾತ-ಬಾಬು ಅವರು 'ಕುರುಬರ ರಾಣಿ', 'ಲಾಲಿ', ದೇವಾಸಂಪತ್ 'ಕರ್ಪೂರದ ಗೊಂಬೆ', ಮುಗೂರು ಸುಂದರ್ 'ಅಣ್ಣಯ್ಯ', 'ರಾಮಾಚಾರಿ', 'ಸುಪ್ರಭಾತ', ಪ್ರಸಾದ್ 'ಶಿವಸೈನ್ಯ', 'ಮದುವೆ' ಚಿತ್ರಗಳಿಗೆ ನೃತ್ಯ ಸಂಯೋಜನ ಮಾಡಿದಾರೆ. ಇವರಲ್ಲಿ ಬಹಳಷ್ಟು ಮಂದಿ ಯುವ ಜನಾಂಗವನ್ನು ಉದ್ದೇಶದಲ್ಲಿಟ್ಟುಕೊಂಡು ಅವರ ಅಭಿರುಚಿಗೆ ತಕ್ಕಂಥ ಪ್ರಚೋದನಕಾರಿ ಹಾಗೂ ನವ್ಯರೀತಿಯ ಬ್ರೇಕ್, ಪೇಕ್ ಮುಂತಾದ ಆಂಗಿಕ ಚಲನೆಗ ಒತ್ತು ಕೊಡುವಂತೆ ನೃತ್ಯ ಸಂಯೋಜಿಸಿದಾರೆ. ಕೆಲವೊಮ್ಮೆ ಬಹುತೇಕ ಚಿತ್ರಗಳಲ್ಲಿನ ನೃತ್ಯಗಳು ಮತ್ತೊಂದರ ನಕಲು ಎಂದು ತೋರುವಂತಿತ್ತು. ಇಲ್ಲಿ ನೃತ್ಯ ನಿರ್ದೇಶಕನಿಗೆ ಇರುವ ಮಿತಿಯನ್ನು ಗಮನಿಸಬೇಕಾಗುತ್ತದೆ. ಹಾಗಾಗಿ ಪ್ರತಿಭೆಯಿದ್ದರೂ ಚಿತ್ತದಕ್ಕೆ ಮಣಿದು ನಿರ್ಮಾಪಕರ ಅಥವಾ ನಿರ್ದೇಶಕರ ಜೊತೆಗೆ ಕೆಲವೊಮ್ಮೆ ಪ್ರೇಕ್ಷಕರನ್ನೂ ಗಮನದಲ್ಲಿಟ್ಟುಕೊಂಡು ನೃತ್ಯ ಸಂಯೋಜನೆ ಮಾಡಬೇಕಾದ ಸಂದರ್ಭವಿರುತ್ತದೆ.

ಇವರುಗಳ ಜೊತೆಗೆ ಕೆಲವೇ ಚಿತ್ರಗಳಿಗೆ ನೃತ್ಯ ನಿರ್ದೇಶನ ಮಾಡಿದರೂ ಗಮನಾರ್ಹವೆನ್ನುವ ಸಾಧನೆ ಮಾಡಿರುವವರು ನಮ್ಮೊಂದಿಗೆ ಇದ್ದರು ಎಂಬುದು ಸಂತಸದ ಸಂಗತಿ. ಅವರಲ್ಲಿ 'ಜಗನ್ಮೋಹಿನಿ' ಚಿತ್ರದ ಚನ್ನವೀರಪ್ಪ, 'ಅನುರಾಧ' ಚಿತ್ರದ ಜನಾರ್ಧನ್, 'ಜಲದುರ್ಗ' ಚಿತ್ರದ ಜಿಗನ್‌ಲಾಲ್, 'ರೇಣುಕಾ ಮಹಾತ್ಮೆ' ಚಿತ್ರದ ವೆಂಪಟಿಸತ್ಯಂ, 'ಸಂತ ಸಕ್ಕು' ಚಿತ್ರದ ರಾಯ್ ಚೌಧರಿ ಸರೋಜ್, 'ಪಂಚರತ್ನ' ಚಿತ್ರದ ಸಿ.ಆರ್.ಕಣ್ಣನ್ ಮೊದಲಾದವರು ಪ್ರಮುಖರು.

ನೃತ್ಯ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ ನಟ ನಟಿಯರು; ನಿರ್ದೇಶಕರು ನಮ್ಮೊಂದಿಗೆ ಇದರು ಇದ್ದಾರೆ ಎಂಬುದು ಮತ್ತೊಂದು ವಿಶೇಷ. ನಟಿ ಚಂದ್ರಕಲಾ ನೃತ್ಯ ನಿರ್ದೇಶಕಿಯಾಗಿ 'ಒಂದೆ ಬಳ್ಳಿಯ ಹೂ' ಚಿತ್ರದಲ್ಲಿ ಕಾರ್ಯ ನಿರ್ವಹಿಸಿದರೆ, ನಟಿ ಶೈಲಶ್ರಿ 'ಮರೆಯದ ಹಾಡು' ಚಿತ್ರದಲ್ಲಿ, ನಟ ಸಂಜಯ್ ಶಾಂತಾರಾಂ 'ಶಿವಲೀಲೆ' ಚಿತ್ರದಲ್ಲಿ, ಕ್ಯಾಬರೆ ನರ್ತಕಿ, ನಟಿ ಅನುರಾಧ ತಮ್ಮ ಪತಿ ಸತೀಶ್ ಅವರೊಂದಿಗೆ 'ಸಿಡಿದೆದ್ದ ಶಿವ' ಹಾಗೂ 'ರಿವೇಂಜ್' ಚಿತ್ರಗಳಲ್ಲಿ ನೃತ್ಯ ನಿರ್ದೇಶನ ಮಾಡಿ ತಾವು ಅವಕಾಶ ಸಿಕ್ಕಿದಲ್ಲಿ ಸಮರ್ಥವಾಗಿ ನೃತ್ಯ ಸಂಯೋಜನೆ ಮಾಡಬಲ್ಲೆವೆಂದು ನಿರೂಪಿಸಿದ್ದಾರೆ. ಹಿಂದಿ ಚಿತ್ರರಂಗದ ಖ್ಯಾತ ನೃತ್ಯ ನಿರ್ದೇಶಕಿ ಸರೋಜ್‌ಖಾನ್ ಕನ್ನಡದ 'ಆಫ್ರಿಕದಲ್ಲಿ ಶೀಲಾ' ಚಿತ್ರಕ್ಕೆ ನೃತ್ಯ ನಿರ್ದೇಶನ ಮಾಡಿರುವುದು ವಿಶೇಷ.

ಇನ್ನು ನಟ-ನಟಿಯರ ವಿಷಯಕ್ಕೆ ಬಂದಾಗ ನಮಗೆ ತಿಳಿದುಬರುವುದು ಹಿಂದಿನ ದಿನಗಳಲ್ಲಿ ನೃತ್ಯವನ್ನು ದೃಷ್ಟಿಯಲ್ಲಿರಿಸಿಕೊಂಡೇ ಕಲಾವಿದರನ್ನು ಆಯ್ಕೆ ಮಾಡುವ ಪರಿಪಾಠವಿತ್ತು. ಆರಂಭದ ದಿನಗಳಲ್ಲಿ ನಾಯಕಿಯರಾಗಿ ಮಿಂಚಿದ ಲಕ್ಷ್ಮೀಬಾಯಿ, ಪಂಢರಿಬಾಯಿ, ಜಯಶ್ರೀ, ಎಂ.ವಿ.ರಾಜಮ್ಮ, ಪ್ರತಿಮಾದೇವಿ, ಬಿ.ಜಯಮ್ಮ, ಆದವಾನಿ ಲಕ್ಷ್ಮೀದೇವಿ ಮೊದಲಾದವರು ಬಹುತೇಕ ನಟನೆಗೆ ಮಾತ್ರ ಸೀಮಿತವಾಗಿದ್ದರೆಂದು ಹೇಳಬಹುದು. ಇದಕ್ಕೆ ಅಪವಾದವೆನ್ನುವಂತೆ ಆದವಾನಿ ಲಕ್ಷ್ಮೀದೇವಿ 'ವೀರಸಂಕಲ್ಪ' ಚಿತ್ರದಲ್ಲಿ ಒಂದು ಗೀತೆಗೆ ಬಿ.ಎಂ.ವೆಂಕಟೇಶ್ ಅವರೊಂದಿಗೆ ನರ್ತಿಸಿದ್ದಾರೆ. ನಂತರದ ದಿನಗಳಲ್ಲಿ ನಾಯಕಿಯರಾಗಿ ಮೆರೆದ ಕೃಷ್ಣಕುಮಾರಿ, ಹರಿಣಿ, ವಾಣಿಶ್ರೀ, ಲೀಲಾವತಿ, ಭಾರತಿ, ಬಿ.ಸರೋಜಾದೇವಿ, ಜಯಂತಿ, ಕಲ್ಪನ, ಚಂದ್ರಕಲಾ ಮೊದಲಾದವರು ಅಭಿನಯದ ಜೊತೆ ಜೊತೆಯಲ್ಲಿ ನೃತ್ಯದಲ್ಲೂ ಮಿಂಚಿದವರು. ಜಯಂತಿ ಹಲವು ಚಿತ್ರಗಳಲ್ಲಿ ಕ್ಯಾಬರೆ, ಜಾನಪದ ನೃತ್ಯ, ಶಾಸ್ತ್ರೀಯ ನೃತ್ಯ ಮಾದರಿಯ ನೃತ್ಯಗಳನ್ನು ನಿರ್ವಹಿಸಿ ತಾನೊಬ್ಬ ಪ್ರತಿಭಾವಂತ ನರ್ತಕಿ ಕೂಡ ಎಂಬುದನ್ನು ಸಾಬೀತು ಪಡಿಸಿದ್ದಾರೆ. ಮಂಜುಳ ಸ್ವತಃ ಭರತ ನಾಟ್ಯ ಕಲಾವಿದೆ.

(ಚಿತ್ರ ೮) ಜಯಮಾಲಾ - ಸಮೂಹ ನೃತ್ಯ - ಹಳೆಯ ಶೈಲಿ

(ಚಿತ್ರ ೯) 'ಆನಂದ ಭೈರವಿ' ಚಿತ್ರದಲ್ಲಿ ಮಾಳವಿಕಾ-ಗಿರೀಶ್ ಕಾರ್ನಾಡ್. ಕೂಚಿಪುಡಿ ನೃತ್ಯ ಸಂಪ್ರದಾಯವನ್ನು ಕುರಿತಾದ ಒಂದು ವಿಶಿಷ್ಟ ಚಿತ್ರ

ಚಲನಚಿತ್ರಗಳಲ್ಲಿ ಶಾಸ್ತ್ರೀಯ ನೃತ್ಯವನ್ನು ಬಹಳ ದೊಡ್ಡ ಪ್ರಮಾಣದಲ್ಲಿ ಬಳಸಿಕೊಂಡಿದ್ದಾರಾದರೂ ಅದರ ವಸ್ತುನಿಷ್ಠ ಬಳಕೆ ಹಾಗೂ ಮೂಲ ಸತ್ವವನ್ನು ಯಥಾವತ್ತಾಗಿ ದಾಖಲಿಸುವಲ್ಲಿ ಸಾಕಷ್ಟು ಪ್ರಯತ್ನ ನಡೆದಿಲ್ಲವೆಂಬುದು ಗಮನಿಸಬೇಕಾದ ಅಂಶ. ದೃಶ್ಯ ಮಾಧ್ಯಮಕ್ಕೆ ನೃತ್ಯಗಳನ್ನು ಅಳವಡಿಸುವಾಗ ನೃತ್ಯ ನಿರ್ದೇಶಕ ಹಲವಾರು ಕಡೆ ಹೊಂದಾಣಿಕೆಗೆ ಮಣಿಯಬೇಕಾಗುತ್ತದೆ ಎಂಬುದು ಹೆಸರಾಂತ ನೃತ್ಯ ನಿರ್ದೇಶಕ ಉಡುಪಿ ಜಯರಾಂ ಅವರ ಅಭಿಪ್ರಾಯ. ಅವರ 'ಸನಾದಿ ಅಪಣ್ಣ'ದ ಜಯಪ್ರದಾ ಪಾತ್ರ. 'ಶ್ರೀ ಕೃಷ್ಣದೇವರಾಯ' ಚಿತ್ರದ ಭಾರತಿ ಪಾತ್ರಗಳನ್ನು ನೋಡಿದಾಗ ಅವರ ವಾದಕ್ಕೆ ಹುರುಳಿಲ್ಲ ಎನಿಸುತ್ತದೆ. ಕಾರಣ ಇಷ್ಟೇ, ಆ ಪಾತ್ರಗಳು ನರ್ತಕಿಯರೇ ಆಗಿದ್ದು ಅಲ್ಲಿ ಶಾಸ್ತ್ರೀಯ ನೃತ್ಯಕ್ಕೆ ಅನಗತ್ಯ ಕುಲುಕು ಬಳುಕು, ಒನಪು ವಯ್ಯಾರಗಳನ್ನು ಬಳಸಬೇಕಾದ ಅವಶ್ಯಕತೆ ಇದೆ ಎಂದೆನಿಸುವುದಿಲ್ಲ. ಆದರೆ ಅಷ್ಟೇ ಸ್ವಾರಸ್ಯದ ವಿಷಯವೆಂದರೆ ಭಾರತಿ, ಜಯಪ್ರದಾರ ನೃತ್ಯಗಳನ್ನು ಮೆಚ್ಚಿದ ಪ್ರೇಕ್ಷಕ ವರ್ಗ, ಸಂಪೂರ್ಣವಾಗಿ ಶಾಸ್ತ್ರೀಯ ನೃತ್ಯವನ್ನೆ ಅಳವಡಿಸಲಾಗಿದ್ದ 'ಆನಂದ ಭೈರವಿ'ಯ ಮಾಳವಿಕಾರ ನೃತ್ಯವನ್ನು ಗುರುತಿಸಲೇ ಇಲ್ಲ. ಕನ್ನಡ ಚಿತ್ರರಂಗದಲ್ಲಿಯೇ ಅಪರೂಪವೆನ್ನಬಹುದಾದ ಪ್ರಯತ್ನವಾದ 'ಆನಂದ ಭೈರವಿ' ಕೂಚುಪುಡಿ ನೃತ್ಯ ಸಂಪ್ರದಾಯದ ಸಮರ್ಥ ಬಳಕೆಯ ಚಿತ್ರ. ಆ ಚಿತ್ರದಲ್ಲಿ ಕೂಚುಪುಡಿ ನೃತ್ಯ ಪದ್ಧತಿಯ ವಿಧಿ-ವಿಧಾನಗಳು, ಎಡರು-ತೊಡರುಗಳನ್ನು ಸಮರ್ಥವಾಗಿ ಚಿತ್ರಿಸಲಾಗಿದೆ. ಚಿತ್ರಕ್ಕೆಂದೇ ನೃತ್ಯ ಕಲಿತು ನರ್ತಿಸಿದ ಗಿರೀಶ್ ಕಾರ್ನಾಡ್ ಹಲವು ವರ್ಷಗಳ ಕಾಲ ಸಾಧನೆ ಮಾಡಿದ ನೃತ್ಯ ಪಟುಗಳಿಗಿಂತ ಶ್ರೇಷ್ಠ ಮಟ್ಟದಲ್ಲಿ ನರ್ತಿಸಿದರು. ಚಿತ್ರದಲ್ಲಿ ನರ್ತಕಿಯ ಉಡುಗೆ, ಕೇಶಾಲಂಕಾರ, ವಾದ್ಯ ಪರಿಕರ ಎಲ್ಲಕ್ಕೂ ಮೂಲ ಶಾಸ್ತ್ರೀಯ ಚೌಕಟ್ಟನ್ನೇ ಬಳಸಿಕೊಳ್ಳಲಾಗಿದೆ. ದೇವಾಲಯದಲ್ಲಿ ನಡೆಯುವ ನೃತ್ಯ ಸ್ಪರ್ಧೆಯ ಸನ್ನಿವೇಶದಲ್ಲಿ ಪುರುಷ ನೃತ್ಯ ಕಲಾವಿದನಿಂದ 'ಪ್ರೇರಣ ತಾಂಡವ' ಗಣಗಳು ಶಿವನನ್ನು ಆನಂದ ನೃತ್ಯಕ್ಕೆ ಪ್ರೇರೇಪಿಸುವ ನೃತ್ಯ ಶೈಲಿಯನ್ನು ಪರಿಚಯಿಸಲಾಗಿದೆ. ಇಷ್ಟೆಲ್ಲಾ ಆದಾಗ್ಯೂ 'ಆನಂದ ಭೈರವಿ' ಸೋತಿತು. ಕನ್ನಡದಲ್ಲಿ ಇದೇ ರೀತಿಯ ಪ್ರಯತ್ನಗಳು 'ಕಲಾವತಿ', 'ಮಲಯ ಮಾರುತ', 'ಋತುಗಾನ' ಚಿತ್ರಗಳಲ್ಲಿ ನಡೆದಿದ್ದವು.

ಕಲ್ಪನಾ 'ಇಮ್ಮಡಿ ಪುಲಕೇಶಿ' ಚಿತ್ರದಲ್ಲಿ, ಬಿ.ಸರೋಜದೇವಿ 'ಅಮರ ಶಿಲ್ಪಿ ಜಕಣಾಚಾರಿ', ಭಾರತಿ 'ಶ್ರೀಕೃಷ್ಣದೇವರಾಯ', ಮಂಜುಳಾ 'ಗುರುಶಿಷ್ಯರು', 'ಹಾಸ್ಯರತ್ನ ರಾಮಕೃಷ್ಣ', ಜಯಂತಿ 'ಕುಲಗೌರವ', 'ಕಲಾವತಿ', ಲೀಲಾವತಿ 'ರಣಧೀರ ಕಂಠೀರವ', ಜಯಪ್ರದ 'ಸನಾದಿ ಅಪ್ಪಣ್ಣ', ಮಾಧವಿ 'ಮಲಯ ಮಾರುತ', 'ಆನಂದ ಭೈರವಿ' ಚಿತ್ರದಲ್ಲಿ ಮಾಳವಿಕ, 'ರಾಗತಾಳ' 'ಸಂಗೀತಾ' ಚಿತ್ರದಲ್ಲಿ ಜಯಮಾಲಾ, ರೇಖಾರಾವ್ 'ಹಂಸಗೀತೆ'ಯಲ್ಲಿ ನರ್ತಕಿಯರ ಪಾತ್ರದಲ್ಲಿ ಮಿಂಚಿದ್ದಾರೆ. ಅಲ್ಲಿ ಸಂಪೂರ್ಣವಾಗಿ ಶಾಸ್ತ್ರೀಯ ನೃತ್ಯದ ಬಳಕೆ ಆಗಿದೆಯೆಂದು ಹೇಳಲು ಬರದಾದರೂ ಆ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನವಂತೂ ಆಗಿದೆ ಎನ್ನಬಹುದು. ಶಾಸ್ತ್ರೀಯ ನೃತ್ಯದಲ್ಲಿ ದೇಹ, ಮನಸ್ಸು, ಲಯ-ಗತಿ ಎಲ್ಲದರ ಸಂಪೂರ್ಣ ಮಿಲನ ಸಾಧ್ಯವಾಗದಿದ್ದರೆ ನೋಡುವವರಿಗೆ ಆಭಾಸವೆನಿಸುತ್ತದೆ ಎಂಬುದನ್ನು ಕೆಲವು ನೃತ್ಯಗಳು ನಿರೂಪಿಸಿವೆ. ಜಯಂತಿ ಶಾಸ್ತ್ರೀಯ ನೃತ್ಯದಲ್ಲಿ ಪರಿಶ್ರಮವಿದರೂ ತುಸು ದಪ್ಪವಾಗಿದ್ದರಿಂದ 'ಕುಲಗೌರವ' ಚಿತ್ರದ 'ರಾಗ ನಿನ್ನದು ತಾಳ ನನ್ನದು' ನೃತ್ಯದಲ್ಲಿ ಸಹ್ಯವೆನಿಸುವುದಿಲ್ಲವಾದರೆ, 'ಇಮ್ಮಡಿ ಪುಲಕೇಶಿ'ಯಲ್ಲಿ ಕಲ್ಪನಾ ಅವರ ಚಲನೆ ಗತಿ ಆಕೆ ಅಮೃತವಾಗಿ ನಟಿಸಬಲ್ಲರೆ ಹೊರತು ನರ್ತಿಸಲಾರರು ಎಂದು ನಿರೂಪಿಸಿದೆ. ನೃತ್ಯದಲ್ಲಿ ಸಾಕಷ್ಟು ಪರಿಶ್ರಮವಿದ್ದ ಮಾಧವಿಗೆ 'ಮಲಯ ಮಾರುತ' ಜೀವಮಾನದ ಅತ್ಯಂತ ಅಮೂಲ್ಯ ಅವಕಾಶವಾಗಿತ್ತೆಂದು ಹೇಳಬಹುದು. ಆದರೆ ಅದೇಕೋ ಆಕೆಯ ನೃತ್ಯದಲ್ಲಿ ಜೀವಂತಿಕೆ ಹುಡುಕುವಲ್ಲಿ ಪ್ರೇಕ್ಷಕ ಹಾಗೂ ವಿಮರ್ಶಕರಾದಿಯಾಗಿ ಬಹುತೇಕ ಮಂದಿ ವಿಫಲರಾದರು. ಇಲ್ಲಿ ಸೋತ ಮಾಧವಿ 'ಪೈಟಿ', 'ಗರುಡರೇಖೆ' ಹಾಗೂ 'ಶಿವಕನ್ಯೆ'ಯ ನಾಗಕನ್ಯೆಯಾಗಿ ಮಿಂಚಿದು ವಿಶೇಷವಾದದ್ದು. ನಟರಲ್ಲಿ ರಾಜಕುಮಾರ್ (ಮೋಹಿನಿ ಭಸ್ಮಾಸುರ) ಮಿಂಚಿದ್ದು, ಶ್ರೀಧರ್ 'ಮಾನಸವೀಣೆ', ಕೊಲ್ಲೂರು ಮೂಕಾಂಬಿಕೆ', 'ಶಬರಿಮಲೆ ಅಯ್ಯಪ್ಪಸ್ವಾಮಿ' ಮೊದಲಾದ ಚಿತ್ರಗಳಲ್ಲಿ ಸೊಗಸಾಗಿ ನರ್ತಿಸಿ ತಾವು ನೃತ್ಯ ಕಲಾವಿದರೂ ಹೌದೆಂದು ನಿರೂಪಿಸಿದ್ದಾರೆ.

(ಚಿತ್ರ ೧೦) ಕರ್ನಾಟಕದ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ನೃತ್ಯ ಪ್ರಕಾರಗಳನ್ನು ಕನ್ನಡ ಚಿತ್ರಗಳಲ್ಲಿ ಅಳವಡಿಸುವ ಪ್ರಯತ್ನಗಳು ನಡೆದಿವೆ. ಯಕ್ಷಗಾನದ ಪಾತ್ರಧಾರಿ ಲೀಲಾವತಿ

'ಸಾಗರ ಸಂಗಮಂ', 'ಶಂಕರಾಭರಣಂ', 'ಸಿರಿವೆನ್ನಲ', 'ಸಿರಿಸಿರಿ ಮುವ್ವ' ಮುಂತಾದ ನೃತ್ಯ ಪ್ರಧಾನ ತೆಲುಗು ಚಿತ್ರಗಳು ಕರ್ನಾಟಕದಲ್ಲಿಯೂ ಅಪಾರ ಜನಪ್ರಿಯತ ಪಡೆದವು. ಇದೇ ರೀತಿಯ ಜನಪ್ರಿಯತೆ ಕನ್ನಡದ ಯಾವೊಂದು ಚಿತ್ರಕ್ಕೂ ಲಭಿಸಿಲ್ಲವೆಂದೇ ಹೇಳಬಹುದು. ಅಂಥ ನೃತ್ಯ ಪ್ರಧಾನ ಚಿತ್ರಗಳು ಕನ್ನಡದಲ್ಲಿ ತಯಾರಾಗಿಲ್ಲ ಎಂದು ಹೇಳಬಹುದು.

ಸಾಮಾನ್ಯವಾಗಿ ಚಲನಚಿತ್ರಗಳಲ್ಲಿ ಉಡುಪು ಮತ್ತು ವಾದ್ಯಗಳ ಬಳಕೆಯಿಂದಷ್ಟೇ ಜಾನಪದ ನೃತ್ಯಗಳನ್ನು ಗುರುತಿಸಬೇಕಾಗಿದೆ. ಹಳೆಯ ಚಿತ್ರಗಳು ಹೊಸ ಚಿತ್ರಗಳು ಎರಡನ್ನೂ ತುಲನಾತ್ಮಕವಾದ ದೃಷ್ಟಿಯಿಂದ ನೋಡಿದಾಗ ಜಾನಪದ ನೃತ್ಯಗಳ ಧಾಟಿಯಲ್ಲಿ ಅಂತಹ ಮಾರ್ಪಾಡು ಆಗಿಲ್ಲವೆಂಬ ಅಂಶ ಎದ್ದು ಕಾಣುತ್ತದೆ. 'ಸಂತ ಶಿಶುನಾಳ ಷರೀಫ' ಚಿತ್ರದಲ್ಲಿ 'ಕೋಡಗನ ಕೋಳಿ ನುಂಗಿತ್ತಾ...' ಹಾಡಿಗೆ ನಟ ಶ್ರೀಧರ್ ಸೊಗಸಾಗಿ ಜಾನಪದ ಧಾಟಿಯ ನೃತ್ಯ ಮಾಡಿದ್ದಾರೆ. 'ವೀರಸಂಕಲ್ಪ'ದ 'ಸಿಟ್ಟ್ಯಾಕೋ ಸಿಡುಕ್ಯಾಕೋ ನನ ಜಾಣ...'ದ ವಾಣಿಶ್ರೀ ನರ್ತನ, 'ಭಲೇ ಬಸವ'ದ 'ಕಂಡ್ಯಾ ಕಂಡ್ಯೇನೋ ಬಸವಾ...'ದಲ್ಲಿ ಜಯಂತಿ ಚಿತ್ರದ ನಾಯಕ ಉದಯಕುಮಾರ್ ಅವರನ್ನು ಕಾಡುವ ಜಾನಪದ ಮೂಲದ ಗೀತೆಯ ನರ್ತನ. 'ವಿಜಯನಗರದ ವೀರಪುತ್ರ'ದ 'ಮಾತಿನ ಮಲ್ಲ ತೋರುತ ಹಲ್ಲ...'ದ ನರ್ತನ ಹಾಗೂ ತೀರ ಇತ್ತೀಚಿನ 'ಜನುಮದ ಜೋಡಿ'



(ಚಿತ್ರ ೧೧) ನಟ ಶ್ರೀಧರ್ ಭರತನಾಟ್ಯ ಪ್ರವೀಣರು. ಶಾಸ್ತ್ರೀಯ ನೃತ್ಯ ಸಂಯೋಜನೆಯಲ್ಲಿ ಪರಿಣತರೂ ಹೌದು.

ಚಿತ್ರದ ಹಾಡಿಗೆ ಅಳವಡಿಸಿದ ಕಂಸಾಳೆ ನೃತ್ಯ, 'ಜೋಡಿ ಹಕ್ಕಿ' ಚಿತ್ರದ ಲಂಬಾಣಿ ನೃತ್ಯದ ಸನ್ನಿವೇಶ, 'ಮಹಾಕವಿ ಕಾಳಿದಾಸ'ದಲ್ಲಿನ ಕೋಲಾಟ ಮೊದಲಾದವು ಈ ಮಾಧ್ಯಮದಲ್ಲಿ ಜಾನಪದ ನೃತ್ಯಗಳ ಬಳಕೆಗೆ ಉದಾಹರಣೆಗಳು. ಮೂಲ ಜಾನಪದ ಗೀತೆಗಳಲ್ಲಿ ಒಮ್ಮೊಮ್ಮೆ ಕೊಂಚ ಒರಟು ಎನ್ನಬಹುದಾದ ಭಾಷೆ ಇರುವುದರಿಂದ ಮಾಧ್ಯಮದಲ್ಲಿ ಅದನ್ನು ಅಳವಡಿಸುವಾಗ ಒಂದು ವರ್ಗದ ಪ್ರೇಕ್ಷಕನಿಗೆ ಅದು ಅಸಹ್ಯವೆನಿಸುವ ಸಾಧ್ಯತೆ ಇದ್ದೂ ಕೆಲವೊಂದು ವರ್ಗದ ಪ್ರೇಕ್ಷಕರನ್ನು ಮಾತ್ರ ಆ ರೀತಿಯ ನೃತ್ಯಗಳು ಹೆಚ್ಚು ರಂಜಿಸಿದವು.

ಆರಂಭದ ದಿನಗಳಿಂದ ಇತ್ತೀಚಿನವರೆಗೆ ಚಿತ್ರಗಳಲ್ಲಿ ನಾಗನೃತ್ಯಗಳನ್ನು ಬಳಸಿಕೊಳ್ಳಲಾಗಿದೆ. ಇದು ಒಂದು ವಿಶೇಷ ಪ್ರಕಾರವಾಗಿ ಬೆಳೆದು ಬಂದಿರುವುದು ನೃತ್ಯ ನಿರ್ದೇಶಕರ ಜಾಣ್ಮೆಯಿಂದ ಎಂದು ಹೇಳಬಹುದು. ಏಕೆಂದರೆ ಈ ನೃತ್ಯಕ್ಕೆ ನಿರ್ದಿಷ್ಟ ಕಟ್ಟುಪಾಡುಗಳು, ರೂಪುರೇಷೆಗಳು ಇಲ್ಲವಾದ್ದರಿಂದ ನೃತ್ಯ ನಿರ್ದೇಶಕರ, ನೃತ್ಯ ಪಟುವಿನ ಪ್ರತಿಭೆ ಹಾಗೂ ಅವರ ಸಾಮರ್ಥ್ಯಕ್ಕೆ ಅನುಸಾರವಾಗಿ ತೀವ್ರ ಚಲನೆಯನ್ನು, ಉದ್ರೇಕಕಾರಿ ಮಿಥುನ ಭಂಗಿಗಳನ್ನು ಅಳವಡಿಸಿಕೊಂಡಿದ್ದಾರೆ. ಈ ನಿಟ್ಟಿನಲ್ಲಿ 'ನಾಗಕನ್ನಿಕಾ'ದ ರಾಜಶ್ರೀ, 'ಶಿವಕನ್ಯೆ', 'ಗರುಡರೇಖೆ'ಯ ಮಾಧವಿ, 'ಆರಣ್ಯದಲ್ಲಿ ಅಭಿಮನ್ಯು'ವಿನ ಪೂನಂ ದಾಸ್‌ಗುಪ್ತಾ, 'ಪುಟಾಣಿ ಏಜೆಂಟ್ ೧, ೨, ೩'ನ ಸ್ವರ್ಣಮುಖಿ, 'ಖೈದಿ' ಚಿತ್ರದ ವಿಷ್ಣುವರ್ಧನ್, 'ಶಿವನಾಗ'ದ ಅರ್ಜುನ್‌ಸರ್ಜಾ ಗಮನ ಸೆಳೆದರೆ, 'ನಾಗಿಣಿ'ಯ ಗೀತಾ ವಿಫಲರಾಗಿದ್ದಾರೆ ಎನ್ನಬಹುದು. 'ಗರುಡ ರೇಖೆ' ಚಿತ್ರದಲ್ಲಿ ಎರಡು ವಿಶೇಷ ನಾಗನೃತ್ಯಗಳಿವೆ. ಒಂದರಲ್ಲಿ ಸುಂದರ ದೈಹಿಕ ಚಮತ್ಕಾರದ ಬಳಕೆ ಇದ್ದರೆ ಮತ್ತೊಂದರಲ್ಲಿ ಉದ್ದನೆಯ ಕೊಳಲನ್ನು ನಾಲ್ವರು ನರ್ತಕಿಯರು ನರ್ತಿಸುತ್ತಾ ನುಡಿಸುತ್ತಾರೆ. ವಾಸ್ತವವಾಗಿ ಅದು ಸಾಧ್ಯವಿಲ್ಲವಾದರೂ ಆ ದೃಶ್ಯ ಸಂಯೋಜನೆ ಕಣ್ಣಿಗೆ ಮುದ ನೀಡುತ್ತದೆ. ಅದೇ ಹಾಡಿನಲ್ಲಿ ನಗಾರಿ ಬಾರಿಸುವ, ಇನ್ನೂ ಮುಂತಾದ ಚಮತ್ಕಾರವನ್ನು ನೃತ್ಯ ನಿರ್ದೇಶಕರು ಸಮರ್ಥವಾಗಿ ಸಂಯೋಜಿಸಿದ್ದಾರೆ.

ಅನೇಕ ಕನ್ನಡ ಚಿತ್ರಗಳ ಕರ್ನಾಟಕ ಸಂಸ್ಕೃತಿ, ಶ್ರೀಮಂತ ಪರಂಪರೆ ಮೊದಲಾದವುಗಳನ್ನು ಹಾಗೂ ಅನೇಕ ಸ್ಥಳೀಯ ನೃತ್ಯ ಪ್ರಕಾರಗಳನ್ನು ಸಮರ್ಥವಾಗಿ ಬಳಸಿಕೊಂಡಿದ್ದಾರೆ. ಭಾಷೆ, ಉಡುಗೆ, ನೃತ್ಯ ಪ್ರತಿಯೊಂದಲ್ಲೂ ಶ್ರೀಮಂತ ಪರಂಪರೆ ಹೊಂದಿರುವ ಸಂಸ್ಕೃತಿ ಕೊಡವ ಬಾಂಧವರದು. ಇದನ್ನು ನಮ್ಮ ನಿರ್ದೇಶಕರು ಹಾಗೂ ನೃತ್ಯ ನಿರ್ದೇಶಕರು ಸಮರ್ಥವಾಗಿ ಅಳವಡಿಸಿಕೊಂಡಿದ್ದಾರೆ. 'ಎಡಕಲ್ಲು ಗುಡ್ಡದ ಮೇಲೆ' ಚಿತ್ರದಲ್ಲಿ 'ಯಾವೂರವ್ವ ಇವ ಯಾವೂರವ್ವ...', 'ಶರಪಂಜರ'ದಲ್ಲಿ 'ಕಾವೇರಿ ಕೊಡಗಿನ ಕಾವೇರಿ...' ಹಾಗೂ 'ಮುತ್ತಿನ ಹಾರ' ಚಿತ್ರದಲ್ಲಿ 'ಕೊಡವರ ವೀರ ಬಲೆ ಗುರಿಕಾರ...' ಹಾಡೂ ಕೊಡವ ಭಾಷೆಯದೇ ಪಲ್ಲವಿ ಉಳ್ಳ 'ಮಡಿಕೇರಿ ಸಿಪಾಯಿ ಮುತ್ತುಕಾತ್ತು ಮರೇಲಿ...' ಗೀತೆಗಳ ಚಿತ್ರಣದಲ್ಲಿ ಕೊಡಗಿನ ನೃತ್ಯ, ಸಂಪ್ರದಾಯ, ವಿವಾಹ ರೀತಿ ರಿವಾಜುಗಳ ಸುಂದರ ಚಿತ್ರಣವಿದೆ. ಉಡುಪಿ ಜಯರಾಂ 'ಮುತ್ತಿನ ಹಾರ'ದ ಈ ಜಾನಪದ 'ಮಡಿಕೇರಿ ಸಿಪಾಯಿ...' ಹಾಡಿಗೆ ೧೯೪೦ರ ಕಾಲದ ನೃತ್ಯದ ಮಾದರಿಯನ್ನೇ ಬಳಸಿದ್ದಾರೆ. ಇಡೀ ನೃತ್ಯದಲ್ಲಿ ಕೈಗಳ ಚಲನೆಯೇ ಬಹಳ ಮುಖ್ಯ. ದೇಹದ ಚಲನೆಯಲ್ಲಿ ಅಂಥ ತೀವ್ರತರವಾದ ಚಲನೆಯನ್ನು ಕಾಣಲಾಗುವುದಿಲ್ಲ. ಉಡುಪಿ ಜಯರಾಂ ನೃತ್ಯವನ್ನು ಅತ್ಯಂತ ನೈಜವಾಗಿ, ಸಮರ್ಥವಾಗಿ ನಿರೂಪಿಸಿದ್ದಾರೆ.

ಕೊಡವರ ಸಂಸ್ಕೃತಿಯ ಜೊತೆಗೆ ದಟ್ಟ ಅರಣ್ಯಗಳಲ್ಲಿ ಇಡೀ ಬದುಕನ್ನು ಸವೆಸುವ ಸೋಲಿಗರ ಬದುಕಿನ ಚಿತ್ರಣವನ್ನು 'ಬಿಳಿಗಿರಿಯ ಬನದಲ್ಲಿ' ಚಿತ್ರದಲ್ಲಿ ನೃತ್ಯ ನಿರ್ದೇಶಕಿ ಉಷಾ ದಾತಾರ್ ಸೋಲಿಗರ ನೃತ್ಯದ ಮೂಲಕ ಮಾಡಿದ್ದರೆ, 'ಕಾಕನ ಕೋಟೆ'ಯಲ್ಲಿ ಕಾಡಿನ ಜನರ ಬದುಕನ್ನು ಬಿಂಬಿಸುವ ಹಾಡು 'ಕರಿ ಹೈದನೆಂಬೋನೆ ಮಾದೇಶ್ವರ...'ದ ಮೂಲಕ ಮಾಡಿದ್ದರೆ, 'ನಾಗರಹೊಳೆ'ಯಲ್ಲಿ ನಟಿ ಕಾಂಚನಾ 'ನಾಗರ ಹೊಳೆಯೋ ಅಮ್ಮಾಲೇ...' ಹಾಡುಗಳಲ್ಲಿ ಅತ್ಯಂತ ಸುಂದರವಾದ ನರ್ತನವಿದೆ. ಶಾಸ್ತ್ರೀಯ ನೃತ್ಯದಲ್ಲಿ ಪರಿಶ್ರಮ ಇದ್ದ ಕಾಂಚನ ಕಾಡಿನ ಕನ್ಯೆಯಾಗಿ ವಿಜೃಂಭಿಸಿದ ಈ ಹಾಡು ಹಾಗೂ ನೃತ್ಯ ದಶಕಗಳೇ ಕಳೆದರೂ ಪ್ರೇಕ್ಷಕರ ಮನಸ್ಸಿನಲ್ಲಿ ಅಚ್ಚಳಿಯದೆ ನಿಂತಿವೆ. ಕಾಂಚನ 'ಬಭ್ರುವಾಹನ' ಹಾಗೂ 'ಭಕ್ತ ಕುಂಬಾರ'ಗಳಲ್ಲಿ ನಿರ್ವಹಿಸಿದ ಶಾಸ್ತ್ರೀಯ ಮೂಲದ ನೃತ್ಯಗಳು ಆಕೆ ಉತ್ತಮ ನೃತ್ಯಗಾತಿಯೆಂಬುದನ್ನು ನಿರೂಪಿಸಿವೆ. ಇತ್ತೀಚಿನ 'ಭೂಮಿಗೀತ' ಚಿತ್ರದಲ್ಲಿ ಯುವ ನಿರ್ದೇಶಕಿ ಗಿರಿಜಾ ಕೂಡ ಕಾಡಿನ ಜನರ ನೃತ್ಯದ ಮಾದರಿಯನ್ನು ಅಳವಡಿಸಿದ್ದಾರೆ.

ಇದೇ ನಿಟ್ಟಿನಲ್ಲಿ ದಕ್ಷಿಣ ಕನ್ನಡದ ವಿಶೇಷವಾದ ಯಕ್ಷಗಾನವನ್ನು ನಿರ್ದೇಶಕ ಗಿರೀಶ್ ಕಾಸರವಳ್ಳಿ ಅವರು ತಮ್ಮ 'ಬಣ್ಣದ ವೇಷ' ಚಿತ್ರದಲ್ಲಿ ಸೊಗಸಾಗಿ ಅಳವಡಿಸಿದ್ದಾರೆ. ನೃತ್ಯಪಟು, ನಟ ಶ್ರೀಧರ್ ಈ ಚಿತ್ರದಲ್ಲಿ ಮಿಂಚಿದ್ದಾರೆ. ಯಕ್ಷಗಾನ ಪದ್ಧತಿಯ ತಾಂತ್ರಿಕ ಹಾಗೂ ಸಾಂಪ್ರದಾಯಿಕ ವಿಧಾನಗಳನ್ನು ಬಹಳ ಸೂಕ್ಷ್ಮವಾಗಿ ಕಣ್ಣಿಗೆ ಕಟ್ಟುವಂತೆ ತೋರಿಸುವ ಪ್ರಾಮಾಣಿಕ ಪ್ರಯತ್ನ ಗಿರೀಶ್ ಅವರದು.

ಶಾಸ್ತ್ರೀಯ ನೃತ್ಯ, ಜಾನಪದ ನೃತ್ಯ ಇವೆಲ್ಲದರ ಜೊತೆಗೆ ಕೆಲವೊಮ್ಮೆ ವಿಶೇಷವೆನಿಸುವ ಪ್ರಯತ್ನಗಳು ನಡೆದಿವೆ. 'ಹಾವಿನ ಹೆಡೆ'ಯಲ್ಲಿ 'ಬಿಸಿ ಬಿಸಿ

(ಚಿತ್ರ ೧೨) ಜಾತ್ರೆಯಲ್ಲಿ ಜಾನಪದ ಮೇಳ - ಜನುಮದ ಜೋಡಿ

(ಚಿತ್ರ ೧೩) ಲಾಮಾ ಕ್ಯಾಂಪ್‌ನಲ್ಲಿ ಧಾರ್ಮಿಕ ನೃತ್ಯ ಅಂಬರೀಷ್, ಸುಮನ್ ರಂಗನಾಥ್, ಎಂ.ಪಿ.ಶಂಕರ್

ಕಜ್ಜಾಯ...' ಹಾಡಿಗೆ ಕೆಲವು ಕಡೆ ಭರತನಾಟ್ಯದ ನಡೆಗಳನ್ನು ಆಕರ್ಷಕವಾದ ರೀತಿಯಲ್ಲಿ ಅಳವಡಿಸಲಾಗಿದೆ. ರಾಜಕುಮಾರ್ ಬಹಳ ಅಚ್ಚುಕಟ್ಟಾಗಿ ಈ ನೃತ್ಯವನ್ನು ನಿರ್ವಹಿಸಿ ಪ್ರೇಕ್ಷಕರನ್ನು ರಂಜಿಸಿದ್ದಾರೆ. ಇದೇ ರೀತಿ ಮಂಜುಳಾ 'ಭಲೇ ಹುಡುಗ' ಚಿತ್ರದಲ್ಲಿ 'ಹಬ್ಬ ಮಾಡ್ತೀನಿ ಬಾರೋ ಸುಬ್ಬರಾಯನೇ' ಹಾಡಿಗೆ ನರ್ತಿಸಿದರೆ, ತಾರೆ ಮಹಾಲಕ್ಷ್ಮಿ 'ಬಾರೆ ನನ್ನ ಮುದ್ದಿನ ರಾಣಿ'ಯಲ್ಲಿ ಹಳೆಯ ಚಿತ್ರಗೀತೆಗಳಿಗೆ ಚೆನ್ನಾಗಿ ಹೆಜ್ಜೆ ಹಾಕಿದ್ದಾರೆ.

ಇದೇ ನಿಟ್ಟಿನಲ್ಲಿ ಪ್ರಭಾಕರ್-ಹಲಂ ಜೋಡಿ 'ಮಳೆ ಬಿಲ್ಲ ಬಣ್ಣ ಚೆಂದ' ಹಾಡಿಗೆ ಮಾಡಿದ ಭಾಂಗ್ಡನೃತ್ಯ (ಚಿತ್ರ: ಪಟ್ಟಣಕ್ಕೆ ಬಂದ ಪತ್ನಿಯರು) ಒಂದು ವಿಶೇಷ ಕೊಡುಗೆ. ಇದೇ ಪ್ರಭಾಕರ್ 'ಮುದುಡಿದ ತಾವರೆ ಅರಳಿತು' ಚಿತ್ರದಲ್ಲಿ 'ವಿವಾಹ ಬಾಳಿಗೆ ಹೊಂಗಿರಣ...' ಹಾಡಿಗೆ ಕವ್ವಾಲಿ ಮಾದರಿಯ ನೃತ್ಯಕ್ಕೆ ಹೆಜ್ಜೆ ಹಾಕಿದರೆ, ಮಂಜುಳಾ 'ಹೊಸತೀರ್ಪು' ಚಿತ್ರದಲ್ಲಿ, ಜಯಮಾಲ 'ಪ್ರೇಮವೇ ಬಾಳಿನ ಬೆಳಕು' ಚಿತ್ರದಲ್ಲಿ, ಕಲ್ಪನಾ 'ಕೆಸರಿನ ಕಮಲ' ಚಿತ್ರದಲ್ಲಿ, ರಂಗಭೂಮಿ ಕಲಾವಿದೆ ಚಿಂದೋಡಿ ಲೀಲಾ 'ಕಿತ್ತೂರು ಚೆನ್ನಮ್ಮ' ಚಿತ್ರದಲ್ಲಿ ಘರ್‌ವಾಲಿ ಸಂಸ್ಕೃತಿಯ ಕವ್ವಾಲಿಗಳಲ್ಲಿ ಭಾಗವಹಿಸಿರುವುದು ವಿಶೇಷವೆನಿಸುತ್ತದೆ.

ಕಥಕ್ ಶೈಲಿಯ ಸಂಯೋಜನೆಯಲ್ಲಿ ಚಿತ್ರಿತವಾದ 'ಸಿಪಾಯಿ ರಾಮು' ಚಿತ್ರದಲ್ಲಿ ಆರತಿ 'ವಹಾರೆ ಮೇರಾ ಮುರುಗ' ಹಾಗೂ ಅದೇ ಶೈಲಿಯಲ್ಲಿ ನರ್ತಿಸಿರುವ 'ಒಂದೇ ರೂಪ ಎರಡು ಗುಣ' ಚಿತ್ರದ 'ಓ ಉಡಾಳ ಸರಾಳ' ಎರಡೂ ಈ ನೃತ್ಯ ಶೈಲಿಗೆ ಉತ್ತಮ ಉದಾಹರಣೆಗಳು.

ಮಕ್ಕಳನ್ನು ದೃಷ್ಟಿಯಲ್ಲಿಟ್ಟುಕೊಂಡು ಸಾಕಷ್ಟು ನೃತ್ಯರೂಪಕಗಳನ್ನು ಈ ಮಾಧ್ಯಮ ಮಕ್ಕಳಿಗೆ ಕೊಡುಗೆಯಾಗಿ ನೀಡಿದೆ. 'ಜನ್ಮ ರಹಸ್ಯ' ಚಿತ್ರದಲ್ಲಿ ಕಾಡುಪ್ರಾಣಿಗಳ ಪಾತ್ರಗಳ ಮೂಲಕ 'ಕಾವೇರಿ ತೀರದಲ್ಲಿ ಒಂದು ಕಾಡು...' ಗೀತೆಯನ್ನು ಸೃಷ್ಟಿಸಿ ನೃತ್ಯ ಸಂಯೋಜಿಸಿದರೆ, 'ದೊಂಬರ ಕೃಷ್ಣ' ಚಿತ್ರದ 'ಜಾಣ ನರಿಯ ಕಥೆ...', 'ಚಿನ್ನ ನಿನ್ನ ಮುದ್ದಾಡುವೆ' ಚಿತ್ರದ ಕಿಂದರ ಜೋಗಿ ಕಥೆ, 'ಸ್ಕೂಲ್ ಮಾಸ್ಟರ್' ಚಿತ್ರದ 'ಬನ್ನಿರೈ ಬನ್ನಿರೈ...', 'ನಮ್ಮ ಮಕ್ಕಳು' ಚಿತ್ರದ 'ತಾರೆಗಳ ತೋಟದಿಂದ ಚಂದಿರ ಬಂದ...', 'ಸುವರ್ಣ ಸೇತುವೆ' ಚಿತ್ರದ ಬೇಬಿ ರೇಖಾ ಅಭಿನಯದ 'ಮಲ್ನಾಡಿನ ಮೂಲೆನಾಗೆ...', 'ತಾಯಿಯ ಹೊಣೆ' ಚಿತ್ರದ 'ನಾಡ ಚರಿತೆ ನೆನಪಿಸುವ...', 'ನನ್ನ ದೇವರು' ಚಿತ್ರದ ಸತ್ಯ ಹರಿಶ್ಚಂದ್ರ-ಚಂದ್ರಮತಿಯರ ಕಥೆ, 'ಮಧುರ ಸಂಗಮ'ದ ಕುಮಾರ ರಾಮನ ಕಥೆ, 'ಪುಟಾಣಿ ಏಜೆಂಟ್ ೧, ೨, ೩' ಚಿತ್ರದ 'ಕೂ ಕೂ ಕೂ ಕೂ ಎನ್ನುತ ಹಾಡೋಣ...', 'ದಂಗೆ ಎದ್ದ ಮಕ್ಕಳು' ಚಿತ್ರದ 'ಸ್ವಾಗತವು ನಿಮಗೆ ಸುಸ್ವಾಗತವು ನಿಮಗೆ...', 'ಮಕ್ಕಳ ಭಾಗ್ಯ' ಚಿತ್ರದ 'ಗುಡಿಯಲಿರುವ ಶಿಲೆಗಳೆಲ್ಲ...' ಹೀಗೆ ಮಕ್ಕಳಿಗಾಗಿ ಆಕರ್ಷಕ ರೀತಿಯಲ್ಲಿ ನೃತ್ಯ ಸಂಯೋಜನೆ ಮಾಡಲಾಗಿದೆ. 'ತಬ್ಬಲಿಯು ನೀನಾದೆ ಮಗನೆ' ಚಿತ್ರದ ಪ್ರಾರಂಭಿಕ ಹಂತದಲ್ಲಿ ಸಂಯೋಜಿಸಿರುವ ಪುಣ್ಯಕೋಟಿಯ ಕಥೆಯಂತೂ ಹೆಸರಾದದ್ದು. ಈ ಮೇಲಿನ ಎಲ್ಲಾ ನೃತ್ಯರೂಪಕಗಳೂ ನೃತ್ಯ ನಿರ್ದೇಶಕ ಹಾಗೂ ನಿರ್ದೇಶಕರ ಪ್ರಾಮಾಣಿಕ ಪ್ರಯತ್ನಗಳೆಂದು ಹೇಳಬಹುದು.

ಚಿತ್ರ ನಿರ್ದೇಶಕ ಪ್ರತಿಭಾವಂತನಾದರೆ ಒಂದೇ ಒಂದು ನೃತ್ಯದ ಮೂಲಕವೋ ಅಥವಾ ನೃತ್ಯರೂಪಕದ ಮೂಲಕವೋ ಜನತೆಗೆ ಒಳ್ಳೆಯ ಸಂದೇಶಗಳನ್ನು ನೀಡಬಹುದು. ಚಿತ್ರ ನಿರ್ದೇಶಕ, ನೃತ್ಯನಿರ್ದೇಶಕ, ಸಂಗೀತ ಸಂಯೋಜಕ, ಗೀತರಚನೆಕಾರ ಒಟ್ಟಾಗಿ ಚರ್ಚಿಸಿ ನಿರ್ಮಿಸಿದ ನೃತ್ಯಗಳು ಸಾರ್ವಕಾಲಿಕ ಯಶಸ್ಸನ್ನು ಪಡೆಯುತ್ತವೆ ಎಂಬುದು 'ನಾಗರ ಹಾವು' ಚಿತ್ರದ ಒನಕೆ ಓಬವ್ವನ ಕಥೆಯಿಂದ ನಿರೂಪಿತವಾಗಿದೆ. ಈ ಚಿತ್ರದ ನಾಲ್ಕು ಪ್ರಮುಖ ಪಾತ್ರಧಾರಿಗಳನ್ನು ಮೀರಿ ನಿಂತ ಪಾತ್ರವಾಗಿ ಓಬವ್ವಳ ಪಾತ್ರದಲ್ಲಿ ಜಯಂತಿ ನೆನಪಿನಲ್ಲಿ ಉಳಿಯುತ್ತಾರೆ. ಅದೇ ರೀತಿಯ ಪ್ರಯತ್ನ 'ಮಸಣದ ಹೂ' ಚಿತ್ರದ್ದು. 'ಕನ್ನಡ ನಾಡಿನ ಕರಾವಳಿ...' ಗೀತೆ ಕರ್ನಾಟಕದ ಹಿರಿಮೆಯೊಂದಿಗೆ ಶಾಸ್ತ್ರೀಯ ನೃತ್ಯದಲ್ಲಿ ಪರಿಣತರಾದ ನಟಿ ಹೇಮಾಚೌಧರಿಯ ಪ್ರತಿಭೆಯನ್ನು ನೃತ್ಯದ ಮೂಲಕ ಪ್ರೇಕ್ಷಕರಿಗೆ ಪರಿಣಾಮಕಾರಿಯಾಗಿ ಪರಿಚಯಿಸುತ್ತದೆ. 'ಸುಪ್ರಭಾತ' ಚಿತ್ರದಲ್ಲಿ ನಾಯಕ ವಿಷ್ಣುವರ್ಧನ್ ಜನರಿಂದ ದೂರವಾಗಿ ಇರಲು ಬಯಸಿ, ಯಾರ ಹಂಗೂ ಬೇಡವೆಂದು ಕ್ಷಣ ಕಾಲ ಜಗತ್ತಿನ ಇರುವಿಕೆಯನ್ನೇ ಮರೆತು ನಲಿದಾಡುವ ಚಿತ್ರಣ ಬಹಳ ಹೃದಯಸ್ಪರ್ಶಿಯಾಗಿ ಮೂಡಿಬಂದಿದೆ.

ಐವತ್ತರ ದಶಕದಲ್ಲಿ ಅನೇಕ ಸಂಗೀತ ಪ್ರಧಾನವಾದ ಚಿತ್ರಗಳು ತೆರೆಗೆ ಬಂದವು. ವಾಗ್ಗೇಯಕಾರರ ಅನೇಕ ಕೃತಿಗಳನ್ನು ಚಲನಚಿತ್ರಗಳಲ್ಲಿ ಬಳಸಿಕೊಳ್ಳಲಾಯಿತು. ಆ ಸಂದರ್ಭದಲ್ಲಿ ನೃತ್ಯಕ್ಕೆ ಪ್ರತ್ಯೇಕವಾದ ಸ್ಥಾನ ಇರಲಿಲ್ಲ. ಅದೂ ಅಲ್ಲದೆ ಸಂಗೀತದ ಭಾವಕ್ಕೆ ಮುಖದಲ್ಲೇ ಭಾವನೆ ವ್ಯಕ್ತಪಡಿಸುತ್ತಿದ್ದುದರಿಂದ ನೃತ್ಯದ ಬಗ್ಗೆ ಹೆಚ್ಚೇನೂ ಹೇಳಲೂ ಆಗದು.

ಅರುವತ್ತರ ದಶಕದಲ್ಲಿ ಸಿನಿಮಾ ಮಾಧ್ಯಮ ಪೌರಾಣಿಕ ಹಾಗೂ ಐತಿಹಾಸಿಕ ಹಿನ್ನೆಲೆಯ ಚಿತ್ರಗಳಿಗೆ ಮಹತ್ವ ನೀಡಿದುದರ ಪರಿಣಾಮವಾಗಿ ನೃತ್ಯದ ಪರಿಕಲ್ಪನೆ ಪ್ರಾರಂಭವಾಯಿತು ಎನ್ನಬಹುದು. ದಕ್ಷಿಣದ ಶಾಸ್ತ್ರೀಯ ನೃತ್ಯಪ್ರಕಾರಗಳಾದ ಭರತನಾಟ್ಯ, ಕೂಚುಪುಡಿ ಶೈಲಿಗಳನ್ನು ಹಲವಾರು ಸಂದರ್ಭಗಳಲ್ಲಿ ಅವುಗಳ ಮೂಲ ಸ್ವರೂಪಕ್ಕೆ ಧಕ್ಕೆ ಬಾರದ ರೀತಿಯಲ್ಲಿ ಸಂಯೋಜಿಸಲಾಯಿತು. ಈ ದಶಕದಲ್ಲಿ ನಮ್ಮ ಜಾನಪದ ನೃತ್ಯವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲಾಗಿದೆ. ಇದೇ ಅವಧಿಯಲ್ಲಿ ಶಾಸ್ತ್ರೀಯ ಮಾಧ್ಯಮದಲ್ಲಿ ವಿಶ್ವವಿಖ್ಯಾತಿ ಪಡೆದಿದ್ದ ಕಮಲಾ ಲಕ್ಷ್ಮಣ್, ಎಲ್.ವಿಜಯಲಕ್ಷ್ಮಿ, ವೈಜಯಂತಿಮಾಲ, ಲಲಿತಾ, ಪದ್ಮಿನಿ, ರಾಗಿಣಿ ಮೊದಲಾದ ನೃತ್ಯ ಪರಿಣತರು ಸಿನಿಮಾರಂಗವನ್ನು ಪ್ರವೇಶಿಸಿದರು. ವೈಜಯಂತಿ, ಪದ್ಮಿನಿ ನಟಿಯರಾಗಿ ಖ್ಯಾತರಾದರೆ, ಕಮಲಾ ಲಕ್ಷ್ಮಣ್ ತಮ್ಮನ್ನು ಕೇವಲ ನೃತ್ಯ ಸನ್ನಿವೇಶಗಳಿಗೆ ಸೀಮಿತಗೊಳಿಸಿಕೊಂಡರು.

(ಚಿತ್ರ ೧೪) ಕ್ಯಾಬರ ಜ್ಯೋತಿಲಕ್ಷ್ಮೀ

ನೃತ್ಯ ಕಲಾವಿದೆಯರಂತೆ ಶ್ರೇಷ್ಠ ನೃತ್ಯ ಗುರುಗಳೂ ದಕ್ಷಿಣ ಭಾರತದ ಸಿನಿಮಾಗಳಲ್ಲಿ ಕೆಲಸ ಮಾಡಿದರು. ಅಂತಹ ಗುರುಗಳಲ್ಲಿ ದಂಡಾಯುಧಪಾಣಿ ಪಿಳ್ಳೆ, ವೆಂಪಟಿ ಪೆದ್ದ ಸತ್ಯಂ, ಪಿ.ಎಸ್.ಗೋಪಾಲಕೃಷ್ಣ, ಖ್ಯಾತ ಕಥಕ್ ನೃತ್ಯಪಟು ಗೋಪಿಕೃಷ್ಣ, ಎಂ.ಸಿ.ವೀರ್, ಸಿ.ಆರ್.ಕಣ್ಣನ್ ಮೊದಲಾದವರು ಮುಖ್ಯರು.

ಅರುವತ್ತರ ದಶಕದ ಕೊನೆಯ ಭಾಗದಲ್ಲಿ ಆಗ ಹಾಲಿವುಡ್‌ನಲ್ಲಿ ಸಾಕಷ್ಟು ಹೆಸರು ಮಾಡಿದ್ದ ಹಾಡುಗಾರ ಮತ್ತು ನೃತ್ಯ ಕಲಾವಿದ ಎಲ್ವಿಸ್ ಪ್ರೆಸ್ಲಿ ಅವರ ರಾಕ್ ಅಂಡ್ ರೋಲ್ ಮತ್ತು ಟ್ವಿಸ್ಟ್ ನೃತ್ಯ ಶೈಲಿ ಭಾರತೀಯ ಚಿತ್ರರಂಗವನ್ನು ಆಕ್ರಮಿಸಿಕೊಂಡಿತು. ಅದರ ಸೆಳೆತಕ್ಕೆ ಸಿಲುಕದಿದ್ದ ನೃತ್ಯ ನಿರ್ದೇಶಕರೇ ಕಡಿಮೆ. ಮಡಿವಂತಿಕೆಯಿಂದ ಹೊರಬಂದು ಹಲವು ನೃತ್ಯ ನಿರ್ದೇಶಕರು ತಮ್ಮ ಚಿತ್ರಗಳಲ್ಲಿ ಈ ಶೈಲಿಯನ್ನು ಅಳವಡಿಸಿಕೊಂಡರು. ಇದೇ ಸಂದರ್ಭದಲ್ಲಿಯೇ ಭಾರತೀಯ ಚಿತ್ರರಂಗದಲ್ಲಿ ಕ್ಯಾಬರೆ ಎನ್ನುವ ಪರಿಕಲ್ಪನೆ ಮೂಡಿ ಬಂದದ್ದು. ಕನ್ನಡದಲ್ಲಿ ಕ್ಯಾಬರೆಯನ್ನು ಪ್ರಥಮವಾಗಿ ಚಿತ್ರಿಸಿದ್ದು ದೊರೆ-ಭಗವಾನ್, ಕನ್ನಡದ ಪ್ರಥಮ ಬಾಂಡ್ ಚಿತ್ರ 'ಜೇಡರ ಬಲೆ'. ಎಲ್ವಿಸ್ ಪ್ರೀಸ್ಲಿಯಷ್ಟೇ ಪ್ರಭಾವ ಬೀರಿದ ಮತ್ತೊಬ್ಬ ಹಾಲಿವುಡ್ ನಟ ನೃತ್ಯ ಕಲಾವಿದ ಜೇಮ್ಸ್ ಕ್ಯಾಡ್ನಿಯನ್ನು ನಾವು ನೆನಪಿಸಿಕೊಳ್ಳಬೇಕು. ಇಲ್ಲಿಂದ ಮುಂದುವರೆದು ಟ್ವಿಸ್ಟ್, ರಾಕ್ ಅಂಡ್ ರೋಲ್ ಮಾದರಿಯ ನೃತ್ಯಗಳನ್ನು ನಟಿ ಬಿ.ವಿ.ರಾಧಾ ಸುಮಾರು ಚಿತ್ರಗಳಲ್ಲಿ ನಿರ್ವಹಿಸಿದ್ದಾರೆ. ಎಷ್ಟೋ ಚಿತ್ರಗಳಲ್ಲಿ ಒಂದು ಹಾಡು ಇರಲೇಬೇಕಾದ ಸಂದರ್ಭದಲ್ಲಿ ಬಿ.ವಿ.ರಾಧಾ ನರ್ತನವಿರುತ್ತಿತ್ತು. ಉಳಿದಂತೆ ಶೈಲಶ್ರೀ, ಜಯಕುಮಾರಿ ಕೂಡ ಅಂತಹ ನೃತ್ಯಗಳಲ್ಲಿ ಸಾಕಷ್ಟು ಬಾರಿ ನರ್ತಿಸಿದಾರೆ.

ಅರುವತ್ತರ ದಶಕದ ಎಲ್ಲ ಆವಿಷ್ಕಾರಗಳೂ ಎಪ್ಪತ್ತರ ದಶಕದಲ್ಲೂ ಮುಂದುವರಿದು ನಾಯಕಿಯರ ಜೊತೆಗೆ ನಾಯಕರಿಗೂ ವಿಸ್ತಾರವಾಗಿದ್ದು ಎಪ್ಪತ್ತರ ದಶಕದ ವಿಶೇಷಗಳಲ್ಲೊಂದು. ಯುಗಳಗೀತೆಗಳ ನೃತ್ಯ ಎನ್ನುವ ಹೊಸ ಟ್ರೆಂಡ್ ಆರಂಭವಾಗಿದ್ದು ಈ ದಶಕದಲ್ಲಿ. ಈ ಟ್ರೆಂಡ್ ಬಳಸಿಕೊಂಡು ಹಲವು ನಾಯಕರು ತಮ್ಮ ನೃತ್ಯದಿಂದಲೇ ಜನಪ್ರಿಯರಾದರು. ವಿಶೇಷವಾಗಿ ಹಿಂದಿಯ ಶಮ್ಮಿಕಪೂರ್ ಹಾಗೂ ತೆಲುಗಿನ ಎ.ನಾಗೇಶ್ವರರಾವ್. ಶಮ್ಮಿಕಪೂರ್ ತಮ್ಮ ವಿಶೇಷವಾದ ದೈಹಿಕ ಕುಲುಕುವಿಕೆಯಿಂದ ಹೆಸರಾದರು. ನಾಗೇಶ್ವರ ರಾವ್ ಶರೀರದ ಚಲನೆಗಳಿಗೆ ಬಹಳ ಸೊಗಸಾದ ಲಯದ ಹಿಡಿತವನ್ನು ತಂದರು. ಕನ್ನಡದಲ್ಲಿ ಈ ಪರಿಕಲ್ಪನೆಯನ್ನು ಸಮರ್ಥವಾಗಿ ಬಳಸಿಕೊಂಡವರು ವಿಷ್ಣುವರ್ಧನ್. ಇದೇ ಸಂದರ್ಭದಲ್ಲಿ ಸ್ಲೋಮೋಷನ್ ಎನ್ನುವ ತಾಂತ್ರಿಕತೆಯನ್ನೂ ನಿರ್ದೇಶಕ ಪುಟ್ಟಣ್ಣ ಕಣಗಾಲ್ ಕನ್ನಡ ಸಿನಿಮಾಕ್ಷೇತ್ರಕ್ಕೆ ಪರಿಚಯಿಸಿದರು. 'ನಾಗರ ಹಾವು' ಚಿತ್ರದ 'ಬಾರೆ ಬಾರೆ ಚಂದದ ಚೆಲುವಿನ ತಾರೆ' ಹಾಡನ್ನು ಪೂರ್ಣವಾಗಿ ಸ್ಲೋ-ಮೋಷನ್ ತಂತ್ರದೊಂದಿಗೆ ಚಿತ್ರಿಸಿದರು. ಇದೇ ತಾಂತ್ರಿಕತೆಯನ್ನು ಒಂದು ಹಾಡಿಗೆ ತೊಂಬತ್ತರ ದಶಕದಲ್ಲಿ ಹಿಂದಿ ಚಿತ್ರ 'ಜೋ ಜೀತಾ ಹೈ ವಹೀ ಸಿಕಂದರ್' ಚಿತ್ರದಲ್ಲಿ ಬಳಸಲಾಯಿತು. ನಾಯಕ ಅಮೀರ್‌ಖಾನ್‌ನಿಂದ ಹಿಡಿದು ಬಹಳ ಮಂದಿಗೆ ಪ್ರಿಯವೆನಿಸಿದ ಆ ತಾಂತ್ರಿಕತೆಯನ್ನು ಕನ್ನಡದಲ್ಲಿ ಇಪ್ಪತ್ತು ವರ್ಷದ ಹಿಂದೆಯೇ ಯಶಸ್ವಿಯಾಗಿ ಬಳಸಿದ್ದರು.

ನರ್ತಕಿ ತೊಡುವ ಉಡುಗೆ, ತೊಡುಗೆ, ಅಸಹಜವೆನ್ನುವ ಮುಖ ಲಕ್ಷಣ ಇವಲ್ಲದರಿಂದ ಕ್ಯಾಬರೆ ಒಂದು ನೃತ್ಯ ಪ್ರಕಾರವಾಗಿ ಬೆಳೆಯದೇ ನಾಯಕ ಬೇಸರವಾದಾಗ, ಮದ್ಯವ್ಯಸನಿಯಾದಾಗ, ಖಳನಾಯಕನನ್ನು ಸಂಧಿಸಲು ಬರುವಾಗ, ಚಿತ್ರದ ಓಟದ ಮಧ್ಯದಲ್ಲಿ ಬಲವಂತವಾಗಿ ತುರುಕಲಾಗುವ ನೃತ್ಯವಾಗಿ ಬಳಕೆಯಾಗಿದೆ. ಕೆಲವೊಮ್ಮೆ ಪ್ರೇಕ್ಷಕನ ಕಣ್ಣು ತಣಿಸುವ, ಗಲ್ಲಾಪೆಟ್ಟಿಗೆ ತುಂಬಿಕೊಳ್ಳುವ ಸಲುವಾಗಿ ಮಾತ್ರ ಕ್ಯಾಬರೆಯ ಬಳಕೆಯಾಗಿದೆ. ಎಷ್ಟೋ ವೇಳೆ ಕ್ಯಾಬರೆ ಮಾಡುವ ನರ್ತಕಿ ಮನಸ್ಸಿಲ್ಲದಿದ್ದರೂ ಯಾರದೋ ಬಲವಂತಕ್ಕೋ ಒತ್ತಡಕ್ಕೋ ಮಣಿದು ನರ್ತಿಸಬೇಕಾಗುತ್ತಿತ್ತು. ಈ ಮಾತನ್ನು ಅನೇಕ ಕ್ಯಾಬರೆ ನರ್ತಕಿಯರೇ ತಮ್ಮ ಮನದಾಳದಿಂದ ಹೇಳಿಕೊಂಡಿದ್ದಾರೆ.

'ಪರೋಪಕಾರಿ' (ವಿಜಯಲಲಿತ), 'ಕಸ್ತೂರಿ ನಿವಾಸ', 'ಕೌ ಬಾಯ್ ಕುಳ್ಳ' (ಜ್ಯೋತಿಲಕ್ಷ್ಮೀ, ಹಲಂ), 'ಶುಭ ಮಹೂರ್ತ' (ಅನುರಾಧಾ), ಹಿಂದಿ ಚಿತ್ರರಂಗದ ಖ್ಯಾತ ನೃತ್ಯ ತಾರೆ ಹೆಲನ್ 'ಭಲೇ ಹುಚ್ಚ' ಚಿತ್ರದಲ್ಲಿ ಕ್ಯಾಬರೆ ಮಾಡಿದರೆ, ಜಯಶ್ರೀ.ಟಿ 'ಕೌಬಾಯ್ ಕುಳ್ಳ' ಚಿತ್ರದಲ್ಲಿ ಕ್ಯಾಬರೆ ಮಾಡಿರುವುದು ವಿಶೇಷ. 'ಪ್ರಚಂಡ ಕುಳ್ಳ'ದ ಸಿಲ್ಕ್‌ಸ್ಮಿತಾ, 'ಸಿಂಹಜೋಡಿ'ಯ ಜಯಮಾಲಿನಿ, 'ಮಿಸ್ಟರ್ ರಾಜ'ದ ಡಿಸ್ಕೋ ಶಾಂತಿ ಹೀಗೆ ಕ್ಯಾಬರೆ ನರ್ತಕಿಯರ ಪ್ರತಿಭಾ ಸಂಗಮವೇ ಕನ್ನಡದಲ್ಲಾಗಿದ. ಇವರಲ್ಲಿ ಹಲವರು ಒಳ್ಳೆಯ ಅಭಿನೇತ್ರಿಯರೂ ಆಗಿದ್ದರು. ಇದಕ್ಕೆ ಪೂರಕವಾಗಿ ಖ್ಯಾತ ಕ್ಯಾಬರೆ ನರ್ತಕಿ ಡಿಸ್ಕೋ ಶಾಂತಿ ಹೇಳುತ್ತಾರೆ : ''ಕೇವಲ ನರ್ತನಕ್ಕೆ ಮಾತ್ರ ನಾನು ಮೀಸಲಿಲ್ಲ. ಒಳ್ಳೇ ಪಾತ್ರಗಳಲ್ಲಿ ಅಭಿನಯಿಸುವ ಆಸೆ ಇದೆ. ಅವಕಾಶವಿಲ್ಲ, ಚಿತ್ರರಂಗದಲ್ಲಿ ಅದೃಷ್ಟ ಮುಖ್ಯ. ಪ್ರತಿ ಚಿತ್ರದಲ್ಲೂ ಛಾಯಾಗ್ರಾಹಕ, ನಿರ್ದೇಶಕ ಇಡುವ ಕೋನಗಳು ಮುಖ್ಯ. ಇದಕ್ಕೆ ಪೂರಕವಾಗಿ ನಮ್ಮ ಬೆಂಬಲ, ಪ್ರತಿಭೆ, ಕಾಲವೂ ಸಹಾಯಕ. ನೃತ್ಯ ಭಂಗಿಗಳು ಅತಿ ಸೆಕ್ಸಿಯಾಗಿದ್ದರೆ ಅದಕ್ಕೆ ನರ್ತಕಿ ಬಾಧ್ಯಳಲ್ಲ. ನೃತ್ಯ ಸಂಯೋಜಕ ಯಾವ ರೀತಿ ಮೂವ್‌ಮೆಂಟ್ ಕಲಿಸುತ್ತಾರೋ ತದ್ರೂಪ ಮಾಡಿ ತೋರಿಸುವುದಷ್ಟೇ ನಮ್ಮ ಕೆಲಸ. ಯಾರೂ 'ಓವರ್ ಸೆಕ್ಸೀ ನೃತ್ಯ' ಮಾಡಲು ಬಯಸುವುದಿಲ್ಲ. ನಾವು ಅಸಹಾಯಕರು. ಈ ವೃತ್ತಿಗೆ ಬಂದ ಮೇಲೆ ಎಲ್ಲದಕ್ಕೂ ಹೊಂದಿಕೊಳ್ಳಬೇಕು' ಎಂದು ಅಭಿಪ್ರಾಯ ಪಡುತ್ತಾರೆ.

ಎಪ್ಪತ್ತು ಹಾಗೂ ಎಂಬತ್ತರ ದಶಕದಲ್ಲಿ ಅನಿವಾರ್ಯವೆನಿಸಿದ್ದ ಕ್ಯಾಬರೆ ತೊಂಬತ್ತರ ದಶಕದಲ್ಲಿ ಕಡಿಮೆಯಾಗುತ್ತಾ ಬಂದಿದೆ. ಇದಕ್ಕೆ ಕಾರಣ ಪ್ರೇಕ್ಷಕರ ಅಭಿರುಚಿ ಬದಲಾಗಿದೆ ಎಂದು ಹೇಳುವುದಕ್ಕಿಂತ ನಾಯಕಿಯರೇ ಈ ವೃತ್ತಿಯನ್ನು ಹಿಡಿದಿರುವುದೇ ಕಾರಣವೆನ್ನಬಹುದು.'ಕ್ಯಾಬರೆ ಅಭಿನಯಕ್ಕೆ-ಕಲಾವಿದರ ಕಲಾವಂತಿಕೆಗೆ ಕಚಗುಳಿ ಇಡುವ ಕ್ರಿಯೆ. ಆದರ ಇವು ಪುನರಾವರ್ತನೆಯಾದಾಗ ಯಾಂತ್ರೀಕೃತಗೊಂಡು ಏಕತಾನೀಯವಾಗಿಬಿಡುತ್ತದೆ. ಅಂಥ ಯಾಂತ್ರಿಕ ಅಭಿನಯ ಕಲಾವಿದರ ಬೆಳವಣಿಗೆಗೆ ಅಪಾಯಕಾರಿಯಾಗಿ ಬಿಡುವ ಸಂಭವ ಹೆಚ್ಚು' ಎನ್ನುತ್ತಾರೆ ಖ್ಯಾತ ಕ್ಯಾಬರೆ ನರ್ತಕಿ ಹಾಗೂ ನೃತ್ಯ ಸಂಯೋಜಕಿ ಅನುರಾಧ. ಎಪ್ಪತ್ತರ ದಶಕದಲ್ಲೂ ಜಯಂತಿ, ಬಿ.ವಿ.ರಾಧಾ, ಕ್ಯಾಬರೆ ಮಾಡಿದ್ದರು. 'ಅಂತ' ಚಿತ್ರದಲ್ಲಿ ಜಯಮಾಲಾ, 'ಆಪರೇಷನ್ ಅಂತ'ದಲ್ಲಿ ತಾರಾ ಕ್ಯಾಬರೆ ಮಾಡಿ ಬೆರಗುಗೊಳಿಸಿದ್ದಾರೆ. ಶಾಸ್ತ್ರೀಯ ಸಂಗೀತ ಮತ್ತು ನೃತ್ಯವನ್ನು ಪ್ರಧಾನ ವಸ್ತುವಾಗಿರಿಸಿಕೊಂಡು ತೆರೆಗೆ ಬಂದ 'ಮಲಯ ಮಾರುತ' ಚಿತ್ರದಲ್ಲಿ 'ಎಲ್ಲಾರು ಮಾಡುವುದು ಹೊಟ್ಟೆಗಾಗಿ...' ಎಂಬ ದಾಸರ ಕೃತಿಗೆ ನಿರ್ದೇಶಕ ರವೀ, ನೃತ್ಯ ನಿರ್ದೇಶಕ ಉಡುಪಿ ಜಯರಾಂ ಕ್ಯಾಬರೆ ಅಳವಡಿಸಿದ್ದನ್ನು ಒಂದು ವರ್ಗದ ಪ್ರೇಕ್ಷಕರು ಒಪ್ಪದೆ ಮಾಡಿದ ಗಲಾಟೆ ವಾಗ್ಗೇಯಕಾರರ ಕೃತಿಗಳಿಗೆ ಅಪಚಾರವೆಸಗುವ ಅಂಥ ಪ್ರಯತ್ನಗಳಿಗೆ ತೀವ್ರ ವಿರೋಧ ಬರುತ್ತದೆ ಎಂಬುದನ್ನು ತೋರಿಸಿಕೊಟ್ಟಿತು. ನಿರ್ದೇಶಕ ಆ ಕ್ಯಾಬರೆ ನರ್ತಕಿಯಿಂದ ಸಮಾಜಕ್ಕೆ ನೀಡಲು ಪ್ರಯತ್ನಿಸಿದ ಸಂದೇಶದ ಸೂಕ್ಷ್ಮ ಫಲಪ್ರದವಾಗದೆ ಹೋಯಿತು. ಈ ನಿಟ್ಟಿನಲ್ಲಿ ಆ ನೃತ್ಯಕ್ಕೆ ಅಭಿನಯಿಸಿದ ಜಯಮಾಲಿನಿ ಹೀಗೆ ಹೇಳುತ್ತಾರೆ : ''ಆಭಾಸವಾದ ಉಡಿಗೆ ಕೂಡದು. ಆದರೆ ಕಟ್ಟುಮಸ್ತಾದ ಶರೀರವನ್ನು ಎತ್ತಿತೋರಿಸುವ ರೀತಿಯಲ್ಲಿ ಉಡುಪನ್ನು ನಾನು ಒಪ್ಪುತ್ತೇನೆ. ಹೆಣ್ಣು ಆಕರ್ಷಕವಾಗಿ ಕಾಣುವಂತೆ ಉಡುವ ಉಡುಪಿನಲ್ಲಿ ದೋಷವೇನಿದೆ ? ಈಪತ್ತಿನ ಸಮಾಜದಲ್ಲಿ ಎಷ್ಟು ಮಂದಿ ಆ ರೀತಿ ಉಡುಪಿನಲ್ಲಿಲ್ಲ ? ಚಿತ್ರ ನೋಡಲು ಬರುವವರಲ್ಲಿ ಅನೇಕರು ತತ್ವ, ನೀತಿ, ವಿನೋದಗಳಲ್ಲದೆ ಕಣ್ಣುಗಳಿಗೆ ಕೂಡಾ ಹಬ್ಬವನ್ನು ಬಯಸಿ ಬರುತ್ತಾರೆ. ಅಂಥವರಿಗೆ ಉಲ್ಲಾಸ ನೀಡುವ ಹಾಗೆ ನೃತ್ಯಗಳಿದ್ದರೆ, ಕೆಟ್ಟು ಹೋಗುವ ಮಾತೆಲ್ಲಿಂದ ಬರುತ್ತದೆ?''

(ಚಿತ್ರ ೧೫) ವ್ಯಾಯಾಮ ಶೈಲಿಯ, ಮೈ ಕೈ ಕುಲುಕಾಟದ ಸ್ವಚ್ಛಂದ ನೃತ್ಯ - ಬ್ರೇಕ್ ಡ್ಯಾನ್ಸ್. ಇಂದು ಯುವ ಪ್ರೇಕ್ಷಕರಿಗೆ ಅಚ್ಚುಮೆಚ್ಚು - ವನಿತಾವಾಸು, ವಿಷ್ಣುವರ್ಧನ್

ಇನ್ನು ಎಂಬತ್ತರ ದಶಕದಲ್ಲಿ ಸಿನಿಮಾ ಮಾಧ್ಯಮ ಕಂಡ ಬಹಳ ಪರಿಣಾಮಕಾರಿ ಬದಲಾವಣೆ ಸಮೂಹ ನೃತ್ಯ ಸಂಯೋಜನೆ. ಜಾನಪದ ನೃತ್ಯಗಳೆಂದು ಗುರುತಿಸಲ್ಪಟ್ಟಿದ್ದ ನೃತ್ಯಗಳು ಕ್ರಮೇಣ ವ್ಯಕ್ತಿಯೊಬ್ಬನನ್ನು ವೈಭವೀಕರಿಸುವ ಅಥವಾ ಆತನ ಗುಣಗಳನ್ನು ಕೊಂಡಾಡುವ ಪರಿಯೇ 'ಸಮೂಹ ನೃತ್ಯ'ದ ಪರಿಕಲ್ಪನೆಯಾಗತೊಡಗಿತು. ಚಲನಚಿತ್ರಗಳಲ್ಲಿಯೂ ತಾರಾಪದ್ಧತಿ ಬಂದ ಮೇಲೆ ಇಂತಹ ಸಾವಿರಾರು ಪ್ರಯತ್ನಗಳು ನಿರಂತರವಾಗಿ ನಡೆದಿವೆ.

ಇದೇ ನಿಟ್ಟಿನಲ್ಲಿ ಸುಗ್ಗಿಹಾಡು, ಫಸಲನ್ನು ಕೊಯ್ಯುವ ಸಂದರ್ಭ, ಊರದೇವಿಯ ರಥೋತ್ಸವ, ಗಣೇಶನ ಹಬ್ಬದ ಸಂದರ್ಭ ಈ ರೀತಿ ಸಮೂಹ ನೃತ್ಯ ಹೆಚ್ಚು ಹೆಚ್ಚಾಗಿ ದಾಖಲಾಗಲು ಕಾರಣವಾಯಿತು. ಹಿಂದಿನ ದಶಕಗಳಲ್ಲಿ ಈ ಪರಿಕಲ್ಪನೆ ಇತ್ತಾದರೂ ಅಲ್ಲಿ ಸಮೂಹ ನೃತ್ಯಕ್ಕೆ ತರ್ಕಬದ್ಧ ಕಾರಣ ಇರುತ್ತಿತ್ತು. ಉದಾಹರಣೆಗೆ 'ಬಂಗಾರದ ಮನುಷ್ಯ', 'ಕೂಡಿ ಬಾಳೋಣ', 'ಮಣ್ಣಿನ ಮಗ', 'ಬೂತಯ್ಯನ ಮಗ ಅಯ್ಯು' ಮೊದಲಾದ ಚಿತ್ರಗಳಲ್ಲಿ ಅಳವಡಿಸಲಾದ ಸುಗ್ಗಿಯ ಅಥವಾ ಊರದೇವಿಯ ಹಬ್ಬದ ಸಂದರ್ಭದ ನೃತ್ಯಗಳು. ಆದರೆ ಈ ಪರಿಕಲ್ಪನೆ ಹಾಳಾದದ್ದು ತೊಂಬತ್ತರ ದಶಕದಲ್ಲಿ. ಇತ್ತೀಚಿನ ದಿನಗಳಲ್ಲಿ ಕೇವಲ ಕಾಮದೃಶ್ಯಗಳ ವೈಭವೀಕರಣವೇ ಸಮೂಹ ನೃತ್ಯವೆಂದು ಪರಿಗಣಿತವಾಗುತ್ತಿದೆ.

ಇಂತಹ ಬದಲಾದ ಪರಿಸ್ಥಿತಿಯಲ್ಲೂ ನೃತ್ಯಕ್ಕಾಗಿ ವಿಶೇಷವೆನಿಸುವ ತಾಂತ್ರಿಕ ವಿಧಾನಗಳನ್ನು ಬಳಸಿ ಅತಿ ರಂಜನೀಯವಾಗಿ ಚಿತ್ರಿಸುವ ಪ್ರಯತ್ನ ತೊಂಬತ್ತರ ದಶಕದಲ್ಲಿ ಕಂಡುಬಂದಿದೆ. ಮೊದಲೆಲ್ಲ ಕ್ಯಾಮರಾ ಎದುರು ಇಡೀ ನೃತ್ಯ ನಡೆಯುತ್ತಿದ್ದರೆ, ಈಗ ನೃತ್ಯದ ಒಂದೊಂದು ಭಂಗಿ, ನಡೆ, ಜಿಗಿತಗಳನ್ನು ಹಾವ-ಭಾವಗಳನ್ನು ಒಂದೊಂದು ಕೋನದಲ್ಲಿ ಸೆರೆ ಹಿಡಿದು ಪ್ರತಿಯೊಂದು ಸನ್ನಿವೇಶವನ್ನೂ ಆಕರ್ಷಣೀಯವಾಗಿ ಮಾಡಲಾಗಿದೆ. 'ಸನಾದಿ ಅಪ್ಪಣ್ಣ' ಚಿತ್ರದಲ್ಲಿ ಜಯಪ್ರದಾ ನರ್ತಿಸಿರುವ 'ಕರೆದರೂ ಕೇಳದ...' ಗೀತೆಯ ನೃತ್ಯ, 'ರಾಮಾಚಾರಿ'ಚಿತ್ರದ 'ಯಾರಿವಳು ಯಾರಿವಳು...', 'ಪ್ರೇಮಲೋಕ' ಚಿತ್ರದ 'ಈ ನಿಂಬೆ ಹಣ್ಣಿನಂಥ ಹುಡುಗಿ...', 'ಚೆಲುವೆ ಒಂದು ಕೇಳ್ತೀನಿ...', ರಣಧೀರ ಚಿತ್ರದ 'ಪ್ರೀತಿ ಮಾಡಬಾರದು...', ಹೀಗೆ ಅಸಂಖ್ಯ ನೃತ್ಯಗಳು ಇಂಥ ವೈಭವದಿಂದ ಕೂಡಿದ್ದು ಪ್ರೇಕ್ಷಕರನ್ನು ಸೆಳೆಯುವಲ್ಲಿ ಯಶಸ್ವಿಯಾಗಿವೆ.

ತೊಂಬತ್ತರ ದಶಕದಲ್ಲಿ ಹಾಡುಗಳನ್ನು ಚಿತ್ರೀಕರಿಸುವಾಗ ಫ್ಯಾಂಟಸಿ ಹಾಗೂ ಹಲವು ಲೊಕೇಶನ್‌ಗಳನ್ನು ಬಳಸುವ ಹೊರದೇಶಗಳ ಸುಂದರ ತಾಣಗಳಲ್ಲಿ, ರಸ್ತೆಗಳಲ್ಲಿ ಕುಣಿತದ ಚಿತ್ರೀಕರಣ ಮಾಡುವ ಪರಿಪಾಠ ಬೆಳೆಯುತ್ತಿದ್ದು ಪ್ರೇಕ್ಷಕರ ಅಭಿರುಚಿಗ ಏನನ್ನಾದರೂ ಹೊಸತನ್ನು ಹುಡುಕುತ್ತಲೇ ಇರುವಂತಾಗಿದೆ.

ಎಂಬತ್ತರ ದಶಕದ ಮಧ್ಯಭಾಗದಿಂದ ಆರಂಭವಾಗಿ ತೊಂಬತ್ತರ ದಶಕದ ಆರಂಭದ ಹಂತದಲ್ಲಿ ಕನ್ನಡ ಸಿನಿಮಾ ರಂಗದಲ್ಲಿ ಹೊಸ ಪರಂಪರೆಯೊಂದು ಪ್ರಾರಂಭವಾಯಿತು. ಈ ಸಂದರ್ಭದಲ್ಲಿ ಡಿಸ್ಕೋ ಡ್ಯಾನ್ಸ್ ಬಹಳ ಪ್ರಾಮುಖ್ಯತೆ ಪಡೆಯಿತು. ಈ ಹಿನ್ನೆಲೆಯಲ್ಲಿ ಹಲವು ಪ್ರತಿಭಾವಂತ ಯುವ ಕಲಾವಿದರು ಮಾಧ್ಯಮಕ್ಕೆ ಲಗ್ಗೆ ಹಾಕಿದರು.

ಶಂಕರ್‌ನಾಗ್ ಅವರ ನೃತ್ಯವನ್ನು 'ಚಂಡಿ ಚಾಮುಂಡಿ', 'ಗೀತಾ' ಮೊದಲಾದ ಚಿತ್ರಗಳಲ್ಲಿ ಒಪ್ಪಿಕೊಂಡ ಪ್ರೇಕ್ಷಕನಿಗೆ 'ಆನಂದ್' ಚಿತ್ರದಿಂದ ಶಿವರಾಜ್‌ಕುಮಾರ್ ಪ್ರವೇಶವಾದ ಮೇಲೆ ನೃತ್ಯದಲ್ಲಿ ಪ್ರಾವೀಣ್ಯ ಪಡೆದ ನಾಯಕ ಬೇಕೆನ್ನುವ ಹುಡುಕಾಟ ಆರಂಭವಾಯಿತು. ಶಿವರಾಜ್‌ಕುಮಾರ್ 'ರಥಸಪ್ತಮಿ', 'ರಣರಂಗ', 'ಆನಂದಜ್ಯೋತಿ' ಮೊದಲಾದ ಚಿತ್ರಗಳಲ್ಲಿ ತಮ್ಮ ಚುರುಕಾದ ನೃತ್ಯದಿಂದ ಬಹುಬೇಗ ಹದಿವಯಸ್ಸಿನ ಆಸೆಗಳಿಗೆ ಪ್ರೇರಕ ಶಕ್ತಿಯಾದರು. ಇದೇ ನಿಟ್ಟಿನಲ್ಲಿ ಮತ್ತೊಬ್ಬ ಉತ್ತಮ ನೃತ್ಯಪಟುವಾಗಿ ಲೀಲಾವತಿ ಅವರ ಪುತ್ರ ವಿನೋದ್ ರಾಜ್, 'ಡ್ಯಾನ್ಸ್ ರಾಜ ಡ್ಯಾನ್ಸ್' ಚಿತ್ರದಿಂದ ಪ್ರವೇಶವಾದ ಮೇಲೆ ಬ್ರೇಕ್, ಡಿಸ್ಕೋ, ಷೇಕ್ ಮೊದಲಾದ ಡ್ಯಾನ್ಸ್‌ಗಳದೇ ಕಾರುಬಾರು. ವಿನೋದ್ ರಾಜ್ 'ಕೃಷ್ಣ ನೀ ಕುಣಿದಾಗ', 'ಕಾಲೇಜ್ ಹೀರೋ' ಮೊದಲಾದ ಚಿತ್ರಗಳ ನೃತ್ಯದಿಂದ ಮನೆಮಾತಾದರು. ವಿನೋದ್ ರಾಜ್ ಕನ್ನಡ ಚಿತ್ರರಂಗ ಕಂಡ ಉತ್ತಮ ನೃತ್ಯಪಟು ಎಂದು ಧಾರಾಳವಾಗಿ ಹೇಳಬಹುದಾದರೂ ಅವರಿಗೆ ಸಾಕಷ್ಟು ಪ್ರೋತ್ಸಾಹ, ಬೆಂಬಲ ಸಿಗದ ಕಾರಣ ನೆರೆಯ ತಮಿಳು ಚಿತ್ರರಂಗದಲ್ಲಿ ಅನಭಿಷಿಕ್ತ ದೊರೆಯಾಗಿ ಮೆರೆಯುತ್ತಿರುವ ನೃತ್ಯಪಟು ಪ್ರಭುದೇವನಂತೆ ಮಿಂಚದೆ ಹೋದದ್ದು ಕನ್ನಡ ಚಿತ್ರರಂಗದ ವಿಪರ್ಯಾಸಗಳಲ್ಲಿ ಒಂದು.

ವಿನೋದ್ ರಾಜ್ ನಂತರ ಕೇಳಿಬರುವ ಹೆಸರು ಶಶಿಕುಮಾರ್. ಪ್ರೇಕ್ಷಕರನ್ನು ಹುಚ್ಚೆಬ್ಬಿಸಿದ ಅವರು ಒಂದೇ ರೀತಿಯ ನೃತ್ಯ ವೈಖರಿಯಿಂದ ಬೇಸರವೆನಿಸುವಷ್ಟರ ಮಟ್ಟಿಗೆ ಹೋಗಿದ್ದು, ಶಾಸ್ತ್ರೀಯ ನೃತ್ಯದ ಹಿನ್ನೆಲೆ ಇರುವ ಶ್ರೀಧರ್‌ಗೆ ಕಮಲಹಾಸನ್‌ಗೆ ಸಿಕ್ಕಂಥ ಅವಕಾಶಗಳು ಸಿಗದೆ ಹೋದದ್ದು, ಮತ್ತೊಬ್ಬ ಭರತನಾಟ್ಯ ಪ್ರವೀಣ ಸಂಜಯ್‌ಗೆ ಅವಕಾಶಗಳೇ ಬರದೆ ಹೋದದ್ದು ತೊಂಬತ್ತರ ದಶಕಗಳಲ್ಲಿ ಕಂಡು ಬಂದಂಥ ಸೋಜಿಗದ ವಿಷಯಗಳು.

ತೊಂಬತ್ತರ ದಶಕದ ಯುವ ನಾಯಕಿಯರಲ್ಲಿ ಯಾರಿಗೂ ಹೇಳಿಕೊಳ್ಳುವಂಥ ಅವಕಾಶಗಳು ಸಿಕ್ಕದೆ ಹೋಗಿ ಅವರುಗಳ ಪ್ರತಿಭೆಯನ್ನು ತೋರುವಂಥ ಪ್ರಯತ್ನಗಳು ನಡೆದೇ ಇಲ್ಲ ಎನ್ನಬಹುದು. ಭವ್ಯ 'ಪ್ರಳಯಾಂತಕ' ಚಿತ್ರದಲ್ಲಿ ನಾಯಕ ರವಿಚಂದ್ರನ್ ಅವರನ್ನು ಛೇಡಿಸುತ್ತಾ 'ಮುಂದೆ ನೀ ಹೋದಾಗ...' ಎಂದು ಹಾಡಿ ಕುಣಿದರೆ, ಸುಧಾರಾಣಿ 'ಮೈಸೂರು ಮಲ್ಲಿಗೆ' ಚಿತ್ರದಲ್ಲಿ 'ನಮ್ಮೂರ ಚಂದವೋ ನಿಮ್ಮೂರು ಚಂದವೋ...' ಎಂದು ನರ್ತಿಸಿದ್ದಾರೆ. 'ರಣರಂಗ' ಚಿತ್ರದಲ್ಲಿ 'ಮುಸ್ಸಂಜೇಲಿ...' ಎಂಬ ಸೋಲೋ ಹಾಡಿಗೆ ಕುಣಿದರೆ ಅದೇ ಚಿತ್ರದ 'ನಿನ್ನ ಕಣ್ಣುಗಳು...' ಎಂಬ ಹಾಡಿಗೆ ನಾಯಕ ಶಿವರಾಜ್ ಕುಮಾರ್ ಅವರೊಂದಿಗೆ ಕೊಂಚ ಬಿಸಿಬಿಸಿಯೆನ್ನುವ ಮಾದರಿಯ ನೃತ್ಯದಲ್ಲಿ ಭಾಗವಹಿಸಿದ್ದಾರೆ. ಉಳಿದಂತೆ ಶೃತಿ ಕೂಡ ಹಿಂದೆ ಬಿದ್ದಿಲ್ಲ. ಸಾಕಷ್ಟು ಚಿತ್ರದಲ್ಲಿ ನೃತ್ಯ ಮಾಡಿರುವ ಶೃತಿಗೆ ನಿಜವಾದ ಅವಕಾಶ ಸಿಕ್ಕಿದ್ದು ತಮಿಳಿನ 'ಕಲ್ಕಿ' ಚಿತ್ರದಲ್ಲಿ. ಆ ಚಿತ್ರದಲ್ಲಿ ಸಾಕಷ್ಟು ನವೀನ ಮಾದರಿಯ ನಡೆಗಳನ್ನು ಹಾಕಿದ್ದರು. ಅಭಿನಯವನ್ನೇ ಬಂಡವಾಳವಾಗಿಸಿಕೊಂಡು ಮಿಂಚಿದ ನಟಿ ವಿನಯಾಪ್ರಸಾದ್ ಕೂಡ ನೃತ್ಯದಲ್ಲಿ ತಾವೇನು ಕಡಿಮೆ ಇಲ್ಲ ಎಂಬುದನ್ನು ವಿಷ್ಣುವರ್ಧನ್ ಅವರೊಂದಿಗೆ ಕುಣಿದ 'ಬಾರೆ ಸಂತೆಗೆ ಹೋಗೋಣ ಬಾ...' ಹಾಡಿನಿಂದ ತಾವು ಒಳ್ಳೆಯ ನರ್ತಕಿ ಎಂದು ತೋರಿಸಿಕೊಟ್ಟಿದ್ದಾರೆ. ತೊಂಬತ್ತರ ದಶಕದಲ್ಲಿ ಬಿರುಗಾಳಿ ಎಬ್ಬಿಸಿದ ಮಾಲಾಶ್ರೀ ಕೂಡ ನೃತ್ಯದಲ್ಲಿ ಹಿಂದೆ ಬಿದ್ದಿಲ್ಲ. ತಮ್ಮದೇ ಆದ ತಲೆ ಆಡಿಸುವ ಪರಿಯನ್ನು ತಮ್ಮ ನೃತ್ಯಗಳಲ್ಲಿ ಬಿಂಬಿಸುತ್ತಿದ್ದ ಮಾಲಾಶ್ರೀ ಹೆಚ್ಚು ಕಡಿಮೆ ಇದೇ ರೀತಿ ನೃತ್ಯಗಳಲ್ಲಿ ಭಾಗವಹಿಸಿದರಾದರೂ 'ಬೆಳ್ಳಿ ಮೋಡಗಳು' ಹಾಗೂ 'ಶಿವನಾಗ' ಚಿತ್ರಗಳಲ್ಲಿ ಶಾಸ್ತ್ರೀಯ ನೃತ್ಯದ ನಡೆಗಳನ್ನು ಬಹಳ ಚೆನ್ನಾಗಿ ನಿರ್ವಹಿಸಿದ್ದಾರೆ.

ಒಟ್ಟಾರೆಯಾಗಿ ಕನ್ನಡ ಚಲನಚಿತ್ರ ಕ್ಷೇತ್ರದಲ್ಲಿ ನೃತ್ಯದ ಬೆಳವಣಿಗೆಯನ್ನು, ಅದರ ಮಹತ್ವವನ್ನು ಅವಲೋಕಿಸುತ್ತ ಬಂದಾಗ ನಿರ್ದೇಶಕ, ಸಂಗೀತ ಸಂಯೋಜಕ, ಗೀತ ರಚನಕಾರ, ನೃತ್ಯ ನಿರ್ದೇಶಕ ಇವರ ನಡುವೆಯ ಸಮನ್ವಯ ತೀರಾ ಅಪರೂಪವೆಂದೇ ಹೇಳಬೇಕು. ಚಿತ್ರನಿರ್ಮಾಣದ ಬೇರೆಲ್ಲ ವಿಭಾಗಗಳ ನಡುವೆ ಅಲ್ಪಸ್ವಲ್ಪ ಸಾಮರಸ್ಯವಿದ್ದರೂ ನೃತ್ಯ ನಿರ್ದೇಶಕನನ್ನು ಚಿತ್ರ ನಿರ್ಮಾಣದ ಪೂರ್ವಭಾವಿ ಚರ್ಚೆಗೆ ಕರೆದ ಉದಾಹರಣೆ ಬಹಳ ಕಡಿಮೆ. ಇದರಿಂದಾಗಿ ನಮ್ಮ ಕನ್ನಡ ಚಿತ್ರರಂಗದಲ್ಲಿ ನೃತ್ಯ ಬೇರೆಲ್ಲ ಚಿತ್ರರಂಗಗಳಷ್ಟು ಪರಿಣಾಮಕಾರಿಯಾಗಿ ಬಳಕೆಯಾಗಿಲ್ಲ ಎನ್ನುವುದು ಸಾಮಾನ್ಯರೂ ಗ್ರಹಿಸುವಂಥ ವಿಚಾರ.



ಅಭಿವ್ಯಕ್ತಿಗೆ ತಾಂತ್ರಿಕತೆಯ ಸುವರ್ಣಲೇಪ

'ಅಭಿನಯ' ಶಬ್ದಕ್ಕೆ ಮನಸ್ಸಿನ ಭಾವವನ್ನು ಪ್ರಕಟಪಡಿಸುವ ಕ್ರಿಯೆ ಎಂಬ ಅರ್ಥ ಶಬ್ದಕೋಶಗಳಲ್ಲಿ ಸಿಕ್ಕುತ್ತದೆ. ಆದರೆ ಇದರ ಅರ್ಥವ್ಯಾಪ್ತಿ ಇದನ್ನೂ ಮೀರಿ ಬೆಳೆದಿದೆ. 'ಅಭಿನಯ'ದ ಉದ್ದೇಶ ಮನಸ್ಸಿನ ಭಾವವನ್ನು ಮಾತ್ರ ಪ್ರಕಟಪಡಿಸುವುದಲ್ಲ, ಪರಕಾಯ ಪ್ರವೇಶ ಮಾಡಿ ಪಾತ್ರವೊಂದರ ಮಾನಸಿಕ ಪಾತಳಿಗೆ ಪಾತಾಳಗರಡಿ ಬಿಟ್ಟು ಅದು ಪ್ರೇಕ್ಷಕರಿಗೆ ಅರ್ಥವಾಗುವಂತೆ ಮಾಡುವ ಕ್ರಮ. ಹೀಗಾಗಿ 'ಅಭಿನಯ' ಎಂಬ ಪರಿಕಲ್ಪನೆ ಬಗ್ಗೆಯೇ ದೀರ್ಘ ಪ್ರಬಂಧ ಬರೆಯಬಹುದು. ಆದರೆ ಸದ್ಯದ ಲೇಖನದ ಉದ್ದೇಶ ಕನ್ನಡ ಚಿತ್ರರಂಗದಲ್ಲಿ ಅಭಿನಯದ ಪರಿಕಲ್ಪನೆ ಯಾವ ಯಾವ ಆಯಾಮ ಪಡೆಯುತ್ತಾ ಬಂದಿತು. ಚಾರಿತ್ರಿಕ ಮತ್ತು ಸಾಂಸ್ಕೃತಿಕ ಸಂದರ್ಭದಲ್ಲಿ ಕನ್ನಡ ಚಿತ್ರದಲ್ಲಿ 'ಅಭಿನಯ' ಪಡೆದುಕೊಂಡ ಸ್ವರೂಪ ಏನು ಎಂಬುದನ್ನು ವಿಶ್ಲೇಷಿಸುವುದು.

'ಕರ್ನಾಟಕ' ಎಂಬ ಈಗಿನ ಒಂದು ಹೋಮೋಜಿನಸ್ ಆದ ಪ್ರದೇಶದ ಪರಿಕಲ್ಪನೆ ಕನ್ನಡ ಚಿತ್ರರಂಗ ಹುಟ್ಟಿದಾಗ ಇರಲಿಲ್ಲ. ಸಂವಹನದ ಕೊರತೆಯಿಂದ ಮತ್ತು ರಾಜಕೀಯ ಕಾರಣಗಳಿಗಾಗಿ ವೈವಿಧ್ಯಮಯ ಸಂಸ್ಕೃತಿ ಮತ್ತು ಭಾಷೆಯ ಉಪವಿಭಾಗಗಳು ಎಲ್ಲೆಡೆ ಹರಡಿದ್ದವು. ಅವನ್ನೆಲ್ಲ ಒಟ್ಟುಗೂಡಿಸುವಲ್ಲಿ ಚಿತ್ರರಂಗ ಕೂಡ ಮುಖ್ಯ ಕೆಲಸ ಮಾಡಿತು. ಹೀಗೆ 'ಅಭಿನಯ'ದ ಮೂಲಕ ಕೆಲವರು ಸಾಂಸ್ಕೃತಿಕ ಪ್ರತಿನಿಧಿಗಳಾಗಿಯೂ ರೂಪುಗೊಂಡರು. ನಾಟಕ ಸಮೂಹ ಮಾಧ್ಯಮವಾಗಿದ್ದಾಗ ನಟ ತಾನು ನಿರ್ವಹಿಸುತ್ತಿದ್ದ ಪಾತ್ರಗಳಿಂದ ಜನಪ್ರಿಯನಾಗುತ್ತಿದ್ದ. ಸಿನಿಮಾ ಸಮೂಹ ಮಾಧ್ಯಮವಾದಾಗ ಪಾತ್ರಗಳು ನಟರಿಂದ ಪ್ರಸಿದ್ಧವಾಗುತ್ತಿವೆ. ಈ ಬದಲಾವಣೆಯೇ 'ಅಭಿನಯ' ಕಲ್ಪನೆ ಬೆಳೆದ ರೀತಿಯನ್ನು ಸೂಚಿಸುತ್ತದೆ. ಈ ಬೆಳವಣಿಗೆಯ ಹಿಂದೆ ನಟನೆಯ ಸಾಂಸ್ಕೃತಿಕ ಮಾರ್ಪಾಟಿನ ಸೂಕ್ಷ್ಮಗಳಿವೆ. ಇದನ್ನು ಅರ್ಥ ಮಾಡಿಕೊಳ್ಳುವುದೇ ಈ ಲೇಖನದ ಪ್ರಧಾನ ಉದ್ದೇಶ.

'ಅಭಿನಯ' ಕಲಾಪ್ರಕಾರಕ್ಕೆ ಪುರಾತನ ಇತಿಹಾಸವಿದೆ. ಭರತನ ನಾಟ್ಯಶಾಸ್ತ್ರದ ಅಭಿನಯದಲ್ಲಿ ನಾಲ್ಕು ವಿಧ :

೧. ಅಂಗಾಂಗ ಚಲನೆಯಿಂದ ತೋರ್ಪಡಿಸುವ ಅಭಿನಯ - ಆಂಗಿಕ
೨. ಮಾತುಗಳಿಂದ ಮಾಡುವ ಅಭಿನಯ - ವಾಚಿಕ
೩. ವೇಷ-ಭೂಷಣ, ಬಣ್ಣ ಲೇಪನದಿಂದ ತೋರಿಸುವ ಅಭಿನಯ - ಆಹಾರ್ಯ
೪. ಮಾನಸಿಕ ತಲ್ಲಣಗಳಿಂದ ಮತ್ತು ಮನೋಭಾವಗಳಿಂದ ಸೂಚಿಸುವ ಅಭಿನಯ - ಸಾತ್ವಿಕ

ಅಭಿನಯದ ರೂಪು-ರೇಷೆಗಳು ಹೇಗೇ ಇದ್ದರೂ ಮುಖ್ಯವಾಗಿ ಅದರ ಉದ್ದಿಶ್ಯ ಪ್ರೇಕ್ಷಕನ ಜೊತೆ ಸಂವಾದ. 'ನಿ' ಎಂದರೆ 'ಒಯ್ಯು', ಈ ಧಾತುವಿಗೆ 'ಅಭಿ' ಎಂಬ ಉಪಸರ್ಗ ಹಚ್ಚಿದರೆ 'ಅಭಿನಯ' ಎಂಬ ಶಬ್ದ ದಕ್ಕುತ್ತದೆ. 'ಅಭಿನಯ' ಕೇವಲ ಅಭಿವ್ಯಕ್ತಿ ಕಲೆಯಲ್ಲ. ಅಭಿವ್ಯಕ್ತಿಯ ಜೊತೆಗೆ ಸಂವಹನ ಕೂಡ ಮುಖ್ಯ. ಅಭಿನಯವೆಂದರೆ ಅನುಕರಣೆಯಲ್ಲ. ಏಕೆಂದರೆ ಸಮಾಜದಲ್ಲಿ ಮನುಷ್ಯನ ಭಾವನೆ ಅಭಿವ್ಯಕ್ತವಾಗುವಾಗ ಎಷ್ಟೋ ಬಾರಿ ಸಹಜವಾಗಿರುವುದಿಲ್ಲ. ಜೊತೆಗೆ ಅದರಲ್ಲಿ ವೈಯಕ್ತಿಕ ಅಭಿವ್ಯಕ್ತಿ ಕ್ರಮ ಕೂಡ ಇರುತ್ತದೆ. ಕೆಲವರಿಗೆ ಭಾವನೆಗಳನ್ನು ವ್ಯಕ್ತಪಡಿಸಲೇ ಬಾರದಿರಬಹುದು. ಕೆಲವರು ಅಗತ್ಯಕ್ಕಿಂತ ಹೆಚ್ಚು ಭಾವುಕರಾಗಿ ವರ್ತಿಸಬಹುದು. ನಟನೆ ಈ ಎರಡು ಧ್ರುವಗಳ ನಡುವಿನ ಸಮಭಾಜಕ ಬಿಂದುವನ್ನು ಬಳಸಿಕೊಂಡು ಪಾತ್ರದ ಸಾಧ್ಯತೆಯನ್ನು ಒಗ್ಗಿಸುತ್ತದೆ. ನಟನೆ ಒಂದು ಪರಂಪರೆ, ಅದೇ ಹಂತದಲ್ಲಿ ಪ್ರಯೋಗಶೀಲತೆ ಕೂಡ. ಇವೆರಡೂ ಮೇಳೈಸಿದ ಸಾಧ್ಯತೆಯೇ ಅಭಿನಯ.

ಭಾರತದಲ್ಲಿ ಮಾತ್ರವಲ್ಲ, ಪ್ರಪಂಚದ ಯಾವುದೇ ಭಾಗದ ಚಿತ್ರಗಳಲ್ಲಿ ಮೂಕಿಯುಗದಿಂದಲೂ ಅಭಿನಯದ ಪರಿಕಲ್ಪನೆಗೆ ಮಹತ್ವವಿದೆ. ಪ್ರಪಂಚದ ಬೇರೆ ಭಾಗಗಳಲ್ಲೂ ಈ ಕುರಿತು ಚರ್ಚೆ, ಜಿಜ್ಞಾಸೆ ಆಗಿದೆ. ಸಿನಿಮಾ ಛಾಯಾಗ್ರಹಣ, ಸಂಕಲನ, ಚಿತ್ರನಾಟಕ, ಗೀತೆ ಮುಂತಾದ ಪರಿಕರಗಳಲ್ಲಿ ಬೆಳವಣಿಗೆ ಕಾಣುವುದಕ್ಕೆ ಮೊದಲೇ ಚಲನಚಿತ್ರಗಳಲ್ಲಿ ನಟನೆ ಎಂಬುದು ವಿವಿಧ ಅಂಗಗಳ ಸಂಯೋಜನೆಯಿಂದ ಉತ್ಪತ್ತಿಯಾಗುವ ಅನುಭೂತಿ ಎಂಬ ವಾದ ಹುಟ್ಟಿಕೊಂಡಿತ್ತು. ೧೯೩೦ರಲ್ಲಿ ಕೋಟ ಶಿವರಾಮ ಕಾರಂತರು ಅಭಿನಯ ಕುರಿತು ಬರೆದ ಮಾತುಗಳು :

"ಸಿನಿಮಾದಲ್ಲಿ ನಟರಿಗೆ ದೊರೆಯುವ ಸ್ಥಾನ ಆಯಾಯ ಚಿತ್ರಗಳ ವಿಷಯವನ್ನು ಹೊಂದಿದೆ. ಅವರಿಂದ ನಟನೆಯಲ್ಲಿ ದೊರೆಯಬೇಕಾದ ಸಹಕಾರವೂ ಅಷ್ಟೇ ನಿರ್ದಿಷ್ಟ. ಬಹಳ ಹಿಂದೆಯೇ ರಷ್ಯಾದಲ್ಲಿ ಖ್ಯಾತ ನಟ ಮಾಸ್ಕೂಕಿನ್ - ಉಣ್ಣುವಾಗ, ಉಡುವಾಗ, ನಗುವಾಗ ಮುಂತಾದ ಹಲವು ಪ್ರಸಂಗಗಳ ಚಿತ್ರಗಳನ್ನು ಸಂಗ್ರಹಿಸಿ ಪ್ರಸಂಗ ಬಂದರೆ ಅವುಗಳನ್ನು ಉಪಯೋಗಿಸಿ ಬೇಕಾದ ಭಾವಗಳನ್ನು ತೋರಿಸಲು ಶಕ್ತನಾದನಂತೆ. ಆ ಕಾಲದಲ್ಲಿ ಮಾಸ್ಕೂಕಿನ್ ಚಿತ್ರಗಳಲ್ಲಿ ನಟಿಸುತ್ತಿರಲಿಲ್ಲ. ಹೆಚ್ಚೇನು, ಚಿತ್ರಾಭಿನಯ (Film Acting) ಎಂಬ ವಿಷಯವೇ ಇಲ್ಲವೆಂಬ ಅಭಿಪ್ರಾಯವೂ ಇತ್ತು. ಮನುಷ್ಯರು ತಮ್ಮಷ್ಟಕ್ಕೆ ವಿಹರಿಸುವಾಗ ಸಂಗ್ರಹಿಸಿದ ಅವನ ಚಿತ್ರಗಳು ಶ್ರೇಷ್ಠ ನಿರ್ದೇಶಕರ ಕೈಗೆ ಸಿಕ್ಕರೆ ಆತ ಅವುಗಳನ್ನು ಜಡ ಚಿತ್ರಗಳೊಂದಿಗೆ ಜೋಡಿಸಿ, ಆ ಮೂಲಕ ಬೇಕಾದ ಭಾವಗಳನ್ನು ತೋರಿಸಬಹುದು ಎಂಬ ಅಭಿಪ್ರಾಯವಿತ್ತು. ಶಿಕ್ಷೆಗೆ ಗುರಿಯಾದ ಮನುಷ್ಯನ ಸಂತೋಷವನ್ನು ಪುಡೋವ್ಕಿನ್ ತೋರಿಸಿದ. ಅಭಿನಯಿಸಲ್ಪಟ್ಟ ಭಾಗಗಳೆಂದರೆ ಮಂದಹಾಸ ಬೀರುವ ತುಟಿಗಳು, ಕುಣಿಸಿದ ಕೈ ಬೆರಳುಗಳು ಮಾತ್ರ. ಉಳಿದ ಭಾಗಗಳನ್ನು ನದಿ, ಪಕ್ಷಿ, ಮಗು, ಮುಂತಾದ ಇತರ ವಸ್ತುಗಳು ತೋರಿಸಿದವು. ಮೇಲಿನ ಉದಾಹರಣೆಯನ್ನು ಗಮನಿಸಿದರೆ ನಿರ್ದೇಶಕನ ಸೃಜನಶಕ್ತಿ ಎಷ್ಟೆಷ್ಟು ಅಧಿಕವಾಗುತ್ತದೋ ಅಷ್ಟಷ್ಟು ಕಡಿಮೆ ಅಭಿನಯ ಸಾಕು ಎನ್ನಬೇಕಾದೀತು."

ಇದು ಅಭಿನಯದ ಒಂದು ಸಾಧ್ಯತೆಯಾದರೆ ವ್ಯಕ್ತಿ ವೈಶಿಷ್ಟ್ಯಗಳನ್ನುಳ್ಳ ಚಿತ್ರಗಳದ್ದು ಇನ್ನೊಂದು ಮಾರ್ಗ. ಕಾರಂತರು ತಾರಾಪದ್ಧತಿ ಕುರಿತೂ ಮಾತನಾಡುತ್ತಾರೆ. ತಾರೆಯರು ಅಭಿನಯಿಸುವಾಗ ಅವರಿಗೆ ತಕ್ಕಂತೆ ಕಥೆ ವಿರೂಪಗೊಳ್ಳುವುದನ್ನು ಹೇಳುತ್ತಾರೆ. ನಟನನ್ನು ಕೀರ್ತನೆ ಮಾಡುವ ಕಥೆಗಳು, ಅವನ ಶಕ್ತಿಗನುಗುಣವಾಗಿ ಸೃಷ್ಟಿಯಾದ ಅಸಾಂಗತ್ಯವೇ ಇರುತ್ತದೆ ಎಂದು ಕಾರಂತರು ಸೂಚಿಸುತ್ತಾರೆ.

ಈ ಹಿನ್ನೆಲೆಯಲ್ಲಿ ಚಲನಚಿತ್ರಗಳಲ್ಲಿ ಅಭಿನಯ ಕುರಿತಾದ ಎರಡು ವಾದಗಳನ್ನು ಗುರುತಿಸಬಹುದು. ಒಂದನೇ ವಾದದಲ್ಲಿ ಚಲನಚಿತ್ರ ಮಾಧ್ಯಮದ ವಿವಿಧ ಪರಿಕರಗಳಂತೆ ಅಭಿನಯ ಕೂಡ ಒಂದು ಪರಿಕರ. ಇವುಗಳೆಲ್ಲ ಪರಸ್ಪರ ಬೆರೆಯುವ ಮೂಲಕ ದೃಶ್ಯ ರೂಪಗೊಳ್ಳುತ್ತದೆ. ನಟನ ಅಭಿನಯವಿಲ್ಲದೆಯೇ ದೃಶ್ಯ ಶ್ರೀಮಂತವಾಗಿ ರೂಪುಗೊಳ್ಳುವುದು ಸಾಧ್ಯ. ನಟ ಅಥವಾ ನಟಿಯ ಪೇಲವ ನಟನೆಯನ್ನು ಕ್ಯಾಮರಾ ಕೋನಗಳು, ಹಿನ್ನೆಲೆ ಸಂಗೀತ ಅಥವಾ ಸಂಕಲನಕಾರನ ಚಾತುರ್ಯದಿಂದ ಮರೆ ಮಾಡಿ ದೃಶ್ಯವನ್ನು ಉತ್ತಮವಾಗಿಸಬಹುದು. ಇನ್ನೊಂದು ವಾದ ವಾಸ್ತವವಾದಿ ಚಿತ್ರಗಳಿಗೆ ಸಂಬಂಧಿಸಿದ್ದು. ನಟ ಉಳಿದ ಪರಿಕರಕ್ಕಿಂತ ಮುಖ್ಯ. ಅವನ ಅಭಿನಯಕ್ಕೆ ಉಳಿದ ಪರಿಕರಗಳು ಪೂರಕ. ಅವನು ತನ್ನ ಪ್ರಯೋಗಶೀಲತೆಯಿಂದ ಹೊಸ ಅರ್ಥಗಳನ್ನು ಹುಡುಕಬಲ್ಲ. ಅವನ ಇಮೇಜ್ ಬಹಳ ಸಲ ಚಿತ್ರದ ಕಥೆ ನಿರ್ಣಯಿಸುವ ಅಂಶವಾಗುತ್ತದೆ. ಈ ಎರಡೂ ವಾದಗಳು ಇಂದಿಗೂ ಮಹತ್ವ ಪಡೆದಿವೆ. ಅವು ಇದೇ ಅರ್ಥವಲ್ಲಲ್ಲದಿದ್ದರೂ ಈ ಕೇಂದ್ರದ ಸುತ್ತ ಸ್ಥಿತ್ಯಂತರ ಪಡೆದಿವೆ.

ಅಭಿನಯದ ಬೆಳವಣಿಗೆ

ಕನ್ನಡ ಚಿತ್ರರಂಗ ಆರಂಭವಾದಾಗ ಅದಕ್ಕೆ ಹಿನ್ನೆಲೆ ರಂಗಭೂಮಿ. ಹೀಗೆ ರಂಗಭೂಮಿ ಎನ್ನುವಾಗ ಯಾವ ರಂಗಭೂಮಿ ಎಂಬ ಪ್ರಶ್ನೆ ಬರುತ್ತದೆ. ಆ ಕಾಲಕ್ಕೆ ನಮ್ಮಲ್ಲಿ ಎರಡು ಮಾದರಿ ರಂಗಭೂಮಿಗಳಿದ್ದವು. ಒಂದು ಸಾವಿರಾರು ವರ್ಷ ಇತಿಹಾಸವಿದ್ದ ಜಾನಪದ ರಂಗಭೂಮಿ. ಇದು ಮೂಲತಃ ಮೌಖಿಕ. ತನ್ನದೇ ಪ್ರಾದೇಶಿಕ ಹಿನ್ನೆಲೆಯುಳ್ಳ ಯಕ್ಷಗಾನ, ಬಯಲಾಟ ಮುಂತಾದ ಪ್ರಭೇದಗಳು ಇಲ್ಲಿದ್ದವು. ಪ್ರತಿ ಪ್ರಭೇದವಲ್ಲೂ ತನ್ನದೇ ನಟನೆ, ಶೈಲಿ, ಅಭಿವ್ಯಕ್ತಿಯ ರೂಪಗಳು ಸಿದ್ಧಗೊಂಡಿದ್ದವು.

ಇನ್ನೊಂದು ಪಾಶ್ಚಾತ್ಯ ಅಥವಾ ಪಾರ್ಸಿ ರಂಗಭೂಮಿ. ಈ ರಂಗಭೂಮಿ ಆರಂಭದಲ್ಲಿ ಪಾಶ್ಚಾತ್ಯರನ್ನು ರಂಜಿಸಲೆಂದೇ ಹುಟ್ಟಿಕೊಂಡಿದ್ದು. ಬಿಳಿ ದೊರೆಗಳ ಮನರಂಜನೆಗೆ ನಮ್ಮ ಪುರಾಣದ ವಸ್ತುವನ್ನು ಆಯ್ದು ನಾಟಕಗಳನ್ನು ರಚಿಸುತ್ತಿದ್ದರು. ಇದು ಕಾಲಕ್ರಮೇಣ ಕಂಪನಿ ನಾಟಕಗಳ ರೂಪ ತಳೆಯಿತು.

ಕಂಪನಿ ನಾಟಕಗಳು ಹೇಗೆ ನಡೆಯುತ್ತಿದ್ದವು ಎಂಬುದನ್ನು ಸೂಕ್ಷ್ಮವಾಗಿ ಗಮನಿಸಿದರೆ ಈ ನಾಟಕಗಳನ್ನು ನೋಡುವುದಕ್ಕೆ ಮೂರು-ನಾಲ್ಕು ಸಾವಿರ, ಒಮ್ಮೊಮ್ಮೆ ಅದಕ್ಕಿಂತ ಹೆಚ್ಚು ಜನ ಸೇರಿರುತ್ತಿದ್ದರು. ನಾಟಕ ಗ್ಯಾಸ್‌ಲೈಟ್ ಬೆಳಕಿನಲ್ಲಿ ನಡೆಯುತ್ತಿತ್ತು. ಇದರಿಂದ ಸಹಜವಾಗಿ ಎಲ್ಲಾ ಪ್ರೇಕ್ಷಕರಿಗೂ ನಟರ ಮುಖಭಾವ ಸ್ಪಷ್ಟವಾಗಿ ಕಾಣುತ್ತಿರಲಿಲ್ಲ. ಅವರು ಮುಖದ ಮೂಲಕ ವ್ಯಕ್ತಪಡಿಸುವ ಭಾವನೆಗಳು ಎದುರು ಸಾಲಿನ ಯಾರೋ ಕೆಲವರಿಗೆ ಮಾತ್ರ ಅರ್ಥವಾಗುತ್ತಿದ್ದವು. ಹೀಗಾಗಿ ನಟರು ತಮ್ಮ ಕಂಠಕ್ಕೆ ಮಹತ್ವ ಕೊಡಲೇ ಬೇಕಾಯಿತು. ಸಂಭಾಷಣೆಗೆ ಇದರಿಂದ ಹೆಚ್ಚಿನ ಮಹತ್ವ ಬಂದಿತು. ಅಳು, ನಗು ಮುಂತಾದ ಭಾವವೈವಿಧ್ಯ ಅಬ್ಬರದಲ್ಲೇ ಮೂಡಬೇಕಾಯಿತು. ಸಂಭಾಷಣೆಯೇ ಪ್ರೇಕ್ಷಕರಿಗೆ ಸಾಕಾಗುವುದಿಲ್ಲವಾದ ಕಾರಣ ಹಾಡುಗಳು ಬೇಕಾದವು. ಜನಪದ ರಂಗಭೂಮಿಯಲ್ಲಿ ಹಾಡಿಗೆ ಇರುವ ಮಹತ್ವ ಗಮನಿಸಿದರೆ ಹಾಡುಗಳು ಪ್ರವೇಶ ಮಾಡಿದ್ದಕ್ಕೆ ಆ ಹಿನ್ನೆಲೆ ಕೂಡ ಇರುವುದು ಸಾಧ್ಯ.

ಈ ಚಟುವಟಿಕೆಗಳು ಮತ್ತೊಂದು ಘಟ್ಟ ತಲುಪಿದ್ದು ಕಳೆದ ಶತಮಾನದ ಆರಂಭದಲ್ಲಿ. ರಂಗಭೂಮಿ ಬಗ್ಗೆ ಸ್ಪಷ್ಟ ಕಲ್ಪನೆ ಉಳ್ಳ ನಾಟಕಗಳು ತಯಾರಾದದ್ದು ಈ ಕಾಲದಲ್ಲೇ. ಕೈಲಾಸಂ, ಶ್ರೀರಂಗರಂಥವರು ಪಾಶ್ಚಾತ್ಯ ನಾಟಕಗಳನ್ನು ಓದಿ, ಇಂಗ್ಲೆಂಡಿಗೂ ಹೋಗಿ, ಅವುಗಳ ಪ್ರಭಾವದಿಂದ ಸಾಮಾಜಿಕ ವಸ್ತುಗಳನ್ನುಳ್ಳ ನಾಟಕಗಳನ್ನು ಸೃಷ್ಟಿಸಿದರು. ಕ್ರಮೇಣ ಪೌರಾಣಿಕ ವಸ್ತುಗಳಿಂದ ಆಚೆಗೂ ನಾಟಕದ ಆಯಾಮ ಚಾಚಿಕೊಳ್ಳುವುದು ಸಾಧ್ಯವಾಯಿತು. ಜೊತೆಗೆ ಸ್ವಾತಂತ್ರ್ಯ ಚಳವಳಿಯ ಉತ್ಸಾಹ, ಕನಸುಗಳು ನಾಟಕವಲ್ಲಿ ಮರುಹುಟ್ಟು ಪಡೆದು ಹೊಸ ಕಥಾನಕಗಳಿಗೆ ಜನ್ಮ ನೀಡಿದವು. ನಮ್ಮಲ್ಲಿ ಚಲನಚಿತ್ರ ಬಂದಾಗಿನ ಪರಿಸ್ಥಿತಿ ಇದು.

ಸಿನಿಮಾ ಮೊದಲು ಬಂದದ್ದು ಕಥಾನಕಗಳ ಸಹಾಯದಿಂದ. ಈ ಕಾರಣದಿಂದಲೇ ರಂಗಭೂಮಿಯವರಿಗೆ ಇದು ವಿರೋಧಿ ಮಾಧ್ಯಮ ಅನ್ನಿಸಲಿಲ್ಲ. ಬದಲಾಗಿ ನಾಟಕದ ಯಾಂತ್ರೀಕೃತ ಸಾಧ್ಯತೆಯಾಗಿ ಕಾಣಿಸಿತು. ಹೊರಗಿನಿಂದ ಸಿದ್ಧವಸ್ತುವಾಗಿ ಬಂದದ್ದು ತಂತ್ರಜ್ಞಾನ. ಇದರ ನೆರವಿನಿಂದ ರಂಗಭೂಮಿಯು ಚಿತ್ರೀಕರಣವಾಗುತ್ತಿತ್ತು. ಈ ಸೂಕ್ಷ್ಮ ಗಮನಿಸಿದರೆ, ಅಂದಿನ ನಟ-ನಟಿಯರು ರಂಗಭೂಮಿಯಂತೆಯೇ ಅಭಿನಯಿಸುತ್ತಿದ್ದರು ಎಂದು ಅಪಾದನೆ ಮಾಡುವಲ್ಲಿ ಯಾವ ಅರ್ಥವೂ ಇಲ್ಲ. ಏಕೆಂದರೆ ಆರಂಭದ ಚಲನಚಿತ್ರಗಳಲ್ಲಿ ಭಿನ್ನ ತಂತ್ರಜ್ಞಾನವೇ ಬಳಕೆಯಾಗಿರಲಿಲ್ಲವಾದ್ದರಿಂದ ಅಭಿನಯದ ಇನ್ನೊಂದು ಸಾಧ್ಯತೆಯಾದರೂ ಎಲ್ಲಿ ಸಾಧ್ಯ ? ಗುಬ್ಬಿ ವೀರಣ್ಣ, ಹೆಚ್.ಎಲ್.ಎನ್.ಸಿಂಹ, ಬಿ.ಆರ್.ಪಂತುಲು ಮುಂತಾದ ರಂಗಭೂಮಿ ಧೀಮಂತರೇ ಆರಂಭಿಕ ಚಿತ್ರಗಳ ಸೂತ್ರಧಾರರು. ಸುಬ್ಬಯ್ಯನಾಯ್ಡು, ನಾಗೇಂದ್ರರಾವ್, ರಾಜಕುಮಾರ್, ಉದಯಕುಮಾರ್, ನರಸಿಂಹರಾಜು, ಬಾಲಕೃಷ್ಣ ಮೊದಲಾದ ರಂಗಭೂಮಿ ನಟರೇ ತೆರೆಯ ಮೇಲೆ ಬಂದವರು. ಇದರಿಂದಾಗಿ ಸಹಜವಾಗಿ ಅದು ರಂಗಭೂಮಿಯ ಹ್ಯಾಂಗೋವರ್ ಆಯಿತು. ಕಾಲಕ್ರಮೇಣ ನಮ್ಮಲ್ಲಿ ಕಾದಂಬರಿ ಆಧಾರಿತ ಚಿತ್ರಗಳು ಬರುವುದಕ್ಕೆ ಆರಂಭವಾದಾಗ ಸಂಭಾಷಣೆ ಹೇಳುವ ಶೈಲಿ, ಅಂಗಾಂಗ ಚಲಿಸುವ ಕ್ರಮ ಮತ್ತು ಭಾವಾಭಿವ್ಯಕ್ತಿಯಲ್ಲಿ ಬದಲಾವಣೆ ಕಾಣಿಸಿತು. 'ಸಂಸಾರನೌಕ'ದ ಸುಂದರನ ಪಾತ್ರವನ್ನು ಉದಾಹರಣೆಯಾಗಿ ಗಮನಿಸಬಹುದು. ಈ ಪಾತ್ರದಲ್ಲಿ ಆಂಗಿಕ ಅಭಿನಯ ಮೊದಲಿನಂತೆಯೇ ಇದ್ದರೂ ವಾಚಿಕ ಅಭಿನಯದಲ್ಲಿ ವ್ಯತ್ಯಾಸ ಕಾಣಿಸಿತ್ತು. ಈ ಹಂತದಲ್ಲಿ ನಿರ್ಮಾಪಕರೇ ಚಿತ್ರಕಥೆಗಾರರಿಗೆ ಹಣ ಕೊಟ್ಟು ವಿದೇಶಿ ಚಿತ್ರಗಳನ್ನು ನೋಡಿ ಬನ್ನಿ ಎಂದು ಕಳುಹಿಸುತ್ತಿದ್ದುದೂ ಉಂಟು. ಹೀಗೆ ಇಂಗ್ಲಿಷ್ ಚಿತ್ರ ನೋಡಿದರೂ ಅದನ್ನು ನಮ್ಮ ಶೈಲಿಗೆ ಅಳವಡಿಸುತ್ತಿದ್ದುದರಿಂದ ಈ ಬದಲಾವಣೆ ಬಹಳ ಮುಖ್ಯವಾಗಿ ಕಾಣಿಸಲಿಲ್ಲ.

೭೦ರ ದಶಕದ ಹೊತ್ತಿಗೆ ನಮ್ಮಲ್ಲಿ ಚಿತ್ರಮಾಧ್ಯಮ ತುಸು ಬೇರೆ ರೀತಿಯದನ್ನು ಹೇಳಬಹುದು ಎಂಬ ಭಾವನೆ ಕೆಲವರಲ್ಲಾದರೂ ಹುಟ್ಟಿಕೊಂಡಿತ್ತು. ಈ ದಶಕದಲ್ಲಿ ಬಂದ 'ಮನಮೆಚ್ಚಿದ ಮಡದಿ', 'ಮಿಸ್ ಲೀಲಾವತಿ', 'ಬೆಳ್ಳಿಮೋಡ' ಈ ಮೂರು ಚಿತ್ರಗಳನ್ನು ಬದಲಾವಣೆ ಕುರಿತ ಚರ್ಚೆಗೆ ಉದಾಹರಣೆಯಾಗಿ ತೆಗೆದುಕೊಂಡರೆ, 'ಮನಮೆಚ್ಚಿದ ಮಡದಿ'ಯಲ್ಲಿ ರಾಜಕುಮಾರ್, ಲೀಲಾವತಿ ಪ್ರಧಾನ ಪಾತ್ರದಲ್ಲಿರುವರು. ಚಿತ್ರದ ಸನ್ನಿವೇಶವೊಂದರಲ್ಲಿ ಲೀಲಾವತಿ ತಾನು ಗರ್ಭಿಣಿ ಎಂದು ತಾಯಿಗೆ ಹೇಳಬೇಕು. ಹಿಂದಿನ ಚಿತ್ರಗಳಂತೆ ಇಲ್ಲಿ ನಾಯಕಿ ಬೊಬ್ಬಿಟ್ಟು ಗೋಳಾಡುವುದಿಲ್ಲ. ಬಹಳ ಸಾಂಕೇತಿಕವಾಗಿ ತನ್ನ ಸ್ಥಿತಿ ಹೇಳುತ್ತಾಳೆ. ಅವಳ ಧ್ವನಿ ನಡುಗುವುದಿಲ್ಲ. ಆದರೆ ಕ್ಯಾಮರಾ ಲಾಂಗ್‌ಶಾಟ್‌ನಿಂದ ಹಂತ ಹಂತವಾಗಿ ಕ್ಲೋಸಪ್‌ಗೆ ಬರುತ್ತದೆ. ಈ ವೇಗದಲ್ಲಿ ಸಂಭಾಷಣೆಯ ತೀವ್ರತೆ ತಗ್ಗುತ್ತಾ ಬರುತ್ತದೆ. ಈ ತಂತ್ರ ನಮ್ಮ ರಂಗಭೂಮಿ ಕಲ್ಪನೆಗಿಂತ ಭಿನ್ನವಾಗಿತ್ತು. ಇಲ್ಲಿ ನಾಯಕಿ ಜೊತೆ ಕ್ಯಾಮರಾ ಕೂಡ ಅಭಿನಯದಲ್ಲಿ ಪ್ರಧಾನ ಪಾತ್ರ ವಹಿಸಿತ್ತು. 'ಮಿಸ್ ಲೀಲಾವತಿ' ಚಿತ್ರದ ನಾಯಕಿ ಪ್ರಯೋಗಶೀಲೆ. ಈ ಪಾತ್ರದಲ್ಲಿ ಕೊಂಚ ದ್ವಂದ್ವ ಕೂಡ ಇದೆ. ಚಿತ್ರದ ಒಂದು ದೃಶ್ಯದಲ್ಲಿ, ತರಗತಿಯಲ್ಲಿ ಇಬ್ಸನ್ನನ 'ಡಾಲ್ಸ್ ಹೌಸ್' ನಾಟಕದ ನೋರಾ ಪಾತ್ರದ ನಿಲುವನ್ನು ಎಲ್ಲರೂ ವಿರೋಧಿಸುವಾಗ ನಾಯಕಿ ಸಮರ್ಥಿಸುತ್ತಾಳೆ. ತನ್ನ ಸೆಕ್ಸುಯಾಲಿಟಿ ಬಗ್ಗೆ ಮಯ್ಯಾರ, ನಾಚಿಕೆ, euphemism ಇತ್ಯಾದಿ ಸ್ತ್ರೀಸಹಜ ಒಗ್ಗರಣೆಗಳಿಲ್ಲದೆ ನಾಯಕಿ ಜಯಂತಿ ಮಾತನಾಡುವಾಗ, ಕ್ಯಾಮರಾ ಅಕ್ಷರಶಃ ಅಸಹಜ ಕೋನದಲ್ಲಿ ಇಡೀ ದೃಶ್ಯವನ್ನು ಹೇಳಿದೆ. ಈ ದೃಶ್ಯೀಕರಣದ ಅಸಹಜತೆ ಪಾತ್ರದ ಅಸಹಜತೆ ಕೂಡ ಆಗಿ ಪ್ರೇಕ್ಷಕರನ್ನು ತಟ್ಟುತ್ತದೆ.

'ಬೆಳ್ಳಿಮೋಡ'ದ ಜನಪ್ರಿಯ ''ಮೂಡಣ ಮನೆಯ ಮುತ್ತಿನ ನೀರಿನ...'' ದೃಶ್ಯದಲ್ಲಿ ನಾಯಕಿಯ ಅಭಿನಯಕ್ಕಿಂತ ನೆರಳು-ಬೆಳಕಿನ ಸಂಯೋಜನೆಯ ವಿನ್ಯಾಸವೇ ಆ ಗೀತೆಯನ್ನು ದೃಶ್ಯಕಾವ್ಯವಾಗಿಸಿರುವುದು. ಚಿತ್ರದ ಅಂತಿಮ ದೃಶ್ಯದಲ್ಲಿ ''ಬೆಳ್ಳಿ ಕರಗಿತು, ಮೋಡ ಉಳಿಯಿತು...'' ಎಂದು ನಾಯಕಿ ತನ್ನ ನೋವನ್ನು ವ್ಯಕ್ತಪಡಿಸುವಾಗ ಧ್ವನಿ ಅಗತ್ಯಕ್ಕಿಂತ ಹೆಚ್ಚು ಬಾರಿ ಪ್ರತಿಧ್ವನಿಸುವ, ಅದಕ್ಕೆ ತಕ್ಕಂತೆ ಕ್ಯಾಮರಾ ಚಲಿಸುವ ತಂತ್ರವನ್ನು ಬಳಸಲಾಗಿದೆ.

ಈ ಮೂರು ಚಿತ್ರಗಳ ಉದಾಹರಣೆ ಕೊಡುತ್ತಿರುವ ಕಾರಣ ಇಷ್ಟೆ. ಹೊಸ ಅಲೆ ಚಿತ್ರದಿಂದಲೇ ನಮ್ಮಲ್ಲಿ ಚಲನಚಿತ್ರ ಮಾಧ್ಯಮದ ಬಗ್ಗೆ ಸರಿಯಾದ ತಿಳಿವಳಿಕೆ ಬಂತು ಎಂಬ ನಂಬಿಕೆ ನಮ್ಮಲ್ಲಿ ಬಹಳಷ್ಟು ಜನಕ್ಕೆ ಇದೆ. ಈ ಉದಾಹರಣೆ ನೋಡಿದಾಗ ಹೊಸ ಅಲೆ ಚಿತ್ರ ಬರುವುದಕ್ಕೆ ಮೊದಲೇ ನಮ್ಮ ಲ್ಲಿ ಅಭಿನಯ ಎಂದರೆ ನಟ-ನಟಿಯರು ಮಾತ್ರವಲ್ಲ, ಕ್ಯಾಮರಾ ಚಲನೆ ಮತ್ತು ಧ್ವನಿ ಬಳಕೆ ಕ್ರಮ ಎಂಬ ಅರಿವು ಹುಟ್ಟಿಕೊಂಡಿತ್ತು ಎಂದು ತಿಳಿಯುತ್ತದೆ. ಇವನ್ನು ಸಮರ್ಥವಾಗಿ ಬಳಸಿದ 'ಚಲನಚಿತ್ರ ಭಾಷೆ' ರೂಪುಗೊಂಡಿಲ್ಲದೆ ಇರಬಹುದು. ಆದರೆ ಹೊಸ ಅಲೆ ಚಿತ್ರ ಬರುವ ಮೊದಲು ಕನ್ನಡ ಚಿತ್ರರಂಗ ಕಗ್ಗತ್ತಲಲ್ಲಿ ಇತ್ತು ಎಂಬ ಕಲ್ಪನೆ ತಪ್ಪು. ಅಭಿನಯದ ಪರಿಕಲ್ಪನೆ ನಮ್ಮಲ್ಲಿ ಬದಲಾಗುತ್ತಾ ಬಂದ ಕ್ರಮವೇ ಒಂದು ಕರಗುತ್ತ ಇನ್ನೊಂದರಲ್ಲಿ ಬೆಳೆಯುತ್ತಾ ಹೋದ ಕ್ರಮ.

'ಸಂಸ್ಕಾರ'ದಿಂದ ಅಧಿಕೃತವಾಗಿ, 'ನಾಂದಿ'ಯಿಂದ ಅನಧಿಕೃತವಾಗಿ ನಮ್ಮಲ್ಲಿ ಹೊಸ ಅಲೆ ಚಿತ್ರಗಳು ಕಾಲಿಟ್ಟವು. ಹೊಸ ಅಲೆ ಚಿತ್ರಗಳಲ್ಲಿ ಗಂಭೀರವಾಗಿ ತೊಡಗಿಕೊಂಡವರೆಲ್ಲ ಪಾಶ್ಚಾತ್ಯ ಪ್ರಯೋಗಗಳ ಬಗ್ಗೆ ಅರಿವಿದ್ದವರು ಮತ್ತು ಮಾಧ್ಯಮದ ಭಿನ್ನ ಸಾಧ್ಯತೆಯನ್ನು ಬಲ್ಲವರಾಗಿದ್ದವರು. ಹೊಸ ಅಲೆ ತಂದುಕೊಟ್ಟ ಅಭಿನಯ ಕ್ರಮ ಎಂದರೆ ಭಾವುಕತೆ ಬಿಟ್ಟ ಮೆಲುದನಿಯ ಅಭಿನಯ ಕ್ರಮ. ಕೆಲವು ಸಲ ಇವರೇನು ಅಭಿನಯ ಮಾಡುತ್ತಾ ಇಲ್ಲವಲ್ಲ ಎಂಬ ಅನಿಸಿಕೆ ಹುಟ್ಟಿಸುವಷ್ಟು ಸಂಯಮ ಕಂಡುಬಂದಿದ್ದು ನಿಜ. ಈ ಬೆಳವಣಿಗೆಯಿಂದ ಮೆಲೋಡ್ರಾಮದ ಪಾತಾಳದಿಂದ ಪಾತ್ರಗಳು ಹೊರಗೆ ಬರುವುದು ಸಾಧ್ಯವಾಯಿತು. ಇದರಿಂದ ಅಭಿನಯ ಪ್ರೇಕ್ಷಕನನ್ನು ಕೆರಳಿಸುವ ಬದಲಾಗಿ ಜಿಜ್ಞಾಸೆಗೆ ಸಿಲುಕಿಸುವಂತಾಯಿತು. ಜೊತೆಗೆ ಕಲಾವಿದರ ಮುಖವನ್ನು ಬೇರೆ ಬೇರೆ ಕೋನಗಳಲ್ಲಿ ತೋರಿಸುವ ಮೂಲಕವೇ ಭಾವನೆಗಳನ್ನು ಹೇಳುವುದು ಸಾಧ್ಯ ಎಂಬ ಅಂಶಕ್ಕೆ ಇಲ್ಲಿ ಒತ್ತು ಸಿಕ್ಕಿತು. ಇದಕ್ಕೆ ಒಂದೆರಡು ಉದಾಹರಣೆ ನೀಡುವುದಾದರೆ, 'ಸಂಸ್ಕಾರ'ದ ನಾರಾಯಣಪ್ಪನ ಪಾತ್ರಕ್ಕೆ ಲಂಕೇಶ್‌ರನ್ನು ಆಯ್ಕೆ ಮಾಡಲಾಗಿತ್ತು. ಲಂಕೇಶ್ ಭಾವಾಭಿನಯ ನೀಡುವುದಿರಲಿ, ಕಣ್ಣನ್ನು ಚಂಚಲವಾಗಿಸುವುದಕ್ಕೂ ಅಸಮರ್ಥರಾಗಿದ್ದರು. ಬಹುಶಃ ಈ ಕಾರಣಕ್ಕೇ ಇರಬೇಕು

ರಾಧೆಯಾದ ಶಾಮರು....

(ಚಿತ್ರ ೧-೫) ಸ್ತ್ರೀ ಪಾತ್ರಗಳಲ್ಲಿ ಶೋಭಿಸುವ, ರಂಜಿಸುವ ನಾಯಕ ನಟರು - ರಾಜಕುಮಾರ್, ನರಸಿಂಹರಾಜು, ರಮೇಶ್, ಕಲ್ಯಾಣ್‌ಕುಮಾರ್

ನಾರಾಯಣಪ್ಪನ ಪಾತ್ರ ಬಂದಾಗಲೆಲ್ಲ ಕ್ಯಾಮರಾದ ಕೋನಗಳು ಭಾವನೆಗೆ ತಕ್ಕಂತೆ ಚಲಿಸುತ್ತಲೇ ಇರುತ್ತಿದ್ದವು. ಇದರಿಂದ ಲಂಕೇಶ್ ಅಭಿನಯಿಸದೇ ಉತ್ತಮ ಅಭಿನಯ ಸಾಧ್ಯವಾಗಿಬಿಟ್ಟಿತು. ಇಂಥದೆ ಇನ್ನೊಂದು ಉದಾಹರಣೆ 'ಪಲ್ಲವಿ'. ಇಲ್ಲಿ ಮುಖ್ಯ ಪಾತ್ರದಲ್ಲಿರುವ ಟಿ.ಎನ್.ಸೀತಾರಾಮ್, ವಿಮಲಾನಾಯಿಡು ಇಬ್ಬರದೂ ಭಾವರಹಿತ ಸಪ್ಪೆ ಮುಖ. ಇದನ್ನು ಮೀರಲು ಲಂಕೇಶ್ ಒಂದು ಉಪಾಯ (Device) ಯೋಜಿಸಿದ್ದರು. ಸೌಂಡ್‌ಟ್ರ್ಯಾಕ್‌ನಲ್ಲಿ ಪಾತ್ರದ ಭಾವನೆಗಳನ್ನು ಅಥವಾ ಇಡೀ ಸನ್ನಿವೇಶದ ಭಾವವನ್ನು ಹಿನ್ನೆಲೆ ಮಾತುಗಳಲ್ಲಿ ಹೇಳಿಬಿಡುವುದು. ಇದರಿಂದ ನಟ-ನಟಿಯರು ಅಭಿನಯಿಸದೆಯೂ ಈ ಚಿತ್ರಕ್ಕೆ ರಾಷ್ಟ್ರಪ್ರಶಸ್ತಿ ಬಂತು ಎಂದು ಸಿ.ಆರ್.ಸಿಂಹ ಅಭಿಪ್ರಾಯ.

ಇನ್ನು ಹೊಸ ಅಲೆ ಚಿತ್ರಗಳಲ್ಲಿ ಕ್ಯಾಮರಾ ಬಳಕೆಯಾಗುವ ಕ್ರಮದ ಬಗ್ಗೆ ಕೆಲವು ಉದಾಹರಣೆಗಳನ್ನು ಗಮನಿಸೋಣ. 'ಘಟಶ್ರಾದ್ಧ'ದಲ್ಲಿ ಯಮುನಕ್ಕನಿಗೆ ಬಹಿಷ್ಕಾರ ಹಾಕುತ್ತಾರೆ. ಅವಳಿಗಿರುವ ಏಕೈಕ ಆಸೆ ನಾಣಿ. ಹೊರಗಿಂದ ಹುಡುಗರು ಬಂದು ಆತನನ್ನು ಕರೆಯುತ್ತಾರೆ. ನಾಣಿಗೆ ತನ್ನ ವಯಸ್ಸಿನ ಹುಡುಗರ ಜೊತೆ ಆಡಬೇಕು ಎಂಬ ಆಸೆ. ನಾಣಿ ಗರ್ಭಿಣಿಯಾದ ಯಮುನಕ್ಕನ ಹೊಟ್ಟೆಗೆ ಒದ್ದು ಓಡುತ್ತಾನೆ. ಆಗ ಯಮುನಕ್ಕನ ಪ್ರತಿಕ್ರಿಯೆ ದಾಖಲಿಸಲು ಕ್ಲೋಸ್ ಅಪ್‌ನಲ್ಲಿ ವೈಡ್‌ಆ್ಯಂಗಲ್ ಲೆನ್ಸ್ ಬಳಸಲಾಯಿತು. ಇದರಿಂದ ಅವಳ ಮುಖ Distort ಆಗಿ ಪ್ರೇಕ್ಷಕರಿಗೆ ದುರಂತದ, ನೋವಿನ ತೀವ್ರತೆ ಮುಟ್ಟಿತು. ಇದೇ ಚಿತ್ರದ ಇನ್ನೊಂದು ದೃಶ್ಯದಲ್ಲಿ ಯಮುನಕ್ಕನಿಗೆ ಗರ್ಭಪಾತ ಮಾಡಿಸುವ ದೃಶ್ಯ. ಅದರಲ್ಲಿ ಆಕೆಯ ತಲೆ ಮಲಗಿರುವ ಬೆಂಚಿನ ಮಟ್ಟದಿಂದ ಕೆಳಗೆ ವಾಲಿರುವ ಹಾಗೆ ವಿಚಿತ್ರ ಕೋನವಿತ್ತು. ಗರ್ಭಪಾತ ಮಾಡುವಾಗ ನೋವಿನಿಂದ ಕಿರುಚುತ್ತಿದ್ದ ಹಾಗೇ ಆಕೆಯ ಮುಖದ ಮೇಲೆ ಬೆಳಕು ಹೆಚ್ಚು ಮಾಡುತ್ತಾ ಹೋಗಲಾಗಿತ್ತು. ಮುಖ ಬಿಳುಚಿದ ಹಾಗೆ ಕಾಣುತ್ತ ಪ್ರೇಕ್ಷಕರನ್ನು ಕಲಕಿತು. ಈ ವಿವರಗಳನ್ನು ಛಾಯಾಗ್ರಾಹಕ ಎಸ್.ರಾಮಚಂದ್ರ ವಿವರಿಸಿದರು. ಈ ಎರಡು ಉದಾಹರಣೆಯಲ್ಲಿ ಅಭಿನಯದ ವ್ಯಾಪ್ತಿ ಮತ್ತು ಶಕ್ತಿಯನ್ನು ಕ್ಯಾಮರಾ ಹೆಚ್ಚಿಸಿದ್ದನ್ನು ನೋಡಬಹುದು. ಇಂಥದೇ ಇನ್ನೊಂದು ಚಿತ್ರ ಎಂ.ಎಸ್.ಸತ್ಯು ಅವರ 'ಕನ್ನೇಶ್ವರ ರಾಮ'. ಇಲ್ಲಿ ಕನ್ನೇಶ್ವರರಾಮ ತನ್ನ ಪ್ರೇಯಸಿಯನ್ನು ಉನ್ಮತ್ತಳನ್ನಾಗಿಸಿ ಆವಳ ಒಡವೆಗಳನ್ನು ದೋಚುವ ಉಪಾಯದಲ್ಲಿದ್ದಾನೆ. ಈ ದೃಶ್ಯ ಲಾಂಗ್ ಶಾಟ್‌ನಲ್ಲಿ ಆರಂಭವಾಗಿ ಮಿಡ್ ಶಾಟ್ ಆಗಿ ಪರಿವರ್ತಿತವಾಗುತ್ತದೆ. ಪ್ರೇಯಸಿ ಉನ್ಮತ್ತಳಾಗಿ ಕಣ್ಣನ್ನು ಅರೆಮುಚ್ಚಿ ತನ್ನ ದೇಹವನ್ನು ಪ್ರಣಯಾಭಿಲಾಷೆಗೆ ಸಿದ್ದಗೊಳಿಸುತ್ತಿದ್ದಾಳೆ. ಕನ್ನೇಶ್ವರರಾಮನ ಕಣ್ಣಲ್ಲಿ ಕ್ರೌರ್ಯ ಎದ್ದು ಕಾಣುತ್ತಿದೆ. ಆವನ ಮಾತಲ್ಲಿ ಮಾತ್ರ ಪ್ರಣಯದ ಕಾವು ಇದೆ. ಅವನು ಉಪಾಯವಾಗಿ ಪ್ರೇಯಸಿಯ ಒಡವೆಗಳನ್ನು ಬಿಚ್ಚಿಕೊಳ್ಳುತ್ತಾನೆ. ಪ್ರೇಯಸಿ ತನ್ನನ್ನೇ ಬಿಚ್ಚಿಕೊಳ್ಳುತ್ತಿದ್ದಾಳೆ. ಇದು ಮಂದ ಬೆಳಕಿನಲ್ಲಿ ದೃಶ್ಯೀಕರಣಗೊಂಡಿದೆ. ನೈಕಟ್ಯ (Juxtapose) ಹೊಂದುವ ಮಾತಲ್ಲಿ ಸಾಮ್ಯತೆ ಇದ್ದರೂ ಪರಸ್ಪರ ವಿರುದ್ಧವಾದ ಆಂಗಿಕ ಅಭಿನಯವನ್ನು ಕ್ಯಾಮರಾ ಅಗತ್ಯಕ್ಕೆ ತಕ್ಕಂತೆ ಸೆರೆ ಹಿಡಿದಿದೆ. ಇಲ್ಲಿ ಸಂಭಾಷಣೆಯೇ ಇಲ್ಲ, ಇರುವುದೆಲ್ಲ ಅಸ್ಪಷ್ಟ ಮಾತೇ ಆದರೆ ದೃಶ್ಯ ಪರಿಣಾಮಕಾರಿಯಾಗಿ ಕನ್ನೇಶ್ವರರಾಮನ ವ್ಯಕ್ತಿತ್ವವನ್ನು ಪ್ರೇಕ್ಷಕರಿಗೆ ತಲುಪಿಸುತ್ತದೆ.

'ಅನ್ವೇಷಣೆ' ಚಿತ್ರದ್ದು ಇನ್ನೊಂದು ಮಾದರಿ ಅಭಿನಯ. ಇದರಲ್ಲಿ ಅನಂತ್‌ನಾಗ್, ಸ್ಮಿತಾಪಾಟೀಲ್ ವ್ಯಕ್ತಪಡಿಸುವ ಭಯ, ಕಾತುರ, ಗೊಂದಲಗಳು ಪ್ರೇಕ್ಷಕರಿಗೆ ತವಾಷೆಯಾಗಿ ಕಾಣುವಂತೆ ಸಂಯೋಜಿಸಲಾಗಿದೆ. ಇದು ಮಾಮೂಲಿ ಚಿತ್ರಗಳ ಬಿಹೇವಿಯಲ್ ಪ್ಯಾಟರ್ನ್ (ಸ್ವಭಾವಮೂಲ ಮಾದರಿ)ಗಿಂತ ಭಿನ್ನವಾದುದು. ಇಂಥದೇ ಪ್ರಯತ್ನವನ್ನು 'ಋಷ್ಯಶೃಂಗ', 'ಕಾಡು ಕುದುರೆ' ಚಿತ್ರಗಳಲ್ಲೂ ಗುರುತಿಸಬಹುದು.

೭೦ರ ದಶಕದಿಂದೀಚೆಗೆ ಕಲಾತ್ಮಕ, ವ್ಯಾಪಾರೀ ಎಂಬ ಎರಡು ಪ್ರಕಾರಗಳು ಕವಲೊಡೆದವು. ಆ ಸಂದರ್ಭದಲ್ಲೇ ನಮ್ಮಲ್ಲಿ ಹವ್ಯಾಸಿ ರಂಗಭೂಮಿ ಚಳವಳಿ ಪ್ರಬಲವಾಗಿತ್ತು. ವೃತ್ತಿ ರಂಗಭೂಮಿಯ ಅಭಿನಯಕ್ಕಿಂತ ಹವ್ಯಾಸಿ ರಂಗಭೂಮಿಯದು ಭಿನ್ನ. ಪ್ರತಿಯೊಂದನ್ನೂ ವಾಚ್ಯವಾಗಿ ಹೇಳದೆ ಸಂಭಾಷಣೆಗಳಷ್ಟೇ ದೈಹಿಕ ಅಭಿವ್ಯಕ್ತಿ (body language)ಗೂ ಮಹತ್ವ ಕೊಡುವ, ಬೆಳಕಿನ ವ್ಯವಸ್ಥೆಯಲ್ಲೇ ಹೊಸ ಅರ್ಥ ಹುಡುಕುವ ಪ್ರಯತ್ನಗಳಾದವು. ಪ್ರತಿಮೆಗಳ ಮೂಲಕ ಮಾತಾಡುವ ಪ್ರಯತ್ನವೂ ನಡೆಯಿತು. ಇವೆಲ್ಲವೂ ಕಲಾತ್ಮಕ ಅಥವಾ ಹೊಸ ಅಲೆ ಚಿತ್ರಗಳಲ್ಲಿ ಕಾಣಿಸಿಕೊಂಡವು. ಜೊತೆಗೆ ಹವ್ಯಾಸಿ ರಂಗಭೂಮಿಯಿಂದ ಬಂದ ನಟರು ವ್ಯಾಪಾರಿ ಚಿತ್ರಗಳಲ್ಲಿ ಅಭಿನಯಿಸಲು ಆರಂಭಿಸಿದಾಗ ತಮ್ಮ ಅಭಿವ್ಯಕ್ತಿ ಮಾದರಿಗಳನ್ನು ಆ ಮಾಧ್ಯಮಕ್ಕೆ ತಂದರು. ಇದರಿಂದ ಅಭಿನಯದ ಪರಿಕಲ್ಪನೆ ಇನ್ನಷ್ಟು ಸಂಕೀರ್ಣವಾಯಿತು. ಇದೇ ಹಂತದ ಇನ್ನೊಂದು ಬೆಳವಣಿಗೆಯೆಂದರೆ ಇಮೇಜ್ ಪರಿಕಲ್ಪನೆ ಹುಟ್ಟಿಕೊಂಡಿದ್ದು. ಆರಂಭದಲ್ಲಿ ನಟರ ಅಭಿನಯ ಚಾತುರ್ಯಕ್ಕೆ ತಕ್ಕಂತ ಈ ಇಮೇಜ್ ಬೆಳೆದರೂ ಚಿತ್ರರಂಗದಲ್ಲಿ ಅಪಾರ ಹಣ ಹರಿಯಲು ಆರಂಭಿಸಿದ ಮೇಲೆ ಇಮೇಜ್ ಎಂಬ ಸೂತ್ರ ಚಿತ್ರ ನಿರ್ಮಾಣ ಚಟುವಟಿಕೆಗಳನ್ನೇ ನಿಯಂತ್ರಿಸುವಷ್ಟು ಪ್ರಬಲವಾಯಿತು. ಇಮೇಜ್ ಒಬ್ಬ ನಟನ ಸಹಜ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತದೆ. ವಯಸ್ಸಾದರೂ ವಿಗ್ ಧರಿಸಿ ಯುವಕನಂತೆ ಪಾತ್ರ ಮಾಡಿಯಾದರೂ ತಮ್ಮ ಇಮೇಜ್ ಕಾಪಾಡಿಕೊಳ್ಳುವ ಅನಿವಾರ್ಯಕ್ಕೆ ನಟ ನಟಿಯರು ಬಲಿಯಾದರು.

ತಂತ್ರಜ್ಞಾನ ಕಳೆದೆರಡು ದಶಕದಲ್ಲಿ ಅಪಾರವಾಗಿ ಬೆಳೆದಿದೆ. ಅಭಿನಯ, ಚಿತ್ರನಿರ್ಮಾಣದ ಹಲವು ಪರಿಕರಗಳಲ್ಲಿ ಒಂದು. ಒಂದು ಕಾಲದಲ್ಲಿ ಅದ್ಭುತವಾಗಿ ಕಾಣುತ್ತಿದ್ದ ದ್ವಿಪಾತ್ರ, ತ್ರಿಪಾತ್ರದ ಜಾದು ಈಗ ಮಾಮೂಲಾಗಿದೆ. ಹೆಚ್ಚಿನ ನಾಯಕ-ನಾಯಕಿಯರಿಗೆ ಕಂಠದಾನ ಕಲಾವಿದರಿದ್ದಾರೆ. ಎಷ್ಟೋ ಸಲ ಈ ಎರವಲು ಕಂಠವೇ ಪಾತ್ರದ ಯಶಸ್ಸಿಗೆ ಕಾರಣವಾಗುವುದೂ ಉಂಟು. ಈ ಬೆಳೆದ ತಂತ್ರಜ್ಞಾನದಲ್ಲಿ ಅಭಿನಯ ಒಂದು ಸಂಕೀರ್ಣ ಕಲೆಯಾಗಿ ಬೆಳೆದಿದೆ. ಈ ಬೆಳವಣಿಗೆಯ ನಡುವೆ ಅಭಿನಯಿಸುವ ಸಮಸ್ಯೆಗಳ ಕುರಿತು ಕಲಾವಿದ ಎಂ.ಎಸ್.ಉಮೇಶ್ ಹೇಳುತ್ತಾರೆ : ''ಕ್ಲೋಸಪ್, ಮಿಡ್ ಶಾಟ್, ಲಾಂಗ್ ಶಾಟ್, ಟ್ರ್ಯಾಲಿ ಶಾಟ್ - ಹೀಗೆ ನಾನಾ ರೀತಿಯಲ್ಲಿ ಕ್ಯಾಮರಾ ಬಳಸುವುದರಿಂದ ಅಭಿನಯದ ಸಾಧ್ಯತೆಯೇ ಕಡಿಮೆಯಾಗಿದೆ. ಇಲ್ಲಿ ಆಂಗಿಕ ಅಭಿನಯಕ್ಕಿಂತ ಮುಖಭಾವನೆಯೇ ಮುಖ್ಯ. ಇದರೊಂದಿಗೆ ಛಾಯಾಗ್ರಾಹಕ ಒಂದು ನಿಗದಿತ ಸ್ಥಳಕ್ಕೆ ಮಾತ್ರ ಲೈಟಿಂಗ್ ಮಾಡಿರುತ್ತಾರೆ. ಕಲಾವಿದ ಅಭಿನಯಿಸುವಾಗ, ನುಡಿಯುವಾಗ, ನಡೆಯುವಾಗ ಛಾಯಾಗ್ರಾಹಕ ಮಾಡಿದ ಬೆಳಕನ್ನು ಅನುಸರಿಸಬೇಕು. ಅನಂತರ ಸಹಕಲಾವಿದನನ್ನು ಮರೆಮಾಡಬಾರದು. ಅಗತ್ಯಕ್ಕೆ ತಕ್ಕಂತೆ ಕ್ಯಾಮರಾಗೆ ಫೇವರ್ ಆಗಿ ಮಾತನಾಡಬೇಕು. ಇವನ್ನೆಲ್ಲ ಅರಿತ ಮೇಲೆ ಸಂಭಾಷಣೆಯನ್ನು ಮರೆಯದೆ ನೆನಪಲ್ಲಿಟ್ಟು ಮಾತಾಡಬೇಕು. ಹಾಗೆ ಮಾತಾಡುವಾಗ ಸಂಭಾಷಣೆಗೆ ತಕ್ಕಂತೆ ಮುಖಭಾವ ಬದಲಾಗುತ್ತಿರಬೇಕು''.

ಇಲ್ಲಿ ಗಮನಿಸಬೇಕಾದ ಸಂಗತಿ ಎಂದರೆ ಇವತ್ತಿನ ಚಿತ್ರರಂಗದಲ್ಲಿ ಅಭಿನಯ ನಟನ ಖಾಸಗಿ ಅಭಿವ್ಯಕ್ತಿ ಮಾಧ್ಯಮವಾಗಿ ಉಳಿದಿಲ್ಲ. ಅದು ತಂತ್ರಜ್ಞಾನದ ಜೊತೆ ಸಾಗಬೇಕಾದ ಅನಿವಾರ್ಯತೆಯಾಗಿದೆ. ತನ್ನ ಶಕ್ತಿಯನ್ನು ಇಮೇಜ್ ಕಟ್ಟಿಕೊಡುವ ಮಿತಿಯಲ್ಲಿ ತಂತ್ರಜ್ಞಾನದ ಜೊತೆಗೆ ಹೆಗಲು ಹಾಕಿ ನಡೆಯುವಂತ ರೂಪಿಸಿಕೊಳ್ಳಬೇಕು. ಇದೆಲ್ಲಕ್ಕಿಂತ ಹೆಚ್ಚಾಗಿ ಪ್ರತಿ ಪಾತ್ರಗಳಿಗೂ ಅಭಿನಯದ ಕ್ರಮಕ್ಕೊಂದು stock expression ವಿಧಾನ ರೂಪುಗೊಂಡಿರುವುದರಿಂದ ಈ ಮಿತಿಯಲ್ಲೇ ಅಭಿನಯಿಸಬೇಕು. ಇದು ಸಾಮಾನ್ಯ ಚಿತ್ರಗಳಲ್ಲಿ ರೂಪುಗೊಂಡಿರುವ ಕ್ರಮ. ನಟ ಇಂಥ ಕಡೆ ತನ್ನದೇ ಅಸ್ತಿತ್ವದ ವಿಶ್ವವನ್ನು ಸೃಷ್ಟಿ ಮಾಡುತ್ತ ತಾನು ಮಾಡುವ ಪಾತ್ರ ನಿಜವೇನೋ ಅನ್ನುವ ಭ್ರಮೆ ಹುಟ್ಟಿಸುತ್ತಿರಬೇಕು. ಇಲ್ಲಿ ಸಾಮಾನ್ಯವಾಗಿ ಅನುಕರಣೆ ಕಡೆಗೆ ಒತ್ತು ಬೀಳುತ್ತದೆ. ನಿರ್ದೇಶಕ ಸಮರ್ಥನಾದರೆ ನಟನೆಯನ್ನು ತನ್ನ ಚಿತ್ರದ ಅಗತ್ಯಕ್ಕೆ ತಕ್ಕ ಹಾಗೆ ಬಳಸಿಕೊಳ್ಳುತ್ತಾನೆ. ಇಲ್ಲವಾದ ಕಡೆ ಎಲ್ಲಾ ದುರ್ಬಲ ಎಳೆಗಳೇ. ಸಿನಿಮಾಕ್ಕೋಸ್ಕರ ಅಭಿನಯಿಸುವುದಕ್ಕೂ, ಪಾತ್ರ ಮಾಡುವುದಕ್ಕೋಸ್ಕರ ಅಭಿನಯಿಸುವುದಕ್ಕೂ ಹೆಚ್ಚಿಗೆ ವ್ಯತ್ಯಾಸ ಇರುವುದಿಲ್ಲ. ತಾನು ಹೇಗೆ project ಆಗಬೇಕೆಂಬುದರ ಬಗ್ಗೆಯೇ ಯೋಚಿಸುತ್ತಾ ಹೋದರೆ ಮಾಧ್ಯಮದ ಒಟ್ಟು ಉದ್ದೇಶ ವಿಫಲವಾಗುತ್ತದೆ.

ಹಾಗಾದರೆ ತಂತ್ರಜ್ಞಾನ ಅಭಿನಯದ ಸಾಧ್ಯತೆಯನ್ನು ಕುಗ್ಗಿಸಿದೆಯೆ ? ಎಂಬ ಪ್ರಶ್ನೆಗೆ, ''ಇಲ್ಲ,'' ಅನ್ನುತ್ತಾ ಅಭಿನೇತ್ರಿ ವಿನಯಾ ಪ್ರಸಾದ್, ''ಒಬ್ಬ ನಟ ಅಥವಾ ನಟಿಗೆ ತಂತ್ರಜ್ಞಾನದ ಬಗ್ಗೆ, ಅದರಲ್ಲೂ ಶಾಟ್ ಟೇಕಿಂಗ್ಸ್ ಬಗ್ಗೆ ಪೂರ್ಣಜ್ಞಾನ ಇದ್ದರೆ ಹೆಚ್ಚು ಯಶಸ್ವಿಯಾಗಿ ನಟಿಸುವುದು ಸಾಧ್ಯ. ನಮ್ಮ ಹತ್ತಿರ ೧೦೦ ಲೆನ್ಸ್ ಇದೆ ಅಂದಿರುತ್ತಾರೆ. ಮುಖ, ಕೈ, ಕಾಲು ಏನೂ ಅಲ್ಲಾಡಿಸೋಕೆ ಸಾಧ್ಯ ಇಲ್ಲ ಅಂತ ಎಷ್ಟು rigid ಆಗಿರುತ್ತೇನೆ ಅಂದರೆ, ಆಮೇಲೆ ಚಿತ್ರ ನೋಡಿದಾಗ ಅನ್ನಿಸುತ್ತೆ, ಯಾಕೆ ನಾನು ಇಷ್ಟೊಂದು ಸ್ಟಿಫ್ ಆಗಿದ್ದೀನಿ, ಒಂಚೂರಾದರೂ ಕೈ ಆಡಿಸಬಹುದಿತ್ತಲ್ಲಾ ಅಂತ. ತಂತ್ರಜ್ಞಾನದ ಬಗ್ಗೆ ನಟರ ಅಜ್ಞಾನ ಕೆಟ್ಟ ಅಭಿನಯಕ್ಕೆ ಕಾರಣ ಆಗುತ್ತೆ'' ಎನ್ನುತ್ತಾರೆ. ಇದೇ ಮಾತನ್ನು ಪುಷ್ಟೀಕರಿಸುತ್ತಾ ನಟ ರಮೇಶ್ ಹೇಳುತ್ತಾರೆ : ''ಸಿನಿಮಾ ಅಭಿನಯದಲ್ಲಿ ನಟ ಮಾತ್ರ ಅಲ್ಲ, ಉಳಿದ ತಂತ್ರಗಳೂ ಸೇರಿವೆ. ನಾನೂ ಇತ್ತೀಚೆಗೆ ಕಲಿತುಕೊಂಡಿದ್ದೀನಿ. ಇಲ್ಲಿ ನಾನು ಕಿರುಚುತ್ತೇನೆ ಅಂದುಕೊಳ್ಳಿ. 'ಸೀತಾ' ಅಂತ ಐದು ಸಲ echo ಹಾಕ್ತಾರೆ ಅಂತ ಗೊತ್ತಿದ್ರೆ ಅಷ್ಟು ಗ್ಯಾಪ್ ಬಿಟ್ಟು ನಾನು ಮಾತಾಡಬಹುದು. ತಂತ್ರ ಗೊತ್ತಿಲ್ಲ್ದೇ ಇದ್ರೆ ನಾನು 'ಸೀತಾ' ಅಂದು ಮುಂದಿನ ಮಾತೂ ಹೇಳ್ಬಿಟ್ಟಿರ್ತೀನಿ. ಅಲ್ಲಿ ಪ್ರತಿಧ್ವನಿಯ ಪರಿಣಾಮ ಹೊರಟ್ಹೋಯ್ತು. ಹಾಗೆಯೇ ಈ ಝೂಮ್-ಇನ್ ಆಗೋಕೂ ಮುಂಚೆಯೇ ನಾನು ಭಾವ ಪ್ರದರ್ಶನ ಕೊಟ್ಟರೆ ಅದು ಕಾಣಿಸೋದಿಲ್ಲ. ಆ ಝೂಮ್‌ಗೆ ಮಾತ್ರ expression ಕೊಡ್ತೀನಿ. ಹಾಗೇ, ಒಂದು ಬ್ಯಾಂಗ್ ಬರುತ್ತೆ. ಸ್ವಲ್ಪ ಹೊತ್ತು ಭಾವನೆಗಳನ್ನು ಕೊಡಿ ಸಾರ್, ಅನ್ನುತ್ತಾರೆ ನಿರ್ದೇಶಕರು. ನಾನು ನಗುವನ್ನು control ಮಾಡಬೇಕು.'' ಇದು ಒಟ್ಟಾರೆ ಇವತ್ತಿನ ಚಿತ್ರಗಳಲ್ಲಿನ ಅಭಿನಯ ಕುರಿತ ಸಂಕೀರ್ಣ ಪರಿಕಲ್ಪನೆಯನ್ನು ಹೇಳುತ್ತದೆ. ಸಿನಿಮಾ ನಟನೆ, ಕಂಪನಿ ನಾಟಕರಂಗದಿಂದ ವಿಸ್ತಾರವಾಗಿ ಬೆಳೆಯಿತೆಂಬುದು ಚಾರಿತ್ರಿಕವಾಗಿ ನಿರ್ಧಾರಿತವಾಗಿದೆ. ಆದರ ನಂತರದಲ್ಲಿ ರಂಗಭೂಮಿಯಲ್ಲಿ ಉಂಟಾದ ಬದಲಾವಣೆ ಚಿತ್ರರಂಗವನ್ನು ತಟ್ಟಿತೆ? ಎಂಬ ಪ್ರಶ್ನೆ ಕೂಡ ಮುಖ್ಯವಾದದ್ದು. ನಾಟಕದಲ್ಲಿ ಸಾಧ್ಯವಾಗದಿದ್ದ ಚಲನೆ, ಭ್ರಮೆಯನ್ನು ಸಿನಿಮಾ ಹೆಚ್ಚಾಗಿ ಒಳಗೊಂಡಂತೆ, ಅಶ್ಲೀಲ-ದ್ವಂದ್ವಾರ್ಥ ಚಿತ್ರರಂಗದಲ್ಲಿ ಹೆಚ್ಚಾದಂತೆ ರಂಗಭೂಮಿಯೇ ಚಿತ್ರರಂಗವನ್ನು ಅನುಕರಿಸಿತು. ವೃತ್ತಿಪರ ರಂಗಭೂಮಿ, ಹವ್ಯಾಸಿ ರಂಗಭೂಮಿ ಅಭಿನಯದ ಎರಡು ಮಾದರಿಗಳನ್ನು ಹುಟ್ಟುಹಾಕಿದವು. ಈ ಎರಡೂ ಮಾದರಿಗಳನ್ನು ನಾವು ಇವತ್ತಿನ ಚಿತ್ರರಂಗದಲ್ಲಿ ಕಾಣಬಹುದಾಗಿದೆ. ನಟನೆಯೇ ಅಮುಖ್ಯವಾದ, ತಂತ್ರಜ್ಞಾನ ಪ್ರಧಾನವಾದ ಪ್ರಯತ್ನಗಳು ಅಲ್ಲಲ್ಲಿ ಕಾಣಿಸಿದರೂ ಅದು ಪ್ರಧಾನವಾಹಿನಿಯಿಂದ ದೂರವೇ ಉಳಿದು ಬರಿ ಪ್ರಯತ್ನವಾಯಿತು. ಇವತ್ತಿಗೂ ಕನ್ನಡ ಚಿತ್ರರಂಗ ನಟನೆಯ ಮಾಧ್ಯಮವಾಗಿಯೇ ಉಳಿದಿದೆ. ಪಾತ್ರಗಳಿಗಿಂತ ಅದನ್ನು ಅಭಿನಯಿಸಿದ ನಟವರ್ಗದ ಹೆಸರೇ ಜನರ ನಾಲಗೆಯ ಮೇಲೆ ರಂಜಿಸುತ್ತದೆ. ಇದು ವಿಶ್ವದಾದ್ಯಂತ ಉಂಟಾಗಿರುವ ಬೆಳವಣಿಗೆ. ಆದ್ದರಿಂದ ಕನ್ನಡ ಚಿತ್ರರಂಗವನ್ನೇನೂ ಇದಕ್ಕಾಗಿ ದೂರುವಂತಿಲ್ಲ.

ಅಭಿನಯದ ಮಾದರಿ

ಕನ್ನಡ ಚಲನಚಿತ್ರ ಇತಿಹಾಸದಲ್ಲಿ ಅಭಿನಯದ ಕೆಲವು ಮಾದರಿ ರೂಪುಗೊಂಡಿದ್ದು ಅವು ರೂಪುಗೊಂಡ ಕ್ರಮ ಮತ್ತು ಪರಿಣಾಮವನ್ನು ಚರ್ಚಿಸಬಹುದು. ಆರಂಭದಲ್ಲಿ ಬಂದ ಮಾದರಿ ನಾಟಕರಂಗದ್ದೇ. ನಗು, ಅಳು, ಆಕ್ರೋಶ ಯಾವುದೇ ಭಾವ ಇರಲಿ, ಅದನ್ನು ಅಬ್ಬರದ ಧ್ವನಿ, ವಿಪರೀತ ಆಂಗಿಕ ಚಲನೆ ಮೂಲಕ ಅಭಿವ್ಯಕ್ತಿಸುವುದು ಈ ಶೈಲಿ. ಆರಂಭದ ಬಹುತೇಕ ಚಿತ್ರಗಳು ಪೌರಾಣಿಕ, ಚಾರಿತ್ರಿಕ ವಸ್ತುಗಳನ್ನು ಪಡೆದಿದ್ದರಿಂದ, ಅದರಲ್ಲೂ ಭಕ್ತಿಪ್ರಧಾನ ಚಿತ್ರಗಳಲ್ಲಿ ಭಾವಾವೇಶವೇ ಭಕ್ತಿಯನ್ನು ತೋರ್ಪಡಿಸುವ ಮಾದರಿಯಾದ್ದರಿಂದ ಈ ಶೈಲಿ ಹೊಂದಿಕೊಳ್ಳುತ್ತಿತ್ತು. ಕಾಲ ಕಳೆದಂತೆ ಸಾಮಾಜಿಕ ಚಿತ್ರಗಳು ತೆರೆಗೆ ಬಂದವು. ಮಧ್ಯಮ ವರ್ಗದ ಜನ ಪಾತ್ರಗಳಾದರು. ಜನಸಾಮಾನ್ಯರನ್ನು ತೆರೆ ಮೇಲೆ ತೋರಿಸುವಾಗ ಅಬ್ಬರದ ಶೈಲಿ ಹೊಂದಿಕೊಳ್ಳುತ್ತಿರಲಿಲ್ಲ. ಹೀಗೆನ್ನುವಾಗಲೇ ಗಮನಿಸಬೇಕಾದ ಇನ್ನೊಂದು ಮಾತೂ ಇದೆ. ಅಬ್ಬರದ ಶೈಲಿಯ ಚಿತ್ರಗಳಲ್ಲೇ ಜನಸಾಮಾನ್ಯರ ಪಾತ್ರಗಳಿರುತ್ತಿದ್ದವು. ಈ ಪಾತ್ರಗಳು ಸಹಜವಾಗೇ ವರ್ತಿಸುತ್ತಿದ್ದವು. ದ್ವೇಷ, ಅಸೂಯೆ, ಹೊಟ್ಟೆಕಿಚ್ಚಿನ ಪ್ರತಿರೂಪವಾದ ಆ ಪಾತ್ರಗಳೇ ಪ್ರಧಾನ ಪಾತ್ರಗಳಿಗಿಂತ ಸಹಜ ಎನ್ನಿಸುತ್ತಿದ್ದವು. ಹೀಗಾಗಿ ಜನಸಾಮಾನ್ಯರೇ ಪ್ರಧಾನ ಪಾತ್ರವಾದಾಗ ಸಹಜ ಅಭಿನಯ ಎಂಬ ಪರಿಕಲ್ಪನೆ ಕಾಲಿಟ್ಟಿತು. ತಾಂತ್ರಿಕವಾಗಿ ಇನ್ನೂ ಬೆಳವಣಿಗೆ ಕಾಣದ ಅಂದಿನ ದಿನದಲ್ಲಿ ಅಭಿನಯದಿಂದಲೇ ಸಿನಿಮಾ ತನ್ನ ಕಲಾತ್ಮಕ ಅಂತರವನ್ನು ಸಿದ್ಧಿಸಿಕೊಳ್ಳಬೇಕಾಗಿತ್ತು. ಹೀಗಾಗಿ ಅಬ್ಬರ, ಸಹಜತೆ ಎರಡೂ ಮೇಳೈಸಿದ ಒಂದು ಅಸಹಜ ಶೈಲಿ ಹುಟ್ಟಿಕೊಂಡಿತು. ನಟರ ಸಾಮರ್ಥ್ಯಕ್ಕೆ ತಕ್ಕಂತೆ ಈ ಎರಡು ಅಂಶಗಳಲ್ಲಿ ಒಂದು ಮೇಲುಗೈ ಹೊಂದಿದ

ಅವರವರ ಪ್ರತ್ಯೇಕ ಶೈಲಿಯೇ ಹುಟ್ಟಿಕೊಂಡಿತು. ಬುದ್ಧಿವಂತ ನಿರ್ದೇಶಕರ ಕೈಯಲ್ಲಿ ಕಥಾವಸ್ತುವಿಗೆ ತಕ್ಕಂಥ ಅನೇಕ ಶೈಲಿಗಳು ಬಂದವು.

ಹೊಸ ಅಲೆ ಚಿತ್ರಗಳು ಬಂದಾಗ ಸಹಜ ಅಭಿನಯದ ಕೂಗು ಮತ್ತೊಮ್ಮೆ ಕೇಳಿಬಂತು. ಹೊಸ ಅಲೆ ಚಿತ್ರಗಳಲ್ಲಿ ತೊಡಗಿಕೊಂಡವರಲ್ಲಿ ಅನೇಕರು ಸಾಹಿತ್ಯದ ಹಿನ್ನೆಲೆಯಿಂದ ಬಂದವರು. ಅವರಿಗೆ ತಮ್ಮ ಬರವಣಿಗೆ ಬಗ್ಗೆ ಅಪಾರ ವಿಶ್ವಾಸವಿತ್ತು. ಹೀಗಾಗಿ ಸಂಭಾಷಣೆ ಮಾತ್ರವಲ್ಲ, ಪಾತ್ರದ ಹಿನ್ನೆಲೆಯಾಗಿಯೇ ಮಾತುಗಳು ಬಂದವು. ಇದರಿಂದಾಗಿ ಅಭಿನಯ ಮಾತಿನ ಜೊತೆ ಸಾಗುವ ಇಕ್ಕಟ್ಟಿನ ಹಾದಿ ನಿರ್ಮಾಣವಾಯಿತು. ಪಾಶ್ಚಾತ್ಯ ಮಾದರಿಗಳಿಂದ ಪ್ರಭಾವಿತರಾದ ಇಂಥ ನಿರ್ದೇಶಕರು ಚಿತ್ರಗಳಲ್ಲಿ ಹಲವು ಪರಿಕರಗಳ ನಡುವೆ ಅಭಿನಯ ಕೂಡ ಒಂದು ಪರಿಕರ ಎಂಬ ಕಲ್ಪನೆ ಕಂಡುಕೊಂಡು, ಅಭಿನಯದ ಅಬ್ಬರವನ್ನು ತಗ್ಗಿಸಿದರು. ಹವ್ಯಾಸಿ ರಂಗಭೂಮಿ ಮಾತನ್ನು ಮಾತ್ರವಲ್ಲದೆ, ಸಂಕೇತ, ಪ್ರತಿಮೆ, ಶಬ್ದಗ್ರಹಣ, ಬೆಳಕಿನ ಸಂಯೋಜನೆ ಮುಂತಾದ ಹಲವು ಅಂಶಗಳಿಂದ ಧ್ವನಿ ಹೊರಡಿಸುತ್ತಿತ್ತು. ಅಭಿನಯ ಹವ್ಯಾಸಿ ರಂಗಭೂಮಿಯಲ್ಲಿ ಅಬ್ಬರವಾಗಬೇಕಾದ ಅಗತ್ಯವೇ ಇರಲಿಲ್ಲ. ಚಲನಚಿತ್ರದಲ್ಲಿ ಆಗ ರೂಪುಗೊಂಡಿದ್ದ ಸಹಜ ಅಭಿನಯದ ಪರಿಕಲ್ಪನೆಗೂ ಇದಕ್ಕೂ ಒಂದು ಮುಖ್ಯ ವ್ಯತ್ಯಾಸ ಇರುವುದನ್ನು ನೋಡಬಹುದು. ಇದನ್ನು ರಿಯಲಿಸಂ ಮತ್ತು ಅಥೆಂಟಿಸಿಟಿಗೆ ಇರುವ ವ್ಯತ್ಯಾಸವಾಗಿ ಡಾ|ಯು.ಆರ್.ಅನಂತಮೂರ್ತಿ ತಮ್ಮ 'ಸಂಸ್ಕಾರ'-ಸಿನಿಮಾ ಕುರಿತು ಚರ್ಚಿಸಿದ ಲೇಖನದಲ್ಲಿ ವಿವರಿಸುತ್ತಾರೆ. ಚಲನಚಿತ್ರದಲ್ಲಿ ರೂಪುಗೊಂಡಿದ್ದ ಸಹಜ ಅಭಿನಯ, ಧ್ವನಿಯಲ್ಲಿ ಅಬ್ಬರವನ್ನು ಬಿಟ್ಟುಕೊಟ್ಟಿದ್ದರೂ ವಾಚಿಕ, ಆಹಾರ್ಯ, ಸಾತ್ವಿಕ ಅಭಿನಯಗಳಲ್ಲಿ ನಾಟಕೀಯತೆ ಉಳಿಸಿಕೊಂಡಿತ್ತು. ಆಂಗಿಕ ಚಲನೆ ಒಂದು ನಿರ್ದಿಷ್ಟ ಲಯಕ್ಕೆ ಒಳಗೊಂಡಂತೆ ಭಾವಗಳ ಸಹವರ್ತಿ ಆಗಬೇಕೆಂಬ ಕಲ್ಪನೆ ಇತ್ತು. ಆದರೆ ಹವ್ಯಾಸಿ ರಂಗಭೂಮಿಯಲ್ಲಿ ನಟ ನಿಂತಲ್ಲೇ ನಿಂತಿದ್ದರೂ ಅಭಿನಯವಾಗಿಬಿಡುತ್ತಿತ್ತು. ಇಲ್ಲಿ ಕೈ ಚಲಿಸಿದರೂ ಅರ್ಥ, ಕಣ್ಣು ಮುಚ್ಚಿದರೂ ಒಂದು ಅರ್ಥ. ಈ ಎರಡೂ ಹಿನ್ನೆಲೆಯಿಂದ ಬಂದ ನಟರಲ್ಲಿ ಈ ಶೈಲಿ ಪ್ರತ್ಯೇಕವಾಗಿ ಉಳಿದುಕೊಳ್ಳುವುದನ್ನು ನಾವು ಗಮನಿಸುತ್ತೇವೆ. ಇದರ ಜೊತೆಗೆ ಕೆ.ಎಸ್.ಅಶ್ವತ್ಥ್ ಅಂಥ ನಟರು ಇವೆರಡಕ್ಕೆ ಬೆಸುಗೆ ಹಾಕಿ ಸಿನಿಮ್ಯಾಟಿಕ್ ಎಂದು ಕರೆಯಬಹುದಾದ ಮೂರನೆಯ ಸಹಜ ಅಭಿನಯಶೈಲಿ ರೂಢಿಸಿಕೊಂಡಿದ್ದರು. ಹೀಗೆ ಸಹಜ ಅಭಿನಯ ಎಂದು ಕರೆಯುವಾಗಲೇ ಮೂರು ಮಾದರಿಗಳಿರುವುದನ್ನು ಗಮನಿಸುತ್ತೇವೆ.

ಈ ಬೆಳವಣಿಗೆ ನಡೆಯುತ್ತಿರುವಾಗಲೇ ಇನ್ನೊಂದು ಬೆಳವಣಿಗೆ ೬೦ರ ದಶಕದಲ್ಲಿ ಸಂಭವಿಸಿತ್ತು. ಅದು ಭಾವನೆಗಳಿಗೆ ಒತ್ತು ಕೊಟ್ಟು ಮಾಡುವ ಅಭಿನಯ. ಅತಿಯಾಗಿ ಅಳುವುದು, ದುಃಖವನ್ನು ಅಬ್ಬರದ ಶೈಲಿಯಲ್ಲಿ ಪ್ರಕಟಿಸುವುದು ಮಾತ್ರವಲ್ಲ, ಅದನ್ನು ಗಂಟೆಗಟ್ಟಲೆ ವಿಸ್ತರಿಸುವುದು. ಸಾಮಾನ್ಯವಾಗಿ ಮೆಲೊಡ್ರಾಮ ಎಂದು ಕರೆಯಬಹುದಾದ ಈ ಶೈಲಿ ಪುಟ್ಟಣ್ಣ ಕಣಗಾಲ್ ಕೈಯಲ್ಲಿ ಹೊಸ ರೂಪವನ್ನೇ ಪಡೆಯಿತು. ಇದು ಬೇಗ ಜನಪ್ರಿಯವಾಯಿತು. ಕಣ್ಣೀರಿಗೆ ಕಾಂಚಾಣ ದಕ್ಕುತ್ತದೆ ಎಂದು ನಿರ್ಮಾಪಕರು ಈ ಶೈಲಿಯನ್ನು ಹೆಚ್ಚಾಗಿ ಬಳಸಿಕೊಂಡರು. ತಂತ್ರಜ್ಞಾನಕ್ಕೆ ತಕ್ಕಂತೆ ಮಾರ್ಪಾಟು ಹೊಂದಿದ ಆಂಗಿಕ ಅಭಿನಯ ಮತ್ತು ಧ್ವನಿಯ ಪರಿಮಿತಿಗಳನ್ನು ಉಳ್ಳ ಸಂಭಾಷಣೆ ಹೇಳುವ ಶೈಲಿ ಒಂದಾದರೆ ಭಾವಗಳ ಅಬ್ಬರಕ್ಕೆ ಪ್ರೇಕ್ಷಕರಲ್ಲಿ ಭಾವನೆಗಳನ್ನು ಉದ್ರೇಕಿಸುವ ಮಾದರಿಯ ಶೈಲಿ ಇನ್ನೊಂದು. ಇವೆರಡೂ ಅಭಿನಯದ ಎರಡು ಮಾದರಿಗಳಾಗೇ ನಮ್ಮಲ್ಲಿ ಬೆಳೆದುಬಂದಿವೆ.

ತಂತ್ರಜ್ಞಾನ ಬೆಳೆದಂತೆ ಕ್ಯಾಮರಾಕೋನ, ಬೆಳಕಿನ ಚಲನೆಗೆ ತಕ್ಕಂತ ಅಭಿನಯಿಸಬೇಕಾದ ಅಗತ್ಯ ಎಲ್ಲ ಕಲಾವಿದರ ಪಾಲಿಗೆ ಬಂತು. ಹೆಚ್ಚಿನವರು ಕಂಠದಾನ ಪಡೆಯಬೇಕಾಯಿತು. ಹೀಗೆ ಕಂಠದಾನ ಪಡೆಯುವವರು ಡಬ್ಬಿಂಗ್ ಕಲಾವಿದರಿಗೆ ನೆರವಾಗಲು ಅಭಿನಯದಲ್ಲೇ ಕೆಲವು ಸೂಚನೆ ನೀಡುತ್ತಿದ್ದರು. ಹೀಗೆ ಅನ್ಯ ಪರಿಕರಗಳ ಅಗತ್ಯಕ್ಕೆ ತಕ್ಕಂತೆ ಅಭಿನಯಿಸುವ ಮಾದರಿಯೊಂದು ನಮ್ಮಲ್ಲಿದೆ. ಇದು ಪ್ರತ್ಯೇಕ ಮಾದರಿಯಲ್ಲವಾದರೂ ಉಳಿದ ಮಾದರಿಗಳ ನಡುವೆಯೇ ಇದರ ಛಾಯೆ ಕೂಡಾ ಕಾಣಿಸುತ್ತದೆ.

ಇನ್ನು ಕೊನೆಯ, ಬಹು ಜನಪ್ರಿಯವಾದ ಮಾದರಿ ಎಂದರೆ ಇಮೇಜ್‌ಗೆ ತಕ್ಕಂತೆ ಅಭಿನಯಿಸುವಂಥದ್ದು. ನಟ, ನಟಿ ಯಾವುದೇ ಚಿತ್ರದಲ್ಲಿ ಸಿಗರೇಟ್ ಸೇದುವ ವಿಧಾನವೂ, ಸಂಭಾಷಣೆ ಹೇಳುವ ವಿಧಾನವೂ ಕೈಯನ್ನು ಚಲಿಸುವ ವಿಧಾನವೂ ಜನಪ್ರಿಯವಾಗುತ್ತದೆ. ಅವನ ಅಥವಾ ಅವಳ ಪ್ರತಿ ಚಿತ್ರದ ಅಭಿನಯದಲ್ಲಿ ಇಂಥ ಪಾತ್ರಗಳೇ ಇರುತ್ತವೆ. ಪಾತ್ರಗಳ ಹೆಸರು ವ್ಯತ್ಯಾಸವಾಗಿರುವುದನ್ನು ಬಿಟ್ಟರೆ ಅಭಿನಯದ ಶೈಲಿಯಲ್ಲಿ ಯಾವ ವ್ಯತ್ಯಾಸವೂ ಇರುವುದಿಲ್ಲ. ಇದು ಇವತ್ತಿನ ಜನಪ್ರಿಯ ಮಾದರಿಗಳಲ್ಲಿ ಒಂದು.

ಅಭಿನಯ ಮತ್ತು ಗೀತೆ

ದೃಶ್ಯ ರೂಪುಗೊಳ್ಳುವ ವಿಧಾನದಲ್ಲಿ ಒಂದು ಐತಿಹಾಸಿಕ ಬದಲಾವಣೆ ಕಾಣುತ್ತೇವೆ. ಈ ಪರಿವರ್ತನೆಯ ಕ್ರಮ ಅಭಿನಯಶೈಲಿ ಮೇಲೆ ಅನೇಕ ರೀತಿಯ ಪರಿಣಾಮ ಬೀರಿದೆ. ಆರಂಭದ ಚಿತ್ರಗಳಲ್ಲಿ ಹಾಡಿಗೆ ಪ್ರಧಾನ್ಯ ಇತ್ತು. ಭಾರತದ ಎಲ್ಲಾ ನಾಟಕ ಮತ್ತು ರಂಗಭೂಮಿಯಲ್ಲೂ ಗೀತೆಗೆ ಮಹತ್ವ ಹೆಚ್ಚು. ಹಾಡೂ ಅಭಿವ್ಯಕ್ತಿಗೆ ಪೂರಕವಾಗಬಲ್ಲ ಪ್ರಧಾನ ಸಾಮಗ್ರಿ. ಪಾತ್ರಗಳು ತಮ್ಮ ಮನೋತಾಕಲಾಟವನ್ನು ಹಾಡಿನ ಮೂಲಕವೇ ಅಭಿವ್ಯಕ್ತಿಸುವುದು ಎಲ್ಲಾ ಮಾದರಿ ರಂಗಭೂಮಿಯಲ್ಲಿ ಕಾಣಬರುತ್ತಿದ್ದ ಶೈಲಿ. ಆರಂಭಿಕ ಸಿನಿಮಾಗಳಲ್ಲಿ ಸಾಕಷ್ಟು ಹಾಡುಗಳಿರುತ್ತಿದ್ದವು. ಆದರೆ ಆಗೆಲ್ಲ ಹಾಡನ್ನು ಪಾತ್ರಧಾರಿಗಳೇ ಹಾಡಬೇಕಾದ್ದರಿಂದ ಅವರ ಗಮನವೆಲ್ಲಾ ಸಹ ವಾದ್ಯಗಾರರು, ಹಾಡಿನ ತಾಳ ಇಂಥ ಅಂಶಗಳ ಕಡೆ ಹರಿಯುತ್ತಿತ್ತು. ಈ ಕಾರಣದಿಂದ ಹಾಡುವಾಗ ಅಭಿನಯಿಸುವುದು ಎಂಬ ಕಲ್ಪನೆ ಅಷ್ಟಾಗಿ ಬೆಳೆಯಲಿಲ್ಲ. ಹಿನ್ನೆಲೆ ಗಾಯನ ಬಂದ ಮೇಲೂ ಪರಿಸ್ಥಿತಿಯಲ್ಲಿ ಅಂಥ ಬದಲಾವಣೆ ಏನೂ ಕಾಣಲಿಲ್ಲ. ಶಬ್ದಕ್ಕೆ ತಕ್ಕಂತೆ ತುಟಿ ಚಲನೆ ಮಾಡುವುದು, ಭಾವಕ್ಕೆ ತಕ್ಕಂತೆ ಕೈಕಾಲು ಅಡಿಸುವುದು, ಅರ್ಥಕ್ಕೆ ತಕ್ಕಂತೆ ಮುಖಭಾವ ಬದಲಾಯಿಸುವುದು ಇಷ್ಟೇ, ಹಾಡಿಗೆ ನಮ್ಮಲ್ಲಿ ದಕ್ಕುತ್ತಿದ್ದ ಅಭಿನಯ. ಮುಂದೆ ತಾಂತ್ರಿಕ ಬೆಳವಣಿಗೆ ನಂತರವಂತೂ ಹಾಡಿನ ಅರ್ಥವನ್ನು ಶಾಟ್‌ಗಳಲ್ಲಿ ಸಂಯೋಜಿಸಲಾಗುತ್ತಿತ್ತು. ಹೀಗಾಗಿ ಅಭಿನಯದ ಅಲ್ಪಸ್ವಲ್ಪ ಅಗತ್ಯವೂ ಮಾಯವಾಯಿತು. ನಮ್ಮ ಬಹುತೇಕ ಹಾಡುಗಳಲ್ಲಿ ಅಭಿನಯದ ಅಂಶವೇ ಇರುವುದಿಲ್ಲ. ಅಷ್ಟು ಮಾತ್ರವಲ್ಲ, ಹಾಡುಗಳು ಜನಪ್ರಿಯ ಚಿತ್ರಗಳಲ್ಲಿ ಪ್ರೇಕ್ಷಕರನ್ನು ಉದ್ರೇಕಿಸಲು ರೂಪುಗೊಂಡಿರುವುದರಿಂದ ಅಭಿನಯ ಇಂಥ ಅಂಶಕ್ಕೆ ಪೂರಕವಾಗಿರುವುದೂ ಉಂಟು. ಸಮರ್ಥ ನಟ ತನ್ನ ಅಭಿನಯ ಸಾಮರ್ಥ್ಯದಿಂದ ಹಾಡಿನ ಅರ್ಥವನ್ನು ಹಿಗ್ಗಿಸಬಹುದು.

ಅಪರೂಪಕ್ಕಾದರೂ ನಮ್ಮಲ್ಲಿ ಅಂಥ ಪ್ರಯತ್ನ ನಡೆದಿದೆ. ಅಂಥ ಒಂದೆರಡು ಉದಾಹರಣೆ ನೋಡಬಹುದು. ಒಂದು : 'ಎರಡು ಕನಸು' ಚಿತ್ರದ ''ತಂ ನಂ ತಂ ನಂ ನನ್ನೀ ಮನವು ಮಿಡಿಯುತಿದೆ...'' ಎಂಬ ಗೀತೆ, ಈ ಗೀತೆಯ ಸಾಹಿತ್ಯ ಮಾಮೂಲಿ ಪ್ರಣಯದ್ದು. ಆದರೆ ತೆರೆಯ ಮೇಲಿನ ದೃಶ್ಯ ಈ ಗೀತೆಯ ಸಾಹಿತ್ಯವನ್ನು ಅನುಕರಿಸಿಲ್ಲ. ಬದಲಾಗಿ ಒಂದು ಪರಿಪೂರ್ಣ ದಾಂಪತ್ಯದ ಕನಸನ್ನು ಒಳಗೊಂಡಿದೆ. ಸಂತೃಪ್ತ ಗೃಹಿಣಿಯೊಬ್ಬಳು ದಾಂಪತ್ಯದಿಂದ ಅಪೇಕ್ಷಿಸುವ ಸುಖೀಕ್ಷಣಗಳನ್ನು ಇಲ್ಲಿ ಜೋಡಿಸಲಾಗಿದೆ. ರಾಜಕುಮಾರ್, ಕಲ್ಪನಾ ಭಾವಪೂರ್ಣವಾಗಿ ಅಭಿನಯಿಸಿರುವ ಈ ದೃಶ್ಯ ಅನೇಕ ಅರ್ಥಗಳನ್ನು ಧ್ವನಿಸಿದೆ. ಚಿತ್ರದಲ್ಲಿ ನಾಯಕಿ ಗಂಡನನ್ನು ಮೊದಲ ದಿನದಿಂದಲೂ ಅರ್ಥ ಮಾಡಿಕೊಳ್ಳಲಾಗದೆ ಸೋತು, ಸುಖೀದಾಂಪತ್ಯಕ್ಕೆ ಕನವರಿಸುತ್ತಿರುವುದರಿಂದ ಗೀತೆಯ ಸಾಹಿತ್ಯ, ಹಾಡಿನ ಅರ್ಥ ಎರಡೂ ವಿಭಿನ್ನ ಘಟಕಗಳಾಗಿದ್ದರೂ ಒಟ್ಟಾಗಿ ಒಂದು ಪರಿಪೂರ್ಣ ದೃಶ್ಯವಾಗಿ ಹೊರಹೊಮ್ಮಿದೆ. ಇಲ್ಲಿ ಮುಖ್ಯವಾಗಿ ಗೆದ್ದಿರುವುದು ಅಭಿನಯ. ಎರಡು : 'ಕಾಡು ಕುದುರೆ' ಚಿತ್ರದ ''ಕಾಡು ಕುದುರೆ ಓಡಿ ಬಂದಿತ್ತಾ...'' ಶೀರ್ಷಿಕೆ ಗೀತೆ. ಗೀತೆಯ ಸಾಹಿತ್ಯದಲ್ಲೆಲ್ಲೂ ಸೆಕ್ಸ್ ಪ್ರಸ್ತಾಪವೇ ಇಲ್ಲ. ಇರುವುದೆಲ್ಲ ಕಾಡು ಕುದುರೆಯೊಂದು ಉನ್ಮತ್ತವಾಗಿ ಬರುತ್ತಿರುವುದರ ಪ್ರಸ್ತಾಪ, ಎಲ್ಲೂ ಪಾತ್ರವಾಗದ ಈ ಗೀತೆಯ ಸಾಂಕೇತಿಕ ಅರ್ಥ, ಅಭಿನಯದಲ್ಲಿ ವ್ಯಕ್ತವಾಗಿದೆ. ಪರಸ್ಪರ ಅನುರಕ್ತರಾದ ಪ್ರಣಯಿಗಳ ಭಾವನಾತ್ಮಕ ತಾಕಲಾಟ ಅಭಿನಯದಲ್ಲಿ ಬಂದಿದೆ. ಹೀಗಾಗಿ ಈ ಗೀತೆಯನ್ನು ಪ್ರತ್ಯೇಕವಾಗಿ ಕೇಳಿದಾಗ ಹೊಳೆಯುವ ಅರ್ಥಗಳಿಗೂ ದೃಶ್ಯದ ಜೊತೆಯಲ್ಲಿ ನೋಡಿದಾಗ ಹೊಳೆಯುವ ಅರ್ಥಗಳಿಗೂ ಸಾಕಷ್ಟು ಬೆಳವಣಿಗೆ ಇದೆ. ಇಲ್ಲಿ ಅಭಿನಯ ಗೀತೆಯ ಸಾಂಕೇತಿಕತೆಯನ್ನು ಪ್ರತಿಪಾದಿಸಿದೆ. ಮೂರು : 'ಕಸ್ತೂರಿ ನಿವಾಸ' ಚಿತ್ರದ ''ನೀ ಬಂದು ನಿಂತಾಗ, ನಿಂತು ನೀ ನಕ್ಕಾಗ, ನಕ್ಕು ನೀ ಸೆಳೆದಾಗ...'' ಗೀತೆಯನ್ನು ಪ್ರತ್ಯೇಕವಾಗಿ ಕೇಳಿದಾಗ ಒಂದು ಪ್ರೇಮಗೀತೆಯಂತೆ ಭಾಸವಾಗುತ್ತದೆ. ಆದರೆ ತೆರೆಯ ಮೇಲೆ ಅದು ನಾಯಕ ಗತಿಸಿದ ಮಡದಿಯನ್ನು ನೆನಪಿಸಿಕೊಳ್ಳುವ ದೃಶ್ಯ. ಹಾಡಿನ ಸಂಭ್ರಮ, ಸನ್ನಿವೇಶದ ನೀರವತೆ ಎರಡನ್ನೂ ಅಭಿನಯವೇ ತುಂಬಿಕೊಟ್ಟಿದೆ. ಈ ಗೀತೆಯಲ್ಲೂ ಹಾಡಿನ ಅರ್ಥಕ್ಕೆ, ಅಭಿನಯಕ್ಕೆ ಸಂಬಂಧ ಅಮೂರ್ತ. ಹಾಗಿದ್ದೂ ಅದು ಅರ್ಥ ಕೆಡಿಸದೆ, ಅರ್ಥ ವಿಸ್ತರಣೆಗೆ ನೆರವಾಗಿದೆ. ನಮ್ಮಲ್ಲಿ ಹೀಗೆ ಅಭಿನಯ ಗೀತೆಯ ಸಾಧ್ಯತೆಯನ್ನು ಹೆಚ್ಚಿಸಿದ ಉದಾಹರಣೆಗಳು ಬಹಳ ಕಡಿಮೆ.

'ದೂರದ ಬೆಟ್ಟ' ಚಿತ್ರದ "ಪ್ರೀತಿಯೇ ಆ ದ್ಯಾವ್ರು ತಂದ ಆಸ್ತಿ ನಮ್ಮ ಪಾಲಿಗೆ..." ಗೀತೆಯಲ್ಲಿನ ಅಭಿನಯವನ್ನು ಸೂಕ್ಷ್ಮ ಭಾವಗಳ ವಿಸ್ತರಣೆಗೆ ಗಮನಿಸಬಹುದು. ಈ ಗೀತೆ ದಂಪತಿಗಳಿಬ್ಬರೂ ಕುಲುಮೆಯ ಕಾರ್ಯದಲ್ಲಿ ತೊಡಗಿದಾಗ ಹೇಳುವಂಥದು. ಮೊದಲ ಚರಣದಲ್ಲಿ ಹಾಡಿನಲ್ಲಿ ತನ್ಮಯನಾಗಿ ತನ್ನ ಕೆಲಸ ಮರೆತ ಗಂಡನನ್ನು ಹೆಂಡತಿ ಎಚ್ಚರಿಸುತ್ತಾಳೆ. ಎರಡನೇ ಚರಣದಲ್ಲಿ ಅವರ ದೈನಂದಿನ ಆವರ್ತ ಮುಗಿಸಿ ಹಾಡಿನ ಭಾವವನ್ನು ಹೆಂಡತಿಯೇ ಮುಂದುವರಿಸುತ್ತಾಳೆ. ಇದು ಸಾಹಿತ್ಯವನ್ನು ಆಧರಿಸಿದ ಅಭಿನಯ ಅಲ್ಲ, ಸಂತೃಪ್ತ ದಾಂಪತ್ಯವನ್ನು ಹಾಡಿನ ಅರ್ಥದ ಆಚೆಗೇ ಅಭಿನಯಿಸಿದ್ದು. ಅಭಿನಯ ಹೇಗೆ ಹಾಡಿನ ಅರ್ಥವನ್ನು ವಿಸ್ತರಿಸಬಲ್ಲದು ಎಂಬುದಕ್ಕೆ ಉತ್ತಮ ಉದಾಹರಣೆ ಇದು. ನಮ್ಮಲ್ಲಿ ಹಾಡಿನ ಅರ್ಥಗಳನ್ನು ಬಿಡಿಬಿಡಿ ಪ್ರತಿಮೆಗಳಾಗಿ ದೃಶ್ಯೀಕರಿಸುವ ಸಂದರ್ಭ ಹೆಚ್ಚು. ಇಲ್ಲೆಲ್ಲ ಅಭಿನಯ ಎಂದರೆ ತುಟಿಚಲನೆ ಎಂದೇ ಅರ್ಥ. ಆಗತ್ಯ ಬಿದ್ದಾಗಲೂ ಅದರಾಚೆಗೆ ಚಲಿಸುವ ಪ್ರಯತ್ನಗಳು ಕಡಿಮೆ. 'ಚೂರಿ ಚಿಕ್ಕಣ್ಣ' ಚಿತ್ರದ "ನೀ ಮೊದಲು ಮೊದಲು ನನ್ನ ನೋಡಿದಾಗ..." ಗೀತೆಯಲ್ಲಿ ಒಂದು ತಂತ್ರವನ್ನು ಸಂಯೋಜಿಸಲಾಗಿದೆ. ದೃಶ್ಯದಲ್ಲಿ ಈ ಗೀತೆ ಆಕಾಶವಾಣಿ ಮೂಲಕ ಪ್ರಸಾರವಾಗುತ್ತಿರುತ್ತದೆ. ನಾಯಕ-ನಾಯಕಿ ಇಬ್ಬರೇ ಆ ಹಿನ್ನೆಲೆಯಲ್ಲಿ ಅಭಿನಯಿಸಬೇಕು. ಆದರೆ ಇದಕ್ಕೆ ಅಭಿನಯಿಸಿದ ರಾಜಕುಮಾರ್-ಜಯಂತಿ ಇಬ್ಬರೂ ಈ ಸೂಕ್ಷ್ಮಕ್ಕೆ ತಕ್ಕಂತೆ ಅಭಿನಯಿಸಿಲ್ಲ. ಹಾಡನ್ನು ತಾವೇ ಹೇಳಿದಾಗ ಏನು ಭಾವಗಳನ್ನು ಪ್ರಕಟಿಸಬಹುದಿತ್ತೋ ಅಷ್ಟನ್ನೇ ಮಾಡಿದ್ದಾರೆ. ಹೀಗಾಗಿ ಹಾಡನ್ನು ಸಂಯೋಜಿಸಿದ ತಂತ್ರ ವಿಫಲವಾಯಿತು. 'ಗಾಳಿಗೋಪುರ' ಚಿತ್ರದ "ಧೂಳಿ ಆಯಿತು ಗಾಳಿಗೋಪುರ..." ಹಾಡು ಕೂಡ ಹಿನ್ನೆಲೆಯಲ್ಲಿ ಬರುವ ಗೀತೆ. ಇದಕ್ಕೆ ಅಭಿನಯಿಸುವಾಗ ಅಶ್ವತ್ಥ್-ರಾಜಕುಮಾರ್ ಇಬ್ಬರೂ ಹಾಡಿನ ಅರ್ಥಕ್ಕೇ ತಮ್ಮ ಅಭಿನಯವನ್ನು ಮೇಲ್‌ಸ್ತರದಲ್ಲಿ ಹುದುಗಿಸಿ ಅದು ಹಿನ್ನೆಲೆ ಗೀತೆ ಎಂಬ ಭಾವನೆಯೇ ಬಾರದಂತೆ ಮಾಡಿದ್ದಾರೆ. 'ಒಂದೇ ಬಳ್ಳಿಯ ಹೂಗಳು' ಚಿತ್ರದ "ನೀನೆಲ್ಲಿ ನಡೆವೆ ದೂರ..." ಗೀತೆಗೂ ಇದೇ ಮಾತನ್ನು ಹೇಳಬಹುದು. ಹೀಗಯೇ ಗತಿಸಿದ ಪ್ರೇಯಸಿಯನ್ನು ನೆನಪಿಸಿಕೊಳ್ಳುವ 'ಸಹೋದರರ ಸವಾಲ್' ಚಿತ್ರದ "ನಲ್ಲನೆ ಸವಿ ಮಾತೊಂದ ನುಡಿವೆಯಾ..." ಗೀತೆಯ ಒಂದು ಶಾಟ್ ರಜನಿಕಾಂತ್ ಕಣ್ಣಲ್ಲಿ ನೀರು ತುಂಬಿರುವುದನ್ನು ತೋರಿಸಿ ಉಳಿದಂತೆ ಪ್ರಣಯ ಗೀತೆಯಾಗಿಯೇ ಇದೆ. ಇದು ಹಾಡಿನ placement ಹೇಗಿರಬೇಕೆಂಬುದು ಗೊತ್ತಾಗದೆ ಅಭಿನಯದಲ್ಲಿ ಉಂಟಾದ ಸಮಸ್ಯೆ.

ಅಭಿನಯ ಹಾಡಿನ ಅರ್ಥದಾಚೆಗೆ ಇದ್ದಾಗಲೆಲ್ಲ ವಿಸ್ತರಣೆಯೇ ಆಗಬೇಕಿಲ್ಲ. 'ಬಂಧನ' ಚಿತ್ರದ "ಈ ಬಂಧನಾ ಜನುಮ ಜನುಮದ ಅನುಬಂಧನ..." ಹಾಡಿನಲ್ಲಿ ದೇವರಲ್ಲಿ ಏನನ್ನು ಕೇಳಿಕೊಂಡೆ ಎಂದು ನಾಯಕಿ ಕೇಳುವುದು, ಅದಕ್ಕೆ 'ಹತ್ತು ಮಕ್ಕಳು ಬೇಕು' ಎಂದು ನಾಯಕ ಹೇಳುವುದು, ಅವಕ್ಕೆ ನಾಯಕಿ 'ಆರತಿಗೊಬ್ಬಳು ಕೀರ್ತಿಗೊಬ್ಬ' ಎಂಬ ಬೋರ್ಡ್ ತೋರಿಸುವುದು ಇದೆ. ಈ ಅಭಿನಯ ಹಾಡಿನ ಅರ್ಥಕ್ಕಿಂತ ಆಚೆ ಇರಬಹುದು. ಆದರೆ ತೀರಾ ವಾಚ್ಯವಾಗುವಷ್ಟು ಮಿಮಿಕ್ರಿ ಮಟ್ಟದಲ್ಲಿ ಇರುವುದರಿಂದ ಹಾಡಿನ ಸೂಕ್ಷ್ಮಗಳನ್ನು ಹೋಗಲಾಡಿಸಿದೆ. ಗೀತೆ ಯಾವುದನ್ನು unsaid ಆಗಿ ಹೇಳುತ್ತೋ ಅದನ್ನು ಅಭಿನಯ ಅಂದಗೆಡಿಸಿದೆ. ಇದು ಉತ್ತಮ ಅಭಿನಯಕ್ಕೆ ಮಾದರಿ ಅಲ್ಲ.

ಅಭಿನಯ ಮತ್ತು ನೃತ್ಯ

ನಮ್ಮ ಜಾನಪದ ರಂಗಭೂಮಿ ನೃತ್ಯವನ್ನು ಪ್ರಧಾನವಾಗಿ ಉಳ್ಳ ಯಕ್ಷಗಾನದಂಥ ಕಲೆಗಳ ಹಿನ್ನೆಲೆ ಹೊಂದಿತ್ತು. ಈ ಕಲೆಗಳಲ್ಲಿ ಚಲನೆಗೆ ಪ್ರಧಾನ್ಯ. ಈ ಚಲನೆಯೇ ಅಭಿವ್ಯಕ್ತಿಯ ತೀವ್ರತೆಯನ್ನು ನಿರ್ಧರಿಸುತ್ತಿತ್ತು. ಮಾತ್ರವಲ್ಲ, ಪಾರಂಪರಿಕ ರಂಗಭೂಮಿಯ ವಿಭಿನ್ನ ಪ್ರದೇಶಗಳಲ್ಲಿ ಬೇರೆಬೇರೆ ನೃತ್ಯಪ್ರಕಾರಗಳಿದ್ದವು. ಅವುಗಳಿಗೆ ತಮ್ಮದೇ ವೈಶಿಷ್ಟ್ಯಗಳಿದ್ದವು. ಚಲನಚಿತ್ರ ಸಂದರ್ಭದಲ್ಲಿ ಏಕರೂಪತೆ ಕಡೆ ಗಮನ ಹರಿದಿದ್ದರಿಂದ ನೃತ್ಯ ಸರಳೀಕರಣಗೊಂಡಿತು. ಆರಂಭದ ಚಿತ್ರಗಳಲ್ಲಿ ನೃತ್ಯ ಪ್ರತ್ಯೇಕ ಘಟಕವಾಗಿ ಇರುತ್ತಿತ್ತು. ಭರತನಾಟ್ಯದಂಥ ಶಾಸ್ತ್ರೀಯ ನೃತ್ಯ ರಾಜನ ಆಸ್ಥಾನದಲ್ಲಿ ರಾಜನರ್ತಕಿಯೋ ಅಥವಾ ನಾಯಕಿಗೆ ಆ ಕಲೆಯ ಕಡೆ ಒಲವಿದ್ದ ಸಂದರ್ಭದಲ್ಲೋ ಭಾವಾಭಿವ್ಯಕ್ತಿಗೆ ಬಳಕೆಯಾಗುತ್ತಿತ್ತು. ಜನಪದ ನೃತ್ಯ ಅಂಥ ಕಥೆಗಳಿಗೆ ಅನುಗುಣವಾಗಿ ಬಳಕೆಯಾಗುತ್ತಿತ್ತು. 'ಮಹಾಕವಿ ಕಾಳಿದಾಸ' ಚಿತ್ರದ ಕೋಲಾಟದ ಹಾಡು, 'ವೀರಕೇಸರಿ' ಚಿತ್ರದ ಜಾನಪದ ನೃತ್ಯ ಇವುಗಳನ್ನೆಲ್ಲ ಉದಾಹರಣೆಯಾಗಿ ಗಮನಿಸಬಹುದು. ಆರಂಭದಲ್ಲೇ ನೃತ್ಯ ಕಥನದ ಭಾಗವಾಗಿ ಬರದೆ ಭಿನ್ನ ಘಟಕದ ಮಾದರಿಯಲ್ಲಿ ಬಂದಿದ್ದರಿಂದ ಅಲ್ಲಿ ಅಭಿನಯದ ಅಂಶಕ್ಕೆ ಮಹತ್ವ ಬರಲಿಲ್ಲ. ಅನಂತರ ಕ್ಯಾಬರೆ ನೃತ್ಯಗಳು ಬಂದವು. ಕ್ಯಾಬರೆಯಲ್ಲಿ ಹೆಣ್ಣನ್ನು ಸಾಧ್ಯವಾದಷ್ಟು ಮಟ್ಟಿಗೆ expose ಮಾಡುವುದೇ ಮುಖ್ಯವಾಗಿತ್ತು. ಅಭಿನಯದ ಪ್ರಶ್ನೆ ಎಲ್ಲೂ ಗಂಭೀರವಾಗಿ ಕಾಡಲೇ ಇಲ್ಲ.

ಅನಂತರ ಪಾಶ್ಚಾತ್ಯ ಪ್ರಭಾವ ನೃತ್ಯದಲ್ಲಿ ಕಾಣಿಸಿತು. ಈ ಪ್ರಭಾವ ಕೂಡ ಪಾಶ್ಚಾತ್ಯ ಸಂಸ್ಕೃತಿಯ classical traditionನಿಂದ ಬಂದದ್ದಲ್ಲ. ಪಾಶ್ಚಾತ್ಯ ನೃತ್ಯ ಮಾದರಿಯನ್ನು ಹಿಂದಿ ಚಿತ್ರ ಭಾರತೀಕರಣಗೊಳಿಸಿದ್ದರ ಪಡಿನೆಳಲು ನಮ್ಮಲ್ಲಿ ಬಂದ, ಇತ್ತ ಭಾರತೀಯವೂ ಅಲ್ಲದ, ಅತ್ತ ಪಾಶ್ಚಾತ್ಯವೂ ಅಲ್ಲದ ಒಂದು ಎಡಬಿಡಂಗಿ ನೃತ್ಯ ಪ್ರಕಾರ. ಇದನ್ನು ನೃತ್ಯ ಎನ್ನುವುದಕ್ಕಿಂತ ಕುಣಿತ ಎನ್ನಬಹುದೇನೋ. ಇವತ್ತಿನ ಚಲನಚಿತ್ರಗಳಲ್ಲಿ ಕಂಡುಬರುವ ನೃತ್ಯದಲ್ಲಿ ಆಂಗಿಕ ಅಭಿನಯಕ್ಕೆ ಮಹತ್ವ ಇಲ್ಲ. ಹೆಚ್ಚಿನವು ಸೃಜನಶೀಲತೆಯನ್ನು ಕಳೆದುಕೊಂಡು vulgarise ಆದ ಮಾದರಿಗಳು. ಅವು ಸಂಸ್ಕೃತಿಯ ಬೇರುಗಳಿಲ್ಲದೆ ಹೆಚ್ಚು ಜನರನ್ನು ತಲುಪುವ ಆತುರದಲ್ಲಿ, ಒತ್ತಾಯದಲ್ಲಿ, ಆರ್ಥಿಕ ಗಡಿ ದಾಟುವ ಆಕಾಂಕ್ಷೆಯಲ್ಲಿ ಸರಳೀಕರಣಗೊಳ್ಳುತ್ತಿವೆ. ಈ ಮಾದರಿಗಳಲ್ಲಿ ಅಭಿನಯಕ್ಕೆ ಸ್ಥಾನ ಇಲ್ಲವಾಯಿತು. ದುರಂತವೆಂದರೆ ನೃತ್ಯವನ್ನು ಶಾಸ್ತ್ರೀಯವಾಗಿ ಬಲ್ಲ ಕಲಾವಿದರೂ ಚಲನಚಿತ್ರ ಸಂದರ್ಭದಲ್ಲಿ ಈ ಸರಳೀಕೃತ ಶೈಲಿಯಲ್ಲೇ ಕಾಣಿಸಿಕೊಳ್ಳುವುದು.

ಈವರೆಗಿನ ಚರ್ಚೆಯಿಂದ ಕನ್ನಡ ಚಲನಚಿತ್ರದಲ್ಲಿ ರೂಪುಗೊಂಡ ಅಭಿನಯದ ಮಾದರಿಗಳನ್ನು ಹೀಗೆ ಸಂಗ್ರಹಿಸಬಹುದು.

೧. ರಂಗಭೂಮಿ ಪ್ರೇರಿತ ಮಾದರಿ :

ಸಂಭಾಷಣೆ ಒಪ್ಪಿಸುವಾಗ ಅಸಹಜ ನಾಟಕೀಯ ಶೈಲಿ. ಮುಖ್ಯವಾಗಿ ಭಾವಾಭಿವ್ಯಕ್ತಿಗೆ ಧ್ವನಿಯನ್ನು ಎತ್ತರಿಸುವುದು, ಮುಖದಲ್ಲಿ ಭಾವನೆಗಳನ್ನು ವ್ಯಕ್ತಪಡಿಸುವುದು ಕ್ರಮ. ಕಣ್ಣು, ಹುಬ್ಬು, ಬಾಯಿ, ಕೆನ್ನೆಗಳು ದಿಗ್ಭ್ರಮೆ, ಆಶ್ಚರ್ಯ, ಹತಾಶೆ, ಉನ್ಮಾದ ಇವನ್ನೆಲ್ಲ ವ್ಯಕ್ತಪಡಿಸುವಾಗ ಒಟ್ಟಾಗಿ ಕೆಲಸ ಮಾಡುತ್ತವೆ. ಇಲ್ಲೆಲ್ಲ ಮುಖಮುದ್ರೆಗಳೇ ಮಾತುಗಳಿಗಿಂತ ಚೆನ್ನ.

೨. ಭಾವನೆಯ ಅಬ್ಬರದ - ಮೆಲೊಡ್ರಾಮಾ :

ಭಾವನೆಗಳನ್ನು ಆಗತ್ಯಕ್ಕಿಂತ ಹೆಚ್ಚು ತೀವ್ರವಾಗಿ ವ್ಯಕ್ತಪಡಿಸಿ, ಪ್ರೇಕ್ಷಕರನ್ನು ಗೊಂದಲಗೊಳಿಸುವ ಪ್ರಯತ್ನ. ಭಾವಾಭಿನಯದ ವಿಸ್ತಾರ ಹೆಚ್ಚು. ಹುಚ್ಚು, ಅಳು ಮುಂತಾದ ಭಾವಗಳ ಪ್ರಕಟಣೆಯಲ್ಲಂತೂ ಪ್ರೇಕ್ಷಕ ಕರಗಿಬಿಡುತ್ತಾನೆ. ಸಂಭಾಷಣೆ ಹೇಳುವುದರಿಂದ ಹಿಡಿದು ಆಂಗಿಕ ಅಭಿನಯದವರೆಗೆ ಎಲ್ಲವೂ 'ಅತಿ'.

೩. ಸಮ್ಮಿಶ್ರಿತ ಸಹಜ ಶೈಲಿ :

ಸಾಮಾಜಿಕ ಚಿತ್ರಗಳು ಕನ್ನಡಕ್ಕೆ ಬರುವ ಸಂದರ್ಭದಲ್ಲಿ ರೂಪುಗೊಂಡಿತು. ಇಲ್ಲಿ ಸಂಭಾಷಣೆ ಹೇಳುವ ಕ್ರಮದಲ್ಲಿ ಮಧ್ಯಮ ವರ್ಗದ ಸಾರ್ವತ್ರಿಕ ಶೈಲಿಯನ್ನು ಬಳಸಿ ಆಂಗಿಕ ಅಭಿನಯದಲ್ಲಿ ಚಲನೆಗೆ ಹೆಚ್ಚು ಒತ್ತು ನೀಡಲಾಗುತ್ತಿತ್ತು. ಪ್ರೇಕ್ಷಕನಿಗೆ ನೆರೆಯವರ ನೋವು ನಲಿವನ್ನು ನೋಡುತ್ತಿರುವ ತಾದಾತ್ಮ್ಯ ಇಲ್ಲಿ ಸೃಷ್ಟಿಯಾಗುತ್ತಿತ್ತು.

೪. ಸಿನಿಮ್ಯಾಟಿಕ್ ಆದ ಸಹಜ ಶೈಲಿ :

ನಿತ್ಯಜೀವನದಲ್ಲಿ ನಾವು ವರ್ತಿಸುವುದಕ್ಕೆ, ಚಲನಚಿತ್ರದಲ್ಲಿ ಅದೇ ಸನ್ನಿವೇಶವನ್ನು ಅಭಿನಯಿಸುವುದಕ್ಕೆ ಪ್ರಧಾನವಾದ ವ್ಯತ್ಯಾಸವಿದೆ. ಇದನ್ನು ಕಲಾತ್ಮಕ ಅಂತರ ಎಂದು ಕರೆಯಬಹುದು. ಈ ಶೈಲಿಯ ಅಭಿನಯ ಈ ಅಂತರವನ್ನು ಗಮನದಲ್ಲಿಟ್ಟುಕೊಂಡು ಸಂಭಾಷಣೆ ಹೇಳುವಾಗ, ಆಂಗಿಕ ಅಭಿನಯ ನೀಡುವಾಗ, ಪ್ರೇಕ್ಷಕನ ರೂಢಿಗತ ನಂಬಿಕೆಗಳನ್ನು ಬಳಸಿ ಅರ್ಥ ಹೊರಡಿಸಲು ಪ್ರಯತ್ನಿಸುತ್ತದೆ. ಇದೊಂದು ರೀತಿ screen presence ಅನ್ನು ಅವಲಂಬಿಸಿದ ಶೈಲಿ.

೫. ಹವ್ಯಾಸಿ ನಾಟಕ ಪ್ರೇರಿತ ಸಹಜ ಶೈಲಿ :

ಹವ್ಯಾಸಿ ನಾಟಕದಲ್ಲಿ ಅಭಿನಯದ ಅಬ್ಬರ ಕಡಿಮೆ; ಚಲನೆ ಕಡಿಮೆ. ಸಾಂಕೇತಿಕವಾಗಿ ಎಲ್ಲವನ್ನೂ ಅಭಿವ್ಯಕ್ತಿಸುವ ಪ್ರಯತ್ನ. ಈ ಹಿನ್ನೆಲೆ, ಕ್ಯಾಮರಾಕೋನ ಇವೆರಡೂ ಬೆರೆತು ಅಭಿನಯ ಇತರ ಪರಿಕರಗಳ ಜೊತೆ ಕೈಜೋಡಿಸಿ ನಡೆಯುವ ಜಾಣ್ಮೆಯ ಶೈಲಿ.

೬. ಇಮೇಜ್ ನಿರ್ಬಂಧಿತ ಶೈಲಿ :

ನಾಯಕ-ನಾಯಕಿಯ ಯಾವುದೋ ವರ್ತನೆ, ಚಲನೆ, ಸಂಭಾಷಣೆ ಹೇಳುವ ಶೈಲಿ, ಧ್ವನಿಯ ವೈಶಿಷ್ಟ್ಯ ಜನಪ್ರಿಯವಾಗುತ್ತದೆ. ಇದರಿಂದ ಒಂದು ಇಮೇಜ್ ಸೃಷ್ಟಿಯಾಗುತ್ತದೆ. ಅವರ ಮುಂದಿನ ಅಭಿನಯವನ್ನೆಲ್ಲ ಈ ಇಮೇಜ್ ನಿರ್ಧರಿಸುತ್ತದೆ. ಕನ್ನಡದಲ್ಲೀಗ ಹೆಚ್ಚಿನವರ ಅಭಿನಯಶೈಲಿ ಇದೇ.

ನಾಯಕ- ನಾಯಕಿಯ ಪರಿಕಲ್ಪನೆ

ನಮ್ಮ ಜಾನಪದ ರಂಗಭೂಮಿಯಲ್ಲಿ ರಂಗದ, ಪ್ರೇಕ್ಷಕನ ನಡುವೆ ಅಂಥ ಅಂತರ ಇರುತ್ತಿರಲಿಲ್ಲ. ಪ್ರೇಕ್ಷಕರ ನಡುವಿಂದಲೇ ನಟ ಹುಟ್ಟಿಬರುವ ಮಾದರಿಗಳೂ ಅಲ್ಲಿವೆ. ಆರಂಭಿಕ ಚಿತ್ರಗಳ ಮಾದರಿ ಇಂಥದಲ್ಲ; ಅದು ಪಾರ್ಸಿ ರಂಗಭೂಮಿಯಿಂದ ಪ್ರೇರಿತವಾದದ್ದು. ಈ ಮಾದರಿಯಲ್ಲಿ ಒಂದು ರೀತಿಯ compartmental ಅಭಿನಯ ಕ್ರಮ ಇರುತ್ತದೆ. ಒಂದೊಂದು ಪಾತ್ರಕ್ಕೆ ಒಂದೊಂದು ರೀತಿಯ ಅಭಿನಯ. ಪ್ರತಿ ಪಾತ್ರವೂ ಅದರ ಒಳಹೊಕ್ಕು ಅದನ್ನೇ ನಿಜ ಎಂದು ನಂಬಿಸುವಂತೆ ಅಭಿನಯಿಸುವ ಶೈಲಿ. ಈಗ ನಾಯಕ, ನಾಯಕಿ, ಖಳನಾಯಕ, ಹಾಸ್ಯಪಾತ್ರ, ಪೋಷಕ ಪಾತ್ರ ಇವುಗಳ modelಗಳು ಕನ್ನಡ ಚಿತ್ರರಂಗದಲ್ಲಿ ಬದಲಾಗುತ್ತಾ ಬಂದ ಕ್ರಮ, ಅವು ಅಭಿನಯಶೈಲಿಯ ಮೇಲೆ ಮಾಡಿದ ಪರಿಣಾಮಗಳನ್ನು ಗಮನಿಸಬಹುದು.

ಮೊದಲಿಗೆ ನಾಯಕ. ಇವನು ಶೂರ, ಸಾಹಸಿ, ಆದರ್ಶವೇ ಮೈವೆತ್ತುಕೊಂಡು ಬಂದವನು. ಈ ಕಲ್ಪನೆ ಬೆಳೆಯುವುದರ ಹಿಂದೆ ಎರಡು ಸೂಕ್ಷ್ಮಗಳಿವೆ. ಒಂದು, ನಾಯಕ ಸಾಮಾನ್ಯ ಜನರ ಮಟ್ಟಕ್ಕಿಂತ ಭಿನ್ನವಾಗಿರಬೇಕು ಎಂಬ ಕಲ್ಪನೆ. ಇನ್ನೊಂದು, ಪುರುಷ ಪ್ರಧಾನ ಸಂಸ್ಕೃತಿಗೆ ಅನುಗುಣವಾಗಿ ಸೃಷ್ಟಿಯ ಕೇಂದ್ರ 'ನಾನೇ' ಎಂಬ ಅಹಂ ಪೋಷಿಸುವ ಬಾಣ್ಮೆ. ಆರಂಭದ ನಾಯಕರು ವೀರ ಅರಸ, ಸೈನಿಕ ಇಂಥ ಕ್ಷಾತ್ರತೇಜ ಪಡೆದಿರುತ್ತಿದ್ದರು, ಇಲ್ಲವೇ ಭಕ್ತಿರಸದಲ್ಲಿ ಮಿಂದು ಎದ್ದು ಬಂದಿರುತ್ತಿದ್ದರು. ಈ ನಡುವೆ ಸಮಾಜ ಸುಧಾರಕರೂ ಆಗಿರುತ್ತಿದ್ದರು. ಇಡೀ ಕಥೆಯನ್ನು ನಿಯಂತ್ರಿಸುವುದೇ ನಾಯಕನ ಪಾತ್ರವಾದ್ದರಿಂದ ಉಳಿದ ಪಾತ್ರಗಳಿಗಿಂತ ಭಿನ್ನವಾದ ಅಭಿನಯ ಗತ್ತು, ಗಾಂಭೀರ್ಯ. ಸಂಭಾಷಣೆ ಹೇಳುವ ಶೈಲಿಯಲ್ಲಾಗಲೀ, ಅಭಿನಯದ ರೀತಿಯಲ್ಲಾಗಲೀ ತೂಕ ತಪ್ಪದ ಸಂಯಮ. ನಾಯಕ ಭಾವುಕನಾಗುವಂತಿಲ್ಲ; ಸಂಯಮಿ, ಪರರ ಕಷ್ಟಕ್ಕೆ ಮುಂದಾಗುವವನು, ಸ್ವಾರ್ಥವನ್ನು ತ್ಯಜಿಸಿದವನು. ಈ ಮಾದರಿ ಸ್ವಾತಂತ್ರ್ಯೋತ್ತರ ದಿನಗಳಲ್ಲಿ ಮಾರ್ಪಾಟು ಹೊಂದಿತು. ಇಲ್ಲಿ ನಾಯಕ ಬದಲಾವಣೆಯ ಹರಿಕಾರನಾದ. ಹಳ್ಳಿಯಿಂದ ಬಂದು ವಿದ್ಯೆ ಕಲಿತು ಬದಲಾವಣೆ ತರುವವನು, ಹಳ್ಳಿಗಳನ್ನು ಉದ್ಧಾರ ಮಾಡುವವನು, ಅನ್ಯಾಯದ ವಿರುದ್ಧ ಸಿಡಿದೇಳುವವನು ಆದ ನಾಯಕನನ್ನು ೬೦ರ ದಶಕದಲ್ಲಿ ಕಾಣುತ್ತೇವೆ. ೭೦ರ ದಶಕದಲ್ಲಿ ಎರಡು ಬೆಳವಣಿಗೆಗಳು ಒಟ್ಟಿಗೆ ಕಂಡವು. ಒಂದು, ಆ ಕಾಲದಲ್ಲಿ ಹುಟ್ಟಿದ ಹೊಸ ಅಲೆ ಚಿತ್ರಗಳ ಪ್ರೇರಣೆಯಾದ ಆದರ್ಶದ ಪೊರೆ ಕಳಚಿಕೊಂಡ ಸಹಜ ನಾಯಕನೊಬ್ಬ ಹುಟ್ಟಿಕೊಂಡ. ಅದರ ಜೊತೆಗೇ 'ಕಸ್ತೂರಿ ನಿವಾಸ', 'ಬಂಗಾರದ ಮನುಷ್ಯ' ಯಶಸ್ಸಿನಿಂದ ಕೊಡುಗೈದಾನಿ ನಾಯಕನೊಬ್ಬ ಕಾಣಿಸಿಕೊಂಡ. ಮೊದಲ ನಾಯಕ ಸಹಜವಾಗಲು ಪ್ರಯತ್ನಿಸಿದರೆ, ಎರಡನೆಯವನು ಭಾವುಕತೆಯ ಅಬ್ಬರದಲ್ಲಿ ಮೆರೆದ. ಆ ಹೊತ್ತಿಗಾಗಲೇ ಬಾಂಡ್ ಚಿತ್ರಗಳು ಕಾಲಿಟ್ಟಿದ್ದರಿಂದ ಸಾಹಸಕ್ಕೆ ಹೊಸ ಅರ್ಥ ಬಂತು. ಫೈಟಿಂಗ್, ಚೇಸಿಂಗ್ ಇಂಥ ದೃಶ್ಯಗಳಿಗೆ ಮಹತ್ವ ಬಂದಿತು. ಇಲ್ಲೆಲ್ಲ ನಾಯಕನ ಪರಾಕ್ರಮದ ಪ್ರಭಾವಳಿ ಹಿಗ್ಗಿತು. ಪ್ರತಿ ಫ್ರೇಂನಲ್ಲಿ ಇಣುಕುವ ನಾಯಕ ಕೇಂದ್ರೀಕೃತ ವ್ಯವಸ್ಥೆ ಕಾಲಿಟ್ಟಿತು. ಇನ್ನೊಂದೆಡೆ ಸರಳವಾಗುತ್ತಿದ್ದ ನಾಯಕ ಸೂಕ್ಷ್ಮಜ್ಞನಾಗಿ ಬೆಳೆಯುತ್ತ ಹೋದ. ತ್ರಿಕೋನ ಪ್ರೇಮವೋ ಭಗ್ನಪ್ರೇಮವೋ ಬಂದಾಗ ಈ ಮಾದರಿ ಮುಂದಕ್ಕೆ ಬಂದಿತು.

೮೦ರ ದಶಕದಲ್ಲಿ 'ವಸ್ತು'ವಿನಲ್ಲಿ ದೊಡ್ಡ ಬದಲಾವಣೆ ಕಂಡುಬಂತು. ಸ್ವಾತಂತ್ರ್ಯೋತ್ತರ ಕನಸುಗಳೆಲ್ಲ ವಿಫಲಗೊಂಡು ಭ್ರಷ್ಟಾಚಾರ, ಅವ್ಯವಸ್ಥೆ ಎಲ್ಲೆಡೆ ಹಬ್ಬಿದ್ದನ್ನು ಕಂಡು, ನಿರಾಶೆಯ ವಾತಾವರಣ ಎಲ್ಲೆಡೆ ಕಾಣಲು ಆರಂಭವಾಯಿತು. ಆಗ ನಾಯಕ ಆ್ಯಂಗ್ರಿ ಯಂಗ್ ಮ್ಯಾನ್ ಆಗಿ ಸಿಡಿದೆದ್ದ. ಪೊಲೀಸ್ ಸಿಐಡಿ, ಪತ್ರಕರ್ತ - ಹೀಗೆ ಭ್ರಷ್ಟಾಚಾರ ಬಯಲಿಗೆಳೆಯಲು ವಿವಿಧ ವೇಷ ಹಾಕಿದ. ವ್ಯವಸ್ಥೆ ಮೂಲಕ ಸಾಧಿಸಲಾಗದ್ದನ್ನು ಬೇರೆ ಮಾರ್ಗದಲ್ಲಿ ಸಾಧಿಸಿದ. ಇದು ಇಂದಿಗೂ ಅಸ್ತಿತ್ವದಲ್ಲಿರುವ ಮಾದರಿ. ಈ ಹೊತ್ತಿಗೆ compartmental ಅಭಿನಯ ತಗ್ಗುತ್ತ ಬಂದಿತ್ತು. ನಾಯಕರೇ ಹಾಸ್ಯವನ್ನು ಸೇರಿದಂತೆ ಎಲ್ಲಾ ರಸವನ್ನು ಅಭಿನಯಿಸುವ ಪರಂಪರೆ ಸಿದ್ಧವಾಯಿತು.

ಕೊನೆಯದು, ಬಳಕೆದಾರ ಸಂಸ್ಕೃತಿಯ ಪ್ರಭಾವದಿಂದ ಮೃತಳೆದ ನಾಯಕನ ಮಾದರಿ. ಬಳಕೆದಾರ ಸಂಸ್ಕೃತಿಯ ಪ್ರಧಾನ ಲಕ್ಷಣವೆಂದರೆ ಎಲ್ಲವೂ ತನ್ನದಾಗಬೇಕು ಎಂಬ ಹಂಬಲ ಹುಟ್ಟಿಸಿ, ಗ್ರಾಹಕನನ್ನು ಚಪಲಚಿತ್ತನನ್ನಾಗಿಸುವುದು. ಈ ನಾಯಕ ಸುಂದರನಾಗಿದ್ದರೆ ಸಾಲದು; ಭಾವನೆಗಳನ್ನು ಕೆರಳಿಸಬೇಕು. ಕಥೆಗೆ ಅಗತ್ಯವಿರದಿದ್ದರೂ ಭಾರಿ ಹೊಡೆದಾಟಗಳು, ನೃತ್ಯ ದೃಶ್ಯಗಳು, ಅಪಾರ ವೆಚ್ಚದ ಶ್ರೀಮಂತ ಸೆಟ್‌ಗಳು ನಾಯಕನಿಗ ಸೃಷ್ಟಿಯಾದವು. ಅವನು ಬಡವ, ಶ್ರೀಮಂತ, ಸಾಮಾನ್ಯ ಏನೇ ಆಗಿರಲಿ, ಮ್ಯಾನರಿಸಂನಲ್ಲಿ ಮಾತ್ರ ವ್ಯತ್ಯಾಸ ಕಾಣುತ್ತಿರಲಿಲ್ಲ. ಪ್ರೇಕ್ಷಕ ನಾಯಕನಲ್ಲಿ ತನ್ನನ್ನು ಗುರುತಿಸಿ ಇಡೀ ಪ್ರಪಂಚವನ್ನು ಅನುಭೋಗಿಸಬೇಕು. ಇದೇ ಇಲ್ಲಿಯ ಅಭಿನಯದ ಶೈಲಿ. ಇಂಥ ಕಡೆ ಫೈಟ್ಸ್, ಸಾಂಗ್ಸ್ ಮುಖ್ಯ. ಅದೂ ಕೊಂಚ ರೋಬಸ್ಟ್ ಆಗಿರಬೇಕು. ಸೆಕ್ಸ್ ಗೆಶ್ಚರ್ಸ್ ಹೇರಳವಾಗಿರಬೇಕು. ಅದು ಪ್ರಣಯ ಇರಲಿ, ರೇಪ್ ಇರಲಿ ನಾಯಕ, ಅವನ ಮೂಲಕ ಪ್ರೇಕ್ಷಕ ಇರುವುದೇ ಹೆಣ್ಣನ್ನು ಅನುಭೋಗಿಸುವುದಕ್ಕೆ ಎಂಬ ಸಿದ್ಧಾಂತ. ಇವತ್ತಿನ ನಾಯಕನ ಮಾದರಿಗಳಲ್ಲಿ ಒಂದಲ್ಲ ಒಂದು ನೆಲೆಯಲ್ಲಿ ಈ ಅಂಶವನ್ನು ಕಾಣುತ್ತೇವೆ.

compartmental ಅಭಿನಯ ಯುಗದಿಂದಲೂ ನಾಯಕಿ ಎಂದರೆ ನಾಯಕನ ಜೊತೆಗಿರುವವಳು ಎಂದು ಅರ್ಥ. ಸಮಾನಪಾತ್ರ ಎಂದಲ್ಲ. ಆರಂಭದ ಚಿತ್ರಗಳಲ್ಲಿ ಕಣ್ಣು ಪಟಪಟ ಎನ್ನಿಸಿ, ತಲೆ ತಗ್ಗಿಸಿ ಅಸ್ವಾಭಾವಿಕ ನಡುಗುವ ಸ್ವರದಲ್ಲಿ ಮಾತಾಡುವ ನಾಯಕಿಯರು - ನಾಯಕ ಕುಣಿಸುವ ಗೊಂಬೆಗಳು. ತ್ಯಾಗದ ಸಾಕಾರಮೂರ್ತಿ ತಾಯಿ, ತಗ್ಗಿಬಗ್ಗಿ ನಡೆಯುವ ಹೆಂಡತಿ, ದಾರಿ ತಪ್ಪಿಸುವ ಪ್ರೇಯಸಿ, ಘಟವಾಣಿ ಅತ್ತೆ - ಇವರೆಲ್ಲ ಪ್ರಭಾವಳಿ ಹಿಗ್ಗಿಸಿಕೊಳ್ಳಲು ಒಂದಲ್ಲ ಒಂದು ರೀತಿ ನೆರವಾಗುವವರೇ ಹೊರತು ಸ್ವಂತ ವ್ಯಕ್ತಿತ್ವ ಬೆಳೆಸಿಕೊಳ್ಳಲು ಪ್ರಯತ್ನಿಸಿದವರಲ್ಲ. ಈ ವೃತ್ತದಲ್ಲಿ ಬಾರದ ಪಾತ್ರಗಳೆಲ್ಲ ಹಿಸ್ಟೀರಿಕಲ್ ಆದ, ಹಾಳುಗೇಡಿ ಬುದ್ಧಿಯ ವ್ಯಕ್ತಿತ್ವ ಉಳ್ಳವರಾದವರು. ನಾಯಕನ ಕೈಬೆರಳು ಸೋಕಿದರೆ ರೋಮಾಂಚಿತರಾಗುವ, ಪ್ರೀತಿಯ ಕಣ್ನೋಟ ಕಂಡರೆ ಸಾರ್ಥಕತೆ ಕಂಡುಕೊಳ್ಳುವ, ಬಿರಿಮಾತಿಗೆ ಬವರಿದ ಹರಿಣಿಯರಂತಾಗುವ ಸತ್ವಹೀನ ಸ್ಟೀರಿಯೋ ಟೈಪ್‌ನಿಂದ ಆಚೆ ಬಂದು ಸ್ತ್ರೀಪಾತ್ರಗಳಿಗೆ ಜೀವತುಂಬುವ ಪ್ರಯತ್ನ ನಡೆದಿರುವುದು ಬಹಳ ಅಪರೂಪ.

ಇವರ ನಂತರದ ಘಟ್ಟದಲ್ಲಿ ನಾಯಕಿಯರಿಗೂ ಎರಡು ಮಾದರಿಗಳು ಸೃಷ್ಟಿಯಾದವು. ಒಂದು ಅಬ್ಬರದ ಭಾವುಕಶೈಲಿಯ ಅಭಿನಯ. ತಾಳಿ, ಕುಂಕುಮ, ಶೀಲ, ಪಾತಿವ್ರತ್ಯ ಮುಂತಾದವುಗಳಿಗಾಗಿ ಹೋರಾಡಿ ಕಣ್ಣೀರಿಡುವುದು ಒಂದು ಯಶಸ್ವಿ ಸೂತ್ರವಾದ ಮೇಲೆ ಅದೇ ಒಂದು ಅಭಿನಯಶೈಲಿಯಾಯಿತು. ಇನ್ನೊಂದು 'ಟೇಮಿಂಗ್ ಆಫ್ ದಿ ಶ್ರೂ' ಸೂತ್ರ ಪ್ರಭಾವಿತ ಶೈಲಿ. ಸ್ವಂತಿಕೆ ಇತ್ಯಾದಿ ಶಬ್ದಗಳಿಂದ ಎಗರಾಡಿ, ಅಹಂಕಾರ ಮೆರೆದು, ಕೊನೆಗೆ ನಾಯಕನಿಂದ ಪಳಗಿಸಲ್ಪಡುವುದು. ೧೯೬೩ರ 'ವೀರಕೇಸರಿ', 'ಅಬ್ಬಾ ಆ ಹುಡುಗಿ' ಸೇರಿದಂತೆ ೨೦೦೦ನೇ ವರ್ಷದವರೆಗೆ ಇಂಥ ಚಿತ್ರಗಳ ದೊಡ್ಡ ಸಾಲೇ ನಮ್ಮಲ್ಲಿ ನಿರ್ಮಾಣವಾಗಿದೆ, ಆಗುತ್ತಲೇ ಇವೆ. ಅವಕ್ಕೂ ಮೊದಲು, ಅನಂತರ ಕೂಡಾ ಈ ಮಾದರಿ ನಾಯಕಿಯರಿಗೆ ಮೊದಲರ್ಧದಲ್ಲಿ ಎಗರಾಡುವ ಸ್ವಾತಂತ್ರ್ಯವಿರುತ್ತದೆ. ಆದರೆ ಉತ್ತರಾರ್ಧದಲ್ಲಿ ಎಗರಾಡಿದ್ದಕ್ಕೆ ಪ್ರಾಯಶ್ಚಿತ್ತವಾಗಿ ಬುದ್ಧಿ ಕಲಿಯಬೇಕಾಗುತ್ತದೆ. 'ಒಳಗೆ ಸೇರಿದರೆ ಗುಂಡು, ಹುಡುಗಿ ಆಗುವಳು ಗಂಡು...' ಎಂದು ಹಾಡುವ ರೌಡಿ ಹೆಣ್ಣು ಕೊನೆಗೆ ಪಳಗಿದ ನಾಯಕಿಯೇ. (ಈ ಕುರಿತು ಡಾ|ರಾಮಚಂದ್ರದೇವ 'ಷೇಕ್ಸ್‌ಪಿಯರ್ ಎರಡು ಸಂಸ್ಕೃತಿಗಳಲ್ಲಿ' ಎಂಬ ತಮ್ಮ ಮಹಾಪ್ರಬಂಧದಲ್ಲಿ ವಿವರವಾಗಿ ಚರ್ಚಿಸಿದ್ದಾರೆ)

ಅನಂತರದ್ದು ಬಳಕೆದಾರ ಸಂಸ್ಕೃತಿ ಪ್ರೇರಿತವಾದ ಮಾದರಿ. ಇಲ್ಲಿ ಹೆಣ್ಣು ಪಾತ್ರವಲ್ಲ; ಪದಾರ್ಥ. ಅದರಲ್ಲೂ sexual appeal ಕೊಡುವ ಪದಾರ್ಥ. ಬೇಕೋಬೇಡವೋ ಅನ್ನುವಷ್ಟು ಬಟ್ಟೆ ತೊಟ್ಟು, ವಿಚಿತ್ರವಾಗಿ ಕೂದಲು ಕತ್ತರಿಸಿಕೊಂಡು, ಸೊಂಟ ಬಳುಕಿಸುವ ಈ ಹೆಣ್ಣುಗಳು ನಡೆವ ಶೈಲಿ, ನಿಲ್ಲುವ ಭಂಗಿ, ಮಾತಾಡುವ ರೀತಿ ಎಲ್ಲದರಲ್ಲೂ ಕಾಮಪ್ರಚೋದನೆ ಹುಟ್ಟಿಸಬೇಕು. ಒಂದೆರಡು ದೃಶ್ಯದಲ್ಲಿ ನಾಯಕನ ಮೇಲೆ ಬಿದ್ದು ಹೊರಳಾಡಿ ಅಲ್ಪಸ್ವಲ್ಪ ಉಳಿದ ಬಟ್ಟೆಯ ಬಹುಭಾಗವನ್ನು ಬಿಚ್ಚಿ ಪ್ರೇಕ್ಷಕನ ಕಣ್ಣನ್ನು ತಣಿಸಬೇಕು. ದೀರ್ಘ ಚುಂಬನ, ಹೆಚ್ಚುಕಡಿಮೆ ಸಂಭೋಗಕ್ಕೆ ಹತ್ತಿರವಾದ ಕ್ರಿಯೆ ಇವೆಲ್ಲ ಸಾಮಾನ್ಯ. ಇನ್ನು ನೀರಿನಲ್ಲಿ ನೆನೆಯುವುದು ಇದ್ದೇ ಇರಬೇಕು. ಹಾಡು, ಸಂಭಾಷಣೆಗಳಲ್ಲಿ ದ್ವಂದ್ವಾರ್ಥ ಬಳಸುವ ಇನ್ನೊಂದು ಮಾದರಿಯೂ ಇದೆ. ಹೆಣ್ಣಿನ ಅಭಿನಯ ಎಂದರೆ ಸಾಧ್ಯವಾದಷ್ಟು ಬೆತ್ತಲಾಗುವುದು ಎಂಬುದು ಈ ಮಾದರಿಯ ಅಂತರಾರ್ಥ.

ಹೀಗೆ ಕನ್ನಡ ಚಿತ್ರರಂಗದ ಇತಿಹಾಸದಲ್ಲೇ ನಾಯಕಿ ಪರಿಕಲ್ಪನೆ ಸರಳೀಕೃತಗೊಳ್ಳುತ್ತ, ಹುಡಿಯಾಗುತ್ತಾ ಬಂತು. ಗಟ್ಟಿ ಪಾತ್ರವಿದ್ದಾಗಲೂ ನಾಯಕಿಗೆ ಕೆಲಮಟ್ಟಿಗಿನ ಸೂಕ್ಷ್ಮತೆಯಾದರೂ ಇರಬೇಕು ಎಂಬುದನ್ನೇ ಚಿತ್ರರಂಗ ನಂಬಿದಂತೆ ಕಾಣುವುದಿಲ್ಲ. ನಮ್ಮಲ್ಲಿ ಸ್ತ್ರೀವಾದಿ ಎಂಬ ಹಣೆಪಟ್ಟಿ ಕಟ್ಟಿಕೊಂಡು ಬಂದ ಚಿತ್ರಗಳೂ ಕೂಡ ತಮ್ಮ ಘೋಷಿತ ಉದ್ದೇಶಕ್ಕೆ ತೊಡರುಗಾಲು ಹಾಕಿಕೊಳ್ಳುವುದೊಂದು ವಿಚಿತ್ರ. ಇಂಥ ಯಾವ ಪಾತ್ರವೂ ಅಥೆಂಟಿಕ್ ಎಂದು ಅವರ ಅಭಿನಯದ ಯಾವ ಹಂತದಲ್ಲೂ ಅನ್ನಿಸುವುದಿಲ್ಲ. ಹೀಗಾಗಿ ನಮ್ಮಲ್ಲಿ ಘೋಷಿತ ನೀತಿ ಮತ್ತು ಚಿತ್ರಿಸುವ ತಂತ್ರ

(ಚಿತ್ರ ೬-೭) ಭಾರತಿ ಮತ್ತು ಸಂಪತ್ 'ಸ್ವಯಂವರ'



ಸಂಪತ್ 'ಹೊನ್ನಿಯ ಮದುವೆ'

ಇವೆರಡಕ್ಕೂ ಪರಸ್ಪರ ವಿರುದ್ಧ ಸಂಬಂಧವೇ ಇದೆ. ಇದರ ಹಿಂದಿನ ರಾಜಕೀಯವನ್ನು ಸ್ತ್ರೀವಾದಿ ವಿಮರ್ಶಕರು ತೆರೆದಿಟ್ಟಿದ್ದಾರೆ. ಕ್ಲೇರ್ ಜಾನ್‌ಸ್ಟನ್ ಹೇಳುವ ಹಾಗೆ ''If we accept that cinema involves the production of signs, the idea of non-intervention is pure mystification. The sign is allways a product. What the camera, in fact, grasps is the natural world of the dominent ideology'' ಎಂಬ ವ್ಯಾಖ್ಯಾನವೇ ನಮ್ಮಲ್ಲಿನ ನಾಯಕಿಯರ ಅಭಿನಯದ ಕುರಿತ ವ್ಯಾಖ್ಯಾನ.

ವಿಲನ್ ಅಥವಾ ಖಳನಟರ ಪಾತ್ರಗಳು compartmental ಅಭಿನಯ ಕಾಲದಿಂದಲೂ ಪುರಾಣದ ದುಷ್ಟಪಾತ್ರಗಳಿಂದ ಪ್ರೇರಣೆ ಪಡೆದವು. ಜಾನಪದ ರಂಗಭೂಮಿಯಲ್ಲಿ ರಾಕ್ಷಸ ಪಾತ್ರಕ್ಕೆ ಪ್ರಾಮುಖ್ಯ ಇರುತ್ತದೆ. ತೆರೆಯ ಮೇಲೆ ಬರುವುದು ಕೆಲವೇ ನಿಮಿಷಗಳು, ಆದರೂ ಇವು ತನ್ನ ಅಬ್ಬರದಿಂದ ಪ್ರೇಕ್ಷಕರ ಮನವನ್ನು ಕದಡಿಬಿಡುವಷ್ಟು ಶಕ್ತ ಪಾತ್ರಗಳಾಗಿರುತ್ತಿದ್ದವು. ಖಳನಟರ ಅಬ್ಬರಕ್ಕೆ ಇನ್ನೊಂದು ತಾತ್ವಿಕ ಕಾರಣ ಇದೆ. ಇದು ಅರಿಸ್ಟಾಟಲ್‌ನ ನಾಟ್ಯಮೀಮಾಂಸೆಯಲ್ಲಿ ಕಂಡುಬರುವ ಕೆಥಾರ್ಸಿಸ್‌ಗೆ ಹೋಲಿಸಬಹುದಾದ ಚಿಂತನೆ. ದುಷ್ಟತನ, ದುರ್ಮಾರ್ಗಗಳನ್ನು ಅತಿಯಾಗಿ ಅಭಿನಯಿಸಿದಷ್ಟು ಪ್ರೇಕ್ಷಕನ ಅಂಥ ಮನೋಭಾವ ಕಡಿಮೆಯಾಗುತ್ತದೆ ಎಂಬುದು ಇಂಥ ಚಿಂತನೆಯ ಜೀವಾಳ. ಆರಂಭದ ಚಿತ್ರಗಳಲ್ಲಿಯ ಖಳರು ಅಬ್ಬರದ ಶೈಲಿಯಲ್ಲಿ ಸಂಭಾಷಣೆ ಹೇಳುತ್ತ, ಕಣ್ಣನ್ನು ವಿಚಿತ್ರ ಗತಿಯಲ್ಲಿ ತಿರುಗಿಸುತ್ತ ಭಯ ಹುಟ್ಟಿಸುವ ಮಾದರಿಯಲ್ಲಿ ನಟಿಸುತ್ತಿದ್ದರು. ಇದೇ ಹೊತ್ತಿನ ಕೆಲ ಖಳ ಪಾತ್ರಗಳು ಇಂಗ್ಲಿಷ್ ಜಂಟಲ್‌ಮನ್ ತರಹ ವೇಷ ಧರಿಸಿ, ಪೈಪ್ ಎಳೆಯುತ್ತ ಇಂಗ್ಲಿಷ್ ಮಿಶ್ರಿತ ಕನ್ನಡವನ್ನು ಮಾತಾಡುತ್ತಿದ್ದರು. ಇದೇ ನಮ್ಮ ಸಂಸ್ಕೃತಿಯ ವಿವಿಧ ಕಲೆಗಳಲ್ಲಿ ಬ್ರಿಟಿಷರು ಹೇಗೆ ಖಳರಾಗಿ ಮಾರ್ಪಾಟಾಗಿದ್ದರು ಎನ್ನುವುದಕ್ಕೆ ಉದಾಹರಣೆ. ಸಾಮಾಜಿಕ ಚಿತ್ರಗಳು ಬರುವುದಕ್ಕೆ ಆರಂಭಿಸಿದ ಮೇಲೆ ಭೂಮಾಲೀಕರು, ಜಮೀನ್ದಾರರು, ಊರಿನ ಶಾಂತಿಭಂಗ ಮಾಡುವವರು, ಒಟ್ಟು ಕುಟುಂಬವನ್ನು ಒಡೆಯುವವರು ಖಳರಾದರು. ಇಲ್ಲಿಯೂ ಅಭಿನಯಶೈಲಿಯಲ್ಲಿ ಅಂಥವ್ಯತ್ಯಾಸವೇನೂ ಕಾಣದಿದ್ದರೂ ದಪ್ಪ ಮೀಸೆ, ಕೈಯಲ್ಲೊಂದು ಬಂದೂಕು, ತೋಳದಂಥ ನಾಯಿ - ಇಂಥ ಖಳರ ಜೊತೆಗೆ ಬಂದವು. ಕೆಲವು ಪ್ರಯೋಗಶೀಲ ನಟರು ಉರಿಯುವ ಕಣ್ಣು, ಕುಣಿಯುವ ಕೆನ್ನೆಗಳು, ಧ್ವನಿಯಲ್ಲಿ ಕರ್ಕಶತೆ ಬೆರೆಸಿ ಡಕಾಯಿತರ ಶೈಲಿಗೆ ಹತ್ತಿರವಾಗುವ ಅಭಿನಯಮಾರ್ಗ ಅವಲಂಬಿಸಿದರು. ಅನಂತರ ತುರ್ತು ಪರಿಸ್ಥಿತಿ, ಅನಂತರದ ಘಟನೆಗಳು, ಭ್ರಷ್ಟಾಚಾರ ಇತ್ಯಾದಿಗಳು ಪ್ರಜಾಪ್ರಭುತ್ವದ ಬಗ್ಗೆ ವಿಶ್ವಾಸ ಕಡಿಮೆ ಮಾಡುತ್ತ ಹೋದಂತ ರಾಜಕಾರಣಿಗಳು ಖಳರಾದರು. ಬಿಳಿ ಟೋಪಿ, ಖಾದಿ ಧರಿಸಿ ಎಂದಿನ ಸಹಜ ಶೈಲಿಯಲ್ಲಿ ಬೆಣ್ಣೆಮಾತು ಆಡುತ್ತ, ಗುಟ್ಟಿನಲ್ಲಿ ಕೆಲಸ ಮಾಡುವ ಈ ಖಳರಿಗೂ ಹಿಂದಿನ ಅಬ್ಬರದ ಖಳರಿಗೂ ಉತ್ತರ ದಕ್ಷಿಣ. ಇವರನ್ನು ರಾಜಕಾರಣಿಗಳು ಎಂದು ಸಾಮಾನ್ಯವಾಗಿ ಕರೆದರೂ ಪೋಲೀಸ್ ಇಲಾಖೆ ಸೇರಿದಂತೆ ವಿವಿಧ ವೃತ್ತಿಯಲ್ಲಿರುವ ನಯವಂಚಕರು ಖಳರಾಗಿ ಮಾರ್ಪಾಟಾದರು. ಈಚಿನ ಚಿತ್ರಗಳಲ್ಲಿ ಇನ್ನೊಂದು ಮಾದರಿ ಖಳನಟರನ್ನು ನೋಡುತ್ತೇವೆ. ಇವರು 'ರಾಜಕಾರಣಿ'ಗಳಿಗಿಂತ ಪ್ರಬಲರಾದ ಭೂಗತ ಜಗತ್ತಿನ ವ್ಯಕ್ತಿಗಳು. ಇತರ ಶ್ರೀಮಂತರಂತೆ ಕಾಸ್ಟ್ಯೂಮ್ಸ್ ಧರಿಸಿರುವ ಬಹುತೇಕ ಸೂಣಕಲರೂ ಆಗಿರುವ ಇವರ ನಯವಂಚಕತೆ ಚಿತ್ರದ ಕಥೆ ಬೆಳೆಯುತ್ತಾ ಹೋದಂತೆ ಗೊತ್ತಾಗುವುದು. ಇದು 'ಖಳ' ಪಾತ್ರಗಳ ಅಭಿನಯದ ಮಾದರಿ ನಮ್ಮಲ್ಲಿ ಬೆಳೆಯುತ್ತಾ ಬಂದ ಕ್ರಮ.

ಖಳಪಾತ್ರ ಅಲ್ಲಲ್ಲಿ ಕೊಂಚ ಸಂಕೀರ್ಣ ವ್ಯಕ್ತಿತ್ವ ಪಡೆದರೂ ನಾಯಕನಿಂದ ಪೆಟ್ಟು ತಿನ್ನುವ, ರೇಪ್ ಮಾಡುವ, ಮುಗ್ಧರನ್ನು ಹಿಂಸಿಸುವ ಕ್ರಿಯೆಗಳು ಈ ಪಾತ್ರಕ್ಕೆ ಸಾಮಾನ್ಯ. ಈ ದೃಷ್ಟಿಯಿಂದ ನೋಡಿದಾಗ ಸಿನಿಮಾ ಬಿಂಬಿಸುವ ಖಳರು ನಮ್ಮ ವ್ಯಕ್ತಿತ್ವದ ಸ್ಯಾಡಿಸ್ಟ್ ಮನೋಭಾವವನ್ನು ಪ್ರತಿಪಾದಿಸುತ್ತಾರೆ. ಕೆಲವು ಚಿತ್ರಗಳಲ್ಲಿ ರೇಪ್ ದೃಶ್ಯೀಕರಿಸಿರುವ ಕ್ರಮ ಪ್ರೇಕ್ಷಕನಿಗೆ ತಾನೇ ರೇಪ್ ಮಾಡುತ್ತಿರುವಂಥ ಸಂತೋಷ ನೀಡುವಂತಿರುತ್ತದೆ. ಕೆಥಾರ್ಸಿಸ್‌ನಿಂದ ಸ್ಯಾಡಿಸ್ಟ್ ಮನೋಭಾವದವರೆಗೆ ಕನ್ನಡ ಚಿತ್ರರಂಗದಲ್ಲಿ 'ಖಳ'ರು ಬೆಳೆದುಬಂದಿದ್ದಾರೆ ಎಂದು ವಿಶ್ಲೇಷಿಸಬಹುದು.

ಪ್ರಾಚೀನ ಸಂಸ್ಕೃತ ನಾಟಕಗಳಲ್ಲೂ ವಿದೂಷಕನ ಪಾತ್ರಕ್ಕೆ ಮಹತ್ವವಿದೆ. ನಾಯಕ-ನಾಯಕಿಯರು ಗಾಂಭೀರ್ಯದ ಮೇಲುಸ್ತರದಲ್ಲಿ ಸಂಚರಿಸುತ್ತಿದ್ದರೆ, ವಿದೂಷಕರು ಬದುಕಿನ ಸಣ್ಣಪುಟ್ಟ ಸಂಭ್ರಮಗಳನ್ನು ಗ್ರಹಿಸುವ ಮೂಲಕ ಮೂಲಭೂತ ಪ್ರವೃತ್ತಿಗಳನ್ನು ಪ್ರದರ್ಶಿಸುವ ಮೂಲಕ ಸಹಜ ಪಾತ್ರಗಳಂತೆ ಕಾಣಿಸಿಕೊಳ್ಳುತ್ತಿದ್ದರು. ನಮ್ಮ ಆರಂಭಿಕ ಚಿತ್ರಗಳ ಹಾಸ್ಯನಟರು ಈ ವಿದೂಷಕರ ಕಲ್ಪನೆಯಿಂದ ಪ್ರೇರಣೆ ಪಡೆದಿದ್ದರು. ಅಂಗಚೇಷ್ಟೆ, ಕೀರಲು ಧ್ವನಿ, ಅಸಹಜ ಚಲನೆ ಇವೆಲ್ಲ ಈ ಪಾತ್ರಗಳ ಅಭಿನಯದಲ್ಲಿರುತ್ತಿದ್ದವು. ನಾಯಕನ ತಮ್ಮ, ಗೆಳೆಯ ಹೀಗೆ ಹತ್ತಿರ ವಲಯದ ಪಾತ್ರವಾಗಿರುತ್ತಿದ್ದ ಈ ಪಾತ್ರಗಳು ನಾಯಕನ ಗಾಂಭೀರ್ಯದ ಬಲೂನನ್ನು ಅಲ್ಲಲ್ಲಿ ಸೂಜಿಯಿಂದ ಚುಚ್ಚುತ್ತಾ ಒಟ್ಟು ಚಿತ್ರಕ್ರಮಕ್ಕೆ ಚಲನೆ ತಂದುಕೊಡುತ್ತಿದ್ದವು. ಇಂಥ ಹಾಸ್ಯಪಾತ್ರಗಳನ್ನು ನಿರ್ವಹಿಸುವವರು ತಮ್ಮದೇ ಶೈಲಿಯನ್ನು ಮೆರೆದರೇ ಹೊರತು ಬಹಳಕಾಲ ಹಾಸ್ಯನಟನ ಒಟ್ಟು ಪರಿಕಲ್ಪನೆಯಲ್ಲಿ ಅಂಥ ಬದಲಾವಣೆಯನ್ನೇನೂ ಮಾಡಲಿಲ್ಲ. ೭೦ರ ದಶಕದಲ್ಲಿ ಪಾತ್ರಕ್ಕೆ ಸಹಜ ವರ್ತನೆಯಾಗಿದ್ದು ಪ್ರೇಕ್ಷಕರಿಗೆ ಹಾಸ್ಯವಾಗಿ ಕಾಣುವ ಬ್ಲಾಕ್ ಕಾಮಿಡಿ ಶೈಲಿ ಕಾಣಿಸಿಕೊಂಡಿತು. ಒಂದೇ ರೀತಿ ವ್ಯಕ್ತಿಗಳಿರುವುದರಿಂದಲೋ ಅಥವಾ ಪಾತ್ರದ ಪೆದ್ದುತನದಿಂದಲೋ ಇಂಥ ಹಾಸ್ಯ ಸ್ಫೋಟಿಸುತ್ತಿತ್ತು.

ಹಾಸ್ಯಕ್ಕೆ ಅಶ್ಲೀಲ ಕಾಲಿಟ್ಟಿದ್ದು ೭೦ರ ದಶಕದ ಅಂತ್ಯದಲ್ಲಿ, ಅದಕ್ಕಿಂತ ಮೊದಲು ಅಶ್ಲೀಲ ಇರಲಿಲ್ಲ ಎಂದಲ್ಲ. ಇಲ್ಲಿಂದ ಮುಂದೆ ಅಶ್ಲೀಲವೇ ಹಾಸ್ಯವಾಯಿತು. ದ್ವಂದ್ವಾರ್ಥ ಸಂಭಾಷಣೆ, ಕೈ ಕಾಲು ಚಲನೆಯಲ್ಲಿ ಅಸಭ್ಯ ಅರ್ಥ ಹೊರಡಿಸುವುದು, ಕಿಚಾಯಿಸುವ ಧ್ವನಿಯಲ್ಲಿ ಸೆಕ್ಸ್ ಧ್ವನಿಸುವುದು ಇವೆಲ್ಲ ಸಾಮಾನ್ಯವಾಯಿತು. ಇಂದು ಹಾಸ್ಯಚಿತ್ರ ಎಂದರೆ ದ್ವಂದ್ವಾರ್ಥ ಚಿತ್ರ ಎಂದೇ ಅರ್ಥ ಬಂದುಬಿಟ್ಟಿದೆ. ಮುಂದೆ ಪಾತ್ರಗಳ role modelಗಳನ್ನು ಚರ್ಚಿಸುವಾಗ ಈ ಕುರಿತು ವಿವರವಾಗಿ ಚರ್ಚಿಸುವುದಾಗುತ್ತದೆ.

ನಾವು ಚರ್ಚಿಸಬೇಕಾದ ಕೊನೆಯ ಮಾದರಿ ಪೋಷಕನಟ-ನಟಿಯರದು. ಅಣ್ಣ, ತಮ್ಮ, ಗೆಳೆಯ, ತಂದೆ, ಚಿಕ್ಕಪ್ಪ ಹೀಗೆ ಅಸಂಖ್ಯ ಪಾತ್ರಗಳು ಆರಂಭದಿಂದಲೂ ನಿರ್ಲಕ್ಷ್ಯಕ್ಕೆ ಒಳಗಾದವೇ. ಆರಂಭದಲ್ಲಿ ಅಸೂಯೆ, ಹತಾಶೆ, ಆಸೆ, ಕ್ರೋಧ ಇಂಥ ಕೆಲವು ಮೂಲಭೂತ ಪ್ರವೃತ್ತಿಗಳನ್ನು (basic instinct) ಹೇಳುತ್ತಿದ್ದ ಈ ಪಾತ್ರಗಳು ಚಿತ್ರಕ್ಕೆ ಸಹಜತೆ ತಂದುಕೊಡುತ್ತಿದ್ದವು. ಕಾಲಕಳೆದಂತೆ ಪ್ರಧಾನ ಪಾತ್ರಗಳು ಸಂಕೀರ್ಣವಾಗಿ ಈ ಪಾತ್ರಗಳು ಪೇಲವವಾದವು. ಇದಕ್ಕೆ ನಮ್ಮ ಚಿತ್ರೀಕರಣ ಕ್ರಮವೂ ಮುಖ್ಯಕಾರಣ. ಪ್ರಧಾನ ಪಾತ್ರಗಳಿಗ ಮಾತ್ರವೆ ಪೂರ್ತಿಕಥೆ, ಪಾತ್ರವೈಶಿಷ್ಟ್ಯ ಇವನ್ನೆಲ್ಲ ವಿವರಿಸುವ ಕ್ರಮ ನಮ್ಮಲ್ಲಿದೆ. ಪೋಷಕ ಪಾತ್ರಗಳು ಶಾಟ್‌ಗೆ ಅಭಿನಯಿಸುವ ಪಾತ್ರಗಳು. ಆ ಶಾಟ್‌ನಲ್ಲಿ ನಿರ್ದೇಶಕ ಹೇಳಿದ ಕೆಲಸ ಮಾಡಿದರೆ ಇವರ ಕೆಲಸ ಮುಗಿಯಿತು. ಆ ಶಾಟ್‌ಗೆ ಚಿತ್ರದಲ್ಲಿ ಏನು ಸ್ಥಾನ ಎಂಬುದೇ ಈ ಪಾತ್ರ ನಿರ್ವಹಿಸುವವರಿಗೆ ಗೊತ್ತಿರುವುದಿಲ್ಲ. ಈ ಪರಿಸ್ಥಿತಿಯಲ್ಲಿ ಅವು ಸತ್ವಹೀನ ಪುನರಾವರ್ತಿತ ನಕಲು ಪಾತ್ರಗಳಾಗಿ ಬೆಳೆದುಬಂದಿವೆ. ಈಚೆಗೆ ದೃಶ್ಯ ಶ್ರೀಮಂತಿಕೆಯ ಕಲ್ಪನೆ ಹೆಚ್ಚುತ್ತಿರುವುದರಿಂದ ನಾಯಕ ನಾಯಕಿ ಜೊತೆಯಾಗಿರಲು ಹೇರಳ ಸಹಕಲಾವಿದರು ಬೇಕು. ಅವರೆಲ್ಲ ಅಭಿನಯದಲ್ಲಿ ಪರಿಣತರಾದವರಲ್ಲ. ನಾಯಕನ ನೆರಳಾಗಿ ಇರಬೇಕಾದವರು. ಹೀಗಾಗಿ ಪೋಷಕ ಪಾತ್ರಗಳಿಗೆ ನಮ್ಮಲ್ಲಿ ಪ್ರತ್ಯೇಕ ಅಭಿನಯಶೈಲಿ ರೂಪುಗೊಳ್ಳಲೇ ಇಲ್ಲ. ಕೆ.ಎಸ್.ಅಶ್ವತ್, ಲೋಕನಾಥ್, ಸಂಪತ್ ಅಂತಹವರು ಸ್ವಂತ ಶೈಲಿ ಬೆಳೆಸಿಕೊಂಡರೇ ಹೊರತು ಪೋಷಕನಟನ ಶೈಲಿಯನ್ನಲ್ಲ. ಇದಕ್ಕೆ ಮುಖ್ಯ ಕಾರಣವೆಂದರೆ ನಮ್ಮ ಚಲನಚಿತ್ರಗಳಲ್ಲಿ ಪೋಷಕ ನಟರ ಪಾತ್ರಗಳು

(ಚಿತ್ರ ೮) ಶಾಂತ ಹುಬ್ಳೀಕರ್, ಗುಬ್ಬಿ ವೀರಣ್ಣ

ಸರಳ ರೇಖಾತ್ಮಕವಾಗಿ ಕಾಣಿಸಿಕೊಂಡು ಮಾಯವಾಗುತ್ತವೆ. ಅವುಗಳಿಗೆ ಭಾವ ಹರಳು ಗಟ್ಟುವಷ್ಟು ಸಮಯವೂ ಸಿಕ್ಕುವುದಿಲ್ಲ. ಕ್ಯಾಮೆರಾ, ಲೈಟಿಂಗ್ ಈ ಯಾವ ತಾಂತ್ರಿಕ ಪರಿಕರವೂ ಅವರತ್ತ ತಿರುಗುವುದಿಲ್ಲ. ಹೀಗಾಗಿ ಆ ಪಾತ್ರಗಳಲ್ಲಿ ಬೆಳವಣಿಗೆ ಹೇಗೆ ತಾನೆ ಮೂಡಿಬರಲು ಸಾಧ್ಯ ?

ರಂಗಭೂಮಿ ಪ್ರಭಾವ

ಕನ್ನಡ ಚಿತ್ರರಂಗದ ಪರಂಪರೆಯಲ್ಲಿ ಬಂದ ಕೆಲವು ಮುಖ್ಯ ಕಲಾವಿದರು ಅಭಿನಯವನ್ನು ಅಭಿವ್ಯಕ್ತಿಯ ಸಾಧನವಾಗಿ ಬಳಸಿಕೊಂಡ ಕ್ರಮ ಮತ್ತು ಅದರ ಬೆಳವಣಿಗೆಯ ಬಗ್ಗೆ ಚರ್ಚೆಗೆ, ಈವರೆಗೆ ನಡೆಸಿದ 'ಚರ್ಚೆ' ಭೂಮಿಕೆಯಾಗಿ ಕೆಲಸ ಮಾಡುತ್ತದೆ. ಕನ್ನಡ ಚಿತ್ರರಂಗದ ಮೂಕಿಚಿತ್ರ ಮತ್ತು ಆರಂಭಿಕ ಚಿತ್ರಗಳಲ್ಲಿ ಗುಬ್ಬಿ ವೀರಣ್ಣ, ಸುಬ್ಬಯ್ಯನಾಯ್ಡು, ಆರ್.ನಾಗೇಂದ್ರರಾವ್, ಹೆಚ್.ಎಲ್.ಎನ್.ಸಿಂಹ, ಬಿ.ಆರ್. ಪಂತುಲು ಮೊದಲಾದವರು ನಾಯಕ ಪಾತ್ರಗಳನ್ನು ನಿರ್ವಹಿಸಿದ ಪ್ರಮುಖರು. ಅವತ್ತಿನ ನಾಯಕರುಗಳಲ್ಲಿ ಸಣ್ಣ ಪುಟ್ಟ ಆಂಗಿಕ ವೈಶಿಷ್ಟ್ಯಗಳನ್ನು ಹೊರತುಪಡಿಸಿ ಅಭಿನಯಶೈಲಿಯಲ್ಲಿ ಬಹುತೇಕ ಸಮಾನ ಗುಣಗಳನ್ನು ಕಾಣಬಹುದು. ನಾಟಕದ ಪ್ರಭಾವದಿಂದ ತುಂಬಿದ ಸಂಭಾಷಣೆ ಶೈಲಿ, ಪ್ರತಿಮಾತಿಗೂ ಬೆನ್ನೆಲುಬಾದ ಆಂಗಿಕ ಅಭಿನಯ, ನಡಿಗೆ ಮೂಲಕ ಪಾತ್ರದ ವಯಸ್ಸು ವೈಶಿಷ್ಟ್ಯಗಳನ್ನು ಹೇಳುವ ಪ್ರಯತ್ನ ಇವನ್ನು ಇವರೆಲ್ಲರಲ್ಲೂ ಕಾಣಬಹುದು. ಆರ್.ನಾಗೇಂದ್ರರಾವ್, ಬಿ.ಆರ್.ಪಂತುಲು ಇಬ್ಬರನ್ನು ಪ್ರಾತಿನಿಧಿಕವಾಗಿ ಬಳಸಿಕೊಂಡು ಅಂದಿನ ಅಭಿನಯಶೈಲಿಯ ಎರಡು ಮಾದರಿಗಳನ್ನು ಗಮನಿಸಬಹುದು.

ಆರ್.ನಾಗೇಂದ್ರರಾಯರು ಪ್ರಯೋಗಶೀಲ, ಸಾಧಕ ಎಂದೇ ಕರೆಸಿಕೊಂಡವರು. ಕನ್ನಡದ ಮೊದಲ ಚಿತ್ರ 'ಸತಿ ಸುಲೋಚನಾ'ದಿಂದ ಒಂದಲ್ಲ ಒಂದು ರೀತಿಯಲ್ಲಿ ಚಿತ್ರರಂಗದ ಬೆಳವಣಿಗೆಗೆ ಶ್ರಮಿಸಿದವರು. ಇಲ್ಲಿನ ವ್ಯಾಪ್ತಿ ದೃಷ್ಟಿಯಿಂದ ಅವರ ಅಭಿನಯಶೈಲಿಯನ್ನು ಮಾತ್ರ ಚರ್ಚಿಸಲಾಗಿದೆ. ನಾಗೇಂದ್ರರಾವ್ ಅವರದು ನಿರುದ್ವಿಗ್ನ ಗತಿಶೀಲ ಶೈಲಿ. ತಾನು ನಿರ್ವಹಿಸುವ ಪಾತ್ರಗಳ ಭಾವನೆಯನ್ನು ಮೆಲುಸ್ತರದಲ್ಲಿ ಹುದುಗಿಸಿ ಆ ಭಾವನೆಗಳಿಂದ ಅಭಿನಯವನ್ನು ಪ್ರತ್ಯೇಕಿಸಿ ನಟಿಸುತ್ತಿದ್ದರು. ಈ ಕಾರಣದಿಂದಲೇ ಆ ಪಾತ್ರದ ಸಂಭಾಷಣೆ ಮುಗಿಯುತ್ತಿದ್ದಂತೆ, ಅದರಿಂದ ಹೊರಬಂದು ಅವರು ನಾಗೇಂದ್ರರಾಯರು ಎಂಬ ಅರಿವೂ ಪ್ರೇಕ್ಷಕನಲ್ಲಿ ಜಾಗೃತವಾಗಿರುತ್ತಿತ್ತು. ತಮ್ಮ ಕೊನೆಯ ಚಿತ್ರಗಳಲ್ಲಿ ಬಹಳ ಮುಖ್ಯವಾಗಿ 'ಹಣ್ಣೆಲೆ ಚಿಗುರಿದಾಗ'ದಂಥ ಚಿತ್ರಗಳಲ್ಲಿ ನಾಗೇಂದ್ರರಾಯರು ತಮ್ಮ ಅಭಿನಯಶೈಲಿಗೆ ಸಿನಿಮ್ಯಾಟಿಕ್ (cenimatic) ಕೋನ ಅಳವಡಿಸಿಕೊಳ್ಳಲು ಪ್ರಯತ್ನಿಸಿದರು. ಇದರಿಂದ ಅವರ ಅಭಿನಯದಲ್ಲಿ ಪ್ರಜ್ಞಾಪೂರ್ವಕ ಸಂಜ್ಞೆಗಳು ಹೊರಡುವುದನ್ನು ಗಮನಿಸಬಹುದು. ಚಿತ್ರರಂಗದಲ್ಲಿ ಅಭಿನಯ ಪರಿಕಲ್ಪನೆ ಹಲವು ಮಾರ್ಪಾಟು ಹೊಂದಿದೆ.ಅಭಿಪ್ರಾಯಭೇದಗಳು ಇರಬಹುದಾದರೂ ಕನ್ನಡ ಚಿತ್ರರಂಗ ಬಾಲ್ಯಾವಸ್ಥೆಯಲ್ಲಿದ್ದಾಗ ತಮ್ಮ ಪ್ರಯೋಗಶೀಲತೆಯಿಂದ ನಾಗೇಂದ್ರರಾವ್ ರೂಪಿಸಿದ ಮಾದರಿಗಳೇ ಮುಂದೆ ಗಟ್ಟಿ ಮಾದರಿಗಳಿಗೆ ದಾರಿಯಾಯಿತು.

(ಚಿತ್ರ ೯-೧೧) ನಾಗೇಂದ್ರರಾವ್

ಇದೇ ಕಾಲದ ಇನ್ನೊಂದು ಮಾದರಿಯನ್ನು ನಾವು ಬಿ.ಆರ್.ಪಂತುಲು ಅವರಲ್ಲಿ ಕಾಣುತ್ತೇವೆ. ದಕ್ಷಿಣ ಭಾರತದ ಚಿತ್ರರಂಗದಲ್ಲೇ ತಮ್ಮದೊಂದು ವಿಶಿಷ್ಟ ಸ್ಥಾನ ಉಳಿಸಿಕೊಂಡಿರುವ ಪಂತುಲು ವಿಭಿನ್ನ ಜೀವನಧರ್ಮಗಳಿಗೆ ಪ್ರಾತಿನಿಧಿಕವಾಗಬಲ್ಲ ಒಂದು ರೀತಿಯ ಪಾತ್ರವನ್ನು ತಮ್ಮ ಅಭಿನಯ ಶೈಲಿಯಿಂದ ನಿರ್ಮಿಸುತ್ತಾ ಬಂದರು. ಅದು ಒಂದು ಬಗೆಯ ಸೂಪರ್ ಮೆಲೋಡ್ರಾಮ ಶೈಲಿ. ನಾಗೇಂದ್ರರಾವ್ ಭಾವನೆಗಳನ್ನು ಮೆಲುಸ್ತರದಲ್ಲಿ ಹುದುಗಿಸಲು ಪ್ರಯತ್ನಿಸಿದರೆ, ಪಂತುಲು ಅದನ್ನು ಪಾತ್ರದ ಅಗತ್ಯಕ್ಕಿಂತ ಹೆಚ್ಚು ಆಳವಾಗಿ ಚಿಮ್ಮಿಸಲು ಪ್ರಯತ್ನಿಸಿದರು. ಇದಕ್ಕೆ 'ಸ್ಕೂಲ್ ಮಾಸ್ಟರ್' ಚಿತ್ರದಲ್ಲಿ ಒಡೆದ ಕನ್ನಡಕದ ಗಾಜಿನ ತುಂಡಿನಲ್ಲಿ ಒಂದೊಂದೇ ಅಕ್ಷರವನ್ನು ಓದುವಾಗಿನ ಅಭಿನಯವನ್ನು ಗಮನಿಸಬಹುದು. ಈ ದೃಶ್ಯದ ಸಂಭಾಷಣೆಯಲ್ಲಿ ಅತಿ ಭಾವುಕತೆ ಇಲ್ಲದಿದ್ದರೂ ಪಂತುಲು ಕಾತರ, ದುಃಖ, ಸಂತೋಷ ಇಂಥ ಅನೇಕ ಭಾವನೆಗಳನ್ನು ತಮ್ಮ ಅಭಿನಯದ ಮೂಲಕ ಸಮ್ಮಿಳನಗೊಳಿಸಿ ಇಡೀ ದೃಶ್ಯಕ್ಕೆ ಸೂಪರ್ ಮೆಲೊಡ್ರಾಮಾ ಆಯಾಮ ಕೊಟ್ಟಿದ್ದರು. 'ಪೋಸ್ಟ್‌ಮಾಸ್ಟರ್' ಮೊದಲಾದ ಚಿತ್ರಗಳಲ್ಲೂ ಇಂಥ ಉದಾಹರಣೆಗಳಿವೆ. ಹಾಗೇ 'ಶ್ರೀಕೃಷ್ಣದೇವರಾಯ'ದಲ್ಲಿ ತಿಮ್ಮರಸನ ಕಣ್ಣು ಕೀಳಿಸುವ ದೃಶ್ಯದಲ್ಲಿ ಅಬ್ಬರದ, ಭಾವುಕತೆಯ ಅಭಿನಯವನ್ನು ಅವರು ತಮ್ಮ ನಡಿಗೆಯ ಶೈಲಿಯಲ್ಲಿ ಮೂಡಿಸಿದ್ದನ್ನು ಗಮನಿಸಬಹುದು. ಈ ಎರಡೂ ಚಿತ್ರದ ನಡುವೆ ಇರುವ ಕಾಲದ ಅಂತರವನ್ನು ಗಮನಿಸಿದಾಗ, ಪಂತುಲು ತಮ್ಮ ಅಭಿನಯಶೈಲಿಯನ್ನು ನಾಗೇಂದ್ರರಾವ್ ಅವರಂತೆ ಮಾರ್ಪಡಿಸಿಕೊಳ್ಳದೇ ಇರುವುದನ್ನು ಗಮನಿಸಬಹುದು. ಪಂತುಲು, ನಾಗೇಂದ್ರರಾವ್ ಆರಂಭಿಕ ಅಭಿನಯದ ಎರಡು ಮುಖ್ಯ ಮಾದರಿಗಳನ್ನು ಪ್ರತಿನಿಧಿಸುತ್ತಾರೆ ಎಂಬುದಕ್ಕೆ ಇದು ಉದಾಹರಣೆ. ಅಂದಿನ ಹೆಚ್ಚಿನ ನಾಯಕನಟರ ಅಭಿನಯದ ಶೈಲಿ ಈ ಎರಡೂ ಮಾದರಿಯ ಸುತ್ತಮುತ್ತಲೇ ಇರುವುದನ್ನು ಗಮನಿಸಬಹುದು. ಇಂದಿನ ಯಾವ ತಾಂತ್ರಿಕ ಸೌಲಭ್ಯವೂ ಇಲ್ಲದೆ ಪಾತ್ರ ನಿರ್ವಹಿಸುವವರೇ ಹಾಡನ್ನು ಹೇಳಬೇಕಾದ, ಡಬ್ಬಿಂಗ್, ಲೈಟಿಂಗ್‌ನಲ್ಲಿ ಹೆಚ್ಚಿನ ಆಧುನಿಕ ಆಯಾಮಗಳಿಲ್ಲದ ಅಂದಿನ ಕಾಲದ ನಾಯಕನಟರ ಅಭಿನಯವು ಸ್ವಂತಿಕೆಯನ್ನು ಬಹುವಾಗಿ ಅಪೇಕ್ಷಿಸುತ್ತಿತ್ತು. ಈ ಹಿನ್ನೆಲೆಯಲ್ಲಿ ಮೇಲೆ ಹೇಳಿದ ಎರಡೂ ಅಭಿನಯದ ಮಾದರಿಗಳನ್ನು ಗಮನಿಸಬಹುದು.

ಸುಬ್ಬಯ್ಯನಾಯ್ಡು ವೃತ್ತಿರಂಗಭೂಮಿಯ ಎಲ್ಲಾ ಲಕ್ಷಣಗಳನ್ನು ಅದರ ಉತ್ತಮ ಅರ್ಥದಲ್ಲಿ ಹೊಂದಿದ್ದ ಕಲಾವಿದ. ಆರಂಭಿಕ ಚಿತ್ರರಂಗದ ಕಲಾವಿದರಲ್ಲಿನ ಮಿತಿಯನ್ನೇ ಇವರ ನಟನೆಯ ಶೈಲಿಯಲ್ಲಿ ಗುರುತಿಸಬಹುದು.

ನಾಟಕರಂಗದ ಹಿನ್ನಲೆಯಿಂದ ಬಂದ ಹೊನ್ನಪ್ಪಭಾಗವತರ್ ಅವರಲ್ಲಿ ನಾಟಕರಂಗದ ಎಲ್ಲಾ ಲಕ್ಷಣಗಳನ್ನು ಕಾಣಬಹುದು. ತಮಿಳು ಚಿತ್ರರಂಗದ ಪ್ರಭಾವವೂ ಸೇರಿರುವುದರಿಂದ ಸಂಭಾಷಣೆ ಹೇಳುವಲ್ಲಿ ಅಬ್ಬರದ ಶೈಲಿ, ಅತಿಯೆನ್ನಿಸುವ ಆಂಗಿಕಭಾವ ಪ್ರಕಟಣೆ ಅವರಲ್ಲಿ ಕಾಣಬಹುದು. ತ್ಯಾಗ ಪರಾಕ್ರಮಗಳ ದೃಶ್ಯದಲ್ಲಿ ಮೈತುಂಬಿ ಬರುವ ಹೊನ್ನಪ್ಪ ಭಾಗವತರ್ ಸೂಕ್ಷ್ಮ ಸನ್ನಿವೇಶಗಳಲ್ಲಿ ಸಪ್ಪೆ ಎನಿಸುತ್ತಾರೆ. ಸ್ವತಃ ಗಾಯಕರಾದ ಅವರು ಗೀತೆಗಳಿಗೆ ಅಭಿನಯಿಸುವಾಗ ಕೃತ್ರಿಮ ಎನಿಸುವ ದಾರಿ ತುಳಿದಿದ್ದು ಆಶ್ಚರ್ಯ. 'ಮಹಾಕವಿ ಕಾಳಿದಾಸ', 'ಜಗಜ್ಯೋತಿ ಬಸವೇಶ್ವರ', 'ಭಕ್ತ ಕುಂಬಾರ'. ಚಿತ್ರಗಳಲ್ಲಿ ಕೆಲವು ದೃಶ್ಯಗಳಲ್ಲಿ ಅವರ ಅಭಿನಯ ಪಡೆಯಬಹುದಾಗಿದ್ದ ಹಲವು ಸೂಕ್ಷ್ಮಗಳು ಹೊಳಹು ಹಾಕಿವೆ.

ನಾಂದಿ (ಚಿತ್ರ ೧೨-೧೮)

ಅಂದಿನ ಚಿತ್ರರಂಗದ ಇತಿಮಿತಿ ಗಮನದಲ್ಲಿರಿಸಿ ಯೋಚಿಸಿದಾಗ ಕೆಂಪರಾಜ ಅರಸ್ ಬಹಳ ಸಂವೇದನಾಶೀಲ ಅಭಿನಯ ನೀಡಿದ ಕಲಾವಿದ ಎಂದು ಗುರುತಿಸಬಹುದು. ಸನ್ನಿವೇಶದ ಅಗತ್ಯಕ್ಕೆ ತಕ್ಕಂತೆ ಭಾವತೀವ್ರತೆ ಹಿಡಿದಿಡಬಲ್ಲ ಚಾಕಚಕ್ಯತೆಯನ್ನು 'ಭಕ್ತ ರಾಮದಾಸ್'ನಲ್ಲಿ ಗುರುತಿಸಬಹುದು. ಹಾಗೆಯೇ 'ನಳದಮಯಂತಿ' ಚಿತ್ರದಲ್ಲಿ ಸಂಭಾಷಣೆ ಹೇಳುವಾಗ ತೋರಿಸಿರುವ ಸೂಕ್ಷ್ಮಪ್ರಜ್ಞೆ, ನಟನ ಎರಡೂ ಆವಸೆಗಳಿಗೆ ತಕ್ಕಂತೆ ಅಭಿನಯದ ಶೈಲಿ ಮಾರ್ಪಡಿಸಿಕೊಂಡ ಕ್ರಮ ಮುಖ್ಯ.

ರಾಜಕುಮಾರ್ - ಪರಿವರ್ತನ ಶೀಲ

ಕನ್ನಡದಲ್ಲಿ ನಾಯಕನಟರ ಅಭಿನಯಶೈಲಿ ಚರ್ಚಿಸುವಾಗ ರಾಜಕುಮಾರ್ ಕುರಿತ ಚರ್ಚೆಯನ್ನು ಪ್ರತ್ಯೇಕವಾಗಿಡಲು ಮುಖ್ಯ ಕಾರಣವೆಂದರೆ ಅವರ ಅಭಿನಯ ನಾಲ್ಕೈದು ದಶಕಗಳ ದೀರ್ಘ ವ್ಯಾಪ್ತಿ ಆವರಿಸಿರುವುದು. ರಾಜಕುಮಾರ್ ಅವರನ್ನು ಚಲನಚಿತ್ರದ ವ್ಯಾಪ್ತಿಗಿಂತ ಅವರನ್ನು ಸಾಂಸ್ಕೃತಿಕ ಸಂಕೇತ (Cultural Icon) ಎನ್ನುವಂತೆ ನಮ್ಮ ಸಮಾಜ ಗ್ರಹಿಸಿದೆ. ಸದ್ಯದ ಮಿತಿಯಲ್ಲಿ ರಾಜಕುಮಾರ್ ಅಭಿನಯದ ಶೈಲಿ, ಕನ್ನಡ ಚಿತ್ರರಂಗದ ಅಭಿನಯದ ಪರಿಕಲ್ಪನೆ ಮೇಲೆ ಅದು ಮಾಡಿರುವ ಪರಿಣಾಮ ಇದನ್ನು ಪ್ರಧಾನವಾಗಿ ಚರ್ಚಿಸಲಾಗಿದೆ. ಉಳಿದ ಅಂಶಗಳನ್ನು ಈ ಚರ್ಚೆಗೆ ಆನುಷಂಗಿಕವಾಗಿ ಬಳಸಿಕೊಳ್ಳಲಾಗಿದೆ.

ರಾಜಕುಮಾರ್ ಅಭಿನಯಶೈಲಿ ನಾಲ್ಕೈದು ದಶಕಗಳ ದೀರ್ಘ ವ್ಯಾಪ್ತಿಯಲ್ಲಿ ಒಂದೇ ಮಾದರಿಯಲ್ಲಿ ಇರಲಿಲ್ಲ. ಕಾಲಕ್ಕೆ ತಕ್ಕಂತೆ ಅಭಿನಯಶೈಲಿ ಬದಲಾಯಿಸಿಕೊಳ್ಳುತ್ತ ಬಂದಿದ್ದರಿಂದಲೇ ಅವರು ಯಶಸ್ವಿ ನಟರಾಗಲು ಸಾಧ್ಯವಾಯಿತು. ತಾಂತ್ರಿಕತೆ ಬೆಳೆಯದೇ ಇದ್ದ ಕಾಲದಿಂದ, ತಾಂತ್ರಿಕತೆಯ ಪಾರಮ್ಯದ ಕಾಲದವರೆಗೆ ಅವರು ಅನೇಕ ವೈವಿಧ್ಯಮಯ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ. ರಾಜಕುಮಾರ್ ಅಭಿನಯದ ಶೈಲಿಯ ವಿವಿಧ ಘಟ್ಟಗಳನ್ನು ಚರ್ಚಿಸುವ ಮೊದಲು ಕೆಲವು ಪ್ರಮುಖ ಅಂಶಗಳನ್ನು ಗುರುತಿಸಿಕೊಳ್ಳಬಹುದು. ಸಂಭಾಷಣೆ ಹೇಳುವ ಶೈಲಿಯಲ್ಲಿ ಕನ್ನಡ ಭಾಷೆಯ ಎಲ್ಲಾ ಸಾಧ್ಯತೆಯನ್ನು ಉದಾತ್ತ-ಅನುದಾತ್ತಗಳೊಂದಿಗೆ ಸಮರ್ಥವಾಗಿ ಬಳಸಿಕೊಳ್ಳುವುದು, ತಾವು ನಿರ್ವಹಿಸುವ ಪಾತ್ರಕ್ಕೆ ತಕ್ಕಂಥ ಸಿನಿಮ್ಯಾಟಿಕ್ ಅಥೆಂಟಿಸಿಟಿ ಸಾಧಿಸಿಕೊಳ್ಳುವ ಮೂಲಕ ಪ್ರಭಾವಿ ಸಿನಿಮ್ಯಾಟಿಕ್ ಅಥೆಂಟಿಸಿಟಿ ಸಾಧಿಸುವುದು. ಇದು ಸ್ಥಾಯಿಯಾಗಿ ಉಳಿದುಕೊಂಡ ಅವರ ಅಭಿನಯದ ಲಕ್ಷಣಗಳು.

ರಾಜಕುಮಾರ್ ಅಭಿನಯದಲ್ಲಿ ಮೂರು ಮುಖ್ಯ ಘಟ್ಟಗಳನ್ನು ಗುರುತಿಸಿಕೊಳ್ಳಬಹುದು. ಮೊದಲ ಘಟ್ಟ ಅವರು ಚಿತ್ರರಂಗ ಪ್ರವೇಶಿಸಿ ಪ್ರಮುಖ ನಟರಾಗಿ ರೂಪುಗೊಳ್ಳುವವರೆಗಿನದು. ಎರಡನೆಯದು, ವೈವಿಧ್ಯಮಯ ಪಾತ್ರಗಳನ್ನು ನಿರ್ವಹಿಸುವ ಮೂಲಕ ತಮ್ಮ ಅಭಿನಯಶೈಲಿಯನ್ನು ಹಿಗ್ಗಿಸಿಕೊಂಡ ಘಟ್ಟ. ಕೊನೆಯ ಘಟ್ಟ ರಾಜಕುಮಾರ್ ಕುಟುಂಬವೇ ಚಿತ್ರ ನಿರ್ಮಾಣಕ್ಕೆ ತೊಡಗಿ ಅವರಿಗೆ ದೊರೆತ ಪಾತ್ರಗಳಲ್ಲಿ ವೈವಿಧ್ಯದ ಕೊರತೆ ಕಂಡು ಅವರು ತಮ್ಮ ಶಕ್ತಿಯ ಪಡಿನೆಳಲಾಗಿದ್ದು.

ಮೊದಲ ಘಟ್ಟದ ರಾಜಕುಮಾರ್ ಚಿತ್ರಗಳಲ್ಲಿ ಹೆಚ್ಚಿನವು ಭಕ್ತಿಪ್ರಧಾನ ಪಾತ್ರಗಳದ್ದಾಗಿದ್ದವು. ಮೊದಲ ಚಿತ್ರ 'ಬೇಡರ ಕಣ್ಣಪ್ಪ'ದಲ್ಲೇ ರಾಜಕುಮಾರ್ ಅಂದಿನ ನಟರಿಗಿಂತ ಭಿನ್ನಮಾರ್ಗವನ್ನು ಅಭಿನಯಶೈಲಿಯಲ್ಲಿ ಬೆಳೆಸಿಕೊಂಡರು. ಸಾಮಾನ್ಯವಾಗಿ ಅಂದು ರಂಗಭೂಮಿಯಿಂದ ಬಂದ ಕಲಾವಿದರು ಮಾಡುವಂತೆ ಭಾವತೀವ್ರತೆಗೆ ಆಂಗಿಕ ಅಭಿನಯದ ಬದಲು ವಾಚಿಕ ಅಭಿನಯವನ್ನು ಬಳಸಿಕೊಂಡರು. ಉಕ್ಕುವ ಭಾವಗಳ ತೀವ್ರತೆಯನ್ನು ಸಂಭಾಷಣೆಯಲ್ಲೇ ತೋರಿಸಿ, ತಮ್ಮ ಕಣ್ಣುಗಳನ್ನು ಈ ತೀವ್ರತೆಗೆ ಸಮನ್ವಯಗೊಳಿಸಿದರು. ಆದರೆ ಇದೇ ಹೊತ್ತಿನಲ್ಲಿ ಪಾತ್ರ ಅಸಹಜ ಅನ್ನಿಸದಂತೆ ಸಂಯಮ ಕಾಪಾಡಿಕೊಂಡರು. ಇದಕ್ಕೆ 'ಭಕ್ತ ವಿಜಯ' ಚಿತ್ರದಲ್ಲಿ ಪರಮಾತ್ಮ ತನ್ನ ಪತ್ನಿಗೆ ಕಾಣಿಸಿಕೊಂಡು, ತನಗಿನ್ನೂ ಸಾಕ್ಷಾತ್ಕಾರವಾಗದ ಬಗ್ಗೆ ನಾಯಕ ಕೊರಗುವ ಸನ್ನಿವೇಶ ನೋಡಬಹುದು. ಇಲ್ಲಿ ಹತಾಶೆ, ಕೊರಗು ಇಂಥ ಸಂಚಾರಿ ಭಾವಗಳನ್ನು ರಾಜಕುಮಾರ್ ತಮ್ಮ ಕಣ್ಣಲ್ಲೇ ಸಮರ್ಥವಾಗಿ ವ್ಯಕ್ತಪಡಿಸಿದ್ದಾರೆ. 'ಓಹಿಲೇಶ್ವರ' ಚಿತ್ರದಲ್ಲಿ ಮಗುವಿನ ಸಾವಿಗಾಗಿ ಕೊರಗುವ ದೃಶ್ಯದಲ್ಲೂ ಈ ಸಂಯಮ ಎದ್ದು ಕಾಣುತ್ತದೆ. ರಾಜಕುಮಾರ್‌ರ ಈ ಹಂತದ ಅಭಿನಯಶೈಲಿ ಅರ್ಥ ಮಾಡಿಕೊಳ್ಳಲು 'ಶ್ರೀಕೃಷ್ಣ ಗಾರುಡಿ' ಚಿತ್ರ ಗಮನಿಸಬಹುದು. ಇಲ್ಲಿ ರಾಜಕುಮಾರ್ ನಾಯಕರಲ್ಲ, ಸ್ವಶಕ್ತಿಯ ಬಗ್ಗೆ ಅಹಂಕಾರಪಡುವ ಪ್ರತಿನಾಯಕನ ಛಾಯೆ ಇರುವ ಅರ್ಜುನನ ಪಾತ್ರ. ಶ್ರೀಕೃಷ್ಣನ ಸತ್ವಪರೀಕ್ಷೆಗೆ ಒಳಗಾಗುವ ಈ ಪಾತ್ರ

ವಿಕಾಸ

ರಾಜಕುಮಾರ್ ಪ್ರತಿಭೆಗೆ ಸವಾಲಾಗುವಂಥವು. ಇವನ್ನು ಸಹಜವಾಗಿ ನಿರ್ವಹಿಸಿರುವ ರಾಜಕುಮಾರ್ ಸ್ವ ಪ್ರತಿಷ್ಠೆ, ಆಕ್ರೋಶಗಳನ್ನೆಲ್ಲ ಕಣ್ಣ ಲ್ಲೇ ವ್ಯಕ್ತಪಡಿಸಿದ್ದಾರೆ. ಈ ಕಾಲದಲ್ಲಿ _ಅಭಿನಯಶೈಲಿಯಲ್ಲಿ ಪ್ರತಿನಾಯಕ ಅಹಂಕಾರ ಪಡುವಾಗ ಅಬ್ಬರದ ಸಂಭಾಷಣೆ ಶೈಲಿಯನ್ನು ಕಾಣುತ್ತೇವೆ. ರಾಜಕುಮಾರ್ ಇಂಥಲ್ಲಿ ಸಂಯಮದ ಅಭಿನಯ ನೀಡಿ ಹೊಸತನ ತೋರಿದರು. ಹೀಗೆ ಆರಂಭಿಕ ಘಟ್ಟದಲ್ಲೇ ರಾಜಕುಮಾರ್ ತಮ್ಮ ಅಭಿನಯಶೈಲಿಯಲ್ಲಿ ಪ್ರಯೋಗಶೀಲತೆಯನ್ನು ಅಳವಡಿಸಿಕೊಳ್ಳುವ ಮೂಲಕ ಹೊಸತನ ಕಂಡು ಕೊಂಡಿದ್ದರು.



(ಚಿತ್ರ ೧೯-೨೩)

ಎರಡನೇ ಘಟ್ಟ, ರಾಜಕುಮಾರ್ ಕನ್ನಡ ಚಿತ್ರರಂಗದ ಪ್ರಮುಖ ಕಲಾವಿದರಾಗಿ ಬೆಳೆದ ಘಟ್ಟ. ಈ ಹಂತದಲ್ಲಿ ಕನ್ನಡ ಚಿತ್ರರಂಗ ಮದರಾಸಿನಲ್ಲಿ ನೆಲೆ ನಿಂತಿತ್ತು. ಚಿತ್ರನಿರ್ಮಾಣದ ಸಲಕರಣೆಗೆ ಮದರಾಸಿನ ಅವಲಂಬನೆ ತೀರಾ ಅಗತ್ಯವಾಗಿತ್ತು. ಅದು ತಮಿಳು ಚಿತ್ರರಂಗದ ವೈಭವದ ಯುಗ. ಎಂ.ಜಿ.ಆರ್., ಶಿವಾಜಿ ಗಣೇಶನ್ ಸ್ಟಾರ್‌ಗಳಾಗಿ ಮೆರೆಯುತ್ತಿದ್ದರು. ಇವರ ಚಿತ್ರಗಳು ಹಣದ ಹೊಳೆಯನ್ನೇ ಹರಿಸಬಲ್ಲವು ಎಂಬುದು ಖಚಿತವಾದಾಗ ತಮಿಳು ಚಿತ್ರರಂಗದ ತಾಂತ್ರಿಕ ವೈಭವ ಹಿಗ್ಗಿತು. ಇದರ ಮುಂದೆ ಕನ್ನಡ ಚಿತ್ರಗಳು ಮಂಕಾಗತೊಡಗಿದವು. ಬಂಡವಾಳ ಹೂಡಿ ಎಚ್ಚರಿಕೆಯಿಂದ ಹೆಜ್ಜೆ ಇಡಬೇಕಾದ ಸ್ಥಿತಿ ಕನ್ನಡ ನಿರ್ಮಾಪಕನದು. ಇವರ ಉಪಯೋಗ ಪಡೆದು ಇತರ ಭಾಷೆಯ ಚಿತ್ರಗಳು ಕನ್ನಡಕ್ಕೆ ಡಬ್ ಆಗತೊಡಗಿದವು. ಕನ್ನಡದ ಪ್ರಮುಖ ನಟರೆಲ್ಲ ಮದರಾಸಿಗೆ ವಲಸೆ ಹೊರಟರು. ಇಂಥ ಸತ್ವ ಪರೀಕ್ಷೆಯ ಸಂದರ್ಭದಲ್ಲಿ ರಾಜಕುಮಾರ್ ತಮಿಳು ಚಿತ್ರರಂಗಕ್ಕೆ ವಲಸೆ ಹೋಗದೆ ಕನ್ನಡದಲ್ಲಿ ಮಾತ್ರವೇ ನಟಿಸುವ ನಿರ್ಧಾರ ತಳೆದರು. ಇದರಿಂದ ಸಹಜವಾಗಿಯೇ ರಾಜಕುಮಾರ್ ಕನ್ನಡಿಗರ ಸ್ವಾಭಿಮಾನದ ಪ್ರತೀಕವಾದರು. ಪರಿವರ್ತನೆಗಳಿಗೆ ತಮ್ಮನ್ನು ಒಪ್ಪಿಸಿಕೊಳ್ಳಬಲ್ಲ ಅವರಿಗೆ ವಿಭಿನ್ನ ಪಾತ್ರಗಳ ಸರಮಾಲೆಯೇ ಸಿಕ್ಕಿತು. ಅರುವತ್ತರ ದಶಕದ ಬಹುತೇಕ ಚಿತ್ರಗಳಲ್ಲಿ ರಾಜ್ ನಟಿಸಿದ್ದಾರೆ. ಕನ್ನಡ ಚಿತ್ರರಂಗವನ್ನು ಸಂದಿಗ್ಧತೆಯಿಂದ ದೂರ ಮಾಡಿ, ಇತರರ ನಡುವೆ ತಲೆ ಎತ್ತಿ ನಿಲ್ಲುವಂತೆ ಮಾಡಿದ ಕೀರ್ತಿ ಕೂಡ ಅವರಿಗೇ ಸೇರಬೇಕು.

ಈ ಹಿನ್ನೆಲೆಯಲ್ಲಿ ಅವರ ಅಭಿನಯದ ಎರಡನೇ ಘಟ್ಟ ನೋಡಬಹುದು. ಈ ಹೊತ್ತಿಗಾಗಲೇ ಕನ್ನಡ ಚಿತ್ರರಂಗದಲ್ಲಿ ಕಾದಂಬರಿ ಆಧಾರಿತ ಚಿತ್ರಗಳು ಆರಂಭವಾಗಿದ್ದವು. ಸಾಮಾಜಿಕ ವಸ್ತುಗಳು ತೆರೆಗೆ ಬರಲು ಆರಂಭಿಸಿದವು. ಭಕ್ತಿಪ್ರಧಾನ ಪಾತ್ರಗಳಿಂದ ಮಧ್ಯಮವರ್ಗ ಮತ್ತು ಕೆಳಮಧ್ಯಮ ವರ್ಗದ ಪಾತ್ರಗಳನ್ನು ಈ ಹೊತ್ತಿನಲ್ಲಿ ರಾಜ್ ಹೆಚ್ಚಾಗಿ ಅಭಿನಯಿಸಲು ಆರಂಭಿಸಿದರು. ಈ ಪಾತ್ರಗಳಿಗೆ ಹೊಂದುವಂತೆ ತಮ್ಮ ಅಭಿನಯಶೈಲಿಯನ್ನು ಬದಲಾಯಿಸಿಕೊಂಡರು. ಸಂಭಾಷಣೆ ಹೇಳುವ ಶೈಲಿಯಲ್ಲಿ ನಾಟಕೀಯತೆ ಬದಲು ಸಹಜತೆ ಅಳವಡಿಸಿಕೊಂಡರು. ಪಾತ್ರದ ಚಲನೆಯಲ್ಲಿ ಕೇವಲ ಬಾಹ್ಯಶೈಲಿ ಬದಲು ಪಾತ್ರದ ವಯೋಮಾನಕ್ಕೆ ತಕ್ಕಂಥ ಲಯ ಅಳವಡಿಸಿಕೊಂಡರು. ಇದೆಲ್ಲಕ್ಕಿಂತ ಮುಖ್ಯವಾಗಿ ಕ್ಯಾಮರಾದ ಶಕ್ತಿಯನ್ನು ತನ್ನ ಅಭಿನಯದ ಅಂಗವಾಗಿಸಿಕೊಳ್ಳುವ ಜಾಣ್ಮೆ ತೋರಿದರು. 'ನಂದಾದೀಪ', 'ಗಾಂಧಿನಗರ', 'ಕನ್ಯಾರತ್ನ', 'ಹಣ್ಣೆಲೆ ಚಿಗುರಿದಾಗ' ಇಂಥ ಚಿತ್ರಗಳನ್ನು ಉದಾಹರಣೆಯಾಗಿ ನೋಡಬಹುದು. ಕಣ್ಣಲ್ಲಿ ಯಾವುದೇ ಭಾವವನ್ನೂ ತೋರ್ಪಡಿಸದೆ ಕಣ್ಣುಗಳನ್ನೇ ಪ್ರಧಾನವಾಗಿಟ್ಟುಕೊಂಡ ಸರ್ವಜ್ಞಮೂರ್ತಿ ಪಾತ್ರದ ವೈಶಿಷ್ಟ್ಯ ಆ ಚಿತ್ರ ನೋಡಿದವರು ಬಹಳವಾಗಿ ಹೇಳುತ್ತಾರೆ. ಈ ನಿರ್ಭಾವುಕತೆಯನ್ನು ತರುವುದೆಷ್ಟು ಕಷ್ಟ ಎಂಬುದು ಅಭಿನಯ ಗೊತ್ತಿದ್ದವರಿಗೆ ಮಾತ್ರ ಗ್ರಹಿಸಲು ಸಾಧ್ಯ. 'ಬಾಳು ಬೆಳಗಿತು' ಚಿತ್ರದಲ್ಲಿ ಎರಡು ವ್ಯಕ್ತಿತ್ವವನ್ನು ಅಭಿನಯಿಸಬೇಕಾದ ಸವಾಲಿನ ಪಾತ್ರ. ಒಂದು ಕೆಳವರ್ಗದ ಆಳು, ಇನ್ನೊಂದು ತನ್ನ ಒಡೆಯನ ಅನುಪಸ್ಥಿತಿಯಲ್ಲಿ ಸಿರಿವಂತಿಕೆಯ ಗತ್ತು ಪ್ರದರ್ಶಿಸಬೇಕಾದ ವ್ಯಕ್ತಿತ್ವ. ಈ ಎರಡೂ ವ್ಯಕ್ತಿತ್ವಕ್ಕೆ ಹೊಂದುವ ಸಂಭಾಷಣೆ ಶೈಲಿ ಮತ್ತು ನಡಿಗೆಯ ವಿಧಾನವನ್ನು ಅಳವಡಿಸಿಕೊಂಡು ಮೇಲ್ನೋಟಕ್ಕೇ ಅವೆರಡೂ ಪಾತ್ರದ ಭಿನ್ನತೆಯನ್ನು ತೋರಿಸಿದ್ದರು. 'ಭಲೇ ಜೋಡಿ' ಚಿತ್ರದಲ್ಲಿ ಹೀಗೆ complimentaryಯಾಗಬಲ್ಲ ಎರಡು ಪಾತ್ರಗಳು. ಒಂದು ನಾಯಕನ ಸಕಲ ಗುಣವನ್ನು ಒಳಗೊಂಡ ಧೀರ ಪಾತ್ರವಾದರೆ, ಇನ್ನೊಂದು ಪುಕ್ಕಲು ಸ್ವಭಾವದ ಸಾತ್ವಿಕ ಪಾತ್ರ. ಈ ಚಿತ್ರದಲ್ಲಿ ರಾಜ್ ಇವೆರಡು ಪಾತ್ರಗಳ ಪ್ರತ್ಯೇಕತೆಯನ್ನು ಅರಿತು ಅಭಿನಯಿಸಿದ್ದಾರೆ. ಕೆಳ ವರ್ಗದ ಹಳ್ಳಿಗನ ಪಾತ್ರ, ಮಧ್ಯಮ ವರ್ಗದ ಗೃಹಸ್ಥನ ಪಾತ್ರ, ಮೇಲು ವರ್ಗದ ಸಿರಿವಂತನ ಪಾತ್ರ ಈ ಮೂರು ಸ್ತರದ ಪಾತ್ರಗಳ gesture ಅನ್ನು ಗ್ರಹಿಸಿ, ಅದನ್ನು ಪಾತ್ರದ behaviour pattern ಮತ್ತು ಸಂಬಂಧಪಟ್ಟ ಚಿತ್ರಕ್ಕೆ ಹೊಂದಿಕೊಂಡ ಪಾತ್ರದ biographyಗೆ ತಕ್ಕಂತೆ ಅಭಿನಯಿಸುವ ಮೂಲಕ ಸಿನಿಮ್ಯಾಟಿಕ್ ಅಂಥೆಂಟಿಸಿಟಿ ಹುಡುಕಿಕೊಂಡದ್ದು ರಾಜ್ ಅವರ ಈ ಘಟ್ಟದ ಅಭಿನಯಶೈಲಿಯ ಮುಖ್ಯಾಂಶ. ಇದೇ ಸಂದರ್ಭದಲ್ಲಿ ಅತಿ ಭಾವುಕ ಪಾತ್ರ, ಮಾರ್ಪಾಟುಗೊಂಡ ಚಾರಿತ್ರಿಕ ಪಾತ್ರ - ಹೀಗೆ ಭಿನ್ನಪಾತ್ರಗಳನ್ನು ರಾಜಕುಮಾರ್ ನಿರ್ವಹಿಸಿದರು. ಉದಾಹರಣೆಯಾಗಿ ಇನ್ನೂ ಕೆಲವು ಚಿತ್ರಗಳಲ್ಲಿಯ ಅವರ ಅಭಿನಯವನ್ನು ಚರ್ಚಿಸಬಹುದು.

'ಸಾಕ್ಷಾತ್ಕಾರ','ಸಂಧ್ಯಾರಾಗ' ಇವೆರಡರಲ್ಲೂ ರಾಜ್ ಅವರದ್ದು ಅತಿಭಾವುಕತೆಯ ಪಾತ್ರ. ಆಗಿನ್ನೂ ಸೂಪರ್ ಮೆಲೋಡ್ರಾಮ ತನ್ನ ನಾಟಕೀಯತೆಯ ಆವರಣ ಕಟ್ಟಬೇಕೆಂದು cinimatic angle ಕಂಡುಕೊಳ್ಳುತ್ತಿತ್ತು. ಅಬ್ಬರದ ಭಾವುಕ ವಾತಾವರಣದ 'ದೇವದಾಸ್' ಮಾದರಿ ಚಿತ್ರಗಳು ಭಾರತೀಯ ಚಿತ್ರರಂಗದಲ್ಲಿ ಆಗಲೇ ಕಂಡುಬರುತ್ತಿದ್ದವು. ರಾಜ್ ಈ ಚಿತ್ರಗಳ ಪ್ರಭಾವಕ್ಕೆ ಒಳಗಾಗದೆ ಭಾವುಕತೆ ವ್ಯಕ್ತಪಡಿಸಲು ತಮ್ಮದೇ ಶೈಲಿ ಕಂಡುಕೊಂಡರು. ಭಾವುಕತೆಯನ್ನು ಸಂಭಾಷಣೆ

ಹೇಳುವಲ್ಲಿ ಅತಿಯಾಗಿ ಬೆರೆಸದೆ, ಕಣ್ಣನ್ನು ಭಾವಪರವಶವಾಗುವಂತೆ ಅಭಿನಯದ ಶೈಲಿಯನ್ನು ಮಾರ್ಪಡಿಸಿಕೊಂಡರು. ಅತಿ ಭಾವುಕ ದೃಶ್ಯಗಳಲ್ಲಿ ಕೂಡ ಸಂಯಮದ ಅಭಿನಯವನ್ನು ಕಥಾನಕದ ಹದ ತಪ್ಪದ ಹಾಗೆ ಬಳಸಿದ್ದು ಅವರ ವೈಶಿಷ್ಟ್ಯ. 'ಹಣ್ಣೆಲೆ ಚಿಗುರಿದಾಗ' ಚಿತ್ರದ ನಿಜವಾದ ನಾಯಕ ಆರ್.ನಾಗೇಂದ್ರರಾಯರು. ಅವರ ಅಭಿನಯಶೈಲಿಯ ಎದುರಿಗೆ ತನ್ನತನ ಉಳಿಸಿಕೊಂಡು ನಿಲ್ಲುವ ಸವಾಲೂ ರಾಜಕುಮಾರ್ ಎದುರಿಗೆ ಇತ್ತು. ಅದನ್ನು ಸೂಕ್ಷ್ಮವಾಗಿ ನಿವಾರಿಸಿಕೊಂಡಿದ್ದನ್ನು ಗಮನಿಸಬಹುದು.

ಮೂರನೇ ಘಟ್ಟದ ಅಭಿನಯಕ್ರಮ ಚರ್ಚಿಸುವ ಮೊದಲು ಕೆಲವು ಸಾಂಸ್ಕೃತಿಕ ಬೆಳವಣಿಗೆಯನ್ನು ಗಮನಿಸಬೇಕು. 'ಮೇಯರ್ ಮುತ್ತಣ್ಣ', 'ದೂರದ ಬೆಟ್ಟ'ದಂಥ ಚಿತ್ರಗಳು ಜಿಲ್ಲಾಕೇಂದ್ರಗಳಲ್ಲಿ ಯಶಸ್ವಿಯಾಗಿ ನಡೆಯುವ ಮೂಲಕ ರಾಜಕುಮಾರ್ ರಾಜ್ಯವ್ಯಾಪೀ ನಟರಾಗಿ ಬೆಳೆದಿದ್ದರು. ಈ ಚಿತ್ರಗಳ ಯಶಸ್ಸಿನಲ್ಲಿ ರಾಜ್ ಪಾತ್ರ ಮುಖ್ಯವಾದದ್ದಾಗಿತ್ತು. ಈ ನಡುವೆ ಡಬ್ಬಿಂಗ್ ವಿರೋಧಿ ಅಲೆಯೊಂದು ಕನ್ನಡದಲ್ಲಿ ಎದ್ದು ಯಶಸ್ವಿಯಾಯಿತು. ತಮಿಳು ಅನ್ನೈ, ಕನ್ನಡ ಭುವನೇಶ್ವರಿ ತೆರೆಗಷ್ಟೇ

ವಿಭಿನ್ನ ಪಾತ್ರ; ಭಾವ ವೈವಿಧ್ಯ (ಚಿತ್ರ ೨೪-೩೩)

ಸೀಮಿತವಾಗಿರಲಿಲ್ಲ. ಒಳಪುಟದ ಸಣ್ಣ ಕಾಲಂ ಸುದ್ದಿಯಾಗಿ ಪ್ರಕಟವಾಗುತ್ತಿದ್ದ ಕನ್ನಡ ಚಳವಳಿ ಸುದ್ದಿಗಳು ಪ್ರಮುಖವಾಗಿ ಮುಖಪುಟಕ್ಕೆ ವರ್ಗಾವಣೆಯಾದವು. ಹೀಗೆ ಕನ್ನಡ ಚಳವಳಿ ಬೆಳೆಯುತ್ತಾ ಹೋದಂತೆ ಕನ್ನಡದ ಸ್ವಾಭಿಮಾನ ರಾಜಕುಮಾರ್ ಒಂದೇ ಆಗುತ್ತ ಹೋಯಿತು. ಇಷ್ಟು ಹೊತ್ತಿಗೆ ಚಿತ್ರರಂಗಕ್ಕೆ ಗ್ಲಾಮರ್ ಬಂದಿದರಿಂದ ರಾಜಕುಮಾರ್ ಇಮೇಜ್ ಮತ್ತು ಕನ್ನಡತನ ಸಮ್ಮಿಳಿತಗೊಂಡು ಮುಂದುವರಯಿತು. ಎಂ.ಜಿ.ರಾಮಚಂದ್ರನ್ ಮತ್ತು ಎನ್.ಟಿ.ರಾಮರಾವ್ ಅವರಂತೆ ರಾಜಕುಮಾರ್ ಅವರನ್ನು ಸೂಪರ್‌ಸ್ಟಾರ್ ಆಗಿ ನೋಡುವ, ಬೆಳೆಸುವ ಮನೋಭಾವ ಸಾಂಸ್ಕೃತಿಕವಾಗಿ ಮೊಳಕೆಯೊಡೆಯಿತು.

ಬಾಂಡ್ ಚಿತ್ರಗಳಲ್ಲಿ ರಾಜಕುಮಾರ್ ನಟಿಸಲು ಆರಂಭಿಸಿದರಿಂದ ಅವರಿಗಾಗಲೇ ಸೂಪರ್‌ಮ್ಯಾನ್ ಆಯಾಮ ಸೃಷ್ಟಿಯಾಗಲು ಆರಂಭವಾಗಿತ್ತು. ಇದಕ್ಕೆ ಪೂರಕವಾಗಿ ಪರಿವರ್ತನೆಯ ಹರಿಕಾರನಾಗುವ ಪಾತ್ರಗಳೂ ಸಿಕ್ಕಿದವು. ಅಂತಿಮವಾಗಿ 'ಬಂಗಾರದ ಮನುಷ್ಯ', 'ಕಸ್ತೂರಿ ನಿವಾಸ'ಗಳ ಯಶಸ್ಸು ಕೊಡುಗೈದಾನಿಯ ಇಮೇಜ್ ಸೇರಿಸಿದವು. ಜನಸಮುದಾಯದ ಮನದಲ್ಲಿದ್ದ ಪರಮಸಾತ್ವಿಕ ಪುರುಷೋತ್ತಮನ ಕಲ್ಪನೆಗೆ ರಾಜಕುಮಾರ್ ಅಕ್ಷರಶಃ ಹೊಂದಿಕೊಂಡುಬಿಟ್ಟರು. ಚಿತ್ರಗಳಲ್ಲಿ ಕೂಡ ರಾಜಕುಮಾರ್ ಕೆಟ್ಟ ಕೆಲಸಗಳ ಬಗ್ಗೆ ಯೋಚಿಸುವುದನ್ನು ಸಹಿಸದ ಉಗ್ರ ಅಭಿಮಾನಿ ವರ್ಗವೊಂದು ಸೃಷ್ಟಿಯಾಯಿತು. ತಾವೇ ಸ್ವತಃ ಹಾಡಲು ಆರಂಭಿಸಿದ ಮೇಲೆ ರಾಜಕುಮಾರ್ ಜನಸಾಮಾನ್ಯರ ರಕ್ಷಣೆಗೆ ಬಂದ ಅವತಾರವಾಗಿಬಿಟ್ಟರು.

'ಶಂಕರ್ ಗುರು' ಯಶಸ್ಸಿನನಂತರ ರಾಜಕುಮಾರ್ ಬೇರೆ ಬ್ಯಾನರ್‌ಗಳಲ್ಲಿ ನಟಿಸುವುದನ್ನು ಕಡಿಮೆ ಮಾಡಿದರು. ಅವರ ಬ್ಯಾನರ್ ಮೂಲಕವೇ ಚಿತ್ರಗಳು ತಯಾರಾದವು. ರಾಜಕುಮಾರ್ ಇಮೇಜ್‌ಗೆ ತಕ್ಕಂತೆ ಸೃಷ್ಟಿಯಾಗಿದ್ದ ಕಥೆಗಳು, ಕಪ್ಪು ಬಿಳುಪಿನ (ಕೆಟ್ಟದು-ಒಳ್ಳೆಯದು) ತೆಳು ಕಥಾವಸ್ತುಗಳು ಆನಂತರದ ಚಿತ್ರಗಳಲ್ಲಿ ರಾರಾಜಿಸಿದವು. 'ದಾರಿ ತಪ್ಪಿದ ಮಗ' ಚಿತ್ರದಲ್ಲಿ ರಾಜಕುಮಾರ್ ವಹಿಸಿದ ನೇತ್ಯಾತ್ಮಕ ಪಾತ್ರವನ್ನು (negative role) ಜನ ಒಪ್ಪದಾದಾಗ, ದ್ವಿಪಾತ್ರ ವಹಿಸಿದ ಸಂದರ್ಭದಲ್ಲಿ ಎರಡು ಪಾತ್ರಗಳೂ ಸಾತ್ವಿಕವಾಗಬೇಕಾದ ಅನಿವಾರ್ಯತೆ ಒದಗಿತು. ಹೀಗೆ ತಮ್ಮ ಪ್ರತಿಭೆಯ ಉತ್ತುಂಗದಲ್ಲಿ ಸವಾಲುಗಳಿಲ್ಲದ, ಸರಳ-ಸೌಮ್ಯ ಪಾತ್ರಗಳನ್ನು ನಿರ್ವಹಿಸಬೇಕಾದ ಅನಿವಾರ್ಯತೆಗೆ ರಾಜಕುಮಾರ್ ಸಿಲುಕಿದರು. 'ಶಂಕರ್ ಗುರು' ಚಿತ್ರದ "ನೀನು ನಿಜವಾದ ಹೆಣ್ಣೇ ಅಲ್ಲವೆ? ನಿನ್ನ ಮನದಲ್ಲಿ ಆಸೆ ಇಲ್ಲವೆ..." ಅಂಥ ಹಾಡಿನ ಸಾಲುಗಳು, 'ಅಪೂರ್ವ ಸಂಗಮ'ದಲ್ಲಿ "ಪ್ರತಿ ರಾತ್ರಿಯಲಿ ಬಳಿ ಸೇರುತಲಿ..." ಎಂಬ ಹಾಡಿನ ಸಾಲು, 'ಬಹದ್ದೂರ್ ಗಂಡು' ಚಿತ್ರದಲ್ಲಿ ಈಜು ಕೊಳಕ್ಕೆ ಧುಮುಕುವ ದೃಶ್ಯ, 'ರಾಜ ನನ್ನ ರಾಜ' ಚಿತ್ರದಲ್ಲಿ ನೀರಿನಲ್ಲಿ ತೊಯ್ಯುತ್ತ "ತನುವು.. ಮನವು.. ಇಂದು ನಿಂದಾಗಿದೆ..." ಎಂದು ಹಾಡುವ ದೃಶ್ಯ, 'ಸಮಯದ ಗೊಂಬೆ' ಚಿತ್ರದಲ್ಲಿ ನಾಯಕಿಯನ್ನು ಕಾಪಾಡುವ ಮುನ್ನ ನಡೆಯುವ expose ದೃಶ್ಯಗಳಲ್ಲಿ ರಾಜಕುಮಾರ್ ಅವರಂಥ ನಟ ಭಾಗಿಯಾಗಿದ್ದಾರೆ ಎನ್ನುವುದೇ ಇವತ್ತಿನ ಸಂದರ್ಭಕ್ಕೆ ವಿಸ್ಮಯ. 'ವಸಂತಗೀತ', 'ಶ್ರುತಿ ಸೇರಿದಾಗ', 'ಸಮಯದ ಗೊಂಬೆ'ಯಂಥ ಕೃತಕ ಪಾತ್ರಗಳಲ್ಲಿ ರಾಜ್ ಅವರನ್ನು ನೋಡುವುದೇ ಒಲ್ಲದ ಸಂಗತಿ.

ಇಷ್ಟೆಲ್ಲ ಇಮೇಜ್ ಮಿತಿಗೆ ಸಿಲುಕಿದರೂ ಈ ಹಂತದ ಅಭಿನಯಶೈಲಿಯಲ್ಲಿ ರಾಜಕುಮಾರ್ ಹೊಂದಾಣಿಕೆ ಮಾಡಿಕೊಳ್ಳಲಿಲ್ಲ ಎಂಬುದು ಮುಖ್ಯವಾಗಿ ಗಮನಿಸಬೇಕಾದ ಅಂಶ. ಕನ್ನಡ ಮಿಶ್ರಿತ ಇಂಗ್ಲಿಷ್ ಬಳಸಿದರು. ಇಂಗ್ಲಿಷ್ ಸಂಭಾಷಣೆ ನಿರ್ವಹಿಸಬೇಕಾದ ಸಂದರ್ಭದಲ್ಲಿ ಅವನ್ನು ಸಹಜವಾಗಿ ನಿರ್ವಹಿಸಿದ್ದನ್ನು ನೋಡಬಹುದು. ಫೈಟಿಂಗ್, ಚೇಸಿಂಗ್ ಇಂಥ ದೃಶ್ಯಗಳಲ್ಲಿ ನಡಿಗೆಯ ಗತಿಯನ್ನು ಕೃತ್ರಿಮ ಅನ್ನಿಸದಂತೆ ರಾಜ್ ನಿರೂಪಿಸಿದ್ದಾರೆ. ಪ್ರಣಯ ಸನ್ನಿವೇಶಗಳಲ್ಲಿ

ಅತಿಯಾಗದಂತೆ ಭಾವಗಳು ಶೃಂಗಾರ ರಸದ ಅಂಚಿನಲ್ಲೇ ಸಂಚರಿಸುವಂತೆ ನೋಡಿಕೊಂಡಿದ್ದಾರೆ. ಈ ಘಟ್ಟದಲ್ಲಿ ಅವರಿಗೆ ಸವಾಲಾಗುವಂಥ ಪಾತ್ರಗಳು ಸಿಕ್ಕಿದ್ದು ಕಡಿಮೆ. ಅಂಥವುಗಳಲ್ಲಿ 'ರಾಜಾ ನನ್ನ ರಾಜಾ'ದ ನೇತ್ಯಾತ್ಮಕ (negative) ಮಾದರಿಯಲ್ಲಿ ಆರಂಭವಾಗಿ ಸಾತ್ವಿಕತೆಯ ಕಡೆಗೆ ನಡೆಯುವ ಪಾತ್ರ ಕೂಡ ಒಂದು. ಆರಂಭದಲ್ಲಿ ನಾಯಕಿಯನ್ನು ಬೆಂಬತ್ತಿ ಕಾಡುವ ದೃಶ್ಯಗಳಲ್ಲಿ ರಾಜಕುಮಾರ್ ನಿಜಕ್ಕೂ ಪ್ರಭಾವಿಯಾಗಿ ಕಾಣಿಸಿಕೊಳ್ಳುತ್ತಾರೆ. 'ದಾರಿ ತಪ್ಪಿದ ಮಗ'ದ ಖಳನ ಛಾಯೆಯ ಪಾತ್ರದಲ್ಲಿ ಕಣ್ಣಲ್ಲೇ ನಯವಂಚಕತೆಯ ಸೂಕ್ಷ್ಮಗಳನ್ನು ತೋರಿದ್ದಾರೆ. ಸುಳ್ಳು ಆಮಿಷ ತೋರಿಸಿ ರಾಣಿಯ ಶೀಲ ಅಪಹರಿಸುವ ದೃಶ್ಯ ಇದಕ್ಕೊಂದು ಉತ್ತಮ ಉದಾಹರಣೆ. 'ಭಾಗ್ಯದ ಲಕ್ಷ್ಮೀ ಬಾರಮ್ಮ' ಚಿತ್ರದಲ್ಲಿ ಹಾಸ್ಯದ ಲೇಪವುಳ್ಳ ಸಂಭಾಷಣೆಗಿಂತ ತಮ್ಮ ಅಭಿನಯದಿಂದಲೇ ರಾಜಕುಮಾರ್ ಅನೇಕ ದೃಶ್ಯಗಳಲ್ಲಿ ನಗೆಯುಕ್ಕಿಸುತ್ತಾರ. 'ಭಕ್ತ ಪ್ರಹ್ಲಾದ' ಚಿತ್ರದ ಹಿರಣ್ಯಕಶಿಪು ಅವರು ನಿರ್ವಹಿಸಿದ ಇನ್ನೊಂದು ವಿಶಿಷ್ಟ ಪಾತ್ರ. ತನಗೆ ವಿರೋಧಿಯಾಗಿ ನಿಂತ ಮಗನನ್ನು ದಂಡಿಸುವ ಪಾತ್ರವಲ್ಲಿ ಸಂಭಾಷಣೆ ಹೇಳುವ ಶೈಲಿಯಲ್ಲೇ ಅವರು ಕಠೋರತೆ ಅಭಿವ್ಯಕ್ತ ಮಾಡುವ ಕ್ರಮ ಖಳನಾಯಕನ ಪಾತ್ರ ವಹಿಸುವವರಿಗೂ ಮಾದರಿಯಾಗುವಂತಿದೆ. ತಮ್ಮ ಇಮೇಜ್ ಆಚೆ ನಟಿಸಿದ ಪ್ರಯೋಗಶೀಲ ಪಾತ್ರ 'ಒಂದು ಮುತ್ತಿನ ಕತೆ'ಯದು. ಇದು ರಾಜ್ ಅಭಿನಯಶೈಲಿ ಏರಬಹುದಾಗಿದ್ದ ಹಲವು ಮೇರುಗಳ ಪ್ರತೀಕವಂತಿದೆ. ಹೀಗೆ ಅವರ ಅಭಿನಯದ ಹಲವು ಆಯಾಮಗಳನ್ನು ಸಾಲುಸಾಲಾಗಿ ಉದಾಹರಿಸಬಹುದಾಗಿದೆ. ತಾಂತ್ರಿಕತೆಯ ಸಮರ್ಥ ಬಳಕೆಯ ಚಿತ್ರಗಳಲ್ಲಿ ಪ್ರತಿಭಾವಂತ ಪ್ರಯೋಗಶೀಲ ನಿರ್ದೇಶಕರ ಚಿತ್ರಗಳಲ್ಲಿ ರಾಜಕುಮಾರ್ ನಟಿಸದೆ ಹೋದ್ದರಿಂದ ಅವರ ಅಭಿನಯ ಪಡೆಯಬಹುದಾದ ಹಲವಾರು ಆಯಾಮಗಳು ತಪ್ಪಿಹೋದವು. ಇದರಿಂದ ಕನ್ನಡ ಚಿತ್ರರಂಗಕ್ಕೆ ಆದ ನಷ್ಟ ದೊಡ್ಡ ಪ್ರಮಾಣದ್ದು.

(ಚಿತ್ರ ೩೪-೩೯) ಅಶ್ವತ್ಥ್

ಅಶ್ವತ್ಥ್ - ಸಹಜ ಅಭಿನಯ

ದೀರ್ಘ ಅಭಿನಯ ಬದುಕನ್ನು ಪಡೆದ ನಟರ ಪೈಕಿ ಕೆ.ಎಸ್.ಅಶ್ವತ್ಥ್ ಪ್ರಮುಖರು. ನಟರ ಕೆಲವು ಆಂಗಿಕ ಅಭಿನಯಗಳು ಅವರ ಅಂಕೆಯನ್ನು ಮೀರಿ ಅವರನ್ನು ಆವರಿಸಿಬಿಡುತ್ತವೆ. ಅಂಥ ಕೆಲವು ಗೆಶ್ಚರ್ಸ್ ರಾಜಕುಮಾರ್ ಅವರನ್ನೂ ಕಾಡುತ್ತದೆ. ಕೈಗಳ ಚಲನೆ, ಒಂದೆರಡು ಭಾವ ಪ್ರದರ್ಶನಕ್ಕೆ ಕಣ್ಣುಗಳನ್ನು ತಿರುಗಿಸುವ ಕ್ರಮ, ಥಟ್ಟನೆ ಹೊರಡುವ ಹೆ ಹೇ ಶಬ್ದ ಇತ್ಯಾದಿ ಅವರು ಯಾವ ಪಾತ್ರ ಮಾಡಿದರೂ ಬಿಡುವುದಿಲ್ಲ. ಪ್ರಾರಂಭದ ಕೆಲವು ಚಿತ್ರಗಳಲ್ಲಿ ಅಶ್ವತ್ಥ್ ಪ್ರಮುಖ ಪಾತ್ರದಲ್ಲಿದ್ದು, ರಾಜಕುಮಾರ್ ಎರಡನೆಯ ಪಾತ್ರದಲ್ಲಿದ್ದುದೂ ಉಂಟು. ಆದರೂ ಈ ದೀರ್ಘ ಅವಧಿಯಲ್ಲಿ ಅಶ್ವತ್ಥ್ ಪೋಷಕ ನಟನ ಪಾತ್ರ ವಹಿಸಿದ್ದೇ ಹೆಚ್ಚು. ಸಹಜ ಅಭಿನಯದ ಕೂಗು ಹುಟ್ಟುವ ಎಷ್ಟೋ ಮೊದಲೇ ಸಿನಿಮ್ಯಾಟಿಕ್ ರಿಯಲಿಸಂ ಅನ್ನು ತಮ್ಮ ಅಭಿನಯದ ಮೂಲಕ ಅಶ್ವತ್ಥ್ ಸಾಧಿಸಿಬಿಟ್ಟಿದ್ದರು. ಸ್ವನಿಯಂತ್ರಣ (self control) ಮತ್ತು ಭಾವುಕತೆಯನ್ನು ಸಮರ್ಥವಾಗಿ ಬಳಸಿಕೊಂಡು ತಮ್ಮ ಪಾತ್ರ ಮೆಲೊಡ್ರಾಮ ಆಗದೆ ಸಹಜವಾಗೇ ಬೆಳೆಯುವಂತೆ ನೋಡಿಕೊಂಡರು. 'ನಮ್ಮ ಮಕ್ಕಳು', 'ನಾಗರಹಾವು', 'ಭಾಗ್ಯವಂತ' ಮುಂತಾದ ಚಿತ್ರಗಳಲ್ಲಿ ಅವರ ಅಭಿನಯದ ಪ್ರಭಾವ ಮರೆಯುವಂಥದ್ದಲ್ಲ. ಆದರೆ ಅಶ್ವತ್ಥ್‌ಗೆ ದೊರೆತ ಪಾತ್ರಗಳು ಮತ್ತು ಅವನ್ನು ಅವರು ನಿರ್ವಹಿಸಿದ ಕ್ರಮ ಒಂದೇ ಮಾದರಿಯದಾಗಿತ್ತು. ಅವರ ಅಭಿನಯದಲ್ಲಿ ಬೆಳವಣಿಗೆ ಕಾಣುವುದಿಲ್ಲ, consistency ಕಾಣಿಸುತ್ತದೆ.

ರಾಜಕುಮಾರ್ ಸಮಕಾಲೀನರಾಗಿ, ಕೊಂಚ ಮುಂಚೆ ಕೂಡಾ ಬೆಳೆದುಬಂದವರು ಕಲ್ಯಾಣ್‌ಕುಮಾರ್, ಉದಯಕುಮಾರ್. ಕಲ್ಯಾಣ್‌ಕುಮಾರ್ 'ನಟಶೇಖರ' ಮೂಲಕ ಹೊಸ ಮಾದರಿ ನಟನೆಯನ್ನು ಕನ್ನಡ ಚಿತ್ರರಂಗಕ್ಕೆ ತಂದರು. 'ಬೆಟ್ಟದ ಕಳ್ಳ' ಚಿತ್ರದ ಅವರ ಅಭಿನಯ ಅದೇ ಚಿತ್ರದ ಹಿಂದಿ ತಮಿಳು ಅವತರಣಿಕೆಗಳಲ್ಲಿ ಅಭಿನಯಿಸಿದ ಖ್ಯಾತನಟರಿಗಿಂತ ಉತ್ತಮವಾಗಿತ್ತೆಂಬ ಅಭಿಪ್ರಾಯವಿದೆ. 'ಸುಬ್ಬಾಶಾಸ್ತ್ರಿ', 'ಅಮರ ಶಿಲ್ಪಿ ಜಕಣಾಚಾರಿ' ಚಿತ್ರಗಳಲ್ಲಿ ಭಾವಪೂರ್ಣತೆ, ಗಾಂಭೀರ್ಯದ ಜೊತೆಗೆ ಲಯವನ್ನು ತಮ್ಮ ಅಭಿನಯಶೈಲಿಯಲ್ಲಿ ರೂಢಿಸಿಕೊಂಡರು. ಕಲ್ಯಾಣ್‌ಕುಮಾರ್‌ಗೆ ಸಿಕ್ಕ ಸವಾಲಿನ ಪಾತ್ರ 'ಬೆಳ್ಳಿಮೋಡ' ಚಿತ್ರದ್ದು. ಆ ಚಿತ್ರದ ಮೊದಲ ಭಾಗದಲ್ಲಿ ಪ್ರೇಮಿಯಾಗಿ, ಎರಡನೇ ಭಾಗದಲ್ಲಿ ಆಸ್ತಿಗಾಗಿ ಆಸೆ ಪಡುವ ಸ್ವಾರ್ಥಿಯಾಗಿ ಪಾತ್ರ ನಿರ್ವಹಿಸಿದರು. ಕಲ್ಯಾಣ್ ಕುಮಾರ್ ಪ್ರೇಮಿಯ ಪಾತ್ರದಲ್ಲಿ ತೋರಿದ ಸಂಯಮವನ್ನೇ ಎರಡನೇ ಭಾಗದಲ್ಲಿ ಉಳಿಸಿಕೊಂಡಿರುವುದಲ್ಲದೆ, ಅಂತಸ್ತಿಗೆ ಆಸೆ ಪಡುವ ಮನೋಭಾವನೆಯನ್ನು ಮುಖಭಾವದಲ್ಲೇ ವ್ಯಕ್ತಪಡಿಸಿದ್ದಾರೆ. ನಾಯಕಿ ತನ್ನ ಪುಟ್ಟ ತಮ್ಮನನ್ನು ಪರಿಚಯಿಸಲು ಹೋದಾಗ ಸಿಡುಕುವ ಮಾದರಿ ಇದಕ್ಕೊಂದು ಉದಾಹರಣೆ. ಕಲ್ಯಾಣ್ ಅವರಿಗೆ ಜನಪ್ರಿಯತೆಯ ಇಮೇಜ್ ಇದ್ದಾಗಲೂ ಇಂಥ ಸಂಕೀರ್ಣ ವ್ಯಕ್ತಿತ್ವದ ಪಾತ್ರಗಳನ್ನು ಅಭಿನಯಿಸುವ ಸವಾಲು ಸಿಕ್ಕಿದ್ದರಿಂದ ಅವರ ಅಭಿನಯ ಮಾದರಿ, ಸಂಭಾಷಣೆಯ ಶೈಲಿ, ಮುಖಭಾವ ವ್ಯಕ್ತಪಡಿಸುವ ಕ್ರಮದಲ್ಲಿ ಹೊಸತನವನ್ನು ದುಡಿಸಿಕೊಂಡಿತು. ಈ ಹಂತದಲ್ಲೇ ಕಲ್ಯಾಣ್‌ಕುಮಾರ್ ಎಂಜಿಆರ್ ಅವರೊಂದಿಗೆ 'ಪಾಶಂ'ನಲ್ಲಿ ನಟಿಸಿದರು. ಅನಂತರ 'ನೆಂಜಿಲ್ ಒರು ಆಲಯಂ' ಯಶಸ್ಸು ಅವರಿಗೆ ತಮಿಳು ಚಿತ್ರರಂಗದ ಬಾಗಿಲನ್ನು ತೆರೆಯಿತು. ಎರಡು ದೋಣಿಯಲ್ಲಿ ಕಾಲಿಟ್ಟ ಕಲ್ಯಾಣ್ ಎಲ್ಲಿಯೂ ಸಲ್ಲದೆ ಹೋದರು. ಉತ್ಸಾಹದಿಂದ ಏನೋ ಹೇಳಿ, ವಿವಾದಕ್ಕೆ ಸಿಲುಕಿದರು. ಕನ್ನಡ ಪ್ರೇಕ್ಷಕನ ಆಗ್ರಹಕ್ಕೂ ಪಾತ್ರರಾದರು. ಅನಂತರ ಎಷ್ಟೋ ವರ್ಷಗಳ ನಂತರ 'ತಾಯಿಯ ನುಡಿ' ಮೂಲಕ ಮರು ರಂಗಪ್ರವೇಶ ಮಾಡಿದ ಕಲ್ಯಾಣ್‌ಕುಮಾರ್ ಅವರಿಗೆ ಸಿಕ್ಕಿದ್ದೆಲ್ಲ ಪೋಷಕ ಪಾತ್ರಗಳೇ. ಅದೂ ಸೂಪರ್‌ಮೆಲೊಡ್ರಾಮ ಮಾದರಿಯದು. ಇಲ್ಲಿ ಹಿಂದಿನ ಪ್ರಯೋಗಶೀಲತೆಯ ಭಾವನ್ನು ಕಳೆದುಕೊಂಡು ಸಲೀಸಾಗಿ ನಟಿಸಿದರು ಎಂಬುದು ಮುಖ್ಯ.

ನಾಯಕನಟ, ಖಳನಟ, ಪೋಷಕನಟ ಹೀಗೆ ವೈವಿಧ್ಯಮಯ ಪಾತ್ರಗಳನ್ನು ನಿರ್ವಹಿಸಿದ ಉದಯಕುಮಾರ್ ಪ್ರತಿಭಾವಂತ ನಟ. ಧ್ವನಿ ಬಳಕೆ ಮೂಲಕವೇ ಪಾತ್ರದ ವೈವಿಧ್ಯ ನಿರ್ವಹಿಸಿದ ಅವರ ತುಸು ಸ್ಥೂಲ ದೇಹ ಮಂದಗತಿಯ ಚಲನೆಗೆ ಕಾರಣವಾದರೂ ಪಾತ್ರದ ಗತಿಶೀಲತೆಗೆ ಭಂಗ ಬಾರದಂತೆ ಅಭಿನಯಶೈಲಿ ರೂಪಿಸಿಕೊಂಡರು. ಇದಕ್ಕೆ 'ಭಲೇ ಭಾಸ್ಕರ' ಚಿತ್ರವನ್ನು ಉದಾಹರಣೆಯಾಗಿ ನೀಡಬಹುದು. 'ಶ್ರೀ ರಾಮಾಂಜನೇಯ ಯುದ್ಧ' ಚಿತ್ರದ ಆಂಜನೇಯನ ಪಾತ್ರದಲ್ಲಿ ಉದಯಕುಮಾರ್ ನಟನೆಯ ಕೌಶಲ ಗಮನಿಸಬಹುದು. 'ಚಂದವಳ್ಳಿಯ ತೋಟ', 'ಮರ್ಯಾದೆ ಮಹಲ್' ಮೊದಲಾದವನ್ನೂ ಇಲ್ಲಿ ಉಲ್ಲೇಖಿಸಬಹುದು.

ಕಲ್ಯಾಣ ವೈಭವ (ಚಿತ್ರ ೪೦-೫೧)

ಜನಪ್ರಿಯತೆಯ ಸಂಕೋಲೆ

ಕನ್ನಡದ ಪ್ರಮುಖ ನಟರಲ್ಲೊಬ್ಬರಾದ ವಿಷ್ಣುವರ್ಧನ್ ವೈವಿಧ್ಯಮಯ ಪಾತ್ರಗಳ ಕೊರತೆಯಿಂದ ಪ್ರತಿಭಾವಂತ ನಟನಾ ಸಾಮರ್ಥ್ಯವನ್ನು ಒಂದೇ ಮಾದರಿಯಲ್ಲಿ ಉಳಿಸಿಕೊಳ್ಳಲಿಲ್ಲ. 'ನಾಗರಹಾವು' ಚಿತ್ರದ ರೋಷ, ಆವೇಶಗಳ ಮೇಲುಸ್ತರದ ಆಳವಲ್ಲಿ ಭಾವುಕತೆ ಹುದುಗಿಸುವ ವಿಶಿಷ್ಟ ಪಾತ್ರ ಅಭಿನಯಿಸಿದ ವಿಷ್ಣು, 'ಭೂತಯ್ಯನ ಮಗ ಅಯ್ಯು' ಚಿತ್ರದಲ್ಲೂ ಇದೇ ಮಾದರಿಯ ಆವೇಶದ ಪಾತ್ರ ನಿರ್ವಹಿಸಿದರು. ಈ ಎರಡೂ ಪಾತ್ರದಲ್ಲೂ ಹಸಿ ಭಾವಗಳ ಅಂತರ್ಯದಲ್ಲಿ ಮಿಡಿಯುವ ಅಂತಃಕರಣವನ್ನು ಉತ್ತಮವಾಗಿ ಹಿಡಿದಿಟ್ಟಿದ್ದರು. ಈ ಎರಡೂ ಪಾತ್ರಗಳಲ್ಲಿ ವಿಷ್ಣು ಅವರ ಆಂಗಿಕ ಅಭಿನಯ ಬಹಳ ಉತ್ತಮ ಮಟ್ಟದ್ದಾಗಿತ್ತು. ಪಾತ್ರಗಳ ಹೊರ ವಲಯದ ಲಯಬದ್ಧತೆಯನ್ನು ಭಾವಾಭಿವ್ಯಕ್ತಿಗೆ ಬಳಸಿಕೊಳ್ಳುವ ಕ್ರಮ ಕನ್ನಡದ ಮಟ್ಟಿಗೆ ಹೊಸತಾಗಿತ್ತು. ಚಿತ್ರರಂಗದ ಕವಲುದಾರಿಯಲ್ಲಿ ವಿಷ್ಣು ಅವರಿಗೆ ರೋಷವನ್ನು ಅಭಿವ್ಯಕ್ತಿಸುವ ಮಾದರಿಗೇ ಹೆಚ್ಚು ಮಹತ್ವ ಸಿಕ್ಕಿತು. ಅನ್ಯಾಯದ ವಿರುದ್ಧ ಸಿಡಿದೇಳುವ ಕಥೆಗಳು ಹೆಚ್ಚಾಗಿ ಬರುತ್ತಿದ್ದ ಸಂದರ್ಭದಲ್ಲಿ ಅಂತಹ ಕಥೆಗಳಿಗೆ ಹೊಂದಿಕೊಂಡುಬಿಟ್ಟರು. ತಮ್ಮ ಎಡಗೈ ಪ್ರಧಾನವಾದ ಶೈಲಿ ಮತ್ತು ಏಕಸ್ಥಾಯಿ ಸಂಭಾಷಣೆಯ ಶೈಲಿಯಿಂದ ಆ ಪಾತ್ರಗಳಿಗೆ ಚಲನೆ ತುಂಬುತ್ತಿದ್ದ ಅವರಿಗೆ 'ಸಾಹಸಸಿಂಹ', 'ವೀರಾಧಿವೀರ', 'ಚಾಣಕ್ಯ', 'ಮರೆಯದ ಮಾಣಿಕ್ಯ', 'ನಾಗ ಕಾಳ ಭೈರವ' ಇಂಥ ಚಿತ್ರಗಳೇ ಹೆಚ್ಚಾಗಿ ದೊರೆತವು. ಕಥನದ ಸ್ವರೂಪದಲ್ಲೇ ಏಕತಾನತೆ ಹೊಂದಿದ್ದ ಈ ಚಿತ್ರಗಳಲ್ಲಿ ಅಭಿನಯಕ್ಕೆ ಹೆಚ್ಚಿನ ಅವಕಾಶವೇ ಇರಲಿಲ್ಲ.

ವಿಷ್ಣುವರ್ಧನ್ ಅವರ ಭಾವುಕ ಶೈಲಿಯ ಪಾತ್ರಗಳು ಹಾಗೆ ನೋಡಿದರೆ ಈ ಪಾತ್ರಗಳಿಗಿಂತ ಜೀವಂತವಾಗಿ ಕಾಣುತ್ತಿದ್ದವು. 'ಹೊಂಬಿಸಿಲು', 'ಬಂಧನ', 'ಮಲಯ ಮಾರುತ'ದಂಥ ಚಿತ್ರಗಳಲ್ಲಿ ಅವರ ಅಭಿನಯ ಸಾಕಷ್ಟು ಸಂವೇದನಾಶೀಲವಾಗಿತ್ತು. ಮುಖ್ಯವಾಗಿ ಮೆಲೋಡ್ರಾಮಾ ದೃಶ್ಯಗಳಲ್ಲಿ ವಿಷ್ಣು ಕಳೆದುಹೋಗದೆ ಸಂಯಮ ತಾಳಿ ಅಭಿನಯಿಸುತ್ತಿದ್ದರು. ಈ ಪಾತ್ರಗಳ ಹೊರ ಆವರಣವೇ ಅತಿ ಭಾವುಕತೆಯದಾದ್ದರಿಂದ ಈ ಚಲನಶೀಲತೆ ಅಸ್ಪಷ್ಟವಾಯಿತು. ವಿಷ್ಣುವರ್ಧನ್‌ಗೆ ದೊರೆತ ಉತ್ತಮ ಚಿತ್ರಗಳಲ್ಲಿ 'ಬಿಳಿಗಿರಿಯ ಬನದಲ್ಲಿ', 'ಸುವರ್ಣ ಸೇತುವೆ', 'ಮಲಯ ಮಾರುತ', 'ನೀ ಬರೆದ ಕಾದಂಬರಿ', 'ಡಿಸೆಂಬರ್ ೩೧', 'ಬಂಧನ', 'ಸುಪ್ರಭಾತ', 'ಮುತ್ತಿನಹಾರ', 'ಲಯನ್ ಜಗಪತಿರಾವ್', 'ಲಾಲಿ', 'ಹರಕೆಯ ಕುರಿ' ಮೊದಲಾದವು ಪ್ರಮುಖವಾದವು. ಈ ಚಿತ್ರಗಳಲ್ಲಿನ ಅವರ ಅಭಿನಯ ನೋಡಿದಾಗ ಅವರು ಪಾತ್ರಗಳನ್ನು ಎಷ್ಟು ಸತ್ವಯುತವಾಗಿ ನಿರ್ವಹಿಸುತ್ತಾರೆ ಎನ್ನಿಸುತ್ತದೆ.

ವಿಷ್ಣುವರ್ಧನ್ ಅವರು ಸಂಭಾಷಣೆ ಹೇಳುವಲ್ಲಿ ಸ್ಪಷ್ಟತೆ ಇದೆ. ಅಪಭ್ರಂಶಗಳ ಸಾಧ್ಯತ ತೀರ ಅಪರೂಪ. ವಿಷ್ಣುವರ್ಧನ್ ತಮ್ಮ screen presenceಗೆ ಸಾಕಷ್ಟು ಗಮನ ನೀಡುವವರು. ಇದು ಅವರ ಜನಪ್ರಿಯತೆಗೆ ಕಾರಣವಾದ ಅಂಶಗಳಲ್ಲಿ ಒಂದು. ಇಷ್ಟೆಲ್ಲ ಹೇಳುವಾಗಲೂ ಬಹುದೊಡ್ಡ ಪ್ರತಿಭೆಯ ಎದುರು ನಿಲ್ಲುವ ಸವಾಲಿತ್ತು. ವಿರೋಧವೆನ್ನಿಸದ ಹಾಗೆ ಅಸ್ತಿತ್ವವನ್ನು ಕಟ್ಟಿಕೊಳ್ಳಬೇಕಿತ್ತು. ಅಭಿಮಾನೀ ಪ್ರೇಕ್ಷಕರಲ್ಲಿ ಸಮತೋಲ ಉಳಿಸಿಕೊಳ್ಳುತ್ತ ಒಂದು ಅರ್ಥದಲ್ಲಿ ತೆಳುವಾದ ಮುಳ್ಳುತಂತಿಯ ಮೇಲಿನ ನಡಿಗೆಯಾಗಿತ್ತು. ಇತ್ತ ಹೆಚ್ಚು ಗಮನಿಸುವ ಅನಿವಾರ್ಯದಲ್ಲಿ ಅಭಿನಯಕ್ಕೆ ಅಗತ್ಯವಿರುವ ಪಾತ್ರ ವೈವಿಧ್ಯವನ್ನು ಹುಡುಕಾಡಲೇ ಇಲ್ಲ. ಕೆಲವು ರೀತಿಯ ಪಾತ್ರಗಳನ್ನೇ ದೂರ ಇಟ್ಟುಬಿಟ್ಟರು. ಪ್ರಾಯಶಃ ಬೇರಾವ ಭಾಷೆಯ ಕಲಾವಿದನೂ ಎದುರಿಸಲಾರದ ತೊಡಕುಗಳವು. ಉಳಿವಿಗಾಗಿ ಸಾತ್ವಿಕವಾದ ಹೋರಾಟವೊಂದನ್ನು ಮಡಿಲಿಗಿಟ್ಟುಕೊಂಡೇ ವೃತ್ತಿಜೀವನ ನಡೆಸಿಕೊಂಡು ಬಂದರು. ಆದ್ದರಿಂದಲೇ ರೋಷ, ಸ್ಕ್ರೀನ್ ಪ್ರೆಸೆನ್ಸ್‌ಗಾಗಿ ಉಡುಗೆ, ಕ್ಯಾಮರಾಕೋನಗಳೂ ಸಹ ಆಯ್ಕೆ ಮಾಡಿ ಜೋಡಿಸಿಕೊಳ್ಳಬೇಕಾಯಿತು. ಉಳಿದದ್ದೆಲ್ಲ ಅವರ ಮೊನಚಾದ ಕಣ್ಣುಗಳು, ತಳಮಟ್ಟದಿಂದ ಬರುವ ಕಂಠಸಿರಿ, ಸರಿಯಾದ ನಿರ್ದೇಶಕನಾದಾಗ ಹೊರಡಿಸುವ ಮಾತಿನ ಏರಿಳಿತಗಳು ಅಭಿನಯದ ಮಾದರಿಗಳಾದವು. ಉಳಿದಂತೆ ಸಾಹಸವೇ ಅಭಿನಯವಾಯಿತು.

ವಿಷ್ಣುವರ್ಧನ್ ಆಂಗಿಕ ಅಭಿನಯ ತುಟಿಚಲನೆಯಲ್ಲಿ ಸಾಕಷ್ಟು ನಿಯಂತ್ರಣ ಹೊಂದಿದವರು. ಮುಖ್ಯವಾಗಿ ಹಾಡುಗಳ ಅಭಿನಯದಲ್ಲಿ ಇದು ಅವರ ಬಹಳ ದೊಡ್ಡಶಕ್ತಿಯಾಗಿ ಕಾಣುತ್ತದೆ. ಆರಂಭದಿಂದಲೂ ವಿಷ್ಣುವರ್ಧನ್ ಪಾತ್ರಗಳಿಗೆ ಅಭಿನಯಿಸುವ ಬದಲು ಪಾತ್ರಗಳನ್ನೇ ತಮ್ಮ ಅಭಿನಯದ ಚೌಕಟ್ಟಿಗೆ ಹೊಂದಿಸಲು ಪ್ರಯತ್ನಿಸಿದರು. ಆ ಚೌಕಟ್ಟು ಕೂಡ ಜನಪ್ರಿಯತೆಯದು. ಹೀಗಾಗಿ ಪಾತ್ರಗಳ ಜೀವಸತ್ವಕ್ಕೆ (biography) ತಕ್ಕಂಥ ಅಭಿನಯ ಅವರಲ್ಲಿ ಕಾಣುವುದಿಲ್ಲ. ಶುದ್ಧ ಹಳ್ಳಿಗನಾಗಲಿ, ಮಧ್ಯಮ ವರ್ಗದವನಾಗಲಿ, ಸಿರಿವಂತನಾಗಲಿ ವಿಷ್ಣು ಪ್ರಣಯ ಸನ್ನಿವೇಶದಲ್ಲಿ ಒಂದೇ ಮಾದರಿಯಲ್ಲಿ ಅಭಿನಯಿಸುತ್ತಾರೆ. ಅದರಲ್ಲೂ ಅವರು ರಭಸವಾಗಿ ನಾಯಕಿಯನ್ನು ಅಪ್ಪಿಕೊಳ್ಳುವ ಕ್ರಮ ಸಂವೇದನಾಶೀಲ ಪಾತ್ರಗಳ ಸಂದರ್ಭದಲ್ಲಿ ಅಸಹಜವಾಗಿ ಕಾಣುತ್ತದೆ. ಅಭಿನಯದ ಎಲ್ಲಾ ಘಟ್ಟಗಳಲ್ಲೂ ತಮ್ಮ ಶೈಲಿಯನ್ನು ಬದಲಾಯಿಸಿಕೊಳ್ಳಲು ಅವರು ಪ್ರಯತ್ನಿಸದೆ ಕೃತಕ ಮೀಸೆ, ತಲೆಗೆ ಟೋಪಿ ಇತ್ಯಾದಿ ಧರಿಸಿ ಹಾಗೇ ಸಲ್ಲುವ ಪ್ರಯತ್ನ ನಡೆಸಿದರು. ಇದು ಅಂತಿಮವಾಗಿ ಅವರೊಳಗಿನ ಕಲಾವಿದನಿಗೆ ಹೊರಬರಲು ಅವಕಾಶ ನೀಡಲಿಲ್ಲ. 'ಶಿವಶಂಕರ್', 'ಹಲೋಡ್ಯಾಡಿ' ಮೊದಲಾದ ಚಿತ್ರಗಳಲ್ಲಿ ಅವರು ಬದಲಾಗಬಯಸಿದರು. ಆದರೆ ಅವರ ಜನಪ್ರಿಯತೆಯೇ ಅವರನ್ನು ಕಟ್ಟಿಹಾಕಿತು. ಮರಳಿ ಅದೇ ದಾರಿಗೆ ಬಂದರು. ಅವರೊಳಗೆ ಇರುವ ಕಲಾವಿದನನ್ನು ಸಮರ್ಥವಾಗಿ ದುಡಿಸಿಕೊಂಡದ್ದೇ ಕಡಿಮೆ. ಆ ಮಟ್ಟಿಗೆ ದಿನೇಶ್ ಬಾಬು ನಿರ್ದೇಶನದ 'ಸುಪ್ರಭಾತ', 'ಲಾಲಿ' ಚಿತ್ರಗಳಲ್ಲಿ ಚಿಪ್ಪೊಡೆದುಕೊಂಡು ಹೊರಬರುವ ವಿಷ್ಣುವರ್ಧನ್ ಅವರನ್ನು ಕಂಡಾಗ ನಿಜವಾದ

ಉದಯಕುಮಾರ್ (ಚಿತ್ರ ೫೨-೬೦)

ವಿಷ್ಣು ವಿಲಾಸ (ಚಿತ್ರ ೬೧-೬೪)

ಅಭಿನಯ ಪ್ರತಿಭೆ ಕಾಣುತ್ತದೆ. ಸವಿರಾದ ಹಾಸ್ಯದಲ್ಲಿ ಅವರ ತಲ್ಲೀನತೆ ಕಾಣಬಹುದು. ಅವರ ನಾಯಕನ ಇಮೇಜ್‌ನಿಂದಾಗಿ ಅಂಥ ಪಾತ್ರ ಸಾಧ್ಯವಿಲ್ಲ. ಗೌರವನಟನಾಗಿ ಅಭಿನಯಿಸಿದಾಗೆಲ್ಲ ಯಾವ ಆತಂಕವೂ ಇಲ್ಲದೆ, ಸೊಗಸಾಗಿ ನಿರ್ವಹಿಸಿದ್ದನ್ನು ಕಾಣಬಹುದು. ೨೦೦೦ದ ಕೊನೆಗೆ ಅಣ್ಣ, ಅಪ್ಪ, ಯಜಮಾನನ ಮಾದರಿಗೆ ತಿರುಗಿದರು. ಎಪ್ಪತ್ತರ ದಶಕದಲ್ಲಿ ಪ್ರವೇಶ ತುಂಬ ತಡವಾಯಿತು. ಆದರೆ ತುಂಬ ಬೇಕಾಗಿದ್ದ ಸ್ಥಾನ ಹಿರಿದಾಗಿತ್ತು. ಕಡಿಮೆ ಅವಧಿ, ಅವಕಾಶದಲ್ಲಿ ಹಿರಿದನ್ನು ಸಾಧಿಸುವ ಅನಿವಾರ್ಯ, ಒತ್ತಡ ಬಿದ್ದು ಆಳದಲ್ಲಿದ್ದ ಕಲಾವಿದನನ್ನು ಎಚ್ಚರಿಸಲು ಬೆಳೆಸಲು ಸಮಯವಿರಲಿಲ್ಲ. ಆದರೂ ಅವರ ಸಹಜ ಪ್ರತಿಭೆಯೇ ಅವರನ್ನು ಕಾಪಾಡಿದೆ.

ನಾಟಕದ ಶೈಲಿಯಲ್ಲಿ ಸಂಭಾಷಣೆ ಹೇಳುವ ಕ್ರಮವನ್ನು ಕೊನೆಯವರೆಗೂ ರೂಢಿಸಿಕೊಂಡು ಬಂದ ಗಂಗಾಧರ್ ವಿಶಿಷ್ಟ ಕಂಠದಿಂದ ಪಾತ್ರಗಳಲ್ಲಿ ವೈವಿಧ್ಯ ತಂದರು. ನಾಯಕ ಎಂದರೆ ಗಾಂಭೀರ್ಯವೇ ಮೂರ್ತಿವೆತ್ತಂತೆ ಇರಬೇಕು ಎಂಬ ಕಲ್ಪನೆ ಸುಳ್ಳು ಮಾಡಿ ಪ್ಲೇಬಾಯ್ ಮಾದರಿ ಅಭಿನಯ ರೂಢಿಸಿದರು. ಆದರೆ 'ಶರಪಂಜರ', 'ಸೀತಾ', 'ಸೋತು ಗೆದ ವಳು', 'ಯಾವ ಜನ್ಮದ ಮೈತ್ರಿ' ಮುಂತಾದ ಚಿತ್ರಗಳಲ್ಲಿ ಕಲ್ಪನಾ ಅಂಥ ಅಭಿನೇತ್ರಿಯ ಎದಿರು ಅಭಿನಯಿಸುವಾಗ ನಾಯಕಿಯ ನೆರಳಾಗಿಬಿಟ್ಟರು. ಅಭಿನಯದ ಎಲ್ಲಾ ಸೂಕ್ಷ್ಮಗಳಲ್ಲಿ ಕಲ್ಪನಾ ಗಂಗಾಧರ್ ಅವರನ್ನು ಓವರ್‌ಟೇಕ್ ಮಾಡಿದರು. ಹೀಗಾಗಿ ಗಂಗಾಧರ್ ತಮ್ಮ ಅಭಿನಯ ಕ್ರಮವನ್ನು ರೂಢಿಸಿಕೊಳ್ಳಬಲ್ಲ ಅವಕಾಶಗಳನ್ನು ಕಳೆದುಕೊಂಡರು. ಹಲವು ದಶಕಗಳ ನಂತರ ಅವರು ಅಭಿನಯಿಸಿದ 'ಆಟ ಹುಡುಗಾಟ' ಚಿತ್ರದಲ್ಲಿ ಕೂಡ ಅವರ ಈ ಮೂಲಭೂತ ಭಾವಾಭಿವ್ಯಕ್ತಿ ಕ್ರಮ ಕೊಂಚವೂ ಬದಲಾಗದಿದ್ದುದನ್ನು ನೋಡಬಹುದು.

ನಾಯಕನಾಗಿ 'ಅಬ್ಬಾ ಆ ಹುಡುಗಿ' ಚಿತ್ರದಿಂದ ಪ್ರವೇಶ ಮಾಡಿದ ರಾಜಾಶಂಕರ್ ಕುಮಾರತ್ರಯರ ಅಬ್ಬರದಲ್ಲಿ ಮಿಂಚಲಿಲ್ಲವೆನ್ನಬಹುದು. ಪಾತ್ರಗಳಲ್ಲಿ ವೈವಿಧ್ಯ ಇರಲಿಲ್ಲ. ಭಾವಾಭಿನಯವೂ ಸಾಲದು. ಆದರೆ, ರಾಜಾಶಂಕರ್ ಪೋಷಕ ನಟರಾಗಿ 'ಭಕ್ತ ಕುಂಬಾರ' ಚಿತ್ರದಲ್ಲಿ ರಾಜಕುಮಾರ್‌ಗೆ ಸರಿಸಮಾನವಾಗಿ ಅಭಿನಯಿಸಿದ್ದರು. 'ಶ್ರೀನಿವಾಸ ಕಲ್ಯಾಣ' ಚಿತ್ರದ ಕೊನೆಯ ಭಾಗದಲ್ಲಿ ಭಕ್ತನಾಗಿ ಅವರು ಗಮನ ಸೆಳೆದರು. ಅಲ್ಲಿ ನೇರ ಮುಖಭಾವ ವ್ಯಕ್ತವಾಗದೆ ಗಡ್ಡ, ಮೀಸೆಗಳಿದ್ದವು. ಅಂಥಲ್ಲಿ ಅವರು ಭಾವಾಭಿವ್ಯಕ್ತಿಗಿಂತ ಮಿಗಿಲಾದ ಆಂಗಿಕಾಭಿನಯ ಹಾಗೂ ಕಂಠಸ್ವರದಲ್ಲಿ ವೈಶಿಷ್ಟ್ಯ ತೋರಬಲ್ಲವರಾಗಿದ್ದರು.

ನಡಿಗೆ, ಮುಖಭಾವದಲ್ಲಿ ಗಾಂಭೀರ್ಯವನ್ನು ಅರ್ಥವತ್ತಾಗಿ ಪ್ರಕಟಿಸುವ ರಾಜೇಶ್ ಕೆಲವು ಸ್ಥಾಯಿಭಾವಗಳಿಗೆ ಹೇಳಿಮಾಡಿಸಿದ ಕಲಾವಿದರು. 'ಬ್ರೋಕರ್ ಭೀಷ್ಮಾಚಾರಿ' ಚಿತ್ರದ ಪಾತ್ರ ಅವರಿಗೆ ನಿಜವಾದ ಸವಾಲನ್ನು ನೀಡಿತ್ತು. ಸಂಭಾಷಣೆ ಹೇಳುವಾಗಲೇ ಮುಖಭಾವಗಳನ್ನು ಭಿನ್ನವಾಗಿ ಸಂಯೋಜಿಸುತ್ತಾ ಹೋಗುವ ಕ್ರಮ ಅವರಿಗೆ ಇಂಥ ಪಾತ್ರಗಳಲ್ಲಿ ಪ್ರಭಾವಿ ಅನ್ನಿಸಬಲ್ಲ ಅಭಿನಯ ನೀಡಲು ನೆರವಾಯಿತು. ಉತ್ತಮ ವರ್ಗದ, ವ್ಯಕ್ತಿತ್ವ ಹಾವಭಾವಗಳಿಗೆ ಸಂಪೂರ್ಣ ಹೊಂದಿಕೊಳ್ಳುವ ಶೈಲಿ ರೂಢಿಸಿಕೊಂಡ ಅವರು ಮಧ್ಯಮ ವರ್ಗದ, ಕೆಳ ಮಧ್ಯಮ ವರ್ಗದ ಪಾತ್ರಗಳ ಅಭಿನಯಕ್ಕೆ ಬಂದಾಗ ಸಪ್ಪೆಯಾಗಿ ಕಾಣುತ್ತಿದ್ದರು. 'ಕಲಿಯುಗ' ಚಿತ್ರದ ಬಡತನದ ಸನ್ನಿವೇಶದಲ್ಲಿ ಅಸಹಜ ಎನ್ನಿಸಿದ ಅಭಿನಯ ನೀಡಿರುವ ಅವರು ಅದೇ ಚಿತ್ರದಲ್ಲಿ ಶ್ರೀಮಂತಿಕೆ ಪಡೆದ ನಂತರದ ದೃಶ್ಯಗಳಲ್ಲಿಯ ಅಭಿನಯ ಪ್ರಭಾವೀ ಆಗಿಬಿಟ್ಟಿರುವುದು ಇದಕ್ಕೆ ಸಾಕ್ಷಿ. 'ದೇವರ ದುಡ್ಡು' ಚಿತ್ರದಲ್ಲಿ ದೋಸೆ ಹಿಟ್ಟು ರುಬ್ಬುವವನಾಗಿ ರಾಜೇಶ್ ನಿಲ್ಲುವುದಿಲ್ಲ, ಗೆಲ್ಲುವುದಿಲ್ಲ. ಆದರೆ 'ಬೆಳುವಲದ ಮಡಿಲಲ್ಲಿ' ಚಿತ್ರದ ರೈತನಾಗಿ ಮತ್ತು ಹಿರಿಯಣ್ಣ, ಮಾವ, ಚಿಕ್ಕಪ್ಪ

(ಚಿತ್ರ ೭೫) ಕಲ್ಪನಾ ಮತ್ತು ಗಂಗಾಧರ್

(ಚಿತ್ರ ೭೬) ಶ್ರೀನಾಥ್ ಮತ್ತು ರಾಜೇಶ್

ಮೊದಲಾದ ಪಾತ್ರಗಳಲ್ಲಿ ಅವರು ಮಧ್ಯಮ, ಮೇಲ್‌ಮಧ್ಯಮ ವರ್ಗವನ್ನು ಚೆನ್ನಾಗಿ ಪ್ರತಿನಿಧಿಸಿದ್ದರು. ಭಾವಾಭಿನಯಕ್ಕಿಂತ ಅವರ ನಿಲುವು, ಕಂಠ ಕ್ರಿಯಾಶಾಲಿ.

ಎತ್ತರದ ನಿಲುವು, ಕಂಚಿನ ಕಂಠ, ಪಾತ್ರಸತ್ವವನ್ನು (basics) ನಡಿಗೆಯ ಶೈಲಿಯಲ್ಲೇ ತೋರಿಸಬಲ್ಲ ಚಾಕಚಕ್ಯತೆ ಇವೆಲ್ಲದರಿಂದ ಸುದರ್ಶನ್ ಗಮನಸೆಳೆದ ನಟ. ಇವರು ಪ್ರಧಾನ ಪಾತ್ರ ವಹಿಸಿದ ಚಿತ್ರಗಳೇ ಕಡಿಮೆ. 'ವಿಜಯನಗರದ ವೀರಪುತ್ರ'ದಲ್ಲಿನ ಕ್ಷಾತ್ರೀಯ ತೀವ್ರತೆಗೆ ಹೊಂದಿಕೊಂಡ ಅಭಿನಯ ನೀಡಿದ ಇವರು 'ನಗುವ ಹೂವು', 'ಪ್ರಚಂಡ ಕುಳ್ಳ' ಮುಂತಾದ ಚಿತ್ರಗಳಲ್ಲಿ ಗಮನ ಸೆಳೆದರು. ಮಾಂತ್ರಿಕ ಮೊದಲಾದ ವಿಶಿಷ್ಟ ಪಾತ್ರದಲ್ಲಿ ಅವರ ಶೈಲಿ ಹೊಸತೆನಿಸುವಂತಿತ್ತು.

ಸಂಭಾಷಣೆ ಹೇಳುವ ಶೈಲಿಯಲ್ಲಿ ಭಾವಗಳನ್ನು ವ್ಯಕ್ತಪಡಿಸಲು ಕೊನೆಯವರೆಗೂ ಅಸಮರ್ಥರಾದ ರಾಮ್‌ಗೋಪಾಲ್ ನಿಶ್ಚಲ ಅಭಿನಯಶೈಲಿ ರೂಢಿಸಿಕೊಂಡಿದ್ದರು. 'ಬೀಸಿದ ಬಲೆ', 'ಯಾರು ಹಿತವರು' ಚಿತ್ರಗಳಲ್ಲಿ ಗಮನ ಸೆಳೆದರೂ ಚಿತ್ರರಂಗದಲ್ಲಿ ಅವರ ಛಾಪು ಅಲ್ಪ ಪ್ರಮಾಣದ್ದು.

ಕನ್ನಡ ಚಿತ್ರರಂಗದಲ್ಲಿ ನೇತ್ಯಾತ್ಮಕ ಪಾತ್ರಗಳಿಗೆ ತಕ್ಷಣ ನೆನಪಾಗಿ ಬರುವ ಕಲಾವಿದ ಚಂದ್ರಶೇಖರ್. ಚಂಚಲ ಕಣ್ಣುಗಳು, ಸ್ವರದಲ್ಲಿ ಅಗತ್ಯ ಬಿದ್ದಂತೆ ಬಳಸುವ ಏರಿಳಿತ ಮತ್ತು ಸವಾಲಿನ ಸನ್ನಿವೇಶಗಳಲ್ಲಿ ತಾದಾತ್ಮ್ಯತೆಯಿಂದ ನಟಿಸುವ ಗುಣ ಅವರಲ್ಲಿ ಕಾಣಬಹುದು. 'ಎಡಕಲ್ಲು ಗುಡ್ಡದ ಮೇಲೆ' ಚಿತ್ರದಲ್ಲಿ ಅಕ್ಕ-ತಂಗಿಯರಿಬ್ಬರನ್ನೂ ಲೈಂಗಿಕವಾಗಿ ಬಯಸುವ ಅವರು ಗಮನಾರ್ಹ ಅಭಿನಯ ನೀಡಿದಾರೆ.

ಶ್ರೀನಾಥ್ ಭಾವೋತ್ಕಟತೆಯಲ್ಲಿ ಸಂಯಮ ಕಾಪಾಡಿಕೊಳ್ಳುವ, ಆಂಗಿಕ ಅಭಿನಯಕ್ಕಿಂತ ಮುಖಚರ್ಯೆಯಲ್ಲಿ ಭಾವನೆಗಳನ್ನು ವ್ಯಕ್ತಪಡಿಸುವ ಅಭಿನಯಶೈಲಿಯನ್ನು ರೂಢಿಸಿಕೊಂಡರು. ಪ್ರೇಮಕಥೆಗಳಲ್ಲಿ ತನ್ಮಯತೆಯನ್ನೂ ಉದ್ವಿಗ್ನತೆಯನ್ನು ಮುಖದಲ್ಲಿ ವ್ಯಕ್ತಪಡಿಸುವ ರೀತಿಯೇ ಅವರಿಗೆ 'ಪ್ರಣಯರಾಜ' ಬಿರುದನ್ನು ತಂದಿತು. 'ಶುಭಮಂಗಳ' ಚಿತ್ರವನ್ನು ಉದಾಹರಣೆಯಾಗಿ ನೀಡಬಹುದು. 'ಖಳ'ನ ಛಾಯೆ ಇರುವ ಸಂಕೀರ್ಣ ಪಾತ್ರಗಳನ್ನು ಅಭಿನಯಶೈಲಿಯಲ್ಲಿ ಯಶಸ್ವಿಯಾಗಿ ನಿರ್ವಹಿಸಿದ ಕೀರ್ತಿ ಇವರದು. 'ದೇವರು ಕೊಟ್ಟ ತಂಗಿ' ಚಿತ್ರದಲ್ಲಿ ತನ್ನ ಹೆಂಡತಿಯ ಶೀಲ ಶಂಕಿಸುವ ಗಂಡನಾಗಿ, 'ಯಾರಿವನು' ಚಿತ್ರದ ನಿಗೂಢ ಕೊಲೆಗಾರನಾಗಿ ಅವರು ಅಭಿನಯಿಸಿದ ಕ್ರಮ ಇದಕ್ಕೆ ಸಾಕ್ಷಿ. 'ಮಾನಸ ಸರೋವರ' ಚಿತ್ರದ ಅತಿ ಭಾವುಕ ಪಾತ್ರವನ್ನೂ ಸಂಯಮದಿಂದ, ಮುಖಚರ್ಯೆಯಲ್ಲೇ ತೀವ್ರಭಾವುಕತೆ ತೋರ್ಪಡಿಸುವ ಮೂಲಕ ನಿರ್ವಹಿಸಿದ್ದು ಬಹಳ ಮುಖ್ಯ. ಇಮೇಜ್‌ನ್ನೇ ಅಂಟಿಕೊಳ್ಳದ ಎಲ್ಲಾ ಬಗೆಯ ಪಾತ್ರಗಳನ್ನು ಒಬ್ಬ ಕಲಾವಿದನಾಗಿ ಒಪ್ಪಿ ನಟಿಸಿದರು. ಕೊಂಚ ನೇಸಲ್ ಆದ್ದರಿಂದ ಸಂಭಾಷಣೆ ಹೇಳುವ ರೀತಿ ಒಪ್ಪಾಗುತ್ತಿರಲಿಲ್ಲ. ಶೌರ್ಯಕ್ಕಿಂತ ಭಾವಪ್ರಧಾನವಾದಾಗ ಒಪ್ಪವಾಗಿ ನಿರ್ವಹಿಸುತ್ತಾರೆ.

ತುರ್ತುಪರಿಸ್ಥಿತಿ ನಂತರ ಪರಿವರ್ತನೆಯ ಕನಸೆಲ್ಲ ಕರಗಿಹೋದ ರೀತಿ ಜನಸಮುದಾಯದಲ್ಲಿ ಪ್ರಜಾಪ್ರಭುತ್ವದ ಬಗ್ಗೆ ನಿರಾಶೆ, ಆಕ್ರೋಶ ಹುಟ್ಟಲು ಕಾರಣವಾಯಿತು. ಇದನ್ನು ಪ್ರತಿನಿಧಿಸುವಂತಿದ್ದ 'ಅಂತ' ಚಿತ್ರದ ಯಶಸ್ಸು ಅಂಬರೀಷ್ ಅವರಿಗೆ ಆ್ಯಂಗ್ರಿ ಯಂಗ್‌ಮ್ಯಾನ್ ಇಮೇಜ್ ಕೊಟ್ಟಿತು. ಅಲ್ಲಿಯವರೆಗ ಅಬ್ಬರದ ಖಳನ ಪಾತ್ರ. 'ಶುಭಮಂಗಳ', 'ರಂಗನಾಯಕಿ', 'ಪಡುವಾರಳ್ಳಿ ಪಾಂಡವರು' ಚಿತ್ರಗಳಲ್ಲಿ ಕೊಂಚ ಪ್ರಯೋಗಶೀಲ ಎನ್ನಿಸುವ ಪಾತ್ರ ಮಾಡಿದ್ದ ಅಂಬರೀಷ್‌ಗೆ ಸಿಕ್ಕಿದ್ದೆಲ್ಲ ಪೊಲೀಸ್ ಅಧಿಕಾರಿಯಾಗಿ ಒಂದೋ ಅಧಿಕಾರದ ಮೂಲಕ, ಇಲ್ಲವೇ ಅಧಿಕಾರ ಬಿಟ್ಟು ದುಷ್ಟರನ್ನು ಸದೆಬಡಿಯುವ ಸಾಹಸಿಯ ಪಾತ್ರ. ಧ್ವನಿಯಲ್ಲಿ ಅಷ್ಟೇನೂ ವೈವಿಧ್ಯ ಹೊಂದಿರದೆ, ಮುಖದಲ್ಲಿ ಕೆಲವು ಪ್ರಾಥಮಿಕ ಭಾವಗಳನ್ನು ವ್ಯಕ್ತಪಡಿಸಬಲ್ಲ ಅಂಬರೀಷ್‌ಗೆ ಚಲನೆಯೇ ಅಭಿನಯದ ಶಕ್ತಿ. ಆಕ್ರೋಶಭರಿತನಾಗಿ ಹೆಜ್ಜೆ ಹಾಕುವ ಮಾದರಿಯೇ ಅವರ ಸಾಹಸ ಪಾತ್ರಗಳ ಯಶಸ್ಸಿಗೆ ಕಾರಣವಾಯಿತು. ಅಲ್ಲಲ್ಲಿ 'ಒಲವಿನ ಉಡುಗೊರೆ', 'ಹೃದಯ ಹಾಡಿತು' ಮುಂತಾದ ಚಿತ್ರಗಳಲ್ಲಿ ಭಾವಪೂರ್ಣ ಪಾತ್ರಗಳನ್ನು ಮಾಡಿರುವ ಅಂಬರೀಷ್ ತಮ್ಮ ಸ್ಥಿರ ಮುಖಚರ್ಯೆಯಿಂದ ಅಂಥ ಪಾತ್ರಗಳಿಂದ ಅಭಿನಯದಲ್ಲಿ ಯಶಸ್ವಿಯಾಗಬಲ್ಲ ಮಾದರಿಗಳನ್ನೇನೂ ಕಟ್ಟಿಕೊಡಲಿಲ್ಲ.

(ಚಿತ್ರ ೭೭) ಸುದರ್ಶನ್

'ರ್‍ಯಾಂಬೋ' ಚಿತ್ರಗಳನ್ನು ನೋಡಿ ಆಕರ್ಷಿತರಾಗಿದ್ದ ಮಂದಿಗೆ ಪ್ರಭಾಕರ್ ಅಂಥ ಪಾತ್ರಗಳಿಗೆ ಹೊಂದಿಕೊಳ್ಳಬಲ್ಲರು ಎಂದು ಅರ್ಥವಾಗಿದ್ದು ತಡವಾಗಿಯೇ. 'ಎಸ್ ಬಾಸ್' ಪಾತ್ರದಿಂದ ವಿಲನ್ ಆಗಿ ತಮ್ಮ ವಿಶಿಷ್ಟ ಗೆಸ್ಚರ್‌ಗಳಿಂದ ಜನಪ್ರಿಯರಾಗಿದ್ದ ಪ್ರಭಾಕರ್

(ಚಿತ್ರ ೭೮-೮೧) ಶ್ರೀನಾಥ್

ತಮ್ಮ ಗಡುಸಾದ ಕಂಠ, ಮಾರಾಮಾರಿ ಹೊಡೆದಾಟದಿಂದ ವಿಶಿಷ್ಟ ಶೈಲಿ ಹುಟ್ಟು ಹಾಕಿ 'ಬಿ', 'ಸಿ' ಕೇಂದ್ರಗಳ ಮೆಚ್ಚಿನ ಹೀರೋ ಆದರು. ಆಗಾಗ ಸೌಮ್ಯಪಾತ್ರಗಳನ್ನು ನಿರ್ವಹಿಸಲು ಪ್ರಯತ್ನಿಸಿದರೂ ಮಾರಾಮಾರಿ ಪ್ರಿಯರಿಗೆ ಅವರು ಬದಲಾಗುವುದು ಬೇಕಾಗಿರಲಿಲ್ಲ. ಇಂಗ್ಲಿಷ್-ಕನ್ನಡ ಬೆರೆತ ಮಾತು, ಆಂಗಿಕ ಚಲನೆಗೇ ಒತ್ತು ಕೊಟ್ಟರು. ಕಿವಿ, ಕಣ್ಣು, ಕೆನ್ನೆ, ತಲೆಯ ಚಿಪ್ಪನ್ನು ಆಡಿಸುವುದು ಮೊದಲಾದ ಮಾದರಿಗಳನ್ನೇ ಹೆಚ್ಚಾಗಿ ಬಳಸಿದರು. ತೀರಾ ಎಳೆಯ ಮಗುವಿನಂತೆ ಆಡುವುದನ್ನು ಮುಗ್ಧತೆ ವಾತ್ಸಲ್ಯದ ಅಭಿವ್ಯಕ್ತಿಗೆ ರೂಢಿಸಿಕೊಂಡರು.

ಕನ್ನಡದಲ್ಲಿ ಹೊಸ ಅಲೆ ಚಿತ್ರಗಳು ಆರಂಭವಾದಾಗ ಅವುಗಳ ಪ್ರಯೋಗಶೀಲತೆ ಮತ್ತು ಧ್ವನಿಯನ್ನು ಗುರುತಿಸಬಲ್ಲ ಕಲಾವಿದರ ಅವಶ್ಯಕತೆ ಬಂದಿತು. ಅಂಥ ಅವಶ್ಯಕತೆಗೆ ಹೇಳಿಮಾಡಿಸಿದಂಥ ಕಲಾವಿದ ಅನಂತ್‌ನಾಗ್. ಹವ್ಯಾಸಿ ರಂಗಭೂಮಿ ಹಿನ್ನೆಲೆಯಿಂದ ಬಂದ ಅನಂತ್‌ನಾಗ್ ಕ್ಯಾಮರಾ ಆ್ಯಂಗಲನ್ನು ಬಳಸಿಕೊಂಡು ಪ್ರಭಾವಿ ಅಭಿನಯ ನೀಡಬಲ್ಲ ಮಾದರಿಯಲ್ಲಿ ಅಗ್ರಗಣ್ಯ. 'ಹಂಸಗೀತೆ'ಯ ಭೈರವಿ ವೆಂಕಟಸುಬ್ಬಯ್ಯನ ಪಾತ್ರದಲ್ಲಿ ಸಂಭಾಷಣೆಗಳೇ ಇಲ್ಲದೆ ಏಳು-ಬೀಳಿನ ಕಥೆಯನ್ನು ತಮ್ಮ ಅಭಿನಯದ ಕ್ರಮದಲ್ಲೇ ವ್ಯಕ್ತಪಡಿಸಿದ ರೀತಿ ಅನಂತ್‌ನಾಗ್‌ರನ್ನು ಕಲಾತ್ಮಕ ಚಿತ್ರಗಳ ಖಾಯಂ ನಟರಾಗಿಸಿಬಿಟ್ಟಿತು. 'ಸಂಕಲ್ಪ', 'ಕನ್ನೇಶ್ವರರಾಮ', 'ಬರ', 'ಆಕ್ಸಿಡೆಂಟ್', 'ಗಂಗವ್ವ ಗಂಗಾಮಾಯಿ', 'ಬೆಳದಿಂಗಳ ಬಾಲೆ' ಚಿತ್ರಗಳಲ್ಲಿ ಅನಂತ್‌ನಾಗ್ ವಹಿಸಿದ ಪಾತ್ರಗಳನ್ನು ಬೇರೆ ಯಾವ ನಟರಾದರೂ ವಹಿಸಬಹುದು ಎಂದು ಊಹಿಸುವುದೂ ಕಷ್ಟವೆ. ಮೈಸೂರು ಕನ್ನಡದ ಅಭ್ಯಾಸವಾದ ಕಿವಿಗ ವಿಚಿತ್ರ ಅನ್ನಿಸುವ ತಮ್ಮ ಧ್ವನಿಯನ್ನೇ ತಮ್ಮ ಶಕ್ತಿಯನ್ನಾಗಿ ಬಳಸಿಕೊಂಡ ಅನಂತ್‌ನಾಗ್, ಈ ಚಿತ್ರಗಳಲ್ಲಿ ಕ್ಯಾಮರಾ ಕೋನಗಳನ್ನು ತಮ್ಮ ಅಭಿನಯದ ಸಾಧ್ಯತೆಗೆ ಯಶಸ್ವಿಯಾಗಿ ಬಳಸಿಕೊಂಡರು. ತಮ್ಮ ಕಣ್ಣುಗಳಲ್ಲೇ ಅನೇಕ ಭಾವಗಳನ್ನು ವ್ಯಕ್ತಪಡಿಸಬಲ್ಲ ಸಿನಿಮಾತ್ಮಕ ಋಜುತ್ವ ಎಂದು ಕರೆಯಬಲ್ಲ ಅಭಿನಯದ ಶೈಲಿ ಇವರದ್ದು. ಕುತೂಹಲದ ಅಂಶವೆಂದರೆ, ಅನಂತ್‌ನಾಗ್ ಕಲಾತ್ಮಕ ಚಿತ್ರಗಳಲ್ಲದೆ ಸೂಪರ್ ಮೆಲೊಡ್ರಾಮಾ ಚಿತ್ರಗಳಲ್ಲೂ ಯಶಸ್ವಿಯಾದರು. ಇಲ್ಲೆಲ್ಲ ಮುಖದಲ್ಲೇ ಉದ್ದೇಶಪೂರ್ವಕವಾಗಿ ಅತಿಯಾದ ಭಾವಗಳನ್ನು ಬಿಂಬಿಸಿದ್ದು ಅವರ ಕಲಾತ್ಮಕ ಚಿತ್ರಗಳ ಅಭಿನಯದ ಶೈಲಿಗೆ ತದ್ವಿರುದ್ಧವಾದದ್ದು. ಅವರ ಅಭಿನಯಶೈಲಿಯ ಮೂರನೆ ಸಾಧ್ಯತೆ ಹಾಸ್ಯಚಿತ್ರಗಳದ್ದು. ಇಲ್ಲಿ ಅನಂತ್ ತಮ್ಮ ವಿಚಿತ್ರಸ್ವರವನ್ನು ಕಾಮಿಕಲ್ ಆಗಿ ಬಳಸಿಕೊಂಡರು. ಕಣ್ಣುಗಳಲ್ಲಿ ಚಂಚಲತೆ ವ್ಯಕ್ತಪಡಿಸುವ ಮೂಲಕ ಪಾತ್ರದ ಹಾಸ್ಯ ಮನೋಭಾವನಗ ಚಾಲನೆ ನೀಡಿದರು. 'ನಾ ನಿನ್ನ ಬಿಡಲಾರೆ', 'ಬೆಂಕಿಯ ಬಲೆ', 'ಇಬ್ಬನಿ ಕರಗಿತು', 'ಚಂದನದ ಗೊಂಬೆ'ಯಂಥ ಚಿತ್ರಗಳಲ್ಲಿ ಸ್ಥಿರವಾದ ಕಣ್ಣು, ಭಾವಪೂರ್ಣ ಮುಖ ಮತ್ತು ಕೆಳಸ್ತರದ ಗಾಂಭೀರ್ಯದ ಧ್ವನಿ ಇವುಗಳ ಮೂಲಕ ಮೆಲೊಡ್ರಾಮ, ಪರಿಣಾಮ ಕಂಡುಕೊಂಡ ಅನಂತ್‌ನಾಗ್, 'ನಾರದ ವಿಜಯ', ಗೋಲ್ ಮಾಲ್ ಸರಣಿ, ಗಣೇಶನ ಸರಣಿ ಚಿತ್ರಗಳಲ್ಲಿ ಚಂಚಲ ಕಣ್ಣು, ಹುಡುಗಾಟಿಕೆ ಮುಖಭಾವ ಮತ್ತು ಕಾಮಿಕಲ್ ಧ್ವನಿ ಮೂಲಕ ಹಾಸ್ಯರಸ ಚಿಮ್ಮಿಸಿದರು. ಅನಂತ್‌ನಾಗ್ ಅಭಿನಯದ ಇನ್ನೊಂದು ಮಾದರಿ ಖಳನದ್ದು. ಉದಾಹರಣೆಗೆ 'ಶಾಂತಿ ಕ್ರಾಂತಿ' ನೋಡಿದರೆ ಕಣ್ಣನ್ನು ಕ್ರೂರವಾಗಿಸುವ ಮತ್ತು ಅದಕ್ಕೆ ಹೊಂದುವ ಮುಖಭಾವವನ್ನು ಪ್ರಕಟಿಸುವ ಮೂಲಕ ಅಭಿನಯದಲ್ಲಿ ಖಳನನ್ನು ತೋರ್ಪಡಿಸಿದ್ದಾರೆ. ಇಮೇಜ್‌ಗಳ ಭರಾಟೆ ಅತಿಯಾಗಿದ್ದ ಕಾಲದಲ್ಲಿ ಸದಾ ಇಮೇಜ್‌ರಹಿತರಾಗೇ ಉಳಿದು ಅನೇಕ ವೈವಿಧ್ಯಮಯ ಪಾತ್ರಗಳನ್ನು ನಿರ್ವಹಿಸಿದ ಅನಂತ್‌ನಾಗ್ ಅಭಿನಯದ ಮಾದರಿ ಯಾವತ್ತೂ static ಆಗಿರಲಿಲ್ಲ ಮಾತ್ರವಲ್ಲ, ಪ್ರೇಕ್ಷಕರ ಅಪೇಕ್ಷೆಯ ನಿಯಂತ್ರಣಕ್ಕೆ ಒಳಪಟ್ಟಿರಲಿಲ್ಲ. ಸಿನಿಮಾ ಮಾಧ್ಯಮದಲ್ಲಿ ಅಭಿನಯ ಎಷ್ಟು ಪ್ರಯೋಗಶೀಲವಾಗಬಲ್ಲದು ಎಂಬುದಕ್ಕೆ ಕನ್ನಡ ಚಿತ್ರಗಳ ಸಂದರ್ಭದಲ್ಲಿ ಅನಂತ್‌ನಾಗ್ ಮಾದರಿಯೇ ಉದಾಹರಣೆ.

(ಚಿತ್ರ ೮೨) ಪ್ರಭಾಕರ್

(ಚಿತ್ರ ೮೩-೮೫) ಅಂಬರೀಷ್, ಸುಧಾರಾಣಿ, ರಮೇಶ್



(ಚಿತ್ರ ೮೬) ಅನಂತ್‌ನಾಗ್

ಮಾಡುವ ಕ್ರಮವನ್ನು ಉದಾಹರಣೆಯಾಗಿ ನೀಡಬಹುದು. 'ಬ್ಯಾಂಕರ್ ಮಾರ್ಗಯ್ಯ'ದ ಪಲ್ಲಟಗೊಂಡ ಜೀವನ ವಿಧಾನಕ್ಕೆ ಹೊಂದಿಸಿಕೊಂಡ ಚಲನೆ, ಭಾವ ಪರಿವರ್ತನೆ ಕೂಡ ಉತ್ತಮ ಉದಾಹರಣೆ. ವ್ಯಾಪಾರಿ ಚಿತ್ರಗಳಲ್ಲೂ ಸಾಕಷ್ಟು ಸಂಖ್ಯೆಯಲ್ಲಿ ಅಭಿನಯಿಸಿದ ಲೋಕೇಶ್ ಚಿತ್ರಗಳ ಧಾವಂತದ ನಡುವೆ ಕೂಡ ಸೂಕ್ಷ್ಮಗಳನ್ನು ಅಭಿವ್ಯಕ್ತಿಸುತ್ತಲೇ ಬಂದರು. ಇದಕ್ಕೆ 'ಮಲ್ಲಿಗೆ ಸಂಪಿಗೆ' ಚಿತ್ರದಲ್ಲಿ ತನ್ನ ಹೆಂಡತಿಗೆ ಕ್ಯಾನ್ಸರ್ ಎಂದು ತಿಳಿದು ತೊಳಲಾಡುವ ಸನ್ನಿವೇಶವನ್ನು ಗಮನಿಸಬಹುದು. ಪೋಷಕ ಪಾತ್ರಗಳನ್ನು ಅಭಿನಯಿಸಲು ಆರಂಭಿಸಿದ ಮೇಲೆ ಲೋಕೇಶ್ ಈ ಪಾತ್ರಗಳ ಘನತೆ ಮುಕ್ಕಾಗದ ಹಾಗೆ ಎತ್ತಿಹಿಡಿಯುವ ಶೈಲಿಯನ್ನು ರೂಢಿಸಿಕೊಂಡರು. 'ರಣಧೀರ'ದಂಥ ಪಕ್ಕಾವ್ಯಾಪಾರಿ ಚಿತ್ರದಲ್ಲಿ ಲೋಕೇಶ್ ಭಿನ್ನವಾಗಿ ನಿಲ್ಲುವುದು ಈ ಕಾರಣಕ್ಕೇ. ಹಾಗೇ 'ಭೂಮಿಗೀತ' ಚಿತ್ರದಲ್ಲಿ ಮಧ್ಯವರ್ತಿಯಾಗಿ ಗೊಲ್ಲ ಜನತೆಯ 'ಒಳ'ಗಿದ್ದು, ಜನರನ್ನು ವಂಚಿಸುವ ಪಾತ್ರದ ನಯವಂಚಕತೆಯನ್ನು ಸಂಭಾಷಣೆ ಹೇಳುವ ಶೈಲಿಯಲ್ಲಿ ಅವರು ಮೂಡಿಸಿದ ಕ್ರಮ ಗಮನಾರ್ಹ. 'ಬ್ಯಾಂಕರ್ ಮಾರ್ಗಯ್ಯ', 'ಕಾಕನಕೋಟೆ', 'ಸಂಗೀತಾ' ಚಿತ್ರಗಳಲ್ಲಿ ಲೋಕೇಶ್ ಅಭಿನಯ, ಕಲಾವಿದ ಪಾತ್ರವೊಂದನ್ನು ಎಷ್ಟರಮಟ್ಟಿಗೆ ಜೀವಂತವಾಗಿಸಿಬಿಡಬಲ್ಲ ಎಂಬುದಕ್ಕೆ ಸಾಕ್ಷಿಯಾಗಿದೆ.

೭೦ರ ದಶಕದಿಂದೀಚೆಗೆ ಬಂದ ನಾಯಕನಟರ ಅಭಿನಯಶೈಲಿಯಲ್ಲಿ ಪ್ರಮುಖವಾಗಿ ರಾಜಕುಮಾರ್ ಪ್ರಭಾವವನ್ನು ಕಾಣುತ್ತೇವೆ. ನಗುವ ಕ್ರಮ, ನಡಿಗೆಯ ಶೈಲಿ, ಕೋಪಿಸಿಕೊಳ್ಳುವ ರೀತಿ ಇಲ್ಲೆಲ್ಲ ನೂರಾರು ನಟರು ಅವರನ್ನು ಅನುಕರಿಸಿದ್ದಾರೆ. ಈ ಅನುಕರಣೆಯ ಪಂಥವನ್ನು ಅನಧಿಕೃತವಾಗಿ ಆರಂಭಿಸಿದವರು ಅಶೋಕ್. ಅನೇಕ ಆ್ಯಂಗಲ್‌ಗಳಲ್ಲಿ ರಾಜಕುಮಾರ್ ಶೈಲಿಯನ್ನೇ ಹೊಂದಿದ ಈ ಕಲಾವಿದ ಅಪರೂಪಕ್ಕೆ ತನ್ನ ಸ್ವಂತಿಕೆ ಪ್ರದರ್ಶಿಸಿದ್ದೂ ಇದೆ. 'ಅವಳ ಅಂತರಂಗ', 'ಮರಳು ಸರಪಣಿ', 'ಚೆಲ್ಲಿದ ರಕ್ತ' ಅಂಥ ಚಿತ್ರಗಳಲ್ಲಿ ಕೆಲವು. 'ಸನಾದಿ ಅಪ್ಪಣ್ಣ'ದಲ್ಲಿ ತಂದೆಯ ತ್ಯಾಗವನ್ನು ಮರೆತು ಸ್ವಾರ್ಥಿಯಾಗುವ ಮಗನ ಪಾತ್ರ. ಈ ಪಾತ್ರದ ಹಲವು ಸಂಕೀರ್ಣತೆಗಳನ್ನು ಅವರು ಅಭಿನಯಿಸದೆ, ಸರಳೀಕೃತ ನಿರ್ವಹಣೆ ತೋರಿದರು. ಇದು ಈ ಕಲಾವಿದನ ಮಿತಿ. 'ರಂಗನಾಯಕಿ' ಚಿತ್ರದ ಸೆಮಿ-ವಿಲನ್ ಪಾತ್ರವನ್ನು ಪುಟ್ಟಣ್ಣನವರ working philosophyಗೆ ತಕ್ಕಂತೆ ನಟಿಸಿದ ಅಶೋಕ್ ಅವರಲ್ಲಿ ಇಂಥ ಪಾತ್ರ ನಿಷ್ಠೆಯನ್ನು ಅನೇಕ ಕಡೆ ನೋಡುತ್ತೇವೆ.

ಕಲಾತ್ಮಕ ಚಿತ್ರಗಳಿಗೆ ಭಿನ್ನ ಅಭಿನಯ ಕ್ರಮ ಬೇಕಿತ್ತು. ಅತಿ ಅನ್ನಿಸದೆ ಅಭಿನಯವನ್ನು ಲಭ್ಯ ಪರಿಕರ ಎಂಬ ಮಿತಿಯಲ್ಲಿ ಅರ್ಥ ಮಾಡಿಕೊಂಡು ಅದಕ್ಕೆ ಅನುಗುಣವಾಗಿ ಅಭಿನಯಿಸುವ ಕಲಾವಿದರು ಇಂಥ ಚಿತ್ರಗಳಿಗೆ ಬೇಕಿತ್ತು. ನಮ್ಮಲ್ಲಿ ದೊಡ್ಡಸಂಖ್ಯೆಯಲ್ಲಿ ಅಲ್ಲದಿದ್ದರೂ ಈ ಸವಾಲನ್ನು ಒಪ್ಪಿಕೊಂಡ ಹಲವಾರು ಕಲಾವಿದರಿದ್ದಾರೆ. ಗಿರೀಶ್ ಕಾರ್ನಾಡ್ ಬರಹಗಾರರಾಗಿ, ನಾಟಕಕಾರರಾಗಿ, ಮಾಧ್ಯಮ ಕುರಿತ ಚಿಂತಕರಾಗಿ, ನಿರ್ದೇಶಕರಾಗಿ ಕೆಲಸ ಮಾಡಿದ ಪ್ರತಿಭಾವಂತ. ಆದರೆ ಅಭಿನಯ ಎಂಬ ನೆಲೆ ಬಂದಾಗ, ಇವರೊಳಗಿನ ಕಲಾವಿದ ಅನೇಕ ಕಡೆ ಪೂರ್ತಿಯಾಗಿ ಅಭಿವ್ಯಕ್ತವಾಗಲೇ ಇಲ್ಲ. ಪಾತ್ರದ ಖಚಿತ ನೆಲೆಯ ಬಗ್ಗೆ ಎಚ್ಚರದಿಂದ ಇರುವ ಕಾರ್ನಾಡ್ ಪಾತ್ರದ ಮೂಲಭೂತ ಪ್ರವೃತ್ತಿಯನ್ನು ಸೂಕ್ಷ್ಮವಾಗಿ ಗುರುತಿಸಿಕೊಳ್ಳುತ್ತಾರೆ. ಪಾತ್ರಕ್ಕೆ ತಕ್ಕ ಹಾವ-ಭಾವ, ನಡಿಗೆಯ ಶೈಲಿ ಎಲ್ಲವೂ ವಾಸ್ತವಿಕತೆಯಿಂದಿದ್ದು ಮೂಡಿಬರುತ್ತದೆ. ಆದರೆ

ಚಿತ್ರರಂಗದ ಸಾಧ್ಯತೆಗಳ ಬಗ್ಗೆ ಸದಾ ಪ್ರಯೋಗಶೀಲರಾಗಿದ ಶಂಕರ್‌ನಾಗ್ ವೈವಿಧ್ಯಮಯ ಅಭಿನಯದ ಮಾದರಿಗಳನ್ನೇನೂ ಕಾಣಲಿಲ್ಲ. ಆಗಲೇ ಸಿದ್ಧವಾಗಿದ್ದ ಮಾರಾಮಾರಿ ಮಾದರಿಯೊಂದರಲ್ಲಿ ಸಿಕ್ಕಿಬಿದ್ದ ಶಂಕರ್‌ನಾಗ್ ಅಂಥ ಪಾತ್ರಗಳನ್ನೇ ಹೆಚ್ಚಾಗಿ ನಿರ್ವಹಿಸಿದರು. ಸಂಭಾಷಣೆ ಹೇಳುವಲ್ಲಿ ಕೊಂಚ ನಾಟಕೀಯತೆ ಬೆರೆಸುವ ಮೂಲಕ ವೈವಿಧ್ಯ ಸಾಧಿಸಿದ್ದೊಂದೇ ಅವರ ಅಭಿನಯಶೈಲಿಯಲ್ಲಿ ಗುರುತಿಸಬಹುದಾದ ಅಂಶ. 'ಆಕ್ಸಿಡೆಂಟ್', 'ಮಿಂಚಿನ ಓಟ', 'ನೋಡಿ ಸ್ವಾಮಿ ನಾವಿರೋದು ಹೀಗೆ'ಯಂಥ ವೈವಿಧ್ಯಮಯ ಪಾತ್ರಗಳು ಶಂಕರ್‌ನಾಗ್‌ಗೆ ಮತ್ತಷ್ಟು ದೊರೆತಿದರೆ ಅವರ ಅಭಿನಯಶೈಲಿಗೆ ಒಂದು ರೂಪ ಬರುತ್ತಿತ್ತೋ ಏನೋ. ಅವರ ಕೃತಕ ಅನ್ನಿಸುವ ನಡಿಗೆಯೇ ಕ್ರಮೇಣ ಒಂದು ವಿಶಿಷ್ಟ ಶೈಲಿಯಾಗಿ ಪ್ರಿಯವೆನಿಸಿಬಿಟ್ಟಿತು. ಅವರು ಹಲ್ಲುಕಚ್ಚಿ ಮಾತಾಡುವ ಶೈಲಿಯೂ ಹಾಗೇ ಗುಣವಾಗಿ ಪರಿವರ್ತಿತವಾಯಿತು.

(ಚಿತ್ರ ೮೭) ಶಂಕರ್‌ನಾಗ್

ವೃತ್ತಿ ರಂಗಭೂಮಿ ಮತ್ತು ಹವ್ಯಾಸಿ ರಂಗಭೂಮಿಗಳೆರಡರಲ್ಲೂ ಬಾಲನಟನಿಂದ ಪ್ರಬುದ್ಧ ನಟನೆಯವರೆಗೆ ಅನುಭವ ಪಡೆದ ಲೋಕೇಶ್ ತಮ್ಮದೇ ಅಭಿನಯಶೈಲಿ ರೂಢಿಸಿಕೊಂಡ ಕಲಾವಿದ. 'ಭೂತಯ್ಯನ ಮಗ ಅಯ್ಯು' ಚಿತ್ರದ ಪರಿವರ್ತಿತವಾಗುವ ದುಷ್ಟ ಪಾತ್ರದ ಮೂಲಕ ಗಮನ ಸೆಳೆದ ನಟ ಲೋಕೇಶ್ ಮುಖ್ಯವಾಗಿ ಪಾತ್ರದ biographyಯನ್ನು ಅರ್ಥ ಮಾಡಿಕೊಂಡು ಚಿತ್ರದಲ್ಲಿ ಅವರ ನಿರ್ದಿಷ್ಟತೆಗೆ ಅನುಗುಣವಾಗಿ ಅಭಿನಯಿಸುವ ಸೂಕ್ಷ್ಮತೆ ಪ್ರದರ್ಶಿಸುತ್ತ ಬಂದಿದ್ದಾರೆ. ಇದರಿಂದ ಅವರಿಗೆ ಯಾವುದೇ ಶೈಲಿಯ ಚಿತ್ರವಾದರೂ ಸಹಜ ಅಭಿನಯ ಸಾಧ್ಯ. 'ಪರಸಂಗದ ಗೆಂಡೆತಿಮ್ಮ', 'ಸಂಕ್ರಾಂತಿ', 'ಭುಜಂಗಯ್ಯನ ದಶಾವತಾರ' ಚಿತ್ರಗಳ ಕ್ಷೋಭೆಗೆ ಒಳಗಾದ ಪಾತ್ರಗಳ ತುಮುಲವನ್ನು ತಮ್ಮ ಗೆಶ್ಚರ್‌ಗಳ ಮೂಲಕವೇ ವಿಶಿಷ್ಟವಾಗಿ ಅಭಿನೀತಗೊಳಿಸಿದ್ದಾರೆ. ಇದಕ್ಕೆ ತನ್ನ ಹೆಂಡತಿ ಕುರಿತು ಗೊಂದಲಕ್ಕೆ ಒಳಗಾದ ಗೆಂಡೆತಿಮ್ಮ ಕೊಳಕ್ಕೆ ಕಲ್ಲು ಎಸೆಯುವುದು, 'ಭುಜಂಗಯ್ಯನ ದಶಾವತಾರ' ಚಿತ್ರದ ಸ್ಥಿತ್ಯಂತರಗಳಲ್ಲಿ "ಲೋ ನೀನಿದ್ದೀಯಲ್ಲ" ಎಂಬ ಸಂಭಾಷಣೆಗೆ ಅನುವು

(ಚಿತ್ರ ೯೦-೯೧) ಲೋಕೇಶ್, ಉಪಾಸನೆ ಸೀತಾರಾಂ

(ಚಿತ್ರ ೯೦-೯೧) ಗಿರೀಶ್ ಕಾರ್ನಾಡ್ ಶ್ರೀಧರ್

ಸಂಭಾಷಣೆ ಕ್ರಮದಲ್ಲಿ ವೈವಿಧ್ಯ ರೂಢಿಸಿಕೊಳ್ಳದೆ ಹೋಗಿದ್ದರಿಂದ ಅಲ್ಲಿ ಪಾತ್ರದಿಂದ ಭಿನ್ನವಾಗಿ ನಿಲ್ಲುತ್ತಾರೆ. 'ಸಂಸ್ಕಾರ'ದ ಪ್ರಾಣೇಶಾಚಾರ್ಯ, 'ಮೈಸೂರು ಮಲ್ಲಿಗೆ'ಯ ಶ್ಯಾನುಭೋಗ, 'ಕಾನೂರು ಹೆಗ್ಗಡಿತಿ'ಯ ಚಂದ್ರಪ್ಪಗೌಡ ಇವೆಲ್ಲ ಜನರ ಮನಸ್ಸಿನಲ್ಲಿ ಶಾಶ್ವತವಾಗಿಯೇ ನೆಲೆ ನಿಂತ ಪಾತ್ರಗಳಾದ್ದರಿಂದಲೇ ಕಾರ್ನಾಡರಿಗೆ ಆ ಪಾತ್ರಗಳಿಗೆ ಅಗತ್ಯವಾದ ಅಧಿಕೃತತೆ ಕೊಡುವುದು ಸಾಧ್ಯವಾಗಲೇ ಇಲ್ಲ. ಈ ಪಾತ್ರಗಳ ಸಾಹಿತ್ಯಿಕ ರೂಪ ಮೀರುವುದು ಅವರಿಂದ ಸಾಧ್ಯವಾಗಲಿಲ್ಲ. ವ್ಯಾಪಾರಿ ಚಿತ್ರಗಳಿಗೆ ಬಂದರೆ ಕಾರ್ನಾಡರು ಅಚ್ಚರಿ ಹುಟ್ಟಿಸುವಷ್ಟು ಹೊಂದಾಣಿಕೆ ಮಾಡಿಕೊಳ್ಳುತ್ತಾರೆ. ತೀರಾ ಪ್ರಾಥಮಿಕ ಸೂಕ್ಷ್ಮಗಳ ಅಭಿವ್ಯಕ್ತಿಗೆ ಪ್ರಯತ್ನಿಸುವುದಿಲ್ಲ. 'ನೆನಪಿನ ದೋಣಿ', 'ಜನುಮದಾತ' ಚಿತ್ರಗಳನ್ನು ಉದಾಹರಣೆಯಾಗಿ ನೀಡಬಹುದು. ತುಂಬ ಭಿನ್ನವೆನಿಸಿದ್ದು 'ಸಿಂಧು ಭೈರವಿ'ಯ ನಾಟ್ಯಾಚಾರ್ಯನ ಚಿತ್ರ. ಅಂಥದೇ ಅಭಿನಯ ವಿಶೇಷ ತೋರಬಲ್ಲ 'ಶಿಶುನಾಳ ಶರೀಫ', 'ಪಂಚಾಕ್ಷರ ಗವಾಯಿ' ಕೂಡ ಹೆಸರಿಸಬಹುದು.

'ಚೋಮನ ದುಡಿ' ಚಿತ್ರದಲ್ಲಿ ಚೋಮನ ಪಾತ್ರ ನಿರ್ವಹಿಸಿದ ಎಂ.ವಿ.ವಾಸುದೇವರಾವ್, ಸುದೀರ್ಘ ರಂಗಭೂಮಿ ಅನುಭವ ಉಳ್ಳ ಕಲಾವಿದ. ಹೀಗಿದ್ದೂ ರಂಗಭೂಮಿಗಿಂತ ಚಿತ್ರರಂಗ ಬೇರೆ ಎಂಬ ಎಚ್ಚರಿಕೆಯ ಅಭಿನಯವನ್ನು ಅವರಲ್ಲಿ ಕಾಣುತ್ತೇವೆ. ಕ್ಯಾಮರಾ ಆ್ಯಂಗಲ್‌ಗಳನ್ನು ಅವರು 'ಚೋಮನದುಡಿ' ಚಿತ್ರದಲ್ಲಿ ಕ್ಲೈಮ್ಯಾಕ್ಸ್ ಸನ್ನಿವೇಶದಲ್ಲಿ ಪ್ರಭಾವಶಾಲಿಯಾಗಿ ಬಳಸಿಕೊಂಡಿದ್ದಾರೆ. ದುರಂತವೆಂದರೆ ಕನ್ನಡ ಚಿತ್ರರಂಗ ಈ ಪ್ರತಿಭೆಯನ್ನು ಬಳಸಿಕೊಳ್ಳಲೇ ಇಲ್ಲ. 'ಒಂದು ಊರಿನ ಕತೆ', 'ಕಳಸಾಪುರದ ಹುಡುಗರು' ಚಿತ್ರದಲ್ಲಿ ಅವರು ಅಭಿನಯಿಸಿದರೂ ಸವಾಲಿನ ಪಾತ್ರಗಳು ದೊರೆಯದೆ, ಪೋಷಕ ಪಾತ್ರಗಳ ಅಂಚಿನಲ್ಲೇ ಒದ್ದಾಡಿದರು. ಇವರ ಕಂಠಸ್ವರ ಚಲನಚಿತ್ರಕ್ಕೆ ಹೊಂದಿಕೊಳ್ಳಲಿಲ್ಲ ಎಂಬುದು ಗಮನಿಸಬೇಕಾದ ಸಂಗತಿ.

ಇದೇ ಅಲೆಯಲ್ಲಿ ಬಂದ ಸುರೇಶ್ ಹೆಬ್ಳೀಕರ್ ಹವ್ಯಾಸಿ ರಂಗಭೂಮಿಯ ಸಂಯಮದ ಅಭಿನಯ ಕ್ರಮ ಅಳವಡಿಸಿಕೊಂಡವರು. ಪರಿಳಿತವಿಲ್ಲದೆ ಸಂಭಾಷಣೆ ಹೇಳುವ ವಿಧಾನ, ಮೂಲ ಅಂಶವನ್ನು ಕ್ಯಾಮರಾ ಆ್ಯಂಗಲ್‌ಗೆ ಪೂರಕವಾಗುವಂತೆ ಅಭಿವ್ಯಕ್ತಿಸುವ ಕ್ರಮ, ಎಲ್ಲಕ್ಕಿಂತ ಹೆಚ್ಚಾಗಿ ಪಾತ್ರದ ತುಮುಲಗಳನ್ನು ಕೆಲವು ಸ್ಥಿರ ಹಾವಭಾವಗಳ ಮೂಲಕ ಪ್ರತಿಪಾದಿಸುವ ರೀತಿ ಅವರ ಅಭಿನಯದ ಶೈಲಿ. 'ಋಷ್ಯಶೃಂಗ', 'ಅಂತರಾಳ', 'ಅಪರಿಚಿತ'ದಂಥ ಅತೃಪ್ತಕಾಮಿಯ ಪಾತ್ರ ಅವರ ವ್ಯಾಪ್ತಿ ಮೀರಿದ್ದು. ಹೀಗಾಗಿ 'ಎಡಕಲ್ಲು ಗುಡ್ಡದ ಮೇಲೆ' ಚಿತ್ರದ ಜಯಂತಿಯಷ್ಟು ಶಕ್ತಿಯುತವಾಗಿ ಇಂಥದೇ ಪಾತ್ರವನ್ನು ನಿರ್ವಹಿಸುವುದು ಹೆಬ್ಳೀಕರ್‌ಗೆ ಸಾಧ್ಯವಾಗಲಿಲ್ಲ. ಮುಂದೆ ಪೋಷಕಪಾತ್ರ ನಿರ್ವಹಿಸುವಾಗ ಅವರ ಅಭಿನಯಶೈಲಿಯಲ್ಲಿ ಮಾರ್ಪಾಟು ಕಾಣುವುದಿಲ್ಲ. ಇದರಿಂದ ಹೆಬ್ಳೀಕರ್‌ಗೆ ಅಭಿನಯದ ಸಾಧ್ಯತೆ ವಿಸ್ತರಿಸಿಕೊಳ್ಳುವುದು ಅಗತ್ಯವಿದ್ದಾಗಲೂ ಸಾಧ್ಯವಾಗಿಲ್ಲ.

ಕಲಾತ್ಮಕ ಚಿತ್ರಗಳಿಗೆ ಬೇಕಾದ 'ಸಂಯಮ', ವ್ಯಾಪಾರಿ ಚಿತ್ರಗಳಿಗೆ ಬೇಕಾದ 'ತೀವ್ರತೆ', ಎರಡನ್ನೂ ಸಂಯೋಜಿಸಿಕೊಂಡ ವಿಶಿಷ್ಟ ಕಲಾವಿದ ಗುತ್ತಿಗೇರಿ ಮಾನಪ್ಪ ಅಥವಾ ಮಾನು. ಲವಲವಿಕೆಯ ಅಭಿನಯದಿಂದ ತಮ್ಮ ಪಾತ್ರಗಳನ್ನು ಚಲನಶೀಲ ಆಗುವಂತೆ ನೋಡಿಕೊಂಡ ಅವರು ಪಾತ್ರಗಳ ಗತಿಸ್ಥಿತಿಯನ್ನು ನಿಖರವಾಗಿ ಗುರುತಿಸಿಕೊಂಡು ಅಭಿನಯಿಸುತ್ತಿದ್ದರು. 'ಪರಸಂಗದ ಗೆಂಡೆತಿಮ್ಮ'ದ ಪ್ರತಿನಾಯಕನ ರೂಪದಲ್ಲಿ ಪ್ರೇಮಿಯಾಗಿ, 'ಕಾಡುಕುದುರೆ'ಯ ಭಗ್ನಪ್ರೇಮಿಯಾಗಿ, 'ಗಂಧರ್ವಗಿರಿ'ಯ ವಿಲನ್ ಆಗಿ ಅವರು ನೀಡಿದ ಅಭಿನಯ ನೆನಪಿನಲ್ಲಿ ಉಳಿಯುವಂಥದು. 'ಅರಿವು', 'ಬೆಂಕಿ', 'ಕರಡೀಪುರ' ಮೊದಲಾದ ಚಿತ್ರಗಳಲ್ಲಿಯೂ ಇದ್ದರು. ಮುಖ್ಯವಾಗಿ ಮಾನು ಪ್ರತಿಭೆಯನ್ನು ಎರಡೂ ಪ್ರಕಾರಗಳು ಸಮರ್ಥವಾಗಿ ಬಳಸಿಕೊಳ್ಳದೇ ಹೋಗಿದ್ದಂತು ವಿಷಾದದ ಸಂಗತಿ. ಮಾನು ಬಹುತೇಕ ಹೊಸ ಅಲೆ ಚಿತ್ರಗಳಿಗೆ, ಮಧ್ಯಮ ವರ್ಗದ ಚಿತ್ರಗಳಿಗೆ ಹೊಂದಿಕೊಂಡರು. ತುಸು ದೊರಗು ಅನ್ನಿಸುವ ಕಂಠ, ಭಾವರಹಿತ ಮುಖ ವಾಣಿಜ್ಯವಲಯಕ್ಕೆ ಬೇಕಾಗಲಿಲ್ಲ.

ಅಭಿನಯಿಸಿದ್ದು ಕೆಲವೇ ಚಿತ್ರಗಳಾದರೂ ತಮ್ಮದೇ ಶೈಲಿ ರೂಪಿಸಿಕೊಂಡ ಮೂಲತಃ ರಂಗ ಕಲಾವಿದ ಪಿ.ಎಸ್.ಶ್ರೀನಿವಾಸ್. ಕ್ಯಾಮರಾ ಆ್ಯಂಗಲ್‌ಗಳ ಮೂಲಕವೇ ಅಭಿನಯಶೈಲಿ ರೂಢಿಸಿಕೊಳ್ಳುತ್ತಿದ್ದ ಕಲಾವಿದರಿದ್ದ ಕಾಲದಲ್ಲಿ ಚಿತ್ರರಂಗದ ನಿಜವಾದ ಶಕ್ತಿಯನ್ನು ಗುರುತಿಸಿಕೊಂಡು ಸಹಜ ಅಭಿನಯ ಪ್ರದರ್ಶಿಸಿದ ಕಲಾವಿದ ಇವರು. 'ಸ್ಪಂದನ', 'ಅಭಿಮಾನ', 'ಏನೇ ಬರಲಿ ಪ್ರೀತಿ ಇರಲಿ' ಇವರ ನಿರ್ದೇಶನವಿದ್ದ ಅಭಿನಯದಲ್ಲೂ ಗಮನ ಸೆಳೆದ ಚಿತ್ರಗಳು.

ಸಂಭಾಷಣೆ ಹೇಳುವ ಶೈಲಿಯಲ್ಲಿ ಕೊಂಚ ಗಡುಸಾದ ಸ್ವರದ ಸಾಧ್ಯತೆಯಿಂದ ವಿಶಿಷ್ಟ ಮರುಧ್ವನಿ (echo) ಗಳಿಸಿಕೊಂಡು ತಮ್ಮದೇ ಛಾಪು ಮೂಡಿಸಿದ ಜಿ.ಕೆ.ಗೋವಿಂದರಾವ್ ಹವ್ಯಾಸಿ ರಂಗಭೂಮಿಯ ಪ್ರಭಾವಿ ಹಿನ್ನೆಲೆಯಿಂದ ಬಂದಿದ್ದರೂ ಆಂಗಿಕ ಅಭಿನಯವನ್ನು ಪೂರ್ಣ ಮರೆತ ಶೈಲಿ ರೂಢಿಸಿಕೊಂಡರು. 'ಚಲನೆ' ಇಲ್ಲದ ಸ್ಥಿರಭಂಗಿಯಲ್ಲಿ ಪಾತ್ರಗಳನ್ನು ನಿರ್ವಹಿಸುವ ಕ್ರಮ ಕಲಾತ್ಮಕ ಚಿತ್ರಗಳ ಮಟ್ಟಿಗೆ ಅನಿವಾರ್ಯವಾಗಿದ್ದರೂ ವ್ಯಾಪಾರಿ ಚಿತ್ರಗಳಲ್ಲಿ ಆಭಾಸವಾಗಿ ಕಾಣುತ್ತದೆ. ಇಂಥದೇ ಸಮಸ್ಯೆ ಲೋಹಿತಾಶ್ವ ಅವರಲ್ಲೂ ಇದೆ. ಲೋಹಿತಾಶ್ವ ಕೊಂಚ ಸಂಯಮದ ಹಾವಭಾವಗಳನ್ನು ರೂಢಿಸಿಕೊಂಡಿದ್ದರಿಂದ ಅಲ್ಲಲ್ಲಿ ಪ್ರಭಾವೀ ಅಭಿನಯ ನೀಡುವುದು



(ಚಿತ್ರ ೯೨-೯೫) ಸುರೇಶ್ ಹೆಬ್ಳೀಕರ್ ಸುಂದರಕೃಷ್ಣ ಅರಸ್ ಸಿ.ಆರ್.ಸಿಂಹ ಮಾನು

(ಚಿತ್ರ ೯೫-೧೦೧) ಕಾಶೀನಾಥ್

ಉಪೇಂದ್ರ

ಮುರಳಿ

ಸುಂದರರಾಜ್

ಸಾಧ್ಯವಾಯಿತು. ಒಳ್ಳೆಯ ರಾಜಕಾರಣ ಅಥವಾ ಮಂತ್ರಿ ಹೇಗಿರಬೇಕೆಂಬ ಮಾದರಿಯೊಂದನ್ನು ರೂಪಿಸಿದರು. ಅವರು ನೆನಪಿನಲ್ಲಿ ಉಳಿಯುವುದು ಹಾವಭಾವಗಳ ಮೂಲಕವೇ. ಶರತ್ ಲೋಹಿತಾಶ್ವ ಕೂಡಾ ತಂದೆಯ ಮಾದರಿಯನ್ನೇ ಅನುಕರಿಸಿದರು. ಆದರೆ ತುಸು ಒರಟಾದ (ರೋಬಸ್ಟ್) ಧಾಟಿಯಿಂದಾಗಿ ಖಳಪಾತ್ರಗಳಲ್ಲಿ ವಿಶೇಷ ಅಭಿನಯ ಕೊಡಲು ಅವರಿಗೆ ಸಾಧ್ಯವಾಯಿತು.

ಮೈಮ್ ರಂಗಭೂಮಿ ಮೊದಲಾದ ಹಲವಾರು ಪ್ರಕಾರಗಳಲ್ಲಿ ತಮ್ಮನ್ನು ಗಂಭೀರವಾಗಿ ತೊಡಗಿಸಿಕೊಂಡ ಸಿ.ಆರ್.ಸಿಂಹ ಆಂಗಿಕ, ವಾಚಿಕ ಎರಡರಲ್ಲೂ ಪ್ರಯೋಗಶೀಲತೆ ಅಳವಡಿಸಿಕೊಂಡ ಕಲಾವಿದ. ಪ್ರೇಕ್ಷಕನ ರೂಢಿಗತ ನಂಬಿಕೆಗಳನ್ನು ಬಳಸಿಕೊಂಡು ಅರ್ಥ ಹೊರಡಿಸಲು ಪ್ರಯತ್ನಿಸಿದ ಅವರು ತೆರೆಯ ಮೇಲೆ ಮೂಡುವ ತಮ್ಮ ಬಗ್ಗೆ ಎಚ್ಚರಿಕೆ ವಹಿಸದಿದ್ದುದರಿಂದ ಅವರ ಪ್ರಯೋಗಶೀಲತೆಯ ಪೂರ್ತಿಪರಿಣಾಮ ಲಭ್ಯವಾಗಲಿಲ್ಲ. ಮುಖ್ಯವಾಗಿ ಕಲಾತ್ಮಕ ಚಿತ್ರಗಳಲ್ಲಿ ಪ್ರೇಕ್ಷಕರನ್ನು ಕಲಕುವುದು ಅವರಿಗೆ ಸಾಧ್ಯವಾಗಲಿಲ್ಲ ('ಸಂಸ್ಕಾರ', 'ಸಂಕಲ್ಪ'ಗಳನ್ನು ಬಿಟ್ಟು) ಆದರೆ ಹಾಸ್ಯಪಾತ್ರಗಳಲ್ಲಿ ಚಲನೆಯನ್ನು ನಿಖರವಾಗಿ ರೂಪಿಸಿದರಿಂದ ತಕ್ಕಮಟ್ಟಿಗೆ ಪರಿಣಾಮ ಕಂಡುಬಂದಿದೆ. 'ಚಿತೆಗೂ ಚಿಂತೆ' ಚಿತ್ರದ ವ್ಯಾಪಾರಿ ಚಿತ್ರಗಳ ಚಾಕಲೇಟ್ ಹೀರೋಗಳನ್ನು ಗೇಲಿ ಮಾಡುವ ವಿಡಂಬನೆ ಮಾದರಿ ಪಾತ್ರದಲ್ಲಿ ಅವರು ನೀಡಿದ ಅಭಿನಯ ಅವರ ನಿಜವಾದ ಪ್ರತಿಭೆಗೆ ಸಾಕ್ಷಿ.

(ಚಿತ್ರ ೧೦೦ ೧೦೧) ಶಿವರಾಜ್ ಕುಮಾರ್

ಪುಟ್ಟಣ್ಣ ಕಣಗಾಲ್ ಗರಡಿಯಿಂದ ಬಂದ ಕಲಾವಿದರಲ್ಲೆಲ್ಲ ಅವರ working philosophyಯ basics ಕೆಲಸ ಮಾಡುವುದನ್ನು ಗಮನಿಸಬಹುದು. ವಿಷ್ಣುವರ್ಧನ್, ಅಂಬರೀಷ್, ಶ್ರೀನಾಥ್ ಪ್ರಯತ್ನಪೂರ್ವಕವಾಗಿ ಇದನ್ನು ಮೀರಿ ಜನಪ್ರಿಯತೆಯ ಚೌಕಟ್ಟಿಗೆ ತಮ್ಮ ಶೈಲಿಯನ್ನು ಮಾರ್ಪಡಿಸಿಕೊಂಡಿದ್ದಾರೆ. ಕೆಲವರು ಈ ಬದಲಾವಣೆ ಮಾಡಿಕೊಳ್ಳದೇ ಹೋದರು. ರಾಮಕೃಷ್ಣ ಇಂಥ ಕಲಾವಿದರಲ್ಲಿ ಪ್ರಮುಖ. ಮರಿನಾಯಕ, ಉತ್ಸಾಹೀ ನಾಯಕನಿಂದ ಹಿಡಿದು ಪೋಷಕ ಪಾತ್ರಗಳವರೆಗೆ ಹಲವು ಸ್ತರದ ಪಾತ್ರ ನಿರ್ವಹಿಸಿದರೂ ಅಂಚಿನವರೆಗೂ ತೀವ್ರತೆ ಒಯ್ಯುವ ಶೈಲಿಯಲ್ಲಿ ವ್ಯತ್ಯಾಸ ಕಾಣುವುದಿಲ್ಲ. ಪಾತ್ರಗಳ ಸಾಧ್ಯತೆಗೆ ಅನುಗುಣವಾಗಿ ಅಭಿನಯಿಸುವ ಕ್ರಮ ಎಲ್ಲಾ ಸಂದರ್ಭದಲ್ಲೂ ರೂಢಿಸಿಕೊಳ್ಳದೆ ಹೋಗಿದ್ದರಿಂದ ರಾಮಕೃಷ್ಣ ಕೆಲವು ಪಾತ್ರಗಳಲ್ಲಿ ಮಾತ್ರ ಜೀವಂತ ಅಭಿನಯ ನೀಡುತ್ತಾರೆ. ಇದೇ ಮಿತಿಯನ್ನು ಜೈಜಗದೀಶ್ ಅವರಲ್ಲೂ ಕಾಣಬಹುದಾದರೂ ಆಂಗಿಕ ಅಭಿನಯದ ಮಟ್ಟಿಗೆ ಈ ಕಲಾವಿದನಿಗೆ ಪಾತ್ರದ ನಿಲುವಿಗೆ ಅನುಗುಣವಾಗಿ ಅಭಿನಯಿಸುವುದು ಸಾಧ್ಯವಾಗಿದರಿಂದ ನೇತ್ಯಾತ್ಮಕ ಪಾತ್ರಗಳಲ್ಲಿ ಗೆಲ್ಲುವುದು ಸಾಧ್ಯವಾಯಿತು. 'ಬಂಧನ', 'ಹೃದಯ ಬಂಧನ', 'ಗಾಳಿಮಾತು' ಮುಂತಾದ ಚಿತ್ರಗಳಲ್ಲಿ ಜೈಜಗದೀಶ್ ಚಿತ್ರದ ಮೂಲತತ್ವವನ್ನು ಕಾಪಾಡುವ ಮಾದರಿಯಲ್ಲಿ ನೀಡಿದ ಅಭಿನಯ ಮುಖ್ಯವಾಗಿ ಗುರುತಿಸಬೇಕಾದ್ದು.

ಶ್ರೀಧರ್ ಹಲವು ಧಾಟಿಯ ಪಾತ್ರಗಳನ್ನು ನಿರ್ವಹಿಸಿದ ಕಲಾವಿದ. ಭರತನಾಟ್ಯದ ಹಿನ್ನೆಲೆಯಿಂದ ಬಂದಿದ್ದರಿಂದ ಆಂಗಿಕ ಅಭಿನಯ ಅವರಲ್ಲಿ ಸಹಜವಾಗಿ ಕಾಣುತ್ತದೆ. ಆದರೆ ಪಾತ್ರಗಳ biographyಗೆ ಗಮನ ಕೊಡದೆ ಅಭಿನಯಿಸುವುದರಿಂದ ಅದು static ಆಗಿಯೇ ಕಾಣುತ್ತದೆ. 'ಅಮೃತ ಘಳಿಗೆ'ಯ ತ್ಯಾಗಿ ಪಾತ್ರಕ್ಕೆ ಅವರ ಅಭಿನಯಶೈಲಿ ಹೊಂದುತ್ತದೆ. ಆದರೆ ಸಂಕೀರ್ಣ ಪಾತ್ರಗಳ ಸಂದರ್ಭದಲ್ಲಿ ಇದು ಸಾಕಾಗುವುದಿಲ್ಲ. 'ಬಣ್ಣದ ವೇಷ', 'ಸಂತ ಶಿಶುನಾಳ ಶರೀಫ' ಮುಂತಾದ ಎರಡು ಮೂರು ಘಟ್ಟಗಳ ಅಭಿನಯ ಅಗತ್ಯ ಎನ್ನಿಸುವ ಚಿತ್ರಗಳಲ್ಲಿ ಶ್ರೀಧರ್ ಬಹುಮಟ್ಟಿಗೆ stock expressionಗಳಲ್ಲಿ ತಪ್ಪರಾಗುತ್ತಾರ. ಇದರಿಂದ ಅವರ ಪಾತ್ರಗಳು ಅಥೆಂಟಿಕ್ ಆಗಿ ಕಾಣುವುದಿಲ್ಲ. ವ್ಯಾಪಾರಿ ಚಿತ್ರಗಳ

(ಚಿತ್ರ ೧೦೪) ರಮೇಶ್, ವಿನೋದ್ ರಾಜ್

ಮಾಮೂಲಿ ಪಾತ್ರಗಳಲ್ಲೂ ಕೂಡ ಶ್ರೀಧರ್ ಚೌಕಟ್ಟು ಮುರಿಯಲು ಪ್ರಯತ್ನಿಸಲಿಲ್ಲ. ಹೀಗಾಗಿ ಶಕ್ತಿಯುತ ಅನ್ನಿಸಲಿಲ್ಲ. ಆಂಗಿಕ, ವಾಚಿಕ ಅಭಿನಯದ ಶಕ್ತಿ ಹೊಂದಿದ್ದ ಪರಿಣಾಮಕಾರಿ ಅಭಿನಯಶೈಲಿ ಅವರಲ್ಲಿ ರೂಪುಗೊಳ್ಳದೆ ಹೋಗಿದ್ದನ್ನು ಗಮನಿಸಬಹುದು. 'ಆಸ್ಫೋಟ'ದಂಥ ಚಿತ್ರದ ಅಭಿನಯ ಈ ಮಾತಿಗೆ ಅಪವಾದ. ಇಂಥಲ್ಲಿ ಕಲಾವಿದ ನಿರ್ದೇಶಕ ಯಾರ ಪ್ರತಿಭೆ ಕೆಲಸ ಮಾಡಿದೆ ಎಂಬುದನ್ನು ಊಹೆಗೆ ಬಿಡಬೇಕು.



(ಚಿತ್ರ ೧೦೫) ರಮೇಶ್ ಭಟ್, ಸುಧಾ ನರಸಿಂಹರಾಜು

ವೃತ್ತಿ ರಂಗಭೂಮಿಯ ತೊಡಗುವಿಕೆಯನ್ನು ಹಿನ್ನೆಲೆಯಾಗಿ ಉಳ್ಳ ಶೈಲಿ ಶ್ರೀನಿವಾಸಮೂರ್ತಿ ಅವರದು. ತಮ್ಮ ಪಾತ್ರದ ಚೌಕಟ್ಟಿಗೆ ತಕ್ಕಂತೆ ಕಂಟ್ರೋಲ್ಡ್ ಆಗಿ ಅಭಿನಯಿಸುವ ಅವರಿಗೆ ಸಿಕ್ಕಿದ್ದೆಲ್ಲ ಹೆಚ್ಚಾಗಿ ಎರಡನೆ ನಾಯಕನ ಪಾತ್ರವಾದ್ದರಿಂದ ಪೂರಕ ಅಭಿನಯಶೈಲಿಯನ್ನು ರೂಢಿಸಿಕೊಂಡು ಬಂದರು. ಮುಂದೆ ಪೋಷಕ ಪಾತ್ರಗಳ ನಿರ್ವಹಣೆಯಲ್ಲಿ ಇದು ಮುಂದುವರಿಯಿತು. compartmental ಅನ್ನಿಸುವ ಶೈಲಿಯನ್ನು ಪ್ರಜ್ಞಾಪೂರ್ವಕವಾಗಿ ಒಪ್ಪಿಕೊಂಡಂತಿರುವ ಈ ಕಲಾವಿದನಿಗೆ ಸವಾಲಿನ ಪಾತ್ರಗಳ ಕೊರತೆಯಿಂದ ತಮ್ಮ ಪೂರ್ಣ ಶಕ್ತಿಯನ್ನು ತೋರಿಸುವ ಅವಕಾಶ ಸಿಕ್ಕಲೇ ಇಲ್ಲ.

ಪಾತ್ರಗಳ ಅಗತ್ಯಕ್ಕೆ ತಕ್ಕ ತೀವ್ರತೆ ಮತ್ತು ಸಂಯಮದಿಂದ ಅಭಿನಯಿಸಿದ ಕಲಾವಿದರಲ್ಲಿ ಮುರಳಿ, ಚರಣ್‌ರಾಜ್, ವಿಜಯಕಾಶಿ, ಸುಂದರರಾಜ್ ಪ್ರಮುಖರು. ಈ ಮೂವರ ಶೈಲಿಯಲ್ಲೂ ಸ್ವಂತಿಕೆ ಕಾಣದಿದ್ದರೂ ಚಿತ್ರದಲ್ಲಿ ತಮ್ಮ ಪಾತ್ರ ನಿಲ್ಲಬೇಕು ಎಂಬ ಮಟ್ಟಿಗಿನ ತಾದಾತ್ಮ್ಯ ಕಂಡುಬರುತ್ತದೆ. ಚರಣ್‌ರಾಜ್ ತಮ್ಮ ಪಾತ್ರದ ಚೌಕಟ್ಟನ್ನು ಅರ್ಥ ಮಾಡಿಕೊಂಡು ನಟಿಸುವ ಕಲಾವಿದ. ವಿಜಯಕಾಶಿ ಪಾತ್ರದ ಒಳತಿರುವುಗಳ ಬಗ್ಗೆ ಎಚ್ಚರಿಕೆ ಇಟ್ಟುಕೊಳ್ಳುವ ಕಲಾವಿದ. ಸುಂದರರಾಜ್ ಪಾತ್ರದ ಚಲನೆಗೆ ಹೆಚ್ಚು ಗಮನ ನೀಡಿ ಅದರ ಸ್ವಭಾವಜನ್ಯ ಭಾವಗಳಿಗೆ ತಕ್ಕಂತೆ ಅಭಿನಯಿಸುವ ಕಲಾವಿದ.

ಪಾತ್ರ ತೆರೆಯಮೇಲೆ ಜೀವಂತವಾಗಿ ಮೂಡಿಬರಲು ಅಭಿನಯಶೈಲಿ ಮಾತ್ರವೇ ಕಾರಣವಲ್ಲ ಎಂಬ ಕುತೂಹಲಕರ ಸಾಧ್ಯತೆಯನ್ನು ತೋರಿಸಿಕೊಟ್ಟವರು ರವಿಚಂದ್ರನ್. ಉತ್ತಮ ಕಲಾವಿದರಲ್ಲದಿದರೂ ತಮ್ಮ ತಂತ್ರಜ್ಞಾನದ ಜಾಣ್ಮೆಯಿಂದ ಈ ಕೊರತೆ ತುಂಬಿಕೊಂಡರು. ಕ್ಯಾಮರಾ, ಲೈಟಿಂಗ್ ಎಫೆಕ್ಟ್‌ನಿಂದ ಒಟ್ಟಾರೆ ದೃಶ್ಯ ಸಂಯೋಜನೆಯಲ್ಲಿ ತಮ್ಮ ರೋಲ್ ಶಕ್ತಿಯುತವಾಗಿ ಕಾಣುವಂತೆ ರೂಪಿಸಿದರು. ಅವರು ನಿರ್ದೇಶಕರಲ್ಲದ ಚಿತ್ರದಲ್ಲಿ ಅವರ ನಟನೆ ಸಪ್ಪೆಯಾಗಿ ಕಾಣಲು ಈ ಅಂಶವೇ ಕಾರಣ. ಹೆಚ್ಚಾಗಿ ರೀಮೇಕ್ ಚಿತ್ರಗಳಲ್ಲಿ ಅಭಿನಯಿಸಿದ ರವಿಚಂದ್ರನ್ ಮೂಲದ ಎಲ್ಲಾ ಹಾವಭಾವಗಳನ್ನೂ ಯಥಾವತ್ತಾಗಿ ಅನುಕರಿಸುವ ಸಂಪ್ರದಾಯ ಆರಂಭಿಸಿದರು. ಇದರಿಂದಾಗಿ ಪಾತ್ರಗಳಿಗೆ ನೇಟಿವಿಟಿ ಮೂಡುವ ಸಾಧ್ಯತೆಯೇ ಇಲ್ಲವಾಗಿ ಈ ನೆಲಕ್ಕಿರಬಹುದಾಗಿದ ಅಲ್ಪಸ್ವಲ್ಪ ಸಂಪರ್ಕವೂ ತಪ್ಪಿಹೋಯಿತು. ರೀಮೇಕ್ ಚಿತ್ರಗಳ ಪ್ರವಾಹವೇ ಹರಿಯತೊಡಗಿದಾಗ ರವಿಚಂದ್ರನ್ ರೂಪಿಸಿದ ಈ ಶೈಲಿ ಸಾರ್ವತ್ರಿಕವಾಗಿಹೋಯಿತು. ಜಾಗತೀಕರಣದ ಸಂದರ್ಭದಲ್ಲಿ ಪ್ರಾದೇಶಿಕ ವೈಶಿಷ್ಟ್ಯ ಹೇಗ ನಾಶವಾಗುತ್ತದೆ ಎಂಬುದಕ್ಕೆ ರವಿಚಂದ್ರನ್ ಅಭಿನಯದ ಶೈಲಿಯನ್ನು ಗುರುತಿಸಬಹುದು. ಇಷ್ಟಾಗಿಯೂ ಮಾಧ್ಯಮದ ಅಗತ್ಯಗಳನ್ನು ಅವರು ಗ್ರಹಿಸಿದ ರೀತಿಯನ್ನು ಪ್ರಶ್ನಿಸುವುದು ಕಷ್ಟ.

ಕಾಮಿಕ್ ವರ್ತನೆಯಿಂದ ಗಂಭೀರ ಪಾತ್ರ ನಿರ್ವಹಣೆಯ ವಿಶಿಷ್ಟ ಶೈಲಿಯನ್ನು ಕನ್ನಡಕ್ಕೆ ತಂದವರು ಕಾಶೀನಾಥ್. ಅವರ ಅಭಿನಯಶೈಲಿಯನ್ನು ಸುಲಭವಾಗಿ ಹಾಸ್ಯನಟನೆಯ ಪಟ್ಟಿಗ ಸೇರಿಸುವಂತಿಲ್ಲ. ಪಾತ್ರಗಳ ಒಳತೋಟಿ ಎಬ್ಬಿಸುವ ದುಗುಡ ನೋಡುಗರಿಗೆ ತಮಾಷೆ ಅನ್ನಿಸುವ ರೀತಿಯಲ್ಲಿ ಅಭಿನಯಿಸುವ, ಬ್ಲಾಕ್‌ಕಾಮಿಡಿ ಎಂದು ಕರೆಯಬಲ್ಲ ಶೈಲಿ ಅವರದು. ದ್ವಂದ್ವಾರ್ಥ, ಸೆಕ್ಸ್ ಗೆಶ್ಚರ್‌ಗಳನ್ನು ಧಾರಾಳವಾಗಿ ಅಳವಡಿಸಿಕೊಂಡ ಇನ್ನೊಂದು ಹಾದಿಯನ್ನೂ ಅವರ ಅಭಿನಯಕ್ರಮದಲ್ಲಿ ಕಾಣಬಹುದು. ಕಾಶೀನಾಥ್ ನಾಯಕನಿಗ ಸಾಮಾನ್ಯವಾಗಿ ಇರುತ್ತಿದ್ದ ಪ್ರಭಾವಳಿ ಮುರಿದು ಕಾಮಿಕ್‌ವಳಿ ಜೋಡಿಸಿದವರು. ಇಂಥವನ್ನಾದರಿ ನಿರ್ಮಿಸಿದ ಮೊದಲಿಗರಲ್ಲದಿದ್ದರೂ ಈ ಪರಂಪರೆ ಬೆಳೆಸಿದ ಮೊದಲಿಗರು. ನಂತರದ ಎಸ್.ನಾರಾಯಣ್ ಅಂಥವರು ಅದನ್ನು ಮುಂದುವರಿಸಿದರು.

ಮಂದರದಲ್ಲಿ ಭಾವರಹಿತವಾಗಿ ಸಂಭಾಷಣೆ ಹೇಳುತ್ತ, ಮುಖದಲ್ಲಿ ಹೆಚ್ಚಿನ ಭಾವವೈವಿಧ್ಯ ಪ್ರಕಟಿಸಿದವರು ಶಿವರಾಜ್‌ಕುಮಾರ್. ಅವರ ಶಕ್ತಿ ಲಯಪ್ರಜ್ಞೆ. ಪಾತ್ರಗಳಿಗೆ ವಿಶಿಷ್ಟ ಚಲನೆ ನೀಡಿ ಚಲನಶೀಲವಾಗಿ ಮಾರ್ಪಡಿಸಿಕೊಳ್ಳುವ ಶೈಲಿ ಅವರದ್ದು. 'ಓಂ', 'A.K. 47' ಚಿತ್ರಗಳಲ್ಲಿ ಇದನ್ನು ಪ್ರಧಾನವಾಗಿ ಗುರುತಿಸಬಹುದು. ನೃತ್ಯದಲ್ಲಿ ಪರಿಣತಿ ಪಡೆದಿರುವುದರಿಂದ ಪಾಶ್ಚಾತ್ಯ ಪ್ರಭಾವದ ನೃತ್ಯಗಳಲ್ಲಿ ಎದ್ದು ಕಾಣುತ್ತಾರೆ. ಶಿವರಾಜ್ ಕುಮಾರ್ ಸಮಸ್ಯೆ ಎಂದರೆ ಪಾತ್ರಗಳ biographyಗೆ ಮಹತ್ವ ಕೊಡದೆ ಎಲ್ಲ ಮಾದರಿ ಪಾತ್ರಗಳಿಗೂ ನಿರ್ದಿಷ್ಟ ಸಂಜ್ಞೆಗಳನ್ನು ನೀಡುವುದು. ಹಳ್ಳಿಯ ಮುಗ್ಧ, ಮಧ್ಯಮ ವರ್ಗದವನು, ಸಿರಿವಂತ ಹೀಗೆ ಪಾತ್ರ ಯಾವುದೇ ಇರಲಿ ಅವರ ಮ್ಯಾನರಿಸಂನಲ್ಲಿ ಯಾವುದೇ ವ್ಯತ್ಯಾಸ ಕಾಣುವುದಿಲ್ಲ. ಜೊತೆಗೆ ತಮ್ಮ ಪಾತ್ರದ ಚೌಕಟ್ಟಿಗೆ ಅವರು ಗಮನ ಕೊಡುವುದಿಲ್ಲ. ಇದರಿಂದ ಪಾತ್ರದಲ್ಲಿ ಕರಗಿಹೋಗುವುದು ಸಾಧ್ಯವಾಗದೆ, ಶಿವರಾಜ್ ಕುಮಾರ್ ಆಗಿಯೇ ಉಳಿದುಕೊಳ್ಳುತ್ತಾರೆ. ಇದು ಜಾಗತಿಕ ಮಟ್ಟದಲ್ಲಿ ಕೂಡ ನಟನಲ್ಲೇ ಕೇಂದ್ರೀಕೃತವಾಗಿ ಅಭಿನಯಶೈಲಿ ಬದಲಾಗುತ್ತಿರುವ ಕ್ರಮ. ಶಿವರಾಜ್ ಕುಮಾರ್ ಒಂದೇ ಸ್ಥಾಯಿಯಲ್ಲಿ ಮತ್ತು ವೇಗದಲ್ಲಿ ಸಂಭಾಷಣೆ ಹೇಳುತ್ತಾರೆ. ಕೀರಲು ಸ್ವರಕ್ಕೆ ಹತ್ತಿರವಾದ ಈ ಶೈಲಿಯಲ್ಲಿ ಯಾವ ಭಾವತೀವ್ರತೆಗೂ ಸ್ಪಷ್ಟತೆ ಸಿಕ್ಕುವುದಿಲ್ಲ.

(ಚಿತ್ರ ೧೦೬) ಜಗ್ಗೇಶ್, ಸಾಧು ಕೋಕಿಲ

(ಚಿತ್ರ ೧೦೭-೧೧೦) ಶಶಿಕುಮಾರ್

ರಾಘವೇಂದ್ರ ರಾಜಕುಮಾರ್

ದೇವರಾಜ್

ಕುಮಾರ್ ಬಂಗಾರಪ್ಪ

ಆರಂಭದಲ್ಲಿ ಕಮಲಹಾಸನ್ ಅಭಿನಯಕ್ರಮವನ್ನು ಅನುಕರಿಸುತ್ತಿರುವಂತೆ ಕಾಣಿಸಿದರೂ ನಂತರ ತಮ್ಮದೇ ಶೈಲಿ ರೂಢಿಸಿಕೊಂಡವರು ರಮೇಶ್. ವೈವಿಧ್ಯಮಯ ಪಾತ್ರಗಳನ್ನು ನಿರ್ವಹಿಸಿದ ಇವರು ಪಾತ್ರಕ್ಕೆ ಹೊಂದುವ ಅಭಿನಯ ಕ್ರಮವನ್ನು ಪ್ರಜ್ಞಾಪೂರ್ವಕವಾಗಿ ರೂಢಿಸಿಕೊಂಡರು. 'ಪಂಚಮವೇದ', 'ಅರಗಿಣಿ'ಯ ಸೂಪರ್ ಮೆಲೋಡ್ರಾಮ ಪಾತ್ರಗಳು, 'ಸುಂದರ ಸ್ವಪ್ನಗಳು', 'ಅಮೃತವರ್ಷಿಣಿ'ಯ ಋಣಾತ್ಮಕ ಲೇಪದ ಪಾತ್ರ, 'ಉಲ್ಟಾ ಪಲ್ಟಾ', 'ಕುರಿಗಳು ಸಾರ್ ಕುರಿಗಳು' ಚಿತ್ರಗಳ ಹಾಸ್ಯ ಲೇಪನದ ಪಾತ್ರ ಹೀಗೆ ವಿಭಿನ್ನ ಸ್ತರದ ಪಾತ್ರಗಳನ್ನು ಸಹಜವಾಗಿ ನಿರ್ವಹಿಸಿದ್ದಾರೆ. ಆದರೆ ಸವಾಲಿನ ಸನ್ನಿವೇಶಗಳಲ್ಲಿ ತೊಡಗಿಸಿಕೊಳ್ಳಲಾಗದೆ ಪ್ರಜ್ಞಾಪೂರ್ವಕವಾಗಿ ನಟಿಸುವುದರಿಂದ ಪಾತ್ರದ ಸಂಕೀರ್ಣತೆ ಅಭಿವ್ಯಕ್ತಿಸುವುದು ಅವರಿಗೆ ಅನೇಕ ಕಡೆ ಸಾಧ್ಯವಾಗಿಲ್ಲ. ಜೊತೆಗೆ ಜನಪ್ರಿಯತೆಯ ಚೌಕಟ್ಟನ್ನು ಬ್ರೇಕ್ ಮಾಡಲು ಅಷ್ಟಾಗಿ ಪ್ರಯತ್ನಿಸದಿರುವುದರಿಂದ ಅಭಿನಯಶೈಲಿಯಲ್ಲೇ ದ್ವಂದ್ವವನ್ನು ಗುರುತಿಸಬಹುದು.

(ಚಿತ್ರ ೧೧೧) ಪ್ರತಿಮಾದೇವಿ

ಹಸಿಭಾವಗಳ ಅಭಿವ್ಯಕ್ತಿಪ್ರಧಾನ ಪಾತ್ರಗಳಿಗೆ ವರ್ಗಾವಣೆಗೊಂಡ ಸಂಕ್ರಮಣ ಸ್ಥಿತಿಯಲ್ಲಿ ಬಂದವರು ಜಗ್ಗೇಶ್. ಅವರಲ್ಲಿ ಮೂಲತಃ ಸಂಭಾಷಣೆ ಹೇಳುವಾಗ ಪರಿಮಿತ ಕೊಟ್ಟು ಅದರಲ್ಲಿನ ಹಸಿತನ ಪ್ರೇಕ್ಷಕನಿಗ ತಟ್ಟುವಂತೆ ಮಾಡುವ ಕ್ರಮವಿದೆ. ಸಂಭಾಷಣೆ, ಕಾಸ್ಟ್ಯೂಮ್ಸ್, ಹಾವಭಾವ ಇವುಗಳೆಲ್ಲೆಲ್ಲ ವಿಚಿತ್ರ ಸಂಜ್ಞೆ ಹೊರಡಿಸಿದ ಅವರು ಲೈಂಗಿಕ ಅಂಶವನ್ನು ಕೂಡ ಹಸಿಯಾಗಿ ಬಿಂಬಿಸುವ ಪ್ರಯತ್ನ ಮಾಡಿದರು. ಅವರ ಅಭಿನಯಶೈಲಿ ಭಾವಗಳ ಕಚ್ಚಾ ಸರಕಿನಂತೆ ಭಾಸವಾಗುತ್ತದೆ. ಅವರೊಳಗೊಬ್ಬ ಕಲಾವಿದ ಇದ್ದರೂ ಸರಿಯಾಗಿ ಹೊರಬಂದಿಲ್ಲ. ತಾವೇ ಕಟ್ಟಿಕೊಂಡ ಪ್ರೇಕ್ಷಕ, ಅವನ ಅಭಿರುಚಿಗೇ ಒಗ್ಗಿಕೊಂಡ ಅಭಿನಯಗಳಿಂದಾಗಿ ಅವರ ಶೈಲಿಗೆ ಒಂದು ಗೊತ್ತಾದ ಮಾದರಿ ಹಿಂತಿರುಗಿ ಬರಲಾಗದಷ್ಟು ಪ್ರವೇಶಿಸಿಬಿಟ್ಟಿದೆ.

ಅಶ್ಲೀಲ, ಸ್ಯಾಡಿಸ್ಟ್ ಮನೋಭಾವ, ಅತೃಪ್ತ ಕಾಮನೆ ಇವಕ್ಕೆಲ್ಲ ಆಕಾರ ಕೊಡಲು ಪ್ರಯತ್ನಿಸಿದವರು ಉಪೇಂದ್ರ. ವಿಚಿತ್ರ ಕಾಸ್ಟ್ಯೂಮ್ಸ್, ಅಸಹಜ ಛಾಯಾಕೋನ, ಸಂಭಾಷಣೆಯಲ್ಲಿನ ಹಸಿತನ ಇವನ್ನೇ ಪ್ರಧಾನವಾಗಿ ಅವಲಂಬಿಸಿದವರು. ಹೀಗಾಗಿ ಅವರಲ್ಲಿ ಅಭಿನಯ ಶೈಲಿ ಅನ್ನುವುದು ಪ್ರಧಾನವಾಗಿ ಕಾಣುವುದಿಲ್ಲ. ಅಭಿನಯದಲ್ಲಿನ ವೈಫಲ್ಯವನ್ನು ಉಳಿದ ಪರಿಕರಗಳಿಂದ ತುಂಬಿಕೊಂಡು ಒಟ್ಟಾಗಿ ದೃಶ್ಯ ಶ್ರೀಮಂತವಾಗಿ ಮಾಡುವ ಪ್ರಯತ್ನ ಅವರಲ್ಲಿ ಕಾಣಬಹುದು. ನೇರಮಾತು, ಕಿರಿಚಾಟವೇ ಅವರ ಅಭಿನಯ. ತಾವು ನಿರ್ದೇಶಕರಲ್ಲದ ಚಿತ್ರಗಳಲ್ಲಿ ಅವರು ಸಪ್ಪೆಯಾಗಿ ಕಾಣಲು ಇದೇ ಮುಖ್ಯ ಕಾರಣ.

ಪ್ರಧಾನ ಪಾತ್ರಗಳಲ್ಲಿ ಅಭಿನಯಿಸಿದ ಚಿತ್ರಗಳು ಕಮ್ಮಿಯಾದರೂ ಪೋಷಕ ಪಾತ್ರಗಳ ಸರಳೀಕರಣದಿಂದ ಮೇಲೆ ನಿಂತವರು ರಮೇಶ್ ಭಟ್. ಸಂಭಾಷಣೆ ಹೇಳುವಾಗ ಭಾವಗಳ ಪರಿಮಿತವನ್ನು ಚಿಮ್ಮಿಸುವ ಜಾಣ್ಮೆ ತೋರಿದ ಇವರು ಪಾತ್ರಗಳ ಹಿನ್ನೆಲೆಗೆ (Biography) ತಕ್ಕಂತೆ ಒಳಸಂಜ್ಞೆಗಳನ್ನು ಅರಿತು

ನಟಿಸಿದರು. 'ನೋಡಿ ಸ್ವಾಮಿ ನಾವಿರೋದು ಹೀಗೆ', 'ಪರಮೇಶಿ ಪ್ರೇಮ ಪ್ರಸಂಗ'ದ ಕಾಮಿಕ್ ಲೇಪದ ಗಂಭೀರಪಾತ್ರ ನಿರ್ವಹಿಸಿದ ಕ್ರಮಕ್ಕೂ 'ಒಂದು ಸಿನಿಮಾ ಕತೆ' ಚಿತ್ರದಲ್ಲಿ ಕಾಮಿಕ್ ಲೇಪದ ವಿಲನ್ ಪಾತ್ರ ನಿರ್ವಹಿಸಿದ ಕ್ರಮಕ್ಕೂ ಅವರು ಸಾಧಿಸಿಕೊಂಡ ಭಿನ್ನತೆಯೇ ಕಾರಣ. 'ಗೀಜಗನ ಗೂಡು', 'ಸ್ಪಂದನ'ದಂಥ ಚಿತ್ರಗಳ ಗಂಭೀರ ಪಾತ್ರಗಳಲ್ಲೂ ಅವರು ಮಿಂಚಿದ್ದಾರೆ.

ಸಿನಿಮಾ, ಪ್ರಧಾನ ಮನರಂಜನೆ ಮಾಧ್ಯಮವಾದ ಮೇಲೆ ಅನೇಕ ನಾಯಕನಟರು ಬಂದಿದ್ದಾರೆ. ಇವರೆಲ್ಲ ತಮ್ಮದೇ ಅಭಿನಯಶೈಲಿ ರೂಢಿಸಿಕೊಂಡಿದ್ದಾರೆ ಎನ್ನುವುದು ಕಷ್ಟ. ಒಂದೇ ಮಾದರಿ ಪಾತ್ರನಿರ್ವಹಣೆ, ಅದಕ್ಕಿಂತ ಹೆಚ್ಚಾಗಿ ಯಶಸ್ವಿ ಮಾದರಿಯ ಅನುಕರಣೆ ಇಂಥವರಲ್ಲಿ ಕಾಣಬಹುದು. ಇವರುಗಳಲ್ಲಿ ಕೊಂಚ ಭಿನ್ನ ಅನ್ನಿಸಿದವರು ಸುನಿಲ್. ಪಾತ್ರಗಳ ಒಳತೋಟಿಯನ್ನು ಹಿಡಿದಿಡುವಾಗ ಆರ್ದ್ರವಾಗಿಬಿಡುವ ಚಾಕಚಕ್ಯತೆ ತೋರಿದರು. ಕಣ್ಣುಗಳ ಚಲನೆಯಲ್ಲೂ ಅವರು ಕೆಲವೆಡೆ ಗೆದ್ದಿರುವುದನ್ನು ಕಾಣಬಹುದು. ನೃತ್ಯ ಸನ್ನಿವೇಶಗಳಲ್ಲಿ ಎದ್ದು ಕಾಣುವ ಶಶಿಕುಮಾರ್ ಕೆಲವೆಡೆ ಪಾತ್ರಗಳ ಹಾವಭಾವದಲ್ಲಿ ವೈವಿಧ್ಯ ರೂಪಿಸಿದ್ದನ್ನು ಕಾಣಬಹುದು. ತಮ್ಮ ಅನಾಕರ್ಷಕ ಕಂಠದಿಂದ ಪಾತ್ರಗಳನ್ನು ಕುಗ್ಗಿಸುತ್ತಾರೆ (down play) ಎಂಬ ಅಪಾದನೆ ಎದುರಿಸಿದ ರಾಘವೇಂದ್ರ ರಾಜಕುಮಾರ್ ಆಂಗಿಕ ಅಭಿನಯದಲ್ಲಿ ಕೆಲವೆಡೆ ಗಮನ ಸೆಳೆಯುತ್ತಾರೆ. ಪಾತ್ರಗಳ ಚಲನೆಯಲ್ಲಿ ಶಕ್ತಿ ಮೆರೆದ ಕುಮಾರ್ ಬಂಗಾರಪ್ಪ ಮ್ಯಾನರಿಸಂ ಬಗ್ಗೆ ತೋರಿಸಿದ ನಿರ್ಲಕ್ಷ್ಯದಿಂದ ತಮ್ಮದೇ ಶೈಲಿ ರೂಢಿಸಿಕೊಳ್ಳದೆ ಹೋದರು. ಹವ್ಯಾಸಿ ರಂಗಭೂಮಿ ಹಿನ್ನೆಲೆಯಿಂದ ಬಂದ ದೇವರಾಜ್ ತಮ್ಮ ವಿಶಿಷ್ಟ ಕಂಠ ಮತ್ತು self controlನಿಂದ ಗಮನ ಸೆಳೆದರು. ಹೆಚ್ಚಾಗಿ ಪೋಲೀಸ್ ಅಧಿಕಾರಿ ಪಾತ್ರಗಳನ್ನೇ ನಿರ್ವಹಿಸಿದ ಅವರು ಕೊಂಚ ಭಿನ್ನ ಪಾತ್ರಗಳು ದೊರೆತ 'ಕೆಂಡದ ಮಳೆ', 'ಉತ್ಕರ್ಷ', 'ಹುಲಿಯಾ' ಚಿತ್ರಗಳಲ್ಲಿ ತಮ್ಮ ಶಕ್ತಿ ತೋರಿಸಿದರು. ಸಶಕ್ತ ಅಭಿನಯಶೈಲಿ ರೂಪಿಸಿಕೊಳ್ಳುವಷ್ಟು ವೈವಿಧ್ಯಮಯ ಪಾತ್ರಗಳು ಅವರಿಗೆ ದೊರೆಯದೆ ಹೋದವು. ಮೂಲತಃ ಕನ್ನಡದವರೇ ಆದರೂ ಅಲ್ಲೊಂದು ಇಲ್ಲೊಂದು ಕನ್ನಡ

(ಚಿತ್ರ ೧೧೨-೧೧೪) ಲೀಲಾವತಿ

(ಚಿತ್ರ ೧೧೫-೧೧೬) ಹರಿಣಿ

ಸಾಹುಕಾರು ಜಾನಕಿ

ಚಿತ್ರಗಳಲ್ಲಿ ನಟಿಸಿದ ಪ್ರಕಾಶ್‌ರ್ಯ ಹಾವಭಾವವೇ ಪ್ರಧಾನವಾದ ಅಭಿನಯಶೈಲಿ ರೂಢಿಸಿಕೊಂಡರು. ಸನ್ನಿವೇಶಕ್ಕ ತಕ್ಕಂತೆ ಕಣ್ಣು, ಮುಖಭಾವಗಳನ್ನು ವೈವಿಧ್ಯಮಯವಾಗಿಸಬಲ್ಲ ಅವರ ಶಕ್ತಿಯನ್ನು 'ಹರಕಯ ಕುರಿ', 'ನಾಗಮಂಡಲ'ದಲ್ಲಿ ನೋಡಬಹುದು. ಕನ್ನಡೇತರ ಚಿತ್ರಗಳಲ್ಲಿ ಅವರು ಹೆಚ್ಚಾಗಿ ಸಂದರು.

ನಾಯಕಿಯರು

ಕನ್ನಡ ಚಿತ್ರರಂಗದ ಆರಂಭದಲ್ಲಿ ನಾಯಕಿಯರೇ ಗಾಯಕಿಯರೂ ಆಗಬೇಕಾದರಿಂದ ಉಡುಪಿ ಲಕ್ಷ್ಮೀಬಾಯಿ, ತ್ರಿಪುರಾಂಬ, ಅಶ್ವತ್ಥಮ್ಮ, ಸುಂದರಮ್ಮ, ಬಿ.ಜಯಮ್ಮ, ಅಮೀರ್‌ಬಾಯಿ ಕರ್ನಾಟಕಿಯಂಥವರು ನಾಯಕಿ-ಗಾಯಕಿಯರಾಗಿ ಚಿತ್ರರಂಗ ಪ್ರವೇಶಿಸಿದರು. ಆಗ ನಾಯಕಿ ಎಂದರೆ ಸಾಧ್ವೀಮಣಿ ಎಂಬ ನಾಟಕದ ಕಲ್ಪನೆಯೇ ಪ್ರಧಾನವಾಗಿತ್ತು. ಅಸ್ಪಷ್ಟವಾಗಿದ್ದ ಈ ಕಲ್ಪನೆಗೆ ಖಚಿತ ರೂಪ ಬಂದಿದ್ದು ಪಂಢರಿಬಾಯಿ ಅವರಿಂದ. ತಲೆ ತಗ್ಗಿಸಿ, ಕಣ್ಣನ್ನು ಪಟಪಟ ಎನ್ನಿಸುತ್ತಾ ಅಸ್ಪಷ್ಟವಾಗಿ ನಡುಗುವ ಸ್ವರದಲ್ಲಿ ಮಾತನಾಡುವ ಅಭಿನಯಶೈಲಿ ಒಂದು ಪರಂಪರೆಯನ್ನೇ ಸೃಷ್ಟಿಸಿತು. ಲೀಲಾವತಿ ಈ ಶೈಲಿಯನ್ನು ಮಾರ್ಪಡಿಸಿಕೊಂಡು ಭಾವಪೂರ್ಣತೆಯನ್ನು ಅಳವಡಿಸಿಕೊಂಡರು. 'ವೀರಕೇಸರಿ'ಯಂಥ ಚಿತ್ರದಲ್ಲಿ ಮೊದಲರ್ಧದ ಮಟ್ಟಿಗಾದರೂ ಮೆರೆಯುವ ನಾಯಕಿ ಪಾತ್ರ ಅವರಿಗೆ ಸಿಕ್ಕಿತು. ನಾಯಕಿಯರೆಂದರೆ ಸಾಧ್ವೀಮಣಿಗಳೆಂಬ ಸಾಮಾನ್ಯ ಕಲ್ಪನೆಗೆ ಈ ಪಾತ್ರಗಳ ಮೇರೆದಾಟಿ ಹೊಸ ತಿರುವು ಕೊಟ್ಟವು. ದುರಂತವೆಂದರೆ ಲೀಲಾವತಿ ನಾಯಕಿ ಪಟ್ಟದ ಅವಧಿ ಅಲ್ಪ ಕಾಲದ್ದಾಗಿತ್ತು. ಆ ಅಲ್ಪ ಅವಧಿಯಲ್ಲಿ ಅವರು ಬೇರೆಲ್ಲರನ್ನೂ ಮೀರಿಸುವಷ್ಟು ಚಿತ್ರಗಳ ನಾಯಕಿಯಾಗಿ ಬಿಟ್ಟರು. ಬಹುಬೇಗ ಅವರು ಪೋಷಕ ನಟಿ ಮತ್ತು ಅಲ್ಲಿಂದ ತಾಯಿ ಪಾತ್ರದತ್ತ ಜಾರಿದರು. ನಡುವೆ 'ಭಕ್ತ ಕುಂಬಾರ'ದಂಥ ಚಿತ್ರದಲ್ಲಿ ಪ್ರಧಾನಪಾತ್ರ ವಹಿಸಿದರೂ ಕನ್ನಡ ಚಿತ್ರರಂಗದಲ್ಲಿ ಲೀಲಾವತಿ ಹೆಚ್ಚು ವಹಿಸಿದ್ದೇ ತಾಯಿಯ ಪಾತ್ರ. ಈ ಪಾತ್ರದಲ್ಲಿಯೂ ಸಿನಿಮಾತ್ಮಕ ವಾಸ್ತವಿಕತೆಯ ಮಾದರಿಯ ಅಭಿನಯಶೈಲಿ ರೂಢಿಸಿ ಕೊಂಡರು. ಚಿತ್ರರಂಗದ ಬೆಳವಣಿಗೆಯ ಜೊತೆಗೇ ತಮ್ಮ ಅಭಿನಯಶೈಲಿಯನ್ನು ಅವರು ಮಾರ್ಪಡಿಸಿಕೊಳ್ಳುತ್ತ ಬಂದರೀತಿ ಗಮನಾರ್ಹ.

ಆರಂಭದ ದಿನಗಳಲ್ಲಿನ ನಾಯಕಿಯರಲ್ಲಿ ಸಹಜತೆ ರೂಢಿಸಿಕೊಂಡ ಶೈಲಿ ಪ್ರತಿಮಾದೇವಿಯವರದ್ದು. 'ಜಗನ್ಮೋಹಿನಿ', 'ಶ್ರೀನಿವಾಸ ಕಲ್ಯಾಣ'ದಂಥ ಚಿತ್ರಗಳಲ್ಲಿ ಅವರು ಪಾತ್ರಗಳನ್ನು ಸಂಯಮದಿಂದ ನಿರ್ವಹಿಸಿದನ್ನು ಕಾಣಬಹುದು. ಆಂಗಿಕ ಚಲನೆಯಲ್ಲಿ ನಾಟಕೀಯ ಅನ್ನಿಸಿದರೂ ಕೃತಕವಾಗದ ಎಚ್ಚರಿಕೆಯಲ್ಲಿ ಅಭಿನಯಶೈಲಿ ರೂಢಿಸಿಕೊಂಡವರು. ಹರಿಣಿ, ಪೌರಾಣಿಕ ಮತ್ತು ಸಾಮಾಜಿಕ ಚಿತ್ರಗಳೆರಡಕ್ಕೂ ಭಿನ್ನವಾಗಿ ಸಂಭಾಷಣೆ ಹೇಳುವ ಶೈಲಿ ರೂಢಿಸಿಕೊಂಡು, ಆ ಕಾರಣಕ್ಕೆ ಮುಖ್ಯರಾದರು. 'ನಾಂದಿ' ಚಿತ್ರದಲ್ಲಿ ಜಾಣತನದಿಂದ ನಟಿಸಿದ ಅವರಿಗೆ ಅಂಥ ಚಿತ್ರಗಳು ಹೆಚ್ಚಾಗಿ ಸಿಕ್ಕಲಿಲ್ಲ. ಮುಖದಲ್ಲಿ ಭಾವನೆಗಳನ್ನು ಅಧಿಕವಾಗಿ ತೋರಿಸದ ವಿಭಿನ್ನ ಮುಖಚರ್ಯೆಯ ಶೈಲಿಯನ್ನು ಅವರು ಪ್ರಯೋಗಶೀಲವಾಗಿ ಸಾಧಿಸಿಕೊಂಡಿದ್ದರು. 'ಜಗನ್ಮೋಹಿನಿ', 'ಆಶಾಸುಂದರಿ'ಯಂಥ ಚಿತ್ರಗಳಲ್ಲಿ ವಿಶಿಷ್ಟ ಪಾತ್ರ ನಿರ್ವಹಣೆ ಮಾಡಿದ್ದ ಹರಿಣಿ, ಪೌರಾಣಿಕ ಮತ್ತು ಸಾಮಾಜಿಕ ಚಿತ್ರಗಳೆರಡರಲ್ಲೂ ಭಿನ್ನವಾಗಿ ತಮ್ಮ ಅಭಿನಯ ಕ್ರಮ ರೂಢಿಸಿಕೊಂಡರು. ಘಟಕೀಕೃತ ಚಿತ್ರಗಳ ಕಾಲದಲ್ಲೇ ಚೌಕಟ್ಟು ನೀಡಲು ಪ್ರಯತ್ನಿಸಿದ ಅವರಿಗ 'ಅರಿಶಿನ ಕುಂಕುಮ', 'ನಾಂದಿ'ಯಂಥ ಚಿತ್ರಗಳಲ್ಲಿ ಅಮೂಲ್ಯ ಎನ್ನಿಸುವ ಪಾತ್ರಗಳೇ ಸಿಕ್ಕರೂ ತಮ್ಮ ವಿಶಿಷ್ಟತೆ ಮೆರೆದಿದ್ದರು. ಬಹಳ ಮುಖ್ಯವಾಗಿ ಪಾತ್ರದ ಆಂತರಿಕ ತುಮುಲ ಹಿಡಿದಿಡಬಲ್ಲ ಅವರ ಸಾಮರ್ಥ್ಯಕ್ಕೆ ತಕ್ಕ ಪಾತ್ರಗಳು ಹೆಚ್ಚಾಗಿ ಸಿಕ್ಕಲಿಲ್ಲ.

ಪ್ರತಿಮಾದೇವಿಯವರ ಜೊತೆ ಜೊತೆಗೆ ಚಿತ್ರರಂಗ ಪ್ರವೇಶಿಸಿದ ಸಾಹುಕಾರ್ ಜಾನಕಿ ನಿಜಕ್ಕೂ ನಾಯಕಿ ಪಾತ್ರಗಳಿಗೆ ಒಂದು ರೀತಿಯ ಹೊಸ ಆಯಾಮ ನೀಡಿದರು. ಸಂಭಾಷಣೆ ಹೇಳುವಾಗಿನ ರೀತಿಯಿಂದಲೇ ಕಲಾವಿದರ ಪಾತ್ರಗಳು ಕೃತಕವೆನಿಸಬಹುದಾದ ದಿನಗಳಲ್ಲಿ ಸಾಹುಕಾರ್ ಜಾನಕಿ ಚುರುಕಾದ ಅಭಿನಯದಿಂದ 'ಗೌರಿ' ಚಿತ್ರದ ಆದರ್ಶಸತಿ, 'ಸಾಕು ಮಗಳು' ಚಿತ್ರದ ಅಹಂಕಾರದ ಹೆಣ್ಣು, ಹೀಗೆ ಎಲ್ಲ ರೀತಿಯ ವೈವಿಧ್ಯಮಯ ಪಾತ್ರಗಳಲ್ಲಿ ಕಾಣಿಸಿಕೊಂಡರು. ಆಕೆ ಮಡಿವಂತಿಕೆಯ ಕಾರಣ ಕೈಬಿಟ್ಟ ಚಿತ್ರ 'ಮಿಸ್ ಲೀಲಾವತಿ' ಮುಂದೆ ಜಯಂತಿಯಂಥ ಕಲಾವಿದೆಯ ಪ್ರತಿಭೆಯನ್ನು ಹೊರಹಾಕಿತು. ಸಾಹುಕಾರ್ ಜಾನಕಿಯವರ ಸೋದರಿಯಾದ ಕೃಷ್ಣಕುಮಾರಿ ಹೆಚ್ಚಾಗಿ ಪೌರಾಣಿಕ, ಐತಿಹಾಸಿಕ ಚಿತ್ರಗಳಲ್ಲಿಯೇ ಕಾಣಿಸಿಕೊಂಡಿದ್ದರಿಂದ ಸಹಜವಾಗಿ ಅಲ್ಲಿ ನಾಟಕೀಯವಾದ ಅಥವಾ ಕೃತಕವೆನಿಸುವ ಹಾಗೂ ಒಂದೇ ತರನಾದ ಪಾತ್ರ ನಿರ್ವಹಣೆ ಮಾಡಿದರು.

ಬಿ.ಸರೋಜಾದೇವಿ ಅಭಿನಯಶೈಲಿಯಲ್ಲಿ ಮುಖ್ಯವಾಗಿ ಮೂರು ಘಟ್ಟಗಳನ್ನು ಗುರುತಿಸಬಹುದು. ಆಂಗಿಕ ಅಭಿನಯದಲ್ಲಿ ಎಚ್ಚರ ವಹಿಸುತ್ತಿದ್ದ ಸರೋಜಾದೇವಿ ಪ್ರಾರಂಭಿಕ ಹಂತದಲ್ಲಿ ತುಟಿಚಲನೆ ಕುರಿತು ಅಷ್ಟಾಗಿ ಗಮನ ಹರಿಸುತ್ತಿರಲಿಲ್ಲ. ಅವರ ಕಣ್ಣುಗಳನ್ನು ಭಾವಪೂರ್ಣವಾಗಿ ಬಳಸುವ ಕ್ರಮವನ್ನೂ ಈ ಹಂತದಲ್ಲಿ ನೋಡಬಹುದು.

(ಚಿತ್ರ ೧೧೮ ೧೨೧) ಬಿ.ಸರೋಜಾದೇವಿ

(ಚಿತ್ರ ೧೨೨-೧೩೧) ಜಯಂತಿ

'ಅಮರಶಿಲ್ಪಿ ಜಕಣಾಚಾರಿ','ಮಲ್ಲಮ್ಮನ ಪವಾಡ','ಚಿರತ ಜೀವ'ದಂಥ ಚಿತ್ರಗಳಲ್ಲಿ ಪಾತ್ರಗಳ ವ್ಯಾಪ್ತಿ ಗುರುತಿಸಿಕೊಂಡು ಅಭಿನಯಿಸಿದ ಕ್ರಮ ನೋಡಬಹುದು. ಎರಡನೇ ಘಟ್ಟ, ಅವರು ತಮಿಳು ಮತ್ತಿತರ ಭಾಷೆಗಳಲ್ಲೂ ಅಭಿನಯಿಸಲು ಆರಂಭಿಸಿ ಯಶಸ್ವಿಯಾದ ನಂತರದ್ದು. ಈ ಶೈಲಿಯಲ್ಲಿ ಸಂಭಾಷಣೆ ಹೇಳುವಲ್ಲಿ, ಆಂಗಿಕ ಚಲನೆಯಲ್ಲಿ ಅಬ್ಬರ ಕಾಣಬಹುದು. ಮೂರನೇ ಘಟ್ಟ, ಅವರು ಅಪರೂಪಕ್ಕೆ ಅಲ್ಲೊಂದು ಇಲ್ಲೊಂದು ಚಿತ್ರಗಳಲ್ಲಿ ತಮ್ಮನ್ನು ಸೀಮಿತಗೊಳಿಸಿಕೊಂಡ ನಂತರದ್ದು. ಈ ಪಾತ್ರಗಳಲ್ಲಿ ಸಂಯಮ-ಎಚ್ಚರಿಕೆ ಎರಡನ್ನೂ ಕಾಣಬಹುದು. ಆದರೆ, ಒಟ್ಟಾಗಿ ಸರೋಜಾದೇವಿ ರೂಪುಗೊಂಡ ಜನಪ್ರಿಯ ಚೌಕಟ್ಟಿನ ಆಂಚಿನಲ್ಲೇ ಪಾತ್ರನಿರ್ವಹಿಸುತ್ತ ಬಂದಿದ್ದರಿಂದ ಈ ಮೂರೂ ಘಟ್ಟಗಳಲ್ಲಿ ಬೆಳವಣಿಗೆಗಿಂತ ಪಾತ್ರನಿರ್ವಹಣೆಯಲ್ಲಿ ನಿಷ್ಠೆ ಕಾಣುತ್ತದೆ.

ನಾಯಕಿ ಪಾತ್ರಕ್ಕೆ ದಿಟ್ಟತನ, ಗ್ಲಾಮರ್‌ನ ಸ್ಪರ್ಶ ನೀಡಿದ್ದು ಜಯಂತಿ. ಗಾರೆಯಿಂದ ಬರುವ ಇಟ್ಟಿಗೆಗಳಂತೆ ಒಂದೇ ರೀತಿಯಲ್ಲಿ ಬರುತ್ತಿದ್ದ ನಾಯಕಿಯ ಅಭಿನಯಶೈಲಿ ವ್ಯಾಪ್ತಿಯನ್ನು ಜಯಂತಿ ಹಿಗ್ಗಿಸಿದರು. 'ಮಿಸ್ ಲೀಲಾವತಿ' ಚಿತ್ರದ ದಿಟ್ಟನಾಯಕಿ ಪಾತ್ರವನ್ನು, ಆ ಪಾತ್ರದ ವೈಚಾರಿಕ ಪ್ರಬುದ್ಧತೆಯನ್ನು, ನಿರ್ಭಾವುಕತನವನ್ನು ಶಕ್ತವಾಗಿ ಅಭಿನಯಿಸಿದರು. ಒಯ್ಯಾರ, ನಾಚಿಕೆ, ಗಾಢ ಅರ್ಥ ಮುಂತಾದ ಒಗ್ಗರಣೆಗಳಿಲ್ಲದೆ ತನ್ನನ್ನು ತಾನೇ ಪ್ರಶ್ನಿಸುವ ದಿಟ್ಟತನದಿಂದ ಆ ಪಾತ್ರವನ್ನು ಜೀವಂತವಾಗಿಸಿದರು. ಚಿತ್ರದ ಕೊನೆಗೆ ಅದು ದುರಂತ ಪಾತ್ರವಾಗೇ ಅಂತ್ಯವಾದರೂ ಮೊದಲಿನ ದಿಟ್ಟತನವೇ ನಮ್ಮ ಮನದಲ್ಲಿ ಗುಂಗಾಗುತ್ತದೆ. 'ಚಕ್ರತೀರ್ಥ' ಇದಕ್ಕೆ ವಿರುದ್ಧವಾದ ಅತಿ ಭಾವುಕತೆಯ ಲೇಪದ ಪಾತ್ರ. ಇದನ್ನು ಜಯಂತಿ ಸಂಯಮದಿಂದ ನಿರ್ವಹಿಸಿದ್ದರು. 'ಎಡಕಲ್ಲು ಗುಡ್ಡದ ಮೇಲೆ' ಚಿತ್ರದಲ್ಲಿ ಲೈಂಗಿಕ ಅತೃಪ್ತಿಯಿಂದ ನರಳುವ ಹೆಣ್ಣಿನ ಪಾತ್ರ. ಒಂದು ಸೂಪರ್ ಮೆಲೊಡ್ರಾಮ ಇಲ್ಲವೇ ಅಶ್ಲೀಲ ಆಗಬಹುದಾಗಿದ್ದ ಈ ಪಾತ್ರವನ್ನು ಜಯಂತಿ ಅಪಾರ ಸಂಯಮದಿಂದ ನಿರ್ವಹಿಸಿದ್ದರು. ಅತಿ ಮಡಿವಂತಿಕೆಯ ಕೋನದಿಂದ ನೋಡಿದರೂ ಸಹಜವಾಗಿ ಕಾಣುವಂತೆ ಪಾತ್ರದ ಚೌಕಟ್ಟನ್ನು ಜಯಂತಿ ಸಮತೋಲನದ ನೆಲೆಯಲ್ಲಿಟ್ಟಿದ್ದರು. ಮಾಮೂಲಿ 'ಟೇಮಿಂಗ್ ಆಫ್ ದಿ ಶ್ರೂ' ಸೂತ್ರದಲ್ಲಿದ್ದ 'ಬಹದ್ದೂರ್ ಗಂಡು' ಚಿತ್ರದಲ್ಲಿ ಸೊಕ್ಕಿದ ನಾಯಕಿ ಪಾತ್ರವನ್ನು ಜಯಂತಿ ಮಾದರಿಯಾಗುವಂತೆ ನಿರ್ವಹಿಸಿದ್ದರು. ಸಂಭಾಷಣೆ ನಿರೂಪಣೆ ಶೈಲಿಯಲ್ಲಿ ಅಷ್ಟೇನು ಚುರುಕನ್ನು ಕಾಯ್ದುಕೊಳ್ಳದಿದ್ದರೂ ಆಂಗಿಕ ಅಭಿನಯದಲ್ಲಿ ಜೀವಂತಿಕೆಯನ್ನು ಕಾಯ್ದುಕೊಂಡ ಅಭಿನಯಶೈಲಿ ಜಯಂತಿಯದು. ಹಲವು ದಶಕಗಳ ವ್ಯಾಪ್ತಿಯಲ್ಲಿ ಅಭಿನಯಿಸಿದ ಜಯಂತಿ ಕಾಲಕಾಲಕ್ಕೆ ತಮ್ಮ ನಟನೆಯನ್ನು ಬದಲಾಯಿಸಿಕೊಳ್ಳುತ್ತಲೇ ಬಂದರು. ಕ್ರಿಯೆಯ ಜೊತೆ ಜೊತೆಗೆ ಸಂಭಾಷಣೆ ಹೇಳುವ ಸಿನಿಮಾ ಭಾಷೆಯಲ್ಲಿ ಬಿಸಿನೆಸ್ ಶೈಲಿಯನ್ನು ರೂಢಿಸಿಕೊಂಡರು. ಚೆಲುವು ಮಾತುಗಳ ಮಾದಕತೆಯೇ ಪ್ರಧಾನವಾಗಿ ಬಿಡುವ ಅಪಾಯ ದಾಟಿ ಕಲಾವಿದೆಯಾಗಿ ಎಂಥ ಪಾತ್ರವಾದರೂ ನಿಲ್ಲಿಸಬಲ್ಲ ಸಮರ್ಥೆ ಜಯಂತಿ.

ಸಹಜತೆಯ ಕಲ್ಪನೆ ಬರುವುದಕ್ಕೆ ಮೊದಲೇ ಸಹಜ ಅಭಿನಯಶೈಲಿಯನ್ನು ಕನ್ನಡದಲ್ಲಿ ರೂಢಿಸಿದವರು ಭಾರತಿ. ಪಾತ್ರದ ಮೂಲಭಾವಗಳನ್ನು ವೈವಿಧ್ಯತೆಯೊಂದಿಗೆ ಅಭಿವ್ಯಕ್ತಿಸುವ, ಸಂಭಾಷಣೆ ಹೇಳುವ ಶೈಲಿಯಲ್ಲೇ ಅಥೆಂಟಿಸಿಟಿ ಸ್ಪರ್ಶ ನೀಡುವ ಶೈಲಿ ಅವರದು. ಸಹಜ ಸ್ನಿಗ್ಧ ಸೌಂದರ್ಯದ ಜೊತೆಗೆ ಅಭಿನಯದಲ್ಲಿ ನೈಜತೆ ತಂದಿದ್ದರಿಂದ ಅವರು ನಿರ್ವಹಿಸಿದ ಪಾತ್ರಗಳು ಜೀವಂತವಾಗಿರುತ್ತಿದ್ದವು. ಆದರೆ ಭಾರತಿ ನಿರ್ವಹಿಸಿದ ಹೆಚ್ಚಿನ ಪಾತ್ರಗಳೆಲ್ಲ ಮರ ಸುತ್ತುವ ಪ್ರೇಮಿಯದೇ. ಅಪರೂಪಕ್ಕೆ 'ಶ್ರೀಕೃಷ್ಣ ರುಕ್ಮಿಣಿ ಸತ್ಯಭಾಮಾ'ದಂಥ ಚಿತ್ರದಲ್ಲಿ ಗರ್ವ, ಹೊಟ್ಟೆಕಿಚ್ಚು ಮುಂತಾದ basic instinctಗಳನ್ನು ಒಳಗೊಂಡ ಜೀವಂತಪಾತ್ರ ಸಿಕ್ಕಿತು. ಉಳಿದಂತೆ ನಾಯಕನ ನೆರಳಿನಂತೆ ಬೆಳೆಯುವ ಪಾತ್ರದಲ್ಲಿ ಭಾರತಿ ಹೆಚ್ಚಿನದೇನನ್ನೂ ಹೇಳದೆ ಹೋದರು. ಎಷ್ಟೋ ವರ್ಷಗಳ ನಂತರ ಬಂದ 'ಋಣಮುಕ್ತಳು' ಚಿತ್ರದಲ್ಲಿ ಅವರ ಅಭಿನಯ ಭಾರತಿ ಎಂಥ ಸಿನಿಮ್ಯಾಟಿಕ್ ಅಥೆಂಟಿಸಿಟಿ ಕನ್ನಡಕ್ಕೆ ನೀಡಬಲ್ಲವರಾಗಿದ್ದರು ಎಂಬುದರ ಕುರುಹಾಗಿತ್ತು.

ದಕ್ಷಿಣದ ಹೇಮಮಾಲಿನಿ ಎಂದೇ ಹಣೆಪಟ್ಟಿ ಹೊತ್ತು ಹೆಚ್ಚು ಕಡಿಮೆ ಗ್ಲಾಮರಸ್ ನಟಿಯಾಗಿ ಕಾಣಿಸಿಕೊಂಡ ಪದ್ಮಪ್ರಿಯಾ ಒಳ್ಳೆಯ ನಿರ್ದೇಶಕರ ಕೈಕೆಳಗೆ ಪರಿಣಾಮಕಾರಿಯಾಗಿ ಅಭಿನಯಿಸಬಲ್ಲೆನೆಂದು 'ಬಾಡದ ಹೂ' ಚಿತ್ರದ

(ಚಿತ್ರ ೧೩೨-೧೩೫)ವೈಶಾಲಿ

ಭಾರತಿ

(ಚಿತ್ರ ೧೩೬ -೧೪೩)ಕಲ್ಪನಾ

ನಾಯಕಿಪ್ರಧಾನ ಪಾತ್ರದಲ್ಲಿ ಸಾಕಷ್ಟು ತಲ್ಲೀನತೆಯಿಂದಲೇ ಅಭಿನಯಿಸಿ ತೋರಿಸಿದ್ದರು. 'ಮರಳಿ ಸರಪಣಿ', 'ತಾಯಿಗೆ ತಕ್ಕ ಮಗ', 'ಪಟ್ಟಣಕ್ಕೆ ಬಂದ ಪತ್ನಿಯರು' ಚಿತ್ರಗಳಲ್ಲಿ ವಿಭಿನ್ನವಾಗಿ ಕಾಣಿಸಿಕೊಂಡಿದ್ದರು.

ಕನ್ನಡದಲ್ಲಿ ಹೊಸ ಅಲೆ ಆರಂಭವಾದಾಗ ಅದರ ಪ್ರಯೋಗಶೀಲತೆಗೆ ಹೊಂದಿಕೊಳ್ಳಬಲ್ಲ ನಟಿಯರಿಗಾಗಿ ಶೋಧ ನಡೆಯಿತು. ಕಲ್ಪನಾ, ಆರತಿ ಇಂಥ ಕೆಲವು ಚಿತ್ರಗಳಲ್ಲಿ ನಟಿಸಿದರೂ ಪಾತ್ರನಿರ್ವಹಣೆಯಲ್ಲಿ ಪ್ರಯೋಗಶೀಲತೆ ತೋರಿಸಲಿಲ್ಲ. ಇದಕ್ಕೆ ಉತ್ತರವಾಗಿ ಪ್ರಾರಂಭದಲ್ಲೇ ಲಭ್ಯವಾದ ಹೆಸರು ಎಲ್.ವಿ.ಶಾರದಾ. ಕ್ಯಾಮರಾಕೋನಗಳು ಮತ್ತು ಪಾತ್ರದ ವೈಚಾರಿಕಸ್ತರಗಳನ್ನು ಗುರುತಿಸಿಕೊಳ್ಳಬಲ್ಲ ತಮ್ಮ ಶಕ್ತಿಗಾಗಿ ಶಾರದಾ ಇಂಥ ಚಿತ್ರಗಳಿಗೆ ಖಾಯಂ ಆದರು. ಕೆಲ ಮಟ್ಟಿಗೆ ಶೈಲೀಕೃತ ಅಭಿನಯ (stylised acting) ಎಂದು ಕರೆಯಬಲ್ಲ ಶೈಲಿ ಹೊಂದಿದ ಶಾರದಾ 'ವಂಶವೃಕ್ಷ', 'ಫಣಿಯಮ್ಮ' ಚಿತ್ರಗಳಲ್ಲಿ ಪ್ರಭಾವಿ ಅಭಿನಯ ತೋರಿದರು. ಈ ಚಳವಳಿ ಕ್ಷೀಣಿಸಿದಂತೆ ಅವರ ಹೆಸರು ತೆರೆಮರೆಗೆ ಸರಿಯಿತು. ಆಕೆ ನಿಜಕ್ಕೂ ಬೇರೆ ಬೇರೆ ರೇಂಜ್‌ನಲ್ಲಿ ಅಭಿನಯಿಸಬಲ್ಲರೆಂದು ಸಾಬೀತು ಮಾಡಿದ ಕೆಲವು ಚಿತ್ರಗಳಿವೆ. 'ವಾತ್ಸಲ್ಯಪಥ', 'ಒಂದು ಪ್ರೇಮದ ಕಥೆ' ಇತ್ಯಾದಿ. ಆದರೆ ಚಿತ್ರದ ಸೋಲು ಕಲಾವಿದರನ್ನು ಮರೆಸಿಬಿಡುವ ದುರಂತದಲ್ಲಿ ಆಕೆಯೂ ಕರಗಿದರು. ಈ ಚಳವಳಿಯಲ್ಲೂ ಇದ್ದು, ವ್ಯಾಪಾರಿ ಚಿತ್ರಗಳಲ್ಲಿ ಅವಕಾಶ ಪಡೆದವರು ವೈಶಾಲಿ ಕಾಸರವಳ್ಳಿ. 'ಆಕ್ರಮಣ' ಚಿತ್ರದಲ್ಲಿ ವಾಸ್ತವತೆಯಿಂದ ಕೂಡಿದ (realistic) ಅಭಿನಯ ನೀಡಿದ ವೈಶಾಲಿ ವ್ಯಾಪಾರಿ ಚಿತ್ರಗಳಲ್ಲಿ ಮೆಲೊಡ್ರಾಮ ಛಾಯೆ ತಟ್ಟಿದ ಅಭಿನಯ ನೀಡಿದರು. ಹಾಸ್ಯ ಪಾತ್ರವನ್ನು ಆಕೆ ಸರಿಗಟ್ಟಬಲ್ಲವರಾಗಿದ್ದರು. ಆದರೆ ಅವರಿಗೆ ಸಿಕ್ಕ ಅವಕಾಶಗಳು ಕಡಿಮೆಯಾದ್ದರಿಂದ ಅವರ ಅಭಿನಯಶೈಲಿಯನ್ನು ಒಂದು ವ್ಯಾಖ್ಯಾನದ ವ್ಯಾಪ್ತಿಗೆ ತರುವುದು ಕಷ್ಟ. ನಮ್ಮಲ್ಲಿ ಹೊಸ ಅಲೆ ಚಿತ್ರಗಳು ಶಬನಾ ಆಜ್ಮಿ, ಸ್ಮಿತಾ ಪಾಟೀಲ್‌ರಂಥ ಕಲಾವಿದೆಯರನ್ನು ಹುಟ್ಟುಹಾಕಲಿಲ್ಲ ಎಂಬುದು ವಾಸ್ತವ.

ಕಲ್ಪನಾ ಎಂದಕೂಡಲೇ ನೆನಪಿಗೆ ಬರುವುದು ಅಬ್ಬರದ ಸೂಪರ್ ಮೆಲೊಡ್ರಾಮಾ ಪಾತ್ರಗಳು. 'ಬೆಳ್ಳಿಮೋಡ'ದ ಸವಾಲಿನ ಪಾತ್ರವನ್ನು ಜೀವಂತಿಕೆ ತುಂಬಿ ನಿರ್ವಹಿಸಿದ್ದ ಕಲ್ಪನಾ ತಮ್ಮ ಅಭಿನಯದ ಆರಂಭದಲ್ಲಿ ಸಂಯಮದ ಶೈಲಿಯಲ್ಲೇ ಅಭಿನಯಿಸುತ್ತಿದ್ದರು. ಆದರೆ 'ಶರಪಂಜರ' ಚಿತ್ರದ ಹುಚ್ಚಿಯ ಪಾತ್ರ ಅವರ ಅಭಿನಯ ಮಾದರಿಯನ್ನೇ ಬದಲಾಯಿಸಿಬಿಟ್ಟಿತು. ಇದರ ಜೊತೆಗೆ ಭಾವುಕ ಮಾದರಿ ನಿರೂಪಣೆಯ ಮೊದಲ ಹಂತದಲ್ಲಿ ಪುಟ್ಟಣ್ಣ ಕಣಗಾಲ್ ಅವರು ಇದೇ ಮಾದರಿಯನ್ನೇ ಕಲ್ಪನಾರಲ್ಲಿ ಬೆಳೆಸಿದರು. ವಾಚಿಕ, ಆಂಗಿಕ ಅಭಿನಯಗಳೆರಡರಲ್ಲೂ ಮೆಲೊಡ್ರಾಮ ತಂದ ಕಲ್ಪನಾ, ಪ್ರಣಯ ಸನ್ನಿವೇಶಗಳಲ್ಲಂತೂ ಅತಿಗೆ ಹೋಗಿಬಿಡುತ್ತಿದ್ದರು. ದುಃಖದ ಸನ್ನಿವೇಶಗಳಲ್ಲಿ ಕಣ್ಣೀರಿನ ಕೋಡಿಯನ್ನೇ ಹರಿಸುತ್ತಿದ್ದರು. ಕಲ್ಪನಾ ಅಭಿನಯಶೈಲಿ ಕನ್ನಡದಲ್ಲಿ ನಾಯಕಿಯರಿಗೆ ಒಂದು ಮಾದರಿಯನ್ನೇ ನಿರ್ಮಿಸಿತು. ಆಗಲೇ ನಿರ್ಮಾಣವಾಗಿದ್ದ ಸಾಧ್ವಿಯರ ಮಾದರಿಯ ಆಧುನೀಕರಣವೇ ಕಲ್ಪನಾ ರೂಢಿಸಿಕೊಂಡ ಭಾವುಕ ಶೈಲಿ ಎನ್ನಬಹುದೇನೋ. ಆಕೆ ಅತಿಭಾವುಕತೆಯಲ್ಲಿ ತಾನೇ ಕಳೆದುಹೋದರು. ಅವರೊಳಗಿದ್ದ ನಿಜವಾದ ಕಲಾವಿದೆ ಇಣುಕಿದ್ದು 'ಉಯ್ಯಾಲೆ', 'ಮುಕ್ತಿ' ಸ್ವಲ್ಪ ಮಟ್ಟಿಗೆ 'ಗೆಜ್ಜೆಪೂಜೆ'ಯಂಥ ಚಿತ್ರಗಳಲ್ಲಿ.

ನಿರ್ದೇಶಕ ಹಾಗೂ ನಿರ್ಮಾಪಕ ಎಂ.ಎಸ್.ನಾಯಕ್ ಅವರ ಪುತ್ರಿಯಾದ ಚಂದ್ರಕಲಾ ಸಾಕಷ್ಟು ಅವಕಾಶ ಪಡೆಯದೇ ಹೋದರೂ ಗಳಿಸಿದ ಕೆಲವೇ ಚಿತ್ರಗಳಲ್ಲಿ ಉತ್ತಮ ಎನ್ನಬಹುದಾದಂಥ ಅಭಿನಯ ನೀಡಿದ್ದರು. 'ಒಂದೇ ಬಳ್ಳಿಯ ಹೂಗಳು' ಚಿತ್ರದ ವಾತ್ಸಲ್ಯಮಯಿ ಸೋದರಿ, 'ಪುನರ್ಜನ್ಮ' ಚಿತ್ರದ ಮೂಕಿ, 'ಮಾರ್ಗದರ್ಶಿ' ಚಿತ್ರದ ಪ್ರೇರಕಶಕ್ತಿಯಾಗಿ ಸೂಕ್ಷ್ಮವೆನಿಸುವಂಥ ಮಾದರಿಯಲ್ಲಿ ಅಭಿನಯ ನೀಡಿದ್ದರು.

(ಚಿತ್ರ ೧೪೪-೧೪೬)ಮಂಜುಳಾ

(ಚಿತ್ರ ೧೪೭-೧೫೦) ಆರತಿ

ನಾಯಕಿ ಪಾತ್ರಗಳು ಭಾವುಕತೆ ಮುಸುಕಿಂದ ತಲೆ ಹೊರಗೆ ಹಾಕುತ್ತಿದ್ದ ಸಂಕ್ರಮಣ ಕಾಲದಲ್ಲಿ ತಮ್ಮ ಶೈಲಿ ರೂಢಿಸಿಕೊಂಡ ಮಂಜುಳಾರಲ್ಲಿ ಭಾವುಕತೆ ಮತ್ತು ಸಹಜತೆ ಎರಡನ್ನೂ ಮಿಶ್ರಗೊಳಿಸಿದ ಶೈಲಿ ಕಾಣಬಹುದು. ಪಾತ್ರಕ್ಕೆ ತಕ್ಕ ಆಂಗಿಕ ಅಭಿನಯ ಕಂಡುಕೊಂಡು ಅಭಿನಯಿಸಿದ ಮಂಜುಳಾ ಈ ಕಾರಣಕ್ಕೇ ಗಂಡುಬೀರಿ, ಬಜಾರಿ, ಗ್ಲಾಮರ್ ಗರ್ಲ್, ಸಾಧ್ವಿ, ಪತಿವ್ರತೆ ಎಲ್ಲಾ ರೇಂಜ್ ಪಾತ್ರಗಳಿಗೂ ಸೈ ಅನ್ನಿಸಿಕೊಂಡರು. ಭಾವುಕ ಸನ್ನಿವೇಶಗಳಲ್ಲಿ ಕರಗಿಹೋಗದೆ ಸಂಯಮದಿಂದ ನಟಿಸುತ್ತಿದ್ದ ಅವರದು ಕೆಲವು ಕಡೆ ಕೃತ್ರಿಮ ಎನ್ನಿಸುವಷ್ಟು ಪ್ರಜ್ಞಾಪೂರ್ವಕವಾಗಿ ರೂಢಿಸಿಕೊಂಡ ಶೈಲಿ. 'ಸಂಪತ್ತಿಗೆ ಸವಾಲ್', 'ಬಯಸದೇ ಬಂದ ಭಾಗ್ಯ', 'ಗಲಾಟೆ ಸಂಸಾರ' ಚಿತ್ರಗಳಲ್ಲಿ ಮಂಜುಳಾ ಅವರ ಸಮಸ್ಯೆಯನ್ನು ಗುರುತಿಸಬಹುದು.

ಮೆಲೋಡ್ರಾಮವನ್ನೇ ಸಹಜತೆಗೆ ಬೆರೆಸಿ ಸಮ್ಮಿಶ್ರಣಗೊಳಿಸಿಕೊಂಡ ಶೈಲಿ ಆರತಿಯವರದ್ದು. 'ಎಡಕಲ್ಲು ಗುಡ್ಡದ ಮೇಲೆ', 'ಶುಭಮಂಗಳ'ದಂಥ ಚಿತ್ರಗಳ ಚೆಲ್ಲಾಟದ ಹುಡುಗಿ ಪಾತ್ರವನ್ನು ನೈಜ ಎನ್ನಿಸುವ ಹಾಗೆ ಅಭಿನಯಿಸಿದ ಆರತಿ, ಪಾತ್ರದ ಬಗೆಗೊಂದು empathy ಬೆಳೆಯುವಂತೆ ತಮ್ಮ ಶೈಲಿಯನ್ನು ಬೆಳೆಸಿಕೊಳ್ಳುತ್ತಿದ್ದರು. ಆದರೆ ಅವರ ಮುಂದಿನ ಚಿತ್ರಗಳೆಲ್ಲ ಬಹು ಪಾಲು ನಾಟ್ಯಿಯನ್ನು ಹೋಲುವಂಥದು. 'ರಂಗನಾಯಕಿ'ಯಂಥ ಪಾತ್ರವಂತೂ ಅಪ್ಪಟ ಮೆಲೋಡ್ರಾಮ. ಹೀಗಾಗಿ ಆರತಿ ಪಾತ್ರಗಳ ಒಳಸಂಜ್ಞೆಗಳನ್ನು ಪ್ರದರ್ಶಿಸುವುದಕ್ಕಷ್ಟೇ ತಮ್ಮ ಶೈಲಿಯನ್ನು ಸೀಮಿತಗೊಳಿಸಿಕೊಂಡುಬಿಟ್ಟರು. ಕೊನೆಗೆ ಅದು ಸತ್ವಹೀನ ಏಕತಾನದ ಮಾದರಿಯಾಗಿ ಕೊನೆಗೊಂಡಿತು. ಆರತಿ ತಮ್ಮ ಚಿತ್ರಜೀವನದಲ್ಲಿ ಚಲನಶೀಲ ಅನ್ನಿಸಬಲ್ಲ ಪಾತ್ರ ಮಾಡಿದ್ದೇ ಕಡಿಮೆ.

ಆಂಗಿಕ ಅಭಿನಯದ ಮಟ್ಟಿಗೆ ಲಕ್ಷ್ಮೀಗೆ ಹೋಲಿಸಬಲ್ಲ ಕಲಾವಿದರು ಸಿಕ್ಕುವುದು ಕಷ್ಟ. ಬಾಂಡ್ ಚಿತ್ರಗಳಲ್ಲಿ ತೆರೆಗೆ ಕಾಲಿಟ್ಟ ಇವರಿಗೆ ಆರಂಭದ ಚಿತ್ರಗಳು ಅಂಗಸೌಷ್ಠವ ಪ್ರದರ್ಶನಕ್ಕೆ ಮಾತ್ರ ಅವಕಾಶ ನೀಡಿದವು. ರಂಗುರಂಗಿನ ಆ ಪಾತ್ರಗಳ ಅಗತ್ಯಕ್ಕೆ ತಕ್ಕಂತೆ ನಟಿಸಿದ ಲಕ್ಷ್ಮೀ ಇಂಥ ಚಿತ್ರಗಳ ಪ್ರವಾಹದ ನಂತರವೂ ಉಳಿದುಕೊಂಡರು. ಮೆಲೋಡ್ರಾಮಾ ಚಿತ್ರಗಳಲ್ಲಿ ಅಭಿನಯಿಸಿದಷ್ಟೇ ಪ್ರಭಾವಶಾಲಿಯಾಗಿ ಫಾರ್ಮುಲಾ ಚಿತ್ರಗಳಲ್ಲೂ ನಟಿಸಿದರು. ಕಣ್ಣುಗಳಲ್ಲಿ ಮಾತ್ರವಲ್ಲದೆ ದೇಹದ ಪ್ರತಿ ಅಂಗವನ್ನು ಸಂಭಾಷಣೆಗೆ ಮೇಳೈಸಿಕೊಂಡು ಅಭಿನಯಿಸುವ ಲಕ್ಷ್ಮೀ ದೈಹಿಕ ಅಭಿವ್ಯಕ್ತಿಯನ್ನು ಅವರ ಅತ್ಯುತ್ತಮ ಮಾದರಿಯಲ್ಲಿ - ತಮ್ಮ ಅಭಿನಯಶೈಲಿಯಲ್ಲಿ ಅಳವಡಿಸಿಕೊಂಡರು. ಪ್ರಣಯ ಸನ್ನಿವೇಶಗಳಲ್ಲಿ ಆಕೆಯನ್ನು ಮೀರಿಸುವ ಕಲಾವಿದರು ಇನ್ನೊಬ್ಬರಿರಲಿಲ್ಲ. ಮುಖದಲ್ಲಿ ಉನ್ಮಾದವನ್ನು ಅವರು ಪ್ರಕಟಿಸುವ ರೀತಿಯೇ ಅನನ್ಯ. ಕ್ಯಾಮರಾ ಆ್ಯಂಗಲ್‌ಗಳನ್ನು ಎಚ್ಚರಿಕೆಯಿಂದ ಗುರುತಿಸಿಕೊಳ್ಳುತ್ತಿದ್ದ ಅವರು ಆ ದೃಷ್ಟಿಯಿಂದಲೂ ಗೆದ್ದವರು. 'ಪಲ್ಲವಿ ಅನುಪಲ್ಲವಿ' ಚಿತ್ರದಲ್ಲಿ ಅವರ ಅಭಿನಯ ಇದಕ್ಕೆ ಸಾಕ್ಷಿ. ಚೆಲ್ಲು ಹುಡುಗಿ ಪಾತ್ರವನ್ನು ನಿರ್ವಹಿಸಿದಷ್ಟೇ ಸಲೀಸಾಗಿ ಗೃಹಿಣಿಯ ಗಾಂಭೀರ್ಯವನ್ನೂ ಅಭಿವ್ಯಕ್ತಿಸಿದ ಲಕ್ಷ್ಮೀ ಪೋಷಕ ಪಾತ್ರಗಳನ್ನು ನಿರ್ವಹಿಸಲು ಆರಂಭಿಸಿದಾಗ ಹೊಸಮಾದರಿ ಹಾವಭಾವಗಳನ್ನು ಕಂಡುಕೊಂಡರು. 'ಹೂವು ಹಣ್ಣು'ದಂಥ ಚಿತ್ರದಲ್ಲಿ ಇದನ್ನು ಸೂಕ್ಷ್ಮವಾಗಿ ಗುರುತಿಸಬಹುದು.

(ಚಿತ್ರ ೧೫೧) ಲಕ್ಷ್ಮೀ

ಗ್ಲಾಮರ್ ಪಾತ್ರಗಳ ಜೊತೆಯಲ್ಲೇ ರಾಜಕುಮಾರ್ ಅವರ ಚಿತ್ರಗಳ ಖಾಯಂ ನಾಯಕಿಯಾಗಿ ಚಿತ್ರರಂಗಕ್ಕೆ ಬಂದ ಜಯಮಾಲಾ ಅವರಿಗೆ ಈ ಅಂಶಗಳೇ ಮಿತಿಗಳಾದವು. ಜನಪ್ರಿಯ ಚೌಕಟ್ಟಿನ ಚಿತ್ರಗಳು ಸಾಲುಸಾಲಾಗಿ ಬಂದವು. ಇದು ಅಭಿನಯ ಸಾಧ್ಯತೆಯನ್ನೇ ಹೊಸಕಿ ಹಾಕಿತು. ಮುಂದೆ 'ಚಂಡಿ ಚಾಮುಂಡಿ'ಯಂಥ ಮಾರಾಮಾರಿ ಪಾತ್ರಗಳು ದೊರೆಯಲಾರಂಭಿಸಿದಾಗ ಜಯಮಾಲಾ ಚಿತ್ರರಂಗಕ್ಕ ಹೊಸ ಸಾಧ್ಯತೆಯನ್ನೇನೋ ಕೊಟ್ಟರು. ಆದರೆ ಸೃಜನಾತ್ಮಕವಾಗಿಯಲ್ಲ. 'ರಾಗ ತಾಳ', 'ಸಂಗೀತಾ'ದಂಥ ಚಿತ್ರಗಳಲ್ಲಿ ಗಮನಾರ್ಹ

(ಚಿತ್ರ ೧೫೨-೧೫೪) ಜಯಮಾಲ, ಉಮಾಶಿವಕುಮಾರ್

ಜಯಮಾಲ

(ಚಿತ್ರ ೧೫೫) ಬಿ.ವಿ.ರಾಧ

(ಚಿತ್ರ ೧೫೬) ಭವ್ಯ

(ಚಿತ್ರ ೧೫೭) ಮಹಾಲಕ್ಷ್ಮಿ - ಪ್ರಭಾಕರ್

ಅಭಿನಯ ನೀಡಿದ್ದ ಈ ಕಲಾವಿದೆಗೆ ಅತ್ಯುತ್ತಮ ಅವಕಾಶಗಳು ಸಿಕ್ಕಿದ್ದು 'ತಾಯಿಸಾಹೇಬ', 'ಗಂಗವ್ವ ಗಂಗಾಮಾಯಿ'ಯಂಥ ಇತ್ತೀಚಿನ ಚಿತ್ರಗಳಲ್ಲಿ. ಈ ಚಿತ್ರಗಳನ್ನು ನೋಡಿದಾಗ ಕಲಾವಿದೆಗೆ ಈ ಅವಕಾಶಗಳು ಹಿಂದೆಯೇ ಸಿಗಬೇಕಿತ್ತು ಅನ್ನಿಸಿದ್ದು ಸುಳ್ಳಲ್ಲ.

ದೀರ್ಘಕಾಲದಿಂದ ಚಿತ್ರರಂಗದಲ್ಲಿದ್ದರೂ ಸವಾಲಿನ ಪಾತ್ರಗಳ ಕೊರತೆಯಿಂದ ತಮ್ಮ ಪ್ರತಿಭೆಗೆ ತಕ್ಕ ಅವಕಾಶ ಪಡೆಯದೆ ಹೋದವರು ಬಿ.ವಿ.ರಾಧಾ. ಅವರದು ಚಂಚಲತೆ, ಗಾಂಭೀರ್ಯ ಇಂಥ ಮೂಲಪ್ರವೃತ್ತಿಯನ್ನು ಗಾಢವಾಗಿ ಅಭಿನಯಿಸುವ ಶೈಲಿ. ಕಲಾತ್ಮಕ ಚಿತ್ರಗಳ ನಡುವೆ ಬಂದ ಪದ್ಮಾಕುಮಟಾ ಅವರಿಗೆ ಪಾತ್ರಗಳ ಏಕತಾನತೆಯೇ ಬೆಳವಣಿಗೆಗೆ ಅಡ್ಡಿಯಾಯಿತು. ಗಾಂಭೀರ್ಯ ಪಾತ್ರಗಳಲ್ಲಿ ಸೂಕ್ಷ್ಮವಾಗಿ ನಟಿಸಿದ ಕಾಂಚನಾ ಅವಕಾಶಗಳ ಕೊರತೆಯಿಂದ ಸೊರಗಿದ ಪ್ರತಿಭೆ. ಚೆಲ್ಲು ಹುಡುಗಿ ಪಾತ್ರಗಳ ನಿರ್ವಹಣೆಯಲ್ಲಿ ಹೊಸತನ ತೋರಿದ ಪ್ರಮೀಳಾ ಜೋಷಾಯ್ ತಮ್ಮ ಆಂಗಿಕ ಅಭಿನಯದಲ್ಲಿ ನಿಯಂತ್ರಣ ಇಟ್ಟುಕೊಳ್ಳದೆ ಪಾತ್ರಗಳು ವಾಸ್ತವಿಕ ರೀತಿಯಲ್ಲಿ ಬೆಳೆಯದ ಶೈಲಿ ರೂಢಿಸಿಕೊಂಡರು. ಆದರೆ ತಮ್ಮದೇ ಛಾಪು ಮೂಡಿಸದೆ ಹೋದರು. ಇದೇ ರೀತಿ ಉಲ್ಲೇಖಿಸಬಹುದಾದ ಮತ್ತೊಂದು ಹೆಸರು ಹೇಮಾಚೌಧುರಿ. ನಾಯಕಿಗೆ ಬೇಕಾದ ಎಲ್ಲಾ ಅರ್ಹತೆಗಳಿದ್ದರೂ ಅದೇಕೋ ಹೇಮಾಚೌಧುರಿ ಮಿಂಚಲು ಆಗಲೇ ಇಲ್ಲ. 'ವಿಜಯವಾಣಿ' ಚಿತ್ರದಲ್ಲಿ ಕಲ್ಪನಾಗೆ ಸಮಾನಾಂತರವಾದ ಪಾತ್ರದಲ್ಲಿ ಉತ್ತಮವಾಗಿ ನಟಿಸಿದರೂ ಆಕೆಗೆ ಆಕೆಯ ಪ್ರತಿಭಾಪ್ರದರ್ಶನಕ್ಕೆ ಅವಕಾಶವೇ ಸಿಗಲಿಲ್ಲವೆನ್ನಬಹುದು. ಅವಕಾಶಗಳ ಕೊರತೆಯಿಂದ ಉಪನಾಯಕಿ, ಖಳನಾಯಕಿ ಹೀಗೆ ಸತ್ವವಿಲ್ಲದ ಪಾತ್ರಗಳಲ್ಲಿ ಸೊರಗಿದ ಪ್ರತಿಭೆ ಎನ್ನಲಡ್ಡಿಯಿಲ್ಲ. ಕೆಲವು ಚಿತ್ರಗಳಲ್ಲಿ ಇವರ ನೃತ್ಯ ಪ್ರತಿಭೆ ಮೆರೆದಿದೆ. ೨೦೦೦ದಲ್ಲಿ ತೆರೆಕಂಡ 'ವೀರಪ್ಪ ನಾಯಕ' ಚಿತ್ರದ ಪಾತ್ರ ಪ್ರೌಢ ಅಭಿವ್ಯಕ್ತಿಗೆ ಅವಕಾಶ ಮಾಡಿತ್ತು. ಇದೇ ಮಾತು ಶ್ರೀಲಲಿತಾಗೂ ಅನ್ವಯಿಸುತ್ತದೆ. 'ಸಂಘರ್ಷ', 'ಪಡುವಾರಳ್ಳಿ ಪಾಂಡವರು', 'ಸುಬ್ಬಿ ಸುಬ್ಬಕ್ಕ ಸುವ್ವಲಾಲಿ' ಮುಂತಾದ ಚಿತ್ರಗಳಲ್ಲಿ ಪರಿಣಾಮಕಾರಿಯಾಗಿ ಅಭಿನಯಿಸಿದ ಶ್ರೀಲಲಿತಾ ನಂತರದ ದಿನಗಳಲ್ಲಿ ಪೋಷಕ ಪಾತ್ರಗಳಿಗೆ ಹೊರಳಿದರು. 'ಹಂಸಗೀತೆ'ಯಿಂದ ಹೊಸ ರೀತಿಯಿಂದಲೇ ಬಂದರೂ ರೇಖಾರಾವ್ ಕೆಲವು ಪ್ರಧಾನವಾಹಿನಿ ಚಿತ್ರಗಳಲ್ಲೂ ತಮ್ಮ ನೀಲಕಂಗಳನ್ನೇ ಬಂಡವಾಳ ಮಾಡಿಕೊಂಡು ಗಮನ ಸೆಳೆದರು.

೮೦ರ ದಶಕದಲ್ಲಿ ಹಲವಾರು ಪರಭಾಷಾ ಕಲಾವಿದರು ಕನ್ನಡದಲ್ಲಿ ನಟಿಸಿದರು. ಅವರ ಅಭಿನಯದ ವ್ಯಾಪ್ತಿ ದೊಡ್ಡದಾದರೂ ಕನ್ನಡದಲ್ಲೂ ಗಮನಾರ್ಹ ಚಿತ್ರಗಳಲ್ಲಿ ನಟಿಸಿದ್ದರಿಂದ ಅವರ ಕುರಿತು ಸಂಕ್ಷಿಪ್ತವಾಗಿ ಚರ್ಚಿಸಬಹುದು. ಆಂಗಿಕ ಅಭಿನಯದಲ್ಲಿ ತುಂಬಾ ಸಮತೋಲನ ಕಾಯ್ದುಕೊಂಡು ಚಲನೆ ಉಳಿಸಿಕೊಂಡ ಶೈಲಿ ಜಯಪ್ರದ ಅವರದ್ದು. ಮುಖ್ಯವಾಗಿ ಮುಖಭಾವ ವ್ಯಕ್ತಪಡಿಸುವಲ್ಲಿ ಸ್ಥಿತ್ಯಂತರಗಳನ್ನು ಸಿದ್ಧಿಸಿಕೊಳ್ಳುತ್ತ ಬಂದ ಶೈಲಿ ಗಾಯತ್ರಿ ಅವರದ್ದು. ಪಾತ್ರಕ್ಕೆ ತಕ್ಕಂಥ ಸಿದ್ಧ ಮುಖಭಾವ ನೀಡುವ ಸೀಮಿತ ಶೈಲಿ ಮಾಧವಿ ಅವರದ್ದು. ಗೀತಾ ಪಾತ್ರದ ಮೂಲಪ್ರವೃತ್ತಿಯನ್ನು ಗುರುತಿಸಿಕೊಂಡರಾದರೂ ಚಲನೆಯಲ್ಲಿ ವೈವಿಧ್ಯ ನೀಡಲಿಲ್ಲ. ಆಂಗಿಕ ಅಭಿನಯದಲ್ಲಿ ಅವರದ್ದು ಮಿಂಚಿದ ಪ್ರತಿಭೆ. ಪಾತ್ರಗಳ ವ್ಯಾಪ್ತಿಯರಿತು ನಟಿಸಿದ ಸರಿತಾ ಸೂಕ್ಷ್ಮ ಒಳನೋಟಗಳ ಅಭಿವ್ಯಕ್ತಿಗೂ ಪ್ರಯತ್ನಿಸುತ್ತಿದ್ದರು. ಪ್ರಬುದ್ಧ ನಟಿ ಎಂದೇ ಹೆಸರಾದ ಸುಹಾಸಿನಿ ತಮ್ಮ ಸಂಯಮದ ಅಭಿನಯದಿಂದ ಸಿನಿಮ್ಯಾಟಿಕ್ ರಿಯಲಿಸಂ ಎಂದು ಕರೆಯಬಹುದಾದ ಶೈಲಿಯನ್ನು ಪ್ರಭಾವಿಯಾಗಿ ಮೂಡಿಸಿಕೊಂಡರು. ಸ್ಥಿರಚರ್ಯೆಯಿಂದಲೇ ಪಾತ್ರಗಳನ್ನು ವೈವಿಧ್ಯವಾಗಿಸಲು ಪ್ರಯತ್ನಿಸುವ ಶೈಲಿ ಅಂಬಿಕಾ ಅವರದ್ದು.

ಆರತಿ ಜೊತೆಗೆ ಬಿರುಕು ಮೂಡಿದ ಮೇಲೆ ಪುಟ್ಟಣ್ಣ ಕಣಗಾಲ್ ಹೊಸ ಕಲಾವಿದೆಯ ಹುಡುಕಾಟದಲ್ಲಿದ್ದರು. ಆಗ ಬಂದವರು ಪದ್ಮಾವಾಸಂತಿ. ಪುಟ್ಟಣ್ಣನವರ ಭಾವುಕ ಶೈಲಿಯ ಚಿತ್ರಗಳಲ್ಲಿ ನಟಿಸಿದರೂ ಸ್ವಲ್ಪ ಭಿನ್ನ ಹಾವಭಾವಗಳಿಂದ ಗಮನ ಸೆಳೆದ ಪದ್ಮಾವಾಸಂತಿ, ಪಾತ್ರದ ಮೂಲಪ್ರವೃತ್ತಿಯನ್ನು ಸೂಕ್ಷ್ಮವಾಗಿ ಗ್ರಹಿಸುತ್ತಿದ್ದರು. ಪುಟ್ಟಣ್ಣನವರ ಬೇರೆ ನಾಯಕಿಯರಿಗೆ ಹೋಲಿಸಿದರೆ ವಾಸ್ತವ ಅನ್ನುವ ಅಭಿನಯ ನೀಡಿದರು. 'ಅಮೃತ ಘಳಿಗೆ' ಚಿತ್ರದಲ್ಲಿ ''ಈ ದೇಹ ನಿಮ್ಮದು...'' ಎಂದು

(ಚಿತ್ರ ೧೫೮) ಪದ್ಮಾವಾಸಂತಿ, ಶ್ರೀಧರ್

(ಚಿತ್ರ ೧೫೯-೧೬೦) ಸುಧಾರಾಣಿ, ರಾಮ್ ಕುಮಾರ್

(ಚಿತ್ರ ೧೬೧) ವಿನಯಾ ಪ್ರಸಾದ್

(ಚಿತ್ರ ೧೬೨) ತಾರಾ

ನಾಯಕನನ್ನು ಕೇಳುವ ಭಾವುಕ ದೃಶ್ಯವನ್ನು ಬಹಳ ಸಂಯಮದಿಂದ ನಿರ್ವಹಿಸಿದ್ದರು. ಆದರೆ ಉದ್ಯಮಕ್ಕೆ ಬೇಕಾದದ್ದು ಇದಲ್ಲ. ಆಕೆಯನ್ನು ಪೋಷಕ ಪಾತ್ರಗಳಿಗೆ ತಳ್ಳಲಾಯಿತು.

ಜನಪ್ರಿಯತೆಯ ಚೌಕಟ್ಟಿಗೆ ಅನುಗುಣವಾಗಿ ಅಭಿನಯಿಸಿದ ಸುಮಲತಾ ಪಾತ್ರಗಳ ವೈವಿಧ್ಯದ ಬಗ್ಗೆ ತಲೆ ಕೆಡಿಸಿಕೊಳ್ಳದೆ ಏಕರೂಪತೆಗೆ ಸೀಮಿತವಾದರು. ಆಂಗಿಕ, ವಾಚಿಕ ಅಭಿನಯಗಳೆರಡರಲ್ಲೂ ಪಾತ್ರಗಳ ವ್ಯಾಪ್ತಿ ಗ್ರಹಿಸಿ ಅಗತ್ಯ ಒಳನೋಟ ನೀಡಬಲ್ಲ ಶೈಲಿ ರೂಢಿಸಿಕೊಂಡ ರೂಪಾದೇವಿ ಅವರಿಗೆ ಸವಾಲಾಗುವ ಪಾತ್ರಗಳೇ ಅಷ್ಟಾಗಿ ಸಿಕ್ಕಲಿಲ್ಲ. ಅಲ್ಲೊಮ್ಮೆ ಇಲ್ಲೊಮ್ಮೆ ಸಿಕ್ಕಂಥ 'ಅವಳ ಅಂತರಂಗ', 'ಧರ್ಮ', 'ತ್ರಿಶೂಲ', 'ಬಾಳನೌಕೆ' ಮುಂತಾದ ಚಿತ್ರಗಳಲ್ಲಿ ಹೆಣ್ಣಿನ ಅಂತರಂಗದ, ಮಾನಸಿಕ ಒಳತೋಟಿಗಳನ್ನು ಬಹಳ ಚೆನ್ನಾಗಿ ವ್ಯಕ್ತಪಡಿಸುವ ಪ್ರಯತ್ನ ಮಾಡಿದ್ದಾರೆ ಎನ್ನಬಹುದು. ರೂಪಾದೇವಿ ಜೊತೆಜೊತೆಗೆ ಚಿತ್ರರಂಗ ಪ್ರವೇಶಿಸಿದ ವಿಜಯಲಕ್ಷ್ಮೀ ಸಿಂಗ್, ಆಕೆ ಯಾವ ರೀತಿಯ ಪಾತ್ರಕ್ಕೆ ಹೊಂದುವರು ಎನ್ನುವ ಪರಿಕಲ್ಪನೆ ಬರುವ ಹೊತ್ತಿಗೆ ಆಕೆ ಚಿತ್ರರಂಗದಿಂದ ಹೆಚ್ಚು ಕಡಿಮೆ ನಿರ್ಗಮಿಸಿದ್ದರು. ಗ್ಲಾಮರಸ್ ಪಾತ್ರಗಳಲ್ಲೇ ಹೆಚ್ಚಾಗಿ ಕಾಣಿಸಿಕೊಂಡರೂ 'ಪ್ರಾಯ ಪ್ರಾಯ ಪ್ರಾಯ', 'ಹುಲಿ ಹೆಜ್ಜೆ', 'ಪಿತಾಮಹ'ಗಳಲ್ಲಿ ತಕ್ಕಮಟ್ಟಿಗೆ ಎನ್ನಬಹುದಾದ ಅಭಿನಯ ನೀಡಿದ್ದರು. ನಾಯಕಿಯಾಗಿ ಗಮನ ಸೆಳೆಯುವುದಕ್ಕಿಂತ 'ಬೆಂಕಿಯಲ್ಲಿ ಅರಳಿದ ಹೂವು' ಹಾಗೂ 'ಮಸಣದ ಹೂವು' ಚಿತ್ರಗಳಲ್ಲಿನ ಪುಟಾಣಿ ಪಾತ್ರಗಳಲ್ಲಿ ಸ್ಮರಣೀಯವಾದ ಅಭಿನಯವಿತ್ತು.

ಮೂಲಪ್ರವೃತ್ತಿಗಳನ್ನು ಜೀವಂತವಾಗಿಸಬಲ್ಲ ಚಲನಶೀಲ ಶೈಲಿಯನ್ನು ರೂಢಿಸಿಕೊಂಡ ಕಲಾವಿದೆ ವನಿತಾ ವಾಸು. 'ಕಾಡಿನ ಬೆಂಕಿ' ಚಿತ್ರದ ಕೊಂಚ ಸಂಯಮ ತಪ್ಪಿದರೂ ಅಶ್ಲೀಲ ಆಗಿಬಿಡಬಹುದಾಗಿದ್ದ ಪಾತ್ರವನ್ನು ಅವರು ನಿರ್ವಹಿಸಿದ ರೀತಿ ಇದಕ್ಕೆ ಸಾಕ್ಷಿ. ಆದರೆ ಅವರಿಗೆ ಸ್ಪಷ್ಟಚಿತ್ರಣದ ಪಾತ್ರಗಳೇ ಹೆಚ್ಚಾಗಿ ಸಿಗಲಿಲ್ಲ. ಅಂಚಿನಲ್ಲಿ ಚಲಿಸುವಾಗಲೇ ತಮ್ಮ ಅವಕಾಶವನ್ನು ಪ್ರಭಾವಿಯಾಗಿ ಉಪಯೋಗಿಸಿಕೊಂಡರು. ಅಬ್ಬರದ ಅತ್ತೆ ಪಾತ್ರಗಳಿಗೆ ಹೇಳಿಮಾಡಿಸಿದ ಉಮಾ ಶಿವಕುಮಾರ್ 'ಬಜ್ಜಿ ಬಂಗಾರಮ್ಮ'ನಂಥದೇ ಹಾವಭಾವಗಳ ಶೈಲಿ ರೂಢಿಸಿಕೊಂಡರು. ಸತ್ಯಭಾಮ ಕೂಡ ಇದೇ ಪಟ್ಟಿಯಲ್ಲಿ ಹೆಸರಿಸಬೇಕಾದವರು. ರಂಗಭೂಮಿ ಹಿನ್ನೆಲೆ ಜೊತೆಗೆ ಪಾತ್ರದ ಪ್ಲೇಸ್‌ಮೆಂಟ್ ಅನ್ನು ಪ್ರಜ್ಞಾಪೂರ್ವಕವಾಗಿ ಗ್ರಹಿಸುವ ಶಕ್ತಿ, ಇದರಿಂದ ವಾಸ್ತವಿಕತೆ (realistic) ಯ ಶೈಲಿಯನ್ನು ರೂಢಿಸಿಕೊಂಡ ಗಿರಿಜಾ ಲೋಕೇಶ್ ಬಹಳ ಮುಖ್ಯವಾಗಿ ಪಾತ್ರಗಳ ಹಿನ್ನೆಲೆಯನ್ನು (Biography) ಅರ್ಥ ಮಾಡಿಕೊಂಡು ಅಭಿನಯಿಸುವ ಕ್ರಮಕ್ಕಾಗಿ ಮುಖ್ಯರಾಗುತ್ತಾರೆ.

ಮೆಲೋಡ್ರಾಮಾ ಪಾತ್ರಗಳ ಸರಣಿಯನ್ನು ಯಶಸ್ವಿಯಾಗಿ ಮುಂದುವರೆಸಿದ ಭವ್ಯಾ ತಮ್ಮ ನಾಟಕೀಯ ಎನ್ನಬಹುದಾದ ಅಭಿನಯದಿಂದಲೇ ಚಿತ್ರರಂಗದಲ್ಲಿ ಹೆಸರು ಮಾಡಿದರು. ಅವರಿಗೆ ದೊರೆತ ವಿಭಿನ್ನ ಪಾತ್ರಗಳನ್ನು ನಾಟಕೀಯ ಶೈಲಿಯಲ್ಲಿ ನಿರ್ವಹಿಸಿ ತಮ್ಮ ಅಭಿನಯದ ಚೌಕಟ್ಟನ್ನು ತಾವೇ ಸೀಮಿತಗೊಳಿಸಿಕೊಂಡರು. 'ಪ್ರೇಮ ಪರ್ವ'ದಲ್ಲಿಯ ಮುಗ್ಧತೆ ಅನಂತರದ ಚಿತ್ರಗಳಲ್ಲಿ ಉಳಿಯಲಿಲ್ಲ. ದೊರೆತ ಅವಕಾಶದಲ್ಲೇ ವೈಶಿಷ್ಟ್ಯ ತೋರಿದರು, ಬಹಳ ಕಾಲದ ಮೌನದ ನಂತರ ಮರಳಿ ಬಂದರು.

Compartmental ಯುಗಕ್ಕೆ ಒಪ್ಪುವಂತೆ ವಿಭಜನಾ ಪಾತ್ರಕ್ಕೆ ತಕ್ಕಂತೆ ಅಭಿನಯಿಸಿದ ಮಹಾಲಕ್ಷ್ಮೀ ಸೂಕ್ಷ್ಮ ಸಂವೇದನೆಯ ಅಭಿನಯಶೈಲಿಯನ್ನು ಅಳವಡಿಸಿಕೊಂಡವರು. ನಾಯಕಿಯರಾಗಿ ತೆರೆಗೆ ಪರಿಚಿತರಾದ ಅಭಿನಯಾ ಹಾಗೂ ಅರ್ಪಣ ಇಬ್ಬರೂ ಪ್ರತಿಭಾವಂತೆಯರಾದರೂ ಗಾಡ್‌ಫಾದರ್‌ಗಳ ಕೊರತೆಯಿಂದ ನಲುಗಿದ ಕಲಾವಿದೆಯರು.

ಅನಂತರ ಬಂದ ಕಲಾವಿದೆಯರಲ್ಲಿ ತಮ್ಮ ಅಭಿನಯಶೈಲಿಯನ್ನು ನಿಖರವಾಗಿ ಗುರುತಿಸಿಕೊಂಡವರು ಸುಧಾರಾಣಿ. ಆರಂಭದಲ್ಲಿ ಜನಪ್ರಿಯ ಶೈಲಿಯ ಪಾತ್ರಗಳನ್ನೇ ಅಭಿನಯಿಸುವಾಗಲೂ 'ಮನ ಮೆಚ್ಚಿದ ಹುಡುಗಿ'ಯಂಥ ಚಿತ್ರಗಳಲ್ಲಿ ಜೀವಂತಿಕೆಯ ಅಭಿನಯ ತೋರಿಸಿದ್ದ ಸುಧಾರಾಣಿ ಪಾತ್ರಗಳ ವ್ಯಾಪ್ತಿಯನ್ನು ಪ್ರಜ್ಞಾಪೂರ್ವಕವಾಗಿ ಗ್ರಹಿಸಿ (performance) ಅಭಿನಯ ನೀಡುತ್ತಿದ್ದರು. ಮುಖಚರ್ಯೆಯಲ್ಲಿ ಭಾವ ವೈವಿಧ್ಯ ತೋರಿಸದಿದ್ದರೂ ಆಂಗಿಕ, ವಾಚಿಕ ಅಭಿನಯದಲ್ಲಿ ತಾಂತ್ರಿಕತೆ ಅರಿತು ಸಹಜತೆ ಮೂಡಿಸಿದ ಕಲಾವಿದೆ ಸುಧಾರಾಣಿ. 'ಮೈಸೂರು ಮಲ್ಲಿಗೆ'ಯಲ್ಲಿ ಅವರು ತೋರಿಸಿದ ಸಿನಿಮಾತ್ಮಕ ವಾಸ್ತವತೆ ಗಮನಿಸಿದರೆ ಭಾರತಿಯವರ ಅಭಿನಯಶೈಲಿಯ ಸೂಕ್ಷ್ಮ ಹೋಲಿಕೆಗಳನ್ನು ಸುಧಾರಾಣಿಯವರಲ್ಲೂ ಗುರುತಿಸಬಹುದಾಗಿದೆ. ಸುಧಾರಾಣಿ ವಾಸ್ತವತೆಯ ಅಭಿನಯದತ್ತ ವಾಲುತ್ತಿದ್ದಂತೆ, ಮೆಲೊಡ್ರಾಮ ಪಾತ್ರಗಳನ್ನು ನಿರ್ವಹಿಸುವ ಕಲಾವಿದೆಯಾಗಿ ಶ್ರುತಿ ರೂಪುಗೊಂಡರು. ಸೂಕ್ಷ್ಮವಾಗಿ ಗಮನಿಸಿದರೆ ಶ್ರುತಿ ಅಭಿನಯಶೈಲಿಯಲ್ಲಿ ಮೆಲೊಡ್ರಾಮ ಕಾಣಿಸುವುದಿಲ್ಲ. ಆದರೆ ಅಂಥ ಪಾತ್ರಗಳೇ ದೊರೆಯುತ್ತ ಹೋದ್ದರಿಂದ ಒಂದು ರೀತಿ ಸಿನಿಮಾತ್ಮಕ ಹೊಂದಾಣಿಕೆ ಸಾಧಿಸಿದಂತೆ ಕಾಣುತ್ತದೆ. ಮೆಲೊಡ್ರಾಮದಲ್ಲಿ ನಾಟಕೀಯತೆ ಬೆರೆಸದೆ ಅಂತರ ಇಟ್ಟುಕೊಂಡು ನಟಿಸುವ ಶ್ರುತಿ ನಿರ್ಮಿಸಿದ ಮಾದರಿ ಕಲ್ಪನಾ ಅವರಿಗಿಂತ ಭಿನ್ನವಾದ್ದು. 'ಗೆಲುವಿನ ಸರದಾರ' ಚಿತ್ರದಲ್ಲಿ ಅವರು ನೀಡಿದ ಲವಲವಿಕೆಯ ಅಭಿನಯ ನೋಡಿದರೆ ಶ್ರುತಿಯನ್ನು ನಮ್ಮ ಚಿತ್ರರಂಗ 'ತಪ್ಪು ಮಾದರಿ'ಗೆ ಸಿಕ್ಕಿಹಾಕಿಸಿತು ಎನ್ನಿಸುತ್ತದೆ.

ಮಾಲಾಶ್ರೀ ಇಮೇಜ್‌ಗೆ ಅನುಗುಣವಾದ ಪಾತ್ರಗಳಲ್ಲಿ ನಟಿಸುತ್ತಾ ಬಂದವರು.

(ಚಿತ್ರ ೧೬೩-೧೬೪) ಮಾಲಾಶ್ರೀ, ದ್ವಾರಕೀಶ್,

(ಚಿತ್ರ ೧೬೫) ಮಾಲಾಶ್ರೀ, ಸುನೀಲ್, ಶ್ರುತಿ

ಅಷ್ಟೇನೂ ಭಾವಪೂರ್ಣ ಮುಖಭಾವ ಹೊಂದಿಲ್ಲದ ಅವರಿಗೆ ಕೊನೆಗೆ ದೊರೆತ ಮಾರಾಮಾರಿ ಪಾತ್ರಗಳೇ ಸೂಕ್ತ ಎನ್ನಿಸಿ ಬಿಟ್ಟಿತು. ಭಾವಪೂರ್ಣ ಪಾತ್ರಗಳ ಯಶಸ್ಸಿಗೆ ಆವರಿಗೆ ಕಂಠದಾನ ಮಾಡುತ್ತಿದ್ದ ಸರ್ವಮಂಗಳಾ ಮುಖ್ಯ ಕಾರಣರಾಗಿದರು. ನಂತರದ ಮಾಲಾಶ್ರೀಯ ಚಿತ್ರಗಳಲ್ಲಿ ಈ ವ್ಯತ್ಯಾಸವನ್ನು ಪ್ರಧಾನವಾಗಿ ಗಮನಿಸಬಹುದು. ವೇಗವಾಗಿ ಸಲೀಸೆನಿಸುವಂತೆ ಆಂಗಿಕ ಚಲನೆ ಕೊಡುವ ಕಾರಣದಿಂದ ನಮ್ಮ ಬೇರೆಲ್ಲ ಕಲಾವಿದೆಯರಿಗಿಂತ ಭಿನ್ನವೆನಿಸಿದರು. ಇದನ್ನು ಹೊರತುಪಡಿಸಿದರೆ ಮಾಲಾಶ್ರೀಯಲ್ಲಿ ಅಭಿನಯದ ಮಾದರಿ ಹುಡುಕುವುದು ಕಷ್ಟ. ಈ ಕಲಾವಿದೆಯ ಸಾಮರ್ಥ್ಯವನ್ನು ಸರಿಯಾಗಿ ದುಡಿಸಿಕೊಳ್ಳದೆ ಚಿನ್ನದ ಮೊಟ್ಟೆ ಇಡುವ ಕೋಳಿಯ ಕರುಳು ಕತ್ತರಿಸಿದ ಪ್ರವೃತ್ತಿಯೂ ಇದಕ್ಕೆ ಕಾರಣವಾಗಿರಬಹುದು. ಮೊಳಕೆ ಫಲವಾಗಲು, ಮಾಗಲು ಬಿಡಲಿಲ್ಲ.

(ಚಿತ್ರ ೧೬೬) ಎಂ.ಪಿ.ಶಂಕರ್

೯೦ರ ದಶಕದನಂತರ ಚಿತ್ರಕಥೆಯ ರಚನಾಕ್ರಮದಲ್ಲೇ ನಾಯಕಿಯರಿಗೆ ಮಹತ್ವ ಕಡಿಮೆಯಾಯಿತು. ಅವರನ್ನು ಪಾತ್ರಗಳಿಗಿಂತ ಪದಾರ್ಥಗಳಾಗಿ ನೋಡುವ ದೃಷ್ಟಿಕೋನ ಪ್ರಬಲವಾಯಿತು. ಬಳಕೆದಾರ ಸಂಸ್ಕೃತಿಯ ಪ್ರಭಾವಕ್ಕೊಳಗಾದ ಇಂದಿನ ನಾಯಕಿಯರ ಅಭಿನಯ ಕ್ರಮವನ್ನು ಈ ಹಿನ್ನೆಲೆಯಲ್ಲೇ ಗುರುತಿಸಬೇಕು. ಆಂಗಿಕ ಅಭಿನಯದಲ್ಲಿ ಅವರಲ್ಲೂ ಕಣ್ಣಿನ ಚಲನೆಯಲ್ಲಿ ಆಕರ್ಷಕ ಹಾವಭಾವ(ಗೆಶ್ಚರ್) ಗಳನ್ನು ರೂಢಿಸಿಕೊಂಡ ಪ್ರೇಮ ಅವರು ಪಾತ್ರದ biography ಬಗ್ಗೆ ತಲೆ ಕೆಡಿಸಿಕೊಂಡವರಲ್ಲ. ಇದರಿಂದ ಸೊಕ್ಕಿದ ಹೆಣ್ಣಿನಿಂದ ಸಂತೃಪ್ತ ಗೃಹಿಣಿ, ಚೆಲುವೆಣ್ಣಿನಂಥ ಯಾವುದೇ ರೋಲ್‌ನಲ್ಲೂ ಅವರ ಅಭಿನಯ ಕ್ರಮದಲ್ಲಿ ವ್ಯತ್ಯಾಸ ಕಾಣುವುದಿಲ್ಲ. ಅವರೇ ರೂಢಿಸಿಕೊಂಡ ಆಕರ್ಷಕ ಹಾವಭಾವಗಳಲ್ಲೂ ಪಾತ್ರಕ್ಕೆ ತಕ್ಕಂಥ ಜೀವಂತಿಕೆ ನೀಡಲು ಅಲ್ಲಲ್ಲಿ ಪ್ರಯತ್ನಿಸಿದರೂ ಅಭಿನಯ ಸಾಧ್ಯತೆಯಲ್ಲಿ ವೈವಿಧ್ಯ ರೂಢಿಸಿಕೊಳ್ಳದಿರುವುದರಿಂದ ಪಾತ್ರಗಳ placementಗೆ ತಕ್ಕ ನ್ಯಾಯವನ್ನು ಅವರು ಅನೇಕ ಕಡೆ ನೀಡುವುದಿಲ್ಲ. 'ನಾಗಮಂಡಲ'ದ ಸಂಕೀರ್ಣ ಪಾತ್ರದಲ್ಲಿ ಸಹಜ ಅಭಿನಯ ನೀಡಿದ ವಿಜಯಲಕ್ಷ್ಮೀ ಈ ಚಿತ್ರದಲ್ಲಿ ಸಂಯಮದಿಂದ ಅಭಿನಯಿಸುವ ಶೈಲಿಯತ್ತ ಸಾಗಿದ್ದರು. ನಂತರ ಅವರಿಗೆ ಅಂಥ ಸವಾಲಿನ ಪಾತ್ರ ಸಿಕ್ಕದೆ ಅವರ ಶೈಲಿ ಅಸ್ಪಷ್ಟವಾಗಿಯೇ ಉಳಿದಿದೆ. ಚಿತ್ರದ ಅಭಿನಯ ಆಕೆಯ ರೇಂಜ್ ಬೇರೆ ಎಂದು ಹೇಳುತ್ತಿದೆ. ಪಾತ್ರದ ಮೂಲಭಾವಗಳನ್ನು ವೈವಿಧ್ಯಮಯವಾಗಿ ಅಭಿನಯಿಸುವ ಅನು ಪ್ರಭಾಕರ್ ಅವರದು ನೈಜ ಅನ್ನಿಸಬಲ್ಲ ಶೈಲಿ. ನಾಯಕನ ನೆರಳಿನ ಪಾತ್ರದಲ್ಲಿ ಹೆಚ್ಚಾಗಿ ಅಭಿನಯಿಸಿದ ಅವರು ಈ ಸೀಮಿತ ಸಾಧ್ಯತೆಯಲ್ಲೇ ಭಾವಗಳನ್ನು ಶಕ್ತವಾಗಿ enact ಮಾಡಿದ್ದಾರೆ. ಸವಾಲಿನ ಪಾತ್ರಗಳನ್ನು ನಿರ್ವಹಿಸಿದರೆ ಪರಿಪೂರ್ಣ ಶೈಲಿ ರೂಢಿಸಿಕೊಳ್ಳಬಲ್ಲ ಭರವಸೆ ಹುಟ್ಟಿಸುತ್ತಾರೆ. ಕನ್ನಡ ಚಿತ್ರಗಳಲ್ಲಿ ಅಪರೂಪಕ್ಕೆ ನಟಿಸಿದ ಸೌಂದರ್ಯ ಪಾತ್ರಗಳ ರಿದಮ್ ಅನ್ನು ಜೀವಂತವಾಗಿಸುವ ಅಪರೂಪದ ಅಭಿನಯಶೈಲಿ ಹೊಂದಿದವರು.

(ಚಿತ್ರ ೧೬೭) ಶಕ್ತಿಪ್ರಸಾದ್, ಚಂದ್ರಶೇಖರ್

ಪ್ರತಿಭಾವಂತ ಕಲಾವಿದೆ ವಿನಯಾ ಪ್ರಸಾದ್ ಸ್ಪಷ್ಟ ಭಾಷೆಯ ಉಚ್ಚಾರಣೆ, ಅದನ್ನು ಭಾವಗಳ ಪರಿಳಿತಗಳಿಗೆ ತಕ್ಕಂತೆ ಬಳಸುವ ಕ್ರಮ, ಶಕ್ತ ಆಂಗಿಕ ಅಭಿನಯದ ಮೂಲಕ ಚಲನಶೀಲ ಅಭಿನಯಶೈಲಿ ರೂಢಿಸಿಕೊಂಡವರು. 'ಗಣೇಶನ ಮದುವೆ' ಮಾದರಿಯ ಕಾಮಿಕ್ ಪಾತ್ರಗಳಲ್ಲೇ ಹೆಚ್ಚಾಗಿ ನಟಿಸಿದ ವಿನಯಾ ಪ್ರಸಾದ್, ಅಂಥ ಪಾತ್ರಗಳ ಸಾಮಾನ್ಯ ನಿರ್ವಹಣೆಯಾದ ಅಂಗಚೇಷ್ಟೆಗೆ ಬಲಿಯಾಗದೆ ಸಹಜವಾದ basic instinctಗಳನ್ನು ಅಭಿವ್ಯಕ್ತಿಸುವಂತೆ ಅಭಿನಯಿಸಿದವರು. ಅವರಿಗೆ ದೊರೆತ ಏಕೈಕ ಸವಾಲಿನ ಪಾತ್ರ 'ಆತಂಕ' ಚಿತ್ರದ್ದು. ಅಲ್ಲಿ ಕಣ್ಣುಗಳಲ್ಲೇ ಭಾವನೆಗಳನ್ನು ಚಿಮ್ಮಿಸುವ ಕ್ರಮ ಬಹಳ ವಿಶಿಷ್ಟವಾದದ್ದು. ಪೋಷಕ ಪಾತ್ರಗಳನ್ನು ನಿರ್ವಹಿಸಲು ಆರಂಭಿಸಿದ ಮೇಲೂ ವಿನಯಾಪ್ರಸಾದ್ ಆ ಪಾತ್ರಗಳ ಚೌಕಟ್ಟಿನಲ್ಲೇ ಜೀವಂತಶೈಲಿ ಮುಂದುವರೆಸಿದರು. ಆಂಗಿಕ ಅಭಿನಯದಲ್ಲೇ ಹಲವು ಭಾವಗಳನ್ನು ಹೇಳಬಲ್ಲ ಸಹಜ ಶೈಲಿ ರೂಪಿಸಿಕೊಂಡಿದ್ದ ಸುಮನ್ ನಗರ್‌ಕರ್ ಅವರಿಗ 'ಹೂಮಳೆ' ಹೊರತುಪಡಿಸಿ ಸಿಕ್ಕಿದ ಉಳಿದ ಪಾತ್ರಗಳೆಲ್ಲಾ ಖಚಿತ ಚಿತ್ರಣ ಇಲ್ಲದವು. ಆದರೂ ಅವರು ದೊರೆತ ಅವಕಾಶದಲ್ಲಿ ಸಹಜ ಅಭಿನಯ ನೀಡಿದ್ದರು. 'ಚಂದ್ರಮುಖಿ

(ಚಿತ್ರ ೧೬೮) ತೂಗುದೀಪ ಶ್ರೀನಿವಾಸ್

(ಚಿತ್ರ ೧೬೯) ಸುಧೀರ್

(ಚಿತ್ರ ೧೭೦) ವಜ್ರಮುನಿ

(ಚಿತ್ರ ೧೭೧-೧೭೮) ನರಸಿಂಹರಾಜು

ಪ್ರಾಣಸಖಿ'ಯಲ್ಲಿ ತುಂಟತನದಿಂದ ಭಾವಲೋಕಕ್ಕಿಳಿಯುವ ಭಾವನಾ 'ದೇವೀರಿ', 'ನಂಬರ್ ಒನ್' ಎರಡು ಚಿತ್ರಗಳಲ್ಲಿ ವಿಭಿನ್ನ ಪಾತ್ರಗಳಲ್ಲಿ ಗಮನಸೆಳೆವರು. ಪಾತ್ರದ ಮೂಲಪ್ರವೃತ್ತಿಯನ್ನು ಅರಿತು ಅಭಿನಯಿಸುವ ಭಾವನಾ ಅವರದ್ದು ಸಹಜ ಅನ್ನಿಸುವ ಅಭಿನಯಶೈಲಿ.

ದೀರ್ಘಕಾಲದಿಂದ ಚಿತ್ರರಂಗದಲ್ಲಿದ್ದರೂ ಅಲ್ಲೊಂದು ಇಲ್ಲೊಂದು ಬಿಟ್ಟರೆ ಪೋಷಕ ಪಾತ್ರಗಳನ್ನೇ ಮಾಡುತ್ತ ಬಂದ ತಾರಾ, ಪಾತ್ರದ ನಿರ್ದಿಷ್ಟತೆಗೆ ತಕ್ಕಂಥ ಅಭಿನಯ ನೀಡುವ ಶೈಲಿಯನ್ನು ರೂಢಿಸಿಕೊಂಡವರು. ಆದರೆ ಪ್ರತಿ ಪಾತ್ರಕ್ಕೆ ಮಾಮೂಲು ಮುಖಭಾವದ ಮಾದರಿ ಅಭಿನಯ ನೀಡುವುದರಿಂದ ಒಳಗಿನ ಹಲವು ಸೂಕ್ಷ್ಮಗಳು ವ್ಯಕ್ತವಾಗುವುದೇ ಇಲ್ಲ. 'ಕಾನೂರು ಹೆಗ್ಗಡಿತಿ'ಯಂಥ ಸಂಕೀರ್ಣ ಪಾತ್ರ ನಿರ್ವಹಿಸುವಲ್ಲಿ ಅವರಿಗೆ ಸಮಸ್ಯೆ ತಲೆದೋರಿದ್ದೇ ಇಂಥ ಕಡೆ. ಅವರ ಅಭಿನಯಕ್ಕೊಂದು ಶೈಲಿ ನಿರ್ಮಾಣವಾಗಬಹುದಾಗಿದ್ದ ಸಂದರ್ಭದಲ್ಲಿ ಸವಾಲಿನ ಪಾತ್ರಗಳು ಸಿಕ್ಕದೇ ಹೋಗಿದ್ದು ಇದಕ್ಕೆ ಕಾರಣವಾಗಿರಬಹುದು. ಅವರ 'ಕೋಟೆ', 'ಮುನ್ನುಡಿ' ಚಿತ್ರಗಳಲ್ಲಿಯ ಭಾವಾಭಿನಯ ಗಮನಾರ್ಹ.

ಖಳ ನಾಯಕರು

ಕನ್ನಡ ಚಿತ್ರರಂಗದಲ್ಲಿ ಖಳನಟರಿಗೆ ಪಾತ್ರವೈವಿಧ್ಯ ಸಿಕ್ಕಲೇ ಇಲ್ಲ. ಆದರೂ ಪ್ರಸಿದ್ಧರಾದವರು ಅನೇಕರು. ಇವರೆಲ್ಲ ತಮ್ಮ ಹಾವಭಾವಗಳನ್ನೇ ಪಾತ್ರದ ಶಕ್ತಿಶಾಲಿ ಅಂಶವಾಗಿ ಬಳಸಿಕೊಂಡ ಕ್ರಮವೇ ಒಂದು ದೀರ್ಘಅಧ್ಯಯನಕ್ಕೆ ಪ್ರೇರಣೆ ನೀಡಬಹುದು. ಆರಂಭದ compartmental ಯುಗದಲ್ಲಿ ರಾಕ್ಷಸ ಪಾತ್ರವನ್ನು ಹೋಲುವ ವಿಕಟ ನಗೆ, ಕೆಂಗಣ್ಣು, ಅಬ್ಬರದ ಸಂಭಾಷಣೆಗಳು ಖಳನಟರಿಗೆ ಇರುತ್ತಿದ್ದವು. ಆ ದಿನದಲ್ಲಿ ಖಳನಾಗಿ ಛಾಪು ಮೂಡಿಸಿದ ನಟರು ಕಡಿಮೆ.

೬೦ರ ದಶಕದಲ್ಲಿ ಹಲವು ಖಳರು ಹುಟ್ಟಿಕೊಂಡರು. ಅವರು ದಶಕಗಳ ಕಾಲ ಚಿತ್ರರಂಗದಲ್ಲಿ ಉಳಿದುಕೊಂಡರು. ನಾಗಪ್ಪ ಅರವತ್ತರ ದಶಕದ ಖಳನಾಯಕರಲ್ಲಿ ಪ್ರಮುಖರು. ಅಭಿನಯದ ವಿಷಯದಲ್ಲಿ ಹೇಳಿಕೊಳ್ಳುವಂಥ ವಿಶೇಷವೇನು ಇಲ್ಲವೆನಿಸಿದರೂ ಖಳನಾಯಕನಿಗೆ ಹೇಳಿಮಾಡಿಸಿದ ಗೆಟಪ್‌ಗಳಿಂದ, ಕೆನ್ನೆಯ ಮೇಲಿನ ಮಚ್ಚೆ, ಕತ್ತಿಗೆ ಕಟ್ಟಿದ ಕರ್ಚಿಫ್, ಕಣ್ಣುಗಳಲ್ಲಿ ಕ್ರೂರತೆ ಇವೇ ಬಂಡವಾಳವಾಗಿದ್ದ ದಿನಗಳಲ್ಲಿ ಅವರು 'ಪರೋಪಕಾರಿ' ಇನ್ನೂ ಮೊದಲಾದ ಚಿತ್ರಗಳಲ್ಲಿ ಅಭಿನಯಿಸಿದ್ದರು. ಇದೇ ಸಮಯಕ್ಕೆ ಖಳನಾಯಕರಾಗಿ ಬಂದ ಎಂ.ಪಿ.ಶಂಕರ್ ಮೊದಮೊದಲು ಅಟ್ಟಹಾಸ ಮಾಡುವ ಪಾತ್ರಗಳಲ್ಲೇ ಕಾಣಿಸಿಕೊಂಡರು. ಬಹಳಷ್ಟು ಸಲ ಕೃತಕವೆನ್ನಿಸುವಂಥ ಅಭಿನಯ ಅವರದೆನ್ನಬಹುದಾದರೂ ನಂತರದ ದಿನಗಳಲ್ಲಿ ಸಾಕಷ್ಟು ಪರಿಶ್ರಮವಹಿಸಿ ಅಭಿನಯಿಸುತ್ತಿದ್ದ ಅವರು ಖಳನಾಯಕ ಪಾತ್ರದಿಂದ ಪೋಷಕ ಪಾತ್ರಗಳಿಗೆ ಹೊರಳಿದವರು. ತೂಗುದೀಪ ಶ್ರೀನಿವಾಸ್ ಸಂಭಾಷಣೆಯಲ್ಲಿ ಅಬ್ಬರಕ್ಕಿಂತ ಕಣ್ಣಿನಲ್ಲಿ ಉಗ್ರತೆ ಪ್ರದರ್ಶಿಸುವ ಶೈಲಿ ತಂದರು. ಜಮೀನ್ದಾರರ ಮಾದರಿ ಪಾತ್ರಗಳಲ್ಲಿ ಬಹಳ ತುಂಬಿಕೊಂಡಂತೆ ಕಾಣುವ ತೂಗುದೀಪ ಶ್ರೀನಿವಾಸ್ ಅವರು ಕುಹಕ, ಅಟ್ಟಹಾಸ ಇಂಥ ಮೂಲಪ್ರವೃತ್ತಿಯನ್ನು ಮುಖದಲ್ಲೇ ಸಮರ್ಥವಾಗಿ ತೋರಿಸಬಲ್ಲರು. ಅವರಿಗೆ ಒಂದೇ ಮಾದರಿಯ ಕಪ್ಪು-ಬಿಳುಪಿನ (ಕೆಟ್ಟ-ಒಳ್ಳೆಯ) ಪಾತ್ರಗಳೇ ದೊರೆಯುತ್ತ ಹೋದದ್ದರಿಂದ ಚಿತ್ರಕ್ಕೆ ತಕ್ಕಂತೆ ಕಾಸ್ಟ್ಯೂಮ್ಸ್‌ನಲ್ಲಿ ಬದಲಾವಣೆ ಕಾಣುತ್ತಹೋಯಿತೇ ಹೊರತು ಅಭಿನಯದಲ್ಲಿ ಬೆಳವಣಿಗೆಗೆ ಅವಕಾಶವಿಲ್ಲದಾಯಿತು. ವಜ್ರಮುನಿ ಅವರ ಅಭಿನಯದಲ್ಲಿ ನಾಟಕದ ಚೌಕಟ್ಟು ಕೆಲಸ ಮಾಡುವುದನ್ನು ಗಮನಿಸಬಹುದು. ಸಂಭಾಷಣೆ ಹೇಳುವ ಶೈಲಿಯಲ್ಲಿ ವ್ಯಂಗ್ಯ ಮಿಶ್ರಿತ ಪರಿಳಿತ, ಕಣ್ಣುಗಳನ್ನು ಸನ್ನಿವೇಶಕ್ಕೆ ತಕ್ಕಂತೆ ಬಳಸುವ ಕ್ರಮ ಅವರ ಅಭಿನಯಶೈಲಿಯ ಮುಖ್ಯ ಲಕ್ಷಣಗಳು. ಅಬ್ಬರದ ಪಾತ್ರಗಳಿಗೆ ಹೇಳಿ ಮಾಡಿಸಿದಂತಿದ್ದ ವಜ್ರಮುನಿ ಮಧ್ಯಮವರ್ಗ, ಕೆಳಮಧ್ಯಮವರ್ಗದಿಂದ ಬಂದ ಖಳರ ಪಾತ್ರ ಮಾಡುವಾಗ ಸಪ್ಪೆಯಾಗಿ ಕಾಣಿಸುತ್ತಿದ್ದರು. ಅದು ಅವರ ಅಭಿನಯಶೈಲಿಯ ಮಿತಿ.

ಅಭಿನಯಶೈಲಿಯಲ್ಲಿ ಬೆಳವಣಿಗೆ ಕಾಣುವುದು ಶಕ್ತಿಪ್ರಸಾದ್ ಅವರಲ್ಲಿ. ಸಿದ್ಧಸೂತ್ರಗಳಿಗೆ ಮೊರೆ ಹೋಗದೆ, ತಮ್ಮದೇ ಸ್ವಂತಿಕೆಯನ್ನು ಪ್ರತಿ ಚಿತ್ರದಲ್ಲಿ ಕಂಡುಕೊಳ್ಳುತ್ತಿದ್ದ ಅವರು ತಮ್ಮ ಹಾವಭಾವಗಳನ್ನು ಚಿತ್ರದಿಂದ ಚಿತ್ರಕ್ಕೆ ಬದಲಾಯಿಸಿಕೊಳ್ಳುವ ಮೂಲಕ ಆ ಪಾತ್ರಗಳು ಬೇರೆ ಎಂಬ ಭಾವನೆ ಹುಟ್ಟುವಂತೆ ಮಾಡಲು ಪ್ರಯತ್ನಿಸಿದರು. ತಾಂತ್ರಿಕತೆ ಬದಲಾದಂತೆ ತಮ್ಮ ಶೈಲಿಯಲ್ಲಿ ವೈವಿಧ್ಯ ತಂದವರು. ಸಂಜ್ಞೆಗಳನ್ನು ಪ್ರಜ್ಞಾಪೂರ್ವಕವಾಗಿ ಹೊರಡಿಸುತ್ತಿದ್ದ ಅವರು ಖಳನಟನ ಅಭಿನಯದಲ್ಲಿ ಕೂಡ ನೈಜತೆ ಸಾಧಿಸುವುದು ಸಾಧ್ಯ ಎಂಬುದನ್ನು ನಿರೂಪಿಸಿದರು. ದುರಂತವೆಂದರೆ ಅವರ ಪ್ರತಿಭೆಗೆ ತಕ್ಕಂಥ ಸಂಕೀರ್ಣ ಪಾತ್ರಗಳು ಅವರಿಗೆ ದೊರೆಯಲೇ ಇಲ್ಲ. ಮಾತುಗಾರಿಕೆಯಿಂದಲೇ ಪ್ರಸಿದ್ಧರಾದ ಧೀರೇಂದ್ರಗೋಪಾಲ್ ತಮ್ಮ ವಾಚಿಕ ಅಭಿನಯದಿಂದಲೇ ಪ್ರಸಿದ್ಧರಾದವರು. ಪಾತ್ರದ ಸ್ವರೂಪವನ್ನೇ ಮಾತಿನ ಶೈಲಿಯಲ್ಲಿ ಬಿಡಿಸಿಡುವ ಇವರು ಹಾವಭಾವಗಳ ಮೊರೆಹೋದದ್ದು ಕಡಿಮೆ. ಖಳನ ಅಭಿನಯದಲ್ಲೇ ಸ್ವಲ್ಪ ಕಾಮಿಕ್ ಟಚ್ ಕೊಟ್ಟ ಮಾಮೂಲಿ ಖಳರಿಗಿಂತ ಬೇರೆ ಅನ್ನಿಸಿದರೂ ತಾವೇ ನಿರ್ಮಿಸಿದ ಮಾದರಿಯಿಂದ ಹೊರಬರುವುದು ಅವರಿಗೆ ಸಾಧ್ಯವಾಗಲಿಲ್ಲ.

ಸುಧೀರ್ ಖಳರಾಗುವ ವೇಳೆಗೆ ಖಳನಟರ ಮಾಮೂಲಿ ಸ್ವರೂಪ ಬದಲಾಗಿತ್ತು. ಅಭಿನಯದಲ್ಲಿ ಸಹಜತೆ ಕಂಡುಬರುತ್ತಿತ್ತು. ಈ ಬದಲಾವಣೆಯನ್ನು ಅವರಲ್ಲಿ ನೋಡಬಹುದು. ನಿರ್ಭಾವುಕತೆಯನ್ನೇ ಶೈಲಿಯನ್ನಾಗಿಸಿಕೊಂಡ ಸುಧೀರ್ ಅಸಹನೆ ಹುಟ್ಟುವಂತೆ ಮಾಡುವ ಅಸಾಂಪ್ರದಾಯಿಕ ಹಾವಭಾವಗಳ ಮೂಲಕ ಹೊಸಬಗೆಯ ಅಭಿನಯಕ್ರಮ ಹುಟ್ಟುಹಾಕಿದರು. ಅದು ಮುಂದೆಬಂದ ಅನೇಕ ಖಳನಟರಿಗೆ ಮಾದರಿ ಆಯಿತು. ಖಳರಾಗಿದ್ದ ಕಾಲದಲ್ಲಿ ತಮ್ಮ ಹಾವಭಾವಗಳಿಂದಲೇ ಭಯ ಹುಟ್ಟಿಸುತ್ತಿದದ್ದು ಪ್ರಭಾಕರ್ ಶೈಲಿ. ಅಲ್ಲಲ್ಲಿ ಖಳರಾಗಿ ಅಭಿನಯಿಸಿದ ಸಿ.ಆರ್.ಸಿಂಹ ಸಹಜ ಛಾಯೆಯೊಂದನ್ನು ತರಲು ಪ್ರಯತ್ನಿಸಿದರು.

ಹಾಸ್ಯ ಪಾತ್ರಗಳು

ಹಾಸ್ಯನಟ ಎಂದರೆ ನಮ್ಮ ಕಣ್ಣಮುಂದೆ ಬರುವ ಎರಡು ಚಿತ್ರಗಳು ಬಾಲಕೃಷ್ಣ, ನರಸಿಂಹರಾಜು ಅವರದು. ಇವರಿಬ್ಬರೂ ಹಾಸ್ಯನಟನೆಗೆ ತಂದ ವೈವಿಧ್ಯವೇ ಒಂದು ವಿವರ ಅಧ್ಯಯನದ ವಸ್ತುವಾಗಬಲ್ಲದು. ನರಸಿಂಹರಾಜು ಉಬ್ಬುಹಲ್ಲು, ತೆಳು ಮೈಕಟ್ಟು, ಅಸಹಜ ಮುಖಭಾವ ಹೀಗೆ ತಮ್ಮ ದೇಹ ಸ್ವಭಾವವನ್ನೇ ಅಭಿನಯಶೈಲಿಯ ಮುಖ್ಯ ಲಕ್ಷಣವಾಗಿಸಿಕೊಂಡರೂ ನಡಿಗೆಯ ವಿಧಾನದಲ್ಲೇ ಹಾಸ್ಯ ಚಿಮ್ಮಿಸಿದರು. ಸಂಭಾಷಣೆ ಹೇಳುವ ಶೈಲಿಯಲ್ಲಿ ಕಾಮಿಕಲ್ ಸಂಜ್ಞೆಗಳನ್ನು ಬಳಸುವ ಕ್ರಮ ರೂಢಿಸಿಕೊಂಡರು.

(ಚಿತ್ರ ೧೭೯-೧೮೮) ಬಾಲಕೃಷ್ಣ

(ಚಿತ್ರ ೧೮೯) ವಾದಿರಾಜ್

(ಚಿತ್ರ ೧೯೦) ರತ್ನಾಕರ್

(ಚಿತ್ರ ೧೯೧) ಮಾಸ್ಟರ್ ಹಿರಣ್ಣಯ್ಯ

(ಚಿತ್ರ ೧೯೨) ದ್ವಾರಕೀಶ್

ರಂಗಭೂಮಿ ಪ್ರಭಾವ ಎದು ಕಾಣುವ ಅವರ ನಟನಾ ಶೈಲಿಯಲ್ಲಿ ಸಂಕೀರ್ಣತೆಯ ಛಾಯೆ ಗುರುತಿಸುವುದು ಕಷ್ಟ. ಪಾತ್ರಗಳಿಗೆ ತಕ್ಕಂಥ ಅಭಿನಯ ವೈವಿಧ್ಯ ಬೆಳೆಸಿಕೊಳ್ಳದೆ ಹೋದದ್ದರಿಂದ ಕಳ್ಳನಿಂದ ಹಿಡಿದು ತೆನಾಲಿ ರಾಮಕೃಷ್ಣನವರೆಗೂ ಯಾವುದೇ ಪಾತ್ರದಲ್ಲಿ ಕಾಣುವುದು ನರಸಿಂಹರಾಜು ಅವರೇ ಹೊರತು ಆ ಪಾತ್ರವಲ್ಲ. ಇದಕ್ಕೆ ಅವರಿಗೆ ಸೃಷ್ಟಿಸಲಾದ ಇಮೇಜ್, ಅದಕ್ಕೆ ಅವರು ಬದ್ಧರಾದ ರೀತಿ ಎರಡೂ ಮುಖ್ಯ ಕಾರಣಗಳು. ನರಸಿಂಹರಾಜು ಹಾಸ್ಯಪಾತ್ರಕ್ಕೆ ಬಹುಮುಖ್ಯವಾಗಿ ಇರಲೇಬೇಕಾದ ಟೈಮಿಂಗ್‌ನಲ್ಲಿ ಪರಿಣತರು. ಅದೇ ಅವರ ಯಶಸ್ಸಿನ ಜನಪ್ರಿಯತೆಯ ಶಕ್ತಿಯೂ ಆಗಿತ್ತು. ಅವೆಲ್ಲವನ್ನೂ ಮೀರಿ ಅವರ ನಿಜವಾದ ಅಭಿನಯ ಕಂಡದ್ದು 'ಪ್ರೊ।ಹುಚ್ಚೂರಾಯ' ಚಿತ್ರದಲ್ಲಿ. ಹಾಸ್ಯ ಎಂದರೂ ಚಿತ್ರದಲ್ಲಿ ಹಾಸ್ಯವಿರಲಿಲ್ಲ; ಅವರ ಸಂಕೀರ್ಣ ಅಭಿನಯವಿತ್ತು.

ಬಾಲಕೃಷ್ಣ ನಿರ್ವಹಿಸಿದ ಪಾತ್ರವೈವಿಧ್ಯ ಗಮನಿಸಿದಾಗ ಅವರನ್ನು ಹಾಸ್ಯನಟನ ಮಿತಿಯಲ್ಲಿ ಚರ್ಚಿಸುವುದು ಕಷ್ಟ. ಆದರೂ ಅವರ ಪ್ರಮುಖ ಛಾಪು ಕಾಣುವುದು ಹಾಸ್ಯನಟನಾಗಿ. ರಂಗಭೂಮಿ ಹಿನ್ನೆಲೆಯಿಂದ ಬಂದ ಬಾಲಕೃಷ್ಣ ಆಂಗಿಕ, ವಾಚಿಕ ಅಭಿನಯದಲ್ಲಿ ಆರಂಭದಲ್ಲಿದ್ದ ನಾಟಕೀಯ ಶೈಲಿಯನ್ನು ಕಾಲಕಳೆದಂತೆ ಚಿತ್ರರಂಗದ ಬೆಳವಣಿಗೆಗೆ ತಕ್ಕಂತೆ ಬದಲಾಯಿಸಿಕೊಳ್ಳುತ್ತಾ ಬಂದರು. ಪಾತ್ರದ ಸ್ವರೂಪ, ಚಿತ್ರದಲ್ಲಿ ಅದರ ಸ್ಥಾನ ಇವುಗಳನ್ನು ಗಮನಿಸಿ, ಅದಕ್ಕೆ ಹೊಂದುವಂಥ ಅಭಿನಯ ರೂಢಿಸಿಕೊಂಡ ಬಾಲಕೃಷ್ಣ ತಮ್ಮ ಸಂಭಾಷಣೆ ಹೇಳುವ ಶೈಲಿಯಲ್ಲಿ ಮಾತ್ರ ಕೊನೆಯವರೆಗೂ ನಾಟಕೀಯತೆ ಉಳಿದುಕೊಂಡು ಬಂದಿತು. ಖಳನಾಗಿ ನಟಿಸುವಾಗಲೂ ನಾಟಕೀಯ ಅಟ್ಟಹಾಸ ಉಳಿಸಿಕೊಂಡಿದ್ದೂ ಇದೆ. ಬಾಲಕೃಷ್ಣರ ವೈಶಿಷ್ಟ್ಯವೆಂದರೆ ಒಂದು ಪಾತ್ರವನ್ನು 'ಹಾಸ್ಯ', 'ಖಳ' ಎರಡೂ ಲಕ್ಷಣಗಳನ್ನು ಒಳಗೊಳ್ಳುವಂತ ಬೆಳೆಸುವುದು. ಇದಕ್ಕೆ 'ಮಂಕುದಿಣ್ಣೆ' ಚಿತ್ರದ ಅವರ ಅಭಿನಯವನ್ನು ಉದಾಹರಣೆಯಾಗಿ ನೀಡಬಹುದು. ಈ ಚಿತ್ರದಲ್ಲಿ ಮೊದಲರ್ಧ ಪೂರ್ಣ ಹಾಸ್ಯಪಾತ್ರದಂತೆ ಕಾಣುವ ಇವರ ಪಾತ್ರ ಕೊನೆಯರ್ಧದಲ್ಲಿ ಖಳನಾಗಿ ಎದ್ದುಬಿಡುತ್ತದೆ. ಈ ಹಂತದಲ್ಲಿ ಬದಲಾವಣೆಗೆ ತಕ್ಕಂತೆ ತಮ್ಮ ಹಾವಭಾವಗಳನ್ನು ಅವರು ಮಾರ್ಪಡಿಸಿಕೊಳ್ಳುವ ರೀತಿ ಯುವನಟರಿಗೆ ಮಾದರಿಯಾಗುವಂತಿದೆ. ಭಾವಪೂರ್ಣ ಅಭಿನಯದ ಪಾತ್ರಗಳಲ್ಲಿ ಬಾಲಕೃಷ್ಣ ಪ್ರಭಾವಿ ಅಭಿನಯ ನೀಡಿದ್ದಾರೆ. 'ಬೆಂಕಿಯ ಬಲೆ' ಚಿತ್ರದ ತಂದೆಯ ಪಾತ್ರ ಇದಕ್ಕೊಂದು ಉದಾಹರಣೆ. ಮಗಳ ಮೇಲಿನ ಮಮತೆಯ ಸಹಜ, ಅಸಹಜ ಸ್ಥಿತಿಗಳೆರಡನ್ನು ಈ ಪಾತ್ರದಲ್ಲಿ ಅವರು ತೋರಿಸಿದ್ದಾರೆ. 'ಬಂಗಾರದ ಮನುಷ್ಯ'ದ ರಾಚೂಟಪ್ಪನ ಪಾತ್ರ ಅವರ ಅಭಿನಯದ ಇನ್ನೊಂದು ಆಯಾಮವನ್ನು ಕಾಣಿಸಿತು. 'ಸರ್ವಜ್ಞ ಮೂರ್ತಿ' ಚಿತ್ರದಲ್ಲಿ ಅವರು ವಯಸ್ಸಿನ ಮೂರು ಘಟ್ಟಗಳನ್ನು ನಿರ್ವಹಿಸುವಾಗ ಬದಲಾಗುವ ಆಂಗಿಕ, ವಾಚಿಕಗಳು ಅಭಿನಯದ ಅತ್ಯುತ್ತಮ ಮಾದರಿ; ಆದರೆ ಇವು ಹಲವರ ಗಮನಕ್ಕೇ ಬಾರದೆ ಹೋದವು.

(ಚಿತ್ರ ೧೯೩) ಉಮೇಶ್ ಎಂ. ಎಸ್.

ಖಳನಾಗಿ ವೃತ್ತಿ ಆರಂಭಿಸಿದ ದಿನೇಶ್ ಹಾಸ್ಯನಟರಾಗಿ ಬದಲಾದರು. ಖಳನಾಗಿ ಮುಖಚರ್ಯೆಯನ್ನು ಬಳಸಿಕೊಂಡ ಕ್ರಮವನ್ನು ಸಂಪೂರ್ಣ ಬದಲಾಯಿಸಿ ಹಾಸ್ಯಪಾತ್ರಕ್ಕೆ ಹೊಂದಿಸಿಕೊಂಡ ರೀತಿ ಗಮನಾರ್ಹ. ಇದರ ಜೊತೆಗೇ ಬಾಲಕೃಷ್ಣ ಅವರಂತೆ ಒಂದೇ ಪಾತ್ರದಲ್ಲಿ ಎರಡೂ ಭಾವಗಳನ್ನು ಬೆರೆಸಲು ಪ್ರಯತ್ನಿಸಿದರು. ಆದರೆ ದಿನೇಶ್ ಅಭಿನಯಶೈಲಿ ಹೆಚ್ಚು ಖಳಪಾತ್ರಗಳಿಗೇ ಹೊಂದುವಂಥದು. ಅವರ ಗಡಸು ಕಂಠ, ಕಣ್ಣಿನ ತೀಕ್ಷ್ಣ ಚಲನೆ ಮುಂತಾದ ಕಾರಣಗಳನ್ನು ಇದಕ್ಕೆ ನೀಡಬಹುದು. ಕೊನೆಯ ಕೆಲವು ಚಿತ್ರಗಳಲ್ಲಿ ದ್ವಂದ್ವಾರ್ಥ ಸಂಭಾಷಣೆ ಹೇಳಬೇಕಾದ ಅನಿವಾರ್ಯಕ್ಕೆ ಸಿಲುಕಿದ ದಿನೇಶ್ ಆ ಮಟ್ಟಿಗೆ ತಮ್ಮ ಅಭಿನಯದ ಶಿಸ್ತನ್ನು ಹಾಳುಮಾಡಿಕೊಂಡರು. ಮುಸುರಿ ಕೃಷ್ಣಮೂರ್ತಿ ಕೂಡ ಆರಂಭದಲ್ಲಿ ವೈವಿಧ್ಯಮಯ ಪಾತ್ರ ನಿರ್ವಹಿಸಿದರೂ ಕೀಚಲುಧ್ವನಿ, ಮುಖಚರ್ಯೆದಿಂದ ಹಾಸ್ಯನಟರಾಗಿ ಪರಿವರ್ತಿತರಾದರು. ಕನ್ನಡದ ಚಿತ್ರಗಳಲ್ಲಿ ಹಾಸ್ಯದಲ್ಲಿ ಅಶ್ಲೀಲ, ದ್ವಂದ್ವಾರ್ಥ ಮುಖ್ಯವಾಗಿ ಇಣುಕಿದ್ದೇ ಇವರ ಕಾಲದಲ್ಲಿ. ಹೀಗಾಗಿ ಅವರ ಅಭಿನಯಶೈಲಿಗಿಂತ ಸಂಭಾಷಣೆಗಳೇ ನಗೆಯುಕ್ಕಿಸುವ ಅಂಶವಾಗಿ ಪರಿವರ್ತಿತವಾಗಿ, ಮುಸುರಿ ಕೃಷ್ಣಮೂರ್ತಿ ಪ್ರತಿಭೆ ಪೂರ್ಣವಾಗಿ ಅನಾವರಣಗೊಳ್ಳಲೇ ಇಲ್ಲ.

'ಮಕ್ಕಳ ರಾಜ್ಯ'ದ ಬಾಲನಟ ಎಂ.ಎಸ್.ಉಮೇಶ್ ಚಿತ್ರರಂಗದಲ್ಲಿ ಹೆಸರು ಮಾಡಿದ್ದು ಹಾಸ್ಯನಟರಾಗಿ. 'ಕಥಾಸಂಗಮ'ದ ತಿಮ್ಮರಾಯಿ ಪಾತ್ರ ಅವರಿಗೆ ಒಂದು ಮಾದರಿಯನ್ನೇ ನಿರ್ಮಿಸಿತು. ಮುನಿತಾಯಿ ಸ್ನಾನ ಮಾಡುವಾಗ ಕದ್ದು ನೋಡುವ ತಿಮ್ಮರಾಯಿ ಮುಖದಲ್ಲೇ ಚಾಪಲ್ಯ ವ್ಯಕ್ತಪಡಿಸಿದ ರೀತಿ ಉಮೇಶ್‌ಗೆ ಖ್ಯಾತಿ ತಂದುಕೊಟ್ಟಿತು. ದುರಂತವೆಂದರೆ ಮುಂದೆ ಅವರಿಗೆ ದೊರೆತದ್ದೆಲ್ಲ ತಿಮ್ಮರಾಯಿ ಮಾದರಿ ಪೆದ್ದುತನದ ಪಾತ್ರವೆ. ಪೆದ್ದುನಗೆ, ಕಾಮಿಕ್ ಶೈಲಿಯಲ್ಲಿ ಸಂಭಾಷಣೆ ಹೇಳುವ ಕ್ರಮ ಉಮೇಶ್ ಎಂದರೆ ನೆನಪಿಗೆ ಬರುವ ಅಭಿನಯದ ಶೈಲಿ. ರಂಗಭೂಮಿ ಹಿನ್ನೆಲೆಯಿಂದ ಬಂದ ಕಾರಣ ಆಂಗಿಕ, ವಾಚಿಕ ಅಭಿನಯದಲ್ಲಿ ಪರಿಣತಿ ಹೊಂದಿದ್ದ ಅವರ ಪ್ರತಿಭೆ ಚಿತ್ರರಂಗದಲ್ಲಿ ಸಮರ್ಥವಾಗಿ ಬಳಕೆಯಾಗಲಿಲ್ಲ. ಇಂಥದೇ ಮಾದರಿ ಉಮೇಶ್ ಅವರ ಅಣ್ಣ ಎಂ.ಎಸ್.ಸತ್ಯ ಅವರದು.

ಹವ್ಯಾಸಿ ರಂಗಭೂಮಿ ಹಿನ್ನೆಲೆಯ ಮುಖ್ಯಮಂತ್ರಿ ಚಂದ್ರು (ಚಂದ್ರಶೇಖರ್) ತಮ್ಮ ಮಾತಿನ ಶೈಲಿಯನ್ನೇ ಹಾಸ್ಯವಾಗಿ ಬಳಸಿದರು. ದಢೂತಿ ದೇಹದಿಂದ ಭಿನ್ನ ಸಂಜ್ಞೆಗಳನ್ನು ಹೊರಡಿಸಲಾಗದ ಮಿತಿಯನ್ನು ಈ ಶೈಲಿಯಲ್ಲಿ ತುಂಬಿಕೊಂಡರು. ಸಂಭಾಷಣೆ ಹೇಳುವಾಗಲೇ ಹಾಸ್ಯ ಹುಟ್ಟುವಂತೆ ಪರಿಳಿತಗಳನ್ನು ರೂಢಿಸುವುದು ಅವರ ಶೈಲಿ. ಬಹಳ ಮುಖ್ಯವಾಗಿ ಗಮನಿಸಬೇಕಾದ ಸಂಗತಿ ಎಂದರೆ 'ಗುರಿ'ಯಂಥ ಚಿತ್ರದಲ್ಲಿ ಖಳನ ಪಾತ್ರವಹಿಸುವಾಗಲೂ ಅವರು ಮಾಮೂಲಿ ಖಳನಟನ ಮಾದರಿ ಬಳಸುವ ಬದಲು ಹಾಸ್ಯಶೈಲಿಯನ್ನೇ ಮುಂದುವರೆಸಿದರು. ಹೀಗಾಗಿ ಅವರ ಅಭಿನಯದ ಶೈಲಿ ಒಂದು ವೈಶಿಷ್ಟ್ಯದಂತೆಯೇ ಒಂದು ಮಿತಿ ಕೂಡ ಆಯಿತು. ಖಳನಲ್ಲಿ ಹಾಸ್ಯವನ್ನು



(ಚಿತ್ರ ೧೯೪) ಮುಖ್ಯಮಂತ್ರಿ ಚಂದ್ರು

(ಚಿತ್ರ ೧೯೫) ದಿನೇಶ್

(ಚಿತ್ರ ೧೯೬) ಶಿವರಾಂ

ಬೆರೆಸಿದವರ ಹೊಸ ಸಾಲಿನಲ್ಲಿ ಚಂದ್ರಶೇಖರ್ ಕೂಡಾ ಸೇರುತ್ತಾರೆ. ಇದೇ ಸಾಲಿನಲ್ಲಿ ಸೇರುವ ಮತ್ತೊಬ್ಬ ಪ್ರತಿಭಾವಂತ ಕಲಾವಿದ ಅವಿನಾಶ್. ರಂಗಭೂಮಿ ಹಿನ್ನೆಲೆಯ ಅವಿನಾಶ್ 'ತ್ರಿಶೂಲ'ದಲ್ಲಿ ಪರಿಣಾಮಕಾರಿಯಾಗಿ ಅಭಿನಯಿಸಿದರೂ ಕಂಚಿನ ಕಂಠ ಹೊಂದಿದ್ದರೂ ಗುರುತಿಸಿಕೊಳ್ಳಲು ಹೆಣಗಾಡಿ ಬರೀ ಸೀಮಿತ ಮಿತಿಯ ನಟರಾಗಿಮುಂಟು. ಹುಲಿಯಾ ಚಿತ್ರದ ಪಾತ್ರ ಅವರ ಅಭಿನಯ ಸಾಮರ್ಥ್ಯವನ್ನು ತೋರಿದವು. ತಮ್ಮ ಪೆದ್ದುತನದ ಅಭಿನಯದ, ಕೀಚಲು ಕಂಠವನ್ನು ಶೈಲಿಯಾಗಿ ಬಳಸುವ ಟೆನ್ನಿಸ್ ಕೃಷ್ಣ ಮತ್ತು ಮಾತು, ನಡಿಗೆಯಲ್ಲಿನ ಅಸಹಜತೆಯನ್ನು ಶೈಲಿಯಾಗಿ ಉಳ್ಳ ಬ್ಯಾಂಕ್ ಜನಾರ್ದನ್ ಮೊದಲಾದವರು ಕಂಡು ಬಂದ ಇಬ್ಬರು ಹಾಸ್ಯನಟರು. ಇವರೆಲ್ಲ ಆ ಕಾಲದ ರತ್ನಾಕರ್ ಅನಂತರದ ಎನ್.ಎಸ್.ರಾವ್ ಅಭಿನಯಶೈಲಿಯ ಮಿಶ್ರಣಗಳು ಎನ್ನಬಹುದು.

ಸ್ವಾಭಾವಿಕವಾಗಿಯೇ ಗಿಡ್ಡವಾದ ತಮ್ಮ ದೇಹಪ್ರಕೃತಿ ಮತ್ತು ವಿಶಿಷ್ಟ ಗಂಟಲುಗಳನ್ನೇ ಶಕ್ತಿಯಾಗಿ ಬಳಸಿಕೊಂಡು ಹಾಸ್ಯಪಾತ್ರ ನಿರ್ವಹಿಸಿದ ವಾದಿರಾಜ್ ರಂಗಭೂಮಿಯ ಸಿದ್ಧಮಾದರಿಯ ಸೂಕ್ಷ್ಮಗಳನ್ನು ಸಿನಿಮಾದ ಸಾಧ್ಯತೆಗೆ ಮಾರ್ಪಡಿಸಿಕೊಂಡರು. ಆದರೆ ತಮ್ಮದೇ ಶೈಲಿ ರೂಢಿಸಿಕೊಂಡ ಮೇಲೆ ಅದಕ್ಕೆ ಪಾತ್ರಗಳ ಚೌಕಟ್ಟನ್ನು ಗಮನಿಸದೇ ಬದ್ಧರಾಗುತ್ತ ಹೋದರು. ಕುಳ್ಳ ಎಂಬ ಶಬ್ದವನ್ನೇ ಗಟ್ಟಿಯಾಗಿ ಹಿಡಿದುಕೊಂಡ ದ್ವಾರಕೀಶ್ ಅದನ್ನೇ ತಮ್ಮ ಅಭಿನಯ ಕ್ರಮವಾಗಿಸಿಕೊಂಡರು. ಮುಗ್ಧತನ, ಕೊಂಚ ಪೆದ್ದುತನದ ಹಾವಭಾವಗಳನ್ನು ಕಾಮಿಕ್ ಆಗಿ ಬಳಸಿಕೊಂಡ ಇವರು ಇದನ್ನೇ ತಮ್ಮ ಅಭಿನಯಶೈಲಿಯಾಗಿ ಬಳಸಿಕೊಂಡರು. ಅಭಿನಯಿಸುವಾಗ ಕ್ಯಾಮರಾ ಕೋನಗಳಿಗೆ ಗಮನ ನೀಡದ ಅವರು ತೆರೆಯನ್ನು ನೇರವಾಗಿ ನೋಡಿದ್ದೇ ಅಪರೂಪ. ಹಲವು ವರ್ಷಗಳ ವೃತ್ತಿಯ ಇವರ ಅಭಿನಯ ಕ್ರಮದಲ್ಲಿ ಅಂಥ ವ್ಯತ್ಯಾಸವೇನೂ ಕಾಣುವುದಿಲ್ಲ.

ಪ್ರಧಾನ ಪಾತ್ರಗಳ ಹಾವಭಾವವನ್ನು ಅಣಕಿಸುವುದು ಒಂದು ಬಗೆಯ ಹಾಸ್ಯವೇ. ಕೊಂಚ ಮಿಮಿಕ್ರಿಯಂತೆ ಕಾಣುವ ಅಭಿನಯಶೈಲಿಯನ್ನು ಅಳವಡಿಸಿಕೊಂಡ ಶಿವರಾಂ, ಆ ಪಾತ್ರಗಳಿಗೆ ಪ್ರಚುರವಾಗಿ ಅಂಗಚೇಷ್ಟೆಗಳನ್ನು ಧಾರಾಳವಾಗಿ ಅಭಿವ್ಯಕ್ತಿಸಿದರು. 'ಡ್ರೈವರ್ ಹನುಮಂತು', 'ತಾಯಿಸಾಹೇಬ' ಚಿತ್ರಗಳಲ್ಲಿ ಶಕ್ತ ಅಂಗಿಕ ಅಭಿನಯ ನೀಡಿದ ಅವರು ಪಾತ್ರಗಳ ಚೌಕಟ್ಟಿಗೆ ಬದ್ಧರಾಗದೆ ಭಾವತೀವ್ರತೆಗೆ ಗಮನ ನೀಡಿದ್ದರೆ, ಇನ್ನಷ್ಟು ಪ್ರಭಾವಶಾಲಿಯಾದ ಅಭಿನಯ ನೀಡುತ್ತಿದ್ದರು ಎಂಬ ಭಾವನೆ ಕಾಡುತ್ತದೆ. ರಂಗಭೂಮಿಯ ಹಿನ್ನೆಲೆ ಇದ್ದುದರಿಂದ ಶಿವರಾಂ ಅವರು ಸಂಭಾಷಣೆ ಹೇಳುವಾಗಿನ ಟೈಮಿಂಗ್ಸ್ ಸನ್ನ ಗಮನಾರ್ಹವಾದುದು. ಚಿತ್ರರಂಗದ ಬೇರ ಚಟುವಟಿಕೆಗಳಲ್ಲಿ ಹೆಚ್ಚಾಗಿ ತೊಡಗಿಕೊಂಡ ಶಿವರಾಂ, ಅಭಿನಯ ಕುರಿತು ಗಮನ ಹರಿಸಲಿಲ್ಲ ಎನಿಸುತ್ತದೆ.

ಹಾಸ್ಯನಟಿಯರಲ್ಲಿ ಎಂ.ಎನ್. ಲಕ್ಷ್ಮೀದೇವಿ ನೆನಪಾಗುತ್ತಾರೆ. ಮುಖಭಾವದಲ್ಲೆ ಚೆಲ್ಲಾಟ ತೋರಿಸುತ್ತ, ಒಯ್ಯಾರ ಪ್ರದರ್ಶಿಸುವ ಅವರ ನೂರಾರು ಬಗೆಯ ಪಾತ್ರಗಳು ಬಂದು ಹೋಗಿವೆ. ಕೀರಲು ಧ್ವನಿಯನ್ನು ಅಭಿನಯದ ಶಕ್ತಿಯಾಗಿಸಿಕೊಂಡ ಇವರ ಶೈಲಿ ಎಲ್ಲಾ ವಯೋಮಾನದಲ್ಲೂ ಒಂದೇ ಮಾದರಿಯಂತಿರುವುದೊಂದು ವಿಶೇಷವೇ ಸರಿ. ಮೈನಾವತಿ ಕೆಲಮಟ್ಟಿಗೆ ಚೆಲ್ಲಾಟ ಅನ್ನಿಸಬಲ್ಲ ಹಾಸ್ಯಪಾತ್ರಗಳನ್ನೂ ನಿರ್ವಹಿಸಿದ್ದರು. ಆಕೆ ನಾಯಕಿ, ಪೋಷಕಿ, ನರ್ತಕಿ ಹೀಗೆ ಹಲವು ಬಗೆಯಲ್ಲಿ ಬೆಳ್ಳಿತೆರೆ ಬೆಳಗಿದವರು. ಹೀಗೇ ಎಂದು ವಿಂಗಡಿಸುವುದು ಕಷ್ಟ. ಬಹಳ ದಿನಗಳ ನಂತರ ಕನ್ನಡ ಚಿತ್ರರಂಗ ಕಂಡ ಹಾಸ್ಯನಟಿ ಉಮಾಶ್ರೀ. ರಂಗಭೂಮಿಯಲ್ಲಿ 'ಸಾಕವ್ವ'ನ ಗಂಭೀರ ಪಾತ್ರ ಮಾಡುತ್ತಿದ್ದ ಈ ನಟಿಯನ್ನು ಕನ್ನಡ ಚಿತ್ರರಂಗ ಹಾಸ್ಯನಟಿಯಾಗಿ ಸ್ವೀಕರಿಸಿತು. ಆಂಗಿಕ ಚೇಷ್ಟೆ ಮತ್ತು ಸಂಭಾಷಣೆ ಹೇಳುವಲ್ಲಿ ಅಸಹಜ ಪರಿಳಿತ ಕಲ್ಪಿಸುವ ಅಭಿನಯಶೈಲಿ ರೂಪಿಸಿ ಕೊಂಡ ಇವರು ದ್ವಂದ್ವಾರ್ಥ ಸಂಭಾಷಣೆಗೆ ಪ್ರಸಿದ್ಧರಾದುದೊಂದು ವಿಷಾದದ ಸಂಗತಿ. ದ್ವಂದ್ವಾರ್ಥ ಸಂಭಾಷಣೆಯೇ ಇವರ ಇಮೇಜ್ ಆಗಿ ಬಿಟ್ಟಿದ್ದರಿಂದ ಇವರೊಳಗಿನ ಕಲಾವಿದೆ ಹೊರಬರಲೇ ಇಲ್ಲ. ಆದರೂ 'ಪುಟ್ನಂಜ', 'ತಾಯವ್ವ', 'ಸಂಗ್ಯಾ ಬಾಳ್ಯಾ'ದಂಥ ಪಾತ್ರಗಳು ಆಕೆಯ ಸಾಮರ್ಥ್ಯವನ್ನು ಹೇಳುತ್ತವೆ.

ಪೋಷಕ ಪಾತ್ರಗಳು

ಕನ್ನಡದಲ್ಲಿ ಪೋಷಕ ನಟರಿಗೆ ಒಪ್ಪುವ ಅಭಿನಯ ಕ್ರಮ ಎನ್ನುವುದು ಯಾವ ಹಂತದಲ್ಲೂ ರೂಪುಗೊಳ್ಳಲಿಲ್ಲ. ತಂದೆ, ತಾಯಿ, ತಂಗಿ ಹೀಗೆ ಪ್ರಧಾನ ಪಾತ್ರಗಳ ಸುತ್ತ ಒಡನಾಡುವ ಈ ಪಾತ್ರಗಳು ಕಾಲಕ್ರಮೇಣ ಆರಂಭದ ದಿನಗಳ ಸಹಜತೆ ಕಳೆದುಕೊಂಡು ಸರಳ ರೇಖಾತ್ಮಕವಾಗಿ ಬೆಳೆಯುತ್ತ ಹೋದವು. ಹೀಗಾಗಿ ಪೋಷಕ ಪಾತ್ರ ನಿರ್ವಹಿಸಿದ ಹೆಚ್ಚಿನ ಕಲಾವಿದರಿಗೆ ತಮ್ಮದೇ ಅಭಿನಯಶೈಲಿಯನ್ನು ರೂಢಿಸಿಕೊಳ್ಳುವ ಅವಕಾಶವೇ ಸಿಕ್ಕಲಿಲ್ಲ. ಈ ಭಾಗದಲ್ಲಿ ಚರ್ಚಿಸುವ ಕೆಲ ಕಲಾವಿದರನ್ನು ಹಿಂದೆ ಚರ್ಚಿಸಿದ್ದರೂ ಸೋದಾಹರಣ ಚರ್ಚೆಗ ಅನುಕೂಲವಾಗಿ ಇಲ್ಲಿಯೂ ಪ್ರಸ್ತಾಪಿಸಬೇಕಾಗಿದೆ. ಕನ್ನಡದಲ್ಲಿ ಪೋಷಕಪಾತ್ರಗಳ ಜೊತೆಗೆ ನೆನಪಾಗುವ ಹೆಸರು ಅಶ್ವತ್ಥ್. ತಮ್ಮ ಅಭಿನಯದ ಬಹುತೇಕ ಚಿತ್ರಗಳಲ್ಲಿ ತಂದೆ ಪಾತ್ರ ನಿರ್ವಹಿಸಿದ ಅವರು ತಮಗಿಂತ ಹಿರಿಯ ಕಲಾವಿದರಿಗೂ ಅಪ್ಪನಾಗಬೇಕಾದ ಅನಿವಾರ್ಯತೆಗೆ ಸಿಲುಕಿದರು. ಸಹಜವಾಗಿ ಅಭಿನಯಿಸುವ ಕ್ರಮವೊಂದನ್ನು ರೂಢಿಸಿಕೊಂಡಿದ್ದ ಅಶ್ವತ್ಥ್ ಭಾವಪೂರ್ಣ ಆಂಗಿಕ ಅಭಿವ್ಯಕ್ತಿಯಿಂದ ಇಂಥ ಪಾತ್ರಗಳಿಗೆ ಸಾಮಾನ್ಯವಾಗಿ ಅಗತ್ಯವಾಗುವ ಭಾವುಕತೆಯನ್ನು ಸಾಧಿಸಿದರು. ಪಾತ್ರಗಳು ಮೆಲೊಡ್ರಾಮ ಆಗದ ಹಾಗೆ ಸಂಯಮ ತೋರುತ್ತ ಬಂದ ಅವರು ಪೋಷಕ ಪಾತ್ರಗಳು ತಮ್ಮ ಚೌಕಟ್ಟಿನಲ್ಲೇ ಪ್ರಭಾವಶಾಲಿಯಾಗಿ ನಿಲ್ಲುವಂತೆ ಮಾಡಿದರು. ಅಶ್ವತ್ಥ್ ಪೋಷಕ ಪಾತ್ರಗಳನ್ನು ನಿರ್ವಹಿಸಿದ ಕ್ರಮ ನಮ್ಮಲ್ಲಿ ಒಂದು

(ಚಿತ್ರ ೧೯೭) ಎಂ.ಎನ್.ಲಕ್ಷ್ಮೀದೇವಿ

(ಚಿತ್ರ ೧೯೮) ಉಮಾಶ್ರೀ

(ಚಿತ್ರ ೧೯೯) ಎನ್.ಎಸ್.ರಾವ್

(ಚಿತ್ರ ೨೦೦) ಪಂಢರಿಬಾಯಿ

(ಚಿತ್ರ ೨೦೧) ಜಯಶ್ರೀ.ಎಂ

(ಚಿತ್ರ ೨೦೨) ಎಂ.ವಿ.ರಾಜಮ್ಮ

ಪರಂಪರೆಯನ್ನೇ ಸೃಷ್ಟಿಸಿತು. ಜನಪ್ರಿಯ ನಟರು ಪೋಷಕ ಪಾತ್ರ ನಿರ್ವಹಿಸಬೇಕಾಗಿ ಬಂದಾಗಲೂ ಅಶ್ವತ್ ಅವರನ್ನು ಅನುಕರಿಸುವುದನ್ನು ನಾವು ನೋಡುತ್ತೇವೆ.

ಹವ್ಯಾಸಿ ರಂಗಭೂಮಿ ಹಿನ್ನೆಲೆಯಿಂದ ಬಂದ ಸಂಪತ್ ಕ್ಯಾಮರಾ ಕುರಿತು ಅತಿಯಾಗಿ ತಲೆ ಕೆಡಿಸಿಕೊಳ್ಳದೆ ವಾಸ್ತವಿಕ ಅಭಿನಯಕ್ರಮ ರೂಢಿಸಿಕೊಂಡವರು. ಪಾತ್ರಗಳ ನಿರ್ದಿಷ್ಟತೆ ಮತ್ತು ಹಿನ್ನಲೆಯನ್ನು ನಿಖರವಾಗಿ ಗುರುತಿಸಿಕೊಳ್ಳುತ್ತಿದ್ದ ಅವರು ಈ ಸೂಕ್ಷ್ಮಗಳನ್ನು ಬಳಸಿಕೊಂಡು ಪಾತ್ರಗಳು ಜೀವಂತವಾಗುವಂತೆ ಮಾಡುತ್ತಿದ್ದರು. ಹವ್ಯಾಸಿ ರಂಗಭೂಮಿಯಿಂದ ಬಂದರೂ ಈ ಸಹಜತೆಗಿಂತ ಭಿನ್ನ ಶೈಲಿ ರೂಢಿಸಿಕೊಂಡವರು ಲೋಕನಾಥ್. ತಮ್ಮದೇ ಸಂಭಾಷಣೆ ಹೇಳುವ ಶೈಲಿ ಮತ್ತು ಕೆಲವು ವಿಶಿಷ್ಟ ಹಾವಭಾವಗಳನ್ನು ಉಳಿಸಿಕೊಂಡು ಬಂದ ಅವರದೇ ಕಾರಣಕ್ಕೆ ಗಮನಾರ್ಹರಾದರು. ಆದರೆ ಅವರ ಅಭಿನಯಶೈಲಿ ಈ ಅಂಶಗಳಿಂದ ಆಚೆಗೆ ಬೆಳೆಯಲೇ ಇಲ್ಲ. 'ಉಪಾಸನ' ಚಿತ್ರದಿಂದ ಪೋಷಕನಟರಾಗಿ ತೆರೆಗೆ ಬಂದ ಸೀತಾರಾಂ ಪಾತ್ರಪೋಷಣೆಯಲ್ಲಿ ಎಷ್ಟು ತಲ್ಲೀನರಾಗುತ್ತಿದ್ದರೆಂದರೆ ಅವರ ಪಾತ್ರ ಎಲ್ಲೂ ನಾಟಕೀಯ ಎನಿಸುತ್ತಿರಲಿಲ್ಲ. 'ಉಪಾಸನೆ' ನಂತರ 'ಶುಭಮಂಗಳ' ಚಿತ್ರದ ಆತ್ಮಾಭಿಮಾನಕ್ಕಾಗಿ ಪ್ರಾಣ ಬಿಡುವ ತಂದೆಯ ಪಾತ್ರದಲ್ಲಿ ಅವರ ಅಭಿನಯ ಸರಿಸಾಟಿ ಇಲ್ಲದ್ದು. ಆದರೆ ನಂತರದ ದಿನಗಳಲ್ಲಿ ಅವರ ಪ್ರತಿಭೆಗೆ ಪೂರಕವಾದ ಪಾತ್ರಗಳು ಸೃಷ್ಟಿಯಾಗಲಿಲ್ಲ.

ಸದಾಶಿವ ಬ್ರಹ್ಮಾವರ್ ಭಾವಪೂರ್ಣ ಪಾತ್ರಗಳನ್ನು ನಿರ್ವಹಿಸಿದ ಕಲಾವಿದ. ಮುಖ್ಯವಾಗಿ ಮಧ್ಯಮ ವರ್ಗದ ಪಾತ್ರಗಳಿಗೆ ಜೀವ ತುಂಬುವ ಇವರು, ಭಿನ್ನವರ್ಗದ ಪಾತ್ರಗಳಲ್ಲಿ ಅಸಹಜವಾಗಿ ಕಾಣುವರು. ಇದಕ್ಕೆ ಅವರು ಅಭಿನಯಶೈಲಿಯನ್ನು, ಸಂಭಾಷಣೆ ಹೇಳುವ ರೀತಿಯನ್ನು ಪಾತ್ರಕ್ಕೆ ತಕ್ಕಂತೆ ಬದಲಾಯಿಸಿಕೊಳ್ಳದ್ದು ಮುಖ್ಯ ಕಾರಣ. ತಂದೆ ಪಾತ್ರ ನಿರ್ವಹಣೆಯಲ್ಲಿ ಬಾಲಕೃಷ್ಣ ಅವರದ್ದೊಂದು ವಿಶಿಷ್ಟ ಶೈಲಿ. ಕಾಮಿಕ್ ಆದ ತಮ್ಮ ಎಂದಿನ ಹಾವಭಾವ ಇಂಥ ಪಾತ್ರಗಳ ನಿರ್ವಹಣೆ ಸಂದರ್ಭ ಬಂದಾಗ ಅವರು ಬದಲಾಯಿಸಿಕೊಳ್ಳುವ ರೀತಿ ಅನನ್ಯ. ತಂದೆ ಪಾತ್ರ ನಿರ್ವಹಿಸುವಾಗ ಅನಂತ್‌ನಾಗ್ ಗಾಂಭೀರ್ಯದ ಚೌಕಟ್ಟಿನ ವಿಶಿಷ್ಟ ಕ್ರಮವನ್ನು ರೂಢಿಸಿಕೊಂಡಿದ್ದರು. ಅದು ಸಹಜವಾಗಿದ್ದ ಶೈಲಿ.

ವರ್ಸಟೈಲ್ ಕಮಡಿಯನ್ ಎಂದೇ ಹೆಸರಾದ ಮಾ।ಹಿರಣ್ಣಯ್ಯ ಚಲನಚಿತ್ರಗಳಲ್ಲೂ ಪಾತ್ರ ನಿರ್ವಹಿಸಿದ್ದಾರೆ. ಮಾತುಗಾರಿಕೆಯೇ ಅವರ ಅಭಿನಯದ ಮುಖ್ಯ ಭಾಗ. ಚಲನಚಿತ್ರದಲ್ಲಿ ಇದಕ್ಕೊಂದು ಚೌಕಟ್ಟು, ಸೀಮಿತತೆ ಇರುತ್ತದೆ. ಹೀಗಾಗಿ ಚಲನಚಿತ್ರದಲ್ಲಿ ಅವರು ತಮ್ಮ ಶಕ್ತಿಯ ಪಡಿನೆಳಲಾಗಿ ಕಾಣುತ್ತಿದ್ದರು. ಇಂಥ ಸಮಸ್ಯೆಯನ್ನು ಸಿ.ಆರ್.ಸಿಂಹ ಅಭಿನಯಕ್ರಮದಲ್ಲಿ ಗುರುತಿಸಬಹುದು. ಚೇತನ್ ರಾಮರಾವ್ ರಂಗಭೂಮಿ ಚಲನೆಯನ್ನು ಚಿತ್ರರಂಗದಲ್ಲಿ ಯಥಾವತ್ತಾಗಿ ತರಲು ಪ್ರಯತ್ನಿಸಿದರು. ಇದು ಪಾತ್ರದ ವ್ಯಾಪ್ತಿ ಅನುಸರಿಸಿ ಒಮ್ಮೊಮ್ಮೆ ಪ್ರಭಾವಶಾಲಿಯಾಗಿ ಕಾಣುತ್ತಿತ್ತು. ರಾಜಾನಂದ್ ಅಭಿನಯಕ್ರಮದಲ್ಲಿ ಇಂಥ ಅಂಶ ಗುರುತಿಸಬಹುದು. ಆದರೆ ಪಾತ್ರಗಳ ಚಲನೆ ಕುರಿತು ರಾಜಾನಂದ್ ಗಮನ ಇಡುತ್ತಿದ್ದರು. ಹೀಗಾಗಿ ಕನಿಷ್ಟ ಯಾವ ಹಂತದಲ್ಲೂ ತಮ್ಮ ಪಾತ್ರನಿರ್ವಹಣೆ ಅಸಹಜವಾಗಬಾರದು ಎಂಬ ಎಚ್ಚರವನ್ನು ಅವರಲ್ಲಿ ಕಾಣುತ್ತೇವೆ.

ರಂಗಭೂಮಿ, ಕಿರುತೆರೆ ಹಿನ್ನೆಲೆಯಿಂದ ಬಂದ ಹೆಚ್.ಜಿ.ಸೋಮಶೇಖರರಾವ್, ಸಿನಿಮಾಗಳಲ್ಲಿ ಪಾತ್ರ ನಿರ್ವಹಿಸುವಾಗ ತಮ್ಮ ಅಭಿನಯಶೈಲಿ ಬದಲಾಯಿಸಿಕೊಳ್ಳಲಿಲ್ಲ. ಇಲ್ಲಿ ಕ್ಯಾಮರಾ ರೇಂಜ್ ದೊಡ್ಡದಾಗಿರುವುದರಿಂದ ಕಿರುತೆರೆಯಲ್ಲಿ ಪ್ರಭಾವಿಯಾಗಿ ಕಾಣುವ ಇವರ ಹಾವಭಾವಗಳೇ ಹಿರಿತೆರೆಯಲ್ಲಿ ಅಸಹಜವಾಗಿ ಕಾಣುವುದನ್ನು ಗುರುತಿಸಬಹುದು. ಹೆಚ್.ಜಿ.ದತ್ತಾತ್ರೇಯ ಇವರಲ್ಲಿ ಕೊಂಚ ಈ ಪರಿವರ್ತನೆಗೆ ಅಳವಡಿಸಿಕೊಳ್ಳುವ ಪ್ರಯತ್ನ ಕಾಣಿಸಿದರೂ ಕೆಲವು ಸಾಮಾನ್ಯ ಸಂಜ್ಞೆಗಳಿಗೆ ಬಂದಾಗ ಅವರು ಗಮನ ನೀಡದೆ ಹೋಗುವುದರಿಂದ ಪಾತ್ರಕ್ಕೆ ಅಗತ್ಯ ಚಾಲನೆ ಸಿಕ್ಕದ ಸಂಭವವೂ ಇದೆ. ದಟ್ಟ ಹವ್ಯಾಸಿ ರಂಗಭೂಮಿ ಹಿನ್ನೆಲೆಯಿಂದ ಬಂದ ಅಶೋಕ್ ಬಾದರದಿನ್ನಿಗೂ ಈ ಸಮಸ್ಯೆ ಇದೆ. ಅವರು ಕ್ಯಾಮರಾ ಕೋನಗಳನ್ನು ಗಮನಕ್ಕೆ ತಂದುಕೊಳ್ಳದೆ ನಟಿಸುವುದರಿಂದ ವಕ್ರವಾಗಿ ಕಾಣುವ ವೈಪರೀತ್ಯ ಸಂಭವಿಸುತ್ತದೆ. ತಮ್ಮ ಪಾತ್ರಗಳ ಚೌಕಟ್ಟನ್ನು ಅರಿತು ಅದರ ಮಿತಿಯಲ್ಲೇ ಪಾತ್ರವನ್ನು ಜೀವಂತವಾಗಿಸುವ ಪ್ರಾಮಾಣಿಕ ಪ್ರಯತ್ನ ಮಾಡುವ ಹೊನ್ನವಳ್ಳಿ ಕೃಷ್ಣ ಅವರಿಗೆ ಅಭಿನಯ ಕುರಿತು ಇರುವ ಬದ್ಧತೆ ಬಹಳ ಮುಖ್ಯವಾದುದು. ಶೈಲಿಯ ಮಟ್ಟಿಗೆ ಸ್ಪಷ್ಟ ನಿಲುವು ಅವರಲ್ಲಿ ಕಾಣದಿದ್ದರೂ 'ಶ್ರುತಿ' ಚಿತ್ರ ಗಮನಿಸಿದರೆ, ಈತ ಅವಕಾಶ ಲಭ್ಯವಾಗಿದ್ದರೆ ದೊಡ್ಡ ಪ್ರಮಾಣದಲ್ಲಿ ಬೆಳೆಯಬಹುದಾಗಿದ್ದ ಕಲಾವಿದ ಎನ್ನಿಸುತ್ತದೆ. ಕಾಮಿಕ್ ಆಗಿಯೇ ಪಾತ್ರ ನಿರ್ವಹಿಸುವ ದೊಡ್ಡಣ್ಣ ಪೋಷಕ ಪಾತ್ರಗಳ ಸಂದರ್ಭದಲ್ಲಿ ತಮ್ಮ ಹಾವಭಾವಗಳನ್ನು ಬದಲಾಯಿಸಿಕೊಳ್ಳಲಿಲ್ಲ. ಖಳನಾಯಕ ಪಾತ್ರ ಬಂದಾಗಲೂ ಅನುಕರಣೆಗಳ ಮಿಶ್ರಣ ಹೊಂದಿದ ಅವರ ಶೈಲಿಯಲ್ಲಿ ಸ್ವಂತಿಕೆ ಅಂಶ ಕಡಿಮೆ. 'ಬೆಳ್ಳಿ ಮೋಡಗಳು' ಚಿತ್ರದಲ್ಲಿ ದೊರೆತ ವಿಶಿಷ್ಟ ಪಾತ್ರವನ್ನು ಮೂಲದ ಅನುಕರಣೆ ಮಾಡಿ ನಿರ್ವಹಿಸಿದರು. ಆದರೆ

(ಚಿತ್ರ ೨೦೩) ರಮಾದೇವಿ

(ಚಿತ್ರ ೨೦೪) ಆದವಾನಿ ಲಕ್ಷ್ಮೀದೇವಿ

(ಚಿತ್ರ ೨೦೫) ಮೈನಾವತಿ

(ಚಿತ್ರ ೨೦೬) ಬಿ. ಜಯಾ

ರಂಗಭೂಮಿಯ ಅನುಭವ, ಸಂಭಾಷಣೆಯ ಪರಿಳಿತಗಳ ಸಾಧನೆಯಿಂದ ಗೆದ್ದುಬಿಡುತ್ತಾರೆ. ಕೆಲವು ಕಾಮಿಕ್ ಹಾವಭಾವವನ್ನು ವಿಶಿಷ್ಟವಾಗಿ ಬಳಸಿಕೊಂಡ ಅರವಿಂದ್ ಕೂಡ 'ಶಂಖನಾದ'ದಲ್ಲಿ ದೊರೆತ ಅವಕಾಶದನಂತರವೂ ಸ್ವಂತಿಕೆಯತ್ತ ಗಮನ ಹರಿಸದೆ ಅನುಕರಣೆಯಲ್ಲೇ ನಷ್ಟವಾದರು. ಸಂಭಾಷಣೆ ಹೇಳುವ ಶೈಲಿಯಲ್ಲಿ ಕಾಮಿಕ್ ಆದ ಕೆಲವು ಒಳಸಂಜ್ಞೆ ನೀಡಲು ಪ್ರಯತ್ನಿಸುವ ಸಿಹಿಕಹಿ ಚಂದ್ರು ಅದಕ್ಕಿಂತ ಭಿನ್ನ ಅಭಿನಯಕ್ಕೆ ಪ್ರಯತ್ನಿಸಲೇ ಇಲ್ಲ. ಗಾಂಭೀರ್ಯ ತುಂಬಿದ ನಡಿಗೆ, ನಿರ್ದಿಷ್ಟ ಸಂಜ್ಞೆ ಮೂಲಕ ಪೋಷಕ ಪಾತ್ರಗಳ ಕೆಲವು ಮಾದರಿಗೆ ಜೀವತುಂಬಿದ ಬಿ.ಸಿ.ಪಾಟೀಲ್ ನಾಯಕನಾದಾಗ, ಮೂಲಭೂತ ಅಂಶಗಳಿಂದ ಭಿನ್ನಶೈಲಿಗೆ ಪ್ರಯತ್ನಿಸಲಿಲ್ಲ. ಈಚಿನ ದಿನಗಳಲ್ಲಿ ಹೆಚ್ಚು ಕಡಿಮೆ ಏಕಪ್ರಕಾರ (stereo type) ಆಗಿಬಿಟ್ಟಿರುವ ತಂದೆ ಪೋಷಕಪಾತ್ರಕ್ಕೆ ತಕ್ಕ ಶೈಲಿ ಅಳವಡಿಸಿಕೊಂಡ ಕೃಷ್ಣೇಗೌಡ, ಕರಿಬಸವಯ್ಯ ಅವರದ್ದು ನಿರ್ದಿಷ್ಟ ಮುಖಭಾವದ ಅಭಿನಯ. ಹೆಸರಿಸದಿದ್ದರೂ ಅನಂತರ ಬಂದ ಬಹುತೇಕ ಎಲ್ಲ ಕಲಾವಿದರ ಅಭಿನಯಶೈಲಿಯನ್ನು ಈ ಪಟ್ಟಿಗೆ ಸೇರಿಸಬಹುದು.

ನಾಯಕಿ ಹೊರತಾದ ಸ್ತ್ರೀಪಾತ್ರಗಳು ಸಾಮಾನ್ಯವಾಗಿ ಗೊಂಬೆಗಳು. ಅವಕ್ಕಿರುವ ವ್ಯಾಪ್ತಿ, ಅವಶ್ಯಕತೆಯಲ್ಲೇ ಅಭಿನಯಕ್ಕೆ ಅವಕಾಶ ಕಡಿಮೆ. ಇಂಥ ಪಾತ್ರಗಳನ್ನು ಎರಡು ಭಾಗಗಳಾಗಿ ವಿಂಗಡಿಸಬಹುದು. ಒಂದು, ತ್ಯಾಗದ ಸಾಕಾರಮೂರ್ತಿ ತಾಯಿ, ಮಮತೆ ಪುತ್ತಳಿ ತಂಗಿ, ಅಥವಾ ಅಕ್ಕ. ಇಂಥ ಪರಮ ಸಾತ್ವಿಕ ವರ್ಗ, ಇನ್ನೊಂದು ಬುದ್ಧಿ ಕೆಡಿಸುವ, ತಪ್ಪುದಾರಿಗೆ ಎಳೆಯುವ ಪ್ರೇಯಸಿ, ಘಟವಾಣಿಯಾದ ಅತ್ತೆ ಇಂಥ ದುಷ್ಟ ಪಾತ್ರಗಳು. ಕನ್ನಡ ಚಿತ್ರರಂಗದಲ್ಲಿ ಈ ಎರಡೂ ಪರಂಪರೆ ಸರಳ ರೇಖಾತ್ಮಕವಾಗಿಯೇ ಬೆಳೆದುಕೊಂಡು ಬಂದಿದೆ. ಈ ಪಾತ್ರ ನಿರ್ವಹಿಸುವವರ ಅಭಿನಯಶೈಲಿ ಕೂಡ ಇದರ ಅಂಚಿನಲ್ಲೇ ಸಾಗುತ್ತದೆ.

ಆರಂಭಿಕ ಚಿತ್ರಗಳಲ್ಲಿ ತಾಯಿ ಎಂದರೆ ಚಿತ್ರದ ಅರ್ಥಪೂರ್ಣ ಮುಂದುವರಿಕೆ ಕಾಪಾಡುವ ಪಾತ್ರವಾಗಿರುವುದನ್ನು ಕಾಣುತ್ತೇವೆ. ಅಂಥ ಚಿತ್ರಗಳಲ್ಲಿ ಈ ಪಾತ್ರ ಜೀವಂತವಾಗಿ ಎದ್ದುಬರಲಿಲ್ಲ. ಪಂಢರಿಬಾಯಿ ಈ ಪಾತ್ರಕ್ಕೊಂದು ಚೌಕಟ್ಟು ತಂದರು. ಅವರು ನಾಯಕಿ ಪಾತ್ರ ನಿರ್ವಹಿಸುವಾಗ ರೂಪಿಸಿಕೊಂಡಿದ್ದ ಭಾವಪೂರ್ಣ ಶೈಲಿಯನ್ನೇ ಇಲ್ಲಿಗೂ ಟೇಕಾಫ್ ಮಾಡಿಬಿಟ್ಟರು. ಪಂಢರಿಬಾಯಿ ಅವರು ರೂಢಿಸಿಕೊಂಡ ಈ ಶೈಲಿ ಕೃತಕ ಎಂಬುದು ನಿಜವಾದರೂ ಅದೊಂದು ಪರಂಪರೆ ಸೃಷ್ಟಿಸಿತು ಎಂಬ ಅಂಶ ನಾವು ಮರೆಯುವಂತಿಲ್ಲ. ಪಂಢರಿಬಾಯಿಯವರಂತೆ ಮಮತಾಮಯಿ ತಾಯಿಯಾಗಿ ಮಿಂಚಿದ ಮತ್ತೊಬ್ಬ ಕಲಾವಿದೆ ಎಂ.ವಿ.ರಾಜಮ್ಮ. 'ಕಿತ್ತೂರು ಚೆನ್ನಮ್ಮ' ಚಿತ್ರದ ವೀರಮಾತ, 'ಕೃಷ್ಣದೇವರಾಯ' ಚಿತ್ರದ ದುಃಖದಿಂದ ಶಾಪ ಹಾಕುವ, ಕೋಪಗೊಳ್ಳುತ್ತಲೇ ಹೃದಯ ಕರಗಿಸುವ ತಾಯಿಯಾಗಿ, ವಿವಾಹೇತರ ಸಂಬಂಧದಲ್ಲಿ ಜನಿಸಿದ ಮಗು ಬೆಳೆದು ತನ್ನ ಕಣ್ಣೆದುರಿಗ ನಡೆದಾಡುವ ಸುಂದರ ಹುಡುಗಿಯೊಬ್ಬಳ ತಾಯಿಯಾಗಿ ಸಮಾಜದ ಎದುರಿಗೆ ಮಗಳೆಂದು ಒಪ್ಪಿಕೊಳ್ಳಲಾಗದೆ ತಳಮಳಿಸುವ ತಾಯಿಯಾಗಿ ಎಂ.ವಿ.ರಾಜಮ್ಮ 'ಒಂದು ಹೆಣ್ಣಿನ ಕಥೆ' ಚಿತ್ರದಲ್ಲಿ ಹೃದಯಸ್ಪರ್ಶಿಯಾದ ಅಭಿನಯ ನೀಡಿದ್ದಾರೆ. ಇದೇ ಅವಧಿಯಲ್ಲಿ ತಾಯಿಯಾಗಿ ಮಿಂಚಿದ ಜಯಶ್ರೀ ಕೂಡ ಪ್ರತಿಭಾವಂತ ಕಲಾವಿದೆ. ನಾಯಕಿಯಾಗಿ ಮಿಂಚಿದಕ್ಕಿಂತ ತಾಯಿಯಾಗಿ ಮಿಂಚಿದ್ದೇ ಹೆಚ್ಚು. ಮಮತಾಮಯಿ ತಾಯಿಯ ಪರಂಪರೆಯಿಂದ ಹೊರಬಂದು ಮಗನನ್ನು ಅಡ್ಡದಾರಿಗೆ ತಳ್ಳುವ ತಾಯಿ, ತನ್ನ ಮಗಳ ಅಭ್ಯುದಯಕ್ಕಾಗಿ ಮತ್ತೊಂದು ಹೆಣ್ಣನ್ನು ಹಿಂಸಿಸುವ ಸ್ವಾರ್ಥಿ ತಾಯಿಯಾಗಿ, ಮಾತೃತ್ವಕ್ಕೆ ಬೇರೆ ಆಯಾಮ ನೀಡಿ ಪಂಢರಿಬಾಯಿ, ಎಂ.ವಿ.ರಾಜಮ್ಮ ಅವರು ನಿರ್ಮಾಣ ಮಾಡಿಕೊಂಡಿದ್ದ ಒಂದು ರೀತಿಯ ಕಣ್ಣೀರಿಡುವ ತಾಯಿಪಾತ್ರದಿಂದ ಹೊರಬಂದು ಸಹಜತೆ ನೀಡಿದ ಕೀರ್ತಿ ಜಯಶ್ರೀ ಅವರಿಗೆ ಸಲ್ಲುತ್ತದೆ. ಆಕೆ ಅಭಿನಯದ 'ಮಾರ್ಗದರ್ಶಿ', 'ಕಲಾವತಿ', 'ಚಂದವಳ್ಳಿಯ ತೋಟ' ಒಂದಕ್ಕಿಂತ ಒಂದು ವಿಭಿನ್ನ ರೀತಿಯ ತಾಯಿಪಾತ್ರಗಳು. ಇವರದೇ ಅವಧಿಯಲ್ಲಿ ನಾಯಕಿಪಾತ್ರದಿಂದ ವರ್ಗವಾಗಿ ಬಂದ ಮತ್ತೊಬ್ಬ ಕಲಾವಿದೆ ಆದವಾನಿ ಲಕ್ಷ್ಮೀದೇವಿ. ಬಹುಶಃ ಜಯಶ್ರೀ ಅವರಂತೆಯೇ ವೈವಿಧ್ಯಮಯ ತಾಯಿಪಾತ್ರಗಳನ್ನು ನಿರ್ವಹಿಸಿದ್ದು ಆದವಾನಿಯವರೆಂದರೆ ತಪ್ಪಾಗಲಾರದು. 'ಗಂಧದಗುಡಿ' ಚಿತ್ರದ ಮಮತಾಮಯಿ ತಾಯಿಯಾಗಿ ಇಬ್ಬರು ವೈರುಧ್ಯ ಮನೋಭಾವವುಳ್ಳ ಮಕ್ಕಳ ತಾಯಿಯಾಗಿ, ಇಬ್ಬರನ್ನೂ ಸಮಾನವಾಗಿ ಪ್ರೀತಿಸುವ ಪಾತ್ರದಲ್ಲಿ ಆಕೆ ಸ್ಮರಣೀಯ. 'ನಮ್ಮ ಸಂಸಾರ', 'ನಂದಗೋಕುಲ', 'ಬಂಗಾರದ ಮನುಷ್ಯ' ಮೊದಲಾದ ಒಂದಕ್ಕಿಂತ ಒಂದು ವಿಭಿನ್ನ ಪಾತ್ರಗಳಲ್ಲಿ ಮಿಂಚಿದರು.

ನಾಯಕಿ ಪಾತ್ರಕ್ಕಿಂತ ತಾಯಿ ಪಾತ್ರ ಭಿನ್ನವಾದ್ದು ಎಂದು ನಿಖರವಾಗಿ ಗುರುತಿಸಿಕೊಂಡವರು ಲೀಲಾವತಿ. ಇವರು ಪಾತ್ರದ ವಯಸ್ಸಿಗೆ ತಕ್ಕಂತೆ ಮೂಲಭೂತ ಪ್ರವೃತ್ತಿಯನ್ನು ಬದಲಿಸಿಕೊಂಡರು. ಅವರು ಅಜ್ಜಿ ಪಾತ್ರ ನಿರ್ವಹಿಸುವಾಗಲೂ ಇಂಥ ಬದಲಾವಣೆ ಮಾಡಿಕೊಂಡದ್ದನ್ನು ಗಮನಿಸುತ್ತೇವೆ. ಬಹುತೇಕ ಚಿತ್ರಗಳಲ್ಲಿ ಖಾಯಂ ತಾಯಿಯಾಗಿ ನಟಿಸಿದ ಲೀಲಾವತಿ ಪಾತ್ರಗಳ ಒಳಸಂಜ್ಞೆಗಳನ್ನು ಗುರುತಿಸಿಕೊಂಡು ಅಭಿನಯಿಸುತ್ತಿದ್ದರು. 'ಗೆಜ್ಜೆಪೂಜೆ' ಚಿತ್ರದಲ್ಲಿ ತನ್ನಂತೆ ತನ್ನ ಮಗಳಾಗಬಾರದು ಎಂದು ಚಡಪಡಿಸುವ ತಾಯಿಯಾಗಿ ಶ್ರೇಷ್ಠ ಅಭಿನಯ ನೀಡಿದ್ದಾರೆ. ಜನಪ್ರಿಯ ನಾಯಕಿಯರು ಕಾಲಾನುಕ್ರಮ ತಾಯಿಯರಾಗಿ ನಟಿಸಲು ಆರಂಭಿಸಿದ ಮೇಲೆ ಲೀಲಾವತಿ ಕಂಡುಕೊಂಡ ಈ ಮಾದರಿ ಬದಲಾವಣೆಯನ್ನು ಅಳವಡಿಸಿಕೊಳ್ಳಲಿಲ್ಲವೆಂಬುದನ್ನು ನಾವು ಗಮನಿಸಬೇಕು. ಜಯಂತಿ, ಸರೋಜಾದೇವಿ, ಭಾರತಿಯಂಥ ಕಲಾವಿದೆಯರು ತಾಯಿ ಪಾತ್ರ ಬೇರೆ ಎಂಬಂತೆ ಗ್ರಹಿಸಿಕೊಳ್ಳಲಿಲ್ಲ. ಕೆಲಮಟ್ಟಿಗೆ ಆರತಿ ಈ ಸೂಕ್ಷ್ಮ ಕಂಡುಕೊಂಡಿದ್ದರು. ಆದರೆ ಅವರ ಮೂಲತಃ ಅಭಿನಯಶೈಲಿ ಸೀಮಿತ ಚೌಕಟ್ಟಿನದಾದರಿಂದ ತುಂಬಾ ಅಥೆಂಟಿಕ್ ಅನ್ನಿಸುವ ಮಾದರಿಯನ್ನೇನೂ ಅವರಲ್ಲಿ ಕಾಣಲಾಗುವುದಿಲ್ಲ. ಲಕ್ಷ್ಮೀ ಕೂಡ ಈ ಸೂಕ್ಷ್ಮಕ್ಕೆ ಗಮನಕೊಟ್ಟವರು. ಪಾತ್ರಗಳ ಮ್ಯಾನರಿಸಮನ್ನು ಗಮನಿಸದೆ ನಟಿಸಿದ್ದರಿಂದ ಅವರ ಎಂದಿನ ಅಭಿನಯದ ಶಕ್ತಿಶಾಲಿ ಅಂಶಗಳು ಇಲ್ಲಿ ಉಳಿದುಕೊಂಡವು. ನಮ್ಮ ಜನಪ್ರಿಯ ನಟಿಯರೆಲ್ಲ ವಯಸ್ಸಿಗೆ ತಕ್ಕಂತೆ ವ್ಯಕ್ತಿಯ ಹಾವಭಾವ ಬದಲಾಗುತ್ತವೆ ಎಂಬ ಸರಳ ಅಂಶ ಮರೆತುಬಿಟ್ಟಿದ್ದೊಂದು ಆಶ್ಚರ್ಯದ ಸಂಗತಿಯಾಗಿ ಕಾಣುತ್ತದೆ. ಪಂಢರಿಬಾಯಿ, ಆದವಾನಿ ಲಕ್ಷ್ಮೀದೇವಿ, ಎಂ.ವಿ.ರಾಜಮ್ಮ ಅವರಂತೆ ಹಲವಾರು ನಾಯಕರ ತಾಯಿಯಾಗಿ ಅಭಿನಯಿಸಿದರೂ ಅವರಂತೆ ಮಿಂಚದೆ ಹೋದ ಕಲಾವಿದೆ ಶಾಂತಮ್ಮ ಭಾವಾಭಿನಯದಲ್ಲಿ ಆಂಗಿಕದಲ್ಲಿ ಅನನ್ಯರು.

ಸಾತ್ವಿಕ ಪಾತ್ರದ ಇನ್ನೊಂದು ಮಗ್ಗುಲು ತಂಗಿ ಅಥವಾ ಎರಡನೇ ನಾಯಕಿಯರದು. ಇಲ್ಲಿ ಎರಡನೇ ನಾಯಕಿ ಸಾಮಾನ್ಯವಾಗಿ ತ್ರಿಕೋನ ಪ್ರೇಮದಲ್ಲಿ ನಿರಾಶಳಾದರೆ, ತಂಗಿ ನಾಯಕನ ನೆರಳಾಗೇ ಬೆಳೆಯುತ್ತ, ದುಷ್ಟರ ಅಟ್ಟಹಾಸಕ್ಕೆ ಗುರಿಯಾಗಿ ಅತ್ಯಾಚಾರಕ್ಕೆ ಒಳಗಾಗುವವಳು, ಇಲ್ಲ ನಿಂದನೆಗೆ ಗುರಿಯಾಗಿ ಆತ್ಮಹತ್ಯೆ ಮಾಡಿಕೊಳ್ಳುವವಳು. ಹರಿಣಿ, ಬಿ.ವಿ.ರಾಧಾರಂಥವರು ಹೆಚ್ಚಾಗಿ ಇಂಥ ಪಾತ್ರಗಳನ್ನು ನಿರ್ವಹಿಸುತ್ತ ಬಂದರು. ನಿರ್ದಿಷ್ಟ ಗಮನ ಇಲ್ಲ ಎಂಬ ಕಾರಣಕ್ಕ ಈ ಪಾತ್ರಗಳಲ್ಲಿ ಇವರು ಚಲನೆಯನ್ನೇ ಕಂಡುಕೊಳ್ಳಲಿಲ್ಲ. 'ದೇವರು ಕೊಟ್ಟ ತಂಗಿ' ರೋಲ್‌ಗೆ ನಿರ್ದಿಷ್ಟ ಗಮನ ಬಿದ್ದರೂ ಯಾವ ಕ್ರಿಯಾಶಾಲಿ ಸಂಕೀರ್ಣತೆ ರೂಪುಗೊಂಡಿದ್ದು ಕಾಣುವುದಿಲ್ಲ. ತಂಗಿ ಪಾತ್ರಕ್ಕೊಂದು ಅಭಿನಯ ಕ್ರಮ ಅನ್ನುವುದೇ ಈ ಅರ್ಥದಲ್ಲಿ ನಮ್ಮಲ್ಲಿ ರೂಪುಗೊಂಡಿಲ್ಲ. ಬಾಲನಟಿಯಾಗಿ ಬಹುತೇಕ ಚಿತ್ರಗಳಲ್ಲಿ ಮುಖ್ಯವಾಗಿ 'ಆಶಾ'ದಲ್ಲಿ ತಂಗಿಯಾದ ಬೇಬಿ

ಇಂದಿರಾ ಅಭಿನಯವನ್ನು ಈ ಹಿನ್ನೆಲೆಯಲ್ಲಿ ನೋಡಬಹುದು. ಈ ಚಿತ್ರದ ಇನ್ನೊಂದು ಸಾಧ್ಯತೆಯಾದ ಹದಿಹರೆಯದ ಪ್ರೇಮಿಯಾಗಿ ಲವಲವಿಕೆಯಿಂದ ನಟಿಸಿದ ಇಂದಿರಾ, ತಂಗಿ ದೃಶ್ಯ ಬಂದಾಗ ಅವರಲ್ಲೂ ಈ ಸಂಬಂಧವನ್ನೇ ಹೇಳುವ 'ನಂದಾದೀಪ ಆಗು ನೀನೆಂದು....' ಹಾಡಿನ ದೃಶ್ಯದಲ್ಲಿ ಕೂಡ ವಾತ್ಸಲ್ಯದ ಹಾವಭಾವಗಳನ್ನು ರೂಢಿಸಿಕೊಂಡಿಲ್ಲ. ಇನ್ನಷ್ಟು ವಿಸ್ತರಿಸಿ ಹೇಳಬೇಕೆಂದರೆ ಧ್ವನಿರಹಿತವಾಗಿ ನೋಡಿದರೆ ಇದು ಪ್ರಣಯಗೀತೆ ತರಹ ಕಾಣಿಸುವ ಅಭಿನಯಕ್ರಮ ಹೊಂದಿದೆ. ಸಾಕಷ್ಟು ಚಿತ್ರಗಳಲ್ಲಿ ಜನಪ್ರಿಯ ನಟರೆಲ್ಲರಿಗೂ ತಂಗಿಯಾಗಿ ಅಭಿನಯಿಸಿದ ತಾರಾ ಅಭಿನಯದಲ್ಲೂ ಈ ಕ್ರಿಯಾಶೀಲತೆ ಕಾಣುವುದಿಲ್ಲ. 'ಗುರಿ'ಯಲ್ಲಿ ಅಣ್ಣನೊಡನೆ ಜಗಳವಾಡುವ ತಂಗಿಯಾಗಿ ತುಂಟತನವನ್ನು ತಮ್ಮ ಯಾವ ಹಾವಭಾವದಲ್ಲೂ ತೋರಿಲ್ಲ. ನಿರ್ದಿಷ್ಟ ಮುಖಭಾವದ (stock expression) ಮಾದರಿಯಲ್ಲಿ ಅಭಿನಯಿಸುವ ತಾರಾ, ತಂಗಿಗೂ ಒಂದು ಮಾದರಿ, ನಿರ್ದಿಷ್ಟತೆ ಇರಬೇಕು ಎಂದು ಗ್ರಹಿಸಿಕೊಂಡಿದ್ದರೆ ಅವರ ಒಳಗಿನ ಕಲಾವಿದೆಯ ನಿಜ ತೆರೆದುಕೊಳ್ಳುತ್ತಿತ್ತು. ಚಿತ್ರಗಳಲ್ಲಿ ತಂಗಿ ಪಾತ್ರ ಎಲ್ಲೂ ಜೀವಂತವಾಗಿ ಬಂದೇ ಇಲ್ಲ. ಅಂಥ ಸಾಧ್ಯತೆ ಅಪರೂಪಕ್ಕಾದರೂ ಒಂದೆರಡು ಚಿತ್ರಗಳಲ್ಲಿ ಸಿಕ್ಕಿದೆ. 'ಪ್ರೊಫೆಸರ್ ಹುಚ್ಚೂರಾಯ' ಚಿತ್ರದಲ್ಲಿ ಮಂಜುಳಾ ನೀಡಿದ ಅಭಿನಯ ಕೆಲವು ದೃಶ್ಯಗಳಲ್ಲಿ ಈ ಸೂಕ್ಷ್ಮಗಳನ್ನು ಕಂಡುಕೊಂಡಿದೆ. 'ನಮ್ಮೂರ ಮಂದಾರ ಹೂವೇ' ಚಿತ್ರದಲ್ಲಿ ಸುಮನ್ ನಗರ್‌ಕರ್ ಅಣ್ಣನನ್ನು, "ನಿನ್ನ ಪ್ರೇಮ ಪ್ರಕಟಿಸು," ಎಂದು ಒತ್ತಾಯಿಸುವ ದೃಶ್ಯದಲ್ಲಿ ಆಂಗಿಕ ಅಭಿನಯದಲ್ಲಿ ಬಹಳ ಪ್ರಭಾವಿಯಾಗಿ ವಾತ್ಸಲ್ಯ ಪ್ರಕಟಿಸಿದರು. ಇವೆಲ್ಲ ಬಿಡಿ ಪ್ರಯತ್ನಗಳಾಗಿ ಕಾಣುತ್ತವೆಯೇ ಹೊರತು ಪರಂಪರೆ ನಿರ್ಮಿಸಲಿಲ್ಲ. ಇನ್ನು ಎರಡನೇ ನಾಯಕಿ ಎನ್ನುವುದು ಅಭಿನಯದ ಇನ್ನೊಂದು ಸಾಧ್ಯತೆಯಾಗಿ ನಮ್ಮಲ್ಲಿ ಬೆಳೆಯಲಿಲ್ಲ. ನಾಯಕಿ ಪಾತ್ರಕ್ಕೆ ಕೊಟ್ಟ ನ್ಯಾಯವನ್ನೇ - ಇರುವ ಕೆಲವೇ ದೃಶ್ಯಗಳಲ್ಲಿ - ಇಲ್ಲಿಯೂ ಸಲ್ಲಿಸಿದರೆ ಮುಗಿಯಿತು ಎಂಬ ಮನೋಭಾವ ಕಾಣುತ್ತದೆ. ಹೀಗೆ ಎರಡನೇ ನಾಯಕಿಯಾದವಳು ಹಾಳುಗೆಡಿ ಹಿಸ್ಟೀರಿಕಲ್ ವ್ಯಕ್ತಿತ್ವದವಳಾದಾಗ ವಿಲನ್ ಮಾದರಿ ಅಭಿನಯಕ್ರಮ ಬೆರೆಸುವುದನ್ನು ಕಾಣಬಹುದು. ಆರಂಭಿಕ ಚಿತ್ರದಲ್ಲಿ ಮೊದಲ ನಾಯಕಿ ಪರಮ ಸಾಧ್ವಿಯಾದರೆ, ಎರಡನೇ ನಾಯಕಿ ಅಪ್ಸರೆ ಅಥವಾ ವೇಶ್ಯೆ. ನಂತರದ ಸಾಂಸಾರಿಕ ಚಿತ್ರಗಳಲ್ಲಿ ಮೊದಲ ನಾಯಕಿ ಗೃಹಿಣಿಯಾದರೆ, ಎರಡನೆಯವಳು ಸೆಕ್ರೆಟರಿ ಯಾ ಸೂಳೆ. ಸೂಕ್ಷ್ಮವಾಗಿ ಗುರುತಿಸಿದರೆ ಈ ಅಂತರವನ್ನು ಅಭಿನಯಕ್ರಮದಲ್ಲಿ ಮೂಡಿಸಲಿಲ್ಲ, ಬದಲಾಗಿ ಕಾಸ್ಟ್ಯೂಮ್ಸ್‌ನಲ್ಲಿ ಮೂಡಿದವು. ಆರಂಭಿಕ ಚಿತ್ರಗಳಲ್ಲಿ ತಲೆ ಮೇಲೆ ಸೆರಗು ಹೊದ್ದು, ಹಣೆಯಲ್ಲಿ ಅಗಲ ಕುಂಕುಮ ಹಚ್ಚಿಕೊಂಡು, ಹೂವು ಮುಡಿದ ಕಾಸ್ಟ್ಯೂಮ್ಸ್ ಮೊದಲ ನಾಯಕಿಗಿದ್ದರೆ, ಸಾಕಷ್ಟು ಅಂಗಾಂಗ ಪ್ರದರ್ಶನ ಮಾಡುವಂಥ ಬಟ್ಟೆ ತೊಟ್ಟು ಎಗರಾಡುವ ಕಾಸ್ಟ್ಯೂಮ್ಸ್ ಎರಡನೇ ನಾಯಕಿಗಿರುತ್ತಿತ್ತು. ನಂತರದ ಚಿತ್ರಗಳಲ್ಲಿ ಉದ್ದ ಜಡೆ, ಮೈ ತುಂಬಾ ಸೆರಗು ಹೊದ್ದವಳು ಮೊದಲ ನಾಯಕಿಯಾದರೆ, ಬಾಬ್‌ಕಟ್ ಮಾಡಿಸಿದ ತುಂಡುಲಂಗದ ಚೆಲುವೆ ಎರಡನೇ ನಾಯಕಿ. ನಮ್ಮ ಚಿತ್ರರಂಗ ಹೀಗೆ ಸರಳ ರೇಖಾತ್ಮಕವಾಗಿ ಯೋಚಿಸುತ್ತ ಹೋಯಿತೇ ಹೊರತು ಇದನ್ನು ಭಿನ್ನ ಅಭಿನಯಕ್ರಮದಿಂದ ಅಭಿವ್ಯಕ್ತಿಸಬಹುದು ಎಂಬ ಬಗ್ಗೆ ತಲೆ ಕೆಡಿಸಿಕೊಳ್ಳಲಿಲ್ಲ. ಅತ್ತಿಗೆ ಪಾತ್ರಗಳಿಗೆ ಬಂದಾಗ, ಈ ಪಾತ್ರ ಒಳ್ಳೆಯದಾಗಿದ್ದರೆ ತಾಯಿ ಪಾತ್ರದ ಅಭಿನಯ ಕ್ರಮ ಕಾಣುತ್ತೇವೆ. ಹಾಗೆಯೇ ಅದು ದುಷ್ಟ ಪಾತ್ರವಾಗಿದ್ದರೆ, ಅತ್ತೆ ಪಾತ್ರದ ಅಭಿನಯಕ್ರಮ ಕಾಣುತ್ತೇವೆ. ಇದಕ್ಕಿಂತ ಭಿನ್ನವಾಗಿ ಸಾಮಾಜಿಕವಾಗಿ ಅತ್ತಿಗೆ ಎನ್ನುವ ಸ್ಥಾನಕ್ಕೆ ಭಿನ್ನಸಾಧ್ಯತೆಗಳಿವೆ ಎಂಬ ಅಂಶವನ್ನು ಚಿತ್ರರಂಗ ಗುರುತಿಸಲಿಲ್ಲ. ಇಲ್ಲೂ ಕೂಡ ಅಲ್ಲೊಂದು ಇಲ್ಲೊಂದು ಅಪವಾದ ಗುರುತಿಸಬಹುದು. 'ಪ್ರೇಮಮಯಿ' ಚಿತ್ರದಲ್ಲಿ ಲೀಲಾವತಿ ಅತ್ತಿಗೆಯ ಪರಿಕಲ್ಪನೆಗೆ ಹೊಂದಬಹುದಾದ ಅಭಿನಯ ನೀಡಿದರು. 'ಸಂಪತ್ತಿಗೆ ಸವಾಲ್' ಚಿತ್ರದಲ್ಲಿ ಮನೆಯವರೆಲ್ಲ ದೂರವಿಟ್ಟ ಮೈದುನನ ಬಗ್ಗೆ ಮಮತೆ ತಾಳುವ ಅತ್ತಿಗೆಯಾಗಿ ಕಲಾವತಿ ಭಿನ್ನ ಅಭಿನಯಕ್ರಮ ಅಳವಡಿಸಿಕೊಂಡಿದ್ದರು. ಬಹಳ ಹಿಂದೆಯೇ ರಂಗಭೂಮಿಯಿಂದ ಬಂದ ಆರ್.ಟಿ.ರಮಾ ಅವರು ವಿಶಿಷ್ಟ ಧ್ವನಿ, ಆಂಗಿಕಾಭಿನಯದ ಮೂಲಕ ಅಭಿವ್ಯಕ್ತಿಸಿದರು.

ಇನ್ನು ನಮ್ಮ ಚಿತ್ರಪರಂಪರೆಯಲ್ಲಿ ಅತ್ತೆಯೆಂದರೆ ಘಟವಾಣಿ ಹೆಣ್ಣು ಎಂದೇ ಅರ್ಥ. ಸೊಸೆಯನ್ನು ಇಂಚು ಇಂಚಾಗಿ ಶೋಷಿಸುವ ಈ ಪಾತ್ರಕ್ಕೆ ರೂಪುಗೊಂಡ ಅಭಿನಯ ಕ್ರಮ ದಶಕಗಳು ಕಳೆಯುತ್ತಾ ಹೋದರೂ ಬದಲಾಗದೆ ಹಾಗೇ ಉಳಿದುಕೊಂಡಿದೆ. ಆರಂಭದಲ್ಲಿ ನಾಟಕದ ಹಿನ್ನೆಲೆಯಿಂದ ಬಂದ ಈ ಪಾತ್ರ ೫೦-೬೦ರ ದಶಕದಲ್ಲಿ ತಮಿಳು ಚಿತ್ರರಂಗದ ಪ್ರಭಾವಕ್ಕೆ ಸಿಲುಕಿತು. ರಮಾದೇವಿ, ಎಂ.ಎನ್.ಲಕ್ಷ್ಮೀದೇವಿ, ಪಾಪಮ್ಮ ಅಂತಹವರು ಈ ಹಿನ್ನೆಲೆಯಲ್ಲಿ ತಮ್ಮದೇ ಶೈಲಿಯನ್ನು ಕೊಂಚ ವ್ಯತ್ಯಾಸಗಳೊಂದಿಗೆ ಅಳವಡಿಸಿಕೊಂಡಿದ್ದರು. ೮೦ರ ದಶಕದಲ್ಲಿ ಕಮಿನೀಧರನ್, ಸತ್ಯಭಾಮಾ, ಶಶಿಕಲಾ, ಉಮಾ ಶಿವಕುಮಾರ್ ಅಂಥವರು ಕೊಂಚ ಆಧುನೀಕರಿಸಿದ ಶೈಲಿಗೆ ಬಂದರು. ಇವತ್ತಿಗೂ ಅತ್ತೆ ಎಂದರೆ ಅಬ್ಬರದ ಹಾವಭಾವಗಳ ಪಾತ್ರ ಕಣ್ಮುಂದೆ ಬರುತ್ತದೆಯೇ ಹೊರತು, ಪಾತ್ರಧಾರಿಗಳಲ್ಲ. ಇದಕ್ಕೆ ಆ ಪಾತ್ರ ನಿರ್ವಹಿಸಿದವರು ತಮ್ಮ ಸ್ವಂತಿಕೆಯನ್ನು ಕೊಡದೆಹೋದದ್ದೇ ಕಾರಣ.

ಹೊಸಅಲೆ ಪ್ರತಿಮೆ ಅಭಿನಯ

ಅಭಿನಯಕಲೆ ಎಂಬ ಶಬ್ದದ ಜೊತೆಗೇ ಹುಟ್ಟಿಕೊಳ್ಳುವ ಪ್ರಶ್ನೆ ಚಿತ್ರರಂಗ ನಟರ ಮಾಧ್ಯಮವೇ ? ನಿರ್ದೇಶಕನ ಮಾಧ್ಯಮವೇ ? ಈ ಪ್ರಶ್ನೆ ಬಹಳ ಕಾಲದಿಂದ ನಮ್ಮಲ್ಲಿ ಕೇಳಿಬರುತ್ತಲೇ ಇದೆ. ಅಭಿನಯಕಲೆ ಕುರಿತ ಲೇಖನವನ್ನು ಈ ಚರ್ಚೆಯೊಂದಿಗೆ ಮುಕ್ತಾಯಗೊಳಿಸಬಹುದು. ಕನ್ನಡ ಚಿತ್ರರಂಗದ ಆರಂಭದಲ್ಲಿ ಈ ಪ್ರಶ್ನೆ ಗಂಭೀರವಾಗಿ ಕೇಳಿಬರಲಿಲ್ಲ. ಏಕೆಂದರೆ ಅಂದಿನ ಚಿತ್ರರಂಗದಲ್ಲಿ ಕಲಾವಿದರ ಅಭಿನಯವೇ ಮುಖ್ಯವಾದದ್ದು. ತಾಂತ್ರಿಕ ಬೆಳವಣಿಗೆ ಇಲ್ಲದ ಕಾಲದಲ್ಲಿ ಅಭಿನಯದ ಮೂಲಕವೇ ಕಥೆ ಸಂವಹನಗೊಳ್ಳಬೇಕಿತ್ತು. ಪುಟ್ಟಣ್ಣ ಕಣಗಾಲ್ ನಿರ್ದೇಶಕರಾದನಂತರ ಈ ಪ್ರಶ್ನೆ ಹೆಚ್ಚಾಗಿ ಕೇಳಿಬರಲು ಆರಂಭಿಸಿತು. ಪುಟ್ಟಣ್ಣ ತಮ್ಮ ಚಿತ್ರಕ್ಕೆ ಒಂದು ತಾತ್ವಿಕ ನೆಲೆಗಟ್ಟು ಹೊಂದಿರುತ್ತಿದ್ದರು. ಅವರ ಚಿತ್ರಗಳ ನಡುವೆ ಅಷ್ಟರ ಮಟ್ಟಿಗಿನ ಸಾತತ್ಯ ಇದ್ದೇ ಇತ್ತು. ಪುಟ್ಟಣ್ಣ ನಟರ ಅಭಿನಯಶೈಲಿಯನ್ನು ನಿಯಂತ್ರಿಸುತ್ತಿದ್ದರೇ ಎಂದು ಕೇಳಿದರೆ ಉತ್ತರಿಸುವುದು ಕಷ್ಟ. 'ಎಡಕಲ್ಲು ಗುಡ್ಡದ ಮೇಲೆ'ಯ ಜಯಂತಿ ತಮ್ಮ ಪ್ರತಿಭೆಯಿಂದ ಪುಟ್ಟಣ್ಣ ಆ ಪಾತ್ರವನ್ನು ಸಂಯೋಜಿಸಿದ ರೀತಿಯನ್ನೇ ಬದಲಾಯಿಸಿದ್ದನ್ನು ನೋಡುತ್ತೇವೆ. ಪುಟ್ಟಣ್ಣನವರ ಅತಿಭಾವುಕತೆಯ ಸ್ತ್ರೀಪಾತ್ರಗಳನ್ನು ಕಲ್ಪನಾ, ಆರತಿ, ಪದ್ಮಾವಾಸಂತಿ ಒಂದೇ ಮಾದರಿಯಲ್ಲಿ ನಿರ್ವಹಿಸಲಿಲ್ಲವೆಂಬುದನ್ನು ಗಮನಿಸಬೇಕು. ಜೊತೆಗೆ ಹೀಗೆ ಸಿದ್ಧಗೊಂಡ ಶೈಲಿ ತಮ್ಮ ಅಭಿವ್ಯಕ್ತಿ ಕ್ರಮಕ್ಕೆ ತೊಂದರೆಯಾಗಬಹುದು ಎಂಬುದನ್ನು ಗ್ರಹಿಸಿದಂತೆ ಪುಟ್ಟಣ್ಣ ತಮ್ಮ ಚಿತ್ರಗಳಲ್ಲಿ ಕಲಾವಿದರನ್ನು ಬದಲಾಯಿಸುತ್ತಲೇ ಬಂದರು. ಹೊಸ ಅಲೆ ಚಿತ್ರಗಳು ಬಂದಾಗ ಸಿನಿಮಾಕ್ಕೆ ಇರುವ ಹಲವು ಪರಿಕರಗಳಲ್ಲಿ ಅಭಿನಯ ಕೂಡ ಒಂದು ಎಂಬ ಚಿಂತನೆ ಬಂದಿತು. ಬೆಳಕು, ಕ್ಯಾಮರಾಕೋನ, ಸಂಕಲನ, ಸಂಗೀತದ ಬಳಕೆ ಇವೆಲ್ಲವೂ ಅಭಿವ್ಯಕ್ತಿಯ ಪರಿಕರಗಳಾದವು. ಎಲ್ಲಕ್ಕಿಂತ ಹೆಚ್ಚಾಗಿ ಹೊಸಅಲೆ ಚಿತ್ರಗಳು ಪ್ರತಿಮೆಗಳ ಮೂಲಕ ಮಾತನಾಡಲು ಆರಂಭಿಸಿದವು. ಅಭಿನಯ ಕೂಡ ಈ ಪ್ರತಿಮೆಯ ಭಾಗವಾಗಿತ್ತು. ಈ ಪ್ರತಿಮೆ ರೂಪಿಸಿಕೊಂಡ ಗತಿ ಮತ್ತು ಲಯ ಅಭಿನಯಶೈಲಿಯನ್ನು ನಿಯಂತ್ರಿಸುತ್ತಿತ್ತು. ಹೀಗೆಂದ ಮಾತ್ರಕ್ಕೆ ಇಂಥ ಚಿತ್ರಗಳಲ್ಲಿ ಅಭಿನಯಶೈಲಿಗೆ ಏನೂ ಅವಕಾಶವೇ ಇಲ್ಲವೇ? ಎಂಬ ಪ್ರಶ್ನೆ ಬರುತ್ತದೆ. ಅನಂತ್‌ನಾಗ್ ಚಿತ್ರಗಳಲ್ಲಿ ಅಭಿನಯಿಸಿದ ಕ್ರಮಕ್ಕೆ ಮತ್ತು ಬೇರೆ ನಟರು ಅಭಿನಯಿಸಿದ ಕ್ರಮಕ್ಕೆ ಇರುವ ವ್ಯತ್ಯಾಸ ಗಮನಿಸಿದರೆ ಈ ಪ್ರಶ್ನೆಗೆ ಉತ್ತರ ಸಿಕ್ಕುತ್ತದೆ. ಸೃಜನಶೀಲ ನಟ ಆ ಪಾತ್ರದ ಗತಿಸ್ಥಿತಿಯನ್ನು ನಿಖರವಾಗಿ ಗುರುತಿಸಿಕೊಂಡರೆ ಅದನ್ನು ಪರಿಣಾಮಕಾರಿಯಾಗಿಸಬಲ್ಲ ಮಾತ್ರವಲ್ಲ, ಅದನ್ನು ವಿಸ್ತರಿಸಲೂ ಬಲ್ಲ. ಇಂಥಲ್ಲಿ ಅಭಿನಯ ಒಂದು ಮಾದರಿಯ ಸಂವಾದ ಕೂಡ ಆಗಬಹುದು.

ಇಮೇಜ್ ಸೃಷ್ಟಿಯಾದನಂತರ ಚಿತ್ರರಂಗ ನಟನ ಮಾಧ್ಯಮ ಎಂಬ ಕಲ್ಪನೆ ಹುಟ್ಟಿಕೊಂಡಿದ್ದು ನಿಜ. ಆದರೆ ಅದು ಪೂರ್ಣಸತ್ಯವಲ್ಲ. ಏಕೆಂದರೆ ನಟರೇ ತಮ್ಮ ಇಮೇಜ್‌ಗೆ ಬಂದಿಯಾಗಿರುತ್ತಾರೆ. ಇಲ್ಲಿ ಅಭಿನಯ ಕ್ರಮ ಪ್ರೇಕ್ಷಕನ ಅಪೇಕ್ಷೆ ಮೇಲೆ ಜರುಗುತ್ತಿರುತ್ತದೆ. ಬೇಡಿಕೆ ಮತ್ತು ಪೂರೈಕೆ ತತ್ವವನ್ನು ಆಧರಿಸಿದ ಇಂಥ ಚಿತ್ರಗಳಲ್ಲಿ ಅಭಿನಯಕ್ಕೆ ಅವಕಾಶವಾದರೂ ಎಲ್ಲಿರುತ್ತದೆ ? ಹೀಗೆ ಚಿತ್ರರಂಗದಲ್ಲಿ ಅಭಿನಯಕಲೆ ಹಲವು ಅರ್ಥಗಳನ್ನು ಧ್ವನಿಸಬಲ್ಲ ಶಕ್ತಿ ಪಡೆದಿದೆ.

ಕನ್ನಡ ಜನಸಮೂಹ ಮೊದಲಿಂದ ಅಪೇಕ್ಷಿಸುತ್ತಿದ್ದ ಸಾಹಿತ್ಯ ಸಹಜ ಕಥನ ಕಲೆಯದು. ಹೀಗಾಗಿ ನಮ್ಮ ಅಭಿನಯಶೈಲಿಯಲ್ಲಿ ಸಹಜತೆ ಎದ್ದು ಕಾಣುತ್ತದೆ. ಈ ನಡುವೆ ಬೇರೆ ಭಾಷೆಯ ಪ್ರಭಾವದಿಂದಾಗಿ ತೂರಿಕೊಂಡ ಅಸಹಜತೆಯ ಅಲೆಯೂ ಇದೆ. ರೀಮೇಕ್ ಯುಗ ಬಂದಮೇಲೆ ಕನ್ನಡ ನಾಡು, ನುಡಿಗೆ ಸಂಬಂಧವೇ ಇಲ್ಲದ ಅಭಿನಯಶೈಲಿಯೂ ಬರುತ್ತಿದೆ. ಇದೇ ಹೊಸ ತಂತ್ರಜ್ಞಾನಕ್ಕೂ, ಕಥನ ಕಲೆಗೂ ಅನ್ವಯಿಸುತ್ತದೆ. ಇವನ್ನೆಲ್ಲ ಒಂದು ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ಇಟ್ಟು ನೋಡುವ ಮೂಲಕ ಹಲವು ಅರ್ಥಗಳನ್ನು ಪಡೆಯಬಹುದು.

ನೇಟಿವಿಟಿ ಮತ್ತು ಅಭಿನಯಶೈಲಿ

ನೇಟಿವಿಟಿ ಎಂದಕೂಡಲೆ ಕನ್ನಡದ ಮಟ್ಟಿಗೆ ಗುಡಿಸಲು, ಅವರೆಕಾಳು ಮುದ್ದೆ, ಅಪ್ಪಟ ಹಳ್ಳಿ ವೇಷಭೂಷಣ ನೆನಪಾಗುತ್ತದೆ. ಇದನ್ನೇ ಮಣ್ಣಿನಗುಣ ಎಂದು ನಂಬಿದ್ದೇವೆ ಕೂಡ. ಆದರೆ ಚಿಂತನೆ ಪ್ರತಿಪಾದಿಸುವ ಬಹಳ ಜನಕ್ಕೆ ಕೇವಲ ವಸ್ತ್ರವೈಖರಿ ನೇಟಿವಿಟಿ ನೀಡುವುದಿಲ್ಲ ಎಂಬ ಸೂಕ್ಷ್ಮ ಅರ್ಥವಾಗುವುದಿಲ್ಲ. ಇದಕ್ಕೆ ನೀಡಬಹುದಾದ ಉದಾಹರಣೆ 'ಕಾನೂರು ಹೆಗ್ಗಡಿತಿ'. ಇಲ್ಲಿ ಸುಬ್ಬಮ್ಮನ ಪಾತ್ರಧಾರಿ ತಾರಾ ಧರಿಸಿರುವ ಕಾಸ್ಟ್ಯೂಮ್ಸ್ ನಿಖರವಾಗಿಯೇ ಇದೆ. ಹಲವು ಸೂಕ್ಷ್ಮಗಳಿಗೆ ಒತ್ತು ನೀಡಲಾಗಿದೆ. ಹೀಗಿದ್ದೂ ಆ ಪಾತ್ರ ಜೀವಂತವಾಗಿ ಮೂಡಿಬರಲಿಲ್ಲ. ಇದಕ್ಕೆ ಕಾರಣ ಇಷ್ಟೆ, ತಾರಾ ೪೦ರ ದಶಕದ ಮಲೆನಾಡಿನ ಹೆಣ್ಣಿನ ದೈಹಿಕ ಅಭಿವ್ಯಕ್ತಿ ಬಳಸಲಿಲ್ಲ. ಮಲೆನಾಡಿನ ಹೆಣ್ಣುಮಕ್ಕಳು ಇವತ್ತಿಗೂ ತಮ್ಮ ದೃಷ್ಟಿಯನ್ನು ಎದುರಿಗಿದ್ದವನಿಗೆ ಸಂಧಿಸದ ಎಚ್ಚರಿಕೆ ಕಾಯ್ದುಕೊಳ್ಳುತ್ತಾರೆ. ಮನೆಯ ಮಹಡಿಯಲ್ಲಿ ನಿಂತು ಮಾತನಾಡುತ್ತಾರೆ. ಅದೆಲ್ಲಕ್ಕಿಂತ ಮುಖ್ಯವಾಗಿ ತೀರ್ಥಹಳ್ಳಿ ಸುತ್ತಮುತ್ತಲಿನ ಹೆಣ್ಣುಮಕ್ಕಳು ಮಾತನಾಡುವಾಗ ಒಂದು ವಿಶಿಷ್ಟ ಧ್ವನಿವೈವಿಧ್ಯ ಬಳಸುತ್ತಾರೆ. ಇವೆಲ್ಲ ಇಲ್ಲದೆ ಪಾತ್ರ ಜೀವಂತವಾಗಿ ಮೂಡಿ ಬರಲಿಲ್ಲ. ಅಷ್ಟೇಕೆ, ಗಿರೀಶ್ ಕಾರ್ನಾಡ್ ಕೂಡ ಅಭಿನಯದಲ್ಲಿ ಈ ಸೂಕ್ಷ್ಮವನ್ನು ಗುರುತಿಸಿಕೊಳ್ಳಲಿಲ್ಲ.

ಅಭಿನಯದಲ್ಲಿ ನೇಟಿವಿಟಿ ಎಂದರೆ ಇಂಥ ಅಂಶಗಳು. ಪ್ರತಿಪ್ರದೇಶವೂ ತನ್ನ ಜೀವನ ಕ್ರಮಕ್ಕನುಗುಣವಾದ ಸಮಾನ ಸಂಜ್ಞೆಗಳನ್ನು ರೂಪಿಸಿಕೊಂಡಿರುತ್ತದೆ. ಈ ಸಂಜ್ಞೆಗಳು ಆ ಜನರಿಗೆ ಬದುಕುವ ಕ್ರಮ ಕೂಡ ಹೌದು. ಸೈದ್ಧಾಂತಿಕವಾಗಿ ಕೂಡ ಅಭಿನಯ ಜೀವಂತವಾಗಿ ನಿಲ್ಲಬೇಕಾದರೆ ಈ ಸೂಕ್ಷ್ಮಗಳನ್ನು ಗುರುತಿಸಬೇಕು. ನಾವು ಪ್ರಾದೇಶಿಕ ವೈವಿಧ್ಯ ಎಂದಕೂಡಲೇ ಉತ್ತರ ಕರ್ನಾಟಕದ ಮಾದರಿ ಭಾಷೆಯನ್ನೋ ದಕ್ಷಿಣ ಕನ್ನಡದ ಭಾಷೆಯನ್ನೋ ಹಾಕಿ ಸುಮ್ಮನಾಗಿ ಬಿಡುತ್ತೇವೆ. ಎಷ್ಟೋಸಲ ಈ ವೈವಿಧ್ಯ ಕೂಡ ನಿಖರವಾಗಿ ರೂಪುಗೊಂಡಿರುವುದಿಲ್ಲ. ಇನ್ನು ಪಾತ್ರ ರೂಪುಗೊಳ್ಳುವ ಪ್ರದೇಶಕ್ಕೆ ತಕ್ಕ ಅಭಿನಯ ನಮ್ಮಲ್ಲಿ ರೂಪುಗೊಂಡಿರುವುದೇ ಅಪರೂಪ. ಇದಕ್ಕೆ ಕಾರಣಗಳು, ಮತ್ತು ವಸ್ತ್ರವಿನ್ಯಾಸ ಈ ಅಂಶಗಳ ಮೇಲೆ ಎಂಥ ಪ್ರಭಾವ ಬೀರಿದೆ ಎಂಬ ಅಂಶಗಳನ್ನು ಈ ಭಾಗದಲ್ಲಿ ಚರ್ಚಿಸೋಣ.

ಕನ್ನಡ ಚಲನಚಿತ್ರ ಆರಂಭವಾಗಿದ್ದ ಹಂತದಲ್ಲೇ ಅದಕ್ಕೆ ಪ್ರಭಾವ ಬೀರಿದ್ದ ಪಾರ್ಸಿ ರಂಗಭೂಮಿ ಒಂದು ಅಭಿನಯಕ್ರಮವನ್ನು ರೂಪಿಸಿತ್ತು. ಅದು ನೇಟಿವಿಟಿಯಿಂದ ತೀರ ದೂರವಾದ ನಾಟಕೀಯ ಶೈಲಿ. ಆರಂಭದಲ್ಲಿ ಪೌರಾಣಿಕ ಚಿತ್ರಗಳು ಹೆಚ್ಚಾಗಿದ್ದರಿಂದ ಈ ಪ್ರಶ್ನೆ ಗಂಭೀರವಾಗಿ ಕಾಡಲಿಲ್ಲ. ಅನಂತರ ಕನ್ನಡ ಚಿತ್ರರಂಗ ಮದರಾಸಿನಲ್ಲಿ ನೆಲೆ ನಿಂತಮೇಲೆ ಹರಿಬಾಬು ಅವರ ಮೇಕಪ್ಪನ್ನೇ ಅವಲಂಬಿಸಿದ ಸಂದರ್ಭದಲ್ಲಿ ಕಾಸ್ಟ್ಯೂಮ್ಸ್ ಕೂಡ ನೆಲದ್ದಾಗಿರಲಿಲ್ಲ. ಅವತ್ತಿನ ಪಾತ್ರಗಳೆಲ್ಲ ತಮಿಳು ಪಾತ್ರಗಳ ಹಾಗೆ ಕಾಣುತ್ತಿದ್ದವು. ಇನ್ನು ಡಬ್ಬಿಂಗ್ ಯುಗ ಆರಂಭವಾದ ಮೇಲಂತೂ ಭಾಷೆ ಹೊರತುಪಡಿಸಿದರೆ ಇಡೀ ಚಿತ್ರವೇ ಪರಭಾಷೆಯದು. ಇನ್ನು ನೇಟಿವಿಟಿ ಪ್ರಶ್ನೆಯಾದರೂ ಎಲ್ಲಿ ಬಂತು. ಹೀಗೆ ೬೦ರ ದಶಕಕ್ಕೆ ಬರುವವರೆಗೂ ನಮ್ಮದೇ ಆದ ಅಭಿನಯ ಕ್ರಮ, ಅದಕ್ಕೊಂದು ಮಣ್ಣಿನ ವಾಸನೆ ಎಂಬುದು ರೂಪುಗೊಳ್ಳಲೇ ಇಲ್ಲ. ಅಂದಿನ ನಿರ್ದೇಶಕರಿಗಾಗಲಿ, ಪಾತ್ರಧಾರಿಗಳಿಗಾಗಲಿ ಇಂಥದೊಂದು ಸಾಧ್ಯತೆ ಕಾಣಿಸಿದಂತಿಲ್ಲ.

೬೦ರ ದಶಕದ ಮುಖ್ಯ ಬದಲಾವಣೆ ಎಂದರೆ ವಸ್ತ್ರವೈಖರಿ ಮಟ್ಟಿಗಂತೂ ಕರ್ನಾಟಕದ ಪ್ರಾದೇಶಿಕ ಭಿನ್ನತೆ ಪಾತ್ರಗಳಲ್ಲಿ ಕಂಡುಬಂದಿತು. ರಾಜಕುಮಾರ್‌ರಂಥ ಕಲಾವಿದರು ಹಳ್ಳಿಯ ಪಾತ್ರಗಳಿಗೆ ಬಂದಾಗ ಈ ನೆಲದ ಮ್ಯಾನರಿಸಮನ್ನೂ ಕಂಡುಕೊಂಡರು. 'ಮಣ್ಣಿನ ಮಗ'ದಂಥ ಚಿತ್ರದಲ್ಲಿ ಈ ಅಂಶವನ್ನು ನಿಖರವಾಗಿ ಗುರುತಿಸಬಹುದು. ಹೀಗಿದ್ದೂ ರಾಜಕುಮಾರ್ ಹಳೇ ಮೈಸೂರು ಪ್ರದೇಶದ ಮ್ಯಾನರಿಸಂ ಕಂಡುಕೊಂಡಿದ್ದರು; ಉತ್ತರ ಕರ್ನಾಟಕದ್ದು ಅನ್ನಿಸಬಲ್ಲ ಪಾತ್ರವನ್ನು ನಿರ್ವಹಿಸಿದಾಗ ಯಾವ ಬದಲಾವಣೆಯನ್ನೂ ಮಾಡಿಕೊಳ್ಳಲಿಲ್ಲ. ಇದಕ್ಕೆ 'ಬಹದ್ದೂರ್ ಗಂಡು' ಚಿತ್ರವನ್ನು ಉದಾಹರಣೆಯಾಗಿ ನೀಡಬಹುದು. ಈ ಚಿತ್ರದ ಕಥೆ ಉತ್ತರ ಕರ್ನಾಟಕದ ಹಿನ್ನೆಲೆ ಹೊಂದಿದ್ದರೂ ಅಭಿನಯ ಕ್ರಮದಲ್ಲಿ ಇಂಥ ಅಂಶ ಕಾಣಿಸುವುದಿಲ್ಲ. ಇದೇ ಲೋಪವನ್ನೇ 'ಸಿಪಾಯಿ ರಾಮು' ಚಿತ್ರದಲ್ಲೂ ಕಾಣಬಹುದು. ಈ ಮಿತಿಗೆ ಹೊರತಾಗಿಯೂ ರಾಜಕುಮಾರ್ ಪ್ರಾದೇಶಿಕ ಹಿನ್ನೆಲೆಯ ಶೈಲಿ ಕಂಡುಕೊಂಡಿದ್ದರು. ಈ ಕಾರಣಕ್ಕೇ ಅವರನ್ನು ಜನಸಮುದಾಯ ದೊಡ್ಡಪ್ರಮಾಣದಲ್ಲಿ ಸ್ವೀಕರಿಸಿತು. ಈ ದಶಕದ ಚಿತ್ರಗಳ ಬಗ್ಗೆ ಮಾತನಾಡುವಾಗ ಕತ್ತಿವರಸೆಗೆ ಬಂದರೆ ಎಂಜಿಆರ್ ಶೈಲಿ ಎಲ್ಲಾ ಕಲಾವಿದರಲ್ಲಿಯೂ ಅಭಿವ್ಯಕ್ತವಾದದ್ದನ್ನು ನೋಡುತ್ತೇವೆ. ಭಾವತೀವ್ರತೆಯಲ್ಲಿ ಕೊಂಚಮಟ್ಟಿಗೆ ಶಿವಾಜಿ ಗಣೇಶನ್ ಶೈಲಿಯನ್ನು ಗುರುತಿಸಬಹುದು. ಅಬ್ಬರದಲ್ಲಿ ಎನ್‌ಟಿಆರ್ ಅವರನ್ನು ಗುರುತಿಸಬಹುದು. ಇದಕ್ಕೆ ಮುಖ್ಯ ಕಾರಣ ಎಂದರೆ ಎಲ್ಲಾ ಭಾಷೆಗಳ ಚಿತ್ರಗಳು ಒಂದೇ ಕಡೆ ನಿರ್ಮಾಣವಾಗುತ್ತಿದ್ದುದರಿಂದ ಒಬ್ಬರ ಪ್ರಭಾವ ಇನ್ನೊಬ್ಬರ ಮೇಲೆ ಸಹಜವಾಗಿ ಬೀಳುತ್ತಿತ್ತು.

ಅಭಿನೇತ್ರಿಯರಲ್ಲಿ ಲೀಲಾವತಿ ಗ್ಲಾಮರ್ ಅನ್ನು ಮೀರಿ ಮಣ್ಣಿನ ಗುಣದ ಅಭಿನಯ ಕ್ರಮವನ್ನು ಕಂಡುಕೊಂಡರು. 'ಮನಮೆಚ್ಚಿದ ಮಡದಿ', 'ಪ್ರೇಮಮಯಿ'ಯಂಥ ಚಿತ್ರಗಳಲ್ಲಿ ಈ ಅಂಶವನ್ನು ಗುರುತಿಸಬಹುದು. ಅನಂತರ ಈ ದಶಕದ ಬಹುತೇಕ ಕಲಾವಿದೆಯರು ಲೀಲಾವತಿಯನ್ನೇ ಅನುಕರಿಸಿದರು. ಇದೂ ಕೂಡ ಸೂಕ್ಷ್ಮಗಳಿದ್ದೂ ವೈವಿಧ್ಯವಿಲ್ಲದ ಅಭಿನಯಕ್ರಮ. ಆ ಕಾಲದ ವಸ್ತುಗಳಲ್ಲಿ ಕಲಿತ ಹೆಣ್ಣಾಗಿ ಜಯಂತಿ, ಭಾರತಿ, ಕಲ್ಪನಾ ಮುಂತಾದವರು ಸಹಜವಾಗಿ ಅಭಿನಯಿಸುತ್ತಿದ್ದರು. ಹಳ್ಳಿಹೆಣ್ಣಾಗಿ ಅಭಿನಯಿಸುವಾಗ ಅವರ ಶೈಲಿ ಕೃತಕವಾಗುತ್ತಿತ್ತು. ಬಹುತೇಕ ಕಲಾವಿದರಲ್ಲಿ ಕಾಸ್ಟ್ಯೂಮ್ಸ್‌ನಿಂದಲೇ ಅವರು ಹಳ್ಳಿಯವರು ಎಂದು ತಿಳಿಯಬೇಕಾದ ಪರಿಸ್ಥಿತಿಯಿತ್ತು. ಭಾಷೆಯಲ್ಲಿ 'ಐತೆ,' 'ವೈತೆ' ಎಂದು ರಾಗ ಎಳೆದುಬಿಟ್ಟರೆ ಅದು ಹಳ್ಳಿಗೆ ಹೊಂದಿಬಿಡುತ್ತದೆ ಎಂಬ ಕಲ್ಪನೆ ಕಾಣುತ್ತೇವೆ. 'ಬೋರೇಗೌಡ ಬೆಂಗಳೂರಿಗೆ ಬಂದ', 'ಮೇಯರ್ ಮುತ್ತಣ್ಣ' ಹೀಗೆ ನಗರ ಮತ್ತು ಹಳ್ಳಿಯ ಜೀವನದ ಎರಡರ ಚಿತ್ರಣವೂ ಇರುವ ಸಂದರ್ಭ ಬಂದಾಗ ಅಭಿನಯಶೈಲಿಯಲ್ಲಿ ಒರಟಾದ ಅಭಿನಯ ಹಳ್ಳಿ ಬದುಕಿಗೂ ನಾಜೂಕಾದ ಅಭಿನಯ ನಗರದ ಬದುಕಿಗೂ ರೂಪುಗೊಂಡಿದ್ದನ್ನು ಗಮನಿಸಬಹುದು. ಇದು ಸಿನಿಮಾಮಂದಿ ಗ್ರಹಿಸಿಕೊಂಡ ರೀತಿಯೇ ಹೊರತು ಸಹಜವಾದ ಅಂಶ ಅಲ್ಲ.

೭೦ರ ದಶಕಕ್ಕೆ ಕಾಲಿಟ್ಟಾಗ ಈ ಅಲ್ಪಸ್ವಲ್ಪ ವೈವಿಧ್ಯವೂ ಮಾಯವಾಗಿ ಸರಳೀಕರಣಕ್ಕೆ ಬಂದಿತು. ಇಷ್ಟು ಹೊತ್ತಿಗೆ ಕಾಸ್ಟ್ಯೂಮ್ಸ್‌ನಲ್ಲಿ, ತಂತ್ರಜ್ಞಾನದಲ್ಲಿ ಅಪಾರ ಬೆಳವಣಿಗೆ ಕಂಡುಬಂದಿದ್ದರಿಂದ, ದಶಕದ ಅಂತ್ಯದ ಹೊತ್ತಿಗೆ ಈ ಅಂಶಗಳೇ ಪ್ರಾಬಲ್ಯ ಸಾಧಿಸಿದವು. ಮಣ್ಣಿನ ಗುಣದಂಥ ಸೂಕ್ಷ್ಮ ವಿಷಯಗಳು ಗಣನೆಗೆ ಬರುತ್ತಿರಲಿಲ್ಲ. ಎಲ್ಲಾ ವೈವಿಧ್ಯಗಳೂ ಮಾಯವಾಗಿ ಸರಳೀಕೃತ ಅಭಿನಯಶೈಲಿ ಸರ್ವೇಸಾಮಾನ್ಯವಾಯಿತು. ಇದು ಮುಖ್ಯಪ್ರವಾಹದಲ್ಲಿ ಪ್ರಬಲವಾಗಿ ಕಂಡುಬಂದ ಅಂಶವಾದರೂ ಇದಕ್ಕೆ ಅಪವಾದಗಳನ್ನು ಗುರುತಿಸಬಹುದು. 'ಬಂಗಾರದ ಮನುಷ್ಯ' ಚಿತ್ರದ ಹಳ್ಳಿಯ ಬದುಕಿನ ದೃಶ್ಯಗಳಲ್ಲಿ ರಾಜಕುಮಾರ್, ಬಾಲಕೃಷ್ಣ ಮಣ್ಣಿನಗುಣಕ್ಕೆ ಹತ್ತಿರವಾಗುವ ಅಭಿನಯ ನೀಡಿದ್ದಾರೆ. 'ನಾಗರಹಾವು' ಚಿತ್ರೀಕರಣ ಸಂಪೂರ್ಣ ಚಿತ್ರದುರ್ಗದಲ್ಲಿ ನಡೆಯುವುದರ ಜೊತೆಗೇ ಆ ಪಾತ್ರಧಾರಿಗಳ ಮಾತಿನಲ್ಲಿ ಕೆಲಮಟ್ಟಿಗೆ ಮಣ್ಣಿನಗುಣ ಕಾಣುತ್ತದೆ. ಮುಖ್ಯವಾಗಿ ಅಶ್ವತ್ಥ್ ಕೆಲವು ಸನ್ನಿವೇಶದಲ್ಲಿ ಚಿತ್ರದುರ್ಗದ ಗುಣವನ್ನು ತೋರಿಸಿದ್ದಾರೆ. 'ಭೂತಯ್ಯನ ಮಗ ಅಯ್ಯು' ಚಿತ್ರದ ಕೆಲವು ದೃಶ್ಯಗಳಲ್ಲಿ ಈ ಅಂಶವನ್ನು ಗುರುತಿಸಬಹುದು. ಅದೇ 'ಬಂಗಾರದ ಪಂಜರ'ದಂಥ ಚಿತ್ರಕ್ಕೆ ಬರುವಾಗ ಈ ಅಂಶಗಳು ಮಾಯವಾಗುತ್ತ ಬಂದಿರುವುದನ್ನು ಗುರುತಿಸಬಹುದು.

ಹೊಸಅಲೆ ಚಿತ್ರಗಳು ನಮ್ಮಲ್ಲಿ ಕಾಲಿಟ್ಟಾಗ ಬಂದ ಹಲವು ಸೈದ್ಧಾಂತಿಕ ಅಂಶಗಳಲ್ಲಿ ಈ ಮಣ್ಣಿನಗುಣವನ್ನು ತರುವುದು ಕೂಡ ಒಂದು. ಈ ಚಿತ್ರಗಳು ಕಥೆಯ ಮಟ್ಟಿಗೆ ಈ ಅಂಶವನ್ನು ತಂದವು ಎಂಬುದು ನಿರ್ವಿವಾದವಾಗಿ ಒಪ್ಪಬಹುದಾದ ಅಂಶ. ಅಭಿವ್ಯಕ್ತಿಕ್ರಮದ ಮಟ್ಟಿಗೆ ಅವು ಪಾಶ್ಚಾತ್ಯ ಪ್ರಭಾವಕ್ಕೆ ಸಿಲುಕಿದವು ಎಂಬ ಮಾತಿದೆ. ಅದು ಕೆಲಮಟ್ಟಿಗೆ ನಿಜ. ಅಂದರೆ ಅಭಿನಯಕ್ರಮದ ಮಟ್ಟಿಗೆ ಈ ಮಣ್ಣಿನಗುಣಕ್ಕೆ ಈ ಚಿತ್ರಗಳಲ್ಲಿ ಒತ್ತು ಸಿಕ್ಕಲಿಲ್ಲ. ಈ ಚಿತ್ರಗಳಲ್ಲಿ ಅಭಿನಯವೇ ಒಂದು ಪರಿಕರವಾಗಿ ಬಳಕೆಯಾಗುವ ಕ್ರಮ ಬಂದಿದ್ದರಿಂದ ಸೂಕ್ಷ್ಮಗಳಿಗೆ ಮಹತ್ವ ಸಿಕ್ಕಲಿಲ್ಲ. ಆದರೂ 'ಋಷ್ಯಶೃಂಗ'ದಂಥ ಚಿತ್ರದಲ್ಲಿ ಕೆಲಮಟ್ಟಿಗೆ ಈ ಸೂಕ್ಷ್ಮಗಳು ಕೆಲಸ ಮಾಡಿದ್ದನ್ನು ನೋಡಬಹುದು. ಬಿಡಿಬಿಡಿಯಾಗಿ ಇಂಥ ಉದಾಹರಣೆ ಅಲ್ಲಿ-ಇಲ್ಲಿ ಹೆಕ್ಕಬಹುದಾದರೂ ಈ ಮಟ್ಟಿಗೆ ಒಂದು ಅಭಿವ್ಯಕ್ತಿಕ್ರಮ ಇದೆ ಎಂಬುದನ್ನು ಹೊಸಅಲೆ ಚಿತ್ರಗಳು ಯಾವ ಹಂತದಲ್ಲೂ ಒಪ್ಪಿಕೊಳ್ಳಲಿಲ್ಲ.

೮೦ರ ದಶಕದಿಂದೀಚೆಗೆ ಜಾಗತೀಕರಣದ ಹೊಡೆತಕ್ಕೆ ಸಿಕ್ಕಿ ಪ್ರಾದೇಶಿಕ ವೈವಿಧ್ಯಗಳೇ ನಾಶವಾಗುತ್ತಿವೆ. ಮೊದಲೇ ರೂಪುಗೊಳ್ಳದಿದ್ದ ಶೈಲಿ ಈಗ ನಿರ್ನಾಮವಾಗಿದೆ. ಅಭಿನಯದ ಯಾವ ಹಂತದಲ್ಲೂ ಈಗ ಮಣ್ಣಿನ ಗುಣ ಎಂದು ಹೇಳಬಹುದಾದ ಅಂಶಗಳನ್ನು ಗುರುತಿಸಲಾಗುವುದಿಲ್ಲ. ಗೆಶ್ಚರ್ಸ್‌ನಿಂದ ಹಿಡಿದು ಪ್ರತಿಚಲನೆಯಲ್ಲೂ ಹಿಂದಿ ಚಿತ್ರರಂಗದ ಪ್ರಭಾವವನ್ನು ನಟರು ರೂಪಿಸಿಕೊಂಡ ಭಿನ್ನಶೈಲಿಯೊಂದು ಹರಡಿಕೊಂಡಿದೆ. ದುರಂತವೆಂದರೆ ಇಂಥ ಅಂಶಗಳಿಗೆ ಒತ್ತುಕೊಡುತ್ತೇವೆ ಎಂದು ಹೇಳುವ ಚಿತ್ರಗಳೂ ಕೂಡ ಸಹಜವಾಗಿ ಕಾಣುವುದಿಲ್ಲ. ಡಾಕ್ಯುಮೆಂಟರಿ ತರಹ

ಕಾಣುತ್ತವೆ. ಇನ್ನು ರೀಮೇಕ್ ಹಾವಳಿಗೆ ಸಿಲುಕಿದ ಮೇಲಂತೂ ಮೂಲದ ಯಥಾವತ್ ಅನುಕರಣೆ ಕಾಣುತ್ತೇವೆ. ಪೇಟಾ ಕಟ್ಟುವುದು, ಮೀಸೆ ಬಿಡುವುದು, ಬೆಲ್ಟ್ ಕಟ್ಟುವುದು - ಇವುಗಳಲ್ಲಿ ನಮ್ಮದಲ್ಲದ ಕಾಸ್ಟ್ಯೂಮ್ಸ್ ಬಂದುಬಿಟ್ಟಿವೆ. ಕಥನ ನಮ್ಮದಲ್ಲವಾದರೂ ಅಭಿವ್ಯಕ್ತಿಯಲ್ಲಿ, ನಿರೂಪಣೆಯಲ್ಲಿ ನಮ್ಮದಾಗಿಸುವ ಪ್ರಾಥಮಿಕ ಪ್ರಯತ್ನ ಕೂಡ ನಡೆಯುತ್ತಿಲ್ಲವಾದ್ದರಿಂದ ಇಂದಿನ ನಟ-ನಟಿಯರ ಅಭಿನಯದಲ್ಲಿ ಇವತ್ತು ನೇಟಿವಿಟಿ ಅಥವಾ ದೇಸೀಯವಾದ್ದು ಇಲ್ಲ. ಇದು ಜಾಗತೀಕರಣದ ಪರಿಣಾಮವೋ, ಸೂಕ್ಷ್ಮಗಳನ್ನು ಚಿತ್ರರಂಗ ಅಲಕ್ಷಿಸಿದ ಪರಿಣಾಮವೋ ಅಥವಾ ಉದ್ಯಮವಾಗುವ ಧಾವಂತದಲ್ಲಿ ಮಾಧ್ಯಮದ ಲಕ್ಷಣ ಕಳೆದುಕೊಂಡ ಕಾರಣವೋ ? ಈ ವಿಷಯ ಕುರಿತ ವಿವರವಾದ ಚರ್ಚೆ ಅಗತ್ಯವಿದೆ.

ನಿರ್ದೇಶನ-ಅಭಿನಯಶೈಲಿ

ನಿರ್ದೇಶನ, ಅಭಿನಯ ಇವೆರಡಕ್ಕೂ ಮುಖ್ಯ ಸಂಬಂಧವಿದೆ. ಒಬ್ಬನೇ ಕಲಾವಿದ ಬೇರೆಬೇರೆ ನಿರ್ದೇಶಕರ ಚಿತ್ರಗಳಲ್ಲಿ ಬೇರೆಬೇರೆ ರೇಂಜ್‌ನಲ್ಲಿ ನಟಿಸಿರುವುದನ್ನು ನೋಡಬಹುದು. ಸಿನಿಮಾ ಅಂಗೀಕೃತ ಅರ್ಥದಲ್ಲಿ ನಿರ್ದೇಶಕನ ಮಾಧ್ಯಮ. ಪ್ರಭಾವಿ ನಿರ್ದೇಶಕ ಲಭ್ಯ ಪರಿಕರಗಳನ್ನೆಲ್ಲ ಮಾಧ್ಯಮದ ಸಾಧ್ಯತೆ ಹಿಗ್ಗಿಸಲು ಬಳಸಿಕೊಳ್ಳುತ್ತಾ ಹೋಗುತ್ತಾನೆ. ಅಭಿನಯ ಪ್ರಮುಖ ಪರಿಕರವಾಗಿದ್ದರಿಂದ ಅದನ್ನು ನಿರ್ದೇಶಕ ಹೇಗೆ ದುಡಿಸಿಕೊಳ್ಳುತ್ತಾನೆ ಎಂಬ ಅಂಶದ ಮೇಲೂ ಕಲಾವಿದರ ಸಾಮರ್ಥ್ಯ ನಿರ್ಧಾರವಾಗುತ್ತದೆ. ಪ್ರತಿಭಾವಂತ ನಿರ್ದೇಶಕನಿಗೆ ಖಚಿತವಾದ working philosophy ಇರುತ್ತದೆ. ಇದು ಅಭಿನಯದ ಸಾಧ್ಯತೆಗಳನ್ನು ನಿರ್ಧರಿಸುತ್ತದೆ. ಇಷ್ಟೆಲ್ಲ ಸೈದ್ಧಾಂತಿಕವಾಗಿ ಬರೆದ ಮೇಲೂ ಕನ್ನಡದಲ್ಲಿ ಇಂಥ ನಿರ್ದೇಶಕರ ಸಂಖ್ಯೆ ಕಡಿಮೆ ಎಂದು ವಿಷಾದದಿಂದಲೇ ಒಪ್ಪಿಕೊಳ್ಳಬೇಕು. ಎಲ್ಲೋ ಒಂದು ದೃಶ್ಯದಲ್ಲಿ ಪ್ರತಿಭೆ ಮಿಂಚಿದರೂ ಅದು ಯಾರ ಪರಿಶ್ರಮದಿಂದ ಎಂಬುದನ್ನು ಗುರುತಿಸುವುದೇ ಕಷ್ಟ. ಎಂಬತ್ತರ ದಶಕದಿಂದೀಚೆಗಂತೂ ಸಿನಿಮಾ ನಟರ ಮಾಧ್ಯಮವಾಗಿ ಬೆಳೆದು ನಿರ್ದೇಶಕನ ಪಾತ್ರ ಗೌಣವಾಗಿದೆ. ಇನ್ನು ರೀಮೇಕ್ ಯುಗದಲ್ಲಂತೂ ನಿರ್ದೇಶನ ಎಂಬ ಪ್ರತ್ಯೇಕ ವಿಭಾಗವೇ ತಾಂತ್ರಿಕ ಕಾರಣಗಳಿಗಾಗಿ ಎಷ್ಟೋ ಅಷ್ಟು ಗೌಣವಾಗಿದೆ. ಈ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಕೆಲವು ನಿರ್ದೇಶಕರು ಅಭಿನಯವನ್ನು ಬಳಸಿಕೊಂಡ ಕ್ರಮವನ್ನು ಇಲ್ಲಿ ಚರ್ಚಿಸಲಾಗಿದೆ. ಇದೊಂದು ಆನುಷಂಗಿಕ ಚರ್ಚೆಯಾದ್ದರಿಂದ ಕೆಲವರನ್ನು ಪ್ರಾತಿನಿಧಿಕವಾಗಿ ಆಯ್ದುಕೊಳ್ಳಲಾಗಿದೆ. ಅವರ ಕುರಿತು ನಡೆಸಿದ ಚರ್ಚೆಯೇ ಇನ್ನೂ ಹಲವರಿಗೆ ಅನ್ವಯಿಸುತ್ತದೆ.

ಕನ್ನಡದ ಜೊತೆಗೆ ಬೇರೆ ಭಾಷೆಗಳಲ್ಲಿ ಆರಂಭಿಕ ನಿರ್ದೇಶಕರಾಗಿ ತಮ್ಮ ಛಾಪು ಮೂಡಿಸಿದ ಬಿ.ಆರ್.ಪಂತುಲು ಚಿತ್ರಗಳಲ್ಲಿ ಎಲ್ಲಾ ಕಲಾವಿದರು ಒಂದೇ ಸ್ಥಾಯಿಯಲ್ಲಿ ಮಾತಾಡುವುದನ್ನು ಕಾಣುತ್ತೇವೆ. ಅಗತ್ಯಕ್ಕಿಂತ ಹೆಚ್ಚಿನ ಅಬ್ಬರ ಅವರ ಚಿತ್ರಗಳಲ್ಲಿತ್ತು. ಎರಡೂ ಭಾಷೆಗಳಲ್ಲಿ ತಯಾರಾದ ಚಿತ್ರಗಳಲ್ಲಿ ಅವರು ಬಳಸುವ ತಂತ್ರ (devise) ತಮಿಳಿಗೇ ಹೆಚ್ಚು ಹತ್ತಿರ. 'ರತ್ನಗಿರಿ ರಹಸ್ಯ', 'ಸ್ಕೂಲ್ ಮಾಸ್ಟರ್'ನಂಥ ಚಿತ್ರಗಳಲ್ಲಿ ಈ ಅಂಶ ಗುರುತಿಸಬಹುದು. ಶಾಟ್ ಡಿವಿಜನನ್ನು ಅಪಾರವಾಗಿ ನಂಬಿದಂತ ಕಾಣುವ ಅವರ ಚಿತ್ರಗಳಲ್ಲಿ ಕ್ಯಾಮರಾ ಒಂದು ಪರಿಪೂರ್ಣ ಪರಿಕರವಾಗಿ ಬಳಕೆಯಾಗುವುದಿಲ್ಲ. ಅಭಿನಯವೇ ಅಲ್ಲಿನ ಪ್ರಮುಖ ಪರಿಕರ. ಈ ಕಾರಣದಿಂದ ಉದ್ದುದ ಸಂಭಾಷಣೆಗಳನ್ನು, ವಾಚ್ಯ ಸನ್ನಿವೇಶಗಳನ್ನು ಕಾಣಬಹುದು. ಉದಾಹರಣೆಗೆ 'ಕಿತ್ತೂರು ಚೆನ್ನಮ್ಮ', 'ಬೀದಿ ಬಸವಣ್ಣ' ಇಂಥ ಚಿತ್ರಗಳನ್ನು ನೋಡಬಹುದು. ಅವರ ಚಿತ್ರದಲ್ಲಿ ಸೂಪರ್ ಮೆಲೋಡ್ರಾಮ ಸಾಮಾನ್ಯವಾಗಿ ಎದ್ದು ಕಾಣುವ ಶೈಲಿ. ತೀವ್ರವಾದ ಮೇಲು ಇಲ್ಲವೆ ತಳಸ್ಥಾಯಿಗಳಲ್ಲಿ ಮಾತಾಡುವ ಇವರ ಪಾತ್ರಗಳು ವಾಸ್ತವವಾದಿ ತತ್ತ್ವ (ರಿಯಲಿಸ್ಟಿಕ್ ಲಾಜಿಕ್)ದ ಮೇಲೆ ಕೆಲಸ ಮಾಡುತ್ತಿರಲಿಲ್ಲ. ತಮಿಳು ಚಿತ್ರಗಳಲ್ಲಿ ಆಗುವಂತೆ ಹಳ್ಳಿಯವನು ದಿಢೀರ್ ವಿದ್ಯಾವಂತನಾಗುವುದು, ಇಂಥ ಬೆಳವಣಿಗೆ ಇವರಲ್ಲಿ ಕಾಣುತ್ತೇವೆ. ಸೆಟ್ ನಿರ್ಮಾಣದಲ್ಲಿ ಕೂಡ ತಮಿಳಿನ ಛಾಯೆ ಅವರ ಚಿತ್ರಗಳಲ್ಲಿ ಕಾಣುತ್ತದೆ. ಕೆಲಮಟ್ಟಿಗೆ ಅವರ ಕೊನೆ ಘಟ್ಟದಲ್ಲಿ ಬಂದ 'ಗಂಡೊಂದು ಹೆಣ್ಣಾರು', 'ಶ್ರೀಕೃಷ್ಣದೇವರಾಯ' ಚಿತ್ರದಲ್ಲಿ ಕೊಂಚ ಬದಲಾವಣೆ ಕಂಡರು. ಲಾಂಗ್‌ಶಾಟ್‌ನಲ್ಲಿ ದೃಶ್ಯ ವೈಭವ ಹೇಳುವ ಚಪಲ ಹೆಚ್ಚಾಗಿ ಮೂಡಿ ಅವರ ತಾತ್ತ್ವಿಕತೆಯಲ್ಲಾದ ಬದಲಾವಣೆ ಅಭಿನಯ ಕ್ರಮದಲ್ಲಿ ಕಾಣುವುದಿಲ್ಲ. ಸ್ವತಃ ಕಲಾವಿದರಾದ ಪಂತುಲು ಪಾತ್ರ ನಿರ್ವಹಿಸುತ್ತಿದ್ದ ಕ್ರಮವನ್ನು ಅವರೂ ಉಳಿದ ಕಲಾವಿದರಲ್ಲೂ ಕಾಣಲು ಪ್ರಯತ್ನಿಸಿದ್ದನ್ನು ನಾವು ಗುರುತಿಸಬಹುದು.

ನಾಗೇಂದ್ರರಾವ್ ನಿರ್ದೇಶನದ ಚಿತ್ರಗಳು ಸಂಖ್ಯೆಯಲ್ಲಿ ಕಡಿಮೆಯಾದರೂ ಇಲ್ಲಿ ಪ್ರಯೋಗಶೀಲತೆಯನ್ನು ಗಮನಿಸಬಹುದು. ಅವರ ಚಿತ್ರಗಳಲ್ಲಿ ಅಭಿನಯ ಇತರರಂತೆ ಪ್ರಮುಖ ಪರಿಕರವಾದರೂ ಅಬ್ಬರರಾಹಿತ್ಯವನ್ನು, ಕೆಲಮಟ್ಟಿಗಿನ ಸಂಯಮವನ್ನು ಗಮನಿಸಬಹುದು. ಸಂಭಾಷಣೆಯಂತೆಯೇ ಹಿನ್ನೆಲೆ ಸಂಗೀತವನ್ನೂ ಅಭಿನಯವನ್ನೂ ಪ್ರಭಾವಿಯಾಗಿ ಬಳಸಿಕೊಂಡ ಅವರು 'ವಿಜಯನಗರದ ವೀರಪುತ್ರ'ದಂಥ ಚಿತ್ರಗಳಲ್ಲಿ ಸಂಯೋಜಿಸಿದ ಕ್ಲೋಸಪ್‌ಗಳು ಚಿತ್ರವನ್ನು ಬೇರೆ ಸ್ತರದಲ್ಲಿ ಗ್ರಹಿಸುವಂತೆ ಮಾಡಿತ್ತು.

ಕನ್ನಡದಲ್ಲಿ ಸ್ಪಷ್ಟವಾದ ಕಾರ್ಯಾನ್ವಯ ತತ್ತ್ವ (working philosophy) ಇಟ್ಟುಕೊಂಡು ಕೆಲಸ ಮಾಡಿದ ಮೊದಲ ನಿರ್ದೇಶಕ ಪುಟ್ಟಣ್ಣ ಕಣಗಾಲ್. ಚಿತ್ರರಂಗದ ಪ್ರತಿ ವಿಭಾಗವನ್ನು ಅವರು ತಮ್ಮ ತಾತ್ತ್ವಿಕತೆಗೆ (philosophy) ಅನುಗುಣವಾಗಿ ಒಗ್ಗಿಸಿಕೊಂಡರು. ಪುಟ್ಟಣ್ಣ ಅಭಿನಯದ ಕುರಿತು ಹೊಂದಿದ್ದ ನಿಲುವು, ಅದನ್ನು ಅವರು ನಿರ್ವಹಿಸಿದ ಕ್ರಮ ಇವುಗಳಿಂದ ಹೊರಬಂದ ಕಲಾವಿದರ ದೊಡ್ಡ ಪಡೆಯೇ ಕನ್ನಡದಲ್ಲಿದೆ. ಕನ್ನಡದಲ್ಲಿ ತಮ್ಮದೇ 'ಸ್ಕೂಲ್ ಆಫ್ ಆ್ಯಕ್ಟಿಂಗ್' ನಿರ್ಮಿಸಿದ ಕೀರ್ತಿ ಅವರದು. ಬಹುತೇಕ ಕಾದಂಬರಿ ಆಧರಿತ ಚಿತ್ರಗಳನ್ನು ನಿರ್ಮಿಸಿದ ಪುಟ್ಟಣ್ಣ ಪಾತ್ರಗಳ ಹಿನ್ನೆಲೆ (biography)ಯನ್ನು ವಿವರವಾಗಿ ಗುರುತಿಸಿಕೊಳ್ಳುತ್ತಿದ್ದರು. ಹೀಗಾಗಿ ಕಾಸ್ಟ್ಯೂಮ್ಸ್‌ನಿಂದ ಹಿಡಿದು ನಡಿಗೆಯ ಶೈಲಿಯವರೆಗೂ ಅವರು ಹತೋಟಿ ಇಟ್ಟುಕೊಂಡಿರುವುದನ್ನು ಗಮನಿಸಬಹುದು. ಅವರು ಹೀಗೆ ಗುರುತಿಸಿಕೊಳ್ಳುವ ಸಣ್ಣಪುಟ್ಟ ವಿವರಗಳಿಂದ ಪಾತ್ರಗಳು ಜೀವಂತವಾಗಿ ಮೂಡಿಬರುವುದನ್ನು ನೋಡಬಹುದಾಗಿದೆ.

ಪುಟ್ಟಣ್ಣನವರ ಚಿತ್ರಗಳ ಅಂತರಾಳದಲ್ಲಿ ಸಾಮಾನ್ಯವಾಗಿ ಕೆಲಸ ಮಾಡುವ ತಾತ್ತ್ವಿಕತೆ ಒಂದು ರೀತಿಯ ನಿಸಿಕತನದ್ದು. ಅತ್ಯಂತ ಜೀವಂತ ಪಾತ್ರಗಳನ್ನು ಕೆತ್ತಿ ಕೂಡ, ಅತಿಭಾವುಕತೆಯಿಂದ ತಾವೇ ಆ ಪಾತ್ರಗಳನ್ನು ಅರ್ಥ ಮಾಡಿಕೊಳ್ಳದೆ ಹೋಗುತ್ತಿದರು. ಮೇಲ್ನೋಟಕ್ಕೆ ಆಭಾಸ ಎಂದು ಕಾಣುವ ಈ ಹೇಳಿಕೆಯನ್ನು, ಅವರ ಚಿತ್ರಗಳನ್ನು ಹಿನ್ನೆಲೆಯಾಗಿಟ್ಟುಕೊಂಡು ಓದಿದರೆ ಅರ್ಥ ಸಿಕ್ಕಬಹುದು. ಪುಟ್ಟಣ್ಣನವರ ಅಭಿನಯಶೈಲಿಯನ್ನು ಸಾಮಾನ್ಯವಾಗಿ ಮೆಲೋಡ್ರಾಮ ಎಂದು ಕರೆಯುವ ರೂಢಿ ಇದೆ. ಆದರೆ ಅದು ಕೇವಲ ಮೆಲೋಡ್ರಾಮ ಅಲ್ಲ ರಿಯಲಿಸ್ಟಿಕ್ ಮೆಲೋಡ್ರಾಮ. ಸಾಮಾನ್ಯವಾಗಿ ಮೆಲೋಡ್ರಾಮ ಅಂದರ ಕಣ್ಣಲ್ಲಿ ನೀರು ಬರುತ್ತಲೇ ಅದರ ತೀವ್ರತೆ ಕೂಡ ಹೊರಟುಹೋಗಿಬಿಡುತ್ತದೆ. ಆದರೆ ಪುಟ್ಟಣ್ಣನವರ ಮೆಲೋಡ್ರಾಮ ಹಾಗಲ್ಲ, ಹಂತಹಂತವಾಗಿ ಪಾತ್ರಗಳನ್ನು ಭಾವುಕತೆಯ ಅಂಚಿಗೆ ಕೊಂಡೊಯ್ದು, ಅಲ್ಲಿಂದ ಹಿಂಜಲು ಆರಂಭಿಸುತ್ತಿದ. ಇದರಿಂದ ಪ್ರೇಕ್ಷಕ ಬಹಳ ತೀವ್ರವಾಗಿ ಕಲಕಿದಂತಾಗುತ್ತಿದ್ದ. ಇದನ್ನು ಅವರು ಸ್ತ್ರೀ ಮತ್ತು ಪುರುಷ ಪಾತ್ರಗಳಿಗೆ ಭಿನ್ನವಾಗುವಂತೆ ಬಳಸುತ್ತಿದರು. ಸಾಮಾನ್ಯವಾಗಿ ಪುಟ್ಟಣ್ಣನವರ ಚಿತ್ರಗಳಲ್ಲಿ ಪ್ರಬಲವಾಗಿರುವುದು ಸ್ತ್ರೀ ಪಾತ್ರಗಳ. ಅವರ ಸ್ತ್ರೀ ಪಾತ್ರಗಳು ಸಮಾಜದ ವಿರುದ್ಧ ಸೆಣಸುವ ಶೋಷಿತ ಅತೃಪ್ತ ಪಾತ್ರಗಳು. ಹೀಗಾಗಿ ಅವರಲ್ಲಿ ನಾಯಕಿ ಪಾತ್ರಕ್ಕೆ ಒತ್ತು ಬೀಳುತ್ತಿತ್ತು. ಪುಟ್ಟಣ್ಣ ಈ ಪಾತ್ರಗಳನ್ನು ನಿರ್ಮಿಸುವಾಗ ಒಂದು ನೆಲೆಯಲ್ಲಿ ಶಕ್ತಿ, ಇನ್ನೊಂದು ನೆಲೆಯಲ್ಲಿ ಕನಿಕರ ಪ್ರವೃತ್ತನಾಗುವ ಹಾಗೆ ನಿರ್ಮಿಸುತ್ತಿದರು. ಮತ್ತು ಒಟ್ಟಾಗಿ ಪಾರಂಪರಿಕ ನೆಲೆಯಲ್ಲಿ ಸಮ್ಮತವಾಗುವಂತೆ ಈ ಪಾತ್ರಗಳನ್ನು ಬಳಸುತ್ತಿದ್ದರು. ಇದು ಹೇಗ ಎಂಬ ಗಂಭೀರ ಚರ್ಚೆ ಪ್ರಸ್ತುತ ಲೇಖನದ ವ್ಯಾಪ್ತಿಗ ಹೊರತಾಗಿದ್ದರಿಂದ, ಇದು ಅಭಿನಯದ ಮೇಲೆ ಬೀರಿದ ಪರಿಣಾಮವನ್ನು ಮಾತ್ರ ಇಲ್ಲಿ ಚರ್ಚಿಸಲಾಗಿದೆ. ಧ್ವನಿ ತಗ್ಗಿಸಿ, ನಡುಗುವ ಸ್ವರದಲ್ಲಿ, ಸರಗು ಹೂದು ಮಾತನಾಡುವ ಪಾರಂಪರಿಕ ಅಭಿನಯದನ್ನು ಪುಟ್ಟಣ್ಣ ಬ್ರೇಕ್ ಮಾಡಿ ಸ್ವಂತಿಕೆ ಮೂಂಬಿದ ದಿಟ್ಟತನದ ಅಭಿನಯಕ್ರಮ ಬಳಸಿದರು. ಕಣ್ಣಂಚಲ್ಲಿ ನೀರು ಜಿನುಗುವ ಬದಲು ಅದು ದೀರ್ಘವಾದ ಒಂದು ಅನುಭವ ಆಗುವಂತೆ ವಿಸ್ತರಿಸಿದರು. ಹೀಗಾಗಿ ಅವರ ಸ್ತ್ರೀಪಾತ್ರಗಳ ಅಭಿನಯಕ್ಕೆ ದಿಟ್ಟತನವಿದೆ. ಕನಿಕರಕ್ಕೆ ಪಾತ್ರವಾಗುವ ಹೊತ್ತಿನಲ್ಲಿ ಈ ಪಾತ್ರಗಳು ಕಂಗೆಡುವುದಿಲ್ಲ. ತಮ್ಮ ಚಿತ್ರದಲ್ಲಿ ನಟಿಸಿದ ಎಲ್ಲ ಕಲಾವಿದರಲ್ಲೂ ಇಂಥದೇ ಅಭಿನಯವನ್ನು ಪುಟ್ಟಣ್ಣ ಪಡೆದರು. ಜಯಂತಿಯಂಥವರು 'ಎಡಕಲ್ಲು ಗುಡ್ಡದ ಮೇಲೆ', 'ಮಸಣದ ಹೂವು' ಚಿತ್ರಗಳಲ್ಲಿ ಕೆಲಮಟ್ಟಿಗೆ ಈ ಚೌಕಟ್ಟನ್ನು ಬ್ರೇಕ್ ಮಾಡಿದರೆ, ಕಲ್ಪನಾ ಈ ಮಾದರಿಯಲ್ಲಿ ತಾವೇ ಸಂಪೂರ್ಣ ಕರಗಿಹೋದರು. ಆರತಿ ನಾಯಕಿಯಾಗುಳ್ಳ ಚಿತ್ರಗಳಲ್ಲಿ ಪುಟ್ಟಣ್ಣ ಕೊಂಚ ಗುಣಾತ್ಮಕ ಹೊಳಹು ಕೊಟ್ಟರು. ಕೆಲವು ಸಲ ಪುಟ್ಟಣ್ಣ ನಿರ್ಮಿಸಿದ ರೇಂಜ್‌ಗೆ ಆರತಿ ಅಭಿನಯ ಹಿಗ್ಗದಿದ್ದಾಗ ಪಾತ್ರದ ಮೇರೆ ಇಳಿದದ್ದೂ ಇದೆ. 'ಶುಭಮಂಗಳ' ಇದಕ್ಕೆ ಉದಾಹರಣೆ. 'ರಂಗನಾಯಕಿ' ಮಟ್ಟಿಗೆ ಪುಟ್ಟಣ್ಣ ಆರತಿಯವರ ಅಭಿನಯದ ಇತಿ-ಮಿತಿಯನ್ನು ಅರಿತು ಪಾತ್ರದ ಆಳ-ಹರವು ನಿರ್ಧರಿಸಿದ್ದರು. ಮುಖ್ಯವಾದ ಅಂಶವೆಂದರೆ ಪುಟ್ಟಣ್ಣನವರ ಯಾವ ಚಿತ್ರದಲ್ಲೂ ಹೆಣ್ಣನ್ನು ಒಂದು ಪದಾರ್ಥವಾಗಿ ಚಿತ್ರಿಸಲಿಲ್ಲ, ಎಕ್ಸ್‌ಪೋಸ್ ಮಾಡಲಿಲ್ಲ. ಅವರ ಯಾವ ಚಿತ್ರದ ನಾಯಕಿಯರೂ

sexual appeal ಕೂಡುವುದಿಲ್ಲ. ಕೊಂಚ ಅತಿ ಅನ್ನಿಸುವಷ್ಟು ಭಾವತುಂಬಿದ ಜೀವಂತ ಪಾತ್ರಗಳಾಗಿ ನಿಲ್ಲುತ್ತಾರೆ. ಹೀಗಾಗಿ ಮಾಮೂಲಿ ಚಿತ್ರದ ಜಾಡಿಂದ ಬಂದವರಿಗೆ ಅವರ ಚಿತ್ರದಲ್ಲಿ ಅಭಿನಯಿಸುವುದೇ ಒಂದು ಸವಾಲು. ಈ ಸವಾಲನ್ನು ಕೆಲವರು ಮಾತ್ರ ನಿರ್ವಹಿಸಿದರು ಎಂಬುದು ವಿಷಾದಕರ. ಸ್ತ್ರೀಪಾತ್ರಗಳಿಗೆ ಪ್ರಾಧಾನ್ಯ ಸಿಕ್ಕಿದ್ದರಿಂದ ಅವರ ಚಿತ್ರಗಳಲ್ಲಿ ಪುರುಷ ಪಾತ್ರಗಳು ಸಹಕಾರಿ ನೆಲೆಯಲ್ಲಿ ಕೆಲಸ ಮಾಡುತ್ತವೆ. ಹೆಚ್ಚಿನ ಪುರುಷ ಪಾತ್ರಗಳ ಮೇಲೆ ಒಂದಲ್ಲ ಒಂದು ಕಡೆ ನೇತ್ಯಾತ್ಮಕ ಗೆರೆ ಬಿದ್ದಿರುತ್ತದೆ. ಹೀಗಾಗಿ ಜನಪ್ರಿಯತೆಯ ಚೌಕಟ್ಟಿಗೆ ಸಿಕ್ಕಿಬಿದ್ದ ನಟರಿಂದಲೂ ಭಿನ್ನ ಮಾದರಿ ಅಭಿನಯ ಬರುವುದು ಸಾಧ್ಯವಾಯಿತು. ಸ್ಟಾರ್‌ಗಳಾದವರು ಅವರ ಚಿತ್ರಗಳಲ್ಲಿ ಹಿಂಜರಿದಿದ್ದು ಈ ಕಾರಣದಿಂದಲೆ. ರಾಜಕುಮಾರ್ ಅವರಂಥ ವಿಸ್ತೃತ ವ್ಯಾಪ್ತಿಯ ಕಲಾವಿದ ಕೂಡ ಪುಟ್ಟಣ್ಣನವರ ಚಿತ್ರಗಳಲ್ಲಿ ನಿರ್ದೇಶಕನ ಶೈಲಿಗನುಸಾರವಾದ ಅಭಿನಯ ನೀಡಿದನ್ನು ನಾವು ಗುರುತಿಸಬಹುದು. ಈ ಅಂಶವೇ ಪುಟ್ಟಣ್ಣ ಅಭಿನಯದ ಮೇಲೆ ಎಂಥ ನಿಯಂತ್ರಣ ಹೊಂದಿದ್ದರು ಎಂಬುದನ್ನು ತೋರಿಸುತ್ತದೆ. ಇದರ ಪರಿಣಾಮವೆಂದರೆ ಪುಟ್ಟಣ್ಣನವರ ಚಿತ್ರದಲ್ಲಿ ನಟಿಸಿದ ಬಹುತೇಕ ಕಲಾವಿದರು ಅದೇ ಚೌಕಟ್ಟನ್ನು ಬೇರೆ ಚಿತ್ರಗಳಲ್ಲಿ ಅಭಿನಯಿಸುವಾಗಲೂ ಮುಂದುವರಿಸಿದರು. ಶ್ರೀನಾಥ್, ರಾಮಕೃಷ್ಣ, ಜೈಜಗದೀಶ್, ಶ್ರೀಧರ್ ಮುಂತಾದ ಕಲಾವಿದರಲ್ಲಿ ಇಂದಿಗೂ ಈ ಮಾದರಿ ಮುಂದುವರೆದಿರುವುದನ್ನು ಗಮನಿಸಬಹುದು.

ಪುಟ್ಟಣ್ಣ ಚಿತ್ರವನ್ನು ದೃಶ್ಯಾತ್ಮಕ ಪ್ರತಿಮೆಗಳನ್ನಾಗಿ ವಿಂಗಡಿಸುತ್ತಿದ್ದರು. ಈ ಒಟ್ಟು ಪ್ರತಿಮೆಯಲ್ಲಿ ಅಭಿನಯ ಕೂಡ ಒಂದು ಪರಿಕರ. ಇವೆಲ್ಲ ಸೇರಿ ತಮಗೆ ಬೇಕಾದ ಅರ್ಥ ಹೊರಡಿಸುವ ಪ್ರಯತ್ನ ಅವರಲ್ಲಿ ಕಾಣಬಹುದು. ಅವರ ಚಿತ್ರಗಳಲ್ಲಿ ಬರುವ ಪ್ರತಿಮೆಗಳೆಲ್ಲ ದೃಶ್ಯದ ಆಂತರಿಕ ಭಾಗವಾಗಿ ಮೂಡುವುದನ್ನ ಗಮನಿಸಬಹುದು. 'ಬೆಳ್ಳಿಮೋಡ'ದಲ್ಲಿ 'ಬೆಳ್ಳಿ ಸರಿಯಿತು ಮೋಡ ಉಳಿಯಿತು' ಎಂಬ ದೃಶ್ಯ ಕಟ್ಟಿಕೊಡುವ ಪ್ರತಿಮೆಯಲ್ಲಿ ಅಭಿನಯ ಒಂದು ಪೂರಕ ಸಂಗತಿಯಾಗಿ ಬಂದಿದೆ. 'ನಾಗರಹಾವು' ಚಿತ್ರದಲ್ಲಿ 'ಹಾವಿನ ದ್ವೇಷ...' ಹಾಡಿನ ಉದ್ದಕ್ಕೂ ದೃಶ್ಯದ ಅಂಚಿನಲ್ಲಿ ನಾಗರಹಾವು ಚಲಿಸುವ ತಂತ್ರ ಇದೆ. ಇದರಿಂದ ಅಭಿನಯ ಹೊರಡಿಸದೆ ಉಳಿದ ಧ್ವನಿಗಳು ಬಿಂಬಿತವಾಗುತ್ತವೆ. ಹಾಗೆಯೇ 'ಕರ್ಪೂರದ ಗೊಂಬೆ ನಾನು...' ಹಾಡಿನ ಕೊನೆಯಲ್ಲಿ ತಟ್ಟೆಯಲ್ಲಿ ಕರ್ಪೂರ ಕರಗುತ್ತಿರುವ ದೃಶ್ಯಕ್ಕೆ ಆರತಿ ಉನ್ಮಾದ ಪ್ರಕಟಿಸುವ ಅಭಿನಯವನ್ನು ಜಕ್ಸ್ಟಪೋಸ್ ಮಾಡಿದ್ದಾರೆ. ಹಾಗೆಯೇ ಈ ಚಿತ್ರದಲ್ಲಿ ಬಳಕೆಯಾದ ನಿಧಾನಗತಿ ಛಾಯಾಗ್ರಹಣ (slow motion) ರಾಮಾಚಾರಿ ಮನಸ್ಸಿನಲ್ಲಿ ಅಲಮೇಲು ಚಿತ್ರ ಕರಗುತ್ತ ಹೋಗುವುದನ್ನು ಸಂಕೇತಿಸಿತ್ತು. 'ಶರಪಂಜರ' ಚಿತ್ರದಲ್ಲಿ 'ಹದಿನಾಲ್ಕು ವರ್ಷ ವನವಾಸದಿಂದ...' ಗೀತೆಯಲ್ಲಿ ನವರಾತ್ರಿ ಗೊಂಬೆಗಳು ಕಿಟಕಿ ಹೊರಗೆ ಉರಿಯುತ್ತಿರುವ ಬೆಂಕಿ ಇವುಗಳನ್ನು ಕ್ಲೋಸಪ್‌ನಲ್ಲಿ ತೋರಿಸುವ ಮೂಲಕ ಅವರು ಅರ್ಥ ಹೊರಡಿಸಿದ ಕ್ರಮ ಅಭಿನಯವನ್ನು ಮೀರಿ ದೃಶ್ಯ ಬೆಳೆಯುವಂತೆ ಮಾಡಿದೆ. 'ಮಾನಸ ಸರೋವರ'ದಲ್ಲಿ 'ನೀನೇ ಸಾಕಿದಾ ಗಿಣಿ...' ಹಾಡಿಗೆ ಎರಡು ಸ್ಥಾಯಿ ಅಭಿನಯದ ದೃಶ್ಯಗಳನ್ನು ಒಟ್ಟಾಗಿಸಿ ಪ್ರತಿಮೆ ನಿರ್ಮಿಸಿದ್ದಾರೆ. 'ಅಮೃತ ಘಳಿಗೆ' ಚಿತ್ರದಲ್ಲಿ ನಾಯಕನ ಸಂಯಮವನ್ನು ಕೆಣಕುವ ಭಾವತೀವ್ರತೆಯ ದೃಶ್ಯವನ್ನು ಲೈಟಿಂಗ್ ಮತ್ತು ಕ್ಯಾಮರಾಕೋನಗಳಲ್ಲಿ ಪರಿಣಾಮಕಾರಿಯಾಗಿಸಿದ್ದಾರೆ. ಹೀಗೆ ಪುಟ್ಟಣ್ಣನವರ ಚಿತ್ರದಲ್ಲಿ ಉಳಿದ ಪರಿಕರಗಳು ಅಭಿನಯವನ್ನು ಓವರ್‌ಟೇಕ್ ಮಾಡುವ ಸಂದರ್ಭಗಳು ಸಾಕಷ್ಟಿವೆ. ಕಲಾವಿದರ ಅಭಿನಯ ನಿರೀಕ್ಷಿತ ಮಟ್ಟದಲ್ಲಿ ಇಲ್ಲದಿದ್ದಾಗಲೂ ದೃಶ್ಯದ ತೀವ್ರತೆ ಕಡಿಮೆಯಾಗದಂತೆ ನಿರ್ವಹಿಸುವ ಚಾಕಚಕ್ಯತೆ ಅವರಲ್ಲಿ ಕಾಣುವುದು. ಹೀಗೆ ಪುಟ್ಟಣ್ಣನವರು ಅಭಿನಯವನ್ನು ತಮ್ಮ ಚಿತ್ರಗಳಲ್ಲಿ ಬಳಸಿಕೊಂಡ ಕ್ರಮ ಸಾಕಷ್ಟು ಕುತೂಹಲಕರ ಚರ್ಚೆಗೆ ದಾರಿಯಾಗಬಹುದು.

ನೇರಕಥಾನಕಗಳ ಮೂಲಕ ಅಭಿವ್ಯಕ್ತಿಸುವ ತಂತ್ರವನ್ನು ಬಳಸಿದವರು ಸಿದ್ದಲಿಂಗಯ್ಯ. ಎಲ್ಲವನ್ನು ಅವರ ವಾಚ್ಯಶೈಲಿಯಲ್ಲಿ ಅಭಿನಯಕ್ಕೆ ಅವಕಾಶ ಹೆಚ್ಚು ಅಥವಾ ಅಭಿನಯವೇ ಅವರ ಚಿತ್ರಗಳ ಜೀವಾಳ. ೭೦-೮೦ರ ದಶಕದ ಹೆಚ್ಚಿನ ವ್ಯಾಪಾರಿ ಚಿತ್ರಗಳ ನಿರ್ದೇಶಕರು ಅಳವಡಿಸಿಕೊಂಡ ಈ ಶೈಲಿಯಲ್ಲಿ ಕ್ಯಾಮರಾಕ್ಕೆ ಹೆಚ್ಚೇನೂ ಕೆಲಸವಿಲ್ಲ. ತೀರಾ ಭಾವಪೂರ್ಣವಾಗಿದ್ದರೆ ಕ್ಲೋಸಪ್, ಇಲ್ಲದಿದ್ದರೆ ಲಾಂಗ್‌ಶಾಟ್‌ನಲ್ಲೇ ಎಲ್ಲವೂ ಇತ್ಯರ್ಥ. ಸಿದ್ದಲಿಂಗಯ್ಯನವರ ಚಿತ್ರದಲ್ಲಿ ಮುಖ್ಯವಾಗಿ ಗುರುತಿಸಬಹುದಾದ ಅಂಶವೆಂದರೆ ಒಬ್ಬನು ಇದ್ದಕ್ಕಿದ್ದಂತೆ ಒಳ್ಳೆಯವನಾಗುವುದು, ಇಲ್ಲವೆ ಕೆಟ್ಟವನಾಗುವುದು. 'ನ್ಯಾಯವೇ ದೇವರು'ನಲ್ಲಿ ಆಕಸ್ಮಿಕ ಕೊಲೆ ಒಪ್ಪಿಕೊಳ್ಳುವ ರೀತಿ, 'ಬೂತಯ್ಯನ ಮಗ ಅಯ್ಯು'ನಲ್ಲಿ ಅಯ್ಯು ಬದಲಾಗುವ ರೀತಿ, 'ಪ್ರೇಮಪರ್ವ'ದಲ್ಲಿ ಕೊನೆಯುವರೆಗೂ ಹಠ ಸಾಧಿಸಿದ ವಿಲನ್ ಕೊನೆಯ ದೃಶ್ಯದಲ್ಲಿ ನಾಯಕನನ್ನು ಅಪ್ಪಿಕೊಳ್ಳುವುದು ಹೀಗೆ ಉದಾಹರಣೆ ನೀಡಬಹುದು. ಇಂಥ ಪರ್ಯವಸಾನಗಳಲ್ಲಿ ಅಭಿನಯ ಎಷ್ಟೇ ಉತ್ತಮವಾಗಿದ್ದರೂ ಜೀವಂತವಾಗದೆ ಉಳಿಯುವ ಅಪಾಯವಿದೆ. ಏಕೆಂದರೆ ಅಲ್ಲಿಯವರೆಗೆ ರೂಢಿಸಿದ್ದ ಕಲ್ಪನೆಗಳು ಅಭಿನಯದಿಂದಲೇ ಬದಲಾಗುವುದು ಕಷ್ಟ. ಅಲ್ಲೆಲ್ಲ ಬೇರೆ ಸಿನಿಮಾತ್ಮಕ ಅಂಶಗಳು ಕೆಲಸ ಮಾಡಬೇಕಿತ್ತು. ಇದು ಸಾಧ್ಯವಾಗದೆ ಹೋಗಿದ್ದರಿಂದ ಅಭಿನಯ ತನ್ನ ಎತ್ತರವನ್ನು ಕಾಯ್ದುಕೊಳ್ಳದೆ ಹೋಗುತ್ತದೆ. ರಾಜಕುಮಾರ್ ಅವರಂಥ ಕಲಾವಿದರು ಮಾತ್ರ 'ಮೇಯರ್ ಮುತ್ತಣ್ಣ', 'ಬಾಳು ಬೆಳಗಿತು' ಚಿತ್ರಗಳಲ್ಲಿ ಎರಡು ವ್ಯಾಪ್ತಿಯ ಅಭಿನಯ ನೀಡಿ ವಾಸ್ತವತೆಯ ಸ್ಪರ್ಶ ನೀಡಿದರು. 'ಬೂತಯ್ಯನ ಮಗ ಅಯ್ಯು' ಚಿತ್ರದಲ್ಲಿ ಅಯ್ಯುವಿನ ಹೆಂಡತಿ ಬೂತಯ್ಯ ಸತ್ತಾಗ ಗಾಡಿಯಲ್ಲಿ ಹೆಣ ಒಯ್ಯಬೇಕಾಯಿತು ಎಂದು ನೆನಪಿಸಿಕೊಳ್ಳುವ ಸಂಭಾಷಣೆಯ ಜೊತೆಗೆ ದೃಶ್ಯಾತ್ಮಕ ಫ್ಲಾಶ್‌ಬ್ಯಾಕ್ ಬರುತ್ತದೆ. 'ಹೇಮಾವತಿ' ಚಿತ್ರದಲ್ಲಿ ಈ ತಂತ್ರ ಸಾಕಷ್ಟು ಪುನರಾವರ್ತನೆಯಾಗಿದೆ. ಇದು ನಿರ್ದೇಶಕನಿಗೆ ಅಭಿನಯದ ಬಗ್ಗೆ ಪೂರ್ಣ ನಂಬಿಕೆ ಇಲ್ಲದಿರುವುದಕ್ಕೆ ಸಾಕ್ಷಿ. ಅಭಿನಯವನ್ನೇ ಆಧರಿಸಿದ ತಂತ್ರ ಬಳಸಿ, ಅಭಿನಯವನ್ನು ಪೂರ್ಣವಾಗಿ ನಂಬದೇ ಹೋದರೆ ಇಂಥ ಗೊಂದಲ ಸೃಷ್ಟಿಯಾಗುತ್ತದೆ. ಸಿದ್ದಲಿಂಗಯ್ಯ ಕಥಾತ್ಮಕ ವಿವರಗಳಿಗೆ ಹೆಚ್ಚು ಗಮನ ನೀಡುತ್ತಾರೆ. ಅದು ಅಭಿನಯದಲ್ಲಿ ಮೂರ್ತಗೊಳ್ಳುವಾಗಲೂ ಸಾಕಷ್ಟು ವಾಚ್ಯವಾಗುವಂತೆ ಮಾಡುತ್ತಾರೆ. ಇದರಿಂದ ಕಥೆ ಗಟ್ಟಿಯಾದ ಕಡೆ ಅವರು ಗಮನಾರ್ಹ ಚಿತ್ರಗಳನ್ನು ನೀಡುವುದು ಸಾಧ್ಯವಾಯಿತು.

ಹೊಸ ಅಲೆ ಚಿತ್ರಗಳು ಬಂದ ಮೇಲೆ ಈ ಚಳವಳಿಯಲ್ಲಿ ಅಗ್ರಗಣ್ಯ ನಿರ್ದೇಶಕ ಗಿರೀಶ್ ಕಾಸರವಳ್ಳಿ. ಈ ಚಳವಳಿ ಕ್ಷೀಣಿಸಿದ ಮೇಲೂ ಚಿತ್ರ ನಿರ್ಮಾಣದಲ್ಲಿ ರಾಜಿ ಮಾಡಿಕೊಳ್ಳದ ಅವರಲ್ಲಿ ಅಭಿನಯ ಬಳಕೆಯಾಗುವ ಕ್ರಮವನ್ನು ಗಮನಿಸಬಹುದು. ಕಾಸರವಳ್ಳಿ ಪ್ರತಿಮೆಗಳ ಮೂಲಕ ಮಾತನಾಡುತ್ತಾರೆ. ಈ ಪ್ರತಿಮೆಗಳು 'ಬಣ್ಣದ ವೇಷ'ದ ಬಟ್ಟೆ, 'ಮನೆ' ಚಿತ್ರದ ಬಣ್ಣದ ಬಳಕೆ, 'ಕ್ರೌರ್ಯ'ದಲ್ಲಿನ ನಾಯಿ, ಇಲ್ಲವೆ 'ತಾಯಿಸಾಹೇಬ'ದ ಅತ್ತರು ಹೀಗೆ ಯಾವುದೇ ಆಗಿರಬಹುದು, ಅದನ್ನು ಅವರು ಸಿನಿಮಾತ್ಮಕ ನುಡಿಗಟ್ಟಾಗಿಯೇ ಬಳಸುತ್ತಾರೆ. ಆದರೆ ಇವೆಲ್ಲವೂ ನಿರ್ಜೀವ ಪ್ರತಿಮೆಗಳು (non living objects) ಅನ್ನೋದನ್ನ ಎಚ್ಚರಿಕೆಯಿಂದ ಗಮನಿಸಬೇಕು. ಕಾಸರವಳ್ಳಿ ಚಿತ್ರಗಳಲ್ಲಿ ಎಲ್ಲೂ ಅಭಿನಯ ಒಂದು ಪ್ರತಿಮೆಯ ಭಾಗವಾಗುವುದಿಲ್ಲ. ಬದಲಾಗಿ ಪೂರಕ ಅಂಶವಾಗುತ್ತದೆ ಅಷ್ಟೆ. ಪರೋಕ್ಷ ನಿರೂಪಣಾ ವಿಧಾನ (non narrative devices) ಮುಖ್ಯವಾಗಿರುವ ಕಡೆ ಅಭಿನಯ ಮಬ್ಬಾಗುವುದು ಸಹಜ. ಆದರೆ ಕಾಸರವಳ್ಳಿ ಪಾತ್ರಗಳ ಹಿನ್ನೆಲೆಗೆ (biography) ಸಂಪೂರ್ಣ ಮಹತ್ವ ಕೊಡುತ್ತಾರೆ. ಸಣ್ಣಪುಟ್ಟ ವಿವರಗಳನ್ನು ದಾಖಲಿಸುವಾಗಲೂ ಎಚ್ಚರಿಕೆ ವಹಿಸುತ್ತಾರೆ. ಇಷ್ಟಾದ ಮೇಲೂ ಅಭಿವ್ಯಕ್ತಿಯ ಹಂತದಲ್ಲಿ ಅಭಿನಯದ ಬದಲು ಕ್ಯಾಮರಾಕೋನ ಮತ್ತು ಬೆಳಕು ವ್ಯವಸ್ಥೆ ಮುಂದಾಗಿಬಿಡುತ್ತದೆ. ಅವರ ದೃಶ್ಯಬದಲಾವಣೆ ತಂತ್ರದಲ್ಲೇ ಅಭಿನಯಕ್ಕೆ ಮಹತ್ವ ಸಿಕ್ಕದ ಅಂಶವಿದೆ.

ಈಗ ಕಾಸರವಳ್ಳಿಯವರ ಕಾರ್ಯನ್ಯಾಯ ತತ್ವದ ಹಿನ್ನೆಲೆಯಲ್ಲಿ ಈ ಅಂಶವನ್ನು ಚರ್ಚಿಸಬಹುದು. ಸಮಾಜ ವ್ಯಕ್ತಿಯ ಮೇಲೆ ನಡೆಸುವ ಕ್ರೌರ್ಯ ಅವರ ಎಲ್ಲಾ ಚಿತ್ರಗಳಲ್ಲೂ ಮುಖ್ಯವಾಗುವ ತತ್ವ. ಇಲ್ಲಿ ವ್ಯಕ್ತಿಗೆ ಮಹತ್ವವಿದೆ. ಅಂದರೆ ಅಭಿನಯಕ್ಕೆ ಅವಕಾಶವಿದೆ ಎಂದಾಯಿತು. ಆ ಕಾಳಜಿ ಪರಕೀಯತೆ ಆಗಬಹುದು, ಸಂಭ್ರಮ ಆಗಬಹುದು. ಇವೆಲ್ಲ ಅಭಿನಯದ ಮೂಲಕ ಹೇಳಬಹುದಾದ ಅಂಶಗಳು. ಆದರೆ ಅಘೋಷಿತವಾಗಿ (unsaid) ಹೇಳುವ ಉದ್ದೇಶದಿಂದ ಕಾಸರವಳ್ಳಿ ಅಂಥ ಸಾಧ್ಯತೆ ನಿರಾಕರಿಸುತ್ತಾ ಬಂದಿದ್ದಾರೆ. 'ಘಟಶ್ರಾದ್ಧ'ದ ಯಮುನಕ್ಕನ ಗರ್ಭಪಾತ, ಕೇಶಮುಂಡನ, 'ಮನೆ'ಯ ನಾಯಕ ಎದುರಿಸುವ ಗೊಂದಲ, 'ತಬರ'ನ ಹತಾಶೆ, 'ಕ್ರೌರ್ಯ'ದ ಅಜ್ಜಿಯ ನಿರಾಸೆಗಳು, 'ತಾಯಿಸಾಹೇಬ'ಳ ದ್ವಂದ್ವಗಳು ಇವೆಲ್ಲ ಅಂಶಗಳು ಅಭಿನಯವನ್ನು ಅವಲಂಬಿಸಿವೆ. ತಾಂತ್ರಿಕ ಅಂಶಗಳ ಸಹಾಯದಿಂದ ತೆರೆಯ ಮೇಲೆ ಬಂದಿವೆ. ಒಂದೆರಡು ಹಾವಭಾವಗಳಲ್ಲಿ ಹೇಳಬಹುದಾದ ಭಾವನೆಗಳಿಗೂ ಕಾಸರವಳ್ಳಿ ಅವಕಾಶ ನೀಡುವುದಿಲ್ಲ. ಇದಕ್ಕೆ 'ಆಕ್ರಮಣ' ಹೊರತು ಅನ್ನಿಸುತ್ತದೆ. ಅಲ್ಲಿ ವೈಶಾಲಿ ಅಭಿನಯವೇ ಚಿತ್ರದ ಬಹಳ ಮುಖ್ಯ ಧ್ವನಿ (tone) ನಿರ್ವಹಿಸಿದೆ. ದೃಶ್ಯಾತ್ಮಕ ವಿನ್ಯಾಸದಲ್ಲಿ ಕಾಸರವಳ್ಳಿ ನಿರ್ಮಿಸಿಕೊಡುವುದು ಸೀಮಿತ ಉದ್ದೇಶದ ಅಭಿನಯ. ಇಂಥ ಅಭಿನಯದಲ್ಲಿ ಲವಲವಿಕೆ ಕಡಿಮೆ, ಆದರೆ ಶಿಸ್ತುಬದ್ಧವಾಗುವ ತವಕ ಹೆಚ್ಚಾಗಿರುತ್ತದೆ.

ಅಭಿನಯವನ್ನು ಜನಪ್ರಿಯತೆಯ ಚೌಕಟ್ಟಿಂದ ಬೇರೆಯಾಗಿಸುವ ಉದ್ದೇಶದಿಂದಲೇ ಕಾಸರವಳ್ಳಿ ಈ ಎಚ್ಚರಿಕೆ ವಹಿಸಿರಬಹುದು. ಈಗಾಗಲೇ ಜನಪ್ರಿಯವಾಗಿರುವ ಅಭಿನಯದ ಮಾದರಿಗಳು ಅವರ ಒಟ್ಟು ಉದ್ದೇಶವನ್ನೇ

ವಿಫಲವಾಗಿಸಿಬಿಡುವ ಎಲ್ಲಾ ಸಾಧ್ಯತೆಗಳೂ ಇವೆ. ಪ್ರೇಕ್ಷಕನ ಗ್ರಹಿಕೆ ನ್ಯೂಟ್ರಲ್ ಆಗಿರಬೇಕು ಎಂದು ನಂಬುವ ಕಾಸರವಳ್ಳಿ, ಆತ ಭಾವಪರವಶನಾಗಬಾರದು, ದೈನಂದಿನ ಬಳಕೆ ಮೀರಿದ ಅರ್ಥ ಅವನಿಗೆ ತನ್ನ ಪ್ರತಿಮೆಗಳಿಂದ ದೊರೆಯಬೇಕು ಎಂಬ ಉದ್ದೇಶದಿಂದ ಅಭಿನಯವನ್ನು ನಿಯಂತ್ರಿಸಿರಬಹುದು. ಸೈದ್ಧಾಂತಿಕವಾಗಿ ಅದು ಕೆಲಸ ಮಾಡಿದೆ ಕೂಡ. ಆದರೆ ಕಾಸರವಳ್ಳಿ ಆಯ್ದುಕೊಂಡ ಕಲಾವಿದರು - ಅಲ್ಲೊಂದು ಇಲ್ಲೊಂದು ಅಪವಾದ ಬಿಟ್ಟರೆ - ಈ ನಿಯಂತ್ರಣಕ್ಕೆ ಸಿಕ್ಕಬಲ್ಲ ಅಭಿನಯದ ಮಾದರಿ ಹೊಂದಿದವರು. ಆದರೆ ಅದನ್ನು ಬ್ರೇಕ್ ಮಾಡಬಲ್ಲ ಮಾದರಿ ಹೊಂದಿದವರು ಇದ್ದಿದ್ದರೆ.... ಉದಾಹರಣೆಗೆ ಅನಂತ್‌ನಾಗ್, ಕಾಸರವಳ್ಳಿಯವರ ಚಿತ್ರವಲ್ಲಿ ಅಭಿನಯಿಸಿದ್ದರೆ ? ಇದು ಕುತೂಹಲಕರ.

ಅಮೂರ್ತವಾಗಿ ಕಥೆ ಹೇಳುವ ತಂತ್ರವನ್ನು ಬಳಸುವ ಎಂ.ಎಸ್.ಸತ್ಯು ಕನ್ನಡವಲ್ಲಿ ನಿರ್ದೇಶಿಸಿರುವುದು ನಾಲ್ಕು ಚಿತ್ರಗಳು. ನಾಲ್ಕರಲ್ಲಿ 'ಚಿತಗೂ ಚಿಂತೆ', ಜನಪ್ರಿಯ ಚಿತ್ರಗಳಲ್ಲಿನ ಅಭಿನಯದ ವಿಡಂಬನೆ. ಇಲ್ಲಿ ಅಭಿನಯದ ವಿವಿಧ ಮಾದರಿಗಳನ್ನು ಉದ್ದೇಶಪೂರ್ವಕವಾಗಿಯೇ ಗೇಲಿ ಮಾಡಲಾಗಿದೆ. ಒಂದು ಸಾಂಸ್ಕೃತಿಕ ಸಂದರ್ಭಕ್ಕೆ ಪ್ರಯತ್ನಿಸುವ ಆಶಯದ ಚಿತ್ರ ನಿರ್ಮಿಸಿಕೊಂಡಿರುವ ಈ ಕ್ರಮವೇ ಕುತೂಹಲಕರವಾದದ್ದು. ಎಲ್ಲಕ್ಕಿಂತ ಮುಖ್ಯವಾದ್ದೆಂದರೆ ಜನಪ್ರಿಯ ಚಿತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ಮಂಜುಳಾ, ಸಿ.ಆರ್.ಸಿಂಹ ತಮ್ಮ ಅಭಿನಯ ಕ್ರಮವನ್ನೇ ಗೇಲಿ ಮಾಡುವ ಪಾತ್ರ ವಹಿಸಿದ್ದು. ಇನ್ನೆರಡು ಚಿತ್ರಗಳಾದ 'ಕನ್ನೇಶ್ವರರಾಮ', 'ಬರ' ಚಿತ್ರಗಳಲ್ಲಿ ಸತ್ಯು ಕ್ಯಾಮರಾ, ಬೆಳಕಿನ ವ್ಯವಸ್ಥೆ ಮುಂತಾದ ತಾಂತ್ರಿಕ (technical) ಅಂಶಗಳನ್ನು ಬಳಸಿಕೊಳ್ಳುವಂತೆಯೇ ಅಭಿನಯವನ್ನೂ ಕ್ರಿಯಾಶಾಲಿಯಾಗಿ ಬಳಸಿಕೊಂಡಿದ್ದಾರೆ. ಕಲಾತ್ಮಕ ಚಿತ್ರದಲ್ಲಿ ಗಂಭೀರವಾಗಿ ತೊಡಗಿಕೊಂಡಿರುವ ಕಲಾವಿದರನ್ನು ಒಳಗೊಂಡ ಚಿತ್ರವಲ್ಲಿ ಆಂಗಿಕ, ವಾಚಿಕ ಅಭಿನಯಗಳೆರಡಕ್ಕೂ ಸಾಕಷ್ಟು ಅವಕಾಶ ಸಿಕ್ಕಿದೆ. ವಾಚಿಕ ಅಭಿನಯದ ತೀವ್ರತೆ ಅಮೂರ್ತತೆಯ ನೆಲೆಗೇ ನಡೆಯುವ ವಿಶಿಷ್ಟ ಪ್ರಯತ್ನ ಈ ಚಿತ್ರದಲ್ಲಿದೆ. 'ಬರ' ಇಷ್ಟರಮಟ್ಟಿಗಿನ ಹಿಡಿತ ಸಾಧಿಸಿದ ಚಿತ್ರವಾದರೂ ವ್ಯಕ್ತಿಕವಾಗಿ ಸಿ.ಆರ್.ಸಿಂಹ, ಅನಂತ್‌ನಾಗ್ ಗೆಸ್ಚರ್ ಬಳಸಿಕೊಂಡ ಕ್ರಮದಿಂದಾಗಿ ಅಭಿನಯವನ್ನು ಸಮರ್ಥವಾಗಿ ಪಡಮಕೊಂಡಿದೆ. ಸತ್ಯು ನಾಲ್ಕನೇ ಚಿತ್ರದ ಹೊತ್ತಿಗಾಗಲೇ ಇಂಥ ಸಾಧ್ಯತೆ ಪೂರ್ತಿ ಹೊರಟುಹೋಗಿದೆ. ಶೈಲಜ, ಅಮಿತ್‌ರಾವ್ ಅವರಂಥ ಹೊಸ ಕಲಾವಿದರಿದ್ದಾರೆ ಎಂಬುದು ನಿಜವಾದರೂ ಕ್ಲೋಸಪ್‌ಗಳಲ್ಲಿ ಕೂಡ ಅಭಿನಯಕ್ಕೆ ಒತ್ತು ಸಿಕ್ಕಿಲ್ಲ. ಮಾತ್ರವಲ್ಲ, ಕ್ಯಾಮರಾಕೋನಗಳಲ್ಲಿ ಅಸ್ಪಷ್ಟವಾಗಿ ಚಲಿಸುವುದರಿಂದ ಚಿತ್ರಕ್ಕೆ ಅನೇಕ ಕಡೆ ಸಿನಿಮಾತ್ಮಕ ಸಂಘಟನೆ ನಿರ್ಮಾಣವೇ ಆಗಿಲ್ಲ. ಇದು ಸಾಲದು ಎಂಬಂತೆ ನಾಯಕಿ ಬಟ್ಟೆ ಬದಲಾಯಿಸುವ ದೃಶ್ಯಗಳನ್ನೆಲ್ಲ ಬಳಸಿ ಸತ್ಯು ಜನಪ್ರಿಯ ಚೌಕಟ್ಟಿಗೆ ಹತ್ತಿರವಾಗುವ ಪ್ರಯತ್ನ ಮಾಡಿದ್ದಾರೆ. ವಿವಿಧ ಭಾಷೆಗಳು ಬಳಕೆಯಾಗುವ ಚಿತ್ರವಲ್ಲಿ ಯಾವ ಭಾಷೆಗೂ ಪ್ರಾಂತೀಯ ಚೌಕಟ್ಟಿಲ್ಲದೆ ಒಂದು ಮಾದರಿ ಅಮೆಚೂರ್ ನಾಟಕದ ತಾಲೀಮಿನಂತೆ ಭಾಸವಾಗುತ್ತದೆ. ಈ ನಾಲ್ಕು ಚಿತ್ರಗಳನ್ನು ಒಟ್ಟಾಗಿ ಇಟ್ಟು ನೋಡಿದರೆ ಸತ್ಯು ತಮ್ಮ ಕಾರ್ಯಾನ್ವಯ ತತ್ವದಲ್ಲಿ ಅಭಿನಯಕ್ಕೆ ಸ್ಪಷ್ಟ ರೂಪವನ್ನೇನು ಕೊಟ್ಟಂತೆ ಕಾಣುವುದಿಲ್ಲ. ಆದರೆ ಪ್ರತಿಮೆಗಳ ಬದಲಾಗಿ ಅಮೂರ್ತ ಸಂಜ್ಞೆಗಳ ಮೂಲಕ ಮಾತನಾಡುವ ಅವರ ಚಿಂತನಾಕ್ರಮದಲ್ಲಿ ಅಭಿನಯಕ್ಕೆ ಸಾಕಷ್ಟು ಅವಕಾಶವಿದೆ. ಸಮರ್ಥ ಕಲಾವಿದರು ಅದನ್ನು ಬಳಸಿಕೊಂಡಿದ್ದಾರೆ. ಇಲ್ಲವಾದ ಸಂದರ್ಭದಲ್ಲಿ ಕಲಾವಿದರ ಸೋಲನ್ನು ಪ್ಯಾಚಪ್ ಮಾಡುವ ಕೆಲಸವನ್ನು ಸತ್ಯು ಮಾಡಿಲ್ಲ. ಭಾರತೀಯ ನಾಟಕ ಪರಂಪರೆಯ ಒಳಸಂಜ್ಞೆಗಳಿಂದ ಪ್ರೇರಿತರಾದಂತೆ ಕಾಣುವ ಸತ್ಯು ಅದಕ್ಕೆ ಸ್ಪಷ್ಟ ತಾತ್ವಿಕರೂಪ ಕೊಟ್ಟಿಲ್ಲ. ಇದರಿಂದ ಅವರ ಚಿತ್ರಗಳಲ್ಲಿ ಕೆಲವು ಕಡೆ ಅಭಿನಯ ಪರಸ್ಪರ ವೈರುಧ್ಯಗಳನ್ನು ಹಿಡಿಯುವಷ್ಟಕ್ಕೇ ತೃಪ್ತವಾದಂತೆ ಕಾಣುತ್ತದೆ. ಇದಕ್ಕೆ ಉದಾಹರಣೆ, ಸತ್ಯುರವರ ಎಲ್ಲಾ ಚಿತ್ರಗಳಲ್ಲಿ ಹಾಡುಗಳನ್ನು ಬಳಸಲಾಗಿದೆ. ಆದರೆ ಯಾವ ಚಿತ್ರದಲ್ಲೂ ಹಾಡುಗಳು ಒಂದು ತಂತ್ರವಾಗಿ (device) ಬಳಕೆಯಾಗಿಲ್ಲ. ಇತ್ತ ಜನಪ್ರಿಯವೂ ಆಗಿಲ್ಲ. ಇವರಿಂದ ಅವರು ಅದನ್ನು ಬಳಸಿದ ಉದ್ದೇಶವೇ ಅಸ್ಪಷ್ಟ. ಇಂಥ ಅಸ್ಪಷ್ಟತೆಯನ್ನೇ ಅವರ ಚಿತ್ರಗಳಲ್ಲಿ ಅಭಿನಯ ಬಳಕೆಯಾದ ಕ್ರಮ ಎಂದು ಹೇಳಬಹುದು.

ಎಸ್.ವಿ.ರಾಜೇಂದ್ರಸಿಂಗ್ ಬಾಬು ಪ್ರಾಕೃತಿಕ ವಿದ್ಯಮಾನಗಳನ್ನು ಚಿತ್ರದಲ್ಲಿ ಚಲನಶೀಲವಾಗಿ ಬಳಸಿಕೊಳ್ಳುವ ತಂತ್ರ ಹುಟ್ಟುಹಾಕಿದರು. ನೇರನಿರೂಪಣೆ ತಂತ್ರ ಬಳಸುವ ಅವರಲ್ಲಿ ವಾಚ್ಯತೆಗೆ ಮಹತ್ವ ಹೆಚ್ಚು. ಪ್ರತಿಮೆ ಬಳಸುವಾಗಲೂ ತೀರ ವಾಚ್ಯವಾಗಿ ಬಿಡುತ್ತದೆ. ಇದಕ್ಕೆ ಕಾರಣವೆಂದರೆ ಅವರು ಹಾವಭಾವಗಳ ಬದಲು ವಾಚಿಕ ಅಭಿನಯಕ್ಕೆ ಅದರಲ್ಲೂ ಶಬ್ದಗಳನ್ನು ಬಳಸಿಕೊಂಡ ತಂತ್ರಕ್ಕೆ ಮಹತ್ವ ನೀಡುತ್ತಾರೆ. ಉತ್ತಮ ಅಭಿನಯದಲ್ಲೂ ಕ್ಲೋಸಪ್ ಬರದೇಹೋದರೆ ಅದು ಚಿತ್ರವ್ಯಾಕರಣದಲ್ಲಿ ಸರಿಯಾದ ರೀತಿಯ ಗ್ರಹಿಕೆಯಾಗಿ ಬರುವುದಿಲ್ಲ. ಜನಪ್ರಿಯ ತಂತ್ರಗಳನ್ನು ಹೆಚ್ಚಾಗಿ ಬಳಸುವ ಅವರಲ್ಲಿ ನಟರು ತಮ್ಮ ಜನಪ್ರಿಯತೆಯನ್ನು ಬಳಸಿಕೊಳ್ಳುವುದಕ್ಕಾಗಿ ನಟಿಸುವ, ಪ್ರೇಕ್ಷಕನ ಅಪೇಕ್ಷೆ ತಣಿಸುವ ಪ್ರಯತ್ನಕ್ಕೆ ಅವಕಾಶವಿರುತ್ತದೆ. ಅಂಬರೀಷ್, ವಿಷ್ಣುವರ್ಧನ್, ಸುಂದರಕೃಷ್ಣ ಅರಸ್ ಅಂಥವರ ಅಭಿನಯದ ಹೊಸಸಾಧ್ಯತೆ ಕಂಡುಕೊಂಡವರು ಬಾಬು. ಈ ಮಟ್ಟಿಗಿನ ಅಂತರ್ನೋಟ ಅವರಲ್ಲಿ ಕೆಲಸ ಮಾಡುತ್ತಿರುತ್ತದೆ. 'ಬಂಧನ'ದಲ್ಲಿ ಸುಹಾಸಿನಿಯಂಥ ಸಂವೇದನಾಶೀಲ ಅಭಿನೇತ್ರಿಯನ್ನು ಬಳಸಿಯೂ ವಾಚ್ಯತೆಗೆ ಮೊರೆಹೋಗಿರುವುದರಿಂದ ಸುಹಾಸಿನಿಗೆ ಮನೋಸ್ಥಿತಿಯ ಒಳಸಂಜ್ಞೆ ನೀಡಲು ಅವಕಾಶವೇ ಸಿಕ್ಕಿಲ್ಲ. 'ಹೂವು-ಹಣ್ಣು'ನಲ್ಲಿ ಲಕ್ಷ್ಮೀ ಇಂಥದೇ ಸಮಸ್ಯೆ ಎದುರಿಸಿದ್ದಾರೆ. ಅವರ ಬಹುತೇಕ ಚಿತ್ರಗಳಲ್ಲಿ ನಟಿಸಿದ ವಿಷ್ಣುವರ್ಧನ್ ಯಾವ ಚಿತ್ರದಲ್ಲೂ ಕಥೆಗೆ ಅಗತ್ಯವಾದ ಅಭಿನಯಶೈಲಿ ಬಳಸಿಲ್ಲ. ತಮ್ಮ ಅನುಭವಗಳನ್ನು ತಣಿಸುವ ಹಾವಭಾವಗಳನ್ನು ಸರ್ವಸ್ವತಂತ್ರವಾಗಿ ಬಳಸಿದ್ದಾರೆ. ಸಣ್ಣ ಪುಟ್ಟ ವಿವರಗಳನ್ನು ಸೂಕ್ಷ್ಮವಾಗಿ ಬಳಸಿಕೊಳ್ಳುವ, ಮಳೆ ಇತ್ಯಾದಿ ಪ್ರಾಕೃತಿಕ ವಿದ್ಯಮಾನಗಳನ್ನು ಶ್ರೀಮಂತವಾಗಿ ಬಳಸುವ ಎಸ್.ವಿ.ರಾಜೇಂದ್ರಸಿಂಗ್ ಬಾಬು ಸ್ಪಷ್ಟವಾದ ಕಾರ್ಯಾನ್ವಯ ತಂತ್ರವನ್ನು ರೂಢಿಸಿಕೊಂಡಿಲ್ಲ. ಇದರ ಪರಿಣಾಮವೇ ಅವರ ಚಿತ್ರಗಳಲ್ಲಿ ಕಲಾವಿದರು ಅವರ ಕೈತಪ್ಪಿ ಬೆಳೆಯಲು ಸಾಧ್ಯವಾಗುತ್ತದೆ.

ಟಿ.ಎಸ್.ನಾಗಾಭರಣ ನಿರ್ದೇಶನದ ಚಿತ್ರಗಳಲ್ಲಿ ಅಪ್ಪಟ ಜನಪ್ರಿಯತೆ, ಅಪ್ಪಟ ಕಲಾತ್ಮಕತೆ ಎರಡೂ ಇವೆ. ಆಶ್ಚರ್ಯವೆಂದರೆ ಈ ಎರಡೂ ಸಂದರ್ಭದಲ್ಲೂ ಅವರು ಭಿನ್ನ ಅಭಿನಯ ಕ್ರಮವನ್ನೇ ಅಳವಡಿಸಿಕೊಂಡಿದ್ದಾರೆ. ಅವರ ಜನಪ್ರಿಯ ಚಿತ್ರಗಳು ವ್ಯಾಪಾರಿ ಚಿತ್ರದ ಎಲ್ಲಾ ಲಕ್ಷಣಗಳನ್ನೂ ಒಳಗೊಂಡು ಬೆಳೆಯುತ್ತದೆ. ಅಲ್ಲಿ ಅಭಿನಯಕ್ಕೊಂದು ನಿಯಂತ್ರಣ ಇಲ್ಲ. ರಾಜಕುಮಾರ್ ಕೂಡ ತಮ್ಮ ಜನಪ್ರಿಯ ಶೈಲಿಯಲ್ಲಿ ಅಭಿನಯಿಸಲು ಅವಕಾಶವಿದೆ. ಅಂಬರೀಷ್ ತಮ್ಮ ಎಲ್ಲಾ ಸಹಜ ತಪ್ಪುಗಳನ್ನು ಮಾಡುವ ಅವಕಾಶವಿದೆ. ನಾಗಾಭರಣ ಇಂಥ ಚಿತ್ರಗಳಲ್ಲಿ ಕಟಿಂಗ್ ಪ್ಯಾಟರ್ನ್‌ನಲ್ಲೇ ಒಳ್ಳೆಯ ಅಭಿನಯ ಕೇಂದ್ರೀಕರಿಸುವ, ಕೆಟ್ಟ ಅಭಿನಯವನ್ನು ಪ್ಯಾಚಪ್ ಮಾಡುವ ಪ್ರಯತ್ನ ಮಾಡುವುದಿಲ್ಲ. ಈ ಅಂಶವನ್ನು ಒತ್ತಿ ಹೇಳಲು ಕಾರಣವೆಂದರೆ ಅವರ ಕಲಾಕೃತಿ ಎಂದು ಕರೆಯಬಲ್ಲ ಚಿತ್ರಗಳಲ್ಲಿ ಇದು ಸಾಧ್ಯವಾಗಿದೆಯಾದ್ದರಿಂದ. ಇದನ್ನು ಅವಶ್ಯಕತೆಗೆ ತಕ್ಕಂತೆ ವರ್ತಿಸುವ ದರ್ಜಿ ಮನೋಭಾವ ಎಂದು ಕರೆಯಬಹುದೇನೋ. ನಾಗಾಭರಣ ಅವರ ಕಲಾತ್ಮಕ ಎನ್ನುವ ಚಿತ್ರಗಳ ರಾಚನಿಕತೆಯಲ್ಲೇ ಅಭಿನಯಕ್ಕೆ ಸಾಕಷ್ಟು ಅವಕಾಶವಿದೆ. 'ಅನ್ವೇಷಣೆ'ಯಲ್ಲಿ ಹೆದರಿಕೆಯ ಅಭಿನಯ ಪ್ರೇಕ್ಷಕನಿಗೆ ಹಾಸ್ಯವಾಗುವಂತೆ ಸಂಯೋಜಿಸಿದ ಬ್ಲಾಕ್ ಕಾಮಿಡಿ ಸಾಕಷ್ಟು ಸವಾಲಿನ ಅಭಿನಯ ನಿರೀಕ್ಷಿಸುವಂಥದು. 'ಬ್ಯಾಂಕರ್ ಮಾರ್ಗಯ್ಯ'ದಲ್ಲಿ ಬಳಕೆಯಾಗುವ ಶಬ್ದತಂತ್ರಗಳಿಗೆ ಪೂರಕವಾಗುವ ಅಭಿನಯ ಹೊಸ ಸಾಧ್ಯತೆಯನ್ನೇ ಪಡೆದುಕೊಂಡಿದೆ. 'ಮೈಸೂರು ಮಲ್ಲಿಗೆ'ಯಲ್ಲಿ ಜನರ ಮನದಲ್ಲಿ ನಿಂತ ಕವಿತೆಯ ಸಾಲುಗಳನ್ನು ದೃಶ್ಯವಾಗಿಸುವಾಗ ನಾಗಾಭರಣ ಬಳಸಿದ ತಾಂತ್ರಿಕಜಾಣ್ಮೆ ಉತ್ತಮ ಮಟ್ಟದ್ದು. ''ಹುಣ್ಣಿಮೆಯ ರಾತ್ರಿಯಲ್ಲಿ ಉಕ್ಕುವುದು ಕಡಲಾಗಿ...'' ಸಾಲಿಗೆ ಹುಣ್ಣಿಮೆಯ ರಾತ್ರಿಯಲ್ಲಿ ಉಕ್ಕುವ ಅಲೆಗಳ ಮೇಲೆ ಅವಳ ನೆರಳು ಬೀಳುವಂತೆ ಸಂಯೋಜಿಸಿದ ರೀತಿಯ ಜಾಣ್ಮೆಯನ್ನೇ ''ರಾಯರು ಬಂದರು ಮಾವನ ಮನೆಗೆ...'' ಹಾಡನ್ನು ಲಾಂಗ್‌ಶಾಟ್‌ನಲ್ಲಿಡುವುದರಲ್ಲಿ ಗಮನಿಸಬಹುದು. ಹವ್ಯಾಸಿ ರಂಗಭೂಮಿಯ ಮಾದರಿ ಪ್ರತಿಮೆಗಳನ್ನು ಬಳಸುವ ನಾಗಾಭರಣ ಸಿನಿಮಾತ್ಮಕಕೋನ ಹೊಂದಿದ ಅಭಿನಯ ಕ್ರಮವನ್ನು ಅದಕ್ಕೆ ಸಂಯೋಜಿಸಿದ್ದಾರೆ. ಇದರಿಂದ ಅವರ ಚಿತ್ರಗಳಿಗೆ ಓಘ ಸಿಕ್ಕಿದೆ. ಸಾಮಾನ್ಯವಾಗಿ ಕಲಾತ್ಮಕ ಚಿತ್ರಗಳಲ್ಲಿ ಕಂಡುಬರದ ಲವಲವಿಕೆ ಇವರ ಚಿತ್ರಗಳಲ್ಲಿ ಕಂಡುಬರುವುದಕ್ಕೆ ಈ ಅಂಶವೇ ಕಾರಣ. 'ನಾಗಮಂಡಲ'ದಲ್ಲಿ ವಿಜಯಲಕ್ಷ್ಮೀಯಂಥ ಹೊಸ ಕಲಾವಿದೆಯಿಂದ ಕೂಡ ಉತ್ತಮ ಮಟ್ಟದ ಅಭಿನಯ ಪಡೆಯಲಾಗಿದೆ. ಚಲನಚಿತ್ರದ ಶಕ್ತಿಯುತ ಅಂಶಗಳನ್ನು ಕ್ರಿಯಾಶಾಲಿಯಾಗಿ ಸಂಯೋಜಿಸಿಕೊಳ್ಳುವ ನಾಗಾಭರಣ ವ್ಯಾಪಾರಿ ಚಿತ್ರಗಳ ಸಂದರ್ಭದಲ್ಲಿ ಅದನ್ನು ಮರೆತುಬಿಡುವುದು ಆಶ್ಚರ್ಯಕರ. 'ಜನುಮದ ಜೋಡಿ'ಯಲ್ಲಿ ಬೇರೆ ಅನ್ನಿಸಬಹುದಾದ ತಂತ್ರ ಬಳಕೆಯಾಗಿದ್ದರೂ ಚಿತ್ರದ ಅವಶ್ಯಕತೆಯನ್ನು ಶಿವರಾಜ್ ಕುಮಾರ್ ಅಭಿನಯ ಪೂರೈಸುವುದಿಲ್ಲವಾದ್ದರಿಂದ ಅದಕ್ಕೆ ನಾಗಾಭರಣ ಅವರ ಉಳಿದ ಚಿತ್ರಗಳಲ್ಲಿ ಕಂಡುಬರುವ ವೇಗ (pace) ಲಭ್ಯವಾಗಿಲ್ಲ.

ತಾಂತ್ರಿಕ, ಶ್ರೀಮಂತಿಕೆಯ ದೃಶ್ಯಗಳನ್ನು ಸಂಯೋಜಿಸುವ ರವಿಚಂದ್ರನ್‌ರಲ್ಲಿ ಅಭಿನಯಕ್ಕೆ ಎರಡನೇ ಸ್ಥಾನ. ಕಥೆಯ ನಿರೂಪಣೆಯನ್ನೇ ಕ್ಯಾಮರಾಕೋನಗಳಲ್ಲಿ

(ಚಿತ್ರ ೨೦೭) ರವಿಚಂದ್ರನ್

ನಿರ್ವಹಿಸುವ ಅವರು ಅಭಿನಯ ಎಷ್ಟೇ ಸಪ್ಪೆಯಾಗಿದ್ದರೂ ತಾಂತ್ರಿಕ ಶ್ರೀಮಂತಿಕೆಯಿಂದಲೇ ಮುಚ್ಚಿಹಾಕಿಬಿಡುತ್ತಾರೆ. ಉದಾಹರಣೆಗೆ, 'ಪ್ರೇಮಲೋಕ'ದ "ಈ ನಿಂಬೆಹಣ್ಣಿನಂತ ಹುಡುಗಿ ಬಂತು ನೋಡು..." ಹಾಡಿನ ಚಿತ್ರೀಕರಣ. ಇಲ್ಲಿ ಹಾಡಿನಲ್ಲಿ ಬರುವ ಪ್ರತಿ ಸಂಕೇತವನ್ನೂ ವಾಚ್ಯವಾಗಿಯೇ ತೋರಿಸಲಾಗಿದೆ. ಎಷ್ಟರ ಮಟ್ಟಿಗೆ ಎಂದರೆ 'ಈ ಗಲ್ಲ ರಸಗುಲ್ಲಾ...' ಎನ್ನುವಾಗ ಗಲ್ಲಕ್ಕೆ ಕ್ಲೋಸಪ್ ಮಾಡಲಾಗಿದೆ. ಆದರೆ ಒಟ್ಟು ಹಾಡಿನ ದೃಶ್ಯ ವಾಚ್ಯ ಅನ್ನಿಸುವುದಿಲ್ಲ. ಇದಕ್ಕೆ ಕಾರಣ ಎಂದರೆ ಹಾಡಿನಲ್ಲಿ ಸಂಕೇತಗಳು ಬದಲಾಗುತ್ತ ಹೋಗುವಂತೆ ಚಿತ್ರದಲ್ಲೂ ಬದಲಾಗುತ್ತಾ ಹೋಗಿದೆ. ಬಿಡಿಬಿಡಿ ಸಂಕೇತಗಳು ಒಟ್ಟಾಗಿ ಒಂದು ಪ್ರತಿಮೆ ನಿರ್ಮಿಸುವ ತಂತ್ರವನ್ನೇ ಕ್ಯಾಮರಾ ಮೂಲಕ ರವಿಚಂದ್ರನ್ ಸಾಧಿಸಿದ್ದಾರೆ. ಹೀಗಾಗಿ ಅಭಿನಯದ ಬೇರೆ ಬೇರೆ ಮಾದರಿಗಳು ಒಟ್ಟಾಗಿ ಮಿಕ್ಸಪ್ ಆಗಿ ಶ್ರೀಮಂತವಾಗಿ ಬದಲಾಗಿಬಿಡುತ್ತದೆ. 'ಸಿಪಾಯಿ' ಚಿತ್ರದಲ್ಲಿ ಬಂಗಾರದ ಗೊಂಬೆಯ ಪ್ರತಿಮೆ ಬಳಸಿದ ಕ್ರಮ. ಇಂಥದೊಂದು ತಂತ್ರಗಾರಿಕೆ ಇಲ್ಲದಿದ್ದರೆ ತೀರಾ ವಾಚ್ಯವಾಗಿ ಬಿಡುತ್ತಿತ್ತು. ಭಾವತೀವ್ರತೆಗೂ ಅವರು ಕ್ಯಾಮರಾಕೋನಗಳನ್ನು, ಲೈಟಿಂಗನ್ನು ಸಂಯೋಜಿಸಿ ಅಗತ್ಯ ಪರಿಣಾಮ ಪಡೆಯುತ್ತಾರೆ. ರವಿಚಂದ್ರನ್ ಅಭಿನಯದ ಕೊರತೆಯನ್ನು ಬೇರೆ ಅಂಶಗಳಿಂದ ತುಂಬಲು ಹೋಗುತ್ತಾರೆ. ಉದಾಹರಣೆಗೆ ಸೆಕ್ಸನ್ನು ಹಸಿಹಸಿಯಾಗಿ ತೋರಿಸುತ್ತಾರೆ. ಪ್ರೇಕ್ಷಕನ ಗಮನ ಅವರ ಭಾವಾಭಿನಯಕ್ಕಿಂತ ಸುತ್ತಲೂ ಇರುವ ಪರಿಕರ ಶ್ರೀಮಂತಿಕೆಯ ಕಡೆಗೆ, ಅವರ ಕಲ್ಪನೆಯ ಅದ್ಭುತದ ಕಡೆಗೆ ಹರಿಯುವಂತೆ ಚಿತ್ರಿಕೆಗಳನ್ನು ಸಂಯೋಜಿಸುತ್ತಾರೆ.

ಕನ್ನಡದಲ್ಲಿ ಭಿನ್ನ ಚಿತ್ರಗಳನ್ನು ನಿರ್ದೇಶಿಸಿದ ಸುನಿಲ್‌ಕುಮಾರ್ ದೇಸಾಯಿ, ಕಥನವನ್ನು ಕೇಂದ್ರವಾಗಿರಿಸಿಕೊಂಡು ಘಟಕಗಳನ್ನು ನಿರ್ಮಿಸಿಕೊಂಡ ತಂತ್ರಗಾರಿಕೆ ಬಳಸಿಕೊಂಡವರು. ಇವರ ಚಿತ್ರಗಳಲ್ಲಿ ಅಭಿನಯದ ಅಗತ್ಯ ಹೆಚ್ಚು. ಜೊತೆಗೆ ಅಭಿನಯದ ಮೇಲೆ ನಿಯಂತ್ರಣ ಹೊಂದುವ ಜಾಣ್ಮೆಯನ್ನೂ ಅವರಲ್ಲಿ ಕಾಣಬಹುದು. 'ಉತ್ಕರ್ಷ'ದಂಥ ಚಿತ್ರಗಳಲ್ಲಿ ಗೆಶ್ಚರ್ ಅನ್ನು ಬಹಳ ತೀವ್ರವಾಗಿ ಬಳಸಿಕೊಂಡ ಅವರು 'ನಿಷ್ಕರ್ಷ'ದಲ್ಲಿ ಲಾಂಗ್‌ಶಾಟ್‌ಗಳನ್ನೇ ಬೇರೆ ಬೇರೆ ರೀತಿಯಲ್ಲಿ ಸಂಯೋಜಿಸಿ ಒಂದು ಮಾದರಿ ಅಭಿನಯವೇ ಬೇರೆ ಬೇರೆ ಹಂತದಲ್ಲಿ ಭಿನ್ನ ಅರ್ಥ ಹೊರಡಿಸುವಂತೆ ಮಾಡಿದರು. 'ಬೆಳದಿಂಗಳ ಬಾಲೆ'ಯಲ್ಲಿ ಸಂಭಾಷಣೆಯೇ ಪ್ರಧಾನವಾದ ವಾಚಿಕ ಅಭಿನಯದ ಮೂಲಕ ಕಥೆ ಕಟ್ಟಿದರು. ಸುನಿಲ್ ಕುಮಾರ್ ದೇಸಾಯಿಯವರ ಸಮಸ್ಯೆಯೆಂದರೆ ಒಂದು ನಿರ್ದಿಷ್ಟ ಕಾಲಘಟ್ಟದ ಕಥಾನಕವನ್ನು ಮಾತ್ರ ಶಕ್ತಿಶಾಲಿಯಾಗಿ ಹಿಡಿದಿಡುವುದು. ಇಂಥ ಸಂದರ್ಭದಲ್ಲಿ ಪಾತ್ರಗಳ ಹಿನ್ನೆಲೆ ಸೇರಿದಂತೆ ಎಲ್ಲಾ ಅಂಶಗಳು ಒಂದು ಸಿದ್ಧಸೂತ್ರದ ನೆಲೆಯಲ್ಲಿ ನಿಂತಿರುತ್ತವೆ. ಸುನಿಲ್‌ಕುಮಾರ್ ದೇಸಾಯಿ ಬಳಸುವ ಅಭಿನಯ ಕ್ರಮ ನಿರ್ದಿಷ್ಟ ಮುಖಭಾವ (stock expression)ಮಾದರಿಯದು. ಅದಕ್ಕೆ ಕ್ರಿಯಾಶೀಲತೆ ಇದೆ, ಆದರೆ ಚಲನೆ ಇಲ್ಲ. 'ನಮ್ಮೂರ ಮಂದಾರ ಹೂವೇ'ನಲ್ಲಿ ಶಿವರಾಜ್ ಕುಮಾರ್ ಸ್ಪರ್ಶಕ್ಕೆ ನಟಿ ಪ್ರೇಮ ಉನ್ಮಾದ ಪ್ರಕಟಿಸಿದ ರೀತಿ ಸುನಿಲ್‌ಕುಮಾರ್ ದೇಸಾಯಿ ಅಭಿನಯದ ಸಣ್ಣ ಸಂಗತಿಗಳಿಗೂ ಹೇಗೆ ಗಮನ ನೀಡುತ್ತಾರೆ ಎನ್ನುವುದಕ್ಕೆ ಸಾಕ್ಷಿ.

ನಾಗತಿಹಳ್ಳಿ ಚಂದ್ರಶೇಖರ್ ಬಳಸುವ ಪ್ರತಿಮೆಗಳೆಲ್ಲ ಅಪ್ಪಟ ಸಾಹಿತ್ಯಿಕವಾದವುಗಳೇ. ಅದನ್ನು ದೃಶ್ಯಾತ್ಮಕ ಹಂತದಲ್ಲಿ ಅವರು ಬೆಳೆಸುವುದಿಲ್ಲ. ಎಷ್ಟೋ ಕಡೆ ಒಂದೆರಡು ಹಾವಭಾವಗಳು ಮಾಡಬಹುದಾದ ಕೆಲಸವನ್ನು ಉದ್ದುದ್ದ ಸಂಭಾಷಣೆಗಳೇ ನಿರ್ವಹಿಸುತ್ತವೆ. ಜೊತೆಗೆ ಒಂದು ಸಿನಿಮಾತ್ಮಕ ಕೋನ ಮಾಡಬಹುದಾದ ಕೆಲಸಕ್ಕೆ ಮೂರ್‍ನಾಲ್ಕು ಶಾಬ್ದಿಕ ಪ್ರತಿಮೆಗಳು ಖರ್ಚಾಗುತ್ತವೆ. ಇದರಿಂದ ಮಾಧ್ಯಮದ್ದಲ್ಲದ ಒಂದು ಕಾರ್ಯಾನ್ವಯ ತತ್ವ (working philosophy) ಕೆಲಸ ಮಾಡುತ್ತದೆ. ಈ ಕಾರಣದಿಂದಲೇ ಅವರ ಚಿತ್ರಗಳ ಪಾತ್ರಗಳು ವರದಿ ಒಪ್ಪಿಸುವ ನೆಲೆಯಲ್ಲಿ ಕೆಲಸ ಮಾಡುತ್ತವೆ. ಅನಂತ್‌ನಾಗ್, ರಮೇಶ್, ಸುಮನ್ ನಗರ್‌ಕರ್ ಅಂಥವರು ಅಭಿನಯದಲ್ಲಿ ಸ್ವಂತಪ್ರಯತ್ನದಿಂದ ಪಾತ್ರಕ್ಕೆ ಜೀವ ಕೊಟ್ಟಿದ್ದಾರೆ. ಆದರೆ ಒಟ್ಟಾಗಿ ಅವರ ನಿರ್ದೇಶನದಲ್ಲಿ ಅಭಿನಯ ಶಕ್ತಿಶಾಲಿ ಅಂಶವಲ್ಲ, ಸಾಮಾನ್ಯ ಪರಿಕರ ಮಾತ್ರ.

ಆಂಗಿಕ, ವಾಚಿಕ ಅಭಿನಯಗಳೆರಡರಲ್ಲೂ ಹಸಿ-ಬಿಸಿಯಾದ ವಿಧಾನವನ್ನು ಜಾರಿಗೆ ತಂದ ಉಪೇಂದ್ರ ಅವರು ಪಾರಂಪರಿಕ ನಂಬಿಕೆಗಳನ್ನು ಬ್ರೇಕ್ ಮಾಡಲು ಪ್ರಯತ್ನಪೂರ್ವಕವಾಗಿ ಹೊರಟವರು. ಇಂಥ ಪ್ರಯತ್ನ ಅವರು ಅಭಿನಯವನ್ನು ಬಳಸಿಕೊಳ್ಳುವ ಕ್ರಮದಲ್ಲಿ ಕಾಣಬಹುದು. ಸಂಭಾಷಣೆಯಲ್ಲಿ ಅಸಾಮಾನ್ಯ ಅನ್ನಿಸುವ pace ಜೋಡಿಸುವುದು, ಸಾಮಾನ್ಯವಾದ ಹಾವಭಾವಗಳನ್ನು ನಿರಾಕರಿಸಿ ಲೇವಡಿ ಮಾಡುವ ಕ್ರಮ ಬಳಸುವುದು ಇವನ್ನೆಲ್ಲ ಅವರಲ್ಲಿ ಗುರುತಿಸಬಹುದು. ಒಂದು ವಿಧಾನವನ್ನು ನಿರಾಕರಿಸುವ ಜೊತೆಗೆ ಪರ್ಯಾಯವಾದ್ದನ್ನು ನಿರ್ಮಿಸುವ ಜವಾಬ್ದಾರಿ ಬೇಕು. ಅದು ಉಪೇಂದ್ರರಲ್ಲಿ ಇನ್ನೂ ಕಾಣುವುದಿಲ್ಲವಾದ್ದರಿಂದ ಅತಂತ್ರವೇ ಅವರ ಚಿತ್ರದಲ್ಲಿ ಕಾಣುವ ಅಭಿನಯದ ಲಕ್ಷಣವಾಗಿದೆ. ಹೀಗಿದ್ದೂ ಅವರು ನಿರ್ದೇಶಿಸಿ, ಅವರೆ ಅಭಿನಯಸದ 'ಶ್!', 'ಓಂ', 'ಸ್ವಸ್ತಿಕ್'ನಂಥ ಚಿತ್ರದಲ್ಲಿ ಮಾಮೂಲಿ ಜಾಡಿನ ಅಭಿನಯವೇ ಇತರ ಕಲಾವಿದರಿಂದ ಬಂದಿರುವುದನ್ನು ಕಾಣಬಹುದು.

ಕನ್ನಡ ಚಿತ್ರರಂಗದಲ್ಲಿ ತಮ್ಮನ್ನು ದೊಡ್ಡಪ್ರಮಾಣದಲ್ಲಿ ತೊಡಗಿಸಿಕೊಂಡ ಇನ್ನೂ ಅನೇಕ ನಿರ್ದೇಶಕರಿದ್ದಾರೆ ಎಂಬ ಅರಿವು ಇದೆ. ಈ ಲೇಖನದ ಮುಖ್ಯ ಉದ್ದೇಶ ಅಭಿನಯವನ್ನು ಚರ್ಚಿಸುವುದೇ ಹೊರತು ನಿರ್ದೇಶನವನ್ನು ಅಲ್ಲವಾದ್ದರಿಂದ ವಿಭಿನ್ನ ಮಾದರಿ ಪ್ರತಿನಿಧಿಸುವವರನ್ನು ವಿವಿಧ ಕಾಲಘಟ್ಟದಲ್ಲಿ ಆಯ್ದುಕೊಳ್ಳಲಾಗಿದೆ. ನಿರ್ದೇಶಕರ ಈ ಒಂದೊಂದು ಮಾದರಿಯನ್ನು ಪ್ರತಿನಿಧಿಸುವುದರಿಂದ ಅವರ ಕುರಿತು ನಡೆಸಿದ ಚಿಂತನೆ ಆ ಮಾದರಿಯಲ್ಲಿ ಬರುವ ಬೇರೆಯವರಿಗೂ ಅನ್ವಯಿಸುತ್ತದೆ ಎಂಬುದನ್ನು ಗಮನಿಸಿಕೊಳ್ಳಬೇಕು. ಒಟ್ಟಿನಲ್ಲಿ ಈ ಚಿಂತನೆಯನ್ನು ಸಮಾರೋಪ ಗೊಳಿಸುವುದಾದರೆ ಕನ್ನಡದಲ್ಲಿ ಅಭಿನಯ ಬಳಸಿಕೊಳ್ಳುವ ಮಾರ್ಗ ಕುರಿತು ಯಾವ ಘಟ್ಟದಲ್ಲೂ ನಿರ್ದೇಶಕರು ಗಂಭೀರವಾಗಿ ಪ್ರಯತ್ನಿಸಿಲ್ಲ. ವ್ಯಾಪಾರಿ ಚಿತ್ರಗಳಲ್ಲಿ ಅಭಿನಯ ನಿರ್ದೇಶಕರ ಕೈಮೀರಿ ಬೆಳೆದು ಮಾಧ್ಯಮ ನಟರನ್ನು ಕೇಂದ್ರೀಕರಿಸಿ ಬೆಳೆದರೆ, ಕಲಾತ್ಮಕ ಚಿತ್ರಗಳಲ್ಲಿ ಅಭಿನಯಕ್ಕೆ ಎರಡನೇ ಸ್ಥಾನ ಸಿಕ್ಕಿ ತಾಂತ್ರಿಕ ಅಂಶಗಳಿಗೆ ಮಹತ್ವ ಸಿಕ್ಕಿದೆ. ಎರಡೂ ನೆಲೆಯಲ್ಲಿ ಅಭಿನಯ ಒಂದು ಶಕ್ತಿಶಾಲಿ ಘಟಕವಾಗಿ ಬಂದಿಲ್ಲ ಎಂಬುದು ಗಂಭೀರವಾಗಿ ಚಿಂತಿಸಬೇಕಾದ ವಿಷಯ.



ಬೆಳಕಿನ ಲೋಕದಲ್ಲಿ ಬಣ್ಣಗಳ ಕಾರುಬಾರು

ಚಲನಚಿತ್ರವಾಗಲಿ, ನಾಟಕವಾಗಲಿ, ನೃತ್ಯವಾಗಲಿ ಇದರಲ್ಲಿ ಪ್ರಸಾಧನ (Make-up) ದ ಸ್ಥಾನ ಹಾಗೂ ಅಗತ್ಯ ಎಂಥದ್ದೆನ್ನುವುದು ಎಲ್ಲರಿಗೂ ತಿಳಿದೇ ಇದೆ. ಎಲ್ಲ ರಂಗಗಳಲ್ಲೂ ಸಾಕಷ್ಟು ಕ್ರಾಂತಿಕಾರಿ ಬದಲಾವಣೆಗಳಾದರೂ ಈ ಪ್ರಸಾಧನ ಮಾತ್ರ ಹಿಂದಿನಿಂದ ಇಂದಿನವರೆಗೂ ಹಾಗೆಯೇ ಉಳಿದುಕೊಂಡಿದೆ. ಅದರ ದೃಷ್ಟಿಕೋನಗಳಷ್ಟೇ ಬದಲಾಗಿರಬಹುದು. ಹಿಂದೆ ಪೌರಾಣಿಕ ಹಾಗೂ ಐತಿಹಾಸಿಕ ಪಾತ್ರಗಳನ್ನು ಸೃಷ್ಟಿಸುವಾಗ ಮಾಮೂಲಿ ನಟನೊಬ್ಬನಿಗೆ ಬೇರೆಯೇ ರೂಪ ಕೊಡಲು ಪ್ರಸಾಧನ ಅನಿವಾರ್ಯವಾಗಿತ್ತು. ಇಂದು ಒಬ್ಬ ಮಾಮೂಲಿ ಮನುಷ್ಯನ ಸಹಜ ವೇಷದ ಪಾತ್ರ ಮಾಡುವಾಗಲೂ ಪ್ರಸಾಧನ ಸ್ಥಾನ ಉಳಿಸಿಕೊಂಡಿದೆ. ಈಗ ಬೆಳಕಿನ ಸಂಯೋಜನೆಗೆ ಪ್ರಸಾಧನದ ಅಗತ್ಯ ತುಂಬಾ ಇದೆ. ಹೊಸ ಅಲೆಯ ಚಿತ್ರಗಳು ಬಂದು ಕೆಲವೊಮ್ಮೆ ಪ್ರಸಾಧನದ ಅಗತ್ಯ ಇಲ್ಲವೆನ್ನುವ ಮಾತು ಬಂದಾಗಲೂ ತೀರಾ ಪ್ರಸಾಧನ ಇಲ್ಲದೆ ಸಿನಿಮಾ ಆಗಲಿ, ನಾಟಕವಾಗಲಿ ಸಾಧ್ಯವಿಲ್ಲವೆನ್ನುವ ಮಾತನ್ನು ಎಲ್ಲರೂ ಒಪ್ಪುತ್ತಾರೆ.

ಬಣ್ಣ ಬಣ್ಣದ ಪ್ರಸಾಧನ ಬಣ್ಣದ ಲೋಕವೆನಿಸಿರುವ ಸಿನಿಮಾರಂಗದೊಂದಿಗೆ ಹುಟ್ಟಿಕೊಂಡಿದಲ್ಲ. ಇಂದು ಸಿನಿಮಾರಂಗದ ಒಂದು ಅವಿಭಾಜ್ಯ ಅಂಗವೆನಿಸಿರುವ ಪ್ರಸಾಧನ ವಿಭಾಗ ಚಿತ್ರರಂಗಕ್ಕೆ ದೊರೆತ ಒಂದು ಬಳುವಳಿ, ಅಷ್ಟೆ. ಇಂದು ಅದರ ರೂಪುರೇಷೆಗಳು ಬದಲಾಗಿರಬಹುದು. ಕಾಲಕ್ರಮೇಣ ಬದಲಾಗುವ ಇತರ ಅಂಶಗಳೊಂದಿಗೆ ಇದೂ ಬದಲಾಗಿದೆ. ಹಿಂದೆ ರಂಗಭೂಮಿಯಿಂದ ಪ್ರೇರಿತವಾದ ಚಿತ್ರಗಳ ಅಭಿನಯ ಇಂದು ನಮಗ ಓವರ್ ಆ್ಯಕ್ಟಿಂಗ್ ಎನಿಸುತ್ತದೆ. ಇಂದು ಸಹಜ ಅಭಿನಯವೇ ನಿಜವಾದ ಅಭಿನಯ ಎನಿಸುತ್ತದೆ. ಹಾಗೆಯೇ ಪ್ರಸಾಧನ ಕೂಡ. ಹಿಂದಿನ ಪಾತ್ರಗಳೂ ಅಂಥವೇ ಇದವು. ಇಂದು ಅಭಿನಯ ಮಾಡದಂತಿರುವುದು ಹೇಗ ನಿಜವಾದ ಅಭಿನಯವೋ ಹಾಗೆಯೇ ಪ್ರಸಾಧನ ಮಾಡಿಯೂ ಮಾಡದಂತಿರುವುದು ನಿಜವಾದ ಮೇಕಪ್. ಇದಕ್ಕೆ ಮುಖ್ಯ ಕಾರಣವೆಂದರ ಬದಲಾದ ಪಾತ್ರಗಳು.

ಪ್ರಸಾಧನ ಎನ್ನುವುದು ಬಣ್ಣಗಳೊಂದಿಗಿನ ಹಾಗೂ ಬಣ್ಣಗಳೊಂದಿಗೆ ಪ್ರತಿಫಲಿಸುವ ಬೆಳಕಿನೊಂದಿಗಿನ ಆಟ. ಇದನ್ನು ನಾವು ದೈವದತ್ತವೆನಿಸಿರುವ ಪ್ರಕೃತಿಯಲ್ಲೂ ನಾನಾ ವಿಧಗಳಲ್ಲಿ ಕಾಣುತ್ತೇವೆ. ಗಿಡ, ಮರ, ನದಿ, ಬೆಟ್ಟ, ಆಕಾಶಗಳಿರಲಿ ಅಥವಾ ಇವುಗಳೊಂದಿಗೆ ಬದುಕುವ ಮನುಷ್ಯ ಅಥವಾ ಇನ್ನಾವುದೇ ಜೀವಿಯಿರಲಿ ಎಲ್ಲವೂ ಈ ಬಣ್ಣ ಹಾಗೂ ಬೆಳಕುಗಳೊಂದಿಗೆ ಸಂಬಂಧ ಹೊಂದಿವೆ. ಮಾನವ ಬೇರೆ ಬೇರೆ ಭೂ ಪ್ರದೇಶಗಳಲ್ಲಿ ನೆಲೆಸುತ್ತ ಹೋದಂತೆ ಅಲ್ಲಿಯ ವಾತಾವರಣಕ್ಕೆ ತಕ್ಕಂತೆ ಆತನ ಬಾಹ್ಯ ರೂಪ ಬದಲಾಯಿತು. ಹೀಗಾಗಿ ಪ್ರಪಂಚದ ಒಂದೆಡೆ ಜನ ತೀರಾ ಬೆಳ್ಳಗಿದ್ದರೆ ಇನ್ನೊಂದೆಡೆಯ ಜನ ತೀರಾ ಕಪ್ಪಗಿದ್ದಾರೆ. ಕೆಲವೆಡೆ ಇವೆರಡರ ಮಧ್ಯದ ಬಣ್ಣದ ಜನರೂ ಇದ್ದಾರೆ. ಇದೇ ರೀತಿ ಆಕಾರಗಳಲ್ಲಿಯೂ. ಭೂಮಿಯ ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ ಸಾಕಷ್ಟು ವ್ಯತ್ಯಾಸ ಕಂಡು ಬರುತ್ತದೆ. ಮುಖ್ಯವಾಗಿ ಇಲ್ಲಿ ನಮಗೆ ಬಣ್ಣಗಳ ವ್ಯತ್ಯಾಸ ಮುಖ್ಯ. ಇದು ಪರಿಸರಕ್ಕೆ ತಕ್ಕಂತೆ ಉಂಟಾದ ವ್ಯತ್ಯಾಸ.

ಮಾನವ ವಿಜ್ಞಾನಿಗಳು ಮಾನವರನ್ನು ತಲೆಯ ಆಕಾರ, ಮೈ ಬಣ್ಣಗಳ ಆಧಾರ ಹಾಗೂ ಕೂದಲು, ಮೂಗು ಮುಂತಾದ ವ್ಯತ್ಯಾಸಗಳ ಆಧಾರದ ಮೇಲೆ ಮೂರು ಪ್ರಮುಖ ವಿಭಾಗಗಳನ್ನಾಗಿ ವಿಂಗಡಿಸಿದಾರೆ. ಅವುಗಳೆಂದರೆ ಕಾಕ್‌ಸಾಯ್ಡ್ (ಬಿಳಿ), ಮಂಗೋಲಾಯ್ಡ್ (ಹಳದಿ) ಹಾಗೂ ನೀಗ್ರಾಯ್ಡ್ (ಕಪ್ಪು). ಆದರೆ ಈ ಭೌತಿಕ ಲಕ್ಷಣಗಳ ಗುರುತಿನಿಂದ ಉಂಟಾದ ವಿಭಜನೆ ಮೇಲು-ಕೀಳು ಎಂಬ ವರ್ಣಭೇದ ನೀತಿಯನ್ನು ಹುಟ್ಟುಹಾಕಿದು ಮಾತ್ರ ವಿಪರ್ಯಾಸ.

ನಮ್ಮ ವಿಶಾಲ ದೇಶದಲ್ಲೂ ಪ್ರಾಂತ್ಯದಿಂದ ಪ್ರಾಂತ್ಯಕ್ಕೆ ಮನುಷ್ಯರ ಮುಖ ವಿನ್ಯಾಸದಲ್ಲಿ, ಬಣ್ಣಗಳಲ್ಲಿ ಸೂಕ್ಷ್ಮ ಬದಲಾವಣೆಗಳಿದ್ದರೂ ನಮ್ಮ ಏಕಮೂಲದ ಸಾಂಸ್ಕೃತಿಕ ಪರಂಪರೆಯಿಂದಾಗಿ ಬೆಳೆಸಿಕೊಂಡು ಬಂದ ಸೌಂದರ್ಯ ಕಲ್ಪನೆ ಅಗಾಧವಾದುದಷ್ಟೇ ಅಲ್ಲ, ಅಚ್ಚರಿ ಮೂಡಿಸುವಂಥದೂ ಹೌದು. 'ಭಗವದ್ಗೀತೆ'ಯಲ್ಲಿ ವಿಶ್ವರೂಪ ದರ್ಶನವನ್ನು ವಿವರಿಸುವಾಗ 'ದಿವ್ಯಾನುಗಂಧ ಲೇಪನಂ' ಎಂದು ಹೇಳಿರುವುದು ದೇವನಾದ ಶ್ರೀಕೃಷ್ಣನ ಅಲಂಕಾರದ ಕುರಿತು ಎಂದು ಪ್ರತಿ ಭಾರತೀಯನಿಗೂ ತಿಳಿದ ವಿಷಯ. ಇದೇ ರೀತಿ ಶಿವನನ್ನು ಅಡಿಯಿಂದ ಮುಡಿಯವರೆಗೆ ಭಸ್ಮದಿಂದ ಅಲಂಕರಿಸಿದ ನಾವು ಶ್ರೀಕೃಷ್ಣನಿಗೆ ಕಸ್ತೂರಿ ತಿಲಕವಿಟ್ಟು ಆನಂದಿಸಿದೆವು. ಈ ನಿಷ್ಠೆ ಮುಂದೆ ಭಕ್ತವೃಂದ ತಮ್ಮ ದೇಹದ ಮೇಲೆಯೇ ಗಂಧಾಕ್ಷತೆ, ಮುದ್ರೆ, ಬಿಳಿಕೆಂಪು ನಾಮ, ಗೋಪಿ ಚಂದನ, ಭಸ್ಮ ಧರಿಸುವುದಕ್ಕೆ ಕಾರಣವಾಯಿತು. ಇದಲ್ಲದೆ ನಮ್ಮ ದೇವಿ-ದೇವತೆಗಳಿಗೆ ಅರಿಶಿನ, ಕುಂಕುಮ, ಸಿಂಧೂರ, ಕಜ್ಜಲ, ಶ್ರೀಗಂಧ, ಕೇಸರಿ, ಕಸ್ತೂರಿ, ಗೋರೋಜನ, ಪುನುಗು, ಚಂದನ ಇವುಗಳನ್ನು ಅಲಂಕರಿಸಲು ಬಳಸಿರುವುದನ್ನು ದೇವಾಲಯಗಳಲ್ಲಿ, ಸಾಹಿತ್ಯ ಕೃತಿಗಳಲ್ಲಿ ಗಮನಿಸಬಹುದು.

ಆದಿಶಂಕರಾಚಾರ್ಯರಿಂದ ಏಳನೇ ಶತಮಾನದಲ್ಲಿ ರಚಿತವಾದ 'ಸೌಂದರ್ಯ ಲಹರಿ'ಯಲ್ಲಿ ನೂರು ಶ್ಲೋಕಗಳಿದ್ದು ತ್ರಿಪುರ ಸುಂದರಿ ದೇವಿಯ ದಿವ್ಯಗುಣಗಳ ವರ್ಣನೆಯಿದೆ. ದೇಹದ ವಿವಿಧ ಭಾಗಗಳ ವರ್ಣನೆಯು ದೇವಿಯ ಸ್ತನಪಾನ ಮಾಡಿದ ದ್ರಾವಿಡ ಬಾಲಕ ಶಂಕರರಿಗೆ ಈ 'ಸೌಂದರ್ಯ ಲಹರಿ' ಬಾಯಿಂದ ತಂತಾನೆ ಹೊರಹೊಮ್ಮಿತೆಂಬ ಉಲ್ಲೇಖವಿದೆ. ನಮ್ಮ ಪರಂಪರೆಯಲ್ಲಿ ಕಾಣುವ ಸೌಂದರ್ಯ ಪ್ರಜ್ಞೆಗೆ ಇಂತಹ ಅನೇಕ ಉದಾಹರಣೆಗಳಿವೆ. ಹೀಗೆ ಅಂದಿನಿಂದಲೂ ಇರುವ ಸೌಂದರ್ಯದ ಕಲ್ಪನೆ ಇಂದು ಜನಜೀವನದಲ್ಲಿಯೂ ಹಾಸುಹೊಕ್ಕಾಗಿದೆ. ಗಮನ ಸೆಳೆಯುವಂತ ಮೈಕಾಂತಿಯನ್ನು ಹೆಚ್ಚಿಸುವ ವಸ್ತುಗಳನ್ನು ಅಂಗರಾಗಗಳು (Cosmetics) ಎನ್ನುತ್ತಾರ. ಇದರ ಉದ್ದೇಶ ಸೌಂದರ್ಯದೊಂದಿಗೆ ಆರೋಗ್ಯವನ್ನು ವೃದ್ಧಿಸುವುದು.

(ಚಿತ್ರ ೧) ಮುಖವಾಡಗಳು - ಪುಣೆ ಫಿಲಂ ಇನ್‌ಸ್ಟಿಟ್ಯೂಟ್ ಸಂಗ್ರಹ

ನಮ್ಮನ್ನು ಮುನ್ನೂರು ವರ್ಷಗಳ ಕಾಲ ಆಳಿದ ಹಾಗೂ ನಾಗರಿಕತೆಯಲ್ಲಿ ನಮಗಿಂತಲೂ ಮುಂದುವರಿದವರೆಂದು ಭಾವಿಸುವ ಬ್ರಿಟನ್‌ನಲ್ಲಿ ೧೭೭೦ರಲ್ಲಿಯೇ

ಈ ರೀತಿಯ ಅಂಗರಾಗಗಳ ಖಾಸಗಿ ಬಳಕೆ ಎಷ್ಟಿತ್ತೆಂದರೆ ಅಲ್ಲಿಯ ಸಂಸತ್ತು ಒಂದು ಕಾಯಿದೆ ರಚಿಸಿ 'ಅಂಗರಾಗಗಳಿಂದ ಅಲಂಕರಿಸಿಕೊಂಡು ಮನಸೆಳೆದು ಮದುವೆಯಾದರೆ ಅದು ಮದುವೆ ಎನಿಸಿಕೊಳ್ಳುವುದಿಲ್ಲ'' ಎಂದು ಸಾರಿತು. ಅಂಗರಾಗಗಳನ್ನು ಹೊರ ಕಾಣುವಂತೆ ಹಚ್ಚುವುದನ್ನು ಅನೇಕ ದೇಶಗಳು ಒಪ್ಪುತ್ತಿರಲಿಲ್ಲ ಎನ್ನುವುದಕ್ಕೆ ಇದೊಂದು ಉದಾಹರಣೆ. ಆದರೆ ಭಾರತದಲ್ಲಿ ಅನೇಕ ಶತಮಾನಗಳಷ್ಟು ಹಿಂದೆಯೇ ಸೌಂದರ್ಯ ಹಾಗೂ ಆರೋಗ್ಯಗಳ ಕಾರಣಕ್ಕಾಗಿ ಅಂಗರಾಗಗಳ ಬಳಕೆಯಿತ್ತೆನ್ನುವುದಕ್ಕೆ ಸಾಕಷ್ಟು ಪುರಾವೆಗಳು ದೊರೆಯುತ್ತವೆ. ಇದಕ್ಕೆ ಪೂರಕವಾಗಿ ಇಲ್ಲಿನ ಸಂಸ್ಕೃತಿಗೆ ಹೊರಗಿನಿಂದ ಬಂದ ಅನೇಕ ಉತ್ತಮ ಅಂಶಗಳು ಸೇರ್ಪಡೆಗೊಂಡವು.

ನಮ್ಮಲ್ಲಿ ಸೌಂದರ್ಯ ರಕ್ಷಣೆಗೆ ಖಚಿತ ನಿಯಮಗಳಿದ್ದವೆನ್ನುವುದು ವಿಶೇಷ. ಇದರಂತೆ ಚರ್ಮದ ಕಾಂತಿ ಹೆಚ್ಚಿಸಲು ಋತು ಚರ್ಯೆಗಳು ಬಳಕೆಯಲ್ಲಿದ್ದವು. ಇದರ ಪ್ರಕಾರ ಹೇಮಂತ, ಶಿಶಿರಗಳಲ್ಲಿ ಕುಂಕುಮ, ಕೇಸರಿ ಲೇಪನಗಳನ್ನು, ಗ್ರೀಷ್ಮದಲ್ಲಿ ಶ್ರೀಗಂಧವನ್ನು, ವರ್ಷ ಮತ್ತು ಶರದ್ ಋತುಗಳಲ್ಲಿ ಲಾವಂಚ, ಕರ್ಪೂರದ ಲೇಪನಗಳನ್ನು ಉಪಯೋಗಿಸುವ ವಾಡಿಕೆಯಿತ್ತು.

ಕಣ್ಣು ಬಿಟ್ಟರೆ ಕಾಣುವ ಬೆಳಕಿನ ಲೋಕದಲ್ಲಿ ಬಣ್ಣಗಳದೇ ಕಾರುಬಾರು. ಬಣ್ಣವಿಲ್ಲದೆ ಪ್ರಪಂಚವೇ ಇಲ್ಲ. ನಮ್ಮ ಸುತ್ತಲಿನ ವರ್ಣವಿನ್ಯಾಸದ ಪರಿಣಾಮ ನಮ್ಮ ಮೇಲೆ ಎಷ್ಟೊಂದು ಪ್ರಭಾವ ಬೀರಿದೆಯೆಂದರೆ ಕಿವಿಗೆ ಮಾಧುರ್ಯ ನೀಡುವ ಸಂಗೀತಾನುಭವವನ್ನು ವರ್ಣಮಯವಾಗಿತ್ತೆಂದೇ ಹೇಳುತ್ತೇವೆ. ಇದು ಪ್ರತಿಯೊಬ್ಬರೂ ತಮ್ಮ ಕಲ್ಪನೆಗೆ ತಕ್ಕಂತ ಮನದಲ್ಲಿ ರೂಪಿಸಿಕೊಳ್ಳುವ ವರ್ಣಲೋಕ. ಆದರೆ ಇದಿಷ್ಟರಿಂದಲೇ ತೃಪ್ತಿಯಾಗದೆ ಹೊರಗೂ ಗೋಚರವಾಗುವ ಬಣ್ಣದ ಪ್ರಪಂಚವನ್ನು ಸೃಷ್ಟಿಸಲಾಗಿದೆ. ಅದನ್ನು ನೃತ್ಯ ಅಥವಾ ನಾಟ್ಯ ಎಂದು ಗುರುತಿಸಬಹುದು. ಕ್ರಮೇಣ ಅದು ನಾಟಕ ಹಾಗೂ ಸಿನಿಮಾ ಎಂಬ ಮತ್ತೂ ಮುಂದುವರಿದ ಮಾದರಿಗಳಾಗಿ ಬೆಳವಣಿಗೆಗೊಂಡವು. ಒಟ್ಟಿನಲ್ಲಿ ಇದೆಲ್ಲ ಬಣ್ಣದ ಪ್ರಪಂಚ. ಇಲ್ಲಿ ಬಣ್ಣದ ತೆರೆಗಳು, ಬಣ್ಣದ ದೀಪಗಳು, ಬಣ್ಣದ ವಸ್ತ್ರಗಳ ಜೊತೆಗೆ ಕಲಾವಿದರ ಮುಖದ ಮೇಲಿನ ಬಣ್ಣವೂ ಮಹತ್ವ ಪಡೆಯಿತು. ಬಣ್ಣದ ಬೆಳಕಿನ ವ್ಯವಸ್ಥೆಗಳಿಂದ ಹೊಂಬಣ್ಣ, ನೀಲಿ ಬಣ್ಣ, ಕರಿ ಬಣ್ಣಗಳಂಥ ಬಣ್ಣಗಳನ್ನು ಸೃಷ್ಟಿಸಿ ಕಲಾವಿದನ ಮುಖದ ಮೇಲಿನ ವರ್ಣಕ್ಕೆ ಪುಟಗೊಟ್ಟು ಭಾವನೆಗಳನ್ನು ನಿರೂಪಿಸುವ ಕ್ರಮ ಬೆಳೆಯಿತು.

ನಾಟ್ಯ, ನೃತ್ಯಗಳಿಗಿಂತ ನಾಟಕಗಳಲ್ಲಿ ಅಭಿನಯಕ್ಕೆ ಹೆಚ್ಚಿನ ಅವಕಾಶವಿತ್ತು. ಇಲ್ಲಿ ಕಣ್ಣು, ಬಾಯಿ, ಕೈಕಾಲು, ಮುಖ, ಪಾದ, ತೋಳು ಹೀಗೆ ದೇಹದ ಪ್ರತಿ ಅಂಗ, ಉಪಾಂಗಗಳನ್ನು ತೊಡಗಿಸಿಕೊಂಡು ಅಭಿನಯಿಸುವುದು ಆಂಗಿಕ ಅಭಿನಯವಾಗುತ್ತದೆ. ನಾಟ್ಯದಲ್ಲಿ ಬರುವ ಸಾಹಿತ್ಯ, ಭಾಷೆ, ಸಂಭಾಷಣೆ ಇದು ವಾಚಿಕಾಭಿನಯಕ್ಕೆ ಸಂಬಂಧಿಸಿದ್ದು. ಆಹಾರ್ಯದಲ್ಲಿ ವೇಷಭೂಷಣಗಳಿಂದ, ಅಂದರೆ ಆಭರಣಗಳು, ಹಣೆ, ಅಂಗಗಳ ರಚಿಸುವ ಆಲಂಕಾರಿಕ ಚಿಹ್ನೆಗಳು, ವಸ್ತ್ರದ ಬಣ್ಣ ಇವುಗಳನ್ನು ಪಾತ್ರದ ವೈಚಿತ್ರ್ಯದಂತೆ ಬಳಸಿ ಭಾವಾಭಿನಯಕ್ಕೆ ಪೂರಕವಾಗುವಂತೆ ಬಳಸುತ್ತಿದ್ದರು. ಪಾತ್ರದ ಮನಃಸ್ಥಿತಿ, ಭಾವನೆಗಳನ್ನು ಯಾವ ಪರಿಕರದ ನೆರವೂ ಇಲ್ಲದೆ ತೋರಿಸುವುದು ಸಾತ್ವಿಕಾಭಿನಯವೆನಿಸಿತು.

ನೃತ್ಯ ಹಾಗೂ ಗಾಯನದೊಂದಿಗೆ ಮೈ, ಮುಖಕ್ಕೆ ಬಣ್ಣ ಹಾಕಿಕೊಂಡು ಇನ್ನಿತರ ಅಲಂಕಾರ ಸಾಧನಗಳನ್ನು ಧರಿಸಿಕೊಂಡು ಕಲಾವಿದರು ಅಭಿನಯಿಸುತ್ತಾರೆ. ನಾಟಕಗಳಲ್ಲಿನ ಪಾತ್ರಗಳ ವೇಷಭೂಷಣ ಅಲಂಕಾರಕ್ಕೂ ಹಾಗೂ ಅವು ನಿರೂಪಿಸುವ ರಸಕ್ಕೂ ಸಂಬಂಧವಿರುವುದರಿಂದ ನವರಸಗಳ ಬಗ್ಗೆ ಕೊಂಚ ಗಮನ ಹರಿಸುವುದು ಒಳಿತು. ಶೃಂಗಾರ, ಹಾಸ್ಯ, ಕರುಣ, ರೌದ್ರ, ವೀರ, ಭಯಾನಕ, ಭೀಭತ್ಸ, ಅದ್ಭುತ ಹಾಗೂ ಶಾಂತ - ಇವು ನವರಸಗಳು. ಇದರ ನಂತರ ಕೆಲವು ನಾಟ್ಯ ಪಂಡಿತರು ಭಕ್ತಿರಸವೂ ಒಂದೆಂದರು. ರಂಗಭೂಮಿ ಹಾಗೂ ಸಿನಿಮಾದವರು ಇದನ್ನು ಒಪ್ಪಿ, ಬಳಸಿ ಪರಿಪಕ್ವತೆಗೆ ತಂದರೆಂದೇ ಹೇಳಬಹುದು. ವರ್ಣಾಲಂಕಾರ ದೃಷ್ಟಿಯಿಂದ ಸಮೃದ್ಧವಾದ ಕಲಾಮಾಧ್ಯಮವೆಂದರೆ ಯಕ್ಷಗಾನ. ಇದರಲ್ಲಿ ರಂಗಸ್ಥಳದಿಂದ ತುಸು ದೂರದಲ್ಲಿ ಬಣ್ಣ ಹಚ್ಚಿ, ವೇಷ ಹಾಕಿಕೊಳ್ಳುವ ಜಾಗವೆನಿಸಿಕೊಂಡಿರುವ ಚೌಕಿ ಇರುತ್ತದೆ. ಯಕ್ಷಗಾನ ಆರಂಭವಾಗುವ ಮೊದಲೇ ಈ ಚೌಕಿಯಲ್ಲಿ ಬಣ್ಣ ಹಚ್ಚುವುದು, ವಿವಿಧ ಬಣ್ಣದ ಬಟ್ಟೆ ತೊಡುವುದು, ಪಾತ್ರಕ್ಕೆ ಬೇಕಾದ ರೀತಿಯ ಕಿರೀಟ ಧರಿಸುವುದು ಆರಂಭವಾಗುತ್ತದೆ. ನಾಟಕ ಹಾಗೂ ಸಿನಿಮಾಗಳಿಗಿಂತ ಇಲ್ಲಿನ ಮುಖ್ಯ ವ್ಯತ್ಯಾಸವೆಂದರೆ ಇಲ್ಲಿ ಪಾತ್ರಧಾರಿಗಳೇ ತಮ್ಮ ತಮ್ಮ ಮುಖಕ್ಕೆ ಮೇಕಪ್ ಮಾಡಿಕೊಳ್ಳುತ್ತಾರೆ. ತಾವೇ ವೇಷಭೂಷಣ ತೊಡುತ್ತಾರೆ. ಯಕ್ಷಗಾನದಲ್ಲಿ ಅಭಿನಯ ಹಾಗೂ ನೃತ್ಯ ಕಲಿಯುವುದರ ಜೊತೆಗೆ ಈ ಕೆಲಸವನ್ನೂ ಕಲಿಯುವುದು ರೂಢಿ. ಅಲ್ಲಿ ಪ್ರತ್ಯೇಕವಾಗಿ ಪ್ರಸಾಧನ ಕಲಾವಿದರಿರುವುದಿಲ್ಲ. ತೀರಾ ಅಗತ್ಯವೆನಿಸಿದರೆ ಒಬ್ಬರ ನೆರವಿಗೆ ಮತ್ತೊಬ್ಬರು ಬರುತ್ತಾರಷ್ಟೆ. ಈಗೀಗ ತನ್ನ ಮೌಲ್ಯ ಕಳೆದುಕೊಂಡು ಸಾಮಾಜಿಕ ಪ್ರಸಂಗಗಳನ್ನು ಆಡುತ್ತಿದ್ದರೂ ಯಕ್ಷಗಾನದ ಔನ್ನತ್ಯ ಸಾರುವುದೇನಿದ್ದರೂ ಪೌರಾಣಿಕ ಪ್ರಸಂಗಗಳಲ್ಲಿ ಮಾತ್ರ. ಹಾಗಾಗಿ ಇಲ್ಲಿ ದೇವರು, ದಾನವರು, ರಾಜ ಮಹಾರಾಜರು, ಋಷಿ ಮುನಿಗಳು ಮುಂತಾದ ಬಣ್ಣ ಬಣ್ಣದ ಪಾತ್ರಗಳು ಬರುತ್ತವೆ. ಇದರಲ್ಲಿರುವ ಪಾತ್ರಧಾರಿಗಳು ಸಾಮಾನ್ಯ ಮನುಷ್ಯರೇ ಆಗಿದ್ದರೂ ಮೇಕಪ್ ಹಾಕಿಕೊಂಡು ವೇಷ ಧರಿಸಿ ಬಂದಾಗ ಗುರುತೇ ಸಿಗದಷ್ಟು ವ್ಯತ್ಯಾಸವಾಗಿ ಭಯಂಕರ ರಾಕ್ಷಸರಾಗಬಹುದು ಅಥವಾ ಸುಂದರ ಸ್ತ್ರೀಯರಾಗಬಹುದು.

ಯಕ್ಷಗಾನದ ಇನ್ನೊಂದು ವಿಶೇಷವೆಂದರೆ ಇಂದಿಗೂ ಸ್ತ್ರೀ ಪಾತ್ರವನ್ನು ಗಂಡಸೇ ನಿರ್ವಹಿಸುತ್ತಾನೆ. ಇಲ್ಲಿ ಆತ ಪ್ರಸಾಧನ ಹಾಗೂ ಅಭಿನಯದಲ್ಲಷ್ಟೇ ಸ್ತ್ರೀಗೆ ಪೈಪೋಟಿ ನೀಡುವುದಲ್ಲದೆ ತನ್ನ ಧ್ವನಿಯನ್ನೂ ಬದಲಿಸಬೇಕಾಗುತ್ತದೆ. ಯಕ್ಷಗಾನದಲ್ಲಿ ಸಾಮಾನ್ಯವಾಗಿ ಸ್ತ್ರೀ ಪಾತ್ರಧಾರಿಗಳು ನಾರದ ಅಥವಾ ಕೃಷ್ಣನ ಪಾತ್ರದ ಹೊರತು ಬೇರೆ ಪಾತ್ರ ಧರಿಸುವುದಿಲ್ಲ. ಅಂಥ ಕಲಾವಿದರು ಸ್ತ್ರೀ ಪಾತ್ರಧಾರಿಗಳೆಂದೇ ಪ್ರಸಿದ್ಧರಾಗಿದ್ದಾರೆ. ಗಂಡಸನ್ನು ಹೆಣ್ಣಿನಂತೆ ಬದಲಾಯಿಸುವುದಾದರೆ ಅದು ಪ್ರಸಾಧನದ ಶಕ್ತಿಯೂ ಹೌದು. ಇಂದು ಸಿನಿಮಾರಂಗಕ್ಕೆ ದೊರೆತ ಆಧುನಿಕ ಸೌಲಭ್ಯಗಳ್ಯಾವುವೂ ಯಕ್ಷಗಾನದಲ್ಲಿ ಇಲ್ಲ. ಬಹುತೇಕ ಹಿಂದಿನ ಪದ್ಧತಿಗಳೇ ಇಂದೂ ಅಲ್ಲಿ ರೂಢಿಯಲ್ಲಿವೆ. ಸ್ತ್ರೀ ವೇಷಕ್ಕೆ ಯಕ್ಷಗಾನದಲ್ಲಿ ಕೆಲ ಕಲಾವಿದರು ಹೇಗೆ ಬ್ರಾಂಡ್ ಆಗಿರುತ್ತಾರೋ ಹಾಗೆಯೇ ರಾಕ್ಷಸ ಅಥವಾ ದಾನವರ ಪಾತ್ರಕ್ಕೆ ಕೆಲವರು ಮೀಸಲಾಗಿರುತ್ತಾರೆ. ಯಕ್ಷಗಾನದಲ್ಲಿ 'ಬಣ್ಣದವೇಷ' ಎನ್ನುವುದರ ಅರ್ಥವೇ ರಾಕ್ಷಸ ಪಾತ್ರ. ಇನ್ನು ಹಲವಾರು ವೈವಿಧ್ಯ ಪಾತ್ರಗಳನ್ನು ಮಾಡುವ ಪ್ರಸಿದ್ಧ ಕಲಾವಿದರೂ ಕೂಡ ಸ್ತ್ರೀ ವೇಷ ಹಾಗೂ ರಾಕ್ಷಸ ವೇಷಗಳಲ್ಲಿ ಅಭಿನಯಿಸುವುದಿಲ್ಲ. ಇದು ಅಲ್ಲಿ ನಡೆದುಕೊಂಡಿರುವ ಪದ್ಧತಿ. ಹೀಗೆ ಇಂದಿಗೂ ಪ್ರಸಾಧನಕ್ಕೆ ಸವಾಲಾಗಿರುವ ಪಾತ್ರಗಳಿದ್ದರೆ ಅದು ಯಕ್ಷಗಾನದಲ್ಲಿ ಮಾತ್ರ. ಚಲನಚಿತ್ರರಂಗದಲ್ಲಿ ಆರಂಭದಲ್ಲಿ ಕೆಲವು ಪೌರಾಣಿಕ ಚಿತ್ರಗಳು ಬಂದವಾದರೂ ಕ್ರಮೇಣ ಹೊಸತನ್ನು ನೀಡುವ ಪ್ರಯೋಗಾತ್ಮಕ ಮನೋಭಾವ, ಬದಲಾದ ಜನರ ಅಭಿರುಚಿಗಳಿಂದಾಗಿ ಐತಿಹಾಸಿಕ ಹಾಗೂ ನಂತರ ಸಾಮಾಜಿಕ ಕಥೆಗಳು ಬರಲಾರಂಭಿಸಿದವು. ಸಾಮಾನ್ಯ ಜನಜೀವನದ ಕಥೆಗಳೂ ಚಿತ್ರವಾಗತೊಡಗಿದ ಮೇಲೆ ಪಾತ್ರಗಳ ಪ್ರಸಾಧನ ಅಥವಾ ವೇಷಭೂಷಣ ಹಿಂದಿನಂತೆ ಉಳಿಯುವುದು ಸಾಧ್ಯವಿರಲಿಲ್ಲ. ಹಾಗೆಯೇ ಚಲನಚಿತ್ರ ಹಾಗೂ ಇತರ ಮಾಧ್ಯಮಗಳ ಪ್ರಭಾವದಿಂದ ಯಕ್ಷಗಾನದ ಶಕ್ತಿ ಕುಂದಿದ್ದೂ ಸುಳ್ಳಲ್ಲ. ಇವೆಲ್ಲ ಏನೇ ಇದ್ದರೂ ಪ್ರಸಾಧನ ವಿಷಯಕ್ಕೆ ಬಂದಾಗ ಯಕ್ಷಗಾನ ಅಥವಾ ಕೇರಳದ ಕಥಕ್ಕಳಿ ತಮ್ಮ ಔನ್ನತ್ಯದ ಸ್ಥಾನವನ್ನೆಂದೂ ಬಿಟ್ಟುಕೊಡಲಾರವು.

ರಂಗಮಂದಿರದಲ್ಲಿ ಕಲಾವಿದ ಒಂದು ಸಣ್ಣ ಆಕೃತಿಯಾಗಿ ಕಾಣುತ್ತಾನೆ. ಆತನ ಅಭಿನಯ ಕೊನೆಯ ಸಾಲಿನಲ್ಲಿರುವ ಪ್ರೇಕ್ಷಕರಿಗೂ ಕಾಣುವಂತಾಗಲು ವಿಶಿಷ್ಟ ಭಾವಾಭಿವ್ಯಕ್ತಿಯ, ಅಸಹಜ ಗಾತ್ರದ ಮುಖವಾಡಗಳನ್ನು ಧರಿಸುವ ಕ್ರಮವಿತ್ತು. ಇದರ ನಂತರದ ಕಲಾವಿದ ಬಾಯಿ ಮತ್ತು ಕಣ್ಣುಗಳ ಸುತ್ತಲಿನ ಗೆರೆಗಳನ್ನು ಎತ್ತಿ ಕಾಣುವಂತೆ ಬಣ್ಣ ಬಳಿದುಕೊಂಡು ಬೆಳಕಿನ ನೆರವನ್ನು ಪಡೆಯುತ್ತ ಪ್ರೇಕ್ಷಕರಿಗ ತನ್ನ ಭಾವನೆಗಳನ್ನು ತಲುಪಿಸಲು ಪ್ರಯತ್ನಿಸಿದ. ಈ ರೀತಿಯಾಗಿ ವರ್ಣಾಲಂಕಾರ ವಿಕಾಸವಾಗುತ್ತ ಬಂತು. ವೃತ್ತಿ ರಂಗಭೂಮಿ ಹಾಗೂ ವಿಲಾಸಿ ರಂಗಭೂಮಿ ತಂಡಗಳು ತಮ್ಮ ಅಸ್ತಿತ್ವವನ್ನು ಸಾರಲು ಪ್ರೇಕ್ಷಕರ ಮುಂದೆ ಭ್ರಮಾಲೋಕವನ್ನು ಸೃಷ್ಟಿಸುವುದನ್ನೇ ನಂಬಿದವು. ಹೀಗಾಗಿ ಪೌರಾಣಿಕ, ಪವಾಡ, ಭಕ್ತಿಕಥೆಗಳ ನಾಟಕಗಳಲ್ಲಿ ಅತಿಯಾದ ವರ್ಣಾಲಂಕಾರ ಮಾಡುತ್ತಿದ್ದರು. ಅದರೂ ಸಿನಿಮಾದೊಂದಿಗೆ ಸ್ಪರ್ಧೆ ಏರ್ಪಟ್ಟಾಗ ಬಣ್ಣ, ಬೆಡಗು, ತಂತ್ರಗಾರಿಕೆಗೆ ಒತ್ತು ನೀಡಿ ದಶಾವತಾರ, ಭೂಕೈಲಾಸ, ಕುರುಕ್ಷೇತ್ರದಂತಹ ನಾಟಕಗಳನ್ನು ಆಡುತ್ತಿದ್ದರು.

ಹೀಗ ಕಲಾವಿದ ತಾನು ಪಾತ್ರವಾಗಿ ಪ್ರೇಕ್ಷಕನನ್ನು ತಲುಪಲು ಭಾವಾಭಿನಯದಷ್ಟೇ ಮೇಕಪ್ ಅಥವಾ ಪ್ರಸಾಧನ ಕೂಡ ಮುಖ್ಯ. ರಂಗಭೂಮಿಯಲ್ಲಾದರೆ ನಟ ರಂಗದ ಮೇಲೆ ಹೋಗುವ ಮುನ್ನ ತೆರಳುವುದು ಗ್ರೀನ್ ರೂಮ್‌ಗೆ. ಅಲ್ಲಿರುವ ಪ್ರಸಾಧನಪಟು ಕಲಾವಿದರ ವಯಸ್ಸು, ಸ್ವಭಾವವನ್ನು ಅರಿತು ಆತ ಅಭಿನಯಿಸುವ ಪಾತ್ರವನ್ನು ತಾಳೆ ಹಾಕಿ ಮುಖಾಲಂಕಾರ ಆರಂಭಿಸುತ್ತಾನೆ. ಇದರಿಂದಾಗಿ ಕಲಾವಿದರೂ ಬೇರೆ ಬೇರೆ ಪಾತ್ರಗಳಾಗಿ ರೂಪಾಂತರಗೊಳ್ಳುತ್ತಾರೆ. ಗ್ರೀನ್ ರೂಮ್‌ನಲ್ಲಿ ಪ್ರಸಾಧನ ತಜ್ಞನ

ಕರಸ್ಪರ್ಶದಿಂದ ಪಾತ್ರಗಳು ಬಗೆಬಗೆಯಾಗಿ ಅರಳುತ್ತವೆ. ಒಂದು ಅರ್ಥದಲ್ಲಿ ಆತ ಜಾದೂಗಾರನೇ ಸರಿ. ಆದರೂ ಪಾತ್ರಕ್ಕೆ ನ್ಯಾಯ ಸಲ್ಲಿಸುವ ಜವಾಬ್ದಾರಿ ನಟನಿಗಿದ್ದಷ್ಟೇ ಆತನಿಗೂ ಇರುತ್ತದೆ. ನಾಟಕವಲ್ಲಾಗಲಿ, ಸಿನಿಮಾದಲ್ಲಾಗಲಿ ಪ್ರಸಾಧನ ಎನ್ನುವುದಂತೂ ಅನಿವಾರ್ಯ. ಹಾಗಾಗಿ ಇಲ್ಲಿ ನಟಿಸಿದ್ದೆ ಎನ್ನುವುದಕ್ಕೆ ಬದಲಾಗಿ ಬಣ್ಣ ಹಚ್ಚಿದೆ ಎಂದು ಕಲಾವಿದರು ಹೇಳಿಕೊಳ್ಳುವುದೇ ಪ್ರಸಾಧನದ ಮಹತ್ವವನ್ನು ಸಾರುತ್ತದೆ.

ಪ್ರಸಾಧನ ಮಾಡಿಸಿಕೊಂಡು ರಂಗದ ಮೇಲೆಯೋ ಅಥವಾ ಕ್ಯಾಮರಾ ಮುಂದೆಯೋ ಹೋಗಬೇಕಾದ ಕಲಾವಿದ ಅಥವಾ ಕಲಾವಿದೆ ತಾನು ಅಭಿನಯಿಸುವ ಪಾತ್ರದ ಸ್ವಭಾವದ ಸೂಕ್ಷ್ಮಾನುಸೂಕ್ಷ್ಮಗಳನ್ನು ಚೆನ್ನಾಗಿ ಅಧ್ಯಯನ ಮಾಡಿ ಆಯಾ ಸಂದರ್ಭಕ್ಕನುಸಾರವಾಗಿ ಅಭಿನಯಿಸಲು ಬಾಹ್ಯವಾಗಿಯಷ್ಟೇ ಅಲ್ಲದೆ ಮೈಂಡ್ ಮೇಕಪ್ (mind make-up) ಕೂಡ ಮಾಡಿಕೊಳ್ಳಬೇಕಾಗುತ್ತದೆ. ತಾನು ಅಭಿನಯಿಸುವ ಪಾತ್ರದಲ್ಲಿ ಪರಕಾಯ ಪ್ರವೇಶ ಮಾಡಬೇಕಾದುದೂ ತುಂಬಾ ಮುಖ್ಯ. ಆಗಲೇ ಪ್ರಸಾಧನ ಕೂಡ ಅರ್ಥಪೂರ್ಣವೆನಿಸುತ್ತದೆ. ಕಲಾವಿದ ತನ್ನ ವಯಸ್ಸಿಗೆ ವಿರುದ್ಧವಾದ ಪಾತ್ರ ಮಾಡುವಾಗ ಪ್ರಸಾಧನದ ಕೆಲಸ ಬಹಳ ಮುಖ್ಯ. ಇಷ್ಟಾಗಿಯೂ ಆ ಕಲಾವಿದ ಆ ಪ್ರಸಾಧನಕ್ಕೆ ಸರಿಹೊಂದುವ ಧಾಟಿಯಲ್ಲಿ ಸಂಭಾಷಣೆ ಹೇಳದೆ ಇದ್ದರೆ, ಅದಕ್ಕೆ ಬೇಕಾದ ನಡವಳಿಕೆ ತೋರದಿದ್ದರೆ ಪಾತ್ರದಲ್ಲಿ ಸಹಜತೆ ಮತ್ತು ಜೀವಂತಿಕೆ ಮರೆಯಾಗಿ ಅದೊಂದು ಫ್ಯಾನ್ಸಿ ಡ್ರೆಸ್‌ನಂತಾದರೆ ಆಶ್ಚರ್ಯವಿಲ್ಲ.

ಆದರೆ ಕಲಾವಿದ ಪ್ರಸಾಧನಕ್ಕೆ ಹೋಗುವ ಮುನ್ನ ತನ್ನ ಪಾತ್ರದ ಎಲ್ಲ ವಿವರಗಳನ್ನು ಸಂಗ್ರಹಿಸಬೇಕು. ನಿರ್ದೇಶಕ ಕೂಡ ಆ ಪಾತ್ರದ ಬಗ್ಗೆ ಪ್ರಸಾಧನ ತಜ್ಞ (Make-up Man)ನಿಗೆ ಸಾಕಷ್ಟು ವಿವರ ನೀಡಿರಬೇಕು. ಹೀಗಿದ್ದಾಗ ಕಥೆಯಲ್ಲಿ, ಪಾತ್ರ ಪೋಷಣೆಯಲ್ಲಿ ಸಹಜತೆ ಬರುತ್ತದೆ. ಈ ದೃಷ್ಟಿಯಿಂದ ಮಾದರಿಯಾಗಿ ಇಂದಿಗೂ ನಿಲ್ಲುವುದು ಇಂಗ್ಲಿಷ್ ಚಿತ್ರಗಳು. ಈಗೀಗ ಸ್ಥಳೀಯ ಭಾಷೆಗಳೂ ಸೇರಿದಂತೆ ಕನ್ನಡದಲ್ಲಿಯೂ ಪ್ರಸಾಧನ ತಂತ್ರಜ್ಞಾನ ವೃದ್ಧಿಯಾಗುತ್ತಿರುವುದು ನಿಜವಾದರೂ ಇತರ ವಿಭಾಗಗಳಿಗೆ ಹೋಲಿಸಿದರೆ ಈ ಪ್ರಗತಿ ಕೊಂಚ ನಿಧಾನವೇ ಎನ್ನಬಹುದು.

(ಚಿತ್ರ ೨) 'ಫಣಿಯಮ್ಮ' - ಬೇಬಿ ಪ್ರತಿಮಾ ನೈಜತೆಗಾಗಿ ಕೇಶಮುಂಡನ

ಮೂಕಿ ಚಿತ್ರಗಳ ಕಾಲದಿಂದ ಇಂದಿನ ಸಿನಿಮಾಸ್ಕೋಪ್ ಯುಗದವರೆಗೂ ಪ್ರಸಾಧನ ಕಲೆ ಬೆಳೆದು ಬಂದ ರೀತಿಯನ್ನು ಸೂಕ್ಷ್ಮವಾಗಿ ಗಮನಿಸಿದರೆ ಅದರಲ್ಲಿ ಚಿತ್ರರಂಗದ ಇತಿಹಾಸವೇ ಬಿಚ್ಚಿಕೊಳ್ಳುತ್ತದೆ. ಪ್ರಸಾಧನದಲ್ಲಿ ಸುಧಾರಣೆ ಹೇಗೆ ಆಗುತ್ತ ಬಂತು ? ಹಿಂದೆ ಅದರ ವಿಧಾನ ಹೇಗಿತ್ತು ? ಅನುಭವದಿಂದ, ಅಲ್ಲಿ ಇಲ್ಲಿ ಕಂಡ ತಿಳಿವಳಿಕೆಯಿಂದ ಪ್ರಸಾಧನ ಕಲಾವಿದ ಏನೇನು ಕಲಿಯುತ್ತಾ ಬಂದ ? ಚಿತ್ರರಂಗದಲ್ಲಿ ನಟ ನಟಿಯರಿಗೆ ತಾರಾಮೌಲ್ಯ ಹೆಚ್ಚುತ್ತ ಹೋದಂತೆ ಅವರು ಹಾಗೂ ಅವರ ವೈಯಕ್ತಿಕ ಪ್ರಸಾಧನ ತಜ್ಞರು ಹೇಗೆ ಜನಪ್ರಿಯರಾಗುತ್ತ ಬಂದರು ಎಂದು ಗುರುತಿಸುವುದು.

ಇತಿಹಾಸವನ್ನು ಕೆದಕುತ್ತ ಹೋದರೆ ಪಾರ್ಸಿ ಕಂಪೆನಿ ನಾಟಕಗಳು, ಯಕ್ಷಗಾನ ಬಯಲಾಟ ಪ್ರಸಂಗಗಳು ಅಲ್ಲಿನ ಪ್ರಸಾಧನ ವಿಧಾನಗಳು ಕಾಣಸಿಗುತ್ತವೆ. ಆಗಿನ ನಾಟಕಗಳಲ್ಲಿ ನಟ ಮುಖಕ್ಕೆ ಬಿಳಿಯ ಬಣ್ಣ ಬಳಿದು ತುಟಿ, ಕೆನ್ನೆಗಳಿಗೆ ಇಂಗಳೀಕ ಹಚ್ಚಿ, ಕಣ್ಣು-ಹುಬ್ಬುಗಳಿಗೆ ಕಾಡಿಗ ತೀಡಿ ಹಳದಿ ಬೇಕೆನಿಸಿದರೆ ಹರಿದಾಳವನ್ನು ಉಪಯೋಗಿಸುತ್ತಿದ್ದ. ಆಗಿದ್ದ ಸವಲತ್ತುಗಳು ಅಷ್ಟೆ. ಆದರೆ ಈಗ ವಿದೇಶೀಯ ಮಾಕ್ಸ್ ಫ್ಯಾಕ್ಟರ್ಸ್ ವರ್ಣಗಳು ಲಭ್ಯ. ಚಿತ್ರರಂಗದ ಪ್ರಮುಖ ಕಲಾವಿದರು ತಾವೇ ವಿಶೇಷ ಪ್ರಸಾಧನ ಕಲಾವಿದರನ್ನು ಹೊಂದಿರುತ್ತಾರೆ. ಚಿತ್ರರಂಗದ ನಾಯಕ, ನಾಯಕಿಯರು ಅನೇಕರಿಗೆ ಒಂದು ರೀತಿಯ ರೂಪದರ್ಶಿಗಳಾದುದರಿಂದ ಜನ ತಾವು ಅವರಂತೆ ಆಗಬೇಕೆಂದು ಬಯಸುತ್ತಾರೆ. ಇದರಿಂದಾಗಿ ಇಂದು ಜನಜೀವನದಲ್ಲೂ ಸೌಂದರ್ಯವನ್ನು ಹೆಚ್ಚಿಸುವ ವಸ್ತುಗಳು, ಪ್ರಸಾಧನ ಸಾಮಗ್ರಿಗಳು ಉಪಯೋಗದಲ್ಲಿವೆ. ಇಂಥ ಆಕರ್ಷಣೆ ಹೆಚ್ಚಿದ್ದರಿಂದ ಬ್ಯೂಟಿ ಪಾರ್ಲರ್‌ಗಳ ಸಂಖ್ಯೆ ಹೆಚ್ಚಲು ಕಾರಣವೋ ಅಥವಾ ಬ್ಯೂಟಿ ಪಾರ್ಲರ್‌ಗಳು ಈ ಮನೋಭಾವಕ್ಕೆ ಸ್ಫೂರ್ತಿ ನೀಡಿದವೋ ಎನ್ನುವುದು ಇಲ್ಲಿ ಚರ್ಚಿಸುವ ವಿಷಯವಲ್ಲ.

ಮೊದಮೊದಲು ಪ್ರಸಾಧನಕ್ಕೆ ಬಳಸುತ್ತಿದ್ದ ಬಣ್ಣಗಳು ಹೂವು, ಎಲೆ, ಇಂಗಳೀಕ, ಹರಿದಾಳ ಮೊದಲಾದವುಗಳಿಂದ ತಯಾರಿಸುವಂಥದ್ದಾಗಿತ್ತು. ಬಿಳಿ ಬಣ್ಣಕ್ಕೆ ಸಫೇದಾ ಬಳಸುತ್ತಿದ್ದರು. ಸೀಸದ ಬಿಳಿ ಆಕ್ಸೈಡ್ ಅಥವಾ ಜಿಂಕ್ ಆಕ್ಸೈಡ್ ಚರ್ಮಕ್ಕೆ ಅಪಾಯಕಾರಿ ಎನ್ನುವುದು ಕ್ರಮೇಣ ಅರಿವಾಗತೊಡಗಿತು. ಇದರ ಸಂಶೋಧನೆಯಲ್ಲಿ ಪಾಶ್ಚಾತ್ಯರು ನಮಗಿಂತ ಮುಂದುವರಿದು ಇಂದಿಗೂ ಈ ರಂಗದಲ್ಲಿ ಅವರದೇ ಆಧಿಪತ್ಯ ನಡೆಯುತ್ತಿದೆ. ಜರ್ಮನಿಯ ಲೈಶನರ್ ಎಂಬ ವಿಜ್ಞಾನಿ ಇಂದಿನ ಅಲಂಕಾರ ವಸ್ತುಗಳಿಗೆ ನಾಂದಿ ಹಾಡಿದ. ಅನಂತರ ಮ್ಯಾಕ್ಸ್ ಫ್ಯಾಕ್ಟರ್, ಸ್ಟೈನ್ಸ್ ಎಂಬುವರ ಸಂಶೋಧನೆಗಳು ಪ್ರಸಾಧನ ಕಲಾವಿದರಿಗೆ ವರದಾನವಾದವು. ಆದರೆ ಇವೆಲ್ಲ ದುಬಾರಿ ಎನ್ನುವುದಂತೂ ನಿಜ.

ಪ್ರಸಾಧನ ಕಲಾವಿದರಾಗಬಯಸುವವರಿಗೆ ಪ್ರೈಮರಿ ಕಲರ್ಸ್, ವಾರ್ಮ್ ಕಲರ್ಸ್, ಕೋಲ್ಡ್ ಕಲರ್ಸ್, ನ್ಯೂಟ್ರಲ್ ಕಲರ್ಸ್, ಕಾಂಪ್ಲಿಮೆಂಟರಿ ಕಲರ್‌ಗಳ ಪರಿಚಯ ಇರುವುದು ಸಾಮಾನ್ಯ. ಇದರೊಂದಿಗೆ ಪ್ರಸಾಧನದ ಮೇಲೆ ಬೆಳಕಿನಿಂದ ಉಂಟಾಗುವ ಪರಿಣಾಮಗಳೇನು ಎಂದು ತಿಳಿದಿರಬೇಕಾದ್ದೂ ಅನಿವಾರ್ಯ. ಒಬ್ಬೊಬ್ಬರ ಮೈ ಚರ್ಮದ ಬಣ್ಣ ಒಂದೊಂದು ರೀತಿ ಇರುವುದರಿಂದ ಯಾವ ಮುಖಕ್ಕೆ ಯಾವ ರೀತಿಯ ಫೌಂಡೇಶನ್ ಬಳಸಬೇಕು, ಪ್ಯಾನ್‌ಕೇಕ್ ಎಲ್ಲಿ ಉಪಯೋಗಿಸಬೇಕು, ಲಿಕ್ವಿಡ್ ಫೌಂಡೇಶನ್ ಎಲ್ಲಿ ಅಗತ್ಯ, ಎಷ್ಟರ ಮಟ್ಟಿಗೆ ಅಗತ್ಯ ಎಂಬ ಸಾಮಾನ್ಯ ವಿಷಯಗಳ ತಿಳಿವಳಿಕೆ ಅಗತ್ಯ. ಪ್ರಸಾಧನ ಆದಾಗ ಡೀಪ್ ಪ್ಯಾಡ್‌ಗಳು ಕಣ್ಣುಗಳನ್ನು, ಗುಳಿ ಬಿದ್ದ ಕನ್ನೆಗಳನ್ನು ಹೇಗೆ ತೋರಿಸಬಲ್ಲವು ಎನ್ನುವುದನ್ನು ಪ್ರಸಾಧನ ಕಲಾವಿದ ಅನುಭವದಿಂದ ಕಲಿಯುತ್ತ ಹೋಗುತ್ತಾನೆ. ಕೆಲವೊಮ್ಮೆ ಕೆಲವು ಪಾತ್ರಗಳಿಗೆ ಕಣ್ಣು, ಮೂಗು, ಬಾಯಿಗಳನ್ನು ಬದಲಾಯಿಸಬೇಕಾಗುತ್ತದೆ, ಇನ್ನು ಕೆಲವೊಮ್ಮೆ ಮುಖದ ಮೇಲೆ ಚಾಕುವಿನಿಂದ ಕುಯ್ದ ಗಾಯ ತೋರಿಸಬೇಕಾಗುತ್ತದೆ. ಮತ್ತೆ ಕೆಲವೊಮ್ಮೆ ಸಣ್ಣ ಗಾಯಗಳನ್ನು ಪ್ರಸಾಧನದ ಮೂಲಕ ಸೃಷ್ಟಿ ಮಾಡಬೇಕಾಗುತ್ತದೆ. ಇಂಥ ಸಂದರ್ಭಗಳಲ್ಲಿ ಸ್ಪಾಂಜ್, ಗಮ್, ಲ್ಯಾಟೆಕ್ಸ್, ದ್ರವರೂಪದಲ್ಲಿರುವ ರಬ್ಬರ್, ಸಾಧಾರಣವಾದ ಹತ್ತಿ ಮುಂತಾದ ವಸ್ತುಗಳು ಹೇಗೆ ಮೇಕಪ್ ಕೆಲಸಕ್ಕೆ ಸಹಾಯಕವಾಗುತ್ತವೆ ಎನ್ನುವುದನ್ನು ತಿಳಿಯಬೇಕು. ವೈವಿಧ್ಯಮಯ ಗಡ್ಡ, ಮೀಸೆಗಳು ಬೇಕಾದ ಸಂದರ್ಭದಲ್ಲಿ ಕ್ರೇಪ್ ಹೇರ್ ಹೇಗೆ ಬಳಸಬಹುದು ಎನ್ನುವುದು ಪ್ರಸಾಧನ ಕಲಾವಿದನ ಜಾಣ್ಮೆಯನ್ನು ಅವಲಂಬಿಸಿದ ವಿಷಯ. ಕ್ರೇಪ್ ಹೇರ್ ಅನ್ನು ನಾಟಕಗಳಲ್ಲಿ ವಿಶೇಷವಾಗಿ ಉಪಯೋಗಿಸುತ್ತಾರಾದರೂ ಅದರದ್ದೇ ಒಂದು ವಿಶೇಷವಿದೆ. ಅದರಲ್ಲಿ ಎರಡು ತರಹಗಳಿವೆ. ಒಂದು ಕ್ರೇಪ್ ಹೇರ್ ಮತ್ತು ಕ್ರೇಪ್ ಫೈಬರ್. ಕ್ರೇಪ್ ಹೇರ್‌ಗೆ ಬೆಲೆ ಜಾಸ್ತಿಯಾಗಿರುವುದರಿಂದ ಕ್ರೇಪ್ ಫೈಬರ್‌ಗಳ ಉಪಯೋಗವೇ ಹೆಚ್ಚು.

ಕ್ರೇಪ್ ಫೈಬರ್ ಬೇಕಾದ ಬಣ್ಣಗಳಲ್ಲಿ ಸಿಗುತ್ತದೆ. ಇದರಿಂದ ಎಲ್ಲ ತರಹದ ಗಡ್ಡ, ಮೀಸೆಗಳನ್ನೂ ಅಂಟಿಸಬಹುದು. ಕ್ರೇಪ್ ಹೇರ್ ಉಪಯೋಗಿಸುವುದರಲ್ಲಿ ನಟರು ಬಹಳ ಮಿತವ್ಯಯಿಗಳಾಗಿರಬೇಕು. ಹೆಚ್ಚಾಗಿ ಉಪಯೋಗಿಸಿದ್ದಾದರೆ ಅದು ಮುಖದಿಂದ ಜಾರಿ ಬರುವುದೂ ಉಂಟು. ಅಭಿನಯಿಸುವ ಸಂದರ್ಭದಲ್ಲಿ ಇದು ಜಾರಿ ಬರುವುದಾಗಲಿ, ಅದನ್ನು ಒತ್ತಿ ಹಿಡಿಯುವುದಾಗಲಿ ಅದಲ್ಲಿ ಹಾಸ್ಯಾಸ್ಪದವಾಗುವ ಸಾಧ್ಯತೆ ಇಲ್ಲದಿಲ್ಲ. ಈ ಕ್ರೇಪ್‌ಹೇರ್ ಜಡೆಗಳ ಪರಿಣಾಮ ಬೀರುತ್ತದೆ. ಮೊಟ್ಟಮೊದಲು ನಟನಿಗೆ ಎಷ್ಟು ಉದ್ದ ಗಡ್ಡ ಬೇಕೆಂದು ನಿರ್ಧರಿಸಿ. ಅದರಲ್ಲಿ ಕ್ರೇಪ್‌ಹೇರ್ ಜಡೆಯ ಅರ್ಧದಷ್ಟನ್ನು ಕತ್ತರಿಸಿಕೊಳ್ಳಬೇಕು. ಅದನ್ನು ಒಂದು ಕಡೆ ಹಿಡಿದು ಚೆನ್ನಾಗಿ ಎಳೆದು ಅರಳಿಸಿ ಗಡ್ಡವನ್ನು ಮಾಡಬೇಕು. ಇದು ಬಹಳ ಜಾಗರೂಕತೆಯಿಂದ ಮಾಡಬೇಕಾದ ಕೆಲಸ. ಗಡ್ಡವನ್ನು ಮಾಡಿದ ಮೇಲೆ ಸ್ವಲ್ಪ ನೀರಿನಿಂದ ತೋಯಿಸುವುದು ಒಳ್ಳೆಯದು. ನಂತರ ಕ್ರೇಪ್‌ಹೇರ್ ಅನ್ನು ಮೇಜಿನ ಮೇಲೆ ಸ್ವಲ್ಪ ಹೊತ್ತು ಹರಡಿ ಬಾಚಬೇಕು. ಇದರಿಂದ ಅದರಲ್ಲಿರುವ ಸುಕ್ಕುಗಳು ಹೋಗುತ್ತವೆ. ಆಗಲೂ ಮೃದುವಾಗದಿದ್ದರೆ ಅದರ ಮೇಲೆ ಒಂದೆರಡು ಗಂಟೆಗಳ ಕಾಲ ಭಾರವಿರಿಸಬೇಕಾಗುತ್ತದೆ.

ಹೀಗೆ ತಯಾರಾದ ಗಡ್ಡ, ಮೀಸೆಗಳನ್ನು ಅಂಟಿಸುವಾಗ ಅವು ಸಾಮಾನ್ಯವಾಗಿ ಹೇಗೆ ಬೆಳೆಯುತ್ತದೆನ್ನುವುದನ್ನು ತಿಳಿದಿರಬೇಕು. ಎಲ್ಲವೂ ತುಟಿಗಳ ಕೆಳಭಾಗದಿಂದಲೇ ಪ್ರಾರಂಭವಾಗುವುದು ಒಂದು ಕ್ರಮವಾದರೆ ತುಟಿಗಳ ಕೆಳಗೆ ಎರಡು ಮೂರು ಕಡೆಗಳಿಂದ ಪ್ರಾರಂಭವಾಗುವುದು ಮತ್ತೊಂದು ರೀತಿ. ಗಡ್ಡಗಳು ಕಿವಿಗಳಿಗೆ ಅಂಟಿಕೊಂಡು ಬೆಳೆಯುವುದಿಲ್ಲವೆನ್ನುವ ವಿಷಯವನ್ನು ಪ್ರಸಾಧನ ಕಲಾವಿದ ಅರಿತಿರಬೇಕು. ಅಂಟಿಸುವಾಗ ಸ್ಪಿರಿಟ್ ಗಮ್ ಅನ್ನು ಬ್ರಶ್‌ನಿಂದ ಎಲ್ಲೆಲ್ಲಿ ಅಂಟಿಸಬೇಕೋ ಅಲ್ಲಿ ಜಾಗ್ರತೆಯಾಗಿ ಲೇಪಿಸಿ, ಗಡ್ಡಕ್ಕೆ ಉಪಯೋಗಿಸುವ ಕ್ರೇಪ್ ಹೇರ್ ಅನ್ನು ಅಂಟಿಸಿ, ಒದ್ದೆ ಬಟ್ಟೆಯಿಂದ ಸ್ವಲ್ಪ ಒತ್ತಬೇಕಾಗುತ್ತದೆ. ಇದರಿಂದ ಸ್ಪಿರಿಟ್ ಗಮ್‌ಗೆ ಕ್ರೇಪ್ ಹೇರ್ ಚೆನ್ನಾಗಿ ಅಂಟಿಕೊಳ್ಳುತ್ತದೆ. ಹೀಗೆಯೇ ಮೀಸೆಗಳನ್ನು ಅಂಟಿಸುವುದೂ ಒಂದು ಮುಖ್ಯ ವಿಷಯ. ಕ್ರೇಪ್ ಹೇರ್ ಅನ್ನು ಒಂದೇ ಭಾಗ ಮಾಡಿ ಅಂಟಿಸುವುದು ತಪ್ಪು. ಎರಡು ಭಾಗ ಮಾಡಿ ಎರಡು ಪಕ್ಕಗಳಲ್ಲಿ ಅಂಟಿಸಬೇಕು. ನಂತರ ಅವನ್ನು ಬೇಕಾದ ರೂಪಿಗೆ ತಕ್ಕಂತೆ ಕತ್ತರಿಸಬೇಕು. ಕಣ್ಣುರೆಪ್ಪೆಗಳಿಗೆ ಪೈಂಟ್ ಹಾಕುವುದು ಒಳಿತು. ಕ್ರೇಪ್ ಹೇರ್ ಅಂಟಿಸುವುದರಿಂದ ಕೆಲವು ವೇಳೆ ಕಲಾವಿದರಿಗೆ ತೊಂದರೆಯಾಗಬಹುದು. ಆದರೂ ಕಣ್ಣು ರೆಪ್ಪೆಗಳು ಉದ್ದವಾಗಿರಬೇಕಾದರೆ ಕ್ರೇಪ್ ಹೇರ್ ಅನ್ನೇ ಬಳಸಬೇಕು.

(ಚಿತ್ರ ೩) 'ವಿಜಯನಗರದ ವೀರಪುತ್ರ' - ಸುದರ್ಶನ್

ಗುಬ್ಬಿ ವೀರಣ್ಣನವರು ನಾಟಕ ಕಂಪೆನಿಯ ಹಲವಾರು ವಿಭಾಗಗಳಲ್ಲಿ ದುಡಿದವರು. ಬಣ್ಣ ಹಾಕುವ ಕಲೆಯನ್ನೂ ಸ್ವತಃ ಅವರೇ ಕರಗತ ಮಾಡಿಕೊಂಡಿದ್ದರು. ಇವರು ಮೂಕಿ ಚಿತ್ರಗಳನ್ನು ತಯಾರಿಸಿದ ನಂತರ ತಮ್ಮ ಕಂಪೆನಿ ನಾಟಕಗಳಾದ ಸದಾರಮೆ, ಸುಭದ್ರ, ಜೀವನ ನಾಟಕ, ಹೇಮರೆಡ್ಡಿ ಮಲ್ಲಮ್ಮ, ಬೇಡರ ಕಣ್ಣಪ್ಪ - ಕಥಾವಸ್ತುಗಳನ್ನು ಚಿತ್ರಗಳನ್ನಾಗಿ ಮಾಡಿದರು. ಹೀಗೆ ಕ್ರಮೇಣ ಎಲ್ಲ ಅನುಭವಗಳನ್ನೂ ಹೊಂದಿ, ವೃತ್ತಿ ನಾಟಕರಂಗದಿಂದ ಚಿತ್ರರಂಗಕ್ಕೆ ವಲಸೆ ಬಂದವರಲ್ಲಿ ಸುಬ್ಬಯ್ಯನಾಯ್ಡು, ಆರ್.ನಾಗೇಂದ್ರರಾಯರು, ಮರಿರಾವ್, ರಾಘವೇಂದ್ರರಾವ್, ಡಿಕ್ಕಿ ಮಾಧವರಾವ್, ಬಿ.ಜಯಮ್ಮ, ಕೆ.ಹಿರಣ್ಣಯ್ಯ, ಹೊನ್ನಪ್ಪ ಭಾಗವತರ್, ಸುಭದ್ರಮ್ಮ ಮನ್ಸೂರ್, ಜಿ.ವಿ.ಅಯ್ಯರ್, ನರಸಿಂಹರಾಜು, ಬಾಲಕೃಷ್ಣ, ದಿನೇಶ್, ರಾಜಕುಮಾರ್, ಮಾಸ್ಟರ್ ಹಿರಣ್ಣಯ್ಯ, ಯೋಗಾನರಸಿಂಹ, ಮುಸುರಿ ಕೃಷ್ಣಮೂರ್ತಿ, ಎಂ.ವಿ.ವಾಸುದೇವರಾವ್, ಚಿಂದೋಡಿ ಲೀಲಾ ಮುಂತಾದವರು ಪ್ರಮುಖರು. ಆ ಕಾಲದ ನಾಟಕಗಳಲ್ಲಿ ಪಾತ್ರ ಮತ್ತು ವರ್ಣಾಲಂಕಾರ ವೇಷಭೂಷಣಗಳಿಂದ ಇಂದಿಗೂ ಜನಮನದಲ್ಲಿ ಉಳಿದ ಪಾತ್ರಗಳೆಂದರೆ ಬುದ್ಧ, ನಾಜೂಕಯ್ಯ, ಅಗಸ, ಸಾಬಿ, ಕಳ್ಳ, ಬ್ರಾಹ್ಮಣ, ವಿಧವೆ ಮುಂತಾದವು.

ನವ್ಯ ನಾಟಕಗಳಲ್ಲಾದ ಬದಲಾವಣೆಗಳ ಪರಿಣಾಮವಾಗಿ ವರ್ಣಾಲಂಕಾರದಲ್ಲಿ ವೈಭವೀಕರಣ ಹೋಗಿ ವಾಸ್ತವತೆ ಬಂತು. ಪ್ರಸಾಧನ, ಬೆಳಕಿನ ವ್ಯವಸ್ಥೆ ಇವುಗಳ ನಡುವಿನ ಸಂಬಂಧ ಸ್ಪಷ್ಟವಾಗತೊಡಗಿತು. ಕಡಿಮೆ ಬಣ್ಣ ಬಳಸಿಯೂ ಸೂಕ್ತ ಬೆಳಕಿನಲ್ಲಿ ಹಲವು ಭಾವನೆಗಳನ್ನು ತೋರಿಸಲು ಸಾಧ್ಯ ಎಂದು ಕಂಡುಕೊಳ್ಳಲಾಯಿತು. ಹವ್ಯಾಸಿ ರಂಗಭೂಮಿಯ ಖ್ಯಾತ ನಾಟಕ 'ತುಘಲಕ್' ಯಾವ ಥಳಕು ಬಳಕು, ವೇಷಭೂಷಣ, ವರ್ಣಾಲಂಕಾರ ಇಲ್ಲದೆ ವೈಚಾರಿಕತೆಗೆ ಒತ್ತು ಕೊಟ್ಟಿತು. 'ಕಾಕನಕೋಟೆ', 'ನೋಡಿ ಸ್ವಾಮಿ ನಾವಿರೋದು ಹೀಗೆ', 'ನಾಗಮಂಡಲ', 'ಹರಕೆಯ ಕುರಿ'. 'ಸಂಗ್ಯಾ ಬಾಳ್ಯಾ'ವಂತಹ ನಾಟಕಗಳು ರಂಗಭೂಮಿಯ ಮೇಲೆ ಪ್ರಯೋಗಗಳಾಗಿ ಪ್ರಾರಂಭವಾಗಿ ಪರಿಪಕ್ವತೆ ಪಡೆದು ಅದೇ ಸರಳತೆ, ಸಹಜತೆಯಿಂದ ಚಿತ್ರ ಮಾಧ್ಯಮಕ್ಕೆ ಬಂದವು. ಇದು ನಾಟಕರಂಗದಿಂದ ಚಿತ್ರರಂಗಕ್ಕೆ ಆದ ಲಾಭವೆನ್ನಬಹುದು. ಅತಿ ನಾಟಕೀಯತೆ, ಅತಿ ಮಾತು, ಮಾಧ್ಯಮಕ್ಕೆ ಅಗತ್ಯವಿಲ್ಲದ ವರ್ಣಾಲಂಕಾರದಿಂದ 'ದೇವದಾಸಿ'ಯಂತಹ ಯಶಸ್ವಿ ನಾಟಕಗಳು ಚಿತ್ರಗಳಾದಾಗ ಸೋತಿವೆ.

೧೯೩೯ರಲ್ಲಿ ಮೋಹನ್ ಭವನಾನಿ ಅವರ ನಿರ್ದೇಶನದಲ್ಲಿ 'ವಸಂತಸೇನಾ' (ಮೃಚಕಟಿಕಾ) ಚಿತ್ರ ತಯಾರಾಯಿತು. ಕಲಾ ವಿಮರ್ಶಕರಾಗಿ ರಾಷ್ಟ್ರೀಯ ಖ್ಯಾತಿ ಪಡೆದಿದ್ದ ಜಿ.ವೆಂಕಟಾಚಲಂ ಈ ಚಿತ್ರದ ಕಲಾನಿರ್ದೇಶಕರಾಗಿದರೆ ಟಿ.ಪಿ.ಕೈಲಾಸಂ, ಕಮಲಾದೇವಿ ಚಟ್ಟೋಪಾಧ್ಯಾಯ, ಡಾ|ಎಲ್.ಎಸ್.ನಾರಾಯಣಶಾಸ್ತ್ರಿ ಮುಂತಾದವರು ತಾರಾಗಣದಲ್ಲಿದ್ದರು. ಚಲನಚಿತ್ರವನ್ನು ಬಯಾಸ್ಕೋಪ್ ಎನ್ನುತ್ತಿದ್ದ ಕಾಲದ ಆ ಚಿತ್ರದಲ್ಲಿ ವೃತ್ತಿಪರತೆ ಕಾಪಾಡಿಕೊಳ್ಳಲು ಅವರೆಲ್ಲ ಯತ್ನಿಸಿದ್ದರ ಫಲವಾಗಿ ವೇಷಭೂಷಣ ಹಾಗೂ ಪ್ರಸಾಧನದ ಸಲುವಾಗಿ ರವಳಪ್ಪ ಎನ್ನುವವರನ್ನು ಗೊತ್ತು ಮಾಡಿದ್ದರು.

ಆ ಸಮಯದಲ್ಲಿ ತಲೆ ಎತ್ತಿದ ಸೂರ್ಯ ಫಿಲಂ ಬೆಂಗಳೂರಿನಲ್ಲಿ ಒಂದು ಸ್ಟುಡಿಯೋ ಹುಟ್ಟು ಹಾಕಿತು. ೧೯೩೯ರಲ್ಲಿ 'ರಾಜಹೃದಯ' ಆ ಸಂಸ್ಥೆಯ ಮೊದಲ ಬಿಡುಗಡೆಯಾದ ಚಿತ್ರ. ಆಗ ಕನ್ನಡ ಚಿತ್ರಗಳಿಗೂ ಇಂಗ್ಲಿಷ್ ಹೆಸರಿಡುವ ಪದ್ಧತಿಯಿದ್ದುದರಿಂದ ಆ ಚಿತ್ರಕ್ಕೆ 'ಹಾರ್ಟ್ ಆಫ್ ದಿ ಕಿಂಗ್' ಎಂದು ಹೆಸರನ್ನಿಟ್ಟಿದ್ದರು. ಲಕ್ಷ್ಮೀಬಾಯಿ ಆ ಚಿತ್ರದ ನಾಯಕಿಯಾಗಿದ್ದರು. ಸ್ಟುಡಿಯೋ ಎಂದಾಗ ಅಲ್ಲೊಬ್ಬ ಪ್ರಸಾಧನ ಕಲಾವಿದ ಇರಲೇಬೇಕು ಎನ್ನುವ ಸಂಪ್ರದಾಯವೂ ಹುಟ್ಟಿಕೊಂಡಿತು. ನಂತರ ಟಾಕಿ ಚಿತ್ರ ಬರುವಾಗಲೂ ಕಲಾವಿದರು ವಿವಿಧ ಪಾತ್ರಗಳಲ್ಲಿ ರಾರಾಜಿಸಲು ಆ ಕಂಪೆನಿಗೊಬ್ಬ ಪ್ರಸಾಧನ ಕಲಾವಿದ ಅನಿವಾರ್ಯ ಎನ್ನುವಂತಾಯಿತು. ಆಗ ಆ ಕಂಪೆನಿಗೆ ಪ್ರಸಾಧನ ಕಲಾವಿದ ಆಗಿದ್ದವರು ಬಾಬೂರಾವ್.

ಕಲಾವಿದರು ವೇಷಭೂಷಣಗಳೊಂದಿಗೆ ಪ್ರಸಾಧನ ಮಾಡಿಕೊಂಡು ಮೆರವಣಿಗೆಯಲ್ಲಿ ಚಿತ್ರ ತಂಡದೊಂದಿಗೆ ಜನರ ಬಳಿ ಹೋಗುತ್ತಿದ್ದರು. ಈ ದೃಶ್ಯವನ್ನೂ ಚಿತ್ರಿಸಿ ಚಿತ್ರದಲ್ಲಿ ಅಳವಡಿಸುತ್ತಿದ್ದುದರಿಂದ ತೆರೆಯ ಮೇಲೆ ತಾವೂ ಬರಬಹುದೆಂಬ ಆಸೆಯಿಂದ ಜನ ಸಾಮಾನ್ಯರೂ ಮೆರವಣಿಗೆಯಲ್ಲಿ ಭಾಗವಹಿಸುತ್ತಿದ್ದರು. ಮಾತ್ರವಲ್ಲದೆ ಈ ಕಾರಣಕ್ಕಾಗಿ ಚಿತ್ರ ನೋಡಲೂ ಹೋಗುತ್ತಿದ್ದರು. ಈ ಮೆರವಣಿಗೆ ಸಂದರ್ಭದಲ್ಲಿಯೂ ಪ್ರಸಾಧನ ಕಲಾವಿದ ಕೂಡ ಕಲಾವಿದರ ಪಕ್ಕದಲ್ಲಿಯೇ ಇರಬೇಕಾಗಿತ್ತು.

ಆ ಕಾಲದಿಂದ ಈಗಿನವರೆಗೂ ಫೋಟೋಜೆನಿಕ್ ಫೇಸ್ ಎನಿಸಿದಾಗ ಫೋಟೋ ಸೆಷನ್‌ಗಳೂ, ಸೆಟ್ ಮೇಲೆ ಹೋಗಲು ಕಲಾವಿದರನ್ನು ಆಯ್ಕೆ ಮಾಡುವ ಮುನ್ನ 'ಮೇಕಪ್ ಟೆಸ್ಟ್'ಗಳೂ ನಡೆಯುತ್ತಲೇ ಇವೆ. ಕೆಲವರಂತೂ ಮೇಕಪ್ ಇದ್ದಾಗ ಹಾಗೂ ಇಲ್ಲದಾಗ ತುಂಬಾ ವ್ಯತ್ಯಾಸವಾಗಿ ಕಂಡುಬರುವುದೂ ಹೌದು. ಆದ್ದರಿಂದ ಚಿತ್ರರಂಗದಲ್ಲಿ ಅಂತಿಮವಾಗಿ ಮೇಕಪ್ ಹಾಕಿಕೊಂಡಾಗ ಹೇಗೆ ಕಾಣುತ್ತಾರೆನ್ನುವುದು ಮುಖ್ಯ. ಆದ್ದರಿಂದ ಚಿತ್ರರಂಗ ಪ್ರವೇಶಿಸುವವರು ಮೇಕಪ್ ಟೆಸ್ಟ್ ಎದುರಿಸಲೇಬೇಕು. ಇದು ಸೂಕ್ಷ್ಮ ವಿಚಾರವಾದುದರಿಂದ ನಟ-ನಟಿಯರು ಛಾಯಾಗ್ರಾಹಕ ಹಾಗೂ ಪ್ರಸಾಧನ ಕಲಾವಿದರನ್ನು ತುಂಬಾ ಗೌರವ, ಪ್ರೀತಿಯಿಂದ ಕಾಣುತ್ತಾರೆ. ಅವರುಗಳು ಉದ್ದೇಶಿತರಾಗಿಯೋ ಆಕಸ್ಮಿಕವಾಗಿಯೋ ತಪ್ಪು ಮಾಡಿದರೂ ಅದರ ಪರಿಣಾಮ ಬೀರುವುದು ಕಲಾವಿದರ ಮೇಲೆ ಎನ್ನುವುದೂ ನಿಜ.

ಸಿನಿಮಾದಲ್ಲಿ ತಂತ್ರ ವಿಶೇಷತೆಯಿಂದಾಗಿ ಕಲಾವಿದರಿಗೆ ಯಾವ ವರ್ಣಾಲಂಕಾರವೂ ಇಲ್ಲದೆ ಅಥವಾ ಸ್ವಲ್ಪವೇ ವರ್ಣಾಲಂಕಾರ ಮಾಡಿ ಪಾತ್ರವನ್ನು ನಿರೂಪಿಸಬಹುದು. ಈಗಿನ ಸಿನಿಮಾ ಪ್ರಸಾಧನ ಕಲೆಯಲ್ಲಿ ನಟ-ನಟಿಯರ ತಾರಾವರ್ಚಸ್ಸನ್ನು ಉಳಿಸಲು, ಬೆಳೆಸಲು ವರ್ಣಾಲಂಕಾರ ವಿಭಾಗದಲ್ಲಿ ಈಗ ವಿಗ್ ತಯಾರಿಸುವವ, ದಂತ ವೈದ್ಯ, ಪ್ಲಾಸ್ಟಿಕ್ ಸರ್ಜನ್, ವರ್ಣ ವಿಶೇಷ ತಜ್ಞರು ಪ್ರವೇಶಿಸಿದ್ದಾರೆ. ಸಿನಿಮಾದಲ್ಲಿ ಪ್ರಸಾಧನದ ಉದ್ದೇಶ ಕಲಾವಿದರ ಭಾವಾಭಿವ್ಯಕ್ತಿಗೆ ನೆರವಾಗುವುದು ಮಾತ್ರವಲ್ಲ, ಆ ಕಾರ್ಯಕ್ಕೆ ಅನೇಕ ತಂತ್ರಗಳ ನೆರವಿದೆ. ಇಲ್ಲಿ ಒಂದೇ ಒಂದು ಸಲದ ಅಭಿನಯಕ್ಕಾಗಿ ವರ್ಣಾಲಂಕಾರ ಪರಿಣತಿ, ಪರಿಪಕ್ವತೆ ತಲುಪಿದರೂ ಸಾಕು. ಆದರೆ ಅದು ಸುಂದರ ಹಾಗೂ ಆದರ್ಶಮಯವಾಗಿರಬೇಕು. ಚಿತ್ರರಂಗದಲ್ಲಿ ಕಲಾವಿದರ ಆಯ್ಕೆಯಲ್ಲಿ ಮೊದಲ ಆದ್ಯತೆ ಸಿಗುವುದು ಪ್ರತಿಭೆಗಿಂತ ಆತನ ಫೋಟೋಜೆನಿಕ್ ಮುಖಕ್ಕೆ ಎನ್ನುವುದು ಸುಳ್ಳಲ್ಲ. ಯಾಕೆಂದರೆ ಇಲ್ಲಿ ಗ್ಲಾಮರ್ ಮುಖ್ಯ. ಇದು ಬಣ್ಣದ ಕನಸುಗಳನ್ನು ಮಾರುವ ಮಾಯಾಲೋಕ. ಹೀಗಾಗಿ ನಾಯಕಿ ಆಟ್ರಾಕ್ಟಿವ್, ಗ್ಲಾಮರಸ್, ಪ್ರೆಟ್ಟಿ, ಸೆಕ್ಸಿಯಾಗಿರಬೇಕೆಂದು ಸಾಮಾನ್ಯ ಅಭಿಪ್ರಾಯವಿದೆ. ಇಂಥ ಸಂದರ್ಭಗಳಲ್ಲಿ ನಾಯಕಿಯ ಮೈ ಬಣ್ಣ ಬೇರೆಯೇ ಇದ್ದರೂ ಪ್ರಸಾಧನ ಕಲಾವಿದ ಹಾಗೂ ಛಾಯಾಗ್ರಾಹಕ ಪಾತ್ರಕ್ಕೆ ಬೇಕಾದಂತೆ ಅವಳನ್ನು ಸುಂದರಿಯಾಗಿ ನಿರೂಪಿಸುವಲ್ಲಿ ಯಶಸ್ವಿಯಾಗುತ್ತಾರೆ. ಒಬ್ಬ ಪೈಂಟ್, ಪೌಡರ್‌ಗಳಿಂದ ಪ್ರಸಾಧನದ ಮೂಲಕ ಅವಳಿಗೆ ರೂಪ ನೀಡಿದರೆ ಮತ್ತೊಬ್ಬ ಬೆಳಕು ಹಾಗೂ ಫ್ರೇಮ್‌ನ ಸಂಯೋಜನೆಗಳಿಂದ ಕುಂದುಕೊರತೆಗಳಿದ್ದರೂ ಅದನ್ನು ಮುಚ್ಚಿ, ಇತರ ಉತ್ತಮ ಅಂಶಗಳನ್ನು ಎತ್ತಿ ಹಿಡಿಯುತ್ತಾನೆ. ಇಂಥ ಸಂಪ್ರದಾಯಕ್ಕೆ ಕಟ್ಟು ಬಿದ್ದ ನಮ್ಮ

ಚಿತ್ರರಂಗದಲ್ಲಿ ನಾಯಕಿ ಕ್ಷಾಮ, ಬರ, ಹಸಿವು, ನೀರಡಿಕೆಗಳಿಂದ ಸಾಯುವ ಸಂದರ್ಭದಲ್ಲಿಯೂ ಗ್ಲಾಮರಸ್ ಆಗಿ ಕಾಣುವ ಪವಾಡ ನಡೆಯುತ್ತದೆ. 'ಕಾಡು' ಚಿತ್ರದಲ್ಲಿ ಬಿಂದು ಜಯದೇವ್ ಅವರ ಗೌರವರ್ಣವನ್ನು ಕಪ್ಪು ಮಾಡಲು ಮೈ, ಮುಖಕ್ಕೆಲ್ಲ ಕರಿ ಬಣ್ಣ ಬಳಿದಿದ್ದರು. 'ಹಲೋ ಸಿಸ್ಟರ್'ನಲ್ಲಿ ಮಾಲಾಶ್ರೀಯ ಕೆಳವರ್ಗದ ಮೂಗಿ ಪಾತ್ರಕ್ಕೆ ಇಂಥ ಪ್ರಸಾಧನ ಇತ್ತು.

(ಚಿತ್ರ ೮) ಮುಖ್ಯಮಂತ್ರಿ ಚಂದ್ರು

ಹೆಣ್ಣು ಸೌಂದರ್ಯದ ಪ್ರತೀಕ. ಸಿನಿಮಾದಲ್ಲಿಯೂ ಅವಳು ಅದನ್ನು ಪ್ರತಿಬಿಂಬಿಸಬೇಕೆಂಬ ನಿಯಮವೂ ಇದೆಯಾದ್ದರಿಂದ ನಟಿಯರಿಗೆ ಪ್ರಸಾಧನದ ಅಗತ್ಯ ಹೆಚ್ಚಿರುತ್ತದೆ. ಮುಖದಲ್ಲಿನ ಸಣ್ಣ ರಂಧ್ರಗಳನ್ನು, ಮೊಡವೆಗಳನ್ನು ಪ್ರಸಾಧನದಲ್ಲಿ ವಿಶೇಷ ಮುತುವರ್ಜಿ ವಹಿಸಿ ಕಾಣದಂತೆ ಮಾಡಿದರೂ ಚಿತ್ರೀಕರಣದ ಸಂದರ್ಭದಲ್ಲಿ ಛಾಯಾಗ್ರಾಹಕ ಲೆನ್ಸ್ ಮುಂದೆ ವಿವಿಧ ಡಿಫ್ಯೂಸರ್ ಬಳಸಿ ಇಂಥ ಕುಂದುಗಳನ್ನು ಸರಿಪಡಿಸುತ್ತಾನೆ. ಒಂದೇ ಫ್ರೇಮ್‌ನಲ್ಲಿ ಬಿಳಿ ಹಾಗೂ ಕರಿ ಬಣ್ಣದ ನಟರಿಬ್ಬರೂ ಇದ್ದರೆ ಆಗ ವರ್ಣಾಲಂಕಾರದ ಜೊತೆಗೆ ಬೆಳಕನ್ನೂ ಭಾಗಶಃ ಹೆಚ್ಚು ಕಡಿಮೆ ಮಾಡಿ ಚಿತ್ರೀಕರಿಸಬೇಕಾಗುತ್ತದೆ. ಹಾಲಿವುಡ್‌ನ ಸಿಡ್ನಿ ಪಾಯ್ಟಿಯರ್ ನಟಿಸಿದ ಅನೇಕ ಚಿತ್ರಗಳಲ್ಲಿ ಈ ತಂತ್ರವನ್ನು ಕಾಣಬಹುದು. ಆದರೆ ಚಲಿಸುವ ಸಂದರ್ಭ ಇದ್ದರೆ ಇಬ್ಬರಿಗೂ ಒಂದೇ ರೀತಿಯ ವರ್ಣಾಲಂಕಾರ ಮಾಡಬೇಕಾಗುತ್ತದೆ. ಹೀಗೆ ಹೆಚ್ಚು ಹೆಚ್ಚು ಬಣ್ಣ ಬಳಸಿದರೆ ಮುಖ ಚರ್ಮದ ರಂಧ್ರಗಳು ಮುಚ್ಚಿ ನೈಜತೆ ಮಾಸುತ್ತದೆ.

ಭೂತ, ಪಿಶಾಚಿ, ಮೋಹಿನಿ, ಮಾಂತ್ರಿಕ ಇಂತಹ ಅತಿಮಾನುಷ ಅನುಭವ ನೀಡುವ ಚಿತ್ರಗಳಲ್ಲಿ ಪಾತ್ರಗಳ ಮುಖಕ್ಕೆ ಹೆಚ್ಚಿನ ವರ್ಣಾಲಂಕಾರ ಹಾಗೂ ಹೆಚ್ಚು ಬೆಳಕನ್ನು ಬಳಸಿ ರೌದ್ರತೆಯನ್ನು ನಿರೂಪಿಸುತ್ತಾರೆ. ಕಲಾವಿದರಿಗೆ ಸದಾ ಕಾಡುವ ಸಮಸ್ಯೆಯೆಂದರೆ ಬೆವರು. ಸ್ಟುಡಿಯೋಗಳಲ್ಲಿ ಶಾಖಪೂರಿತ ಬೆಳಕಿನಿಂದ ಸೆಖೆಗೆ ಬೆವರು ಸುರಿದರೆ, ಹೊರಾಂಗಣದಲ್ಲಿ ಬಿಸಿಲಿನ ತಾಪಕ್ಕೆ ಬೆವರು ಸುರಿಯುತ್ತದೆ. ಆಗ ಬೆವರು ಮೇಕಪ್‌ನೊಂದಿಗೆ ಮಿಶ್ರವಾಗುವ ಸಾಧ್ಯತೆಯಿರುವುದರಿಂದ ಆಗಾಗ ಪ್ರಸಾಧನ ಕಲಾವಿದ ಬೆವರನ್ನು ಒರೆಸಲು ಒದ್ದೆ ಬಟ್ಟೆ, ಬ್ಲಾಟಿಂಗ್ ಪೇಪರ್ ಅನ್ನು ಬಳಸುತ್ತಾನೆ. ಚಿತ್ರಿಕೆಗಳಿಗಾಗಿ ವಿಪರೀತ ದೀಪಗಳನ್ನು ಬಳಸುವುದರಿಂದ ಆ ತಾಪಕ್ಕೆ ಬೆವರುವುದು ಹೆಚ್ಚು. ಹೊಸ ಕಲಾವಿದರು ಆರಂಭದ ಭಯದಿಂದಾಗಿಯೂ ಈ ರೀತಿ ಬೆವರುವುದಿದೆ. ಇನ್ನೂ ಕೆಲವೊಮ್ಮೆ ಸನ್ನಿವೇಶಕ್ಕೆ ಪೂರಕವಾಗಿ ಪಾತ್ರಧಾರಿ ಭಯ, ಆತಂಕದ ಅಭಿವ್ಯಕ್ತಿಗೆ ಮುಖದಲ್ಲಿ ಬೆವರನ್ನು ಒರೆಸಿಕೊಳ್ಳಬೇಕಾಗುತ್ತದೆ. ಆಗ ಮುಖದ ಮೇಲೆ ನೀರ ಹನಿ ಚಿಮುಕಿಸುವರು. ನೀರಿನ ಹನಿ ಬೆಳಕಿಗೆ ಬೇಗನೇ ಆರಿ ಹೋಗುವುದರಿಂದ ಗ್ಲಿಸರಿನ್ ಹನಿಗಳನ್ನು ಬೆವರಾಗಿ ಬಳಸುತ್ತಾರೆ. ಇದೇ ರೀತಿ ಮಳೆಯಲ್ಲಿ ನೆನೆಯುವ ಸಂದರ್ಭದಲ್ಲಿ ಮೇಕಪ್ ಅಳಿಸಿ ಕಲಾವಿದರ ಅಸಲಿ ಬಣ್ಣ ಕಾಣದಂತೆ ಎಚ್ಚರಿಕೆಯನ್ನು ವಹಿಸಬೇಕಾಗುತ್ತದೆ.

ದ್ವಿಪಾತ್ರ ಅಥವಾ ಬಹುಪಾತ್ರಗಳನ್ನು ಒಬ್ಬನೇ ಕಲಾವಿದ ಅಭಿನಯಿಸಿದಾಗ ವಿಶೇಷ ತಂತ್ರಜ್ಞಾನದಿಂದಾಗಿ ಒಂದೇ ಫ್ರೇಮ್‌ನಲ್ಲಿ ಎರಡೂ ಪಾತ್ರಗಳನ್ನು ತರಬಹುದು. ಇಂಥ ಸಂದರ್ಭಗಳಲ್ಲಿ ಪ್ರಸಾಧನ ಕಲಾವಿದ ಜಾಣ್ಮೆಯಿಂದ, ನಾಜೂಕಾಗಿ ಕೆಲಸ ಮಾಡಬೇಕಾಗುತ್ತದೆ. ಒಬ್ಬನೇ ನಿರ್ವಹಿಸುವ ಎರಡು ಪಾತ್ರಗಳಿಗ ಒಬ್ಬನಿಗೇ ಎರಡು ರೀತಿಯ ಪ್ರಸಾಧನ ಮಾಡಿ ಒಂದೇ ಫ್ರೇಮ್‌ನಲ್ಲಿ ವ್ಯತ್ಯಾಸ ಕಂಡೂ ಕಾಣದಂತೆ ಮಾಡುವುದು ಆತನ ವೃತ್ತಿ ನೈಪುಣ್ಯಕ್ಕೆ ಸವಾಲೇ ಸರಿ. ಹೊಸ ಅಲೆ, ಸಮಾನಾಂತರ, ನವ್ಯ, ಕಲಾತ್ಮಕ ಎನ್ನುವ ಹೆಸರು ಪಡೆದ ಬೇರೆಯದೇ ರೀತಿಯ ಚಿತ್ರಗಳಲ್ಲಿ ಕಲಾವಿದರ ಸೌಂದರ್ಯ ಮಹತ್ವ ಪಡೆಯದೆ ಅಭಿನಯ ಹಾಗೂ ದೃಶ್ಯದ ಒಟ್ಟಾರೆ ಪರಿಣಾಮ ಮುಖ್ಯವಾಗಿ ಪ್ರಸಾಧನದ ಪ್ರಾಮುಖ್ಯ ಕಡಿಮೆಯಾಗುವುದಿದೆ. ಕಲಾವಿದನ ಮೇಲೆ ನೆರಳು, ಬೆಳಕಿನ ಆಟವೇ ವೈಭವೀಕರಿಸುವುದರಿಂದ ಪ್ರಸಾಧನದ ಅಗತ್ಯ ಕಡಿಮೆಯಾಗುತ್ತದೆ. ಇಡೀ ದೃಶ್ಯವನ್ನು ಕೊಂಚ ಮಸುಕಾಗಿ ಚಿತ್ರಿಸಿದರೂ ಅದೊಂದು ವಿಭಿನ್ನ ಪ್ರಯತ್ನವೆಂದು ಪ್ರೇಕ್ಷಕ ಸ್ವೀಕರಿಸಿದ ಉದಾಹರಣೆಯಿದೆ. ಇದಕ್ಕೆ ಮಣಿರತ್ನಂ ಅವರ 'ಅಂಜಲಿ'ಯಂಥ ಚಿತ್ರಗಳೇ ಸಾಕ್ಷಿ. ಹೊಸ ಅಲೆ ಚಿತ್ರಗಳಲ್ಲಿ ನಾಯಕ, ನಾಯಕಿಯ ಲಕ್ಷಣಗಳು ಬದಲಾಗುತ್ತಿರುತ್ತವೆ. ಅವರು ಸುಂದರವಾಗಿ ರಬೇಕಾಗಿಲ್ಲ, ಮೋಹಕ ರೂಪ ಹೊಂದಿರಬೇಕಾಗಿಲ್ಲ. ಗ್ಲಾಮರ್ ಇಲ್ಲದ, ಬಿಳಿ ಬಣ್ಣವೂ ಇಲ್ಲದ ಅನೇಕ ಯಶಸ್ವಿ ನಟ-ನಟಿಯರೂ ಚಿತ್ರರಂಗದಲ್ಲಿರಲು ಇದೂ ಒಂದು ಕಾರಣ.

ಕನ್ನಡದಲ್ಲಿ ತೆರೆಕಂಡ 'ಸಂಸ್ಕಾರ' ಸೆನ್ಸಾರ್‌ನಲ್ಲಿ ಸಾಕಷ್ಟು ಬಿಸಿಬಿಸಿ ಚರ್ಚೆಯಾಗಿ ದೇಶಾದ್ಯಂತ ಹೆಸರು ಮಾಡಿದ್ದು ಈಗ ಇತಿಹಾಸ. ಯು.ಆರ್.ಅನಂತಮೂರ್ತಿಯವರ ಕಾದಂಬರಿ ಆಧಾರಿತ ಈ ಚಿತ್ರ ಭಾರತದ ಚಿತ್ರರಂಗದಲ್ಲೇ ಒಂದು ಪ್ರಯೋಗಾತ್ಮಕ ಚಿತ್ರವೆಂದು ಹೆಸರು ಪಡೆಯಿತಲ್ಲದೆ ಅನೇಕ ಪ್ರಶಸ್ತಿಗಳನ್ನೂ ಗಳಿಸಿಕೊಂಡಿತು. ಇಂಥ 'ಸಂಸ್ಕಾರ' ಚಿತ್ರದಲ್ಲಿ ಪ್ರಸಾಧನ ಬಳಸದೇ ಚಿತ್ರೀಕರಣ ಮಾಡಲಾಯಿತೆನ್ನುವುದು ವಿಶೇಷ. ಈ ಚಿತ್ರಕ್ಕಾಗಿ ಛಾಯಾಗ್ರಾಹಕರಾಗಿ ಬಂದವರು ಆಸ್ಟ್ರೇಲಿಯಾದ ಟಾಮ್ ಕೋವನ್. ಪ್ರಸಾಧನ ಇಲ್ಲದೆ ನಡೆಸಿದ ಈ ಪ್ರಯತ್ನವನ್ನು ಅವರೂ ಮೆಚ್ಚಿದ್ದರು.

ಆರಂಭದ ದಿನಗಳಲ್ಲಿ ಅನೇಕ ಕನ್ನಡ ಚಿತ್ರಗಳು ಛಾಯಾಗ್ರಹಣಗೊಂಡ ನಾಟಕಗಳೇ ಎಂದರೂ ತಪ್ಪಲ್ಲ. ಮಾಡುತ್ತಲೇ ಕಲಿ ಎಂಬ ತತ್ವದಂತೆ, ತಂತ್ರಜ್ಞಾನವನ್ನು ಅನುಸರಿಸಿಕೊಂಡು ವಸ್ತ್ರವಿನ್ಯಾಸ, ವರ್ಣಾಲಂಕಾರ, ಅಭಿನಯ, ಮಾತು ತಿಳಿಗೊಳಿಸುತ್ತಲೇ ಬಂದರು. ೧೯೫೩ರಲ್ಲಿ ತಯಾರಾದ ಡಿ.ಶಂಕರ್‌ಸಿಂಗ್ ನಿರ್ದೇಶನದ 'ದಳ್ಳಾಳಿ' ಚಿತ್ರದ ನಾಯಕರು ಮೇಕಪ್ ಸುಬ್ಬಣ್ಣನವರು ಎಂಬುದೊಂದು ವಿಶೇಷ. ಇವರ ನಂತರ ೧೯೬೬ರಲ್ಲಿ ಕಲ್ಯಾಣ್‌ಕುಮಾರ್ ನಿರ್ದೇಶಿಸಿ, ನಟಿಸಿದ 'ಎಂದೂ ನಿನ್ನವನೆ' ಯಾವುದೇ ವರ್ಣಾಲಂಕಾರ ಇಲ್ಲದೆ ತಯಾರಾದ ಚಿತ್ರ. ಇದು ಹೊಸ ಅಲೆ ಬೀಸುವ ಮುನ್ನವೇ ಕನ್ನಡ ಚಿತ್ರರಂಗ ಇಟ್ಟ ದಿಟ್ಟ ಹೆಜ್ಜೆ ಎನ್ನಬಹುದು. ಅದೇ ವರ್ಷ ತಯಾರಾದ ಎಂ.ವಿ.ಕೃಷ್ಣಸ್ವಾಮಿ ನಿರ್ದೇಶನದ 'ಸುಬ್ಬಾಶಾಸ್ತ್ರಿ' ಸಂಪ್ರದಾಯ, ಉಡುಗೆ-ತೊಡುಗೆ, ಅಲಂಕಾರಗಳ ದೃಷ್ಟಿಯಿಂದ ಸಹಜತೆಗೆ ಒತ್ತು ಕೊಟ್ಟ ಚಿತ್ರ. ೧೯೬೭ರಲ್ಲಿ ಬಿ.ಎ.ಅರಸುಕುಮಾರ್ ನಿರ್ದೇಶನದ 'ಬಂಗಾರದ ಹೂ' ಕುಷ್ಠ ರೋಗ (ತೊನ್ನು) ಕುರಿತ ಕಪ್ಪು-ಬಿಳುಪು ಚಿತ್ರದಲ್ಲಿ ವರ್ಣಾಲಂಕಾರವನ್ನು ವಿಶಿಷ್ಟ ಉದ್ದೇಶಕ್ಕಾಗಿ ಬಳಸಿಕೊಳ್ಳಲಾಯಿತು. ಇದರ ನಂತರ ಮನುಷ್ಯ ಸ್ವಭಾವದ ಎರಡು ವಿಭಿನ್ನ ದೃಷ್ಟಿಕೋನಗಳನ್ನು ದ್ವಿಪಾತ್ರದಲ್ಲಿ ನಟಿಯರ ವರ್ಣಾಲಂಕಾರ ಹಾಗೂ ವೇಷ ಭೂಷಣಗಳಲ್ಲಿ ಬಿಳಿ, ಕಪ್ಪು, ಕಂದು ಬಳಸಿಯೇ ನಿರೂಪಿಸಿದ ಚಿತ್ರಗಳೆಂದರೆ ೧೯೬೯ರಲ್ಲಿ ತಯಾರಾದ ಪುಟ್ಟಣ್ಣ ಕಣಗಾಲ್ ನಿರ್ದೇಶನದ, ಕಲ್ಪನಾ ನಟಿಸಿದ 'ಕಪ್ಪು-ಬಿಳುಪು' ಹಾಗೂ ಎಂ.ಆರ್.ವಿಠಲ್ ನಿರ್ದೇಶನದ, ಜಯಂತಿ ನಟಿಸಿದ 'ಎರಡು ಮುಖ' ಉಲ್ಲೇಖನೀಯ. ಕೆಂಪರಾಜ ಅರಸರು 'ನಳದಮಯಂತಿ'ಯಲ್ಲಿ ಅಪ್ಪಾಪಂಕನಾಗಿ ಪ್ರಸಾಧನ ಮಾಡಿಕೊಂಡದ್ದು ವಿಶೇಷವಾಗಿತ್ತು. 'ಇಮ್ಮಡಿ ಪುಲಿಕೇಶಿ'ಯಲ್ಲಿ ಗೂನ ದೊರೆ ಉದಯಕುಮಾರ್, ಕೆಲವು ಚಿತ್ರಗಳಲ್ಲಿ ಕಲ್ಯಾಣ್ ಕುಮಾರ್ ಸಹ ಹಾಗೆ ಗೂನು ಮಾಡಿಕೊಂಡದ್ದು, ಜಿ.ವಿ.ಅಯ್ಯರ್ ಅವರ ನಿರ್ದೇಶನದ 'ತಾಯಿಯ ಕರುಳು' ಚಿತ್ರದಲ್ಲಿ ವಿಕಾರವಾದ ಮುಖ - ಹೀಗೆ ಪಟ್ಟಿ ಮಾಡುತ್ತಾ ಹೋಗಬಹುದು.

ಕನ್ನಡದ ಮೊದಲ ವರ್ಣ ಚಿತ್ರ 'ಅಮರ ಶಿಲ್ಪಿ ಜಕಣಾಚಾರಿ' ೧೯೬೪ರಲ್ಲಿ ತಯಾರಾಯಿತು. ಈ ಚಿತ್ರದಲ್ಲಿ ವಸ್ತ್ರ, ವರ್ಣಾಲಂಕಾರದಲ್ಲಿ ಬಣ್ಣದ ಲೋಕವನ್ನೇ ತೆಗೆದಂತಿತ್ತು. ಆರಂಭದ ಹುಮ್ಮಸ್ಸು ಅತಿಯಾದುದರಲ್ಲಿ ಆಶ್ಚರ್ಯವೇನಿಲ್ಲ. ಆದರೂ ಆ ಚಿತ್ರದಲ್ಲಿ ನಾಯಕ ತನ್ನ ಕೈಯನ್ನು ಕತ್ತರಿಸಿಕೊಳ್ಳುವ ದೃಶ್ಯ ಪರಿಣಾಮದ ವರ್ಣಾಲಂಕಾರ ಮೆಚ್ಚುವಂಥದ್ದು. ಇದರ ನಂತರ ೧೯೭೦ರಲ್ಲಿ ಬಂದ ಎರಡನೇ ವರ್ಣ ಚಿತ್ರ ಪಂತುಲು ನಿರ್ದೇಶನದ 'ಶ್ರೀಕೃಷ್ಣದೇವರಾಯ'. ಇದರಲ್ಲಿ ನಟ ಪಂತುಲುರವರು ರಾಜದ್ರೋಹದ ಶಿಕ್ಷೆಗೊಳಗಾಗಿ ಕಣ್ಣನ್ನು ಕಳೆದುಕೊಳ್ಳುವುದರ ವರ್ಣಾಲಂಕಾರವೂ ಅದ್ವಿತೀಯ. ೧೯೭೧ರಲ್ಲಿ ಪುಟ್ಟಣ್ಣನವರು ಪ್ರಥಮವಾಗಿ ನಿರ್ದೇಶಿಸಿದ ವರ್ಣಚಿತ್ರಕ್ಕೆ ಕಲಾವಿದರ ಬಣ್ಣದ ಮೇಲೆ ಹಿಡಿತವಿದ್ದರೂ ಹೊರಾಂಗಣದ ಪ್ರಕೃತಿಯ ಬಣ್ಣವನ್ನು ಹಿನ್ನೆಲೆಯಾಗಿ ನಿರೂಪಣೆಗೂ ಬಳಸಿಕೊಂಡರು. ಪುಟ್ಟಣ್ಣನವರು 'ಶರಪಂಜರ' ಚಿತ್ರವನ್ನು ಈಸ್ಟ್‌ಮನ್ ವರ್ಣದಲ್ಲಿ ತಯಾರಿಸಿದಾಗ, ನಮ್ಮ ವರ್ಣಾಲಂಕಾರ ಪಟುಗಳಿಗೆ ಮಾರ್ಗದರ್ಶನ ನೀಡಲು ಮೋದಿ ಎಂಬ ಪರಿಣತರನ್ನು ಮುಂಬಯಿಯಿಂದ ಕರೆಸಿದ್ದರು. ೧೯೭೨ರಲ್ಲಿ ತಯಾರಾದ ಕಣಗಾಲ್ ಪ್ರಭಾಕರಶಾಸ್ತ್ರಿ ನಿರ್ದೇಶನದ 'ಸುಭದ್ರಾ ಕಲ್ಯಾಣ' ಹಳೆಯ ದಿನಗಳನ್ನು ಜ್ಞಾಪಿಸುವ ವರ್ಣಾಲಂಕಾರ ಹೊಂದಿತ್ತು. ೧೯೭೨ರಲ್ಲಿ ಸಿದ್ದಲಿಂಗಯ್ಯ ನಿರ್ದೇಶಿಸಿದ 'ಬಂಗಾರದ ಮನುಷ್ಯ' ಹಾಗೂ ಪುಟ್ಟಣ್ಣ ಕಣಗಾಲ್ ನಿರ್ದೇಶನದ 'ನಾಗರಹಾವು' ಎರಡೂ ಚಿತ್ರಗಳಲ್ಲಿನ ನುರಿತ ನಟ ಹಾಗೂ ನವನಟರ ಯಶಸ್ಸು ಇಂದಿಗೂ ದಾಖಲೆಯೇ ಸರಿ. ಈ ಅಭೂತಪೂರ್ವ ಯಶಸ್ಸು

ಕನ್ನಡ ಚಿತ್ರರಂಗದಲ್ಲಿ ವರ್ಣಚಿತ್ರಗಳ ನಿರ್ಮಾಣದ ಹೊಸ ಯುಗಕ್ಕೆ ಅಡಿಪಾಯ ಹಾಕಿತು. ಇದರೊಂದಿಗೆ ಪ್ರಸಾಧನ ಕೂಡ ವರ್ಣಚಿತ್ರಗಳಿಗೆ ಬೇಕಾದ ರೀತಿಯಲ್ಲಿ ಮಾರ್ಪಾಟು ಮಾಡಿಕೊಂಡಿತು.

೧೯೭೫ ಬಹುಮುಖ ಪ್ರತಿಭೆಗಳ ವರ್ಷವೆಂದು ಹೇಳಬಹುದು. ಸಮಾನಾಂತರ ಚಿತ್ರದ ಸಿದ್ಧಾಂತದಂತೆ ಸರಳ ವರ್ಣಾಲಂಕಾರದಿಂದ ಗಮನ ಸೆಳೆದ ಎರಡು ಸಾಮಾಜಿಕ ಚಿತ್ರಗಳಲ್ಲಿ ಒಂದು ಪ್ರಸಾದ್ ನಿರ್ದೇಶನದ 'ಕಂಕಣ', ಮತ್ತೊಂದು ಬಿ.ವಿ.ಕಾರಂತ್ ನಿರ್ದೇಶನದ 'ಚೋಮನದುಡಿ'. ಇಲ್ಲಿ 'ಚೋಮನದುಡಿ' ಚಿತ್ರದ ಪ್ರಸಾಧನ ಕಲಾವಿದ ರಾಮಕೃಷ್ಣರ ಪರಿಶ್ರಮವನ್ನು ಉಲ್ಲೇಖಿಸುವುದು ಅನಿವಾರ್ಯ. ಇದು ಅವರ ಪ್ರಥಮ ಚಿತ್ರವೂ ಹೌದು. ಈ ಚಿತ್ರದಲ್ಲಿ ಚೋಮನಾಗಿ ಅಭಿನಯಿಸಿದವರು ಬೆಳ್ಳಗೆ ಇರುವ ವಾಸುದೇವರಾವ್. ಚಿತ್ರದ ಮುಹೂರ್ತದಂದು 'ಚೋಮನದುಡಿ' ಕಾದಂಬರಿಯನ್ನು ಬರೆದ ಶಿವರಾಮ ಕಾರಂತರೂ ಬಂದಿದ್ದರು. ರಾಮಕೃಷ್ಣ ಅವರು ಕಾರಂತರಲ್ಲಿ ತಾನು ಈ ಚಿತ್ರದ ಪ್ರಸಾಧನ ಕಲಾವಿದ ಎಂದು ಪರಿಚಯಿಸಿಕೊಂಡಾಗ ಕಾರಂತರು ''ನನ್ನ ಚೋಮ ಬಿಳಿಯಲ್ಲ, ಕಪ್ಪಗಿದ್ದಾನೆ'' ಎಂದು ಸೂಕ್ಷ್ಮವಾಗಿ ಹೇಳಿದರು. ಆಗ ನಿರ್ದೇಶಕ ಕಾರಂತರು ವಾಸುದೇವರಾವ್ ಅವರನ್ನು ಕಪ್ಪಗೆ ಮಾಡುವ ಜವಾಬ್ದಾರಿಯನ್ನು ರಾಮಕೃಷ್ಣನಿಗೆ ನೀಡಿದರು. ಆಗ ಅವರಿಗೆ ನೆತ್ತಿಯಿಂದ ಪಾದದವರೆಗೂ ಕಪ್ಪು ಬಣ್ಣ ಬಳಿಯಲಾಯಿತು. ಕಂಕುಳಲ್ಲಿ ಮಾತ್ರ ಎಷ್ಟು ಬಳಿದರೂ ಬಣ್ಣ ನಿಲ್ಲುತ್ತಿರಲಿಲ್ಲ.

ಇದಲ್ಲದೆ ಚೋಮನ ಮನೆಯ ಮುಂದೆ ಇರುವ ನಾಯಿ ಚೆನ್ನಾಗಿದ, ಅದನ್ನು ಬಡಕಲಾಗಿ ಕಾಣುವಂತೆ ಮಾಡು ಎಂದು ಕಾರಂತರು ಹೇಳಿದಾಗ ರಾಮಕೃಷ್ಣ ಹೇಗೋ ಅದಕ್ಕೆ ಕೆಸರು ಬಳಿದು ಒಂದು ರೂಪ ಕೊಟ್ಟರು. ಅದರೆ ನಾಯಿಗೆ, ಚಿಕ್ಕಿಗಲ್ಲ ಪ್ರಸಾಧನ ಮಾಡುವ ಈ ಕೆಲಸವೇ ಬೇಡ ಎನ್ನುವಷ್ಟು ರಾಮಕೃಷ್ಣರಿಗೆ ಬೇಸರ ಆಗಿತ್ತಂತೆ. ನೈಜವಾಗಿ ಮೂಡಿ ಬಂದ ಚಿತ್ರಕ್ಕೆ ಪ್ರಶಸ್ತಿಗಳು ಬಂದಾಗ ರಾಮಕೃಷ್ಣ ತನ್ನ ಕೆಲಸ ಸಾರ್ಥಕ ಆಯಿತೆಂದು ಭಾವಿಸಿದರಂತೆ. ಈ ಹುರುಪಿನಿಂದಲೇ ಮುಂದ 'ಗ್ರಹಣ', 'ತಬ್ಬಲಿಯು ನೀನಾದೆ ಮಗನೆ', 'ಘಟಶ್ರಾದ್ಧ'ದಂತಹ ಚಿತ್ರಗಳಿಗೂ ರಾಮಕೃಷ್ಣ ಪ್ರಸಾಧನ ಮಾಡಿ ಸೈ ಎನಿಸಿಕೊಂಡರು.

ಸಾಂಪ್ರದಾಯಿಕ ಪರಿಸರ, ಶೈಲಿಯಲ್ಲಿ ಬೆಳೆದು ಬಂದಿದ್ದರೂ ಅದನ್ನು ಮೀರಿ ಬೆಳೆದು ನಿಂತು ಐತಿಹಾಸಿಕವಾದರೂ ವರ್ಣಾಲಂಕಾರ, ವೇಷಭೂಷೆ, ಒಡವೆಗಳ ಬಳಕೆಯಲ್ಲಿ ದಾಖಲೆಯಾಗುವಂಥ ಚಿತ್ರ ಜಿ.ವಿ.ಅಯ್ಯರ್ ನಿರ್ದೇಶನದ 'ಹಂಸಗೀತೆ'. ಅಯ್ಯರ್ ಹಿಂದಿನ ಕಾಲದಲ್ಲಿ ಹೇಗ ಪ್ರಸಾಧನ ಮಾಡಲಾಗುತ್ತಿತ್ತೆಂದು ಈ ರೀತಿ ವಿವರಿಸುತ್ತಾರ:

''ಆಗ ವೈಟ್ ಲೆಡ್, ವರ್ಮಿಲಾನ್, ಯಲ್ಲೊ, ಗ್ಲಸರಿನ್, ವ್ಯಾಸಲೀನ್ ನಾವು ಉಪಯೋಗಿಸುತ್ತಿದ್ದ ಮೇಕಪ್ ಐಟಮ್‌ಗಳು. ಮೊದಲು ಬೇಸ್ ತಯಾರಿಸಿ, ಹಾಕ್ತಿದ್ವಿ. ಹಳ್ಳಿಗಳಲ್ಲಿ ಚಿತ್ರೀಕರಣಕ್ಕೆ ಹೋದಾಗ ಗ್ರೀಸ್ ಸಿಗದೇ ಇದ್ದಾಗ ಅದರ ಬದಲಿಗೆ ಬೆಣ್ಣೆ ಉಪಯೋಗಿಸುತ್ತಿದ್ದೆವು. ಇಂಥ ಸಂದರ್ಭಗಳಲ್ಲಿ ಬೊಳ್ಳೆ ಹಣ್ಣನ್ನು ಕೂಡ ಬಳಸುತ್ತಿದ್ದೆವು. ಮೀಸೆಗೆ, ಗಡ್ಡಕ್ಕೆ ಕುರಿಯ ತುಪ್ಪಳ ಬಳಸುತ್ತಿದ್ದೆವು. ಪ್ರಮುಖ ಪಾತ್ರಗಳಿಗೆಲ್ಲ ವ್ಯಾಸಲೀನ್‌ನಲ್ಲಿ ಕಲಸಿ ಮೇಕಪ್ ಹಾಕುತ್ತಿದ್ದೆವು. ಆಗ ಚಿತ್ರರಂಗದಲ್ಲಿ ಹರಿಬಾಬು ಅನ್ನೋರು ದೊಡ್ಡ ಮೇಕಪ್ ಮ್ಯಾನ್. ಆತ ಬಂಗಾಳದವರು. ಬಹಳ ಪ್ರಸಿದ್ಧರು. ಎಂ.ಜಿ.ಆರ್. ಮತ್ತು ಶಿವಾಜಿ ಗಣೇಶನ್ ಅವರಿಗೆ ಆಗಲೇ ವಿವಿಧ, ವಿಚಿತ್ರ ರೀತಿಯ ವಸ್ತ್ರಾಲಂಕಾರ, ವರ್ಣಾಲಂಕಾರ ಮಾಡುತ್ತಿದ್ದರು. ಇದು ಅವರದೇ ಸ್ಟೈಲ್ ಅನ್ನುವ ಮಟ್ಟಿಗೆ ವ್ಯತ್ಯಾಸ ಇರುತ್ತಿತ್ತು''.

ನಂತರ ಪುಟ್ಟಣ್ಣ ನಿರ್ದೇಶನದ 'ಬಿಳಿ ಹೆಂಡ್ತಿ' ಚಿತ್ರದಲ್ಲಿ ನಾಯಕಿಗೆ ಅತ್ಯಂತ ಕಡಿಮೆ ಪ್ರಸಾಧನ ಮಾಡಲಾಗಿತ್ತು. ಕಾರಣ ಆ ಚಿತ್ರದ ನಾಯಕಿ ವಿದೇಶಿ ತರುಣಿ ಮಾರ್ಗರೇಟ್ ಥಾಂಸನ್. ಇದಕ್ಕೆ ವಿರುದ್ಧವಾಗಿ ವರ್ಣಾಲಂಕಾರದ ಎಲ್ಲ ವಿಭಾಗಗಳಲ್ಲಿಯೂ ಶ್ರೀಮಂತಿಕೆ ಮೆರೆದು ತಯಾರಾದ ಚಿತ್ರ ವಿಜಯ್ ನಿರ್ದೇಶನದ 'ಮಯೂರ'. ೧೯೭೮ರಲ್ಲಿ ಗೀತಪ್ರಿಯ ನಿರ್ದೇಶನದ 'ಹೊಂಬಿಸಿಲು' ವರ್ಣಾಲಂಕಾರದ ದೃಷ್ಟಿಯಿಂದ ಇತ್ತ ವ್ಯಾಪಾರಿ ಚಿತ್ರವೂ ಆಗದೆ, ಅತ್ತ ಕಲಾತ್ಮಕ ಚಿತ್ರವೂ ಆಗದೆ ಹೋಯಿತು. ಎರಡೂ ಪದ್ಧತಿಯನ್ನು ಅನುಸರಿಸದೆ ನುರಿತ ನಾಯಕ, ನಾಯಕಿಯರು ವರ್ಣಾಲಂಕಾರದ ವ್ಯತ್ಯಾಸದಿಂದ ಈ ಚಿತ್ರದಲ್ಲಿ ಸಿಡಿಮಿಡಿಗೊಂಡಿದ್ದರು.

ವರ್ಣಾಲಂಕಾರ ಮಾಡುವವರಿಗೆ ಸದಾ ಖುಷಿ ಕೊಡುವುದೆಂದರೆ ಪೌರಾಣಿಕ ಪಾತ್ರಗಳು. ಸಾಮಾಜಿಕ ಕಥೆಯ ಹಿನ್ನೆಲೆಯಲ್ಲಿ ಬಂದ 'ಭೂಲೋಕದಲ್ಲಿ ಯಮರಾಜ', 'ಭೂಮಿಗೆ ಬಂದ ಭಗವಂತ', 'ನಾರದ ವಿಜಯ' ಮೊದಲಾದ ಚಿತ್ರಗಳು ಪ್ರಸಾಧನ ಕಲಾವಿದರ ಕೆಲಸಕ್ಕೆ ತೃಪ್ತಿಯ ನೆಲೆ ನೀಡಿದ್ದವು. ಇದರ ನಂತರ ಕೆಲವು ಚಿತ್ರಗಳ ಹಾಡಿನಲ್ಲಿ ಬರುವ ಶಿವ-ಪಾರ್ವತಿ, ರಾಧಾ-ಕೃಷ್ಣ, ರತಿ-ಮನ್ಮಥರ ದೃಶ್ಯಗಳಲ್ಲಿ ಬರುವ ಪಾತ್ರಗಳ ಸೃಷ್ಟಿಯಲ್ಲಿ ಪ್ರಸಾಧನ ಕಲಾವಿದರ ಕೈಚಳಕಕ್ಕೆ ಅವಕಾಶ ಸಿಕ್ಕಿದ್ದಿದೆ. ೧೯೮೧ರಲ್ಲಿ ತಯಾರಾದ ಪುಟ್ಟಣ್ಣ ಕಣಗಾಲ್ ನಿರ್ದೇಶನದ 'ರಂಗನಾಯಕಿ' ಕಥೆ ಮತ್ತು ಪರಿಸರದ ದೃಷ್ಟಿಯಿಂದ ವರ್ಣಾಲಂಕಾರದಲ್ಲಿ ವಿಶೇಷ ಎನಿಸುವಂಥ ಚಿತ್ರ. ವೃತ್ತಿ ರಂಗಭೂಮಿಯನ್ನು ಕೇಂದ್ರಬಿಂದುವನ್ನಾಗಿ ಹೊಂದಿದ್ದು ಅತಿಯಾದ ವರ್ಣಾಲಂಕಾರ ಇದ್ದರೂ ಒಟ್ಟು ಪ್ರಭಾವದ ದೃಷ್ಟಿಯಿಂದ ಸಹಜ ಹಾಗೂ ಸ್ವೀಕಾರಾರ್ಹ ಎನಿಸಿತ್ತು. ಇದರಲ್ಲಿ ಅಂಬರೀಷ್ ಪಾತ್ರದ ಪ್ರಸಾಧನ ಎಷ್ಟು ಸಹಜವಾಗಿತ್ತೆಂದರೆ ಅನೇಕ ವರ್ಷಗಳಿಂದ ದಿನವೂ ಬಣ್ಣ ಹಚ್ಚಿ ನಾಟಕದಲ್ಲಿ ಅಭಿನಯಿಸುವ ನಟನಂತೆಯೇ ಇತ್ತು.

ಇದೇ ವರ್ಷದಲ್ಲಿ ಬಂದ ಭಾರ್ಗವ ನಿರ್ದೇಶನದ 'ಗುರು ಶಿಷ್ಯರು' ಅನೇಕ ಹಾಸ್ಯ ಕಲಾವಿದರನ್ನೊಳಗೊಂಡ ಚಿತ್ರ. ಇದರಲ್ಲಿ ರಾಜ ಹಾಗೂ ಋಷಿ ಮುನಿಗಳ ವರ್ಣಾಲಂಕಾರವಿದ್ದು ಪ್ರಸಾಧನ ಕಲಾವಿದರ ಪರಿಣತಿಗೆ ಸಾಕಷ್ಟು ಕೆಲಸ ಒದಗಿಸಿತು. ೧೯೮೩ರಲ್ಲಿ ಬಂದ ಪ್ರೇಮಾ ಕಾರಂತ್ ನಿರ್ದೇಶನದ 'ಫಣಿಯಮ್ಮ'ದಲ್ಲಿ ಒಂದು ಹೆಣ್ಣಿನ ಕೇಶ ಮುಂಡನದ ಅನಂತರದ ವರ್ಣಾಲಂಕಾರ ಗಮನೀಯವಾಗಿತ್ತು. ದೀರ್ಘಾವಧಿ ವೈಧವ್ಯ ಜೀವನ ನಿರೂಪಿಸಲು ವರ್ಣಾಲಂಕಾರದ ನೆರವಿನಿಂದ ಬಾಲ್ಯ, ತಾರುಣ್ಯ, ಮಧ್ಯಕಾಲ, ವೃದ್ಧಾಪ್ಯವನ್ನು ಎಳೆ ಎಳೆಯಾಗಿ ಬಿಡಿಸುವಲ್ಲಿ ಯಶಸ್ವಿಯಾದರು. ವರ್ಣಾಲಂಕಾರ ವೃತ್ತಿಯ ವಿಭಿನ್ನ ಮಜಲುಗಳ ಸತ್ವಪರೀಕ್ಷೆ ಮಾಡುವಂಥ ಕಥಾವಸ್ತು ಹೊಂದಿರುವ ಯಂಡಮೂರಿ ವೀರೇಂದ್ರನಾಥ್‌ರ ಕಾದಂಬರಿ ಆಧಾರಿತ ಚಿತ್ರ 'ತುಳಸೀದಳ'. ೧೯೮೫ರಲ್ಲಿ ವೇಮಗಲ್ ಜಗನ್ನಾಥ್ ನಿರ್ದೇಶಿಸಿದ ಈ ಚಿತ್ರದಲ್ಲಿ ಭೂತ-ಪ್ರೇತ, ಮಾಟ-ಮಂತ್ರ ಇವುಗಳ ನಿರೂಪಣೆಯಲ್ಲಿನ ವರ್ಣಾಲಂಕಾರ ಹಾಗೂ ವಿಶೇಷ ಪ್ರಭಾವಕ್ಕೆ ರಾಜ್ಯ ಪ್ರಶಸ್ತಿಯೂ ಬಂದು ಈ ವೃತ್ತಿಗೊಂದು ವಿಶೇಷ ಮೆರುಗು ಬಂತು. ಇಂತಹ ಸಾಧನೆಗೆ ಪಾತ್ರರಾದ ಪ್ರಸಾಧನ ಕಲಾವಿದ ಮಲ್ಲೇಶ್ ಹರ್ತಿ.

ಇದೇ ಮಲ್ಲೇಶ್ ಹರ್ತಿ ೧೯೮೭ರಲ್ಲಿ ಒಬ್ಬ ಭಿಕ್ಷುಕ ನಾಯಕನಿಗೂ ಹಾಗೂ ಮಧ್ಯ ವಯಸ್ಸಿನ ದೇವದಾಸಿ ಉಪನಾಯಕಿಗೂ ಸಹಜವಾದ ವರ್ಣಾಲಂಕಾರ ನೀಡಿದ್ದು ಉಮೇಶ್ ಕುಲಕರ್ಣಿ ನಿರ್ದೇಶನದ 'ಶಂಖನಾದ' ಚಿತ್ರದಲ್ಲಿ. ವರ್ಣಾಲಂಕಾರದ ವಿಷಯದಲ್ಲಿ ೧೯೮೭ ಮಹತ್ವದ ವರ್ಷ. ಸಿನಿಮಾ ಎಂದರೆ ಬಣ್ಣದ ಲೋಕ, ಕನಸುಗಳ ಲೋಕ ಎಂದು ಪ್ರತಿಪಾದಿಸಿದ ಚಿತ್ರವೊಂದು ತೆರೆಕಂಡದ್ದು ಇದೇ ವರ್ಷದಲ್ಲಿ. ಚಿತ್ರ 'ಪ್ರೇಮಲೋಕ'. ವರ್ಣಾಲಂಕಾರ, ವಸ್ತ್ರಾಲಂಕಾರ, ದೀಪಾಲಂಕಾರ ಎಲ್ಲದರಲ್ಲೂ ವರ್ಣದ ಸುರಿಮಳೆ ಸುರಿಸಿದ ಚಿತ್ರವಿದು. ಅದೇ ವರ್ಷ ಹವಾಮಾನ ದೃಷ್ಟಿಯಿಂದ ಸವಾಲೆನಿಸುವ ಪರಿಸರದಲ್ಲಿ ಹಲವಾರು ಕಲಾವಿದರನ್ನು ವರ್ಣಾಲಂಕಾರದಿಂದ ಸಹಜವಾಗಿ ರೂಪಿಸಿ ತೆರೆಗೆ ಬಂದಿದ್ದು ಶಂಕರ್‌ನಾಗ್ ನಿರ್ದೇಶನದ ಚಿತ್ರ 'ಒಂದು ಮುತ್ತಿನ ಕಥೆ'. ಈ ಚಿತ್ರದಲ್ಲಿ ರಮೇಶ್‌ಭಟ್ ಅವರ ಹಲ್ಲಿನ ವಿಶೇಷ ವಿನ್ಯಾಸ ನನಪಿನಲ್ಲಿ ಉಳಿಯುವಂಥದ್ದು, ಈ ಬಗೆಯ ಮುಖ ವಿನ್ಯಾಸವನ್ನು ವಿಷ್ಣುವರ್ಧನ್ ಅವರಿಗೆ 'ಶಿವ-ಶಂಕರ್' ಚಿತ್ರದಲ್ಲಿ ನಿರ್ದೇಶಕ ಭಾರ್ಗವ ಅವರು ಹಾಕಿಸಿದ್ದರು.

ರವಿಚಂದ್ರನ್ ಸಹ 'ಶ್ರೀರಾಮಚಂದ್ರ' ಮತ್ತು 'ಅಂಜದಗಂಡು' ಚಿತ್ರಗಳಲ್ಲಿ ಇಂಥದಲ್ಲಿ ಪ್ರಸಾಧನದಲ್ಲಿ ಕಾಣಿಸಿಕೊಂಡಿದ್ದರು. ಅದೇ ವರ್ಷ ತಯಾರಾದ ಗೌರಿಶಂಕರ್ ನಿರ್ದೇಶನದ 'ಕೆಂಡದ ಮಳೆ' ಸೆನ್ಸಾರ್‌ನ ಕತ್ತರಿಗೆ ಸಿಲುಕಿ, ಮುಸ್ಲಿಂ ಪಾತ್ರದ ಹಣೆಯ ಮೇಲಿನ ಕುಂಕುಮವನ್ನು ಬ್ಲೇಡಿನಿಂದ ನೆಗಟಿವ್‌ನಲ್ಲಿ ಕೆರೆದು ತೆಗೆಯಿರಿ ಎಂಬ ಹೊಸ ವರ್ಣಾಲಂಕಾರ ತಂತ್ರಜ್ಞಾನ ಸಲಹೆಯೊಂದಿಗೆ ದೆಹಲಿಗೆ ಪ್ರಯಾಣ ಬೆಳೆಸಿ ವಿಜಯಿಯಾದದ್ದು ಒಂದು ಘಟ್ಟ. ಅದೇ ವರ್ಷ ಕೃಷ್ಣ ಮಾಸಡಿ ನಿರ್ದೇಶನದಲ್ಲಿ ತೆರೆಕಂಡ 'ಅವಸ್ಥೆ' ಚಿತ್ರದ ನಾಯಕನಾಗಿರುವ ಬಿಳಿಯಾಗಿರುವ ಅನಂತ್‌ನಾಗ್‌ರಿಗೆ ಕೃಷ್ಣೇಗೌಡನಾಗಲು ಮೈ ಮುಖವೆಲ್ಲ ಕಪ್ಪು ಬಳಿಯಲಾಯಿತು.

೧೯೮೬ರಲ್ಲಿ ಪ್ರಥಮ ಬಾರಿಗೆ ವರ್ಣಚಿತ್ರ ನಿರ್ದೇಶಿಸಿದ ಗಿರೀಶ್ ಕಾಸರವಳ್ಳಿ 'ತಬರನ ಕಥೆ' ಚಿತ್ರದಲ್ಲಿ ಭ್ರಷ್ಟಾಚಾರ, ಅಧಿಕಾರಶಾಹಿ ಎನ್ನುವುದು ವ್ಯವಸ್ಥೆಯ ಒಳಗೆ ಕ್ಯಾನ್ಸರ್‌ನಂತೆ ಹರಡಿದೆಯೆನ್ನುವುದನ್ನು ನಿರೂಪಿಸಲು ನಾಯಕಿ ನಳಿನಾಮೂರ್ತಿಯ ಕಾಲಿಗೆ ಆದ ಕ್ಯಾನ್ಸರ್ ಹುಣ್ಣು ಕ್ರಮೇಣ ಬೆಳೆಯುವುದನ್ನು ತೋರಿಸಿ, ಕೊನೆಗೆ ಕಾಲನ್ನೇ ಕತ್ತರಿಸುವ ಹಂತಕ್ಕೆ ತಂದು ತಲುಪಿಸುತ್ತಾರೆ. ಈ ಹುಣ್ಣನ್ನು ಹಂತ ಹಂತವಾಗಿ ವರ್ಣಾಲಂಕಾರದಲ್ಲಿ ಸಹಜವಾಗಿ, ಪರಿಣಾಮಕಾರಿಯಾಗಿ ರೂಪಿಸಿದವರು ವರ್ಣಾಲಂಕಾರ ಪಟು ಕೆ.ಎಂ.ಕೃಷ್ಣ. ಅದೇ ವರ್ಷ ದಿನೇಶ್ ಬಾಬು ನಿರ್ದೇಶನದ

'ಸುಪ್ರಭಾತ' ಚಿತ್ರದಲ್ಲಿ ನಾಯಕ ನಟ ವಿಷ್ಣುವರ್ಧನ್ ಪೆಟ್ರೋಲ್ ಬಂಕ್‌ನ ಕೆಲಸಗಾರನಾಗಿ ದಿನದ ಕೊನೆಯಲ್ಲಿ ಸ್ನಾನ ಮಾಡುವಾಗ ಅಲ್ಲಿಂದ ಹರಿದ ನೀರು ಎಣ್ಣೆ, ಗ್ರೀಸು ಮಿಶ್ರಿತ ಕಪ್ಪಾದದ್ದು ಪ್ರೇಕ್ಷಕರಲ್ಲಿ ನಗುವನ್ನು ಉಕ್ಕಿಸುತ್ತದೆ. ಇದೂ ವರ್ಣಾಲಂಕಾರ ಕೃತ್ತಿಯ ಒಂದು ಸೃಜನಾತ್ಮಕ ಕೊಡುಗೆ.

೧೯೮೯ರಲ್ಲಿ ಉಮೇಶ್ ಕುಲಕರ್ಣಿ ನಿರ್ದೇಶನದ 'ಗಂಡು ಗೂಳಿಗಳು' ಚಿತ್ರದಲ್ಲಿ ಸ್ತ್ರೀ ದ್ವೇಷಿ ನಾಯಕನ ಪಾರ್ಶ್ವಮುಖ ಸುಟ್ಟಿರುವ ವಿಕೃತಿಯನ್ನು ಹಲವಾರು ಪ್ರಯೋಗಗಳ ನಂತರ ನಿರೀಕ್ಷಿತ ಪರಿಣಾಮ ನೀಡಿದವರು ವರ್ಣಾಲಂಕಾರ ವಿಶೇಷಜ್ಞ ಕೆ.ಎಂ.ಕೃಷ್ಣ. ೧೯೯೨ರಲ್ಲಿ ತೆರೆಕಂಡ 'ಪ್ರಜೆಗಳು ಪ್ರಭುಗಳು' ಚಿತ್ರದಲ್ಲಿ ತಮಿಳು ಮೂಲದ ರೌಡಿಯಾಗಿ ಮೈಸೂರು ಲೋಕೇಶ್‌ರ ಕಪ್ಪು ಬಣ್ಣದ ವರ್ಣಾಲಂಕಾರ ವಿಶೇಷವೆನಿಸಿತ್ತು. ಈ ಪಾತ್ರಕ್ಕಾಗಿ ಅವರಿಗೆ ಪೋಷಕ ನಟಿ ಪ್ರಶಸ್ತಿಯೂ ಬಂತು. ೧೯೯೫ರಲ್ಲಿ ತೆರೆಕಂಡ ಚಿಂದೋಡಿ ಬಂಗಾರೇಶ್ ನಿರ್ದೇಶಿಸಿದ 'ಗಾನಯೋಗಿ ಪಂಚಾಕ್ಷರ ಗವಾಯಿ' ಚಿತ್ರದಲ್ಲಿ ಅಂಧನಾದ ಸಂಗೀತಗಾರ ನಾಯಕನಿಗಾಗಿ ಕ್ಲಿಷ್ಟಕರವಾದ ಪ್ರಸಾಧನ ತಂತ್ರ ಬಳಸಲಾಗಿತ್ತು. ೧೯೯೭ರಲ್ಲಿ ರವಿಚಂದ್ರನ್ ನಿರ್ದೇಶನದ 'ಪುಟ್ನಂಜ' ಚಿತ್ರದಲ್ಲಿ ಉಮಾಶ್ರೀ ನಟಿಸಿದ ಪುಟ್ಮಲ್ಲಿಯ ಪಾತ್ರ ಕನ್ನಡ ಚಿತ್ರರಂಗದ ಒಂದು ಮೈಲಿಗಲ್ಲು ಎನಿಸುವಂಥದು. ನಡು ವಯಸ್ಸಿನ ಉಮಾಶ್ರೀಯನ್ನು ಮುದುಕಿಯನ್ನಾಗಿ ಮಾಡಿದ ಪ್ರಸಾಧನ ಕೆಲಸ ಸ್ಮರಣೀಯ. ಸುಕ್ಕುಗಟ್ಟಿದ ಮುಖ, ಕೇಶಾಲಂಕಾರ, ವಸ್ತ್ರಾಲಂಕಾರ ಎಲ್ಲಕ್ಕೂ ಮೆರುಗು ಎನ್ನುವಂತೆ ಉಮಾಶ್ರೀ ಅದ್ಭುತ ಅಭಿನಯ ನೀಡಿ ಆ ಪಾತ್ರಕ್ಕೆ ಜೀವ ತುಂಬಿದರು. ಈ ಮೊದಲು ಅವರು ರಂಗಭೂಮಿಯಲ್ಲಿ ದೇವನೂರ ಮಹಾದೇವರ ಕಥೆ ಆಧರಿಸಿದ ನಾಟಕದಲ್ಲಿ 'ಸಾಕವ್ವ'ನಾಗಿ ಹೆಸರಾಗಿದ್ದ ಉಮಾಶ್ರೀ ಅಂಥದೇ ಗೆಟಪ್‌ನಲ್ಲಿ ಡಿ.ರಾಜೇಂದ್ರಬಾಬು ನಿರ್ದೇಶನದ ಚಿತ್ರದಲ್ಲಿ ಅಭಿನಯಿಸಿದ್ದರು. ಆದರೆ 'ಪುಟ್ನಂಜ'ದ ಪುಟ್ಮಲ್ಲಿ ಬಹಳ ಜನಪ್ರಿಯಳಾದಳು. ಇದೇ ರೀತಿಯ ಪಾತ್ರ ಆಕೆಗೆ ಅಜ್ಜಯ್ಯನಾಯ್ಡು ಅವರ 'ತಾಯವ್ವ'ದಲ್ಲೂ ಸಿಕ್ಕಿತ್ತು. ಪ್ರಸಾಧನಕಾರರು ಪೈಪೋಟಿಯ ಮೇಲೆ ಈ ಗೆಟಪ್ ಹಾಕಿದ್ದರು.

೧೯೯೭ರಲ್ಲಿ ಗಿರೀಶ್ ಕಾಸರವಳ್ಳಿ ನಿರ್ದೇಶಿಸಿದ 'ತಾಯಿ ಸಾಹೇಬ' ಚಿತ್ರದಲ್ಲಿ ನಾಯಕಿ ಜಯಮಾಲಾರಿಗೆ ಪ್ರಾದೇಶಿಕ ಛಾಯೆ ಇರುವ ದೇಸಾಯಿ ಮನೆತನದ ಹೆಣ್ಣಿನ ಭಿನ್ನ ವಯೋಮಾನ, ವಿಭಿನ್ನ ಮನೋಗುಣಕ್ಕೆ ಅನುಗುಣವಾಗಿ ವರ್ಣಾಲಂಕಾರ, ವಸ್ತ್ರಾಲಂಕಾರದ ಸಮನ್ವಯ ಚಿತ್ರದ ಮೂಲಾಧಾರ ಎನ್ನಬಹುದು. ೨೦೦೦ದಲ್ಲಿ ತೆರೆಕಂಡ ಬರಗೂರು ರಾಮಚಂದ್ರಪ್ಪ ನಿರ್ದೇಶನದ 'ಹಗಲುವೇಷ'ದ ವರ್ಣಾಲಂಕಾರದ ವಿಷಯದಲ್ಲಿ ವಿಭಿನ್ನ ಚಿತ್ರ. ಥರ ಥರದ ವೇಷ ಹಾಕುವ, ಬಣ್ಣ ಬಳಿದುಕೊಂಡು ನಟಿಸುವ ಜನಪದ ವೇಷಗಳ ವೈಖರಿಗೆ ಸರಿಯಾದ ಪ್ರಸಾಧನ ಮಾಡುವುದು ಪ್ರಸಾಧನ ಕಲಾವಿದನಿಗೆ ಸವಾಲೆನಿಸುವ ಕೆಲಸ. ಒಂದೆ ಗಿರೀಶ್ ಕಾಸರವಳ್ಳಿಯವರು ಯಕ್ಷಗಾನ ಲೋಕದ ಕಥಾವಸ್ತು ಹಾಗೂ ಅದರಲ್ಲಿ ಪಾತ್ರ ಮಾಡುವ ನಾಯಕನ ಕಥೆ ಹೊಂದಿದ ಚಿತ್ರ 'ಬಣ್ಣದ ವೇಷ'ದಲ್ಲಿ ಪಾತ್ರಗಳಿಗೆ ಯಕ್ಷಗಾನದಲ್ಲಿ ಚಾಲ್ತಿಯಲ್ಲಿರುವ ಢಾಳಾದ ವರ್ಣಾಲಂಕಾರ ಬಳಸಿ ಕಲಾವಿದರ ಭಾವಾಭಿವ್ಯಕ್ತಿಗೆ ನೆರವಾದರು. ಕಮಲಹಾಸನ್ ತಮಿಳಿನಲ್ಲಿ 'ಅಪೂರ್ವ ಸಹೋದರ್‌ಗಳ್' ಚಿತ್ರದಲ್ಲಿ ಕುಳ್ಳನಾಗಿ ನಟಿಸಿದ್ದು ಇತಿಹಾಸ. ಇದರಿಂದ ಪ್ರೇರಿತರಾಗಿ ಕನ್ನಡದಲ್ಲಿ 'ಶಿವಶಂಕರ್' ಚಿತ್ರದಲ್ಲಿ ವಿಷ್ಣುವರ್ಧನ್‌ರ ಒಂದು ಪಾತ್ರವನ್ನು ಭಿನ್ನವಾಗಿ ಮಾಡಿ ವಿಶೇಷ ಪ್ರಸಾಧನ ಮಾಡಿರುವುದು ಒಂದು ಪ್ರಯೋಗಾತ್ಮಕ ಕೆಲಸ.

(ಚಿತ್ರ ೫) 'ಒಂದು ಮುತ್ತಿನ ಕಥೆ' ಶಿವರಾಂ

ಇಷ್ಟೆಲ್ಲ ಪ್ರಯೋಗ, ಪ್ರಯತ್ನಗಳು ನಡೆದಿದ್ದರೂ ಕನ್ನಡ ಚಿತ್ರರಂಗದ ಮಟ್ಟಿಗೆ ವರ್ಣಾಲಂಕಾರ ಬೇರೆ ಭಾಷೆಗಳ ಚಿತ್ರಗಳಿಗೆ ಹೋಲಿಸಿದಲ್ಲಿ ಶೈಶಾವಸ್ಥೆಯಲ್ಲಿಯೇ ಇದೆ. ತಮಿಳಿನಲ್ಲಿ ಕಮಲಹಾಸನ್ 'ಇಂಡಿಯನ್' ಹಾಗೂ 'ಅವ್ವೈ ಷಣ್ಮುಗಿ', 'ಇಂದ್ರುಡು ಚಂದ್ರುಡು' ಮುಂತಾದ ಚಿತ್ರಗಳಲ್ಲಿ ಮಾಡಿದ ಪ್ರಯತ್ನ ನಿಜಕ್ಕೂ ಶ್ಲಾಘನೀಯ. ಇಂಥ ವಿಶೇಷ ಪ್ರಯತ್ನಗಳನ್ನು ಕಂಡಾಗ ಚಲನಚಿತ್ರಗಳಲ್ಲಿ ಮೇಕಪ್‌ನ ವೈಚಿತ್ರ್ಯ, ಅನಿವಾರ್ಯ ತಿಳಿಯುತ್ತದೆ. ಈ ವರ್ಣಾಲಂಕಾರ ಪ್ರಥಮತಃ ಮುಖಕ್ಕೆ ಸಂಬಂಧಿಸಿದ್ದರೂ ಉಡುಪುಗಳ ಹೊರಗೆ ಕಾಣುತ್ತಿರುವ ಅಂಗಾಗಗಳಿಗೆಲ್ಲ ವರ್ಣವನ್ನು ಹಚ್ಚಬೇಕಾಗುತ್ತದೆ. ನಾಟಕಗಳಲ್ಲಿ ಪ್ರೇಕ್ಷಕರಿಗೂ, ನಟರಿಗೂ ನಡುವೆ ಹೆಚ್ಚು ಅಂತರವಿರುತ್ತಿತ್ತು. ಆದ್ದರಿಂದ ವರ್ಣಾಲಂಕಾರ ಒಂದು ಘಟ್ಟದವರೆಗೆ ಸೂಕ್ಷ್ಮವಾಗಿದ್ದರೆ ಸಾಕಾಗುತ್ತಿತ್ತು. ಆದರೆ ಚಲನಚಿತ್ರಗಳಲ್ಲಿ ಕ್ಲೋಸಪ್‌ಗಳ ಉಪಯೋಗದಿಂದ ಪ್ರೇಕ್ಷಕರನ್ನು ನಟ-ನಟಿಯರು ತೀರಾ ಹತ್ತಿರದವರೆಗೆ ಕೊಂಡೊಯ್ಯುವುದರಿಂದಲೂ ವರ್ಣಾಲಂಕಾರಕ್ಕೆ ಹೆಚ್ಚು ಗಮನ ಕೊಡಬೇಕಾಗಿ ಬಂತು. ವರ್ಣಾಲಂಕಾರ ಕಲಾವಿದನ ಉಪಯೋಗಕ್ಕಾಗಿ ಅಮೆರಿಕಾದ ಮ್ಯಾಕ್ಸ್ ಫ್ಯಾಕ್ಟರ್ ಕಂಪೆನಿಯವರು ವಿವಿಧ ವರ್ಣಗಳನ್ನು ತಯಾರಿಸಿದ್ದಾರೆ.

ಈ ಬಣ್ಣಗಳಲ್ಲಿ ಗ್ರೀಸ್ ಪೆಯಿಂಟ್ ಮೇಕಪ್ ಮತ್ತು ಪ್ಯಾನ್‌ಕೇಕ್ ಮೇಕಪ್ ಎಂದು ಎರಡು ಬಗೆಗಳಿವೆ. ಎರಡರಲ್ಲಿಯೂ ಎಲ್ಲ ವರ್ಣಗಳೂ ದೊರೆಯುತ್ತವೆ. ಪ್ರಸಾಧನ ಮಾಡಿಕೊಳ್ಳುವ ಮುಖವನ್ನು ಮೊದಲಿಗೆ ಒಳ್ಳೆಯ ಕ್ರೀಮ್ ಹಚ್ಚಿ ಒರೆಸಿ ತೆಗೆದು ಶುದ್ಧ ಮಾಡಲಾಗುತ್ತದೆ. ಮುಖದ ಚರ್ಮದಲ್ಲಿರುವ ಸಣ್ಣ ಸಣ್ಣ ರಂಧ್ರಗಳಲ್ಲಿ ಇರುವ ದೂಳು ಮತ್ತು ಕೊಳೆಯನ್ನು ತೆಗೆಯಲು ಈ ರೀತಿ ಮಾಡಲಾಗುತ್ತದೆ. ನಂತರ ಚರ್ಮವನ್ನು ತಂಪು ಮಾಡುವ ಯಾವುದಾದರೂ ಅಸ್ಟ್ರಿಂಜೆಂಟನ್ನು ಮುಖಕ್ಕೆ ಹಚ್ಚಲಾಗುವುದು. ಆಮೇಲೆ ಮುಖಕ್ಕೆ ಒಂದು ಬಣ್ಣವನ್ನು ಹಚ್ಚಲಾಗುವುದು. ಇದಕ್ಕೆ ಫೌಂಡೇಶನ್ ಅಥವಾ ತಳಹದಿ ಎಂದು ಹೆಸರು. ಇದರ ನಂತರವೇ ಇತರೆ ಬೇಕಾದ ಬಣ್ಣಗಳನ್ನು ಹಚ್ಚಲಾಗುವುದು. ಪಾತ್ರಧಾರಿಗಳ ಚರ್ಮದ ಸ್ವಾಭಾವಿಕ ಬಣ್ಣಕ್ಕೆ ಅನುಗುಣವಾಗಿ ಫೌಂಡೇಶನ್ ಬಣ್ಣ ಹಚ್ಚಲಾಗುತ್ತದೆ. ಮುಖಕ್ಕೆ ಹಚ್ಚುವ ಫೌಂಡೇಶನ್ ಗ್ರೀಸ್ ಪೆಯಿಂಟ್ ಆದಾಗ ವರ್ಣವನ್ನು ಬೆಟ್ಟಿನಲ್ಲಿ ತೆಗೆದುಕೊಂಡು ನಂತರ ಅದನ್ನು ಸರಿಯಾಗಿ ಹದ ಮಾಡಿ ಆಮೇಲೆ ಮುಖಕ್ಕೆ ಬೆರಳುಗಳಿಂದ ಹಚ್ಚಬೇಕು. ಅದೇ ಬೆರಳುಗಳಿಂದ ಅದನ್ನು ಮುಖದ ಮೇಲೆ ಸಮನಾಗಿ ಹರಡಿ ಕಾಣದಂತೆ ಮಾಡಬೇಕು.

ಈ ಫೌಂಡೇಶನ್ ಪ್ಯಾನ್‌ಕೇಕ್‌ದಾದರೆ ಒಂದು ಒಳ್ಳೆಯ ಸ್ಪಂಜನ್ನು ನೀರಿನಲ್ಲಿ ನೆನೆಸಿ ಅನಂತರ ನೀರನ್ನು ಸಂಪೂರ್ಣವಾಗಿ ಹಿಂಡಿ ಅದನ್ನು ಪ್ಯಾನ್‌ಕೇಕ್ ಮೇಲೆ ತಿಕ್ಕಿ ಬಣ್ಣವನ್ನು ತೆಗೆದು ಮುಖಕ್ಕೆ ಹಚ್ಚಬೇಕು. ಗ್ರೀಸ್ ಪೆಯಿಂಟನ್ನು ಸಾಧಾರಣವಾಗಿ ಮುಖದಲ್ಲಿ ಕಲೆಗಳಿದ್ದು ಅದನ್ನು ಮುಚ್ಚಬೇಕೆಂದಾಗ ಉಪಯೋಗಿಸುತ್ತಾರೆ. ಆದರೆ ಇದರಲ್ಲಿ ಮುಖದ ಚರ್ಮ ಸಂಪೂರ್ಣ ಮುಚ್ಚಿ ಹೋಗುವುದರಿಂದ ಸ್ವಾಭಾವಿಕವಾಗಿ ಕಾಣುವುದಿಲ್ಲ. ಆದ್ದರಿಂದ ಬಹುತೇಕ ಕಲಾವಿದರು ಪ್ಯಾನ್‌ಕೇಕ್ ಮೇಕಪ್ ಮಾತ್ರ ಧರಿಸುತ್ತಾರೆ. ಪ್ಯಾನ್‌ಕೇಕ್ ವರ್ಣವನ್ನು ಮುಖಕ್ಕೆ ಹಚ್ಚಿದ ನಂತರ ಮುಖದ ಮೇಲಿರುವ ನೀರನ್ನು ಬ್ಲಾಟಿಂಗ್ ಪೇಪರ್ ಸಹಾಯದಿಂದ ತೆಗೆಯಬೇಕು. ನಂತರ ಒಳ್ಳೆಯ ಬ್ರಶ್‌ನಿಂದ ಬೇಕಾದ ಛಾಯೆಯ ಪ್ಯಾನ್‌ಕೇಕ್ ಅನ್ನು ಮುಖಕ್ಕೆ ಹಚ್ಚಬೇಕು. ಫೌಂಡೇಶನ್ ಹಚ್ಚಿದ ಬಳಿಕ ಲೈನಿಂಗ್

(ಚಿತ್ರ ೬) 'ಅಸಂಭವ' ಉಮಾಶ್ರೀ

ಬಣ್ಣಗಳನ್ನು ಉಪಯೋಗಿಸಲಾಗುತ್ತದೆ. ಸಾಧಾರಣವಾಗಿ ಲೈನಿಂಗ್ ಬಣ್ಣವನ್ನು ಮೂಗಿನ ಪಕ್ಕಗಳಲ್ಲಿ ಮತ್ತು ತುದಿಯಲ್ಲಿ, ಕೆನ್ನೆಯ ಮೇಲೆ, ದವಡೆಯ ಕೊನೆಯಲ್ಲಿ, ಹಣೆಯ ಇಬ್ಬದಿಗಳಲ್ಲಿ ಮುಂತಾದ ಸ್ಥಳಗಳಲ್ಲಿ ಉಪಯೋಗಿಸುತ್ತಾರೆ. ಕಣ್ಣುಗಳ ಕೆಳಗೆ ಕೆಲವು ಪಾತ್ರಗಳಿಗೆ ಬೇಕಾದಂತೆ ಗುಳಿಯನ್ನು ಬೀಳಿಸಲು ಅಥವಾ ಸ್ವಾಭಾವಿಕವಾದ ಆಳತೆಗೆ ಕಣ್ಣಿನ ಕೆಳಗೆ ಕಂದು ಬಣ್ಣವಿರಲು ಈ ಲೈನಿಂಗ್ ಬಣ್ಣ ಉಪಯೋಗಿಸಲಾಗುತ್ತದೆ. ಇದರಲ್ಲಿಯೂ ನಾನಾ ವಿಧದ ಛಾಯೆಗಳಿವೆ. ಮುಖದ ಎಲ್ಲ ಭಾಗಗಳಿಗೂ ಪ್ರಸಾಧನ ಮಾಡಿದ ಮೇಲೆ ಮತ್ತೆ ಪೌಡರನ್ನು ಹಚ್ಚಬೇಕು. ಅದು ಒಂದೇ ಸಮನೆ ಇರುವಂತೆ ನೋಡಿಕೊಳ್ಳಬೇಕು. ಪೌಡರ್‌ನ ನಂತರ ಕೆನ್ನೆಗಳಿಗೆ ರೂಜ್ ಹಚ್ಚಬೇಕು. ಇದು ಅಧಿಕವಾದರೆ ಆಭಾಸ. ಆದ್ದರಿಂದ ಜಾಗರೂಕವಾಗಿರಬೇಕು. ಇಷ್ಟೆಲ್ಲ ವರ್ಣಗಳನ್ನು ಹಚ್ಚಿದ ನಂತರ ತುಟಿಗಳ ಸ್ವಾಭಾವಿಕ ಬಣ್ಣ ಬಿಳಿಚಿಕೊಂಡಂತೆ ಕಾಣುತ್ತದೆ. ಆದ್ದರಿಂದ ತುಟಿಗಳಿಗೆ ಲಿಪ್‌ಸ್ಟಿಕ್ ಹಚ್ಚಬೇಕು. ನಂತರ ಹುಬ್ಬುಗಳನ್ನೂ, ಕಣ್ಣುಗಳ ಅಂಚನ್ನೂ ಐಬ್ರೊ ಪೆನ್ಸಿಲ್‌ಗಳ ಸಹಾಯದಿಂದ ಕಪ್ಪಗೆ ಮಾಡಬೇಕು. ಇದಕ್ಕೆ ಐ ಲ್ಯಾಷ್ ಕೂಡ ಉಪಯೋಗಿಸಬಹುದು.

ಇವಲ್ಲದೆ ವಿಲಕ್ಷಣ ಪಾತ್ರಗಳಿಗೆ ಮೂಗಿನ ಮಾಟವನ್ನೋ, ಕಿವಿ, ಮೂಗು ಅಥವಾ ಇನ್ನಾವುದಾದರೂ ಗುರುತನ್ನೇ ಮಾಡಲು ನೋಸ್ ಪುಟ್ಟಿಯನ್ನು ಉಪಯೋಗಿಸುತ್ತಾರೆ. ಹಳೆಯ ಗಾಯದ ಗುರುತನ್ನು ಮಾಡಲು ಜಿಲೆಟಿನ್ ಉಪಯೋಗಿಸುತ್ತಾರೆ. ಹೊಸ ಗಾಯದ ಗುರುತನ್ನು ಮಾಡಲು ಗ್ರೀಸ್ ಪೆಯಿಂಟ್‌ನ ಕೆಂಪುಬಿಳಿ, ಮಣ್ಣಿನ ಬಣ್ಣ, ಕಪ್ಪು ಬಣ್ಣ ಇತ್ಯಾದಿಗಳನ್ನು ಬಳಸಲಾಗುತ್ತದೆ. ಬಿಳಿಯ ಕೂದಲನ್ನು ಕಪ್ಪಗೆ ಮಾಡಲು ಹೇರ್ ಡೈ ಉಪಯೋಗಿಸುತ್ತಾರೆ.

(ಚಿತ್ರ ೭) ಹಸಿ ಗಾಯ

ಚಿತ್ರ ಯಾವ ಶೀರ್ಷಿಕೆಯಾದರೂ ಹೊಂದಿರಲಿ, ವರ್ಣಾಲಂಕಾರದ ವೃಷ್ಟಿಯಿಂದ ನಿಶ್ಚಿತವಾಗಿ ಹೇಳಬಲ್ಲಂಥ ಪಾತ್ರಗಳು ಶ್ರೀನಿವಾಸ, ವೆಂಕಟೇಶ, ರಾಮ, ಕೃಷ್ಣ ಮೊದಲಾದವು. ಈ ಪಾತ್ರಗಳಿಗೆ ಅಡಿಯಿಂದ ಮುಡಿಯವರೆಗೆ ನೀಲ ವರ್ಣ, ಮೇಘ ವರ್ಣದಿಂದ ಸ್ಪ್ರೇ ಮಾಡಿ, ನುಣ್ಣಗಾದ ಗಡ್ಡ, ಮೀಸೆ ಇಲ್ಲದ ಮುಖ ಕಲ್ಪಿಸಿಕೊಳ್ಳಬಹುದು. ಇದೇ ರೀತಿ ರಾವಣ, ಯಮ, ಶನಿ, ಅಂಗಾರಕ, ರಾಹು, ಕೇತು ಇವರಿಗೆ ಕಪ್ಪು, ಕಡು ನೀಲಿ ಬಣ್ಣದ ಭೀಭತ್ಸ ಭಾವ ಹುಟ್ಟಿಸುವ ವರ್ಣಾಲಂಕಾರ ಬೇಕೇ ಬೇಕು. ಇನ್ನು ದಶಾವತಾರಗಳಲ್ಲಂತೂ ವರ್ಣಾಲಂಕಾರ ಪ್ರವೃತ್ತಿಯವರಿಗೆ ತಮ್ಮ ಕೈಚಳಕ ತೋರಿಸಲು ಸೊಗಸಾದ ಅವಕಾಶ.

ಕಲಾವಿದರು ಎದುರಿಸುವ ಮೊದಲ ಸಮಸ್ಯೆ ಮೊಡವೆ. ಇಂಥ ಮೊಡವೆಗಳು ಮುಖದ ಅಂದ ಕೆಡಿಸುತ್ತದಲ್ಲದೆ ಮೇಕಪ್ ಮಾಡುವಾಗಲೂ ತೊಂದರೆ ಮಾಡುತ್ತವೆ. ಎಣ್ಣೆ ಚರ್ಮದವರಲ್ಲಿ ಇವು ಹೆಚ್ಚಿನ ಪ್ರಮಾಣದಲ್ಲಿರುತ್ತವೆ. ಇಂಥವರಿಗೆ ಅತಿ ಮುತುವರ್ಜಿ ವಹಿಸಿ ಪ್ರಸಾಧನ ಮಾಡಬೇಕಾಗುತ್ತದೆ. ಮೊಡವೆಗಳಂತೆ ಮಚ್ಚೆಗಳೂ ಕೂಡ ಒಂದು ಸಮಸ್ಯೆಯೆ. ಇವುಗಳಿಗಂತೂ ಯಾವ ಪರಿಹಾರವೂ ಇಲ್ಲ. ಕೆಲವರು ಉದ್ದೇಶಪೂರ್ವಕವಾಗಿ ಮಚ್ಚೆಯಂಥ ಬೊಟ್ಟುಗಳನ್ನು ಇಟ್ಟುಕೊಳ್ಳುವುದೂ ಇದೆ. ಈ ರೀತಿ ಭಾರತಿ ಹಾಗೂ ಸರೋಜಾದೇವಿ ಕೆನ್ನೆ ಭಾಗದಲ್ಲಿ ತ್ರಿಕೋನಾಕಾರದಲ್ಲಿ ಮೂರು ಚುಕ್ಕೆ ಹಚ್ಚಿಕೊಳ್ಳುತ್ತಾರೆ. ಕಲ್ಪನಾ, ಭಾರತಿ ಕತ್ತಿನ ಬಳಿ ಒಂದು ಕಾಸಿನಗಲದ ಕಪ್ಪು ಮಚ್ಚೆ ಮಾಡಿಕೊಳ್ಳುತ್ತಾರೆ. ಇನ್ನು ಕಥೆಯಲ್ಲಿಯೂ ಕಳೆದುಹೋದ ಮಕ್ಕಳನ್ನು ತಂದೆ, ತಾಯಿ ಒಂದುಗೂಡಿಸುವ ಯಶಸ್ವಿ ಸೂತ್ರವಾಗಿ ಬರುವ ಈ ರೀತಿಯ ಮಚ್ಚೆ, ಹಚ್ಚೆಗಳು ವರ್ಣಾಲಂಕಾರ ವಿಭಾಗದ ಕೊಡುಗೆಗಳು.

ಚಲನಚಿತ್ರ ಕಲಾವಿದೆಯರ ಕುರಿತು ಸೆನ್ಸಾರ್‌ನಿಂದ ಪ್ರೇಕ್ಷಕನವರೆಗೆ ಬಹಳ ಚರ್ಚೆಗೊಳಗಾದ ಅಂಗವೆಂದರೆ ಅವರ ತುಟಿಗಳು. ತುಟಿಯಿಂದ ತುಟಿಗೆ ಚುಂಬನ ನಮ್ಮ ಚಿತ್ರಗಳಲ್ಲಿ ಸಾಧ್ಯವಿಲ್ಲದೆ ಇರುವುದರಿಂದ ಚಿತ್ರಗಳಲ್ಲಿ ಚುಂಬನವನ್ನು ಸೂಚಿಸಲು ನಾಯಕನ ಕೆನ್ನೆ ಅಥವಾ ಹಣೆಯ ಮೇಲೆ ತುಟಿಗಳ ಪಡಿಯಚ್ಚು ಮೂಡಿಸುತ್ತಾರೆ. ಇದು ಮೇಕಪ್ ಮಾಡುವವರ ಕೆಲಸವೆ. ನಟ, ನಟಿಯರ ಆರೋಗ್ಯ ಉತ್ತಮವಾಗಿದ್ದರೆ ತುಟಿಗಳು ಸಹಜವಾಗಿಯೇ ಕೆಂಪಾಗಿರುತ್ತದ. ಆದರೂ ಸ್ವಲ್ಪವಾದರೂ ಲಿಪ್‌ಸ್ಟಿಕ್ ಬಳಸಬೇಕಾಗುತ್ತದೆ. ಕಲಾವಿದರಿಗೆ ನಿಧಾನವಾಗಿ ಕಾಡುವ ಸಮಸ್ಯೆಯೆಂದರೆ ಮುಪ್ಪು. ಇದು ನಟ ನಟಿಯರಿಗಂತೂ ಬೇಡವೇ ಬೇಡವೆನಿಸುವ ಕಾಲ. ಅದು ಕಾಣಲು ಆರಂಭವಾಗುವುದು ಚರ್ಮದ ಸುಕ್ಕುಗಟ್ಟುವಿಕೆಯಿಂದ. ಆದರೂ ಕೆಲವು ಕಾಸ್ಮೆಟಿಕ್ ಸರ್ಜನ್‌ರಿಂದ ಈ ಸುಕ್ಕುಗಟ್ಟುವುದನ್ನು ತೆಗೆದುಹಾಕಿಸಿಕೊಳ್ಳುವವರೂ ಇದ್ದಾರೆ. ಇದರೊಂದಿಗೆ ಇವರ ಕೂದಲು ಬೆಳ್ಳಗಾಗುವುದೂ ಒಂದು ಸಮಸ್ಯೆ. ಕೂದಲು ಹಣ್ಣಾಗುವ ಸಮಸ್ಯೆ ಎಲ್ಲರಿಗೂ ನಿಧಾನವಾಗಿ ಆಗುವುದಾದರೆ ಕೆಲವರಿಗೆ ಅಕಾಲದಲ್ಲಿ ಉದುರುವ ಸಮಸ್ಯೆಯೂ ಇದೆ.

ಚಿತ್ರದ ಯಾವುದೇ ದೃಶ್ಯವಿರಲಿ, ಯಾವುದೇ ಪಾತ್ರವಿರಲಿ ಗಾಯವಾದಾಗ ಮಾಡುವ ಬ್ಯಾಂಡೇಜ್‌ಗೆ ರಕ್ತದ ಕಲೆ ಇರಲೇಬೇಕು. ನುರಿತ ಡಾಕ್ಟರ್, ಪ್ರತಿಷ್ಠಿತ ಆಸ್ಪತ್ರೆಯಾದರೂ ಸಹ ರಕ್ತ ಕಾಣುವಂತೆ ಡ್ರೆಸ್ಸಿಂಗ್ ಮಾಡುವ ಕಲೆ ಸಿನಿಮಾದಲ್ಲಿ ಮಾತ್ರ ಸಾಧ್ಯ. ಚಿತ್ರರಂಗದ ಮುಖ್ಯ ಎರಡು ಅಂಶಗಳೆಂದರೆ ರಕ್ತ ಮತ್ತು ಕಣ್ಣೀರು. ಚಿತ್ರದ ಗಲ್ಲಾ ಪೆಟ್ಟಿಗೆ ತುಂಬಲು ಈ ಸೂತ್ರ ಅನುಸರಿಸುವ ಮಂದಿಯೇ ಹೆಚ್ಚು. ಸೆನ್ಸಾರ್‌ನವರು 'ಲೈಂಗಿಕತೆ ಬೇಡ, ಹಿಂಸೆ ಇದ್ದರೂ ಇರಲಿ' ಎಂಬ ಸಡಿಲ ಧೋರಣೆ ತೋರಿದ್ದು ಹಿಂಸಾತ್ಮಕ ಚಿತ್ರಗಳ ತಯಾರಿಕೆಯು ಹೆಚ್ಚುವರಿಗೆ ಕಾರಣವಾಗಿದೆ. ಚಿತ್ರಗಳಲ್ಲಿ ಬ್ಲಡ್‌ಬ್ಯಾಂಕ್‌ನಿಂದ ನಿಜವಾದ ರಕ್ತವನ್ನು ಬಳಸಿ ಚಿತ್ರ ಮಾಡಿರುವ ನಿರ್ದೇಶಕರೂ ಇದ್ದಾರೆ.

೧೯೩೪ರಲ್ಲಿ ಬಂದ ಕನ್ನಡದ ಪ್ರಥಮ ವಾಕ್ಚಿತ್ರ 'ಸತಿ ಸುಲೋಚನಾ' ಚಿತ್ರದ ಚಿತ್ರೀಕರಣದ ವೇಳೆ ನಡೆದ ಘಟನೆಯೊಂದು ಸ್ವಾರಸ್ಯಕರ. ವೈ.ವಿ.ರಾವ್ ನಿರ್ದೇಶಿಸಿದ ಈ ಚಿತ್ರದಲ್ಲಿ ಸುಲೋಚನೆಯ ಪಾತ್ರವನ್ನು ತ್ರಿಪುರಾಂಬ ಮಾಡಿದ್ದರು. ಅದರಲ್ಲಿ ಅಳುವ ಸನ್ನಿವೇಶವೊಂದಿತ್ತು. ಪ್ರಸಾಧನ ಕಲಾವಿದ ಕೂಡ ಇದ್ದ. ಆದರೆ ಕಣ್ಣಲ್ಲಿ ನೀರು ಬರಲೇಬೇಕಿತ್ತು. ಗ್ಲಿಸರಿನ್‌ನ ಬಳಕೆ ಇಲ್ಲವಾದುದರಿಂದ ವಿಧಿಯಿಲ್ಲದೆ ಚುರುಕು ಮೆಣಸಿನ ಕಾಯಿಯನ್ನು ತಂದು ಕಣ್ಣಿಗೆ ತಾಕಿಸಿದರು. ಆದರೆ ನಿರೀಕ್ಷಿಸಿದ್ದೇ ಒಂದು ಆದದ್ದೇ ಒಂದು. ನೀರು ಬರುವ ಬದಲು ಆ ನಟಿಯ ಕಣ್ಣು ಕೆಂಪಾಗಿ ಉರಿಯತೊಡಗಿತು. ಮುಂದೆ ಬೇರೆ ದಾರಿಯಿಲ್ಲದೆ ನೀರಿನ ಹನಿಗಳನ್ನೇ ಜಾರಿಸಿ ಆ ದೃಶ್ಯವನ್ನು ಚಿತ್ರೀಕರಿಸಿದರು. ಇದು ಪ್ರಸಾಧನ ಕಲಾವಿದರು ಇವ್ವಾಗಲೂ ಕೆಲವೊಮ್ಮೆ ಎಂತೆಂಥ ಕರಾಮತ್ತುಗಳನ್ನು ಮಾಡಬೇಕಾಗುತ್ತದೆನ್ನುವುದಕ್ಕೆ ನಿದರ್ಶನ. ಇಂಥ ಅನುಭವಗಳೆಲ್ಲವೂ ಪ್ರಸಾಧನ ಕಲಾವಿದರಿಗೆ ಪಾಠವಾಗುತ್ತ ಬರುವುದೂ ನಿಜ.

ಹಿಂದೆ ಸ್ಟುಡಿಯೋಗಳಿಗೆ, ಕಂಪೆನಿಗಳಿಗೆ ಮೀಸಲಾಗಿರುತ್ತಿದ್ದ ಪ್ರಸಾಧನ ಕಲಾವಿದ ನಿಧಾನವಾಗಿ ತಾರಾಮೌಲ್ಯ ಹೆಚ್ಚಿದಂತೆ ನಾಯಕ, ನಾಯಕಿಯರ ವೈಯಕ್ತಿಕ ಪ್ರಸಾಧನ ಕಲಾವಿದರಾಗುವ ಕ್ರಮ ಬೆಳೆಯಿತು. ಈಗ ಪೋಷಕ ಕಲಾವಿದರು ಕೂಡ ತಮ್ಮದೇ ಪ್ರಸಾಧನ ಕಲಾವಿದರನ್ನು ಹೊಂದುವ ಪರಿಪಾಠ ಬೆಳೆದಿದೆ. ಈ ವೈಯಕ್ತಿಕ ಪ್ರಸಾಧನ ಕಲಾವಿದರು ಚಿತ್ರದಿಂದ ಚಿತ್ರಕ್ಕೆ ಅಥವಾ ಕೆಲ ಚಿತ್ರಗಳ ನಂತರ ಬದಲಾಗುವುದೂ ಇದೆ. ಹೀಗ ವೈಯಕ್ತಿಕ ಪ್ರಸಾಧನ ಕಲಾವಿದರು ಖಾಯಂ ಪ್ರಸಾಧನ ಕಲಾವಿದರೇ ಆಗಬೇಕೆಂದೇನೂ ಇಲ್ಲ. ಆದರೂ ನಮ್ಮಲ್ಲಿ ಕೆಲವು ನಾಯಕ, ನಾಯಕಿಯರು ತುಂಬಾ ಕಾಲ ಒಬ್ಬನೇ ಪ್ರಸಾಧನ ಕಲಾವಿದರನ್ನು ಅವಲಂಬಿಸಿರುವುದೂ ಹೌದು. ಕನ್ನಡ ಚಿತ್ರರಂಗದಲ್ಲಿ ರಾಜಕುಮಾರ್ ಅವರ ಎತ್ತರಕ್ಕೆ ಬೆಳೆದ ಮತ್ತೊಬ್ಬ ನಟನಿಲ್ಲ. ಇವರ ಈ ಯಶಸ್ಸಿನಲ್ಲಿ ಬಹುತೇಕ ಚಿತ್ರಗಳಲ್ಲಿ ವೈಯಕ್ತಿಕ ಪ್ರಸಾಧನ ಕಲಾವಿದರಾಗಿದ್ದ ದೊರೆಸ್ವಾಮಿನಾಯ್ಡು ಅವರ ಕೊಡುಗೆಯೂ ಅಪಾರ ಎನ್ನುವುದನ್ನು ಮರೆಯುವಂತಿಲ್ಲ. ವಿಷ್ಣುವರ್ಧನ್ ಅವರಿಗೆ ಇಪ್ಪತ್ತೈದು ವರ್ಷಗಳಿಂದಲೂ ಪ್ರಸಾಧನ ಮಾಡುತ್ತಾ ಬಂದವರು ಪ್ರಸಾಧನ ಪಟು ಶ್ರೀನಿವಾಸ್. ಈಗ ಅವರಿಗೆ ವಯಸ್ಸಾದುದರಿಂದ ಆ ಜಾಗದಲ್ಲಿ ಮಾಧವನ್ ಇದ್ದಾರೆ. ಶ್ರೀನಿವಾಸ್ ಭಾರತಿಯವರಿಗೂ ಕೂಡ ಮೂವತ್ತೈದು ವರ್ಷಗಳಿಂದ ಖಾಯಂ ಪ್ರಸಾಧನ ಕಲಾವಿದ ಆಗಿದ್ದರು. ಪರಭಾಷೆಯ ಚಿತ್ರಗಳಲ್ಲಿ ನಟಿಸುವಾಗಲೂ ಭಾರತಿ ಅವರು ಶ್ರೀನಿವಾಸ್ ಅವರನ್ನೇ ಕರೆದುಕೊಂಡು ಹೋಗುತ್ತಿದ್ದರಂತೆ. ಒಬ್ಬರೇ ಪ್ರಸಾಧನ ಕಲಾವಿದರು ಇದ್ದಾರೆಂದರೆ ಅದರಿಂದ ಆಗುವ ಲಾಭವನ್ನು ಭಾರತೀ ಹೀಗೆ ವಿವರಿಸುತ್ತಾರೆ :

"ಪರ್ಮನೆಂಟ್ ಮೇಕಪ್ ಮ್ಯಾನ್ ಇದ್ದಾಗ ಅವರಿಗೆ ನಮ್ಮ ಮುಖಾಲಂಕಾರದ ಸಕಲ ಗುಟ್ಟುಗಳೂ ತಿಳಿದಿರುತ್ತವೆ. ಎಲ್ಲಿ ಲೈಟ್ ಕಲರ್ಸ್ ಹಾಕಬೇಕು, ಎಲ್ಲಿ ಮೀಡಿಯಂ ಕಲರ್ ಹಾಕಬೇಕು, ಎಲ್ಲಿ ಡಾರ್ಕ್ ಕಲರ್ ಹಾಕಬೇಕು ಎನ್ನುವುದು ಅವರಿಗೆ ಚೆನ್ನಾಗಿ ತಿಳಿದಿರುತ್ತದೆ. ಒಬ್ಬೊಬ್ಬರ ಮುಖ ಒಂದೊಂದು ರೀತಿಯಲ್ಲಿ ಇರುತ್ತದೆ. ಎಲ್ಲರ ಮುಖಕ್ಕೆ ಒಂದೇ ರೀತಿಯ ಮೇಕಪ್ ಸಾಧ್ಯವಿಲ್ಲ. ಹಾಗಾಗಿ ಅವರು ಮುಖವನ್ನು

(ಚಿತ್ರ ೮) 'ಚಿತ್ರಲೇಖ' - ಕೀರ್ತಿಕುಮಾರ್



(ಚಿತ್ರ ೯) 'ಮರಿಯಾ ಮೈ ಡಾರ್ಲಿಂಗ್' - ಎಂ.ಪಿ.ಶಂಕರ್

ಕೂಲಂಕಷವಾಗಿ ಅಭ್ಯಸಿಸಬೇಕಾಗುತ್ತದೆ. ಪ್ರತಿ ಬಾರಿ ಹೊಸಬ ಮೇಕಪ್ ಮ್ಯಾನ್ ಆದರೆ ನಿರೀಕ್ಷಿತ ಯಶಸ್ಸು ಗಳಿಸುವುದು ಸಾಧ್ಯವಿಲ್ಲ. ಯಾಕೆಂದರೆ ಕಲಾವಿದರ ಮುಖದ ಪ್ಲಸ್ ಹಾಗೂ ಮೈನಸ್ ಪಾಯಿಂಟ್‌ಗಳೆರಡನ್ನು ಮೇಕಪ್ ಕಲಾವಿದ ಅರಿತಿರಬೇಕಾಗುತ್ತದೆ. ಈಗಂತೂ ಎಲ್ಲ ವಿಭಾಗದಲ್ಲಿ ಆದಂತೆ ಮೇಕಪ್ ವಿಭಾಗದಲ್ಲಿಯೂ ಸೈಂಟಿಫಿಕ್ ಪ್ರೋಗ್ರಸ್ ಆಗ್ತಿದೆ. ಹಾಲಿವುಡ್‌ನಿಂದ ಮ್ಯಾಕ್ಸ್ ಫ್ಯಾಕ್ಟರ್ ಕಂಪನಿಯ ತಯಾರಿಕೆ ಬೆಲೆ ದುಬಾರಿಯಾದರೂ ತುಂಬಾ ಸೊಫಿಸ್ಟಿಕೇಟೆಡ್ ಆಗಿದೆ. ಯಾಕೆಂದರೆ ಪಾತ್ರ ಮಾಡುವಾಗ ಮೇಕಪ್ ಮಾಡಿ ಮುಖ ಕಾಂತಿ ಹೆಚ್ಚಿಸಿಕೊಂಡರೆ ಸಾಲದು. ಮುಂದೆ ಅದರಿಂದ ಮುಖಕ್ಕೆ ಹಾನಿಯಾಗದಂತೆಯೂ ಎಚ್ಚರ ವಹಿಸಬೇಕು. ಈಗ ಸಿನಿಮಾ ಕಲಾವಿದರಷ್ಟೇ ಅಲ್ಲದೆ ಸಾರ್ವಜನಿಕರೂ ಕೂಡ ಮೇಕಪ್‌ನ ಅನಿವಾರ್ಯತೆಯನ್ನು ಕಂಡುಕೊಂಡಿದ್ದಾರೆ''.

ಭಾರತೀಯರಲ್ಲದ ಕಲ್ಪನಾ, ಮಂಜುಳಾ ಮೊದಲಾದ ನಟಿಯರೂ ಕೂಡ ತಮ್ಮ ಸ್ವಂತ ಪ್ರಸಾಧನ ಕಲಾವಿದರನ್ನು ಹೊಂದಿದ್ದರು. ಕಂಪೆನಿಯ ಪ್ರಸಾಧನ ಕಲಾವಿದರು ಎಲ್ಲರಿಗೂ ಒಂದೇ ಬಣ್ಣ, ಒಂದೇ ಬ್ರಶ್ ಬಳಸುವುದರಿಂದ ಮುಖದ ಅಂಟು ರೋಗಗಳು ಒಬ್ಬರಿಂದ ಒಬ್ಬರಿಗೆ ಬರುವ ಸಾಧ್ಯತೆಯೂ ಇದೆಯಾದ್ದರಿಂದ ಅನುಕೂಲವಿರುವವರೆಲ್ಲ ವೈಯಕ್ತಿಕ ಪ್ರಸಾಧನ ಕಲಾವಿದರನ್ನೇ ದುಡಿಸಿಕೊಳ್ಳುತ್ತಾರೆ.

ತಮ್ಮ ಯಶಸ್ಸಿನಲ್ಲಿ ಪ್ರಸಾಧನ ಕಲಾವಿದರ ಪಾಲು ದೊಡ್ಡದಿರುತ್ತದೆಂದು ಕಲಾವಿದರಿಗೂ ಗೊತ್ತು. ಆದರಿಂದ ಅವರನ್ನು ಗೌರವದಿಂದ, ಪ್ರೀತಿಯಿಂದ ನೋಡಿಕೊಳ್ಳುತ್ತಾರೆ. ಇದಕ್ಕೊಂದು ಉತ್ತಮ ಉದಾಹರಣೆ ಎಂದರೆ ಪಂಢರಿಬಾಯಿ. ಅವರಿಗೆ ಖಾಯಂ ಪ್ರಸಾಧನ ಕಲಾವಿದರಾಗಿದ್ದವರು ಕೆ.ನಾರಾಯಣಸ್ವಾಮಿ. ೧೯೬೫ರ ಹೊತ್ತಿಗೆ ಐವತ್ತು ಚಿತ್ರಗಳಲ್ಲಿ ಅಭಿನಯಿಸಿದ ಪಂಢರಿಬಾಯಿ ಅವರಿಗೆ ಈತ ಹನ್ನೆರಡು ವರ್ಷಗಳಿಂದ ಪ್ರಸಾಧನ ಮಾಡುತ್ತಿದ್ದ ವ್ಯಕ್ತಿ. ಒಮ್ಮೆ ನಾರಾಯಣಸ್ವಾಮಿ ವಿಪರೀತ ಅನಾರೋಗ್ಯದಿಂದ ಹಾಸಿಗೆ ಹಿಡಿದರು. ಆ ಸಂದರ್ಭದಲ್ಲಿ ಪಂಢರಿಬಾಯಿ ತಾವೊಬ್ಬ ದೊಡ್ಡ ನಟಿ ಎನ್ನುವುದನ್ನು ಮರೆತು ತಾನೆ ಕ್ಯಯಾರೆ ಅಡುಗೆ ಮಾಡಿ ಅವರಿಗೆ ಬಡಿಸಿ ಉಪಚರಿಸಿದರು. ತಮಿಳಿನ 'ದೈವತ್ತಾಯ್' ಎಂಬ ಚಿತ್ರದಲ್ಲಿ ನಾರಾಯಣಸ್ವಾಮಿ ಮಾಡಿದ ಪ್ರಸಾಧನದ ಬಗ್ಗೆ ಪಂಢರಿಬಾಯಿ ಯಾವಾಗಲೂ ನೆನೆಯುತ್ತಾರೆ.

ವರ್ಣಾಲಂಕಾರ ಕಲಾವಿದರು ತಮ್ಮ ಕೈಚಳಕಕ್ಕೆ ನೀಡಿದಷ್ಟೇ ಗಮನವನ್ನು ತಾವು ಉಪಯೋಗಿಸುವ ವಸ್ತುಗಳಿಗೂ ನೀಡುವುದು ಅಗತ್ಯ. ಇದರಲ್ಲಿ ಮೊದಲನೆಯದು ಕನೆಗಳು, ಲೋಷನ್‌ಗಳು, ಎಮಲ್ಷನ್‌ಗಳು ಮುಖ್ಯ. ಕಾಂತಿಯಿಂದ ಚೆನ್ನಾಗಿ ಕಾಣಲು ಪೌಡರ್(ಪುಡಿ), ಲಿಪ್‌ಸ್ಟಿಕ್, ರೋಸ್, ನೈಲ್ ಪಾಲಿಷ್ ಮುಂತಾದವು ಬೇಕಾಗುತ್ತವೆ. ಇದರೊಂದಿಗೆ ಸೌಂದರ್ಯದೊಂದಿಗೆ ಆರೋಗ್ಯವನ್ನು ಕಾಪಾಡುವ ನಿರ್ಗಂಧಕಗಳು, ಮಜ್ಜನ ಪರಿಕರಗಳೂ ಇವೆ. ಚರ್ಮದ ಪಾಲನೆಗೆ ತಣ್ಣಗಿರುವ, ನುಣುಪಾಗಿರುವ ಕ್ರೀಮ್ ಬಳಸುತ್ತಾರೆ. ಕಣ್ಣೀರು ಬರಲು ಗ್ಲಿಸರಿನ್ ಉಪಯೋಗಿಸಿದರೆ ರಕ್ತದಂತೆ ಕಾಣುವುದಕ್ಕೆ ವಾಶೆಬಲ್ ರೆಡ್ ವಾಟರ್ ಕಲರ್ ಬಳಸುತ್ತಾರೆ. ಸುಟ್ಟ ಗಾಯ ಮಾಡಲು ನುಣುಪಾದ ರಬ್ಬರ್ ಮಡಿಕೆ ಉಪಯೋಗಿಸುತ್ತಾರೆ.

ಎಲ್ಲ ಪರಿಕರಗಳೂ ಎಲ್ಲರಿಗೂ ದೊರೆಯುತ್ತಿದ್ದರೂ ಹಲವಾರು ವಿಭಾಗಗಳಲ್ಲಿ ಪರಭಾಷೆಯವರು ಸಾಧಿಸಿದ ಔನ್ನತ್ಯವನ್ನು ಕನ್ನಡ ಚಿತ್ರರಂಗ ಸಾಧಿಸಿಲ್ಲವೆಂದೇ ಹೇಳಬಹುದು. ಪ್ರಸಾಧನ ವಿಭಾಗ ಕೂಡ ಇದಕ್ಕೆ ಹೊರತಾಗಿಲ್ಲ. ಯಾವ ವರ್ಣಾಲಂಕಾರವೂ ಇಲ್ಲದೆ ರಾಬರ್ಟ್ ಫ್ಲಾಹರ್ಟಿ, ವಿಟ್ಟೋರಿಯಾ ಡಿಸಿಕಾ, ಬ್ರೆಸೇನ್ ಹಾಗೂ ವೇಲ್ ಉತ್ತಮ ಚಿತ್ರಗಳನ್ನು ನೀಡಿದ್ದಾರೆ. 'ಸಿಟಿಜನ್ ಕೇನ್' ಇಂದಿಗೂ ವಿಶ್ವಮಟ್ಟದ ಶ್ರೇಷ್ಠ ಚಿತ್ರ ಎನಿಸಿಕೊಂಡಿದೆ. ನಟ ಅಲೆಕ್‌ಗಿನ್ನಿಸ್ ರಾಬರ್ಟ್ ಹ್ಯಾಮರ್‌ನ 'ಕೈಂಡ್ ಹಾರ್ಟ್ ಅಂಡ್ ಕಾರೋನೆಟ್ಸ್' ಚಿತ್ರದಲ್ಲಿ ಏಳು ವಿಭಿನ್ನ ಬಗೆಯ ಪಾತ್ರಗಳನ್ನು ನಿರ್ವಹಿಸಿದರೂ ಅದರಲ್ಲಿ ಕಣ್ಣಿಗೆ ಕಾಣಿಸುವ ವೇಷಭೂಷಣ, ವರ್ಣಾಲಂಕಾರ ಸಮರ್ಪಕವಾಗಿ ಬಳಸಿದ್ದರಿಂದ ಯಶಸ್ವಿಯಾಗಿದ್ದು ಇತಿಹಾಸ. ಇದೇ ರೀತಿ ತಮಿಳಿನಲ್ಲಿ ಶಿವಾಜಿಗಣೇಶನ್ 'ನವರಾತ್ರಿ' ಚಿತ್ರದಲ್ಲಿ ಒಂಬತ್ತು ವಿವಿಧ ಪಾತ್ರಗಳನ್ನು ಮಾಡಿ ವರ್ಣಾಲಂಕಾರ ತಜ್ಞರಿಗೆ ಸವಾಲೆನಿಸುವ ಕೆಲಸ ನೀಡಿದ್ದರು. ಇದೇ ಚಿತ್ರ 'ನಯಾ ದಿನ್ ನಯೀ ರಾತ್' ಹೆಸರಿನಲ್ಲಿ ಹಿಂದಿಯಲ್ಲಿಯೂ ತಯಾರಾಯಿತು. ಅದರಲ್ಲಿ ನಟ ಸಂಜೀವ್ ಕುಮಾರ್ ಒಂಬತ್ತು ವಿವಿಧ ಪಾತ್ರಗಳಲ್ಲಿ ಉತ್ತಮ ಅಭಿನಯ ನೀಡಿ ಗಮನ ಸೆಳೆದರು. ಕನ್ನಡದಲ್ಲಿ ಮಾಲಾಶ್ರೀ, ಕುಮಾರ್ ಬಂಗಾರಪ್ಪ, ಜಗ್ಗೇಶ್ ಒಂದೇ ಚಿತ್ರದಲ್ಲಿ ಹಲವಾರು ಗೆಟಪ್‌ಗಳಲ್ಲಿ ಕಾಣಿಸಿಕೊಂಡರೂ ಒಂದು ನಿರ್ದಿಷ್ಟ ಎತ್ತರ ಏರಲಿಲ್ಲ. ಇದು ವರ್ಣಾಲಂಕಾರಕ್ಕೂ ಅನ್ವಯಿಸುತ್ತದೆ.

'ಅಶಾನಿ ಸಂಕೇತ್' ಚಿತ್ರದಲ್ಲಿ ನಿರ್ದೇಶಕ ಸತ್ಯಜಿತ್ ರಾಯ್ ಬಂಗಾಳದ ಬರಗಾಲದ ಹಿನ್ನಲೆಯಲ್ಲಿ ಕಥೆ ನಿರೂಪಿಸುತ್ತ ಬಡಜನತೆ ಅನ್ನಕ್ಕಾಗಿ ಕಾಡಿನಲ್ಲಿ ಗೆಡ್ಡೆ ಗೆಣಸು ಹುಡುಕುತ್ತಿರುವಾಗ ಅದರಲ್ಲಿಯ ಸುಂದರ ಹೆಣ್ಣನ್ನು ಅಕ್ಕಿ ಕೊಡುವ ಆಸೆ ತೋರಿಸಿ ಮುಖ ಸುಟ್ಟು ಹೋದ ವ್ಯಾಪಾರಿ ತನ್ನ ಕಾಮದಾಹಕ್ಕೆ ಬಲಿಪಶುವನ್ನಾಗಿ ಮಾಡಿಕೊಳ್ಳುತ್ತಾನೆ. ಈ ಹೃದಯ ವಿದ್ರಾವಕ ದೃಶ್ಯಕ್ಕೆ ವರ್ಣಾಲಂಕಾರ ಕೊಡುಗೆಯೂ ಗಮನ ಸೆಳೆಯುವಂತಿತ್ತು. ಹಿಂದಿ ಚಿತ್ರರಂಗದ ಸುಂದರ ನಟಿ ಎನಿಸಿಕೊಂಡಿರುವ ಮೀನಾಕುಮಾರಿ 'ಮೈ ಭಿ ಲಡ್‌ಕಿ ಹೂಂ' ಚಿತ್ರದಲ್ಲಿ ಯಾರೂ ಮದುವೆಯಾಗಲು ಒಪ್ಪದ ಕಪ್ಪು ಬಣ್ಣದ ಹುಡುಗಿಯ ಪಾತ್ರ ಧರಿಸಿದ್ದರು. ಇದು ವರ್ಣಾಲಂಕಾರದ ಕೊಡುಗೆಯೂ ಹೌದು. 'ಮದರ್ ಇಂಡಿಯಾ' ಚಿತ್ರದಲ್ಲಿ ನಾಯಕಿ ನರ್ಗೀಸ್ ಜಮೀನ್ದಾರಿ ಪದ್ಧತಿಯ ವಿರುದ್ಧ ಸೆಟೆದು ನಿಂತು ಸುಡುವ, ನಡೆವ ಯಾವುದೇ ವರ್ಣಾಲಂಕಾರ ವೃತ್ತಿಯವನ ಕಲ್ಪನೆಯನ್ನು ಮೀರಿದ್ದು. ಆದರಿಂದ ಅದು ಇಂದಿಗೂ ಅಮರ ಪಾತ್ರವಾಗಿ ಉಳಿದಿದೆ. 'ನೀಚಾ ನಗರ್'ನಂತಹ ವಾಸ್ತವವಾದಿ ಚಿತ್ರ ನೀಡಿದ ಚೇತನ್ ಆನಂದ್ ಭಾರತ-ಚೀನಾ ಯುದ್ಧ ಹಿನ್ನೆಲೆಯ 'ಹಕೀಕತ್' ಚಿತ್ರದಲ್ಲಿ ವಾರಗಟ್ಟಲೆ ತಮ್ಮ ಬೂಟುಗಳನ್ನು ಬಿಚ್ಚದ ಸೈನಿಕರು ಕೊನೆಗೊಂದು ದೃಶ್ಯದಲ್ಲಿ ಬೂಟು ಬಿಚ್ಚಿದಾಗ ಕಾಲಿನ ಚರ್ಮವೇ ಕಿತ್ತು ಬರುವ ದೃಶ್ಯ ಕೊನೆಯವರೆಗೂ ಮನಸ್ಸಿನಲ್ಲಿ ಉಳಿಯುವಂಥದ್ದು. ಇಂತಹ ಸೂಕ್ಷ್ಮ ವಿವರಗಳೇ ವರ್ಣಾಲಂಕಾರ ಕಲಾವಿದನಿಗೆ ಸವಾಲು ಹಾಕುವ ಹಾಗೂ ಸನ್ಮಾನ, ಪ್ರಶಸ್ತಿಗಳನ್ನು ತಂದುಕೊಡುವ ಸಾಧನೆಗಳು.

ಹೆಣ್ಣಿನ ಸೌಂದರ್ಯವನ್ನು ಪರದೆಯ ಮೇಲೆ ಹೇರಳವಾಗಿ, ಮುಕ್ತವಾಗಿ ತೋರಿಸುವ ಕಲೆ ಅರಿತ ನಿರ್ದೇಶಕ ರಾಜ್‌ಕಪೂರ್ 'ಸತ್ಯಂ ಶಿವಂ ಸುಂದರಂ' ಚಿತ್ರದಲ್ಲಿ ನಾಯಕಿ ಜೀನತ್ ಅಮಾನ್‌ಳ ಸುಂದರ ದೇಹವನ್ನು ಒಂದೆಡೆ ತೋರಿಸುತ್ತಲೇ ಮತ್ತೊಂದೆಡೆ ಆವಳ ಮುಖದ ಸುಟ್ಟ ಗಾಯದ ಕುರೂಪವನ್ನು ಕೊನೆಯವರೆಗೂ ಕುತೂಹಲ ಉಳಿಸಿಕೊಂಡೇ ಕಥೆ ಹೇಳುತ್ತಾರೆ. ಇಲ್ಲಿ ವರ್ಣಾಲಂಕಾರವನ್ನು ಕಥನಕ್ಕೂ ಬಳಸಿದ ರೀತಿ ವಿಶೇಷವಾದದ್ದು. 'ತಾಯಿ ಕರುಳು' ಚಿತ್ರದಲ್ಲಿ ಪ್ರಭಾಕರ್ ಮುಖದ ಒಂದು ಭಾಗವೇ ಕುರೂಪವಾಗಿತ್ತು. ನಾಯಕನಟರು ಅಂಥ ಪ್ರಸಾಧನ ಮಾಡಿಕೊಳ್ಳುವುದೇ ಒಂದು ಸಾಹಸ. ಅಂಥಲ್ಲಿ ಪ್ರಸಾಧನ ಕಲಾವಿದ ತುಂಬಾ ಎಚ್ಚರವಹಿಸಬೇಕಾಗುತ್ತದೆ. ಇದೇ ರೀತಿ 'ಒಲವಿನ ಉಡುಗೊರೆ' ಚಿತ್ರದಲ್ಲಿ ಅಂಬರೀಷ್ ಅವರಿಗೂ ಪ್ರಸಾಧನ ಮಾಡಲಾಗಿತ್ತು.

ಮಲಯಾಳಂ ನಿರ್ದೇಶಕ ಅರವಿಂದನ್ ಅವರ 'ಕಾಂಚನ ಸೀತಾ' ಚಿತ್ರ ನಮ್ಮ ಕಲ್ಪನೆಯ ರಾಮಾಯಣಕ್ಕೆ ತದ್ವಿರುದ್ಧವಾದದ್ದು. ಆ ಚಿತ್ರದಲ್ಲಿ ರಾಮ-ಲಕ್ಷ್ಮಣರು ಗಡ್ಡ,

ಮೀಸ ಬಿಟ್ಟ ಗುಡಗಾಮ ಜನಾಂಗದಂತಿರುವ ಸಾಮಾನ್ಯ ಜನರು. ಅವರ ಆಯುಧ, ನಡೆ-ನುಡಿ, ಹೋರಾಡುವ ಪರಿ, ಬದುಕು ಯಾವುದೋ ಗಿರಿಜನರ ಬದುಕಿನಲ್ಲಿ ಘಟಿಸಿದ ಕಥೆಯೇ ರಾಮಾಯಣ ಎಂದು ತಮ್ಮ ಚಿತ್ರದಲ್ಲಿ ನಿರೂಪಣೆ ಮಾಡಿದ್ದಾರೆ. ಅದರಲ್ಲಿ ಬರುವ ಜಿಂಕೆ ಯಾವ ಮಾಯಾಮೃಗವೂ ಅಲ್ಲ. ಲಕ್ಷ್ಮಣನ ಪಾತ್ರಕ್ಕೆ ಮುಖದ ಮೇಲೆ ಸಿಡುಬಿನ ಕಲೆಯಿದ್ದುದೂ ಒಂದು ವಿಶೇಷ. ಈ ಚಿತ್ರದ ಬಗ್ಗೆ ಅಭಿಪ್ರಾಯ ಏನೇ ಇರಲಿ, ಪ್ರಸಾಧನ ಕಲೆಯ ದೃಷ್ಟಿಯಿಂದ ಅದೊಂದು ಅಮೋಘ ಸಾಹಸ ಎಂದೇ ಹೇಳಬಹುದು.

ರಿಚರ್ಡ್ ಅಟೆನ್‌ಬರೊ 'ಗಾಂಧಿ' ಚಿತ್ರಕ್ಕಾಗಿ ತಾರಾಗಣದ ಆಯ್ಕೆಗಾಗಿ ಮುಂಬಯಿಯ ತಾಜ್ ಹೋಟೇಲ್‌ನಲ್ಲಿದ್ದಾಗ ಸರ್ದಾರ್ ಪಟೇಲರ ಪಾತ್ರಕ್ಕೆ ನಟ ಸಯಿದ್ ಜಾಫರಿ ಹೆಸರನ್ನು ಯಾರೋ ಸೂಚಿಸಿದಾಗ ಅಟೆನ್‌ಬರೊ ''ಅವರು ತುಂಬಾ ಕೆಂಪು ಬಣ್ಣದವರು. ಅದ್ದರಿಂದ ಆ ಪಾತ್ರಕ್ಕೆ ಹೊಂದಿಕೆ ಆಗುವುದಿಲ್ಲ'' ಎಂದುಬಿಟ್ಟರು. ಇದು ಸಯಿದ್ ಜಾಫರಿ ಕಿವಿಗೆ ಇತ್ತು. ಅಂತಿಮ ತಾರಾಗಣದ ಆಯ್ಕೆಗೆ ಮತ್ತೂ ಮೂರು ತಿಂಗಳಿದೆಯೆಂದು ತಿಳಿದ ಜಾಫರಿ ದಿನವೂ ಜುಹು ಬೀಚ್‌ನ ಮರಳ ಮೇಲ ಬರೀ ಚಡ್ಡಿಯ ಮೇಲೆ ಒಂದೊಂದು ತಾಸು ಅಂಗಾತ, ಬೋರಲು ಮಲಗುತ್ತಿದ್ದರು. ಮೂರು ತಿಂಗಳ ನಂತರ ಅವರ ಮೂಲ ಬಣ್ಣ ಸಂಪೂರ್ಣ ಬದಲಾಗಿತ್ತು. ನಂತರ ಅವರೇ ಆ ಪಾತ್ರಕ್ಕೆ ಆಯ್ಕೆಯೂ ಆದರು.

ಈ ಹಿನ್ನೆಲೆಯಲ್ಲಿ ಮನಸ್ಸನ್ನು ಕಾಡುವ ಅಂಶ ವರ್ಣಾಲಂಕಾರ ತಂತ್ರದ ಇತ್ತೀಚಿನ ಬೆಳವಣಿಗೆ. ತಂತ್ರಗಳನ್ನು ಬಳಸಿಕೊಂಡು ಹೊಸ ಹೊಸ ಕಥೆ, ಕಲ್ಪನೆಗಳನ್ನು ನಮ್ಮ ನಿರ್ದೇಶಕರು ಯಾಕೆ ರೂಪಿಸುತ್ತಿಲ್ಲ ಎಂದು. ಆಧುನಿಕ ಗ್ರಾಫಿಕ್ಸ್, ಸುಲಭವಾಗಿ ದೊರೆಯುವ ಅಂತರರಾಷ್ಟ್ರೀಯ ಮಾದರಿಯ ಕಚ್ಚಾ ಮಾಲು, ತಂತ್ರಜ್ಞಾನ, ಪರಿಣತರ ಸೇವೆ ಲಭ್ಯವಿರುವಾಗ ಅದರ ಸದುಪಯೋಗ ಕುರಿತು ಅಷ್ಟಾಗಿ ಯೋಚಿಸುತ್ತಿಲ್ಲ. ಮ್ಯಜಿಕ್ ಎನಿಸುವ 'ವ್ಯಾಂಪೈರ್' ಕಥೆ, ಹೀಗೂ ಸಾಧ್ಯವೇ ಎಂಬಂಥ ಮಾನವ ಹಾವಾಗುವ 'ಸ್ನೇಕ್' ಚಿತ್ರ ಅಥವಾ ಬೇರೆ ಗ್ರಹಗಳಿಂದ ಭೂಲೋಕಕ್ಕೆ ದಾಳಿ ಇಡುತ್ತಿರುವ ಹಲವಾರು ಬಗೆಯ ಜೀವಿಗಳ ಕಲ್ಪನೆಗೆ ಕಚಗುಳಿ ಇಡುವ ಕ್ಷೇತ್ರಗಳು. ತೆರೆಯ ಹಿಂದಿನ ಹಲವಾರು ವಿಭಾಗಗಳು ಈಗ ಪ್ರಾಮುಖ್ಯ ಪಡೆದು ಜನರ ಗಮನಕ್ಕೆ ಬರುತ್ತಿವೆ. ನಾಯಕ, ನಾಯಕಿ ಅಥವಾ ಇತರ ಕಲಾವಿದರಷ್ಟೇ ಅಲ್ಲದೆ ಹಿನ್ನೆಲೆ ಗಾಯಕರು, ತಂತ್ರಜ್ಞರು ತಮ್ಮ ಕೆಲಸದ ಮೂಲಕ ಜನರನ್ನು ತಲುಪುತ್ತಿದ್ದಾರೆ. ಹಾಗೆಯೇ ಪ್ರಸಾಧನ ಕೂಡ ಜನರ ಗಮನ ಸೆಳೆಯಬೇಕು. ಅದಕ್ಕೆ ಮುಖ್ಯವಾಗಿ ಅಂಥ ಕಥೆ, ಪಾತ್ರಗಳು ಸಿಗಬೇಕು.

ಇಂದಿನ ಚಿತ್ರರಂಗದಲ್ಲಿರುವ ಬಹು ಮಂದಿ ರಂಗಭೂಮಿಯಿಂದಲೇ ಬಂದವರು. ಒಂದು ವಾತಾವರಣದಿಂದ ಮತ್ತೊಂದು ವಾತಾವರಣಕ್ಕೆ ದಿಢೀರ್ ಎಂದು ತೆರಳಿದಾಗ ಅಲ್ಲಿ ಹೊಂದಿಕೊಳ್ಳುವವರೆಗೆ ಮುಜುಗರವಾಗುವುದು ಸಹಜ. ಇಂಥ ಪ್ರಸಂಗವೊಂದನ್ನು ಲಕ್ಷ್ಮೀಬಾಯಿ ತಮ್ಮ ಆತ್ಮಕಥನದಲ್ಲಿ ಹೀಗೆ ಹೇಳಿಕೊಂಡಿದ್ದಾರೆ: ''ನಾನು ಚಿತ್ರೀಕರಣ ನೋಡುವ ಸಲುವಾಗಿ ಒಮ್ಮೆ ಕೃಷ್ಣಾಬಾಯಿ ಜೊತೆ ಶೂಟಿಂಗ್‌ಗೆ ಹೋಗಿದೆ. ಆ ಸಂಸ್ಥೆಯ ಮಾಲೀಕರಾದ ಹರಿಭಾಯಿ ದೇಸಾಯಿ ನನ್ನನ್ನು ಗಮನಿಸಿ ಮೇಕಪ್‌ಮ್ಯಾನ್‌ನನ್ನು ಕರೆದು 'ಆ ಹುಡುಗಿ ಲಕ್ಷಣವಾಗಿದ್ದಾಳೆ. ಮೇಕಪ್ ಟೆಸ್ಟ್ ಮಾಡಿ' ಎಂದರು. ನಾನು ಏನೂ ತಿಳಿಯದೆ ಕಕ್ಕಾಬಿಕ್ಕಿಯಾಗಿ ನಿಂತಿದ್ದಾಗ ಅವರೇ 'ಮೇಕಪ್ ಮಾಡಿಸ್ಕೊ' ಎಂದರು. ಆಗ ಆ ಕಂಪನಿಗೆ ಮೇಕಪ್ ಕಲಾವಿದೆ ಆಗಿದ್ದವರು ದಘೂತಿ ಫಾತಿಮಾ. ಆಕೆ ಗದರಿಸುತ್ತಲೇ 'ಅಂದರ್ ಆವ್' ಎಂದಳು. ಮುಖ ತೊಳೆದುಕೊಂಡು ಬರಲು ಹೇಳಿದಳು. ಅನಂತರ ಮುಖಕ್ಕೆ ಬಣ್ಣ ಹಚ್ಚಿ ಲಿಪ್‌ಸ್ಟಿಕ್ ಹಾಕಿದಳು. 'ಮುಖಕ್ಕೆ ನೀರು ಸಿಂಪಡಿಸಿಕೊ' ಎಂದಳು. ಆದರೆ ಅವಳು ಹೇಳಿದ್ದು ನನಗೆ ಅರ್ಥವಾಗದೆ ನಾನು ಮುಖವನ್ನು ಉಜ್ಜಿ ತೊಳೆದುಕೊಂಡೆ. ಮುಖದಲ್ಲಿನ ಬಣ್ಣವೆಲ್ಲ ಕಲಸಿಕೊಂಡು ವಿಕಾರವಾಯಿತು. ನಾನು ಫಾತಿಮಾ ಎದುರು ಹೋಗಿ ನಿಂತಾಗ ಅವಳು ಕೋಪದಿಂದ ದೇಸಾಯಿಯವರಿಗೆ ಇವಳ ಅವಸ್ಥೆ ನೋಡಿ ಎಂದು ಹೇಳಿದಳು. ಮಾಲೀಕರು ಹೊಸಬಳಾದ ನನ್ನ ಪರಿಸ್ಥಿತಿಯನ್ನು ಅರಿತು ಮತ್ತೆ ಮೇಕಪ್ ಮಾಡುವಂತೆ ಆಕೆಗೆ ಹೇಳಿದರು. ಎರಡನೇ ಬಾರಿ ಮೇಕಪ್ ಮಾಡಿಸಿಕೊಂಡು ಸೆಟ್‌ಗೆ ಹೋದೆ. ಆದರೆ ನಟಿಸುವ ಸಂದರ್ಭದಲ್ಲಿ ನಗುವನ್ನಾದರೂ ಅಭಿನಯಿಸುತ್ತಿದ್ದೆ, ಅಳು ಮಾತ್ರ ಆಗುತ್ತಿರಲಿಲ್ಲ. ಆಗ ಚಿತ್ರದಲ್ಲಿ ಹೊಡೆದು ಅಳು ತರಿಸುತ್ತಿದ್ದರು''.

ಶಂಕರ್‌ಸಿಂಗ್ ಸಂಸ್ಥೆಯಲ್ಲಿ ನಾಯಕಿಯಾಗಿದ್ದ ಪ್ರತಿಮಾದೇವಿ ಪ್ರಸಾಧನದ ಬಗ್ಗೆ ತಮ್ಮ ಅನುಭವವನ್ನು ಹೀಗೆ ಹೇಳುತ್ತಾರೆ : ''ಶಂಕರ್‌ಸಿಂಗ್ ಅವರು ಚಿತ್ರೀಕರಣ ಮಾಡುತ್ತಿದ್ದಾಗ ಹಾಲಿವುಡ್, ಇಂಗ್ಲೆಂಡ್‌ನಿಂದ ಟ್ರಂಕ್‌ಗಟ್ಟಲೆ ಮೇಕಪ್ ಐಟಮ್ಸ್ ತರಿಸಿ ಇಟ್ಟಿರುತ್ತಿದರು. ಅವೇ ಬಹಳ ವರ್ಷ ಬಾಳಿಕೆ ಬರುತ್ತಿತ್ತು. ಆಗ ಎಲ್ಲರಿಗೂ ಒಂದೇ ಬಗೆಯ ಮೇಕಪ್. ನಾಯಕಿ ಅಂದರೆ ಗ್ಲಾಮರಸ್ ಆಗಿರಬೇಕು. ವಯಸ್ಸಾದ ಪಾತ್ರ ಆದರ ರಿಂಕಲ್ಸ್, ಪ್ಯಾಡ್ಸ್ ಹಾಗೂ ವೈಟ್ ಹೇರ್ ಮಾಡೋರು. ಆಗ ಬರುತ್ತಿದ್ದುದೂ ಕಪ್ಪು-ಬಿಳುಪು ಚಿತ್ರಗಳು. ಆದರೆ ತಮಿಳಿನವರ ಹಾಗೆ ನಮ್ಮಲ್ಲಿ ಓವರ್ ಮೇಕಪ್ ಮಾಡುತ್ತಿರಲಿಲ್ಲ. ನಮ್ಮ ಚಿತ್ರಗಳು ಸಹಜತೆಗೆ ಆಗಲೇ ಹತ್ತಿರವಾಗಿರುತ್ತಿದ್ದವು''.

ಕನ್ನಡ ಚಿತ್ರರಂಗದ ಪ್ರಸಾಧನದಲ್ಲಿ ತನ್ನದೇ ವಿಶಿಷ್ಟ ಸ್ಥಾನ ಗಳಿಸಿಕೊಂಡವರು ದೊರೆಸ್ವಾಮಿನಾಯ್ಡು. ತೆರೆಯ ಹೊರಗೆ ಅಪರಿಚಿತರಾದರೂ ಚಿತ್ರಜೀವನದಲ್ಲಿ ಹಿರಿಯ ವ್ಯಕ್ತಿ. ದೀರ್ಘ ಅನುಭವ ಹೊಂದಿದ್ದು, ರಾಜಕುಮಾರ್ ಅವರ ವೈಯಕ್ತಿಕ ಪ್ರಸಾಧನ ಕಲಾವಿದರಾಗಿದ್ದ ದೊರೆಸ್ವಾಮಿ ತಾನಾಯಿತು ತನ್ನ ಕೆಲಸವಾಯಿತು ಎಂಬಂತಿರುವವರು. ಕಲ್ಕತ್ತಾದಲ್ಲಿ ಪ್ರಸಾಧನ ಕಲೆಯ ವೃತ್ತಿ ಜೀವನ ಆರಂಭಿಸಿದ ದೊರೆಸ್ವಾಮಿ 'ರಾಜ್ ಅವರೇ ನನ್ನ ಸಕಲ ಆಸ್ತಿ. ಅವರ ಉತ್ತಮ ಗುಣಗಳೇ ನನ್ನನ್ನು ಅವರಲ್ಲಿ ಕಟ್ಟಿ ಹಾಕಿಸಿವೆ' ಎನ್ನುತ್ತಿದ್ದರು. ರಾಜ್ ನಿರ್ವಹಿಸಿದ ಪೌರಾಣಿಕ, ಐತಿಹಾಸಿಕ ಪಾತ್ರಗಳಿಗೆ ಜೀವ ತುಂಬಿದ ದೊರಸ್ವಾಮಿ ಪ್ರಸಾಧನ ಕಲೆಯ ಬಗ್ಗೆ ತಮ್ಮ ಅಭಿಪ್ರಾಯ ಹೀಗೆ ಹೇಳುತ್ತಾರೆ : ''ನಾನು ಈ ವೃತ್ತಿಗೆ ಬರುವ ಮೊದಲು ನಾಟಕಗಳಲ್ಲಿ ಕಲಸ ಮಾಡುತ್ತಿದ್ದೆ. ಕನ್ನಯ್ಯ ಡ್ರಾಮಾ ಕಂಪೆನಿಯಲ್ಲಿ ಎಸ್.ಜಿ.ಕಿಟ್ಟಪ್ಪ ಅವರೊಂದಿಗಿದೆ. ಸುಮಾರು ಇಪ್ಪತ್ತು ವರ್ಷಗಳ ಕಾಲ ಕೆಲಸ ಮಾಡಿದರೂ ಮಾಲೀಕರು ನಿಧನರಾದ ನಂತರ ಮುಂದೆ ಜೀವನಕ್ಕೇನು ಮಾಡುವುದೆಂದು ತಿಳಿಯದಾಯಿತು. ಆ ಸಂದರ್ಭದಲ್ಲಿ ಕೆ.ಟಿ.ಸುಂದರಾಂಬಾಳ್ ಈಸ್ಟ್ ಇಂಡಿಯಾದಲ್ಲಿ 'ನಂದನಾರ್' ಚಿತ್ರ ತಯಾರಿಕೆ ಆರಂಭಿಸಿದರು. ನಾನು ಕಲ್ಕತ್ತಾಗೆ ಹೋಗಿ ಸೇರಿದೆನಾದರೂ ಆರಂಭದಲ್ಲಿ ನನಗೆ ಮೇಕಪ್ ಕುರಿತಾಗಿ ಏನೂ ತಿಳಿದಿರಲಿಲ್ಲ. ಅದುವರೆಗೆ ನಾನು ನಟನಾಗಿಯೇ ಕೆಲಸ ಮಾಡಿದ್ದೆ. ಮತ್ತೆ ಮದ್ರಾಸಿಗೆ ಹಿಂತಿರುಗಿ ಏನಾದರೂ ಕೆಲಸ ಕೊಡಿಸಲು ನನ್ನ ಸಹೋದರನನ್ನು ಕೇಳಿದೆ. ಅವರು ನನ್ನನ್ನು ನ್ಯಾಷನಲ್ ಮೂವಿಟೋನ್‌ಗೆ ಬರಲು ತಿಳಿಸಿದರು. ಅಲ್ಲಿ ಟಿ.ಪಿ.ರಾಜಲಕ್ಷ್ಮಿ, ಕಳತ್ತೂರು ಶಾಮ ಮೊದಲಾದವರು ನಟಿಸುತ್ತಿರುವ ಮೂಕಿಚಿತ್ರವೊಂದು ತಯಾರಾಗುತ್ತಿತ್ತು. ಅಲ್ಲಿ ನನಗೆ ಮೇಕಪ್ ಕೆಲಸ ಹೇಳಿದರು. ಗೊತ್ತಿಲ್ಲವೆಂದರೂ ನನ್ನ ಸಹೋದರ ಧೈರ್ಯ ನೀಡಿದರು. ನಂತರ ಆ ಚಿತ್ರದ ನಿರ್ದೇಶಕ ವೈ.ವಿ.ರಾವ್ ಅವರೊಂದಿಗೆ ಕಲ್ಕತ್ತಾಗ ಹೋಗಿ 'ಚಿಂತಾಮಣಿ' ಚಿತ್ರಕ್ಕೂ ಕೆಲಸ ಮಾಡಿದ.

''ಅಷ್ಟು ಹೊತ್ತಿಗೆ ಕಲ್ಕತ್ತಾದ ಹರಿಬಾಬು ಅವರ ಮಾರ್ಗದರ್ಶನದಲ್ಲಿ ಮೇಕಪ್ ಬಗ್ಗೆ ಸಾಕಷ್ಟು ಕಲಿತೆ. ನಂತರ ವೈ.ವಿ.ರಾವ್ ಮದರಾಸಿನಲ್ಲಿ ಸ್ಟಾರ್ಟೋನ್ ಸ್ಟುಡಿಯೋ ಪ್ರಾರಂಭಿಸಿ ನನ್ನನ್ನು ಕರೆದರು. ಅಲ್ಲಿ ನನಗೆ ಅನೇಕರ ಸಂಪರ್ಕ ದೊರೆಯಿತು. ಆಗ ನಾವು ನಾಟಕಗಳಲ್ಲಿ ಮಾಡುತ್ತಿದ್ದ ಮೇಕಪ್ ಅನ್ನೇ ಡೆವಲಪ್ ಮಾಡಿ ಬಳಸುತ್ತಿದೆವು. ಆ ಕಾಲದಲ್ಲಿ ಸ್ಟಿಕ್‌ಗಳು ಬರುತ್ತಿದ್ದವು. ಅದನ್ನು ಹಿಟ್ಟಿನಂತೆ ಮಾಡಿಕೊಂಡು ಕೈಗಳಿಗೆ ಉಜ್ಜಿಕೊಂಡು ಮುಖಕ್ಕೆ ಹಚ್ಚಬೇಕಾಗಿತ್ತು. ಆಗ ಪ್ಯಾನ್‌ಕೇಕ್ ಆಗಲಿ, ಬ್ರಶ್ ಆಗಲಿ ಲಭ್ಯವಿರಲಿಲ್ಲ. ಆ ಸಂದರ್ಭದಲ್ಲಿ ಹರಿಬಾಬು ಮದರಾಸಿಗೆ ಬಂದರು. ಅವರಿಗೆ ಪ್ಯಾನ್‌ಕೇಕ್ ಹಾಗೂ ಲೈಟ್ ಅಂಡ್ ಶೇಡ್ ಕಲರ್‌ಗಳ ಬಗ್ಗೆ ಅನುಭವವಿತ್ತು. ಅವರು ಮೇಕಪ್ ಮಾಡುತ್ತಿದ್ದಾಗ ಬೇರೆಯವರನ್ನು ಒಳಗೆ ಬಿಡುತ್ತಿರಲಿಲ್ಲ. ಮೇಕಪ್ ಮುಗಿಸಿ ಕಲಾವಿದರು ಹೊರಬಂದ ನಂತರ ಮುಖವನ್ನು ನೋಡಿ ಅಭ್ಯಸಿಸುತ್ತಿದ್ದೆ. ಆರಂಭದಲ್ಲಿ ಕೆಲವು ತಪ್ಪುಗಳಾದರೂ ನಿಧಾನವಾಗಿ ಈ ರೀತಿಯ ಕೆಲಸವನ್ನು ಕಲಿತೆ.

''ಹರಿಬಾಬು ಅವರ ತಮ್ಮನನ್ನು ಪರಿಚಯ ಮಾಡಿಕೊಂಡು ಉಪಾಯವಾಗಿ ಹರಿಬಾಬು ಉಪಯೋಗಿಸುತ್ತಿದ್ದ ಕೆಲವು ವಸ್ತುಗಳನ್ನು ತರಿಸಿಕೊಂಡು ನನ್ನ ಬಾಯಂ ಆರ್ಟಿಸ್ಟ್‌ಗಳಿಗೆ ಪ್ರಯೋಗಿಸಿ ಸೆಟ್‌ಗೆ ಕಳುಹಿಸುತ್ತಿದ್ದೆ. ಆ ದಿನಗಳಿಗೂ ಈಗಿನ ದಿನಗಳಿಗೂ ಬಹಳ ವ್ಯತ್ಯಾಸವಿದೆ. ಅದು ಕಪ್ಪು-ಬಿಳುಪು ಚಿತ್ರಗಳ ಕಾಲ, ಮಾತ್ರವಲ್ಲದೆ ಟಾಕಿ ಚಿತ್ರಗಳೂ ಬಂದಿರಲಿಲ್ಲ. ಆರಂಭದಲ್ಲಿ ಕಲ ತಪ್ಪುಗಳನ್ನು ಮಾಡಿ ಕಟಿಂಗ್ಸ್ ಮತ್ತು ಶೇಡ್‌ಗಳನ್ನು ಇಂಪ್ರೂವ್ ಮಾಡಿದೆವು. ನಾನು ನನ್ನ ಗುರು ಹರಿಬಾಬು ಅವರ ಕೆಲಸ ಗಮನಿಸಿ ಟೆಕ್ನಿಕ್ ಅಭಿವೃದ್ಧಿಗೊಳಿಸಿದೆ. ಇಂದು ಬೇಕಾದಷ್ಟು ಹೊಸ ಮೆಟೀರಿಯಲ್ಸ್ ಬಂದಿವೆ. ನಾವೂ ಅವುಗಳನ್ನು ಪ್ರಯೋಗಿಸಲು ಸಿದ್ಧರಾಗಿದ್ದೇವೆ. ಕಲಾವಿದರು ಮೇಕಪ್‌ಗಾಗಿ ಬಂದು ಕುಳಿತ ಕೂಡಲೇ ಮೇಕಪ್ ಮಾಡದೆ ಸ್ವಲ್ಪ ಹೊತ್ತು

(ಚಿತ್ರ ೧೦) ೫೦ರ ದಶಕದಲ್ಲಿ ಮದರಾಸಿನ ಸ್ಟುಡಿಯೋಗಳಲ್ಲಿ ಪ್ರಸಾಧನ ಕೊಠಡಿ ರಾಜಕುಮಾರ್ ಹಾಗೂ ಅವರ ನೆಚ್ಚಿನ ಪ್ರಸಾಧನ ಪಟು ದೊರೆಸ್ವಾಮಿ ನಾಯ್ಡು

ಮಾತುಕತೆಯಾಡಿ ಅವರ ಮುಖವನ್ನು ಸ್ಟಡಿ ಮಾಡುತ್ತೇವೆ. ಅನಂತರ ಕುಂದು ಕೊರತೆಗಳನ್ನು ಗಮನಿಸಿ ಅದಕ್ಕೆ ತಕ್ಕಂತೆ ಮೇಕಪ್ ಮಾಡುತ್ತೇವೆ.

''ಮೇಕಪ್ ಮಾಡುವ ಮೊದಲು ಪಾತ್ರದ ಸ್ವಭಾವ, ಲಕ್ಷಣಗಳು ಹಾಗೂ ಇನ್ನಿತರ ವಿಷಯಗಳನ್ನು ನಿರ್ದೇಶಕರಿಂದ ಕೇಳಿ ತಿಳಿಯುತ್ತಿದ್ದೆವು. ಹಂತ ಹಂತವಾಗಿ ಪಾತ್ರವನ್ನು ಫಾಲೋ ಮಾಡಬೇಕಾಗಿತ್ತು, ಕಂಟಿನ್ಯೂಯಿಟಿಯತ್ತ ಗಮನ ಹರಿಸಬೇಕಾಗಿತ್ತು. ಅದಕ್ಕೆ ಮೊದಲು ಕಥೆಯ ಬಗ್ಗೆಯೂ ತಿಳಿದುಕೊಳ್ಳಬೇಕಾಗಿತ್ತು. ಇದರೊಂದಿಗೆ ಮೇಕಪ್ ಮ್ಯಾನ್, ಡೈರೆಕ್ಟರ್ ಹಾಗೂ ಕ್ಯಾಮರಾಮ್ಯಾನ್ ನಡುವೆ ಒಂದು ಅಂಡರ್‌ಸ್ಟ್ಯಾಂಡಿಂಗ್ ಇರಲೇಬೇಕು. ಆದರೆ ಈಗೀಗ ಸಹನಿರ್ದೇಶಕರು ನಮಗೆ ಕಥೆಯ ಬಗ್ಗೆ, ಪಾತ್ರದ ಬಗ್ಗೆ ಏನೂ ಸರಿಯಾಗಿ ಮಾಹಿತಿ ನೀಡದೆ ಮೇಕಪ್ ಮಾಡುವಂತೆ ಕಳಿಸುತ್ತಾರೆ. ಈಗ ಎಷ್ಟೇ ಅಭಿವೃದ್ಧಿ ಹೊಂದಿದ್ದರೂ ಕೆಲಸದಲ್ಲಿ ಮಾತ್ರ ಮೊದಲಿನ ತನ್ಮಯತೆ ಇಲ್ಲ. ಈಗಂತೂ ವರ್ಣಚಿತ್ರಗಳೇ ಎಲ್ಲ. ಮೇಕಪ್ ಮಾಡಲು ಕಪ್ಪು-ಬಿಳುಪು ಚಿತ್ರಗಳೇ ತ್ರಾಸದಾಯಕ. ಇವರಲ್ಲಿ ಅನೇಕ ಶೇಡ್‌ಗಳ ಕಟಿಂಗ್‌ಗಳನ್ನು ಕೊಡಬೇಕಾಗುತ್ತದೆ.

''ಇನ್ನು ನನ್ನ ವೃತ್ತಿ ಜೀವನದಲ್ಲಿ ರಾಜಕುಮಾರ್ ದೊರಕಿದ್ದು ನನ್ನ ಸುಯೋಗವೆಂದೇ ಹೇಳಬೇಕು. ಒಮ್ಮೆ ಜಿ.ವಿ.ಅಯ್ಯರ್ ಅವರು ಹೊಸ ನಟನೊಬ್ಬನಿಗೆ ಮೇಕಪ್ ಮಾಡಬೇಕೆಂದರು. ಅವರೇ ರಾಜಕುಮಾರ್. ನಂತರ ಅವರೊಂದಿಗೆ ಮೂರ್‍ನಾಲ್ಕು ಚಿತ್ರಗಳಲ್ಲಿ ಕೆಲಸ ಮಾಡುವ ಅವಕಾಶ ದೊರೆಯಿತು. ಆದರೂ ಹೆಚ್ಚು ಹತ್ತಿರವಾಗಲಿಲ್ಲ. ಆಗ ನಾನು ತೆಲುಗು ಚಿತ್ರಗಳಲ್ಲಿ ಬ್ಯುಸಿ ಆಗಿದ್ದೆ. 'ನಾಗಾರ್ಜುನ', 'ಕೃಷ್ಣಗಾರುಡಿ' ಚಿತ್ರಗಳಲ್ಲಿ ಕೆಲಸ ಮಾಡಿದ ನಂತರ ರಾಜಕುಮಾರ್ ಅವರಿಗೆ ತೃಪ್ತಿಯಾಗಿ ತಮ್ಮೊಡನೆ ಇರಲು ಹೇಳಿದರು. ಒಮ್ಮೆ ಬೇರೊಬ್ಬರು ರಾಜಕುಮಾರ್ ಅವರಿಗೆ ಮೇಕಪ್ ಮಾಡಿದರು. ಅದು ಅವರಿಗೆ ತೃಪ್ತಿಯಾಗಲಿಲ್ಲ. ಪತ್ರಿಕೆಗಳಲ್ಲಿ ಕೆಟ್ಟದಾಗಿ ವಿಮರ್ಶೆ ಬಂತು. ಆಗ ರಾಜ್ ನೊಂದುಕೊಂಡು ತಮ್ಮ ಮುಖ ಎಲ್ಲ ಬಗೆಯ ಪಾತ್ರಗಳಿಗೆ ಹೊಂದುವುದಿಲ್ಲವಾದರೆ ಈ ಫೀಲ್ಡ್ ಬಿಟ್ಟುಬಿಡುವುದೇ ಲೇಸು ಎಂದು ಹೇಳಿದರು. ಆಗ ನಾನು 'ನಿಮ್ಮ ಮುಖ ಎಲ್ಲ ಬಗೆಯ ಪಾತ್ರಗಳಿಗೆ ಹೊಂದುತ್ತದೆ. ನನ್ನ ಮಾತು ಸುಳ್ಳಾದರೆ ಮತ್ತೆಂದೂ ನಾನು ಮೇಕಪ್ ಬಾಕ್ಸ್ ಮುಟ್ಟುವುದೇ ಇಲ್ಲ' ಎಂದು ಪ್ರತಿಜ್ಞೆ ಮಾಡಿದೆ. 'ಕನ್ಯಾರತ್ನ', 'ಗೋವಾದಲ್ಲಿ ಸಿ.ಐ.ಡಿ.' ಚಿತ್ರಗಳಲ್ಲಿ ಅವರಿಗೆ ಮೇಕಪ್ ಮಾಡಿ ನನ್ನ ಮಾತು ನಿಜ ಮಾಡಿಸಿದೆ. ಆದರೂ ಒಬ್ಬರೇ ಕಲಾವಿದರಿಗೆ ಸೀಮಿತವಾಗಿದ್ದರೆ ಮೇಕಪ್‌ಮ್ಯಾನ್ ಹೆಚ್ಚು ಬೆಳೆಯಲು ಸಾಧ್ಯವಾಗುವುದಿಲ್ಲ ಎನ್ನುವುದೂ ನಿಜ''.

ದೊರೆಸ್ವಾಮಿ ಮೊದಲು ಎಂ.ಜಿ.ಆರ್., ನಾಗಯ್ಯ, ವಿ.ಎನ್.ಜಾನಕಿ ಮೊದಲಾದವರೊಂದಿಗೂ ಕೆಲಸ ಮಾಡಿದ್ದರು. ಇವರಂತೆ ಕನ್ನಡ ಚಿತ್ರರಂಗದಲ್ಲಿ ಪ್ರಸಾಧನ ಪಟುವಾಗಿ ಸಾಕಷ್ಟು ಚಿತ್ರಗಳಿಗೆ ಕೆಲಸ ಮಾಡಿದವರು ಮನ್ಮಥರಾವ್. 'ಕೌಬಾಯ್ ಕುಳ್ಳ' ಚಿತ್ರದ ಮೂಲಕ ಸ್ವತಂತ್ರ ಪ್ರಸಾಧನ ಕಲಾವಿದರಾಗಿ ಕನ್ನಡ ಚಿತ್ರರಂಗ ಪ್ರವೇಶಿಸಿದ ಅವರು 'ಎಡಕಲ್ಲು ಗುಡ್ಡದ ಮೇಲೆ' ಚಿತ್ರದ ನಂತರ ಇಲ್ಲಿಯೇ ನೆಲೆಯೂರಿದರು. ಅಣ್ಣ ವೀರರಾಜು ಅವರಿಂದ ಪ್ರಸಾಧನ ಕಲಿತ ನಂತರ ಎಸ್.ಆರ್.ಮೂರ್ತಿ, ರಾಜಗೋಪಾಲ್ ಅವರ ಜೊತೆ ಕೆಲಸ ಮಾಡಿದರು. ಮೇಕಪ್ ಸುಬ್ಬಣ್ಣನವರ ಮೂಲಕ ಕನ್ನಡ ಚಿತ್ರರಂಗದ ನಂಟು ಬೆಳೆಸಿಕೊಂಡರು. ಮನ್ಮಥರಾವ್ ತಮ್ಮ ಅನುಭವವನ್ನು ಈ ರೀತಿ ಹಂಚಿಕೊಂಡಿದ್ದಾರೆ : ''ಹಿಂದಿನ ದಿನಗಳಿಗೂ ಇಂದಿಗೂ ಅಪಾರ ವ್ಯತ್ಯಾಸಗಳಿವೆ. ಆಗ ಕಪ್ಪು-ಬಿಳುಪು ಚಿತ್ರಗಳು ಮಾತ್ರವೇ ತಯಾರಾಗುತ್ತಿದ್ದವು. ಮುಖಕ್ಕೆ ತಕ್ಕಂತೆ ಮೌಲ್ಡ್ ಮತ್ತು ಶೇಡ್‌ಗಳನ್ನು ಮಾಡುತ್ತಿದ್ದೆವು. ಈಗ ಅಷ್ಟೊಂದು ಶ್ರಮದ ಅಗತ್ಯವಿಲ್ಲ. ಏಕೆಂದರೆ ಸೆಟ್‌ಗಳ ಮೇಲೆ ಫ್ಲಾಟ್ ಮೇಕಪ್ ಮಾಡಬಹುದು ಅಥವಾ ಲೈಟಿಂಗ್ ಅರೇಂಜ್ ಮಾಡಬಹುದು. ಈಗಂತೂ ಈ ವಿಭಾಗದಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ಇದಕ್ಕೆ ಕೊನೆಯೇ ಇಲ್ಲ. ವಿದೇಶಿ ಚಿತ್ರಗಳನ್ನು ನೋಡಿಯೂ ಸಾಕಷ್ಟು ಅಭಿವೃದ್ಧಿ ಪಡಿಸಿಕೊಳ್ಳುತ್ತೇವೆ. ಆದರೆ ಇದಕ್ಕೆ ನಿರ್ಮಾಪಕ, ನಿರ್ದೇಶಕರ ಸಹಾಯವೂ ಅಗತ್ಯ. ನಮ್ಮಲ್ಲಿನ ಮೇಕಪ್ ಪರಿಕರಗಳೂ ವಿದೇಶಗಳಿಂದ ಬರುವ ಪರಿಕರಗಳಷ್ಟು ಉತ್ತಮ ಗುಣಮಟ್ಟದ್ದಲ್ಲ. ನಮ್ಮ ಪ್ರತಿಭೆಗೆ ಸವಾಲಾಗುವುದು ಪೌರಾಣಿಕ ಪಾತ್ರಗಳು. ಆದರೆ ಈಗ ಅಂಥ ಚಿತ್ರಗಳೇ ಬರುತ್ತಿಲ್ಲ.

''ಮೇಕಪ್ ಕಲಾವಿದರು ಕಥೆಯ ಚರ್ಚೆಯಲ್ಲಿ ಭಾಗವಹಿಸಬೇಕು. ಆದರೆ ಇಂದು ನಿರ್ದೇಶಕರಿಗೆ, ಕಥೆಗಾರನಿಗೆ ಇದಕ್ಕೆಲ್ಲ ತಾಳ್ಮೆಯಿಲ್ಲ. ಗೆಟಪ್ ಹೇಳುತ್ತಾರೆಯೇ ಹೊರತು ಪಾತ್ರದ ಸ್ವಭಾವ, ಲಕ್ಷಣ, ಕಥೆ ಏನನ್ನೂ ಹೇಳುವ ಸಂಪ್ರದಾಯ ಈಗಿಲ್ಲ. ಇದರೊಂದಿಗೆ ಕ್ಯಾಮರಾಮನ್ ಹಾಗೂ ಮೇಕಪ್‌ಮ್ಯಾನ್ ಇಬ್ಬರಲ್ಲೂ ಹೊಂದಾಣಿಕೆಯಿರಬೇಕು. ಬಣ್ಣವನ್ನು ಬೆಳಕಿಗೆ ಅನುಕೂಲವಾಗುವಂತೆ ಹೆಚ್ಚಿಸಬೇಕೆ ಡಲ್ ಮಾಡಬೇಕೆ ಎಂದು ಕ್ಯಾಮರಾಮನ್ ಹೇಳಬೇಕು. ಹಾಗೆಯೇ ವಿಗ್, ಕಾಸ್ಟ್ಯೂಮ್ಸ್ ಎಲ್ಲವೂ ಮೇಕಪ್‌ಗೆ ಪೂರಕವಾಗಿ ಒಂದಕ್ಕೊಂದು ಹೊಂದಾಣಿಕೆಯಾಗಬೇಕು.

''ಚಿತ್ರಕ್ಕೆ ಮೇಕಪ್ ಮ್ಯಾನ್ ಇಲ್ಲದಿದ್ದರೂ ಆಗುತ್ತದೆ ಎನ್ನುತ್ತಾರಾದರೂ ಇದು ಸಂಪೂರ್ಣ ಸಾಧ್ಯವಿಲ್ಲ. ಪಾತ್ರದ ವಯಸ್ಸು, ಪರಿಣಿತಗಳನ್ನು ತೋರಿಸಲು ಮೇಕಪ್ ಬೇಕೇ ಬೇಕು. ಕಮರ್ಶಿಯಲ್ ಚಿತ್ರಗಳಲ್ಲಿ ಗ್ಲಾಮರ್ ಇರಲೇಬೇಕು. ಗ್ಲಾಮರ್ ಬೇಕೆಂದರೆ ಮೇಕಪ್ ಕಲಾವಿದ ಬೇಕೇ ಬೇಕು.

''ಮೇಕಪ್ ಮ್ಯಾನ್ ಆದವನು ಕೆಲವು ಕಾರಣಗಳಿಗಾಗಿ ಪರ್ಸನಲ್ ಮೇಕಪ್ ಮ್ಯಾನ್ ಆದರೂ ಯೂನಿಟ್‌ನಲ್ಲಿ ಕೆಲಸ ಮಾಡುವುದು ಒಳ್ಳೆಯದು. ಒಬ್ಬರೇ ಕಲಾವಿದರಿಗೆ ಮಾಡುತ್ತಿದ್ದರೆ ವಿಭಿನ್ನ ಪ್ರಯತ್ನಗಳು ಸಾಧ್ಯವಿಲ್ಲ. ಕೆಲಸದಲ್ಲಿ ಏಕತಾನತೆ ಬರುತ್ತದೆ''.

'ಕಠಾರಿ ವೀರ' ಕನ್ನಡ ಚಿತ್ರದಲ್ಲಿ ಮಾಧವಯ್ಯನವರಿಗೆ ಸಹಾಯಕರಾಗಿ ಕೆಲಸ ಮಾಡಿದ ವೀರಾಸ್ವಾಮಿ ಸ್ವಂತ್ರ ಪ್ರಸಾಧನ ಕಲಾವಿದರಾಗಿ ಇನ್ನೂರಕ್ಕೂ ಹೆಚ್ಚು ಕನ್ನಡ ಚಿತ್ರಗಳಲ್ಲಿ, ನೂರು ತೆಲುಗು ಚಿತ್ರಗಳಲ್ಲಿ ಕೆಲಸ ಮಾಡಿದ್ದರು. ಮೇಕಪ್ ಭದ್ರಯ್ಯನವರ ಬಳಿ ತರಬೇತಿ ಪಡೆದ ನಂತರ ವೀರರಾಜು ಹಾಗೂ ಮಾಧವಯ್ಯ ಅವರೊಂದಿಗೆ ಪರಿಣತಿ ಹೊಂದಿದರು. ಈ ವೀರಾಸ್ವಾಮಿ ತಮ್ಮ ಕೆಲಸವನ್ನು ಕುರಿತು ಹೇಳುತ್ತಾರೆ : ''ಆ ದಿನಗಳ ಕೆಲಸ ಹೇಗಿತ್ತೆಂದರೆ ನಮ್ಮ ಗುರುಗಳು ಯಾವಾಗಲೂ ಹೇಳುತ್ತಿದ್ದರು. ನಾವು ಮೇಕಪ್ ಮಾಡುವ ಕಲಾವಿದರು ನಮ್ಮನ್ನು ಮೆಚ್ಚಿ ಗೌರವಿಸಬೇಕು. ಕೆಲಸದಲ್ಲಿ ಭಯ, ಭಕ್ತಿ ಇರಬೇಕು ಎನ್ನುತ್ತಿದ್ದರು. ನಾವೂ ಹಾಗೆಯೇ ನಿಷ್ಠೆಯಿಂದ ಕೆಲಸ ಮಾಡುತ್ತಿದ್ದೆವು. ಕಲಾವಿದರೂ ಗೌರವ ಕೊಡುತ್ತಿದ್ದರು. ಇಂದು ಈ ರಂಗದಲ್ಲಿ ಬೇಕಾದಷ್ಟು ಬದಲಾವಣೆಗಳಾಗಿವೆ. ಹೊಸ ಹೊಸ ಮೆಟೀರಿಯಲ್ಸ್ ಬರ್‍ತಾ ಇವೆ. ವಿದೇಶಿ ವಸ್ತುಗಳಾದರೆ ಚರ್ಮಕ್ಕೆ ಹಾನಿಯಾಗುವುದಿಲ್ಲ. ಬೆಲೆ ಜಾಸ್ತಿಯಾದರೂ ಅವನ್ನೇ ಬಳಸಬೇಕು.

(ಚಿತ್ರ ೧೧) ಮೇಕಪ್‌ಗೆ ಮೊದಲು ಅಲಂಕರಣ ಸಾಮಗ್ರಿಗಳಿಗೆ ಪೂಜೆ ಸಲ್ಲಿಸುತ್ತಿರುವ ಕಲ್ಯಾಣ್ ಕುಮಾರ್

"ನನಗೆ ಮೊದಲಿನಿಂದಲೂ ಅಷ್ಟು ದೈವಭಕ್ತಿ ಇರಲಿಲ್ಲ. ಆಗ ರಾಜಕುಮಾರ್ ಅವರು ಮಂತ್ರಾಲಯದ ರಾಘವೇಂದ್ರ ಸ್ವಾಮಿಗಳ ಬಗ್ಗೆ ಹೇಳುತ್ತಿದ್ದರು. ನನಗೂ ಆಗ ಗುರು ಸನ್ನಿಧಿಗೆ ಹೋಗಬೇಕು ಅನ್ನೋ ಆಸೆ ಹುಟ್ಟಿತ್ತು. ನಂತರ ರಾಜಕುಮಾರ್ ಅಭಿನಯಿಸಿದ 'ಮಂತ್ರಾಲಯ ಮಹಾತ್ಮೆ' ಚಿತ್ರ ನೋಡಿದೆ. ಅವರ ಮೇಕಪ್, ಗೆಟಪ್ ಸಾಕ್ಷಾತ್ ರಾಘವೇಂದ್ರ ಸ್ವಾಮಿಯೇ ಎದ್ದು ಬಂದಂತಿತ್ತು. ಅದನ್ನು ಮಾಡಲು ಅವಕಾಶ ಪಡೆದ ಮೇಕಪ್ ಕಲಾವಿದ ಎಂಥ ಪುಣ್ಯವಂತ ಅನ್ನಿಸಿತ್ತು. ಅಂಥ ಒಂದು ಅವಕಾಶ ನನಗೆ ಬರಬಾರದಿತ್ತೆ ಅಂದುಕೊಳ್ಳುತ್ತಿದ್ದೆ. ಕೆಲ ಸಮಯದ ನಂತರ ಹುಣಸೂರು ಕೃಷ್ಣಮೂರ್ತಿ ಅವರ ನಿರ್ದೇಶನದ 'ರಾಘವೇಂದ್ರ ವೈಭವ' ಚಿತ್ರದಲ್ಲಿ ಶ್ರೀನಾಥ್‌ರಿಗೆ ಗುರುರಾಯರ ಗೆಟಪ್ ಹಾಕಿ ಮೇಕಪ್ ಮಾಡುವ ಅವಕಾಶ ಸಿಕ್ಕಿತು. ನಾನು ಆಗ ಮಂಜುಳಾ ಅವರ ಪರ್ಸನಲ್ ಮೇಕಪ್ ಆಗಿದ್ದರೂ ಅವರು ದೊಡ್ಡ ಮನಸ್ಸು ಮಾಡಿ ಆ ಚಿತ್ರದಲ್ಲಿ ಕೆಲಸ ಮಾಡಲು ಕಳುಹಿಸಿಕೊಟ್ಟಿದ್ದರು.

"ಕಥೆಯ ಬಗ್ಗೆಯೂ ನಿರ್ಮಾಪಕರಲ್ಲಿ ಚರ್ಚಿಸಬೇಕು. ಪಾತ್ರದ ವಿವರ ತಿಳಿದಷ್ಟೂ ನಮಗೆ ಕೆಲಸ ಮಾಡಲು ಅನುಕೂಲವಾಗುತ್ತದೆ. ಬಣ್ಣದ ಚಿತ್ರಗಳಿಗಿಂತ ಕಪ್ಪು-ಬಿಳುಪು ಚಿತ್ರದಲ್ಲಿ ಕೆಲಸ ಮಾಡುವುದೇ ಹೆಚ್ಚು ಕಷ್ಟ. ಹೊಸ ಅಲೆಯ ಚಿತ್ರಗಳಲ್ಲಿ ಮೇಕಪ್ ಬಳಕೆ ಕಡಿಮೆ ಎಂದರೂ ಮೇಕಪ್ ಇಲ್ಲದೆ ಚಿತ್ರ ಮಾಡುವುದು ಸಾಧ್ಯವಿಲ್ಲ. ಕೆಲವು ಕಥೆಗಳಿಗಂತೂ ಮೇಕಪ್ ಮ್ಯಾನ್ ಇಲ್ಲದೆ ಚಿತ್ರ ಮಾಡುವುದು ಸಾಧ್ಯವೇ ಇಲ್ಲ. ದುರ್ಯೋಧನ ಎಲ್ಲಾದರೂ ಪ್ಯಾಂಟ್ ಹಾಕಿಕೊಂಡು ಬರುವುದು ಸಾಧ್ಯವೆ ?" ಎನ್ನುವ ವೀರಾಸ್ವಾಮಿ ಮಂಜುಳಾರವರ ಖಾಯಂ ಪ್ರಸಾಧನ ಕಲಾವಿದರಾಗಿದ್ದರೂ, ಹೀಗೆ ಒಬ್ಬರಿಗೇ ಪ್ರಸಾಧನ ಮಾಡುವುದರಲ್ಲಿ ಕೆಲಸದಲ್ಲಿ ಆನಂದ ಸಿಗುವುದಿಲ್ಲ. ಒಬ್ಬರಿಗೆ ಕೆಲಸ ಮಾಡುತ್ತಿದ್ದರೆ ಅವರಲ್ಲಿ ಬದಲಾವಣೆ ಕಡಿಮೆ" ಎನ್ನುತ್ತಾರೆ.

ಪ್ರಸಾಧನ ಕಲಾವಿದರಾಗಿ ಸಾಕಷ್ಟು ಹೆಸರು ಮಾಡಿದ ಮೇಕಪ್ ಸುಬ್ಬಣ್ಣ ಮೈಸೂರಿನಲ್ಲಿ ಚಿತ್ರವೊಂದರ ಶತದಿನೋತ್ಸವ ಸಮಾರಂಭದಲ್ಲಿ ಭಾಗವಹಿಸುವ ಸಂದರ್ಭದಲ್ಲಿ ಅವರ ಮಗ ಹೊರಗೆ ಸೈಕಲ್ ಸ್ಟ್ಯಾಂಡ್ ಕಾಯುತ್ತಿದ್ದ. ಅದನ್ನು ನೋಡಿದವರೊಬ್ಬರು ಸುಬ್ಬಣ್ಣನಿಗೆ ವಿಷಯ ತಿಳಿಸಿದರು. ಆಗ ಅವರು ಇನ್ನು ಇವನನ್ನು ಹೀಗೇ ಬಿಟ್ಟರೆ ದಾರಿ ತಪ್ಪುತ್ತಾನೆಂದು ಭಾವಿಸಿ ತಮ್ಮ ಜೊತೆಗೆ ಕರೆದೊಯ್ದು ತಮ್ಮದೇ ಕೆಲಸ ಕಲಿಸಿದರು. ಆತ ಇನ್ನಾರೂ ಇಲ್ಲ, ಕನ್ನಡ ಚಿತ್ರರಂಗದ ನಿಪುಣ ಮೇಕಪ್‌ಮ್ಯಾನ್ ಎನಿಸಿಕೊಂಡಿರುವ ಕೇಶವ. ಮೈಸೂರಿನಲ್ಲಿ ಶಾಲೆಸೇರಿದ ಕೇಶವ ಸಿನಿಮಾ ಹುಚ್ಚಿನಿಂದ ಆರನೇ ತರಗತಿಗೆ ಓದು ನಿಲ್ಲಿಸಿದರು. ಚಿತ್ರರಂಗ ಸೇರುವುದು ಬೇಡವೆಂದು ಮಗನನ್ನು ಸುಬ್ಬಣ್ಣನವರು ಮಧುಗಿರಿ ರಾಮು ಅವರ ಸ್ಟುಡಿಯೋಗೆ ಸೇರಿಸಿದರು. ಆದರೆ ಫೋಟೋಗ್ರಫಿಯತ್ತ ಕೇಶವನ ಮನಸ್ಸು ಸೆಳೆಯಲಿಲ್ಲ. ತಂದೆಯೊಂದಿಗೆ ಸೇರಿಕೊಂಡ ಮೇಲೆ ತಂದೆ ಪ್ರಸಾಧನ ಮಾಡುತ್ತಿರುವುದನ್ನು ನೋಡುತ್ತಲೇ ಪರಿಕರಗಳ ಪರಿಚಯ ಮಾಡಿಕೊಂಡರು. ನಂತರ ಅವುಗಳನ್ನು ಬಳಸುವುದನ್ನು ಕಲಿತರು. 'ಮೇಯರ್ ಮುತ್ತಣ್ಣ' ಹಾಗೂ 'ಬಾಳು ಬೆಳಗಿತು' ಚಿತ್ರದಲ್ಲಿ ಸಹಾಯಕರಾಗಿ ದುಡಿದರು. 'ಸಾಕ್ಷಾತ್ಕಾರ' ಚಿತ್ರದಿಂದ ಸ್ವತಂತ್ರವಾಗಿ ಪ್ರಸಾಧನ ಕಲಾವಿದರಾಗಿ ಕೇಶವ ಚಿತ್ರರಂಗಕ್ಕೆ ಅಡಿಯಿಟ್ಟರು. 'ಸಿಪಾಯಿ ರಾಮು' ಅವರು ಪ್ರಸಾಧನ ಕೆಲಸ ಮಾಡಿದ ಮೊದಲ ವರ್ಣಚಿತ್ರ. ಕಪ್ಪು-ಬಿಳುಪು ಚಿತ್ರದಲ್ಲಿ ಇವರಿಗೆ ಪ್ರಥಮ ಬಾರಿಗೆ ಬಾಲಕೃಷ್ಣರಿಗೆ ಪ್ರಸಾಧನ ಮಾಡುವ ಅವಕಾಶ ಸಿಕ್ಕಿದರೆ, ಬಣ್ಣದ ಚಿತ್ರದಲ್ಲಿ ವಜ್ರಮುನಿಗೆ 'ಹುಲಿಯ ಹಾಲಿನ ಮೇವು' ಹಾಗೂ 'ಮಯೂರ' ಇವರಿಗೆ ಚಾಲೆಂಜ್ ಎನಿಸಿರುವ ಚಿತ್ರಗಳು. ಮೊದಲ ವರ್ಣ ಚಿತ್ರ ಮಾಡುವಾಗ ಪ್ರಸಾಧನ ಕಲಾವಿದ ರಾಜನ್‌ ಅವರು ಕೇಶವರನ್ನು ಸುಬ್ಬಣ್ಣನ ಮಗನೆಂದು ಗುರುತಿಸಿ ತಮ್ಮಲ್ಲಿದ್ದ ಪ್ರಸಾಧನ ಸಾಮಗ್ರಿಗಳನ್ನು ನೀಡಿ ಹರಸಿದ್ದರು. ಇವರಿಗ ತೃಪ್ತಿಕೊಟ್ಟ ಪಾತ್ರವೆಂದರ 'ನಾ ನಿನ್ನ ಬಿಡಲಾರೆ' ಚಿತ್ರದಲ್ಲಿ ಅನಂತ್‌ನಾಗ್‌ಗೆ ದಪ್ಪದ ಗೆಟಪ್ ಹಾಕಿದ್ದು. ತಮ್ಮ ಕಲೆಯ ಮೂಲಕ ಅನೇಕ ಪಾತ್ರಗಳನ್ನು ಅರಳಿಸಿದ ಕೇಶವ ತಮ್ಮ ವೃತ್ತಿಯ ಬಗ್ಗೆ ಹೀಗ ಹೇಳುತ್ತಾರೆ : "ಬಹಳ ಹಿಂದೆ ಹೇಗಿತ್ತೂ ನನಗೆ ಗೊತ್ತಿಲ್ಲ. ಆದರೆ ಈಗ ಬೇಕಾದಷ್ಟು ಡೆವಲಪ್ ಆಗಿದ. ನನಗೆ ಈ ರಂಗಕ್ಕೆ ಬರಲು ಆಸಕ್ತಿಯಿರಲಿಲ್ಲ. ಆದರೆ ನಮ್ಮ ತಂದೆ ಬಲವಂತವಾಗಿ ಕರತಂದರು. ನನಗ ಚಿತ್ರ ನಿರ್ದೇಶಕನಾಗಬೇಕೆಂಬ ಆಸೆಯಿತ್ತು. ತಂದೆಯ ಜೊತೆಗಿದ್ದ ನಾನು ಒಮ್ಮೆ ಅವರಿಲ್ಲದಾಗ ತೂಗುದೀಪ ಶ್ರೀನಿವಾಸ್ ಅವರಿಗ ಟಚ್‌ಅಪ್ ಮಾಡಿದೆ. ಅದು ಕಪ್ಪು ಬಿಳುಪು ಚಿತ್ರ. ಕೆಲಸ ಸರಿಯಾಗದ ಕಾರಣ ತಂದೆಯವರು ಅವರಿಂದ ಬಯ್ಯಿಸಿಕೊಳ್ಳಬೇಕಾಯಿತು. ನನ್ನಿಂದಾಗಿ ತಂದೆ ಮಾತು ಕೇಳಬೇಕಾಗಿ ಬಂತಲ್ಲ ಎಂದು ಶ್ರದ್ಧೆಯಿಂದ ಕೆಲಸ ಕಲಿತೆ.

"ನಮ್ಮ ತಂದೆ ತೀರಿಕೊಂಡ ಸಂದರ್ಭದಲ್ಲಿ ಈ ರಂಗವನ್ನೇ ಬಿಟ್ಟುಬಿಡಲು ನಿರ್ಧರಿಸಿದ್ದೆ. ಆಗ ರಾಜಕುಮಾರ್ ಅವರು ಧೈರ್ಯ ತುಂಬಿದರು. ನನಗಂತೂ ಅವರೇ ಸ್ಫೂರ್ತಿ. ನನ್ನನ್ನು ಮೇಕಪ್ ಮ್ಯಾನ್ ಮಾಡುವಲ್ಲಿ ಅವರ ಪಾತ್ರ ಹಿರಿದು. ಇನ್ನು ಚಿತ್ರದಲ್ಲಿ ಕೆಲಸ ಮಾಡುವಾಗ ಕಥೆಯ ಬಗ್ಗೆ, ಪಾತ್ರದ ಬಗ್ಗ ತಿಳಿದುಕೊಳ್ಳಬೇಕು. ಇಡೀ ಪಾತ್ರದ ಕಲ್ಪನೆ ನಮಗಿದ್ದರೆ ಅದು ಬೆಳೆಯುತ್ತಾ ಹೋದಂತೆ ಬೇಕಾದ ಬದಲಾವಣೆ ಮಾಡಲು ಅನುಕೂಲವಾಗುತ್ತದೆ. ಇದರೊಂದಿಗೆ ನಿರ್ದೇಶಕರು ಹಾಗೂ ಛಾಯಾಗ್ರಾಹಕರೊಂದಿಗೂ ಉತ್ತಮ ಹೊಂದಾಣಿಕೆ ಇರಬೇಕು. ಕಪ್ಪು-ಬಿಳುಪು ಹಾಗೂ ಬಣ್ಣದ ಚಿತ್ರಗಳಿಗೂ ಮೇಕಪ್‌ನಲ್ಲಿ ಸಾಕಷ್ಟು ವ್ಯತ್ಯಾಸ ಇದೆ. ಕಪ್ಪು-ಬಿಳುಪು ಚಿತ್ರಗಳಲ್ಲಿ ಮೇಕಪ್ ಇರಲೇಬೇಕು. ವರ್ಣ ಚಿತ್ರದಲ್ಲಿ ಬೇಕಾದಷ್ಟು ಬಣ್ಣಗಳಿರುವುದರಿಂದ ಬೇರೆ ರೀತಿ ಮೇಕಪ್ ಮಾಡುತ್ತೇವೆ. 'ತಾಯಿ ಮಮತೆ' ಚಿತ್ರದಲ್ಲಿ ಪ್ರಭಾಕರ್ ಮೂರು ಪಾತ್ರಗಳಲ್ಲಿ ಮಾಡಿದ್ದರು. ಪ್ರತಿಯೊಂದು ಪಾತ್ರಕ್ಕೆ ಬೇರೆ ಬೇರೆ ಮೇಕಪ್ ಮಾಡಿದ್ದೆ. ಕಪ್ಪು-ಬಿಳುಪು ಚಿತ್ರದಲ್ಲಿ ಶೇಡ್‌ಗಳಿಂದಾಗಿ ಬೇರೆ ಬೇರೆ ಪಾತ್ರಗಳನ್ನು ಸೃಷ್ಟಿಸಲು ಸಾಧ್ಯ.

"ಹೊಸ ಅಲೆಯ ಚಿತ್ರಗಳಲ್ಲಿ ಮೇಕಪ್ ಬೇಡವೆಂದರೂ ಹುಬ್ಬು, ಮೀಸೆ, ಪೌಡರ್ ಮುಂತಾದ ವಸ್ತುಗಳನ್ನು ಬಳಸದೆ ಇರುವುದಿಲ್ಲ. ಡಾಕ್ಯುಮೆಂಟರಿ ಮಾಡುವಾಗಲೂ ಸ್ವಲ್ಪಮಟ್ಟಿಗಿನ ಮೇಕಪ್ ಬಳಸುತ್ತಾರೆ. ಈ ವೃತ್ತಿಗೆ ಯಾರೇ ಬಂದರೂ ಏಕಾಏಕಿ ಪರ್ಸನಲ್ ಮೇಕಪ್ ಮ್ಯಾನ್ ಆಗುವುದು ಸಾಧ್ಯವಿಲ್ಲ. ಮೊದಲು ಯೂನಿಟ್‌ನಲ್ಲಿ ಕೆಲಸ ಮಾಡಲೇಬೇಕಾಗುತ್ತದೆ. ಆದರೂ ವೈಯಕ್ತಿಕ ಮೇಕಪ್ ಮ್ಯಾನ್ ಆಗುವುದು ತಮ್ಮ ಕೆಲಸಕ್ಕೆ ಸೀಮಿತ ಚೌಕಟ್ಟು ಹಾಕಿಕೊಂಡಂತೆ ಎನ್ನುವುದಂತೂ ನಿಜ.

"ಒಮ್ಮೆ ರಾಜಕುಮಾರ್ ಚಿತ್ರಕ್ಕಾಗಿ ಬೆಂಗಳೂರಿಗೆ ಬಂದಿದ್ದಾಗ ಗುಬ್ಬಿ ವೀರಣ್ಣನವರು ಕರೆಸಿಕೊಂಡಿದ್ದರು. ಅವರಿಗೆ ಮೇಕಪ್ ಮಾಡಬೇಕೆಂದಾಗ ನಾನು ತಬ್ಬಿಬ್ಬಾಗಿ ಹೋಗಿದ್ದೆ. ಆಗ ವೀರಣ್ಣನವರು 'ನೋಡು, ನಿಮ್ಮಪ್ಪ ಇದ್ದಿದ್ರೆ ಅವರ ಕೈಯಲ್ಲೇ ಮೇಕಪ್ ಮಾಡಿಸ್ಕೊಳ್ತಿದ್ದೆ. ನೀನು ಅವರ ಅಬ್ಬಾದವನು. ಧೈರ್ಯವಾಗಿ ಮಾಡು. ನೀವು ಈ ಕಾಲದವರು. ಇನ್ನೂ ಹೆಚ್ಚು ತಿಳಿದುಕೊಂಡಿರ್ತೀರಿ ಎಂದು ಧೈರ್ಯ ತುಂಬಿದರು.

"ಇನ್ನೊಮ್ಮೆ 'ಶ್ರೀನಿವಾಸ ಕಲ್ಯಾಣ' ಚಿತ್ರಕ್ಕಾಗಿ ಬಾವಾಜಿ ಪಾತ್ರಕ್ಕೆ ಮೇಕಪ್ ಮಾಡಿದ ಪ್ರಸಂಗ. ಆ ಪಾತ್ರ ನಿರ್ವಹಿಸಿದವರು ರಾಜಾಶಂಕರ್. ದೊರೆಸ್ವಾಮಿಯವರು ಈ ಕ್ರೇಪ್ ಹೇರ್‌ನಲ್ಲಿ ದಾಡಿ, ಮೀಸೆ ಮೊದಲಾದ್ದನ್ನು ಸಿದ್ದ ಮಾಡುವುದರಲ್ಲಿ ಪಳಗಿದ ಕೈ. ಅಂದು ದೊರೆಸ್ವಾಮಿ ಊರಲ್ಲಿರಲಿಲ್ಲ. ಹಾಗಾಗಿ ಆ ಕೆಲಸ ನನಗೆ ಬಂತು. ಹೇಗೆ ಮಾಡುತ್ತೇನೋ ಎಂದು ನನ್ನಂತೆಯೇ ಎಲ್ಲರಿಗೂ ಅಳುಕು. ರಾಜಾಶಂಕರ್ ಧೈರ್ಯ ತುಂಬಿದರು. ರಾಜಕುಮಾರ್ ಮೊದಲು ನಾನು ಮಾಡಿದ ಮೇಕಪ್ ನೋಡಿ ಸಂತೋಷಗೊಂಡರು. ಉಳಿದವರೆಲ್ಲರೂ ಮೆಚ್ಚಿದರಲ್ಲದೆ, ನಿರ್ದೇಶಕ ವಿಜಯ್ ಐದು ರೂಪಾಯಿ ಗಿಫ್ಟ್ ಕೂಡ ಕೊಟ್ಟಿದ್ದರು" ಎಂದು ತಮ್ಮ ಅನುಭವವನ್ನು ಮೆಲುಕು ಹಾಕುವ ಕೇಶವ್ ಪ್ರಸಾಧನ ವಿಭಾಗದಲ್ಲಿ ಸಾಕಷ್ಟು ಎತ್ತರಕ್ಕೆ ಏರಿದ್ದಾರೆ. ಇವರ ತಂದೆ

(ಚಿತ್ರ ೧೨) ಮೈನಾವತಿಗೆ ಪ್ರಸಾಧನ - ಎಂ.ಎಸ್.ಸುಬ್ಬಣ್ಣ

ಮೇಕಪ್ ಸುಬ್ಬಣ್ಣ ಕಪ್ಪು ಬಿಳುಪು ಚಿತ್ರದ ಕಾಲದಲ್ಲಿ ಇನ್ನೂ ಪ್ರಸಾಧನ ಕ್ಷೇತ್ರ ಇಷ್ಟು ಮುಂದುವರಿಯದ ಕಾಲದಲ್ಲಿ ಸಾಕಷ್ಟು ಹೆಸರು ಮಾಡಿದ್ದರು. ಬಡತನದಲ್ಲಿದ್ದರೂ ಹಾಸ್ಯ ಪ್ರವೃತ್ತಿಯಿಂದ ಜೀವನವನ್ನು ಸಲೀಸಾಗಿ ತೆಗೆದುಕೊಳ್ಳುವ ಪ್ರವೃತ್ತಿ ಅವರದು. ಮೈಸೂರಿನ ನವಜ್ಯೋತಿ ಹಾಗೂ ಮಹಾತ್ಮಾ ಪಿಕ್ಚರ್ಸ್ ಮುಂತಾದೆಡೆ ಕೆಲಸ ಮಾಡಿದ್ದ ಸುಬ್ಬಣ್ಣ ಬಹುತೇಕ ಎಲ್ಲ ಹಿರಿಯ ಕಲಾವಿದರಿಗೂ ಪ್ರಸಾಧನ ಮಾಡಿದವರು. ಇವರಿಗೆ ದೇಹದ ನ್ಯೂನತೆ ಮುಚ್ಚುವ ಕುಶಲತೆಯಿತ್ತು. ಹಿರಿಯ, ಕಿರಿಯ ಕಲಾವಿದರೆಂಬ ಭೇದವಿಲ್ಲದೆ ಎಲ್ಲರನ್ನೂ ಸಮನಾಗಿ ನೋಡಿಕೊಳ್ಳುತ್ತಿದ್ದರು.

ರಂಗಭೂಮಿಯಲ್ಲಿ ಸಾಕಷ್ಟು ಕೃಷಿ ಮಾಡಿರುವ ಎ.ಎಸ್.ಮೂರ್ತಿಯವರು ಪುಟ್ಟಣ್ಣ ಕಣಗಾಲ್ ಅವರ ಚಿತ್ರದಲ್ಲಿ ಪ್ರಸಾಧನ ಮಾಡಿಸಿಕೊಂಡ ಘಟನೆಯನ್ನು ಹೀಗೆ ವಿವರಿಸುತ್ತಾರೆ : ''ಸುಭದ್ರ ಕಲ್ಯಾಣ' ಚಿತ್ರದಲ್ಲಿ ನನ್ನ ಪಾತ್ರ ನೋಡಿದ ಪುಟ್ಟಣ್ಣ ತಮ್ಮ 'ಕಾನ್ಸ್‌ಟೇಬಲ್ ಕಸ್ತೂರಿ' ಚಿತ್ರದಲ್ಲಿ ಪಾತ್ರ ಮಾಡಲು ಕರೆದಿದ್ದರು. ಆಗ ನನ್ನನ್ನು ಹೊಸಬನೆಂದು ತಿಳಿದ ಮೇಕಪ್‌ಮ್ಯಾನ್ ಅವಸರದಲ್ಲಿ ಬಣ್ಣ ತಟ್ಟಿ ಕಳುಹಿಸಿದ. ನಾನೂ ಏನೂ ಹೇಳಲಾರದೆ ಸುಮ್ಮನಾದೆ. ಆದರೆ ಪುಟ್ಟಣ್ಣ ನನ್ನ ಮೇಕಪ್ ನೋಡಿ ಆ ಮೇಕಪ್ ಮ್ಯಾನ್ ಮೇಲೆ ಕಿಡಿಕಿಡಿಯಾದರು. ಆತ ಲೀಲಾವತಿ ಹಾಗೂ ಆರತಿಯವರಿಗೆ ಉತ್ತಮವಾಗಿಯೇ ಮೇಕಪ್ ಮಾಡಿದ್ದ. ಈ ವ್ಯತ್ಯಾಸವನ್ನು ಅರಿತ ಪುಟ್ಟಣ್ಣ ಆತನಿಗೆ ಚೆನ್ನಾಗಿ ಬಯ್ದು 'ನಮ್ಮ ಕಂಪೆನಿಯಲ್ಲಿ ಯಾರೂ ತಾರತಮ್ಯ ಮಾಡಬಾರದು' ಎಂದು ಮತ್ತೊಮ್ಮೆ ಮೇಕಪ್ ಮಾಡಿಸಿದರು''.

ಕಲಾವಿದರನ್ನು ಒಂದು ಗೊತ್ತಾದ ಕಾಲಾವಧಿಯಲ್ಲಿ ತೋರಿಸುವಾಗ ಕೂಡ ಪ್ರಸಾಧನ ಅದಕ್ಕೆ ಹೊಂದಿಕೊಂಡಂತೆ ಇರಬೇಕಾಗುತ್ತದೆ. 'ನಿಷ್ಕರ್ಷ' ಚಿತ್ರದಲ್ಲಿ ಬೆಳಗಿನಿಂದ ಸಂಜೆಯವರೆಗೆ ನಡೆಯುವ ಕಥೆಗೆ ಬೆಳಗಿನ ಗೆಟಪ್ ಕ್ರಮೇಣ ಉಲ್ಲಾಸ ಕಳೆದುಕೊಳ್ಳುತ್ತಾ ಸಂಜೆ, ರಾತ್ರಿ ಆದಂತೆ ನಿಧ ನಿಧಾನವಾಗಿ ಫ್ರೆಶ್‌ನೆಸ್ ಕಡಿಮೆ ಆಗುವುದನ್ನು ತೋರಿಸಲಾಗಿತ್ತು. ಪ್ರಸಾಧನ ಎಂದರೆ ಅದನ್ನೇ ಎತ್ತಿ ತೋರಿಸುವ ವಿಶಿಷ್ಟ ಪಾತ್ರಗಳನ್ನು ಕುರಿತು ಹೇಳುವುದಕ್ಕಿಂತ ಮಿಗಿಲಾದ್ದೆಂದರೆ ಅಂಥದೇನೂ ಇಲ್ಲ. ತೀರಾ ಸಾಮಾನ್ಯವಾದ ಮನುಷ್ಯರ ಪ್ರಸಾಧನ ಮುಂಬೆಳಗು, ಬಿಸಿಲು, ಏರು ಬಿಸಿಲು, ಮುಸ್ಸಂಜೆಗಳಲ್ಲಿ ಹೇಗೆ ಇರಬೇಕು ಎಂಬುದನ್ನು ಗುರುತಿಸುವುದು ಮುಖ್ಯ.

ಬೆಳಿಗ್ಗೆ ಹಾಕಿದ್ದ ಪ್ರಸಾಧನ ಚಿತ್ರೀಕರಣದಲ್ಲಿ ಬಳಸುವ ಲೈಟ್‌ನಿಂದಾಗಿ ಕಡಿಮೆ ಆಗುವುದನ್ನು ಹಾಗೂ 'ಟಚ್ ಅಪ್' ಮಾಡಿ ಸರಿಪಡಿಸದಿದ್ದರೆ ಚಿತ್ರಿಕೆ ಕೆಡುತ್ತದೆ. ಅದೇ ರೀತಿ ಸಂಜೆಯಾಗುತ್ತಿದ್ದಂತೆ ಮುಖದ ಬಣ್ಣ ಕೆಟ್ಟು, ಕಲಾವಿದರೂ ಸೊರಗಿರುತ್ತಾರೆ. ಆದರೆ ಚಿತ್ರಿಕೆ ಮಾತ್ರ ಬೆಳಗ್ಗಿನ ಲವಲವಿಕೆಯನ್ನೇ ಬೇಡುತ್ತದೆ. ಆಗಲೂ ಪ್ರಸಾಧನ ಕಲಾವಿದ ತುಂಬಾ ಎಚ್ಚರವಹಿಸುವ ಅಗತ್ಯವಿದೆ.

ಕನ್ನಡ ಚಿತ್ರರಂಗದಲ್ಲಿ ಹೆಸರಾದ ಮತ್ತೊಬ್ಬ ಪ್ರಸಾಧನ ಕಲಾವಿದ ಎಂದರೆ ರಾಮಕೃಷ್ಣ. ಮೇಕಪ್ ರಾಮಕೃಷ್ಣ ಎಂದೇ ಇವರು ಖ್ಯಾತಿಯಾಗಿದ್ದಾರೆ. ಅನೇಕ ಪ್ರಶಸ್ತಿ ವಿಜೇತ ಚಿತ್ರಗಳಿಗೆ ಪ್ರಸಾಧನ ಮಾಡಿದ ಹಿರಿಮೆ ಇವರದು. ಈ ಸಂದರ್ಭದಲ್ಲಿ ರಾಮಕೃಷ್ಣ ಅವರ ಅನಿಸಿಕೆ ಮುಖ್ಯವೆನಿಸುತ್ತದೆ. ಅವರ ಅಭಿಪ್ರಾಯ ಹೀಗಿದೆ :

''ನಾನು ಸಿನಿಮಾರಂಗಕ್ಕೆ ಬಂದಿದ್ದು ೧೯೭೨-೭೩ರಲ್ಲಿ, 'ಚೋಮನದುಡಿ' ಚಿತ್ರದ ಮೂಲಕ. ಅದಕ್ಕೂ ಮುಂಚೆ ಥಿಯೇಟರ್‌ನಲ್ಲಿ ಮೇಕಪ್ ಮಾಡುತ್ತಿದ್ದೆ. ಈ ಫಾರ್ಮುಲಾ ಮೇಕಪ್ ಅಂದ್ರೆ ಉದಾಹರಣೆಗೆ ಸಾಹುಕಾರ ಅಂದ್ರೆ ಮುಂಚೆ ಅವನಿಗೆ ಗಿರಿಜಾ ಮೀಸೆ ಇರಬೇಕು, ಪೇಟ ಇರಬೇಕು, ಜರಿ ಪಂಚೆ ಇರಬೇಕು. ಅಂದರೆ ನೋಡಿದ ತಕ್ಷಣ ಅವನು ಸಾಹುಕಾರ ಎನ್ನುವಂತಿರಬೇಕು ಎನ್ನುವುದು. ನಾಯಕ, ನಾಯಕಿ ಅಂದರೆ ಅವರು ಬಡವರಾಗಲಿ, ಶ್ರೀಮಂತರಾಗಲಿ ಯಾವುದೇ ಸನ್ನಿವೇಶದಲ್ಲಿದ್ದರೂ ಅವರು ಗ್ಲಾಮರಸ್ ಆಗಿ ಕಾಣಬೇಕೆನ್ನುವುದು. ಜೊತೆಗೆ ಸುಂದರನಾಗಿರಬೇಕೆನ್ನುವುದು ರೂಢಿ. ಸನ್ನಿವೇಶ ಹೇಗೇ ಇದರೂ ನಾಯಕ, ನಾಯಕಿ ಸುಂದರವಾಗಿ ಕಾಣಲೇಬೇಕು. ಇದು ಫಾರ್ಮುಲಾ ಮೇಕಪ್. ಇಲ್ಲಿ ಸಹಜತೆ ಇರುವುದಿಲ್ಲ ಎನ್ನುವುದೂ ನಿಜ.

''ಹೊಸ ಅಲೆ ಚಿತ್ರಗಳು ಬಂದಾಗ ಈ ಫಾರ್ಮುಲಾ ಮೇಕಪ್‌ಗೆ ಸ್ವಲ್ಪ ಕಡಿವಾಣ ಹಾಕಿದಂತಾಯಿತು. ಫಿಲಂ ಇನ್‌ಸ್ಟಿಟ್ಯೂಟ್‌ನಲ್ಲಿ ಕಲಿತು ಬಂದವರು ಪ್ರಯೋಗಾತ್ಮಕ ಚಿತ್ರಗಳತ್ತ ಒಲವು ತೋರಿದರು. ಸತ್ಯಜಿತ್ ರಾಯ್ ಚಿತ್ರಗಳು ಆಗಲೇ ಬಂದು ಕ್ರಾಂತಿ ಮಾಡಲಾರಂಭಿಸಿದ್ದವು. ಇದಲ್ಲದೆ ಭಾರತದ ಇತರೆಡೆಯೂ ಬಂದ ಹೊಸ ಅಲೆಯ ಚಿತ್ರಗಳು ಪ್ರಭಾವ ಮೂಡಿಸಿದವು. ಹಾಗಾಗಿ ಮೇಕಪ್ ಅಗತ್ಯವಿದ್ದಾಗ ಮಾತ್ರ ಬಳಸುವ ಕ್ರಮ ಬಂದಿತು. ಪಾತ್ರಧಾರಿಗಳು ಸುಂದರವಾಗಿ ಕಾಣಬೇಕೆಂಬ ಕಲ್ಪನೆಗೆ ಇಲ್ಲಿ ಬ್ರೇಕ್ ಬಿತ್ತು. ಈ ಮೇಕಪ್ ಅನ್ನೋ ಪದದಲ್ಲೆ ಒಂದು ಅರ್ಥ ಇದೆ. ನಮ್ಮಲ್ಲಿ ಉದಾಹರಣೆಗೆ ನೂರು ರೂಪಾಯಿ ಇದ್ದು ಖರ್ಚು ನೂರಕ್ಕಿಂತ ಜಾಸ್ತಿ ಆಗುವಾಗ ಹೇಗಾದರೂ ಮಾಡಿ ಅಷ್ಟರಲ್ಲೇ ಮೇಕಪ್ ಮಾಡಬೇಕು ಅಂತ ಹೇಳುವ ಕ್ರಮವಿದೆ. ಅಂದ್ರೆ ಎಲ್ಲಿ ಏನು ಅವಶ್ಯಕತೆ ಇದೆಯೊ ಅದಕ್ಕೆ ತಕ್ಕ ಹಾಗೆ ಬಣ್ಣ ಬಳಿಯುತ್ತಿರುವುದು ಈ ಅರ್ಥದಲ್ಲಿ.

''ಆದರೂ ಈ ಫಾರ್ಮುಲಾ ಮೇಕಪ್ ಇನ್ನೂ ಇದೆ. ನಾಯಕ ಯಾವುದೇ ಉದ್ಯೋಗದಲ್ಲಿದ್ದರೂ ಆತನ ಕೈ ಶುದ್ಧವಾಗಿರಬೇಕು, ಬಟ್ಟೆ ಕೊಳೆಯಾಗದೆ ಗರಿಗರಿಯಾಗಿರಬೇಕು. ಇದರ ನಡುವೆ ಅತ್ತ ಹೊಸ ಅಲೆಯೂ ಅಲ್ಲದ ಇತ್ತ ಕಮರ್ಷಿಯಲ್ ಕೂಡ ಅಲ್ಲದ ಚಿತ್ರಗಳೂ ಬಂದವು. ಇಂಥ ಸಂದರ್ಭಗಳು ಮೇಕಪ್ ಕಲಾವಿದನನ್ನು ಕೂಡ ಇಕ್ಕಟ್ಟಿಗೆ ಸಿಲುಕಿಸುತ್ತಿದ್ದವು. ಸ್ಟಾರ್ ಎನಿಸಿಕೊಂಡವರಿಗೆ ಸಪರೇಟ್ ಮೇಕಪ್ ಮ್ಯಾನ್ ಹೇಗೆ ಬಂದ ಅಂದ್ರೆ ಯೂನಿಟ್‌ನಲ್ಲಿ ಯಾರಾದರೂ ಮೇಕಪ್ ಮ್ಯಾನ್ ಇಷ್ಟವಾದ್ರೆ 'ಇನ್ನು ಮೇಲೆ ನೀನೇ ನನಗೆ ಮೇಕಪ್ ಮಾಡು' ಎನ್ನುತ್ತಿದ್ದರು. ಇಷ್ಟವಾಗೋದು ಎಂದರೆ ಅವರ ಮುಖವನ್ನು ಚಂದಗೊಳಿಸಬಲ್ಲ ಜಾಣತನ, ಮುಖ್ಯವಾಗಿ ಮೇಕಪ್ ಪರಿಕರಗಳು ಅವರ - ಅದರಲ್ಲೂ ಸ್ಪಿರಿಟ್‌ಗಮ್ - ದೇಹಕ್ಕೆ ಒಗ್ಗುತ್ತದೆಯೋ ಎಂಬುದರತ್ತ ಗಮನಹರಿಸಬೇಕು. ಎಲ್ಲರೂ ಒಂದೇ ಪದಾರ್ಥ ಬಳಸುವುದಕ್ಕಿಂತ ಪ್ರತ್ಯೇಕವಾಗಿರುವುದು ಆರೋಗ್ಯದ ದೃಷ್ಟಿಯಿಂದ ಒಳ್ಳೆಯದು. ಇವೆಲ್ಲ ಪ್ರತ್ಯೇಕ ಮೇಕಪ್ ಮ್ಯಾನ್‌ನ ಅಗತ್ಯವನ್ನು ಒತ್ತಾಯಿಸಿದವು. ಇದು ಪರ್ಸನಲ್ ಮೇಕಪ್ ಮ್ಯಾನ್ ಇಟ್ಟುಕೊಳ್ಳುವುದಕ್ಕೆ ಕಾರಣವಾಯಿತು. ಮೊದ ಮೊದಲು ಅವಶ್ಯಕತೆಗಳಿಗೋಸ್ಕರ ಮೇಕಪ್ ಕಲಾವಿದರನ್ನು ಇಟ್ಟುಕೊಳ್ಳುತ್ತಿದ್ದರೆ ಈಗ ಅದು ಪ್ರತಿಷ್ಠೆಯ ಪ್ರಶ್ನೆಯೂ ಆಗಿದೆ. ಮೊದಲು ಒಬ್ಬ ಒಳ್ಳೇ ಮೇಕಪ್ ಮ್ಯಾನ್ ಅಂದರೆ ಕ್ಯೂ ನಿಂತುಕೊಂಡು ಮೇಕಪ್ ಮಾಡಿಸಿಕೊಳ್ಳುತ್ತಿದ್ದರು. ಆದರೆ ಈಗ ಹಾಗಿಲ್ಲ. ಮೇಕಪ್ ಬಗ್ಗೆ ನಟ-ನಟಿಯರಿಗೂ ತಿಳಿದಿರುತ್ತೆ. ಮಾತ್ರವಲ್ಲದೆ ಮೇಕಪ್ ಮ್ಯಾನ್‌ಗಳ ಸಂಖ್ಯೆಯೂ ಜಾಸ್ತಿಯಾಗಿದೆ.

''ದ್ವಿಪಾತ್ರ, ತ್ರಿಪಾತ್ರಗಳಿದ್ದರೆ ಅವು ಭಿನ್ನವಾಗಿ ಕಾಣಬೇಕೆಂದರೆ ಬೇರೆ ಬೇರೆ ರೀತಿಯ ಮೇಕಪ್, ಬೇರೆ ಬೇರ ರೀತಿಯ ವಿಗ್, ವಸ್ತ್ರಾಲಂಕಾರ ಮಾಡಬೇಕು. ಮೇಕಪ್ ಅಂದ್ರೆ ಮುಖ್ಯವಾಗಿ ಲೈಟ್ ಮತ್ತು ಶೇಡ್. ಮುಖದಲ್ಲಿ ಎದ್ದು ಕಾಣಬೇಕಾದ ಜಾಗವನ್ನು ಲೈಟ್ ಶೇಡ್‌ನಿಂದ ಹಾಗೂ ಕಾಣಬಾರದ ಜಾಗವನ್ನು ಡಾರ್ಕ್ ಶೇಡ್‌ನಿಂದ ಮಾಡಿರಬೇಕಾಗುತ್ತದೆ. ಸಾಮಾನ್ಯವಾಗಿ ನಾಯಕಿಯರು ಮೂಗಿನ ಎರಡೂ ಕಡೆ ಡಾರ್ಕ್ ಮಾಡಿಕೊಳ್ಳುತ್ತಾರೆ. ಇದರಿಂದ ಮೂಗಿನ ಮಧ್ಯ ಭಾಗ ಎದ್ದು ಕಾಣುತ್ತದೆ.

''ಪಾತ್ರವನ್ನು ಬ್ಯೂಟಿಫೈ ಮಾಡಬೇಕಾಗಿ ಬಂದಾಗ ಕ್ಯಾಮರಾಮನ್ ಹಾಗೂ ಮೇಕಪ್ ಮ್ಯಾನ್ ಸಂಬಂಧ ಅತಿ ಮುಖ್ಯ. ಇಲ್ಲವಾದಲ್ಲಿ ಪಾತ್ರಕ್ಕೆ ತಕ್ಕ ಹಾಗೆ ಮೇಕಪ್ ಮಾಡಿಕೊಂಡು ಹೋದರೆ ಸಾಕಾಗುತ್ತದೆ. ಲೈಟಿಂಗ್‌ನಿಂದ ಮುಖ ಕೆಡಿಸೋದು ಕಷ್ಟ. ಯಾಕೆಂದರೆ ಕಲಾವಿದ ಚಲಿಸುತ್ತಿರುತ್ತಾನೆ, ಮಾತಾಡುತ್ತಿರುತ್ತಾನೆ. ಒಂದೇ ಕಡೆ ನಿಂತಿದ್ದಾಗ ಮಾತ್ರ ಬೆಳಕಿನಿಂದ ಅಂದ ಕೆಡಿಸಲೂಬಹುದು, ಹೆಚ್ಚಿಸಲೂಬಹುದು. ಹೊಸ ಅಲೆ ಚಿತ್ರಗಳಲ್ಲಿ ಮೇಕಪ್‌ನ ಕೆಲಸ ತುಂಬಾ ಸೂಕ್ಷ್ಮ. ಅದರಲ್ಲಿ ಒಂದೇ ವ್ಯಕ್ತಿ ಬೆಳಿಗ್ಗೆ

(ಚಿತ್ರ ೧೩)'ತರ್ಕ' - ಉದಯ್ ಹಾತ್ತಿನಗದ್ದೆ. ಪ್ರಸಾಧನ - ಮಲ್ಲೇಶ್ ಹರ್ತಿ

ಒಂಥರ ಕಾಣಬೇಕು, ಮಧ್ಯಾಹ್ನ ಒಂಥರ ಇರಬೇಕು, ಸಂಜೆ ಮತ್ತೊಂದು ರೀತಿಯಾಗಿ ಅಂದರೆ ದಿನದಲ್ಲಿನ ವ್ಯಕ್ತಿಯ ಬದಲಾವಣೆಗಳನ್ನು ಗುರುತಿಸಬೇಕು. ಕಮರ್ಷಿಯಲ್ ಚಿತ್ರದಲ್ಲಿ ಬೆಳಗ್ಗಿನಿಂದ ಸಂಜೆಯವರೆಗೆ ಮಾತ್ರವಲ್ಲ, ಮಧ್ಯರಾತ್ರಿ ಎದು ಬಂದಾಗಲೂ ಒಂದೇ ಥರ ಇರುತ್ತಾರೆ. ಒಂದು ಸಾರಿ ಮೇಕಪ್ ಹಾಕಿದರೆ ಸಾಕು. ಫೈಟ್ ಮುಗಿದ ಮೇಲೂ ಕೂಡ ನಾಯಕನ ಕೂದಲೂ ಕೂಡ ಕೆದರದೆ ಉಳಿದಿರುತ್ತದೆ.

''ಹೊಸ ಅಲೆಯ ಚಿತ್ರಗಳಲ್ಲಾದರೆ ತುಂಬಾ ಎಚ್ಚರಿಕೆಯಿಂದಿರಬೇಕು. ಅದರಲ್ಲಿ ಗಡ್ಡವಿದ್ದರೂ ಗಡ್ಡ ಎಷ್ಟು ದಿನದ್ದು, ಸುಖದಿಂದ ಗಡ್ಡ ಬಿಟ್ಟಿದ್ದೆ ಅಥವಾ ಚಿಂತೆಯಿಂದ ಗಡ್ಡ ಬಿಟ್ಟಿದ್ದೆ ? ಎಂದು ಮೇಕಪ್‌ನಲ್ಲೇ ಹೇಳಬೇಕು. ಒಬ್ಬ ವ್ಯಕ್ತಿ ಪಾತ್ರದ ಅಗತ್ಯಕ್ಕಿಂತ ಸುಂದರವಾಗಿದ್ದರೆ ಆ ಪಾತ್ರಧಾರಿಯ ಅಂದಗೆಡಿಸುವುದಕ್ಕೂ ಮೇಕಪ್ ಮಾಡಬೇಕಾಗುತ್ತದೆ. ಮೊದಲು ವಿಲನ್ ಅಂದ್ರೆ ಹೀಗೇ ಇರಬೇಕೆಂಬ ರೀತಿಯಲ್ಲಿ ಸಾಮಾನ್ಯಾಗಿ ಒಂದೇ ರೀತಿಯ ಮೇಕಪ್ ಇರುತ್ತಿತ್ತು. ಆದರೆ ಈಗ ವಿಲನ್‌ನ ಕಲ್ಪನೆಯೂ ಬದಲಾದಂತೆ ಮೇಕಪ್ ಕೂಡ ಬದಲಾಗಿದೆ. ಈಗ ಅತಿಯಾದ ಮೇಕಪ್ ಮಾಡುವುದನ್ನು ಕಲಾವಿದರೂ ಒಪ್ಪುವುದಿಲ್ಲ.

ನಾಟಕಗಳ ಮೇಕಪ್ ಕೊನೆಯ ಸಾಲಿನ ಪ್ರೇಕ್ಷಕನಿಗೂ ತಲುಪುವಂತಿರಬೇಕು. ಆದರೆ ಸಿನಿಮಾದಲ್ಲಿ ಆ ರೀತಿಯ ಮೇಕಪ್ ಮಾಡಿದರೆ ಕ್ಲೋಸ್ ಶಾಟ್ ತೆಗೆದಾಗ ಅಸಹ್ಯವಾಗಿ ಕಾಣಿಸುತ್ತದೆ. ಮಾತ್ರವಲ್ಲ, ಚಿತ್ರಗಳಲ್ಲಿ ಮೇಕಪ್ ತುಂಬಾ ಪರಿಪಕ್ವವಾಗಿರಬೇಕು. ನಾಟಕವಲ್ಲಿಯೂ ಈ ಬೆಳಕು ತುಂಬಾ ಉತ್ತಮ ರೀತಿಯಲ್ಲಿ ಬಳಕೆ ಮಾಡುತ್ತಿರುವುದರಿಂದ ಅತಿಯಾದ ಮೇಕಪ್ ಮಾಡಿದರೆ ಅಲ್ಲಿಯೂ ಅಸಹ್ಯವಾಗಿಯೇ ಕಾಣುತ್ತದೆ. ನನಗೆ ಬಿ.ವಿ.ಕಾರಂತರು 'ಚೋಮನದುಡಿ' ಚಿತ್ರದಲ್ಲಿ ಅವಕಾಶ ನೀಡಿದಾಗ ಆಶ್ಚರ್ಯವಾಗಿತ್ತು. ಸಿನಿಮಾ ಅನುಭವ ಅದೇ ಮೊದಲು. ಸಿನಿಮಾದಲ್ಲಿ ಮೊದಲು ಯಾರ ಜೊತೆಗೂ ಕೆಲಸವನ್ನು ಮಾಡಿರಲಿಲ್ಲ.

''ಚೋಮನ ದುಡಿ'ಯ ನಂತರ 'ಗ್ರಹಣ', 'ಘಟಶ್ರಾದ್ಧ', 'ತಬ್ಬಲಿಯು ನೀನಾದೆ ಮಗನೆ' ಮುಂತಾದ ಪ್ರಶಸ್ತಿ ವಿಜೇತ ಚಿತ್ರಗಳಿಗೆ ಮೇಕಪ್ ಮಾಡಿದ್ದರಿಂದ ಹೆಸರೂ ಬಂತು. ಆರಂಭದಲ್ಲಿ ಕೆಲಸ ಕಷ್ಟವೆನಿಸಿದರೂ ಫಲಿತಾಂಶ ನೋಡಿ ಸಂತೋಷವಾಯಿತು. ಆಗ ಚಿತ್ರದ ವೆಚ್ಚವೂ ಕಡಿಮೆಯಾಗಬೇಕಾಗಿತ್ತು. ಹಾಗಾಗಿ ಮದರಾಸಿನಿಂದ ಕರೆಸಲು ಖರ್ಚು ಜಾಸ್ತಿಯಾಗುತ್ತದೆಂದು ಸ್ಥಳೀಯರಿಗೇ ಅವಕಾಶ ಕೊಡುತ್ತಿದ್ದರು. ಅದಾಗಲೇ ಪ್ರಸಿದ್ಧರಾಗಿದ್ದ ಮೇಕಪ್ ಪಟುಗಳು ಬ್ಯುಸಿ ಆಗಿದ್ದರು. ಹೊಸ ಅಲೆ ಚಿತ್ರಗಳ ಜನರಿಗೆ ಬೇಗ ಹೊಂದಿಕೊಳ್ಳಲಿಲ್ಲ. 'ಗ್ರಹಣ' ಚಿತ್ರದಲ್ಲಿ ಕೆಲವೊಂದು ಪಾತ್ರಕ್ಕೆ ಮೇಕಪ್ ಇರಲೇ ಇಲ್ಲ. ಎಸ್.ರಾಮಚಂದ್ರ, ಗಿರೀಶ್ ಕಾಸರವಳ್ಳಿ ಇವರೆಲ್ಲ ಫಿಲಂ ಇನ್‌ಸ್ಟಿಟ್ಯೂಟ್‌ನಲ್ಲಿ ಕಲಿತು ಬಂದಿದ್ದರಿಂದ ಸಹಜತೆಗೆ ಒತ್ತು ಕೊಡುತ್ತಿದ್ದರು.

''ಘಟಶ್ರಾದ್ಧ' ಚಿತ್ರದಲ್ಲಿ ಮಕ್ಕಳಿಗೆ ಜುಟ್ಟು ಬಿಡಬೇಕು. ವಿಗ್ ಹಾಕದೆ ತುಂಬಾ ಸ್ವಾಭಾವಿಕವಾಗಿ ಬರಬೇಕೆಂದು ಅವರ ತಲೆ ಕೂದಲನ್ನು ಕೆರೆದು ಜುಟ್ಟು ಮಾಡಿದ್ದೆವು. ಆ ಚಿತ್ರಕ್ಕೆ ಮೇಕಪ್ ಮಾಡ್ತಾ ಮಾಡ್ತಾ ಕೆಲಸವನ್ನು ಕಲಿತೆನೆಂದರೂ ತಪ್ಪಾಗಲಿಕ್ಕಿಲ್ಲ. ಆ ಚಿತ್ರದ ಪಾತ್ರವೊಂದಕ್ಕೆ ಬಾಲ್ಡ್ ಮೇಕಪ್ ಮಾಡಬೇಕಿತ್ತು. ಆ ಪಾತ್ರಧಾರಿ ಒಂದು ಚೂರೂ ಕೂದಲು ಹೋಗಬಾರದು ಅಂತ ಹಠ ಹಿಡಿದರು. ಆಗ ನಾನು ಬಾಂಬೆಯಿಂದ ಬಾಲ್ಡ್ ಕ್ಯಾಪ್ ಅನ್ನು ಎರಡು ಮೂರು ತರಿಸಿದ್ದೆ. ಅದು ಹಾಕಿ ತೆಗೆಯುವಾಗ ಬೇಗ ಬೇಗನೆ ಹರಿದು ಹೋಯಿತು. ಕೊನೆಗೆ ನಾಟಕಗಳಲ್ಲಿ ನಾಣಿಯವರು ಮಾಡುತ್ತಿದ್ದಂತೆ ಮಾಡಿ ಬಾಲ್ಡ್ ಮೇಕಪ್ ಮಾಡಿದೆ. ಎಲ್ಲರೂ ಅದನ್ನು ಮೆಚ್ಚಿದರು. ಚಿತ್ರ ನೋಡಿದವರು ನಿಜವಾಗಿಯೂ ಕೂದಲು ತೆಗೆದಿದ್ದೀರಾ ? ಎಂದು ಕೇಳಿದಾಗ ಸಂತೋಷವೂ ಆಯಿತು. 'ತಬ್ಬಲಿಯು ನೀನಾದೆ ಮಗನೆ' ಚಿತ್ರದಲ್ಲಿಯೂ ನನ್ನ ಕೆಲಸಕ್ಕೆ ಸಾಕಷ್ಟು ಅವಕಾಶವಿತ್ತು. 'ಒಂದಾನೊಂದು ಕಾಲದಲ್ಲಿ' ಚಿತ್ರದ ಒಂದೆರಡು ದೃಶ್ಯಗಳಿಗೆ ನಾನು ಮೇಕಪ್ ಮಾಡಿದ್ದೆ. ಶಂಕರ್‌ನಾಗ್ ನಿರ್ದೇಶನದ 'ಮಿಂಚಿನ ಓಟ' ಚಿತ್ರಕ್ಕೆ ಮಾಡಿದ ಮೇಕಪ್ ನಿಜಕ್ಕೂ ವಿಭಿನ್ನಾಗಿಯೇ ಇತ್ತು. ಸಾಮಾನ್ಯವಾಗಿ ಕಮರ್ಶಿಯಲ್ ಚಿತ್ರಗಳಿಗೆ ಇರುವ ರೀತಿಗಿಂತ ಬೇರೆಯದ್ದು ಎಂದು ಗುರುತಿಸುವಂತಿತ್ತು.

''ಪರಸಂಗದ ಗೆಂಡೆತಿಮ್ಮ'' ಚಿತ್ರವೂ ಹಳ್ಳಿಯ ಹಿನ್ನೆಲೆ ಹೊಂದಿರುವ ಚಿತ್ರವಾದ್ದರಿಂದ ಮೇಕಪ್ ಕೆಲಸ ಸಾಕಷ್ಟಿತ್ತು. ಹೀಗೆ ಆಗ ನನಗೆ ಸಿಕ್ಕ ಅವಕಾಶಗಳೆಲ್ಲವೂ ಛಾಲೆಂಜಿಂಗ್ ಆಗಿದ್ದವು. ಇದು ನನ್ನನ್ನು ಮೇಕಪ್ ವಿಭಾಗದಲ್ಲಿ ಗಂಭೀರವಾಗಿ ತೊಡಗಿಕೊಳ್ಳುವಂತೆ ಮಾಡಿತೆಂದರೆ ತಪ್ಪಿಲ್ಲ. ಕೆಲ ಕಾಲ ಕಮಲಹಾಸನ್ ಅವರಿಗೂ ಮೇಕಪ್ ಮ್ಯಾನ್ ಆಗಿದ್ದೆ. ನನಗೆ ಕನ್ನಡದ ಗೀಳು ಹೆಚ್ಚು, ಹಿಂತಿರುಗಿ ಬಂದೆ. ಆದರೆ ಸಿನಿಮಾಗಳಲ್ಲಿ ಅವಕಾಶ ಕಡಿಮೆಯಾಗತೊಡಗಿದಾಗ ಜಯಮಾಲಾ ಅವರಿಗೆ ಪರ್ಸನಲ್ ಮೇಕಪ್ ಮ್ಯಾನ್ ಆಗಿ ಕೆಲಸ ಮಾಡಿದೆ. ಆಗ ಪತ್ರಿಕೆಗಳಲ್ಲಿ ಜಯಮಾಲಾ ತುಂಬಾ ಗ್ಲಾಮರಸ್ ಆಗಿ ಕಾಣುತ್ತಿದ್ದರು ಅಂತಲೂ ಬರುತ್ತಿತ್ತು. ನಮಗೆ ಪ್ರತಿಯೊಂದು ಪಾತ್ರಕ್ಕೆ ಮೇಕಪ್ ಮಾಡುವಾಗಲೂ ಅದೊಂದು ಪರೀಕ್ಷೆಯಂತೆಯೇ ಇರುತ್ತದೆ.

''ಮೆಟೀರಿಯಲ್ ದೃಷ್ಟಿಯಿಂದ ನೋಡಿದಾಗ ಮ್ಯಾಕ್ಸ್ ಫ್ಯಾಕ್ಟರ್ ಕಂಪೆನಿಯದೇ ಸರ್ವಾಧಿಕಾರ. ಅದು ಲಂಡನ್‌ನ ಕಂಪೆನಿ. ಈಗ ಅದು ಮುಚ್ಚಿಹೋಗಿದೆ. ಈಗ ಕ್ರೈಲಾನ್ ಅನ್ನುವ ಕಂಪೆನಿಯಿದೆ. ಯಾವ ಕಂಪೆನಿ ಬಂದರೂ ಪ್ಯಾನ್‌ಕೇಕ್ ಹಾಗೂ ಪ್ಯಾನ್‌ಸ್ಟಿಕ್ ಇದ್ದೇ ಇರುತ್ತದೆ. ಮೊದಲು ಈ ಕೇಕ್‌ಗಳಲ್ಲಿ ಇಪ್ಪತ್ತು ಮೂವತ್ತು ಶೇಡ್ಸ್ ಇರುತ್ತಿತ್ತು. ಆದರೆ ಈಗ ನೂರೆಂಟು ಶೇಡ್ಸ್ ಇವೆ. ಇಡೀ ದೇಹಕ್ಕೆ ಮೇಕಪ್ ಮಾಡಬೇಕಾದ ಸಂದರ್ಭ ಬಂದರೆ ಈ ಪ್ಯಾನ್‌ಕೇಕ್ ಉಪಯೋಗಿಸುವುದು ದುಬಾರಿ ಎನಿಸುತ್ತದೆ. ಯಾಕೆಂದರೆ ಈ ಪ್ಯಾನ್‌ಕೇಕ್‌ಗಳ ಬೆಲೆ ಸಾವಿರಾರು ರೂಪಾಯಿಗಳು. ಮೊದಲು ಆ ಬಣ್ಣದಲ್ಲಿ ಪ್ಯಾಚ್ ಟೆಸ್ಟ್ ಮಾಡಿಕೊಂಡು ಕಿವಿಗೊ ಎಲ್ಲಿಯೊ ಒಂದೆಡೆ ಹಚ್ಚಿ ನೋಡ್ತೀವಿ. ಕೆರೆತ, ನವೆ ಬರದೆ ಹೋದರೆ ಆಗ ಆ ಬಣ್ಣವನ್ನು ಮುಖಕ್ಕೆ ಹಚ್ಚುತ್ತೇವೆ. ಯಾಕೆಂದರೆ ಬಣ್ಣದ ಅಪ್ಲಿಕೇಶನ್ ಕೂಡ ಬಹಳ ಮುಖ್ಯ. ಹೆಚ್ಚು ರಫ್ ಆಗಿ ಉಜ್ಜಿದರೂ ಉರಿ ಬಂದು ಬಿಡುತ್ತದೆ. ನಮ್ಮ ದೇಶದಲ್ಲಿಯೂ ಈಗ ಸಾಕಷ್ಟು ಕಂಪೆನಿಗಳು ಮೇಕಪ್ ಪರಿಕರಗಳನ್ನು ತಯಾರಿಸುತ್ತವಾದರೂ ಕಲಾವಿದರಿಗೆ ವಿದೇಶಿ ಕಂಪೆನಿಗಳ ಮೋಹವೇ ಜಾಸ್ತಿ. ನಮ್ಮಲ್ಲಿ ತಯಾರಾಗುವ ಪರಿಕರಗಳು ವಿದೇಶಿ ಮಟ್ಟದಲ್ಲಿ ಇಲ್ಲವೆನ್ನುವುದು ನಿಜ. ಆದರೂ ತೀರಾ ಕಳಪೆ ಮಟ್ಟದ್ದಂತೂ ಅಲ್ಲ.

''ಕೆಲವು ನಟ ನಟಿಯರು ಪಾತ್ರಗಳನ್ನು ಮರೆತು ತಮ್ಮ ಇಮೇಜ್‌ಗೆ ತಕ್ಕಂತೆ ಮೇಕಪ್ ಹಾಕಲು ಹೇಳುತ್ತಾರೆ. ಇದು ಕಲೆಯ ದೃಷ್ಟಿಯಿಂದ ತಪ್ಪಾಗುತ್ತದೆ. ಆದರೆ ಕೆಲವು ನಟರು ಪಾತ್ರಕ್ಕೆ ತಕ್ಕ ಹಾಗೆ ಮೇಕಪ್ ಮಾಡಿಸಿಕೊಳ್ಳುತ್ತಾರೆ. ಅಂಬರೀಷ್‌ಗೆ ಮೇಕಪ್ ಮಾಡುತ್ತಿದ್ದಾಗ ಅವರು ಪಾತ್ರಕ್ಕೆ ಬೇಕಾದಂತೆ ಮೇಕಪ್ ಮಾಡಿಸಿಕೊಳ್ಳುತ್ತಿದ್ದರು. ಉದಾಹರಣೆ 'ಏಳು ಸುತ್ತಿನ ಕೋಟೆ', 'ನ್ಯೂ ಡೆಲ್ಲಿ', 'ಆಪರೇಷನ್ ಅಂತ' ಮೊದಲಾದವು.

''ನಮ್ಮ ಕೆಲಸಕ್ಕೆ ಸವಾಲಾಗಿದ್ದು ಗಿರೀಶ್ ಕಾಸರವಳ್ಳಿ ಅವರ ಚಿತ್ರಗಳು. ಇತ್ತೀಚೆಗೆ ವಿಶೇಷವಾಗಿ ಮೇಕಪ್ ಮಾಡಿದ್ದು 'ಕಾನೂರು ಹೆಗ್ಗಡಿತಿ' ಚಿತ್ರದಲ್ಲಿ. ಗೌಡನ ಪಾತ್ರಕ್ಕೆ ಗಿರೀಶ್ ಕಾರ್ನಾಡರಿಗೆ ಆರಂಭದಿಂದ ಸಾಯುವ ಹಂತದವರೆಗೂ ಬೇರೆ ಬೇರೆ ರೀತಿಯ ಮೇಕಪ್ ಮಾಡಿದ್ದೆ. ಕೆಲವರ ನೆಗೆಟಿವ್ ಅಂಶಗಳು ಪಾಸಿಟಿವ್ ಪಾಯಿಂಟ್ ಆಗಿ ಕಾಣುವುದು ವಿಶೇಷ. ಅಂಬರೀಷ್ ಅವರ ಕಣ್ಣುಗಳು ಚೆನ್ನಾಗಿಲ್ಲದಿದ್ದರೂ ಆಕರ್ಷಿಸುವುದಂತೂ ನಿಜ.

ಕೆಲವೆಡೆ ಕಲಾವಿದರಿಗೂ ಮೇಕಪ್ ಕಲಾವಿದರಿಗೂ ವಿರಸಗಳಿರುವುದೂ ಇದೆ. ಆದರೆ ಕೆಲಸ ಮಾಡುವ ಸಂದರ್ಭದಲ್ಲಿ ಇದಾವುದನ್ನೂ ತೋರ್ಪಡಿಸದೆ ನಿಷ್ಠೆಯಿಂದ ಮಾಡುವುದು ನಮ್ಮ ಜವಾಬ್ದಾರಿ. ಮೇಕಪ್ ಮ್ಯಾನ್ ಹಾಗೂ ವಸ್ತ್ರಾಲಂಕಾರದವರ ಸಂಬಂಧದಲ್ಲಿ ಉತ್ತಮ ಹೊಂದಾಣಿಕೆ ಇರಬೇಕು. ಹಾಗೆಯೇ ಛಾಯಾಗ್ರಾಹಕರೊಂದಿಗೂ ಕೂಡ.

"ಈ ವರ್ಣಾಲಂಕಾರಕ್ಕೆ ಸಂಬಂಧಿಸಿದಂತೆ ಮುಖ್ಯವಾಗಿ ಹೇಳಬೇಕಾದ ಮಾತೆಂದರೆ ನಮ್ಮಲ್ಲಿ ಈ ವಿಭಾಗಕ್ಕೆ ನಿರ್ದಿಷ್ಟ ನೀತಿ, ನಿಯಮಾವಳಿಗಳಿರುವ ಶಿಕ್ಷಣ ಇಲ್ಲ. ಇದು ಅತಿ ಅಗತ್ಯ. ಎಲ್ಲವನ್ನೂ ಅನುಭವದಿಂದಲೇ ಕಲಿಯುವುದಕ್ಕೆ ಬಹಳ ಸಮಯ ಹಿಡಿಯುತ್ತದಲ್ಲದೆ ಎಲ್ಲರಿಂದಲೂ ಇದು ಸಾಧ್ಯವೂ ಆಗಲಾರದು. ಇದಕ್ಕೊಂದು ವ್ಯವಸ್ಥಿತ ರೀತಿಯ ಶಿಕ್ಷಣವಿದ್ದರೆ ಇನ್ನೂ ಸಾಕಷ್ಟು ಸುಧಾರಿಸುತ್ತದಲ್ಲದೆ ಅದಕ್ಕೊಂದು ಗೌರವವೂ ಇರುತ್ತದೆ. ನಮ್ಮ ಜೊತೆಗೆ ಇರುವ ಹಿರಿಯರಾದ ಮೇಕಪ್ ನಾಣಿ ಅವರ ನೆರವು ಪಡೆದು ಈ ಕ್ಷೇತ್ರದಲ್ಲಿ ನಿಜವಾದ ಅಧ್ಯಯನ ಇತ್ಯಾದಿ ಮಾಡಿದರೆ ಒಳಿತು. ಇಲ್ಲವಾದರೆ ಮುಂದಿನ ಪೀಳಿಗೆಗೆ ಏನೂ ಉಳಿಯುವುದೇ ಇಲ್ಲ. ನಾವೆಲ್ಲ ನಾಣಿ ಅವರ ಗರಡಿಯಿಂದ ಬಂದವರೇ. ಈ ಕ್ಷೇತ್ರದಲ್ಲೂ ಈಗ ಅವರೇ ಮಾಸ್ಟರ್ ಅನ್ನಿಸುತ್ತೆ. ಆದರೆ ನಮ್ಮ ಚಿತ್ರರಂಗದಲ್ಲಿ ಯಾವುದೇ ವಿಭಾಗಕ್ಕೂ ಸರಿಯಾದ ಶಿಕ್ಷಣ ಇಲ್ಲದಿರುವುದರಿಂದ ಚಿತ್ರೋದ್ಯಮ ಇಷ್ಟು ದುರ್ಬಲವಾಗಿದೆ. ಇವಕ್ಕೊಂದು ರೀತಿ, ನೀತಿ, ನಿಯಮ ಇಲ್ಲದೆ ಇರುವುದರಿಂದ ಯಾರು ಬೇಕಾದರೂ ಸಿನಿಮಾ ಮಾಡಬಹುದೆನ್ನುವ ಪರಿಸ್ಥಿತಿಯಿದೆ".

(ಚಿತ್ರ ೧೪) ರಮೇಶ್ - ಪ್ರೇಮಿ ನಂ.೧

ಇದುವರೆಗೆ ತಮ್ಮ ಅಭಿಪ್ರಾಯ ಹಂಚಿಕೊಂಡವರಲ್ಲ ಕಪ್ಪು-ಬಿಳುಪು ಹಾಗೂ ವರ್ಣ ಚಿತ್ರಗಳೆರಡರ ಅನುಭವವನ್ನು ಹಂಚಿಕೊಂಡವರು. ಈ ತಲೆಮಾರಿನ ಪ್ರಸಾಧನ ಕಲಾವಿದರುಗಳಲ್ಲಿ ಎಸ್.ಎ.ಶಿವಕುಮಾರ್ ಅಥವಾ ಕುಮಾರ್ ನೊಣವಿನಕೆರೆ ಪ್ರಮುಖರು. ಪ್ರಸಾಧನ ಸಹಾಯಕರಾಗಿ ರಂಗಭೂಮಿಯಲ್ಲೂ ಪಳಗಿದವರು. ರಂಗ ನಿರಂತರ, ರಂಗ ಸಂಪದ, ಬೆನಕ ಮುಂತಾದ ತಂಡಗಳಲ್ಲಿ ಪ್ರಸಾಧನ ಕಲಾವಿದರಾಗಿ ಕೆಲಸ ಮಾಡಿದ್ದರು. ನಾಟಕದ ಅನುಭವ ಇರುವವರಿಗೆ ಚಿತ್ರರಂಗದಲ್ಲಿ ಕೆಲಸ ಮಾಡುವುದು ಸುಲಭ ಎನ್ನುವುದು ಇವರ ಅಭಿಪ್ರಾಯ. ಕುಮಾರ್ ಇದುವರೆಗೆ ಸುಮಾರು ನೂರೈವತ್ತು ಚಿತ್ರಗಳಿಗೆ ಪ್ರಸಾಧನ ಮಾಡಿದ್ದಾರೆ. ರಾಜ್ಯ ಪ್ರಶಸ್ತಿ ಪಡೆದ 'ಕುಬಿ ಮತ್ತು ಇಯಾಲ', 'ಆತಂಕ', 'ಚೈತ್ರದ ಚಿಗುರು', 'ದೋಣಿ ಸಾಗಲಿ', 'ನೋಡು ಬಾ ನಮ್ಮೂರ' ಮುಂತಾದ ಚಿತ್ರಗಳಿಗೆ ಕೆಲಸ ಮಾಡಿದ್ದಾರೆ. ಆದರೆ ಮೇಕಪ್ ಕಲಾವಿದರಿಗೆ ಪ್ರಶಸ್ತಿ ನೀಡಿ ಗೌರವಿಸುವ ಪದ್ಧತಿಯಿಲ್ಲವೆನ್ನುವುದು ಇವರ ಕೊರಗು. 'ತುಳಸೀದಳ' ಚಿತ್ರಕ್ಕಾಗಿ ಮಾತ್ರ ಒಮ್ಮೆ ಮಲ್ಲೇಶ್ ಹರ್ತಿ ಅವರಿಗೆ ವಿಶೇಷ ಪ್ರಶಸ್ತಿ ನೀಡಿದ್ದರು.

ಕುಮಾರ್ ತಮ್ಮ ಅನಿಸಿಕೆಗಳನ್ನು ಈ ರೀತಿಯಾಗಿ ಹೇಳಿಕೊಂಡಿದ್ದಾರೆ : "ಪರಭಾಷೆಯ ಚಿತ್ರಗಳಲ್ಲಿ ಮಾಡಿದಂತೆ ನಮ್ಮಲ್ಲಿಯೂ ಮೇಕಪ್‌ನಲ್ಲಿ ಬೇಕಾದ ರೀತಿಯ ಪ್ರಯೋಗ ಮಾಡಬಹುದು. ಕಮಲಹಾಸನ್ ಕೆಲಸ ಮಾಡುವ ರೀತಿಯೇ ಬೇರೆ. ಕಥೆಯ ಬಗ್ಗೆ ಯೋಚಿಸುತ್ತಲೇ ಮೇಕಪ್ ಬಗ್ಗೆಯೂ ಯೋಚಿಸುತ್ತಾರೆ. ಅವರು ವರ್ಷಕ್ಕೆ ಒಂದೆರಡು ಚಿತ್ರವನ್ನಷ್ಟೇ ಮಾಡುವುದರಿಂದ ಪೂರ್ವ ತಯಾರಿಗೂ ಸಾಕಷ್ಟು ಸಮಯ ವ್ಯಯಿಸುತ್ತಾರೆ. ನಾಲ್ಕೈದು ಗಂಟೆಗಳ ಮೇಕಪ್ ಮಾಡಿಸುತ್ತಾರೆ. ನಮ್ಮಲ್ಲಿ ಆ ರೀತಿಯಾಗಿ ಕೆಲಸದ ರೀತಿಯೇ ಇಲ್ಲ. ಇಲ್ಲಿ ಕಥೆಯನ್ನು, ಪಾತ್ರದ ವಿವರಣೆಯನ್ನು ಸರಿಯಾಗಿ ಹೇಳುವುದಿಲ್ಲ. 'ಕುಬಿ ಮತ್ತು ಇಯಾಲ' ಚಿತ್ರ ಮಾಡುವಾಗ ಮಾತ್ರ ನಿರ್ದೇಶಕರು ನನಗೆ ಓದಿಕೊಳ್ಳಲು ಸ್ಕ್ರಿಪ್ಟ್ ಕೊಟ್ಟಿದ್ದರು. ನಿಜಕ್ಕೂ ಇದರಿಂದ ತುಂಬಾ ಲಾಭವಾಗುತ್ತದೆ.

"ಈಗ ಈ ಕ್ಷೇತ್ರ ಸಾಕಷ್ಟು ಮುಂದುವರಿದಿದೆ. ೧೯೬೩-೬೪ರವರೆಗೂ ಇಲ್ಲಿ ಮೇಕಪ್ ಪರಿಕರಗಳು ಸಿಗುತ್ತಿರಲಿಲ್ಲ. ಕಲ್ಕತ್ತಾ, ಮುಂಬಯಿ, ಮದ್ರಾಸ್‌ಗಳಿಂದ ತರಿಸಬೇಕಾಗುತ್ತಿತ್ತು ಅಥವಾ ಫಿಲಂ ಚೇಂಬರ್ ತರಿಸಿ ಕೊಡುತ್ತಿತ್ತು. ಇದನ್ನು ಮೊದಲು ಬೆಂಗಳೂರಿಗೆ ತಂದು ಮಾರಾಟ ಮಾಡಿದವರು ಗಾಂಧೀನಗರದ ರಾಮಿ ಸ್ಟೋರ್ಸ್‌ನವರು. "ನಾನು ಎಂ.ಎಸ್.ಸತ್ಯು ಅವರ ಧಾರಾವಾಹಿ 'ಜೋಗಿ ನಂಜಪ್ಪನ ಕಥೆ'ಯಲ್ಲಿ ಶ್ರೀಧರ್‌ಗೆ ತೊಂಬತ್ತು ವರ್ಷದ ಮುದುಕನ ಮೇಕಪ್ ಮಾಡಿದ್ದೆ. ಈ ಪಾತ್ರ ಮಾಡಿದ್ದರಿಂದಲೇ ಅವರಿಗೆ 'ಸಂತ ಶಿಶುನಾಳ ಷರೀಫ'ಚಿತ್ರಕ್ಕೆ ಅವಕಾಶ ಸಿಕ್ಕಿತು. ಇದನ್ನು ಶ್ರೀಧರ್ ಅವರೇ ಹೇಳಿದ್ದರು. ನಂತರ ನಾನು 'ಶಿರ್ಡಿ ಸಾಯಿಬಾಬಾ' ಚಿತ್ರದಲ್ಲಿ ಕೆಲಸ ಮಾಡಿದಾಗ ಅವರಲ್ಲಿ ನಮ್ಮ ಕೆಲಸಕ್ಕೆ ಹೆಚ್ಚಿನ ಅವಕಾಶವಿತ್ತು.

"ನಾವು ನಮ್ಮ ಸಮಸ್ಯೆ ಏನೇ ಇದ್ದರೂ ಮೇಕಪ್ ಮಾಡುವಾಗ ಅದನ್ನು ಕಲಾವಿದರ ಮುಂದೆ ಹೇಳಿಕೊಳ್ಳಬಾರದು. ಮಾತ್ರವಲ್ಲ, ಮೇಕಪ್ ಮ್ಯಾನ್ ಶುದ್ಧವಾಗಿರಬೇಕು. ಆದರೆ ಈಗೀಗ ಮೇಕಪ್‌ಮ್ಯಾನ್ ಅಂತ ಹೇಳಿಕೊಂಡು ಬರುವ ಅನೇಕರಿಗೆ ಕೆಲಸವೇ ಗೊತ್ತಿರುವುದಿಲ್ಲ. ಅವರಿಂದಲೂ ಕೆಲಸ ಮಾಡಿಸುವವರು ಇದ್ದಾರೆ. ಇಲ್ಲಿ ನಮಗೆ ಒಮ್ಮೊಮ್ಮೆ ಕೆಲಸ ಪೂರ್ಣ ಮಾಡಲು ಅವಕಾಶ ನೀಡದೆ ಅವಸರ ಮಾಡುತ್ತಾರೆ. ಜ್ಯೂನಿಯರ್ ಕಲಾವಿದರಿಗಂತೂ ಸರಿಯಾಗಿ ಮೇಕಪ್ ಮಾಡಲು ಸಮಯವನ್ನೇ ನೀಡುವುದಿಲ್ಲ.

"ನಾನು ಕಂಪನಿ ಮೇಕಪ್ ಮ್ಯಾನ್ ಆಗಿಯೂ ಕೆಲಸ ಮಾಡುತ್ತೇನೆ, ಪರ್ಸನಲ್ ಮೇಕಪ್ ಮ್ಯಾನ್ ಆಗಿಯೂ ಕೆಲಸ ಮಾಡುತ್ತೇನೆ. 'ಮಾಂಗಲ್ಯಂ ತಂತುನಾನೇನಾ' ಹಾಗೂ 'ಪ್ರೀತ್ಸೋದ್ ತಪ್ಪಾ'ಚಿತ್ರಗಳಿಗೆ ರವಿಚಂದ್ರನ್ ಅವರಿಗೆ ಪರ್ಸನಲ್ ಮೇಕಪ್ ಮ್ಯಾನ್ ಆಗಿ ಸ್ವಿಝರ್‌ಲೆಂಡ್‌ಗೂ ಹೋಗಿದ್ದೆ. 'ಪ್ರೀತ್ಸೆ' ಚಿತ್ರದಲ್ಲಿ ಉಪೇಂದ್ರರಿಗೂ ಪರ್ಸನಲ್ ಮೇಕಪ್ ಮ್ಯಾನ್ ಆಗಿದ್ದೆ.

"ನಾವು ಇಲ್ಲಿ ಎಷ್ಟೇ ಕಷ್ಟ ಪಟ್ಟರೂ ನಮಗೆ ಕೊಡುವ ಸಂಭಾವನೆ ತೀರಾ ಕಡಿಮೆ. ಪರಭಾಷಾ ಚಿತ್ರಗಳಲ್ಲಿ ಕೊಡುವ ಸಂಭಾವನೆಯ ಕಾಲುಭಾಗವೂ ಇಲ್ಲಿಲ್ಲ. ಕೆಲವೊಮ್ಮೆ ಇಲ್ಲಿ ಕಲಾವಿದರು ಗೌರವವನ್ನೂ ನೀಡುವುದಿಲ್ಲ" ಎಂದು ನೋವು ತೋಡಿಕೊಳ್ಳುವ ಕುಮಾರ್ ಕನ್ನಡ ಚಿತ್ರರಂಗದ ಯುವ ಪ್ರಸಾಧನ ಪಟು.

ಹೀಗೆ ಮೇಕಪ್ ಅಥವಾ ಪ್ರಸಾಧನ ಅಥವಾ ವರ್ಣಾಲಂಕಾರ ಇಂದು ಹಾಗೂ ಹಿಂದೆ ಮತ್ತು ಮುಂದೆಯೂ ಕೂಡ ಚಲನಚಿತ್ರದಲ್ಲಿ ಯಾವ ರೀತಿ ಅನಿವಾರ್ಯ ಎನ್ನುವುದನ್ನು ಅರಿಯಬಹುದು. ಸಿನಿಮಾದ ಇತರ ಪ್ರಮುಖ ಅಂಗಗಳಂತೆಯೇ ಈ ಪ್ರಸಾಧನ ಕೂಡ ಬಹು ಮುಖ್ಯವಾದ ಒಂದು ಭಾಗ.

೫೦-೬೦ರ ದಶಕಗಳಲ್ಲಿ ಪ್ರಸಾಧನ ವಿಭಾಗದಲ್ಲಿ ಏಕಮೇವಾದ್ವಿತಿಯರಾಗಿ ಮೆರೆದವರು ಮದರಾಸಿನ ಹರಿಬಾಬು. ಎಂತಹ ಸೂಪರ್ ಸ್ಟಾರ್‌ಗಳಾಗಲಿ ಅವರ ಮನೆಗೇ ಹೋಗಿ ಬೆಳಗಿನ ಜಾವದಿಂದ ಕ್ಯೂನಲ್ಲಿ ಕುಳಿತು ಅವರಿಂದ ಮೇಕಪ್ ಮಾಡಿಸಿಕೊಂಡು ಬರುತ್ತಿದ್ದ ಅವಿಸ್ಮರಣೀಯ ದಿನಗಳವು. ಅವರಷ್ಟು ಪ್ರತಿಷ್ಠೆಯನ್ನು ಬೆಳೆಸಿಕೊಂಡ ಪ್ರಸಾಧನ ಪರಿಣತರಾರೂ ನಮ್ಮೊಂದಿಗಿಲ್ಲ.

ಈ ವಿಭಾಗದಲ್ಲಿ ವಿಶೇಷವಾದ ಸಾಧನೆಗಳನ್ನು ಮಾಡಿದ ಅನೇಕ ಪರಿಣತರ ಕೆಲಸದ ಬಗ್ಗೆ ಲೇಖನದಲ್ಲಿಯೇ ಸಾಕಷ್ಟು ಬರೆಯಲಾಗಿದೆ. ಉಳಿದಂತೆ ಚೋಟೆ ಜಾನ್, ಮಾಧವಯ್ಯ, ಭದ್ರಯ್ಯ, ಪೀತಾಂಬರಂ, ವೆಂಕಟೇಶ್ವರರಾವ್, ತಂಗಪ್ಪನ್, ಕೋಟೇಶ್ವರರಾವ್, ಮನ್ಮಥರಾವ್, ಶ್ಯಾಂ ಸುಂದರ್, ವೆಂಕಟಸ್ವಾಮಿ ಮುಂತಾದವರ ಹೆಸರುಗಳನ್ನು ವಿಶೇಷವಾಗಿ ಉಲ್ಲೇಖಿಸಬಹುದು. ಕನ್ನಡ ಚಿತ್ರರಂಗ ಕರ್ನಾಟಕಕ್ಕೆ ಸ್ಥಳಾಂತರಗೊಂಡ ನಂತರ ಇಲ್ಲಿ ವಿಶೇಷ ಗಮನ ಸೆಳೆದವರ ಪೈಕಿ ಬಹುರೂಪಿ ನಾಣಿಯವರ ಹೆಸರು ಎದ್ದು ನಿಲ್ಲುತ್ತದೆ.

ವರ್ಣ - ವಸ್ತ್ರದ ಕ್ರಿಯಾತ್ಮಕ ಬಳಕೆ

ಭಾರತೀಯರ ಬದುಕಿನಲ್ಲಿ ವಸ್ತ್ರ ಮತ್ತು ವರ್ಣಗಳ ಪ್ರಾಮುಖ್ಯ ಶತಶತಮಾನಗಳಿಂದ ಹಾಸುಹೊಕ್ಕಾಗಿದೆ. ಸಂಕ್ರಾಂತಿ ಹಬ್ಬದಂದು ಪಂಚಾಂಗ ಶ್ರವಣ ಮಾಡಿ ಮಕರ ಸಂಕ್ರಾಂತಿ ಫಲ ಕೇಳುವರು. ಸಂಕ್ರಾಂತಿ ದೇವತೆಯ ಹುಟ್ಟು, ಧರಿಸಿರುವ ವಸ್ತ್ರ ಹಾಗೂ ಅದರ ವರ್ಣ, ಆಭರಣ, ಕೈಯಲ್ಲಿರುವ ಪಾತ್ರೆಯಲ್ಲಿನ ಖಾದ್ಯ ಹಾಗೂ ಹಿಡಿದ ಆಯುಧ, ಬಳಸಿದ ವಾಹನ, ನೋಡುವ ಹಾಗೂ ಹೋಗುವ ದಿಕ್ಕು ಆಧರಿಸಿ ಆಯಾ ವರ್ಷದಲ್ಲಿ, ಆಯಾ ಪದಾರ್ಥಗಳ ಸಮೃದ್ಧಿ, ಅಭಾವ, ಬೆಲೆ ಹೆಚ್ಚಳ, ಉಪದ್ರವವನ್ನು ಊಹಿಸಲಾಗುತ್ತದೆ.

ಯುಗಾದಿಯಂದು ಪಂಚಾಂಗ ಶ್ರವಣ ಮಾಡಿ, ಆಯಾ ಸಂವತ್ಸರದ ಫಲಗಳನ್ನು ಅರಿಯುತ್ತಾರೆ. ಇಲ್ಲಿ ಯಾವ ಗ್ರಹ ಆಧಿಪತ್ಯ ಹೊಂದಿರುವುದು ಎಂಬುದನ್ನು ಆಧರಿಸಿ, ಮಳೆ-ಬೆಳೆ, ಪ್ರಜೆಗಳು ಧರಿಸುವ ವಸ್ತ್ರ, ವೇಷ ಭೂಷಣಗಳ ಸಹಿತ ಅವರ ವರ್ಷದ ಮನೋಭಾವ, ಹಾಸ್ಯ, ಉಲ್ಲಾಸ, ಜೀವನರೀತಿ ನಿರೂಪಿಸುತ್ತಾರೆ.

ಎಲ್ಲ ಧರ್ಮಗಳ ಪಂಚಾಂಗಗಳಲ್ಲೂ ಹೊಸ ವಸ್ತ್ರ ತೊಡಲು ಸೂಕ್ತ ದಿನ, ಕಾಲ, ವಾರ ಹಾಗೂ ಅವುಗಳನ್ನು ಪ್ರಥಮ ಬಾರಿ ನೀರಿನಲ್ಲಿ ನೆನೆಸಲು ಶುಭದಿನಗಳ ಪಟ್ಟಿ ನೀಡಿರುತ್ತಾರೆ. ಯುಗಾದಿಯ, ಹೊಸವರ್ಷದ ಮೊದಲದಿನ ನೂತನ ವಸ್ತ್ರಧಾರಣ ಮಾಡಿದ ನಂತರವೇ ಬೇವು-ಬೆಲ್ಲ ಸೇವನೆ ನಡೆಯುತ್ತದೆ. ದೀಪಾವಳಿಯ ನರಕ ಚತುರ್ದಶಿಯಂದು, ನರಕಾಸುರನ ವಧೆ ಸಂಕೇತವಾಗಿ ಪುರುಷರು ಹಳೆಯದಾದ ನಿತ್ಯದ ಉಡುಪಿನಲ್ಲಿ ವಿಜಯದ ಆರತಿ ಮಾಡಿಸಿಕೊಂಡು, ನಂತರ ಸ್ನಾನ ಮಾಡಿಯೇ ಹೊಸ ವಸ್ತ್ರ ಧರಿಸುತ್ತಾರೆ.

ಮದುವೆಯಂಥ ಮಂಗಳ ಕಾರ್ಯದ ವಸ್ತ್ರ ಖರೀದಿಗೆ ಮೊದಲು ದೇವವಸ್ತ್ರವೆಂದು ಕಾಲು ಮೀಟರಿನಷ್ಟು ಕೇಸರಿ ವಸ್ತ್ರ ಕುಲದೇವತೆಗೆ ಖರೀದಿಸಿ, ನಂತರ ಮನೆಯ ಹಿರಿಯ ಮುತ್ತೈದೆಯ ಸೀರೆ, ಬಳಿಕ ಮದುಮಗಳ ಸೀರೆ, ಕೊನೆಗೆ ಮನೆಯ ಇತರ ಹಿರಿಯರಾದ ವಿಧವೆಯರ ವಸ್ತ್ರ ಖರೀದಿಸುತ್ತಾರೆ. ಕೆಲವು ಪದ್ಧತಿಯ ಜೋತಿಷ್ಯ ಶಾಸ್ತ್ರದಲ್ಲಿ ರಾಶಿಗೆ ಅನುಗುಣವಾಗಿ ಧರಿಸಬೇಕಾದ ವಸ್ತ್ರಗಳ ವರ್ಣ ವಿವರಿಸಲಾಗಿದೆ.

ಆಭರಣಗಳ ಖರೀದಿಯಲ್ಲೂ ಮನಬಂದಂತೆ ಹರಳು, ಕಲ್ಲುಗಳನ್ನು ಆಯ್ಕೆ ಮಾಡದೇ ಆಯಾ ರಾಶಿಗಳಿಗೆ ಕೂಡಿ ಬರುವಂಥ ಸುಖ, ಶಾಂತಿ, ಸಮೃದ್ಧಿ ಒದಗಿಸುವಂಥ ವರ್ಣಗಳನ್ನು, ನವರತ್ನಗಳಲ್ಲಿ ಸೂಕ್ತವಾದುದನ್ನು ಆಯ್ಕೆ ಮಾಡುತ್ತಾರೆ. ಆಭರಣಗಳ ಅಂಗಡಿಗಳಲ್ಲಿ ಇದಕ್ಕಾಗೇ ಮುದ್ರಿತ ಪಟ್ಟಿಯನ್ನು ಒದಗಿಸುತ್ತಾರೆ. ಮನಸ್ಸಿಗೆ ಬಂದ ಹಾಗೆ ನವರತ್ನದ ಉಂಗುರ ಧರಿಸದೆ, ರಾಶಿ ಆಧರಿಸಿ, ಹಾಗೂ ಗ್ರಹಗಳ ಸ್ಥಾನಮಾನದಂತೆ ಹರಳುಗಳನ್ನು ಕೂಡಿಸಿರುವ ಹಾಗೂ ಯಾವ ಬೆರಳಿನಲ್ಲಿ ಮತ್ತು ತನ್ನತ್ತ ಯಾವ ಹರಳು ಇರಬೇಕೆಂಬುದನ್ನು ಸೂಚಿಸುವ ಪರಿಣತರ ಸೇವೆಯೂ ಲಭ್ಯವಿದೆ.

(ಚಿತ್ರ ೧) 'ಭಕ್ತ ಪ್ರಹ್ಲಾದ' - ನಾಟಕದ ಪ್ರಭಾವ

ನಮ್ಮ ಅಸಂಖ್ಯಾತ ದೇವರುಗಳಿಗೂ ಅವರವರಿಗೆ ಪ್ರಿಯವಾದ ವರ್ಣಗಳನ್ನು ನಿಗದಿಪಡಿಸಲಾಗಿದು ಅದೇ ವರ್ಣದ ವಸ್ತ್ರ, ಹೂವು, ಫಲದ ನೈವೇದ್ಯ ಮಾಡಿದರೆ ದೇವತೆಗಳು ಒಲಿದು ಶೀಘ್ರಫಲ ನೀಡುವರು ಎಂಬ ನಂಬಿಕೆ ಜನಜನಿತ. ಹೀಗಾಗಿ ಗಣಪತಿಗೆ ಕೆಂಪು, ಸರಸ್ವತಿಗೆ ಬಿಳಿ, ಶನಿಗೆ ಕಪ್ಪು ಇಂಥ ವರ್ಣಗಳ ಕಲ್ಪನೆ ಚಾಲ್ತಿಯಲ್ಲಿದೆ. ನವಗ್ರಹಗಳ ಪೂಜೆಯಲ್ಲಂತೂ ಆಯಾ ಗ್ರಹಗಳ ವರ್ಣಕ್ಕೆ ಹೊಂದಿಕೊಳ್ಳುವಂಥ ಧಾನ್ಯಗಳನ್ನು ಸಾಂಕೇತಿಕವಾಗಿ ಆಯ್ಕೆ ಮಾಡಿ ಗ್ರಹಗಳ ಸ್ಥಾನಮಾನ ಪ್ರಕಾರ ಜೋಡಿಸಿ ಪೂಜಿಸಲಾಗುತ್ತದೆ.

ಜಗತ್ತಿನ ಜಾನಪದ ಇತಿಹಾಸದಲ್ಲಿ ಹಲವಾರು ದೇಶಗಳು ಒಂದೊಂದು ದಿಕ್ಕಿಗೆ ಒಂದೊಂದು ವರ್ಣವನ್ನು ನೀಡಿ ಸಂಕೇತಿಸುತ್ತವೆ. ಪೂರ್ವ : ಬಿಳಿ, ಉತ್ತರ : ಹಳದಿ, ಪಶ್ಚಿಮ : ನೀಲಿ, ದಕ್ಷಿಣ : ಕೆಂಪು, ಮೇಲೆ ಕೆಳಗೆ : ಕಪ್ಪು ಸಾಮಾನ್ಯವಾಗಿ ಸ್ವೀಕೃತ ಸಂಕೇತಗಳು. ಇದು ಕೆಲವೊಮ್ಮೆ ದೇಶದಿಂದ ದೇಶಕ್ಕೆ ಬದಲಾಗುತ್ತದೆ. ಇವರೊಂದಿಗೆ ಕೆಂಪು : ವಿಜಯದ ಸಂಕೇತ, ನೀಲಿ : ತೊಂದರೆಯ, ಕಪ್ಪು : ಸಾವಿನ, ಬಿಳಿ : ಸಂತಸದ ಕುರುಹಾಗಿ ನಂಬುತ್ತಾರೆ. ವಿಶ್ವದ ಹಲವಾರು ದೇಶಗಳಲ್ಲಿ ಬಿಳಿ : ಶುದ್ಧತೆಗೆ, ಕಪ್ಪು : ಸಾವಿಗೆ, ಕೆಂಪು : ರಾಗಭಾವಗಳಿಗೆ, ಹಸಿರು : ಜೀವಂತಿಕೆಗೆ ಸಂಕೇತವೆನಿಸಿದೆ. ಪಾಶ್ಚಾತ್ಯ ಚರ್ಚುಗಳು ದಿನ ಹಾಗೂ ಕಾಲಗಳಿಗೂ ಬಣ್ಣಗಳ ಸಾಂಕೇತಿಕತೆಯನ್ನು ಹೊಂದಿಸುತ್ತವೆ.

ಈ ಹಿನ್ನೆಲೆಯಲ್ಲಿ ರೂಪಿತವಾದ ಉಡುಪುಗಳ ಕೆಲವು ಸಂಕೇತಗಳು ವಿಶ್ವಮಾನ್ಯವಾಗಿವೆ. ಶೋಕದ ಉಡುಪು ಕಪ್ಪು ಅಥವಾ ಕೆಲವೆಡೆ ಬಿಳಿ ವರ್ಣವಾಗಿದ್ದರೆ, ಕೆಂಪು ಶತ್ರು, ಯುದ್ಧ, ಕೋಪ, ರಾಗದ್ವೇಷಗಳನ್ನು ಸಮೀಕರಿಸುತ್ತದೆ. ನೀಲಿ ಪವಿತ್ರತೆಯ ಕುರುಹಾದರೆ ಹಸಿರು ಬೆಳವಣಿಗೆಯನ್ನು ಸೂಚಿಸುತ್ತದೆ. ಭಾರತದಲ್ಲಿ ಕೆಂಪು, ಕಪ್ಪು, ಹಳದಿ ಈ ಮೂರು ವರ್ಣಗಳು ಭೂತಗಳ ವಿರುದ್ಧ ರಕ್ಷಣೆಯ ಬಣ್ಣಗಳಾಗಿವೆ. ಇದಲ್ಲದೆ ಕೀರ್ತಿಗೆ ಸಂಕೇತ ಶುಭ್ರ - ಎಂದು, ಪಾಪ-ದುಷ್ಟಟಕ್ಕೆ ಕಪ್ಪು; ವಿರಕ್ತರಿಗೆ-ತ್ಯಾಗಕ್ಕೆ ಕಾವಿ ವರ್ಣ ಪ್ರತಿನಿಧಿ. ಉತ್ತರ ಭಾರತದ ವಧು ಕೆಂಪು ಸೀರೆ ಉಟ್ಟರೆ ಕೇರಳದಲ್ಲಿ ಆಕೆ ಬಿಳಿ ಉಡುವುದು ಸಂಪ್ರದಾಯ. ಹಸಿರು ಬಳೆ ಸುಮಂಗಲಿತನದ ಸಂಕೇತವಾದರೆ ಮುಳ್ಳು ಹಾಸಿಗೆಯಲ್ಲಿ ಬೀಳುವ ದಾಸಯ್ಯ ಧರಿಸುವುದು ಅರಿಶಿನದಲ್ಲಿ ಅದ್ದಿರುವ, ಮೈಗ ನಂಜಾಗದ ಹಳದಿ ವಸ್ತ್ರ. ಗ್ರಾಮೀಣ ಜೀವನದಲ್ಲಿ ಹುಡುಗಿ ಮೈನೆರೆದರೆ ಬಣ್ಣದ ಓಕುಳಿಯಾಡುವ ಸಂಪ್ರದಾಯ ಈಗಲೂ ಅಲ್ಲಲ್ಲಿ ಚಾಲ್ತಿಯಲ್ಲಿದೆ.

ಈ ರೀತಿ ವರ್ಣಗಳ ಕುರಿತ ಒಂದು ಸುಪ್ತ ವಿಚಾರಧಾರೆಯ ಫಲವಾಗಿ ಆಯಾ ದೇಶದ ಧ್ವಜಗಳ ವರ್ಣಗಳು, ಆಟದಲ್ಲಿ ಬಳಸುವ ಕಾಲ್ಚೆಂಡು, ಪಂದ್ಯದಲ್ಲಿ ಓಡಿಸುವ ದೋಣಿಯ ಬಣ್ಣ ಆಯ್ಕೆ ಮಾಡಿಕೊಳ್ಳುತ್ತಾರೆ. ಚದುರಂಗದ ದಾಳಗಳಲ್ಲಿ ಸಹ ಬಿಳಿ ಪ್ರಗತಿ ಸೂಚಿಸಿದರೆ ಕಪ್ಪು ಸೋಲಿನ ಸಂಕೇತ.

ಪ್ರಕೃತಿಯಲ್ಲಿ ಅಪಾರ ವರ್ಣವೈವಿಧ್ಯ ಕಾಣಬಹುದು. ವಸಂತದ ವರ್ಣವಿನ್ಯಾಸ ಉತ್ಸಾಹ, ಹರ್ಷಗಳನ್ನು ತುಂಬುತ್ತದೆ. ಮೋಡ ಮುಸುಕಿದ ವರ್ಷಋತುವಿನ ವರ್ಣವೈಖರಿ, ಕಾತರ, ವಿರಹಕ್ಕೆ ಕಾರಣವಾಗಬಹುದು. ಆದರೆ ಇಂಥ ಸಂದರ್ಭಗಳಲ್ಲಿ ಒಬ್ಬ ಸಾಮಾನ್ಯ ಮನುಷ್ಯ ನೋಡುವುದು ಕೇವಲ ಕೆಲವೇ ಪ್ರಾಥಮಿಕ ವರ್ಣಗಳನ್ನು, ಉಳಿದವುಗಳನ್ನು ಗುರುತಿಸಲಾರ, ಅರಿಯಲಾರ,

ಅವುಗಳನ್ನು ಪದಗಳಲ್ಲಿ ಅಭಿವ್ಯಕ್ತಿಗೊಳಿಸಲಾರ. ಆದರೆ ಕಲಾವಿದ ಮಾತ್ರ ಸಾಮಾನ್ಯ ಮನುಷ್ಯನ ದೃಷ್ಟಿವ್ಯಾಪ್ತಿಯ ಆಚೆಗಿನ ವರ್ಣಲೋಕ ಕಂಡು ತಾನು ಮಾತ್ರ ಆನಂದಿಸದೆ ಅದನ್ನು ಚಿತ್ರಿಸಿ ಪ್ರಕಟಿಸುತ್ತಾನೆ.

ಈ ಹಿನ್ನೆಲೆಯಲ್ಲಿ ವರ್ಣಗಳ ಲೋಕದ ಬಗ್ಗೆ ಅರಿಯುವುದು ಉತ್ತಮ. ವಿಶ್ವದ ಎಲ್ಲೆಡೆ ವರ್ಣ ಸಂಯೋಜಕರು ವೈಜ್ಞಾನಿಕ ರೀತಿಯಲ್ಲಿ ಮಾಡಿದ ವರ್ಗೀಕರಣದ ಪ್ರಕಾರ ಕೆಂಪು, ಹಳದಿ, ನೀಲಿ ಇವು ಮೂರು ಪ್ರಾಥಮಿಕ ವರ್ಣಗಳು. ಇದರ ನಂತರ ಹಳದಿ-ಕೆಂಪು ಮಿಶ್ರಣದ ಕಿತ್ತಳೆ, ಹಳದಿ-ನೀಲಿ ಸೇರಿ ಹುಟ್ಟುವ ಹಸಿರು, ಕೆಂಪು ಮತ್ತು ನೀಲಿಯನ್ನು ಕೂಡಿಸುವುದರಿಂದ ದೊರೆಯುವ ನೇರಳೆ ದ್ವಿತೀಯ ವರ್ಗದ ವರ್ಣಗಳು. ಇದೇ ರೀತಿಯಲ್ಲಿ ಕೆಂಪು-ಕಿತ್ತಳೆ, ಕಿತ್ತಳೆ-ಹಳದಿ, ಹಳದಿ-ಹಸಿರು, ನೀಲಿ-ಹಸಿರು, ನೀಲಿ-ನೇರಳೆ, ಕೆಂಪು-ನೇರಳೆ ಸಂಯೋಜನೆ ಫಲಿತಾಂಶವನ್ನು ಪೂರಕ ವರ್ಣಗಳು. ಪ್ರಾಥಮಿಕ ಮೂರು ಬಣ್ಣಗಳನ್ನು ಸಮನಾಗಿ ಬೆರೆಸಿದರೆ, ಬೂದು ಬಣ್ಣ ಪಡೆಯಬಹುದು. ಕಪ್ಪು, ಬಿಳಿ, ಬೂದು ಬಣ್ಣಗಳನ್ನು ನೈಸರ್ಗಿಕ ವರ್ಣಗಳು ಎನ್ನುತ್ತಾರೆ.

ಯಾವುದೇ ವರ್ಣಕ್ಕೆ ಬಿಳಿ ಬೆರೆಸಿದಂತೆಲ್ಲ ಅದರ ಉಜ್ವಲತೆ ಕಡಿಮೆಯಾಗಿ ಅದು ಪಡೆಯುವ ವಿವಿಧ ಸ್ತರಗಳ ವರ್ಣವನ್ನು ನಸುಛಾಯೆ ಎಂದು ಗುರುತಿಸಬಹುದು. ಇದರಂತೆ ಯಾವುದೇ ವರ್ಣಕ್ಕೆ ಕಪ್ಪು ಬೆರೆಸಿದಂತೆಲ್ಲಾ ವರ್ಣ ಮಸುಕಾಗುತ್ತ, ಅದು ದಟ್ಟ ಕಪ್ಪುಛಾಯೆ ಪಡೆಯುವುದು.

ವರ್ಣಗಳು ಮನುಷ್ಯನ ಮನದಲ್ಲಿ ಮೂಡಿಸುವ ಭಾವನೆ ಆಧರಿಸಿ ಕೆಂಪು, ಹಳದಿ, ನೇರಳೆ, ಕಂದು, ಕಿತ್ತಳೆ ವರ್ಣಗಳನ್ನು ಶಾಖ ಸೂಚಕ, ಬೆಚ್ಚಗಿನ, ಕಾವುಳ್ಳ ಎಂದು ಗುರುತಿಸುತ್ತಾರೆ. ಇದೇ ರೀತಿ ನೀಲಿ, ಹಸಿರು, ಬೂದು, ನಾವಿಕ ನೀಲಿ, ಕಪ್ಪು ವರ್ಣಗಳನ್ನು ಶಾಂತ, ತಂಪು ಎಂದು ಕಂಡುಕೊಳ್ಳುತ್ತಾರೆ.

ಸಾಮರಸ್ಯ ಇರುವ ಪ್ರಮುಖ ವರ್ಣಗಳ ಜೋಡಿ ಸಂಬಂಧವನ್ನು ಹಾಗೂ ಅವುಗಳ ಉಪಯೋಗವನ್ನು ನಾಲ್ಕು ಗುಂಪುಗಳಾಗಿ ಗುರುತಿಸಬಹುದು.

ಮೊದಲನೆಯದಾಗಿ : ಹಸಿರು-ಹಳದಿ ವರ್ಣಗಳ ಜಂಟಿ ಉಪಯೋಗವನ್ನು ಸಮಾನ ವರ್ಣಗಳ ಸಾಮರಸ್ಯ ಎನ್ನುವರು. ಇವು ಕ್ರಮೇಣ ಹೊಂದಿಕೊಳ್ಳುವಂತಹ ವರ್ಣಗಳು. ಇದರಂತೆ ಯಾವುದೇ ಒಂದು ಬಣ್ಣದ ವಿವಿಧ ಗಾಢವಾದ ಹಾಗೂ ಹಗುರಾದ ಛಾಯೆಗಳ ಉಪಯೋಗವನ್ನು 'ಏಕರೂಪ ವರ್ಣಗಳ ಸಾಮರಸ್ಯ' ಎನ್ನುವರು.

ಇದೇ ರೀತಿ ವೈರುಧ್ಯವಿರುವ ಬಣ್ಣಗಳಾದ ಹಸಿರು-ಹಳದಿ, ಕೆಂಪು-ನೀಲಿ, ನೇರಳೆ-ನೀಲಿ, ಹಳದಿ-ಕೆಂಪು ವರ್ಣಗಳನ್ನು ಜಂಟಿಯಾಗಿ ಉಪಯೋಗಿಸಿದಾಗ 'ಪೂರಕ ವರ್ಣಗಳ ಸಾಮರಸ್ಯ' ಅಥವಾ 'ವೈರುಧ್ಯ ಸಾಮರಸ್ಯ' ಎನ್ನುತ್ತಾರೆ.

ಹಳದಿ-ತಿಳಿನೀಲಿ ಬಣ್ಣದ ಜಂಟೀ ಬಳಕೆಯನ್ನು 'ಪ್ರಬಲ ಪ್ರಧಾನ ವರ್ಣಗಳ ಸಾಮರಸ್ಯ' ಎನ್ನುತ್ತಾರೆ. ಇಲ್ಲಿ ಹಲವಾರು ವಿಧದ ಕಪ್ಪುಛಾಯೆ ಹಾಗೂ ಬಿಳಿಛಾಯೆಯ ವರ್ಣಗಳನ್ನು ಅನುಕ್ರಮವಾಗಿ ಬಳಸಿ, ಪ್ರಬಲ ವರ್ಣ ಎದ್ದು ಕಾಣುವಂತೆ ಶ್ರಮಿಸಲಾಗುವುದು. ಕೆಲವೊಮ್ಮೆ ಇದು ಕಣ್ಣಿಗೆ ರಾಚುವಂತೆ ತೋರುವುದು. ಇವುಗಳ ಜೊತೆಗೆ ವರ್ಣಸಾಮರಸ್ಯಕ್ಕೆ ಧಕ್ಕೆ ತರದಂತೆ, ಸಹಜ ವರ್ಣಗಳಾದ ಕಪ್ಪು, ಬಿಳಿ, ಬೂದು ವರ್ಣಗಳನ್ನು ಸಹ ಬಳಸಬಹುದು.

ತಾಂತ್ರಿಕವಾಗಿ ಕಪ್ಪು, ಬಿಳುಪು ವರ್ಣಗಳೇ ಅಲ್ಲ. ಕಪ್ಪು ತನ್ನಲ್ಲಿ ಎಲ್ಲ ವರ್ಣಗಳನ್ನು ಒಳಗೊಂಡಿದೆ. ಬಿಳಿ ಯಾವುದೇ ವರ್ಣ ಹೊಂದಿಲ್ಲ. ಹೀಗಾಗಿ ಕಪ್ಪು ವರ್ಣದ ಜೊತೆಗೆ ಯಾವುದೇ ಇತರ ವರ್ಣ ಬಳಸಿದಾಗ, ಇತರ ವರ್ಣದ ಪರಿಣಾಮ ಮಸುಕಾಗುವುದು. ಆದರೆ ಬಿಳಿಯದರ ಜೊತೆಗೆ ಉಪಯೋಗಿಸಿದಾಗ ಅದರ ವರ್ಣಪರಿಣಾಮ ವೃದ್ಧಿಸುವುದು. ಕಪ್ಪು ಸೌಮ್ಯತೆಯ ಸಂಕೇತ. ಕೆಲವೊಮ್ಮೆ ನಾಟಕೀಯ ಪರಿಣಾಮ ಬೀರಬಲ್ಲದು. ಇದು ಇತರ ಎಲ್ಲ ವರ್ಣಗಳ ಜೊತೆ ಸರಿಯಾಗಿ ಹೊಂದಿಕೊಳ್ಳಬಲ್ಲುದು. ಆದರೆ ಬಿಳುಪು ಪರಿಶುದ್ಧತೆಯ, ಸರಳತೆಯ ಹಾಗೂ ಮುಗ್ಧತೆಯ ಸಂಕೇತ. ಆದ್ದರಿಂದಲೇ ಎಳೆಯ ಮಕ್ಕಳಿಗೆ ಈ ವರ್ಣದ ತೊಡುಗೆ ಶೋಭಿಸುವುದು.

(ಚಿತ್ರ ೨)'ಮಂಗಳಗೌರಿ' ರಂಗಭೂಮಿ ಪ್ರೇರಣೆ

ಇನ್ನು ಯಾವುದೇ ವ್ಯಕ್ತಿಗೆ ವಸ್ತ್ರಗಳ ಆಯ್ಕೆ ಮಾಡುವಾಗ ಆ ವ್ಯಕ್ತಿಯ ಅಥವಾ ಆ ಪಾತ್ರದ ತಲೆ ಕೂದಲಿನ ಬಣ್ಣ, ಕಣ್ಣುಗಳ ಬಣ್ಣ ಹಾಗೂ ಮೈಬಣ್ಣವನ್ನು ಗಮನಿಸಬೇಕು. ಇದರೊಂದಿಗೆ ವ್ಯಕ್ತಿಯ / ಕಲಾವಿದನ ವಯಸ್ಸು, ದೈಹಿಕ ವ್ಯಕ್ತಿತ್ವ ಹಾಗೂ ಸಮಾಜದಲ್ಲಿನ ಸ್ಥಾನಮಾನ ನಿರ್ಣಾಯಕ ಅಂಶವಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಅರಿಯಲೇಬೇಕಾದ ಸಾಮಾನ್ಯ ನಿಯಮಗಳೆಂದರೆ, ಸಾದಾ ವರ್ಣಗಳ ವಸ್ತ್ರಗಳು, ವ್ಯಕ್ತಿಯು ತೆಳ್ಳಗಾಗಿರುವಂತೆ ತೋರಿಸುವಲ್ಲಿ ನೆರವಾಗುವುವು. ಮೈಮೇಲೆ ಉದ್ದುದ್ದ ಪಟ್ಟಿಗಳಾಗಿ ಕಾಣುವ ವಸ್ತ್ರಗಳು ವ್ಯಕ್ತಿ/ಕಲಾವಿದ ಎತ್ತರವಾಗಿರುವಂತೆ ಕಾಣಲು ಸಹಾಯಕವಾಗುವುವು. ಮೈಮೇಲೆ ಅಡ್ಡಡ್ಡ ಗೆರೆಗಳಿರುವ ಹಾಗೂ ಇವು ಎರಡು ವರ್ಣಗಳನ್ನು ಅನುಕ್ರಮವಾಗಿ ಹೊಂದಿದ್ದರೆ ವ್ಯಕ್ತಿ/ಕಲಾವಿದ ಕುಬ್ಜನಂತೆ ತೋರುತ್ತಾನೆ. ದೊಡ್ಡದೊಡ್ಡ ಹೂವಿನ ಚಿತ್ತಾರ, ಸಕ್ಕೆಗಳಿರುವ ವಸ್ತ್ರಧಾರಿಗಳು ದಪ್ಪಗೆ, ದುಂಡಗಿರುವಂತೆ ಕಾಣಿಸುತ್ತಾರೆ. ಕೋಮಲವಾದ, ನಾಜೂಕಾದ ವಿನ್ಯಾಸದ ವಸ್ತ್ರ ಧರಿಸಿದರೆ ಪಾತ್ರಧಾರಿಗಳು ನಾಜೂಕಾಗಿ, ಕೋಮಲ ಸ್ವಭಾವದವರಾಗಿ ತೋರುತ್ತಾರೆ. ಸಾಮಾನ್ಯವಾಗಿ ಜನಪದದಲ್ಲಿ, ರಂಗಭೂಮಿ, ಸಿನಿಮಾ ಹಾಗೂ ಈಗ ಟಿ.ವಿ. ಮಾಧ್ಯಮಗಳಲ್ಲಿ ಸ್ವೀಕೃತವಾಗಿರುವ 'ವರ್ಣ ಮನೋವಿಜ್ಞಾನ' ಸಾರ ಈ ರೀತಿ ಇದೆ :

ಕೆಂಪು ವರ್ಣ ಪಾತ್ರಧಾರಿಯು ಆಕ್ರಮಣಕಾರಿ, ಪ್ರಚೋದನಕಾರಿ, ಹುರಿದುಂಬಿಸುವಂತಹ, ಕ್ರಿಯಾಶೀಲ, ಆನಂದ, ಉತ್ಸಾಹದಿಂದ ತುಂಬಿದ ವ್ಯಕ್ತಿತ್ವ ನಿರೂಪಿಸುವುದು. ಇದು ಮಕ್ಕಳಿಗೆ ಸೂಕ್ತವಾದ ವರ್ಣ.

ಹಳದಿ ವರ್ಣ ಸಂತೋಷ, ಉತ್ಸಾಹ, ಆನಂದ, ಬಿಸಿಲಿನಷ್ಟೇ ಹೊಳಪಾದ ಮುಖಭಾವ ನಿರೂಪಿಸಲು ನೆರವಾಗುತ್ತದೆ.

ನೀಲಿ ವರ್ಣ ಅಧಿಕಾರ ಮತ್ತು ಔಚಿತ್ಯ, ಸ್ಥಾನಮಾನ ಸಂಕೇತಿಸಲು ಸೂಕ್ತ ವರ್ಣ. ಇದನ್ನು ತಟಸ್ಥ ವರ್ಣ ಎನ್ನುತ್ತಾರೆ.

ಹಸಿರು ವರ್ಣ ಒಪ್ಪಂದ ಸೂಚಿಸುವ, ಕಣ್ಣಿಗೆ ಚೇತೋಹಾರಿ ಭಾವನೆ ನೀಡುವ, ವ್ಯಕ್ತಿ ತನ್ನ ವಿಚಾರದಲ್ಲಿ ಮುಳುಗಿ ಅಂತರಾತ್ಮ ಕೆದುಕುವಂತಹ ವಾತಾವರಣ ನಿರ್ಮಿಸುವಲ್ಲಿ ನೆರವಾಗುತ್ತದೆ.

ಕಿತ್ತಳೆ ವರ್ಣ ಆನಂದ, ಉಲ್ಲಾಸದ ಜೊತೆಗೆ ಭ್ರಮಾಲೋಕವನ್ನು ಸೃಷ್ಟಿಸುತ್ತದೆ. ಪಾತ್ರದ ಆಂತರಿಕ ಶಕ್ತಿ, ಚೈತನ್ಯ ನಿರೂಪಿಸುವಲ್ಲಿ ಸಹಾಯಕಾರಿ ಸಾಧನ.

ಸಾಮಾನ್ಯವಾಗಿ ವರ್ಣಗಳ ವಸ್ತ್ರಗಳ ಆಯ್ಕೆಯನ್ನು ಪಾತ್ರಗಳು ನಿರ್ಧರಿಸಿದರೂ, ನಿಜಜೀವನದಲ್ಲಿ ಕೆಲವು ತರಹದ ವ್ಯಕ್ತಿಗಳು ಕೆಲವು ಬಗೆಯ ವರ್ಣಗಳನ್ನು ತ್ಯಜಿಸಿದರೆ ಉತ್ತಮ ಎನ್ನುವ ಸಿದ್ಧಾಂತವಿದೆ. ಅದರಲ್ಲಿ ಪ್ರಮುಖವಾದವು ಇವು:

ಕಪ್ಪು ಮೈಬಣ್ಣದವರು ಹಳದಿ, ನೀಲಿ, ಬಿಳಿ ವರ್ಣದ ವಸ್ತ್ರಗಳನ್ನು ಧರಿಸದಿದ್ದರೆ ಉತ್ತಮ. ತಿಳು ಮೈಬಣ್ಣದವರು ಹಳದಿ, ಕಡು ಕೆಂಪು, ಕೆಂಪು-ನೀಲಿ, ಕಂದು ಹಾಗೂ ಯಾವುದೇ ಪ್ರಖರ ವರ್ಣಗಳನ್ನು ಬಳಸದಿದ್ದರೆ ಉತ್ತಮ. ಸಾದುಗಪ್ಪು ಅಥವಾ ಕಂದು ಮೈ ಬಣ್ಣದವರು ಕೆಂಪು, ಕಿತ್ತಳೆ, ಹಳದಿ, ಕೆಂಪು-ನೀಲಿ, ಕಂದು, ಕಡು ಗುಲಾಬಿ, ನಸು ಗುಲಾಬಿ, ಬಿಳಿ ವರ್ಣ ತ್ಯಜಿಸಿದರೆ ವಿಹಿತ. ಪೇಲವವಾದ ತಿಳಿ ಮೈ ಬಣ್ಣದವರು, ಅದರೆ ಬಿಳಿ ಕೂದಲಾದವರು, ವಯಸ್ಸಾದವರು ಕಂದು, ನೀಲಿ, ಹಾಗೂ ಬೇಸರ ಮೂಡಿಸುವಂತಹ ಮುಖಕರ ವೈರುಧ್ಯ ವರ್ಣಗಳನ್ನು ದೂರವಿಡುವುದೇ ವಿಹಿತ.

ಇಂದು 'ಒಳಾಂಗಣ ಶೃಂಗಾರ' ಗಹನ ಅಭ್ಯಾಸದ ವಿಷಯ. ಇದರಲ್ಲಿ ಮನೆಯ, ಆಫೀಸಿನ ಗೋಡೆಗಳಿಗೆ ಬಳಸಲಾಗುವ ಬಣ್ಣ, ಪರದೆಗಳ ವರ್ಣ, ಅವು ಹುಟ್ಟಿಸುವ ವಾತಾವರಣ ಅಲ್ಲಿ ಬರುವ ಜನರ ಮನಸ್ಸಿನ ಮೇಲೆ ಆಗುವ ಮೊದಲ ಪರಿಣಾಮ ಕುರಿತು ಗಂಭೀರವಾಗಿ ಚಿಂತಿಸಿ ಕೆಲವು ತತ್ವಗಳನ್ನು ರೂಪಿಸಲಾಗಿದೆ. ಕಟ್ಟಡದ ಒಳಗೆ ತೂರಿಬರುತ್ತಿರುವ ಸಹಜ ಬೆಳಕು, ಒಳಗಡೆ ಲಭ್ಯವಿರುವ ಕೃತ್ರಿಮ ಲೈಟುಗಳು ಹಾಗೂ ಅಲ್ಲಿರುವ ಮೇಜು, ಕುರ್ಚಿ, ಸೋಫಾ, ಮಂಚ, ಟಿ.ವಿ. ಇಂಥ ಪರಿಕರಗಳನ್ನು ಗಮನದಲ್ಲಿಟ್ಟುಕೊಂಡು ಅವುಗಳನ್ನು ಬಳಸಿ ಇರುವ ಸ್ಥಳದ ಆಯಾಮ ಹೆಚ್ಚಿಗೆ ಕಾಣುವಂತೆ, ಅಲ್ಲಿಗೆ ಬರುವ ಗ್ರಾಹಕರು ಸಮ್ಮೋಹನಕ್ಕೆ ಒಳಗಾಗುವಂತೆ ಕಾಳಜಿ

(ಚಿತ್ರ ೩)'ವೀರ ವಿಕ್ರಮ'- ಅರಬ್ ಶೈಲಿ

ಪಡಿಸಲಾಗುತ್ತದೆ. ಇದನ್ನು ಸಾಧಿಸಲು ಕೊಠಡಿಯ ಗೋಡೆಗಳಿಗೆ ಶೀತಲ ವರ್ಣಗಳನ್ನು ಲೇಪಿಸಿದಾಗ ಕೊಠಡಿ ಇರುವುದಕ್ಕಿಂತ ದೊಡ್ಡದಾಗಿಯೂ, ಶಾಖ ಸೂಚಕ ವರ್ಣಗಳನ್ನು ಬಳಸಿದಾಗ ಅದು ಇರುವುದಕ್ಕಿಂತ ಚಿಕ್ಕದಾಗಿಯೂ ಕಾಣುತ್ತದೆ.

ಇಂಥದೇ ತಂತ್ರ ನಾಟಕಗಳಲ್ಲಿ ಹಗಲು - ಸೂರ್ಯೋದಯ ಸೂಚಿಸಲು ಕಿತ್ತಳೆ, ಕೆಂಪು ವರ್ಣ, ಹೊಂಬಣ್ಣ ಬಳಸಿದರೆ ಸಂಜೆ ಮತ್ತು ರಾತ್ರಿ ರೂಪಿಸಲು ನೀಲಿ, ಕಪ್ಪು ವರ್ಣದ ತೆರೆಗಳನ್ನು ಬಳಸಿ ನಿರೂಪಿಸುತ್ತಾರೆ. ಕಲ್ಪನೆ, ಕನಸು, ಕೈಲಾಸ, ಸ್ವರ್ಗ ಇವುಗಳಿಗೆ ಧೂಪ, ಹಿಮ, ಹೊಗೆ ಇವುಗಳನ್ನು ಬಳಸಿದರೆ ಸಮುದ್ರ, ಪಾತಾಳದ ನಿರೂಪಣೆಗೆ ನೀಲಿ ವರ್ಣದ ಬೆಳಕು ನೆರವಿಗೆ ಬರುತ್ತದೆ. ಹೀಗಾದಾಗ ಪಾತ್ರಧಾರಿಗಳ ಎಲ್ಲ ಬಿಳಿವಸ್ತ್ರಗಳು ನೀಲಿಛಾಯೆ ಪಡೆದು ಸಹಜತೆಯನ್ನು ಹಾಗೂ ಸುಲಭದಲ್ಲಿ ಪ್ರೇಕ್ಷಕರ ಸ್ವೀಕೃತಿಯನ್ನು ಕೊಡಿಸಿಕೊಡುತ್ತವೆ. ಇದೇ ರೀತಿ, ಕೇವಲ ಕೆಂಪು ವರ್ಣ ಬಳಸಿ ವಿವಿಧ ನಾಟಕೀಯ ಪರಿಣಾಮವನ್ನು ಸಾಧಿಸಲಾಗುತ್ತದೆ.

ಹೀಗೆ ಇಷ್ಟೆಲ್ಲ ವಿಪುಲ ವರ್ಣಸಿದ್ಧಾಂತ, ಸೂತ್ರ, ಸಂಶೋಧಿತ ಸತ್ಯಗಳು ಲಭ್ಯವಿದ್ದರೂ, ಕನ್ನಡ ಚಿತ್ರಗಳ ನಿರ್ಮಾಣದಲ್ಲಿ ವಸ್ತ್ರವಿನ್ಯಾಸದ ಬಳಕೆಯ ವೈಖರಿ, ಪ್ರಗತಿಯತ್ತ ನೋಟ ಬೀರಿದರೆ, ನಮಗೆ ನಮ್ಮ ನೆಲೆ ಹಾಗೂ ನಮ್ಮ ಕನ್ನಡ ಚಿತ್ರಗಳಲ್ಲಿನ ನಮ್ಮತನದ ಗಟ್ಟಿತನವೂ ಅರಿವಾಗುವುದು. ಈ ದೃಷ್ಟಿಯಿಂದಲಾದರೂ ಚಲನಚಿತ್ರ ಇತಿಹಾಸ ಕೆದಕಲೇಬೇಕು.

ಈಗ ಕೆಲವು ವರ್ಷಗಳ ಹಿಂದೆ ಭೂಗತ ಲೋಕದ ಅಪರಾಧಿಯೊಬ್ಬ ಎದುರಾಳಿ ತಂಡದ ಮೇಲೆ ಕಣ್ಣಿಟ್ಟು, ಅವರು ನಾಲ್ಕು ಜನ ಇಸ್ಪೀಟಾಡುತ್ತಿರುವಾಗ ಅವರ ಮೇಲೆ ಎರಗಿ ಮಚ್ಚಿನಿಂದ ಕೊಚ್ಚಿಹಾಕಿ, ಮೂವರನ್ನು ಅಲ್ಲೇ ಸಾಯಿಸಿದ. ಆದರೆ ಉಳಿದೊಬ್ಬನಿಗೆ ಮಾತ್ರ ಜೀವದಾನ ನೀಡಿ ಬಿಟ್ಟುಬಿಟ್ಟ. ಕಾರಣವೆಂದರೆ ಆ ವ್ಯಕ್ತಿ ಆಗ ಕಪ್ಪು ಹಾಗೂ ಕಾವಿ ವಸ್ತ್ರ ತೊಟ್ಟು, ಮಾಲೆ ಧರಿಸಿ, ಅಯ್ಯಪ್ಪನಿಗೆ ಶಬರಿಮಲೈ ಯಾತ್ರೆಯ ಹರಕೆ ಹೊತ್ತಿದ್ದ. ಈ ಘಟನೆ ಒಬ್ಬ ನಿರ್ದಯಿ ಕೊಲೆಗಾರನ ಮನದಲ್ಲೂ ಮಾನವೀಯ ದಯೆ, ಅನುಕಂಪ, ಭಕ್ತಿಭಾವ ಮೂಡಿಸಿದ್ದು ಅವನ ಎದುರಾಳಿ ತೊಟ್ಟ ಧಾರ್ಮಿಕ ವೇಷ-ಭೂಷೆಯಿಂದ ಎಂದು ಅವರ ಮಹತ್ವವನ್ನು ಸಾರುತ್ತದೆ. ಇಂಥ ಘಟನೆ, ಸನ್ನಿವೇಶಗಳೇ ಚಿತ್ರಗಳ ನಿರ್ದೇಶಕರಿಗೆ ಚಿಂತನೆಯ ಗ್ರಾಸವಾಗಬೇಕಿತ್ತು. ಹಾಗಾಗಿದ್ದರೆ ಚಿತ್ರನಿರ್ಮಾಣದ ಸಮಗ್ರ ಅಂಶಗಳನ್ನೂ ಸೃಜನಾತ್ಮಕವಾಗಿ ದುಡಿಸಿಕೊಂಡ ಖ್ಯಾತಿಗೆ ಪಾತ್ರರಾಗಬಹುದಿತ್ತು. ಆದರೆ ಇಂದಿಗೂ ಚಲನಚಿತ್ರಗಳಲ್ಲಿ ವಸ್ತ್ರವಿನ್ಯಾಸ ಗೌಣವಿಷಯವಾಗಿ ಉಳಿದಿರುವುದು ಖೇದಕರ.

ಒಂದು ಚಲನಚಿತ್ರ ನೋಡಿದ ಪ್ರೇಕ್ಷಕ, ನಂತರ ಅದರ ಬಗ್ಗೆ ಯಾವುದೇ ಟೀಕೆ, ಟಿಪ್ಪಣಿ, ವಿಮರ್ಶೆ ಮಾಡದೆ ನೆಮ್ಮದಿ ಭಾವ ತೋರಿದರೆ ಆ ಚಿತ್ರದ ಎಲ್ಲ ವಿಭಾಗಗಳು ಸಮರ್ಪಕವಾಗಿವೆ ಎಂದೇ ಅರ್ಥ. ಇದರ ಶ್ರೇಯಸ್ಸು ಆಯಾ ವಿಭಾಗದ ಪರಿಣಿತರಿಗೆ ಸೇರುವುದು. ಆದರೆ ಚಿತ್ರದ ಯಾವುದೇ ಒಂದು ದೋಷ ಮುಖಕ್ಕೆ ರಾಚುವಂತಿದ್ದರೆ ಆ ಅಪಶ್ರೇಯಕ್ಕೆ ನಿರ್ದೇಶಕನೇ ಹೊಣೆಗಾರನಾಗುತ್ತಾನೆ. ಏಕೆಂದರೆ ಆತನ ಮಾರ್ಗದರ್ಶನ ಹಾಗೂ ಮೂಗಿನ ನೇರಕ್ಕೆ ಎಲ್ಲ ನಿರ್ಣಯಗಳೂ ಬದ್ಧ. ಹೀಗಾಗಿ ಕನ್ನಡ ಚಿತ್ರಗಳ ವಸ್ತ್ರವಿನ್ಯಾಸದ ಚರ್ಚೆಯ ಸಮಯದಲ್ಲಿ ವಸ್ತ್ರವಿನ್ಯಾಸಕಾರನಿಗಿಂತಲೂ ಆಯಾ ಚಿತ್ರಗಳ ನಿರ್ದೇಶಕರ ನಾಮದಿಂದಲೇ ಅವರ ಕೊಡುಗೆ ಗುರುತಿಸುವುದು ಅವಶ್ಯ.



(ಚಿತ್ರ ೪)'ಮುದುಡಿದ ತಾವರೆ ಅರಳಿತು'- ಖವ್ವಾಲಿ ಗಾಯಕ

ಕನ್ನಡ ಟಾಕಿ ಚಿತ್ರಗಳ ನಿರ್ಮಾಣದ ಆರಂಭ ಕಾಲದಲ್ಲಿ, ಅಂದರೆ ೧೯೪೩ರಲ್ಲಿ, ತಯಾರಾದ ಪೌರಾಣಿಕ ಚಿತ್ರ 'ಕೃಷ್ಣ ಸುಧಾಮ'.

ಇದು ದ್ವಾಪರಯುಗದ ನಿರೂಪಣೆಯ ಚಿತ್ರ. ಇದರ ಒಂದು ಸನ್ನಿವೇಶದಲ್ಲಿ ಅಕ್ಕಪಕ್ಕದ ಗೃಹಿಣಿಯರು ಮಾತನಾಡುವಾಗ, ಇನ್ನೊಂದು ಸ್ತ್ರೀಪಾತ್ರ ತಲೆ ನುಣ್ಣಗೆ ಬೋಳಿಸಿಕೊಂಡು ಕೆಂಪು ಸೀರೆ ಉಟ್ಟು ಪ್ರವೇಶಿಸಿ ಅಂದಿನ ಕಾಲದ ಮಹಿಳೆಯರ ನಾಜೂಕು, ನಖರಾಗಳ ಬಗ್ಗೆ ಟೀಕೆ ಮಾಡುತ್ತದೆ. ಈ ಚಿತ್ರ ಬಿಡುಗಡೆಯಾದಾಗ 'ದ್ವಾಪರ ಯುಗದಲ್ಲೂ ಬ್ರಾಹ್ಮಣ ವಿಧವೆಯರು ಮುಂಡನ ಮಾಡಿಸಿಕೊಳ್ಳುವ ಪದ್ಧತಿ ಇತ್ತೇ? ಇದು ನಿರ್ದೇಶಕರ ಅಜ್ಞಾನವೋ ಅಥವಾ ಹುಚ್ಚು ಕಲ್ಪನೆಯೋ ?' ಎಂದು ಪತ್ರಿಕೆಗಳಲ್ಲಿ ಚರ್ಚೆಯ ವಿಷಯವಾಯಿತು. ಯಾವುದೇ ಪಾತ್ರದ ಚಿತ್ರಣವನ್ನು ಲಘುವಾಗಿ ಪರಿಗಣಿಸಿದರೆ ಅದರ ಪರಿಣಾಮ ಗಂಭೀರವಾಗಬಹುದು ಎಂಬುದಕ್ಕೆ ಈ ಚಿತ್ರ ಸಾಕ್ಷಿ. ಇದರ ನಿರ್ದೇಶಕರು ಕೆ.ಸುಬ್ರಮಣ್ಯಂ.

ಯಾವುದೇ ಚಿತ್ರ ನೋಡಿದರೂ ಅದು ಆಯಾ ದೇಶ, ಕಾಲ, ಸಂಸ್ಕೃತಿ, ಸಂದರ್ಭ, ಸಾಮಾಜಿಕ ಸ್ತರ, ಪಾತ್ರದ ನಡವಳಿಕೆ ಇವುಗಳಿಗೆ ಕನ್ನಡಿ ಹಿಡಿದಂತೆ ನಿರೂಪಿಸಲು ನೆರವಾಗುವ ಪ್ರಮುಖ ಸಾಧನ ಪಾತ್ರಗಳ ವಸ್ತ್ರವಿನ್ಯಾಸ. ಅಂದರೆ ಪಾತ್ರಧಾರಿಗಳು ತೊಡುವ ವೇಷ-ಭೂಷೆ, ಆಭರಣ ಜೊತೆಗೆ ಆಯಾ ಪರಿಸರದಲ್ಲಿ ಬಳಸಲಾದ ವಸ್ತ್ರಪರಿಕರ ಅಂದರೆ ಬಾಗಿಲು, ಕಿಟಕಿಯ ಪರದೆಗಳು ಹಾಗೂ ಅವುಗಳ ವರ್ಣಗಳ ಆಯ್ಕೆ.

ಕನ್ನಡ ಚಲನಚಿತ್ರರಂಗಕ್ಕೆ ವೃತ್ತಿನಿರತ ರಂಗಭೂಮಿ ನೀಡಿದ ಯೋಗದಾನವನ್ನು ಅಳೆಯುವುದು ಪ್ರಯಾಸಕರ. ಅದು ಕೇವಲ ಕಥಾವಸ್ತು, ನುರಿತ ಕಲಾವಿದರನ್ನು ಮಾತ್ರ ಒದಗಿಸಲಿಲ್ಲ, ಅದರೊಂದಿಗೆ ವರ್ಷಗಟ್ಟಲೆ ಶ್ರಮಪಟ್ಟು ದೇವಾಲಯ ಶಿಲ್ಪಗಳ ಅಧ್ಯಯನ ಮಾಡಿ, ಹಲವಾರು ವರ್ಣರಂಜಿತ ಚಿತ್ರಗಳನ್ನು ಸಂಗ್ರಹಿಸಿ, ಸಾಹಿತ್ಯ ಕೃತಿಗಳನ್ನು ಜಾಲಾಡಿ, ಆಯಾ ಕಥಾವಸ್ತುವಿಗೆ ಸಂಬಂಧಪಟ್ಟ ವಸ್ತ್ರ, ವೇಷ-ಭೂಷೆ, ಆಭರಣಗಳನ್ನು ತಯಾರಿಸಿದ್ದರು. ಇದು ನಾಟಕದ ಲೈಟುಗಳ ಮುಂದೆ ಜಗಮಗಿಸುವ, ಕಣ್ಣು ಕುಕ್ಕುವ ವರ್ಣಮಯ ರಾಜಮಹಾರಾಜರ ವೇಷ-ಭೂಷೆ, ಅರಮನೆಯ ದೃಶ್ಯವಿರಬಹುದು ಅಥವಾ ಕಾಡಿನಲ್ಲಿ ಬದುಕುವ ಪರ್ಣಕುಟೀರದಲ್ಲಿನ ಸಾಧುಸಂತರ ಸಾತ್ವಿಕ ಜೀವನದ ನಿರೂಪಣೆಗೆ ಬೇಕಾದ ಸರಳ ಉಡುಪುಗಳಿರಬಹುದು. ಸಮಗ್ರತೆ, ಸಮರ್ಪಕತೆ ಅವರ ಗುರಿಯಾಗಿತ್ತು.[೧]

ಇನ್ನೂ ವಿಶೇಷವೆಂದರೆ ಈ ನಾಟಕಗಳು ಕರ್ನಾಟಕದ ಮೂಲೆಮೂಲೆಯಲ್ಲಿ, ರಾಜರ ಅರಮನೆಯಲ್ಲಿ ಆಹ್ವಾನಿತರಿಗಾಗಿ ಪ್ರದರ್ಶನಗಳಿಂದ ಹಿಡಿದು, ಪ್ರತಿ ಗ್ರಾಮದ ಬಡ ರೈತನ ಕಣ್ಮನ ತಣಿಸಿ, ಒಂದು ರೀತಿಯಲ್ಲಿ 'ಮಾನಸಿಕ ಒಪ್ಪಿಗೆಯ ಮುದ್ರೆ' ಪಡೆದಿದ್ದವು. ಅಲ್ಲಿ ಯಾವುದೇ ಟೀಕೆ-ಆಕ್ಷೇಪಣೆಗೆ ಅವಕಾಶವೇ ಇರಲಿಲ್ಲ. ಇಂಥ 'ಸುಲಿದ ಬಾಳೆಯ ಹಣ್ಣಿನಂದದಿ' ಇರುವ ಈ ವಸ್ತ್ರವಿನ್ಯಾಸವನ್ನು ಆರಂಭದ ಚಿತ್ರಗಳಲ್ಲಿ ಯಾವ ಸಂಕೋಚ, ಅನುಮಾನವಿಲ್ಲದೇ ಬಳಸಿಕೊಂಡರು. ಹಲವಾರು ಸಂದರ್ಭಗಳಲ್ಲಿ ನಾಟಕದ ನಿರ್ದೇಶಕರೇ ಸಿನಿಮಾ ನಿರ್ದೇಶಕರೂ, ನಾಟಕದ ಮೂಲ ಪಾತ್ರಧಾರಿಗಳೇ ಚಿತ್ರದಲ್ಲೂ ಪಾತ್ರಧಾರಿಗಳೂ ಆಗಿದ್ದುದು ಒಂದು ರೀತಿಯ ವರವಾಯಿತು. ಹೀಗಾಗಿ ಈ ಪ್ರಕ್ರಿಯೆ ಸಹಜವಾಗಿಯೇ ಇತ್ತು. ಈ ಪರಂಪರೆಯಲ್ಲಿ ಬಂದ ಚಿತ್ರಗಳೆಂದರೆ ೧೯೩೪ರಿಂದ ಆರಂಭವಾದ 'ಸತಿ ಸುಲೋಚನಾ', 'ಭಕ್ತ ಧ್ರುವ', 'ಮಹಾತ್ಮಾ ಕಬೀರ್', 'ಪುರಂದರ ದಾಸ', 'ಭಕ್ತ ರಾಮದಾಸ', 'ಭಕ್ತ ಕುಂಬಾರ', 'ಬೇಡರ ಕಣ್ಣಪ್ಪ', 'ಶಿವಶರಣೆ ನಂಬಿಯಕ್ಕ' ಈ ಕೆಲವನ್ನು ಹೆಸರಿಸಬಹುದು.

ಕನ್ನಡ ಚಿತ್ರರಂಗ ಆರಂಭ ಕಾಲದಲ್ಲಿ ಎಂದೂ ಸಂಪ್ರದಾಯಕ್ಕೆ ಶರಣು ಹೋಗಲಿಲ್ಲ. ಒಂದೇ ಮಾದರಿಯ ಭಕ್ತಿ ಪ್ರಧಾನ, ಪೌರಾಣಿಕ ಚಿತ್ರಗಳನ್ನು ನಿರ್ಮಿಸದೆ, ಮೊದಲ ಟಾಕಿಚಿತ್ರ ತಯಾರಾದ ಎರಡೇ ವರ್ಷದಲ್ಲಿ, ಅಂದರೆ ೧೯೩೬ರಲ್ಲೇ ದಕ್ಷಿಣ ಭಾರತದ

೧. ಕನ್ನಡ ವೃತ್ತಿರಂಗಭೂಮಿಗೆ ಪಾರ್ಸಿ ನಾಟಕ ಕಂಪನಿಗಳ ಪ್ರಭಾವವಿತ್ತು. ನಮ್ಮ ಬಹುತೇಕ ಪೌರಾಣಿಕ ಪಾತ್ರಗಳಿಗೆ ಬಳಕೆಯಾಗುವ ವಸ್ತ್ರವಿನ್ಯಾಸಕ್ಕೆ ಪಾರ್ಸಿ ರಂಗಭೂಮಿಯ ಹಾಗೂ ಕಲಾವಿದ ರವಿವರ್ಮನ ಕಲಾಕೃತಿಗಳು ಸ್ಫೂರ್ತಿಯಾಗಿವೆ. ನಮ್ಮ ರಾಮ, ಕೃಷ್ಣ, ರಾಕ್ಷಸರ ಮುಖಗಳೂ ಸಹ ಅಂಥ ಪ್ರೇರಣೆಯಿಂದ ಬಂದವೇ. ಹೀಗೆ ಪಾತ್ರಗಳಿಗೆ ಒಂದು ಗೊತ್ತಾದ ರೂಪುರೇಷೆ ಪ್ರಾಪ್ತವಾಗಿಬಿಟ್ಟಿದೆ. - ಸಂ.

(ಚಿತ್ರ ೫) 'ದೂರದ ಬೆಟ್ಟ' - ಕಾಮನ ಹಬ್ಬದ ಸಡಗರ

ಮೊಟ್ಟಮೊದಲ ಸಾಮಾಜಿಕ ಚಿತ್ರ 'ಸಂಸಾರ ನೌಕ' ನಿರ್ಮಿಸಿದ ಹೆಗ್ಗಳಿಕೆಯನ್ನು ಕನ್ನಡನಾಡು ಪಡೆಯಿತು. ಇಲ್ಲಿಯ ಪಾತ್ರಗಳ ಪೋಷಣೆ, ಚಿತ್ರಣ, ನಿರೂಪಣೆ ನಾಟಕಕರ್ತೃ ಸಿನಿಮಾ ನಿರ್ದೇಶಕ ಹೆಚ್.ಎಲ್.ಎನ್.ಸಿಂಹರ ಕಲ್ಪನೆಯಿಂದ ಮೂಡಿಬಂದು ಈ ಪರಂಪರೆಗೆ ಭದ್ರ ಅಡಿಪಾಯ ಹಾಕಿತು. ಇಂಥದೇ ಇನ್ನೊಂದು ಕೊಡುಗೆ ಅ.ನ.ಕೃ. ಲೇಖನಿಯಿಂದ ೧೯೪೨ರಲ್ಲಿ ಮೂಡಿಬಂದ 'ಜೀವನ ನಾಟಕ'. ಇವು ಪಾತ್ರಚಿತ್ರಣದಲ್ಲಿ ಗುರುತಿಸಬೇಕಾದ ಘಟ್ಟ.

ನಾಟಕದಲ್ಲಿ ದೃಶ್ಯಕಲ್ಪನೆಗೆ ಇರುವ ಇತಿ-ಮಿತಿ ಅರಿತು ಈಗ ಸಿನಿಮಾ ತಂತ್ರದ ಸಾಧ್ಯತೆಗಳನ್ನು ದುಡಿಸಿಕೊಳ್ಳಲು ವಸ್ತುವಿನ ಹುಡುಕಾಟ ಆರಂಭವಾಯಿತು. ಭಕ್ತಿರಸ ಪ್ರಧಾನ ಧಾರ್ಮಿಕ ವಸ್ತುವಿನ ಚಿತ್ರಗಳಲ್ಲಿ ಮೋಹಕತೆ, ಮಾದಕತೆ, ಲೈಂಗಿಕತೆಗೆ ಆಸ್ಪದವೇ ಇರಲಿಲ್ಲ. ಇದ್ದರೂ ಅದು ಗಾಂಭೀರ್ಯದ ಎಲ್ಲೆ ಮೀರಿರಲಿಲ್ಲ. ಈ ಇಕ್ಕಟ್ಟಿಂದ ಹೊರಬರಲು ನೆರವಾದ ಕಥಾವಸ್ತು, ಜಾನಪದ.

ಸಿನಿಮಾ ಇರುವುದೇ ಒಂದು ಭ್ರಮಾಲೋಕ ಸೃಷ್ಟಿಸಲು. ಪ್ರೇಕ್ಷಕ ತನ್ನ ಕಷ್ಟಕಾರ್ಪಣ್ಯ ಮರೆತು ಮುದಗೊಳ್ಳಲಿ ಎಂಬ ಸಿದ್ಧಾಂತ ನಂಬಿದ ನಿರ್ದೇಶಕರು ಧರೆಗೆ ನಾಗಕನ್ನಿಕೆಯನ್ನೋ, ಜಗನ್ಮೋಹಿನಿಯನ್ನೋ ಇಳಿಸಿದರು. ಅವರು ತೊಟ್ಟ ಬಿಗಿ ಉಡುಪು ನಟಿಯರ ಅಂಗಸೌಷ್ಠವ ಎತ್ತಿತೋರಲು ನೆರವಾದರೆ, ಕೇಶಾಲಂಕಾರ, ರಹಸ್ಯಮಯ ವಾತಾವರಣ ನಿರ್ಮಿಸುವ ಬೆಳಕು-ಕತ್ತಲಿನ ಸಂಯೋಜನೆ, ಮನಕ್ಕೆ ಕಾಡುವಂತೆ ಸುಪ್ತವಾಗಿ ಮೊಳಗುವ ಸಂಗೀತದ ಅಲೆಗಳು ಜನರನ್ನು ಮೋಡಿ ಮಾಡಿದವು. ೧೯೫೧ರಲ್ಲಿ ತಯಾರಾದ 'ಜಗನ್ಮೋಹಿನಿ' ೨೫ ವಾರ ಪ್ರದರ್ಶನ ಕಾಣಲು ಹರಿಣಿ ಧರಿಸಿದ ವಸ್ತ್ರಗಳು ಹಾಗೂ ಅವರ ಅಭಿನಯ ಕಾರಣ ಎನ್ನಬಹುದು.

ಕನ್ನಡ ಚಿತ್ರರಂಗದ ಬೆಳವಣಿಗೆಯಲ್ಲಿ ಗುರುತಿಸಬೇಕಾದ ಇನ್ನೊಂದು ಪ್ರಮುಖ ಅಂಶ, ಕಥೆಯ ಹುಡುಕಾಟ. ಅದಕ್ಕಾಗಿ ಸಮುದ್ರಸೀಮೆ ದಾಟಿ ಮುಂದುವರಿದ ಪ್ರಯತ್ನಗಳು. ೧೯೫೩ರ 'ಜಲದುರ್ಗ' ಅಥವಾ 'ಮುಟ್ಟಿದ್ದೆಲ್ಲಾ ಚಿನ್ನ' ಕೇವಲ ಪಾಶ್ಚಿಮಾತ್ಯ ಸಾಹಿತ್ಯದ ತದ್ರೂಪ - ಅನುವಾದ ಆಗಿರದೆ ಇಲ್ಲಿಯ ಸಂಸ್ಕೃತಿ ಮತ್ತು ಪರಿಸರಕ್ಕೆ ಅಳವಡಿಸಿ ಕನ್ನಡದ ಕವಚ ತೊಡಿಸಿ ನಿರ್ಮಿಸಿದ ಚಿತ್ರಗಳು. ಇವು ನಿರ್ದೇಶಕನ ಸೃಜನಶೀಲತೆ ಸಾರ್ಥಕಪಡಿಸಿದ ಪ್ರಯತ್ನಗಳು.

ನಾಟಕರಂಗದ ಹಿಡಿತ ಚಿತ್ರಮಾಧ್ಯಮದ ಮೇಲೆ ಎಷ್ಟು ಬಿಗುವಾಗಿತ್ತೆಂಬುದನ್ನು ಖಚಿತಪಡಿಸಲೆಂಬಂತೆ ನಡೆದ ಬೆಳವಣಿಗೆ, ಜನಪ್ರಿಯ ನಾಟಕವಾಗಿದ್ದ ೧೯೩೫ರಲ್ಲಿ ಮೂರನೆ ಕನ್ನಡ ಚಿತ್ರವಾಗಿ ನಿರ್ಮಾಣವಾದ 'ಸದಾರಮೆ' ಮತ್ತೆ ೧೯೫೬ರಲ್ಲಿ ಪುನರ್‌ನಿರ್ಮಾಣವಾದ ಈ ಹಾಸ್ಯನಾಟಕದ ಕರ್ತೃ ಗುಬ್ಬಿ ವೀರಣ್ಣ. ನಾಟಕ ಹಾಗೂ ಎರಡೂ ಚಿತ್ರಗಳಲ್ಲಿ ಅವರು ಕಾಣಿಸಿಕೊಂಡದ್ದು ಒಂದು ವಿಶೇಷ. ಕರ್ನಾಟಕದಾದ್ಯಂತ ಜನಪ್ರಿಯವಾದ ಹಾಗೂ ತಲೆತಲಾಂತರದಿಂದ ಪ್ರೇಕ್ಷಕರ ಮನದಲ್ಲಿ ಅಚ್ಚುಮೂಡಿದ ಪಾತ್ರಗಳ ವೇಷ-ಭೂಷೆ ಬದಲಾಯಿಸಿ ಬೇರೆ ಅಪಹೇಳನಕ್ಕೆ ಗುರಿಯಾಗುವ ಸಾಹಸ ತೋರದೆ ಕ್ಷೇಮಕರ ಮಾರ್ಗವೆಂದು ಮೂರೂ ಚಿತ್ರಗಳಲ್ಲಿ ಪಾತ್ರಗಳ ವೇಷ -ಭೂಷೆಯ ಮೂಲ ಕಲ್ಪನೆಯನ್ನೇ ಉಳಿಸಿಕೊಳ್ಳಲಾಯಿತು. ಇದು ಯಾವ ಅಂಧಶ್ರದ್ಧೆ, ಅನುಕರಣೆಗೆ ಶರಣು ಹೋದದ್ದರ ಸಂಕೇತವಲ್ಲ. ಒಂದು ಮಾಧ್ಯಮದಲ್ಲಿ ಪರಿಪಕ್ವತೆ, ಸಂಪೂರ್ಣತೆ ಹಂತ ತಲುಪಿದ ನಂತರ ಅದರಲ್ಲಿ ಬದಲಾವಣೆಗಾಗಿ ಬದಲಾವಣೆ ತರಲು ಪ್ರಯತ್ನಿಸುವುದು ಕೇವಲ 'ಅಹಂ' ಸಂಕೇತವೆನಿಸಬಹುದು. ಇಂಥ ಅಪಾಯಕಾರಿ ಮಾರ್ಗವನ್ನು ಯಾರೂ ಅನುಸರಿಸಲಿಲ್ಲವೆಂಬುದೇ ವಿಶೇಷ ಸಾಧನೆ.

ನಾವು ಕೇವಲ ಚಲನಚಿತ್ರ ತಂತ್ರವನ್ನು ಪಶ್ಚಿಮದಿಂದ ಪಡೆಯಲಿಲ್ಲ. ಅವರು ರೂಪಿಸಿದ ಚಿತ್ರಗಳು, ಮಾಡಿದ ಚಿತ್ರಗಳು, ಪ್ರಯತ್ನಗಳು ನಮಗೂ ಆದರ್ಶಗಳಾದವು. ಅನುಕರಣೆಗೆ ಪ್ರೇರೇಪಿಸಿದವು. ೧೯೫೭ರಲ್ಲೇ ಕನ್ನಡೀಕರಿಸಿದ ಟಾರ್ಜಾನ್ ಚಿತ್ರ 'ರತ್ನಗಿರಿ ರಹಸ್ಯ' ಇದಕ್ಕೆ ಉತ್ತಮ ಉದಾಹರಣೆ. ಇಂಗ್ಲಿಷ್ ಚಿತ್ರಗಳ ಟಾರ್ಜಾನ್ ವೇಷ-ಭೂಷೆ ನಮ್ಮ ಇತಿ-ಮಿತಿಯಲ್ಲಿ ಪ್ರೇಕ್ಷಕನಿಗೆ ಹೊಸತನ್ನು ನೀಡಲು ಪ್ರಯತ್ನಿಸಿದ ಚಿತ್ರ.

೧೯೫೫ರವರೆಗೆ ಕಪ್ಪು-ಬಿಳುಪು ಚಿತ್ರಗಳೇ ತಯಾರಾದವು. ಅವುಗಳಲ್ಲಿ ಅದುವರೆಗೆ ಬಳಸಲಾದ ತಂತ್ರ ಅದರ ಇತಿ-ಮಿತಿಯ ಸಂಕ್ಷಿಪ್ತ ಉಲ್ಲೇಖ ಅಪೇಕ್ಷಣೀಯ.

ಅಂತಿಮವಾಗಿ ಚಿತ್ರದಲ್ಲಿ ಮೂಡುವ ಪರಿಣಾಮ ಕಪ್ಪು-ಬಿಳುಪು ಎರಡೇ ಛಾಯೆಗಳಾಗಿದ್ದರೂ ಪಾತ್ರಧಾರಿಗಳು ವೈವಿಧ್ಯಮಯ ವರ್ಣದ ವಸ್ತ್ರ ಧರಿಸುತ್ತಿದ್ದರು. ಚಿತ್ರಿತವಾಗುತ್ತಿರುವ ಪರಿಸರ-ಹಿನ್ನೆಲೆಯಲ್ಲಿ ಪಾತ್ರಗಳು ಕರಗಿಹೋಗದೇ ಪ್ರತ್ಯೇಕತೆ ಕಾಪಾಡಿಕೊಳ್ಳಲೆಂದು, ವರ್ಣವೈರುಧ್ಯದ ಪರಿಣಾಮ ನೀಡುವ ವಸ್ತ್ರಗಳನ್ನು ಬಳಸುತ್ತಿದ್ದರು. ನಿರ್ದೇಶಕ, ಕಲಾನಿರ್ದೇಶಕ, ಛಾಯಾಗ್ರಾಹಕ, ವಸ್ತ್ರ ವಿನ್ಯಾಸಕಾರ ಒಂದೆಡೆ ಕುಳಿತು, ಚರ್ಚಿಸಿ ನಿರ್ಣಯ ಕೈಗೊಳ್ಳುತ್ತಿದ್ದರು. ನಿರ್ಮಾಪಕ ಅದನ್ನು ಚಾಲನೆಗೆ ತರಲು ಅವಕಾಶ ಕಲ್ಪಿಸುತ್ತಿದ್ದ.

ಸ್ಟುಡಿಯೋ ಸಂಸ್ಕೃತಿ ಜಾರಿಯಲ್ಲಿ ಇರುವವರೆಗೂ ಈ ಪರಸ್ಪರ ವಿಚಾರ-ವಿನಿಮಯವಿದ್ದು ಎಲ್ಲ ಪರಿಣತರೂ ಒಂದೇ ಸೂರಿನಡಿ ತಮ್ಮ ಸೇವೆ ಸಲಹೆ ನೀಡುತ್ತಿದ್ದರು. ಬಟ್ಟೆ ಕತ್ತರಿಸಿ ಹೊಲಿಯುವವ, ಅದಕ್ಕೆ ಬಣ್ಣ ಹಾಕುವವ, ಅದು ನೆಗೆಟಿವ್ ಮೇಲೆ ಮೂಡಿದಾಗ ಕಾಣುವ ಬಗೆ ತಿಳಿಸುವವ, ಈ ಎಲ್ಲರ ಸಲಹೆಗಳು ದಾಖಲೆಯಾಗಿ ಮುಂದಿನ ಚಿತ್ರನಿರ್ಮಾಣಗಳಲ್ಲಿ ಹೆಚ್ಚಿನ ನೈಪುಣ್ಯ ಸಾಧಿಸುವಲ್ಲಿ ನೆರವಾಗುತ್ತಿದ್ದವು. ಎಲ್ಲ ಪಾತ್ರಗಳ ನಿರೂಪಣೆಗೆ ಅಗತ್ಯವಾದ ವಸ್ತ್ರ, ಒಡವೆಗಳು ಸಿದ್ಧವಾಗಿರುತ್ತಿದ್ದವು. ಹೀಗಾಗಿ ಅದು ಎಲ್ಲರ ಚಿತ್ರವಾಗಿರುತ್ತಿತ್ತು. ಕಪ್ಪು ಬಿಳುಪು ಛಾಯಾ ವಿನ್ಯಾಸದಲ್ಲಿ ವೈವಿಧ್ಯ ತರಲು ಕಂಡುಕೊಂಡ ಇನ್ನೊಂದು ವಿಧಾನವೆಂದರೆ ಬಟ್ಟೆಗಳಿಗೆ ಕೂಡಿಸಲಾದ ಕನ್ನಡಿಯ ತುಣುಕುಗಳು ಹಾಗೂ ಮಿರಿಮಿರಿ ಮಿಂಚುವ ಜರಿಯ ಪಟ್ಟಿಗಳು. ಇದು ರಾಜಮಹಾರಾಜನಿಗೂ ಉಪಯೋಗವಾಗುತ್ತಿತ್ತು, ರಾಜನರ್ತಕಿಗೂ ಇದನ್ನೇ ಬಳಸುತ್ತಿದ್ದರು.

(ಚಿತ್ರ ೬-೭) ಪ್ರಾದೇಶಿಕ ಸೊಗಡು

ಕನ್ನಡದಲ್ಲಿ ಲಭ್ಯವಿರುವ ವಿಪುಲ ಸಂಶೋಧಿತ ಸಾಮಗ್ರಿ ಬಳಸಿ, ಕಾದಂಬರಿ ಆಧರಿಸಿ, ಜನಪದ ಸಾಹಿತ್ಯ, ಅರಮನೆಯ ವರ್ಣಚಿತ್ರಗಳನ್ನು ಶೋಧಿಸಿ ಸಿದ್ಧಮಾಡಿದ ಕನ್ನಡ ಸೊಗಡಿನ ನಾಲ್ಕು ಐತಿಹಾಸಿಕ ಚಿತ್ರಗಳು ಉಲ್ಲೇಖನೀಯ. ೧೯೬೦ರಲ್ಲಿ ತಯಾರಾದ 'ರಣಧೀರ ಕಂಠೀರವ' ಚಿತ್ರ ಮೈಸೂರಿನ ಅರಸು ಮನೆತನದ ಜೀವನದ ಇಣುಕು ನೋಟ, ಅದೇ ವರ್ಷ ತಯಾರಾದ 'ರಾಣಿ ಹೊನ್ನಮ್ಮ'. ೧೯೬೧ರ 'ಕಿತ್ತೂರು ಚೆನ್ನಮ್ಮ', ೧೯೬೨ರ 'ವಿಜಯನಗರದ ವೀರಪುತ್ರ' ಕನ್ನಡ ವೀರವನಿತೆಯರ, ಚಕ್ರವರ್ತಿಗಳ ಬದುಕನ್ನು ನಿರೂಪಿಸಿದವು. ಇವುಗಳ ಯಶಸ್ಸಿನ ಹಿಂದೆ

(ಚಿತ್ರ ೮) 'ಇಮ್ಮಡಿ ಪುಲಿಕೇಶಿ' - ಚಾಲುಕ್ಯ ಕಾಲದ ವಸ್ತ್ರಾಭರಣ

ಇಲ್ಲಿಯ ಪ್ರೇಕ್ಷಕ ಈ ಚಿತ್ರಗಳ ಮಣ್ಣಿನ ವಾಸನೆ ಗುರುತಿಸಿದನೆಂದೇ ಅಭಿಮಾನದಿಂದ ಹೇಳಬೇಕು. ಈ ಭಾವನೆ ಮೂಡಿಸುವಲ್ಲಿ ವಸ್ತ್ರಾಲಂಕಾರದ ಕೊಡುಗೆ ಗೌಣವೇನಲ್ಲ.

ಪ್ರೇಕ್ಷಕನಿಗೆ ಹೊಸತನ್ನು ಕೊಡಬೇಕೆಂಬ ತುಡಿತದ ಫಲ, ಕನ್ನಡ ಚಿತ್ರರಂಗ ಕಂಡುಕೊಂಡ ಭಾಗಶಃ ವರ್ಣಚಿತ್ರ. ನಿಯಮಿತ ಅವಧಿಯಲ್ಲಿ ಪ್ರೇಕ್ಷಕನನ್ನು ಮಂತ್ರಮುಗ್ಧ ಮಾಡಲು, ಅವನ ಕಲ್ಪನೆಯ ಕುದುರೆ ಸೆರೆಹಿಡಿಯಲು, ಬಣ್ಣಬಣ್ಣದ ಹಿನ್ನೆಲೆ ಸನ್ನಿವೇಶಗಳನ್ನು ಸಂಯೋಜಿಸತೊಡಗಿದರು. ಭಾಗಶಃ ವರ್ಣದಲ್ಲಿ ತಯಾರಾದ ಚಿತ್ರಗಳಲ್ಲಿ, ಚಿತ್ರಿತವಾದ ವರ್ಣಭಾಗ ಎಷ್ಟು ಸಾಧ್ಯವೋ ಅಷ್ಟು ವರ್ಣಾಲಂಕೃತ ವಸ್ತ್ರಗಳನ್ನು ಧರಿಸಿದ ನೃತ್ಯಗಳು ಅಥವಾ ಯುದ್ಧದ ಸನ್ನಿವೇಶಗಳು. ಇದಕ್ಕೂ ಮೈಸೂರು ದಸರಾದ ವರ್ಣಮಯ ಅಂಶವನ್ನು ಚಿತ್ರಿಸಿ, ಅದರಲ್ಲಿ ಪಾತ್ರಗಳನ್ನು ಸಮಾವೇಶಗೊಳಿಸಲು ಯತ್ನಿಸಿದರು. ಹೀಗಾಗಿ ಚಿತ್ರಗಳಲ್ಲಿ ವರ್ಣಮಯ ವಸ್ತ್ರ ಸಂಯೋಜನೆ ಕ್ರಮೇಣ ಇಣುಕತೊಡಗಿತು. ಈ ರೀತಿ ತಯಾರಾದ ಪ್ರಥಮ ಚಿತ್ರ ೧೯೫೫ರ 'ಸ್ತ್ರೀ ರತ್ನ', ನಂತರ ೧೯೫೬ರ 'ಸದಾರಮೆ', ೧೯೫೭ರ 'ಪ್ರಭುಲಿಂಗ ಲೀಲೆ', ೧೯೬೩ರ 'ವೀರ ಕೇಸರಿ'.

೧೯೬೪ ಕನ್ನಡ ಚಿತ್ರರಂಗದಲ್ಲಿ ಒಂದು ಹೊಸ ಮೈಲಿಗಲ್ಲು. ಕನ್ನಡ ಪ್ರೇಕ್ಷಕನ ಬಹುದಿನಗಳ ಕನಸಾದ ಪೂರ್ಣವರ್ಣಚಿತ್ರವನ್ನು ಪೂರೈಸಿದವರು ಸ್ಟುಡಿಯೋ ಮಾಲಿಕ/ಛಾಯಾಗ್ರಾಹಕ ನಿರ್ದೇಶಕ ಬಿ.ಎಸ್.ರಂಗ. ಇವರ 'ಅಮರ ಶಿಲ್ಪಿ ಜಕಣಾಚಾರಿ' ಸೆಟ್ಟುಗಳ ವರ್ಣಸಂಯೋಜನೆ, ಹಿನ್ನೆಲೆಯ ವರ್ಣಪರದೆಗಳು, ಪಾತ್ರಧಾರಿಗಳ ವೇಷ-ಭೂಷೆ, ಹಾಡು, ನೃತ್ಯಗಳ ಚಿತ್ರಣದಲ್ಲಿನ ವಸ್ತ್ರವಿನ್ಯಾಸಗಳಲ್ಲಿ ತಮ್ಮ ಇತರ ಚಿತ್ರಗಳ ಅನುಭವವನ್ನು ಎರಕ ಹೊಯ್ದು ನಿರ್ಮಿಸಿದ್ದರು.

ಅನಂತರವೂ ಮಹತ್ವಪೂರ್ಣ ಕಪ್ಪು-ಬಿಳುಪು ಚಿತ್ರಗಳು ನಿರ್ಮಾಣವಾಗುತ್ತಲೇ ಇದ್ದವು. ಕಥಾವಸ್ತು, ಮೂಲಪಾತ್ರದ ವೇಷ-ಭೂಷೆ ಎರಡೂ ದೃಷ್ಟಿಯಿಂದ ೧೯೬೫ರ ಕ್ರಾಂತಿಕಾರಿ ಚಿತ್ರ ಆರೂರು ಪಟ್ಟಾಭಿ ನಿರ್ದೇಶನದ, ನರೇಂದ್ರಬಾಬು ಸಾಹಿತ್ಯ/ನಿರ್ಮಾಣದ 'ಸರ್ವಜ್ಞ ಮೂರ್ತಿ' ಒಂದು ದಾಖಲೆ ಚಿತ್ರ. ಲಂಗೋಟಿ ಧರಿಸಿ, ಕಂಬಳಿ ಹೊದ್ದು, ಸಮಾಜದ ಡೊಂಕು ತಿದ್ದುವ ಸರ್ವಜ್ಞನ ಪಾತ್ರಧಾರಿಯಾಗಿ ರಾಜಕುಮಾರ್ ಅಭಿನಯ ಅವರ ನಟನಾ ಜೀವನದಲ್ಲೇ ಒಂದು ಮೈಲಿಗಲ್ಲು.

೧೯೬೩ರಲ್ಲಿ, ಮಹಾರಾಷ್ಟ್ರದ ಗ್ರಾಮೀಣ ಜನರ ಬದುಕನ್ನು ಅರಿತ, ಅಲ್ಲಿಯ ಸಾಂಸ್ಕೃತಿಕ ಬೇರುಗಳನ್ನು ಗುರುತಿಸಬಲ್ಲ ನಿರ್ದೇಶಕ ಸುಂದರರಾವ್ ನಾಡಕರ್ಣಿ ಕೊಡುಗೆ 'ಸಂತ ತುಕಾರಾಂ'. ಇದರಲ್ಲಿ ಗ್ರಾಮೀಣ ಜನರು ಬದುಕುವ ರೀತಿ, ಮರಾಠಾ ಮಹಿಳೆ ಹಾಗೂ ಪುರುಷರ ವೇಷ-ಭೂಷೆ, ಧರಿಸುವ ಪೇಟಾ, ಪಂಢರಪುರದ ಪರಿಸರ. ಇವುಗಳ ಮರುಸೃಷ್ಟಿ ಕನ್ನಡಕ್ಕಾಗಿ ಮದರಾಸಿನಲ್ಲಿ ಸಾಧಿಸಿದ್ದು ವಿಶೇಷ.

ಕೇವಲ ಪಾತ್ರಗಳ ವೇಷ ಧರಿಸಿ ಪರಿಸರವನ್ನು ಸೃಷ್ಟಿಸಿದರೆ ಮಾತ್ರ ನಿರ್ದೇಶಕ ಯಶಸ್ವಿಯಾದಂತಲ್ಲ. ಇಷ್ಟು ಮಾತ್ರ ಅಚ್ಚುಕಟ್ಟಾಗಿ ಮಾಡಿದರೆ ಪ್ರೇಕ್ಷಕ ಚಿತ್ರ ಸ್ವೀಕರಿಸಬೇಕೆಂಬ ನಿಯಮವೂ ಇಲ್ಲ. ಈ ಹಿನ್ನೆಲೆಯಲ್ಲಿ ನೋಡಿದರೆ ವೇಷ ಭೂಷೆ ಹಾಗೂ ಮಧ್ಯ ಮಠದ ಬದುಕನ್ನು ಸ್ಟುಡಿಯೋದಲ್ಲಿ ಯಶಸ್ವಿಯಾಗಿ ಮರುಸೃಷ್ಟಿಸಿದರೂ ಅದಕ್ಕೊಂದು ಮೆರುಗು, ಸಹಜತೆ, ಪರಿಪೂರ್ಣತೆ ನೀಡಿದ್ದು ರಾಜಕುಮಾರ್ ಅಭಿನಯದ 'ಮಂತ್ರಾಲಯ ಮಹಾತ್ಮೆ'.

ವಿದೇಶದಲ್ಲಿ ಚಿತ್ರನಿರ್ಮಾಣ ತರಬೇತಿ ಪಡೆದ ನಿರ್ದೇಶಕ ಎಂ.ವಿ.ಕೃಷ್ಣಸ್ವಾಮಿ ತಮ್ಮ ಮೊದಲ ಚಿತ್ರ 'ಸುಬ್ಬಾಶಾಸ್ತ್ರಿ'ಯಲ್ಲಿ ಶ್ರೀವೈಷ್ಣವ ಸಂಪ್ರದಾಯದ ಕುಟುಂಬದ ಜೀವನವನ್ನು ಅವರ ವೇಷ-ಭೂಷೆ, ನಡೆ-ನುಡಿ, ಪರಿಸರದಲ್ಲಿ ಪರಿಣಾಮಕಾರಿಯಾಗಿ ಚಿತ್ರಿಸಿದರು.

೧೯೩೬ರ 'ಚಿರಂಜೀವಿ', ೧೯೪೭ರ 'ಚಂದ್ರಹಾಸ' ನಂತರ ೧೯೬೭ರಲ್ಲಿ ಅನಂತ ಹಿರೇಗೌಡ ನಿರ್ದೇಶನದ 'ಸಂಗೊಳ್ಳಿ ರಾಯಣ್ಣ' ಉತ್ತರ ಕರ್ನಾಟಕದವರ ಮತ್ತೊಂದು ಪ್ರಯತ್ನ. ಇಲ್ಲಿ ಗ್ರಾಮೀಣ ಬದುಕು, ಪರಿಸರ ಹಾಗೂ ರಾಯಣ್ಣನ ವ್ಯಕ್ತಿತ್ವ, ವೇಷ-ಭೂಷೆಗಳು. ಲಾವಣಿಗಳಲ್ಲಿ ದಾಖಲಾಗಿವೆ. ಅದರಂತೆ ಚಿತ್ರಿಸಲಾಯಿತು. ಅದೇ ವರ್ಷ ನಿರ್ಮಾಣವಾದ 'ಇಮ್ಮಡಿ ಪುಲಿಕೇಶಿ' ಇತಿಹಾಸವನ್ನು ಕಣ್ಮುಂದೆ ಪುನರ್‌ರೂಪಿಸುವಂತೆ ಮರುಸೃಷ್ಟಿಸಿ ಯಶಸ್ವಿಯಾದ ಚಿತ್ರ.

ಪ್ರೇಕ್ಷಕ ಜನಪದ, ಐತಿಹಾಸಿಕ ಚಿತ್ರಗಳನ್ನು ನೋಡಿ ಬೇಸರವೆನಿಸಿ ಬದಲಾವಣೆಗೆ ಹಂಬಲಿಸಿದ ಹಂತದಲ್ಲೇ ಬಂದ ಚಿತ್ರ 'ಬೇಡರ ಬಲೆ'. ಇದು ಗಂಡು-ಹೆಣ್ಣು ಎಲ್ಲ ಪಾತ್ರಗಳೂ ಪಾಶ್ಚಿಮಾತ್ಯ ಉಡುಪನ್ನು ಬಳಸಿ ಪ್ರೇಕ್ಷಕರಿಗೆ ಮುದ ನೀಡಿದ ಚಿತ್ರ. ಇದರ ಯಶಸ್ಸಿನ ರುಚಿಕಂಡ ಚಿತ್ರರಂಗ ಈ ಪಾಶ್ಚಿಮಾತ್ಯ ಉಡುಗೆ ತೊಡಿಗೆಗೆ ಹ್ಯಾಟು, ಟೈ, ಪಿಸ್ತೂಲು, ಕ್ಯಾಬರೆ ನೃತ್ಯಗಳಂಥ ಅಂಶ ಸೇರಿಸಿ, ವರ್ಷಕ್ಕೊಂದರಂತೆ ೧೯೬೮ರಲ್ಲಿ 'ಗೋವಾದಲ್ಲಿ ಸಿ.ಐ.ಡಿ.೯೯೯, ೧೯೬೯ರಲ್ಲಿ 'ಆಪರೇಷನ್ ಜಾಕ್‌ಪಾಟ್ ಸಿ.ಐ.ಡಿ. ೯೯೯', ೧೯೭೦ರಲ್ಲಿ 'ಮೃತ್ಯು ಪಂಜರದಲ್ಲಿ ಗೂಢಚಾರಿ ೫೫೫' ಇಂಥ ಚಿತ್ರಗಳನ್ನು ನೀಡಿತು.

ಸರ್ಕಸ್ ಜೀವನ ಪ್ರಾಣಿಗಳ ಸಾಮೀಪ್ಯ ಮಾತ್ರವಲ್ಲ, ಅಲ್ಲಿಯ ಜೀಕು ಜೋಕಾಲಿ, ಸಾಹಸ ಪ್ರದರ್ಶನ, ಚಿತ್ರದಲ್ಲಿ ನಟಿಯರಿಗೆ ಬಿಗಿಯುಡುಗೆ ತೊಟ್ಟು ಅಂಗ ಪ್ರದರ್ಶನಕ್ಕೂ ಒಂದು ಅಪರೂಪದ ಅವಕಾಶ, ಇಂಥ ವಾತಾವರಣವನ್ನು ಯಶಸ್ವಿಯಾಗಿ ಸೃಷ್ಟಿಸಿದ ಚಿತ್ರ 'ಧೂಮಕೇತು'.

ಕಾಡುಪ್ರಾಣಿ ಹಾಗೂ ಕಾಡು ಜನರ ಜೀವನ ಚಿತ್ರಣ ನಮ್ಮ ಚಿತ್ರರಂಗದ ಒಂದು ಯಶಸ್ವಿ ಸೂತ್ರ. ೧೯೬೯ರಲ್ಲಿ 'ಕಾಡಿನ ರಹಸ್ಯ' ಇಂಥ ಬದುಕನ್ನು ಪುನರ್‌ಸೃಷ್ಟಿಸಿ ವೈವಿಧ್ಯ ಒದಗಿಸಿತು.

೧೯೬೩ರಲ್ಲಿ ರಾಜಕುಮಾರ್ ದ್ವಿಪಾತ್ರದಲ್ಲಿ ನಟಿಸಿದ 'ಸತಿಶಕ್ತಿ' ಜಾನಪದ ಚಿತ್ರವಾದರೆ ೧೯೬೯ರಲ್ಲಿ 'ಕಪ್ಪು-ಬಿಳುಪು' ಕಲ್ಪನಾ ದ್ವಿಪಾತ್ರದಲ್ಲಿ ನಟಿಸಿದ ಚಿತ್ರ. ಕಪ್ಪು-ಬಿಳುಪು ಚಿತ್ರನಿರ್ಮಾಣದಲ್ಲಿ ಸಾಮಾನ್ಯವಾಗಿ ಕಪ್ಪುಛಾಯೆ, ವರ್ಣಗಳು ವ್ಯಕ್ತಿಯ ಋಣಾತ್ಮಕ ಗುಣಗಳಾದ ಮೋಸಗಾರಿಕೆ, ವಂಚನೆ, ಸಿಟ್ಟು, ಕುಹಕ, ಪಿತೂರಿ, ದುಃಖ ಇವುಗಳ ಸಂಕೇತವಾದರೆ, ಬಿಳಿ ವರ್ಣಛಾಯೆ ಇನ್ನೊಂದು ಪಾತ್ರದ ಔದಾರ್ಯ, ಮನೋವೈಶಾಲ್ಯ, ತ್ಯಾಗ, ಮುಕ್ತ ಮನೋಭಾವ ಇಂಥ ಧನಾತ್ಮಕ ಅಂಶಗಳನ್ನು ಸಂಕೇತಿಸುತ್ತದೆ. ಹೀಗಾಗಿ ಇಂಥ ಚಿತ್ರಗಳ ನಿರ್ಮಾಣದುದ್ದಕ್ಕೂ ಪಾತ್ರಗಳ ಚಿತ್ರಣದಲ್ಲಿ ನೆರವಾಗಲು ವಸ್ತ್ರ ವಿನ್ಯಾಸಕಾರ, ಪ್ರೇಕ್ಷಕನ ಮನದಲ್ಲಿ ಗೊಂದಲ ಮೂಡಿಸದೆ, ಪಾತ್ರ ಗುರುತಿಸಲು ನೆರವಾಗುವಂತೆ ಭಿನ್ನ ಛಾಯೆಯ ವಸ್ತ್ರವನ್ನು ಚಿತ್ರದುದ್ದಕ್ಕೂ ರೂಪಿಸಿ ನಿರ್ದೇಶಕನ ಕಲ್ಪನೆಯ ಭಾವದ್ವಂದ್ವ, ಮಾನಸಿಕ ತಾಕಲಾಟ, ಸ್ವಭಾವ ವೈಚಿತ್ರ್ಯ ನಿರೂಪಣೆಯಲ್ಲಿ ಪ್ರಮುಖ ಪಾತ್ರವಹಿಸುತ್ತಾನೆ. ಇವನ ಕಾರ್ಯದಲ್ಲಿ ಛಾಯಾಗ್ರಾಹಕನೂ ಬೆಳಕು ವಿನ್ಯಾಸದ ಪರಿಣತಿಯಿಂದ ನೆರವಾಗುತ್ತಾನೆ.

ಕಪ್ಪು-ಬಿಳುಪಿನಲ್ಲಿ ಎರಡು ಪಾತ್ರಗಳ ವೈರುಧ್ಯ ನಿರೂಪಣೆಯೇ ಭಿನ್ನ. ವರ್ಣ ಚಿತ್ರಗಳಲ್ಲಿ ವರ್ಣ ವಿನ್ಯಾಸದಿಂದಾಗಿ ಏಕಕಾಲಕ್ಕೆ ಹಲವಾರು ಪಾತ್ರ ವಹಿಸುವ ಕಲಾವಿದ-ಕಲಾವಿದೆಯರಿಗೆ ವರ್ಣದಿಂದಲೇ ಅವರನ್ನು ಗುರುತಿಸಲು ನೆರವಾಗುವಂತೆ ವಸ್ತ್ರವಿನ್ಯಾಸ ರೂಪಿಸುತ್ತಾರೆ. ಇದರಿಂದಾಗಿ ಹೊಡೆದಾಟ, ಬೆಂಬತ್ತಿ ಬರುವ ದೃಶ್ಯ ಇಂಥ ಕ್ಲಿಷ್ಟಕರ ಸನ್ನಿವೇಶದಲ್ಲೂ ಪ್ರೇಕ್ಷಕ ಗೊಂದಲದಲ್ಲಿ ಬೀಳದಂತೆ ವಸ್ತ್ರಗಳ ವರ್ಣವಿನ್ಯಾಸ ನೆರವಾಗುತ್ತದೆ. ಇನ್ನುಳಿದಂತೆ ವರ್ಣಗಳನ್ನು ಸಾಂಕೇತಿಕವಾಗಿ ಪಾತ್ರದ ಸ್ವಭಾವಕ್ಕೆ ತಕ್ಕಂತೆ ನಿರ್ದೇಶಕ ಸೂಚಿಸಿದಾಗ ವಸ್ತ್ರ ವಿನ್ಯಾಸಕಾರ ಅವುಗಳನ್ನು ಸಿದ್ಧಪಡಿಸಿ ಕಲಾವಿದರಿಗೆ ತೊಡಿಸುತ್ತಾನೆ.

. ಸಮಕಾಲೀನ ಶಿಲ್ಪಗಳನ್ನು ಆಧರಿಸಿ ರಚಿಸಲಾದ ವಸ್ತ್ರಾಲಂಕಾರ, ಕಿರೀಟ, ಆಭರಣಾದಿಗಳು ಅದುವರೆಗೆ ಯಾವುದೇ ಕನ್ನಡ ಚಿತ್ರದಲ್ಲೂ ಆಗಿರದ ಪ್ರಯೋಗವಾಗಿತ್ತು. ಸಂ.

ಬಿ.ಆರ್.ಪಂತುಲು ೧೯೭೦ರ 'ಶ್ರೀ ಕೃಷ್ಣದೇವರಾಯ' ಚಿತ್ರದಲ್ಲಿ ಐತಿಹಾಸಿಕ ಚಿತ್ರಕ್ಕೆ ಬೇಕಾದ ವೈಭವ, ಸಹಜತೆ ಗಮನದಲ್ಲಿಟ್ಟು ವೇಷ-ಭೂಷೆ, ಆಭರಣ ಆಯ್ಕೆ ಮಾಡಿ ನಿರೂಪಿಸಿದ್ದರು. ಅವರು ಅರಮನೆಯ ಹೊರಾಂಗಣಕ್ಕೆ ರಾಜಸ್ಥಾನದಲ್ಲಿನ ಜೈಪುರ, ಜೋಧಪುರ ಅರಮನೆ ಹಾಗೂ ಯುದ್ಧಗಳನ್ನು ಹೊರಾಂಗಣದಲ್ಲಿ ಚಿತ್ರಿಸಿ ಆನೆ, ಕುದುರೆ, ಒಂಟೆ ಬಳಸಿ ಕನ್ನಡಕ್ಕೆ ಮೆರುಗನ್ನು ನೀಡಿದ ನಿರ್ಮಾಪಕ/ನಿರ್ದೇಶಕ.

೧೯೬೭ರಲ್ಲಿ ಪುಟ್ಟಣ್ಣ ಕಣಗಾಲ್ ನಿರ್ದೇಶಿಸಿದ 'ಬೆಳ್ಳಿ ಮೋಡ' ಕೊಡಗಿನ ಎಸ್ಟೇಟಿನ ಬದುಕು, ಅಲ್ಲಿಯ ಪರಿಸರದಲ್ಲಿ ಬದುಕುವ ರೀತಿಯನ್ನು ವೇಷ-ಭೂಷೆಯಿಂದ ಸಮರ್ಥವಾಗಿ ಸೆರೆ ಹಿಡಿಯಿತು. ನಂತರ ೧೯೬೯ರಲ್ಲಿ 'ಮಲ್ಲಮ್ಮನ ಪವಾಡ', 'ಕಪ್ಪು-ಬಿಳುಪು' ಚಿತ್ರದಲ್ಲಿ ಸ್ಟುಡಿಯೋಗೆ ಶರಣು ಹೋದರು. ಅನಂತರ ೧೯೭೦ರಲ್ಲಿ ಎಂ.ಕೆ.ಇಂದಿರಾ ಅವರ ಕಾದಂಬರಿ 'ಗೆಜ್ಜೆ ಪೂಜೆ' ಚಿತ್ರ ಮಾಡಿದಾಗ ಸ್ಟುಡಿಯೋದಲ್ಲೇ ಹಳೇ ಮೈಸೂರಿನ ಪ್ರಾಂತದಲ್ಲಿನ ವೇಶ್ಯಾ ಜೀವನದ ಪರಿಛಿತಗಳನ್ನು ಲೀಲಾವತಿ. ಕಲ್ಪನಾ ಇವರ ವೇಷ-ಭೂಷೆ, ಆಭರಣ, ಮೇಕಪ್ ಇವುಗಳಿಂದ ತೆರೆ ಮೇಲೆ ಮೂಡಿಸುವಲ್ಲಿ ಯಶಸ್ವಿಯಾದರು.

೧೯೭೦ ಮಹತ್ವದ ವರ್ಷ ಎನ್ನಬಹುದು. ನವ್ಯ ಸಾಹಿತಿಗಳು, ಹವ್ಯಾಸಿ ನಾಟಕಕಾರರು, ಹೊಸ ಚಿಂತನೆ, ಹೊಸ ಅಲೆಯ ನಿರ್ದೇಶಕರು ಚಿತ್ರರಂಗದತ್ತ ಗಮನಹರಿಸಿದರು. ಮುಕ್ತವಾತಾವರಣದಲ್ಲಿ ಜೀವನದ ಅನುಭವವನ್ನು ಚಿತ್ರಿಸಿ, ಮುಕ್ತವಾಗಿ ಹೊಸಗಾಳಿ ಉಸಿರಾಡಲು ನಾಂದಿ ಹಾಡಿದ ಮೊದಲ ಚಿತ್ರ ಪಟ್ಟಾಭಿರಾಮ ರೆಡ್ಡಿಯವರ 'ಸಂಸ್ಕಾರ'. ಯು.ಆರ್.ಅನಂತಮೂರ್ತಿಯವರ ಕೃತಿ ಆಧರಿಸಿದ ಈ ಚಿತ್ರದಲ್ಲಿ ಮಲೆನಾಡಿನ ಅಗ್ರಹಾರದ ಬ್ರಾಹ್ಮಣರ ಬದುಕನ್ನು ಎಳೆ-ಎಳೆಯಾಗಿ, ಸವಿವರವಾಗಿ ಸೆರೆ ಹಿಡಿದ ಶ್ರೇಯಸ್ಸು ಈ ತಂಡಕ್ಕೆ ಸಲ್ಲಬೇಕು. ಇದರಲ್ಲಿನ ಮಾಲೇರ ಪುಟ್ಟನಾಗಿ ಜಿ.ಆರ್.ಜಯರಾಂ ಪಾತ್ರ, ಬ್ರಾಹ್ಮಣರ ರೀತಿ-ನೀತಿ, ವೇಷ-ಭೂಷೆ ನೆನಪಿನಲ್ಲುಳಿಯುವಂಥದು.

ಪ್ರಥಮ ಬಾರಿಗೆ ವರ್ಣದಲ್ಲಿ ಚಿತ್ರ ನಿರ್ದೇಶಿಸಿದ ಪುಟ್ಟಣ್ಣ ಕಣಗಾಲ್ ೧೯೭೧ರ 'ಶರಪಂಜರ'ದಲ್ಲಿ ಕೊಡಗಿನ ಹೊರಾಂಗಣದ ವರ್ಣಕ್ಕೆ ಹಾಗೂ ದೃಶ್ಯದ ಭಾವಕ್ಕೆ ಅನುರೂಪವಾಗಿ ನಾಟಕೀಯ ವರ್ಣ, ವೇಷ-ಭೂಷೆ ಆಯ್ಕೆ ಮಾಡಿದರು. ತ್ರಿವೇಣಿ ರೂಪಿತ ಕ್ಲಿಷ್ಟಕರ ಪಾತ್ರವನ್ನು, ಸಮರ್ಥವಾಗಿ ತೆರೆಯ ಮೇಲೆ ಸ್ಟುಡಿಯೋ ಒಳಾಂಗಣ ದೃಶ್ಯಗಳಲ್ಲೂ ಸಮರ್ಥ ವರ್ಣ ಪರಿಕಲ್ಪನೆಯಿಂದ ರೂಪಿಸಿ ಪ್ರೇಕ್ಷಕರ ಮನಗೆದ್ದರು.

೧೯೭೨ರಲ್ಲಿ ತೆರೆಕಂಡ ವಿಶೇಷ ಚಿತ್ರ 'ಯಾರ ಸಾಕ್ಷಿ ?'. ಎಂ.ಆರ್.ವಿಠಲ್ ನಮ್ಮ ಹೆಚ್ಚಿನ ಚಿತ್ರಗಳಲ್ಲಿ ಆಭಾಸಕರವಾಗಿ ನಿರೂಪಿತವಾಗುವ ಕೋರ್ಟಿನ ಸನ್ನಿವೇಶಗಳ ಹಿನ್ನೆಲೆಯಲ್ಲಿ ತಮ್ಮ ಚಿತ್ರವನ್ನು ಪೂರ್ಣವಾಗಿ ನ್ಯಾಯಾಲಯದಲ್ಲಿ ಚಿತ್ರಿಸಿದರು. ಇದರಲ್ಲಿನ ಪಾತ್ರಧಾರಿಗಳು ವಿಶೇಷತಃ ನ್ಯಾಯಾಧೀಶರು, ನ್ಯಾಯವಾದಿಗಳು ಹಾಗೂ ಕಕ್ಷಿದಾರರ ಬದುಕಿಗೆ ಹತ್ತಿರದವರಾಗಿದ್ದರು. ಎಲ್ಲೂ ಆಭಾಸಗಳಿಗೆ, ಅಜ್ಞಾನದ ಪ್ರದರ್ಶನಕ್ಕೆ ಅವಕಾಶ ಇರಲಿಲ್ಲ. ಅದೇ ವರ್ಷ ಟಿ.ಕೆ.ರಾಮರಾವ್ ಕಾದಂಬರಿ ಆಧರಿಸಿ ಆದರ್ಶಮಯವಾದ ಪಾತ್ರವಾದರೂ, ಪಾತ್ರಚಿತ್ರಣದ ಅವಕಾಶ ಬಳಸಿಕೊಂಡು ಸಿದ್ದಲಿಂಗಯ್ಯ ತೆರೆಗೆ ನೀಡಿದ ಚಿತ್ರ 'ಬಂಗಾರದ ಮನುಷ್ಯ'. ಇದರಲ್ಲಿ ಪಾತ್ರದ ವೈಭವೀಕರಣವಿದ್ದರೂ ವೇಷ-ಭೂಷಗಳು ಸಹಜತೆಯ ಗೆರೆ ದಾಟಲಿಲ್ಲ.

ಪುಟ್ಟಣ್ಣ ಕಣಗಾಲ್ ನಿರ್ದೇಶನದ 'ನಾಗರ ಹಾವು', ತ.ರಾ.ಸು. ರೂಪಿಸಿದ ವಿಕ್ಷಿಪ್ತ ಪ್ರವೃತ್ತಿಯ ನಾಯಕನನ್ನು ಆತನ ವೇಷ-ಭೂಷೆಯ, ವರ್ಣದ ಆಯ್ಕೆಯಿಂದ ಆತನಿಗೊಂದು ವಿಶಿಷ್ಟ ರೂಪ ನೀಡಿದರು. ಪಾತ್ರ ಚಿತ್ರಣ, ಪರಿಸರ ವರ್ಣನೆಯಲ್ಲಿ ಎತ್ತಿದ ಕೈ ಎಂದು ಹೆಸರಾದ ಕಾದಂಬರಿಕಾರ ಎಸ್.ಎಲ್.ಭೈರಪ್ಪನವರ 'ವಂಶವೃಕ್ಷ' ಚಿತ್ರದ ಶ್ರೋತ್ರಿಯ ಜೀವನದ ವಿವರಗಳು, ಕಾತ್ಯಾಯಿನಿಯ ವೈಧವ್ಯ ಜೀವನದ ಎಳೆ-ಎಳೆಗಳು ಚಿತ್ರದಲ್ಲಿ ಸಮರ್ಥವಾಗಿ ನಿರೂಪಿತವಾದವು. ಇದರ ಬಲದ ಮೇಲೆ ಚಿತ್ರದ ತಾಂತ್ರಿಕ ದೋಷಗಳು ನಗಣ್ಯವೆನಿಸಿದವು. ಚಿತ್ರದಲ್ಲಿ ನಂಜನಗೂಡಿನ ಪರಿಸರ ಪ್ರೇಕ್ಷಕರ ಮನಸೆಳೆಯಿತು.

ಪುಣೆಯ ಫಿಲಂ ಇನ್‌ಸ್ಟಿಟ್ಯೂಟ್ ಪದವೀಧರ ಕೆ.ಎಂ.ಶಂಕರಪ್ಪ, ಬಸವರಾಜ ಕಟ್ಟೀಮನಿ ಕಾದಂಬರಿ ಆಧರಿಸಿ, ೧೯೪೨ರ ಚಲೇಜಾವ್ ಚಳವಳಿಯ ಹೋರಾಟವನ್ನು, ಉತ್ತರ ಕರ್ನಾಟಕದ ಪರಿಸರವನ್ನು ಸೆರೆಹಿಡಿಯುವುದರಲ್ಲಿ 'ಮಾಡಿ ಮಡಿದವರು' ಚಿತ್ರದಲ್ಲಿ ಯಶಸ್ವಿಯಾದರು. ಏಣಗಿ ಬಾಳಪ್ಪ, ನೀಲಗಾರ್, ಹಿರೇಮಠ್, ಸುಧೀರ್, ರಾಂ ಗೋಪಾಲ್ ಇಂಥ ವೃತ್ತಿನಿರತ ರಂಗಭೂಮಿ ಕಲಾವಿದರು, ಬಾಳಪ್ಪ ಹುಕ್ಕೇರಿಯಂಥ ಗಾಯಕರು ಈ ಚಿತ್ರದಲ್ಲಿ ತೊಡಗಿಕೊಂಡದ್ದು ಪಾತ್ರದ ವೇಷ-ಭೂಷ ಹಾಗೂ ಭಾಷೆಯ ಸೊಗಡನ್ನು ಉಳಿಸಿಕೊಳ್ಳುವಲ್ಲಿ ನೆರವಾಯಿತು. ಇದು ಇಂದಿಗೂ ಅಲ್ಲಿಯ ಬದುಕನ್ನು ನಿರೂಪಿಸುವ ಒಂದು ಶ್ರೇಷ್ಠ ಚಿತ್ರ.

ಕರ್ನಾಟಕದಲ್ಲಿ, ದಕ್ಷಿಣ ಕನ್ನಡ ಜಿಲ್ಲೆಯ ಬದುಕು, ಭಾಷೆ, ವೇಷ-ಭೂಷೆ, ಪರಿಸರಕ್ಕೆ ಅದರದ್ದೇ ಒಂದು ಸೊಗಡಿದೆ. ಅದನ್ನು ಸಮರ್ಥವಾಗಿ ಶಬ್ದ ಚಿತ್ರಣ ಮಾಡಿ ಸೈ ಎನಿಸಿಕೊಂಡವರು ಶಿವರಾಮ ಕಾರಂತ. ಅವರ 'ಚೋಮನ ದುಡಿ' ಕಾದಂಬರಿಯನ್ನು ಅಲ್ಲಿಯದೇ ಸಾಂಸ್ಕೃತಿಕ ನೆಲೆಗಟ್ಟಿನ ಬಿ.ವಿ.ಕಾರಂತ್, ಹಾಗೂ ಕಲಾವಿದರಾದ ಎಂ.ವಿ.ವಾಸುದೇವರಾವ್, ಪದ್ಮಾ ಕುಮಟಾ ತೆರೆಮೇಲೆ ಮರು ಸೃಷ್ಟಿಸಿದರು.

ಕಾದಂಬರಿಕಾರರ ಆಶಯವನ್ನು ಅರ್ಥ ಮಾಡಿಕೊಂಡು ಅದನ್ನು ವೈಭವೀಕರಿಸದೆ, ವಿಕೃತಿಗೊಳಿಸದೆ ಚಿತ್ರ ಮಾಡುವ ಪ್ರಯತ್ನಗಳು ಕೇವಲ ಕೈಬೆರಳೆಣಿಕೆಯಷ್ಟು. ಅವುಗಳಲ್ಲಿ ಒಂದು ತ.ರಾ.ಸು ಅವರ 'ಹಂಸ ಗೀತೆ'ಯನ್ನು ಜಿ.ವಿ.ಅಯ್ಯರ್ ನಿರ್ದೇಶನದಲ್ಲಿ ತೆರೆಗೆ ತಂದದು . ಸಂಗೀತ ಸಾಧನೆಯಲ್ಲಿ ಹುಡುಕಾಟ, ಗತ ಜೀವನದ ಅಹಿತಕರ ಕಾಡುವ ನೆನಪು, ವಿಕ್ಷಿಪ್ತವಾಗಿ ಬದುಕುವ ರೀತಿ, ತುಂಡು ಲಂಗೋಟಿ ಧರಿಸಿ ಅಂಡಲೆಯುವ 'ಬೂವಾ'ನ ಪಾತ್ರವನ್ನು ಬಿ.ವಿ.ಕಾರಂತ ನಟಿಸಿ ರೂಪಿಸಿದ ರೀತಿ ಚಿತ್ರದ ಒಂದು ಆಯಾಮವಾದರೆ, ಸಂಗೀತ ಪ್ರೇಮಿ ರಾಜನೇ ವೇಷ ಮರೆಸಿಕೊಂಡು ಗುಂಪಿನಲ್ಲಿ ಕುಳಿತು ಸಂಗೀತ ಆಲಿಸುವ ಚಿತ್ರಣ ದೃಶ್ಯದ ಸಹಜತೆಯ ಇನ್ನೊಂದು ಆಯಾಮ. ಮಾಸ್ತಿಯವರ ನಾಟಕವನ್ನು ಯಶಸ್ವಿಯಾಗಿ ರಂಗಭೂಮಿಗೆ ತಂದ ನಿರ್ದೇಶಕ ಸಿ.ಆರ್.ಸಿಂಹರ ತಂಡವೇ 'ಕಾಕನ ಕೋಟೆ' ಚಿತ್ರವನ್ನು ತೆರೆಗಿತ್ತಾಗ ಕಾಡುಜನರ ಮನೆಗಳು, ಪರಿಸರ, ವೇಷ-ಭೂಷೆಯ ಸಹಜತೆ ರೂಪಿಸುವಲ್ಲಿ ನೆರವಾದವರು ರಂಗಭೂಮಿ ಹಿನ್ನೆಲೆಯ ಸಿನಿಮಾ ನಿರ್ದೇಶಕ ಎಂ.ಎಸ್.ಸತ್ಯು.

ವೃತ್ತಿಯಿಂದ ಮುಜರಾಯಿ ಇಲಾಖೆಯಲ್ಲಿದ್ದು ಮಠ, ಮಸೀದಿ, ಚರ್ಚುಗಳ ಬದುಕಿನ ವಿಕೃತಿ, ವೈಭವ ಕಂಡ ವಿಶುಕುಮಾರ್ ವಿಭಿನ್ನ ವಸ್ತುಗಳ ಚಿತ್ರಗಳನ್ನು ನೀಡಿದರು. ೧೯೭೭ರಲ್ಲಿ 'ಕರಾವಳಿ' ತೀರಪ್ರದೇಶದ ಮೀನುಗಾರರ ಬದುಕನ್ನು ಸಹಜ ರೀತಿಯಲ್ಲಿ ಸೆರೆ ಹಿಡಿದರೆ ೧೯೮೦ರಲ್ಲಿ 'ಮದರ್' ಚರ್ಚಿನ ಜೀವನದ ಒಳನೋಟ ನೀಡಿತು. ಈ ಎರಡೂ ಚಿತ್ರಗಳಲ್ಲಿನ ಪಾತ್ರಗಳ ವೇಷ-ಭೂಷೆ, ನಡೆ-ನುಡಿ ಗಮನಾರ್ಹ. ಅವರ 'ಕೋಟಿ ಚೆನ್ನಯ' ಕೂಡಾ ಅಂಥ ವಿಶೇಷಗಳನ್ನೊಳಗೊಂಡಿತ್ತು.

ಬ್ರಿಟಿಷರ ಕಾಲದಲ್ಲಿ ಮಲೆನಾಡಲ್ಲಿ ಬದುಕಿ ಬಾಳಿ ದಂತಕತೆಯಾಗುಳಿದ ಕನ್ನೇಶ್ವರ ರಾಮನ ಜೀವನವನ್ನು ರಾಬಿನ್‌ಹುಡ್ ಮಾದರಿಯಲ್ಲಿ ಭಾರತೀಕರಣಗೊಳಿಸಿ ವೈಭವೀಕರಿಸದೆ ದರೋಡೆಕೋರರ ಜೀವನವನ್ನು ೧೯೭೭ರಲ್ಲಿ ತೆರೆಯ ಮೇಲೆ 'ಕನ್ನೇಶ್ವರ ರಾಮ' ಚಿತ್ರದಲ್ಲಿ ರೂಪಿಸಿದವರು ಎಂ.ಎಸ್.ಸತ್ಯು.

ಅದೇ ವರ್ಷ ಇನ್ನೆರಡು ಚಿತ್ರ ಐತಿಹಾಸಿಕ ಪಾತ್ರವೆಂಬಂತೆ ಮೆರೆದ ದರೋಡೆಕೋರನ ಜೀವನ ಆಧರಿಸಿ ಹುಣಸೂರು ಕೃಷ್ಣಮೂರ್ತಿ ನಿರ್ದೇಶಿಸಿದ 'ವೀರ ಸಿಂಧೂರ ಲಕ್ಷ್ಮಣ' ವೇಷ-ಭೂಷೆ, ಮಾತುಗಳಲ್ಲಿ ವೃತ್ತಿ ರಂಗಭೂಮಿಯ ಬಣ್ಣ, ಥಳಕು, ಅಬ್ಬರ, ಅರಚಾಟದ ಪಡಿಯಚ್ಚಾಗಿ ಪ್ರೇಕ್ಷಕರ ಮನ ಮುಟ್ಟದೆ ಹೋಯಿತು. ಆದರೆ ೧೯೭೫ರಲ್ಲಿ ದೇವುಡು ಅವರ ಕಾದಂಬರಿ ಆಧರಿಸಿದ 'ಮಯೂರ' ಜನಪ್ರಿಯ ಕಾಸ್ಟ್ಯೂಮ್ ಚಿತ್ರ.

೧೯೭೭ರಲ್ಲಿ ಯು.ಆರ್.ಅನಂತಮೂರ್ತಿಯವರ ಸಣ್ಣಕಥೆ ಆಧರಿಸಿ ಪುಣೆ ಫಿಲಂ ಇನ್‌ಸ್ಟಿಟ್ಯೂಟಿನ ಪದವೀಧರ ಗಿರೀಶ್ ಕಾಸರವಳ್ಳಿ ನಿರ್ದೇಶಿಸಿದ 'ಘಟಶ್ರಾದ್ಧ' ವರ್ಷದ ವಿಶೇಷ ಕೊಡುಗೆ. ಅಲ್ಲಿನ ಸಂಸ್ಕೃತಿಯ ಬೇರುಗಳನ್ನು ಅರಿತ ಗಿರೀಶ್, ಕೆ.ವಿ.ಸುಬ್ಬಣ್ಣ ಹಾಗೂ ದಿವಾಕರ ಇವರೆಲ್ಲರ ಸಂಯುಕ್ತ ನೆರವಿನಿಂದ ಚಿತ್ರದ ಪಾತ್ರಧಾರಿಗಳ ವೇಷ-ಭೂಷೆ, ಬಳಸಿದ ಪರಿಕರಗಳು, ಸುತ್ತಲಿನ ಪರಿಸರ, ಮಾತುಕತೆ ಎಲ್ಲವೂ ಪ್ರತಿ ಫ್ರೇಮಿನಲ್ಲೂ ಸಾಂಕೇತಿಕವಾಗಿದ್ದು ಚಿತ್ರದ ಸಮಗ್ರತೆಗೆ ನೆರವಾದವು.

ಸಾಹಿತಿ ಎಂ.ಚಿದಾನಂದ ಮೂರ್ತಿಯವರ, ೧೬ನೇ ಶತಮಾನದಲ್ಲಿ ವೀರಗತಿ ಹೊಂದುವ ಕದನಗಲಿಗಳ ಕುರಿತ ಪ್ರಬಂಧ ಆಧರಿಸಿ ತಯಾರಾದ 'ಒಂದಾನೊಂದು ಕಾಲದಲ್ಲಿ' ಕಾಲ-ವಸ್ತ್ರ, ನಿರೂಪಣೆಯ ಉತ್ತಮ ಉದಾಹರಣೆ. ಗಿರೀಶ್ ಕಾರ್ನಾಡ್ ನಿರ್ದೇಶನದಲ್ಲಿ ಶಂಕರ್‌ನಾಗ್ ಗಂಡುಗಲಿಯಾಗಿ, ಸುಂದರಕೃಷ್ಣ ಅರಸ್ ಬೆರವಾಡಿಯಾಗಿ ವೇಷ-ಭೂಷೆ, ಕೇಶಾಲಂಕಾರಗಳಲ್ಲಿ ಜಪಾನಿನ ಹರಾಕಿರಿ ಪರಂಪರೆಯ ವೀರಯೋಧರ ಛಾಯೆ ಇದ್ದರೂ ಕನ್ನಡಕ್ಕೆ ಹೊಸದಾದ ಕೊಡುಗೆ ಎನ್ನಬಹುದು.

೧೯೭೮ರಲ್ಲಿ ಕರ್ನಾಟಕದ ಗಿರಿಜನರಾದ ಕಾಡುಕುರುಬರ ಬಡತನ, ಬವಣೆಯ ಜೀವನವನ್ನು ಸರಳವಾಗಿ, ಸಹಜವಾಗಿ ಸೆರೆಹಿಡಿದ ಚಿತ್ರ ಸಿ.ಚಂದ್ರಶೇಖರ್

ನಿರ್ದೇಶನದ 'ಹುಲಿ ಬಂತು ಹುಲಿ'. ಅದೇ ವರ್ಷ ತಮ್ಮ ಕಾದಂಬರಿಯಲ್ಲಿ ನಿರೂಪಿಸಿದ ಪಾತ್ರ, ಪರಿಸರ, ವೇಷ ಭೂಷೆಗೆ ಒತ್ತು ಕೊಟ್ಟು ಅಷ್ಟೇ ನಿಷ್ಠೆಯಿಂದ ತದ್ರೂಪವಾಗಿ ತೆರೆಗೆ ತಂದವರು ಶಿವರಾಮ ಕಾರಂತರು, 'ಮಲೆಯ ಮಕ್ಕಳು' ಚಿತ್ರದಲ್ಲಿ, ಕಲ್ಪನಾರಂತಹ ಸುರಿತ ನಟಿಯನ್ನೂ ಕೈಗೊಂಬೆಯಾಗಿ ರೂಪಿಸಿ ಬಳಸಿದ್ದು ನಿರ್ದೇಶಕರ ಸಾಧನೆ.

೧೯೭೯ರಲ್ಲಿ ಅಲೆಮಾರಿ ದೊಂಬರ ಜೀವನವನ್ನು ಅವರ ಪರಿಸರ, ವೇಷ-ಭೂಷೆಗಳ ಮೂಲಕ ಸಹಜವಾಗಿ ಸೆರೆಹಿಡಿದ ನಿರ್ದೇಶಕ ಹೆಚ್.ಎಂ.ಕೆ.ಮೂರ್ತಿ, 'ದೊಂಬರ ಕೃಷ್ಣ' ಚಿತ್ರದಲ್ಲಿ.

೧೯೮೧ರಲ್ಲಿ ಅಶ್ವತ್ಥರ ಕಾದಂಬರಿ ಆಧರಿಸಿ ವೃತ್ತಿ ರಂಗಭೂಮಿಯ ಹೆಚ್.ಕೆ.ಯೋಗಾನರಸಿಂಹ, ಮುಸುರಿ ಕೃಷ್ಣಮೂರ್ತಿ, ರಾಜಾನಂದ, ದಿನೇಶ್, ಇಂಥ ಅನೇಕ ಪ್ರತಿಭೆಗಳನ್ನು ಸಂಗಮಿಸಿ ಗತಕಾಲದ ರಂಗಭೂಮಿಯ ವಾತಾವರಣ, ರಾತ್ರಿಯ ಪಾತ್ರಗಳ ವೇಷ-ಭೂಷೆ ಹಾಗೂ ಹಗಲಿನಲ್ಲಿ ಕಲಾವಿದರ ಬದುಕು, ಬವಣೆ ಇವೆಲ್ಲವುಗಳನ್ನು 'ರಂಗನಾಯಕಿ'ಗಾಗಿ ಸೃಷ್ಟಿಸಿದರು ಪುಟ್ಟಣ್ಣ ಕಣಗಾಲ್.

ಕರ್ನಾಟಕದ ತುದಿಯಲ್ಲಿರುವ ಬೀದರ್ ಜಿಲ್ಲೆ ತನ್ನದೇ ಭಾಷೆ, ಸಂಸ್ಕೃತಿಯ ಸೊಗಡನ್ನು ಹೊಂದಿರುವ ಬಹುಭಾಷಾ ಕೇಂದ್ರ. ಅಲ್ಲಿ ಆಗಾಗ ಕಾಡುವ ಕ್ಷಾಮದ ವಸ್ತುವನ್ನು ಸಾಹಿತ್ಯದಲ್ಲಿ ಸೆರೆಹಿಡಿದವರು ಯು.ಆರ್.ಅನಂತಮೂರ್ತಿ. ಆದರೆ ಬೀದರ ಜಿಲ್ಲೆಯ ವೇಷ-ಭೂಷೆ ಬಳಸಿ ಸಿ.ಆರ್.ಸಿಂಹ - ಕಂಬಾರ್ ಹಾಗೂ ಇಂತಹವರ ಇನ್ನೂ ಅನೇಕ ಪಾತ್ರಗಳಿಗೆ ಜೀವ ತುಂಬಿಸಿ ೧೯೮೨ರಲ್ಲಿ 'ಬರ' ತೆರೆಗೆ ತಂದವರು ನಿರ್ದೇಶಕ ಎಂ.ಎಸ್.ಸತ್ಯು.

ಮಾತೆ ಮಹಾದೇವಿಯವರ ಸಾಹಿತ್ಯವನ್ನು ಆಧರಿಸಿ ಅವರದೇ ನಿರ್ಮಾಣ, ನಿರ್ವಹಣೆಯಲ್ಲಿ ೧೨ನೇ ಶತಮಾನದ ಉತ್ತರ ಕರ್ನಾಟಕದ ಬದುಕನ್ನು ೧೯೮೩ರಲ್ಲಿ ಮರುಸೃಷ್ಟಿಸಿದ ಚಿತ್ರ 'ಕ್ರಾಂತಿಯೋಗಿ ಬಸವಣ್ಣ'. ನಿರ್ದೇಶಕ : ರವೀ (ಕೆ.ಎಸ್.ಎಲ್.ಸ್ವಾಮಿ).

ಮಲೆನಾಡಿನ ಜೀವನವನ್ನು ಜೀರ್ಣಿಸಿಕೊಂಡ ಎಂ.ಕೆ.ಇಂದಿರಾ ಕಂಡ ಬದುಕಿನ ಒಂದು ವಿಶಿಷ್ಟ ಸಾಹಿತ್ಯದ ನೋಟ 'ಫಣಿಯಮ್ಮ' ಕಾದಂಬರಿ. ಇದನ್ನು ಅಷ್ಟೇ ಸಮರ್ಪಕವಾಗಿ ಅಲ್ಲಿಯ ಸಂಸ್ಕೃತಿಯನ್ನು ಅರಿತ ಪ್ರೇಮಾ ಕಾರಂತರು ಬಾಲವಿಧವೆಯ ಜೀವನದ ಬಹು ಮುಖಗಳನ್ನು ತೆರೆಯ ಮೇಲೆ ರೂಪಿಸಿದ್ದು ೧೯೮೩ರ 'ಫಣಿಯಮ್ಮ' ಚಿತ್ರದಲ್ಲಿ.

ಕಾಲೇಜು ವಿದ್ಯಾರ್ಥಿ ಜೀವನದ ಮಾದಕ ಲೋಕದ ನಿರೂಪಣೆ, ಹಾಗೂ ಅದರ ಬವಣೆ ಅನುಭವಿಸುವ ನಿರಪರಾಧಿ ರಸ್ತೆ ಅಂಚಿನ ಬಡವರ ಬದುಕನ್ನು ಸಶಕ್ತವಾಗಿ, ಸಹಜವಾಗಿ ಸೆರೆ ಹಿಡಿದರು ೧೯೮೫ರಲ್ಲಿ ನಿರ್ದೇಶಕ ಶಂಕರನಾಗ್ 'ಆಕ್ಸಿಡೆಂಟ್' ಚಿತ್ರದಲ್ಲಿ.

ಧಾರ್ಮಿಕ ಪಾತ್ರಗಳನ್ನು ಕೇಂದ್ರವಾಗಿರಿಸಿಕೊಂಡು ಚಿತ್ರನಿರ್ಮಾಣ ಮಾಡುವುದು ಸಾಹಸದ ಕೆಲಸವೇ. ಅಲ್ಪಸ್ವಲ್ಪ ಸೃಜನಾತ್ಮಕ ಸ್ವಾತಂತ್ರ್ಯ ಬಳಸಿದರೆ, ಧಾರ್ಮಿಕ ಭಾವನೆಗೆ ನೋವುಂಟಾದರೆ ಗೊಂದಲ, ಟೀಕೆ, ಟಿಪ್ಪಣಿ, ಬಹಿಷ್ಕಾರದ ಕೂಗು ಮಾಮೂಲು. ಈ ಹಿನ್ನೆಲೆಯಲ್ಲಿ ದಾಸಯ್ಯ ಪಂಥದ ಹಲವಾರು ವ್ಯಕ್ತಿಗಳನ್ನು ಸಂದರ್ಶಿಸಿ, ಛಾಯಾಚಿತ್ರಗಳನ್ನು ದಾಖಲಿಸಿ, ಅವರ ವೇಷ-ಭೂಷೆ, ನಡೆ-ನುಡಿ, ಸಂಪ್ರದಾಯ, ನಂಬಿಕೆಗಳನ್ನು ಆಧರಿಸಿ, ರಾಜಕೀಯ ದೊಂಬರಾಟವನ್ನು ನಿರೂಪಿಸಿದ ಚಿತ್ರ 'ಶಂಖನಾದ'. ಇದರಲ್ಲಿ ಊರುಬಸವಿಯ ಪಾತ್ರದ ವೇಷ-ಭೂಷೆಯಲ್ಲಿ ಅಶ್ಲೀಲತೆಯ ಗೆರೆ ದಾಟದಂತೆ ಕಾಳಜಿ ವಹಿಸಿ ನಿರೂಪಿಸಿದವರು ನಿರ್ದೇಶಕ ಉಮೇಶ್ ಕುಲಕರ್ಣಿ.

(ಚಿತ್ರ ೯) 'ಲಗ್ನಪತ್ರಿಕೆ' · ರಂಜನೆಗಾಗಿ ವಿಶೇಷ ವೇಷಭೂಷಣ

೧೯೮೭, ಚಿತ್ರರಂಗದ ಒಂದು ಹೊಸ ಅಧ್ಯಾಯದ ವರ್ಷ. ಹಾಲಿವುಡ್‌ನಲ್ಲಿ ಚಾಲ್ತಿಯಲ್ಲಿದ್ದ ಸಂಗೀತ-ವಸ್ತ್ರ ರೂಪಕದಿಂದ ಪ್ರೇರಿತರಾಗಿ ಬಣ್ಣದ ಥಳಕು ಬಳುಕಿನ ನೂರಾರು ನೃತ್ಯ ಕಲಾವಿದರು ನಟಿಸಿದ ಹೆಚ್ಚಿನಂಶ ಹಾಡಿನಲ್ಲೇ ಕಥೆ ರೂಪಿಸಿದ ಚಿತ್ರ 'ಪ್ರೇಮಲೋಕ'. ಇವರ ಕಲ್ಪನೆ ಹಾಗೂ ಯಶಸ್ಸಿನಿಂದಾಗಿ ಕನ್ನಡದ 'ಶೋಮ್ಯಾನ್' ಪದವಿ ಗಿಟ್ಟಿಸಿಕೊಂಡ ನಟ-ನಿರ್ದೇಶಕ ರವಿಚಂದ್ರನ್ ಹಾಗೂ ಸಂಗೀತ ನಿರ್ದೇಶಕ ಹಂಸಲೇಖ ಕನ್ನಡದಲ್ಲೊಂದು ಹೊಸ ಪಂಥಕ್ಕೆ ನಾಂದಿ ಹಾಡಿದರು.

ಕುವೆಂಪು ಅವರ ಹಳಗನ್ನಡ ಕೃತಿ ಆಧರಿಸಿದ 'ಬೆರಳ್ಗೆ ಕೊರಳ್'ನಲ್ಲಿ ಏಕಲವ್ಯನ ಕಥನವನ್ನು ಕಾಡುಜನಾಂಗದ ಹಿನ್ನೆಲೆಯಲ್ಲಿ ಸರಳವಾಗಿ ರೂಪಿಸಿದ ನಿರ್ದೇಶಕ ಹರ್ಷವರ್ಧನ್. ಪಂಢರಿಬಾಯಿಯಂಥ ಹಿರಿಯನಟಿ ಮುಜುಗರವಾದರೂ ತುಂಡುವಸ್ತ್ರ ತೊಟ್ಟು ಬೇಡತಿ ಪಾತ್ರವಹಿಸಿದ್ದು ವಿಶೇಷ.

ವಿದೇಶಿ ಸಾಹಿತ್ಯ ಕೃತಿಯನ್ನು ಕನ್ನಡದ ಮಣ್ಣಿಗೆ ಅಳವಡಿಸಿ, ಮೊಗವೀರರ ಜೀವನದ ಹಿನ್ನೆಲೆಯಲ್ಲಿ ರೂಪಿಸಲಾದ ಚಿತ್ರ ಶಂಕರನಾಗ್ ನಿರ್ದೇಶನದ 'ಒಂದು ಮುತ್ತಿನ ಕಥೆ'. ಸಾಗರ ತೀರದಲ್ಲೇ ಮೊಗವೀರರ ಜೀವನದ ಪರಿಸರ ನಿರ್ಮಿಸಿ, ರಂಗಭೂಮಿಯ ಹಲವಾರು ಕಲಾವಿದರ ನಡುವೆ ನಟ ರಾಜಕುಮಾರ್ ಪಾತ್ರವನ್ನು ವೈಭವೀಕರಿಸದೆ, ಸಾಗರದ ಮೇಲೆ ಚಿತ್ರಿಸುವ ಈ ಸಾಹಸ ತೆರೆ ಕಂಡದ್ದು ೧೯೮೭ರಲ್ಲಿ.

ಅದುವರೆಗೆ ಕೇವಲ ಕಪ್ಪು ಬಿಳುಪಿನಲ್ಲಿ ಚಿತ್ರ ನಿರ್ದೇಶಿಸಿದ್ದ ಗಿರೀಶ್ ಕಾಸರವಳ್ಳಿ ೧೯೮೮ರಲ್ಲಿ ವರ್ಣಚಿತ್ರ 'ತಬರನ ಕಥೆ' ನಿರ್ದೇಶಿಸಿದರು. ಪೂರ್ಣಚಂದ್ರ ತೇಜಸ್ವಿಯವರ ಸಶಕ್ತ ಕೃತಿ ಆಧರಿಸಿ ಚಿಕ್ಕಮಗಳೂರು ಜಿಲ್ಲೆಯ ಪರಿಸರದ ಸೂಕ್ಷ್ಮ ವಿವರಗಳನ್ನು ಸಾಹಿತ್ಯದಲ್ಲಿ ಸೆರೆ ಹಿಡಿದಿದ್ದನ್ನು ಅಷ್ಟೇ ನಿಷ್ಠೆಯ ಕಲ್ಪನಾಶಕ್ತಿಯಿಂದ ತೆರೆಗೆ ನೀಡಿದ ನಿರ್ದೇಶಕರು. ಚಾರುಹಾಸನ್‌ರಂಥ ಪರಭಾಷಾ ನಟರಿಗೂ ಸಹಜ ವೇಷ-ಭೂಷೆ ತೊಡಿಸಿ ಕನ್ನಡತನ ರೂಪಿಸುವಲ್ಲಿ ಯಶಸ್ವಿಯಾದರು.

ಒಳಾಂಗಣದಲ್ಲಿ, ಸ್ಟುಡಿಯೋದಲ್ಲಿ ಕೃತಕ ಬೆಳಕು ಹಾಗೂ ಹಿಡಿತವಿರುವ ಸನ್ನಿವೇಶಗಳಲ್ಲಿ ವರ್ಣವಿನ್ಯಾಸ, ವರ್ಣ ಸಂಯೋಜನೆ ಕಲ್ಪಿಸಿ, ಸಾಕಾರಗೊಳಿಸುವುದು ಸಾಧ್ಯ. ಈ ಶೈಲಿಯಲ್ಲಿ ದುಡಿದ ಪುಟ್ಟಣ್ಣ ಕಣಗಾಲ್ ಅವರ ನಂತರ ಕನ್ನಡ ಚಿತ್ರರಂಗಕ್ಕೆ ಕಾಲಿಟ್ಟ ಇನ್ನೊಂದು ಪ್ರತಿಭೆ ಪುಣೆ ಇನ್‌ಸ್ಟಿಟ್ಯೂಟಿನ ಛಾಯಾಗ್ರಹಣ ಪದವೀಧರ ಕೇರಳದ ದಿನೇಶ್ ಬಾಬು. ಇವರ ಮೊದಲ ಪ್ರಯತ್ನ 'ಸುಪ್ರಭಾತ' ಈ ಮಾತಿಗೆ ಸಾಕ್ಷಿ ಎಂಬಂತಿತ್ತು. ಈ ಚಿತ್ರದಲ್ಲಿ ಅಲ್ಲಲ್ಲಿ ಕಂಡ ವಿಶೇಷತೆಗಳೆಂದರೆ ಸೃಷ್ಟಿಯ ಸಹಜ ವರ್ಣಗಳ ಮುಂದೆ ಪಾತ್ರಧಾರಿಗಳ ವಸ್ತ್ರಗಳ ವರ್ಣ, ದೃಶ್ಯದ ಭಾವತಾಕಲಾಟಕ್ಕೆ ತಕ್ಕಂತೆ ಸಂಯೋಜಿಸಿ ಚಿತ್ರಿಸಿದ ವೈಖರಿ ನಂತರದ ಇವರ ಎಲ್ಲ ಚಿತ್ರಗಳಲ್ಲೂ ಅದನ್ನು ಗುರುತಿಸಬಹುದು. ಉದಾಹರಣೆಗೆ 'ಅಮೃತವರ್ಷಿಣಿ'.

ಇಂದಿಗೂ ಉತ್ತರ ಕರ್ನಾಟಕದ ಗ್ರಾಮೀಣ ಬದುಕಿನಲ್ಲಿ ಹೇಳಿಕೊಳ್ಳುವಂಥ ಯಾವುದೇ ಬದಲಾವಣೆಗಳಿಲ್ಲ. ಅಲ್ಲಿಯ ಜನರ ವೇಷ-ಭೂಷೆ, ಬದುಕಿನ ರೀತಿ, ನೆಲೆಸುವ ತಾಣ ಕಾಲನ ಸಾಕ್ಷಿಯಾಗಿಯೇ ನಿಂತಿವೆ. ಹೀಗಾಗಿ ಅಲ್ಲಿಯ ಅತೀತ ಕಾಲದ ಬದುಕಿನ ಹಿನ್ನೆಲೆಯಲ್ಲಿ ಚಿತ್ರ ರೂಪಿಸುವುದು ಅಂಥ ಶ್ರಮದ ಕೆಲಸವೇನಲ್ಲ. ಸಂತರ ಕವನ ಸಾಹಿತ್ಯ ಹಾಗೂ ಅಲ್ಲಿನ ಪರಿಸರದಲ್ಲಿ ಪಾತ್ರಗಳನ್ನು ನೆಟ್ಟು, ಸಹಜ ರೀತಿಯಲ್ಲಿ ವೇಷ-ಭೂಷೆ ಹಾಗೂ ಭಾಷೆಯಿಂದ ನಿರೂಪಿಸಲಾದ ಚಿತ್ರ ನಾಗಾಭರಣ ನಿರ್ದೇಶನದ 'ಸಂತ ಶಿಶುನಾಳ ಷರೀಫ'. ಬಿಜಾಪುರದ ಪರಿಸರ, ಭಾಷೆ, ಉಡುಗೆ-ತೊಡುಗೆಗಳನ್ನು ಸಮರ್ಥವಾಗಿ ಬಳಸಿಕೊಂಡ ಚಿತ್ರಗಳಲ್ಲಿ ಕೆ.ವಿ.ರಾಜು ನಿರ್ದೇಶನದ 'ಹುಲಿಯಾ' ಮುಖ್ಯವಾಗುತ್ತದೆ.

ನೈಸರ್ಗಿಕ ಸಂಪತ್ತಿನಿಂದಾಗಿ ಮಾತ್ರವಲ್ಲ, ವೇಷ-ಭೂಷೆ, ಭಾಷೆ, ಸಂಸ್ಕೃತಿ, ವೀರ ಪರಂಪರೆಯಿಂದಾಗಿ ಕರ್ನಾಟಕ ಅಭಿಮಾನ ಪಡಬಹುದಾದಂತಹ ಜಿಲ್ಲೆ ಕೊಡಗು. ಇಲ್ಲಿಯ ಈ ಎಲ್ಲ ಅಂಶಗಳ ಸಾರ ಇಳಿಸಿ, ವಂ.ಮು.ಜೋಶಿ ಕಥೆ ಆಧರಿಸಿದ 'ಮುತ್ತಿನ

. ಇದೇ ಸಮಯ ತೆರೆಗೆ ಬಂದ ಭಾರತೀಸುತರ 'ಹುಲಿಯ ಹಾಲಿನ ಮೇವು' ಕೂಡಾ ಕಾಸ್ಟ್ಯೂಮ್ ಚಿತ್ರವೇ. ಅದು ಶ್ರೀಮಂತ ಚಿತ್ರವೂ ಆಗಿತ್ತು. ಸಂ.

ಹಾರ' ಒಂದು ಗಂಭೀರ ಕೊಡುಗೆ. ನಿರ್ದೇಶಕ ಎಸ್.ವಿ.ರಾಜೇಂದ್ರಸಿಂಗ್ ಕಥೆಗೆ ತಕ್ಕ ಪರಿಸರ ಸೃಷ್ಟಿಸಿ ಮದುವೆ, ಮರಣ ಇಂಥ ಸನ್ನಿವೇಶಗಳಿಗೆ ವಸ್ತ್ರ ಇತ್ಯಾದಿ ಬಳಸಿದ ರೀತಿ ಉತ್ತಮ ಉದಾಹರಣೆ.

ಪರಿಸರ, ಸಾಹಿತ್ಯ, ವೇಷ-ಭೂಷೆ ಈ ಮೂರು ದೃಷ್ಟಿಯಿಂದಲೂ ನಿರ್ದೇಶಕ ವೃತ್ತಿ ಹಾಗೂ ಕಲಿನಾಶಕ್ತಿ ಸಾಮರ್ಥ್ಯಕ್ಕೆ ಒಂದು ಆಹ್ವಾನವೆಂದು ಪರಿಗಣಿಸಲಾದ ಕಥಾವಸ್ತು ಶಿವಶರಣೆ ಅಕ್ಕಮಹಾದೇವಿಯ ಜೀವನ. ೧೯೯೧ರಲ್ಲಿ ಚಂದ್ರಹಾಸ ಆಳ್ವ ನಿರ್ದೇಶನದಲ್ಲಿ ಕೇವಲ ಕೇಶರಾಶಿಯಿಂದ ಮಾತ್ರ ತನ್ನನ್ನು ಸಮಾಜದ ದೃಷ್ಟಿಯಿಂದ ರಕ್ಷಿಸಿಕೊಂಡ ದಿಗಂಬರೆ ಮಹಾಯೋಗಿನಿಯ ಪಾತ್ರವನ್ನು ಕಲಾವಿದೆ ನಟಿ ಉಮಾ ರಕ್ಷಿಸಿಕೊಂಡ... ವೃತ್ತಿಪರ ಛಲಗಾರಿಕೆಯಿಂದ ರೂಪಿಸಿ ಪ್ರಶಸ್ತಿ ಪಡೆದರೂ ಈ ಚಿತ್ರ ತೆರೆಕಂಡು ಕನ್ನಡಿಗರಿಗೆ ನೋಡಲು ಅವಕಾಶ ದೊರೆಯಲಿಲ್ಲ.

೧೯೯೨ ಒಂದು ದೃಷ್ಟಿಯಿಂದ ಮಹತ್ತರ ವರ್ಷ. ಭಿನ್ನ ಪರಿಸರ, ಪಾತ್ರಗಳನ್ನೊಳಗೊಂಡ ಮೂರು ಚಿತ್ರ ತೆರೆಕಂಡದ್ದು ಈ ವರ್ಷದ ವಿಶೇಷ. ಕೆ.ಎಸ್.ನರಸಿಂಹಸ್ವಾಮಿಯವರ ಕವನ ಆಧರಿಸಿ, ಹಳೆಯ ಮೈಸೂರಿನ ಬದುಕಿನ ಹಿನ್ನೆಲೆಯಲ್ಲಿ ಗಾಂಧಿಯುಗದ ಸ್ವಾತಂತ್ರ್ಯ ಹೋರಾಟದ ಕಾಲವನ್ನು ಸಮರ್ಪಕವಾಗಿ ಪಾತ್ರಗಳ ವೇಷ-ಭೂಷೆ, ಆಭರಣಗಳ ಬಳಕೆಯಿಂದ ರೂಪಿಸಿದ ಚಿತ್ರ ನಾಗಾಭರಣ ನಿರ್ದೇಶನದ 'ಮೈಸೂರ ಮಲ್ಲಿಗೆ'.

ಕರ್ನಾಟಕ ಹವ್ಯಾಸಿ ರಂಗಭೂಮಿಯ ಜನಪ್ರಿಯ ನಾಟಕ 'ಸಂಗ್ಯಾ ಬಾಳ್ಯಾ' ಜನಪದ ಕಥೆ ಆಧರಿಸಿ, ಲೇಖಕ ಎಫ್.ಡಿ.ಸಾಲಿ ನೆರವಿನಿಂದ ಉತ್ತರ ಕರ್ನಾಟಕದ ಜಾತ್ರೆ, ದೇಸಾಯಿ ವಾಡೆಗಳ ನಡುವೆ ಹೆಣ್ಣಿನ ಬದುಕು, ದೌರ್ಜನ್ಯ, ಶೋಷಣೆ ಇವುಗಳನ್ನು ಪಾತ್ರಗಳ ವೇಷ-ಭೂಷೆ, ಆಭರಣಗಳ ಸಮಗ್ರ ಹಾಗೂ ಸಮರ್ಪಕ ಬಳಕೆ ಮಾಡಿ ೧೯೯೨ರಲ್ಲಿ ತೆರೆಕಂಡದ್ದು ಸುಂದರಕೃಷ್ಣ ಅರಸ್ ನಿರ್ದೇಶನದ 'ಸಂಗ್ಯಾ ಬಾಳ್ಯಾ'.

ಮೊದಲೇ ನಿರ್ಮಿತವಾಗಿದ್ದರೂ ವಿಳಂಬವಾಗಿ ಬಿಡುಗಡೆಯಾದ ಚಿತ್ರ, ವಿಶುಕುಮಾರ್ ಸಾಹಿತ್ಯ ಆಧರಿಸಿದ 'ಪ್ರಜೆಗಳು-ಪ್ರಭುಗಳು'. ಭೀಮಾ ನಾಗರಾಜ್, ವಿಜಯಲಕ್ಷ್ಮಿ ನಿರ್ದೇಶನದಲ್ಲಿ ನಗರದ ಕೊಳಚೆ ಪ್ರದೇಶದ ಓಟುಬ್ಯಾಂಕಿನ ಸುತ್ತ ಗಿರಕಿ ಹೊಡೆಯುವ ರಾಜಕಾರಣಿಗಳನ್ನು ಕುರಿತಾದ ಈ ಚಿತ್ರದಲ್ಲಿ ಕೊಳಚೆ ಪ್ರದೇಶಗಳ ನೈಜಚಿತ್ರಣ ಮಾತ್ರವಲ್ಲ, ನಾಯಕನಾಗಿ ಮೈಸೂರು ಲೋಕೇಶ್ ನಟಿಸಿದ ತಮಿಳು ಪಾತ್ರದ ವೇಷ-ಭೂಷೆ, ಎಲೆ-ಅಡಿಕೆ ಜಗಿಯುತ್ತ ಮಾತಾಡುವ ಕನ್ನಡದ ರೀತಿ ಪ್ರಶಸ್ತಿ ಗಳಿಸಿತು. ಬಹುಶಃ ವಸ್ತ್ರ ವಿನ್ಯಾಸ ಹಾಗೂ ವರ್ಣಾಲಂಕಾರ ಅಧ್ಯಯನಕ್ಕೆ ಹೇಳಿಮಾಡಿಸಿದಂಥ ಪಾತ್ರ ಇದು.

ವೃತ್ತಿ ರಂಗಭೂಮಿಯ ವಿಶಾಲ ಅನುಭವ ಹಾಗೂ ಅದರ ಸಾಧ್ಯತೆ, ಇತಿ-ಮಿತಿ ಅರಿತ ನಟಿ-ನಿರ್ಮಾಪಕಿ ಚಿಂದೋಡಿ ಲೀಲಾ ೧೯೯೫ರಲ್ಲಿ ಅರ್ಪಿಸಿದ 'ಗಾನಯೋಗಿ ಪಂಚಾಕ್ಷರ ಗವಾಯಿ' ಚಿತ್ರ ಉತ್ತರ ಕರ್ನಾಟಕದ ಸಮಕಾಲೀನ ಸಂಗೀತಗಾರನ ಬದುಕನ್ನು ವೇಷ-ಭೂಷೆ ಹಾಗೂ ಪರಿಸರ ದೃಷ್ಟಿಯಿಂದ ಸಮಗ್ರವಾಗಿ, ಸಮರ್ಪಕವಾಗಿ ರೂಪಿಸಿದ ಚಿತ್ರವೆಂದು ಹೇಳಬಹುದು.

ಕಥಾವಸ್ತು ವಿಶಾಲ ಹಿನ್ನೆಲೆಯಿಂದ ಮುಂದೆ ಬಂದಿದ್ದರೆ, ಅದು ಸಾರ್ವತ್ರಿಕವಾಗಿ ಹಾಗೂ ವ್ಯಾಪಕವಾಗಿ ಗುರುತಿಸುವಂತಿದ್ದರೆ, ಅದರ ನಿರೂಪಣೆಯಲ್ಲಿ ನಿರ್ದೇಶಕರಿಗೆ ಅಗಾಧ ಜ್ಞಾನ ಇರಬೇಕಾದುದು ಅವಶ್ಯ. ಭಯೋತ್ಪಾದನೆ ವಸ್ತುವನ್ನು ಪಂಜಾಬಿ ಹಿನ್ನೆಲೆಯ ನಾಯಕ, ಕರ್ನಾಟಕದ ಹಿನ್ನೆಲೆಯ ನಾಯಕಿ, ದೆಹಲಿಯಲ್ಲಿ ಹಿಂಸಾಚಾರ, ಬಾಂಬ್ ಸ್ಫೋಟ ಹೀಗೆ ಕಥೆಯ ಹರವು ಹೆಚ್ಚಿದಂತೆ ಪಾತ್ರಚಿತ್ರಣ ಬಹಳಷ್ಟು ನೈಜತೆ ನಿರೀಕ್ಷಿಸುತ್ತದೆ. ಈ ಎಲ್ಲ ಅಂಶಗಳನ್ನೂ ಅಧ್ಯಯನ ಮಾಡಿ, ತೆರೆಯ ಮೇಲೆ ರೂಪಿಸಿದವರು ಎಂ.ಎಸ್.ಸತ್ಯು, 'ಗಳಿಗೆ' ಚಿತ್ರದಲ್ಲಿ. ಕೇವಲ ಪಂಜಾಬಿ, ಹಿಂದಿ, ಕನ್ನಡ ಭಾಷೆ ಬಳಕೆಯಷ್ಟೇ ಅಲ್ಲ, ಪಂಜಾಬ್ ಪೊಲೀಸ್, ದೆಹಲಿ ಶಾಲಾಮಕ್ಕಳ ಸಮವಸ್ತ್ರ, ಕನ್ನಡದ ಮಧ್ಯಮ ವರ್ಗದ ತಂದೆ-ತಾಯಿಗಳು, ಅವರ ಜೀವನ ರೀತಿ, ಹೀಗೆ ಬದುಕಿನ ಹಲವಾರು ಸ್ತರಗಳನ್ನು ಸ್ಪಷ್ಟ ಗುರುತಿಸುವ ಪ್ರಯತ್ನ ಇದರಲ್ಲಿ ಎದ್ದು ಕಾಣುತ್ತಲಿತ್ತು.

ಚಿತ್ರನಿರ್ಮಾಣದಲ್ಲಿ ತೊಡಗಿರುವ ಹಲವಾರು ವೃತ್ತಿನಿರತರ ಕನಸು, ತಮ್ಮ ವೃತ್ತಿ ವಿಶೇಷವನ್ನು ಚಿತ್ರದುದ್ದಕ್ಕೂ ಮೆರೆಯುವಂಥ ಒಂದು ಚಿತ್ರದ ನಿರ್ಮಾಣ, ನಿರ್ದೇಶನ ಕಾಣಿಕೆಯನ್ನು ಚಿತ್ರರಂಗಕ್ಕೆ ನೀಡಬೇಕೆನ್ನುವುದು. ಇದು ನೃತ್ಯನಿರ್ದೇಶಕ, ಕಲಾನಿರ್ದೇಶಕ, ಛಾಯಾಗ್ರಾಹಕ, ಸಂಕಲನಕಾರ, ಸಾಹಸ ನಿರ್ದೇಶಕ ಎಲ್ಲರಿಗೂ ಅನ್ವಯಿಸುವಂಥ ಮಾತು. ಈ ಹಿನ್ನೆಲೆಯಲ್ಲಿ ವಸ್ತ್ರ ವಿನ್ಯಾಸಕಾರನ ಮಹತ್ವ ಹಾಗೂ ಭಾವನಾತ್ಮಕ ಕೊಡುಗೆ ಎತ್ತಿ ಹಿಡಿಯುವಂಥ ಯಶಸ್ವಿ ಚಿತ್ರ 'ತಾಯಿ ಕೊಟ್ಟ ಸೀರೆ' ೧೯೯೭ರ ಕೊಡುಗೆ. ಇದರ ನಿರ್ದೇಶಕರು ಎಸ್.ನಾರಾಯಣ್.

ಜಾನಪದ ಕಥಾವಸ್ತುವಿರುವ ನಾಟಕದ ಹಿನ್ನೆಲೆಯ ಗಿರೀಶ್ ಕಾರ್ನಾಡ್ ರಚಿಸಿದ ಕೃತಿಯನ್ನು ಹವ್ಯಾಸಿ ರಂಗಭೂಮಿ ಅನುಭವವಿರುವ ನಾಗಾಭರಣ ನಿರ್ದೇಶನದಲ್ಲಿ, ಉತ್ತರ ಕರ್ನಾಟಕದ ಹಿನ್ನೆಲೆಯಲ್ಲಿ ವಸ್ತ್ರಾಭರಣ ಪ್ರಧಾನ ಚಿತ್ರವಾಗಿ ಸಮರ್ಪಕವಾಗಿ ರೂಪಿತವಾದ ಚಿತ್ರ 'ನಾಗಮಂಡಲ', ೧೯೯೭ರ ವಿಶೇಷ ಸಾಧನೆ.

ಅದೇ ವರ್ಷ ಅಣೆಕಟ್ಟಿನ ನಿರ್ಮಾಣದ ಮುಳುಗಡೆಯಾಗುವ ಗಿರಿಜನರ ಕಾಡಿನ ಜೀವನದ ಸುತ್ತ ನಿರೂಪಿತವಾದ ಚಿತ್ರ, ಕೇಸರಿ ಹರವು ನಿರ್ದೇಶನದ 'ಭೂಮಿ ಗೀತೆ'. 'ರಂಗಾಯಣ' ಕಲಾವಿದರು ಗಿರಿಜನರಾಗಿ ಧರಿಸಿದ ವೇಷ-ಭೂಷೆ ಹಾಗೂ ಗಿರಿಜನರ ಗುಡಿಸಲುಗಳು ಸಹಜತೆಯಿಂದಾಗಿ ವಿಮರ್ಶಕರ ಗಮನ ಸೆಳೆದವು.

ಈ ಮೊದಲು ಹಲವಾರು ವರ್ಣಚಿತ್ರಗಳನ್ನು ನಿರ್ದೇಶಿಸಿದ್ದ ಗಿರೀಶ್ ಕಾಸರವಳ್ಳಿ, ೧೯೯೮ರಲ್ಲಿ ರಂ.ಶಾ.ರವರ 'ತಾಯಿ ಸಾಹೇಬ' ಕಾದಂಬರಿ ಆಧರಿಸಿದ ಚಿತ್ರದಲ್ಲಿ ಚಿತ್ರನಿರ್ಮಾಣದ ಎಲ್ಲ ವಿಭಾಗಗಳಲ್ಲಿ ಹಿಡಿತ ತೋರಿದರು. ಸ್ವಾತಂತ್ರ್ಯಪೂರ್ವ ಗಾಂಧಿಯುಗದ ಬದುಕಿನ ರೀತಿಯನ್ನು ಉತ್ತರ ಕರ್ನಾಟಕದ ದೇಸಾಯಿ ನಾಡಿನ ಪರಿಸರದಲ್ಲಿ, ಹೆಣ್ಣು, ಗಂಡು, ವಿಧವೆ, ಸೂಳೆ, ಯುವಕ-ಯುವತಿ ಹೀಗೆ ಅನೇಕ ಹರವುಗಳ ಪಾತ್ರಗಳನ್ನು ಅವುಗಳ ಸಮಗ್ರ ವೇಷ-ಭೂಷೆ, ಬಳಸುವ ಪರಿಕರಗಳಿಗೆ ಗಮನ ಕೊಟ್ಟು, ಛಾಪೆಯನ್ನು ಮೂಡಿಸಿಕೊಂಡರು. ವಿಮರ್ಶಕರಿಂದ ಸೈ ಎನಿಸಿಕೊಂಡರು. ಕಲಾನಿರ್ದೇಶನ, ವಸ್ತ್ರವಿನ್ಯಾಸಕ್ಕೆ ಅಧ್ಯಯನಯೋಗ್ಯ ಚಿತ್ರ 'ತಾಯಿ ಸಾಹೇಬ'.

ಈ ಅರುವತ್ತಾರು ವರ್ಷಗಳ ಕನ್ನಡ ಚಲನಚಿತ್ರರಂಗದ ಇತಿಹಾಸದಲ್ಲಿ ವಸ್ತ್ರವಿನ್ಯಾಸ ದೃಷ್ಟಿಯಿಂದ ಉಲ್ಲೇಖನೀಯ ಚಿತ್ರಗಳು ಬೆರಳೆಣಿಕೆಯಷ್ಟು ಎಂಬ ಉತ್ತರ ನಿರಾಸೆ ತಂದರೂ, ಇನ್ನೂ ಕೆಲವು ಅಂಶ ಹೇಳದಿದ್ದರೆ ಈ ವೃತ್ತಿಗೆ ಕುಂದುಂಟಾದೀತು.

ಸಿನಿಮಾ ಕೇವಲ ಪ್ರಭಾವ ಬೀರುವ ಮಾಧ್ಯಮವಷ್ಟೇ ಅಲ್ಲ, ಹಲವಾರು ಪ್ರಭಾವಕ್ಕೆ ಒಳಗಾದ ಮಾಧ್ಯಮವೂ ಹೌದು. ಹಾಲಿವುಡ್ ಇಂಗ್ಲಿಷ್ ಚಿತ್ರಗಳು, ಮುಂಬಯಿ ಹಿಂದಿ ಚಿತ್ರಗಳು, ಸ್ಥಳೀಯ ಸಾಹಿತ್ಯ ಕೃತಿಗಳು, ನಾಟಕಗಳು ಹಾಗೂ ಬಹು ಮುಖ್ಯವಾಗಿ ಸಿನಿಮಾ ಗಿಟ್ಟಿಸಿಕೊಂಡಿರುವ ಬಹುಭಾಷಾ ಪ್ರೇಕ್ಷಕರ ನಿರೀಕ್ಷೆಗಳು ಕನ್ನಡ ಚಿತ್ರದ ಸ್ವರೂಪದಲ್ಲಿ ನಿರ್ಣಾಯಕ ಅಂಶಗಳು.

ಕರ್ನಾಟಕ ರಾಜ್ಯವನ್ನು ಪರಭಾಷೆಯ ಸೀಮೆಗಳಾದ ತಮಿಳುನಾಡು, ಕೇರಳ, ಆಂಧ್ರ, ಗೋವಾ, ಮಹಾರಾಷ್ಟ್ರ ಆವರಿಸಿದೆ. ಅಲ್ಲಿಯ ಸಾಂಸ್ಕೃತಿಕ ಛಾಯೆಯ ಪಾತ್ರಗಳು ಇಲ್ಲಿನ ಚಿತ್ರಗಳಲ್ಲಿ ಇಣುಕುವುದು ಸಹಜ. ಇದರಂತೆಯೇ ರಾಜಧಾನಿ ಬೆಂಗಳೂರು ಬಹು ಭಾಷಿಕರ ನೆಲೆಯಾಗಿರುವುದರಿಂದ ಇಲ್ಲಿ ಹಣಕಾಸಿನ ವ್ಯವಹಾರದ ಮಾರವಾಡಿಗಳು, ಸೇಟುಗಳು, ಸರ್ದಾರಜೀಗಳು ಹಾಗೂ ಮುಸ್ಲಿಮರನ್ನು ಕಾಣಬಹುದು. ಇಲ್ಲಿನ ವಿದೇಶೀಯರೂ ಇಲ್ಲಿ ನೆಲೆಸಿ ಬದುಕಿನ ಒಡನಾಟ ಹೊಂದಿದ್ದಾರೆ. ಹೀಗಾಗಿ ಈ ಪಾತ್ರಗಳ ಛಾಯೆಗಳನ್ನು ಅಲ್ಲಲ್ಲಿ ಕೆಲವು ಕನ್ನಡ ಚಿತ್ರಗಳಲ್ಲಿ ಅವುಗಳ ವೇಷ-ಭೂಷೆ, ಭಾಷೆಯಿಂದ ಗುರುತಿಸಬಹುದು.

ಇದಲ್ಲದೆ ಕರ್ನಾಟಕದಲ್ಲೇ ಹೈದರಾಬಾದ್ ಕನ್ನಡಿಗರು, ಮುಂಬೈನ ಉತ್ತರ ಕರ್ನಾಟಕದ ಕನ್ನಡಿಗರು, ದಕ್ಷಿಣ ಕನ್ನಡದವರು, ಕೊಡಗಿನವರು, ಹಳೆ ಮೈಸೂರಿನವರ ಬದುಕಿನಲ್ಲಿ, ಭಾಷೆ, ವೇಷ-ಭೂಷೆಗಳಲ್ಲಿ ವೈಯಕ್ತಿಕ ಛಾಯೆ ಇರುವುದಷ್ಟೇ ಅಲ್ಲ, ವೈವಿಧ್ಯವೂ ಇದೆ. ಇದಕ್ಕೆ ಕೊಂಕಣಿ, ತುಳು, ಕೊಡವ ಮಾತಾಡುವ ಪಾತ್ರಗಳು ಸೇರಿದರೆ ಮತ್ತಷ್ಟು ಮೆರುಗು.

ಇಂಥ ವಿಪುಲ, ಸೃಜನಾತ್ಮಕ ಅವಕಾಶವನ್ನು ಸಮರ್ಥವಾಗಿ ಬಳಸಿಕೊಂಡ ನಿರ್ದೇಶಕರು ಎಷ್ಟು ಜನ ?. ಯಾವುದೋ ಒಂದೆರಡು ಚಿತ್ರದಲ್ಲಿ ಮಹಾರಾಷ್ಟ್ರದ ತಮಾಷಾ (ದೂರದ ಬೆಟ್ಟ), ಕವ್ವಾಲಿ, ಮುಜರಾ (ಕೆಸರಿನ ಕಮಲ), ಭಾಂಗಡಾ, ಯಕ್ಷಗಾನ (ಬಣ್ಣದ ವೇಷ) ಬಳಸಿ ಪ್ರಾದೇಶಿಕತೆಯ ಜೊತೆ ರಾಷ್ಟ್ರೀಯತೆ ಮೆರೆಯುವ ಬದಲು ಎಲ್ಲ ಚಿತ್ರಗಳಲ್ಲಿ ಒಂದೇ ಪಡಿಯಚ್ಚಿನಂತಿರುವ ಕ್ಯಾಬರೆ, ಕ್ಲಬ್ ಡ್ಯಾನ್ಸ್, ಡಿಸ್ಕೋ ಡ್ಯಾನ್ಸ್ ತುರುಕಿ ನಿರೂಪಿಸುತ್ತಿರುವುದು ಯಾವ ಸಂಸ್ಕೃತಿಯ ಪ್ರತಿರೂಪ ?.

ಕನ್ನಡ ಚಿತ್ರರಂಗದ ಆರಂಭ ಕಾಲದಲ್ಲಿ ಚಿತ್ರ ಹೊರ ರಾಜ್ಯಗಳಲ್ಲಿ, ನೆರೆ ರಾಜ್ಯಗಳಲ್ಲಿ ನಡೆಯುತ್ತಿತ್ತು. ಕೆಲವು ಕಲಾವಿದರು, ಲೇಖಕರನ್ನು ಬಿಟ್ಟರೆ ಅವುಗಳಲ್ಲಿ ಕನ್ನಡಿಗರ ಸಕ್ರಿಯ ಪಾತ್ರ ಕಡಿಮೆ ಎಂದೇ ಹೇಳಬಹುದು. ಹೀಗಾಗಿ ಕನ್ನಡ ಸಾಂಸ್ಕೃತಿಕ

ವಾತಾವರಣದ ಕೊರತೆ, ಅದನ್ನು ಅರಿತಿರುವ ಚಿತ್ರತಂಡದವರ ಅಭಾವ, ಜೊತೆಗ ಕನ್ನಡಕ್ಕ ಸೀಮಿತ ಮಾರುಕಟ್ಟೆ ಇದೆ ಎಂಬ ತಲೆ ಮೇಲೆ ತೂಗುವ ಖಡ್ಗದಿಂದಾಗಿ ಬಹುವೆಚ್ಚ ಮಾಡದೆ ಇತರ ಭಾಷೆಯ ಚಿತ್ರದವರು ಬಳಸಿಬಿಟ್ಟ ಸೆಟ್ಟುಗಳು ಅವುಗಳ ಶಿಲ್ಪ ವೈಖರಿ ಪಾಂಡ್ಯ, ಚೋಳ ರಾಜ್ಯದಂತಿರಲಿ ಅಥವಾ ಭೋಸಲೆ, ಸಿಂಧೆ ಪರಂಪರೆಯದಿರಲಿ ಹಾಗೂ ಅಲ್ಲಿನ ಕಲಾವಿದರ ಉಡುಗೆ ತೊಡುಗೆ, ಕೇಶಾಲಂಕಾರ ಬಳಸಿ ಚಿತ್ರ ನಿರ್ಮಾಣ ಮಾಡಬೇಕಿತ್ತು. ಎಷ್ಟೋ ಬಾರಿ ಯಶಸ್ವಿ ಚಿತ್ರವನ್ನು ಅನುಸರಿಸಿ ಚಿತ್ರಗಳನ್ನು ರೂಪಿಸಬೇಕಿತ್ತು. ಹೀಗಾಗಿ ಅಂದಿನ ಚಿತ್ರಗಳಲ್ಲಿ ಕನ್ನಡತನ ನಿರೀಕ್ಷಿಸುವುದು ಸಾಧ್ಯವಾಗದ ಮಾತಾಗಿತ್ತು. ಅಂದಿನ ಜಾನಪದ ಚಿತ್ರವಾಗಲಿ, ಐತಿಹಾಸಿಕ ಚಿತ್ರವಾಗಲಿ ಅದಕ್ಕೆ ಒಂದು ಕಾಲದ ಚೌಕಟ್ಟು, ಸಂಸ್ಕೃತಿಯ ಗಂಧವೂ ಇರಲಿಲ್ಲ. ಆದರೆ ಮುಂದೆ ಕನ್ನಡದಲ್ಲಿ ಕೋಟಿ ರೂಪಾಯಿ ವೆಚ್ಚದ ಚಿತ್ರ ನಿರ್ಮಾಣ ನಡೆದಿದೆ. ನಿರ್ಮಾಣದ ಸಕಲ ಸೌಲಭ್ಯಗಳೂ ಉಂಟಾಗಿವೆ. ಚಿತ್ರೀಕರಣಕ್ಕಾಗಿ ವಿದೇಶಕ್ಕೂ ಹೋಗುವಷ್ಟು ಚೈತನ್ಯ ಇದೆ. ಆದರೆ ಈಗಲೂ ಆತ್ಮವಿಶ್ವಾಸ ಸಾಲದೆ ಸಿದ್ಧಯಶಸ್ಸಿನ ಸೂತ್ರವೆಂದು ಇತರ ಭಾಷೆಯ ರೀಮೇಕ್ ಹಕ್ಕುಗಳನ್ನು ತಂದು ಚಿತ್ರದ ತದ್ರೂಪ ಛಟ್ಟಿ ಇಳಿಸುತ್ತೇವೆ. ನಮ್ಮದಲ್ಲದ ಅನೇಕ ಸಂಪ್ರದಾಯಗಳನ್ನು, ಜೀವನ ಶೈಲಿಯನ್ನು ಮೂಲಚಿತ್ರದಲ್ಲಿದೆ ಎಂಬ ಒಂದೇ ಕಾರಣಕ್ಕಾಗಿ ಕನ್ನಡದಲ್ಲೂ ತುರುಕಿ ಪರಕೀಯರಾಗುತ್ತಿದ್ದೇವೆ. ನಮ್ಮ ಚಿತ್ರದಲ್ಲಿ ಭಾಗವಹಿಸುವ ನಾಯಕಿಯರು, ತಂತ್ರಜ್ಞರು, ಸಂಗೀತಗಾರರು ಹೊರನಾಡಿನ ಬೇರಿನವರಾದಾಗಲಂತೂ ಇದಕ್ಕೆ ಮತ್ತಷ್ಟು ಕುಮ್ಮಕ್ಕು ದೊರೆಯುತ್ತದೆ. ನಮ್ಮ ಚಿತ್ರಗಳಲ್ಲೂ ಕಾವಡಿ ಹೊರುವುದು, ಅಯ್ಯಪ್ಪನಿಗೆ ಮಾಲೆ ಹಾಕುವುದು, ತಮಿಳು ಮಾದರಿಯಲ್ಲಿ ಪಂಚೆ ಉಟ್ಟು ಭುಜದ ಮೇಲೆ ಶಲ್ಯ ಧರಿಸುವುದು, ಗ್ರಾಮದ ಮಹಿಳೆಯರೆಲ್ಲರೂ ನಾಯಕ-ನಾಯಕಿಯ ಜೊತೆ ಪ್ರೇಮಗೀತೆಗಳಲ್ಲಿ ಕುಣಿಯುವುದು, ನಾಯಕಿ ಹಣೆಗೆ ಭಸ್ಮ ಧರಿಸುವುದು, ಮಾತಿನಲ್ಲಿ 'ಅಣ್ಣೆ' ಇತ್ಯಾದಿ ಪದ ಬಳಸುವುದನ್ನು ಕಾಣಬಹುದು.

ಚಿತ್ರನಿರ್ಮಾಣಕ್ಕಾಗಿ ಹಣ ನೀಡುವವರು ಹಾಗೂ ಪಾತ್ರಧಾರಿಗಳು ಉತ್ತರ ಭಾರತದ ಸಿಂಧಿಗಳು, ಮಾರ್ವಾಡಿಗಳು, ಗುಜರಾತಿಗಳು ಆಗಿದ್ದಾಗ ನುಸುಳಿಕೊಂಡು ಬಂದ ಕೆಲವಾರು ಸಂಪ್ರದಾಯಗಳೆಂದರೆ ವಧು ಮದುವೆಯಲ್ಲಿ ಕೆಂಪು ಸೀರೆ ಉಡುವುದು, ವಿಧವೆ ಬಿಳಿ ಸೀರೆ ಉಡುವುದು, ಪಂಜಾಬಿ, ರಾಜಸ್ಥಾನಿ ವೇಷ-ಭೂಷೆಗಳಲ್ಲಿ ನಾಯಕ-ನಾಯಕಿ ಕುಣಿಯುವುದು, ಮದುವೆಯ ಮೆರವಣಿಗೆಯ ಮುಂದೆ ಕುಣಿಯುತ್ತಾ ಹಾಡುವುದು, ಇಂಥ ಅನೇಕವನ್ನು ನಮ್ಮ ಕನ್ನಡ ಚಿತ್ರಗಳಲ್ಲಿ ಕಾಣಬಹುದು.

ಕನ್ನಡದ ಹೆಚ್ಚಿನ ಚಿತ್ರಗಳಲ್ಲಿನ ದೋಷವೆಂದರೆ ಚಿತ್ರದ ಹಾಡುಗಳು ಮೂಲಪರಿಸರಕ್ಕೆ, ಪಾತ್ರಪೋಷಣೆಗೆ ಪ್ರತ್ಯೇಕವಾಗಿ ಉಳಿಯುವುದು. ಈ ಅಪವಾದಕ್ಕೆ ಪುಟ್ಟಣ್ಣನಂಥ ನಿರ್ದೇಶಕರೂ ಹೊರತೇನಲ್ಲ. ಆದರೆ ಅವರು ಕಥೆಯ ಇತಿ-ಮಿತಿ ಅರಿತು ತೆರೆಯ ಮೇಲೆ ಸ್ವಲ್ಪ ಕಾಲ ಮಾತ್ರ ಅಲ್ಪ ಸ್ವಾತಂತ್ರ್ಯ ಬಳಸಿ ಮತ್ತೆ ಮೂಲಕಥೆಗೆ ಮರಳಿ ಬರುತ್ತಿದ್ದರು. ಹಾಡಿನ ಹಿನ್ನೆಲೆ ತಾಣ ಮಾತ್ರ ಭ್ರಮಾಲೋಕಕ್ಕೆ ಕರೆದೊಯ್ಯುತ್ತಿದ್ದವು. ಅವು ನಮ್ಮದೇ ನೆಲೆ ಆಗಿದ್ದರಿಂದ ನಮ್ಮ ನೆಲದ ಸೌಂದರ್ಯ ಎದ್ದುಕಂಡು ಆಭಾಸ ಎನಿಸುತ್ತಿರಲಿಲ್ಲ. ಈಗಿನ ಮಾತೇ ಬೇರೆ. ಹೊಸಿಲು ದಾಟದ ಗೌರಮ್ಮನಂಥ ನಾಯಕಿ ಪ್ರೇಮಾಂಕುರವಾದೊಡನೆ ತಕ್ಷಣವೇ ಬಣ್ಣಬಣ್ಣದ ಬಿಗಿ ಉಡುಪು ತೊಟ್ಟು ವಿದೇಶಗಳ ಬೀದಿಯಲ್ಲಿ ಪರಕೀಯರ ಮುಂದೆ ನಾಯಕನ ಜೊತೆ ಉದ್ರೇಕದಿಂದ ಕುಣಿಯುತ್ತಾಳೆ. ಮತ್ತೆ ಕಥೆಗೆ ಮರಳಿದಾಗ ಅದೇ ಬಿಚ್ಚೋಲೆ ಗೌರಮ್ಮನ ಸಮಸ್ಯೆಗಳು ನಿರೂಪಿತವಾಗುತ್ತವೆ.

(ಚಿತ್ರ ೧೦) 'ಧರಣಿ ಮಂಡಲ ಮಧ್ಯದೊಳಗೆ' - ಲಂಬಾಣಿ ಮತ್ತು ಗ್ರಾಮೀಣ ಕನ್ಯೆಯರು

'ಹಸಿ ಮಾಂಸ ಮತ್ತು ಹದ್ದುಗಳು' ಗೀತಾ ನಾಗಭೂಷಣ ಕಾದಂಬರಿ ಆಧರಿಸಿ, ದೊರೆ-ಭಗವಾನ್ ನಿರ್ದೇಶಿಸಿದ 'ಹೆಣ್ಣಿನ ಕೂಗು' ಉತ್ತರ ಕರ್ನಾಟಕದ ಗ್ರಾಮದ ಕಥಾವಸ್ತುವಿನ ಚಿತ್ರ. ಇದರಲ್ಲಿ ನೆಲದ ಬಿರುಕು, ಒಣಗಿದ ವೃಕ್ಷ, ಶುಭ್ರ ಆಕಾಶ, ಅನ್ನ ನೀರಿಗಾಗಿ ಜನರ ಬವಣೆ ನಿರೂಪಿತವಾಗುತ್ತವೆ. ಅಷ್ಟರಲ್ಲಿ ನಾಯಕ-ನಾಯಕಿಯ ಪ್ರೇಮಗೀತೆ ಆರಂಭವಾಗಿ, ಹಿನ್ನೆಲೆಯಲ್ಲಿ ಶ್ರೀರಂಗಪಟ್ಟಣದ ಆಸುಪಾಸಿನ ಹಸಿರು ಭತ್ತದ ಗದ್ದೆಗಳು, ಕಾವೇರಿ ನದಿ ಕಾಣುವುದು. ಹಾಡಿನ ನಂತರ ಮತ್ತೆ ಗ್ರಾಮದ ಕತೆ ಮುಂದುವರೆಯುವುದು. ಚಿತ್ರದ ಅಂತ್ಯದಲ್ಲಿ ನಾಯಕಿ ಸರಿತಾ ತಂದೆಯ ಹಸಿವು ನೀಗಿಸಲು ಅಕ್ಕಿಯನ್ನು ಪಕ್ಕದ ಮನೆಯಿಂದ ತರಲು ಹೋಗುತ್ತಾಳೆ. ಆಗ ಆಕೆ ಧರಿಸಿದ ವೇಷ, ದುಃಖದ ಸಂಕೇತವಾಗಿ ಗಂಜಿ ಹಾಕಿದ ಕಪ್ಪು ಬಣ್ಣದ ಗರಿಗರಿ ಸೀರೆ, ಅದಕ್ಕೆ ಹೊಂದುವ ವರ್ಣದ ಕುಪ್ಪಸ, ಬಳೆ, ಉಗುರಿನ ಬಣ್ಣ. ಖ್ಯಾತ ನಟಿಯರಾದ ಶಬನಾ ಆಜ್ಮಿ, ದೀಪ್ತಿ ನವಲ್, ಸ್ಮಿತಾ ಪಾಟೀಲ್‌ರಿಂದ ಶ್ಯಾಮ್ ಬೆನಗಲ್, ಗೋವಿಂದ ನಿಹಲಾನಿ, ಜಬ್ಬಾರ್ ಪಟೇಲ್‌ರಿಗೆ ಪಡೆಯಲು ಸಾಧ್ಯವಾದ ಸಹಜತೆ, ಸಹಕಾರ ಕನ್ನಡದ ನುರಿತ ನಿರ್ದೇಶಕದ್ವಯರಿಗೆ ಏಕೆ ಸಾಧ್ಯವಾಗಲಿಲ್ಲ ಎಂಬ ಪ್ರಶ್ನೆ ಯಾರನ್ನಾದರೂ ಕಾಡುತ್ತದೆ.

ಬಹುಶಃ ಚಿತ್ರಗಳಲ್ಲಿ ದುರುಪಯೋಗವಾದ ಪ್ರಮುಖ ಮೂರು ವಸ್ತ್ರಗಳೆಂದರೆ ಖಾದಿ, ಖಾಕಿ, ಕಾವಿ. ಇಡೀ ದೇಶವನ್ನು ಸ್ವದೇಶೀ ಚಳವಳಿಯಲ್ಲಿ ಬಡಿದೆಬ್ಬಿಸಿ ವಿದೇಶಿ ವಸ್ತ್ರವನ್ನು ಸುಟ್ಟು, ಮಹಿಳೆ, ಮಕ್ಕಳು, ಹಳ್ಳಿಗರು ನೇಯ್ದು ರಾಷ್ಟ್ರಾಭಿಮಾನದ ಸಂಕೇತವಾದ ಖಾದಿ ಹಾಗೂ ಗಾಂಧಿ ಟೋಪಿಗಳು, ವ್ಯವಸ್ಥೆ ಭ್ರಷ್ಟವಾದಂತೆ, ಭ್ರಷ್ಟಪಾತ್ರಗಳ ಸಂಕೇತವಾಗಿ ನಿರೂಪಿತವಾದವು. ಶಿಸ್ತು, ಸಂಯಮ, ಗೌರವದ ಕುರುಹಾಗಿದ್ದ ಖಾಕಿ ಪೊಲೀಸರ ಸಮವಸ್ತ್ರವಾಗಿ ಚಿತ್ರದ ಕೊನೆಗೆ ಬರುವ ನಿಸ್ಸಹಾಯಕ ಪೆದ್ದನಾಗಿ, ಹಾಡಿನಲ್ಲಿ ಕುಣಿಯುವ ಡೊಳ್ಳು ಹೊಟ್ಟೆಯ, ಉದ್ದ ತಲೆಗೂದಲಿನ, ಜನ ಕಂಟಕ, ಜನರ ಶೋಷಕನಾಗಿ ನಿರೂಪಿತವಾಯಿತು. ಈ ಅಶಿಸ್ತಿನ ನೆರಳು ಜೇಲಿನ ಖೈದಿಗಳ ಪಾತ್ರಕ್ಕೂ ವಿಸ್ತರಿಸಿತು.

ಇಷ್ಟೇ ಅಲ್ಲ, ಸಮಸ್ತ ಚಿತ್ರರಂಗ ಯಾವ ಕಾನೂನು ನಿಯಮಾವಳಿಯನ್ನೂ ಪಾಲಿಸದೆ ಮನಬಂದಂತೆ ಬಳಸಿದ ವಸ್ತ್ರ ರಾಷ್ಟ್ರ ಧ್ವಜ. ಸುವರ್ಣ ಮಹೋತ್ಸವದ ನಂತರವಂತೂ ಈ ಅಲೆ ಹೆಚ್ಚಾಯಿತು. ಯಾರದೋ ಶವಕ್ಕೆ ಹೊದಿಸಲು, ಯಾವುದೋ ಸ್ವಂತ ಕಟ್ಟಡದ ಮೇಲೆ, ವಾಹನದ ಮೇಲೆ, ಮೈಮೇಲೆ ಹೀಗೆ ಅದರ ದುರುಪಯೋಗ ನಡೆದೇ ಇದೆ. ಉದಾಹರಣೆಗೆ ಖೈದಿಯೊಬ್ಬ ತಪ್ಪಿಸಿಕೊಳ್ಳಲು 'ಎ.ಕೆ. 47' ಚಿತ್ರದಲ್ಲಿ ರಾಷ್ಟ್ರಧ್ವಜದ ಬಳಕೆಯಾಗಿದೆ.

ವೇಷ ಬದಲಾವಣೆಗಾಗಿ ಗಡ್ಡ, ಮೀಸೆ, ಕಾವಿಯೇ ಸಾಧನವಾಯಿತು. ಈ ಸ್ವಾತಂತ್ರ್ಯವನ್ನು ಪೂರ್ಣಪ್ರಮಾಣದಲ್ಲಿ ಬಳಸಲು ಬೆಳ್ಳಿತೆರಗೆ 'ಭೂಮಿಗೆ ಬಂದ ಭಗವಂತ', 'ಭೂಲೋಕದಲ್ಲಿ ಯಮರಾಜ' 'ನಾರದ ವಿಜಯ'ದಂಥ ಚಿತ್ರಗಳನ್ನು ತಂದಿತು. ಇದರ ಇನ್ನೊಂದು ಧ್ರುವವಾಗಿ ಶೋಷಿತರಿಗೆ, ನೆಲೆ ಇಲ್ಲದವರಿಗೆ, ಪೀಡಿತರಿಗೆ, ಗಾಯಗೊಂಡು ಮೃತ್ಯುವಿನೊಡನೆ ಸೆಣಸಾಡುವ ಪಾತ್ರಕ್ಕೆ ಆಸರೆಯಾಗುವ ಮಾನವೀಯ ತಾಣವಾಗಿ ಚರ್ಚು ಹಾಗೂ ಅದರಲ್ಲಿನ ಫಾದರ್ ಸಹಾಯಹಸ್ತ ಚಾಚುವ ಪಾತ್ರವಾಗಿ ರೂಪಿತವಾದರು.

(ಚಿತ್ರ ೧೧) ಗಿರಿಜನ ಮಹಿಳೆ

ರಾಷ್ಟ್ರೀಯ ಏಕತೆ ನಿರೂಪಣೆಯ ಅಗತ್ಯ ಬಿದ್ದಾಗ ಮಾತ್ರ ಮುಸ್ಲಿಂ ವೇಷ-ಭೂಷೆಯ ಪಾತ್ರ ನಿರ್ಮಾಣ. ಅದಿಲ್ಲದಿದ್ದರೆ ಅವರ ಬುರ್ಖಾ ಇತರ ಜಾತಿಯ ನಾಯಕ-ನಾಯಕಿ ತಪ್ಪಿಸಿಕೊಳ್ಳಲು, ಹಾಸ್ಯನಟ ತನ್ನ ಹುಡುಗಿಗೆ ಪ್ರೀತಿಸಲು, ಅವಳ ಮನೆಗೆ ಕದ್ದು

೧. ಉಮಾಶ್ರೀ ವೃದ್ಧೆಯ ಪಾತ್ರದಲ್ಲಿ, ಮಾಲಾಶ್ರೀ ಅವರು ಹಲವು ವಿಧದ ವೇಷ ಧರಿಸಿ, ಜಯಂತಿಯವರು ವೈವಿಧ್ಯಮಯ ಪಾತ್ರಗಳಲ್ಲಿ ಇತರ ತಾರೆಯರು ಕೂಡ ಪೊಲೀಸ್ ಅಧಿಕಾರಿ ಮತ್ತಿತರ ನೋಟಗಳಲ್ಲಿ ಗಮನ ಸೆಳೆದಿದ್ದಾರೆ. – ಸಂ.



(ಚಿತ್ರ ೧೨.೧೬) ಹೆಣ್ಣು ಆರು ದಶಕಗಳಲ್ಲಿನ ಪರಿವರ್ತನೆ

ಬರಲು, ನಾಯಕನೇ ನಾಯಕಿಯಾಗಿ ನಟಿಸುವ ಸಂದರ್ಭ ಬಂದಾಗಲೂ ನರವಾಯಿತು. ಇದಕ್ಕೂ ಹೆಚ್ಚಿನ ಅವಕಾಶ ಗಿಟ್ಟಿಸಿಕೊಂಡ ಕ್ಷಣಗಳೆಂದರೆ ಚಿತ್ರದಲ್ಲಿ ಬರುವ ನಾಯಕ ನಾಯಕಿಯ ಪೈಪೋಟಿ ಹಾಡಿನ ಎರಡು ಗುಂಪುಗಳ ಕವ್ವಾಲಿ ದೃಶ್ಯಗಳಲ್ಲಿ. ಇದು ಬಿಟ್ಟರೆ ಹಾಸ್ಯಕ್ಕೆಂದೇ ನಿರೂಪಿತವಾದ ಇನ್ನೊಂದು ಪಾತ್ರ ಕಣ್ಣಿಗೆ ಕಾಡಿಗೆ, ಮಣ್ಣಿಗೆ ಮೆತ್ತಿದ ಮುಖ, ಸಪಾಟಾದ ಎದೆ, ನೈಲಾನ್ ಸೀರೆ ಹಾಗೂ ಕುಪ್ಪಸ ಧರಿಸಿ ಚಪ್ಪಾಳೆ ತಟ್ಟುತ್ತಾ ಅಲೆಯುವ ಹಿಜಡಾ ನಿರೂಪಣೆ.

ಚಿತ್ರರಂಗ ಎಂದೂ ಕಂಡರಿಯದ ಗಿರಿಜನರಾದ ಸೋಲಿಗರು, ಇರುಳರು, ಕೊರಗರು, ಜೇನುಕುರುಬರು ಹಾಗೂ ಲಂಬಾಣಿಗಳು ಕನ್ನಡ ಚಿತ್ರದಲ್ಲಿ ನಿರೂಪಿತರಾದಾಗ ಹೊಸಹೊಸ ಬಣ್ಣಬಣ್ಣದ ಬಟ್ಟೆ ತೊಟ್ಟು ಅವರ ಸಂಸ್ಕೃತಿಗೆ ಹೊರತಾದ ನೃತ್ಯ ಮಾಡುವ ಪಾತ್ರಗಳಾಗಿದವು. 'ಮೌನ ಗೀತ', 'ಭೂಮಿ ಗೀತ' 'ಕಾಕನ ಕೋಟೆ' 'ಫಲಿತಾಂಶ' ಈ ಚಿತ್ರಗಳನ್ನು ಈ ಸಂದರ್ಭದಲ್ಲಿ ಉಲ್ಲೇಖಿಸಬಹುದು. 'ಮಾಡಿ ಮಡಿದವರು' ಚಿತ್ರಕ್ಕೆ ಉಷಾ ದಾತಾರ್ ಸಂಯೋಜಿಸಿದ್ದ ಲಂಬಾಣಿ ನೃತ್ಯವನ್ನು ಹೊರತುಪಡಿಸಿ, ಕಾಡುಜನರನ್ನು ಮನಬಂದಂತೆ ಬಳಸಿದವರಲ್ಲಿ ಎಂ.ಪಿ.ಶಂಕರ್, ರಾಜೇಂದ್ರಸಿಂಗ್ ಬಾಬು, ಸ್ವಲ್ಪ ಮಟ್ಟಿಗೆ ದ್ವಾರಕೀಶ್ ಕೂಡಾ ನೆನಪಾಗುತ್ತಾರೆ.

ಚಿತ್ರರಂಗ ಮೊದಲಿಂದಲೂ ನಂಬಿದ ಸೂತ್ರ ಪ್ರೇಕ್ಷಕ ಕಣ್ಣೀರು ಸುರಿಸಿದಷ್ಟೂ ಗಲ್ಲಾಪೆಟ್ಟಿಗೆ ಭರ್ತಿ ಎಂಬ ಲೆಕ್ಕಾಚಾರ. ಇದರ ವಿಕೃತ ಪರಿಣಾಮವೆಂದರೆ ಮೊದಲು ಚಿತ್ರಗಳಲ್ಲಿ ಸೂಚ್ಯವಾಗಿ ದೀಪ ಆರಿಸಿ, ಪಂಚಪಾಳ ಬಿದ್ದು ಕುಂಕುಮ ಚೆಲ್ಲಿ, ಕನ್ನಡಿ ಒಡೆದು, ಮಾಂಗಲ್ಯ ಕಿತ್ತು, ಫೋಟೋ ಕೆಳಗೆ ಬಿದ್ದು ನುಚ್ಚುನೂರಾಗಿ ಸಾವನ್ನು ತೋರಿಸುತ್ತಿದ್ದ ಪದ್ಧತಿ. ಈಗ ಶವಕ್ಕೆ ಮಾಲಾರ್ಪಣೆ, ರೋದನ, ಚಟ್ಟಕಟ್ಟುವಿಕೆ, ಬಿಳಿವಸ್ತ್ರ ಧರಿಸಿ ಅಗ್ನಿ ಹೊತ್ತು ಎಲ್ಲ ಪಾತ್ರಗಳ ಶವಯಾತ್ರೆ, ಸೋರುವ ಮಡಕೆ ಹೊತ್ತು ಅಪ್ರದಕ್ಷಿಣೆಗೆ ಬರುವುದು, ಕೈಯಾರೆ ಅಗ್ನಿಸ್ಪರ್ಶ, ಚಿತೆಯುರಿದನಂತರ ಚಿತಾಭಸ್ಮ ವಿಸರ್ಜನೆ, ಮುಂಡನ, ಫೋಟೋಗೆ ಹಾರ ಹಾಕಿ ನಮಸ್ಕಾರ. ಇದರೊಂದಿಗೆ ನಾಯಕಿಯ ಜೀವನದ ಸರ್ವಸ್ವವೂ ಮುಗಿಯಿತೇನೋ ಎಂಬಂತೆ ಬಿಳಿವಸ್ತ್ರ ಧರಿಸಿದ, ಕೆದರಿದ ಕೇಶರಾಶಿಯ, ನಿರಾಭರಣ ಸೀರೆ ಅನುಕಂಪದ ಅಲೆಯೆಬ್ಬಿಸುವ ವಿಧವೆ. ಇದೆಲ್ಲಕ್ಕೂ ಹಿನ್ನೆಲೆಯಾಗಿ ಒಂದು ಗೀತೆ. ಚಿತ್ರಮಂದಿರದಲ್ಲಿ ಎಂದೋ ನೋಡಿ ಸಹಿಸಿದ್ದನ್ನು ಇಂದು ಟಿ.ವಿ.ಯಲ್ಲೂ ಮಕ್ಕಳ ಮುಂದೆ ನೋಡಬೇಕಾದ ಇಕ್ಕಟ್ಟಿನ ದುರಂತದ ದೃಶ್ಯಗಳು ಅವು.

ವೇಷ-ಭೂಷೆಗಳಲ್ಲಿಯೇ ಕೆಲವು ಪಾತ್ರಗಳ ನಡತೆಯನ್ನು ಬಹು ಸುಲಭವಾಗಿ ತೋರಿಸುವ ಕೆಲವು ಪದ್ಧತಿಗಳು ಪರದೆಯ ಮೇಲೆ ರೂಪಿತವಾಗಿವೆ. ಪೂರ್ಣ ಸೆರಗು ಹೊದ್ದು, ಅಡಿಯಿಂದ ಮುಡಿವರೆಗೆ ಅಲಂಕೃತರಾಗಿ ನೆಲವನ್ನೇ ನೋಡುವ ಕನ್ಯೆ, ವಧುಪರೀಕ್ಷೆಯ ದೃಶ್ಯದಲ್ಲಿ ಸದಾ ಕೆಕ್ಕರುಗಣ್ಣಿಂದ ನೋಡುತ್ತ ಶೋಷಣೆ, ದೌರ್ಜನ್ಯ ಮಾಡಲು ಸೆರಗು ಬಿಗಿಯಾಗಿ ಕಟ್ಟಿ ನಿಂತ ಬಜಾರಿ ಅತ್ತೆ, ತಲೆ ತುಂಬಾ - ಮೈ ತುಂಬಾ ಸೆರಗು ಹೊದ್ದು ಸದಾ ವಿಧೇಯಳಾದ ಪುರೋಗಾಮಿ ಸೊಸೆ, ಮುಕ್ತವಾದ ಸೆರಗೇ ಬೇಕಿಲ್ಲದ ವೇಷ, ಬಾಬ್‌ಕಟ್, ಪೋನಿ ಟೇಲ್ ಕೇಶರಾಶಿಯ, 'ಸಮಾಜ ಸೇವೆ'ಯಲ್ಲಿ ತೊಡಗಿರುವ ಪ್ರಗತಿಗಾಮಿ ಹೆಣ್ಣು, ಲಿಪ್‌ಸ್ಟಿಕ್, ರ್‍ಯಾಸ್, ಪರ್ಸ್, ಗೌನು ಧರಿಸಿ ಬಿಕನಿ, ಮಿಡಿಯಲ್ಲಿ ಮಿಂಚುವ ಚಂಚಲೆ, ಸುಲಭವಾಗಿ ದಕ್ಕುವ ಹೆಣ್ಣು, ಮುಖದ ತುಂಬಾ ಮೆತ್ತಿಕೊಂಡ ಅಲಂಕಾರ, ಬಣ್ಣಬಣ್ಣದ ಬಿಗಿಯಾದ, ಆದರೆ ಅಂಗಾಂಗ ಕಾಣುವ ಕುಪ್ಪಸ, ಸೀರೆ ಧರಿಸಿ ಕೆಳತುಟಿ ಕಚ್ಚುತ್ತಾ ಕೊಂಕುಕಣ್ಣಿಂದ ನೋಡುವ ಬೆಲೆವೆಣ್ಣು, ಇವು ಸಿನಿಮಾದಲ್ಲಿ ಅಂಥ ಗುಣ-ಸ್ವಭಾವದ ಪಾತ್ರಗಳ ಮಾದರಿಗಳಾಗಿವೆ.

ವಿದೇಶಿ ಮಹಿಳೆಯರು ನಾಯಕಿಯಾಗಿ ಪಾತ್ರ ವಹಿಸಿದರೂ, ಅವರು ಎಂದೂ ಸೀರೆ ಉಡುವಲ್ಲಿ, ನಮ್ಮ ರೀತಿಯ ಕೇಶಾಲಂಕಾರ ಮಾಡಿಕೊಂಡು ಹಾಡು, ಕುಣಿತದಲ್ಲಿ ಭಾಗಿಯಾಗುವಲ್ಲಿ ಎಂದೂ ಅತಂತ್ರಭಾವ ಪಡಲಿಲ್ಲ. ಮುಜುಗರಕ್ಕೆ ಈಡಾಗಲಿಲ್ಲ. ಅಂಥ ಸಾಂಸ್ಕೃತಿಕ ಸಾಮರಸ್ಯ ಮೆರೆದರು (ಚಿತ್ರ : ಬಿಳಿ ಹೆಂಡ್ತಿ).

ಕನ್ನಡ ಚಿತ್ರರಂಗಕ್ಕೆ ಕಳಶವಿಟ್ಟಂತೆ ಬರುವ ಒಂದು ದೃಶ್ಯ ಉಲ್ಲೇಖನೀಯ. ಅದೆಂದರೆ, ಒಂದಲ್ಲ ಒಂದು ಚಿತ್ರದಲ್ಲಿ ಜನಪ್ರಿಯ ನಾಯಕನಟರು ಸ್ತ್ರೀವೇಷ ಧರಿಸಿ ನಾಯಕಿಯೊಂದಿಗೆ ಕುಣಿಯುವುದು; ಅವಳನ್ನು ಪ್ರೇಮಿಸುವುದು. ಈ ವೇಷಾಂತರದ ಮೋಹಕ್ಕೆ ಅಂದಿನ ರಾಜಕುಮಾರರಿಂದ ಇಂದಿನ ರಮೇಶ್ ಸಹ ಹೊರತಾಗಲಿಲ್ಲ. ಇಂಥದೇ ಸನ್ನಿವೇಶ, ಸಂದರ್ಭ ನಟಿಯರನ್ನು ಪುರುಷರ ಪಾತ್ರದಲ್ಲಿ ಚಿತ್ರಿಸಿದಾಗ ಆ ಪ್ರಮಾಣದಲ್ಲಿ ಉದ್ಭವಿಸುವುದಿಲ್ಲ.

ಎಲ್ಲ ಕ್ಷೇತ್ರಗಳಲ್ಲಿನಂತೆ ಚಿತ್ರರಂಗದಲ್ಲೂ ಕಾಯ್ದೆ, ಕಾನೂನು, ನಿಯಮಗಳಿವೆ. ಆದರೆ ಎಲ್ಲವೂ ಪುಸ್ತಕ ರೂಪದಲ್ಲಿ. ಜಾರಿಗೆ ತರುವಲ್ಲಿ ಏನೋ ತೊಡಕು, ದೋಷ. ಹೀಗಾಗಿ ಸೆನ್ಸಾರಿನ ನೀತಿಸಂಹಿತೆಯಲ್ಲಿ ಚಿತ್ರದ ಪಾತ್ರಗಳ ವೇಷ-ಭೂಷೆಯ ಬಗ್ಗೆ ಖಚಿತ ನಿಯಮಾವಳಿಯಿದ್ದರೂ ಎಲ್ಲ ಸದಸ್ಯರೂ ಕಣ್ಣಿದ್ದೂ ಕುರುಡರಂತೆ ಕಾಮಪ್ರಚೋದಕ ಉಡುಗೆಗಳ ಅಶ್ಲೀಲನೃತ್ಯಗಳನ್ನು ಒಪ್ಪುತ್ತಾರೆ. ಮಳೆಯಲ್ಲಿ ನೆನೆದು (ನಾಯಕ ನಾಯಕಿ ಕುಣಿದಾಗ) ಮಾನವ ಅಂಗರಚನಾಶಾಸ್ತ್ರದ ಅಧ್ಯಯನಕ್ಕೆ ನೆರವಾಗುತ್ತಾರೆ. ಅತ್ಯಾಚಾರದ ವಿವರಗಳನ್ನು ತೋರಿಸಿ, ಪ್ರೇಕ್ಷಕನ ಲೈಂಗಿಕಜ್ಞಾನ ಹೆಚ್ಚಿಸುವಲ್ಲಿ ಶ್ರಮಿಸುತ್ತಾರೆ. ನಾಯಕನ ರಕ್ತಸಿಕ್ತ ವೇಷ, ದೇಹ ತೋರಿಸಿ ಈ ದೇಶದ ಅಹಿಂಸಾ ಪರಂಪರೆ ಎತ್ತಿಹಿಡಿಯುತ್ತಾರೆ. ನಮ್ಮ ಚಿತ್ರಗಳು ಭ್ರಮಾಲೋಕಕ್ಕೆ ಕರೆದೊಯ್ಯುವ ಸಾಧನಗಳು, ನೈಜತೆಯ ಅಗತ್ಯವಿಲ್ಲ ಎಂಬುದನ್ನರಿತ ಸೆನ್ಸಾರ್ ಮಂಡಳಿಯವರು ಪೋಲೀಸರ ಸಮವಸ್ತ್ರ, ನ್ಯಾಯವಾದಿಗಳ, ನ್ಯಾಯಾಧೀಶರ ವೇಷ-ಭೂಷೆ, ಖೈದಿಗಳ ಉಡುಗೆ ತೊಡುಗೆ ಇವ್ಯಾವುದರ ಬಗ್ಗೆ ಹೆಚ್ಚಿಗೆ ತಲೆ ಕೆಡಿಸಿಕೊಳ್ಳುವುದಿಲ್ಲ. ಹೀಗಾಗಿ ಖಾದಿ, ಖಾಕಿ, ಕಾವಿ, ರಾಷ್ಟ್ರಧ್ವಜ ಹೇಗೆ ಬಳಸಿದರೂ ಅವಕ್ಕೆ ಅಭ್ಯಂತರವಿದ್ದಂತೆ ಕೆಲವೊಮ್ಮೆ ಕಾಣುವುದಿಲ್ಲ.

ಚಿತ್ರದಲ್ಲಿ ನಾಯಕ ಅಥವಾ ಇನ್ನಾವುದೇ ಪಾತ್ರ ನಿರುದ್ಯೋಗಿ ತರುಣರ ಗುಂಪನ್ನು ಸಂಘಟಿಸಿ ಅವರಿಗೆ ಶಸ್ತ್ರಾಸ್ತ್ರ, ಹೋರಾಟ, ಕದನ ತಂತ್ರದ ತರಬೇತಿ ಒದಗಿಸಿ ಅವರಿಗೆ ಸಮವಸ್ತ್ರ ನೀಡಿ ರಾಜ್ಯದ, ರಾಷ್ಟ್ರದ ಪೋಲೀಸು, ಮಿಲಿಟರಿಗೆ ಸಮಾಂತರವಾದ ಪಡೆ ರಚಿಸಕೂಡದು. ಇಂಥ ಚಿತ್ರಣಕ್ಕೆ ನಿಷೇಧವೆಂಬ ನಿಯಮವಿದೆ. ಆದರೂ ಈ ನಿಯಮಗಳನ್ನು ಗಾಳಿಗೆ ತೂರಿ ಬಂದ ಚಿತ್ರಗಳಲ್ಲಿ ೧೯೮೦ರ 'ಇಂದ್ರಜಿತ್'ನಿಂದ ಆರಂಭವಾಗಿ ಎಣಿಸುತ್ತ ಬಂದರೆ ಕೈಕಾಲು ಬೆರಳುಗಳು ಸಾಲದಂಥ ಸ್ಥಿತಿ. ಅಂದು ಇಂಥ ಪ್ರವೃತ್ತಿಗೆ, ಅದರ ನಿರೂಪಣೆಗೆ ಸೆನ್ಸಾರ್ ಕಡಿವಾಣ ಹಾಕಿಲ್ಲ. ಖಾಕಿ ಸಮವಸ್ತ್ರದ ವೀರಪ್ಪನ್‌ನಂಥ ಸಮಾಜ ವಿರೋಧಿ ಶಕ್ತಿಯನ್ನು ವೈಭವೀಕರಿಸಿದ 'ವೀರಪ್ಪನ್' ಚಲನಚಿತ್ರಕ್ಕೆ ಸಬ್ಸಿಡಿ, ತೆರಿಗೆ ವಿನಾಯಿತಿ, ಶ್ರೇಷ್ಠಚಿತ್ರ ಪ್ರಶಸ್ತಿ ನೀಡಿ, ಚಿತ್ರ ನೋಡಿ

ಅನಂದ ಪಡುತ್ತೇವೆ. ಒಳ್ಳೆ ಉದ್ದೇಶವೋ, ಕೆಟ್ಟ ಉದ್ದೇಶವೋ, 'ಸೆಕ್ಸ್'ಗಳ ಹೆಸರಿನಲ್ಲಿ ಪದೆ ಕಟ್ಟುವ ಪ್ರವೃತ್ತಿಗೂ ಚಿತ್ರರಂಗ ಮುಂದಾಗುತ್ತಿದೆ.

ನಮ್ಮ ಯಾವ ಸಂಸ್ಕೃತಿಯ ಪ್ರತಿರೂಪವೂ ಅಲ್ಲದ ಕನ್ನಡವೆಂದರೇ ಅವಹೇಳನಕ್ಕೆ ಈಡಾಗುವಂತಹ ಬಾಲಿಶ ಕಲ್ಪನೆಯ ಅರ್ಧ ಚಡ್ಡಿ, ವುಲನ್ ಮಂಕೀ ಕ್ಯಾಪ್, ಬಣ್ಣದ ಬನಿಯನ್, ಬಾಯಲ್ಲಿ ಪೀಪೀ ಇಂಥ ಕುಳ್ಳ ಪಾತ್ರದ ಸರಣಿ ಚಿತ್ರಗಳೇ ನಿರೂಪಿತವಾಗಿ, ಮಾನಸಿಕವಾಗಿ ಕುಬ್ಜರಾದ ಒಂದು ವರ್ಗವನ್ನು ರಂಜಿಸಿದವು.

ಕಪ್ಪು-ಬಿಳುಪು ಯುಗದಲ್ಲಿ ದೇಹದ ಕೆಳಭಾಗಕ್ಕೆ ಬಿಗಿಯಾದ ಕಪ್ಪು ತೊಡುಗೆ, ಮೇಲೆ ಬಿಳಿಯಾದ ಬಿಗಿ ತೊಡುಗೆ, ಅದರ ಮೇಲೆ ಮಿಂಚುವ ಕನ್ನಡಿ ತುಣುಕುಗಳು ಅಥವಾ ಜರಿ, ಧರಿಸಿದ ನೃತ್ಯಗಾತಿ ವರ್ಣಯುಗಕ್ಕೆ ಕಾಲಿಡುತ್ತಿರುವಂತೆ ಇನ್ನೂ ಮಾದಕವಾಗಿ ಕಾಣಲು ಪ್ರಯತ್ನಿಸಿದಳು. ಆಗ ಅವಳ ನೆರವಿಗೆ ಬಂದದ್ದು ವರ್ಣಮಯ ವಸ್ತ್ರಗಳು. ಮನುಷ್ಯನ ಮೈ ಚರ್ಮದ ವರ್ಣವುಳ್ಳ ವಸ್ತ್ರದಿಂದ ಬಿಗಿಯಾಗುವಂತೆ ಹೊಲಿಸಲಾದ ಸಂಪೂರ್ಣ ವೇಷ-ಭೂಷೆ ಪ್ರೇಕ್ಷಕನಿಗೆ ಅವಳು ಬರೀ ಮೈಯಲ್ಲಿ ನರ್ತಿಸುತ್ತಿರುವಳೇನೋ ಎಂಬ ಭ್ರಮೆಯನ್ನು ಸೃಷ್ಟಿಸಿದವು. ಕೆಲವು ಸಂದರ್ಭಗಳಲ್ಲಿ ಕಲಾವಿದೆಯ ಮೈಗೆ ವೇಷದ ಬಿಗಿತ ಹೆಚ್ಚಿಸಲು ಹೋಗಿ ನರ್ತಕಿಯ ಅಂಗಗಳ ರಕ್ತ ಹೆಪ್ಪುಗಟ್ಟಿದ, ಮೈಮೇಲೆ ವಸ್ತ್ರಗಳಿಗೆ ಹೊಲಿಗೆ ಹಾಕಿದಾಗ ಮೈಚರ್ಮ ಸೂಜಿಗೆ ಸಿಕ್ಕು ನರಳಿದ ದಾರುಣ ಪ್ರಸಂಗಗಳೂ ಇವೆ.

ಕಥಾನಾಯಕ, ಚಿತ್ರದ ಉತ್ಕರ್ಷ ದೃಶ್ಯಗಳಲ್ಲಿ ಮಾಡುವ ಸಾಹಸ, ಹೋರಾಟದ ದೃಶ್ಯಗಳಿಗೆ ಪೂರಕವಾಗಿ ನಿಜವಾದ ಸಾಹಸ ಹಾಗೂ ಪ್ರಾಣಾಪಾಯದ ಸನ್ನಿವೇಶಗಳಲ್ಲಿ ಅವನಂತೆ ಕಾಣುವಂತಹ ನಕಲಿ ನಟ, ಈ ಸಾಹಸವನ್ನು ಮಾಡುವುದು ವಾಡಿಕೆ. ಆಗ ಅತಿ ಅವಶ್ಯವಾಗಿ ಹೊಂದಾಣಿಕೆಯಾಗಬೇಕಾದ ಅಂಶವೆಂದರೆ ನಿಜವಾದ ನಾಯಕನ ಹಾಗೂ ನಕಲಿ ಕಲಾವಿದನ ವೇಷ-ಭೂಷೆಗಳು. ಅದೇ ವರ್ಣದ ವೇಷ-ಭೂಷೆ ಇದ್ದಾಗ ಮಾತ್ರ ಇದನ್ನು ಆಭಾಸವಾಗದಂತೆ ಎರಡನ್ನೂ ಸೇರಿಸಿ, ವರ್ಣ ಓಘ ಅಭಾಸವಾಗದಂತೆ ಸಂಕಲನ ಮಾಡಲು ಸಾಧ್ಯ. ಆರಂಭ ಕಾಲದ ಚಿತ್ರಗಳಲ್ಲಿ ನಾಯಕ ನಟ ಭಾರಿ ಬೆಲೆಯ ವುಲನ್, ಟೆರಿಕಾಟ್, ಟೆರಿಲಿನ್ ವಸ್ತ್ರ ಧರಿಸಿದರೆ, ನಕಲಿ ನಟ ಅದಕ್ಕೆ ಹೊಂದುವಂಥ ವರ್ಣದ ಕಡಿಮೆ ಬೆಲೆಯ ಹತ್ತಿ ವಸ್ತ್ರದ ವೇಷ-ಭೂಷೆ ಧರಿಸಿ ಕಾರ್ಯ ನಿರ್ವಹಿಸುತ್ತಿದ್ದ. ಆದರೆ, ಈಗ ಅವರೂ ಸಹ ಲೈಟಿಂಗ್ ಹಾಗೂ ಲೆನ್ಸ್‌ನಿಂದಾಗಿ ವಸ್ತ್ರದ ನುಣುಪು ವ್ಯತ್ಯಾಸ ಗೊತ್ತಾಗುತ್ತದೆ ಎಂಬ ನೆಪ ನೀಡಿ ಭಾರಿ ಬಟ್ಟೆಯ ಪೋಷಾಕನ್ನೇ ಕಾಡಿಬೇಡಿ, ಹೊಲಿಸಿಕೊಂಡು ಧರಿಸುವ ಪರಂಪರೆ ಆರಂಭವಾಗಿದೆ. ಸಾಹಸ ಚಿತ್ರೀಕರಣನಂತರ ಅದು ಕೆಸರು, ಮಣ್ಣು ಮೆತ್ತಿ ಅಲ್ಲಲ್ಲಿ ಹರಿದು, ತರಚಿದ್ದ ವಸ್ತ್ರಗಳನ್ನು ನಿರ್ಮಾಪಕ ಮರಳಿ ಕೇಳಲಾರ, ನಟ ನೀಡಲಾರ. ಇದು ವಸ್ತ್ರವಿನ್ಯಾಸ ವೃತ್ತಿಯ ಇನ್ನೊಂದು ಮುಖ.

ಇಂದು ಪೋಲೀಸ್ ಇನ್‌ಸ್ಪೆಕ್ಟರ್ ಸಮವಸ್ತ್ರದಲ್ಲಿರುವ ಶಂಕರನಾಗ್, ದೇವರಾಜ್, ಪ್ರಭಾಕರ್, ಅಂಬರೀಶ್ ಈ ಕಲಾವಿದರ ಯಾವುದಾದರೂ ಒಂದು ಸ್ಥಿರಚಿತ್ರ ತೋರಿಸಿ ಇದು ಯಾವ ಚಿತ್ರದ್ದು ಎಂದು ಕೇಳಿದರೆ, ಉತ್ತರ ಹೇಳಲಾಗದಂತಹ ಸ್ಥಿತಿಯಲ್ಲಿ ಪ್ರೇಕ್ಷಕ ಮಾತ್ರವಲ್ಲ, ಇಡೀ ಚಿತ್ರೋದ್ಯಮವೇ ನಿಂತಿದೆ.

ತೊಡುಗೆ (ಚಿತ್ರ ೧೭-೧೯)

ಇಂದು ಈ ದೃಷ್ಟಿಯಿಂದ ಕನ್ನಡ ನಾಡಿನಲ್ಲಿ ತಯಾರಾದ ಕನ್ನಡವಲ್ಲದ ಆದರೆ ಕನ್ನಡಿಗರ ಚಿತ್ರಗಳಾದ 'ಕೋಟಿ ಚೆನ್ನಯ', 'ಗ್ಯಾಡಿರೋ ಪಂಜೇರು', 'ಶಂಕರಾಚಾರ್ಯ', 'ರಾಮಾನುಜಾಚಾರ್ಯ' ವಸ್ತ್ರವಿನ್ಯಾಸದ ದೃಷ್ಟಿಯಿಂದ ಸ್ವಲ್ಪಮಟ್ಟಿಗಾದರೂ ತನ್ನತನವನ್ನು ಸಾರಿ ಹೇಳುತ್ತವೆ.

೧೯೭೫ರಲ್ಲಿ ಅನಂತ್ ಹಿರೇಗೌಡರ ನಿರ್ದೇಶನದಲ್ಲಿ ಜೈನ ಯಾತ್ರಾಸ್ಥಳಗಳ ಕುರಿತು ತಯಾರಾದ ಸಾಕ್ಷ್ಯ ರೂಪಕ ಚಿತ್ರವನ್ನು ಆಗಿನ ಮುಖ್ಯಮಂತ್ರಿ ದೇವರಾಜ ಅರಸು ವೀಕ್ಷಿಸಿ ಪೂರ್ಣ ತೆರಿಗೆ ವಿನಾಯಿತಿ ನೀಡಿ ಪ್ರದರ್ಶನಕ್ಕೆ ಬೆಂಬಲ ನೀಡಿದರು. ಆದರೂ ಚಿತ್ರ ತೆರೆ ಕಾಣಲಿಲ್ಲ. ಕಾರಣವಿಷ್ಟೇ ಅದರಲ್ಲಿ ಚಿತ್ರದುದ್ದಕ್ಕೂ ಶ್ರದ್ಧಾಪೂರ್ವಕ ನಿರೂಪಿತವಾದ ದಿಗಂಬರ ಪಂಥದ ಹಲವಾರು ಗುರುಗಳು ಹಾಗೂ ಅವರಿಗೆ ವಂದಿಸುವ ಮಹಿಳೆಯರು, ಮಕ್ಕಳು ಇದ್ದರು. ಅವೆಲ್ಲ ಇತರರ ದೃಷ್ಟಿಯಲ್ಲಿ ಅವಹೇಳನ, ನಗೆಪಾಟಲಿಗೆ ಈಡಾಗದಿರಲೆಂದು ಸ್ವಯಂ ವಿವೇಚನೆಯಿಂದ ನಿರ್ಮಾಪಕರೇ ನಿರ್ಧರಿಸಿ, ಚಿತ್ರವನ್ನು ಖಾಸಗಿ ಪ್ರದರ್ಶನಕ್ಕೆ ಸೀಮಿತಗೊಳಿಸಿದರು. ಆದರೆ ಇಂದು ಇಡೀ ಚಿತ್ರರಂಗವೇ ಪರದೆಯ ಮೇಲೆ ದಿಗಂಬರ ಸ್ವರೂಪದಲ್ಲಿ ಕಾಣಲು ತವಕ ಪಡುತ್ತಿದೆ. ಸಂಕೋಚ, ಮುಜುಗರ ಇರುವುದು ಪ್ರೇಕ್ಷಕನಿಗೆ ಮಾತ್ರ.

ತನ್ನ ಮನೆಯಲ್ಲಿ, ಖಾಸಗಿ ವೀಕ್ಷಣೆಯಲ್ಲಿ, ಹಲವಾರು ಚಾನೆಲ್‌ಗಳಲ್ಲಿ ಸೆನ್ಸಾರಾಗದೆ ನೋಡಬಾರದ್ದನ್ನು ನೋಡಲು ಅವಕಾಶ ಇರುವ ಅಥವಾ ನೋಡುವುದನ್ನೇ ಒಂದು ನೆಪ ಮಾಡಿ, ಇಂದು ಹಣ ತೆತ್ತು, ಹತ್ತುಪಟ್ಟು ಗಾತ್ರದ ಭವ್ಯದೃಶ್ಯ ವೈಭವಕ್ಕೆ ಕತ್ತಲು ಕೋಣೆಯಲ್ಲಿ ಸಂಮೋಹನಕ್ಕೆ ಒಳಗಾಗಿ ತನ್ನ ತನು, ಮನ, ಧನ ಅರ್ಪಿಸಿ ಕುಳಿತುಕೊಳ್ಳುವ ಪ್ರೇಕ್ಷಕನಿಗೆ ಅವನ ಸುಪ್ತ ಮನದಾಳದಲ್ಲಿರುವ ಪಶುಪ್ರವೃತ್ತಿಯನ್ನು ಬಡಿದೆಬ್ಬಿಸುವ ವೇಷ-ಭೂಷೆ, ಪಾತ್ರ, ಪರಿಸರ ನಿರೂಪಣೆಯ ಚಿತ್ರಗಳು ಬೇಕೆ ಎಂಬ ಯಕ್ಷ ಪ್ರಶ್ನೆಗೆ ಯಾರು ಉತ್ತರಿಸಬೇಕು?

ಇಂದು ಯಾವ ವಿಭಾಗದ ವೃತ್ತಿಪರರಿಗೂ ಚಿಂತನೆ - ಚರ್ಚೆಗೆ ಸಮಯ, ಅವಕಾಶ, ಆಸಕ್ತಿ ಇಲ್ಲದಿರುವಂತಹ ವಾತಾವರಣ ಬದುಕಿನ ಪ್ರತಿಯೊಂದು ಕ್ಷೇತ್ರದಲ್ಲೂ ಇಣುಕತೊಡಗಿದೆ. ಸಿನಿಮಾ ರಂಗವೂ ಇದಕ್ಕೆ ಅಪವಾದವೇನಲ್ಲ. ಇಲ್ಲಿ ಯಾವುದೇ ಒಂದು ನಿಶ್ಚಿತ ಪರಿಣಾಮ ಸಾಧಿಸಲು ಹಲವಾರು ಜನರ ಪರಿಶ್ರಮ, ಚಿಂತನೆ, ಆಸಕ್ತಿಯನ್ನು ಅವಲಂಬಿಸಬೇಕಾಗುತ್ತದೆ. ಕೆಲವೊಮ್ಮೆ ಹಣದ ಅಭಾವ, ನುರಿತ ಕೆಲಸಗಾರರ ಕ್ರಿಯಾಶೀಲರ ಕೊರತೆ, ಹಲವೊಮ್ಮೆ ಪರಸ್ಪರ ವಿಚಾರ ವಿನಿಮಯದ ಲೋಪ ಹಾಗೂ ಕೆಲಸದ ಒತ್ತಡದ ಜೊತೆಗೆ, ವೃತ್ತಿಯ ಅಸುರಕ್ಷಿತತೆಯ ಭಾವನೆಯಿಂದಾಗಿ ಅಲ್ಪಕಾಲದಲ್ಲಿ ಅಧಿಕ ದುಡಿಯಬೇಕೆನ್ನುವ ಹಂಬಲದ ಪರಿಣಾಮವಾಗಿ ನಿರೀಕ್ಷಿತ ಮಟ್ಟದಲ್ಲಿ ಚಿತ್ರನಿರ್ಮಾಣದ ಎಲ್ಲ ವಿಭಾಗಗಳೂ ದುಡಿಯುತ್ತಿಲ್ಲ. ಇದರಲ್ಲಿ ವಸ್ತ್ರವಿನ್ಯಾಸ ಹಾಗೂ ಕೇಶಾಲಂಕಾರದ ವಿಭಾಗವೂ ಒಂದು ಅಂಶ ಎಂದೇ ಹೇಳಬಹುದು.

ಇಷ್ಟಾದರೂ ಎಲ್ಲೋ ಮೋಡಗಳ ಮರೆಯಲ್ಲಿ ಬೆಳ್ಳಿ ಅಂಚಿನಂತೆ ನಿರ್ದೇಶಕರ ಚಿಂತನೆ ಹಾಗೂ ವಸ್ತ್ರವಿನ್ಯಾಸಕರ ಅಧ್ಯಯನದ ಫಲಾಫಲ ವಿಶ್ಲೇಷಣೆ ಮಾಡುವ ಸೌಭಾಗ್ಯ, ಸದವಕಾಶ ಕೆಲವು ನಿರ್ದೇಶಕರು ಹಾಗೂ ಅವರ ಪತ್ನಿಯರು ವಸ್ತ್ರವಿನ್ಯಾಸದ ಹೊಣೆ ಹೊತ್ತಿರುವುದರಿಂದ ನೋಡಲು ಸಿಗುವಂತಾಗಿದೆ. ಇವರಲ್ಲಿ ಹೆಚ್ಚಿನವರು ಗಂಭೀರ ಪ್ರವೃತ್ತಿಯ, ಮುಖ್ಯವಾಹಿನಿಗೆ ಸೇರದೆ ಇರುವ ಚಿತ್ರಗಳ ನಿರ್ದೇಶಕ-ಪತ್ನಿಯರ ತಾರಾಜೋಡಿ ಎನ್ನುವುದು ವಿಶೇಷ. ಆದರೆ ಕೆಲವು ಕಲಾವಿದ ಕಲಾವಿದೆಯರು ಪ್ರತ್ಯೇಕವಾಗಿ ತಮ್ಮ ಪ್ರತಿಷ್ಠೆ ಉಳಿಸಿಕೊಳ್ಳಲು, ಬೆಳೆಸಿಕೊಳ್ಳಲು ತಮಗಾಗಿಯೇ ವೈಯಕ್ತಿಕ ವಸ್ತ್ರವಿನ್ಯಾಸಕಾರರನ್ನು, ಕೇಶ ಶೃಂಗಾರಕರನ್ನು ನೇಮಿಸಿಕೊಳ್ಳುವ ಸಂಪ್ರದಾಯ ಬೆಳೆದು ಬಂದಿದೆ. ಆದರೆ ಎಲ್ಲಿಯವರೆಗೆ ಚಿತ್ರಗಳು ನಿರ್ದೇಶಕನ ಮಾಧ್ಯಮವಾಗದೆ ತಾರಾವರ್ಚಸ್ಸಿನ ಮಾರಾಟದ ಫಲಗಳಾಗಿರುತ್ತವೋ ಅಲ್ಲಿಯವರೆಗೆ ಈ ಬವಣೆ ತಪ್ಪಿದ್ದಲ್ಲ.

ರಾಜ್ಯ ಸರ್ಕಾರ ಚಲನಚಿತ್ರಗಳ ಹಲವಾರು ವಿಭಾಗಗಳಿಗೆ ಪ್ರಶಸ್ತಿ ನೀಡಿದರೂ ವಸ್ತ್ರವಿನ್ಯಾಸಕ್ಕೆ ಪ್ರಶಸ್ತಿ ನೀಡದೆ ಇರುವುದು ವಿಷಾದನೀಯ. ಆದರೆ ಈ ಕಲೆಗೆ ಕೇಂದ್ರ ಸರ್ಕಾರದ ಪ್ರಶಸ್ತಿ ಪಡೆದವರು ಕನ್ನಡ ಚಿತ್ರರಂಗದಲ್ಲಿ ಇದ್ದಾರೆ ಎನ್ನುವುದು ಸಮಾಧಾನದ ಅಂಶ. (ಚಿತ್ರ : ತಾಯಿ ಸಾಹೇಬ, ವಸ್ತ್ರವಿನ್ಯಾಸ : ವೈಶಾಲಿ ಕಾಸರವಳ್ಳಿ).

(ಚಿತ್ರ ೨೦-೨೨) ಬಿಗಿ ಉಡುಗೆಯ ಬೆಡಗಿಯರು

ಇದೇ ಸಂದರ್ಭದಲ್ಲಿ ಈ ವೃತ್ತಿಯಲ್ಲಿ ತೊಡಗಿರುವವರು ಅಭಿಮಾನ ಪಡುವಂಥ ಇನ್ನೊಂದು ಸಾಧನೆ ಭಾರತ ದೇಶದ್ದು.

ಇತಿಹಾಸದಲ್ಲಿ, 'ಆ ತುಂಡು ಬಟ್ಟೆಯ ಫಕೀರನನ್ನು ನಾನು ಭೇಟಿಯಾಗಲಾರೆ' ಎಂದು ಇಂಗ್ಲೆಂಡಿನ ಪ್ರಧಾನಿ ಚರ್ಚಿಲ್ ಗುಡುಗಿ ನಂತರ ಅದೇ ಗಾಂಧೀಜಿಯ ಮನೋಬಲದ ಮುಂದೆ ತಲೆಬಾಗಿ ಭಾರತಕ್ಕೆ ಸ್ವಾತಂತ್ರ್ಯ ನೀಡಬೇಕಾಯಿತು. ಇತಿಹಾಸ ಮರುಕಳಿಸಿದಂತೆ ಗಾಂಧೀಜಿ ಜೀವನ ಆಧರಿಸಿ ಚಿತ್ರ ಮಾಡುವ ಹೆಬ್ಬಯಕೆ ಹೊತ್ತು ಅನೇಕ ದಶಕಗಳ ಕಾಲ ಅಲೆದ ನಿರ್ದೇಶಕ ರಿಚರ್ಡ್ ಅಟೆನ್‌ಬರೋಗೆ ಹಾಲಿವುಡ್‌ನ ಸಿನಿಮಾ ಕಂಪನಿಗಳು 'ಆ ತುಂಡು ಬಟ್ಟೆಯ ನಾಯಕನ ಚಿತ್ರವನ್ನು ಯಾರು ನೋಡುತ್ತಾರೆ' ಎಂದು ಮೂಗು ಮುರಿದು, ಬಂಡವಾಳ ಹಾಕಲು ಒಪ್ಪಲಿಲ್ಲ. ಆದರೆ ಮುಂದೆ ಇದೇ ಚಿತ್ರ ಗಾಂಧೀ ಸಿದ್ಧಾಂತಕ್ಕೆ ವಿಶ್ವಮನ್ನಣೆ ಒದಗಿಸಿ, ಆರು ಆಸ್ಕರ್ ಪ್ರಶಸ್ತಿಗಳಲ್ಲಿ ವಸ್ತ್ರವಿನ್ಯಾಸ ಪ್ರಶಸ್ತಿಯನ್ನು ಭಾರತೀಯ ಮಹಿಳೆ ಭಾನು ಅಥೈಯಾಗ ಒದಗಿಸಿಕೊಟ್ಟಿತು. ಇಪ್ಪತ್ತು ವರ್ಷ ಈ ವೃತ್ತಿಯಲ್ಲಿ ಅಖಂಡವಾಗಿ ದುಡಿದು ಈ ಕೀರ್ತಿ ಪಡೆದ ಭಾರತದ ಏಕೈಕ ವ್ಯಕ್ತಿ ಮಹಿಳೆ ಎಂಬುದೂ ಒಂದು ವಿಶೇಷ.

ಕೊನೆಗೊಂದು ಕಾಡುವ ಪ್ರಶ್ನೆ:

ನಿರ್ದೇಶನದ ಹಿಡಿತದಲ್ಲಿ ತಂತ್ರ ಮತ್ತು ಕಲ್ಪನೆಯಲ್ಲಿ ಅಪರೂಪದ ಕಥಾವಸ್ತು ಇದ್ದರೆ ಏನೆಲ್ಲ ಸಾಧಿಸಬಹುದು ಎಂಬುದನ್ನು ರೂಪಿಸಲು ಇಲ್ಲಿ ಒಂದು ಅಪರೂಪದ ಉದಾಹರಣೆ ಅತಿ ಅಗತ್ಯ.

ಸುಮಾರು ೩೦ ವರ್ಷಗಳ ಹಿಂದೆ 'ಓಬರ್‌ಹಾಸನ್' ಅಂತರರಾಷ್ಟ್ರೀಯ ಕಿರುಚಿತ್ರ ಉತ್ಸವದಲ್ಲಿ ಯುರೋಪಿನ ಒಂದು ದೇಶದ ಕಪ್ಪು ಬಿಳುಪು ಕಿರುಚಿತ್ರವನ್ನು ಪ್ರದರ್ಶಿಸಲಾಯಿತು. ಆ ದೇಶದಲ್ಲಿ ಆಗ ಇದ್ದ ರಾಜಕೀಯ ವ್ಯವಸ್ಥೆ ಪ್ರಜಾಪ್ರಭುತ್ವ. ಆದರೆ ಅಕ್ಕಪಕ್ಕದಲ್ಲಿನ ದೇಶಗಳು ಕಮ್ಯೂನಿಸ್ಟ್ ನೆಲೆಗಳು. ಅವು ತಮ್ಮ ಸಿದ್ಧಾಂತವನ್ನು ಪಸರಿಸುವ ಪ್ರಯತ್ನದಲ್ಲಿದ್ದರೆ ಪ್ರಜಾಪ್ರಭುತ್ವದ ದೇಶದ ಪ್ರಜೆಗಳು ಆ ಸಿದ್ಧಾಂತದ ನೆರಳನ್ನೇ ಕಂಡರೂ ಬೆಚ್ಚಿ ಬೀಳುವಂತಹ ಸಾಮಾಜಿಕ, ರಾಜಕೀಯ ಪರಿಸರ.

ಈ ಹಿನ್ನೆಲೆಯಲ್ಲಿ ಒಬ್ಬ ಪ್ರಬುದ್ಧ ನಾಗರಿಕ ಒಂದು ದಿನ ತನ್ನ ಮನೆಯಲ್ಲಿ ಕೆಲಸಕ್ಕೆ ಹೊರಡುವ ಮುನ್ನ ತಿಂಡಿ ತಿಂದು ಕೈ ಒರೆಸಿಕೊಳ್ಳಲು ಜೇಬಿನಲ್ಲಿ ಕೈಹಾಕಿ ಕರವಸ್ತ್ರ ಹೊರತೆಗೆಯುತ್ತಾನೆ. ಆಗ ಅವನ ಕೈಗೆ ಸಿಗುವುದು ಕೆಂಪುಬಣ್ಣದ ಕರವಸ್ತ್ರ. ಕಪ್ಪು ಬಿಳುಪು ಚಿತ್ರದಲ್ಲಿ ಕರಿ ಸೂಟು, ಬಿಳಿ ಶರ್ಟಿನ ಜೇಬಿನಲ್ಲಿ ಕಂಪು ವರ್ಣದ ಕರವಸ್ತ್ರ ಕೇವಲ ಪಾತ್ರಕ್ಕೆ ಮಾತ್ರವಲ್ಲ, ಪ್ರೇಕ್ಷಕರಿಗೂ ಆಘಾತ ನೀಡುವ ಅನುಭವ. ಇಂತಹ ಪರಿಣಾಮವನ್ನು ಚಿತ್ರದ ಪ್ರತಿಯೊಂದು ಫ್ರೇಮಿನಲ್ಲೂ ಬರುವ ಕರವಸ್ತ್ರವನ್ನು ಕೃತ್ರಿಮವಾಗಿ ಕೈಯಾರೆ ಕೆಂಪು ಬಣ್ಣ ಬಳಿದು ಸಾಧಿಸಲಾಗಿತ್ತು.

ಈಗ ಆ ಪಾತ್ರ ಬೆದರಿ ಕರವಸ್ತ್ರವನ್ನು ದೂರ ಎಸೆದು ಬೇರೆ ಜೇಬಿನಲ್ಲಿ ತಡಕಾಡಿದರೆ ಅದೇ ಕರವಸ್ತ್ರ ಆ ಜೇಬಿನಿಂದ ಹೊರಬರುತ್ತದೆ. ನಂತರ ಅದನ್ನು ತೂರೆದಷ್ಟೂ, ತೊಡೆದಷ್ಟೂ, ತಳ್ಳಿದಷ್ಟೂ ಅದು ಹತ್ತಿರ ಹತ್ತಿರ ಬಂದು ಮೈಯಲ್ಲಿ ನುಸುಳಿಕೊಂಡು ವ್ಯಕ್ತಿಯ ತೋಳಿನಿಂದ, ಕಾಲರ್‌ನಿಂದ, ಪ್ಯಾಂಟಿನ ಒಳಗಿನಿಂದ ನುಗ್ಗಿ ಕೆಳಗೆ ಉದ್ಭವಿಸಿದಾಗ ನೊಣ ಕಾಡಿದಂತೆ ಅವನು ಅದನ್ನು ಸತತವಾಗಿ ಕೊಡವುತ್ತಾನೆ. ಅದನ್ನು ದೂರ ಓಡಿಸುತ್ತಾನೆ. ಕೊನೆಗೆ ಅದರ ಕಾಟ ತಾಳಲಾರದೆ ತಾನೇ ಮನೆ ಬಿಟ್ಟು ರಸ್ತೆಗೆ ಓಡಿ ಬಂದರ ಆ ಕೆಂಪುವಸ್ತ್ರ ರಸ್ತೆಯಲ್ಲೂ ಹಾರುತ್ತ ಅವನ ಬೆನ್ನಟ್ಟಿ ಬರುತ್ತದ. ಕೊನೆಗ ಅದನ್ನು ಪಿಸ್ತೂಲಿನಿಂದ ಹೊಡೆದರೆ ನೂರಾರು ತುಂಡುಗಳಾಗಿ ಅವೆಲ್ಲವೂ ಅವನನ್ನು ಬೆನ್ನಟ್ಟಿ ಬರುತ್ತದೆ. ಅದರಿಂದ ಬಿಡಿಸಿಕೊಳ್ಳಲು ನುಗ್ಗಿದ ಸ್ಥಳಗಳಾದ ಚರ್ಚು, ಸರ್ಕಾರಿ ಕಛೇರಿ, ಆಸ್ಪತ್ರೆ, ರೈಲು ನಿಲಾಣ ಹೀಗೆ ಅದರ ವ್ಯಾಪಕತೆ ಸೂಚಿಸುವ ಅದರ ಕಬಂಧ ಬಾಹುಗಳು ಹರಡಿರುವುದನ್ನು ಸಾರುವಂತೆ ಆ ಕೆಂಪು ವಸ್ತ್ರ ಅಲ್ಲೆಲ್ಲಾ ಬೆಂಬತ್ತಿ ಬರುತ್ತದೆ.

ಕೊನೆಗೆ ಓಡಿ ಓಡಿ ಸುಸ್ತಾಗಿ, ವ್ಯಕ್ತಿ ಕುಸಿದು ಕುಳಿತಾಗ ಆ ಕೆಂಪು ವಸ್ತ್ರವೂ ಅವನ ಕಾಲ ಬಳಿ ಬಂದು ನಿರರ್ಥಕ ವಸ್ತುವಿನಂತೆ ಬೀಳುತ್ತದೆ. ಈಗ ಅದರತ್ತ ತಾತ್ಸಾರದಿಂದ ನೋಡಿ ವ್ಯಕ್ತಿ ನಕ್ಕು ಸುಮ್ಮನಾಗುತ್ತಾನೆ. "ಸಿದ್ಧಾಂತಕ್ಕೆ ಯಾವುದೇ ಮಹತ್ವ ನೀಡದೆ, ಅದಕ್ಕೆ ಹೆದರದೆ, ನೆಮ್ಮದಿ ಹಾಳುಮಾಡಿದ ಸಹಬಾಳ್ವೆಗೆ ಒಪ್ಪಿದಾಗ ಅದೂ ಸಹ ಕಾಡದ ತಪ್ಪಗಿರುವುದು," ಎಂಬ ಯಾವುದೇ ಮಾತು, ಶೀರ್ಷಿಕೆ ಇಲ್ಲದೆ ಸೂಕ್ಷ್ಮ ಸಂದೇಶದೊಂದಿಗೆ ಚಿತ್ರ ಕೊನೆಗೊಳ್ಳುತ್ತದೆ. ಬಹುಶಃ ವರ್ಣ, ವಸ್ತ್ರ ಮತ್ತು ಅದರ ಕ್ರಿಯಾತ್ಮಕ ಬಳಕೆಗೆ ಇದು ಶ್ರೇಷ್ಠ ಉದಾಹರಣೆ. ಆದರೆ ನಾವು ಮಾನಸಿಕವಾಗಿ, ತಾಂತ್ರಿಕವಾಗಿ ಈ ಘಟ್ಟ ತಲುಪುವುದು ಯಾವಾಗ ಎಂಬುದೇ ಸದಾ ಕಾಲವೂ ಕಾಡುವ ಪ್ರಶ್ನೆ.

ಕನ್ನಡ ಚಿತ್ರರಂಗದಲ್ಲಿ ತಮ್ಮ ವೈಯಕ್ತಿಕ ವಸ್ತ್ರಾಲಂಕಾರ ತಜ್ಞರನ್ನು ಹೊಂದಿದ್ದ ನಟನಟಿಯರ ಸಂಖ್ಯೆ ಕಡಿಮೆ. ರಾಜಕುಮಾರ್‌ರಿಗೆ ಬಹಳ ವರ್ಷಗಳು ಎಮ್. ನಾಥ್ ವಸ್ತ್ರಗಳನ್ನು ವಿನ್ಯಾಸಗೊಳಿಸುತ್ತಿದ್ದರು. ವಿಷ್ಣುವರ್ಧನ್ ಅವರಿಗೆ ದೀರ್ಘ ಕಾಲ ವಸ್ತ್ರಾಲಂಕಾರ ಮಾಡುವುದರೊಂದಿಗೆ ಅವರ ಉಡುಪುಗಳನ್ನು ವಿನ್ಯಾಸಗೊಳಿಸಿದವರು ಮುಂಬಯಿನ ಬಡಾ ಸಾಬ್. ಅವರ ಸಾಕುಮಗಳು ಕೀರ್ತಿ ಈ ಜವಾಬ್ದಾರಿಯನ್ನು ಹೊತ್ತಿದ್ದಾರೆ.

ಕನ್ನಡದಲ್ಲಿ ಚಿತ್ರನಿರ್ಮಾಣ ಚಟುವಟಿಕೆಗಳು ಕರ್ನಾಟಕಕ್ಕೆ ಸ್ಥಳಾಂತರಗೊಳ್ಳುವ ಮುಂಚೆ ಮದರಾಸಿನಲ್ಲಿ ಈ ವಿಭಾಗದಲ್ಲಿ ಸಕ್ರಿಯರಾಗಿದ್ದವರಲ್ಲಿ ಪ್ರಮುಖರು ಕೆ.ಎ.ರೆಹಮಾನ್, ವೇಲಾಯುಧಂ, ಎಂ.ರಾಧ ಮತ್ತು ಪೊನ್ನುರಾಜ್ (ಪದ್ಮಿನಿ ಪಿಕ್ಚರ್ಸ್), ಬಿ.ಅಪ್ಪಾರಾವ್, ಅಶ್ವತ್, ಫ್ರಾನ್ಸಿಸ್, ಕೆ.ಸೂರ್ಯರಾವ್, ಬಾಬುರಾವ್ ಮೊದಲಾದವರು. ಮೈಸೂರಿನಲ್ಲಿ ಬಿ.ವಿಠಲ್ ಬ್ರದರ್ಸ್, ನಟೇಶ ಪಿಳ್ಳೆ, ಶ್ಯಾಂ ಸಿಂಗ್ ಪ್ರಮುಖರಾಗಿದ್ದರು. ಮದರಾಸು ದಿನಗಳಲ್ಲಿ ಕನ್ನಡ ಚಿತ್ರರಂಗಕ್ಕೆ ಈ ಇಲಾಖೆಯಲ್ಲಿ ನೆರವಾಗಿ ನಿಂತವರಲ್ಲಿ ಬಾಬುರಾವ್, ನಬೀತಾನ್ ಮಾಸ್ಟರ್, ಎ.ರಾಮನಾಥನ್, ಅಚ್ಯುತರಾವ್, ಮಾಣಿಕ್ಯಂ, ಡಿ.ಎಸ್.ಮಣಿ, ಕೃಷ್ಣ, ವಾಲಿ, ಕಣ್ಣನ್ ಮುಂತಾದವರನ್ನು ಹೆಸರಿಸಬಹುದು.

ಕರ್ನಾಟಕದಲ್ಲಿ ವಸ್ತ್ರಾಲಂಕಾರ ಕ್ಷೇತ್ರದಲ್ಲಿ ಹೆಸರಾದವರು ನಾಜರ ನಾರಾಯಣ್, ಕಲಿಕಾ ಮೂರ್ತಿ, ವಿಠಲ್ ರಾವ್, ನಾಗರಾಜ್, ಚೆಲುವರಾಜ್ ಪ್ರಮುಖರು. ಆದರೆ ೯೦ರ ದಶಕದ ನಂತರ ಕಂಪೆನಿ ವಸ್ತ್ರಾಲಂಕಾರತಜ್ಞರ ಸಂಖ್ಯೆ ತಗ್ಗುತ್ತ ಬಂತು. ಬಿಡಿಬಿಡಿಯಾಗಿ ಚಿತ್ರಗಳಿಗೆ ಈ ಸೇವೆ ಸಲ್ಲಿಸುತ್ತಿರುವವರ ಸಂಖ್ಯೆ ಹೆಚ್ಚುತ್ತಿದೆ.

ಸಾಮಾನ್ಯವಾಗಿ ಹೊಸ ಅಲೆ ಮತ್ತು 'ಪ್ರಿಡ್ಜ್' ಚಿತ್ರಗಳ ನಿರ್ದೇಶಕರ ಪತ್ನಿಯರೇ ಅವರಿಗಾಗಿ ವಸ್ತ್ರಾಲಂಕಾರ ಮತ್ತು ಉಡುಪಿನ ವಿನ್ಯಾಸದ ಕಾರ್ಯವನ್ನು ನಿರ್ವಹಿಸುತ್ತಾರೆ. ಅದರ ಪೈಕಿ ಪ್ರೇಮಾ ಕಾರಂತ್, ವಿಜಯಲಕ್ಷ್ಮಿ ಸಿಂಗ್ (ಆಕೆ ನಿರ್ಮಾಪಕಿಯೂ ಹೌದು), ನಾಗಿಣಿ ಭರಣ, ವೈಶಾಲಿ ಕಾಸರವಳ್ಳಿ, ಅರುಂಧತಿ ನಾಗ್, ಬಿ.ವಿ.ರಾಧ ಮತ್ತು ಸಿ.ಎಸ್.ಶೋಭಾ ಮುಖ್ಯರು.

ಹೊಸಬರ ಪೈಕಿ 'ಮುನ್ನುಡಿ'ಯ ಜುಬೇದ-ಅನುಪಮ, 'ಭೂಮಿಗೀತ'ದ ಜಯಂತಿ ಚಂದ್ರಶೇಖರ್, 'ಸಂಗ್ಯಾ ಬಾಳ್ಯಾ'ದ ವಿಠಲ್ ಸಂಗಲ್ ಸುಭಾಷ್ ಕಡಕೋಳ್ ಗಮನಾರ್ಹ ಕೆಲಸ ಮಾಡಿದ್ದಾರೆ.

ತುರುಬಿಗೂ ಒಂದು ಭಾಷೆ

ಗಮನ ಸೆಳೆಯುವಂತೆ ಮೈ ಕಾಂತಿಯನ್ನು ಹೆಚ್ಚಿಸುವ, ಆದರೆ ಮೈ ಸಾಬೂನನ್ನು ಹೊರತುಪಡಿಸಿ ಬಳಸಲಾಗುವ ವಸ್ತುಗಳು ಅಂಗರಾಗಗಳು (Cosmetics). ಇವು ಆರೋಗ್ಯ ಹಾಗೂ ಸೌಂದರ್ಯ ಎರಡನ್ನೂ ವೃದ್ಧಿಸುವ ಸಾಧನ. ಇದನ್ನು ಈಗ ಒಂದು ಶಾಸ್ತ್ರವೆಂದೇ ಪರಿಗಣಿಸುವಷ್ಟು ಬೆಳೆದಿದೆ. ಅಲ್ಲದೆ ಅದು ಈಗ ಕೈಗಾರಿಕಾ ಸ್ವರೂಪವನ್ನು ಪಡೆದಿದೆ. ಇದಕ್ಕೆ ಕಾರಣ ಇದನ್ನು ಈಗ ಕೇವಲ ಬಲ್ಲಿದರು ಮಾತ್ರವಲ್ಲ, ಬಡವರೂ ಬಳಸುವಂತೆ ಮಾಡಿವೆ ಕೈಗೆಟುಕುವ ಬೆಲೆ ಹಾಗೂ ಸೇವಾಜಾಲ.

ಈ ಅಂಗರಾಗಶಾಸ್ತ್ರಗಳಲ್ಲಿ ಒಂದು ಮಹತ್ವದ ಅಂಶವೇ ಕೇಶ ಶೃಂಗಾರ. ೧೮೭೦ರಲ್ಲಿ ಫ್ರಾನ್ಸಿನ ಕೇಶಾಲಂಕಾರಿ ಮಾರ್ಸೆಲ್ ಗ್ರೇಟೊ ಕಂಡು ಹಿಡಿದ ''ಮಾರ್ಸೆಲ್ ಗುಂಗುರು'' ಪದ್ಧತಿಯಲ್ಲಿ ಕಂಬಿಗಳ ನೆರವಿನಿಂದ ಕೂದಲನ್ನು ಗುಂಗುರಾಗಿಸುತ್ತಿದ್ದರು. ಇದನ್ನು ಮನೆಗಳಿಗಿಂತ ಅಂಗಡಿಗಳಲ್ಲೇ ಹೆಚ್ಚಿಗೆ ಬಳಸಿದರು. ಇದರ ನಂತರ ಲಂಡನ್‌ನಲ್ಲಿದ್ದ ಜರ್ಮನಿಯ ನಾಪಿತ ಚಾರಲ್ಸ್ ನೆಸ್ಲರ್ ೧೯೦೬ರಲ್ಲಿ ಕಂಡುಹಿಡಿದ 'ಶಾಶ್ವತ ಅಲೆಗುಂಗುರು' ಪದ್ಧತಿಯಲ್ಲಿ ಕೂದಲು ಗುಂಗುರಾಗಿಸಿಕೊಳ್ಳಲು ೧೦-೧೨ ತಾಸು ಹಿಡಿಯುತ್ತಿತ್ತು. ಈ ವಿಧಾನವನ್ನು ಅಮೆರಿಕಾದಲ್ಲಿ ೧೯೨೦ರಲ್ಲಿ ಉತ್ತಮಗೊಳಿಸಿದ ನಂತರ ಇದೇ ಅಂಗರಾಗ ವ್ಯವಸಾಯದ ಶೇಕಡಾ ೩೦ರಷ್ಟು ವ್ಯಾಪಾರ ಸಾಧನವಾಯಿತು.

ತಲೆ ಕೂದಲನ್ನು ಚೆನ್ನಾಗಿಟ್ಟುಕೊಳ್ಳುವುದು ಅಲಂಕರಣ ಕ್ರಿಯೆಗಳಲ್ಲಿ ಬಲು ತೊಡಕಿನ ಕೆಲಸ. ಕೂದಲನ್ನು ಚೊಕ್ಕಗೊಳಿಸುವುದು, ಹಾಗೂ ಸಂದರ್ಭಗಳಿಗೆ ತಕ್ಕಂತೆ ಅಲ್ಪ ಕಾಲದಲ್ಲಿ ಅಲಂಕರಿಸಿಕೊಳ್ಳುವುದು ಚಾಲೂಕುತನದ, ಕೆಲವರಿಗೆ ಮಾತ್ರ ಒಲಿದ ಕಲೆ. ಇದರಂತೆಯೇ ಕೂದಲಿಗೆ ಶಾಶ್ವತವಾಗಿ ಬಣ್ಣವನ್ನು ಕೊಡುವ ಲೇಪನ ಕಲೆಯೂ ಬಲು ಮಹತ್ವದ ಅಂಶ. ಇಲ್ಲಿ ಕೂದಲಿಗೆ ಕಪ್ಪು, ಕೆಂಪು, ಬಂಗಾರ ಅಥವಾ ಬಿಳಿ ವರ್ಣದ ಪರಿಣಾಮವನ್ನು ನೀಡಬಹುದು. ಇದರೊಂದಿಗೆ ಸ್ನಾನಕ್ಕೆ ತಲೆಗೆ ಬಳಸುವ ಕಷಾಯ ಹಾಗೂ ನಂತರ ಮುಡಿಯುವ ಬಗೆ ಬಗೆಯ ಹೂಗಳು ಕೂದಲಿನ ಗಮಗಮಿಕೆ ಹೆಚ್ಚಿಸುತ್ತವೆ.

ಭಾರತೀಯ ಪರಂಪರೆಯಲ್ಲಿ ಜನ ತಾವು ಬಳಸುವ ಸೌಂದರ್ಯ ಸಾಧನಗಳು, ಅಲಂಕರಣಗಳು ದೇವರ ಪ್ರೀತ್ಯರ್ಥವೆಂದೇ ಭಾವಿಸುತ್ತಿದ್ದರು. ಕ್ರಮೇಣ ನಾಗರಿಕತೆಯೊಂದಿಗೆ ವಿಚಾರದಲ್ಲಿ ಬದಲಾವಣೆಗಳಾದವು. ಹೀಗಾಗಿ ಮೊದಲು ದೇವಮಂದಿರಕ್ಕೆ ಮೀಸಲಾದ ಶೃಂಗಾರ ಸಾಧನಗಳು ಶಯ್ಯಾಗೃಹಕ್ಕೂ ತಲುಪಿದವು. ಅಲಂಕಾರದ ಉದ್ದೇಶ ಕಲಾಭಿರುಚಿಯನ್ನು ಹೆಚ್ಚಿಸಿಕೊಳ್ಳುವುದು, ತಮ್ಮ ರಸಿಕತೆಯಿಂದ ಸಮಾಜದಲ್ಲಿ ಸಹ್ಯರೆನಿಸಿಕೊಳ್ಳುವುದು, ಜೊತೆಗೆ ಶರೀರದ ಆರೋಗ್ಯವನ್ನು ಕಾಪಾಡಿಕೊಳ್ಳುವುದು. ಇದಲ್ಲದೆ ಪಾತ್ರಧಾರಿಗಳು ರಂಗಸ್ಥಳದಲ್ಲಿ ವಿವಿಧ ವೇಷ-ಭೂಷೆ, ಅಲಂಕಾರ ಬಳಸಿ ಕೃತಕ ಗಡ್ಡ, ಮೀಸೆ ಬಳಸುವ ಕಲೆಯನ್ನು ಸಾಧಿಸಿಕೊಂಡರು.

ಋತುಗಳಿಗೆ ಅನುಸಾರವಾಗಿ ವಸ್ತ್ರಾಭರಣ ಧಾರಣೆ, ಕೇಶಾಲಂಕರಣ ಮತ್ತು ಪುಷ್ಪ ಧಾರಣೆ ಅರಿತ ಚತುರ ಭಾರತೀಯರು ತಮ್ಮ ಲಾವಣ್ಯ ಹೆಚ್ಚಿಸಿಕೊಳ್ಳಲು ಮಾತ್ರವಲ್ಲ, ವಿಷಯಾಭಿಲಾಷೆ ಜಾಗೃತಗೊಳಿಸಿ ಸ್ಪರ್ಶ ಸುಖಕ್ಕೆ ಉತ್ತೇಜಿಸುವುದನ್ನು ಕಂಡು ಕೊಂಡರು. ಇವುಗಳ ವಿವರವಾದ ವರ್ಣನೆ ವಾಜೀಕರಣದಲ್ಲಿ ಉಲ್ಲೇಖಿಸಗೊಂಡಿದೆ.

(ಚಿತ್ರ ೧-೬) ಚಾಲುಕ್ಯ ಮತ್ತು ವಿಜಯನಗರ ಶಿಲ್ಪಗಳಲ್ಲಿ ಕಾಣಬರುವ ಕೇಶಾಲಂಕಾರದ ಕೆಲವು ಮಾದರಿಗಳು

ಕೂದಲನ್ನು ಅಭಿರುಚಿಗೆ ತಕ್ಕಂತೆ ನಿಜಜೀವನದಲ್ಲೂ ಹಾಗೂ ಪಾತ್ರಕ್ಕೆ ತಕ್ಕಂತೆ ರಂಗಭೂಮಿ, ಚಲನಚಿತ್ರ, ಟಿ.ವಿ.ಮಾಧ್ಯಮಗಳಲ್ಲಿ ಬೆಳೆಸಿಕೊಳ್ಳುವುದು, ಕತ್ತರಿಸಿಕೊಳ್ಳುವುದು, ಬಾಚುವುದು, ಹೆಣೆಯುವುದು, ಕಟ್ಟುವುದು ಈ ಎಲ್ಲ ವಿಷಯಗಳೂ ಕೇಶಾಲಂಕಾರದಲ್ಲಿ ಒಳಗೊಂಡಿವೆ. ಕೇಶದ ಅಲಂಕರಣ ಕೇವಲ ಹೆಂಗಸರಿಗೆ ಮಾತ್ರವಲ್ಲ, ಗಂಡಸರಿಗೂ ಸಹಜವಾದುದೆ. ಆದರೆ ಕೇಶದ ಆಗತ್ಯ ಕಾಲಾನುಕಾಲಕ್ಕೆ ವ್ಯತ್ಯಾಸವಾಗುತ್ತ ಬಂದಿದೆ. ಸಾಮಾಜಿಕ, ಧಾರ್ಮಿಕ ಹಾಗೂ ಅಲಂಕರಣ ದೃಷ್ಟಿಯಿಂದ ಮಾನವ ತನ್ನ ತಲೆಗೂದಲನ್ನು ಬೆಳೆಸುತ್ತಿದ್ದ. ನಂತರ ಸ್ವಲ್ಪ ಉಳಿಸಿಕೊಂಡೋ ಅಥವಾ ಪೂರ್ಣವಾಗಿಯೂ ತೆಗೆಸಿದ್ದುಂಟು. ಗಡ್ಡ, ಮೀಸೆಗಳೂ ಅಷ್ಟೆ, ದೇವರ ಹರಕಗಾಗಿ ಬಿಡುವುದು ಹಾಗೂ ತೆಗೆಯುವುದು ಎರಡೂ ಪದ್ಧತಿಗಳಿವೆ. ಆದರೆ ಬಹು ಮುಖ್ಯವಾಗಿ ವ್ಯಕ್ತಿತ್ವಕ್ಕೆ, ಮುಖದ ಅಂದ ಚೆಂದಕ್ಕೆ ಒಪ್ಪುವಂತೆ ತಲೆಗೂದಲನ್ನು ತಿದ್ದುವ ಕಲೆ ಇತ್ತೀಚಿನ ಬೆಳವಣಿಗೆ. ಇದಕ್ಕಾಗಿ ವೃತ್ತಿನಿರತರು ಹಾಗೂ ಸಂಸ್ಥೆಗಳ ಸೇವೆಯೂ ಲಭ್ಯ ಇದೆ.

ಪೂರ್ವ ರಾಷ್ಟ್ರದವರು ಕರಿಗೂದಲು ಮೆಚ್ಚುತ್ತಾರೆ. ಪಾಶ್ಚಾತ್ಯರು ಬಂಗಾರದ ಬಣ್ಣದ ಕೂದಲನ್ನು ಇಷ್ಟ ಪಡುತ್ತಾರೆ. ಪೂರ್ವದಲ್ಲಿ ಜಡೆ, ಮುಡಿ ಹೆಚ್ಚು ಪ್ರಿಯ. ಪಾಶ್ಚಿಮಾತ್ಯರಲ್ಲಿ ಮೋಟು ಕೂದಲಿನ (Bob Cut) ಅಲಂಕರಣ ಸರ್ವೇ ಸಾಮಾನ್ಯ.

ಅಗತ್ಯಕ್ಕಿಂತಲೂ ತಲೆಗೂದಲು ಕಡಿಮೆಯಾದಾಗ ಕೊರತೆ ತುಂಬಲು ಕೃತಕ ಸಾಧನಗಳನ್ನು ಬಳಸುತ್ತಾರೆ. ಇವುಗಳಲ್ಲಿ ಚವುರಿ, ಕುಚ್ಚು, ಸಿಂಬಿ, ಗಂಗಾವನ ಪ್ರಮುಖ. ತಲೆ ಪೂರ್ತಿ ಬೋಳಾಗಿದ್ದರೆ ಟೋಫನ್ನು, ವಿಗ್ ಅನ್ನು ಉಪಯೋಗಿಸುತ್ತಾರೆ. ಈಗ ಇದೇ ಒಂದು ಉದ್ಯಮವಾಗಿದೆ. ಈ ರೀತಿ ವಿಗ್ ತಯಾರಿಸಲು ಕೃತಕ ಸಾಧನ ಬಳಸಬಹುದು ಅಥವಾ ಅನ್ಯರ ಕೂದಲನ್ನು ಬಳಸಿಯೂ ವಿವಿಧ ವಿಗ್‌ಗಳನ್ನು ತಯಾರಿಸಬಹುದು.

(ಚಿತ್ರ ೭-೧೦) ಈ ಕೇಶ ವಿನ್ಯಾಸಗಳಿಗೆ ಶಿಲ್ಪಗಳು ಸ್ಫೂರ್ತಿ ನೀಡಿವೆ



ಕರ್ನಾಟಕದಲ್ಲಿ ಮಹಿಳೆಯರು ಕೇಶಾಲಂಕಾರದಲ್ಲಿ ನಿಪುಣರಿದ್ದರೆಂದು ಸಾರಲು ನಮ್ಮ ಕನ್ನಡ ಕಾವ್ಯಗಳಲ್ಲಿ, ದೇವಾಲಯಗಳಲ್ಲಿನ ಶಿಲ್ಪಗಳು ಇಂದಿಗೂ ಸಾಕ್ಷಿಯಾಗಿ ನಿಂತಿವೆ. ಪಟ್ಟದ ಕಲ್ಲು, ಐಹೊಳೆ ದೇವಾಲಯಗಳಲ್ಲಿ ವಿವಿಧ ಪ್ರಕಾರದ ಮಹಿಳೆಯರ ಕೇಶ ರಚನೆಯ ಜಿಡಿಮುಡಿ, ಸೋಗೆ ದುರುಬು, ಮುತ್ತಿನ ಮುಡಿ, ಗೋಡಂಬಿ ಮುಡಿ, ಎಳಲ್ಮುಡಿ, ತೆಕ್ಕೆ ದುರುಬು ಕಾಣಬಹುದು. ಇದೇ ರೀತಿ ವಿಜಯನಗರದ ಶಿಲ್ಪ ಸುಂದರಿಯರ ಬಂಬಲ್ಮುಡಿ, ಹಳೇಬೀಡು, ಬೇಲೂರು ಶಿಲಾಬಾಲಿಕೆಯರಲ್ಲಿ ಜೀಸಣಿಕೆ ಮುಡಿ, ಬೇಲೂರು ಮುಡಿ ನೋಡಬಹುದು (ಚಿತ್ರ ನೋಡಿರಿ). ಕೇಶರಾಶಿಗ ತೊಡಿಸುತ್ತಿದ್ದ ಆಭರಣಗಳಲ್ಲಿ ಜಡೆ ಬಿಲ್ಲೆ, ನಾಗರ, ಕಾಕಡೆ, ಚೈತಲಿ, ಬೊಟ್ಟು, ಚಂದ್ರ, ಸೂರ್ಯ, ಕೆನ್ನೆ ಸರಪಳಿ, ಗೊಂಡೆ, ಮುತ್ತಿನ ಮಾಲೆ, ಬಂಗಾರ ಬೆಳ್ಳಿಯ ಹೂವುಗಳು ಪ್ರಮುಖವಾದುವು.

ಮುಖದ ಆಕೃತಿಗೆ, ದೇಹದ ಗಾತ್ರಕ್ಕೆ, ಎತ್ತರಕ್ಕೆ ತಕ್ಕಂತೆ ಮುಡಿಕಟ್ಟುವ ಈ ಕೇಶಾಲಂಕಾರ ಕಲೆ ಚಲನಚಿತ್ರ ಜಗತ್ತನ್ನು ಪ್ರವೇಶಿಸಿ ಈಗ ವಿಶ್ವದ ಎಲ್ಲೆಡೆ ಜನಪ್ರಿಯವಾಗಿದೆ.

(ಚಿತ್ರ ೧೪) ಐತಿಹಾಸಿಕ ಚಿತ್ರಗಳ ಕೇಶ, ವಸ್ತ್ರಾಲಂಕಾರಗಳಿಗ ಶಿಲ್ಪಗಳೇ ಆಧಾರ (ಚಿತ್ರ: 'ಇಮ್ಮಡಿ ಪುಲಿಕೇಶಿ')

ಸಾಮಾನ್ಯವಾಗಿ ನಾವು ಯಾವುದೇ ಸಾಹಿತ್ಯ ಕೃತಿ ಓದಿದಾಗ-ಅದು ಧಾರ್ಮಿಕ ಸಾಹಿತ್ಯವಿರಲಿ, ರಾಜಕೀಯ ಇತಿಹಾಸ ಅಥವಾ ಜೀವನ ಚರಿತ್ರೆಯಾಗಿರಲಿ ಕೆಲವು ವ್ಯಕ್ತಿಗಳ ಹೆಸರಿನ ಉಲ್ಲೇಖ ನಮ್ಮ ಕಣ್ಮುಂದೆ ಒಂದು ಚಿತ್ರವನ್ನು ನಿಲ್ಲಿಸುತ್ತದೆ. ಅದು ಆಯಾ ವ್ಯಕ್ತಿಯ ವೇಷ-ಭೂಷೆ ಹಾಗೂ ಗಡ್ಡ ಮೀಸೆ ಒಳಗೊಂಡ ಕೇಶಾಲಂಕಾರ ಸಹಿತ ಕಲ್ಪನೆಯಾಗಿರುತ್ತದೆ. ವಿಶ್ವಮಟ್ಟದಲ್ಲಿ ನಾವು ಚಾರ್ಲಿ ಚಾಪ್ಲಿನ್, ಹಿಟ್ಲರ್, ಕಾರ್ಲ್‌ಮಾರ್ಕ್ಸ್, ಅಬ್ರಹಾಂ ಲಿಂಕನ್, ಗಾಂಧೀಜಿ, ರವೀಂದ್ರನಾಥ ಟಾಗೋರ್ ಇವರನ್ನು ಹೆಸರಿಸಬಹುದು. ಅದೇ ರೀತಿ ನಮ್ಮ ಸಮಕಾಲೀನ ಬದುಕಿನಲ್ಲಿ ಭಾರತೀಯರ ಕಣ್ಮುಂದೆ ಸುಳಿಯುವ ಹೆಸರುಗಳು ಧೀರೇಂದ್ರ ಬ್ರಹ್ಮಚಾರಿ, ಆಚಾರ್ಯ ರಜನೀಶ್, ಲಲ್ಲೂ ಪ್ರಸಾದ್ ಯಾದವ್, ವೀರಪ್ಪನ್ ಮೊದಲಾದವರು. ಮಹಿಳೆಯರಲ್ಲಿ ಮೀರಾ, ಅಕ್ಕಮಹಾದೇವಿ, ಅನಿಬೆಸೆಂಟ್, ಇಂದಿರಾ ಗಾಂಧಿ ಇವರನ್ನು ಹೆಸರಿಸಬಹುದು.

ಇದೇ ರೀತಿ ನಮ್ಮಲ್ಲಿ ದೇವತೆಗಳು, ನವಗ್ರಹಗಳು, ಋಷಿಗಳು, ರಾಕ್ಷಸರು, ಮೋಹಿನಿ-ಪಿಶಾಚಿಗಳು, ಸಾಧು ಸಂತ ಸನ್ಯಾಸಿಗಳು ಹಾಗೂ ಐತಿಹಾಸಿಕ ರಾಜರು, ಮಂತ್ರಿಗಳು, ಗುಪ್ತಚಾರರು, ಸೈನಿಕರು, ದೂತರು, ಮಾಟ ಮಂತ್ರದವರು ಇವರುಗಳ ಬಗ್ಗೆ ಒಂದು ಸಾಮಾನ್ಯ ಕಲ್ಪನೆ ಇಂದಿಗೂ ಜನಜನಿತವಾಗಿದೆ. ಈ ಕಲ್ಪನೆಯ ಚೌಕಟ್ಟಿನಿಂದಾಚೆ ಯಾವುದೇ ಅಂಶ ನಿರೂಪಿತವಾದರೂ ಅದು ಜನರ ಟೀಕ, ಅವಹೇಳನ, ತಾತ್ಸಾರಕ್ಕೆ ಗುರಿಯಾಗುತ್ತದೆ (ಉದಾ : ಪೊದೆ ಮೀಸೆ ಇಲ್ಲದ ಭೀಮ ಅಥವಾ ಸೀತೆಯನ್ನು ಕಳೆದುಕೊಂಡರೂ ವಿರಹಿಯಾದರೂ ರಾಮ ಗಡ್ಡ, ಮೀಸೆ ಬಿಡುವ ಹಾಗಿಲ್ಲ).

ಈ ಹಿನ್ನೆಲೆಯಲ್ಲಿ ನಮ್ಮ ಕನ್ನಡ ರಂಗಭೂಮಿ ರೂಪಿಸಿಕೊಂಡು ಬಂದ, ಒಂದು ನಿಶ್ಚಿತ ಪರಂಪರೆಯಲ್ಲಿ ನಿರೂಪಿತವಾದ, ವಸ್ತ್ರವಿನ್ಯಾಸದ ಜೊತೆಗ ಕೇಶಾಲಂಕಾರ ಸಾಧನಗಳೂ ಜಾರಿಯಲ್ಲಿದ್ದವು. ಇವುಗಳನ್ನೇ ಯಾವುದೇ ಎಗ್ಗಿಲ್ಲದೆ ಆರಂಭದ ಕನ್ನಡ ಚಲನಚಿತ್ರಗಳಾದ 'ಭಕ್ತಧ್ರುವ', 'ಸತೀ ಸುಲೋಚನಾ'. 'ಪುರಂದರದಾಸ', 'ರಾಜಸೂಯ ಯಾಗ', 'ಸುಭದ್ರ', 'ವಸಂತಸೇನಾ', 'ಭಕ್ತ ಪ್ರಹ್ಲಾದ', 'ಸತ್ಯ ಹರಿಶ್ಚಂದ್ರ', 'ಕೃಷ್ಣ ಸುಧಾಮ', 'ಕೃಷ್ಣಲೀಲಾ', 'ಮಹಾತ್ಮ ಕಬೀರ', 'ಭಕ್ತ ರಾಮದಾಸ್', 'ಭಕ್ತ ಕುಂಬಾರ', 'ನಾಗಕನ್ನಿಕಾ', 'ಸತೀ ತುಳಸಿ', 'ಜಗನ್ಮೋಹಿನಿ', 'ಶ್ರೀನಿವಾಸ ಕಲ್ಯಾಣ'ದ ನಂತರವೂ ಈ ಪರಂಪರೆಯ ಇತರ ಹಲವಾರು ಚಿತ್ರಗಳಲ್ಲಿ ಇವುಗಳ ಬಳಕೆ ಮುಂದುವರಿಯಿತು.

'ಸದಾರಮೆ', 'ಸಂಸಾರನೌಕ', 'ಜೀವನ ನಾಟಕ', 'ದಳ್ಳಾಳಿ', 'ಜಾತಕ ಫಲ', 'ಕನ್ಯಾದಾನ' ಇಂತಹ ಸಾಮಾಜಿಕ ಚಿತ್ರಗಳಲ್ಲಿ ಸಮಕಾಲೀನ ಬದುಕನ್ನು ನಿರೂಪಿಸಲು ವಿಶೇಷ ಕಾಳಜಿ ವಹಿಸಿ ಸ್ಥಳೀಯ ಸೊಗಡಿನ ಪ್ರಾಂತೀಯತೆಯ ವೇಷ-ಭೂಷೆ, ಕೇಶಾಲಂಕಾರ ನಿರೂಪಿಸಲಾಯಿತು.

ಆದರೂ ಯಾವ ವರ್ಷ, ಯಾವ ಚಿತ್ರ, ಯಾವ ಪಾತ್ರ ಮಾಡಬೇಕಾಗಬಹುದೋ ಎಂಬ ಶಂಕೆ ಅಥವಾ ಆಶಾಭಾವನೆಯಿಂದಾಗಿ ನಟರು ಸಹಜವಾದ, ಕತ್ತಿನವರೆಗೂ ಇಳಿಬಿಟ್ಟ ಕೇಶರಾಶಿ ಹಾಗೂ ಸಹಜ ಗಡ್ಡ, ಮೀಸೆ ಬೆಳೆಸಿಕೊಂಡೇ ಬದುಕುತ್ತಿದ್ದರು.

(ಚಿತ್ರ ೧೫-೧೯) ಮೊಘಲ್ ಕೊಡಗು ಶರಣೆ ಶಕುಂತಲೆ ಕಾಲೇಜು ಕನ್ಯೆ

(ಚಿತ್ರ ೨೦-೨೩) ಆಧುನಿಕ ಕೇಶ ವಿನ್ಯಾಸದ ಕೆಲವು ಮಾದರಿಗಳು

ಪಾತ್ರ ದೊರೆತಾಗ ನಿರ್ದೇಶಕನಿಗೆ ತಲೆ ಒಪ್ಪಿಸುವ ಸಂಪ್ರದಾಯ ಅನೇಕ ವರ್ಷಗಳ ಕಾಲ - ಸ್ಟುಡಿಯೋ ಪದ್ಧತಿ ಇರುವವರೆಗೂ - ಚಾಲ್ತಿಯಲ್ಲಿತ್ತು. ಕೆಲವು ಸಂದರ್ಭಗಳಲ್ಲಿ ತಮ್ಮ ಚಿತ್ರೀಕರಣ ದಿನಗಳನ್ನು ಅನೇಕ ನಿರ್ಮಾಪಕರಿಗೆ ಹಂಚಿ ನೀಡಿದಾಗ ಚಿತ್ರೀಕರಣದ ದೃಶ್ಯಗಳಲ್ಲಿ ಪಾತ್ರದ ಅಸಲಿ ಕೇಶಾಲಂಕಾರ, ಗಡ್ಡ, ಮೀಸೆಯ ಅಖಂಡತೆ ಹಾಗೂ ಏಕತೆ (Continuity) ಹೋಗುವುದೆಂಬ ಕಾರಣದಿಂದ ಕಲಾವಿದರು ತಮಗೆ ಬಂದ ಅಭಿನಯ ಅವಕಾಶಗಳನ್ನು ನಿರಾಕರಿಸುತ್ತಿದ್ದರು. ಸ್ತ್ರೀ ಪಾತ್ರಗಳು ಆಧುನಿಕತೆಯನ್ನು ನಿರೂಪಿಸಲು ಬಾಬ್‌ಕಟ್ ಅಥವಾ ವಿಧವೆಯ ಪಾತ್ರ ಮಾಡಲು ತಲೆ ಬೋಳಿಸಿಕೊಳ್ಳಲು ಒಪ್ಪದೆ ಪಾತ್ರವನ್ನೇ ತಿರಸ್ಕರಿಸುತ್ತಿದ್ದರು. ಆಗ ಅವರಿಗಾಗಿ ನುಣ್ಣನೆ ತಲೆ ಕಾಣುವಂತೆ ಟೋಫ಼ಸ್ ಹಾಕುವ ತಂತ್ರ ಕಂಡುಕೊಳ್ಳಬೇಕಾಯಿತು. ನಂತರ ಏಕಕಾಲದಲ್ಲಿ ನೂರಾರು ಬಗೆಯ ಐತಿಹಾಸಿಕ, ಸಾಮಾಜಿಕ, ಭಕ್ತಿರಸ ಪ್ರಧಾನ, ಜಾನಪದ ಚಿತ್ರಗಳನ್ನು ಕಲಾವಿದರು ನಟಿಸಲು ಒಪ್ಪತೊಡಗಿದಾಗ ಅವರಿಗಾಗಿಯೇ ಪಾತ್ರಕ್ಕೆ ತಕ್ಕಂತೆ ಕೃತಕ ಕೇಶಾಲಂಕಾರ, ಗಡ್ಡ, ಮೀಸೆ ರೂಪಿಸುವ ಸಂಪ್ರದಾಯ ಹುಟ್ಟಿಕೊಂಡಿತು.

ಪಾತ್ರದ ಪ್ರಾಂತೀಯತೆಯ ನಿರೂಪಣೆಯಲ್ಲಿ ನೆರವಾದ ಸರಳ, ಸುಲಭವಾದ ಇನ್ನೊಂದು ಸಾಧನವೆಂದರೆ ಪುರುಷರು ಧರಿಸುವ ಶಿರೋ ವಸ್ತ್ರಗಳು. ಇವನ್ನು ಕಥೆ ಹಾಗೂ ಪಾತ್ರಕ್ಕೆ ತಕ್ಕಂತೆ, ಕೊಡಗಿನ ಜರೀ ಪೇಟ (ಚಿತ್ರ :ಮುತ್ತಿನ ಹಾರ), ಮೈಸೂರಿನ ಪೇಟ (ಗೆಜ್ಜೆಪೂಜೆ, ಹಣ್ಣೆಲೆ ಚಿಗುರಿದಾಗ), ಉತ್ತರ ಕರ್ನಾಟಕದ ರುಮಾಲು (ಸಂಗೊಳ್ಳಿ ರಾಯಣ್ಣ, ಮಾಡಿ ಮಡಿದವರು, ಸಂಗ್ಯಾ ಬಾಳ್ಯಾ), ಮಹಾರಾಷ್ಟ್ರದ ಪಗಡಿ (ಭಕ್ತ ಕುಂಬಾರ, ಸಂತ ತುಕಾರಾಂ, ಗೋರ ಕುಂಬಾರ) ಹಾಗೂ ಅನೇಕ ಪೋಷಕ ಪಾತ್ರಗಳಲ್ಲಿ ಬರುವ ಮುಸ್ಲಿಮರ ರೂಮ್ಮಿ ಟೋಪಿ, ಹೆಣಿಕೆಯ ಕಾಶ್ಮೀರಿ ಟೋಪಿ, ಎಂ.ಜಿ.ಆರ್. ಮಾದರಿಯ ಕುರಿ ತುಪ್ಪಳದ ಟೋಪಿ, ಪಠಾಣರ ಟೋಪಿ, ಸರ್ದಾರ್‌ಜೀಗಳ ಶಿರಸ್ತ್ರಾಣ (ಟರ್ಬನ್), ಮಾರ್ವಾಡಿಯ ರುಮಾಲು, ಪಾರ್ಸಿಯ ಟೋಪಿಗಳನ್ನು ಬಳಸಲಾಯಿತು. ಶುಭ ಕಾರ್ಯದಲ್ಲಿ ಪುರುಷರು ತಲೆಗೆ ವಸ್ತ್ರ ಬಳಸಬೇಕೆಂಬ ಪರಂಪರೆ ನಿರೂಪಿಸಲು, ಮದುವೆಯಲ್ಲಿ ಬಾಸಿಂಗ ಅಥವಾ ಜರೀಪೇಟ, ರಾಜಕೀಯ ಸನ್ನಿವೇಶದಲ್ಲಿ ಖಾದಿ ಟೋಪಿ, ವ್ಯಾಪಾರಿಗೆ ಕರಿ ಅಥವಾ ಕಂದು ರಟ್ಟಿನ ಟೋಪಿ, ಪದವಿ ಅಧಿಕಾರಿಗಳ ಸ್ಥಾನಮಾನ ರೂಪಿಸಲು ಪೊಲೀಸು, ಸೈನ್ಯಾಧಿಕಾರಿಗಳ ವಿವಿಧ ಕ್ಯಾಪುಗಳು ಹಾಗೂ ಹಾಸ್ಯದ ನಿರೂಪಣೆಗೆ ಮತ್ತು ಪಶ್ಚಿಮ ಹಿನ್ನೆಲೆಯ ಖಳನಾಯಕನ ಚಿತ್ರಣಕ್ಕೆ ವಿವಿಧ ಬಗೆಯ ಹ್ಯಾಟುಗಳ ಬಳಕೆ ಚಾಲನೆಗೆ ಬಂದಿತು. ಇದೇ ರೀತಿ ಗಿರಿಜನರು, ಕಾಡುಜನರು, ಆದಿವಾಸಿಗಳೆಂದು ರೂಪಿಸಲು ಗರಿಗಳನ್ನು ಸಿಕ್ಕಿಸಿದ, ಕೊಂಬುಗಳಿಂದ ಕೂಡಿದ ಶಿರೋಭರಣ ಇರುತ್ತಿತ್ತು.

ಚಿತ್ರಗಳ ನಿರ್ಮಾಣದಲ್ಲಿ ಹಾಗೂ ನಿರೂಪಣೆಯಲ್ಲಿ ಯಾಂತ್ರಿಕತೆ ಮೇಲುಗೈ ಪಡೆದಂತೆ ಹಲವಾರು ಪಾತ್ರಗಳ ನಿರೂಪಣೆಯಲ್ಲಿ ಕೇಶಾಲಂಕಾರವೂ ಒಂದು ನಿಶ್ಚಿತ ಮಾದರಿಯಲ್ಲಿ ಮೂಡಿಬರತೊಡಗಿತು.

ರಾಜಕುಮಾರಿ, ರಾಕ್ಷಸಿ, ಮೋಹಿನಿ, ನೀಳವಾದ, ಸಡಿಲವಾಗಿ ಬಿಟ್ಟ ಕೇಶರಾಶಿಯಲ್ಲಿ ಅಲೆವ ಹೆಣ್ಣಾಗಿದ್ದರೆ, ದೆವ್ವ, ಭೂತ, ಪ್ರೇತ ಪೀಡಿತೆ ಕೆದರಿದ ತಲೆಯ, ವಿಶಾಲ ಕೇಶರಾಶಿಯವಳಾಗಿರುತ್ತಿದ್ದಳು. ಅವಳು ಹುಚ್ಚಿಯಾಗಿದ್ದರೆ ತಲೆಯನ್ನು ಸದಾ ಕೆರೆಯುವ, ಮಣ್ಣು, ಕೂರೆ, ಹೇನು ಹೆಕ್ಕುವ ತಲೆಯಲ್ಲಿ ಮಣ್ಣು, ಕಸ ಹುಯ್ದುಕೊಳ್ಳುವ, ಕೂದಲು ಕಿತ್ತುಕೊಳ್ಳುವ ಭಯಂಕರ ಸ್ವರೂಪಳಾಗಿರುತ್ತಿದ್ದಳು. ಇದೇ ರೀತಿ, ಹಳ್ಳಿಯ ಮುಗ್ಧೆ, ಅನಕ್ಷರಸ್ಥೆ, ಪೆದ್ದುತನ ತೋರಿಸಲು ಅವಳ ತಲೆಗೆ ಸಾಕಷ್ಟು ಎಣ್ಣೆ ಹಾಕಿ, ಬಿಗಿಯಾಗಿ ಬಾಚಿ ಕಟ್ಟಿದ, ಎಮ್ಮೆ ಕೋಡಿನಂತೆ ಬಾಗಿದ ಎರಡು ಜಡೆ ಅಥವಾ ಒಂದೇ ಜಡೆಯ ತುದಿಗೆ ಗೊಂಡೆ ಕಟ್ಟಿ, ಅವನ್ನು ಕೈಯಲ್ಲಿ ಹಂಟರಿನಂತೆ ಗರಗರ ತಿರುಗಿಸುತ್ತ ಗಂಡು ಬೀರಿಯಂತೆ ಅಲೆಯುತ್ತಿರುವಂತೆ ಕಾಣುತ್ತಾಳೆ. ತುಂಬಾ ಓದಿದವಳು, ಮುಂದುವರಿದವಳು ಅಥವಾ ಸ್ವೇಚ್ಛಾಚಾರದ ನಡತೆಯನ್ನು ನಿರೂಪಿಸಲು ಹೆಣ್ಣು ಬಾಬ್‌ಕಟ್ ಮಾಡಿಕೊಂಡು ಅಥವಾ ಹಣೆ ಮುಚ್ಚುವಂತೆ ಕೂದಲು ಮುಂದೆ ಬಾಚಿ, ಕುದುರೆ ಬಾಲ (Pony Tail) ದಂತೆ ಜಡೆ ಕಟ್ಟುವುದು ವಾಡಿಕೆ. ಇನ್ನು ಮದುವೆಯ ಹೆಣ್ಣು ಸರ್ವಾಲಂಕೃತಳಾಗಿ, ಭರತನಾಟ್ಯ ಕಲಾವಿದೆಯಂತೆ ತಲೆ ಬಾಚಿ, ಅದಕ್ಕೆ ಸಕಲ ಆಭರಣ, ಹೂಗಳನ್ನು ಮುಡಿಸಿ ನೀಳ ಜಡೆಯ ಆದರ್ಶ ವಧುವಾಗಿ ಎಲ್ಲ ಚಿತ್ರಗಳಲ್ಲಿ ನಿರೂಪಿಸಲಾಗುತ್ತದೆ.ಅದು ಕ್ರೈಸ್ತ ಪದ್ಧತಿಯ ಮದುವೆಯಾದರೆ ನಾಯಕ ಗರಿಗರಿಯಾದ ಸೂಟಿನಲ್ಲಿ, ನಾಯಕಿ ಬಿಳಿಯದಾದ ಗೌನು, ಪಾರದರ್ಶಕ ಮುಖವಾಡದಂತಹ ಬುರುಕಿ ಧರಿಸಿರುತ್ತಾಳೆ. ನಾಯಕನ ಮೇಲೆ ಕಣ್ಣಿಟ್ಟಿರುವ ಖಳನಾಯಕಿಯಾದರೆ ಅವಳು ಕೆಂಪು ಕೂದಲಿನ ಬಾಬ್‌ಕಟ್ ಮಾದರಿಯ ಕೇಶಾಲಂಕಾರದ ವಿಗ್ ಧರಿಸಿ, ಹುಬ್ಬು ರೆಪ್ಪೆಗಳನ್ನು ತೀಡಿಕೊಂಡು, ಮಾತು-ನೋಟ-ನಡತೆ ಎಲ್ಲದರಲ್ಲಿ ದುರ್ಗುಣಗಳ ಗಣಿಯಾಗಿ ತೋರುತ್ತಾಳೆ. ಇನ್ನು ಮುಪ್ಪು ಸೂಚಿಸಲು ನಾಯಕಿಯ ಮುಂದಲೆ, ಬೈತಲೆಯ ಜಾಗವನ್ನು ಸ್ವಲ್ಪ ಬೆಳ್ಳಗಾಗಿಸಿ (ಇಂದಿರಾಗಾಂಧಿ ಮಾದರಿಯಲ್ಲಿ) ಅಥವಾ ಕಿವಿಗಳ ಬಳಿ ಸ್ವಲ್ಪ ಬಿಳಿತಾಗಿರುವ ಛಾಯೆ ತೋರಿಸಿದರೂ ಅವಳಿಗೆ ವಯಸ್ಸಾಯಿತೆಂದು ಪ್ರೇಕ್ಷಕ ತರ್ಕ ಮಾಡುತ್ತಾನೆ. ಇನ್ನು ರಂಭೆ, ಊರ್ವಶಿ, ಮೇನಕೆಯಂತಹ ಪಾತ್ರಗಳು ಯಾರದಾದರೂ ತಪೋಭಂಗ ಮಾಡುವ ವಿಶೇಷ ಕಾರ್ಯದ ಮೇಲೆ ಬಂದಾಗ ಹಾಡು-ನೃತ್ಯದ ಒಂದೊಂದು ನುಡಿಗೂ, ಪಲ್ಲವಿಗೂ ಶಿಲಾಬಾಲಿಕೆಯರ ತದ್ರೂಪದಂತೆ ಹಲವಾರು ಬಗೆಯ ತುರುಬಿನ ಮುಡಿಗಳು ಪ್ರತ್ಯಕ್ಷವಾಗುತ್ತವೆ. ಈಗಿನ ಚಿತ್ರಗಳ ಹಾಡುಗಳಲ್ಲಂತೂ ವ್ಯಾಯಾಮ, ಸರ್ಕಸ್ಸು, ಡ್ರಿಲ್ಲು, ಯೋಗ ಹಾಗೂ ಭೂತ ಸಂಚಾರಗಳ ಒಟ್ಟು ಪರಿಣಾಮವಾಗಿ ನಾಯಕಿ ತನ್ನ ತಲೆ ಕೂದಲನ್ನು (ಅಂಗಾಂಗಗಳ ಸಹಿತ) ಎಗರಾಡಿಸಿ ಕುಣಿಸಿದಷ್ಟೂ ಪ್ರೇಕ್ಷಕನಿಗಿಂತಲೂ ನಿರ್ದೇಶಕ ಹೆಚ್ಚು ಆನಂದ ಪಡುತ್ತಾನೆ. ಮಳೆಯ ದೃಶ್ಯಗಳಲ್ಲಂತೂ ನಾಯಕ-ನಾಯಕಿಯ ಬಟ್ಟೆ, ತಲೆ ತೋಯ್ದರೂ ಅವರು

(ಚಿತ್ರ ೨೪-೨೮) ಮುಸ್ಲಿಂ ಮಾರ್ವಾಡಿ ಹಳ್ಳಿ ಸಾಹುಕಾರ ಮುನ್ಷಿ ಪತ್ತೇದಾರ

(ಚಿತ್ರ ೨೯) 'ಸ್ವಾಮಿ ವಿವೇಕಾನಂದ' ಚಿತ್ರಕ್ಕಾಗಿ ಬಾಲ ವಿವೇಕಾನಂದ ಪಾತ್ರಧಾರಿಗೆ ಜಿ.ವಿ.ಅಯ್ಯರ್ ನಿರ್ದೇಶನದ ಮೇರೆಗೆ ಕೇಶಮುಂಡನ ಮಾಡುತ್ತಿರುವ ಮಲ್ಲೇಶ್

ಹಾಡುತ್ತಾರೆ, ಕುಣಿಯುತ್ತಾರೆ. ಆದರೆ ಅವರು ಒಮ್ಮೆಯೂ ಸೀನುವುದಿಲ್ಲ. ನಂತರ ನೆಗಡಿಯೂ ಬರುವುದಿಲ್ಲ. ನಮ್ಮ ಎಲ್ಲ ಚಿತ್ರಗಳಲ್ಲಿ ಸ್ತ್ರೀ ಪಾತ್ರಗಳು ಮಗು ಹೆರುತ್ತವೆ, ರೋಗದಿಂದ ಹಾಸಿಗೆ ಹಿಡಿಯುತ್ತವೆ, ಹರಕೆಗಾಗಿ ಉರುಳು ಸೇವೆ ಮಾಡಲು ತಿರುಪತಿ, ಧರ್ಮಸ್ಥಳಕ್ಕೆ ದರ್ಶನ ನೀಡುತ್ತವೆ. ಆದರೆ ಎಂದೂ ಅವುಗಳ ತಲೆಯ ಮೇಲಿನ ಕೂದಲು ಉದರುವುದಿಲ್ಲ. ಅತ್ಯಾಚಾರಗಳಲ್ಲಿ ತಲೆಗೂದಲು ಕಿತ್ತುವಿಕ ಒಂದು ಪ್ರಬಲ ಸಾಕ್ಷ್ಯವಾಗುವುದಿಲ್ಲ ಅಥವಾ ಎರಡು ಗ್ರಾಮಗಳ ವೈಷಮ್ಯದಲ್ಲಿ ಸೇಡಿನ ಸೂಚಕವಾಗಿ ಯಾವ ಹೆಣ್ಣು ಪಾತ್ರದ ತಲೆಯನ್ನು ಬೋಳಿಸಲಾಗುವುದಿಲ್ಲ ಅಥವಾ ಯುದ್ಧದಲ್ಲಿ ಶತ್ರು ಸೈನ್ಯ ಪ್ರತೀಕಾರವಾಗಿ ಅತ್ಯಾಚಾರದ ನಂತರ ಹೆಣ್ಣಿನ ತಲೆ ಬೋಳಿಸುವ ಹೀನ ಕೃತ್ಯ ದಾಖಲೆಯಾಗುವುದಿಲ್ಲ. ಅಷ್ಟೇ ಏಕೆ, ಅವಳು ತನ್ನ ಅಡಿಗೆ ಮನೆಯಲ್ಲಿ ಎಂದೂ ನೈಟಿ, ಗೌನಿನಲ್ಲಿ ಇರದೆ ಸದಾ ಕಾಲವೂ ಮ್ಯಾಚಿಂಗ್ ಸೀರೆ, ಕುಪ್ಪಸ ಧರಿಸಿ ನೀಟಾಗಿ ತಲೆ ಬಾಚಿದ, ಹೂ ಮುಡಿದ, ಚಿಟಿಕೆ ಹೊಡೆಯುವುದರಲ್ಲಿ ಅಡಿಗ ಸಿದ್ಧ ಮಾಡುವ ಆದರ್ಶ ನಾರಿಯಾಗಿ ಕಾಣುವುದು ಶಾಶ್ವತ ನಿಯಮ.

ಇನ್ನು ನಾಯಕನ ಬವಣೆ ಬೇರೆ ರೀತಿಯದು. ಅವನು ಹೊಟ್ಟೆಪಾಡಿಗಾಗಿ ಎಂದೂ ಕೆಲಸಕ್ಕೆ ಹೋಗುವುದಿಲ್ಲ. ಹೀಗಾಗಿ ಅವನೆಂದೂ ಸಿಟಿ ಬಸ್ಸಿನಲ್ಲಿ ಪಯಣಿಸುವುದಿಲ್ಲ. ಆದ್ದರಿಂದ ಅವನ ವೇಷ-ಭೂಷ ಗರಿಗರಿಯಾಗಿ, ಕೇಶಾಲಂಕಾರ ಒಂದಿನಿತೂ ಕೆಡದೆ, ಸದಾಕಾಲವೂ ಮಟ್ಟಸವಾಗಿ ಇರುತ್ತದೆ. ಅವನ ಜೇಬಿನಲ್ಲಿ ಎಂದೂ ಬಾಚಣಿಗೆ ಇರುವುದಿಲ್ಲ. ಅವನ ಪಾತ್ರ ಯಾವುದಾದರೂ ಇರಲಿ, ಡಾಕ್ಟರ್, ಲಾಯರ್ ಅಥವಾ ಪೋಲೀಸ್ ಅಧಿಕಾರಿಯಾಗಿದ್ದರೂ ಕತ್ತಿನವರೆಗೂ ಭಾಗವತರಂತೆ ತಲೆಗೂದಲು ಹಾಗೂ ಉದ್ದನಾದ ಕಿವಿಗೆ ಸಮಾನವಾದ ಪಕ್ಕದ ಕೇಶರಾಶಿ (Side Locks) ಇರಲೇ ಬೇಕು. ಮೀಸೆ ಅವನ ಇಚ್ಛೆ. ಐತಿಹಾಸಿಕವಾದರೆ ಅಂಟಿಸಬಹುದು. ನಾಯಕಿಯಿಂದ ವಿರಹ ಸೂಚಿಸಲು, ಅವಳ ಸಾವಿನಿಂದ ದುಃಖ ಅಗಲಿಕೆಯ ಕುರುಹಾಗಿ ಗಡ್ಡ, ಮೀಸೆ ಬಿಟ್ಟು ತಲೆ ಕೆದರಿರುವುದು ಸಾಮಾನ್ಯ ಲಕ್ಷಣ. ಪಾತ್ರದ ತಂದೆ ತಾಯಿ ಸತ್ತರೆ ನಾಯಕ ತಲೆ ಬೋಳಿಸಿಕೊಳ್ಳುವ ಸಂಪ್ರದಾಯ ಆರಂಭದ ಚಿತ್ರಗಳಲ್ಲಿತ್ತು. ಸಮಾಜ ವಿರೋಧಿ ಶಕ್ತಿಗಳಾದ ಡಾಕು, ಕೈದಿಗಳ ನಿರೂಪಣೆಗೆ ಕೆದರಿದ ಭಯಂಕರ ತಲೆ, ಪೊಗದಸ್ತಾದ ಮೀಸೆ, ಕುರುಚಲು ದಟ್ಟ ಗಡ್ಡ ಸಾಮಾನ್ಯ. ಭಾವೈಕ್ಯತೆಯ ಸಂಕೇತದ ಪಾತ್ರವಾಗಿದರೆ ಮುಸ್ಲಿಮರ ಪಾತ್ರಕ್ಕೆ ಸೂಚಕವಾಗಿ ಒಂದು ಗಡ್ಡ, ಅದು ಹೋತದಂತೆ ಕಿರಿದಾಗಿರಬಹುದು ಅಥವಾ ಅಯಾತುಲ್ಲಾ ಖೊಮೇನಿಯಂತೆ ಕುರುಹಾಗಿರಬಹುದು. ಮೇಲೊಂದು ಅವರಲ್ಲಿ ಚಾಲ್ತಿಯಲ್ಲಿರುವ ಯಾವುದಾದರೂ ಬ್ರಾಂಡ್ ಟೋಪಿ ಇದ್ದರೆ ಸಾಕು. ಖಳ ನಾಯಕ ಕ್ರಿಶ್ಚಿಯನ್ ಹೆಸರಿನ ಧಡಿಯನಾಗಿದ್ದರೆ ಬೊಹೆಮಿಯನ್ ಗಡ್ಡ ಮೀಸೆ (ಚಿತ್ರಕಾರ ರೋರಿಚ್ ಮಾದರಿಯಂತೆ) ಹಾಗೂ ಅತಿ ಉದ್ದವಾದ ಸೈಡ್ ಲಾಕುಗಳು ಅತಿ ಅವಶ್ಯಕ ಅಂಗ. ನಾಯಕ ಸ್ವೇಚ್ಛಾಚಾರಿ, ಪುಂಡಲೆಯುವವ. ಹಿರಿಯರ ಮಾತಿನ ವಿರೋಧಿ ಎಂದು ಸೂಚಿಸಲು ಹಿಪ್ಪಿ ಶೈಲಿಯ ಕೇಶರಚನೆಯ ಬಳಕೆ ಬಹಳ ಸರಳ ಮಾರ್ಗ. ಹಳ್ಳಿಯ ದ್ವೇಷ, ವೈಷಮ್ಯ ನಿರೂಪಿಸಲು ಮೀಸೆ ಕತ್ತರಿಸಿ ಕಳಿಸುವ, ತಲೆ ಬೋಳಿಸಿ ಕತ್ತೆಯ ಮೇಲೆ ಮೆರೆಸುವ, ಯುದ್ಧದಲ್ಲಿ ಸೋತಾಗ ನುಣ್ಣಗೆ ತಲೆ ಗುಂಡು ಹೊಡೆಸುವ ಪಾತ್ರಗಳ ನಿರೂಪಣೆ ಇಲ್ಲವೆಂದೇ ಹೇಳಬಹುದು. ಮೇಲ್ವರ್ಗ, ಮೇಲ್ಜಾತಿ ಸೂಚಿಸಲು ಇರುವ ಏಕೈಕ ಸಾಧನವೆಂದರೆ ಬಗೆ ಬಗೆಯ ಆಕೃತಿಯ, ಗಾತ್ರದ, ಉದ್ದವಾಗಿರುವ ಜುಟ್ಟುಗಳು. ಇವು ಸಂಗೀತಗಾರನ ಪಕ್ಕವಾದ್ಯದವರಿಗಾಗಿರಬಹುದು ಅಥವಾ ಮಠ, ದೇವಾಲಯಗಳಲ್ಲಿ ಅಸ್ಪೃಶ್ಯತೆ ನಿರೂಪಿಸಲು ಇರಬಹುದು. ಅಥವಾ ಪೆದ್ದ, ಹಾಸ್ಯಗಾರನಾಗಿರಲು ನಿಗರಿದ ಜುಟ್ಟಿನ ತುದಿಗೊಂದು ಹೂವು ಸಿಕ್ಕಿಸಿದರೂ ಸಾಕು. ವಯಸ್ಸಾಗಿರುವುದನ್ನು ರೂಪಿಸಲು ತಲೆಯ ಮುಂಭಾಗ ಸ್ವಲ್ಪ ಬಿಳಿಯಾದರೆ ಸಾಕು. ಆದರೆ ನಾಯಕನ ತಲೆಗೂದಲು ಉದುರಿ ಅದು ಎಂದೂ ಬೋಳು (Bald) ಆಗುವಂತಿಲ್ಲ. ಕಥೆಯ ಸಂಪೂರ್ಣ ಹಂದರ ಸ್ಮೃತಿ ತಂತ್ರದಲ್ಲಿ (Flash Back) ಬರುತ್ತಿದ್ದರೆ ಸಂಪೂರ್ಣ ತಲೆಗೆ ಬಿಳಿಕೂದಲಿನ ವಿಗ್, ಬಿಳಿ ಗಡ್ಡ, ಮೀಸೆಯ ಅಲಂಕಾರದ ಆರಂಭ ಹಾಗೂ ಅಂತ್ಯದ ಒಂದೆರಡು ದೃಶ್ಯಗಳಿದ್ದರೆ ಅದೇ ದೊಡ್ಡ ಸಾಧನೆ. ಕೋರ್ಟುಗಳಲ್ಲಿ ನ್ಯಾಯಾಧೀಶರು ಇಂದೂ ಬ್ರಿಟಿಷರ ಕಾಲದ ಬಿಳಿ ವಿಗ್ ಹಾಕುವುದನ್ನು ಬಿಟ್ಟಿಲ್ಲ.

ಇನ್ನು ಚಿತ್ರಗಳಲ್ಲಿ ರೂಪಿತವಾಗುವ ಮಕ್ಕಳಂತೂ ಎಂದೂ ಮಣ್ಣಲ್ಲಾಡುವುದಿಲ್ಲ, ಯೂನಿಫಾರಂ ಅಪರೂಪ. ಸದಾ ಕಾಲವೂ ಗರಿಗರಿಯಾದ, ಬಣ್ಣದ ವೇಷಗಳನ್ನು ತೊಟ್ಟು, ನೀಟಾಗಿ ತಲೆ ಬಾಚಿರುವ, ಚಿಕ್ಕ ವಯಸ್ಸಿನ ಮಕ್ಕಳಾದರೆ ಗುಂಗುರು ಕೂದಲಿನ ಬಾಲ ಗೋಪಾಲನಂತೆ, ಬೆಳೆದ ಮಕ್ಕಳಾದರೆ ಬಾಬ್‌ಕಟ್ ಅಥವಾ ಜಡೆ ಹಾಕಿದವರಾಗಿ ಕಾಣಿಸಿಕೊಳ್ಳುತ್ತಾರೆ. ಹಲವಾರು ಚಿತ್ರಗಳಲ್ಲಿ ಸಹಜ ಕೇಶಾಲಂಕಾರಕ್ಕೆ ಅನುಕೂಲವಾಗಲೆಂದು ಬಾಲ ಕಲಾವಿದೆ (ಹುಡುಗಿ) ಯಿಂದಲೇ ಬಾಲಕನ ಪಾತ್ರವನ್ನು ಮಾಡಿಸುತ್ತಾರೆ. ಮುದ್ದು ಮುಖ, ಮಧುರ ಕಂಠ, ನೀಳ ಕೇಶರಾಶಿಯೇ ಈ ಪಾತ್ರ ಪಡೆಯಲು ಅರ್ಹತೆಗಳಾಗುತ್ತವೆ.

ಇದುವರೆವಿಗೂ ನಮ್ಮ ಚಿತ್ರಗಳಲ್ಲಿ ಛಲದಿಂದ ತನ್ನ ಅವಮಾನ ತೀರಿಸಿಕೊಳ್ಳಲು ಕೇಶರಾಶಿಗ ತೂಡಯ ರಕ್ತವನ್ನು ತೊಡೆದ ದ್ರೌಪದಿ, ಜಲಕ್ರೀಡೆ ಮುಗಿಸಿದ ಗೋಪಿಕಾ ಸ್ತ್ರೀಯರು ನಮ್ಮ ವಸ್ತ್ರಗಳನ್ನು ಮರಳಿ ಕೊಡು ಎಂದು ಕೃಷ್ಣನನ್ನು ಗೋಗರೆಯುವ ರಸ ನಿಮಿಷಗಳು, ಸಾಮ್ರಾಜ್ಯ ಕಟ್ಟುವ ತನಕ ಶಿಖೆಯನ್ನು ಮೇಲೆತ್ತಿ ಕಟ್ಟಲಾರೆನೆಂದು ಪ್ರತಿಜ್ಞೆ ಮಾಡಿದ ಚಾಣಾಕ್ಯ, ಬಿಡುಗಡೆಗೆ ಹಾತೊರೆಯುವ, ಆದರೆ ಬಂಧನದಲ್ಲಿರುವ ಬಂಗಾರದ ಕೂದಲಿನ ರಾಜಕುಮಾರಿ, ತಮ್ಮ ಬೇಡಿಕೆ ಈಡೇರುವವರೆಗೆ ಅಥವಾ ಶತ್ರುವಿನ ಕೊಲೆ ಮಾಡದ ಮೀಸೆ, ಗಡ್ಡ ತೆಗೆಯೆನೆಂಬ ಸಮಾಜಘಾತಕ ಪಾತ್ರಗಳು, ನಿರೂಪಣೆಯಾಗಿ ತೆರೆಯ ಮೇಲೆ ಬಂದು ರೋಮಾಂಚನ ನೀಡಲು ಕಾತರವಾಗಿ ಇಂದಿಗೂ ಕಾಯುತ್ತಿವೆ ಎಂದೇ ಹೇಳಬಹುದು.

(ಚಿತ್ರ ೩೦-೩೪) ನಂಬೂದರಿ — ವೈದಿಕ — ಖಳನಾಯಕ — ವಿದ್ಯಾರ್ಥಿಗಳು — ಅರಣ್ಯಾಧಿಕಾರಿ



ಸಾವಿನೊಂದಿಗೆ ಸರಸ

ಮಾನವನಷ್ಟೇ ಅಲ್ಲ, ಪ್ರತಿ ಜೀವಿಯ ಬದುಕಿನ ಪ್ರತೀ ಕ್ಷಣವೂ ಹೋರಾಟದಿಂದಲೇ ಕೂಡಿರುತ್ತದೆ. ಈ ಹೋರಾಟದ ಹಾದಿಯಲ್ಲಿ ಬದುಕಿನ ಗುರಿ ಮುಖ್ಯವಾಗಿರುತ್ತದೆ. ಈ ಹೋರಾಟದ ರೀತಿ ನೀತಿಗಳು ಮಾತ್ರ ಒಂದೊಂದು ಜೀವಜಾತಿಗಳಲ್ಲಿ ಒಂದೊಂದು ತರನಾಗಿರುತ್ತದೆ. ಇದಕ್ಕೆ ಮಾನವ ಹೊರತಾಗಿಲ್ಲ. ಈ ಹೋರಾಟದ ಹಾದಿಯಲ್ಲಿ ಆರಂಭದಲ್ಲಿ ಅನ್ಯಜೀವಿಗಳೊಂದಿಗೆ ಸೆಣಸಾಡುತ್ತಾ ಬಂದ ಮನುಷ್ಯ ಭೂಮಿಯ ಮೇಲೆ ತನ್ನ ಸಾರ್ವಭೌಮತ್ವ ಸಾಧಿಸಿದ ನಂತರ ಮನುಷ್ಯ, ಮನುಷ್ಯರ ನಡುವಿನ ಹೋರಾಟಕ್ಕೂ ಕಾರಣನಾದ. ನಂತರದ ಹೋರಾಟ ಕೇವಲ ಬದುಕಿಗಾಗಿಯಷ್ಟೇ ಸೀಮಿತವಾಗಿ ಉಳಿಯಲಿಲ್ಲ. ಅಧಿಕಾರ, ಪದವಿ, ಧನದಾಹ, ಸ್ತ್ರೀ ವ್ಯಾಮೋಹ, ಸುಖಲೋಲುಪತೆ, ಸ್ವಾರ್ಥ, ಮತ್ಸರ, ದ್ವೇಷಗಳು ಕ್ರಮೇಣ ಹೋರಾಟದ ಇನ್ನಿತರ ಮಜಲುಗಳಾಗಿ ರೂಪುಗೊಂಡವು. ಪುರಾಣ, ಇತಿಹಾಸಗಳ ಉದ್ದಕ್ಕೂ ಇದಕ್ಕೆ ಬೇಕಾದಷ್ಟು ಉದಾಹರಣೆಗಳು ಸಿಗುತ್ತವೆ. ಮಾನವನ ನಡುವೆಯೂ ಹೋರಾಟದ ವಿಧಾನ ಕಾಲದಿಂದ ಕಾಲಕ್ಕೆ ಬದಲಾಗುತ್ತಾ ಬಂತು. ಮೊದ ಮೊದಲು ತೋಳ್ಬಲವೇ ಪ್ರಧಾನವಾಗಿದ್ದ ಹೋರಾಟ ನಿಧಾನವಾಗಿ ಅದರೊಂದಿಗೆ ಬುದ್ಧಿಶಕ್ತಿಯನ್ನೂ ಅಳವಡಿಸಿಕೊಂಡಿತು. ಈಗಂತೂ ಅದೇ ಪ್ರಮುಖವೆಂದೆನಿಸತೊಡಗಿದೆ. ಒಟ್ಟಿನಲ್ಲಿ ಯಾವುದೇ ತರನಾದ ಹೋರಾಟವಾದರೂ ಅದೊಂದು ಸಾಹಸದ ಪ್ರಕ್ರಿಯೆ.

ಇನ್ನು ಸಿನಿಮಾ ಕತೆಯಷ್ಟೇ ಅಲ್ಲ, ಯಾವುದೇ ಕಥಾವಸ್ತುವಿನಲ್ಲಾದರೂ ಒಂದು ಹೋರಾಟ ಇದ್ದೇ ಇರುತ್ತದೆ. ಕತೆಗಾಗಲಿ, ಕತೆಯೊಳಗಿನ ಪಾತ್ರಕ್ಕಾಗಲಿ ನಿರ್ದಿಷ್ಟವಾದ ಒಂದು ಗುರಿ ಇದೆ ಎನಿಸಿದಾಗಲೇ ಅಲ್ಲಿ ಕುತೂಹಲ ಉಳಿಯಲು ಸಾಧ್ಯ. ಹಾಗೆಯೇ ಈ ಗುರಿ ತಲುಪಲು ನಾನಾ ರೀತಿಯಲ್ಲಿ ಸೆಣಸಾಡಬೇಕಾಗುತ್ತದೆ. ಅದರಲ್ಲಿ ಸಾಹಸದ ಭಾಗವೂ ಬಹು ಮುಖ್ಯ. ಅದು ಕಲ್ಪನೆಯಾಗಿರಲಿ ಅಥವಾ ವಾಸ್ತವವಾಗಿರಲಿ ಜೀವನದಲ್ಲಿ ಸಂಘರ್ಷ ಇಲ್ಲದಿರಲು ಸಾಧ್ಯವಿಲ್ಲ. ಇದು ಕತೆಯಾದರೂ ಅಷ್ಟೆ, ಆ ಕತೆ ಚಿತ್ರವಾದರೂ ಅಷ್ಟೆ. ಆರಂಭದಲ್ಲಿ ಬಿಸಿಲು-ಮಳೆ, ಗಾಳಿ, ಚಳಿ, ಕ್ರೂರ ಮೃಗಗಳು ಹಾಗೂ ಇನ್ನಿತರ ಪ್ರಕೃತಿ ವಿಕೋಪಗಳನ್ನು ಎದುರಿಸಿ ಸೆಣಸಾಡುತ್ತಿದ್ದ ಮಾನವ ಇಂದು ತನಗ ತಾನೇ ಶತ್ರುವಾಗಿದ್ದಾನೆ ಎನ್ನುವುದಷ್ಟೇ ಬದಲಾವಣೆ.

ಪ್ರಪಂಚದ ಮಹಾಕಾವ್ಯಗಳಲ್ಲೇ ಮೇರುಕೃತಿಗಳೆನಿಸಿರುವ ಮಹಾಭಾರತ ಹಾಗೂ ರಾಮಾಯಣದಲ್ಲಿ ಯುದ್ಧ ಕಾಂಡಗಳು ಎಷ್ಟು ಪ್ರಮುಖ ಎಂದು ವಿವರಿಸಿ ಹೇಳಬೇಕಾಗಿಲ್ಲ. ಪಾಂಡವರು, ದುರ್ಯೋಧನ, ಕರ್ಣ, ರಾಮ, ಲಕ್ಷ್ಮಣ ಮೊದಲಾದವರ ಶೌರ್ಯ, ಸಾಹಸ ಇಂದಿಗೂ ಆದರ್ಶ ಪ್ರಾಯ. ಇದರೊಂದಿಗ ವಿಷ್ಣುವಿನ ದಶಾವತಾರ, ಶಿವನ ಶಕ್ತಿಗಳ ಸೃಷ್ಟಿ, ದೇವ ದಾನವರ ಯುದ್ಧ ಮುಂತಾದ ದುಷ್ಟ ಶಿಕ್ಷಣ ಶಿಷ್ಟ ರಕ್ಷಣ ಎಂಬ ತತ್ವದ ತಳಹದಿಯ ಮೇಲೆ ನಡೆದ ಸಾಹಸಗಳು ಜನಮಾನಸದಲ್ಲಿ ಇಂದಿಗೂ ಹಾಸು ಹೊಕ್ಕಾಗಿವೆ. ಇದಲ್ಲದೆ ಪುರಾಣಗಳಲ್ಲಿ ಸಮುದ್ರ ಮಂಥನ, ಕಾಳಿಂಗ ಮರ್ದನ ಮುಂತಾದ ಭವ್ಯ ಕಲ್ಪನೆಗಳು ಅದ್ಭುತವೆನಿಸುತ್ತವೆ. ಭಯಾನಕವಾದ ಕಾಳಿಂಗ ಸರ್ಪವನ್ನೇ ಹಗ್ಗವನ್ನಾಗಿ ಮಾಡಿ, ಮಂದರ ಪರ್ವತವನ್ನು ಕಡಗೋಲನ್ನಾಗಿಸಿ ದೇವತೆಗಳು ದಾನವರು ಮಂಥಿಸುವ ಕಲ್ಪನೆಯೇ ವಿಶಿಷ್ಟ ಸಾಹಸ. ಪುರಾಣದ ಪ್ರಮುಖ ಪಾತ್ರಗಳಾದ ರಾಮ,ಲಕ್ಷ್ಮಣ, ಕರ್ಣ, ಅರ್ಜುನ, ಏಕಲವ್ಯ, ಅಭಿಮನ್ಯು, ಭೀಮ, ದುರ್ಯೋಧನ, ಬಬ್ರುವಾಹನ ಮೊದಲಾದವರೆಲ್ಲ ಶೌರ್ಯ, ಸಾಹಸಗಳಿಗೆ ಹೆಸರಾದವರು. ಇದು ಕಥಾ ನಾಯಕನಿಗೆ ಇರಬೇಕಾದ ಇನ್ನಿತರ ಗುಣಗಳೊಂದಿಗ ಸಾಹಸವೂ ಪಾತ್ರದ ಪರಿಪೂರ್ಣತೆಗೆ ಇರಬೇಕೆಂಬ ಇವತ್ತಿನ ಧೋರಣೆಗೂ ಕಾರಣವೆನ್ನುವುದು ಸುಳ್ಳಲ್ಲ. ಇಂಥ ಅನೇಕ ಪಾತ್ರಗಳ ಧೈರ್ಯಸಾಹಸ, ಶಕ್ತಿ-ಸಾಮರ್ಥ್ಯಗಳು ಇಂದಿನ ಸಾಹಸಕ್ಕೂ ಪ್ರೇರಕವಾಗಿದೆ.

ಪುರಾಣ ಕತೆಗಳ ಈ ಸಾಹಸಗಾಥೆಗಳ ಮುಂದುವರಿದ ಭಾಗ ನಮಗೆ ಇತಿಹಾಸಗಳಲ್ಲೂ ಯಥೇಚ್ಚವಾಗಿ ಕಾಣಸಿಗುತ್ತವೆ. ಪ್ರಪಂಚದ ಯಾವುದೇ ರಾಜ ಮಹಾರಾಜರ, ದಂಡನಾಯಕರ ಇತಿಹಾಸ ಗಮನಿಸಿದರೆ ಅಲ್ಲಿ ವೈಭವೀಕರಣ ಗೊಂಡಿರುವುದು ಯುದ್ಧದಂತಹ ಸಾಹಸವೆ. ಜನಪದೀಯ ಕತೆಗಳೂ ಇದಕ್ಕೆ ಹೊರತಾಗಿಲ್ಲ. ಹೀಗೇ ಬದುಕಿನ ಒಂದು ಅಂಗವೇ ಆದ ಸಾಹಸ ಚಲನಚಿತ್ರಗಳಲ್ಲಿಯೂ ತನ್ನದೇ ಒಂದು ಸ್ಥಾನ ಪಡೆಯಿತಲ್ಲದೇ ಸಾಹಸ ಪ್ರಧಾನ ಚಿತ್ರಗಳೇ ತಯಾರಾಗುವಷ್ಟು ಪ್ರಾಮುಖ್ಯ ಪಡೆಯಿತು.

ಅಂದಿನಿಂದಲೂ ಪ್ರಮುಖ ವೀರ ಪುರುಷರಲ್ಲದೆ ತಮ್ಮ ಇಡೀ ಜೀವನವನ್ನೇ ಹೋರಾಟಕ್ಕಾಗಿ ಮುಡಿಪಿಟ್ಟ ಸೈನಿಕರು, ಈಗಲೂ ದೇಶದ ಗಡಿ ಪ್ರದೇಶದಲ್ಲಿ ಚಳಿಗಾಳಿ, ಬಿಸಿಲು ಬೆಂಕಿ, ಹಸಿವು ನಿದ್ದೆ ಎಲ್ಲವನ್ನೂ ಮರೆತು ಸೇವೆ ಸಲ್ಲಿಸುವ ಸೈನಿಕರು ಸಾಹಸಕ್ಕೆ ಮತ್ತೊಂದು ಹೆಸರಾಗಿದ್ದಾರೆ. ಇವರೊಂದಿಗೆ ಪೊಲೀಸ್ ಸಿಬ್ಬಂದಿಗಳು, ರಕ್ಷಣಾ ಅಧಿಕಾರಿಗಳು ಸದಾ ಅಪಾಯದ ಜೊತೆಗೆ ಹೋರಾಡುವ ಕಾಯಕದಲ್ಲಿರುತ್ತಾರೆ. ಚಿತ್ರವೊಂದರ ಕತೆಗೆ ಇವುಗಳಲ್ಲಿ ಒಂದಲ್ಲ ಒಂದು ಅಂಶಗಳ ಪ್ರಭಾವವಿದ್ದೇ ಇರುತ್ತದೆ.

ಆರಂಭದಲ್ಲಿ ಸಾಹಸವೆಂದರೆ ತೋಳ್ಬಲವಷ್ಟೆ. ನಂತರ ಇದಕ್ಕೆ ಸಹಕಾರಿಯಾಗಿ ಕಲ್ಲಿನ ಆಯುಧಗಳು, ಲೋಹದ ಆಯುಧಗಳೂ ರೂಪುಗೊಂಡವು. ಬಿಲ್ಲು ಬಾಣಗಳು, ಖಡ್ಗ, ಗುರಾಣಿ, ಈಟಿಗಳು ಕ್ರಮೇಣ ಬಂದೂಕು, ಪಿಸ್ತೂಲು, ಬಾಂಬ್ ಮೊದಲಾದ ಆವಿಷ್ಕಾರಗಳು ಈ ಸಾಹಸದ ಹೋರಾಟಕ್ಕಾಗಿಯೇ ಆಗಿದ್ದವೆಂದರ ತಪ್ಪಲ್ಲ. ಈಗಂತೂ ತಂತ್ರಜ್ಞಾನದ ಬಳಕೆ ಇಲ್ಲೂ ಯಥೇಚ್ಛವಾಗಿ ಆಗಿದ್ದರಿಂದ ಕಲ್ಪನೆಗೂ ಮೀರಿದಂತಹ ಯುದ್ಧ ಸಾಮಾಗ್ರಿಗಳು ಪ್ರಪಂಚವಾದ್ಯಂತ ತಯಾರಾಗುತ್ತಿವೆ. ಇವೆಲ್ಲವೂ ಚಲನಚಿತ್ರಗಳ ಸಾಹಸ ದೃಶ್ಯಗಳಿಗೆ ಪೂರಕ ವಿಷಯಗಳಾಗುತ್ತಿವೆ.

ಆರಂಭ ಕಾಲದ ಚಿತ್ರಗಳಲ್ಲಿ ಸಾಹಸ

ಮೊದಮೊದಲು ಚಿತ್ರಗಳಲ್ಲಿ ಕತೆಗಳಿಗೆ ಅನುಗುಣವಾಗಿ ಸಾಹಸ ಸಂಯೋಜನೆ ಮಾಡಲಾಗುತ್ತಿತ್ತು. ತಾಂತ್ರಿಕವಾಗಿ ಇಷ್ಟೊಂದು ಬೆಳವಣಿಗೆಯಾಗದಿದ್ದುದರಿಂದ ಆರಂಭದ ಚಿತ್ರಗಳಲ್ಲಿ ಹಳೆಯ ಶೈಲಿಯ ಹೊಡೆದಾಟಗಳು ಬಳಕೆಯಾಗುತ್ತಿದ್ದವು. ನಿಜ ಜೀವನದಲ್ಲಿ ನಡೆಯುವಂಥ ಹೋರಾಟದ ದೃಶ್ಯಗಳು ಯಾವುದೇ ಸಿನಿಮೀಯ ವೈಭವೀಕರಣವಿಲ್ಲದೆ ಚಿತ್ರೀಕರಿಸಲ್ಪಡುತ್ತಿದ್ದವು. ಆಗ ಸಾಹಸ ಸಂಯೋಜನೆಗೆಂದು ಪ್ರತ್ಯೇಕ ವಿಭಾಗವೂ ಇರಲಿಲ್ಲ. ಕ್ರಮೇಣ ನಾಯಕರನ್ನು ಸಾಮಾನ್ಯರಿಗಿಂತ ಮಿಗಿಲೆಂದು ವೈಭವೀಕರಿಸುವ ಸಲುವಾಗಿ ಸಾಹಸದಲ್ಲಿ ವಿಪರೀತ ಕಲ್ಪನೆಗಳನ್ನು ರೂಪಿಸಿ ಅದನ್ನು ಚಿತ್ರಿಸಲು ಸಾಹಸ ನಿರ್ದೇಶಕರು ಬೆಳಕಿಗೆ ಬಂದರು. ಇದಕ್ಕೂ ಮೊದಲು ಸಾಹಸ ದೃಶ್ಯಗಳಲ್ಲಿ ಭಾಗವಹಿಸುವವರು ಸ್ವತಃ ಜಟ್ಟಿಗಳೋ ಮಲ್ಲಯುದ್ಧ ಪ್ರವೀಣರೋ ಆಗಿರುತ್ತಿದ್ದರು.

ಹೀಗ ಬೆಳೆಯುತ್ತ ಬಂದಂತೆ ಅದರಲ್ಲೂ ಪೌರಾಣಿಕ, ಐತಿಹಾಸಿಕ ಚಿತ್ರಗಳ ನಂತರ ಸಾಮಾಜಿಕ ಚಿತ್ರಗಳು ಆರಂಭವಾದ ಮೇಲಂತೂ ನಾಯಕನಟರ ಇಮೇಜ್‌ಗೂ ಕೂಡಾ ಸಾಹಸದ ದೃಶ್ಯಗಳು ಸಹಕಾರಿಯಾಗತೊಡಗಿದವು. ಸಾಹಸ ಕಲಾವಿದರ ಪಡೆಯೇ ಹುಟ್ಟಿಕೊಂಡಿತಲ್ಲದೆ ಸಾಹಸ ದೃಶ್ಯಗಳು ಅಪಾಯವೆನಿಸಿದರೆ ಡ್ಯೂಪ್‌ಗಳನ್ನು ಬಳಸುವ ಕ್ರಮವೂ ರೂಢಿಗೆ ಬಂದಿತು. ನಾಯಕನೇ ಖುದ್ದಾಗಿ ಸಾಹಸ ದೃಶ್ಯಗಳಲ್ಲಿ ಭಾಗವಹಿಸುವುದು ಸಾಧ್ಯವಾಗುತ್ತಿರಲಿಲ್ಲವಾದರಿಂದ ಅದರಲ್ಲಿ ಪರಿಣತಿ ಹೊಂದಿದವರು ಡ್ಯೂಪ್ (ಬದಲಿ) ಆಗಿ ನಾಯಕನ ಕರ್ತವ್ಯ ನಿರ್ವಹಿಸುತ್ತಿದ್ದರು.

ನಾಯಕ ನಟನೇ ಮಾಡುವಂಥ ದೃಶ್ಯವಾದರೂ ಅಪಾಯಕಾರಿ ಎನ್ನಿಸಿದರೆ ನಿರ್ಮಾಪಕ, ನಿರ್ದೇಶಕರು ಅದಕ್ಕೆ ಅವಕಾಶ ಮಾಡಿಕೊಡುತ್ತಿರಲಿಲ್ಲ. ಇಡೀ ಚಿತ್ರ ನಾಯಕ ನಟನನ್ನೇ ಅವಲಂಬಿಸಿರುವುದರಿಂದ ಇಂಥ ಅಪಾಯ ಸ್ವೀಕರಿಸಲು ಅವರ್‍ಯಾರೂ ತಯಾರಾಗುವುದಿಲ್ಲ. ಹಾಗಾಗಿ ದೃಶ್ಯಕ್ಕೆ ಜೀವ ತುಂಬಲು ನಾಯಕನಂತೆ ಪೋಷಾಕು ಧರಿಸಿದ ವ್ಯಕ್ತಿ ಅದರಲ್ಲಿ ಮುಖ ಕಾಣಿಸದ ರೀತಿಯಲ್ಲಿ ಭಾಗವಹಿಸುತ್ತಾನೆ. ಅಂತಿಮವಾಗಿ ತೆರೆಯ ಮೇಲೆ ಇದನ್ನು ನಾಯಕನೇ ಮಾಡಿದನೇನೋ ಎನ್ನುವಷ್ಟು ಸಹಜವಾಗಿ ಮೂಡಿಸಲಾಗುತ್ತದಾದ್ದರಿಂದ ಪ್ರೇಕ್ಷಕರು ಸಂತಸಪಡುತ್ತಾರೆ. ಚಲನಚಿತ್ರವೇ ಒಂದು ಭ್ರಮಾಲೋಕದ ಉತ್ಪನ್ನವಾದ್ದರಿಂದ ಯಾರೋ ಡ್ಯೂಪ್ ಮಾಡಿದ ಕಠಿಣ ಸಾಹಸ. ನಾಯಕ ನಟನಿಗೆ ಪ್ರಶಂಸೆ ತರುತ್ತದೆ. ಇದು ಕ್ರಮೇಣ ವ್ಯಕ್ತಿಪೂಜೆಗೂ ಮೂಲವಾಗುತ್ತಾ ಬಂತು.

ಸಾಮಾನ್ಯವಾಗಿ ನಾಯಕ, ನಾಯಕಿಗೆ ಆಪತ್ತು ಬಂದಾಗ ಅವಳನ್ನು ಸಾಹಸದಿಂದ ಪಾರು ಮಾಡುವುದು, ಅನ್ಯಾಯದ ವಿರುದ್ಧ ಹೋರಾಡುತ್ತಾ ದುಷ್ಟರೊಂದಿಗೆ ಸೆಣಸಾಡುವುದು ಮುಂತಾದ ಸಂದರ್ಭಗಳಲ್ಲಿ ಸಾಹಸ ಅನಿವಾರ್ಯ. ಆಗ ಕುದುರೆ ಸವಾರಿ ಮಾಡುವುದು, ಎತ್ತರದಿಂದ ಜಿಗಿಯುವುದು, ಬಿಳಲುಗಳ ಸಹಾಯದಿಂದ ಮರದಿಂದ ಮರಕ್ಕೆ ನೆಗೆಯುವುದು, ಹತ್ತಾರು ಜನರನ್ನು ಒಬ್ಬನೇ ಸದೆಬಡಿಯುವುದು, ಗಾಳಿಯಲ್ಲಿ ಎಗರಿ ಸೆಣಸಾಡುವುದು ಮಾಡಬೇಕಾಗುತ್ತದೆ. ಸಾಹಸ ನಿರ್ದೇಶಕನ ಪರಿಕಲ್ಪನೆಗೆ ತಕ್ಕಂತೆ ಇಂಥ ದೃಶ್ಯಗಳು ರೋಮಾಂಚನಕಾರಿಯಾಗಿ ಮೂಡಿ ಬರುತ್ತದೆ. ಜೊತೆಗೆ ಕಥೆಯ ಹಿನ್ನೆಲೆ, ಕತೆ ನಡೆಯುವ ಸ್ಥಳ, ನಾಯಕನ ಸ್ವಭಾವ ಗುಣಗಳು ಈ ಸಾಹಸಕ್ಕೆ ಪೂರಕವಾಗುತ್ತವೆ.

ಪೌರಾಣಿಕ ಚಿತ್ರಗಳಲ್ಲಿ ಯುದ್ಧದ ಸಂದರ್ಭದಲ್ಲಿ ಎರಡೂ ಕಡೆಯ ಸಹಸ್ರಾರು ಸೈನಿಕರು ಪರಸ್ಪರ ಮುಗಿ ಬೀಳುವುದರೊಂದಿಗೆ ಯುದ್ಧ ಆರಂಭವಾಗುತ್ತದೆ. ಪ್ರಮುಖ ವೀರರು ರಥದ ಮೇಲೆ, ಕುದುರೆ ಮೇಲೆ ಖಡ್ಗ ಹಿಡಿದೋ, ಬಿಲ್ಲು ಬಾಣ ಹಿಡಿದೋ ಯುದ್ಧ ಮಾಡುತ್ತಾರೆ. ಆರಂಭದ ಐತಿಹಾಸಿಕ ಚಿತ್ರಗಳಲ್ಲಿ ಈ ಪದ್ಧತಿ ಇದ್ದರೂ ಕ್ರಮೇಣ ಮದ್ದು, ಗುಂಡು, ಬಂದೂಕುಗಳ ಬಳಕೆ ಆರಂಭವಾಯಿತು.ಜಾನಪದದ ಕತೆಯಾಧಾರಿತ ಚಿತ್ರಗಳು ಆರಂಭವಾದ ಮೇಲೆ ಸಾಹಸದ ಎಲ್ಲ ವಿಧಾನಗಳನ್ನೂ ಬಳಸಿಕೊಳ್ಳಲಾಯಿತು. ಕತ್ತಿವರಸೆಯಂತೂ ಎಲ್ಲಾ ಪೌರಾಣಿಕ, ಐತಿಹಾಸಿಕ , ಜಾನಪದ ಚಿತ್ರಗಳಲ್ಲೂ ಬಳಕೆಯಾಗುತ್ತಿತ್ತು. ಸಾಹಸ ಕಾಲಾನುಕ್ರಮದಲ್ಲಿ ಕತ್ತಿವರಸೆ, ಕುದುರೆ ಸವಾರಿ, ಮಲ್ಲಯುದ್ಧ, ಜಟ್ಟಿಕಾಳಗ, ಬಾಕ್ಸಿಂಗ್,ಫೈಟಿಂಗ್, ಬಾಂಬಿಂಗ್, ಶೂಟಿಂಗ್ ಹೀಗೆ ಹಂತ ಹಂತವಾಗಿ ಬದಲಾಗುತ್ತಾ ಬಂದಿದೆ.

ಕತ್ತಿವರಸೆ

ಕತ್ತಿವರಸೆಯಲ್ಲಿ ಸ್ಪೇನ್ ದೇಶ ಮೇಲುಗೈ ಸಾಧಿಸಿದೆಯಾದರೂ ಇದು ಆರಂಭವಾದದ್ದು ಹದಿನಾಲ್ಕನೇ ಶತಮಾನದಲ್ಲಿ ಯುರೋಪ್‌ನಲ್ಲಿ. ಹಿಂದೆ ಭಾರತದಲ್ಲಿಯೂ ಕುಸ್ತಿಯೊಂದಿಗೆ ಕತ್ತಿ ಕಾಳಗವನ್ನು ಕಲಿಸಲಾಗುತ್ತಿತ್ತು. ರಾಣಾ ಪ್ರತಾಪ್‌ಸಿಂಹ, ಶಿವಾಜಿ ಮೊದಲಾದ ಐತಿಹಾಸಿಕ ವೀರರಷ್ಟೇ ಅಲ್ಲದೆ ಕಿತ್ತೂರು ರಾಣಿ ಚೆನ್ನಮ್ಮ ನಂಥ ವೀರ ಮಹಿಳೆಯರೂ ಕತ್ತಿವರಸೆಯಲ್ಲಿ ಪಳಗಿದ್ದರು. ಈ ಕಲೆ ಸುಮಾರು ಹದಿನಾರನೇ ಶತಮಾನದ ವೇಳೆಗೆ ಸಣ್ಣ ಸಣ್ಣ ಜಗಳಕ್ಕೂ ಕಾದಾಡುವಾಗ ಉಪಯೋಗಿಸುವಷ್ಟು ಪ್ರಖ್ಯಾತವಾಗಿತ್ತು. ಖಡ್ಗ ವೀರರು ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ತಮ್ಮದೇ ಆದ ವಿಶಿಷ್ಟ ಶೈಲಿ ಹಾಗೂ ವರಸೆಗಳನ್ನು ರೂಢಿಸಿಕೊಳ್ಳುತ್ತಿದ್ದರು. ಒಲಂಪಿಕ್ ಪಂದ್ಯಗಳ ಪುನರುತ್ಥಾನ ೧೮೯೬ರಲ್ಲಿ ಆಗುತ್ತಿದ್ದಂತೆ ಕತ್ತಿವರಸೆ ಹೆಚ್ಚಿನ ಪ್ರಮಾಣದಲ್ಲಿ ಗರಿಗೆದರಿತು. ನಂತರ ಅಂತರ್‌ರಾಷ್ಟ್ರೀಯ ಕತ್ತಿವರಸೆಯ ಒಕ್ಕೂಟ (International Federation of Fencing) ಸ್ಥಾಪಿತವಾಯಿತು. ಇಂಥ ಇತಿಹಾಸವನ್ನೊಳಗೊಂಡ ಕತ್ತಿ ಕಾಳಗ ಚಲನಚಿತ್ರಗಳಲ್ಲೂ ಸಾಕಷ್ಟು ಪ್ರಮಾಣದಲ್ಲಿ ಬಳಕೆಯಾಯಿತು. ನಾಯಕ, ಖಳನಾಯಕರು ಕತ್ತಿ ಹಿಡಿದು ಹೋರಾಡುವಾಗ ಪ್ರೇಕ್ಷಕ ತದೇಕ ಚಿತ್ತನಾಗಿ ರಣಕೌಶಲವನ್ನು ನೋಡಿ ಆನಂದಿಸುತ್ತಿದ್ದ. ನಿಬಿರವಾದ ಮಾಟ, ದೇಹದ ಭಂಗಿಗಳಿರುವ ನಟನ ಕತ್ತಿವರಸೆ ಬಹು ಆಕರ್ಷಣೀಯ. ಫಳಫಳನೆ ಹೊಳೆಯುವ ಕತ್ತಿ, ಒಂದಕ್ಕೊಂದು ತಾಗಿ ಖಣಿಖಣಿಲೆಂದು ಸದ್ದು ಮಾಡುವಾಗ ಪ್ರೇಕ್ಷಕನಿಗೆ ಅದೊಂದು ರೋಮಾಂಚಕ ಅನುಭವವೆನಿಸುತ್ತದೆ.

ಕತ್ತಿವರಸೆಯ ಪಂದ್ಯಗಳಿಗಾಗಿ ಮೂರು ಬಗೆಯ ಆಯುಧಗಳನ್ನು ಅಂಗೀಕರಿಸಲಾಗಿತ್ತು. (ಅ) ಫಾಯಿಲ್ (ಆ) ಎಪೇ (ಇ) ಸೇಬರ್. ಇದರಲ್ಲಿ ಮಹಿಳೆಯರು ಫಾಯಿಲ್ ಅನ್ನು ಮಾತ್ರ ಉಪಯೋಗಿಸುತ್ತಿದ್ದರು. ಕತ್ತಿಯನ್ನು ನಿರ್ವಹಿಸುವಷ್ಟೇ ಚಾಣಾಕ್ಷತನ ಹೆಜ್ಜೆಗಳ ಚಲನೆಯಲ್ಲೂ ಇರಬೇಕು. ಕಾದಾಡುವಾಗ ಸಮತೋಲನ ಕಾಪಾಡಿಕೊಳ್ಳುವುದು ಅತೀ ಮುಖ್ಯ. ಇವುಗಳನ್ನು ಅಭ್ಯಾಸ ಮಾಡದ ಕಲಾವಿದನಿಗೆ ಚಿತ್ರೀಕರಣ ಸಂದರ್ಭದಲ್ಲಿ ಅನಾಹುತಗಳಾಗುವ ಸಂಭವ ಹೆಚ್ಚು. ಸಾಹಸ ದೃಶ್ಯಗಳಲ್ಲಿ ಭಾಗವಹಿಸುವ ಪ್ರತಿಯೊಬ್ಬ ಕಲಾವಿದನೂ ಕತ್ತಿವರಸೆ, ದೊಣ್ಣೆವರಸೆ, ಕುದುರೆ ಸವಾರಿ ಮುಂತಾದ ಮೂಲ ಸಾಹಸಗಳನ್ನು ಕಲಿತಿರಲೇಬೇಕು.

ಕನ್ನಡದ ಪ್ರಪ್ರಥಮ ವಾಕ್ಚಿತ್ರ 'ಸತಿ ಸುಲೋಚನಾ' ದಲ್ಲೇ ಯಥೇಚ್ಛವಾದ ಸಾಹಸ ಬಳಕೆಯಾಗಿತ್ತು. ಆಗ ಇದ್ದ ಸೀಮಿತ ಸೌಲಭ್ಯಗಳಲ್ಲೇ ಉತ್ತಮ ಸಾಹಸಗಳನ್ನು ಚಿತ್ರೀಕರಿಸಲಾಗಿತ್ತು. ಹೀಗೆ ಕನ್ನಡ ಚಿತ್ರರಂಗಕ್ಕೆ ಮೊದಲ ಚಿತ್ರದ ಮೂಲಕ ಸಾಹಸದ ಪ್ರವೇಶವೂ ಆಯಿತು. ನಂತರ ೧೯೩೪ ರಿಂದ ೧೯೪೭ರ ವರೆಗೆ ಚಿತ್ರಗಳಲ್ಲಿ ಅಂಥ ಸಾಹಸದ ದೃಶ್ಯಗಳು ಬಳಕೆಯಾಗಲಿಲ್ಲ. ೧೯೪೭ರಲ್ಲಿ ಬಂದ 'ಚಂದ್ರಹಾಸ' ಚಿತ್ರದಲ್ಲಿ ಮತ್ತೆ ಸಾಹಸ ಮರುಕಳಿಸಿತು. ಕೆಂಪರಾಜ್ ಅರಸ್ ನಿರ್ದೇಶಿಸಿ ನಟಿಸಿದ್ದ 'ರಾಜಾವಿಕ್ರಮ' ಅಲ್ಲಿನವರೆಗಿನ ಚಿತ್ರಗಳಲ್ಲಿ ತೋರದ ಹೆಚ್ಚುಗಾರಿಕೆಯ ಸಾಹಸ ದೃಶ್ಯಗಳನ್ನು ಒಳಗೊಂಡಿತ್ತು. ಆ ಚಿತ್ರದ ಪರಾಕಾಷ್ಠೆಯ ದೃಶ್ಯದಲ್ಲಿ ವಿಕ್ರಮರಾಜನು ಕುತಂತ್ರಿಯಾದ ಸೇನಾಧಿಪತಿಯೊಡನೆ ನಡೆಸುವ ಕತ್ತಿವರಸೆ ಜನಪ್ರಿಯವಾಗಿತ್ತು. ಸೇನಾಧಿಪತಿಯಾಗಿ ನಟಿಸಿದ ನಟ ಆ ಚಿತ್ರದ ಸಾಹಸ ನಿರ್ದೇಶಕನೂ ಆಗಿದ್ದರು.

ರತ್ನಗಿರಿ ರಹಸ್ಯ (೧೯೫೭), ಭೂಕೈಲಾಸ (೧೯೫೮), ರಣಧೀರ ಕಂಠೀರವ, ರಾಣಿ ಹೊನ್ನಮ್ಮ, ದಶಾವತಾರ (೧೯೬೦), ಕಿತ್ತೂರು ಚೆನ್ನಮ್ಮ, ವಿಜಯನಗರದ ವೀರಪುತ್ರ (೧೯೬೧), ದೇವ ಸುಂದರಿ (೧೯೬೨) ಮುಂತಾದ ಚಿತ್ರಗಳಲ್ಲಿ ಕತ್ತಿವರಸೆ ಚಿತ್ರದಲ್ಲಿ ಬಹುಮುಖ್ಯ ಭಾಗವಾಗಿ ಕಾಣಿಸಿಕೊಂಡಿತ್ತಲ್ಲದೆ ಸಾಕಷ್ಟು ಜನಮನ್ನಣೆಯನ್ನೂ ಗಳಿಸಿತ್ತು. ೧೯೬೩ರಲ್ಲಿ ಬಿ.ವಿಠಲಾಚಾರ್ಯರು ನಿರ್ಮಿಸಿ ನಿರ್ದೇಶಿಸಿದ ಚಿತ್ರ 'ವೀರಕೇಸರಿ' ಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಈ ಕಲೆಯನ್ನು ಉಪಯೋಗಿಸಿಕೊಳ್ಳಲಾಗಿತ್ತು. ಆಗ ದಕ್ಷಿಣ ಭಾರತದಲ್ಲೇ ಖ್ಯಾತರೆನಿಸಿದ್ದ ಸಾಹಸ ನಿರ್ದೇಶಕ ಎಂ.ಎಸ್ ಸ್ವಾಮಿನಾಥನ್ ಈ ಚಿತ್ರಕ್ಕೆ ಸಾಹಸ ಸಂಯೋಜನೆ ಮಾಡಿದ್ದರು. ವಿಶಿಷ್ಟ ಶೈಲಿಗಳಲ್ಲಿ ಕತ್ತಿ ಕಾಳಗವನ್ನು ಜನ ಹುಚ್ಚೇರಿಸಿ ನೋಡುವಂತೆ ರೂಪಿಸುತ್ತಿದ್ದರು. ರಾಜಕುಮಾರ್ ಹಾಗೂ ಉದಯ್ ಕುಮಾರ್ ಅವರೂ ಕೂಡಾ ಅಷ್ಟೇ ಲೀಲಾಜಾಲವಾಗಿ ಕತ್ತಿವರಸೆಯನ್ನು ನಿರ್ವಹಿಸಿದ್ದರು.

ಇದೇ ವರ್ಷ ತೆರೆಕಂಡ ರಾಜಕುಮಾರ್ ದ್ವಿಪಾತ್ರದಲ್ಲಿ ಅಭಿನಯಿಸಿದ್ದ 'ಸತಿ ಶಕ್ತಿ'ಯಲ್ಲಿಯೂ ಅದ್ಭುತವೆನಿಸುವ ಕತ್ತಿಕಾಳಗವನ್ನು ನಿರೂಪಿಸಲಾಗಿತ್ತು. ಎಂ.ಡಿ.ಖಾನ್ ಮತ್ತು ಕೆ.ಮಾಧವನ್ ಜಂಟಿಯಾಗಿ ವಿಶೇಷ ಎನಿಸುವ ಸಾಹಸ ಸಂಯೋಜನೆ ಮಾಡಿದ್ದರು. ಈ ಚಿತ್ರ ವಿಶೇಷ ಸಾಹಸ ಹಾಗೂ ದೃಶ್ಯ ವೈಭವದ ಕಾರಣಕ್ಕಾಗಿಯೇ ಶತದಿನೋತ್ಸವ ಆಚರಿಸಿತ್ತು.

ಸಾಹಸ ನಿರ್ದೇಶಕ ವೈ.ಶಿವಯ್ಯ ಹುಣಸೂರರ ಮೆಚ್ಚಿನ ಕತೆಯಾಧಾರಿತ ಚಿತ್ರ. 'ವೀರ ಸಂಕಲ್ಪ ' (೧೯೬೪)ದಲ್ಲೂ ಇದೇ ರೀತಿಯ ಸಾಹಸವನ್ನು ಅಳವಡಿಸಿದ್ದರು. ಸ್ವತಃ ಹುಣಸೂರು ಕೃಷ್ಣಮೂರ್ತಿ ಹಾಗೂ ಬಿ.ಎಂ.ವೆಂಕಟೇಶ್ ಆ ದೃಶ್ಯಗಳಲ್ಲಿ ಸರಾಗವಾಗಿ ಅಭಿನಯಿಸಿ ಜನಮನ್ನಣೆ ಗಳಿಸಿದ್ದರು. ಪಿ.ಎ.ಪುಲಕೇಶಿ ಸಾಹಸ ನಿರ್ದೇಶನದ 'ಚಂದ್ರಹಾಸ' ಹಾಗೂ 'ಬೆಟ್ಟದ ಹುಲಿ'ಯಲ್ಲೂ ಕೂಡ ಕತ್ತಿವರಸೆಯ ವಿವಿಧ ಅಂಶಗಳನ್ನು ಸಂಯೋಜಿಸಲಾಗಿತ್ತು.

ತೆಲುಗಿನಲ್ಲೇ ಹೆಚ್ಚು ಪರಿಚಿತರಾಗಿದ್ದ ಕನ್ನಡಿಗ ವೈ.ಶಿವಯ್ಯ 'ಮನೆ ತುಂಬಿದ ಹೆಣ್ಣು' ಚಿತ್ರದ ಮೂಲಕ ಕನ್ನಡ ಚಿತ್ರರಂಗಕ್ಕೆ ಬಂದರು. ನಂತರ ಆಗೊಂದು ಈಗೊಂದು ಕನ್ನಡ ಚಿತ್ರಗಳಿಗೆ ಸಾಹಸ ಸಂಯೋಜನೆ ಮಾಡಿದರಾದರೂ ೧೯೬೬ರಲ್ಲಿ ಬಂದ 'ಕಠಾರಿ ವೀರ' ಚಿತ್ರ ಅವರನ್ನು ಎಲ್ಲರೂ ಗಮನಿಸುವಂತೆ ಮಾಡಿತು. ಅವರು ಸಂಪೂರ್ಣವಾಗಿ ತೆಲುಗು ಚಿತ್ರರಂಗದಿಂದ ಹೊರಬಂದು ಕನ್ನಡ ಚಿತ್ರರಂಗದಲ್ಲೇ ನೆಲೆಯೂರಲು ಬಹುತೇಕ ಈ ಚಿತ್ರವೇ ನಾಂದಿ ಹಾಡಿತು. ಇದಕ್ಕೆ ನಟ ರಾಜಕುಮಾರ್ ಸಹಕಾರ ಹಾಗೂ ಸ್ನೇಹ ಕೂಡಾ ಕಾರಣ ಎನ್ನುವುದು ಶಿವಯ್ಯ ಅವರ ಅಭಿಪ್ರಾಯ. ಸ್ವಾಮಿನಾಥನ್ ಅವರಲ್ಲಿ ಮೂರು ವರ್ಷಗಳ ಕಾಲ ಸತತವಾಗಿ ಶಿಕ್ಷಣ ಪಡೆದ ಶಿವಯ್ಯನವರು ಕತ್ತಿವರಸೆಯಲ್ಲಿ ಪ್ರವೀಣರು. 'ಕಠಾರಿ ವೀರ' ಚಿತ್ರಕ್ಕೆ ಸಾಹಸ ನಿರ್ದೇಶಕರಾಗಿ ಆಯ್ಕೆಯಾಗಲು ಈ ಅಂಶವೇ ಪ್ರಮುಖ ಕಾರಣವಾಗಿತ್ತು. ಆ ಸಂದರ್ಭದಲ್ಲಿ ಚಿಕ್ಕದೊಂದು ದುರಂತವೂ ಸಂಭವಿಸಿತ್ತು. ಶಿವಯ್ಯನವರ ಸಲಹೆಯಂತೆ ಕತ್ತಿವರಸೆ ನಿರ್ವಹಿಸುತ್ತಿದ್ದ ರಾಜಕುಮಾರ್ ಅವರಿಗೆ ಎದುರಾಳಿಯ ಕತ್ತಿ ಬೀಸುವಿಕೆಯಲ್ಲಿ ಉಂಟಾದ ಕ್ಷಣ ವ್ಯತ್ಯಯದಿಂದ ಕತ್ತಿಯ ತುದಿ ರಾಜಕುಮಾರ್ ಅವರ ಕಣ್ಣಿಗೆ ತಾಕಿತ್ತು.

(ಚಿತ್ರ ೧) ಪೌರಾಣಿಕದ ಸುರಾಸುರರ ಖಡ್ಗ ಸಮರ

ಈ ಕಾರಣಕ್ಕೆ ಅಂದು ಚಿತ್ರೀಕರಣವೇ ನಿಂತು ಹೋಗಿತ್ತು. ಅದೃಷ್ಟವಶಾತ್ ಕಣ್ಣಿನ ಬಿಳಿಭಾಗಕ್ಕೆ ಮಾತ್ರ ಏಟು ತಗುಲಿದ್ದರಿಂದ ದೃಷ್ಟಿ ಕಳೆದುಕೊಳ್ಳುವ ಅಪಾಯದಿಂದ ಪಾರಾಗಿದ್ದರು.

ಮುಂದೆ ಶಿವಯ್ಯನವರು 'ಕಿಲಾಡಿರಂಗ','ರಾಜಶೇಖರ','ರಾಜಮಾರ್ಗದ ರಹಸ್ಯ', 'ಮಯೂರ','ಒಂದೇ ರೂಪ ಎರಡು ಗುಣ','ಬಹಾದ್ದೂರ್ ಗಂಡು','ರಾಜಾ ನನ್ನ ರಾಜಾ','ಹುಲಿಯ ಹಾಲಿನ ಮೇವು','ರಾಮ ಪರಶುರಾಮ','ಗುರುಶಿಷ್ಯರು','ಎರಡು ನಕ್ಷತ್ರಗಳು','ಪ್ರಚಂಡ ಕುಳ್ಳ' ಹಾಗೂ ಇನ್ನೂ ಅನೇಕ ಚಿತ್ರಗಳಲ್ಲಿ ಕತ್ತಿವರಸೆಯ ವಿಭಿನ್ನ ಶೈಲಿಗಳನ್ನು ಅಳವಡಿಸಿದ್ದಾರೆ.

ಕುದುರೆ ಸವಾರಿ

ಚಿತ್ರರಂಗದಲ್ಲಿ ಅಂದಿನಿಂದ ಇಂದಿನವರೆಗೂ ಕುದುರೆ ಸವಾರಿ ಎನ್ನುವುದು ನಟನಾಗಲು ಕಲಿಯಬೇಕಾದ ಒಂದು ಅನಿವಾರ್ಯ ವಿದ್ಯೆ . ಪೌರಾಣಿಕ ಹಾಗೂ ಐತಿಹಾಸಿಕ ಚಿತ್ರಗಳಲ್ಲಂತೂ ಕುದುರೆ ಸವಾರಿ ತೀರಾ ಅನಿವಾರ್ಯ. ನಂತರದ ಸಾಮಾಜಿಕ ಚಿತ್ರಗಳಲ್ಲೂ ಕೂಡ ದರೋಡೆಕೋರ, ಕ್ರಾಂತಿಕಾರ, ಯೋಧ, ಸಿಪಾಯಿ ಮುಂತಾದ ಪಾತ್ರಗಳಿಗೆ ಕುದುರೆ ಸವಾರಿಯ ಅಗತ್ಯ ಇದ್ದೇ ಇತ್ತು. ಆರಂಭದ ದಿನಗಳಲ್ಲಿ ನಾಯಕನ ಇಮೇಜನ್ನು ಎತ್ತಿ ಹಿಡಿಯಲು ಕುದುರೆ ಸವಾರಿಯೂ ಒಂದು. ಕುದುರೆ ಇದ್ದ ಚಿತ್ರದಲ್ಲಿ ಕುದುರೆ ಮೇಲೆ ನಾಯಕನು ಕುಳಿತು ಹಾಡುವ ಹಾಡೊಂದು ಅನಿವಾರ್ಯವಾಗಿತ್ತು. ಕುದುರೆಗಳನ್ನು ಸಾಹಸ ದೃಶ್ಯಗಳಲ್ಲಿ ಬಳಸಿಕೊಳ್ಳುವಾಗ ಎಷ್ಟೋ ಸಾರಿ ಅನಾಹುತಗಳಾಗಿದ್ದೂ ಇದೆ. ಕೆಲವೊಮ್ಮೆ ಆಗಲಿರುವ ಘೋರ ಅನಾಹುತಗಳು ಕೊಂಚದರಲ್ಲಿಯೇ ತಪ್ಪಿ ಹೋಗಿದ್ದೂ ಇದೆ.

ಪ್ರಥಮ ಚಿತ್ರದಿಂದ ಮೊದಲ್ಗೊಂಡು 'ರತ್ನಗಿರಿ ರಹಸ್ಯ', 'ಶ್ರೀ ಕೃಷ್ಣ ಗಾರುಡಿ' ಚಿತ್ರಗಳಲ್ಲಿ ಕುದುರೆಗಳನ್ನು ಸಾಧಾರಣವಾಗಿ ಬಳಸಿಕೊಳ್ಳಲಾರಂಭಿಸಿದರು. ಅದ್ದೂರಿ ಎನಿಸುವ ಸಾಹಸಗಳು ಈ ಚಿತ್ರಗಳಲ್ಲಿ ಇಲ್ಲದಿದ್ದರೂ ನಂತರದ ಚಿತ್ರಗಳಾದ 'ರಣಧೀರ ಕಂಠೀರವ', 'ಕಿತ್ತೂರು ಚೆನ್ನಮ್ಮ', 'ವಿಜಯನಗರದ ವೀರಪುತ್ರ', 'ವೀರ ಕೇಸರಿ', 'ವೀರ ಸಂಕಲ್ಪ' ಚಿತ್ರಗಳಲ್ಲಿ ಕುದುರೆ ಸವಾರಿಯೂ ಪ್ರಧಾನ ಪಾತ್ರ ನಿರ್ವಹಿಸುತ್ತದೆ. ಯುದ್ಧದಂತಹ ಸಾಹಸ ಸಂದರ್ಭಗಳಲ್ಲಿ ಕುದುರೆಗಳ ಬಳಕೆ ರೋಮಾಂಚನಕಾರಿ ಎನಿಸುತ್ತದೆ. ಪರಸ್ಪರ ಕುದುರೆ ಸವಾರರು ಕತ್ತಿ ಗುರಾಣಿ ಹಿಡಿದು ಕಾದಾಡುವ ಸನ್ನಿವೇಶದಲ್ಲಿ ನಟ ಅಥವಾ ನಟಿಗೆ ಇರಬೇಕಾದ ಏಕಾಗ್ರತೆ ಹೆಚ್ಚಿನ ಪ್ರಮಾಣದಲ್ಲಿದ್ದು, ಆಕಸ್ಮಿಕವಾಗಿ ಕತ್ತಿಯ ತುದಿ ಕುದುರೆಗೆ ತಾಗಿ ಅದು ಹುಚ್ಚೆದ್ದು ಓಡಿದರೆ ಅನಾಹುತ ಕಟ್ಟಿಟ್ಟ ಬುತ್ತಿ. ಇಂತಹ ಘಟನೆಗಳು ಸಾಕಷ್ಟು ನಡೆದು ಕೆಲವೊಮ್ಮೆ ಕೂದಲೆಳೆಯ ಅಂತರದಲ್ಲಿ ಪಾರಾದ ಸಂದರ್ಭಗಳಿವೆಯಲ್ಲದೆ ಮತ್ತೆ ಕೆಲವೊಮ್ಮೆ ಸಾವು ನೋವು ಸಂಭವಿಸಿದ ಉಲ್ಲೇಖವೂ ಇದೆ.

'ಕಿತ್ತೂರು ಚೆನ್ನಮ್ಮ' ಚಿತ್ರದಲ್ಲಿ ನಟಿ ಬಿ.ಸರೋಜಾದೇವಿಯವರು ಯುದ್ಧ ದೃಶ್ಯಗಳಲ್ಲಿ ಭಾಗವಹಿಸಿದ್ದ ರೀತಿ ಯಾರಿಗಾದರೂ ಅಚ್ಚರಿ ಹುಟ್ಟಿಸುತ್ತದೆ. ಅದುವರೆಗೆ ಸಾಮಾನ್ಯವಾಗಿ ಕೌಟುಂಬಿಕ ಹಿನ್ನೆಲೆಯ ಸೌಮ್ಯ ಪಾತ್ರಗಳಲ್ಲಿ ಕಾಣಿಸಿಕೊಳ್ಳುತ್ತಿದ್ದ ಸರೋಜಾದೇವಿ ಇದ್ದಕ್ಕಿದ್ದಂತೆ ಕತ್ತಿ ಹಿಡಿದು ಯುದ್ಧ ಭೂಮಿಯಲ್ಲಿ ಹೋರಾಡುವ ದೃಶ್ಯದಲ್ಲಿ ಭಾಗವಹಿಸಬೇಕೆಂದರೆ ಸಾಮಾನ್ಯ ಸಂಗತಿಯಲ್ಲ. ಈ ಪಾತ್ರಕ್ಕಾಗಿ ಅವರು ಕುದುರೆ ಸವಾರಿ, ಕತ್ತಿ ವರಸೆಯ ಅಭ್ಯಾಸ ಮಾಡಿದರೆನ್ನುವುದು ಗಮನಾರ್ಹವಾಗುತ್ತದೆ. ಇಷ್ಟೆಲ್ಲ ಇದ್ದರೂ ಸಾಹಸ ನಿರ್ದೇಶಕ ಎಷ್ಟು ಜಾಣ್ಮೆಯಿಂದ ದೃಶ್ಯ ಸಂಯೋಜನೆ ಮಾಡುತ್ತಾರೆನ್ನುವುದರ ಮೇಲೆಯೇ ಅಪಾಯದ ಪ್ರಮಾಣವಿರುತ್ತದೆ.

'ರಣಧೀರ ಕಂಠೀರವ', 'ಕಿತ್ತೂರು ಚೆನ್ನಮ್ಮ' ಹಾಗೂ 'ವಿಜಯನಗರದ ವೀರಪುತ್ರ' ಈ ಮೂರು ಚಿತ್ರಗಳ ಸಾಹಸ ನಿರ್ದೇಶನದ ಹೊಣೆ ಹೊತ್ತವರು ದಕ್ಷಿಣ ಭಾರತವಲ್ಲದೆ ಉತ್ತರದಲ್ಲೂ ಹೆಸರು ಮಾಡಿದ ಸಾಹಸ ನಿರ್ದೇಶಕ ಶ್ಯಾಂ ಸುಂದರ್ ಶೆಟ್ಟಿಯವರು. ಈ ಚಿತ್ರಗಳಲ್ಲಿ ಬರುವ ಕತ್ತಿವರಸೆ, ಕುದುರೆ ಸವಾರಿ, ಮಲ್ಲಯುದ್ಧ ಹಾಗೂ ಇತರ ದೃಶ್ಯಗಳನ್ನು ಸಹಜತೆಗೆ ಹತ್ತಿರವಾಗುವಂತೆ ರೋಮಾಂಚನಕಾರಿಯಾಗಿ ಸಂಯೋಜಿಸಲಾಗಿತ್ತು. ಇದಕ್ಕಾಗಿ ಸಾಕಷ್ಟು ಸಂಖ್ಯೆಯ ಸೈನಿಕರು, ಆನೆ ಕುದುರೆಗಳು, ಫಿರಂಗಿಗಳನ್ನು ಬಳಸಿಕೊಂಡು ಚಿತ್ರಿಸಲಾಗಿತ್ತು. ಶ್ಯಾಂ ಸುಂದರ್ ಶೆಟ್ಟಿಯವರು 'ವಿಜಯನಗರದ ವೀರಪುತ್ರ' ಚಿತ್ರದಲ್ಲಿ ಒಂದು ಚಿಕ್ಕ ಪಾತ್ರದಲ್ಲಿ ಅಭಿನಯಿಸಿದ್ದರು. ಈ ಚಿತ್ರದಲ್ಲಿ ನಟಿಸಿದ ನಾಯಕ ನಟ ಆರ್.ಸುದರ್ಶನ್ ಅವರಿಗೆ ನಾಗೇಂದ್ರರಾಯರು ವಿಶೇಷವಾದ ಸಾಹಸ ತರಬೇತಿಯನ್ನು ನೀಡಿದ್ದರು. ಇಂಥ ಪೂರ್ವ ತಯಾರಿಗಳೆಲ್ಲವೂ ಸಾಹಸ ಉತ್ತಮ ಮಟ್ಟದಲ್ಲಿ ಮೂಡಿ ಬರಲು ಕಾರಣವಾಗುತ್ತದೆ.

'ವೀರ ಸಂಕಲ್ಪ' ಚಿತ್ರದ ಸಾಹಸ ಸಂಯೋಜನೆ ಮಾಡಿದವರು ವೈ.ಶಿವಯ್ಯನವರು. ಕತ್ತಿವರಸೆಯಂತೆ ಕುದುರೆ ಫೈಟ್‌ಗಳಲ್ಲಿಯೂ ಕೂಡಾ ಎತ್ತಿದ ಕೈ ಎನಿಸಿದ್ದ ಇವರು ಜಿ.ಎಂ.ವೆಂಕಟೇಶ್ ಹಾಗೂ ಹುಣಸೂರು ಕೃಷ್ಣಮೂರ್ತಿಯವರಿಗೆ ಕುದುರೆ ಸವಾರಿಯನ್ನು ಕಾಳಜಿವಹಿಸಿ ತರಬೇತಿ ನೀಡಿದ್ದರು. ಹೀಗಾಗಿ ಅಪೂರ್ವವಾದ ಸಾಹಸ ತೆರೆಯ ಮೇಲೆ ಮೂಡಿ ಬಂದು ಚಿತ್ರದ ಯಶಸ್ಸಿಗೂ ಬಹುತೇಕ ಈ ಅಂಶವೇ ಕಾರಣವೆನಿಸಿತ್ತು.

'ಬಂಗಾರದ ಹೂವು' ಚಿತ್ರೀಕರಣ ಸಂದರ್ಭದಲ್ಲಿ ರಾಜಕುಮಾರ್ ಅವರು ಕುದುರೆ ಸವಾರಿ ಮಾಡುತ್ತಿದ್ದಾಗ ಆಯಕಟ್ಟಿನ ಜಾಗದಲ್ಲಿ ಅವರು ಬಿದ್ದು ಬಿಟ್ಟರು. ಗಾಬರಿಗೊಂಡ ಕುದುರೆ ಒಂದೆ ಸಮನೆ ಅವರನ್ನು ಒದೆಯಲು ಆರಂಭಿಸಿತು. ಸುಮಾರು ಹತ್ತು ನಿಮಿಷಕ್ಕೂ ಹೆಚ್ಚು ಕಾಲ ಅವರು ಆ ಒದೆತವನ್ನು ಅನುಭವಿಸಬೇಕಾಯಿತು. ಎಷ್ಟೇ ಮುನ್ನೆಚ್ಚರಿಕೆ ವಹಿಸಿದರೂ ಇಂಥ ಅಪಾಯಗಳಾಗುತ್ತಲೇ ಇರುತ್ತವೆನ್ನುವುದಕ್ಕೆ ಇದೇ ರೀತಿ ಮತ್ತೊಮ್ಮೆ ಆದುದೇ ಸಾಕ್ಷಿ. ಆದರೂ ಯಾವುದೇ ಅಪಾಯವಾಗದೇ ಚಿತ್ರೀಕರಣ ಮುಗಿದಿತ್ತು. ಇಂಥ ಸಂದರ್ಭಗಳಲ್ಲಿ ಸಾಹಸ ನಿರ್ದೇಶಕರು ಗರಿಷ್ಠ ಜವಾಬ್ದಾರಿಯನ್ನು ನಿಭಾಯಿಸಿಬೇಕಾಗುತ್ತದೆ.

ಚಲನ ಚಿತ್ರಗಳಲ್ಲಿ ಬೇಟೆ

ಬೇಟೆಯೆಂದರೆ ಸಾಹಸಕ್ಕೆ ಮತ್ತೊಂದು ಹೆಸರು. ದಿಕ್ಕಿರದ ಕಾಡಿನಲ್ಲಿ ಕ್ರೂರ ಮೃಗಗಳನ್ನು ಅಟ್ಟಿಸಿಕೊಂಡು ಹೋಗಿ ಬೇಟೆಯಾಡುವುದು ಪ್ರಾಣವನ್ನೇ ಪಣಕ್ಕಿಡುವ ಅಪಾಯ. ಕಥಾ ನಾಯಕ ಶೂರ, ವೀರನೆಂದು ಪ್ರತಿಬಿಂಬಿಸಲು ಅಪಾಯಕಾರಿ ಬೇಟೆಯ ದೃಶ್ಯ ಸಂಯೋಜಿಸಲಾಗುತ್ತದೆ. ಆದಿ ಮಾನವನ ಕಾಲದಿಂದಲೂ ಬೇಟೆಯ ಪದ್ಧತಿ ರೂಢಿಯಾಗಿತ್ತು. ಆಗ ಪ್ರಾಣಿಗಳಂತೆಯೇ ಮನುಷ್ಯನಿಗೂ ಹೊಟ್ಟೆ ಪಾಡಿಗೆ ಬೇಟೆಯೇ ಮೂಲ ಆಧಾರವಾಗಿತ್ತು. ನಂತರವೂ ಪುರಾಣ, ಇತಿಹಾಸಗಳಲ್ಲಿ ಬೇಟೆಯ ಸಾಹಸದ ಉಲ್ಲೇಖ ಸಾಕಷ್ಟಿತ್ತು. ಈಗ ಬೇಟೆ ನಿಷಿದ್ಧವಾಗಿದ್ದರೂ ಕೆಲವೆಡೆ ನಡೆಯುತ್ತಲೇ ಇರುತ್ತದೆನ್ನುವುದು ಸುಳ್ಳಲ್ಲ.

ಹಿಂದೆ ರಾಜರು ಪ್ರಜಾಪೀಡಕ ಪ್ರಾಣಿಗಳಿಂದ ಪ್ರಜೆಗಳನ್ನು ರಕ್ಷಿಸಲು ಆಗಾಗ ಬೇಟೆಯನ್ನು ಕೈಗೊಳ್ಳುತ್ತಿದ್ದರು. ರಾಮಾಯಣದಲ್ಲಿ ಶ್ರೀರಾಮ ಚಂದ್ರನು ಸಾಲುಮರಗಳನ್ನು ಒಂದೇ ಬಾಣದಲ್ಲಿ ಕತ್ತರಿಸಿ ಬಿಲ್ಲುಗಾರಿಕೆ ಮೆರೆದ ಉಲ್ಲೇಖವಿದೆ. ಆಗ ಬೇಟೆಯೆಂದರೆ ಅದು ಬಿಲ್ಲುಗಾರಿಕೆಯೆಂದೇ ಅರ್ಥ. ಹೀಗೆ ಅರ್ಜುನ ತಿರುಗುವ ಮತ್ಸ್ಯಯಂತ್ರದ ಬಿಂಬವನ್ನು ನೀರಿನಲ್ಲಿ ನೋಡಿ ಗುರಿಯಿಟ್ಟು ಅದನ್ನು ಭೇದಿಸಿದ ಕತೆಯಿದೆ. 'ಶಬ್ದ ವೇಧಿ' ಎಂಬ ವಿದ್ಯೆ ಕಲಿತ ಏಕಲವ್ಯ ದೂರದಲ್ಲಿ ನಾಯಿ ಬೊಗಳಿದ ಶಬ್ದವನ್ನು ಆಲಿಸಿಯೇ ಆ ನಾಯಿಯ ಬಾಯಿಗೇ ಬಾಣಗಳನ್ನು ಬಿಟ್ಟ ಉದಾಹರಣೆಯಿದೆ. ಇದೇ ವಿದ್ಯೆ ಕಲಿತಿದ್ದ ದಶರಥ ಬಿಟ್ಟ ಬಾಣ ಶ್ರವಣಕುಮಾರನನ್ನು ಬಲಿ ತೆಗೆದುಕೊಂಡಿತ್ತು.

(ಚಿತ್ರ ೨) ಜಾನಪದದಲ್ಲೂ ಹೋರಾಟಕ್ಕೆ ಪ್ರಾಶಸ್ತ್ಯ

ಚಲನಚಿತ್ರಗಳಲ್ಲೂ ಬಿಲ್ಲುಗಾರಿಕೆಯ ಕಲೆಯನ್ನು ಆಕರ್ಷಣೀಯವಾಗಿ ಬಳಸಿಕೊಳ್ಳಲಾಗಿತ್ತು. ರಾಜಕುಮಾರ್ ನಾಯಕತ್ವದ ಪ್ರಥಮ ಚಿತ್ರ 'ಬೇಡರ ಕಣ್ಣಪ್ಪ' ಹೆಸರೇ ಸೂಚಿಸುವಂತೆ ಬೇಟೆಯಾಡಿ ಬದುಕುವ ಶಿವಭಕ್ತನೊಬ್ಬನ ಕತೆಯನ್ನಾಧರಿಸಿತ್ತು. ಬೇಟೆಯಂಥ ಸಾಹಸ ಸಂಯೋಜನೆ ಮಾಡುವುದು ಸಾಹಸ ನಿರ್ದೇಶಕರಿಗೆ ನಿಜಕ್ಕೂ ಸವಾಲಿನ ಕೆಲಸ. ಬೇಡನು ಆಹಾರಕ್ಕಾಗಿ ಪ್ರಾಣಿಗಳನ್ನರಸಿ ಓಡುವುದು, ಬೀಳುವುದು, ಬಳಲಿ ಕುಳಿತುಕೊಳ್ಳುವಾಗ ಮತ್ತೆಲ್ಲೋ ಕೇಳುವ ಸದ್ದನ್ನು ಅನುಕರಿಸಿ ಆಸೆಯಿಂದ ಓಡುವುದು ಮುಂತಾದ ತಿರುವುಗಳೊಂದಿಗೆ ಪ್ರಾಣಿಗಳನ್ನು ಬೆನ್ನಟ್ಟುವ ದೃಶ್ಯವನ್ನು ರೋಮಾಂಚನಕಾರಿಯಾಗಿ ಚಿತ್ರಿಸಬೇಕಾಗುತ್ತದೆ.

ರಾಮಾಯಣ, ಮಹಾಭಾರತದ ಕತೆಗಳು ಹಾಗೂ ಅವುಗಳ ಉಪಕತೆಗಳನ್ನಾಧರಿಸಿದ ಚಿತ್ರಗಳಲ್ಲೂ ಬಿಲ್ಲು ಬಾಣಗಳ ಬಳಕೆ ಅನಿವಾರ್ಯವಾಗಿತ್ತು. ಯುದ್ಧದ ಸಂದರ್ಭದಲ್ಲಿ ಬಾಣಗಳು ಅನೇಕ ಅವತಾರಗಳನ್ನು ತಾಳುವುದಿದೆ. ಚಂದ್ರಾಕಾರ, ಸರ್ಪಾಕಾರ, ಬೆಂಕಿ ಉಗುಳುವ ಬಾಣ, ನೀರು ಚಿಮ್ಮುವ ಬಾಣ ಮುಂತಾದವು. ಬಿಲ್ಲಿನಿಂದ ಚಿಮ್ಮಿದ ಒಂದು ಬಾಣ ವೈರಿಯತ್ತ ಸಾಗುತ್ತಿದ್ದಂತೆ ಒಂದರಿಂದ ಹತ್ತಾಗಿ, ನೂರಾಗಿ, ಸಾವಿರವಾಗಿ ಮುನ್ನುಗ್ಗುವ ಚಮತ್ಕಾರವೂ ನಡೆಯುತ್ತದೆ.

ಇತ್ತೀಚಿನವರೆಗೂ ಅಂದರೆ ಸಿಡಿಮದ್ದು, ಬಂದೂಕುಗಳ ಬಳಕೆ ಆರಂಭವಾಗುವವರೆಗೆ ಬಿಲ್ಲು ಬಾಣಗಳದೇ ಆಧಿಪತ್ಯವಾಗಿತ್ತು. ನವೀಕರಣಗೊಂಡ ಬಿಲ್ಲುಗಾರಿಕೆ ಈಗಲೂ ತನ್ನ ಅಸ್ತಿತ್ವ ಉಳಿಸಿಕೊಂಡಿದೆಯೆಂದರೆ ಅದರ ಶಕ್ತಿಯ ಅರಿವಾಗುತ್ತದೆ. ವಿಶ್ವ ಕ್ರೀಡಾರಂಗದಲ್ಲಿ ಇಂದು ಬಿಲ್ಲುಗಾರಿಕೆ ಆಂಗ್ಲ ಭಾಷೆಗಳ ಚಿತ್ರಗಳಲ್ಲೂ ಬಳಕೆಯಾಗುತ್ತಿದ್ದು ನಂತರ ಪ್ರಾದೇಶಿಕ ಭಾಷಾ ಚಿತ್ರಗಳಲ್ಲೂ ಕಾಣಿಸಿಕೊಂಡಿದೆ. ಈ ಬಾಣಗಳ ರೂಪ ವಿನ್ಯಾಸದಲ್ಲೂ ಭಿನ್ನತೆಯಿದ್ದು ಆರಂಭದಲ್ಲಿ ನಿಂಬೆ, ಕಿತ್ತಳೆ ಮುಂತಾದ ಮರಗಳಿಂದ ಬಿಲ್ಲು ಬಾಣಗಳನ್ನು ತಯಾರಿಸಲಾಗುತ್ತಿತ್ತು. ಆಧುನಿಕ ಕ್ರಮದಲ್ಲಿ ಫೈಬರ್ ಗ್ಲಾಸ್, ಅಲ್ಯುಮಿನಿಯಂ ಮುಂತಾದ ಲೋಹಗಳಿಂದಲೂ ತಯಾರಿಸಲಾಗುತ್ತದೆ.

ಮಲ್ಲಯುದ್ಧ, ಕುಸ್ತಿ, ಲಾಠಿ, ದೊಣ್ಣೆ ವರಸೆಗಳು

ಕತ್ತಿವರಸೆ, ಕುದುರೆ ಸವಾರಿಗಳ ಜೊತೆಯಲ್ಲೇ ತೋಳ್ಬಲವನ್ನಾಧರಿಸಿದ ಮಲ್ಲಯುದ್ಧ, ಕುಸ್ತಿಗಳನ್ನು ಚಿತ್ರಗಳಲ್ಲಿ ಅಳವಡಿಸಿಕೊಳ್ಳಲಾಗುತ್ತಿತ್ತು. ಬದಲಾವಣೆಯ ಗಾಳಿ ಬೀಸುತ್ತಾ ಸಾಮಾಜಿಕ ಚಿತ್ರಗಳು ಹೆಚ್ಚಾದಂತೆ ಅದಕ್ಕನುಗುಣವಾಗಿ ಸಾಹಸದ ಶೈಲಿಯೂ ಬದಲಾಯಿತು. ಆಗಲೇ ಮಲ್ಲಯುದ್ಧ, ಕುಸ್ತಿ, ದೊಣ್ಣೆವರಸೆ ಮುಂತಾದ ಪ್ರಕಾರಗಳು ಸಾಹಸ ಕ್ರಮದಲ್ಲಿ ಬಳಕೆಯಾಗತೊಡಗಿದವು.

ಹಳ್ಳಿಗಾಡಿನ ಕತೆಗಳನ್ನು ನಿರೂಪಿಸುವಾಗ ಅಲ್ಲಿ ದೊರಕುವ ಪರಿಕರ, ಅಲ್ಲಿನ ಸ್ಥಳ ವಿಶೇಷಗಳಿಗನುಗುಣವಾಗಿ ಸಾಹಸವನ್ನು ಸಂಯೋಜಿಸಲು ಆರಂಭಿಸಿದರು. ಉದಾಹರಣೆಗೆ ಕೆಸರುಗದ್ದೆಯಲ್ಲಿ ಹೊಡೆದಾಟ, ಹುಲ್ಲಿನ ಬಣವೆಯಲ್ಲಿ ಸಾಹಸ ಅಥವಾ ಕೋಣಗಳೊಂದಿಗೆ ಕಾದಾಟ ಮುಂತಾದವು.

ದೊಣ್ಣೆ ವರಸೆಗಾಗಿ ಸುಮಾರು ಎರಡೂವರೆಯಿಂದ ಮೂರು ಅಡಿಗಳಷ್ಟು ಉದ್ದ, ಮುಕ್ಕಾಲು ಅಂಗುಲದಷ್ಟು ಸುತ್ತಳತೆಯುಳ್ಳ ದೊಣ್ಣೆಗಳನ್ನು ಹಿಡಿದು ಹೊಡೆದಾಡುವುದು ಸಾಮಾನ್ಯವಾಯಿತು. ನೋಡುಗನಿಗೆ ದೊಣ್ಣೆಯ ಚಲನೆ ತೀವ್ರವಾಗಿರುವಂತೆಯೂ, ಚುರುಕಾಗಿ ಕಾಣುವಂತೆಯೂ ಸಂಯೋಜಿಸಲಾಗುತ್ತಿತ್ತು. ದೊಣ್ಣೆ ವರಸೆಯಲ್ಲಿ ಶಿರಮಾರ್, ಕುಂಭವಾರ್, ಕಕ್ಷಮಾರ್, ಜಂಗಾಸ್ತಿಮಾರ್, ಭ್ರಮಣಮಾರ್, ಪ್ರಹಾರ್ ಎಂಬ ನಿರ್ದಿಷ್ಟ ಪ್ರಹಾರಗಳಿವೆ. ಚಿತ್ರಗಳಲ್ಲಿ ಕಥಾ ಹಿನ್ನೆಲೆಯನ್ನು ಅನುಸರಿಸಿ ಸನ್ನಿವೇಶಕ್ಕೆ ತಕ್ಕಂತೆ ಮೇಲಿನ ವರಸೆಗಳನ್ನು ಬಳಸಿಕೊಳ್ಳುತ್ತಿದ್ದರು.

ಲಾಠಿ ವರಸೆಯಲ್ಲಿ ಲಾಠಿಗಳು ಆಳೆತ್ತರದ್ದಾಗಿರುತ್ತವೆ. ಸಾಮಾನ್ಯವಾಗಿ ಇಂಥ ಸಾಹಸದ ಸನ್ನಿವೇಶದಲ್ಲಿ ಖಳನ ಕಡೆಯವರೆಲ್ಲ ಲಾಠಿಗಳನ್ನು ಹಿಡಿದು ನಾಯಕನ ಮೇಲೆ ಆಕ್ರಮಣಕ್ಕಿಳಿದಾಗ ಆತ ಅವರೆಲ್ಲರನ್ನು ಒಮ್ಮೆಲೇ ಎದುರಿಸಬೇಕಾಗುತ್ತದೆ. ಈ ಸಂದರ್ಭದಲ್ಲಿ ಸಾಹಸ ನಿರ್ದೇಶಕ ತುಂಬಾ ಜಾಗರೂಕನಾಗಿ ದೃಶ್ಯವನ್ನು ಸಂಯೋಜಿಸಬೇಕಾಗುತ್ತದೆ. ಗುಂಪಿನಲ್ಲಿ ಒಬ್ಬನ ಹೊಡೆತ ಆಯ ತಪ್ಪಿದರೂ ಅಪಾಯವೇ. ಪ್ರತಿಯೊಬ್ಬರೂ ಸಾಕಷ್ಟು ಅಭ್ಯಾಸ ನಡೆಸಬೇಕಾಗುತ್ತದೆ. ಲಾಠಿಯಲ್ಲಿ ಕೈಚಳಕದ ಚಮತ್ಕಾರವೂ ರೋಚಕವಾಗಿರುತ್ತದೆ. ಲಾಠಿಯನ್ನು ಎದೆಯ ಮಟ್ಟಕ್ಕೆ ಹಿಡಿದು ವೇಗವಾಗಿ ತಿರುಗಿಸುವುದು, ಹೊಡೆತವನ್ನು ತಪ್ಪಿಸಿಕೊಳ್ಳುತ್ತಾ ತಡೆಯುವುದು ನೋಡುಗನಿಗೆ ಖುಷಿ ತರಿಸುತ್ತದೆ.

ಶಿವಯ್ಯನವರ ಸಾಹಸ ಸಂಯೋಜನೆ ಇರುವ ಬಹುತೇಕ ಚಿತ್ರಗಳಲ್ಲಿ ದೊಣ್ಣೆ ಹಾಗೂ ಲಾಠಿಯ ಚಮತ್ಕಾರವನ್ನು ನಾವು ಕಾಣಬಹುದು. 'ರುದ್ರನಾಗ', 'ರಕ್ತ ತಿಲಕ' ಮುಂತಾದ ಚಿತ್ರಗಳಲ್ಲಿ ಶಿವಯ್ಯನವರು ಇದನ್ನು ಸಾಧಿಸಿದ್ದಾರೆ.

ಸಾಮಾನ್ಯವಾಗಿ ಕೆಲವು ಸಾಹಸ ದೃಶ್ಯಗಳನ್ನು ಅಳವಡಿಸಲೆಂದೇ ಸನ್ನಿವೇಶಗಳ ಸೃಷ್ಟಿಯಾಗಿರುತ್ತದೆ. ಉದಾಹರಣೆಗೆ ಊರಿಗೊಬ್ಬ ಬಲಶಾಲಿ ಬಂದು ಆ ಊರಿನ ಗಂಡಸರ ಸಾಮರ್ಥ್ಯಕ್ಕೆ ಸವಾಲು ಹಾಕುತ್ತಾನೆ. ಆಗ ಮುಗ್ಧನಂತಿರುವ ನಾಯಕ ಅಖಾಡಕ್ಕಿಳಿಯುವುದು ತನ್ನದೇ ಶೈಲಿಯಿಂದ ಆ ಬಲಶಾಲಿಯನ್ನು ಸೋಲಿಸುವುದು ಮಾಮೂಲಿ. ಪೆದ್ದನಂತಿರುವ ನಾಯಕನಿಗೆ ಬುದ್ಧಿ ಕಲಿಸಲೊ ಗೋಳು ಹೊಯ್ದುಕೊಳ್ಳಲೊ ಆತನನ್ನು ಅಖಾಡಕ್ಕಿಳಿಸುವುದು ಆರಂಭದಲ್ಲಿ ಆತ ಹೊಡೆತ ತಿಂದರೂ ನಂತರ ತನ್ನ ಮನೋ ಬಲದಿಂದಲೊ ಪ್ರೇಯಸಿಯ ಪ್ರೇರಣೆಯಿಂದಲೊ ಅಥವಾ ಊರಿನ ಗೌರವ ಕಾಪಾಡುವುದಕ್ಕಾಗಿಯೂ ಭಯಂಕರ ಹೋರಾಟ ನಡೆಸಿ ಎದುರಾಳಿಯನ್ನು ಮಣ್ಣು ಮುಕ್ಕಿಸುವ ಪ್ರಸಂಗಗಳು ನಡೆಯುತ್ತವೆ.

ಭಾರತದಲ್ಲಿ ಕುಸ್ತಿಪಟುಗಳ ಆರಾಧ್ಯದೈವವೆಂದರೆ ಹನುಮಂತ. ಚಿತ್ರಗಳಲ್ಲೂ ಇದನ್ನು ಸಾಕಷ್ಟು ರೀತಿಯಲ್ಲಿ ಬಳಸಿಕೊಂಡಿದ್ದಾರೆ. 'ಪ್ರಚಂಡ ಪುಟಾಣಿಗಳು' ಚಿತ್ರದಲ್ಲಿ ನಟ ರಾಮಕೃಷ್ಣ ಹೆಗಡೆ 'ಜೈ ಜೈ ಜೈ ಹನುಮಂತ' ಎಂದು ಹನುಮಂತನನ್ನು ಸ್ತುತಿಸುತ್ತ ಅಂಗಸಾಧನೆ ಮಾಡುವುದು ಇದಕ್ಕೊಂದು ಉದಾಹರಣೆ. ಇದಲ್ಲದೆ ಇನ್ನು ಕೆಲವು ಚಿತ್ರಗಳಲ್ಲಿ ನಾಯಕ ಹೋರಾಟಕ್ಕಿಳಿಯುವ ಮುನ್ನ 'ಜೈ ಆಂಜನೇಯನೆಂದೊ, ಜೈ ಮಾರುತಿ ಎಂದೋ ಸ್ತುತಿಸುವ ವಾಡಿಕೆಯಿದೆ.

ಕಾಲ ಮತ್ತು ವೇಗ ಕುಸ್ತಿಯಲ್ಲಿ ಬಹಳ ಮುಖ್ಯವಾದ ಅಂಶಗಳು. ಭಾರತದಲ್ಲಿ ಕೆಂಪು ಮಣ್ಣಿನ ಅಖಾಡದಲ್ಲಿ ಕುಸ್ತಿ ನಡೆಯುತ್ತದೆ. ಇದರಲ್ಲಿ ಭಾಗವಹಿಸುವವರು ಬಿಗಿಯಾದ ಕಾಚಾವನ್ನು ಧರಿಸುತ್ತಾರೆ. ಅದರ ಮೇಲೊಂದು ಹನುಮಾನ್ ಚಡ್ಡಿಯನ್ನು ಧರಿಸುತ್ತಾರೆ. ಇವೆರಡಕ್ಕೂ ವ್ಯತಿರಿಕ್ತವಾಗಿ ಚಲನಚಿತ್ರಗಳಲ್ಲಿ ಪ್ಯಾಂಟ್ ಧರಿಸಿ ಕುಸ್ತಿ ಮಾಡುವುದು, ಬನಿಯನ್ ಧರಿಸಿ ಕುಸ್ತಿ ಮಾಡುವುದು ಇರುತ್ತದೆ. ಅಪರೂಪಕ್ಕೆ ನೈಜ ಕುಸ್ತಿಯ ಅಳವಡಿಕೆ ಆಗಿದೆ. ಭಾರತದ ಕುಸ್ತಿ ಪಟ್ಟುಗಳಲ್ಲಿ ಭೀಮಸೇನಿ, ಹನುಮಂತಿ, ಜಾಂಬವಂತಿ, ಜರಾಸಂಧಿ ಎಂಬ ನಾಲ್ಕು ರೀತಿಯ ಪಟ್ಟುಗಳಿವೆ. ಚಲನಚಿತ್ರಗಳಲ್ಲಿ ಸಾಮಾನ್ಯವಾಗಿ ಭೀಮಸೇನಿ ಮತ್ತು ಹನುಮಂತಿ ಪಟ್ಟನ್ನು ಹೆಚ್ಚಾಗಿ ಬಳಸುತ್ತಾರೆ. ಉಕ್ಕಿನ ದೇಹದ ಮಾಂಸ ಖಂಡಗಳು, ಅಗಲವಾದ ಎದೆ, ನೀಳವಾದ ತೋಳು, ಉತ್ತಮ ದೇಹಾದಾರ್ಢ್ಯತೆ ಇದ್ದರೆ ಅವನನ್ನು ಜಟ್ಟಿ ಎನ್ನುತ್ತಾರೆ. ಕನ್ನಡ ಚಿತ್ರಗಳಲ್ಲಿ ಹೀಗೆ ಕಾಣುತ್ತಿದ್ದವರಲ್ಲಿ ಟೈಗರ್ ಪ್ರಭಾಕರ್, ಉದಯಕುಮಾರ್, ಎಂ.ಪಿ.ಶಂಕರ್ ಪ್ರಮುಖರು. ಇವರಿಗೆ ತಮ್ಮ ದೇಹದ ಗಾತ್ರಕ್ಕೆ ತಕ್ಕುದಾದ ಸಾಕಷ್ಟು ಪಾತ್ರಗಳೂ ದೊರೆತಿದ್ದವು. ರಾಜಕುಮಾರ್ 'ಭಲೇ ಬಸವ' ಮುಂತಾದ ಚಿತ್ರಗಳಲ್ಲಿ ಜಟ್ಟಿಯಂತೆ ಕಾಣಿಸಿಕೊಂಡಿದ್ದರು.

ಬಾಂಡ್ ಶೈಲಿಯ ಚಿತ್ರಗಳು

ಬಾಂಡ್ ಶೈಲಿ ಎಂದರೆ ಸಾಹಸದೊಂದಿಗೆ ಚಾಣಾಕ್ಷತನವೂ ಇರುವಂಥದ್ದು. ಜೇಮ್ಸ್ ಬಾಂಡ್ ಸರಣಿ ಚಿತ್ರಗಳ ಸ್ಫೂರ್ತಿ ಕ್ರಮೇಣ ಕನ್ನಡಕ್ಕೂ ಬಂತು. ದೊರೆ ಭಗವಾನ್ ಜೋಡಿ ನಿರ್ದೇಶನದ 'ಜೇಡರ ಬಲೆ' ಕನ್ನಡದಲ್ಲಿ ಪ್ರಥಮ ಬಾಂಡ್

ಚಿತ್ರ. ಭಾರತೀಯ ಶೈಲಿಯ ಎಲ್ಲಾ ಚಿತ್ರಗಳನ್ನು ನೋಡಿದ್ದ ಪ್ರೇಕ್ಷಕನಿಗೂ ಒಂದು ಬದಲಾವಣೆ ಬೇಕಿತ್ತು. ಆ ಸಮಯದಲ್ಲಿ ರಾಜಕುಮಾರ್ ಅಭಿನಯದ ಪಾಶ್ಚಾತ್ಯ ಶೈಲಿಯ 'ಜೇಡರ ಬಲೆ' ತೆರೆಕಂಡು ಜನಮೆಚ್ಚುಗೆ ಗಳಿಸಿತಲ್ಲದೆ ಮತ್ತಷ್ಟು ಇದೇ ಶೈಲಿಯ ಚಿತ್ರಗಳು ಬರಲು ಕಾರಣವಾಯಿತು.

ದಕ್ಷಿಣ ಭಾರತಕ್ಕೆ ಪ್ರಥಮವಾಗಿ ಬಾಂಡ್ ಚಿತ್ರಗಳನ್ನು ತಂದವರು ನಾವೇ ಎಂದು ಭಗವಾನ್ ಹೇಳುತ್ತಾರೆ. ರಾಜಕುಮಾರ್ ಈ ಚಿತ್ರದಲ್ಲಿ ಸೂಟು, ಬೂಟು, ಟೈ ಧರಿಸಿ ಜೇಮ್ಸ್ ಬಾಂಡ್ ಮಾದರಿಯಲ್ಲೇ ಕಾಣಿಸುತ್ತಿದ್ದರು. ಈ ಚಿತ್ರಗಳಲ್ಲಿ ಗನ್ ಉಪಯೋಗಿಸಿ ಎದುರಾಳಿಯನ್ನು ಎದುರಿಸುವುದು ಅಥವಾ ಭುಜಕ್ಕೆ ಕೈಯಿಂದ ಹೊಡೆದೊ, ಭುಜದ ನರಗಳನ್ನು ತಿರುಗಿಸಿಯೋ ಕೊಲ್ಲುವುದು ಅಥವಾ ಪ್ರಜ್ಞೆ ತಪ್ಪಿಸುವುದು ಇವರ ವಿಶೇಷ. ಸಾಮಾನ್ಯವಾಗಿ ಇಲ್ಲಿನ ಸಾಹಸ ಭಯಂಕರವೆನಿಸುವ ಶೈಲಿಯದಲ್ಲ. ಆದರೆ ಕುತೂಹಲವನ್ನಂತೂ ಉಂಟು ಮಾಡುತ್ತಿತ್ತು. ಇದರೊಂದಿಗೆ ವಿಶೇಷ ಎನಿಸುವ ಟೆಕ್ನಿಕ್‌ಗಳನ್ನು ಬಳಸುತ್ತಿದ್ದರು. ನಾಯಕನ ಬಳಿ ಇರುವ ವಿಶೇಷ ರೀತಿಯ ಕಾರು, ವಿಭಿನ್ನ ವಿನ್ಯಾಸದ ಕೋಣೆ, ಎಲ್ಲಕ್ಕೂ ರಿಮೋಟ್ ಅಥವಾ ಬಟನ್ ಬಳಸಿ ಉಪಯೋಗಿಸಲ್ಪಡುವ ರೀತಿ, ಮಂಚದಲ್ಲಿ ಮಲಗಿದ್ದ ಜಾಗಕ್ಕೆ ದೂರದಲ್ಲಿರುವ ಫೋನ್ ಹತ್ತಿರ ಬರುವಂತೆ ಮಾಡುವುದು, ಕಾರ್‌ನಿಂದ ಬುಲೆಟ್‌ಗಳು ಶೂಟ್ ಆಗುವುದು, ಇದ್ದಕ್ಕಿದ್ದಂತೆ ಕಾರು ತನ್ನ ರೂಪವನ್ನೇ ಬದಲಾಯಿಸಿ ಬಿಡುವುದು ಮುಂತಾದ ಗಿಮಿಕ್‌ಗಳನ್ನು ಉಪಯೋಗಿಸಲಾಗುತ್ತಿತ್ತು. ಇವೆಲ್ಲ ಪ್ರೇಕ್ಷಕನಿಗೆ ಹೊಸರೀತಿಯ ಮನೋರಂಜನೆ ನೀಡುವಲ್ಲಿ ಸಫಲವಾಗಿದ್ದವು.

ಬಹಳ ಹೊತ್ತು ನಾಯಕ, ಖಳನಾಯಕರ ಕಾರು-ಬೈಕುಗಳು ಒಂದನ್ನೊಂದು ಹಿಂಬಾಲಿಸಿ ವಿವಿಧ ಚಮತ್ಕಾರಗಳನ್ನು ತೋರುವುದರಲ್ಲಿಯೂ ವಿಶೇಷ ಎನಿಸುವಂಥ ಸಾಹಸವನ್ನು ಅಳವಡಿಸಲಾಗುತ್ತಿತ್ತು. ಸಾಮಾನ್ಯವಾಗಿ ಬಾಂಡ್ ಚಿತ್ರಗಳಲ್ಲಿ ವಿಜ್ಞಾನಿಯೊಬ್ಬ ಕಂಡು ಹಿಡಿದ ರಹಸ್ಯ ಸೂತ್ರವನ್ನು ಲಪಟಾಯಿಸುವ ಖಳನ ಯೋಜನೆಯನ್ನು ಬುಡಮೇಲು ಮಾಡುವುದು, ದೇಶದ ಭದ್ರತೆಯನ್ನು ರಹಸ್ಯವನ್ನು ಕದಿಯುವ ದೇಶದ್ರೋಹಿಗಳ ಹುನ್ನಾರವನ್ನು ಕಂಡುಹಿಡಿದು ಮಟ್ಟಹಾಕುವುದು ಮುಂತಾದ ಕತೆಗಳೇ ಇರುತ್ತಿದ್ದವು.

೧೯೬೭ರಲ್ಲಿ ರಾಜಾಶಂಕರ್ ನಟಿಸಿದ್ದ 'ಜಾಣರ ಜಾಣ' ಇದೇ ರೀತಿಯ ಕಥಾವಸ್ತು ಹೊಂದಿದ್ದರೂ ಬಾಂಡ್ ಮಾದರಿಯ ಸಾಹಸಗಳಾದ ಕಾರ್‌ಗಳನ್ನು ಉರುಳಿಸುವುದು, ಚೇಸ್ ದೃಶ್ಯಗಳು, ಪಿಸ್ತೂಲ್‌ಗಳ ಬಳಕೆ ಇವೆಲ್ಲವೂ ಇರಲಿಲ್ಲವಾದ ಕಾರಣ ಅದು ಯಶಸ್ವಿ ಚಿತ್ರವಾಗಲಿಲ್ಲ. ೧೯೬೮ರಲ್ಲಿ 'ಜೇಡರ ಬಲೆ' ಬಂದ ಮೇಲೆ ಆರ್.ಎನ್.ಜಯಗೋಪಾಲ್ ತಮ್ಮ ಪ್ರಥಮ ನಿರ್ದೇಶನದ ಚಿತ್ರವಾಗಿ 'ಧೂಮಕೇತು' ಚಿತ್ರವನ್ನು ತೆರೆಗೆ ತಂದರು. ನಂತರ ದೊರೆಭಗವಾನ್ ಮತ್ತೊಮ್ಮೆ ಇದೇ ಮಾದರಿಯ 'ಗೋವಾದಲ್ಲಿ ಸಿ.ಐ.ಡಿ ೯೯೯', 'ಆಪರೇಷನ್ ಜಾಕ್‌ಪಾಟ್‌ನಲ್ಲಿ ಸಿ.ಐ.ಡಿ ೯೯೯', ನಂತರ ವರ್ಣದಲ್ಲಿ 'ಆಪರೇಷನ್ ಡೈಮಂಡ್ ರಾಕೆಟ್' ಚಿತ್ರಗಳನ್ನು ನಿರ್ದೇಶಿಸಿ ಯಶಸ್ಸನ್ನು ಪಡೆದರು. ಆದರೆ 'ಆಪರೇಷನ್ ಡೈಮಂಡ್ ರಾಕೆಟ್' ನಂತರ ಬಂದ ಹಲವು ನಾಯಕರ ಬಾಂಡ್ ಚಿತ್ರಗಳು ನಿರೀಕ್ಷಿತ ಯಶಸ್ಸು ಗಳಿಸಲಿಲ್ಲ. ರಾಜಕುಮಾರ್ ಕೂಡಾ 'ಆಪರೇಷನ್ ಡೈಮಂಡ್ ರಾಕೆಟ್' ನಂತರ ಯಾವ ಬಾಂಡ್ ಶೈಲಿಯ ಚಿತ್ರಗಳಲ್ಲೂ ನಟಿಸಲಿಲ್ಲ.

ರಾಜಕುಮಾರ್ ಅವರು ಈ ಶೈಲಿಯ ಚಿತ್ರಗಳನ್ನು ಒಪ್ಪಿದ್ದೂ ತೀರಾ ಅನಿರೀಕ್ಷಿತವಾಗಿ. ಒಮ್ಮೆ ರಾಜಕುಮಾರ್ ಜೊತೆಗೆ ನಿರ್ದೇಶಕ ದೊರೆ ಹಾಗೂ ಭಗವಾನ್ ಅವರು 'ಮಿಸ್ಟರ್ ನೊ' ಎನ್ನುವ ಇಂಗ್ಲಿಷ್ ಬಾಂಡ್ ಚಿತ್ರವೊಂದನ್ನು ನೋಡಲು ಹೋಗಿದ್ದರೆಂದೂ ಚಿತ್ರ ನೋಡಿದ ದೊರೆ ಅವರು ರಾಜಕುಮಾರ್ ಅವರನ್ನು 'ನೀವ್ಯಾಕೆ ಬಾಂಡ್ ಚಿತ್ರದಲ್ಲಿ ಅಭಿನಯಿಸಬಾರದು?' ಎಂದು ಕೇಳಿದರೆಂದೂ 'ನೀವು ಮಾಡಬಹುದು ಅಂತ ಧೈರ್ಯ ಕೊಟ್ಟರೆ ಮಾಡೋಣ' ಎಂದು ರಾಜಕುಮಾರ್ ಹೇಳಿದರೆಂದೂ ಸಂದರ್ಶನಗಳಿಂದ ತಿಳಿದು ಬರುತ್ತದೆ. ಆಗ ದೊರೆ-ಭಗವಾನ್ ಇಯಾನ್ ಫ್ಲೇಮಿಂಗ್ ಬರೆದ ಮೂರು ಬಾಂಡ್ ಕಾದಂಬರಿಗಳನ್ನು ಓದಿ 'ಜೇಡರ ಬಲೆ'ಗ ಕತೆಯನ್ನು ಸಿದ್ಧ ಮಾಡಿ ಚಿತ್ರಿಸಿದರು.

ಹೀಗೆ ಚಿತ್ರರಂಗಕ್ಕೆ ಹೊಸ ರೀತಿಯ ಸಾಹಸಚಿತ್ರಗಳು ಬರಲಾರಂಭಿಸಿದವು. ಅಂಬರೀಷ್, ಅನಂತ್‌ನಾಗ್ ಮುಂತಾದ ನಾಯಕರೂ ಬಾಂಡ್ ಮಾದರಿಯ ಪಾತ್ರಗಳನ್ನು ಮಾಡಿ ಸೋಲು ಗೆಲುವು ಎರಡನ್ನು ಉಂಡಿದ್ದಾರೆ. ಕ.ವಿ.ಜಯರಾಮ್ ನಿರ್ದೇಶನದ ಚಿತ್ರ 'ವರ್ಣ ಚಕ್ರ' ಸೌಮ್ಯ ಪಾತ್ರಗಳಿಂದ ದಿಢೀರ್ ಬಾಂಡ್ ಪಾತ್ರ ಮಾಡಿದ ಅನಂತ್‌ನಾಗ್ ಅವರಿಗೆ ಒಪ್ಪಲಿಲ್ಲವಾದ್ದರಿಂದ ಚಿತ್ರ ಸೋತಿತು. ಜೋಸೈಮನ್ ನಿರ್ದೇಶನದ ಅಂಬರೀಷ್ ಅಭಿನಯದ 'ಹಾಂಗ್‌ಕಾಂಗ್‌ನಲ್ಲಿ ಏಜೆಂಟ್ ಅಮರ್' ಚಿತ್ರದಲ್ಲಿ ಉತ್ತಮ ಸಾಹಸವಿತ್ತು. ಇದು ಅಂಬರೀಷ್ ಅವರ ನೂರನೆಯ ಚಿತ್ರ. ಈ ಚಿತ್ರಕ್ಕೆ ಸಾಹಸ ನಿರ್ದೇಶನ ಮಾಡಿದವರು ಸಾಹುಲ್. ಈ ಚಿತ್ರದಲ್ಲಿ ಬಹುಮಹಡಿ ಕಟ್ಟಡವನ್ನು ಹಗ್ಗದ ಮುಖಾಂತರ ನಾಯಕ ಏರಬೇಕು. ಅಪಾಯಕಾರಿ ಎನಿಸುವ ಇಂಥ ಸಾಹಸದ ದೃಶ್ಯಗಳಲ್ಲಿ ನಾಯಕ ನಟ ಅಂಬರೀಷ್ ಗೆ ಡ್ಯೂಪ್ ಆಗಿದ್ದವರು ಸಾಹಸ ಕಲಾವಿದ ಬಾಷಾ.

೧೯೭೨ರಲ್ಲಿ ದ್ವಾರಕೀಶ್ ನಿರ್ಮಿಸಿ ನಟಿಸಿದ ಚಿತ್ರ 'ಕುಳ್ಳ ಏಜೆಂಟ್ ೦೦೦' ಚಿತ್ರದಲ್ಲಿ ಅತ್ಯುತ್ತಮ ಎನಿಸುವ ಸಾಹಸ ದೃಶ್ಯಗಳಿದ್ದವು. ಜ್ಯೋತಿಲಕ್ಷ್ಮಿಗೆ ಈ ಸಿನಿಮಾದ ಮೂಲಕ ಹೊಡೆದಾಟದ ಹುಡುಗಿಯ ಪಾತ್ರವನ್ನು ದ್ವಾರಕೀಶ್ ನೀಡಿದರು. ಆಕೆ ತುಂಬು ತೋಳಿನ ಅಂಗಿ, ಕೊಳವೆ ಪ್ಯಾಂಟ್ ಧರಿಸಿ ಫೈಟ್‌ಗಳಲ್ಲಿ ತಾವೇ ಭಾಗಿಯಾಗಿ ಮೆಚ್ಚುಗೆ ಗಳಿಸಿದರು. ಉದಯಕುಮಾರ್ ನಟಿಸಿದ್ದ 'ಮೃತ್ಯು ಪಂಜರದಲ್ಲಿ ಗೂಢಾಚಾರಿ ೫೫೫' ಚಿತ್ರವೂ ಇದೇ ಶೈಲಿಯದಾಗಿತ್ತು.

ಸಿ.ಐ.ಡಿ, ಸಿ.ಬಿ.ಐ ಚಿತ್ರಗಳು

ಒಂದೆಡೆ ಸಾಮಾಜಿಕ ಚಿತ್ರಗಳು, ಹೊಡೆದಾಟದ ಚಿತ್ರಗಳು ಹೆಚ್ಚಾಗುತ್ತ ಬಂದಂತೆ ನಮನಡುವೆ ಸಿ.ಬಿ.ಐ ಮತ್ತು ಸಿ.ಐ.ಡಿ ಚಿತ್ರಗಳು ರಹಸ್ಯವನ್ನು ಭೇದಿಸುವ ಕತೆಯನ್ನು ಹೊಂದಿಕೊಂಡು ಬಂದವು. ಸಾಮಾನ್ಯವಾಗಿ ಕೊಲೆಯ ಸುತ್ತ ಸುತ್ತುವ ಕತೆಯಲ್ಲಿ ಯಾರ್‍ಯಾರ ಮೇಲೆಯೋ ಅನುಮಾನ ಬರುವಂತೆ ಚಿತ್ರಿಸಿ ಕೊನೆಗೆ ಅದುವರೆಗೆ ಅನುಮಾನವೇ ಬಾರದಿರುವ ಒಬ್ಬ ವ್ಯಕ್ತಿಯನ್ನು ತಪ್ಪಿತಸ್ಥನೆಂದು ಸಾಬೀತು ಪಡಿಸುವುದು ನಡೆಯುತ್ತದೆ. ಕುತೂಹಲ, ರೋಮಾಂಚನ ಈ ಚಿತ್ರಗಳಲ್ಲಿ ರುತ್ತಿದ್ದುದರಿಂದ ಜನರಿಗೂ ಇಂಥ ಚಿತ್ರಗಳು ಇಷ್ಟವಾಗುತ್ತಿದ್ದವು.

ರಾಜಕುಮಾರ್ ಅಭಿನಯದ 'ಚೂರಿ ಚಿಕ್ಕಣ್ಣ', 'ಭಲೇ ಹುಚ್ಚ', 'ಸಿ.ಐ.ಡಿ ರಾಜಣ್ಣ' ಮುಂತಾದ ಚಿತ್ರಗಳು ಈ ರೀತಿಯವು. ಉದಯಶಂಕರ್ ನಟಿಸಿದ್ದ 'ಭಲೇ ಭಾಸ್ಕರ್', ದ್ವಾರಕೀಶ್ ಅಭಿನಯದ 'ಸಿಂಗಾಪೂರದ ರಾಜಾ ಕುಳ್ಳ' ಮುಂತಾದವನ್ನು ಇಲ್ಲಿ ಹೆಸರಿಸಬಹುದು.

ಈ ಚಿತ್ರಗಳಲ್ಲಿ ಸಸ್ಪೆನ್ಸೇ ಮುಖ್ಯ ಉದ್ದೇಶವಾಗಿ ಇರುತ್ತಿದ್ದುದರಿಂದ ಮಾಮೂಲಿ ಹೊಡೆದಾಟಗಳೇ ಇರುತ್ತಿದ್ದವು. ಹೆಚ್ಚಿನ ಸಾಹಸದ ಅವಶ್ಯಕತೆ ಇರಲಿಲ್ಲ. ಶಂಕರ್‌ನಾಗ್ ಅಭಿನಯದ 'ಸಿ.ಬಿ.ಐ.ಶಂಕರ್' ಚಿತ್ರದಲ್ಲಿ ನಾಯಕ ಮತ್ತು ಸಂಗಡಿಗರು ಷೂಟಿಂಗ್ ಮಾಡುವ ತಂಡದ ವೇಷದಲ್ಲಿ ಒಂದು ಕೊಲೆಯ ರಹಸ್ಯವನ್ನು ಬಯಲು ಮಾಡುವುದು ಕುತೂಹಲದೊಂದಿಗೆ ಮನರಂಜನೆಯನ್ನೂ ಒಳಗೊಂಡಿದೆ. ಈ ಚಿತ್ರದಲ್ಲಿ ದೇವರಾಜ್ ಖಳನಾಯಕನ ಪಾತ್ರ ನಿರ್ವಹಿಸಿದ್ದರು. ಆ ಪಾತ್ರ ಯೋಗಾಸನದಲ್ಲಿ ತರಬೇತಿ ಹೊಂದಿದ್ದು ಪ್ರಾಣಾಯಾಮ ಬಳಸಿ, ಪ್ರವೀಣನಾಗಿರುತ್ತದೆ. ಹಾಗಾಗಿ ಚಾಕುವಿನಿಂದ ಇರಿದರೂ ಸಾಯದೇ ಬದುಕುಳಿದು ಕತೆಯ ತಿರುವಿಗೆ ಕಾರಣವಾಗುತ್ತದೆ.

ಸಸ್ಪೆನ್ಸ್ ಚಿತ್ರಗಳು ಎಂದಾಗ 'ಅಪರಿಚಿತ', 'ತರ್ಕ', 'ಶ್!', 'ಅಗ್ನಿ ಸಾಕ್ಷಿ' ಮುಂತಾದ ಚಿತ್ರಗಳು ನೆನಪಾಗುತ್ತವೆ. ಕಾಶೀನಾಥ್ ನಿರ್ದೇಶನದ 'ಅಪರಿಚಿತ' ಚಿತ್ರದಲ್ಲಿ ಸಾಹಸ ಎನ್ನುವುದು ಏನೂ ಇಲ್ಲವಾದರೂ ಸಸ್ಪೆನ್ಸ್‌ನಿಂದಲೇ ಜನಪ್ರಿಯವಾಯಿತು. ಅಂತಯೇ ಸುನಿಲ್ ಕುಮಾರ್ ದೇಸಾಯಿ ಯವರ 'ತರ್ಕ' ಚಿತ್ರವೂ ಕೂಡ. ಆದರೆ ಉಪೇಂದ್ರ ನಿರ್ದೇಶನದ 'ಶ್!' ಸಸ್ಪೆನ್ಸ್ ಜೊತೆಗೆ ಉತ್ತಮ ಸಾಹಸವನ್ನು ಒಳಗೊಂಡಿತ್ತು. ಥ್ರಿಲ್ಲರ್ ಮಂಜು ರೋಚಕವೆನಿಸುವ ಸಾಹಸ ಸಂಯೋಜನೆ ಮಾಡಿದ್ದರು. ಈ ಚಿತ್ರದಲ್ಲಿ ಕುಮಾರ್ ಗೋವಿಂದ್ ಹಾಗೂ ಥ್ರಿಲ್ಲರ್ ಮಂಜು ನಡುವೆ ನಡೆಯುವ ಹೊಡೆದಾಟ ವಿಶಿಷ್ಟವಾಗಿತ್ತು. 'ಸ್ಲೋ ಮೋಷನ್'ನಲ್ಲಿ ಚಿತ್ರೀಕರಿಸಿದ್ದು ಈ ಸಾಹಸ ದೃಶ್ಯ ಅದ್ಭುತವೆನಿಸಲು ಇನ್ನಷ್ಟು ಸಹಕಾರಿಯಾಗಿತ್ತು.

ಮುಷ್ಟಿಯುದ್ಧ/ಬಾಕ್ಸಿಂಗ್

ಕ್ರಿ.ಪೂ.೩೦೦೦ರಲ್ಲೇ ಮುಷ್ಟಿಯುದ್ಧ ಈಜಿಪ್ಟ್ ದೇಶದಲ್ಲಿ ಪ್ರಚಾರದಲ್ಲಿತ್ತು. ಪ್ರಾಚೀನ ಗ್ರೀಸ್‌ನಲ್ಲಿ ಇದರಷ್ಟು ಜನಪ್ರಿಯವಾದ ಕ್ರೀಡೆ ಮತ್ತೊಂದಿರಲಿಲ್ಲ. ಇದೊಂದು ಅಂತರರಾಷ್ಟ್ರೀಯ ಪಂದ್ಯವಾಗಿ ನೀತಿ ನಿಯಮಗಳೊಂದಿಗೆ ಪ್ರಖ್ಯಾತವಾಯಿತು. ಮಹಮ್ಮದ್ ಆಲಿ, ಜೋಡ ಫ್ರೋಜಿಯರ್, ಮೈಕ್‌ಟೈಸನ್ ಪ್ರಖ್ಯಾತ ಬಾಕ್ಸಿಂಗ್ ಪಟುಗಳು. ಈ ಕಲೆ ನಿಧಾನವಾಗಿ ಚಲನಚಿತ್ರ ಗಳಲ್ಲೂ ಬಳಕೆಯಾಗತೊಡಗಿತು. ರಾಜಕುಮಾರ್ 'ತಾಯಿಗೆ ತಕ್ಕ ಮಗ' ಚಿತ್ರದಲ್ಲಿಯೂ ಟೈಗರ್

ಪ್ರಭಾಕರ್, ಶಂಕರ್‌ನಾಗ್ ಅಭಿನಯದ ಕೆಲವು ಚಿತ್ರಗಳಲ್ಲಿಯೂ ಈ ಕಲೆಯನ್ನು ಅಳವಡಿಸಿಕೊಂಡಿದ್ದಾರೆ.

ಮುಷ್ಟಿಯುದ್ಧ ಅಥವಾ ಬಾಕ್ಸಿಂಗ್ ಮಾಡುವ ಕಣಕ್ಕೆ ರಿಂಗ್ ಎಂದು ಹೆಸರು. ಬಿದ್ದರೂ ಹೆಚ್ಚು ಗಾಯ, ನೋವುಗಳಾಗದಿರಲೆಂದು ನೆಲವನ್ನು ನಯವಾಗಿಟ್ಟಿರುತ್ತಾರೆ. ಚೌಕಾಕಾರದಲ್ಲಿ ೧೬-೨೦ ಅಡಿಗಳಷ್ಟು ಸ್ಥಳದ ಸುತ್ತ ಹಗ್ಗವನ್ನು ಬಿಗಿಯಾಗಿ ಎಳೆದು ಕಟ್ಟುತ್ತಾರೆ. ಆ ಚೌಕದೊಳಗೆ ಇಬ್ಬರು ಪರಸ್ಪರ ಕಾದಾಡಬೇಕು. ಕೈಯಲ್ಲಿ ತೊಡುವ ಗವಸುಗಳು ಮೃದುವಾದ ಸ್ಪಂಜನ್ನು ಒಳಗೊಂಡಿದ್ದು ತುಂಬಾ ತೀವ್ರ ತೆರನಾದ ಪೆಟ್ಟಾಗುವುದನ್ನು ತಡೆಯುತ್ತವೆ.

ಬಾಕ್ಸಿಂಗ್ ಕ್ರೀಡೆಯಲ್ಲಿ ನಿಯಮಗಳಿದ್ದರೂ ಚಲನಚಿತ್ರಗಳಲ್ಲಿ ಖಳನಾಯಕನ ಕಡೆಯವರು ಗೆಲ್ಲಬೇಕೆಂದು ನಾಯಕನ ತಂಗಿಯನ್ನೋ, ತಾಯಿಯನ್ನೋ ಅಪಹರಿಸಿ ಆತನನ್ನು ಅಸಹಾಯಕನನ್ನಾಗಿ ಮಾಡುತ್ತಾರೆ. ನಾಯಕ ಶಕ್ತಿಯಿದ್ದರೂ ಈ ಕಾರಣಕ್ಕಾಗಿ ಹೊಡೆತ ತಿನ್ನುತ್ತಿರುತ್ತಾನೆ. ಇಂಥ ಅನೇಕ ಕಾರಣಗಳಿಗಾಗಿ ನಾಯಕ ಮೊದಲು ಪೆಟ್ಟು ತಿಂದು ಆವೇಶದಿಂದ ನಂತರ ಖಳನನ್ನು ಸಂಹಾರ ಮಾಡುವ ಸಾಹಸವನ್ನು ಜನರು ಆನಂದಿಸುತ್ತಾರೆ. ಇಂಥ ಸಂದರ್ಭದಲ್ಲಿ ಕ್ಯಾಮೆರಾಮನ್ ಚಾಕಚಕ್ಯತೆ ಅಗತ್ಯ. ಅವರ ಕೋನ, ಟೇಕಿಂಗ್ ಹಾಗೂ ವೇಗಗಳು ನೋಡುವವರಿಗೆ ಭಾರೀ ಹೊಡೆತ ಬಿದ್ದಂತೆ ಭಾಸವಾಗುವಂತೆ ಚಿತ್ರಿಸಬೇಕು.

ಚಲನಚಿತ್ರಗಳಲ್ಲಿ ಪ್ರಾಣಿಗಳ ಸಾಹಸ

ಬಹಳ ಹಿಂದಿನಿಂದಲೂ ಚಲನಚಿತ್ರಗಳಲ್ಲಿ ಕುದುರೆಗಳಷ್ಟೇ ಅಲ್ಲದೆ ನಾಯಿ, ಹಾವು, ಕೋತಿ, ಆನೆ, ಹುಲಿ , ಮೊಸಳೆ, ಚಿರತೆ ಮುಂತಾದ ಪ್ರಾಣಿಗಳು ಮತ್ತು ಕೆಲ ಪಕ್ಷಿಗಳೂ ಬಳಕೆಯಾಗಿವೆ. ಪುರಾಣದ ಕತೆಗಳಲ್ಲೂ ಕೆಲವು ಪ್ರಾಣಿ ಪಕ್ಷಿಗಳು ಪಾತ್ರ ವಹಿಸಿದ ಉದಾಹರಣೆಗಳು ಸಾಕಷ್ಟಿವೆ. ಇವರಲ್ಲಿ ಹಾವನ್ನೇ ಕೇಂದ್ರವಾಗಿರಿಸಿ ತೆಗೆದ ಚಿತ್ರಗಳು ಭಾರತದಲ್ಲಷ್ಟೇ ಅಲ್ಲದೆ ವಿದೇಶದಲ್ಲೂ ಅಪಾರ. ಇಂಥ ಚಿತ್ರಗಳು ಬಹುತೇಕ ಯಶಸ್ವಿಯಾಗಿವೆ. ಕನ್ನಡ ಚಿತ್ರಗಳೊಂದಕ್ಕೆ ಹೊರತಲ್ಲ. ಪಾಶ್ಚಾತ್ಯರ 'ಸ್ನೇಕ್‌ವುಮನ್', 'ಕೋಬ್ರಾ', 'ಕಿಂಗ್ ಕೋಬ್ರಾ', 'ಅನಕೊಂಡ' ಮೊದಲಾದ ಚಿತ್ರಗಳನ್ನು ಹೆಸರಿಸಬಹುದು. ಹಾವನ್ನು ನಮ್ಮಲ್ಲಿ ದೇವರೆಂದು ಪೂಜಿಸುವುದು ಕೂಡಾ ಯಶಸ್ಸಿಗೆ ಕಾರಣವಾಗುವ ಮತ್ತೊಂದು ಅಂಶ. ಚಿತ್ರಗಳಿಗಾಗಿ ಹಲ್ಲುಕಿತ್ತ ಹಾವುಗಳನ್ನು ಪಳಗಿಸುವವರದೇ ಒಂದು ವಿಭಾಗವಿದೆ.

೧೯೪೯ರ 'ನಾಗಕನ್ನಿಕಾ' ಚಿತ್ರದಿಂದಲೂ ಪ್ರಧಾನವಾಗಿ ನಾಗರ ಹಾವಿನ ಮಹಿಮೆ ಮತ್ತು ಪವಾಡಗಳನ್ನು ತೋರುತ್ತಾ ಬಂದಿದ್ದಾರೆ. ಹೆಣ್ಣುಬಿಳು ಬೆಳದಿಂಗಳ ರಾತ್ರಿಯಲ್ಲಿ ಹಾವಾಗಿ ಬಿಬ್ಬೊಬ್ಬರನ್ನೇ ಕೊಲ್ಲುವುದು, ಶಾಪಗ್ರಸ್ತರಾದವರು ಆಗಾಗ ಹಾವಾಗಿ ಬಿಡುವುದು, ಹಾವುಗಳು ಜೊತೆಗೂಡಿದಾಗ ಗಂಡು ಹಾವನ್ನು ಕೊಂದವರನ್ನು ಹೆಣ್ಣು ಹಾವು ಸಾಯಿಸಿ ಸೇಡು ತೀರಿಸಿಕೊಳ್ಳುವುದು, ನಾಗರಹಾವು ತನ್ನ ಭಕ್ತೆಯನ್ನು ಪವಾಡ ಸದೃಶ್ಯವಾಗಿ ಕಾಪಾಡುವುದು... ಇಂಥ ಅನೇಕ ಅಂಶಗಳು ಹಾವಿನ ಚಿತ್ರದಲ್ಲಿ ಇರುತ್ತವೆ. ಇಂಥ ಪವಾಡಗಳು ನಾಗಕನ್ನಿಕಾ, ಪೂಜಾಫಲ ಚಿತ್ರಗಳಿಂದ ಹಿಡಿದು ಗರುಡರೇಖೆ, ನಾಗಮಂಡಲ, ನಾಗದೇವತೆ ಚಿತ್ರಗಳವರೆಗೂ ಬೆಳೆದು ಬಂದಿದೆ.

ಆಬಾಲವೃದ್ಧರಾದಿಯಾಗಿ ಎಲ್ಲರಿಗೂ ಹಾವಿನ ಕತೆ, ಹಾವಿನ ಸಾಹಸಗಳು ಮೆಚ್ಚುಗೆಯಾಗುತ್ತವೆ. ನಾಗರ ಹಾವಲ್ಲದೆ ಹೆಬ್ಬಾವೂ ಕೂಡ ಅನೇಕ ಚಲನಚಿತ್ರಗಳಲ್ಲಿ ಪರಿಣಾಮಕಾರಿಯಾಗಿ ಕಾಣಿಸಿಕೊಂಡಿದೆ. ರಾಜೇಂದ್ರಸಿಂಗ್‌ಬಾಬು ನಿರ್ದೇಶನದ 'ನಾಗರಹೊಳೆ', ಪ್ರಭಾಕರ್ ಅಭಿನಯದ 'ಕಾಡಿನ ರಾಜ' ಚಿತ್ರಗಳು ಇದಕ್ಕೆ ಉದಾಹರಣೆ. ಹೆಬ್ಬಾವಿನ ಬಳಕೆ ಅಂದರೆ ಸಾಮಾನ್ಯವಾಗಿ ಅದು ಕಾಡಿನಲ್ಲಿ ಸಂಚರಿಸುವಾಗ ದಿಢೀರನೆ ಸುತ್ತಿಕೊಳ್ಳುವುದು ಮತ್ತು ಅದರ ಅಪಾಯಕಾರಿ ಹಿಡಿತದಿಂದ ಬಿಡಿಸಿಕೊಳ್ಳಲು ವಿಶಿಷ್ಟ ಸಾಹಸಗಳನ್ನು ಮಾಡುವುದು ಕಂಡು ಬರುತ್ತದೆ.

ಇದರ ಹೊರತಾಗಿ ಚಲನಚಿತ್ರಗಳಲ್ಲಿ ಪ್ರಮುಖ ಪಾತ್ರವಹಿಸುವ ಪ್ರಾಣಿಯೆಂದರೆ ನಾಯಿ. ಇಂಗ್ಲಿಷ್ ಚಿತ್ರಗಳಲ್ಲಿ ನಾಯಿಯೇ ನಾಯಕನಾಗುವುದೂ ಉಂಟು. 'ಬಿತೋವೆನ್'ನಂಥ ಕೆಲವು ಚಿತ್ರಗಳನ್ನು ಉದಾಹರಿಸಬಹುದು. ಕನ್ನಡದಲ್ಲಿಯೂ ನಾಯಿಗಳ ಬಳಕೆ ಸಾಕಷ್ಟಾಗಿದೆ. ನಾಯಿ ನಿಷ್ಠೆಗೆ ಮಾತ್ರವಲ್ಲದೆ ಸಾಹಸಕ್ಕೂ ಹೆಸರು ಮಾಡಿದ ಪ್ರಾಣಿ. ಸಿನಿಮಾಗಳಲ್ಲಿ ಇವು ಖಳರನ್ನು ಹುಡುಕಲು ನೆರವಾಗುವುದು, ಅವರನ್ನು ಅಟ್ಟಿಸಿಕೊಂಡು ಹೋಗುವುದು, ಕಾವಲು ಕಾಯುವುದು, ಮಕ್ಕಳನ್ನು ಅಪಾಯದಿಂದ ಪಾರು ಮಾಡಲು ನಾಯಕನಿಗೆ ನೆರವಾಗುವುದಷ್ಟೇ ಅಲ್ಲದೆ ಖಳರೂ ಕೂಡಾ ತಮ್ಮ ಕಾರ್ಯ ಸಾಧನೆಗಾಗಿ ನಾಯಿಗಳನ್ನು ಬಳಸಿಕೊಳ್ಳುವುದಿದೆ.

'ಜಿಮ್ಮಿಗಲ್ಲು', 'ಜೋಡಿ ಜೀವ', 'ಪ್ರಚಂಡ ಪುಟಾಣಿಗಳು' ಚಿತ್ರಗಳಲ್ಲದೆ ಬೇಬಿ ಶ್ಯಾಮಿಲಿ ನಟಿಸಿದ ಭೈರವಿ, ಶಾಂಭವಿ ಮುಂತಾದ ಸರಣಿ ಚಿತ್ರಗಳಲ್ಲಿ ನಾಯಿ, ಹಾವು, ಕೋತಿ, ಗೂಳಿಗಳ ಸಾಹಸವೇ ಪ್ರಧಾನವಾಗಿದ್ದವು. ಸಾಮಾನ್ಯವಾಗಿ ಮಕ್ಕಳನ್ನು ಆಕರ್ಷಿಸಲು ಪ್ರಾಣಿಗಳ ಪಾತ್ರ ಮುಖ್ಯವಾಗುತ್ತದೆ. ಅಬ್ಬಾಯಿ ನಾಯ್ಡು ನಿರ್ಮಿಸಿದ 'ತಾಳಿಯಭಾಗ್ಯ' ಚಿತ್ರದಲ್ಲಿ ನಾಯಿಯ ಸಾಹಸವೇ ಪ್ರಮುಖ ಅಂಶ. ಚಿತ್ರದ ನಾಯಕ ಖಳರಿಂದ ಹತರಾದಾಗ ನಾಯಿಯೇ ಅವರನ್ನೆಲ್ಲಾ ಒಬ್ಬೊಬ್ಬರನ್ನಾಗಿ ಕೊಂದು ಸೇಡು ತೀರಿಸಿಕೊಳ್ಳುತ್ತದೆ. ಈ ಚಿತ್ರ ಶತದಿನೋತ್ಸವ ಆಚರಿಸಿದಾಗ ನಿರ್ಮಾಪಕ ಅಬ್ಬಾಯಿ ನಾಯ್ಡು 'ನಾಯಿಯೇ ನನ್ನ ಚಿತ್ರದ ನಾಯಕ' ಎಂದು ಹೇಳಿಕೊಂಡಿದ್ದರು.

'ಶಂಕರ್ ಗುರು', 'ಹುಲಿಯ ಹಾಲಿನ ಮೇವು' ಚಿತ್ರಗಳಲ್ಲಿ ವೈ.ಶಿವಯ್ಯನವರ ಸಾಹಸ ನಿರ್ದೇಶನದಲ್ಲಿ ರಾಜಕುಮಾರ್ ಹುಲಿಯೊಡನೆ ಹೋರಾಡುವುದನ್ನೂ, 'ಗಂಧದ ಗುಡಿ' ಚಿತ್ರದಲ್ಲಿ ಸಿಂಹದೊಡನೆ ಹೋರಾಡುವುದನ್ನೂ ಸಮರ್ಥವಾಗಿ ಚಿತ್ರಿಸಲಾಗಿದೆ. ಇದೇ ರೀತಿ 'ಭರ್ಜರಿ ಬೇಟೆ' ಚಿತ್ರದಲ್ಲಿ ಶಂಕರ್‌ನಾಗ್, 'ಮನಮೆಚ್ಚಿದ ಹುಡುಗಿ' ಚಿತ್ರದಲ್ಲಿ ಶಿವರಾಜಕುಮಾರ್ ಚಿರತೆಯೊಡನೆ ಕಾದಾಡುವುದು, 'ಹುಲಿಹೆಜ್ಜೆ' ಚಿತ್ರದಲ್ಲಿ ಪ್ರಭಾಕರ್ ಹುಲಿಯೊಡನೆ ಸೆಣಸಾಡುವುದು ಪ್ರಾಣಿಗಳೊಂದಿಗೆ ಸಾಹಸ ದೃಶ್ಯಗಳನ್ನು ರೋಚಕವೆನಿಸುವ ರೀತಿಯಲ್ಲಿ ಸಂಯೋಜಿಸಿದ್ದಕ್ಕೆ ಕೆಲವು ಉದಾಹರಣೆಗಳು.

'ನಾಗ ಕಾಳ ಭೈರವ' ಚಿತ್ರದ ಹೆಸರಿಗನುಗುಣವಾಗಿ ಹಾವು, ಗೂಳಿ ಮತ್ತು ನಾಯಿಗಳ ಸಾಹಸವಿದೆ. 'ಶಪಥ' ಚಿತ್ರದಲ್ಲೂ ಹಾವು ಸೇರಿದಂತೆ ಅನೇಕ ಪ್ರಾಣಿಗಳ ಬಳಕೆಯಾಗಿದೆ. 'ಜಿದ್ದು' ಚಿತ್ರದಲ್ಲಿ ರೋಷ, ಶಕ್ತಿಗಳೆ ಇಲ್ಲದಂತಿದ್ದ ನಾಯಕ ಪ್ರಭಾಕರ್ ಅವರನ್ನು ಸುದರ್ಶನ್ ಕ್ರೂರ ಮೃಗಗಳೊಡನೆ ಬಿಟ್ಟು, ಅವುಗಳ ಹಾಗೇ ನಡೆದುಕೊಳ್ಳುವಂತೆ ತರಬೇತಿ ಕೊಡುತ್ತಾರೆ. ಈ ಚಿತ್ರದಲ್ಲೂ ಸಿಂಹ, ಚಿರತೆ, ಹಾವು ಮುಂತಾದ ಪ್ರಾಣಿಗಳ ದಂಡು ದಂಡೇ ಬಳಕೆಯಾಗಿದೆ.

ಕಾಡಿನ ಜೀವನವನ್ನೇ ಬಹುತೇಕ ಆಧಾರವಾಗಿರಿಸಿ ತೆಗೆದ ವನ್ಯಪ್ರಾಣಿಪ್ರಿಯ ಎಂ.ಪಿ.ಶಂಕರ್ ನಿರ್ಮಾಣದ ಚಿತ್ರಗಳಾದ 'ಕಾಡಿನ ರಹಸ್ಯ', 'ಗಂಧದ ಗುಡಿ', 'ಕಾಡಿನ ರಾಜ', 'ಮೃಗಾಲಯ', 'ರಾಮಲಕ್ಷ್ಮಣ', 'ಆಫ್ರಿಕಾದಲ್ಲಿ ಶೀಲಾ', 'ಜಯಸಿಂಹ', 'ಕಾಡಿನಲ್ಲಿ ಜಾತ್ರೆ', 'ಬೆಳ್ಳಿನಾಗ' ಚಿತ್ರಗಳಲ್ಲಿ ಪ್ರಾಣಿಗಳ ಬಳಕೆ ಹಾಗೂ ಅವುಗಳ ಸಾಹಸ ಹೇರಳವಾಗಿದೆ. 'ರಾಮಲಕ್ಷ್ಮಣ' ಚಿತ್ರದಲ್ಲಿ ಕುರುಡು ಹುಡುಗನಿಗೆ ಹುಲಿಮರಿಯೊಂದು ಸಿಕ್ಕುತ್ತದೆ. ಆತನೊಡನೆ ಹಾಗೂ ಇತರರೊಡನೆ ಕಾಡು ಪ್ರಾಣಿಯ ಬಾಂಧವ್ಯವನ್ನು ಇದರಲ್ಲಿ ಸೊಗಸಾಗಿ ಚಿತ್ರಿಸಲಾಗಿತ್ತು. ಇದೇ ರೀತಿ 'ಕಾಡಿನರಾಜ' ಚಿತ್ರದಲ್ಲೂ ಚಿಕ್ಕ ವಯಸ್ಸಿನಲ್ಲೇ ಕಾಡಿನಲ್ಲಿ ತಪ್ಪಿಸಿಕೊಂಡ ಹುಡುಗ ಪ್ರಾಣಿಗಳ ಜೊತೆಯೇ ಬೆಳೆದು ದೊಡ್ಡವನಾಗುವ ಕತೆಯಿದೆ. ಕಾಡಿನ ಪ್ರಾಣಿಗಳ ಜೊತೆ ಸ್ನೇಹ ಗಳಿಸಿಕೊಂಡು ಅವುಗಳೊಡನೆ ಒಬ್ಬನಾಗಿರುವಂತೆ ಚಿತ್ರದಲ್ಲಿ ನಿರೂಪಿಸುವ ಕೆಲಸ ಸಾಹಸ ನಿರ್ದೇಶಕರಿಗೆ ಸವಾಲೊಡ್ಡುವಂಥಾದ್ದು. ಈ ಸವಾಲನ್ನು ಸಾಹಸ ನಿರ್ದೇಶಕರಾದ ಸಾಹುಲ್ ಹಾಗೂ ಬಾಬಾ ಸಮರ್ಥವಾಗಿ ನಿಭಾಯಿಸಿದ್ದರು. 'ಮೃಗಾಲಯ' ಚಿತ್ರದಲ್ಲಿ ಪ್ರಾಣಿ ಸಂಗ್ರಹಾಲಯದಿಂದ ಮೃಗಗಳೆಲ್ಲ ಖಳರ ಸಂಚಿನಿಂದ ನಗರದೊಳಕ್ಕೆ ನುಗ್ಗಿದಾಗ ಕೋಲಾಹಲ ಉಂಟಾಗುತ್ತದೆ. ಇವುಗಳನ್ನೆಲ್ಲ ಮತ್ತೆ ಬಲೆಹಾಕಿ ಹಿಡಿಯುವುದು, ಗನ್ ಮೂಲಕ ಅ ಮತ್ತಿನ ಇಂಜೆಕ್ಷನ್ ಹಾರಿಸಿ ಪ್ರಜ್ಞೆ ತಪ್ಪಿಸಿ ಚೆದುರಿದ ಪ್ರಾಣಿಗಳನ್ನೆಲ್ಲ ಮತ್ತೆ ಹಿಡಿಯುವ ಸಾಹಸವೇ ಚಿತ್ರದ ಪ್ರಧಾನ ಅಂಶ. ಇಂತಹ ಕ್ಲಿಷ್ಟವಾದ ಸಾಹಸವನ್ನು ಸರಾಗವಾಗಿ ಸಂಯೋಜಿಸಿದವರು ಸಾಹಸ ನಿರ್ದೇಶಕ ಬಾಬು.

'ಆಫ್ರಿಕಾದಲ್ಲಿ ಶೀಲ' ಚಿತ್ರವನ್ನು ದ್ವಾರಕೀಶ್ ಆಫ್ರಿಕಾದ ಕಾಡಿಗೇ ಹೋಗಿ ಚಿತ್ರೀಕರಣವನ್ನು ಮಾಡಿದ್ದರು. ಅಲ್ಲಿಯೂ ಕರಡಿ, ಗೊರಿಲ್ಲಾ, ಚಿರತೆಗಳನ್ನು ಸಮರ್ಥವಾಗಿ ಬಳಸಿಕೊಂಡಿದರು. ಹೀಗೆ ಕ್ರೂರ ಪ್ರಾಣಿಗಳನ್ನು ಚಿತ್ರಗಳಲ್ಲಿ ಕತೆಗೆ ಬೇಕಾಗುವಂತೆ ಬಳಸಿಕೊಳ್ಳುವುದು ಸುಲಭದ ಮಾತಲ್ಲ. ತುಂಬಾ ಎಚ್ಚರಿಕೆ ಬೇಕು. ಪ್ರಾಣಿಗಳನ್ನು ನಿಯಂತ್ರಣದಲ್ಲಿಡುವ ರಿಂಗ್ ಮಾಸ್ಟರ್ ಮತ್ತು ಸಾಹಸ ನಿರ್ದೇಶಕರ ನಡುವೆ ಹೊಂದಾಣಿಕೆ ಮತ್ತು ಟೈಮಿಂಗ್ ಅತಿ ಮುಖ್ಯವಾದ ಅಂಶಗಳು. ಅದರಲ್ಲೂ ಮಕ್ಕಳೊಡನೆ ಪ್ರಾಣಿಗಳನ್ನು ಬಳಸುವಾಗ ಕಣ್ಣಲ್ಲಿ ಕಣ್ಣಿಟ್ಟು ಅಪಾಯ ಆಗದಂತೆ ಎಚ್ಚರವಹಿಸಬೇಕಾಗುತ್ತದೆ.

ಇನ್ನು ಶಕ್ತಿ ಶಾಲಿಯಾದ ಗೂಳಿಯೊಡನೆ ಹೋರಾಡುವ ದೃಶ್ಯಗಳೂ ಸಾಕಷ್ಟು ಚಿತ್ರಗಳಲ್ಲಿ ಬಂದಿವೆ. ಚಲನಚಿತ್ರಗಳಲ್ಲಿ ಸಾಮಾನ್ಯವಾಗಿ ಗೂಳಿ ಕೆಂಪು ವಸ್ತ್ರ ಧರಿಸಿದವರನ್ನು ಅಟ್ಟಿಸಿಕೊಂಡು ಹೋಗುತ್ತದೆ. 'ಬಂಗಾರದ ಮನುಷ್ಯ' ಚಿತ್ರದಲ್ಲಿ

ಕೆಂಪು ಸೀರೆಯುಟ್ಟ ಭಾರತಿಯನ್ನು ಗೂಳಿ ಅಟ್ಟಿಸಿಕೊಂಡು ಬಂದಾಗ ನಾಯಕ ರಾಜಕುಮಾರ್ ಗೂಳಿಯನ್ನು ಹಿಮ್ಮೆಟ್ಟಿಸಿ ರಕ್ಷಿಸುವ ದೃಶ್ಯವಿದೆ.

'ಮಯೂರ', 'ಒಂದೇ ರೂಪ ಎರಡು ಗುಣ', 'ಬಹದ್ದೂರ್ ಗಂಡು', 'ಬಬ್ರುವಾಹನ', 'ಸಹೋದರರ ಸವಾಲ್', 'ಹುಲಿಯ ಹಾಲಿನ ಮೇವು', 'ವಿಜಯ್‌ವಿಕ್ರಮ್', 'ಅಶ್ವಮೇಧ', 'ವೀರಪ್ಪನ್', 'ಸಿಂಹದಮರಿ' ಮುಂತಾದ ಸಾಕಷ್ಟು ಚಿತ್ರಗಳಲ್ಲಿ ಕುದುರೆಯ ಬಳಕೆಯಾಗಿದೆ. 'ಬಹದ್ದೂರ್ ಗಂಡು','ಹುಲಿಯ ಹಾಲಿನ ಮೇವು' ಚಿತ್ರಗಳಲ್ಲಿ ರಾಜಕುಮಾರ್ ಉತ್ತಮ ಕುದುರೆ ಸವಾರ. ಸಾಹಸ ದೃಶ್ಯಗಳಲ್ಲಿ ಹೆಚ್ಚಿನ ಮೆರುಗು ತರಲು ನಾಯಕ, ಖಳನಾಯಕ ಮತ್ತು ಆತನ ತಂಡದವರಿಗೆ ಕುದುರೆಯನ್ನು ನೀಡಲಾಗುತ್ತದೆ. ಚೇಸಿಂಗ್ ದೃಶ್ಯಗಳಲ್ಲಿ ಕುದುರೆಗಳನ್ನು ಓಡಿಸುವುದು, ಕುದುರೆಗಳು ಬಾಂಬ್ ಎಸೆತದಿಂದ, ದೊಣ್ಣೆಗಳ ಹೊಡೆತದಿಂದ ಮುಗ್ಗರಿಸಿ ಬೀಳುವುದು ಮುಂತಾದ ದೃಶ್ಯಗಳು ಸಾಮಾನ್ಯ.

'ಸಿಪಾಯಿ ರಾಮು' ಚಿತ್ರದಲ್ಲಿ ಚಂಬಲ್ ಕಣಿವೆಗೆ ಹೋಗಿ ಚಿತ್ರೀಕರಣ ನಡೆಸಿದ್ದರು. ಅಲ್ಲಿಯೂ ದರೋಡೆಯ ದೃಶ್ಯಗಳಲ್ಲಿ ಕುದುರೆಗಳನ್ನು ಉಪಯೋಗಿಸಿದ್ದರು. ಅಲ್ಲದೇ ಹೊಸದಾಗಿ ತಂದ ಕುದುರೆಗಳನ್ನು ಪಳಗಿಸುವಂತಹ ದೃಶ್ಯಗಳನ್ನು 'ನನ್ನ ಪ್ರತಿಜ್ಞೆ' ಮುಂತಾದ ಚಿತ್ರಗಳಲ್ಲಿ ಅಳವಡಿಸಲಾಗಿದೆ. 'ಸಿಂಹದ ಮರಿ' ಚಿತ್ರದಲ್ಲಿನ ನೂರಕ್ಕೂ ಹೆಚ್ಚು ಕುದುರೆಗಳನ್ನು ರೇಸ್‌ಗಾಗಿ ಬಳಸಲಾಗಿತ್ತು. ಈ ದೃಶ್ಯವನ್ನು ಹೆಲಿಕಾಪ್ಟರ್ ಸೇರಿದಂತೆ ಒಟ್ಟು ಮೂರು ಆ್ಯಂಗಲ್‌ಗಳಿಂದ ಚಿತ್ರಿಸಿಕೊಂಡಿದ್ದಾರೆ.

'ಮಳೆ ಬಂತು ಮಳೆ' ಚಿತ್ರದಲ್ಲಿ ಭಾರಿ ಮಳೆಯಿಂದ ತುಂಬಿಕೊಂಡ ಊರಿನ ಕೆರೆಯಲ್ಲಿ ಮೊಸಳೆಯೊಂದು ಸೇರಿಕೊಂಡು ನೀರಿಗೆಂದು ಬಂದ ದನ,ಕರು,ಆಡು ಕೊನೆಗೆ ಮನುಷ್ಯರನ್ನೂ ಬಿಡದೆ ತಿನ್ನುತ್ತಾ ಬರುತ್ತದೆ. ಈ ಮೊಸಳೆಯೊಂದಿಗೆ ನಾಯಕ ಅರ್ಜುನ್‌ಸರ್ಜಾ ಹೋರಾಡುವ ದೃಶ್ಯವಿದೆ. ಇಂಗ್ಲೀಷ್‌ನ 'ಜಾಸ್' ಚಿತ್ರದ ಸ್ಫೂರ್ತಿಯಿಂದ ಬಂದ ಚಿತ್ರವಿದು. ಸಾವಿರಾರು ರೂಪಾಯಿ ವ್ಯಯಿಸಿ ಕೃತಕ ಮೊಸಳೆಯೊಂದನ್ನು ಈ ಚಿತ್ರಕ್ಕಾಗಿ ನಿರ್ಮಿಸಲಾಗಿತ್ತು. ನೋಡುಗರಿಗೆ ನಿಜವಾದ ಮೊಸಳೆಯಂತೆ ಕಾಣುವ ಹಾಗೆ ಉತ್ತಮ ತಾಂತ್ರಿಕತೆಯಿತ್ತು. ಮೇಲ್ನೋಟಕ್ಕೆ ಸಾಹಸ ಪ್ರಧಾನವೆನಿಸಿದರೂ ಕೃತಕ ಮೊಸಳೆಯನ್ನು ಚಿತ್ರೀಕರಣಕ್ಕೆ ಬಳಸಿರುವುದರಿಂದ ಸಾಹಸವೆಂಬುದು ಕೇವಲ ಹೊಡೆದಾಟದಲ್ಲಷ್ಟೇ ಕಾಣುತ್ತದೆ.

ಸಾಹಸ ಸ್ಪರ್ಧೆಗಳು

ಸಾಹಸ ಸ್ಪರ್ಧೆಗಳಲ್ಲಿ ಸೈಕಲ್ ಸ್ಪರ್ಧೆಯಿಂದ ಹಿಡಿದು ಬೈಕ್, ಕಾರ್, ರೈಸ್‌ಗಳಲ್ಲದೆ ದೋಣಿ, ಎತ್ತಿನ ಗಾಡಿಗಳ ಸ್ಪರ್ಧೆಯೂ ಇರುತ್ತದೆ. ಇಂಥ ಸ್ಪರ್ಧೆಗಳಲ್ಲಿ ಭಾಗವಹಿಸುವವರು ಸಾಹಸವನ್ನು ಮೈಗೂಡಿಸಿಕೊಂಡೇ ಇರಬೇಕಾಗುತ್ತದೆ. ಚಿತ್ರದ ನಾಯಕ ಇಂಥ ಸಾಹಸಿಗನಾಗಿದ್ದರೆ ಚಿತ್ರಕ್ಕಲ್ಲದೆ ಆತನ ಇಮೇಜ್‌ಗೂ ಸಹಾಯವಾಗುತ್ತದೆ. ಇಂಥ ಸ್ಪರ್ಧೆಗಳು ನಿಜವಾದುದಿರಲಿ, ಚಲನಚಿತ್ರಕ್ಕಾಗಿ ಸಂಯೋಜಿಸಿದ್ದಾಗಲಿ ಜಾಗರೂಕತೆ ತಪ್ಪಿದರೆ ಎರಡರಲ್ಲೂ ಅಪಾಯವಿದ್ದೇ ಇದೆ. ಅಪಾಯವಿಲ್ಲದಿದ್ದರೆ ಅದು ಸಾಹಸವಾಗುವುದಾದರೂ ಹೇಗೆ? ಆದರೆ ಇವೆಲ್ಲದಕ್ಕೂ ಸಿದ್ಧವಿದ್ದವರು ಇಂಥ ಸಾಹಸಗಳಲ್ಲಿ ಭಾಗವಹಿಸುತ್ತಾರೆ. ಹಾಗೆ ನೋಡ ಹೋದರೆ ಇಂಗ್ಲಿಷ್ ಭಾಷೆಯ ಚಿತ್ರಗಳಲ್ಲಿರುವಂಥ ತೀರಾ ಅಪಾಯಕಾರಿ ಎನಿಸುವ ಸಾಹಸಗಳು ನಮ್ಮ ಚಿತ್ರರಂಗದಲ್ಲಿ ಕಡಿಮೆಯೆಂದೇ ಹೇಳಬಹುದು. ಇದಕ್ಕೆ ಕಾರಣ ನಮ್ಮ ಸೀಮಿತ ಮಾರುಕಟ್ಟೆ, ಸೀಮಿತ ಬಜೆಟ್ ಹಾಗೂ ಸೀಮಿತ ತಂತ್ರಜ್ಞಾನ. ಆದರೆ ಈಗೀಗ ಎಲ್ಲ ರೀತಿಯಲ್ಲೂ ಈ ಮಿತಿಯನ್ನು ದಾಟುವ ಪ್ರಯತ್ನವನ್ನು ಚಿತ್ರರಂಗ ಮಾಡುತ್ತಿದೆ. ಸಾಹಸಕ್ಕೇ ಆದ್ಯತೆ ಬಂದಿದೆ.

ಸಾಹಸದ ಸ್ಪರ್ಧೆಗಳನ್ನು ಸಂಯೋಜಿಸುವುದು ತುಂಬಾ ತ್ರಾಸದಾಯಕ ಕೆಲಸ. ಇದರಲ್ಲಿ ಹೆಚ್ಚು ಅಪಾಯವಿದೆ, ಖರ್ಚು ಜಾಸ್ತಿ. ಸ್ಪರ್ಧಿಗಳು ಹೆಚ್ಚಿದ್ದಷ್ಟು ರೋಚಕವಾಗಿರುತ್ತದೆ. ಆಯಾ ಸ್ಪರ್ಧೆಗೆ ತಕ್ಕುದಾದ ವಾಹನವೊ, ಪ್ರಾಣಿಯೊ ಅಷ್ಟೇ ಸಂಖ್ಯೆಯಲ್ಲಿ ಬೇಕು. ಇದನ್ನು ಸೆರೆಹಿಡಿಯುವುದೂ ಕೂಡಾ ಛಾಯಾಗ್ರಾಹಕನಿಗೆ ಸವಾಲಿನ ಕೆಲಸ. ನಮ್ಮ ಸಂಸ್ಕೃತಿಯಲ್ಲಿ ಸ್ಪರ್ಧೆ ಎಂದರೆ ಕೇವಲ ಗೆಲುವಿನ ಗುರಿಯಷ್ಟೇ ಅಲ್ಲ. ಅದೊಂದು ಆಚರಣೆಯೂ ಹೌದು. ಒಂದೊಂದು ಪ್ರದೇಶದಲ್ಲಿ ಅಲ್ಲಿನ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ನಡೆಯುವ ಸ್ಪರ್ಧೆಗಳೇ ಸಾಕಷ್ಟಿವೆ. ಉದಾಹರಣೆಗೆ ಪಶ್ಚಿಮ ಕರಾವಳಿಯ ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಕಂಬಳ ಒಂದು ಖ್ಯಾತಿವೆತ್ತ ಕ್ರೀಡೆ. ವರ್ಷಕ್ಕೊಮ್ಮೆ ಬೇರೆ ಬೇರೆ ಜಾಗಗಳಲ್ಲಿ ನಾಲ್ಕಾರು ಕಡೆಗಳಲ್ಲಿ ನಡೆಯುವ ಕಂಬಳ ಎಂದರೆ ಕೋಣಗಳ ಓಟದ ಸ್ಪರ್ಧೆ. ಕೋಣಗಳ ಸ್ಪರ್ಧೆಯೆಂದರೆ ಬರೀ ಕೋಣಗಳಷ್ಟೇ ಓಡುವುದಿಲ್ಲ. ಜೋಡಿ ಕೋಣಗಳೊಂದಿಗೆ ಅವುಗಳನ್ನು ಕೆಸರಿನ ಗದ್ದೆಯಲ್ಲಿ ಓಡಿಸುವವನೂ ಸ್ಪರ್ಧಿಯಾಗುತ್ತಾನೆ.

ವಿಷ್ಣುವರ್ಧನ್ ಅಭಿನಯದ 'ರುದ್ರನಾಗ' ಚಿತ್ರದಲ್ಲಿ ಕಂಬಳವನ್ನು ಚಿತ್ರಿಸಿದ್ದಾರೆ. ತುಳು ಚಿತ್ರ 'ಕೋಟಿ ಚೆನ್ನಯ' ದಲ್ಲಿ ಕತೆಗೆ ಪೂರಕವಾಗಿಯೇ ಕಂಬಳದ ಬಳಕೆಯಾಗಿತ್ತು. ನಮ್ಮಲ್ಲಿ ಸಾಂಸ್ಕೃತಿಕ ಕ್ರೀಡೆಗಳು, ಜಾನಪದ ಸ್ಪರ್ಧೆಗಳು ಚಿತ್ರಗಳ ಅವಿಭಾಜ್ಯ ಅಂಗಗಳಾಗಲಿಲ್ಲವೆನ್ನುವುದು ದುರಂತ. ರಿಮೇಕ್ ಸಂಸ್ಕೃತಿಗೂ ಮುನ್ನ ಚಿತ್ರೋದ್ಯಮ ಪರಕೀಯ ಭಾಷಾ ಚಿತ್ರಗಳಿಗೆ ಮಾರು ಹೋಗಿ ತನ್ನ ಮಣ್ಣಿನ ಸಂಸ್ಕೃತಿಯನ್ನು ಮರೆತಿದ್ದು ನಿಜ. ಕೇವಲ ಸಾಹಸ, ಕ್ರೀಡೆಗಳೆಂದಷ್ಟೇ ಅಲ್ಲ ನಮ್ಮಲ್ಲಿನ ಆಚರಣೆ, ಸಂಪ್ರದಾಯ, ರೀತಿ ರಿವಾಜುಗಳು ಜನಜೀವನದಲ್ಲಿ ಹಾಸು ಹೊಕ್ಕಷ್ಟು ಚಲನಚಿತ್ರಗಳಲ್ಲಿ ಬಳಕೆಯಾಗಲಿಲ್ಲ. ಈ ನಿಟ್ಟಿನಲ್ಲಿ ಮಲಯಾಳಂ ಚಿತ್ರರಂಗ ನಮಗೆ ಮಾದರಿಯಾಗಬೇಕಿತ್ತು, ಆಗಲಿಲ್ಲ. ಹಾಗಾಗಿ 'ಯಕ್ಷಗಾನ' ದಂಥ ಪ್ರಬುದ್ಧ ಕಲೆ 'ಬಣ್ಣದ ವೇಷ' ದಂಥಾ ಬೆರಳೆಣಿಕೆಯ ಚಿತ್ರಗಳ ಹೊರತು ಮತ್ತೆಲ್ಲೂ ಬಳಕೆ ಆಗಲೇ ಇಲ್ಲ. ಕೇರಳದಲ್ಲಿ 'ಕಥಕ್ಕಳಿ' ಚಲನಚಿತ್ರಗಳ ಕತೆಯಲ್ಲೂ ಹೇಗೆ ಸ್ಥಾನ ಪಡೆಯಿತೆನ್ನುವುದನ್ನು ಗಮನಿಸಿದರೆ ನಮ್ಮ ಚಿತ್ರರಂಗ ತನ್ನ ತನ ಉಳಿಸಿಕೊಳ್ಳುವಲ್ಲಿ ಬಹುತೇಕ ಸೋತಿತೆಂದೇ ಹೇಳಬಹುದು.

'ಕಂಬಳ' ನಿಜಕ್ಕೂ ಒಂದು ಸಾಹಸ ಹಾಗೂ ಮನರಂಜನೆಯ ಕ್ರೀಡೆ. ಈ ಸ್ಪರ್ಧೆಯಲ್ಲಿ ಭಾಗವಹಿಸುವ ಕೋಣಗಳನ್ನು ಸಾಕುವುದು ಪ್ರತಿಷ್ಠೆಯ ವಿಷಯವೂ ಹೌದು. ನಾಲ್ಕನೇ ಶತಮಾನದಿಂದಲೂ ತುಳುನಾಡನ್ನಾಳಿದ ಆಳುಪ ಮನರಂಜನೆಗಾಗಿ ಬೃಹತ್ ಕಂಬಳ ಏರ್ಪಡಿಸಿದ್ದನ್ನು ಇತಿಹಾಸ ಹೇಳುತ್ತದೆ. ಇದನ್ನು 'ಅರಸ ಕಂಬಳ' ವೆಂದು ಕರೆಯುತ್ತಿದ್ದರು. ಹದವಾದ ಕೆಸರಿನ ಗದ್ದೆಯಲ್ಲಿ ಚೆನ್ನಾಗಿ ನೀರು ಹರಿಸಿ ಉದ್ದಕ್ಕೂ ಕೋಣಗಳನ್ನು ಓಡಿಸುತ್ತಾರೆ. ಸಾಮಾನ್ಯವಾಗಿ ಇರುವ ಅಗಲಕ್ಕಿಂತ ಎರಡರಷ್ಟು ಅಗಲವಿದ್ದರೆ ಅದಕ್ಕೆ ಜೋಡುಕೆರೆ ಕಂಬಳವೆಂದು ಹೆಸರು. ನೀರು ನಿಂತ ಆ ಗದ್ದೆಗಳಲ್ಲಿ ಕೋಣಗಳ ಹಿಂದೆ ಕೆಸರನ್ನು ಸವರಿಕೊಂಡು ಹೋಗುವಂತೆ ಗೋರು ಹಲಗೆಯನ್ನು ಕಟ್ಟಿರುತ್ತಾರ. ಈ ಹಲಗೆಯ ಮೇಲೆ ನಿಂತು ಹಗ್ಗ ಹಿಡಿದ ಸವಾರ ಕೋಣಗಳನ್ನು ತುಂಬ ವೇಗವಾಗಿ ಓಡಿಸಬೇಕು. ಇಲ್ಲಿ ಮೊದಲು ಗುರಿ ಮುಟ್ಟುವುದರೊಂದಿಗೆ ಆ ವೇಗಕ್ಕೆ ಕೆಸರಿನ ನೀರು ಹೆಚ್ಚು ಎತ್ತರ ಚಿಮ್ಮುವುದೂ ಕೂಡಾ ಗೆಲುವಿನ ಗುರಿಯಾಗಿರುತ್ತದೆ. ಇಂಥ ರೋಮಾಂಚನಕಾರಿ ಸಾಹಸದ ಕ್ರೀಡೆ ನಮ್ಮ ಚಿತ್ರಗಳಲ್ಲಿ ಬಳಕಯಾದದ್ದು ಕಡಿಮೆ.

ಕೋಳಿ ಕಾಳಗ ಮತ್ತೊಂದು ಸಾಹಸ ಕಲೆ. 'ಸಿಪಾಯಿ ರಾಮು', 'ರಾಮಲಕ್ಷ್ಮಣ' ಚಿತ್ರಗಳಲ್ಲಿ ಕೋಳಿಕಾಳಗವನ್ನು ಚಿತ್ರಿಸಿದ್ದಾರೆ. ವಿಶೇಷ ತಳಿಯ ಕೋಳಿಗಳನ್ನು ಸ್ಪರ್ಧೆಗಳಿಗೆಂದೇ ಬೆಳೆಸಿ ಆ ಕೋಳಿಗಳಿಗೆ ಮಾಲೀಷು ಮಾಡಿ ಅಮೋನಿಯಾ ದ್ರಾವಣವನ್ನು ಸವರಿ ಅದರ ಚರ್ಮ ಗಡುಸಾಗುವಂತೆ ಮಾಡುತ್ತಾರ. ತಲೆಯ ಮೇಲಿನ ಜುಟ್ಟು, ಕುತ್ತಿಗೆಯ ಮೇಲಿನ ಗರಿ, ಬಾಲ ಮೊದಲಾದವುಗಳನ್ನು ಶಿಸ್ತಾಗಿ ಕತ್ತರಿಸಿ ಅದರ ಕಾಲಿಗೆ ಚಿಕ್ಕ ಕತ್ತಿಯನ್ನು ಕಟ್ಟಿ ಕಾಳಗಕ್ಕೆ ಬಿಡುತ್ತಾರೆ. ಕೋಳಿಗಳು ರೋಷಕ್ಕೆ ಹೆಸರುವಾಸಿಯಾಗಿದ್ದು ಎಷ್ಟೇ ಗಾಯವಾದರೂ ಹಿಂಜರಿಯದೇ ಸಾಯುವವರೆಗೆ ಹೋರಾಡುತ್ತವೆ.

ಈ ಕೋಳಿ ಕಾಳಗವೂ ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಪ್ರಖ್ಯಾತಿ ಹೊಂದಿವೆ. ಆರಂಭದಲ್ಲಿ ಹಬ್ಬ ಹರಿದಿನಗಳಲ್ಲಿ ವಿಶೇಷ ಕೋಳಿ ಕಾಳಗ ನಡೆಸುತ್ತಿದ್ದು ಈಗ ಜೂಜಿನ ಸ್ಪರ್ಧೆಯಾಗಿ ಯಾವಾಗಲೂ ನಡೆಯುತ್ತಿವೆ. ಇದೇನೇ ಇದ್ದರೂ ಇಂಥ ಸ್ಪರ್ಧೆಗಳು ಜನ ಜೀವನದ ಒಂದು ಅಂಗವೇ ಆದುದರಿಂದ ಚಲನಚಿತ್ರಗಳಲ್ಲೂ ಬಳಕೆಯಾಗಬೇಕಾಗಿದ್ದರೂ ಅಷ್ಟಾಗಿ ಆಗಲಿಲ್ಲ. 'ಸಿಪಾಯಿ ರಾಮು' ಚಿತ್ರದಲ್ಲಿ ಆರತಿ ಮತ್ತು ಶಿವರಾಮ್ ತಮ್ಮ ಕೋಳಿಗಳನ್ನು ಕಾಳಗಕ್ಕೆ 'ಛೂ' ಬಿಟ್ಟು ನೆರೆದ ಜನ ಸಮೂಹದೆದುರು 'ವ್ಹಾರೆ ಮೇರ ಮುರುಗ' ಎಂದು ಹಾಡಿ ಕುಣಿಯುತ್ತಾರೆ. ಆ ಹಾಡೂ ಜನಪ್ರಿಯವಾಯಿತು.

ಮರದ ದಿಮ್ಮಿಗಳಿಂದ ಮಾಡಿದ, ಕೈಯಲ್ಲಿ ಹುಟ್ಟು ಹಾಕುವ ದೋಣಿ ಸ್ಪರ್ಧೆ ಹಾಗೂ ಯಂತ್ರ ಚಾಲಿತ ಮೋಟಾರು ದೋಣಿ ಸ್ಪರ್ಧೆ ಮೊದಲಾದ ಹಲವು ವಿವಿಧ ದೋಣಿ ಸ್ಪರ್ಧೆಗಳು ನಡೆಯುವುದುಂಟು. ಚಲನಚಿತ್ರಗಳಲ್ಲಿ ದೋಣಿ, ಬೋಟ್‌ಗಳನ್ನು ಸ್ಪರ್ಧೆಗಿಂತ ಹೆಚ್ಚಾಗಿ ನಾಯಕ, ಖಳನಾಯಕರ ಚೇಸಿಂಗ್ ದೃಶ್ಯಗಳ ಜಟಾಪಟಿಗಾಗಿಯೇ ಹೆಚ್ಚು ಬಳಸಲಾಗುತ್ತದೆ. 'ಅಜಿತ್', 'ಮತ್ಸರ', 'ಹಾಂಗ್‌ಕಾಂಗ್‌ನಲ್ಲಿ ಏಜೆಂಟ್ ಅಮರ್', 'ಶರವೇಗದ ಸರದಾರ',

'ಅಂಡಮಾನ್' ಮುಂತಾದ ಚಿತ್ರಗಳಲ್ಲಿ ದೋಣಿಗಳನ್ನು ಬಳಸಿಕೊಳ್ಳಲಾಗಿದೆ. ಸಾಹಸದ ವೈಭವೀಕರಣಕ್ಕಾಗಿ ಒಂದು ದೋಣಿ ಮತ್ತೊಂದು ದೋಣಿಗೆ ಢಿಕ್ಕಿ ಹೊಡೆದು ಅದರಲ್ಲಿದ್ದ ಜನ ನೀರಿನ ಪಾಲಾಗುವುದು, ನಾಯಕ ದೋಣಿಯಿಂದ ದೋಣಿಗೆ ನೀರಿನ ಅಪಾಯ ಲೆಕ್ಕಿಸದೆ ಹಾರುವುದು, ದೋಣಿಗಳಿಗೆ ಬೆಂಕಿ ಹತ್ತಿ ಬಾಂಬ್ ಸಿಡಿದು ಭಸ್ಮವಾಗುವುದು ಮುಂತಾದ ಸಾಕಷ್ಟು ವಿಭಿನ್ನ ರೀತಿಯ ದೋಣಿ ಸಾಹಸಗಳು ನಮ್ಮ ಚಿತ್ರಗಳಲ್ಲಿ ಸಿಗುತ್ತವೆ.

'ಶರವೇಗದ ಸರದಾರ'ದಲ್ಲಿ ನಾಯಕ ಕುಮಾರ್ ಬಂಗಾರಪ್ಪ ಅವರನ್ನು ಧಾಂಡಿಗರು ಹಿಂಬಾಲಿಸಿ ಕೊಲ್ಲಲು ಪ್ರಯತ್ನಿಸುವಾಗಿನ ಸಾಹಸ, 'ಬೂತಯ್ಯನ ಮಗ ಅಯ್ಯು' ಚಿತ್ರದಲ್ಲಿ ತುಂಬಿದ ಪ್ರವಾಹದಲ್ಲಿ ನಾಯಕ ವಿಷ್ಣುವರ್ಧನ್‌ರವರ ದೋಣಿಯ ಸಾಹಸ. 'ಅಂಡಮಾನ್'ನಲ್ಲಿ ಯಂತ್ರಚಾಲಿತ ಬೋಟ್‌ನಲ್ಲಿ ನಾಯಕ ಶಿವರಾಜ್‌ಕುಮಾರ್ ಖಳರೊಂದಿಗೆ ಕಾದಾಡುವುದು ರೋಮಾಂಚಕಾರಿ ದೃಶ್ಯಗಳಾಗಿವೆ. 'ರಣಧೀರ' ಚಿತ್ರದಲ್ಲಿ ಕ್ಲೈಮ್ಯಾಕ್ಸ್‌ಗೆಂದೇ ವಿಶೇಷ ಹಡಗನ್ನು ನಿರ್ಮಾಣ ಮಾಡಲಾಗಿತ್ತು. ನಾಯಕ ರವಿಚಂದ್ರನ್ ಖಳರೊಂದಿಗೆ ಹಡಗಿನಲ್ಲಿ ಹೊಡೆದಾಡುವಾಗ ಗಾಜಿನ ಕಿಟಕಿಗಳು ಒಡೆದು ಸಮುದ್ರದ ನೀರು ಒಳ ನುಗ್ಗುತ್ತದೆ. ಎಲ್ಲರೂ ಒಳನುಗ್ಗುವ ನೀರಿನ ರಭಸಕ್ಕೆ ಸಿಕ್ಕಿ ಸೆಣಸಾಡುವ ಸಾಹಸ ಅದ್ಭುತವಾಗಿತ್ತು. ಮೂಲ ಹಿಂದಿ ಚಿತ್ರ 'ಹೀರೋ' ಗಿಂತ ಈ ಸಾಹಸಗಳು 'ರಣಧೀರ' ಚಿತ್ರದಲ್ಲೇ ಉತ್ತಮವಾಗಿ ಮೂಡಿಬಂದು ಕನ್ನಡ ಚಿತ್ರರಂಗದಲ್ಲಿ ಇದೊಂದು ಅಸಾಧಾರಣ ಸಾಹಸವೆಂದು ಗುರುತಿಸಲ್ಪಟ್ಟಿತು.

ಎತ್ತಿನ ಗಾಡಿಗಳ ಸಾಹಸಗಳೂ ಅನೇಕ ಚಿತ್ರಗಳಲ್ಲಿ ಚಿತ್ರಿತವಾಗಿದೆ. ಹಳ್ಳಿಗಳಲ್ಲಿ ಜಾತ್ರೆಗಳ ವೇಳೆ ಇಂಥ ಸ್ಪರ್ಧೆಗಳು ನಡೆಯುತ್ತವೆ. ಚಲನಚಿತ್ರಗಳಲ್ಲಿ ನಾಯಕನೇ ಅಂತಿಮವಾಗಿ ಗೆಲ್ಲುವ ಇಂಥ ಸಾಹಸ ಸ್ಪರ್ಧೆಗಳಲ್ಲಿ ಖಳರು ಅನ್ಯಾಯ ಮಾರ್ಗದಲ್ಲಿ ನಾಯಕನನ್ನು ಮೊದಲು ಗುರಿ ಮುಟ್ಟದಂತೆ ತಡೆಯುವುದು, ಆತ ಅದನ್ನೆಲ್ಲ ಎದುರಿಸಿ ಸ್ಪರ್ಧೆಯಲ್ಲಿ ಗೆಲ್ಲುವುದೇ ಸಾಹಸದ ಪ್ರಮುಖ ಅಂಶವೆನಿಸುತ್ತದೆ.

ಸೈಕಲ್‌ಗಳು ೧೯೭೦ರ ದಶಕದ ಚಿತ್ರಗಳಲ್ಲಿ ಸಾಹಸದ ಪ್ರಮುಖ ಸಾಧನಗಳಾಗಿದ್ದವು. ನಾಯಕ, ನಾಯಕಿಯನ್ನು ಸೈಕಲ್‌ಬಾರ್ ಮೇಲೆ ಕೂರಿಸಿಕೊಂಡು ಹೋಗುವಾಗ ರೌಡಿಗಳು ದಿಢೀರನೆ ಎದುರಾಗಿ ಅವರನ್ನು ಚುಡಾಯಿಸಿದಾಗ, ನಾಯಕ ಸೈಕಲನ್ನೇ ಆಯುಧ ಮಾಡಿಕೊಂಡು ಅವರೊಡನೆ ಕಾದಾಡುವುದು ಸಾಮಾನ್ಯ. ಆಗಿನ ರಾಜಕುಮಾರ್ ಅಭಿನಯದ ಅನೇಕ ಚಿತ್ರಗಳಲ್ಲಿ ಇವು ಚಿತ್ರಿತವಾಗಿದ್ದವು. ಉದಾಹರಣೆಗೆ 'ಬಡವರ ಬಂಧು', 'ಅನುರಾಗ ಅರಳಿತು'.

ಕೆಲವು ಚಿತ್ರಗಳಲ್ಲಿ ನಾಯಕನಿಗೆ ಎದುರಾದ ಸಮಸ್ಯೆಗಾಗಿ ಸೈಕಲ್‌ರೇಸ್‌ಗಳಲ್ಲಿ ಭಾಗವಹಿಸಿ ನಾನಾ ಅಡೆತಡೆಗಳನ್ನು ಎದುರಿಸಿ ಗೆದ್ದು ಸಾಹಸ ಮೆರೆಯುವುದೂ ಇದೆ. ಇದೇ ರೀತಿ ಬೈಕ್ ಮತ್ತು ಕಾರ ರೇಸ್‌ಗಳೂ ಚಲನಚಿತ್ರಗಳಲ್ಲಿ ರೂಢಿಗತವಾಗಿ ಹಿಂದಿನಿಂದಲೂ ಬಂದಿವೆ. 'ನಾ ನಿನ್ನ ಮರೆಯಲಾರೆ' 'ರಣಧೀರ' ಮೊದಲಾದ ಚಿತ್ರಗಳಲ್ಲಿ ನಾಯಕರು ಉತ್ತಮ ಬೈಕ್ ಸವಾರರೇ ಆಗಿರುವುದರಿಂದ ಚಿತ್ರದಲ್ಲಿ ರೋಚಕ ಬೈಕ್ ಸ್ಪರ್ಧೆ ವೀಕ್ಷಿಸಬಹುದು. 'ನಾ ನಿನ್ನ ಮರೆಯಲಾರೆ' ಚಿತ್ರದಲ್ಲಿ ಕೊನೆಯಲ್ಲಿ ನಾಯಕ ನಾಯಕಿಯನ್ನು ಸಂಧಿಸಲು ಆತುರವಾಗಿ ಹೋಗುವಾಗ ಸಾಲಾಗಿ ಕಾರುಗಳು ಅಡ್ಡ ನಿಂತಿರುತ್ತವೆ. ನಾಯಕ ಕಾರುಗಳ ಮೇಲೆಯೇ ಬೈಕ್ ಓಡಿಸಿಕೊಂಡು ಮುಂದೆ ಹೋಗುತ್ತಾನೆ. ಸಾಹಸ ನಿರ್ದೇಶಕ ವೈ.ಶಿವಯ್ಯ ಈ ಸಾಹಸವನ್ನು ಉತ್ತಮವಾಗಿ ಯೋಜಿಸಿದ್ದರೆ, ಅದನ್ನು ನಿಭಾಯಿಸಿದ ಡ್ಯೂಪ್ ಕಲಾವಿದನೂ ಅಷ್ಟೇ ಚೆನ್ನಾಗಿ ತನ್ನ ಕಾರ್ಯ ನಿರ್ವಹಿಸಿದ್ದರು.

'ಅಶ್ವಮೇಧ' ಚಿತ್ರದಲ್ಲಿ ಖಳನಾಯಕನ ಜೀಪ್‌ನೊಂದಿಗೆ ನಾಯಕನ ಕುದುರೆಯ ಸ್ಪರ್ಧೆ ಒಂದು ಉತ್ತಮ ಕಲ್ಪನೆಯಾಗಿತ್ತಲ್ಲದೆ ಕುತೂಹಲದಿಂದಲೂ ಕೂಡಿತ್ತು. ರೇಸ್‌ಗಳನ್ನು ಬಿಟ್ಟರೆ ಬೈಕ್ ಮತ್ತು ಕಾರ್ ಚೇಸಿಂಗ್‌ಗಳನ್ನು ನಂತರದ ಬಹುತೇಕ ಚಿತ್ರಗಳಲ್ಲಿ ಅಳವಡಿಸಿದ್ದಾರೆ. ಖೈದಿಯೊಬ್ಬ ಪರಾರಿಯಾದರೆ ಅವನನ್ನು ಪೊಲೀಸರು ಹಿಂಬಾಲಿಸುವ ಕಾರು, ಬೈಕುಗಳ ಸಾಹಸ ಕೆಲ ಚಿತ್ರಗಳ ಅವಿಭಾಜ್ಯ ಅಂಗಗಳಾಗಿವೆ. ಚೇಸಿಂಗ್ ದೃಶ್ಯವೊಂದು ಮೈನವಿರೇಳುವಂತೆ ಮಾಡಿದ್ದು 'ಲಾಕಪ್ ಡೆತ್' ಚಿತ್ರದಲ್ಲಿ. ಚಿತ್ರದಲ್ಲಿ ಕೆಲವೇ ನಿಮಿಷಗಳ ಕಾಲ ಬರುವ ಚೇಸಿಂಗ್ ದೃಶ್ಯ ಭಾಗಕ್ಕಾಗಿ ಸತತವಾಗಿ ಮೂವತ್ತು ದಿನಗಳ ಕಾಲ ಕುದುರೆಮುಖ, ಕೆಮ್ಮಣ್ಣುಗುಂಡಿ, ಕಾರ್ಕಳಗಳಲ್ಲಿ ಒಂದು ಅಂಬುಲೆನ್ಸ್, ಆರು ಜೀಪು, ಆರು ವ್ಯಾನು, ಎಂಟು ಕಾರುಗಳ ಜೊತೆಗೆ ಸಾಕಷ್ಟು ಸಂಖ್ಯೆಯ ಬೈಕ್‌ಗಳನ್ನು ಬಳಸಲಾಗಿತ್ತು. ಈ ಹೊರಾಂಗಣಗಳಲ್ಲಿ ಪೆಟ್ರೋಲ್ ಬಂಕ್, ದಾಬಾ ಮತ್ತು ಎರಡು ವಿಭಿನ್ನವಾದ ಮನೆಗಳ ಸೆಟ್ ಹಾಕಲಾಗಿತ್ತು. ಈ ಅದ್ಭುತ ಸಾಹಸವನ್ನು ಸಾಹಸ ನಿರ್ದೇಶಕ ಥ್ರಿಲ್ಲರ್‌ಮಂಜು ಸಂಯೋಜಿಸಿದ್ದರು. ಚಿತ್ರದ ನಿರ್ಮಾಪಕ ರಾಮು ಪರಭಾಷಾ ಚಿತ್ರಗಳೊಂದಿಗೆ ಸಾಹಸದಲ್ಲೂ ಪೈಪೋಟಿಯಾಗಿ ನಿಲ್ಲಬೇಕೆಂದೇ ಈ ದೃಶ್ಯಕ್ಕಾಗಿ ಮೂವತ್ತು ಲಕ್ಷಕ್ಕೂ ಮೀರಿ ಖರ್ಚು ಮಾಡಿದ್ದರು. ಹಿಂದೆಂದೂ ಕೇವಲ ಸಾಹಸದ ದೃಶ್ಯ ಭಾಗವೊಂದಕ್ಕೆ ಇಷ್ಟೊಂದು ಹಣ ವ್ಯಯಿಸಿದ ಉದಾಹರಣೆಯಿಲ್ಲ.

ಜೀಪುಗಳು ಕಾರುಗಳು, ಬೈಕುಗಳು ಢಿಕ್ಕಿ ಹೊಡೆದುಕೊಂಡು ಹೊಂಡದೊಳಗೆ, ಪಕ್ಕದ ಬಂಡೆ, ಅಪ್ಪಳಿಸುವುದು, ಮೇಲಕ್ಕೆ ಹಾರಿ ಬೀಳುವುದೊ, ಬೈಕ್‌ನಿಂದ ಹಾರಿ ಆಳವಾದ ನೀರಿಗೆ ಜಿಗಿಯುವುದು ಹೀಗೆ ಸುಮಾರು ಹದಿನೈದು ನಿಮಿಷಗಳ ಕಾಲ ಸುದೀರ್ಘ, ರೋಮಾಂಚನ ಎನ್ನಿಸುವಂಥ ಸಾಹಸ ದೃಶ್ಯವನ್ನು ತೆರೆಯ ಮೇಲೆ ತಂದಿದ್ದರು. ಯಾವುದೇ ಭಾಷೆಯ ಚಿತ್ರಕ್ಕೂ ಕಡಿಮೆ ಇಲ್ಲದಂಥ ಸಾಹಸ ಚಿತ್ರಣವಾಗಿತ್ತು.

ಅದರಂತೆಯೇ 'ಸ್ಪೀಡ್' ಆಂಗ್ಲ ಚಿತ್ರದ ಸ್ಫೂರ್ತಿಪಡೆದು ಬಿ.ಸಿ.ಪಾಟೀಲ್ ನಿರ್ಮಾಣದಲ್ಲಿ ತೆರೆಕಂಡ 'ನಿರ್ಬಂಧ' ಚಿತ್ರದಲ್ಲಿ ಕ್ಲೈಮಾಕ್ಸ್ ದೃಶ್ಯ ಚೇಸಿಂಗ್ ಮಾದರಿಯದೇ ಆಗಿದೆ. ಮಕ್ಕಳ ದಿನಾಚರಣೆಯ ಅಂಗವಾಗಿ ಹಲವಾರು ಮಕ್ಕಳುಗಳೊಡನೆ ಮುಖ್ಯಮಂತ್ರಿ ತನ್ನ ಪತ್ನಿಯೊಡಗೂಡಿ ನಿರ್ದಿಷ್ಟ ಸ್ಥಳಕ್ಕೆ ತೆರಳಲು ಬಸ್ಸನ್ನು ತರಿಸಿರುತ್ತಾರೆ. ದುಷ್ಕರ್ಮಿಗಳು ಮುಖ್ಯಮಂತ್ರಿಯನ್ನು ಕೊಲ್ಲಲು ವಿಶೇಷ ರೀತಿಯ ಬಾಂಬ್ಅನ್ನು ಜೋಡಿಸುತ್ತಾರೆ. ವಾಹನ ನಿರ್ದಿಷ್ಟ ವೇಗಕ್ಕಿಂತ ಹೆಚ್ಚು ವೇಗ ಪಡೆದ ತಕ್ಷಣ ಆ ಬಾಂಬ್ ಆನ್ ಆಗುತ್ತದೆ. ಮತ್ತೆ ಅ ವೇಗಕ್ಕಿಂತ ಕಡಿಮೆ ಬಂದಿತೆಂದರೆ ಬಾಂಬ್ ಸಿಡಿಯುತ್ತದೆ. ಹಾಗಾಗಿ ಆ ಮಿತಿಗಿಂತ ಕಡಿಮೆ ವೇಗ ಚಲಿಸುವುದಾಗಲಿ, ನಿಲ್ಲಿಸುವುದಾಗಲಿ ಸಾಧ್ಯವೇ ಇಲ್ಲ. ಇದೊಂದು ರೋಚಕ, ಕುತೂಹಲ ಉಕ್ಕಿಸುವ ಸನ್ನಿವೇಶ. ನಾಯಕ ನಟರಾದ ಶಶಿಕುಮಾರ್ ಮತ್ತು ಕುಮಾರ್ ಬಂಗಾರಪ್ಪ ತಮ್ಮ ಸಾಹಸ ಪ್ರದರ್ಶನದಿಂದ ಅ ಬಸ್ಸಿನ ವೇಗ ತಗ್ಗದಂತೆ ಎಚ್ಚರವಹಿಸಿ ಮತ್ತೊಂದು ವಾಹನದಲ್ಲಿ ಅದರ ಸರಿಸಮದಾಗಿ ಹೋಗಿ ತಮ್ಮ ವಾಹನಕ್ಕೆ ಮಕ್ಕಳನ್ನು, ಮುಖ್ಯಮಂತ್ರಿಗಳನ್ನು ಸ್ಥಳಾಂತರಿಸುತ್ತಾರೆ. ಈ ಸಾಹಸದಲ್ಲಿ ಸ್ಥಿರವಾದ ವೇಗ ಕಾಪಾಡಲು ಸುತ್ತಲಿನ ಅನೇಕ ವಾಹನಗಳಿಗೆ, ತಳ್ಳು ಗಾಡಿಗಳಿಗೆ ಬಸ್ಸು ಢಿಕ್ಕಿ ಹೊಡೆಯುತ್ತಾ ಸಾಗುತ್ತದೆ. ಜನರನ್ನು ಪಾರು ಮಾಡಲು ಹೋಗಿ ರಸ್ತೆಯ ವಿಭಾಜಕಗಳನ್ನು ಬಸ್ಸು ನೆಲಸಮ ಮಾಡುತ್ತದೆ. ಕೊನೆಗೆ ಎಲ್ಲರೂ ಪಾರಾದ ನಂತರ ಅದೆ ಬಸ್ಸು ಖಳನಾಯಕನಿಗೆ ಡಿಕ್ಕಿ ಹೊಡೆದು ಬಾಂಬ್ ಸ್ಫೋಟಿಸಿ ಖಳನೊಂದಿಗೆ ಬಸ್ ಕೂಡ ಭಸ್ಮವಾಗುತ್ತದೆ. ಈ ದೃಶ್ಯಗಳನ್ನು ಛಾಯಾಗ್ರಾಹಕ ಸುಂದರನಾಥ ಸುವರ್ಣ ಚಿತ್ರೀಕರಿಸಿಕೊಂಡಿದ್ದಾರೆ. ಸಮರ್ಥವಾಗಿ ಸಾಹಸ ನಿರ್ದೇಶಕರಾದ ಹರೀಶ್ ಶೆಟ್ಟಿ, ಸುರೇಶ್‌ರಾವ್, ಹಾಗೂ ನಂಜುಂಡಿ ನಾಗರಾಜ್ ಚಿತ್ರದ ಕೊನೆಯ ಹನ್ನೆರೆಡು ನಿಮಿಷಗಳು ಮೈನವಿರೇಳಿಸುವಂತೆ ಸಾಹಸ ಸಂಯೋಜಿಸಿದ್ದರು.

'ಪ್ರೇಮಲೋಕ' ದಲ್ಲಿ ನಾಯಕ ನಾಯಕಿಯನ್ನು ಕೂರಿಸಿಕೊಂಡು ಮೋಟಾರ್ ಬೈಕ್‌ನಲ್ಲಿ ಸಾಗುವಾಗ ಕಾರ್ಟನ್ ಬಾಕ್ಸ್ ತುಂಬಿದ ಲಾರಿಯೊಂದು ದಾರಿಗೆ ಅಡ್ಡವಾಗಿ ನಿಲ್ಲುತ್ತದೆ. ನಾಯಕ ಬೈಕನ್ನು ಲಾರಿಯ ಮೇಲೆ ಹಾರಿಸಿ ಮುನ್ನುಗ್ಗುತ್ತಾನೆ. ಮತ್ತೊಂದು ಲಾರಿ ದಾರಿಗೆ ಅಡ್ಡ ನಿಂತಾಗ ಲಾರಿಯ ಕೆಳಗಡೆ ಬೈಕನ್ನು ಅಡ್ಡವಾಗಿ ನಡೆಸಿಕೊಂಡು ಮುಂದೆ ಹೋಗುತ್ತಾನೆ. ಈ ರೀತಿಯಲ್ಲಿ ಸಾಹಸ ಮಾಡಬಲ್ಲ ಡ್ಯೂಪ್ ಕಲಾವಿದ ಜಾಲಿ ಬಾಸ್ಟಿನ್ ದೃಶ್ಯಕ್ಕೆ ಜೀವ ತುಂಬಿದ್ದರು.

ರಾಮು ನಿರ್ಮಾಣದ ಮತ್ತೊಂದು ಚಿತ್ರ 'ಎ.ಕೆ.47' ಹಲವಾರು ಅಂಶಗಳಿಂದ ವಿಶಿಷ್ಟವಾದದ್ದು. ರಾಮ್ ಶೆಟ್ಟಿ ಈ ಚಿತ್ರದ ಸಾಹಸ ನಿರ್ದೇಶಕರಾಗಿದ್ದರು. ಡಿ.ಟಿ.ಎಸ್ ತಂತ್ರಜ್ಞಾನದೊಂದಿಗೆ ಚೇಸಿಂಗ್ ದೃಶ್ಯಗಳಲ್ಲಿ ಸಾಕಷ್ಟು ಜೀಪು, ಕಾರುಗಳನ್ನು ಕ್ಯಾನಾನ್ ಬ್ಲಾಸ್ಟ್ ತಂತ್ರದ ಮೂಲಕ ಅತೀ ಎತ್ತರಕ್ಕೆ ಚಿಮ್ಮಿಸಿ ಉಡಾಯಿಸುವ ಹೊಸ ತಂತ್ರಜ್ಞಾನಗಳನ್ನು ಬಳಸಿ ಸಾಹಸ ದೃಶ್ಯಗಳನ್ನು ಹೆಚ್ಚು ಪ್ರಭಾವಶಾಲಿಯಾಗಿ ಕಾಣುವಂತೆ ಸಂಯೋಜನೆ ಮಾಡಿದ್ದರು.

ಒಟ್ಟಾರೆಯಾಗಿ ಗ್ರಾಫಿಕ್ ಮತ್ತು ಸ್ಪೆಷಲ್ ಎಫೆಕ್ಟ್‌ಗಳಿಗೂ ಪ್ರಾಧಾನ್ಯ ನೀಡಲಾಗಿತ್ತು. ಕ್ಯಾಮರಾ ಟ್ರಿಕ್‌ಗಳು, ಎಡಿಟಿಂಗ್ ಟೇಬಲ್ ಮೇಲೆ ಸಂಯೋಜಿಸುವ ಟ್ರಿಕ್ ಶಾಟ್‌ಗಳೂ ಚಿತ್ರದಲ್ಲಿ ಅತ್ಯಂತ ಯಶಸ್ವಿಯಾಗಿ ಬಳಕೆಯಾದವು. ಹಾಲಿವುಡ್-ಬಾಲಿವುಡ್ ಚಿತ್ರಗಳ ಅದ್ದೂರಿತನ, ಶ್ರೀಮಂತಿಕೆ ಚಿತ್ರದಲ್ಲಿ ಕ್ಯಾನನ್

(ಚಿತ್ರ ೩) ಮುಕ್ತ ಶೈಲಿ

ಬ್ಲಾಸ್ಟ್ ಮುಖಾಂತರ ಗ್ಯಾಸ್ ಸಿಲಿಂಡರ್ ಸಿಡಿಸಿ ಜೀಪು, ಕಾರುಗಳನ್ನು ಮೇಲಕ್ಕೆ ಹಾರಿಸುವ ಪದ್ಧತಿ ಈ ಚಿತ್ರದಲ್ಲಿ ಹೇರಳವಾಗಿ ಬಳಕೆಯಾಯಿತಲ್ಲದೆ ಸಾಕಷ್ಟು ಪ್ರಶಂಸೆಗೂ ಪಾತ್ರವಾಯಿತು. ಚೇಸಿಂಗ್ ದೃಶ್ಯಗಳಿರುವ ಚಿತ್ರಗಳಲ್ಲಿ ಸಾಹಸ ಕಲಾವಿದರು, ಡ್ಯೂಪ್‌ಗಳು ಹೆಚ್ಚು ರಿಸ್ಕ್‌ನಿಂದ ಕೆಲಸ ಮಾಡಬೇಕಾಗುತ್ತದೆ. ಬೈಕ್‌ನಿಂದ ಬೀಳುವಾಗ, ಹಾರುವಾಗ, ಬಸ್‌ಗಳ ಮೇಲೆಯೋ, ಕಾರು ಜೀಪು ಲಾರಿಗಳ ಮೇಲಿಂದಲೋ ಬೈಕ್ ಹಾರಿಸುವಾಗ ಮೈಯಲ್ಲಾ ಕಣ್ಣಾಗಿರಬೇಕು. ರಸ್ತೆಗಳಲ್ಲಿ ಆಯತಪ್ಪಿ ಬೀಳುವುದು, ಮತ್ತೊಂದು ವಾಹನಕ್ಕೆ ಅನಿರೀಕ್ಷಿತವಾಗಿ ಢಿಕ್ಕಿ ಹೊಡೆದು ಉರುಳುವುದು, ನೀರಿಗೆ ವಾಹನದ ಜೊತೆಗೇ ಎಗರುವುದು ಇಂತಹ ಪ್ರತಿಯೊಂದು ಸಂದರ್ಭದಲ್ಲಿಯೂ ಪ್ರಾಣವನ್ನು ಗರಿಷ್ಠ ಅಪಾಯಕ್ಕೊಡ್ಡಬೇಕಾಗುತ್ತದೆ.

'ಲೇಡಿ ಪೊಲೀಸ್', 'ಎಮರ್ಜೆನ್ಸಿ', 'ಸರ್ಕಲ್ ಇನ್ಸ್‌ಪೆಕ್ಟರ್', 'ಪೊಲೀಸ್ ಡೈರಿ', 'ಸೆಂಟ್ರಲ್‌ಜೈಲ್', 'ಜಾಕಿಚಾನ್', 'ರಫ್ ಅಂಡ್ ಟಫ್', 'ಲೇಡಿ ಕಮಿಷನರ್', 'ಲೇಡಿ ಟೈಗರ್', 'ಒನ್ ಮ್ಯಾನ್ ಆರ್ಮಿ', 'ಕಿಲ್ಲರ್ ಥ್ರಿಲ್ಲರ್', 'ಅಮರ್ ಅಕ್ಬರ್ ಅಂತೋಣಿ', 'ಓಂ ನಮಃ ಶಿವಾಯ' ಮುಂತಾದ ಅನೇಕ ಸಾಹಸ ಪ್ರಧಾನ ಚಿತ್ರಗಳಲ್ಲಿ ಅತ್ಯುತ್ತಮ ಎನಿಸುವ ಚೇಸಿಂಗ್ ಹಾಗೂ ಸಾಹಸ ದೃಶ್ಯಗಳನ್ನು ಚಿತ್ರಿಸಲಾಗಿತ್ತು.

ಸಾಹಸ ನಿರ್ದೇಶಕರ ದೃಶ್ಯ ಸಂಯೋಜನೆ ಒಂದೆಡೆಯಾದರೆ ಅಂಥ ಚಿತ್ರಗಳನ್ನು ನಿರ್ದೇಶಿಸುವಲ್ಲಿ ಹೆಚ್ಚು ಒಲವು ತೋರಿಸಿದ್ದವರು ನಿರ್ದೇಶಕ ಓಂ ಪ್ರಕಾಶ್. 'ಲಾಕಪ್ ಡೆತ್', 'ಎ.ಕೆ. 47'ನಿಂದ ಹಿಡಿದು ಅನೇಕ ಚಿತ್ರಗಳು ಸಾಹಸ ಪ್ರಧಾನವಾಗಿದ್ದವು. ಇದೇ ಸಾಹಸವನ್ನೇ ಬಂಡವಾಳವಾಗಿರಿಸಿಕೊಂಡು ಓಂ ಪ್ರಕಾಶ್ ತುಂಬಾ ಮಹತ್ವಾಕಾಂಕ್ಷೆಯಿಂದ ನಿರ್ದೇಶಿಸಿದ ಚಿತ್ರ 'ವಂದೇ ಮಾತರಂ'. ಜಯಶ್ರೀದೇವಿ ಈ ಚಿತ್ರದ ನಿರ್ಮಾಪಕಿ. 'ದಕ್ಷಿಣದ ಅಮಿತಾಬ್' ಎಂದೇ ಸಾಹಸಕ್ಕಾಗಿ ಖ್ಯಾತಿಗಳಿಸಿದ ನಟಿ ವಿಜಯಶಾಂತಿ ಈ ಚಿತ್ರದ ಮುಖ್ಯ ಪಾತ್ರದಲ್ಲಿ ನಟಿಸಿದರು. ಬಹುಕಾಲದ ನಂತರ ಅಂಬರೀಷ್ ಕೂಡಾ ತಮ್ಮ ಹಳೆಯ ಚಿತ್ರಗಳನ್ನು ನೆನಪಿಸುವಂತೆ ರೆಬೆಲ್‌ಸ್ಟಾರ್ ಆಗಿಯೇ ಈ ಚಿತ್ರವಲ್ಲಿ ಕಾಣಿಸಿಕೊಂಡರು. ಸಾಹಸದ ಅನೇಕ ಆಯಾಮಗಳನ್ನು 'ವಂದೇ ಮಾತರಂ' ಚಿತ್ರದಲ್ಲಿ ಅತ್ಯದ್ಭುತವಾಗಿ ಸಂಯೋಜಿಸಲಾಗಿತ್ತು. ಟಿ.ಜನಾರ್ಧನ್ ಅವರ ಕ್ಯಾಮೆರಾ ಕೈ ಚಳಕ ಕೂಡಾ ಇಂಥ ಸಾಹಸ ದೃಶ್ಯಗಳನ್ನು ಯಶಸ್ವಿಯಾಗಿ ಸೆರೆಹಿಡಿಯುವಲ್ಲಿ ಸಹಕರಿಸಿತ್ತು. ಚಿತ್ರ ನಿರೀಕ್ಷಿತ ಯಶಸ್ಸು ಪಡೆಯದೇ ಇದ್ದರೂ ಇದರ ಸಾಹಸ ದೃಶ್ಯದ ಭಾಗಗಳು ಆಂಗ್ಲ ಭಾಷೆಯ ಚಿತ್ರಗಳನ್ನು ನೆನಪಿಗೆ ತರುವಷ್ಟು ಸೊಗಸಾಗಿದ್ದವು.

ಕರಾಟೆ, ಜ್ಯೂಡೋ

ಕನ್ನಡ ಚಿತ್ರರಂಗದಲ್ಲಿ ಸಾಹಸ ನಿರ್ದೇಶಕರಾಗಿ ಜ್ಯೂಡೋ ರತ್ನಂ, ಅಂಬೂರ್ ಬಾಬು ಮೊದಲಾದವರು ಬಂದ ಮೇಲೆ ಸಾಹಸದ ಪರಿ ಬೇರೆಯೇ ದಿಕ್ಕಿನಲ್ಲಿ ಸಾಗತೊಡಗಿತು. ಚಿತ್ರದಿಂದ ಚಿತ್ರಕ್ಕೆ ಒಬ್ಬ ನಾಯಕನಿಂದ ಮತ್ತೊಬ್ಬ ನಾಯಕನಿಗೆ ಭಿನ್ನ ವಿಭಿನ್ನ ರೀತಿಯ ಸಾಹಸ ಸಂಯೋಜನೆಯಲ್ಲಿ ಪ್ರಯೋಗಗಳು ಆರಂಭವಾದವು. ಪಾಶ್ಚಿಮಾತ್ಯ ಸಾಹಸಗಳ ಅನುಕರಣೆ, ಸ್ಟಂಟ್‌ಗಳ ಬಳಕೆ ಹೆಚ್ಚಾಯಿತು. ಫೈಟ್‌ಗಳ ಏಕರೂಪತೆ ಹೋಗಿ ಹೊಸತನದ ಹುಡುಕಾಟ ಆರಂಭವಾಯಿತು. ಅದೇ ಹೊತ್ತಿಗೆ ಬ್ರೂಸ್‌ಲಿ ಅಭಿನಯದ 'ಎಂಟರ್ ದಿ ಡ್ರಾಗನ್' ಚಿತ್ರ ಇಡೀ ವಿಶ್ವದಲ್ಲಿ ಮಾಂತ್ರಿಕವೆನಿಸುವ ಯಶಸ್ಸನ್ನು ಗಳಿಸಿತ್ತು. ಕನ್ನಡದಲ್ಲಷ್ಟೇ ಅಲ್ಲ, ಬ್ರೂಸ್‌ಲಿ ಅಲೆ ಇಡೀ ವಿಶ್ವದೆಲ್ಲೆಡೆ ಹರಡಿತ್ತು. ಹಾಲಿವುಡ್‌ನ ಗನ್, ಬಾಂಬ್ ಫೈಟಿಂಗ್ ಹಿಂದೆ ಬಿದ್ದು ನಾಯಕನ ವ್ಯಕ್ತಿಗತ ಶೌರ್ಯ, ಸಾಹಸಗಳು ಮುನ್ನೆಲೆಗೆ ಬಂದವು. ನಂತರದ ಚಿತ್ರಗಳ ಸಾಹಸಗಳು ಎರಡೂ ಶೈಲಿಯ ಮಿಶ್ರಣವಾಗಿ ಆಯಾ ಕಲಾವಿದರ ಹಾಗೂ ಸಾಹಸ ನಿರ್ದೇಶಕರ ಜಾಣ್ಮೆಗನುಗುಣವಾಗಿದ್ದವು. ಕನ್ನಡದಲ್ಲಿ ವಿಜಯನ್ ಇದಕ್ಕೆ ಹೆಸರಾಗಿದ್ದರು.

ಬ್ರೂಸ್‌ಲಿಯಿಂದ ಪ್ರಾರಂಭವಾದ ಪ್ರಭಾವದ ಅಲೆ ಜಾಕಿಚಾನ್‌ವರೆಗೂ ಮುಂದುವರೆಯಿತು. ಜಾಕಿಚಾನ್ ಚಿತ್ರಗಳಲ್ಲಿ ಕೇವಲ ಕರಾಟೆಯಷ್ಟೇ ಅಲ್ಲದೆ ಇನ್ನಿತರ ಅಪಾಯಕಾರಿ ಸಾಹಸಗಳು, ಸಾಹಸದಲ್ಲೂ ಹಾಸ್ಯ ಇತ್ಯಾದಿ ಪ್ರಯೋಗಗಳಿರುತ್ತಿದ್ದವು. ಇಂಥ ಚಿತ್ರಗಳ ಸ್ಫೂರ್ತಿಯಿಂದ ನಾಯಕ ಕರಾಟೆ ಮೂಲಕ ಶತ್ರುಗಳನ್ನು ಸದೆಬಡಿಯುವ ಅನೇಕ ಚಿತ್ರಗಳು ಬಂದವು. ಕರಾಟೆ ಶೈಲಿಯನ್ನು ಆರಂಭದಲ್ಲಿ ಪ್ರೇಕ್ಷಕನೂ ಕುತೂಹಲದಿಂದ ನೋಡಿದ. ನಟ ಶಂಕರ್‌ನಾಗ್ 'ಕರಾಟೆಕಿಂಗ್' ಎನ್ನುವ ಬಿರುದನ್ನೂ ಹೊಂದಿದ್ದರು. ಅರ್ಜುನ್ ಸರ್ಜಾ ಮೊದಲಾದವರು ಹೊಡೆದಾಟಗಳಲ್ಲಿ ಕರಾಟೆ ಬಳಸುತ್ತಿದ್ದರು.

'ನನ್ನ ರೋಷ ನೂರು ವರುಷ' ಚಿತ್ರದಿಂದ ಸ್ವತಂತ್ರ ನಿರ್ದೇಶಕರಾದ ಜೋಸೈಮನ್ ಸಾಹಸ ಚಿತ್ರಗಳನ್ನೇ ನೀಡುತ್ತಾ ಬಂದರು. ವಿಷ್ಣುವರ್ಧನ್ ಅಭಿನಯಿಸಿ ವಿಜಯನ್ ಸಾಹಸ ಸಂಯೋಜಿಸಿದ ಚಿತ್ರ 'ಸಾಹಸಸಿಂಹ' ಚಿತ್ರದ ವಿಶಿಷ್ಟ ಸಾಹಸ ಮತ್ತು ಯಶಸ್ಸಿನಿಂದಾಗಿ ನಾಯಕ ವಿಷ್ಣುವರ್ಧನ್‌ಗೆ 'ಸಾಹಸಸಿಂಹ' ಎಂಬ ಬಿರುದೇ ಬಂದಿತ್ತು. ಈ ಚಿತ್ರದ ಸಾಹಸ ಹೆಚ್ಚು ಜನಪ್ರಿಯವಾಗಲು ಕಾರಣ ನಾಯಕ, ಖಳನಾಯಕರು ನೇರ ಹೊಡೆದಾಟಕ್ಕೆ ಹೋಗದೆ ಚೇಸ್ ಮಾಡುತ್ತಾ ಒಬ್ಬರನ್ನೊಬ್ಬರು ಹುಡುಕುತ್ತಾ ವಿವಿಧ ಕೋನಗಳಲ್ಲಿ ನಿಲ್ಲುತ್ತ, ಕಣ್ಣಾಡಿಸುತ್ತಾ ನೋಡುವ ಮುಂತಾದ ಹೊಸಬಗೆಯಿಂದಾಗಿ ಪ್ರೇಕ್ಷಕರಲ್ಲಿ ಕುತೂಹಲ ಉಂಟು ಮಾಡಿತು. ಖಳನಾಯಕರು ತಮ್ಮ ವೈರಿಗಳನ್ನು ಸುಮಾರು ಏಳು ಅಡಿಗಳ ಎತ್ತರದ ದೊಡ್ಡ ಘಂಟೆಯೊಳಗೆ ಅವರ ಕೈಕಟ್ಟಿ ನಿಲ್ಲಿಸಿ ಹೊರಗಿನಿಂದ ದೊಡ್ಡ ಸುತ್ತಿಗೆಯಿಂದ ಬಾರಿಸಿದಾಗ ಘೋರ ಕರ್ಣಕಠೋರ ಶಬ್ದದ ತರಂಗಗಳಿಂದ ಕಿವಿ ಮೂಗುಗಳಲ್ಲಿ ರಕ್ತ ಬಂದು ಆತ ಸಾಯುತ್ತಾನೆ. ಈ ಹೊಸತನಗಳೊಂದಿಗೆ, ಕರಾಟೆ ಶೈಲಿಯಲ್ಲಿ ನಾಯಕ ಎದುರಾಳಿಗಳನ್ನು ಸದೆ ಬಡಿವ ಸಾಹಸ ಜನಕ್ಕೆ ಬಹು ಮೆಚ್ಚಿಗೆಯಾಯಿತು. ಆಂಗ್ಲ ಚಿತ್ರವೊಂದರಲ್ಲಿ ಕಿವಿಗೆ ಶಬ್ದ ತರಂಗಗಳ ಮೂಲಕ ಕಿರುಕುಳ ಕೊಡುವ ದೃಶ್ಯದಿಂದ ಸ್ಫೂರ್ತಿಗೊಂಡು ಘಂಟೆ ಮಾದರಿಯನ್ನು ಈ ಚಿತ್ರಕ್ಕೆ ಅಳವಡಿಸಲಾಯಿತೆಂದು ಜೋಸೈಮನ್ ಹೇಳುತ್ತಾರೆ.

ಬ್ರೂಸ್ ಲೀ ನಟಿಸಿದ 'ಫ್ರಿನ್ಸ ಆಫ್ ಫ್ಯೂರಿ' ಚಿತ್ರವನ್ನು ವಿದೇಶದಿಂದ ತರಿಸಿ ಜೋಸೈಮನ್, ವಿಷ್ಣುವರ್ಧನ್, ವಿಜಯನ್ ನೋಡಿ ಅದೇ ಬಗೆಯ ಸಾಹಸವನ್ನು 'ಸಾಹಸ ಸಿಂಹ' ಚಿತ್ರದಲ್ಲಿ ಅಳವಡಿಸಿದ್ದರು. ಈ ಚಿತ್ರದ ಸ್ಟಂಟ್ ಫೈಟ್‌ಗಳು ಕನ್ನಡ ಚಿತ್ರರಂಗದಲ್ಲಿ ಒಂದು ಹೊಸ ತಿರುವನ್ನೇ ತಂದವು.

ಜಪಾನಿ ಭಾಷೆಯಲ್ಲಿ ಕರಾಟೆ ಎಂದರೆ 'ಬರಿಮುಷ್ಟಿ' ಎಂದರ್ಥ. ಅದರ ಮೂರು ವಿಶಿಷ್ಟ ಅಂಶಗಳೆಂದರೆ ಪಟ್ಟು, ಹಿಡಿತ, ಒದೆತ. ಒಬ್ಬ ಒದೆತ ಕೊಡುತ್ತಾ ಹೋದಂತೆ ಮತ್ತೊಬ್ಬ ಅದನ್ನು ತಡೆಯುವುದು, ಪುನಃ ಈತ ಒದೆ ಕೊಟ್ಟಾಗ ಮೊದಲಿನವನು ತಡೆಯುವುದು. ಕೈಕಾಲಿನ ಚಲನೆಯಲ್ಲಿ ಕ್ಷಣಮಾತ್ರದ ವ್ಯತ್ಯಾಸವಾದರೂ ಮುಖಕ್ಕೋ, ಹೊಟ್ಟೆಗೋ ಒದೆ ಬೀಳುತ್ತದೆ. ಇದರಲ್ಲಿ ಸುಮಾರು ಹನ್ನೆರಡು ಬಗೆಯ ಒದೆಗಳು ಮತ್ತು ಹದಿನಾಲ್ಕು ಬಗೆಯ ಕೈಗುದ್ದುಗಳಿವೆ. ಬೆರಳಿನಿಂದ, ಬೆರಳುಗಳಿಂದ, ಅಂಗೈ ಮತ್ತು ಮಡಿಸಿದ ಬೆರಳುಗಳ ತುದಿಯಿಂದ, ಮೊಣಕೈಯಿಂದ ನೀಡುವಂತಹ ಕೆಲವು ಬಗೆಯ ಹೊಡೆತಗಳು ಚಾಲ್ತಿಯಲ್ಲಿವೆ.

ಚಲನಚಿತ್ರಗಳಲ್ಲಿ ಕರಾಟೆ ಆಡುವವರು ತಮ್ಮ ಕುತ್ತಿಗೆ, ಕಾಲು, ಸೊಂಟಗಳ ಹಿಡಿತವನ್ನು ಮೊದಲು ಅಭ್ಯಾಸ ಮಾಡಿರಬೇಕು. ಒದೆಯುವಾಗ ಅಥವಾ ಹೊಡೆಯುವಾಗ ಜೋರಾಗಿ ಅರಚುವುದರಿಂದ ಒದೆ ಜೋರಾಗಿ ಬೀಳುತ್ತದೆಂಬ ನಂಬಿಕೆ ಇರುವುದರಿಂದ ನೈಜತೆಗಾಗಿ ಚಲನಚಿತ್ರಗಳಲ್ಲೂ ಅದನ್ನು ಬಳಸಿಕೊಂಡಿದ್ದಾರೆ. ಮೈಮರೆತು ತೀರಾ ತಲ್ಲೀನತೆಯಿಂದ ಸ್ಪರ್ಧಿಸುವಾಗ ಗಾಯ ಅಥವಾ ಸಾವೂ

ಸಂಭವಿಸಬಹುದು. ಆದ್ದರಿಂದ ಎಚ್ಚರಿಕೆಯಿಂದ ಹೊಡೆತ, ಒದೆತಗಳನ್ನು ಕೊಡುವುದು ಬಹಳ ಮುಖ್ಯ.

ಕರಾಟೆ ಪಟುಗಳು ಬಿಳಿಬಣ್ಣದ ಪಾಯಜಾಮ, ಸ್ವಲ್ಪ ಸಡಿಲವಾದ ನಡುವಂಗಿಯನ್ನು ತೊಟ್ಟು, ಸೊಂಟಕ್ಕೆ ಕಲಿಕೆಯ ಹಂತದ ಸೂಚಕವಾಗಿ ಬಿಳಿ, ಕಂದು, ಹಸಿರು, ಕಪ್ಪು, ಕೆಂಪು ಮುಂತಾದ ಪಟ್ಟಿಯನ್ನು ಧರಿಸುತ್ತಾರೆ. ಕರಾಟೆಯಂತೆಯೇ ಜಪಾನಿನ ಮತ್ತೊಂದು ಸಾಹಸ ಕ್ರೀಡೆಯೆಂದರೆ ಜ್ಯೂಡೊ. ಇದೂ ಕೂಡಾ ಚಲನಚಿತ್ರಗಳಲ್ಲಿ ಸಾಕಷ್ಟು ಬಳಕೆಯಾಗಿದೆ. ಸಾಹಸ ನಿರ್ದೇಶಕ ರತ್ನಂ ತಮ್ಮ ಹೆಸರಿನ ಹಿಂದೆ ಜ್ಯೂಡೋ ಸೇರಿಸಿ 'ಜ್ಯೂಡೋರತ್ನಂ' ಎಂದೇ ಕರೆಸಿಕೊಂಡಿದ್ದಾರೆ. ಈ ಕಲೆ ಜಪಾನಿನ 'ಜೂಜಿತ್ಸೊ' ಎಂಬ ಅಪಾಯಕಾರಿ ಆಟದ ಸುಧಾರಿತ ರೂಪ. ೧೮೮೨ರಲ್ಲಿ ಡಾ|ಜಿಗೋಶಿ ಎಂಬುವವರು ಟೋಕಿಯೋದಲ್ಲಿ ಒಂದು ಇನ್‌ಸ್ಟಿಟ್ಯೂಟ್ ತೆರೆದು ಜೂಜಿತ್ಸುವಿನ ಕೆಲವು ಅಪಾಯಕಾರಿ ತಂತ್ರಗಳನ್ನು ತೆಗೆದು ಹಾಕಿ ಉತ್ತಮ ವಿಧಾನಗಳನ್ನು ಉಳಿಸಿಕೊಂಡು ಅದನ್ನು 'ಜ್ಯೂಡೋ' ಎಂದು ಕರೆದರು.

ಜ್ಯೂಡೋ ನಲ್ಲಿ ಶಕ್ತಿಯನ್ನು ಶಕ್ತಿಯಿಂದಲೇ ಎದುರಿಸಬೇಕೆಂಬ ನಿಯಮ ಸುಳ್ಳಾಗುತ್ತದೆ. ಎದುರಾಳಿ ಎಷ್ಟು ಬಲಿಷ್ಠನೊ ಅಷ್ಟು ವೇಗದಿಂದ ಬಂದು ಆತನ ಮೇಲೆ ಆಕ್ರಮಣ ಮಾಡುವುದು, ಎದುರಾಳಿಯೂ ಅಷ್ಟೇ ವೇಗದಿಂದ ನೆಲಕ್ಕೆ ಉರುಳಿದರೆ ಅವರ ಒದೆತ ಬಲವಾಗಿದ್ದು ಜ್ಯೂಡೋ ಕಲೆ ಆತನಿಗೆ ಕರಗತವಾಗಿದೆ ಎಂದರ್ಥ. ಜ್ಯೂಡೋದಲ್ಲಿ ಮೊದಲು ಕಲಿಯಬೇಕಾದ್ದು ಬೀಳುವುದನ್ನು. ಎದುರಾಳಿ ಬಿದ್ದಾಗ ದೇಹ ಸಡಿಲ ಮಾಡಿಕೊಂಡು ಒಂದೇ ಬಾರಿಗೆ ನೆಲ ಮುಟ್ಟುವಂತೆ ಬೀಳಬೇಕು. ಹಾಗೆ ಬೀಳುವಾಗ ದಢಾರೆಂದು ಸದ್ದಾದರೂ ಏನೂ ಅಪಾಯವಾಗುವುದಿಲ್ಲ.

ಚಲನಚಿತ್ರಗಳಲ್ಲಿ ಸಾಹಸ ಸಂಯೋಜಕರು ಈ ಎಲ್ಲಾ ಅಂಶಗಳನ್ನು ಯಥಾವತ್ತಾಗಿ ಅನುಕರಿಸಲು ಸಾಧ್ಯವಾಗದಿದ್ದರೂ ಆ ಭಾವನೆ ಪ್ರೇಕ್ಷಕನಿಗೆ ಬರುವಂತೆ ಸಂಯೋಜನೆ ಮಾಡಬೇಕಾಗುತ್ತದೆ. ಈ ಕಾರಣಗಳಿಗಾಗಿಯೇ ವಿಷ್ಣುವರ್ಧನ್, ಶಂಕರ್‌ನಾಗ್, ಪ್ರಭಾಕರ್, ಚರಣ್‌ರಾಜ್, ಅರ್ಜುನ್‌ಸರ್ಜಾ ಮೊದಲಾದ ನಾಯಕರು ಹಲವಾರು ಭಂಗಿಗಳಲ್ಲಿ ನಿಂತು ಅಭಿನಯಿಸಿ ಎದುರಾಳಿಯ ಮೇಲೆ ಆಕ್ರಮಣ ಮಾಡುವುದರಿಂದ ನೈಜತೆ ಗೋಚರವಾಗುತ್ತದೆ.

ಕರಾಟೆಗೆ ಒಗ್ಗಿಕೊಳ್ಳುವಂತಹ ತೆಳುವಾದ ಮೈ ಬಲಿಷ್ಠವಾದ ರಟ್ಟೆಗಳನ್ನು ಪ್ರದರ್ಶಿಸುತ್ತಾ ವಿಭಿನ್ನ ಭಾವ ಭಂಗಿಗಳಲ್ಲಿ ನಿಂತು ಕರಾಟೆ ಆಡುವಂತಹ ನಟ ಕರಾಟೆ ರಾಮಕೃಷ್ಣ ಹೆಗಡೆ. 'ಪ್ರಚಂಡ ಪುಟಾಣಿಗಳು' ಚಿತ್ರದಲ್ಲಿ ಈ ರೀತಿಯ ಕರಾಟೆಯಿಂದ ವೈರಿಪಡೆಯನ್ನು ನುಚ್ಚು ನೂರು ಮಾಡುವ ಶೈಲಿ ಜನ ಮನ್ನಣೆ ಪಡೆಯಿತು. ಪ್ರೇಕ್ಷಕನಿಗೆ ಕರಾಟೆಯ ವಿವಿಧ ಭಂಗಿಗಳ ನಿಲುವುಗಳೇ ಆಕರ್ಷಣೀಯವೆನಿಸುತ್ತದೆ.

'ಸಿಂಹದ ಮರಿ ಸೈನ್ಯ' ಚಿತ್ರದಲ್ಲಿ ಅರ್ಜುನ್‌ಸರ್ಜಾ ಕಳ್ಳರ ಗುಂಪನ್ನು ಭೇದಿಸಲು ಈ ತಂತ್ರವನ್ನು ಅನುಸರಿಸುತ್ತಾರೆ. 'ಸೀತಾ ರಾಮು' ಚಿತ್ರದಲ್ಲಿ ಶಂಕರ್‌ನಾಗ್ ಮತ್ತು ಮಂಜುಳಾಗಾಗಿ ಈ ಕಲೆಯನ್ನು ಬಳಸಲಾಗಿತ್ತು. ಇಂಥ ಕಡೆ ವೈ.ಶಿವಯ್ಯ ಹಲವು ವಿಭಿನ್ನ ರೀತಿಯ ಹೊಡೆದಾಟಗಳನ್ನು ಮಿಶ್ರಮಾಡಿ ಸಂಯೋಜಿಸಿದ್ದರು. ಟೈಗರ್ ಪ್ರಭಾಕರ್ ಅಭಿನಯದ ಬಹುತೇಕ ಚಿತ್ರಗಳಲ್ಲಿ ಕರಾಟೆ ಮಿಶ್ರಿತ ಹೊಡೆದಾಟದ ದೃಶ್ಯಗಳಿವೆ. ಹೊಸ ಇತಿಹಾಸ, ಚಂಡಿ ಚಾಮುಂಡಿ, ಟೈಗರ್, ಬಂಧಮುಕ್ತ, ಜೇಡಿ, ಭರತ್, ರೇಂಜರ್ ಮುಂತಾದ ಚಿತ್ರಗಳನ್ನು ಇಲ್ಲಿ ಹೆಸರಿಸಬಹುದು. ಹಲವಾರು ಚಿತ್ರಗಳಿಗೆ ಸ್ವತಃ ತಾವೇ ಸಾಹಸ ನಿರ್ದೇಶಕರಾಗಿ ಈ ಕಲೆಯನ್ನು ಪ್ರಭಾಕರ್ ತಮ್ಮ ಚಿತ್ರಗಳಲ್ಲಿ ಸಂಯೋಜಿಸಿಕೊಂಡಿದ್ದರು. ಎಸ್.ವಿ.ರಾಜೇಂದ್ರ ಸಿಂಗ್ ನಿರ್ದೇಶನದ 'ಕಿಲಾಡಿಜೋಡಿ' ಚಿತ್ರದಲ್ಲಿ 'ಆಡಬೇಕು.. ಕರಾಟೇ ಆಡಬೇಕು...' ಎನ್ನುವ ಹಾಡನ್ನೇ ಸಂಯೋಜಿಸಿ ಚಿತ್ರಿಸಲಾಗಿತ್ತು. ಎಂಬತ್ತರ ದಶಕದಲ್ಲಿ ವಿಷ್ಣುವರ್ಧನ್ ನಟಿಸಿದ 'ಆರಾಧನೆ' ಚಿತ್ರದಲ್ಲೂ ಕರಾಟೆ ಪ್ರಧಾನವಾಗಿತ್ತು.

ಇತರ ಸಾಹಸಗಳು

ಹಿಂದಿಯಲ್ಲಿ 'ಶೋಲೆ' ಚಿತ್ರದ ಯಶಸ್ಸು ಇತರ ಭಾಷಾ ಚಿತ್ರಗಳ ಮೇಲೆ ಒಂದಲ್ಲ ಒಂದು ರೀತಿಯಲ್ಲಿ ಪರಿಣಾಮ ಬೀರಿದೆ. ಅಷ್ಟು ಅದ್ದೂರಿಯಾಗಿ, ಅತ್ಯುತ್ತಮ ತಾಂತ್ರಿಕ ಹಿನ್ನೆಲೆಯಲ್ಲಿ ನಿರ್ಮಿಸುವುದು ಎಲ್ಲರಿಗೂ ಸಾಧ್ಯವಾಗದಿದ್ದರೂ ಅದರ ಕೆಲವು ಅಂಶಗಳನ್ನು ಮಾತ್ರ ತಮ್ಮ ತಮ್ಮ ಚಿತ್ರಗಳಲ್ಲಿ ಅಳವಡಿಸಿಕೊಂಡರು.

ಹಾಗ ಅಮದಾದ ಅಂಶಗಳಲ್ಲಿ ರೈಲು ಸಾಹಸ ಪ್ರಮುಖವಾಗುತ್ತದೆ. ರೈಲು ಬೋಗಿಗಳ ಮೇಲೆ ಓಡುವ ಸಂದರ್ಭಗಳಲ್ಲಿ ಅತಿಯಾದ ಎಚ್ಚರ ಇರಬೇಕು. ಬೋಗಿಗಳ ಮೇಲ್ಭಾಗ ಸಮತಟ್ಟಾಗಿರದೆ ಕಮಾನಿನಂತೆ ಬಾಗಿರುವುದರಿಂದ ಓಡುವಾಗ, ಅದರಲ್ಲೂ ಚಲಿಸುವ ರೈಲಿನ ಮೇಲೆ ಓಡುವಾಗ ಜಾರುವ ಸಾಧ್ಯತೆಗಳು ಹೇರಳವಾಗಿರುತ್ತವೆ. ಆದ್ದರಿಂದಲೇ ಅಂತಹ ಸಂದರ್ಭಗಳಲ್ಲಿ ಆದಷ್ಟು ನೀರು, ಹುಲ್ಲು, ಅಕ್ಕಪಕ್ಕದಲ್ಲಿ ಲಭ್ಯವಿರುವಂತಹ ಸ್ಥಳಗಳನ್ನು ಚಿತ್ರೀಕರಣಕ್ಕೆ ಆಯ್ಕೆ ಮಾಡುತ್ತಾರೆ. ಓಡುವ ರೈಲನ್ನು ಏರುವುದು, ರೈಲಿನಿಂದ ಹಾರುವುದು ಮುಂತಾದ ಅಪಾಯಕಾರಿ ಸಾಹಸ ದೃಶ್ಯಗಳಲ್ಲಿ ಭಾಗವಹಿಸುವವರು ತಕ್ಕ ತರಬೇತಿ ಪಡೆದಿರಲೇ ಬೇಕಾಗುತ್ತದೆ.

'ಸಿಂಹದ ಮರಿ ಸೈನ್ಯ' ಚಿತ್ರದಲ್ಲಿ ಮಕ್ಕಳು ಹಗ್ಗದ ಸೇತುವೆಯ ಸಹಾಯದಿಂದ ಒಂದು ದಡದಿಂದ ಮತ್ತೊಂದು ದಡಕ್ಕೆ ದಾಟುವಾಗ ಸೇತುವೆ ತುಂಡಾಗುತ್ತದೆ. ಕೆಲವರು ಸೇತುವೆ ದಾಟಿ ದಡ ಮುಟ್ಟಿದರೂ ಉಳಿದೊಬ್ಬ ದಾಟಲು ಪ್ರಯತ್ನಿಸುವಾಗ ಹಗ್ಗವು ಭಾರ ತಾಳದೆ ಕತ್ತರಿಸಿ ಹೋಗುತ್ತದೆ. ಕೆಳಗಡೆ ನೀರಿನ ಪ್ರಪಾತವಿರುತ್ತದೆ. ಭಯದಿಂದ ಉಳಿದೊಬ್ಬನನ್ನು ಕಾಪಾಡಲು ಎಲ್ಲರೂ ತವಕಿಸುತ್ತಾರೆ. ನಾನಾ ಯೋಜನೆಗಳನ್ನು ಹಾಕಿ ಕೊನೆಗೆ ಸಾಹಸದಿಂದ ಸೇತುವೆಯ ಕೊನೆಯಲ್ಲಿ ನೇತಾಡುತ್ತಿದ್ದವನನ್ನು ಪಾರು ಮಾಡುತ್ತಾರೆ. ಇಂತಹ ಸಾಹಸಗಳಲ್ಲಿ ಕೋತಿ, ನಾಯಿಯಂತಹ ಪ್ರಾಣಿಗಳೂ ಸಹಾಯಕರಾಗಿ ಕೆಲಸ ಮಾಡುವುದು ಚಲನಚಿತ್ರ ಶೈಲಿ.

ಎತ್ತರದ ಪರ್ವತಗಳನ್ನು ಏರುವಾಗಲೂ ಇಳಿಯುವಾಗಲೂ ಸಾಹಸ ಅವಶ್ಯ. ಪರ್ವತಗಳು ಬರೀ ಕಲ್ಲು ಬಂಡೆಗಳಿಂದ ತುಂಬಿರಬಹುದು ಅಥವಾ ಹಿಮಾವೃತವಾಗಿರಬಹುದು. ಈ ಎರಡೂ ರೀತಿಯ ಪರ್ವತಗಳನ್ನು ಹತ್ತುವಾಗ ವಿಭಿನ್ನ ಬಗೆಯ ಸಮಸ್ಯೆಗಳು ಎದುರಾಗುತ್ತವೆ. ಅವುಗಳನ್ನು ಏರುವ ವಿಧಾನದಲ್ಲೂ ವ್ಯತ್ಯಾಸವಿದೆ. ಕನ್ನಡ ಚಿತ್ರಗಳಲ್ಲಿ ಹಿಮಪ್ರದೇಶಗಳ ಪರ್ವತಾರೋಹಣ ಅಷ್ಟು ಗಮನಾರ್ಹವಾಗಿ ಬಳಕೆ ಆಗಿಲ್ಲವಾದರೂ ಬಂಡೆಕಲ್ಲುಗಳ ಪರ್ವತಾರೋಹಣ ಕೆಲವು ಚಿತ್ರಗಳಲ್ಲಿದೆ. ಖಳನಾಯಕರ ತಾಣಗಳು ಸಾಮಾನ್ಯವಾಗಿ ಬೆಟ್ಟ ಗುಡ್ಡಗಳಲ್ಲೇ ಇರುವುದರಿಂದ ಅನೇಕ ಚಿತ್ರಗಳ ಕ್ಲೈಮಾಕ್ಸ್ ದೃಶ್ಯಗಳು ಬೆಟ್ಟಗಳಲ್ಲೇ ಆಗಿರುವುದಿದೆ.

ಸ್ಥಳ ಮತ್ತು ಹವಾಗುಣಕ್ಕೆ ಅನುಗುಣವಾದ ಎಚ್ಚರಿಕೆ ಚಿತ್ರತಂಡಕ್ಕೆ ಇರಬೇಕಾದ್ದು ಅಗತ್ಯ. ಸಾಹಸ ನಿರ್ದೇಶಕ ಎಲ್ಲವನ್ನೂ ಕೂಲಂಕಷವಾಗಿ ಅಧ್ಯಯನ ಮಾಡಿಯೇ ಷೂಟಿಂಗ್ ವ್ಯವಸ್ಥೆ ಮಾಡಬೇಕಾಗುತ್ತದೆ. ಚಲನಚಿತ್ರಗಳಲ್ಲಿ ಕಟ್ಟಡಗಳನ್ನೇರಲು ಮನೆಯ ಪೈಪುಗಳನ್ನೊ, ಹಗ್ಗವನ್ನೊ ಬಳಸಲಾಗುತ್ತದೆ. ಹಗ್ಗ ಹಿಡಿದು ಕಟ್ಟಡದ ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ ಹಾರುವ ಸನ್ನಿವೇಶಗಳು ಸಾಮಾನ್ಯವಾಗಿ ಎಲ್ಲ ನಟರ ಚಿತ್ರಗಳಲ್ಲೂ ಬಳಕೆಯಾಗಿದೆ.

'ಅಜಿತ್', 'ಹಾಂಗ್‌ಕಾಂಗ್‌ನಲ್ಲಿ ಏಜೆಂಟ್ ಅಮರ್', 'ನಿಷ್ಕರ್ಷ', 'ಬಯಲುದಾರಿ', 'ಸಿಂಹದ ಮರಿ ಸೈನ್ಯ' ಮುಂತಾದ ಚಿತ್ರಗಳಲ್ಲಿ ಹೆಲಿಕಾಪ್ಟರ್ ಬಳಸಿ

(ಚಿತ್ರ ೪) ಕಲರಿಪಯಟ್ ಶೈಲಿಯ ಕತ್ತಿವರಸೆ

ಸಾಹಸವನ್ನು ಚಿತ್ರಿಸಲಾಗಿದೆ. ಮೇಲೆ ಹಾರುತ್ತಿರುವ ಹೆಲಿಕಾಪ್ಟರ್‌ಗೆ ಹಗ್ಗ ಎಸೆದು ಕುಣಿಕೆ ಹಾಕಿ ಹೆಲಿಕಾಪ್ಟರ್ ಜೊತೆಗೆ ಗಾಳಿಯಲ್ಲಿ ಹಗ್ಗದ ಸಹಾಯದಿಂದ ಹಾರಾಡುವ ದೃಶ್ಯಗಳು ಅನೇಕ. 'ಬಯಲುದಾರಿ' ಚಿತ್ರದ 'ಚೆಲುವೆ ಎಲ್ಲಿರುವ ಮನವ ಕಾಡುವ ರೂಪಸಿಯೆ...' ಎಂಬ ಹಾಡಿನಲ್ಲಿ ಅನಂತ್‌ನಾಗ್ ಹಾರಾಡುವ ಹೆಲಿಕಾಪ್ಟರ್‌ನಲ್ಲಿ ಕುಳಿತು ಹಾಡುತ್ತಾರೆ. ಆ ಗೀತೆಯ ಪೂರ್ಣ ಚಿತ್ರೀಕರಣ ಹೆಲಿಕಾಪ್ಟರ್‌ನಲ್ಲಿಯೇ ನಡೆದಿರುವುದು ವಿಶೇಷ.

ಸರ್ಕಸ್ ಎಂದರೆ ಅದೊಂದು ಸಾಹಸದ ಮತ್ತೊಂದು ಪ್ರಪಂಚ. ಮೈನವಿರೇಳಿಸುವ ಅನೇಕ ರೀತಿಯ ಸಾಹಸಗಳು ಸರ್ಕಸ್‌ನಲ್ಲಿರುತ್ತವೆ. ಇತರ ಭಾಷಾ ಚಿತ್ರಗಳಲ್ಲಿ ಬಂದಂತೆ ಸರ್ಕಸ್‌ಗೆ ಸಂಬಂಧಿಸಿದ ಚಿತ್ರಗಳು ಕನ್ನಡದಲ್ಲಿ ಬರಲಿಲ್ಲ. ಹಿಂದಿಯಲ್ಲಿ ರಾಜ್‌ಕಪೂರ್ ಅಭಿನಯಿಸಿದ 'ಮೇರಾ ನಾಮ್ ಜೋಕರ್' ತಮಿಳಿನಲ್ಲಿ ಕಮಲ ಹಾಸನ್ ನಟಿಸಿದ 'ಅಪೂರ್ವ ಸಹೋದರ್‌ಗಳ್' ಚಿತ್ರಗಳು ಸರ್ಕಸ್‌ನ ಪ್ರಧಾನ ಹಿನ್ನೆಲೆಯನ್ನೊಳಗೊಂಡಿದ್ದು ಅದರ ನಾನಾಮುಖಗಳು ಚಿತ್ರದಲ್ಲಿ ಅನಾವರಣಗೊಂಡಿವೆ. ಕನ್ನಡದಲ್ಲಿ ಆರ್.ಎನ್.ಜಯಗೋಪಾಲ್ ನಿರ್ದೇಶನದ 'ಧೂಮಕೇತು' ಚಿತ್ರ ಬಿಟ್ಟರೆ ಬೇರಾವ ಚಿತ್ರವೂ ಸರ್ಕಸ್ ಸಾಹಸವನ್ನು ಬಹಳ ಮಟ್ಟಿಗೆ ಉಪಯೋಗಿಸಿಕೊಳ್ಳಲಿಲ್ಲ. 'ಪ್ರತಾಪ್' ಚಿತ್ರದ ಕ್ಲೈಮ್ಯಾಕ್ಸ್ ದೃಶ್ಯದಲ್ಲಿ ಸರ್ಕಸ್‌ನ ಹಲವು ಅಂಶಗಳನ್ನು ತಕ್ಕಮಟ್ಟಿಗೆ ಸೇರಿಸಿಕೊಂಡಿದ್ದಾರೆ.

ದಸರಾ ಉತ್ಸವದ ನಂತರ ಬನ್ನಿ ಮಂಟಪದ ಒಳಾಂಗಣದಲ್ಲಿ ನಡೆಯುವ ಪಂಜಿನ ಕವಾಯಿತಿನಲ್ಲಿ ರಕ್ಷಕ ದಳದ ಸಿಬ್ಬಂದಿಗಳು ಬೈಕುಗಳ ಮೇಲೆ ವಿಭಿನ್ನ ಬಗೆಯ ಸಾಹಸಗಳನ್ನು ಮಾಡುತ್ತಾರೆ. ಒಂದೇ ಬೈಕ್‌ನಲ್ಲಿ ಮೂವತ್ತು ನಲವತ್ತು ಜನ ಹತ್ತಿಕೊಂಡು ಸಾಗುವುದು, ಬೈಕ್ ಮೇಲೆ ಮಲಗಿಕೊಂಡು ಅದನ್ನು ಓಡಿಸುವುದು, ಓಡುವ ಬೈಕ್‌ನ ಮೇಲೆ ಏಣಿ ಇಟ್ಟು ಹತ್ತುವುದು ಮುಂತಾದ ಸಾಹಸಗಳನ್ನು ಪ್ರದರ್ಶಿಸುತ್ತಾರೆ. ಇಂಥ ಸಾಹಸ ದೃಶ್ಯಗಳನ್ನು ನೇರವಾಗಿ ಯಾವ ಚಿತ್ರಗಳಲ್ಲೂ ಬಳಸಿಲ್ಲ. ಆದರೆ ಅಂತಹ ಬೇರೆ ಕೆಲವು ಮಾದರಿಗಳನ್ನು ಅನೇಕ ಚಿತ್ರಗಳ ಫೈಟ್‌ನ ದೃಶ್ಯಗಳಲ್ಲಿ ಅಳವಡಿಸಿಕೊಂಡಿದ್ದಾರೆ. 'ಪ್ರೇಮಲೋಕ'ದಲ್ಲಿ ಜಾಲಿಬಾಸ್ಟಿನ್ ಇಂತಹ ಸಾಹಸ ಮಾಡಿದ್ದಾರೆ.

ದೇಶೀಯತೆ

'ಒಂದಾನೊಂದು ಕಾಲದಲ್ಲಿ' ಚಿತ್ರ ಬಿಡುಗಡೆಯಾದ ಮೇಲೆ ದೇಶೀಯ 'ಕಲರಿಪಯಟ್' ಮುಂತಾದ ತಂತ್ರಗಳು ಹಠಾತ್ತಾಗಿ ಪ್ರಮುಖ ನೆಲೆಗೆ ಬಂದವು. ಇದೇ ತಂಡ ಹಿಂದಿಯ 'ಉತ್ಸವ್' ಚಿತ್ರದಲ್ಲೂ ಸಾಹಸ ನಿರ್ದೇಶನ ಮಾಡಿತ್ತು. 'ಉತ್ಸವ್'ಗೆ ಸಿಕ್ಕ ಮನ್ನಣೆ ಮತ್ತು ಜನಪ್ರಿಯತೆ ಜೊತೆಗ 'ಒಂದಾನೊಂದು ಕಾಲದಲ್ಲಿ' ಚಿತ್ರದ ವಿಶಿಷ್ಟ ಹೊಡೆದಾಟದ ತಂತ್ರ ದೇಶೀಯತೆಯ ಸೊಗಡಿನ ಕಡೆಗೆ ಎಲ್ಲರ ಗಮನ ಸೆಳೆಯುವುದರಲ್ಲಿ ಯಶಸ್ವಿಯಾಯಿತು. ಒಟ್ಟಾರೆ ಚಿತ್ರರಂಗದ ಕಣ್ಣು ಮಾರ್ಷಲ್ ಆರ್ಟ್ಸ್‌ನ ಕಡೆ ಬಿತ್ತು. 'ಚಿತೆಗೂ ಚಿಂತೆ' ಚಿತ್ರದಲ್ಲಿ ಮಾರ್ಷಲ್ ಆರ್ಟ್ಸ್ ಅನ್ನು ಉತ್ತಮವಾಗಿ ಬಳಸಿಕೊಳ್ಳಲಾಗಿದೆ.

'ಬಂಗಾರದ ಮನುಷ್ಯ', 'ಕಾಲೇಜ್ ಹೀರೋ', 'ಸಿಂಹದ ಮರಿ' ಇನ್ನೂ ಮುಂತಾದ ಚಿತ್ರಗಳಲ್ಲಿ ಕೆಸರಿನಲ್ಲಿ ಹೊಡೆದಾಟ ನಡೆಯುತ್ತದೆ. ಕುಮಾರ್ ಗೋವಿಂದ್ ನಟನೆಯ 'ಅಣ್ಣಾಜಿ' ಚಿತ್ರದಲ್ಲಿ ಕೆಸರು ಗದ್ದೆಯ ಹೊಡೆದಾಟವನ್ನು ಉತ್ತಮವಾಗಿ ಚಿತ್ರಿಸಲಾಗಿತ್ತು. ಅತ್ಯಂತ ತ್ರಾಸದಾಯಕ ಸಾಹಸ ಸಂಯೋಜನೆಗೂ ಸಿಗದ ಚಪ್ಪಾಳೆ ಇಂತಹ ದೃಶ್ಯಗಳಿಗೆ ಸಿಕ್ಕಿದ್ದೂ ಉಂಟು. ಮೈ,ಕೈ ದೇಹವೆಲ್ಲ ಕೆಸರು ಮಯವಾಗಿ ಎದ್ದು, ಬಿದ್ದು, ಎಗರಿ, ಸುಸ್ತಾಗಿ ಹೊಡೆದಾಡುವುದು ಜನಕ್ಕೆ ಮೆಚ್ಚಿಗೆಯಾಗುತ್ತಿತ್ತು.

'ಒಂದು ಮುತ್ತಿನ ಕಥೆ' ಚಿತ್ರದಲ್ಲಿ ಸಮುದ್ರದೊಳಗೆ ಈಜುವ, ಮುತ್ತು ತರುವ ಸಾಹಸ ಸನ್ನಿವೇಶವನ್ನು ಬಹಳಷ್ಟು ಶ್ರಮಪಟ್ಟು ನಿರ್ದೇಶಕ ಶಂಕರ್‌ನಾಗ್ ಸೆರೆಹಿಡಿದಿದ್ದರು. ನೀರಿನಲ್ಲಿನ ಇಂಥ ಸಾಹಸ ಅಪಾಯಕಾರಿಯೂ ಹೌದು. 'ಆಪರೇಷನ್ ಜಾಕ್‌ಪಾಟ್‌ನಲ್ಲಿ ಸಿ.ಐ.ಡಿ.೯೯೯' ಹಾಗೂ 'ಜಾಣ' ಚಿತ್ರಗಳಲ್ಲಿ

(ಚಿತ್ರ ೫) ೭೦ರ ದಶಕದಲ್ಲಿ ವಿಜೃಂಭಿಸಿದ ಮಹಿಳಾ ಸಾಹಸಿ

ಕ್ರಮವಾಗಿ ರಾಜಕುಮಾರ್ ಹಾಗೂ ರವಿಚಂದ್ರನ್ ಸಹಕಲಾವಿದರೊಂದಿಗೆ ನೀರಿನಲ್ಲಿ ಸೆಣಸಾಡುವ ದೃಶ್ಯ ಚಿತ್ರಿತವಾಗಿದೆ.

ಕಲಾತ್ಮಕ ಚಿತ್ರವೆನಿಸಿದರೂ ಶಂಕರ್‌ನಾಗ್ ನಿರ್ದೇಶನದ 'ಆ್ಯಕ್ಸಿಡೆಂಟ್' ಚಿತ್ರದಲ್ಲಿ ಅಪಘಾತದ ದೃಶ್ಯದ ಸಾಹಸ ನಿಜಕ್ಕೂ ರೋಮಾಂಚನಕಾರಿಯಾಗಿತ್ತು. ಗಾಂಜಾ, ಅಫೀಮುಗಳ ದಾಸರಾದ ದೊಡ್ಡಮನೆತನದ ಇಬ್ಬರು ಮಕ್ಕಳು ಅತಿಯಾದ ಮದ್ಯ ಮತ್ತು ಡ್ರಗ್ಸ್ ಸೇವಿಸಿದ ಪರಿಣಾಮವಾಗಿ ಮಧ್ಯರಾತ್ರಿಯಲ್ಲಿ ರಸ್ತೆಯ ಪಕ್ಕ ಕಾಲುದಾರಿಯಲ್ಲಿ ಮಲಗಿದ್ದ ಹತ್ತಿಪ್ಪತ್ತು ಜನ ಕೂಲಿಕಾರ್ಮಿಕರ ಮೇಲೆ ಕಾರು ಚಲಿಸಿ ಸಾವು,ನೋವು ಸಂಭವಿಸುತ್ತದೆ. ಇಂಥ ದೃಶ್ಯವನ್ನು ತೆರೆಯ ಮೇಲೆ ಜೀವಂತವಾಗಿ ತೋರಿಸಲು ಶಂಕರ್‌ನಾಗ್ ಹಾಗೂ ಸಾಹಸ ಸಂಯೋಜಕ ಹಾಸನ್ ರಘು ಚರ್ಚಿಸಿ ಮಾರ್ಕೆಟ್‌ನಿಂದ ಆಡು,ಕುರಿಗಳ ಮಾಂಸ, ರಕ್ತ ತರಿಸಿ ಆ ಸ್ಥಳದಲ್ಲಿ ಚೆಲ್ಲಿ ಜನಗಳ ಮೇಲೆ ಕಾರು ಹರಿದಾಗ ಆಗುವ ಸಹಜ ಸನ್ನಿವೇಶದಂತೆ ಆ ದೃಶ್ಯವನ್ನು ಸಂಯೋಜಿಸಿದ್ದರು.

ಫೈಟಿಂಗ್‌ನಲ್ಲಿ ವೈವಿಧ್ಯವಿರಬೇಕು, ಹೊಸತನ ವಿರಬೇಕು ಎಂಬ ತುಡಿತವುಳ್ಳ ನಿರ್ದೇಶಕ ಜೋ ಸೈಮನ್ ನಿರ್ದೇಶನದ ಬಹುತೇಕ ಚಿತ್ರಗಳಲ್ಲಿ ಸಾಹಸ ದೃಶ್ಯಗಳು ಪ್ರಧಾನವಾಗಿದ್ದವು. ಅವರ ಸಾಹಸಸಿಂಹ, ಊರಿಗೆ ಉಪಕಾರಿ, ಸಿಂಹಜೋಡಿ, ರಕ್ತ ತಿಲಕ, ಭರತ್ ಮುಂತಾದ ಚಿತ್ರಗಳಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಸಾಹಸದ ಹೊಸ ಮಜಲುಗಳ ಪ್ರಯತ್ನ ಮಾಡಿದ್ದಾರೆ. ಆದರೆ ಸಾಹಸವನ್ನು ಚಿತ್ರಗಳಲ್ಲಿ ಬೇಕಾಬಿಟ್ಟಿ ತುರುಕುತ್ತಿರಲಿಲ್ಲ. ಎಲ್ಲಿ ಪಾತ್ರಕ್ಕೆ ಫೈಟ್ ಮಾಡಿಯಲ್ಲದೆ ಬೇರ ಮಾರ್ಗದಿಂದ ತಪ್ಪಿಸಿಕೊಳ್ಳಲು ಸಾಧ್ಯವಿರುವುದಿಲ್ಲವೊ ಅಲ್ಲಿ ಮಾತ್ರ ಸಾಹಸ ಪ್ರದರ್ಶನ ಮಾಡಿದರು. 'ಊರಿಗೆ ಉಪಕಾರಿ' ಚಿತ್ರದಲ್ಲಿ ಕತೆಗೆ ಹೊಂದಿಕೊಂಡಂತೆ ಹಳ್ಳಿಯ ಪರಿಸರದಲ್ಲಿ ದೊರಕುವ ಪರಿಕರಗಳನ್ನು ಬಳಸಿ ಸಾಹಸ ಸಂಯೋಜಿಸಲಾಗಿತ್ತು. ಮುಖ್ಯವಾಗಿ ಗಾಡಿಯ ಚಕ್ರಗಳ ಬಳಕೆ ಹೊಸ ವಿಧಾನ, ನೋಟಕ್ಕೂ ಚೆನ್ನ ಅನ್ನಿಸಿತ್ತು.

ಚಲನಚಿತ್ರಗಳಲ್ಲಿ ಸ್ತ್ರೀ ಸಾಹಸ

ಚಲನಚಿತ್ರಗಳಲ್ಲಿ ಸಾಹಸ ಆರಂಭದಿಂದಲೇ ಇದೆಯಾದರೂ ಸ್ತ್ರೀ ಪಾತ್ರಗಳೂ ಸಾಹಸದಲ್ಲಿ ಭಾಗಿಯಾದದ್ದು ತಡವಾಗಿ. ಮೊದಲು ಹಾಸ್ಯಕ್ಕಾಗಿ ಸ್ತ್ರೀ ಪಾತ್ರಗಳು ಹೊಡೆದಾಡುವಂತೆ ಚಿತ್ರಿಸುತ್ತಿದ್ದರು. ನಂತರ ಖಳರ ತಂಡದಲ್ಲಿರುವ ಕನ್ಯೆ ಧೈರ್ಯ, ಸಾಹಸಗಳಿಂದ ಹೊಡೆದಾಟದಲ್ಲಿ ಭಾಗವಹಿಸುವಂತೆ ಸ್ತ್ರೀ ಸಾಹಸವನ್ನು ಪರಿಚಯಿಸಲಾಯಿತು. ಇದೇ ಸ್ಫೂರ್ತಿಯಿಂದ ಮುಂದೆ ನಾಯಕಿಯನ್ನೂ ಖಳರ ಗುಂಪಿನ ಕನ್ಯೆಯೊಡನೆ ಕಾದಾಡಲು ತಯಾರಿ ಮಾಡಲಾಯಿತು. ಹೀಗೆ ಸ್ತ್ರೀ ಸಾಹಸಗಳು ಹಂತ ಹಂತವಾಗಿ ಬೆಳೆದು ಬಂದವು. ಐತಿಹಾಸಿಕ ಚಿತ್ರಗಳು ಸ್ತ್ರೀಯನ್ನೇ ಕೇಂದ್ರ ಪಾತ್ರವಾಗಿರಿಸಿಕೊಂಡು ಚಿತ್ರಿಸಲು ಪ್ರಾರಂಭಿಸಿದಾಗ ಇನ್ನೂ ಹೆಚ್ಚಿನ ಪಾತ್ರಗಳು ಮಹಿಳೆಯರ ಪಾಲಾದವು. 'ಶ್ರೀ ಕೃಷ್ಣ ಗಾರುಡಿ', 'ಗುಣ ಸಾಗರಿ' ಚಿತ್ರಗಳಲ್ಲಿ ಸ್ತ್ರೀ ಪಾತ್ರಗಳು ಚಿರತೆ ಹಾಗೂ ಕರಡಿಯೊಡನೆ ಕಾದಾಡುವ ಸಾಹಸವನ್ನು ಚಿತ್ರಿಸಲಾಯಿತು. ನಂತರ 'ಕಿತ್ತೂರು ಚೆನ್ನಮ್ಮ'ದಂಥ ಐತಿಹಾಸಿಕ ಚಿತ್ರಗಳ ಕತ್ತಿಕಾಳಗ, ಕುದುರೆ ಸವಾರಿಯಂಥ ಪ್ರಮುಖ ಸಾಹಸಗಳನ್ನು ಮಹಿಳಾ ಪಾತ್ರಗಳಿಂದ ಮಾಡಿಸಲಾಯಿತು. 'ದೇವ ಸುಂದರಿ', 'ರಾಣಿ ಹೊನ್ನಮ್ಮ' ಇನ್ನೂ ಮುಂತಾದ ಚಿತ್ರಗಳೂ ಇದೇ ಮಾದರಿಯವು. ಪುರಾಣ, ಇತಿಹಾಸಗಳಲ್ಲೂ ಸ್ತ್ರೀಯರು ಅನೇಕ ಸಂದರ್ಭಗಳಲ್ಲಿ ಶಕ್ತಿ ಸಾಹಸಗಳನ್ನು ಮೆರೆದಿದ್ದು ಚಲನಚಿತ್ರಗಳಲ್ಲೂ ಸ್ತ್ರೀಯರ ಸಾಹಸ ಬಳಸಿಕೊಳ್ಳಲು ಸ್ಫೂರ್ತಿಯಾಯಿತು.

ಚಿತ್ರರಂಗದಲ್ಲಿ ಬದಲಾವಣೆಯ ಅಲೆ ಬೀಸಿ ಸಾಮಾಜಿಕ ಚಿತ್ರಗಳ ಸಂಖ್ಯೆ ಬೆಳೆಯುತ್ತಾ ಹೋದಂತೆ ಜಯಂತಿ, ಮಂಜುಳಾ, ಕಲ್ಪನಾರಂಥ ನಾಯಕಿಯರು ಸಾಹಸ ಪ್ರಧಾನ ಚಿತ್ರಗಳಲ್ಲಿ ಅಭಿನಯಿಸಲು ಹಿಂಜರಿಯಲಿಲ್ಲ. ಈ ರೀತಿಯ ಚಿತ್ರಗಳು ಜನರಿಗೂ ವಿಶೇಷವೆನಿಸಿ ಆಕರ್ಷಿಸತೊಡಗಿತು. ಒಂದು ವರ್ಗದ ನಿರ್ಮಾಪಕ, ನಿರ್ದೇಶಕರು ಮಹಿಳಾ ಸಾಹಸವನ್ನೇ ಪ್ರಧಾನವಾಗಿಟ್ಟುಕೊಂಡು ಚಿತ್ರಗಳನ್ನು ನಿರ್ಮಿಸಲಾರಂಭಿಸಿದ್ದು ವಿಶೇಷ. ಜಯವಿಜಯ, ನಾರಿ ಮುನಿದರೆ ಮಾರಿ,

ಸೀತಾರಾಮು ಇಂಥ ಚಿತ್ರಗಳು ಉಲ್ಲೇಖಾರ್ಹ. 'ಕುಳ್ಳ ಏಜೆಂಟ್ ೦೦೦' ಚಿತ್ರದಲ್ಲಿ ನಟಿ ಜ್ಯೋತಿಲಕ್ಷ್ಮೀ ಬಿಗಿಯಾದ ಉಡುಪುಗಳನ್ನು ಧರಿಸಿ ಪುರುಷನಂತೆಯೇ ಹಾರಿ ನೆಗೆದು ಕರಾಟೆ ಶೈಲಿಯಲ್ಲಿ ಹೋರಾಡುವಾಗ ಪ್ರೇಕ್ಷಕರು ಸಿಳ್ಳೆ ಹೊಡೆದು ಚಪ್ಪಾಳೆ ತಟ್ಟಿದ್ದಿದೆ. 'ಕಳ್ಳ ಕುಳ್ಳ' ಚಿತ್ರದಲ್ಲಿ ವಿಜಯಲಲಿತಾ ಕೂಡ ತೀರಾ ಕ್ಲಿಷ್ಟವೆನಿಸುವಂತಹ ಸಾಹಸ ದೃಶ್ಯಗಳಲ್ಲಿ ಭಾಗವಹಿಸಿ ಸೈ ಎನಿಸಿಕೊಂಡಿದ್ದರು. ಆಗ್ಗೆ ತೆಲುಗು ಚಿತ್ರರಂಗದಲ್ಲಿ ಸಾಹಸದಲ್ಲಿ ಈಕೆಯದೆ ಮೇಲುಗೈ. 'ಕಳ್ಳ ಕುಳ್ಳ' ಯಲ್ಲಿ ಜಯಚಿತ್ರ, 'ಹೆಣ್ಣಿನ ಸೇಡು' ಚಿತ್ರದಲ್ಲಿ ಗೀತಾ, 'ತಾಳಿಯ ಆಣೆ'ಯಲ್ಲಿ ಭಾರತಿ ಇದೇ ಮಾದರಿಯ ಸಾಹಸಗಳಲ್ಲಿ ಪಾಲ್ಗೊಂಡರೆ ಜಯಮಾಲ 'ಚಂಡಿ ಚಾಮುಂಡಿ' ಚಿತ್ರದಲ್ಲಿ, ಶಿವರಂಜಿನಿ 'ಎಸ್.ಪಿ.ಸಾಂಗ್ಲಿಯಾನ'ದಲ್ಲಿ, ರಾಧಾ 'ರಣಚಂಡಿ'ಯಲ್ಲಿ, ರೂಪಾ ಗಂಗೂಲಿ 'ಕದನ' ಚಿತ್ರದಲ್ಲಿ, ಭಾವನ 'ನಂಬರ್ ವನ್' ಚಿತ್ರದಲ್ಲಿ ಮುಖ್ಯ ಪಾತ್ರಗಳಲ್ಲಿ ಕಾಣಿಸಿಕೊಂಡು ಸಾಹಸ ದೃಶ್ಯಗಳಲ್ಲಿ ಮಿಂಚಿದ್ದಾರೆ. ಸುಮಲತಾ, ತಾರಾ, ಉಮಾಶ್ರೀ, ಮಹಾಲಕ್ಷ್ಮೀ, ಕಾಂಚನ ಮುಂತಾದ ನಟಿಯರೂ ಅನೇಕ ಚಿತ್ರಗಳಲ್ಲಿ ಸಾಹಸ ಪಾತ್ರಗಳನ್ನು ನಿರ್ವಹಿಸಿದ್ದಾರೆ.

ವಿಜಯಶಾಂತಿಯವರ ಸಾಹಸ ಚಿತ್ರಗಳ ಭರ್ಜರಿ ಯಶಸ್ಸು ಕನ್ನಡ ಚಿತ್ರ ನಿರ್ಮಾಪಕರಿಗೂ ಸ್ಫೂರ್ತಿ ನೀಡಿತು. ಆಗ ಅವರ ಕಣ್ಣಿಗೆ ಬಿದ್ದದ್ದು ಮಾಲಾಶ್ರೀ. ೯೦ರ ದಶಕದ ಆರಂಭದಲ್ಲಿಯಂತೂ ಮಾಲಾಶ್ರೀಯದೇ ಕಾರು ಬಾರು. ನಾಯಕಿ ಪ್ರಧಾನವಾದ ಅವರ ಬಹುತೇಕ ಚಿತ್ರಗಳು ಯಶಸ್ವಿ ಎನಿಸಿಕೊಂಡಿದ್ದವು. ಅವರೂ ಅಲ್ಲಿಯವರೆಗೆ ಮಾಲಾಶ್ರೀ ಬಜಾರಿ, ಗೃಹಿಣಿ, ತ್ಯಾಗಿ ಈ ರೀತಿಯ ಪಾತ್ರಗಳನ್ನಷ್ಟೇ ಮಾಡಿದರು. ಅದುವರೆಗ ನಾಯಕಿ ಪ್ರಧಾನ ಚಿತ್ರಗಳಲ್ಲೇ ಕಾಣಿಸಿಕೊಂಡಿದ್ದ ಅವರಿಗೆ ನಂತರ ಸಾಹಸ ಪ್ರಧಾನ ಚಿತ್ರಗಳಲ್ಲಿ ಭಾಗವಹಿಸುವುದು ಕಷ್ಟವಾಗಲಿಲ್ಲ. ೧೯೯೧ರಲ್ಲಿ 'ಎಸ್.ಪಿ.ಭಾರ್ಗವಿ' ಚಿತ್ರದ ಮೂಲಕ ಮಾಲಾಶ್ರೀ ಸಾಹಸ ಪ್ರಧಾನ ಚಿತ್ರದಲ್ಲಿ ಮೊದಲ ಬಾರಿಗೆ ಕಾಣಿಸಿಕೊಂಡರು. ನಂತರ ಸಾಲು ಸಾಲಾಗಿ ಸಾಹಸವೇ ಪ್ರಮುಖ ಅಂಶವಾದ 'ವಜ್ರಾಯುಧ', 'ಸಾಹಸಿ', 'ಸರ್ಕಲ್ ಇನ್ಸ್‌ಪೆಕ್ಟರ್', 'ಸಿ.ಬಿ.ಐ.ದುರ್ಗಾ', 'ಲೇಡಿ ಕಮಿಷನರ್', 'ಲೇಡಿ ಟೈಗರ್', 'ಲೇಡಿ ಪೊಲೀಸ್', 'ಚಾಮುಂಡಿ' ಮುಂತಾದ ಚಿತ್ರಗಳಲ್ಲಿ ನಟಿಸಿ ಹೊಸದೊಂದು ಅಲೆಯನ್ನೇ ಸೃಷ್ಟಿಸಿದರು. ಕನ್ನಡ ಚಿತ್ರರಂಗದ ಯಾವ ತಾರೆಯರೂ ಇಷ್ಟೊಂದು ಸಾಹಸ ಭರಿತ ಪಾತ್ರಗಳಲ್ಲಿ ಅಭಿನಯಿಸಿದ ಉದಾಹರಣೆಯಿಲ್ಲ. ಈ ಎಲ್ಲಾ ಚಿತ್ರಗಳಲ್ಲೂ ನಾಯಕಿ ಮಾಲಾಶ್ರೀ ಖಳರೊಡನೆ ಕಾದಾಡುವ ದೃಶ್ಯಗಳು ಇದ್ದೇ ಇರುತ್ತಿದ್ದವು.

ಇಂತಹ ಪಾತ್ರಗಳನ್ನು ನಿರ್ವಹಿಸುವುದಕ್ಕಾಗಿ ಮಾಲಾಶ್ರೀಯವರು ಸತತ ಅಭ್ಯಾಸ, ವ್ಯಾಯಾಮಗಳನ್ನೂ ಮಾಡುತ್ತಿದ್ದುದರಿಂದ ಕ್ಲಿಷ್ಟ ಹಾಗೂ ಅಪಾಯ ವೆನಿಸುವ ಅನೇಕ ಸಾಹಸ ದೃಶ್ಯಗಳಲ್ಲಿ ಡ್ಯೂಪ್ ಇಲ್ಲದೆ ಸ್ವತಃ ತಾವೇ ಭಾಗವಹಿಸುತ್ತಿದ್ದರು. ಸಾಹಸ ಪ್ರಧಾನ ಪಾತ್ರಗಳನ್ನು ಆಕೆ ಬಹುವಾಗಿ ಮೆಚ್ಚುತ್ತಿದ್ದರು.

'ಲೇಡಿ ಪೊಲೀಸ್' ಚಿತ್ರದಲ್ಲಿ ಮಾಲಾಶ್ರೀ ಡ್ಯೂಪ್ ಇಲ್ಲದೆ ಸ್ವತಃ ತಾವೇ ಗ್ಲಾಸ್ ಡೈವ್ ಮಾಡಿದರು. ಭಾರತ ಚಿತ್ರರಂಗದಲ್ಲಿಯೇ ಮೊದಲ ಬಾರಿಗೆ ನಾಯಕಿಯೊಬ್ಬಳು ನೇರವಾಗಿ ಗ್ಲಾಸ್ ಡೈವ್ ಮಾಡಿದ ಖ್ಯಾತಿ ಮಾಲಾಶ್ರೀಗ ಸಲ್ಲುತ್ತದೆ. ಇದೇ ಚಿತ್ರದ ಅಂತಿಮ ದೃಶ್ಯದಲ್ಲಿ ನಾಯಕಿಯ ಕೈಕಾಲುಗಳಿಗೆ ಬೆಂಕಿ ಹತ್ತಿಸುವ ರೋಮಾಂಚನಕಾರಿ ದೃಶ್ಯವಿದೆ. ಈ ದೃಶ್ಯದಲ್ಲಿಯೂ ಸ್ವತಃ ಮಾಲಾಶ್ರೀಯವರೇ ಕೈಕಾಲುಗಳಿಗೆ ಬೆಂಕಿ ಹಚ್ಚಿಸಿಕೊಂಡು ಅಭಿನಯಿಸಿದ್ದರು. ಈ ದೃಶ್ಯಕ್ಕಾಗಿ ಅವರು 'ಫೈರ್‌ಸೂಟ್' ಕೂಡಾ ಧರಿಸಿದ್ದರು. ಆದರೂ ಬಹು ಬೇಡಿಕೆಯ ನಟಿಯೊಬ್ಬರು ಇಂಥ ಅಪಾಯದಲ್ಲಿ ತೊಡಗುವುದು ಸುಲಭದ ಮಾತಲ್ಲ, ಸರಿಯೂ ಅಲ್ಲ.

(ಚಿತ್ರ ೬) ದಾಷ್ಪಶಿಕ್ಷಣ ನಿರತೆ ಈ ೨೦ನೇ ಶತಮಾನದ ಚಾಮುಂಡಿ

ಇದಲ್ಲದೆ ಮಾಲಾಶ್ರೀಯವರು ನೇರವಾಗಿ ಕಾಲುಗಳನ್ನು ನೆಲಕ್ಕೆ ೧೮೦ ಡಿಗ್ರಿ ಕೋನದಲ್ಲಿ ಬಗ್ಗಿಸುವುದು, ಎತ್ತರಕ್ಕೆ ಕಾಲನ್ನು ಎತ್ತುವಂತಹ ಅನೇಕ ಸನ್ನಿವೇಶಗಳಲ್ಲಿ ಉತ್ತಮ ಪ್ರದರ್ಶನ ನೀಡುತ್ತಿದ್ದರು. ಹೊಡೆದಾಟದ ದೃಶ್ಯಗಳಲ್ಲಂತೂ ಮಾಲಾಶ್ರೀಯವರ ಕೈಚಳಕ ಎಂಥವರಿಗೂ ಕುತೂಹಲ ತರಿಸುವಂತಿರುತ್ತದೆ. 'ಚಾಮುಂಡಿ' ಚಿತ್ರದಲ್ಲಂತೂ ಅವರ ಸಾಹಸಗಳ ಸ್ಪೆಷಲ್ ಎಫೆಕ್ಟ್‌ಗಳಿಂದ ವೈಭವೀಕರಿಸಿ ಪ್ರೇಕ್ಷಕರ ಮೆಚ್ಚುಗೆಗಳಿಸಿತ್ತು. ಒಟ್ಟಿನಲ್ಲಿ ಕನ್ನಡ ಚಿತ್ರರಂಗದಲ್ಲಿ ಮಹಿಳಾ ಸಾಹಸದ ಬಗ್ಗೆ ಅವಲೋಕನ ಮಾಡುವಾಗ ಮಾಲಾಶ್ರೀಯವರದೇ ಒಂದು ಅಧ್ಯಾಯವಾಗುತ್ತದೆ.

ಸಾಹಸದಲ್ಲಿ ಹಾಸ್ಯ

ಗಂಭೀರ ಚಿತ್ರಗಳಲ್ಲಿ ಸಾಹಸಗಳೊಂದಿಗೆ ಹಾಸ್ಯವನ್ನು ಬೆರೆಸಿದ ಪ್ರಯೋಗ ಪ್ರೇಕ್ಷಕರಿಗೆ ಬಹು ಮೆಚ್ಚು. ನಾಯಕ ಒಂದೆಡೆ ಖಳರೊಡನೆ ಭಯಾನಕವಾಗಿ ಹೋರಾಡುತ್ತಿದ್ದರೆ ನಾಯಕನ ಸ್ನೇಹಿತ ಹಾಸ್ಯ ಪಾತ್ರ ತನ್ನ ಕುಚೇಷ್ಟೆಗಳಿಂದ ಖಳರನ್ನು ಗಲಿಬಿಲಿಗೊಳಿಸುವುದಲ್ಲದೆ ಜನರನ್ನು ನಗೆ ಗಡಲಲ್ಲಿ ತೇಲಿಸುವುದು ರೂಢಿಯಾಯಿತು. ರಾಜಕುಮಾರ್ ಜೊತೆ ನರಸಿಂಹರಾಜು ಇಂಥ ಸನ್ನಿವೇಶಗಳಲ್ಲಿ ಕಾಣಿಸಿಕೊಂಡಿದ್ದರು. ಇವರಂತೆಯೇ ಎಲ್ಲಾ ಹಾಸ್ಯ ನಟರು ಈ ರೀತಿಯ ಪಾತ್ರಗಳಲ್ಲಿ ಜನರನ್ನು ರಂಜಿಸುವುದು ಸಾಮಾನ್ಯವಾಯಿತು. ಹೀಗಾಗಿ ಸಾಹಸದ ಸಂದರ್ಭಗಳಲ್ಲಿ ಹಾಸ್ಯನಟನೊ, ಅಳುಮುಂಜಿ ನಾಯಕಿಯೊ ಇಂಥ ಮೋಜಿನ ಪ್ರಸಂಗಗಳನ್ನು ಸೃಷ್ಟಿಸುತ್ತಿದ್ದರು.

ಮುಸುರಿ ಕೃಷ್ಣಮೂರ್ತಿ, ನರಸಿಂಹರಾಜು, ದ್ವಾರಕೀಶ್, ಎನ್. ಎಸ್.ರಾವ್, ದಿನೇಶ್, ಉಮೇಶ್, ಟೆನ್ನಿಸ್ ಕೃಷ್ಣ ಮೊದಲಾದವರು ಇಂಥ ಹಾಸ್ಯ ಮಿಶ್ರಿತ ಸಾಹಸಗಳಲ್ಲಿ ಭಾಗವಹಿಸಿದ್ದಾರೆ. ಹಾಸ್ಯನಟಿಯರಲ್ಲಿ ಎಂ.ಎನ್.ಲಕ್ಷ್ಮೀದೇವಿ, ಜಯ, ಉಮಾಶ್ರೀ, ರೇಖಾದಾಸ್ ಮುಂತಾದವರೂ ಈ ರೀತಿಯ ಸನ್ನಿವೇಶಗಳಲ್ಲಿ ಕಾಣಿಸಿಕೊಂಡಿದ್ದರು. ನಂತರ ಹಾಸ್ಯನಟರೇ ನಾಯಕ ಪಾತ್ರಗಳಲ್ಲಿ ಕಾಣಿಸಿಕೊಳ್ಳ ತೊಡಗಿದಾಗ ಸಾಹಸ ದೃಶ್ಯಗಳೂ ಸಾಮಾನ್ಯವಾಗಿ ಹಾಸ್ಯ ಮಿಶ್ರಿತವಾಗಿ ಚಿತ್ರಿತವಾಗತೊಡಗಿದವು. ಕಾಶೀನಾಥ್, ಜಗ್ಗೇಶ್ ಮುಂತಾದ ನಟರ ಚಿತ್ರಗಳಲ್ಲಿ ಹಾಸ್ಯ ತುಂಬಿದ ಹೊಡೆದಾಟಗಳ ಸಂಯೋಜನೆ ಇರುತ್ತಿತ್ತು. ಕಾಶೀನಾಥ್ ಅಭಿನಯದ ' ಅವನೇ ನನ್ನ ಹೆಂಡ್ತಿ' ಚಿತ್ರದಲ್ಲಿ ನಾಯಕಿಯ ಸರ ಕದ್ದುಕೊಂಡು ಹೋದವನನ್ನು ಹಿಮ್ಮೆಟ್ಟಿ ಮೈಕ್ಕೆ ತಾಗಸದೆ ಕೇವಲ ಅವರಿಂದ ಬೀಳುವ ಪಟುಗಳಿಂದ ತಪ್ಪಿಸಿಕೊಳ್ಳುತ್ತಲೇ ಸುಸ್ತು ಮಾಡಿ ಅವರಿಂದ ಸರವನ್ನು ವಶಮಾಡಿಕೊಳ್ಳುತ್ತಾರೆ. ಜಗ್ಗೇಶ್ ತಮ್ಮ ಚಿತ್ರಗಳ ಸಾಹಸ ದೃಶ್ಯಗಳಲ್ಲಿ, ಸಾಕಷ್ಟು ರೀತಿಯಲ್ಲಿ ಪ್ರೇಕ್ಷಕರನ್ನು ನಗಿಸಿದ್ದಾರೆ. 'ಕಿಲಾಡಿ ತಾತ' ಚಿತ್ರದಲ್ಲಿ ಪ್ರಭಾಕರ್ ಹಾಗೂ ದಿನೇಶ್ ಅಭಿನಯದ ಫೈಟ್‌ಗಳು ವಿಭಿನ್ನ ವೆನಿಸುವ ಹಾಸ್ಯವನ್ನು ಒಳಗೊಂಡಿದ್ದವು.

ಕ್ಯಾಮರಾ ಟೆಕ್ನಿಕ್

ತೆರೆಯ ಮೇಲೆ ಸಾಹಸ ದೃಶ್ಯಗಳು ಅದ್ಭುತವಾಗಿ ಕಾಣಬೇಕಾದರೆ ಕೇವಲ ಸಾಹಸ ನಿರ್ದೇಶನದ ಸಂಯೋಜನೆಯಾಗಲಿ, ಅದರಲ್ಲಿ ಅಪಾಯವನ್ನು ಲೆಕ್ಕಿಸದೇ ಭಾಗವಹಿಸುವ ನಟನ ಧೈರ್ಯವಾಗಲಿ ಸಾಕಾಗುವುದಿಲ್ಲ. ಇವರೊಂದಿಗೆ ಕ್ಯಾಮರಾದ ಸಹಯೋಗವೂ ಅಗತ್ಯ. ಅಂದರೆ ಸಾಮಾನ್ಯವಾಗಿ ಬಹಳ ರಿಸ್ಕ್ ಇರುವ ಸಾಹಸ ಮಾಡಬೇಕಾದರೆ ನಾಯಕನ ಬದಲಿಗೆ ನಾಯಕನ ಡ್ಯೂಪ್ ಹೊಡೆದಾಡುತ್ತಾನೆ. ಅಂತಹ ಸಂದರ್ಭದಲ್ಲಿ ನಾಯಕನೇ ಆ ದೃಶ್ಯದಲ್ಲಿ ಭಾಗಿಯಾಗಿದ್ದಾನೆಂಬಂತೆ ನಂಬಿಸಲು ನಕಲುಸಾಹಸ ಕಲಾವಿದನ ಮುಖ ಕಾಣಿಸದಂತೆ ಕ್ಯಾಮರಾ ಚಲಿಸಬೇಕು.

ಹೊಡೆದಾಟದ ದೃಶ್ಯಗಳಲ್ಲಿ ನಿಜವಾಗಿಯೂ ಹೊಡೆಯುವುದು ಅಸಾಧ್ಯವಾದ್ದರಿಂದ ಹೊಡೆದಂತೆ

ಮಾಡಿದ್ದೂ ಕೂಡಾ ಕ್ಯಾಮರಾದ ಕೋನದಿಂದಾಗಿ ನಿಜವಾಗಿ ಹೊಡೆದಂತೆ ಕಾಣುತ್ತದೆ. ಚಿತ್ರ ನೋಡುವಾಗ ನಿಜವಾಗಿಯೂ ಹೊಡೆತ ಬಿದ್ದಂತೆ ಭಾಸವಾಗಲು ಹಿನ್ನೆಲೆ ಸಂಗೀತ, ಸಂಕಲನಗಳು ಪ್ರಧಾನ ಪಾತ್ರವಹಿಸುತ್ತವೆ.

ಸಾಹಸ ಚಿತ್ರಣ ಮಾಡುವ ಸಂದರ್ಭದಲ್ಲಿ ಸಾಮಾನ್ಯವಾಗಿ ಹಾರ್ಡ್ ಆ್ಯಂಗಲ್ ಅನ್ನು ಬಳಸುತ್ತಾರೆ. ಸಾಫ್ಟ್ ಆ್ಯಂಗಲ್ ಬಳಸುವುದು ಅಪರೂಪ. ಯಾಕೆಂದರೆ ಫೈಟ್ ಮಾಡುವಾಗ ನಿಜವಾಗಿಯೂ ಹೊಡೆದಾಡುವುದಿಲ್ಲವಾದ್ದರಿಂದ ತುಂಬಾ ನೀರಸವಾಗಿ ಕಾಣುತ್ತದೆ. ಅದಕ್ಕಾಗಿ ಕ್ಯಾಮರಾ ತಂತ್ರಗಳ ಬಳಕೆ ಅಗತ್ಯ. ಲೋ ಆ್ಯಂಗಲ್, ಸೈಡ್ ಆ್ಯಂಗಲ್ ಅಥವಾ ಮಧ್ಯೆ ಒಂದು ಸಟೆರನ್ ಇಟ್ಟು ಚಿತ್ರೀಕರಿಸಿದಾಗ ಅದು ವಿಶೇಷವಾಗಿ ಕಾಣುತ್ತದೆ.

ಸಾಹಸ ನಿರ್ದೇಶಕನಿಗೆ ಕೆಲವೊಮ್ಮೆ ಎರಡನೇ ಘಟಕದ ಕ್ಯಾಮರಾಮನ್ ಆಗುವ ಸಾಧ್ಯತೆ ಇದೆ. ಸ್ಟಂಟ್ ನಿರ್ದೇಶಕರು ಸಾಹಸ ದೃಶ್ಯಗಳನ್ನು ಸೆರೆ ಹಿಡಿಯುವಾಗ ಸಂಕಲನದ ಬಗ್ಗೆಯೂ ಗಮನವಿಟ್ಟು ಚಿತ್ರಿಸಬೇಕು. ಇದರೊಂದಿಗೆ ಸಂಗೀತವನ್ನು ಅಳವಡಿಸುವುದಕ್ಕಾಗಿ ಚಿತ್ರೀಕರಣ ಮಾಡುವಾಗಲೇ ಅದನ್ನು ದೃಷ್ಟಿಯಲ್ಲಿಟ್ಟು ಕೊಳ್ಳಬೇಕಾಗುತ್ತದೆ. ಹಾಗಾಗಿ ಸಾಹಸ ನಿರ್ದೇಶಕರಿಗೆ ಸಂಕಲನ ಹಾಗೂ ಸಂಗೀತದ ಬಗ್ಗೆಯೂ ಜ್ಞಾನವಿರಬೇಕಾಗುತ್ತದೆ.

ಸಾಹಸ ಚಿತ್ರೀಕರಣ ಸಮಯದಲ್ಲಿ ಮುಖ್ಯವಾದ ದೃಶ್ಯಗಳಿದ್ದರೆ ಮೂರು ನಾಲ್ಕು ಕ್ಯಾಮರಾಗಳ ಸಹಾಯದಿಂದ ವಿವಿಧ ಕೋನಗಳಲ್ಲಿ ಚಿತ್ರಿಸುತ್ತಾರೆ. ಕೆಲವೊಮ್ಮೆ ಸ್ಲೋ ಸ್ಪೀಡ್ ಅಂದರೆ ೨೪ಕ್ಕಿಂತಲೂ ಹೆಚ್ಚು ಫ್ರೇಮ್‌ಗಳಲ್ಲಿ ಸೆರಹಿಡಿಯಬೇಕಾಗುತ್ತದೆ. ಸ್ಲೋ ಮೋಷನ್‌ನಲ್ಲಿ ಬೇಕೆಂದಾಗ ೧೦೦ರಿಂದ ೨೦೦ ಫ್ರೇಮ್‌ಗಳಲ್ಲಿ ಚಿತ್ರಿಸಬೇಕಾಗುತ್ತದೆ. ಉದಾಹರಣೆಗೆ ನೆಲದಿಂದ ಎತ್ತರ ಸ್ಥಳಕ್ಕೆ ಹಿಮ್ಮುಖವಾಗಿ ಎಗರಲು ಸಾಧ್ಯವಿಲ್ಲ. ಅಥವಾ ನೆಲದಿಂದ ಓಡುವ ಕುದುರೆಯ ಮೇಲಕ್ಕೆ ಏರುವುದು ತ್ರಾಸದಾಯಕ ಹಾಗೂ ಅಪಾಯಕಾರಿ. ಅಂತಹ ಸಂದರ್ಭದಲ್ಲಿ ಆ ಸನ್ನಿವೇಶಗಳನ್ನು ಮೇಲಿನಿಂದ ಕೆಳಕ್ಕೆ ಧುಮುಕುವ ದೃಶ್ಯವನ್ನು ಸೆರೆ ಹಿಡಿದು ನಂತರ ಅದನ್ನು ರಿವರ್ಸ್ ಆ್ಯಕ್ಷನ್‌ನಲ್ಲಿ ತೆರೆಯ ಮೇಲೆ ತೋರಿಸಿದಾಗ ನೈಜವಾಗಿಯೇ ನೆಲದ ಮೇಲಿಂದ ಎತ್ತರದ ಸ್ಥಳಕ್ಕೋ, ಕುದುರೆಯ ಮೇಲಕ್ಕೋ ಒಂದೇ ನೆಗತಕ್ಕೆ ನೆಗೆದಂತೆ ಕಾಣುತ್ತದೆ.

ಸಾಹಸ ನಿರ್ದೇಶಕ ದೃಶ್ಯ ಸಂಯೋಜನೆ ಮಾಡುವ ಮೊದಲು ಅದರ ಕಥಾ ಹಿನ್ನೆಲೆ, ಯಾರು ಯಾರಿಗ ಹೊಡೆದಾಟ, ಯಾರು ಗೆಲ್ಲಬೇಕು, ಖಳನಾಯಕ ಸಾಯಬೇಕಾ ಅಥವಾ ಸೋತು ಓಡಿ ಹೋಗಬೇಕಾ, ಶರಣಾಗಬೇಕಾ ಮುಂತಾದ ಮಾಹಿತಿಯನ್ನು ಪಡೆದುಕೊಂಡಿರಬೇಕಾಗುತ್ತದೆ. ಇದಲ್ಲದೆ ಸ್ಕ್ರಿಪ್ಟ್ ಹಂತದಲ್ಲಿಯೇ ಸಾಹಸ ನಿರ್ದೇಶಕನೊಂದಿಗೆ ಕತೆಯಲ್ಲಿ ಬರುವ ಸಾಹಸದ ಬಗ್ಗೆ ಚರ್ಚಿಸಿದರೆ ಉತ್ತಮ ಫಲಿತಾಂಶ ದೊರಕುತ್ತದೆ. ಇದಲ್ಲದೆ ಸಾಹಸ ನಿರ್ದೇಶಕನೊಂದಿಗೆ ಕಲಾ ನಿರ್ದೇಶಕನೂ ಕೈಗೂಡಿಸಬೇಕು. ಸಾಹಸ ದೃಶ್ಯಗಳಿಗೆ ತಕ್ಕಂತೆ ಸಾಮಗ್ರಿಗಳನ್ನು ಪರಿಕರಗಳನ್ನು ವ್ಯವಸ್ಥಿತಗೊಳಿಸಬೇಕಾಗುತ್ತದೆ. ಅವರು ಬಳಸುವ ಆಯುಧಗಳಾಗಿರಬಹುದು, ಟೇಬಲ್ ಕುರ್ಚಿಗಳಾಗಿರಬಹುದು ಅಥವಾ ಹೊಡೆದಾಟದ ಸಂದರ್ಭದಲ್ಲಿ ಒಡೆದು ಹೋಗುವ ಕಿಟಕಿ ಬಾಗಿಲುಗಳಿರಬಹುದು. ಇದನ್ನೆಲ್ಲ ಕಲಾ ನಿರ್ದೇಶಕನೇ ಸಜ್ಜುಗೊಳಿಸಬೇಕಾಗುತ್ತದೆ.

ಕೆಲವೊಂದು ಸಂದರ್ಭಗಳಲ್ಲಿ ಪಾತ್ರಧಾರಿ ದೊಡ್ಡ ಗಾತ್ರದ ಬಂಡೆಕಲ್ಲನ್ನು ಎತ್ತಬೇಕಾಗಿ ಬರಬಹುದು ಅಥವಾ ಕಲ್ಲುಗಳಿಂದ ಹೊಡೆಯುವ ಸನ್ನಿವೇಶವಿರಬಹುದು. ಆಗ ನಿಜವಾದ ಬಂಡೆಕಲ್ಲನ್ನು ಎತ್ತುವುದಾಗಲಿ, ನೈಜ ಕಲ್ಲುಗಳಿಂದ ಹೊಡೆಯುವುದಾಗಲಿ ಸಾಧ್ಯವಿಲ್ಲ. ಅದಕ್ಕಾಗಿ ಕಲಾನಿರ್ದೇಶಕ ಹಗುರ ವಸ್ತುವಿನಿಂದ ಬಂಡೆಕಲ್ಲಿನಂತೆ ಕಾಣುವ ವಸ್ತುವನ್ನು, ಕಲ್ಲುಗಳಂತೆ ಕಾಣುವ ವಸ್ತುಗಳನ್ನು ತಯಾರಿಸಬೇಕಾಗುತ್ತದೆ. ಕ್ಯಾಮರಾ ಕಣ್ಣಿನಲ್ಲಿ ಇವೆಲ್ಲವೂ ನೈಜವಾಗಿಯೇ ಕಾಣಿಸುತ್ತವೆ. ಇವುಗಳ ಜೊತೆಗೆ ಹಿನ್ನೆಲೆ ಸಂಗೀತ ಮತ್ತು ಧ್ವನಿ ಸಂಯೋಜನೆಯೂ ಅಷ್ಟೇ ಪ್ರಾಮುಖ್ಯ ಪಡೆದಿದೆ.

ಸಾಹಸದ ಕೆಲವು ತಾಂತ್ರಿಕತೆ

ವಾಸ್ತವದಲ್ಲಿ ಕಲಾವಿದನ ಸಾಹಸದೊಂದಿಗೆ ಕ್ಯಾಮರಾ ಟೆಕ್ನಿಕ್, ಕ್ಯಾಮರಾಸ್ಪೀಡ್, ಸಂಕಲನ, ಸಂಗೀತ ಮುಂತಾದ ತಾಂತ್ರಿಕ ಅಂಶಗಳು ಬಹು ಮುಖ್ಯ ಪಾತ್ರವಹಿಸುತ್ತವೆ. ಅಲ್ಲದೆ ಗುಂಡು ಬಿದ್ದಂತೆ, ರಕ್ತ ಹಾರಿದಂತೆ ತೋರಿಸುವುದು, ಬಾಂಬ್ ಸಿಡಿತ, ಬಣ್ಣದ ಬಾಂಬ್‌ಗಳ ಸಿಡಿಸುವಿಕೆ, ಕಾರು ಜೀಪುಗಳನ್ನು ಎತ್ತರೆತ್ತರಕ್ಕೆ ಚಿಮ್ಮಿಸುವುದು ಇವೆಲ್ಲವೂ ತಾಂತ್ರಿಕ ಕೌಶಲ್ಯಗಳು.

ಚೆಸ್ಟ್ ಬುಲೆಟ್: ಎದುರಾಳಿ ಗುಂಡು ಹೊಡೆಯುವಂತೆ ನಟಿಸಿ ಬಂದೂಕಿನ ಕುದುರೆಯನ್ನು ಎಳೆದ ಮರುಕ್ಷಣ ಅದಕ್ಕೆ ಬಲಿಯಾದಂತೆ ನಟಿಸುವವನ ಮೈಯಲ್ಲಿ ಗುಂಡು ಸಿಡಿದಂತೆ ರಕ್ತ ಚಿಲ್ಲೆಂದು ಚಿಮ್ಮುವ ತಂತ್ರಕ್ಕೆ ಚೆಸ್ಟ್ ಬುಲೆಟ್ ಎನ್ನುತ್ತಾರೆ. ಗುಂಡೇಟು ಯಾವ ಅಂಗಳಕ್ಕೆ ಬೀಳಬೇಕೆಂಬುದನ್ನು ನಿಗದಿಪಡಿಸಿಕೊಂಡು ಆ ಸ್ಥಳಕ್ಕೆ ಪ್ಯಾಕಿಂಗ್ ಕೊಟ್ಟು ಕುಂಕುಮದ ನೀರಿಗೆ ಗ್ಲಿಸರಿನ್ ಬೆರೆಸಿದ ಪೊಟ್ಟಣವನ್ನು ಜೋಡಿಸಿ ಅದಕ್ಕೆ ಸಣ್ಣ ಪಟಾಕಿಯಂತಹ ಸ್ಫೋಟಕವನ್ನು ಇಟ್ಟು ಅದಕ್ಕೆ ತಂತಿಯನ್ನು ಜೋಡಿಸಲಾಗುತ್ತದೆ. ಅದರ ನಿಯಂತ್ರಣದ ಜವಾಬ್ದಾರಿಯನ್ನು ಹೊತ್ತವನು ಎದುರಾಳಿ ಬಂದೂಕಿನಿಂದ ಗುರಿಯಿಟ್ಟು ಹೊಡೆದಾಕ್ಷಣ ಎರಡು ತಂತಿಗಳ ಸಂಪರ್ಕವೇರ್ಪಡಿಸಿ ದೇಹಕ್ಕೆ ಅಂಟಿಕೊಂಡಿರುವ ಸ್ಫೋಟಕ ಸಿಡಿಯುವಂತೆ ಮಾಡುತ್ತಾನೆ. ಆಗ ಗ್ಲಿಸರಿನ್ ಬೆರೆತ ಕೆಂಪು ದ್ರವ ಚಿಮ್ಮಿ ಪ್ರೇಕ್ಷಕರಿಗೆ ಆತನ ದೇಹದಿಂದಲೇ ರಕ್ತ ಹಾರಿದಂತೆ ಅನುಭವವಾಗುತ್ತದೆ.

ಕ್ಯಾನನ್ ಬ್ಲಾಸ್ಟ್: ಚಲಿಸುತ್ತಿರುವ ಕಾರು ಇದ್ದಕ್ಕಿದ್ದಂತೆ ಸ್ಫೋಟಿಸಿ ಮೇಲಕ್ಕೆ ಹಾರುವ ದೃಶ್ಯವನ್ನು ಸಂಯೋಜಿಸಲು ಕ್ಯಾನನ್ ಬ್ಲಾಸ್ಟ್ ತಂತ್ರ ಉಪಯೋಗಿಸಲಾಗುತ್ತದೆ. ಇದಕ್ಕಾಗಿ ಪೂರ್ವ ನಿಯೋಜಿತ ಸ್ಥಳದಲ್ಲಿ ಆಗೆದು ಗ್ಯಾಸ್ ಸಿಲಿಂಡರನ್ನು ಹೂಳುತ್ತಾರೆ. ಅದರಿಂದಲೂ ತಂತಿಯ ಸಂಪರ್ಕ ಪಡೆದು ನಿಯಂತ್ರಣವಿಟ್ಟುಕೊಂಡ ವ್ಯಕ್ತಿ ಕಾರು ಅಥವಾ ಇನ್ನಾವುದೇ ಯೋಜಿತ ವಾಹನ ಆ ಸ್ಥಳಕ್ಕೆ ಬರುತ್ತಿದ್ದಂತೆ ತಂತಿಗೆ ಸಂಪರ್ಕ ನೀಡಿ ಸಿಲಿಂಡರ್ ಸಿಡಿಯುವಂತೆ ಮಾಡುತ್ತಾನೆ. ಸಿಲಿಂಡರ್ ಸಿಡಿದಾಗ ಅದರ ಮೇಲಿರುವ ವಾಹನ ಸಾಕಷ್ಟು ಮೇಲಕ್ಕೆ ಚಿಮ್ಮುವುದರಿಂದ ಅದ್ಭುತ ಸಾಹಸ ತೆರೆಯ ಮೇಲೆ ಮೂಡುತ್ತದೆ. ವಾಹನ ಹೀಗೆ ಸಿಡಿಯುವ ಸ್ಥಳಕ್ಕೆ ಹೋಗುವ ಮೊದಲೇ ಡ್ರೈವರ್ ಕೆಳಗೆ ಹಾರುತ್ತಾನೆ ಅಥವಾ ಇದಕ್ಕೆಂದೇ ನಿಷ್ಪ್ರಯೋಜಕ ವಾಹನಗಳನ್ನು ಬಳಸುತ್ತಾರೆ.

ಗ್ಲಾಸ್ ಬುಲೆಟ್: ಕಲಾವಿದನೊಬ್ಬ ಒಂದು ಗಾಜನ್ನು ಸೀಳಿ ಡೈವ್ ಹೊಡೆಯಬೇಕಾದರೆ ಅದಕ್ಕೆ ಹೊಂದಿಕೆಯಾಗುವ ತೆಳುಗಾಜು ಹಾಗೂ ಹಾರುವ ವ್ಯಕ್ತಿಗೆ ಸಮರ್ಪಕವಾದ ರಕ್ಷಕ ಕವಚಗಳು ಇರಬೇಕು. ಇವೆಲ್ಲವುಗಳ ಜೊತೆಗೆ ಸೀಳಬೇಕಾದ ಗಾಜಿನ ಇನ್ನೊಂದು ಭಾಗದಲ್ಲಿ ಸ್ಫೋಟಕಗಳನ್ನು ಅಂಟಿಸಿರುತ್ತಾರೆ. ಸಿಡಿಸುವ ತಂತ್ರ ತಂತಿಗಳನ್ನು ಸಮಯಕ್ಕೆ ಸರಿಯಾಗಿ ಜೋಡಿಸುವುದು. ಗಾಜನ್ನು ಒಡೆಯುವ ವ್ಯಕ್ತಿ ಹಾರಿ ಗಾಜಿಗೆ ಬಡಿಯುವ ಕ್ಷಣಕ್ಕೆ ಸರಿಯಾಗಿ ಸ್ಫೋಟಕವನ್ನು ಸಿಡಿಸಬೇಕು. ಇಲ್ಲಿ ಸಿಡಿಸುವ ಹಾಗೂ ಹಾರುವ ಸಮಯದಲ್ಲಿ ಕೊಂಚ ಏರುಪೇರಾದರೂ ಸಾಹಸ ಕಲಾವಿದನ ಪರಿಸ್ಥಿತಿ ಶೋಚನೀಯವಾಗುತ್ತದೆ.

ಬಾಂಬ್ ಸಿಡಿತ: ಮೊದಲೇ ನಿಯೋಜಿಸಿದ ಸ್ಥಳಗಳಲ್ಲಿ ಬಾಂಬ್‌ಗಳನ್ನು ಹುದುಗಿಸಿ ಇಡುತ್ತಾರೆ. ಅದನ್ನು ಆ ದೃಶ್ಯದಲ್ಲಿ ಭಾಗವಹಿಸುವ ಕಲಾವಿದನಿಗೆ ಮೊದಲೇ ತೋರಿಸಲಾಗುತ್ತದೆ. ಇಲ್ಲಿಯೂ ಸಮಯದ ಹೊಂದಾಣಿಕೆಯೇ ಮುಖ್ಯ. ಹಾಗಾಗದಿದ್ದಲ್ಲಿ ಇದರಿಂದ ಗಂಭೀರ ಅಪಾಯಗಳಾಗುವ ಸಾಧ್ಯತೆಯಿದೆ. ನಿಯಂತ್ರಕನಲ್ಲಿ ಇರುವ ರಿಮೋಟ್‌ನ ಗುಂಡಿ ಒತ್ತುವ ಸಮಯಕ್ಕೆ ಭಾಗವಹಿಸುವ ಕಲಾವಿದ ಎಷ್ಟು ದೂರದಲ್ಲಿರಬೇಕೆಂಬ ವಿವರಣೆಯನ್ನು ಮೊದಲೇ ನೀಡಿ ಎಲ್ಲರೂ ಸಮಯ (timing) ಹೊಂದಾಣಿಕೆಯಿಂದ ಇಂಥ ದೃಶ್ಯಗಳಲ್ಲಿ ಭಾಗವಹಿಸಬೇಕಾಗುತ್ತದೆ.

ಈ ತಂತ್ರಗಳ ಬಳಕೆಯಲ್ಲಿ ಕ್ಯಾಮರಾ ವೇಗ ಮತ್ತು ಕೋನ ಪ್ರಮುಖ ಪಾತ್ರವಹಿಸುತ್ತವೆ. ಕೆಲವೊಂದು ನಿರ್ದಿಷ್ಟ ಕೋನಗಳಿಂದ ಸೆರೆಹಿಡಿದಾಗ ಮಾತ್ರ ಒಂದು ದೃಶ್ಯ ಸಂಪೂರ್ಣವಾಗಿ ಸಂಯೋಜಕನ ಕಲ್ಪನೆಯಂತೆ ಬರಲು ಸಾಧ್ಯವಾಗುತ್ತದೆ. ಮೇಲಿನಿಂದ ಒಬ್ಬ ವ್ಯಕ್ತಿ ಕೆಳಕ್ಕೆ ಹಾರುವಾಗ ತಳಭಾಗ ಆಗಲೇ ತೋರಿಸುವುದಿಲ್ಲ. ಅಲ್ಲಿ ಸುರಕ್ಷತೆಗಾಗಿ ಬೆಡ್‌ಗಳನ್ನೋ, ಬಲೆಯನ್ನೋ ಹಾಕಲಾಗಿರುತ್ತದೆ. ಸಾಹಸ ಸಂಯೋಜಕ ಯಾವಾಗಲೂ ಅವಶ್ಯಕತೆಗಿಂತಲೂ ಸ್ವಲ್ಪ ಹೆಚ್ಚಿನ ಪ್ರಮಾಣದಲ್ಲೇ ಚಿತ್ರೀಕರಿಸಿಕೊಳ್ಳುತ್ತಾನೆ. ಸಂಕಲನದ ಸಮಯದಲ್ಲಿ ಹೊಂದಾಣಿಕೆಗೆ ಈ ಹೆಚ್ಚುವರಿ ಚಿತ್ರಿಕೆಗಳು ಅಗತ್ಯ ಬೀಳುತ್ತವೆ.

ಸಾಹಸದಲ್ಲಿ ದುರ್ಘಟನೆಗಳು: ಸಾಹಸ ಪ್ರಧಾನ ಚಿತ್ರಗಳಲ್ಲಿ ಸಣ್ಣಪುಟ್ಟ ಅನಾಹುತಗಳು ಸಾಮಾನ್ಯವಾದರೂ ಕೆಲವೊಂದು ದುರ್ಘಟನೆಗಳು ಚಿತ್ರರಂಗದ ಜನ ಎಂದಿಗೂ ಮರೆಯಲಾಗದಂತೆ ಅಚ್ಚಳಿಯದೆ ಉಳಿದು ಬಿಟ್ಟಿರುತ್ತವೆ. ಸಾಮಾನ್ಯವಾಗಿ

(ಚಿತ್ರ ೭) ಬೆಂಗಳೂರಿನ ಮಹಾತ್ಮ ಗಾಂಧಿ ರಸ್ತೆಯನ್ನು ಜಿಗಿಯುವ 'ಲಾಕಪ್ ಡೆತ್' ಚಿತ್ರದ ಮೈನವಿರೇಳುವ ಸಾಹಸ ದೃಶ್ಯದ ಚಿತ್ರಣ ಕಾಲದಲ್ಲಿ ಒಬ್ಬ ಮೋಟಾರ್ ಸೈಕಲ್ ಸವಾರ ತೀವ್ರಗಾಯಗೊಂಡ.

ಒಂದು ಸಾಹಸ ದೃಶ್ಯವನ್ನು ಚಿತ್ರಿಸುವ ಮೊದಲೇ ಸಕಲರೀತಿಯ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಪ್ರಥಮವಾಗಿ ಸ್ಟಂಟ್‌ಗಳನ್ನು ಸಂಯೋಜಿಸುವಾಗಲೇ ಅದಕ್ಕೆ ಬೇಕಾದ ಸುಸಜ್ಜಿತ ಸಲಕರಣೆಗಳು, ಸಿದ್ಧತೆಗಳನ್ನು ಮಾಡಿಕೊಂಡಿರಬೇಕು. ದೃಶ್ಯ ಎಲ್ಲಿ ನಡೆಯಬೇಕು ? ಹೇಗೆ ಚಿತ್ರಿಸಬೇಕು ? ಯಾವರೀತಿ ಚಿತ್ರಿಸಿದರೆ ಅನಾಹುತಗಳನ್ನು ತಪ್ಪಿಸಬಹುದು ? ಎಂಬ ಎಲ್ಲಾ ಎಚ್ಚರಿಕೆಗಳನ್ನು ತೆಗೆದುಕೊಳ್ಳಬೇಕು. ಒಂದು ಸಣ್ಣ ನಿರ್ಲಕ್ಷ್ಯ ಕೂಡಾ ಭಾರಿ ಅನಾಹುತಕ್ಕೆ ಕಾರಣವಾಗುವ ಸಾಧ್ಯತೆಯಿದೆ.

ಇವುಗಳ ಅಗತ್ಯ ಕೇವಲ ಸಾಹಸ ದೃಶ್ಯಗಳಲ್ಲಿ ಮಾತ್ರವಲ್ಲ. ಹಾಡಿನ ಚಿತ್ರೀಕರಣ ಸಂದರ್ಭದಲ್ಲಿಯೂ ಸಾಹಸ ಸಂಯೋಜಕ ಮತ್ತು ಸಾಹಸ ಸಾಮಗ್ರಿ ತಯಾರಕರ ಅಗತ್ಯವಿರುತ್ತದೆ. ಇಂಥ ಸಂದರ್ಭಗಳಲ್ಲಿ ದೃಶ್ಯ ವೈಭವಕ್ಕಾಗಿ ಬಣ್ಣ ಬಣ್ಣದಲ್ಲಿ ಸಿಡಿಯುವ ಬಾಂಬ್‌ಗಳನ್ನು ಸಿಡಿಸುತ್ತಾರೆ. ಎಚ್ಚರ ತಪ್ಪಿದರೆ ಇಲ್ಲಿಯೂ ಅಪಾಯವಿದೆ.

'ಹಾವಾದ ಹೂವು' ಚಿತ್ರದ ಸಾಹಸ ದೃಶ್ಯವೊಂದರಲ್ಲಿ ಹೆಚ್ಚು ಅಪಾಯಕಾರಿ ಸನ್ನಿವೇಶ ಸೃಷ್ಟಿಸುವಾಗ ಸಾಹಸ ನಿರ್ದೇಶಕ ರುದ್ರೇಶ್ ಕತ್ತಿನ ಮೂಳೆ, ಕೈಮೂಳೆಗಳನ್ನು ಮುರಿದುಕೊಂಡು ಮತ್ತೆ ಚೇತರಿಸಿಕೊಳ್ಳಲು ಕೆಲವು ತಿಂಗಳುಗಳೇ ಬೇಕಾಯಿತು. ಆ ಚಿತ್ರಕ್ಕಾಗಿ ಅವರು ಪಡೆದ ಸಂಭಾವನೆ ಕೇವಲ ಇನ್ನೂರೈವತ್ತು ರೂಪಾಯಿಗಳಾದರೆ, ಅದಕ್ಕಾಗಿ ಖರ್ಚುಮಾಡಿದ್ದು ಅಪಾರ ಹಾಗೂ ಪಣವಾಗಿಟ್ಟಿದ್ದು ಪ್ರಾಣವನ್ನು!

೧೯೭೮ರ ಫೆಬ್ರವರಿ ತಿಂಗಳ ಕೊನೆಯ ವಾರದ ಒಂದು ದಿನ ಮಧ್ಯಾಹ್ನ ನಾಲ್ಕು ಗಂಟೆಯ ಸಮಯ ಸ್ಥಳ ಬೆಂಗಳೂರಿನ ಪ್ರತಿಷ್ಠಿತ ಮಹಾತ್ಮ ಗಾಂಧಿ ರಸ್ತೆಯ ಮಧ್ಯಭಾಗ. 'ಲಾಕಪ್ ಡೆತ್' ಚಿತ್ರದ ಸಾಹಸ ದೃಶ್ಯವೊಂದ ಚಿತ್ರೀಕರಣ ನಡೆಸಲಾಗುತ್ತಿತ್ತು. ಆಸ್ಪತ್ರೆಯಲ್ಲಿ ಬಂದಿಯಾಗಿರುವ ನಾಯಕ ದೇವರಾಜ್‌ನನ್ನು ಆತನ ಸ್ನೇಹಿತರು ಪೊಲೀಸ್ ಕಾವಲಿನಿಂದ ಬಿಡಿಸಿಕೊಂಡು ಆಂಬ್ಯುಲೆನ್ಸ್‌ನಲ್ಲಿ ತಪ್ಪಿಸಿಕೊಂಡು ಹೋಗುವಾಗ ಪೊಲೀಸರು ಬೆನ್ನಟ್ಟುತ್ತಾರೆ. ಅವರಿಂದ ತಪ್ಪಿಸಿಕೊಂಡು ಸಾಗುವಾಗ ರಸ್ತೆಯಲ್ಲಿ ಎರಡಂತಸ್ತಿನ ಬಸ್ಸು ಎದುರಾಗುತ್ತದೆ. ಬೆನ್ನಟ್ಟುತ್ತಿದ್ದ ಪೊಲೀಸರು ಬೈಕ್‌ನ ಸಹಾಯದಿಂದ ಈ ಬಸ್‌ನ ಮೇಲಿನಿಂದ ಜಿಗಿಯುವ ಸನ್ನಿವೇಶ. ಅತ್ಯಂತ ಅಪಾಯಕಾರಿ ಹಾಗೂ ಕಷ್ಟಕರವಾದ ಈ ಸನ್ನಿವೇಶದಲ್ಲಿ ಶಿವಕುಮಾರ್ ಹಾಗೂ ರವಿ ಎಂಬ ಸಾಹಸಿಗರು ಭಾಗವಹಿಸಿದ್ದರು. ಎರಡು ಬೈಕ್‌ಗಳು ಸ್ಪ್ರಿಂಗ್ ಬ್ರಿಡ್ಜ್ ಹಾದು ಸುಮಾರು ೨೦ ಅಡಿ ಎತ್ತರದ ಬಸ್ ಮೇಲೆ ಹಾರಿದವು. ಅರೆ ಕ್ಷಣದಲ್ಲಿ ಆಯತಪ್ಪಿ ಅಷ್ಟು ಎತ್ತರದಿಂದ ಒಬ್ಬರ ಮೇಲೊಬ್ಬರು ಬಿದ್ದರು. ಬೀಳುವ ಹಂತದಲ್ಲಿ ಇಬ್ಬರೂ ಬೈಕ್‌ಗಳನ್ನು ಬಿಟ್ಟು ಬಿಟ್ಟರು. ರವಿಗೆ ಮೈಯಲ್ಲಿ ಗಾಯವಾಗಿ ಮಾನಸಿಕ ಸ್ಥಿಮಿತ ತಪ್ಪಿದರೆ ಶಿವಕುಮಾರ್ ಮೂಗಿಗೆ ಆಳವಾದ ಗಾಯವಾಗಿ ರಕ್ತಹರಿಯಿತು.

ಹಾಗೆ ನೋಡಿದರೆ ಈ ಸಾಹಸದಲ್ಲಿ ಭಾಗವಹಿಸಬೇಕಾಗಿದ್ದುದು ಇನ್ನೊಬ್ಬ ಸಾಹಸ ನಿರ್ದೇಶಕ ಜಾಲಿ ಬಾಸ್ಟಿನ್. ಮೊದಲು ಇದನ್ನು ಕಾರಿನಲ್ಲಿ ಜಿಗಿಯುವಂತೆ ಯೋಜಿಸಲಾಗಿತ್ತು. ಆದರೆ ಅವರು ರಸ್ತೆ ಇಕ್ಕಟ್ಟೆಂದು ನಿರಾಕರಿಸಿದ್ದರಿಂದ ಬೈಕ್‌ಗಳನ್ನು ಆರಿಸಿಕೊಳ್ಳಲಾಗಿತ್ತು. ರಾಮು ನಿರ್ಮಿಸಿದ ಈ ಚಿತ್ರಕ್ಕೆ ಸಾಹಸ ಸಂಯೋಜನೆ ಮಾಡಿದವರು ಥ್ರಿಲ್ಲರ್‌ಮಂಜು.

ಬೈಕ್‌ಗಳನ್ನು ಕೈಬಿಟ್ಟು ತರಗೆಲೆಯಂತೆ ಉದುರುತ್ತಿದ್ದ ಮರಣಾಂತಿಕ ದೃಶ್ಯ ಮರುದಿನ ರಾಜ್ಯದ ಪ್ರಮುಖ ದಿನಪತ್ರಿಕೆಗಳ ಮುಖಪುಟದಲ್ಲಿ ಪ್ರಕಟವಾಯಿತು. ಸಾರ್ವಜನಿಕವಾಗಿ ಬಹುದೊಡ್ಡ ಸುದ್ದಿಯಾದ ಈ ಆಕಸ್ಮಿಕ ಘಟನೆ ನಿರ್ಮಾಪಕರನ್ನು ಟೀಕೆಗೆ ಗುರಿಮಾಡಿತು. ಬಹಳ ಮಂದಿ ಪ್ರಾಣದೊಂದಿಗೆ ಚೆಲ್ಲಾಟವಾಡುವ ಇಂಥ ಅಪಾಯಕಾರಿ ಸಾಹಸದ ಔಚಿತ್ಯವನ್ನೇ ಪ್ರಶ್ನಿಸಿದರು. ಕೆಲವರು ಪ್ರಜ್ಞಾವಂತ ಛಾಯಾಗ್ರಾಹಕರು ಇಂಥ ಪ್ರಾಣಾಂತಿಕ ಸಾಹಸದ ಅಗತ್ಯವೇ ಇಲ್ಲ, ಇದನ್ನು ಮಿನಿಯೇಚರ್ ಬಳಸಿಯೂ ಚಿತ್ರಿಸ ಬಹುದಿತ್ತು ಎಂದರು. ಆದರೆ ಚಿತ್ರರಂಗದ ಲಾಭಕೇಂದ್ರಿತ ವ್ಯಾಪಾರಿ ಮನಸ್ಸುಗಳು ಈ ಖಂಡನೆಯನ್ನು ಗಣನೆಗೆ ತೆಗೆದುಕೊಳ್ಳಲಿಲ್ಲ. ಬದಲಿಗೆ ಈ ಘಟನೆಯಿಂದಾಗಿ ಚಿತ್ರಕ್ಕೆ ದೊರಕಬಹುದಾದ ಪ್ರಚಾರವನ್ನು ಲೆಕ್ಕ ಹಾಕಿದವು.

ಅಷ್ಟೇ ಅಲ್ಲ, ಮುಂದೆ ಅಂಥವೇ ಹಲವು ರೀತಿಯ ದುಸ್ಸಾಹಸದ ದೃಶ್ಯಗಳನ್ನು ಸಂಯೋಜಿಸಲು ಈ ಘಟನೆ ನಾಂದಿಯಾಯಿತು. ೧೯೭೭ರಲ್ಲಿ ಮಾರ್ಚ್ ೧೮ರಂದು ಇದೇ ಚಿತ್ರದ ನಿರ್ಮಾಪಕ ರಾಮು ನಿರ್ಮಿಸಿದ 'ಸಿಂಹದ ಮರಿ' ಚಿತ್ರದ ಚಿತ್ರೀಕರಣ ಜೈಪುರದಲ್ಲಿ ನಡೆಯುತ್ತಿದ್ದಾಗ ವಿಜಿ ಎಂಬ ಕ್ಯಾಮರಾ ಸಹಾಯಕ ದುರ್ಮರಣಕ್ಕೀಡಾದ. ಇವರದೇ ಚಿತ್ರೀಕರಣದ ವೇಳೆ ಎಂಟು ಮಂದಿ ಸಾಹಸ ಕಲಾವಿದರ ಕಾಲಿಗೆ ಅತಿ ಭಾರದ ಪೊಲೀಸ್ ಬೂಟು ತೊಡಿಸಿ ಇಪ್ಪತ್ತು ಅಡಿ ಎತ್ತರದಿಂದ ಜಿಗಿಯಲು ನಿರ್ದೇಶಕ ಶಿವಮಣಿ ಹೇಳಿದರು. ಜಿಗಿದ ಅಷ್ಟೂ ಮಂದಿಯ ಕಾಲುಗಳು ಜಖಂ ಆಗಿದ್ದವು. ರಾಮು ಅವರೇ ನಿರ್ಮಿಸಿದ 'ಹಲೋ ಸಿಸ್ಟರ್' ಚಿತ್ರದ ಚಿತ್ರೀಕರಣ ಬೆಂಗಳೂರು ಬಳಿಯ ಬನ್ನೇರು ಘಟ್ಟ ರಸ್ತೆಯ ಕಲ್ಯಾಣ ಮಂಟಪವೊಂದರ ಮುಂದೆ ನಡೆಯುತ್ತಿತ್ತು. ಕ್ರೇನ್‌ನಲ್ಲಿ ಲೈಟ್ ಇಟ್ಟು ದೃಶ್ಯವನ್ನು ಚಿತ್ರೀಕರಿಸಬೇಕೆಂದವರು ನಿರ್ದೇಶಕ ಸಾಯಿಪ್ರಕಾಶ್. ಅದರಂತೆಯೇ ಕ್ರೇನ್ ಮೇಲಕ್ಕೇರುತ್ತಾ ಹೋಗಿ ವಿದ್ಯುತ್ ತಂತಿಗೆ ತಗುಲಿತು. ಅದರಲ್ಲಿ ಕುಳಿತಿದ್ದ ಇಬ್ಬರು ಸಾವನ್ನಪ್ಪಿದ್ದರು. ಅತ್ಯಂತ ಗೌಪ್ಯವಾಗಿಟ್ಟಿದ್ದ ಈ ಘಟನೆ ಮಹಾತ್ಮಗಾಂಧಿ ರಸ್ತೆಯ ಪ್ರಕರಣ ನಡೆದ ಮೇಲೆ ಬಯಲಿಗೆ ಬಂದಿತು. ೧೯೭೫ರ ನವೆಂಬರ್ ೧೭ರಂದು ಹಿಪ್ಪಿರಾಮು ಎಂಬ ಕ್ಲಾಪ್‌ಬಾಯ್ 'ಶಿವಸೈನ್ಯ' ಚಿತ್ರೀಕರಣದ ಸಂದರ್ಭದಲ್ಲಿ ಜೀವ ಕಳೆದುಕೊಂಡ. ಈ ಚಿತ್ರದ ಚಿತ್ರೀಕರಣ ಬೆಂಗಳೂರಿನ ನೀಡ್ಸ್ ಫಾರಂ ಎಂಬಲ್ಲಿ ನಡೆಯುತ್ತಿತ್ತು. ಫಾರಂ ಮೇಲೆ ಹೊದಿಸಲಾಗಿದ್ದ ಜಿಂಕ್ ಶೀಟ್‌ನಲ್ಲಿ ಸಣ್ಣ ರಂಧ್ರದಿಂದ ಬೆಳಕು ಬರುತ್ತಿತ್ತು. ಅದರಿಂದ ಚಿತ್ರೀಕರಣಕ್ಕೆ ಅಡ್ಡಿಯಾಗುತ್ತಿದ್ದು ರಂಧ್ರವನ್ನು ಮುಚ್ಚಲು ಹೇಳಿದರು. ಅದನ್ನು ಮುಚ್ಚಲು ಶೀಟ್ ಮೇಲೆ ಹತ್ತಿದ ಹಿಪ್ಪಿರಾಮು ಶೀಟ್ ಮುರಿದಿದ್ದರಿಂದ ದೊಪ್ಪನೆ ಕೆಳಕ್ಕೆ ಬಿದ್ದ. ತಲೆ ನೆಲಕ್ಕೆ ಅಪ್ಪಳಿಸಿದ್ದರಿಂದ ಸ್ಥಳದಲ್ಲೇ ಜೀವ ಹೋಯಿತು. ಈ ಪ್ರಕರಣದಲ್ಲಿ ಚಲನಚಿತ್ರ ಕಾರ್ಮಿಕರ ಒಕ್ಕೂಟವು ಕನಿಷ್ಠ ಒಂದು ಲಕ್ಷ ರೂಪಾಯಿ ಪರಿಹಾರ ನೀಡಬೇಕೆಂದು ಒತ್ತಾಯಿಸಿತು.

'ಲಾಕಪ್ ಡೆತ್'ನ ಅನಾಹುತ ಹಸಿರಾಗಿರುವಾಗಲೇ 'ಹಾಯ್ ಬೆಂಗಳೂರು' ಚಿತ್ರದ ಕ್ಲೈಮ್ಯಾಕ್ಸ್ ಚಿತ್ರೀಕರಣ ಶೇಷಾದ್ರಿಪುರಂನ ರೈಲ್ವೆ ಪ್ಯಾರಲಲ್ ರಸ್ತೆಯಲ್ಲಿ ನಡೆಯುತ್ತಿತ್ತು. ಬಿ.ಟಿ.ಎಸ್ ಬಸ್ ಮೇಲೆ ಮೋಟಾರ್ ಸೈಕಲ್ ಹಾರಿಸುವ

ಸಂದರ್ಭದಲ್ಲಿ ಎಷ್ಟು ಎಚ್ಚರಿಕೆಯಿಂದಿದ್ದರೂ ಆಯತಪ್ಪಿ ಸಾಹಸ ಕಲಾವಿದರಾದ ಬಾಬು ಮತ್ತು ಚಂದ್ರಶೇಖರ್ ಇಬ್ಬರಿಗೂ ತೀವ್ರತರನಾದ ಗಾಯಗಳಾದವು.

'ಬೆಂಗಳೂರ್ ಬುಡೆ' ಚಿತ್ರೀಕರಣ ಚಾಮರಾಜಪೇಟೆಯ ರುದ್ರ ಭೂಮಿಯಲ್ಲಿ ನಡೆಯುತ್ತಿದ್ದಾಗ ನಾಯಕರಾದ ನೆಪೋಲಿಯನ್ ಮತ್ತು ವಿನೋದ್ ಆಳ್ವಾ ಹೊಡೆದಾಡುವ ದೃಶ್ಯವೊಂದರಲ್ಲಿ ನೆಪೋಲಿಯನ್ ಆಳ್ವಾಗೆ ಹೊಡೆದ ಏಟು ಗುರಿ ತಪ್ಪಿ ಆತನ ಕಣ್ಣಿಗೆ ಬಿತ್ತು. ಬಲವಾಗಿಯೇ ಏಟು ಬಿದ್ದ ಕಾರಣ ಕಣ್ಣಿನಿಂದ ತಕ್ಷಣ ರಕ್ತ ಸುರಿಯಲಾರಂಭಿಸಿತು. ಕೊನೆಗೆ ವಿನೋದ್ ಆಳ್ವಾ ಕಣ್ಣಿಗೆ ಶಸ್ತ್ರ ಚಿಕಿತ್ಸೆ ಮಾಡಿಸಿಕೊಳ್ಳಬೇಕಾಯಿತು. 'ರಾವಣ ರಾಜ್ಯ' ಚಿತ್ರೀಕರಣ ವೇಳೆಯಲ್ಲಿ ದೇವರಾಜ್ ಕೂಡ ಸ್ವಲ್ಪದರಲ್ಲಿಯೇ ಕಣ್ಣಿಗೆ ಆಗಬಹುದಾಗಿದ್ದ ಅನಾಹುತವನ್ನು ತಪ್ಪಿಸಿಕೊಂಡಿದ್ದರು.

ಹಂಸಲೇಖ ತಮ್ಮ ಮಗ ಅಲಂಕಾರ್‌ಗಾಗಿ 'ಸುಗ್ಗಿ' ಚಿತ್ರ ನಿರ್ಮಿಸುವಾಗ ೪೦ ಅಡಿ ಎತ್ತರದಿಂದ ಅಲಂಕಾರ್ ಧುಮುಕುವ ಸನ್ನಿವೇಶವಿತ್ತು. ಧಾಂಡಿಗನೊಬ್ಬನ ಬೆನ್ನಿಗೆ ಎತ್ತರದಿಂದ ಧುಮುಕಿ ಅಲಂಕಾರ್ ಒದೆಯಬೇಕು. ಅಭ್ಯಾಸ ಮಾಡಿರುವೆನೆಂಬ ಅತ್ಯುತ್ಸಾಹ ಹಾಗೂ ಆತ್ಮವಿಶ್ವಾಸದಿಂದ ಡ್ಯೂಪ್ ಹಾಕಲು ಒಪ್ಪದೆ ಹಟ ಮಾಡಿ ಧುಮುಕಿದ್ದರಿಂದ ಕಾಲುಗಳಿಂದ ಒದೆಯುವ ಬದಲು ತನ್ನ ಎದೆಯನ್ನು ಆತನ ಬೆನ್ನಿಗೆ ಏಕಾಏಕಿ ಗುದ್ದಿದಾಗ ಇಬ್ಬರೂ ನೆಲಕ್ಕುರುಳಿದರು. ಎಕ್ಸ್‌ರೇ ತೆಗೆಸಿ ನೋಡಿದಾಗ ಎದೆಯ ಬಲಭಾಗದ ಮೂಳೆಯೊಂದಕ್ಕೆ ಬಲವಾದ ಏಟು ಬಿದ್ದಿತು.

ಥ್ರಿಲ್ಲರ್ ಮಂಜು ರವರ 'ಜಾಕಿಚಾನ್' ಚಿತ್ರೀಕರಣ ಸನ್ನಿವೇಶವೊಂದರಲ್ಲಿ ಬಾಂಬ್ ಸಿಡಿದು ಜೀಪ್‌ಗೆ ಬೆಂಕಿ ಹತ್ತಿತ್ತು. ಜೀಪ್‌ನ ಬ್ರೇಕ್ ವಿಫಲವಾಯಿತು. ಗಾಬರಿಗೊಂಡ ಚಾಲಕ ನಿಯಂತ್ರಣ ಕಳೆದುಕೊಂಡ ಪರಿಣಾಮವಾಗಿ ಚಿತ್ರೀಕರಣ ವೀಕ್ಷಿಸುತ್ತಿದ್ದ ಪತ್ರಿಕಾ ಪ್ರಚಾರಕರ್ತ ಡಿ.ವಿ.ಸುಧೀಂದ್ರ ಹಾಗೂ ಸಾಹಸ ಕಲಾವಿದನೊಬ್ಬನನ್ನು ತೀವ್ರವಾಗಿ ಗಾಯಗೊಳಿಸಿತು. ಬಾಂಬ್ ಸಿಡಿಸುವವನ ತಪ್ಪು ಲೆಕ್ಕಾಚಾರದಿಂದ ಈ ಅನಾಹುತ ಸಂಭವಿಸಿತ್ತು. ಆದರೆ ಬಾಂಬ್ ಸಿಡಿಸಿದ ರವಿ ''ಬಾಂಬ್ ಸರಿಯಾದ ಸಮಯಕ್ಕೆ ಸಿಡಿದಿದೆ. ಕಾರು ಲಾರಿಯ ಮೇಲೆ ಹಾರುವಾಗ ಸಿಡಿದ ಬಾಂಬ್‌ನಿಂದ ಹಾರಿದ ಬೆಂಕಿ ಜೀಪ್‌ಗೆ ಬಿದ್ದು ಡ್ರೈವರ್ ಗಾಬರಿಯಾಗಿ ಜೀಪನ್ನು ಬೇರೆಡೆಗೆ ತಿರುಗಿಸಿದಾಗ ನಿಂತಿದ್ದವರ ಮೇಲೆ ಹರಿಯಿತು'' ಎಂದು ಸಮರ್ಥಿಸಿಕೊಂಡರು.

'ಯುದ್ಧ' ಚಿತ್ರದ ಚಿತ್ರೀಕರಣದಲ್ಲಿ ಕುದುರೆ ಚೇಸಿಂಗ್‌ನಲ್ಲಿ ಒಂದು ಕುದುರೆ ನೆಲಕ್ಕೆ ಮುಗುಚಿಕೊಂಡು ಸತ್ತು ಹೋಯಿತು. ಇದೇ ಚಿತ್ರದ ಚಿತ್ರೀಕರಣ ಸಕಲೇಶಪುರದಲ್ಲಿ ನಡೆಯುತ್ತಿದ್ದಾಗ ಇನ್ನೊಂದು ದುರಂತ ನಡೆಯಿತು. ದೇವರಾಜ್ ಕುಳಿತಿದ್ದ ಕಾರಿನ ಮೇಲೆ ಇಬ್ಬರು ಸಾಹಸಿಗರು ಬೈಕ್ ಎಗರಿಸುವ ದೃಶ್ಯದಲ್ಲಿ ಬೈಕ್‌ಗಿಂತ ಮೊದಲು ಸಾಹಸಿಗರೇ ನೆಲಕಚ್ಚಿದರು. ಕೈಕಾಲು ಮುರಿದುಕೊಂಡ ಇಬ್ಬರನ್ನು ಆಸ್ಪತ್ರೆಗೆ ಸೇರಿಸಲಾಯಿತು.

ಇದೆಲ್ಲಕ್ಕಿಂತ ಘೋರ ಘಟನೆ ೧೯೭೭ರ ಡಿಸೆಂಬರ್‌ನಲ್ಲಿ ನಡೆಯಿತು. 'ಕಾಳಿ' ಚಿತ್ರದ ಹೊಡೆದಾಟದ ಸನ್ನಿವೇಶದ ಚಿತ್ರೀಕರಣವಾಗುತ್ತಿತ್ತು. ಜಾಕಿಶಿವು ಹಾಗೂ ಇನ್ನಿತರರು ಭಾಗವಹಿಸಿದ್ದರು. ಏಟೊಂದಕ್ಕೆ ಪ್ರತಿಕ್ರಿಯೆಯಾಗಿ ಗಾಳಿಯಲ್ಲಿ ಗಿರ್ರನೆ ತಿರುಗಿ ನೆಲಕ್ಕೆ ಬೀಳುವ ದೃಶ್ಯ. ಅತ್ಯಂತ ಉತ್ಸಾಹದಿಂದ ನಟಿಸುತ್ತಾ ಕೆಳಗೆ ಬಿದ್ದ ಜಾಕಿಶಿವು ಮತ್ತೆ ಮೇಲೇಳಲಿಲ್ಲ. ಏಕೆಂದರೆ ಅಂತಹ ಸಾಹಸ ದೃಶ್ಯಕ್ಕೆ ಬೇಕಾದಷ್ಟು ಮೆತ್ತನೆಯ ಹಾಸಿಗೆಗಳನ್ನು ನೆಲದಲ್ಲಿ ಹಾಸಿರಲಿಲ್ಲ. ಅವರ ಬೆನ್ನು ಮೂಳೆ ಮುರಿದು ಪುಡಿ ಪುಡಿಯಾಗಿತ್ತು. ಆಸ್ಪತ್ರೆಯಲ್ಲಿ ಎರಡು ದಿನ ನರಳಾಡಿದ ಜಾಕಿ ಶಿವು ಕೊನೆಯುಸಿರೆಳೆದರು. ಅವರ ಹೆಂಡತಿ ಹಾಗೂ ಎಳೆಯ ಮಗು ಅನಾಥರಾಗಬೇಕಾಯಿತು. ಸುಮಾರು ಇಪ್ಪತ್ತೈದಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿದ ಜಾಕಿಶಿವು ಸ್ನೇಹಮಯಿಯಷ್ಟೇ ಅಲ್ಲದೆ ಉತ್ತಮ ಕಲಾವಿದರೂ ಆಗಿದ್ದರು.

'ಟಿಕೆಟ್ ಟಿಕೆಟ್' ಚಿತ್ರದ ಚಿತ್ರೀಕರಣ ಅಬ್ಬಾಯಿನಾಯ್ಡು ಅವರ ಮಧು ಸ್ಟುಡಿಯೋದಲ್ಲಿ ನಡೆಯುತ್ತಿದ್ದಾಗ ಭಾರೀ ಅನಾಹುತ ನಡೆಯಿತು. ಅಲ್ಲಿ ಸ್ಫೋಟಕ್ಕಾಗಿ ಬಾಂಬ್‌ಗಳನ್ನು ಸಿದ್ಧಗೊಳಿಸಲಾಗುತ್ತಿತ್ತು. ಬಾಂಬ್‌ರವೀ ಎಂದೇ ಖ್ಯಾತರಾಗಿದ್ದ ರವಿ ಎಲ್ಲವನ್ನು ಕಟ್ಟಿ, ಒತ್ತಿ, ಜೋಡಿಸಿ ಇಡುತ್ತಿದ್ದರು. ಅವರ ಎಣಿಕೆಗೂ ಮೀರಿ ಬಾಂಬ್ ಧಟ್ಟನೆ ಸಿಡಿಯಿತು. ಅದುವರೆಗೆ ನೂರಾರು ಬಾಂಬ್ ಸ್ಫೋಟಕಗಳನ್ನು ಸೃಷ್ಟಿಸಿದ್ದ ಅವರ ದೇಹ ಕ್ಷಣದಲ್ಲಿ ಚೂರು ಚೂರಾಯಿತು. ರವಿ ೧೯೮೨ರಿಂದಲೂ ಇದೇ ಕೆಲಸ ಮಾಡುತ್ತಾ ಸಾಕಷ್ಟು ಅನುಭವ ಹೊಂದಿದ್ದರಾದರೂ ಅಪಾಯದಿಂದ ಪಾರಾಗಲು ಸಾಧ್ಯವಾಗಲಿಲ್ಲ. ಈ ದುರಂತದಿಂದಾಗಿ ಅವರ ಕುಟುಂಬ ಕೂಡ ಅನಾಥವಾಯಿತು. ಈ ಸ್ಫೋಟದಲ್ಲಿ ನಾಯಕನಟ ಸಾಯಿಕುಮಾರ್ ಸೇರಿದಂತೆ ಕೆಲವರು ಗಾಯಗೊಂಡಿದ್ದರು.

'ಗಂಧದ ಗುಡಿ' ಚಿತ್ರದ ಡ್ಯೂಪ್ ಕಲಾವಿದನಿಗಾದ ಅಪಘಾತ, ನೇಣು ಹಾಕಿಕೊಳ್ಳುವ ಸನ್ನಿವೇಶದಲ್ಲಿ ಭಾಗವಹಿಸಿದವರ ಸಾವು, ಬೆಂಕಿ ಹತ್ತಿ ಉರಿಯುವಾಗಲೇ ಹೋರಾಡುವ ಕಲಾವಿದರಿಗಾಗುವ ಅಪಘಾತಗಳು, ಹೀಗೆ ಬಹು ದೊಡ್ಡ ಪಟ್ಟಿಯೇ ಇದೆ. ಭಾಗವಹಿಸಿದ ಕಲಾವಿದರು ಪ್ರಾಣಾಂತಿಕ ಅಪಾಯಗಳಿಂದ ಪಾರಾದದ್ದೀದೆ. ಇದೊಂದು ನಿರಂತರ ಜೀವನ್ಮರಣದ ಸಮಸ್ಯೆ.

ಸುರಕ್ಷತೆ ಮತ್ತು ಎಚ್ಚರಿಕೆ

ಭಾರತೀಯ ಚಿತ್ರರಂಗದ ಇತಿಹಾಸದಲ್ಲೇ, ಕನ್ನಡ ಚಿತ್ರಗಳ ಚಿತ್ರೀಕರಣದ ಸಂದರ್ಭದಲ್ಲಿ ನಡೆದಷ್ಟು ದುರ್ಘಟನೆಗಳು ಬೇರಾವ ಭಾಷೆಗಳಲ್ಲೂ ಆಗಿಲ್ಲ. ಇದಕ್ಕೆ ಸ್ಪಷ್ಟವಾದ ಕಾರಣ ಹೇಳುವುದು ಕಷ್ಟವಾದರೂ ಮುನ್ನೆಚ್ಚರಿಕೆ ವಹಿಸದಿರುವುದು, ಅಜ್ಞಾನ ಹಾಗೂ ಬಳಸುವ ಅವೈಜ್ಞಾನಿಕ ಪದ್ಧತಿ ಎನ್ನಬಹುದು.

ಇದರೊಂದಿಗೆ ಸಂಬಂಧಿತ ಕ್ಷೇತ್ರದಲ್ಲಿ ಸೂಕ್ತ ತರಬೇತಿ ಪಡೆಯದಿರುವುದು ಬಹುದೊಡ್ಡ ಲೋಪ. ಕನ್ನಡ ಚಿತ್ರರಂಗದ ಪದ್ಧತಿಯೇ ಹಾಗೆ. ಇಲ್ಲಿ ಯಾವುದಕ್ಕೂ ಅರ್ಹತೆ ಬೇಕಾಗಿಲ್ಲ. ಯಾರು ಏನು ಬೇಕಾದರೂ ಮಾಡಬಹುದು. ಈ ಧೋರಣೆ ಸಾಹಸದ ವಿಷಯದಲ್ಲಿ ಅನೇಕ ಅಪಾಯಗಳನ್ನು ಉಂಟು ಮಾಡಲು ಕಾರಣವಾಗಿದೆ. ಚಿತ್ರ ನಿರ್ಮಾಣದ ಬೇರಾವುದೇ ವಿಭಾಗಕ್ಕೆ ಸೂಕ್ತ ತರಬೇತಿ ಇಲ್ಲವಾದರೆ ಗುಣಮಟ್ಟ ಹಾಳಾಗುತ್ತದೆಯೇ, ಹೊರತು ಇಂಥ ಅಪಾಯಗಳಾಗುವುದಿಲ್ಲ. ಆದರೆ ಸಾಹಸ ಕಲಾವಿದರು ತಮ್ಮ ಪ್ರಾಣವನ್ನೇ ಪಣಕ್ಕಿಟ್ಟು ದೃಶ್ಯಗಳಲ್ಲಿ ಭಾಗವಹಿಸುವುದರಿಂದ ಅವರಿಗೆ ಸೂಕ್ತ ತರಬೇತಿ ಹಾಗೂ ಸತತ ಅಭ್ಯಾಸ ತೀರಾ ಅಗತ್ಯ. ಆದರೆ ಇಲ್ಲಿ ಆರ್ಥಿಕ ಸಮಸ್ಯೆ. ಸ್ಥಳೀಯ ಚಿತ್ರ ನಿರ್ಮಾಣದ ಅವೈಜ್ಞಾನಿಕ ಪದ್ಧತಿಯಿಂದ ಈ ವಿಷಯದಲ್ಲಿ ಯಾವುದೇ ಬೆಳವಣಿಗೆ ಇಲ್ಲ.

ನಾಲ್ಕು ಚಿತ್ರಗಳಿಗೆ ಸಾಹಸ ಕಲಾವಿದನಾಗಿ ದುಡಿದಾಕ್ಷಣ ಆತ ಸರ್ವ ಕಲೆಗಳಲ್ಲೂ ನಿಪುಣನಾಗಿರುವುದಿಲ್ಲ. ಅದಕ್ಕೆ ಪ್ರಯತ್ನ ಶ್ರಮದ ಜೊತೆಗೆ ಕೆಲವು ಮೂಲಭೂತವಾದ ಅಂಶಗಳನ್ನು ತಿಳಿದಿರಬೇಕು. ಅವು ಆತನಿಗೆ ಕರತಲಾಮಲಕವಾಗಿರಬೇಕು. ಆದರೆ ನಮ್ಮಲ್ಲಿ ಸಾಹಸ ಕಲಾವಿದರ ಅಜ್ಞಾನ, ನಿರ್ಮಾಪಕರ ರಾಜೀ ಸೂತ್ರದ ಒತ್ತಾಯ ಇವೆಲ್ಲ ಅನಾಹುತಗಳನ್ನು ಸೃಷ್ಟಿಸುತ್ತದೆ.

'ಲಾಕಪ್‌ಡೆತ್' ಚಿತ್ರೀಕರಣದಲ್ಲಿ ಆದ ಅಪಘಾತದ ಬಗ್ಗೆ ಹಾಸನ್ ರಘು ಹೀಗೆ ಹೇಳುತ್ತಾರೆ. 'ಆ ರೀತಿಯ ಚಿತ್ರೀಕರಣಕ್ಕೆ ಆ ಸ್ಥಳದ ಆಯ್ಕೆ ಸಂಪೂರ್ಣ ತಪ್ಪು. ೧೮೦ ಅಡಿ ದೂರದಿಂದ ವೇಗವಾಗಿ ಬಂದು ಮೂವತ್ತು ಅಡಿ ಜಂಪ್ ಮಾಡಲು ಮಹಾತ್ಮ ಗಾಂಧಿ ರಸ್ತೆಯಲ್ಲಿ ಸೂಕ್ತ ರಕ್ಷಣೆಯ ಏರ್ಪಾಟು ಮಾಡಲು ಸ್ಥಳವಿಲ್ಲ. ಜೊತೆಗೆ ಪಕ್ಕದಲ್ಲಿ ಒಂದು ಕಂಬವೂ ಇತ್ತು. ಮೂವತ್ತು ಅಡಿ ಜಂಪ್ ಮಾಡಲು ಗಂಟೆಗೆ ೪೫ ಕಿಲೋಮೀಟರ್‌ಗಿಂತ ಹೆಚ್ಚು ವೇಗದಲ್ಲಿ ಬಾರದಿರುವಂತೆ ಯೋಜಿಸಬೇಕಾಗಿತ್ತು. ಅವರು ಅದಕ್ಕಿಂತಲೂ ವಿಪರೀತ ವೇಗದಲ್ಲಿ ಬೈಕ್ ಓಡಿಸಿದರು. ಇದನ್ನೇ ತಪ್ಪು ಯೋಜನೆ ಅನ್ನುವುದು. ಇಂತಹ ಸಾಹಸ ಮಾಡಲು ಸೆಟ್ ಹಾಕಬೇಕಾಗಿತ್ತು''.

ಇಂಥದ್ದೇ ನಿರ್ದಿಷ್ಟ ಸಾಹಸವಿರಬೇಕೆಂಬ ಪಟ್ಟು ನಿರ್ಮಾಪಕ, ನಿರ್ದೇಶಕರಿಗೆ ಇದ್ದಲ್ಲಿ ಅದಕ್ಕೆ ಬೇಕಾದ ಎಲ್ಲಾ ಸವಲತ್ತುಗಳನ್ನು ಒದಗಿಸುವ ಜವಾಬ್ದಾರಿಯೂ ಅವರದೇ ಆಗಿರುತ್ತದೆ. ಉದಾಹರಣೆಗೆ ಬೆಂಕಿ ಬಳಸಿ ಚಿತ್ರೀಕರಣ ನಡೆಸುವಾಗ ಫೈರ್ ಇಂಜಿನ್‌ಗಳು, ಸಾಕಷ್ಟು ಸಂಖ್ಯೆಯಲ್ಲಿ ನೀರು ಸಂಗ್ರಹಿಸುವ ಡ್ರಮ್‌ಗಳು, ಬಕೆಟ್‌ಗಳು, ದಪ್ಪವಾದ ಗೋಣಿಗಳು ಅಥವಾ ಕಂಬಳಿಗಳು ಸ್ಥಳದಲ್ಲಿರಬೇಕು. ಹಾಗೇ ನೀರಿನಲ್ಲಿ ಶೂಟಿಂಗ್ ಮಾಡುವಾಗ ಅದರ ಆಳ ಅಗಲ, ಅಲ್ಲಿನ ಜಲಚರಗಳು, ಸುಳಿ ಇವುಗಳ ಬಗ್ಗೆ ಸಮರ್ಪಕ ಮಾಹಿತಿ ಪಡೆಯುವುದರ ಜೊತೆಗೆ ಉತ್ತಮ ಈಜುಗಾರರು, ದೋಣಿ, ಹಗ್ಗ, ಟ್ಯೂಬು ಮೊದಲಾದ ಅಗತ್ಯವಸ್ತುಗಳನ್ನು ಇರಿಸಿಕೊಂಡಿರಬೇಕು. ಸಾಹಸ ನಿರ್ದೇಶಕ ಸ್ವಾಮಿಯವರು ಹೇಳುವ ಹಾಗೆ ನೀರಿನಲ್ಲಿ ಸಾಹಸ ಸಂಯೋಜನೆ ಹೆಚ್ಚು ಅಪಾಯಕಾರಿ. ಅನೇಕ ಚಿತ್ರಗಳಲ್ಲಿ ಜಲಪಾತ, ಕೆರೆ, ನದಿ, ಸಮುದ್ರಗಳಲ್ಲಿ ಚಿತ್ರಿಸುವಾಗ ಸುರಕ್ಷತೆಗೆ ಕಟ್ಟಿದ್ದ ಹಗ್ಗ ಬಿಚ್ಚಿಕೊಂಡು ಕಲಾವಿದರು ನೀರಿನಲ್ಲಿ ಕೊಚ್ಚಿಕೊಂಡು ಹೋದ ಸಂದರ್ಭಗಳೂ ಇವೆ. ಜಂಪ್ ಮಾಡಿದಾಗ ನೀರಿನೊಳಗಿರುವ ಕಲ್ಲುಬಂಡೆಗೆ ಬಡಿದು ತಲೆ, ಎದೆಗೂಡು ಬಡಿದು ಅನಾಹುತಗಳಾಗಿದ್ದೂ ಇದೆ.

ಚೇಸಿಂಗ್ ಮಾಡುವ ದೃಶ್ಯಕ್ಕಾಗಿ ಆಯ್ಕೆ ಮಾಡುವ ದೃಶ್ಯಗಳು, ವಾಹನಗಳು, ವ್ಯಕ್ತಿಗಳು ಎಲ್ಲವೂ ಪೂರ್ವ ನಿಯೋಜಿತವಾಗಿರಬೇಕು. ಎತ್ತರದಿಂದ ಧುಮುಕುವ, ಬೀಳುವ, ಹಾರುವ ಸಂದರ್ಭಗಳಿಗೆ ಅವಶ್ಯಕತೆಗೆ ತಕ್ಕಷ್ಟು ಹಾಸಿಗೆಗಳನ್ನು ಒದಗಿಸಬೇಕು. ೯೦ರ ದಶಕದಿಂದೀಚೆಗೆ ಸಾಹಸವೂ ಚಲನಚಿತ್ರದ ಪ್ರಮುಖ ವಿಭಾಗವಾಗಿ

(ಚಿತ್ರ ೮) ಹಾಸನ ರಘು ಅವರಿಂದ ಉದಯೋನ್ಮುಖ ಸಾಹಸ ಕಲಾವಿದರಿಗೆ ತರಬೇತಿ

ರೂಪುಗೊಂಡಿರುವುದರಿಂದ ಅವಕ್ಕೆ ಅಗತ್ಯವಾದ ಎಲ್ಲಾ ಸೌಲಭ್ಯಗಳನ್ನು ಸಾಹಸ ಸಂಯೋಜಕರು ಜೋಡಿಸಿಕೊಳ್ಳುವುದು ಅನಿವಾರ್ಯ. ಇದಕ್ಕಾಗಿ ಹಣ ವ್ಯಯಿಸಲೇಬೇಕು. ಹೀಗಾದಾಗ ಅಪಘಾತಗಳ ಸಂಖ್ಯೆ ಕಡಿಮೆಯಾಗುತ್ತದೆ.

ಕನ್ನಡ ಚಿತ್ರಗಳಲ್ಲಿ ಪಾಶ್ಚಾತ್ಯ ದೇಶದ ಚಿತ್ರಗಳಲ್ಲಿನ ಅದ್ಭುತ ಸಾಹಸದ ಅನುಕರಣೆ ಮಾಡಬೇಕೆಂಬ ಉದ್ದೇಶವಿದ್ದರೂ ಅಲ್ಲಿದ್ದಂತಹ ಸೌಲಭ್ಯಗಳನ್ನು ಮಾಡಿಕೊಳ್ಳಬೇಕೆಂದಾಗಲಿ, ಸಾಹಸ ದೃಶ್ಯವನ್ನು ತುಂಬಾ ಎಚ್ಚರಿಕೆಯಿಂದ ನಿಧಾನವಾಗಿ ತೆಗೆಯ ಬೇಕೆಂದಾಗಲಿ ನಿಗಾವಹಿಸುವುದಿಲ್ಲ. ಆದರೆ ಪಾಶ್ಚಾತ್ಯರು ಆಧುನಿಕ ಸೌಲಭ್ಯಗಳನ್ನೆಲ್ಲ ಬಳಸಿಕೊಳ್ಳುತ್ತಾರೆ. ಚಿತ್ರೀಕರಣದ ಸ್ಥಳದಲ್ಲೇ ಒಂದೆಡೆಯಿಂದ ಮತ್ತೊಂದೆಡೆಗೆ ಸಂಪರ್ಕದ ವ್ಯವಸ್ಥೆಗಾಗಿ ವಾಕಿಟಾಕಿಗಳನ್ನು ಬಳಸುತ್ತಾರೆ. ರೋಪ್ ಶಾಟ್‌ಗಳನ್ನು ಚಿತ್ರಿಸುವಾಗ ಕಲಾವಿದರಿಗೆ ಹಗ್ಗ ಕಟ್ಟಿ ಪುಲ್ಲಿಯಲ್ಲಿ ಎಳೆದು ಚಿತ್ರಿಸಿದ ನಂತರ ಹಗ್ಗವನ್ನು ಕಂಪ್ಯೂಟರ್ ಸಹಾಯದಿಂದ ತೆರೆಯ ಮೇಲೆ ಕಾಣಿಸಿಕೊಳ್ಳದಂತೆ ಮಾಡುತ್ತಾರೆ. 'ಚಾಮುಂಡಿ' ಚಿತ್ರದಲ್ಲಿ ಈ ತಂತ್ರ ಬಳಸಿಯೇ ಮಾಲಾಶ್ರೀ ಅಷ್ಟೆತ್ತರಕ್ಕ ಜಿಗಿದು ಒದೆಯುವ ಸಾಹಸ ದೃಶ್ಯವನ್ನು ಚಿತ್ರಿಸಿಕೊಳ್ಳಲಾಗಿತ್ತು.

ಜೊತೆಗೆ ನಿರ್ಮಾಪಕ, ನಿರ್ದೇಶಕರು ಚಿತ್ರಕತೆಯ ರಚನೆಯ ಹಂತದಲ್ಲೇ ಸಾಹಸ ನಿರ್ದೇಶಕರು, ಛಾಯಾಗ್ರಾಹಕರು, ಕಲಾ ನಿರ್ದೇಶಕರೊಡನೆ ಚರ್ಚಿಸಿ ಯೋಜಿತವಾಗಿ ಕಾರ್ಯ ನಿರ್ವಹಿದರೆ ಅಪಾಯಗಳು ಕಡಿಮೆಯಾಗುತ್ತವೆ. ಹೀಗೆ ಮಾಡುವುದರಿಂದ ದೃಶ್ಯದ ಗುಣಮಟ್ಟವೂ ಹೆಚ್ಚುವುದರಲ್ಲಿ ಸಂಶಯವಿಲ್ಲ. ಇಂಥ ದೃಶ್ಯ ಸಂಯೋಜನೆಗಾಗಿ ಅವಸರ ಮಾಡದೆ ಸಾಕಷ್ಟು ಸಮಯಾವಕಾಶ ನೀಡಬೇಕು. ಅಪಘಾತದ ನಂತರ ಪರಿಹಾರ ನೀಡಿ ಕೈ ತೊಳೆದು ಕೊಳ್ಳುವುದಕ್ಕಿಂತ ಆಗದಂತೆ ಎಚ್ಚರಿಕೆ ವಹಿಸುವುದು ಸೂಕ್ತ. ಯಾವ ಪರಿಹಾರವೂ ಅಂಗಾಂಗಗಳನ್ನು, ಪ್ರಾಣವನ್ನು ತಂದು ಕೊಡಲಾರದು.

ಒಟ್ಟಾರೆಯಾಗಿ ಕನ್ನಡದ ಸಾಹಸ ನಿರ್ದೇಶಕರಿಗಾಗಲಿ, ಸಾಹಸ ಕಲಾವಿದರಿಗಾಗಲಿ ಉತ್ತಮವಾದ ಎಲ್ಲ ಸಲಕರಣೆ, ಸವಲತ್ತುಗಳಿದ್ದು ಉತ್ತಮವಾಗಿ ಕಲಿಸುವ ತರಬೇತಿ ಕೇಂದ್ರವೊಂದರ ಅಗತ್ಯವಿದೆ. ತರಬೇತಿ ಕೇಂದ್ರಗಳಲ್ಲಿ ಕಲಿತು ಅರ್ಹತಾ ಪತ್ರ ಪಡೆದವರನ್ನು ಮಾತ್ರ ಸಾಹಸಗಳಲ್ಲಿ ಬಳಸಿಕೊಳ್ಳಬೇಕು. ಆಗಲೇ ಈಗ ನಡೆಯುವ ಅಪಾಯ, ಪ್ರಾಣ ಹಾನಿಗಳು ಕಡಿಮೆಯಾಗುವುದು. ಇಲ್ಲವಾದಲ್ಲಿ ಪ್ರೇಕ್ಷಕರನ್ನು ರಂಜಿಸುವ ಕಾಯಕಕ್ಕೆ ಬಿದ್ದು ತಮ್ಮ ಜೀವನದಲ್ಲಿ ಸದಾ ನೋವು ತಿನ್ನುವ ಪರಿಸ್ಥಿತಿಯಿಂದ ಬಿಡುಗಡೆ ಇಲ್ಲ.

ವಿಮೆ ಮತ್ತು ಪರಿಹಾರ

'ಸಾಹಸ ಕಲಾವಿದರ ಸಂಘ' ಸಾಹಸ ಕಲಾವಿದರಿಗೆ ವಿಮೆ ಮಾಡಿಸಲು ಪ್ರಯತ್ನ ಪಟ್ಟಾಗ ವಿಮಾ ಸಂಸ್ಥೆ ನಿರಾಕರಿಸಿತು. ಸರ್ಕಸ್ ಮತ್ತು ಸಾಹಸ ಕಲಾವಿದರಿಗೆ ವಿಮೆ ಕೊಡುವುದಿಲ್ಲ ಎನ್ನುವ ನಿಯಮವನ್ನು ಮುಂದಿಟ್ಟಿತು. ಆಗ ಅಖಿಲ ಭಾರತ ಸಾಹಸ ಕಲಾವಿದರ ಸಂಘ ಇಂದಿರಾಗಾಂಧಿಯವರನ್ನು ಸಂಪರ್ಕಿಸಿ ಈ ಬಗ್ಗೆ ಮನವಿ ಸಲ್ಲಿಸಿತು. ಅದರೂ ಪ್ರಯೋಜನವಾಗಲಿಲ್ಲ.

ಸಾಹಸ ಕಲಾವಿದರ ಸಂಘ ನಿರ್ಮಾಪಕರ ಜೊತೆಯೇ ಒಪ್ಪಂದ ಮಾಡಿಕೊಂಡು ಇರುವ ಸೌಲಭ್ಯದಲ್ಲಿ ಆದಷ್ಟು ಸುರಕ್ಷಿತವಾಗಿ ಚಿತ್ರೀಕರಣ ನಡೆಸಲು ಏರ್ಪಾಟು ಮಾಡಿಕೊಂಡಿತು. ಕೆಲವು ನಿರ್ಮಾಪಕರು ಕಾಳಜಿಯಿಂದ ಸುರಕ್ಷಣಾ ಸೌಲಭ್ಯಗಳನ್ನು ಒದಗಿಸುತ್ತಾರೆ, ಅಪಘಾತವೇನಾದರೂ ಆದರೆ ನೆರವನ್ನೂ ನೀಡುತ್ತಾರೆ. ಇದೊಂದು ಕೇವಲ ಮೌಖಿಕ ಒಪ್ಪಂದವಾಗಿರು ವುದರಿಂದ ಎಲ್ಲಾ ನಿರ್ಮಾಪಕರಿಂದಲೂ ಇದನ್ನೇ ನಿರೀಕ್ಷಿಸಲು ಸಾಧ್ಯವಿಲ್ಲ.

'ಟಿಪ್ಪು ಸುಲ್ತಾನ್' ಧಾರಾವಾಹಿಯ ಚಿತ್ರೀಕರಣದ ಸಂದರ್ಭದಲ್ಲಿ ಆದ ಭಯಂಕರ ಅಪಘಾತ ಎಲ್ಲರಿಗೂ ಗೊತ್ತು. ಟಿಪ್ಪು ಮದುವೆಯ ದೃಶ್ಯದಲ್ಲಿ ಪಟಾಕಿ ಹೊತ್ತಿಸಿ ಶಾಮಿಯಾನಕ್ಕೆ ತಗುಲಿ ಬೆಂಕಿ ಅನಾಹುತವಾಗಿ ನಾಯಕನಟ, ನಿರ್ಮಾಪಕ ಸಂಜಯ್‌ಖಾನ್ ಬದುಕಿ ಉಳಿದದ್ದೇ ಹೆಚ್ಚು. ಆದರೆ ಇತರ ಅನೇಕ ಕಾರ್ಮಿಕರು ಸಾವು ನೋವುಗಳಿಗೆ ಬಲಿಯಾದರು. ಆಗ ಅವರಿಗೆ ಸೂಕ್ತ ಪರಿಹಾರ ನೀಡಬೇಕೆಂದು ಕೋರ್ಟ್‌ನಲ್ಲಿ ದಾವೆ ಹೂಡಲಾಯಿತು. ಸ್ಟುಡಿಯೋ ಮಾಲಿಕರು ಅರ್ಧಭಾಗ ಹಾಗೂ ನಿರ್ಮಾಪಕರು ಅರ್ಧಭಾಗ ಪರಿಹಾರ ಕೊಡಬೇಕೆಂದು ಒಪ್ಪಂದವಾಯಿತಾದರೂ ಅದು ಸರಿಯಾದ ರೀತಿಯಲ್ಲಿ ಎಲ್ಲರಿಗೂ ದೊರೆತಿಲ್ಲ.

ಇಂಥ ಅನೇಕ ಅಸಡ್ಡೆಗಳಿಂದ ಸಾಹಸ ಕಲಾವಿದರನೇಕರು ಇಂದು ಅಂಗಾಂಗ ಹೀನರಾಗಿ ಅಕ್ಷರಶಃ ಭಿಕ್ಷೆ ಬೇಡುವ ಸ್ಥಿತಿಯಲ್ಲಿದ್ದಾರೆ. ಅವರಿಗೆ ಯಾವುದೇ ವಿಮೆಯಾಗಲಿ, ಸರ್ಕಾರಿ ಸೌಲಭ್ಯಗಳಾಗಲಿ ದೊರೆತಿಲ್ಲ. ಚಿತ್ರರಂಗ ಉದ್ಯಮವೆಂದು ಕರೆಸಿಕೊಳ್ಳುವಾಗಲೂ ಅದರ ಅವಿಭಾಜ್ಯ ಅಂಗವಾದ ಸಾಹಸ ಹಾಗೂ ಸಾಹಸ ಕಲಾವಿದರ ಬಗ್ಗೆ ಎಲ್ಲರೂ ಗಮನ ನೀಡಬೇಕಾದ್ದು ಅಗತ್ಯ. ಸಾಹಸ ಕಲಾವಿದರಿಗೆ ಸಿನಿಮಾ ಸಾವು ಬದುಕಿನ ಪ್ರಶ್ನೆ.

ಸಾಹಸ ಸಂಯೋಜನೆ ಇಂದು ಮೊದಲಿಗಿಂತ ತುಂಬಾ ಕಷ್ಟವಾಗುವುದಿಲ್ಲ. ಏಕೆಂದರೆ ಈಗ ಅನೇಕ ಆಧುನಿಕ ಸೌಲಭ್ಯಗಳಿವೆ. ಪಾಶ್ಚಾತ್ಯರ ಅನೇಕ ತಂತ್ರಜ್ಞಾನಗಳ ಬಳಕೆ ನಮ್ಮಲ್ಲಿಯೂ ಆಗುತ್ತಿದೆ. ಗ್ರಾಫಿಕ್ಸ್ ಎಂಬ ಮಾಯಾಲೋಕ ಬಂದ ಮೇಲಂತೂ ತೆರೆಯ ಮೇಲೆಯೇ ಎಲ್ಲವನ್ನೂ ಸೃಷ್ಟಿಸಿ ಬಿಡುವ ಕಲೆ ಕರಗತವಾಗಿದೆ. ಇಷ್ಟೆಲ್ಲಾ ಇದ್ದರೂ ಪ್ರೇಕ್ಷಕರನ್ನು ಸೆಳೆಯಲು ದಿನಕ್ಕೊಂದು ತಂತ್ರ ಹೂಡಲೇ ಬೇಕಾಗುತ್ತದೆ. ಆತನಿಗೆ ನೋಡಿದ್ದೇ ನೋಡಿ ಬೇಸರವಾಗಿ ಅದಕ್ಕಿಂತ ಭಿನ್ನವಾದ ಸಾಹಸ ಸಂಯೋಜನೆಯನ್ನು ಬಯಸಿ ಅಚಾನಕ್ಕಾಗಿ ಪರಭಾಷಾ ಚಿತ್ರಗಳತ್ತ ಹೊರಳಿ ಬಿಡುತ್ತಾನೆ. ಅವನನ್ನು ಹಿಡಿದಿಟ್ಟುಕೊಳ್ಳಬೇಕಾದರೆ ಪ್ರತಿ ಸಾಹಸದಲ್ಲೂ ಏನಾದರೂ ಹೊಸತನ ನೀಡಬೇಕಾಗುತ್ತದೆ. ಈ ತುಡಿತ ಅನೇಕ ಪ್ರಯೋಗಗಳಿಗೂ ಕಾರಣವಾಗುತ್ತದೆ.

''ಯಾವುದೇ ಒಂದು ಶ್ರಮಿಕವರ್ಗದ ಕಷ್ಟ, ತೊಂದರೆ, ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಒಂದು ಸಂಘದ ಅವಶ್ಯಕತೆ ಇದ್ದೇ ಇದೆ. ಒಬ್ಬನಿಗಿಂತ ಒಗ್ಗಟ್ಟು ಮೇಲು. ಅದರಲ್ಲೂ ದಿನದ ಪ್ರತೀಕ್ಷಣವೂ ಸಾವು ಬದುಕುಗಳ ನಡುವೆಯೇ ತೂಗುಯ್ಯಾಲೆಯಾಡುವ ಸಾಹಸ ಕಲಾವಿದರಿಗೆ ಇಂತಹ ಒಂದು ಸಂಘಟನೆಯ ಅನಿವಾರ್ಯತೆ ಇತ್ತು. 'ದಕ್ಷಿಣ ಭಾರತ ಸಾಹಸ ಕಲಾವಿದ ಸಂಘ' ವೇನೋ ೧೯೫೫ರಿಂದಲೇ ಅಸ್ತಿತ್ವದಲ್ಲಿದೆ. ಆದರೆ ಕನ್ನಡದ ಸಾಹಸ ಕಲಾವಿದರು ತಮ್ಮ ಸಮಸ್ಯೆಗಳನ್ನು ಹೊತ್ತುಕೊಂಡು ಪರಿಹಾರ ಕೇಳಬೇಕಾದರೆ ಈ ಸಂಘವಿರುವ ಮದ್ರಾಸ್‌ಗೆ ಹೋಗಬೇಕಾಗುತ್ತಿತ್ತು. ಮೊದಲೇ ಆರ್ಥಿಕವಾಗಿ ಸಂಕಷ್ಟದಲ್ಲಿರುವ ಸಾಹಸ ಕಲಾವಿದರು ಹೋಗಿ ಬರುವುದು ಸಾಧ್ಯವಿರಲಿಲ್ಲ. ಅಲ್ಲದೆ ಇಲ್ಲಿನ ಸಮಸ್ಯೆಯ ಆಳ ಅಲ್ಲಿನವರಿಗೆ ಅರಿವಾಗುವುದೂ ಸಾಧ್ಯವಿರಲಿಲ್ಲ. ಜೊತೆಗೆ ಅವರ ನಿರ್ಲಕ್ಷ್ಯ ಧೋರಣೆಯಿಂದಾಗಿ ನ್ಯಾಯ ಕೇಳಲು ಹೋಗುವುದು ನಿಷ್ಪ್ರಯೋಜಕವೆನಿಸಿತ್ತು. ಈ ಸಮಸ್ಯೆಗಳನ್ನು ಹತ್ತಿಕ್ಕಲು ಸ್ಥಳೀಯ ಸಾಹಸ ಕಲಾವಿದರೆಲ್ಲ ಒಗ್ಗೂಡಿ ಕೆಲಸ ಮಾಡಬೇಕಾದ ಅನಿವಾರ್ಯತೆ ಇತ್ತು. ಅದಕ್ಕಾಗಿ ಕಷ್ಟಪಟ್ಟು, ಹೋರಾಡಿಯಾದರೂ ತಮ್ಮ ಅನ್ನವನ್ನು ಪಡೆದುಕೊಳ್ಳಬೇಕಾದ ಅಗತ್ಯವಿತ್ತು.'' ಅಂತಹ ಸಂದರ್ಭದಲ್ಲಿ

(ಚಿತ್ರ ೯) 'ಅಮರ್ ಅಕ್ಬರ್ ಅಂಥೋಣಿ' ಚಿತ್ರದಲ್ಲಿ ಸಾಹಸ ನಿರ್ದೇಶಿಸಿದ ಥ್ರಿಲ್ಲರ್ ಮಂಜು ಮತ್ತು ಸಹಕಲಾವಿದ

ಹಾಸನ್ ರಘುರಂತಹ ಉತ್ಸಾಹಿ ಸಾಹಸ ಕಲಾವಿದರು ಈ ದಿಸೆಯಲ್ಲಿ ಮುನ್ನುಗ್ಗಿ ಕಾರ್ಯ ಪ್ರವೃತ್ತರಾದರು. ಕ್ಯಾಮರಾ ಮುಂದಷ್ಟೇ ಅಲ್ಲದೆ ತಮ್ಮ ಬದುಕಿಗಾಗಿಯೂ ಸಾಹಸ ಮಾಡಬೇಕಾದ ಅನಿವಾರ್ಯತೆ ಸಾಹಸ ಕಲಾವಿದರದು. "ಕನ್ನಡ ಚಿತ್ರರಂಗ ಇನ್ನೂ ಗಟ್ಟಿಯಾಗಿ ನೆಲೆನಿಂತಿರಲಿಲ್ಲ. ಎಲ್ಲಕ್ಕೂ ಮದರಾಸನ್ನೇ ಅವಲಂಬಿಸಿದ್ದರಿಂದ ಅಲ್ಲಿನವರಿಗೂ ಕನ್ನಡದವರೆಂದರೆ ಮಲತಾಯಿ ಧೋರಣೆಯಿತ್ತು. ಹೀಗಾಗಿ ಹಿಂಸೆ, ಅವಮಾನ, ಶೋಷಣೆಗಳಿಂದ ನೊಂದು ಸಿಡಿದೆದ್ದ ಸಾಹಸ ಕಲಾವಿದರ ಒಂದು ಗುಂಪು 'ಕರ್ನಾಟಕ ರಾಜ್ಯ ಸಾಹಸ ಕಲಾವಿದರ ಸಂಘ'ವನ್ನು ಸ್ಥಾಪಿಸಲು ನಿರ್ದೇಶಿಸಿತು'. ಕನ್ನಡ ನಾಡಿನಲ್ಲಿ ಕನ್ನಡ ಕಲಾವಿದರಿಗೆ ಪ್ರೋತ್ಸಾಹ ಸಿಗಬೇಕು. ಅವರ ನೋವು ನಲಿವುಗಳ ಬಗ್ಗೆ ಗಮನ ಕೊಡಬೇಕು. ಇಂಥ ಹತ್ತಾರು ಕಾರಣಗಳಿಗೆ ಸಂಘವನ್ನು ಸ್ಥಾಪಿಸುವುದು ಅಗತ್ಯವಾಯಿತು" ಎನ್ನುತ್ತಾರೆ, ಹಾಸನ್ ರಘು.

೧೯೮೦ರ ಡಿಸೆಂಬರ್ ೧೭ರಂದು ನಿರ್ಮಾಪಕ ಎಂ.ಕೆ.ಬಾಲಾಜಿ ಸಿಂಗ್ ಹಾಗೂ ಹಾಸನ್ ರಘು ಅವರ ನೇತೃತ್ವದಲ್ಲಿ ೨೩ ಜನ ಸಭೆ ಸೇರಿ ಸಾಹಸ ಕಲಾವಿದರ ಸಂಘವೊಂದನ್ನು ಸ್ಥಾಪಿಸಬೇಕೆಂದು ನಿರ್ಧರಿಸಿದರು. ಆದರೂ ಹಲವಾರು ಆತಂಕ, ಭಯ ಹಾಗೂ ವಿರೋಧಗಳಿಂದಾಗಿ ಸಂಘ ಒಂದು ಸ್ಪಷ್ಟರೂಪ ಪಡೆಯಲು ಸ್ವಲ್ಪ ಸಮಯ ಬೇಕಾಯಿತು. ಈ ಮಧ್ಯೆ ಹೆಚ್.ಎಂ.ಕೆ. ಮೂರ್ತಿಯವರ ನೇತೃತ್ವದಲ್ಲಿ 'ಚಲನಚಿತ್ರ ನಿರ್ಮಾಪಕರ ಸಂಘ'ವೊಂದು ಸಂಘಟಿತಗೊಂಡಿತ್ತು. ಆ ಸಂಸ್ಥೆಯ ಬೆಂಬಲದಿಂದಾಗಿ ಗಾಂಧಿನಗರದಲ್ಲಿದ್ದ ಸಂಘದ ಕಛೇರಿಯನ್ನು ಶಂಕರಪುರಂನ ಗುರುನರಸಿಂಹ ಲಾಡ್ಜ್‌ಗೆ ಸ್ಥಳಾಂತರಿಸಲಾಯಿತು. ಸಾಹಸದ ಅಭ್ಯಾಸಗಳಿಗಾಗಿ ನ್ಯಾಷನಲ್ ಕಾಲೇಜ್‌ನ ಹಿಂಭಾಗದ ಮೈದಾನವನ್ನು ಬಳಸಲಾಯಿತು.

ಇಷ್ಟಾಗಿ ಸಂಘಟಿತರಾದರೂ ಸಂಘಕ್ಕೆ ಚಿತ್ರೋದ್ಯಮದಿಂದ ಸಿಗಬೇಕಾದ ಮಾನ್ಯತೆ ಸಿಗಲಿಲ್ಲ. ಭಾರತದಲ್ಲಿಯೇ ಖ್ಯಾತರೆನಿಸಿಕೊಂಡ ಸಾಹಸ ಸಂಯೋಜಕ ಶ್ಯಾಮ್‌ಸುಂದರ್ ಶೆಟ್ಟಿ ಮದರಾಸಿನಿಂದ ಬೆಂಗಳೂರಿಗೆ ಬಂದು ಸಂಘದ ಗೌರವ ಅಧ್ಯಕ್ಷ ಸ್ಥಾನದಲ್ಲಿರಲು ಒಪ್ಪಿ ಕೆಲಸ ಮಾಡಲು ಆರಂಭಿಸಿದ್ದು ಸಂಘಕ್ಕೆ ಸಾಕಷ್ಟು ಬಳಿತನ್ನು ಮಾಡಿತು. ಅವರು ೧೯೮೪ರಿಂದ ೧೯೮೭ರವರೆಗೂ ಸಂಘಕ್ಕೆ ಬೇಕಾದ ಮಾರ್ಗದರ್ಶನ ನೀಡಿ ಪ್ರೋತ್ಸಾಹಿಸಿದರು.

ಕನ್ನಡ ಚಿತ್ರರಂಗಕ್ಕೆ ಪರವಾಗಬಲ್ಲ ಸಾಹಸ ಕಲಾವಿದರನ್ನು ತಯಾರು ಮಾಡಲು ಹಾಸನ್ ರಘು ಕೃಷ್ಣರಾವ್ ಪಾರ್ಕ್‌ನಲ್ಲಿ 'ಸ್ಟಾರ್ ಜಿಮ್ನಾಸ್ಟಿಕ್ ಕ್ಲಬ್' ಅನ್ನು ಆರಂಭಿಸಿದರು. ಐವತ್ತಕ್ಕೂ ಮೀರಿದ ಸಂಖ್ಯೆಯ ಉತ್ಸಾಹಿ ಯುವಕರು ಅಲ್ಲಿ ತರಬೇತಿಗಾಗಿ ಸೇರಿದರು. ಶ್ಯಾಮ್ ಸುಂದರ್ ಶೆಟ್ಟಿ ಸಹಾ ಅವರಿಗೆ ಸಾಹಸದ ತರಬೇತಿ ನೀಡುತ್ತಿದ್ದರು.

ಇಷ್ಟೆಲ್ಲಾ ಪ್ರಯತ್ನಗಳು ನಡೆಯುತ್ತಿರುವಾಗಲೇ ಶಂಕರ್‌ನಾಗ್ ನಿರ್ದೇಶನದ 'ಆ್ಯಕ್ಸಿಡೆಂಟ್' ಚಿತ್ರದ ಸಾಹಸ ಸಂಯೋಜನೆಗಾಗಿ ಹಾಸನ್‌ರಘು ಅವರಿಗೆ 'ಅತ್ಯುತ್ತಮ ಸಾಹಸ ನಿರ್ದೇಶಕ' ಪ್ರಶಸ್ತಿ ಲಭ್ಯವಾಯಿತು. ಹೀಗೆ ಸಾಹಸಕ್ಕೆಂದು ಪ್ರಶಸ್ತಿ ಪಡೆದ ಮೊದಲಿಗರು ಹಾಸನ್‌ರಘು. ಇದು ಸಾಹಸ ಕಲಾವಿದರಲ್ಲಿ ಹೊಸ ಹುಮ್ಮಸ್ಸು ತರಿಸಿತು.

ಸಾಹಸ ಕಲಾವಿದರ ಸಂಘಕ್ಕೆ ನೆರವಾದವರಲ್ಲಿ ಪ್ರಮುಖರೆಂದರೆ ಅಬ್ಬಾಯಿನಾಯ್ಡು. ಅವರು ತರಬೇತಿಗೆ ಬೇಕಾದ ಸಾಕಷ್ಟು ಸಾಮಗ್ರಿಗಳನ್ನು ಒದಗಿಸಿದರಲ್ಲದೆ ಸರಿಯಾದ ನೆಲೆಯಿಲ್ಲದೆ ಸಂಕಷ್ಟದಲ್ಲಿದ್ದ ಸಂಘಕ್ಕೆ ಬೆಂಗಳೂರಿನ ನೆಟ್ಟಕಲ್ಲಪ್ಪ ವೃತ್ತದ ಬಳಿ ಕಛೇರಿಯೊಂದನ್ನು ಒದಗಿಸಿಕೊಟ್ಟರು. ೧೯೮೫ರ ಫೆಬ್ರವರಿ ೧೫ರಂದು ಅಬ್ಬಾಯಿ ನಾಯಿಡು ಅವರಿಂದಲೇ ಸಂಘದ ಕಛೇರಿ ಉದ್ಘಾಟನೆಯಾಯಿತು. ಮೊದಲಿನಿಂದಲೂ ವಾಣಿಜ್ಯ ಮಂಡಳಿಯ ಮಾನ್ಯತೆಗಾಗಿ ಹೋರಾಟ ನಡೆಸಿದ ಸಂಘಕ್ಕೆ ೧೯೮೫ ಮೇ ೧೮ರಂದು ಮಾನ್ಯತೆಯೂ ದೊರಕಿತು.

ಅಖಿಲ ಕರ್ನಾಟಕ ಸಾಹಸ ನಿರ್ದೇಶಕರ ಮತ್ತು ಸಾಹಸ ಕಲಾವಿದರ ಸಂಘದ ಮುಖ್ಯ ಉದ್ದೇಶ ಆಸಕ್ತ ಹಾಗೂ ಉತ್ಸಾಹಿ ತರುಣರಿಗೆ ಸಾಹಸ ಕಲೆಯ ತರಬೇತಿ ನೀಡುವುದು. ಸಂಸ್ಥೆಯ ಪ್ರಾಂಶುಪಾಲರಾಗಿ ಶ್ಯಾಮ್ ಸುಂದರ್ ಶೆಟ್ಟಿಯವರು ಮಾರ್ಗದರ್ಶನ ನೀಡಿದರು. ಹಾಸನ್‌ರಘು ಮುಖ್ಯ ಶಿಕ್ಷಕರಾಗಿದ್ದರು. ಬೆಂಗಳೂರ್ ಶಂಕರ್, ರುದ್ರೇಶ್, ಗೋವಿಂದ್ ಮುಂತಾದವರು ಶಿಬಿರವನ್ನು ನಡೆಸುವಲ್ಲಿ ಸಹಭಾಗಿಗಳಾದರು. ತಲಾ ಅರುವತ್ತು ಅಭ್ಯರ್ಥಿಗಳ ಎರಡು ತಂಡಕ್ಕೆ ಮೂರು ತಿಂಗಳ ತರಬೇತಿಯನ್ನು ನೀಡಲಾಗುತ್ತಿತ್ತು. ಆದರೆ ಮುಂದೆ ಆರ್ಥಿಕ ಮುಗ್ಗಟ್ಟಿನಿಂದ ಈ ತರಬೇತಿ ಶಿಬಿರ ನಿಂತು ಹೋಯಿತು.

ಸಾಹಸ ಕಲಾವಿದರ ಸಂಘಕ್ಕೆ ೧೯೮೭ರ ನವೆಂಬರ್ ೧೭ರಂದು ಕಾರ್ಮಿಕ ಇಲಾಖೆಯ ನೋಂದಣೆ ಲಭ್ಯವಾಯಿತು. ಇದೊಂದು ಮಹತ್ತರ ಹೆಜ್ಜೆ.

ಇಂದು ಸಾಹಸ ಕಲಾವಿದರು ತಮ್ಮ ಚೌಕಟ್ಟನ್ನು ಹಿರಿದಾಗಿಸಿಕೊಂಡು ಚಿತ್ರ ನಿರ್ಮಾಪಕರಾಗಿಯೂ, ಚಿತ್ರ ನಿರ್ದೇಶಕರಾಗಿಯೂ ಹೊರಹೊಮ್ಮುತ್ತಿದ್ದಾರೆ. ಸಾಹಸ ಕಲಾವಿದರಾಗಿ ಬಂದ ಥ್ರಿಲ್ಲರ್ ಮಂಜು ಮುಂದೆ ಸಾಹಸ ನಿರ್ದೇಶಕರಾಗಿ, ನಂತರ ಚಿತ್ರ ನಿರ್ದೇಶಕರಾಗಿಯೂ ಯಶಸ್ಸು ಪಡೆದರಲ್ಲದೆ ನಾಯಕ ನಟರಾಗಿಯೂ ಮಿಂಚಿದರು. ಸಾಹಸ ನಿರ್ದೇಶಕ ಗೋವಿಂದು ಸದಭಿರುಚಿಯ 'ಹುಲಿಯಾ' ಚಿತ್ರವನ್ನು ನಿರ್ಮಿಸಿದ್ದು ಮತ್ತೊಂದು ಉದಾಹರಣೆ. ಹೀಗೆ ಸಾಹಸ ಕಲಾವಿದರು ಸಕ್ರಿಯವಾಗಿ, ಅನಿವಾರ್ಯವಾಗಿ ಚಿತ್ರರಂಗದಲ್ಲಿ ಭಾಗಿಯಾಗಿದ್ದಾರೆ. (ನೋಡಿ: ಸಂಘಟನೆ)

ಕನ್ನಡ ಚಿತ್ರರಂಗದಲ್ಲಿನ ಸಾಹಸ ನಿರ್ದೇಶಕರಲ್ಲಿ ಪ್ರಮುಖವಾಗಿ ಕೇಳಿಬಂದ ಹೆಸರುಗಳಲ್ಲಿ ವೈ.ಶಿವಯ್ಯ, ಶಾಮಸುಂದರ್ ಶೆಟ್ಟಿ, ಜ್ಯೂಡೋ ರತ್ನಂ, ಸ್ಟಂಟ್ ಸೋಮು, ವಿಜಯ್, ಫೈಟರ್ ರಾಮಶೆಟ್ಟಿ (ಮುಂಬಯಿ), ಅಂಜೂರು ಬಾಬು, ನಂಜುಂಡಿ ನಾಗರಾಜ್, ಹಾಸನ ರಘು, ಥ್ರಿಲ್ಲರ್ ಮಂಜು, ಹಾರ್ಸ್ ಬಾಬು, ಕೆ.ಡಿ.ವೆಂಕಟೇಶ್, ಪುಲಿಕೇಶಿ, ಸಾಂಬಶಿವರಾವ್, ಅರುಣಾಚಲಂ, ಎಂ.ಡಿ.ಖಾನ್, ಎಂ.ಕೆ.ಅಳಗಿರಿಸ್ವಾಮಿ, ಕೆ.ವೆಂಕಟೇಶ್, ಜ್ಯೂ.ಶೆಟ್ಟಿ, ನಂದಕುಮಾರ್, ಟಿ.ವಿ.ಆರ್.ಚಂದ್ರನ್, ಮಾಧವನ್, ದೊರೆ, ಸತ್ಯನ್, ಕೌರವ ವೆಂಕಟೇಶ್, ಚೆಲ್ಲಪ್ಪ, ದಾಸ್, ರಾಮು, ರತ್ನಂ, ಬಾಬು, ಸತ್ಯಬಾಲು, ಜಿ.ಗೋವಿಂದ, ಬಾಬುಸಿಂಗ್ ಠಾಕೂರ್, ಎನ್.ನರಸಿಂಹಮೂರ್ತಿ, ಸುಬ್ಬಯ್ಯ, ಆರ್.ಪ್ರಕಾಶ್, ಎನ್.ಜಯಪ್ರಕಾಶ್, ಪಿ.ವಿಜಯನ್, ಲಜ್ಜು (ರಾಜೇಂದ್ರಪ್ರಸಾದ್), ವಿಕ್ರಮ್, ಜಾಲಿ ಬಾಸ್ಟಿನ್, ಎಂ.ಹೆಚ್.ಮಂಜುನಾಥ್, ಎಂ.ಕೃಷ್ಣಮೂರ್ತಿ, ಸಿ.ಸುಬ್ರಮಣಿ, ನೀಗ್ರೋಜಾನಿ, ಎ.ಎನ್.ಬಾಲಕೃಷ್ಣ, ಆರ್.ಶಿವಕುಮಾರ್, ತ್ಯಾಗರಾಜನ್ ಮುಂತಾದವರಿದ್ದಾರೆ.

ಕಲ್ಪನೆಗಳಿಗೆ ಮೂರ್ತರೂಪ

ಸಿನಿಮಾದಲ್ಲಿ ಕಲಾನಿರ್ದೇಶನ ಎಂಬುದು ಯಾವ ವಿಭಾಗವನ್ನು ಸೂಚಿಸುತ್ತದೆ ಎಂಬುದರ ಬಗ್ಗೆ ನಮ್ಮಲ್ಲಿ ಸೈದ್ಧಾಂತಿಕ ಸ್ಪಷ್ಟತೆಯಿಲ್ಲ. ಮೇಕಪ್‌ನಿಂದ ಹಿಡಿದು ಸೆಟ್ ಹಾಕುವ ಕ್ರಮದವರೆಗೂ ಎಲ್ಲವನ್ನೂ ಕಲಾನಿರ್ದೇಶನವೆಂದೇ ವ್ಯಾಖ್ಯಾನಿಸಲಾಗುತ್ತದೆ. ಹೀಗೆ ಅಸ್ಪಷ್ಟವಾಗಿ ಉಳಿದಿತವಾದ ಸೈದ್ಧಾಂತಿಕ ನೆಲೆಯಿಂದ ಮಾಧ್ಯಮದ ಗ್ರಹಿಕೆಯನ್ನಾಗಲೀ, ಅಭಿವ್ಯಕ್ತಿಯನ್ನಾಗಲೀ ಗುರುತಿಸುವುದು ಕಷ್ಟ. ಸಿನಿಮಾ ಒಂದು ಭಾಷೆ ಎನ್ನುವವರೂ ಕೂಡ ಅದು ಶಾಬ್ದಿಕ ಅರ್ಥದಲ್ಲಿ ಅಲ್ಲ ಎಂಬುದನ್ನು ಮರೆಯಬಾರದು.

ಉಳಿದ ಕಲೆಗಳಿಂದ ಚಲನಚಿತ್ರ ಬೇರೆಯಾಗುವುದು ಅನುಭವವನ್ನು ನೀಡುವ ಕ್ರಮದಲ್ಲಿ. ಉಳಿದ ಕಲೆಗಳು ಅನುಭವ ಇಂದ್ರಿಯಗಮ್ಯವಾಗಿ ಬೌದ್ಧಿಕ ವ್ಯಾಖ್ಯಾನ ಪಡೆದ ನಂತರ ಅನುಭವದ ಆಕಾರ ಪಡೆಯುತ್ತವೆ. ಚಲನಚಿತ್ರದಲ್ಲಿ ಹಾಗಲ್ಲ. ಅನುಭವವೇ ಮೊದಲು ಮೈದಾಳುತ್ತದೆ. ನಂತರ ಅದಕ್ಕೆ ಬೌದ್ಧಿಕ ಆಯಾಮಗಳು ಮೂಡುತ್ತವೆ. ಈ ಅರ್ಥದಲ್ಲಿ ಚಲನಚಿತ್ರವನ್ನು ಕಣ್ಣಿಗೆ ಹೋಲಿಸಬಹುದೇನೋ. ಕಲಾನಿರ್ದೇಶನದ ನಿಜವಾದ ಸೈದ್ಧಾಂತಿಕ ನೆಲೆ ಇದು. ದೃಶ್ಯವನ್ನು ವಾಸ್ತವಕ್ಕಿಳಿಸುವ, ಅದರಲ್ಲೇ ವಾಸ್ತವ ಮೂಡಿಸುವ ಕನಸಿನ ಲೋಕಕ್ಕೆ ಕರೆದೊಯ್ಯುವ ಭೂಮಿಕೆಯನ್ನು ಕಲಾನಿರ್ದೇಶನ ನಿರ್ವಹಿಸುತ್ತದೆ. ಈ ಭೂಮಿಕೆ ಕಲಾನಿರ್ದೇಶಕ ಒಬ್ಬನೇ ನಿರ್ವಹಿಸುವುದಲ್ಲ. ಉಳಿದವರ ಸಮನ್ವಯದಿಂದ ಮಾತ್ರ ಇದು ಸಾಧ್ಯ. ನಿರ್ದೇಶಕ, ಛಾಯಾಗ್ರಹಕ, ಕತೆಗಾರ, ಧ್ವನಿ ಪರಿಣಾಮ ತಜ್ಞ, ಶಬ್ದಗ್ರಾಹಕ ಇವರಲ್ಲ ಕಲಾನಿರ್ದೇಶಕನ ಆಶಯಗಳ ನೆಲೆಯಲ್ಲೇ ಕೆಲಸಮಾಡಬೇಕು. ಹೀಗೆ ಹಲವು ಪ್ರತಿಭೆಗಳ ಉನ್ನತ ಪ್ರಯತ್ನ ಪ್ರತಿಫಲಿತವಾದಾಗ ಚಿತ್ರಕ್ಕೆ ಅಗತ್ಯ ಭೂಮಿಕೆ ನಿರ್ಮಾಣವಾಗುತ್ತದೆ.

ದೆಹಲಿಯ ಸಂಗೀತ ನಾಟಕ ಅಕಾಡಮಿ ೧೯೫೫ರಲ್ಲಿ ಚಲನಚಿತ್ರ ಕುರಿತ ಸೆಮಿನಾರ್ ಒಂದನ್ನು ಏರ್ಪಡಿಸಿತ್ತು. ಅಲ್ಲಿ ಮಂಡಿತವಾದ ಪ್ರಬಂಧಗಳನ್ನು ಗ್ರಂಥರೂಪದಲ್ಲಿ ತರಲಾಗಿದೆ. ಕಲಾನಿರ್ದೇಶನದ ಬಗ್ಗೆ ಪ್ರಬಂಧ ಮಂಡಿಸಿದವರು ರಾಜ್‌ಕಪೂರ್ ಅವರ ಬಹುತೇಕ ಚಲನಚಿತ್ರಗಳಿಗೆ ಕಲಾನಿರ್ದೇಶಕರಾಗಿದ್ದ ಆಚರೇಕರ್. ಅವರ ಅಭಿಪ್ರಾಯಗಳಲ್ಲಿ ಕೆಲವು:

"ಹಿಂದೆ ಪ್ರತಿಯೊಂದು ಕಾಸ್ಟ್ಯೂಮ್‌ಗೆ ಒಂದೊಂದು ನಂಬರ್ ಕೊಡಲಾಗುತ್ತಿತ್ತು. ಇಂಥ ಸಂಖ್ಯೆ ಎಂದರೆ ಅದೇ ವಸ್ತ್ರ (ಭಿಕ್ಷುಕ, ಮಹಾರಾಜ, ವ್ಯಾಪಾರಿ ಹೀಗೆ.....) ತೊಡಿಸಲಾಗುತ್ತಿತ್ತು. ಹಾಗೇ ಕಲಾನಿರ್ದೇಶನಕ್ಕೂ ಇತ್ತು. ಕ್ರಮೇಣ ಇಲ್ಲಿ ಹೊಸ ವಿಧಾನ, ಸೃಜನಶೀಲತೆ ಪ್ರವೇಶಿಸಿ ಹೊಸತನ ಮೂಡತೊಡಗಿತು. ದೃಶ್ಯ ಸಾಧ್ಯತೆಗಳಲ್ಲಿ ನಿರ್ದೇಶಕ, ಛಾಯಾಗ್ರಾಹಕ, ಕಥಾ ಲೇಖಕ ಮತ್ತು ಎಫೆಕ್ಟ್ಸ್ ಮ್ಯಾನ್ ಬಹಳ ಮುಖ್ಯವಾಗುತ್ತಾರೆ.

"ಕಲಾನಿರ್ದೇಶನ ಗಾಯಕನಿಗೆ ಪಕ್ಕವಾದ್ಯದ ಹಾಗೆ ಇರಬೇಕು. ಅದೇ ಢಾಳಾಗಿ ಕಾಣಬಾರದು. ಕಲೆಯನ್ನು ಕಲಾತ್ಮಕವಾಗಿಯೇ ಬಳಸಿಕೊಳ್ಳುವ ತಿಳಿವಳಿಕೆ, ಸಾಮರ್ಥ್ಯ ನಿರ್ದೇಶಕನಿಗೆ ಇರಬೇಕು. ನಿರ್ದೇಶಕನ ಕಲ್ಪನೆಗಳು ಏನೆಂಬುದು ಕಲಾನಿರ್ದೇಶಕನಿಗೆ ಏನೆಂಬುದು ಮನದಟ್ಟಾಗಬೇಕು. ಕಲಾನಿರ್ದೇಶಕನ ಕೆಲಸ ಕಥೆಯೊಂದಕ್ಕೆ ಇಲಸ್ಟ್ರೇಶನ್ ಮಾಡುವ ಕಲಾವಿದನ ರೀತಿಯದು. ಅತ್ಯುತ್ತಮ ಕಥೆ, ಅಭಿನಯ ಇದ್ದೂ ಸಮರ್ಪಕ ಕಲಾನಿರ್ದೇಶನವಿಲ್ಲದ ಚಿತ್ರ ಸೋಲಬಹುದು, ಅತ್ಯುತ್ತಮ ಕಲಾನಿರ್ದೇಶನದಿಂದಾಗಿ ದುರ್ಬಲ ಚಿತ್ರನಾಟಕ ಕೂಡ ಗೆದ್ದು ಬಿಡುವುದೂ ಸಾಧ್ಯ ಎಂಬುದಕ್ಕೆ ಇತಿಹಾಸದ ಪುಟಗಳಲ್ಲಿ ಸೇರಿ ಹೋದ ಹಲವು ಯಶಸ್ವಿ ಚಿತ್ರಗಳ ಉದಾಹರಣೆಯೇ ಇದೆ.

"ಕಲಾನಿರ್ದೇಶಕ ಬರೀ ಕುಶಲ ಕೆಲಸಗಾರ. ಅವನ ನಿಜವಾದ ಕಲೆಯನ್ನು ಬಳಸಿಕೊಳ್ಳಲು ಮುಖ್ಯವಾಗಿ ಪೂರ್ವಸಿದ್ಧತೆ ಇರಬೇಕು. ಕಲಾನಿರ್ದೇಶನದ ಪ್ರಾಮುಖ್ಯ ಏನು ಎಂಬುದು ತಿಳಿದಿರಬೇಕು. ಆತನಿಗೆ ಮೊದಲೇ ಬೇಕಾದ ಹಿನ್ನಲೆ, ಯಾವ ಸನ್ನಿವೇಶ, ಪಾತ್ರಗಳ ಮೂಡ್ ಎಂಬುದನ್ನು ತಿಳಿಸಿರದಿದ್ದರೆ, ಕಾನ್ಸೆಪ್ಟ್ ತಿಳಿಯದೆ ತಪ್ಪುಗಳಾಗಬಹುದು. ಅನಗತ್ಯವಾಗಿ ಭವ್ಯವೂ ಸುಂದರವೂ ಆಗುವುದಾಗಲಿ, ಸೆಟ್ ಒಂದು ಕೇವಲ ಪರಿಕರ ಆಗುವುದಾಗಲಿ ಸಂಭವಿಸಿದರೆ ಅದು ತನ್ನ 'ವ್ಯಕ್ತಿತ್ವ'ವನ್ನು ಕಳೆದುಕೊಂಡು ಬಿಡುತ್ತದೆ. ಅನೇಕ ಸಂದರ್ಭಗಳಲ್ಲಿ ಕೊನೆಯ ನಿಮಿಷದವರೆಗೆ ಬದಲಾಯಿಸುತ್ತಲೇ ಇರುವವರು ಎಲ್ಲೋ ಎಂದೋ ಕಂಡಿದ್ದ, ಅಥವಾ ತಂದಿದ್ದ ಆ್ಯಂಟಿಕ್ಸ್ ಅನ್ನೋ, ಮತ್ತಾವುದೋ ವಸ್ತುವನ್ನೋ ಅಳವಡಿಸಲು ಪ್ರಯತ್ನಿಸುವವರೂ ಉಂಟು. ಇದು ಅಲ್ಲಿ ನಡೆಯುವ ಸನ್ನಿವೇಶಕ್ಕೆ ಹೊಂದದೇ ಹೋದರೆ ಆಭಾಸವಾಗುತ್ತದೆ. ಮುಖ್ಯವಾಗಿ ಹಿಂದಿನ ದೃಶ್ಯಗಳಲ್ಲಿ ಏನು ಇತ್ತು, ಮುಂದೆ ಏನು ತರಯುತ್ತೇವೆ ಎಂಬುದನ್ನು ಮರೆತು ತತ್‌ಕ್ಷಣದ ಖುಷಿಗೆ ಬದಲಾಯಿಸಿದರೆ, ಬದಲಾವಣೆಗೆ ಯಾವುದೇ ತರ್ಕ, ಕಾರಣ ಇಲ್ಲವಾದರೆ ದೋಷಗಳು ನುಸುಳುತ್ತವೆ. ಇಂಥ ಭವ್ಯತೆಯ ಭ್ರಮೆ ಅರ್ಥಹೀನವಾಗುತ್ತದೆ. ಕಲಾನಿರ್ದೇಶಕನಿಗೆ ಸನ್ನಿವೇಶ ಹೇಳಿ ಸ್ವಾತಂತ್ರ್ಯ ಕೊಡಬೇಕು. ಹಾಗಿಲ್ಲವಾದರೆ ಅವನ ಸೃಜನಶೀಲತೆಗೆ ಅವಕಾಶ ತಪ್ಪುತ್ತದೆ. ಭಾರತೀಯ ಚಿತ್ರರಂಗದಲ್ಲಿ ಇಂಥ ಅನೇಕ ಕೊರತೆಗಳು ಇವೆ. ಯಾವುದೇ ಕಲಾನಿರ್ದೇಶನ ಪರಿಕರಗಳ ಜೋಡಣೆ ಮಾತ್ರ ಆಗದೆ ಅಲ್ಲಿ ಸೌಂದರ್ಯ ಮತ್ತು



(ಚಿತ್ರ ೧) 'ರಾಣಿ ಹೊನ್ನಮ್ಮ' ಚಿತ್ರದ ಅರಮನೆ ಸೆಟ್

(ಚಿತ್ರ ೨)'ಪ್ರಭುಲಿಂಗ ಲೀಲೆ' ಚಿತ್ರದ ಅಂತಃಪುರದ ಸೆಟ್ . ಸ್ಟುಡಿಯೋ : ನವಜ್ಯೋತಿ

ಅನುಕೂಲ ಇರಬೇಕು. ಅನುಕೂಲ ಎಂದರೆ ಯಾವುದೇ ಕೋನದಿಂದ ಛಾಯಾಗ್ರಹಣ ಮಾಡಿದರೂ ಕಥಾವಸ್ತುವಿಗೆ ಸೇರಬಹುದಾದ ಅಂಶಗಳಿರುವಂತೆ ಎಂದು ಭಾವಿಸಬಹುದು.

''ಅಜ್ಜ ನೆಟ್ಟ ಆಲದ ಹಾಗೆ ಒಂದೇ ಜಾಡಿನಲ್ಲಿ ಹೋಗದೆ, ಹೊಸ ಹೊಸ ಪದಾರ್ಥ ಬಳಸಿ ಪ್ರಯೋಗ ಮಾಡುವುದು ವಿಹಿತ. ಅದೇ ಮರ, ಬಟ್ಟೆಗಳ ಬಳಕೆ ಬಿಟ್ಟು, ಪ್ಲಾಸ್ಟಿಕ್‌ನ ಬಳಕೆ ಬಂದಾಗಿನಿಂದ ಅನೇಕ ಅಸಾಧ್ಯಗಳನ್ನು ಸಾಧ್ಯವಾಗಿಸಿಕೊಂಡಿದ್ದೇವೆ. ಪ್ಲಾಸ್ಟಿಕ್‌ಗಿರುವ ಹಗುರವಾದ ಗುಣ ಮತ್ತು ಬೇಕಾದ ಹಾಗೆ ಬಾಗುವ ಸಾಧ್ಯತೆ ಬಹಳಷ್ಟು ನೆರವಿಗೆ ಬಂದಿದ್ದುಂಟು. ಥರ್ಮಕೋಲ್ ಸಹ ಹೀಗೆ ನೆರವಾಗಿದೆ. ಇದು ಬಳಸುವವನ ಜಾಣ್ಮೆಗೆ ಸೇರಿದ ಸಂಗತಿ.

''ಮೊದಲು ಒಂದು ಮಿನಿಯೇಚರ್ ರೀತಿಯಲ್ಲಿ ಟೇಬಲ್ ಸೆಟ್‌ನಂಥದನ್ನು ಮಾಡಿಕೊಂಡು ಅದು ಸರಿ ಅನ್ನಿಸಿದ ಮೇಲೆ ಸ್ಟುಡಿಯೋದಲ್ಲಿ ಸೆಟ್ ಹಾಕುವುದು ಸ್ಟುಡಿಯೋ ಬಾಡಿಗೆ, ಸಮಯಗಳ ಉಳಿತಾಯ ಮಾಡಿದಂತೆ. ಕೆಲಸದಲ್ಲೂ ಪರಿಪೂರ್ಣತೆ ತರಲು ಸಾಧ್ಯ.

''ಇನ್ನು ವರ್ಣದ ಪ್ರವೇಶವಾದ ಮೇಲೆ ಸಮಸ್ಯೆಗಳು ಬೇರೆಯೇ ಆದವು. ಕೆಲವೊಮ್ಮೆ ಸಂಕೀರ್ಣವೂ ಆದವು. ವಿದೇಶಗಳಲ್ಲಿ ಚಲನಚಿತ್ರದಲ್ಲಿಯ ವರ್ಣವೈವಿಧ್ಯ ಚಿತ್ರದಲ್ಲಿ (ಪೈಂಟಿಂಗ್) ಚಿತ್ರಕಾರ ಬಳಸುವ ವರ್ಣಗಳಿಗೆ ಪ್ರೇರಣೆಯಾದ ಉದಾಹರಣೆಗಳುಂಟು.

''ಒಂದೊಂದು ವರ್ಣಕ್ಕೆ ಒಂದೊಂದು ಭಾವವನ್ನು ಪ್ರಚೋದಿಸುವ ಶಕ್ತಿ ಇದೆ. ಅವುಗಳ ಮಿಶ್ರಣದಿಂದ ಮತ್ತಷ್ಟು ಬೇರೆ ಬೇರೆ ಭಾವೋತ್ಪತ್ತಿ ಸಾಧ್ಯ. ಆದ್ದರಿಂದ ವರ್ಣಗಳ ಬಳಕೆ ತುಂಬ ಸೂಕ್ಷ್ಮವಾಗಿ ಯೋಚಿಸಿಯೇ ಆಗಬೇಕು, ಮತ್ತು ಯಾವ ಸನ್ನಿವೇಶ, ಯಾವ ಮೂಡ್ ಎಂಬುದನ್ನು ಆಧರಿಸಿ ತೀರ್ಮಾನಿಸಬೇಕು. ಆ ವರ್ಣ ಪ್ರಮಾಣಗಳನ್ನು ನಿರ್ಧರಿಸಲು ಮೊದಲೇ ಸ್ಕೆಚ್ ಮಾಡಿಕೊಳ್ಳುವುದು ಒಳಿತು. ತುಂಬ ಕಡು, ಪ್ರಜ್ವಲ ಬಣ್ಣಗಳೇ ಇರಬೇಕೆಂಬ ಆಲೋಚನ ತಪ್ಪು. ಅದು ಭ್ರಮೆ. ವಾಸ್ತವ ಕಣ್ಣಿಗೆ ಮಾತ್ರವಲ್ಲ, ಮನಸ್ಸನ್ನು ತಟ್ಟುವಂತಿರಬೇಕು. ಹಿತ ಮಿತವಾದ ವರ್ಣದ ಬಳಕೆ, ವಸ್ತ್ರ, ಹಿನ್ನೆಲೆಯ ವಿನ್ಯಾಸಗಳಲ್ಲಿ ಬರಬೇಕು. ಅದಕ್ಕೆ ಸನ್ನಿವೇಶ ಯಾವ ಕಾಲಘಟ್ಟದಲ್ಲಿ ಸಂಭವಿಸುತ್ತದೆ, ಪಾತ್ರಗಳು ಯಾವ ಹಿನ್ನೆಲೆಯಿಂದ ಬಂದಿವೆ ಎಂಬುದು ತಿಳಿದಿರಬೇಕು. ಇಷ್ಟೆಲ್ಲ ಆದರೂ ಎಲ್ಲವನ್ನೂ ಸಂಸ್ಕರಣಾಗಾರಗಳಲ್ಲಿ ತೀರ್ಮಾನಿಸುವ ಅನಿವಾರ್ಯ ಈ ಯಂತ್ರ ಪ್ರಧಾನ ಮಾಧ್ಯಮದ ಮಿತಿ. ಉತ್ತಮವಿಲ್ಲದಿದ್ದರೆ ಶ್ರಮವೆಲ್ಲ ನಿಷ್ಫಲವೂ ಆಗಿಬಿಡಬಹುದು. ಮುಖ್ಯವಾಗಿ ಬದಲಾಗುತ್ತಿರುವ ಚಿಂತನೆಗಳು, ಪ್ರಯೋಗಗಳು ಎಲ್ಲವನ್ನೂ ವಾಸ್ತವದ ಚೌಕಟ್ಟಿನಲ್ಲೇ ಇಡದೆ, ಸಾಂಕೇತಿಕವಾಗಿಯೂ ಹೇಳಬೇಕನ್ನುವುದರಿಂದ ಮತ್ತಷ್ಟು ಈ ಕಲೆಯ ಆಳಕ್ಕೆ ಹೋಗಬೇಕಾಗುತ್ತದೆ. ಎಲ್ಲ ಸಾಧ್ಯತೆಗಳನ್ನೂ ದುಡಿಸಿಕೊಂಡು, ಹೇಳಬೇಕಾದ ಸಂಗತಿಗೆ ಹಿನ್ನೆಲೆಯೂ, ಪೂರಕವೂ, ಧ್ವನಿಪೂರ್ಣವೂ ಆಗುವಂತೆ ನೋಡಿಕೊಳ್ಳಬೇಕಾಗುತ್ತದೆ.

ಇವೆಲ್ಲ ಸಾಧಿತವಾಗಬೇಕಾದರೆ ಕಲಾನಿರ್ದೇಶಕನಿಗೆ ಸರಿಯಾದ ಶಿಕ್ಷಣ, ತರಬೇತಿ ಇರಬೇಕು. ವಿಶ್ವವಿದ್ಯಾಲಯಗಳು ಈ ದಿಕ್ಕಿನಲ್ಲಿ ಯೋಚಿಸಬೇಕು. ಹಾಗೆ ಬಂದ ಕಲಾವಿದನನ್ನು ಸರಿಯಾಗಿ ಬಳಸಿಕೊಳ್ಳಲು ಸಂಬಂಧಪಟ್ಟ ನಿರ್ದೇಶಕನಿಗೆ ಆ ಕ್ಷೇತ್ರದ ಎಲ್ಲ ವಿಭಾಗದ ಸರಿಯಾದ ಪರಿಚಯವೂ ಇರಬೇಕು.''

ಅಚರೇಕರ್ ಅವರ ಮಾತಿನ ತಾತ್ಪರ್ಯ ಇದು. ಅವರು ಹೇಳುವ ಇನ್ನೊಂದು ಮಾತು 'ಸೆಟ್‌ಗಳನ್ನು ಹಾಕಿ ಒಡೆದು ಹಾಕುವುದಲ್ಲ, ಅವನ್ನು ಹಾಗೇ ಇರಿಸಿದರೆ ಪ್ರವಾಸಿಗರಿಗೆ ಪ್ರೇಕ್ಷಣೀಯ ಸ್ಥಳಗಳಾಗಬಲ್ಲವು'. ಈಚೆಗೆ ನಾವು ಕಾಣುತ್ತಿರುವ ಫಿಲಂ ಸಿಟಿಗಳು ಈಗ ಇದೇ ಕ್ರಮ ಅನುಸರಿಸುತ್ತಿವೆ.

೧೯೫೫ರಲ್ಲಿ ಅಚರೇಕರ್ ಅವರು ಎತ್ತಿರುವ ಅನೇಕ ಪ್ರಶ್ನೆಗಳು ಇಂದೂ ಹಾಗೆಯೇ ಉಳಿದಿವೆ. ಎಲ್ಲವನ್ನೂ ಭವ್ಯ-ಶ್ರೀಮಂತವಾಗಿಸುವ ಪ್ರವೃತ್ತಿ ಹೆಚ್ಚಿದೆ.

ಅಚರೇಕರ್ ಇನ್ನೊಂದು ಮಾತನ್ನೂ ಹೇಳಿದರು : ''ರಕ್ಷಿತ ಪ್ರದೇಶಗಳಾದ ಭೂಸೈನ್ಯ, ನೌಕಾ ನೆಲೆ, ವೈಮಾನಿಕ ಕ್ಷೇತ್ರ ಇತ್ಯಾದಿ ಕೆಲವು ಸ್ಥಳಗಳನ್ನು ಸೂಚಿಸಲು ಸೆಟ್ಸ್ ಹಾಕಬೇಕಾದರೆ ಸಂಬಂಧಪಟ್ಟ ಇಲಾಖೆಯ ನೆರವು ಪಡೆಯಬೇಕು, ಅದಕ್ಕೆ ಸರ್ಕಾರ ಸಹಕರಿಸಬೇಕು. ಇವತ್ತಿಗೂ ಈ ಸಮಸ್ಯೆಗೆ ಪರಿಹಾರ ಸಿಕ್ಕಿಲ್ಲ. ನಮ್ಮ ಅನೇಕ ಸನ್ನಿವೇಶಗಳ ಸೆಟ್ಸ್ ಸಹಜವಾಗಿರದೆ ಆಭಾಸಕರವಾಗುವುದು ಇಂಥ ಕಾರಣಗಳಿಂದಲೆ. ಅಧ್ಯಯನ-ಅಭ್ಯಾಸಗಳಿಗೆ ಅವಕಾಶ ಕೊಡದೇ ಎಲ್ಲವೂ ಬೇಗ, ನಾಳೆಯೇ ಆಗಬೇಕೆಂಬ ಒತ್ತಡ ಕೂಡ ಕಾರ್ಯದಲ್ಲಿ ದಕ್ಷತೆ, ಪೂರ್ಣತೆಯ ಕೊರತೆಗೆ ಕಾರಣ ಎನ್ನಬಹುದಾಗಿದೆ.

ಕನ್ನಡ ಚಿತ್ರಗಳಲ್ಲಿ ಕಲಾನಿರ್ದೇಶನ

ಭಾರತೀಯ ಚಿತ್ರರಂಗದಂತೆಯೇ ಕನ್ನಡ ಚಿತ್ರರಂಗದಲ್ಲೂ ಆರಂಭದಲ್ಲಿ ಕಲಾನಿರ್ದೇಶನ ಒಂದು ಪ್ರತ್ಯೇಕ ವಿಭಾಗವಾಗಿ ಶಿಸ್ತಾಗಿ ಬೆಳೆದಿರಲಿಲ್ಲ. ಸೆಟ್ ಹಾಕುವುದು, ಉಡುಗೆ-ತೊಡುಗೆಗಳ ಆಯ್ಕೆ ಇದಿಷ್ಟೇ ಕಲಾನಿರ್ದೇಶಕರ ಕೆಲಸ ಎಂಬ ಭಾವನೆ ಇತ್ತು. ಮೊದಮೊದಲ ಚಿತ್ರಗಳು ಕೊಲ್ಹಾಪುರ, ಮುಂಬಯಿಗಳ ಸ್ಟುಡಿಯೋಗಳಲ್ಲಿ ತಯಾರಾದುದರಿಂದ ಅಲ್ಲಿಯ ಸ್ಟುಡಿಯೋ ಸಿಬ್ಬಂದಿಯವರೇ ಈ ಜವಾಬ್ದಾರಿಯನ್ನು ನಿರ್ವಹಿಸಿ ಬಿಡುತ್ತಿದ್ದರು. ನಿರ್ಮಾಣದ ಸಂಖ್ಯೆ ಸ್ವಲ್ಪ ಬೆಳೆದ ನಂತರ ಕಲಾನಿರ್ದೇಶನದ ಕಲ್ಪನೆ ಸ್ಪಷ್ಟವಾಗುತ್ತಾ ಬಂದಿತು.ಪ್ರತ್ಯೇಕವಾಗಿ ಕಲಾ ನಿರ್ದೇಶಕರೆಂದು ನೇಮಕ ಮಾಡಿಕೊಳ್ಳುವ ಪದ್ಧತಿ ಆರಂಭವಾಯಿತು. ಕಲಾನಿರ್ದೇಶನದ ಕಲ್ಪನೆ ಸ್ಪಷ್ಟವಾಗುತ್ತಾ ಬಂದಾಗಲೂ ಪರಭಾಷೀಯರೇ ಈ ಕಾರ್ಯ ನಿರ್ವಹಿಸಿದರು. ೧೯೪೬ರಲ್ಲಿ ಮೈಸೂರಿನಲ್ಲಿ ನವಜ್ಯೋತಿ ಸ್ಟುಡಿಯೋ ಪ್ರಾರಂಭವಾದಾಗ ಅದರ ಪಾಲುದಾರರಾಗಿದ್ದ ಎಂಬಾರಯ್ಯ ಹಣ ತೊಡಗಿಸದೆ, ಕಲಾನಿರ್ದೇಶಕರೆಂಬ ಕಾರಣಕ್ಕೆ ಪಾಲುದಾರಿಕೆ ಪಡೆದಿದ್ದರು ಎಂದರೆ ಕನ್ನಡ ಚಿತ್ರರಂಗದಲ್ಲಿ ಈ ಕ್ಷೇತ್ರದಲ್ಲಿದ್ದ ಬರ ಎಷ್ಟರ ಮಟ್ಟಿನದು ಎಂಬುದು ಅರ್ಥವಾಗುತ್ತದೆ. ಎಂಬಾರಯ್ಯ ಕನ್ನಡೇತರರು. ಅವರ ಹಾಗೆ ಮೌಲ್ಟರ್ ರಾಜು, ಸಂಕಲನ ಕಾರ-ನಿರ್ದೇಶಕ ಸಿ.ವಿ.ರಾಜು ಕೂಡ ದುಡಿಮೆಯೇ ಬಂಡವಾಳವಾಗಿಸಿಕೊಂಡ ಪಾಲುದಾರರಾಗಿದ್ದರು. ನಿರ್ದೇಶಕ ಆರ್.ಎಂ.ವೀರಭದ್ರಯ್ಯನವರು ಮೂಲತಃ ಕಲಾನಿರ್ದೇಶಕರು. ಮೈಸೂರಿನಲ್ಲಿ ಚಿತ್ರೀಕರಣವಾಗುತ್ತಿದ್ದ ಹಲವು ಕನ್ನಡ ಚಿತ್ರಗಳ ಕಲಾನಿರ್ದೇಶನಕ್ಕಾಗಿ ಮುಂಬಯಿ, ಮದರಾಸುಗಳಿಂದ ಕಲಾನಿರ್ದೇಶಕರನ್ನು ಕರೆಸಲಾಗುತ್ತಿತ್ತು.

ಮುಂದೆ ಕನ್ನಡ ಚಿತ್ರಗಳ ತಯಾರಿಕೆಗೆ ಮದರಾಸೇ ಪೂರ್ಣವಾಗಿ ನೆಲೆಯಾಯಿತು. ಆ ಸಂದರ್ಭದಲ್ಲಿ ಪರಭಾಷಾ ಕಲಾನಿರ್ದೇಶಕರ ಬಳಕೆ ತಾಂತ್ರಿಕವಾಗಿಯೇ ಅನಿವಾರ್ಯವಾಯಿತು. ಆ ದಿನಗಳಲ್ಲಿ ಬಿ.ಚಲಂ, ನಾಗೇಶ್ವರ ರಾವ್. ವೇಕೇಟಿ ರಂಗ, ತೋಟಾ, ಅಮ್ಮೈಯ್ಯಪ್ಪನ್, ಗೋಡ್ಗಾಂವ್‌ಕರ್, ಆರ್.ಬಿ.ಎಸ್.ಮಣಿ, ನಜೀರ್, ವಿ.ಕೆ.ರಮೇಶ್ ಮುಂತಾದವರು ಕನ್ನಡ ಚಿತ್ರಗಳಿಗೆ ಕಲಾನಿರ್ದೇಶನ ಮಾಡಿದ ಪರಭಾಷೀಯರಲ್ಲಿ ಪ್ರಮುಖರು.

(ಚಿತ್ರ ೩)'ಕಾದಾರ ಮುಖ' ಚಿತ್ರದ ಗುಹೆಯ ಸೆಟ್

ಕರ್ನಾಟಕದಲ್ಲಿಯೇ ಕನ್ನಡ ಚಿತ್ರಗಳ ತಯಾರಿಕೆ ಕೇಂದ್ರೀಕೃತವಾದ ನಂತರ ಬೆಳಕಿಗೆ ಬಂದ ಉತ್ತಮ ಕಲಾನಿರ್ದೇಶಕರಲ್ಲಿ ಶಶಿಧರ ಅಡಪ, ರಮೇಶ್ ದೇಸಾಯಿ, ಸುಭಾಷ್ ಕಡಕೋಳ್, ರಮೇಶ್ ಬಾಬು, ಜಾನ್ ದೇವರಾಜ್, ವೈ.ಎಸ್.ವಿ.ಸ್ವಾಮಿ, ಕೆ.ಅನಂತ್, ಶ್ರೀವತ್ಸ, ಹೊಸಮನೆ ಮೂರ್ತಿ ಮುಂತಾದವರ ಕೆಲಸವನ್ನು ಗುರುತಿಸಬಹುದು.

ಪರಭಾಷಾ ಕಲಾನಿರ್ದೇಶಕರ ಕೈಯಲ್ಲಿ ನಿರ್ಮಾಣಗೊಂಡ ಪ್ರಧಾನ ಕಾರಣದಿಂದಲೇ ಕನ್ನಡದ ಆರಂಭಿಕ ಚಿತ್ರಗಳಲ್ಲಿ ಮಣ್ಣಿನ ಗುಣ ಕಾಣಿಸಿಕೊಳ್ಳಲಿಲ್ಲ. ಆಂಧ್ರ-ತಮಿಳುನಾಡು ರಾಜ್ಯಗಳ ಮದುವೆ ಸಂಪ್ರದಾಯಗಳು, ಚಪ್ಪರದಂತಹ ಸಾಂಸ್ಕೃತಿಕ ದಾಖಲಾತಿಗಳು, ಹುಟ್ಟು ಸಾವಿನ ಆಚರಣೆಗಳು, ಅಷ್ಟೇ ಏಕೆ ಅರಮನೆ ಮುಂತಾದ ಸೆಟ್‌ಗಳೂ ಕೂಡ ಪರಭಾಷೆಯೊಂದಕ್ಕೆ ನಿರ್ಮಿತವಾದವನ್ನು ಎರವಲು ಪಡೆಯಬೇಕಾಯಿತು. ಇದರಿಂದಾಗಿ ಪ್ರತಿಭಾವಂತ ನಿರ್ದೇಶಕರು ತಮ್ಮ ಕತೆಯಲ್ಲಿ, ಸಂಭಾಷಣೆಯಲ್ಲಿ ಮೂಡಿಸಿದ ಸಹಜತೆ ದೃಶ್ಯಗಳಾಗುವಾಗ ವಿಕಾರಗೊಳ್ಳುತ್ತಿತ್ತು. ಗ್ರಾಮೀಣ ಸೊಗಡಿನ ಸಂಭಾಷಣೆಯುಳ್ಳ 'ಅಣ್ಣ-ತಂಗಿ' ಚಿತ್ರದ ಸೆಟ್ಟಿಂಗ್‌ಗಳು ಕನ್ನಡ ನೆಲಕ್ಕೇ ಹೊಂದುವಂತಿರಲಿಲ್ಲ. 'ವೀರಕೇಸರಿ', 'ಅಮರಶಿಲ್ಪಿ ಜಕಣಾಚಾರಿ' ಇಂತಹ ಚಿತ್ರಗಳಲ್ಲಿಯೂ ಈ ಸಮಸ್ಯೆಯನ್ನು ಗುರುತಿಸಬಹುದು. ಪೌರಾಣಿಕ ಮತ್ತು ಐತಿಹಾಸಿಕ ಚಿತ್ರಗಳಂತೂ ತಮಿಳು ಚಿತ್ರಗಳು ಬಳಸಿಕೊಂಡಿದ್ದ ಸೆಟ್‌ಗಳಲ್ಲೇ ಅಲ್ಪ ಸ್ವಲ್ಪ ಬದಲಾವಣೆಗಳೊಂದಿಗೆ ಚಿತ್ರೀಕರಣಗೊಳ್ಳುತ್ತಿದ್ದವು. 'ಕಿತ್ತೂರು ಚೆನ್ನಮ್ಮ', 'ಆಶಾ ಸುಂದರಿ', 'ಶ್ರೀ ಶೈಲ ಮಹಾತ್ಮೆ' ಯಂತಹ ಚಿತ್ರಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಈ ಸಮಸ್ಯೆ ಹೆಚ್ಚು ಢಾಳಾಗಿ ಕಾಣುತ್ತದೆ.

ಹಿಂದಿನ ದಿನಗಳಲ್ಲಿ ಚಿತ್ರಣ ಹೇಗೆ ನಡೆಯುತ್ತಿತ್ತು. ಹಿರಿಯ ನಿರ್ದೇಶಕ ಕೆ.ಎಸ್.ಎಲ್.ಸ್ವಾಮಿ (ರವೀ) ನೀಡುವ ಚಿತ್ರ : ''ಹಲವು ದಶಕಗಳ ಹಿಂದೆ ಚಿತ್ರೀಕರಣವೆಲ್ಲಾ ಸ್ಟುಡಿಯೋಗಳಲ್ಲೇ ನಡೆಯುತ್ತಿತ್ತು. ಒಂದು ಅರಮನೆಯ ಭಾಗವೋ, ಭವ್ಯ ಬಂಗಲೆಯ ಭಾಗವೋ ಅಥವಾ ಒಂದು ಗುಡಿಸಲೋ ಯಾವುದೇ ಆಗಿದ್ದರೂ ಇದನ್ನೆಲ್ಲ ಎಲ್ಲಿ ತೆಗೆದಿದ್ದಾರೆ ಎಂಬುದು ಸಾಮಾನ್ಯ ಪ್ರೇಕ್ಷಕರಿಗೆ ಗೊತ್ತಾಗುತ್ತಿರಲಿಲ್ಲ. ಎಲ್ಲ ಸ್ಟುಡಿಯೋ ಒಳಗೇ ರಹಸ್ಯವಾಗಿ ನಡೆಯುತ್ತಿತ್ತು. ಇದೆಲ್ಲ ಹೇಗೆ ಹೆಣೆದಿದ್ದಾರೆ ಎಂಬ ಕುತೂಹಲ ಆಗಿನ ಜನರಿಗೆ ಬಹಳವಾಗಿ ಇರುತ್ತಿತ್ತು. ತಾಂತ್ರಿಕತೆಯ ಯಾವ ರಹಸ್ಯವೂ ಗೊತ್ತಾಗುತ್ತಿರಲಿಲ್ಲ. ಆ ದಿನಗಳಲ್ಲಿ ಮದರಾಸಿನ ವಿಜಯ ವಾಹಿನಿ, ಎ.ವಿ.ಎಂ. ಸ್ಟುಡಿಯೋಗಳಲ್ಲಿ ರೈಲ್ವೆ ಸ್ಟೇಷನ್, ಪ್ಲಾಟ್ ಫಾರಂ ಕೂಡ ಸೆಟ್ ಹಾಕ್ತಾ ಇದರು. ಚಿತ್ರಗಳಲ್ಲಿ ಗಾರ್ಡ್, ಗಾರ್ಡ್‌ರೂಂ, ರೈಲ್ವೆ ಡಬ್ಬಿಗಳು ಇವನ್ನೆಲ್ಲ ನೋಡಿದಾಗ ಆ ಶಬ್ದದ ವಾತಾವರಣದಿಂದ ಎಷ್ಟು ಭ್ರಮೆ ಉಂಟಾಗುತ್ತಿತ್ತು

ಇವರಲ್ಲದ ಇನ್ನೂ ಕೆಲವರನ್ನು ಹೆಸರಿಸಬಹುದು. ಅವರಲ್ಲಿ ಪ್ರಮುಖರು ಎ.ಕೆ.ಶೇಖರ್. ಇವರು ಜೆಮಿನಿಯವರ ಅದ್ದೂರಿಯ ಚಿತ್ರ 'ಚಂದ್ರಲೇಖ'ಕ್ಕಾಗಿ ಬೃಹತ್ ಅರಮನೆಯ ಸೆಟ್‌ನ್ನು ಮ್ಯಾಟೀ ಪೇಂಟಿಂಗ್ ಎಫೆಕ್ಟ್‌ಗಳೊಡನೆ ರೂಪಿಸಿದರು. ಅವರು ಹಲವಾರು ನೂತನ ಪ್ರಯೋಗಗಳನ್ನು ಮಾಡಿ ಈ ಕ್ಷೇತ್ರದ ಅಗ್ರಗಣ್ಯರಲ್ಲೊಬ್ಬರಾಗಿದ್ದರು. ಪುಟ್ಟಣ್ಣನವರ ಚಿತ್ರ ಸೇರಿದಂತೆ ಹಲವು ಕನ್ನಡ ಚಿತ್ರಗಳಿಗೆ ಕೆಲಸ ಮಾಡಿದ್ದಾರೆ. ಇನ್ನೊಬ್ಬರು ಎಂ.ಎಸ್.ಜಾನಕೀರಾಮ್. ಜೆಮಿನಿ ಸಂಸ್ಥೆಯ ಮಾಲೀಕ ಎಸ್.ಎಸ್.ವಾಸನ್ ಅವರು ತಾವು ತಯಾರಿಸಲಿದ್ದ 'ಅವ್ವೆಯ್ಯಾರ್' ಚಿತ್ರಕ್ಕಾಗಿ ಮಿನಿಯೇಚರ್ ತಂತ್ರದ ಸೂಕ್ಷ್ಮ ಅಂಶಗಳನ್ನು ಕಲಿತು ಬರಲು ಜಾನಕೀರಾಮ್ ಅವರನ್ನು ಲಂಡನ್‌ಗೆ ಕಳುಹಿಸಿದರು.

ಜಾನಕೀರಾಮ್ ಲಂಡನ್‌ನ ಸುಪ್ರಸಿದ್ಧ ಪೈನ್‌ವುಡ್ ಸ್ಟುಡಿಯೋದಲ್ಲಿ ವಿಖ್ಯಾತ ಕಲಾನಿರ್ದೇಶಕ ಎಡ್ವರ್ಡ್ ಗ್ಯಾರಿಕ್ ಅವರ ಬಳಿ ಮಿನಿಯೇಚರ್ ತಂತ್ರದ ಬಗ್ಗೆ ಕಲಿತು, ಮದರಾಸಿಗೆ ಹಿಂದಿರುಗಿ 'ಅವ್ವೆಯ್ಯಾರ್' ಚಿತ್ರಕ್ಕೆ ಮಿನಿಯೇಚರ್ ಮ್ಯಾಚಿಂಗ್‌ನೊಂದಿಗೆ ಬೃಹತ್ ಸೆಟ್‌ಗಳನ್ನು ಹಾಕಿದರು. ಈ ಅವಧಿಯಲ್ಲಿ ಅವರೊಂದಿಗೆ ಕೆಲಸ ಮಾಡಿದ ಕನ್ನಡಿಗ ಬಿ.ನಾಗರಾಜರಾವ್ ಮುಂದೆ ದಕ್ಷಿಣ ಭಾರತದ ಪ್ರಸಿದ್ಧ ಕಲಾನಿರ್ದೇಶಕರಾಗಿ ಹೆಸರು ಮಾಡಿದರು. ಪ್ರಾಯಶಃ ಅವರೇ ಪ್ರಥಮ ಕನ್ನಡಿಗ ಕಲಾನಿರ್ದೇಶಕರಿರಬೇಕು. ಆದರೆ ಅವರು ಮೊದಲು ಕೆಲಸ ಮಾಡಿದ್ದು ತಮಿಳು ಚಿತ್ರಗಳಲ್ಲಿ. ಇಡೀ ಉದ್ಯಮ ಮದರಾಸಿನಲ್ಲಿ ನೆಲೆಸಿದ್ದುದೇ ಇದಕ್ಕೆ ಕಾರಣ.

ಕನ್ನಡ ಚಿತ್ರರಂಗದಲ್ಲಿ ಗಮನ ಸೆಳೆದ ಕಲಾನಿರ್ದೇಶಕರು ಬಿ.ಎಂ.ವರ್ತೂರ್‌ಕರ್, ಟಿ.ಎಸ್.ಕೃಷ್ಣನ್, ಎಂಬಾರಯ್ಯ, ಆರ್.ಎಂ.ವೀರಭದ್ರಯ್ಯ, ಚಲಂ, ಲೋಕನಾಥನ್, ಸಿ.ಹೆಚ್.ಇ.ಪ್ರಸಾದರಾವ್, ಎಂ.ಚಂದ್ರನ್, ಶೇಖರ್, ವಾಲಿ, ಪಿ.ವೆಂಕಟರಾಮಯ್ಯ ಮುಂತಾದವರು. ಐವತ್ತರ ದಶಕದವರೆಗೂ ಚಿತ್ರರಂಗ ಪ್ರವೇಶಿಸದಿದ್ದ ಕಲಾವಿದ ಎಸ್.ಎಸ್.ಕುಕ್ಕೆಯವರು ೧೯೫೪ರಲ್ಲಿ ಹೊನ್ನಪ್ಪ ಭಾಗವತರ್ ನಿರ್ಮಿಸಿ, ಕು.ರ.ಸೀತಾರಾಮಶಾಸ್ತ್ರಿ ನಿರ್ದೇಶಿಸಿದ 'ಮಹಾಕವಿ ಕಾಳಿದಾಸ' ಚಿತ್ರಕ್ಕೆ ಕಲಾನಿರ್ದೇಶನ ಮಾಡಿದಾಗ ಅದೊಂದು ಸುದ್ದಿಯೇ ಆಯಿತು. ಹಿಂದಿನ ದಿನಗಳಲ್ಲಿ ಜಾನಪದ, ಪೌರಾಣಿಕ ಮತ್ತು ಐತಿಹಾಸಿಕ ಚಿತ್ರಗಳೇ ತಯಾರಾಗುತ್ತಿದ್ದು ಮದರಾಸಿನ ಸ್ಟುಡಿಯೋಗಳಲ್ಲಿ ತಮಿಳು, ತೆಲುಗು ಚಿತ್ರಗಳಿಗೆ ಹಾಕಿದ್ದ ಸೆಟ್‌ಗಳನ್ನೇ ಅಲ್ಪಸ್ವಲ್ಪ ಬದಲಾವಣೆ ಮಾಡಿ ಚಿತ್ರಿಸುತ್ತಿದ್ದುದರಿಂದ ಆ ಸೆಟ್‌ಗಳ ಶ್ರೀಮಂತಿಕೆ ಅಥವಾ ನಿಖರತೆಯ ಶ್ರೇಯಸ್ಸು ಯಾರಿಗ ಸಲ್ಲಬೇಕೆಂದು ನಿರ್ಧರಿಸುವುದೇ ಕಷ್ಟವಾಗಿತ್ತು. ಆಗಿನ್ನೂ ಸ್ಟುಡಿಯೋ ಆವರಣದ ಹೊರಗೆ ಒಳಾಂಗಣ ದೃಶ್ಯಗಳನ್ನು ಚಿತ್ರಿಸುವ ಪರಿಪಾಠ ಜಾರಿಗೆ ಬಂದಿರಲಿಲ್ಲ.

(ಚಿತ್ರ ೪) ಮಿನಿಯೇಚರ್ ಮ್ಯಾಚಿಂಗ್ ಮತ್ತು ಟ್ರಿಕ್ ಫೋಟೋಗ್ರಫಿ ಸಹಯೋಗದಿಂದ ನಿರ್ಮಾಣವಾದ 'ಶಿವಲೀಲೆ' ಚಿತ್ರದ ಭವ್ಯದೃಶ್ಯ- ಕಲೆ : ಬಿ.ನಾಗರಾಜರಾವ್

(ಚಿತ್ರ ೫)'ಸ್ವಾಮಿ ವಿವೇಕಾನಂದ' ಚಿತ್ರಕ್ಕಾಗಿ ಕಾಳಿ ದೇವಾಲಯದ ಪುನರ್‌ಸೃಷ್ಟಿ - ಕಲೆ : ಬಿ.ನಾಗರಾಜರಾವ್

ಅಂದರೆ, ನಿಜವಾದ ರೈಲ್ವೆ ಸ್ಟೇಷನ್‌ನಲ್ಲೇ ಚಿತ್ರಿಸಿದ್ದಾರೆ ಅನ್ನೋ ಹಾಗೆ ಇರುತ್ತಿತ್ತು. ಅದಕ್ಕೆ ಮುಖ್ಯ ಕಾರಣ ಎಂದರೆ ಹೊರಗಡೆ ಜನ ಸಾಮಾನ್ಯರ ಮುಂದೆ ಕ್ಯಾಮರಾ ಇಟ್ಟುಕೊಂಡು ಚಿತ್ರೀಕರಣ ಮಾಡೋ ಅಂತಹ ಪರಿಸ್ಥಿತಿ ಇರಲಿಲ್ಲ. ಇಂಥ ಪದ್ಧತಿ ಒಂದು ದಿನ ಬರುತ್ತೆ ಅಂತ ಯಾರೂ ಅಂದುಕೊಂಡಿರಲಿಲ್ಲ. ಆಗ ಚಿತ್ರ ತಯಾರಿಸುತ್ತಿದ್ದ ಜನ ನಿಜವಾಗಿ ಬಹಳ ಕಮಿಟೆಡ್ (committed) ಆಗಿರುತ್ತಿದ್ದರು.

ಆಗಿನ ಕಾಲಕ್ಕೆ topography ಬಹಳ ಮುಖ್ಯ ಆಗಿದ್ದಿತು. ನಿರ್ದೇಶಕ, ಕಲಾನಿರ್ದೇಶಕ ಆ ಸ್ಕೆಚ್ (sketch) ಹಾಕಿಕೊಂಡು ಅದರ ಗ್ರೌಂಡ್ ಪ್ಲಾನ್, ಎಲಿವೇಷನ್ ಪ್ಲಾನ್, ಅದರ ಉದ್ದ ಅಗಲಗಳೇನು, ವಿನ್ಯಾಸ ಹೇಗಿರಬೇಕು, ಅದಕ್ಕೆ ಬೆಳಕಿನ ವ್ಯವಸ್ಥೆ ಹೇಗೆ ಮಾಡಬೇಕು, ಇವನ್ನೆಲ್ಲ ಬಹಳ ಸೂಕ್ಷ್ಮವಾಗಿ ಯೋಚಿಸಿ ಸಿದ್ಧಪಡಿಸಿಕೊಳ್ಳುತ್ತಿದ್ದರು.

"ಕಪ್ಪು-ಬಿಳುಪು ಚಿತ್ರಗಳ ಕಾಲಘಟ್ಟದಲ್ಲಿ ನಾವು ನೋಡತಕ್ಕಂಥ ಕಪ್ಪು-ಬಿಳುಪು ಬರಬೇಕಾದರೆ ಸೆಟ್‌ಗೆ ಬಳಸಬೇಕಾದ ಬಣ್ಣಗಳೇ ಬೇರೆ. ಕಲರ್ ಚಿತ್ರಗಳ ಹಾಗೆ ಯಾವ ಬಣ್ಣ ಅಂದರೆ ಆ ಬಣ್ಣ ಬಳಸುತ್ತಿರಲಿಲ್ಲ. ಉಟ್ಟುಕೊಳ್ಳುವ ಪಂಚೆ ನೀಲಿ ಅಥವಾ ಕಾವಿ ಬಣ್ಣದ್ದಾಗಿರುತ್ತಿತ್ತು. ಬಿಳಿ ಬಣ್ಣ ಅಂತೂ ಬಳಸುತ್ತಲೇ ಇರಲಿಲ್ಲ. ಯಾಕೇಂದ್ರೆ ಕಪ್ಪು-ಬಿಳುಪು ಫೋಟೋಗ್ರಫಿಗೆ ಬಿಳಿ ಬಣ್ಣ ಅನಾನುಕೂಲವಾಗುತ್ತೆ. ಹಾಗಾಗಿ ಆ ಕಾಲದಲ್ಲಿ ಕಲಾನಿರ್ದೇಶನ ಬಹಳ ಕಷ್ಟವಾಗಿತ್ತು.

"ಪೌರಾಣಿಕ ಅಥವಾ ಐತಿಹಾಸಿಕ ಚಿತ್ರಗಳಲ್ಲಿ ಒಂದು ಅರಮನೆ ದೃಶ್ಯದಲ್ಲಿ ಮೊದಲನೇ ಸಾಲಿನಲ್ಲಿರುವವರಿಗೆ ಕಿರೀಟ ಮೊದಲಾದುವನ್ನು ಹಾಕಿಬಿಟ್ಟು ಎರಡನೇ ಮೂರನೇ ಸಾಲಿನವರಿಗೆ ಮೈಕೈ ಎಲ್ಲ ಪೇಂಟ್ ಮಾಡಿ ಬಿಡುತ್ತಿದ್ದರು. ತಲೆಗೆ ಮಾತ್ರ ರಟ್ಟನ್ನು ಕತ್ತರಿಸಿ ಕಿರೀಟದ ಥರ ಹಾಕಿರೋದು. ಅವರ ಮೈ ಮೇಲಿನ ಅಂಗವಸ್ತ್ರಗಳನ್ನೂ ಪೇಂಟ್ ಮಾಡುತ್ತಿದ್ದರು. ಅವರ ಕಡೆ ಹೆಚ್ಚಾಗಿ ಕ್ಲೋಸಪ್ ಹೋಗುತ್ತಿರಲಿಲ್ಲ. ಒಂದು ಥರ ಸಹಜತೆಯ ಭ್ರಮೆ ಮೂಡಿಸುತ್ತಿತ್ತು" ಎಂದು ರವೀ ಆ ದಿನಗಳ ಬಗ್ಗೆ ಬೆಳಕು ಚೆಲ್ಲುತ್ತಾರೆ.

ಆ ಕಾಲದಲ್ಲಿ ಇದ್ದ ಕಲಾನಿರ್ದೇಶನದಲ್ಲಿ ಶೇಖರ್ ಮತ್ತು ರಾಮನ್ ಮುಖ್ಯರಾದವರೆಂದು ಜಿ.ವಿ.ಅಯ್ಯರ್ ಗುರುತಿಸುತ್ತಾ... ಆಗೆಲ್ಲಾ ಕಲಾನಿರ್ದೇಶಕರೇ ವಸ್ತ್ರವಿನ್ಯಾಸ ಮಾಡುತ್ತಿದ್ದರು ಎಂದು ನೆನಪಿಸಿಕೊಳ್ಳುತ್ತಾರೆ.

ದೃಶ್ಯೀಕರಣ ಕಲಾನಿರ್ದೇಶನದ ಬಹುಮುಖ್ಯ ಅಂಗ. ಒಂದು ದೃಶ್ಯ ಏನಾಗಿರಬೇಕು ಹೇಗಿರಬೇಕು ಎಂಬುದನ್ನು ನಿಷ್ಕರ್ಷಿಸುವುದು (visualisation) ಕಲಾನಿರ್ದೇಶಕನ ಬಹು ದೊಡ್ಡ ಸವಾಲು. ಇದಕ್ಕೆ ಆತನಿಗೆ ಪ್ರತಿಯೊಂದು ವಿಭಾಗದಿಂದಲೂ ಸಹಕಾರ ಅಗತ್ಯ. ದೃಶ್ಯೀಕರಣ ನಿಷ್ಕರ್ಷ ಮಾಡುವಾಗ ಕಥೆಗಾರನ ದೃಷ್ಟಿಕೋನದಲ್ಲೊಮ್ಮೆ, ನಿರ್ದೇಶಕನ ದೃಷ್ಟಿಕೋನದಲ್ಲೊಮ್ಮೆ, ಛಾಯಾಗ್ರಾಹಕನ ದೃಷ್ಟಿಕೋನದಲ್ಲೊಮ್ಮೆ ಕಲಾನಿರ್ದೇಶಕ ಯೋಚನೆ ಮಾಡಬೇಕಾಗುತ್ತದೆ. ಇದೊಂದು ರೀತಿಯಲ್ಲಿ ಪರಕಾಯ ಪ್ರವೇಶ. ಈ ರೀತಿ ಪರಕಾಯ ಪ್ರವೇಶ ಮಾಡುವ ಸಾಮರ್ಥ್ಯ ಕಲಾನಿರ್ದೇಶಕನಿಗಿರಬೇಕಾಗುತ್ತದೆ. ನಂತರ ಈ ಎಲ್ಲರ ದೃಷ್ಟಿಕೋನಗಳನ್ನು ಒಂದು ಸುಸಂಬದ್ಧ ರೀತಿಯಲ್ಲಿ ಸಂಯೋಜಿಸಿಕೊಡುವುದು ಕಲಾನಿರ್ದೇಶಕನ ಸೃಜನಾತ್ಮಕ ಕೆಲಸ. ದೃಶ್ಯೀಕರಣವೇ ಕಲಾನಿರ್ದೇಶಕನ ಸಾಮರ್ಥ್ಯ ಮಾಪನಕ್ಕೆ ಅಳತೆಗೋಲು ಎನ್ನಬಹುದು. ವಿವಿಧ ವಿಭಾಗಗಳ ಮುಖ್ಯಸ್ಥರ ಕೆಲಸದೊಳಕ್ಕೆ ಪರಕಾಯ ಪ್ರವೇಶ ಮಾಡುವುದು ಎಂದರೆ ಆಯಾ ವಿಭಾಗಗಳಲ್ಲಿ ಪರಿಣತಿ ಸಾಧಿಸುವುದು ಎಂದೇ ಅರ್ಥ. ಈ ಅರ್ಥದಲ್ಲಿ ಕಲಾನಿರ್ದೇಶಕರಾಗಿ ಪ್ರತಿಷ್ಠಾಪಿತರಾದವರು ಕನ್ನಡದಲ್ಲಿ ಬೆರಳೆಣಿಕೆಯಷ್ಟು ಜನ ಸಿಗಬಹುದು. ಹಿಂದಿನ ಕಾಲದ ಕಲಾನಿರ್ದೇಶಕರ ಕುರಿತು ಹೇಳುವಾಗ ಚಿತ್ರದ ನಿರ್ದೇಶಕರನ್ನೇ ಗಮನದಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ. ಉದಾಹರಣೆಗೆ, ಜಿ.ವಿ.ಅಯ್ಯರ್ ಅವರು ತಮ್ಮ ಅನೇಕ ಚಿತ್ರಗಳಿಗೆ ಕಲಾನಿರ್ದೇಶನದಲ್ಲೂ ಸಕ್ರಿಯವಾಗಿ ಭಾಗಿಗಳಾಗಿದ್ದಾರೆ. ಪ್ರಾರಂಭದಿಂದಲೂ ಜಿ.ವಿ.ಅಯ್ಯರ್, ಬಾಲಕೃಷ್ಣ ಇಬ್ಬರಿಗೂ ಬೋರ್ಡ್, ಬ್ಯಾನರ್ ಬರೆಯುವ ಅಭ್ಯಾಸವಿತ್ತು. ಪೈಂಟಿಂಗ್ ಗೊತ್ತು. ಹೀಗಾಗಿ ಅವರಿಗೆ ವರ್ಣ ಸಂಯೋಜನೆ, ದೃಗ್ದರ್ಶನ (ಪರ್ಸ್ಪೆಕ್ಟಿವ್)ದ ತಿಳಿವಳಿಕೆ ಚೆನ್ನಾಗಿಯೇ ಇತ್ತು. ಈ ಅನುಭವ ಅವರ ಪಾಲಿಗೆ ವರದಾನವಾಗಿ ಪರಿಣಮಿಸಿತು.

ಕಲಾನಿರ್ದೇಶನ ಕುರಿತು ತಮ್ಮ ಅನುಭವಗಳನ್ನು ಜಿ.ವಿ.ಅಯ್ಯರ್ ಹೀಗೆ ಹೇಳುತ್ತಾರೆ :

"ನಾನು 'ಲಾಯರ ಮಗಳು' ಚಿತ್ರಕ್ಕೆ ದಿನಕ್ಕೊಂದು ಸೆಟ್ ಹಾಕಿಸಿದ್ದೇನೆ. ಒಂದು ಸೀನ್‌ಗೆ ೧೩ ರಿಂದ ೧೪ ಸೆಟ್‌ಗಳನ್ನು ಬದಲಾಯಿಸಿದೆ" ಎಂದು ತಮ್ಮ ಕಲಾಜೀವನದ ಬಗೆಗೆ ಮೆಲುಕು ಹಾಕುತ್ತಾ ಹೇಳುತ್ತಾರೆ ಜಿ.ವಿ.ಅಯ್ಯರ್. ದೃಶ್ಯ ಶ್ರೀಮಂತಿಕೆಗಾಗಿ ಅವರು ಅಷ್ಟೊಂದು ಸೆಟ್‌ಗಳಲ್ಲಿ ಚಿತ್ರಿಸಲಿಲ್ಲ. ಪರಿಸ್ಥಿತಿಯ ಶಿಶುವಾಗಿ ಅವರು ಹಾಗೆ ಮಾಡಬೇಕಾಯಿತು. ಯಾರು ಯಾರೋ ಹಾಕಿರುವ ಸೆಟ್‌ನಲ್ಲಿ ಚಿತ್ರೀಕರಣ ನಡೆಸುವುದು. ಅನುಭವದಿಂದ ಪಡೆದ ಪರಿಣತಿ, ಅನಿವಾರ್ಯತೆಯನ್ನು ಸಮರ್ಥವಾಗಿ ಅನುಕೂಲವಾದ ರೀತಿಯಲ್ಲಿ ಪರಿವರ್ತಿಸಿಕೊಳ್ಳಲು ನೆರವಾಯಿತು. 'ಶಾಂತಲಾ' ಚಿತ್ರಕ್ಕಾಗಿ ಸೆಟ್ ಹಾಕಿದ್ದರು. 'ಶಾಂತಲಾ' ಯೋಜನೆ ಕೈಗೂಡಲಿಲ್ಲ. ಅದನ್ನೇ 'ಮಧ್ವಾಚಾರ್ಯ' ಚಿತ್ರಕ್ಕೆ ಬಳಸಿಕೊಂಡರು. ಮೇಲಿನ ಎರಡು ಸಂದರ್ಭಗಳಲ್ಲೂ ಏಕರೂಪತೆಯನ್ನು ಸಮರ್ಥವಾಗಿ ಸಾಧಿಸಿದರು. ಇಂತಹ ಸಿದ್ಧಿ ಎಲ್ಲರಿಗೂ ಸಾಧ್ಯವಾಗದ ಕಾರಣ ಆ ಕಾಲದ ನಮ್ಮ ನಿರ್ಮಾಪಕರು ನಿರ್ಮಿಸಿದ ಎಲ್ಲ ಚಿತ್ರಗಳಲ್ಲೂ ಮಣ್ಣಿನ ವಾಸನೆ ಮೂಡಲಿಲ್ಲ.

ಲಭ್ಯವಾದ ಸೆಟ್‌ಗಳನ್ನು ಅರ್ಥವತ್ತಾಗಿ ಬಳಸಿಕೊಳ್ಳಲು ನಡೆಸಲಾಗುತ್ತಿದ್ದ ಉಪಕ್ರಮಗಳನ್ನು ಕುರಿತು ಅಯ್ಯರ್ ಹೇಳುತ್ತಾರೆ - ತೆಲುಗಿನವರು, ತಮಿಳಿನವರು ಹಾಕಿರುವ ಸೆಟ್‌ಗೆ ಕಥೆ ಹೊಸೀತಿರಲಿಲ್ಲ. ಆದರೆ ಅವರು ಮಾಡುವ ಸಿನಿಮಾಗೆ ಹೊಂದುವ ಕಥೆಯನ್ನು ಆರಿಸಿಕೊಳ್ಳುತ್ತಿದ್ದೆವು. 'ಕಟ್ಟಬೊಮ್ಮನ್' ಬಂತು. ನಾವು 'ಕಿತ್ತೂರು ಚೆನ್ನಮ್ಮ'ನಂಥ ಕಥಾವಸ್ತುವನ್ನು ಆರಿಸಿಕೊಂಡೆವು. ಈ ಬಗೆಯ ಸಮಾನ ಅಂಶಗಳನ್ನು ಉಳ್ಳ ಕಥೆಗಳ ಆಯ್ಕೆ, ಅವಕಾಶ ಎಲ್ಲರಿಗೂ ಲಭ್ಯವಾಗುತ್ತಿರಲಿಲ್ಲ.

"ದೇವಲೋಕದ ಸೆಟ್ ಹಾಕಬೇಕು ಅಂದರೆ ಎರಡು ಕಂಬ, ಸ್ಕೈ ಬ್ಯಾಕ್‌ಗ್ರೌಂಡ್ ಮಾಡುತ್ತಿದ್ದರು. ಇವತ್ತೂ ಅದಕ್ಕಿಂತ ಭಿನ್ನವಾಗಿದೆ ಅನಿಸುತ್ತಿಲ್ಲ.

"ನಾನು 'ಹಂಸಗೀತೆ'ಗೆ ಕಲಾಮಂಡಲಂನಿಂದ ಕೃಷ್ಣಮೂರ್ತಿಯನ್ನು ಪ್ಲ್ಯಾನ್ ಮಾಡೋದು, ಮೌಲ್ಡ್ ಮಾಡೋದು ಬಹಳ ಇತ್ತು ಎಂದು ಕರೆತಂದೆ. ಆತ ಬಹಳ ಬೇರೆಯದೇ ಆದ ರೀತಿಯಲ್ಲಿ ಪೈಂಟ್ ಮಾಡುತ್ತಿದ್ದ. ಅದು ನನ್ನ ಕಲ್ಪನೆಯನ್ನು ವಿಸ್ತರಿಸಿತು" ಎಂದು ಹೇಳಲು ಜಿ.ವಿ.ಅಯ್ಯರ್ ಮರೆಯುವುದಿಲ್ಲ.

ಇವರ ಬಣ್ಣದ ಚಿತ್ರಗಳ ಬಗೆಗೆ ಜಿ.ವಿ.ಅಯ್ಯರ್ ಹೇಳುತ್ತಾರೆ : "ವರ್ಣಗಳ ಪಾತ್ರ ಬಹಳ ಇದೆ. ಆದರೆ ನಾವು ಅಂಥ ಪ್ರಯೋಗಗಳನ್ನು ಮಾಡಲೇ ಇಲ್ಲ. ದಟ್ಟವಾದ

ಅಥವಾ ಅತಿ ಕಡು ಬಣ್ಣಗಳನ್ನು ಕಣ್ಣಿಗೆ ಹೊಡೆಯೋ ಹಾಗೆ ಬಳಸಿಬಿಟ್ಟೆವು. ವರ್ಣಚಿತ್ರ ಅಂದರೆ ವರ್ಣಮಯ ಅನ್ನುವ ಅರ್ಥದಲ್ಲಿ. ಹಸಿರು ಮತ್ತು ಹಳದಿ ವರ್ಣಗಳನ್ನು ಕಾಂಪ್ಲಿಮೆಂಟರಿಯಾಗಿ ಹಿನ್ನೆಲೆಗೆ ಉಪಯೋಗಿಸಿಕೊಂಡದು ಅಪರೂಪ. ಆ ರೀತಿ ಯಾರೂ ಬೆಳೆಯಲಿಲ್ಲ ಅನ್ನಿಸುತ್ತೆ, ಮಿತಿ ಹಾಕ್ಕೊಂಡೆವು...''.

ಎಂಬತ್ತರ ದಶಕದ ಸುಮಾರಿನವರೆವಿಗೂ ನಮ್ಮ ಚಿತ್ರರಂಗದಲ್ಲಿ ಕೆಲಸ ಮಾಡಿದ ಕಲಾನಿರ್ದೇಶಕರಾರೂ ಯಾವುದೇ ಸಂಸ್ಥೆಯಿಂದ ತರಬೇತಿ ಪಡೆದು ಬಂದವರಾಗಿರಲಿಲ್ಲವೆಂದೇ ಹೇಳಬೇಕು. ಕನ್ನಡದಲ್ಲಿ ಹೊಸ ಅಲೆಯ ಚಿತ್ರಸೃಷ್ಟಿ ಆರಂಭವಾದ ಮೇಲೆಯೇ ಕಲಾ ಶಿಕ್ಷಣ ಸಂಸ್ಥೆಗಳಲ್ಲಿ ತರಬೇತಿ ಪಡೆದವರು ಚಿತ್ರಗಳ ಕಲಾನಿರ್ದೇಶನಕ್ಕಿಳಿದರು. ಹೀಗಾಗಿ ಹಿಂದಿನ ಬಹುತೇಕ ಚಿತ್ರಗಳಲ್ಲಿ ಉತ್ಪ್ರೇಕ್ಷೆ ಹೆಚ್ಚಾಗಿರುವನ್ನು ಗಮನಿಸಬಹುದಾಗಿದೆ. ಕಲವೊಮ್ಮೆ ಗಂಜಿಗೇ ಗತಿ ಇಲ್ಲದವನ ಮನೆಯೂ ದೊಡ್ಡದಾಗಿಯೇ ಇರುತ್ತಿದ್ದು ಅಸಹಜವೆನಿಸುತ್ತಿತ್ತು. ಕ್ಯಾಮರಾ ಟ್ರಾಲಿ ಟ್ರ್ಯಾಕ್ ಚಲನಗಾಗಿ ದೊಡ್ಡದಾಗಿ ಸೆಟ್ ನಿರ್ಮಾಣವಾಗುತ್ತಿದುದೇ ಅದಕ್ಕೆ ಕಾರಣವಾಗಿತ್ತು.

(ಚಿತ್ರ ೬) 'ಮಾಂಗಲ್ಯಂ ತಂತು ನಾನೇನ' ಚಿತ್ರಕ್ಕಾಗಿ ಕಂಠೀರವ ಸ್ಟುಡಿಯೋದಲ್ಲಿ ಹಾಕಿದ್ದ ಶ್ರೀಮಂತ ಮನೆಯ ಸೆಟ್ - ಕಲೆ ಇಸ್ಮಾಯಿಲ್

ಹಿಂದಿನ ದಿನಗಳಲ್ಲಿ ಕಲಾನಿರ್ದೇಶನದಲ್ಲಿ ತರಬೇತಿ ನೀಡುವ ಯಾವುದೇ ಸೌಲಭ್ಯಗಳಿರಲಿಲ್ಲ. ಸಾಮಾನ್ಯವಾಗಿ ಸೆಟ್ ಅಸಿಸ್ಟೆಂಟ್‌ಗಳಾಗಿಯೋ, ಕಲಾ ನಿರ್ದೇಶಕರಿಗೆ ಸಹಾಯಕರಾಗಿಯೋ ಕೆಲಸ ಮಾಡುತ್ತ, ಕಲಿತು ಮುಂದೆ ಸ್ವತಂತ್ರ ಕಲಾನಿರ್ದೇಶಕರಾಗುತ್ತಿದ್ದರು. ಮುಂದ ೮೦ರ ದಶಕದಲ್ಲಿ ಡಿಪ್ಲೊಮಾ ಇನ್ ಫೈನ್ ಆರ್ಟ್ ಕೋರ್ಸ್ ಮಾಡಿಕೊಂಡು ಆರ್ಟ್ ಎಂದರ ಏನು ? ಅದನ್ನು ಸಿನಿಮಾಗೆ ಹೇಗೆ ಅಳವಡಿಸಬೇಕು ? ಸ್ಟೇಜ್ ಮತ್ತು ಸಿನಿಮಾ ನಡುವಣ ವ್ಯತ್ಯಾಸವೇನು ? ಎಂಬುದನ್ನು ತಿಳಿದುಕೊಂಡು ಸಿನಿಮಾಗ ಬಂದಿದ್ದಾರೆ ಎನ್ನುತ್ತಾರೆ ಸುಭಾಷ್ ಕಡಕೋಳ್. ದಾವಣಗೆರೆ, ಬೆಳಗಾವಿ, ಧಾರವಾಡ ಮುಂತಾದ ಊರುಗಳಲ್ಲಿ ಐದು ವರ್ಷಗಳ ಈ ಕೋರ್ಸ್ ಲಭ್ಯವಿದೆ. ಗುಲ್ಬರ್ಗಾದಲ್ಲಿ ಫೈನ್ ಆರ್ಟ್‌ನಲ್ಲಿ ಡಿಗ್ರಿ ಕೋರ್ಸ್ ಇದೆ. ಕಡಕೋಳ್ ಅವರ ಪ್ರಕಾರ ಚಿತ್ರಕಲೆಯಲ್ಲಿ ತರಬೇತಿ ಪಡೆದಿದರ ವಿಷುಯಲೈಸೇಷನ್ (visualisation) ಗೆ ಸಹಾಯವಾಗುತ್ತದೆ. ಕೆನ್ ಕಲಾಶಾಲೆಯ ಕಲಾವಿದರು ವಾಣಿಜ್ಯ ಪ್ರಧಾನ ಚಿತ್ರಗಳಿಗೆ ಕಲಾನಿರ್ದೇಶನ ಮಾಡಿದುಂಟು. ಕಲಾವಿದರಾದ ಬಿ.ಕೆ.ಎಸ್.ವರ್ಮ, ಚಂದ್ರನಾಥ ಆಚಾರ್ಯ, ಆರ್.ಎಂ.ಹಡಪದ್ ಮೊದಲಾದವರೂ ಕಲಾನಿರ್ದೇಶನ ಮಾಡಿದ್ದಾರೆ. ಹೆಚ್ಚಿನಂಶ ರಂಗತಜ್ಞರು ಈ ಕ್ಷೇತ್ರದಲ್ಲಿ ಯಶಸ್ವಿಯಾಗಿದ್ದಾರೆ.

''ಸುಮಾರು ೫೦ ವರ್ಷಗಳ ಹಿಂದೆ ಬ್ರಿಟಿಷ್ ಕಲಾನಿರ್ದೇಶಕ ಎಡ್ವರ್ಡ್ ಗ್ಯಾರಿ ಅವರು 'ಡಿಸೈನಿಂಗ್ ಫಾರ್ ಫಿಲಂಸ್' ಎಂಬ ಪುಸ್ತಕವನ್ನು ಪ್ರಕಟಿಸಿದ್ದಾರೆ. ಇದರಲ್ಲಿ ಸ್ಪೆಷಲ್ ಎಫೆಕ್ಟ್‌ಗಳ ಬಗೆಗೆ ಲೇಖನಗಳು ಹಾಗೂ ಚಿತ್ರಗಳು ಇವೆ. ಕಲಾನಿರ್ದೇಶಕರು ಹಾಗೂ ಚಲನಚಿತ್ರ ಛಾಯಾಗ್ರಾಹಕರ ಸಮುದಾಯಕ್ಕೆ ಉಪಯುಕ್ತವಾದುದು'' ಎಂದು ಕಲಾನಿರ್ದೇಶಕ ನಾಗರಾಜರಾಯರು ಶಿಫಾರಸು ಮಾಡುವ ಗ್ರಂಥಗಳು.

''ಭಾರತದಲ್ಲಿ ೫೦ ವರ್ಷಗಳ ಹಿಂದೆಯೇ ಸುಪ್ರಸಿದ್ಧ ಟ್ರಿಕ್ ಛಾಯಾಗ್ರಾಹಕ ಪ್ರಹ್ಲಾದ ದತ್ ಮತ್ತು ಬಾಬುಭಾಯಿ ಮಿಸ್ತ್ರಿ ಅವರುಗಳು ಮಿನಿಯೇಚರ್ ಮತ್ತು ಸ್ಪೆಷಲ್ ಎಫೆಕ್ಟ್ಸ್ ತಂತ್ರಗಳನ್ನು ಬಳಸಿದ್ದು ಅದನ್ನು ಪ್ರೇಕ್ಷಕರು ಹಾಗೂ ಭಾರತೀಯ ಚಿತ್ರೋದ್ಯಮದವರು ಪ್ರಶಂಸಿಸಿದ್ದಾರೆ.

''ಇತ್ತೀಚೆಗೆ ಥಾಮಸ್ ಜಿ.ಸ್ಮಿತ್ ಅವರು ಜಾರ್ಜ್ ಲೂಕಾಸ್ ಅವರ ಸಹಯೋಗದೊಂದಿಗೆ 'ಇಂಡಸ್ಟ್ರಿಯಲ್ ಮ್ಯಾಜಿಕ್ - ದಿ ಆರ್ಟ್ ಆಫ್ ಸ್ಪೆಷಲ್ ಎಫೆಕ್ಟ್ಸ್' ಎಂಬ ಪುಸ್ತಕವನ್ನು ಹೊರತಂದಿದ್ದಾರೆ. ಆಧುನಿಕ ಆರ್ಟ್ ಡೈರೆಕ್ಟರುಗಳು ಮತ್ತು ಚಲನಚಿತ್ರ ಛಾಯಾಗ್ರಾಹಕರಿಗೆ ಈ ಪುಸ್ತಕ ಬೋಧಪ್ರದವಾಗಿದೆ. ಇದು ಭಾರತೀಯ ಚಿತ್ರೋದ್ಯಮದಲ್ಲಿ ಭಾರಿ ಪ್ರಮಾಣದಲ್ಲಿ ಪರಿಣಾಮ ಉಂಟುಮಾಡಿದು ನಮ್ಮ ಇಂದಿನ ತಂತ್ರಜ್ಞರು ವಿದೇಶೀ ಚಿತ್ರಗಳೊಂದಿಗೆ ಸ್ಪರ್ಧಿಸುತ್ತಿದ್ದಾರೆ. ವೈಜ್ಞಾನಿಕ ಮುನ್ನಡೆ ಹಾಗೂ ಕಂಪ್ಯೂಟರ್ ಗ್ರಾಫಿಕ್ಸ್ ಬಳಸಿ ಅದ್ಭುತ ಎಫೆಕ್ಟ್‌ಗಳನ್ನು ತಂದಿದ್ದಾರೆ'' ಎನ್ನುವ ನಾಗರಾಜರಾವ್ ''ಇಂದು ತಂತ್ರಜ್ಞಾನದ ಬೆಳವಣಿಗೆ ಹಾಗೂ ಆಧುನಿಕ ಕಂಪ್ಯೂಟರ್ ಬಳಕೆ ಏನೇ ಇದರೂ ಅವು ಮಾನವ ಮಿದುಳಿಗೆ ಪರ್ಯಾಯವಾಗಲಾರವು'' ಎಂಬ ಮಾತನ್ನು ಹೇಳಲು ಮರೆಯುವುದಿಲ್ಲ.

ಕಲಾನಿರ್ದೇಶಕನ ಪರಿಕರಗಳು

ಕಲಾನಿರ್ದೇಶಕ ಮಾಡಬೇಕಾದ ಕೆಲಸ ಎರಡು ನಿಟ್ಟಿನದು. ಒಂದು, ಈಗ ಲಭ್ಯವಿರುವ ಪರಿಕರಗಳನ್ನು ಬಳಸಿ ಅವರ ಮೂಲಕ ಸಹಜತ ನಿರ್ಮಾಣ ಮಾಡುವುದು. ಈ ಕೆಲಸ ಸೆಟ್ ನಿರ್ಮಾಣ ಮಾಡುವಾಗಲೇ ಅಲ್ಲಿರುವ ಪರಿಸರವನ್ನು ಅವ ಲೋಕಿಸಿ ಮಾಡಲು ಸಾಧ್ಯ. ಪುರಾತನವಾದ ಮನೆ ಬಳಸಿದರೆ ಅಲ್ಲಿರುವ ಅನೇಕ ವಸ್ತುಗಳೇ ಸಹಜತೆಗ ನೆರವಾಗುತ್ತವೆ. 'ನಾಗಮಂಡಲ'ದ ಕಲಾನಿರ್ದೇಶನದ ಸಂದರ್ಭದಲ್ಲಿ ಬಳಸಿದಂಥ ಇಂತಹದೊಂದು ಮನೆಯನ್ನು ಶಶಿಧರ ಅಡಪ ನೆನಪಿಸಿಕೊಳ್ಳುತ್ತಾರೆ. ಹೀಗೆಯೇ ತಾಂತ್ರಿಕವಾಗಿ ಕೌಶಲ ಪ್ರದರ್ಶಿತವಾದಾಗಲೇ ಸಹಜವಾಗಿರುವುದನ್ನು ಗಮನದಲ್ಲಿಡಬೇಕು. 'ಜುರಾಸಿಕ್ ಪಾರ್ಕ್' ಸರಣಿಯನ್ನು ಇದಕ್ಕೆ ಉದಾಹರಣೆಯಾಗಿ ನೋಡಬಹುದು.

ಕಲಾನಿರ್ದೇಶಕನಿಗೆ ಅಗತ್ಯವಾದ ಪರಿಕರಗಳೇನು ? ಇದು ಆಯಾ ಕಥೆ ಮತ್ತು ಚಿತ್ರಗಳನ್ನು ಅವಲಂಬಿಸಿರುತ್ತದೆ. ಚಿತ್ರೀಕರಣ ಸ್ಥಳ, ಅಲ್ಲಿನ ಪರಿಕರಗಳು ಮೂಲ ಪರಿಕರಗಳು. ಚಿತ್ರಕಲೆ, ಶಿಲ್ಪಕಲೆ, ರೇಖಾ ಚಿತ್ರಗಳು, ಮರಗೆತ್ತನೆ, ಇತ್ಯಾದಿ ಕಲಾಕೃತಿಗಳಿಂದ ಹಿಡಿದು, ಕುರ್ಚಿ, ಮೇಜು, ಗೋಡೆ, ಕ್ಯಾಲೆಂಡರುಗಳವರೆಗೆ ಯಾವ ವಸ್ತುವಾದರೂ ಪರಿಕರವಾಗಬಲ್ಲುದು.

ಆದರೆ ಈ ಪರಿಕರಗಳನ್ನು ಬಳಸಿಕೊಳ್ಳುವ ಪ್ರಜ್ಞೆ ಕಲಾನಿರ್ದೇಶಕನಿಗೆ ಇರಬೇಕಾಗುತ್ತದೆ. ಇಂದಿನ ಮತ್ತು ಈಗಿನ ಅನೇಕ ಚಿತ್ರಗಳಲ್ಲಿ ಈ ಪರಿಕರಗಳ ಬಳಕೆಯಲ್ಲಿನ ಅತಿರೇಕಗಳನ್ನು ನಾವು ಗುರುತಿಸಬಹುದು. ಒಂದು ಪೌರಾಣಿಕ ದೃಶ್ಯ ಎಂದೊಡನೆ ಹೊಯ್ಸಳ ಚಿತ್ರಕಲೆಯ ಶೈಲಿಯಲ್ಲಿ ಕೆತ್ತಿದ ಕಂಬಗಳನ್ನು ನಿಲ್ಲಿಸಿಬಿಡುವುದು, ಬಸವಣ್ಣನ ಕಾಲವನ್ನು ಸೂಚಿಸಲು ಇಳಕಲ್ ಸೀರೆ, ಗುಳೇದಗುಡ್ಡದ ಖಣ, ಕಸೆ ಅಂಗಿಯಂಥ ವಸ್ತ್ರಾಲಂಕರಣಗಳನ್ನು ಬಳಸುವುದು, ಸ್ವಾತಂತ್ರ್ಯಪೂರ್ವದ ಕಾಲ ಸೂಚನೆಗೆ ಗಾಂಧಿ ಟೋಪಿಯ ಯಥೇಚ್ಛ ಬಳಕೆ, ಉತ್ತರ ಕರ್ನಾಟಕದ ವ್ಯಕ್ತಿತ್ವ ಎಂದೊಡನೆ ಬಿಳೀ ಷರಟು, ಕಚ್ಚೆ ಪಂಚೆ, ಕರೀ ಕೋಟು.... ಈ ರೀತಿ ಮೇಲು ನೋಟಕ್ಕೆ ಮಾತ್ರ ಹೊಂದಿಕೊಳ್ಳುವಂತಹ ವ್ಯವಸ್ಥೆ ಮಾಡಿಬಿಟ್ಟರೆ ಕಲಾನಿರ್ದೇಶನ ಮುಗಿಯಿತು ಎಂದುಕೊಳ್ಳುವವರಿದ್ದಾರೆ.

(ಚಿತ್ರ ೭)'ಮೇಘಮಾಲೆ' ಚಿತ್ರಕ್ಕಾಗಿ ಥರ್ಮೋಕೋಲ್ ಬಳಸಿ ನಿರ್ಮಿಸಲಾದ ಸೆಟ್ - ಕಲೆ : ಸುಭಾಷ್ ಕಡಕೋಳ್

ಕಲಾನಿರ್ದೇಶಕರಾದ ಸುಭಾಷ್ ಕಡಕೋಳ ಈ ಸ್ಥಿತಿಯನ್ನು ವಿಶ್ಲೇಷಿಸುವ ಬಗೆಯೇ ಬೇರೆ : ''ಮೇಲೆ ಹೇಳಿದ ಮಿತಿಗಳಿಂದ ಕಲಾನಿರ್ದೇಶಕ ಬಂಧಿತನಾಗಿದ್ದಾನೆ ಎಂಬ ಮಾತು ಒಪ್ಪುವಂಥದ್ದೇ. ಆದರೆ ಅದು ಕೇವಲ ಕಲಾನಿರ್ದೇಶಕನೊಬ್ಬನದೇ ಮಿತಿ ಎಂದು ನಾನು ಭಾವಿಸುವುದಿಲ್ಲ. ಬಸ್ಸು ಹತ್ತಿದ ಪ್ರಯಾಣಿಕ ಕಂಡಕ್ಟರ್‌ನಿಂದ ಟಿಕೆಟ್ ಕೇಳಿ ಪಡೆಯುವುದು ಕರ್ತವ್ಯ. ಅದೇ ರೀತಿ ಕಲಾನಿರ್ದೇಶಕ ಒಬ್ಬ ಕಂಡಕ್ಟರ್. 'ನನಗೆ ಈ ರೀತಿಯ ದೃಶ್ಯ ಬೇಕು' ಎಂದು ನಿರ್ದೇಶಕ ಕೇಳಬೇಕು. ಅದಕ್ಕೆ ತಕ್ಕ ವ್ಯವಸ್ಥೆಯನ್ನು ಪ್ರೊಡಕ್ಷನ್ ವಿಭಾಗ ಕಲ್ಪಿಸಬೇಕು. ಹಾಗಿದ್ದಾಗ ಮಾತ್ರ ಕಲಾನಿರ್ದೇಶಕ ತನ್ನ ಕೆಲಸವನ್ನು ಸಮರ್ಪಕವಾಗಿ ಮಾಡಲು ಸಾಧ್ಯ.

''ಯಾವುದೋ ದೃಶ್ಯವನ್ನು ವಿವರಿಸುತ್ತಾರೆ. ಆ ದೃಶ್ಯಕ್ಕೆ ನಾವು ಅನೇಕ ರೀತಿಯ ಪರಿಕಲ್ಪನೆಗಳನ್ನು ಒದಗಿಸಬಹುದು. ನಂತರ ಚರ್ಚೆ ಮುಂದುವರಿಯಬೇಕು. ಚರ್ಚೆ ಹೆಚ್ಚಾಗಿ ಆದಷ್ಟೂ ದೃಶ್ಯೀಕರಣ ಉತ್ತಮ ಮಟ್ಟದಲ್ಲಿ ಮೂಡಬಹುದು. ಆದರೆ ಇವರಲ್ಲೂ ಸಾಕಷ್ಟು ಮಿತಿಗಳನ್ನು ಒಟ್ಟಾರೆಯಾಗಿ ಒಂದು ಚಿತ್ರ ತಂಡ ಅನುಭವಿಸ ಬೇಕಾಗುತ್ತದೆ. ೧೫-೨೦ ದಿನಗಳ ಒಳಗಾಗಿ ಒಂದು ಇಡೀ ಚಿತ್ರದ ಚಿತ್ರೀಕರಣ ಮುಗಿದು ಹೋಗುವ ಧಾವಂತದ ದಿನಗಳಿವು. ಇಂಥ ಸನ್ನಿವೇಶದಲ್ಲಿ ಕಲಾನಿರ್ದೇಶನಕ್ಕೆ ಎಂಥ ನ್ಯಾಯ ಒದಗಿಸಲು ಸಾಧ್ಯ ?''

ಕನ್ನಡ ಸಿನಿಮಾದಲ್ಲಿ ಕಲಾನಿರ್ದೇಶಕರಿಗೆ ಒಂದು ಶಾಪ ಎಂದರೆ ಅಗತ್ಯವಿರುವಷ್ಟು ಕಾಲಾವಕಾಶ ಕೊಡದಿರುವುದು ಎನ್ನುತ್ತಾರೆ ಕಡಕೋಳ್. ''ಎಷ್ಟೋ ಸಾರಿ ಶೂಟಿಂಗ್‌ಗೆ ಇನ್ನೂ ಎರಡು-ಮೂರು ದಿನಗಳಿವೆ ಎನ್ನುವಾಗ ಕಲಾನಿರ್ದೇಶಕನಿಗೆ ತಿಳಿಸುತ್ತಾರೆ. ಕಲಾನಿರ್ದೇಶಕರನ್ನು ಯಾವ ರೀತಿ ಬಳಸಿಕೊಳ್ಳಬೇಕು ಎನ್ನುವ ತಿಳಿವಳಿಕೆ ನಿರ್ದೇಶಕರಿಗಿರಬೇಕು. ಎಷ್ಟೋ ಸಾರಿ ನಮಗೆ ಕಥೆ ಹೇಳುವುದಿಲ್ಲ. ಏನು ನಡೀತಾ ಇದೆ ಎಂದು ಗೊತ್ತಾದರೆ ತಾನೇ ನಾವು ಕಂಟಿನ್ಯೂಯಿಟಿ, ಕ್ವಾಲಿಟಿ ಮೇಂಟೈನ್ ಮಾಡಲು ಸಾಧ್ಯ. ನಿರ್ಮಾಪಕ, ನಿರ್ದೇಶಕನ ನಂತರ ಛಾಯಾಗ್ರಾಹಕನ ಪಾತ್ರ ಬಹಳ ಮುಖ್ಯ. ನಾವು ಎಷ್ಟೇ ಚೆನ್ನಾಗಿ ಎಲ್ಲ ವ್ಯವಸ್ಥೆ ಮಾಡಿದ್ದರೂ ಅದನ್ನು ಸಮರ್ಪಕವಾಗಿ ಲೈಟಿಂಗ್ ಮಾಡಿ ಬಳಸಿಕೊಳ್ಳದಿದ್ದರೆ ಎಲ್ಲವೂ ಹಾಳು'' ಎನ್ನುವ ಕಡಕೋಳ್ ತಮ್ಮ ಒಂದೆರಡು ಸಮಸ್ಯೆ, ಅನುಭವಗಳನ್ನು ಹೀಗೆ ವಿವರಿಸುತ್ತಾರೆ :

ಅರುಣಾರಾಜೆ ಅವರ 'ಪತಿತಪಾವನಿ' ಚಿತ್ರಕ್ಕೆ ಮುಂಬೈನ ಕೆಂಪು ದೀಪ ಪ್ರದೇಶ (Red Light Area) ದಲ್ಲಿ ಎಂಟು ದಿನ ಚಿತ್ರೀಕರಣ ನಡೆಯಿತು. ವಾಪಸ್ ಬಂದ ನಂತರ ಅವರಿಗೆ ಇನ್ನೊಂದು ಸೀನ್ ಶೂಟ್ ಮಾಡಬೇಕು ಅನ್ನಿಸಿತು. ಮತ್ತೆ ಮುಂಬೈಗೆ ಹೋಗಿ ಶೂಟ್ ಮಾಡಲು ವ್ಯವಧಾನವಿರಲಿಲ್ಲ. ಆರ್ಟಿಸ್ಟ್‌ಗಳ ಕಾಲ್‌ಶೀಟ್ ಪ್ರಾಬ್ಲಂ ಬೇರೆ. ಹುಬ್ಬಳ್ಳೀಲಿ ಅಂಥ ಒಂದು ಜಾಗವನ್ನು ಹುಡುಕಿದರು. ಅದು ಸ್ಲಂ ಮತ್ತು ಕೆಂಪು ದೀಪ ಪ್ರದೇಶಕ್ಕೆ ಹೊಂದಿಕೊಳ್ಳುವಂತೆ ಇತ್ತು. ಅಲ್ಲಿ ಇನ್ನಷ್ಟು ಕಸ ತಂದುಹಾಕಿ ಶೂಟ್ ಮಾಡಿದೆವು. ಚಿತ್ರ ನೋಡಿದಾಗ ನಾವು ಮುಂಬೈ ಬಿಟ್ಟು ಬೇರೆ ಜಾಗದಲ್ಲಿ ಶೂಟ್ ಮಾಡಿದ್ದೇವೆ ಎಂದು ಎನ್ನಿಸಲೇ ಇಲ್ಲ. ಹಾಗೆಯೇ 'ಸಂಗ್ಯಾ ಬಾಳ್ಯಾ' ಚಿತ್ರದಲ್ಲಿ ಒಂದು ಜಾತ್ರೆ ದೃಶ್ಯ ಸೃಷ್ಟಿ ಮಾಡಬೇಕಾಗಿ ಬಂತು. ಅದು ೨೦೦ ವರ್ಷಗಳ ಹಿಂದೆ ನಡೆದಂಥ ಕಥೆಯಾದ್ದರಿಂದ ಬೆಳಗಾವಿ ಜಿಲ್ಲೆ ಕಿತ್ತೂರಿನ ಹತ್ತಿರ ತುರಮುರಿ ಅಂತ ಹಳ್ಳಿ, ಅಲ್ಲಿ ದೃಶ್ಯ ಚಿತ್ರೀಕರಣ ಮಾಡುವಾಗ ಅಲ್ಲಿನ ಜನ ತುಂಬ ಸಹಕಾರ ನೀಡಿದರು. ತಮ್ಮ ಷರ್ಟ್ ಗುಂಡಿ ಕಿತ್ತು ಹಾಕಿ, ಅಲ್ಲಿಯ ಪೇಟ-ಗೀಟ ಸುತ್ತಿಕೊಂಡು ಚಿತ್ರೀಕರಣದಲ್ಲಿ ಭಾಗವಹಿಸಿದರು. ಆ ಚಿತ್ರ ಅಂತಾರಾಷ್ಟ್ರೀಯ ಚಿತ್ರೋತ್ಸವದ ಪನೋರಮಾ ವಿಭಾಗಕ್ಕೆ ಆಯ್ಕೆಯಾದಾಗ ದೆಹಲಿಯಲ್ಲಿ ಅದನ್ನು ನೋಡಿದವರು 'ಅದು ನಿಜವಾದ ಜಾತ್ರೇನಾ ?' ಅಂತ ಕೇಳಿದರು. ಅದು ಕ್ರಿಯೇಟ್ ಮಾಡಿದ್ದು ಎಂದು ಹೇಳಿದಾಗ 'ಅಷ್ಟು ನ್ಯಾಚುರಲ್ ಆಗಿ ಹೇಗೆ ಬಂತು ?' ಎಂದು ಆಶ್ಚರ್ಯ ಪಟ್ಟರು. ನಿರ್ದೇಶಕ ಸುಂದರಕೃಷ್ಣ ಅರಸ್ ಪ್ರತಿಯೊಂದು ಸೀನ್ ಬಗೆಗೂ ಪ್ರೇಕ್ಷಕರಿಗೆ ವಿವರಣೆ ನೀಡುತ್ತಿದ್ದರು. ಜಾತ್ರೇಲಿ ಜನ ಓಡಾಡುವುದು, ಕುರಿ, ಮೇಕೆಗಳು ಓಡಾಡುವುದು, ನೀರು ತಗೊಂಡು ಹೊಲಕ್ಕೆ ಹೋಗೋದು ಇವೆಲ್ಲ ತುಂಬ ಸ್ವಾಭಾವಿಕವಾಗಿ ಮೂಡಿ ಬಂದವು. ನಿರ್ದೇಶಕ, ಛಾಯಾಗ್ರಾಹಕರ ಸಹಕಾರ ಇದ್ದರೆ ಮಾತ್ರ ಕಲಾನಿರ್ದೇಶಕನ ಕೆಲಸ ಸುಲಭ ಸಾಧ್ಯ'' ಎಂದು ಸಮರ್ಥಿಸಲು ಮೇಲಿನ ಎರಡು ಸನ್ನಿವೇಶಗಳ ನಿದರ್ಶನ ನೀಡುತ್ತಾರೆ ಕಡಕೋಳ್.

ಮತ್ತೊಬ್ಬ ಕಲಾನಿರ್ದೇಶಕರು ಸಂಬಂಧಪಟ್ಟವರ ಅನಾಸಕ್ತಿ, ಕೂಡುವ ತೊಂದರೆಗಳ ಬಗ್ಗೆ ಹೇಳುತ್ತಾರೆ : ''ಸೆಟ್‌ನಲ್ಲಿ ನಾವು ಹೋದಾಗ ನಾಳೆಗೆ ಏನು ಬೇಕು, ಪರಿಕರಗಳು ಏನು ಬೇಕು ಅಂತ ಕೇಳಿದರೆ ಬನ್ನಿ ಹೇಳುತ್ತೇನೆ ಎಂದು ಕರೆದುಕೊಂಡುಹೋಗಿ ಯಾವುದೋ ಮನೇಲಿ ಶೂಟ್ ಮಾಡುತ್ತಾ ಇರುತ್ತೇನೆ. ಮದುವೆ ಸೆಟ್ ಹಾಕಬೇಕು, ನಮಗೆ ಏನೂ ಬೇಕಾಗಿಲ್ಲ, ಹೋಮ ಕುಂಡ ಹಾಕಿಸಿಬಿಡಿ, ಎರಡು ಬಾಳೆ ಕಂಬ ಕಟ್ಟಿಬಿಡಿ, ನಾವು ಮದ್ವೆ ಗಂಡು-ಹೆಣ್ಣಿಗೆ ಸೆರಗಿನ ಗಂಟು ಹಾಕಿ ಸುತ್ತಿಸಿಬಿಡ್ತೀವಿ ಅಷ್ಟೇ ನಮಗೆ ಬೇಕಾಗಿರೋದು ಅಂತಾರೆ. ಬೆಳಿಗ್ಗೆ ಬಂದು ರೆಡಿ ಆದಾಗ 'ಇರ್ರಿ ಇರ್ರಿ, ಹಾಗಲ್ಲ ಆ ಪ್ರೊಡ್ಯೂಸರ್ ಹಾಗೆ ಹೇಳಿದರು, ಕ್ಯಾಮರಾಮನ್ ಹೀಗೆ ಹೇಳಿದರು, ಒಂದು ಪೆಂಡಾಲ್ ಹಾಕ್ರಿ, ಮದ್ವೆಗೆ ಶ್ರೀಮಂತಿಕೆ ಬೇಕ್ವೇನ್ರಿ. ನಾವು ಗಂಡು-ಹೆಣ್ಣನ್ನು ಕಾರಿನಲ್ಲಿ ಕರೆದುಕೊಂಡು ಬರ್ತೀವಿ. ಅದಕ್ಕೆ ಕಾರಿಗೆಲ್ಲ ಅಲಂಕಾರ ಮಾಡ್ಬೇಕು ಅಂತ ಹೇಳಿಬಿಡುತ್ತಾರೆ. ಆಗೇನಾಗುತ್ತೆ - ಅಂಗಡಿ ಬಾಗಿಲು ತೆಗೆಯಲು ೧೦ ಗಂಟೆ ಆಗುತ್ತೆ. ಅಷ್ಟೊತ್ತಿನಲ್ಲಿ ನಾವು ಹಾಗೂ ಹೀಗೂ ತಂದು ಡೆಕೋರೇಟ್ ಮಾಡುವಾಗ, ಏನಪ್ಪಾ ಆರ್ಟ್ ಡೈರೆಕ್ಟರ್ ಬೇಗ ಕೆಲಸ ಮಾಡಲ್ಲ ಅಂತಾರೆ. ಹೀಗೆ ಆರ್ಟ್ ಡೈರೆಕ್ಷನ್‌ನ್ನು ಬಹಳ ಕೇವಲವಾಗಿ ನೋಡುತ್ತಾರೆ''.

'ಕೊಟ್ರೇಶಿ ಕನಸು', 'ಅಮೆರಿಕಾ ಅಮೆರಿಕಾ'ದಂಥ ಸದಭಿರುಚಿಯ ಚಿತ್ರಗಳ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್ ಅವರ ಪ್ರಕಾರ ಕನ್ನಡ ಚಿತ್ರರಂಗದಲ್ಲಿ ಆರ್ಟ್ ಡಿಪಾರ್ಟ್‌ಮೆಂಟ್‌ಗೆ ಅಂತ ಒಂದು ಬಜೆಟ್ ಕೊಡೋದಿಲ್ಲ; ಒಂದು ಚಿತ್ರಕ್ಕೆ ಕಾಸ್ಟ್ಯೂಮ್ಸ್ ಅಂದರೆ ೨-೪ ಲಕ್ಷ ಬಜೆಟ್ ಹಾಕ್ತಾರೆ; ಲೊಕೇಶನ್ ಅಂದ್ರೆ ಯಾವ ಲೊಕೇಶನ್‌ಗೆ ಬೇಕಾದರೂ ಹೋಗೋಣ ಅಂತಾರೆ, ಆದರೆ ಕಲಾ ವಿಭಾಗ ಅಂದ ಕೂಡಲೆ ಹಿಂದೇಟು ಹಾಕುತ್ತಾರೆ.

''ನಾನು ಕೆಲಸ ಮಾಡಿರುವ ಚಿತ್ರಗಳ ಸಂಖ್ಯೆ ಬಹಳ ಕಡಿಮೆ. ನನ್ನ ಅನುಭವದಲ್ಲೇ ಹೇಳೋದಾದ್ರೆ, ನಮ್ಮ ಕಲಾನಿರ್ದೇಶಕರು ಹೇಗಿದ್ದಾರೇಂದ್ರೆ - ಒಂದು ಫ್ರೇಮ್ ಇದ್ದರೆ ಅದರಲ್ಲಿ ಏನೇನೊ ತುಂಬಿಡೋದು - ಜಾಗ ಖಾಲಿ ಇರಬಾರದು - ಹಾಗೆ ತುಂಬಿದರೆ ತಮ್ಮ ಕೆಲಸ ಆಯಿತು ಅಂತ. ಅದು ಅವರ ತಪ್ಪಲ್ಲ. ಏಕೆಂದರೆ ಅವರಿಗೆ ಸ್ಟೇಜ್ ಅಥವಾ ಲಿಟರರಿ ಬ್ಯಾಕ್‌ಗ್ರೌಂಡ್ ಇರಲ್ಲ, ಬೇರೆ ಯಾವುದೇ ಹಿನ್ನೆಲೆ ಇರುವುದಿಲ್ಲ. ಹಾಗಾಗಿ ನಿಜವಾದ ಆರ್ಟ್ ಡೈರೆಕ್ಟರ್ ಅನ್ನೋವಂಥವರು ಇಂದು ಬೆರಳೆಣಿಕೆಯಷ್ಟು ಸಿಗಲಾರರು ಅನ್ನುತ್ತೆ'' ಎನ್ನುತ್ತಾರೆ ನಾಗತಿಹಳ್ಳಿ ಚಂದ್ರಶೇಖರ್.

ವಿಶೇಷ ಪರಿಣಾಮ ಸೃಷ್ಟಿ ಕ್ರಿಯೆಯಲ್ಲಿ ಕಲಾನಿರ್ದೇಶಕನ ಪಾತ್ರ



(ಚಿತ್ರ ೮-೯) ಕೋಟೆಯ ಬತೇರಿಗಳ ಮೇಲೆ ನಡೆವ ಹೋರಾಟದ ಚಿತ್ರೀಕರಣಕ್ಕೆ ಕೋಟೆಗೇ ಹೋಗಬೇಕಾಗಿಲ್ಲ. ಕೋಟೆಯಷ್ಟೇ ಎತ್ತರದ ಸೆಟ್ ಬೇಕಿಲ್ಲ. ಕಲಾವಿದ ನಿರ್ಮಿಸಿದ ಕೋಟೆಯ ಕಿರು ಮಾದರಿಯನ್ನು ಕ್ಯಾಮರಾ ಮುಂದಿಟ್ಟು ಹಿನ್ನೆಲೆಯಲ್ಲಿ ವಿವಿಧ ಎತ್ತರದಲ್ಲಿ ವೇದಿಕೆ ನಿರ್ಮಿಸಿ ಚಿತ್ರಿಸಬಹುದು. ಆದರೆ ಕಲಾನಿರ್ದೇಶಕನಿಗೆ ಛಾಯಾಗ್ರಹಣದ ಹಾಗೂ ಚಿತ್ರಗ್ರಾಹಿ ಉಪಕರಣದ ಬಗೆಗೆ ಪೂರ್ಣ ತಿಳಿವಳಿಕೆ ಅಗತ್ಯ. ಮೇಲೆ ಇರುವ ನಕ್ಷೆ ಚಿತ್ರೀಕರಣದ ವಿಧಾನದ ಬಗೆಗೆ ಹಾಗೂ ಕಲಾನಿರ್ದೇಶಕರ ಪಾತ್ರದ ಬಗೆಗೆ ಬೆಳಕು ಚೆಲ್ಲುತ್ತದೆ.

"ಕಲಾನಿರ್ದೇಶನವಾಗಲಿ, ಛಾಯಾಗ್ರಹಣವಾಗಲಿ, ಪ್ರಸಾದನ ಆಗಿರಲಿ, ವೇಷ-ಭೂಷಣ ಅಥವಾ ಯಾವುದೇ ಪರಿಕರವಾಗಲಿ ಚಿತ್ರದ ಕಥೆಯನ್ನು ಡಾಮಿನೇಟ್ ಮಾಡುವಷ್ಟು ಇರಬಾರದು. ಅದು ಇಡೀ ಚಿತ್ರದ ಒಟ್ಟು ಘನತೆಯನ್ನೇ ಕುಗ್ಗಿಸುತ್ತದೆ" ಎನ್ನುವ ನಾಗತಿಹಳ್ಳಿ "ಪೈಂಟಿಂಗ್ಸ್ ಬಳಸುವ ಬಗ್ಗೆ ನಮ್ಮಲ್ಲಿ ಎಷ್ಟು ತಪ್ಪು ಗ್ರಹಿಕೆ ಇದೆ ಅಂದ್ರೆ, ಪೈಂಟಿಂಗ್ಸ್ ಒಂದು ಕಲಾಪ್ರಕಾರ ಅನ್ನೋದು ನಮ್ಮ ಎಷ್ಟೋ ಸಿನಿಮಾ ಮಂದಿಗೆ ಗೊತ್ತೇ ಇಲ್ಲ" ಅನ್ನುತ್ತಾರೆ.

"ಕಂಟಿನ್ಯೂಯಿಟಿಗೆ ಸಂಬಂಧಪಟ್ಟಂತೆ ಒಬ್ಬ ಚಿತ್ರ ಲೇಖಕ, ಒಬ್ಬ ನಿರ್ದೇಶಕ, ಒಬ್ಬ ಎಡಿಟರ್ ಈ ಮೂಲಭೂತ ತತ್ವದ ಆಧಾರದ ಮೇಲೆ ಒಟ್ಟಿಗೆ ಕೆಲಸ ಮಾಡುತ್ತಾರೆ. ಆದರೆ ಒಬ್ಬ ಕಲಾನಿರ್ದೇಶಕನಿಗೆ ಇವರಲ್ಲಿ ಸಹಭಾಗಿಯಾಗಲು ಸಾಧ್ಯವಾಗೋದಿಲ್ಲ. ಯಾಕೇಂದ್ರೆ ಅಲ್ಲಿ ಒಂದು ಸಹಜವಾದ ಸಮಸ್ಯೆ ಇದೆ. ಉದಾಹರಣೆಗೆ ಎಷ್ಟೋ ಜನ ನಿರ್ದೇಶಕರು ಶೂಟಿಂಗ್ ಸ್ಕ್ರಿಪ್ಟ್ ತಯಾರು ಮಾಡಿಕೊಂಡಿರುವುದಿಲ್ಲ. ಅವರಿಂದ ಕೂಡ ಒಂದು ದೃಶ್ಯಕ್ಕೆ ಎಷ್ಟು ಶಾಟ್ಸ್ ಬೇಕು, ಅವುಗಳನ್ನು ತೆಗೆದುಕೊಳ್ಳುವುದು ಹೇಗೆ ಎನ್ನುವುದನ್ನು ಪೂರ್ವಭಾವಿಯಾಗಿ ನಿರ್ಧಾರ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ.

"ಹಾಗಾಗಿ ಒಬ್ಬ ಕಲಾನಿರ್ದೇಶಕ - ಉದಾಹರಣೆಗೆ ಒಂದು ಲೈನನ್ನು ಸ್ಥಾಯಿಯಾಗಿ ಇಡೀ ಚಿತ್ರದಲ್ಲಿ ಬಳಸಿಕೊಳ್ಳಬೇಕೆನಿಸಿದರೆ ಅಥವಾ ಒಂದು ಫಾರಂ ಅನ್ನು ಹಾಗೆ ಬಳಸಿಕೊಳ್ಳಲು ಸಾಧ್ಯವಾಗದೆ ಹೋಗುತ್ತದೆ. ಯಾಕೆಂದರೆ ಆಯಾ ಚಿತ್ರಕ್ಕೆ ಅದೂ ಹೋದಲ್ಲೇ ಸಿದ್ಧವಾಗುವುದರಿಂದ ಕಲಾನಿರ್ದೇಶಕನಿಗೆ ಚಿತ್ರುದ್ದಕ್ಕೂ ಒಂದು ಪ್ಯಾಟರ್ನ್ ಬಳಸಲು ಸಾಧ್ಯವಾಗುವುದಿಲ್ಲ. ಅಗತ್ಯವಾದ ಪರಿಕರಗಳನ್ನು ಒದಗಿಸಿ, ಸಮಯವನ್ನು ಕೊಟ್ಟು, ಕಲಾವಿದನಿಗೆ ಸ್ವಾತಂತ್ರ್ಯವೂ ಇದ್ದರೆ ಇವೆಲ್ಲ ಖಂಡಿತ ಸಾಧ್ಯವಾಗುತ್ತೆ. ಪೀಟರ್ ಬ್ರೂಕ್ಸ್‌ನ ಮಹಾಭಾರತ ಸಿನಿಮಾದಲ್ಲಿ ಆದದ್ದು ಹಾಗೇ. ಅವನು ಮೂಲತಃ ಅದನ್ನು ನಾಟಕವಾಗಿ ಮಾಡಿರುವುದರಿಂದ ಅವನು ಆ ನಾಟಕಕ್ಕೆ ಸ್ಥಾಯಿಯಾದ ಡಿಸೈನ್ ಬಳಸಿಕೊಂಡಿದ್ದ. ಆದ್ದರಿಂದ ಸಿನಿಮಾದಲ್ಲಿ ಅದು ಸಾಧ್ಯವಾಯಿತು. ಹಿಂದೆ ಎಷ್ಟೋ ಅತ್ಯುತ್ತಮ ನಿರ್ದೇಶಕರು ಹಾಗೆ ಬಳಸಿಕೊಂಡಿರೋ ಉದಾಹರಣೆಗಳಿವೆ. ಆದರೆ ನಮ್ಮ ಸಂದರ್ಭದಲ್ಲಿ, ವ್ಯಾಪಾರಿ ಚಿತ್ರ ಇದ್ದರೂ ಕೂಡ ನಿಜವಾದ ವೃತ್ತಿಪರ ಮನೋಧರ್ಮ ಎಲ್ಲರಲ್ಲೂ ಬೆಳೆಯದೇ ಇರುವುದರಿಂದ ಈ ತರಹ ಯೋಜಿತ ರೀತಿಯ (planned) ಕೆಲಸ ಸಾಧ್ಯವಾಗುತ್ತಿಲ್ಲ ಎನ್ನುತ್ತಾರೆ ಸುರೇಶ್ ಆನಗಳ್ಳಿ. ಸುರೇಶ್ ಆನಗಳ್ಳಿ ಮೂಲತಃ ರಾಷ್ಟ್ರೀಯ ನಾಟಕಶಾಲೆಯ ಪದವೀಧರ. ಅನೇಕ ನಾಟಕಗಳನ್ನು ನಿರ್ದೇಶಿಸಿದ್ದಾರೆ. ಗಿರೀಶ್ ಕಾಸರವಳ್ಳಿ ಅವರ 'ಕ್ರೌರ್ಯ' ಚಿತ್ರಕ್ಕೆ ಕಲಾನಿರ್ದೇಶನ ಮಾಡಿದ್ದಾರೆ.

ಕಲಾನಿರ್ದೇಶನ ಮತ್ತು ಛಾಯಾಗ್ರಹಣ

ಕಲಾನಿರ್ದೇಶಕನ ಕಲ್ಪನೆಗಳೇನೇ ಇದ್ದರೂ ಅದಕ್ಕೆ ರೂಪ ಅಥವಾ ಜೀವಂತಿಕೆ ಲಭ್ಯವಾಗುವುದು ಛಾಯಾಗ್ರಹಣದಿಂದಲೇ. ಕಲಾನಿರ್ದೇಶಕನ ನಿಲುವು-ದೃಷ್ಟಿಕೋನಗಳು ಕ್ಯಾಮರಾ ಕೋನಗಳಿಂದ ಒಡ ಮೂಡದೇ ಹೋದರೆ ಅಂತಿಮ ಪರಿಣಾಮ ತದ್ವಿರುದ್ಧವಾದದ್ದಾಗಿರುತ್ತದೆ. ಈಗಾಗಲೇ ಚರ್ಚಿಸಿದಂತೆ ಮಿನಿಯೇಚರ್ ಸೆಟ್‌ಗಳ ತಾಂತ್ರಿಕತೆ ಕಾಲದಿಂದಲೂ ಛಾಯಾಗ್ರಹಣ ಮತ್ತು ಕಲಾ ನಿರ್ದೇಶನ ಒಟ್ಟು ಕಲೆಗಳಾಗಿಯೇ ವ್ಯಾಖ್ಯಾನಿಸಲ್ಪಡುತ್ತದೆ. ಹಿರಿಯ ಛಾಯಾಗ್ರಹಕ ಎಸ್.ರಾಮಚಂದ್ರ ಅವರ ಪ್ರಕಾರ "ಒಂದು ಒಳ್ಳೆಯ ಕಲಾನಿರ್ದೇಶನವನ್ನು ಛಾಯಾಗ್ರಹಕ ಲೈಟಿಂಗ್‌ನಲ್ಲಿ ಹಾಳು ಮಾಡಬಹುದು. ಅದೇ ತರಹ ಒಂದು ಒಳ್ಳೆಯ ಲೈಟಿಂಗ್ ಸ್ಕೀಂನ್ನು ಕೆಟ್ಟ ಆರ್ಟ್ ಡೈರೆಕ್ಟರ್ ಹಾಳು ಮಾಡಬಹುದು. ಕಲಾನಿರ್ದೇಶಕ ಹಾಕಿರುವ ಸೆಟ್‌ನ ಸೈಜತೆ ಎಷ್ಟು ಎಂಬುದನ್ನು ಮೊದಲು ಗುರುತಿಸಿಕೊಳ್ಳಬೇಕು. ನಂತರ ಅದಕ್ಕೆ ಅನುಗುಣವಾಗಿ ತನ್ನ ಕ್ಯಾಮರಾಕೋನಗಳನ್ನು ಜೋಡಿಸಿಕೊಳ್ಳಬೇಕು. ಇಬ್ಬರ ನಡುವೆ ಸಾಮರಸ್ಯ ಇಲ್ಲದೆ ಹೋದರೆ ಒಟ್ಟಾರೆ ಕೆಲಸ ಮತ್ತೊಬ್ಬರಿಂದ ಹಾಳಾಗಬಹುದು."

'ಪ್ರೇಮಯುದ್ಧ' ಚಿತ್ರದಲ್ಲಿ ಗುಡ್ಡದಿಂದ ಮೆಟಡಾರ್ ಕೆಳಕ್ಕೆ ಬೀಳುವ ದೃಶ್ಯದ ಬಗ್ಗೆ ರಾಮಚಂದ್ರ ನೆನಪಿಸಿಕೊಳ್ಳುತ್ತಾರೆ. ಈ ಚಿತ್ರ ಕ್ಕೆ ಮಿನಿಯೇಚರ್ ಸಾಕು ಎಂದು ಕಲಾನಿರ್ದೇಶಕರೊಂದಿಗೆ ಚರ್ಚಿಸಿದ ಅವರು ೩-೪ ಆಟಿಕೆ ಮೆಟಡಾರ್‌ಗಳನ್ನು ತಂದರು.

ಅದಕ್ಕೆ ಒರಿಜಿನಲ್ ಆಗಿ ಶೂಟ್ ಮಾಡಿದ ರೀತಿಯ ಬಣ್ಣ ಬಳಿದರು. ಆಮೇಲೆ ಪೀಣ್ಯದ ಬಳಿಯ ೧೫-೨೦ ಅಡಿ ಆಳದ ಮಣ್ಣಿನ ಕೊರಕಲನ್ನು ಚಿಕ್ಕಮಗಳೂರಿನ ಗುಡ್ಡಕ್ಕೆ ಮ್ಯಾಚ್ ಮಾಡಲು ಸಿದ್ಧತೆ ನಡೆಸಿದರು. ಎರಡು ಮೂಟೆ ತೌಡು, ಹಸಿರು ಬಣ್ಣ, ರಟ್ಟಿನಿಂದ ಮಾಡಿದ ಸಣ್ಣ ಸಣ್ಣ ಮನೆಗಳು, ಮೇಲ್ಭಾಗದಲ್ಲಿ ಹಂಚಿನ ಬಣ್ಣ, ಬಿಳಿದಾರ, ನಾಲ್ಕಾರು ಪೊರಕೆ ಕಡ್ಡಿ, ಬಾಣಲಿ ಇವಿಷ್ಟೇ ಮಾಡಲಾದ ಸಿದ್ಧತೆಗಳು.

ಅನಂತರ ಕೊರಕಲು ಮಣ್ಣಿನ ಮೇಲೆ ಹಸಿರು ಬಣ್ಣ ಬೆರೆಸಿದ ತೌಡನ್ನು ಎರಚಿದಾಗ, ಅದು ಚಿಕ್ಕಮಗಳೂರಿನ ಹಸಿರು ಗುಡ್ಡವಾಯಿತು. ಮೆಟಡಾರಿನ ಮಿನಿಯೇಚರ್‌ನಲ್ಲಿ ಒಂದೆರಡು ಚಿತ್ರ ಉದುರಿಸಿದರು. ನಂತರ ಕ್ಯಾಮರಾ ಇರಿಸಿ ಆಟದ ಮೆಟಡಾರ್ ತಳ್ಳಲಾಯಿತು. ಆಟಿಕೆ ಮೆಟಡಾರ್ ಆದ್ದರಿಂದ ನೈಜತೆ ಬರುವವರೆಗೂ ಈ ಪ್ರಯೋಗವನ್ನು ಬೆಳೆಸಬಹುದಾಗಿತ್ತು. ನಿಜವಾದ ಮೆಟಡಾರ್ ಇರಿಸಿದ್ದರೆ ಒಂದೇ ಬಾರಿ ಐದಾರು ಕ್ಯಾಮರಾಗಳನ್ನಿಟ್ಟು ಪ್ರಯತ್ನಿಸಬೇಕಿತ್ತು. ಪ್ರವಾಹದ ದೃಶ್ಯಕ್ಕೂ ಅಷ್ಟೇ. ರಟ್ಟಿನ ಸಣ್ಣ ಸಣ್ಣ ಮನೆಗಳನ್ನಿಟ್ಟು ಸಣ್ಣ ಸಣ್ಣ ಗುಡ್ಡದ ನಮೂನೆಗಳನ್ನಿಟ್ಟು ಅದರ ಮೇಲೆ ನೀರು ಬಿಡಲಾಯಿತು. ನಿಜವಾದ ಹಳ್ಳಿಯನ್ನು ಪ್ರವಾಹದಲ್ಲಿ ಮುಳುಗಿಸಿ ದೃಶ್ಯೀಕರಿಸಲು ೫೦-೬೦ ಅಡಿ ಎತ್ತರದ ದೊಡ್ಡ ಅಟ್ಟಣಿಕೆಯಿಂದ ಶೂಟ್ ಮಾಡಬೇಕಿತ್ತು. ಇಲ್ಲಿ ಆ ತೊಂದರೆಗಳಿಲ್ಲದೆ ನೈಜತೆಯ ಅನುಭವ ಬರುವಂತೆ ದೃಶ್ಯೀಕರಿಸಲಾಯಿತು. ಇಂತಹ ಹಲವು ಉದಾಹರಣೆಗಳು ಎಸ್. ರಾಮಚಂದ್ರ ಅವರ ಬಳಿಯಲ್ಲಿವೆ. ಈ ಸಾಧ್ಯತೆಯನ್ನು ಕಲಾನಿರ್ದೇಶಕ ಬಿ. ಕಿಷನ್ ಅವರೂ ಒಪ್ಪುತ್ತಾರೆ. ಪ್ರೇಕ್ಷಕರಿಗೆ ನಿರ್ಮಾಣದ ಹಂತದಲ್ಲಿ ಏನಾಗಿದೆ ಎಂಬುದು ಮುಖ್ಯವಲ್ಲ, ತೆರೆಯ ಮೇಲೆ ಏನು ಲಭ್ಯವಾಗಿದೆ ಎಂಬುದಷ್ಟೇ ಮುಖ್ಯ. ನಿರ್ದೇಶಕರ ಮನಸ್ಸಿನಲ್ಲಿ ಅಸ್ಪಷ್ಟವಾಗಿರೋದು ಛಾಯಾಗ್ರಾಹಕ ಮತ್ತು ಕಲಾನಿರ್ದೇಶಕ ಕೈಗೂಡಿಸಿದರೆ ಮಾತ್ರ ತೆರೆಯ ಮೇಲೆ ಕಾಣಿಸುವುದು ಸಾಧ್ಯ ಎಂಬುದು ಅವರ ಚಿಂತನೆ.

ಕಲಾನಿರ್ದೇಶನದ ಅತ್ಯಂತ ಹಳೆಯ ತಂತ್ರವಾದ ಮಿನಿಯೇಚರ್ ಸೆಟ್‌ಗಳ ಛಾಯಾಗ್ರಹಣಕ್ಕೆ ಬೇರೆಯದೇ ಆದ ತಂತ್ರ ಇದೆ. ಇದನ್ನು ಟ್ರಿಕ್‌ಶಾಟ್ ಎನ್ನಲಾಗುತ್ತದೆ. ಆದರೆ ಮಿನಿಯೇಚರ್ ಸೆಟ್‌ಗಳೆಲ್ಲವನ್ನೂ ಟ್ರಿಕ್‌ಶಾಟ್‌ಗಳ ಮೂಲಕವೇ ತೋರಿಸುತ್ತಾರೆ ಎಂದೇನಿಲ್ಲ. ಮಿನಿಯೇಚರ್ ವಿಧಾನ ಜನಪ್ರಿಯವಾಗುವ ಮೊದಲು ಮ್ಯಾಚ್‌ಶಾಟ್ಸ್ ತೆಗೆಯುತ್ತಿದ್ದರು. ಹಿನ್ನೆಲೆ ಅಥವಾ ಮುಂದಿನ ಭಾಗವನ್ನು ಪೈಂಟ್ ಮಾಡಿಸಿ, ಅದರೊಡನೆ ಮ್ಯಾಚ್ ಮಾಡಲಾಗುತ್ತಿತ್ತು. ಇದು ಸ್ವಲ್ಪ ಸಂಕೀರ್ಣ ವಿಧಾನ. ಇದೇ ಸುಧಾರಣೆಯಾಗುತ್ತಾ ಮಿನಿಯೇಚರ್ ವಿಧಾನ ಬಂತು.

ಈ ವಿಧಾನವೂ ಶ್ರಮದಾಯಕವೆ. ಆದರೆ ಅನೇಕ ಲಾಭಗಳಿವೆ. ಮುಖ್ಯವಾಗಿ ಕಲವು ಸ್ಥಳಗಳಲ್ಲಿ ಚಿತ್ರೀಕರಿಸಲು ಅನುಮತಿ ಇರುವುದಿಲ್ಲ. ಆಗ ಅದರ ಪುನರ್‌ಸೃಷ್ಟಿ ಅನಿವಾರ್ಯವಾಗುತ್ತದೆ. ಯಾವುದೇ ಒಂದು ಬೃಹತ್ ಸೆಟ್‌ನ ಅಗತ್ಯವಿದ್ದರೆ ಇಡೀ ಸೆಟ್‌ನ ಶೇ.೨೦ರಷ್ಟು ಭಾಗವನ್ನು ಮಾತ್ರ ನಿರ್ಮಿಸಿ, ಉಳಿದ ಶೇ.೮೦ರಷ್ಟು ಭಾಗವನ್ನು ಮಿನಿಯೇಚರ್‌ನೊಡನೆ ಮ್ಯಾಚ್ ಮಾಡಬಹುದು. ಇದರಿಂದ ನಿರ್ಮಾಪಕನ ಬಜೆಟ್‌ನಲ್ಲಿ ಗರಿಷ್ಠ ಉಳಿತಾಯ ಸಾಧ್ಯ. ಚಿತ್ರೀಕರಣದ ವೇಳೆಯಲ್ಲಿ ಲೈಟಿಂಗ್‌ನ ವೆಚ್ಚ, ಶ್ರಮ, ಸಮಯಗಳ ಉಳಿತಾಯವಾಗುತ್ತದೆ. ಸುಲಭವಾಗಿ 'ಥ್ರಿಲ್ ಶಾಟ್'ಗಳನ್ನು ತೆಗೆಯಲು ಈ ವಿಧಾನದಿಂದ ಸಾಧ್ಯ. ಐದು ಅಡಿ ಎತ್ತರದಲ್ಲಿ ಫೈಟ್ ಮಾಡುತ್ತಿದ್ದರೆ, ತೆರೆಯ ಮೇಲೆ ನೋಡುವವರಿಗೆ ೫೦ ಅಡಿ ಎತ್ತರದಲ್ಲಿ ಫೈಟ್ ಮಾಡುತ್ತಿರುವಂತೆ ಭಾಸವಾಗುತ್ತದೆ.

ಮಿನಿಯೇಚರ್ ವಿಧಾನವಾಗಲಿ, ಟ್ರಿಕ್ ಶಾಟ್ ಆಗಲಿ, ಪೇಂಟಿಂಗ್, ಗ್ಲಾಸ್ ಪೇಂಟಿಂಗ್ ವಿಧಾನವಾಗಲಿ - ಈ ಎಲ್ಲಾ ತಂತ್ರಗಳಲ್ಲೂ ಕಲಾನಿರ್ದೇಶಕ ಯಶಸ್ವಿಯಾಗಲು ಛಾಯಾಗ್ರಾಹಕನ ಸಹಕಾರ ಬೇಕೇ ಬೇಕು.

ಈ ನಿಟ್ಟಿನಲ್ಲಿ ಛಾಯಾಗ್ರಾಹಕ ಹಾಗೂ ಕಲಾನಿರ್ದೇಶಕರ ನಡುವಣ ಸಂವಹನ ಕ್ರಿಯೆ ಪರಿಪೂರ್ಣವಾಗಿರಬೇಕಾಗುತ್ತದೆ. ಕ್ಯಾಮೆರಾ ನೋಡುವ ಕಣ್ಣಾದರೆ ಕಲಾನಿರ್ದೇಶಕನ ಕೆಲಸ ಕ್ಯಾಮರಾ ನೋಡಬೇಕಾದ ನೋಟದ ರಚನೆ. ಮನುಷ್ಯನ ಕಣ್ಣಿಗಿಂತ ಸಾಕಷ್ಟು ವಿಭಿನ್ನವಾಗಿ ವರ್ತಿಸುವ ಕ್ಯಾಮೆರಾ. ಪ್ರತಿಯೊಂದು ಮಸೂರದ ವಿಶೇಷ ಗುಣ-ಲಕ್ಷಣಗಳನ್ನು ಅರಿತು ಕಲಾನಿರ್ದೇಶಕ ತನ್ನ ಕಾರ್ಯವನ್ನು ನಿರ್ವಹಿಸಬೇಕಾಗುತ್ತದೆ. ಬಣ್ಣ, ಆಕಾರ ಹಾಗೂ ದೃಶ್ಯದೊಳಗಿನ ವಿವಿಧ ವಸ್ತುಗಳ ಜೋಡಣೆ ಕಲಾನಿರ್ದೇಶಕನ ಕೈಯಲ್ಲಿನ ಉಪಕರಣಗಳಾದರೆ ಬಣ್ಣ, ನೆರಳು ಹಾಗೂ ಬೆಳಕು ಮತ್ತು ಮಸೂರದ ವಿಶೇಷ ರಚನೆ, ಆ ಛಾಯಾಗ್ರಾಹಕನ ಕೈಯಲ್ಲಿ ದೃಶ್ಯವನ್ನು ತನಗೆ ಬೇಕಾದ ರೀತಿಯಲ್ಲಿ ಮಾರ್ಪಡಿಸಿಕೊಳ್ಳುವ ಸಾಧನಗಳಾಗಿರುತ್ತವೆ.

''ಮಿನಿಯೇಚರ್ ಬಗ್ಗೆ ಮಾತಾಡೋದಾದ್ರೆ 'ದಿ ಬರ್ನಿಂಗ್ ಟ್ರೈನ್' ಚಿತ್ರ - ಬಿ.ಆರ್.ಛೋಪ್ರಾ ನಿರ್ಮಿಸಿದರು. ಅವರ ಮಗ ರವಿ ಛೋಪ್ರಾ ನಿರ್ದೇಶಿಸಿದರು. ಅವರಲ್ಲಿ ಎಷ್ಟು ಚೆನ್ನಾಗಿ ರೈಲ್ವೆ ಸ್ಟೇಷನ್, ಟ್ರ್ಯಾಕ್‌ಗಳನ್ನು ಹಾಕಿದ್ದರೆಂದರೆ ಅದು ಮಿನಿಯೇಚರ್ ಅಂತ ಗೊತ್ತಾಗೋದೇ ಇಲ್ಲ. ಅಷ್ಟು ಸಹಜವಾಗಿ ಕಲಾನಿರ್ದೇಶನ ಮಾಡಿದ್ದಾರೆ'' ಎಂದು ಉದಾಹರಣೆ ನೀಡುತ್ತಾರೆ ಕ್ರಿಷನ್.

''ನನ್ನ ದೃಷ್ಟಿಯಲ್ಲಿ ಪ್ರತಿಯೊಬ್ಬ ನಿರ್ದೇಶಕರೂ ಕಲಾನಿರ್ದೇಶಕರೆ. ಪೇಪರ್ ಮೇಲೆ ಅವರು ಸ್ಕೆಚ್ ಹಾಕೋಲ್ಲ. ಆದರೆ ಏನು ಬೇಕು ಎನ್ನುವುದು ಮಾತ್ರ ಅವರ ಕಲ್ಪನೆಯಲ್ಲಿರುತ್ತೆ. ಅವರ ತಲೇಲಿರೋದನ್ನು ಆರ್ಟ್ ಡೈರೆಕ್ಟರ್‌ಗೆ ಹೇಳಿ ಈ ರೀತಿ ಸೆಟ್ ಬೇಕೂಂತ ಅಂದ್ರೆ ಆ ರೀತಿ ಸೆಟ್ ಹಾಕಿಕೊಡುತ್ತಾರ. ಅದನ್ನು ಅಪ್ರೂವ್ ಮಾಡೋರು ನಿರ್ದೇಶಕರೇ. ಅವರು ಆರ್ಟಿಸ್ಟ್ ಅಲ್ಲದಿರಬಹುದು. ಆದರೆ ಏನು ಬೇಕು ಅನ್ನೋದು ಅವರಿಗೆ ಚೆನ್ನಾಗಿ ಗೊತ್ತಿರುತ್ತದೆ'' ಎನ್ನುತ್ತಾರೆ ಕ್ರಿಷನ್.

ಗ್ಲಾಸ್ ಮಾಸ್ಕಿಂಗ್, ಸೈಕ್ಲೊರಮ ಪೆಯಿಂಟಿಗ್, ಮ್ಯಾಟ್ ವರ್ಕ್ - ಇವು ಅತ್ಯಂತ ಪ್ರಭಾವಶಾಲಿ ತಾಂತ್ರಿಕ ಪರಿಕರಗಳಾಗಿ ವಿಜೃಂಭಿಸಿವೆ.

ಅನಿಮೇಷನ್ (Animation) ತಂತ್ರವನ್ನು ಉಪಯೋಗಿಸಿ ವಾಸ್ತವಿಕ ದೃಶ್ಯಗಳ ಜೊತೆ ಮಿಳಿತಗೊಳಿಸಿದಾಗ ಏನೆಲ್ಲಾ ಬೆರಗುಗೊಳಿಸುವ ದೃಶ್ಯಗಳು ಸಾಧ್ಯವಾಗಬಲ್ಲವು ಎಂಬುದನ್ನು ವೈಜ್ಞಾನಿಕ ಕಥಾನಕಗಳು ಹಾಗೂ ಹಾರರ್ ಚಿತ್ರಗಳಲ್ಲಿ ನೋಡಬಹುದು.

ಹಾಗೆ ನೋಡಿದರೆ ತಂತ್ರಜ್ಞಾನದ ಮುನ್ನಡೆಯೊಂದಿಗೆ ಕನ್ನಡ ಚಿತ್ರರಂಗದಲ್ಲಿ ತಾಂತ್ರಿಕ ಕೌಶಲ ಕಡಿಮೆಯಾಗುತ್ತ ಬಂದಿದೆ. ೧೯೭೦ರ ದಶಕದಲ್ಲಿ ತಯಾರಾದ ಸ್ಪಿಲ್‌ಬರ್ಗ್ ನಿರ್ದೇಶನದ 'ಜಾಸ್' (Jaws) ಚಿತ್ರದಲ್ಲಿ ಮೆಕಾನಿಕಲ್ ಮಾಡೆಲ್‌ಗಳನ್ನು ತಯಾರಿಸಿ ಚಮತ್ಕಾರಿಕ ಕಲಾ ನಿರ್ದೇಶನ ಮತ್ತು ಸಂದರ್ಭೋಚಿತ ಛಾಯಾಗ್ರಹಣದ ನೆರವಿನಿಂದ ಮೈ ನವಿರೇಳಿಸುವ ದೃಶ್ಯ ಸಂಯೋಜನೆಯನ್ನು ಸಾಧಿಸಲಾಯಿತು. ತೊಂಬತ್ತರ ದಶಕದಲ್ಲಿ ಇದೇ ನಿರ್ದೇಶಕರು ತಯಾರಿಸಿದ 'ಜುರಾಸಿಕ್ ಪಾರ್ಕ್' ಚಿತ್ರದಲ್ಲಿ ಅನಿಮೆಟ್ರಾನಿಕ್ಸ್ (Animatronics) ತಂತ್ರಜ್ಞಾನ

(ಚಿತ್ರ ೧೦) 'ರಣಧೀರ' ಚಿತ್ರಕ್ಕಾಗಿ ನಿರ್ಮಿಸಲಾಗಿದ್ದ ಹಡಗಿನ ಕಿರು ಮಾದರಿ ಕಲೆ : ಬಿ.ನಾಗರಾಜರಾವ್

(ಚಿತ್ರ ೧೧) ಹೊರಾಂಗಣದಲ್ಲಿ ಸೆಟ್ ನಿರ್ಮಾಣಕ್ಕೆ ಮುನ್ನ ಮಾದರಿಯನ್ನಿಟ್ಟುಕೊಂಡು ನಿರ್ದೇಶಕ ಓಂ ಪ್ರಕಾಶ್‌ರಾವ್ ಕಲಾನಿರ್ದೇಶಕ ಇಸ್ಮಾಯಿಲ್ ಪರಸ್ಪರ ಸಮಾಲೋಚನೆ.

ಜರಗುಗೊಳಿಸುವಂಥ ದೃಶ್ಯಗಳ ಚಿತ್ರೀಕರಣವನ್ನು ಸಾಧ್ಯವಾಗಿಸಿತು. ಜಾಗತಿಕ ಚಿತ್ರರಂಗದ ಮೇಲೆ ಇಂಥ ಹೊಸ ಹೊಸ ತಂತ್ರಜ್ಞಾನಗಳು ಗಾಢ ಪರಿಣಾಮ ಬೀರಿದವಾದರೂ ಕನ್ನಡ ಚಿತ್ರರಂಗದವರು ಇಂಥ ತಂತ್ರಜ್ಞಾನಗಳನ್ನು ತಮ್ಮದಾಗಿಸಿಕೊಳ್ಳುವ ಯತ್ನವನ್ನೂ ಮಾಡಲಿಲ್ಲ. ಬಹುತೇಕ ಚಿತ್ರಗಳಲ್ಲಿ ಅದೇ ಹಿಂದಿನ ಮಿನಿಯೇಚರ್, ಟ್ರಿಕ್ ಶಾಟ್, ಗ್ಲಾಸ್ ಮಾಸ್ಕಿಂಗ್ ಇತ್ಯಾದಿ ಹಳೆಯ ತಂತ್ರಗಳೇ ಪುನರಾವರ್ತನೆಯಾಗುತ್ತಿರುತ್ತವೆ.

೮೦ರ ದಶಕದಿಂದೀಚೆಗ ವಿಶ್ವ ಚಿತ್ರರಂಗದಲ್ಲಿಯೇ ತಾಂತ್ರಿಕವಾಗಿ ಸಾಕಷ್ಟು ಪ್ರಗತಿಯಾಗಿದೆ. ಮೆಕ್ಯಾನಿಕಲ್ ಮಾಡಲುಗಳು ಜೀವ ತಳೆದ ಪಾತ್ರಗಳಾಗುವ ಕೌಶಲ್ಯ ಸಾಧ್ಯವಾಗಿದೆ. ಅದರ ನೆರಳು ಕನ್ನಡ ಚಿತ್ರರಂಗದ ಮೇಲೂ ಬೀಳುತ್ತದ. ನೈಜ ಚಿತ್ರೀಕರಣ ಬಿಟ್ಟರೆ ಚಿತ್ರರಂಗ ಬಳಸುತ್ತಿದ್ದ ಪರ್ಯಾಯ ತಂತ್ರ ಮಿನಿಯೇಚರ್‌ಗಳದ್ದು. ಹನುಮಂತ, ಘಟೋತ್ಗಜ ಮುಂತಾದವರು ತೆರೆಯ ಮೇಲೆ ಬೃಹದಾಗುವುದು ಹೀಗೆಯೇ. ಶೇ.೨೦ ರಷ್ಟು ನೈಜ ಚಿತ್ರೀಕರಣ ನಡೆಸಿದರ ಉಳಿದ ಶೇ.೮೦ರಷ್ಟು ಕೆಲಸವನ್ನು ಈ ಮಿನಿಯೇಚರ್‌ಗಳೇ ಮಾಡುತ್ತವೆ. ದೃಶ್ಯದ ಒಂದು ಭಾಗವನ್ನು ಚಿತ್ರೀಕರಿಸಿ ಉಳಿದ ಭಾಗಗಳನ್ನು ಕಲಾತ್ಮಕ ಕೈಚಳಕದಿಂದ ಪ್ರಿಂಟ್ ಮಾಡಿ ಅತಿ ಕಡಿಮೆ ವೆಚ್ಚದಲ್ಲಿ ಬೃಹತ್ ಆದ ದೃಶ್ಯ ವೈಭವ ನಿರ್ಮಿಸಿದಾರ ನಮ್ಮ ಹಿಂದಿನ ಕಲಾನಿರ್ದೇಶಕರು. ಈಗ ಅನಿಮೇಷನ್ ಮತ್ತು ಗ್ರಾಫಿಕ್ಸ್ ಬಹಳ ದೊಡ್ಡ ತಂತ್ರಗಳಾಗಿ ಬೆಳೆದಿವೆ. ನಿಜವಾದ ಚಿತ್ರ ನಿರ್ಮಾಣವಾಗುವುದೇ ಎಡಿಟಿಂಗ್ ರೂಂನಲ್ಲಿ ಎಂಬ ಮಾತು ಕೇಳಿ ಬರುತ್ತಿದೆ. ದೃಶ್ಯೀಕರಣದಲ್ಲಿ ಸಂಭವಿಸದೇ ಇದ್ದ ಅನೇಕ ಘಟನೆಗಳು ಗ್ರಾಫಿಕ್ಸ್‌ನಿಂದ ಮೈತುಂಬಿಕೊಳ್ಳುವುದು ಸಾಧ್ಯವಾಗಿದೆ. ಇಂದು ಕನ್ನಡದ ಅನೇಕ ಚಿತ್ರಗಳಲ್ಲಿ ಈ ತಂತ್ರಜ್ಞಾನವನ್ನು ಗುರುತಿಸಬಹುದು. ಬೃಹತ್ ಸೆಟ್‌ಗಳೂ ಈಗ ಸಾಮಾನ್ಯವಾಗುತ್ತಿವೆ. ಕೋಟಿಗಟ್ಟಲೆ ಹಣವನ್ನು ಈ ದೃಶ್ಯಗಳಿಗೇ ವ್ಯಯಿಸುವವರಿದ್ದಾರ. ಈಗ ದೃಶ್ಯ ಸಹಜತೆ ಬದಲು ದೃಶ್ಯ ಶ್ರೀಮಂತಿಕೆ ಎಂಬುದಕ್ಕೆ ಮಹತ್ವ ಸಿಕ್ಕುತ್ತಿದೆ. ಹೀಗಾಗಿ ಕಲಾನಿರ್ದೇಶನದ ಜವಾಬ್ದಾರಿ ಕೂಡ ಜಾಸ್ತಿಯಾಗುತ್ತಿದೆ. ಕನ್ನಡ ಚಿತ್ರರಂಗದಲ್ಲಿ ಕಲಾನಿರ್ದೇಶನದ್ದು ಇಷ್ಟಾಗಿ ಗಟ್ಟಿ ಇತಿಹಾಸ ಅಲ್ಲ. ಏಕೆಂದರೆ ನಿರ್ಮಾಣದ ಯಾವ ಹಂತದಲ್ಲಿಯೂ ಕಲಾ ನಿರ್ದೇಶನವನ್ನು ಪ್ರೇರಕಶಕ್ತಿಯಾಗಿ ಚಿತ್ರರಂಗ ಬಳಸಲಿಲ್ಲ. ಕಾಲಾನುಕ್ರಮ ಪಾತ್ರಗಳ ಬೆಳವಣಿಗೆಯನ್ನು ನೈಜವಾಗಿಸಲು ಸಾಕಷ್ಟು ಪ್ರಯತ್ನ ಪಟ್ಟಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಕಲಾನಿರ್ದೇಶನ ಎಂಬುದು ಕಲಾ ಪ್ರದರ್ಶನಕ್ಕಿಂತ ಭಿನ್ನವಾದ ಕಲ್ಪನೆ. ಇಂದಿಗೂ ಕೊಳೆಗೇರಿಗಳು, ಆದಿವಾಸಿಗಳ ಹಾಡಿಯ ನಿರ್ಮಾಣವಾಗುವಾಗ ಸಹಜತೆಗಿಂತ ಅಲ್ಲಿ ಕಲಾತ್ಮಕ ವಿವರಗಳನ್ನು ದಾಖಲಿಸಲು ಪೈಪೋಟಿ ನಡೆಯುತ್ತದೆ. ಇದು ವಿರುದ್ಧ ಪರಿಣಾಮ ನೀಡಬಲ್ಲ ಸಂಗತಿ. ಕಲಾ ನಿರ್ದೇಶನ ಕತೆಯೊಂದಿಗೆ ಸಾಗಬೇಕೇ ಹೊರತು ಮೀರಿ ಅಲ್ಲ. ಹೀಗಾಗಿ ಬೇರೆ ಭಾಷೆಯ ಚಿತ್ರಗಳಲ್ಲಿ ಸಾಧ್ಯವಾದಂತೆ ಕನ್ನಡದಲ್ಲಿ ಕಲಾನಿರ್ದೇಶನಕ್ಕೊಂದು ಚೌಕಟ್ಟು ನಿರ್ಮಾಣವಾಗಿಲ್ಲ. ಇದು ಚಿತ್ರಗಳ ಒಟ್ಟು ಆಶಯಕ್ಕೆ ಧಕ್ಕೆ ತಂದಿರುವ ಬೆಳವಣಿಗೆ.

ನಿರ್ದೇಶಕ-ಕಲಾನಿರ್ದೇಶಕ ಸಂಬಂಧ

ನಿರ್ದೇಶಕನಾದವನು ಕಲಾನಿರ್ದೇಶಕರನ್ನು ಯಾವ ರೀತಿ ಬಳಸಿಕೊಳ್ಳಬೇಕು ಎಂಬ ಬಗೆಗೆ ವಿವರಿಸುತ್ತಾ ಪುಟ್ಟಣ್ಣ ಕಣಗಾಲರ ಶಿಷ್ಯ ನಿರ್ದೇಶಕ ಪಿ.ಎಚ್.ವಿಶ್ವನಾಥ್ ಹೀಗೆನ್ನುತ್ತಾರೆ :

''ಪುಟ್ಟಣ್ಣನವರು ತಮ್ಮ ಎಲ್ಲ ಚಿತ್ರಗಳಲ್ಲೂ ಕಲಾ ನಿರ್ದೇಶಕರನ್ನು ಅತ್ಯುತ್ತಮವಾಗಿ ಬಳಸಿಕೊಳ್ಳುತ್ತಿದರು. ಅವರು ಹೊರಾಂಗಣದಲ್ಲೇ ಕೆಲವು ಚಿತ್ರಗಳನ್ನೂ, ಸ್ಟುಡಿಯೋದಲ್ಲಿ ಸೆಟ್ ಹಾಕಿ ಕೆಲವು ಚಿತ್ರಗಳನ್ನೂ ಮಾಡಿದವರು. 'ರಂಗನಾಯಕಿ' ಚಿತ್ರ ಮಾಡಿದ ಸಂದರ್ಭದಲ್ಲಿ ಭಾರಿ ಸೆಟ್‌ಗಳು ಬೇಕೆನ್ನಿಸಿದಾಗ ಎ.ವಿ.ಎಂ.ನಲ್ಲಿ ಕೆಲಸ ಮಾಡುತ್ತಿದ್ದ ಎ.ಕೆ.ಶೇಖರ್ ಅವರನ್ನು ಕರೆಸಿ ಅವರ ಕೈಯಲ್ಲೇ ಡಿಸೈನ್ ಮಾಡಿಸಿದರು. ಶೇಖರ್ ಕೆಲಸ ಮಾಡಿದ ಹಿಂದಿನ ಚಿತ್ರಗಳೆಲ್ಲ ೩೫ ಎಂ.ಎಂ.ನವು. ಸಿನಿಮಾಸ್ಕೋಪ್‌ನಲ್ಲಿ ಕೆಲಸ ಮಾಡಿದ್ದು ಇದೇ ಮೊದಲು. ೩೫ ಎಂ.ಎಂ. ಚಿತ್ರಕ್ಕೆ ಹಾಕಬೇಕಾದ ಸೆಟ್‌ಗಳಿಗೂ, ಸಿನಿಮಾಸ್ಕೋಪ್‌ಗೆ ಹಾಕಬೇಕಾದ ಸೆಟ್‌ಗಳಿಗೂ ಇರುವ ಪರಿಮಾಣ (proportion) ಏನಿರುತ್ತೆ ಅದೆಲ್ಲವನ್ನೂ ಆಗಿನ ಕಾಲದಲ್ಲೇ ಕುಳಿತು ಚರ್ಚಿಸಿ, ಲೆಕ್ಕ ಹಾಕಿ ಅತ್ಯುತ್ತಮವಾಗಿ ಕೆಲಸ ಮಾಡಿದರು. ಪುಟ್ಟಣ್ಣ ತಮ್ಮ ಎಲ್ಲ ಚಿತ್ರಗಳಲ್ಲೂ ಕಲಾನಿರ್ದೇಶನಕ್ಕೆ ಪ್ರಾಶಸ್ತ್ಯ ನೀಡುತ್ತಿದ್ದರು. ಮಿನಿಯೇಚರ್ ಸ್ಪೆಷಲಿಸ್ಟ್ ಆಗಿದ್ದ ನಾಗರಾಜರಾಯರನ್ನು 'ಫಲಿತಾಂಶ' ಚಿತ್ರ ಮಾಡುವಾಗ ಕರೆಸಿ, ಗೋಲ್‌ಗುಂಬಜ್‌ನ ಮಿನಿಯೇಚರ್ ಮಾಡಿಸಿದರು. ಮೊದಲು ಗೋಲ್ ಗುಂಬಜ್‌ಗಿಂತ ದೊಡ್ಡದಾಗಿ ಸೆಟ್ ಹಾಕಿಸಿ, ಒಂದು ಮಿನಿಯೇಚರ್ ಹಾಕಿ, ಒಟ್ಟು ಮೂರು ಸೆಟ್ ಹಾಕಿ ಮ್ಯಾಚ್ ಮಾಡಿ ಶೂಟ್ ಮಾಡಿದರು. ಶಾಟ್ ಅದ್ಭುತವಾಗಿ ಮೂಡಿಬಂತು. ಪ್ರೇಕ್ಷಕರಿಗೆ ಕೂಡ ಅದು ಸೆಟ್ ಎಂದು ಗೊತ್ತಾಗಲಿಲ್ಲ.''

ಮಿನಿಯೇಚರ್ ಮತ್ತು ಸ್ಪೆಷಲ್ ಎಫೆಕ್ಟ್‌ಗಳ ಬಗ್ಗೆ ವಿವರಿಸುತ್ತ ''ಕಲಾ ನಿರ್ದೇಶಕರಾದವರು ಕ್ಯಾಮರಾ ಲೆನ್ಸ್, ಆ್ಯಂಗಲ್‌ಗಳು, ಕಲಾತ್ಮಕ ಸಂಯೋಜನೆ ಹಾಗೂ ವೈಡ್ ಆಂಗಲ್ ಲೆನ್ಸ್ ಮೂಲಕ ಮಿನಿಯೇಚರ್ ಸ್ಕೇಲ್ ಮಾಡಲ್ ಅಲೈನ್‌ಮೆಂಟ್ ಮುಂತಾದ ವಿಷಯಗಳ ಬಗೆಗೆ ತಿಳಿವಳಿಕೆ ಪಡೆಯಲು ಒಳ್ಳೆಯ ಚಲನಚಿತ್ರ ಛಾಯಾಗ್ರಾಹಕರೊಂದಿಗೆ ಕೆಲಸ ಮಾಡಬೇಕು. ಜತೆಗೆ ಮಿನಿಯೇಚರ್ ಮ್ಯಾಚಿಂಗ್ ಎಫೆಕ್ಟ್‌ಗಳಿಗಾಗಿ ಹೊರಾಂಗಣ ಚಿತ್ರೀಕರಣ ಸ್ಥಳಗಳನ್ನು ಛಾಯಾಗ್ರಾಹಕರ ಜತೆಗೂಡಿ ಆಯ್ಕೆ ಮಾಡಬೇಕು'' ಎನ್ನುತ್ತಾರ ಹಿರಿಯ ಕಲಾನಿರ್ದೇಶಕ ಜಿ.ನಾಗರಾಜರಾವ್.

ನಾಗರಾಜರಾಯರು ಪ್ರಥಮವಾಗಿ 'ಕಸ್ತೂರಿ ವಿಜಯ' ಚಿತ್ರಕ್ಕೆ ಕಲಾನಿರ್ದೇಶನ ಮಾಡಿದರು. ಈ ಹೊತ್ತಿಗೆ ಅವರು ಇತರ ಭಾಷೆಗಳಲ್ಲಿ ಪ್ರಸಿದ್ಧರಾಗಿದ್ದರು. ಸಿದ್ಧಲಿಂಗಯ್ಯ ನಿರ್ದೇಶನದ 'ಬೂತಯ್ಯನ ಮಗ ಅಯ್ಯು' ಚಿತ್ರಕ್ಕೆ ಮಿನಿಯೇಚರ್ ಎಫೆಕ್ಟ್ಸ್ ಕೆಲಸ ಮಾಡಿದರು. ನಂತರ 'ರೇಣುಕಾದೇವಿ ಮಹಾತ್ಮೆ' ಚಿತ್ರಕ್ಕೆ ಕಲಾನಿರ್ದೇಶನ ಮಾಡಿದ ನಾಗರಾಜರಾಯರು ಅಮೃತಂ ಅವರ 'ಹುಡುಗಾಟದ ಹುಡುಗಿ', 'ಕನಸು ನನಸು' ಮುಂತಾದ ಚಿತ್ರಗಳಿಗೆ ಮೈಸೂರಿನಲ್ಲಿ ಕೆಲಸ ಮಾಡಿದರು.

'ಹುಲಿಯ ಹಾಲಿನ ಮೇವು' ಚಿತ್ರದ ಒಂದು ಬೆಂಕಿ ಮರಾಂತದಲ್ಲಿ ಆನೆಗಳು ಸಾಯುವ ದೃಶ್ಯಕ್ಕೆ ಮಿನಿಯೇಚರ್ ಎಫೆಕ್ಟ್ ಮಾಡಿ, ಸ್ಟುಡಿಯೋದಲ್ಲಿ ಮ್ಯಾಚ್ ಮಾಡಿ ಅದ್ಭುತ ಪರಿಣಾಮ ತಂದರು. ಪ್ರೇಕ್ಷಕರು ಅದನ್ನು ಬಹುವಾಗಿ ಮೆಚ್ಚಿದರು.

ಹುಣಸೂರು ಕೃಷ್ಣಮೂರ್ತಿ ನಿರ್ದೇಶನದ 'ಎಡೆಯೂರು ಸಿದ್ದಲಿಂಗೇಶ್ವರ ಮಹಾತ್ಮೆ' ಚಿತ್ರದಲ್ಲಿ ಒಂದು ನದಿ ಇಬ್ಭಾಗವಾಗಿ ಸಿದ್ಧಲಿಂಗೇಶ್ವರನಿಗೆ ಹಾದಿ ಮಾಡಿ ಕೊಡುವ ದೃಶ್ಯವಿದೆ. ಅದಕ್ಕೆ ರಾಮನಗರದಲ್ಲಿ ಮಿನಿಯೇಚರ್ ನದಿಯ ಮಾಡೆಲ್ ಸೃಷ್ಟಿಸಿದರು. ಅದೇ ರೀತಿ ಹುಣಸೂರು ಕೃಷ್ಣಮೂರ್ತಿ ನಿರ್ದೇಶನದ 'ಭಕ್ತ ಸಿರಿಯಾಳ', 'ಜ್ಞಾನದೇವ' ಮತ್ತು 'ಶಿವಕನ್ಯೆ' ಪೌರಾಣಿಕ ಚಿತ್ರಗಳಲ್ಲಿ ಮಿನಿಯೇಚರ್ ಸೆಟ್ಸ್‌ನ ಕೆಲಸ ಮಾಡಿದರು. ರೇಣುಕಾಶರ್ಮ ನಿರ್ದೇಶನದ ರಾಜಕುಮಾರ್ ಅಭಿನಯದ 'ಕವಿರತ್ನ ಕಾಳಿದಾಸ' ಚಿತ್ರಕ್ಕಾಗಿ ಇವರು ಮಾಡಿದ ಹಲವು ವಿಶೇಷ ಎಫೆಕ್ಟ್‌ಗಳು ಅಪಾರ ಪ್ರಶಂಸೆ ಗಳಿಸಿದವು. ಅನಂತರ ರೇಣುಕಾಶರ್ಮ ನಿರ್ದೇಶನದ 'ಶಬರಿ ಮಲೆ ಸ್ವಾಮಿ ಅಯ್ಯಪ್ಪ', 'ಕೊಲ್ಲೂರು ಮೂಕಾಂಬಿಕೆ' ಚಿತ್ರಗಳಿಗೆ ಕೆಲಸ ಮಾಡಿದರು. ರಾಜಕುಮಾರ್ ಅಭಿನಯದ 'ಭಕ್ತ ಪ್ರಹ್ಲಾದ' ಚಿತ್ರಕ್ಕಾಗಿ ಬೃಹತ್ ಸೆಟ್‌ಗಳನ್ನು, ಮಿನಿಯೇಚರ್ ಎಫೆಕ್ಟ್‌ಗಳನ್ನು ನಿರ್ಮಿಸಿದ್ದರು. ಪುಟ್ಟಣ್ಣ ಕಣಗಾಲ್ ಅವರ 'ಋಣಮುಕ್ತಳು' ಚಿತ್ರಕ್ಕೆ ಕಲಾ ನಿರ್ದೇಶಕರಾಗಿ ಕೆಲಸ ಮಾಡಿದ ರಾಯರು 'ರಂಗನಾಯಕಿ' ಚಿತ್ರಕ್ಕೆ ಭಾಗಶಃ ಕೆಲಸ ಮಾಡಿದರು. 'ಮರ್ಯಾದೆ ಮಹಲ್' ಚಿತ್ರಕ್ಕಾಗಿ ಭಾರೀ ಮಹಲ್ ಸೆಟ್ ನಿರ್ಮಿಸಿ, ಮಿನಿಯೇಚರ್‌ನಲ್ಲಿ ಹೊರಾಂಗಣ ಬೆಂಕಿ ಎಫೆಕ್ಟ್‌ಗಳನ್ನು ಪರಿಣಾಮಕಾರಿಯಾಗಿ ಮ್ಯಾಚ್ ಮಾಡಿದರು. ವಿ.ರವಿಚಂದ್ರನ್ ಅವರ 'ರಣಧೀರ' ಚಿತ್ರಕ್ಕಾಗಿ ಬೃಹತ್ ಹಡಗಿನ ಮಿನಿಯೇಚರ್ ಮಾಡಿ ದೃಶ್ಯದೊಂದಿಗೆ ಹೊಂದಿಕೆ ಮಾಡಿದ ಪರಿ ಪ್ರೇಕ್ಷಕರ ಮೆಚ್ಚುಗೆ ಗಳಿಸಿತು. ರಾಜಕುಮಾರ್ ಅವರ 'ಒಡ ಹುಟ್ಟಿದವರು' ಮತ್ತು ವಿ.ಸ್ವಾಮಿನಾಥನ್ ಅವರ 'ಶಿವಲೀಲಾ' ರಾಯರ ಇತ್ತೀಚಿನ ಚಿತ್ರಗಳು.

''ಕಲಾನಿರ್ದೇಶನ, ಛಾಯಾಗ್ರಹಣ ಹಾಗೂ ಚಿತ್ರಕಲೆ ಒಂದಕ್ಕೊಂದು ಎಷ್ಟು ಹೊಂದಿಕೊಂಡಿವೆ ಎಂದರೆ, ಒಂದು ಚಿತ್ರದ ಒಂದು ದೃಶ್ಯ ಗೋಥಿಕ್ ಶಿಲ್ಪಶೈಲಿಯ ಒಂದು ದೇವಸ್ಥಾನ ಇದ್ದ ಹಾಗೆ ಇರಬೇಕು ಅಂತ ನಾನು ಓದಿದ ಒಂದು ಪುಸ್ತಕದಲ್ಲಿ ಹೇಳಿದೆ'' ಎನ್ನುತ್ತಾರೆ ನಟ-ನಿರ್ದೇಶಕ ಶಿವರಾಂ.

(ಚಿತ್ರ ೧೨) ಬಿಟ್ಟದ ತಪ್ಪಲಿನಲ್ಲಿ ನಿರ್ಮಾಣವಾದ ಮನೆ - ಬೇಲಿ, ಗೇಟು, ಗಿಡಗಳು, ಒಣಗಿಸಿದ ಬಟ್ಟೆ - ಬಾಗಿದ ಜಿಂಕ್ ಷೀಟ್ - ಸಣ್ಣಸಣ್ಣ ವಿವರಗಳನ್ನು ಕಲಾವಿದರು ಗಮನಿಸಿದ್ದಾರೆ.
ಕಲೆ : ಇಸ್ಮಾಯಿಲ್

ಪ್ರಾಧ್ಯಾಪಕ, ಸಾಹಿತಿ, ವಿಮರ್ಶಕ ಪ್ರೊ.ಎಂ.ಎಚ್.ಕೃಷ್ಣಯ್ಯ ಅವರ ಪ್ರಕಾರ ಒಂದು ಚಿತ್ರದ ಪ್ರಾರಂಭದಲ್ಲಿ ಬರುವ 'ಟೈಟಲ್ಸ್' ಅದೇ ಒಂದು ಸ್ವತಂತ್ರವಾದ ಕಲಾ ಸೃಷ್ಟಿ ಆಗುವ ಸಾಧ್ಯತೆಯಿದೆ. ಅವರೆ,

''ಅದನ್ನು ನಾವು ಕನ್ನಡದಲ್ಲಿ ಹೆಚ್ಚು ಬಳಸಿಕೊಂಡೇ ಇಲ್ಲ. ನನಗೆ ಥಟ್ಟನೆ ನೆನಪಿಗೆ ಬರುವುದು 'ಪಿಂಗ್ ಪ್ಯಾನ್'. ಇಡೀ ಸಿನಿಮಾದ ಉದ್ದೇಶ ಏನಿದೆ, ಸಾರ ಏನಿದೆ, ಅದನ್ನು ಪ್ರಾರಂಭದಲ್ಲಿ ಟೈಟಲ್ ಕಾರ್ಡ್‌ನಲ್ಲಿ ಅಲ್ಲಿನ ಹಾಸ್ಯ, ವಿನೋದ ಮತ್ತು ಪಾತ್ರಗಳ ವೈಚಿತ್ರ್ಯಗಳನ್ನು, ವೈಲಕ್ಷಣಗಳನ್ನು ಸಹ ತನ್ನ ರೇಖಾ ಚಿತ್ರಗಳಲ್ಲಿ, ಕಾರ್ಟೂನ್ ರೀತಿಯ ವ್ಯಂಗ್ಯ ಚಿತ್ರಗಳಲ್ಲಿ ತೋರಿಸಿದ. ಅದಕ್ಕೆ ತಕ್ಕಂತೆ ಹಿನ್ನೆಲೆ ಸಂಗೀತವನ್ನೊದಗಿಸಿದ.

''ನಾವು ಹುಡುಗರಿದ್ದಾಗ ವಿ.ಶಾಂತಾರಾಮ್ ಅವರ ಚಿತ್ರಗಳನ್ನು ನೋಡುತ್ತಿದ್ದೆವು. ಹಾಗೆ ನೋಡುವಾಗ ನಮ್ಮ ಕುತೂಹಲವೆಲ್ಲ ಪ್ರಾರಂಭದಲ್ಲಿ ಬರುವ ಟೈಟಲ್ ಕಡೆಗೇ. ಪ್ರತಿಯೊಂದು ಚಿತ್ರದಲ್ಲೂ ಏನಾದರೂ ಹೊಸದಾಗಿ, ಸೃಜನಾತ್ಮಕವಾಗಿರುವಂಥದನ್ನು ಶಾಂತಾರಾಮ್ ಮಾಡುತ್ತಿದರು. ಉದಾಹರಣೆಗೆ ಯಾವುದೋ ಒಂದು ಗಣಿ ಅಥವಾ ಮತ್ತೇನೋ ಇದ್ದರೆ ಅಲ್ಲಿಂದಲೇ ಒಂದು ಕಲ್ಲು ಸಿಡಿದಂತೆ, ಆ ಕಲ್ಲು ಕ್ಯಾಮರಾ ಹತ್ತಿರ ಬರುತ್ತಿತ್ತು. ಆಗ ಅದರಲ್ಲಿ ಅಕ್ಷರಗಳು ಇತ್ಯಾದಿ ಇರುತ್ತಿದ್ದವು. ಇವೆಲ್ಲ ಒಬ್ಬ ಕಲಾನಿರ್ದೇಶಕನ ಸ್ವತಂತ್ರ ಸೃಷ್ಟಿ ಆಗುವ ಸಾಧ್ಯತೆ ಇದೆ. 'ಕ್ಲಿಯೋಪಾತ್ರ' ಸಿನಿಮಾದಲ್ಲಿ ಪ್ರಾರಂಭದಲ್ಲಿ ಒಂದು ಅದ್ಭುತವಾದ ವರ್ಣಚಿತ್ರ ಇದೆ. ಕನ್ನಡದಲ್ಲಿ ಇದುವರೆಗೂ period ಚಿತ್ರದಲ್ಲಿ ಅತ್ಯಂತ ವಾಸ್ತವಿಕವಾದ ಸಮಕಾಲೀನ, ಸಾಮಾಜಿಕ ಅಂಶಗಳನ್ನು ಪುನರ್ ನಿರ್ಮಾಣ ಮಾಡಿದ ಉದಾಹರಣೆಗಳು ಹೆಚ್ಚಿಗೆ ಇಲ್ಲ.''

''ವಿಜಯನಗರ ಸಾಮ್ರಾಜ್ಯದ ಕಾಲದ ಕಲೆ ಎಲ್ಲಿ, ಅಲ್ಲಿರತಕ್ಕಂಥ ಸೂಕ್ಷ್ಮವಾದ ಮೃದುಕಲ್ಲಿನ ಕೆತ್ತನೆ ಎಲ್ಲಿ - ಆದರೆ 'ಕೃಷ್ಣದೇವರಾಯ' ಚಿತ್ರದಲ್ಲಿ ಕೃಷ್ಣಶಿಲೆ ಕಲ್ಲುಗಳನ್ನು ಬಳಸಿದ್ದಾರೆ. ಜತೆಗೆ ಕೃಷ್ಣದೇವರಾಯನ ಕಾಲದಲ್ಲಿ ಅವರು ಬಟ್ಟೆಗಳನ್ನು, ಬಣ್ಣಗಳನ್ನು ಡ್ರಾಪ್ಸ್‌ಗಳಾಗಿ ಅತ್ಯಂತ ಸಮರ್ಪಕ ರೀತಿಯಲ್ಲಿ ಬಳಸಿಕೊಳ್ಳುತ್ತಿದ್ದರು. ಅದನ್ನೆಲ್ಲ ಅಗಿನ ಕಾಲದ ವಿದೇಶಿ ಪ್ರವಾಸಿಗಳು ಬರೆದಿರುವ ವಿವರಗಳನ್ನು ಓದಿದರೆ ರೋಮಾಂಚನವಾಗುತ್ತದೆ. ಇವನ್ನೆಲ್ಲ ಯಥಾವತ್ತಾಗಿ, ಸಮರ್ಪಕವಾಗಿ ಬಳಸಿಕೊಂಡಾಗ ಮಾತ್ರ ಕಲಾನಿರ್ದೇಶನ ಅರ್ಥಪೂರ್ಣ ಆಗುತ್ತದೆ.

''ಇವತ್ತು ಕಲಾನಿರ್ದೇಶಕನಾದವನು ನಿರ್ದೇಶಕ, ಛಾಯಾಗ್ರಾಹಕ ಇವರೆಲ್ಲರ ಜತೆಗೆ ಕೂಡಿ ಕೆಲಸ ಮಾಡುವಂಥದ್ದಾದರೂ ಚಲನಚಿತ್ರದಲ್ಲಿ ಆತನದೇ ಸ್ವತಂತ್ರವಾದ ಕಲಾಸೃಷ್ಟಿ ಸಾಧ್ಯ'' ಎನ್ನುವುದು ಪ್ರೊ|ಕೃಷ್ಣಯ್ಯ ಅವರ ಅಭಿಪ್ರಾಯ.

ನಿರ್ಮಾಪಕರೊಬ್ಬರು ''ಬರೀ ಸಾಂಕೇತಿಕತೆ ತಂದುಬಿಟ್ಟರೂ ಕಷ್ಟ. ಈಗ ನಾವು ಮಾತಾಡುವಾಗ ಸಂಕೇತದ ಭಾಷೆಯಲ್ಲಿ ಮಾತನಾಡಿದರೆ ಎಷ್ಟು ಹಿಂಸೆ ಆಗುತ್ತೆ - ತಲೆ ಬಿಸಿ ಆಗ್ಹೋಗತ್ತೆ. ಆ ತರಹ ಆಗಬಾರದು. ಒಂದೇ ಕಾಲಕ್ಕೆ, ಒಂದೇ ದಿನ ೩೦-೪೦ ಥಿಯೇಟರ್‌ಗಳಲ್ಲಿ ಸಿನಿಮಾ ಬಿಡುಗಡೆ ಆದಾಗ ಸಂಕೇತ ತಂದುಬಿಟ್ಟರೆ ಸಿನಿಮಾದವರ ಗತಿ ಏನು? ಪ್ರೇಕ್ಷಕ ಒಂದು ಚೂರು ತಲೆ ಬಿಸಿ ಆದರೂ ಚಿತ್ರ ನೋಡುವುದಿಲ್ಲ - ಅಪಪ್ರಚಾರ ಆಗುತ್ತೆ. ಆದ್ದರಿಂದ ಕಮರ್ಶಿಯಲ್ ಸಿನಿಮಾಗಳಲ್ಲಿ ನಾವು ಅತಿಯಾದ ಕಲಾತ್ಮಕತೆ ಅಂತ ಮಾತಾಡಲು ಹೋಗಬಾರದು. ಜತೆಗೆ ಅತಿಯಾದ ನೈಜತೆ- ಇದರಿಂದ ಕೆಲವು ಚಿತ್ರಗಳು ನಿಜವಾಗಿ ಚೆನ್ನಾಗಿವೆ. ಉದಾಹರಣೆಗೆ, ಕೆ.ಆಸೀಫ್ ಅವರ 'ಮುಗಲ್-ಎ-ಆಜಂ' ಅದು ಎಷ್ಟು ಚೆನ್ನಾಗಿತ್ತೆಂದರೆ ಅದರ ನೈಜತೆಯಿಂದಲೇ ಅದು ಬಹಳ ಯಶಸ್ವಿಯಾಯಿತು. ಅದರಲ್ಲಿ ಒಂದು ಕಬ್ಬಿಣದ ಸರಪಳಿ ಇರುತ್ತದೆ. ಅದನ್ನು ಕಬ್ಬಿಣದಲ್ಲೇ ಮಾಡಿದ್ದರು. ಅದು ಕತ್ತರಿಸಿ ಕೆಳಗೆ ಬಿದ್ದಾಗ ಆ ಸರಪಳಿ ಯಾವ ವಿನ್ಯಾಸ ಇರುತ್ತೆ, ಆ ಶಬ್ದ, ಆ ತೂಕ ಇದೆಲ್ಲ ಬಹಳ ಸಂತೋಷ ಉಂಟುಮಾಡಿತ್ತು.

''ಶೀಷ್ ಮಹಲ್' ಮಾಡಿದ್ದರು. ಆಗಿನ ಕಾಲಕ್ಕ ೫೦ ಲಕ್ಷ ರೂ. ಖರ್ಚು ಮಾಡಿದ್ದರು. ಇವತ್ತಿಗೂ ಅದು ಅಜರಾಮರವಾಗಿ ಉಳಿದುಕೊಂಡಿದೆ. ಅದೇ ರೀತಿ 'ಕ್ಲಿಯೋಪಾತ್ರ', 'ಉತ್ಸವ್', 'ಚಾಣಕ್ಯ', 'ಭಾರತ್ ಏಕ್ ಖೋಜ್', 'ಜುನೂನ್', 'ಉಮ್ರಾವ್ ಜಾನ್' ಇಲ್ಲೆಲ್ಲ ಅ ಕಾಲವನ್ನೇ (period) ಮರುಸೃಷ್ಟಿ ಮಾಡಿದ್ದರಲ್ಲ; ಅದರಿಂದಾಗಿ ಯಶಸ್ವಿ ಆಗಿವೆ. ಅಚ್ಚಳಿಯದ ಪರಿಣಾಮ ಬೀರುತ್ತವೆ'' ಎನ್ನುತ್ತಾರೆ ಪ್ರೊ|ಕೃಷ್ಣಯ್ಯ.

ಅತ್ತ ಮಾಧ್ಯಮ ಬೆಳೆಯುತ್ತ ಬಂದಂತೆ ನಮ್ಮಲ್ಲಿ ಹೊರಾಂಗಣ ಚಿತ್ರೀಕರಣಕ್ಕೆ ಮಹತ್ವ ಲಭ್ಯವಾಯಿತು. ಎಲ್ಲಕ್ಕೂ ಸ್ಟುಡಿಯೋವನ್ನೇ ಅವಲಂಬಿಸದೆ ನೈಜ ದೃಶ್ಯಗಳು ಇರುವೆಡೆಗೆ ಹೋಗಿ ಕ್ಯಾಮರಾದಲ್ಲಿ ಸೆರೆ ಹಿಡಿಯುವ ಪ್ರವೃತ್ತಿಯು ಆರಂಭವಾಯಿತು. ೬೦ರ ದಶಕದಲ್ಲಿ ಕನ್ನಡ ಚಿತ್ರರಂಗ ತನ್ನ ಸ್ವಂತಿಕೆಯನ್ನು ಪಡೆದುಕೊಳ್ಳುತ್ತಾ ಬಂದಿದ್ದಕ್ಕೆ, ತಾಂತ್ರಿಕತೆಯಲ್ಲಿ ಈ ಬೆಳವಣಿಗೆ ಆದದ್ದಕ್ಕೆ ತೃಪ್ತಿಕರ ಹೊಂದಾಣಿಕೆ ಲಭ್ಯವಾಗಿ ಕನ್ನಡ ನಾಡಿನ ನಿಸರ್ಗದ ಸೌಂದರ್ಯವೆಲ್ಲ ಚಿತ್ರರಂಗದ ಮೂಲಕ ಸೆಲ್ಯೂಲಾಯ್ಡ್‌ನಲ್ಲಿ ದಾಖಲಾದವು. ಕನ್ನಡಿಗರ ಉಡುಗೆ-ತೊಡುಗೆಗಳು, ಸಂಪ್ರದಾಯಗಳು ಬಿಂಬಿತವಾದವು. ಈಗ ಕಲಾನಿರ್ದೇಶನಕ್ಕೆ ನಿಜವಾದ ಅರ್ಥದಲ್ಲಿ ಮಹತ್ವ ಬಂದಿತು. ನಾಗರಾಜರಾವ್, ಎಸ್.ಎಸ್.ಶುಕ್ಲೆ, ಬಿ.ಕಿಷನ್, ಬಿ.ಸುಭಾಷ್ ಕಡಕೋಳ, ಚಂದ್ರನಾಥ ಆಚಾರ್ಯ, ಬಿ.ಕೆ.ಎಸ್.ವರ್ಮ ಮುಂತಾದವರು ಮಣ್ಣಿನ ಗುಣಗಳನ್ನು ಹೀರಿ ಚಿತ್ರಗಳಿಗೆ ಜೀವಂತಿಕೆ ನೀಡಿದರು. ಚಿತ್ರಗಳಲ್ಲಿ ವರ್ಣದ ಬಳಕೆ ಬಂದ ಮೇಲೆ ಯಾವ ವರ್ಣ ಕ್ಯಾಮರಾ ಮೂಲಕ ಹಾದು ತೆರೆಯ ಮೇಲೆ ಬೀಳುವಾಗ ಗಾಢವಾಗುತ್ತದೆ, ನೈಜವಾಗುತ್ತದೆ ಎಂಬ ಅಂಶಕ್ಕೆ ಮಹತ್ವ ಸಿಕ್ಕಿತು. ಇದರಿಂದ ನೈಜತೆಗೂ ಹೆಚ್ಚಿನ ಆಯಾಮ ದೊರೆತು ನಿರ್ಮಾಣದಲ್ಲಿನ ಕುಶಲತೆ ಹೆಚ್ಚಾಯಿತು.

''ನಾವು ನಿಜವಾದ ಲೊಕೇಶನ್‌ಗಳಲ್ಲಿ ಚಿತ್ರೀಕರಣ ಮಾಡಲು ಪ್ರಾರಂಭಿಸಿದ ಮೇಲೆ ಕಲಾನಿರ್ದೇಶಕ ಬೇಡವೇ ಬೇಡ ಎಂದು ನಿರ್ಮಾಪಕರ ವಾದ ಇರಬಹುದು.

(ಚಿತ್ರ ೧೩) ಹೊಡೆದಾಟದ ದೃಶ್ಯಗಳು ವರ್ಣರಂಜಿತವಾಗಲು ಕಲಾನಿರ್ದೇಶಕ ಅಗತ್ಯ

ಅಥವಾ ನಿರ್ದೇಶಕರು ಅದಕ್ಕೆ ಹೊಂದಿಕೊಂಡು ಹೋಗಿರಬಹುದು. ವಾಸ್ತವವಾಗಿ ಹೇಳುವುದಾದರೆ ಯಾವುದೇ ಸ್ಥಳವಾಗಿರಲಿ. ಹೊರಾಂಗಣ ಚಿತ್ರಣದ ಸ್ಥಳ ಆಗಿರಲಿ ಅಥವಾ ಒಂದು ಸೆಟ್ಟೇ ಆಗಿರಲಿ, ಕಲಾನಿರ್ದೇಶಕನ ಅವಶ್ಯಕತೆ ಇದ್ದೇ ಇರುತ್ತದೆ'' ಎನ್ನುತ್ತಾರೆ ಶಿವರಾಂ.

ನಿರ್ದೇಶಕ ಪಿ.ಹೆಚ್.ವಿಶ್ವನಾಥ್ ''ನಾವು ಸ್ಟುಡಿಯೋದಿಂದ ಹೊರಗೆ ಬಂದವು ಅಂದಾಕ್ಷಣ ಕಲಾನಿರ್ದೇಶಕರೇ ಬೇಕಾಗಿಲ್ಲ ಅನ್ನೋದು ಸರಿಯಲ್ಲ. ಹಿಂದಿಗಿಂತ ಕಲಾನಿರ್ದೇಶಕನ ಜವಾಬ್ದಾರಿ ಈಗ ಹೆಚ್ಚಾಗಿದೆ. ನಾಲ್ಕು ಗೋಡೆಗಳ ಮಧ್ಯ ಏನು ಬೇಕಾದರೂ ಕ್ರಿಯೇಟ್ ಮಾಡಬಹುದಾಗಿತ್ತು. ಈಗಿನ ವಾತಾವರಣದಲ್ಲಿ ಅವನಿಗ ಬೇಕಾದನ್ನು ಆತನೇ ಸೃಷ್ಟಿ ಮಾಡಿಕೊಳ್ಳಬೇಕಾಗಿದ. ನಿಜವಾಗಿ ಇದು ಈಗಿನ ಕಲಾನಿರ್ದೇಶಕನ ಛಾಲೆಂಜಿಂಗ್ ಜಾಬ್'' ಎನ್ನುತ್ತಾರೆ.

''ಸಾಮಾಜಿಕ ಚಿತ್ರಗಳು ಪ್ರಾರಂಭವಾದ ಮೇಲೆ ಕಲಾನಿರ್ದೇಶನದ ಪ್ರಾಮುಖ್ಯವೇ ಕೊಂಚ ಕೊಂಚವಾಗಿ ತಗ್ಗಿತು. ಈ ಕಥೆಗ ಇಂಥದೇ ಸೆಟ್ ಬೇಕು, ಹೀಗೇ ಇರಬೇಕು ಅನ್ನುವ ನಿರ್ದೇಶಕರು, ಕಲಾವಿದರು ಕಡಿಮೆ ಅವರು. ಹೊರಾಂಗಣ ಚಿತ್ರೀಕರಣ ಬಂದ ಮೇಲ ಯಾವುದೋ ಕೊಂಚ ಅಲಂಕಾರವಾಗಿರುವ ಮನೆ ಅಥವಾ ಕಥಗೆ ಹೊಂದುವಂಥದ್ದು ನೋಡಿ ಅಲ್ಲಿರುವ ಪರಿಕರಗಳನ್ನೇ ಅತ್ತ-ಇತ್ತ ಮಾಡಿ ಚಿತ್ರೀಕರಣ ಮಾಡುವುದು ಪ್ರಾರಂಭವಾಗಿದೆ'' ಎಂದು ಇಂದಿನ ಪ್ರವೃತ್ತಿ ಕುರಿತು ಅಯ್ಯರ್ ಹೇಳುತ್ತಾರೆ.

ಹಿರಿಯ ನಿರ್ದೇಶಕ ರವೀ ಅವರ ಪ್ರಕಾರ ''ಇವತ್ತಿನ ಸಿನಿಮಾದಲ್ಲಿ ಏನು ಕಲಾನಿರ್ದೇಶನ ಆಗುತ್ತಾ ಇದೆ ಅನ್ನುವುದನ್ನು ಗಮನಿಸಿದರೆ ಬಹುಶಃ ಕಲಾನಿರ್ದೇಶನ ಇಲ್ಲ ಅಂತಲೇ ಭಾವಿಸಬೇಕಾಗುತ್ತದೆ.

ಕಲಾನಿರ್ದೇಶಕ-ನಿರ್ದೇಶಕ ಕ್ರಿಷನ್ ಅವರು ''ಕನ್ನಡ ಚಿತ್ರಗಳಿಗ ಮೊದಲೆಲ್ಲ ಬೇರೆಯವರು ಉಪಯೋಗಿಸಿಕೊಂಡ ಸೆಟ್‌ಗಳನ್ನು ನಾವು ಸ್ವಲ್ಪ ಬದಲಾವಣೆ ಮಾಡಿ ಉಪಯೋಗಿಕೊಂಡೆವು. ಮೊದಲ ಬಾರಿಗೆ ನಾನು 'ಮಿಸ್ ಲೀಲಾವತಿ' ಚಿತ್ರಕ್ಕೆ ಕಲಾನಿರ್ದೇಶಕನಾಗಿ ಹೋದಾಗ ಒರಿಜಿನಲ್ ಸೆಟ್‌ಗಳನ್ನೇ ಹಾಕಬಹುದು ಅಂತ ಹೇಳಿ ಹಾಗೇ ಮಾಡಿದೆ.

ಈಗ ಆರ್ಟ್ ಡೈರೆಕ್ಷನ್ ಬಗ್ಗೆ ಹೇಳಬೇಕಾಗಿದರ ಸೆಟ್ ಹಾಕಿದಾರೆ ಅಂತ ಗೊತ್ತಾಗಬಾರದು ಆ ರೀತಿ ಕಲಾನಿರ್ದೇಶಕರು ಕೆಲಸ ಮಾಡಬೇಕು. ಮಣಿರತ್ನಂ ಅವರ ಹಿಂದೀ ಸಿನಿಮಾಗಳಲ್ಲೆಲ್ಲ ಇಡೀ ಬೀದಿಗಳ ಸೆಟ್‌ಗಳನ್ನೇ ಹಾಕಿರುತ್ತಾರ. ಆದರೆ ಅದು ಸೆಟ್ ಅಂತಾನೇ ಗೊತ್ತಾಗುವುದಿಲ್ಲ. ನಿಜವಾದ ಬೀದಿಗಳಂತೆಯೇ ಕಾಣಿಸುತ್ತೆ.

ಕಳೆದ ೨೦ ವರ್ಷಗಳಿಂದೀಚಗೆ ಕನ್ನಡ ಚಿತ್ರಗಳು ಬಹುತೇಕವಾಗಿ ಹೊರಾಂಗಣದಲ್ಲೇ ಚಿತ್ರೀಕರಣ ನಡೆಸುವ ಪದ್ಧತಿ ಬಂದಿದ. ಇದರಿಂದಾಗಿ ಕಲಾನಿರ್ದೇಶಕರ ವ್ಯಾಪ್ತಿಯು ಪರಂಪರಾಗತ ಸೆಟ್‌ಗಳಿಂದ ಈಚೆಗೆ ಬರುವಂತಾಗಿದೆ. ಅದಕ್ಕೆ ತಕ್ಕಂತೆ ಕಲಾನಿರ್ದೇಶನದ ತಂತ್ರಗಳಲ್ಲೂ ಸಾಕಷ್ಟು ಬದಲಾವಣೆಗಳಾಗಿವೆ.

ಸ್ಟುಡಿಯೋಗಳಲ್ಲಿ ನಿರ್ಮಿಸಲಾಗುವ ಸೆಟ್‌ಗಳು ಸಂಪೂರ್ಣವಾಗಿ ಕಲಾನಿರ್ದೇಶಕನ ನಿರ್ಮಿತಿಗಳಾಗಿರುತ್ತಿದ್ದವು. ಈ ದೃಷ್ಟಿಯಿಂದ ಸ್ಟುಡಿಯೋ ಸೆಟ್‌ಗಳಲ್ಲಿ ಕಲಾನಿರ್ದೇಶಕನಿಗೆ ಅವಕಾಶಗಳು ಜಾಸ್ತಿಯಾಗಿರುತ್ತವೆ. ಆದರ ಹೊರಾಂಗಣ ಚಿತ್ರೀಕರಣದಲ್ಲಿ ಇಷ್ಟು ಅವಕಾಶಗಳಿರುವುದು ಸಾಧ್ಯವಿಲ್ಲ.

ಆದರ ಇಲ್ಲಿ ಕಲಾನಿರ್ದೇಶಕನಿಗ ಇರುವುದು ಆಯ್ಕೆಯ ಅವಕಾಶ. ಒಂದು ಮನೆ ಹೀಗೇ ಇರಬೇಕು ಎಂದು ಅಂದುಕೊಂಡರ ಅಂತಹ ಒಂದು ಮನೆಯನ್ನು ಹುಡುಕುವ ಆಯ್ಕೆ ಹೊರಾಂಗಣ ಚಿತ್ರೀಕರಣದಲ್ಲಿದೆ. ಕೆಲವು ಸಂದರ್ಭಗಳಲ್ಲಿ ಇಂಥ ಮನೆಗಳನ್ನು ಚಿತ್ರೀಕರಣ ಅಗತ್ಯಗಳಿಗೆ ತಕ್ಕಂತೆ ಪುನರ್ ರೂಪಿಸುವುದೂ ಉಂಟು.

ಶ್ರೀರಂಗಪಟ್ಟಣದ ಸಮೀಪದ ಮಹದೇವಪುರ ಎಂಬ ಹಳ್ಳಿಯೊಂದನ್ನು ಈ ನಿಟ್ಟಿನಲ್ಲಿ ಉದಹರಿಸಬಹುದು. ಸುಮಾರು ೧೫೦ ಮನೆಗಳಿರುವ, ಕಾವೇರಿ ನದಿ ತೀರದ ಈ ಪುಟ್ಟ ಹಳ್ಳಿಯಲ್ಲಿ ಕನ್ನಡ ಮತ್ತು ಇತರ ಭಾಷೆಯ ನೂರಾರು ಚಿತ್ರಗಳ ಚಿತ್ರೀಕರಣವಾಗಿದೆ. ಹಳ್ಳಿಯ ಪರಿಸರದ ಚಿತ್ರೀಕರಣಕ್ಕೆ ಸ್ಥಳ ಅಗತ್ಯವಿದ್ದರೆ ಕನ್ನಡ ಚಿತ್ರೋದ್ಯಮದ ಬಹುತೇಕ ಜನರಿಗೆ ನನಪಾಗುವ ಮೊದಲ ಊರು – ಮಹಾದೇವಪುರ. ಈ ಊರಿನಲ್ಲಿ ೩೦೦ ಮನೆಗಳ ಪೈಕಿ ಕನಿಷ್ಠ ೧೫೦ ಮನೆಗಳಾದರೂ ಒಂದಲ್ಲ ಒಂದು ಕನ್ನಡ ಚಿತ್ರದಲ್ಲಿ ಮೂಡಿ ಬಂದಿದೆ. ಹಾಗೆಯೇ ಈ ಎಲ್ಲಾ ಮನೆಗಳೂ ಆಯಾ ಚಿತ್ರಗಳ ಕಲಾನಿರ್ದೇಶಕರ ಅಗತ್ಯ ಮತ್ತು ಅಭಿರುಚಿಗೆ ತಕ್ಕಂತ ಒಳಾಂಗಣ ವಿನ್ಯಾಸದಲ್ಲಿ ಬದಲಾವಣೆಗಳನ್ನು ಕಂಡಿವೆ.

ಈ ಹಳ್ಳಿಯ ಬಹುತೇಕ ಜನರಿಗೆ ವರ್ಷಕ್ಕೊಮ್ಮೆ ಆದರೂ ತಮ್ಮ ಮನೆಯನ್ನು ಚಿತ್ರದ ಚಿತ್ರೀಕರಣಕ್ಕೆ ನೀಡುವುದು ವರಿಪಾಠವಾಗಿದ. ಇದರಿಂದಾಗಿ ಮನೆಯ ಮಾಲೀಕರಿಗೆ ದಿನಕ್ಕೆ ೫೦೦ರಿಂದ ೧,೦೦೦ ರೂ.ಗಳ ಬಾಡಿಗೆ ಬರುವುದರ ಜತೆಗ ಮನೆಯ ಒಳಾವರಣಗಳೆಲ್ಲ ಕಲಾತ್ಮಕವಾಗಿ ಸುಣ್ಣ, ಬಣ್ಣ ಬಳಿದುಕೊಂಡು ಸಿಂಗಾರವಾಗಿರುತ್ತದೆ; ಯಾವ ವೆಚ್ಚವೂ ಇಲ್ಲದೇ.

ನಿರ್ಮಾಪಕರಿಗೂ ಈ ಹೊರಾಂಗಣ ಚಿತ್ರೀಕರಣ ಅನುಕೂಲಕರವೆ. ಸ್ಟುಡಿಯೋಗಳ ಬಾಡಿಗೆ, ನಿರ್ವಹಣೆಗೆ ಹೋಲಿಸಿದರೆ ಹೊರಾಂಗಣ ಕಟ್ಟಡಗಳು ಅಗ್ಗದ ಬಾಡಿಗಗೆ ಸಿಗುತ್ತವೆ. ಮಹದೇವಪುರದಂಥ ಹಳ್ಳಿಗಳಲ್ಲಿ ಸಣ್ಣ ಮೊತ್ತದ ಬಾಡಿಗೆ ನೀಡಬೇಕಾದ ಅಗತ್ಯ ಇದರೂ 'ಸಿನಿಮಾ ಸಂಸ್ಕೃತಿ'ಯಿಂದ ದೂರ ಇರುವ ದಕ್ಷಿಣ ಕನ್ನಡ, ಉತ್ತರ ಕನ್ನಡ. ಬಿಜಾಪುರ, ಬೆಳಗಾವಿಯಂಥ ಕಡೆ ಜನ ಇದನ್ನು ಅಪೇಕ್ಷಿಸುವುದಿಲ್ಲ.

ಸಿನಿಮಾಗಳು ಸ್ಟುಡಿಯೋ ಆವರಣ ಬಿಟ್ಟು ಹೊರಕ್ಕೆ ಬಂದ ನಂತರ ಕಲಾನಿರ್ದೇಶನದ ದೃಷ್ಟಿಯಲ್ಲಿ ಆಗಿರುವ ಬದಲಾವಣೆ ಗಮನಾರ್ಹ. ಇಲ್ಲಿ ವಸ್ತು ನಿರ್ಮಿತಿಗಿಂತ ವಸ್ತು ಜೋಡಣೆಯ ಮೇಲೆ ಹೆಚ್ಚು ಒತ್ತು ಬೀಳುವುದನ್ನು ಗಮನಿಸಬಹುದು. ಚಿತ್ರದ ವಿಷಯ ಪೌರಾಣಿಕವಾದರೆ ಹೆಚ್ಚಿನ ಚಿತ್ರಗಳು ಈಗಲೂ ಸ್ಟುಡಿಯೋಕ್ಕೇ ಶರಣು ಹೋಗುತ್ತವೆ. ಆದರೆ ಸಾಮಾಜಿಕ, ಸಮಕಾಲೀನ ವಿಷಯಗಳಿದ್ದರೆ ಅಂತಹ ಚಿತ್ರಗಳು ಸ್ಟುಡಿಯೋದಿಂದ ಹೊರಗೆ ನಿರ್ಮಾಣವಾಗುವುದು ಮಾಮೂಲಿಯಾಗಿದ.ಈ ಬದಲಾವಣೆಯಿಂದಾಗಿ ಕಲಾನಿರ್ದೇಶನ ಕೇವಲ ತಾಂತ್ರಿಕ ಅಂಶಗಳನ್ನು ಮೀರಿ ಬೆಳೆಯುತ್ತಾ ಬಂದಿರುವುದನ್ನು ಕಾಣಬಹುದು. ಹೊರಾಂಗಣದಲ್ಲಿ ಚಿತ್ರೀಕರಣ ಸ್ಥಳಗಳ ಆಯ್ಕೆಯೇ ಕಲಾನಿರ್ದೇಶಕನ ಬಹುಮುಖ್ಯ ಸವಾಲು.

ಇತ್ತೀಚಿನ ಚಿತ್ರಗಳಾದ 'ತಾಯಿ ಸಾಹೇಬ', 'ಜನುಮದ ಜೋಡಿ', 'ಅಮೆರಿಕಾ ಅಮೆರಿಕಾ', 'ಜೋಡಿ ಹಕ್ಕಿ', 'ಭೂಮಿಗೀತ', 'ದೇವೀರಿ' ಮೊದಲಾದ ಚಿತ್ರಗಳಲ್ಲಿ ಹೊರಾಂಗಣದಲ್ಲೂ ಕಲಾನಿರ್ದೇಶಕ ಎಷ್ಟು ಹೊಸತನದಿಂದ ಯೋಚಿಸಲು ಅವಕಾಶವಿದೆ ಎಂಬ ಅಂಶ ಮನವರಿಕೆಯಾಗುತ್ತದೆ.

ಮೂಲಭೂತವಾಗಿ ನಮ್ಮೆಲ್ಲರನ್ನೂ ಆಕರ್ಷಿಸುವ ಚಲನಚಿತ್ರದ ಒಂದು ವಿಶೇಷ ಗುಣವೆಂದರೆ ಕೇವಲ ಎರಡು ಆಯಾಮಗಳನ್ನು (2D) ಹೊಂದಿರುವ ಪರದೆಯ ಮೇಲೆ ಮೂರನೆಯ ಆಯಾಮವನ್ನು ಪ್ರೇಕ್ಷಕ ಪರಿಭಾವಿಸುವಂತೆ ಮಾಡುವ ತಂತ್ರಜ್ಞಾನ ಕೌಶಲ. ಈ ಭ್ರಮೆಯನ್ನು ಪ್ರೇಕ್ಷಕ ಎಷ್ಟು ಮಟ್ಟಿಗೆ ಪರಿಪೂರ್ಣವಾಗಿ ಅನುಭವಿಸಲು ಸಾಧ್ಯವಾದರ ಅಷ್ಟು ಉತ್ಕೃಷ್ಟ ಮಟ್ಟದ ಸಾಧನೆಯನ್ನು ಆ ಚಿತ್ರ ಮಾಡಿದೆ ಎಂದು ಹೇಳಬಹುದು.

(ಚಿತ್ರ ೧೪) 'ಜಂಬೂ ಸವಾರಿ' - ಅಗ್ನಿಗಾಹುತಿಯಾದ ಸರ್ಕಸ್ ಟೆಂಟ್ ಚಿತ್ರಣಕ್ಕೆ ಬಳಸಲಾದ ಕಿರು ಆಕೃತಿಯ ಟೆಂಟ್

ಹೊರಾಂಗಣ ಚಿತ್ರೀಕರಣದ ಸಮಯದಲ್ಲಿ ಲೊಕೇಷನ್ ಅನ್ನು ವೃಥೀಕರಿಸುವ ಸಲುವಾಗಿ ಹೊರಭಾಗವನ್ನು ಚಿತ್ರೀಕರಿಸಿರುತ್ತಾರೆ. ಆದರೆ ಸ್ಥಳದ ಒಳಾಂಗಣ ಚಿತ್ರೀಕರಣಕ್ಕೆ ಅನುಕೂಲಕರ ಎನಿಸದಿದ್ದಲ್ಲಿ ಅದಕ್ಕೆ ಹೊಂದಿಕೊಂಡು ಹೋಗುವಂಥ ಸೆಟ್ಟನ್ನು ಕಲಾನಿರ್ದೇಶಕ ಸ್ಟುಡಿಯೋದಲ್ಲಿ ನಿರ್ಮಿಸಿಕೊಡುತ್ತಾನೆ. ಈ ಕೆಲಸವು ಎಷ್ಟು ಕುಶಲತೆಯಿಂದ ಕೂಡಿರುತ್ತದೆಂದರೆ ಪ್ರೇಕ್ಷಕರಿಗೆ ಎರಡೂ ಬೇರೆ ಬೇರೆ ತಾಣಗಳಲ್ಲಿ ಚಿತ್ರೀಕರಿಸಲಾದ ದೃಶ್ಯಗಳು ಎಂದು ಭಾಸವಾಗುವುದೇ ಇಲ್ಲ. ಮತ್ತೆ ಇಂಥ ಸಂದರ್ಭಗಳಲ್ಲಿ ಛಾಯಾಗ್ರಾಹಕನ ಒಳಗೂಳ್ಳುವಿಕೆಯೂ ಅಷ್ಟೇ ಮುಖ್ಯವಾಗಿರುತ್ತದೆ. ಸ್ಥಳಗಳು ಒಂದೇ ಎಂದು ಭಾಸವಾಗಲು ಸೂಕ್ತವಾದ ಬೆಳಕಿನ ಸಂಯೋಜನೆ ಅತಿ ಮುಖ್ಯ.

ಈ ಸಂದರ್ಭದಲ್ಲಿ ಸತ್ಯಜಿತ್ ರಾಯ್ ಅವರ 'ಚಾರುಲತಾ' ಚಿತ್ರವನ್ನು ಉಲ್ಲೇಖಿಸಬಹುದು. ಕಲಾನಿರ್ದೇಶಕ ಬನ್ಸಿಚಂದ್ರ ಗುಪ್ತ ಅವರು ಅತ್ಯಂತ ನೈಜ ಎಂದು ಭಾಸವಾಗುವ ಸೆಟ್ಟನ್ನು ತಯಾರಿಸಿಕೊಟ್ಟಾಗ ಛಾಯಾಗ್ರಾಹಕ ಸುಬ್ರತೋ ಮಿತ್ರ ಅಷ್ಟೇ ಸಮರ್ಪಕವಾಗಿ ಬೆಳಕಿನ ಸಂಯೋಜನೆ ಮಾಡಿ ದಿನದ ವಿವಿಧ ಕಾಲಗಳಲ್ಲಿ ಬದಲಾಗುವ ನೆರಳು-ಬೆಳಕಿನ ಹೊಂದಾಣಿಕೆಯನ್ನು ಪುನರ್ ವಿಂಗಡಿಸಿಟ್ಟಿರಬಹುದೇ ಅಥವಾ ನಿಜವಾದ ಲೊಕೇಶನ್ ಇರಬಹುದೇ ಎಂದು ಪರಿಣಿತರೂ ಅಚ್ಚರಿಪಡುವಂತೆ ಚಿತ್ರಿಸಿದ್ದಾರೆ. ನೆಲದಿಂದ ಕೇವಲ ನಾಲ್ಕು ಅಡಿ ಎತ್ತರದಲ್ಲಿ ಮನೆಯ ನಿರ್ಮಾಣವಾಗಿದ್ದರೂ ಲೋ ಆ್ಯಂಗಲ್ ಶಾಟ್‌ಗಳಿಂದಾಗಿ ಮೊದಲ ಮಹಡಿಯ ಮನೆಯೆಂಬ ಪರಿಣಾಮ ನೀಡಲಾಗಿದೆ.

ಅದೇ ರೀತಿ ಮಣಿರತ್ನಂ ಅವರ 'ಬಾಂಬೆ', 'ರೋಜಾ', 'ದಿಲ್ ಸೆ' ಮೊದಲಾದ ಚಿತ್ರಗಳಲ್ಲಿ ವ್ಯಾಪಕವಾಗಿ ಸೆಟ್‌ಗಳ ಬಳಕೆ ಆಗಿದ್ದರೂ ನೋಡುಗನಿಗೆ ದೃಶ್ಯಗಳು ನೈಜ ಸ್ಥಳದಲ್ಲೇ ಚಿತ್ರಿತವಾದಂತೆ ಭಾಸವಾಗುತ್ತವೆ. ಕನ್ನಡದ್ದೇ ಆದ ಇತ್ತೀಚಿನ ಉದಾಹರಣೆಯನ್ನು ನೀಡುವುದಾದರೆ 'ದೇವೀರಿ' ಚಿತ್ರದ (ನಿರ್ದೇಶಕಿ : ಕವಿತಾ ಲಂಕೇಶ್) ಕೊಳಗೇರಿ ದೃಶ್ಯಗಳು. ಕೆಲವೊಂದು ದೃಶ್ಯಗಳನ್ನು ನೈಜಕೊಳಗೇರಿಗಳಲ್ಲೇ ಚಿತ್ರೀಕರಿಸಲಾಗಿದೆ. ಕೆಲವು ದೃಶ್ಯಗಳಿಗೆ ಕೊಳಗೇರಿಯ ಸೆಟ್ ನಿರ್ಮಿಸಲಾಗಿದೆ (ಕಲಾನಿರ್ದೇಶನ : ಶಶಿಧರ ಅಡಪ). ಛಾಯಾಗ್ರಾಹಕ ಎಸ್.ರಾಮಚಂದ್ರ ಅವರು ಈ ಚಿತ್ರದಲ್ಲಿ ನೆರಳು-ಬೆಳಕಿನೊಂದಿಗೆ ಆಡಿರುವ ಆಟ ದೃಶ್ಯಗಳಿಗೆ ನೈಜತೆಯನ್ನು ನೀಡಿವೆ.

ವ್ಯಾಪಾರಿ ಚಿತ್ರಗಳ ಚಿತ್ರೀಕರಣದಲ್ಲಿ ಬಹು ಬೇಡಿಕೆಯ ತಾರೆಯರ ದಿನಗಳನ್ನು ಹೊಂದಾಣಿಕೆ ಮಾಡಿ ಕಷ್ಟಸಾಧ್ಯವಾದ ಲೊಕೇಶನ್‌ಗಳಲ್ಲಿ ಕರೆದುಕೊಂಡು ಹೋಗಲು ಅಸಾಧ್ಯವಾದ ಸಂದರ್ಭಗಳಲ್ಲಿ ಒಳಾಂಗಣವನ್ನು ಸ್ಟುಡಿಯೋದಲ್ಲಿ ನಿರ್ಮಿಸಿ, ಹೊರಾಂಗಣದೊಟ್ಟಿಗೆ ಮ್ಯಾಚ್ ಮಾಡಿ ಕೆಲಸ ಮುಗಿಸುವುದು ಸಾಮಾನ್ಯ. ಕರ್ನಾಟಕದಲ್ಲಿ ಹೊರಾಂಗಣ ಚಿತ್ರೀಕರಣ ನಡೆಯುವ ಖಾಯಂ ಸ್ಥಳಗಳೇ ಕೆಲವು ಇವೆ. ಇಂಥ ಸ್ಥಳಗಳಲ್ಲೇ ಮೇಲಿಂದ ಮೇಲೆ ಚಿತ್ರೀಕರಣ ನಡೆಯುವಾಗ ದೃಶ್ಯಗಳ ಪುನರಾವರ್ತನೆ ಆಗದಂತೆ ನೋಡಿಕೊಳ್ಳಬೇಕಾದ್ದು ಕಲಾನಿರ್ದೇಶಕನ ಜವಾಬ್ದಾರಿ ಮತ್ತು ಸವಾಲು. ಬೆಂಗಳೂರು ಅರಮನೆಯಲ್ಲೇ ವರ್ಷಕ್ಕೆ ಹತ್ತಾರು ಚಿತ್ರಗಳ ಚಿತ್ರೀಕರಣ ನಡೆಯುತ್ತಿದೆ. ಆದರೆ ದೃಶ್ಯ, ಹಿನ್ನೆಲೆ ಆದಷ್ಟು ವಿಭಿನ್ನವಾಗಿರುವಂತೆ ಕಾಣುವುದರಲ್ಲಿ ಕಲಾನಿರ್ದೇಶಕನ ಕೈವಾಡವೇ ಮುಖ್ಯ.

ಹೊರಾಂಗಣ ಚಿತ್ರೀಕರಣವೇ ಹೆಚ್ಚು ವ್ಯಾಪಕವಾಗುತ್ತಿರುವ ಮತ್ತು ಬಜೆಟ್ ದೃಷ್ಟಿಯಿಂದಲೂ ಅನುಕೂಲವಾಗುತ್ತಿರುವ ಈ ದಿನಗಳಲ್ಲೂ ಲಕ್ಷಾಂತರ ಹಣವನ್ನು ವ್ಯಯಿಸಿ ಒಂದೊಂದು ಚಿತ್ರಕ್ಕೆ ಒಂದೊಂದು ಸೆಟ್ ನಿರ್ಮಿಸುವ ಶ್ರೀಮಂತ ಅಭಿರುಚಿಯ ಜನರೂ ನಮ್ಮ ನಡುವೆ ಇದ್ದಾರೆ. ರವಿಚಂದ್ರನ್ ಈ ಯಾದಿಯಲ್ಲಿ ಮೊದಲಿಗರಾಗಿ ನಿಲ್ಲುತ್ತಾರೆ. ಅವರು ಹೆಚ್ಚಾಗಿ ರೀಮೇಕ್ ಚಿತ್ರಗಳನ್ನೇ ಮಾಡುತ್ತಾರಾದರೂ ಮೂಲ ಚಿತ್ರದ ಪ್ರತಿಕೃತಿಯಾಗದೆ ತನ್ನ ಕಲ್ಪನೆಯ ಶ್ರೀಮಂತ ಸ್ಥಳಗಳನ್ನು ಸೃಷ್ಟಿಸುವ ಸಾಹಸಿ ಆತ. ಚಿತ್ರ ನಿರ್ಮಿತಿಯ ಒಂದೊಂದು ಹಂತದಲ್ಲೂ ಆತ ತೋರುವ ಕಾಳಜಿ, ಪಡುವ ಪರಿಶ್ರಮ ಶ್ಲಾಘನೀಯವಾದುದು. ಇತ್ತೀಚೆಗೆ 'ಓ ನನ್ನ ನಲ್ಲೆ' ಎಂಬ ಚಿತ್ರಕ್ಕೆ ಅವರು ಅರ್ಧ ಕೋಟಿ ರೂ. ವೆಚ್ಚ ಮಾಡಿ ನಗರದ ಸೆಟ್ ಒಂದನ್ನು ನಿರ್ಮಿಸಿದ್ದರು. ಈ ಚಿತ್ರದ ಚಿತ್ರೀಕರಣವಾಗುತ್ತಲೇ ಅಷ್ಟು ದುಬಾರಿಯಾದ ಸೆಟ್ ಬೇರಾವ ಚಿತ್ರಕ್ಕೂ ಲಭ್ಯವಾಗದೆ ಕೆಡವಲಾಯಿತು. ಇಂಥ ಪ್ರಯತ್ನಗಳು ಹೆಚ್ಚು ಹೆಚ್ಚಾಗಿ ನಡೆದಲ್ಲಿ ಕನ್ನಡದಲ್ಲಿ ಕಲಾನಿರ್ದೇಶಕನ ಅಸ್ತಿತ್ವ, ಅವಕಾಶಗಳು ಹೆಚ್ಚು ಗಟ್ಟಿಗೊಳ್ಳುತ್ತವೆ. ರೀಮೇಕ್ ಚಿತ್ರಗಳನ್ನು ನಿರ್ಮಿಸುವವರು ಮೂಲ ಚಿತ್ರದ ಪರಿಕರಗಳನ್ನೇ ಯಥಾವತ್ತಾಗಿ ನಕಲು ಹೊಡೆಯುವ ಪ್ರವೃತ್ತಿಯನ್ನು ನಿಲ್ಲಿಸಿ ತಾಂತ್ರಿಕವಾಗಿಯಾದರೂ ಹೊಸತನಕ್ಕೆ ಯತ್ನಿಸಿದರೆ ಅಷ್ಟರ ಮಟ್ಟಿನ ಲಾಭ ಚಿತ್ರರಂಗಕ್ಕೆ ಆಗುತ್ತದೆ. ಕಲಾನಿರ್ದೇಶನ ಚಿತ್ರರಂಗದ ಒಂದು ಆನುಷಂಗಿಕ ತಾಂತ್ರಿಕ ವೃತ್ತಿಯಾಗಿ ಬೆಳೆದಿದ್ದರೂ ಪರಂಪರೆಯಿಂದ ಚಿತ್ರರಂಗಕ್ಕೆ ಅಷ್ಟಾಗಿ ಸಂಬಂಧ ಇಲ್ಲದವರ ಕಲಾದೃಷ್ಟಿ, ಪರಿಣತಿ, ಸೃಜನಾತ್ಮಕ ಆಲೋಚನೆಗಳೂ ಕನ್ನಡದ ಅನೇಕ ಚಿತ್ರಗಳಲ್ಲಿ ಒದಗಿ ಬಂದಿರುವುದನ್ನು ಇಲ್ಲಿ ಉಲ್ಲೇಖಿಸಲೇ ಬೇಕಾಗುತ್ತದೆ.

ಕಲಾವಿದ ಚಂದ್ರನಾಥ ಆಚಾರ್ಯ ಅವರು 'ಅನುರೂಪ', 'ಪಲ್ಲವಿ', 'ಕಾಲೇಜುರಂಗ', 'ಕನ್ನೇಶ್ವರ ರಾಮ', 'ಘಟಶ್ರಾದ್ಧ', 'ಗೀಜಗನ ಗೂಡು', 'ಪ್ರೇಮ ಕಾಮ', 'ಅನುಭವ' ಮೊದಲಾದ ಅನೇಕ ಚಿತ್ರಗಳಲ್ಲಿ ಕಲಾ ವಿಭಾಗದ ಜವಾಬ್ದಾರಿಯನ್ನು ನಿರ್ವಹಿಸಿದ್ದಾರೆ. ಆದರೂ ಅವರನ್ನು ಚಿತ್ರರಂಗದ ಪರಿಭಾಷೆಯಲ್ಲಿ ಕಲಾನಿರ್ದೇಶಕ ಎಂದು ಗುರುತಿಸಲು ಸಾಧ್ಯವಿಲ್ಲ. ಹಾಗೆ ಗುರುತಿಸಿದರೆ ಕಲಾವಿದನಾಗಿ ಅವರಿಗೊಂದು ಮಿತಿಯನ್ನು ಕಲ್ಪಿಸಿದಂತಾಗಬಹುದು. ಚಂದ್ರನಾಥ ಅವರು ಈ ಮೇಲಿನ ಚಿತ್ರಗಳ ಕಲಾನಿರ್ದೇಶನದಲ್ಲಿ shot-by-shot ಭಾಗಿಯಾಗದೆ ಇದ್ದಿರಬಹುದು. ಆದರೆ ಇಡೀ ಚಿತ್ರಕ್ಕೆ ಒಂದು ಆಶಯವನ್ನು ಕೇಂದ್ರೀಕರಿಸುವುದರಲ್ಲಿ ಅವರ ಕಲೆ ಸಹಕಾರಿಯಾಗಿರುವುದನ್ನು ದಾಖಲಿಸಬೇಕಾಗುತ್ತದೆ.

ಇದೇ ರೀತಿ ಜಾನ್ ದೇವರಾಜ್ ಅವರು ತಮ್ಮ ಚಿತ್ರಕಲೆ, ಶಿಲ್ಪಕಲಾ ಪರಿಣತಿಯನ್ನು ಅನೇಕ ಚಿತ್ರಗಳಲ್ಲಿ ನೀಡಿದ್ದಾರೆ. ವಿಶೇಷವಾಗಿ ರವೀ ನಿರ್ದೇಶನದ 'ಹರಕೆಯ ಕುರಿ'. ಹಾಗೆಯೇ ಟಿ.ಎಸ್.ರಂಗಾ ಅವರ ಚಿತ್ರಗಳಿಗೆ ಕೃಷ್ಣ ಪೋತದಾರ್, ಹಲವು ಚಿತ್ರಗಳಿಗೆ ಬಿ.ಕೆ.ಎಸ್.ವರ್ಮ. ಆದರೆ ಇಂಥವರ ಸಂಖ್ಯೆ ಕನ್ನಡದಲ್ಲಿ ಕಡಿಮೆ. ಕಲೆಯ ವಿವಿಧ ಪ್ರಕಾರಗಳಲ್ಲಿ ತಮ್ಮದೇ ಛಾಪು ಮೂಡಿಸಿದ ಸಾಕಷ್ಟು ಪ್ರತಿಭಾವಂತರು ಕರ್ನಾಟಕದಲ್ಲಿದ್ದರೂ ಚಲನಚಿತ್ರ ಮಾಧ್ಯಮದಲ್ಲಿ ಅಂಥವರನ್ನು ಬಳಸಿಕೊಳ್ಳಲು ಮಾಡಿದ ಯತ್ನ ಕಡಿಮೆ ಎಂಬುದನ್ನು ಒಪ್ಪಿಕೊಳ್ಳಬೇಕು.

ಈಗಿನ ಪೀಳಿಗೆಯ ಕಲಾನಿರ್ದೇಶಕರಲ್ಲಿ ಶಶಿಧರ ಅಡಪ ಮತ್ತು ಅರುಣ್ ಕುಮಾರ್ ತಮ್ಮ ವಿಶಿಷ್ಟ ಹಿನ್ನೆಲೆ ಮತ್ತು ಪ್ರಯೋಗಗಳ ಮೂಲಕ ಗಮನ ಸೆಳೆಯುತ್ತಿದ್ದಾರೆ. ಅಡಪರಿಗೆ ಕಲೆ ಮತ್ತು ರಂಗಭೂಮಿ ಇವೆರಡರ ಗಟ್ಟಿ ಹಿನ್ನೆಲೆ ಇದೆ. ಆ ಕ್ಷೇತ್ರದಲ್ಲಿನ ಜ್ಞಾನ ಮತ್ತು ಸೃಜನಾತ್ಮಕ ಚಿಂತನೆಗಳನ್ನು ಚಿತ್ರರಂಗದಲ್ಲಿ ಅಳವಡಿಸಲು ಅವರು ಮಾಡುವ ಪರಿಶ್ರಮ ಅವರ ಕೆಲಸದಲ್ಲಿ ಪ್ರತಿಫಲಿತವಾಗುತ್ತದೆ. ಅರುಣ್ ಕುಮಾರ್ ಕೂಡ ಕಲಾನಿರ್ದೇಶನಕ್ಕೆ ರಂಗಭೂಮಿಯ ಕೊಡುಗೆ. ರಂಗಾಯಣ ರೆಪರ್ಟರಿಯಲ್ಲಿ ಪಳಗಿ, ಚಿತ್ರರಂಗವನ್ನು ವೃತ್ತಿಯಾಗಿ ಅರಸಿ ಬಂದಿರುವ ಅವರು ಇಲ್ಲಿ ಸ್ಥಿರವಾಗಿ ನಿಲ್ಲುವ ಸೂಚನೆಗಳನ್ನು ನೀಡಿದ್ದಾರೆ. 'ಭೂಮಿಗೀತ' ಚಿತ್ರಕ್ಕೆ ಅವರು ಮುತ್ತತ್ತಿಯ ಸಮೀಪದ ಕಾವೇರಿ ತೀರದಲ್ಲಿ ನಿರ್ಮಿಸಿದ ಸೆಟ್ ದಾಖಲಿಸಬೇಕಾದ ಅನೇಕ ಅಂಶಗಳನ್ನು ಒಳಗೊಂಡಿದೆ. ಬುಡಕಟ್ಟು ಜನಾಂಗದ ಹಾಡಿಯನ್ನು ನಿರ್ಮಿಸಲು ಅವರು ಆಯ್ದುಕೊಂಡಿದ್ದು ತುಂಬ ಸಹಜವಾದ ಪರಿಸರ, ಪರಿಕರ. ಬಿತ್ತದ ಬುಟ್ಟಿ, ತಟ್ಟಿ, ಚಾಪೆ ಮೊದಲಾದವುಗಳನ್ನು ಅತ್ಯಂತ ಕೌಶಲದಿಂದ ಹೆಣೆಯಬಲ್ಲ ೯೦ ವರ್ಷದ ವೃದ್ಧನೊಬ್ಬನನ್ನು ಅರುಣ್ ಕುಮಾರ್ ಈ ಚಿತ್ರಕ್ಕಾಗಿ ತಿಂಗಳುಗಟ್ಟಲೆ ಬಳಸಿಕೊಂಡರು.

(ಚಿತ್ರ ೧೫) ಹೊರಾಂಗಣದಲ್ಲಿ ನಿರ್ಮಾಣವಾದ ರವಿಚಂದ್ರನ್ ಅವರ 'ಕಲಾವಿದ' ಚಿತ್ರದ ಕಲಾತ್ಮಕ ಸೆಟ್

ಇಂಥ ಜನಪದೀಯ ಕಲಾತ್ಮಕ ಪ್ರತಿಭೆಗಳನ್ನು ಚಿತ್ರವೊಂದರ ಕಲಾತ್ಮಕ ಆವರಣಕ್ಕೆ ತಾದಾತ್ಮ್ಯಗೊಳಿಸುವಂತಹ ಯತ್ನ ತಡವಾಗಿಯಾದರೂ ನಡೆಯುತ್ತಿರುವುದು ಆಶಾದಾಯಕವಾದ ಬೆಳವಣಿಗೆ.

ಕಲಾನಿರ್ದೇಶಕ ಕೃಷ್ಣಾಚಾರ್ ಅವರು ಕೇಶವರಾವ್ ಅವರ ಸಹಾಯಕರಾಗಿ ಕೆಲಸ ಮಾಡಿದರು. ಕುದರವಳ್ಳಿ ನಾಗೇಶ್ವರರಾವ್ ಅವರೊಂದಿಗೂ ಕೆಲಸ ಮಾಡಿದ್ದುಂಟು.

''ಪ್ರೀಮಿಯರ್ ಸ್ಟುಡಿಯೋದಲ್ಲಿ ರಮೇಶ್ ಕಲಾನಿರ್ದೇಶಕರಾಗಿದ್ದರು. 'ಗಂಧದಗುಡಿ' ಚಿತ್ರಕ್ಕೆ ಫಾರೆಸ್ಟ್ ಹೋಮ್ಸ್, ಗಂಧದ ಸಾಗಣೆ ಆಫೀಸ್ ಅನ್ನು ಕ್ರಿಯೇಟ್ ಮಾಡಬೇಕಿತ್ತು. ದಿನಕ್ಕೆ ಐದು ರೂಪಾಯಿ ಕೂಲಿಗೆ ಮಾತಾಡಿ ಹದಿನೈದು ಜನ ಕೆಲಸ ಮಾಡಿದೆವು. ಹದಿನೈದು ದಿನಗಳಲ್ಲಿ ಮುಗಿಸಿದೆವು. ಪ್ರೀಮಿಯರ್‌ನಲ್ಲಿ ದಿನಕ್ಕೆ ನಾಲ್ಕು ರೂಪಾಯಿ ಕೂಲಿ ಇದದ್ದು, ಇದಕ್ಕೆ ಐದು ರೂಪಾಯಿ ಕೊಟ್ಟಾಗ ಕೆಲಸಗಾರಿಕೆಗೆ ಅದೇ ದೊಡ್ಡ ನಿಧಿ ಅನ್ನಿಸಿತ್ತು. ಬಸವರಾಜಯ್ಯನವರಿಂದ ಸ್ಟುಡಿಯೋ ಬಿಟ್ಟು ಹೊರಗೆ ಕೆಲಸ ಮಾಡಿದ್ದಕ್ಕೆ ಬೈಸಿಕೊಂಡದ್ದುಂಟು. ಮತ್ತೆ 'ಕೌಬಾಯ್ ಕುಳ್ಳ'ಕ್ಕೆ ಕರೆದು ಸೆಟ್ ಹಾಕಿಸಿದರು. ಕೇಶವರಾವ್ ಚಾಮುಂಡೇಶ್ವರಿಯಲ್ಲಿ ಸೆಟ್ ಹಾಕಲು ಕರೆಸಿದಾಗ ಚಾಮುಂಡೇಶ್ವರಿಯ ಕಲಾನಿರ್ದೇಶಕ ಜಾನ್ ಅವರು ನನ್ನನ್ನು ಅಲ್ಲೇ ಉಳಿಸಿಕೊಂಡರು'' ಎಂದು ತಮ್ಮ ಬದುಕಿನ ವಿವರ, ಆ ದಿನಗಳ ಆರ್ಥಿಕ ಸ್ಥಿತಿ ವಿವರಿಸುವ ಕೃಷ್ಣಾಚಾರ್ ಮುರಳಿ ಮೋಹನ್ ಪ್ರೊಡಕ್ಷನ್‌ರವರ 'ಹದ್ದಿನ ಕಣ್ಣು'ಗೆ ಕಲಾನಿರ್ದೇಶನ ಮಾಡಿದರು. ಸಿಂಗ್ ಬ್ರದರ್ಸ್ ನಿರ್ಮಾಣದ 'ಕಲಿಯುಗ' ಇತ್ಯಾದಿಗಳಿಗೆ ಮಾಡಿದರೂ 'ಗಂಧದಗುಡಿ' ಸೆಟ್ ಅವರಿಗೆ ಮರೆಯಲಾಗದ ಅನುಭವ. ಪ್ರಾಣಿಗಳ ಜೊತೆ ಕೆಲಸ ಮಾಡುವುದು ಕಷ್ಟ. ಸಹಜವೆಂಬಂತೆ ಗುಡಿಸಲು ಹಾಕಿ ಏಜಿಂಗ್ ಮಾಡಿದ್ದು, ಆಗ ಜೊತೆಗಿದ್ದ ಸಿದ್ದು, ಸಣ್ಣಪ್ಪ, ಪೈಂಟರ್, ಮೇಸ್ತ್ರಿ ಪಾಪಾಚಾರಿ ಎಲ್ಲರೂ ಅದಕ್ಕೊಂದು ಜೀವ ತುಂಬುತ್ತಿದ್ದುದನ್ನು ನೆನೆಯುತ್ತಾರೆ. ಇಷ್ಟಾದರೂ ಕಲಾನಿರ್ದೇಶನದ ಬಗ್ಗೆ ಆಳವಾದ ಅಭ್ಯಾಸ-ತಿಳುವಳಿಕೆ ಇದ್ದ ಜನ ಇರಲಿಲ್ಲ ಎನ್ನುತ್ತಾರೆ.

''ರಾಷ್ಟ್ರಗೀತೆ'ಗೆ ಹಾಕಿದ ಬೀದಿ ಸೆಟ್, ಪ್ರೀಮಿಯರ್‌ನಲ್ಲಿ 'ರಾಜ ಮಹಾರಾಜ' ಚಿತ್ರದ 'ಕೋಳಿ ಮಸಾಲೆ' ಹಾಡಿಗೆ ಹಾಕಿದ್ದ ಸೆಟ್, ಬಂಗಲೆ ಸೆಟ್‌ಗೆ ೮೫,೦೦೦ ರೂ. ಖರ್ಚಾದದ್ದು, ಹದಿನೈದು ದಿನದಲ್ಲಿ ಮುಗಿಸಿದ್ದು ಹೇಳುತ್ತಾರೆ. ''ಮೊದಲೆಲ್ಲ ಕಲಾನಿರ್ದೇಶಕರು ಮದರಾಸಿನಿಂದಲೇ ಬರಬೇಕಾಗಿತ್ತು. ಅಂಥ ಪರಿಸ್ಥಿತಿ ಈಗ ಇಲ್ಲ. ಆದರೆ ಕಲಾನಿರ್ದೇಶನ ಅನ್ನುವುದಕ್ಕೆ ಅಂಥ ಗೌರವ ಪರಿಗಣನೆ ಇದೆ ಅನ್ನಿಸುವುದಿಲ್ಲ. ಬಿ.ಆರ್. ರವಿಚಂದ್ರನ್, ಬಿ.ಜಿ. ಜಯಶ್ರೀದೇವಿ ಇರಬಹುದು.. ಎಲ್ಲರೂ ಸೆಟ್ಸ್‌ಗೆ ಖರ್ಚು ಮಾಡೋದಿಲ್ಲ.

''ಹಿಂದೆ ಮದರಾಸಿನಿಂದ ಬರುತ್ತಿದ್ದ ಮಾಣಿಕ್ಯಂ ಎಂಬ ಕಲಾನಿರ್ದೇಶಕರು ಹಿನ್ನೆಲೆ ಕಲಾನಿರ್ದೇಶಕರು. ಅಂದರೆ ಹಿನ್ನೆಲೆಗೆ ಗೋಡೆ, ಆಕಾಶ ಇತ್ಯಾದಿಗಳ ಎಫೆಕ್ಟ್ ತರೋದು. ಆತ ಒಂದು ದಿನದಲ್ಲಿ ಆ ಕೆಲಸ ಮುಗಿಸಿಕೊಡುವಷ್ಟು ಸಮರ್ಥರಿದ್ದರು. ಅಂತಹ ಪರಿಣತರು ನಮ್ಮಲ್ಲಿ ಇಲ್ಲ. ಈಗಲೂ ಅಂಥವರನ್ನು ಕರೆಸುವ ಸ್ಥಿತಿ ಬಂದು ಬಿಡುತ್ತೆ. ಆದರೆ ಅವರೆಲ್ಲ ಬಹಳ ಜಾಸ್ತಿ ಸಂಭಾವನೆ ಕೇಳುತ್ತಾರೆ. ಈಚೆಗೆ ಅನಿವಾರ್ಯವಾಗಿ 'ಓ ಪ್ರೇಮವೆ' ಚಿತ್ರಕ್ಕೆ ಒಂದು ಜಲಪಾತ ಮಾಡಿ, ಅದರ ಹಿನ್ನೆಲೆಗೆ ಬೆಟ್ಟ, ಮರ, ಇತ್ಯಾದಿ ಪೈಂಟ್ ಮಾಡಿ ಮ್ಯಾಚ್ ನಾವೇ ಮಾಡಿದೆವು, ಮದರಾಸಿನಿಂದ ಕರೆಸಲಿಲ್ಲ. ಆದರೆ ಈ ಬ್ಯಾಕ್‌ಗ್ರೌಂಡ್ ಪೈಂಟರ್ಸ್ ನಮ್ಮಲ್ಲಿ ಇಲ್ಲ ಅನ್ನೋದು ಸತ್ಯ ಸಂಗತಿ. ನಮ್ಮಲ್ಲಿರುವ ಪ್ರತಿಭಾವಂತ ಕಲಾವಿದರು ಇಂಥದನ್ನೆಲ್ಲ ಮಾಡುವುದಿಲ್ಲ. ನಿಸ್ಪೃಹವಾಗಿ ಕೆಲಸ ಮಾಡಲು ಅವರಿಗೆ ಇಷ್ಟವಿಲ್ಲ. ಕಪ್ಪು-ಬಿಳುಪು ಹಿನ್ನೆಲೆಯಲ್ಲಿ ಹಾಡುಗಳ ಚಿತ್ರೀಕರಣ, 'ಭಕ್ತ ಸಿರಿಯಾಳ'ಕ್ಕೆ ಮಾಡಿದ ಸೆಟ್ಸ್, 'ಕುದುರೆ ಮುಖ' ಚಿತ್ರಕ್ಕೆ ನೀರಿನ ಮೇಲೆ ಮನೆ ಸೆಟ್ ಹಾಕಿದ್ದು, 'ಮಲ್ಲಿಗೆ ಹೂವೇ'ಗೆ ಹಾಕಿದ ಸೆಟ್‌ಗಳ ಕುರಿತು ಹೇಳುತ್ತಲೇ 'ಸನಾದಿ ಅಪ್ಪಣ್ಣ'ಕ್ಕೆ ಜರೀ ಮೌಲ್ಡ್ ಮಾಡಿದ್ದೆವು, ಈಗ ಅದು ಬೆಲೆ ಜಾಸ್ತಿ ಅಂತ ಯಾರೂ ಮಾಡುವುದಿಲ್ಲ'' ಅನ್ನುತ್ತಾರೆ.

ಗುಹೆಗಳು, ಬಂಡೆಗಳು ಇವನ್ನೆಲ್ಲ ಪೇಪರ್ ಮ್ಯಾಷ್‌ನಲ್ಲಿ ಮಾಡುತ್ತಾರೆ. ಹಿಂದೆ ಪ್ಲಾಸ್ಟರ್ ಆಫ್ ಪ್ಯಾರಿಸ್‌ನಲ್ಲಿ ಮಾಡುವುದಿತ್ತು. ಸಾಮಾನ್ಯವಾಗಿ ಜರೀ ಮನೆ, ಮನೆಯೊಳಗಿನ ಪರಿಕರ ಜೋಡಿಸೋದಷ್ಟೇ ಅಲ್ಲ, ರಸ್ತೆಯಲ್ಲಿ ಫೈಟಿಂಗ್ ಇತ್ಯಾದಿ ಇದ್ದಾಗ ಸಾಹಸ ನಿರ್ದೇಶಕರ ಕಲ್ಪನೆಯನ್ನು ತಿಳಿದು ತಳ್ಳುಗಾಡೀಲಿ ತರಕಾರಿಗಳು, ಕಡಲೆಪುರಿ, ಹಣ್ಣುಗಳು, ಜೋಡಿಸಿಟ್ಟ ಮಡಿಕೆಗಳು ಇವೆಲ್ಲ ಸಿದ್ಧ ಮಾಡೋದೂ ಕಲಾನಿರ್ದೇಶಕರೆ. ಒಮ್ಮೊಮ್ಮೆ ಮಾರ್ಕೆಟ್‌ನಂಥ ವಾತಾವರಣ ತರಬೇಕಾಗುತ್ತದೆ. ಕಲ್ಲು ತೂರುವ ಸನ್ನಿವೇಶಗಳಲ್ಲಿ ಕಲ್ಲುಗಳನ್ನು ಸಹ ಪೇಪರ್ ಮ್ಯಾಷ್‌ನಲ್ಲಿ ತಯಾರಿಸುತ್ತೇವೆ. ಇಲ್ಲವಾದರೆ ಪೆಟ್ಟು ಬೀಳುತ್ತದೆ. ಇವೆಲ್ಲ ಸಾಮಾನ್ಯವಾಗಿ ಛಾಯಾಗ್ರಾಹಕ, ನಿರ್ದೇಶಕರ ಜೊತೆ ಕುಳಿತು ಚರ್ಚೆ ಮಾಡದೆ ಸಾಧ್ಯವಾಗುವುದಿಲ್ಲ. ಬೆಂಕಿ ಬೀಳುವ ಸೀನ್‌ಗಳು, ನೀರಿನ ಮೇಲೆ ಸೇತುವೆ, ಉಯ್ಯಾಲೆ, ಕಾಡುಗಳಲ್ಲಿ ಚಿತ್ರೀಕರಿಸುವಂಥವಕ್ಕೆ ಇವೆಲ್ಲ ಇದ್ದಾಗ ತುಂಬಾ ಕೆಲಸ ಇರುತ್ತದೆ. ಅಪಾಯ ಆಗದ ಹಾಗೆ ಸಿದ್ಧ ಮಾಡೋದು ಬಹಳ ಮುಖ್ಯ.

೩೫ ಎಂ.ಎಂ.ಗೂ ಸಿನಿಮಾಸ್ಕೋಪ್‌ಗೂ ಸೆಟ್ ಹಾಕುವಾಗ ಬಹಳ ಎಚ್ಚರಿಕೆ ಬೇಕಾಗುತ್ತದೆ. ಸ್ಕೋಪ್‌ಗೆ ಎತ್ತರ ಕಡಿಮೆ ಇಡಬೇಕಾಗುತ್ತದೆ. ಇವೆಲ್ಲ ಕೆಲವು ಸರಳ, ಆದರೆ ಎಚ್ಚರಿಕೆಯಿಂದ ಮಾಡಬೇಕಾದ ಕೆಲಸಗಳು ಎಂದು ವಿವರಿಸುತ್ತಾರೆ ಕೃಷ್ಣಾಚಾರ್. ಹಾಗೆ ಅವರು ನೂರಾರು ಚಿತ್ರಗಳಿಗೆ ಕಲಾನಿರ್ದೇಶನ ಮಾಡಿರಬೇಕು. ಅವರ ಅನುಭವವೇ ಅತ್ಯಂತ ರೋಚಕವಾದ್ದು. ಅವರು ಒಂದು ಚಿತ್ರಕ್ಕೆ ಮೇಕೆದಾಟು ಹೊಳೆ ಹತ್ತಿರ ಒಂದು ಮನೆಯ ಸೆಟ್ ಹಾಕಿದರು. ಇಷ್ಟು ಮಟ್ಟ ನೀರಿನವರೆಗೆ ಆಳ ಇಲ್ಲ ಎಂಬ ಲೆಕ್ಕಾಚಾರವಿತ್ತು. ಕನ್ನಂಬಾಡಿಯಲ್ಲಿ ನೀರು ಹೆಚ್ಚಾಗಿದ್ದರಿಂದ ಗೇಟ್ ತೆಗೆದುಬಿಟ್ಟಿರು. ನೀರಿನ ಮಟ್ಟ ಲೆಕ್ಕಾಚಾರ ಮೀರಿ ಉಕ್ಕಿದ ಪರಿಣಾಮವಾಗಿ ಇಡೀ ಸೆಟ್ ಕೊಚ್ಚಿಕೊಂಡು ಹೋಗಿತ್ತು.

ರವಿಚಂದ್ರನ್ ಚಿತ್ರಗಳಲ್ಲಿ ಕಲಾನಿರ್ದೇಶಕನಿಗೆ ಹಬ್ಬ. ರವಿಚಂದ್ರನ್ ಆ ಕಲಾವಿದನ ಎಲ್ಲ ಸಾಮರ್ಥ್ಯವನ್ನು ದುಡಿಸಿಕೊಳ್ಳುವ ಕನಸುಗಾರ. ಆದರಿಂದ ಮಾಡಿದ ಕೆಲಸದಲ್ಲಿ ಅಪಾರ ತೃಪ್ತಿ ಇರುತ್ತದೆ. ರವಿಚಂದ್ರನ್ ಅವರ ಚಿತ್ರಗಳಿಗೆ ಕಲಾನಿರ್ದೇಶನ ಮಾಡಿರುವ ರಮೇಶ್, ನಜೀರ್, ಇಸ್ಮಾಯಿಲ್, ಅರುಣ್ ಕುಮಾರ್ ಅವರುಗಳು ಪ್ರತಿಯೊಂದು ಚಿತ್ರದಲ್ಲೂ ತಮ್ಮ ಸಾಮರ್ಥ್ಯ ಮೆರೆದಿದ್ದಾರೆ. ಪ್ರಶಸ್ತಿಗಳು ಸಹಜವಾಗೇ ಬಂದಿವೆ.

ಕಲಾನಿರ್ದೇಶನದ ಈ ಎಲ್ಲ ಸಾಧ್ಯತೆಗಳ ಜೊತೆಗೆ ಇಂದಿನ ಕಂಪ್ಯೂಟರ್ ಆಧಾರಿತ ತಾಂತ್ರಿಕ ಮುನ್ನಡೆ ಈ ಕ್ಷೇತ್ರದ ದಿಗಂತವನ್ನು ಅನಂತವಾಗಿ ವಿಸ್ತರಿಸಿವೆ. ಡಿಜಿಟಲ್ ಗ್ರಾಫಿಕ್ಸ್ ಮತ್ತು ಎಫೆಕ್ಟ್ ತಂತ್ರಜ್ಞಾನ ಚಿತ್ರ ನಿರ್ಮಾಣದ ಹಾದಿಯನ್ನೇ ಬದಲಿಸುತ್ತಿದೆ. ಆದರೆ ಅದಕ್ಕೆ ಸಂವಾದಿಯಾದ ತಾಂತ್ರಿಕ ಜ್ಞಾನ, ಸ್ಟುಡಿಯೋ ಮತ್ತು ಪರಿಣತಿ ಸದ್ಯಕ್ಕಂತೂ ಕನ್ನಡ ಚಿತ್ರರಂಗಕ್ಕೆ ಎಟುಕಲಾರದಂಥ ಸ್ಥಿತಿ ಇದೆ. ಈ ಹಿನ್ನೆಲೆಯಲ್ಲಿ ಗ್ರಾಫಿಕ್ಸ್‌ಗಳ ಬಳಕೆಯ ಯಶಸ್ಸು ಮತ್ತು ಪರಿಪೂರ್ಣತೆಯ ಕುರಿತು ಯಾವುದೇ ಚರ್ಚೆ ಆರಂಭಿಸುವುದು ಅವಸರದ ಕ್ರಮವಾದೀತು. ಕಲಾನಿರ್ದೇಶನಕ್ಕೆ ಸಂಬಂಧಪಟ್ಟ ಹೊಸ ತಂತ್ರಜ್ಞಾನವನ್ನು ಕನ್ನಡ ಚಿತ್ರರಂಗ ಹೇಗೆ ಅರಗಿಸಿಕೊಂಡೀತು ಎಂಬುದು ಸದ್ಯಕ್ಕೆ ಒಂದು ಕುತೂಹಲದ ಸಂಗತಿ ಮಾತ್ರವಾಗಿದೆ. ಕಾಲವೇ ಅದನ್ನು ನಿರ್ಧರಿಸಬೇಕು.



ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಅಂಕುಶ

ಸೆನ್ಸಾರ್ ! ಈ ಪದ ಚಾಲ್ತಿಗೆ ಬಂದಂದಿನಿಂದ ಕತ್ತರಿ ಪ್ರಯೋಗ ಎಂಬ ಅರ್ಥವನ್ನೇ ಪಡೆದುಕೊಂಡಿದೆ. ಇದು ಚಲನಚಿತ್ರಕ್ಕೆ ಸಂಬಂಧಿಸಿದಂತೆ ಇಂದು ಆಡು ಭಾಷೆಯಲ್ಲಿ ಉಳಿದುಕೊಂಡಿದೆಯೇ ಹೊರತು ಕಾಯ್ದೆಯಲ್ಲಿ ಈ ಶಬ್ದದ ಪ್ರಯೋಗ ಇಲ್ಲ. ಪುಸ್ತಕ, ಪತ್ರಿಕೆಯ ಪ್ರಕಟಣೆಯ ಮುನ್ನ ಅಥವಾ ನಾಟಕ, ಚಿತ್ರಗಳ ಪ್ರದರ್ಶನದ ಮುನ್ನ ಪರೀಕ್ಷಿಸುವ ಅಧಿಕಾರ ಅಥವಾ ಪರೀಕ್ಷಿಸುವುದನ್ನು ಸೆನ್ಸಾರ್ ಎಂದು ಕರೆಯಬಹುದಾದರೂ ಕಡೆಗೂ ಇದು ಕತ್ತರಿ ಪ್ರಯೋಗ ಎಂಬ ಅನ್ವರ್ಥ ನಾಮ ಪಡೆದು ಉಳಿದುಕೊಂಡಿದ್ದು ಚಿತ್ರರಂಗದಲ್ಲಿ. ಇದು ಒಂದು ರೀತಿಯ ದೋಷಾನ್ವೇಷಣೆಯ ಕಲಸ.

ಮಾಧ್ಯಮಗಳಿಗೆ ತಮ್ಮದೇ ಆದ ಹಕ್ಕು, ಬಾಧ್ಯತೆಗಳು ಇರುತ್ತವೆ. ಜನ ಸಾಮಾನ್ಯರನ್ನು ತಲುಪಿ, ಜಾಗೃತಿಯನ್ನು ಮೂಡಿಸುವುದು, ಸುದ್ದಿ ಹರಡಿಸುವುದು, ಪ್ರಚಾರ ಮಾಡುವುದು ಹಾಗೂ ಮನೋರಂಜನ ನೀಡುವುದರ ಮುಖಾಂತರ ವಿವಿಧ ಮಾಧ್ಯಮಗಳು ಅನೇಕ ರೀತಿಯಲ್ಲಿ ತೊಡಗಿಕೊಂಡಿವೆ. ಆದರೆ ಇವೆಲ್ಲಕ್ಕೂ ಕಾನೂನಿನ ಹೊರತಾಗಿಯೂ ಸಾಮಾಜಿಕ ಹಾಗೂ ನೈತಿಕ ಜವಾಬ್ದಾರಿಗಳಿರಲೇಬೇಕು. ಇದರೊಂದಿಗೆ ರಾಜಕೀಯ ಹಾಗೂ ಆರ್ಥಿಕ ಕಾರಣಗಳು, ಪರಿಣಾಮಗಳು ಇದ್ದೇ ಇರುತ್ತವೆ. ಇವೆಲ್ಲವೂ ಯಾವುದೋ ಒಂದು ಹಂತದಲ್ಲಿ ಸಡಿಲಗೊಂಡಾಗ, ಜವಾಬ್ದಾರಿಗಳಿಂದ ಜಾರಿಕೊಳ್ಳುವ ಜಾಣ್ಮೆ ಕಂಡುಕೊಂಡಾಗ ಸಮಾಜದ ಮೇಲೆ ದುಷ್ಪರಿಣಾಮ ಬೀರುವ ಅಪಾಯವಿರುತ್ತದೆ. ಈ ಆಧುನಿಕ ಯುಗದಲ್ಲಿ ಇಂಥ ಪ್ರಕ್ರಿಯೆಗಳು ಹೆಚ್ಚಾಗುತ್ತಿರುವ ಸಂದರ್ಭದಲ್ಲಿ ಮುಖ್ಯವಾಗಿ ಮಾಧ್ಯಮಗಳಿಗೆ ಜವಾಬ್ದಾರಿಯನ್ನು ನಿರ್ವಹಿಸಲು ನೈತಿಕತೆ ಸಾಕಾಗದೆ ಹೋದಾಗ, ಅಲ್ಲಿ ಅನಿವಾರ್ಯವಾಗಿ ಕಾನೂನಿನ ಪ್ರವೇಶವಾಗಲೇ ಬೇಕಾಗುತ್ತದೆ. ಇದು ಅನೇಕ ಕ್ಷೇತ್ರಗಳಲ್ಲಿ ಅನೇಕ ಅರ್ಥಗಳನ್ನು ಕಂಡುಕೊಂಡಿದೆಯಾದರೂ ಸೆನ್ಸಾರ್‌ನ ಒಟ್ಟಾರೆ ಅರ್ಥ ಇದಕ್ಕಿಂತ ಭಿನ್ನವಲ್ಲ.

ಇಲ್ಲಿ ಮುಖ್ಯವಾಗಿ ಹೇಳ ಹೊರಟಿರುವುದು ಸಿನಿಮಾ ಸೆನ್ಸಾರ್‌ನ ಬಗ್ಗೆ. ಚಿತ್ರೀಕರಣದ ನಂತರ ಒಮ್ಮೆ ಸಂಕಲನಗೊಂಡು ಪ್ರದರ್ಶನಕ್ಕೆ ಸಿದ್ಧವಾದರೂ ಅದಕ್ಕೂ ಮುನ್ನ ಚಿತ್ರ ಸೆನ್ಸಾರ್ ವೀಕ್ಷಣೆಗೆ ಹೋಗಬೇಕಾಗುತ್ತದೆ. ಚಿತ್ರದಲ್ಲಿ ಸಮಾಜದ ಮೇಲೆ, ವೀಕ್ಷಕರ ಮೇಲೆ ಯಾವುದೇ ರೀತಿಯಲ್ಲಿ ಕೆಟ್ಟ ಪರಿಣಾಮ ಬೀರುವ ಅಂಶವಿದ್ದರೂ ಅದನ್ನು ಕತ್ತರಿಸಲು ಆದೇಶಿಸಲಾಗುತ್ತದೆ. ಹಾಗಾಗಿ 'ಸೆನ್ಸಾರ್' ಎಂದರೆ ಕತ್ತರಿ ಪ್ರಯೋಗ ಎಂಬ ಅರ್ಥವನ್ನೇ ಪಡೆದುಕೊಂಡಿದೆ. ಆರಂಭದಿಂದಲೂ ಹಲವಾರು ಅವತಾರಗಳೊಂದಿಗೆ ಬಂದಿರುವ ಸೆನ್ಸಾರ್ ಈಗ ಸೆನ್ಸಾರ್ ಎಂಬ ಪದವನ್ನೇ ಕಳೆದುಕೊಂಡು ೧೯೫೨ರಲ್ಲಿ ಬಂದ ಸಿನಿಮಾಟೊಗ್ರಾಫ್ ಆ್ಯಕ್ಟ್ (37 of 1952) ನಂತೆ ಸೆಂಟ್ರಲ್ ಬೋರ್ಡ್ ಆಫ್ ಫಿಲ್ಮ್ ಸರ್ಟಿಫಿಕೇಶನ್ ಎಂದಾಗಿದರೂ ಚಾಲ್ತಿಯಲ್ಲಿ ಮಾತ್ರ ಸೆನ್ಸಾರ್ ಪದದ ಬಳಕೆಯಿದೆ.

ಸಾಮಾಜಿಕ ಹಿತದೃಷ್ಟಿಯಿಂದ ಈ ಕಾನೂನು ರೂಪಿತಗೊಂಡಿದೆಯಾದರೂ ಚಿತ್ರರಂಗದವರ ಪಾಲಿಗೆ ಇದೊಂದು ಕಹಿ ಅನುಭವವಾಗಿಯೇ ಮಾರ್ಪಟ್ಟಿದೆ. ಇಂದು ಸಿನಿಮಾ ಒಂದು ಪ್ರಭಾವಶಾಲಿ ಮಾಧ್ಯಮವಾಗಿ ಜನರನ್ನು ತಲುಪಿದೆ ಎಂದರೆ ಅದಕ್ಕೆ ಮನೋರಂಜನೆಯೊಂದೇ ಕಾರಣವಲ್ಲ. ಅವಿದ್ಯಾವಂತರನ್ನು, ಅಜ್ಞಾನಿಗಳನ್ನು ಕೂಡ ಈ ಮಾಧ್ಯಮ ಸುಲಭವಾಗಿ ತಲುಪುತ್ತದೆ ಎನ್ನುವುದೂ ಕಾರಣವಾಗಿದೆ. ವಾಸ್ತವದಲ್ಲಿ ಇದೊಂದು ಸತ್ವಯುತ ಕಲಾ ಮಾಧ್ಯಮವೇ ಆದರೂ ದಿನಗಳು ಕಳೆದಂತೆ ವ್ಯಾವಹಾರಿಕ ಮಾರುಕಟ್ಟೆಯಾಗಿ ಪರಿವರ್ತಿತಗೊಂಡು ಇರಬೇಕಾದ ಜವಾಬ್ದಾರಿಗಳು ಸಡಿಲಾಗಿ ಆರ್ಥಿಕ ವಿಷಯವೇ ಇಲ್ಲಿ ಪ್ರಾಮುಖ್ಯ ಪಡೆಯುತ್ತ ಬಂದಿತು. ಜನರನ್ನು ಸೆಳೆಯಲು ನಾನಾ ತಂತ್ರಗಳನ್ನು ಹೂಡಲಾಯಿತು. ಇದರಲ್ಲಿ ಲೈಂಗಿಕ ಅಶ್ಲೀಲದಿಂದ ಹಿಡಿದು, ಹಿಂಸೆ, ಅಸಭ್ಯತನ, ಕ್ರೂರತನ, ಮುಂತಾದ ಮಾರಕ ಪ್ರಯೋಗಗಳು ಆರಂಭವಾದವು. ಎಲ್ಲಾ ಕ್ಷೇತ್ರಗಳಲ್ಲೂ ಕಾಲಕಾಲಕ್ಕೆ ಬದಲಾವಣೆ ಅನಿವಾರ್ಯವಾದರೂ ಜನರನ್ನು ಕೆಟ್ಟ ಹಾದಿಯಲ್ಲಿ ನಡೆಯಲು ಪ್ರೇರೇಪಿಸುವುದನ್ನು ತಡೆಯಲೋಸುಗ ಇಂಥ ಕಾನೂನುಗಳು ಸೃಷ್ಟಿಯಾಗುತ್ತವೆ. ಆದ್ದರಿಂದ ಇದು ಚಿತ್ರ ನಿರ್ಮಾಪಕರ ಪಾಲಿಗೆ ಕಹಿ ಅನುಭವವಾಗುತ್ತದೆ. ಹಾಗಾಗಿ ಈಗಲೂ ಸೆನ್ಸಾರ್ ಬೇಕೇ ಬೇಡವೇ ಎನ್ನುವ ಬಗ್ಗೆ ವಾದಗಳು ನಡೆಯುತ್ತಲೇ ಇರುತ್ತವೆ. ಈ ವಾದದಲ್ಲಿ ಹುರುಳಿಲ್ಲ ಎನ್ನುವಂತಿಲ್ಲವಾದರೂ ಚಿತ್ರಗಳನ್ನು ಸಾರ್ವಜನಿಕ ಪ್ರದರ್ಶನಕ್ಕೂ ಮೊದಲು ವೀಕ್ಷಿಸಿ ಕೆಟ್ಟ ಅಂಶಗಳನ್ನು ಕತ್ತರಿಸುವ ಕ್ರಮವಿಲ್ಲದೆ ಹೋದರೆ ನಮ್ಮ ಚಿತ್ರಗಳ ಗುಣಮಟ್ಟ ಇನ್ಯಾವ ಮಟ್ಟಕ್ಕೆ ಇಳಿಯುತ್ತದೆಯೋ ಊಹಿಸಲೂ ಸಾಧ್ಯವಿಲ್ಲ.

ಭಾರತದಲ್ಲಿ ವಾಕ್ಚಿತ್ರಗಳು ಬರುವ ಮೊದಲೇ ತನ್ನದೇ ಆದ ರೀತಿಯಲ್ಲಿ ಸೆನ್ಸಾರ್ ಕಾಯ್ದೆ ರೂಪುಗೊಂಡಿತ್ತು. ಆಗ ಈಗಿನಂತೆ ಅಧಿಕೃತವಾದ ಕಾಯ್ದೆ ಜಾರಿಯಲ್ಲಿಲ್ಲದೆ ಹೋದರೂ, ೧೯೧೮ರಲ್ಲಿ ಸಿನಿಮಾಟೋಗ್ರಾಫ್ ಆ್ಯಕ್ಟ್ ಜಾರಿಗೆ ಬಂದಿತು. ಈ ಕಾನೂನಿನಡಿ ಚಿತ್ರಗಳನ್ನು ವೀಕ್ಷಿಸಿ ಸಾರ್ವಜನಿಕ ಪ್ರದರ್ಶನಕ್ಕೆ ಯೋಗ್ಯವಾಗಿದೆಯೋ, ಇಲ್ಲವೋ ಎಂದು ನಿರ್ಧರಿಸುವುದು ಮಾತ್ರವಲ್ಲದೆ ಚಿತ್ರಮಂದಿರದ ನಿರ್ಮಾಣಕ್ಕೆ ಅನುಮತಿ ನೀಡುವ ಅಂಶವೂ ಸೇರಿಕೊಂಡಿತ್ತು. ಆಗ ಬ್ರಿಟಿಷರ ಆಳ್ವಿಕೆಯಾದುದರಿಂದ ಪ್ರದರ್ಶನಕ್ಕೆ ಯೋಗ್ಯವಲ್ಲದ ಚಿತ್ರಗಳೆಂದರೆ ಭಾರತೀಯ ಚಿತ್ರಗಳಲ್ಲಿ ಪಾಶ್ಚಾತ್ಯರನ್ನು ನಿಂದಿಸುವ, ಅವಮಾನಿಸುವ, ಅಗೌರವಿಸುವ ದೃಶ್ಯಗಳಿರುವ ಚಿತ್ರಗಳು. ಭಾರತೀಯರ ದೇಶಪ್ರೇಮದ ಚಿತ್ರಗಳಾದರೆ ಅವು ಆಗ ಪ್ರದರ್ಶನಕ್ಕೆ ಬರುವುದು ಸಾಧ್ಯವಾಗುತ್ತಿರಲಿಲ್ಲ. ಆದರೂ ಆಗ ಚಲನಚಿತ್ರದ ಕಲ್ಪನೆ ಇಷ್ಟು ಮುಂದುವರಿಯದೆ ಇದ್ದುದರಿಂದ ಕೇವಲ ಪೌರಾಣಿಕ ಚಿತ್ರಗಳು ಬರುತ್ತಿದ್ದವು. ಅವುಗಳಂತೂ ಸೆನ್ಸಾರ್ ವಿವಾದಕ್ಕೆ ಸಿಲುಕುವ ಸಾಧ್ಯತೆಯಿರಲಿಲ್ಲ. ಅಲ್ಲದೆ ಆಗ ಚಿತ್ರಗಳ ತಯಾರಿಕೆಯ ಸಂಖ್ಯೆಯೂ ಬೆರಳೆಣಿಕೆಯಷ್ಟಿತ್ತು.

೧೯೨೦ರಲ್ಲಿ ಇದೇ ಕಾನೂನನ್ನು ಒಳಗೊಂಡ ಫಿಲ್ಮ್ ಸೆನ್ಸಾರ್ ಮಂಡಳಿಯ ಕಛೇರಿಗಳು ಮುಂಬಯಿ, ಕಲಕತ್ತಾ ಹಾಗೂ ಮದರಾಸುಗಳಲ್ಲಿ ಸ್ಥಾಪಿತವಾದವು. ಭಾರತದಲ್ಲಿ ಬ್ರಿಟಿಷ್ ಬೋರ್ಡ್ ಆಫ್ ಫಿಲ್ಮ್ ಸೆನ್ಸಾರ್‌ನ ರೀತಿ ನೀತಿಯನ್ನೇ ಅನುಸರಿಸಲಾಗಿತ್ತು. ಇಷ್ಟಿದ್ದರೂ ಆಗ ಇದು ತೆರೆಮರೆಯಲ್ಲಿ ನಡೆಯುವ ಪ್ರಕ್ರಿಯೆಯಾಗಿಯೇ ಉಳಿದಿತ್ತು. ಆದರೂ ಇದರಲ್ಲಿ ಸ್ವಲ್ಪ ಬದಲಾವಣೆ ಉಂಟಾಗಿ ಲೋಪದೋಷಗಳನ್ನು ತಿದ್ದಿ ಪ್ರಾದೇಶಿಕ ಪರಿಣಾಮಗಳನ್ನು ಯೋಜಿಸಿ ಹೊಸದೊಂದು ರೂಪ ಕೊಡಲು 'ರಂಗಾಚಾರಿಯರ್ ಕಮಿಟಿ'ಯನ್ನು ನೇಮಕ ಮಾಡಲಾಯಿತು. ಇದರಲ್ಲಿ ವಿವಿಧ ರೀತಿಯ ಸಾಕಷ್ಟು ಸಲಹೆ ಸೂಚನೆಗಳಿದ್ದರೂ ಸರಿಯಾಗಿ ಜಾರಿಯಾಗದೆ ಹೋಯಿತು. ಈ ನಡುವೆ ವಾಕ್ಚಿತ್ರಗಳ ಯುಗವೂ ಆರಂಭವಾಗಿ ಭಾರತದಲ್ಲಿಯೂ 'ಆಲಂ ಆರಾ' ಚಿತ್ರದ ಮೂಲಕ ಈ ಕ್ರಾಂತಿ ಆರಂಭವಾಯಿತಾದರೂ ಸೆನ್ಸಾರ್‌ನ ಪ್ರಯೋಗದ ಅಗತ್ಯ ಕಡಿಮೆಯೇ ಇತ್ತು.

ಈ ಸಂದರ್ಭದಲ್ಲಿ ಸಿಗುವ ಇನ್ನೊಂದು ಉಲ್ಲೇಖವೆಂದರೆ ೧೯೦೯ರಲ್ಲಿಯೇ ಸಿನಿಮಾಟೋಗ್ರಫಿ ಕಾಯ್ದೆ ಜಾರಿಗೆ ಬಂದಿತ್ತು. ಇದರ ಪ್ರಕಾರ ಸ್ಥಳೀಯ ಸಂಸ್ಥೆಗಳಿಗೆ ಚಲನಚಿತ್ರಗಳ ಪ್ರದರ್ಶನಕ್ಕೆ ಅನುಮತಿ ನೀಡುವ ಅಧಿಕಾರ ಕೊಡಲಾಗಿತ್ತು. ಅದರಂತೆ ಸ್ಥಳೀಯ ಸಂಸ್ಥೆಗಳು ಚಲನಚಿತ್ರಗಳನ್ನು ಲಿಂಗವಾರು ಮೂಲಕ ಪ್ರದರ್ಶನಕ್ಕೆ

ಸರ್ಟಿಫಿಕೇಟ್‌ಗಳನ್ನು ನೀಡುತ್ತಿದ್ದವು. ಈ ಸಂಸ್ಥೆಯ ಹೆಸರೇ 'ಬ್ರಿಟಿಷ್ ಬೋರ್ಡ್ ಆಫ್ ಫಿಲಂ ಸೆನ್ಸಾರ್'. ಇವು ನೀಡಿದ ತೀರ್ಪನ್ನು ಸರ್ಕಾರವೂ ಪ್ರಶ್ನಿಸುತ್ತಿರಲಿಲ್ಲ. ಈ ಬೋರ್ಡ್ ೧೯೧೨ರಲ್ಲಿ ಕೆಲವು ಉತ್ಸಾಹಿ ಚಿತ್ರೋದ್ಯಮಿಗಳಿಂದಲೇ ಸ್ಥಾಪಿಸಲ್ಪಟ್ಟಿತು. ಮನೋರಂಜನಾ ಕ್ಷೇತ್ರವಾದ ಚಿತ್ರಗಳಲ್ಲಿ ಉನ್ನತ ಫಲಿತಾಂಶ ನೀಡುವುದು ಇದರ ಉದ್ದೇಶವಾಗಿತ್ತು. ಅದರ ಅಧ್ಯಕ್ಷರು ಸಾರ್ವಜನಿಕ ಜೀವನ ಮತ್ತು ಆಡಳಿತಗಳಲ್ಲಿ ನುರಿತವರಾಗಿರುತ್ತಿದ್ದರು. ಅಂತಹವರನ್ನು ಚುನಾಯಿಸುವ ಹಕ್ಕು ಚಿತ್ರರಂಗದ ಎಲ್ಲ ಕ್ಷೇತ್ರಗಳ ಪ್ರತಿನಿಧಿಗಳದೇ ಆಗಿತ್ತು. ಈ ಬೋರ್ಡ್‌ನಲ್ಲಿ ಅಧ್ಯಕ್ಷರೊಂದಿಗೆ ಕಾರ್ಯದರ್ಶಿ ಹಾಗೂ ಅನೇಕ ಸದಸ್ಯರೂ ಇರುತ್ತಿದ್ದರು.

"ಅವರವರ ಹೊಣೆಗಾರಿಕೆಯನ್ನು ಅವರವರಿಗೆ ಬಿಟ್ಟುಕೊಡಬೇಕು ಎನ್ನುವುದರಲ್ಲಿ ನನಗೆ ನಂಬಿಕೆಯಿದೆ. ಆದರೆ ಕೆಲವು ಬಾರಿ ನಿರ್ಬಂಧ ಅನಿವಾರ್ಯವಾಗುತ್ತದೆ. ಅದಕ್ಕಾಗಿ ಕೆಲವೊಮ್ಮೆ ಬೋರ್ಡ್‌ನ ಚಟುವಟಿಕೆಗಳು ಮತ್ತು ತೀರ್ಮಾನಗಳ ಬಗ್ಗೆ ಆಕ್ಷೇಪಗಳು ಬಂದಾಗ ನಾನು ಕೋಪಿಸಿಕೊಳ್ಳುವುದಿಲ್ಲ. ಒಟ್ಟಿನಲ್ಲಿ ಜನರ ನೈತಿಕ ಮಟ್ಟವನ್ನು ನಿರ್ಧರಿಸುವುದು ನಮ್ಮ ಕೆಲಸವಲ್ಲ. ಮುಖ್ಯವಾಗಿ ನಾವು ಬಾರೋಮೀಟರ್‌ನಂತೆ ಸಾರ್ವಜನಿಕ ಹಿತಾಸಕ್ತಿಗಳನ್ನು ಗಮನದಲ್ಲಿರಿಸಿಕೊಂಡು ಅದಕ್ಕೆ ಬುದ್ಧಿವಂತರೂ ತಲೆದೂಗುವಂಥ ತೀರ್ಪು ನೀಡುತ್ತೇವೆ. ಹಿಂದೆ ಸಾರ್ವಜನಿಕ ಪ್ರದರ್ಶನಗಳಿಗೆ ಅನುಮತಿ ನೀಡಲು ಸಾಧ್ಯವೇ ಇಲ್ಲವೆನ್ನುವಂತಿದ್ದ ಚಿತ್ರಗಳು ಈಗ 'X' ಮತ್ತು 'A' ಸರ್ಟಿಫಿಕೇಟ್ ಪಡೆದು ಬಿಡುಗಡೆಯಾಗುತ್ತಿವೆ. ಕಾಲ ಬದಲಾದಂತೆ ನಾವೂ ಬದಲಾಗುವುದು ಬೇಡವೆ ?" ಎಂದು ಬ್ರಿಟಿಷ್ ಸೆನ್ಸಾರ್ ಬೋರ್ಡ್‌ನ ಹಿರಿಯ ಸದಸ್ಯರೊಬ್ಬರು ಆಗ ಅಭಿಪ್ರಾಯಪಟ್ಟಿದ್ದರು. ಇದರೊಂದಿಗೆ ನಮ್ಮ ದೇಶದಲ್ಲಿ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿಲ್ಲ, ಅದಕ್ಕಾಗಿ ಸರ್ಕಾರವನ್ನು ದೂಷಿಸಿದರೆ ಸಾಲದು. ಹಿರಿಯರು ತಮ್ಮ ಕರ್ತವ್ಯ ಪಾಲನೆ ಮಾಡಿದ್ದಾರೆಯೆ ಎನ್ನುವ ಮಾತೂ ಕೇಳಿ ಬರುತ್ತಿತ್ತು. ತಮ್ಮ ಮಕ್ಕಳು ಎಂಥ ಚಿತ್ರಗಳನ್ನು ನೋಡಬೇಕು, ಎಂಥ ಚಿತ್ರಗಳನ್ನು ನೋಡಬಾರದು ಎನ್ನುವ ಹಿರಿಯರು ಮತ್ತು ಅವರ ಮಾತನ್ನು ಕೇಳುವ ಮಕ್ಕಳು ಇದ್ದಾರೆಯೆ ಎಂಬ ಬಗ್ಗೆ ಆತ್ಮಶೋಧನೆ ನಡೆಯುತ್ತಿಲ್ಲ. ನಾಳೆ ಫಿಲಂ ಫೆಡರೇಷನ್ ಆಫ್ ಇಂಡಿಯಾದವರು ಸೆನ್ಸಾರ್ ಮಂಡಳಿಯನ್ನು ವಶಪಡಿಸಿಕೊಂಡ ಮೇಲೂ ಇದು ಮುಂದುವರಿದರೆ ಪ್ರಯೋಜನವೇನು ಎನ್ನುವ ವಾದವೂ ಜೊತೆಗಿತ್ತು.

ಸ್ವಾತಂತ್ರ್ಯಪೂರ್ವ ಭಾರತದಲ್ಲಿ ಚಲನಚಿತ್ರಗಳ ಸೆನ್ಸಾರ್ ಪದ್ಧತಿ ಹೇಗಿತ್ತು ಎಂಬುದರ ಕಲ್ಪನೆ ನಮಗಿರಬೇಕಾದುದು ಅತಿ ಅವಶ್ಯ. ಈ ದಿಕ್ಕಿನಲ್ಲಿ ಸಿಕ್ಕ ಮಾಹಿತಿಯೆಂದರೆ, 'ಮೈಸೂರು ಸಿನಿಮಾಟೋಗ್ರಾಫ್ ಬೋರ್ಡ್' ಎಂಬ ಸಂಸ್ಥೆ ಬೆಂಗಳೂರಿನಿಂದ ಕಾರ್ಯನಿರತವಾಗಿದ್ದು, ಇದು ಚಲನಚಿತ್ರಗಳನ್ನು ಸೆನ್ಸಾರ್ ಮಾಡಿ, ಪ್ರದರ್ಶನ ಅನುಮತಿಯ ಪ್ರಮಾಣಪತ್ರ ನೀಡುತ್ತಿತ್ತು. ಇದರ ವ್ಯಾಪ್ತಿಯಲ್ಲಿ ಕಿರುಚಿತ್ರ, ಜಾಹಿರಾತು, ಚಿತ್ರ, ಸಾಕ್ಷ್ಯಚಿತ್ರ, ಕಥಾಚಿತ್ರಗಳು ಒಳಗೊಂಡಿದ್ದವು. ಇದನ್ನು ಸೆಂಟ್ರಲ್ ಬೋರ್ಡ್ ಎಂದೂ ಕರೆಯಲಾಗುತ್ತಿತ್ತು. ಕಾರ್ಯ ಕೈಗೊಳ್ಳಲು ಕೆ.ಜಿ.ಎಫ್. ಡಿಸ್ಟ್ರಿಕ್ಟ್ ಸಿನಿಮಾಟೋಗ್ರಾಫ್ ಬೋರ್ಡ್, ತುಮಕೂರು ಡಿಸ್ಟ್ರಿಕ್ಟ್ ಸಿನಿಮಾಟೋಗ್ರಾಫ್ ಬೋರ್ಡ್, ಮೈಸೂರು ಡಿಸ್ಟ್ರಿಕ್ಟ್ ಸಿನಿಮಾಟೋಗ್ರಾಫ್ ಬೋರ್ಡ್, ಶಿವಮೊಗ್ಗ ಡಿಸ್ಟ್ರಿಕ್ಟ್ ಸಿನಿಮಾಟೋಗ್ರಾಫ್ ಬೋರ್ಡ್ ಎಂದು ಪ್ರತ್ಯೇಕ ಸಂಸ್ಥೆಗಳಿದ್ದು ಪ್ರತಿ ಜಿಲ್ಲೆಯ ವ್ಯಾಪ್ತಿಯಲ್ಲಿ ಚಿತ್ರಗಳು ಪ್ರದರ್ಶಿತವಾದಾಗ ಅಲ್ಲಿ ಸೆನ್ಸಾರಿಗೆ ಅನುಮತಿ ಪತ್ರ ಪಡೆಯಲೇಬೇಕಾಗಿತ್ತು. ಹೀಗೆ ಅನುಮತಿ ಪಡೆದ ಚಿತ್ರಗಳ ಪಟ್ಟಿ ಪುಸ್ತಕ ರೂಪದಲ್ಲಿ ಪೊಲೀಸ್ ಇಲಾಖೆಯಿಂದ ಪ್ರಕಟವಾಗಿ, ಇನ್‌ಸ್ಪೆಕ್ಟರ್ ಜನರಲ್ ಆಫ್ ಪೊಲೀಸ್ (ಎಫ್.ಎ.ಹ್ಯಾಮಿಲ್ಟನ್) ಇವರ ಸಹಿಯೊಂದಿಗೆ, ಒಂದೂ ಕಾಲು ರೂಪಾಯಿ ಮುಖಬೆಲೆಗೆ ಮಾರಲ್ಪಡುತ್ತಿತ್ತು. ಅದರಲ್ಲಿನ ಆಯ್ದ ಕೆಲವು ಮಾಹಿತಿ ಹಾಗೂ ಕೋಷ್ಟಕ (chart)ವನ್ನು ಇದ್ದಂತೆಯೇ ಇಲ್ಲಿ ಪ್ರಸ್ತುತಪಡಿಸಲಾಗಿದೆ.

ಪ್ರಮಾಣ ಪತ್ರ ಅನುಕ್ರಮ ಸಂಖ್ಯೆ	ಪರಿಶೀಲಿಸಲಾದ ಅಥವಾ ಪ್ರಮಾಣ ಪತ್ರ ನೀಡಲಾದ ಚಿತ್ರದ ಹೆಸರು	ಪ್ರಮಾಣ ಪತ್ರ ಪಡೆಯಲು ಅರ್ಜಿ ಸಲ್ಲಿಸಿದವರು ಪ್ರದರ್ಶಕರ ಹೆಸರು	ಚಿತ್ರವನ್ನು ನಿರ್ಮಿಸಿದ ಅಥವಾ ಬಿಡುಗಡೆ ಮಾಡುತ್ತಿರುವ ಸಂಸ್ಥೆಯ ಹೆಸರು	ಚಿತ್ರದ ಉದ್ದ ಅಡಿಗಳಲ್ಲಿ	ವೀಕ್ಷಣೆಯ ನಂತರ ಬೋರ್ಡ್‌ನ ಆಜ್ಞೆ	ಪ್ರಮಾಣ ಪತ್ರ ನೀಡಲಾದ ದಿನಾಂಕ ಹಾಗೂ ಏನಾದರೂ ಪರಾಗಳಿದ್ದರೆ
		(ಸೆಂಟ್ರಲ್ ಬೋರ್ಡ್, ಬೆಂಗಳೂರು)				
೧	ಬೆಂಗಳೂರಿನಲ್ಲಿ ಜರುಗಿದ ಸೌತ್ ಇಂಡಿಯನ್ ಖಾದಿ ಎಗ್ಸಿಬಿಷನ್ ಮತ್ತು ಕಾನ್ಫರೆನ್ಸ್	ಮಾಲೀಕರು, ದಿ ಎಲೈಟ್ ಸ್ಟುಡಿಯೋ, ನಂ.೧೦, ಚರ್ಚ್ ಸ್ಟ್ರೀಟ್, ಬೆಂಗಳೂರು	ಮಾಲೀಕರು, ದಿ ಎಲೈಟ್ ಸ್ಟುಡಿಯೋ, ನಂ.೧೦, ಚರ್ಚ್ ಸ್ಟ್ರೀಟ್, ಬೆಂಗಳೂರು	೬೦೦	ಪ್ರಮಾಣಪತ್ರ ನೀಡಿಕೆ	೧೮, ಆಗಸ್ಟ್ ೧೯೨೭
೨	ಡಿಸ್ಟ್ರಿಕ್ಟ್ ಸ್ಕೌಟ್ ರ್‍ಯಾಲಿ ಮತ್ತು ಮಲ್ಲೇಶ್ವರಂ ಡಿಸ್‌ಪ್ಲೇ ಸ್ಕೌಟ್ ಸ್ವಿಮ್ಮಿಂಗ್	ಮೈಸೂರು ಫಿಲಂ ಕಂ., ಬೆಂಗಳೂರು	ಮೈಸೂರು ಫಿಲಂ ಕಂ., ಬೆಂಗಳೂರು	೧,೩೦೦	"	೨೮, ಆಗಸ್ಟ್ ೧೯೩೧
೩	ದಿ ಪ್ರೊಸೆಷನ್ ಆಫ್ ಮೌಲಾನಾ ಶೌಕತ್ ಅಲಿ	ಮಿ. ಪಿ.ಅಬ್ಬಾಸ್ ಖಾನ್	ಮಿ. ಪಿ.ಅಬ್ಬಾಸ್ ಖಾನ್ ಸೆಕ್ರೆಟರಿ, ಮುಸ್ಲಿಂ ವಾಲಂಟೀರ್ಸ್ ಬೆಂಗಳೂರು.	೧,೧೮೦	"	೧೦, ಫೆಬ್ರವರಿ ೧೯೩೧
೩೭	ಜಾ ಬ್ರೇಕರ್ಸ್	ಸೆಲೆಕ್ಟ್ ಪಿಕ್ಚರ್ಸ್ ಸರ್ಕ್ಯೂಟ್	ಸೂರ್ಯ ಫಿಲಂ ಕಂ., ಬೆಂಗಳೂರು.	೧೦,೮೫೨	"	೧೭, ಜೂನ್ ೧೯೩೨
೨೫೧	ಟೈರೆಂಟ್	ವೆರೈಟಿ	ಸೂರ್ಯ ಫಿಲಂ ಕಂ., ಬೆಂಗಳೂರು.	೧೦,೭೮೯	"	೫, ಡಿಸೆಂಬರ್ ೧೯೩೨
೬೦೫	ಸತಿ ಸುಲೋಚನಾ	ಸೌತ್ ಇಂಡಿಯಾ ಫಿಲಂ ಸಪ್ಲೈಸ್	ಸೌತ್ ಇಂಡಿಯನ್ ಮೂವಿಟೋನ್	೧೫,೦೦೦	"	೨೮, ಫೆಬ್ರವರಿ ೧೯೩೪
೮೦೨	ಸಾಂಗ್ ಸೀರೀಸ್ ನಂ.೧ ಬೈ ಮಾಸ್ಟರ್ ಶೇಷಾಚಲಂ	ಪ್ಯಾರಾಮೌಂಟ್	ಬೆಂಗಳೂರು	೭೦೦	"	೨೨, ಫೆಬ್ರವರಿ ೧೯೩೫
೮೦೩	ಸಾಂಗ್ ಸೀರೀಸ್ ನಂ.೨ ಬೈ ಮಿಸ್ ತ್ರಿಪುರಾಂಬಾ	"	"	೭೦೦	"	"

		ತುಮಕೂರು ಡಿಸ್ಟ್ರಿಕ್ಟ್ ಸಿನಿಮಾಟೊಗ್ರಾಫ್ ಬೋರ್ಡ್				
೮೬	ಸಿಲ್ವರ್ ಜ್ಯುಬಿಲಿ ಸೆಲೆಬ್ರೇಶನ್ಸ್	ಕೃಷ್ಣ ಸಿನಿಮಾ	ಮಿನರ್ವಾ ಫಿಲಂ ಬೆಂಗಳೂರು	೧೫೦೦	''	೨೦, ಜುಲೈ ೧೯೩೩
		ಮೈಸೂರು ಡಿಸ್ಟ್ರಿಕ್ಟ್ ಸಿನಿಮಾಟೊಗ್ರಾಫ್ ಬೋರ್ಡ್				
೬೬೩	ಹಿಸ್ ಲವ್ ಅಫೇರ್ಸ್	ಲಕ್ಷ್ಮಿ	ಕರ್ನಾಟಕ ಪಿಕ್ಚರ್ಸ್	೬೩೦೦	''	೨೫, ಸೆ. ೧೯೩೪
		ದಾವಣಗೆರೆ ಡಿಸ್ಟ್ರಿಕ್ಟ್ ಸಿನಿಮಾಟೊಗ್ರಾಫ್ ಬೋರ್ಡ್				
೧	ಆಲಂ ಆರಾ	ಶ್ರೀಕೃಷ್ಣ ಸಿನಿಮಾ ದಾವಣಗೆರೆ	ಸಾಗರ್ ಮೂವಿಟೋನ್	೧೧೧೫೨	''	೩೦, ಜನವರಿ ೧೯೩೨
		ಮೈಸೂರು ಡಿಸ್ಟ್ರಿಕ್ಟ್ ಸಿನಿಮಾಟೊಗ್ರಾಫ್ ಬೋರ್ಡ್				
೧೦೯೨	ಸದಾರಮೆ (ಇನ್ ಕ್ಯಾನರೀಸ್)	ನ್ಯೂ ಅಪೇರಾ	ಶಕುಂತಲಾ ಫಿಲ್ಮ್	೧೬೦೦೦	''	೨೨, ಸೆ. ೧೯೩೫
		ಹೆಚ್.ವಿ.ರಾಮಸ್ವಾಮಿಯವರು ಐ.ಜಿ.ಪಿ.ಯಾಗಿ ಪ್ರಕಟಿಸಿದ ಪಟ್ಟಿ				
೯೯೩ ಎ	ದಸರಾ ಇನ್ ಮೈಸೂರು ಸಿಟಿ	ಇಂಡಿಯನ್ ರೆಡ್ ಕ್ರಾಸ್ ಸೊಸೈಟಿ, ಬೆಂಗಳೂರು	ದಿ ಲಂಡನ್ ಫಿಲ್ಮ್ ಪ್ರೊಡಕ್ಷನ್ ಕಂಪನಿ	೨೩೯೪	''	೧೪, ಜುಲೈ ೧೯೩೬
೯೯೪	ವಾಟ್ ರೆಡ್ ಕ್ರಾಸ್ ಡಸ್	ಇಂಡಿಯನ್ ರೆಡ್ ಕ್ರಾಸ್ ಸೊಸೈಟಿ, ಬೆಂಗಳೂರು	ದಿ ಇಂಡಿಯನ್ ರೆಡ್ ಕ್ರಾಸ್ ಸೊಸೈಟಿ, ದೆಹಲಿ ಹೆಡ್‌ಕ್ವಾರ್ಟರ್ಸ್	೨೫೯೨	''	''
೯೯೫	ರೆಡ್ ಕ್ರಾಸ್ ಇನ್ ಮೈಸೂರು ಸಿಟಿ	ಇಂಡಿಯನ್ ರೆಡ್ ಕ್ರಾಸ್ ಸೊಸೈಟಿ, ಬೆಂಗಳೂರು	ದಿ ಲಂಡನ್ ಫಿಲ್ಮ್ ಪ್ರೊಡಕ್ಷನ್ ಕಂಪನಿ	೧೭೨೮	''	''
೧೦೦೬	ಸಂಸಾರನೌಕ (ಟ್ರೈಲರ್)	ಮೆಜೆಸ್ಟಿಕ್	ದೇವಿ ಫಿಲಂಸ್ ಲಿ. ಮದ್ರಾಸ್	೯೫೦	''	೫, ಆಗಸ್ಟ್ ೧೯೩೬
೧೦೨೦	ಸಂಸಾರನೌಕ (ಕ್ಯಾನರೀಸ್ ಟಾಕಿ)	ಸಾಗರ್ ಟಾಕೀಸ್	ದೇವಿ ಫಿಲಂಸ್ ಲಿ. ಮದ್ರಾಸ್	೧೭೦೦೦	''	೨೬, ಆಗಸ್ಟ್ ೧೯೩೬
೧೧೧೭	ರಾಜಸೂಯ (ಇನ್ ಕ್ಯಾನರೀಸ್, ಸಿಂಕ್)	ಪ್ಯಾರಾಮೌಂಟ್ ಟಾಕೀಸ್	ಮೈಸೂರು ಸೌಂಡ್ ಸ್ಟುಡಿಯೋ ಲಿ. ಬೆಂಗಳೂರು	೧೬೦೦೦	''	೪, ಫೆಬ್ರವರಿ ೧೯೩೭
		ಕೆ.ಜಿ.ಎಫ್				
೮೯೯	ಟ್ರೇಲರ್ ಆಫ್ ಕರ್ಮ (ಸಿಂಕ್)	ದಿ ಜ್ಯುಬಿಲಿ ಹಾಲ್ ಟಾಕೀಸ್	ಹಿಮಾಂಶುರಾಯ್ ಇಂಡೋ-ಇಂಟರ್‌ನ್ಯಾಷನಲ್ ಟಾಕೀಸ್	೨೫೦	''	೧೫, ನ. ೧೯೩೬
		ಮೈಸೂರು				
೧೬೦೧	ಪಂಡಿತ್ ಜವಾಹರ್‌ಲಾಲ್ ಹೀಸ್ 'ಅಛೂತ್ ಕನ್ಯಾ' (ಸಿಂಕ್)	ನ್ಯೂ ಅಪೆರಾ	ಬಾಂಬೇ ಟಾಕೀಸ್	೩೫೦	''	೨೨, ಡಿಸೆಂಬರ್ ೧೯೩೬

		ಎಫ್.ಎ.ಹ್ಯಾಮಿಲ್ಟನ್ ಐ.ಜಿ.ಪಿ.ಯಾಗಿ ಪ್ರಕಟಿಸಿದ ಪಟ್ಟಿ				
೧೧೮೫	ಟ್ರೇಲರ್ ಆಫ್ ಚಿರಂಜೀವಿ ಅಥವಾ ಮಾರ್ಕಂಡೇಯ (ಇನ್‌ಕ್ಯಾನರೀಸ್. ಸಿಂಕ್)	ಸೆಲೆಕ್ಟ್ ಪಿಕ್ಚರ್ಸ್ ಸರ್ಕ್ಯೂಟ್	ಕರ್ನಾಟಕ ಟಾಕೀಸ್ ಲಿ.,	೯೯೬	''	೧೪, ಮೇ ೧೯೩೭
೧೨೦೨	ಚಿರಂಜೀವಿ ಅಥವಾ ಮಾರ್ಕಂಡೇಯ	ಸೆಲೆಕ್ಟ್ ಪಿಕ್ಚರ್ಸ್ ಸರ್ಕ್ಯೂಟ್	ಕರ್ನಾಟಕ ಟಾಕೀಸ್ ಲಿ.,	೧೩೨೫೧	''	೨೯, ಮೇ ೧೯೩೭
೧೩೦೯	ಪುರಂದರದಾಸ (ಇನ್ ಕನ್ನಡ ಟಾಕಿ, ಸಿಂಕ್)	ಸೆಲೆಕ್ಟ್ ಪಿಕ್ಚರ್ಸ್ ಸರ್ಕ್ಯೂಟ್	ದೇವಿ ಫಿಲಂಸ್ ಲಿ.,	೧೪೨೦೦	''	೧೩, ಅಕ್ಟೋಬರ್ ೧೯೩೭
೧೩೧೦	ನವೀನ್ ನಿರುಪಮಾ (ತಮಿಳ್, ಸಿಂಕ್)	ಮೈಸೂರು ಸೌಂಡ್ ಸ್ಟುಡಿಯೋ, ಬೆಂಗಳೂರು	ಮೈಸೂರು ಸೌಂಡ್ ಸ್ಟುಡಿಯೋ, ಬೆಂಗಳೂರು	೧೪೦೦೦	''	೧೪, ಅಕ್ಟೋಬರ್ ೧೯೩೭
೧೪೧೦	ಪಂಡಿತ್ ಜವಾಹರ್‌ಲಾಲ್ ಸೀಸ್ 'ಅಛೂತ್ ಕನ್ಯಾ' (ಸಿಂಕ್)	ಸೆಲೆಕ್ಟ್ ಪಿಕ್ಚರ್ಸ್ ಸರ್ಕ್ಯೂಟ್	ಬಾಂಬೆ ಟಾಕೀಸ್	೩೫೦	''	೯, ಏಪ್ರಿಲ್ ೧೯೩೮
೧೪೯೪	ಮಯೂರ್‌ಧ್ವಜ (ಇನ್ ತಮಿಳ್ ಅಂಡ್ ಫ್ಲೂಟ್ ಮ್ಯೂಜಿಕ್ ಇನ್‌ಸಿಂಕ್)	ಮೈಸೂರು ಸೌಂಡ್ ಸ್ಟುಡಿಯೋಸ್	ಮೈಸೂರು ಸೌಂಡ್ ಸ್ಟುಡಿಯೋಸ್	೧೫೦೦೦ + ೧೦೦೦	''	೧೬, ಆಗಸ್ಟ್ ೧೯೩೮
		ಮೈಸೂರು				
೧೯೧೮	ದಸರಾ ಟ್ರಾಪಿಕಲ್ ಆಫ್ ಮೈಸೂರು	ಒಲಂಪಿಯಾ ಟಾಕೀಜ್	ಸಮರ್ಥ ಮೂವೀಸ್ ಪಿಕ್ಚರ್ಸ್, ಬೆಂಗಳೂರು	೧೦೦೦	''	೩, ಮಾರ್ಚ್ ೧೯೩೮
		ಈ.ಜಿ.ಬಿ.ಪೀಲ್ ಐಜಿಪಿಯಾಗಿ ಪ್ರಕಟಿಸಿದ ಪಟ್ಟಿ - ಬೆಂಗಳೂರು ಸಿಟಿ				
೨೧೦೯	ಲಕ್ಷ್ಮೀ ಸ್ವಾರ್ ಅಥವಾ ಭಾಗ್ಯಲೀಲಾ (ತಮಿಳ್)	ಗೇ ಟಾಕೀಜ್ ರಾಬರ್ಟ್‌ಸನ್ ಪೇಟೆ	ಮೆ॥ ದ್ವಾರಕಾನಾಥ್ ಪ್ರೊಡಕ್ಷನ್, ಮೈಸೂರು	೧೪೦೦೦	''	೫, ಮೇ ೧೯೩೯
೨೧೧೦	ದಿ ಟಾಪಿಕಲ್ ಆಫ್ ರಾಯಲ್ ವೆಡ್ಡಿಂಗ್ ಇನ್ ಮೈಸೂರು.	''	''	೧೦೦೦	''	''
೨೬೧೦	ಲೇಡಿ ಆಫ್ ದ ಲೇಕ್ ! ಸರೋವರ್ ಕಿ ಸುಂದರಿ (ಇನ್ ಕನ್ನಡ)	ಪ್ಯಾರಾಮೌಂಟ್ ಟಾಕೀಜ್	ಮೋಷನ್ ಪಿಕ್ಚರ್ಸ್	೧೧೬೨೫	''	೬, ಮೇ ೧೯೪೨
೨೭೩೪	ಪ್ರಹ್ಲಾದ (ಕ್ಯಾನರೀಸ್)	ಕಲೈವಾಣಿ ಫಿಲಂಸ್	ಮೈಸೂರು ಫಿಲಂ ಕಾರ್ಪೊರೇಷನ್	೧೧೦೦೦	''	೧೨, ಜನವರಿ ೧೯೪೩
೨೭೬೯	ಹರಿಶ್ಚಂದ್ರ (ಇನ್ ಕನ್ನಡ)	ಸರಸ್ವತಿ ಸಿನೆ ಫಿಲಂಸ್ ಲ್ಯಾಬೊರೇಟರಿ ಲಿ., ಮದ್ರಾಸ್	ಮೂವಿಲ್ಯಾಂಡ್ ಟಾಕೀಸ್	೧೦೯೯೦	''	೧೬, ಏಪ್ರಿಲ್ ೧೯೪೩
೨೮೦೪	ಕೃಷ್ಣಸುಧಾಮ (ಕ್ಯಾನರೀಸ್)	ಕಲೈವಾಣಿ ಫಿಲಂಸ್ ಲಿ., ಮದ್ರಾಸ್	ಸೆಲೆಕ್ಟ್ ಪಿಕ್ಚರ್ಸ್	೧೦೯೮೩	''	೧೮, ಜೂನ್ ೧೯೪೩
೩೧೦೬	ರಾಧಾರಮಣ (ಕನ್ನಡ)	ಕರ್ನಾಟಕ ಫಿಲಂಸ್ ಲಿ.,	ಶ್ರೀ ವಿಜಯಾ ಫಿಲಂಸ್	೧೦೬೧೪	''	೨೬, ಫೆಬ್ರವರಿ ೧೯೪೪
೩೧೫೮	ವಾಣಿ (ಕ್ಯಾನರೀಸ್)	ಮೂವಿಲ್ಯಾಂಡ್ ಟಾಕೀಸ್	ಶ್ರೀ ಪಿಕ್ಚರ್ಸ್, ಮೈಸೂರು	೧೦೯೯೪	''	೩೧, ಮಾರ್ಚ್ ೧೯೪೪
		ಕೆ.ಜಿ.ಎಫ್				
೨೮೪೭	ಪ್ರಹ್ಲಾದ	ಒಲಂಪಿಯಾ ಟಾಕೀಸ್ ರಾಬರ್ಟ್‌ಸನ್ ಪೇಟೆ, ಕಜಿಎಫ್	ದಿ ಮದ್ರಾಸ್ ಯುನೈಟೆಡ್ ಆರ್ಟಿಸ್ಟ್ಸ್ ಕಾರ್ಪೊರೇಷನ್	೧೬೫೦೦	''	೧೮, ಫೆಬ್ರವರಿ ೧೯೪೨

ಚಲನಚಿತ್ರಕ್ಕೆ ಸಂಬಂಧಪಟ್ಟ ಹಳೆಯ ಪತ್ರಿಕೆ, ಸಂಚಿಕೆ, ಗ್ರಂಥಗಳನ್ನು ಪರಿಶೀಲಿಸಿದಾಗ ಅನ್ಯ ಭಾಷಾ ಚಿತ್ರದ ಅನೇಕ ಮುಖಗಳ ಪರಿಚಯವನ್ನು ನೀಡುತ್ತವೆ. ಈ ದೃಷ್ಟಿಯಿಂದ ಸೆನ್ಸಾರ್ ಕುರಿತು ಕಣ್ಣಾಡಿಸಿದಾಗ ಕಂಡು ಬಂದ ಕೆಲವು ಕುತೂಹಲಕರ, ರೋಚಕ ಅಂಶಗಳು - ಕನ್ನಡ ಚಿತ್ರಗಳಿಗೆ ನೇರ ಸಂಬಂಧಪಟ್ಟಿರದಿದ್ದರೂ - ನಮ್ಮ ಚಿತ್ರಗಳೂ ಅದೇ ಕಾಲ, ಪರಿಸರದಲ್ಲಿ ನಿರ್ಮಾಣವಾಗಿ, ಸ್ಪರ್ಧಿಸಿ, ಬದುಕಿ ಬಾಳಬೇಕಾದುದರಿಂದ ಚರ್ಚೆ ಅಗತ್ಯ.

ಕೆಲವು ಚಿತ್ರಗಳ ಸೆನ್ಸಾರಿಗಾಗಿ ಅರ್ಜಿ ಸಲ್ಲಿಸಿದಾಗ ಮೂಲ ನಿರ್ಮಾಪಕರ, ಸಂಸ್ಥೆಯ ಹೆಸರು ಗೊತ್ತಿಲ್ಲದೇ ಇರುವುದರಿಂದ ಅನಾಮಧೇಯ (unknown) ಎಂದು ನಮೂದಾಗಿದೆ. ಒಂದೆಡೆ ಚಿತ್ರ ಜರ್ಮನ್ ಎಂದು ಗೊತ್ತಿದ್ದೂ ತಯಾರಿಸಿದವರು ಅನಾಮಧೇಯರು. ಇದು ಚಿತ್ರದ ವಹಿವಾಟು ಕೈ ಬದಲಾಯಿಸಿದಾಗ ದಾಖಲೀಕರಣ ಆಗದೇ ಇರುವುದರ ನೇರ ಪರಿಣಾಮ ಎನ್ನಬಹುದು. ಆಗಿನ ಚಿತ್ರಗಳಲ್ಲಿ ಗುಜರಾತಿ, ಹಿಂದಿ, ಉರ್ದು ಭಾಷೆಗಳಲ್ಲಿ ಉಪ ಶೀರ್ಷಿಕೆಗಳು ಮಾತಿನ ನಡುವೆ ಪ್ರತ್ಯೇಕವಾಗಿ ಸೇರಿಸಲ್ಪಡುತ್ತಿದ್ದವು. ಸೆನ್ಸಾರಿನಲ್ಲಿ ಕೇವಲ ದೃಶ್ಯ ಮಾತ್ರವಲ್ಲದೆ ಈ ಉಪ ಶೀರ್ಷಿಕೆಗಳೂ ಕತ್ತರಿಗೆ ಗುರಿಯಾಗುತ್ತಿದ್ದವು.

ಆಕ್ಷೇಪಣೆ

ಸ್ವಾತಂತ್ರ್ಯಪೂರ್ವದ ಚಿತ್ರಗಳಲ್ಲಿ ಸೆನ್ಸಾರ್ ಆಕ್ಷೇಪಕ್ಕೆ ಗುರಿಯಾದ ಕೆಲವು ಸಾಮಾಜಿಕ ಅಂಶಗಳೆಂದರೆ ಸತೀ ಪದ್ಧತಿಯನ್ನು ಬೆಂಬಲಿಸುವ ದೃಶ್ಯಗಳು, ಜಾತೀಯ ಭಾವನೆಗೆ ಕುಮ್ಮಕ್ಕು ಕೊಡುವ ಹಿಂದೂ-ಮುಸ್ಲಿಂ ಸನ್ನಿವೇಶಗಳು, ರಾಜಕೀಯ ಸಿದ್ಧಾಂತಗಳ ಚರ್ಚೆ, ಪ್ರಚಾರ, ರಾಷ್ಟ್ರಭಕ್ತಿಯ ಸಂದೇಶ, ಪೈಗಂಬರ ಸಂತರ ಬಗ್ಗೆ ಹೀಯಾಳಿಕೆ, ಹಿಂದೂಗಳಲ್ಲಿಯ ಶೈವ-ವೈಷ್ಣವ ಶ್ರೇಷ್ಠತೆ ಮರೆಯಲು ಪರಸ್ಪರ ಹೀಯಾಳಿಕೆ, ಅಸ್ಪೃಶ್ಯತೆಯ ಪಾಲನೆ, ದೇವಾಲಯಕ್ಕೆ ಹರಿಜನರ ಪ್ರವೇಶ ನಿರಾಕರಣೆ, ಹಾನಮತ್ತರಾಗಿ ದೈವವನ್ನು ಹಳಿಯುವುದು, ನ್ಯಾಯಾಂಗದ ನಿಂದನೆ, ಅವಹೇಳನ ಹಾಗೂ ಲೈಂಗಿಕತೆ ಪ್ರಚೋದಿಸುವಂತಹ ದೃಶ್ಯಗಳು ಮತ್ತು ಕರೀನೆರಳಿನಲ್ಲಿ ಹುಡುಗಿಯರು ಬಟ್ಟೆ ಬದಲಾಯಿಸಿದರೂ ಕತ್ತರಿ ಪ್ರಯೋಗವಾದದ್ದಿದೆ. ಗುಪ್ತ ರೋಗಗಳ ಬಗ್ಗೆ ತಪ್ಪು ಮಾಹಿತಿ, ಲೇವಡಿ, ಪಾಪ ಎಂಬ ಕಲ್ಪನೆಗೂ ಚಾಲ್ತಿ ದೊರೆಯುತ್ತಿರಲಿಲ್ಲ.

ಕೆಲವು ಚಿತ್ರಗಳಲ್ಲಿ ಬೇರೆ ಭಾಷೆಯ ಹಾಡುಗಳಿದ್ದರೆ ಅದರ ಉಲ್ಲೇಖವೂ ಇದೆ. ಪಂಜಾಬಿ ಗೀತೆ ಹೊಂದಿರುವ ಹಿಂದಿಯ ಚಿತ್ರವೆಂಬ ಸೂಚನೆ ಕೊಡುತ್ತಾರೆ. ಜೊತೆಗೆ ಇಡಿ ಚಿತ್ರ (ಸಿಂಕ್) ತುಟಿ ಮತ್ತು ಧ್ವನಿ ಸಂಬಂಧವಿರುವ ಮಾದರಿಯದೋ ಅಥವಾ ಹಿನ್ನೆಲೆ ಧ್ವನಿಯೋ ಎಂಬ ಮಾಹಿತಿಯನ್ನೂ ಒದಗಿಸುತ್ತದೆ. ಕೆಲವು ಚಿತ್ರಗಳು ಬೇರೆಡೆ ಸೆನ್ಸಾರಾಗಿದ್ದುದು ಕಂಡು ಬಂದರೆ, ಇಲ್ಲಿಯ ಮಂಡಳಿ ನೀಡಿದ ಪ್ರಮಾಣ ಪತ್ರ ರದ್ದುಗೊಳಿಸುವ ಪರಂಪರೆಯನ್ನೂ ಪಾಲಿಸಲಾಗಿದೆ.

ಸ್ವಾತಂತ್ರ್ಯಪೂರ್ವದಲ್ಲಿ ಸೆನ್ಸಾರಾದ ಕೆಲವು ಚಿತ್ರಗಳ ಶೀರ್ಷಿಕೆಗಳು ಅಷ್ಟೇ ಆಕರ್ಷಕ.'ಎಂಟನೇ ಹೆಸ್ರಿಯ ಖಾಸಗಿ ಬದುಕು','ಪವಿತ್ರ ಪಗರಣಗಳು','ಹರಿಜನ ಕನ್ಯೆ-ಲಕ್ಷ್ಮಿ'. 'ವಂದೇ ಮಾತರಂ ಅಥವಾ ಮಂಗಳಸೂತ್ರ', ಬಹುಶಃ ದೇಶದ ಸ್ವಾತಂತ್ರ್ಯ, ಬದುಕಿನ ಪರತಂತ್ರ ಈ ಪಥದಲ್ಲಿ ಯಾವುದಾದರೂ ಒಂದನ್ನು ಆಯ್ಕೆ ಮಾಡುವ ದ್ವಂದ್ವ ಚಿತ್ರಣವೇ ಈ ಚಿತ್ರದ ಸಾರವಿರಬೇಕು. ವಿಕ್ಟರ್ ಹ್ಯೂಗೋನ 'Les Miserbles' (ಕನ್ನಡದ 'ನೊಂದಜೀವಿ' ಲೇ.ನಾ.ಕಸ್ತೂರಿ) ಕಥೆ ಫ್ರಾನ್ಸಿನ ಕ್ರಾಂತಿ ಹಾಗೂ ಯುದ್ಧದ ಹಿನ್ನೆಲೆಯಲ್ಲಿ ಮಾನವೀಯ ಚಿತ್ರಣ ಹೊಂದಿರುವ ವಸ್ತು. ಇಂತಹದನ್ನು ಚಿತ್ರಿಸಿ, ಬ್ರಿಟಿಷರ ವಸಾಹತು ಕೇಂದ್ರ ಭಾರತದಲ್ಲಿ ಬಿಡುಗಡೆ ಮಾಡಿದಾಗ, ಸೆನ್ಸಾರ್‌ನ ಅತಿ ಅನುಮಾನದ ಕಣ್ಣುಗಳಿಗೆ ಸಿಕ್ಕು ಹೆಚ್ಚು ಕತ್ತರಿ ಪ್ರಯೋಗವಾಗಿದ್ದಿದೆ.

ಇದೇ ರೀತಿ ಬ್ರಿಟಿಷರ ಮನ ನೋಯಿಸದಿರಲು ಅವರ ಕಾಯ್ದೆ, ಕ್ರಮಕ್ಕೆ ಹೆದರಿ ಹಾಗೂ ಸ್ಥಳೀಯ ಅರಸರ, ರಾಜ-ಮಹಾರಾಜರ ಗೌರವಕ್ಕೆ ಧಕ್ಕೆ ತರುವ, ದೇಶದ್ರೋಹಿಯೆಂದು ಚಿತ್ರಿಸುವ ಆಗಿನ ವಾತಾವರಣವನ್ನು ಹಿಡಿತದಲ್ಲಿಡಲು ಶಾಸಕಾಂಗದ ಆಜ್ಞೆಯ ಮೂಲಕ ಕೆಲವು ಚಿತ್ರಗಳ ಪ್ರದರ್ಶನಕ್ಕೆ ಮೈಸೂರು ಸರ್ಕಾರ ಅನುಮತಿ ನಿರಾಕರಿಸಿದೆ. ಇವುಗಳಲ್ಲಿ 'ಬ್ರಿಟಿಷ್ ಏಜೆಂಟ್' 'ಮರುಭೂಮಿಯ ಮಗಳು''ಶಾಂತಿಗಾಗಿ ಹೋರಾಟ''ದೋರಂಗೀ ಡಾಕು''ಗಾಝೀ ಸಲಾಲುದ್ದೀನ್' 'ಇನ್‌ಸೈಡ್ ನಾಝಿ ಜರ್ಮನಿ' 'ಕ್ವೆಟ್ಟಾ ಭೂಕಂಪ' (ಸಾಕ್ಷ್ಯಚಿತ್ರ), 'ಗಂಗಾದೀನ್' ಇವು ಪ್ರಮುಖ ಚಿತ್ರಗಳು.

ಸೆನ್ಸಾರಿನವರ ಅವಕೃಪೆಗೆ ಕನ್ನಡ ಚಿತ್ರಗಳು ಈಡಾಗದಿದ್ದುದೇ ಒಂದು ವಿಶೇಷ ಸಾಧನೆ ಹಾಗೂ ದಾಖಲೆ ಎನ್ನಬಹುದು.

ಕನ್ನಡ ಚಿತ್ರಗಳಲ್ಲೂ ಮೂಲ ಸೆನ್ಸಾರ್ ಬೋರ್ಡ್‌ನಲ್ಲಿ ಸೆನ್ಸಾರ್ ಆದಾಗ ಇದ್ದ ಉದ್ದಕ್ಕೂ, ಜಿಲ್ಲೆಗಳಲ್ಲಿ ಸೆನ್ಸಾರ್ ಆದಾಗ ನಮೂದಿಸಲಾದ ಉದ್ದಕ್ಕೂ ತುಂಬಾ ವ್ಯತ್ಯಾಸವಿದೆ. ಈ ಬಗ್ಗೆ ಹಿರಿಯರು ''ಕೆಲವೊಮ್ಮೆ ಕಾರ್ಟೂನ್ ಚಿತ್ರಗಳನ್ನು, ನೃತ್ಯಭಾಗಗಳನ್ನು ಸೇರಿಸಲಾಗುತ್ತಿತ್ತು. ರಾತ್ರಿ ಇಡೀ ನಾಟಕ ನೋಡಿ ಅಭ್ಯಾಸವಾದ ಜನರಿಗೆ ಚಿತ್ರಗಳ ಅವಧಿ ಕಡಿಮೆ ಅನ್ನಿಸಿ ಚಿತ್ರಮಂದಿರಕ್ಕೆ ಬಾರದಿರುವ ಸಂಭವ ಇದ್ದುದರಿಂದ ಇಂಥ ಸೇರ್ಪಡೆ ಅನಿವಾರ್ಯವಾಗುತ್ತಿತ್ತು'' ಎನ್ನುತ್ತಾರೆ. ಕೆಲವೊಮ್ಮೆ ಚಿತ್ರದ ಹಾಡು, ನೃತ್ಯಗಳನ್ನು ಮಾತ್ರ ಸೆನ್ಸಾರ್ ಮಾಡಿರುವುದನ್ನು ಮೇಲಿನ ಪಟ್ಟಿಯಲ್ಲಿ ಕಾಣಬಹುದು. ಕೆಲವು ಚಿತ್ರಗಳ ತುಣುಕುಗಳನ್ನು ಜೋಡಿಸಿ ಟ್ರೈಲರ್‌ಗಳನ್ನು ಸಿದ್ಧಪಡಿಸಿ ಸೆನ್ಸಾರ್ ಮಾಡಿರುವುದೂ ಕೂಡ ಪೂರ್ವಭಾವಿ ಪ್ರಚಾರಕ್ಕೆ ಮತ್ತು ಅನಂತರ ಅಗತ್ಯವಿದ್ದ ಊರುಗಳಲ್ಲಿ ಅವನ್ನು ಸೇರ್ಪಡೆ ಮಾಡಲೆಂದೂ ಆಗಿರಬಹುದು.

೧೯೪೨ನೇ ಮೇ ತಿಂಗಳಲ್ಲಿ ಮೋಷನ್ ಪಿಕ್ಚರ್ಸ್ ಸಂಸ್ಥೆಯ 'ಲೇಡಿ ಆಫ್ ದಿ ಲೇಕ್' ಎಂಬ ಚಿತ್ರವನ್ನು ಕನ್ನಡ ಎಂದು ಸೂಚಿಸಲಾಗಿದೆ. ೧೧,೬೨೫ ಅಡಿ ಇದ್ದ ಈ ಚಿತ್ರ ಕನ್ನಡ ಚಿತ್ರಇತಿಹಾಸದಲ್ಲಿ ಎಲ್ಲೂ ಕಂಡುಬಂದಿಲ್ಲ. ಪ್ರಾಯಶಃ ಇದು ಕನ್ನಡಕ್ಕೆ ಡಬ್ ಆಗಿ ಬಂದಿರಬಹುದು ಎಂದು ಊಹಿಸಲಾಗಿದೆ.

ಸ್ವಾತಂತ್ರ್ಯಾನಂತರ ಅಂದರೆ ೧೯೪೮ರಲ್ಲಿ ಮುಂಬಯಿ ಹಾಗೂ ಮದ್ರಾಸ್ ಸರ್ಕಾರಗಳು ಸೆನ್ಸಾರ್‌ನ ಕಾಯ್ದೆಗಳನ್ನೊಳಗೊಂಡ ಗೈಡ್‌ಲೈನ್ಸ್ ಅನ್ನು ಪ್ರಕಟಿಸಿ ನಿರ್ಮಾಪಕರಿಗೆ ಚಿತ್ರ ತಯಾರಿಕೆ ಮಾಡುವಾಗ ಈ ಕುರಿತು ಮಾಹಿತಿ ಸಿಗುವಂತೆ ಅನುಕೂಲ ಮಾಡಿಕೊಟ್ಟವು. ಇದರ ಮರುವರ್ಷವೇ, ಅಂದರೆ ೧೯೪೯ರಲ್ಲಿ, ಬ್ರಿಟಿಷ್ ಸರ್ಕಾರ ಮಾಡಿಟ್ಟ ಕಾನೂನನ್ನೇ ತಿದ್ದುಪಡಿ ಮಾಡಿ ಚಿತ್ರಗಳನ್ನು ವೀಕ್ಷಿಸಿ ಅವುಗಳನ್ನು 'ಯು' ಹಾಗೂ 'ಎ' ಎಂದು ಎರಡು ವಿಭಾಗಗಳನ್ನಾಗಿ ವಿಂಗಡಿಸುವ ಕ್ರಮವನ್ನು ಜಾರಿಗೆ ತರಲಾಯಿತು. 'ಯು' ಅಂದರೆ (Universal Exhibition) ಎಲ್ಲರೂ ವೀಕ್ಷಿಸಬಹುದಾದ ಚಿತ್ರ ಹಾಗೂ 'ಎ' ಅಂದರೆ (Adults Only) ವಯಸ್ಕರಿಗೆ ಮಾತ್ರ ಎಂಬೆರಡು ಬಗೆಗಳನ್ನಾಗಿ ಮಾಡಲಾಯಿತು.

೧೯೧೮ರಲ್ಲಿ ಆರಂಭವಾದ ಸಿನಿಮಾಟೋಗ್ರಾಫ್ ಆ್ಯಕ್ಟ್ ಇಷ್ಟೆಲ್ಲಾ ಬದಲಾವಣೆಗಳೊಂದಿಗೆ ಬಂದಿದ್ದರೂ ಸ್ವತಂತ್ರ ಭಾರತ ಸರ್ಕಾರ ೧೯೫೨ರಲ್ಲಿ ಹಳೆಯ ಎಲ್ಲ ಕಾಯ್ದೆಗಳನ್ನೂ ಅಳಿಸಿ ಹಾಕಿ ಅಧಿಕೃತವಾದ 'ದಿ ಸಿನಿಮಾಟೊಗ್ರಾಫ್ ಆ್ಯಕ್ಟ್ ೧೯೫೨' ಎಂದು ಸಂವಿಧಾನಾತ್ಮಕವಾಗಿ ರೂಪಿಸಿತು. ಇದರಲ್ಲಿ ಬ್ರಿಟಿಷ್ ಆ್ಯಕ್ಟ್‌ನ ನೆರಳಿರದೆ ಭಾರತದ ಸಂಸ್ಕೃತಿ, ಸಂಪ್ರದಾಯ, ಭಾವನೆಗಳನ್ನು ಆಧರಿಸಿ ಹೊಸ ರೂಪುರೇಷೆಗಳೊಂದಿಗೆ ೧೯೫೮ರಲ್ಲಿ ರೂಪಿತಗೊಂಡ ಚೌಕಟ್ಟಿನಂತೆ ಹೊಸ ಕಾಯ್ದೆಯನ್ನು ರೂಪಿಸಲಾಯಿತು. ಈಗಲೂ ಹಲವಾರು ತಿದ್ದುಪಡಿಗಳೊಂದಿಗೆ ಜಾರಿಯಲ್ಲಿರುವುದು ಇದೇ ಕಾಯಿದೆ. ಸೆನ್ಸಾರ್ ಬೋರ್ಡ್ ಎಂದು ಆಡು ಮಾತಿನಲ್ಲಿ ಹೇಳುವ 'ಸೆಂಟ್ರಲ್ ಬೋರ್ಡ್ ಆಫ್ ಫಿಲ್ಮ್ ಸರ್ಟಿಫಿಕೇಶನ್' ಇಡೀ ಭಾರತದ ಎಲ್ಲ ಭಾಷೆಯ, ಎಲ್ಲ ಪ್ರದೇಶದ ಚಿತ್ರಗಳಿಗೂ ಅನ್ವಯಿಸುತ್ತದೆ. ಇದರಲ್ಲಿ ಕೇಂದ್ರ ಸರ್ಕಾರದಿಂದ ನೇಮಕಗೊಂಡ ಅಧಿಕಾರಿಯಾಗಿ ಒಬ್ಬರು ಅಧ್ಯಕ್ಷರಿದ್ದರೆ, ಒಂಬತ್ತು ಮಂದಿ ಗೌರವ ಸದಸ್ಯರು ಕಾರ್ಯ ನಿರ್ವಹಿಸುವರು. ಇದರ ಮುಖ್ಯ ಕಚೇರಿ ಮುಂಬಯಿನಲ್ಲಿದ್ದು ಬೆಂಗಳೂರು, ಕಲ್ಕತ್ತಾ, ಚೆನ್ನೈ, ಕಟಕ್, ಗೌಹಾಟಿ, ಹೈದಾರಾಬಾದ್, ಮುಂಬಯಿ, ನವದೆಹಲಿ, ತಿರುವನಂತಪುರ ಮುಂತಾದೆಡೆ ಪ್ರಾದೇಶಿಕ ಕಚೇರಿಗಳಿವೆ. ಹೀಗೆ ೧೯೧೮ಕ್ಕೂ ಮೊದಲು ಐಚ್ಛಿಕ ವಿಷಯವಾಗಿದ್ದ ಸೆನ್ಸಾರ್ ಕಡಿಮೆ ಅವಧಿಯಲ್ಲಿ ಚಿತ್ರರಂಗ ಬೆಳೆದಷ್ಟೇ ವೇಗವಾಗಿ ತನ್ನ ರೂಪುರೇಷೆಗಳನ್ನೂ ಬದಲಾಯಿಸಿಕೊಂಡಿತು.

ಜಸ್ಟಿಸ್ ಜಿ.ಡಿ.ಖೋಸ್ಲಾ ಅವರ ಅಧ್ಯಕ್ಷತೆಯಲ್ಲಿ ನೇಮಕಗೊಂಡ ಸಮಿತಿ ಸೆನ್ಸಾರ್‌ನ ಸುಧಾರಣೆಗೆ ಒಂದು ಅಂತಿಮ ರೂಪ ನೀಡಿತ್ತು. ಕೇಂದ್ರ ಸರ್ಕಾರ ನೇಮಿಸಿದ ಈ ಸಮಿತಿ ಹಿಂಸೆ, ಕ್ರೌರ್ಯ, ಲೈಂಗಿಕತೆ, ಅಸಭ್ಯ ಮೊದಲಾದ ಅಂಶಗಳನ್ನು ಎತ್ತಿಹಿಡಿಯಿತು. ಆದರೂ ತದನಂತರ ಹಲವಾರು ಬಾರಿ ತಿದ್ದುಪಡಿಯಾದ ಕಾಯ್ದೆ ೧೯೯೧ರಲ್ಲಿ ಪುನಃ ತಿದ್ದುಪಡಿಯಾಗಿದೆ. ಜಾಗತೀಕರಣದ ಹೆಸರಿನಲ್ಲಿ ಎಲ್ಲಾ ವಸ್ತು ವಿಷಯಗಳು ಬದಲಾದಂತೆ ಸಿನಿಮಾ ಜಗತ್ತೂ ಬದಲಾಗುತ್ತದೆ. ಅದರೊಂದಿಗೆ ಸೆನ್ಸಾರ್‌ನ ಕಾಯ್ದೆಯೂ ಬದಲಾಗುತ್ತದೆ.

೧೯೫೧ಕ್ಕೂ ಮೊದಲಿದ್ದ ಸೆನ್ಸಾರ್ ಬೋರ್ಡ್‌ಗಳು, ಸೆನ್ಸಾರ್ ಕಾಯ್ದೆಗಳೆಲ್ಲವೂ ರದ್ದಾಗಿ ಮೊದಲ ಬಾರಿಗೆ ರೂಪುಗೊಂಡ ಕೇಂದ್ರ ಸೆನ್ಸಾರ್ ಬೋರ್ಡ್‌ನ ಅಧ್ಯಕ್ಷಗಿರಿ ವಹಿಸಿದವರು ಪಾಟ್ನಾ ಹೈಕೋರ್ಟ್ ಚೀಫ್ ಜಸ್ಟಿಸ್ ಆಗಿ ಕಾರ್ಯ ನಿರ್ವಹಿಸಿದ್ದ ಕ್ಲಿಫರ್ಡ್ ಅಗರ್‌ವಾಲ್ (ಚಿತ್ರವಾಣಿ, ಏಪ್ರಿಲ್ ೧೯೫೧, ಪುಟ - ೪೫). ಇವರ ಅಧ್ಯಕ್ಷತೆಯಲ್ಲಿ ಆರಂಭವಾದ ಸೆನ್ಸಾರ್ ಬೋರ್ಡ್‌ನ ಸ್ತ್ರೀ ಪ್ರತಿನಿಧಿಯಾಗಿ ಲೀಲಾವತಿ ಮುನ್ಷಿ, ಚಲನಚಿತ್ರ ವಿಚಾರಣಾ ಸಮಿತಿಯ ಅಧ್ಯಕ್ಷರಾಗಿದ್ದ ಎಸ್.ಕೆ.ಪಾಟೀಲ್, ಪತ್ರಿಕಾ ಪ್ರತಿನಿಧಿಗಳಾಗಿ ಸಿ.ಆರ್.ಶ್ರೀನಿವಾಸನ್ ಮತ್ತು ತುಷಾರ್‌ಕಾಂತಿ ಘೋಷ್, ವಿದ್ಯಾಶಾಖೆಯ ಪ್ರತಿನಿಧಿಯಾಗಿ ಡಾ|ಅಮರನಾಥ್ ಝಾ, ಚಲನಚಿತ್ರ ಪರಿಶ್ರಮ ಪ್ರತಿನಿಧಿಯಾಗಿ ಬಿ.ಎನ್.ಸರ್ಕಾರ್ ನೇಮಕಗೊಂಡಿದ್ದರು. ಮುಂಬಯಿ, ಮದ್ರಾಸ್ ಮತ್ತು ಕಲ್ಕತ್ತಾಗಳಲ್ಲಿ ಉಪಶಾಖೆಗಳು ಆರಂಭವಾಗಿದ್ದವು.

ಸೆನ್ಸಾರ್ - ತಾರೆಯರು

ಐವತ್ತರ ದಶಕದಲ್ಲಿ ತಯಾರಾಗುತ್ತಿದ್ದ ಚಿತ್ರಗಳು ಎಂಥವು ? ಅವುಗಳಿಗೆ ಸೆನ್ಸಾರ್‌ನ ಅಗತ್ಯವಿತ್ತೇ ಎಂದು ನಾವಿಂದು ಯೋಚಿಸಬಹುದು. ಆದರೂ ಸೆನ್ಸಾರ್ ಬೇಕೇ, ಬೇಡವೇ ಎಂಬ ಚರ್ಚೆ ಮಾತ್ರ ಆಗಲೂ ಇತ್ತು. ಅಲ್ಲದೆ ಈಗಿನಂತೆ ಆಗಲೂ ಚಿತ್ರಗಳು ಸೆನ್ಸಾರ್ ಕತ್ತರಿಗೆ ಸಿಕ್ಕಿಯೂ ಇದ್ದವು. ಇದಕ್ಕೊಂದು ಉದಾಹರಣೆ ಎಂಬಂತೆ ದಕ್ಷಿಣದ ಖ್ಯಾತ ತಾರೆ ಅಂಜಲಿದೇವಿ ೧೯೫೭ರಲ್ಲಿ ಪತ್ರಕರ್ತರೊಂದಿಗೆ ಸೆನ್ಸಾರ್ ಬಗೆಗೆ ಹೇಳಿದ ಮಾತು ಈಗಲೂ ಪ್ರಸ್ತುತವೆನ್ನಿಸುತ್ತದೆ. ಸೆನ್ಸಾರ್ ಅಗತ್ಯವೆ ಎಂಬ ಪ್ರಶ್ನೆಗೆ ಅಂಜಲಿ ದೇವಿ,

"ಸೆನ್ಸಾರ್ ಇದ್ದೂ ಚಿತ್ರ ತಯಾರಕರು ನಮ್ಮನ್ನು ಇಷ್ಟೊಂದು ಗೋಳು ಹುಯ್ಯುತ್ತಾರೆ. ಇನ್ನೇನಾದರೂ ಚಿತ್ರಕ್ಕೆ ಸೆನ್ಸಾರ್ ಇಲ್ಲವೆಂದಾದರೆ ನಮ್ಮ ಗತಿ ಏನಾಗುತ್ತಿತ್ತೋ ? ಜೀವ ಹಿಂಡಿ ಬಿಡುತ್ತಾರೆ ಅಷ್ಟೆ" ಎಂಬಂಥ ಮಾತುಗಳನ್ನಾಡಿದ್ದರು.

ಅಂದಿನ ದಿನದಲ್ಲೇ ನಾಯಕಿಯರು ಹಿಂಜರಿಯುವಂಥ ದೃಶ್ಯಗಳನ್ನು ಚಿತ್ರದಲ್ಲಿ ಅಳವಡಿಸಲು ಪ್ರಯತ್ನಿಸುತ್ತಿದ್ದರೆನ್ನುವುದಕ್ಕೆ ನಟಿ ಅಂಜಲಿದೇವಿಯ ಈ ಮಾತುಗಳೇ ಸಾಕ್ಷಿ. ಇದು ಪ್ರಚೋದನಕಾರಿ ದೃಶ್ಯಗಳ ಕುರಿತಾದರೆ ಇದಕ್ಕೂ ಹಿಂದೆ, ಅಂದರೆ ನಲುವತ್ತರ ದಶಕದಲ್ಲಿಯೇ, ಕೆಲ ಚಿತ್ರಗಳು ವಿವಾದಕ್ಕೆ ಸಿಲುಕಿದ್ದವು. 'ಪೃಥ್ವಿವಲ್ಲಭ್', 'ಚೆಂಚು ಲಕ್ಷ್ಮಿ', 'ಭರ್ತೃಹರಿ'ಯಂಥ ಚಿತ್ರಗಳು ಸೆನ್ಸಾರ್ ಆದ ಮೇಲೆ ಪ್ರದರ್ಶನವಾಗುತ್ತಿದ್ದ ಕಾಲದಲ್ಲಿಯೂ ಸಾಕಷ್ಟು ಚರ್ಚೆಗೆ ಒಳಗಾಗಿದ್ದವು. ಅಗಿನ್ನೂ ಬ್ರಿಟಿಷರ ಆಳ್ವಿಕೆಯಾದುದರಿಂದ ಮೈಸೂರು ಸಂಸ್ಥಾನದಲ್ಲಿ ಪ್ರದರ್ಶಿತವಾಗುತ್ತಿದ್ದ ಚಿತ್ರಗಳಿಗೆ ಮೈಸೂರು ಫಿಲಂ ಸೆನ್ಸಾರ್ ಬೋರ್ಡ್‌ನವರು ಬ್ರಿಟಿಷ್ ಇಂಡಿಯಾ ಸೆನ್ಸಾರ್ ಬೋರ್ಡ್‌ನವರು ಕೊಟ್ಟಿರುವ ಅನುಮತಿಯ ಆಧಾರದ ಮೇಲೆ ಇಲ್ಲಿಯೂ ಪ್ರದರ್ಶನಕ್ಕೆ ಅನುಮತಿ ನೀಡಿದ್ದಕ್ಕಾಗಿ ಸಾಕಷ್ಟು ಟೀಕೆಗೆ ಒಳಗಾಗಿದ್ದರು. ಐತಿಹಾಸಿಕ ಕಥೆಯಾಧಾರಿತ ಚಿತ್ರವಾದ 'ಪೃಥ್ವಿವಲ್ಲಭ್' ಚಿತ್ರದಲ್ಲಿ ಕನ್ನಡಿಗರ ಮನನೋಯಿಸುವಂಥ ವಿಚಾರಗಳಿರುವುದರಿಂದ ಅದರ ಪ್ರದರ್ಶನವನ್ನು ನಿಲ್ಲಿಸಬೇಕೆಂಬ ಕೂಗು ಕೇಳಿಬಂದಿತ್ತು. ಜೂನ್ ೧೯೪೪ರ 'ವಾಕ್ಚಿತ್ರ' ಪತ್ರಿಕೆಯಲ್ಲಿ ವಿಶ್ವೇಶ್ವರ ಎನ್ನುವವರು ಬರೆದ ಲೇಖನದ ಸಾರಾಂಶ ಈ ಘಟನೆಗೆ ಕನ್ನಡಿ ಹಿಡಿಯುತ್ತದೆ.

ಇತಿಹಾಸಕ್ಕೆ ಅಪಚಾರ

ತಮಿಳು ಚಿತ್ರವಾದ 'ಭರ್ತೃಹರಿ'ಯಂತಿಲ್ಲದಿದ್ದರೂ 'ಪೃಥ್ವಿವಲ್ಲಭ್' ಚಿತ್ರ ಅದಕ್ಕಿಂತ ಹೆಚ್ಚಾಗಿಯೇ ಕನ್ನಡಿಗರ ಮನಸ್ಸನ್ನು ನೋಯಿಸುವಂತಿದೆ. ಬೆಂಗಳೂರಿನ ಚಿತ್ರಮಂದಿರವೊಂದರಲ್ಲಿ ಪ್ರದರ್ಶಿತಗೊಂಡ ಈ ಚಿತ್ರವನ್ನು ತಯಾರಿಸಿದವರು ಸೊಹ್ರಾಬ್ ಮೋದಿ. 'ಪೃಥ್ವಿವಲ್ಲಭ್' ಚಿತ್ರಕ್ಕೆ ಮೂಲಕಥೆಯನ್ನು ಬರೆದವರು ಮುಂಬಯಿಯ ಕನ್ಹಯ್ಯಲಾಲ್ ಮುನ್ಷಿ. ಇವರು ಮುಂಬಯಿ ಪ್ರಾಂತ್ಯದ ಕಾಂಗ್ರೆಸ್ ಮಂತ್ರಿಮಂಡಲದ ಸದಸ್ಯರಾಗಿದ್ದರು. ಸದಸ್ಯರಾಗುವ ಮೊದಲೇ ಬರೆದ 'ಪೃಥ್ವಿವಲ್ಲಭ್' ಎನ್ನುವ ಕಾದಂಬರಿಯನ್ನು ಯಥಾವತ್ತಾಗಿ ಚಿತ್ರಕಥೆ ಮಾಡಲಾಯಿತು. ಇಲ್ಲೊಂದು ಮುಖ್ಯ ವಿಚಾರವೆಂದರೆ ಇದು ಕಾದಂಬರಿಯಾಗಿ ಪ್ರಕಟವಾದಾಗಲೇ ಗುಜರಾತಿ ಭಾಷೆ ಬಲ್ಲ ಕೆಲ ಕನ್ನಡಿಗರು ಈ ಕಾದಂಬರಿಯನ್ನು ಓದಿ, ಈ ಕಥೆಯಲ್ಲಿ ಕನ್ನಡಿಗರ ಮನಸ್ಸನ್ನು ನೋಯಿಸುವಂಥ ಐತಿಹಾಸಿಕ ಅಂಶಗಳು, ಸತ್ಯಕ್ಕೆ ದೂರವಾದ ಘಟನೆಗಳು ಇರುವುದರಿಂದ ಅದನ್ನು ತಿದ್ದುವುದು ಒಳಿತೆಂದು ಕನ್ಹಯ್ಯಲಾಲ್ ಮುನ್ಷಿಯವರಿಗೆ ತಿಳಿಸಿದ್ದರು. ಸೂಚನೆಗೆ ಗಮನ ಕೊಡುವುದಾಗಿಯೂ ಅವರು ತಿಳಿಸಿದ್ದರು.

"ತಮ್ಮ ಕಾದಂಬರಿಯಿಂದಾಗಿ ಕನ್ನಡಿಗರಿಗೆ ನೋವಾಗಿದೆಯೆಂಬ ವಿಚಾರವನ್ನು ಮುನ್ಷಿಯವರು ಮಂತ್ರಿಗಳಾದ ಮೇಲೂ ಮರೆತಿರಲಿಲ್ಲ. ಹುಬ್ಬಳ್ಳಿಯ ಮಿತ್ರರೊಬ್ಬರ ಮನೆಗೆ ಬಂದಿದ್ದಾಗ ಸಾಹಿತ್ಯದ ವಿಚಾರ ಮಾತಾಡುತ್ತಾ ತಮ್ಮ 'ಪೃಥ್ವಿವಲ್ಲಭ್' ಕಾದಂಬರಿಯ ಬಗ್ಗೆ ಹೇಳಿ, ಅದರಿಂದ ಕನ್ನಡಿಗರಿಗೆ ಬೇಸರವಾದ ಬಗ್ಗೆ ಪ್ರಸ್ತಾಪಿಸಿದ್ದರು. ಆದರೂ ಇಲ್ಲಿ ಮುಖ್ಯವಾಗಿ ಹೇಳುವುದೆಂದರೆ ಮುನ್ಷಿಯವರೇ ತಮ್ಮ ಕಾದಂಬರಿಯಲ್ಲಿ ಈ ಬಗೆಯ ಲೋಪವಿದೆಯೆಂದು ಒಪ್ಪಿಕೊಂಡ ಮೇಲೆ ಅದನ್ನು ಚಲನಚಿತ್ರ ಮಾಡಲು ಅನುಮತಿ ಹೇಗೆ ನೀಡಿದರು ? ಒಂದು ಪಕ್ಷ ಅನುಮತಿ ನೀಡುವುದಾದರೂ ಅದನ್ನು ಸೂಕ್ತ ರೀತಿಯಲ್ಲಿ ಬದಲಾವಣೆ ಮಾಡಲಿಲ್ಲವೇಕೆ ?

"ಈ ಪ್ರಶ್ನೆಗೆ ಸಹಜವಾಗಿ ತೋರುವ ಉತ್ತರ ಒಂದೆ. ಅದೇನೆಂದರೆ ಕನ್ನಡಿಗರು ಯಾರೇನೇ ಅನ್ಯಾಯ ಮಾಡಿದರೂ ಪ್ರತಿಕ್ರಿಯೆ, ಪ್ರತೀಕಾರ ಮಾಡದವರು ಎಂಬ ಮನೋಭಾವ ಇರಬಹುದು. ಇಲ್ಲವಾದಲ್ಲಿ 'ಡ್ರಮ್' ಎನ್ನುವ ಚಿತ್ರ ಪಠಾಣರ ಘನತೆಗೆ ಕುಂದು ತರುತ್ತದೆಂದು ತಮ್ಮ ಅಧಿಕಾರದ ಅವಧಿಯಲ್ಲೇ ಆ ಚಿತ್ರದ ಪ್ರದರ್ಶನವನ್ನು ವಿರೋಧಿಸಿದ ಮುನ್ಷಿಯವರೇ ವಿಷಯ ಗೊತ್ತಿದ್ದೂ ತಮ್ಮ ಕಾದಂಬರಿ ಚಿತ್ರವಾಗುವ ಮೊದಲು ಯಾಕೆ ಸೂಕ್ತ ಬದಲಾವಣೆ ಮಾಡಲಿಲ್ಲ ?

"...'ಪೃಥ್ವಿವಲ್ಲಭ್' ಕಥೆ ಎರಡನೆಯ ತೈಲಪನ ಕಾಲಕ್ಕೆ ಸಂಬಂಧಿಸಿದ್ದು. ಇತಿಹಾಸದಲ್ಲಿರುವಂತೆ ಇಮ್ಮಡಿ ತೈಲಪ ಪರಾಕ್ರಮಶಾಲಿಯಾದ ಕನ್ನಡದ ಅರಸ. ಕನ್ನಡ ಸಾಹಿತ್ಯದ ಮುಕುಟಪ್ರಾಯನೆನಿಸಿದ ರನ್ನನೂ ವೀರ ವಿದ್ವಾಂಸ ಕೇಶಿ ದಂಡನಾಯಕನೂ ಇದ್ದುದು ಈತನ ಆಸ್ಥಾನದಲ್ಲೆ. ಕವಿ ರನ್ನನು ತನ್ನ 'ಸಾಹಸಭೀಮ ವಿಜಯ' ಎಂಬ ಗದಾಯುದ್ಧ ಗ್ರಂಥದಲ್ಲಿ ಅರಸನಾದ ತೈಲಪ ಕುಮಾರನ ಶೌರ್ಯ, ಸಾಹಸಗಳನ್ನು ಹೊಗಳಿ ಆತನ ಸಂಸ್ಕೃತಿಯ ಬಗೆಗೂ ವಿವರಿಸಿದ್ದನು. ಇಂಥ ತೈಲಪ ರಾಜನನ್ನು 'ಪೃಥ್ವೀವಲ್ಲಭ್' ಕಾದಂಬರಿಯಲ್ಲಿ ಹೇಡಿಯೆಂದೂ, ಹೀನ ಮನೋಧರ್ಮದವನೆಂದೂ ನಿರೂಪಿಸಲಾಗಿತ್ತು. ಮಾಳವದ ಅರಸನಾದ ಪೃಥ್ವೀವಲ್ಲಭ ಮುಂಜನಿಗೆ ತೈಲಪನು ಹದಿನಾರು ಬಾರಿ ಸೋತು ತುಂಬಿದ ಸಭೆಯಲ್ಲಿ ಮುಂಜನ ಕಾಲು ತೊಳೆದು ಕ್ಷಮಾಪಣೆ ಕೇಳಿದನೆಂದು ಉಲ್ಲೇಖಿಸಲಾಗಿದೆ. ಇತಿಹಾಸದಲ್ಲಿ ಇದಕ್ಕೆ ಪೂರಕವಾದ ಆಧಾರಗಳು ಸಿಗುವುದಿಲ್ಲ. ವೀರಾಧಿವೀರನೆಂದು, ಮಾನವಂತನೆಂದು ಹೆಸರು ಪಡೆದಿದ್ದ ತೈಲಪ ರಾಜ ತನ್ನ ಪ್ರಾಣ ಉಳಿಸಿಕೊಳ್ಳುವುದಕ್ಕಾಗಿ ಕಾಲು ತೊಳೆದನೆಂದು ಊಹಿಸುವುದೂ ಅಸಾಧ್ಯ. ಅದಲ್ಲದೆ ಇನ್ನೊಂದು ಸನ್ನಿವೇಶದಲ್ಲಿ ತೈಲಪನು ಮುಂಜನ ಆಸ್ಥಾನದ ಕವಿಯೋರ್ವನನ್ನು ಕೈಸೆರೆ ಹಿಡಿದು "ಮುಂಜನಿಗೆ ತನ್ನ ಕವಿಯ ಮೇಲೆ ಅಭಿಮಾನವಿದ್ದರೆ ಅವನು ತನ್ನ ಆಸ್ಥಾನದ ಕವಿಯನ್ನು ಬಿಡಿಸಿಕೊಂಡು ಹೋಗಲಿ" ಎಂದು ಹೇಳಿ ಕಳುಹಿಸುತ್ತಾನೆ. ರನ್ನನಂತಹ ಕವಿಗೆ, ಕೇಶಿ ದಂಡನಾಯಕನಂಥ ವಿದ್ವನ್ಮಣಿಗೆ ಆಶ್ರಯವಿತ್ತ ತೈಲಪನು ಇನ್ನೊಬ್ಬ ಕವಿಯ ವಿಚಾರವಾಗಿ ಹೀಗೆ ವರ್ತಿಸಿದನೆಂಬ ಸಂಗತಿಯೇ ನಂಬಲಸಾಧ್ಯವಾದುದು.

"ಕವಿಯನ್ನು ಬಿಡಿಸಿಕೊಂಡು ಹೋಗಲು ಬಂದ ಮುಂಜನು ಗೋದಾವರಿ ನದಿಯನ್ನು ದಾಟುವಾಗ ಬಿರುಗಾಳಿಗೆ ಸಿಕ್ಕಿ ಅಸಹಾಯಕನಾಗಿದ್ದ ಸಂದರ್ಭದಲ್ಲಿ ತೈಲಪನು ಅತನನ್ನು ಸೆರೆಹಿಡಿದು ತನ್ನ ರಾಜಧಾನಿಗೆ ತರುತ್ತಾನೆ. ಇಲ್ಲಿ ಮುಂಜನು ತೈಲಪನ ಕಾಲು ತೊಳೆಯಲು ನಿರಾಕರಿಸುತ್ತಾನೆ. ಅವನನ್ನು ದಾರಿಗೆ ತರಲು ಯತ್ನಿಸುತ್ತ ತೈಲಪನ ಸಹೋದರಿ ಮೃಣಾಲವತಿ ಮುಂಜನಿಗೆ ಮನಸೋಲುತ್ತಾಳೆ. ಆದರೆ ಅವನ ಪ್ರೀತಿಯನ್ನು ಅನುಮಾನಿಸಿ ಅವಂತಿಗೆ ಹೋಗಲು ಹಿಂಜರಿಯುತ್ತಾಳೆ. ಇದರೊಂದಿಗೆ ಬಂದಿಯಾಗಿದ್ದ ಮುಂಜನಿಗೆ ತೈಲಪನು ಹಾಗೂ ಅವನ ಸಹೋದರಿ ಚಿತ್ರಹಿಂಸೆ ಕೊಟ್ಟರೆಂದು ನಿರೂಪಿಸಲಾಗಿದೆ. ಈ ಸಂದರ್ಭದಲ್ಲಿ ಮುಂಜನು ತೈಲಪನ ರಾಜ್ಯದಲ್ಲಿ ಸಂಗೀತ, ಸಾಹಿತ್ಯ, ನೃತ್ಯಾದಿ ಕಲೆಗಳಿಗೆ ಸ್ಥಾನವೇ ಇಲ್ಲ. ಇದು ಅಸಂಸ್ಕೃತರ, ಅನಾಗರಿಕರ ಬೀಡೆಂದು ಜರಿಯುತ್ತಾನೆ. ಆದರೆ ಹೀಗೆ ಹೇಳಿಯೂ ಅದೇ ಚಿತ್ರದಲ್ಲಿ ತೋರಿಸುವ ತೈಲಪನ ಅರಮನೆ, ರಾಜಧಾನಿಯ ಉಪವನ, ದೇವಾಲಯಾದಿಗಳು ಆತನ ಕಲಾಭಿರುಚಿಯನ್ನು ವ್ಯಕ್ತಗೊಳಿಸುತ್ತವೆ. ಇಂಥ ವಿರೋಧಾಭಾಸಗಳೂ ಚಿತ್ರದಲ್ಲಿವೆ.

"ಇದಾದ ಮೇಲೆ ಸೆರೆಮನೆಯಿಂದ ತಪ್ಪಿಸಿಕೊಂಡು ಹೋಗಲು ಯತ್ನಿಸಿದ ಮುಂಜನನ್ನು ತೈಲಪನು ಆನೆಯ ಕಾಲಿನಿಂದ ತುಳಿಸಿದ ಮೇಲೆ ನಡೆಯುವ ಹೋರಾಟದಲ್ಲಿ ಹಾಗೂ ಇನ್ನೂ ಕೆಲವು ಸನ್ನಿವೇಶದಲ್ಲಿ ತೈಲಪನನ್ನು ಹೇಡಿಯಂತೆಯೂ, ಹೆಣ್ಣಿಗನಂತೆಯೂ ತೋರಿಸಿ, ಕನ್ನಡ ನಾಡಿನ ಅರಸನೊಬ್ಬನಿಗೆ ಅನ್ಯಾಯ, ಅಪಮಾನವಾಗುವಂತೆ ಚಿತ್ರಿಸಲಾಗಿದೆ. ಇಷ್ಟೇ ಅಲ್ಲದೆ ಇತಿಹಾಸವನ್ನು

ಅವಲೋಕಿಸಿದರೆ 'ಪೃಥ್ವೀವಲ್ಲಭ್' ಚಿತ್ರ ಹಲವಾರು ವಿಚಾರಗಳಲ್ಲಿ ತಾಳಿಯಾಗುವುದಿಲ್ಲ.

''ಇಂಥ ಅಸಂಬದ್ಧಗಳನ್ನೊಳಗೊಂಡ ಚಿತ್ರವನ್ನು ಮೈಸೂರು ಫಿಲಂ ಸೆನ್ಸಾರ್ ಬೋರ್ಡ್‌ನವರು ಕನ್ನಡ ನಾಡಾದ ಮೈಸೂರು ಸೀಮೆಯಲ್ಲಿ ಪ್ರದರ್ಶಿಸಲು ಏಕೆ ಅವಕಾಶ ಕೊಟ್ಟರು ? ಸೆನ್ಸಾರ್ ಬೋರ್ಡ್‌ನವರು ಇಂಥ ಪ್ರಸಂಗಗಳಲ್ಲಿ ಧೈರ್ಯದಿಂದ ತಮ್ಮ ಅಧಿಕಾರವನ್ನು ಉಪಯೋಗಿಸಿ 'ಪೃಥ್ವೀವಲ್ಲಭ್'ನಂತಹ ಚಿತ್ರಗಳ ಪ್ರದರ್ಶನಕ್ಕೆ ಅನುಮತಿ ನೀಡಬಾರದು. ಈಗಾಗಲೇ ಅನುಮತಿ ನೀಡಿರುವುದನ್ನು ರದ್ದುಪಡಿಸಬೇಕು.''

ಹೀಗೆ 'ಪೃಥ್ವೀವಲ್ಲಭ್' ಚಿತ್ರದ ಬಗ್ಗೆ ನಲವತ್ತರ ದಶಕದ ಮಧ್ಯ ಭಾಗದಲ್ಲಿ ಬಂದ ವಿರೋಧವನ್ನು ವಿಶ್ವೇಶ್ವರ ಅವರು ಬರೆದ ಈ ಲೇಖನ ಪ್ರತಿನಿಧಿಸುತ್ತದೆ. ಇದರಿಂದ ಅಂದಿನ ದಿನದಲ್ಲಿಯೂ ಇದ್ದ ಸೆನ್ಸಾರ್‌ನ ಅವಶ್ಯಕತೆ ಹಾಗೂ ಸೆನ್ಸಾರ್ ಬೋರ್ಡ್‌ನ ನಿಷ್ಕ್ರಿಯತೆ ಎರಡನ್ನೂ ನಾವು ಈ ಮೂಲಕ ಗಮನಿಸಬಹುದು. ಬ್ರಿಟಿಷ್ ಸೆನ್ಸಾರ್ ಮಂಡಳಿಯ ಧೋರಣೆಗಳನ್ನೊಳಗೊಂಡು ರಚಿತವಾದ ಇಲ್ಲಿನ ಪ್ರಾದೇಶಿಕ ಸೆನ್ಸಾರ್ ಬೋರ್ಡ್‌ಗಳ ನಿಯಮಾವಳಿಗಳು ಸಮರ್ಪಕವಾಗಿ ಹೊಂದಿಕೆಯಾಗದೆ ಬೋರ್ಡ್‌ಗಳು ಸಾಕಷ್ಟು ಟೀಕೆಗೆ ಒಳಗಾಗುತ್ತಿದ್ದವು ಎನ್ನುವುದಕ್ಕೂ ಉದಾಹರಣೆಗಳು ದೊರೆಯುತ್ತವೆ.

ಶಾಸಕರ ಆಕ್ರೋಶ

೧೯೪೪ ಜುಲೈ ತಿಂಗಳಿನ 'ವಾಕ್ಚಿತ್ರ' ಪತ್ರಿಕೆಯಲ್ಲಿ ಪ್ರಕಟವಾದ '**ಪ್ರಜಾ ಪ್ರತಿನಿಧಿಗಳ ಸಭೆಯಲ್ಲಿ ಚಲನಚಿತ್ರಗಳ ಮೇಲೆ ಚರ್ಚೆ - ಮೈಸೂರು ಸೆನ್ಸಾರ್ ಬೋರ್ಡ್ ಮೇಲೆ ಟೀಕೆ**' ಎಂಬ ಲೇಖನ ಇದಕ್ಕೆ ಬೆಳಕು ಚೆಲ್ಲುತ್ತದೆ.

''ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ಮೈಸೂರು ನಗರದಿಂದ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿ ಆರಿಸಿ ಬಂದಿರುವ ಕಾಂಗ್ರೆಸ್ ಪಕ್ಷದ ಎಂ.ಎಸ್.ಜೋಯಿಸ್ ಅವರು ತಮ್ಮ ಬಜೆಟ್ ಭಾಷಣದಲ್ಲಿ ಮೈಸೂರು ಸಂಸ್ಥಾನದಲ್ಲಿ ಚಲನಚಿತ್ರೋದ್ಯಮಕ್ಕೆ ಪ್ರೋತ್ಸಾಹ ದೊರೆಯಬೇಕಾದುದರ ಕುರಿತು ಮಾತಾಡಿದರು. ಜೋಯಿಸ್ ಅವರ ಭಾಷಣದ ಮುಖ್ಯಭಾಗ ಮೈಸೂರು ಸರ್ಕಾರದವರು ರಚಿಸಿದ ಮೈಸೂರು ಫಿಲಂ ಸೆನ್ಸಾರ್ ಬೋರ್ಡ್ ಸಮರ್ಪಕವಾಗಿ ಕರ್ತವ್ಯ ನಿರ್ವಹಣೆ ಮಾಡುತ್ತಿಲ್ಲವೆನ್ನುವುದೇ ಆಗಿದೆ.

''ಫಿಲಂ ಸೆನ್ಸಾರ್ ಬೋರ್ಡ್ ಒಂದು ಮುಖ್ಯವಾದ ಸಂಸ್ಥೆಯೆಂಬ ಭಾವನೆ ಸರ್ಕಾರಕ್ಕೆ ಇದ್ದಂತಿಲ್ಲ. ಈ ಸಂಸ್ಥೆಗೆ ಸದಸ್ಯರನ್ನು ಆರಿಸುವಾಗ ಸರ್ಕಾರ ಯಾವೊಂದು ನಿಯಮಗಳನ್ನೂ ಗಮನದಲ್ಲಿಟ್ಟುಕೊಳ್ಳುವುದಿಲ್ಲ. ಸೆನ್ಸಾರ್ ಬೋರ್ಡ್‌ನವರ ಕಾರ್ಯ ವೈಪರೀತ್ಯದಿಂದ ಉಂಟಾಗುವ ಪರಿಣಾಮಗಳನ್ನು ಮೊದಲು ಅನುಭವಿಸುವವರು ಚಿತ್ರ ಮಂದಿರದವರು. ಆದರೂ ಸೆನ್ಸಾರ್ ಬೋರ್ಡ್‌ನಲ್ಲಿ ಈ ವರ್ಗದವರಿಗೆ ಪ್ರಾತಿನಿಧ್ಯವಿಲ್ಲ. ಅದೇ ರೀತಿ ಮುಖ್ಯ ಸಾಂಸ್ಕೃತಿಕ ಸಂಸ್ಥೆಗಳಿಗೂ ಸಮಿತಿಯಲ್ಲಿ ಪ್ರಾತಿನಿಧ್ಯವಿಲ್ಲ. ಈ ರೀತಿ ಸಮಿತಿಯ ಸದಸ್ಯ ಶಕ್ತಿಯೇ ಸರಿಯಾಗಿಲ್ಲದಿರುವುದೇ ಇಲ್ಲಿ ನಡೆಯುವ ಕೆಲಸಗಳು ಅಸಮರ್ಪಕವಾಗಲು ಕಾರಣವೆಂದರೆ ತಪ್ಪಿಲ್ಲ.

ಈ ಅಂಶವನ್ನು ಎತ್ತಿ ಮಾತನಾಡುತ್ತಾ ಜೋಯಿಸರು 'ಪೃಥ್ವೀವಲ್ಲಭ್', 'ಚೆಂಚುಲಕ್ಷ್ಮಿ', 'ಭರ್ತೃಹರಿ' ಚಿತ್ರಗಳ ಪ್ರದರ್ಶನದ ಅರ್ಹತೆಯನ್ನು ನಿರ್ಣಯಿಸುವಾಗ ಮೈಸೂರು ಫಿಲಂ ಸೆನ್ಸಾರ್ ಬೋರ್ಡ್‌ನವರು ದಕ್ಷತೆಯಿಂದ ಕೆಲಸ ಮಾಡಲಿಲ್ಲವೆಂದು ಹೇಳಿದರು. ತಮಿಳು ಚಿತ್ರ 'ಭರ್ತೃಹರಿ'ಯ ಬಗ್ಗೆ ಮಾತಾಡುತ್ತ ಜೋಯಿಸರು ''ಕನ್ನಡ ಜನಾಂಗವನ್ನು ಅವಹೇಳನ ಮಾಡುವಂತಹ ಮಾತುಗಳನ್ನು ಈ ಚಿತ್ರದಲ್ಲಿ ಸೇರಿಸಲಾಗಿದೆ. ಇಂತಹ ಮಾತುಗಳಿದ್ದೂ ಸೆನ್ಸಾರ್ ಬೋರ್ಡ್‌ನವರು ಅದನ್ನು ಕತ್ತರಿಸದೆ ಪ್ರದರ್ಶನಕ್ಕೆ ಅನುಮತಿ ನೀಡಿದ್ದು ಸರಿಯಲ್ಲ'' ಎಂದು ತಮ್ಮ ಅಭಿಪ್ರಾಯ ತಿಳಿಸಿದರು. ಇದರೊಂದಿಗೆ 'ಚೆಂಚುಲಕ್ಷ್ಮಿ' ಚಿತ್ರದ ವಿಚಾರವಾಗಿ ಜೋಯಿಸ್ ಅವರು ಪ್ರಸ್ತಾಪಿಸಿ, ಈ ಚಿತ್ರದಲ್ಲಿ ಭಕ್ತರ ಗೌರವಕ್ಕೆ ಪಾತ್ರವಾದ ಶ್ರೀ ನರಸಿಂಹದೇವರ ಮನೋವೃತ್ತಿಯನ್ನು ತುಂಬಾ ಹೀನಾಯಕರವಾದ ರೀತಿಯಲ್ಲಿ ಚಿತ್ರಿಸಲಾಗಿದೆ ಎಂದು ದೂರಿದರು. ಸ್ನಾನಾಸಕ್ತಳಾಗಿದ್ದ ನಾಯಕಿಯನ್ನು ನೋಡಿ ಅವಳ ಅಂಗಸ್ಪರ್ಶ ಮಾಡಬೇಕೆಂದು ಅಪೇಕ್ಷಿಸಿ ನರಸಿಂಹದೇವರು ಮೀನಿನ ರೂಪದಿಂದ ಸ್ನಾನಘಟ್ಟವನ್ನು ಪ್ರವೇಶಿಸಿ ನಾಯಕಿಯೊಡನೆ ಅಶ್ಲೀಲವಾಗಿ ವರ್ತಿಸಿದರೆಂದು ಈ ಚಿತ್ರದಲ್ಲಿ ನಿರೂಪಿಸಲಾಗಿದೆ. ಈ ದೃಶ್ಯವನ್ನು ಮದರಾಸು ಫಿಲಂ ಸೆನ್ಸಾರ್ ಬೋರ್ಡ್‌ನವರು ತೆಗೆದು ಹಾಕಿದ್ದರೂ ಕೂಡಾ ಮೈಸೂರು ಫಿಲಂ ಸೆನ್ಸಾರ್ ಬೋರ್ಡ್‌ನವರು ಆ ದೃಶ್ಯ ಸಹಿತ ಚಿತ್ರವನ್ನು ಪ್ರದರ್ಶಿಸಲು ಅನುಮತಿ ನೀಡಿದ್ದಾರೆ. ಇಂಥ ತಪ್ಪುಗಳನ್ನು ತಿದ್ದಿಕೊಂಡು ನಡೆಯಬೇಕಾದ್ದು ಅವಶ್ಯಕವೆಂದು ಸಭೆಯಲ್ಲಿ ಜೋಯಿಸ್ ಅವರು ಅಭಿಪ್ರಾಯಪಟ್ಟರು. 'ಪೃಥ್ವೀವಲ್ಲಭ್', 'ಚೆಂಚುಲಕ್ಷ್ಮಿ', 'ಭರ್ತೃಹರಿ' ಚಿತ್ರಗಳಿಗೆ ಸಾರ್ವಜನಿಕ ಖಂಡನೆಯಾಯಿತಾದರೂ ಈ ಚಿತ್ರಗಳನ್ನು ಬೋರ್ಡ್‌ನವರು ಮರುಪರಿಶೀಲನೆ ಮಾಡಬೇಕು ಮತ್ತು ವಿವಾದಕ್ಕೆ ಕಾರಣವಾದ ದೃಶ್ಯಗಳನ್ನು ಮೈಸೂರು ಫಿಲಂ ಸೆನ್ಸಾರ್ ಬೋರ್ಡ್ ಕತ್ತರಿಸದೆ ಇದ್ದುದಕ್ಕೆ ಸರ್ಕಾರವೇ ಮಧ್ಯ ಪ್ರವೇಶ ಮಾಡಬೇಕು ಎಂದವರು ತಿಳಿಸಿದರು.

ಸಭೆಯಲ್ಲಿ ಮಾತಾಡುತ್ತಿದ್ದ ಜೋಯಿಸ್ ಅವರು ''ಕನ್ನಡ ನಾಡು, ನುಡಿ, ಸಂಸ್ಕೃತಿ, ಜನಾಂಗಗಳನ್ನು ಅವಹೇಳನ ಮಾಡುವ ಚಿತ್ರಗಳನ್ನು ತಯಾರಿಸುವ ನಿರ್ಮಾಪಕರಿಗೆ ಈಗಲೇ ಬುದ್ಧಿ ಕಲಿಸದೆ ಹೋದರೆ ಮುಂದೆ ಭಾರಿ ಅನಾಹುತವನ್ನು ಎದುರಿಸಬೇಕಾಗುತ್ತದೆ'' ಎಂದು ಎಚ್ಚರಿಕೆ ನೀಡಿದರು.

೧೯೪೪ರ 'ವಾಕ್ಚಿತ್ರ' ಪತ್ರಿಕೆಯಲ್ಲಿ ಪ್ರಕಟವಾದ ಲೇಖನದಲ್ಲಿ ಜೋಯಿಸರ ಭಾಷಣದ ಬಹುಭಾಗ ಇಂದು ಚಿತ್ರರಂಗ ಹಾಗೂ ಸೆನ್ಸಾರ್ ಮಂಡಳಿಗಳೆರಡರ ಪರದಾಟದ ಮುನ್ನುಡಿಯಂತಿದೆ ಎನ್ನುವುದನ್ನು ಅರಿಯಬಹುದು. ಆದರೆ ಅಂದು ಎಂ.ಎಸ್.ಜೋಯಿಸರ ಭಾಷಣದಿಂದಾಗಿ ಮೈಸೂರು ಸರ್ಕಾರ ಎಚ್ಚೆತ್ತುಕೊಂಡು ಹಲವಾರು ಸುಧಾರಣೆಗಳನ್ನು ಮಾಡಿತೆಂದು 'ವಾಕ್ಚಿತ್ರ'ದ ಮುಂದಿನ ಸಂಚಿಕೆಯಲ್ಲಿ ಆಧಾರ ಸಿಗುತ್ತದೆ.

ಮೈಸೂರಿನಲ್ಲಿ ಶಾಸನ

ಜೋಯಿಸ್ ಅವರ ಭಾಷಣದಿಂದ ಜಾಗೃತಗೊಂಡ ಮೈಸೂರು ಸರ್ಕಾರ ೧೯೪೪ರ ಜುಲೈ ೧ ರಂದು ಮೈಸೂರು ಫಿಲಂ ಸೆನ್ಸಾರ್ ಬೋರ್ಡ್‌ನ ಕಾರ್ಯ ವಿಧಾನವನ್ನೂ, ಫಿಲ್ಮ್‌ಗಳ ಪರೀಕ್ಷಣಾ ಶುಲ್ಕವನ್ನು ಹೆಚ್ಚು ನಿಖರವಾಗಿ ಸೂಚಿಸುವ ಶಾಸನವೊಂದನ್ನು ಜಾರಿಗೆ ತಂದಿತು. ಈ ಹೊಸ ನಿಯಮಗಳಿಂದ ಆದ ಸುಧಾರಣೆಯೆಂದರೆ ಸೆನ್ಸಾರ್ ಬೋರ್ಡ್ ಹಿಂದೆ ವರ್ಷಕ್ಕೊಮ್ಮೆಯೂ ಸಭೆ ಸೇರದೆ ನಿದ್ದೆ ಮಾಡುತ್ತಿತ್ತು. ನಂತರ ಅದು ಸಾಧ್ಯವಾಗಲಿಲ್ಲ. ಇದರಿಂದಾಗಿ ಮೂರು ತಿಂಗಳಿಗೊಮ್ಮೆಯಾದರೂ, ಅಗತ್ಯವೆನಿಸಿದಲ್ಲಿ ಇನ್ನೂ ಹೆಚ್ಚು ಬಾರಿ ಸಭೆ ಸೇರಿ ತನ್ನ ಕಾರ್ಯಕಲಾಪಗಳ ವರದಿ ಒಪ್ಪಿಸಬೇಕೆಂದು ನಿಯಮಾವಳಿ ರೂಪಿತವಾಯಿತು.

ಅದೇ ರೀತಿ ಬೋರ್ಡ್ ಪರೀಕ್ಷಿಸಿ ಕತ್ತರಿಸಿ ಹಾಕಿದ ದೃಶ್ಯಗಳನ್ನು ಮತ್ತೆ ಸೇರಿಸಿ ಆ ಭಾಗಗಳನ್ನು ಮೈಸೂರು ಸಂಸ್ಥಾನದ ಬೇರೆಡೆಗಳಲ್ಲಿ ಪ್ರದರ್ಶಿಸದಂತೆ ತಡೆಯಲು ಹಿಂದೆ ತಕ್ಕ ವ್ಯವಸ್ಥೆ ಇರಲಿಲ್ಲ. ಜೋಯಿಸ್ ಅವರ ಮಾತಿನಿಂದ ಇಲ್ಲಿಯೂ ಶಿಸ್ತು ಜಾರಿಗೊಂಡಿತು. ಇದಲ್ಲದೆ ಬೋರ್ಡ್‌ನವರು ಒಪ್ಪಿಗೆ ಕೊಟ್ಟ ಚಿತ್ರಗಳಲ್ಲೂ ಪ್ರದರ್ಶನಕ್ಕೆ ಅನರ್ಹವಾದ ದೃಶ್ಯಗಳಿವೆಯೆಂದು ಸಾರ್ವಜನಿಕರು ತಿಳಿಸಿದರೆ ಅಂಥ ಚಿತ್ರಗಳನ್ನು ಮರುಪರಿಶೀಲನೆ ಮಾಡಲು ವಿಶೇಷ ಸಮಿತಿಯೊಂದನ್ನು ರಚಿಸುವುದಕ್ಕೆ ನಿಯಮಾವಳಿಗಳಲ್ಲಿ ಅವಕಾಶ ಮಾಡಿ ಕೊಡಲಾಯಿತು.

ಇಷ್ಟೆಲ್ಲಾ ಸುಧಾರಣೆಯಾಗಿಯೂ ಮತ್ತೊಂದು ಕೊರತೆ ಉಳಿಯಿತು. ಮೈಸೂರು ಸಂಸ್ಥಾನಕ್ಕೆ ಪ್ರದರ್ಶನಕ್ಕೆ ಬರುವ ಎಲ್ಲ ಚಿತ್ರಗಳನ್ನೂ ಮೈಸೂರು ಫಿಲಂ ಸೆನ್ಸಾರ್ ಬೋರ್ಡ್ ಪರೀಕ್ಷಿಸಲೇಬೇಕೆಂಬ ನಿಯಮ ಇಲ್ಲದಿರುವುದೇ ಈ ಕೊರತೆ. ಇದು ಬೋರ್ಡ್‌ನ ಕಾರ್ಯದಕ್ಷತೆಗೆ ದೊಡ್ಡ ಹಿನ್ನಡೆಯಾಗಿತ್ತು. 'ಚಿತ್ರ ನೋಡುವುದೇನು ? ಬ್ರಿಟಿಷ್ ಇಂಡಿಯಾದ ಸೆನ್ಸಾರ್ ಬೋರ್ಡ್ ಕೊಟ್ಟಿರುವ ಅನುಮತಿಯ ಆಧಾರದ ಮೇಲೆ ನಮ್ಮ ಅನುಮತಿಯನ್ನು ಕೊಟ್ಟು ಬಿಡೋಣ' ಎಂದು ಮೈಸೂರು ಸೆನ್ಸಾರ್ ಬೋರ್ಡ್ ಆಲಸ್ಯದಿಂದಿರಲು ಪ್ರೇರಕವಾಯಿತು. ಈ ಕಾರಣದಿಂದಲೇ 'ಸಾಲ್ಮಾ'ದಂತಹ ಕೀಳು ದರ್ಜೆಯ ಚಿತ್ರಕ್ಕೆ ಬೆಂಗಳೂರಿನಲ್ಲಿ ಪ್ರದರ್ಶನಕ್ಕೆ ಅನುಮತಿ ದೊರೆಯುವಂತಾಯಿತು. ಮೈಸೂರು ಬೋರ್ಡ್‌ನವರು ಈ ಚಿತ್ರವನ್ನು ವೀಕ್ಷಿಸದೆ, ಬ್ರಿಟಿಷ್ ಇಂಡಿಯಾ ಸೆನ್ಸಾರ್ ಬೋರ್ಡ್‌ನವರು ನೀಡಿದ ಸರ್ಟಿಫಿಕೇಟ್‌ನ ಆಧಾರದ ಮೇಲೆ ತಮ್ಮ ಅನುಮತಿಯನ್ನು ನೀಡಿದರು. ಈ ಮಕ್ಕಿ ಕಾ ಮಕ್ಕಿ ವ್ಯವಹಾರ ನಿಲ್ಲಿಸಿ, ಸೆನ್ಸಾರ್ ಬೋರ್ಡ್‌ನ ನಿಯಮಾವಳಿಗಳನ್ನು ಇನ್ನಷ್ಟು ತಿದ್ದಬೇಕಾದ್ದು ಮೈಸೂರು ಸರ್ಕಾರದ ಕರ್ತವ್ಯ ಎಂಬ ತೀವ್ರ ಆಕ್ಷೇಪಕ್ಕೆ ಗುರಿಯಾಯಿತು.

ಸೆನ್ಸಾರ್ ಮಂಡಳಿ

ಈಗಿರುವ 'ಸೆಂಟ್ರಲ್ ಬೋರ್ಡ್ ಆಫ್ ಫಿಲಂ ಸರ್ಟಿಫಿಕೇಶನ್' ರೂಪುಗೊಂಡು ಅರ್ಧ ಶತಮಾನವೇ ಕಳೆಯಿತಾದರೂ ಚಿತ್ರೋದ್ಯಮ ಹಾಗೂ ಸೆನ್ಸಾರ್ ಕಾಯ್ದೆಯಲ್ಲಿ

ಒಮ್ಮತ ಉಂಟಾಗಲಿಲ್ಲ. ಸೆನ್ಸಾರ್ ಮಂಡಳಿಯ ಕಾರ್ಯದಕ್ಷತೆಯ ಬಗ್ಗೆ ನಲವತ್ತರ ದಶಕದಲ್ಲಿಯೇ ಬಿರುಸಿನ ಚಟುವಟಿಕೆ ಆರಂಭವಾಗಿತ್ತು. ವ್ಯತ್ಯಾಸವೆಂದರೆ ಆಗ ಸಾರ್ವಜನಿಕರು ಚಿತ್ರದಲ್ಲಿ ಲೋಪ ದೋಷಗಳಿದ್ದರೆ ಸೆನ್ಸಾರ್ ಮಂಡಳಿಯನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದರು. ಈಗ ಪರಿಸ್ಥಿತಿ ಬದಲಾಗಿ ದಿನ ಬೆಳಗಾದರೆ ಚಿತ್ರೋದ್ಯಮಿಗಳು ನಾನಾ ಕಾರಣಗಳನ್ನಿಟ್ಟು ಸೆನ್ಸಾರ್‌ನೊಂದಿಗೆ ವಾದಕ್ಕಿಳಿಯುವುದು ಮಾಮೂಲಾಗಿದೆ. 'ಜನ ಹೇಗಿದ್ದರೂ ನೋಡುತ್ತಾರೆ. ಬೇಡವಾದರೆ ಜನರೇ ಅದನ್ನು ತಿರಸ್ಕರಿಸಲಿ. ಅದರ ಮಧ್ಯೆ ಈ ಸೆನ್ಸಾರ್‌ನ ಗೋಳು ಯಾಕೆ ?' ಎನ್ನುವುದು ಅವರ ವಾದದ ಸಾರಾಂಶ. ಇದು ನಿಜವೂ ಇರಬಹುದು. ಈಗ ಯಾವುದೇ ರೀತಿಯ ಚಿತ್ರಗಳಿಗೆ ಸಾರ್ವಜನಿಕ ಪ್ರತಿಭಟನೆ ಕಂಡುಬರುತ್ತಿಲ್ಲ. ಹಾಗಾಗಿ ಚಿತ್ರ ನೋಡುವುದು ಸಾರ್ವಜನಿಕರಿಗಾಗಿ, ಅವರೇ ಬೇಡವೆನ್ನದಿರುವಾಗ ಹತ್ತಾರು ಮಂದಿಯ ಸೆನ್ಸಾರ್ ಮಂಡಳಿ ಏಕೆ ಅಡ್ಡಗಾಲು ಹಾಕಬೇಕೆನ್ನುವುದು ಉದ್ಯಮದವರ ಪ್ರಶ್ನೆ. ಈಗ ಎಕ್ಸಾಮಿನಿಂಗ್ ಕಮಿಟಿಯಲ್ಲಿ ತಿರಸ್ಕೃತವಾದರೆ ರಿವೈಸಿಂಗ್ ಕಮಿಟಿಯ ಮುಂದೆ ಹೋಗಬಹುದು. ಅಲ್ಲಿಯೂ ಸಮಾಧಾನವಾಗದಿದ್ದರೆ ಟ್ರಿಬ್ಯೂನಲ್‌ಗೆ ಹೋಗಬಹುದು. ಟ್ರಿಬ್ಯೂನಲ್‌ನಲ್ಲಿಯೂ ನಿರೀಕ್ಷಿತ ಫಲಿತಾಂಶ ದೊರೆಯದಿದ್ದರೆ ಸುಪ್ರೀಂ ಕೋರ್ಟ್‌ನವರೆಗೂ ವ್ಯಾಜ್ಯವನ್ನು ಕೊಂಡೊಯ್ಯಬಹುದು. ಹೀಗೆ ಒಂದೆಡೆ ಬಲಶಾಲಿಯಾಗಿ ಕಾಣುವ ಕಾನೂನು ಮತ್ತೊಂದೆಡೆ ಬಲಹೀನವಾಗುತ್ತಾ ಹೋಗುತ್ತದೆ. ಈ ಹಿನ್ನೆಲೆಯಲ್ಲಿ ಕೆಲವೊಮ್ಮೆ ಸೆನ್ಸಾರ್ ಮಂಡಳಿ ಅಸಹಾಯಕವಾಗಿ ಬಿಡುತ್ತದೆ.

ಟ್ರಿಬ್ಯೂನಲ್‌ನಲ್ಲಿಯೂ ಸೆನ್ಸಾರ್ ಪಡೆಯಲು ವಿಫಲವಾದ ಕೆಲವು ಚಿತ್ರಗಳಿಗೆ ಕೇಂದ್ರ ಸರ್ಕಾರ ತನ್ನ ಸ್ವಂತ ಪ್ರೇರಣೆಯಿಂದ ಪರವಾನಗಿ ನೀಡಿದ ನಿದರ್ಶನಗಳೂ ಇವೆ. ಇಂತಹ ಸಂದರ್ಭಗಳಲ್ಲಿ ರಾಜಕಾರಣಿಗಳ ಮೇಲೆ ಕೆಲವು ನಿರ್ಮಾಪಕರು ಪ್ರಭಾವ ಬೀರಿದ್ದೂ ಉಂಟು. ಆದರೆ ೨೦೦೦ದ ಇಸವಿಯ ಕೊನೆಯಲ್ಲಿ ಸರ್ವೋಚ್ಚ ನ್ಯಾಯಾಲಯ ಐತಿಹಾಸಿಕ ತೀರ್ಪೊಂದನ್ನು ನೀಡಿ ಈ ಪರಿಪಾಠವನ್ನು ಸಂಪೂರ್ಣವಾಗಿ ನಿಲ್ಲಿಸಿತು.

ಈಗಿನ ಚಿತ್ರಗಳಲ್ಲಿ ಲೈಂಗಿಕ ದೃಶ್ಯಗಳು ಯಾವ ಮಟ್ಟಕ್ಕೆ ಹೋಗಿದೆಯೆನ್ನುವುದು ಎಲ್ಲರಿಗೂ ತಿಳಿದೇ ಇರುವ ವಿಚಾರ. ಚಿತ್ರಕ್ಕಾಗಲಿ, ಕಥೆಗಾಗಲಿ ಅದರ ಅವಶ್ಯಕತೆ ಎಷ್ಟೆನ್ನುವುದಾಗಲಿ ಅಥವಾ ಅವಶ್ಯಕತೆ ಇದ್ದಾಗಲೂ ಅಂಥ ದೃಶ್ಯಗಳನ್ನು ಯಾವ ರೀತಿ ತೋರಿಸಬೇಕೆನ್ನುವುದಾಗಲಿ ಇಲ್ಲವೇ ಇಲ್ಲ. ಅಗತ್ಯವಿಲ್ಲದಿದ್ದಾಗಲೂ ಅನಿವಾರ್ಯವೆಂದು ನೆಪ ಹೇಳುತ್ತಾ ಚಿತ್ರಗಳಲ್ಲಿ ಅಶ್ಲೀಲ ದೃಶ್ಯಗಳನ್ನು ತುರುಕಿಸಿ, ಪ್ರೇಕ್ಷಕರನ್ನು ಪ್ರೇರೇಪಿಸಿ ಚಿತ್ರಮಂದಿರಕ್ಕೆ ಸೆಳೆಯುವ ಪ್ರಯತ್ನ ಇಂದು ಮಾಮೂಲಾಗಿದೆ. ಇದೆಲ್ಲದರ ನಡುವೆಯೂ ಇತ್ತೀಚಿನವರೆಗೂ ಇದ್ದ ಮಡಿವಂತಿಕೆ ಕೂಡಾ ಕಾಣೆಯಾಗಿ ಪರಭಾಷೆಯ ಚಿತ್ರಗಳ ಪ್ರಭಾವದಿಂದ ನಮ್ಮಲ್ಲಿಯೂ ಅಸಹ್ಯವೆನಿಸುವ ದೃಶ್ಯಗಳು ಚಿತ್ರದಲ್ಲಿ ಬರಲಾರಂಭಿಸಿವೆ.

ಚುಂಬನ

ಒಂದೊಮ್ಮೆ ಗಂಡು-ಹೆಣ್ಣು ಸ್ಪರ್ಶಿಸುವುದು, ತಬ್ಬಿಕೊಳ್ಳುವುದೇ ಅಪರಾಧ, ಅಶ್ಲೀಲವೆನ್ನುವಂತಿತ್ತು. ತೆರೆಯ ಮೇಲೆ ಚುಂಬನದ ದೃಶ್ಯ ಇದೆಯೆಂದರೆ ಅದು ವಿವಾದಕ್ಕೆ ಗ್ರಾಸವಾಗುತ್ತಿತ್ತು. ಇದೇ ವಿಚಾರವಾಗಿ ೧೯೬೦ನೇ ಇಸವಿಯ ಹೊತ್ತಿಗೆ 'ಚಿತ್ರದಲ್ಲಿ ಚುಂಬನ ಇರಬೇಕೆ, ಬೇಡವೆ ?' ಎನ್ನುವ ವಿಷಯವಾಗಿ ನಾಡಿನಾದ್ಯಂತ ಚರ್ಚೆಯಾಯಿತು. ಆಗ ಇದನ್ನು ವಿರೋಧಿಸಿದವರೇ ಅಧಿಕ. ಭಾರತೀಯ ಚಿತ್ರಗಳಲ್ಲಿ ಚುಂಬನ ಎಂಬ ಮಾತಿಗೆ 'ಭಾರತೀಯತೆ ಯಾವ ಚಿತ್ರದಲ್ಲಿದೆ' ಎಂಬ ಮರುಪ್ರಶ್ನೆಯೂ ಹುಟ್ಟುತ್ತದೆ. ಇಂಗ್ಲಿಷ್ ಚಿತ್ರಗಳಿಂದ ಪ್ರೇರಿತಗೊಂಡ ಸಾರ್ವಜನಿಕ ಚುಂಬನ ದೃಶ್ಯಗಳು ನಮ್ಮ ಚಿತ್ರಗಳಲ್ಲೂ ಬಂದುವಾದರೂ ಅದು ನಮ್ಮ ಸಂಸ್ಕೃತಿಯಲ್ಲ. ಪಾಶ್ಚಾತ್ಯರಲ್ಲಿ ಚುಂಬನ ಸಾರ್ವಜನಿಕ ಜೀವನದಲ್ಲಿ ಸಾಮಾನ್ಯ ಕ್ರಿಯೆಯಾದುದರಿಂದ ಅವರ ಚಿತ್ರಗಳಲ್ಲಿ ಅದು ಸಾಮಾನ್ಯವಾಗಿಯೇ ಕಂಡು ಬರುತ್ತಿತ್ತು. ಮತ್ತು ಅವರ ಸಂಸ್ಕೃತಿಯ ನೆಲೆಯಲ್ಲಿ ಅದು ಅಶ್ಲೀಲವೂ ಅಲ್ಲ. ಆದರೆ ನಮ್ಮ ಚಿತ್ರಗಳಲ್ಲಿ ಮಾತ್ರ ಚುಂಬನದ ದೃಶ್ಯಗಳು ಬಂದಾಗ ನಮ್ಮ ಸಂಸ್ಕೃತಿಗೆ ಆರಂಭದಲ್ಲಿ ಹೊಂದಿಕೊಳ್ಳದೆ ಬಿಸಿ ಬಿಸಿ ಚರ್ಚೆಗಳಾದವು. ಅರುವತ್ತರ ದಶಕದಲ್ಲಿ ಚಿತ್ರದಲ್ಲಿ ಚುಂಬನ ಇರಬೇಕೆ, ಬೇಡವೆ ಎಂಬ ಬಗ್ಗೆ ಮೂವರು ಖ್ಯಾತ ಸಿನಿಮಾ ನಟಿಯರು ತಿಳಿಸಿದ ಅಭಿಪ್ರಾಯದಿಂದ ಆಗಿನ ಸಾರ್ವಜನಿಕರ ಮನಃಸ್ಥಿತಿ ಹಾಗೂ ಪ್ರತಿಕ್ರಿಯೆಯನ್ನು ಅರಿಯಬಹುದಾಗಿದೆ.

ಅಗತ್ಯವಿದ್ದಾಗ ಚುಂಬನ

ಈ ಬಗ್ಗೆ ಅಂದಿನ ದಿನಗಳಲ್ಲಿ ಸೆನ್ಸಾರ್ ಮಂಡಳಿ ವಿಶೇಷವಾಗಿ ಗಮನಿಸುತ್ತಿದ್ದ ನಟಿ ಜಯಂತಿಯವರ ಅಭಿಪ್ರಾಯ ಹೀಗಿದೆ : ''ದೃಶ್ಯಕ್ಕೆ ಅಗತ್ಯ ಅನ್ನಿಸಿದರೆ ಚುಂಬನ ಇದ್ದರೆ ತಪ್ಪಿಲ್ಲ. ಪಾತ್ರ ಪೋಷಣೆಗೆ ಇದರಿಂದ ಭಂಗ ಬರಬಾರದು. ಹಾಗೆಂದು ಅತಿಯಾದರೆ ಯಾವುದೂ ಚೆನ್ನಾಗಿರುವುದಿಲ್ಲ. ಎಲ್ಲವೂ ಒಂದು ಮಿತಿಯಲ್ಲಿ ಇರಬೇಕು''.

ನಟಿ ಜಯಂತಿ ಪಾತ್ರಗಳ ಆಯ್ಕೆಯಲ್ಲಿ, ಉಡುಗೆ-ತೊಡುಗೆಯಲ್ಲಿ ಅ ಕಾಲದಲ್ಲೇ ದಿಟ್ಟತನ ತೋರಿದ್ದರು. ಹಾಗಾಗಿ ಚುಂಬನ ದೃಶ್ಯ ಇರುವುದರ ಬಗ್ಗೆ ಅವರು ತಮ್ಮ ಅಭಿಪ್ರಾಯವನ್ನು ದಿಟ್ಟವಾಗಿ ವ್ಯಕ್ತಪಡಿಸಿದರು. ಮುಂದೆ ಜಯಂತಿಯವರು ಸೆನ್ಸಾರ್ ಮಂಡಳಿಯ ಸದಸ್ಯೆಯಾಗಿ ಕೆಲಸ ಮಾಡಿದರು.

ಆದರೆ ''ಇದಕ್ಕೆ ಅವಕಾಶವನ್ನೇ ನೀಡಬಾರದು. ಚಿತ್ರದಲ್ಲಿ ಚುಂಬನ ದೃಶ್ಯದ ಅವಶ್ಯಕತೆ ಇದೆಯೆನ್ನುವುದೇ ತಪ್ಪು. ಇಂಥ ದೃಶ್ಯಗಳಿದ್ದರೆ ಇದರಿಂದ ಏನು ಅನಾಹುತವಾಗುತ್ತದೆ ಎನ್ನುವುದು ಎಲ್ಲರಿಗೂ ತಿಳಿದಿರುವ ಸಂಗತಿ. ಹಾಗಾಗಿ ಅದು ಬೇಡವೇ ಬೇಡ'' ಎಂದು ತಾರೆ ಭಾರತಿಯವರು ಖಡಾಖಂಡಿತವಾಗಿ ತಮ್ಮ ಅನಿಸಿಕೆ ಹೇಳುತ್ತಾರೆ.

ಇವರ ಮಾತನ್ನು ಅನುಮೋದಿಸುವಂತೆ ದಕ್ಷಿಣ ಭಾರತದ ಮತ್ತೊಬ್ಬ ನಟಿ ಜಯಲಲಿತಾ ಈ ರೀತಿಯಾಗಿ ಪ್ರತಿಕ್ರಿಯಿಸುತ್ತಾರೆ :

''ಚುಂಬನ ಅತ್ಯಂತ ಪವಿತ್ರವಾದದ್ದು. ಹಾಗೆಯೇ ಅತ್ಯಂತ ರಹಸ್ಯವಾದದ್ದೂ ಹೌದು. ನಮ್ಮ ಸಂಸ್ಕೃತಿಯಲ್ಲಿ ಹೆಂಗಸರಿಗಿರುವ ಸ್ಥಾನಮಾನವೇ ಬೇರೆ. ಹತ್ತು ಜನರೆದುರು ಗಟ್ಟಿಯಾಗಿ ಮಾತಾಡಲೂ ಹಿಂಜರಿಯುವ ಹೆಂಗಸು ಸಾರ್ವಜನಿಕವಾಗಿ ಚುಂಬನಕ್ಕೆ ಸಮ್ಮತಿಸುವುದುಂಟೆ? ಒಂದು ವೇಳೆ ಅದು ನಾನು ನಟಿಸುವ ಚಿತ್ರಗಳಲ್ಲಿ ಅನಿವಾರ್ಯವೇ ಆದರೆ ಅಂಥ ಚಿತ್ರಗಳಲ್ಲಿ ನಾನು ನಟಿಸುವುದೇ ಇಲ್ಲ'' ಎಂದು ತಮ್ಮ ಸ್ಪಷ್ಟ ಅಭಿಪ್ರಾಯ ತಿಳಿಸಿದ್ದಾರೆ.

ಚಿತ್ರರಂಗದಲ್ಲಿ ತೊಡಗಿಸಿಕೊಂಡವರ ಅಭಿಪ್ರಾಯವೇ ಹೀಗಿದ್ದರೆ, ಆಗ ಜನರ ಅಭಿಪ್ರಾಯ ಚುಂಬನ ದೃಶ್ಯದ ವಿರೋಧವಾಗಿದ್ದರೆ ಆಶ್ಚರ್ಯವಿಲ್ಲ. ಆದರೆ ಈ ಮೂವರು ತಾರೆಯರೂ 'ಚುಂಬನ'ದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸಿ ಸುಮಾರು ಮೂರು-ನಾಲ್ಕು ದಶಕಗಳೇ ಗತಿಸಿ ಹೋಗಿವೆ. ಈಗಂತೂ ಚಿತ್ರಗಳಲ್ಲಿ ಚುಂಬನವೆನ್ನುವುದು ತೀರಾ ಮಾಮೂಲಿ ವಿಷಯವಾಗಿದೆ. ಅಂದು ವಿರೋಧಿಸಿದವರೇ ಇಂದು ಸಹಮತ ನೀಡಿದರೂ ಅಚ್ಚರಿಯೇನಿಲ್ಲ. ಈಗ ಚುಂಬನದ ದೃಶ್ಯ ಅಶ್ಲೀಲವೆಂದು ಯಾರೂ ಆಕ್ಷೇಪಣೆ ಮಾಡುವುದಿಲ್ಲ. ಕಿರಿಯರಿಂದ ಹಿರಿಯರಾದಿಯಾಗಿ ಎಲ್ಲರೂ ಜೊತೆಯಲ್ಲಿ ಯಾವುದೇ ಮುಜುಗರವಿಲ್ಲದೆ ಈ ದೃಶ್ಯವನ್ನು ನೋಡುತ್ತಾರೆ. ಚಿತ್ರವನ್ನು ವೀಕ್ಷಿಸುವ ಜನರು ಹೀಗೆ ಕೆಲವೊಂದು ದೃಶ್ಯಗಳು ಚಿತ್ರಗಳಲ್ಲಿ ತೀರಾ ಸಾಮಾನ್ಯವೆನ್ನುವಂತೆ ಒಗ್ಗಿಕೊಳ್ಳುತ್ತಾ ಹೋದರೆ ಅಂಥ ದೃಶ್ಯಕ್ಕೆ ಅವಕಾಶ ನೀಡಬೇಕೆ ಬೇಡವೆ ಎಂದು ಸೆನ್ಸಾರ್ ಮಂಡಳಿಯು ಇಬ್ಬಂದಿತನಕ್ಕೆ ಸಿಲುಕುವುದಂತೂ ನಿಜ. ಯಾಕೆಂದರೆ ಪ್ರತಿಯೊಂದನ್ನೂ ಕಾನೂನಿನ ಚೌಕಟ್ಟಿನಿಂದಲೇ ನೋಡುವುದು ಸಾಧ್ಯವಿಲ್ಲ.

ನಿರ್ಮಾಪಕರ ಸೆನ್ಸಾರ್‌ನೊಂದಿಗಿನ ಸಮರ ಇಂದು ನಿನ್ನೆಯದಲ್ಲ. ೧೯೫೨ರ ನೀತಿಯಲ್ಲಿ ಆಗಾಗ ಬದಲಾವಣೆಗಳಾಗುತ್ತ ಬಂದಿದ್ದರೂ ಚಿತ್ರ ನಿರ್ಮಾಪಕರಿಗೆ ಸಮಾಧಾನವಾಗಿಲ್ಲ. ೧೯೬೦ರ ಹೊತ್ತಿಗೆ ಚಿತ್ರ ನಿರ್ಮಾಪಕರು ಒಮ್ಮೆ ವ್ಯಾಪಕವಾಗಿ ತಮ್ಮ ಅಳಲು ತೋಡಿಕೊಂಡಿದ್ದರು. ಸೆನ್ಸಾರ್‌ನ ಅತಿಯಾದ ನಿಯಮಬದ್ಧತೆಯಿಂದ ಚಿತ್ರ ತಯಾರಿಸಿ ಬಿಡುಗಡೆ ಮಾಡುವುದೇ ದುಸ್ತರವೆನಿಸಿದೆ. ಅಲ್ಲದೆ ಅವರು ಚಿತ್ರೋದ್ಯಮಿಗಳನ್ನು ಅಪರಾಧಿಗಳಂತೆ ನೋಡುತ್ತಾರೆ. ಸಿದ್ಧವಾದ ಚಿತ್ರಗಳನ್ನು ಸೆನ್ಸಾರ್ ಆದ ಮೇಲೆ ನೋಡಿದರೆ ನಿಸ್ಸಾರವೆನಿಸಿಬಿಡುತ್ತವೆ. ಕೆಲವೊಮ್ಮೆ ಕಥೆಯ ಸಂಬಂಧವೇ ಸೆನ್ಸಾರ್‌ನ ಕತ್ತರಿಯಿಂದಾಗಿ ಕಡಿದು ಹೋಗಿ ನಂತರ ಚಿತ್ರ ವೀಕ್ಷಿಸಿದರೆ ಚಿತ್ರ ಅರ್ಥವೇ ಆಗಲಾರದಂಥ ಪರಿಸ್ಥಿತಿ ಬರುತ್ತದೆ. ಕತ್ತರಿ ಪ್ರಯೋಗ ಮಾಡುವವರಿಗೆ ಚಿತ್ರರಂಗದವರ ಬಗ್ಗೆ ಸ್ವಲ್ಪ ಕಾಳಜಿ ಇರಲಿ, ಸಿನಿಮಾ ಒಂದು ಕಲಾಮಾಧ್ಯಮ ಎನ್ನುವ ಗೌರವ ಇರಲಿ ಎಂದು ಚಿತ್ರ ನಿರ್ಮಾಪಕರು ತಮ್ಮ ಅಹವಾಲನ್ನು ತೋಡಿಕೊಂಡಿದ್ದಾರೆ.

ಸೆಕ್ಸ್ - ಹಿಂಸೆ

ಹೀಗೆ ಸೆನ್ಸಾರ್ ಮಂಡಳಿ ತಮ್ಮ ಚಿತ್ರಗಳಿಗೆ ಅಡ್ಡ ಕತ್ತರಿಯಾಗಿ ನಿಂತಿದೆ ಎಂದು ಹೇಳುತ್ತಿದ್ದರೂ ಚಿತ್ರ ನಿರ್ಮಾಪಕರು ಮಾತ್ರ ತಮ್ಮ ನಿಲುವು ಬದಲಾಯಿಸಿಕೊಳ್ಳಲಿಲ್ಲ ಎನ್ನುವುದಕ್ಕೆ ಕೆಲವಾರು ಚಿತ್ರಗಳೇ ಸಾಕ್ಷಿಯಾಗುತ್ತವೆ. ಸೆನ್ಸಾರ್ ಮಂಡಳಿ ವಿರೋಧಿಸುವ

ಒಂದಿಲ್ಲೊಂದು ಅಂಶಗಳನ್ನು ಏನಾದರೊಂದು ಕಾರಣ ನೀಡಿ ಚಿತ್ರದೊಳಗಿಡುವ ಪರಂಪರೆ ಬೆಳೆಯುತ್ತಲೇ ಹೋಯಿತು. ಇಲ್ಲಿ ಸಾಮಾಜಿಕ ಮೌಲ್ಯಗಳ ಬಗ್ಗೆ ಕಾಳಜಿ, ದೇಶದ ಏಕತೆ ಹಾಗೂ ಸಾರ್ವಭೌಮತೆಯ ಬಗ್ಗೆ ಅವಹೇಳನ ಮಾಡದಿರುವುದು, ದೇಶದ ಭದ್ರತೆಯನ್ನು ಗಂಡಾಂತರಕ್ಕೀಡುಮಾಡುವಂತಹ ದೃಶ್ಯಗಳನ್ನು ಇಡದಿರುವುದು ಮುಂತಾದ ಅಂಶಗಳ ಉಲ್ಲಂಘನೆಯಾಯಿತಾದರೂ ಅದು ಸಾಮಾನ್ಯವಾಗಿ ನಿರ್ಮಾಪಕ, ನಿರ್ದೇಶಕರ ಅಜ್ಞಾನದಿಂದಾಗುವ ಸಾಧ್ಯತೆಯೇ ಹೆಚ್ಚು. ಇದರ ಹೊರತು ಇಂಥ ವಿಷಯಗಳಲ್ಲಿ ನಮ್ಮ ಚಿತ್ರರಂಗದ ಮಟ್ಟಿಗೆ ಹೇಳುವುದಾದರೆ ಪೂರ್ವನಿರ್ಧಾರಿತ ಉದ್ದೇಶವಿರಲಾರದು. ಇಲ್ಲಿ ಬಹುತೇಕ ಉದ್ದೇಶ ಪೂರ್ವಕವಾಗಿಯೇ ಚಿತ್ರಗಳಲ್ಲಿ ಅಳವಡಿಸುವ ಅಂಶವೆಂದರೆ ಸೆಕ್ಸ್ ಮತ್ತು ಹಿಂಸೆ. ಇದು ಸುಲಭವಾಗಿ ಮಾರಾಟವಾಗುವ ಸರಕು ಎನ್ನುವ ಭಾವನೆ ಅವರಲ್ಲಿ ಬಲವಾಗಿ ಬೇರೂರಿಬಿಟ್ಟಿದೆ.

ಹಿಂಸೆಯ ವಿಚಾರಕ್ಕೆ ಬಂದರೆ ಕನ್ನಡ ಚಿತ್ರಗಳಿಗೆ ಬಹುತೇಕ ತೆಲುಗು ಚಿತ್ರಗಳೇ ಸ್ಫೂರ್ತಿ ಎನ್ನಬಹುದು. ಹೊಡಿ, ಬಡಿ, ಕಡಿ ಎನ್ನುವಂಥ ರಕ್ತಮಯ ಚಿತ್ರಗಳು ತೆಲುಗಿನಲ್ಲಿ ಬರುವುದು ಹೆಚ್ಚು. ಅಲ್ಲಿನ ವಾತಾವರಣವೂ ಅದಕ್ಕೆ ಪೂರಕವಾಗಿದೆ. ಅಲ್ಲಿನ ಜಾತಿ-ಜಾತಿಗಳ ಘರ್ಷಣೆಯಿಂದ ಹಿಡಿದು, ವಿಚ್ಛಿದ್ರಕಾರಿ ಸಂಘಟನೆಗಳ ಹೋರಾಟದ ತನಕ ಎಲ್ಲವೂ ಅಂತ್ಯವಾಗುವುದು ರಕ್ತಪಾತದಲ್ಲೆ. ಇದು ಕ್ರಮೇಣ ಚಿತ್ರಗಳಲ್ಲೂ ಕಾಣಿಸಿಕೊಳ್ಳತೊಡಗಿ ಬೆಳ್ಳಿತೆರೆ ಕೆಂಪಾಗತೊಡಗಿತು. ಕನ್ನಡ ಚಿತ್ರರಂಗಕ್ಕೆ ಈ ಪದ್ಧತಿ ವಲಸೆ ಬಂದಿದ್ದು ಕೇವಲ ಜನರನ್ನು ಆಕರ್ಷಿಸುವುದಕ್ಕಾಗಿಯೇ ಹೊರತು ಇಲ್ಲಿ ಅಂಥ ಯಾವುದೇ ಬಲವಾದ ಹಿನ್ನೆಲೆ ಕಾಣಿಸಿಕೊಳ್ಳುವುದಿಲ್ಲ. ಇದರ ಹೊರತಾಗಿ ಹಿಂದಿನ ಯಾವುದೇ ಯುದ್ಧವಾಗಲಿ, ಕ್ರಾಂತಿಯಾಗಲಿ ಚಿತ್ರಗಳ ಮೇಲೆ ಪರಿಣಾಮ ಬೀರಿ ಅದು ಹಿಂಸೆಯನ್ನು ತೆರೆಯ ಮೇಲೆ ತೋರಿಸುವುದಕ್ಕೆ ಕಾರಣವಾಗಲಿಲ್ಲ. ಆದರೂ ಚಿತ್ರಗಳಲ್ಲಿ ಹಿಂಸೆ ಯಾವುದೇ ಭಾಷೆಯ ಚಿತ್ರಗಳಿಗೆ ಸೀಮಿತವಾಗಿರದೆ ದೇಶಾದ್ಯಂತ ವಿಪರೀತ ಎನ್ನುವ ಮಟ್ಟಕ್ಕೆ - ಹೆಚ್ಚು ಕಡಿಮೆ ಅರುವತ್ತು-ಎಪ್ಪತ್ತರ ದಶಕದಲ್ಲೇ ಹರಡಲಾರಂಭಿಸಿತು.

೧೯೭೨ರಲ್ಲಿ ಕೇಂದ್ರ ವಾರ್ತಾಸಚಿವರಾಗಿದ್ದ ಇಂದ್ರಕುಮಾರ್ ಗುಜ್ರಾಲ್ ಚಲನಚಿತ್ರಗಳಲ್ಲಿ ಹಿಂಸೆಯನ್ನು ವೈಭವೀಕರಿಸುವುದರ ಬಗ್ಗೆ ವಿರೋಧ ವ್ಯಕ್ತಪಡಿಸಿದ್ದರಲ್ಲದೆ, ಲೋಕಸಭೆಯಲ್ಲಿಯೂ ಈ ವಿಚಾರವನ್ನು ಚರ್ಚಿಸಿದ್ದರು. ಇನ್ನು ಮುಂದೆ ಹಿಂಸಾಕೃತ್ಯಗಳ ಅತಿರೇಕದ ದೃಶ್ಯಗಳಿರುವ ಚಿತ್ರಗಳನ್ನು ನಿರ್ದಾಕ್ಷಿಣ್ಯವಾಗಿ ಮುಟ್ಟುಗೋಲು ಹಾಕಬೇಕೆಂದು ಇದೇ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಸೆನ್ಸಾರ್ ಬೋರ್ಡ್‌ಗೆ ಆದೇಶ ನೀಡಿತ್ತು. ಅದುವರೆಗಿನ ನೀತಿಯಂತೆ ಚಿತ್ರಗಳಲ್ಲಿ ಹಿಂಸಾ ದೃಶ್ಯಗಳಿದ್ದರೆ ಆ ಭಾಗವನ್ನು ಮಾತ್ರ ಕತ್ತರಿಸಿ ಚಿತ್ರದ ಉಳಿದ ಭಾಗ ಯೋಗ್ಯವಾಗಿದ್ದರೆ ಪ್ರದರ್ಶನಕ್ಕೆ ಅನುಮತಿ ನೀಡಲಾಗುತ್ತಿತ್ತು. ಆದರೆ ಈ ಆದೇಶದಲ್ಲಿ ಅಂಥ ಚಿತ್ರಗಳನ್ನು ಮುಟ್ಟುಗೋಲು ಹಾಕಬೇಕೆಂದು ಸೂಚಿಸಲಾಗಿತ್ತು. ೧೯೭೨ರಲ್ಲಿ ಕೇಂದ್ರ ಸರ್ಕಾರ ಸೆನ್ಸಾರ್ ಬೋರ್ಡ್‌ಗೆ ಈ ಆದೇಶ ನೀಡಿತಾದರೂ ಪ್ರಾಯೋಗಿಕವಾಗಿ ಈ ಅಂಶ ಯಶಸ್ವಿಯಾಗಲಿಲ್ಲವೆಂಬುದನ್ನು ನಂತರ ಬಂದ ಚಿತ್ರಗಳೇ ತಿಳಿಸುತ್ತವೆ.

ಹೀಗೆ ನಿರ್ಮಾಪಕರೊಂದಿಗೆ ಸೆನ್ಸಾರ್ ಮಂಡಳಿ ಗುದ್ದಾಡುತ್ತಲೇ ಇದ್ದರೂ ಸದಾ ಕಾರ್ಯಭಾರದಲ್ಲಿ ಸೋತಂತೆಯೇ ಕಾಣಿಸುತ್ತಿತ್ತು. ದೇಶದೆಲ್ಲೆಡೆ ಸೆನ್ಸಾರ್ ಕಾಯಿದೆಗಳನ್ನು ಒಂದಲ್ಲ ಒಂದು ರೀತಿಯಲ್ಲಿ ಮೀರಿದ ಚಿತ್ರಗಳು ಆಗಲೂ ಬರುತ್ತಿದ್ದವು. ೧೯೭೨ರಲ್ಲಿ ಮದರಾಸಿನಲ್ಲಿ ದಕ್ಷಿಣ ಭಾರತದ ಚಲನಚಿತ್ರ ವಾಣಿಜ್ಯ ಮಂಡಳಿಯ ಕಾರ್ಯಕಾರಿ ಸಮಿತಿಯನ್ನು ಉದ್ದೇಶಿಸಿ ಮಾತನಾಡಿದ ಕೇಂದ್ರ ಸೆನ್ಸಾರ್ ಮಂಡಳಿಯ ಅಧ್ಯಕ್ಷ ವಿ.ಡಿ.ವ್ಯಾಸ್ ಈ ಕುರಿತಾಗಿ ಚರ್ಚಿಸಿದರು. ಸೆನ್ಸಾರ್ ಮಂಡಳಿಗಳಲ್ಲಿ ತರುಣರನ್ನು ನೇಮಕ ಮಾಡುವ ಕುರಿತು ಪರಿಶೀಲನೆ ಮಾಡಲಾಗುವುದೆಂದು ತಿಳಿಸಿದ ವ್ಯಾಸ್ ಸೆನ್ಸಾರ್ ಮಂಡಳಿಗಳು ಅಂಚೆ ಕಚೇರಿಗಳಲ್ಲ ಎಂದು ಮನವರಿಕೆ ಮಾಡಿದರು. ಆದ್ದರಿಂದ ನಿರ್ಮಾಪಕರು ಚಿತ್ರಗಳನ್ನು ಸೆನ್ಸಾರ್ ಮಾಡಿಸಿಕೊಳ್ಳಲು ಮಂಡಳಿಗಳಲ್ಲಿ ಆತುರ ತೋರಬಾರದೆಂದು ಸಲಹೆ ನೀಡಿದರು. ಹಾಗೆಯೇ ಚಿತ್ರೀಕರಣ ಮಾಡಿದ್ದನ್ನೆಲ್ಲ ಮಂಡಳಿ ಕತ್ತರಿಸಿ ಹಾಕುತ್ತದೆಂಬ ಪೂರ್ವಾಗ್ರಹವನ್ನು ಇಟ್ಟುಕೊಳ್ಳಬಾರದೆಂದೂ ವ್ಯಾಸ್ ಇದೇ ಸಂದರ್ಭದಲ್ಲಿ ಮನವಿ ಮಾಡಿದರು. ವಯಸ್ಕರಿಗೆ ಮಾತ್ರ (A) ಸರ್ಟಿಫಿಕೇಟ್ ಪಡೆಯುವುದು ಹಿಂದೆ ನಿರ್ಮಾಪಕರು ಅವಮಾನವೆಂದು ಹಿಂಜರಿಯುತ್ತಿದ್ದರು. ಆದರೆ ಈಗ ಅದಕ್ಕಾಗಿ ಹಾತೊರೆಯುತ್ತಿದ್ದಾರೆಂದು ತಿಳಿಸಿದ ವ್ಯಾಸ್ 'A' ಸರ್ಟಿಫಿಕೇಟ್ ಅಶ್ಲೀಲ ದೃಶ್ಯಗಳಿಗೆ ಲೈಸೆನ್ಸ್ ನೀಡಿದಂತೆ ಅಲ್ಲ. ಒಂದು ಚಿತ್ರ ಹೇಗೋ ಅಶ್ಲೀಲ ದೃಶ್ಯಗಳೊಂದಿಗೆ 'A'



(ಚಿತ್ರ ೧) ಕೇಂದ್ರೀಯ ಚಲನಚಿತ್ರ ಪ್ರಮಾಣೀಕರಣ ಮಂಡಳಿಯ ೧೦೧ನೇ ಸಭೆಯು ೨೦೦೦ನೇ ಮಾರ್ಚ್ ೨೧ರಂದು ನಡೆದ ಸಂದರ್ಭದಲ್ಲಿ ಉಪಾಧ್ಯಕ್ಷೆ ಬಿ.ಸರೋಜಾದೇವಿ, ಪ್ರಾದೇಶಿಕ ಅಧಿಕಾರಿ ಹೆಚ್.ಎ.ಕೃಷ್ಣಮೂರ್ತಿ, ಕೇಂದ್ರ ಮಂಡಳಿಯ ಅಧ್ಯಕ್ಷೆ ಆಶಾ ಪಾರೇಖ್

ಸರ್ಟಿಫಿಕೇಟ್ ಪಡೆದು ಪ್ರದರ್ಶನಕ್ಕೆ ಬಂದಿತೆಂದ ಮಾತ್ರಕ್ಕೆ ಅದರಂತೆಯೇ ಇತರ ಚಿತ್ರಗಳಿಗೂ ಅವಕಾಶ ಇರಬೇಕೆಂದು ಅರ್ಥವಲ್ಲ ಎಂದು ತಿಳಿಸಿದರು. ಆದರೆ ಇದನ್ನೇ ಬಂಡವಾಳವಾಗಿಟ್ಟುಕೊಂಡು ಸದಭಿರುಚಿಯ ಚಿತ್ರಗಳನ್ನು ಕೈಬಿಟ್ಟು ಕೆಲವು ನಿರ್ಮಾಪಕರು ಉದ್ದೇಶಪೂರ್ವಕವಾಗಿಯೇ 'A' ಸರ್ಟಿಫಿಕೇಟ್ ಆಧಾರದ ಮೇಲೆ ಚಿತ್ರ ಬಿಡುಗಡೆ ಮಾಡಿ ಹಣ ಮಾಡುತ್ತಿರುವುದರಿಂದ 'A' ಸರ್ಟಿಫಿಕೇಟ್ ನೀಡುವ ಕ್ರಮವನ್ನೇ ರದ್ದು ಮಾಡಬೇಕೆಂದು ಅಂದಿನ ಸಭೆಯಲ್ಲಿ ದಕ್ಷಿಣ ಭಾರತ ಫಿಲಂ ಚೇಂಬರ್ ಆಫ್ ಕಾಮರ್ಸ್‌ನ ಅಧ್ಯಕ್ಷ ಎ.ಎಲ್.ಶ್ರೀನಿವಾಸ್ ಅವರು ವ್ಯಾಸ್ ಅವರಲ್ಲಿ ಮನವಿ ಮಾಡಿಕೊಂಡಿದ್ದರು. ಆದರೆ ಇವೆಲ್ಲವೂ ಕಾರ್ಯತಃ ಎಷ್ಟರ ಮಟ್ಟಿಗೆ ನಡೆಯಿತೆನ್ನುವ ಪ್ರಶ್ನೆ ಮಾತ್ರ ಉತ್ತರ ಕಾಣದೆ ಉಳಿದುಬಿಡುತ್ತದೆ.

೧೯೭೨ರ ಮೇ ತಿಂಗಳ ಮೂರನೇ ತಾರೀಖಿನಂದು ಬೆಂಗಳೂರಿನಲ್ಲಿ ನಡೆದ ಭಾರತ ಚಿತ್ರೋದ್ಯಮ ಸಮ್ಮೇಳನದಲ್ಲಿ ದೇಶದ ನಾನಾ ಕಡೆಯಿಂದ ಬಂದ ಚಿತ್ರರಂಗದ ಗಣ್ಯರು ಸೆನ್ಸಾರ್ ವ್ಯವಸ್ಥೆಯ ಕುರಿತು ವ್ಯಕ್ತಪಡಿಸಿದ ಅಭಿಪ್ರಾಯಗಳು ಇಂದಿಗೂ ಅನ್ವಯಿಸುವಂತಿವೆಯೆಂದರೆ ಈ ವಿಭಾಗದಲ್ಲಿ ಸುಧಾರಣೆ ಅಥವಾ ಹೊಂದಾಣಿಕೆ ಎಷ್ಟಾಗಿದೆಯೆಂದು ಅರಿಯಬಹುದು. ಅಂದಿನ ಸಮ್ಮೇಳನದಲ್ಲಿ ಇನ್ನು ಮುಂದೆ ಸೆನ್ಸಾರ್ ಆಗುವ ಚಿತ್ರಗಳನ್ನು ಐದು ವಿಭಾಗಗಳನ್ನಾಗಿ ವಿಂಗಡಿಸಿ 'A' ಸರ್ಟಿಫಿಕೇಟ್‌ನ ದುರುಪಯೋಗವನ್ನು ನಿಲ್ಲಿಸಬೇಕೆಂದು ಕೇಂದ್ರ ಸರ್ಕಾರವನ್ನು ಒತ್ತಾಯಿಸಲಾಯಿತು. ಸಮ್ಮೇಳನದಲ್ಲಿ ಸಲಹೆ ಮಾಡಿದ ಐದು ವಿಭಾಗಗಳು ಇಂತಿವೆ :

U - ಸಾರ್ವಜನಿಕರಿಗಾಗಿ
C - ಮಕ್ಕಳಿಗಾಗಿ
G - ಹಿರಿಯರೊಂದಿಗೆ ಮಕ್ಕಳು ನೋಡಬಹುದಾದ ಚಿತ್ರ
A - ಮಕ್ಕಳು ನೋಡಬಾರದ ಚಿತ್ರ
E - ಶೈಕ್ಷಣಿಕ ಚಿತ್ರ

ಚಲನಚಿತ್ರಗಳಿಗೆ ಸೆನ್ಸಾರ್ ವ್ಯವಸ್ಥೆ ಇರಬೇಕು. ಅದು ಅನಿವಾರ್ಯವೂ ಹೌದೆಂಬ ತೀರ್ಮಾನ ಸಮ್ಮೇಳನದಲ್ಲಿ ಬಂದಿತಲ್ಲದೆ ಜೊತೆಗೊಂದು ಸೂಚನೆಯನ್ನು ನೀಡಲಾಯಿತು. ಸೆನ್ಸಾರ್ ವೀಕ್ಷಣಾ ಸಮಿತಿಯಲ್ಲಿ ಸಾರ್ವಜನಿಕ ಜೀವನದ ಪ್ರತಿಷ್ಠಿತರು, ಪ್ರಗತಿಶೀಲ ಮನೋಭಾವ ಉಳ್ಳವರು, ಚಲನಚಿತ್ರ ಮತ್ತು ಇತರ ಕಲೆಗಳ ಬಗ್ಗೆ ನಿಕಟ ಸಂಪರ್ಕ ಇರುವಂಥವರು ಇರಬೇಕು. ಆಗ ಸೆನ್ಸಾರ್‌ನ ನಿಯಮ ಹಾಗೂ ಚಿತ್ರರಂಗದ ಹಿತಾಸಕ್ತಿ ಎರಡನ್ನೂ ತೂಗಿಸಲು ಸಾಧ್ಯವೆಂಬ ಅಭಿಪ್ರಾಯ ಕೇಳಿ ಬಂತು.

ಸೆನ್ಸಾರ್ ನಿರ್ಣಯಗಳ ಮೇಲೆ ಚರ್ಚೆಯನ್ನು ಆರಂಭಿಸಿದ ಇ.ಸುರೇಂದ್ರನಾಥ್ ಸಮ್ಮೇಳನದಲ್ಲಿ ಕೇಂದ್ರ ಹಾಗೂ ಪ್ರಾದೇಶಿಕ ಸೆನ್ಸಾರ್ ಮಂಡಳಿಗಳ ಸದಸ್ಯರ ಬಗ್ಗೆ ಟೀಕೆ ಮಾಡಿದರು. ಸೆನ್ಸಾರ್ ಅಧಿಕಾರಿಗಳು ಯಾವುದೇ ಚಿತ್ರಗಳ ಬಗ್ಗೆ ಸದಸ್ಯರ ಅಭಿಪ್ರಾಯಗಳನ್ನು ಸಂಗ್ರಹಿಸದೆ ಕೇವಲ ಖಾಲಿ ಫಾರಂಗಳಿಗೆ ಸಹಿ ಹಾಕುವುದೊಂದೇ ಅವರ ಕೆಲಸವೆಂದು ಈ ಸಂದರ್ಭದಲ್ಲಿ ಆಪಾದಿಸಿದರು. ಒಂದು ಪ್ರಾಂತ್ಯದಿಂದ

ಇನ್ನೊಂದು ಪ್ರಾಂತ್ಯಕ್ಕೆ ಸೆನ್ಸಾರ್ ನೀತಿಯು ವ್ಯತ್ಯಾಸವಾಗಲು ಇದೇ ಕಾರಣವೆಂದು ಸುರೇಂದ್ರನಾಥ್ ತಮ್ಮ ಅಭಿಪ್ರಾಯ ಬಿಚ್ಚಿಟ್ಟರು. ಸೆನ್ಸಾರ್ ನೀತಿಯ ಅಸಂಬದ್ಧತೆಯನ್ನು ಎತ್ತಿ ತೋರಿಸಲು ಕನ್ನಡ ಚಿತ್ರ 'ಸಂಸ್ಕಾರ' ಮತ್ತು ಮಲಯಾಳಂನ 'ವಿದ್ಯಾರ್ಥಿ' ಚಿತ್ರದ ಉದಾಹರಣೆ ನೀಡಿದ ಅವರು ಒಂದು ವರ್ಷ ಕಾಲ ಸೆನ್ಸಾರ್ ಬೋರ್ಡ್ ಮುಟ್ಟುಗೋಲು ಹಾಕಿಕೊಂಡಿದ್ದ 'ಸಂಸ್ಕಾರ' ಚಿತ್ರಕ್ಕೆ ರಾಷ್ಟ್ರದ ಅತ್ಯುನ್ನತ ಪ್ರಶಸ್ತಿ ದೊರಕಿತಲ್ಲದೆ ಆ ಚಿತ್ರ ಅದೇ ಸರ್ಕಾರದಿಂದ ಅನೇಕ ಅಂತರರಾಷ್ಟ್ರೀಯ ಚಲನಚಿತ್ರೋತ್ಸವಗಳಲ್ಲಿ ಭಾರತವನ್ನು ಪ್ರತಿನಿಧಿಸಲು ಆಯ್ಕೆಯಾದದ್ದು ವಿಪರ್ಯಾಸವಲ್ಲವೆ ಎಂದು ಪ್ರಶ್ನಿಸಿ ಉದ್ಯಮ ತನ್ನದೇ ಆದ ಸೆನ್ಸಾರ್ ಪದ್ಧತಿಯನ್ನೇಕೆ ಜಾರಿಗೆ ತರಬಾರದೆಂದು ಕೇಳಿದರು.

ಇದೇ ಸಮ್ಮೇಳನದಲ್ಲಿ ದೆಹಲಿಯ ಆನಂದ್ ಅವರು ಸೆನ್ಸಾರ್ ಬೋರ್ಡ್ ಕೆಲವು ಅಶ್ಲೀಲ ಚಿತ್ರಗಳಿಗೆ 'A' ಸರ್ಟಿಫಿಕೇಟ್ ಕೊಟ್ಟು ಪ್ರದರ್ಶನಕ್ಕೆ ಅನುಮತಿ ನೀಡುವುದರಿಂದ ಸಭ್ಯ ಚಿತ್ರಗಳು ಗಲ್ಲಾ ಪೆಟ್ಟಿಗೆಯಲ್ಲಿ ಸೋತು ಹೋಗಲಾರಂಭಿಸಿವೆ. ಇದೇ ಕ್ರಮ ಮುಂದುವರಿದರೆ ಸದಭಿರುಚಿಯ ಚಿತ್ರಗಳು ತಯಾರಾಗುವುದೇ ನಿಂತು ಹೋಗಬಹುದಾದ ಅಪಾಯವಿದೆಯೆಂದು ಎಚ್ಚರಿಸಿದರು. ಹಿಂದಿ ಚಿತ್ರರಂಗದ ನಿರ್ಮಾಪಕರೂ, ನಿರ್ದೇಶಕರೂ ಆದ ಸುಬೋಧ್ ಮುಖರ್ಜಿಯವರು ಸೆನ್ಸಾರ್ ಕ್ರಮವನ್ನು ಟೀಕಿಸುತ್ತಾ 'ಪ್ರಪಂಚದ ಇನ್ನಾವ ಭಾಗದಲ್ಲಿಯೂ ಸೆನ್ಸಾರ್ ಬೋರ್ಡ್‌ನವರು ಒಂದು ಅಭಿಪ್ರಾಯಕ್ಕೆ ಬಂದ ನಂತರ ಚರ್ಚೆ ನಡೆದು, ಮರುಪರಿಶೀಲನೆ ಮಾಡಿ ಅದೇ ಅಭಿಪ್ರಾಯ ಬದಲಿಸುವ ಕ್ರಮವಿಲ್ಲ. ಆರಂಭದಲ್ಲಿ ನಿರ್ಣಯಿಸುವವರೇ ನ್ಯಾಯಾಧೀಶರ ದರ್ಜೆಯವರಾಗಿದ್ದರೆ ಇಂಥ ಅವಾಂತರಗಳಾಗುವ ಸಾಧ್ಯತೆಯಿಲ್ಲ'' ಎಂಬ ಅಭಿಮತ ಸೂಚಿಸಿದರು.

ಬಂಗಾಳದಿಂದ ಬಂದಿದ್ದ ರಘಲಾನಿಯವರು, ಬಂಗಾಳದ ಪ್ರಾದೇಶಿಕ ಸೆನ್ಸಾರ್ ಮಂಡಳಿಯ ಕಾರ್ಯದಕ್ಷತೆಗೆ ಈ ರೀತಿಯ ಉದಾಹರಣೆ ನೀಡಿದರು : ''ಬಂಗಾಳಿ ಚಿತ್ರವೊಂದರಲ್ಲಿ ತನ್ನ ತಾಯಿಯ ಹಣೆಯನ್ನು ಹದಿಮೂರು ವರ್ಷದ ಹುಡುಗನೊಬ್ಬ ಚುಂಬಿಸುವ ದೃಶ್ಯವನ್ನು ಸೆನ್ಸಾರ್ ಮಂಡಳಿ ಕತ್ತರಿಸಬೇಕೆಂದು ಆದೇಶ ನೀಡಿತು. ಆದರೆ ಇದೇ ಸೆನ್ಸಾರ್ ಬೋರ್ಡ್ ಲೆಕ್ಕವಿಲ್ಲದಷ್ಟು ಅಶ್ಲೀಲ, ಅಸಹ್ಯ ಚಿತ್ರಗಳಿಗೆ ಅನುಮತಿ ನೀಡುತ್ತಿದೆ.''

ಡಾಕ್ಯುಮೆಂಟರಿ ನಿರ್ಮಾಪಕರ ಸಂಘದ ಅಧ್ಯಕ್ಷರಾಗಿದ್ದ ಡಿ.ಬಿ.ಅಗರ್‌ವಾಲ್ ''ಇತ್ತೀಚೆಗೆ ಸೆನ್ಸಾರ್ ಆದ ಸಾಕ್ಷ್ಯಚಿತ್ರವೊಂದರ ಬೆಳಕಿನ ವ್ಯವಸ್ಥೆಯ ಬಗ್ಗೆಯೂ ಬೋರ್ಡ್ ಸದಸ್ಯರು ಟೀಕೆ ಮಾಡಿದ್ದರು'' ಎಂದು ನೆನಪು ಮಾಡಿಕೊಂಡರು. ಮೈಸೂರು ಫಿಲಂ ಚೇಂಬರ್ ಆಫ್ ಕಾಮರ್ಸ್‌ನ ಮಾಜಿ ಅಧ್ಯಕ್ಷರಾದ ಎಂ.ಸದಾನಂದರಾವ್ ವಯಸ್ಕರಿಗೆ ಮಾತ್ರ (A) ಎಂದು ಸರ್ಟಿಫಿಕೇಟ್ ಪಡೆಯಲು ಕೆಲವು ನಿರ್ಮಾಪಕರು ಪಡುವ ಪಡಿಪಾಟಲಿನ ಬಗ್ಗೆ ಈ ಸಮ್ಮೇಳನದಲ್ಲಿ ಹಾಸ್ಯಪೂರ್ಣವಾಗಿ ವಿವರಿಸಿದರು.

ದಕ್ಷಿಣ ಭಾರತ ಫಿಲಂ ಪ್ರೊಡ್ಯೂಸರ್ಸ್ ಗಿಲ್ಡ್‌ನ ಪ್ರತಿನಿಧಿಯಾಗಿದ್ದ ಕೊಟ್ಟಾರಕರ ಒಂದೇ ಸೆನ್ಸಾರ್ ಕೋಡ್ ಅನ್ನು ಎರಡು ಪ್ರಾಂತ್ಯದ ಸೆನ್ಸಾರ್ ಬೋರ್ಡ್‌ಗಳು ಎರಡು ರೀತಿಗಳಲ್ಲಿ ಪ್ರತಿಪಾದಿಸುವುದೇ ಇಂದಿನ ಸಮಸ್ಯೆಗೆ ಕಾರಣವೆಂದು ಹೇಳಿ ಪ್ರದರ್ಶನಕ್ಕೆ ಅನರ್ಹವೆಂದು ಹೇಳಿ ಸೆನ್ಸಾರ್ ಬೋರ್ಡ್ ಮೊದಲು ಮುಟ್ಟುಗೋಲು ಹಾಕಿದ ತಮ್ಮ 'ಸ್ಟ್ರೈಕ್' ಚಿತ್ರವನ್ನು ಸೆನ್ಸಾರ್ ವಿಮರ್ಶಾ ಸಮಿತಿ ಕೆಲ ದಿನಗಳ ನಂತರ ಅದು ಸರ್ವರೂ ನೋಡಬೇಕಾದ ಅಮೂಲ್ಯ ಚಿತ್ರವೆಂಬ ಶಿಫಾರಸ್ಸಿನೊಂದಿಗೆ ಪಾಸ್ ಮಾಡಿದ ಪ್ರಕರಣವನ್ನು ಉದಾಹರಿಸಿ ಈ ಚಿತ್ರದ ಕಥಾವಸ್ತುವಿಗೆ ತದ್ವಿರುದ್ಧವಾದ ಮತ್ತೊಂದು ಚಿತ್ರವನ್ನು ತಾವು ತಯಾರಿಸಿದಾಗ ಯಾವ ನಿರ್ಬಂಧವೂ ಇಲ್ಲದೆ ಅದೇ ಸೆನ್ಸಾರ್ ಬೋರ್ಡ್ ಆ ಚಿತ್ರದ ಪ್ರದರ್ಶನಕ್ಕೆ ಅನುಮತಿ ಪತ್ರ ನೀಡಿದನ್ನು ಸಮ್ಮೇಳನದಲ್ಲಿ ವಿಡಂಬನಾತ್ಮಕವಾಗಿ ಹೇಳಿದರು.

ಚಾಮುಂಡೇಶ್ವರಿ ಸ್ಟುಡಿಯೋ ಮಾಲೀಕರಾದ ಎಸ್.ಎಂ.ಶ್ರೀರಾಮುಲು ನಾಯ್ಡು ಅವರು ಆ ಸಂದರ್ಭದಲ್ಲಿ ಮಾತಾಡುತ್ತಾ ''ಡಬ್ ಆದ ಚಿತ್ರವೊಂದರಲ್ಲಿ ಮೂಲ ಭಾಷೆಯಲ್ಲಿ ಪರವಾನಗಿ ಪಡೆದ ದೃಶ್ಯಗಳನ್ನು ಡಬ್ ಆದ ಮೇಲೆ ಸೆನ್ಸಾರ್ ಬೋರ್ಡ್ ಕತ್ತರಿಸಿದ್ದು ವಿಪರ್ಯಾಸವೆಂದರು. ಇದೇ ಸಮ್ಮೇಳನದಲ್ಲಿ ಪ್ರತಿ ಚಿತ್ರ ಸೆನ್ಸಾರ್ ಆಗುವಾಗಲೂ ಆ ಚಿತ್ರದ ನಿರ್ಮಾಪಕ ಸೆನ್ಸಾರ್ ಮಂಡಳಿಗೆ ಶುಲ್ಕ ಕೊಡಬೇಕೆಂಬ ಖೋಸ್ಲಾ ಸಮಿತಿಯ ಸಲಹೆಯನ್ನು ಪರಿಶೀಲಿಸಬೇಕೆಂದು'' ಶ್ರೀ ನಾಯ್ಡುರವರು ಅಭಿಪ್ರಾಯ ಪಟ್ಟರು. ೧೯೭೩ರ ಸಮ್ಮೇಳನದಲ್ಲಿ ನಡೆದ ಈ ಎಲ್ಲಾ ಅಭಿಪ್ರಾಯಗಳು, ಚರ್ಚೆಗಳು, ವಾದ-ವಿವಾದಗಳು ಈಗಲೂ ಇವೆ. ಚಿತ್ರ ತಯಾರಕರಿಗೆ ಸೆನ್ಸಾರ್ ಇರುವುದು ದಿನದಿನಕ್ಕೂ ಕಗ್ಗಂಟೆಂದೇ ಭಾಸವಾಗುತ್ತಿದೆ.

ಸ್ವಯಂ ನಿಯಂತ್ರಣ

ಸರ್ಕಾರದಿಂದ ರೂಪಿತಗೊಂಡ ಸೆನ್ಸಾರ್ ನಿಯಮಾವಳಿಗಳು ಚಿತ್ರರಂಗದ ಹಿತದೃಷ್ಟಿಯನ್ನು, ಬೆಳವಣಿಗೆಯನ್ನು, ಬದಲಾವಣೆಗಳನ್ನು ಗಮನದಲ್ಲಿ ಇಟ್ಟುಕೊಂಡಿಲ್ಲವೆಂದು ಹೇಳುವ ಚಿತ್ರ ತಯಾರಕರು ಹಾಲಿವುಡ್ ಸಿನಿಮಾರಂಗದಲ್ಲಿರುವಂತೆ ಉದ್ಯಮದವರೇ ಸ್ವಯಂ ಸೆನ್ಸಾರ್ ಮಾಡುವ ವ್ಯವಸ್ಥೆಯಾಗಬೇಕೆಂದು ಬಯಸುತ್ತಾರೆ. ೧೯೭೩ರಲ್ಲಿ ಫಿಲಂ ಫೆಡರೇಷನ್‌ನ ಅಧ್ಯಕ್ಷರಾಗಿದ್ದ ಜಿ.ಪಿ.ಸಿಪ್ಪಿ ಈ ಮಹತ್ವಪೂರ್ಣ ನಿರ್ಧಾರದ ಬಗೆಗೆ ಪತ್ರಿಕಾಗೋಷ್ಠಿಯೊಂದನ್ನು ಕರೆದು ವಿವರಿಸಿದ್ದರು. ಆ ಸಂದರ್ಭದಲ್ಲಿ ಸೆನ್ಸಾರ್‌ಶಿಪ್ ವಿಷಯದಲ್ಲಿ ಭಾರತ ಚಿತ್ರೋದ್ಯಮ ಹಾಗೂ ಕೇಂದ್ರ ಸರ್ಕಾರದ ನಡುವೆ ಉಂಟಾಗಿದ್ದ ವಿರಸದಿಂದಾಗಿ ಚಿತ್ರೋದ್ಯಮವೇ ಸ್ವಯಂ ಸೆನ್ಸಾರ್‌ಶಿಪ್‌ಗಾಗಿ ವಲಯ ಮಟ್ಟದ ಸೆನ್ಸಾರ್ ಸಮಿತಿಗಳನ್ನು ಕೂಡಲೇ ರಚಿಸಬೇಕೆಂದು ಫಿಲಂ ಫೆಡರೇಷನ್ ಆಫ್ ಇಂಡಿಯಾದ ಕಾರ್ಯಕಾರಿ ಸಮಿತಿ ನಿರ್ಧರಿಸಿತ್ತು. ಕಲ್ಕತ್ತಾ, ಮುಂಬಯಿ ಹಾಗೂ ಮದ್ರಾಸ್‌ಗಳಲ್ಲಿ ರಚಿತವಾಗಲಿರುವ ಉದ್ಯಮದ ಸೆನ್ಸಾರ್ ಮಂಡಳಿಗಳಲ್ಲಿ ಸಮಾಜದ ಪ್ರತಿಷ್ಠಿತರು, ನ್ಯಾಯವಾದಿಗಳು, ಚಿತ್ರೋದ್ಯಮದ ಪ್ರತಿನಿಧಿಗಳಿರುವರೆಂದೂ, ಸರ್ಕಾರದ ಸೆನ್ಸಾರ್ ಮಂಡಳಿಗಳಿಗೆ ಚಿತ್ರಗಳನ್ನು ಒಪ್ಪಿಸುವ ಮುನ್ನ ಈ ಮಂಡಳಿಗಳು ತಮ್ಮದೇ ಆದ ಸೀಲ್ ಆಫ್ ಅಪ್ರೂವಲ್ ನೀಡುವುದೆಂದೂ ಸ್ಪಷ್ಟವಾಗಿ ತಿಳಿಸಿದ್ದರು. ವಿನಾ ಕಾರಣವಾಗಿ ಸೀಲ್ ಆಫ್ ಅಪ್ರೂವಲ್ ಅನ್ನು ಸರ್ಕಾರದ ಸೆನ್ಸಾರ್ ಬೋರ್ಡ್‌ಗಳು ಒಪ್ಪಿಕೊಳ್ಳದಿದ್ದರೆ ಚಿತ್ರೋದ್ಯಮ ನ್ಯಾಯಾಲಯಗಳಲ್ಲಿ ಹೋರಾಡುವುದಕ್ಕೂ ಸಿದ್ಧವಾಗಿದೆಯೆಂದರು. ಈ ಸೆನ್ಸಾರ್ ಮಂಡಳಿಗಳ ರೂಪುರೇಷೆಗಳನ್ನು ನಿರ್ಧರಿಸಲು ಸಿಪ್ಪಿಯವರ ಅಧ್ಯಕ್ಷತೆಯಲ್ಲಿ ಎಲ್ಲಾ ರಾಜ್ಯಗಳ ಫಿಲಂ ಚೇಂಬರ್‌ಗಳ ಅಧ್ಯಕ್ಷರ ಉಪಸಮಿತಿಯೊಂದನ್ನು ಫೆಡರೇಷನ್‌ನ ಕಾರ್ಯಕಾರಿ ಸಮಿತಿ ರಚಿಸಿತ್ತು.

ಹೀಗೆ ೧೯೭೩ರಲ್ಲಿ ಚಲನಚಿತ್ರಗಳ ಸೆನ್ಸಾರ್‌ಶಿಪ್ ಬಗ್ಗೆ ಚಿತ್ರರಂಗದಲ್ಲಿ ದೊಡ್ಡ ಬಿರುಗಾಳಿಯೇ ಎದ್ದಿತ್ತು. ಸರ್ಕಾರದ ಅಧೀನದಲ್ಲಿರುವ ಸೆನ್ಸಾರ್ ಸಮಿತಿಗಳು ತಮ್ಮ ಕಾರ್ಯವನ್ನು ತೃಪ್ತಿಕರವಾಗಿ ನಿರ್ವಹಿಸುತ್ತಿಲ್ಲ ಎಂಬ ಕೂಗು ಕೇಳಿ ಬಂದಿತ್ತು. ಒಂದಲ್ಲ ಒಂದು ಕಾರಣಕ್ಕಾಗಿ ಸಮಿತಿಯವರು ಚಿತ್ರ ನಿರ್ಮಾಪಕರಿಗೆ ತೊಂದರೆ ಕೊಡುತ್ತಿದ್ದಾರೆನ್ನುವುದು ಅವರ ಅಳಲಾಗಿತ್ತು. ಚಲನಚಿತ್ರಗಳ ಗುಣಮಟ್ಟವನ್ನು ಕಾಪಾಡಬೇಕು ಮತ್ತು ಚಿತ್ರಗಳಲ್ಲಿ ಆರೋಗ್ಯಕರ ವಾತಾವರಣವನ್ನು ಉಂಟು ಮಾಡಬೇಕೆಂಬ ಆಕಾಂಕ್ಷೆ ಸೆನ್ಸಾರ್ ಸಮಿತಿಗೆ ಇಲ್ಲ. ಬದಲಾಗಿ ಸ್ವಪ್ರತಿಷ್ಠೆ ಬೆಳೆಸಲು ಆಶಿಸುವ ಕೂಟವೇ ಈ ಸಮಿತಿಯಾಗಿದೆ ಎಂದು ಚಿತ್ರೋದ್ಯಮಿಗಳು ಸೆನ್ಸಾರ್ ಮಂಡಳಿಯ ಮೇಲೆ ಹರಿ ಹಾಯ್ದಿದ್ದರು.

ಮಾನದಂಡವೇ ಇಲ್ಲ

''ಸೆನ್ಸಾರ್ ಸಮಿತಿಯಲ್ಲಿ ಚಲನಚಿತ್ರಗಳನ್ನು ಅಳೆಯುವ ಯಾವ ನಿರ್ದಿಷ್ಟ ಅಳತೆಗೋಲಿಲ್ಲ. ಇಲ್ಲಿ ಸಮಿತಿಯ ಸದಸ್ಯರು ತಮ್ಮ ತಮ್ಮ ಮೂಗಿನ ನೇರಕ್ಕೆ ಅಭಿಪ್ರಾಯ ಹೇರುತ್ತಾರೆ'' ಎಂದು ಹೇಳಿದ ಚಿತ್ರೋದ್ಯಮಿಗಳು ಆ ಸಂದರ್ಭದಲ್ಲಿ ಬ್ಯಾನ್ ಆದ ಹದಿನಾರು ಚಿತ್ರಗಳ ಕುರಿತು ಹೇಳಿದರು. ಅದರಲ್ಲಿ ಒಬ್ಬನೇ ನಿರ್ಮಾಪಕನ ಎರಡು ಚಿತ್ರಗಳಿದ್ದು, ಎರಡೂ ಚಿತ್ರಗಳು ಬ್ಯಾನ್ ಆದರೆ ಆತನ ಗತಿಯೇನು ಎಂದು ಪ್ರಶ್ನಿಸಿದರು. ಆದರೂ ಬ್ಯಾನ್ ಆದ ಹೆಚ್ಚಿನ ಚಿತ್ರಗಳಲ್ಲಿ ಹೆಣ್ಣಿನ ಮಾನಭಂಗದ ದೃಶ್ಯವಿದ್ದುದೂ ನಿಜ. ಆದರೆ ಹಿಂದಿನ ಅನೇಕ ಚಿತ್ರಗಳಲ್ಲಿ ಇಂಥ ದೃಶ್ಯಗಳಿದ್ದೂ ಅವುಗಳು ಬಿಡುಗಡೆಯಾಗಿದ್ದು ಹೌದಾದರೆ ಇವುಗಳನ್ನೇಕೆ ತಡೆಯಬೇಕು ಎನ್ನುವುದು ನಿರ್ಮಾಪಕರ ಪ್ರಶ್ನೆಯಾಗಿತ್ತು. ಪ್ರಾರಂಭದಿಂದಲೇ ಈ ನೀತಿಯನ್ನು ಸಮಿತಿ ಅನುಸರಿಸಿದ್ದರೆ ಇಂಥ ಚಿತ್ರಗಳನ್ನು ನಿರ್ಮಿಸುತ್ತಲೇ ಇರಲಿಲ್ಲ ಎಂದು ಆಗ ಅನೇಕ ನಿರ್ಮಾಪಕರು ಆಕ್ಷೇಪಿಸಿದ್ದರು.

ಇದರ ಪರಿಣಾಮಗಳನ್ನು 'ಕೌಬಾಯ್ ಕುಳ್ಳ' ಚಿತ್ರವೂ ಎದುರಿಸಿತ್ತು. ಒಮ್ಮೆ ಸೆನ್ಸಾರ್ ಅನುಮತಿ ಪಡೆದು ಬಿಡುಗಡೆಯಾಗಬೇಕಿದೆ ಎನ್ನುವಷ್ಟರಲ್ಲಿ ಮತ್ತೆ ಸೆನ್ಸಾರ್‌ಗೆ ತರಿಸಿಕೊಂಡರು. ೧೯೭೩ರ ಜುಲೈ ೧೨ ರಂದು ರಾಜ್ಯದ ಹದಿನೇಳು ಕೇಂದ್ರಗಳಲ್ಲಿ ಬಿಡುಗಡೆಯಾಗುವುದೆಂದು ಪ್ರಚಾರ ಮಾಡಿದ್ದ 'ಕೌಬಾಯ್ ಕುಳ್ಳ' ಕೊನೆಯ ಘಳಿಗೆಯಲ್ಲಿ ಸೆನ್ಸಾರ್ ತೊಂದರೆಗೆ ಸಿಕ್ಕಿ ಬಿಡುಗಡೆ ಮುಂದಕ್ಕೆ ಹೋಯಿತು.

ದ್ವಾರಕೀಶ್ ಅಭಿನಯದ ಈ ಚಿತ್ರವನ್ನು ಸೆನ್ಸಾರ್ ಸಮಿತಿ ಜೂನ್ ೩೦ ರಂದೇ ವೀಕ್ಷಿಸಿ ಅಂದು ಚಿತ್ರದ ಬಗ್ಗೆ ಯಾವುದೇ ಅಭಿಪ್ರಾಯ ನೀಡಲಿಲ್ಲ. ಮಂಡಳಿಯ ಅಧ್ಯಕ್ಷರು ಎರಡು ದಿನದ ನಂತರ ಮತ್ತೆ ಚಿತ್ರವನ್ನು ನೋಡಿದರು. ಆಗಲೂ ಕೂಡ ಕೆಲವು ದೃಶ್ಯಗಳನ್ನು ತೆಗೆಯಬೇಕೆಂದು ಮಾತ್ರ ನಿರ್ಮಾಪಕರಿಗೆ ಸೂಚನೆ ನೀಡಿದರು. ಅವರಂತಯೇ ಆ ದೃಶ್ಯಗಳನ್ನು ಕತ್ತರಿಸಿ ಚಿತ್ರದ ಬಿಡುಗಡೆಯ ದಿನಾಂಕ ಗೊತ್ತು ಮಾಡಿ ಜಾಹಿರಾತು ನೀಡಲಾಗಿತ್ತು.

ಇನ್ನೇನು, ಬಿಡುಗಡೆಯಾಗಬೇಕೆನ್ನುವಷ್ಟರಲ್ಲಿ 'ಕೌಬಾಯ್ ಕುಳ್ಳ' ಚಿತ್ರವನ್ನು ಮತ್ತೆ ವೀಕ್ಷಿಸಬೇಕೆಂದು ಕರೆದು ಮೊದಲು ನೀಡಿದ್ದ ಅನುಮತಿಯನ್ನು ನಿರಾಕರಿಸಿದಾಗ ಚಿತ್ರದ ಹಂಚಿಕೆಯನ್ನು ಪಡೆದಿದ್ದ ಈಶ್ವರಿ ಪಿಕ್ಚರ್ಸ್‌ನವರಿಗೆ ಆಘಾತವಾಗಿದ್ದು ಸಹಜ. ಚಿತ್ರವನ್ನು ಸೆನ್ಸಾರ್ ಮಂಡಳಿಯ ಪುನರ್‌ಪರಿಶೀಲನಾ ಸಮಿತಿ ವೀಕ್ಷಿಸಬೇಕೆಂದು ಮದರಾಸು ಮಂಡಳಿಯವರು ಮುಂಬಯಿಯಲ್ಲಿರುವ ಕೇಂದ್ರ ಮಂಡಳಿಗೆ ಸಲಹೆ ಮಾಡಿದ್ದಾರೆಂದೂ ಸಂಬಂಧಪಟ್ಟ ದಾಖಲೆಗಳೆಲ್ಲ ಮುಂಬಯಿನಲ್ಲಿಯೇ ಇವೆಯೆಂದೂ ತಿಳಿಸಲಾಯಿತು. ಚಿತ್ರ ಹೇಗೇ ಇರಲಿ, ಈ ರೀತಿಯ ದ್ವಂದ್ವಗಳೇಕೆ, ಇಬ್ಬಗೆಯ ನೀತಿ ಏಕೆ ಎಂದು ಚಿತ್ರೋದ್ಯಮಿಗಳು ಒಕ್ಕೊರಲಿನಿಂದ ಕೇಳಿದ್ದರು.

ಇದೇ ರೀತಿ 'ಸಂಸ್ಕಾರ' ಹಾಗೂ 'ಚೋರೇಗೌಡ ಬೆಂಗಳೂರಿಗೆ ಬಂದ' ಚಿತ್ರಗಳೂ ಸೆನ್ಸಾರ್ ಮಂಡಳಿಗೆ ಸಿಲುಕಿ ಒದ್ದಾಡಿದ್ದವು.

ಇದಕ್ಕೂ ಮುನ್ನ, ಅಂದರೆ ೧೯೬೫ರಲ್ಲಿ, ರಾಷ್ಟ್ರದಲ್ಲಿ ತಯಾರಾಗುತ್ತಿರುವ ಚಲನಚಿತ್ರಗಳ ಬಗ್ಗೆ ಅಧ್ಯಯನ ನಡೆಸಿ ಅವುಗಳ ಗುಣಮಟ್ಟದ ಸುಧಾರಣೆಗೆ ಅಗತ್ಯ ಕ್ರಮವನ್ನು ಶಿಫಾರಸು ಮಾಡಲು ಅದಕ್ಕೊಂದು ಸಮಿತಿ ರಚನೆ ಮಾಡಲು ಕೇಂದ್ರ ಸರ್ಕಾರ ಒಪ್ಪಿಗೆ ಕೊಟ್ಟಿತ್ತು. ಈ ಸಂದರ್ಭದಲ್ಲಿ ರಾಜ್ಯಸಭೆಯಲ್ಲಿ ಸದಸ್ಯರೊಬ್ಬರು ಮಂಡಿಸಿದ ಈ ನಿರ್ಣಯ ಅಂಗೀಕೃತವಾಯಿತು. ವಿಪರೀತ ಅಂಗಾಂಗ ಪ್ರದರ್ಶನ, ಅಶ್ಲೀಲತೆಗಳಿಂದಾಗಿ ಯುವ ಜನತೆಯ ಮೇಲೆ ದುಷ್ಪರಿಣಾಮ ಬೀರುವ ಚಿತ್ರಗಳು, ಅರೆಬೆತ್ತಲೆ ದೃಶ್ಯಗಳು, ದ್ವಂದ್ವಾರ್ಥದ ಸಂಭಾಷಣೆ, ಹಾಡುಗಳಿರುವ ಚಿತ್ರಗಳು, ಲೈಂಗಿಕಾಕರ್ಷಣೆಯ ಕಥೆಯನ್ನು ಆಧರಿಸಿ ಜನರನ್ನು ತಪ್ಪು ದಾರಿಗೆಳೆಯುವ ಚಿತ್ರಗಳ ತಯಾರಿಕೆ ನಿಲ್ಲಬೇಕೆನ್ನುವುದು ಇದರ ಉದ್ದೇಶವಾಗಿತ್ತು.

ಇದಕ್ಕೆ ಮತ್ತೊಬ್ಬ ಸದಸ್ಯರು "ನಮ್ಮ ಚಿತ್ರಗಳನ್ನು ನೋಡಿ ಅಸಭ್ಯ ಅನ್ನುತ್ತೀರಿ. ಆದರೆ ಅದಕ್ಕಿಂತ ಅಶ್ಲೀಲವಾದ ಇಂಗ್ಲಿಷ್ ಚಿತ್ರಗಳನ್ನು ನೋಡುತ್ತೀರಲ್ಲ. ಜನರು ನೀತಿ ಪಾಠ ಕಲಿಯಲು ಚಿತ್ರ ನೋಡಲು ಹೋಗುವುದಿಲ್ಲ. ಅವರಿಗೆ ಮನೋರಂಜನೆ ಬೇಕು. ಭಾರತೀಯ ಚಿತ್ರಗಳಲ್ಲಿ ಅಸಭ್ಯವಾದದ್ದು ಹೋಗಬೇಕಾದರೆ ಪಾಶ್ಚಾತ್ಯ ಚಿತ್ರಗಳನ್ನು ಇಲ್ಲಿ ಪ್ರದರ್ಶನಗೊಳ್ಳದಂತೆ ನಿಷೇಧಿಸಬೇಕು" ಎಂದು ತಮ್ಮ ಅಭಿಪ್ರಾಯ ತಿಳಿಸಿದರು.

ಈ ಸಂದರ್ಭದಲ್ಲಿ "ಚಿತ್ರಗಳು ಧನಿಕರ ಕೈಯಿಂದ ಮುಕ್ತವಾಗಬೇಕು, ತಾರಾ ಪದ್ಧತಿ ಹೋಗಬೇಕು, ಸರ್ಕಾರ ಏಕ ರೀತಿಯ ಸಂಭಾವನೆ ನಿಗದಿಪಡಿಸಬೇಕು, ತಯಾರಕರು ಕಲಾವಿದರಿಂದ ಸದಸ್ಯರ ಆಯ್ಕೆಯಾಗಬೇಕು. ಜೂನಿಯರ್ ಕಲಾವಿದರಿಗೆ ಇನ್ನಷ್ಟು ಸವಲತ್ತುಗಳು ಸಿಗಬೇಕು, ಚಿತ್ರದ ಒಟ್ಟು ಉದ್ದ ಹದಿನಾಲ್ಕು ಸಾವಿರ ಅಡಿ ಮೀರದಂತೆ ನೋಡಿಕೊಳ್ಳಬೇಕು..." ಮುಂತಾದ ಸೂಚನೆಗಳು ಬಂದಿದ್ದವು. ಆದರೆ ಇವಲ್ಲವೂ ಕಾರ್ಯರೂಪಕ್ಕೆ ಬರಲಿಲ್ಲವೆನ್ನುವುದು ಗಮನಕ್ಕೆ ಬರುತ್ತದೆ.

ಇನ್ನು ಕನ್ನಡ ಚಿತ್ರಗಳ ಸೆನ್ಸಾರ್ ಆರಂಭದಿಂದಲೂ ನಡೆಯುತ್ತಿದ್ದುದು ಮದರಾಸಿನಲ್ಲಿ. ಮೊದಲು ಕನ್ನಡ ಚಿತ್ರೋದ್ಯಮವೂ ಸಂಪೂರ್ಣ ಮದ್ರಾಸಿನಲ್ಲೇ ಇದ್ದುದರಿಂದ ಇದರಲ್ಲಿ ವ್ಯತ್ಯಾಸ ಕಾಣುತ್ತಿರಲಿಲ್ಲ. ಆದರೆ ಚಿತ್ರರಂಗ ಕರ್ನಾಟಕಕ್ಕೆ ವರ್ಗಾವಣೆಯಾಗಿ ಬಂದ ಮೇಲೂ ಸೆನ್ಸಾರ್‌ಗಾಗಿ ಮದರಾಸಿಗೆ ಹೋಗಬೇಕಾಗಿತ್ತು. ಇದರಿಂದ ಕೆಲವು ನಿರ್ಮಾಪಕರಿಗೆ ಅನುಕೂಲವೆನಿಸಿದ್ದರೂ ಒಟ್ಟಾರೆಯಾಗಿ ತುಂಬಾ ತೊಂದರೆಯೇ ಆಗುತ್ತಿತ್ತು. ಮದರಾಸಿನ ಸೆನ್ಸಾರ್ ಮಂಡಳಿಯಲ್ಲಿ ಬೆರಳೆಣಿಕೆಯಷ್ಟು ಮಂದಿಯೂ ಕನ್ನಡದವರು ಇರುತ್ತಿರಲಿಲ್ಲ. ಕನ್ನಡಿಗರಿದ್ದರೂ ಅಂಥವರು ಕನ್ನಡ ನಾಡನ್ನು ಬಿಟ್ಟು ಎಷ್ಟೋ ವರ್ಷಗಳಿಂದ ಅಲ್ಲಿಯೇ ನೆಲೆಯೂರಿದವರು. ಅವರಿಗೆ ಇಲ್ಲಿ ಆದ ಬದಲಾವಣೆಗಳ ಬಗ್ಗೆ ಯಾವುದೇ ಅರಿವಿರುವುದಿಲ್ಲ. ಯಾವುದೋ ಕಾಲಮಾನವನ್ನು ದೃಷ್ಟಿಯಲ್ಲಿಟ್ಟುಕೊಂಡು ಕನ್ನಡ ಚಿತ್ರಗಳನ್ನು ವೀಕ್ಷಿಸುತ್ತಾರೆ. ಇದರಿಂದಾಗಿ ಕನ್ನಡ ಚಿತ್ರ ನಿರ್ಮಾಪಕರಿಗೆ ತುಂಬಾ ಅಸಮಾಧಾನ ಉಂಟಾಗುವ ಪ್ರಸಂಗಗಳು ನಡೆಯುತ್ತಿದ್ದವು. ಇನ್ನು ಅಲ್ಲಿನ ಅಧಿಕಾರಿಗಂತೂ ಇಲ್ಲಿನ ರೀತಿ-ನೀತಿ ಸಂಪೂರ್ಣ ಅಪರಿಚಿತವಾಗಿರುತ್ತವೆ. ಅಲ್ಲದೆ ಅವರು ತುಂಬಾ ಕಟ್ಟುನಿಟ್ಟಿನ ಅಧಿಕಾರಿಯಾಗಿರುತ್ತಿದ್ದುದು ಮಾತ್ರವಲ್ಲದೆ ಅತಿ ಮಡಿವಂತಿಕೆಯುಳ್ಳವರೂ ಆಗಿದ್ದರಿಂದ ಅಲ್ಲಿ ಸೆನ್ಸಾರ್‌ನಿಂದ ಅನುಮತಿ ಪಡೆದು ಬರುವುದು ತುಂಬಾ ತ್ರಾಸದಾಯಕವಾದ ಕೆಲಸವಾಗಿತ್ತು. ಇದಲ್ಲದೆ ಸೆನ್ಸಾರ್‌ಗಾಗಿ ಚಿತ್ರದ ಪ್ರತಿಯನ್ನು ಮದ್ರಾಸ್‌ಗೆ ಹೊತ್ತುಕೊಂಡು ಹೋಗಿ ತಿಂಗಳುಗಟ್ಟಲೆ ಕಾಯಬೇಕಾಗುವ ಪ್ರಸಂಗವೂ ಬರುತ್ತಿತ್ತು. ಆರಂಭದಲ್ಲಿ ಕನ್ನಡ ಚಿತ್ರಗಳು ಕಡಿಮೆ ತಯಾರಾಗುತ್ತಿದ್ದು ಬರಬರುತ್ತಾ ಸಂಖ್ಯೆ ಜಾಸ್ತಿಯಾಗತೊಡಗಿದಾಗ ಮದರಾಸ್‌ಗೆ ಹೋಗಿ ಸೆನ್ಸಾರ್ ಮಾಡಿಸಿಕೊಂಡು ಬರುವುದು ತುಂಬಾ ತೊಂದರೆಯೆನಿಸತೊಡಗಿತು. ಇದರಿಂದ ಕರ್ನಾಟಕದಲ್ಲೇ ಒಂದು ಸೆನ್ಸಾರ್ ಕಚೇರಿ ಆಗಬೇಕೆಂಬ ಒತ್ತಾಯ ಎಲ್ಲೆಡೆಯಿಂದ ಬರತೊಡಗಿತು.

ಪ್ರಾದೇಶಿಕ ಘಟಕ

ಆಗ ಕರ್ನಾಟಕ ಫಿಲಂ ಚೇಂಬರ್‌ನ ಕಾರ್ಯದರ್ಶಿಯಾಗಿದ್ದ ಆರ್.ಲಕ್ಷ್ಮಣ್ ಸತತ ಮೂರು ವರ್ಷಗಳ ಕಾಲ ಕೇಂದ್ರ ಕಚೇರಿಗೆ ಪತ್ರ ಬರೆದು ಕರ್ನಾಟಕಕ್ಕೊಂದು ಪ್ರಾದೇಶಿಕ ಸೆನ್ಸಾರ್ ಸಮಿತಿ ಬೇಕೆಂದು ಮನವಿ ಮಾಡಿಕೊಂಡಿದ್ದರು. ಕರ್ನಾಟಕದಿಂದ ಆಯ್ಕೆಯಾದ ಲೋಕಸಭೆಯ ಸದಸ್ಯರೂ ಕೂಡಾ ಈ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸಿ ತಾವೂ ಶಿಫಾರಸು ಪತ್ರಗಳನ್ನು ಬರೆದಿದ್ದರು. ಆಗ ರಾಜ್ಯದ ಅರ್ಥ ಸಚಿವರಾಗಿದ್ದ ಎಸ್.ಎಂ.ಕೃಷ್ಣ ಕೂಡಾ ಇದರ ಬಗ್ಗೆ ಆಸಕ್ತರಾಗಿದ್ದರು. ಮದರಾಸಿನಲ್ಲಿರುವ ಅಧಿಕಾರಿ ಹಾಗೂ ಸದಸ್ಯರುಗಳು ಬಹುತೇಕ ತಮಿಳು ಹಾಗೂ ತೆಲುಗು ಭಾಷೆಯವರೇ ಆದುದರಿಂದ ಕನ್ನಡ ಚಿತ್ರಗಳ ವೀಕ್ಷಣೆಗಾಗಿ ಪ್ರತ್ಯೇಕ ಸೆನ್ಸಾರ್ ಸಮಿತಿ ಬೇಕೆಂಬ ಆಗ್ರಹ ಜಾಸ್ತಿಯಾಯಿತು. ಆಗ ಕರ್ನಾಟಕದ ಮುಖ್ಯಮಂತ್ರಿಗಳಾಗಿದ್ದ ಗುಂಡೂರಾಯರೂ ಇಲ್ಲೊಂದು ಪ್ರಾದೇಶಿಕ ಕಚೇರಿ ಇರಬೇಕೆಂದು ಪ್ರಯತ್ನ ಪಟ್ಟಿದ್ದರು. ಇದೆಲ್ಲದರ ಫಲವಾಗಿ ೧೯೮೨ರಲ್ಲಿ ಬೆಂಗಳೂರಿನಲ್ಲಿ ಪ್ರಾದೇಶಿಕ ಸೆನ್ಸಾರ್ ಸಮಿತಿ ಆರಂಭವಾಯಿತು. ಹೀಗೆ ಒಂದು ಹೋರಾಟವನ್ನೇ ಮಾಡಿ ಪ್ರಾದೇಶಿಕ ಕಚೇರಿ ಗಳಿಸಿಕೊಂಡ ಕರ್ನಾಟಕ ಇತರ ರಾಜ್ಯಗಳಿಗೂ ಮಾದರಿಯಾಯಿತು. ಇದರ ಪ್ರೇರಣೆಯಿಂದಲೇ ಇನ್ನೂ ಅನೇಕ ಕಡೆ ಒತ್ತಾಯ ಬಂದು ಹಲವಾರು ಪ್ರಾದೇಶಿಕ ಸೆನ್ಸಾರ್ ಘಟಕಗಳು ದೇಶಾದ್ಯಂತ ಹುಟ್ಟಿಕೊಂಡವು.

ಬೆಂಗಳೂರಿನಲ್ಲಿ ಆರಂಭವಾದ ಪ್ರಾದೇಶಿಕ ಸೆನ್ಸಾರ್ ಘಟಕಕ್ಕೆ ೧೯೮೨ರ ಮಾರ್ಚ್ ೫ರಂದು ಮೊದಲು ಅಧಿಕಾರಿಯಾದವರು ಐ.ಪಿ.ಎಸ್. ಅಧಿಕಾರಿ ರಾಜಗೋಪಾಲ್ ಅವರು. ಇವರು ಮೂಲತಃ ತಮಿಳಿನವರೇ ಆಗಿದ್ದರೂ ಬೆಂಗಳೂರಿನಲ್ಲೇ ನೆಲೆನಿಂತವರಾದುದರಿಂದ ಇಲ್ಲಿನ ಭಾಷೆ, ಸಂಸ್ಕೃತಿ, ಕಲೆಯ ಬಗ್ಗೆ ಅರಿತಿದ್ದರು ಮಾತ್ರವಲ್ಲದೆ ಅಭಿಮಾನವನ್ನೂ ಬೆಳೆಸಿಕೊಂಡಿದ್ದರು. ರಾಜಗೋಪಾಲ್ ರಾಜ್ಯ ಸರ್ಕಾರದ ಡವಲಪ್‌ಮೆಂಟ್ ಕಮಿಷನರ್ ಆಗಿದ್ದ ಶ್ರೀನಿವಾಸನ್‌ರ ಪುತ್ರ. ಅವರು ಮೊದಲು ವಹಿಸಿಕೊಂಡ ಹುದ್ದೆಯೇ ಈ ಸೆನ್ಸಾರ್ ಬೋರ್ಡ್‌ನ ಪ್ರಾದೇಶಿಕ ಆಫೀಸರ್ ಆಗಿ. ಇದು ದೇಶಕ್ಕೆ ಮಾದರಿ ಆಗುವಂಥ ಸೆನ್ಸಾರ್ ಘಟಕ ಆಗಬೇಕೆನ್ನುವ ನಿಟ್ಟಿನಲ್ಲಿ ರಾಜಗೋಪಾಲ್ ತುಂಬಾ ಶ್ರಮ ವಹಿಸಿದ್ದರು. ಅದಕ್ಕಾಗಿ ಸದಸ್ಯರನ್ನು ಅವರ ಯೋಗ್ಯತೆ, ಅಭಿರುಚಿಯ ಆಧಾರದ ಮೇರೆಗೆ ಸಾಹಿತ್ಯ, ವಿಜ್ಞಾನ, ವೈದ್ಯಕೀಯ, ಶಿಕ್ಷಣ, ಮುಂತಾದ ಕ್ಷೇತ್ರಗಳಿಂದ ಆರಿಸಿ ಮಂಡಳಿಯ ಘನತೆ ಹೆಚ್ಚಿಸಲು ಯತ್ನಿಸಿದ್ದರು. ಯಾವುದೇ ರೀತಿಯ ಭ್ರಷ್ಟಾಚಾರ ಇಲ್ಲಿ ಬರಬಾರದೆಂದು ಪ್ರಯತ್ನಪಟ್ಟಿದ್ದರು. ರಾಜಗೋಪಾಲ್‌ರ ಪರಿಶ್ರಮದ ಫಲದಿಂದಾಗಿ ಮೊದಲ ಸಮಿತಿ ತುಂಬಾ ಉತ್ತಮವಾಗಿ ರೂಪುಗೊಂಡಿತ್ತು. ಈಗ ಸುಮಾರು ನಲವತ್ತೆರಡು ಜನರನ್ನೊಳಗೊಂಡಿರುವ ಈ ಪ್ರಾದೇಶಿಕ ಘಟಕ ಆರಂಭಗೊಂಡಾಗ ಇಪ್ಪತ್ತನಾಲ್ಕು ಜನ ಸದಸ್ಯರನ್ನು ಹೊಂದಿತ್ತು.

ಆದರೆ ಬೆಂಗಳೂರಿನಲ್ಲಿ ಸೆನ್ಸಾರ್ ಘಟಕ ಆದ ಮೇಲೂ ಕೆಲವು ನಿರ್ಮಾಪಕರು ಮದರಾಸಿಗೆ ಹೋಗಿ ಅನುಮತಿ ಪಡೆದುಕೊಂಡು ಬರುತ್ತಿದ್ದರು. ದೇಶದ ಯಾವ ಪ್ರಾದೇಶಿಕ ಘಟಕದಲ್ಲಿ ಬೇಕಾದರೂ ಸೆನ್ಸಾರ್ ವೀಕ್ಷಣೆ ಮಾಡಬಹುದೆನ್ನುವ ಕಾನೂನು ಇರುವುದಾದರೂ ಕನ್ನಡ ಚಿತ್ರಗಳೇ ಕರ್ನಾಟಕದಲ್ಲಿ ಸೆನ್ಸಾರ್ ವೀಕ್ಷಣೆಗೆ ಬರದಿದ್ದರೆ ಇಲ್ಲಿ ಘಟಕವಾದರೂ ಯಾಕಿರಬೇಕು ? ಎನ್ನುವ ಪ್ರಶ್ನೆ ಹುಟ್ಟಿಕೊಂಡಿತು. ಇದಕ್ಕಾಗಿ ಮತ್ತೊಂದು ರೀತಿಯ ಚಟುವಟಿಕೆ ಆರಂಭವಾಯಿತು. ನಂತರ ರಾಜಗೋಪಾಲ್ ಅಧಿಕಾರದಲ್ಲಿರುವಾಗಲೇ ಕನ್ನಡ ಚಿತ್ರಗಳನ್ನು ಬೆಂಗಳೂರಿನಲ್ಲೇ ಸೆನ್ಸಾರ್ ಮಾಡಿಸಬೇಕೆಂದು ಒಪ್ಪಂದವಾಯಿತು. ಈ ಪ್ರಯತ್ನದಲ್ಲಿ ಕರ್ನಾಟಕದ ಫಿಲಂ ಚೇಂಬರ್ ಕೂಡಾ ಸಾಕಷ್ಟು ಶ್ರಮಿಸಿತು. ಕೆಲವು ನಿರ್ಮಾಪಕರು ಭಾಷೆ ಗೊತ್ತಿಲ್ಲದ

ಸದಸ್ಯರಿದ್ದರೆ ತಮ್ಮ ಅಶ್ಲೀಲ ಸಂಭಾಷಣೆಗಳನ್ನು ಚಿತ್ರದಲ್ಲಿ ಉಳಿಸಿಕೊಳ್ಳಬಹುದೆಂದು ಸೆನ್ಸಾರ್ ಮಂಡಳಿಯ ಕಣ್ಣಿಗೆ ಮಣ್ಣು ಹಾಕಲು ಮದರಾಸ್‌ಗೆ ಹೋಗುತ್ತಿದ್ದರು. ಇಲ್ಲಿಯೇ ಸೆನ್ಸಾರ್ ಮಾಡಬೇಕೆಂಬುದು ಕಡ್ಡಾಯವಾದ ಮೇಲೆ ನಿರ್ಮಾಪಕರೂ ಈ ಪದ್ಧತಿಗೆ ಹೊಂದಿಕೊಂಡರು. ಮದರಾಸ್‌ಗೆ ಹೋಗಿ ತಿಂಗಳುಗಟ್ಟಲೆ ಕಾಯುವುದಕ್ಕಿಂತ ಇದೇ ವಾಸಿ ಎಂದು ಅವರಿಗೂ ಅನ್ನಿಸಿತು. ಇದರೊಂದಿಗೆ ಕನ್ನಡದಿಂದ ಬೇರೆ ಭಾಷೆಗೆ ಡಬ್ ಆಗಿ ಹೋಗುವ ಚಿತ್ರಗಳನ್ನೂ ಇಲ್ಲಿಯೇ ವೀಕ್ಷಿಸಿ ಸರ್ಟಿಫಿಕೇಟ್ ನೀಡುವ ಕ್ರಮ ಜಾರಿಗೆ ಬಂತು.

ಲೋಪಗಳು

ಆದರೆ ಕ್ರಮೇಣ ಇಲ್ಲಿಯೂ ಅಶಿಸ್ತು ನುಸುಳತೊಡಗಿತು. ರಾಜಕೀಯ ಹಸ್ತಕ್ಷೇಪಗಳು ವಿಪರೀತವಾಗಿ ಸಮಿತಿಯ ಘನತೆ ಕುಸಿಯತೊಡಗಿತು. ರಾಜ್ಯ ಸರ್ಕಾರದ ಆಡಳಿತ ಪಕ್ಷದವರು ಸೆನ್ಸಾರ್ ಸಮಿತಿಗೆ ಸದಸ್ಯರನ್ನು ಆಯ್ಕೆ ಮಾಡುತ್ತಿರುವುದರಿಂದ ಯಾವುದೇ ಯೋಗ್ಯ ಹಿನ್ನೆಲೆ ಇಲ್ಲದಿದ್ದರೂ ಪಕ್ಷಕ್ಕಾಗಿ ದುಡಿದಿದ್ದಾರೆಂಬ ಕಾರಣಕ್ಕಾಗಿ, ಯಾವುದೇ ಸಾಂಸ್ಕೃತಿಕ ಹಿನ್ನೆಲೆಯಿಲ್ಲದ ಪಕ್ಷದ ಕಾರ್ಯಕರ್ತರನ್ನು ಇಲ್ಲಿಗೆ ಸದಸ್ಯರಾಗಿ ನೇಮಿಸುತ್ತಿದ್ದರು. ಇಲ್ಲಿನ ಸದಸ್ಯತ್ವದ ಮೋಹಕ್ಕಾಗಿ ಕೆಲವು ಸದಸ್ಯರು ಸಮಿತಿಯ ನೀತಿ-ನಿಯಮಗಳನ್ನು ಉಪೇಕ್ಷೆಗೊಳಿಸಿದ್ದರ ಪರಿಣಾಮ ಕೂಡ ಇಂದು ಈ ಅವ್ಯವಸ್ಥೆಗೆ ಕಾರಣವಾಗಿದೆಯೆನ್ನಬಹುದು. ಸೆನ್ಸಾರ್ ಮಂಡಳಿಯಲ್ಲೇ ಇಂಥ ಲೋಪ ದೋಷಗಳಿರುವಾಗ ಚಿತ್ರರಂಗ ಇದನ್ನು ಬಳಸಿಕೊಳ್ಳದೆ ಬಿಡುವುದೆ ? ಹೀಗೆ ಎರಡೂ ಕಡೆ ಪ್ರಾಮಾಣಿಕತೆ ಕುಸಿಯತೊಡಗಿದಾಗ ಚಿತ್ರಗಳ ಗುಣಮಟ್ಟ ಹಾಳಾಗಲು ಇದು ಕಾರಣವಾಗದಿರುವುದಿಲ್ಲ. ಈಗಂತೂ ಸೆನ್ಸಾರ್ ಬೋರ್ಡ್‌ನ ನಿಯಮಾವಳಿಗಳು ಮೊದಲಿನಷ್ಟು ಕಠಿಣವಾಗಿಲ್ಲ. ಆದರೂ ಅನಗತ್ಯವಾದ ದೃಶ್ಯಗಳನ್ನಿಟ್ಟು ನಿಜ ಜೀವನದಲ್ಲಿ ನಡೆಯುವ ದೃಶ್ಯಗಳನ್ನೇ ಚಿತ್ರದಲ್ಲಿಟ್ಟಿದ್ದೇವೆಂದು ವಾದಿಸುತ್ತಾರೆ. ಇದು ಎಂದಿಗೂ ಮುಗಿಯದಿರುವ ಸಮಸ್ಯೆ. ಅದಲ್ಲದೆ ಚಲನಚಿತ್ರೋದ್ಯಮಕ್ಕೆ ನೇರವಾಗಿ ಸಂಬಂಧಿಸಿದ ಕೆಲವರನ್ನು ಕೇಂದ್ರ ಸೆನ್ಸಾರ್ ಮಂಡಳಿಯ ಸದಸ್ಯರನ್ನಾಗಿ ನಾಮಕರಣ ಮಾಡುವ ಪರಿಪಾಠವೂ ಬೆಳೆಯಿತು. ಈ ಸದಸ್ಯರಲ್ಲೊಬ್ಬರು ಪ್ರಾದೇಶಿಕ ಘಟಕಗಳಲ್ಲಿ ವೀಕ್ಷಣಾ ಸಮಿತಿ ಸರ್ಟಿಫಿಕೇಟ್ ಕೊಡಲು ನಿರಾಕರಿಸಿದಾಗ ಅದೇ ಚಿತ್ರವನ್ನು ನೋಡಲು ಪುನರ್ವಿಮರ್ಶನಾ ಸಮಿತಿ ರಚನೆಯಾದಾಗ ಅವರ ಅಧ್ಯಕ್ಷತೆ ವಹಿಸಬೇಕು. ಅದರಿಂದಾಗಿ ಉದ್ಯಮದ ಮೇಲಿನ ಮಮಕಾರ ಮತ್ತು ನಿರ್ಮಾಪಕರೊಂದಿಗೆ ತಮಗಿರುವ ಸ್ನೇಹಗಳಿಂದಾಗಿ ವೀಕ್ಷಣಾ ಸಮಿತಿಯ ನಿರ್ಧಾರಗಳನ್ನು ಸಡಿಲಗೊಳಿಸಿರುವ ನಿದರ್ಶನಗಳೂ ಸಾಕಷ್ಟಿವೆ.

ಸೆನ್ಸಾರ್‌ನ ಪರಿಶೀಲನಾ ಸಮಿತಿ ಚಿತ್ರವನ್ನು ವೀಕ್ಷಿಸಿ ಪ್ರದರ್ಶನಕ್ಕೆ ಅರ್ಹವಲ್ಲದ ದೃಶ್ಯಗಳನ್ನು ಕತ್ತರಿಸಿದ ನಂತರ ಆ ಚಿತ್ರ ಬಿಡುಗಡೆಯಾದ ಚಿತ್ರಮಂದಿರದ ಸೂಚನಾ ಫಲಕದಲ್ಲಿ ತೆಗೆಯಲಾದ ಭಾಗಗಳ ಮಾಹಿತಿ ಹಾಕಬೇಕೆಂಬ ಕಾನೂನಿದೆಯಾದರೂ ಇದು ಎಲ್ಲಿಯೂ ಜಾರಿಗೆ ಬರುತ್ತಿಲ್ಲ. ಆದ್ದರಿಂದ ಸೆನ್ಸಾರ್‌ನಲ್ಲಿ ತೆಗೆಯಲಾದ ಭಾಗಗಳನ್ನು ಮರುಜೋಡಣೆ ಮಾಡಿ ಸಾರ್ವಜನಿಕರ ಮುಂದೆ ಪ್ರದರ್ಶನ ಮಾಡುವ ಕ್ರಮ ಅವ್ಯಾಹತವಾಗಿ ನಡೆದೇ ಇದೆ. ಇಂಥ ಚಿತ್ರಗಳನ್ನು ವೀಕ್ಷಿಸಿದ ಜನ ''ಸೆನ್ಸಾರ್ ಸಮಿತಿ ಕಣ್ಮುಚ್ಚಿಕೊಂಡು ಸರ್ಟಿಫಿಕೇಟ್ ನೀಡಿತೆ ?'' ಎಂದು ದೂರುವಂತಾಗುತ್ತದೆ. ಇದಕ್ಕಿರುವ ಒಂದು ಉಪಾಯವೆಂದರೆ, ಹೀಗೆ ಕತ್ತರಿಸಲಾದ ದೃಶ್ಯಗಳ ಬಗ್ಗೆ ಪ್ರತಿವಾರ ಪತ್ರಿಕೆಗಳ ಸಿನಿಮಾ ಪುಟಗಳಲ್ಲಿ ಪ್ರಕಟಣೆ ಹಾಕಿದರೆ ಸಾರ್ವಜನಿಕರ ಗಮನಕ್ಕೆ ಬಂದು ಮತ್ತೆ ಚಿತ್ರದಲ್ಲಿ ಆ ದೃಶ್ಯ ಸೇರ್ಪಡೆಯಾದರೆ ಎಲ್ಲರಿಗೂ ತಿಳಿಯುವಂತಾಗುತ್ತದೆ. ಪತ್ರಿಕೆಯವರೂ ಮಾಹಿತಿ ಪ್ರಕಟಿಸಲು ಮುಂದೆ ಬಂದಿದ್ದಾರಾದರೂ ಸೆನ್ಸಾರ್ ಮಂಡಳಿಯೇ ಕಾರ್ಯಪ್ರವೃತ್ತವಾಗಲಿಲ್ಲ.

ಹೀಗೆ ಕತ್ತರಿಸಲಾದ ಭಾಗವನ್ನು ಮರುಜೋಡಣೆ ಮಾಡಿ ಪ್ರದರ್ಶನಕ್ಕಿಡುವ ಕ್ರಮ ವ್ಯಾಪಕವಾಗಿ ಹೆಚ್ಚಿದಾಗ ೧೯೮೭ರಲ್ಲಿ ಸೆನ್ಸಾರ್ ಪ್ರತಿಯ ಒಂದು ವಿಡಿಯೋ ಪ್ರತಿಯನ್ನು ಮಂಡಳಿಗೆ ನೀಡಬೇಕೆಂಬ ಪದ್ಧತಿಯನ್ನು ರೂಪಿಸಲಾಯಿತು. ಬದಲಾವಣೆ ಮಾಡಿದರೂ ಪರಿಶೀಲಿಸಲು ಇದು ಸಾಕ್ಷಿಯಾಗುತ್ತದೆ. ಇದಲ್ಲದೆ ಕತ್ತರಿಸಲ್ಪಟ್ಟ ಭಾಗದ ನೆಗೆಟಿವ್ ಅನ್ನು ಮಂಡಳಿಗೆ ಒಪ್ಪಿಸುವ ನಿಯಮವಿದೆ. ಆದರೂ ಲ್ಯಾಬ್‌ನೊಳಗಿನ ಒಪ್ಪಂದದಿಂದ ಡ್ಯೂಪ್ ನೆಗೆಟಿವ್ ಮಾಡಿಕೊಂಡು ಕಾನೂನನ್ನು ಉಲ್ಲಂಘಿಸುತ್ತಲೇ ಇದ್ದಾರೆ. ಇದನ್ನು ಪತ್ತೆ ಹಚ್ಚಬೇಕಾದರೆ ಸದಸ್ಯರು ಚಿತ್ರಮಂದಿರಕ್ಕೆ ಹೋಗಿಯೇ ಪರೀಕ್ಷಿಸಬೇಕು. ಇದಕ್ಕೂ ವ್ಯವಸ್ಥೆ ಮಾಡಿ ಸದಸ್ಯರಿಗೆ ಗುರುತಿನ ಚೀಟಿ ನೀಡಲಾಯಿತು. ಈ ಕಾರ್ಡ್ ತೋರಿಸಿದರೂ ಕೆಲವೊಮ್ಮೆ ಚಿತ್ರಮಂದಿರಗಳಲ್ಲಿ ಭರ್ತಿಯಾಗಿದೆಯೆಂದು ಹೇಳಿ ಸೀಟು ಕೊಡಲು ನಿರಾಕರಿಸುತ್ತಾರಲ್ಲದೆ ಸೆನ್ಸಾರ್ ಸದಸ್ಯರು ಪರಿಶೀಲನೆಗಾಗಿ ಬಂದಿದ್ದಾರೆಂದು ಗೊತ್ತಾಗುವುದರಿಂದ ಆ ಪ್ರದರ್ಶನದಲ್ಲಿ ಅಂಥ ದೃಶ್ಯಗಳ ಪ್ರದರ್ಶನ ಮಾಡುವುದೇ ಇಲ್ಲ.

ಕಹಿ ಅನುಭವ

ಇಲ್ಲಿ ಸೆನ್ಸಾರ್‌ನ ಪರಿಶೀಲನಾ ಸಮಿತಿಯ ಸದಸ್ಯರಾಗಿ ಹಲವಾರು ವರ್ಷಗಳ ಅನುಭವವಿರುವ ಹಿರಿಯ ಪತ್ರಕರ್ತ ವಿ.ಎನ್.ಸುಬ್ಬರಾಯರ ಅನುಭವಗಳನ್ನು ದಾಖಲಿಸುವುದು ಮುಖ್ಯವಾಗುತ್ತದೆ. ಅದರಲ್ಲಿ ಮುಖ್ಯವಾದದ್ದೆಂದರೆ ಕನ್ನಡದಲ್ಲಿ ಯಶಸ್ವಿ ಚಿತ್ರವೆನಿಸಿದ 'ಓಂ'ಗೆ ಸಂಬಂಧಿಸಿದ ಘಟನೆ.

ಉಪೇಂದ್ರ ನಿರ್ದೇಶಿಸಿರುವ, ಶಿವರಾಜಕುಮಾರ್ ನಾಯಕನಾಗಿ ನಟಿಸಿರುವ 'ಓಂ' ಚಿತ್ರ ಗಲ್ಲಾಪೆಟ್ಟಿಗೆಯನ್ನು ಕೊಳ್ಳೆಹೊಡೆದಿತ್ತು ಎಂದು ಮಾತ್ರ ಎಲ್ಲರಿಗೂ ಗೊತ್ತು. ಆದರೆ ಸೆನ್ಸಾರ್ ವೀಕ್ಷಣೆಯಲ್ಲಿ ಇದು ಸಿಕ್ಕಿಹಾಕಿಕೊಂಡಿದ್ದು ಬಹುತೇಕರಿಗೆ ತಿಳಿದಿಲ್ಲ. ಈ ಚಿತ್ರದಲ್ಲಿ ನಿಜಜೀವನದ ರೌಡಿಗಳನ್ನು ಬಳಸಿಕೊಂಡಿದ್ದೇ ಅಲ್ಲದೆ ಅವರ ನಿಜವಾದ ಇಮೇಜನ್ನೇ ಚಿತ್ರದಲ್ಲಿ ಇರಿಸಲಾಯಿತು. ಸಮಾಜ ಘಾತುಕ ಶಕ್ತಿಗಳನ್ನು ಚಿತ್ರದಲ್ಲಿ ವೈಭವೀಕರಿಸಿ ಅವರ ಮೂಲಕ ಯುವ ಜನಾಂಗವನ್ನು ದಿಕ್ಕು ತಪ್ಪಿಸುವಲ್ಲಿ ಇಂಥ ಪ್ರಕ್ರಿಯೆಗಳು ಕೆಲಸ ಮಾಡುತ್ತವೆಂದು ವೀಕ್ಷಣಾ ಸಮಿತಿ ಈ ಚಿತ್ರದಿಂದ ಸುಮಾರು ಮೂರೂವರೆ ಸಾವಿರ ಅಡಿಗಳಷ್ಟು ಭಾಗ ಕತ್ತರಿಸಿ ಉಳಿದ ಭಾಗವನ್ನು ಪ್ರದರ್ಶಿಸಲು ಅನುಮತಿ ನೀಡಿ ಚಿತ್ರಕ್ಕೆ 'A' ಸರ್ಟಿಫಿಕೇಟ್ ನೀಡಿತ್ತು. ಆ ಚಿತ್ರವನ್ನು ವೀಕ್ಷಿಸುವ ಅಂದಿನ ಸಮಿತಿಯಲ್ಲಿದ್ದ ವಿ.ಎನ್.ಸುಬ್ಬರಾಯರು ಅಂದು ಮನೆಗೆ ಹೋಗುತ್ತಲೇ ಫೋನ್‌ನಲ್ಲಿ ಅವಾಚ್ಯ ಶಬ್ದಗಳಿಂದ ನಿಂದನೆ ಆರಂಭವಾಯಿತು. 'ಓಂ' ಚಿತ್ರವನ್ನು ಮರುಪರಿಶೀಲನೆ ಮಾಡಿ, ಕತ್ತರಿಸಿದ ಭಾಗಗಳಿಗೆ ಮತ್ತೆ ಅನುಮತಿ ನೀಡಿ 'U' ಸರ್ಟಿಫಿಕೇಟ್ ನೀಡದೇ ಹೋದಲ್ಲಿ ಅಪಾಯವಿದೆಯೆಂದು ಜೀವ ಬೆದರಿಕೆ ಒಡ್ಡಲಾಯಿತು. ಇದರೊಂದಿಗೆ ಹಣದ ಆಮಿಷವನ್ನೂ ತೋರಿಸಲಾಯಿತು.

ಸೆನ್ಸಾರ್ ಮಂಡಳಿಯ ಅಧಿಕಾರಿಗಳಿಗೆ ಮತ್ತು ಸದಸ್ಯರಿಗೆ ಬೆದರಿಕೆ, ಒತ್ತಡ, ಪ್ರಭಾವ, ಆಮಿಷಗಳೆಲ್ಲ ಬರುವುದು ಸಹಜವೇ ಆದರೂ 'ಓಂ' ಚಿತ್ರದ ಘಟನೆ ವಿಪರೀತವಾದುದರಿಂದ ಸುಬ್ಬರಾವ್ ಅವರು ಆ ರಾತ್ರಿಯೇ ಪೊಲೀಸ್ ರಕ್ಷಣೆ ಪಡೆಯಬೇಕಾಯಿತು. ಸೆನ್ಸಾರ್ ಆಫೀಸರ್ ಆಗಿದ್ದ ಪದ್ಮನಾಭನ್ ಅವರೂ ಇದೇ ಪರಿಸ್ಥಿತಿ ಎದುರಿಸುವಂತಾಯಿತು. ನಂತರ 'ಓಂ' ಚಿತ್ರ ರಿವೈಸಿಂಗ್ ಕಮಿಟಿಯ ಮುಂದೆ ಹೋಗಿ 'U' ಸರ್ಟಿಫಿಕೇಟ್ ಪಡೆಯಿತಲ್ಲದೆ, ಮೊದಲು ಕತ್ತರಿಸಲಾಗಿದ್ದ ಅನೇಕ ಭಾಗಗಳನ್ನು ಜೋಡಿಸಲು ಅನುಮತಿಯನ್ನೂ ದೊರಕಿಸಿಕೊಂಡು ಬಿಡುಗಡೆಯಾಯಿತು.

ಇದು ಚಿತ್ರರಂಗದ ಅಶುದ್ಧ ವಾತಾವರಣವನ್ನು ಸಾರುತ್ತದಲ್ಲದೆ ಎಕ್ಸಾಮಿನಿಂಗ್ ಕಮಿಟಿ ಹಾಗೂ ರಿವೈಸಿಂಗ್ ಕಮಿಟಿಯ ನಡುವೆ ಒಮ್ಮೊಮ್ಮೆ ಕಾಣುವ ಅಜಗಜಾಂತರ ವ್ಯತ್ಯಾಸವನ್ನು ತಿಳಿಸುತ್ತದೆ. ಇಲ್ಲಿಯೂ ಆಗದೆ ಹೋದರೆ ಮುಂದೆ ಟ್ರಿಬ್ಯೂನಲ್‌ಗೂ ಹೋಗಬಹುದು, ಸುಪ್ರೀಂ ಕೋರ್ಟ್‌ಗೂ ಹೋಗಬಹುದು. ಆದರೆ ಚಿತ್ರವನ್ನು ಅಳೆಯಲು ಎಲ್ಲಾ ಕಡೆ ಕೇಂದ್ರ ಸೆನ್ಸಾರ್ ಮಂಡಳಿ ರೂಪಿಸಿದ ನಿಯಮಾವಳಿಗಳೇ ಮಾನದಂಡವಾಗಿದ್ದರೂ ತೀರ್ಪು ಒಂದೊಂದೆಡೆ ಒಂದೊಂದು ರೀತಿಯಾಗಿ ಬರುವುದು ಮಾತ್ರ ವಿಪರ್ಯಾಸ.

ಇದಾದ ನಂತರ 'ಪೊಲೀಸ್ ಸ್ಟೋರಿ' ಎಂಬ ಅತಿ ಕೆಟ್ಟ ಸಂಭಾಷಣೆ ಇರುವ ಚಿತ್ರವೊಂದು ಬಂದಿತು. ಇದನ್ನು ವೀಕ್ಷಣಾ ಸಮಿತಿ ಕತ್ತರಿಸಿದ ಮೇಲೆ ಚಿತ್ರ ತಂಡ ಕೋರ್ಟ್‌ನವರೆಗೂ ಹೋಗಿ ಅನುಮತಿ ಪಡೆದು ಬಂದಿತು. 'ಪೊಲೀಸ್ ಸ್ಟೋರಿ' ಚಿತ್ರ ತಂಡದಿಂದ ಇಂಥದ್ದೇ ಶೈಲಿಯ ಚಿತ್ರಗಳು ಬರುವುದು ಮಾಮೂಲಿಯಾಯಿತು. ಇದಲ್ಲದೆ 'ಕೋಣ ಈದೈತೆ' ಎನ್ನುವ ಚಿತ್ರವೊಂದು ಸಂಪೂರ್ಣವಾಗಿ ತಿರಸ್ಕೃತವಾಗಿ ಸರ್ಟಿಫಿಕೇಟ್ ಕೊಡುವುದನ್ನೂ ನಿರಾಕರಿಸಲಾಯಿತು. ಇದು ಕಾನೂನನ್ನು ಅವಹೇಳನ ಮಾಡುವ ಅಸಂಬದ್ಧ ಚಿತ್ರವಾಗಿತ್ತು. ನಂತರ ಅದರಲ್ಲಿ ಐದಾರು ಸಾವಿರ ಅಡಿಗಳಷ್ಟು ತೆಗೆದು ಮರುಚಿತ್ರೀಕರಣ ಮಾಡಿ ಅದಕ್ಕೊಂದು ಬೇರೆಯೇ ರೂಪ ನೀಡಿ ಸೆನ್ಸಾರ್ ಅನುಮತಿ ಪಡೆಯಲಾಯಿತು. ಸಾಧುಕೋಕಿಲಾ ಅಭಿನಯಿಸಿದ ಕೆಲವು ಚಿತ್ರಗಳು ಚಿತ್ರರಂಗದ ದಿಕ್ಕನ್ನೇ ಬದಲಿಸುವಂತಿದ್ದವು. ಅದರಲ್ಲೊಂದು 'ಬಾಂಬೆ ಹಲ್ವಾ'. ಈ ಚಿತ್ರದ ಹೆಸರಿಗೆ ಆಕ್ಷೇಪಣೆ ಮಾಡಿದಾಗ 'ಬೊಂಬಾಟ್ ಹಲ್ವಾ' ಎಂದು ಮಾಡಲಾಯಿತು. ಹೀಗಾಗಿ ಈಗೀಗ ರಿವೈಸಿಂಗ್ ಕಮಿಟಿಯ ಮುಂದೆ ಚಿತ್ರಗಳು ಹೆಚ್ಚಾಗಿ ಹೋಗತೊಡಗಿವೆ.

ಇವು ಮುಖ್ಯ ವಾಹಿನಿಯಲ್ಲಿ ಸಾಗುವ ಚಿತ್ರಗಳ ಕಥೆಯಾದರೆ ಗುಪ್ತವಾಗಿ ಚಿತ್ರೀಕರಣ ನಡೆದು, ಗುಪ್ತವಾಗಿಯೇ ಬಿಡುಗಡೆಯಾಗುವ ಸೆಕ್ಸ್ ಚಿತ್ರಗಳ ಹಾವಳಿ ವಿಪರೀತವಾಗಿದೆ. ಸೆನ್ಸಾರ್ ವೀಕ್ಷಣೆಗೆ ಬರುವಾಗ ಈ ಚಿತ್ರಗಳಲ್ಲಿ ಕತ್ತರಿಸುವಂಥ ದೃಶ್ಯಗಳೇ ಇರುವುದಿಲ್ಲ. ಚಿತ್ರದಲ್ಲಿ ದೃಶ್ಯದಿಂದ ದೃಶ್ಯಕ್ಕೆ ಸಂಬಂಧವೇ ಇಲ್ಲದಿದ್ದರೂ ಪದೇ ಪದೇ ಮರುಕಳಿಸುವ ದೃಶ್ಯಗಳಿದ್ದರೂ ಅದಕ್ಕೆ ಅನುಮತಿ ನೀಡಬೇಕಾಗುತ್ತದೆ. ಸೆನ್ಸಾರ್ ಆದ ನಂತರ ಇಂಥ ಚಿತ್ರಗಳಿಗೆ ಆರೇಳು ಸಾವಿರ ಅಡಿಗಳಷ್ಟು ಮುಚ್ಚಿಟ್ಟ ಭಾಗಗಳನ್ನು ಸೇರಿಸಿ ಬಿಡುಗಡೆ ಮಾಡುತ್ತಾರೆ. ಇವೇ ಚಿತ್ರಗಳು ಬೇರೆ ಭಾಷೆಗೂ ಡಬ್ ಆಗುತ್ತವೆ. ಆಗಲೂ ಇದೇ ತಂತ್ರ ಬಳಸಲಾಗುತ್ತದೆ. ಇದಕ್ಕೆ ಇಡೀ ಉದ್ಯಮವೇ ಬದಲಾಗುವುದರ ಹೊರತು ತಡೆಯಲು ಬೇರೆ ದಾರಿ ಕಾಣುತ್ತಿಲ್ಲ. ಎಲ್ಲರೂ ಒಮ್ಮತಕ್ಕೆ ಬಂದು ಪ್ರಾಮಾಣಿಕತೆಗೆ ಬದ್ಧರಾಗಿದ್ದರೆ ಇಂಥ ಪ್ರಕ್ರಿಯೆಗಳು ಕಡಿಮೆಯಾಗಬಹುದು. ಅಲ್ಲದೆ ಸೆನ್ಸಾರ್ ಸಮಿತಿಗಳಲ್ಲಿ ಪ್ರತಿಷ್ಠಿತ ವ್ಯಕ್ತಿಗಳಿದ್ದಾಗ ಇಂಥ ಪ್ರಶ್ನೆಗಳು ಬರುವುದಿಲ್ಲ. ಎಲ್ಲಕ್ಕೂ ಮುಖ್ಯವಾಗಿ ಚಿತ್ರ ನಿರ್ಮಾಪಕ, ನಿರ್ದೇಶಕರಿಗೆ ಸಾಮಾಜಿಕ ಹಾಗೂ ನೈತಿಕ ಜವಾಬ್ದಾರಿ ಹೆಚ್ಚಾಗಬೇಕು.

(ಚಿತ್ರ ೨) 'ಮುಕ್ತಿ' (ಕಲ್ಪನಾ) - ವಿಷರಕ್ತದ ವೇಶ್ಯೆ : ವೇಶ್ಯೆಯ ಮಗಳು (ಪಾತ್ರ) - ಮುಕ್ತ ಪ್ರದರ್ಶನಕ್ಕೆ ತಡೆ

ಅವ್ಯವಸ್ಥೆಯ ಆಗರ

ಸೆನ್ಸಾರ್ ಎನ್ನುವುದು ಇಷ್ಟೊಂದು ಅವ್ಯವಸ್ಥೆಗಳ ಆಗರವಾಗಿದೆಯೆಂದರೆ ಅದಕ್ಕೆ ನಾನಾ ಕಾರಣಗಳಿವೆ. ನಿಯಮಾವಳಿಗಳು ಒಂದೇ ಆಗಿದ್ದರೂ ಇಲ್ಲಿ ಒಂದೊಂದು ಭಾಷೆಯ, ಒಂದೊಂದು ಪ್ರದೇಶದ ಸಂಪ್ರದಾಯ, ಸಂಸ್ಕೃತಿ, ವೇಷ-ಭೂಷಣ ಬೇರೆ ಬೇರೆಯಾಗಿರುವುದರಿಂದ ಹಲವಾರು ಗೊಂದಲಗಳು ಉಂಟಾಗುತ್ತವೆ. ಇದಲ್ಲದೆ ನಿಯಮಾವಳಿಗಳನ್ನು ಸರಿಯಾಗಿ ಅನುಸರಿಸದಿರುವುದು, ಅದರ ಜಾರಿಯಾಗದಿರುವುದು ಓನ್ನಡೆಗೆ ಮತ್ತೊಂದು ಕಾರಣ. ಸೆನ್ಸಾರ್ ವೀಕ್ಷಣಾ ಮಂಡಳಿ ಚಿತ್ರ ವೀಕ್ಷಣೆ ಮಾಡಿ ಸರ್ಟಿಫಿಕೇಟ್ ಕೊಟ್ಟ ನಂತರ ತನ್ನ ಕರ್ತವ್ಯ ಮುಗಿಯಿತೆಂದು ಸುಮ್ಮನಾಗುತ್ತದೆ. ನಂತರವೂ ಕಾನೂನು ಉಲ್ಲಂಘನೆಯಾಗದಂತೆ, ಉಲ್ಲಂಘನೆಯಾದರೆ ಸೂಕ್ತ ರೀತಿಯಲ್ಲಿ ಕ್ರಮ ಕೈಗೊಳ್ಳುವಂತೆ ಮಾಡಲು ಬೇಕಾದ ವ್ಯವಸ್ಥೆಯೇ ಇಲ್ಲ. ಅಗತ್ಯ ಸಿಬ್ಬಂದಿಯ ಕೊರತೆ ಮತ್ತು ಕ್ರಮ ಕೈಗೊಳ್ಳಲು ಇರುವ ಅಧಿಕಾರವೂ ಮೊಟಕಾಗಿದೆ. ಇದರಿಂದಾಗಿ ಸೆನ್ಸಾರ್ ಬೋರ್ಡ್ ನಿಸ್ಸಹಾಯಕವಾಗುತ್ತಿದೆ, ನಿಯಮಗಳ ಉಲ್ಲಂಘನೆ ಅವ್ಯಾಹತವಾಗಿ ನಡೆಯುತ್ತಿದೆ. ಇದರೊಂದಿಗೆ ಚಿತ್ರ ನಿರ್ಮಾಪಕರ, ನಿರ್ದೇಶಕರ ಅಜ್ಞಾನವೂ ಸೇರಿಕೊಂಡು ಚಿತ್ರಗಳಲ್ಲಿ ನಿಯಮಾಳಿಗಳ ಉಲ್ಲಂಘನೆಯಾಗುತ್ತಿದೆ. ಇಂಗ್ಲಿಷ್ ಚಿತ್ರಗಳಾದರೆ ಕಥಾವಸ್ತುವಿಗೆ ಸಂಬಂಧಪಟ್ಟಂತೆ ಒಂದೊಂದು ವಿಭಾಗಕ್ಕೆ ಆಯಾಯ ವಿಭಾಗದಲ್ಲಿ ಪರಿಣತರ ಸಲಹೆ ಪಡೆಯಲಾಗುತ್ತದೆ. ಆದರೆ ನಮ್ಮ ಚಿತ್ರಗಳಲ್ಲಿ ಈ ವ್ಯವಸ್ಥೆಯಿಲ್ಲದೆ ಸಣ್ಣಪುಟ್ಟ ಲೋಪದೋಷಗಳು ಇದ್ದೇ ಇರುತ್ತವೆ.

ಚಿತ್ರಗಳು, ಚಿತ್ರಮಂದಿರಗಳು ಬರೀ ಮನೋರಂಜನೆ ನೀಡುವುದಕ್ಕೆ ಸೀಮಿತವಾಗಿರಬಾರದು. ಜನರಲ್ಲಿ ಜಾಗೃತಿ ಮೂಡಿಸುವಲ್ಲಿಯೂ ಕಾರ್ಯನಿರತವಾಗಬೇಕೆಂಬ ಕಳಕಳಿ ಇಂದು ನಿನ್ನೆಯದಲ್ಲ. ಇದಕ್ಕೊಂದು ಉದಾಹರಣೆ ಎಂದರೆ ೧೯೨೫ರಲ್ಲಿ ಈ ಬಗ್ಗೆ ಸಭೆಯೊಂದು ಸೇರಿದ್ದರ ಬಗ್ಗೆ ಆಗಸ್ಟ್ ತಿಂಗಳ ೨೩ರ ದೇಶೀಯ ವಿದ್ಯಾಶಾಲಾ ಪತ್ರಿಕೆಯಲ್ಲಿ ವರದಿಯೊಂದು ಬಂದಿತ್ತು. ಆ ಲೇಖನದಲ್ಲಿ ಚಲನಚಿತ್ರ ಪ್ರದರ್ಶನಗಳ ಪರೀಕ್ಷೆಗಾಗಿ ಸಭೆ ಏರ್ಪಾಟಾಗಿದ್ದು ಜನರ ನೈತಿಕ ಸ್ಥಿತಿಯನ್ನು ಕೆಡಿಸದಂತೆ ನೋಡಿಕೊಳ್ಳುವುದು ಈ ಸಭೆಯ ಕರ್ತವ್ಯವಾಗಿದೆ. ಪಾಶ್ಚಾತ್ಯ ದೇಶಗಳಲ್ಲಿ ಚಲನಚಿತ್ರಗಳು ಶಿಕ್ಷಣದಲ್ಲಿಯೂ ಪ್ರಬಲವಾದ ಅಂಗವೆಂದೇ ಪರಿಗಣಿಸಲ್ಪಟ್ಟಿವೆ. ಅನೇಕ ವಿಷಯಗಳಲ್ಲಿ ಅಧ್ಯಾಪಕರಿಗಿಂತಲೂ ಉತ್ತಮವಾಗಿ ವಿದ್ಯಾರ್ಥಿಗಳಿಗೆ ವಿಷದಗೊಳಿಸಲು ಈ ಮಾಧ್ಯಮದಿಂದ ಸಾಧ್ಯವೆಂದು ಜರ್ಮನಿ, ಅಮೆರಿಕಾ ದೇಶಗಳಲ್ಲಿ ವಿದ್ಯಾ ಇಲಾಖೆಯವರೇ ಚಿತ್ರಗಳನ್ನು ತೋರಿಸುವ ಏರ್ಪಾಡು ಮಾಡುತ್ತಾರೆ. ಅಲ್ಲಿನ ಪೌರ ಸಭೆಗಳು ಕೂಡಾ ಶಿಕ್ಷಣವು ಸುಲಭವಾಗಿ ದೊರೆಯಲೆಂದು ಚಿತ್ರಮಂದಿರಗಳಿಗೆ ಸಾಕಷ್ಟು ಪ್ರೋತ್ಸಾಹ ನೀಡುತ್ತವೆ'' ಎಂದು ವರದಿಯಾಗಿತ್ತು.

ಚಿತ್ರಮಂದಿರಗಳಿಂದ ಸದುಪಯೋಗ, ದುರುಪಯೋಗ ಎರಡೂ ಇವೆಯಾದರೂ ಈಗ ದುರುಪಯೋಗವೇ ಹೆಚ್ಚಾಗಿದೆ. ಇದು ದ್ರವ್ಯ ನಷ್ಟವನ್ನು ಮಾತ್ರ ಉಂಟುಮಾಡುವುದಲ್ಲದೆ ವೀಕ್ಷಕರ ಮನಸ್ಸಿನ ಮೇಲೆ ಕೆಟ್ಟ ಪರಿಣಾಮಗಳನ್ನೂ ಬೀರುತ್ತದೆ. ಇದನ್ನು ಕೇವಲ ಪರೀಕ್ಷಕ ಸಭೆಯಿಂದ ಮಾತ್ರ ನಿವಾರಿಸಲು ಅಸಾಧ್ಯ. ಇದಕ್ಕೆ ಜನತೆಯ ಸಹಕಾರವೂ ಬೇಕು. ಅಮೆರಿಕಾದಲ್ಲಿಯೂ ಇಂಥ ಸಭೆ ನಡೆಯಿತಾದರೂ ಪರಿಣಾಮಕಾರಿಯಾಗಿ ಉಳಿಯಲಿಲ್ಲ. ಪೌರಸಭೆಯ ಅಧ್ಯಕ್ಷರು, ವಿದ್ಯಾ ಖಾತೆಯಿಂದ ಇಬ್ಬರು ಅಧ್ಯಕ್ಷರು, ಪೊಲೀಸ್ ಇಲಾಖೆಯಿಂದ ಒಬ್ಬರು ಇರುವ ಈ ಸಭೆಯಲ್ಲಿ ನೈತಿಕತೆ, ದೇಶದ ಗೌರವ ಮುಂತಾದ ಅಂಶಗಳನ್ನು ದೃಷ್ಟಿಯಲ್ಲಿರಿಸಿಕೊಳ್ಳಬೇಕಾಗಿದೆ. ಚಿತ್ರಗಳು ಪ್ರಚಾರ ಸಾಮಗ್ರಿಯಾಗುವುದು ಈಗ ಸಾಮಾನ್ಯ. ಆದರೆ ಪ್ರಚಾರವಾಗುವುದು ಎಂಥ ಭಾವನೆಗಳು ? ಪೌರ್ವಾತ್ಯರೆಲ್ಲ ನೀತಿಹೀನರೆಂದೂ, ಶ್ವೇತವರ್ಣದವರೆಲ್ಲ ಹೇಗಿದ್ದರೂ ಗೌರವಾರ್ಹರೆಂದೂ ಪ್ರಧಾನ ಭಾವನೆಯಿದ್ದಲ್ಲಿ ಅಂತಹ ಚಿತ್ರ ನಮ್ಮ ದೇಶಕ್ಕೆ ಗೌರವವಲ್ಲ. ಇಂಥದ್ದಕ್ಕೆ ನಮ್ಮ ದೇಶದಲ್ಲಿ ಎಡೆಕೊಡದಿರುವುದೇ ಸಭೆಯ ಧ್ಯೇಯವಾಗಿರಬೇಕೆಂದು ಸಾರುವ ಲೇಖನ ದೇಶೀಯ ವಿದ್ಯಾಶಾಲಾ ಪತ್ರಿಕೆಯಲ್ಲಿ ೧೯೨೫ರಲ್ಲಿ ಬಂದಿತ್ತೆಂದರೆ ಈ ವಿಭಾಗದಲ್ಲಿ ಉಂಟಾಗಿರುವ ಸಂಚಲನ ಇಂದು ನಿನ್ನೆಯದಲ್ಲ ಎಂದು ಧಾರಾಳವಾಗಿ ಹೇಳಬಹುದು.

ಉದ್ಯಮ, ಸರ್ಕಾರ, ಸೆನ್ಸಾರ್ ಮಂಡಳಿ, ಜನರು ಎಲ್ಲರೂ ಜಾಗೃತರಾಗಬೇಕೆಂಬ ಕೂಗು ಕೇಳಿ ಬರುತ್ತಲೇ ಇದ್ದರೂ ಸಿನಿಮಾಗಳಲ್ಲಿ ಬದಲಾವಣೆಯಾಗುವುದಿರಲಿ, ನಿಷೇಧ ಹೇರಬೇಕಾದ ವಿಚಾರಗಳು ಜಾಸ್ತಿಯಾಗುತ್ತಲೇ ಹೋದವು. ೧೯೭೭ರಲ್ಲಿ ನಡೆದ ಸಮೀಕ್ಷೆಯೊಂದರ ಪ್ರಕಾರ ಕನ್ನಡದಲ್ಲಿ ವಯಸ್ಕರಿಗೆ ಮಾತ್ರ ಎಂದು ಸೆನ್ಸಾರ್ ಸರ್ಟಿಫಿಕೇಟ್ ಪಡೆದ ಚಿತ್ರಗಳ ಸಂಖ್ಯೆಯಲ್ಲಿ ಬದಲಾವಣೆಯಾಗಿಲ್ಲ ಎನ್ನುವ ಅಂಶ ಸ್ಪಷ್ಟವಾಗುತ್ತದೆ. ೧೯೭೦ರಲ್ಲಿ 'ಗೆಜ್ಜೆ ಪೂಜೆ' ಹಾಗೂ 'ಸಂಸ್ಕಾರ' ಚಿತ್ರಗಳಿಗೆ ವಯಸ್ಕರಿಗೆ ಮಾತ್ರ ಎನ್ನುವ ಸರ್ಟಿಫಿಕೇಟ್ ನೀಡಲಾಗಿತ್ತು. ನಂತರ 'ಮುಕ್ತಿ' ಮತ್ತು 'ಅಮರ ಭಾರತಿ' ಎನ್ನುವ ಚಿತ್ರಗಳಿಗೂ ಅದನ್ನೇ ನೀಡಲಾಯಿತು. ಸೆನ್ಸಾರ್ ಕತ್ತರಿಯಿಂದ ಪಾರಾಗಿ ಬಿಡುಗಡೆಯಾದ ಚಿತ್ರಗಳ ಸಂಖ್ಯೆಯಲ್ಲಿ ಆ ಎರಡು ವರ್ಷಗಳಲ್ಲಿ ಅಂಥ ವ್ಯತ್ಯಾಸವಿರಲಿಲ್ಲ. ೧೯೭೦ರಲ್ಲಿ ಬಿಡುಗಡೆಯಾದ ಒಟ್ಟು ೨೨೪ ಚಿತ್ರಗಳಲ್ಲಿ ೧೫೪ ಚಿತ್ರಗಳು ಸೆನ್ಸಾರ್ ಕತ್ತರಿಗೆ ಸಿಕ್ಕಿಹಾಕಿಕೊಂಡಿದ್ದವು. ೧೯೭೧ರಲ್ಲಿ ಒಟ್ಟು ೨೫೮ ಚಿತ್ರಗಳಲ್ಲಿ ೧೫೫ ಚಿತ್ರಗಳು ಸೆನ್ಸಾರ್ ಸುಳಿಗೆ ಸಿಲುಕಿದ್ದವೆಂದರೆ ದೇಶಾದ್ಯಂತ ಒಟ್ಟಾರೆ ಚಿತ್ರಗಳ ಹಾಗೂ ಸೆನ್ಸಾರ್ ಮಂಡಳಿಯ ಕಾರ್ಯವೈಖರಿಯ ಅರಿವಾಗುತ್ತದೆ. ಮದರಾಸಿನ ಸೆನ್ಸಾರ್ ಸಮಿತಿ ಹಾಗೂ ಕೇಂದ್ರ ಸೆನ್ಸಾರ್ ಮಂಡಳಿಗಳೆರಡೂ ಕನ್ನಡದ ಹೆಮ್ಮೆಯ ಚಿತ್ರ 'ಸಂಸ್ಕಾರ'ದ ಪ್ರದರ್ಶನಕ್ಕೆ ಅನುಮತಿ ನೀಡದೆ ಇದರ ಚರ್ಚೆ ಒಂದು ವರ್ಷದ ಕಾಲ ಮುಂದುವರಿದಾಗ ವಾರ್ತಾ ಮಂತ್ರಿಯಾಗಿದ್ದ ಇಂದ್ರಕುಮಾರ್ ಗುಜ್ರಾಲ್ ಮಧ್ಯಪ್ರವೇಶ ಮಾಡಿ ಈ ಚಿತ್ರದ ಪ್ರದರ್ಶನಕ್ಕೆ ಅನುಮತಿ ಮಾಡಿಕೊಟ್ಟರು. ನಂತರ 'ಸಂಸ್ಕಾರ' ಚಿತ್ರರಂಗದಲ್ಲಿ ಒಂದು ಮೈಲಿಗಲ್ಲಾಗಿ ನಿಂತಿದ್ದು ಈಗ ಇತಿಹಾಸ.

ಖೋಸ್ಲಾ ಕಮಿಟಿ ನೀಡಿದ ವರದಿಯಲ್ಲಿ ಚಿತ್ರಗಳಲ್ಲಿ ಚುಂಬನದ ದೃಶ್ಯ ಇರಬಹುದೆಂದು ಹೇಳಿದ್ದನ್ನು ಜನತೆ ಆಗಲೇ ವಿರೋಧಿಸಿತ್ತು. ಈ ಕುರಿತು ೧೯೭೧ರಲ್ಲಿ ಕೇಂದ್ರ ವಾರ್ತಾ ಮತ್ತು ಪ್ರಸಾರ ಖಾತೆಯ ಮಂತ್ರಿಗಳಾಗಿದ್ದ ಧರ್ಮವೀರ ಸಿನ್ಹಾ ಲೋಕಸಭೆಯಲ್ಲಿ ''ಚಲನಚಿತ್ರಗಳಲ್ಲಿ ಚುಂಬನ ದೃಶ್ಯಗಳ ಬಗ್ಗೆ ಏನು ಮಾಡಬೇಕೆಂಬುದರ ಕುರಿತು ಕೇಂದ್ರ ಸರ್ಕಾರ ಸೆನ್ಸಾರ್ ಮಂಡಳಿಗೆ ನಿರ್ದಿಷ್ಟ ಆದೇಶವನ್ನೇನೂ ನೀಡಿಲ್ಲ'' ಎಂದು ಪ್ರಶ್ನೋತ್ತರ ಕಾಲದಲ್ಲಿ ತಿಳಿಸಿದ್ದರು. ಅದುವರೆಗೂ ಸೆನ್ಸಾರ್‌ಷಿಪ್ ಬಗ್ಗೆ ಖೋಸ್ಲಾ ಸಮಿತಿ ಕೊಟ್ಟಿರುವ ಬೃಹತ್ ವರದಿಯ

ಬಗ್ಗೆ ಕೇಂದ್ರ ಸರ್ಕಾರ ಅಂತಿಮ ನಿರ್ಧಾರ ಕೈಗೊಳ್ಳುವ ಕೆಲಸವನ್ನು ಬಾಕಿ ಉಳಿಸಿಕೊಂಡಿತ್ತು. ೧೯೭೦ರಲ್ಲಿ ಮದ್ರಾಸಿನಲ್ಲಿ ಸಭೆ ಸೇರಿದ ಮಂಡಳಿ ತೆರೆಯ ಮೇಲೆ ಚುಂಬನದ ದೃಶ್ಯ ತೋರಿಸುವುದು ಭಾರತೀಯ ಸಂಸ್ಕೃತಿಗೆ ವಿರುದ್ಧವಾದುದು ಎಂದು ತೀರ್ಮಾನಿಸಿತು. ಇದರೊಂದಿಗೆ ಇತ್ತೀಚೆಗೆ ಚಿತ್ರಗಳಲ್ಲಿ ಅಪರಾಧ, ಲೈಂಗಿಕತೆ ಹೆಚ್ಚಾಗಿದೆ. ಭಾವೈಕ್ಯತೆ, ಜಾಗೃತಿ ಉಂಟು ಮಾಡುವಂಥ ಚಿತ್ರಗಳು ಬರಬೇಕೆಂದು ಅಭಿಪ್ರಾಯಪಟ್ಟಿತು. ಸೆನ್ಸಾರ್ ಮಂಡಳಿ ಆಕ್ಷೇಪಾರ್ಹ ದೃಶ್ಯಗಳಿಗೆ ಕತ್ತರಿ ಹಾಕುವುದಲ್ಲದೆ ರಾಷ್ಟ್ರ ಪ್ರಗತಿಗೆ ಪೂರಕವಾದ, ಕಲಾತ್ಮಕವಾದ ಚಿತ್ರಗಳ ತಯಾರಿಕೆಗೆ ಪ್ರೋತ್ಸಾಹ ನೀಡುತ್ತದೆ ಎಂದು ಈ ಸಂದರ್ಭದಲ್ಲಿ ಸೇರಿದ ಸಭೆಯಲ್ಲಿ ಹೇಳಲಾಗಿತ್ತು.

ಕೇಂದ್ರ ಮಂತ್ರಿಯಾಗಿದ್ದ ಸತ್ಯನಾರಾಯಣ ಸಿನ್ಹಾ ಖೋಸ್ಲಾ ಸಮಿತಿಯ ವರದಿಯ ಬಗ್ಗೆ ಬಹು ಮಾತಾಡುತ್ತ "ಭಾರತೀಯ ಚಿತ್ರಗಳಲ್ಲಿ ನಗ್ನತೆ ವಿಪರೀತವಾಗಿ ಹೆಚ್ಚುತ್ತಿದೆ. ಎಲ್ಲಾ ಪ್ರಾದೇಶಿಕ ಸೆನ್ಸಾರ್ ಅಧಿಕಾರಿಗಳೂ ನಿರ್ದಾಕ್ಷಿಣ್ಯವಾಗಿ ಅಂಥ ದೃಶ್ಯಗಳನ್ನು ಕತ್ತರಿಸಿ ಹಾಕುವ ನಿರ್ಧಾರ ತೆಗೆದುಕೊಳ್ಳಬೇಕು. ಪ್ರೇಕ್ಷಕರ ಕಾಮನೆ ಮತ್ತು ಮನಃಪ್ರಚೋದನೆ ದುರುಪಯೋಗ ಪಡಿಸಿಕೊಳ್ಳುವ ನಿರ್ಮಾಪಕರ ಉದ್ದೇಶವನ್ನು ತಡೆಹಿಡಿಯಬೇಕು. ಇನ್ನು ಮುಂದೆ ಅಂಥ ಚಿತ್ರಗಳಿಗೆ ಸೆನ್ಸಾರ್ ಸರ್ಟಿಫಿಕೇಟ್ ನೀಡಬಾರದು" ಎಂದು ತಿಳಿಸಿದ್ದರು.

ಸಮಾನ ನೀತಿ ಅಗತ್ಯ

ಬಿ.ಎಸ್.ರಂಗಾ ಚಿತ್ರರಂಗವನ್ನು ಉದ್ಯಮವೆಂದು ಪರಿಗಣಿಸಬೇಕೆಂದು ಹೇಳುತ್ತ, ಸೆನ್ಸಾರ್‌ನ ರೀತಿ-ನೀತಿಯ ಬಗೆಗೆ ತಮ್ಮ ಅಭಿಪ್ರಾಯಗಳನ್ನು ಹೀಗೆ ಹೇಳಿದ್ದರು : "ಪಾಶ್ಚಾತ್ಯ ಚಿತ್ರಗಳಲ್ಲಿರುವ ಹಸಿ ಹಸಿ ದೃಶ್ಯಗಳನ್ನು ಪ್ರೇಕ್ಷಕ ನೋಡಲು ಹಾತೊರೆವಷ್ಟು, ಪರ ಪ್ರಾದೇಶಿಕ ಚಿತ್ರಗಳಲ್ಲಿ ಅಂಥ ದೃಶ್ಯಗಳಿದ್ದರ ಅದನ್ನು ಆತ ನೋಡಲಾರ. ಆದರೂ ಎಲ್ಲಾ ಭಾಷೆಯ ಚಿತ್ರಗಳಿಗೂ ಸಮಾನ ನೀತಿ ಇರಬೇಕು. ಆಂಗ್ಲ ಚಿತ್ರಗಳಲ್ಲಿನ ನಗ್ನತೆ ಹಿಂದಿ ಮತ್ತಿತರ ಭಾಷೆಗೆ ಬರುವುದು ಸಹ್ಯವಾದರೆ ಕನ್ನಡಕ್ಕೆ ಯಾಕೆ ಬರಬಾರದು ? ಸೆನ್ಸಾರ್ ಕನ್ನಡ ಚಿತ್ರಗಳಿಗೆ ಮಾತ್ರ ಯಾಕೆ ಕೊಡಲಿ ಯಾಗಬೇಕು ? ಚುಂಬನ ನಮ್ಮ ಸಂಸ್ಕೃತಿ ಅಲ್ಲ, ನಿಜ. ಅದನ್ನು ಕತ್ತರಿಸಲಿ. ಹಾಗೆಯೇ ಇಲ್ಲಿ ಪ್ರದರ್ಶನಗೊಳ್ಳುವ ಆಂಗ್ಲ ಚಿತ್ರಗಳಿಂದಲೂ ಅಂಥ ದೃಶ್ಯಗಳನ್ನು ಮಂಡಳಿ ಕತ್ತರಿಸಬೇಕು."

ಮದ್ರಾಸಿನಲ್ಲಿ ಸೆನ್ಸಾರ್ ಆಗುತ್ತಿದ್ದ ಸಮಯದಲ್ಲಿ ಅಲ್ಲಿ ಕನ್ನಡ ಚಿತ್ರಗಳಿಗೆ ಮಲತಾಯಿ ಧೋರಣೆ ತೋರುತ್ತಿದ್ದರೆಂದು ಹಲವರು ಅಭಿಪ್ರಾಯಪಟ್ಟಿದ್ದರು. 'ಕಳ್ಳರ ಕಳ್ಳ' ಚಿತ್ರದ ಒಂದು ನೃತ್ಯವನ್ನೇ ಕತ್ತರಿಸಿ ಹಾಕಿರುವುದಕ್ಕೆ ಪ್ರತಿಕ್ರಿಯಿಸುತ್ತ ಎಂ.ಪಿ.ಶಂಕರ್ "ಮದ್ರಾಸಿನಲ್ಲಿಯೇ ಸೆನ್ಸಾರ್ ಆಗುವ ತಮಿಳು, ತೆಲುಗು, ಮಲಯಾಳಂ ಚಿತ್ರಗಳಿಗೆ ಬೇರೆ ಮಾನದಂಡ, ಕನ್ನಡ ಚಿತ್ರಗಳಿಗೇ ಬೇರೆ ಮಾನದಂಡ. ಇದರ ಕುರಿತು ಪ್ರಶ್ನಿಸಲು ಹೋದರೆ, ಅಪೀಲು ಹೋಗಿ ಎಂದು ಹೇಳಿ ಸುಮ್ಮನಾಗುತ್ತಾರೆ. ಬಿಡುಗಡೆ ದಿನಾಂಕವನ್ನು ಗೊತ್ತು ಮಾಡಿದವರಿಗೆ ಇದೆಲ್ಲಾ ಸಾಧ್ಯವೆ ?" ಎಂದು ಪ್ರಶ್ನಿಸಿದ್ದರು. ಇದಕ್ಕೆ ಮತ್ತೊಂದು ಉದಾಹರಣೆ ಎಂದರೆ ೧೯೭೭ರ ಜೂನ್ ೨೭ರ 'ಮೇನಕಾ' ಪತ್ರಿಕೆಯಲ್ಲಿ ಪ್ರಕಟವಾದ ರಾಘವೇಂದ್ರರಾವ್ ಎನ್ನುವವರ ಪತ್ರ. 'ಕನ್ನಡದ ಬಗ್ಗೆ ಸೆನ್ಸಾರ್ ಮಂಡಳಿಯ ವಕ್ರದೃಷ್ಟಿ' ಎಂಬ ತಲೆಬರಹವಿಟ್ಟು ಪ್ರಕಟವಾದ ಪತ್ರದ ಸಾರಾಂಶ ಹೀಗಿದೆ :

"ಇತ್ತೀಚೆಗೆ ಬಿಡುಗಡೆ ಆಗಿರುವ ಹಾಗೂ ಆಗಲಿರುವ ಕನ್ನಡ ಚಿತ್ರಗಳ ಬಗ್ಗೆ ಮದ್ರಾಸಿನ ಸೆನ್ಸಾರ್ ಸಮಿತಿ ಮಲತಾಯಿ ಧೋರಣೆ ತೋರುತ್ತಿದೆ. ಇದಕ್ಕೆ ಕಾರಣವೆಂದರೆ ಈ ಸಮಿತಿಯಲ್ಲಿ ಪರಭಾಷೆಯ ಸದಸ್ಯರೇ ಹೆಚ್ಚಾಗಿರುವುದು. ಹೆಸರಿಗೆ ಒಬ್ಬಿಬ್ಬರು ಕನ್ನಡಿಗರಿದ್ದರೂ ಇಲ್ಲದ ಹಾಗೆ ವರ್ತಿಸುತ್ತಾರೆ. ಉದಾಹರಣೆಗೆ 'ಒಂದು ಹೆಣ್ಣಿನ ಕತೆ' ಚಿತ್ರ 'A' ಸರ್ಟಿಫಿಕೇಟ್ ಪಡೆದಿದೆ. ಅದರಲ್ಲಿ ಅಂಥ ದೃಶ್ಯಗಳೇನಿವೆಯೆಂದು ಸಮಿತಿಯವರೇ ಹೇಳಬೇಕು. ಅದೇ ರೀತಿಯಾಗಿ 'ನಂದಗೋಕುಲ', 'ಕ್ರಾಂತಿವೀರ' ಹಾಗೂ 'ಭಲೇ ಹುಚ್ಚ' ಚಿತ್ರಗಳ ನೃತ್ಯದ ಗೀತೆಗಳಿಗೆ ಸಲ್ಲದ ಕಾರಣಗಳನ್ನು ನೀಡಿ ಕತ್ತರಿ ಹಾಕಿದಾರೆ. ಆದರೆ ತಮಿಳು, ತೆಲುಗು ಚಿತ್ರಗಳಲ್ಲಿ ಇದಕ್ಕಿಂತಲೂ ಅಸಹ್ಯವೆನಿಸುವ ದೃಶ್ಯಗಳಿದ್ದರೂ ಪ್ರದರ್ಶನಕ್ಕೆ ಅನುಮತಿ ದೊರೆಯುತ್ತದೆ.

"ಕನ್ನಡ ಚಿತ್ರಗಳಲ್ಲಿ ನೃತ್ಯದ ಭಾಗಗಳಿಗೆ ಅದ್ದೂರಿಯ ಸೆಟ್‌ಗಳನ್ನು ನಿರ್ಮಿಸಿದಾಗ ಅದನ್ನು ಸೆನ್ಸಾರ್ ಮಂಡಳಿ ಕೆಂಗಣ್ಣಿನಿಂದ ನೋಡುತ್ತದೆ. ಇದನ್ನೆಲ್ಲ ನೋಡಿಯೂ ಕೂಡಾ ಸರ್ಕಾರ ಕಣ್ಣು ಮುಚ್ಚಿಕೊಂಡು ಕುಳಿತಿದೆ. ಈ ಎಲ್ಲಾ ತೊಂದರೆಗಳಿಂದ ಕನ್ನಡ ಚಿತ್ರಗಳು ಪಾರಾಗಬೇಕಾದರೆ ಕನ್ನಡ ಚಿತ್ರಗಳಿಗೆಂದೇ ಬೆಂಗಳೂರಿನಲ್ಲಿ ಪ್ರತ್ಯೇಕ ಸೆನ್ಸಾರ್ ಘಟಕ ಸ್ಥಾಪಿಸಬೇಕು. ಇದು ಸಾಧ್ಯವಾಗದೆ ಹೋದಲ್ಲಿ ಚೆನ್ನಾಗಿ ಕನ್ನಡ ತಿಳಿದಿರುವ, ಇಲ್ಲಿನ ಭಾಷೆ, ಸಂಸ್ಕೃತಿ, ಸಂಪ್ರದಾಯವನ್ನು ಅರಿತಿರುವ ಸದಸ್ಯರನ್ನು ಮದ್ರಾಸ್ ಸೆನ್ಸಾರ್ ಘಟಕದಲ್ಲಿ ನೇಮಿಸಲಿ."

ಈ ಪತ್ರದಿಂದ ಬೆಂಗಳೂರಿನಲ್ಲಿ ಸೆನ್ಸಾರ್ ಘಟಕ ಆರಂಭವಾಗುವ ಮುನ್ನ ಕನ್ನಡ ಚಿತ್ರಗಳಿಗೆ ಎಷ್ಟು ತೊಂದರೆಯಾಗುತ್ತಿದ್ದಿತೆಂದು ತಿಳಿಯುತ್ತದೆ. ಸೆನ್ಸಾರ್‌ನ ನಿಯಮಾವಳಿಗಳಲ್ಲಿನ ಇನ್ನೊಂದು ವಿಶೇಷವೆಂದರೆ ಹತ್ತು ವರ್ಷಗಳಿಗೊಮ್ಮೆ ಚಿತ್ರಗಳನ್ನು ಬಿಡುಗಡೆ ಮಾಡುವ ಸಂದರ್ಭ ಬಂದರೆ ಪುನಃ ಸೆನ್ಸಾರ್ ಮಾಡಿ ರೀ-ಸರ್ಟಿಫಿಕೇಟ್ ಪಡೆಯಬೇಕು. ಈ ನಿಯಮ ಅನಂತರ ರದ್ದಾಗಿದೆ.

ಸಿನಿಮಾಗಳ ಉದ್ದೇಶ ವ್ಯಾಪಾರ ಎನ್ನುವುದು ಕೆಲವರ ಅಭಿಪ್ರಾಯವಾದರೆ ಮತ್ತೆ ಕೆಲವರ ಪ್ರಕಾರ ಇದು ವ್ಯಾಪಾರವಲ್ಲ, ಕಲೆ. ಆದರೆ ಚಿತ್ರಗಳಲ್ಲಿ ಮಾತ್ರ ಕಲಾತ್ಮಕವಾದ ವ್ಯಾಪಾರ ಧೋರಣೆಗಳೂ ವ್ಯಾಪಾರಾತ್ಮಕವಾದ ಕಲಾ ಧೋರಣೆಗಳೂ ಕಂಡು ಬರುವುದು ಸತ್ಯ. ಆದರಿಂದ ಚಿತ್ರಗಳು ಜಯಗಳಿಸಬೇಕೆಂದರೆ ಅವುಗಳಿಗೆ ಕೆಲವೊಂದು ಲಕ್ಷಣಗಳಿಲ್ಲದೆ ಹೋದರೆ ಯಾರೂ ನೋಡುವುದಿಲ್ಲ ಎಂಬ ಭಾವನೆಯೂ ಬಲವಾಗಿ ಬೇರೂರಿದೆ. ಆದರಿಂದ ಅನೇಕ ರೀತಿಯ ಆಕರ್ಷಣೆಗಳು ಸಿನಿಮಾ ಕ್ಷೇತ್ರ ಪ್ರವೇಶಿಸಿದವು. ಕನ್ನಡ ಚಿತ್ರಗಳ ವಿಷಯಕ್ಕೆ ಬಂದರೆ ಕರ್ನಾಟಕದಲ್ಲಿ ಪ್ರದರ್ಶಿತವಾಗುವ ಇಂಗ್ಲಿಷ್ ಚಿತ್ರಗಳೊಂದಿಗೂ ಹಿಂದಿ ಚಿತ್ರಗಳೊಂದಿಗೂ ಇತರ ತಮಿಳು, ತೆಲುಗು ಚಿತ್ರಗಳೊಂದಿಗೂ ಪೈಪೋಟಿ ಮಾಡಬೇಕಾದ ಪರಿಸ್ಥಿತಿಯಿದೆ. ಆದ್ದರಿಂದ ಆ ಚಿತ್ರಗಳಲ್ಲಿ ಕಂಡು ಬರುವ ಥ್ರಿಲ್ ನೀಡುವ ದೃಶ್ಯಗಳು ಕನ್ನಡ ಚಿತ್ರಗಳಲ್ಲಿದ್ದರೇನೇ ಪ್ರೇಕ್ಷಕರು ನೋಡುವರೆಂಬ ಭಾವನೆ ಬಂದು ಬಿಟ್ಟಿದೆ.

ಹೀಗೆ ಚಿತ್ರಗಳಲ್ಲಿ ಅಭಿನಯವೇ ಅಲ್ಲದೆ, ಬೇಗ ಬೇಗ ನಡೆದು ಹೋಗುವ ಘಟನೆಗಳಲ್ಲಿ ಕೂಡ ಉತ್ಸುಕತೆಗೆ ಪ್ರಾಧಾನ್ಯ ಕೊಡುತ್ತಿದ್ದಾರೆ. ಸಿನಿಮಾಗಳಲ್ಲಿ ನಾಯಕ ಹಾಗೂ ಖಳನಾಯಕರ ಹೊಡೆದಾಟಕ್ಕೆ ಪ್ರಾಮುಖ್ಯ ಕೊಡಲಾಯಿತು. ಕತೆಯ ಪ್ರಕಾರ ನಾಯಕ ವೃದ್ಧನಾಗಿರಲಿ, ಕುಂಟನಾಗಿರಲಿ, ಅಧ್ಯಾಪಕನಾಗಿರಲಿ, ಡೆಪ್ಯುಟಿ ಕಮಿಷನರೇ ಆಗಿರಲಿ ಆತ ಹೊಡೆದಾಡಿ ಖಳನಾಯಕನನ್ನು ಮಣಿಸುವ ಸಾಮರ್ಥ್ಯ ಉಳ್ಳವನೆಂದು ತೋರಿಸಬೇಕಾದುದು ಚಿತ್ರಧರ್ಮವಾಗಿ ಹೋಗಿದೆ. ಈ ಧರ್ಮ ಸಾಮಾಜಿಕ ಚಿತ್ರಗಳಲ್ಲೊಂದು ಬಗೆಯಾಗಿದ್ದರೆ ಅದನ್ನು ಜಾನಪದ ಚಿತ್ರಗಳಲ್ಲಿ ಇನ್ನಷ್ಟು ವಿಜೃಂಭಣೆಯಿಂದ ನಿರೂಪಿಸಲಾಗುತ್ತದೆ. ಪೌರಾಣಿಕ ಚಿತ್ರಗಳಲ್ಲಂತೂ ವೈಭವೀಕರಣಕ್ಕೆ ಮಿತಿಯೇ ಇರುವುದಿಲ್ಲ. ಹೀಗೆ ಚಿತ್ರದ ನಾಯಕ ಏಕಾಂಗಿಯಾಗಿ ಅನೇಕರೊಂದಿಗೆ ಹೋರಾಡಬೇಕೆನ್ನುವುದು ನಿಯಮವೇ ಆಗಿದೆ.

ಇದೇ ಸಂದರ್ಭದಲ್ಲಿ ನಮ್ಮಲ್ಲಿಯೂ ಜೇಮ್ಸ್ ಬಾಂಡ್ ತರಹದ ಗೂಢಚಾರಿ ಚಿತ್ರಗಳು, ಕೌಬಾಯ್ ಸಿನಿಮಾಗಳು ಬರತೊಡಗಿದವು. ಇಂಥ ಚಿತ್ರಗಳು ಅಪರಾಧ ಹಾಗೂ ಹಿಂಸೆಯನ್ನು ಪ್ರಧಾನವಾಗಿಟ್ಟುಕೊಂಡು ರೂಪುಗೊಳ್ಳತೊಡಗಿದವು. ಕತೆಗೆ ಅಗತ್ಯವಿದೆಯೋ, ಇಲ್ಲವೋ ಎನ್ನುವ ವಿಚಾರ ನಗಣ್ಯವಾಗಿ, ನಾಯಕನಾದವನು ಎದುರು ಬಿದ್ದವನನ್ನು ಹೊಡೆದು ಬಡಿದು ಸಾಗುತ್ತಿರಬೇಕೆಂಬುದು ಶಾಸನವಾಯಿತು. ಖಳನಾಯಕನಾದವನು ನಾಯಕನಿಗೆ ನಾನಾ ರೀತಿಯ ಹಿಂಸೆಗಳನ್ನು ಕೊಟ್ಟು, ಅಡ-ತಡೆಗಳನ್ನು ನೀಡಿದಾಗಲೂ ಅದನ್ನೆಲ್ಲ ಎದುರಿಸಿ ಧೈರ್ಯದಿಂದ ಮುನ್ನುಗ್ಗಿ ಗೆದ್ದು ವಿಜಯೋತ್ಸವ ಆಚರಿಸುವುದೇ ಸಿನಿಮಾಗಳ ಜನಪ್ರಿಯತೆಯ ಸೂತ್ರ ಎಂದು ಭಾವಿಸಲಾಯಿತು. ಈ ಆಕರ್ಷಣೆಗೆ ಪ್ರೇಕ್ಷಕರಷ್ಟೇ ಅಲ್ಲದೆ ಚಿತ್ರ ನಿರ್ಮಾಪಕರೂ ಬಲಿಯಾಗಿದ್ದಾರೆನ್ನುವುದಕ್ಕೆ ಈಗ ಬರುತ್ತಿರುವ ಚಿತ್ರಗಳೇ ಸಾಕ್ಷಿ.

ಚಿತ್ರಗಳಲ್ಲಿ ಹಿಂಸಾ ದೃಶ್ಯಗಳು ದಿನೇ ದಿನೇ ಹೆಚ್ಚುತ್ತಾ ಹೋಗುತ್ತಿರುವುದಂತೂ ಸತ್ಯ. ನಾಯಕನನ್ನು ಕಟ್ಟಿಹಾಕಿ ನಾಯಕಿಯನ್ನು ನಾನಾ ರೀತಿಯಲ್ಲಿ ಹಿಂಸಿಸುವ ದೃಶ್ಯದಿಂದ ಹಿಡಿದು ರಕ್ತ ಹರಿಸಿ ಹಿಂಸೆಯ ಪರಾಕಾಷ್ಠೆಯನ್ನು ತೋರಿಸುವ ಸನ್ನಿವೇಶಗಳವರೆಗೂ ಮಾಮೂಲಿ ಎನಿಸಿಬಿಟ್ಟಿವೆ. ಸಿನಿಮಾಗಳಲ್ಲಿ ಬರುವ ಕಳ್ಳತನ, ಹತ್ಯೆಗಳನ್ನು ನೋಡಿ ಪ್ರಭಾವಗೊಂಡು ಅದನ್ನು ನಿಜಜೀವನದಲ್ಲಿ ಅನುಕರಣೆ ಮಾಡಿದ ಉದಾಹರಣೆಗಳೂ ಇವೆ. ಬ್ಲಾಕ್‌ಮೇಲ್, ಕಿಡ್ನ್ಯಾಪ್, ರೇಪ್ ಮುಂತಾದ ದೃಶ್ಯಗಳು ಎಳೆಯರ ಮೇಲೆ ಪರಿಣಾಮ ಬೀರುವುದು ಸಾಧ್ಯವೇ ಇಲ್ಲ. ಕೆಲವೊಮ್ಮೆ ಕಥಾನಾಯಕನೇ ಕಳ್ಳನೋ, ಪರೋಪಕಾರನೋ, ಮುಂತಾದ ಸಮಾಜ ವಿರೋಧಿ ವ್ಯಕ್ತಿತ್ವ ಹೊಂದಿದವನಾಗಿದ್ದರೆ ಆಗ ಅವನು ಮಾಡುವ ಕೆಲಸಗಳೆಲ್ಲವೂ ಆದರ್ಶವೇ ಆಗಿಬಿಡುವ ಅಪಾಯವೂ ಇರುತ್ತದೆ. ಸೆನ್ಸಾರ್‌ನ ನಿಯಮಾವಳಿಗಳು ಇಂಥ

ಬೆಳವಣಿಗೆಗಳನ್ನು ತಡೆಯುವಲ್ಲಿ ಸ್ವಲ್ಪ ಮಟ್ಟಿಗಾದರೂ ಯಶಸ್ವಿ ಆಗಿರುವುದು ಸುಳ್ಳಲ್ಲ. ಇಂಥ ದೃಶ್ಯಗಳಿಗೆ ಕತ್ತರಿ ಬೀಳುತ್ತದೆಂದು ಗೊತ್ತಿದರೂ ನಿರ್ಮಾಪಕರು ಒಂದಲ್ಲ ಒಂದು ರೀತಿಯಲ್ಲಿ ತಪ್ಪಿಸಿಕೊಳ್ಳಲು ಅದನ್ನು ಚಿತ್ರೀಕರಿಸುತ್ತಲೇ ಇರುತ್ತಾರೆ.

ಇನ್ನು ಚಿತ್ರಗಳಲ್ಲಿ ಯಾವುದೇ ಅಂಶ ಇರಬೇಕೆ ಬೇಡವೆ ಎನ್ನುವುದಕ್ಕಿಂತ ಇದ್ದರೆ ಹೇಗಿರಬೇಕು ಎನ್ನುವ ಮಾತೇ ಹೆಚ್ಚು ಪ್ರಚಲಿತವಾದಂತಿದೆ. ಅಶ್ಲೀಲವಾಗಿ, ಉದ್ರೇಕಕಾರಿಯಾಗಿದ್ದರೆ ತಪ್ಪು, ಆದರೆ ಚಿತ್ರದಲ್ಲಿನ ಕಥೆಗೆ ಪೂರಕವಾಗಿ ಕಲಾತ್ಮಕವಾಗಿದ್ದರೆ ಅದು ತಪ್ಪಲ್ಲ. ಹಾಗಿದ್ದರೆ ಅಂಥ ದೃಶ್ಯಗಳನ್ನು ನೋಡುವಾಗಲೂ ಯಾವುದೇ ಕೆಟ್ಟ ಭಾವನೆ ಹುಟ್ಟಬಾರದೆನ್ನುವುದು ಹಲವರ ಅಭಿಪ್ರಾಯ. ಇದಕ್ಕೊಂದು ಉದಾಹರಣೆ ಎಂದರೆ ಗುರುದತ್ ಹಾಗೂ ಮಾಲಾಸಿನ್ಹಾ ನಟಿಸಿದ 'ಸುಹಾಗ್' ಹಿಂದಿ ಚಿತ್ರ. ಯೋಗ್ಯ ರೀತಿಯಲ್ಲಿ ಬಳಸಿಕೊಂಡರೆ ಸೆಕ್ಸ್ ದೃಶ್ಯಗಳನ್ನು ಕಲಾತ್ಮಕವಾಗಿ ಚಿತ್ರಿಸಬಹುದೆನ್ನುವುದು ಇದರಿಂದ ತಿಳಿಯುತ್ತದೆ. ಪ್ರೀತಿಸಿ ವಿವಾಹವಾದ ಗುರುದತ್ ಹಾಗೂ ಮಾಲಾಸಿನ್ಹಾ ಆರಂಭದಲ್ಲಿ ಅನ್ಯೋನ್ಯವಾಗಿದ್ದು, ಅಪಘಾತಕ್ಕೆ ತುತ್ತಾದ ನಾಯಕನಿಗೆ ಕೆಲದಿನ ಸ್ತ್ರೀ ಸಂಗದಿಂದ ದೂರವಿರುವಂತೆ ವೈದ್ಯರು ಹೇಳುತ್ತಾರ. ಆದರೆ ಗುಣಮುಖನಾದ ಮೇಲೂ ಪತ್ನಿ ತನ್ನೆಡೆಗೆ ಬಾರದಿರುವುದನ್ನು ನೋಡಿ ಒಂದು ದಿನ ಹೇಗಾದರೂ ಪತ್ನಿಯನ್ನು ಸೇರಬೇಕೆಂದು ಬೇಗ ಮನೆಗೆ ಮರಳುತ್ತಾನೆ. ಮನೆಗೆ ಬಂದು ಪತ್ನಿಯ ಸಂಗಕ್ಕಾಗಿ ಪರಿತಪಿಸುತ್ತಾ ಆಕೆಯನ್ನು ಪ್ರೇಮ-ಕಾಮಗಳಿಂದ ಸೆಳೆಯುವ ದೃಶ್ಯ ಮನಸ್ಸಿನಲ್ಲಿ ನಿಲ್ಲುವಂತಿತ್ತು. ಹಾಗೆಯೇ ಮಾಲಾ ಸಿನ್ಹಾ ಆ ಪಾತ್ರದಲ್ಲಿ ದೇಹ, ಮನಸ್ಸುಗಳೆರಡೂ ಪತಿಯ ಸಂಗಕ್ಕೆ ಹಾತೊರೆಯುತ್ತಿದ್ದರೂ ವಿವೇಕದಿಂದ ತನ್ನನ್ನು ತಾನು ನಿಗ್ರಹಿಸಿಕೊಳ್ಳುವ ಅಭಿನಯ ಮನೋಜ್ಞ. ಯಾವುದೇ ಹಸಿ ಹಸಿ ದೃಶ್ಯಗಳಿಲ್ಲದೆಯೂ ಪ್ರಚೋದಕವಾಗಿ ನಿರೂಪಣೆ ಮಾಡಬಹುದೆನ್ನುವದಕ್ಕೆ ಈ 'ಸುಹಾಗ್' ಚಿತ್ರ ಒಂದು ಉದಾಹರಣೆ. ಇಂಥ ಹಲವಾರು ಚಿತ್ರಗಳು ಬಂದಿದ್ದರೂ ಕೆಲ ಚಿತ್ರನಿರ್ಮಾಪಕರ ಉದ್ದೇಶವೇ ಬೇರೆಯಾಗಿರುವುದರಿಂದ ಇಂಥ ದೃಶ್ಯಗಳು 'ವಲ್ಗ್ಯಾರಿಟಿ'ಯ ಮಟ್ಟಕ್ಕೆ ಇಳಿಯುತ್ತವೆ.

ಸೆನ್ಸಾರ್ ಆಕ್ಷೇಪ - ಪ್ರತಿಕ್ರಿಯೆ

ಇಂದಿನ ಚಿತ್ರರಂಗ, ಚಿತ್ರರಂಗದ ಜನರು, ಚಿತ್ರಗಳಲ್ಲಿನ ಬದಲಾವಣೆ, ಪ್ರೇಕ್ಷಕನ ಬದಲಾದ ಮನೋಭಾವ ಎಲ್ಲವೂ ಎರಡು ದಶಕಗಳ ಹಿಂದಿಗಿಂತ ಅಜಗಜಾಂತರ ವ್ಯತ್ಯಾಸ ಕಂಡಿವೆ. ಆಗ ನಮ್ಮ ಕನ್ನಡ ಚಿತ್ರರಂಗದ ಕೆಲವರು ಚಿತ್ರದೊಳಗಿನ ಸೆನ್ಸಾರ್ ಆಕ್ಷೇಪಿಸುವ ದೃಶ್ಯಗಳ ಬಗ್ಗೆ ಹೇಗ ಪ್ರತಿಕ್ರಿಯಿಸಿದ್ದಾರೆಂಬುದು ತಿಳಿದಾಗ ಅಂದಿನ ವಾತಾವರಣವೂ ನಮ್ಮ ಅರಿವಿಗೆ ಬರುತ್ತದೆ.

ಕನ್ನಡ ಚಿತ್ರರಂಗದ ಖ್ಯಾತ ನಟಿ ಬಿ.ವಿ.ರಾಧ ತಮ್ಮ ಅಭಿಪ್ರಾಯವನ್ನು ಹೀಗೆ ವ್ಯಕ್ತಪಡಿಸಿದ್ದರು :

''ಈಗ ನಾವು ರೇಪ್ ಅಂತ ಸಿನಿಮಾಕ್ಕೆ ಸಂಬಂಧಿಸಿದಂತೆ ಏನು ಹೇಳುತ್ತೇವೋ ಅದು ಇಂದು ಹೆಚ್ಚು ಚಾಲ್ತಿಗೆ ಬಂದಿರಬಹುದಾದ ಪದವಾದರೂ ನಮ್ಮ ಸೃಜನಾತ್ಮಕ ಮಾಧ್ಯಮಕ್ಕೆ, ನಮ್ಮ ಸಮಾಜಕ್ಕೆ ಅದು ಹೊಸದೇನೂ ಅಲ್ಲ. ಪುರಾಣ, ಪುಣ್ಯ ಕತೆಗಳ ಕಾಲದಿಂದಲೂ ಹೆಣ್ಣಿನ ಮೇಲೆ ದುರಾಕ್ರಮಣ ನಡೆದೇ ಇದೆ. ಅಂದಿನಿಂದಲೂ ಮಾನಭಂಗದ ಪ್ರಸ್ತಾಪ ಇದ್ದೇ ಇದೆ. ಅದಕ್ಕೆ ಹೆಣ್ಣು ಅಬಲೆ ಎನ್ನುವ ಕಾರಣ ಇರಬಹುದು. ನಾಟಕಗಳಲ್ಲಿ, ಸಿನಿಮಾಗಳಲ್ಲಿ ಅಥವಾ ಸಾಹಿತ್ಯದಲ್ಲಿ ಪ್ರೇಕ್ಷಕನಿಗೆ ಅಥವಾ ಓದುಗನಿಗೆ ಇಂಥ ರೇಪ್‌ನ ದೃಶ್ಯದಿಂದ ಸಮಾಧಾನ ಅಥವಾ ತೃಪ್ತಿ ಸಿಗುತ್ತಿರುವುದನ್ನು ಅಲ್ಲಗಳೆಯುವಂತಿಲ್ಲ. ಅವು ಅತನ ಆಸೆಯನ್ನು ತೀರಿಸುತ್ತಲೇ ಬಂದಿವೆ ಎಂದರೂ ತಪ್ಪಾಗಲಾರದು.

''ಇಷ್ಟಾದರೂ ಆತನಿಗೆ ಸಮಾಧಾನವೆಂಬುದಿಲ್ಲ. ಇಷ್ಟೆಲ್ಲ ಓದಿ, ನೋಡಿದರೂ ಅತನಿಗೆ ಇಂಥ ದೃಶ್ಯಗಳ ಬಗ್ಗೆ ಇನ್ನೂ ಬೇಸರ ಹುಟ್ಟಿಲ್ಲವಲ್ಲ ಎಂದು ಆಶ್ಚರ್ಯವಾಗುತ್ತದೆ. ನಟ-ನಟಿಯರು ಬಣ್ಣದ ಬದುಕನ್ನು ವರಿಸಿದವರು. ನಿರ್ಮಾಪಕ, ನಿರ್ದೇಶಕರು ಬಯಸಿದ್ದನ್ನು ಕೊಡುವುದು ಅವರ ಕರ್ತವ್ಯ. ಬೇರೆಯವರ ಮಾತೇಕೆ ? ನನ್ನ ಪತಿ ರವೀ ಅವರೇ ನಿರ್ದೇಶಿಸಿದ ಚಿತ್ರವೊಂದರಲ್ಲಿ ನಾನೇ ಮಾನಭಂಗದ ದೃಶ್ಯ ಅಭಿನಯಿಸಬೇಕಾಗಿ ಬಂದಿತ್ತು. ಬಣ್ಣ ಹಚ್ಚಿದ ಮೇಲೆ ನಮ್ಮ ವೈಯಕ್ತಿಕ ಸಂಬಂಧಗಳೆಲ್ಲ ಗೌಣವಾಗುತ್ತವೆ.

''ಇಷ್ಟಾದರೂ ಚಲನಚಿತ್ರಗಳಲ್ಲಿನ ಈ ಮಾನಭಂಗ ದೃಶ್ಯಗಳು ನನ್ನಲ್ಲಿ ಹಲವಾರು ಪ್ರಶ್ನೆಗಳನ್ನು ಹುಟ್ಟಿಸಿವೆ. ಇಂಥ ದೃಶ್ಯಗಳಿಗೆ ಸೆನ್ಸಾರ್ ತೊಂದರೆ ಇದೆ ಎನ್ನುತ್ತಾರೆ. ಅಸಹ್ಯ ಅಂತ ಕೆಲವು ಪ್ರೇಕ್ಷಕರು ಮುಖ ಸಿಂಡರಿಸುತ್ತಾರೆ. ಆದರೆ ಮಾನಭಂಗ ಅನ್ನೋ ಜಾಗದಿಂದ ಸರಿದು ಅತ್ಯಾಚಾರವಾಗಿ ಅದು ಮುಗೀತಾ ಇದ್ದರೂ ಏಕೆ ಈ ರೇಪ್ ಅನ್ನೋದು ನಮ್ಮ ಚಿತ್ರರಂಗಕ್ಕೆ, ಪ್ರೇಕ್ಷಕರಿಗೆ ಹಳಸಲಾಗಿಲ್ಲ ಎನ್ನುವ ಪ್ರಶ್ನೆ ಕಾಡುತ್ತದೆ. ಈಗಲೂ ರೇಪ್ ದೃಶ್ಯಕ್ಕೆ ಪರ್ಯಾಯ ಸೂತ್ರ ಕಂಡು ಹಿಡಿಯಲು ಸಾಧ್ಯವಾಗದಿದ್ದರೆ ಮಾನಭಂಗದ ದೃಶ್ಯಗಳಿಗೇ ಮೊರೆ ಹೊಕ್ಕು ಮತ್ತೆ ಅದೇ ಎವರ್‌ಗ್ರೀನ್ ಅಟ್ರ್ಯಾಕ್ಷನ್ ಆಗಿ ಉಳಿಯುವ ಅಪಾಯವಿದೆ.''

ಇದು ರಾಧಾ ಅವರ ಅನಿಸಿಕೆಯಾದರೆ ಕನ್ನಡ ಚಿತ್ರರಂಗದಲ್ಲಿ ಖಳನಟರಾಗಿ ದೊಡ್ಡ ಹೆಸರು ಮಾಡಿರುವ ವಜ್ರಮುನಿಯವರ ಅಭಿಪ್ರಾಯ ಹೀಗಿದೆ:

''ಚಿತ್ರ ನೋಡಿ ಆನಂದಿಸುವ ಪ್ರೇಕ್ಷಕರ ನಡುವೆ ಕುಳಿತು ಅವರ ಪ್ರತಿಕ್ರಿಯೆ ತಿಳಿಯುವ ಹವ್ಯಾಸ ನನಗೆ ಮೊದಲಿನಿಂದಲೂ ಇತ್ತು. ಇತ್ತೀಚೆಗೆ ನನ್ನೊಂದು ಹಳೆಯ ಚಿತ್ರವನ್ನು ಅದೇ ರೀತಿ ನೋಡಿದಾಗ ನನಗೆ ಎರಡು ಬಗೆಯ ಅನುಭವ ಉಂಟಾಯಿತು. ಆ ಚಿತ್ರದಲ್ಲಿ ಒಂದು ರೇಪ್ ದೃಶ್ಯವಿತ್ತು. ಹುಡುಗಿಯನ್ನು ಎಳೆದಾಡಿ, ಅಟ್ಟಿಸಿಕೊಂಡು ಹೋಗಿ ಸೀರೆ ಜಗ್ಗಿಸಿ, ಕುಪ್ಪಸ ಹರಿದು ಇತ್ಯಾದಿ ಮುಗಿಯುವ ಹೊತ್ತಿಗೆ ಬಾಲ್ಕನಿಯಲ್ಲಿ ಕತ್ತಲಲ್ಲಿ ಕುಳಿತಿದ್ದ ನನಗೇ ಆ ಹವಾನಿಯಂತ್ರಿತ ಪರಿಸರದಲ್ಲೂ ಮೈ ಎಲ್ಲ ಬೆವರುವಂತಾಯಿತು. ಕಾರಣ ಇಷ್ಟೆ. ಅಕ್ಕ ಪಕ್ಕದಲ್ಲಿ ಕುಳಿತಿದ್ದ ಹೆಂಗಸರೆಲ್ಲ ಅದರಲ್ಲಿ ಅಭಿನಯಿಸಿದ ನನಗೆ ಒಂದೇ ಸಮನೆ ಶಾಪ ಹಾಕುತ್ತ ಆ ಹುಡುಗಿಯ ಬಗ್ಗೆ ಅನುಕಂಪ ತೋರಿಸುತ್ತಿದ್ದರು. ಇದರ ಇನ್ನೊಂದು ಮುಖವೆಂದರೆ ಚಿತ್ರ ಮುಗಿಸಿ ಹೊರಬರುವಾಗ ನನ್ನನ್ನು ಗುರುತಿಸಿದ ಯುವ ಅಭಿಮಾನಿಗಳು ''ಏನ್ ಗುರು, ಏನ್ ಜೋರಾಗಿ ಆ ಹುಡ್ಗೀನ ಎಳೆದಾಡಿದ್ದೀಯ. ಭಲೇ ಚೆನ್ನಾಗಿತ್ತು'' ಎಂದು ಪ್ರಶಂಸೆಯಿಂದ ನುಡಿದರು. ರೇಪ್ ದೃಶ್ಯದ ಬಗ್ಗೆ ಹೀಗೆ ಒಂದೇ ನಾಣ್ಯದ ಎರಡು ಮುಖಗಳಂತಿರುವ ಅಭಿಪ್ರಾಯಗಳು ಸಹಜವಾದದ್ದೆ. ಇನ್ನು ಚಿತ್ರಗಳಲ್ಲಿ ಇಂಥ ದೃಶ್ಯಗಳಲ್ಲಿ ಅಭಿನಯಿಸುವುದು ನಮ್ಮಂಥ ನಟರಿಗಂತೂ ಅನಿವಾರ್ಯ. ಕೆಲವೊಮ್ಮೆ ನಮಗೂ ಇದು ಮುಜುಗರವನ್ನುಂಟು ಮಾಡುತ್ತದೆ. ಇದಕ್ಕೊಂದು ಉದಾಹರಣೆ, ನಾನು ಚಿತ್ರವೊಂದರಲ್ಲಿ ಮಾನಭಂಗ ದೃಶ್ಯದಲ್ಲಿ ಅಭಿನಯಿಸಿದ ಪ್ರಸಂಗ. ಈ ಸನ್ನಿವೇಶದ ಚಿತ್ರೀಕರಣ ನಡೆದದ್ದು ಕಲ್ಲು, ಮಣ್ಣು, ಮುಳ್ಳು ಹರಡಿದ್ದ ಪ್ರದೇಶದಲ್ಲಿ. ಈ ನೆಲದ ಮೇಲೆ ಹುಡುಗಿಯನ್ನು ಕೆಡವಬೇಕು, ಎಳೆದಾಡಬೇಕು, ಸೀರೆ ಎಳೆಯುವ ಸಾಂಕೇತಿಕ ಪ್ರಯತ್ನವನ್ನು ಮಾಡಬೇಕು, ರವಿಕೆಯನ್ನು ಪರಪರನೆ ಹರಿದು ಸೀಳಿ ಬಿಡಬೇಕು. ಇದರೊಂದಿಗೆ ಕಲ್ಲು, ಮುಳ್ಳಿನ ಯಾತನೆ. ಇವನ್ನೆಲ್ಲ ಆ ದೃಶ್ಯದಲ್ಲಿ ಅಭಿನಯಿಸಿದ ನಟಿ ಬಹಳ ಹೊತ್ತು ನೋವು ನುಂಗಿ ಅಭಿನಯಿಸಿರಬೇಕು. ಚಿತ್ರೀಕರಣ ಮುಗಿಯುತ್ತಿದ್ದಂತೆ ಆಕೆ ನನ್ನ ಬೆನ್ನಿಗೆ ಏಟು ಕೊಟ್ಟು ''ಏನ್ರಿ, ಅಷ್ಟೊಂದು ಜೋರಾಗಿ ಎಳೆದಾಡುವುದೆ ?'' ಎಂದು ಧಾರಾಕಾರವಾಗಿ ಕಣ್ಣೀರು ಹಾಕಿಯೇ ಬಿಟ್ಟಳು. ನನಗಂತೂ ಕರುಳು ಕಿತ್ತು ಬರುವಂತಾಯಿತು. ನಂತರ ಚಿತ್ರದಲ್ಲಿ ದೃಶ್ಯ ಪರಿಣಾಮಕಾರಿಯಾಗಲು ಹಾಗೆ ಮಾಡಬೇಕಾಯಿತೆಂದು ವಿವರಿಸಿದ ಮೇಲೆ ಆಕೆ ಸಮಾಧಾನ ತಂದುಕೊಂಡಳು.

ಕಲಾತ್ಮಕ ನಿರೂಪಣೆ ಸೂಕ್ತಮಾರ್ಗ

''ಆದರೂ ಇಂಥ ರೇಪ್ ದೃಶ್ಯಗಳು ಇರಬೇಕೆ ಬೇಡವೆ, ಅದರಿಂದ ಉಂಟಾಗುವ ಪರಿಣಾಮವೇನು ಎಂದು ನಿರ್ಧರಿಸಬೇಕಾದವರು ಪ್ರೇಕ್ಷಕರು. ಕನ್ನಡ ಚಿತ್ರಗಳ ಮಟ್ಟಿಗೆ ಹೇಳುವುದಾದರೆ ಇಂಥ ದೃಶ್ಯಗಳು ಸಹ್ಯದ ಎಲ್ಲೆ ದಾಟಿ ಹೋಗುವುದು ಅಪರೂಪವೆ. ಕಥೆಗೆ ಪೂರಕವಾಗಿದ್ದರೆ ಜನ ಮೆಚ್ಚಿಕೊಳ್ಳುತ್ತಾರೆನ್ನುವುದಂತೂ ನಿಜ. ಆದರೆ ಚಿತ್ರಕ್ಕೊಂದು ರೇಪ್ ದೃಶ್ಯ ಇರಲೇಬೇಕೆಂಬ ಹಟ ಮಾತ್ರ ಆರೋಗ್ಯಕರ ಬೆಳವಣಿಗೆಯಲ್ಲ. ಹಾಗೆಯೇ ಇಂಥ ದೃಶ್ಯ ನೋಡಿ ಕೆರಳಿ ಕೆಂಡವಾಗುವ ಮಹಿಳಾ ಪ್ರೇಕ್ಷಕರಿಗೊಂದು ಕಿವಿಮಾತು. ಏನೆಂದರೆ ''ನಾವೂ ನಿಮ್ಮಂತೆ ಮಾನವ ಸಹಜವಾದ ಕರುಳಿನ ಮಿಡಿತ ಹೊಂದಿದವರೆ. ಆದರೆ ಕಲಾವಿದನಾಗಿ ಅಂಥ ದೃಶ್ಯಗಳಲ್ಲಿ ಅಭಿನಯಿಸುವುದು ನನ್ನ ಧರ್ಮ ಹಾಗೂ ಕರ್ತವ್ಯ. ಅದಕ್ಕಾಗಿ ನೀವು ಕೊಡಬೇಕೆಂದಿರುವ ಶಿಕ್ಷೆಯನ್ನು ತೆರೆಯ ಮೇಲೆಯೇ ಅನುಭವಿಸುತ್ತೇವೆ.''

ವಜ್ರಮುನಿ ಚಿತ್ರಗಳಲ್ಲಿ ಅಸಂಖ್ಯಾತ ರೇಪ್ ದೃಶ್ಯಗಳಲ್ಲಿ ಭಾಗವಹಿಸಿದ್ದಾರೆ. ಎಲ್ಲವೂ ಕಥೆಗಾಗಿ, ಚಿತ್ರಕ್ಕಾಗಿ ಮಾಡಬೇಕಾಗುತ್ತದೆಂಬ ಅಭಿಪ್ರಾಯ ಇವರದು. ಆದರೆ ನಟಿ ಶಾಂತಲಾ ತಮ್ಮ ಅನುಭವ, ಅಭಿಪ್ರಾಯವನ್ನು ಹೀಗೆ ವಿವರಿಸುತ್ತಾರೆ :

''ನನ್ನ ಅಭಿನಯದ ಮೊದಲ ಚಿತ್ರದಲ್ಲೇ ಇಂಥ ಮಾನಭಂಗದ ದೃಶ್ಯವೊಂದರಲ್ಲಿ ಭಾಗವಹಿಸಬೇಕಾಯಿತು. ಅದರಲ್ಲಿ ದಲಿತ ಹುಡುಗಿಯೊಬ್ಬಳ ಪಾತ್ರ ಮಾಡಿದ್ದೆ. ಕಿತ್ತು ತಿನ್ನುವ ಬಡತನವಿದ್ದುದರಿಂದ ಜಮೀನ್ದಾರ ತೋರಿಸಿದ ಆಸೆಗೆ ಬಲಿಬಿದ್ದು

ಕಪಟವರಿಯದೆ ಮಾನಭಂಗಕ್ಕೊಳಗಾಗುವ ಪ್ರಸಂಗವಿತ್ತು. ಇನ್ನೊಂದು ಚಿತ್ರದಲ್ಲಿಯೂ ಸ್ವಾಮೀಜಿಯು ಮಾನಭಂಗ ಪ್ರಯತ್ನದಲ್ಲಿ ನಾನು ಭಾಗವಹಿಸಬೇಕಾಯಿತು. ಸ್ವಾಮೀಜಿ ಸೀರೆ ಜಗ್ಗಿ ಎಳೆಯುವಾಗ ತಪ್ಪಿಸಿಕೊಂಡು ಓಡಿದಾಗ ಸೀರೆ ಆತನ ಕೈಯಲ್ಲೇ ಉಳಿಯುತ್ತದೆ. ಇಂಥ ಪ್ರಕರಣಗಳು ನಿಜ ಜೀವನದಲ್ಲಿ ನಿತ್ಯವೂ ಒಂದಲ್ಲ ಒಂದು ರೀತಿಯಲ್ಲಿ ನಡೆಯುತ್ತಿರುವ ಸುದ್ದಿ ಕೇಳುತ್ತಲೇ ಇರುತ್ತೇವೆ. ಆದರೆ ಚಿತ್ರದಲ್ಲಿ ಮೊದಲ ಬಾರಿಗೆ ಅಂಥ ದೃಶ್ಯದಲ್ಲಿ ಅಭಿನಯಿಸುವಾಗ ಆತಂಕದೊಂದಿಗೆ ಬೇಸರವೂ ಇತ್ತು. ನಿರ್ದೇಶಕರು ತುಂಬಾ ಧೈರ್ಯ ಹೇಳಿದರು. ಅಸಹ್ಯವಾಗಿ ಕಾಣದಂತೆ ಚಿತ್ರೀಕರಿಸುವುದಾಗಿ ಪದೇ ಪದೇ ಹೇಳಿ ನೆಮ್ಮದಿ ತಂದಿದ್ದರು. ಆದರೆ ಚಿತ್ರೀಕರಣ ಮುಗಿದಾಗ ನನಗೆ ಅಚ್ಚರಿಯಾಗುವಂಥ ಪ್ರತಿಕ್ರಿಯೆ ಬಂದಿತ್ತು. ರೇಪ್ ಮಾಡಿದ ಜಮೀನ್ದಾರ ಆ ದೃಶ್ಯದಲ್ಲಿ ಸುಸ್ತಾಗಿ ಬಸವಳಿದು ಬಿದ್ದ ಆ ಹೆಣ್ಣಿನ ಕೈಗೆ ಹತ್ತು ರೂಪಾಯಿ ನೋಟು ಇಟ್ಟಿರುತ್ತಾನೆ. ಸ್ವಲ್ಪ ಹರಿದ ರವಿಕೆ, ಅಲ್ಲಲ್ಲಿ ಗಾಯ, ಹೋರಾಟದಿಂದ ಬಿದ್ದ ಬರೆಗಳು ಇರುವ ಆ ಪಾತ್ರದಲ್ಲಿ ಪ್ರೇಕ್ಷಕರ ಅನುಕಂಪ ಗಳಿಸುವಂತೆ ಅಭಿನಯಿಸುವ ಅವಕಾಶವೂ ಇತ್ತು. ಎಲ್ಲರೂ ಪ್ರಶಂಸಿಸಿದಾಗ ನಟನೆಯಲ್ಲಿ ಗೆದ್ದೆನೆಂಬ ಖುಷಿಯಲ್ಲಿ ಆಂಥ ದೃಶ್ಯದ ಬಗೆಗಿದ್ದ ಭಾವನೆಯೂ ಬದಲಾಯಿತು. ಕೇವಲ ಸೆಕ್ಸ್‌ನ ದೃಷ್ಟಿಯಿಂದ ಮಾತ್ರ ಚಿತ್ರದಲ್ಲಿ ಹೆಣ್ಣಿನ ಮಾನಭಂಗ ಮಾಡುವ ದೃಶ್ಯ ಇಡುವುದು ಅಪಾಯ. ಆಂಥ ದೃಶ್ಯಗಳು ಅನಿವಾರ್ಯವೆಂದು ಪ್ರೇಕ್ಷಕನೂ ಅರ್ಥ ಮಾಡಿಕೊಳ್ಳುವಂತೆ ಪರಿಣಾಮಕಾರಿಯಾಗಿ ಚಿತ್ರಿಸಿದಾಗ ಅದರಲ್ಲಿ ಅಸಭ್ಯತನ ಕಾಣುವುದಿಲ್ಲ''.

ಸಿನಿಮಾದಂಥ ಪ್ರಬಲ ಮನರಂಜನೆಯ ಮಾಧ್ಯಮದಲ್ಲಿ ಕಾಲ ಸರಿದಂತೆ ಇಂಥ ಬೆಳವಣಿಗೆಗಳು ಸಹಜವೆನ್ನುವುದೇ ಹೆಚ್ಚಿನವರ ಅಭಿಪ್ರಾಯ. ಅದಕ್ಕೊಂದು ಮಿತಿಯೋ, ಅನಿವಾರ್ಯತೆಯೋ ಇರಬೇಕೆಂಬ ಕಿವಿಮಾತನ್ನು ಹೇಳುತ್ತಾರಾದರೂ ಅದು ಬೇಡವೇ ಬೇಡ, ಮಾಡಕೂಡದೆಂದು ದೃಢವಾಗಿ ಹೇಳುವುದಿಲ್ಲ. ಅಂಥ ದೃಶ್ಯಗಳಲ್ಲಿ ಪಾಲ್ಗೊಳ್ಳುವ ನಟಿಯರೇ ಈ ಅಭಿಪ್ರಾಯ ಹೇಳಿದರೆಂದರೆ ಚಿತ್ರಗಳಲ್ಲಿ ಇದು ಎಷ್ಟು ಹಾಸುಹೊಕ್ಕಾಗಿದೆಯೆಂದು ತಿಳಿಯುತ್ತದೆ. ಚಿತ್ರಗಳಲ್ಲಿ ಅಶ್ಲೀಲವನ್ನು ಬಿಂಬಿಸುವ ಇಂಥ ದೃಶ್ಯಗಳಿರುವುದರ ಕುರಿತು ನಟ ಶಕ್ತಿಪ್ರಸಾದ್ ಹೀಗೆ ಹೇಳಿದ್ದರು :

''ಈ ಅಸಭ್ಯ, ಅಸಹ್ಯ ಕೆಲಸ ಮಾಡಬೇಕಾಯಿತಲ್ಲ, ನನ್ನ ಅಭಿನಯ ಈ ಮಟ್ಟಕ್ಕೆ ಇಳಿಯಬೇಕಾಯಿತಲ್ಲ ಎಂದು ನಾನು ಅಭಿನಯಿಸುವ ಚಿತ್ರದಲ್ಲಿ ರೇಪ್ ದೃಶ್ಯವಿದೆಯೆಂದು ಹೇಳಿದಾಗ ಮೊದಲು ಪಶ್ಚಾತ್ತಾಪಗೊಂಡಿದ್ದೆ. ನಾನು ವೃತ್ತಿಯಲ್ಲಿ ಮೇಷ್ಟ್ರಾದುದರಿಂದಲೊ, ಓದಿ ಡಿಗ್ರಿಗಳನ್ನು ಪಡೆದುದರಿಂದಲೊ ನನಗೆ ಈ ಭಾವನೆ ಬಂದಿರಬೇಕು. ಹೆಣ್ಣಿನ ಶೀಲಭಂಗದ ದೃಶ್ಯದಲ್ಲಿ ಸೀರೆ ಎಳೆಯುವುದು, ಕುಪ್ಪಸ ಹರಿಯುವುದು ಇದನ್ನೆಲ್ಲ ಖಳನಟ ಮಾಡಬೇಕೆಂದು ನಿರೀಕ್ಷಿಸುವುದು ಸಹಜವೆ. ಆತನಿಗೆ ಅಭಿನಯದಲ್ಲಿ ಇದೆಲ್ಲ ಕಡ್ಡಾಯದ ಕೆಲಸ. ಇದು ಕೇವಲ ಯಾಂತ್ರಿಕವಾಗಿ ನಡೆಸಬಹುದಾದ ಕ್ರಿಯೆ. ಇದರಲ್ಲಿ ಅಭಿನಯ ಏನು ಬಂತು ? ನೂರಕ್ಕೂ ಹೆಚ್ಚು ಚಿತ್ರಗಳಲ್ಲಿ ಅಭಿನಯಿಸಿರುವ ನನಗೆ ಇದುವರೆಗೂ ನಾನು ಕಲ್ಪಿಸಿಕೊಂಡಿರುವ ಖಳನ ಪಾತ್ರ ದೊರಕಿಯೇ ಇಲ್ಲ.

''ಒಮ್ಮೆ ಖ್ಯಾತ ನಟಿಯೊಬ್ಬಳನ್ನು ಚಿತ್ರದಲ್ಲಿ ರೇಪ್ ಮಾಡುವ ಪ್ರಸಂಗ ಬಂದಿತ್ತು. ಆರಂಭದಲ್ಲಿ ನಾನು ಒಂದು ಚಿತ್ರದಲ್ಲಿ ಅದೇ ನಟಿಯ ತಂದೆಯ ಪಾತ್ರ ವಹಿಸಿದ್ದೆ. ಈಗ ಆಕೆಯ ಶೀಲಭಂಗ ಮಾಡುವ ದೃಶ್ಯದಲ್ಲಿ ಭಾಗವಹಿಸುವುದೆಂದರೆ ಕಸಿವಿಸಿ ಉಂಟಾಗಿ ನನ್ನಿಂದ ಆಗುವುದಿಲ್ಲ ಎಂದು ಹೇಳಿದೆ. ಆ ನಟಿಗೂ ಈ ವಿಷಯವನ್ನು ಸ್ಪಷ್ಟವಾಗಿ ತಿಳಿಸಿದೆ. ಆದರೆ ಇದು ಸಿನಿಮಾ, ಆ ದೃಶ್ಯದಲ್ಲಿ ಪಾಲ್ಗೊಳ್ಳಲೇ ಬೇಕಾಯಿತು. ಜೊತೆಗೆ ಕಥೆಗೆ ಆ ದೃಶ್ಯ ಅನಿವಾರ್ಯವೂ ಆಗಿತ್ತು. ನಿರ್ದೇಶಕರು ಬಲವಂತ ಮಾಡಿದಾಗ ನನ್ನ ಭಾವನೆ ಅವರಿಗೆ ತಿಳಿಸಿದೆ. ಅವರೂ ಕಲಾವಿದರು ಅಂಥ ಭಾವನೆಗಳನ್ನು ಇಟ್ಟುಕೊಳ್ಳಬಾರದೆಂದರು. ಆ ನಟಿಯೂ ಬೆಂಬಲ ಸೂಚಿಸಿದಳು. ಆದರೂ ನನ್ನ ಹಿಂಜರಿಕೆಯಿಂದಾಗಿ ಮೊದಲ ಒಂದೆರಡು ಟೇಕ್‌ಗಳು ಕೆಟ್ಟು ಹೋದವು. ಆಗ ಆ ನಟಿಯೇ 'ನಾನೇನು ಚೆನ್ನಾಗಿಲ್ಲವೇನ್ರೀ. ನೀವೆಂಥ ಗಂಡಸು ?' ಎಂದು ರೇಗಿಸಿ ಹುರಿದುಂಬಿಸಿದಳು. ಇನ್ನೊಮ್ಮೆ ಹಿಂದಿ ನಟಿಯೊಬ್ಬಳೊಂದಿಗೆ ಭಾಗವಹಿಸಿದ ರೇಪ್ ದೃಶ್ಯ ಅದ್ಭುತವಾಗಿ ಮೂಡಿ ಬಂತು. ಮತ್ತೊಂದು ಸಲ ನನ್ನ ಸಹನಟಿಯೊಬ್ಬಳ ಜೊತೆ ರೇಪ್ ದೃಶ್ಯದಲ್ಲಿ ಭಾಗವಹಿಸಬೇಕಾಗಿತ್ತು. ನನ್ನ ಹಿಂಜರಿಕೆ ಕಂಡು ಆಕೆಯೇ ಮಾರ್ಗದರ್ಶನ ನೀಡಿದ್ದಳು. ಇಂಥ ಮಾನಭಂಗದ ದೃಶ್ಯ ಯಾರಿಗೆ ಬೇಕೋ ಬೇಡವೊ, ಖಳನಟನಾದವನು ಯಾಂತ್ರಿಕವಾಗಿ ಈ ಕೆಲಸದಲ್ಲಿ ಪಾಲ್ಗೊಳ್ಳಬೇಕಾಗುತ್ತದೆ. ನನ್ನ ದೃಷ್ಟಿಯಲ್ಲಂತೂ ಇದು ಅಸಹ್ಯ. ಖಳನಟನನ್ನೂ ಕಲಾತ್ಮಕವಾಗಿ ಚಿತ್ರರಂಗದಲ್ಲಿ ಬಳಸಿಕೊಳ್ಳಬೇಕಾದ ಅಗತ್ಯವಿದೆ. ಮಹಾಭಾರತದ ಶಕುನಿಗಿಂತ ಖಳನಾಯಕ ಬೇಕೆ ? ಆದರೆ ಅತ ಎಲ್ಲಾದರೂ ಅಬ್ಬರಿಸಿದ್ದುಂಟೆ ? ಹೆಂಗಸರ ಮಾನಭಂಗಕ್ಕೆ ಯತ್ನಿಸಿದ್ದುಂಟೆ ?'' ಎಂದು ಶಕ್ತಿ ಪ್ರಸಾದ್ ಕೇಳುವ ಪ್ರಶ್ನೆ. ತಾವು ತೆರೆಯ ಮೇಲೆ ಅಂಥ ದೃಶ್ಯಗಳಲ್ಲಿ ಭಾಗವಹಿಸಬೇಕಾದ ಅನಿವಾರ್ಯ ಬಂದಿದ್ದರೂ ಯಾವುದೋ ಕಾರಣ ನೀಡಿ ಅದನ್ನು ಸಮರ್ಥಿಸಿಕೊಳ್ಳದೆ ನೇರವಾಗಿ ಅದನ್ನು ಅಸಹ್ಯವೆಂದೇ ತಮ್ಮ ಅಭಿಪ್ರಾಯ ತಿಳಿಸಿದ್ದಾರೆ.

ಇನ್ನು ನಾಯಕಿಯಾಗಿ, ಪೋಷಕ ನಟಿಯಾಗಿ ಅಭಿನಯಿಸಿರುವ ಪ್ರಮೀಳಾ ಜೋಷಾಯ್ ಅವರ ಅನಿಸಿಕೆ :

''ನಾಯಕಿಯಾಗಿ ನಾನು ಚಿತ್ರರಂಗಕ್ಕೆ ಪರಿಚಯವಾದದ್ದೇ ದೇವದಾಸಿ ಪದ್ಧತಿಯಂಥ ಸಾಮಾಜಿಕ ಪಿಡುಗನ್ನು ಬಣ್ಣಿಸುವಂಥ ಪಾತ್ರವಿರುವ ಚಿತ್ರದಲ್ಲಿ. ಅದರಲ್ಲಿ ಅಂಥ ಅಸಹಾಯಕ ಹೆಣ್ಣಿನ ಪಾತ್ರವನ್ನು ನಾನು ನಿರ್ವಹಿಸಿದ್ದೆ. ಲಾಂದ್ರದ ಬೆಳಕಿನಲ್ಲಿ ಹೆಣ್ಣಿನ ಚೆಲುವನ್ನು ನೋಡಿದ ಹಳ್ಳಿಯ ಶ್ರೀಮಂತ ತಮ್ಮ ಸಮ್ಮತಿ ಸೂಚಿಸಿದ ನಂತರ ಸಂಪ್ರದಾಯದಂತೆ ಪ್ರಥಮವಾಗಿ ಮೈ ಒಪ್ಪಿಸುವ ಹೆಣ್ಣಿನ ಪಾತ್ರವದು. ಅಸಹಾಯಕ ಹೆಣ್ಣೊಬ್ಬಳು ಪರಂಪರೆಯಿಂದ ಬಂದ ಮೂಢನಂಬಿಕೆಗೆ ಹೇಗೆ ಬಲಿಯಾಗುತ್ತಾಳೆ ಎನ್ನುವುದನ್ನು ಪರಿಣಾಮಕಾರಿಯಾಗಿ ತೋರಿಸಿದ ಈ ಚಿತ್ರದ ಹಿಂದೆ ಅಡಗಿದ್ದ ಸಮಾಜ ಸುಧಾರಣೆಯ ಪ್ರಜ್ಞೆ, ಕಳಕಳಿ ಆ ಪಾತ್ರವನ್ನು ಮೋಲ್ನೋಟಕ್ಕೆ ಸುತ್ತುವರಿದಿದ್ದ ಅಸಹ್ಯ ವಾಸನೆಯಿಂದ ದೂರ ಮಾಡಿತ್ತು. ಇಂಥ ಪಾತ್ರ ನಿರ್ವಹಿಸಿದ್ದರ ಬಗ್ಗೆ ನನಗೆ ಹೆಮ್ಮೆಯಿದೆ.

''ಇನ್ನೊಂದು ಚಿತ್ರದಲ್ಲಿ ಸಾಲ ಕೊಡುವ ಶ್ರೀಮಂತನೊಬ್ಬ ಕೊಟ್ಟ ಹಣಕ್ಕಾಗಿ ಪೀಡಿಸಿ, ಇಲ್ಲ ಸಲ್ಲದ ಹಿಂಸೆ ಕೊಟ್ಟು ಆ ಸಾಲಗಾರನ ತಂಗಿಯ ದೇಹವನ್ನೇ ಬಯಸುತ್ತಾನೆ. ಒಪ್ಪದೆ ಹೋದಾಗ ಅತ್ಯಾಚಾರವೆಸಗುತ್ತಾನೆ. ಇದು ನಾನು ಭಾಗವಹಿಸಿದ ಮತ್ತೊಂದು ರೇಪ್ ದೃಶ್ಯ. ಇನ್ನೊಂದು ಚಿತ್ರದಲ್ಲೂ ಹೀಗೆ ಮಾನಭಂಗಕ್ಕೊಳಗಾಗಿ ಆತ್ಮಹತ್ಯೆ ಮಾಡಿಕೊಳ್ಳುವ ಪಾತ್ರವಿತ್ತು. ಹೀಗೆ ಮೂರು ವಿಭಿನ್ನ ರೀತಿಯ ಅಬಲೆಯ ಪಾತ್ರ ನಿರ್ವಹಿಸಿದ್ದೇನೆ. ನನಗೆ ನಟಿಯಾಗಿ ಇದರಲ್ಲಿ ನನ್ನ ಕರ್ತವ್ಯ ಮಾಡಿದ್ದೇನೆ ಎನ್ನುವ ಸಮಾಧಾನವಿದೆ. ಆರಂಭದಲ್ಲಿ ಇಂಥ ದೃಶ್ಯಗಳಲ್ಲಿ ಹೇಗೆ ಭಾಗವಹಿಸುವುದೆಂಬ ಭಯವಿತ್ತು. ಮೊದಲೇ ಸಿನಿಮಾ ಸೇರುವುದಕ್ಕೆ ವಿರೋಧ ವ್ಯಕ್ತಪಡಿಸುತ್ತಿದ್ದ ಮನೆಯವರು ಇಂಥ ದೃಶ್ಯಗಳನ್ನು ನೋಡಿ ತರಾಟೆಗೆ ತೆಗೆದುಕೊಂಡರೂ ಆ ಪಾತ್ರಕ್ಕೆ ಸಿಕ್ಕ ಸಹಾನುಭೂತಿ ಕಂಡು ಸುಮ್ಮನಾಗಿದ್ದರು.

''ಕಥೆಗೆ ಪೂರಕವಾಗಿದ್ದು, ಅದರ ಓಟಕ್ಕೆ ಅಡ್ಡಿ ಬರದೆ, ಬೆಳವಣಿಗೆಗೆ ಸಹಾಯಕವಾಗಿರುವಂಥ ರೇಪ್ ದೃಶ್ಯದಲ್ಲಿ ಅಭಿನಯಿಸಬಹುದು. ಆದರೆ ಮಾನಭಂಗ ದೃಶ್ಯದ ಉದ್ದೇಶ ಸೆಕ್ಸ್ ಭಾವನೆಗಳನ್ನು ಉದ್ದೀಪಿಸುವುದಾದರೆ ಅಂಥ ದೃಶ್ಯಗಳಲ್ಲಿ ಖಂಡಿತ ನಾನು ಅಭಿನಯಿಸುವುದಿಲ್ಲ. ಇಷ್ಟಕ್ಕೂ ಮಾನಭಂಗ ದೃಶ್ಯಕ್ಕೆ ರವಿಕೆ ಹರಿಯುವುದು ಅವಶ್ಯಕವೆ ಎಂಬ ಪ್ರಶ್ನೆ ನನ್ನದು. ಇದಕ್ಕೂ ಇನ್ನಷ್ಟು ಕಲಾತ್ಮಕತೆಯ ಬಣ್ಣ ನೀಡಬೇಕೆನ್ನುವುದು ನನ್ನ ಅಭಿಮತ.''

ಜಾಗೃತಿ ಮೂಡಿಸಲು

ಇಂಥ ದೃಶ್ಯಗಳ ಕುರಿತು ಮತ್ತೊಬ್ಬ ಖಳನಟರಾದ ಧೀರೇಂದ್ರಗೋಪಾಲ್ ಅವರು ತಮ್ಮ ಅಭಿಪ್ರಾಯವನ್ನು ಹೀಗೆ ಹೇಳಿದ್ದರು :

''ನಾವು ಅಭಿನಯಿಸುವ ರೇಪ್ ಸನ್ನಿವೇಶಗಳ ಬಗ್ಗೆ ವಿಮರ್ಶಿಸಿದಾಗ ತಿಳಿವಳಿಕೆ ತಿಳಿಯಾಗುತ್ತದೆ. ನಟ-ನಟಿಯರಾದ ನಾವು ನಮ್ಮ ಕರ್ತವ್ಯ ನಿರ್ವಹಿಸುತ್ತೇವೆ, ಅಷ್ಟೆ. ಪ್ರತಿ ಬಾರಿ ಇಂಥ ದೃಶ್ಯಗಳಲ್ಲಿ ಭಾಗವಹಿಸುವಾಗಲೂ ಅದು ಮುಗಿದರೆ ಸಾಕೆನಿಸಿರುತ್ತದೆ. ಅಭಿನಯಿಸುವಾಗಲೇ ಸನ್ನಿವೇಶಕ್ಕೆ ತಕ್ಕಂತೆ ಕಣ್ಣೀರು ಕರೆಯುವ ಅಬಲೆಯರನ್ನು ನೋಡಿದಾಗ ದಿನನಿತ್ಯ ಇಂಥ ಅಮಾನುಷ, ಕ್ರೂರ, ಪಾಶವಿ ಪ್ರವೃತ್ತಿಗೆ ಬಲಿಯಾಗುವ ಹೆಣ್ಣು ಮಕ್ಕಳ ದುರಂತ ಚಿತ್ರದ ನಿಜ ಘಟನೆಗಳು ಕಣ್ಮುಂದೆ ಹಾದು ಹೋಗುತ್ತವೆ.

''ಚಿತ್ರಗಳಲ್ಲಿ ರೇಪ್ ದೃಶ್ಯದ ಪರಿಣಾಮ ಏನು ಅನ್ನುವುದು ಅತಿ ಮುಖ್ಯ. ನಿತ್ಯ ಜೀವನದಲ್ಲಿ ಇಂಥ ಮಾನಭಂಗದ ಪ್ರಸಂಗಗಳ ಬಗ್ಗೆ ಪತ್ರಿಕೆಯಲ್ಲಿ ಓದುತ್ತಲೇ ಇರುತ್ತೇವೆ. ಇದರ ಬಗ್ಗೆ ಪಶ್ಚಾತ್ತಾಪ ಪಡದಿರುವವರೇ ವಿರಳ. ಹೀಗೆಯೇ ಚಿತ್ರದಲ್ಲಿನ ದೃಶ್ಯಕ್ಕೂ ಇಂಥದೇ ಪ್ರತಿಕ್ರಿಯೆ ಸಿಗುವುದಾದರೆ ಕಲಾವಿದರಾಗಿ ನಮ್ಮ ಶ್ರಮ ಸಾರ್ಥಕ. ಇಂಥ ದೃಶ್ಯಗಳು ಜನರಲ್ಲಿ ಜಾಗೃತಿ ಮೂಡಿಸಬೇಕೇ ಹೊರತು ಅವರನ್ನು

(ಚಿತ್ರ ೩) 'ಭಾರತದ ರತ್ನ' (ಜಯಂತಿ, ಶಕ್ತಿಪ್ರಸಾದ್) - ಚಲನಚಿತ್ರಗಳಲ್ಲಿ ರೇಪ್ ದೃಶ್ಯ

ಅಂಥ ಕಾರ್ಯಗಳಿಗೆ ಪ್ರೇರೇಪಿಸುವಂತಿರಬಾರದು'' ಎನ್ನುವುದು ಧೀರೇಂದ್ರಗೋಪಾಲ್ ಅವರ ಸಲಹೆ.

ಕನ್ನಡ ಚಿತ್ರರಂಗದಲ್ಲಿ ಇತಿಹಾಸ ನಿರ್ಮಾಣ ಮಾಡಿದಂಥ ಚಿತ್ರಗಳನ್ನು ನಿರ್ದೇಶಿಸಿದ ನಿರ್ದೇಶಕ ಸಿದ್ಧಲಿಂಗಯ್ಯ ತಮ್ಮ ವಿಚಾರಧಾರೆಯನ್ನು ಈ ರೀತಿ ಹಂಚಿಕೊಂಡಿದ್ದರು :

''ಸೆಕ್ಸ್ ದೃಶ್ಯಗಳಿದ್ದರೂ ಅವು ಪ್ರೇಕ್ಷಕನ ಮನಸ್ಸಿನ ಮೇಲೆ ಮಧುರವಾದ ಪರಿಣಾಮ ಬೀರುವಂತಿರಬೇಕೇ ಹೊರತು ಅವನ ಮನಸ್ಸನ್ನು ವಿಕಾರಗೊಳಿಸಿ ತಾನೂ ಅಂಥ ಕಾರ್ಯದಲ್ಲಿ ಭಾಗವಹಿಸುವಂತೆ ಪ್ರೇರೇಪಿಸಬಾರದು. ಏಕೆಂದರೆ ನಾವು ಮಕ್ಕಳಿಂದ ಮುದುಕರವರೆಗೆ ಎಲ್ಲರೂ ನೋಡಬೇಕೆಂಬ ಕಾರಣಕ್ಕೆ ಚಿತ್ರ ಮಾಡುತ್ತೇವೆ. ಯಾವುದೇ ಒಂದು ಮನಸ್ಥಿತಿಯ ಜನರಿಗಾಗಿ ಚಿತ್ರ ಮಾಡುವುದು ಸಲ್ಲದು. ಆದರೆ 'ವಯಸ್ಕರಿಗೆ ಮಾತ್ರ' ಎಂಬ ಚಿತ್ರವನ್ನು ಮಕ್ಕಳೂ ವೀಕ್ಷಿಸುತ್ತಿರುವುದು ಮಾತ್ರ ದುರಂತ. ಸಾಧಾರಣವಾಗಿ ಹದಿನಾರು ವರ್ಷ ಪ್ರಾಯದ ಮಕ್ಕಳಿಗೂ ಸೆಕ್ಸ್ ಬಗ್ಗೆ ಅಲ್ಪ ಸ್ವಲ್ಪ ತಿಳಿವಳಿಕೆ, ಕುತೂಹಲಗಳು ಇರುತ್ತವೆ. ತೆರೆಯ ಮೇಲೆ ಮನುಷ್ಯನ ಜೀವನವನ್ನು ಚಿತ್ರಿಸುತ್ತೇವೆ. ಜೀವನದಿಂದ ಸೆಕ್ಸ್ ಎಂದಿಗೂ ಹೊರತಾಗಿರಲು ಸಾಧ್ಯವಿಲ್ಲ. ಆದರೆ ಅದನ್ನು ಚಿತ್ರದಲ್ಲಿ ಯಾವ ರೀತಿ ತೋರಿಸಬೇಕು ಎನ್ನುವುದು ನಿರ್ದೇಶಕನ ಅಭಿರುಚಿಗೆ ಸೇರಿರುವ ವಿಚಾರ. ನನ್ನ ಮಟ್ಟಿಗೆ ಹೇಳುವುದಾದರೆ ಸೆಕ್ಸ್ ಅನ್ನು ಎಷ್ಟು ಮಟ್ಟಿಗೆ ಮುಚ್ಚಿಟ್ಟು ತೋರಿಸಿದರೆ ಅಷ್ಟು ಪರಿಣಾಮಕಾರಿಯಾಗಿರುತ್ತದೆ. ಅದನ್ನು ಅತ್ಯಂತ ಗೌರವಾನ್ವಿತ ರೀತಿಯಲ್ಲಿ ಚಿತ್ರೀಕರಿಸಬಹುದು. ಕೇವಲ ಅಂಗಾಂಗಗಳ ಪ್ರದರ್ಶನ ಮಾಡಿದರೆ ಮಾತ್ರ ಅದು ಸೆಕ್ಸ್ ಆಗುವುದಿಲ್ಲ. ಎಲ್ಲವನ್ನೂ ತೆರೆದು ತೋರಿಸಿದರೆ ಆಗ ಸೆಕ್ಸ್‌ನಲ್ಲಿ ಯಾವ ಆಸಕ್ತಿಯೂ ಉಳಿಯುವುದಿಲ್ಲ. ಬದಲಾಗಿ ಅದರ ಬಗೆಗೆ ಅಸಹ್ಯ, ಜಿಗುಪ್ಸೆ ಉಂಟಾಗುತ್ತದೆ.

''ಸೆಕ್ಸ್ ಅನ್ನು ಸಂಕೇತಗಳ ಮೂಲಕ ವ್ಯಕ್ತಪಡಿಸಬಹುದು. ಒಂದು ಕುಡಿಗಣ್ಣ ನೋಟದಲ್ಲಿಯೂ ಹೇಳಬಹುದು. ಭರತನಾಟ್ಯದಲ್ಲೂ ಸೆಕ್ಸ್ ಇರುತ್ತದೆ, ಕ್ಯಾಬರೆ ನೃತ್ಯದಲ್ಲಿಯೂ ಸೆಕ್ಸ್ ಇರುತ್ತದೆ. ಆದರೆ ವ್ಯಕ್ತವಾಗುವ ರೀತಿ ಬೇರೆ ಬೇರೆ. ಸೆಕ್ಸ್‌ನ ನಿಜವಾದ ಅರ್ಥ - ಶೃಂಗಾರ. ಪ್ರಾಚೀನ ಕಾಲದಿಂದಲೂ ಇದು ನಮ್ಮ ಜೀವನದಲ್ಲಿ ಬೆಸೆದುಕೊಂಡು ಬಂದಿದೆ. ದೇವತೆಗಳೂ, ಋಷಿ ಮುನಿಗಳೂ ಇದರಿಂದ ಹೊರತಾಗಿಲ್ಲ. ನಮ್ಮ ಶಿಲ್ಪಕಲೆಗಳೇ ಇದಕ್ಕೊಂದು ಉತ್ತಮ ಉದಾಹರಣೆ. ಒಟ್ಟಿನಲ್ಲಿ ಚಿತ್ರಗಳಲ್ಲಿ ಇಂಥ ಅಂಶಗಳಿದ್ದರೂ ಅವು ಪರಿಣಾಮಕಾರಿಯಾಗಿರಬೇಕೇ ಹೊರತು ಉದ್ರೇಕಕಾರಿಯಾಗಿರಬಾರದು.''

ಪತ್ರಕರ್ತರಾಗಿದ್ದು, ನಂತರ ನಿರ್ದೇಶಕರಾದ ಪಿ.ಲಂಕೇಶ್ ಅವರು ತಮ್ಮ ಅನಿಸಿಕೆಯನ್ನು ಹೀಗೆ ಹೇಳಿಕೊಂಡಿದ್ದರು :

''ಸೆಕ್ಸೇ ಸರ್ವಸ್ವ. ಆದರೆ ಎಚ್ಚರ ತಪ್ಪಿದರೆ ಅಪಾಯ ತಪ್ಪಿದ್ದಲ್ಲ. ಸೆಕ್ಸ್ ಅನ್ನು ಚಿತ್ರದಲ್ಲಿ ತೋರಿಸುವಾಗ ಜಾಣ್ಮೆ ಇರಬೇಕು, ಕೌಶಲ ಇರಬೇಕು. ಸೆಕ್ಸ್‌ನ ನಿಜವಾದ ಅರ್ಥವೂ ಗೊತ್ತಿರಬೇಕು. ಇದರಲ್ಲಿ ಸೆಕ್ಸ್ ಅನ್ನು ಚಿತ್ರದಲ್ಲಿ ಹೇಗೆ ಹೇಳುತ್ತಾರೆ ಅನ್ನೋದು ಮುಖ್ಯವಾಗುತ್ತದೆ. ಇದು ತುಂಬಾ ಸಂಕೀರ್ಣವಾದ ವಿಷಯವಾದ್ದರಿಂದ ತಾವು ತೋರಿಸಿದ್ದನ್ನೇ ಸೆಕ್ಸ್ ಎಂದು ಭ್ರಮಿಸಿ ನಿರೂಪಿಸ ಹೊರಟರೆ ಅದು ಆ್ಯಂಟಿ ಸೆಕ್ಸ್ ಆಗುವ ಪ್ರಮಾದವೇ ಹೆಚ್ಚು. ಭಾರತೀಯ ಚಿತ್ರಗಳಲ್ಲಿ ಸಂಪ್ರದಾಯವಾದವಿದೆ, ಇನ್‌ಹಿಬಿಷನ್ಸ್ ಇವೆ. ಹೀಗೆ ಇನ್‌ಹಿಬಿಟೆಡ್ ಆಗಿ ಸೆಕ್ಸ್ ತೋರಬೇಕಾದರೆ ಒಂದು ಬಗೆಯ ಗ್ರಾಸ್ನೆಸ್ ಆ್ಯಟಿಟ್ಯೂಡ್ ಬಂದುಬಿಡುತ್ತೆ. ಖ್ಯಾತ ನಿರ್ದೇಶಕರ ಕೈಯಲ್ಲಿಯೂ ಸೆಕ್ಸ್ ವಿದ್ರೂಪ ಹೊಂದುವ ಸಾಧ್ಯತೆ ಇರುತ್ತದೆ. ಆಧುನಿಕ ಚಿತ್ರ ತಯಾರಕರು ಈ ಬಗ್ಗೆ ಚಿಂತಿಸದೆ ಹೋದರೆ ಹಿಂದಿ, ಮಲಯಾಳಂ ಚಿತ್ರಗಳಲ್ಲಿ ನಿರೂಪಣೆಯಾಗುತ್ತಿರುವ ಸೆಕ್ಸ್ ಸಾರ್ವಭೌಮತ್ವ ಪಡೆದು ಉಳಿದುಕೊಂಡು ಬಿಡುತ್ತದೆ. ಇದು ಪ್ರೇಕ್ಷಕರನ್ನು ತಪ್ಪು ದಾರಿಗೆಳೆಯುವ ಸಾಧ್ಯತೆಯಿದೆ. ಸೆಕ್ಸ್ ಎಂದು ಹೇಳಿ ಅದು ಅಶ್ಲೀಲವಾಗಬಾರದು, ವಿರೂಪಗೊಂಡು ಆ್ಯಂಟಿ ಸೆಕ್ಸ್ ಆಗಬಾರದು. ನಿಜವಾದ ಅರ್ಥದಲ್ಲಿ ಸೆಕ್ಸ್ ಅನ್ನು ಸರಿಯಾಗಿ ಅರಿತು ನಿರೂಪಿಸಬೇಕು.''

'ಸಂಸ್ಕಾರ' - 'ಅಂತ'

ಇವರೆಲ್ಲರ ಒಟ್ಟು ಅಭಿಪ್ರಾಯದಂತೆ ಚಿತ್ರಗಳಲ್ಲಿ ಸೆಕ್ಸ್ ದೃಶ್ಯಗಳು ಇದ್ದರೆ ಅದು ತಪ್ಪಲ್ಲ. ಆದರೆ ಅವು ಹಿತಮಿತವಾಗಿರಬೇಕು ಹಾಗೂ ಕಥೆಗೆ ಅಗತ್ಯವಾಗಿರಬೇಕು ಅಶ್ಲೀಲವಾಗಿರಬಾರದು. ಆದರೆ ಇಲ್ಲಿ ಸೆನ್ಸಾರ್ ಮಂಡಳಿಗೆ ಮುಖ್ಯವಾಗುವುದು ಅದರ ನಿಯಮಾವಳಿಗಳು ಮಾತ್ರ. ಆದರೂ ನಿಯಮಾವಳಿ ಹಾಗೂ ಈ ಅಭಿಪ್ರಾಯಗಳಿಗೂ ಹೊಂದಾಣಿಕೆಯಾಗಿ ಚಿತ್ರದಲ್ಲಿ ಅಂಥ ದೃಶ್ಯಗಳಿಗೆ ಅವಕಾಶ ಸಿಕ್ಕಿತೆಂದರೆ ಅದು ಯಾರ ಮನಸ್ಸಿಗೂ ಮುಜುಗರವಾಗಲಾರದು. ಆದರೂ ಸೆನ್ಸಾರ್‌ನೊಂದಿಗೆ ಹೋರಾಡಿದ ಅನೇಕ ಚಿತ್ರಗಳು ಕನ್ನಡದಲ್ಲಿ ಬಂದಿವೆ. ಆದರೆ ಇದುವರೆಗಿನ ದಾಖಲೆಯನ್ನು ಗಮನಿಸಿದಾಗ 'ಸಂಸ್ಕಾರ' ಹಾಗೂ 'ಅಂತ' ಚಿತ್ರಗಳು ಸೆಣಸಾಡಿದಷ್ಟು ಮತ್ತಾವುದೇ ಚಿತ್ರ ಸೆಣಸಾಡಿಲ್ಲ.

'ಸಂಸ್ಕಾರ' ಚಿತ್ರವನ್ನು ಒಂದು ವರ್ಷ ಕಾಲ ಸೆನ್ಸಾರ್ ಮಂಡಳಿ ಮುಟ್ಟುಗೋಲು ಹಾಕಿಕೊಂಡಿತ್ತು. ನಂತರ ಅದೇ ಚಿತ್ರಕ್ಕೆ ರಾಷ್ಟ್ರಾದ್ಯಂತ ಪ್ರಶಂಸೆ ಬಂದಿತ್ತು. ಆದರೆ ರಾಜೇಂದ್ರಸಿಂಗ್ ಬಾಬು ಅವರು ನಿರ್ದೇಶಿಸಿದ ಎಚ್.ಕೆ.ಅನಂತರಾವ್ ಕಾದಂಬರಿ ಆಧಾರಿತ ಚಿತ್ರ 'ಅಂತ' ಸೆನ್ಸಾರ್ ಮಂಡಳಿಯವರೊಂದಿಗಿನ ವಿವಾದದಲ್ಲಿ ದೊಡ್ಡ ಸುದ್ದಿಯನ್ನೇ ಮಾಡಿತ್ತು. ಇದರ ಹೋರಾಟದ ಕಥೆಯನ್ನು ನಿರ್ಮಾಪಕ ಮಾರುತಿ ವಿವರಿಸಿದ ರೀತಿ ಇಲ್ಲಿದೆ :

''...'ಅಂತ' ಕಥಾವಸ್ತುವನ್ನು ಚಿತ್ರ ಮಾಡಲು ಆಯ್ಕೆ ಮಾಡಿಕೊಂಡಾಗಲೇ ಜನಗಳಲ್ಲಿ ಇದರ ಬಗ್ಗೆ ಕುತೂಹಲ ಮೂಡಿತ್ತು. ವೃತ್ತಿ ಬಾಂಧವರಂತೂ ಇದು ಸೆನ್ಸಾರ್ ಆಗುವುದು ಸಾಧ್ಯವೇ ಇಲ್ಲ ಎಂದು ಹೇಳಿದ್ದರು. ಇದರಲ್ಲಿ ಹಿಂಸೆಯ ಅತಿಯಾದ ವೈಭವೀಕರಣವಿತ್ತಲ್ಲದೆ, ರಾಜಕೀಯ ಚಿತ್ರಗಳ ದೃಷ್ಟಿಯಲ್ಲಿ ಇದೊಂದು ಮೈಲಿಗಲ್ಲು ಎನಿಸುವಂಥ ಚಿತ್ರ.

...'ಅಂತ' ಚಿತ್ರವನ್ನು ಮದರಾಸ್ ಸೆನ್ಸಾರ್ ಮಂಡಳಿಯವರು ವೀಕ್ಷಿಸಿ ಒಂದಷ್ಟು ಭಾಗವನ್ನು ಕತ್ತರಿಸಲು ಹೇಳಿ ಪ್ರದರ್ಶನಕ್ಕೆ ಅನುಮತಿ ನೀಡಿದರು. ಆ ಸಂದರ್ಭದಲ್ಲಿ ಅವರು ನಿರ್ಮಾಪಕ, ನಿರ್ದೇಶಕರನ್ನು ಕರೆದು ಚರ್ಚೆ ಮಾಡಿದರಲ್ಲದೆ ಚಿತ್ರದ ಬಗ್ಗೆ ಮೆಚ್ಚುಗೆಯ ಮಾತುಗಳನ್ನಾಡಿ ಪ್ರಶಂಸಾಪತ್ರವನ್ನು ನೀಡಿದ್ದರು. ಅಲ್ಲಿಗೆ ಸಲ್ಲಿಸಬೇಕಾದ ಲ್ಯಾಬ್‌ಲೆಟರ್, ಕಲಾವಿದರ-ತಾಂತ್ರಿಕರ ಪಟ್ಟಿ, ಕಟ್ಟಬೇಕಾದ ಹಣ ಹಾಗೂ ಸೆನ್ಸಾರ್ ಸ್ಕ್ರಿಪ್ಟ್ ಎಲ್ಲವನ್ನೂ ಒದಗಿಸಲಾಗಿತ್ತು. 'ಅಂತ' ಬಿಡುಗಡೆಯಾಯಿತು. ೨೫ ದಿನಗಳ ಕಾಲ ತುಂಬಿದ ಗೃಹಗಳಿಗೆ ಪ್ರದರ್ಶನವಾಯಿತು.

ಚಿತ್ರ ಬಿಡುಗಡೆಯಾಗಿ ಯಶಸ್ವಿ ಪ್ರದರ್ಶನಗೊಳ್ಳುತ್ತಿದ್ದಾಗ ಚಿತ್ರದಲ್ಲಿರುವ ಹಿಂಸಾದೃಶ್ಯಗಳ ಬಗ್ಗೆ ಅಪಸ್ವರ ಬಂದಾಗ ಮದರಾಸಿನಿಂದ ಸೆನ್ಸಾರ್ ಬೋರ್ಡ್ ಸದಸ್ಯರು ಬಂದು ಚಿತ್ರಮಂದಿರದಲ್ಲಿ ಚಿತ್ರ ನೋಡಿ ಇದು ನಾವು ಹಿಂದೆ ನೋಡಿದ ಚಿತ್ರವೇ ಅಲ್ಲ. ಇದಕ್ಕೆ ಸಾಕಷ್ಟು ಭಾಗ ಸೇರಿಸಲಾಗಿದೆ ಎಂದು ಬೆಂಗಳೂರಿನ ಡಿ.ಸಿ.ಯವರಿಗೆ ಚಿತ್ರ ಪ್ರದರ್ಶನ ತಡೆದು ಪ್ರಿಂಟ್ ವಶಪಡಿಸಿಕೊಳ್ಳಬೇಕೆಂದು ಕೋರಿದರು. ಇದರಂತೆ ಬೆಂಗಳೂರಿನ ಚಿತ್ರಮಂದಿರದಿಂದ 'ಅಂತ' ಚಿತ್ರ ಪ್ರದರ್ಶನವನ್ನು ತಡೆಹಿಡಿಯಲಾಯಿತು. ಇದಕ್ಕೆ ಸಂಬಂಧಪಟ್ಟಂತೆ ಒಂದು ತಿಂಗಳು ಕೇಸ್ ನಡೆಯಿತು. ಆ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ಮಾತ್ರ 'ಅಂತ' ಚಿತ್ರದ

(ಚಿತ್ರ ೪) 'ಹೂವು ಮುಳ್ಳು' (ಎಂ.ಪಿ.ಶಂಕರ್, ಸಾಧನಾ) - ತುರ್ತು ಪರಿಸ್ಥಿತಿ ಕಾಲದಲ್ಲಿ ಕತ್ತರಿ

ಪ್ರದರ್ಶನ ನಿಂತಿದರೂ ಬೇರೆಲ್ಲ ಕಡೆ ಪ್ರದರ್ಶನ ನಡೆಯುತ್ತಿತ್ತು. ಏಕೆಂದರೆ ಆ ಪ್ರದೇಶದಿಂದ ಚಿತ್ರ ಪ್ರದರ್ಶನ ನಿಲ್ಲಿಸಲು ಒತ್ತಡ ಬಂದಿರಲಿಲ್ಲ. ಆ ಸಂದರ್ಭದಲ್ಲಿ 'ಅಂತ' ಚಿತ್ರದ ಟಿಕೆಟ್ ಕಾಳಸಂತೆಯಲ್ಲಿ ನೂರು-ಇನ್ನೂರು ರೂಪಾಯಿಗೆ ಮಾರಾಟವಾಗುತ್ತಿತ್ತು.

ಹೆಚ್.ಆರ್.ವೆಂಕಟರಾಮಯ್ಯ ಎನ್ನುವ ವಕೀಲರು ಚಿತ್ರದ ಸ್ಕ್ರಿಪ್ಟ್ ಆಧಾರದ ಮೇಲೆ ವಾದಿಸಿದರು. ಇದರೊಂದಿಗೆ ಚಿತ್ರದ ಪ್ರತಿಯನ್ನು ವಶಪಡಿಸಿಕೊಳ್ಳುವ ಅಧಿಕಾರ ಇಲ್ಲ ಎಂದು ವಾದಿಸಿದ್ದರು. ಇಲ್ಲಿ ವ್ಯಾಜ್ಯ ನಡೆಯುತ್ತಿರುವಾಗಲೇ ಚಿತ್ರದ ನಿರ್ಮಾಪಕರಾದ ಮಾರುತಿ ಹಾಗೂ ನಿರ್ದೇಶಕರಾದ ರಾಜೇಂದ್ರಸಿಂಗ್ ಬಾಬು ದಹಲಿಗೆ ತೆರಳಿ ಪ್ರಧಾನಮಂತ್ರಿ ಇಂದಿರಾಗಾಂಧಿಯವರನ್ನು ಭೇಟಿ ಮಾಡಿದರು. ೧೯೮೧ರಲ್ಲಿ ನಡೆದ ಈ ಭೇಟಿಯನ್ನು ವ್ಯವಸ್ಥೆ ಮಾಡಿದವರು ಉತ್ತರ ಪ್ರದೇಶದ ಲೋಕಸಭಾ ಸದಸ್ಯರಾದ ಖಾಜಿ ಜಲೀಲ್ ಅಬ್ಬಾಸಿಯವರು. ಸುಮಾರು ಎರಡು ಗಂಟೆಯಷ್ಟು ಕಾಲ ನಿರ್ಮಾಪಕರು ಹಾಗೂ ನಿರ್ದೇಶಕರು ತಮ್ಮ ಚಿತ್ರದ ಬಗ್ಗೆ, ಚಿತ್ರಕ್ಕೆ ಸೆನ್ಸಾರ್ ಮಂಡಳಿಯವರಿಂದ ಆದ ಅನ್ಯಾಯದ ಬಗ್ಗೆ ಚರ್ಚಿಸಿದರು. ಅವರಲ್ಲಿಯೇ ನ್ಯಾಯ ಒದಗಿಸಬೇಕೆಂದು ಕೇಳಿದಾಗ ಇಂದಿರಾಗಾಂಧಿಯವರು ಆಗಿನ ವಾರ್ತಾ ಮತ್ತು ಪ್ರಸಾರ ಇಲಾಖೆಯ ಮಂತ್ರಿಯಾಗಿದ್ದ ಸಾಥೆ ಅವರನ್ನು ತಕ್ಷಣ ಕರೆಸಿ ಇದರ ಬಗ್ಗೆ ವಿಚಾರಿಸಲು ಆದೇಶಿಸಿದರು. ಸಾಥೆಯವರು ಎರಡು ಮೂರು ದಿನದಲ್ಲಿ ಎಲ್ಲಾ ಪರಿಹರಿಸುವುದಾಗಿ ಹೇಳಿ ಅಲ್ಲಿಯೇ ಉಳಿಯಲು ಹೇಳಿದರು. ಆದರೆ ಅಷ್ಟರಲ್ಲಿ ನಡೆಯುತ್ತಿದ್ದ ವ್ಯಾಜ್ಯ ಮುಗಿದು ತೀರ್ಪು ನಿರ್ಮಾಪಕರ ಕಡೆಯೇ ಆಯಿತು.

ಚಿತ್ರ ಪ್ರದರ್ಶಿಸಲು ಕೋರ್ಟ್ ತೀರ್ಪು ನೀಡಿತಾದರೂ ವಶಪಡಿಸಿಕೊಂಡ ಚಿತ್ರದ ಪ್ರತಿಯನ್ನು ತಕ್ಷಣ ಕೊಡಲಿಲ್ಲ. ಅದಕ್ಕಾಗಿ ಮತ್ತೆ ಹೈಕೋರ್ಟ್‌ಗೆ ಹೋಗಬೇಕಾಯಿತು. ಅಲ್ಲಿಂದ ನೋಟೀಸ್ ಬಂದರೂ ನ್ಯಾಯಾಲಯದ ಆಜ್ಞೆಯನ್ನು ಉಲ್ಲಂಘಿಸಲಾಯಿತು. ಆಗ ನ್ಯಾಯಾಧೀಶರು ಪ್ರಿಂಟ್ ಡೆಲಿವರಿ ಆಗುವವರೆಗೂ ತಾನು ಕುರ್ಚಿಯಿಂದ ಮೇಲೇಳುವುದಿಲ್ಲ ಎಂದು ಹಟ ಹಿಡಿದ ನಂತರವೇ ಚಿತ್ರದ ಪ್ರತಿ ಹೊರಗೆ ಬಂತು. ಪ್ರತಿಯನ್ನು ನೀಡುವಲ್ಲಿ ಯಶಸ್ವಿಯಾದ ಜಡ್ಜ್ ಆರು ಗಂಟೆಗೆ ಮನೆಗೆ ಹೋದರು. ಆಗ ಡಿ.ಸಿ.ಯವರು ತಮ್ಮ ಪಟ್ಟು ಬಿಡದೆ ಅಲಸೂರು ಗೇಟ್ ಪೊಲೀಸ್ ಸ್ಟೇಷನ್‌ಗೆ ಪ್ರಿಂಟ್ ಅನ್ನು ಮತ್ತೆ ವಶಪಡಿಸಿಕೊಳ್ಳಲು ಹೇಳಿದರು. ಆಗ ಡಿ.ಸಿ.ಆಗಿದ್ದ ಅದೀಪ್ ಚೌಧರಿಯವರು 'ಅಂತ' ಚಿತ್ರವನ್ನು ಸಾರ್ವಜನಿಕ ಪ್ರದರ್ಶನವಾಗದಂತೆ ತಡೆಯಲು ಇನ್ನಿಲ್ಲದ ಪ್ರಯತ್ನ ಪಟ್ಟಿದ್ದರು. ವ್ಯಾಜ್ಯ ಮತ್ತೆ ಮುಂದುವರಿಯಿತು. ಈ ಬಾರಿ ಚಿತ್ರದ ಪ್ರತಿಯನ್ನು ಪೊಲೀಸ್ ಕಸ್ಟಡಿಯಿಂದ ಕೋರ್ಟ್ ಕಸ್ಟಡಿಗೆ ತೆಗೆದುಕೊಳ್ಳಬೇಕೆಂದು ಕೋರಲಾಯಿತು. ಆಗ ಮೊದಲು ಸೆನ್ಸಾರ್ ಮಾಡಿದಾಗ ಇರುವುದಕ್ಕಿಂತ ಈಗ ಹೆಚ್ಚು ಅಡಿಗಳಿವೆ ಎಂದು ಹೇಳಲಾಯಿತು. ಸೆನ್ಸಾರ್ ಆದ ಮೇಲೂ ಇನ್ನಷ್ಟು ಭಾಗ ಸೇರಿಸಲಾಗಿದೆ ಎಂಬ ಅಪವಾದ ಹೊರಿಸಲಾಯಿತು. ಮತ್ತೆ ಸಾಕಷ್ಟು ವಾದ ವಿವಾದಗಳು ನಡೆದು ಅಂತಿಮವಾಗಿ ಕೋರ್ಟು ಎಪ್ಪತ್ತೆಂಟು ಪುಟಗಳ ತೀರ್ಪು ನೀಡಿ ತಕ್ಷಣವೇ ಚಿತ್ರವನ್ನು ಬಿಡುಗಡೆ ಮಾಡುವಂತೆ ಆದೇಶ ನೀಡಿತು. ಇಷ್ಟಾಗುವಾಗ ಎರಡು ತಿಂಗಳು ಕಳೆದು ಹೋಗಿತ್ತು. ಅಲಂಕಾರ್ ಚಿತ್ರಮಂದಿರದಲ್ಲಿ ಮತ್ತೆ ಬಿಡುಗಡೆಯಾದರೂ ಎಲ್ಲವೂ ಪರಿಹಾರವಾಗಲಿಲ್ಲ. ಚಿತ್ರದ ಯಶಸ್ವಿ ಪ್ರದರ್ಶನ ನಡೆದಿರುವಾಗಲೇ ಪಾರ್ಲಿಮೆಂಟ್‌ನಲ್ಲಿ ಸದಸ್ಯರು ಇಷ್ಟು ವಿರೋಧ ಇರುವಾಗ, ಬೆಂಗಳೂರಿನಲ್ಲಿ ಪ್ರದರ್ಶನ ತಡೆಹಿಡಿದಿರುವಾಗ ಹೇಗೆ ಕರ್ನಾಟಕದ ಇತರ ಪ್ರದೇಶಗಳಲ್ಲಿ ಪ್ರದರ್ಶಿಸಲು ಅನುಮತಿ ನೀಡಲಾಗಿದೆ ಎಂದು ಪ್ರಶ್ನಿಸಿದರು. ಚಿತ್ರದಲ್ಲಿ ಸೆನ್ಸಾರ್‌ನವರು ಆಕ್ಷೇಪಿಸಿದ್ದ ಉಗುರು ಕತ್ತರಿಸುವ ಸನ್ನಿವೇಶ ಹಾಗೂ ಮಂತ್ರಿಗಳನ್ನು ಶೂಟ್ ಮಾಡುವ ಸನ್ನಿವೇಶ ಇರುವ ಪ್ರಿಂಟ್‌ಗಳನ್ನು ತಡೆಹಿಡಿಯಬೇಕೆಂದು ಆದೇಶ ನೀಡಿದರು. ಎಲ್ಲ ಪ್ರಿಂಟ್‌ಗಳಲ್ಲೂ ಆ ಅಂಶಗಳು ಇದ್ದವು. ಈ ಹಿನ್ನೆಲೆಯಲ್ಲಿ ಅದಕ್ಕಾಗಿ ಮತ್ತೆ ಹೈಕೋರ್ಟ್‌ನಲ್ಲಿ ವ್ಯಾಜ್ಯ ಹೂಡಲಾಯಿತು. ಆಗ ಮದರಾಸ್ ಸೆನ್ಸಾರ್ ಕಚೇರಿಯಿಂದ ಮತ್ತೆ ತಂತಿ ಸಂದೇಶ ಬಂದಿತ್ತು. ಆದರೆ ನ್ಯಾಯಾಧೀಶರು ತಡೆಯಾಜ್ಞೆ ನೀಡಿದ್ದರು. ಮತ್ತೆ ಮದರಾಸಿಗೆ ಹೋಗಲಿಲ್ಲ. ಇದು ಮುಗಿಯುತ್ತಿದ್ದಂತೆ ಕೇಂದ್ರ ವಾರ್ತಾ ಇಲಾಖೆಯಿಂದ ಚಿತ್ರದ ಪ್ರತಿಯೊಂದನ್ನು ಕಳಿಸಬೇಕೆಂದು ಸಂದೇಶ ಬಂದಿತ್ತು. ಅಲ್ಲಿಗೆ ಚಿತ್ರದ ಪ್ರಿಂಟ್ ಮತ್ತು ಸ್ಕ್ರಿಪ್ಟ್ ಕಳುಹಿಸಿ ಎರಡು ತಿಂಗಳಾದರೂ ಅದನ್ನು ಹಿಂತಿರುಗಿಸುವುದಾಗಲಿ, ಯಾವುದೇ ಪ್ರತಿಕ್ರಿಯೆ ನೀಡುವುದಾಗಲಿ ಮಾಡದಿದ್ದಾಗ ಲಾಯರ್ ನೋಟೀಸ್ ನೀಡಿ ಪ್ರತಿಯನ್ನು ತರಿಸಿಕೊಳ್ಳಬೇಕಾಯಿತು. ಇದಾದ ನಂತರವೂ ನ್ಯಾಯಾಲಯದಲ್ಲಿ ಮೂರು-ನಾಲ್ಕು ವರ್ಷ ವ್ಯಾಜ್ಯ ನಡೆದು ಕೊನೆಯಲ್ಲಿ ತೀರ್ಪು ಚಿತ್ರ ನಿರ್ಮಾಪಕರ ಪರವಾಗಿಯೇ ಆಯಿತು.

ಹೊಸ ಪರಂಪರೆ

'ಅಂತ' ಸೆನ್ಸಾರ್ ವಿಷಯದಲ್ಲಿ ಹೊಸ ಪರಂಪರೆಗೆ ಕಾರಣವಾಯಿತು. ಹೇಗೆಂದರೆ ಮೊದಲು ಚಿತ್ರ ನೋಡಿ, ಸ್ಕ್ರಿಪ್ಟ್‌ನಲ್ಲಿ ಮಾರ್ಕ್ ಮಾಡಿ, ಕಟ್ಸ್ ಹೇಳಿದ ಮೇಲೆ, ಆ ಪ್ರಕಾರ ಸರಿಪಡಿಸಿ ತೋರಿಸಿದ ಮೇಲೆ ಒಪ್ಪಿಗೆ ನೀಡಲಾಗುತ್ತಿತ್ತು. ಆದರೆ 'ಅಂತ'ದ ಪ್ರಕರಣ ಆದ ಮೇಲೆ ಮೊದಲಿನ ಹಾಗೆ ಯಾವುದನ್ನೂ ಬರವಣಿಗೆಯಲ್ಲಿ ಕಮಿಟ್ ಮಾಡುತ್ತಿಲ್ಲ. ಅದರ ದಾಖಲಿಸಿಕೊಂಡರೂ ನಿರ್ಮಾಪಕರಿಗೆ ಕೊಡುವುದಿಲ್ಲ. ಮತ್ತು ಕಟ್ಸ್ ತೆಗೆದು ಹಾಕಿದ ಅಂತಿಮ ಪ್ರತಿಯನ್ನು ವಿಡಿಯೋ ಟೇಪ್‌ನಲ್ಲಿ ಮುದ್ರಿಸಿ ಸೆನ್ಸಾರ್‌ನವರಿಗೆ ಕೊಡಬೇಕು ಇತ್ಯಾದಿ ಹೊಸ ನಿಯಮಗಳಾದವು. ಪ್ರಾಯಶಃ 'ಅಂತ'ದ ಬಗ್ಗೆ ನ್ಯಾಯಾಲಯದಲ್ಲಿ ವಾದ ಮಂಡಿಸಿದೇ ಸೆನ್ಸಾರ್ ಸ್ಕ್ರಿಪ್ಟ್ ಅನ್ನು ಆಧರಿಸಿ. ಅದೇ ಆಧಾರದ ಮೇಲೆಯೇ ಗೆಲುವು ಸಿದ್ಧಿಸಿತ್ತು ಎಂಬುದನ್ನೂ ಈ ಬದಲಾವಣೆಗೆ ಕಾರಣವಾಗಿ ಹೋಲಿಸಿಕೊಳ್ಳಬಹುದು.

ಹೀಗೆ ಕನ್ನಡ ಚಿತ್ರರಂಗದಲ್ಲಿ 'ಅಂತ' ಸೆನ್ಸಾರ್ ಮಂಡಳಿಯ ವಿರುದ್ಧ ಸಾರಿದ ಸಮರ ಇಂದಿಗೂ ಒಂದು ದಾಖಲೆಯೇ ಸರಿ. ಇದರ ನಂತರ ಇದೇ ನಿರ್ಮಾಪಕರ 'ಅಜಿತ್' ಚಿತ್ರಕ್ಕೂ 'A' ಸರ್ಟಿಫಿಕೇಟ್ ನೀಡಿದ ಸೆನ್ಸಾರ್ ಮಂಡಳಿ ಅದರಲ್ಲಿನ ಒಂದು ಹಾಡು ಹಾಗೂ ಹೊಡೆದಾಟದ ಸನ್ನಿವೇಶವನ್ನು ಕತ್ತರಿಸಿ ಹಾಕಿತು. ಇದೇ ರೀತಿ ಹೊಡೆದಾಟದ ದೃಶ್ಯವಿರಬಾರದೆಂದು ಅಬ್ಬಾಯಿನಾಯ್ಡು ಅವರ 'ಹೂವು ಮುಳ್ಳು' ಚಿತ್ರಕ್ಕೂ ಸೆನ್ಸಾರ್ ಸಮಿತಿ ಆಕ್ಷೇಪಣೆ ನೀಡಿತ್ತು. ಚಿತ್ರದಲ್ಲಿ ಇದು ಅನಾಹುತಕಾರಿಯಾಗುವಂತಿಲ್ಲವಾಗಿದ್ದರೂ ತುರ್ತು ಪರಿಸ್ಥಿತಿಯ ಸಮಯವೆಂಬ ಕಾರಣಕ್ಕೆ ಅಂಥ ದೃಶ್ಯಗಳಿಗೆ ಕತ್ತರಿ ಹಾಕುತ್ತಿದ್ದರು. ತುರ್ತು ಪರಿಸ್ಥಿತಿಯ ದಿನಗಳಲ್ಲಿ ಹೊಸ ನಿಯಮಗಳು ಜಾರಿಗೆ ಬಂದು, 'ರಾಜ ನನ್ನ ರಾಜ' ಚಿತ್ರವು ಸೆನ್ಸಾರ್ ತೊಂದರೆಗೊಳಗಾದ ಬಗ್ಗೆ ನಿರ್ಮಾಪಕ ಎ.ಎಲ್.ಅಬ್ಬಾಯಿನಾಯ್ಡು ತಾವು ಹೋದೆಡೆಯಲ್ಲೆಲ್ಲಾ ಸದಾ ಹೇಳುತ್ತಿದ್ದರು.

ಸೆನ್ಸಾರ್ ಸಮಿತಿಯ ನಿಯಮಾವಳಿಗಳಿಂದ ಕೆಲ ಚಿತ್ರಗಳು ಪರದಾಡುತ್ತಿದ್ದರೂ ಬಿಡುಗಡೆಯಾದ ಹಲವಾರು ಚಿತ್ರಗಳ ಬಗ್ಗೆ ಜನರ ಹಾಗೂ ಮಾಧ್ಯಮಗಳ ಪ್ರತಿಕ್ರಿಯೆ ಗಮನಿಸಿದರೆ ಸೆನ್ಸಾರ್ ಮಂಡಳಿಯ ಕಾರ್ಯವೈಖರಿಯ ಬಗ್ಗೆಯೇ ಅನುಮಾನ ಪಡುವಂತಿತ್ತು. ಇದರಲ್ಲಿ 'ಲೇಡೀಸ್ ಹಾಸ್ಟೆಲ್' ಎನ್ನುವ ಚಿತ್ರವೂ ಒಂದು. ಈ ಚಿತ್ರದಲ್ಲಿ ಲೇಡೀಸ್ ಹಾಸ್ಟೆಲ್ ಬಗ್ಗೆ ಕೀಳು ಭಾವನೆ ಹುಟ್ಟಿಸಬೇಕಾದ ಎಲ್ಲಾ ದೃಶ್ಯಗಳೂ ಇದ್ದವು. ಲೇಡೀಸ್ ಹಾಸ್ಟೆಲ್‌ನಲ್ಲಿರುವ ಹುಡುಗಿಯರು ಬರೀ ಕುಡಿತ, ಧೂಮಪಾನ, ವ್ಯಭಿಚಾರದಲ್ಲಿ ಪಾಲ್ಗೊಳ್ಳುತ್ತಾರೆಂಬ ಅಭಿಪ್ರಾಯವನ್ನು ಈ ಚಿತ್ರ ಮೂಡಿಸುತ್ತದೆ. ಇದರಲ್ಲಿನ ದ್ವಂದ್ವಾರ್ಥದ ಸಂಭಾಷಣೆ, ಅಂಗಾಂಗ ಪ್ರದರ್ಶನ ಅತಿರೇಕಕ್ಕೆ ಹೋಗಿತ್ತು. ಹುಡುಗಿಯರು ತಮ್ಮ ಕಾಮತೃಷೆಯನ್ನು ತಣಿಸಿಕೊಳ್ಳುವ ಭರದಲ್ಲಿ ತರುಣನೊಬ್ಬನನ್ನು ಕೊಲೆ ಮಾಡುವ ದೃಶ್ಯವೂ ಈ ಚಿತ್ರದಲ್ಲಿದೆ. ಈ ಚಿತ್ರದಲ್ಲಿ ಹಿಂದಿಯ ಖ್ಯಾತ ಹಾಸ್ಯನಟ ಮಹಮೂದ್ ಮಾತ್ರವಲ್ಲದೆ ಕನ್ನಡದ ರಾಜೇಶ್,

ಬಿ.ಸರೋಜಾದೇವಿ, ರಾಮಕೃಷ್ಣ, ಭವ್ಯ, ಜೈಜಗದೀಶ್ ಮುಂತಾದ ಖ್ಯಾತರಲ್ಲರೂ ಇದರು. ಪತ್ರಿಕೆಗಳಲ್ಲಂತೂ ಈ ಚಿತ್ರದ ಅಸಹ್ಯ ದೃಶ್ಯಗಳ ಬಗ್ಗ ಸಾಕಷ್ಟು ಟೀಕೆಗಳು ಬಂದಿದ್ದವು. 'ಲೇಡೀಸ್ ಹಾಸ್ಟೆಲ್' ಚಿತ್ರದಲ್ಲಿ ಏಳು ಜನ ಯುವತಿಯರು ಯುವಕನೊಬ್ಬನನ್ನು ರೇಪ್ ಮಾಡುವ ದೃಶ್ಯ, ಅನಗತ್ಯ ಅಂಗಾಂಗ ಪ್ರದರ್ಶನಕ್ಕಿಳಿಯುವ ಹುಡುಗಿಯರು, ಸ್ತ್ರೀ ಪಾತ್ರಧಾರಿಗಳ ಅಶ್ಲೀಲ ಸಂಭಾಷಣೆಗಳು ಎಲ್ಲವೂ ಮಿತಿಮೀರಿ ಹೋಗಿತ್ತು. ಇಂಥ ಚಿತ್ರಕ್ಕೆ 'U' ಸರ್ಟಿಫಿಕೇಟ್ ಹೇಗ ಸಿಕ್ಕಿತೆನ್ನುವುದೇ ಅನುಮಾನ ಹುಟ್ಟಿಸಿತ್ತು. ಈ ಚಿತ್ರದಲ್ಲಿ ವಿದ್ಯಾರ್ಥಿನಿಯರು ಬೀದಿ ರೌಡಿಗಳಂತ ಹೊಡದಾಡುವುದು, ಮಧ್ಯರಾತ್ರಿ ಆಟೋ ಹತ್ತಿ ಹುಡುಗರ ರೂಮ್‌ಗೆ ಹೋಗುವುದು, ಅಣ್ಣ-ತಂಗಿ ಕುಡಿದು ಸಿಗರೇಟು ಸೇದುವುದು, ಮೇಡಮ್‌ಗಳೇ ವಿದ್ಯಾರ್ಥಿನಿಯರನ್ನು ವ್ಯಭಿಚಾರಕ್ಕೆ ಪ್ರೋತ್ಸಾಹಿಸುವುದು, ನಂದಿಬೆಟ್ಟದಲ್ಲಿ ಸಾಮೂಹಿಕ ಅರೆಬೆತ್ತಲೆ ನೃತ್ಯದಲ್ಲಿ ಪಾಲ್ಗೊಳ್ಳುವುದು, ವಿದ್ಯಾರ್ಥಿನಿಯರು ಬ್ಲೂಫಿಲಂ ನೋಡಿ, ಅದರಿಂದ ಪ್ರಭಾವಿತರಾಗಿ ಯುವಕನನ್ನು ರೇಪ್ ಮಾಡುವುದು ಮುಂತಾದ ಕೆಟ್ಟ ಪರಿಣಾಮ ಬೀರುವ ದೃಶ್ಯಗಳಿದ್ದೂ ಈ ಚಿತ್ರ ಹೇಗ ಬಿಡುಗಡೆಯಾಯಿತೆಂದು ಸಾರ್ವಜನಿಕವಾಗಿ ಪ್ರಶ್ನೆ ಕೇಳಿ ಬಂದಿತ್ತು.

ರೇಣುಕಾ ಶರ್ಮ ನಿರ್ದೇಶನದ 'ಮುತ್ತೈದೆ' ಚಿತ್ರಕ್ಕೂ ಆಕ್ಷೇಪ ಬಂದಿತ್ತು. ಇದರಲ್ಲಿ ಅಶ್ಲೀಲವೇನೂ ಇಲ್ಲದಿದ್ದರೂ ಮುತ್ತೈದೆ ಸಾವಿನ ಹಿನ್ನೆಲೆಯಲ್ಲಿ ದೃಶ್ಯಗಳನ್ನು ನಿರೂಪಿಸುವುದು ಸಮಂಜಸವಂತೂ ಅಲ್ಲ. ಎಳೆಯ ಹುಡುಗಿಯರಿಗೆ ಅಥವಾ ಒಟ್ಟಾರೆ ಹೆಣ್ಣಿಗೆ ಮುತ್ತೈದೆ ಸಾವನ್ನು ಬೋಧಿಸುವುದು ಸತೀಪದ್ಧತಿಯನ್ನು ಪ್ರೋತ್ಸಾಹಿಸಿದಷ್ಟೇ ಹೀನಕಾರ್ಯ ಎನ್ನುವುದು ನಮ್ಮ ಚಿತ್ರ ನಿರ್ಮಾಪಕರಿಗೆ, ನಿರ್ದೇಶಕರಿಗೆ ತಿಳಿಯಬೇಕೆಂದು ಪತ್ರಿಕೆಗಳು ಸಲಹೆ ನೀಡಿದ್ದವು. ಚಿತ್ರರಂಗದವರಿಗೆ ಈ ಜ್ಞಾನವಿಲ್ಲದಿದ್ದರೆ ಹಾಳಾಗಲಿ, ಸೆನ್ಸಾರ್ ಸಮಿತಿಗಾದರೂ ಇದರ ಜವಾಬ್ದಾರಿ ಇರಬೇಕಿತ್ತೆಂದು ಇಂಥ ದೃಶ್ಯವಿರುವ ಚಿತ್ರವನ್ನು ಹೇಗೆ ಬಿಡುಗಡೆಗೆ ಅನುಮತಿ ನೀಡಿದರೆಂದು ಪ್ರಶ್ನಿಸಿದ್ದವು. ರವಿಚಂದ್ರನ್ ಅಭಿನಯದ 'ಸ್ವಾಭಿಮಾನ', 'ಅಂಜದಗಂಡು' ಚಿತ್ರಗಳಿಗೂ ಟೀಕೆಗಳು ಬಂದಿದ್ದವು. 'ಪ್ರೇಯಸಿ ಪ್ರೀತಿಸು', 'ದಾದಾ' ಚಿತ್ರದ ಕೆಲವು ಅಂಶಗಳನ್ನು ಸೆನ್ಸಾರ್ ಮಂಡಳಿ ಹೇಗೆ ಬಿಟ್ಟಿತೆಂಬ ಪ್ರಶ್ನೆಗಳು ಹುಟ್ಟಿದ್ದವು. 'ವಿಜಯಖಡ್ಗ', 'ಗುಡುಗು ಸಿಡಿಲು' ಮುಂತಾದ ಹಲವಾರು ಚಿತ್ರಗಳು ಈ ಸಾಲಿಗೆ ಸೇರುತ್ತವೆ. ಅತಿಯಾದ ಹಿಂಸೆ, ಲೈಂಗಿಕ ಅಂಶಗಳಿಲ್ಲವೆಂದ ಮಾತ್ರಕ್ಕೆ ಅವು ಸಾಮಾನ್ಯ ಚಿತ್ರಗಳಂತೆ ಕಂಡರೂ ಹಲವಾರು ರೀತಿಯಲ್ಲಿ ಸೆನ್ಸಾರ್ ನೀತಿಯ ಉಲ್ಲಂಘನೆ ಮಾಡಿರುತ್ತವೆ. ಹೀಗೆ ಹಿಂಸೆ ಹಾಗೂ ಸೆಕ್ಸ್ ಅಥವಾ ರಾಜಕಾರಣಿಗಳನ್ನೋ, ಸರ್ಕಾರವನ್ನೋ ಹೀಯಾಳಿಸುವುದೇ ಮುಂತಾದವನ್ನು ಅತಿಯಾಗಿ ವೈಭವೀಕರಿಸುವುದಕ್ಕೆ ಮಾತ್ರ ಸೆನ್ಸಾರ್ ಕತ್ತರಿ ಪ್ರಯೋಗ ಮಾಡಲಾಗುತ್ತದ. ಉಳಿದಂತೆ ಅನೇಕ ವಿಚಾರಗಳಲ್ಲಿ ನಿಯಮಾವಳಿಗಳು ಸಡಿಲಗೊಳ್ಳುತ್ತಿವೆಯೆಂದು ಕೆಲವು ಚಿತ್ರಗಳನ್ನು ವೀಕ್ಷಿಸಿದಾಗ ಸುಲಭವಾಗಿ ತಿಳಿಯುತ್ತದ.

ದೌರ್ಬಲ್ಯ

ಇದಕ್ಕೆ ಸೆನ್ಸಾರ್ ಪರಿಶೀಲನಾ ಸಮಿತಿಯ ಸದಸ್ಯರ ದೌರ್ಬಲ್ಯವೂ ಕಾರಣವೆಂಬ ಚರ್ಚೆಯೂ ಆಗಿದೆ. ಅವರಲ್ಲಿ ಕೆಲವರು ಸ್ವಾರ್ಥಿಗಳು, ಹಣದಾಸೆಯುಳ್ಳವರೂ ಇದ್ದುದರಿಂದ ಅನಾಹುತಗಳಾಗಿದ್ದವೆಂಬ ಹೇಳಿಕೆಗಳು ಬಂದಿದ್ದವು. ಮದರಾಸಿನಲ್ಲಿ ಸೆನ್ಸಾರ್ ಆಗುತ್ತಿದ್ದಾಗ ಇಂಥ ಹಲವಾರು ತೊಂದರೆಗಳಾಗುತ್ತಿದ್ದುದಕ್ಕೆ ಕಾರಣ ಇತ್ತು. ಆದರೆ ಪ್ರಾದೇಶಿಕ ಮಂಡಳಿ ರಚಿತವಾದ ಮೇಲೂ ತಮ್ಮ 'ರಾವಣ ರಾಜ್ಯ' ಚಿತ್ರಕ್ಕೆ ಸೆನ್ಸಾರ್ ಕಿರುಕುಳ ನೀಡಿದ್ದರ ಕಾರಣವನ್ನು ದ್ವಾರಕೀಶ್ ಈ ರೀತಿಯಾಗಿ ಹೇಳಿದರು: ''ಸೆನ್ಸಾರ್ ಸಮಿತಿಯ ಸದಸ್ಯರೊಬ್ಬರು ಇಂಟರ್‌ಕಾಮ್ ಫೋನ್ ಕೊಡಿಸುವಂತೆ ಕೇಳಿದರು. ಆದರೆ ನಾನು ಕೊಡಿಸಲಿಲ್ಲ. ಅದಕ್ಕ ಈ ರೀತಿಯ ಕಿರುಕುಳ ನೀಡಿದರು.'' ದ್ವಾರಕೀಶ್ ಗುಟ್ಟು ಬಿಚ್ಚಿಟ್ಟಿದ್ದನ್ನು ಪತ್ರಿಕಗಳು ಪ್ರಕಟಿಸಿದುವಲ್ಲದೆ, ದ್ವಾರಕೀಶ್ ಮಾತನ್ನು ಅನುಮೋದಿಸಿದ್ದವು. ಇಲ್ಲವಾದಲ್ಲಿ ಇಲ್ಲಿ ಸರಾಸಗಟಾಗಿ ತಿರಸ್ಕೃತವಾಗುವ ಚಿತ್ರಗಳು ಟ್ರಿಬ್ಯೂನಲ್‌ಗೆ ಹೋಗಿ ಪುರಸ್ಕೃತವಾಗಿ ಬರುವುದಾದರೂ ಹೇಗೆ ? ಎನ್ನುವ ಪ್ರಶ್ನೆ ಹುಟ್ಟುತ್ತದೆ. ಇದೇ ಲಾಭ ಪಡೆದು 'ಮುಳ್ಳಲ್ಲೂ ಒಂದು ಮಲ್ಲಿಗೆ' ಯಂಥ ಚಿತ್ರಗಳು ಕೂಡ ದೆಹಲಿಗೆ ಹೋಗಿ ಗೆದ್ದು ಬಂದ ಉದಾಹರಣೆಗಳಿವೆ.

ಗೌರಿಶಂಕರ್ ನಿರ್ದೇಶನದ ವೀರಭದ್ರಪ್ಪನವರ ಸಣ್ಣಕಥೆಯನ್ನಾಧರಿಸಿದ 'ಕಂಡದ ಮಳೆ' ಚಿತ್ರ ಟ್ರಿಬ್ಯೂನಲ್‌ಗೆ ಹೋಗಿ ಬಂದಿತ್ತು. ಲಿಂಗಾಯಿತರ ಮಠದ ನೆರಳಲ್ಲಿ ನರಳಿ ನಲುಗಿದ ಮುಸ್ಲಿಂ ಕುಟುಂಬವೊಂದರ ಕಥೆಯನ್ನು ಹೊಂದಿರುವ ಈ ಚಿತ್ರ ಮೊದಲು ೧೯೮೭ರ ನವಂಬರ್ ೬ ರಂದು ಸೆನ್ಸಾರ್ ವೀಕ್ಷಣೆಗೆ ಹೋಗಿತ್ತು. ಅಲ್ಲಿ ತಿರಸ್ಕೃತವಾದ 'ಕಂಡದ ಮಳೆ' ಚಿತ್ರ ರಿವೈಸಿಂಗ್ ಕಮಿಟಿಯ ಮುಂದೆ ಹೋಯಿತು. ಚಿತ್ರದಲ್ಲಿ ಬಳಸಲ್ಪಟ್ಟ ಮಾತುಗಳು ಧರ್ಮವನ್ನು ಟೀಕಿಸುವಂಥದ್ದಾಗಿತ್ತೆಂದು ಹೇಳಲಾಗಿತ್ತು. ಅಲ್ಲಿ ಚಿತ್ರಕ್ಕ 'U' ಸರ್ಟಿಫಿಕೇಟ್ ನೀಡಿ ಇಪ್ಪತ್ತೊಂದು ಕಡೆ ಕತ್ತರಿಸಲು ಹೇಳಿದರು. ಆದರೆ ಇದೇ ಚಿತ್ರ ಟ್ರಿಬ್ಯೂನಲ್‌ಗೆ ಹೋದಾಗ ಕೇವಲ ಎರಡು ಕಡೆಯಷ್ಟೇ ಕತ್ತರಿ ಪ್ರಯೋಗಕ್ಕೆ ಒಳಗಾಯಿತು. ಇಷ್ಟಾದರೂ ನಂತರ ಈ ಚಿತ್ರ ಸ್ಟೇಟ್ಸ್ ಚಿತ್ರಮಂದಿರದಲ್ಲಿ ಪೊಲೀಸರ ಕಾವಲಿನಲ್ಲಿ ಪ್ರದರ್ಶನವಾಯಿತು. ನಾಗಾಭರಣರ 'ಆಹುತಿ' ಚಿತ್ರದಲ್ಲಿರುವ ಮದುವಣಗಿತ್ತಿಯನ್ನು ಬೆಂಕಿಯಲ್ಲಿ ಸುಡುವ ದೃಶ್ಯಕ್ಕೂ ವಿರೋಧ ಬಂದಿತ್ತು. ಅಪರಾಧಿಗಳ ಕಾರ್ಯ ವಿಧಾನವನ್ನು ಚಿತ್ರದಲ್ಲಿ ತೋರಿಸಬಾರದೆಂಬ ನಿಯಮಾವಳಿಯ ಆಧಾರದ ಮೇಲೆ ಈ ದೃಶ್ಯಕ್ಕೆ ಆಕ್ಷೇಪ ವ್ಯಕ್ತಪಡಿಸಲಾಗಿತ್ತು.

ಸೆನ್ಸಾರ್ ನಿಯಮಗಳು ಎಷ್ಟೇ ಕಟ್ಟುನಿಟ್ಟಾಗಿದ್ದರೂ ವ್ಯಾಖ್ಯಾನಿಸಿಕೊಳ್ಳುವವರ ಮನೋಧರ್ಮ ಕೂಡಾ ಕೆಲಸ ಮಾಡುತ್ತದೆ. 'ಮುದುಡಿದ ತಾವರೆ ಅರಳಿತು' ಕೆ.ವಿ.ಜಯರಾಂ ನಿರ್ದೇಶನದ ಚಿತ್ರ. ಕನ್ನಡದಲ್ಲಿ ಯಶಸ್ಸನ್ನು ಕಂಡ ಚಿತ್ರ. ಇದನ್ನು ಕೆ.ಸಿ.ಎನ್.ಚಂದ್ರಶೇಖರ್ ಅವರು ಬೆಂಗಾಲಿಯಲ್ಲಿ ತಯಾರಿಸಿದಾಗ ಸ್ತ್ರೀಯರನ್ನು ಅಪಮಾನಿಸುತ್ತಿದೆ ಎಂದು ಆಕ್ಷೇಪಿಸಿ ಪ್ರದರ್ಶನಕ್ಕೆ ಅನುಮತಿ ಕೊಡಲಿಲ್ಲ.

ಇನ್ನು ಕೆಲವೊಂದು ಚಿತ್ರಗಳನ್ನು ನೋಡಿದಾಗ ಸೆನ್ಸಾರ್ ಪ್ಯಾನಲ್ (ಸಮಿತಿ) ಚಿತ್ರವನ್ನು ಸಮಗ್ರವಾಗಿ ಪರೀಕ್ಷಿಸುತ್ತದೆಯೇ ಎನ್ನುವ ಅನುಮಾನ ಬರುತ್ತದೆಂದು 'ಲಾರಿ ಡ್ರೈವರ್' ಚಿತ್ರ ವೀಕ್ಷಿಸಿದ ಪ್ರೇಕ್ಷಕರೊಬ್ಬರು ಪತ್ರ ಬರೆದಿದ್ದರು. ೧೯೮೭ರಲ್ಲಿ ಬಂದ ಈ ಚಿತ್ರದ ಸಂಭಾಷಣೆಯ ಕುರಿತು ಪತ್ರದ ಸಾರಾಂಶ ಹೀಗಿದೆ : ''ಚಿತ್ರದಲ್ಲಿ ಖಳನಾಯಕನ ಮಗ ಹುಡುಗಿಯೊಬ್ಬಳು ಗರ್ಭವತಿಯಾಗಲು ಕಾರಣನಾಗಿರುತ್ತಾನ. ಖಳನಾಯಕ ಸಿಟ್ಟಿನಿಂದ ತನ್ನ ಮಗ ಹೀಗೇಕೆ ಮಾಡಿದನೆಂದು ಕೇಳಿದಾಗ ಆತನ ಸಹಾಯಕ 'ಹೆಣ್ಣು ಮಕ್ಕಳ ಜಲೆಗೆ ಬಿದ್ದರೆ ನಿನ್ನ ಮಗ ಏನ್ಮಾಡ್ತಾನೆ? ಆ ಸುಭಾಷ್ ಚಂದ್ರಬೋಸ್ ಕೂಡಾ ಹೀಗೇ ಆಡೋದು' ಎನ್ನುತ್ತಾನೆ. ನಿಜಕ್ಕೂ ದೇಶದ ಬಗ್ಗೆ ಗೌರವವಿರುವ ಯಾವೊಬ್ಬ ಸಂಭಾಷಣೆಕಾರನೂ ಇಂಥ ಸಂಭಾಷಣೆಯನ್ನು ಬರೆಯಲಾರ. ಬರೆದರೂ ಅದು ಯಾರೂ ಸಹಿಸುವಂಥದ್ದಲ್ಲ. ದೇಶಕ್ಕಾಗಿ ಹೋರಾಡಿ ಹುತಾತ್ಮರಾದ ಬೋಸ್‌ರಂಥವರ ಬಗ್ಗೆ ಇಷ್ಟು ಅವಹೇಳನ ಮಾಡುವುದು ನಿಜಕ್ಕೂ ಹೇಯ ಕೆಲಸ. ಸಂಭಾಷಣೆ ಬರೆದ ಕುಣಿಗಲ್ ನಾಗಭೂಷಣ್ ಈ ಮಟ್ಟಕ್ಕೆ ಹೋಗಬಾರದಿತ್ತು. ಚಿತ್ರದ ನಿರ್ದೇಶಕರೂ ಇದರತ್ತ ಗಮನ ಹರಿಸಲಿಲ್ಲವೆಂದರೆ ಅದು ದುರಂತ. ಆದರೆ ಕಂಡ ಕಂಡದ್ದನ್ನೆಲ್ಲ ಕತ್ತರಿಸಿ ಹಾಕುವ ಸೆನ್ಸಾರ್ ಈ ಚಿತ್ರ ನೋಡುವಾಗ ನಿದ್ದೆ ಮಾಡಿತ್ತೆ ?'' ಎನ್ನುವುದು ಆ ಪ್ರೇಕ್ಷಕರ ಪ್ರಶ್ನೆಯಾಗಿತ್ತು.

ಹೀಗ ರಾಷ್ಟ್ರಧ್ವಜ, ಕೆಲವು ಸಮವಸ್ತ್ರಗಳು ಮೊದಲಾದ ಹಲವು ಪವಿತ್ರವಾಗಿಡಬೇಕಾದವನ್ನು ಬಳಸುತ್ತಿರುವ ರೀತಿ ನೋಡುವವನಿಗೆ ಅಕ್ಷಮ್ಯ ಅನ್ನಿಸುವ ಹಂತಕ್ಕೇರಿದೆ. ಇವೆಲ್ಲ ರಾಷ್ಟ್ರೀಯ ಅಪರಾಧಗಳು. ಆದರೂ ದೊಡ್ಡ ಜನರಾದರೆ ನಿಭಾಯಿಸಿಕೊಳ್ಳುತ್ತಾರೆ.

ಪರಭಾಷೆಯ ತಲುಗು, ತಮಿಳು, ಹಿಂದಿ, ಮುಂತಾದ ಚಿತ್ರಗಳು ಇಲ್ಲಿ ಪ್ರದರ್ಶನವಾಗುತ್ತಿರುವುದನ್ನು ಕಂಡರೆ ಅವು ಸೆನ್ಸಾರ್ ಆಗಿವೆಯೇ, ಇಲ್ಲವೇ ಎನ್ನುವ ಅನುಮಾನ ಹುಟ್ಟಿಸುತ್ತವೆ. ಇಂಥ ಕೆಲವು ಚಿತ್ರಗಳ ಪ್ರೇರಣೆಯಿಂದ ಕನ್ನಡದಲ್ಲೂ ಅಂಥ ದೃಶ್ಯಗಳು ನುಸುಳುತ್ತವೆ, ಮಾತ್ರವಲ್ಲದೆ ಅಂಥ ಚಿತ್ರದ ತಯಾರಕರು 'ಆ ಭಾಷೆಯಲ್ಲಿ ಇರಬಹುದಾದರೆ ನಮ್ಮ ಚಿತ್ರದಲ್ಲಿ ಯಾಕಿರಬಾರದು. ಸೆನ್ಸಾರ್ ನಿಯಮ ಎಲ್ಲರಿಗೂ ಒಂದೇ ಅಲ್ಲವ ?' ಎನ್ನುವ ವಾದವನ್ನು ಮಂಡಿಸುತ್ತಾರೆ. ಇದರೊಂದಿಗೆ ಇಂಗ್ಲಿಷ್ ಚಿತ್ರಗಳಂತೂ ಇಲ್ಲಿನ ಯಾವುದೇ ನಿಯಮಾವಳಿಗೆ ಸ್ವಲ್ಪವೂ ಅನ್ವಯಿಸುವುದಿಲ್ಲ. ಆದರೂ ಭಾರತದಲ್ಲಿ ಅ ಚಿತ್ರಗಳು ಬಿಡುಗಡೆಯಾಗುವಾಗ ಇಲ್ಲಿ ಸೆನ್ಸಾರ್ ಆಗಿಯೇ ಬಿಡುಗಡೆಯಾಗಬೇಕು. ಇಂಥ ಚಿತ್ರಗಳಲ್ಲಿಯ ದೃಶ್ಯಗಳ ಬಗ್ಗೆ ಮಾಧ್ಯಮಗಳಲ್ಲಿ ಮಾತ್ರ ವಿಚಾರ ಮಂಥನವಾಗುತ್ತದೆ.

ಆದರೆ ಈಗ ಮನೆಮನೆಗೂ ಟಿ.ವಿ.ಗಳ ಮೂಲಕ ಬರುವ ಅನೇಕ ಚಾನಲ್‌ಗಳಲ್ಲಿ ಚಿತ್ರಗಳಿಗಿಂತ ಮಾರಕವಾದ ದೃಶ್ಯಗಳು ಬರಲಾರಂಭಿಸಿವೆ. ಇವುಗಳಿಗೆ ಸೆನ್ಸಾರ್‌ನ ಯಾವುದೇ ಕಾಯ್ದೆ ಅನ್ವಯಿಸುವುದಿಲ್ಲವೆನ್ನುವುದು ಅವುಗಳನ್ನು ತಯಾರಿಸುವವರಿಗೆ, ಪ್ರಸಾರ ಮಾಡುವವರಿಗೆ ದೊಡ್ಡ ಅನುಕೂಲವಾಗಿರುವುದಂತೂ ಹೌದು. ಆದರೆ ೧೯೬೭ರಲ್ಲಿ ಆಕಾಶವಾಣಿ ಕೇಂದ್ರ ಕನ್ನಡ ಚಿತ್ರಗೀತೆಗಳನ್ನು ಸಾಕಷ್ಟು ಪ್ರಸಾರ ಮಾಡುತ್ತಿಲ್ಲ ಎನ್ನುವ ಬಗ್ಗೆ ಚರ್ಚೆಯಾಗಿತ್ತು. ಇದಕ್ಕೆ ಕಾರಣ ಆಕಾಶವಾಣಿಯಲ್ಲಿ ಹಾಡುಗಳಿಗೆ ಮತ್ತೊಮ್ಮೆ ಸೆನ್ಸಾರ್ ಆಗುವುದು. ಎಂಥಾ ಅಜಗಜಾಂತರ ವ್ಯತ್ಯಾಸ

ಅಲ್ಲವೆ? ಆಕಾಶವಾಣಿಯಲ್ಲಿ ಆಗ ಒಂದಷ್ಟು ಹಳೆಯ ಹಾಡುಗಳನ್ನು ಬಿಟ್ಟರೆ ವರ್ಷ ವರ್ಷವೂ ಬಿಡುಗಡೆ ಆಗುತ್ತಿರುವ ಚಿತ್ರಗಳ ಗೀತೆಗಳು ಪ್ರಸಾರವಾಗುತ್ತಿರಲಿಲ್ಲ. ನೆರೆಯ ಮದ್ರಾಸಿನಲ್ಲಿ ಕೊಡುತ್ತಿರುವ ಪ್ರಾಧಾನ್ಯ ಇಲ್ಲಿ ಕೊಡುತ್ತಿರಲಿಲ್ಲ. ಚಿತ್ರ ಒಮ್ಮೆ ಸೆನ್ಸಾರ್ ಆದ ಮೇಲೆ ಅದರ ಗೀತೆಗಳನ್ನು ಆಕಾಶವಾಣಿ ಏಕೆ ಸೆನ್ಸಾರ್ ಮಾಡಬೇಕು ? ಈ ಸೆನ್ಸಾರ್ ಮಾಡಲೆಂದೇ ಒಂದು ಸಮಿತಿಯನ್ನು ನೇಮಿಸಲಾಗಿತ್ತು. ಅವರು ಒಪ್ಪಿದರ ಮಾತ್ರ ಅಂಥ ಹಾಡಿಗೆ ಆಕಾಶವಾಣಿಯಲ್ಲಿ ಪ್ರಸಾರ ಭಾಗ್ಯ. ಆದರೆ ಈ ಸಮಿತಿ ಸಭೆ ಸೇರುವುದೇ ವಿರಳ. ಹಾಗಾಗಿ ಹೊಸ ಹಾಡುಗಳು ಎಷ್ಟೇ ಜನಪ್ರಿಯವಾದರೂ ಆಕಾಶವಾಣಿಯಲ್ಲಿ ಬರುವುದಿಲ್ಲ. ಬೆಂಗಳೂರು ಆಕಾಶವಾಣಿಯ ಈ ನಿರ್ಲಕ್ಷ್ಯ ಹಾಗೂ ಮಡಿವಂತಿಕೆ ನಿಲ್ಲಬೇಕೆಂದು ಅರವತ್ತರ ದಶಕದಲ್ಲಿ ವ್ಯಾಪಕ ಒತ್ತಡ ಬಂದಿತ್ತು.

ಚಿತ್ರೋದ್ಯಮದ ದೃಷ್ಟಿಯಿಂದ ನೋಡುವಾಗ ಸೆನ್ಸಾರ್ ಬೇಡವೆನ್ನುವವರೇ ಅಧಿಕ. ಹಾಗೂ ಬೇಕಿದ್ದರೆ ನಾವೇ ಸೆನ್ಸಾರ್ ಮಾಡಿಕೊಳ್ಳುತ್ತೇವೆ, ನಮಗೂ ಸಾಮಾಜಿಕ, ನೈತಿಕ ಜವಾಬಾರಿಗಳ ಅರಿವಿದೆ ಎಂದು ಹೇಳುವುದು ಹಿಂದಿನಿಂದಲೂ ನಡೆದು ಬಂದಿದೆ. ಸೆನ್ಸಾರ್‌ನ ಪರಿಶೀಲನಾ ಸಮಿತಿಯಲ್ಲಿಯೇ ಸಿನಿಮಾ ಜ್ಞಾನ ಇಲ್ಲದವರು ಇರುವುದಾದರೆ ಸೆನ್ಸಾರ್‌ಶಿಪ್‌ಗೆ ಏನು ಮರ್ಯಾದೆಯಿರುತ್ತದೆಂದು ಕೇಳುತ್ತಾರೆ. ಕಥೆಯ ಸಂಬಂಧ, ಓಟವೇ ತಪ್ಪುವಂತೆ ಎಲ್ಲೆಂದರಲ್ಲಿ ಕತ್ತರಿಸುತ್ತಾರೆ. ನಂತರ ಆ ಚಿತ್ರಗಳಿಗೆ ಯಾವ ಸರ್ಟಿಫಿಕೇಟ್ ಕೊಟ್ಟರೇನು, ಸಾರ್ವಜನಿಕ ಪ್ರದರ್ಶನಕ್ಕಿದಲು ಆಗುತ್ತದೆಯೆ? ಕಥೆಯ ಓಟಕ್ಕೆ ಹಾನಿಯಾಗದಂತೆ ನೋಡಿಕೊಳ್ಳಬೇಕೆಂಬ ತಿಳಿವಳಿಕೆ ಅವರಿಗಿರಬೇಕೆಂದು ಕೆಲವು ನಿರ್ದೇಶಕರ ಅಭಿಪ್ರಾಯ. ಇದರೊಂದಿಗೆ ಸೆನ್ಸಾರ್ ಮಂಡಳಿಯವರು ಚಿತ್ರರಂಗದವರಿಗೆ ತಿಳಿವಳಿಕೆ ನೀಡುವಲ್ಲಿ ಕಾರ್ಯೋನ್ಮುಖರಾಗಬೇಕು. ಚಿತ್ರೀಕರಿಸಿದ ನಂತರ ಏಕಾಏಕಿಯಾಗಿ ಕತ್ತರಿಸಿ ಹಾಕುವುದಕ್ಕಿಂತ ಚಿತ್ರ ತಯಾರಕರಲ್ಲಿ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಬೇಕೆನ್ನುವ ಅಭಿಪ್ರಾಯವೂ ನಿರ್ದೇಶಕರೊಬ್ಬರಿಂದ ಬಂತು. ಇದಕ್ಕಿಂತ ಮುಖ್ಯವಾಗಿ ಸೆನ್ಸಾರ್ ನೀತಿ ಎಲ್ಲರಿಗೂ ಒಂದೇ ಆಗಿರಬೇಕೆಂಬ ಅಭಿಪ್ರಾಯ ಮಾತ್ರ ಉದ್ಯಮದಿಂದ ಒಕ್ಕೊರಲಿನಲ್ಲಿ ಬರುತ್ತದೆ. ಕೆಟ್ಟ ಪರಿಣಾಮ ಬೀರುತ್ತದೆಂದು ಒಳ್ಳೆಯ ಸಂದೇಶ ನೀಡದಿರಲು ಸಾಧ್ಯವೆ ಎನ್ನುವ ವಾದದ ಮೂಲಕ ಚಿತ್ರದೊಳಗೆ ಎಲ್ಲಾ ಅಂಶಗಳೂ ಸೇರುತ್ತವೆ.

ವೈಯಕ್ತಿಕ ಅಭಿಪ್ರಾಯ - ತೀರ್ಪು

ಹೆಚ್ಚು ಕಡಿಮೆ 'ಸಂಸ್ಕಾರ'ದ ಕಾಲದಿಂದಲೂ ಸೆನ್ಸಾರ್‌ನೊಂದಿಗೆ ಸಮರ ಸಾರುತ್ತಲೇ ಬಂದಿರುವ ಚಿತ್ರರಂಗದಲ್ಲಿ ಈಗೀಗಂತೂ ಬಹುತೇಕ ಚಿತ್ರಗಳು ಈ ಸುಳಿಗೆ ಸಿಲುಕುವಂತಿರುತ್ತವೆ. ನಿಯಮಾವಳಿಗಳು ಏನೇ ಇರಲಿ ಇವರ ಅಭಿಪ್ರಾಯಗಳು ಬೇರೆಯೇ ಇರುತ್ತವೆ. ನಟ ನಿರ್ದೇಶಕ ಕಾಶೀನಾಥ್‌ಗೂ, ಸೆನ್ಸಾರ್‌ಗೂ ಎಲ್ಲಿಲ್ಲದ ಸಂಬಂಧ. ಅವರ ಪ್ರತಿಯೊಂದು ಚಿತ್ರವೂ ಸೆನ್ಸಾರ್‌ನಲ್ಲಿ ಗದ್ದಲ ಮಾಡಿದೆ. ಹಾಗಾಗಿ ಅವರಿಗೆ ಟ್ರಿಬ್ಯೂನಲ್‌ಗೆ ಹೋಗುವುದು ಅಭ್ಯಾಸವಾಗಿ ಬಿಟ್ಟಿದೆ. ನಟ, ನಿರ್ದೇಶಕ ಕಾಶೀನಾಥ್ ತಮ್ಮ ಪ್ರತಿಯೊಂದು ಚಿತ್ರದಿಂದಲೂ ಕೊಂಚ ಕೊಂಚವಾಗಿ ನಿಯಮಗಳ ಆಚೆಗೆ ಬಂದು ನಿಂತವರು. ವಿಭಿನ್ನ ವಸ್ತು ನಿರೂಪಣೆಗಳ ಕಾರಣವಾಗಿ ಅವರ ಚಿತ್ರಗಳು ಸೆನ್ಸಾರ್ ಕತ್ತರಿಗೆ ಸಿಲುಕದೆ ತೆರೆಕಂಡದ್ದೇ ಇಲ್ಲ. ಛಲ ಬಿಡದ ವಿಕ್ರಮನಂತೆ ಅವರು ಎಲ್ಲ ಹಂತಗಳಲ್ಲೂ ನಿಂತು, ಪ್ರತಿಭಟಿಸಿ, ವಾದಿಸಿ ಗೆದ್ದು ಬಂದದ್ದೂ ಹೌದು. ಅವರ ಅನುಭವವೇ ಒಂದು ಗ್ರಂಥವಾಗುವಷ್ಟು. ಚಿತ್ರರಂಗದ ಒಟ್ಟಾರೆ ಅಭಿಪ್ರಾಯವನ್ನು ಕಾಶೀನಾಥ್ ಅವರ ಪ್ರತಿಕ್ರಿಯೆಯ ಮುಖಾಂತರ ಸಾಂಕೇತಿಕವಾಗಿ ಇಲ್ಲಿ ಹೀಗೆ ದಾಖಲಿಸಬಹುದು.

"ಚಿತ್ರ ಸೆನ್ಸಾರ್ ಆಗುವುದೆಂದರೆ ಅದು ಕೆಲವೇ ಕೆಲವರ ವೈಯಕ್ತಿಕ ಅಭಿಪ್ರಾಯವಾಗಬಾರದು. ಹಾಗೆ ಅವರ ಅಭಿಪ್ರಾಯವೇ ತೀರ್ಪು ಎಂದಾಗುವುದರಲ್ಲಿ ಅರ್ಥವೇ ಇಲ್ಲ. ಯಾರೋ ನಾಲ್ಕು ಜನರಿಗೆ ಚಿತ್ರ ಹಿಡಿಸಲಿಲ್ಲ ಎಂದಾಗ ಅಥವಾ ಕೆಟ್ಟದಾಗಿದೆ ಎನಿಸಿದಾಗ ಅದು ಜನರ ಅಭಿಪ್ರಾಯವಾಗುವುದು ಸಾಧ್ಯವಿಲ್ಲ. ಚಿತ್ರ ವೀಕ್ಷಿಸಿ ತೀರ್ಪು ನೀಡುವವರು ಸಾಮಾನ್ಯ ಪ್ರೇಕ್ಷಕರ ಸ್ಥಾನದಲ್ಲಿ ನಿಂತು ನೋಡಬೇಕು. ಅವರು ಪ್ರೇಕ್ಷಕರ ಪ್ರತಿನಿಧಿಯಾಗಬೇಕು. ಜನರ ಮನಸ್ಸನ್ನು ಅರಿತವರಾಗಿರಬೇಕು. ಇಲ್ಲವಾದರೆ ಒಂದೇ ಚಿತ್ರಕ್ಕೆ ತೀರ್ಪು ನೀಡುವವರು ನಾಸ್ತಿಕರಾಗಿದ್ದರೆ ಒಂದು ರೀತಿ, ಆಸ್ತಿಕರಾಗಿದ್ದರೆ ಮತ್ತೊಂದು ರೀತಿ, ಸಂಪ್ರದಾಯಸ್ಥ ಕುಟುಂಬದಿಂದ ಬಂದವರಾದರೆ ಒಂದು ರೀತಿ, ಮಡಿವಂತಿಕೆಯಿಂದ ದೂರ ಇರುವವರಾದರೆ ಮತ್ತೊಂದು ರೀತಿಯ ತೀರ್ಪುಗಳಾಗುವ ಸಾಧ್ಯತೆಯಿದೆ. ಹೀಗೆ ಒಂದೊಂದು ವಿಧದ ತೀರ್ಪು ನೀಡುವುದಾದರೆ ಸೆನ್ಸಾರ್ ಮಂಡಳಿ ಯಾಕೆ ಬೇಕು ?"

ಸೆಕ್ಸ್ - ಉಪ್ಪಿನಕಾಯಿ

"ಜನರು ಖಂಡಿತ ದಡ್ಡರಲ್ಲ. ಸಮಾಜವಾಗಲಿ, ತಾವಾಗಲಿ ಕೆಟ್ಟು ಹೋಗಬೇಕೆನ್ನುವ ಅವಿವೇಕಿಗಳಲ್ಲ. ಯಾವುದು ಒಳ್ಳೆಯದು, ಯಾವುದು ಕೆಟ್ಟದೆಂದು ಅವರೇ ತೀರ್ಮಾನಿಸುತ್ತಾರೆ. ಓಟು ನೀಡಿ ತಮ್ಮ ನಾಯಕನನ್ನು ಆಯ್ಕೆ ಮಾಡಿ ದೇಶದ ವ್ಯವಸ್ಥೆಯನ್ನೇ ಆತನ ಕೈಗೆ ಕೊಡುವ ಜನರಿಗೆ ತಮಗೆ ಎಂಥ ಚಿತ್ರ ಬೇಕೆಂದು ಆಯ್ದುಕೊಳ್ಳುವ ಜಾಣ್ಮೆ ಇರುವುದಿಲ್ಲವೆ ? ಜನ ಕೆಟ್ಟ ಚಿತ್ರಗಳನ್ನೇ ನೋಡುತ್ತಾರೆ, ಅಂಥ ಚಿತ್ರಗಳನ್ನೇ ಬಯಸುತ್ತಾರೆ ಎನ್ನುವುದು ಶುದ್ಧ ಸುಳ್ಳು. ಹಿಂದೆ ಬಂದಿದ್ದ 'ಮುಳ್ಳಲ್ಲೂ ಮಲ್ಲಿಗೆ', 'ಲೇಡೀಸ್ ಹಾಸ್ಟೆಲ್' ಎಂಬ ಅಶ್ಲೀಲ ಚಿತ್ರಗಳನ್ನು ಜನ ತಾವಾಗಿಯೇ ತಿರಸ್ಕರಿಸಿದ್ದಾರೆ. ಸೆಕ್ಸ್ ಉಪ್ಪಿನಕಾಯಿ ಇದ್ದಂತೆ. ಅದು ಊಟವಾಗುವುದಕ್ಕೆ ಸಾಧ್ಯವೇ ಇಲ್ಲ. ಚಿತ್ರಗಳ ಬದಲಿಗೆ ಬ್ಲೂಫಿಲಂ ತೋರಿಸಿದರೆ ಜನ ಮುಗಿ ಬೀಳುತ್ತಾರೆನ್ನುವ ಕಲ್ಪನೆ ತಪ್ಪು. ನೋಡಿದ್ದನ್ನೇ ಜನ ಎಷ್ಟು ಸಾರಿ ನೋಡುತ್ತಾರೆ ? ಹಾಗಾಗಿ ಅವ್ಯಾವುವೂ ಯಾರೂ ತಡೆಯದಿದ್ದರೂ ತಡೆದರೂ ಹೆಚ್ಚು ಕಾಲ ನಿಲ್ಲುವುದಿಲ್ಲ. ಆದರೆ ಸೆನ್ಸಾರ್ ಸಮಿತಿಯಲ್ಲಿ ತಮ್ಮದೇ ಸರಿ ಅನ್ನುವ ಮನೋಭಾವ ಇದೆ. ಇದು ಸರಿಯಲ್ಲ. ಅವರು ಜನರ ಭಾವನೆಗಳನ್ನು ಅರ್ಥ ಮಾಡಿಕೊಳ್ಳಬೇಕು. ನಿಯಮಗಳ ಬಗ್ಗೆ, ರೀತಿ-ನೀತಿಗಳ ಬಗ್ಗೆ ನಮಗೂ ಜವಾಬಾರಿ ಇರುತ್ತದೆ. ಹಾಗೆ ನೋಡುತ್ತ ಸಂಪೂರ್ಣ ಗೈಡ್‌ಲೈನ್ಸ್ ಆಧರಿಸಿಯೇ ಚಿತ್ರವನ್ನು ಸೆನ್ಸಾರ್ ಮಾಡುವುದಾದರೆ ಯಾವ ಚಿತ್ರವೂ ಪ್ರದರ್ಶನಕ್ಕೆ ಬರುವುದು ಸಾಧ್ಯವಿಲ್ಲ. ಬದಲಾಗುವ ಕಾಲಕ್ಕೆ ತಕ್ಕಂತೆ ಎಲ್ಲರೂ ಹೊಂದಿಕೊಳ್ಳಬೇಕು. ಸಿನಿಮಾಗಳಿಗಿಂತ ಈಗ ಮನೆಯಲ್ಲಿರುವ ಟಿ.ವಿ.ಯೇ ಹೆಚ್ಚು ಅಪಾಯಕಾರಿ. ಇದನ್ನು ತಡೆಯುವಲ್ಲಿ ಸೋಲುವ ಕಾನೂನು, ಚಿತ್ರ ನಿರ್ಮಾಪಕರಿಗೆ ತೊಂದರೆ ಕೊಡುವುದರಲ್ಲಿ ಏನು ಅರ್ಥವಿದೆ ? ಸಿನಿಮಾ ಹೇಳಿ ಕೇಳಿ ವ್ಯವಹಾರವನ್ನಾಧರಿಸಿದ ಕಲೆ. ಇಲ್ಲಿ ಬಂಡವಾಳ ಹಾಕಿದ ನಿರ್ಮಾಪಕರಿಗೆ ಅದರಿಂದ ಲಾಭ ಬರುವುದೂ ಮುಖ್ಯವಾಗುತ್ತದೆ. ಸಮಾಜವನ್ನು ಕೆಡಿಸುವುದಾಗಲಿ, ಉದ್ಧಾರ ಮಾಡುವುದಾಗಲಿ ಸಿನಿಮಾಗಳಿಂದ ಸಾಧ್ಯವಿಲ್ಲ. ಹಾಗಿದ್ದಿದ್ದರೆ ರಷ್ಯಾ ದೇಶಕ್ಕಿಂದು ಈ ಗತಿ ಬರುವುದು ಸಾಧ್ಯವಿರಲಿಲ್ಲ. ಯಾಕೆಂದರೆ ಅಲ್ಲಿ ಬಂದಷ್ಟು ದೇಶಪ್ರೇಮದ ಚಿತ್ರಗಳು ಇನ್ನೆಲ್ಲಿಯೂ ಬಂದಿಲ್ಲ. ನಮ್ಮ ಜನರೂ ಅಷ್ಟೇ. ಸಿನಿಮಾವನ್ನು ಸಿನಿಮಾ ಎಂದೇ ನೋಡುತ್ತಾರೆ. ಚಿತ್ರಮಂದಿರದ ಒಳಗೆ ಕುಳಿತು ತೆರೆಯ ಮೇಲಿನ ಅನಾಥ ಹುಡುಗನ ಕಷ್ಟವನ್ನು ನೋಡಲಾಗದೆ ಮರುಗುವ ಅದೇ ಜನ ಚಿತ್ರಮಂದಿರದ ಹೊರಗೆ ಬಂದಾಗ ಅಂಥದೇ ಹುಡುಗ ಹೊಟ್ಟೆಗೆ ಹಿಟ್ಟಿಲ್ಲವೆಂದು ಭಿಕ್ಷೆಗೆ ಕೈಯೊಡ್ಡಿದರೆ ಬೈದು ಕಳುಹಿಸುತ್ತಾರೆ. ಹಾಗಾಗಿ ಚಿತ್ರವನ್ನು ಅನುಭವಿಸುವುದೇ ಬೇರೆ, ವಾಸ್ತವವೇ ಬೇರೆ.

"ಇನ್ನು ಸೆಕ್ಸ್‌ನ ವಿಚಾರಕ್ಕೆ ಬಂದರೂ ಅಷ್ಟೆ. ಅದು ಬೇರೆ ದೇಶದ ರೀತಿ ನೀತಿಯೇನಲ್ಲ. ಅದು ಗುಪ್ತವಾಗಿದ್ದಷ್ಟೂ ಕುತೂಹಲ ಜಾಸ್ತಿಯಾಗಿ ಕೆಟ್ಟ ಪರಿಣಾಮ ಬೀರುತ್ತದೆಯೇ ಹೊರತು ಮುಕ್ತವಾಗಿದ್ದಾಗ ಅಲ್ಲ. ಅದು ಊಟ ತಿಂಡಿಯಷ್ಟೇ ಸಹಜ ಕ್ರಿಯೆ ಎನಿಸಿದಾಗ ಮಾರಕವೆನಿಸುವುದಿಲ್ಲ. ನಮ್ಮ ಸಂಸ್ಕೃತಿಯನ್ನು ಗಮನಿಸಿದರೆ ಬಹಳ ಹಿಂದೆಯೇ ಇದನ್ನು ಹೇಳಿದ್ದಾರೆ. ಕಾಮಶಾಸ್ತ್ರದಂಥ ಪುಸ್ತಕ ನಮ್ಮಲ್ಲಿಯೇ ಬಂದಿಲ್ಲವೆ ? ಲೈಂಗಿಕತೆಗೆ ಸಂಬಂಧಿಸಿದಂತೆ ಪುರಾತನ ಕಾಲದಲ್ಲೂ ಅದನ್ನು ವೈಜ್ಞಾನಿಕವಾಗಿ ಯೋಚಿಸಿದ್ದಾರೆ. ಕೆಲವು ದೇವಸ್ಥಾನಗಳ ಸುತ್ತ ಶಿಲ್ಪಗಳಲ್ಲಿ ಅದರ ವಿವಿಧ ಭಂಗಿಗಳನ್ನು ಕೆತ್ತಿರುವುದು ಅಂದಿನವರ ಆರೋಗ್ಯವಂತ ಮನಸ್ಸಿಗೆ ಹಿಡಿದ ಕನ್ನಡಿಯಾಗಿದೆ. ಅಂದಿನ ಋಷಿ ಮುನಿಗಳು ಯೋಚಿಸಿದಷ್ಟು ವೈಜ್ಞಾನಿಕವಾಗಿ ಇಂದಿನವರು ಯೋಚಿಸುವುದಿಲ್ಲ. ಇದನ್ನೆಲ್ಲ ತಿಳಿದು ಪರಾಮರ್ಶಿಸುವವರನ್ನು ಮಾತ್ರ ಸೆನ್ಸಾರ್ ಬೋರ್ಡಿಗೆ ಮತ್ತು ಪ್ರಾದೇಶಿಕ ಘಟಕಗಳಿಗೆ ಸದಸ್ಯರನ್ನಾಗಿ ನಾಮಕರಣ ಮಾಡುವುದು ಅಗತ್ಯ. ಈ ಸ್ಥಾನಕ್ಕೆ ಯಾವುದೇ ಅರ್ಹತೆಯಿಲ್ಲದ ರಾಜಕೀಯ ಪ್ರಭಾವಗಳಿಂದ ಆ ಸ್ಥಾನಕ್ಕೆ ಬಂದವರಿಗೆ ಇದೆಲ್ಲ ಅರ್ಥವಾಗುತ್ತದೆಯೆ ?" ಎಂದು ಕಾಶೀನಾಥ್ ತಮ್ಮ ವಾದಸರಣಿ ಹರಿಯಬಿಡುತ್ತಾರೆ. ಇದು ಇಡೀ ಉದ್ಯಮವನ್ನು ಪ್ರತಿನಿಧಿಸುವ ಅಭಿಪ್ರಾಯ.

ಭಾರತದಲ್ಲಿ ವರ್ಷವೊಂದಕ್ಕೆ ಸುಮಾರು ೯೦೦ ಚಿತ್ರಗಳು ಹಾಗೂ ಅಸಂಖ್ಯಾತ ಕಿರುಚಿತ್ರಗಳು, ಸಾಕ್ಷ್ಯಚಿತ್ರಗಳೂ ತಯಾರಾಗುವಾಗ ಯಾವುದೇ ಕಾನೂನು ಕಟ್ಟಳೆಗಳಿಲ್ಲದೆ ಸಂಪೂರ್ಣ ಸ್ವಾತಂತ್ರ್ಯ ನೀಡುವ ಸಾಧ್ಯತೆಯಿಲ್ಲ. ಅದು ಸ್ವೇಚ್ಛೆಯಾಗುವ ಅಪಾಯವಿದೆ. ಪ್ರತಿದಿನ ಸುಮಾರು ಒಂದೂವರೆ ಕೋಟಿ ಜನರು ಚಿತ್ರ ನೋಡುತ್ತಾರೆ. ಇಂಥ ಪ್ರಭಾವಶಾಲಿ ಮಾಧ್ಯಮಕ್ಕೆ ಕಾಯಿದೆ, ಕಾನೂನುಗಳಿಲ್ಲದೆ ಹೋದರೆ ಅದರ

ಪರಿಣಾಮ ಊಹಿಸಲೂ ಅಸಾಧ್ಯ. ಇತರ ಮಾಧ್ಯಮಗಳಂತೆ ಇದೂ ಒಂದು ಮಾಧ್ಯಮವೇ ಆದರೂ ಸಂವಿಧಾನದಲ್ಲಿ ಇದನ್ನು ವಿಶೇಷವಾಗಿ ಪರಿಗಣಿಸಿ ಎಚ್ಚರಿಕೆಯಿಂದ ಗೈಡ್‌ಲೈನ್ಸ್ ತಯಾರಿಸಲು ಕಾರಣಗಳಿಲ್ಲದೆ ಇಲ್ಲ. ಪ್ರಜಾಪ್ರಭುತ್ವ ರಾಷ್ಟ್ರವಾದ ಭಾರತದಲ್ಲಿ ಮಾತು ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ ಮೂಲಭೂತ ಹಕ್ಕು. ಆದರೆ ಸಿನಿಮಾದಂಥ ದೃಶ್ಯ ಮಾಧ್ಯಮದಲ್ಲಿ ಇದನ್ನು ಸಡಿಲಗೊಳಿಸಿದರೆ ಅದರ ದುರುಪಯೋಗವಾಗಬಹುದೆಂಬ ಕಾರಣಕ್ಕೆ ಅದಕ್ಕೊಂದು ಕಾಯ್ದೆ ರೂಪಿಸಬೇಕಾಯಿತು.

ಚಿತ್ರ ಬಿಡುಗಡೆಗೆ ಮೊದಲು ಸೆನ್ಸಾರ್‌ನ ಪ್ಯಾನಲ್ ಸದಸ್ಯರು ಚಿತ್ರ ವೀಕ್ಷಿಸಿ ಕಾನೂನಿನ ತಕ್ಕಡಿಯಲ್ಲಿ ಅದನ್ನಿಟ್ಟು ತೂಗಿ ಸರ್ಟಿಫಿಕೇಟ್ ನೀಡುವ ವಿಧಾನ ಸರಿಯೆ? ಇದು ಒಂದು ರೀತಿಯಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಭಂಗ ತಂದಂತಾಗುವುದಿಲ್ಲವೆ ? ಚಲನಚಿತ್ರ ಕೂಡಾ ಪತ್ರಿಕೋದ್ಯಮದಂತೆಯೇ ಒಂದು ಮಾಧ್ಯಮ. ಆದರೆ ಪತ್ರಿಕೆಗಳಿಗೆ ಇಲ್ಲದ ಸೆನ್ಸಾರ್ ಪದ್ಧತಿ ಚಲನಚಿತ್ರಕ್ಕೇಕಿರಬೇಕು ? ಪ್ರಶ್ನೆಗಳು ಅಂದಿನಿಂದ ಇಂದಿನವರೆಗೂ ಇವೆ. ಆಡಿಯೋ-ವಿಷುಯಲ್ ಮಾಧ್ಯಮವಾದ ಸಿನಿಮಾ ಬೇರಾವುದೇ ಮಾಧ್ಯಮಕ್ಕಿಂತ ಹೆಚ್ಚು ಪ್ರಭಾವಶಾಲಿಯಾದುದು ಮತ್ತು ಹೆಚ್ಚು ಪರಿಣಾಮ ಬೀರಬಲ್ಲದು ಎಂಬ ಕಾರಣಕ್ಕೆ ವಿಶೇಷ ಗಮನ ನೀಡಲಾಯಿತು.

ನಿಯಮದ ಪ್ರಕಾರ ಒಮ್ಮೆ ಸೆನ್ಸಾರ್ ಆದ ಮೇಲೆ ಅದಕ್ಕೆ ಮತ್ತೆ ಸೇರಿಸುವುದಾಗಲಿ, ಕಡಿಮೆ ಮಾಡುವುದಾಗಲಿ ಮಾಡಿದರೆ ಅದು ಅಪರಾಧ. ಆದರೆ ಇವು ನಿರಂತರವಾಗಿ ನಡೆಯುತ್ತಲೇ ಇವೆ. ಇದನ್ನು ತಡೆಗಟ್ಟುವುದು ಪೊಲೀಸರ ಜವಾಬ್ದಾರಿಯಾದರೂ ಸಮರ್ಪಕವಾಗಿ ಕಾರ್ಯ ನಿರ್ವಹಣೆಯಾಗುತ್ತಿಲ್ಲ. ಸೆನ್ಸಾರ್ ಸಮಿತಿಗಳ ಸದಸ್ಯರು ಪೊಲೀಸಿನವರಲ್ಲ. ಇಂತಹ ಅಪರಾಧಗಳು ನಡೆದಾಗ ಅಪರಾಧಿಗಳ ವಿರುದ್ಧ ಕ್ರಮ ಕೈಗೊಳ್ಳುವುದು ಪೊಲೀಸಿನವರ ಕೆಲಸ. ಆದರೆ ಪ್ರತಿ ಪೊಲೀಸ್ ಠಾಣೆಯಲ್ಲಿಯೂ ದಿನನಿತ್ಯದ ಕರ್ತವ್ಯಗಳನ್ನೇ ನಿರ್ವಹಿಸಲು ಸಾಕಾದಷ್ಟು ಸಿಬ್ಬಂದಿ ಇರುವುದಿಲ್ಲ. ಜೊತೆಗೆ ಈ ಜವಾಬ್ದಾರಿಯನ್ನೂ ಹೊರುವಷ್ಟು ವ್ಯವಧಾನ ಅವರಿಗೆ ಇರುವುದಿಲ್ಲ. ಹೀಗಾಗಿ ಇಂತಹ ಪ್ರಸಂಗಗಳು ಶಿಕ್ಷೆಗೆ ಒಳಗಾಗದಿರುವುದೇ ಹೆಚ್ಚು. ಚಿತ್ರಕ್ಕೆ ಕತ್ತರಿ ಪ್ರಯೋಗವಾಗಿದ್ದರೆ ಸರ್ಟಿಫಿಕೇಟ್‌ನ ಮೇಲೆ ತ್ರಿಕೋನದ ಗುರುತನ್ನು ಹಾಕಲಾಗುತ್ತದೆ. ಹಿಂಸೆ, ಲೈಂಗಿಕತೆ, ದುಶ್ಚಟ ಮುಂತಾದ ಅಂಶಗಳನ್ನು ವೈಭವೀಕರಿಸಿ ದುಷ್ಪರಿಣಾಮ ಬೀರದಂತೆ ತಡೆಯುವುದು ಮಾತ್ರವಲ್ಲದೆ ಮಾನಸಿಕ ಹಾಗೂ ಧಾರ್ಮಿಕ ಭಾವನೆಗಳು ಕೆರಳದಂತೆ ನೋಡಿಕೊಳ್ಳುವ ಜವಾಬ್ದಾರಿಯೂ ಇದರ ಮೇಲಿದೆ.

ಸೆಂಟ್ರಲ್ ಬೋರ್ಡ್ ಆಫ್ ಫಿಲಂ ಸರ್ಟಿಫಿಕೇಶನ್

ಆರಂಭದಲ್ಲಿ ಸಿ.ಬಿ.ಎಫ್.ಸಿ. ಚಿತ್ರಗಳಿಗೆ ಎರಡು ಬಗೆಯ ಸರ್ಟಿಫಿಕೇಟ್‌ಗಳನ್ನು ಮಾತ್ರ ಕೊಡುತ್ತಿತ್ತು.

1) U = Unrestricted Public Exhibition

2) A = Restricted to Adult Audience

ನಂತರ ೧೯೮೩ರಲ್ಲಿ ಎಲ್ಲರೂ ನೋಡಬಹುದಾದಂಥ ಹಾಗೂ ವಯಸ್ಕರಿಗೆ ಮಾತ್ರ ಎನ್ನುವಂಥ ಈ ಎರಡು ಬಗೆಯ ಚಿತ್ರಗಳೊಂದಿಗೆ ಇನ್ನೂ ಎರಡು ರೀತಿಯ ಸರ್ಟಿಫಿಕೇಟ್ ನೀಡುವ ಪದ್ಧತಿ ಜಾರಿಗೆ ಬಂದಿತು.

1) UA = Unrestricted Public Exhibition subject to parental guidance for children below age of twelve.

2) S = Restricted to specialised audience such as doctors trade unions.

ಹೀಗೆ U A ಎಂಬ ರಕ್ಷಕರ ಅನುಮತಿಯ ಮೇರೆಗೆ ಮಕ್ಕಳು ನೋಡಬಹುದಾದ ಚಿತ್ರಗಳು ಹಾಗೂ 'S' ಎನ್ನುವ ವೈದ್ಯರಂಥ ವಿಶೇಷ ಪ್ರೇಕ್ಷಕರು ಮಾತ್ರ ನೋಡುವಂಥ ಚಿತ್ರಗಳೆಂಬ ವಿಂಗಡಣೆ ಮಾಡಲಾಯಿತು. ಸಿನಿಮಾಟೋಗ್ರಾಫ್ ಆ್ಯಕ್ಟ್ ಬಂದಾಗಿನಿಂದಲೂ ಹಲವಾರು ಬಾರಿ ತಿದ್ದುಪಡಿಗಳಾಗಿವೆ.

ಸೆಂಟ್ರಲ್ ಬೋರ್ಡ್ ಆಫ್ ಫಿಲ್ಮ್ ಸರ್ಟಿಫಿಕೇಶನ್ ಮುಖ್ಯ ಕಚೇರಿ ಮುಂಬಯಿಯಲ್ಲಿದೆ. ಉಳಿದಂತೆ ಹಲವಾರು ಕಡೆಗಳಲ್ಲಿ ಪ್ರಾದೇಶಿಕ ಕಚೇರಿಗಳಿವೆ. ದೆಹಲಿಯಲ್ಲಿ FCAT (Film Certification Appellate Tribunal) ಇದೆ. ಎಕ್ಸಾಮಿನಿಂಗ್ ಕಮಿಟಿ ಹಾಗೂ ರಿವೈಸಿಂಗ್ ಕಮಿಟಿಯಲ್ಲಿನ ತೀರ್ಪು ಅಂತಿಮವಾಗದಿದ್ದಾಗ ಈ ಟ್ರಿಬ್ಯೂನಲ್‌ಗೆ ಹೋಗುವ ಅವಕಾಶವಿದೆ.

ಇಷ್ಟೆಲ್ಲಾ ನೀತಿ-ನಿಯಮಗಳಿದ್ದರೂ ಇದರ ಉಲ್ಲಂಘನೆ ನಡೆಯುತ್ತಲೇ ಇರುತ್ತದೆ. ಸಾಮಾನ್ಯವಾಗಿ ಇದರ ನಿಯಮ ಉಲ್ಲಂಘನೆ ಎಂದರೆ ವಯಸ್ಕರ ಚಿತ್ರಗಳನ್ನು ಮಕ್ಕಳಿಗೆ ತೋರಿಸುವುದು, 'S' ಸರ್ಟಿಫಿಕೇಟ್ ಹೊಂದಿದ ಚಿತ್ರವನ್ನು ಸಂಬಂಧ ಪಡದವರಿಗೆ ತೋರಿಸುವುದು, ಸೆನ್ಸಾರ್ ತಿರಸ್ಕೃತ ಚಿತ್ರಗಳನ್ನು ಸಾರ್ವಜನಿಕರ ಮುಂದೆ ಪ್ರದರ್ಶನಕ್ಕಿಡುವುದು, ಸೆನ್ಸಾರ್ ಆಗುವ ಮೊದಲೇ ಚಿತ್ರಗಳನ್ನು ಪ್ರದರ್ಶಿಸುವುದು, ಸೆನ್ಸಾರ್ ಆಗದ ಚಿತ್ರಗಳಿಗೆ ಇನ್ನಾವುದೋ ಚಿತ್ರದ ಸರ್ಟಿಫಿಕೇಟನ್ನು ತೋರಿಸಿಯೊ, ಫೋರ್ಜರಿ ಮಾಡಿಸಿಯೋ ಚಿತ್ರಪ್ರದರ್ಶನ ಮಾಡುವುದು, ಇದರೊಂದಿಗೆ ಒಮ್ಮೆ ಸೆನ್ಸಾರಿನಲ್ಲಿ ಕತ್ತರಿಸಿದ ಭಾಗವನ್ನು ಮರುಜೋಡಣೆ ಮಾಡುವುದು, ಇವುಗಳಲ್ಲಿ ಯಾವುದನ್ನು ಮಾಡಿದರೂ ಕಾನೂನಿನ ಉಲ್ಲಂಘನೆಯಾಗುತ್ತದೆ. ಹೀಗೆ ಕಾನೂನು ಬಾಹಿರವಾಗಿ ನಡೆದುಕೊಂಡಿದ್ದು ಸಾಬೀತಾದಲ್ಲಿ ಆ ತಪ್ಪಿಗಾಗಿ ಮೂರು ತಿಂಗಳಿನಿಂದ ಮೂರು ವರ್ಷದವರೆಗೆ ಅವರು ಮಾಡಿದ ತಪ್ಪಿನ ಆಧಾರದ ಮೇಲೆ ಸೆರವಾಸವನ್ನು ವಿಧಿಸಬಹುದು. ಹಾಗೂ ಇಪ್ಪತ್ತು ಸಾವಿರದಿಂದ ಒಂದು ಲಕ್ಷದವರೆಗೆ ದಂಡ ವಿಧಿಸಬಹುದು ಅಥವಾ ಎರಡಕ್ಕೂ ಒಳಪಡಿಸಬಹುದು. ಹೀಗೆ ಈ ರೀತಿಯ ಕಾನೂನು ಬಾಹಿರ ಪ್ರಕ್ರಿಯೆ ಎಲ್ಲಿಯೇ ನಡೆಯುತ್ತಿದ್ದರೂ, ಯಾವುದೇ ಪೊಲೀಸ್ ಅಧಿಕಾರಿ ಯಾವುದೇ ಕ್ಷಣದಲ್ಲಿ ದಾಳಿ ಮಾಡಿ ಪ್ರಿಂಟ್ ಅನ್ನು ವಶಪಡಿಸಿಕೊಂಡು ಸಂಬಂಧಿಸಿದವರನ್ನು ಬಂಧಿಸುವ ಅಧಿಕಾರ ಹೊಂದಿರುತ್ತಾರೆ.

ನಿಯಮಾವಳಿಗಳು

ಇವೆಲ್ಲ ಕಡಿಮೆಯಾಗಬೇಕಾದರೆ ಚಿತ್ರ ತಯಾರಕರಿಗೆ ನೈತಿಕ ಹಾಗೂ ಸಾಮಾಜಿಕ ಪ್ರಜ್ಞೆಯ ಜೊತೆಗೆ ಸಿನಿಮಾಟೋಗ್ರಾಫ್ ಆ್ಯಕ್ಟ್‌ನ ನಿಯಮಾವಳಿಗಳ ತಿಳಿವಳಿಕೆ ಮೂಡಬೇಕು. ಎಲ್ಲರಲ್ಲಿಯೂ ಜಾಗೃತಿ ಮೂಡಿದಾಗ ಉತ್ತಮ ಚಿತ್ರಗಳು ಬರಲು ಸಾಧ್ಯವಾಗುತ್ತದಲ್ಲದೆ ಉತ್ತಮ ಅಭಿರುಚಿಯೂ ಬೆಳೆಯುತ್ತದೆ. ಹಾಗಾದರೆ ಸೆನ್ಸಾರ್‌ಗೆ ಯೋಗ್ಯವಾದ ಚಿತ್ರಗಳು ಹೇಗಿರಬೇಕು? ಈ ಪ್ರಶ್ನೆಗೆ ಉತ್ತರವೆಂದರೆ -

* ಚಿತ್ರಗಳಲ್ಲಿ ಸಾಮಾಜಿಕ ಮೌಲ್ಯ ಹಾಗೂ ಜವಾಬ್ದಾರಿಗಳ ಬಗ್ಗೆ ಕಾಳಜಿಯಿರಬೇಕು.
* ಸಮಾಜದಲ್ಲಿನ ಒಳ್ಳೆಯ ಬದಲಾವಣೆಗೆ ಪೂರಕವಾಗಿರಬೇಕು.
* ಚಿತ್ರದಲ್ಲಿನ ಶುದ್ಧ ಹಾಗೂ ಆರೋಗ್ಯಕರ ವಾತಾವರಣ ನಿರ್ಮಾಣ ಮಾಡುವ ಗುಣವಿರಬೇಕು.
* ಸಮಾಜ ವಿರೋಧಿ ಚಟುವಟಿಕೆ ಹಾಗೂ ಹಿಂಸೆಯನ್ನು ವೈಭವೀಕರಿಸಬಾರದು.
* ಅಪರಾಧಿಗಳ ಕಾರ್ಯವಿಧಾನವನ್ನು ಹಾಗೂ ಅಪರಾಧವನ್ನು ಪ್ರೇರೇಪಿಸುವಂತಹ ಚಿತ್ರಣವಿರಬಾರದು.
* ಅಪ್ರಾಪ್ತ ವಯಸ್ಸಿನ ಮಕ್ಕಳನ್ನು ಹಿಂಸೆಯಲ್ಲಿ, ಅಪರಾಧದಲ್ಲಿ ಭಾಗವಹಿಸುವಂತೆ ಚಿತ್ರಿಸುವುದಾಗಲಿ, ಹಿಂಸಿಸುವುದಾಗಲಿ ಮಾಡಬಾರದು.
* ದೈಹಿಕ ಹಾಗೂ ಮಾನಸಿಕ ಕಾಯಿಲೆಗೆ ತುತ್ತಾದವರನ್ನು ಹಾಸ್ಯಾಸ್ಪದವಾಗಿ ಚಿತ್ರಿಸಬಾರದು.
* ಅನಗತ್ಯವಾಗಿ ಕ್ರೂರವಾಗಿ ನಡೆಸಿಕೊಂಡು ಹಿಂಸಿಸುವ ದೃಶ್ಯವನ್ನಿಡಬಾರದು.
* ತಡೆಯಬಹುದಾದ ಹಿಂಸೆ, ಕ್ರೌರ್ಯ, ಭಯಾನಕ ದೃಶ್ಯಗಳನ್ನು ಮನರಂಜನೆಗೆಂದು ಉದ್ದೇಶಪೂರ್ವಕವಾಗಿ ಚಿತ್ರೀಕರಿಸಬಾರದು.
* ವಿಪರೀತ ಪರಿಣಾಮ ಬೀರುವಂತೆ ಕುಡಿತವನ್ನು ಸಮರ್ಥಿಸುವುದಾಗಲಿ, ವೈಭವೀಕರಿಸುವುದಾಗಲಿ ಮಾಡಬಾರದು.
* ಡ್ರಗ್ಸ್ ಮುಂತಾದ ಮಾದಕ ವಸ್ತುಗಳ ಸೇವನೆಯನ್ನು ಪ್ರೇರೇಪಿಸುವುದಾಗಲಿ, ವರ್ಣಿಸುವುದಾಗಲಿ, ಸಮರ್ಥಿಸುವುದಾಗಲಿ ಮಾಡಕೂಡದು.
* ಯಾರದೇ ಮಾನ ನೋಯಿಸುವಂಥ ಅಶ್ಲೀಲತೆ, ಅಸಭ್ಯತನ ತೋರಿಸಬಾರದು.
* ಅಸಭ್ಯವೆನಿಸುವ ದ್ವಂದ್ವಾರ್ಥದ ಮಾತುಗಳು ಇರಬಾರದು.

* ಮಹಿಳೆಯರನ್ನು ಕೆಟ್ಟದಾಗಿ, ಕೆಳದರ್ಜೆಯಾಗಿ ಚಿತ್ರಿಸಬಾರದು.
* ಮಹಿಳೆಯ ಮೇಲೆ ಲೈಂಗಿಕ ಹಿಂಸಾಚಾರ, ಮಾನಭಂಗ ಅಥವಾ ಅತ್ಯಾಚಾರದ ಪ್ರಯತ್ನದ ದೃಶ್ಯಗಳನ್ನು ವಿವರವಾಗಿ ತೋರಿಸಬಾರದು.
* ದೃಶ್ಯದಲ್ಲಾಗಲಿ, ಸಂಭಾಷಣೆಯಲ್ಲಾಗಲಿ ಯಾವುದೇ ಜನಾಂಗ ಅಥವಾ ಧರ್ಮವನ್ನು ಅಗೌರವಕ್ಕೀಡು ಮಾಡಬಾರದು.
* ದೇಶದ ಏಕತೆ ಹಾಗೂ ಸಾರ್ವಭೌಮತೆಯ ಬಗ್ಗೆ ಅವಹೇಳನ ಮಾಡಬಾರದು.
* ದೇಶದ ಭದ್ರತೆಯನ್ನು ಗಂಡಾಂತರಕ್ಕೀಡುಮಾಡುವ ದೃಶ್ಯಗಳನ್ನಿಡಬಾರದು.
* ರಾಷ್ಟ್ರಧ್ವಜ ಹಾಗೂ ಲಾಂಛನಗಳನ್ನು ಅಗೌರವದಿಂದ ನೋಡುವ ದೃಶ್ಯಗಳಿರಬಾರದು.

ಇವೇ ಮುಂತಾದ ಅಂಶಗಳು ನಿಯಮಾವಳಿಗಳ ಸಂಕ್ಷಿಪ್ತ ಸಾರಾಂಶ. ಇದನ್ನಿಟ್ಟುಕೊಂಡು ಹೇಗೆ ಚಿತ್ರ ಮಾಡಬಹುದು ಅಥವಾ ಚಿತ್ರಗಳಲ್ಲಿ ಇದನ್ನು ಹೇಗೆ ಬಳಸಿಕೊಂಡಿದ್ದಾರೆಂಬುದನ್ನು ಯಾರೂ ಗ್ರಹಿಸಬಹುದಾಗಿದೆ.

* * *

ಸೆನ್ಸಾರ್‌ನಿಂದ ಟ್ರಿಬ್ಯುನಲ್‌ಗೆ ಹೋದ ಚಿತ್ರಗಳು ಹೊರ ಬಂದ ಬಗೆ

ಕನ್ನಡದಿಂದ 'ಕೆಂಡದ ಮಳೆ' ದೆಹಲಿಯಲ್ಲಿ ಸೆನ್ಸಾರ್ ಆಗಲು ಪ್ರಯಾಣ ಮಾಡಿದ ಮೊದಲ ಚಿತ್ರ. ಇದರ ನಂತರ ವರ್ಷಕ್ಕೊಂದು ಚಿತ್ರವಾದರೂ ಹೋಗಲೇಬೇಕಾದ ಅನಿವಾರ್ಯಗಳು ಎದುರಾದವು. 'ಅನಂತನ ಅವಾಂತರ' ಸಂಪೂರ್ಣ ಚಿತ್ರವನ್ನೇ ತಿರಸ್ಕರಿಸಿದ ಇಲ್ಲಿನ 'ಪರಿಶೀಲನಾ ಸಮಿತಿ' (Examining Committee) ಹಾಗೂ 'ಪುನರ್ ಪರಿಶೀಲನಾ ಸಮಿತಿ' (Revising Committee), ಟ್ರಿಬ್ಯುನಲ್‌ನಲ್ಲಿ ಕೆಲವು ದೃಶ್ಯ ಹಾಗೂ ಕೆಲವು ಧ್ವನಿ ಕಳೆದುಕೊಂಡು 'ಎ' ಪ್ರಮಾಣ ಪತ್ರದೊಡನೆ ಬಿಡುಗಡೆಯಾಯಿತು. ಆದರೆ ಅಲ್ಲಿಗೆ ಹೋದರೂ ಸೆನ್ಸಾರ್ ಆಗದೇ ಹಾಗೆಯೇ ಉಳಿದು ದಾಖಲೆ ಮಾಡಿದ ಕನ್ನಡದ ಏಕೈಕ ಚಿತ್ರ 'ಪುಂಡ ನಿರುಂಭರು'.

'ಉತ್ತರಧ್ರುವ' ಚಿತ್ರವೂ ವಿವಾದಾತ್ಮಕ ಸಂಭಾಷಣೆಗಳಿಂದಾಗಿ ದೆಹಲಿಯ ಸೆನ್ಸಾರಿನ ಮುಖ ನೋಡಬೇಕಾಯಿತು.

ಟ್ರಿಬ್ಯುನಲ್‌ನಲ್ಲಿ ಅದರ ಅಧ್ಯಕ್ಷರಾಗಿ ಹೈಕೋರ್ಟ್‌ನ ಒಬ್ಬ ನಿವೃತ್ತ ನ್ಯಾಯಾಧೀಶರು ಹಾಗೂ ಸದಸ್ಯರಾಗಿ ಮೂವರು ವ್ಯಕ್ತಿಗಳಿರುತ್ತಾರೆ. ಸಾಮಾನ್ಯವಾಗಿ ಇವರಲ್ಲಿ ಇಬ್ಬರಾದರೂ ಮಹಿಳೆಯರಿರುವುದು ವಾಡಿಕೆ. ಈ ಸಮಿತಿ ತನ್ನ ಸದಸ್ಯರ ಅಭಿಪ್ರಾಯದ ಮತ ಪರಿಶೀಲಿಸಿ, ಬಹುಮತದ ಮೇಲೆ ನಿರ್ಣಯ ಕೈಗೊಳ್ಳುವುದು.

ಈ ಸಮಿತಿಯ ಮುಂದೆ ನಿರ್ಮಾಪಕ / ನಿರ್ದೇಶಕನಾದವನಿಗೆ ಮೊದಲು ಲಿಖಿತ ರೂಪದಲ್ಲಿ ತನ್ನ ಅಹವಾಲು ಹೇಳಿಕೊಳ್ಳಲು ಅವಕಾಶವಿದೆ. ಪ್ರತಿಯೊಂದು ದೃಶ್ಯಕ್ಕೆ ಸೂಚಿಸಲಾದ ಕಟ್ ಬಗ್ಗೆ ವಿವರಿಸಿ, ವಾದ ಮಾಡಬೇಕು. ಸಾಮಾನ್ಯವಾಗಿ ಆ ದೃಶ್ಯ ಚಿತ್ರದಲ್ಲಿ ಬರಲು ಪ್ರೇರಣೆಯಾಗಿದ್ದ ಘಟನ, ಪತ್ರಿಕೆಯ ವರದಿ ಉಲ್ಲೇಖಿಸಿ, ಇದು ಬದುಕಿಗೆ ತೀರ ಹತ್ತಿರವಾದ ಸಹಜವಾದ ದೃಶ್ಯವೆಂದು ವಿವರಿಸಬಹುದು. ಎರಡನೆಯ ವಿಧಾನ ಆದೇ ರೀತಿಯ ದೃಶ್ಯಗಳಿಗೆ ಬೇರೆ ಚಿತ್ರಗಳಲ್ಲಿ ಈ ಮೊದಲು ಅನುಮತಿ ನೀಡಿದ್ದರೆ ಅದನ್ನು (precedence) ಎಂದು ಉಲ್ಲೇಖಿಸಿ ನಿಮ್ಮ ವಾದ ಮಂಡಿಸಬಹುದು.

ಇದೇ ರೀತಿ 'ಆಡಿಯೋ' ಅಭ್ಯಂತರಗಳಲ್ಲಿ, ಸಂವಾದ ಕುರಿತು ವಾದ ಮಾಡುವಾಗ ಅದು ಸಾಹಿತ್ಯಿಕ ಭಾಷೆ, ಜನಪದ ಭಾಷ, ಆಡು ಭಾಷೆ, ಗಾದೆ ಮಾತು ಇಂತಹದಾಗಿದರೆ ಉಲ್ಲೇಖಿಸಬಹುದು. ಇದಲ್ಲದೆ ಯಾವ ಅರ್ಥದಲ್ಲಿ ಒಂದು ಶಬ್ದ ಬಳಸಲಾಗಿದೆಯೆಂದು ವಿವರಿಸಬಹುದು. ಅದಕ್ಕೆ ಇನ್ನೊಂದು ಅರ್ಥವಿದ್ದರೆ ಆ ಅರ್ಥದಲ್ಲಿ ಬಳಸಿಲ್ಲ ಎಂದು ತಿಳಿಸಿದರೆ 'ಅನುಮಾನ ಫಲ' (Benefit of doubt) ವೆಂದು ಅದನ್ನು ಒಪ್ಪಬಹುದು. ಉದಾ : 'ಗಾಂಧೀಜಿಯವರು ತಾವು ಎಂದೂ ಟೋಪಿ ಹಾಕಿಕೊಳ್ಳಲಿಲ್ಲ. ಆದರೆ ಇತರರಿಗೆ ಹಾಕಿದರು' ಎಂದಾಗ ಪಕ್ಷದ ದೀಕ್ಷೆ ನೀಡಲು ಕಾರ್ಯಕರ್ತರಿಗೆ ಟೋಪಿ ತೊಡಿಸಿದರು ಎಂಬ ಅರ್ಥ, ಅದರ ಇನ್ನೊಂದು ಭಾಗ ಬೇರೆಯವರಿಗೆ 'ಟೋಪಿ ಹಾಕಿದರು' 'ಮೋಸ ಮಾಡಿದರು' ಎಂಬುದು ಸ್ವೀಕಾರವಾಗುವುದಿಲ್ಲ. (ಸಮಿತಿಯಲ್ಲಿ ಇಬ್ಬರು ಭಾಷೆ ಬಲ್ಲವರಾಗಿರುತ್ತಾರೆ.)

ಹೀಗೆ ತರ್ಕ, ವಾದ ಸರಣಿ, ಇತರ ಚಿತ್ರಗಳ ವಿಡಿಯೋ ದೃಶ್ಯಗಳ ತುಣುಕು ಪ್ರದರ್ಶನ, ಪತ್ರಿಕೆಯ ವರದಿಗಳ ತುಣುಕು, ಕಲಾತ್ಮಕ ವ್ಯಾಪಾರಿ ಚಿತ್ರಗಳಿಗೆ ಬಳಸುವ ಬೇರೆ ಬೇರೆ ಮಾನದಂಡ ಹಾಗೂ ಚಿತ್ರರಂಗದ ರಾಜಕೀಯ ಶಕ್ತಿಗಳ ಗುಂಪುಗಾರಿಕೆಯ ಪರಿಣಾಮ ಸಮಿತಿಯ ಮೂಲಕ ವ್ಯಕ್ತವಾಗಿದ್ದರೆ ಅದನ್ನು ವಿವರಿಸಬಹುದು. ಇದನ್ನೆಲ್ಲ ಆಧರಿಸಿ ಒಂದೊಂದಾಗಿಯೇ ಚಿತ್ರದಲ್ಲಿನ ದೃಶ್ಯ, ಧ್ವನಿಗಳ ಕುರಿತ ಮೊದಲ ಸಮಿತಿಗಳ ಆಕ್ಷೇಪಗಳನ್ನು ಮನ್ನಾ ಮಾಡುತ್ತಾ ಬರುತ್ತಾರೆ. ಕೆಲವೊಮ್ಮೆ ಕೆಳಗಿನ ಸಮಿತಿಗಳ ನಿರ್ಣಯದ ಕೆಲವು ಅಂಶ ಎತ್ತಿ ಹಿಡಿಯಬಹುದು. ಇದಕ್ಕೆ ನಿಮ್ಮ ಒಪ್ಪಿಗೆ ಸಿಕ್ಕ ನಂತರ ವಿವರವಾದ ತೀರ್ಪನ್ನು ಒಂದು ವಾರದಲ್ಲಿ ಲಿಖಿತ ರೂಪದಲ್ಲಿ, ಸದಸ್ಯರ ಮತ ಭಿನ್ನಾಭಿಪ್ರಾಯವಿದ್ದರೆ ಅದನ್ನೂ ದಾಖಲಿಸಿ ತೀರ್ಪು ಕಳಿಸಿ, ಪ್ರಮಾಣ ಪತ್ರ ನೀಡಲು ನಿರ್ದೇಶನ ನೀಡುತ್ತಾರೆ. ನಿರ್ಮಾಪಕ ಇತರ ಪ್ರಕ್ರಿಯೆಗಳಾದ ನೆಗಟಿವ್, ಪಾಸಿಟಿವ್ ಸಲ್ಲಿಸುವಿಕೆ, ಲ್ಯಾಬ್ ಪ್ರಮಾಣ ಪತ್ರ ಒದಗಿಸುವುದು ಇತ್ಯಾದಿ ಮುಗಿಸಿದ ನಂತರ ಸ್ಥಳೀಯ ಸೆನ್ಸಾರ್ ಪ್ರಮಾಣ ಪತ್ರ ನೀಡುವುದು. ಟ್ರಿಬ್ಯುನಲ್ ತೀರ್ಪು ನೀಡುವಾಗ ಹಾಗೂ ನಂತರ ನಿರ್ಣಯದ ವಿರುದ್ಧ ಸೆನ್ಸಾರಿನ ಪ್ರಾದೇಶಿಕ ಮಂಡಳಿ ಕೋರ್ಟ್‌ಗೆ ಮೇಲ್ಮನವಿ ಹೋಗಬಹುದು. ಆದರೆ ಸಾಮಾನ್ಯವಾಗಿ ತಮ್ಮ ನಿಲುವನ್ನು ಸಮರ್ಥಿಸಿಕೊಳ್ಳಲು ಆಗದ ಈ ಮಂಡಳಿಯವರು ಟ್ರಿಬ್ಯುನಲ್ ತೀರ್ಮಾನವನ್ನು ಒಪ್ಪಿ ಜಾರಿಗೊಳಿಸುತ್ತಾರೆ. ಹಿಂದಿಯಲ್ಲಿ ಆರ್.ಕೆ.ನಯ್ಯರ್ ನಿರ್ಮಿಸಿ, ನಿರ್ದೇಶಿಸಿದ, ಸಾಧನಾ ನಟಿಸಿದ 'ಪತಿ ಪರಮೇಶ್ವರ' ಇಂತಹ ದುರಂತಕ್ಕೆ ಬಲಿಯಾಗಿತ್ತು. ಇದೊಂದು ಅಪವಾದ ಮಾತ್ರ.

ನಿರ್ಮಾಪಕ, ನಿರ್ದೇಶಕ ತನ್ನ ಚಿತ್ರದ ಬಗ್ಗೆ ವಾದ ಮಾಡಲು, ತರ್ಕ ಮಂಡಿಸಲು ಅಸಮರ್ಥನಿದ್ದಲ್ಲಿ ಯಾರಾದರೂ ಕಾನೂನು ತಜ್ಞರ (Legal counsel) ಮುಖಾಂತರವೂ ಲಿಖಿತವಾಗಿ ತಮ್ಮ ಹೇಳಿಕೆ ಮಂಡಿಸಬಹುದು. ನಂತರದ ನೇರ ಮಾತುಕತೆಯಲ್ಲಿ ಮಾತ್ರ ನಿರ್ದೇಶಕ ಇರಲೇಬೇಕು.

ಸಾಮಾನ್ಯವಾಗಿ ಟ್ರಿಬ್ಯುನಲ್‌ಗೆ ಹೋದ ಚಿತ್ರಗಳು ವಾದ-ವಿವಾದ, ಪತ್ರಿಕೆಯ ಪ್ರಚಾರದಿಂದಾಗಿ ಪ್ರೇಕ್ಷಕರ ಕುತೂಹಲ ಕೆರಳಿಸಿ ಯಶಸ್ವಿಯಾಗುವುದರಿಂದ ಇದನ್ನೇ ಒಂದು ಸಾಧನವಾಗಿ ಬಳಸಿದ ನಿರ್ಮಾಪಕರೂ ಇದ್ದಾರೆ. ಇದಕ್ಕೆ ಮರಾಠಿಯ ದಾದಾ ಕೊಂಡ್ಕೆಯನ್ನು ಉಲ್ಲೇಖಿಸಬಹುದು. ಕೆಲವೊಮ್ಮೆ ಇಂತಹ ಚಿತ್ರಗಳು ಪ್ರಶಸ್ತಿ ಪಡೆದು ಗಲ್ಲಾ ಪೆಟ್ಟಿಗೆಯಲ್ಲಿ ನೆಲ ಕಚ್ಚಿದ್ದೂ ಉಂಟು.

ಉಲ್ಲೇಖಗಳ ಅಳವಿಗೆ ಮೀರಿದ ಸಂಗತಿಗಳು ನಡೆಯುತ್ತಿವೆ. ಕ್ರಮೇಣ ಸೆನ್ಸಾರ್ ವಿವಾದ ಒಂದು ವಿಶೇಷ ಎಂಬ ಕುತೂಹಲವನ್ನು ಉಳಿಸಿಕೊಂಡಿಲ್ಲ. ಪತ್ರ ಕೊಡಲು ತಿರಸ್ಕರಿಸುತ್ತಾರೆ. ರಿವ್ಯಸಿಂಗ್‌ನಲ್ಲಿ ಕೊಂಚ ಔದಾರ್ಯ ತೋರುತ್ತಾರೆ, ಅದನ್ನು ಮೀರಿದರ ಟ್ರಿಬ್ಯುನಲ್ ಇದೆ. ಸಣ್ಣ ಕಾರಣಕ್ಕೂ ಕೋರ್ಟು ಕಟ್ಟೆ, ಹತ್ತುವುದು ಪ್ರಾರಂಭವಾಗಿದ. ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಪ್ರಜಾಪ್ರಭುತ್ವ ಇರುವ ರಾಷ್ಟ್ರಗಳಲ್ಲಿ ಹೇಗ ವ್ಯಾಖ್ಯಾನಿಸಿಕೊಳ್ಳಬೇಕೆಂಬುದೇ ಪ್ರಶ್ನೆಯಾಗಿದೆ.

ಚಿಂತನಾ ಸ್ವಾತಂತ್ರ್ಯ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ ಸತ್ಯಾನ್ವೇಷಣೆಗ ವ್ಯಕ್ತಿಯ ವ್ಯಕ್ತಿತ್ವದ ಪೂರ್ಣ ವಿಕಾಸಕ್ಕೆ, ಆ ಮೂಲಕ ಇಡೀ ಸಮಾಜದ ವಿಕಾಸಕ್ಕೆ ಅತ್ಯವಶ್ಯಕ. ಕೆಲವೇ ಜನರಿಗೆ ಅರಿವಾದ ಸತ್ಯ ಎಲ್ಲರಿಗೂ ಸತ್ಯವೆಂದು ಒಪ್ಪಿಗೆಯಾಗುತ್ತದೆಯೆ ? ಸತ್ಯ ಯಾವುದು ಎಂದು ತಿಳಿಸುವ ಅಧಿಕಾರವನ್ನು ನಾವು ಸರ್ಕಾರಕ್ಕೆ ಕೊಟ್ಟಿದ್ದೇವೆಯೇ? ಸತ್ಯಾನ್ವೇಷಣೆಯ ಹಕ್ಕು ಪ್ರತಿಯೊಬ್ಬನಿಗೂ ಇದೆಯಲ್ಲವೆ ?

ಚಲನಚಿತ್ರರಂಗದಲ್ಲಿಯೂ ಯಾವುದೇ ರೀತಿಯ ಚಿತ್ರವನ್ನಾದರೂ ಪ್ರದರ್ಶಿಸುವ ಹಕ್ಕು, ಯಾವುದೇ ವ್ಯಕ್ತಿಯ ಹಕ್ಕಿಗೆ ಧಕ್ಕೆ ತರಕೂಡದಾಗಲೀ, ಸಾಮಾಜಿಕ ಶಿಸ್ತು, ನೈತಿಕತೆ, ಸಭ್ಯತೆ ಇವು ಸಾಮಾಜಿಕ ಜವಾಬ್ದಾರಿಯೇ ಹೊರತು ಸರ್ಕಾರದ ಜವಾಬ್ದಾರಿ ಅಲ್ಲ. ಚಿಂತನಾ ಸ್ವಾತಂತ್ರ್ಯಕ್ಕೆ ಅಭಿವ್ಯಕ್ತಿ ಸ್ವಾತಂತ್ರ್ಯದ ಜೊತೆಗೇ ಆಸ್ವಾದನಾ ಸ್ವಾತಂತ್ರ್ಯವೂ (Right to Receive) ಇದೆ ಎಂಬ ವಾದವನ್ನು ಎತ್ತಿ ಕೆ.ಎಂ.ಶಂಕರಪ್ಪನವರು ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದರು. ಅವರ ಅಭಿಮತಕ್ಕೆ ಮೂಲಾ ಭಕ್ತವತ್ಸಲ ಅವರು ದನಿಗೂಡಿಸಿದರು. ತೀರಾ ಮೂಲಭೂತ ಪ್ರಶ್ನೆ, ಸಂವಿಧಾನಾತ್ಮಕವಾದ ಚರ್ಚೆಯಾಗಬೇಕೆಂಬ ಕಾರಣಕ್ಕಾಗಿ ಈ ವಾದ ನೆನೆಗುದಿಗೆ ಬಿದ್ದಿತು.

ಅವರು ಚಾಪೆ ಕೆಳಗೆ ತೂರಿದರೆ ನಾವು ರಂಗೋಲಿ ಕೆಳಗೆ ತೂರುತ್ತೇವೆ ಅನ್ನುವ ಜಾಯಮಾನದವರಾದ ನಮ್ಮಲ್ಲಿ ಕಟ್ಟುನಿಟ್ಟಿನ ನಿಯಮಗಳ ನಡುವೆಯೂ ನುಸುಳಿಕೊಳ್ಳುವುದು ಹೇಗೆಂದು ಯೋಚಿಸುವವರೇ ಕಾಣುತ್ತಿದ್ದಾರೆ. ಹೀಗಾಗಿ ಸೆನ್ಸಾರ್ ವಿವಾದಗಳು ನಿತ್ಯ ಕೇಳಿ ಬರುತ್ತಿವೆ. ಸೆನ್ಸಾರ್ ಸಲಹಾ ಸಮಿತಿಗಳೂ ಸಡಿಲಾಗಿವೆ, ಚಿತ್ರ ನಿರ್ಮಾಣ ಮಾಡುವವರೂ ಅವರಿಷ್ಟದಂತೆ ವಿಜೃಂಭಿಸುತ್ತಿದ್ದಾರೆ. ಇವುಗಳ ನಡುವೆ ಸ್ವನಿಯಂತ್ರಣ ಎಂಬುದು ಇದೆಯೇ, ಸಾಧ್ಯವೇ ಎಂದು ಕೇಳಿಕೊಳ್ಳುವಂತಾಗಿದೆ.



ಶೂನ್ಯದಿಂದ ಸ್ವಾವಲಂಬನೆಯ ಹಾದಿಯಲ್ಲಿ

ಕನ್ನಡ ನಾಡಿನಲ್ಲಿ ಚಲನಚಿತ್ರ ಸ್ಟುಡಿಯೋಗಳ ಪ್ರಾರಂಭ, ಬೆಳೆದು ಬಂದ ಬಗೆಯೇ ಒಂದು ರೋಚಕ ಕಥಾನಕ. ಇಂಥ ಪ್ರಥಮಗಳನ್ನು ಸಾಧಿಸಿ, ಉದ್ಯಮಶೀಲತೆಯನ್ನು ಮೆರೆದವರು ಬಹುತೇಕ ಕನ್ನಡೇತರರು ಎಂಬುದೊಂದು ವಿಪರ್ಯಾಸ. ಕ್ರಮೇಣ ಕನ್ನಡದವರೇ ಸಾಹಸ ಮಾಡಿದ್ದು, ಶ್ರಮಿಸಿ ಸಾಧಿಸಿದ್ದು ಅವಕ್ಕದೇ ಸಾಟಿ. ಆದರೆ ಚಲನಚಿತ್ರವನ್ನು ಗಂಭೀರವಾಗಿ ಪರಿಗಣಿಸಿ, ಇದನ್ನೊಂದು ವೃತ್ತಿಯಾಗಿ ಸ್ವೀಕರಿಸಿದವರ ಸಂಖ್ಯೆ ಬೆರಳೆಣಿಕೆಯಷ್ಟು. ಆ ಕಾರಣಕ್ಕಾಗಿಯೇ ಈ ಕ್ಷೇತ್ರದಲ್ಲಿ ಶ್ರಮಿಸಿದವರೆಲ್ಲ ಒಂದಲ್ಲ ಒಂದು ಅರ್ಥದಲ್ಲಿ ಸಾಹಸಿಗಳಾಗಿಯೇ ತೋರುತ್ತಾರೆ. ಸಾಹಸ-ಪ್ರಯೋಗಗಳಷ್ಟರಲ್ಲೇ ನಿಲ್ಲದೆ ಅದನ್ನೇ ಒಂದು ಉದ್ಯಮವಾಗಿ ಕೊನೆ ತನಕ ನಿರ್ವಹಿಸಿದವರು ತೀರಾ ವಿರಳ. ಹೀಗಾಗಿ ಅಧಿಕ ಬಂಡವಾಳವನ್ನು ಬೇಡುವ ಸ್ಟುಡಿಯೋ ನಿರ್ಮಾಣಕ್ಕೆ ಧೈರ್ಯ ಮಾಡುವ ಸಂಗತಿ ದೂರವೇ ಉಳಿಯಿತು. ಇಷ್ಟಾದರೂ ಮೂಕಿಚಿತ್ರಗಳ ಕಾಲಕ್ಕೆ ಬೆಂಗಳೂರು ಮೂಕಿಚಿತ್ರ ತಯಾರಿಕೆಯ ಕರ್ನಾಟಕದ ಪ್ರಮುಖ ಕೇಂದ್ರವಾಗಿತ್ತು ಎಂಬುದು ಮುಖ್ಯ ಸಂಗತಿ. ಕನ್ನಡನಾಡು ಈ ಹೊಸ ಆವಿಷ್ಕಾರವನ್ನು ಮುಕ್ತ ಮನಸ್ಸಿನಿಂದ ಸ್ವಾಗತಿಸಿತ್ತು. ಆದರೆ ಕ್ರಮೇಣ ಆ ಪ್ರೀತ್ಯಾದರಗಳಿಂದ ಚಿತ್ರರಂಗ ವಂಚಿತವಾಯಿತು. ಅದಕ್ಕೆ ಅನೇಕ ಕಾರಣಗಳೂ ಇವೆ. ಅವೆಲ್ಲ ಗಂಭೀರವಾಗಿ ಚರ್ಚೆಯಾಗಬೇಕಾದ ಸಂಗತಿಗಳು.

೧೯೨೭-೨೮ರಲ್ಲಿ ಮೂಕಿಚಿತ್ರ ತಯಾರಿಕೆಗೆ ಮುಂಬಯಿ ನಗರವೇ ಕೇಂದ್ರವಾಗಿತ್ತು. ಈ ಅವಧಿಯಲ್ಲಿ ಮುಂಬಯಿಯ ಪ್ರಸಿದ್ಧ ಮೂಕಿಚಿತ್ರ ನಿರ್ಮಾಣ ಸಂಸ್ಥೆ ಶಾರದಾ ಫಿಲಂ ಕಂಪನಿಯ ಪಾಲುದಾರರಾದ ಭೋಗಿಲಾಲ್ ಸಿ.ದವೆ ಮತ್ತು ಹರಿಭಾಯಿ ಆರ್.ದೇಸಾಯಿ ಅವರು ದಕ್ಷಿಣದ ಸುಪ್ರಸಿದ್ಧ ಸ್ಥಳಗಳಲ್ಲಿ ಚಿತ್ರೀಕರಿಸಲು ದಕ್ಷಿಣ ಭಾರತಕ್ಕೆ ಬಂದರು, ಬೆಂಗಳೂರಿಗೂ ಭೇಟಿ ಇತ್ತರು. ಆಗ ಮೈಸೂರು ಆಶ್ರಿತ ಸಂಸ್ಥಾನವಾಗಿತ್ತು. ಕೇವಲ ಎಂಟು ಜಿಲ್ಲೆಗಳಿದ್ದವು. ಮೈಸೂರು ತನ್ನ ನಿಸರ್ಗ ರಮಣೀಯತೆಗೆ ಹೆಸರಾಗಿತ್ತು. ಮೈಸೂರಿನ ಜನತೆ ಕೂಡಾ ಎಲ್ಲರನ್ನೂ ತಮ್ಮವರಂತೆ ಕಾಣುವ ಹೃದಯ ವೈಶಾಲ್ಯ, ಕಾಸ್ಮೊಪಾಲಿಟನ್ ಅಭಿರುಚಿ ಉಳ್ಳವರಾಗಿದ್ದುದು ಮತ್ತು ಮೈಸೂರು ರಾಜ್ಯದ ಹವಾಮಾನ ಚಿತ್ರನಿರ್ಮಾಣಕ್ಕೆ ಅನುಕೂಲವಾದುದಾಗಿತ್ತೆಂಬುದು ಮುಂಬಯಿಯ ಚಿತ್ರತಂಡವನ್ನು ಬಹುವಾಗಿ ಆಕರ್ಷಿಸಿತ್ತು. ಅವರು ತಯಾರಿಸುತ್ತಿದ್ದ ಮೂಕಿಚಿತ್ರದ ಸಲುವಾಗಿ ಬೇಲೂರು-ಹಳೇಬೀಡುಗಳಿಗೆ ಹೋಗಿ ಬಂದ ಮೇಲೆ ಇಲ್ಲಿಯ ಕಲೆ ಸಂಸ್ಕೃತಿಗೆ ಮರುಳಾಗಿದ್ದರು. ತಾವು ಇಲ್ಲೇ ಒಂದು ಸ್ಟುಡಿಯೋ ಸ್ಥಾಪಿಸಿ, ಚಿತ್ರಗಳನ್ನು ನಿರ್ಮಿಸುವ ನಿರ್ಧಾರಕ್ಕೆ ಬಂದರು.

ಹರಿಭಾಯಿ ಆರ್.ದೇಸಾಯಿ ಬೆಂಗಳೂರಿನಲ್ಲಿಯೇ ಉಳಿದರು. ಅವರ ಪ್ರಯತ್ನದ ಫಲವಾಗಿ ಗೆಳೆಯ ಪುರುಷೋತ್ತಮದಾಸ್ ಜೂತಗೂಡಿ ೧೯೨೮ರ ಅಕ್ಟೋಬರ್ ತಿಂಗಳಿನಲ್ಲಿ 'ಸೂರ್ಯ ಫಿಲಂ ಕಂಪನಿ' ಪ್ರಾರಂಭಿಸಿದರು. ಇದು ಭಾರತದ ಪ್ರಸಿದ್ಧ ಮೂಕಿಚಿತ್ರ ನಿರ್ಮಾಣ ಸಂಸ್ಥೆಯೆಂದು ಹೆಸರಾಯಿತು. ೧೯೩೩ರವರೆಗೆ ಅನೇಕ ಮೂಕಿ ಚಿತ್ರಗಳನ್ನು ನಿರ್ಮಿಸಿ, ಇತರರಿಗೆ ಸ್ಫೂರ್ತಿಯಾಯಿತು. ಗುಣಮಟ್ಟವೂ ಉತ್ತಮವಾಗಿದ್ದುದರಿಂದ ಹಚ್ಚಿನ ಬೆಲೆಗೆ ಸೂರ್ಯ ಫಿಲಂ ಕಂಪನಿಯ ಚಿತ್ರಗಳು ಮಾರಾಟವಾಗುತ್ತಿದ್ದವು.

ಆಗಿನ ದಂಡು ಪ್ರದೇಶದ ಕನ್ನಿಂಗ್‌ಹ್ಯಾಂ ರಸ್ತೆಯಲ್ಲಿ ದಿವಾನ್ ಮಿರ್ಜಾ ಅವರಿಗೆ ಸೇರಿದ್ದ ವಿಶಾಲವಾದ ಬಂಗಲೆ ಆವರಣದಲ್ಲಿ ಸೂರ್ಯ ಫಿಲಂ ಕಂಪನಿಯ ಸ್ಟುಡಿಯೋ ಇತ್ತು. ಅದರ ಪ್ರಯೋಗಶಾಲೆಯು ಮಲ್ಲೇಶ್ವರಂ ಬಡಾವಣೆಯಲ್ಲಿ ಇತ್ತೆಂದು ತಿಳಿದು ಬರುತ್ತದೆ. ಖ್ಯಾತ ಚಿತ್ರನಿರ್ದೇಶಕ ಎಂ.ಆರ್.ವಿಠಲ್ ಅವರು ತಮ್ಮ ಕಾಲೇಜು ದಿನಗಳಲ್ಲಿ ಸಂಜೆಯ ವೇಳೆ ಮಲ್ಲೇಶ್ವರಂನಲ್ಲಿದ್ದ ಸೂರ್ಯ ಫಿಲಂ ಕಂಪನಿಯ ಪ್ರಯೋಗಶಾಲೆಗೆ ಹೋಗಿ ತಂತ್ರಜ್ಞರೊಡನೆ ಕಾಲ ಕಳೆಯುತ್ತಿದ್ದುದಾಗಿ ಹೇಳಿಕೊಂಡಿದ್ದಾರೆ. ಮುಂದೆ ವಿಠಲ್ ಅವರು ಸೂರ್ಯ ಫಿಲಂ ಕಂಪನಿಯಲ್ಲೇ ಕೆಲಸ ಮಾಡಿದರು. ಅನೇಕ ಚಿತ್ರಗಳನ್ನು ತಯಾರಿಸಿದರು.

ಹೊರಗಿನಿಂದ ಬಂದವರು ಫಿಲಂ ಕಂಪನಿ ಸ್ಥಾಪಿಸಿ ಸುಸೂತ್ರವಾಗಿ ಕಾರ್ಯ ನಿರ್ವಹಿಸಿದರು ಎನ್ನುವಂತಿಲ್ಲ. ಪ್ರಾರಂಭದಲ್ಲಿ ಸೂರ್ಯ ಸಂಸ್ಥೆ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಯಿತು. ತಮ್ಮ ಚಿತ್ರಗಳಲ್ಲಿ ಹೊಸಬರು, ಸ್ಥಳೀಯ ಕಲಾವಿದರನ್ನು ಬಳಸಿಕೊಳ್ಳುವ ಉದ್ದೇಶದಿಂದ ಪ್ರತಿಭಾಶೋಧ ನಡೆಸಿದರು. ಆದರೆ ಚಿತ್ರಮಾಧ್ಯಮದ ಬಗ್ಗೆ ತಿಳಿವಳಿಕೆ ಇಲ್ಲದ ಸಾಮಾಜಿಕರು ಹೊರಗಿನ ಈ ವ್ಯಾಪಾರಿಗಳನ್ನು ಸಂಶಯದಿಂದಲೇ ನೋಡಿದರು. ಈ ಬಯೊಸ್ಕೋಪ್ ಜನರ ಬಗ್ಗೆ ಚಿತ್ರ ವಿಚಿತ್ರ ಕಥೆಗಳೂ ಹುಟ್ಟಿಕೊಂಡವು. ಚಿತ್ರದಲ್ಲಿ ಅಭಿನಯಿಸಲು ಬನ್ನಿ ಎಂದು ಕರೆದರೂ "ಹೊರಗಿನಿಂದ ಬಂದಿರೋ ಜನ ಯಕ್ಷಿಣಿ ಮಾಡ್ತಾರೆ, ವಶೀಕರಣ ಮಾಡಿ ತರುಣರನ್ನು ಕರೆದೊಯ್ಯುತ್ತಾರೆ" ಎಂತಲೂ "ನಮ್ಮವರನ್ನೆಲ್ಲ ಕರೆದೊಯ್ದು ಕಾಫಿ ತೋಟದಲ್ಲಿ ಜೀತಕ್ಕಿಟ್ಟು, ಅಲ್ಲಿಯ ರೋಗಗಳಿಗೆ ಬಲಿ ಕೊಡುತ್ತಾರೆ" ಎಂತಲೂ ಟೀಕಿಸಿದರು. ಜನರ ಪ್ರತಿಕ್ರಿಯೆಯಲ್ಲಿ ಯಾವುದೋ ಭಯ ಇತ್ತು. ಇವನ್ನೆಲ್ಲ ತಾಳ್ಮೆಯಿಂದ ಎದುರಿಸಿ, ಜನರಲ್ಲಿ ನಂಬಿಕೆ ಹುಟ್ಟಿಸಿ, ತಳವೂರಿ ಕೆಲಸ ಮಾಡಿದ್ದು ಆ ಕಾಲಕ್ಕೆ ಬಹು ದೊಡ್ಡ ಸಾಹಸವೇ ಸರಿ.

ಹರಿಭಾಯಿ ದೇಸಾಯಿ ಅರ್ಥಶಾಸ್ತ್ರದಲ್ಲಿ ಪದವಿ ಪಡೆದವರು. ಯುರೋಪಿನಲ್ಲಿ ಪ್ರವಾಸ ಮಾಡಿ ಚಿತ್ರೋದ್ಯಮದ ಬಗ್ಗೆ ತಿಳಿದುಕೊಂಡು ಬಂದಿದ್ದರು. ಆದ್ದರಿಂದಲೇ ಸೂರ್ಯ ಫಿಲಂ ಕಂಪನಿಯ ಎಲ್ಲ ವಿಭಾಗಗಳನ್ನು ತುಂಬ ಅಚ್ಚುಕಟ್ಟಾಗಿ, ವ್ಯವಸ್ಥಿತವಾಗಿ ಹೊಂದಿಸಿದರು.

ಕೈಯಲ್ಲಿ ತಿರುಗಿಸಿ ಫಿಲಂ ಚಾಲೂ ಮಾಡುವ ಕ್ಯಾಮರಾಗಳು, ಪ್ರೋಸೆಸಿಂಗ್ ಸೌಲಭ್ಯ ಇತ್ಯಾದಿ ಇತ್ತು. ಛಾವಣಿ ಇಲ್ಲದ ದೊಡ್ಡ ಜೋಪಡಿ ಅಥವಾ ಹೊರಾಂಗಣದಲ್ಲಿ ಚಿತ್ರೀಕರಣ ವ್ಯವಸ್ಥೆ ಆಗುತ್ತಿತ್ತು. ಲೈಟ್‌ಗಳ ಬಳಕೆಯಿನ್ನೂ ಬಂದಿರಲಿಲ್ಲ, ಸೂರ್ಯನ ಬೆಳಕೇ ಆಧಾರ. ಈ ದೃಷ್ಟಿಯಿಂದ ಸೂರ್ಯ ಫಿಲಂ ಕಂಪನಿ ಎಂಬ ಹೆಸರು ಸ್ಟುಡಿಯೋಗೆ ಅನ್ವರ್ಥವೇ ಆಗಿದೆ. ತಾಂತ್ರಿಕ ವಿಭಾಗ ಮಾತ್ರವಲ್ಲದೆ ಪ್ರತ್ಯೇಕವಾಗಿ ಒಂದು ಕಥಾವಿಭಾಗವೇ ಇತ್ತು. ಸುಮಾರು ೩೦-೪೦ ಚಿತ್ರಗಳಿಗೆ ಕಥೆ ಹೊಂದಿಸುತ್ತಿದ್ದ ಈ ವಿಭಾಗದಲ್ಲಿ ಸುಶಿಕ್ಷಿತರ ತಂಡವೊಂದು ಕೆಲಸ ಮಾಡುತ್ತಿತ್ತು. ಆನರ್ಸ್ ಪದವೀಧರ ನಾನಾಭಾಯಿ ಈ ಕಥಾವಿಭಾಗದ ಮುಖ್ಯಸ್ಥರು. ಭಾರತದಲ್ಲೇ ಅತ್ಯುತ್ತಮ ತಂತ್ರಜ್ಞರೆಂದು ಖ್ಯಾತರಾಗಿದ್ದ ವಿಷ್ಣು ಸಾವಂತ್ ಛಾಯಾಗ್ರಹಣ ವಿಭಾಗದ ಮುಖ್ಯಸ್ಥರು. ಆ ದಿನಗಳಲ್ಲಿ ಚಿತ್ರಗಳಿಗೆ ಟ್ರಿಕ್ ಫೋಟೋಗ್ರಫಿ ತುಂಬ ಮುಖ್ಯವಾಗಿತ್ತು. ಈ ಶಾಖೆಯ ಮುಖ್ಯಸ್ಥರಾಗಿ ಮಹಮದ್ ಎ.ರಹಮಾನ್ ನಿಯೋಜಿತರಾಗಿದ್ದರು. ಜಾಯಿನಿಂಗ್ ವಿಭಾಗದಲ್ಲಿ ನಗೀನ್ ಪಾಂಡ್ಯ, ಅವರ ಸಹಾಯಕ ಜಾಯಿಂಟ್ ಫಿಲಂ ಕಟರ್ ಆಗಿದ್ದ ರಾಮಚಂದ್ರ ಮಹಾದೀಪ್ ಇದು ಕಾರ್ಯ ನಿರ್ವಹಿಸುತ್ತಿದ್ದರು. ಕೆಲವು ಚಿತ್ರಗಳ ಛಾಯಾಗ್ರಹಣವನ್ನು ಡಿ.ಚವ್ಹಾಣ್ ನಿರ್ವಹಿಸುತ್ತಿದ್ದರು. ನಿರ್ದೇಶನ ವಿಭಾಗದಲ್ಲಿ ಪರಶುರಾಮ್ ಚವ್ಹಾಣ್, ಬಿ.ವಿ.ಪವಾರ್, ಸುಂದರರಾವ್ ನಾಡಕರ್ಣಿ, ದ್ರುಪದ್ ರಾಯ್ ಪ್ರಮುಖರು. ಸಂಕಲನ ವಿಭಾಗದಲ್ಲಿ ತಮಿಳಿನ ಖ್ಯಾತ ಸಂಕಲನಕಾರ ಎಂ.ವಿ.ರಾಮನ್ ಇದ್ದರು. ಎಂ.ವಿ.ರಾಮನ್ ವೈಜಯಂತಿಮಾಲಾ ಅವರ ಪ್ರಥಮ ಚಿತ್ರ 'ಲೈಫ್'ನ ನಿರ್ದೇಶಕ ಮತ್ತು ಅನಂತರ ಇವರು ತಮಿಳಿನ ಜನಪ್ರಿಯ ಚಿತ್ರ 'ಕೊಂಜುಂ ಸಲಂಗೈ'ಯನ್ನು ನಿರ್ದೇಶಿಸಿದರು. ಇಲ್ಲಿಯ ತಂತ್ರಜ್ಞರು-ಕಲಾವಿದರಿಗೆಲ್ಲ ತಿಂಗಳ ಸಂಬಳವಿತ್ತು.

ಈ ಸಂಸ್ಥೆ ತಯಾರಿಸಿದ ಪ್ರಥಮ ಮೂಕಿಚಿತ್ರ 'ರಾಜಹೃದಯ'. ಹೊರಗಿನ ಪ್ರಭಾವ ಅಧಿಕವಾದ್ದರಿಂದ ಆ ಚಿತ್ರಗಳಿಗಿದ್ದ ಹಾಗೇ ನಮ್ಮ ಚಿತ್ರಗಳಿಗೂ ಇಂಗ್ಲಿಷ್ ಶೀರ್ಷಿಕೆ ಕೊಡುವುದೊಂದು ಪದ್ಧತಿಯಾಗಿತ್ತು. ಹೀಗಾಗಿ 'ರಾಜಹೃದಯ'ವನ್ನು 'ಹಾರ್ಟ್ ಆಫ್ ದಿ ಕಿಂಗ್' ಎಂದು ಕರೆದರು. 'ಹಾರ್ಟ್ ಆಫ್ ದಿ ಕಿಂಗ್' ಚಿತ್ರದ ನಿರ್ದೇಶಕರು ಕೇಶವಲಾಲ್ ಜೋಷಿ. ಈ ಚಿತ್ರಕ್ಕೆ ಪ್ರಸಾಧನ ಮಾಡಿದ್ದವರು ಬಾಬುರಾವ್. ಕಲಾನಿರ್ದೇಶಕರು ಪವಲಂಕರ್. ಈ ಚಿತ್ರದ ಸ್ಟಂಟ್ ಕಲಾವಿದ ಗಜಾನನ ಬಕ್ರೆ. ಬಹುತೇಕ ಎಲ್ಲರೂ ಮಹಾರಾಷ್ಟ್ರದವರೆಂಬುದನ್ನು ಗಮನಿಸಿ. ಆದರೆ ನಮ್ಮವರೇ ಆದ ಲಕ್ಷ್ಮೀಬಾಯಿ ಮಾತ್ರ ಆ ದಿನಗಳಲ್ಲಿ ಸೂರ್ಯ ಸಂಸ್ಥೆಯ ಜನಪ್ರಿಯ ನಾಯಕಿ ಮತ್ತು 'ಎ ಸೂರ್ಯ ಸ್ಟಾರ್' ಎಂದೇ ಹೆಸರಾದವರು. ಇದಲ್ಲದೆ ಆ ಸಂಸ್ಥೆಯಲ್ಲಿ ಪ್ರಸಿದ್ಧ ಕಲಾವಿದರನೇಕರಿದ್ದರು. ಹಾಸ್ಯ, ಸ್ಟಂಟ್, ನಾಯಕ-ನಾಯಕಿ ಪಾತ್ರಗಳನ್ನು ನಿರ್ವಹಿಸಲು ಪ್ರಸಿದ್ಧ ಕಲಾವಿದರನ್ನೇ ಗೊತ್ತು ಮಾಡಲಾಗುತ್ತಿತ್ತು. ಜೊತೆಜೊತೆಗೇ ಸ್ಥಳೀಯ ಹೊಸ ಪ್ರತಿಭೆಗಳನ್ನು ಬೆಳೆಸುವ ಪರಿಪಾಠವಿತ್ತು. ಈ ಸಂಸ್ಥೆಯ ಅತಿ ಮುಖ್ಯವಾದ ಮತ್ತೊಂದು ಶಾಖೆಯೆಂದರೆ ಪ್ರಚಾರ ವಿಭಾಗ. ಚತುರ್ಭುಜ್ ಜೋಷಿ ಹಾಗೂ ಅವರ ಸಹಾಯಕರಾಗಿದ್ದ ಪಬ್ಲಿಸಿಸ್ಟ್ ಬಕುಲೇಶ್ ಅವರ ನೇತೃತ್ವದಲ್ಲಿ ಪ್ರಚಾರ ವಿಭಾಗದ ಕೆಲಸ ವಿಶಿಷ್ಟವಾಗಿ ನಿರ್ವಹಿಸಲ್ಪಡುತ್ತಿತ್ತು.

ತಮ್ಮ ತಮ್ಮ ಪಾತ್ರದ ವೇಷ ಭೂಷಣ ಧರಿಸಿದ ಕಲಾವಿದರು ಮೇಕಪ್ ಹಾಕಿಕೊಂಡು ಅಲಂಕೃತ ವಾಹನಗಳಲ್ಲಿ ಹೊರಡುತ್ತಿದ್ದರು. ಅವರ ಕೈ, ಬುಡಿ, ಪಕ್ಕಗಳಲ್ಲಿ ಚಿತ್ರಗಳಲ್ಲಿ ಅಭಿನಯಿಸುತ್ತಿದ್ದ ಸಾಕುಪ್ರಾಣಿಗಳೂ ಇರುತ್ತಿದ್ದವು. ಬೀದಿ ಬೀದಿಗಳಲ್ಲಿ ಬರುತ್ತಿದ್ದ ಈ ಮೆರವಣಿಗೆಯನ್ನು ಇಕ್ಕೆಲಗಳಲ್ಲೂ ಜನ ಕಿಕ್ಕಿರಿದು ನಿಂತು ಬೆರಗಿನಿಂದ ನೋಡುತ್ತಿತ್ತು. ಇವೆಲ್ಲವನ್ನೂ ವಾಹನದಲ್ಲಿದ್ದ ಕ್ಯಾಮರಾ ಚಿತ್ರೀಕರಿಸಿಕೊಳ್ಳುತ್ತಿತ್ತು. ಮತ್ತು ಒಂದು ರೀಲ್‌ನಷ್ಟು ಮುದ್ರಿಸಿ ಚಿತ್ರದಲ್ಲಿ ಸೇರಿಸಲಾಗುತ್ತಿತ್ತು. ''ಸಿನಿಮಾ ನೋಡಿ. ನಿಮ್ಮನ್ನೂ ನೋಡಿ'' ಎಂಬ ವಿಶೇಷ ಶೀರ್ಷಿಕೆಯೊಂದಿಗೆ ಪ್ರದರ್ಶಿಸುವ ಚಿತ್ರದ ಕಥೆ, ಕಲಾವಿದರು ಇತ್ಯಾದಿ ಮಾಹಿತಿ ಇರುವ ಕರಪತ್ರಗಳನ್ನು ಹಂಚುತ್ತಿದ್ದರು. ಮೆರವಣಿಗೆಯಲ್ಲಿ ನಿಂತ ತಾವೂ ಚಿತ್ರದಲ್ಲಿ ಕಾಣುತ್ತೇವೆಂಬ ಕುತೂಹಲಕ್ಕೆ ಪ್ರೇಕ್ಷಕರು ಚಿತ್ರಮಂದಿರಕ್ಕೆ ಧಾವಿಸಿ, ನೂಕುನುಗ್ಗಲಿನಲ್ಲಿ ಟಿಕೆಟ್ ಕೊಂಡು ಚಿತ್ರ ನೋಡಿ ಹಿಗ್ಗುತ್ತಿದ್ದರು.

ಸೂರ್ಯ ಫಿಲಂ ಕಂಪನಿಯ ಚಿತ್ರಗಳಿಗೆ ಬೇಡಿಕೆಯೂ ಬಹಳವಿತ್ತು. ಉತ್ತರ ಭಾರತದಲ್ಲೂ ಅವು ಜನಪ್ರಿಯವಾಗಿದ್ದವು. ಉತ್ತರ ಭಾರತದಲ್ಲೇ ತಯಾರಾದ ಮೂಕಿಚಿತ್ರಗಳಿಗೆ ಮೂರು ಸಾವಿರ ರೂಪಾಯಿಯಾದರೆ, ದಕ್ಷಿಣದ ಸೂರ್ಯ ಸಂಸ್ಥೆಯ ಚಿತ್ರಗಳಿಗೆ ಆರರಿಂದ ೧೦ ಸಾವಿರದವರೆಗೆ ಬೆಲೆ ಇರುತ್ತಿತ್ತು. ಮೋಷನ್ ಪಿಕ್ಚರ್ಸ್ ಸೊಸೈಟಿಯು ೧೯೩೮ರಲ್ಲಿ ಪ್ರಕಟಿಸಿದ 'ದಿ ಇಂಡಿಯನ್ ಸಿನಿಮಾಟೊಗ್ರಾಫ್ ಇಯರ್ ಬುಕ್'ನಲ್ಲಿ ಹೀಗೆ ಹೇಳಿದೆ : "...The company produced silent pictures till the end of 1933. During silent era, this company earned a great fame and their pictures were a rage all over India. Animals such as horse, dog, leopard and monkey featured in some of their productions.. ".

ಸೂರ್ಯ ಫಿಲಂ ಕಂಪನಿ ೧೯೩೩ರವರೆಗೆ ಕೆಲಸ ಮಾಡಿ ಹಲವು ಚಿತ್ರಗಳನ್ನು ನಿರ್ಮಿಸಿತು. ಮಾತನಾಡುವ ಚಿತ್ರಗಳು ಬಂದ ಮೇಲೆ ಮೂಕಿಚಿತ್ರಗಳಿಗೆ ಮಾರುಕಟ್ಟೆ ಇಲ್ಲವಾಯಿತು. ಸೂರ್ಯ ಟಾಕಿಚಿತ್ರಗಳ ಪೈಪೋಟಿಯನ್ನು ಎದುರಿಸಿ ನಿಲ್ಲುವ ಸಾಹಸಕ್ಕೆ ಹೋಗಲೇ ಇಲ್ಲ. ಕ್ರಮೇಣ ಮುಚ್ಚಿಹೋಯಿತು. ಆದರೆ ಮುಂದೆ ಕರ್ನಾಟಕದಲ್ಲಿ ಪ್ರಾರಂಭವಾದ ಸ್ಟುಡಿಯೋಗಳಿಗೆ ಸ್ಟುಡಿಯೋ ಹೇಗಿರಬೇಕು, ಏನಿರಬೇಕು, ಹೇಗೆ ಕಾರ್ಯ ನಿರ್ವಹಿಸಬೇಕು ಎಂಬುದಕ್ಕೆ ಉತ್ತಮ ಮಾದರಿಯನ್ನಂತೂ ಹಾಕಿಕೊಟ್ಟಿತ್ತು ಸೂರ್ಯ ಫಿಲಂ ಕಂಪನಿ. (ನೋಡಿ : ಮೂಕಿಯಿಂದ ಟಾಕಿವರೆಗೆ)

ಕರ್ನಾಟಕ ಪಿಕ್ಚರ್ಸ್ ಕಾರ್ಪೊರೇಷನ್

ಪ್ರಾರಂಭದಲ್ಲಿ ಚಲನಚಿತ್ರ, ಚಿತ್ರ ತಯಾರಕರು ಎಂದರೇನೇ ಅನುಮಾನದಿಂದ ನೋಡುತ್ತಿದ್ದ ಜನ ಕ್ರಮೇಣ ಅರ್ಥ ಮಾಡಿಕೊಳ್ಳತೊಡಗಿದರು. ಈ ಮಾಧ್ಯಮದ ಪ್ರಾಮುಖ್ಯ, ಅದಕ್ಕಿರಬಹುದಾದ ಉತ್ತಮ ಭವಿಷ್ಯ, ಶೈಕ್ಷಣಿಕ ಹಾಗೂ ಮನರಂಜನೆಯ ಮಾಧ್ಯಮವೂ ಆಗಬಹುದಾದ ಸಾಧ್ಯತೆಗಳನ್ನು ವಿದ್ಯಾವಂತ ವರ್ಗವೂ ಗಮನಿಸಿತ್ತು. ಸ್ಥಳೀಯರಲ್ಲಿ ಮೂಡತೊಡಗಿದ ಈ ಆಸಕ್ತಿ ಮತ್ತೊಂದು ಫಿಲಂ ಸ್ಟುಡಿಯೋ ಅಸ್ತಿತ್ವಕ್ಕೆ ಬರಲು ಕಾರಣವಾಯಿತು. ಸೂರ್ಯ ಸಂಸ್ಥೆಯು ಪ್ರಾರಂಭವಾದ ಒಂದೆರಡು ವರ್ಷಗಳಲ್ಲೇ ಸ್ಥಳೀಯರ ಪ್ರಯತ್ನವೂ ಪ್ರಾರಂಭವಾಯಿತು. ಈ ಸಾಹಸದಲ್ಲಿ ತೊಡಗಿಕೊಂಡವರೆಲ್ಲ ಸಾಹಿತ್ಯ, ನಾಟ್ಯ, ನಾಟಕ ಮತ್ತು ಸಾಂಸ್ಕೃತಿಕ ರಂಗದಲ್ಲಿ ಸಾಕಷ್ಟು ಪರಿಶ್ರಮವಿದ್ದ ಕನ್ನಡಿಗರು. ಅವರಲ್ಲಿ ಖ್ಯಾತ ಸಾಹಿತಿ ದೇವುಡು ನರಸಿಂಹಶಾಸ್ತ್ರಿಗಳೂ ಇದ್ದರು. ದೇವುಡು ಅವರು ತಮ್ಮ ಸಾಹಿತ್ಯ ರಚನೆಯೇ ಅಲ್ಲದೆ, 'ನವಜೀವನ' ಪತ್ರಿಕೆಯ ಸಂಪಾದಕರೂ ಆಗಿದ್ದರು. ದೇವುಡು ಅವರಿಗೆ ಹೊಸ ಮಾಧ್ಯಮದ ಬಗ್ಗೆ ಅಪಾರ ಕುತೂಹಲ. ಈ ಅಭಿವ್ಯಕ್ತಿ ಮಾಧ್ಯಮವನ್ನು ಸರಿಯಾಗಿ ದುಡಿಸಿಕೊಳ್ಳಬೇಕೆಂಬ ತವಕ. ಹಾಗಾಗಿ ತಮ್ಮ ಗೆಳೆಯ ಶ್ರೀನಿವಾಸಮೂರ್ತಿಯವರನ್ನು ಜೊತೆಗೆ ಕರೆದುಕೊಂಡರು. ಶ್ರೀನಿವಾಸಮೂರ್ತಿಯವರು ಓರಿಯಂಟಲ್ ಬ್ಯಾಂಕಿನ ಅಧಿಕಾರಿ. ಸಾಹಿತ್ಯ-ಸಂಸ್ಕೃತಿಯಲ್ಲಿ ಅಪಾರ ಒಲವಿದ್ದವರು. ದೇವುಡು ಅವರೊಂದಿಗೆ ಶ್ರೀನಿವಾಸಮೂರ್ತಿಯವರು ರಂಗಭೂಮಿಯಲ್ಲಿ ಬಹು ದೊಡ್ಡ ಹೆಸರಾಗಿದ್ದ ಗುಬ್ಬಿ ವೀರಣ್ಣನವರನ್ನು ಕಂಡು ಈ ಸ್ಟುಡಿಯೋ ನಿರ್ಮಾಣದ ಯೋಜನೆಯನ್ನು ವಿವರಿಸಿದರು. ಸದಾ ತಮ್ಮ ಸಾಹಸಪ್ರವೃತ್ತಿ, ದಿಟ್ಟ ನಿರ್ಧಾರಗಳಿಗೆ ಹೆಸರಾದ ವೀರಣ್ಣನವರಿಗೆ ಈ ಕಾರ್ಯ ತೀರಾ ಹೊಸದೂ ಆಗಿರಲಿಲ್ಲ. ಅವರು ೧೯೩೦ರ ವೇಳೆಗೇ ಚಿತ್ರ ತಯಾರಿಸುವ ಪ್ರಯತ್ನ ಮಾಡಿದ್ದರು. ತರೀಕೆರೆಯಲ್ಲಿ ಅವರ ನಾಟಕ ಮಂಡಳಿಯ ಕ್ಯಾಂಪ್ ಮಾಡಿದ್ದಾಗ 'ಭಕ್ತ ಕಬೀರ್' ನಾಟಕವನ್ನು ಚಿತ್ರ ಮಾಡುವ ಪ್ರಯತ್ನ ಮಾಡಿದ್ದರು. ಅದೇ ವೇಳೆಗೆ ಭಾರೀ ಮಳೆಯ ಕಾರಣದಿಂದ ರಂಗಮಂದಿರವು ಕೊಚ್ಚಿ ಹೋಗಿ ಅಪಾರ ನಷ್ಟವುಂಟಾಗಿದ್ದರಿಂದ ಸಂಪೂರ್ಣವಾಗಿ ಅತ್ತ ಗಮನ ಹರಿಸಬೇಕಾಗಿ ಬಂದಿತು. ಅದರಿಂದಾಗಿ ಚಿತ್ರ ನಿರ್ಮಾಣದ ಪ್ರಯತ್ನವನ್ನು ನಿಲ್ಲಿಸಿ ಬಿಟ್ಟರೆಂದು ತಿಳಿದುಬರುತ್ತದೆ.

ಪುನಃ ದೇವುಡು ಮಿತ್ರರು ಸೂಚಿಸಿದ ಈ ಯೋಜನೆ ಅವರನ್ನು ಆಕರ್ಷಿಸಿತು. ಮಿತ್ರರು ಇದನ್ನೊಂದು ಷೇರು ಕಂಪನಿಯಾಗಿ ಮಾಡಲು ಯೋಜಿಸಿದ್ದರು ಮತ್ತು ಅವರುಗಳ ಒತ್ತಾಯದ ಕಾರಣ ಗುಬ್ಬಿ ವೀರಣ್ಣನವರು ಸಂಸ್ಥೆಯ ಮ್ಯಾನೇಜಿಂಗ್ ಡೈರೆಕ್ಟರ್ ಆಗಿರಲು ಒಪ್ಪಿದರು. ಮೈಸೂರು ಸಂಸ್ಥಾನದ ಸಾರ್ವಜನಿಕ ಜೀವನದಲ್ಲಿ ಪ್ರಮುಖರಾಗಿದ್ದ ಹಲವರು ಈ ಮಂಡಳಿಗೆ ಸೇರಿದರು. ಅವರಲ್ಲಿ ಎ.ವಿ.ಅಯ್ಯಂಗಾರ್, ರಿಟೈರ್ಡ್ ಎಲೆಕ್ಟ್ರಿಕಲ್ ಇಂಜಿನಿಯರ್ ಪುಟ್ಟಸ್ವಾಮಯ್ಯ, ಸಬ್ ಜಡ್ಜ್‌ರಾಗಿದ್ದ ಕೃಷ್ಣರಾಯರೇ ಮೊದಲಾದವರು ಕಂಪನಿಯ ಡೈರೆಕ್ಟರುಗಳಾದರು. ಈ ಹೊಸ ಸಂಸ್ಥೆಗೆ ಸುಮಾರು ಇಪ್ಪತ್ತುಸಾವಿರ ರೂಪಾಯಿಗಳ ನಗದು ಹಾಗೂ ನಲವತ್ತು ಸಾವಿರ ರೂಪಾಯಿ ಮೌಲ್ಯದ ಷೇರುಗಳೂ ಸಂಗ್ರಹವಾದವು. ವೀರಣ್ಣನವರ ಜನಪ್ರಿಯತೆ, ಅವರಿಗಿದ್ದ ಪ್ರಭಾವ ಈ ಎಲ್ಲ ಕಾರ್ಯದ ಹಿಂದೆ ಕೆಲಸ ಮಾಡಿತ್ತು. ೧೯೩೪-೩೫ರ ಅವಧಿಯಲ್ಲಿ ಈ ಸ್ಥಳೀಯರ ಸಾಹಸದ ಫಲವಾಗಿ ಕರ್ನಾಟಕ ಪಿಕ್ಚರ್ಸ್ ಕಾರ್ಪೊರೇಷನ್ ಪ್ರಾರಂಭವಾಯಿತು. ಆಗ ಮೈಸೂರು ಸರ್ಕಾರದಲ್ಲಿ ಕೌನ್ಸಿಲರ್ ಆಗಿದ್ದ ರಾವ್ ಬಹದ್ದೂರ್ ಎಚ್.ವಿ.ನಂಜುಂಡಯ್ಯನವರಿಗೆ ಸೇರಿದ ಮಲ್ಲೇಶ್ವರದಲ್ಲಿದ್ದ ಬಂಗಲೆಯೊಂದನ್ನು ತಿಂಗಳಿಗೆ ೧೫೦ ರೂಪಾಯಿ ಬಾಡಿಗೆಗೆ ಪಡೆದರು. ವಿಶಾಲವಾದ ಕಾಂಪೌಂಡ್, ತೋಟ ಇತ್ಯಾದಿ ಇದ್ದ ಬಂಗಲೆ ಈ ಉದ್ದೇಶಕ್ಕೆ ತುಂಬ ಅನುಕೂಲಕರವೂ ಆಗಿತ್ತು. ಸಂಗ್ರಹಿಸಿದ್ದ ನಗದು ಹಣವನ್ನು ಮೂಲ ಬಂಡವಾಳ ಮಾಡಿಕೊಂಡು ಮುಂಬಯಿ, ಮದರಾಸುಗಳಿಂದ ಸ್ಟುಡಿಯೋಗೆ ಬೇಕಾದ ಸಾಮಗ್ರಿಗಳನ್ನು ಕೊಂಡು ತರಲಾಯಿತು.

ಇದೇ ಹೊತ್ತಿಗೆ ವೀರಣ್ಣನವರು ಸಿ.ವಿ.ನರಸಿಂಹ ಅಯ್ಯಂಗಾರ್ ಅವರ ಬಳಿ ಒಂದು ವರ್ಷಕ್ಕೆ ಒಂದು ಸಾವಿರ ರೂಪಾಯಿನಂತೆ ಹನ್ನೆರಡು ವರ್ಷದ ಗುತ್ತಿಗೆಗೆ ನಿವೇಶನವನ್ನು ಪಡೆದು (೧೯೩೫) ಶಿವಾನಂದ ಥಿಯೇಟರ್ ಅನ್ನು ಕಟ್ಟಿದರು. ಅದು ಈಗ ಬೆಂಗಳೂರಿನ ಸುಬೇದಾರ್ ಛತ್ರದ ರಸ್ತೆಯಲ್ಲಿರುವ ಮೂವಿಲ್ಯಾಂಡ್ ಚಿತ್ರಮಂದಿರ ಇರುವ ಸ್ಥಳ. ಶಿವಾನಂದ ಥಿಯೇಟರ್‌ನ್ನು ೧೯೩೬ನೇ ಮೇ ತಿಂಗಳಿನಲ್ಲಿ ದಿವಾನ್ ಮಿರ್ಜಾ ಇಸ್ಮಾಯಿಲ್ ಉದ್ಘಾಟಿಸಿದ್ದರು. ಈ ಸ್ಥಳವನ್ನು ಕೂಡಾ ಹೊರಾಂಗಣ ಚಿತ್ರೀಕರಣಕ್ಕೆ ಬಳಸುತ್ತಿದ್ದರು.

ಸ್ಟುಡಿಯೋ ಒಂದು ಭಾರೀ ಕಟ್ಟಡವೇನಲ್ಲ. ಕಬ್ಬಿಣದ ಪೈಪ್‌ಗಳನ್ನು ಹೂಳಿ, ಅವರ ಮೇಲೆ ಪೈಪ್‌ಗಳನ್ನು ಅಡ್ಡವಾಗಿ ಕೂಡಿಸಿ, ಡೇರೆ ಎಳೆಯಲಾಗುತ್ತಿತ್ತು. ಬಿಸಿಲು ಬೇಕಾದಾಗ ಹೊದಿಸಿದ್ದ ಟಾರ್ಪಾಲಿನ್ ಅನ್ನು ಸರಿಸಿದರೆ ಸಾಕಾಗಿತ್ತು. ಕನ್ನಡಿಗಳನ್ನಿಟ್ಟು ಬೇಕಾದ ಹಾಗೆ ಬಿಸಿಲನ್ನು ಬಳಸಿ ಬೆಳಕಿನ ವ್ಯವಸ್ಥೆ ಮಾಡಿಕೊಳ್ಳುತ್ತಿದ್ದರು. ಕನ್ನಡಿಗಳೇ ರಿಫ್ಲೆಕ್ಟರ್‌ಗಳ ಕೆಲಸ ನಿರ್ವಹಿಸುತ್ತಿದ್ದವು.

ಅಭಿನಯಿಸುವಾಗ ಕಲಾವಿದರಿಗೆ ಬೆಳಕಿನ ಕಿರಣದ ಪ್ರಖರತೆ ಕಣ್ಣು ತೆರಯಲಾಗದಂತೆ ಮಾಡಿದ್ದೂ ಇದೆ. ಆ ದಿನಗಳಲ್ಲಿ ಅರೆ ಮುಚ್ಚಿದ, ಮುಚ್ಚಿದ ಕಣ್ಣುಗಳ ಕಲಾವಿದರ ಅಭಿನಯವನ್ನೂ ಕೆಲವೊಮ್ಮೆ ಕಾಣಬಹುದಾಗಿತ್ತು. ಇದು ಎಲ್ಲರಿಗೂ ಎದುರಾಗುತ್ತಿದ್ದ ತೊಡಕೇ. ದಾದಾ ಸಾಹೇಬ್ ಫಾಲ್ಕೆ ಅವರ ಚಿತ್ರನಿರ್ಮಾಣದಲ್ಲೂ ಇಂಥ ಸಮಸ್ಯೆಗಳೇ ಇದ್ದವು. ಇವತ್ತಿಗೂ ಫಾಲ್ಕೆ ಚಿತ್ರಗಳ ಹಳೆಯ ಸ್ಥಿರಚಿತ್ರಗಳನ್ನು ನೋಡಿದರ ಬಹುತೇಕ ಮುಚ್ಚಿದ ರೆಪ್ಪೆಗಳ ಕಲಾವಿದರನ್ನೇ ಕಾಣುತ್ತೇವೆ. ಇವಲ್ಲ ಸರಿಹೊಂದಿಸಿಕೊಳ್ಳಲು ಕಲವು ಕಾಲ ಕಾಯಬೇಕಾಯಿತು. ಚಿತ್ರೀಕರಣ ಹೀಗಾದರೆ, ಮಲ್ಲೇಶ್ವರದ ಬಂಗಲೆಯಲ್ಲಿದ್ದ ರೂಮುಗಳನ್ನು ಫಿಲಂ ತೊಳೆಯುವ, ಆರಿಸುವ ಡಾರ್ಕ್ ರೂಂ ಕೆಲಸಗಳಿಗೆ ಬಳಸಲಾಗುತ್ತಿತ್ತು.

ಒಂದು ಕ್ಯಾಮರಾ, ಎಡಿಟಿಂಗ್ ಟೇಬಲ್, ಪುಟ್ಟ ಲ್ಯಾಬೊರೇಟರಿ, ಮುಂಬಯಿಯಿಂದ ತಂದಿದ್ದ ಭಾರೀ ಕಾಸ್ಟ್ಯೂಮ್ಸ್ ಚಿತ್ರ ನಿರ್ಮಿಸಲು ನೆರವಾದವು. ಯಾವುದೋ ಮುಳುಗಿ ಹೋಗುತ್ತಿದ್ದ ಸಂಸ್ಥೆಯಿಂದ ತಂದ ಈ ಕಾಸ್ಟ್ಯೂಮ್‌ಗಳು ಅಗತ್ಯಕ್ಕಿಂತ ಹೆಚ್ಚಾಗಿದ್ದವು ಮತ್ತು ಬಹುತೇಕ ಬಳಸಲಾಗದ ಉಳಿದವು. ಇದಕ್ಕೆ ಸುರಿದ ಹಣ ವ್ಯರ್ಥ ಎಂಬ ಆಕ್ಷೇಪವೂ ಇತ್ತು. ಅತ್ಯಂತ ಶ್ರೀಮಂತ ಎನ್ನಿಸುವ ಈ ಸಿದ್ಧತೆಗೆ ಆ ಕಾಲಕ್ಕೆ ನಲವತ್ತುಸಾವಿರ ರೂಪಾಯಿಗಳಷ್ಟು ಬಂಡವಾಳ ಹೂಡಬೇಕಾಯಿತೆಂದು ದೇವುಡು ನರಸಿಂಹ ಶಾಸ್ತ್ರಿಗಳು ಅಂದಾಜು ಮಾಡುತ್ತಾರೆ. ಈ ಸಂಸ್ಥೆ ಮೈಸೂರು ಪಿಕ್ಚರ್ಸ್ ಕಾರ್ಪೊರೇಷನ್ ಲಾಂಛನದಲ್ಲಿ ತಯಾರಿಸಿದ ಚಿತ್ರ 'ಹರಿಮಾಯಾ'. ಮುಂಬಯಿಯಲ್ಲಿ ಹಲವು ಮೂಕಿಚಿತ್ರಗಳ ನಟರಾಗಿದ್ದ ವೈ.ವಿ.ರಾವ್ 'ಹರಿಮಾಯಾ'ದ ನಿರ್ದೇಶಕರು. ಪಾತ್ರವನ್ನೂ ನಿರ್ವಹಿಸಿದ್ದರು. ಕರ್ನಾಟಕ ಪಿಕ್ಚರ್ಸ್ ಕಾರ್ಪೊರೇಷನ್ ಮೂರು ಮೂಕಿಚಿತ್ರಗಳನ್ನು ತಯಾರಿಸಿತ್ತು. ಕಾಳಿದಾಸನ ಕುಮಾರ ಸಂಭವವನ್ನು ಆಧರಿಸಿ 'ಉಮಾ' ಎಂಬ ಚಿತ್ರ ನಿರ್ಮಿಸುವ ಪ್ರಯತ್ನವೂ ಇತ್ತು.

ವೀರಣ್ಣನವರಿಗೆ ಅರಮನೆಯ ಸಂಪರ್ಕವಿತ್ತು. ಅವರು ಅಂದಿನ ಯುವರಾಜರ ಕುದುರೆ ಸವಾರಿ, ಕ್ರೀಡೆ ಮೊದಲಾದ ಚಟುವಟಿಕೆಗಳನ್ನು ಚಿತ್ರಿಸಿ ತೋರಿಸಿ ಅವರಿಂದ ಮೆಚ್ಚುಗೆ ಪಡೆದಿದ್ದರು. ಮುಂದೆ ಯುವರಾಜರು ಯುರೋಪಿನ ಪ್ರವಾಸ ಮುಗಿಸಿಕೊಂಡು ಬಂದ ಮೇಲೆ ವೀರಣ್ಣನವರನ್ನು ಕರೆಸಿ ಅವರ ಚಿತ್ರನಿರ್ಮಾಣದ ಸಾಹಸವನ್ನು ಮೆಚ್ಚಿ ಚಲನಚಿತ್ರ ಮಾಧ್ಯಮ ಬೆಳೆಯಲಿ, ಮುಂದುವರಿಸಿಕೊಂಡು ಹೋಗಿ ಎಂದರು. ಅದಕ್ಕಾಗಿ ಯಶವಂತಪುರದ ಬಳಿ ನೂರು ಎಕರೆ ಜಮೀನು, ಒಂದು ಲಕ್ಷ ರೂಪಾಯಿ ಧನಸಹಾಯ ಮಾಡುವುದಾಗಿಯೂ ಹೇಳಿದರು. ಅದಲ್ಲದೆ ಅರಸರು ಕೃಷಿ, ಅರಣ್ಯ, ಸೋಪು ಕೈಗಾರಿಕೆ ಮೊದಲಾದ ವಿಷಯಗಳ ಬಗ್ಗೆ ಕಿರುಚಿತ್ರಗಳನ್ನು ಈ ಸ್ಟುಡಿಯೋ ಮೂಲಕವೇ ತಯಾರಿಸಿ ಸಂಸ್ಥೆಯನ್ನು ಬೆಂಬಲಿಸಿದರು. ವೀರಣ್ಣನವರು ಯುವರಾಜರ ನೆರವನ್ನು ಪಡೆದುಕೊಳ್ಳಲಿಲ್ಲ. ಅವರ ಅತ್ತ ರಂಗಭೂಮಿ, ಇತ್ತ ಸ್ಟುಡಿಯೋ ಮತ್ತು ಚಿತ್ರನಿರ್ಮಾಣ ಎಲ್ಲವನ್ನೂ ಸರಿದೂಗಿಸಲಾರದೆ ಸ್ಟುಡಿಯೋ ಕೆಲಸಗಳಿಗೆ ಇತರರನ್ನೇ ಅವಲಂಬಿಸಿದರು. ಆದರೆ ದೇವುಡು ಅಂಥವರಿಗೆ ಅಷ್ಟು ದೊಡ್ಡ ಜವಾಬ್ದಾರಿ ನಿರ್ವಹಿಸಲು ಆಗಲಿಲ್ಲ. ಅಥವಾ ಎಲ್ಲರೂ ಅವರ ಮಾತನ್ನು ಕೇಳುತ್ತಿರಲಿಲ್ಲ ಎನ್ನಬಹುದು. ಅವರು ನಾಟಕದ ಕಂಪನಿಗೇ ಬಂದು ಅಲ್ಲಿಯ ನಿರ್ವಹಣೆ ಹೊತ್ತುಕೊಂಡರು. ಓರಿಯಂಟಲ್ ಬ್ಯಾಂಕ್ ಮುಚ್ಚಿಹೋಗಿದ್ದರಿಂದ ಶ್ರೀನಿವಾಸಮೂರ್ತಿಯವರೂ ಅತಂತ್ರ ಸ್ಥಿತಿಯಲ್ಲಿದ್ದರು. ವೀರಣ್ಣನವರು ಸ್ಟುಡಿಯೋಗೆ ಬರುವ ಹೊತ್ತಿಗೆ ಎಲ್ಲೆಡೆ ಅವ್ಯವಸ್ಥೆಯೇ ತುಂಬಿ ಹೋಗಿತ್ತು. ಲೆಕ್ಕಪತ್ರಗಳಿಂದ ಹಿಡಿದು ಎಲ್ಲ ಕಡೆ ನಿರ್ಲಕ್ಷ್ಯ-ವಂಚನೆ ಕಂಡಿತು. ಬಿಟ್ಟಿದಷ್ಟು ಸಾಲವಾಗಿತ್ತು. ನಾಟಕದ ಕಂಪನಿಯನ್ನು ನೋಡಿಕೊಂಡ ಹಾಗೆಯೇ ಈ ಸ್ಟುಡಿಯೋದ ಕಲಾವಿದರು-ತಂತ್ರಜ್ಞರನ್ನೂ ಅನ್ನವಿಟ್ಟು ಸಾಕಬೇಕಾದ ಗುರುತರ ಹೊಣೆ ವೀರಣ್ಣನವರ ಪಾಲಿಗೆ ಬಂತು. ವೀರಣ್ಣನವರಿಗೆ ಈ ಹಂತದಲ್ಲಿ ವಿಪರೀತ ಅವಮಾನ ಎನ್ನಿಸಿತ್ತು. ಸಮಾಜದಲ್ಲಿ ಅತ್ಯಂತ ಪ್ರತಿಷ್ಠಿತ ವ್ಯಕ್ತಿಯಾಗಿ ಗೌರವಿಸಲ್ಪಡುತ್ತಿದ್ದ ತಮಗೆ ಒದಗಿದ ಈ ಸಂಕಟಕ್ಕಾಗಿ ದುಃಖಿತರಾದರು. ಮನೆಯಿಂದ ಆಚೆಗೆ ಹೋಗದೆ ಕುಳಿತುಬಿಟ್ಟರು. ಸಾಲಗಾರರು ದಾವೆ ಹೂಡಿದರು. ವೀರಣ್ಣನವರು ಕೋರ್ಟಿಗೂ ಹೋಗಲಿಲ್ಲ. ಕಡೆಗೆ ನ್ಯಾಯಾಲಯ ಎಕ್ಸ್ ಪಾರ್ಟಿ ತೀರ್ಮಾನ ತೆಗೆದುಕೊಂಡಿತು. ಲಕ್ಷಾಂತರ ರೂಪಾಯಿಗಳ ಸಾಲದ ಹೊರೆ ಮ್ಯಾನೇಜಿಂಗ್ ಡೈರೆಕ್ಟರಾದ ಕಾರಣ ವೀರಣ್ಣನವರೇ ಭರಿಸಬೇಕಾಯಿತು. ಈ ಸಾಲಗಳನ್ನು ತೀರಿಸಲು ಅವರು ಬಹಳ ಪ್ರಯಾಸಪಟ್ಟರು. ಒಂದು ಹಂತದಲ್ಲಿ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಳ್ಳಲೇ ಎಂದು ಯೋಚಿಸಿದ್ದಾಗಿ ತಮ್ಮ ಆತ್ಮಕಥೆಯಲ್ಲಿ ಹೇಳಿಕೊಂಡಿದ್ದಾರೆ. ಅತ್ಯಂತ ಶ್ರೀಮಂತವಾಗಿ ಪ್ರಾರಂಭವಾಗಿ, ಹಾಗೆಯೇ ನಡೆದುಕೊಂಡೂ ಬಂದ ಈ ಸ್ಟುಡಿಯೋ ವ್ಯವಹಾರ ನಡೆದದ್ದು ಕೇವಲ ಮೂರು ವರ್ಷಗಳ ಕಾಲ ಮಾತ್ರ. ಅನಂತರ ಮುಚ್ಚಿಹೋಯಿತು. ಇದು ಚಿತ್ರೋದ್ಯಮದ ದುರಂತ.

ಇಷ್ಟು ಹೊತ್ತಿಗೆ ಮಾತನಾಡುವ ಚಿತ್ರ 'ಆಲಂ ಆರಾ' (೧೯೩೧) ತೆರೆಗೆ ಬಂದುದು ಚಿತ್ರಮಾಧ್ಯಮ ಆಧುನಿಕ ಯುಗದಲ್ಲಿ ವೈಜ್ಞಾನಿಕ ಕ್ರಾಂತಿಯನ್ನೇ ಮಾಡಿದಂತಾಗಿತ್ತು. ಪ್ರಾರಂಭದಿಂದಲೂ ಈ ಮಾಧ್ಯಮದಲ್ಲಿ ಆಸಕ್ತಿ ತೋರಿಸಿದ, ಈ ಉದ್ಯಮಕ್ಕೆ ಸೂಕ್ತವಾದ ಸ್ಥಳ, ಹವಾಮಾನ, ಪ್ರಕೃತಿ ಎಲ್ಲವೂ ಇದ್ದ ಮೈಸೂರು ರಾಜ್ಯದಲ್ಲಿ ಎಲ್ಲ ಮೂಲಸೌಲಭ್ಯಗಳನ್ನು ಹೊಂದಿದ್ದ ಸ್ಟುಡಿಯೋಗಳು ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡಿದ್ದರೆ ಟಾಕಿಯುಗದ ತಂತ್ರವನ್ನು ಬಳಸಿ ಏನೆಲ್ಲ ಸಾಧಿಸಬಹುದಿತ್ತು. ಮಾಧ್ಯಮದ ಗಂಭೀರವಾದ ಕಾಳಜಿಗಿಂತ ಕೇವಲ ಕುತೂಹಲಕ್ಕೆಂದು ತೊಡಗಿಕೊಂಡವರೇ ಹೆಚ್ಚಾದ್ದರಿಂದ ವೃತ್ತಿಪರತೆ, ಬದ್ಧತೆ ಇಲ್ಲದೇ ಸ್ಟುಡಿಯೋಗಳು ಮುಚ್ಚಿಹೋದವು. ಕೈಗೆಟುಕುವಷ್ಟು ಅಂತರದಲ್ಲಿದ್ದ ಮಹತ್ಸಾಧನೆಯ ಅವಕಾಶವನ್ನು ಕನ್ನಡನಾಡು ಆ ಮಟ್ಟಿಗೆ ಕಳೆದುಕೊಂಡಿತೆಂದೇ ಹೇಳಬಹುದು. ಇಷ್ಟಾದರೂ ಕನ್ನಡ ಚಿತ್ರರಂಗ ತನ್ನ ಸಾಹಸಪ್ರಿಯತೆಯನ್ನು ಬಿಟ್ಟುಕೊಡಲಿಲ್ಲ. ಮೂಕಿಚಿತ್ರದ ಭದ್ರ ಬುನಾದಿ ಇದ್ದ ಕನ್ನಡ ಚಿತ್ರರಂಗದ ಹಿನ್ನೆಲೆಯಲ್ಲಿ ನೋಡಿದಾಗ ಕೊಂಚ ತಡವಾಯಿತು ಎನ್ನಿಸಿದರೂ ಟಾಕಿ ಆರಂಭವಾದ ಸುಮಾರು ಮೂರು ವರ್ಷಗಳ ನಂತರ, ೧೯೩೪ರ ಹೊತ್ತಿಗೆ ಕನ್ನಡದಲ್ಲಿ ಟಾಕಿಚಿತ್ರಗಳು ಬಂದವು. ೧೯೩೪ರಲ್ಲಿ 'ಸತಿ ಸುಲೋಚನಾ', 'ಭಕ್ತ ಧ್ರುವ'ಗಳಾದರೆ ಒಟ್ಟಾರೆ ೧೯೩೬ರ ಕೊನೆಯ ಹೊತ್ತಿಗೆ ನಾಲ್ಕು ಕನ್ನಡ ಚಿತ್ರಗಳು ಬಂದವು. ಈ ಚಿತ್ರಗಳನ್ನು ತುಂಬ ಸುಲಭವಾಗೇನೂ ತಯಾರಿಸಿರಲಿಲ್ಲ. ನಿರ್ಮಾಪಕರು ಕೊಲ್ಹಾಪುರ, ಪುಣೆ, ಮುಂಬಯಿ, ಮದರಾಸುಗಳಿಗೆ ಹೋಗಿ ಚಿತ್ರೀಕರಿಸಿದ್ದರು. ಆ ಕೇಂದ್ರಗಳಲ್ಲಿಯೂ ಚಿತ್ರೀಕರಣ ಚಟುವಟಿಕೆ ಅಧಿಕವಾಗಿದ್ದುದರಿಂದ ಕನ್ನಡ ಚಿತ್ರನಿರ್ಮಾಣಕ್ಕೆ ನಿರೀಕ್ಷಿಸಿದಷ್ಟು ಸಹಕಾರ, ಸೌಲಭ್ಯ ಸಿಗುವುದೂ ಸಾಧ್ಯವಿರಲಿಲ್ಲ. ಕರ್ನಾಟಕದಲ್ಲೇ ಒಂದು ಸ್ಟುಡಿಯೋ ಇದ್ದರೆ ಚೆನ್ನ ಅನ್ನಿಸಿದುದು ಸಹಜ.

ಮೈಸೂರು ಸೌಂಡ್ ಸ್ಟುಡಿಯೋಸ್

ಮೈಸೂರಿನ ಎ.ಆರ್.ತಿಮ್ಮಯ್ಯನವರು ಸಾರಿಗೆ ಬಸ್ಸುಗಳ ಮಾಲೀಕರು. ಶ್ರೀಮಂತ ವ್ಯಾಪಾರಿ. ಅವರು ಅಪೆರಾ ಮತ್ತು ಕೃಷ್ಣಾ ಚಿತ್ರಮಂದಿರಗಳ ಮಾಲೀಕರೂ ಆಗಿದ್ದರು. ತಮಿಳುನಾಡಿನ ವೆಲ್ಲೂರಿನಲ್ಲಿ ಅವರದೊಂದು ಚಿತ್ರಮಂದಿರ ಇತ್ತು.

ತಮ್ಮ ಚಿತ್ರಮಂದಿರದಲ್ಲೇ ತೆಲುಗು ಚಿತ್ರವೊಂದನ್ನು ನೋಡುತ್ತಿದ್ದಾಗ ಈ ಕಲಾವಿದರನ್ನು ಮೀರಿಸುವ ಕಲಾವಿದರು ಕನ್ನಡದಲ್ಲಿ ಇದ್ದಾರೆ, ಅವರನ್ನೆಲ್ಲ ಬಳಸಿ ಚಿತ್ರ ಮಾಡಿದರ ಅದ್ಭುತವೇ ಸಾಧಿತವಾದೀತು ಅನ್ನಿಸಿತು. ಚಿತ್ರೀಕರಣಕ್ಕಾಗಿ ಬೇರೆ ರಾಜ್ಯಗಳಿಗೆ ಹೋಗಿ ಸರದಿಗಾಗಿ ಕಾದು ನಿಲ್ಲುವುದಕ್ಕಿಂತ ಇಲ್ಲೇ ಒಂದು ಸ್ಟುಡಿಯೋ ಇದ್ದರೆ ಅನುಕೂಲ ಎನ್ನಿಸಿತು. ಕೂಡಲೇ ಕಾರ್ಯಪ್ರವೃತ್ತರಾದರು.

ಮಿತ್ರರ ಬಳಿ ಚರ್ಚಿಸಿದಾಗ ಇದಕ್ಕೆ ಉತ್ತಮ ಪ್ರತಿಕ್ರಿಯೆ ಬರಲಿಲ್ಲ. ಆದರೆ ತಿಮ್ಮಯ್ಯನವರಿಗೆ ಕನಕಲಕ್ಷ್ಮಮ್ಮನವರನ್ನು ಪರಿಚಯ ಮಾಡಿಸಿದರು. ಕನಕಲಕ್ಷ್ಮಮ್ಮನವರು ಕನ್ನಡದ ಮೊದಲ ವಾಕ್ಚಿತ್ರಗಳಲ್ಲೊಂದಾದ 'ಧ್ರುವಕುಮಾರ' (ಭಕ್ತ ಧ್ರುವ)ದಲ್ಲಿ ಅಭಿನಯಿಸಿದರು. ಆಕೆ ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಇಂಗ್ಲಿಷ್ ವಿಭಾಗದ ಮುಖ್ಯಸ್ಥೆಯಾಗಿದ್ದರು. ಆಕೆಯ ಸಹೋದರ ಟಿ.ದ್ವಾರಕಾನಾಥ್ ಅವರು 'ಭಕ್ತ ಧ್ರುವ'ಕ್ಕೆ ಕೆಲಸ ಮಾಡಿದರು. ಚಲನಚಿತ್ರ ನಿರ್ದೇಶಕರೂ ಆಗಿದ್ದರು. ಆತ ಉತ್ತಮ ತಂತ್ರಜ್ಞರಾಗಿದ್ದರು. ಕನಕಲಕ್ಷ್ಮಮ್ಮನವರು ದ್ವಾರಕಾನಾಥರನ್ನು ಪರಿಚಯಿಸಿದ್ದು ತಿಮ್ಮಯ್ಯನವರಿಗೆ ತುಂಬ ಸಹಕಾರಿಯಾಯಿತು. ದ್ವಾರಕಾನಾಥರು ಆಗ ಮದರಾಸಿನಲ್ಲಿ ವಿಜಯಾ ಸಿನಿ ಲ್ಯಾಬೊರೇಟರೀಸ್ ಸಂಸ್ಥೆಯನ್ನು ನಡೆಸುತ್ತಿದ್ದರು. ತಿಮ್ಮಯ್ಯನವರ ಸ್ಟುಡಿಯೋ ಸ್ಥಾಪಿಸುವ ಯೋಜನೆಯನ್ನು ಮೆಚ್ಚಿದ ದ್ವಾರಕಾನಾಥ್ ಸೂಕ್ತ ಸಲಹೆಗಳನ್ನು ಕೊಟ್ಟರು. ತಿಮ್ಮಯ್ಯನವರ ಕೋರಿಕೆಯಂತೆ ತಾವೂ ಬೆಂಗಳೂರಿಗೇ ಬಂದು ಸ್ಟುಡಿಯೋ ಜವಾಬ್ದಾರಿಯನ್ನು ವಹಿಸಿಕೊಂಡರು.

(ಚಿತ್ರ ೧) ಎ.ಆರ್.ತಿಮ್ಮಯ್ಯ

ತಿಮ್ಮಯ್ಯನವರಿಗೆ ಗೆಳೆಯರ ದೊಡ್ಡ ಬಳಗವೇ ಇತ್ತು. ಅವರೆಲ್ಲ ಬೆಂಬಲಿಸಿದರು. ಒಂದು ಜಾಯಿಂಟ್ ಸ್ಟಾಕ್ ಕಂಪನಿಯಾಗಿ ಮೈಸೂರು ಸೌಂಡ್ ಸ್ಟುಡಿಯೋಸ್ ರೂಪುಗೊಂಡಿತು. ಸ್ಟುಡಿಯೋಗಾಗಿ ಆಯ್ಕೆ ಮಾಡಿದ್ದು ಈ ಹಿಂದೆ 'ಕರ್ನಾಟಕ ಪಿಕ್ಚರ್ಸ್ ಕಾರ್ಪೊರೇಷನ್ ಸ್ಟುಡಿಯೋ' ಇದ್ದ ಮಲ್ಲೇಶ್ವರದ ಬಂಗಲೆಯನ್ನೇ. ಆ ಕಾಲಕ್ಕೆ ಸುಮಾರು ೨೫,೦೦೦ ರೂಪಾಯಿಗಳ ವೆಚ್ಚದಲ್ಲಿ ಸ್ಟುಡಿಯೋ ಸಜ್ಜಾಯಿತು. ತಿಮ್ಮಯ್ಯನವರು ಪ್ರದರ್ಶಕರೂ ಆಗಿದ್ದರು. ಅವರಿಗೆ ಸೂರ್ಯ ಸಂಸ್ಥೆಯ ನಂಟೂ ಇದ್ದುದು, ಈಗ ಅವರೊಟ್ಟಿಗೆ ದ್ವಾರಕಾನಾಥ್‌ರಂಥ ಪ್ರತಿಭಾವಂತ ತಂತ್ರಜ್ಞರೂ ಸೇರಿದ ಕಾರಣ ಸ್ಟುಡಿಯೋಗೆ ಅತ್ಯಾಧುನಿಕ ಸಲಕರಣೆಗಳನ್ನು ತರಿಸಲು ಸಾಧ್ಯವಾಯಿತು. ಒಂದು ಬೆಲ್ ಅಂಡ್ ಹೊವೆಲ್ ಕ್ಯಾಮರಾ, ಆಡಿಯೋ ಕಾಮೆಕ್ಸ್ ಎಂಬ ಜರ್ಮನ್ ರಿಕಾರ್ಡಿಂಗ್ ಉಪಕರಣ ತರಿಸಿದರು. ಆ ಕಾಲಕ್ಕೆ ಭಾರತಕ್ಕೆ ಆಮದಾಗಿದ್ದ ಎರಡೇ ಉಪಕರಣಗಳಲ್ಲಿ ಇದೊಂದಾಗಿತ್ತು. ಚಿತ್ರೀಕರಣಕ್ಕಾಗಿ ಇದ್ದ ಒಂದು ಅಂಕಣ (floor)ದಲ್ಲೇ ಕೊಂಚ ಭಾವಣೆ ಬದಲಾಯಿಸಿಕೊಳ್ಳಲಾಗಿತ್ತು. ಇದು ಹಗಲು, ರಾತ್ರಿ ಎಫೆಕ್ಟ್‌ಗಳಿಗೆ ಬೇಕಾದ ಹಾಗೆ ಹೊಂದಿಸಿಕೊಳ್ಳುವಂತಿತ್ತು. ಸುಪ್ರಸಿದ್ಧ ಛಾಯಾಗ್ರಾಹಕ ಬೊಮ್ಮನ್ ಡಿ.ಇರಾನಿ, ಗಜಾನನ ಕಾಂಬಳೆ, ಎಂ.ವಿ.ರಾಮನ್ ಮತ್ತು ಯಶವಂತರಾವ್ ಎಂಬ ರಿಕಾರ್ಡಿಸ್ಟ್ ಪ್ರಮುಖ ತಂತ್ರಜ್ಞರಾಗಿದ್ದರು. ಸಮಸ್ತವನ್ನೂ ನಿರ್ವಹಿಸಲು ಜನರಲ್ ಮ್ಯಾನೇಜರ್ ಆಗಿ ನೇಮಕಗೊಂಡಿದ್ದ ದ್ವಾರಕಾನಾಥ್ ಅವರಿದ್ದರು. ದ್ವಾರಕಾನಾಥ್ ಸಂಸ್ಕರಣ (ಲ್ಯಾಬೊರೇಟರಿ) ವಿಭಾಗವನ್ನು ನಿರ್ವಹಿಸುತ್ತಿದ್ದರು. ಮೈಸೂರು ಸೌಂಡ್ ಸ್ಟುಡಿಯೋದಲ್ಲಿ ತಯಾರಾದ ಚಿತ್ರ 'ರಾಜಸೂಯ ಯಾಗ'. ಒಂದು ಅರ್ಥದಲ್ಲಿ ಸ್ಥಳೀಯವಾಗಿ ತಯಾರಾದ ಪ್ರಥಮ ಕನ್ನಡ ಚಿತ್ರ ಎಂತಲೂ ಹೇಳಬಹುದು. ಕನ್ನಡ ರಂಗಭೂಮಿಯಲ್ಲಿನ ಪ್ರಸಿದ್ಧ ಕಲಾವಿದರನೇಕರು ಈ ಚಿತ್ರದಲ್ಲಿ ಅಭಿನಯಿಸಿದರು. ಆ ಕಾಲಕ್ಕೆ ಪ್ರಥಮ ಸುತ್ತಿನ ಬಿಡುಗಡೆಗೆ ಮೂರು ಪ್ರತಿ ತೆಗೆಯಲಾಗಿತ್ತು. ನಿರ್ಮಾಪಕರಿಗೆ ಆದಾಯವೂ ಒಂದು ಲಕ್ಷ ರೂಪಾಯಿಗಳವರೆಗೆ ಬಂದಿತ್ತು. ಆ ದಿನಗಳಲ್ಲಿ ಚಿತ್ರಗಳಿಂದ ಬರುತ್ತಿದ್ದ ಗಳಿಕೆಯ ದೃಷ್ಟಿಯಿಂದ ಇದು ದೊಡ್ಡ ಮೊತ್ತವೇ ಆಗಿತ್ತು.

ಅನಂತರ ತಮಿಳಿನಲ್ಲಿ 'ನವೀನ ನಿರುಪಮ' ಎಂಬ ೧೪,೫೦೭ ಅಡಿ ಉದ್ದದ ಚಿತ್ರವನ್ನು ತಯಾರಿಸುವ ಪ್ರಯತ್ನ ನಡೆಯಿತು. ಈ ಚಿತ್ರದಲ್ಲಿ ಕೆ.ಎಸ್.ಐಯರ್, ಸ್ಕ್ಯಾಂಡೊ, ಕೊಳಲು ವಿದ್ವಾನ್ ಮನ್ನಾರ್‌ಗುಡಿ ಪಾಪ, ಗುಲಾಬಿ ಬಾಯಿ, ಕನಕವಲ್ಲಿ, ಹಾಸ್ಯನಟ ಸಾರಂಗಪಾಣಿ ಮೊದಲಾದವರು ಅಭಿನಯಿಸಿದರು. ಮುಖ್ಯವಾಗಿ ಸ್ಟುಡಿಯೋ ಮಾಲೀಕರಾಗಿದ್ದ ವಿ.ಆರ್.ತಿಮ್ಮಯ್ಯನವರೇ ನಿರ್ದೇಶಿಸಲು ಹೊರಟರು. ತಾವೇ ಚೌಧರಿ ಎಂಬ ಹೆಸರಿನಲ್ಲಿ ನಾಯಕ ಪಾತ್ರವನ್ನು ನಿರ್ವಹಿಸಿದರು. ಸ್ಟುಡಿಯೋದ ಮುಖ್ಯರು, ಹಣ-ಅಧಿಕಾರ ಇದ್ದವರು ಅವರೇ ಮುಂದಾದಾಗ 'ಇದು ಸರಿಯಾಗಲಾರದು' ಎಂದು ಹೇಳುವ ಧೈರ್ಯ ಯಾರೂ ಮಾಡಲಿಲ್ಲ. ತಿಮ್ಮಯ್ಯನವರಿಗೂ ತಮ್ಮ ಇತಿ-ಮಿತಿಗಳನ್ನು ತಿಳಿದುಕೊಳ್ಳುವ ಅಗತ್ಯ ತೋರಲಿಲ್ಲ. ಮದರಾಸಿನಲ್ಲಿ ಚಿತ್ರೋದ್ಯಮ ನೆಲೆಯೂರತೊಡಗಿತ್ತು. ತಂತ್ರಜ್ಞಾನದಲ್ಲಿ ಹೆಚ್ಚಿನ ಸಾಧನೆ ಆಗಿತ್ತು. ತಜ್ಞರಿದ್ದರು. ಇಂಥ ಹೊತ್ತಿನಲ್ಲಿ ಕರ್ನಾಟಕದಿಂದ ತಮಿಳು ಚಿತ್ರ ಸಿದ್ಧವಾಗುವ ಅಗತ್ಯವೇ ಇರಲಿಲ್ಲ. ಇದು ಆಕಾಶಕ್ಕೆ ಏಣಿ ಹಾಕುವ ಸಾಹಸವೇ ಆಯಿತು. ನಿರ್ದೇಶನ-ಅಭಿನಯ ಎರಡೂ ಮಾಡುವ ತಿಮ್ಮಯ್ಯನವರ ಆತುರದ ಪ್ರಯತ್ನ ಅಪೇಕ್ಷಣೀಯವಾಗಿರಲಿಲ್ಲ. ತಪ್ಪು ಹೆಜ್ಜೆ ಇಟ್ಟಾಗಿತ್ತು. ಕನ್ನಡ ಚಿತ್ರೋದ್ಯಮಕ್ಕೆ ಭದ್ರ ಬುನಾದಿ ಆಗಬೇಕಾಗಿದ್ದ ಸ್ಟುಡಿಯೋ ಪ್ರಯತ್ನ ತನ್ನ ಮೂರನೆಯ ಚಿತ್ರ ತಯಾರಿಕೆ ಪ್ರಾರಂಭಿಸುವ ಹೊತ್ತಿಗೇ ಮುಚ್ಚುವ ಸ್ಥಿತಿ ಬಂದಿತ್ತು.

ಕನ್ನಡ ಚಿತ್ರಗಳು ಜನತೆಯನ್ನು ಆಕರ್ಷಿಸುವಲ್ಲಿ ಸಫಲವಾಗಿದ್ದವು. ಜನತೆ ರಂಗಭೂಮಿಗಿಂತ ಮಿಗಿಲಾದ ಮನರಂಜನೆ ಸಿನಿಮಾದಲ್ಲಿ ಸಿಗುತ್ತದೆಂದು ನಂಬತೊಡಗಿತ್ತು. ಪ್ರಸಿದ್ಧ ರಂಗ ಕಲಾವಿದರೆಲ್ಲ ಚಿತ್ರರಂಗಕ್ಕೆ ಬರಲಾರಂಭಿಸಿದ್ದರು. ಇಂಥ ಹದವಾದ ಪರಿಸರವಿದ್ದಾಗ ಕನ್ನಡ ಚಿತ್ರಗಳು ಇಲ್ಲೇ ತಯಾರಾಗಲು ಬೇಕಾಗಿದ್ದ ಮೂಲ ಸೌಲಭ್ಯಗಳೇ ಇರಲಿಲ್ಲ. ಎಲ್ಲವೂ ಲಭ್ಯವಿದ್ದು, ಒಂದು ಬೃಹತ್ ಉದ್ಯಮವಾಗಿ ಬೆಳೆಯುತೊಡಗಿದ್ದ ಮದರಾಸಿಗೆ ಕನ್ನಡ ಚಿತ್ರರಂಗ ವಲಸೆ ಹೋಗುವುದು ಅನಿವಾರ್ಯವಾಯಿತು.

ಮೈಸೂರು ಮೂವಿಟೋನ್

ಮತ್ತೆ ಕರ್ನಾಟಕದಲ್ಲಿ ಸ್ಟುಡಿಯೋ ಪ್ರಾರಂಭವಾಗಲು ಸುಮಾರು ಐದು ವರ್ಷಗಳು ಬೇಕಾದವು. ಚಿತ್ರ ತಯಾರಿಕೆಯೂ ಸಾಕಷ್ಟು ಪ್ರಮಾಣದಲ್ಲಿ ಇರಲಿಲ್ಲ. ಎರಡನೇ ಮಹಾಯುದ್ಧದ ಕಾರಣ ಕಚ್ಚಾ ಫಿಲಂ ಅನ್ನು ಆಮದು ಮಾಡಿಕೊಳ್ಳುವುದು ಕಷ್ಟವಿತ್ತು. ಕಚ್ಚಾ ಫಿಲಂಗೆ ಸರ್ಕಾರದ ನಿಯಂತ್ರಣ, ರೇಷನ್ ಬಂದಿತು. ಇಂಥ ಹೊತ್ತಿನಲ್ಲಿ ತಮಿಳು-ತೆಲುಗು ಚಿತ್ರರಂಗದಲ್ಲಿ ಸಾಕಷ್ಟು ಸಾಧಿಸಿ, ದಕ್ಷಿಣಭಾರತ ಚಲನಚಿತ್ರ ಪಿತಾಮಹರೆಂದೇ ಪ್ರಸಿದ್ಧರಾದ ಕನ್ನಡನಾಡಿನವರೇ ಆಗಿದ್ದ ಎಚ್.ಎಂ.ರೆಡ್ಡಿ[1]ಯವರು ಮೈಸೂರಿನಲ್ಲಿ ಸ್ಟುಡಿಯೋ ಮಾಡುವ ಯೋಜನೆ ಕೈಗೆತ್ತಿಕೊಂಡು ಸಂಗಡಿಗರೊಂದಿಗೆ ಕಾರ್ಯನಿರತರಾದರು.

ಈಗ ಮೈಸೂರಿನಲ್ಲಿ ಪ್ರೀಮಿಯರ್ ಸ್ಟುಡಿಯೋ ಇರುವ ಸ್ಥಳದಲ್ಲೇ 'ಮೈಸೂರು ಮೂವಿಟೋನ್ ಸ್ಟುಡಿಯೋಸ್' ಪ್ರಾರಂಭವಾಯಿತು. ೧೯೪೨ನೇ ಇಸವಿಯ ವಿಜಯದಶಮಿಯ ದಿನ ದಿವಾನ್ ನ್ಯಾಪತಿ ಮಾಧವರಾವ್ ಅವರು ಉದ್ಘಾಟಿಸಿದರು. ಪ್ರಾರಂಭದಲ್ಲಿ ರೆಡ್ಡಿಯವರಿಗೆ ಎಲ್ಲ ಕಡೆಯಿಂದ ಪ್ರೋತ್ಸಾಹ ಸಿಕ್ಕಿತು. ಪುಣೆಯ ಶಾಲಿಮಾರ್ ಸಂಸ್ಥೆಯ ನಿರ್ಮಾಪಕ ಹಾಗೂ ನಿರ್ದೇಶಕ ಡಬ್ಲ್ಯು.ಜಡ್.ಅಹ್ಮದ್ ಮತ್ತು ಅವರ ತಾರಾಪತ್ನಿ ನೀನಾ ಅವರು ಮೈಸೂರಿನಲ್ಲೇ ನೆಲೆಸಿ ಹಿಂದಿ ಚಿತ್ರಗಳನ್ನು ನಿರ್ಮಿಸುತ್ತೇವೆಂಬ ಆಶ್ವಾಸನೆ ಕೊಟ್ಟರು. ಆದರೆ ಕನ್ನಡ ಚಿತ್ರಗಳ ನಿರ್ಮಾಣವೇ ಇಲ್ಲ. ಅದು ಅಂಥ ಸಮಸ್ಯೆಯ ಕಾಲ. ಕಚ್ಚಾ ಫಿಲಂ ಅಭಾವವಿತ್ತು. ಬಹು ಪ್ರಯಾಸಪಟ್ಟರೆ ಕೊಂಚ ಕಚ್ಚಾ ಫಿಲಂ ಸಿಗುತ್ತಿತ್ತು. ಅದೂ ದೊಡ್ಡ ನಿರ್ಮಾಪಕರಿಗೆ. ಫಿಲಂ ದೊರಕಿಸಿಕೊಳ್ಳಲು ಆಗಿನ ನಿಯಮದಂತೆ 'ರಹದಾರಿ' (ಪರವಾನಗಿ) ಪಡೆದುಕೊಳ್ಳುವ ಉತ್ಸಾಹ ಕನ್ನಡದ ಎಲ್ಲ ನಿರ್ಮಾಪಕರಿಗೆ ಇರಲಿಲ್ಲ. ಹೀಗಾಗಿ ಕನ್ನಡ ಚಿತ್ರಗಳೇ ಇಲ್ಲದಿರುವಾಗ ರೆಡ್ಡಿ ಸ್ಟುಡಿಯೋ ಮುಚ್ಚಲೇಬೇಕಾದ ಅನಿವಾರ್ಯ ಎದುರಾಯಿತು. ಹೆಚ್.ಎಂ.ರೆಡ್ಡಿ ಅವರಿಗೆ ಫಿಲಂ ಪರ್ಮಿಟ್ ಸಿಕ್ಕಿತು. ಚಿತ್ರನಿರ್ಮಾಣಕ್ಕೆ ಉತ್ತಮ ಸೌಲಭ್ಯ ಇರುವ ಕಡೆ ಹೋದರು. ಇದು ಚಲನಚಿತ್ರ ಸ್ಟುಡಿಯೋದ ಮತ್ತೊಂದು ದುರಂತ.

ವಿಕ್ರಂ ಲ್ಯಾಬೊರೇಟರೀಸ್

ಪ್ರಸಿದ್ಧ ನಿರ್ಮಾಪಕ, ನಿರ್ದೇಶಕ, ಮೂಲತಃ ಛಾಯಾಗ್ರಾಹಕರೂ ಆಗಿದ್ದ ಬಿ.ಎಸ್.ರಂಗಾ ಅವರಿಗೆ ಕರ್ನಾಟಕದಲ್ಲಿ ಸ್ಟುಡಿಯೋ ಸ್ಥಾಪಿಸುವ ಅಪೇಕ್ಷೆ ಇತ್ತು. ಅದಕ್ಕೆ ಪೂರ್ವಭಾವಿಯಾಗಿ ಒಂದು ಸಂಸ್ಕರಣಾಗಾರ (ಲ್ಯಾಬೊರೇಟರಿ)ವನ್ನು ಪ್ರಾರಂಭಿಸಿದರು. ಸುಸಜ್ಜಿತ ಸಂಸ್ಕರಣಾಗಾರವೇ ಇಲ್ಲದಿರುವ ಆ ಸಂದರ್ಭಕ್ಕೆ ಅವರ ಈ ಯೋಜನೆ-ಪ್ರಯತ್ನ ಸರಿಯಾದ ಕ್ರಮವೇ ಆಗಿತ್ತು. ಮುಂದೆ ಅದನ್ನೇ ವಿಸ್ತರಿಸಿ ಸ್ಟುಡಿಯೋ ಮಾಡುವ ರಂಗಾ ಅವರ ಉದ್ದೇಶವನ್ನು ಅಂದು ಕೆ.ಸಿ.ದೇಸಾಯಿ, ಜಯಂತಿಲಾಲ್ ಠಾಕೂರ್ ಹಾಗೂ ಗೋವಿಂದ ಶೆಟ್ಟಿ ಅವರು ಬೆಂಬಲಿಸಿದ್ದರು. ಮೈಸೂರು-ಬೆಂಗಳೂರು ರಸ್ತೆಯಲ್ಲಿ ಸಿಗುವ ನಾಯಂಡಹಳ್ಳಿಯ ಬಳಿ ವಿಕ್ರಂ ಲ್ಯಾಬೊರೇಟರಿ ಪ್ರಾರಂಭವಾಯಿತು. ರಂಗಾ ಅವರಿಗಿದ್ದ ಮದರಾಸು ಚಿತ್ರರಂಗದ ಸಂಪರ್ಕ, ಪ್ರಭಾವಗಳ ಕಾರಣ ತಮಿಳು, ತೆಲುಗು ಚಿತ್ರಗಳೂ ಇಲ್ಲಿ ಸಂಸ್ಕರಣಗೊಂಡವು. ಕನ್ನಡ ಚಿತ್ರಗಳು ಬೆರಳೆಣಿಕೆಯಷ್ಟೂ ಇರಲಿಲ್ಲ. ಇವನ್ನೇ ನಂಬಿ ಸಂಸ್ಕರಣಾಗಾರ ನಡೆಸುವುದು ಸಾಧ್ಯವೇ ಇರಲಿಲ್ಲ. ಹಾಗಿರುವಾಗ ಸ್ಟುಡಿಯೋ ಮಾಡುವ ಯೋಜನೆ ಕೂಡಾ ತಪ್ಪು ಹೆಜ್ಜೆಯಾದೀತೆಂಬುದನ್ನು ರಂಗಾ ಬಹಳ ಬೇಗ ಗ್ರಹಿಸಿದರು. ಈ ಮುಂದಾಲೋಚನೆಯ ಫಲವಾಗಿ ಅವರ ಕಾರ್ಯಕ್ಷೇತ್ರ ಮದರಾಸಿಗೇ ವಾಪಸಾಯಿತು. ಇಲ್ಲಿಯ ವಿಕ್ರಂ ಲ್ಯಾಬೊರೇಟರಿ ನಂತರ ಮದರಾಸಿನಲ್ಲಿ ಪ್ರಾರಂಭಿಸಿದ ವಿಕ್ರಂ ಸ್ಟುಡಿಯೋ ಮತ್ತು ಲ್ಯಾಬೊರೇಟರಿ ಅದ್ದೂರಿ ಚಿತ್ರಗಳಿಗೆ ಹೆಸರಾದ ಸಂಸ್ಥೆಯಾಗಿ ಬೆಳೆದು ಬಂತು. ಅವರ ಸಂಸ್ಥೆಯೇ ಪ್ರಥಮ

೧. ಹೆಚ್.ಎಂ.ರೆಡ್ಡಿಯವರು ಬೆಂಗಳೂರಿನ ಬಳೆಪೇಟೆಯವರು, ನಿರ್ದೇಶಕ ವೈ.ಆರ್.ಸ್ವಾಮಿ ಅವರ ಸಂಬಂಧಿ. ಚಿಕ್ಕಂದಿನಲ್ಲೇ ಮುಂಬಯಿ ಸೇರಿ ಚಿತ್ರಗಳಿಗೆ ದುಡಿದರು. ಪ್ರಥಮ ವಾಕ್ಚಿತ್ರ 'ಆಲಂ ಆರಾ'ದ ತಂತ್ರಜ್ಞರಲ್ಲಿ ಒಬ್ಬರು ; ತೆಲುಗು, ತಮಿಳು ಪ್ರಥಮ ವಾಕ್ಚಿತ್ರಗಳ ನಿರ್ದೇಶಕರು. ಕೆ.ವಿ.ರೆಡ್ಡಿ, ಎಲ್.ವಿ.ಪ್ರಸಾದ್ ಮೊದಲಾದವರೆಲ್ಲ ಹೆಚ್.ಎಂ.ರೆಡ್ಡಿಯವರು ಸ್ಥಾಪಿಸಿದ ರೋಹಿಣಿ ಪಿಕ್ಚರ್ಸ್‌ನಲ್ಲಿ ಸಹಾಯಕರಾಗಿ ದುಡಿದವರೇ. ರೆಡ್ಡಿಯವರ ಬಳಿ ಸಹಾಯಕರಾಗಿದ್ದ ವೈ.ಆರ್.ಸ್ವಾಮಿ, ಹೆಚ್.ವಿ.ಬಾಬು ಯಶಸ್ವೀ ನಿರ್ದೇಶಕರಾದರು. ಮಧುಸೂದನ್, ಮನೋಹರ್ ಅತ್ಯುತ್ತಮ ಛಾಯಾಗ್ರಾಹಕರೆಂದು ಹೆಸರಾದರು. ರೆಡ್ಡಿ ಅವರು ನಿರ್ದೇಶಿಸಿದ, ವಿ.ನಾಗಯ್ಯ ಅಭಿನಯದ 'ಗೃಹಲಕ್ಷ್ಮಿ' ತೆಲುಗು ಚಿತ್ರ ಅತ್ಯಂತ ಜನಪ್ರಿಯವಾಗಿತ್ತು.

ಕಪ್ಪು-ಬಿಳುಪು ಸಂಸ್ಕರಣ ಕೇಂದ್ರವಾಗಿತ್ತು. ಕನ್ನಡದ ಪ್ರಥಮ ವರ್ಣಚಿತ್ರ ತಯಾರಕರೂ ಅವರೇ. ದಕ್ಷಿಣ ಭಾರತಕ್ಕೇ ಅತ್ಯಾಧುನಿಕ ಅನಿಮೇಷನ್ ಸೌಲಭ್ಯ ಒದಗಿಸಿದ ಸಂಸ್ಥೆಯೂ ರಂಗಾ ಅವರದೇ. ಚಿತ್ರರಂಗದಲ್ಲಿ ಯಶೋಗಾಥೆಯನ್ನೇ ಕಟ್ಟಿಕೊಟ್ಟ ಸಮರ್ಥ ತಂತ್ರಜ್ಞ ರಂಗಾ. ಅದರೂ ಅವರಿಗೆ ಕರ್ನಾಟಕದ ಬಗೆಗಿದ್ದ ಪ್ರೀತಿ ತಗ್ಗಲಿಲ್ಲ. ಅನಂತರವೂ ಬೆಂಗಳೂರಿನಲ್ಲಿ ಮಗ ವಸಂತ್ ಅವರ ಹೆಸರಿನಲ್ಲೇ ವಸಂತ್ ಲ್ಯಾಬೊರೇಟರಿ ಪ್ರಾರಂಭಿಸಿ, ಅದರ ನಿರ್ವಹಣೆಯನ್ನು ಆತನಿಗೇ ವಹಿಸಿದರು. ೨೦೦೦ನೇ ವರ್ಷದಲ್ಲಿ ಚಲನಚಿತ್ರ ವಾಣಿಜ್ಯ ಮಂಡಳಿಯ ಗುತ್ತಿಗೆ ಅವಧಿ ಮುಗಿದು ಸಂಕೇತ್ ಎಲೆಕ್ಟ್ರಾನಿಕ್ಸ್ ಮುಚ್ಚಿಹೋದಾಗ ಅಲ್ಲಿಯ ಯಂತ್ರಗಳನ್ನು ಖರೀದಿಸಿ ವಸಂತ್ ಅವರು ಕಾರ್ಯ ಮುಂದುವರಿಸಿದರು. ಶಂಕರ್‌ನಾಗ್‌ರ ಸಂಕೇತ್ ಮಿತ್ರ ಬಳಗಕ್ಕೆ, ಅಭಿಮಾನಿಗಳಿಗೆ ಇದೊಂದು ನೆಮ್ಮದಿ ತಂದ ಸಂಗತಿ.

ನವಜ್ಯೋತಿ ಸ್ಟುಡಿಯೋ

ಕನ್ನಡ ಚಲನಚಿತ್ರ ಇತಿಹಾಸದಲ್ಲಿ ಅತ್ಯಂತ ಮುಖ್ಯವಾದ ಸ್ಥಾನ ನವಜ್ಯೋತಿ ಸ್ಟುಡಿಯೋಗೆ ಸಲ್ಲುತ್ತದೆ. ಬೆಂಗಾಡಲ್ಲಿ ಬಂಗಾರ ಬೆಳೆವ ಸಾಹಸ ಮಾಡಿ ಯಶಸ್ವಿಯೂ ಆದ ಸಾಹಸಗಾಥೆ ಈ ಸಂಸ್ಥೆಯದು. ಪ್ರಾರಂಭದಲ್ಲಿ ಜಾನಕಿರಾಂ, ಎಂಬಾರಯ್ಯ, ರುದ್ರಪ್ಪ, ಕೆ.ಆರ್.ರಾಮಸ್ವಾಮಿ, ಬಿಂದುಮಾಧವ, ನಾಗಲಿಂಗು, ಗೋವಿಂದರಾಜ ಮೊದಲಿಯಾರ್, ಎಸ್.ಎನ್.ರಾಜು, ಪ್ರೇಮಾನಂದ್ ಎಂಬ ಒಂಬತ್ತು ಜನ ಸೇರಿ ಈ ಸ್ಟುಡಿಯೋ ಯೋಜನೆ ಸಿದ್ಧಪಡಿಸಿದ್ದಾಗಿ ದಾಖಲೆಗಳಿಂದ ತಿಳಿದುಬರುತ್ತದೆ. ಒಂಬತ್ತು ಜನರಾದ್ದರಿಂದ ನವಜ್ಯೋತಿ ಎನ್ನಲಾಯಿತೆಂದೂ ಹೇಳುತ್ತಾರೆ. ಇವರುಗಳಲ್ಲಿ ಜಾನಕಿರಾಂ ಅವರು ಛಾಯಾಗ್ರಹಣದಲ್ಲಿ ಪರಿಣತರು, ಎಂಬಾರಯ್ಯನವರು ಕಲಾನಿರ್ದೇಶಕರು, ಸಂಸ್ಕರಣ ವಿಭಾಗದಲ್ಲಿ ರುದ್ರಪ್ಪ, ಧ್ವನಿಗ್ರಹಣ ವಿಭಾಗಕ್ಕೆ ಕೆ.ಆರ್.ರಾಮಸ್ವಾಮಿ, ಗೋವಿಂದರಾಜ ಮೊದಲಿಯಾರ್ ಅವರು ಸ್ಥಿರಚಿತ್ರ ಛಾಯಾಗ್ರಾಹಕರಾಗಿ, ಪ್ರೇಮಾನಂದ್ ಸಂಗೀತ ವಿಭಾಗದಲ್ಲಿ, ಮೌಲ್ಡಿಂಗ್ ರಾಜು ಕಲಾವಿಭಾಗದಲ್ಲಿ, ಬಿಂದು ಮಾಧವ ಅವರು ಜನರಲ್ ಮ್ಯಾನೇಜರ್ ಆಗಿ ಕಾರ್ಯ ನಿರ್ವಹಿಸಿದಾಗಿ ದಾಖಲೆಗಳು ಹೇಳುತ್ತವೆ. ೧೯೪೧ರಿಂದ ೧೯೪೩ರವರೆಗೆ ಹೀಗಿತ್ತು. ಈ ಪಾಲುದಾರರು ರಾಮಸ್ವಾಮಿ ಅವರಿಗೆ ಮಾರಿದ್ದರಿಂದ ಅವರು ಸ್ನೇಹಿತರನ್ನು ಸೇರಿಸಿಕೊಂಡು ಕಾರ್ಯೋನ್ಮುಖರಾದರು. ಅನಂತರ ಐದು ಮಂದಿ ಮಾತ್ರ ಪಾಲುದಾರರಾಗಿ ಉಳಿದರು. ಅವರೆಂದರೆ, ಜಿ.ಆರ್.ರಾಮಯ್ಯ, ಎಚ್.ಎಸ್. ಕೃಷ್ಣಸ್ವಾಮಿ, ಜಿ.ಡಿ.ಅಯ್ಯಂಗಾರ್, ರಾಜ್ ಅಂಡ್ ಬ್ರದರ್ಸ್‌ನ ಮಾಲೀಕರಾದ ಗೋವಿಂದರಾಜ ಮೊದಲಿಯಾರ್ ಹಾಗೂ ನಿರ್ದೇಶಕ ಸಿ.ವಿ.ರಾಜು. ಜಾನಕಿರಾಂ ಅವರು ಛಾಯಾಗ್ರಹಣ ಕಲಸದ ಒತ್ತಡದಿಂದಾಗಿ ಮದರಾಸಿಗೆ ಹೋಗಬೇಕಾಗಿ ಬಂತು. ಗೋವಿಂದರಾಜ ಮೊದಲಿಯಾರ್ ಅವರು ಕೆಲವು ಉಪಕರಣಗಳನ್ನು ತರಿಸಿದರು. ನವಜ್ಯೋತಿ ನಿಜವಾದ ಅರ್ಥದಲ್ಲಿ ರೂಪು ಪಡೆದದ್ದು ಜಿ.ಆರ್.ರಾಮಯ್ಯನವರ ನೇತೃತ್ವದಲ್ಲೇ. ೧೯೪೪ರಲ್ಲಿ ಆಗಿನ ಮೈಸೂರು ಮುನಿಸಿಪಾಲಿಟಿಯಿಂದ ಏಳೂವರೆ ಎಕರೆ ಭೂಪ್ರದೇಶವನ್ನು ಸರಸ್ವತಿಪುರಂನಲ್ಲಿ ಪಡೆದುಕೊಳ್ಳಲಾಯಿತು. ಈ ಸ್ಥಳವು ಸಾಹಿತಿ ಚದುರಂಗರ ಸಹೋದರ ಬಸವರಾಜ ಅರಸು ಅವರ ಸೊತ್ತು ಎಂದೂ ಹೇಳಲಾಗಿದೆ.

ಸ್ಟುಡಿಯೋಗಳಿಗೂ ಬಸ್ ಮಾಲೀಕರಿಗೂ ಯಾವ ನಂಟೋ ಕಾಣೆವು. ತಿಮ್ಮಯ್ಯನವರ ಹಾಗೇ ಜಿ.ಆರ್.ರಾಮಯ್ಯನವರೂ ಬಸ್ ಮಾಲೀಕರು. ಗೆಳೆಯರೊಟ್ಟಿಗೆ ನವಜ್ಯೋತಿಯನ್ನು ರೂಪಿಸಿ ನಡೆಸಿಕೊಂಡು ಬಂದ ರೀತಿಯೇ ಒಂದು ರೋಚಕ ಕಥೆ. ರಾಮಯ್ಯನವರ ಪ್ರಯತ್ನ, ಸಾಧನೆ ಮುಂದೆ ಕನ್ನಡ ಚಿತ್ರೋದ್ಯಮಕ್ಕೆ ಭದ್ರಬುನಾದಿ ಹಾಕಿಕೊಟ್ಟಿತು.

೧೯೪೩ರಲ್ಲಿ 'ವಾಣಿ' ಚಿತ್ರ ಸಿದ್ಧವಾದದ್ದು ಕೊಯಮತ್ತೂರಿನ ಪಕ್ಷಿರಾಜಾ ಸ್ಟುಡಿಯೋದಲ್ಲಿ. ಆ ತಂಡದಲ್ಲೊಬ್ಬರಾಗಿದ್ದ ರಾಮಯ್ಯನವರಿಗೆ ಆಗಿನಿಂದಲೂ ಮೈಸೂರಿನಲ್ಲೇ ಸ್ಟುಡಿಯೋ ಮಾಡಿದರೆ ಸ್ಥಳೀಯರಿಗೆ ಅವಕಾಶವಾಗುತ್ತದೆ. ಕನ್ನಡ ಚಿತ್ರಗಳೂ ಕನ್ನಡನಾಡಿನಲ್ಲೇ ತಯಾರಾಗುತ್ತವೆ ಎಂಬ ಆಲೋಚನೆ ಬಂದಿತು. ಆ ಹೊತ್ತಿಗಾಗಲೇ ಮೊದಲೇ ಹೇಳಿದ ಒಂಬತ್ತು ಜನರ ತಂಡ ಈ ಯೋಜನೆಯಡಿ ಕಾರ್ಯ ಪ್ರವೃತ್ತವಾಗಿತ್ತು. ರಾಮಯ್ಯನವರು ಮುಂದುವರಿಸಿದರು ಮತ್ತು ನಿವೇಶನ ಪಡೆದು, ಕಟ್ಟಡವನ್ನು ಎದ ಮಾಡಿದರು. ಒಂದು ಪ್ರೊಜೆಕ್ಷನ್ ರೂಂ, ಲ್ಯಾಬೊರೇಟರಿ, ರಿ ರಿಕಾರ್ಡಿಂಗ್ ಸ್ಟುಡಿಯೋ ಸಿದ್ಧವಾಯಿತು. ಮೂರು ಫ್ಲೋರುಗಳಿದ್ದವು. ತಮಿಳುನಾಡಿನಲ್ಲಿದ್ದ ಪ್ರಾಗ್ಜ್ಯೋತಿ ಸ್ಟುಡಿಯೋ ಲಿಕ್ವಿಡೇಟ್ ಆಗುವ ಸ್ಥಿತಿಯಲ್ಲಿದ್ದುದರಿಂದ ಅಲ್ಲಿಯ ಯಂತ್ರಗಳನ್ನು ಖರೀದಿಸಿದರು. ಹಾಗ ಕೊಂಡು ತಂದ ಸಲಕರಣೆಗಳಲ್ಲಿ

(ಚಿತ್ರ ೨)ಜಿ.ಆರ್.ರಾಮಯ್ಯ

ಮೈಸೂರು ನಗರದ ಪ್ರಸಿದ್ಧ ವಾಣಿಜ್ಯೋದ್ಯಮಿ ಜಿ.ಆರ್.ರಾಮಯ್ಯನವರು ಹಲವು ಬಸ್ ಸರ್ವೀಸ್‌ಗಳ ಒಡೆಯರಾಗಿದ್ದರು. ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರಿಂಗ್ ಮತ್ತು ಶಾರದಾ ವಿಲಾಸ ವಿದ್ಯಾ ಸಂಸ್ಥೆಗಳ ಆಡಳಿತ ಮಂಡಳಿಯಲ್ಲಿ ಅನೇಕ ವರ್ಷ ಸೇವೆ ಸಲ್ಲಿಸಿದ್ದರು. ಹಲವು ಮಿತ್ರರ ಪ್ರೇರಣೆಯ ಮೇರೆಗೆ ಚಿತ್ರರಂಗಕ್ಕೆ ಧುಮುಕಿದರು.

೧೯೪೩ರಲ್ಲಿ ಸಂಗೀತ ರತ್ನ ಟಿ.ಚೌಡಯ್ಯ, ಎಂ.ಎನ್.ಗೋಪಾಲ್, ಕಲ್ಚರ್ಡ್ ಕಮೆಡಿಯನ್ ಕೆ.ಹಿರಣ್ಣಯ್ಯ ಅವರುಗಳೊಂದಿಗೆ ಸೇರಿ ಕೊಯಮತ್ತೂರಿನ ಪಕ್ಷಿರಾಜಾ ಸ್ಟುಡಿಯೋದಲ್ಲಿ 'ವಾಣಿ' ಚಲನಚಿತ್ರವನ್ನು ತಯಾರಿಸಿದರು.

ಸಿ.ವಿ.ರಾಜು ಅವರ ಸಲಹೆಯ ಮೇರೆಗೆ ಮೈಸೂರಿನ ಸರಸ್ವತಿಪುರಂನಲ್ಲಿ ನವಜ್ಯೋತಿ ಸ್ಟುಡಿಯೋ ಸ್ಥಾಪಿಸಿದರು (೧೯೪೫). ಇವರೊಂದಿಗೆ ಎಂಟು ಮಂದಿ ಪಾಲುದಾರರು (ಹೆಸರಿಗೆ ಮಾತ್ರ, ಯಾರೂ ಹಣ ಹಾಕಿರಲಿಲ್ಲ). ಒಟ್ಟು ಒಂಬತ್ತು ಮಂದಿ. ಹೀಗಾಗಿ ನವಜ್ಯೋತಿ ಎಂದು ಹೆಸರಿಟ್ಟರು. 'ಕೃಷ್ಣಲೀಲಾ' ಚಿತ್ರದ ತಯಾರಿಕೆಗೆ ಸ್ಟುಡಿಯೋವನ್ನು ಶಂಕರ್‌ಸಿಂಗ್, ವಿಠಲಾಚಾರ್ಯ ವಿಶ್ವನಾಥಶೆಟ್ಟಿ ಅವರುಗಳ ಮಾಲೀಕತ್ವದ ಮಹಾತ್ಮ ಪಿಕ್ಚರ್ಸ್ ಸಂಸ್ಥೆಗೆ ಬಿಟ್ಟುಕೊಟ್ಟರು. ೧೯೪೭ರಲ್ಲಿ 'ಕೃಷ್ಣಲೀಲಾ' ಚಿತ್ರ ತಯಾರಾಯಿತು. ಅಲ್ಲಿಂದ ಮುಂದೆ ಮಹಾತ್ಮ ಸಂಸ್ಥೆಯ ಬಹುತೇಕ ಚಿತ್ರಗಳು ತಯಾರಾದವು. ತಮಿಳು ಚಿತ್ರರಂಗದ ಖ್ಯಾತ ನಟ ಎಂ.ಜಿ.ರಾಮಚಂದ್ರನ್ ಮತ್ತು ವಿ.ಎನ್.ಜಾನಕಿ ಅಭಿನಯದ 'ಮರುದನಾಟ್ಟು ಇಳವರಸಿ' ತಮಿಳು ಚಿತ್ರವೂ ಇಲ್ಲೇ ತಯಾರಾಯಿತು. ಅಮೆರಿಕಾದ ಮೈಕೆಲ್ ಡೇ ಅವರು ಈ ಸ್ಟುಡಿಯೋದ ಸೌಲಭ್ಯಗಳನ್ನು ಬಳಸಿಕೊಂಡು 'ಎಲಿಫೆಂಟ್ ಅಂಡ್ ರಿವರ್' ಎಂಬ ಇಂಗ್ಲಿಷ್ ಚಿತ್ರಗಳನ್ನು ತಯಾರಿಸಿದರು. ಅಲ್ಲದೆ ಇಲ್ಲಿಯ ಉಪಕರಣಗಳನ್ನು ಬಳಸಿ ಜವಹರಲಾಲ್ ನೆಹರು ಅವರ ಮತ್ತು ಖೆಡ್ಡಾ ಕಾರ್ಯಾಚರಣೆಯ ಚಿತ್ರಗಳನ್ನು ವರ್ಣದಲ್ಲಿ ತಯಾರಿಸಿದರು. ಅವರು ಸ್ಟುಡಿಯೋದ ತಂತ್ರಜ್ಞರ ಕಾರ್ಯವನ್ನು ಪ್ರಶಂಸಿಸಿದ್ದರು. ಮುಂದೆ ಪಾಲುದಾರರನ್ನೆಲ್ಲ ದುಡ್ಡು ಕೊಟ್ಟು ಕಳುಹಿಸಿ ರಾಮಯ್ಯನವರೇ ಸ್ಟುಡಿಯೋವನ್ನು ವಶಕ್ಕೆ ತೆಗೆದುಕೊಂಡರು. ಇಷ್ಟೆಲ್ಲ ಆದರೂ ಸ್ಟುಡಿಯೋ ಆರ್ಥಿಕವಾಗಿ ಕಷ್ಟ ನಷ್ಟಗಳನ್ನು ಅನುಭವಿಸಿತು. ಕೋರ್ಟ್ ವ್ಯವಹಾರವಾಗಿ ಕೋರ್ಟ್ ರಿಸೀವರನ್ನು ನೇಮಿಸಿತು. ಕಡೆಗೆ ೧೯೬೩ರ ಹೊತ್ತಿಗೆ ಸ್ಟುಡಿಯೋ ಮುಚ್ಚಬೇಕಾಯಿತು.

ಈ ಮಧ್ಯೆ ೧೯೪೮ರಲ್ಲಿ ಮೈಸೂರಿನ ಪ್ರಭಾ ಚಿತ್ರಮಂದಿರವನ್ನು ಸ್ಥಾಪಿಸಿದರು. ಕಡೆಗೆ ಅದೂ ಸ್ಟುಡಿಯೋದಂತೆಯೇ ಸಾಲಗಾರರ ಪಾಲಿಗೆ ಹೋಯಿತು. ಸರ್ಕಾರ ಬಸ್ ಸರ್ವೀಸ್‌ಗಳನ್ನು ರಾಷ್ಟ್ರೀಕರಣ ಮಾಡಿದ್ದರಿಂದ ಬಹಳ ಕಷ್ಟ-ನಷ್ಟಗಳನ್ನು ರಾಮಯ್ಯನವರು ಅನುಭವಿಸಬೇಕಾಗಿ ಬಂತು. ಅಷ್ಟಾದರೂ ಕೊನೆಯವರೆಗೆ ಅವರು ತಮ್ಮನ್ನು ಸಾಮಾಜಿಕ, ಶೈಕ್ಷಣಿಕ ಸೇವೆಗಳಲ್ಲಿ ತೊಡಗಿಸಿಕೊಂಡಿದ್ದರು.

ಒಂದು ಆರ್.ಸಿ.ಎ.ಮೆಷಿನ್, ಮಿಚೆಲ್ ಕ್ಯಾಮರಾ, ಧ್ವನಿ ವ್ಯವಸ್ಥೆಗೆ ಬೇಕಾದ ಸಾಮಗ್ರಿ, ಕೊಂಚ ಲೈಟ್ಸ್ ಇತ್ಯಾದಿಗಳಿದ್ದವು. ಯಾವುದೇ ಕಾರಣಕ್ಕೂ ಹೊರಗೆಲ್ಲೂ ಹೋಗಬೇಕಾಗಿರಲಿಲ್ಲ. ಇಷ್ಟು ಸೌಕರ್ಯವೇ ಆ ಕಾಲಕ್ಕೆ ದೊಡ್ಡದು. ಹಾಗಾಗಿ ದಕ್ಷಿಣ ಭಾರತದಲ್ಲೇ ಅತ್ಯಂತ ಸುಸಜ್ಜಿತ ಸ್ಟುಡಿಯೋ ಎಂಬ ಹೆಸರೂ ಬಂತು.

ಶಂಕರ್‌ಸಿಂಗ್ ಅವರು ತಯಾರಿಸಿದ ಮಹಾತ್ಮಾ ಸಂಸ್ಥೆಯ ಚೊಚ್ಚಲ ಚಿತ್ರ 'ಕೃಷ್ಣಲೀಲಾ' ಈ ಸ್ಟುಡಿಯೋದಲ್ಲಿ ಸಿದ್ಧವಾದ ಮೊದಲ ಚಿತ್ರ. ಅನಂತರ ಈ ಸ್ಟುಡಿಯೋ ಇರುವಷ್ಟು ಕಾಲ ಮಹಾತ್ಮಾ ಸಂಸ್ಥೆಯ ಬಹುತೇಕ ಎಲ್ಲ ಚಿತ್ರಗಳೂ ಇಲ್ಲೇ ತಯಾರಾದವು. 'ಭಾರತಿ', 'ಜಗನ್ಮೋಹಿನಿ', 'ನಾಗಕನ್ನಿಕಾ', 'ದಳ್ಳಾಳಿ', 'ಕನ್ಯಾದಾನ' ಮೊದಲಾದ ಚಿತ್ರಗಳೂ ಇಲ್ಲೇ ತಯಾರಾದವು.

'ಬಿಂದು ಬಿ.ಎ.' ಎಂಬ ಚಿತ್ರ ಇಲ್ಲಿಯೇ ಸಿದ್ಧವಾಗಿ, ಬಿಡುಗಡೆಯ ಹಂತಕ್ಕೆ ಬಂದಾಗ ಅಚಾತುರ್ಯದಿಂದ ಬೇಗ ಹತ್ತಿ ಉರಿಯುವ ನೈಟ್ರೇಟ್‌ನಿಂದಾಗಿ - ಫಿಲಂ ಸುಟ್ಟು ಹೋಯಿತು, ತೆರೆಕಾಣಲಿಲ್ಲ. ನವಜ್ಯೋತಿಯ ಒಂದು ಭಾಗವೇ ಆಗಿಹೋಗಿದ್ದ, ಎಲ್ಲ ವಿಭಾಗಗಳಲ್ಲೂ ದುಡಿದು ಪರಿಣತಿ ಪಡೆದಿದ್ದ ದೊರೆಸ್ವಾಮಿ ಅವರು ಈ ಚಿತ್ರಕ್ಕೆ ಸಹಾಯಕರಾಗಿದುದಲ್ಲದೆ, ಅಭಿನಯಿಸಿಯೂ ಇದ್ದರು. ಅವರು ಇಂದಿಗೂ ಈ ಬಗ್ಗೆ ವಿವರಗಳನ್ನು ಕೊಡುವಾಗ ಗದ್ಗದರಾಗುತ್ತಾರೆ.

ನವಜ್ಯೋತಿ ಸ್ಟುಡಿಯೋದಲ್ಲಿ ಎಲ್ಲ ಭಾಷೆಯ ಚಿತ್ರಗಳೂ ತಯಾರಾಗಿವೆ. ಎಂ.ಜಿ.ರಾಮಚಂದ್ರನ್ ಮುಂದೆ ಆವರ ಹೆಂಡತಿಯೂ ಆದ - ಜಾನಕಿ ಜೋಡಿ ನಟಿಸಿದ್ದ 'ಮರುದನಾಟ್ಟು ಇಳವರಸಿ' ಚಿತ್ರೀಕರಣವಾದದ್ದು ಇಲ್ಲಿಯೇ.

ನವಜ್ಯೋತಿಯಲ್ಲಿದ್ದ ಉಪಕರಣಗಳನ್ನೇ ಬಳಸಿಕೊಂಡು ಇಂಗ್ಲಿಷ್ ಚಿತ್ರವೊಂದನ್ನು ಅಮೆರಿಕೆಯ ಮೈಕೆಲ್ ಡೇ ಎನ್ನುವವರು ತಯಾರಿಸಿದ್ದರು. ಚಿತ್ರದ

(ಚಿತ್ರ ೩) ವಿಜಯಭಾಸ್ಕರ್‌ರವರ ಸಂಗೀತ ನಿರ್ದೇಶನದ ಮೊದಲ ಚಿತ್ರ 'ಶ್ರೀರಾಮಪೂಜಾ' ಚಿತ್ರದ ಹಾಡುಗಳ ಧ್ವನಿಮುದ್ರಣ ಮೈಸೂರಿನ ನವಜ್ಯೋತಿ ಸ್ಟುಡಿಯೋದಲ್ಲಿ ನಡೆಯಿತು. ಚಿತ್ರದ ಹಿಂದಿನ ಸಾಲಿನಲ್ಲಿ ಪಿ.ಕಾಳಿಂಗರಾವ್, ಮೋಹನಕುಮಾರಿ, (ಸಿತಾರ್‌ವಾದ್ಯದ ಹಿಂದೆ), ಬಿ.ಆರ್.ಕೃಷ್ಣಮೂರ್ತಿ ಮತ್ತು ವಿಜಯಭಾಸ್ಕರ್ (ಬಲಗಡೆ ನಿಂತಿರುವವರು) ಅವರನ್ನು ಕಾಣಬಹುದು.

ಉಂಟುಮಾಡಿದವೆಂದು ಅಲ್ಲಿದ್ದ ತಂತ್ರಜ್ಞರು ದಂತಕಥೆಯ ಹಾಗೆ ಹೇಳಿಕೊಳ್ಳುತ್ತಾರೆ.

ಇತ್ತ ಅಡವಾನ ಇಟ್ಟುಕೊಂಡವರಲ್ಲಿ ಒಬ್ಬರಾದ ಪುರಿಮಂಡಿ ಕೃಷ್ಣೋಜಿರಾವ್ ಅವರು ಮೊಕದ್ದಮೆ ಹೂಡಿದರು. 'ನವಜ್ಯೋತಿ' ಜಿಕರಿಗೆ ಬಂತು. ರಾಮಯ್ಯನವರ ಆಪ್ತಮಿತ್ರ 'ಮೈಸೂರು ಪತ್ರಿಕೆ'ಯ ಟಿ.ನಾರಾಯಣ ಅವರು ಮಧ್ಯೆ ಪ್ರವೇಶಿಸಿದರು. ಅವರು ಕೊಯಮತ್ತೂರಿನ ಫೈನಾನ್ಷಿಯರ್ ಒಬ್ಬರಿಂದ ಹತ್ತು ಲಕ್ಷ ರೂಪಾಯಿ ಕೊಡಿಸುವುದಾಗಿ ಆಶ್ವಾಸನೆ ಕೊಟ್ಟರು. ಕೈಗೆ ಹಣ ಬರದೆ ಮೊಕದ್ದಮೆ ವಾಪಸ್ ಪಡೆಯಬಾರದೆಂಬ ಆಲೋಚನೆ ಬಂದರೂ ನಾರಾಯಣ ಅವರ ಮಾತಿಗೆ ಬೆಲೆಕೊಟ್ಟು ಕೃಷ್ಣೋಜಿರಾಯರು ಮೊಕದ್ದಮೆ ವಾಪಸ್ ಪಡೆದರು. ಕೊಯಮತ್ತೂರಿನ ಶ್ರೀಮಂತರು ಕೊಟ್ಟ ಮಾತಿನಂತೆ ಕಂತುಗಳಲ್ಲಿ ಹಣ ಕಳುಹಿಸಿದರು. ಎರಡು ಕಂತು ಸರಿಯಾಗಿಯೇ ಬಂತು. ಅದನ್ನು ಕೃಷ್ಣೋಜಿರಾಯರಿಗೆ ತಲುಪಿಸಿದ್ದೂ ಆಯಿತು. ಆದರೆ ಮೂರನೆಯ ಕಂತು ಬರಲೇ ಇಲ್ಲ. ಮತ್ತೆ 'ನವಜ್ಯೋತಿ' ಜಿಕರಿಗೆ. ರಾಮಯ್ಯನವರಿಗೆ ಸೂಚನೆ ಸಹ ಕೊಡದೆ ಇದ್ದ-ಬಿದ್ದ ಪದಾರ್ಥಗಳನ್ನೆಲ್ಲಾ ಬಾಚಿಕೊಂಡು ಒಯ್ದರು.

"...ಆರ್.ಸಿ.ಎ.ಮಷಿನ್ ಇಲ್ಲದೆ ಕೆಲಸ ಮಾಡಲು ಕಷ್ಟವಾಯಿತು. ಆವರೂ ಬಾಡಿಗೆಗೆ ಬ್ಲೂಸೀಲ್ ಮೆಷಿನ್ ತಂದು ಕೆಲಸ ಮಾಡಿದೆವು. ಡಿ.ಶಂಕರ್‌ಸಿಂಗ್ ಅವರ 'ಶಿವಶರಣೆ ನಂಬೆಕ್ಕ' ಚಿತ್ರೀಕರಣ ನಡೆದಿತ್ತು. ಆರುನೂರು ರೂಪಾಯಿಗಳ ವಿದ್ಯುತ್ ಬಿಲ್ ಬಂತು. ಹಣ ಕಟ್ಟಿಲ್ಲ ಅಂತ ಆಡಳಿತಾಧಿಕಾರಿಯಾಗಿದ್ದ ಹಿರಣ್ಣಯ್ಯ ಮೈನ್ ಸ್ವಿಚ್ ಆಫ್ ಮಾಡಿಬಿಟ್ಟರು. ಅವರಿಗೆ ಎಷ್ಟು ಹೇಳಿದರೂ ತಿಳಿಯುತ್ತಿರಲಿಲ್ಲ. ನೆಗಟಿವ್ ಫಿಲಂ ಕೊಡಿ ಎಂದರೆ ಅದನ್ನು ಬಿಟ್ಟ 'ಎಷ್ಟು ಬೇಕೋ ತಗೊಳ್ಳಿ' ಎನ್ನುತ್ತಿದ್ದರು. ಆತನ ಹಾಗೂ ಅವರ ಕಡೆಯವರೇ ಆದ ಚೆನ್ನವೀರಯ್ಯ ಎಂಬ ಮ್ಯಾನೇಜರ್‌ರಿಂದ ತುಂಬ ಕಷ್ಟ ಪಡಬೇಕಾಯಿತು..." ಎಂದು ವಿವರಿಸುತ್ತಾರೆ ನವಜ್ಯೋತಿಯ ತಂತ್ರಜ್ಞ, ನಿರ್ದೇಶಕ ದೊರೆಸ್ವಾಮಿ.

ಗುಣಮಟ್ಟ ಉತ್ತಮವಾಗಿತ್ತು. ಅದಕ್ಕೆ ನವಜ್ಯೋತಿಯ ಉಪಕರಣ, ಸಿಬ್ಬಂದಿಯವರೇ ಕಾರಣ ಎಂದು ಬಹುವಾಗಿ ಪ್ರಶಂಸಿಸಿದ್ದರು.

ಕನ್ನಡ ಚಿತ್ರರಂಗಕ್ಕೆ ಶ್ರೇಷ್ಠನಟರನ್ನು, ಪ್ರತಿಷ್ಠಿತ ನಿರ್ಮಾಣ ಸಂಸ್ಥೆಗಳನ್ನು, ಚಿತ್ರಗಳನ್ನು ಕೊಟ್ಟ ನವಜ್ಯೋತಿಗೂ ಕ್ರಮೇಣ ಮಂಕು ಬಡಿಯಿತು.

ರಾಮಯ್ಯನವರು 'ಪ್ರಭಾ' ಚಿತ್ರಮಂದಿರವನ್ನು ಕೊಂಡಿದ್ದರು. ೧೯೪೯-೫೦ರ ಹೊತ್ತಿಗೆ ಪಾಲುದಾರರಲ್ಲಿ ಭಿನ್ನಾಭಿಪ್ರಾಯ ತಲೆದೋರಿತು. ರಾಮಯ್ಯನವರು ಅವರಿಗೆಲ್ಲ ತಲಾ ೨೫,೦೦೦ ರೂಪಾಯಿಗಳನ್ನು ಕೊಟ್ಟು ಸ್ಟುಡಿಯೋದ ಸಂಪೂರ್ಣ ಸ್ವಾಮ್ಯವನ್ನು ತಾವೇ ಪಡೆದುಕೊಂಡರು. ಇನ್ನಿತರ ಸಾಲಗಳು ಕೊಂಚ ಬಾಕಿ ಇತ್ತು. ಚಿತ್ರೀಕರಣ ಮಾಡಿಕೊಂಡ ಮಂದಿ ಸರಿಯಾಗಿ ಹಣ ಕೊಡುತ್ತಿರಲಿಲ್ಲ. ರಾಮಯ್ಯನವರು ಮತ್ತಷ್ಟು ಬಂಡವಾಳ ಹೂಡುವ ಸ್ಥಿತಿಯಲ್ಲಿ ಇರಲಿಲ್ಲ. ಆರಂಭಕ್ಕೆ ಕೆಲವು ಸಲಕರಣೆಗಳನ್ನು ತಂದುಹಾಕಿದ್ದ (ಸ್ಟುಡಿಯೋಗೆ ಮಾರಿದ್ದ) ಗೋವಿಂದರಾಜು ಅವರು ಎಲ್ಲವನ್ನೂ ಕೊಂಡೊಯ್ದುಬಿಟ್ಟರು. ಅವು ಮುಖ್ಯವಾಗಿ ಬೇಕಾಗಿದ್ದ ಆರ್.ಸಿ.ಎ.ಮೆಷಿನ್, ೩೫ ಎಂ.ಎಂ. ಕ್ಯಾಮರಾ, ಪ್ರೊಜೆಕ್ಟರ್ ಮೊದಲಾದ ಅತಿ ಮುಖ್ಯ-ಅತ್ಯಗತ್ಯ ಉಪಕರಣಗಳೇ ಆಗಿದ್ದವು. ಎಷ್ಟೇ ಪ್ರಯತ್ನಿಸಿದರೂ ಸ್ಟುಡಿಯೋ ಖರ್ಚು ತೂಗಿಸಿ ನಡೆಸಲು ರಾಮಯ್ಯನವರಿಗೆ ಸಾಧ್ಯವಾಗುತ್ತಿರಲಿಲ್ಲ.

ತಾವೇ ಒಂದು ಚಿತ್ರ ತಯಾರಿಸಬೇಕೆಂದರೂ ಹಣ ಸಿಗಲಿಲ್ಲ. ಕೆಲವರು ಸ್ಟುಡಿಯೋಗೆ ಪಾಲುದಾರರಾಗಿ ಬರುವ ಆಸಕ್ತಿ ತೋರಿದರು. ಆದರೆ ಆ ಹಿಂದಿನ ಕಹಿ ಅನುಭವ ಮರುಕಳಿಸದಿರಲಿ ಎಂಬ ಕಾರಣಕ್ಕೆ ರಾಮಯ್ಯನವರು ಪಾಲುದಾರಿಕೆಯ ವ್ಯವಹಾರವನ್ನು ಒಪ್ಪಿಕೊಳ್ಳಲಿಲ್ಲ. ಸಾಲಗಾರರಿಗೆ ಬಡ್ಡಿಯಾದರೂ ಕೊಡುತ್ತೇನೆ, ಪಾಲುದಾರಿಕೆಯ ಪರ್ಯಾಯ ವ್ಯವಸ್ಥೆಯೇ ಬೇಡ ಎಂಬ ನಿಷ್ಠುರವಾದ ತೀರ್ಮಾನ ಕೈಗೊಂಡರು. ತಮ್ಮ ಪ್ರಭಾ ಚಿತ್ರಮಂದಿರವನ್ನು ಮಾರಿದರು. ಸಾಲದ ಬಡ್ಡಿ ಏರುತ್ತಲೇ ಇತ್ತು. ಸಾಲಗಾರರು ವಿಪರೀತ ತಗಾದೆ ಮಾಡಿದರು, ದಾವೆ ಹೂಡಿದರು. ಕಡೆಗೆ ಸ್ಟುಡಿಯೋಗೆ ಸ್ಟ್ಯಾಂಡ್ ಬೈ ಆರ್ಡರ್ ಬಂತು. ಕೋರ್ಟಿನ ಆದೇಶದಂತೆ 'ಮೈಸೂರು ಸಿಸಿ ಕಾರ್ಪೊರೇಷನ್' ಎಂಬ ಕಂಪನಿಗೆ ಆಡಳಿತವನ್ನು ವಹಿಸಿಕೊಡಲಾಯಿತು. ಆದರೆ ಆ ಕಂಪನಿಯಲ್ಲೂ ಹಣವಿರಲಿಲ್ಲ ಎಂದು ತಿಳಿಯಲು ಬಹುಕಾಲ ಬೇಕಾಗಲಿಲ್ಲ. ನವಜ್ಯೋತಿಯ ಸಮಸ್ಯೆಯ ಜೊತೆಗೆ ಆ ಕಂಪನಿಯ ಜವಾಬ್ದಾರಿಯನ್ನೂ ರಾಮಯ್ಯನವರೇ ಹೊರಬೇಕಾದ ದುಃಸ್ಥಿತಿಯೊದಗಿತು. ಆ ಕಂಪನಿಯ ಪರಿಯಿಂದ ಆಡಳಿತಾಧಿಕಾರಿಯಾಗಿ ಬಂದವರು ವೈ.ಎನ್.ಹಿರಣ್ಣಯ್ಯ. ಅವರಿಗೆ ಚರಾಸಿ ಸಾಮಗ್ರಿಗಳ ಸಹಿತ ಅಧಿಕಾರ ವಹಿಸಿಕೊಡಲಾಗಿತ್ತು. ಆದರೆ ಅವರಿಗೆ ಚಿತ್ರಮಾಧ್ಯಮದ ಬಗ್ಗೆ ಏನೂ ತಿಳಿದಿರಲಿಲ್ಲ. ಅವರ ನಡವಳಿಕೆಗಳು ಹಲವು ರೀತಿಯ ಆಭಾಸಗಳನ್ನೇ

ನವಜ್ಯೋತಿ ಸ್ಟುಡಿಯೋದ ಅಂತಿಮಘಟ್ಟದ ವಿವರಗಳನ್ನು ಕೊಟ್ಟವರು ಜಿ.ಆರ್.ರಾಮಯ್ಯನವರ ಹತ್ತಿರದ ಬಂಧು, ನ್ಯಾಯವಾದಿ ಜಿ.ವಿ.ರಾಮಯ್ಯನವರು. ಇವರು ಕೆಲವು ಕಾಲ 'ನವಜ್ಯೋತಿ'ಯ ಮ್ಯಾನೇಜರ್ ಆಗಿಯೂ ಕೆಲಸ ಮಾಡಿದ್ದರು. ಅವರು ಆ ಕೊನೆಯ ದಿನಗಳನ್ನು ನೆನೆಯುತ್ತ, "...ಸ್ಟುಡಿಯೋ ವಶಪಡಿಸಿಕೊಂಡು, ಇದ್ದ-ಬಿದ್ದ ಪದಾರ್ಥಗಳನ್ನೆಲ್ಲ ಹೊತ್ತೊಯ್ದ ಪುರಿಮಂಡಿ ಕೃಷ್ಣೋಜಿರಾವ್‌ಗೆ ಮನೆ ತಲುಪಿದ್ದೇ ಹೃದಯಾಘಾತವಾಯಿತು. ಅವರು ನಿಧನರಾದ ಒಂದು ವಾರದ ಅಂತರದಲ್ಲಿ ಆತನ ಪತ್ನಿಯೂ ನಿಧನರಾದರು. ಅವರ ಮಗನಿಗೆ ಸ್ಟುಡಿಯೋ ಬಗ್ಗೆ ಏನೂ ತಿಳಿಯದು, ಆಸಕ್ತಿಯೂ ಇರಲಿಲ್ಲ. ಆತ ಆಸ್ತಿಯನ್ನು 'ಶಿವರಾತ್ರೀಶ್ವರ ಪ್ರೌಢಶಾಲೆ'ಗೆ ಮಾರಿದರು. ಮತ್ತಿತರ ಆಸ್ತಿ-ಪಾಸ್ತಿ ಮನಬಂದವರಿಗೆ ತೋರಿದಷ್ಟಕ್ಕೆ ಮಾರಿದರು..." ಎನ್ನುತ್ತಾರೆ. "..ನವಜ್ಯೋತಿಯಲ್ಲಿ ಇನ್ನೂರು ಮಂದಿ ಕೆಲಸ ಮಾಡುತ್ತಿದ್ದರು. ತಿಂಗಳಿಗೆ ೯೮೦೦ ರೂಪಾಯಿಗಳನ್ನು ಸಂಬಳವಾಗಿ ಕೊಡುತ್ತಿದ್ದೆವು. ಪ್ರಾರಂಭದಲ್ಲಿ ಎಂ.ವಾದಯ್ಯ, ಜಾನಕಿರಾಂ, ದೊರೈರಾಜ್, ಶಬ್ದಗ್ರಾಹಕ ಎಂ.ವಿ.ಎನ್.ಅಯ್ಯಂಗಾರ್ ಇವರಿಗೆಲ್ಲ ತಲಾ ಮುನ್ನೂರು ರೂಪಾಯಿಯಂತೆ ಸಂಬಳ ಕೊಡಲಾಗುತ್ತಿತ್ತು. ಕ್ಯಾಮರಾಮನ್ ಡಬ್ರಿ ಮಣಿ ಇದ್ದರು. ಮುಂಬೈನಿಂದ ಕರೆಸಿದ ಮೇಕಪ್‌ಮ್ಯಾನ್‌ಗೆ ಸಹಾಯಕರಾಗಿ ಸುಬ್ಬಣ್ಣ ಇದ್ದರು. ಅಂಥ ವೈಭವದ, ಮಹಾತ್ವಾಕಾಂಕ್ಷೆಯಿಂದ ಕೆಲಸ ಮಾಡಿದ ಸಂಸ್ಥೆ ೧೯೬೦ರ ಸುಮಾರಿಗೆ ಶಾಶ್ವತವಾಗಿ ಮುಚ್ಚಿಹೋಯಿತು.." ಎಂದು ವಿಷಾದದಿಂದ ಹೇಳುತ್ತಾರೆ.

ಕನ್ನಡ ನಾಡಿನ ಚಿತ್ರೋದ್ಯಮಕ್ಕೆ ಭದ್ರ ಬುನಾದಿ ಹಾಕಿದ ಪ್ರತಿಷ್ಠಿತ ನವಜ್ಯೋತಿ ಸ್ಟುಡಿಯೋದ ಕಥೆ ಹೀಗೆ ಮುಕ್ತಾಯವಾಯಿತು.

ಓಂಕಾರ್ ಸ್ಟುಡಿಯೋ

ನವಜ್ಯೋತಿಯ ಹಿಂದೆಯೇ ಪ್ರಾರಂಭವಾಯಿತು 'ಓಂಕಾರ್ ಸ್ಟುಡಿಯೋ'. ಅದು ಅರುವತ್ತರ ದಶಕದಲ್ಲಿ ಬೆಂಗಳೂರಿನಲ್ಲಿ ಸಂಭವಿಸಿದ ಘಟನೆ ಅಥವಾ ಏಕವ್ಯಕ್ತಿ ಸಾಹಸ.

ಡಾ|ಎಂ.ರಾಮದಾಸ್ ಅವರು ಗಣಿ ಮಾಲೀಕರು. ಅವರ ಸ್ಥಳ ಚಿತ್ರದುರ್ಗ. ಅವರು ಬೆಂಗಳೂರಿನಲ್ಲಿ ಸ್ಟುಡಿಯೋ ಸ್ಥಾಪಿಸಲಿದ್ದಾರೆಂಬ ಸುದ್ದಿ ೧೯೫೮ರಲ್ಲೇ ಇತ್ತು. ಬೆಂಗಳೂರಿನ ಸರ್ಜಾಪುರ ರಸ್ತೆಯಲ್ಲಿ ಈಗ ಸೈಂಟ್ ಜಾನ್ಸ್ ಆಸ್ಪತ್ರೆ ಇರುವ ಸ್ಥಳದಲ್ಲಿ (ಲಾಲ್‌ಬಾಗಿಗೆ ಸುಮಾರು ೩-೪ ಕಿ.ಮೀ) ೪೦ ಎಕರೆಯಷ್ಟು ಹಚ್ಚ ಹಸಿರಾಗಿರುವ ಜಮೀನು ಪಡೆದು ಎರಡು ಫ್ಲೋರ್‌ಗಳಿರುವ ಸ್ಟುಡಿಯೋ ಪ್ರಾರಂಭಿಸುವ ಯೋಜನೆ. ಸ್ಥಳವೇನೋ ಸೊಗಸಾಗಿತ್ತು. ಆದರೆ ಅದನ್ನು ಸರಿಯಾಗಿ ಬಳಸಿಕೊಳ್ಳಲಾಗಲಿಲ್ಲ ಎಂಬುದೇ ವ್ಯಥೆಯ ಸಂಗತಿ. ರಾಮದಾಸ್ ಅವರ ಮಿತ್ರ, ಗಣಿ ಉದ್ಯಮದಲ್ಲೇ ಇದ್ದವರಾದ ಬಿ.ಕೆ.ನಾರಾಯಣ ಸಿಂಗ್ ಆ ಹೊತ್ತಿಗೆ 'ಕೈವಾರ ಮಹಾತ್ಮೆ' ಚಿತ್ರ ನಿರ್ಮಿಸಿದ್ದರು. ನಾರಾಯಣ ಸಿಂಗ್ ಅವರ ಅಳಿಯ ನಾಗರಾಜ್ ಸಿಂಗ್ ಅವರಿಗೆ ಚಲನಚಿತ್ರರಂಗದಲ್ಲಿ ಅತೀವ ಆಸಕ್ತಿಯಿತ್ತು. ಇಂಥ ಸಣ್ಣ ಕಾರಣಗಳೇ ಒಂದು ಬಹುದೊಡ್ಡ ಬಂಡವಾಳ ಬೇಡುವ ಸ್ಟುಡಿಯೋ ನಿರ್ಮಾಣಕ್ಕೆ ಪ್ರೇರಣೆಯಾದುವು ಎಂಬುದು ವಿಶೇಷ ಸಂಗತಿ. ಇವರ ಪ್ರಯತ್ನಗಳು ಸಾಹಸಗಳಿಗೆ ಉದ್ಯಮ-ಸರ್ಕಾರ ಯಾವುದೂ ಅಂಥ ಮಹತ್ವ ಕೊಡದೇ ದಿವ್ಯ ನಿರ್ಲಕ್ಷ್ಯ ತೋರಿದ್ದೊಂದು ವಿಪರ್ಯಾಸ.

(ಚಿತ್ರ ೪) ಡಾ|ರಾಮದಾಸ್

ಆಗ ಬಹುತೇಕ ಕನ್ನಡ ಚಿತ್ರಗಳು ಮದರಾಸಿನಲ್ಲೇ ತಯಾರಾಗುತ್ತಿದ್ದವು. ರಾಮದಾಸ್ ಅವರು ಕೊಯಮತ್ತೂರಿಗೆ ಹೋಗಿ ಭಾರೀ ಬೆಲೆ ತೆತ್ತು ಕಾಸ್ಟ್ಯೂಮ್ಸ್ ಇತ್ಯಾದಿ ಹೊತ್ತು ತಂದರು. ಅವು ಎಲ್ಲ ಕಾಲಕ್ಕೂ ಬಳಕೆ ಆಗುವುದು ಹೇಗೆ ಸಾಧ್ಯ ? ಹಾಗಾಗಿ ಅದಕ್ಕೆಂದು ತೊಡಗಿಸಿದ ಹಣ ಒಂದು ಅರ್ಥದಲ್ಲಿ ವ್ಯರ್ಥವೇ ಆಯಿತು. ಅದೇ ಸಮಯದಲ್ಲಿ ಕೊಯಮತ್ತೂರಿನ ಸೆಂಟ್ರಲ್ ಸ್ಟುಡಿಯೋ ಮುಚ್ಚುವ ಸ್ಥಿತಿಯಲ್ಲಿತ್ತು. ಅಲ್ಲಿದ್ದ ಯಂತ್ರೋಪಕರಣಗಳನ್ನು ಖರೀದಿಸಬಹುದಿತ್ತು. ಆದರೆ ರಾಮದಾಸ್ ಅವರಿಗೆ ಜಪಾನ್‌ನಿಂದಲೇ ತರಿಸುವ ಆಸೆ. ಅತ್ತ ಅದನ್ನೂ ತರಿಸಲಿಲ್ಲ, ಇದನ್ನೂ ಕೊಳ್ಳಲಿಲ್ಲ. ರಾಮದಾಸ್ ಅವರ ಕನಸಿನ ಹಾಗೆ ವ್ಯವಸ್ಥಿತವಾಗಿ ಸ್ಟುಡಿಯೋ ರೂಪುಗೊಳ್ಳಲಿಲ್ಲ. ಜಮೀನಿನಲ್ಲಿ ಒಂದು ಮನೆ ಮೊದಲೇ ಇತ್ತು. ಅಲ್ಲಿ ತುಸು ಕಡಿಮೆ ಎತ್ತರದ ಛಾವಣಿ ಇರುವ ಒಂದು ದೊಡ್ಡ ಕೊಠಡಿ (ಹಾಲ್) ಇತ್ತು. ಅದನ್ನೇ ಸರಿಪಡಿಸಿ ಚಿತ್ರೀಕರಣಕ್ಕೆ ಫ್ಲೋರ್ ಮಾಡಿಕೊಂಡರು. ತುಂಬಾ ವ್ಯವಸ್ಥಿತ ಎಂದು ಹೇಳುವಂತಿರಲಿಲ್ಲ. ಆದರೆ ಹೊರಾಂಗಣ ವಿಶಾಲವಾಗಿತ್ತು. ಹಸಿರು ತುಂಬಿದ ಸ್ಥಳವಾದ್ದರಿಂದ ಬೇರೆ ಬೇರೆ ದೃಶ್ಯಗಳನ್ನು ಚಿತ್ರಿಸುವುದು ಸಾಧ್ಯವಿತ್ತು. ಮೇಕಪ್‌ಗಾಗಿ ಒಂದೆರಡು ಕೊಠಡಿಗಳು. ಕೆಲವು ಲೈಟ್ಸ್ ಇದ್ದವು.

ಸರ್ವಸೌಲಭ್ಯ ಎನ್ನುವುದಕ್ಕಿಂತ ನಮ್ಮ ನೆಲದಲ್ಲೇ ಎದ್ದಿರುವ ಸ್ಟುಡಿಯೋ, ನಮ್ಮ ಜನ ಎಂಬ ಅಭಿಮಾನ ಕೆಲವರನ್ನಾದರೂ ಅಲ್ಲಿಗೆ ಕರೆತರುತ್ತಿತ್ತು. ಹಾಗೆ ಕನ್ನಡದ ಕೆಲವು ಚಿತ್ರಗಳು ಇಲ್ಲಿ ತಯಾರಾದವು. ಬಹುತೇಕ ಭಾಗಶಃ ಚಿತ್ರೀಕರಣ ಅಥವಾ ಚಿತ್ರದ ಮುಹೂರ್ತ ಮಾತ್ರ ಆದದ್ದೂ ಉಂಟು. 'ಜಾಣರ ಜಾಣ' ಇಲ್ಲಿ ಸಂಪೂರ್ಣವಾಗಿ ತಯಾರಾದ ಚಿತ್ರ. 'ಮಣ್ಣಿನ ಮಗ', 'ಹೂವು ಮುಳ್ಳು', 'ಸೇಡಿನ ಕಿಡಿ' ಮೊದಲಾದ ಕೆಲವು ಚಿತ್ರಗಳು ಇಲ್ಲಿ ಭಾಗಶಃ ತಯಾರಾದವು.

ಯಾವುದೇ ಸ್ಟುಡಿಯೋ ಲಾಭದಲ್ಲಿ ನಡೆಯುವುದು ಅಪರೂಪ. ಆದರೆ ಚಿತ್ರೀಕರಣಕ್ಕೆ ಸ್ಟುಡಿಯೋ ಬೇಕೇ ಬೇಕು. ರಾಮದಾಸ್ ಅವರದ್ದು ಉತ್ಸಾಹ. ಆದರೆ ಅದೊಂದೇ ಸ್ಟುಡಿಯೋ ನಡೆಸಲು ಸಾಧ್ಯವಾಗುವುದಿಲ್ಲವಲ್ಲ. ಕೇವಲ ಹಣ ವ್ಯಯ ಮಾಡುವುದೂ ಅಲ್ಲ, ಅದು ಯಾವುದಕ್ಕೆ ವಿನಿಯೋಗವಾಗುತ್ತದೆಂಬುದೂ ಮುಖ್ಯ. ಅತ್ಯಗತ್ಯವಾಗಿ ಪರಿಣಿತ ತಂತ್ರಜ್ಞರನ್ನು ತೊಡಗಿಸಿಕೊಳ್ಳಬೇಕು. ಇತರ ವಿಭಾಗಗಳಿಗೂ ವ್ಯವಸ್ಥಿತವಾಗಿ ನಡೆಸಿಕೊಂಡು ಹೋಗಬಲ್ಲ ಜನರನ್ನು ಕೆಲಸಕ್ಕೆ ಗೊತ್ತು ಮಾಡಿಕೊಳ್ಳಬೇಕು. ಇಂಥ ಮುಖ್ಯ ಸಂಗತಿಗಳನ್ನೇ ಸ್ಟುಡಿಯೋ ಮಾಡಲು ಹೊರಟವರು ಗಮನಿಸುವುದಿಲ್ಲ. ರಾಮದಾಸ್ ಅವರಿಗೆ ತಿಮ್ಮಯ್ಯನವರ ಹಾಗೆ ನಿರ್ದೇಶನ-ಅಭಿನಯದಂಥ ಹುಚ್ಚುಗಳೇನೂ ಇರಲಿಲ್ಲ. ಸ್ಟುಡಿಯೋ ಬಗ್ಗೆ ತುಂಬ ಪ್ರೀತಿಯಿತ್ತು. ಆದರೆ ತಮ್ಮ ಗಣಿ ಉದ್ಯಮವನ್ನು ಬಿಟ್ಟು ಸ್ಟುಡಿಯೋದಲ್ಲೇ ಕೂರುವುದು ಮಾತ್ರ ಸಾಧ್ಯವಿರಲಿಲ್ಲ. ಹೀಗಾಗಿ ಅವರು ಇತರರನ್ನು ಆಶ್ರಯಿಸಿದರು. ಅವರು ನಂಬಿದವರು ಈ ವಿಭಾಗವನ್ನು ಬಲ್ಲವರೇನಲ್ಲ. ಸಹಜವಾಗಿಯೇ ಸ್ಟುಡಿಯೋ ಬಡವಾಯಿತು. ಇಲ್ಲಿ ತಯಾರಾದ 'ಜಾಣರ ಜಾಣ' ತಾಂತ್ರಿಕ ಗುಣಮಟ್ಟದಲ್ಲಿ ಉತ್ತಮವಾಗಿದೆ ಎಂಬ ಮಾತಿದೆ. ಮಾತೆತ್ತಿದರೆ 'ನೀವು ಸ್ಟುಡಿಯೋ ಇತ್ಯಾದಿ ಮೂಲಸೌಲಭ್ಯ ಕಲ್ಪಿಸಿಕೊಳ್ಳಿ. ಉದ್ಯಮವನ್ನು ಇಲ್ಲೇ ನೆಲೆಗೊಳಿಸುವ ಇಂಥ ಪ್ರಯತ್ನಗಳಿಗೆ ನೆರವಾಗುತ್ತೇವೆ' ಎಂದು ವೇದಿಕೆಯ ಭಾಷಣಗಳಲ್ಲಿ ಹೇಳುತ್ತಿದ್ದ ಸರ್ಕಾರ ಯಾವ ನೆರವನ್ನೂ ಕೊಡಲಿಲ್ಲ. ಅದಕ್ಕಾಗಿ ಪ್ರಯತ್ನಿಸಿದ ರಾಮದಾಸ್ ಬೇಸತ್ತರು. ಓಂಕಾರ್ ಸ್ಟುಡಿಯೋದಲ್ಲಿ ಅನೇಕ ಚಿತ್ರಗಳಿಗೆ ಮುಹೂರ್ತ ನೆರವೇರಿದೆ. ಒಂದು ಹಂತದಲ್ಲಿ ಈ ಸ್ಟುಡಿಯೋವನ್ನು ಮುಹೂರ್ತದ ಸ್ಟುಡಿಯೋ ಎಂದು ಹಾಸ್ಯ ಮಾಡಿದ್ದೂ ಉಂಟು. ಬಂಗಾರಪ್ಪನವರು (ಮುಂದೆ ರಾಜ್ಯದ ಮುಖ್ಯಮಂತ್ರಿಯಾದವರು) ಅಭಿನಯಿಸಬೇಕಿದ್ದ ಚಿತ್ರವೊಂದರ ಮುಹೂರ್ತ ಕೂಡಾ ಇಲ್ಲಿಯೇ ನಡೆದಿತ್ತು.

ಓಂಕಾರ್ ಸ್ಟುಡಿಯೋ ಕೆಲವು ಕಾಲ ಕರ್ನಾಟಕ ಸ್ಟುಡಿಯೋಸ್ ಎಂಬ ಹೆಸರಿನಲ್ಲಿ ನಡೆಯಿತು. ನಗರದಿಂದ ಬಹಳ ದೂರ ಎಂಬ 'ಪಿಳ್ಳೆ ನೆಪ' ಚಿತ್ರ ತಯಾರಕರಿಗೆ ಮಾಮೂಲು. ಅದೇ ಇಲ್ಲೂ ಆಯಿತು. ಅಷ್ಟು ವಿಶಾಲವಾದ ಪ್ರದೇಶ ಚಿತ್ರರಂಗದ ಕೈತಪ್ಪಿ ಸೈಂಟ್ ಜಾನ್ಸ್ ಆಸ್ಪತ್ರೆಗೆ ಸೇರಿ ಹೋಯಿತು.

"...ಎಲ್ಲ ಭಾಷಾ ರಾಜಧಾನಿಯಲ್ಲೂ ಸ್ಟುಡಿಯೋಗಳಿವೆ. ಕನ್ನಡ ನಾಡಿಗೆ, ಬೆಂಗಳೂರಿಗೆ ತನ್ನದೇ ಆದ ಸ್ಟುಡಿಯೋ ಬೇಕು. ಅದು ಬರೀ ಭಾವೋದ್ವೇಗದ ಕೂಗು ಆಗದೇ ಸರಿಯಾದ ಯೋಜನೆ, ಬುನಾದಿ ಹಾಕಿಕೊಂಡು ಪ್ರಾರಂಭವಾಗಬೇಕು. ಈಗಾಗಲೇ ಆಗಿ ಹೋದ ಸ್ಟುಡಿಯೋಗಳು ಏಕೆ ಮುಚ್ಚಿಹೋದವು ಎಂಬ ಕಾರಣ ತಿಳಿದುಕೊಂಡು ಮತ್ತೆ ಅಂಥದೇ ತಪ್ಪುಗಳಾಗದ ಹಾಗೆ ನೋಡಿಕೊಳ್ಳುವುದು ಮುಖ್ಯ. ಕನ್ನಡ ಜಾಗೃತಿಗಾಗಿ ಶ್ರಮಿಸಿದ ಜನ ಸ್ಟುಡಿಯೋದ ಅಗತ್ಯ ಕುರಿತೂ ಯೋಚಿಸಬೇಕು. ಕರ್ನಾಟಕದಲ್ಲಿ ಶ್ರೀಮಂತ ಉದ್ಯಮಿಗಳಿದ್ದಾರೆ. ಅಂಥವರ ಮನವೊಲಿಸಿ ಈ ಉದ್ಯಮದಲ್ಲಿ ತೊಡಗಿಸಿಕೊಳ್ಳಬೇಕು. ಹೊರ ರಾಜ್ಯಗಳಲ್ಲಿರುವ ಸ್ಟುಡಿಯೋಗಳು ಹಲವು ವರ್ಷಗಳಿಂದ ಕೆಲಸ ಮಾಡುತ್ತಾ ಬಂದಿವೆ. ಸುಸಜ್ಜಿತವಾಗಲೂ ಸಾಧ್ಯವಾಗಿದೆ. ನಾವು ರಾಜ್ಯದಲ್ಲಿ ಹೊಸದಾಗಿ ಪ್ರಾರಂಭ ಮಾಡಬೇಕಾದ ಸ್ಥಿತಿ ಇರುವುದರಿಂದ ಅದಕ್ಕೆ ಬೇಕಾಗುವ ಸಲಕರಣೆ ಹೊಂದಿಸುವ ಧೈರ್ಯ ಮಾಡಬೇಕಿದೆ. ಸ್ಟುಡಿಯೋಗೆ ಮುಖ್ಯವಾಗಿ ಲ್ಯಾಬೊರೇಟರಿ ಇರಲೇಬೇಕು. ಕನಿಷ್ಠ ೧೦-೧೫ ಚಿತ್ರಗಳ ಕೆಲಸವಾದರೂ ನಡೆಯುತ್ತಿರಬೇಕು. ಹಾಗಿಲ್ಲವಾದರೆ ಖರ್ಚು-ವೆಚ್ಚಗಳನ್ನು ಸರಿತೂಗಿಸಲು ಸಾಧ್ಯವಾಗುವುದಿಲ್ಲ. ಸ್ಟುಡಿಯೋದಲ್ಲಿ ಕನಿಷ್ಠ ನಾಲ್ಕು ಫ್ಲೋರ್‌ಗಳಿದ್ದು, ಬಿರುಸಿನ ಕೆಲಸ ನಡೆದರೆ ಸ್ಟುಡಿಯೋಗೆ ಬಂಡವಾಳ ಹೂಡಿದ ಸಾಹಸಿಯೂ ನಾಲ್ಕು ಕಾಸು ಕಂಡಾನು... ಸ್ಟುಡಿಯೋ ಯಾರಿಗೂ ಲಾಭದಾಯಕ ಉದ್ಯಮ ಅಲ್ಲ. ಆದರೆ ಅದು ಅಗತ್ಯವಾಗಿ ಬೇಕು. ಈ ಕಾರಣಕ್ಕೇ ಅತ್ತ ಮನಸ್ಸು ಮಾಡಬೇಕು..." ಎಂದು ಚಿತ್ರಲೇಖಾ ಚಲನಚಿತ್ರ ಪತ್ರಿಕೆ ೧೯೬೩ರಲ್ಲೇ ಸಂಪಾದಕೀಯ ಬರೆಯಿತು.

ಸಾಮಾನ್ಯವಾಗಿ ರಾಜ್ಯದ ರಾಜಧಾನಿಗಳನ್ನು ಬಿಟ್ಟು ಹೊರಗೆ ಪ್ರಾರಂಭವಾದ ಸ್ಟುಡಿಯೋಗಳು ಬಹುಕಾಲ ನಡೆಯಲಾಗದೆ ಸೊರಗಿವೆ. ಇದಕ್ಕೆ ಮದರಾಸು ಬಿಟ್ಟು ಹೊರಗೆ ಪ್ರಾರಂಭವಾದ ಅನೇಕ ಸ್ಟುಡಿಯೋಗಳ ಸ್ಥಿತಿಯನ್ನು ಉದಾಹರಿಸಬಹುದಾಗಿದೆ.

ಈ ಕಾಲಘಟ್ಟದಲ್ಲಿ ಮದರಾಸಿನ ಸ್ಟುಡಿಯೋಗಳಲ್ಲಿ ಎಲ್ಲ ಭಾಷೆಯ ಚಿತ್ರಗಳೂ ತಯಾರಾಗುತ್ತಿದ್ದವು. ಮದರಾಸಿನ ವಾಹಿನಿ, ಜೆಮಿನಿ, ಎ.ವಿ.ಎಂ. ಮೊದಲಾದ ೧೦-೧೫ ಸ್ಟುಡಿಯೋಗಳಲ್ಲೂ ಮತ್ತು ಕೇರಳದ ತಿರುವನಂತಪುರದ ಸ್ಟುಡಿಯೋದಲ್ಲೂ ಕೆಲಸ ನಡೆಯುತ್ತಿತ್ತು. ಅವುಗಳಲ್ಲಿ ಕನ್ನಡದ ಚಿತ್ರಗಳೂ ಇದ್ದವು. ಆದರೆ ಆ ಹೊತ್ತಿಗೆ ಪ್ರಾರಂಭವಾಗಿದ್ದ ಮೈಸೂರಿನ ಸ್ಟುಡಿಯೋಗಳಲ್ಲಿಯೂ ಬೇರೆ ಭಾಷೆಯ ಚಿತ್ರಗಳೇ ಆದುವಾಗಲೀ ಕನ್ನಡ ಚಿತ್ರಗಳಲ್ಲ ಎಂಬುದನ್ನು ಗುರುತಿಸುವ ಚಲನಚಿತ್ರ ಪತ್ರಿಕೆಗಳು, ಈ ಪ್ರವೃತ್ತಿಗೆ ಏನು ಕಾರಣವೆಂಬುದೇ ತಿಳಿಯುತ್ತಿಲ್ಲ ಎನ್ನುತ್ತವೆ.

ಇಂಥ ಹೊತ್ತಿನಲ್ಲಿ ಬಂದ ಮತ್ತೊಂದು ಬೆಳಕಿನ ಸೆಳಕು - ಪ್ರೀಮಿಯರ್ ಸ್ಟುಡಿಯೋ.

ಪ್ರೀಮಿಯರ್ ಸ್ಟುಡಿಯೋ

ನವಜ್ಯೋತಿ ಸ್ಟುಡಿಯೋ ಪ್ರಾರಂಭವಾದ ಹತ್ತು ವರ್ಷಗಳ ನಂತರ ಪ್ರೀಮಿಯರ್ ಸ್ಟುಡಿಯೋ ಅಸ್ತಿತ್ವಕ್ಕೆ ಬಂತು. ಮದರಾಸಿನಲ್ಲೇ ಕೇಂದ್ರಿತವಾಗಿದ್ದ ಕನ್ನಡ ಚಿತ್ರರಂಗವನ್ನು ಮೈಸೂರಿನತ್ತ ಸೆಳೆಯುವಲ್ಲಿ, ಚಿತ್ರೋದ್ಯಮ ಕರ್ನಾಟಕದಲ್ಲೇ ಬೇರೂರುವಂತೆ ಮಾಡುವಲ್ಲಿ ಪ್ರೀಮಿಯರ್ ಮತ್ತು ಅದರ ಕೇಂದ್ರ ಬಿಂದು ಎಂ.ಎನ್.ಬಸವರಾಜಯ್ಯನವರದು ಸಿಂಹ ಪಾಲಿದೆ.

ಬಸವರಾಜಯ್ಯನವರು ಪ್ರೀಮಿಯರ್ ಇನ್‌ಶ್ಯೂರೆನ್ಸ್ ಕಂಪನಿಯನ್ನು ನಡೆಸುತ್ತಿದ್ದರು. ಆ ಕೆಲಸದ ನಿಮಿತ್ತ ಮದರಾಸಿಗೆ ಹೋಗಿ ಬರಬೇಕಾಗುತ್ತಿತ್ತು. ಈ ಓಡಾಟದಲ್ಲಿ ಮದರಾಸಿಗೆ ಹೋದಾಗಲೆಲ್ಲ ಚಿತ್ರ ನಿರ್ಮಾಪಕರು, ತಂತ್ರಜ್ಞರು, ಕಲಾವಿದರು, ಸಾಹಿತಿಗಳನ್ನೆಲ್ಲ ಭೇಟಿಯಾಗಿ ಚಿತ್ರೀಕರಣ ಕರ್ನಾಟಕದಲ್ಲೇ ನಡೆಸಿ ಎಂದು ಹುರಿದುಂಬಿಸುತ್ತಿದ್ದರು. ಕಡೆಗೆ ಅವರೇ ಸ್ಟುಡಿಯೋ ನಿರ್ಮಿಸುವ ಸವಾಲನ್ನು ಹೊತ್ತು ಕಾರ್ಯ ಪ್ರವೃತ್ತರಾದರು. ಅದರ ಫಲವಾಗಿ ೧೯೫೪ರ ಆಗಸ್ಟ್ ೬ನೇ ತಾರೀಖಿನಂದು ಅಂದಿನ ಮುಖ್ಯಮಂತ್ರಿಗಳಾದ ಕೆಂಗಲ್ ಹನುಮಂತಯ್ಯನವರು ಚಿತ್ತರಂಜನ್ ಮಹಲ್‌ನಲ್ಲಿ ಪ್ರೀಮಿಯರ್ ಸ್ಟುಡಿಯೋವನ್ನು ಉದ್ಘಾಟಿಸಿದರು. ಇದು ಮೈಸೂರು ಅರಮನೆಗೆ ಸೇರಿದ ಬಂಗಲೆ. ಈ ಹಿಂದೆ ಎಚ್.ಎಮ್.ರೆಡ್ಡಿಯವರ 'ಮೈಸೂರು ಮೂವಿಟೋನ್' ಇದ್ದುದೂ ಈ ಸ್ಥಳದಲ್ಲೇ. ಬಸವರಾಜಯ್ಯನವರು ಈ ಸ್ಥಳವನ್ನು ಕೊಂಡುಕೊಂಡರು. ಆರಂಭದಲ್ಲಿ ಒಂದು ಫ್ಲೋರ್ ಮಾತ್ರ ಇರುವ ಸ್ಟುಡಿಯೋ ಪ್ರಾರಂಭಿಸಿದರು. ಕನ್ನಡ ನಿರ್ಮಾಪಕರಿಗೆ ಬೆಂಬಲವಾಗಿ ನಿಲ್ಲಬೇಕು, ಪ್ರಾದೇಶಿಕವಾಗಿ ಉದ್ಯಮ ನೆಲೆಯೂರಬೇಕು ಎಂಬ ದೂರದೃಷ್ಟಿ ಬಸವರಾಜಯ್ಯನವರದಾಗಿತ್ತು.



(ಚಿತ್ರ ೫) ಎಂ.ಎನ್.ಬಸವರಾಜಯ್ಯ

ಒಂದು ಮಾದರಿಯನ್ನು ಮುಂದಿಡಲು 'ಸ್ತ್ರೀರತ್ನ' ಎಂಬ ಚಿತ್ರವನ್ನು ತಾವೇ ನಿರ್ಮಿಸಿದರು. ಆ ಚಿತ್ರಕ್ಕೆ ಸಾಹಿತ್ಯ ಒದಗಿಸಿದವರು ಅ.ನ.ಕೃಷ್ಣರಾಯರು. ಹಿಂದಿಯ ಗಾಯಕಿ ಮೀನಾಕಪೂರ್ ಅವರಿಂದ ಹಾಡಿಸಲಾಗಿತ್ತು. ಪ್ರೀಮಿಯರ್‌ನಿಂದ ಹೊರಬಂದ ಈ ಪ್ರಥಮ ಕನ್ನಡ ಚಿತ್ರದಲ್ಲಿ ಪ್ರಸಿದ್ಧ ತಾರೆ ಶಾಂತಾ ಹುಬ್ಳೀಕರ್ ಅವರ ಅಭಿನಯವಿತ್ತು. ಖ್ಯಾತ ನಿರ್ದೇಶಕ ಕ.ಸುಬ್ರಹ್ಮಣ್ಯಂ ನಿರ್ದೇಶಿಸಿದ್ದರು. ಆ ಕಾಲಕ್ಕೇ ಚಿತ್ರವು ಭಾಗಶಃ ವರ್ಣದಿಂದ ಕೂಡಿತ್ತು. ತಾವೇ ಇಂಥ ಸಾಹಸ ಮಾಡಿ ತೋರಿಸಿ, ತಮ್ಮ ಸ್ಟುಡಿಯೋದಲ್ಲಿ ಎಲ್ಲವೂ ಸಾಧ್ಯ ಎಂದು ನಿರೂಪಿಸಿದ್ದರು ಬಸವರಾಜಯ್ಯ. ಪ್ರೀಮಿಯರ್ ವಿದೇಶೀ ನಿರ್ಮಾಪಕರನ್ನೂ ಆಕರ್ಷಿಸಿತ್ತು. ಇಂಗ್ಲಿಷ್ ಅಲ್ಲದೆ ಹಿಂದಿ, ತಮಿಳು, ತಲುಗು, ಮಲೆಯಾಳಂ ಚಿತ್ರಗಳು ಇಲ್ಲಿ ಬಂದವು. ಸಾಮಾನ್ಯವಾಗಿ ಮೈಸೂರಿನ ರಮಣೀಯ ದೃಶ್ಯಗಳ ಹಿನ್ನೆಲೆಯಲ್ಲಿ ಹೊರಾಂಗಣ ಚಿತ್ರೀಕರಣಕ್ಕೆಂದು ಬರುತ್ತಿದ್ದ ತಂಡಗಳು ಕೂಡಾ ಕೆಲವು ಸನ್ನಿವೇಶಗಳನ್ನು ಸ್ಟುಡಿಯೋದಲ್ಲಿ ಚಿತ್ರಿಸಿಕೊಂಡದ್ದುಂಟು. ಪ್ರೀಮಿಯರ್‌ನ ಸಲಕರಣೆ, ಸಂಸ್ಕರಣಾಗಾರ, ಪ್ರೊಜೆಕ್ಷನ್ ಸೌಲಭ್ಯ ಇತ್ಯಾದಿಗಳು ಚಿತ್ರತಂಡಗಳಿಗೆ ಬಹು ಆಕರ್ಷಕ-ಅನುಕೂಲಕರ ಸಂಗತಿಗಳಾಗಿದ್ದವು.

೧೯೫೪ರಲ್ಲಿ ಪ್ರೀಮಿಯರ್ ಪ್ರಾರಂಭವಾದಾಗ ಕರ್ನಾಟಕದಲ್ಲಿ ಏಕೀಕರಣಕ್ಕಾಗಿ ದೊಡ್ಡ ಆಂದೋಳನವೇ ನಡೆದಿತ್ತು. ಎಲ್ಲೆಲ್ಲೂ ಕನ್ನಡ-ಕನ್ನಡತನ ಬೇಕೆಂಬ ತಹತಹವಿತ್ತು. ಸರಿಯಾಗಿ ಎರಡು ವರ್ಷಕ್ಕೆ ೧೯೫೬ನೇ ನವೆಂಬರ್ ೧ನೇ ತಾರೀಖಿಗೆ ಕನ್ನಡನಾಡು ಏಕೀಕರಣ ಪ್ರದೇಶವಾಗಿ, ಚದುರಿ ಹೋಗಿದ್ದ ಕನ್ನಡ ಪ್ರದೇಶಗಳು ಒಂದಾದವು. ಇದು ಚಿತ್ರೋದ್ಯಮದ ಮೇಲೂ ಪ್ರಭಾವ ಬೀರಿತು. ಚಿತ್ರೋದ್ಯಮದಲ್ಲಿ ಆಸಕ್ತಿ ಇದ್ದವರು, ಉದ್ಯಮಕ್ಕೆ ನಿಕಟವಾಗಿದ್ದ ಹಲವರು ಮಂತ್ರಿಮಂಡಲದಲ್ಲಿ, ವಿಧಾನಸಭೆಯಲ್ಲಿ ಇದ್ದರು. ಇದು ಸರ್ಕಾರಕ್ಕೂ ಕನ್ನಡ ಚಿತ್ರರಂಗದ ಬಗ್ಗೆ ಆಸ್ಥೆ, ಸಹಾನುಭೂತಿಯ ವಾತಾವರಣ ಉಂಟಾಗಲು ಕಾರಣವಾಯಿತು.

ಕನ್ನಡ ಚಿತ್ರಗಳಿಗೆ ಇರುವ ಸೀಮಿತ ಮಾರುಕಟ್ಟೆಯನ್ನು ಮನಗಂಡು, ಕನ್ನಡ ಚಿತ್ರಗಳ ನಿರ್ಮಾಣ ವೆಚ್ಚ ಕಡಿಮೆಯಾದರೆ ಮಾತ್ರ ಕನ್ನಡ ಪ್ರದೇಶದಲ್ಲಿ ಚಿತ್ರೋದ್ಯಮ ಉಳಿಯಬಲ್ಲುದು ಎಂಬ ಅಂಶ ಮನದಟ್ಟಾಗಿತ್ತು. ಹೀಗಾಗಿ ಸ್ಥಳೀಯವಾಗಿ ಸ್ಟುಡಿಯೋಗಳನ್ನು ಕಟ್ಟಿ, ಬೆಳೆಸುವ ಅಗತ್ಯ ಹೆಚ್ಚಾಗಿ ಕಂಡಿತು. ರಾಮದಾಸ್ ಅವರ ಪ್ರಯತ್ನ ಫಲ ಕಾಣಲಿಲ್ಲ. ಆದರೆ ಬಸವರಾಜಯ್ಯನವರದು ಬಿಡದ ಪಟ್ಟು. ಹಿಡಿದದ್ದು ಸಾಧಿತವಾಗಲೇಬೇಕೆಂಬ ಛಲ. ಇಲ್ಲಿಯೇ ಎಲ್ಲ ಸೌಲಭ್ಯಗಳೂ ಇದ್ದರೂ ಇತ್ತ ಗಮನ ಹರಿಸದ ಕನ್ನಡ ಚಿತ್ರ ನಿರ್ಮಾಪಕರನ್ನು ಸೆಳೆದುಕೊಳ್ಳಲೇಬೇಕೆಂಬ ಪ್ರಯತ್ನ ಬಸವರಾಜಯ್ಯನವರದು.

ಡಿ.ಶಂಕರ್‌ಸಿಂಗ್ ಅವರು ಮಾತ್ರ ಹಿಂದೆ ನವಜ್ಯೋತಿಯಲ್ಲಿ ಮಾಡುತ್ತಿದ್ದಂತೆಯೇ ಪ್ರೀಮಿಯರ್ ಪ್ರಾರಂಭವಾದ ಮೇಲೆ ಅಲ್ಲಿಯೇ ಚಿತ್ರೀಕರಣ ಮಾಡುತ್ತಿದ್ದರು. ಹೊರಗಿನವರೂ ಬಂದು ಚಿತ್ರಿಸುತ್ತಿದ್ದರು. ಹಾಗೆ ತಯಾರಾದ ಮೊದಲ ಹಿಂದಿ ಚಿತ್ರ ರಮೇಶ್ ಸೈಗಲ್ ನಿರ್ದೇಶನದ 'ಶೋಲಾ ಔರ್ ಶಬನಮ್', ತಮಿಳಿನ 'ಯಾನೈಪಾಗನ್', 'ಕೋಕಿಲ ವಾಣಿ', 'ನಾಗಾರ್ಜುನ' ಮೊದಲಾದವೂ ಇದ್ದವು. ಚಿತ್ರೀಕರಣಕ್ಕೆ ೬೦ ಸಾವಿರ ಚದರಡಿಯ ದೊಡ್ಡ ನಿವೇಶನವೇ ಇತ್ತು. ಮದರಾಸಿನ 'ವಿಜಯವಾಹಿನಿ' ಬಿಟ್ಟರೆ ಇದೇ ದೊಡ್ಡದು. ಬಸವರಾಜಯ್ಯ 'ಎಂದೂ ಕೆಲಸವಿಲ್ಲ ಮುಚ್ಚಿಬಿಡುತ್ತೇನೆ' ಎಂದು ಗೊಣಗಲೂ ಇಲ್ಲ. ಪ್ರಯಾಸವಾದರೂ ತೂಗಿಸುವ ಸಾಹಸಿ. ಆದರೆ ಅವರ ಮನಸ್ಸಿನಲ್ಲಿದ್ದ ಕನ್ನಡ ಚಿತ್ರಗಳೆಲ್ಲವೂ ಇಲ್ಲಿಯೇ ನಿರ್ಮಾಣವಾಗಲಿ ಎಂಬ ಆಸೆ ಪೂರ್ತಿಯಾಗಿ ಫಲಿಸಿರಲಿಲ್ಲ.

ಬಸವರಾಜಯ್ಯನವರು ಸರ್ಕಾರಕ್ಕೆ ಬಹಿರಂಗಪತ್ರ ಬರೆದರು. ಸಹಾಯಧನ ಯೋಜನೆಯನ್ನು ವಿವರಿಸಿ, ಅದರ ಸಾಧಕ-ಬಾಧಕಗಳನ್ನು ವಿಶ್ಲೇಷಿಸಿದರು. ಬಸವರಾಜಯ್ಯನವರ ಈ ಒತ್ತಾಯವನ್ನು ಪತ್ರಿಕೆಗಳು ಬೆಂಬಲಿಸಿದವು. ಉದ್ಯಮದ ಕೆಲವರು ಬೆಂಬಲಿಸಿದರೆ, ಕೆಲವರದು ಡೋಲಾಯಮಾನ ಸ್ಥಿತಿ. ಒಟ್ಟಾರೆ ಕನ್ನಡಪರ ಸಂಘಟನೆಗಳು, ಕನ್ನಡಕ್ಕಾಗಿ ಹೋರಾಟ ಮಾಡಿದ ನಾಯಕರು-ಜನತೆ, ಚಿತ್ರೋದ್ಯಮ ಕರ್ನಾಟಕದಲ್ಲೇ ನೆಲೆಯೂರಬೇಕೆಂದು ಹಟ ಹಿಡಿದವು.

ಇನ್ನೂ 'ಕರ್ನಾಟಕ' ಎಂಬ ಅಭಿದಾನ ಆಗಿರಲಿಲ್ಲ. ಎಲ್ಲೆಲ್ಲೂ ಕನ್ನಡತನಕ್ಕಾಗಿ ಹಂಬಲಿಸುವ ಮನಸ್ಸುಗಳು ತುಂಬಿದ್ದವು. ಇಂಥ ಪರಿಸ್ಥಿತಿಯ ಒತ್ತಡ, ಬಸವರಾಜಯ್ಯನವರ ದೂರದೃಷ್ಟಿಯ ಫಲವಾಗಿ ರಾಜ್ಯ ಸರ್ಕಾರವು ಸಹಾಯಧನ ಯೋಜನೆಯನ್ನು ರೂಪಿಸಿತು. ಬಸವರಾಜಯ್ಯನವರು ಅಂದಿನ ಮಂತ್ರಿಗಳು, ಅಧಿಕಾರಿಗಳನ್ನು ಸ್ಟುಡಿಯೋಗೆ ಆಹ್ವಾನಿಸಿ ಮನವಿಪತ್ರಗಳನ್ನು ಕೊಟ್ಟರು.

''ಮದರಾಸಿನಲ್ಲಿ ತಯಾರಾಗುತ್ತಿರುವ ಕನ್ನಡ ಚಿತ್ರಗಳು ಕರ್ನಾಟಕದಲ್ಲೇ ತಯಾರಾಗಬೇಕು. ಮತ್ತು ಕರ್ನಾಟಕದಲ್ಲಿ ತಯಾರಾಗುವ ಎಲ್ಲ ಚಿತ್ರಗಳಿಗೂ ಸಹಾಯಧನ ಉಂಟು ಎಂದು ಘೋಷಿಸಿದರೆ, ಇತರ ಭಾಷಾ ಚಿತ್ರ ನಿರ್ಮಾಪಕರೂ ಇತ್ತ ಬರುತ್ತಾರೆ. ಇಲ್ಲಿಯೇ ಚಿತ್ರ ಚಟುವಟಿಕೆ ನಡೆದರೆ ಅತ್ತ ಕಡೆಯವರ ಬಂಡವಾಳವೂ ಇಲ್ಲಿ ವ್ಯಯವಾಗುತ್ತದೆ, ಮತ್ತು ನಮ್ಮ ಜನರಿಗೆ ಉದ್ಯೋಗಾವಕಾಶವೂ ಸಿಗುತ್ತದೆ. ಇದರಿಂದಾಗಿ ಸಹಾಯಧನ ನೀಡಿದರೂ ಸರ್ಕಾರಕ್ಕೆ ನಷ್ಟವಿಲ್ಲ...'' ಎಂಬ ಬಸವರಾಜಯ್ಯನವರ ವಿಚಾರಗಳು ಸರ್ಕಾರಕ್ಕೂ ಯುಕ್ತವಾಗೇ ಕಂಡಿತ್ತು. ಇಂಥ ಒತ್ತಡ ಎಲ್ಲ ಕಡೆಯಿಂದ ಬರತೊಡಗಿತು. ಸರ್ಕಾರ ಮಣಿಯಿತು. ಸಹಾಯಧನ ಯೋಜನೆಯನ್ನು ೧೯೬೬-೬೭ರಲ್ಲಿ ಜಾರಿಗೆ ತರಲಾಯಿತು. ಈ ಯೋಜನೆಯಿಂದ ಉತ್ತೇಜಿತರಾದ ಚಿತ್ರತಂಡಗಳು ಇತ್ತ ಧಾವಿಸಿದವು. ಪ್ರೀಮಿಯರ್‌ನಲ್ಲಿ ಚಟುವಟಿಕೆ ಹೆಚ್ಚಿತು.

ಚಿತ್ರ ನಿರ್ಮಾಪಕರಿಗೆ ಸರ್ವ ವಿಧದಲ್ಲೂ ಸಹಕಾರ ಕೊಡುತ್ತಿದ್ದ ಬಸವರಾಜಯ್ಯನಂಥವರಿಂದಲೇ ಮತ್ತ ಶಂಕರ್‌ಸಿಂಗ್ ಮೊದಲಾಗಿ ಅನೇಕರು ನಿರಂತರವಾಗಿ ಚಿತ್ರ ನಿರ್ಮಿಸಲು ಸಾಧ್ಯವಾಯಿತು. ಬಸವರಾಜಯ್ಯನವರು ಹೊಸದಾಗಿ ಚಿತ್ರ ನಿರ್ಮಾಣಕ್ಕೆ ಕೆಲವು ಸಾವಿರ ರೂಪಾಯಿಗಳನ್ನಿಟ್ಟುಕೊಂಡು ಬಂದವರಿಗೆ ಬುದ್ಧಿ ಹೇಳಿ ವಾಪಸ್ ಕಳುಹಿಸಿದ್ದೂ ಇದೆ. ಯಾರು ಹೇಗಾದರೂ ಹೋಗಲಿ ನನ್ನ ಸ್ಟುಡಿಯೋದಲ್ಲಿ ಕೆಲಸಗಳಾದರ ಸಾಕೆಂಬ ಸ್ವಾರ್ಥಿಯಾಗಿರಲಿಲ್ಲ. ಆದರೆ ಕೇವಲ ಖಯಾಲಿಗಲ್ಲದ ನಿಜವಾದ ಮಾಧ್ಯಮ ನಿಷ್ಠರು ಬಂದಾಗ ಸಲಕರಣೆ, ಸೆಟ್‌ಗಳು, ರಾ ಸ್ಟಾಕ್ ಎಲ್ಲವನ್ನೂ ಒದಗಿಸಿ, ಸಹಾಯಧನ ಬಂದ ಮೇಲೆ ಹಣ ಹಿಂತಿರುಗಿಸಬಹುದು ಎಂದದ್ದೂ ಉಂಟು.

ಬಸವರಾಜಯ್ಯನವರು ಸ್ಟುಡಿಯೋ ವಿಸ್ತರಿಸಲೇಬೇಕಾಯಿತು. ವರ್ಷಕ್ಕೆ ೫೦ ಚಿತ್ರಗಳಾದರೂ ಸಂಸ್ಕರಣಗೊಳ್ಳುವಂಥ ಹೊಸ ಲ್ಯಾಬೊರೇಟರಿ ಸ್ಥಾಪಿಸುವ ಯೋಜನೆ ಹಾಕಿದರು. ಅವರಲ್ಲಿ ಇದ್ದ ಪುಟ್ಟ ಲ್ಯಾಬೊರೇಟರಿಯಲ್ಲಿ ೨ ಅಥವಾ ೩ ಚಿತ್ರಗಳಿಗಿಂತ ಹೆಚ್ಚು ಚಿತ್ರಗಳು ಸಂಸ್ಕರಣವಾಗುವುದು ಸಾಧ್ಯವಿರಲಿಲ್ಲ. ನಿರ್ಮಾಪಕ ಯಾವ ಕಾರಣಕ್ಕೂ ಸ್ಟುಡಿಯೋದಿಂದ ಹೊರಗೆ ಹೋಗದ ಹಾಗೆ ಸ್ಟುಡಿಯೋವನ್ನು ಸಜ್ಜುಗೊಳಿಸುವ ಉತ್ಸಾಹ ಬಸವರಾಜಯ್ಯನವರಿಗೆ. ಪ್ರಾರಂಭಕ್ಕೆ ಒಂದು ಫ್ಲೋರ್ ಇದ್ದದ್ದು ಎರಡಾಯಿತು. ಆ ಎರಡನೆಯ ಫ್ಲೋರ್‌ನಲ್ಲಿ 'ಸಕ್ಕರೆದೇ ಸ್ವರ್ಗ' ಚಿತ್ರೀಕರಣ

(ಚಿತ್ರ ೬) ಪ್ರೀಮಿಯರ್ ಸ್ಟುಡಿಯೋದ ಫ್ಲೋರೊಂದರ ನೋಟ

ಯಾವುದೇ ಸ್ಟುಡಿಯೋಗಿಂತ ಅತ್ಯಂತ ಕಡಿಮೆ ದರವಾಗಿತ್ತು. ಪ್ರೀಮಿಯರ್‌ನಲ್ಲಿ ತಯಾರಾದ ಅನೇಕ ಚಿತ್ರಗಳು ಶತದಿನೋತ್ಸವ ಕಂಡಿವೆ. ವರ್ಷಕ್ಕೆ ಅಂಕೆ ಕಡಿಮೆ ಇಲ್ಲದಂತೆ ಚಿತ್ರ ತಯಾರಾಗುತ್ತಿದ್ದ ಪ್ರೀಮಿಯರ್ ಭಾರತದ ಚಲನಚಿತ್ರ ಇತಿಹಾಸದಲ್ಲೇ ಒಂದು ವಿಕ್ರಮ.

೧೯೭೦ನೇ ಡಿಸೆಂಬರ್ ತಿಂಗಳಲ್ಲಿ ಪ್ರೀಮಿಯರ್‌ನ ಆರನೇ ಫ್ಲೋರ್ ಅನ್ನು ಅಂದಿನ ವಾರ್ತಾಮಂತ್ರಿ ಎಂ.ರಾಜಶೇಖರ ಮೂರ್ತಿಯವರು ಉದ್ಘಾಟಿಸಿದರು. ಈ ಫ್ಲೋರ್‌ಗೆ ಒಂದೂವರೆ ಲಕ್ಷ ರೂಪಾಯಿನಷ್ಟು ಖರ್ಚಾಗಿತ್ತು. ಆ ವೇಳೆಗೆ ಚಿತ್ರಗಳ ಸಹಾಯಧನ ಕೂಡಾ ಒಂದು ಲಕ್ಷ ಐವತ್ತು ಸಾವಿರ ರೂಪಾಯಿಗಳಿಗೆ ಏರಿತ್ತು.

ತಯಾರಾದ ಚಿತ್ರಗಳಿಗೆ ಬಿಡುಗಡೆಯ ಸಮಸ್ಯೆ ತಲೆದೋರಿತು. ಹೀಗಾಗಿ ಚಿತ್ರ ತಯಾರಿಕೆ ಕೊಂಚ ಕುಂಠಿತವೂ ಆಯಿತು. ಚಿತ್ರಮಂದಿರಗಳು ಕನ್ನಡ ಚಿತ್ರಗಳ ಬಿಡುಗಡೆ ವಿಚಾರದಲ್ಲಿ ಮಲತಾಯಿ ಧೋರಣೆ ತಾಳಿದ್ದವು. ಬಿಡುಗಡೆಗೆ ಅವಕಾಶ ಇಲ್ಲದೆ ಚಿತ್ರಗಳು ತೆರೆಕಾಣುತ್ತಿರಲಿಲ್ಲವಾದ್ದರಿಂದ ಹೊಸ ಚಿತ್ರಗಳು ಬರುವುದೂ ಸಾಧ್ಯವಿರಲಿಲ್ಲ. ಇಂಥ ಹೊತ್ತಿನಲ್ಲಿ ಚಿತ್ರಗಳ ಗುಣಮಟ್ಟದ ಬಗ್ಗೆ ಮಾತನಾಡಿ, ಉತ್ತಮ ಗುಣಮಟ್ಟವಿದ್ದರೆ ಮಾತ್ರ ಸಹಾಯಧನ ಎಂದು ಒಂದು ಕಡೆ, ಕನ್ನಡ ಚಿತ್ರಗಳನ್ನು ಕಡ್ಡಾಯವಾಗಿ ಪ್ರದರ್ಶಿಸದಿದ್ದರೆ ಕಾನೂನು ಕ್ರಮ ಜರುಗಿಸುವುದಾಗಿ ಒಂದು ಕಡೆ ಸರ್ಕಾರ ಬೆದರಿಕೆ ಹಾಕಿತು. ಚಿತ್ರಮಂದಿರಗಳನ್ನು ಬಗ್ಗಿಸುವುದು ಅಂದು-ಇಂದೂ ಸುಲಭದ ಮಾತೇನಲ್ಲ. ಮಂತ್ರಿಗಳು ಎತ್ತಿದ ಗುಣಮಟ್ಟದ ಪ್ರಶ್ನೆ ಚಿತ್ರೋದ್ಯಮದ ಪರಿಶೀಲನೆಗೆ, ವಿವಾದಕ್ಕೆ ಕಾರಣವಾಯಿತು. ಇಂದಿಗೂ ಇಂಥ ವಿವಾದಗಳು ಇದ್ದೇ ಇವೆ.

ಆಯಿತು. ಅನಂತರ ೨೨೫ ಅಡಿ ಉದ್ದ, ೧೨೦ ಅಡಿ ಅಗಲ ಇರುವ ಮೂರನೆಯ ಫ್ಲೋರ್ ಸಹ ಸಿದ್ಧ ಮಾಡಿದರು. ಈ ಫ್ಲೋರ್‌ನಲ್ಲಿ ವರ್ಣಚಿತ್ರಗಳಿಗೆ ಬೇಕಾದ ಎಲ್ಲ ಸೌಲಭ್ಯವನ್ನೂ ಒದಗಿಸಲಾಗಿತ್ತು.

೧೯೬೭ರ ಮೊದಲ ಮೂರು ತಿಂಗಳಲ್ಲೇ ನಾಲ್ಕು ಕನ್ನಡ ಚಿತ್ರಗಳು ತಯಾರಾದವು. ಐದನೆಯ ಚಿತ್ರವೂ ಸಿದ್ಧವಾಗಿತ್ತು. ಮತ್ತೆರಡು ಚಿತ್ರಗಳು ತಯಾರಿಕಾ ಹಂತದಲ್ಲಿದ್ದವು. ಇವಲ್ಲ ನೋಡಿದಾಗ ಬಸವರಾಜಯ್ಯನವರ ವರ್ಷಕ್ಕೆ ಐವತ್ತು ಚಿತ್ರಗಳ ತಯಾರಿಕೆಯಾಗಬೇಕೆಂಬ ಅಪೇಕ್ಷೆ ಕೇವಲ ಕಲ್ಪನೆ ಎಂದು ತಳ್ಳಿಹಾಕುವಂತಿರಲಿಲ್ಲ.

ಪ್ರೀಮಿಯರ್‌ನ ಮೂರನೆಯ ಫ್ಲೋರ್‌ನ ಸಿದ್ಧತೆಯೂ ಆಯಿತು. ಶ್ರೀಮಂತ ಸೆಟ್‌ಗಳಿಗಾಗಿ ಸರಂಜಾಮುಗಳನ್ನು ಖರೀದಿಸಿದರು. ಅತ್ಯಾಧುನಿಕ ಸಂಸ್ಕರಣ (ಪ್ರೋಸೆಸಿಂಗ್) ಸೌಲಭ್ಯವಿತ್ತು. ಪ್ರದರ್ಶನ (ಪ್ರೊಜೆಕ್ಷನ್)ಕ್ಕೂ ಅವಕಾಶ ಮಾಡಲಾಗಿತ್ತು. ಇದರಿಂದಾಗಿ ಅಲ್ಲಿ ಚಿತ್ರಿಸಿದ ಭಾಗವನ್ನು, ಅಲ್ಲೇ ಸಂಸ್ಕರಿಸಿ, ರಷಸ್ ನೋಡುವುದು ಸಾಧ್ಯವಾಯಿತು. ಒಮ್ಮೆ ಸ್ಟುಡಿಯೋ ಪ್ರವೇಶಿಸಿದ ತಂಡ ಯಾವ ಕಾರಣಕ್ಕೂ ಹೊರಗೆ ಹೋಗಬೇಕಾಗಿರಲಿಲ್ಲ. 'ಅಪರಾಜಿತೆ', 'ನಾಗಶ್ರೀ', 'ಧನಪಿಶಾಚಿ', 'ಚಕ್ರತೀರ್ಥ' ಚಿತ್ರಗಳು ಮತ್ತು ಕೆಲವು ತಮಿಳು ಚಿತ್ರಗಳೂ ತಯಾರಾದವು.

ಆ ಅವಧಿಯಲ್ಲೇ ಹರಿಣಿ, ಹುಣಸೂರು, ಚದುರಂಗ ಅಲ್ಲದೆ ಬಾವಾ ಮೂವಿಟೋನ್, ಶ್ರೀಕಾಂತ್ ಅಂಡ್ ಶ್ರೀಕಾಂತ್ ಮೊದಲಾದವರ ಚಿತ್ರಗಳೂ ಪ್ರಾರಂಭವಾಗಿದವು. ವರ್ಷಕ್ಕೆ ಮೂವತ್ತರಿಂದ ನಲವತ್ತು ಚಿತ್ರಗಳವರೆಗೆ ತಯಾರಾಗತೊಡಗಿದವು. ಕ್ರಮೇಣ ಪ್ರೀಮಿಯರ್‌ನಲ್ಲಿ ನಾಲ್ಕು, ಐದನೆಯ ಫ್ಲೋರ್‌ಗಳಾದವು. ಆರನೆಯ ದೊಡ್ಡ ಫ್ಲೋರ್ (೬೨೦ ಅಡಿ x ೧೧೦ ಅಡಿ) ಸಹ ಸಿದ್ಧವಾಯಿತು. ನಾಲ್ಕು ಜೊತೆ ಧ್ವನಿಮುದ್ರಣ ಯಂತ್ರಗಳ ಜೊತೆಗೆ ಮತ್ತೆರಡು ಸೇರ್ಪಡೆಯಾದವು. ಆದಾಗಲೇ ಇದ್ದ ಮಿಚೆಲ್, ಏರಿಫ್ಲೆಕ್ಸ್ ಕ್ಯಾಮರಾಗಳ ಸಂಖ್ಯೆ ದ್ವಿಗುಣಗೊಂಡಿತು. ೧೯೭೦ರ ಹೊತ್ತಿಗೆ ಇನ್ನೂರು ಕಿಲೋವ್ಯಾಟ್ ವಿದ್ಯುಚ್ಛಕ್ತಿ ಇತ್ತು. ನಾಲ್ಕು ಸಂಕಲನ ಕೊಠಡಿಗಳ ಜೊತೆಗೆ ಮತ್ತೊಂದೂ ಸೇರಿತು. ಹನ್ನೆರಡು ಮೇಕಪ್ ರೂಮ್‌ಗಳಾದವು. ಅವುಗಳಲ್ಲಿ ಒಂದೆರಡು ವಿಶೇಷ ರೀತಿಯಲ್ಲಿ ಸಜ್ಜಾದ ಕೋಣೆಗಳು.

ಇವಲ್ಲ ಮುಂಬೈ ನಿರ್ಮಾಪಕರನ್ನೂ ಸೆಳೆದವು. ಮೈಸೂರಿನ ಪ್ರಕೃತಿ ಸೌಂದರ್ಯ, ಪ್ರೀಮಿಯರ್ ಕಾರ್ಮಿಕರ ಸಹಕಾರ, ಸ್ಟುಡಿಯೋ ನಗರಕ್ಕೆ ತುಂಬಾ ಹತ್ತಿರವಲ್ಲಿದೆ ಎಂಬುದು ವಿಶೇಷ ಆಕರ್ಷಣೆಯಾಗಿತ್ತು. ಸಾಮಾನ್ಯವಾಗಿ ಒಂದು ಕಾಲ್‌ಶೀಟ್ ಎಂದರೆ ಎಂಟು ಗಂಟೆ ಅವಧಿ, ಒಂದು ಸ್ಟುಡಿಯೋ ಕಾಲ್‌ಶೀಟ್‌ಗೆ ೨೫೦ ರೂಪಾಯಿಗಳು. ಸೌಲಭ್ಯ ಹೆಚ್ಚಿಸಿದ ಕಾರಣಕ್ಕೆ ಅದು ೩೦೦ ರೂಪಾಯಿ ಆಯಿತು. ಇದು ಇಡೀ ಭಾರತದ

ಪ್ರೀಮಿಯರ್ ಬಗ್ಗೆ ಎಲ್ಲ ಭಾಷೆಯವರೂ ಆದರ, ಮೆಚ್ಚುಗೆ ತೋರುತ್ತಿದ್ದರು. ೧೯೭೧ರಲ್ಲಿ ಪೇಕೇಟಿ ಶಿವರಾಂ ನಿರ್ದೇಶನದ 'ಜಯ ವಿಜಯ' ಚಿತ್ರೀಕರಣದ ವೇಳೆ ಪ್ರೀಮಿಯರ್‌ಗೆ ಭೇಟಿ ಇತ್ತ ಎಸ್.ಟಿ.ರಾಮರಾಯರು ಸೌಲಭ್ಯ, ವಾತಾವರಣ ಮೆಚ್ಚಿ ಇಲ್ಲಿಯೇ ಚಿತ್ರೀಕರಣ ಮಾಡುವ ಅಪೇಕ್ಷೆ ವ್ಯಕ್ತಪಡಿಸಿದ್ದರು.

೧೯೭೨ರಲ್ಲಿ ಮುಂಬೈನ ನಿರ್ಮಾಪಕ, ನಿರ್ದೇಶಕ ಮೋಹನ್‌ಕುಮಾರ್ ಅವರು ಮೈಸೂರಿನಲ್ಲಿ ಸ್ವಂತ ಸ್ಟುಡಿಯೋ ನಿರ್ಮಿಸುವ ಉದ್ದೇಶದಿಂದಲೇ ಬಂದರು. ಪ್ರಾರಂಭಕ್ಕೆ ಪ್ರೀಮಿಯರ್‌ನ ಎರಡು ಹೊಸ ಫ್ಲೋರ್‌ಗಳನ್ನು ಹತ್ತು ವರ್ಷಗಳಿಗೆ ಗುತ್ತಿಗೆಗೆ ಪಡೆದರು. ಆ ಭಾಗಕ್ಕೆ 'ಎಂ.ಕೆ.ಸ್ಟುಡಿಯೋಸ್' ಎಂಬ ಹೆಸರಿಟ್ಟುಕೊಂಡರು. ವರ್ಷಕ್ಕೆರಡಾದರೂ ಹಿಂದಿ ಚಿತ್ರ ನಿರ್ಮಿಸುವ ಯೋಜನೆ ಇತ್ತು. ಅವರದೇ ನಿರ್ಮಾಣದ 'ಮೋಮ್ ಕಿ ಗುಡಿಯಾ' ಮತ್ತು 'ಅನ್‌ಪಡ್' ಚಿತ್ರಗಳ ಕೆಲಸ ನಡೆಯಿತು. ೧೯೭೩ರಲ್ಲಿ ವಿದ್ಯುತ್‌ಗೆ ವ್ಯತ್ಯಯ ಬಂತು. ಈ ವಿದ್ಯುತ್ ಕೊರತೆಯಿಂದಾಗಿ ಚಿತ್ರಣ ಕಾರ್ಯಗಳು ಕೊಂಚ ಮುಗ್ಗರಿಸಿದವು. ಆದರೆ ಪ್ರೀಮಿಯರ್‌ನಲ್ಲಿ ತಮಿಳು ಚಿತ್ರ ತಯಾರಿಕೆ ನಡೆದಿತ್ತು. ಕನ್ನಡ ಚಿತ್ರ ತಯಾರಿಸಿ ಕೈಸುಟ್ಟುಕೊಂಡು ಬೇಸತ್ತು ಹೋಗಿದ್ದ ಪಂತುಲು ಅವರೂ ಸಹ ತಮಿಳು ಅವತರಣಿಕೆಯನ್ನೂ ಕನ್ನಡದ ಜೊತೆಗೇ ಚಿತ್ರೀಕರಿಸುತ್ತಿದ್ದರು. 'ಗಂಗೆ-ಗೌರಿ' ತಮಿಳು ಅವತರಣಿಕೆ ಯಶ ತಂದಿತು. ಇದು ಅವರ ಅಂಥ ಪ್ರಯತ್ನ ಮತ್ತಷ್ಟು ಹೆಚ್ಚಿಸಲು ಕಾರಣವಾಯಿತು. ಇದೇ ವೇಳೆಗೆ ನೃತ್ಯ ಕಾರ್ಯಕ್ರಮವೊಂದರ ಸಂಬಂಧದಲ್ಲಿ ತಾರ ಜಯಲಲಿತಾ ಹಾಗೂ ರಾಜಕಾರಣಿಯೊಬ್ಬರ ನಡುವೆ ಸಂಘರ್ಷವೇರ್ಪಟ್ಟು ಭಾರೀ ಸುದ್ದಿಯಾಯಿತು. ಈ ಹಿನ್ನೆಲೆಯಲ್ಲಿ ಮದರಾಸಿನ ಪತ್ರಕರ್ತರ ತಂಡ ಮೈಸೂರಿಗೆ ಬಂದಿತು. ಆಗ ಪ್ರೀಮಿಯರ್‌ಗೂ ಭೇಟಿ ಕೊಟ್ಟಿತು. ಪ್ರೀಮಿಯರ್‌ನ ಸೌಲಭ್ಯಗಳ ಸಮೀಕ್ಷೆ ನಡೆಸಿತು. ಆ ಪತ್ರಕರ್ತರ ಪರಿಚಯವಿದ್ದ ಪಂತುಲು ಅವರೇ ಆಹ್ವಾನಿಸಿ ಚಹಾ ಕೂಟ ಏರ್ಪಡಿಸಿದರು. ಇದರಿಂದಾಗಿ ಪ್ರೀಮಿಯರ್‌ಗೆ ಹೆಚ್ಚು ಪ್ರಚಾರವೂ ಸಿಕ್ಕಿತು. ಅಧಿಕ ಸಂಖ್ಯೆಯಲ್ಲಿ ತಮಿಳು ಚಿತ್ರಗಳ ತಯಾರಿಕೆಯು ಪ್ರಾರಂಭವಾಗಿ ಪ್ರೀಮಿಯರ್ ಲಾಭದ ಕಡೆ ಹೆಜ್ಜೆ ಹಾಕಿತು. ೧೯೭೪ರ ಮೇ ತಿಂಗಳೊಂದರಲ್ಲೇ ಸ್ಟುಡಿಯೋದಲ್ಲಿ ೧೨೦ ಕಾಲ್‌ಶೀಟ್ ಕೆಲಸ ಆಗಿತ್ತು. ಅದೊಂದು ದಾಖಲೆ. ಮದರಾಸಿನ ನಿರ್ಮಾಪಕರು, ಸ್ಟುಡಿಯೋ ವಲಯಗಳು ಸಹ ಈ ದಾಖಲೆ ಕಂಡು ಬೆರಗಾದವು.

ಆದರೆ, ಇದೇ ಹೊತ್ತಿಗೆ ದಿಢೀರನೆ ಕಾರ್ಮಿಕರ ಸಮಸ್ಯೆಗಳು ತಲೆದೋರಿದವು. ೧೯೭೪ರ ಮೇ ೧೫ರ ಶನಿವಾರ ರಾತ್ರಿ ೨ ಗಂಟೆಯಿಂದಲೇ ಪ್ರೀಮಿಯರ್ ನೌಕರರು ಮುಷ್ಕರ ಹೂಡಿದರು. 'ಅಣ್ಣ-ಅತ್ತಿಗೆ', 'ಬೆಂಗಳೂರು ಭೂತ' ಕನ್ನಡ ಚಿತ್ರಗಳು ಮತ್ತು ಎರಡು ಮಲೆಯಾಳಂ ಚಿತ್ರಗಳ ಚಿತ್ರೀಕರಣ ಥಟ್ಟನೆ ನಿಂತು ಹೋಯಿತು. ಹಂಗಾಮಿ ಲೈಟ್ ಬಾಯ್‌ಗಳು, ತಾಂತ್ರಿಕವರ್ಗದವರು ತಮ್ಮನ್ನು ಖಾಯಂ ಕೆಲಸಗಾರರಾಗಿ ತೆಗೆದುಕೊಳ್ಳಬೇಕೆಂಬ ಬೇಡಿಕೆ ಮುಂದಿಟ್ಟರು. ಈ ಕಾರಣಕ್ಕಾಗಿ ಮುಷ್ಕರ ಹೂಡಿದ ವಿಷಯವನ್ನು ದಕ್ಷಿಣ ಭಾರತ ಸ್ಟುಡಿಯೋ ಕೆಲಸಗಾರರು ಮತ್ತು ತಾಂತ್ರಿಕ ವರ್ಗದ ಸಂಘಕ್ಕೂ ತಿಳಿಸಲಾಗಿತ್ತು. ಈ ಸಂಬಂಧವಾಗಿ ನಡೆದ ಹಲವು ಹಂತದ ಮಾತುಕತೆಗಳು ವಿಫಲವಾದವು. ಆದರೆ ಕೆಲಸಗಾರರ ಒಗ್ಗಟ್ಟನ್ನು ಒಡೆಯುವಲ್ಲಿ ವ್ಯವಸ್ಥಾಪಕರು ಸಫಲರಾಗಿದ್ದರು. ಹಂತ ಹಂತವಾಗಿ ಕೆಲಸವೂ ಪ್ರಾರಂಭವಾಗಿಬಿಟ್ಟಿತು. ಹೊರಗೆ ಕಾರ್ಮಿಕರು ಧರಣಿ ಕುಳಿತಿರುವಾಗಲೇ ಒಳಗೆ ತೆಲುಗು, ಮಲಯಾಳ ಚಿತ್ರಗಳು ಚಿತ್ರಣಗೊಳ್ಳುತ್ತಲೇ ಇದ್ದವು. ಆದರೂ ಇಂಥದೊಂದು ನೆಪವನ್ನೇ ಕಾದಿದ್ದವರಂತೆ ಹಲವರು ಮದರಾಸಿಗೇ ವಾಪಸ್ಸಾದರು. ಅವುಗಳಲ್ಲಿ ರಾಜಕುಮಾರ್ ಅಭಿನಯದ ಶ್ರೀಕಾಂತ್ ಅಂಡ್ ಶ್ರೀಕಾಂತ್ ಸಂಸ್ಥೆಯ ತಯಾರಿಕೆ 'ಬಹದ್ದೂರ್ ಗಂಡು' ಚಿತ್ರ ಮದರಾಸಿನ ಎ.ವಿ.ಎಂ.ನಲ್ಲೂ, 'ದಾರಿ ತಪ್ಪಿದ ಮಗ' ವಾಸು ಸ್ಟುಡಿಯೋದಲ್ಲೂ ಚಿತ್ರೀಕರಣ ಮುಂದುವರಿಸಿದವು. 'ಹುಲಿಯ ಹಾಲಿನ ಮೇವು' ಚಿತ್ರವೂ ಮೈಸೂರಿಗೇ ಬರುವ ಸಂಭವ ಇತ್ತು. ಒಟ್ಟಾರೆ ಹೇಳುವುದಾದರೆ ಕನ್ನಡ ಚಿತ್ರರಂಗ ಮತ್ತೆ ಮದರಾಸಿಗೇ ಹೋಗಿಬಿಡುವ ಎಲ್ಲ ಲಕ್ಷಣಗಳೂ ಕಾಣತೊಡಗಿದವು.

ಹಾಗೆ ಎಲ್ಲರೂ ವಲಸ ಹೋಗದಿರಲಿ, ಕೆಲವು ನಿರ್ಮಾಪಕರಾದರೂ ಇಲ್ಲೇ ಉಳಿಯಲಿ ಎಂಬ ಉದ್ದೇಶದಿಂದ ಬಸವರಾಜಯ್ಯನವರು ಮತ್ತಷ್ಟು ಫ್ಲೋರ್‌ಗಳನ್ನು ಹೆಚ್ಚಿಸುವ ಪ್ರಯತ್ನ ಮಾಡಿದರು. ಅದಕ್ಕಾಗಿ ನಗರಾಭಿವೃದ್ಧಿ ಸಂಸ್ಥೆಯಿಂದ ಮತ್ತಷ್ಟು ಸ್ಥಳವನ್ನು ಪಡೆದುಕೊಂಡರು. ವಿಶ್ರಾಂತಿ ಕೊಠಡಿಗಳು, ಹೊರಾಂಗಣ ಘಟಕ ಎಲ್ಲವೂ ಸರಹಿಗೆ ಸಿದ್ಧವಿದ್ದವು. ಪ್ರೀಮಿಯರ್‌ನ ಹೊರಾಂಗಣ ಘಟಕದಲ್ಲಿ ಭಾರತದ ಯಾವ ಹೊರಾಂಗಣ ಘಟಕವೂ ಹೊಂದಿರದ 'ಆಲ್ಬರ್‌ನೇಟರ್' ಅಳವಡಿಸಲಾದ ಕ್ಯಾಮರಾ ಇತ್ತು. ಇದು ಹೊರದೇಶದ ಚಿತ್ರ ತಂಡಗಳನ್ನು ತನ್ನತ್ತ ಆಕರ್ಷಿಸುತ್ತಿದ್ದ ಸಾಧನ.

ಬಸವರಾಜಯ್ಯನವರು ನಿರ್ಮಾಪಕರಿಗೆ ಸಾಲ ಸೌಲಭ್ಯ ಒದಗಿಸುತ್ತಿದ್ದರು. ಚಿತ್ರೀಕರಣಕ್ಕೆ ಅನುವು ಮಾಡಿಕೊಟ್ಟು, ಬಾಡಿಗೆ ಬದಲಿಗೆ ಸರ್ಕಾರದ ಸಹಾಯಧನವನ್ನು ಆಧಾರ ಮಾಡಿಕೊಳ್ಳುತ್ತಿದ್ದರು. ಇದರ ಹಿಂದೆ ಸ್ವಾರ್ಥ, ಅರ್ಥ, ಪರಾರ್ಥ ಎಲ್ಲವೂ ಇತ್ತು. ಹೀಗಾಗಿ ಸಹಜವಾಗಿಯೇ ಬಸವರಾಜಯ್ಯನವರ ಪರ-ವಿರೋಧ ಬಣಗಳೂ ಇದ್ದವು.

'ಮಂತ್ರವೃಕ್ಷ' ಚಿತ್ರದ ನಿರ್ಮಾಪಕ ಜಿ.ವಿ.ಅಯ್ಯರ್ ಅವರೊಂದಿಗೆ ಇಂಥ ಕಾರಣಕ್ಕೇ ಜಗಳ ಮಾಡಿಕೊಂಡರು. ಬಸವರಾಜಯ್ಯ ಉದ್ಯಮಕ್ಕೆ ಒಳಿತು ಮಾಡುವುದರ ಜೊತೆಗೆ ಕೆಲವರಿಗೆ 'ದರ್ಪ' ಅನ್ನಿಸುವಂಥ ನಿಷ್ಠುರ ಸ್ವಭಾವದವರೂ ಆಗಿದ್ದರು. ತೀರಾ ನೇರವಾದ ಮಾತುಗಳು ಮುಲಾಜಿಲ್ಲದ ವ್ಯವಹಾರಗಳ ಕಾರಣ ಅನೇಕರು ಅವರ ಬಗ್ಗೆ ಅಸಮಾಧಾನಗೊಳ್ಳುತ್ತಿದ್ದರು. ಅಷ್ಟೇ ನಿಷ್ಠುರ, ನೇರ ಬರಹದ ಪತ್ರಕರ್ತರೊಂದಿಗೂ ಬಸವರಾಜಯ್ಯನವರು ವಿಚಿತ್ರ ಮೀರಿ ವರ್ತಿಸಿದರು. ಒಂದು ಅರ್ಥದಲ್ಲಿ ಅವರದು ಏಕ ಚಕ್ರಾಧಿಪತ್ಯ, ಸರ್ವಾಧಿಕಾರಿ ಮನೋಭಾವವಾಯಿತು ಎಂದು ಭಾವಿಸಿದವರೂ ಇದ್ದಾರೆ.

ಸುಮಾರು ೧೯೬೫-೬೬ರಲ್ಲಿ ನಡೆದ ಘಟನೆಯೊಂದನ್ನು ಇಲ್ಲಿ ನೆನೆಯಬಹುದಾಗಿದೆ. ಪ್ರೀಮಿಯರ್‌ನ ಗೇಟ್‌ನಿಂದ ಪ್ರವೇಶಿಸುವ ಕಾರುಗಳು ಸ್ಟುಡಿಯೋದ ಮುಖ್ಯ ಕಚೇರಿಯ ಕಟ್ಟಡವನ್ನು ದಾಟಿ ಬರಬೇಕಿತ್ತು. ಇದು ಗದ್ದಲವಾಗುತ್ತದೆಂದೋ ಮತ್ತಾವ ಒಳಗಿನ ಕಾರಣವೋ ಬಸವರಾಜಯ್ಯನವರು ಕಾರುಗಳನ್ನು ಮುಂಭಾಗದಲ್ಲೇ ಪಾರ್ಕ್ ಮಾಡಿ, ಎಲ್ಲರೂ ನಡೆದೇ ಫ್ಲೋರ್‌ಗಳಿಗೆ ಹೋಗಬೇಕೆಂದು ತಾಕೀತು ಮಾಡಿದರು. ಅನೇಕರು ಅದರಂತೆ ನಡೆದುಕೊಂಡರು. ರಾಜಕುಮಾರ್ ಅವರ ಕಾರು ಮಾತ್ರ ಫ್ಲೋರ್‌ವರೆಗೆ ಹೋಗುತ್ತಿತ್ತು. ಇದಕ್ಕೂ ತಕರಾರೆತ್ತಿದ ಬಸವರಾಜಯ್ಯನವರು ರಾಜ್ ಅವರನ್ನು ನೋಡಲು ಬರುವ ಅಭಿಮಾನಿಗಳನ್ನೂ ತಡೆದರು. ಈ ಧೋರಣೆ ರಾಜಕುಮಾರ್ ಅವರಿಗೆ ಸರಿಬರಲಿಲ್ಲ. ಅವರು ಪ್ರೀಮಿಯರ್‌ಗೇ ಬರುವುದಿಲ್ಲ ಎಂದು ಹಟ ಮಾಡಿದರು. ಪ್ರೀಮಿಯರ್‌ನ ೨-೩ ಫ್ಲೋರ್‌ಗಳನ್ನು ಉದ್ಘಾಟಿಸಿದ್ದ ರಾಜಕುಮಾರ್ ಅವರಿಗೂ ಬಸವರಾಜಯ್ಯನವರಿಗೂ ತುಂಬ ಗೆಳೆತನವಿತ್ತು. ಇಂಥ ಕ್ಷುಲ್ಲಕ ಕಾರಣಗಳಿಗಾಗಿ ಇವರ ಸ್ನೇಹ ಬಿರುಕುಬಿಟ್ಟಿತು. ರಾಜಕುಮಾರ್ ಅಭಿನಯದ ಚಿತ್ರಗಳು ಬೇರೆ ಕಡೆಯೇ ಚಿತ್ರೀಕರಣಗೊಂಡವು. ಹೊರಾಂಗಣ ಚಿತ್ರೀಕರಣದ ಪರಿಪಾಠ ತನಗೇ ಅರಿವಿಲ್ಲದಂತೆ ಪ್ರಾರಂಭವಾಗಿಬಿಟ್ಟಿತು. ಭಾರತ್ ಎಂಟರ್‌ಪ್ರೈಸಸ್ ಸಂಸ್ಥೆಯ 'ಉಯ್ಯಾಲೆ' ಚಿತ್ರ ಈ ಕಾರಣದಿಂದಲೇ ಸಂಪೂರ್ಣವಾಗಿ ಮೈಸೂರಿನ ಹೊರಾಂಗಣದಲ್ಲೇ ಚಿತ್ರಿತವಾಯಿತು. ಕೆಲವು ಭಾಗ ಬೆಂಗಳೂರಿನ ಮನೆಗಳಲ್ಲಿ ಚಿತ್ರಿಸಿದರು. ಅದೇ ಸಂಸ್ಥೆಯ 'ದೇವರ ಮಕ್ಕಳು' ಚಿತ್ರದ ಕೆಲವು ಭಾಗ ಪ್ರೀಮಿಯರ್‌ನಲ್ಲಾಗಿತ್ತು. ರಾಜಕುಮಾರ್ ಬರುವುದಿಲ್ಲ ಎಂದಿದ್ದರಿಂದ ಅವರ ಅಭಿನಯದ ಸನ್ನಿವೇಶಗಳನ್ನೆಲ್ಲ ಬೆಂಗಳೂರಿನಲ್ಲಿ ಚಿತ್ರಿಸಿದರು. ಹಲವು ತಿಂಗಳುಗಳ ಕಾಲ ಈ ಜೂಟಾಟ ನಡೆದೇ ಇತ್ತು. ಮಧ್ಯವರ್ತಿಗಳು ಪ್ರವೇಶಿಸಿ ಸಂಧಾನ ಮಾಡಿದ್ದು, ಸ್ವತಃ ಬಸವರಾಜಯ್ಯನವರೇ ಬಹಿರಂಗವಾಗಿ ರಾಜಕುಮಾರ್ ಪ್ರೀಮಿಯರ್‌ಗೆ ಬರಬೇಕೆಂದು ಆಹ್ವಾನಿಸಿದ್ದು, ಬಹುತೇಕ ರಾಜ್ ಅಭಿನಯದ ಚಿತ್ರಗಳೇ ಇದ್ದ ಆ ದಿನಗಳಲ್ಲಿ ಕನ್ನಡ ಚಿತ್ರರಂಗ ಕರ್ನಾಟಕದಲ್ಲಿ ನೆಲೆಯೂರಬೇಕಾದರೆ ರಾಜ್ ಅವರು ಇಲ್ಲೇ ಚಿತ್ರೀಕರಣ ಮಾಡಬೇಕೆಂಬ ಒತ್ತಾಯ ಇತ್ಯಾದಿಗಳ ಕಾರಣ ರಾಜಕುಮಾರ್ ಅವರು ಕನ್ನಡ ಭಾಷೆ, ಕನ್ನಡ ನಾಡಿನ ಸಮೃದ್ಧಿಗಾಗಿ ಮತ್ತೆ ಪ್ರೀಮಿಯರ್‌ಗೆ ಬರುತ್ತೇನೆ ಎಂದರು, ಬಂದರು. ಇಂಥ ಹತ್ತಾರು ಪ್ರಸಂಗಗಳನ್ನು ಪ್ರೀಮಿಯರ್ ತನ್ನ ಉಡಿಯಲ್ಲಿ ಕಟ್ಟಿಕೊಂಡಿದೆ.

ಪ್ರಾರಂಭದ ದಿನಗಳಲ್ಲಿ ಮದರಾಸಿನಲ್ಲಿ ಸಾಮಾನ್ಯವಾಗಿ ಮೊದಲೇ ಹಾಕಿದ್ದ ಸೆಟ್‌ಗಳನ್ನೇ ಕನ್ನಡ ಚಿತ್ರಗಳಿಗೆ ಬಳಸಿಕೊಳ್ಳುತ್ತಿದ್ದರು. ಪ್ರೀಮಿಯರ್‌ನಲ್ಲಿ ಹಾಕುತ್ತಿದ್ದ ಸೆಟ್‌ಗಳನ್ನೂ ಹಾಗೆ ಬಳಸಿಕೊಳ್ಳುವುದಕ್ಕೆ ನಿರ್ಮಾಪಕರು ಒಪ್ಪಿಕೊಳ್ಳುತ್ತಿರಲಿಲ್ಲ. ಎರಡು ಕನ್ನಡ ಚಿತ್ರಗಳಿಗೆ ಒಂದೇ ಸೆಟ್ ಇರುವುದು ಅವರಿಗೆ ಸರಿ ಕಾಣಲಿಲ್ಲ. ಮತ್ತು ತಮ್ಮ ಚಿತ್ರದ ಏಕೈಕ ವೈಶಿಷ್ಟ್ಯವಾಗಬೇಕೆಂಬ ಅಪೇಕ್ಷೆಯೂ ಸಹಜವಾಗಿಯೇ ಇರುತ್ತಿತ್ತು. ಆದರೆ ಅಲ್ಪ ಸ್ವಲ್ಪ ಬದಲಾಯಿಸಿ ಬಳಸಿಕೊಂಡರೆ ಪುಟ್ಟ ಬಂಡವಾಳದ ನಿರ್ಮಾಪಕ ಬದುಕಿಕೊಂಡಾನೆಂಬುದು ಬಸವರಾಜಯ್ಯನವರ ವಾದ. ಕಡೆಗೆ ಆ ಸೆಟ್‌ಗಳನ್ನು ತಾವೇ ಕೊಂಡುಕೊಂಡು, ಇತರರಿಗೆ ಕೊಡತೊಡಗಿದರು. ಇಂಥ ಒಂದು ಸಂದರ್ಭ ಎದುರಾದಾಗ ಪುಟ್ಟಣ್ಣ ಕಣಗಾಲರು ತಾವು ಹಾಕಿಸಿದ್ದ ಸೆಟ್ ಅನ್ನು ಮತ್ತಾರೂ ಬಳಸದಿರಲಿ ಎಂದು ತಾವೇ ಹಾರೆ, ಗುದ್ದಲಿ ಕೊಂಡೊಯ್ದು ಒಡೆದು ಹಾಕಿದ ಪ್ರಸಂಗವೂ ಉಂಟು.

ಪದೇ ಪದೇ ಎದುರಾಗುತ್ತಿದ್ದ ಕಾರ್ಮಿಕರ ಸಮಸ್ಯೆಗೆ ಬಸವರಾಜಯ್ಯನವರು ಕಂಡುಕೊಂಡ ಪರಿಹಾರ ಹೀಗಿದೆ : ಬೆರಳೆಣಿಕೆಯಷ್ಟು ಮುಖ್ಯ ತಂತ್ರಜ್ಞರನ್ನು ಬಿಟ್ಟರೆ ಬೇರೆ ಯಾರೂ ಕೆಲಸಗಾರರು ಸ್ಟುಡಿಯೋದಲ್ಲಿ ಇರುವುದಿಲ್ಲ. ಚಿತ್ರೀಕರಣ ಮಾಡುವವರು ತಾವೇ ತಮಗೆ ಬೇಕಾದ ಕೆಲಸಗಾರರನ್ನು ಗೊತ್ತು ಮಾಡಿಕೊಳ್ಳಬಹುದು. ಅಷ್ಟು ಕಾಲ ಅದೇ ವೃತ್ತಿಯಲ್ಲಿದ್ದ ಕೆಲಸಗಾರರು ಹೋಗುವುದಾದರೂ ಎಲ್ಲಿ ? ಅಲ್ಲೇ ಇದ್ದರು. ಯಾರೇ ನಿರ್ಮಾಪಕ ಬಂದಾಗಲೂ ಆತನ ಆಯ್ಕೆಯಂತೆ ಕೆಲಸಕ್ಕೆ ಬರುತ್ತಿದ್ದರು. ಇವೆಲ್ಲ ಪರ್ಯಾಯ ವ್ಯವಸ್ಥೆಗಳೂ ಅಂದುಕೊಂಡಷ್ಟು ಸುಲಭವಂತೂ ಆಗಿರಲಿಲ್ಲ. ಬಸವರಾಜಯ್ಯನವರ ಉತ್ಸಾಹವೂ ಕರಗತೊಡಗಿತ್ತು. ಬೆಂಗಳೂರಿನಲ್ಲೂ ಸಂಸ್ಕರಣ, ಡಬ್ಬಿಂಗ್, ಸ್ಟುಡಿಯೋ ಇತ್ಯಾದಿ ಪ್ರಾರಂಭವಾಯಿತು. ಕಲಾವಿದರಲ್ಲಿ ಮದರಾಸಿನಿಂದ ಬರಬೇಕಿತ್ತು, ಬಂದು ಹೋಗಲು ಸರಿಯಾದ ಸೌಲಭ್ಯ ಇರಲಿಲ್ಲವಾದ್ದರಿಂದ, ಬೆಂಗಳೂರಿಗಾದರೆ ವಿಮಾನ, ತ್ವರಿತ ರೈಲು ಬಸ್ಸುಗಳ ಅನುಕೂಲ ಇದ್ದುದರಿಂದ ಬೆಂಗಳೂರಿನಲ್ಲಿ ಚಿತ್ರೀಕರಣವೇ ಸುಲಭವೆಂದು ಕಂಡಿತ್ತು.

ಸ್ಟುಡಿಯೋ ಸೆಟ್‌ಗಳು ಕೃತಕ, ಸಹಜತೆಗಾಗಿ ಸಿದ್ಧವಿರುವ ಮನೆಗಳು-ಕಚೇರಿಗಳು ಆದರ ಚೆನ್ನ ಅನ್ನಿಸಿದ್ದರಿಂದ, ಬೆಂಗಳೂರಿನಲ್ಲಿ ಅಂಥ ಶ್ರೀಮಂತ ಬಂಗಲೆಗಳೂ ಇದ್ದುದರಿಂದ ಕ್ರಮೇಣ ಬೆಂಗಳೂರಿಗೇ ಚಿತ್ರರಂಗ ಅಂಟಿಕೊಳ್ಳತೊಡಗಿತು. ಕ್ಷಣಕ್ಷಣಕ್ಕೂ ಆಧುನಿಕ ತಂತ್ರಜ್ಞಾನದ ಆವಿಷ್ಕಾರವಾಗುತ್ತಿದ್ದ ಹಿನ್ನೆಲೆಯಲ್ಲಿ ಈ ಹೊತ್ತಿಗೆ ಪ್ರೀಮಿಯರ್‌ನ ಉಪಕರಣಗಳು ಹಳೆಯವು ಅನ್ನಿಸಿತ್ತು. ಅಲ್ಲಿಯ ಪ್ರೊಜೆಕ್ಷನ್ ವ್ಯವಸ್ಥೆ ಸರಿಯಿಲ್ಲ ಅಂದರು. ಒಟ್ಟಾರೆ ಬಿಲ್ಲದ ಗಂಡನಿಗೆ ಮೊಸರಿನಲ್ಲಿ ಕಲ್ಲು ಸಿಕ್ಕಂತಾಗಿತ್ತು. ಉದ್ಯಮ ಮೈಸೂರಿನಿಂದ ವಿಮುಖವಾಯಿತು. ಇದೊಂದು ಚಿತ್ರೋದ್ಯಮದ ದುರಂತ ಅಧ್ಯಾಯವೇ ಆಯಿತು. ಗಿರಿ, ನದಿ, ತಾಪಮಾನ, ಸಂಚಾರ ಸೌಲಭ್ಯ ಎಲ್ಲ ದೃಷ್ಟಿಯಿಂದ ಕರ್ನಾಟಕದ ಹಾಲಿವುಡ್ ಆಗಬಹುದಾಗಿದ್ದ ಮೈಸೂರನ್ನು ಚಿಕ್ಕಪುಟ್ಟ ಕಾರಣಗಳಿಗಾಗಿ ಕೈ ಬಿಟ್ಟಂತಾಯಿತು.

೧೯೮೦ರಿಂದೀಚೆಗೆ ಪ್ರೀಮಿಯರ್‌ಗೆ ಮಂಕು ಕವಿಯಿತು. ಸರ್ಕಾರವೂ ಎಲ್ಲ ಭಾಷೆಗಳಿಗೂ ಕೊಡುತ್ತಿದ್ದ ಸಹಾಯಧನವನ್ನು ನಿಲ್ಲಿಸಿ, ಕನ್ನಡ ಚಿತ್ರಗಳಿಗೆ ಮಾತ್ರ ಸಹಾಯಧನ ಎಂದಾಗ ಅನ್ಯಭಾಷಾ ಚಿತ್ರಗಳು ಕರ್ನಾಟಕದ ಸ್ಟುಡಿಯೋಗಳಿಗೆ ಬರುವುದು ನಿಂತಿತು. 'ಕಪ್ಪು-ಬಿಳುಪು' ಚಿತ್ರ ನಿರ್ಮಾಣ ಹಿಂದ ಸರಿದು ಸಂಪೂರ್ಣವಾಗಿ ವರ್ಣವೇ ವಿಜೃಂಭಿಸಿತು. ವರ್ಣ ಸಂಸ್ಕರಣ ಸೌಲಭ್ಯ ಪ್ರೀಮಿಯರ್‌ನಲ್ಲಿ ಇರಲಿಲ್ಲ. ಸಂಸ್ಕರಣಕ್ಕಾಗಿ ಮದರಾಸಿಗೆ ಹೋಗಲೇಬೇಕಿತ್ತು. ಅದರ ಬದಲು ಮದರಾಸಿನಲ್ಲೇ ಚಿತ್ರಿಸಿದರೆ ಎಲ್ಲ ಕೆಲಸ ಅಲ್ಲೇ ಮುಗಿಯುತ್ತದ ಎಂಬ ಧೋರಣೆ. ಸಹಾಯಧನದ ಸಲುವಾಗಿ ಚಿತ್ರ ನಿರ್ಮಿಸುವವರು ಮಾತ್ರ ಹೊರಾಂಗಣದಲ್ಲೇ ಚಿತ್ರಿಸತೊಡಗಿದರು. ಬೆಂಗಳೂರಿನಲ್ಲಿ ಸ್ಟುಡಿಯೋ ಇತ್ಯಾದಿಗಳು ಬಂದ ಮೇಲೆ ಮೈಸೂರು ದುಬಾರಿ ಎಂದು ಭಾವಿಸಿದ್ದೂ ಉಂಟು. ಕೆಲವರು ಮಾತ್ರ ಪ್ರೀಮಿಯರ್‌ಗೇ ಹೋಗುತ್ತಿದ್ದರು. ಅವರೊಂದಿಗಿದ್ದ ಯಾವುದೋ ಭಾವನಾತ್ಮಕ ಸಂಬಂಧ ಅವರನ್ನತ್ತ ಸೆಳೆಯುತ್ತಿತ್ತು.

ಆದರೆ ಬಸವರಾಜಯ್ಯನವರು ಇಷ್ಟು ಮಾತ್ರದಿಂದ ಸ್ಟುಡಿಯೋ ನಡೆಸುವುದು ಸಾಧ್ಯವಿರಲಿಲ್ಲ. ಒಂದೊಂದಾಗಿ ಫ್ಲೋರ್‌ಗಳನ್ನು ಮುಚ್ಚತೊಡಗಿದರು. ಗೋಡೌನ್‌ಗಳಾಗಿ ಮಾರ್ಪಡಿಸತೊಡಗಿದರು. ಮೈಸೂರಿನ ಪತ್ರಕರ್ತರು ಇದನ್ನು ಪ್ರತಿಭಟಿಸಿ, ಸ್ಟುಡಿಯೋ ಪ್ರಾರಂಭವಾಗಲೇಬೇಕೆಂದರು. ಸಾರ್ವಜನಿಕ ಅಭಿಪ್ರಾಯ, ಸರ್ಕಾರದಿಂದ ಒತ್ತಡ ಇತ್ಯಾದಿಗಳನ್ನು ತಂದರು.

ಕೆಲಸವೇ ಇಲ್ಲದೆ ಸ್ಟುಡಿಯೋ ಹೇಗ ಕೆಲಸ ಮಾಡಬೇಕು ಎಂಬ ಪ್ರಶ್ನೆಯೆದ್ದಾಗ ಪತ್ರಕರ್ತರೇ ನಿರ್ಮಾಪಕರೊಂದಿಗೆ ಮಾತುಕತೆಯಾಡಿ ಚಿತ್ರೀಕರಣ ಅಲ್ಲೇ ನಡೆಯುವಂತೆ ವಿಧಾನಗಳನ್ನು ರೂಪಿಸಿದರು. ಕಾರ್ಮಿಕರನ್ನು ಒಂದು ನಿಯಂತ್ರಣದಲ್ಲಿಟ್ಟರು. ಕೆಲಸ ಪ್ರಾರಂಭವಾಯಿತು. ಚಿತ್ರಗಳೂ ಹೊರಬಂದವು. ಹಿಂದಿನ ವೈಭವ ಮತ್ತೆಂದೂ ಕಾಣಲಿಲ್ಲ. ಈ ಆಂದೋಳನದ ಮುಂಚೂಣಿಯಲ್ಲಿ ಪತ್ರಕರ್ತ ಕೆ.ಜಿ.ಕುಮಾರ್, ಪದ್ಮನಾಭ್, ಪಟ್ಟಾಭಿರಾಮನ್, ಮೈಸೂರು ಹರೀಶ್, ಪಿ.ಎಂ.ರಾಜನ್ ಮೊದಲಾದವರಿದ್ದರು. ಚಿತ್ರೋದ್ಯಮ ಉಳಿದು-ಬೆಳೆದು ಬರಲಿ ಎಂಬ ಆಶಯ ಉದ್ಯಮಕ್ಕಿಂತ ಹೆಚ್ಚಾಗಿ ಪತ್ರಕರ್ತರಿಗೇ ಮುಖ್ಯವಾದದ್ದು ವಿಶೇಷ ಸಂಗತಿ. ಪತ್ರಕರ್ತರನ್ನು ಬೆಂಬಲಿಸಿ ಧರಣೆ, ಮಾತುಕತೆ ಇತ್ಯಾದಿಗಳಲ್ಲಿ ಭಾಗವಹಿಸಿದ ಮುಖ್ಯರು ಶಂಕರ್‌ನಾಗ್, ಪ್ರತಿಮಾದೇವಿ, ವಿತರಕ-ನಿರ್ಮಾಪಕ ಪಾರ್ಥನಾಥ್ ಮೊದಲಾದವರು.

ಈ ಮಧ್ಯೆ ಟಿಪ್ಪೂಸುಲ್ತಾನ್ ಧಾರಾವಾಹಿಯನ್ನು ಚಿತ್ರಿಸಲು ಬಂದ ತಂಡ, ಅವರೊಂದಿಗಿನ ವ್ಯವಹಾರ ಕೊಂಚ ಭರವಸೆ ಮೂಡಿಸಿತು. ಭರಾಟೆಯಿಂದ ಕೆಲಸವೂ ನಡೆದಿತ್ತು. ಸ್ಫೋಟವೊಂದರ ಕಾರಣವಾಗಿ ಭಾರೀ ಅಗ್ನಿ ದುರಂತ ಸಂಭವಿಸಿ, ಕಾರ್ಮಿಕರನೇಕರು ಸುಟ್ಟು ಕರಕಲಾದರು. ಅದೊಂದು ಮೈಸೂರಿನ, ಪ್ರೀಮಿಯರ್‌ನ ಇತಿಹಾಸದಲ್ಲೇ ಯಾರೂ ಮರೆಯಲಾಗದಂಥ ಅಪಘಾತ. ಮತ್ತೆ ಪ್ರೀಮಿಯರ್ ಚೇತರಿಸಿಕೊಳ್ಳಲೇ ಇಲ್ಲ.

ಫ್ಲೋರ್‌ಗಳೆಲ್ಲ ಉಗ್ರಾಣಗಳಾಗಿವೆ. ಮೇಕಪ್, ವಿಶ್ರಾಂತಿ ಕೊಠಡಿಗಳು ವಿದ್ಯಾರ್ಥಿನಿಲಯಗಳಾಗಿವೆ, ಚಿತ್ತರಂಜನ್ ಮಹಲ್ ಹೋಟೇಲ್ ಆಗಿ ಪರಿವರ್ತನೆಯಾಗಿದೆ.

ಪ್ರೀಮಿಯರ್ ದುರಂತ : ಒಂದು ಇತಿಹಾಸ

ಕನ್ನಡಿಗರ ಹೆಮ್ಮೆಯ ಸಂಕೇತವಾದ ಮೈಸೂರಿನ ಪ್ರೀಮಿಯರ್ ಸ್ಟುಡಿಯೋದಲ್ಲಿ ಕನ್ನಡವಲ್ಲದೇ ನಾನಾ ಭಾಷೆಯ ಚಿತ್ರಗಳ ಚಿತ್ರೀಕರಣ ಎಡೆಬಿಡದೆ ನಡೆಯುತ್ತಿತ್ತು. ಯಥೇಚ್ಛವಾದ ನೈಸರ್ಗಿಕ ವಾತಾವರಣದಿಂದ ಕಂಗೊಳಿಸುತ್ತಿದ್ದ ಪ್ರೀಮಿಯರ್ ಒಂದು ರೀತಿಯಲ್ಲಿ ಅನಿವಾರ್ಯವೆನ್ನುವಷ್ಟರ ಮಟ್ಟಿಗೆ ಇದ್ದಂಥ ಸಂದರ್ಭದಲ್ಲಿ ಆಗೊಮ್ಮೆ ಈಗೊಮ್ಮೆ ನಡೆದಂಥ ಕಹಿ ಪ್ರಸಂಗಗಳನ್ನು ಹೊರತುಪಡಿಸಿದರೆ ಪ್ರೀಮಿಯರ್ ಇತಿಹಾಸದಲ್ಲಿ ಯಾವೊಂದು ಕಹಿಘಟನೆ ಅದರ ಸ್ಥಾಪನೆಯ ರಜತವರ್ಷದವರೆಗೂ ನಡೆದದ್ದಿಲ್ಲ. ಇಂಥ ಪ್ರೀಮಿಯರ್‌ನಲ್ಲಿ ವ್ಯಕ್ತಿಯೊಬ್ಬರ ಮಡುಕಿನ ಫಲವೋ ಅಥವಾ ವಿಧಿನಿಯಾಮಕವೋ ಒಟ್ಟಿನಲ್ಲಿ ಹಿಂದೆಂದೂ ನಡೆದಿರದಂಥ ಭಾರೀ ಬೆಂಕಿ ಅನಾಹುತ ೧೯೮೯ರ ಫೆಬ್ರವರಿ ೮ರಂದು ಜರುಗಿ, ಚಿತ್ರಪ್ರಪಂಚದ ದುರಂತಗಳಲ್ಲಿ ಮರೆಯಲಾಗದಂಥ ದುರಂತಗಳಲ್ಲಿ ಒಂದಾಗಿ ನಿಂತಿದೆ.

ಭಾರೀ ವೆಚ್ಚದ ಸಂಜಯ್ ಖಾನ್ ನಿರ್ಮಾಣದ 'ಸ್ವೋರ್ಡ್ ಆಫ್ ಟೀಪೂ ಸುಲ್ತಾನ್' ಧಾರಾವಾಹಿಯ ಚಿತ್ರೀಕರಣದ ಸಂದರ್ಭದಲ್ಲಿ ಸನ್ನಿವೇಶವೊಂದರ ಅವಶ್ಯಕತೆಯ ಮೇರೆಗೆ ಬಾಣ ಬಿರುಸು, ಪಟಾಕಿ ಮದ್ದುಗಳನ್ನು ಸಿಡಿಸುವಂಥ

(ಚಿತ್ರ ೭) ಪ್ರೀಮಿಯರ್ ದುರಂತದಲ್ಲಿ ಸುಟ್ಟ ಕಾರ್ಮಿಕ ಆಸ್ಪತ್ರೆಯಲ್ಲಿ

ಪ್ರಸಂಗದಲ್ಲಿ ಜರುಗಿದ ಬೆಂಕಿ ಅನಾಹುತದ ಛಾಯೆ ಇಂದಿಗೂ ಅಳಿಸಲಾಗದಂಥದು. ಹಾಗೆ ನೋಡಿದರೆ ಪ್ರೀಮಿಯರ್ ಇತಿಹಾಸದಲ್ಲಿ ಬಾಣ ಬಿರುಸು, ಪಟಾಕಿ ಸಿಡಿತಗಳನ್ನು ಹನ್ನೊಂದು ಬಾರಿ ಬಳಸಲಾಗಿತ್ತು. ಅಲ್ಲೆಲ್ಲೂ ಸಣ್ಣ ಸುಟ್ಟಗಾಯವೂ ಆಗದ ರೀತಿಯಲ್ಲಿ ಚಿತ್ರೀಕರಣ ನಡೆದಿತ್ತು. ಈ ಧಾರಾವಾಹಿ ಚಿತ್ರೀಕರಣದ ವೇಳೆಯಲ್ಲಿ ಹಿರಿಯ ತಂತ್ರಜ್ಞರು, ಕಲಾನಿರ್ದೇಶಕರು, ಸಹಕಲಾವಿದರೆಲ್ಲರ ವಿರೋಧಗಳ ನಡುವೆ ನಿರ್ದೇಶಕ ಸಂಜಯ್ ಖಾನ್ ತೆಗೆದುಕೊಂಡ ಏಕಪಕ್ಷೀಯ ನಿರ್ಧಾರದ ಫಲವಾಗಿ ಪ್ರೀಮಿಯರ್ ಬೆಂಕಿ ಅನಾಹುತ ಹಲವಾರು ಮುಗ್ಧರ ಜೀವನವನ್ನು ಬಲಿ ತೆಗೆದುಕೊಂಡಿತಲ್ಲದೇ ಲಕ್ಷಾಂತರ ರೂಪಾಯಿಗಳ ನಾಶಕ್ಕೆ ಕಾರಣವಾಯಿತು.

ಹೊರಗಿನಿಂದ ಮುಚ್ಚಿದ ಬಾಗಿಲು, ಸ್ಟುಡಿಯೋ ಒಳಗೆ ಅರುವತ್ತೈದು ಮಂದಿ, ಸಂಜಯ್ ಖಾನ್ ಮುಂಬೈನಿಂದ ತಂದಿದ್ದ ೧೨ ಲಕ್ಷ ರೂಪಾಯಿ ಜನರೇಟರ್ ನೆರವಿನಿಂದ ಹೊರಗಿನಿಂದ ಸ್ಟುಡಿಯೋ ಒಳಗೆ ಸರಬರಾಜಾಗುತ್ತಿದ್ದ ವಿದ್ಯುತ್, ಸ್ಟುಡಿಯೋ ಒಳಗೆಲ್ಲ ಸೆಣಬಿನ ಪ್ಯಾಡಿಂಗ್ ವ್ಯವಸ್ಥೆ, ಇವೆಲ್ಲದರ ಜೊತೆಗೆ ನಿರ್ದೇಶಕನ ಬೇಜವಾಬ್ದಾರಿ, ಅತೀ ಎನ್ನುವ ಮಹತ್ವಾಕಾಂಕ್ಷೆ, ಇವೆಲ್ಲ ಪೂರಕ ಅಂಶಗಳ ಜೊತೆಗೆ ಪಟಾಕಿ, ಸಿಡಿಮದ್ದು, ಹೂಬಾಣ, ತೋಪುಗಳ ಸಿಡಿತಕ್ಕೆ ಒಂದೇ ಒಂದು 'ಓ.ಕೆ' ಸಾಕಾಯಿತು ಪ್ರೀಮಿಯರ್ ಹತ್ತಿ ಉರಿಯಲು. ಬಾಣ ಬಿರುಸುಗಳು ಎತ್ತರಕ್ಕೆ ಚಿಮ್ಮಿದ ಕೆಲವೇ ಕ್ಷಣಗಳಲ್ಲಿ ಸಾವಿರ ಕಿಲೋವ್ಯಾಟ್ ಸಾಮರ್ಥ್ಯದ ನೂರಾರು ಬಲ್ಬ್‌ಗಳು ಸಿಡಿದು ಸ್ಟುಡಿಯೋ ಪೂರಾ ಗಾಡಾಂಧಕಾರಕ್ಕೆ ಸಿಲುಕಿತು. ಬೆಂಕಿ ಸೆಣಬಿನ ಪ್ಯಾಡಿಂಗ್ ವ್ಯವಸ್ಥೆಯನ್ನು ಮುತ್ತಿಕ್ಕಿ, ಅಕ್ಕ ಪಕ್ಕದಲ್ಲಿದ್ದ ಎಲ್ಲಾ ಪರಿಕರಗಳನ್ನು ಕ್ಷಣಮಾತ್ರದಲ್ಲಿ ತನ್ನ ತೆಕ್ಕೆಗೆ ತೆಗೆದುಕೊಂಡುಬಿಟ್ಟಿತು. ಒಳಗೆ ಕತ್ತಲೆ, ಹೊರಗಿಂದ ಹಾಕಿದ ಬಾಗಿಲು, ಅರುವತ್ತೈದು ಮಂದಿ ಪ್ರಾಣರಕ್ಷಣೆಗೆ ದಿಕ್ಕಾಪಾಲಾಗಿ ಓಡಾಡುವಾಗ ಕಾಲ್ತುಳಿತಕ್ಕೆ ಸಿಲುಕಿ ಕೆಲಗುರುಳಿದವರು ಕೆಲವರಾದರೆ, ದಿಢೀರ್ ಅಪಘಾತದಿಂದ ಕೈಕಾಲು ಒಡದವರು ಕೆಲವರು, ನೋಡ ನೋಡುತ್ತಿದ್ದಂತೆ ಸುಟ್ಟು ಕರಕಲಾದವರು ಹಲವರು. ಬಾಗಿಲು ತೆಗೆಯುವ ವೇಳೆಗೆ ಬೆಂಕಿ ತನ್ನ ಪರಾಕಾಷ್ಠೆಯನ್ನು ಮುಟ್ಟಿತ್ತು. ಅಗ್ನಿಶಾಮಕ ದಳದವರು ಬರುವ ವೇಳೆಗೆ ಸುಮಾರು ೪೫ ಮಂದಿ ಹೆಣಗಳಾಗಿದ್ದರು. ಇಷ್ಟೆಲ್ಲದರ ನಡುವೆ ಸಂಜಯ್ ಖಾನ್, ಸಹಕಲಾವಿದ ಪರ್ವಿನ್ ತಾಜ್, ಲೈಟ್‌ಬಾಯ್ ಎ.ಎಂ.ಮಾಧು ಪವಾಡಸದೃಶ ರೀತಿಯಲ್ಲಿ ಪಾರಾಗಿದ್ದರು.

ಮೊಟ್ಟಮೊದಲು ವಿದ್ಯುತ್‌ವೈರ್‌ಗಳು ಸುಟ್ಟು ಶಾರ್ಟ್ ಸರ್ಕ್ಯೂಟ್‌ನಿಂದ ಅನಾಹುತ ಸಂಭವಿಸಿತೆಂದು ವರದಿಯಾಯಿತಾದರೂ ನಂತರದ ಕೂಲಂಕಷ ತಪಾಸಣೆಯ ನಂತರ ಅದು ಸ್ಟುಡಿಯೋದಲ್ಲಿದ್ದ ಸೆಣಬಿನ ಪ್ಯಾಡಿಂಗ್ ಹಾಗೂ ಇನ್ನಿತರೆ ದಹ್ಯ ವಸ್ತುಗಳು ಹೂಬಾಣ, ಸಿಡಿಮದ್ದುಗಳಿಂದ ಸಿಡಿದ ಬೆಂಕಿಗೆ ಸಿಲುಕಿ ಸಂಭವಿಸಿದ್ದು ಎಂದು ವಿದ್ಯುತ್ ಮಂಡಳಿ ದೃಢಪಡಿಸಿತ್ತು. ಇದೆಲ್ಲದರ ಮೇಲೆ ಸಂಜಯ್ ಖಾನ್ ಮುಂಬೈನಿಂದ ತಂದಿದ್ದ ಜನರೇಟರ್‌ನಿಂದ ನಿರಂತರವಾಗಿ ಹರಿದುಬರುತ್ತಿದ್ದ ವಿದ್ಯುತ್ ಕೂಡ ದುರಂತದ ಭೀಕರತೆಯನ್ನು ಹೆಚ್ಚಿಸಿದ್ದು ಸತ್ಯ. ಇಷ್ಟೊಂದು ಪ್ರಮಾಣದಲ್ಲಿ ಸಾವು ಸಂಭವಿಸಲು ಒಂದು, ಬೆಂಕಿಯ ಜ್ವಾಲೆಗೆ ಸಿಲುಕಿದ್ದು, ಎರಡನೆಯದಾಗಿ ಸೆಟ್ ತುಂಬಾ ತುಂಬಿಕೊಂಡ ಕಾರ್ಬನ್ ಮಾನಾಕ್ಸೈಡ್ ಸೇವನೆಯಿಂದ ಉಸಿರುಗಟ್ಟಿದ್ದು, ಮೂರನೆಯದಾಗಿ ಜನರೇಟರ್‌ನಿಂದ ಹರಿದು ಬರುತ್ತಿದ್ದ ವಿದ್ಯುತ್, ರಬ್ಬರ್ ಹೊದಿಕೆ

(ಇನ್ಸುಲೇಟರ್) ಇಲ್ಲದ ವಿದ್ಯುತ್ ಸ್ಪರ್ಶವಾಗಿದ್ದು. ಹೀಗೆ ಮೂರು ರೀತಿಯಿಂದ ಸಾವಿನ ಸಂಖ್ಯೆ ಹೆಚ್ಚಾಗಿತ್ತು.

ಒಟ್ಟಿನಲ್ಲಿ ೧೯೮೯ರ ಫೆಬ್ರವರಿ ೮, ರಾತ್ರಿ ೯-೨೫ ಭಾರತೀಯ ಚಿತ್ರರಂಗದ ಹಾಗೂ ಪ್ರೀಮಿಯರ್ ಸ್ಟುಡಿಯೋದ ಇತಿಹಾಸದಲ್ಲಿ ಒಂದು ಕರಾಳರಾತ್ರಿಯಾಯಿತು. ಸಂಜಯ್‌ಖಾನ್ ಬಾಡಿಗೆಗೆ ಪಡೆದಿದ್ದ ಎರಡು ಫ್ಲೋರ್‌ಗಳಲ್ಲಿ ಒಂದಾದ 'ಸಿ' ಫ್ಲೋರ್ (೬೦ ಅಡಿ ಅಗಲ, ೧೨೦ ಅಡಿ ಉದ್ದದ ಫ್ಲೋರ್) ಪೂರಾ ಬೆಂಕಿಯ ಕೆನ್ನಾಲಿಗೆಗೆ ಭಸ್ಮವಾಗಿ ಹೋಯಿತು. ಅದೇ ಧಾರಾವಾಹಿಗಾಗಿ ಮತ್ತೊಂದು ಫ್ಲೋರ್‌ನಲ್ಲಿ 'ಪಾಕೀಜಾ' ಚಿತ್ರದ ಖ್ಯಾತ ಕಲಾನಿರ್ದೇಶಕ ಕಾರ್ಲೇಕರ್‌ರ ಕಲಾನಿರ್ದೇಶನದಲ್ಲಿ ಸಿದ್ಧವಾಗಿದ್ದ ಭವ್ಯ ಅರಮನೆಯ ಸೆಟ್, ಮಧ್ಯದ ಫ್ಲೋರ್‌ನಲ್ಲಿ ತುಂಬಿಟ್ಟಿದ್ದ ಪೊಟಾಶ್ ತುಂಬಿದ್ದ ಚೀಲಗಳಿಂದ ಬೆಂಕಿ ಹರಡಲು ಸಾಧ್ಯವಾಗದೆ ಉಳಿದುಕೊಂಡಿತ್ತು. ಅರಮನೆಯ ಭವ್ಯ ಸೆಟ್ ಉಳಿಯಿತೇ ಹೊರತು ಅದರ ನಿರ್ಮಾತೃವನ್ನು ಬೆಂಕಿ ಬಿಡದೇಹೋದದ್ದು ದೊಡ್ಡ ದುರಂತ. ಈ ಅನಾಹುತದಲ್ಲಿ ಕಾರ್ಲೇಕರ್ ವಿಧಿವಶರಾದರು. ದುರಂತದಲ್ಲಿ ಮೈಸೂರಿನವರೇ ೨೫ ಮಂದಿ ಅಸುನೀಗಿದರು.

ಈ ಹಿಂದೆ ೧೯೭೮ರಲ್ಲಿ ಬೆಂಗಳೂರಿನ ಚಾಮುಂಡೇಶ್ವರಿ ಸ್ಟುಡಿಯೋದಲ್ಲಿನ ದೇವಾಲಯದ ಸೆಟ್ ಕುಸಿದು ನಂತರ ಸಿದ್ಧಪಡಿಸಿದ ಅದೇ ಸೆಟ್‌ಗೆ ಬೆಂಕಿ ತಗುಲಿ ಆದ ನಷ್ಟ, 'ಹುಲಿಯ ಹಾಲಿನ ಮೇವು' ಚಿತ್ರದ ಚಿತ್ರೀಕರಣದ ವೇಳೆಯಲ್ಲಿ ನಾಗರಹೊಳೆ ಅಭಯಾರಣ್ಯದಲ್ಲಿ ಸಂಭವಿಸಿದ ಬೆಂಕಿ ದುರಂತದಿಂದ ಆನೆಗಳು ಬಲಿಯಾದುದನ್ನು ಹೊರತುಪಡಿಸಿದರೆ ಪ್ರೀಮಿಯರ್ ಸ್ಟುಡಿಯೋದಲ್ಲಿ ಸಂಭವಿಸಿದಂಥ ಪ್ರಮಾದ ಎಲ್ಲಿಯೂ ಎಂದೂ ನಡೆದಿರಲಿಲ್ಲ. ಹೀಗಾಗಿ ಫೆಬ್ರವರಿ ೮, ಪ್ರೀಮಿಯರ್‌ನಲ್ಲಿ ಪ್ರತೀ ವರ್ಷ ಹುತಾತ್ಮರ ದಿನ ಆಚರಿಸುವಂತಾಗಿದೆ.

ದುರಂತದ ನಂತರ ಪರಿಹಾರ ಕಾರ್ಯದಲ್ಲಿ ಸರ್ಕಾರ, ಸಂಘ ಸಂಸ್ಥೆ, ಚಿತ್ರೋದ್ಯಮಕ್ಕೆ ಸಂಬಂಧಿಸಿದ ಎಲ್ಲ ಒಕ್ಕೂಟಗಳು, ನಟ-ನಟಿಯರು, ಸಾರ್ವಜನಿಕರು ಹೀಗೆ ಪ್ರತಿಯೊಬ್ಬರೂ ನೀಡಿದ ಅಪೂರ್ವ ಸಹಕಾರದಿಂದ ಶಾಶ್ವತ ಅಲ್ಲದಿದ್ದರೂ ತಾತ್ಕಾಲಿಕ ಪರಿಹಾರ ದೊರೆಯುವಂತಾಯಿತು. ಈ ನಿಟ್ಟಿನಲ್ಲಿ ಸಹಕಲಾವಿದರ ಸಂಘದ ಅಧ್ಯಕ್ಷರಾಗಿದ್ದ ಅಶೋಕ್, ಕಾರ್ಯದರ್ಶಿ ಡೆಲ್ಲಿ ಮನೆಮನೆಗೆ ಹೋಗಿ ಪರಿಹಾರಧನ ಸಂಗ್ರಹಿಸಿದರು. ಮೈಸೂರಿನ ಚಲನಚಿತ್ರ ಸಂಘದ ಸದಸ್ಯರೆಲ್ಲರೂ ಬೀದಿಬೀದಿಯಲ್ಲಿ ಪಾದಯಾತ್ರೆ ಮಾಡಿ ಒಂದು ಲಕ್ಷಕ್ಕೂ ಮೀರಿ ಹಣ ಸಂಗ್ರಹಿಸಿ ತಾತ್ಕಾಲಿಕವಾಗಿ ಹಂಚಿದರು. ಸುದ್ದಿ ತಿಳಿದೊಡನೆ ವಾಣಿಜ್ಯ ಮಂಡಳಿ ಪ್ರಮುಖರಾದ ಸಿ.ವಿ.ಎಲ್.ಶಾಸ್ತ್ರಿಯವರು ಮೈಸೂರಿಗೆ ಧಾವಿಸಿ ಬಂದು, ದುರಂತ ಸ್ಥಳಕ್ಕೆ ಭೇಟಿ ನೀಡಿ ಆರ್ಥಿಕ ನೆರವು ನೀಡಿದರು.

ಆಗಿನ ಗೃಹಮಂತ್ರಿಗಳಾದ ಬಿ.ರಾಚಯ್ಯ ಪಾದಯಾತ್ರೆ ಮಾಡಿ ಹಣ ಸಂಗ್ರಹಿಸಿದರೆ, ಮುಖ್ಯಮಂತ್ರಿಗಳಾದ ಎಸ್.ಆರ್.ಬೊಮ್ಮಾಯಿ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಸತ್ತವರ ಮನೆಯವರಿಗೆ ತಲಾ ಹತ್ತು ಸಾವಿರ ರೂಪಾಯಿ ಪರಿಹಾರ ಧನ ಪ್ರಕಟಿಸಿದರು. ಸ್ಟುಡಿಯೋ ಮಾಲೀಕರಾದ ಎಂ.ಎನ್.ಬಸವರಾಜಯ್ಯ ತಾವು ಕೋರ್ಟಿಗೆ ಕಟ್ಟಿದ್ದ ೮೧ ಸಾವಿರವನ್ನು ಪರಿಹಾರಕ್ಕಾಗಿ ಹಂಚಿದರು. ಇದಲ್ಲದೆ ನಿರ್ದೇಶಕ ಸಂಜಯ್‌ಖಾನ್ ಕಡೆಯಿಂದ ಛಾಯಾಗ್ರಾಹಕ ರಾಜು (ವಿಜಯವಾಡ) ಅವರಿಗೆ ಒಂದು ಲಕ್ಷ, ಕೆ.ಆರ್.ನಗರ ಸೋದರಿಯರಿಗೆ ಎರಡು ಲಕ್ಷ, ಅಲ್ಲದೇ ಕೋರ್ಟಿನ ವತಿಯಿಂದ ಚಿಕ್ಕ ವಯಸ್ಸಿನವರಿಗೆ ಹೆಚ್ಚು ಮೊತ್ತ ಹಾಗೂ ವಯಸ್ಸಾದವರಿಗೆ ಕೊಂಚ ಕಡಿಮೆ ಮೊತ್ತ ಎಂಬಂಥ ನಿರ್ಣಯದನ್ವಯ ಪರಿಹಾರ ದೊರೆಯಿತು. ಇದಷ್ಟೇ ಅಲ್ಲದೆ ಸಂಜಯ್‌ಖಾನ್ ಠೇವಣಿಯೆಂದು ಇಟ್ಟಿದ್ದ ಒಟ್ಟು ಆರು ಲಕ್ಷ ರೂಪಾಯಿಗಳನ್ನು ಕೋರ್ಟಿನ ತೀರ್ಮಾನಕ್ಕೆ ಕಾಯದೇ ತಾತ್ಕಾಲಿಕ ಪರಿಹಾರವೆಂದು ನೀಡಬೇಕೆಂದು ವಕೀಲರಾದ ಆರ್.ಜಿ.ನರಸಿಂಹ ಅಯ್ಯಂಗಾರ್, ಪತ್ರಕರ್ತರಾದ ಕೆ.ಬಿ.ಕುಮಾರ್, ಸಹಕಲಾವಿದರ ಸಂಘದ ಅಧ್ಯಕ್ಷರಾದ ಪಾಲಳ್ಳಿ ರಾಮಕೃಷ್ಣ ಮೊದಲಾದವರು ಒತ್ತಾಯಿಸಿ ಧರಣಿ ನಡೆಸಿದ್ದರಿಂದ ಆ ಮೊತ್ತವನ್ನೂ ಪರಿಹಾರವೆಂದು ಹಂಚಲಾಯಿತು.

ದುರಂತಕ್ಕೆ ಸ್ಪಂದಿಸಿದ ಚಿತ್ರರಂಗದ ಮೇರುನಟರಾದ ರಾಜಕುಮಾರ್, ವಿಷ್ಣುವರ್ಧನ್, ಲಕ್ಷ್ಮೀ, ಶಂಕರ್‌ನಾಗ್ ಮೊದಲಾದವರ, ಸರ್ಕಾರದ, ಸಾರ್ವಜನಿಕರ ಸಹಕಾರದಿಂದ, ಸಂಘ ಸಂಸ್ಥೆಗಳ ಪರಿಶ್ರಮದಿಂದ ಸಾಕಷ್ಟು ಪರಿಹಾರಧನ ಸಂಗ್ರಹವಾಗಿ ಪ್ರತಿಯೊಬ್ಬರಿಗೂ ತಲಾ ಎರಡರಿಂದ ಮೂರು ಲಕ್ಷ ರೂಪಾಯಿ ಪರಿಹಾರ ದೊರೆಯುವಂತಾಯಿತು. ಇದೆಲ್ಲ ಮಾನವೀಯತೆ, ಹೃದಯವಂತಿಕೆಯ ನೆಲೆಗಟ್ಟಿನಲ್ಲಿ ಆದಂಥದ್ದು. ಇದಲ್ಲದೆ ಕಾನೂನಿನ ಚೌಕಟ್ಟಿನಲ್ಲಿ ನಡೆದ ಸಮರದಲ್ಲಿ ಎಂ.ಸಿ.ನರಸಿಂಹನ್, ಶರತ್‌ಚಂದ್ರ ವಿಜಯ್, ಆರ್.ಜಿ.ನರಸಿಂಹ ಅಯ್ಯಂಗಾರ್ ಹೈಕೋರ್ಟಿನಲ್ಲಿ, ರಂಗನಾಥ್, ಶಿವ, ಸಂಪತ್ ಅಯ್ಯಂಗಾರ್, ಸುಬ್ಬರಾವ್ ಮೈಸೂರಿನ ಜಿಲ್ಲಾ ಕೋರ್ಟಿನಲ್ಲಿ ನಡೆಸಿದ ಹೋರಾಟದಲ್ಲಿ ಲಭಿಸಿದ ಜಯದ ಪ್ರತಿಫಲವಾಗಿ ನೊಂದವರಿಗೆ ಪರಿಹಾರ ದೊರೆಯುವಂತಾಯಿತು.

ದುರಂತದಲ್ಲಿ ಪ್ರಾಣತೆತ್ತ ಕುಟುಂಬದವರಿಗೆ ಸೂರೊಂದನ್ನು ಕಲ್ಪಿಸಿಕೊಡಲು ಸಹಕಲಾವಿದರ ಸಂಘದ ಅಧ್ಯಕ್ಷ ಪಾಲಳ್ಳಿ ರಾಮಕೃಷ್ಣ ಅವರು ಆಗಿನ ಮುಖ್ಯಮಂತ್ರಿಗಳಾದ ಬಂಗಾರಪ್ಪ ಅವರಲ್ಲಿ ಮಂಡಿಸಿದ್ದ ೩೦ ಅಡಿ X ೪೦ ಅಡಿ ನಿವೇಶನದ ಬೇಡಿಕೆ, ಆಗಿನ ಪ್ರಾಧಿಕಾರದ ಅಧ್ಯಕ್ಷರಾದ ಶಾಂತಕುಮಾರಿಯವರ ನಿಸ್ವಾರ್ಥ ಪ್ರಯತ್ನದ ನಂತರವೂ ಮುಂದೆ ಬಂದ ಅಧಿಕಾರಿಗಳ ನಿರ್ಲಕ್ಷ್ಯದಿಂದ ಅದು ಕನಸಾಗಿಯೇ ಉಳಿದಿದೆ. ಈ ನಡುವೆ ಪ್ರೀಮಿಯರ್ ಸ್ಟುಡಿಯೋದಲ್ಲಾದ ದುರಂತವನ್ನೇ ಮುಂದಿಟ್ಟುಕೊಂಡು ಕೆಲವು ನಾಯಕ-ನಿರ್ಮಾಪಕ-ನಿರ್ದೇಶಕರು ಮದರಾಸಿನಲ್ಲಿ ಚಿತ್ರೀಕರಿಸುವ ಉದ್ದೇಶದಿಂದ ಪ್ರಯತ್ನ ನಡೆಸಿದರಾದರೂ ಅಂಥ ಪ್ರಯತ್ನಗಳಿಗೆ ಸಾಕಷ್ಟು ಉತ್ತೇಜನ ದೊರೆಯದ ಕಾರಣ ಹಾಗೂ ಸರ್ಕಾರದ ಬಿಗಿಯಾದ ಧೋರಣೆಯ ಕಾರಣ ಪ್ರಯತ್ನ ಫಲಕಾರಿಯಾಗದೆ ಬೆಂಗಳೂರಿನಲ್ಲಿಯೇ ಚಿತ್ರೀಕರಣ ನಡೆಸುವಂತಾಯಿತು.

ಪ್ರೀಮಿಯರ್ ದುರಂತ ವ್ಯಕ್ತಿಯೊಬ್ಬರ ದುಡುಕಿನ, ಪ್ರತಿಷ್ಠೆಯ ಫಲವಾಗಿ ಸಂಭವಿಸಿದ್ದೇ ಹೊರತು, ಯಾವುದೇ ಅಪಶಕುನದಿಂದಾಗಿದ್ದಲ್ಲ. ಹಾಗಾಗಿ ಈ ದುರಂತದ ನೆಪವೊಡ್ಡಿ ಚಿತ್ರೀಕರಣ ನಡೆಸಲು ಹಿಂದುಮುಂದು ನೋಡುವ ಚಿತ್ರೋದ್ಯಮ ಯೋಚಿಸುವ ರೀತಿಯೇ ಬೆಂಕಿಯಿಂದಾದ ದುರಂತಕ್ಕಿಂತ ದೊಡ್ಡ ದುರಂತ.

ಪ್ರೀಮಿಯರ್ ಸ್ಟುಡಿಯೋ ಬಸವರಾಜಯ್ಯನವರ ಅದ್ಭುತರಮ್ಯ ಕನಸು. ನನಸಾಯಿತು, ಭವ್ಯವೆನಿಸಿತ್ತು. ಚಿತ್ರೋದ್ಯಮವನ್ನು ಕಟ್ಟಿ ಬೆಳೆಸಿತು. ಅಂಥ ಸಾಧನೆಗಾಗಿ ಬಸವರಾಜಯ್ಯನವರಿಗೆ ರಾಜ್ಯ ಸರ್ಕಾರವು ೧೯೯೬-೯೭ನೇ ವರ್ಷದಲ್ಲಿ ಡಾ|ರಾಜಕುಮಾರ್ ಪ್ರಶಸ್ತಿ ನೀಡಿ ಗೌರವಿಸಿತು.

ಮದರಾಸಿನಲ್ಲಿ ಕನ್ನಡ ಚಿತ್ರ ನಿರ್ಮಾಪಕರಿಗೆ ವಿಶೇಷ ಆಸ್ಥೆಯಿಂದ ನೆರವಾಗುತ್ತಿದ್ದ ಫಿಲಂ ಸೆಂಟರ್‌ನ ಮಜೀದ್ ಮತ್ತು ನೂರ್ ಸಹೋದರರು ತಾವೇ ಬೆಂಗಳೂರಿನಲ್ಲಿ ಸ್ಟುಡಿಯೋ ಪ್ರಾರಂಭಿಸುವ ಬಗ್ಗೆ ಯೋಚಿಸಿದ್ದರು. ಕರ್ನಾಟಕ ಸರ್ಕಾರದ ಸಹಾಯಧನ ಯೋಜನೆ ಜಾರಿಗೆ ಬಂದ ಮೇಲೆ ಅನೇಕರು ಹೀಗೆ ಯೋಚಿಸಿದ್ದುಂಟು. ಅದಕ್ಕೂ ಮುಂಚೆಯೇ ವಾದಿರಾಜ್-ಜವಹರ್ ಸಹೋದರರು ಮದರಾಸಿನ ರೇವತಿ ಸ್ಟುಡಿಯೋವನ್ನು ಗುತ್ತಿಗೆ ಆಧಾರದ ಮೇಲೆ ಪಡೆದು ಉತ್ತಮ ಚಿತ್ರಗಳನ್ನು ತಯಾರಿಸುವ ಉತ್ಸಾಹದಲ್ಲಿದ್ದರು. ಅವರ 'ನಾಂದಿ', 'ನವಜೀವನ' ಚಿತ್ರಗಳ ಪ್ರಶಸ್ತಿಗೆ ಸಂಬಂಧಿಸಿದಂತೆ ಎದ್ದ ವಿವಾದ, ವಿಪರೀತವಾದ ಶ್ರಮ ಅವರನ್ನು ಹಣ್ಣಾಗಿಸಿತ್ತು. ಚಿತ್ರಗಳಿಂದಲೂ ಹೇಳಿಕೊಳ್ಳುವಂಥ ಗಳಿಕೆ ಬರಲಿಲ್ಲ. ಹೀಗಾಗಿ ಅವರ ಉತ್ಸಾಹ ಕಮರಿ ಹೋಯಿತು.

ಸಹಾಯಧನದ ಫಲವಾಗಿ ಉಪಭಾಷಾ ಚಿತ್ರ ನಿರ್ಮಾಣ ಚಟುವಟಿಕೆ ಹೆಚ್ಚಾಯಿತು. ನಿರ್ಮಾಪಕ-ನಿರ್ದೇಶಕರೊಬ್ಬರು ಕರ್ನಾಟಕದ ಕರಾವಳಿ ಪ್ರದೇಶದಲ್ಲಿ ಸ್ಟುಡಿಯೋ ಸ್ಥಾಪಿಸುವ ಬಗ್ಗೆ ಯೋಚಿಸಿದ್ದರು. ಆ ಹೊತ್ತಿಗೆ 'ಎನ್ನ ತಂಗಡಿ', 'ದಾರೆದ ಬುಡೆದಿ' ಮೊದಲಾದ ಚಿತ್ರಗಳನ್ನು ಸ್ಥಳೀಯ ಕಲಾವಿದರನ್ನೇ ಹೆಚ್ಚಾಗಿ ಬಳಸಿ ಚಿತ್ರಿಸಿಯೂ ಇದ್ದರು. ಮಂಗಳೂರಿನಲ್ಲೇ ಸಂಪೂರ್ಣ ಹೊರಾಂಗಣದಲ್ಲಿ 'ಧರ್ಮಪತ್ನಿ' ಎಂಬ ರೀಮೇಕ್ ಚಿತ್ರವೂ ತಯಾರಾಗಿತ್ತು. ಆದರೂ ಅಲ್ಲಿ ಸ್ಟುಡಿಯೋ ಪ್ರಾರಂಭಿಸುವ ಯೋಜನೆ ಸಾಧಿತವಾಗದೇ ನಿಂತುಹೋಯಿತು.

ಕಂಠೀರವ ಸ್ಟುಡಿಯೋ

ಸ್ಟುಡಿಯೋ ನಿರ್ಮಾಣದ ಹಲವು ಪ್ರಯತ್ನಗಳು ಏಕೋ ವಿಫಲವಾಗುತ್ತ ಹೋದದ್ದು, ಪ್ರೀಮಿಯರ್‌ನ ವಿನಾ ಇನ್ನೊಂದು ಸ್ಟುಡಿಯೋ ಇಲ್ಲದ್ದು, ಕನ್ನಡ ಕಲಾವಿದರು-ತಂತ್ರಜ್ಞರು ಕರ್ನಾಟಕ ರಾಜ್ಯದಲ್ಲೇ ಇದ್ದು ಉದ್ಯಮವು ನೆಲೆಯೂರಿದರೆ ರಾಜ್ಯದ ಘನತೆ ಹೆಚ್ಚುತ್ತದೆ ಇತ್ಯಾದಿ ಕಾರಣಗಳನ್ನು ಹಿಂದಿಟ್ಟುಕೊಂಡ ರಾಜ್ಯ ಸರ್ಕಾರ ಬೆಂಗಳೂರಿನಲ್ಲಿ ಒಂದು ಸ್ಟುಡಿಯೋ ಪ್ರಾರಂಭಿಸುವತ್ತ ಮನಸ್ಸು ಮಾಡಲೇಬೇಕಾಯಿತು. ಇದರ ಸಾಧ್ಯಾಸಾಧ್ಯತೆಗಳ ಬಗ್ಗೆ ವಿಧಾನಸಭೆಗಳಲ್ಲಿ ಚರ್ಚೆಗಳಾದವು. ಯಾವುದೇ ಬಹಿರಂಗ ಸಭೆ-ಸಮಾರಂಭಗಳಲ್ಲೂ ಉದ್ಯಮದಿಂದ

ಯಾರಾದರೂ ಮುಂದೆ ಬಂದರೆ ಸರ್ಕಾರ ಅವರ ನೆರವಿಗೆ ಬರುತ್ತದೆ ಎಂದು ಕರೆ ಕೊಡುತ್ತಲೇ ಇದ್ದ ಸರ್ಕಾರ ತಾನು ಸಹಾಯಧನ ನೀತಿಯನ್ನು ಪ್ರಕಟಿಸಿದ ಬೆನ್ನಲ್ಲೇ ಸುಮಾರು ೧೯೬೬-೬೭ರ ಸುಮಾರಿನಲ್ಲಿ ಸ್ಟುಡಿಯೋ ಬಗ್ಗೆ ಚಿಂತಿಸಿತು. ಉದ್ಯಮದಲ್ಲಿಯ ಕೆಲವರು ಸರ್ಕಾರದ ಈ ಆಹ್ವಾನವನ್ನು ಸ್ವೀಕರಿಸಿದರು. ಮುಖ್ಯವಾಗಿ ಗುಬ್ಬಿ ವೀರಣ್ಣನವರು ಮುಂದಾದರು.

ಇಂಥ ಹಲವು ಪ್ರಯತ್ನಗಳನ್ನು ಮುಂದುವರಿಸಲಾಗದ ಮುಗ್ಗರಿಸಿದ ಕಥೆಯನ್ನು ಮರೆತು ವೀರಣ್ಣನವರೇ ಮುನ್ನುಗ್ಗಿದಾಗ ಅವರೊಂದಿಗೆ ಟಿ.ಎಸ್.ಕರಿಬಸವಯ್ಯ, ಶಾಸಕ-ಸಚಿವ ಶಂಕರೇಗೌಡರು ಮೊದಲಾದವರು ಹೆಗಲು ಕೊಡಲು ಸಜ್ಜಾದರು. ಅನ್ನದಾನಪ್ಪ ದೊಡ್ಡಮೇಟಿ, ಧರ್ಮಸ್ಥಳದ ರತ್ನವರ್ಮ ಹೆಗಡೆ ಮತ್ತಿತರರೂ ಜೊತೆಯಾದರು.

೧೯೬೬ನೇ ಮಾರ್ಚ್ ತಿಂಗಳಲ್ಲಿ 'ಶ್ರೀ ಕಂಠೀರವ ಸ್ಟುಡಿಯೋಸ್' ಸಂಸ್ಥೆ ಪ್ರಾರಂಭವಾಯಿತು. ಸುಮಾರು ೧೧೫ ಮಂದಿ ಷೇರುಗಳನ್ನು ಕೊಂಡರು. ೭.೫ (ಏಳೂವರೆ) ಲಕ್ಷ ರೂಪಾಯಿಗಳು ಸಂಗ್ರಹವಾದವು. ಸರ್ಕಾರ ಮೊದಲೇ ಹೇಳಿದ್ದಂತೆ ತನ್ನ ಪಾಲಿನ ಐದು ಲಕ್ಷ ರೂಪಾಯಿ ಷೇರು ಬಂಡವಾಳವನ್ನು ಹೂಡಿತು.

ಬೆಂಗಳೂರು-ತುಮಕೂರು ರಸ್ತೆಯಲ್ಲಿ ಸ್ಟುಡಿಯೋಗಾಗಿ ೧೭.೫ ಎಕರೆ ಜಮೀನನ್ನು ಕೊಂಡರು. ಪ್ರಾರಂಭದಲ್ಲಿ ಇದನ್ನು ದೂರ ಊರಾಚೆ ಎಂದವರುಂಟು. ಕೆಲವೇ ವರ್ಷಗಳಲ್ಲಿ ಆ ಪ್ರದೇಶವು ಜನನಿಬಿಡ ಪ್ರದೇಶವಾಗಿ, ಊರೊಳಗೇ ಸೇರಿ ಹೋಗಿದೆ.

ಈ ನಿವೇಶನದಲ್ಲಿ ಎರಡು ಫ್ಲೋರ್‌ಗಳನ್ನು ನಿರ್ಮಿಸಲಾಯಿತು, ಒಂದು 'ಕಲ್ಯಾಣಿ' ಮತ್ತೊಂದು 'ಕಾವೇರಿ'. ೧೪೦ ಅಡಿ x ೧೨೦ ಅಡಿ ವಿಸ್ತೀರ್ಣದ ಕಾವೇರಿ ಫ್ಲೋರ್ ಭಾರತದಲ್ಲೇ ಅತಿ ದೊಡ್ಡದು ಎನ್ನಲಾಗಿತ್ತು. ಇದು ೧೯೭೦ನೇ ಜನವರಿ ೬ನೇ ತಾರೀಖು ಪ್ರಾರಂಭವಾಯಿತು. ಸಂಸ್ಥೆಗೆ ಪ್ರಾರಂಭದಲ್ಲಿ ಶಂಕರೇಗೌಡರೇ ಅಧ್ಯಕ್ಷರು. ಮುಂದೆ ಅವರು ಸಚಿವ ಪಟ್ಟಕ್ಕೇರಿದಾಗ ಆ ಸ್ಥಾನವನ್ನು ಗುಬ್ಬಿ ವೀರಣ್ಣನವರಿಗೆ ವಹಿಸಿಕೊಟ್ಟರು. ಟಿ.ಎಸ್.ಕರಿಬಸವಯ್ಯನವರು ಸಂಸ್ಥೆಯ ಮ್ಯಾನೇಜಿಂಗ್ ಡೈರೆಕ್ಟರಾಗಿ ಸ್ಟುಡಿಯೋದ ಪ್ರಗತಿಗೆ ಶ್ರಮಿಸಿದರು. ರಾಜ್ಯ ಸರ್ಕಾರವು ಸಲಕರಣೆ, ಯಂತ್ರಗಳು ಇತ್ಯಾದಿ ಕೊಳ್ಳಲು ಸುಮಾರು ೧೨ ಲಕ್ಷ ರೂ. ಸಾಲ ನೀಡಿತು. ಮಿಚೆಲ್ ಕ್ಯಾಮರಾ, ದೀಪಗಳು ಇನ್ನಿತರ ಸಲಕರಣೆಗಳನ್ನು ಕೊಂಡರು.

ಕಂಠೀರವ ಸ್ಟುಡಿಯೋ ಪ್ರಾರಂಭವಾದಾಗ ಮೊದಲು ಚಿತ್ರೀಕರಿಸಿದವರು ನಾವು ಎನ್ನುತ್ತಾರೆ ನಿರ್ಮಾಪಕ-ನಿರ್ದೇಶಕ ಸಮೀಉಲ್ಲಾ. ಅವರ ಸಂಸ್ಥೆಯ ನಿರ್ಮಾಣ 'ಠಕ್ಕ ಬಿಟ್ರೆ ಸಿಕ್ಕ' ಚಿತ್ರ ಕಂಠೀರವದಲ್ಲಿ ಚಿತ್ರೀಕರಣಗೊಂಡಿತು.

ಕಂಠೀರವ ಸ್ಟುಡಿಯೋದಲ್ಲಿ ಒಂದು ಲ್ಯಾಬೊರೇಟರಿ ಮತ್ತೊಂದು ಫ್ಲೋರ್ ಸಿದ್ಧವಾದವು. ೧೯೭೨ರ ಆಗಸ್ಟ್ ೧೫ರಂದು ಸಂಜೆ ಉದ್ಘಾಟನಾ ಸಮಾರಂಭ ನೆರವೇರಿತು. ಕಂದಾಯ ಮಂತ್ರಿ ಹುಚ್ಚಮಾಸ್ತಿಗೌಡರು 'ಕಲ್ಯಾಣಿ' ಫ್ಲೋರ್ ಅನ್ನು, ಕೈಗಾರಿಕಾ ಸಚಿವ ಎಸ್.ಎಂ.ಕೃಷ್ಣ ಅವರು 'ಕಸ್ತೂರಿ' ಫ್ಲೋರ್ ಅನ್ನು ಉದ್ಘಾಟಿಸಿದರು. ಈ ಫ್ಲೋರ್‌ನ ವಿಸ್ತೀರ್ಣ ೧೨೦ ಅಡಿ x ೬೦ ಅಡಿ ಆಗಿತ್ತು.

ಇದೇ ಸಂದರ್ಭದಲ್ಲಿ (೧೯೭೨) ಸ್ಟುಡಿಯೋದ ನಿರ್ದೇಶಕ ಮಂಡಳಿಯ ಅಧ್ಯಕ್ಷರಾಗಿದ್ದ ಗುಬ್ಬಿ ವೀರಣ್ಣನವರನ್ನು 'ಪದ್ಮಶ್ರೀ' ಗೌರವ ಲಭಿಸಿದ್ದರ ಸಲುವಾಗಿ ಸತ್ಕರಿಸಲಾಯಿತು. (ಪದ್ಮಶ್ರೀ ಪುರಸ್ಕೃತರಾದ ನಾಟಕಕಾರ ಆದ್ಯ ರಂಗಾಚಾರ್ಯರನ್ನೂ ಅದೇ ಸಂದರ್ಭದಲ್ಲಿ ಸನ್ಮಾನಿಸಲಾಯಿತು).

ಕಂಠೀರವ ಲ್ಯಾಬೊರೇಟರಿ ವಿಭಾಗಕ್ಕೆ ಮುಂಬೈನ ಗೋಪಾಲಕೃಷ್ಣ ಅವರು ಸಂಸ್ಕರಣ ಪ್ಲ್ಯಾಂಟ್ ಅನ್ನು ನಿರ್ಮಿಸಿದ್ದರು. ಹಗಲಿನಲ್ಲೂ ಕತ್ತಲೆಯ ಆವರಣವಿಲ್ಲದ ಫಿಲಂ ಸಂಸ್ಕರಣ ಮಾಡಬಹುದಾದ ತಂತ್ರವು ಅಂದಿನ ವಿಶೇಷ. ಈ ಸಂಸ್ಥೆಗೆ ವಿಭಾಗದ ಮುಖ್ಯಸ್ಥರಾಗಿ ನೇಮಕಗೊಂಡ ತ್ಯಾಗರಾಜನ್ ಅವರು ವಾಹಿನಿ ಸ್ಟುಡಿಯೋದಲ್ಲಿ ಇಪ್ಪತ್ತು ವರ್ಷಗಳ ಕಾಲ ಕೆಲಸ ಮಾಡಿದ ಅನುಭವಿ ತಂತ್ರಜ್ಞರಾಗಿದ್ದರು.

ಸ್ಟುಡಿಯೋದಲ್ಲಿ ಮೂವಿಯೋಲಾ, ಎಡಿಟಿಂಗ್ ಟೇಬಲ್‌ಗಳು ಸಿದ್ಧವಾಗಿದ್ದವು. ನಾಲ್ಕು ಕೊಠಡಿಗಳಲ್ಲಿ ಸಂಕಲನ ವ್ಯವಸ್ಥೆ ಇತ್ತು. ಏಕಕಾಲದಲ್ಲಿ ನಾಲ್ಕು ಚಿತ್ರಗಳ ಸಂಕಲನ ಮಾಡಬಹುದಿತ್ತು. ಪ್ರೊಜೆಕ್ಷನ್ ರೂಮ್ ಸಿದ್ಧವಿದ್ದು, ಪ್ರೊಜೆಕ್ಟರ್ ಅಳವಡಿಕೆ, ಧ್ವನಿಯಂತ್ರಗಳ ವ್ಯವಸ್ಥೆಯ ಕೆಲಸ ನಡೆದಿತ್ತು. ಮುದ್ರಣ ಯಂತ್ರಗಳು ಬರುತ್ತಿದ್ದವು. ಇವೆಲ್ಲವನ್ನು ಟಿ.ಎಸ್.ಕರಿಬಸವಯ್ಯನವರು ಅತ್ಯಂತ ಮುತುವರ್ಜಿವಹಿಸಿ ನಿರ್ವಹಿಸುತ್ತಿದ್ದರು.

ಸ್ಟುಡಿಯೋಗಳು ಹೆಚ್ಚಾದವು, ಚಿತ್ರನಿರ್ಮಾಣವೂ ಹೆಚ್ಚಿತ್ತು. ಇಂಥ ಹೊತ್ತಿನಲ್ಲಿ ನಿರ್ಮಾಪಕರ ಗಿಲ್ಡ್ ಕಡೆಯಿಂದ ಒಂದು ವಿಷಯ ಚರ್ಚೆಗೆ ಬಂದಿತು. ಅದೆಂದರೆ, ಚಿತ್ರೀಕರಣ ನಡೆಯುತ್ತಿರುವ ಸ್ಟುಡಿಯೋಗಳಿಗೆ ವೀಕ್ಷಕರು ಬರುವುದು ಸಹಜ. ಇಂಥಲ್ಲಿ ಪ್ರವೇಶಕ್ಕೆ ನಾಲ್ಕಾಣೆ ಶುಲ್ಕ ವಿಧಿಸುವ ಬಗ್ಗೆ ಯೋಚಿಸಲಾಯಿತು. ನೂಕುನುಗ್ಗಲು ತಪ್ಪಬಹುದು. ಅಥವಾ ಶುಲ್ಕದ ಮೂಲಕ ಸಂಗ್ರಹಿಸುವ ಹಣವನ್ನು ಸಿನಿ ತಾಂತ್ರಿಕ ವರ್ಗದವರ ಕಲ್ಯಾಣ ನಿಧಿಗೆ ಸೇರಿಸಿ, ಚಿತ್ರೀಕರಣ ಸಮಯದಲ್ಲಿ ಏನಾದರೂ ತೊಂದರೆಗೆ ಒಳಗಾಗುವ ತಾಂತ್ರಿಕ ವರ್ಗದವರಿಗೆ (ಲೈಟಿಂಗ್ ಬಾಯ್ಸ್, ಮೊದಲಾದವರು) ಅಥವಾ ಅಂಥವರ ಮನೆಯಲ್ಲಿ ಕಷ್ಟ ಸ್ಥಿತಿಯಿದ್ದು, ಕಾಯಿಲೆ-ಕಸಾಲೆ ಇದ್ದವರ ಔಷಧೋಪಚಾರಕ್ಕೆ ಈ ನಿಧಿಯನ್ನು ಬಳಸುವುದು ಎಂತಲೂ ಯೋಚಿಸಿದರು. ಹೀಗೆ ಹಣ ಕೂಡಿಸುವ ಯೋಜನೆಯಿಂದ ಚಿತ್ರೀಕರಣಕ್ಕೆ ತೊಂದರೆ ಆಗಬಹುದೆಂಬ ಆಕ್ಷೇಪವೂ ಇತ್ತು. ಅಂತೂ ಈ ಯೋಜನೆ ಜಾರಿಗೆ ಬರಲಿಲ್ಲ.

ಈ ಹೊತ್ತಿಗೆ ಬೆಂಗಳೂರಿನಲ್ಲಿ ಚಾಮುಂಡೇಶ್ವರಿ ಸ್ಟುಡಿಯೋ ಸಹ ಪ್ರಾರಂಭವಾಗಿತ್ತು. ಮತ್ತು ಶಿಕ್ಷಣ ಸಂಸ್ಥೆ ಜಯಚಾಮರಾಜೇಂದ್ರ ಪಾಲಿಟೆಕ್ನಿಕ್‌ನಲ್ಲಿದ್ದ 'ಸೌಂಡ್ ಅಂಡ್ ಟೆಲಿವಿಷನ್' ವಿಭಾಗಕ್ಕೆ ಅತ್ಯಾಧುನಿಕ ರಿಕಾರ್ಡಿಂಗ್ ಉಪಕರಣಗಳನ್ನು ತರಿಸಿ ಅಳವಡಿಸಲಾಯಿತು. ೧೯೭೨ರ ನವಂಬರ್‌ನಲ್ಲೇ ಈ ಘಟಕವನ್ನು ಶಿಕ್ಷಣ ಸಚಿವ ಬದರಿನಾರಾಯಣ್ ಅವರು ಪ್ರಾರಂಭಿಸಿದ್ದರೆ, ಸಮಾರಂಭದ ಅಧ್ಯಕ್ಷತೆಯನ್ನು ಶಿಕ್ಷಣ ಶಾಖೆಯ ಕಾರ್ಯದರ್ಶಿ ಸ್ಯಾಮ್ಯುಯಲ್ ಅಪ್ಪಾಜಿ ವಹಿಸಿದ್ದರು. ಈ ಘಟಕದಲ್ಲಿ ವೆಸ್ಟ್ರೆಕ್ಸ್ ಸಂಸ್ಥೆಯ ಎಯ್ಟ್ ಚಾನಲ್ ಮಿಕ್ಸರ್, ಫೋರ್ ಟ್ರ್ಯಾಕ್ ೩೫ ಎಂ.ಎಂ. ಮ್ಯಾಗ್ನೆಟಿಕ್ ರಿಕಾರ್ಡರ್ ಮತ್ತು ರೀಪ್ರೊಡ್ಯೂಸರ್, ರೀ-ರಿಕಾರ್ಡರ್, ೪೦ ೪೦ ಸೌಂಡ್ ಪ್ರೊಜೆಕ್ಷನ್ ಸಿಸ್ಟಮ್ ಮತ್ತು ಜರ್ಮನಿಯ ಎಕೋಲೆಟ್ ರಿವರ್ಬರೇಟರ್ ಮುಂತಾದವು ಇದ್ದವು.

ವಿಶೇಷವೆಂದರೆ ಕೇವಲ ಪಾಲಿಟೆಕ್ನಿಕ್‌ಗಳ ವಿದ್ಯಾರ್ಥಿಗಳಿಗೆ ಮಾತ್ರವೇ ಅಲ್ಲದೆ, ಖಾಸಗಿಯವರಿಗೂ ಈ ಉಪಕರಣಗಳನ್ನು ಬಳಸುವ ಸೌಲಭ್ಯವನ್ನು ಆಗಿನ ಪ್ರಿನ್ಸಿಪಾಲ್ ಆರ್.ಎನ್.ನಂಜುಂಡಪ್ಪ ಮುಕ್ತವಾಗಿರಿಸಿದ್ದರು. ಕೇವಲ ಕಾಲ್‌ಶೀಟ್‌ಗಳೇ ಆಗಬೇಕೆಂದಿಲ್ಲ, ಗಂಟೆಗಳ ಲೆಕ್ಕದಲ್ಲೂ ಬಾಡಿಗೆ ಪಡೆಯುವ ಅವಕಾಶ ಇದೆಯೆಂದು ಸೌಂಡ್ ಇಂಜಿನಿಯರ್ ರಾಮಮೂರ್ತಿ ಹೇಳಿದ್ದರು. ಕೆಲವು ಚಿತ್ರಗಳ ಕೆಲಸ ಅಲ್ಲಿಯೂ ಆಗಿದೆ. ಶಿವರಾಮ ಕಾರಂತರು 'ಮಲೆಯ ಮಕ್ಕಳು' ಚಿತ್ರದ ರಿ-ರಿಕಾರ್ಡಿಂಗ್ ಇಲ್ಲೇ ಮಾಡಿದ್ದರು.

ಈ ಮಧ್ಯೆ ಪೂರ್ವ ಪ್ರದರ್ಶನಗಳಿಗೆ ಮಿನಿ ಥಿಯೇಟರುಗಳಿಲ್ಲ ಎಂಬ ಕೊರತೆ ಇದ್ದೇ ಇತ್ತು. ನಿರ್ಮಾಪಕ ರಾಮನಾಥನ್ ಅವರು "ಮುಂಬೈನಲ್ಲಿ ಇಂಥ ಹದಿನೇಳು ಥಿಯೇಟರುಗಳಿವೆ. ಅವಕ್ಕೆಲ್ಲ ಬಿಡುವಿಲ್ಲದಷ್ಟು ಕೆಲಸವಿರುತ್ತದೆ. ಕರ್ನಾಟಕದಲ್ಲಿ ಚಿತ್ರೋದ್ಯಮ ಬೆಳೆಯುತ್ತಿರುವಾಗ ಇದೊಂದು ಕೊರತೆಯಾಗಬಾರದು. ಸ್ಟುಡಿಯೋಗಳಲ್ಲಿ ಪ್ರದರ್ಶನ ವ್ಯವಸ್ಥೆ ಇದ್ದರೂ ಅಲ್ಲಿ ಡಬ್ಬಿಂಗ್ ಕೆಲಸ ನಡೆಯುತ್ತಿರುತ್ತದೆಯಾದರಿಂದ ಪೂರ್ವ ಪ್ರದರ್ಶನಗಳಿಗಾಗಿ ಮಿನಿ ಥಿಯೇಟರ್‌ಗಳು ಅವಶ್ಯವಾಗಿ ಇರಲೇಬೇಕು" ಎಂದು ಹೇಳುತ್ತಲೇ ಇದ್ದರು.

ಈ ಮಧ್ಯೆ ಬಿ.ಸರೋಜಾದೇವಿ ಅವರ ಪತಿ ಶ್ರೀಹರ್ಷ ಅವರು ಇಂಥದೊಂದು ಯೋಜನೆ ಕೈಗೆತ್ತಿಕೊಂಡದ್ದೂ ಉಂಟು. ಅದಕ್ಕಾಗಿ ಅವರು ಮಾಡೆಲ್ ಇತ್ಯಾದಿ ಮಾಡಿಸಿ ಪತ್ರಕರ್ತರಿಗೆ ವಿವರಿಸಿದ್ದುಂಟು. ಆದರೆ ಅವರು ಅಪೇಕ್ಷಿಸಿದ ಸ್ಥಳದಲ್ಲಿ ಪರವಾನಗಿ ಸಿಗದ ಕಾರಣ ಆ ವಿಚಾರವನ್ನು ಕೈಬಿಡಬೇಕಾಯಿತು.

೧೯೭೨ರಲ್ಲಿ ಚಿತ್ರರಂಗ ಒಂದು ನಿತ್ಯ ಹಬ್ಬದ ಹಾಗೆ ಕಂಗೊಳಿಸುತ್ತಿತ್ತು. ಕರ್ನಾಟಕದಲ್ಲಿ ಅನ್ಯಭಾಷಾ ಚಿತ್ರಗಳ ಕೆಲಸವೂ ಅಧಿಕವಾಗಿಯೇ ನಡೆದಿತ್ತು. ಆ ವರ್ಷ ಮುಖ್ಯವಾಗಿ ದೀಪ್ತಿ ಫಿಲಂರವರ ಮಲೆಯಾಳಿ ಚಿತ್ರ 'ಪುಳ್ಳಿಮಾನ್', ವಿಜಯಭಾರತಿ ಸಂಸ್ಥೆಯ 'ನಾ ಮೆಚ್ಚಿದ ಹುಡುಗ', ಪದ್ಮಿನಿ ಪಿಕ್ಚರ್ಸ್‌ರವರ 'ಒಂದು ಹೆಣ್ಣಿನ ಕಥೆ', ಧನಂಜಯ ಮೂವೀಸ್‌ರವರ 'ಹೊನ್ನಿಯ ಮದುವೆ', ಮೆಹಮೂದ್‌ರವರ ಹಿಂದಿ ವರ್ಣ ಚಿತ್ರ 'ಗರಂ ಮಸಾಲಾ' ಇತ್ಯಾದಿಗಳಿಗೆ ಕೆಲಸ ನಡೆಯಿತು.

ಜನಪ್ರಿಯ ಕಲಾವಿದರು, ತಂತ್ರಜ್ಞರು ಮೈಸೂರು-ಬೆಂಗಳೂರಿನ ಹೋಟೇಲ್‌ಗಳಲ್ಲಿ ತಂಗಿದ್ದು ಹೋಟೇಲ್ ಉದ್ಯಮ ಕೂಡಾ ವಿಶಿಷ್ಟವಾಗಿ ಬೆಳೆಯತೊಡಗಿತ್ತು. ಚಿತ್ರೋದ್ಯಮದ ಜೊತೆಜೊತೆಗೇ ಪೂರಕವಾದ ಇತರ ಉದ್ಯಮಗಳೂ ಬೆಳೆಯುವುದು ಸಹಜವೇ ಆಗಿದೆ.

ತಂತ್ರಜ್ಞರ ಅಗತ್ಯವೂ ಅಷ್ಟೇ ಇರುತ್ತದೆ. ಸ್ಟುಡಿಯೋಗಳಲ್ಲಿ ಲೈಟ್ ಜಾಯ್‌ಗಳು, ಫ್ಲೋರ್ ಜಾಯ್‌ಗಳು ಬಹಳ ಮುಖ್ಯ. ಕಂಠೀರವದಲ್ಲಿದ್ದ ಲೈಟ್‌ಜಾಯ್ ಯಾಕೂಬ್ ಬಗ್ಗೆ ದಂತಕಥೆಗಳಿವೆ. ಯಾಕೂಬ್ ಮೈಸೂರಿನವರು. ಶಾಲಾ ದಿನಗಳಿಂದಲೂ ಸ್ಟುಡಿಯೋಗಳ ಮುಂದೆ ನಿಂತು ನೋಡುವ ಅಭ್ಯಾಸ. ತನ್ನ ೯ನೇ ವಯಸ್ಸಿನಿಂದಲೂ (೧೯೫೫) ಆತ ಸ್ಟುಡಿಯೋಗಳಲ್ಲಿ ಕೆಲಸ ಹಿಡಿಯಲು ಅಲೆದವರು. 'ಸಲೀಸ್ಸ' ಹೇಳುವ ಕೆಲಸದಿಂದ ಲೈಟ್‌ಜಾಯ್ ಆಗಿ ಬಡ್ತಿ ಸಿಕ್ಕಿತು. ಅನಂತರ ಆತನೇ ಚೀಫ್. ಅಂಥ ಸಮಯದಲ್ಲೇ ಪ್ರಸಿದ್ಧ ನಿರ್ದೇಶಕ ಸಿದ್ಧಲಿಂಗಯ್ಯನವರೂ ಲೈಟ್‌ಜಾಯ್ ಆಗಿ ದುಡಿದರು. ಎಂಥ ಪಂಥಾಹ್ವಾನಕ್ಕೂ ಸಿದ್ಧ ಯಾಕೂಬ್. ಕ್ಷಣಾರ್ಧದಲ್ಲಿ ಚಿತ್ರೀಕರಣಕ್ಕೆ ಸಿದ್ಧಮಾಡಿಬಿಡುವ ಚೂಟಿ ಹುಡುಗ. ಹೀಗಾಗಿ ಸ್ಟುಡಿಯೋ ಇತಿಹಾಸದಲ್ಲಿ ಯಾಕೂಬ್ ಒಂದು ವಿಶೇಷ ವ್ಯಕ್ತಿ. "ನನ್ನ ವೃತ್ತಿ ಜೀವನದಲ್ಲಿ ಎಂದೂ ಒಂದು ಲೈಟೂ ಬಿಸಿ ಆಗಿಲ್ಲ, ಒಂದು ಬಲ್ಬೂ ಒಡೆದಿಲ್ಲ" ಎಂದು ಹೆಮ್ಮೆ ಪಡುತ್ತಿದ್ದರು ಯಾಕೂಬ್. ಅವರು ಕಂಠೀರವದಲ್ಲಿ (೧೯೭೦) ಚೀಫ್ ಟೆಕ್ನೀಷಿಯನ್ ಆಗಿ ದಿನಕ್ಕೆ ಹನ್ನೆರಡಾಣೆ ಸಂಬಳಕ್ಕೆ ಸೇರಿದವರು. ಉದ್ಯಮದ ಎಲ್ಲರೂ 'ಹಮಾರಾ ಯಾಕೂಬ್ ಭಾಯ್' ಎಂದು ಬೆನ್ನು ತಟ್ಟಿ ಮಾತಾಡಿಸುವಷ್ಟು ವ್ಯಾಪಿಸಿಕೊಂಡ ವ್ಯಕ್ತಿ ಯಾಕೂಬ್. ಸ್ಟುಡಿಯೋಗಳಲ್ಲಿ ಜೀವವನ್ನೇ ತೆತ್ತುಕೊಳ್ಳುವ ಇಂಥ ಹತ್ತಾರು ಪರಿಣತರು ಹಲವು ವಿಭಾಗಗಳಲ್ಲಿ ದುಡಿಯುತ್ತಲೇ ಇರುತ್ತಾರೆ. ಅವರೇ ಅಲ್ಲಿಯ ಜೀವಾಳ.

೧೯೭೪ರ ಹೊತ್ತಿನಲ್ಲಿ ಅದಾವ ಕಾರಣದಿಂದಲೋ ರಾಜಕುಮಾರ್ ಅವರ ಚಿತ್ರಗಳೆಲ್ಲ ಮದರಾಸಿನಲ್ಲೇ ತಯಾರಾಗುತ್ತಿದ್ದವು. ಅವರ ಆಗ ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷರಾಗಿದ್ದ ಎಂ.ಭಕ್ತವತ್ಸಲ ಅವರು ಮತ್ತು ಬಿ.ವಿ.ಅರಸುಕುಮಾರ್ ಅವರು "ಬೆಂಗಳೂರಿನಲ್ಲಿ ಸ್ಟುಡಿಯೋ ಚಟುವಟಿಕೆ ಸಗಿತಗೊಳ್ಳಬಾರದು. ತಾವು ಕರ್ನಾಟಕದಲ್ಲೇ ಚಿತ್ರೀಕರಣ ನಡೆಸಬೇಕು" ಎಂದು ಒತ್ತಾಯಿಸಿದರು. ರಾಜಕುಮಾರ್ ಅವರು ತಮ್ಮ ಚಿತ್ರ ನಿರ್ಮಾಪಕರು ಎಲ್ಲಿ ಚಿತ್ರ ತಯಾರಿಸಿದರ ಅಲ್ಲಿಗ ಹೋಗಿದ್ದೇನಾಗಲಿ, ಬೆಂಗಳೂರಿಗ ಬರದಿರುವ ಕಾರಣಗಳೇನೂ ಇಲ್ಲ. ತಾವು ಹಾಗ ಎಂದೂ ಹೇಳಿಲ್ಲ ಎಂತಲೂ ಹೇಳಿಕೆ ನೀಡಿದರು. ಬಿಟ್ಟಾರೆ ರಾಜ್ ಅವರ ಚಿತ್ರಗಳು ಬೆಂಗಳೂರಿನಲ್ಲಿ ಚಿತ್ರಣವಾಗತೊಡಗಿದರಿಂದ ಉದ್ಯಮದಲ್ಲಿ ಚಟುವಟಿಕೆ ಹೆಚ್ಚಿತು. ಸ್ಟುಡಿಯೋಗಳು ಹಗಲಿರುಳು ಕೆಲಸ ಮಾಡಿದವು ಎಂಬುದು ಮುಖ್ಯ.

ಈ ಮಧ್ಯೆ ಕಂಠೀರವ ಸ್ಟುಡಿಯೋದ ಒಂದು ಭಾಗದಲ್ಲಿ ಕ್ವಾಲಿಟಿ ಲ್ಯಾಬ್ (ವರ್ಣ ಸಂಸ್ಕರಣ ಕೇಂದ್ರ) ಪ್ರಾರಂಭವಾಯಿತು. ಕೆಂಪರಾಜ ಅರಸರು 'ಕರ್ನಾಟಕ ಚಲನಚಿತ್ರೋದ್ಯಮ ಅಭಿವೃದ್ಧಿ ನಿಗಮ'ದ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಕರ್ನಾಟಕದಲ್ಲಿ ಸುಸಜ್ಜಿತ ವರ್ಣ ಸಂಸ್ಕರಣಾಗಾರದ ಅಗತ್ಯತೆಯನ್ನು ಮನಗಂಡು ಈ ನೆರವು ಕಲ್ಪಿಸಿದರು. ಆ ನಿಗಮದ ನೆರವಿನಿಂದ ತಯಾರಾದ 'ಸದಾನಂದ', 'ಸುಳಿ', 'ಪ್ರೇಮಜ್ವಾಲೆ', 'ಲಕ್ಷ್ಮೀ ಪ್ರಸನ್ನ' ನಾಲ್ಕೂ ಚಿತ್ರಗಳ ವರ್ಣ ಸಂಸ್ಕರಣ ಈ ಲ್ಯಾಬ್‌ನಲ್ಲೇ ಆಯಿತು. ಗುಣಮಟ್ಟವೇನೂ ಕಳಪೆಯಾಗಿರಲಿಲ್ಲ. ಮುಖ್ಯವಾಗಿ ಕ್ವಾಲಿಟಿ ಲ್ಯಾಬ್ ಪ್ರಾರಂಭಿಸಿದ ಮನೋಹರ್ ಆರ್.ಶೆಟ್ಟಿ ಅವರಿಗ ಸಾಕಷ್ಟು ಅನುಭವವಿತ್ತು.

ಮನೋಹರ್ ಶೆಟ್ಟಿ ಅವರು ದಕ್ಷಿಣದ ಮೂಲ್ಕಿಯವರು. ಮೂಲತಃ ಟೈಮ್ಸ್ ಆಫ್ ಇಂಡಿಯಾದ ಪತ್ರಕರ್ತರಾಗಿದ್ದರು. ಬಿಸಿನೆಸ್ ಮ್ಯಾನೇಜ್‌ಮೆಂಟ್ ಪದವಿ ಪಡೆದ ಮೇಲೆ ಇಂಡಿಯನ್ ಮೋಷನ್ ಪಿಕ್ಚರ್ಸ್ ಅಸೋಸಿಯೇಷನ್‌ನಲ್ಲಿ ಕೆಲ ಕಾಲ ದುಡಿದರು. ಫಿಲಂ ಸೆಂಟರ್‌ನಲ್ಲಿ ಬಿಸಿನೆಸ್ ಮ್ಯಾನೇಜರ್ ಆಗಿದ್ದರು. ಜೆ.ಪಿ.ಎಚ್.ವ್ಯಾಂಡರ್ ಅವ್ವರಾ (J.P.H.Vandor Awera) ಅವರ ಬಳಿ ಲ್ಯಾಬ್‌ಗ ಸಂಬಂಧಿಸಿದ ವಿಷಯಗಳನ್ನು ಕಲಿತರು. ಸ್ಟಂಟ್ ಚಿತ್ರಗಳ ನಿರ್ಮಾಪಕ ಹೋಮಿ ವಾಡಿಯಾ ಅವರ ಮಾರಾಟಕ್ಕಿದ್ದ ಲ್ಯಾಬೊರೇಟರಿಯನ್ನು ಕೊಂಡರು. ಕಪ್ಪು-ಬಿಳುಪು ಸಂಸ್ಕರಣ ಮಾತ್ರ ಸಾಧ್ಯವಿದ್ದ ಆ ಯಂತ್ರಗಳನ್ನು ತಾವೇ ಸರಿಪಡಿಸಿ ಚಾತುರ್ಯದಿಂದ ವರ್ಣ ಸಂಸ್ಕರಣಕ್ಕೆ ಅಣಿ ಮಾಡಿದರು. ಅನಂತರ ಚಂದೂಲಾಲ್ ಷಾ ಅವರು ಆರಂಭಿಸಿದ್ದ, ಬಿ.ಸಿ.ರಾಮನ್ ಅವರು ನಡೆಸುತ್ತಿದ್ದ 'ಕ್ವಾಲಿಟಿ ಲ್ಯಾಬ್' ಕೊಂಡು ತಾವು ತಯಾರಿಸಿದ ಯಂತ್ರಗಳನ್ನು ಜೋಡಿಸಿ ವರ್ಣಸಂಸ್ಕರಣ ಕಾರ್ಯ ಆರಂಭಿಸಿದರು. ಮಹಾರಾಷ್ಟ್ರದಲ್ಲೂ ಲ್ಯಾಬ್ ಪ್ರಾರಂಭಿಸುವ ಯೋಜನೆ ಅವರಿಗಿತ್ತು.

ಕೆಂಪರಾಜ ಅರಸರಿಗೂ ಲ್ಯಾಬ್‌ನಲ್ಲಿ ಆಸಕ್ತಿ ಇತ್ತು. ಶೆಟ್ಟಿಯವರ ಯೋಜನೆಗಳು ಸರಳ, ಸುಲಭವಾಗಿತ್ತು. ಕೇವಲ ಒಂದು ತಿಂಗಳಲ್ಲಿ ಶೆಟ್ಟಿಯವರ ಕ್ವಾಲಿಟಿ ಲ್ಯಾಬ್ ಪ್ರಾರಂಭವಾಯಿತು. ಅಭಿವೃದ್ಧಿ ಕಾರ್ಪೊರೇಷನ್‌ನ ಚಿತ್ರಗಳು ಇಲ್ಲೇ ಸಂಸ್ಕರಣಗೊಳ್ಳಲಿ ಎಂದಾಗ ಉದ್ಯಮದಲ್ಲಿ ಅಪಸ್ವರವೆದ್ದಿತ್ತು. ಅವರ ಸ್ಯಾಂಪಲ್ ಪ್ರಿಂಟ್ಸ್ ನೋಡಿದ ಮೇಲೆ ಎಲ್ಲರೂ ಇತ್ತ ಬರುವ ಮನಸ್ಸು ಮಾಡಿದರು.

ಮುಂಬಯಿಯಿಂದ ಎರಡು ಲಾರಿಯಷ್ಟು ಯಂತ್ರಗಳು, ಎರಡು ಕಾರಿನಲ್ಲಿ ತಂತ್ರಜ್ಞರು ಬಂದಿಳಿದರು. ಸುಮಾರು ೨೫ ಅಡಿ ಉದ್ದದ ನೆಗೆಟಿವ್ ಪ್ರೋಸೆಸಿಂಗ್ ಮೆಷಿನ್, ಅಷ್ಟೇ ಟೆಂಪರೇಚರ್ ನಿಯಂತ್ರಣ, ಫಿಲ್ಟರ್‌ಗಳಿಗೂ ಏರ್ಪಾಡಾಗಿತ್ತು. ಸೊಗಸಾದ ಫ್ರಾನ್ಸ್‌ನ ಪ್ರಿಂಟಿಂಗ್ ಮೆಷಿನ್, ನೆಗೆಟಿವ್‌ಗಳನ್ನಿಡಲು ಕೋಲ್ಡ್ ಸ್ಟೋರೇಜ್‌ನ ಅನುಕೂಲವಿತ್ತು. ಮತ್ತೊಂದು ಪ್ರಯೋಗಾಲಯ ಕೋಣೆ. ರಾಸಾಯನಿಕ ತಜ್ಞ ವರ್ಣ ಪ್ರಮಾಣ ನಿಗದಿ ಮಾಡುತ್ತಿದ್ದ. ಪಂಚಿಂಗ್ ಮೆಷಿನ್ ಏನು ಬೇಕಾದರೂ ಬದಲಾಯಿಸಲು ಅನುಕೂಲವಾಗುವಂಥ ನೆರವು. ವರ್ಣ ಮಾತ್ರವಲ್ಲ, ಕಪ್ಪು-ಬಿಳುಪು ಚಿತ್ರಗಳಿಗೂ ಸಂಸ್ಕರಣ ಸೌಲಭ್ಯ ಒದಗಿಸಲಾಗಿತ್ತು. ಮುಖ್ಯವಾಗಿ ಎಡಿಟಿಂಗ್, ಮೂವಿಯೊಲ ಇತ್ಯಾದಿಗಳೆಲ್ಲ ಲಭ್ಯವಿದ್ದವು. ಕನ್ನಡದವರೊಬ್ಬರ ಸಾಹಸವೇ ಆದರೂ ಏಕೋ ಉದ್ಯಮ ನಿರಾಸಕ್ತಿ ತೋರಿತು. ಒಮ್ಮೆ ಬೇಡವಾದರೆ ಆಕ್ಷೇಪ-ಕ್ರೂರತೆಗಳ ಸಾಲುಸಾಲೇ ಇರುತ್ತದೆ. ದೂರುಗಳು ಹೆಚ್ಚಾದವು. ಸರಿಪಡಿಸಲು, ಮನವೊಲಿಸಲು ನಿರಂತರವಾಗಿ ಪ್ರಯತ್ನಿಸಿ, ಏನೂ ಪರಿಹಾರ ಕಾಣದೆ, ಮರಳಿ ತಮ್ಮ ಹಳೆಯ ಗೂಡಿಗೆ ಸೇರಿಕೊಂಡರು. ಇನ್ನು ಸಾಧ್ಯವೇ ಇಲ್ಲ ಎನ್ನಿಸಿದಾಗ ಕ್ವಾಲಿಟಿ ಲ್ಯಾಬ್ ಸಹ ಮುಚ್ಚಿಹೋಯಿತು.

ಮೊದಲು ಕನ್ನಡ ಚಿತ್ರಗಳ ಚಿತ್ರೀಕರಣಕ್ಕೆ ಕರ್ನಾಟಕದಲ್ಲಿ ಅಗತ್ಯವಾದ ಸ್ಟುಡಿಯೋಗಳಿಲ್ಲ ಎಂದು ದೂರುತ್ತಿದ್ದ ಉದ್ಯಮಿಗಳು ಕಂಠೀರವ ಬಹಳ ದೂರ ಎಂದು ಕುಂಟುನೆಪ ತೆಗೆದು ಸಹಕಾರ ನೀಡದೆ ದೂರ ಉಳಿಯತೊಡಗಿದರು. ನೂರಾರು ಕನಸು ಹೊತ್ತು ಆರಂಭವಾದ ಸ್ಟುಡಿಯೋವನ್ನು ಸರ್ಕಾರವೇ ಪೂರ್ಣವಾಗಿ ವಹಿಸಿಕೊಳ್ಳುವಂತೆ ಉದ್ಯಮದ ಕಡೆಯಿಂದಲೇ ಒತ್ತಾಯ ಆರಂಭವಾಯಿತು. ಸರ್ಕಾರ ತಾನು ಮಾಡಿದ ಷೇರು ಬಂಡವಾಳಕ್ಕೆ ಬಡ್ಡಿಯನ್ನು ಸೇರಿಸಿ, ಸುಮಾರು ಹದಿನೇಳೂವರೆ ಲಕ್ಷ ರೂ.ಗಳ ಮೊತ್ತವನ್ನು ತನ್ನ ಷೇರು ಬಂಡವಾಳವನ್ನಾಗಿಸಿಕೊಂಡು, ೧೯೮೭-೮೮ರಲ್ಲಿ ಮತ್ತೆ ಐದು ಲಕ್ಷ ರೂ.ಗಳನ್ನು ಷೇರು ಬಂಡವಾಳದಲ್ಲಿ ತೊಡಗಿಸಿ ಕಂಠೀರವ ಸ್ಟುಡಿಯೋವಿನ ಸ್ವಾಮ್ಯವನ್ನು ತನ್ನದಾಗಿಸಿಕೊಂಡಿತು. ಅಲ್ಲಿಯವರೆವಿಗೂ ಟಿ.ಎಸ್. ಕರಿಬಸವಯ್ಯನವರೇ ವ್ಯವಸ್ಥಾಪಕ ನಿರ್ದೇಶಕರಾಗಿ ಸ್ಟುಡಿಯೋವನ್ನು ನಡೆಸಿಕೊಂಡು ಬಂದಿದ್ದರು.

೧೯೮೦ರಲ್ಲಿ ಕಂಠೀರವವನ್ನು ಸರ್ಕಾರ ವಹಿಸಿಕೊಂಡು ವಾರ್ತಾಧಿಕಾರಿಗಳಾಗಿದ್ದ ರೇಣು ಆನಂದರಾವ್ ಅವರನ್ನು ಪ್ರಥಮ ಸರ್ಕಾರಿ ವ್ಯವಸ್ಥಾಪಕ ನಿರ್ದೇಶಕರನ್ನಾಗಿ ನೇಮಿಸಿತು. ಆ ವೇಳೆಗೆ ಕಂಠೀರವದಲ್ಲಿ ಸುಮಾರು ೫೪ ಮಂದಿ ಕಾರ್ಮಿಕರು, ತಂತ್ರಜ್ಞರು ಹಾಗೂ ಸಿಬ್ಬಂದಿ ವರ್ಗದವರಿದ್ದು, ಆಡಳಿತವರ್ಗ ಹಾಗೂ ಸಿಬ್ಬಂದಿವರ್ಗಗಳ ನಡುವೆ ಹಿಂದೆ ನೀಡಲಾಗುತ್ತಿದ್ದ ದಿನಗೂಲಿಯನ್ನೇ ಲೆಕ್ಕ ಮಾಡಿ ತಿಂಗಳಿಗೊಮ್ಮೆ ನೀಡುವ ಪದ್ಧತಿ ಆರಂಭವಾಯಿತು. ಇದರಿಂದಾಗಿ ಯಾರು ಯಾರು ಯಾವ ಯಾವ ಕೆಲಸ ಎಂಬ ಕಾರ್ಯಕ್ಷೇತ್ರ ನಿರ್ಧಾರಿತವಾಗಿ, ಕರ್ನಾಟಕ ಸರ್ಕಾರದ ೧೯೮೩ರ ವೇತನ ಪಟ್ಟಿಯನ್ವಯ ವೇತನ ನೀಡಲಾಯಿತು. ಕಾರ್ಮಿಕರಿಗೆ ಹಲವು ಸೌಲಭ್ಯಗಳನ್ನೂ ಒದಗಿಸಲಾಯಿತು. ಇದರಿಂದಾಗಿ ಸಂಸ್ಥೆಯ ಮಾಸಿಕ ವೆಚ್ಚವೂ ಹೆಚ್ಚಿತು.

ಚಿತ್ರೀಕರಣಕ್ಕೆ ಅಗತ್ಯವಾದ ಸೆಟ್‌ಗಳ ನಿರ್ಮಾಣ, ಉಪಕರಣಗಳನ್ನು ಒದಗಿಸುವುದು ಮುಂತಾದವುಗಳ ಬಗ್ಗೆ ಆದ್ಯ ಗಮನ ನೀಡಲಾಯಿತು. ಮದರಾಸಿನ ಹೆಸರಾಂತ ಸ್ಟುಡಿಯೋಗಳಲ್ಲಿ ನಿರ್ಮಿಸಿಕೊಡುವಂತೆಯೇ ಕಂಠೀರವದಲ್ಲಿ ಭಾರಿ ವೆಚ್ಚದ ಅದ್ದೂರಿಯ ಸೆಟ್‌ಗಳನ್ನು ನಿರ್ಮಿಸಿಕೊಡಲಾಯಿತು. 'ಗುರು ಶಿಷ್ಯರು', 'ಎರಡು ನಕ್ಷತ್ರಗಳು', 'ಶಿವನಾಗ', 'ಕ್ರಾಂತಿಯೋಗಿ ಬಸವಣ್ಣ', 'ಶಾಂತಿ ಕ್ರಾಂತಿ', 'ಋಣ ಮುಕ್ತಳು', 'ರಂಗನಾಯಕಿ', 'ಮಸಣದ ಹೂವು' ಮುಂತಾದ ಚಿತ್ರಗಳಿಗಾಗಿ ನಿರ್ಮಿಸಲಾದ ಸೆಟ್‌ಗಳನ್ನು ಈ ಸಂದರ್ಭದಲ್ಲಿ ಉದಾಹರಿಸಬಹುದು.

ಕಂಠೀರವದಲ್ಲಿ ಮಿಸ್ಟೆಲ್, ಮಿಚ್ಚೆಲ್ ಹಾಗೂ ಏರಿಫ್ಲೆಕ್ಸ್ II ಸಿ.ಬಿ.ವಿ -ಮೂರು ಮಾದರಿಯ ಕ್ಯಾಮರಾಗಳಿವೆ. ಇದರಲ್ಲಿ ಮಿಸ್ಟೆಲ್ ಕ್ಯಾಮರಾ ತೀರಾ ಹಳೆಯದಾಗಿದ್ದು ಉಪಯೋಗವಾಗುತ್ತಿಲ್ಲ. ಇಲ್ಲಿರುವ ಶಬ್ದಗ್ರಹಣದ ಉಪಕರಣಗಳು ಸೆಟ್‌ನಲ್ಲಿ ಚಿತ್ರೀಕರಣ ಸಮಯದಲ್ಲೇ ಸಮಾನಾಂತರವಾಗಿ ಧ್ವನಿ ಮುದ್ರಿಸಿಕೊಳ್ಳಬಹುದಾದವು. ಇವೂ ತೀರಾ ಹಳೆಯದಾಗಿದ್ದು, ಆಧುನಿಕ ತಂತ್ರಜ್ಞಾನ ಹೊಂದಿದ ಉಪಕರಣಗಳನ್ನು ತರಿಸುವ ಬಗ್ಗೆ ಆಡಳಿತ ವರ್ಗ ತಲೆಕೆಡಿಸಿಕೊಂಡಿಲ್ಲ.

ಸ್ಟುಡಿಯೋ ಆವರಣದಲ್ಲಿರುವ ಖಾಲಿ ನಿವೇಶನದಲ್ಲಿನ ಉದ್ಯಾನವನ ಬಿ.ಸರೋಜಾದೇವಿ ಅವರು ಅಧ್ಯಕ್ಷರಾಗಿದ್ದಾಗ ರಾಜ್ಯ ಸರ್ಕಾರದ ತೋಟಗಾರಿಕೆ

ಇಲಾಖೆ ಹಾಗೂ ಲೋಕೋಪಯೋಗಿ ಇಲಾಖೆಗಳ ಸಹಕಾರದಿಂದ ನವೀಕೃತವಾಯಿತು. ಸುಮಾರು ಎರಡು ಎಕರೆ ಜಾಗದಲ್ಲಿ ರಿಕಾರ್ಡಿಂಗ್ ಥಿಯೇಟರ್ ನಿರ್ಮಿಸಲು ಚಿತ್ರೋದ್ಯಮ ಅಭಿವೃದ್ಧಿ ನಿಗಮ ಕಾರ್ಯ ಪ್ರಾರಂಭಿಸಿತಾದರೂ ಪೂರ್ಣಗೊಳಿಸಲಿಲ್ಲ. ನಂತರದಲ್ಲಿ ಪ್ರಸಾದ್ ಧ್ವನಿ ಮುದ್ರಣ ಕೇಂದ್ರಕ್ಕೆ ಜಾಗವನ್ನು ಗುತ್ತಿಗೆಗೆ ನೀಡಲಾಯಿತು. ಈ ಕೇಂದ್ರ ಸುಸಜ್ಜಿತವಾಗಿ ಕಾರ್ಯ ನಿರ್ವಹಿಸುತ್ತಿದೆ.

ಕಂಠೀರವದಲ್ಲಿ ಕಾರ್ಮಿಕರಲ್ಲಿ ಬಹುಪಾಲು ಮಂದಿ ಸ್ಟುಡಿಯೋದಲ್ಲಿ ಕೆಲಸಕ್ಕೆ ಸೇರಿದ ನಂತರದಲ್ಲಿಯೇ ಪರಿಣತಿ ಪಡೆದವರು. ಕಾರ್ಖಾನೆಯ ಕಾರ್ಮಿಕರಿಗಿರುವ ಹಲವು ಸೌಲಭ್ಯಗಳನ್ನು ಪಡೆದವರು. ಆದರೂ ೧೯೮೭ರ ಅಂತ್ಯದಲ್ಲಿ ಸುಮಾರು ೬೦ ದಿನಗಳ ಕಾಲ ಕಾರ್ಮಿಕರು ಸಂಪು ಹೂಡಿದ್ದು ಈ ಸಂಸ್ಥೆಯ ಇತಿಹಾಸದಲ್ಲಿನ ಒಂದು ಕಪ್ಪು ಚುಕ್ಕೆ.

ನಿರ್ಮಾಪಕರೊಂದಿಗೆ ವ್ಯವಹರಿಸುವಾಗ ಅದೂ ಸೆಟ್‌ಗಳ ನಿರ್ಮಾಣ, ಅನಂತರ ಅವನ್ನು ಬಿಚ್ಚುವ ಅಥವಾ ಇತರರಿಗೆ ಕೊಡುವ ವಿಚಾರಗಳಲ್ಲಿ ಸ್ಪಷ್ಟವಾದ ನಿಯಮಗಳ ರಚನೆಯಾಗದೆ ವೃತ್ತಿಪರತೆಯ ಕೊರತೆಯಿಂದಾಗಿ ಪದೇ ಪದೇ ನಿರ್ಮಾಪಕರೊಂದಿಗೆ ವಿವಾದ, ತಿಂಗಳುಗಟ್ಟಲೆ ಸ್ಥಳ ಕದಲಿಸದ ಸೆಟ್‌ಗಳು, ಪರಿಹಾರ ಕಾಣದ ಅಧಿಕಾರಿಗಳು ನಿತ್ಯನೋಟ. ಕಂಠೀರವ ಲಾಭದಾಯಕವಿರಲಿ, ತನ್ನ ಖರ್ಚುಗಳು ಎತ್ತಿಕೊಳ್ಳುವುದೂ ಸಾಧ್ಯವಾಗದೆ ಬಡಕಲಾಯಿತು. ಟಿ.ವಿ. ಚಾನಲ್‌ಗಳಿಗೆ ಫ್ಲೋರ್‌ಗಳನ್ನು ಲೀಸ್‌ಗೆ ಕೊಡುವ ಮಟ್ಟದಲ್ಲಿ ನಿಂತಿದೆ.

ಚಾಮುಂಡೇಶ್ವರಿ ಸ್ಟುಡಿಯೋ

ಚಾಮುಂಡೇಶ್ವರಿ ಸ್ಟುಡಿಯೋ ಬೆಂಗಳೂರಿನಲ್ಲಿ ಪ್ರಾರಂಭವಾದ ಸುಸಜ್ಜಿತ ಮತ್ತು ಐತಿಹಾಸಿಕ ಮಹತ್ವ ಇರುವ ಸಂಸ್ಥೆ. ''ಗಾರೆ, ಇಟ್ಟಿಗೆ, ಕಬ್ಬಿಣಗಳಿಂದ ಒಂದು ಸ್ಟುಡಿಯೋ ಸಿದ್ಧವಾಗಿಬಿಡುವುದಿಲ್ಲ. ಕೇವಲ ಒಂದು ರಂಗಮಂದಿರ ನಾಲ್ಕು ಗೋಡೆಗಳ ಮಧ್ಯೆ ಇದ್ದರೆ ಅದನ್ನೇ ಸ್ಟುಡಿಯೋ ಎಂದು ಕರೆಯಲಾಗುವುದಿಲ್ಲ. ಅಂಥ ರಂಗಸ್ಥಳದಲ್ಲಿ ಚಿತ್ರೀಕರಿಸಿದ್ದನ್ನು ಅಲ್ಲೇ ನೋಡುವ ಸೌಲಭ್ಯ ಇರಬೇಕು. ಅದು ನಿಜವಾದ ಸ್ಟುಡಿಯೋ'' ಎನ್ನುವ ಗಂಭೀರ-ಖಚಿತ ನಿಲುವಿನವರು ಕುಪ್ಪುಸ್ವಾಮಿ ನಾಯ್ಡು. ಅವರು ಚಾಮುಂಡೇಶ್ವರಿ ಸ್ಟುಡಿಯೋದ ಮಾಲೀಕರು.

ಬೆಂಗಳೂರಿನಲ್ಲಿ ಕನ್ನಿಂಗ್‌ಹ್ಯಾಂ ರಸ್ತೆಯ ಉತ್ತರಕ್ಕಿರುವ ಅಡ್ಡರಸ್ತೆಯಲ್ಲಿದ್ದ ಬೊಬ್ಬಿಲಿ ಮಹಾರಾಜರ ಬಂಗಲೆಯನ್ನು ೧೯೪೮ ಆಗಸ್ಟ್ ೨೫ರಂದು ಕೊಂಡು ಸ್ಟುಡಿಯೋ ಕಟ್ಟಲು ಪ್ರಾರಂಭಿಸಲಾಯಿತು. ಕೊಯಮುತ್ತೂರಿನ ವಾಣಿಜ್ಯೋದ್ಯಮಿ ಶ್ರೀರಾಮುಲು ನಾಯ್ಡು ಮತ್ತು ಅವರ ಅಳಿಯ ಕುಪ್ಪುಸ್ವಾಮಿ ನಾಯ್ಡು ಅವರು ಹಗಲಿರುಳು ಸಿದ್ಧಪಡಿಸಿದ ಸಂಸ್ಥೆ ಇದು. ಪ್ರಾರಂಭದಲ್ಲಿ ಕುಪ್ಪುಸ್ವಾಮಿ ನಾಯ್ಡು ಮ್ಯಾನೇಜಿಂಗ್ ಪಾರ್ಟನರ್ ಆಗಿದ್ದರು. ಕುಪ್ಪುಸ್ವಾಮಿ ನಾಯ್ಡು ಚಿತ್ರ ನಿರ್ಮಾಪಕರೂ ಆಗಿದ್ದರು. ಅವರು ೧೯೬೧ರಲ್ಲಿ 'ಸಾಸ್ತಾ ಫಿಲಂಸ್' ಲಾಂಛನದಲ್ಲಿ 'ಶಬರಿಮಲೈ ಅಯ್ಯಪ್ಪ' ಎಂಬ ಮಲೆಯಾಳಿ ಚಿತ್ರವನ್ನು ನಿರ್ಮಿಸಿದರು. ೧೯೬೨ರಲ್ಲಿ ತಮಿಳಿನಲ್ಲಿ ಕೂಡಾ 'ಶಬರಿಮಲೈ ಅಯ್ಯಪ್ಪನ್' ಚಿತ್ರ ತಯಾರಿಸಿದರು. ಎರಡೂ ಭಾಷೆಯಲ್ಲೂ ಯಶಸ್ವಿಯಾದ ಚಿತ್ರಗಳಿವು. ಮಲೆಯಾಳಿ ಚಿತ್ರಕ್ಕೆ ವರ್ಷದ ಶ್ರೇಷ್ಠ ಚಿತ್ರ ಪ್ರಶಸ್ತಿಯೂ ರಾಷ್ಟ್ರಮಟ್ಟದಲ್ಲಿ ಲಭಿಸಿತ್ತು.

೧೯೫೦ರ ಜೂನ್ ತಿಂಗಳ ಹೊತ್ತಿಗೆ ಲ್ಯಾಬೊರೇಟರಿ ಸಿದ್ಧವಾಗಿ ಕಾರ್ಯಾರಂಭ ಮಾಡಿತು. ಅನಂತರ ಸಂಕಲನ ವಿಭಾಗ, ಮೊದಲನೆಯ ಫ್ಲೋರ್, ಹೀಗೆ ಹಂತ ಹಂತವಾಗಿ ಸಜ್ಜುಗೊಂಡಿತು. ಅವರದೇ ಆಗಿದ್ದ ಪಕ್ಷಿರಾಜ ಸ್ಟುಡಿಯೋದಿಂದ ಸಾಕಷ್ಟು ಸಲಕರಣೆಗಳನ್ನು ತರಲಾಗಿತ್ತು. ಜೊತೆಗೆ ಹೊಸ ಹೊಸ ಉಪಕರಣಗಳನ್ನು ತಂದುಕೊಂಡರು. ಅದು ಯಾವ ಕೆಲಸಕ್ಕೂ ಮದರಾಸಿಗೆ ಹೋಗಬೇಕಿಲ್ಲ ಎಂಬಂತೆ ಸಜ್ಜುಗೊಳಿಸುವ ಪ್ರಯತ್ನವಾಗಿತ್ತು.

ಪ್ರಾರಂಭದಲ್ಲಿ ಎರಡು ಡೆವಲಪಿಂಗ್ ಪ್ಲಾಂಟ್‌ಗಳು, ಎರಡು ಪ್ರಿಂಟಿಂಗ್ ಯಂತ್ರಗಳು, ಎರಡು ಮೂವಿಯೋಲಗಳು, ಆರು ಸಂಕಲನದ ಕೊಠಡಿಗಳು, ಒಂದು ಕೋಲ್ಡ್ ಸ್ಟೋರೇಜ್, ಮೂರು ಮೇಕಪ್ ಕೊಠಡಿಗಳು, ಯಂತ್ರಗಳ ವ್ಯವಸ್ಥೆ ಇರುವ ಬಡಗಿ ವಿಭಾಗವೂ ಇತ್ತು. ಬಡಗಿ ಕೆಲಸದ ವಿಭಾಗ ಪ್ರತ್ಯೇಕವಾಗಿ ಇರಿಸಿದ್ದರಿಂದ ಒಂದು ಫ್ಲೋರ್‌ನಲ್ಲಿ ಚಿತ್ರೀಕರಣ ನಡೆಯುತ್ತಿದ್ದಾಗ ಬೇರೆ ಸೆಟ್‌ಗಾಗಿ ಆಗುವ ಸಿದ್ಧತೆಗಳ ಗಡಿಬಿಡಿ, ಗಲಾಟೆಗಳು ಚಿತ್ರೀಕರಣಕ್ಕೆ ಅಡಚಣೆ ಆಗುತ್ತಿರಲಿಲ್ಲ ಮತ್ತು ಇನ್ನೊಂದು ಸೆಟ್ ನಿರ್ಮಾಣ ತ್ವರೆಯಲ್ಲಿ ಆಗುತ್ತಿತ್ತು. ಪ್ರಾರಂಭದಲ್ಲೇ ಇಷ್ಟೆಲ್ಲ ಸಜ್ಜುಗೊಳಿಸಲು ೨.೫ ಲಕ್ಷಕ್ಕೂ ಹೆಚ್ಚು ಹಣ ವೆಚ್ಚ ಮಾಡಿದ್ದರು.

ಸಬ್ಸಿಡಿ ನಿಯಮದ ಅನಿಶ್ಚಿತತೆ, ಕನ್ನಡ ನಿರ್ಮಾಪಕರಿಗೆ ಬಿಡದ ಮದರಾಸು ಮೋಹಗಳ ನಡುವೆ ಇಷ್ಟು ಬಂಡವಾಳ ಹಾಕಿ ಸ್ಟುಡಿಯೋ ನಿರ್ಮಿಸಿದ್ದರ ಬಗ್ಗೆ ''ಕನ್ನಡ ಚಿತ್ರಗಳ, ಅದರಲ್ಲೂ ವರ್ಣ ಚಿತ್ರಗಳ ನಿರ್ಮಾಣಕ್ಕೆ ಕೈ ಹಾಕಿದ್ದೇವೆ. ಮದರಾಸಿಗೆ ಹೋಗದೆ ಇಲ್ಲೇ ಉತ್ತಮ ಮಟ್ಟದ ಚಿತ್ರ ನಿರ್ಮಾಣ ಸಾಧ್ಯವೆಂದು ಮಾಡಿ ತೋರಿಸುತ್ತೇವೆ. ಹಾಗೆಂದು ಬರೀ ಕನ್ನಡ ಚಿತ್ರಗಳಿಂದಲೇ ನಮ್ಮ ಬಂಡವಾಳ ಹಿಂತಿರುಗಲಾರದು. ಬೇರೆ ಭಾಷೆಯ ಚಿತ್ರಗಳನ್ನೂ ತಯಾರಿಸಬೇಕಾಗುತ್ತದೆ'' ಎಂದಿದ್ದರು ಕುಪ್ಪುಸ್ವಾಮಿ ನಾಯ್ಡು. ಅವರೇ ನಿರ್ಮಿಸಿದ 'ಸುಭದ್ರಾ ಕಲ್ಯಾಣ' ಈಸ್ಟ್‌ಮನ್ ಕಲರ್‌ನಲ್ಲಿ ತಯಾರಾದ ಅತ್ಯಂತ ಶ್ರೀಮಂತ ಚಿತ್ರ. ಮೈಸೂರಿನ ಪ್ರೀಮಿಯರ್ ಸ್ಟುಡಿಯೋದ ಬಸವರಾಜಯ್ಯನವರೂ ಚಿತ್ರ ನಿರ್ಮಿಸಿದ್ದನ್ನು ಇಲ್ಲಿ ನೆನೆಯಬಹುದಾಗಿದೆ. ಆದರೆ 'ಸುಭದ್ರಾ ಕಲ್ಯಾಣ' ಚಿತ್ರ ಕುಪ್ಪುಸ್ವಾಮಿ ಅವರ ಕಲ್ಪನೆ, ಭರವಸೆಗಳ ಹತ್ತಿರಕ್ಕೂ ಬರಲಿಲ್ಲ. ಚಾಮುಂಡೇಶ್ವರಿಯಲ್ಲಿ ಪ್ರಾರಂಭದಲ್ಲೇ ಕನ್ನಡ ಹಾಗೂ ಮಲೆಯಾಳಂ ಸೇರಿದಂತೆ ಎರಡು ಚಿತ್ರಗಳು ಸಂಪೂರ್ಣವಾಗಿ ಸ್ಟುಡಿಯೋದಲ್ಲೇ ತಯಾರಾಗಿದ್ದವು ('ಸಾಕ್ಷಾತ್ಕಾರ' ಹಾಗೂ ಮಲೆಯಾಳದ 'ಕರಿನಿಳಲ್'). ಕಪ್ಪು-ಬಿಳುಪು ಸಂಸ್ಕರಣ, ಸಂಕಲನ, ಪ್ರಿಂಟಿಂಗ್ ಕೂಡಾ ಅಲ್ಲೇ ಆಗಿತ್ತು. 'ಸಾಕ್ಷಾತ್ಕಾರ' ಚಿತ್ರದ ರಿ-ರಿಕಾರ್ಡಿಂಗ್ ಕೂಡಾ ಅಲ್ಲೇ ಆಗಿತ್ತು.

೧೯೭೧ರ ಹೊತ್ತಿಗೆ ಸ್ಟುಡಿಯೋದಲ್ಲೇ ಸಂಸ್ಕರಣಗೊಂಡ ಚಿತ್ರಗಳು 'ತಾಯಿ ದೇವರು', 'ನಮ್ಮ ಸಂಸಾರ', 'ಬೇತಾಳ ಗುಡ್ಡ', 'ಮೂರು ಮುತ್ತುಗಳು', 'ಪೂರ್ಣಿಮಾ', 'ಕಸ್ತೂರಿ ನಿವಾಸ', 'ಪರೋಪಕಾರಿ', 'ದೇವರ ಮಕ್ಕಳು', 'ಸಾಕ್ಷಾತ್ಕಾರ', 'ಕುಲಗೌರವ', ಮಲೆಯಾಳದ 'ಕರಿನಿಳಲ್', 'ಮಾನ್‌ಪೇಡ' ಮುಂತಾದವು.

ಕ್ರೇನ್, ಟ್ರ್ಯಾಲಿ, ಒಳ್ಳೆಯ ಕ್ಯಾಮರಾ ಎಲ್ಲವೂ ಇದ್ದುದರಿಂದ ಬಾಡಿಗೆ ತುಸು ಹೆಚ್ಚೆಂದು ಮೇಲು ನೋಟಕ್ಕೆ ಕಂಡರೂ ಚಿತ್ರೀಕರಣ ಒಂದೇ ಕಡೆ - ಪರಿಕರಗಳಿಗೆ ಅಲೆದಾಡದೆ - ನಡೆದುಹೋಗುವುದರಿಂದ ಸಮಯದ ಉಳಿತಾಯವಂತೂ ಆಗುತ್ತಿತ್ತು.

ಆ ದಿನಗಳಲ್ಲಿ ಭಾರತದ ಎರಡು ಸ್ಟುಡಿಯೋಗಳಲ್ಲಿ ಮಾತ್ರ ಬಿ.ಎನ್.ಸಿ.ಮಿಚೆಲ್ ಕ್ಯಾಮರಾಗಳಿದ್ದವು. ಒಂದು ಚಾಮುಂಡೇಶ್ವರಿ, ಮತ್ತೊಂದು ಮುಂಬಯಿನ ಕರ್ದಾರ್ ಸ್ಟುಡಿಯೋದಲ್ಲಿತ್ತು. ಚಾಮುಂಡೇಶ್ವರಿಯಲ್ಲಿದ್ದುದು ರಾಜಕಪೂರ್, ದಿಲೀಪ್ ಕುಮಾರ್ ನಟಿಸಿದ್ದ 'ಅಂದಾಜ್' ಚಿತ್ರಕ್ಕೆ ಬಳಸಿದ್ದ ಉಪಕರಣಗಳು.

'ಸುಭದ್ರಾ ಕಲ್ಯಾಣ' ಚಿತ್ರಕ್ಕೆ ಶ್ಲೋಕವೊಂದನ್ನು ರಿಕಾರ್ಡ್ ಮಾಡುವ ಮೂಲಕ ಸದ್ದು ಗದ್ದಲವಿಲ್ಲದೆ ಪ್ರಾರಂಭವಾದ ರಿಕಾರ್ಡಿಂಗ್ ಥಿಯೇಟರ್ ಸುಮಾರು ೮೦ ಅಡಿ ಉದ್ದ, ೪೦ ಅಡಿ ಅಗಲದ ದೊಡ್ಡ ಅಂಗಳ. ಸಮರ್ಥ ಇಂಜಿನಿಯರುಗಳು ಇದ್ದು ಕಾಲಕಾಲಕ್ಕೆ ಅಗತ್ಯವಿರುವ ಆಧುನಿಕ ಉಪಕರಣಗಳನ್ನು ತರಿಸಿಕೊಳ್ಳುತ್ತಿದ್ದು, ಚಾಮುಂಡೇಶ್ವರಿ ಸ್ಟುಡಿಯೋ ಶಿಸ್ತು ಮತ್ತು ಘನತೆವೆತ್ತ ಸಂಸ್ಥೆಯಾಗಿ ರೂಪುಗೊಂಡಿತ್ತು. ೧೯೭೩ರ ಹೊತ್ತಿಗೆ ಇದ್ದ ಎರಡನೆಯ ಫ್ಲೋರ್ ಚಿಕ್ಕದೆಂಬ ಕಾರಣಕ್ಕೆ ಮೂರನೆಯ ಫ್ಲೋರ್ ನಿರ್ಮಿಸಿದರು. ಸುಮಾರು ೫೦ ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಲು ಪ್ರಾರಂಭಿಸಿದ್ದರು. ಚಾಮುಂಡೇಶ್ವರಿಯ ಎಲ್ಲ ಫ್ಲೋರ್‌ಗಳು ಸದಾಕಾಲ ಬ್ಯುಸಿಯಾಗಿರುತ್ತಿದ್ದವು.

ಮದರಾಸಿನಲ್ಲಿ ದಿಢೀರನೆ ಎರಗಿದ ವಿದ್ಯುತ್ ಖೋತಾದ ಪಿಡುಗಿನಿಂದಾಗಿ ಅಲ್ಲಿಯ ಚಿತ್ರಗಳೂ ಕರ್ನಾಟಕಕ್ಕೆ ಬರತೊಡಗಿದವು. ೧೯೭೩ನೇ ಮಾರ್ಚ್ ತಿಂಗಳಲ್ಲಿ ಎನ್.ಟಿ.ರಾಮರಾಯರು ಬೆಂಗಳೂರಿಗೆ ಬಂದು ತೆಲುಗು ಚಿತ್ರವೊಂದರಲ್ಲಿ ಅಭಿನಯಿಸಿದರು. ೧೯೭೬ರಲ್ಲಿ ಕುಪ್ಪುಸ್ವಾಮಿ ನಾಯ್ಡು ಸಂಪೂರ್ಣವಾಗಿ ಸ್ಟುಡಿಯೋ ಮಾಲೀಕತ್ವ ವಹಿಸಿಕೊಂಡರು, ಮತ್ತು ಖಾಸಗಿ ಮಾಲೀಕತ್ವದಿಂದ ಪ್ರೈವೇಟ್ ಲಿಮಿಟೆಡ್ ಕಂಪನಿಯಾಗಿ ಪರಿವರ್ತಿಸಿದ 'ಮಾ ಚಾಮುಂಡೇಶ್ವರಿ ಸ್ಟುಡಿಯೋ ಅಂಡ್ ಲ್ಯಾಬ್ (ಪ್ರೈ) ಲಿಮಿಟೆಡ್' ಹೆಸರಿನಲ್ಲಿ ನಾಯ್ಡು ಅವರೇ ಮ್ಯಾನೇಜಿಂಗ್ ಡೈರೆಕ್ಟರೂ ಆಗಿ ಜವಾಬ್ದಾರಿ ವಹಿಸಿಕೊಂಡರು.

೧೯೮೫ರಲ್ಲಿ ಮತ್ತೆ ನವೀಕರಣಗೊಳಿಸಿದರು. ಅಮೆರಿಕಾ, ಜರ್ಮನಿ, ಆಸ್ಟ್ರೇಲಿಯಾ ಮತ್ತು ಇಂಗ್ಲಂಡ್‌ನಿಂದ ಆಧುನಿಕ ಯಂತ್ರೋಪಕರಣಗಳನ್ನು ತರಿಸಿ ಅಳವಡಿಸಿದರು. ಅಮೂಲ್ಯವಾದ ಆಧುನಿಕ ಸಲಕರಣೆಗಳನ್ನು ಅಳವಡಿಸಿಕೊಂಡು ಸ್ಟುಡಿಯೋ ವಿಸ್ತಾರಗೊಂಡಿತು. ಕಾಲಕಾಲಕ್ಕೆ ಹೊಸ ಆವಿಷ್ಕಾರದ ಹಿನ್ನೆಲೆಯ ಆಧುನಿಕ ಯಂತ್ರಗಳನ್ನು ಅಳವಡಿಸಿಕೊಳ್ಳುತ್ತಲೇ ಬಂದಿತು.

ಈ ೨೦೦೦ದ ಹೊತ್ತಿಗೆ ಸ್ಟುಡಿಯೋದ ವಿಸ್ತೀರ್ಣ ೪೮,೭೮೬ ಚದರ ಅಡಿಗಳಷ್ಟಿದೆ. ಸ್ಟುಡಿಯೋದಲ್ಲಿ ಹಾಡುಗಳಿಗೆ ಡಿಜಿಟಲ್ ರಿಕಾರ್ಡಿಂಗ್ ಪದ್ಧತಿ, ಡಬ್ಬಿಂಗ್‌ಗೆ ಡಿಜಿಟಲ್ ಪದ್ಧತಿ, ರಿ-ರಿಕಾರ್ಡಿಂಗ್ ಮತ್ತು ಮಿಕ್ಸಿಂಗ್‌ಗೆ ಸಹ ಡಿಜಿಟಲ್ ಪದ್ಧತಿಯನ್ನು ಅಳವಡಿಸಲಾಗಿದೆ. ಸಂಕಲನಕ್ಕೆ ಸ್ಟೀನ್‌ಬೆಕ್ ಸಲಕರಣೆಯಿದೆ. ಸೌಂಡ್ ನೆಗೆಟಿವ್ ಪ್ರೋಸೆಸಿಂಗ್ ಇತ್ಯಾದಿಗಳೂ ಇವೆ.

೧೯೮೭ರಲ್ಲಿ ಒಮ್ಮೆ ಛಾವಣಿ ಕುಸಿಯಿತು ಮತ್ತು ೧೯೮೮ನೇ ಜನವರಿಯಲ್ಲಿ ಒಂದೆರಡು ಬಾರಿ ಬೆಂಕಿ ಅನಾಹುತವಾಯಿತು. ಆಗ ಸ್ಟುಡಿಯೋದ ೧೨೦ X ೮೦ ಚದರ ಅಡಿ ವಿಸ್ತಾರದ ಬಹುದೊಡ್ಡ ಫ್ಲೋರ್ ಸಂಪೂರ್ಣವಾಗಿ ನಾಶವಾಯಿತು. ಶಿವರಾಜ್ ಕುಮಾರ್ ಅಭಿನಯದ 'ಶಿವ ಭಕ್ತ ಕಣ್ಣಪ್ಪ'ದ ಚಿತ್ರೀಕರಣ ನಡೆದಿತ್ತು. ಭಾರೀ ಸೆಟ್ ಹಾಕಲಾಗಿತ್ತು. ಈ ಸಂದರ್ಭದಲ್ಲಿ ಯಾರಿಗೂ ಪ್ರಾಣಹಾನಿಯಾಗದೆ ಪಾರಾದರೆಂಬುದೇ ಸಮಾಧಾನದ ಸಂಗತಿ. ಇದಾದ ನಂತರ ಸ್ಟುಡಿಯೋದಲ್ಲಿ ಚಿತ್ರೀಕರಣಕ್ಕೆ ಅವಕಾಶ ಕೊಡುವುದೇ ಬೇಡವೆಂದು ವ್ಯವಸ್ಥಾಪಕ ವರ್ಗವು ತೀರ್ಮಾನ ತಗೆದುಕೊಂಡಿತು. ಚಿತ್ರ ತಂಡಗಳೂ ಹೊರಾಂಗಣವನ್ನೇ ಆಯ್ದುಕೊಳ್ಳುವ ಪರಿಪಾಠ ಬೆಳೆಸಿಕೊಂಡ ಹಿನ್ನಲೆಯಲ್ಲಿ ಉದ್ಯಮಕ್ಕೆ ಇದೊಂದು ದೊಡ್ಡ ಸಮಸ್ಯೆ ಆಗಲಿಲ್ಲ.

ಸರ್ಕಾರದ ಸೌಲಭ್ಯಗಳನ್ನು ಬಯಸುವ ಎಲ್ಲ ಚಿತ್ರಗಳ ನಿರ್ಮಾಣ ಚಟುವಟಿಕೆಗಳೂ (ಚಿತ್ರೀಕರಣ, ಡಬ್ಬಿಂಗ್, ರಿಕಾರ್ಡಿಂಗ್, ಸಂಕಲನ ಇತ್ಯಾದಿ) ಕರ್ನಾಟಕದಲ್ಲೇ ಆಗಬೇಕೆಂಬ ನಿಯಮವನ್ನು ಸರ್ಕಾರ ೧-೧-೧೯೮೮ರಿಂದಲೇ ಜಾರಿಗೆ ತಂದಿತು. ಇದರಿಂದ ಕರ್ನಾಟಕದ ಸ್ಟುಡಿಯೋಗಳಿಗೆ ಮತ್ತಷ್ಟು ಚೈತನ್ಯ ಬಂದಂತಾಯಿತು.

ಚಾಮುಂಡೇಶ್ವರಿ ಕೂಡಾ ಚಿತ್ರೀಕರಣವನ್ನು ನಿಷೇಧಿಸಿದರೂ ಇನ್ನುಳಿದ ಡಬ್ಬಿಂಗ್, ರಿಕಾರ್ಡಿಂಗ್, ರಿ-ರಿಕಾರ್ಡಿಂಗ್, ಸಂಕಲನ, ಸಂಸ್ಕರಣ ಇತ್ಯಾದಿ ಕಾರ್ಯಗಳನ್ನು ಮುಂದುವರಿಸಿಕೊಂಡು ಹೋಯಿತು.

"ಸ್ಟುಡಿಯೋ ಪ್ರಾರಂಭವಾದಾಗಿನಿಂದ ಪ್ರಸಿದ್ಧ ನಿರ್ಮಾಣ ಸಂಸ್ಥೆಗಳಾದ ಪೂರ್ಣಿಮಾ ಎಂಟರ್‌ಪ್ರೈಸಸ್, ಶ್ರೀ ವೈಷ್ಣವಿ ಕಂಬೈನ್ಸ್, ನಿರುಪಮಾ ಆರ್ಟ್ ಕಂಬೈನ್ಸ್ ಮೊದಲಾದ ರಾಜಕುಮಾರ್ ಮತ್ತು ಅವರ ಕುಟುಂಬದವರು, ಸಂಬಂಧಿಕರ ಅಧೀನದಲ್ಲಿರುವ ಸಂಸ್ಥೆಗಳು ಇಲ್ಲಿಯೇ ತಮ್ಮ ಚಿತ್ರಗಳ ಕೆಲಸ ಮಾಡಿವೆ. ಶ್ರೀ ಈಶ್ವರಿ ಪ್ರೊಡಕ್ಷನ್ಸ್, ಜೆಸ್ ಮೂವೀಸ್, ಕೆ.ಸಿ.ಎನ್.ಮೂವೀಸ್, ಬಾಬಾ ಮೂವೀಸ್, ಅಜಂತಾ ಕಂಬೈನ್ಸ್, ಶಾಸ್ತ್ರಿ ಮೂವೀಸ್ ಮೊದಲಾದ ಖ್ಯಾತ ನಿರ್ಮಾಣ ಸಂಸ್ಥೆಗಳು ಚಾಮುಂಡೇಶ್ವರಿಯ ವಿವಿಧ ಶಾಖೆಗಳಲ್ಲಿಯ ಸೌಲಭ್ಯಗಳನ್ನು ಬಳಸಿಕೊಂಡಿವೆ" ಎಂದು ಹೆಮ್ಮೆಯಿಂದಲೇ ಹೇಳುತ್ತದೆ ವ್ಯವಸ್ಥಾಪಕ ವರ್ಗ.

ಮುಖ್ಯವಾಗಿ ಪ್ರಾರಂಭದಿಂದಲೂ ಪ್ರತಿಭಾವಂತ ತಂತ್ರಜ್ಞರು ಕಾರ್ಯನಿರತರಾಗಿದ್ದಾರೆಂಬುದು ಮುಖ್ಯ ಸಂಗತಿ. ಅದರಲ್ಲಿ ಹಲವು ದಶಕಗಳ ಅನುಭವ ಇರುವ ಎಸ್.ಪಿ.ರಾಮನಾಥನ್ ಅವರು ಧ್ವನಿಗ್ರಾಹಕರಾಗಿ ಕೆಲಸ ಮಾಡಿ ಅನೇಕ ರಾಜ್ಯ ಹಾಗೂ ರಾಷ್ಟ್ರ ಪ್ರಶಸ್ತಿ ಗಳಿಸಿದ್ದು ಹೆಮ್ಮೆಯ ಸಂಗತಿಯಾದರೆ ಅವರ ನಂತರದ ಎಸ್.ಮಹೇಂದ್ರನ್ ಅವರೂ ಅಷ್ಟೇ ಪರಿಣತಿಯಿಂದ ಕಾರ್ಯ ನಿರ್ವಹಿಸಿ ಪ್ರಶಸ್ತಿಗಳನ್ನು ಪಡೆದುಕೊಂಡಿದ್ದಾರೆ. ಕೋದಂಡಪಾಣಿಯವರಂಥ ಧ್ವನಿಗ್ರಾಹಕರೇ ಒಂದು ಆಸ್ತಿ ಸ್ಟುಡಿಯೋಗೆ.

ಸ್ಟುಡಿಯೋ ತನ್ನ ಸಾಧನೆ-ಸೇವೆಗಾಗಿ ಅಂದಿನ ಮುಖ್ಯಮಂತ್ರಿ ಗುಂಡೂರಾಯರಿಂದ ಕನ್ನಡ ಚಲನಚಿತ್ರ ನಿರ್ದೇಶಕರ ಸಂಘದಿಂದ (KANFIDA) ಪ್ರಶಸ್ತಿ ಪಡೆದಿದೆ.

ಮದರಾಸಿನಲ್ಲಿ ರೇ.ವೀರಪ್ಪ ವಿದ್ಯುತ್ ಜ್ಯೋತಿ ಆಗಿದ್ದರಿಂದ ಇತ್ತ ಬಂದ ಚಿತ್ರೋದ್ಯಮಿಗಳಿಂದಾಗಿ ಆಗಲೇ ಹೇಳಿದಂತೆ ಎಸ್.ಟಿ.ರಾಮರಾಯರು ಮತ್ತು 'ಬಾಳು ಬೆಳಗಿತು' ಹಿಂದಿ ಅವತರಣಿಕೆ 'ಹಂ ಶಕಲ್' ಚಾಮುಂಡೇಶ್ವರಿಗೆ ಬಂದರೆ, ಪಂತುಲು ಅವರು 'ಸ್ಕೂಲ್ ಮಾಸ್ಟರ್' ತಮಿಳು ಅವತರಣಿಕೆಯನ್ನು ಮೈಸೂರಿನಲ್ಲಿ ಚಿತ್ರಿಸುತ್ತಿದ್ದರು.

ಅಭಿಮಾನ್ ಸ್ಟುಡಿಯೋದಲ್ಲಿ ಪ್ರಸಾದ್ ಪ್ರೊಡಕ್ಷನ್ಸ್‌ರವರು ಎರಡು ಕನ್ನಡ ಚಿತ್ರ ನಿರ್ಮಿಸಲು ಐದು ತಿಂಗಳ ಕಾಲ ಗುತ್ತಿಗೆಗೆ ಪಡೆದರು. ಬಾಲಕೃಷ್ಣ ಅವರು ಸಲಕರಣೆಗಳನ್ನು ಹೊಂದಿಸಲು ಸಂಭ್ರಮದಿಂದ ಓಡಾಡುತ್ತಿದ್ದರು.

ಅಭಿಮಾನ್ ಸ್ಟುಡಿಯೋ

ನಟ ಬಾಲಣ್ಣ (ಟಿ.ಎನ್.ಬಾಲಕೃಷ್ಣ) ಅವರ ಅಭಿಮಾನ್ ಸ್ಟುಡಿಯೋ ಪ್ರಾರಂಭವಾದದ್ದೇ ಒಂದು ರಂಜನೀಯ ಚಿತ್ರಕಥೆಯಂತಿದೆ. ಬಾಲಣ್ಣನವರು ಮದರಾಸಿನಲ್ಲಿ ಚಿತ್ರೀಕರಣದಲ್ಲಿದ್ದಾಗ ಅವರನ್ನೂ, ಚಿತ್ರೀಕರಣವನ್ನು ನೋಡುವ ಆಸೆಯಿಂದ ಬಂದವರನ್ನು ಬಾಗಿಲಲ್ಲಿದ್ದ ವಾಚ್‌ಮನ್ ಒರಟಾಗಿ ನಡೆಸಿಕೊಂಡ. ಸ್ವತಃ ಬಾಲಕೃಷ್ಣರೇ ಬಂದು ಹೇಳಿದರೂ ಬಿಡದೆ ಅಪ್ಪಣೆ ಚೀಟಿ ತನ್ನಿ ಎಂದಿದ್ದ. ಕಡೆಗೆ ಅನುಮತಿ ತಂದು ಅವರನ್ನು ಕರೆದೊಯ್ಯಲು ಕನಿಷ್ಠ ಒಂದೆರಡು ಗಂಟೆಗಳ ಕಾಲ ಬಾಲಕೃಷ್ಣ ವರದಾಡಿಬಿಟ್ಟರು. ಇದೆಲ್ಲ ಕಹಿ ಮನಸ್ಸಿನಲ್ಲಿದ್ದುದರಿಂದ ನಮ್ಮ ನಿರ್ಮಾಪಕರೇ ಕರ್ನಾಟಕದಲ್ಲಿ ಸ್ಟುಡಿಯೋ ನಿರ್ಮಿಸಿದ್ದರೆ ಇಂಥ ಸ್ಥಿತಿ ಬರುತ್ತಿರಲಿಲ್ಲ ಎಂದು ಯೋಚಿಸುತ್ತಿದ್ದರು. ಕೆಲವರಲ್ಲಿ ಪ್ರಸ್ತಾಪ ಮಾಡಿ 'ನ'ಕಾರಾತ್ಮಕ ಉತ್ತರವನ್ನು ಪಡೆದರು. ಇದೇ ಹೊತ್ತಿನಲ್ಲಿ ಮದರಾಸು, ಮುಂಬಯಿಯ ಕೆಲವರು ಬೆಂಗಳೂರಿನಲ್ಲಿ ಸ್ಟುಡಿಯೋ ನಿರ್ಮಿಸುವ ಪ್ರಯತ್ನ ಮಾಡುತ್ತಿದ್ದಾರೆಂಬ ಸುದ್ದಿಯೂ ಇತ್ತು. ಅವರು ಯಾರೇ ಸ್ಟುಡಿಯೋ ನಿರ್ಮಿಸಿದರೂ ಅತ್ತಕಡೆಯವರನ್ನೇ ತಂದು ಕೆಲಸಕ್ಕಿಡುತ್ತಾರೆ. ಕನ್ನಡಿಗರಿಗೆ ಈ ಕ್ಷೇತ್ರದಲ್ಲಿ ಉದ್ಯೋಗಾವಕಾಶವೇ ಇಲ್ಲದಂತಾಗುತ್ತದೆ ಎಂಬ ಆತಂಕ ಬಾಲಕೃಷ್ಣರಿಗೆ.

ಕಡೆಗೆ ತಾವೇ ಸ್ಟುಡಿಯೋ ಪ್ರಾರಂಭಿಸಲು ತೀರ್ಮಾನಿಸಿದರು. ತಮ್ಮ ಚಿತ್ರಾಭಿಮಾನಿಗಳಿಂದ ತಲಾ ನೂರು ರೂಪಾಯಿಯಂತೆ ಆನ್ ಡಿಮ್ಯಾಂಡ್ ಪ್ರೊನೋಟ್ ನೀಡಿ ಸಾಲ ಪಡೆದು ಸ್ಟುಡಿಯೋ ನಿರ್ಮಿಸುವ ಯೋಜನೆ ಹಾಕಿದರು. ಪ್ರಾರಂಭಕ್ಕೆ ಬೀಜ ಹಣ (ಸೀಡ್ ಮನಿ) ಕೊಟ್ಟಿದ್ದು ಬಾಲಕೃಷ್ಣರ ಹೆಂಡತಿಯೇ. ಅದಕ್ಕಾಗಿ ಆಕೆ ತಮ್ಮ ಕೈಯಲ್ಲಿದ್ದ ಚಿನ್ನದ ಜೋಡಿ ಬಳೆಯನ್ನು ಒತ್ತೆ ಇಟ್ಟು ಹಣ ಹೊಂದಿಸಿದ್ದರು. ಆ ಹಣದಿಂದ ಆನ್ ಡಿಮ್ಯಾಂಡ್ ಪ್ರೊನೋಟ್ ಮಾದರಿಯನ್ನು ಅಚ್ಚು ಮಾಡಿ ಪುಸ್ತಕ ರೂಪದಲ್ಲಿ ಸಿದ್ಧಮಾಡಿಟ್ಟುಕೊಂಡರು. ಬೆಂಗಳೂರಿಗೆ ಬಂದವರು ಮೊದಲು ನೋಡಿದ್ದು ದೀನಬಂಧು ವಿ.ಆರ್.ನಾಯಿಡು ಅವರನ್ನು. ಅವರು ಶುಭ ಹಾರೈಸಿ ಮೊದಲು ಬೋಣಿ ಮಾಡಿದವರೆಂದು, 'ಅವರು ನನ್ನ ಪಾಲಿನ ದೇವತಾ ಮನುಷ್ಯ' ಎಂದು ಬಾಲಕೃಷ್ಣರು ನೆನೆಯುತ್ತಿದ್ದರು. ಶಿವಪುರದಲ್ಲಿ ಗೆಳೆಯ ಸುಬ್ಬಣ್ಣನವರ ನೆರವಿನಿಂದ ಎರಡು ಸಾವಿರ ರೂಪಾಯಿ ಸಂಗ್ರಹವಾಯಿತು. ಶೂಟಿಂಗ್ ಮುಗಿಸಿ ಉಳಿದ ದಿನಗಳಲ್ಲೆಲ್ಲ ಸಂಚಾರ ಮಾಡಿದರು ಬಾಲಕೃಷ್ಣ. ಅವರ ಬಗ್ಗೆ ಸಲ್ಲದ ಪ್ರಚಾರಗಳೂ ಆದವು. ಧನ ಸಂಗ್ರಹಣೆಯಂಥ ಕೆಲಸದಲ್ಲಿ ಅದೆಲ್ಲ ಸಹಜವೇ. ೧೯೬೮ರಲ್ಲಿ ಬ್ಯಾಡಗಿಯಲ್ಲಿದ್ದ ಅಭಿಮಾನ ಕಲಾವಿಲಾಸಿ ನಾಟ್ಯ ಸಂಘದವರು ಬಾಲಕೃಷ್ಣ ಮತ್ತಿತರರನ್ನು ಕರೆಸಿ ಸನ್ಮಾನ ಮಾಡಿದರು. ಆ ಸಂದರ್ಭದಲ್ಲಿ ಸಂಸ್ಥೆ ಸಾಲವಾಗಿ ೫೦೦ ರೂಪಾಯಿ ಕೊಟ್ಟಿತು.

ಬಾಲಣ್ಣನವರು ಸ್ಟುಡಿಯೋಗೆ ನಿವೇಶನ ಹುಡುಕತೊಡಗಿದರು. ಖಾಸಗಿ ನಿವೇಶನಗಳನ್ನು ಕೊಳ್ಳುವ ಧನಬಲ ಇರಲಿಲ್ಲ. ಕೆಂಗೇರಿ ಬಳಿಯ ಸ್ಥಳವನ್ನು ಅಲ್ಲಿಯವರೇ ಆದ ರಾಜಣ್ಣ ಎಂಬುವವರು ತೋರಿಸಿದರು. ನಗರಕ್ಕೆ ಕೊಂಚ ದೂರವಾಯಿತು ಎನ್ನಿಸಿದರೂ ಬೇರೆ ದಾರಿ ಇರಲಿಲ್ಲ. ಆಗ ಅರಣ್ಯ ಮಂತ್ರಿಗಳಾಗಿದ್ದ ಬಿ.ರಾಚಯ್ಯನವರ ಬಳಿ ಸ್ಟುಡಿಯೋ ನಿರ್ಮಾಣದ ಯೋಜನೆ, ಆಯ್ದುಕೊಂಡ ನಿವೇಶನ ಕುರಿತು ವಿವರಿಸಿ ಸಹಾಯಕ್ಕೆ ಯಾಚಿಸಿದಾಗ ಅವರು ಅತ್ಯಂತ ಉತ್ಸಾಹದಿಂದಲೇ ಒಪ್ಪಿಕೊಂಡರು. ಶಂಕುಸ್ಥಾಪನೆಯೂ ಆಗಿ ೧೨೦ X ೬೦ X ೩೦ ಅಡಿಯ ಫ್ಲೋರ್ ನಿರ್ಮಾಣವೂ ಆರಂಭವಾಯಿತು. ಮೇಕಪ್ ಸಲುವಾಗಿ ಕಟ್ಟಡಗಳಿದ್ದವು. ಫ್ಲೋರ್‌ನ ಮುಕ್ಕಾಲು ಗೋಡೆ ಎದ್ದಿರುವಾಗಲೇ ಶ್ರೀಕಾಂತ್ ಅಂಡ್ ಶ್ರೀಕಾಂತ್ ಎಂಟರ್‌ಪ್ರೈಸಸ್‌ನವರು ತಮ್ಮ 'ಮಾರ್ಗದರ್ಶಿ' ಚಿತ್ರದ ಕೆಲಸ ಪ್ರಾರಂಭಿಸಿದರು. ಅದಕ್ಕಾಗಿ ತುರ್ತು ಮೇಲ್ಛಾವಣಿಯನ್ನು ಅವರೇ ಹಾಕಿಸಿಕೊಂಡರು. ತೀರ್ಥಹಳ್ಳಿಯ ಬಿ.ಎಸ್.ವಿಶ್ವನಾಥನ್ ಅವರು ಪಂಪ್‌ಸೆಟ್ ಹಾಕಿಸಿ ನೀರಿನ ಸೌಲಭ್ಯವನ್ನೂ ಉಚಿತವಾಗಿಯೇ ಒದಗಿಸಿದರು. 'ಮಾರ್ಗದರ್ಶಿ' ಒಳಾಂಗಣ ಚಿತ್ರೀಕರಣವೂ ಸರಾಗವಾಗಿ ನಡೆದು ಹೋಯಿತು. ಪಾಲ್ ಅವರು ತಮ್ಮ 'ಪುನರ್ಜನ್ಮ', 'ಚದುರಂಗ' ಚಿತ್ರಗಳಿಗೆ ಒಪ್ಪಂದ ಮಾಡಿಕೊಂಡರು. ಅವರು ಸುಜಾತ ಸಂಚಾರಿ ಘಟಕದ ಉಪಕರಣಗಳನ್ನು ಬಳಸಿಕೊಂಡು ಚಿತ್ರಿಸಬೇಕಾಯಿತು. ಇವೆಲ್ಲ ಬಾಲಣ್ಣನವರಿಗೆ ಮತ್ತಷ್ಟು ಬಲ, ಉತ್ಸಾಹ ತಂದುಕೊಟ್ಟವು. ಆದರೆ ಥಟ್ಟನೆ ಮೌನ ಕವಿಯಿತು. ಯಾರೂ ಚಿತ್ರೀಕರಣಕ್ಕೇ ಬರಲಿಲ್ಲ. ಚಿತ್ರಗಳ ಕೆಲಸ ಆಗಬಹುದೆಂದುಕೊಂಡು ಅವರಾಗಲೇ ಒಪ್ಪಂದ ಮಾಡಿಕೊಂಡಿದ್ದರಿಂದಾಗಿ ಉಪಕರಣಗಳಿಗೆ ಮೂರು ತಿಂಗಳ ಬಾಡಿಗೆ, ಕೆಲಸಗಾರರಿಗೆ ಸಂಬಳ ಎಲ್ಲವನ್ನೂ ಕೊಡಲೇಬೇಕಿತ್ತು. ದಿಕ್ಕುಗಾಣದೆ ಕುಳಿತ ಹೊತ್ತಿನಲ್ಲಿ ಅಂದಿನ ಕೈಗಾರಿಕಾ ಮಂತ್ರಿ ಎಂ.ರಾಜಶೇಖರಮೂರ್ತಿಗಳು ಸ್ಟುಡಿಯೋಗೆ ಭೇಟಿ ಇತ್ತರು. ಅವರ ಹತ್ತಿರ ಸ್ಟುಡಿಯೋದ ಸಮಸ್ಯೆಗಳ ಬಗ್ಗೆ ರಾಜಕುಮಾರ್ ಅವರು ಹೇಳಿದರಿಂದ 'ನಾಳೆಯೇ

ಬಂದು ನೋಡಿ' ಎಂದರು ಮಂತ್ರಿಗಳು. ಮಾರುದಿನ ಹೋದಾಗ ರಾಜಶೇಖರ ಮೂರ್ತಿಗಳು ಮತ್ತು ಅಂದಿನ ಅರ್ಥಮಂತ್ರಿ ರಾಮಕೃಷ್ಣ ಹೆಗಡೆ ಅವರು ಚರ್ಚಿಸಿ, ಬಾಲಣ್ಣನ ಸಾಹಸವನ್ನು ಮೆಚ್ಚಿ ಕೂಡಲೇ ಐದು ಲಕ್ಷ ರೂಪಾಯಿಗಳನ್ನು ಸಾಲವಾಗಿ ಒದಗಿಸಿದರು. ಕ್ಯಾಮರಾ ಒಂದು ವಿನಾ ಇನ್ನೆಲ್ಲ ಉಪಕರಣಗಳನ್ನು ಖರೀದಿಸಿದರು ಬಾಲಣ್ಣ.

ಆದರೆ ಆ ಹೊತ್ತಿಗೆ ಮತ್ತೆರಡು ಸ್ಟುಡಿಯೋಗಳು ಪ್ರಾರಂಭವಾಗಿದ್ದರಿಂದ ಬಾಲಣ್ಣನಿಗೆ ಒಂದೆರಡು ಸಣ್ಣ ಪುಟ್ಟ ನಿರ್ಮಾಪಕರ ಸಹಾನುಭೂತಿಯ ನೆರವು ಸಿಕ್ಕಿತಾಗಲಿ, ಸ್ಟುಡಿಯೋ ಸದಾ ಬ್ಯುಸಿ ಆಗುವುದು ಸಾಧ್ಯವೇ ಇರಲಿಲ್ಲ. ಬಾಲಕೃಷ್ಣ ಎಲ್ಲವೂ ಅಚ್ಚುಕಟ್ಟಾಗಿ, ಸುಖವಾಗಿ ಇರಲಿ ಎಂದು ಯೋಜಿಸಿದ್ದರು. ನಿರ್ಮಾಪಕರು ಇತರರಿಗೆ ಓಡಾಡುವ ತೊಂದರೆ ತಪ್ಪಿಸಲು ಸ್ಟುಡಿಯೋದಲ್ಲೇ ಹನ್ನೆರಡು 'ಗೆಸ್ಟ್ ರೂಮ್'ಗಳನ್ನು ಕಟ್ಟಿಸಿದ್ದರು. ಭಾವಣೆ ಹೊದಿಸಲು ಸಾಕಷ್ಟು ಹಣ ಇರಲಿಲ್ಲ. ಎರಡನೆಯ ಫ್ಲೋರ್ ಸಹ ಪ್ರಾರಂಭಿಸಿದ್ದರು. ಆದರೆ ಚಿತ್ರಗಳೇ ಬರಲಿಲ್ಲ. ಮದರಾಸಿನ ಖ್ಯಾತ ನಿರ್ದೇಶಕ ಸಿ.ವಿ.ಶ್ರೀಧರ್ ಅವರು 'ನಿನಗಾಗಿ ನಾನು' ವರ್ಣ ಚಿತ್ರವನ್ನು ತಯಾರಿಸಿದ್ದು ಬಿಟ್ಟರೆ ಬೇರಾವ ನಿರ್ಮಾಪಕರೂ ಸುಳಿಯಲೇ ಇಲ್ಲ. ಬಾಲಣ್ಣ ತಾವು ಅಭಿನಯಿಸದ್ದಕ್ಕೆ ಬಂದ ಸಂಭಾವನೆಯನ್ನು ಇಲ್ಲಿಯ ಕೆಲಸಗಳು, ಕೆಲಸಗಾರರಿಗೆ ಹಂಚಬೇಕಾಯಿತು. ಮನೆಯಲ್ಲಿ ಎಲ್ಲವೂ ಖಾಲಿ.

ಕೆಲದಿನಗಳ ಅನಂತರ ಹೆಂಡತಿಯ ಹೆಸರಿನಲ್ಲಿ ಸಿಂಡಿಕೇಟ್ ಬ್ಯಾಂಕ್‌ನಿಂದ ಸಾಲ ಪಡೆದು ಹೊರಾಂಗಣ ಚಿತ್ರೀಕರಣದ ಘಟಕ ಪ್ರಾರಂಭಿಸಿದರು. ಇದಕ್ಕೆ ಮದರಾಸಿನ ಜೆಮಿನಿ ಸ್ಟುಡಿಯೋ ಮಾಲೀಕರು ತಮ್ಮಲ್ಲಿದ್ದ ಲೈಟ್‌ಗಳು, ಸೌಂಡ್ ಉಪಕರಣಗಳೇ ಮುಂತಾದವನ್ನು ಕೊಂಚ ಕಡಿಮೆ ಬೆಲೆಗೇ ಕೊಟ್ಟರು. ಬಾಲಣ್ಣ ಸ್ಟುಡಿಯೋಗೆ 'ಅಭಿಮಾನ' ಎಂದು ಕರೆದರು. ಜನರಿಂದ ಸಂಗ್ರಹವಾದ ಹಣದಿಂದ ಸಿದ್ಧವಾದ ಸ್ಟುಡಿಯೋ. ಹೀಗೆ ಹೇಳಿಕೊಂಡರೂ ಚಿತ್ರೀಕರಣಕ್ಕೆ ಎಲ್ಲ ಸೌಲಭ್ಯಗಳೂ ಲಭ್ಯವಿರಲಿಲ್ಲ. ಬಾಲಣ್ಣನಿಗೆ ಜನ ಬಲವೂ ಸಾಲದು. ಪ್ರಾರಂಭದಲ್ಲಿ ಎಲ್ಲರೂ ದೊಡ್ಡ ದೊಡ್ಡ ಮಾತಾಡಿ ಬೆಂಬಲ ಸೂಚಿಸಿದರು. ಅವರ ಉತ್ಸಾಹ, ವ್ಯವಹಾರ ಭಾವನಾತ್ಮಕತೆಯೊಂದಿಗೆ ತಳುಕು ಹಾಕಿಕೊಳ್ಳುವುದು ಸಾಧ್ಯವೇ ಇಲ್ಲ. ಬಾಲಣ್ಣನ ಸ್ಟುಡಿಯೋ ನಗರದಿಂದ ಬಹಳ ದೂರದಲ್ಲಿತ್ತು. ಹೋಗಿ ಬರುವ ರಸ್ತೆ ಕೂಡಾ ದುರಸ್ತಿಯಾಗಿರಲಿಲ್ಲ. ರಾತ್ರಿ ತಡವಾದರೆ ಹಿಂತಿರುಗುವುದು ಕಷ್ಟವಿತ್ತು.

ಊರಾಚೆಗಿದ್ದ ಸ್ಟುಡಿಯೋದ ಬಳಿ ಯಾವುದೇ ಅಂಗಡಿ ಮುಂಗಟ್ಟುಗಳೂ ಇರಲಿಲ್ಲ. ಹತ್ತಿರದಲ್ಲಿ ಲಾಡ್ಜಿಂಗ್, ಹೋಟೇಲ್‌ಗಳೂ ಇರಲಿಲ್ಲ. ಇದಲ್ಲ ಹೋಗಲೆಂದರೆ, ಸ್ಟುಡಿಯೋದಲ್ಲೇ ಬಂದಾದರೂಂದು ಅನುಕೂಲ ಇರಲಿಲ್ಲ. ಅಷ್ಟು ದೊಡ್ಡ ಸ್ಥಳವನ್ನು ನಿಭಾಯಿಸಲು, ಚೊಕ್ಕಟಗೊಳಿಸಲು ಜನ ಇರಲಿಲ್ಲ. ಬಾಲಣ್ಣನವರೇ ಪೊರಕೆ ಹಿಡಿದು ಗುಡಿಸುವುದನ್ನು ನೋಡಿಕೊಂಡು ಯಾವ ಚಿತ್ರೀಕರಣ ತಂಡ ಹೊಂದಿಕೊಳ್ಳಲು ಸಾಧ್ಯವಿತ್ತು ? ಕೆಲಸಗಳಿಲ್ಲ, ಹಣವಿಲ್ಲ, ವಿದ್ಯುತ್ ಬಿಲ್ ಸಹ ಕಟ್ಟದ ಯಾವಾಗಲೂ ಸಮಸ್ಯೆ ಆಗುತ್ತಿತ್ತು. ಇಂಥ ನೂರು ತೊಡಕುಗಳು ಇದ್ದಾಗ ಎಲ್ಲವನ್ನು ನಿವಾರಿಸಿ, ಬೇಕಾದ್ದನ್ನು ಒದಗಿಸಬಲ್ಲ ಸ್ಟುಡಿಯೋ ನಗರದ ಹೃದಯದಲ್ಲೇ ಇರುವಾಗ ಕೇವಲ ಬಾಲಣ್ಣನ ಮೇಲಿನ ಪ್ರೀತಿಗೆ ಎಷ್ಟು ಬಾರಿ, ಎಷ್ಟು ವಿಧದಲ್ಲಿ ತೊಂದರೆಯಾದರೂ ಸಹಿಸುವುದಾದೀತು. ಆಗ ಈಗ ಭಾವುಕತೆಯಿಂದ ಬಾಲಣ್ಣನಿಗಾಗಿ ಬಂದ ಜನರನ್ನು ಬಿಟ್ಟರೆ, ಬೇರೆಯವರು ಬರಲಿಲ್ಲ. ಬಂದವರೂ ಸಂತೋಷವಾಗಿ ಕೆಲಸ ಮಾಡಿಕೊಂಡು ತೆರಳಲಿಲ್ಲ. ಇಷ್ಟಾದರೂ ಬಾಲಣ್ಣನಿಗಾಗಿ ಚಿತ್ರಪ್ರೇಮಿಗಳು ಸದಾ ಶುಭ ಕೋರಿದರು. ಪತ್ರಿಕೆಗಳಲ್ಲಿ ಅಭಿಮಾನಿಗಳು ಬರೆಯುತ್ತಲೇ ಇದರು. "ಬಾಲಣ್ಣನ ಸ್ಟುಡಿಯೋದಲ್ಲಿ ಕೆಲಸ ಮಾಡಿ, ಆತನ ಉದ್ದೇಶ ಈಡೇರಲಿ" ಎಂಬ ಒತ್ತಡ ಜನರಿಂದ ಬರುತ್ತಲೇ ಇತ್ತು.

ಬಾಲಣ್ಣ ಕೂಡಾ ಹಲವಾರು ಆಮಿಷಗಳನ್ನೊಡ್ಡಿದರು. ಅವರು ಕೊಟ್ಟ ಒಂದು ಜಾಹಿರಾತು ಹೀಗಿತ್ತು :

'ಸಂಸ್ಕಾರ' ನಿರ್ಮಾಪಕರಿಗೆ ಉಚಿತ ಸ್ಟುಡಿಯೋ : ಬಾಲಣ್ಣ ಘೋಷಣೆ

"...'ಸಂಸ್ಕಾರ' ಚಿತ್ರ ರಾಷ್ಟ್ರಪತಿಗಳ ಚಿನ್ನದ ಪದಕ ಗೆದ್ದಿದೆ. ಇದರಿಂದ ನನಗಾಗಿರುವ ಸಂತೋಷ ಅಪಾರ. ಕನ್ನಡ ಚಿತ್ರ ಯಾವುದೇ ರಾಷ್ಟ್ರಪತಿಯವರ ಪದಕ ಗೆದ್ದರೆ, ಆ ಚಿತ್ರದ ನಿರ್ಮಾಪಕರ ಮುಂದಿನ ಚಿತ್ರಕ್ಕೆ ನನ್ನ ಅಭಿಮಾನ್ ಸ್ಟುಡಿಯೋದಿಂದ ಕಾಲ್‌ಶೀಟ್‌ಗಳನ್ನು ಉಚಿತವಾಗಿ ಕೊಡುವುದಾಗಿ ನಾನು ಹಿಂದೆಯೇ ಘೋಷಣೆ ಹೊರಡಿಸಿದೆ. ಅಂತೆಯೇ ನಮ್ಮ ಘನ ಸರ್ಕಾರದ ಪ್ರೋತ್ಸಾಹ-ನೆರವಿನಿಂದ ಈಗ (ಸ್ಟುಡಿಯೋ) ಸಿದ್ಧವಾಗಿದೆಯಾದ್ದರಿಂದ ಆ ನಿರ್ಮಾಪಕ ಮಹನೀಯರನ್ನು ಆಹ್ವಾನಿಸುತ್ತಿದ್ದೇನೆ."

-ಟಿ.ಎನ್.ಬಾಲಕೃಷ್ಣ

ಅಭಿಮಾನ್ ಚಿತ್ರ ನಿರ್ಮಾಣ ಮಂದಿರ, ಕೆಂಗೇರಿ (ಬೆಂಗಳೂರು)

ಇಷ್ಟೆಲ್ಲ ಉತ್ಸಾಹ ತುಂಬಿದ್ದರೂ ಬಾಲಣ್ಣನಿಗೆ ಸ್ಟುಡಿಯೋ ನಿರ್ವಹಣೆ ಸಾಧ್ಯವಾಗಲಿಲ್ಲ. ಚಿಂತೆ ಬುದ್ಧಿಯನ್ನೇ ಅಲುಗಾಡಿಸಿತ್ತು. ಎಲ್ಲಿ ತನ್ನ ಸ್ಟುಡಿಯೋ ತನ್ನ ಕೈಬಿಟ್ಟು ಹೋಗುತ್ತದೊ ಎಂಬ ಆತಂಕ ಕೊನೆಗಾಲದಲ್ಲಿ ಅವರನ್ನು ಬಹುವಾಗಿ ಕಾಡಿತು. ಭಯ-ಭೀತಿ, ಪೋಲೀಸರಂಬ ಭ್ರಮೆ ಇತ್ಯಾದಿ ಸಿಂಡ್ರೋಮ್‌ಗಳು ಅವರನ್ನು ನರಳಿಸಿದವು. ಬಾಲಣ್ಣ ಆರ್ಥಿಕವಾಗಿ, ಕೌಟುಂಬಿಕವಾಗಿ, ವ್ಯಕ್ತಿಯಲ್ಲಿ ಹೀಗೆ ಹತ್ತಾರು ದಿಕ್ಕಿನಿಂದ ಕುಗ್ಗಿಹೋದರು. ಬಾಲಣ್ಣನವರ ನಿಧನದ ನಂತರ ರಾಜ್ಯ ಸರ್ಕಾರ ಅವರಿಂದ ಬರಬೇಕಾಗಿದ್ದ ಬಾಕಿಯನ್ನೆಲ್ಲ ಮಾಫಿ ಮಾಡಿತು. ಅದರ ಬಹು ದೊಡ್ಡ ನಿವೇಶನವನ್ನು ಮತ್ತೆ ದೀರ್ಘಕಾಲದ ಗುತ್ತಿಗೆಗೆ ವಹಿಸಿಕೊಟ್ಟಿತು. ಬಾಲಣ್ಣನವರ ಮಕ್ಕಳೂ ನೋಡಿಕೊಳ್ಳುವುದು ಸುಲಭವಿಲ್ಲ. ವಿಪರೀತ ಪ್ರಯಾಸದಿಂದ ಸ್ಟುಡಿಯೋ ನಡೆಯುತ್ತಿತ್ತು.

ರವಿಚಂದ್ರನ್ ಅವರು ತಮ್ಮ ಚಿತ್ರಗಳಿಗೆ ಹಾಕುವ ಸೆಟ್‌ಗಳು ಯಾವಾಗಲೂ ಅಪರೂಪವೆನಿಸುವಂಥವು. ಇನ್ನು ಮುಂದೆ ಅಭಿಮಾನ್‌ನಲ್ಲೇ ಸೆಟ್ ಹಾಕುವುದಾಗಿಯೂ, ಅವರ ಚಿತ್ರೀಕರಣ ಮುಗಿದ ಮೇಲೆ ಅಲ್ಪ ಸ್ವಲ್ಪ ಬದಲಾವಣೆ ಮಾಡಿ ಬೇರೆಯವರು ಬಳಸಿದರ ಅಡ್ಡಿ ಇಲ್ಲವೆಂದೂ, ಆದರೆ ಬಾಡಿಗೆಯ ಇಂತಿಷ್ಟು ಭಾಗವನ್ನು ತಮಗೆ ಕೊಡಬೇಕೆಂದೂ ಒಪ್ಪಂದ ಮಾಡಿಕೊಂಡರು. ಆದರೆ ಆರ್ಥಿಕ ಅನಾನುಕೂಲ ಎಷ್ಟೆಂದರ, ಬಾಲಣ್ಣನವರ ಮಗ ಸರಿಯಾಗಿ ಹಣಕಾಸಿನ ವ್ಯವಹಾರ ನಡೆಸಿಕೊಂಡು ಬರಲಿಲ್ಲ. ರವಿಚಂದ್ರನ್ ಅವರು ಒಪ್ಪಂದ ಹಿಂತಗೆದುಕೊಳ್ಳುವಂತಾಯಿತು. ಹೊಸ ಹೊಸ ಕನ್ನಡ ಟಿ.ವಿ.ಚಾನಲ್‌ಗಳು ಬರತೊಡಗಿದ್ದರಿಂದ ಕೆಲವು ಖಾಸಗಿ ಚಾನಲ್‌ಗಳವರು ಮುಖ್ಯವಾಗಿ ಪಿಪ್ಯಾನೆಟ್ ಕಾವೇರಿ ಅವರು ಸ್ಟುಡಿಯೋವನ್ನು ಲೀಸ್‌ಗೆ ತಗೆದುಕೊಂಡು ಚಿತ್ರೀಕರಣಕ್ಕೆ ಬಳಸಲಾರಂಭಿಸಿದರು. ಅಭಿಮಾನ್ ಸ್ಟುಡಿಯೋ ಹೀಗೆ ಇದೆ ಎಂದು ಸಂತೋಷದಿಂದ ಹೇಳಲಾರೆವಾದರೂ, ಅದೂ 'ಇದೆ' ಎಂದರ ಸಾಕು.

ಸಾಗರ್-ಸುಜಾತಾ ಸ್ಟುಡಿಯೋ

ಈ ಮಧ್ಯೆ ಸಹಾಯಧನ ಯೋಜನೆಯ ಬಿರುಸಿನ ದಿನಗಳಲ್ಲಿ ಹುಮ್ಮಸ್ಸಿನಿಂದಲೇ ಪ್ರಾರಂಭವಾದ ಸ್ಟುಡಿಯೋ ಸಾಗರ್-ಸುಜಾತಾ. ಪ್ರಸ್ತುತ ದಯಾನಂದ ಸಾಗರ್ ಕಾಲೇಜುಗಳ ಸಮುಚ್ಚಯವಿರುವ ಪ್ರದೇಶದಲ್ಲಿ ಒಂದೇ ಒಂದು ಫ್ಲೋರ್‌ನೊಂದಿಗೆ ಪ್ರಾರಂಭವಾಯಿತು. ತಗಡುಗಳಿಂದಲೇ ನಿರ್ಮಿಸಿದ್ದರು. ಮದರಾಸಿನ ಸುಜಾತಾ ಹೊರಾಂಗಣ ಘಟಕದಿಂದ ತರಿಸಿದ ಸಲಕರಣೆಗಳನ್ನು ಬಳಸಲಾಗುತ್ತಿತ್ತು. ದಯಾನಂದ ಸಾಗರ್ ಅವರು ನಿರ್ಮಾಪಕರಾಗಿ ಆರ್.ನಾಗೇಂದ್ರರಾಯರು ನಿರ್ದೇಶಿಸುತ್ತಿದ್ದ 'ಪೂರ್ಣಿಮಾ' ಚಿತ್ರ ಅರ್ಧಕ್ಕೇ ನಿಂತಿತು. ನಾಗೇಂದ್ರರಾಯರಿಗೂ ಸಾಗರ್ ಅವರಿಗೂ ಭಿನ್ನಾಭಿಪ್ರಾಯಗಳು ಬಂದವು. ಕಡೆಗ ಸಾಗರ್ ಅವರೇ ಚಿತ್ರೀಕರಣವನ್ನು ಪೂರೈಸಿದರು. 'ಪೂರ್ಣಿಮಾ', ಮತ್ತು 'ನಮ್ಮ ಸಂಸಾರ' ಚಿತ್ರಗಳು ಈ ಸ್ಟುಡಿಯೋದಲ್ಲಿ ತಯಾರಾದವು.

ತಗಡುಗಳನ್ನು ಬಳಸಿ ನಿರ್ಮಿಸಲಾಗಿದ್ದ ಫ್ಲೋರ್ ಒಂದು ದೊಡ್ಡ ಆಲದ ಮರದ ಸನಿಹವೇ ಇತ್ತು. ಆ ಮರದಲ್ಲಿ ಬಹಳಷ್ಟು ಕೋತಿಗಳಿದ್ದವು. ಕೋತಿಗಳು ಫ್ಲೋರಿಗೆ ಧುಮುಕುತ್ತ ಆಟವಾಡುತ್ತಿದ್ದವು. ಹೀಗೆ ತಗಡುಗಳ ಮೇಲೆ ಧುಮುಕಿದಾಗಲೆಲ್ಲ ಶಬ್ದ ಹೆಚ್ಚಾಗಿ ಚಿತ್ರೀಕರಣಕ್ಕೆ ಅಡಚಣೆಯಾಗುತ್ತಿತ್ತು. ಒಂದೆಡೆ ಇಂಥ ತೊಂದರೆಗಳಾದರೆ, ಕೆಲವೇ ಸಮಯದಲ್ಲೇ ಸುಜಾತಾ ಹೊರಾಂಗಣ ಘಟಕದೊಂದಿಗೂ ಭಿನ್ನಾಭಿಪ್ರಾಯ ಏರ್ಪಟ್ಟು ಸ್ಟುಡಿಯೋ ಮುಚ್ಚುವ ಸ್ಥಿತಿಗೆ ಬಂತು. ಆದರೆ ಸುಜಾತಾ ಹೊರಾಂಗಣ ಘಟಕ ಕನ್ನಡ ಚಿತ್ರರಂಗದಲ್ಲಿ ಸಾಕಷ್ಟು ಚಿತ್ರಗಳಿಗೆ ಪರಿಕರವನ್ನು ಒದಗಿಸುತ್ತ ವ್ಯವಹರಿಸುತ್ತಲೇ ಇತ್ತು.

ಬೆಂಗಳೂರು ಫಿಲಂ ಲ್ಯಾಬೊರೇಟರಿ

೧೯೭೨ರ ಮೇ ೨೬ರಂದು ಬೆಂಗಳೂರಿನ ಶೇಷಾದ್ರಿಪುರಂ ಮೊದಲನೆಯ ಮುಖ್ಯರಸ್ತೆಯಲ್ಲಿ ಬೆಂಗಳೂರು ಫಿಲಂ ಲ್ಯಾಬೊರೇಟರಿ ಪ್ರಾರಂಭವಾಯಿತು. ಬೆಂಗಳೂರಿನ ಸ್ಪೀಡ್‌ವೇ ಪಿಕ್ಚರ್ಸ್ (ಪ್ರೈ) ಲಿಮಿಟೆಡ್‌ನ ಮ್ಯಾನೇಜಿಂಗ್ ಡೈರಕ್ಟರ್

ಜಿ.ರಾಮರಾಯರ ಮಹತ್ವಾಕಾಂಕ್ಷೆ ಇದು. ಇದು ಅವರು ಬಹುದಿನಗಳಿಂದ ಕಾಣುತ್ತಿದ್ದ ಕನಸು. ಚಿತ್ರ ತಾಂತ್ರಿಕತೆಯಲ್ಲಿ ಪಳಗಿದ ರಾಮರಾಯರು ಈ ಯೋಜನೆಯನ್ನು ಮುಂದಿಟ್ಟು ಒಂದು ಚಿತ್ರಕ್ಕೆ ಕೊಡುವ ಸಹಾಯಧನ ಮೊತ್ತದಷ್ಟು ಕೊಟ್ಟು ನೆರವಾದರೂ ಸಾಕು ಎಂದು ಸರ್ಕಾರವನ್ನು ಕೇಳಿದ್ದರು. ಆದರೆ ಸರ್ಕಾರ ಅದನ್ನು ಪರಿಗಣಿಸಲೇ ಇಲ್ಲ. ರಾಮರಾಯರು ಸ್ವಪ್ರಯತ್ನದಿಂದಲೇ ಶೇಷಾದ್ರಿಪುರಂನಲ್ಲಿ ಪ್ರಥಮ ಹಂತವಾಗಿ ಎಡಿಟಿಂಗ್ ರೂಂ ಪ್ರಾರಂಭಿಸಿದರು. ಅಲ್ಲಿ ರಾಜ್ಯದಲ್ಲಿ ಮತ್ತೆಲ್ಲೂ ಇಲ್ಲದಿರದ ವಿಶಿಷ್ಟವಾದ ಸೌಂಡ್‌ಹೆಡ್ ಸಹಿತವಾದ ಎಡಿಟಿಂಗ್ ಟೇಬಲ್ ಹಾಗೂ ಮೂವಿಯೋಲಾ ಇತ್ತು. ಪುಟ್ಟದೊಂದು ಪ್ರೊಜೆಕ್ಷನ್ ಥಿಯೇಟರ್ ಸಹ ಇತ್ತು. ಎಲ್ಲ ಸಿದ್ಧಮಾಡಿ ಎರಡು ವರ್ಷದಲ್ಲಿ ಹತ್ತಾರು ಚಿತ್ರಗಳ ಸಂಕಲನ ಕಾರ್ಯ ನಿರ್ವಹಿಸಿದ್ದರು.

ಒಂದು ೩೫ ಎಂ.ಎಂ. ಬೆಲ್ ಅಂಡ್ ಹೊವೆಲ್ ಪ್ರಿಂಟರ್, ಒಂದು ಸ್ಟೇ ಪ್ರೋಸೆಸರ್ (ನೆಗಟಿವ್ ಮತ್ತು ಪಾಸಿಟಿವ್‌ಗಳ ಡೆವಲಪಿಂಗ್‌ಗಾಗಿ), ಒಂದು ಮೂವಿಯೋಲಾ, ಒಂದು ಸೌಂಡ್‌ಹೆಡ್ ಸಹಿತವಾದ ಫೋರ್‌ವೇ ಸಿಂಕ್ರೊನೋಮೀಟರ್ ಇರುವ ಎಡಿಟಿಂಗ್ ಟೇಬಲ್, ಮಿನಿ ಪ್ರಿವ್ಯೂ ಥಿಯೇಟರ್ ಇತ್ಯಾದಿಗಳು ಸಿದ್ಧವಾದವು. ಇಲ್ಲಿದ್ದ ಸ್ಟೇ ಪ್ರೋಸೆಸಿಂಗ್ ಪ್ಲಾಂಟ್ ಬೆಂಗಳೂರಿಗೇ ಹೊಸತು. ಅದು ಸ್ಥಳೀಯವಾಗಿ (ಬೆಂಗಳೂರಿನಲ್ಲೇ) ತಯಾರಾದ ಬಿಡಿಭಾಗಗಳನ್ನು ಸೇರಿಸಿ ರೂಪಿಸಲಾದ ಯಂತ್ರವಾಗಿತ್ತು. ಮದರಾಸಿನ ಫಿಲಂ ಸೆಂಟರ್‌ನ ಮಜೀದ್ ಅವರ ಬಳಿ ಕೆಲಸ ಮಾಡಿ ಬಲ್ಲವರಾದ ಅಬ್ದುಲ್ ಕಾಲೆ ಹಾಗೂ ಈ ಫಿಲಂ ಲ್ಯಾಬ್‌ನ ಜವಾಬ್ದಾರಿ ಹೊತ್ತುಕೊಂಡ ನಾರಾಯಣ್ ಆಮೋಣ್‌ಕರ್ ಅವರು ರಾಮರಾಯರಿಗೆ ಈ ತಾಂತ್ರಿಕ ಸಹಕಾರ ನೀಡಿದ್ದರು. ಸ್ವತಃ ರಾಮರಾಯರೇ ಮುಂಬೈನ ಸಿನಿ ಲ್ಯಾಬೊರೇಟರಿಯಲ್ಲಿ ಎರಡು ದಶಕಗಳ ಕಾಲ ಕೆಲಸ ಮಾಡಿದ ಅನುಭವ ಇದ್ದವರು. ಸ್ಟುಡಿಯೋ ಬಹಳ ಕಾಲ ಕೆಲಸ ಮಾಡಿತು.

ಮಧು ಆರ್ಟ್ ಸ್ಟುಡಿಯೋಸ್

ಕನ್ನಡ ಚಲನಚಿತ್ರರಂಗಕ್ಕೆ ತಮ್ಮ ಸಂಸ್ಥೆಯಡಿಯಲ್ಲಿ ಸುಮಾರು ಚಿತ್ರಗಳನ್ನು ನಿರ್ಮಿಸಿದ ಸಾಹಸಿಗ ಎ.ಎಲ್. ಅಬ್ಬಾಯಿ ನಾಯ್ಡು ತಮ್ಮ ಮಹತ್ವಾಕಾಂಕ್ಷೆಯ ಮಧು ಆರ್ಟ್ ಸ್ಟುಡಿಯೋ ನಿರ್ಮಾಣವನ್ನು ಬೆಂಗಳೂರಿನ ಉತ್ತರಹಳ್ಳಿ ಸಮೀಪದ ಚಿಕ್ಕಕಲ್ಲಸಂದ್ರದ ಬಳಿ ಏಳು ಎಕರೆ ಹದಿಮೂರು ಗುಂಟೆ ವಿಸ್ತೀರ್ಣದ ಜಮೀನಿನಲ್ಲಿ ಆರಂಭಿಸಿದ್ದರು.

೧೯೮೦ರ ಮೇ ೨೮ರಂದು ನಡೆದ ಶಿಲಾನ್ಯಾಸ ಸಮಾರಂಭಕ್ಕೆ ಅಂದಿನ ಯೋಜನಾ ಆಯೋಗದ ಉಪಾಧ್ಯಕ್ಷ ರಾಮಕೃಷ್ಣ ಹೆಗಡೆ, ಕರ್ನಾಟಕ ರಾಜ್ಯ ಸರ್ಕಾರದ ಕೈಗಾರಿಕೆ ಮತ್ತು ವಿದ್ಯುತ್ ಸಚಿವ ಎಸ್.ಎಂ.ಯಾಹ್ಯಾ, ಕಾನೂನು ಮತ್ತು ಪ್ರವಾಸೋದ್ಯಮ ಸಚಿವರಾದ ವೀರಪ್ಪ ಮೊಯ್ಲಿ, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಸಿ.ವಿ.ಎಲ್.ಶಾಸ್ತ್ರಿ ಹಾಗೂ ಉತ್ತರಹಳ್ಳಿ ಶಾಸಕರಾದ ಎಸ್.ರಮೇಶ್ ಆಗಮಿಸಿದರು. ಕಟ್ಟಡ ನಿರ್ಮಾಣಕ್ಕೆ ಸುಮಾರು ಆರು ವರ್ಷಗಳ ಬೇಕಾಯಿತು. ಅಧಿಕೃತವಾಗಿ ಸ್ಟುಡಿಯೋ ಆರಂಭಗೊಂಡದ್ದು ೧೯೮೬ರ ಆಗಸ್ಟ್ ೧೬ ರಂದು. ಸ್ಟುಡಿಯೋ ಶುಭಾರಂಭಕ್ಕೆ ವಿಶೇಷ ಅತಿಥಿಗಳಾಗಿ ಆಗಿನ ಮುಖ್ಯಮಂತ್ರಿ ಜೆ.ಎಚ್.ಪಟೇಲ್, ನಟ ರಾಜಕುಮಾರ್, ಬೆಂಗಳೂರು ಅಭಿವೃದ್ಧಿ ರಾಜ್ಯ ಮಂತ್ರಿ ಅನಂತ್‌ನಾಗ್ ಹಾಗೂ ಪಶು ಸಂಗೋಪನಾ ಸಚಿವ ಬಿ.ಎಸ್.ಬಚ್ಚೇಗೌಡ ಆಗಮಿಸಿದರು.

ಅಬ್ಬಾಯಿ ನಾಯ್ಡು ಅವರ ಮಹತ್ವಾಕಾಂಕ್ಷೆಯ ಈ ಸ್ಟುಡಿಯೋದಲ್ಲಿ ಒಟ್ಟು ನಾಲ್ಕು ಫ್ಲೋರ್‌ಗಳಿದ್ದು ಕನ್ನಡದ ಧೀಮಂತ ನಿರ್ದೇಶಕರ ಹೆಸರುಗಳನ್ನು ಒಂದೊಂದು ಫ್ಲೋರ್‌ಗೆ ಇಡಲಾಗಿದೆ. ಮೊದಲನೇ ಫ್ಲೋರ್‌ನಲ್ಲಿ ಶ್ರೀಮಂತ ಬಂಗಲೆಯ ಸೆಟ್ ಇದ್ದು ಅದಕ್ಕೆ 'ಪುಟ್ಟಣ್ಣ ಕಣಗಾಲ್' ಎಂದು, ಎರಡನೇ ಫ್ಲೋರ್‌ಗೆ 'ಹುಣಸೂರು ಕೃಷ್ಣಮೂರ್ತಿ' ಎಂದು, ಮೂರನೇ ಫ್ಲೋರ್‌ಗೆ 'ಬಿ.ಆರ್.ಪಂತಲು ಫ್ಲೋರ್' ಎಂದು ಹೆಸರಿಟ್ಟು ನಿರ್ದೇಶಕರಿಗೆ ತಮ್ಮ ಗೌರವ ಸಲ್ಲಿಸಿದ್ದಾರೆ. ಎರಡನೇ ಫ್ಲೋರ್‌ನಲ್ಲಿ ಖಾಲಿಯಾದ ಜಾಗವಿದೆ. ಮೂರನೇ ಫ್ಲೋರ್‌ನಲ್ಲಿ ಆಸ್ಪತ್ರೆ ನಾಲ್ಕನೆಯ ಫ್ಲೋರ್‌ನಲ್ಲಿ ಕೋರ್ಟ್, ಪೊಲೀಸ್ ಠಾಣೆ, ರಸ್ತೆ ಸೆಟ್ ಇದ್ದು, ಆ ರಸ್ತೆಯಲ್ಲಿ ದೇವಸ್ಥಾನ, ಮನೆಗಳು, ಶಾಲೆ ಮೊದಲಾದ ಸೆಟ್ ಇದೆ. ಅಧಿಕೃತವಾಗಿ ನಿರ್ಮಾಣಗೊಂಡ ಮಧು ಆರ್ಟ್ಸ್ ಸ್ಟುಡಿಯೋದಲ್ಲಿ ಮೊಟ್ಟ ಮೊದಲು ಚಿತ್ರೀಕರಣಗೊಂಡ ಮೊದಲ ಚಿತ್ರ 'ತಾಯಿದ್ದ'. ಅದು ಆರಂಭಗೊಂಡಿದ್ದು ಪುಟ್ಟಣ್ಣ ಕಣಗಾಲ್ ಫ್ಲೋರ್‌ನಲ್ಲಿ. ಹುಣಸೂರು ಕೃಷ್ಣಮೂರ್ತಿ ಫ್ಲೋರ್‌ನಲ್ಲಿ ಆರಂಭಗೊಂಡ ಮೊದಲ ಚಿತ್ರ 'ಮಾನವ ೨೦೨೨'.

ಅಬ್ಬಾಯಿ ನಾಯ್ಡು ಅವರಿದ್ದಾಗಲೇ ವಿಪರೀತ ಸಮಸ್ಯೆಗಳಿದ್ದವು. ಅವರು ತೀರಿಕೊಂಡ ಮೇಲೆ ಸಮಸ್ಯೆಗಳು ಹೆಚ್ಚಿದವು. ಸಾಲ-ಬಡ್ಡಿ ಏರಿದ ಕಾರಣ ಹರಾಜಿನವರೆಗೆ ವಿವಾದ ಹೋಯಿತು. ಆದರೂ ಏನೋ ಪ್ರೀತಿ-ಅಭಿಮಾನದಿಂದ ಉದ್ಯಮ ಆಗ ಈಗ ಅಲ್ಲಿ ಕೆಲಸ ಮಾಡುತ್ತದೆ. ಟಿ.ವಿ.ಚಾನಲ್‌ಗಳಿಗಾಗಿ, ಧಾರಾವಾಹಿಗಳಿಗಾಗಿ ಕೆಲಸ ನಡೆಯುತ್ತಿರುತ್ತದೆ.

ಪ್ರಸಾದ್ ಲ್ಯಾಬ್ ಮತ್ತು ರಿಕಾರ್ಡಿಂಗ್ ಸ್ಟುಡಿಯೋ

ಏಶಿಯಾದಲ್ಲಿಯೇ ಅತ್ಯುತ್ತಮ ಸೌಲಭ್ಯಗಳಿರುವ ಚಲನಚಿತ್ರ ಸ್ಟುಡಿಯೋ ಎಂದು ಹೆಸರಾದ ಮದರಾಸಿನ ಪ್ರಸಾದ್ ಸ್ಟುಡಿಯೋ ಎಲ್.ವಿ.ಪ್ರಸಾದ್ ಅವರು ಕಂಡ ಕನಸಿನ ಸಾಕಾರ ರೂಪ. ಚಿತ್ರೀಕರಣಕ್ಕೆ ಅಗತ್ಯವಾದ ಫ್ಲೋರುಗಳು, ಪರಿಕರಗಳು - ಎಡಿಟಿಂಗ್ ರೂಂಗಳು - ಸಂಸ್ಕರಣ ಕೇಂದ್ರ - ಅತ್ಯುತ್ತಮ ಧ್ವನಿಗ್ರಹಣ ಸೌಲಭ್ಯವಿರುವ ರಿಕಾರ್ಡಿಂಗ್ ಥಿಯೇಟರ್ ಎಲ್ಲವೂ ಅತ್ಯಾಧುನಿಕ ತಾಂತ್ರಿಕ ಕೌಶಲಗಳೊಂದಿಗೆ ಸಜ್ಜುಗೊಂಡಿರುವ ಪ್ರಸಾದ್ ಸಂಸ್ಥೆಯ ಆವರಣದ ಒಳಹೊಕ್ಕರೆ ಚಿತ್ರ ಸೃಷ್ಟಿಯ ಎಲ್ಲ ವಿಧಿ ವಿಧಾನಗಳನ್ನು ಪೂರೈಸಿಕೊಂಡು ಪ್ರಿಂಟ್‌ಗಳೊಂದಿಗೆ ಹೊರಬರಬಹುದು. ಅಂತಹ ಸೌಲಭ್ಯವುಳ್ಳ ಸಂಸ್ಥೆ.

ಕನ್ನಡ ಚಿತ್ರ ನಿರ್ಮಾಪಕರು ತಮ್ಮ ಚಿತ್ರಗಳ ಸಂಸ್ಕರಣ ಹಾಗೂ ಮುದ್ರಣಕ್ಕಾಗಿ ಮದರಾಸಿಗೆ ಎಡತಾಕುವುದನ್ನು ತಪ್ಪಿಸಲು ಪ್ರಸಾದ್ ಸಂಸ್ಥೆಯವರು ಸಂಸ್ಥೆಯ ಲ್ಯಾಬೊರೇಟರಿಯ ಶಾಖೆಯೊಂದನ್ನು ಬೆಂಗಳೂರಿನಲ್ಲಿ ಕಂಠೀರವ ಸ್ಟುಡಿಯೋ ಸಮೀಪದಲ್ಲಿ ಆರಂಭಿಸಿದರು. ಅತ್ಯಂತ ಆಧುನಿಕ ಉಪಕರಣಗಳಿಂದ ಸಜ್ಜುಗೊಂಡು ಆರಂಭವಾದ ಈ ಸಂಸ್ಕರಣ ಕೇಂದ್ರದಲ್ಲಿ ವರ್ಣ ಚಿತ್ರಗಳ ಸಂಸ್ಕರಣ ಆರಂಭವಾಗಿ ಪ್ರಸಾದ್ ಲ್ಯಾಬ್‌ನ ಸಂಸ್ಕರಣ ಅತ್ಯುತ್ತಮ ಎಂದು ದಾಖಲೆಯನ್ನೇ ನಿರ್ಮಿಸಿತು.

ನಂತರದಲ್ಲಿ ಕಂಠೀರವ ಸ್ಟುಡಿಯೋ ಆವರಣದಲ್ಲಿ ಕರ್ನಾಟಕ ಚಲನಚಿತ್ರೋದ್ಯಮ ಅಭಿವೃದ್ಧಿ ನಿಗಮವು ಸ್ಥಾಪಿಸಲೆತ್ನಿಸಿ ವಿಫಲಗೊಂಡಿದ್ದ ಧ್ವನಿ ಮುದ್ರಣ ಕೇಂದ್ರದ ಸ್ಥಾಪನೆಯ ಕಾರ್ಯವನ್ನು ತನ್ನ ತೆಕ್ಕೆಗೆ ತೆಗೆದುಕೊಂಡಿತು. ಕನ್ನಡ ಚಿತ್ರಗಳ ಹಾಡುಗಳ ಧ್ವನಿ ಮುದ್ರಣ, ರಿ-ರಿಕಾರ್ಡಿಂಗ್, ಮಿಕ್ಸಿಂಗ್‌ಗಾಗಿ ಮದರಾಸಿಗೆ ಹೋಗಬೇಕಾಗಿದ್ದ ಕಷ್ಟ ನಿರ್ಮಾಪಕರಿಗೆ ತಪ್ಪುವಂತೆ ಮಾಡಿದ ರಿಕಾರ್ಡಿಂಗ್ ಥಿಯೇಟರ್ 'ಒನ್ ಆಫ್ ದಿ ಬೆಸ್ಟ್' ಆಗಿದೆ. ಕನ್ನಡದ ಸುಮಾರು ಎಂಟುನೂರಕ್ಕೂ ಹೆಚ್ಚು ಚಿತ್ರಗಳ ಧ್ವನಿಮುದ್ರಣವನ್ನು ಯಶಸ್ವಿಯಾಗಿ ನಿರ್ವಹಿಸಿರುವ ಪ್ರಸಾದ್ ರಿಕಾರ್ಡಿಂಗ್ ಥಿಯೇಟರ್ ಬೆಂಗಳೂರಿನಲ್ಲಿನ ಧ್ವನಿ ಮುದ್ರಣ ಕೇಂದ್ರಗಳಲ್ಲಿ ಅಗ್ರಗಣ್ಯವಾಗಿದೆ. ಪ್ರಸಾದ್ ಧ್ವನಿ ಮುದ್ರಣಾಗಾರದಿಂದ ಹೊರಬಂದ ಅನೇಕ ಚಿತ್ರಗಳು ರಾಜ್ಯ, ರಾಷ್ಟ್ರ ಹಾಗೂ ಅಂತರ ರಾಷ್ಟ್ರೀಯ ಪ್ರಶಸ್ತಿಗಳಿಗೆ ಪಾತ್ರವಾಗಿದೆ ಎಂಬುದು ಗಮನಾರ್ಹ.

ಪ್ರಸಾದ್ ಲ್ಯಾಬ್

ಪ್ರಸಾದ್ ಲ್ಯಾಬ್‌ನಲ್ಲಿ ೧೬, ೩೫ ಮತ್ತು ೭೦ ಎಂ.ಎಂ ಚಿತ್ರಗಳ ಸಂಸ್ಕರಣ ಸೌಲಭ್ಯಗಳಿದ್ದು ಶ್ರೇಷ್ಠ ತಾಂತ್ರಿಕ ಮಟ್ಟಕ್ಕೆ ಹೆಸರಾಗಿದೆ. ಸಂಕಲನ ಕಾರ್ಯಕ್ಕೂ ಅಚ್ಚುಕಟ್ಟಾದ ಸೌಲಭ್ಯವಿದೆ. ಈ ಸ್ಟುಡಿಯೋದ ಸಾಧನೆಗೆ ಗರಿ ಇಟ್ಟಂತೆ ಪೂರ್ಣ ಸುಸಜ್ಜಿತ ವೀಡಿಯೋ ಪ್ರೊಡಕ್ಷನ್ ಮತ್ತು ಪೋಸ್ಟ್ ಪ್ರೊಡಕ್ಷನ್ ಯೂನಿಟ್ಟನ್ನು ಸ್ಥಾಪಿಸಲಾಗಿದೆ. ಈ ಯೂನಿಟ್‌ನಲ್ಲಿ ವೀಡಿಯೋ ಟೆಲಿ ಸಿನಿ ಟ್ರಾನ್ಸ್‌ಫರ್ ವ್ಯವಸ್ಥೆ, ಒಂದು ಹೆ ಬ್ಯಾಂಡ್ ಎಡಿಟ್ ಸೂಟ್, ಒಂದು ಬೀಟಾಕ್ಯಾಮ್ ಎಡಿಟ್ ಸೂಟ್, ಡಿಜಿಟಲ್ ವೀಡಿಯೋ ಎಫೆಕ್ಟ್ ಮತ್ತು ಒಂದು ಕಂಪ್ಯೂಟರ್ ಗ್ರಾಫಿಕ್ಸ್ ವಿಭಾಗಗಳಿದ್ದು ವಿ.ಎಚ್.ಎಸ್. ಡೂಪ್ಲಿಕೇಷನ್ ಸೌಲಭ್ಯವೂ ಇದೆ.

ಈ ಎಲ್ಲಾ ಸೌಲಭ್ಯಗಳ ಜೊತೆಗೆ ಕಂಪ್ಯೂಟರ್ ಗ್ರಾಫಿಕ್ಸ್ ವಿಭಾಗದಲ್ಲಿ ಮೂರು ಕಂಪ್ಯೂಟರ್ ಗ್ರಾಫಿಕ್ಸ್ ವ್ಯವಸ್ಥೆಯನ್ನು ಅಳವಡಿಸಲಾಗಿದೆ. ಇದರಿಂದ ವೀಡಿಯೋ ಹಾಗೂ ಫಿಲಂ ಮೇಲೆ ಆ್ಯನಿಮೇಷನ್ ಕಾರ್ಯವನ್ನು ನಿರ್ವಹಿಸಬಹುದಾಗಿದೆ. ಈ ವ್ಯವಸ್ಥೆಗಳಿಂದ ೧೬.೭ ದಶಲಕ್ಷ ಕಲರ್ ಷೇಡ್‌ಗಳನ್ನು, ೩ಡಿ ಮಾಡೆಲಿಂಗ್, ರೋಟೋಸ್ಕೋಪಿ, ಲೈವ್ ಆ್ಯಕ್ಷನ್ ಆ್ಯನಿಮೇಷನ್ ಕಾರ್ಯವನ್ನು ನಿರ್ವಹಿಸ ಬಹುದಾಗಿದೆ. ಕ್ಯಾಮರಾದಿಂದ ಅಥವಾ ವೀಡಿಯೋ ಟೇಪಿನಿಂದ ನೇರವಾಗಿ ಚಿತ್ರಗಳನ್ನು ಕಂಪ್ಯೂಟರ್‌ನಲ್ಲಿ ಗ್ರಹಿಸಿ ವಿಶೇಷವಾದ ಎಫೆಕ್ಟ್‌ಗಳನ್ನು ಸೃಷ್ಟಿಸುವಂಥ ಸಾಧನೆ ಪ್ರಸಾದ್ ಲ್ಯಾಬ್‌ನದು.

ಕಂಪ್ಯೂಟರ್ ಗ್ರಾಫಿಕ್ಸ್ ಮತ್ತು ಡಿಜಿಟಲ್ ವೀಡಿಯೋ ಎಫೆಕ್ಟ್‌ಗಳೆರಡನ್ನೂ ಎಡಿಟಿಂಗ್ ಸೂಟ್‌ನೊಳಗೆ ಇಂಟಿಗ್ರೇಟ್ ಮಾಡಲಾಗಿದ್ದು ಅದರ ಜೊತೆಗೆ

(ಚಿತ್ರ ೮) ಪ್ರಸಾದ್ ಫಿಲಂ ಲ್ಯಾಬೊರೇಟರಿ

ಟೈಮ್‌ಕೋಡ್ ಬಳಸಿ ಸಮಯವನ್ನು ಕಡಿಮೆ ಮಾಡುವುದರ ಜೊತೆ ಉತ್ತಮ ತಾಂತ್ರಿಕ ಗುಣಮಟ್ಟವನ್ನು ಒದಗಿಸಿದೆ.

ಈ ಎಲ್ಲ ವ್ಯವಸ್ಥೆಗಳನ್ನು ಸಮರ್ಥವಾಗಿ ನಿರ್ವಹಿಸುವ ನಿಪುಣ ಕೆಲಸಗಾರರು ಪ್ರಸಾದ್ ಸಂಸ್ಥೆಯಲ್ಲಿ ಇರುವುದರಿಂದ ಯಾವುದೇ ಸಮಸ್ಯೆಗಳಿಲ್ಲದೆ ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿದೆ.

ವಸಂತ್ ಕಲರ್ ಲ್ಯಾಬ್

ಕನ್ನಡ ಚಿತ್ರರಂಗ ಇಂದು ಬೃಹತ್ ಉದ್ಯಮದ ರೂಪ ತಾಳಿದೆ. ಇತರ ಯಾವುದೇ ಭಾಷೆಯ ಚಲನಚಿತ್ರಗಳಲ್ಲಿ ಕಂಡುಬರುವಂತಹ ತಾಂತ್ರಿಕತೆ, ಅದ್ದೂರಿತನ ಕನ್ನಡ ಚಿತ್ರಗಳಲ್ಲೂ ಕಂಡುಬರುತ್ತಿವೆ. ಇತರ ಭಾಷೆಗಳ ಚಿತ್ರಗಳೊಡನೆ ಪೈಪೋಟಿ ನಡೆಸುವಷ್ಟು ಕನ್ನಡ ಚಿತ್ರರಂಗ ಅಭಿವೃದ್ಧಿ ಸಾಧಿಸಿದೆ. ಇಂದು ಕನ್ನಡ ಚಿತ್ರರಂಗ ಈ ಸಾಧನೆಗಳ ಶಿಖರ ಏರಿರುವಾಗ ಅದರ ಬಾಲ್ಯದ ಪಟುಗಳ ಸಿಂಹಾವಲೋಕನ ಮಾಡಿದರೆ ಹಲವು ಅಪ್ರತಿಮ ಸಾಹಸಿಗಳ ಸಾಲೇ ಕಂಡು ಬರುತ್ತದೆ. ಇಂತಹ ವ್ಯಕ್ತಿಗಳ ಪಟ್ಟಿಯಲ್ಲಿ ಮುಖ್ಯವಾಗಿ ಕಂಡುಬರುವ ಅಪರೂಪದ ವ್ಯಕ್ತಿ ಬಿ.ಎಸ್.ರಂಗಾ.

ಕನ್ನಡ ಚಿತ್ರರಂಗ ಅಷ್ಟೇಕೆ ದಕ್ಷಿಣ ಭಾರತದ ಚಿತ್ರರಂಗದ ಪ್ರಗತಿಯಲ್ಲಿ ಈ ಶಕ್ತಿಯು ಕೊಡುಗೆ ಅತ್ಯಂತ ಅಮೂಲ್ಯವಾದದ್ದು. ಮುಂಬಯಿಯಲ್ಲಿ ಛಾಯಾಗ್ರಾಹಕರಾಗಿ ವೃತ್ತಿ ಆರಂಭಿಸಿದ ಇವರು ತಾಯ್ನಾಡಿನಲ್ಲಿ ಏನನ್ನಾದರೂ ಮಾಡಬೇಕೆನ್ನುವ ಮಹತ್ವಾಕಾಂಕ್ಷೆಯಿಂದ ಬೆಂಗಳೂರಿಗೆ ಮರಳಿ 'ವಿಕ್ರಂ ಲ್ಯಾಬೊರೇಟರಿ' ಎಂಬ ಸಂಸ್ಥೆಗೆ ನಾಂದಿ ಹಾಡಿದರು. ಇವರ ಮೂಲಕ ಮೊದಲ ಬಾರಿಗೆ ಕನ್ನಡ ಚಿತ್ರಗಳು ಸಂಸ್ಕರಣ ಕಾರ್ಯಕ್ಕಾಗಿ ಬೆಂಗಳೂರಿಗೆ ಬರುವಂತಾಯಿತು. ನಂತರ ಮದ್ರಾಸಿಗೆ ಸ್ಥಳಾಂತರಿಸಿ ಅಲ್ಲಿ ಇವರು ಸ್ಥಾಪಿಸಿದ 'ವಿಕ್ರಂ ಸ್ಟುಡಿಯೋ' ಮೂಲಕ ಹಲವು ಉತ್ತಮ ಚಿತ್ರಗಳು ತೆರೆಗೆ ಅರ್ಪಿಸಲ್ಪಟ್ಟವು.

ಕನ್ನಡದಲ್ಲಿ ವರ್ಣಮಯ ಚಿತ್ರಗಳು ಹೆಚ್ಚಿನ ಸಂಖ್ಯೆಯಲ್ಲಿ ತಯಾರಾಗಬೇಕೆಂಬ ಸದುದ್ದೇಶದಿಂದ ಬೆಂಗಳೂರಿನಲ್ಲಿ ೧೯೭೬ರಲ್ಲಿ 'ವಸಂತ್ ಕಲರ್ ಲ್ಯಾಬೊರೇಟರಿ' ಸ್ಥಾಪಿಸಿದರು. ಮಗ ಬಿ.ಆರ್.ವಸಂತ್ ಮದ್ರಾಸ್ ವಿಶ್ವವಿದ್ಯಾಲಯದಿಂದ ಬಿ.ಟೆಕ್ ಪದವಿ ಪಡೆದು, ಜೆಮಿನಿ ಕಲರ್ ಲ್ಯಾಬ್ ಮತ್ತು ಈಸ್ಟ್‌ಮನ್ ಕೋಡಾಕ್ ಲಿಮಿಟೆಡ್‌ಗಳಲ್ಲಿ ಹೆಚ್ಚಿನ ತರಬೇತಿ ಗಳಿಸಿ ಬಂದು ತಂದೆಗೆ ಬೆನ್ನೆಲುಬಾಗಿ ನಿಂತರು.

ಅಂದು ಇವರುಗಳ ದೂರದೃಷ್ಟಿ, ಪ್ರಯೋಗಶೀಲತೆಯ ಫಲವಾಗಿ ಜನ್ಮ ತಾಳಿದ ಕನ್ನಡದ ಪ್ರಥಮ ಹೆಮ್ಮೆಯ ವರ್ಣ ಸಂಸ್ಕರಣ ಕೇಂದ್ರ ತನ್ನ ಚಟುವಟಿಕೆಯನ್ನು ವಿಸ್ತರಿಸಿಕೊಂಡು 'ವಿಶನ್ ಟೆಕ್ನಾಲಜಿ ಇಂಡಿಯಾ ಲಿಮಿಟೆಡ್' ಆಗಿ ಪರಿವರ್ತನೆಗೊಂಡಿತು. ಇಲ್ಲಿ ಫಿಲಂ ಪ್ರೋಸೆಸಿಂಗ್, ಸೌಂಡ್ ರಿಕಾರ್ಡಿಂಗ್, ಎಡಿಟಿಂಗ್ ಮುಂತಾದ ಕಾರ್ಯಗಳನ್ನು ನಡೆಸಲಾಗುತ್ತಿದೆ. ಫಿಲಂ ಪ್ರೋಸೆಸಿಂಗ್ ವಿಭಾಗದಲ್ಲಿ ನೆಗಟಿವ್ ಮತ್ತು ಪಾಸಿಟಿವ್‌ಗಳ ಪ್ರೋಸೆಸಿಂಗ್, ರಿಕಾರ್ಡಿಂಗ್, ಟ್ರಾನ್ಸ್‌ಫರಿಂಗ್, ಪ್ರಿಂಟಿಂಗ್ ಕಾರ್ಯಗಳನ್ನು ನಡೆಸಲಾಗುತ್ತಿದೆ. ಚಲನಚಿತ್ರಗಳು ಪ್ರೋಸೆಸಿಂಗ್ ಕಾರ್ಯವಲ್ಲದೇ ಜಾಹಿರಾತುಗಳು, ಕಿರು ಚಿತ್ರಗಳು ಡಾಕ್ಯುಮೆಂಟರಿಗಳ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗುತ್ತಿದೆ. ಇದೀಗ ೧೬ ಎಂ.ಎಂ. ನೆಗಟಿವ್‌ನಿಂದ ೩೫ ಎಂ.ಎಂ. ಮತ್ತು ಸಿನಿಮಾ ಸ್ಕೋಪ್. ಬ್ಲೋ ಅಪ್ ಪ್ರಿಂಟಿಂಗ್ ಕಾರ್ಯಗಳಿಗೂ ಇಲ್ಲಿ ಅವಕಾಶ ಕಲ್ಪಿಸಲಾಗಿದೆ.

ಶಂಕರ್‌ನಾಗ್‌ರ ಕನಸಿನ ಕೂಸು 'ಸಂಕೇತ್' ಇನ್ನೇನು ಅಂತಿಮ ಉಸಿರೆಳೆಯುತ್ತಿದೆ ಎನ್ನುವ ಸ್ಥಿತಿಯಲ್ಲಿದ್ದಾಗ ವಿಶನ್ ಟೆಕ್ನಾಲಜಿ ಇಂಡಿಯಾ ಲಿಮಿಟೆಡ್ ಕನ್ನಡಿಗನೊಬ್ಬನ ಕನಸನ್ನು ಉಳಿಸುವ ಉದ್ದೇಶದಿಂದ ಎಲ್ಲ ಉಪಕರಣಗಳನ್ನು ಖರೀದಿಸಿ ತನ್ನ ಮಡಿಲಲ್ಲೇ ಅವುಗಳಿಗೆಲ್ಲ ಆಶ್ರಯ ನೀಡಿತು. ಹಾಗಾಗಿ ಈಗ ಆಧುನಿಕ ಮತ್ತು ಕಂಪ್ಯೂಟರೀಕೃತ ವ್ಯವಸ್ಥೆಯಿಂದಾಗಿ ೧೬ ಟ್ರ್ಯಾಕ್‌ನಲ್ಲಿ ಧ್ವನಿ ಮುದ್ರಣ, ಡಬ್ಬಿಂಗ್, ರಿ-ರಿಕಾರ್ಡಿಂಗ್ ಮತ್ತು ಮಿಕ್ಸಿಂಗ್, ಆಪ್ಟಿಕಲ್ ವರ್ಗಾವಣೆಯ ಕಾರ್ಯಗಳಿಗೂ ಇಲ್ಲಿ ಉತ್ತಮ ವ್ಯವಸ್ಥೆ ಇದೆ. ಇದರಿಂದ ಶಂಕರ್‌ನಾಗ್ ಅವರ ಕನಸನ್ನು ನನಸು ಮಾಡಿದ ಕೀರ್ತಿಯೂ ಸಹ ಈ ಸಂಸ್ಥೆಯ ಪಾಲಿಗೆ ಬಂದಂತಾಗಿದೆ.

ಕನ್ನಡ ಚಿತ್ರರಂಗದ ಆರಂಭದ ಹಂತದಿಂದಲೂ ಮುಂಚೂಣಿಯಲ್ಲಿರುವ ಈ ಸಂಸ್ಥೆ ಧಾರಾವಾಹಿಗಳ ನಿರ್ಮಾಣ, ಮಾಹಿತಿ ತಂತ್ರಜ್ಞಾನ ಕ್ಷೇತ್ರಗಳಲ್ಲೂ ಹೆಸರು ಗಳಿಸಿದೆ. ಕನ್ನಡ ಚಿತ್ರರಂಗ, ಚಿತ್ರೋದ್ಯಮಿಗಳು ತನ್ನ ಮೇಲಿಟ್ಟಿರುವ ವಿಶ್ವಾಸ, ಪ್ರೇಮವನ್ನು ಇಂದಿಗೂ ಉಳಿಸಿಕೊಂಡು ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿದೆ.

ಸಂಕೇತ್ ಎಲೆಕ್ಟ್ರಾನಿಕ್ಸ್

ಸಾಹಸ ಪ್ರವೃತ್ತಿಯೊಂದಿಗೆ ಹಲವು ಕನಸುಗಳನ್ನು ಮೈಗೂಡಿಸಿಕೊಂಡಿದ್ದ ಸರಳ ಸಜ್ಜನ ನಟ ಶಂಕರ್‌ನಾಗ್ ರಂಗಭೂಮಿ ಹಾಗೂ ಚಿತ್ರರಂಗದ ಬಗ್ಗೆ ಅಪಾರ ಕಾಳಜಿ ಹೊಂದಿದ್ದವರು. ನಂದಿಬೆಟ್ಟಕ್ಕೆ ರೋಪ್‌ವೇ ಸೃಷ್ಟಿಸುವುದು, ನಗರ ಮಧ್ಯೆ ಗ್ರಾಮೀಣ ವಾತಾವರಣಕ್ಕಾಗಿ 'ದಿ ಕಂಟ್ರಿ ಕ್ಲಬ್' ಸ್ಥಾಪಿಸುವುದು, ಮದರಾಸಿನ ರಿಕಾರ್ಡಿಂಗ್ ಸ್ಟುಡಿಯೋದವರ ಕೃಪಾಶ್ರಯದಿಂದ ಕನ್ನಡ ನಿರ್ಮಾಪಕರನ್ನು ಪಾರು ಮಾಡಲು ಬೆಂಗಳೂರಿನಲ್ಲಿ ಆಧುನಿಕ ತಂತ್ರಜ್ಞಾನ ಇರುವ ರಿಕಾರ್ಡಿಂಗ್ ಸ್ಟುಡಿಯೋ ನಿರ್ಮಿಸುವುದು ಹೀಗೆ ಹಲವು ಹನ್ನೊಂದು ಕನಸು ಅವರದು.

ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಕಟ್ಟಡದ ಮೇಲಿನ ಖಾಲಿ ಜಾಗಕ್ಕೆ ಬಾಡಿಗೆ ಕೊಟ್ಟು ಆ ಜಾಗವನ್ನು ತಮ್ಮದಾಗಿಸಿಕೊಂಡಿದ್ದ ವಾಣಿಜ್ಯ ಮಂಡಳಿಯ ಪ್ರಮುಖರೆನಿಸಿದ ಸಿ.ವಿ.ಎಲ್.ಶಾಸ್ತ್ರಿಯವರ ಸಹಯೋಗ ಸಿಕ್ಕಿ, ಆ ಖಾಲಿ ಜಾಗದಲ್ಲಿ ಶಂಕರ್‌ನಾಗ್ ಕಟ್ಟಡ ನಿರ್ಮಿಸಿ, ರಾಜ್ಯ ಹಣಕಾಸು ಸಂಸ್ಥೆಯ ನೆರವಿನಿಂದ ಯಂತ್ರೋಪಕರಣಗಳನ್ನು ತರಿಸಿ ಆರಂಭಿಸಿದುದೇ 'ಸಂಕೇತ್ ಎಲೆಕ್ಟ್ರಾನಿಕ್ಸ್'.

೧೯೮೫ರ ಆಗಸ್ಟ್ ೧೫ರಂದು ಅಂದಿನ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರಿಂದ ಉದ್ಘಾಟನೆಯಾದ 'ಸಂಕೇತ್ ಎಲೆಕ್ಟ್ರಾನಿಕ್ಸ್ ಪ್ರೈವೇಟ್ ಲಿಮಿಟೆಡ್' ರಿಕಾರ್ಡಿಂಗ್ ಸ್ಟುಡಿಯೋ ಕನ್ನಡ ಚಿತ್ರರಂಗದ ಪರಾವಲಂಬನೆಯನ್ನು ದೂರ ಮಾಡಿತು. ಹಾಡುಗಳ ಧ್ವನಿಮುದ್ರಣ, ರಿ-ರಿಕಾರ್ಡಿಂಗ್ (ಪುನರ್ ಧ್ವನಿಮುದ್ರಣ) ಹಾಗೂ ಮಾತುಗಳ ಧ್ವನಿಮುದ್ರಣ ಎಲ್ಲವೂ ಕಂಪ್ಯೂಟರೀಕೃತವಾಗಿದ್ದ ಸ್ಟುಡಿಯೋ ಆಗಿದೆ. ಈಗ ಅದು ವಿಶನ್ ಟೆಕ್ನಾಲಜಿ ಇಂಡಿಯಾದಲ್ಲಿ ಲೀನವಾಗಿದೆ.

ಆಕಾಶ್ ಸ್ಟುಡಿಯೋ

'ಆಕಾಶ್ ರಿಕಾರ್ಡಿಂಗ್ ಸಿಸ್ಟಮ್' ಎಂಬ ಹೆಸರಿನಿಂದ ಬೆಂಗಳೂರಿನ ಕುಮಾರ ಪಾರ್ಕಿನ ಈಸ್ಟ್ ಪಾರ್ಕ್ ರಸ್ತೆಯಲ್ಲಿ ೧೯೯೬ರ ಜೂನ್ ೨೫ರಂದು ಆರಂಭಗೊಂಡಿತಾದರೂ, ಅಬ್ಬಾಯಿ ನಾಯ್ಡು ನಿರ್ಮಾಣದ 'ತಾಯವ್ವ' ಚಿತ್ರದ ಧ್ವನಿ ಮುದ್ರಣ ಕಾರ್ಯದೊಂದಿಗೆ ೧೯೯೬ರ ಆಗಸ್ಟ್ ತಿಂಗಳಲ್ಲಿ ವಿಧ್ಯುಕ್ತವಾಗಿ ಆರಂಭಗೊಂಡಿತು.

ಸುಸಜ್ಜಿತ ರೀತಿಯಲ್ಲಿ ಆರಂಭವಾದ ಸಂಸ್ಥೆಯ ಅಡಿಯಲ್ಲಿ ಆಕಾಶ್ ಆಡಿಯೋ ಸಂಸ್ಥೆ ಧ್ವನಿ ಸುರಳಿ ಮಾರುಕಟ್ಟೆಯನ್ನು ಪ್ರವೇಶಿಸಿತು. ಇದೇ ಸಂಸ್ಥೆಯ 'ರೇಣುಕಾಂಬ ಎಡಿಟಿಂಗ್ ಸೆಂಟರ್' ಚಿತ್ರದ ಸಂಕಲನ ಕೇಂದ್ರವಾಗಿದ್ದರೆ, 'ರೇಣುಕಾಂಬ ಔಟ್‌ಡೋರ್ ಯೂನಿಟ್' ಚಿತ್ರೀಕರಣಕ್ಕೆ ಬೇಕಾದ ಅತ್ಯಾಧುನಿಕ ಉಪಕರಣಗಳನ್ನು ಒದಗಿಸುತ್ತದೆ. 'ಟೆಲಿಸಿನಿ' ಪದ್ಧತಿಯಂತೆ ರಿಕಾರ್ಡಿಂಗ್ ಹಾಗೂ ಎಡಿಟಿಂಗ್ ಮಾಡಲಾಗುವ ಈ ಸಂಸ್ಥೆಯಲ್ಲಿ ಡಬ್ಬಿಂಗ್ ಸ್ಟುಡಿಯೋ ಕೂಡ ಇದ್ದು ಒಂದು ಚಿತ್ರ ನಿರ್ಮಾಣದ ಪೂರ್ವ ಹಾಗೂ ನಂತರದ ಎಲ್ಲಾ ಹಂತಗಳಿಗೂ ಈ ಸ್ಟುಡಿಯೋ ಸಹಾಯಕವಾಗಿದೆ. ಸ್ಟುಡಿಯೋದ ಮಾಲೀಕರಾದ ಮಧು ಬಂಗಾರಪ್ಪ ಅವರು ಗುಣಮಟ್ಟಕ್ಕೆ ಹೆಚ್ಚಿನ ಪ್ರಾಧಾನ್ಯ ಕೊಟ್ಟಿದು, ಸಹಜವಾಗಿ ನಿರ್ಮಾಪಕರನ್ನು ಹೆಚ್ಚು ಹೆಚ್ಚು ಆಕರ್ಷಿಸುತ್ತಿದೆ.

'ಆಕಾಶ್ ರಿಕಾರ್ಡಿಂಗ್ ಸಿಸ್ಟಮ್ಸ್'ನಲ್ಲಿ ಮಲ್ಟಿ ಟ್ರ್ಯಾಕ್ ಡಿಜಿಟಲ್ ರಿಕಾರ್ಡಿಂಗ್, ಪ್ರೋಟೂಲ್ ಹಾರ್ಡ್ ಡಿಸ್ಕ್ ರಿಕಾರ್ಡಿಂಗ್ ಹಾಗೂ ಪ್ಯಾರಿಸ್ ಹಾರ್ಡ್ ಡಿಸ್ಕ್ ಡಬ್ಬಿಂಗ್‌ಗಳಿಂದ ಕೂಡಿದ ಆಧುನಿಕ ಯಂತ್ರೋಪಕರಣಗಳನ್ನು ಒಳಗೊಂಡಿದೆ. ಈ

(ಚಿತ್ರ ೯) ಆಕಾಶ್ ಆಡಿಯೋ ಆಧುನಿಕ ಧ್ವನಿಗ್ರಹಣ ಯಂತ್ರಸಾಧನಗಳು

ಸೌಲಭ್ಯ ಬಳಸಿದ 'ಎ' ಚಿತ್ರದ ಸಂಪೂರ್ಣ ಸೌಂಡ್ ರಿಕಾರ್ಡಿಂಗ್‌ನ ಪ್ರಥಮ ಪ್ರಯತ್ನಕ್ಕಾಗಿ ರಾಜ್ಯ ಸರ್ಕಾರದಿಂದ ಅತ್ಯುತ್ತಮ ಶಬ್ದಗ್ರಾಹಕ ಪ್ರಶಸ್ತಿ ಗಳಿಸಿದೆ.

ಜ್ಯೋತಿ ಸ್ಟುಡಿಯೋ

ಸುಮಾರು ೧೭ ವರ್ಷಗಳ ಹಿಂದಿನ ಮಾತು. ವಸಂತ್ ಲ್ಯಾಬ್‌ನಲ್ಲಿ ಒಂದು, ಬೆಂಗಳೂರು ಲ್ಯಾಬ್ (ಆಗಿನ ಕಂಠೀರವ ಸ್ಟುಡಿಯೋದಲ್ಲಿತ್ತು) ನಲ್ಲಿ ಒಂದು ಹಾಗೂ ಚಾಮುಂಡೇಶ್ವರಿ ಸ್ಟುಡಿಯೋದಲ್ಲಿ ಮೂವಿಯೋಲಾಗಳು ಇದ್ದವಾದರೂ 'ಬ್ಯಾಂಕರ್ ಮಾರ್ಗಯ್ಯ' ಚಿತ್ರದ ಸಂಕಲನದ ಸಮಯದಲ್ಲಿ ಅದಾವುದೂ ಸರಿಯಾದ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಿಲ್ಲವೆಂದು ತಿಳಿದುಬಂದು, ಸಂಕಲನಕ್ಕೆಂದು ಒಂದು ಪ್ರತ್ಯೇಕವಾದ ಎಡಿಟಿಂಗ್ ರೂಮ್ ಇರಲೇಬೇಕೆಂಬ ಛಲದಿಂದ ಸ್ಥಾಪಿಸಿದವರು ಚಿತ್ರೋದ್ಯಮಿ ನಿರ್ಮಾಪಕ ಟಿ.ಎಸ್.ನರಸಿಂಹನ್.

'ಜ್ಯೋತಿ ಎಂಟರ್‌ಪ್ರೈಸಸ್' ಎಂಬ ಹೆಸರಿನಿಂದ ಬೆಂಗಳೂರಿನ ವಿಲ್ಸನ್ ಗಾರ್ಡನ್‌ನಲ್ಲಿ ೧೫-೧-೧೯೪೪ರಂದು ಸುಸಜ್ಜಿತವಾದ ಮೂರು ಸಕ್ರಿಯ ಮೂವಿಯೋಲಾಗಳೊಂದಿಗೆ ಹಾಗೂ ಒಂದು ಸ್ಟ್ಯಾಂಡ್ ಬೈ ಮೂವಿಯೋಲಾದೊಂದಿಗೆ ಆರಂಭಗೊಂಡ ಈ ಸಂಸ್ಥೆ ಕಡಿಮೆ ವೆಚ್ಚದಲ್ಲಿ ಚಿತ್ರ ತಯಾರಿಸುವವರಿಗೆ ಅನುಕೂಲವಾಗುವಂತಹ ಸವಲತ್ತುಗಳನ್ನು ನೀಡಿತು. ಆದರೂ ಆರಂಭದ ಕೆಲ ದಿನಗಳು ಯಾವೊಬ್ಬ ನಿರ್ಮಾಪಕನೂ ಧೈರ್ಯ ಮಾಡದೆ ಮದ್ರಾಸಿಗೆ ಹೋಗುವಂತಹ ಸ್ಥಿತಿಯಿತ್ತು. ಇದಕ್ಕೆ ಅವರು ಕೊಡುತ್ತಿದ್ದ ಮುಖ್ಯ ಕಾರಣ ಅಲ್ಲಿರುವ ಶ್ರೇಷ್ಠ ಮಟ್ಟದ ಸಂಕಲನಕಾರರು. ಆದರೆ ಅವರಿಗಿಂತ ಯಾವ ರೀತಿಯಲ್ಲೂ ಕಡಿಮೆಯಿಲ್ಲದ ತಂತ್ರಜ್ಞ ಸುರೇಶ್ ಅರಸ್ ಇಲ್ಲಿ ಕೆಲಸ ಮಾಡುತ್ತಿದ್ದರು. ಕಡೆಗೆ ಕೆಲಸಗಳ ಒತ್ತಡ ಹೊರಿಸಿ ಆ ತಂತ್ರಜ್ಞನೇ ಮದರಾಸಿಗೆ ಹೋಗುವ ಹಾಗೆ ಮಾಡಿತು ಮದರಾಸ್ ಚಿತ್ರೋದ್ಯಮ.

ಅಲ್ಲಿ ಅಳವಡಿಸಿದ್ದ ಎಲ್ಲಾ ಮೂವಿಯೋಲಾಗಳು ರಾಜ್‌ಕಮಲ್ ಸ್ಟುಡಿಯೋದಿಂದ ನಿರ್ದೇಶಕ ವಿ.ಶಾಂತಾರಾಂ ಅವರ ಸೂಚನೆ ಸಲಹೆಗಳ ಮೇರೆಗೆ ತರಿಸಲಾಗಿತ್ತು. ಅಂತಹ ಮೂವಿಯೋಲಾ ಸೇವೆಯನ್ನು ಇಲ್ಲಿನ ನಿರ್ಮಾಪಕರು ಸರಿಯಾಗಿ ಬಳಸಿಕೊಳ್ಳಲಿಲ್ಲ ಎಂಬ ಕೊರಗು ನರಸಿಂಹನ್ ಅವರಿಗೆ. ಹಾಗೂ ಹೀಗೂ ಕುಂಟುತ್ತಾ ಸಾಗಿದ ಈ ಸಂಸ್ಥೆಯಲ್ಲಿ ಮೊದಲು ಸಂಕಲನಗೊಂಡ ಚಿತ್ರ ಕೌಶಿಕ್ ನಿರ್ದೇಶನದ 'ಮುಖವಾಡ'. ನಂತರ 'ಸೂರ್ಯ', 'ಒಂದು ಮುತ್ತಿನ ಕಥೆ', 'ಅವಸ್ಥೆ', 'ಕಾಡಿನ ಬೆಂಕಿ', 'ಬಿಸಿಲು ಬೆಳದಿಂಗಳು', 'ಕೋಟೆ', 'ಅವಳೇ ನನ್ನ ಹೆಂಡ್ತಿ', 'ಸಂತ ಶಿಶುನಾಳ ಷರೀಫ್', 'ಮೈಸೂರು ಮಲ್ಲಿಗೆ', 'ಪಂಚಮ ವೇದ', 'ಉದ್ಭವ', 'ಗಣೇಶನ ಮದುವೆ', 'ಸಂಗ್ಯಾಬಾಳ್ಯ', 'ಹೂವು ಹಣ್ಣು', 'ಚಿನ್ನಾರಿ ಮುತ್ತ', 'ಕೊಟ್ರೇಶಿ ಕನಸು', 'ದೇವೀರಿ', 'ಹಗಲು ವೇಷ', 'ವಿಮೋಚನೆ', 'ಗಾನಯೋಗಿ ಪಂಚಾಕ್ಷರ ಗವಾಯಿ', 'ಗಜ್ಜನಾದ' ಮುಂತಾದ ಯಶಸ್ವೀ ಚಿತ್ರಗಳ ಸಂಕಲನ ಕಾರ್ಯ ನಡೆದಿದೆ.



(ಚಿತ್ರ ೧೦) ಎಸ್.ವಿ.ರಾವ್ - ಸಿನಿಮಾದ ವಿಶೇಷ ತಂತ್ರಜ್ಞ

೧೯೯೬ರಲ್ಲಿ ಸ್ಟೀನ್‌ಬೆಕ್ (steinbeck) ಮೂವಿಯೋಲಾ ವ್ಯವಸ್ಥೆಯನ್ನು ಅಳವಡಿಸಲಾಯಿತಾದರೂ, ನಿರ್ಮಾಪಕರು ಈ ಸಂಸ್ಥೆಯನ್ನು ಗಾಂಧಿನಗರ ಪ್ರದೇಶದಲ್ಲಿ ಬಯಸಿದರಾದ್ದರಿಂದ ಮತ್ತು ಆ ಸಂಸ್ಥೆಯ ನಿಪುಣ ಸಂಕಲನಕಾರರಾದ ಸುರೇಶ್‌ಅರಸ್ ಮದ್ರಾಸಿನಲ್ಲಿ ಬಿಡುವಿಲ್ಲದಂತೆ ಕಾರ್ಯೋನ್ಮುಖರಾದ ಕಾರಣ ಹಾಗೂ ಬ್ಯಾಂಕಿನಿಂದ ಪಡೆದ ಸಾಲ ಮರು ಪಾವತಿಯಲ್ಲಾದ ವ್ಯತ್ಯಯಗಳಿಂದ ೧೭-೨-೨೦೦೦ದಂದು ಈ ಸಂಸ್ಥೆ ಮುಚ್ಚಿಹೋಯಿತು.

ವಿಜಯಾ ಆಡಿಯೋಸ್ ಡಿಜಿಟಲ್ ಆಡಿಯೋ ರಿಕಾರ್ಡಿಂಗ್ ಸೆಂಟರ್

ಬೆಂಗಳೂರಿನ ಶಂಕರಪುರಂನಲ್ಲಿ ೧೯೯೭ರ ಅಕ್ಟೋಬರ್ ಹತ್ತರಂದು ಸ್ಥಾಪಿತವಾದ ವಿಜಯ ಆಡಿಯೋಸ್ ಡಿಜಿಟಲ್ ಆಡಿಯೋ ರಿಕಾರ್ಡಿಂಗ್ ಕೇಂದ್ರ. ಕನ್ನಡ ಚಿತ್ರರಂಗಕ್ಕೆ ತನ್ನ ಅಮೂಲ್ಯವಾದ ಸೇವೆಯನ್ನು ಯಶಸ್ವಿಯಾಗಿ ಸಲ್ಲಿಸುತ್ತ ಬಂದಿದೆ. ಈ ಕೇಂದ್ರದಲ್ಲಿ ಹಾಡುಗಳ ರಿಕಾರ್ಡಿಂಗ್ ಡಿಜಿಟಲ್ ತಂತ್ರಜ್ಞಾನವನ್ನು ಬಳಸಿಕೊಂಡು ಮಲ್ಟಿ ಟ್ರಾಕ್‌ಗಳಲ್ಲಿ ರಿಕಾರ್ಡ್ ಮಾಡುವ ವ್ಯವಸ್ಥೆಯ ಜೊತೆಗೆ, ಚಿತ್ರಗಳ ಡಬ್ಬಿಂಗ್ (೩೫ ಎಂ.ಎಂ, ಯು.ಮಾಟಿಕ್, ಡಿಜಿಟಲ್), ರಿ-ರಿಕಾರ್ಡಿಂಗ್, ಎಫೆಕ್ಟ್ಸ್ ಮಿಕ್ಸಿಂಗ್ ಹಾಗೂ ಆಪ್ಟಿಕಲ್ ಟ್ರಾನ್ಸ್‌ಫರಿಂಗ್ ಮೊದಲಾದ ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿಸಿದ್ದು ಸುಮಾರು ಕನ್ನಡ ಚಿತ್ರಗಳ ರಿಕಾರ್ಡಿಂಗ್ ಕಾರ್ಯ ನಡೆದಿದೆ.

ರಾವ್‌ಕೋ ಎಫೆಕ್ಟ್ಸ್ ಸರ್ವಿಸ್ ಲ್ಯಾಬೊರೇಟರಿ

ಚಿತ್ರರಂಗವೆಂದರೆ ಬರೀ ಝಗಮಗಿಸುವ ತಾರೆಯರು, ನಿರ್ದೇಶಕ, ನಿರ್ಮಾಪಕ ಹಾಡು, ಕುಣಿತ ಎಲ್ಲಾ ತುಂಬಿದ ಮಸಾಲೆ ಎಂಬ ಭಾವನೆ ಕೆಲವರಿಗೆ. ಇದನ್ನು ಬಿಟ್ಟರೆ ಚಿತ್ರ ನಿರ್ಮಾಣದ ಹಿಂದೆ ಅವಿರತವಾಗಿ ದುಡಿದ ಎಷ್ಟೋ ಮಂದಿಯ ಪರಿಚಯವಾಗಲೀ ಅಥವಾ ಅವರ ಕಾರ್ಯದಕ್ಷತೆ, ಕಾರ್ಯ ವೈಖರಿಯ ಪರಿಚಯವಾಗಲಿ ಇರುವುದಿಲ್ಲ. ಆದರೆ ಚಿತ್ರವೊಂದರ ಹಿಂದೆ, ಚಿತ್ರದ ಯಶಸ್ಸಿಗೆ ಹೆಗಲು ಕೊಟ್ಟು ನಿಂತ 'ಅಸಲೀ ಹೀರೋ'ಗಳು ಎಷ್ಟೋ ಮಂದಿ ಇದ್ದಾರೆ. ಅಂಥವರಲ್ಲಿ ಒಬ್ಬರು ರಾವ್‌ಕೋ ಎಂದೇ ಪರಿಚಿತರಾಗಿರುವ ಉಡುಪಿಯ ಆರೂರು ಸುಂದರ ವಿಠಲರಾಯರು.

ರಾವ್‌ಕೋ ಬಳಿ ಬರದ ಮೇಧಾವಿ ನಿರ್ದೇಶಕರೇ ಇಲ್ಲವೆನ್ನಬಹುದು. ಸತ್ಯಜಿತ್‌ರಾಯ್, ಮೃಣಾಲ್‌ಸೇನ್, ಲಕ್ಷ್ಮೀನಾರಾಯಣ್, ಗಿರೀಶ್ ಕಾರ್ನಾಡ್, ಬಿ.ವಿ.ಕಾರಂತ್, ಶ್ಯಾಮ್ ಬೆನಗಲ್ ಹೀಗೆ ಪ್ರತಿಭಾವಂತ ದಂಡೇ ರಾವ್‌ಕೋ ಅವರಿಂದ ಚಿತ್ರ ಸಂಬಂಧಿ ಸಿನಿಮಾತಂತ್ರಗಳನ್ನು ತಿಳಿಯಲು, ಸಲಹೆ ಪಡೆಯಲು ಬರುತ್ತಾರೆ. ಸಾಮಾನ್ಯವಾಗಿ ಭಾರತೀಯ ಚಿತ್ರವೊಂದು ವಿದೇಶಕ್ಕೆ ಹೋಗಬೇಕಾದರೆ, ಅಲ್ಲಿಯ ಜಾಗತಿಕ ಚಿತ್ರೋತ್ಸವದಲ್ಲಿ ಪ್ರದರ್ಶಿತವಾಗಬೇಕಾದರೆ ಸೂಕ್ತವಾದ ಸಬ್‌ಟೈಟಲ್ ಅವಶ್ಯ. ರಾವ್‌ಕೋ ಸಬ್‌ಟೈಟಲ್ ನಿಪುಣ.

ಹದಿನೆಂಟು ವರ್ಷಕ್ಕೂ ಮೀರಿ ಚಲನಚಿತ್ರರಂಗಕ್ಕೆ ಅವರು ನೀಡಿದ ಕೊಡುಗೆ ಅತ್ಯಮೂಲ್ಯವಾದುದು. ಮುಂಬಯಿಯ ಮಾಹಿಮ್‌ನಲ್ಲಿ 'ರಾವ್‌ಕೋ ಎಫೆಕ್ಟ್ಸ್ ಸರ್ವಿಸ್' ಲ್ಯಾಬೊರೇಟರಿ ಸ್ಥಾಪಿಸಿದರು. ವರ್ಷಕ್ಕೆ ಸರಾಸರಿ ೫೦ ಕಥಾ ಚಿತ್ರಕ್ಕೆ ಮತ್ತು ೧೫೦ ಡಾಕ್ಯುಮೆಂಟರಿಗಳಿಗೆ ಸ್ಪೆಷಲ್ ಎಫೆಕ್ಟ್ಸ್ ಕೊಡುತ್ತ ಬಂದ ರಾವ್‌ಕೋ ತಂತ್ರ ಕೌಶಲ್ಯಕ್ಕೆ ಯಾವುದೇ ಒಂದು ಮಿತಿಯಿಲ್ಲ. ನಮ್ಮಲ್ಲಿ ತಾಂತ್ರಿಕ ನಿಪುಣರು ಅನೇಕರಿರಬಹುದು ಆದರೆ ಅದನ್ನು ಖುದ್ದಾಗಿ ತಯಾರಿಸುವವರು ಕಡಿಮೆ. ಆದರೆ ರಾವ್ ತಾವೇ ಸ್ವತಃ ಅನೇಕ ಯಂತ್ರಗಳನ್ನು ನಿರ್ಮಿಸಿ, ಲಕ್ಷಾಂತರ ರೂಪಾಯಿಗಳ ವಿದೇಶಿ ವಿನಿಮಯ ಉಳಿಸಿದ್ದಾರೆ. ಚಲನಚಿತ್ರ ಪ್ರೋಸೆಸಿಂಗ್, ಪ್ರಿಂಟಿಂಗ್, ಆಪ್ಟಿಕಲ್ ಪ್ರಿಂಟಿಂಗ್, ಆನಿಮೇಷನ್ ಕ್ಯಾಮೆರಾಗಳು ಹೀಗೆ ಹತ್ತು ಹಲವಾರು ಯಂತ್ರಗಳನ್ನು ನಿರ್ಮಿಸಿದ್ದಾರೆ.

ರಾವ್‌ಕೋ ಅತೀ ವಿಶಿಷ್ಟರೆನಿಸಿರುವುದು ಸಬ್‌ಟೈಟಲ್‌ಗಳಿಂದ ಎಂಬುದು ಮತ್ತೊಂದು ವಿಶೇಷ. ಇಡೀ ಭಾರತದಲ್ಲಿ ಚಿತ್ರಗಳಿಗೆ ಸಬ್‌ಟೈಟಲ್ಸ್ ಹಾಕುವುದು ಅವರೊಬ್ಬರೆ. ಇದು ಅವರ ವಿಶೇಷ ತಾಂತ್ರಿಕ ಪರಿಜ್ಞಾನಕ್ಕೆ ಒಂದು ಉದಾಹರಣೆ. ಸತ್ಯಜಿತ್‌ರೇ ಅವರ ಎಲ್ಲಾ ಚಿತ್ರಗಳು, ಕನ್ನಡದ 'ಕಾಡು', 'ಚೋಮನ ದುಡಿ', ಮಲೆಯಾಳಂನ 'ಚೆಮ್ಮೀನ್', 'ನಿರ್ಮಾಲ್ಯಂ' ಹೀಗೆ ಅವರು ಸಬ್‌ಟೈಟಲ್ ಹಾಕಿದ ಚಿತ್ರಗಳ ಸಂಖ್ಯೆಗೆ ಲೆಕ್ಕವಿಲ್ಲ. ಸಬ್‌ಟೈಟಲ್‌ಗಳನ್ನು ಹಾಕುವ ಕೆಲಸ ಬಹಳ ಸೂಕ್ಷ್ಮವಾದುದು. ಮೂಲ ಭಾಷೆಯಲ್ಲಿರುವ ಸಂವಾದಕ್ಕೆ ಹೊಂದಿಕೊಂಡು ಸನ್ನಿವೇಶಕ್ಕೆ

(ಚಿತ್ರ ೧೧) ಆಪ್ಟಿಕಲ್ ಯಂತ್ರದೊಂದಿಗೆ ಎಸ್.ಎ.ರಾವ್

ತಕ್ಕಂತೆ ೩೫ ಮಿ.ಮೀ ನ ಫಿಲಂನಲ್ಲಿರುವ ೨೨ x ೧೬ ಮಿ.ಮೀ ದೃಶ್ಯ ಭಾಗದ ಒಳಗ, ಒಂದು ಮಿ.ಮೀ ಚಿಕ್ಕದಾಗಿರುವ ಅಕ್ಷರಗಳನ್ನು ಒಂದು ಅಥವಾ ಎರಡು ಸಾಲು ಮೀರದಂತೆ ಅಚ್ಚೊತ್ತುವ ಕೆಲಸ ಸೂಕ್ಷ್ಮ ಹಾಗೂ ಬಹಳ ಜಿಗುಟಿನ ಕೆಲಸ. ಅದನ್ನು ಚಿತ್ರದ ಸೌಂಡ್ ಟ್ರಾಕ್‌ಗೆ ಸರಿಹೊಂದಿಸುವುದು ಮತ್ತೊಂದು ತ್ರಾಸದಾಯಕ ವಿಷಯ.

ರಾವ್‌ಕೋ ಅವರ ಆವಿಷ್ಕಾರಗಳಲ್ಲಿ ಒಂದಾದ 'ಆಪ್ಟಿಕಲ್ ಪ್ರಿಂಟಿಂಗ್' ಕ್ಯಾಮರಾ ಹಾಗೂ ಪ್ರೊಜೆಕ್ಟರ್‌ಗಳ ಸಂಗಮವಾಗಿದ್ದು ೧೬ ಮಿ.ಮೀ ನಿಂದ ೩೫ ಮಿ.ಮೀ.ಗೆ ಹಿಗ್ಗಿಸುವ ಕಾರ್ಯ, ಸಿನಿಮಾಸ್ಕೋಪ್ ಬ್ಲೋ ಅಪ್. ಚಿತ್ರದ ಟೈಟಲ್ ಕಾರ್ಡ್‌ಗಳನ್ನು ತೋರಿಸುವ ಈ ಯಂತ್ರ ಒಂದು ಬಹುಪಯೋಗಿ ಯಂತ್ರ. ಇದಲ್ಲದೆ ಸ್ಲೈಡ್ ಕಾಪಿ ಮಾಡುವ ಯಂತ್ರ, ಅನಿಮೇಶನ್ ಕ್ಯಾಮೆರಾ, ಮೋಷನ್ ಪಿಕ್ಚರ್ ಪ್ರಾಸೆಸಿಂಗ್ ಯಂತ್ರ ಹೀಗೆ ಅವರ ಆವಿಷ್ಕಾರದ ಪಟ್ಟಿ ಬೆಳೆಯುತ್ತದೆ.

ಅರುಣ್ ಡಿಜಿ ಆಡಿಯೋ

ನೃತ್ಯ ಕಲಾವಿದ, ನಾಟ್ಯ ಪ್ರವೀಣ ಯು.ಕೆ.ಅರುಣ್ ೧೯೮೨ರಲ್ಲಿ ನೃತ್ಯ ತಂಡವನ್ನು ಕಟ್ಟಿ ಪ್ರದರ್ಶನ ನೀಡುತ್ತಿದ್ದ ಸಮಯ. ಆಗ ಅವರ ನೃತ್ಯ ರೂಪಕಗಳಿಗೆ ಹಾಡುಗಳನ್ನು ಧ್ವನಿ ಮುದ್ರಿಸಿಕೊಳ್ಳಲು ತಮ್ಮದೇ ಆದ ಅರುಣ್ ಡಿಜಿ ಆಡಿಯೋ ಅನ್ನು ಸ್ಥಾಪಿಸಿ ರಿಕಾರ್ಡಿಂಗ್‌ಗೆ ನಾಲ್ಕು ಟ್ರ್ಯಾಕ್‌ಗಳನ್ನು ಉಪಯೋಗಿಸುತ್ತಿದ್ದರು. ಮತ್ತಷ್ಟು ಆಧುನಿಕತೆಗಾಗಿ ಮದ್ರಾಸಿಗೆ ಅಲೆಯಬೇಕಾಗುವಂಥ ಸಂದರ್ಭದಲ್ಲಿ ಸಾಹಸ ಮಾಡಿ ೧೯೯೨ರಲ್ಲಿ ಎಂಟು ಟ್ರ್ಯಾಕ್‌ಗಳನ್ನು ಅಳವಡಿಸಿದರು. ತಮ್ಮ ಮನೆಯ ಮೊದಲ ಅಂತಸ್ತಿನಲ್ಲಿ ಆರಂಭಿಸಿದ ಈ ಕೇಂದ್ರ ಅದು ಅತ್ಯಂತ ಸುಸಜ್ಜಿತವಾದ ರಿಕಾರ್ಡಿಂಗ್ ಕೇಂದ್ರಗಳಲ್ಲಿ ಒಂದೆನಿಸಿತ್ತು. ತಂತ್ರಜ್ಞಾನ ಬೆಳೆದಂತೆ ಕೇಂದ್ರವನ್ನು ವಿಸ್ತರಿಸಿ ಹದಿನಾರು ಟ್ರ್ಯಾಕ್‌ಗಳ ಡಿಜಿಟಲ್ ತಂತ್ರಜ್ಞಾನವನ್ನು ಅಳವಡಿಸಿದರು.

ಆ ತಂತ್ರಜ್ಞಾನವಲ್ಲಿ ಯಮಹಾದ O2R ಡಿಜಿಟಲ್ ದರ್ಶಕದ ಜೊತೆಗೆ ಒಳಗ ಅಳವಡಿಸಿದ ೪೦ ಸಿಗ್ನಲ್ ಪ್ರಾಸೆಸರ್‌ಗಳು ಮತ್ತು ೪೦ ರಿವರ್ಬ್ ಯೂನಿಟ್‌ಗಳಿರುತ್ತವೆ. ಸಂಪೂರ್ಣವಾಗಿ ಡಿಜಿಟಲ್ ಅಂಶಗಳಿಂದ ಕೂಡಿದ ಈ ತಂತ್ರಜ್ಞಾನವಲ್ಲಿ ಹಾಡುಗಳ ರಿಕಾರ್ಡಿಂಗ್ ಅನ್ನು ೧೬ ಡಿಜಿಟಲ್ ಟ್ರ್ಯಾಕ್‌ಗಳ ಮೇಲೆ ಮಾಡಿ ಡಿಜಿಟಲ್ ಟೈಮ್ ಕೋಡ್ ರಿಕಾರ್ಡರ್‌ನಲ್ಲಿ ಮಿಕ್ಸ್ ಮಾಡಿ ಸೆಕೆಂಡಿಗ ೨೪ ಫ್ರೇಮ್‌ಗಳಂತೆ ನಿರ್ದಿಷ್ಟವಾದ ಸಿಂಕ್ರನೈಸ್‌ನೊಂದಿಗ ೩೫ ಎಂ.ಎಂ ಫಿಲಂಗೆ ಅಳವಡಿಸಬಹುದಾಗಿದೆ. ಅದು ಮಿಕ್ಸಿಂಗ್ ಇವೇ ಮೊದಲಾದ ಹಲವು ಕಾರ್ಯಗಳನ್ನು ಸ್ವಯಂ ನಿರ್ವಹಿಸುತ್ತದೆ. ಇದಕ್ಕಾಗಿಯೇ ಅತ್ಯಾಧುನಿಕ ಎನ್ನುವಂಥ ಯಮಹಾ ಮಿಕ್ಸರ್ ಅನ್ನು ಅಳವಡಿಸಲಾಗಿದ.

ಇಷ್ಟೆಲ್ಲಾ ಆಧುನಿಕತೆಗಳಿಂದ ಕೂಡಿದ ಈ ಸ್ಟುಡಿಯೋದಲ್ಲಿ ಅತ್ಯಂತ ಉನ್ನತ ಮಟ್ಟದ ಡಬ್ಬಿಂಗ್ ಮತ್ತು ಪುನರ್ಧ್ವನಿ ಮುದ್ರಣ ಮಾಡಬಹುದಾಗಿದ. ಡಬ್ಬಿಂಗ್ ಅನ್ನು ೮ ಟ್ರ್ಯಾಕ್‌ಗಳ ಹಾರ್ಡ್ ಡಿಸ್ಕ್ ಮೇಲೆ ಡಿಜಿ ಡಿಸೈನ್ ಸಹಕಾರದೊಂದಿಗ ನೇರವಾಗಿ ಮುದ್ರಿಸಿಕೊಂಡು, ನಂತರ ಅದನ್ನು ತೀರಾ ಸುಧಾರಿತ ರೀತಿಯಲ್ಲಿ ಫ್ರೇಮ್ ಟು ಫ್ರೇಮ್ ಎಡಿಟಿಂಗ್ ಮಾಡಲಾಗುತ್ತದ. ಇದರಿಂದ ಪರಿಣಾಮಕಾರಿಯಾದ ಡಬ್ಬಿಂಗ್ ಸಾಧ್ಯವಾಗಿದ. ಈ ಮೊದಲು ಮಾಡುತ್ತಿದಂತ ಪ್ರತಿ ಬಾರಿಯೂ ಮ್ಯಾಗ್ನಟಿಕ್ ಟೇಪ್ ಅನ್ನು ಕತ್ತರಿಸಿ ಮರುಜೋಡಣೆ ಮಾಡುವಂಥ ತ್ರಾಸದಾಯಕ ಕೆಲಸ ಸಂಪೂರ್ಣವಾಗಿ ಇಲ್ಲವಾಗಿದೆ. ಈ ರೀತಿ ಡಬ್ಬಿಂಗ್ ಮಾಡಲಾದ ಡಬ್ಬಿಂಗ್ ಟ್ರ್ಯಾಕ್ ಅನ್ನು DAT ಟೇಪ್ ಜೊತೆಗ ಮಿಕ್ಸ್ ಮಾಡುವ, ನಂತರ ಅದೇ ೨೪ ಫ್ರೇಮ್‌ಗಳ DAT ಟೇಪ್ ಅನ್ನು ಪುನರ್ಧ್ವನಿ ಮುದ್ರಣ ಮಾಡಿಕೊಳ್ಳಲು ಬಳಸಿಕೊಳ್ಳುವ ಸವಲತ್ತು ಇಲ್ಲಿದೆ. ಚಿತ್ರಗಳ ರಿ-ರಿಕಾರ್ಡಿಂಗ್ ಮಾಡಲು ಬೇಕಾದಂಥ ೧೯ ಟ್ರ್ಯಾಕ್‌ಗಳ ಡಿಜಿಟಲ್ ರಿಕಾರ್ಡಿಂಗ್ ವ್ಯವಸ್ಥೆ ಇದ್ದು ಅದಕ್ಕಾಗಿ 2 TASCAM DA-88 ಎನ್ನುವ ಅತ್ಯಾಧುನಿಕ ತಂತ್ರಜ್ಞಾನ ಹಾಗೂ ಅದರೊಂದಿಗೆ ವೀಡಿಯೂ ಮಾನಿಟರ್ ವ್ಯವಸ್ಥೆ ಇದೆ. ಇದರಿಂದ ಸರಿಯಾದ ಹಾಗೂ ಉತ್ಕೃಷ್ಟ ಮಟ್ಟದ ರಿ-ರಿಕಾರ್ಡಿಂಗ್ ಸಾಧ್ಯವಾಗಿದೆ. ಈ ಎಲ್ಲಾ ತಂತ್ರಜ್ಞಾನದ ಅಳವಡಿಕೆಗಾಗಿ ಶ್ರೇಷ್ಠಮಟ್ಟದ ತಂತ್ರಜ್ಞರು ಇಲ್ಲಿದ್ದಾರೆ.

ಚಿತ್ರರಂಗಕ್ಕೆ ಸಹಕಾರವಾಗಲೆಂದು ಶ್ರಮವಹಿಸಿ ೬೦ ೭೦ ಲಕ್ಷ ರೂ.ಗಳನ್ನು ಸುರಿದು ತಮ್ಮ ಸ್ಟುಡಿಯೋ ಅನ್ನು ಅತ್ಯಾಧುನಿಕ ಮಾದರಿಯಲ್ಲಿ ಸಿದ್ಧಗೊಳಿಸಿದ ಅರುಣ್ ತಾವು ಹಾಕಿದ ಬಂಡವಾಳ ಮರಳಿ ಪಡೆಯುವ ಹಾದಿಯಲ್ಲಿ ಇರುವ ತೊಡಕುಗಳ ಬಗ್ಗೆ ಈ ರೀತಿ ಹೇಳುತ್ತಾರೆ.

''ರಾಜ್ಯ ಸರ್ಕಾರ ಆದೇಶ ಹೊರಡಿಸಿದಂತೆ ಚಿತ್ರೋದ್ಯಮಕ್ಕೆ ಸಂಬಂಧಿಸಿದ ಎಲ್ಲಾ ಕ್ರಿಯೆಗಳು ರಾಜ್ಯದ ಒಳಗೆ ನಡೆದರೆ ಮಾತ್ರ ಸಬ್ಸಿಡಿ ಸಿಗುತ್ತದೆ ಇಲ್ಲವಾದರ ಸಬ್ಸಿಡಿ ಖೋತಾ ಎಂಬುದು ಸ್ವಾಗತಾರ್ಹ. ಆದರೆ ನಮ್ಮ ಸ್ಟುಡಿಯೋದಲ್ಲಿ ಚಿತ್ರಕ್ಕೆ ಸಂಬಂಧಿಸಿದ ಡಬ್ಬಿಂಗ್, ರಿಕಾರ್ಡಿಂಗ್, ರಿ-ರಿಕಾರ್ಡಿಂಗ್ ಎಲ್ಲವೂ ಸಾಧ್ಯ. ಬರೀ ಆಪ್ಟಿಕಲ್ ಟ್ರಾನ್ಸ್‌ಫರ್‌ಗಾಗಿ ಮದ್ರಾಸಿಗೋ ಅಥವಾ ಮುಂಬೈಗೋ ಹೋಗಬೇಕಾಗುತ್ತದೆ. ಬೆಂಗಳೂರಿನಲ್ಲಿರುವ ಕೆಲವು ಸ್ಟುಡಿಯೋಗಳಲ್ಲಿ ಒಂದು ಹಾಡಿನ ಆಪ್ಟಿಕಲ್ ಟ್ರಾನ್ಸ್‌ಫರೆನ್ಸ್‌ಗೆ ತಗಲುತ್ತಿದ್ದ ವೆಚ್ಚ ಕೇವಲ ೩೦೦ರೂ ಮಾತ್ರ. ಸರ್ಕಾರದ ನೀತಿ ಕೆಲವರಿಗೆ ಒಳಿತು ಮಾಡಿದ್ದರೆ ನಮ್ಮಂಥವರಿಗೆ ಸಂಕಷ್ಟಕ್ಕೀಡು ಮಾಡುವಂಥಾದ್ದಾಗಿದೆ.''

ಅರುಣ್ ಡಿಜಿ ಆಡಿಯೋದಲ್ಲಿನ ತಂತ್ರಜ್ಞಾನವನ್ನು ಸಮರ್ಥವಾಗಿ ಬಳಸಿಕೊಳ್ಳುವ ಸೌಂಡ್ ಎಂಜಿನಿಯರ್ ತನ್ನ ಕಾರ್ಯಕೌಶಲ, ಬುದ್ಧಿಮತ್ತೆ ಬಳಸಿದರೆ ಉತ್ಕೃಷ್ಟ ಮಟ್ಟದ ನಿರ್ಮಾಣಗಳು ಇಲ್ಲಿ ಸಾಧ್ಯ. ಚಲನಚಿತ್ರಗಳೇ ಅಲ್ಲದೆ, ಜಾಹಿರಾತುಗಳಿಗೆ, ದೂರದರ್ಶನ ಧಾರಾವಾಹಿಗಳಿಗೆ ಹಾಗೂ ಇನ್ನಿತರೆ ನಿರ್ಮಾಣ ಕಾರ್ಯಗಳಿಗೆ ಅರುಣ್ ಡಿಜಿ ಆಡಿಯೋ ಒಂದು ವರವಾಗಿದೆ ಎಂದರೆ ಅತಿಶಯೋಕ್ತಿ ಏನಲ್ಲ.

ಅರವಿಂದ್ ಸ್ಟುಡಿಯೋ

ಬೆಂಗಳೂರಿನ ಹನುಮಂತನಗರದಲ್ಲಿರುವ ಅರವಿಂದ್ ಕಿಗ್ಗಾಲ್ ಅವರ ಅರವಿಂದ್ ರಿಕಾರ್ಡಿಂಗ್ ಸ್ಟುಡಿಯೋವಿನ ಮೂಲ ಹೆಸರು 'ಗಾನಲಹರಿ ಸೌಂಡ್ ರಿಕಾರ್ಡಿಂಗ್ ಕಂಪೆನಿ'. ಬಿ.ಎಸ್‌ಸಿ., ಪದವಿಯನ್ನು ಮಡಿಕೇರಿಯ ಸೆಂಟ್ರಲ್ ಕಾಲೇಜಿನಲ್ಲಿ ಮುಗಿಸಿದ ಇವರು, ಮೈಸೂರಿನಲ್ಲಿ ಆಟೋಮೊಬೈಲ್ ಡಿಪ್ಲೊಮಾ ಕೂಡ ಮುಗಿಸಿದರು. ಮದ್ರಾಸಿನಲ್ಲಿ ಸ್ವಂತ ಆಟೋಮೊಬೈಲ್ ಗ್ಯಾರೇಜಿನ ಮಾಲೀಕರಾದ ಇವರಿಗೆ ಚಿಕ್ಕಂದಿನಿಂದಲೇ ಸಂಗೀತದ ಗೀಳು. ೧೯೬೭ರಲ್ಲಿ ಮದ್ರಾಸ್‌ನಲ್ಲಿದ್ದಾಗ ಕಲಿಸಿದ ತರಂಗಿಣಿ ಸ್ಟುಡಿಯೋದ ಸೌಂಡ್ ಇಂಜಿನಿಯರ್ ಅಮೀರ್ ಅವರನ್ನು ಗುರುಗಳು



(ಚಿತ್ರ ೧೨) ಅರುಣ್ ಡಿಜಿ ಸ್ಟುಡಿಯೋ ಸಂಸ್ಥೆ ಮಾಲೀಕ ಯು.ಕೆ.ಅರುಣ್ ತಮ್ಮ ಧ್ವನಿ ಇಂಜನಿಯರ್ ಜೊತೆಯಲ್ಲಿ

(ಚಿತ್ರ ೧೩) ಅರವಿಂದ ಸ್ಟುಡಿಯೋ - ಕರ್ನಾಟಕದಲ್ಲಿ ಆರಂಭವಾದ ಆಧುನಿಕ ೧೬ ಟ್ರ್ಯಾಕ್ ಧ್ವನಿ ರಿಕಾರ್ಡಿಂಗ್ ಯಂತ್ರ ಸೌಲಭ್ಯ ನಿಯಂತ್ರಿಸುತ್ತಿರುವ ಜಯಶ್ರೀ ಅರವಿಂದ್

(ಚಿತ್ರ ೧೪) ಅರವಿಂದ ಕಿಗ್ಗಾಲ

ಲಕ್ಷ್ಮಿ ಎಡಿಟಿಂಗ್ ರೂಮ್

ಗಾಂಧಿನಗರದ ಐದನೇ ಕ್ರಾಸ್‌ನಲ್ಲಿ ಆರಂಭವಾದ ಲಕ್ಷ್ಮಿ ಎಡಿಟಿಂಗ್ ರೂಮ್ ಒಂದು ಸುಸಜ್ಜಿತವಾದ ಸಂಕಲನ ಕೇಂದ್ರವಾಗಿ ಆರ್.ಎಫ್.ಸಾಲಿ ಅವರ ಮಾರ್ಗದರ್ಶನದಲ್ಲಿ ಕನ್ನಡ ಚಿತ್ರಗಳಿಗೆ ಅವಶ್ಯಕವಾದ ಸೇವೆಯನ್ನು ಮಾಡುತ್ತಾ ಬಂದು ಪ್ರೋತ್ಸಾಹದ ಕೊರತೆಯಿಂದ ಮುಚ್ಚಬೇಕಾಗಿ ಬಂದದ್ದು ವಿಪರ್ಯಾಸದ ಸಂಗತಿ. ಸಿ.ದಶರಥ್, ಎಂ.ಎನ್.ಸ್ವಾಮಿ ಮುಂತಾದ ನಿಪುಣ ತಂತ್ರಜ್ಞರ ಸೇವೆಯನ್ನು ಕಂಡ ಲಕ್ಷ್ಮಿ ಎಡಿಟಿಂಗ್ ರೂಮ್‌ನಲ್ಲಿ 'ಪತಿತ ಪಾವನಿ' ಮೊದಲಾದ ಚಿತ್ರಗಳಿಗೆ ಸಂಕಲನ ಕಾರ್ಯ ನಡೆದಿತ್ತು. ಇದೇ ಕೇಂದ್ರಗಳಲ್ಲಿ ಸಾಕಷ್ಟು ಹೊಸ ಅಲೆಯ ಚಿತ್ರಗಳ ಸಂಕಲನ ಕಾರ್ಯಗಳು ನಡೆದವು.

ಎಂದು ನೆನೆಯುತ್ತಾರೆ. ಅವರಿಂದ ಸ್ಟುಡಿಯೋಕ್ಕೆ ಸಂಬಂಧಪಟ್ಟಂತೆ ಟೆಕ್ನಿಕ್‌ಗಳನ್ನು ಕಲಿತುಕೊಂಡ ಇವರು ಎ.ವಿ.ಎಂ., ವಾಹಿನಿಗಳಂತಹ ಸ್ಟುಡಿಯೋಗಳಲ್ಲಿ ಕೂಡಾ ಕೆಲಸ ಮಾಡಿದ ಅನುಭವವೇ ಹೊರತು ಯಾವುದೇ ಸೌಂಡ್ ಇಂಜಿನಿಯರಿಂಗ್ ವಿಷಯದಲ್ಲಿ ವಿಶೇಷ ತರಬೇತಿಯನ್ನೇನೂ ಹೊಂದಿಲ್ಲ. ಧ್ವನಿಗ್ರಹಣದ ಬಗೆಗೆ ಅವರಿಗಿದ್ದ ಆಸಕ್ತಿ ಆ ತಾಂತ್ರಿಕತೆಯಲ್ಲಿ ಅವರನ್ನು ಪರಿಣತರನ್ನಾಗಿಸಿತು.

೧೯೭೮ರಲ್ಲಿ ಮಾಸ್ಟರ್ ಹಿರಣ್ಣಯ್ಯನವರ ನಾಟಕದ ಹಾಡುಗಳನ್ನು ರಿಕಾರ್ಡ್ ಮಾಡುವ ಸಂದರ್ಭ ಒದಗಿ ಬಂದಾಗ ಅವರ ಮನೆಯಲ್ಲೇ ತನ್ನಲ್ಲಿದ್ದ ಮೊಬೈಲ್ ರಿಕಾರ್ಡಿಂಗ್ ಉಪಕರಣಗಳ ಮೂಲಕ (¼" spool recorder) ರಿಕಾರ್ಡಿಂಗ್ ಮಾಡುವುದನ್ನು ಪ್ರಾರಂಭಿಸಿದರು. ನಂತರ ಕೊಡವ ಭಾಷಾ ಹಾಡುಗಳ ಧ್ವನಿಮುದ್ರಣ ಕಾರ್ಯ. ಎಲ್ಲರಿಂದಲೂ ಉತ್ತಮ ಅಭಿಪ್ರಾಯಗಳು ಬರಲು, ತಾವೇ ೧೯೮೨ರಲ್ಲಿ ಬೆಂಗಳೂರಿನ ಅಲಸೂರಿನಲ್ಲಿ ಒಂದು ಪುಟ್ಟ ಕೊಠಡಿಯಲ್ಲಿ ರಿಕಾರ್ಡಿಂಗ್ ಸಂಸ್ಥೆಯನ್ನು ಪ್ರಾರಂಭ ಮಾಡಿದರು. ೧೯೮೪ರಲ್ಲಿ ಮೊತ್ತ ಮೊದಲನೆಯದಾಗಿ 4 Track Recorderನ ಖರೀದಿ. ನಂತರವೇ ರಾಮದಾಸ್ ನಾಯ್ಡು ನಿರ್ಮಿಸಿ, ಯೋಗನಾರಸಿಂಹ ಅವರ ಸಂಗೀತ ನಿರ್ದೇಶನದ 'ಜೀವನ ಸಂಗ್ರಾಮ' ಚಿತ್ರದ ಹಾಡುಗಳ ಧ್ವನಿಮುದ್ರಣ ಕಾರ್ಯ ನಡೆಯಿತು. ನಂತರ ಹನುಮಂತನಗರಕ್ಕೆ ಧ್ವನಿಗ್ರಹಣ ಕೇಂದ್ರದ ಸ್ಥಳಾಂತರ. ಸುಸಜ್ಜಿತ ಸ್ಟುಡಿಯೋವಾಗಿ ಬದಲಾವಣೆ. ನಾಗಾಭರಣರ ಪ್ರಶಸ್ತಿ ವಿಜೇತ ಚಿತ್ರ 'ಆಸ್ಫೋಟ'ದ ಧ್ವನಿಮುದ್ರಣ. ಆನಂತರದಲ್ಲಿ ಬಹಳಷ್ಟು ಚಿತ್ರಗಳ ಹಾಡುಗಳ ಧ್ವನಿಮುದ್ರಣ. 'ಮೈಸೂರು ಮಲ್ಲಿಗೆ', 'ಸಂತ ಶಿಶುನಾಳ ಷರೀಫ' ಚಿತ್ರಗಳ ಹಾಡುಗಳ ಧ್ವನಿಮುದ್ರಣಕ್ಕಾಗಿ ಪ್ರಶಸ್ತಿ ಲಭಿಸಿತು.

೧೯೯೨ರಲ್ಲಿ ಕರ್ನಾಟಕದ ಪ್ರಥಮ ೮ ಟ್ರ್ಯಾಕ್‌ಗಳ ಡಿಜಿಟಲ್ ರಿಕಾರ್ಡರ್ ಅಳವಡಿಕೆ. ಒಂದೆರಡು ತಿಂಗಳಲ್ಲೇ ೧೬ ಟ್ರ್ಯಾಕ್‌ಗಳಿಗೆ ವಿಸ್ತರಿಸಲಾಯಿತು. ೧೯೯೪ರಲ್ಲಿ ಕಂಪ್ಯೂಟರ್ ಆಧಾರಿತ ತಂತ್ರಜ್ಞಾನದ ಅಳವಡಿಕೆಯ ಪ್ರಾರಂಭ. ೧೯೯೬ರಲ್ಲಿ ಎರಡು ಅಂತಸ್ತುಗಳ ಸೇರ್ಪಡೆಯೊಂದಿಗೆ ಸಂಸ್ಥೆಯ ವಿಸ್ತರಣೆ. ಪ್ರತಿ ಹೆಜ್ಜೆಯಲ್ಲಿಯೂ ಆಧುನಿಕ ತಂತ್ರಜ್ಞಾನದ ಅಳವಡಿಕೆ.

೧೯೯೮ರಲ್ಲಿ ಹಾರ್ಡ್‌ಡಿಸ್ಕ್‌ನಲ್ಲಿ ಪಿಕ್ಚರ್‌ನ ಸೇರ್ಪಡೆಯೊಂದಿಗೇ ಜೊತೆ ಜೊತೆಯಲ್ಲೇ ರಿಕಾರ್ಡ್ ಮಾಡಿಕೊಳ್ಳುವ ವ್ಯವಸ್ಥೆ ಒದಗಿಸಲಾಯಿತು. ನಗರದಲ್ಲಿನ ಸುಸಜ್ಜಿತ ಹಾಗೂ ಆಧುನಿಕ ತಂತ್ರಜ್ಞಾನ ಹೊಂದಿದ ಧ್ವನಿಗ್ರಹಣ ಕೇಂದ್ರ ಇದು.

ಬಿ.ಸಿ.ಆರ್.ಸಿ. ಡಬ್ಬಿಂಗ್ ಥಿಯೇಟರ್

ಬೆಂಗಳೂರಿನ ಗಾಂಧಿನಗರದ ಆನಂದರಾವ್ ಬಡಾವಣೆಯಲ್ಲಿ ಆರಂಭವಾದ ಬೆಂಗಳೂರು ಸಿನಿ ರಿಕಾರ್ಡಿಂಗ್ ಸೆಂಟರ್ ಕೂಡ ಡಬ್ಬಿಂಗ್, ಪ್ರೊಜೆಕ್ಷನ್ ಮುಂತಾದ ಚಿತ್ರಸಂಬಂಧಿ ಅಂಶಗಳಿಗೆ ಸಹಾಯಕವಾದ ಸಲಕರಣೆಗಳಿಂದ ಕೂಡಿದ್ದು ಸಾಕಷ್ಟು ಹುರುಪಿನಿಂದಲೇ ಆರಂಭಗೊಂಡು ನಂತರ ಕಾರಣಾಂತರಗಳಿಂದ ಮುಚ್ಚಬೇಕಾದ ಪರಿಸ್ಥಿತಿ ಬಂತು. 'ನಂಬರ್ ಐದೂ ಎಕ್ಕ' ಇನ್ನೂ ಮುಂತಾದ ಚಿತ್ರಗಳ ಡಬ್ಬಿಂಗ್ ಇಲ್ಲಿ ನಡೆದಿತ್ತು.

ಮೇಲಿನ ಸ್ಟುಡಿಯೋಗಳ ಜೊತೆಗೆ ಇಂದಿರಾನಗರದಲ್ಲಿ ಸ್ಥಾಪನೆಯಾದ ಡೆಕ್ಕನ್ ಸ್ಟುಡಿಯೋ, ವಿನಯ್ ಎಂಟರ್‌ಪ್ರೈಸಸ್, ಕೆ.ಎಫ್.ಡಿ.ಐ.ಸಿ.ಯ ಎಡಿಟಿಂಗ್ ವಿಭಾಗ, ಆನಂದರಾವ್ ವೃತ್ತದ ಬಳಿಯ ಶೀತಲ್ ಸಂಕಲನ ಕೇಂದ್ರಗಳಲ್ಲದೆ, ಆದರ್ಶ ಫಿಲಂ ಇನ್‌ಸ್ಟಿಟ್ಯೂಟ್‌ನ ಡಬ್ಬಿಂಗ್ ಥಿಯೇಟರ್ ಹಾಗೂ ಎಸ್.ಜೆ.ಪಿ. ಪಾಲಿಟೆಕ್ನಿಕ್ ಸ್ಟುಡಿಯೋಗಳು ಶಿಕ್ಷಣದ ಜೊತೆಗೆ ಚಿತ್ರ ಸಂಬಂಧಿ ಡಬ್ಬಿಂಗ್, ರಿಕಾರ್ಡಿಂಗ್ ಇನ್ನೂ ಮುಂತಾದ ಅವಶ್ಯಕ ಸೌಲಭ್ಯಗಳನ್ನು ಒದಗಿಸಿವೆ. ಅಲ್ಲಿಯೂ ಸಾಕಷ್ಟು ಚಿತ್ರಗಳ ಡಬ್ಬಿಂಗ್ ಕಾರ್ಯಗಳು ನಡೆದಿವೆ.

ಹೃದಯದಿಂದ

ನಿರ್ಮಾಪಕ–ನಿರ್ದೇಶಕ-ನಟ ವಿ.ರವಿಚಂದ್ರನ್ ಅವರು ಗಾಂಧಿನಗರದಲ್ಲಿ ಅತ್ಯಾಧುನಿಕ ಸಲಕರಣೆಗಳಿಂದ ಕೂಡಿದ ಸಂಕಲನ ಕೇಂದ್ರವನ್ನು ಸ್ಥಾಪಿಸಿದ ನಂತರದಲ್ಲಿ ರಾಜಾಜಿನಗರದ ತಮ್ಮ ಮನೆಯ ಆವರಣದಲ್ಲಿ ಧ್ವನಿಮುದ್ರಣ ಕೇಂದ್ರವೊಂದನ್ನು ಆರಂಭಿಸಿದರು. ಶಬ್ದಗ್ರಹಣದಲ್ಲಿ ಹೊಸ ಆವಿಷ್ಕಾರವಾದ ಡಿ.ಟಿ.ಎಸ್. ಯಂತ್ರೋಪಕರಣಗಳಿಂದ ಸಜ್ಜುಗೊಂಡ ಡಿಜಿಟಲ್ ಧ್ವನಿಮುದ್ರಣ ವ್ಯವಸ್ಥೆಯುಳ್ಳ ಈ ಕೇಂದ್ರದಲ್ಲಿ ತಾವೇ ಸಂಗೀತ ಸಂಯೋಜನೆಯನ್ನು ನಡೆಸಿ 'ಹೃದಯದಿಂದ..' ಸಂಗೀತ ಮೂಡಿ ಬರಲು ಕಾರಣರಾದರು. ರವಿಚಂದ್ರನ್‌ರ ಸಾಹಸಗಳ ಇನ್ನೊಂದು ಮುಖವಾಗಿದೆ ಇವರು ಆರಂಭಿಸಿರುವ ಧ್ವನಿಮುದ್ರಣ ಕೇಂದ್ರ.

ಹೊರಾಂಗಣ ಚಿತ್ರೀಕರಣ ಘಟಕಗಳು

ಸ್ಟುಡಿಯೋಗಳ ಉಲ್ಲೇಖ ಬರುವಾಗ ಹೊರಾಂಗಣ ಚಿತ್ರಘಟಕಗಳನ್ನು ಮರೆಯುವಂತಿಲ್ಲ. ಈ ನಿಟ್ಟಿನಲ್ಲಿ 'ಬಸಂತ್ ಔಟ್‌ಡೋರ್ ಯೂನಿಟ್'ನ ರೂವಾರಿ ಬಸಂತಕುಮಾರ್ ಪಾಟೀಲ್ ಅವರ ಅನುಭವ ಬಹಳ ವಿಶಿಷ್ಟವೆನಿಸುತ್ತದೆ. ಒಂದು ಚಿತ್ರದ ಮುಹೂರ್ತದ ಸಮಯದಲ್ಲಿ ಕಾರಣಾಂತರಗಳಿಂದ ಬರಬೇಕಾಗಿದ್ದ ಹೊರಾಂಗಣ ಚಿತ್ರೀಕರಣ ಘಟಕ ನಿಗದಿತ ಸಮಯಕ್ಕೆ ಸರಿಯಾಗಿ ಬಾರದೆ ಕುಪಿತರಾದ ಬಸಂತಕುಮಾರ್ ಪಾಟೀಲ್ ತಮ್ಮದೇ ಸ್ವಂತ ಚಿತ್ರೀಕರಣ ಘಟಕವನ್ನು ಸ್ಥಾಪಿಸುವ ಶಪಥ ಮಾಡಿ ಆ ದಿಸೆಯಲ್ಲಿ ಯಶಸ್ವಿಯಾದರು. ಇದೇ ಮಾದರಿಯಲ್ಲಿ ಎಸ್.ಎ.ಗೋವಿಂದರಾಜು ಅವರ 'ವೀನಸ್ ಔಟ್‌ಡೋರ್ ಯೂನಿಟ್', ಹೆಚ್.ಎಂ.ಕೆ.ಮೂರ್ತಿ ಅವರ 'ಓಂ ಶಕ್ತಿ ಸಿನಿ ಸರ್ವೀಸ್', ಮಧು ಬಂಗಾರಪ್ಪ ಅವರ 'ರೇಣುಕಾಂಬ ಚಿತ್ರೀಕರಣ ಘಟಕ', 'ಪಿ.ಆರ್.ರಾಮದಾಸ ನಾಯ್ಡು ಅವರ 'ಕಿರಣ್ ಮೂವಿಟೋನ್', ಆರ್ಮುಗಂ ಅವರ ಪ್ರೀಮಿಯರ್, ಹಯಗ್ರೀವಭಟ್ ಅವರ 'ರಾಘವೇಂದ್ರ ಔಟ್‌ಡೋರ್ ಯೂನಿಟ್', 'ಏಳು ಕೋಟಿ ಸಿನಿ ಸರ್ವೀಸ್', 'ಸುಜಾತಾ ಮೂವಿಟೋನ್'. ಡಿ.ವಿ.ರಾಜಾರಾಂ ಅವರ 'ಸಿನಿಟೆಕ್', 'ಆನಂದ್ ಸಿನಿ ಸರ್ವೀಸ್', 'ಮೂರ್ತಿ ಮೂವೀಸ್', 'ಗಣೇಶ್ ಔಟ್‌ಡೋರ್ ಯೂನಿಟ್', 'ಸುಷ್ಮಾ ಮೂವಿಟೋನ್', 'ಪೂರ್ಣಿಮಾ ಎಂಟರ್‌ಪ್ರೈಸಸ್' ಇತ್ಯಾದಿ ಹಲವಾರು ಹೊರಾಂಗಣ ಘಟಕಗಳು ಅತ್ಯಮೂಲ್ಯ ಸೇವೆ ಸಲ್ಲಿಸುತ್ತಿವೆ.

ಚಿತ್ರಮಂದಿರಗಳು

ಬಣ್ಣದ ಕನಸುಗಳ ಮಾರುವ ಮಳಿಗೆ

ಚಿತ್ರೋದ್ಯಮದ ಎಲ್ಲ ಚಟುವಟಿಕೆಗಳ ಅಂತಿಮ ಘಟ್ಟವೇ ಈ ಚಿತ್ರಮಂದಿರ. ಒಂದು ರೀತಿಯಲ್ಲಿ ಇದು ಮಾರುಕಟ್ಟೆಯೂ ಹೌದು. ಪ್ರೇಕ್ಷಕರು ಕನಸುಗಳನ್ನು ಕೊಂಡುಕೊಳ್ಳುವ ಜಾಗವಿದು. ಚಿತ್ರವೊಂದರ ಭವಿಷ್ಯ ನಿರ್ಧಾರವಾಗುವುದೂ ಇಲ್ಲೇ. ನಿರ್ಮಾಪಕ, ನಿರ್ದೇಶಕ, ಹಂಚಿಕೆದಾರ ಅಥವಾ ಕಲಾವಿದರೆಲ್ಲರೂ ತಮ್ಮತನವನ್ನು ಇಲ್ಲಿಯೇ ಪಣಕ್ಕಿಡುತ್ತಾರೆ. ಇದು ಬೆಳ್ಳಿತೆರೆಯಲ್ಲಿ ಮಾಯಾಲೋಕವನ್ನು ಸೃಷ್ಟಿಸುವ ತಾಣ.

ಭಾರತದಲ್ಲಿ ಪ್ರಥಮ ಬಾರಿಗೆ ಚಿತ್ರಪ್ರದರ್ಶನ ನಡೆದಿದ್ದು ಮುಂಬೈನಲ್ಲಿ ೧೮೯೬ರ ಜುಲೈ ೭ರಂದು. ಕರ್ನಾಟಕಕ್ಕೆ ಚಿತ್ರಮಂದಿರ ಬರಲು ಮತ್ತೆ ಕೆಲವು ವರ್ಷಗಳೇ ಹಿಡಿದವು. ಹೀಗೆ ಬೆಂಗಳೂರಿನಲ್ಲಿ ಆರಂಭವಾದ ಮೊದಲ ಚಿತ್ರಮಂದಿರ ಪ್ಯಾರಮೌಂಟ್. ೧೯೦೫ರಲ್ಲಿ ಬೆಂಗಳೂರಿನ ಶ್ರೀ ಕೃಷ್ಣರಾಜೇಂದ್ರ ಮಾರ್ಕೆಟ್ ಎದುರಿನ ಕಲಾಸಿಪಾಳ್ಯದಲ್ಲಿದ್ದ 'ದೊಡ್ಡಣ್ಣ ಹಾಲ್' ಎಂದೇ ಹೆಸರಾಗಿದ್ದ ಜನೋಪಕಾರಿ ದೊಡ್ಡಣ್ಣ ಶೆಟ್ಟರ ಶ್ರೀ ಲಕ್ಷ್ಮೀನರಸಿಂಹ ಧರ್ಮಸಂಸ್ಥೆಯ ಆವರಣದಲ್ಲಿ ಪ್ಯಾರಾಮೌಂಟ್ ಚಿತ್ರಮಂದಿರ ಆರಂಭವಾಯಿತು. ಹಿಂದೆ ಇದೇ ಸ್ಥಳದಲ್ಲಿ ಖ್ಯಾತ ನಾಟಕ ಕಂಪೆನಿಗಳ ನಾಟಕಗಳು ಪ್ರದರ್ಶಿತವಾಗುತ್ತಿದ್ದವಲ್ಲದೆ, ಅನೇಕ ಸಭೆ-ಸಮಾರಂಭಗಳೂ ನಡೆಯುತ್ತಿದ್ದವು. ಪ್ಯಾರಾಮೌಂಟ್ ಪ್ರಪ್ರಥಮ ಚಿತ್ರಮಂದಿರವಷ್ಟೇ ಅಲ್ಲದೆ, ಆಗಿನ ಕಾಲದ ಅದ್ಭುತವೂ ಆಗಿತ್ತು. ಬ್ರಿಟಿಷರ ಆಳ್ವಿಕೆಯ ಕಾಲವಾದ್ದರಿಂದ ಆಗ ಇಂಗ್ಲಿಷ್ ಹೆಸರನ್ನಿಡುವ ಪದ್ಧತಿ ರೂಢಿಯಲ್ಲಿತ್ತು. ಅದಕ್ಕಾಗಿ ಆಗಿನ ಫ್ಯಾಷನ್‌ಗೆ ತಕ್ಕಂತೆ ಈ ಚಿತ್ರಮಂದಿರಕ್ಕೆ ಪ್ಯಾರಮೌಂಟ್ ಎಂಬ ಆಂಗ್ಲ ಹೆಸರು ಬಂತು. ಆದರೂ ಈ ಚಿತ್ರಮಂದಿರ ದೊಡ್ಡಣ್ಣ ಟ್ರಸ್ಟ್‌ನ ಜಮೀನಿನಲ್ಲಿಯೇ ಇದ್ದುದರಿಂದ ಜನ ಇದನ್ನು ದೊಡ್ಡಣ್ಣ ಹಾಲ್ ಎಂದೇ ಕರೆಯುತ್ತಿದ್ದರು. ಅಂತೆಯೇ ಇದು ಕರ್ನಾಟಕದ ಚಿತ್ರ ಮಂದಿರಗಳಿಗೆಲ್ಲ ದೊಡ್ಡಣ್ಣನೂ ಹೌದು. ಚಿತ್ರಮಂದಿರವನ್ನು ಆರಂಭಿಸಿದವರು ಶ್ರೀನಿವಾಸುಲುನಾಯ್ಡು, ರಂಗಸ್ವಾಮಿ ನಾಯ್ಡು ಮತ್ತು ಸಾಹುಕಾರ್ ಮಲ್ಲಪ್ಪನವರ ಮಗ ರುದ್ರಪ್ಪನವರು. ಈ ಮೂವರೂ ಕರ್ನಾಟಕದಲ್ಲಿ ಚಿತ್ರಮಂದಿರದ ಇತಿಹಾಸ ಬರೆದವರು. ಆಗ ಸಿನಿಮಾಕ್ಕೆ ಬಯಾಸ್ಕೋಪ್ ಎಂಬ ಹೆಸರಿತ್ತು. ಪ್ಯಾರಮೌಂಟ್ ಚಿತ್ರಮಂದಿರದಲ್ಲಿ ಬಯಾಸ್ಕೋಪ್ ನೋಡುವುದೆಂದರೆ ಆಗಿನ ಕಾಲದಲ್ಲಿ ಒಂದು ಅಪೂರ್ವ ಅನುಭವ. ಇದಕ್ಕಾಗಿ ಜನ ಎಷ್ಟೋ ವರ್ಷಗಳು ಬೇರೆ ಬೇರೆ ಊರುಗಳಿಂದ ಪ್ರಯಾಣ ಮಾಡಿ ಬರುತ್ತಿದರು.

ಈ ಚಿತ್ರಮಂದಿರದ ಮತ್ತೊಂದು ವಿಶೇಷವೆಂದರೆ ಕನ್ನಡದ ಮೊದಲ ವಾಕ್ಚಿತ್ರ ಬಿಡುಗಡೆಯಾದದ್ದು ಇಲ್ಲೇ. ೧೯೩೪ರ ಮಾರ್ಚ್ ೩ರಂದು ಪ್ಯಾರಮೌಂಟ್ ಚಿತ್ರಮಂದಿರದಲ್ಲಿ 'ಸತಿ ಸುಲೋಚನಾ' ತೆರೆಕಂಡಿದ್ದು ದಾಖಲೆ. ಅದುವರೆಗೆ ಮೂಕಿ ಚಿತ್ರಗಳನ್ನೋ, ಪರಭಾಷೆಯ ಚಿತ್ರಗಳನ್ನೋ ಮಾತ್ರ ನೋಡಿದ ಕನ್ನಡಿಗರು ತಮ್ಮದೇ ಭಾಷೆಯ ಚಿತ್ರವನ್ನು ತೆರೆಯ ಮೇಲೆ ನೋಡಿ ಹುಚ್ಚೆದ್ದು ಹೋದರು. ಕೇವಲ ೪೦.೦೦೦ ರೂಪಾಯಿಗಳ ವೆಚ್ಚದಲ್ಲಿ ತಯಾರಾದ ೧೬,೦೦೦ ಅಡಿ ಉದ್ದದ 'ಸತಿ ಸುಲೋಚನಾ' ಚಿತ್ರವನ್ನು ನೋಡಿದ ಪ್ರೇಕ್ಷಕರು ಅದರಲ್ಲಿನ 'ಭಲೆ ಭಲೆ ಪಾರ್ವತಿ ಬಲು ಚತುರೆ' ಎಂಬ ಗೀತೆಯನ್ನು ಗುನುಗುತ್ತಲೇ ಹೊರಬರುತ್ತಿದರು.

ಈ ಚಿತ್ರ ಆರು ವಾರಗಳ ಕಾಲ ತುಂಬಿದ ಪ್ರದರ್ಶನ ಕಂಡು ಆಗಿನ ಕಾಲದಲ್ಲಿ ಹೊಸದೊಂದು ದಾಖಲೆಯನ್ನು ನಿರ್ಮಿಸಿತು. ಈ ಪ್ರಥಮ ಕನ್ನಡ ಚಿತ್ರವನ್ನು ನೋಡಲು ಸುತ್ತಮುತ್ತಲ ಹಳ್ಳಿಗಳಿಂದ ನಿತ್ಯವೂ ಎತ್ತಿನ ಬಂಡಿಗಳಲ್ಲಿ ಬರುತ್ತಿದ್ದ ನೂರಾರು ಜನರ ಪೈಕಿ ಅದೆಷ್ಟೋ ಜನ ತಮ್ಮೂರಿಗೆ ಹಿಂದಿರುಗಲಾರದವರಿಗೆ ಚಿತ್ರಮಂದಿರದ ಮಾಲೀಕರು ದೊಡ್ಡ ಛತ್ರದಲ್ಲಿ ಊಟ, ವಸತಿಗಳನ್ನು ಏರ್ಪಾಟು ಮಾಡಿದ ಪ್ರಸಂಗಗಳೂ ಉಂಟು.

ಎಪ್ಪತ್ತು ವರ್ಷಗಳು ತುಂಬು ಬಾಳ್ವೆ ನಡೆಸಿದ ಪ್ಯಾರಮೌಂಟ್ ೧೯೭೪ರಲ್ಲಿ ನೆಲಸಮವಾಯಿತು. ಎರಡು ವರ್ಷಗಳ ನಂತರ ಅದೇ ಜಾಗದಲ್ಲಿ ಪ್ರದೀಪ್ ಹಾಗೂ ಪರಿಮಳ ಎಂಬ ಅವಳಿ ಚಿತ್ರಮಂದಿರಗಳು ತಲೆ ಎತ್ತಿದವು. ಆ ವೇಳೆಗಾಗಲೇ ಬೆಂಗಳೂರಿನಲ್ಲಿ ಇನ್ನೂ ಅನೇಕ ಚಿತ್ರಮಂದಿರಗಳು ಹುಟ್ಟಿಕೊಂಡಿದ್ದವು.

ವಾಸ್ತವವಾಗಿ ಮೊದಲು ಚಿತ್ರೀಕರಣ ಆರಂಭಿಸಿದ ಕನ್ನಡ ಚಿತ್ರ 'ಭಕ್ತ ಧ್ರುವ'. ಆದರೆ ಇದು ಬಿಡುಗಡೆಯಾಗಿದ್ದು 'ಸತಿ ಸುಲೋಚನಾ' ಚಿತ್ರದ ನಂತರ. ಅಂದರೆ ಅದೇ ವರ್ಷ ಏಪ್ರಿಲ್ ತಿಂಗಳಿನಲ್ಲಿ ಬೆಂಗಳೂರಿನ ಕೆಂಪೇಗೌಡ ವೃತ್ತದ ಸೆಲೆಕ್ಟ್ ಚಿತ್ರಮಂದಿರದಲ್ಲಿ 'ಭಕ್ತ ಧ್ರುವ' ಬಿಡುಗಡೆಯಾಯಿತು. ಕೆಲವರ್ಷಗಳ ನಂತರ ಸೆಲೆಕ್ಟ್ ಚಿತ್ರಮಂದಿರವನ್ನು ಕೆಡವಿ ಅದೇ ಜಾಗದಲ್ಲಿ ಗೀತಾ ಚಿತ್ರಮಂದಿರವನ್ನು ಕಟ್ಟಲಾಯಿತು. ಆದರೆ ಈಗ ಗೀತಾ ಕೂಡ ಕೇವಲ ನೆನಪಾಗಿದೆ.

೧೯೨೬ರಿಂದ ೧೯೪೩ರವರೆಗೆ ಬೆಂಗಳೂರೇ ದಕ್ಷಿಣ ಭಾರತದ ಚಲನಚಿತ್ರ ವಿತರಣೆಯ ಕೇಂದ್ರ ಸ್ಥಾನವಾಗಿತ್ತು. ಮದರಾಸು, ವಿಜಯವಾಡ, ತಿರುಚನಾಪಳ್ಳಿ ಮುಂತಾದ ಸ್ಥಳಗಳಲ್ಲದೆ ಸಿಲೋನ್‌ಗೂ ಕೂಡಾ ಇಲ್ಲಿಂದಲೇ ಚಿತ್ರಗಳು ವಿತರಣೆಯಾಗುತ್ತಿದ್ದವು. ಈಗ ಗಾಂಧಿನಗರ ಚಲನಚಿತ್ರ ವಿತರಣಾ ಕೇಂದ್ರ ಸ್ಥಾನವಾಗಿದ್ದರೂ ನಗರದ ಪ್ರಥಮ ಚಲನಚಿತ್ರ ಹಂಚಿಕಾ ಕಛೇರಿ ಆರಂಭವಾದದ್ದು ಚಿಕ್ಕಪೇಟೆಯ ಆಂಜನೇಯನ ಗುಡಿ ಪಕ್ಕದ ಕಟ್ಟಡವೊಂದರಲ್ಲಿ. ಇದರ ಪಕ್ಕದಲ್ಲಿಯೇ ವಿಜಯ ಚಿತ್ರಮಂದಿರದ ನಿರ್ಮಾಣವಾಯಿತು. ಇದರ ಮಾಲೀಕರು ಅಲಂಕಾರ್ ಚಿತ್ರಮಂದಿರ ನಿರ್ಮಿಸಿದ್ದ ಕೆ.ಸಿ.ದೇಸಾಯಿಯವರ ತಂದೆಯವರಾದ ಚಮನ್‌ಲಾಲ್ ದೇಸಾಯಿ ಹಾಗೂ ಕಿನೋ ಚಿತ್ರಮಂದಿರದ ಚಂದ್ರವದನ ದೇಸಾಯಿ ಅವರ ತಂದೆ ಠಾಕೂರ್ ದೇಸಾಯಿ. ಇವರಿಬ್ಬರ ಸಹಭಾಗಿತ್ವದಲ್ಲಿ ಸೆಲೆಕ್ಟ್ ಪಿಕ್ಚರ್ಸ್ ಎಂಬ ಮೊದಲ ಹಂಚಿಕಾ ಸಂಸ್ಥೆ ಆರಂಭವಾಯಿತು. ಆ ಸಮಯದಲ್ಲಿ ಬೆಂಗಳೂರಿನಲ್ಲಿ ಹಿಂದಿ ಚಿತ್ರಗಳಿಗೆ

(ಚಿತ್ರ ೧) ಕನ್ನಡದ ಮೊದಲ ವಾಕ್ಚಿತ್ರ 'ಸತಿ ಸುಲೋಚನಾ' ಪ್ರದರ್ಶಿಸಿದ ಬೆಂಗಳೂರಿನ ಪ್ಯಾರಾಮೌಂಟ್ ಚಿತ್ರಮಂದಿರ (ದೊಡ್ಡಣ್ಣ ಹಾಲ್)

ಸಿಗುತ್ತಿದ್ದ ಮರ್ಯಾದೆ ಮದ್ರಾಸು ಅಥವಾ ಹೈದರಾಬಾದ್‌ನಲ್ಲಿ ಸಿಗುತ್ತಿರಲಿಲ್ಲ. ಇದು ಕನ್ನಡಿಗರ ವಿಶಾಲ ಮನೋಭಾವಕ್ಕೆ ಇನ್ನೊಂದು ಸಾಕ್ಷಿ. ಮದರಾಸು, ಹೈದರಾಬಾದ್‌ಗಳಲ್ಲಿ ಹಿಂದಿ ಚಿತ್ರಗಳು ಬಿಡುಗಡೆಯಾದಾಗ ದುಭಾಷಿಯೊಬ್ಬ ಹಿಂದಿ ಸಂಭಾಷಣೆಗಳನ್ನು ಸ್ಥಳೀಯ ಭಾಷೆಗೆ ಅನುವಾದಿಸಿ ಧ್ವನಿವರ್ಧಕದಲ್ಲಿ ಹೇಳುತ್ತಿದ್ದ. ಆದರೆ ಬೆಂಗಳೂರಲ್ಲಿ ಈ ವ್ಯವಸ್ಥೆಯು ಅಗತ್ಯವಿರಲಿಲ್ಲ.

ಪ್ಯಾರಾಮೌಂಟ್ ಹಾಗೂ ಸೆಲೆಕ್ಟ್ ಚಿತ್ರಮಂದಿರಗಳ ನಂತರ ಬೆಂಗಳೂರಿನ ಸುಬೇದಾರ್ ಛತ್ರಂ ರಸ್ತೆಯಲ್ಲಿ ಗುಬ್ಬಿ ವೀರಣ್ಣನವರು ಶಿವಾನಂದ ಥಿಯೇಟರ್ ನಿರ್ಮಿಸಿದರು. ಅದು ಇಂದಿನ ಮೂವಿಲ್ಯಾಂಡ್. ರಂಗಯ್ಯ ಬ್ರದರ್ಸ್ ಸಂಸ್ಥೆಯಿಂದ ಸೂಪರ್ ಟಾಕೀಸ್ ತಲೆಯೆತ್ತಿತ್ತು. ಮೆಜೆಸ್ಟಿಕ್ ಹಾಗೂ ಪ್ಯಾರಮೌಂಟ್ ಚಿತ್ರಮಂದಿರಗಳನ್ನು ರಂಗಸ್ವಾಮಿ ನಾಯ್ಡು ಹಾಗೂ ಅವರ ಸಹೋದರರೇ ನಡೆಸುತ್ತಿದ್ದರು. ಈಗಿನ ಕಲ್ಪನಾ ಹಾಗೂ ಸಂತೋಷ್ ಚಿತ್ರಮಂದಿರಗಳಿರುವ ಜಾಗವೂ ಅವರಿಗೇ ಸೇರಿತ್ತು.

ಆ ಕಾಲದಲ್ಲಿ ಈ ಚಿತ್ರಮಂದಿರಗಳ ಪೈಕಿ ಕನ್ನಡ ಚಿತ್ರಗಳಿಗೆ ಆದ್ಯತೆ ನೀಡುತ್ತಿದ್ದುದು ಸೂಪರ್ ಟಾಕೀಸ್. 'ಹೇಮರೆಡ್ಡಿ ಮಲ್ಲಮ್ಮ' ಚಿತ್ರ ಇದೇ ಟಾಕೀಸ್‌ನಲ್ಲಿ ಇಪ್ಪತ್ತೈದು ವಾರಗಳ ಪ್ರದರ್ಶನ ಕಂಡು ಇತಿಹಾಸ ನಿರ್ಮಿಸಿತ್ತು. ೧೯೪೧ರಲ್ಲಿ ಇರಾನಿ ಬ್ರದರ್ಸ್ ಎಂಬ ಪಾರ್ಸಿಗಳು ಪ್ರಭಾತ್ ಚಿತ್ರಮಂದಿರವನ್ನು ಕಟ್ಟಿಸಿದರು. ಇದು ಆ ಕಾಲದ ಅತ್ಯಂತ ಹೆಚ್ಚು ಅಚ್ಚುಕಟ್ಟಾದ ಸಿನಿಮಾ ಮಂದಿರ. ಇದನ್ನು ದಿವಾನ್ ಮಿರ್ಜಾ ಇಸ್ಮಾಯಿಲ್ ಉದ್ಘಾಟಿಸಿದ್ದರು. ಇದರಲ್ಲಿ ಮೊದಲು ತೆರೆಕಂಡ ಚಿತ್ರ ವಿ.ಶಾಂತಾರಾಂರವರ ಪ್ರಭಾತ್ ಸಂಸ್ಥೆಯ ಹಿಂದಿ ಚಿತ್ರ 'ಆದ್ಮಿ'. ಈ ಚಿತ್ರದಲ್ಲಿ ಶಾಂತಾ ಹುಬ್ಳೀಕರ್ ನಟಿಸಿದ್ದರು. ನಂತರ ಬಾಂಬೆ ಟಾಕೀಸ್‌ನ 'ರಾಮಾಶಾಸ್ತ್ರಿ'. 'ಸಂತ ಧ್ಯಾನೇಶ್ವರ್', 'ಕಿಸ್ಮತ್'. 'ಬಂಧನ್', 'ಕಂಗನ್' ಮುಂತಾದ ಪ್ರಸಿದ್ಧ ಚಿತ್ರಗಳು ಬಿಡುಗಡೆಯಾದವು. ಅಂದಿನ ದಿನಗಳಲ್ಲಿ ಪ್ರಭಾತ್ ಚಿತ್ರಮಂದಿರಕ್ಕೆ ಹೋಗುವುದೇ ಒಂದು ಪ್ರತಿಷ್ಠೆಯ ವಿಷಯವಾಗಿತ್ತು. ಚಿತ್ರಮಂದಿರದ ಮ್ಯಾನೇಜರ್‌ಗಳಾಗಿದ್ದ ಮಂಜಣ್ಣ ಮತ್ತು ಅಪ್ಪಚ್ಚು ಅವರುಗಳು ಕಾರ್ಯನಿರ್ವಹಿಸಿದ ರೀತಿಯನ್ನು ದಂತಕಥೆಯಂತೆ ಇಂದಿಗೂ ಹೇಳುತ್ತಾರೆ.

೧೯೪೪ರಲ್ಲಿ ಕೆಂಪೇಗೌಡ ರಸ್ತೆಯಲ್ಲಿ ಸ್ಟೇಟ್ಸ್ ಚಿತ್ರಮಂದಿರದ ನಿರ್ಮಾಣ ಆರಂಭವಾಗಿತ್ತು. ಈ ಚಿತ್ರಮಂದಿರದ ವೈಶಿಷ್ಟ್ಯವೆಂದರೆ ಆಧಾರ ಸ್ತಂಭಗಳಿಲ್ಲದೆಯೇ ಬಾಲ್ಕನಿಯನ್ನು ನಿರ್ಮಿಸಿದ್ದು. ಇದರ ಭದ್ರತೆಯನ್ನು ಖಚಿತಪಡಿಸಿಕೊಳ್ಳಲು ಸುಮಾರು ನಾಲ್ಕಾರು ತಿಂಗಳ ಕಾಲ ಬಾಲ್ಕನಿಯಲ್ಲಿ ನೂರಾರು ಮರಳಿನ ಮೂಟೆಗಳನ್ನು ಪೇರಿಸಿ ಇಡಲಾಗಿತ್ತು. ಇನ್ನೊಂದು ವಿಶೇಷವೆಂದರೆ ಎರಡನೇ ಮಹಾಯುದ್ಧದ ಸಮಯದಲ್ಲಿ ಈ ಚಿತ್ರಮಂದಿರವನ್ನು ಕಲಕಾಲ ಮಿಲಿಟರಿ ಗೋಡೌನ್ ಆಗಿಯೂ ಬಳಸಿಕೊಳ್ಳಲಾಗಿತ್ತು. ಈ ಚಿತ್ರಮಂದಿರ ೧೯೪೬ರಲ್ಲಿ ಅಧಿಕೃತವಾಗಿ ಉದ್ಘಾಟನೆಯಾಯಿತು.

ಗಾಂಧಿನಗರ ಕರ್ನಾಟಕ ಚಿತ್ರೋದ್ಯಮದ ಪ್ರಮುಖ ಕೇಂದ್ರವಾಗಿ ಬೆಳೆದದ್ದು ಡಾ|ಪಟೇಲ್ ಅವರು ಮೆಜೆಸ್ಟಿಕ್ ಚಿತ್ರಮಂದಿರವನ್ನು ವಹಿಸಿಕೊಂಡ ನಂತರ. ಗಾಂಧಿನಗರದಲ್ಲಿ ವಿತರಣೆಯ ಚಟುವಟಿಕೆ ಬೆಳೆದಂತೆ ಅದರ ಸುತ್ತಲೂ ಕೆಂಪೇಗೌಡ ರಸ್ತೆಯ ಇಕ್ಕೆಲಗಳಲ್ಲಿ ಚಿತ್ರಮಂದಿರಗಳೂ ಭರದಿಂದ ನಿರ್ಮಾಣಗೊಂಡವು. ಅದರಂತೆ ತಯಾರಿಕೆ, ವಿತರಣೆ ಹಾಗೂ ಪ್ರದರ್ಶನ ಈ ಮೂರು ವಿಭಾಗಗಳಿಗೂ ಕೇಂದ್ರ ಪ್ರದೇಶ ಎನಿಸಿಕೊಂಡಿತು ಗಾಂಧಿನಗರ. ಬಹುಶಃ ಇಂಥ ಉದಾಹರಣೆ ಭಾರತದಲ್ಲಿ ಮತ್ತೆಲ್ಲೂ ಇಲ್ಲ.

ಬೆಂಗಳೂರಿನ ಬಡಾವಣೆಗಳಲ್ಲಿ ಚಿತ್ರಮಂದಿರಗಳು ಆರಂಭವಾದದ್ದು ೧೯೪೪-೪೫ರಲ್ಲಿ. ಹಳೇ ಒಕ್ಕಲಿಗರ ಸಂಘದ ಆವರಣದಲ್ಲಿ ಶಾರದಾ ಟಾಕೀಸ್ ನ ಮೂಲಕ ಈ ಪ್ರಕ್ರಿಯೆಗೆ ಚಾಲನೆ ದೊರೆಯಿತು. ಬಟ್ಟೆ ವ್ಯಾಪಾರಿಗಳಾಗಿದ್ದ ವೆಂಕಟಪ್ಪ ಮತ್ತು ತಿಮ್ಮಯ್ಯ ಎಂಬುವವರು ಈ ಚಿತ್ರಮಂದಿರವನ್ನು ನಡೆಸುತ್ತಿದ್ದರು. ಈ ಕಲ್ಲಿನ ಕಟ್ಟಡದಲ್ಲಿ ಇಡೀ ದಕ್ಷಿಣ ಭಾರತದಲ್ಲೇ ಪ್ರಥಮ ಬಾರಿಗೆ ಬೆಳಗಿನ ಪ್ರದರ್ಶನಗಳು ಆರಂಭವಾದವು. ಈ ಪ್ರದರ್ಶನಗಳನ್ನು ನಿರ್ವಹಿಸಿದವರು ಎ.ಜಿ.ಘೋಷ್, ಪುಟ್ಟಸ್ವಾಮಿ ಹಾಗೂ ಆರ್.ಲಕ್ಷ್ಮಣ್. ಹೀಗೆ ಬೆಳಗಿನ ಪ್ರದರ್ಶನ ಕಂಡ ಮೊದಲ ಚಿತ್ರ 'ಸೂಯೆಜ್' (ಇಂಗ್ಲಿಷ್). ಚಿತ್ರಮಂದಿರಕ್ಕೆ ಆಗಿನ ಬಾಡಿಗೆ ದರ-ಮೂರು ದಿನಗಳ ಬೆಳಗಿನ ಪ್ರದರ್ಶನಕ್ಕೆ ಒಟ್ಟು-ಹನ್ನೆರಡು ರೂಪಾಯಿ. ಹಾಗೆಯೇ ಎಲ್ಲೇ ಕುಳಿತರೂ ಟಿಕೆಟ್ ಬೆಲೆ ಎರಡಾಣೆ, ಅಂದರೆ ಈಗಿನ ದರದಂತೆ ಸುಮಾರು ಹದಿಮೂರು ಪೈಸೆ. ಮೊದಲು ಬಂದವರನ್ನು ಆದ್ಯತೆಯ ಮೇರೆಗೆ ಬಾಲ್ಕನಿಯಲ್ಲಿ, ನಂತರ ಬಂದವರನ್ನು ಕೆಳಗೆ ಕೂರಿಸಲಾಗುತ್ತಿತ್ತು. ಚಿತ್ರ ಪ್ರದರ್ಶನದಿಂದ ಲಾಭವಿದೆಯೆಂದು ಅರಿತ ಚಿತ್ರಮಂದಿರದ ಮಾಲೀಕರು ಬೆಳಗಿನ ಪ್ರದರ್ಶನವನ್ನು ತಾವೇ ವಹಿಸಿಕೊಂಡರು.

ಶಾರದಾ ಟಾಕೀಸ್‌ನಲ್ಲಿ ಬೆಳಗಿನ ಪ್ರದರ್ಶನ ಯಶಸ್ವಿಯಾದುದನ್ನು ಕಂಡು ಪ್ಯಾರಮೌಂಟ್ ಚಿತ್ರಮಂದಿರದವರೂ ಈ ಪದ್ಧತಿಯನ್ನು ಜಾರಿಗೆ ತಂದರು. ಆಗ ಶುಕ್ರವಾರ, ಶನಿವಾರ, ಭಾನುವಾರದ ಜೊತೆಗೆ ಅಮಾವಾಸ್ಯೆ ಹಾಗೂ ಸರ್ಕಾರಿ ರಜಾ ದಿನಗಳಲ್ಲಿ ಮಾತ್ರ ಬೆಳಗಿನ ಪ್ರದರ್ಶನವನ್ನು ನಡೆಸಲಾಗುತ್ತಿತ್ತು. ಇದಾದ ಒಂದೆರಡು ವರ್ಷಗಳ ನಂತರ ಮಧ್ಯಾಹ್ನದ ಪ್ರದರ್ಶನವೂ ಆರಂಭವಾಯಿತು. ಇದಕ್ಕೆ ಪ್ರೇರಣೆಯಾಗಿದ್ದು ಸಾಗರ್ ಹಾಗೂ ಮೂವಿಲ್ಯಾಂಡ್‌ಗಳಲ್ಲಿ ಪ್ರದರ್ಶನಗೊಳ್ಳುತ್ತಿದ್ದ 'ಬಾಲನಾಗಮ್ಮ' ಹಾಗೂ 'ಭಕ್ತ ಪೋತನ' ಚಿತ್ರಗಳು. ಒಂದರಲ್ಲಿ ನಾಗಯ್ಯ ಪ್ರಧಾನ ಆಕರ್ಷಣೆಯಾದರೆ ಮತ್ತೊಂದರಲ್ಲಿ ಆಕರ್ಷಣೆ ಕಾಂಚನ ಮಾಲಾ. ಈ ತೀವ್ರ ಪೈಪೋಟಿಯ ನಡುವೆ ಮಧ್ಯಾಹ್ನದ ಪ್ರದರ್ಶನಗಳು ಆರಂಭವಾಯಿತಲ್ಲದೆ ಇದೇ ಸಂದರ್ಭದಲ್ಲಿ ಪೋಸ್ಟರುಗಳ ಪ್ರಚಾರಕ್ಕೂ ಚಾಲನೆ ದೊರಕಿತು. ವಾಹಿನಿ ಹಾಗೂ ಜೆಮಿನಿ ಇಬ್ಬರಿಗೂ ಸ್ವಂತ ಮುದ್ರಣಾಲಯಗಳಿದ್ದುದರಿಂದ ರಾತ್ರಿಯೆಲ್ಲಾ ಪೋಸ್ಟರ್ ಅಂಟಿಸುವ ಭರಾಟೆ ಹೆಚ್ಚಾಯಿತು. ಆಗಿನ ನಗರ ಸಾರಿಗೆ ಬಸ್‌ಗಳ ಮೇಲೂ 'ಭಕ್ತ ಪೋತನ' ಪೋಸ್ಟರ್ ಅಂಟಿಕೊಂಡಿತ್ತು. ಈ ಪೋಸ್ಟರ್ ಯುದ್ಧದ ಹಿಂದಿನ ಚಾಲಕಶಕ್ತಿಯಾಗಿ ನಿಂತು ನಡೆಸಿದವರು ನಿರ್ಮಾಪಕ ಬಿ.ನಾಗಿರೆಡ್ಡಿ.

ಸುಮಾರು ೧೯೪೫-೪೬ರಲ್ಲಿ ಮೂವಿಲ್ಯಾಂಡ್ ಚಿತ್ರಮಂದಿರದಲ್ಲಿ ಪ್ರಥಮವಾಗಿ 'ಕ್ಯೂ' ಪದ್ಧತಿ ಆರಂಭವಾಯಿತು. ಜನಗಳನ್ನು ವ್ಯವಸ್ಥೆಯಾಗಿ ನಿಲ್ಲಿಸಲು ಉದ್ದಕ್ಕೂ ಬೊಂಬುಗಳನ್ನು ಕಟ್ಟಲಾಯಿತು. ಅದೇ ಕಾಲದ ಇನ್ನೊಂದು ಬದಲಾವಣೆಯೆಂದರೆ ಚಿತ್ರಗಳ ಉದ್ದ ೧೧,೦೦೦ ಅಡಿಗಳಿಗಿಂತ ಉದ್ದವಿರಬಾರದೆಂದು ನಿಯಂತ್ರಣ ಬಂದಿದ್ದು. ಇದನ್ನು ಮುರಿಯಲು ವಿ.ಶಾಂತಾರಾಮ್ ಅನುಸರಿಸಿದ ಉಪಾಯ ನಂತರ ಕೆಲವರಿಗೆ ಮೇಲ್ಪಂಕ್ತಿಯಾಯಿತು. ಅದೆಂದರೆ ಚಿತ್ರದ ಟೈಟಲ್ ಕಾರ್ಡ್‌ಗಳನ್ನು ಮುಖ್ಯ ಚಿತ್ರದಿಂದ ಬೇರ್ಪಡಿಸಿ ಸ್ಲೈಡ್‌ಗಳ ಮೂಲಕ ತೋರಿಸುವುದು. ಇದರಿಂದ ಸುಮಾರು ೨೦೦-೩೦೦ ಅಡಿಗಳ ಉಳಿತಾಯ ಸಾಧ್ಯವಾಗುತ್ತಿತ್ತು.

ಅಂದಿನ ಕಾಲದ ಇನ್ನೊಂದು ವಿಶೇಷವೆಂದರೆ ತಮಿಳು ಚಿತ್ರಗಳು ಕಂಟೋನ್ಮೆಂಟ್ ಪ್ರದೇಶದ ಲಕ್ಷ್ಮಿ ಚಿತ್ರಮಂದಿರದಲ್ಲಿ ಮಾತ್ರ ಬಿಡುಗಡೆಯಾಗುತ್ತಿದ್ದವು. ನಗರ ಪ್ರದೇಶಗಳಲ್ಲಿ ತೆಲುಗು ಹಾಗೂ ಹಿಂದಿ ಚಿತ್ರಗಳ ಆಧಿಪತ್ಯವಿತ್ತು.ಕನ್ನಡ ಚಿತ್ರಗಳ ಪ್ರಮಾಣ ತೀರಾ ಕಡಿಮೆ ಇದ್ದುದರಿಂದ ಇವು ಯಾವ ಲೆಕ್ಕಕ್ಕೂ ಬರುತ್ತಿರಲಿಲ್ಲ. ಕಂಟೋನ್ಮೆಂಟ್‌ನ ಪ್ಲಾಜಾ ಹಾಗೂ ಅಪೇರಾ ಚಿತ್ರಮಂದಿರಗಳು ಇಂಗ್ಲಿಷ್ ಚಿತ್ರಗಳ ಪಾಲಾಗಿದ್ದವು. ಆದರೆ ವಿಶ್ವಸಮರದ ಸಮಯವಾದುದರಿಂದ ಆರಂಭದಲ್ಲಿ ಜನ ರಾತ್ರಿ ಹೊರಗ ಬರಲು ಅಂಜುತ್ತಿದರು. ಆಗ ಈ ಚಿತ್ರಮಂದಿರಗಳ ದೈನಂದಿನ ಗಳಿಕೆ ಎರಡು ಅಥವಾ ಮೂರು ರೂಪಾಯಿಗಳಿಗೆ ಇಳಿದು ಇನ್ನೇನು ಚಿತ್ರಮಂದಿರ ಮುಚ್ಚುವ ಸ್ಥಿತಿಗ ಬಂದಿತ್ತು. ಆದರೆ ಅದೇ ಸಮಯದಲ್ಲಿ ಬೆಂಗಳೂರಿನಲ್ಲಿ ಸುಮಾರು ಒಂದೂವರೆ ಲಕ್ಷದಷ್ಟು ಬ್ರಿಟಿಷ್ ಸೈನಿಕರು ಬೀಡು ಬಿಟ್ಟಿದ್ದರಿಂದ ಈ ಚಿತ್ರಮಂದಿರಗಳು ಮತ್ತೆ ಜಿಗಿದು ನಿಂತವು.

ಡಿಫೆನ್ಸ್ ಸಿನಿಮಾ ಎಂದು ಕರೆಯಲಾಗುತ್ತಿದ್ದ ಬಿ.ಆರ್.ವಿ.(ಬ್ಯಾಂಗಲೂರ್ ರಿಸರ್ವ್ ವಾಲಂಟಿಯರ್ಸ್) ಆರಂಭವಾದದ್ದೂ ಆಗಲೆ. ಈ ಕಟ್ಟಡವನ್ನು ಮುಖ್ಯವಾಗಿ ರಕ್ಷಣಾ ಇಲಾಖೆಯ ಸಭೆ ಸಮಾರಂಭಗಳಿಗಾಗಿ ಕಟ್ಟಿದ್ದರೂ ಅಂತಹ ಸಂದರ್ಭಗಳು ಇಲ್ಲದಿದ್ದಾಗ ಚಿತ್ರಗಳ ಪ್ರದರ್ಶನ ನಡೆಯುತ್ತಿತ್ತು.

ಆಗ ಕೆಂಪೇಗೌಡ ರಸ್ತೆಯೊಂದರಲ್ಲೇ ಇಪ್ಪತ್ತಕ್ಕೂ ಹೆಚ್ಚು ಚಿತ್ರಮಂದಿರಗಳಿದ್ದು ಅವೆಲ್ಲವೂ ಈಗ ಕನ್ನಡ ಚಿತ್ರಗಳಿಗ ಪ್ರಮುಖ ಪ್ರದರ್ಶನ ಕೇಂದ್ರಗಳಾಗಿವೆ. ಕನ್ನಡದ ಈ ಸಾರ್ವಭೌಮತ್ವಕ್ಕೆ ನಿಜಕ್ಕೂ ನಾಂದಿ ಹಾಡಿದ ಚಿತ್ರಮಂದಿರ ಭಾರತ್. ಜಯಚಾಮರಾಜೇಂದ್ರ ರಸ್ತೆಯಲ್ಲಿ ಭಾರತ್ ಚಿತ್ರಮಂದಿರವಿದ್ದ ಜಾಗದಲ್ಲಿ ಇಂದು ಬಹು ಅಂತಸ್ತಿನ ಕಟ್ಟಡ ತಲೆ ಎತ್ತಿದ್ದರೂ ಅಂದು ಆ ಚಿತ್ರಮಂದಿರ ಸಲ್ಲಿಸಿದ ಸೇವೆ ಮರೆಯಲಾಗದಂಥದ್ದು. ಈ ಚಿತ್ರಮಂದಿರದ ಮಾಲೀಕರಾಗಿದ್ದವರು ಷರೀಫ್ ಸಹೋದರರು. ಈಗಿನ ರವೀಂದ್ರ ಕಲಾಕ್ಷೇತ್ರವಿರುವ ಪ್ರದೇಶದ ಅರ್ಧ ಭಾಗವೂ ಅವರದಾಗಿತ್ತು. ಕಲಾಕ್ಷೇತ್ರದ ಯೋಜನೆ ರೂಪುಗೊಂಡಾಗ ಸರ್ಕಾರ ಆ ಜಾಗವನ್ನು ಪಡೆದು ಅವರಿಗೆ ಬೇರೆ ಜಾಗವನ್ನು ನೀಡಿತು. ಚಿತ್ರಮಂದಿರ ಕಟ್ಟಿದ ಆರಂಭದ ನಾಲ್ಕೈದು ವರ್ಷ ಗ್ಲೋಬ್ ಚಿತ್ರಮಂದಿರದ ಕುಕ್ ನಂತರ ಸುಮಾರು ಅಷ್ಟೇ ಕಾಲ ಶಾಂಪೂರ್ ಪಾಪಣ್ಣ ಎಂಬುವವರೂ ಅದನ್ನು ನಡೆಸುತ್ತಿದ್ದು ಇಂಗ್ಲಿಷ್ ಚಿತ್ರಗಳ ಸೆಕೆಂಡ್ ರನ್

(ಚಿತ್ರ ೨) ಕನ್ನಡ ಚಿತ್ರಗಳಿಗೆ ಆದ್ಯತೆ ನೀಡುತ್ತಿದ್ದಾ, ಕಣ್ಮರೆಯಾದ ಭಾರತ್

ಅಥವಾ ತಮಿಳಿನ ಎನ್.ಎಸ್.ಕೃಷ್ಣನ್, ಟಿ.ಎ.ಮಧುರಮ್ ಅವರ ಹಾಸ್ಯ ಚಿತ್ರಗಳನ್ನು ಪ್ರದರ್ಶಿಸುತ್ತಿದ್ದರು.

೧೯೬೦ರಲ್ಲಿ ಷರೀಫ್ ಅವರು ಆ ಚಿತ್ರಮಂದಿರವನ್ನು ತಮ್ಮ ವಶಕ್ಕೆ ತೆಗೆದುಕೊಂಡು ಸಂಪೂರ್ಣವಾಗಿ ನವೀಕರಿಸಿದರು. ಈ ಸಂದರ್ಭದಲ್ಲಿ ಚಿತ್ರಮಂದಿರದಲ್ಲಿ 'ರಣಧೀರ ಕಂಠೀರವ' ಚಿತ್ರ ಬಿಡುಗಡೆಯಾಯಿತು. ರಾಜಕುಮಾರ್, ಜಿ.ವಿ.ಅಯ್ಯರ್, ನರಸಿಂಹರಾಜು, ಬಾಲಕೃಷ್ಣ ಮೊದಲಾದವರು ಸೇರಿ 'ಕನ್ನಡ ಚಲನಚಿತ್ರ ಕಲಾವಿದರ ಸಂಘ' ಲಾಂಛನದಲ್ಲಿ ಈ ಚಿತ್ರವನ್ನು ನಿರ್ಮಾಣ ಮಾಡಿದ್ದರು. ಷರೀಫ್ ಸಹೋದರರ ನವೀಕೃತ ಭಾರತ್ ಚಿತ್ರಮಂದಿರದಲ್ಲಿ ಈ ಚಿತ್ರ ಬಿಡುಗಡೆಯಾಗಿ ನಂತರ ದೀರ್ಘಕಾಲ ಕನ್ನಡ ಚಿತ್ರಗಳ ಪ್ರದರ್ಶನಕ್ಕೆ ಈ ಮಂದಿರ ಮೀಸಲಾಗಲು ನಾಂದಿಹಾಡಿತು. ಈ ಕನ್ನಡ ಚಿತ್ರ ಪ್ರದರ್ಶನ ಪರಂಪರೆಯ ಪ್ರಾರಂಭದಲ್ಲಿ ಪ್ರಧಾನ ಪಾತ್ರವಹಿಸಿ, ಚಿತ್ರಮಂದಿರದ ಕೊನೆತನಕ ಹಾಗೇ ಇರುವಂತೆ ನೋಡಿಕೊಂಡವರು ಆರ್.ಲಕ್ಷ್ಮಣ್. ಅವರು ಅಲ್ಲಿ ಮ್ಯಾನೇಜರ್ ಆಗಿ ಕಾರ್ಯ ನಿರ್ವಹಿಸಿದರು.

'ರಣಧೀರ ಕಂಠೀರವ' ಬಿಡುಗಡೆಯಾಗಿದ್ದೂ ಒಂದು ಕಥೆ. ದಸರಾ ಸಮಯದಲ್ಲಿ ಬೆಂಗಳೂರಿನ ಕೆಂಪೇಗೌಡ ರಸ್ತೆಯ ಮುಖ್ಯ ಚಿತ್ರಮಂದಿರಗಳು ಸಿಗದ ಕಾರಣ ಮೈಸೂರಿನಲ್ಲಿ ಒಂದು ವಾರ ಮೊದಲೇ ಬಿಡುಗಡೆಯಾಯಿತು. ಆಗ ವಿಕ್ರಮ್ ಪಿಕ್ಚರ್ಸ್ ಅವರು ಹಿಮಾಲಯ ಚಿತ್ರಮಂದಿರದಲ್ಲಿ ಪ್ರದರ್ಶಿತವಾಗುತ್ತಿದ್ದ '೨೪ ಗಂಟೆ' ಹಿಂದಿ ಚಿತ್ರವನ್ನು ತಾವೇ ಕೊಂಡು ಆ ಮಂದಿರದಲ್ಲಿ 'ರಣಧೀರ ಕಂಠೀರವ' ಬಿಡುಗಡೆ ಮಾಡಿದರು. ಕೆಂಪೇಗೌಡ ರಸ್ತೆಯಲ್ಲಿ ಕನ್ನಡ ಚಿತ್ರಗಳ ಪ್ರದರ್ಶನಕ್ಕೆ ಮುಖ್ಯ ತಿರುವು ಬಂದಿದ್ದು ಆಗಲೆ. ಶೇಷಾದ್ರಿಪುರದ ಸೆಂಟ್ರಲ್ ಚಿತ್ರಮಂದಿರ ಹಾಗೂ ಜಯಚಾಮ ರಾಜೇಂದ್ರ ರಸ್ತೆಯಲ್ಲಿದ್ದ ಶಿವಾಜಿ ಅದುವರೆಗೆ ಕನ್ನಡ ಚಿತ್ರಗಳಿಗೆ ಮಾತ್ರ ಮೀಸಲಾಗಿದ್ದರೂ ಭಾರತ್ ಚಿತ್ರ ಮಂದಿರದ ಸ್ಥಾಪನೆಯ ನಂತರ ಅವೂ ತಮಿಳಿನತ್ತ ಸಾಗಿದವು. ಮಿನರ್ವ ಕೂಡ ತೆಲುಗಿಗೆ ಪ್ರಾಧಾನ್ಯ ನೀಡಿತು.

ಅಲ್ಲಿಂದ ಮುಂದೆ ಕನ್ನಡದ ಪರವಾದ ದಿನಗಳೆಂದರೆ ತಪ್ಪಿಲ್ಲ. ೧೯೬೩ರಲ್ಲಿ ಕನ್ನಡ ಚಿತ್ರ ಪ್ರೇಮಿಗಳ ಸಂಘ ಆರಂಭವಾಗಿ ಕನ್ನಡ ಕಲಾವಿದರಿಗೆ ಪ್ರಥಮ ಬಾರಿ ಸನ್ಮಾನ ಸಮಾರಂಭ ಏರ್ಪಡಿಸಿದ್ದು ಕಲಾವಿದರಿಗೆ ಒಂದು ಬ್ರೇಕ್ ನೀಡಿದಂತಾಯಿತು. ಆಗಲೇ ಅ.ನ.ಕೃಷ್ಣರಾಯರು 'ರಾಜ್ ಕುಮಾರ್ ಅವರನ್ನು ಕನ್ನಡದ ಅಭಿವೃದ್ಧಿಗಾಗಿ ಉಪಯೋಗಿಸಿ' ಎಂದು ಹೇಳಿದ್ದು. ಅಂದಿನಿಂದ ರಾಜ್ಯದ ವಿವಿಧೆಡೆಗಳಲ್ಲಿ ಇಂಥ ಸಮಾರಂಭಗಳೂ ನಡೆಯಲಾರಂಭಿಸಿದ್ದು ಮಾತ್ರವಲ್ಲದೆ ಕನ್ನಡ ಚಿತ್ರಪ್ರದರ್ಶನದ ಬಗ್ಗೆ ವ್ಯಾಪಕವಾದ ಬೆಳವಣಿಗೆ ಕಂಡು ಬಂತು. ಈ ಕಾರ್ಯವನ್ನು ಚೊಕ್ಕವಾಗಿ ನಿರ್ವಹಿಸಿದವರು ನಿರ್ಮಾಪಕದ್ವಯರಾದ ಗೋಪಾಲ್ ಹಾಗೂ ಲಕ್ಷ್ಮಣ್.

ಹೆಚ್ಚು ಕಡಿಮೆ ಇದೇ ಸಂದರ್ಭದಲ್ಲಿಯೇ ರಾಜ್ಯದಲ್ಲಿ ಡಬ್ಬಿಂಗ್ ವಿರುದ್ಧ ಉಗ್ರ ಚಳವಳಿ ನಡೆಯಿತು. ಶಿವಾಜಿ ಚಿತ್ರ ಮಂದಿರದಲ್ಲಿ 'ಜಿಂಬೊ ಕಮ್ಸ್ ಟು ಟೌನ್' ಎನ್ನುವ ಚಿತ್ರವೊಂದರ ಕನ್ನಡ ಅವತರಣಿಕೆ ಬಿಡುಗಡೆಯಾಗಿತ್ತು. ಆಗ ಗೀತಪ್ರಿಯ ಆರೂರು ಪಟ್ಟಾಭಿ, ವಿಜಯಭಾಸ್ಕರ್, ಆರ್.ನಾಗೇಂದ್ರರಾವ್, ಪಂಢರಿಬಾಯಿ ಮೊದಲಾದವರು ಇದರ ಬಗ್ಗೆ ಮುದ್ದು ಧೋರಣೆ ತಾಳಿದ್ದು ನಿಜ. ಅದರ ತೆಲುಗಿನ ಭವ್ಯ ಪೌರಾಣಿಕ ಚಿತ್ರಗಳು ಕನ್ನಡಕ್ಕೆ ಡಬ್ ಆಗುತ್ತಿದ್ದು ಕನ್ನಡ ಚಿತ್ರರಂಗ ಚೇತರಿಸಿಕೊಳ್ಳಲಾಗದಂತಾಗಿತ್ತು. ಈ ಹಿನ್ನೆಲೆಯಲ್ಲಿ ಗೋಪಾಲ್, ಅರಸುಕುಮಾರ್, ಆರ್.ಲಕ್ಷ್ಮಣ್ ಮೊದಲಾದವರು ಇದನ್ನು ವಿರೋಧಿಸಿದ್ದರು. ಇಂಥ ಚಟುವಟಿಕೆಗಳಿಗೆಲ್ಲ ಕೇಂದ್ರ ಸ್ಥಾನವಾಗಿತ್ತು ಭಾರತ್ ಚಿತ್ರಮಂದಿರ.

ಈ ವಿರೋಧ ಯಶಸ್ವಿಯಾಗಿದ್ದರಿಂದ ವಿಜಯ ಪ್ರೊಡಕ್ಷನ್ಸ್ ಲಾಂಛನದಲ್ಲಿ 'ಸತ್ಯ ಹರಿಶ್ಚಂದ್ರ' ಚಿತ್ರ ನಿರ್ಮಾಣವಾಯಿತಲ್ಲದೆ ಭಾರತ್ ಚಿತ್ರಮಂದಿರದಲ್ಲಿ ಇದು ಪ್ರಥಮ ಬಾರಿಗೆ ನೂರು ದಿನಗಳ ಪ್ರದರ್ಶನ ಕಂಡು ದಾಖಲೆ ನಿರ್ಮಾಣವಾಯಿತು. ಪ್ರಥಮ ಬಾರಿಗೆ ಶತದಿನೋತ್ಸವ ಆಚರಣೆ ಮಾಡಲಾಯಿತು. ಈ ಕಾರ್ಯಕ್ರಮಕ್ಕೆ ನಿಜಲಿಂಗಪ್ಪ ಅಧ್ಯಕ್ಷರಾಗಿದ್ದರು. ನಂತರ ಇಲ್ಲಿ 'ಸ್ಕೂಲ್ ಮಾಸ್ಟರ್' ಹಾಗೂ 'ಮಣ್ಣಿನ ಮಗ' ದಾಖಲೆ ಸ್ಥಾಪಿಸಿದ ಮತ್ತೆರಡು ಚಿತ್ರಗಳು.

ಈ ಎಲ್ಲ ಬೆಳವಣಿಗೆಗಳ ನಡುವೆಯೂ ಪರ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದಲ್ಲಿ ಚಿತ್ರಮಂದಿರಗಳ ನಿರ್ಮಾಣ ನಿರಾಶಾದಾಯಕವಾಗಿಯೇ ಇತ್ತು. ಈ ಮಾತು ಇಂದಿಗೂ ಪ್ರಸ್ತುತವೆನಿಸುತ್ತದೆ. ಹಳೆಯ ಮೈಸೂರು ಎಂದು ಕರೆಯಲಾಗುತ್ತಿದ್ದ ದಿನಗಳಿಂದಲೂ ಕನ್ನಡ ಚಿತ್ರಗಳಿಗೆ ಚಿತ್ರಮಂದಿರಗಳ ಕೊರತೆ ಇದ್ದೇ ಇತ್ತು. ಜನಸಂಖ್ಯೆಗೆ ಅನುಗುಣವಾಗಿಯಾಗಲಿ, ಆದಾಯದ ದೃಷ್ಟಿಯಿಂದಾಗಲಿ ಚಿತ್ರಮಂದಿರಗಳು ನಿರ್ಮಾಣವಾಗುತ್ತಿರಲಿಲ್ಲ. ಹಾಗಾಗಿ ಕನ್ನಡ ಚಿತ್ರೋದ್ಯಮ ಬೆಳೆಯತೊಡಗಿದಂತೆ ಇಲ್ಲಿ ಚಿತ್ರಮಂದಿರಗಳ ಕೊರತೆ ನಿಚ್ಚಳವಾಗಿ ಕಾಣತೊಡಗಿತು.

ಸಾಮಾನ್ಯವಾಗಿ ಚಿತ್ರಮಂದಿರಗಳಲ್ಲಿ ಐದು ವಿಧಗಳಿವೆ :

೧. ಖಾಯಂ ಚಿತ್ರಮಂದಿರ

೨. ಅರೆ ಖಾಯಂ ಚಿತ್ರಮಂದಿರ

೩. ತಾತ್ಕಾಲಿಕ ಚಿತ್ರಮಂದಿರ

೪. ಸಂಚಾರಿ ಚಿತ್ರಮಂದಿರ

೫. ಡ್ರೈವ್ ಇನ್ ಚಿತ್ರಮಂದಿರ

ಆದರೆ ಈಗ ಇವುಗಳ ಪ್ರಕಾರ, ವ್ಯತ್ಯಾಸ ಎರಡೂ ಕಡಿಮೆಯಾಗಿ ಖಾಯಂ ಹಾಗೂ ಅರೆಖಾಯಂ ಚಿತ್ರಮಂದಿರಗಳಾಗಿ ಉಳಿದುಕೊಂಡಿವೆ. ಬೆಂಗಳೂರಿನ ಏಕೈಕ ಡ್ರೈವ್ ಇನ್ ಚಿತ್ರಮಂದಿರ ಪ್ರಯೋಗಾತ್ಮಕವಾಗಿ ಹುಟ್ಟಿಕೊಂಡಿತಾದರೂ ಈಗ ಅದು ಅಸ್ತಿತ್ವದಲ್ಲಿಲ್ಲ. ಕರ್ನಾಟಕದ ಮಟ್ಟಿಗೆ ಒಂದು ವಿಚಿತ್ರ ಸಂಗತಿ ಎಂದರೆ ಖಾಯಂ ಚಿತ್ರಮಂದಿರಗಳಲ್ಲಿ ಬಹುಭಾಗ ಜಿಲ್ಲಾ, ನಗರ ಪ್ರದೇಶಗಳಲ್ಲೇ ಇವೆ. ಉದಾಹರಣೆಗೆ ರಾಜ್ಯದಲ್ಲಿರುವ ಸುಮಾರು ೭೦೦ ಖಾಯಂ ಚಿತ್ರ ಮಂದಿರಗಳ ಪೈಕಿ ಬೆಂಗಳೂರು, ಮೈಸೂರು, ಹುಬ್ಬಳ್ಳಿ, ಧಾರವಾಡ, ಬೆಳಗಾಂ ಹಾಗೂ ದಾವಣಗೆರೆಗಳಲ್ಲೇ ೩೦೦ ಚಿತ್ರಮಂದಿರಗಳಿವೆ. ಉಳಿದವು ಇಪ್ಪತ್ತು ಜಿಲ್ಲೆಗಳಲ್ಲಿ ಹಂಚಿಕೆಯಾಗಿವೆ. ಬೆಂಗಳೂರು ನಗರವೊಂದರಲ್ಲೇ ಸುಮಾರು ನೂರು ಖಾಯಂ ಚಿತ್ರ ಮಂದಿರಗಳಿವೆ. ಈ ಮಹಾನಗರದ ಆಸುಪಾಸಿನಲ್ಲಿ ನೂರಕ್ಕೂ ಹೆಚ್ಚು ಸಂಚಾರಿ ಚಿತ್ರಮಂದಿರಗಳೂ ಇವೆ.

ಯುನೆಸ್ಕೋ ಸಮೀಕ್ಷೆಯ ಪ್ರಕಾರ ಈ ರಾಜ್ಯದ ಜನಸಂಖ್ಯೆಗೆ ಸರಿಹೊಂದುವಷ್ಟು ಚಿತ್ರಮಂದಿರಗಳಿಲ್ಲ. ಇದರೊಂದಿಗೆ ಕನ್ನಡ ನಾಡಿನಲ್ಲಿ ಕನ್ನಡ ಚಿತ್ರ ಪ್ರದರ್ಶನಕ್ಕೆ ಮಂದಿರಗಳು ಸಿಗುತ್ತಿಲ್ಲ ಎಂಬ ಕೂಗು ಮೊದಲಿನಿಂದಲೂ ಇದ್ದಿದ್ದೆ.

ಈ ಸಮಸ್ಯೆಗೆ ಮುಖ್ಯ ಕಾರಣವೆಂದರೆ ಆಗಿನ ದಿನಗಳಿಂದಲೂ ಕಂಟೋನ್ಮೆಂಟ್ ಪ್ರದೇಶದಲ್ಲಿ ತಮಿಳರು ಹಾಗೂ ಮುಸಲ್ಮಾನರು ಹೆಚ್ಚು ಸಂಖ್ಯೆಯಲ್ಲಿ ವಾಸವಾಗಿದ್ದರು. ಸಹಜವಾಗಿಯೇ ಅವರು ತಮ್ಮ ಪ್ರದೇಶದಲ್ಲಿ ತಮಿಳು ಹಾಗೂ ಹಿಂದಿ ಚಿತ್ರಗಳಿಗೆ ಪ್ರೋತ್ಸಾಹ ನೀಡುತ್ತಿದ್ದರು. ಹಾಗಾಗಿ ಅಲ್ಲಿ ಕನ್ನಡ ಚಿತ್ರಗಳು ಪ್ರದರ್ಶಿತವಾದರೂ ಸರಿಯಾದ ಗಳಿಕೆ ಕಾಣದೆ ನಷ್ಟ ಅನುಭವಿಸಬೇಕಾಗುತ್ತಿತ್ತು. ಹೀಗಾಗಿ ಕೆಲವೊಂದು ಪ್ರದೇಶಗಳಿಗೆ ಕನ್ನಡ ಚಿತ್ರಗಳು ಹೋಗುವುದೇ ಕ್ರಮೇಣವಾಗಿ ನಿಂತಿತು. ಆಗ ಉಳಿದ ಒಂದಷ್ಟು ಪ್ರಮುಖ ಚಿತ್ರಮಂದಿರಗಳ ಮೇಲೆ ಒಟ್ಟಾಗಿ ಎಲ್ಲರ ಕಣ್ಣು ಬೀಳತೊಡಗಿದ ರಿಂದ ಪೈಪೋಟಿ ಆರಂಭವಾಯಿತು. ಸಿನಿಮಾ ವ್ಯಾಪಾರಿ ಮನೋಭಾವವನ್ನು ಹೆಚ್ಚೆಚ್ಚು ಮೈಗೂಡಿಸಿಕೊಂಡಂತೆ ಈ ಪೈಪೋಟಿ ಬೇರೆ ತಿರುವುಗಳನ್ನೇ ಪಡೆದುಕೊಳ್ಳತೊಡಗಿತು. ಬೆಂಗಳೂರೇ ಅಲ್ಲದೆ ನಾಡಿನ ಎಲ್ಲಾ ಜಿಲ್ಲೆಗಳಿಗೂ ಹೆಚ್ಚು ಕಡಿಮೆ ಈ ತಾರತಮ್ಯ ಹಬ್ಬಿತು. ಅದರಲ್ಲೂ ಗಡಿ ಭಾಗದ ಜಿಲ್ಲೆಗಳಲ್ಲಂತೂ ಕನ್ನಡ ಚಿತ್ರಗಳ ಸುಳಿವೇ ಇಲ್ಲದಂತಾಯಿತು.

ವಾಕ್ಚಿತ್ರಗಳು ಆರಂಭವಾದಾಗಲಂತೂ ಕನ್ನಡ ಚಿತ್ರಗಳ ನಿರ್ಮಾಣದ ಪ್ರಮಾಣ ತೀರಾ ಕಡಿಮೆಯಿದ್ದು ಪರಭಾಷಾ ಚಿತ್ರಗಳೇ ಹೆಚ್ಚು ಬಿಡುಗಡೆಯಾಗುತ್ತಿದ್ದುದರಿಂದ ಕನ್ನಡಿಗನೂ ಪರಭಾಷಾ ಚಿತ್ರಗಳನ್ನು ನೋಡುವ ಮನೋಧರ್ಮ ನಿರುಪಾಧಿಕವಾಗಿ ಬೆಳೆಯಿತು. ಇಂದಿಗೂ ಈ ಪ್ರಭಾವ ಉಳಿದುಕೊಂಡು ಬಂದಿದೆ. ಇದಕ್ಕೆ ಪರಭಾಷಾ ಚಿತ್ರಗಳು ತಾಂತ್ರಿಕ ವೈಭವದಿಂದಾಗಿ ಹೆಚ್ಚು ಶ್ರೀಮಂತವಾಗಿರುವುದೂ ಒಂದು ದೊಡ್ಡ ಕಾರಣ.

ಚಿತ್ರ ನಿರ್ಮಾಣ ಸಂಖ್ಯೆಯಲ್ಲಿ ಕನ್ನಡ ಚಿತ್ರರಂಗ ಅಕ್ಕ ಪಕ್ಕದ ಭಾಷಾ ಚಿತ್ರರಂಗಕ್ಕಿಂತ ಈಗಲೂ ಹಿಂದಿದೆ. ಪ್ರಥಮ ವಾಕ್ಚಿತ್ರ 'ಸತಿ ಸುಲೋಚನಾ' (೧೯೩೪) ಚಿತ್ರದಿಂದ ಇಲ್ಲಿನವರೆಗೆ ಎರಡು ಸಾವಿರಕ್ಕೂ ಹೆಚ್ಚು ಕನ್ನಡ ಚಿತ್ರಗಳು ಬಿಡುಗಡೆಯಾಗಿವೆ. ಆದರೆ ೧೯೩೧ರಿಂದ ೧೯೮೭ರವರೆಗೆ ಬಿಡುಗಡೆಯಾದ ತಮಿಳು ಚಿತ್ರಗಳ ಸಂಖ್ಯೆ ೩೪೬೫. ಅದೇ ರೀತಿ ತೆಲುಗು ಚಿತ್ರರಂಗದಲ್ಲಿ ನಿರ್ಮಾಣವಾದ ಚಿತ್ರಗಳು ೩೦೯೯. ಆದರೆ ಅದೇ ಅವಧಿಯಲ್ಲಿ ಪ್ರದರ್ಶಿತವಾದ ಕನ್ನಡ ಚಿತ್ರಗಳ ಸಂಖ್ಯೆ ಕೇವಲ ೧೨೨೬. ನಮ್ಮ ರಾಜ್ಯಕ್ಕಿಂತ ಚಿಕ್ಕದಾದ ಕೇರಳದಲ್ಲಿಯೂ ಅದಾಗಲೇ ೧೯೯೯ ಮಲಯಾಳಂ ಚಿತ್ರಗಳು ತಯಾರಾಗಿದವು.

ಸಿನಿಮಾಗಳ ಬಗ್ಗೆ ಅಸ್ಪೃಶ್ಯತಾ ಮನೋಭಾವ ಬೆಳೆಯಲು ಕನ್ನಡಿಗರ ಮಡಿವಂತಿಕೆಯೂ ಕಾರಣ. ಆರಂಭದಲ್ಲಿ ದಕ್ಷಿಣ ಕನ್ನಡದಲ್ಲಿ ಯಕ್ಷಗಾನ, ಹರಿಕಥೆ, ಬಯಲಾಟ ಹಾಗೂ ವೃತ್ತಿ ನಾಟಕಗಳಿಗೆ ಹೆಚ್ಚು ಪ್ರೋತ್ಸಾಹವಿದ್ದು ಚಲನಚಿತ್ರಗಳನ್ನು ಬಹುತೇಕ ಜನರು ತಿರಸ್ಕಾರದಿಂದಲೇ ನೋಡುತ್ತಿದ್ದರು. ಆ ಮನೋಭಾವ ಒಟ್ಟಾರೆಯಾಗಿ ಇಂದಿಗೂ ಬದಲಾಗಿಲ್ಲ. ಯಕ್ಷಗಾನ ಹಾಗೂ ನಾಟಕ ರಂಗಗಳಿಗಿರುವ ಶಕ್ತಿಯೂ ಏಕಾಏಕಿ ಜನರ ಆಸಕ್ತಿಯನ್ನು ಸಿನಿಮಾದ ಕಡೆಗೆ ತಿರುಗಿಸಲು ಬಿಡಲಿಲ್ಲವೆನ್ನುವುದೂ ಅಷ್ಟೇ ನಿಜ. ಉದಾಹರಣೆಗೆ ಇಂದಿನ ಆಧುನಿಕ ಯುಗದಲ್ಲಿ ತಾಂತ್ರಿಕ ವೈಭವೀಕರಣ, ವೈಜ್ಞಾನಿಕ ಸವಲತ್ತುಗಳನ್ನು ಬಳಸಿಯೂ ಚಿತ್ರ ನಿರ್ಮಾಣ ಮಾಡಿ ಎರಡು ಗಂಟೆಗಳ ಕಾಲ ಪ್ರೇಕ್ಷಕನನ್ನು ಹಿಡಿದಿಡಲು ಶತಪ್ರಯತ್ನ ಮಾಡಬೇಕು. ಆಗಲೂ ಸೋಲುವ ಸಂಭವವೇ ಹೆಚ್ಚು. ಆದರೆ ಅದೇ ಯಕ್ಷಗಾನದಂಥ ಶಾಸ್ತ್ರೀಯ ಕಲಾ ಪ್ರಕಾರವೊಂದು ರಾತ್ರಿಯಿಡೀ ಪ್ರೇಕ್ಷಕನನ್ನು ಕಣ್ಮುಚ್ಚಲೂ ಬಿಡದೆ ಹಿಡಿದು ಕೂರಿಸುತ್ತದೆಂದರೆ ಅದರ ಅಗಾಧ ಶಕ್ತಿಯ ಅರಿವಾಗುತ್ತದೆ.

ಕರ್ನಾಟಕದಲ್ಲಿ ಒಟ್ಟು ೧೨೫೦ ಚಿತ್ರಮಂದಿರಗಳಿವೆ. ಅವುಗಳಲ್ಲಿ ಸುಮಾರು ೭೦೦ ಖಾಯಂ ಚಿತ್ರಮಂದಿರಗಳು ಹಾಗೂ ೬೦೭ ಸಂಚಾರಿ ಮತ್ತು ಅರ ಖಾಯಂ ಚಿತ್ರಮಂದಿರಗಳು. ಬೆಂಗಳೂರು, ದಕ್ಷಿಣ ಕನ್ನಡ, ತುಮಕೂರು, ಮೈಸೂರು, ಬೆಳಗಾವಿ, ಧಾರವಾಡ, ಬಳ್ಳಾರಿ ಜಿಲ್ಲೆಗಳಲ್ಲಿ ತಲಾ ೪೦ಕ್ಕಿಂತಲೂ ಹೆಚ್ಚು ಖಾಯಂ ಚಿತ್ರಮಂದಿರಗಳಿದರೆ ಕೊಡಗು, ಗುಲ್ಬರ್ಗಾ, ಬೀದರ್‌ಗಳಲ್ಲಿ ತೀರಾ ಕಡಿಮೆಯೆನಿಸುವ ಹತ್ತು-ಹದಿನೈದು ಖಾಯಂ ಚಿತ್ರಮಂದಿರಗಳಿವೆ.

ಇನ್ನು ಅರೆಖಾಯಂ ಅಥವ ಸಂಚಾರಿ ಚಿತ್ರಮಂದಿರಗಳ ಲೆಕ್ಕಾಚಾರಕ್ಕೆ ಬಂದರೂ ಬೆಂಗಳೂರು ಜಿಲ್ಲೆ ಮೇಲುಗೈ ಪಡೆಯುತ್ತದೆ. ರಾಜ್ಯದ ಜಿಲ್ಲೆಗಳಲ್ಲಿ ಜನಸಂಖ್ಯೆ ಆಧಾರದ ಮೇಲೆ ಚಿತ್ರಮಂದಿರಗಳು ನಿರ್ಮಾಣವಾಗಿಲ್ಲ, ಬೆಂಗಳೂರು ಮೈಸೂರಿನಂತಹ ಕೆಲವೇ ಜಿಲ್ಲೆಗಳಲ್ಲಿ ಅಧಿಕ ಚಿತ್ರಮಂದಿರಗಳಿದ್ದು ಉಳಿದ ರಾಜ್ಯಗಳಲ್ಲಿ ಕಡಿಮೆ ಚಿತ್ರಮಂದಿರಗಳಿವೆ. ಹೆಚ್ಚಿನ ಸಂಖ್ಯೆಯ ಜನ ಸದಾ ಬಂದು ಹೋಗುತ್ತಿರುವ ಪ್ರದೇಶಗಳಾದುದರಿಂದ ಈ ಜಿಲ್ಲೆಗಳಲ್ಲಿ ಅಧಿಕ ಚಿತ್ರಮಂದಿರಗಳಿರಲು ಕಾರಣ.

ರಾಜ್ಯದಲ್ಲಿ ಜಿಲ್ಲಾವಾರು ಚಿತ್ರಮಂದಿರಗಳ ಹಂಚಿಕೆ ಹೀಗಿದೆ:

ಬಾಗಲಕೋಟೆ ಜಿಲ್ಲೆ : ಇಲ್ಲಿ ೧೯ ಖಾಯಂ ಚಿತ್ರಮಂದಿರಗಳು, ೧೪ ಅರೆಖಾಯಂ ಚಿತ್ರಮಂದಿರಗಳು, ೧೦ ತಾತ್ಕಾಲಿಕ ಚಿತ್ರಮಂದಿರಗಳು, ನಾಲ್ಕು ಸಂಚಾರಿ ಚಿತ್ರಮಂದಿರಗಳು ಹಾಗೂ ೪೮ ವೀಡಿಯೋ ಕೇಂದ್ರಗಳಿವೆ. ಶಕ್ತಿ, ಕೃಷ್ಣ, ವಾಸವಿ, ರಾಜಕುಮಾರ್ ಮೊದಲಾದವು ಪ್ರಮುಖ ಖಾಯಂ ಚಿತ್ರಮಂದಿರಗಳು.

ಬಾಗಲಕೋಟೆಯಲ್ಲಿ ಆರಂಭವಾದ ಮೊದಲ ಚಿತ್ರಮಂದಿರ ಶ್ರೀ ಗುರುಸಿದ್ದೇಶ್ವರ. ೧೯೨೦ರಲ್ಲಿ ಇದನ್ನು ಶ್ರೀಮದ್ ವೀರಶೈವ ಶಿವಯೋಗ ಮಂದಿರ ಸಂಸ್ಥೆಯವರು ಕಟ್ಟಿಸಿದರು. ವಿಶೇಷವೆಂದರೆ ಇದುವರೆಗೆ ಈ ನಗರದಲ್ಲಿ ಯಾವುದೇ ಚಿತ್ರಮಂದಿರವನ್ನೂ ಕೆಡವಿಲ್ಲ. ಗುರುಸಿದ್ದೇಶ್ವರ ಟಾಕೀಸ್‌ನ ಮೊದಲ ಹೆಸರು

(ಚಿತ್ರ ೩) ರಾಮಭಾವು ಪೋದ್ದಾರ್

ಶ್ರೀ ಶಿವಾನಂದ ಟಾಕೀಸ್ ಎಂದು. ಈ ಜಿಲ್ಲೆಯಲ್ಲಿ ಹೆಚ್ಚಾಗಿ ಕನ್ನಡ ಚಿತ್ರಗಳನ್ನು ಪ್ರದರ್ಶಿಸುವ ಚಿತ್ರಮಂದಿರಗಳೆಂದರೆ ಗುರುಸಿದ್ದೇಶ್ವರ, ಕೃಷ್ಣ, ಶಕ್ತಿ ಹಾಗೂ ವಾಸವಿ.

ಈ ಜಿಲ್ಲೆಯಲ್ಲಿ ಹೆಚ್ಚು ದಿನಗಳ ಕಾಲ ಪ್ರದರ್ಶನಗೊಂಡ ಚಿತ್ರಗಳೆಂದರೆ 'ಬಂಗಾರದ ಮನುಷ್ಯ', 'ಗಂಧದ ಗುಡಿ', 'ಸಂಪತ್ತಿಗೆ ಸವಾಲ್', ' ಸೂರಪ್ಪ', 'ದಳವಾಯಿ' ಇತ್ಯಾದಿ. ಇಲ್ಲಿ ಆಟೋ ಹಾಗೂ ಪ್ರಮುಖ ಜಾಗಗಳಲ್ಲಿ ಪೋಸ್ಟರ್ ಅಂಟಿಸುವ ಮೂಲಕ ಪ್ರಚಾರ ಮಾಡುತ್ತಾರೆ. ಇಲ್ಲಿ ಚಿತ್ರಮಂದಿರವೊಂದು ಇಪ್ಪತ್ತೆರಡು ವರ್ಷಗಳ ಕಾಲ ಸ್ಥಗಿತಗೊಂಡು ಮತ್ತೆ ನವೀಕರಣಗೊಂಡು ೨೦೦೦ ಜೂನ್ ೨ ರಂದು ಪ್ರಾರಂಭವಾಗಿದ್ದು ವಿಶೇಷ.

ಬೆಳಗಾವಿ ಜಿಲ್ಲೆ : ಈ ಜಿಲ್ಲೆಯಲ್ಲಿ ೩೯ ಖಾಯಂ ಚಿತ್ರಮಂದಿರಗಳು ಹಾಗೂ ೨೮ ಅರೆಖಾಯಂ ಚಿತ್ರ ಮಂದಿರಗಳಿವೆ. ಬೆಳಗಾವಿ, ಗೋಕಾಕ್ ಹಾಗೂ ಚಿಕ್ಕೋಡಿ ತಾಲ್ಲೂಕುಗಳಲ್ಲಿ ಹೆಚ್ಚು ಚಿತ್ರಮಂದಿರಗಳು ಹಂಚಿಹೋಗಿವೆ.

ಈ ಜಿಲ್ಲೆಯಲ್ಲಿ ಮೊದಲು ಪ್ರಾರಂಭವಾಗಿದ್ದು ಗ್ಲೋಬ್ ಚಿತ್ರಮಂದಿರ. ಇದು ೧೯೨೮ರಲ್ಲಿ ಪ್ರಾರಂಭವಾಯಿತು. ಈ ಚಿತ್ರಮಂದಿರವನ್ನು ನಿರ್ಮಾಣ ಮಾಡಿದವರು ಮುಷ್ ಮತ್ತು ಭುಚ್ಚು ಪೇರ್ ಎಂಬುವವರು. ಆಜಾದ್, ಕೃಷ್ಣ, ರೇಡಿಯೋ, ರೆಕ್ಸ್ ಚಿತ್ರಮಂದಿರಗಳನ್ನು ಕೆಡವಲಾಗಿದೆ. ಈ ಜಿಲ್ಲೆಯಲ್ಲಿ ಕನ್ನಡ ಚಿತ್ರಗಳನ್ನು ಪ್ರದರ್ಶಿಸುವ ಚಿತ್ರಮಂದಿರಗಳೆಂದರೆ ನಿರ್ಮಲ್, ಸಂತೋಷ್, ನರ್ತಕಿ ಮುಂತಾದವು. ಆದರೂ ಕನ್ನಡ ಚಿತ್ರಗಳು ಹೆಚ್ಚು ದಿನ ಪ್ರದರ್ಶನ ಕಾಣುವುದಿಲ್ಲ. ಪತ್ರಿಕೆ ಹಾಗೂ ಪೋಸ್ಟರ್‌ಗಳು ಇವರ ಪ್ರಚಾರದ ಸಾಧನಗಳು.

ನರ್ತಕಿ ಚಿತ್ರಮಂದಿರದ ರಾಮಭಾವು ಪೋದ್ದಾರ್ ಶಾಸಕರಾಗಿ, ವಿಧಾನ ಪರಿಷತ್ತಿನ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು. ಆ ಅವಧಿಯಲ್ಲಿ ಚಿತ್ರರಂಗದ ಮುಖ್ಯವಾಗಿ ತೆರಿಗೆಗೆ ಸಂಬಂಧಪಟ್ಟ ಸಮಸ್ಯೆಗಳ ಪರಿಹಾರಕ್ಕೆ ಶ್ರಮಿಸಿದರು.

ಗದಗ ಜಿಲ್ಲೆ : ಈ ಜಿಲ್ಲೆಯಲ್ಲಿ ಒಂಬತ್ತು ಖಾಯಂ ಚಿತ್ರಮಂದಿರಗಳು, ಒಂದು ಅರೆ ಖಾಯಂ ಚಿತ್ರಮಂದಿರ ಹಾಗೂ ೧೬ ತಾತ್ಕಾಲಿಕ ಚಿತ್ರಮಂದಿರಗಳಿವೆ. ಇದರ ಜೊತೆಗೆ ಒಂಬತ್ತು ವೀಡಿಯೋ ಕೇಂದ್ರಗಳೂ ಇವೆ. ಈ ಜಿಲ್ಲೆಯಲ್ಲಿ ಮೊದಲು ಪ್ರಾರಂಭವಾಗಿದ್ದು ಶ್ರೀ ಮಹಾಲಕ್ಷ್ಮಿ ಚಿತ್ರಮಂದಿರ, ೧೯೪೮ರಲ್ಲಿ. ಆಗಲೇ ವಾಕ್ಚಿತ್ರಗಳ ಕಾಲ ಆರಂಭವಾಗಿದ್ದರೂ ಈ ಚಿತ್ರಮಂದಿರದಲ್ಲಿ ಮೊಟ್ಟಮೊದಲಿಗೆ ಪ್ರದರ್ಶನಗೊಂಡಿದ್ದು 'ಹರಿಶ್ಚಂದ್ರ ತಾರಾಮತಿ' ಎಂಬ ಮೂಕಿ ಚಿತ್ರ. ಈ ಚಿತ್ರಮಂದಿರವನ್ನು ಯರ್ತಿಮಲಿ ಎಂಬುವವರು ನಿರ್ಮಿಸಿದರು.

ಗದಗ್ ನಲ್ಲಿ ಕನ್ನಡ ಚಿತ್ರಗಳನ್ನು ಹೆಚ್ಚಾಗಿ ಪ್ರದರ್ಶಿಸುವ ಚಿತ್ರಮಂದಿರಗಳೆಂದರೆ ಶ್ರೀ ವೆಂಕಟೇಶ್ವರ, ಕರ್ನಾಟಕ, ಕೃಷ್ಣ, ಮಹಾಲಕ್ಷ್ಮಿ ಹಾಗೂ ಚಿತ್ರ. ಅತಿ ಹೆಚ್ಚು ದಿನ ಪ್ರದರ್ಶನಗೊಂಡ ಚಿತ್ರಗಳೆಂದರೆ 'ಜನುಮದ ಜೋಡಿ', 'ನಂಜುಂಡಿ ಕಲ್ಯಾಣ', 'ಒಡ ಹುಟ್ಟಿದವರು', 'ಸೂರ್ಯವಂಶ'. ಇಲ್ಲಿ ಪ್ರಚಾರಕ್ಕೆ ಈಗಲೂ ಎತ್ತಿನಗಾಡಿಯನ್ನು ಬಳಸಲಾಗುತ್ತದೆ. ಉಳಿದಂತೆ ಪತ್ರಿಕೆ, ಪೋಸ್ಟರ್, ಆಟೋಗಳು ಇದ್ದೇ ಇವೆ.

ಬಳ್ಳಾರಿ ಜಿಲ್ಲೆ : ಈ ಜಿಲ್ಲೆಯಲ್ಲಿ ಇರುವ ಒಟ್ಟು ಚಿತ್ರ ಮಂದಿರಗಳ ಸಂಖ್ಯೆ ೬೬. ಇವುಗಳಲ್ಲಿ ಖಾಯಂ ಚಿತ್ರಮಂದಿರಗಳು ೩೪, ಅರೆಖಾಯಂ ಚಿತ್ರಮಂದಿರಗಳು ೧೦ ಹಾಗೂ ತಾತ್ಕಾಲಿಕ ಚಿತ್ರಮಂದಿರಗಳು ೨೨. ಇದಲ್ಲದೆ ಬಳ್ಳಾರಿಯಲ್ಲಿ ನಾಲ್ಕು ವೀಡಿಯೋ ಥಿಯೇಟರ್ ಗಳೂ ಇವೆ. ಒಟ್ಟಿನಲ್ಲಿ ಇಲ್ಲಿ ಚಿತ್ರಮಂದಿರಗಳ ಸಂಖ್ಯೆ ಹೆಚ್ಚೇ ಇದ್ದರೂ ಕನ್ನಡ ಚಿತ್ರಗಳಿಗೆ ಪ್ರಾಧಾನ್ಯ ಕಡಿಮೆ.

ಬಳ್ಳಾರಿ ಜಿಲ್ಲೆ ಮೊದಲು ಮದರಾಸು ಪ್ರಾಂತ್ಯಕ್ಕೆ ಸೇರಿತ್ತು. ರಾಜ್ಯ ಪುನರ್ವಿಂಗಡಣೆಯ ನಂತರ ವಿಶಾಲ ಮೈಸೂರಿನ ಭಾಗವಾಯಿತು. ತೆಲುಗು ಮಾತನಾಡುವ ಜನ ಹೆಚ್ಚಾಗಿದ್ದುದರಿಂದ ಇಲ್ಲಿ ತೆಲುಗು ಚಿತ್ರಗಳಿಗೆ ಹೆಚ್ಚಿನ ಆದ್ಯತೆ. ಅಲ್ಲದೆ ಜಿಲ್ಲೆಯ ಹೊಸಪೇಟೆಯಲ್ಲಿ ತುಂಗಭದ್ರ ಅಣೆಕಟ್ಟಿನ ಕಾಮಗಾರಿಗಾಗಿ ಇಲ್ಲಿ ಬಂದು ನೆಲೆಸಿದ ಕಾರ್ಮಿಕರು ಹಾಗೂ ಅಧಿಕಾರಿಗಳಲ್ಲಿ ಹೆಚ್ಚಿನವರು ತಮಿಳರಾದ್ದರಿಂದ ತಮಿಳು ಚಿತ್ರಗಳಿಗೆ ನಂತರದ ಪ್ರಾಶಸ್ತ್ಯ. ಆಂಧ್ರದ ಗಡಿಭಾಗದಲ್ಲಿ ಸೀಡೆಡ್ ಏರಿಯಾ ಆನಿಸಿದ್ದರಿಂದಾಗಿ ಹಿಂದಿ ಪ್ರಾಬಲ್ಯ. ಇವುಗಳ ಸ್ಪರ್ಧೆಯನ್ನು ಎದುರಿಸಿ ನಿಲ್ಲಬೇಕಾದ ಪರಿಸ್ಥಿತಿ ಕನ್ನಡ ಚಿತ್ರಗಳದು.

ಹೊಸಪೇಟೆಯಲ್ಲಿ ಎಂಟು ಚಿತ್ರಮಂದಿರಗಳಿದ್ದು ಅವುಗಳಲ್ಲಿ ಎರಡು-ಮೂರು ಮಾತ್ರ ಕನ್ನಡಕ್ಕೆ. ಉಳಿದವು ತೆಲುಗು, ಹಿಂದಿ, ತಮಿಳಿಗೆ ಮೀಸಲು. ಇಲ್ಲಿನ ತೀರಾ ಹಳೆಯ ಚಿತ್ರಮಂದಿರ ಸ್ಟಾರ್. ಈಗ ಅಸ್ತಿತ್ವದಲ್ಲಿಲ್ಲ. ರಾಯಲ್, ಮುಬಾರಕ್, ಉಮಾ ಮತ್ತು ರಾಧಿಕಾ ಇಲ್ಲಿನ ಹಳೆಯ ಚಿತ್ರಮಂದಿರಗಳು, ಹೊಸದೆಂದರೆ ಗುರು ಸಚ್ಚಿದಾನಂದ, ವಿಜಯ (ಹಿಂದಿನ ಸಚ್ಚಿದಾನಂದ) ಮತ್ತು ರಾಮಾ (ಹಿಂದಿನ ಅಜಮ್). ತೆಲುಗು ಭಾಷೀಯರೇ ಅಧಿಕವಾಗಿರುವುದರಿಂದ ತೆಲುಗು ಚಿತ್ರಗಳು ಇಲ್ಲಿ ಯಶಸ್ವಿ ಪ್ರದರ್ಶನ ಕಂಡಿವೆ. ಹೋಟೇಲ್ ಉದ್ಯಮಿಯಾದ ನಾಗರಾಜ ಗುಪ್ತ ೧೯೬೦ ರಿಂದ ಆರು ವರ್ಷಗಳ ಕಾಲ ಕನ್ನಡ ಚಿತ್ರಗಳನ್ನು ಹೊಸಪೇಟೆಗೆ ತರಿಸಿಕೊಂಡು ಪ್ರದರ್ಶನ ವ್ಯವಸ್ಥೆ ಮಾಡಿ ಇಲ್ಲಿನ ಪ್ರಮುಖ ಪ್ರದರ್ಶಕರೆನಿಸಿದ್ದಾರೆ.

ತುಂಗಭದ್ರ ಡ್ಯಾಂನಲ್ಲಿ 'ಮನೆ ಅಳಿಯ' ಚಿತ್ರದ ಹೊರಾಂಗಣ ಚಿತ್ರೀಕರಣ ನಡೆದುದನ್ನು ಕಂಡ ಹೊಸಪೇಟೆಯ ಜನ ಹೆಚ್ಚಿನ ಸಂಖ್ಯೆಯಲ್ಲಿ ಆ ಚಿತ್ರ ವೀಕ್ಷಿಸಿದರು. ಸ್ಥಳೀಯ ಭಾವನೆಗಳ ಕಾರಣ 'ಶ್ರೀ ಕೃಷ್ಣದೇವರಾಯ' ಚಿತ್ರ ಹೆಚ್ಚು ಕಾಲ ಪ್ರದರ್ಶಿತವಾಯಿತು. ಇತ್ತೀಚಿಗೆ ಯಶಸ್ವಿ ಪ್ರದರ್ಶನ ಕಂಡ ಚಿತ್ರ 'ಯಜಮಾನ'. 'ಮಾಯಾಬಜಾರ್' (ಕನ್ನಡಕ್ಕೆ ಡಬ್ ಆದ ಚಿತ್ರ) ಮತ್ತು ತೆಲುಗಿನ 'ಸತ್ಯ ಹರಿಶ್ಚಂದ್ರ' ಹಿಂದೆ ಯಶಸ್ವಿಯಾದ ಚಿತ್ರಗಳಲ್ಲಿ ಪ್ರಮುಖವಾದವು. ಇಲ್ಲಿನ ಪ್ರದರ್ಶಕರಿಗೆ ಕನ್ನಡ ಚಿತ್ರೋದ್ಯಮದ ಬಗೆಗೆ ಕಾಳಜಿ ಕಡಿಮೆ. ಜಿಲ್ಲಾವಾರು ವಿತರಣ ವ್ಯವಸ್ಥೆಯಿಂದಾಗಿ ಇಲ್ಲಿ ಬಹಳಷ್ಟು ಅಸ್ತವ್ಯಸ್ತವಾಯಿತು.

ಇಲ್ಲಿ ಸಂಚಾರಿ ಚಿತ್ರಮಂದಿರಗಳು ಇರಲಿಲ್ಲ. ನಾಟಕ ಕಂಪನಿಯವರು ಹಾಕಿಸುತ್ತಿದ್ದ ಥಿಯೇಟರುಗಳೇ ಕಂಪನಿ ಬೇರೆಕಡೆ ಹೋದಾಗ ಸಿನಿಮಾ ಪ್ರದರ್ಶನಕ್ಕೆ ಲಭ್ಯವಾಗುತ್ತಿದ್ದು, ಅದನ್ನೇ ಟೆಂಟ್ ಸಿನಿಮಾ ಎಂದು ಕರೆಯಲಾಗುತ್ತಿತ್ತು.

ಶಿವಮೊಗ್ಗ ಜಿಲ್ಲೆ : ಅವಿಭಜಿತ ಶಿವಮೊಗ್ಗ ಜಿಲ್ಲೆಯಲ್ಲಿ ಒಟ್ಟು ೫೫ ಚಿತ್ರಮಂದಿರಗಳಿವೆ. ಇವುಗಳಲ್ಲಿ ಖಾಯಂ ಚಿತ್ರಮಂದಿರಗಳು ೨೮, ಅರೆ ಖಾಯಂ ಚಿತ್ರಮಂದಿರಗಳು ೨೦ ಹಾಗೂ ಸಂಚಾರಿ ಚಿತ್ರಮಂದಿರಗಳು ಏಳು. ಶಿವಮೊಗ್ಗ ನಗರದಲ್ಲಿ ಒಟ್ಟು ಒಂಬತ್ತು ಚಿತ್ರಮಂದಿರಗಳಿವೆ. ಅವುಗಳಲ್ಲಿ ಎಚ್.ಪಿ.ಸಿ, ವಿನಾಯಕ, ಮಲ್ಲಿಕಾರ್ಜುನ, ಲಕ್ಷ್ಮಿ ಮುಖ್ಯವಾದವು.

ಒಟ್ಟಾರೆಯಾಗಿ ಶಿವಮೊಗ್ಗ ಜಿಲ್ಲೆಯಲ್ಲಿ ಚಿತ್ರಮಂದಿರಗಳು ಸಂಕಷ್ಟ ಸ್ಥಿತಿಯಲ್ಲಿವೆ. ಆರ್ಥಿಕ ಸಂಕಷ್ಟ ತಾಳಲಾರದೆ ಅನೇಕ ಚಿತ್ರಮಂದಿರಗಳು ಮುಚ್ಚಿವೆ. ಪ್ರೇಕ್ಷಕರ ಕೊರತೆ, ಸರ್ಕಾರದ ನಿಯಮಾವಳಿಗಳು ಹಾಗೂ ಟಿ.ವಿ.ಮಾಧ್ಯಮ ಚಿತ್ರಮಂದಿರಗಳ ಅವಸಾನಕ್ಕೆ ಕಾರಣವಾಗುತ್ತಿವೆ. ಹೆಚ್ಚಾಗಿ ಇಲ್ಲಿ ಖಾಯಂ ಚಿತ್ರಮಂದಿರಗಳೇ ಬಾಗಿಲು ಹಾಕುತ್ತಿವೆ. ಇಲ್ಲಿನ ಪ್ರಮುಖ ಚಿತ್ರಮಂದಿರಗಳು ಶ್ರೀಮಂತ ಮನೆತನಗಳ ಒಡೆತನದಲ್ಲಿದ್ದರೂ ಭದ್ರಾವತಿಯಲ್ಲಿ ಒಂದೆರಡು ಚಿತ್ರಮಂದಿರಗಳ ಹೊರತು ಉಳಿದೆಲ್ಲವೂ ಬಹುತೇಕ ಚಿಂತಾಜನಕ ಸ್ಥಿತಿಯಲ್ಲಿವೆ. ಹೆಚ್ಚಿನ ಚಿತ್ರಮಂದಿರಗಳು ಲೀಸ್ ಅಥವಾ ಬಾಡಿಗೆಯ ಆಧಾರದ ಮೇಲೆ ನಡೆಯುತ್ತಿವೆ.

ರಾಜಕುಮಾರ್ ಅಪಹರಣದ ನಂತರದ ನಷ್ಟದಿಂದಾಗಿ ಇಲ್ಲಿ ಮೂರು ಚಿತ್ರಮಂದಿರಗಳು ನಿಂತುಹೋಗಿವೆ. ಶಿವಮೊಗ್ಗ ಸಕ್ಕರೆ ಕಾರ್ಖಾನೆ ಸ್ಥಗಿತಗೊಂಡಿದ್ದೂ ಚಿತ್ರಮಂದಿರಗಳಲ್ಲಿ ಪ್ರೇಕ್ಷಕರ ಕೊರತೆಗೆ ಕಾರಣವಾಗಿದೆ. ಇಲ್ಲಿನ ಉದ್ಯಮದ ಹಿರಿಯರೊಬ್ಬರ ಪ್ರಕಾರ ಇನ್ನು ಒಂದೆರಡು ವರ್ಷಗಳಲ್ಲಿ ಶೇಕಡಾ ೨೫ ರಷ್ಟು ಚಿತ್ರಮಂದಿರಗಳು ಮುಚ್ಚಿಹೋಗುವ ಸಾಧ್ಯತೆಯಿದೆ.

ತುಮಕೂರು ಜಿಲ್ಲೆ : ಈ ಜಿಲ್ಲೆಯಲ್ಲಿ ಚಿತ್ರಮಂದಿರಗಳ ಸಂಖ್ಯೆ ಹೆಚ್ಚಾಗಿಯೇ ಇದೆ. ಇಲ್ಲಿ ಒಟ್ಟು ೧೧೯ ಚಿತ್ರಮಂದಿರಗಳಿವೆ. ಇದರಲ್ಲಿ ೩೪ ಖಾಯಂ, ೨೫ ಅರೆಖಾಯಂ, ೧೫ ತಾತ್ಕಾಲಿಕ ಹಾಗೂ ೪೬ ಸಂಚಾರಿ. ಖಾಯಂ ಚಿತ್ರಮಂದಿರಗಳ ಸಂಖ್ಯೆ ಕಡಿಮೆಯಾದರೂ ಪ್ರಶಾಂತ್, ನ್ಯೂ ವಿನೋದ, ಗಾಯತ್ರಿ, ರೇಣುಕಾ ಮೊದಲಾದವು ಪ್ರಮುಖ ಚಿತ್ರಮಂದಿರಗಳಾಗಿವೆ.

ತುಮಕೂರಿನ ಪ್ರಶಾಂತ್ ಚಿತ್ರಮಂದಿರವನ್ನು ನಿರ್ಮಿಸಿದವರು ಗುಬ್ಬಿ ವೀರಣ್ಣನವರು ಎನ್ನುವುದೊಂದು ವಿಶೇಷ. ಈಗ ಅವರ ವಂಶಸ್ಥರ ಒಡೆತನದಲ್ಲಿ ಈ ಚಿತ್ರಮಂದಿರ ನಡೆಯುತ್ತಿದೆ. ಉಳಿದಂತೆ ಗಾಯತ್ರಿ ಚಿತ್ರಮಂದಿರ ಡಿ.ಟಿ.ಎಸ್. ಸೌಲಭ್ಯವನ್ನು ಹೊಂದಿದೆ. ಮಧುಗಿರಿ, ಪಾವಗಡ ತಾಲೂಕುಗಳಲ್ಲಿ ಸಂಚಾರಿ ಚಿತ್ರಮಂದಿರಗಳೇ ಅಧಿಕವಾಗಿವೆ.

ಹಾಸನ ಜಿಲ್ಲೆ: ಈ ಜಿಲ್ಲೆಯಲ್ಲಿ ಚಿತ್ರಮಂದಿರಗಳ ಒಟ್ಟಾರೆ ಸಂಖ್ಯೆ ಕಡಿಮೆಯೆ. ಇಲ್ಲಿರುವ ಒಟ್ಟು ಚಿತ್ರಮಂದಿರಗಳ ಸಂಖ್ಯೆ ೩೨. ಇವುಗಳಲ್ಲಿ ೨೦ ಖಾಯಂ ಚಿತ್ರಮಂದಿರಗಳಿರುವುದು ಒಂದು ವಿಶೇಷ. ಉಳಿದಂತೆ ಮೂರು ಅರೆ ಖಾಯಂ ಹಾಗೂ ಐದು ತಾತ್ಕಾಲಿಕ ಚಿತ್ರಮಂದಿರಗಳಿವೆ. ನಾಲ್ಕು ವೀಡಿಯೋ ಕೇಂದ್ರಗಳೂ ಈ ಚಿತ್ರಮಂದಿರಗಳೊಂದಿಗೆ ಸ್ಪರ್ಧಿಸುತ್ತಿವೆ.

ಇಂಪೀರಿಯಲ್ ಟಾಕೀಸ್ ಹಾಸನದ ಮೊಟ್ಟ ಮೊದಲ ಚಿತ್ರಮಂದಿರ. ಭಾನು, ಸಹ್ಯಾದ್ರಿ, ಪೃಥ್ವಿ ದೊಡ್ಡ ಹಾಗೂ ಪ್ರಮುಖ ಚಿತ್ರಮಂದಿರಗಳು. ಆಸನಗಳ ಸಂಖ್ಯೆಯಲ್ಲಿ ತೇಜಸ್ವಿ, ಚೆನ್ನಾಂಬಿಕ, ಗುರು ಚಿತ್ರಮಂದಿರಗಳು ಪೈಪೋಟಿಯಲ್ಲಿವೆ.

ಚಾಮರಾಜನಗರ ಜಿಲ್ಲೆ: ಈ ಜಿಲ್ಲೆಯಲ್ಲಿರುವ ಒಟ್ಟು ಚಿತ್ರಮಂದಿರಗಳ ಸಂಖ್ಯೆ ೩೭. ಖಾಯಂ ೧೮ ಹಾಗೂ ೧೯ ಸಂಚಾರಿ. ಕೃಷ್ಣ, ಭ್ರಮರಾಂಬ, ಬಸವೇಶ್ವರ ಪ್ರಮುಖ ಚಿತ್ರಮಂದಿರಗಳಾಗಿದ್ದು ಭ್ರಮರಾಂಬ ಈಗ ಸ್ಥಗಿತಗೊಂಡಿವೆ. ಚಾಮರಾಜನಗರ ತಾಲ್ಲೂಕಿನಲ್ಲಿ ಎಂಟು ಖಾಯಂ ಚಿತ್ರಮಂದಿರಗಳಿದ್ದರೆ ಕೊಳ್ಳೆಗಾಲ ತಾಲ್ಲೂಕಿನಲ್ಲಿ ಆರು ಇವೆ. ಇಲ್ಲಿ ಎಂಟು ಸಂಚಾರಿ ಚಿತ್ರಮಂದಿರಗಳೂ ಇವೆ.

೬೫ ವರ್ಷಗಳ ಹಿಂದೆ ನಿರ್ಮಾಣಗೊಂಡ ಕೃಷ್ಣ ಚಾಮರಾಜನಗರ ಜಿಲ್ಲೆಯ ಮೊದಲ ಚಿತ್ರಮಂದಿರ. ಇದರಲ್ಲಿ ಮೊದಲು ಪ್ರದರ್ಶನಗೊಂಡಿದ್ದು ಮೂಕಿ ಚಿತ್ರ. ಸಿ.ಬಸವಣ್ಣ ಎನ್ನುವವರು ಕೃಷ್ಣ ಚಿತ್ರಮಂದಿರವನ್ನು ನಿರ್ಮಿಸಿದರು. ಅವರ ಪುತ್ರ ಮಲ್ಲಿಕ್ 'ಸಾಕ್ಷಾತ್ಕಾರ' ಮತ್ತು 'ಬಿಳಿಗಿರಿಯ ಬನದಲ್ಲಿ', 'ಪ್ರೇಮದ ಕಾಣಿಕೆ' ಚಿತ್ರಗಳನ್ನು ನಿರ್ಮಿಸಿದರು. ಈ ಜಿಲ್ಲೆಯ ಚಿತ್ರ ಮಂದಿರಗಳಲ್ಲಿ ಕನ್ನಡ ಚಿತ್ರ ಪ್ರದರ್ಶನವೇ ಹೆಚ್ಚು ಎನ್ನುವುದು ಅದರ ಹಿರಿಮೆ. ಚಿತ್ರಮಂದಿರಗಳ ಮಾಲೀಕರು ಆರ್ಥಿಕವಾಗಿ ಪ್ರಬಲರಾಗಿದ್ದರೂ ವ್ಯಾಪಾರ ಕುಸಿಯುತ್ತಿದೆ. 'ಸಾಕ್ಷಾತ್ಕಾರ', 'ಹಾಲು ಜೇನು', 'ಜೀವನಚೈತ್ರ', 'ನಂಜುಂಡಿ ಕಲ್ಯಾಣ', 'ಆನಂದ್' ಮುಂತಾದ ಚಿತ್ರಗಳು ಯಶಸ್ವಿ ಪ್ರದರ್ಶನ ಕಂಡಿವೆ. ಪೋಸ್ಟರ್ ಗಳನ್ನು ಅಂಟಿಸುವುದು ಇಲ್ಲಿನ ಮುಖ್ಯ ಪ್ರಚಾರ ವಿಧಾನ.

ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಒಟ್ಟು ೨೬ ಚಿತ್ರಮಂದಿರಗಳಿವೆ. ಉತ್ತಮ ಆದಾಯ ತರುವ ಸುಸಜ್ಜಿತ ಚಿತ್ರಮಂದಿರಗಳೂ ಇಲ್ಲಿವೆ. ಇಲ್ಲಿನ ವಿಶೇಷ ಎಂದರೆ ೨೨ ವೀಡಿಯೋ ಕೇಂದ್ರಗಳಿರುವುದು. ಸಂಖ್ಯೆಯಲ್ಲಿ ಸಮಾನವಾಗಿರುವ ವೀಡಿಯೋ ಕೇಂದ್ರಗಳೊಂದಿಗೆ ಚಿತ್ರಮಂದಿರಗಳು ಸೆಣಸಬೇಕಾಗಿದೆ.

ಮಂಗಳೂರು ಜಿಲ್ಲೆ : ಮಂಗಳೂರು ಜಿಲ್ಲೆಯ ಮೊದಲ ಚಿತ್ರಮಂದಿರವೆಂದರೆ ಈಗಿನ ನ್ಯೂ ಚಿತ್ರ. ಇದು ೧೯೨೦ ರಲ್ಲಿ ಪ್ರಾರಂಭವಾಯಿತು. ಈ ಚಿತ್ರಮಂದಿರವನ್ನು ನಿರ್ಮಿಸಿದವರು ಕೆ.ವಿಠಲ್‌ದಾಸ್ ಪೈ. ಆರಂಭದಲ್ಲಿ ಇದಕ್ಕೆ ಹಿಂದೂಸ್ತಾನ್ ಚಿತ್ರಮಂದಿರವೆಂದು ಹೆಸರಿತ್ತು. ನಂತರ ಶ್ರೀ ಚಿತ್ರಮಂದಿರವೆಂದು ಹೆಸರಿಸಲಾಯಿತಾದರೂ ಈಗ ನ್ಯೂ ಚಿತ್ರ ಎಂದು ಹೆಸರಿಡಲಾಗಿದೆ.

ಇಲ್ಲಿ ಕನ್ನಡ ಚಿತ್ರಗಳನ್ನು ಪ್ರದರ್ಶಿಸುವ ಚಿತ್ರಮಂದಿರಗಳೆಂದರೆ ನ್ಯೂ ಚಿತ್ರ, ರಮಾಕಾಂತಿ, ಅಮೃತ್, ರೂಪವಾಣಿ, ಸುಚಿತ್ರ, ಜ್ಯೋತಿ, ಪ್ಲಾಟಿನಂ, ಸೆಂಟ್ರಲ್, ಬಾಲಾಜಿ, ಪ್ರಭಾತ್ ಮೊದಲಾದವು. ಇಲ್ಲಿನ ಚಿತ್ರಮಂದಿರಗಳ ಮಾಲೀಕರು ಆರ್ಥಿಕವಾಗಿ ಪ್ರಬಲರಾಗಿದ್ದರೂ ಟಿ.ವಿ ಮತ್ತು ವೀಡಿಯೋ ಕೇಂದ್ರಗಳ ಸ್ಪರ್ಧೆಯಿಂದ ಚಿತ್ರಮಂದಿರಗಳ ವ್ಯಾಪಾರ ಕಡಿಮೆಯಾಗಿದೆ. ಚಿತ್ರಮಂದಿರಗಳಿಗೆ ಸರಿಸಮನಾಗಿ ಸುಮಾರು ೪೧ಕ್ಕೂ ಹೆಚ್ಚು ವೀಡಿಯೋ ಪಾರ್ಲರ್‌ಗಳೂ ಇವೆ. ಚಿತ್ರಮಂದಿರಗಳಿಗೆ ಪತ್ರಿಕೆ, ಪೋಸ್ಟರ್ ಹಾಗೂ ಆಟೋ, ಕಾರುಗಳಲ್ಲಿ ಚಿತ್ರದ ಪ್ರಚಾರ ಮಾಡಲಾಗುತ್ತದೆ.

ಇಲ್ಲಿ 'ರಾಜಾ ವಿಕ್ರಮ', 'ಹೇಮರೆಡ್ಡಿ ಮಲ್ಲಮ್ಮ', 'ಭಕ್ತ ಪ್ರಹ್ಲಾದ', 'ಸತ್ಯ ಹರಿಶ್ಚಂದ್ರ', 'ದಲ್ಲಾಳಿ', 'ನಟಶೇಖರ', 'ಬಂಧನ', 'ಯಾರೇ ನೀನು ಚೆಲುವೆ', ಮುಂತಾದ ಚಿತ್ರಗಳು ಯಶಸ್ವಿ ಪ್ರದರ್ಶನ ಕಂಡಿವೆ. 'ಬಂಗಾರದ ಮನುಷ್ಯ' ಮಂಗಳೂರಿನಲ್ಲಿ ನೂರು ದಿನ ಪ್ರದರ್ಶಿತವಾಯಿತು. ಹೊಸದಾಗಿ ಸ್ಟೀರಿಯೋ ಧ್ವನಿವ್ಯವಸ್ಥೆಯನ್ನು ಅಳವಡಿಸಿರುವ ಚಿತ್ರಮಂದಿರಗಳಿವೆ.

ನ್ಯೂಚಿತ್ರ ಚಿತ್ರಮಂದಿರದ ಮಾಲೀಕರಾದ ವಿಠಲ್‌ದಾಸ್ ಪೈಯವರು ರೂಪವಾಣಿ ಚಿತ್ರಮಂದಿರವನ್ನು ನಿರ್ಮಿಸಿದರು. ಇವರು ದಕ್ಷಿಣ ಕನ್ನಡದಲ್ಲಿ ಚಿತ್ರರಂಗದ ವ್ಯವಹಾರದಲ್ಲಿ ಕ್ರಾಂತಿಯನ್ನೇ ಮಾಡಿದವರು. ನ್ಯೂ ಚಿತ್ರ ಟಾಕೀಸ್ ನಲ್ಲಿ 'ಹೇಮರೆಡ್ಡಿ ಮಲ್ಲಮ್ಮ', ಹಾಗೂ 'ರಾಜಾ ವಿಕ್ರಮ' ಚಿತ್ರಗಳನ್ನು ಪ್ರದರ್ಶಿಸಿದರು. ರೂಪವಾಣಿ ಚಿತ್ರಮಂದಿರವನ್ನು ೧೯೪೪ರ ಫೆಬ್ರವರಿ ೧೩ ರಂದು 'ಗೋಕುಲ್' ಎಂಬ ಹಿಂದಿ

ಆರಂಭ ೧೯೨೪

ಮಧ್ಯಂತರ ೧೯೩೭

ಇಂದು ೧೯೮೩

(ಚಿತ್ರ ೪-೬) ಕೆಲವು ಕಡೆ ಪ್ರೇಕ್ಷಕರ ಅಭಿರುಚಿಗೆ ಅನುಗುಣವಾಗಿ ಚಿತ್ರಮಂದಿರಗಳು ರೂಪಾಂತರಗೊಳ್ಳುತ್ತಿವೆ. ಆಧುನಿಕ ಸೌಲಭ್ಯಗಳನ್ನು, ತಂತ್ರಜ್ಞಾನಗಳನ್ನು ಮೈಗೂಡಿಸಿಕೊಳ್ಳುತ್ತಿವೆ. ಹುಬ್ಬಳ್ಳಿಯ ಡೆಕ್ಕನ್ ಟಾಕೀಸ್‌ನ ಆರು ದಶಕಗಳ ವಿಕಾಸದ ಮೂರು ಮಜಲುಗಳು

ಚಿತ್ರದೊಂದಿಗೆ ಆರಂಭಿಸಿದರು. ದಕ್ಷಿಣ ಕನ್ನಡದಲ್ಲಿ ಮೊದಲ ಬಾರಿಗೆ ಡಬಲ್ ಪ್ರೊಜೆಕ್ಟರ್ ಅನ್ನು ಈ ಚಿತ್ರಮಂದಿರದಲ್ಲಿ ಅಳವಡಿಸಲಾಯಿತು.

ಆರಂಭದಲ್ಲಿ ಹಿಂದಿ ಚಿತ್ರಗಳಿಗೆ ಪ್ರಾಧಾನ್ಯ ನೀಡುತ್ತಿದ್ದ ರೂಪವಾಣಿ ೧೯೯೧ರ ನಂತರ ಕನ್ನಡ ಚಿತ್ರಗಳಿಗೆ ಆದ್ಯತೆ ನೀಡುತ್ತಿದೆ. ಈ ಅವಧಿಯಲ್ಲಿ 'ಆಕಸ್ಮಿಕ', 'ಜಿಡ ಹುಟ್ಟಿದವರು','ಲಾಕ್ ಅಪ್ ಡೆತ್', 'ಪ್ರೀತ್ಸೋದ್ ತಪ್ಪಾ', 'ನಾನು ನನ್ನ ಹೆಂಡ್ತೀರು', 'ಸ್ನೇಹ','ನಾಗದೇವತೆ' ಮುಂತಾದ ಚಿತ್ರಗಳು ಯಶಸ್ವಿ ಪ್ರದರ್ಶನ ಕಂಡಿವೆ. 'ಯಾರೇ ನೀನು ಚೆಲುವೆ' ೨೫ ವಾರಗಳ ಪ್ರದರ್ಶನ ಕಂಡು ರೂಪವಾಣಿಯ ಇತಿಹಾಸದಲ್ಲೇ ದಾಖಲೆ ನಿರ್ಮಿಸಿತು.

೧೯೯೧ ರ ಮೊದಲು ಯಶಸ್ವಿ ಪ್ರದರ್ಶನ ಕಂಡ ಕನ್ನಡ ಚಿತ್ರಗಳೆಂದರೆ 'ಚಂದವಳ್ಳಿಯ ತೋಟ', 'ಶ್ರೀ ಕೃಷ್ಣ ದೇವರಾಯ', 'ಇಬ್ಬನಿ ಕರಗಿತು', 'ನೀ ಬರೆದ ಕಾದಂಬರಿ' ಮತ್ತು 'ಅಂತ'. ಇವಲ್ಲದೆ ೫೦ ದಿನಗಳ ಪ್ರದರ್ಶನ ಕಂಡರೆ 'ಬಂಧನ' ಚಿತ್ರ ೧೦೦ ದಿನಗಳ ಕಾಲ ಪ್ರದರ್ಶಿತಗೊಂಡು ದಾಖಲೆ ಮಾಡಿತು.

ಉಡುಪಿ ಜಿಲ್ಲೆ : ಈ ಜಿಲ್ಲೆಯಲ್ಲಿ ೧೩ ಖಾಯಂ ಚಿತ್ರಮಂದಿರಗಳು ಹಾಗೂ ಏಳು ಅರೆ ಖಾಯಂ ಚಿತ್ರಮಂದಿರಗಳಿವೆ. ಇವುಗಳಲ್ಲಿ ಡಯಾನ, ಅಲಂಕಾರ್, ಗೀತಾಂಜಲಿ, ಕಲ್ಪನಾ ಮೊದಲಾದವು ಪ್ರಮುಖವಾದವು. ಕುಂದಾಪುರದಲ್ಲಿದ್ದ ಲಕ್ಷ್ಮಿ ಸಂಚಾರಿ ಚಿತ್ರಮಂದಿರ ಈಗ ಸ್ಥಗಿತಗೊಂಡಿದೆ.

ಮಂಗಳೂರಿನಂತೆ ಉಡುಪಿಯಲ್ಲಿಯೂ ವೀಡಿಯೋ ಥಿಯೇಟರ್‌ಗಳ ಸಂಖ್ಯೆ ಸಾಕಷ್ಟಿದೆ. ಇಲ್ಲಿ ಹದಿನೈದು ವೀಡಿಯೋ ಕೇಂದ್ರಗಳಿದ್ದು ಅವುಗಳಲ್ಲಿ ಎರಡು ಮಾತ್ರ ಮುಚ್ಚಿವೆ.

ಉಡುಪಿ ಜಿಲ್ಲೆಯ ಮೊದಲ ಚಿತ್ರಮಂದಿರ ರಾಮಕೃಷ್ಣ. ಇದನ್ನು ೧೯೪೧ರಲ್ಲಿ ಮಣಿಪಾಲದ ಉಪೇಂದ್ರ ಅನಂತ ಪೈ ಕಟ್ಟಿಸಿದರು. ಈ ಚಿತ್ರಮಂದಿರದ ಹೆಸರು ಈಗ ಅಲಂಕಾರ್ ಎಂದಾಗಿದೆ. ಹಿಂದೆ 'ಬಯಲು ದಾರಿ','ಅಂತ','ಚೋಮನ ದುಡಿ' ಮುಂತಾದ ಚಿತ್ರಗಳು ಉಡುಪಿಯಲ್ಲಿ ಯಶಸ್ವಿಯಾಗಿದ್ದರೂ ಈಗ ಜನ ಚಿತ್ರಗಳ ಬಗ್ಗೆ ಆಸಕ್ತಿ ತಳೆಯುತ್ತಿಲ್ಲ. ಅದರಲ್ಲೂ ಉಡುಪಿಯಲ್ಲಿ ಕನ್ನಡ ಚಿತ್ರಗಳ ಬಗ್ಗೆ ಒಂದು ರೀತಿಯ ತಿರಸ್ಕಾರ ಭಾವನೆ ಬೆಳೆಯುತ್ತಿರುವುದು ವಿಷಾದದ ಸಂಗತಿ. ಕನ್ನಡ ಚಿತ್ರಗಳಿಗಿಂತಲೂ ಇಲ್ಲಿ ಹಿಂದಿ, ತಮಿಳು, ತೆಲುಗು ಚಿತ್ರಗಳು ಪ್ರಾಧಾನ್ಯ ಪಡೆಯುತ್ತಿರುವುದು ನಿಜಕ್ಕೂ ದುರಂತ. ಆದರೆ ಚಿತ್ರಮಂದಿರಗಳು ಆಧುನಿಕ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ಆಕರ್ಷಿಸಲು ಪ್ರಯತ್ನಿಸುತ್ತಿವೆ.

ಮೈಸೂರು ಜಿಲ್ಲೆ : ಕರ್ನಾಟಕದಲ್ಲಿ ಬೆಂಗಳೂರು ಬಿಟ್ಟರೆ ಪ್ರಮುಖವಾದ ಜಿಲ್ಲೆ ಮೈಸೂರು. ಇಲ್ಲಿ ೪೧ ಖಾಯಂ ಹಾಗೂ ಅರೆಖಾಯಂ ಚಿತ್ರಮಂದಿರಗಳಿವೆ. ಇವುಗಳೊಂದಿಗೆ ೫೨ ತಾತ್ಕಾಲಿಕ ಚಿತ್ರಮಂದಿರಗಳೂ ಸೇರಿ ಜಿಲ್ಲೆಯಲ್ಲಿ ಒಟ್ಟು ೯೩ ಚಿತ್ರಮಂದಿರಗಳಿವೆಯೆಂದಾಯಿತು. ತಾತ್ಕಾಲಿಕ ಚಿತ್ರಮಂದಿರಗಳ ಪೈಕಿ ಸುಮಾರು ಹನ್ನೊಂದು ಚಿತ್ರಮಂದಿರಗಳಲ್ಲಿ ರಹದಾರಿ ನವೀಕರಣವಾಗದ ಕಾರಣಕ್ಕೆ ಚಿತ್ರ ಪ್ರದರ್ಶನ ನಡೆಯುತ್ತಿಲ್ಲ. ಮೈಸೂರು ನಗರದಲ್ಲೇ ಪ್ರಮುಖ ಚಿತ್ರಮಂದಿರಗಳಿವೆ.

ಮೈಸೂರು ಜಿಲ್ಲೆಯ ಮೊಟ್ಟ ಮೊದಲ ಚಿತ್ರಮಂದಿರ 'ಐ.ಎಸ್.ಚಿತ್ರಮಂದಿರ' (ಇಸ್ಮಾಯಿಲ್ ಷರೀಫ್) ಭಾರತಕ್ಕೆ ಸ್ವಾತಂತ್ರ್ಯ ಬಂದ ತರುಣದಲ್ಲಿ ಈ ಜಾಗದಲ್ಲಿ ಒಲಂಪಿಯಾ ಚಿತ್ರ ಮಂದಿರವನ್ನು ಕಟ್ಟಿಸಿದವರು ಎಂ.ವಿ.ವೀರೇಂದ್ರ ಕುಮಾರ್. ಮೈಸೂರಿನಲ್ಲಿ ಆರಂಭದಿಂದ ಇಂದಿಗೂ ಪ್ರದರ್ಶನದಲ್ಲಿ ಕನ್ನಡ ಚಿತ್ರಗಳೇ ಪ್ರಾಧಾನ್ಯ ಪಡೆಯುತ್ತಿರುವುದು ಸಂತಸದ ವಿಚಾರ. ಟಿ.ವಿ. ಮಾಧ್ಯಮದ ಪ್ರಭಾವದಿಂದಾಗಿ ಚಿತ್ರ ಪ್ರದರ್ಶನಕ್ಕೆ ಜನರ ಪ್ರತಿಕ್ರಿಯೆ ಕಡಿಮೆಯಾಗಿರುವುದು ಇಲ್ಲಿಯೂ ಕಂಡು ಬರುತ್ತದೆ.

'ಪಡುವಾರಹಳ್ಳಿ ಪಾಂಡವರು','ಕೃಷ್ಣ ನೀ ಬೇಗನೆ ಬಾರೋ','ಅವಳ ಅಂತರಂಗ', 'ಪೋಲೀಸನ ಹೆಂಡ್ತಿ', 'ಜನುಮದ ಜೋಡಿ' ಮೊದಲಾದ ಚಿತ್ರಗಳು ಈ ಜಿಲ್ಲೆಯಲ್ಲಿ ಉತ್ತಮ ಪ್ರದರ್ಶನ ಕಂಡಿವೆ.

ಕೊಡಗು ಜಿಲ್ಲೆ : ಈ ಜಿಲ್ಲೆಯಲ್ಲಿರುವ ಒಟ್ಟು ಚಿತ್ರಮಂದಿರಗಳ ಸಂಖ್ಯೆ ೧೫. ಇದರಲ್ಲಿ ಒಂಬತ್ತು ಖಾಯಂ, ನಾಲ್ಕು ಅರೆ ಖಾಯಂ ಹಾಗೂ ಎರಡು ತಾತ್ಕಾಲಿಕ ಚಿತ್ರಮಂದಿರಗಳು ಸೇರಿವೆ. ಕಾವೇರಿ ಮಹಲ್, ಬಸಪ್ಪ ಚಿತ್ರಮಂದಿರ, ವುಡ್‌ಲ್ಯಾಂಡ್ಸ್, ಮಮತಾ ಮುಂತಾದವು ಪ್ರಮುಖ ಖಾಯಂ ಚಿತ್ರಮಂದಿರಗಳು . ಸಂಖ್ಯೆಯಲ್ಲಿ ಕಡಿಮೆಯಿದ್ದರೂ ಕೊಡಗು ಜಿಲ್ಲೆಯ ಚಿತ್ರಮಂದಿರಗಳು ಸುಸಜ್ಜಿತವಾಗಿವೆ.

ಕೊಡಗು ಜಿಲ್ಲೆಯ ಮೊಟ್ಟ ಮೊದಲ ಚಿತ್ರಮಂದಿರ ಕಾವೇರಿ ಮಹಲ್. ಇದನ್ನು ೧೯೪೫ರಲ್ಲಿ ಅಪ್ಪನೆರವಂಡ ಮಾದಪ್ಪ ನಿರ್ಮಿಸಿದರು. ಈ ಚಿತ್ರಮಂದಿರದಲ್ಲಿ ಮೊದಲ ಬಾರಿಗೆ ಬೆಳಗಿನ ಪ್ರದರ್ಶನ ಆರಂಭವಾಯಿತು. ಈ ಜಿಲ್ಲೆಯಲ್ಲಿ ಎಲ್ಲ ಚಿತ್ರಮಂದಿರಗಳೂ ಬಹುತೇಕ ಕನ್ನಡ ಚಿತ್ರಗಳ ಪ್ರದರ್ಶನಕ್ಕೆ ಆದ್ಯತೆ ನೀಡುತ್ತಿವೆ. ಇಲ್ಲಿ 'ನಾಗರ ಹಾವು', 'ಬಂಗಾರದ ಮನುಷ್ಯ','ಬೇಡರ ಕಣ್ಣಪ್ಪ','ಬಂಧನ','ಜನುಮದ ಜೋಡಿ','ಅಂತ', 'ಯಜಮಾನ', ಮುಂತಾದ ಚಿತ್ರಗಳು ಯಶಸ್ವಿ ಪ್ರದರ್ಶನ ಕಂಡಿವೆ.

ಕಾರವಾರ(ಉತ್ತರಕನ್ನಡ)ಜಿಲ್ಲೆ: ಈ ಜಿಲ್ಲೆಯಲ್ಲಿ ೨೦ ಖಾಯಂ ಚಿತ್ರಮಂದಿರಗಳು ಹಾಗೂ ಆರು ಅರೆ ಖಾಯಂ ಚಿತ್ರ ಮಂದಿರಗಳು ಸೇರಿದಂತೆ ಒಟ್ಟು ೨೬ ಚಿತ್ರಮಂದಿರಗಳಿವೆ. ಇವುಗಳಲ್ಲಿ ಪ್ರಸನ್ನ, ಪಲ್ಲವಿ, ಗೀತಾಂಜಲಿ, ಜ್ಯೋತಿ, ಚಿತ್ತರಂಜನ್ ಮುಂತಾದವು ಪ್ರಮುಖ ಚಿತ್ರಮಂದಿರಗಳು.

೧೯೪೯ರಲ್ಲಿ ಆರಂಭವಾದ ಶಿರಿನ್ ಟಾಕೀಸ್ ಕಾರವಾರದ ಪ್ರಪ್ರಥಮ ಚಿತ್ರಮಂದಿರ. ಇದನ್ನು ಕಟ್ಟಿಸಿದವರು ಎನ್. ಎನ್.ಜೋರ್ಕರ್. ಕಾರವಾರದಲ್ಲಿ ಹೆಚ್ಚು ಕನ್ನಡ ಚಿತ್ರಗಳನ್ನು ಪ್ರದರ್ಶಿಸುವ ಚಿತ್ರಮಂದಿರಗಳೆಂದರೆ ಗೀತಾಂಜಲಿ, ಅರ್ಜುನ್, ಪ್ರಸನ್ನ, ಪಲ್ಲವಿ ಇತ್ಯಾದಿ.

ಪ್ರಥಮ ಚಿತ್ರಮಂದಿರ ಎಂಬ ಹೆಗ್ಗಳಿಕೆಗೆ ಪಾತ್ರವಾದ ಶಿರಿನ್ ಈಗಿಲ್ಲ. ಈ ಚಿತ್ರಮಂದಿರದೊಂದಿಗೆ ನವರತ್ನ, ಸ್ಮಿತಾ, ಆದರ್ಶ, ಲಕ್ಷ್ಮಿ ಚಿತ್ರಮಂದಿರಗಳೂ ಮುಚ್ಚಿ ಹೋಗಿವೆ. ಇದಕ್ಕೆ ಪ್ರೇಕ್ಷಕರ ಸಂಖ್ಯೆ ಕಡಿಮೆಯಾದದ್ದು 'ವ್ಯವಹಾರ' ಕುಸಿದಿದ್ದು ಕಾರಣ. ಉಳಿದ ಚಿತ್ರಮಂದಿರಗಳ ಮಾಲೀಕರೂ ಈಗ ಆರ್ಥಿಕವಾಗಿ ಸಬಲರಾಗಿಲ್ಲ.

ಕಾರವಾರ ಜಿಲ್ಲೆಯ ಚಿತ್ರಮಂದಿರಗಳಲ್ಲಿ ಹೆಚ್ಚು ದಿನಗಳ ಕಾಲ ಪ್ರದರ್ಶನಗೊಂಡ ಚಿತ್ರಗಳೆಂದರೆ 'ನಮ್ಮ ಸಂಸಾರ', 'ಬೇಡರ ಕಣ್ಣಪ್ಪ', 'ಮಲ್ಲಮ್ಮನ ಪವಾಡ', 'ನಾ ನಿನ್ನ ಬಿಡಲಾರ' ಇತ್ಯಾದಿ.

ದಾವಣಗೆರೆ ಜಿಲ್ಲೆ: ೧೯೯೭ರಲ್ಲಿ ಅಸ್ತಿತ್ವಕ್ಕೆ ಬಂದ ದಾವಣಗೆರೆ ಜಿಲ್ಲೆ ಆರು ತಾಲೂಕುಗಳನ್ನು ಹೊಂದಿದೆ. ಈ ನೂತನ ಜಿಲ್ಲೆಯಲ್ಲಿ ಒಟ್ಟು ೫೫ ಚಿತ್ರಮಂದಿರಗಳಿವೆ. ಇವರಲ್ಲಿ ೨೫ ಖಾಯಂ, ಐದು ಅರೆಖಾಯಂ ಮತ್ತು ೨೪ ತಾತ್ಕಾಲಿಕ, ಜೊತೆಗೆ ಒಂದು ಸಂಚಾರಿ ಚಿತ್ರಮಂದಿರವೂ ಇದೆ.

ಈ ಜಿಲ್ಲೆಯಲ್ಲಿಯೂ ವೀಡಿಯೋ ಥಿಯೇಟರ್‌ಗಳ ಸಂಖ್ಯೆ ಅಧಿಕವಾಗಿದೆ. ಇಲ್ಲಿ ೧೭ ವೀಡಿಯೋ ಕೇಂದ್ರಗಳಿವೆ. ಜಿಲ್ಲೆಯ ಖಾಯಂ ಚಿತ್ರಮಂದಿರಗಳಲ್ಲಿ ೧೩ ಚಿತ್ರಮಂದಿರಗಳು ದಾವಣಗೆರೆ ತಾಲ್ಲೂಕೊಂದರಲ್ಲೇ ಇವೆ.

೧೯೪೭ರ ನವೆಂಬರ್ ೧೧ರಂದು ಆರಂಭವಾದ ಮೋತಿ ಟಾಕೀಸ್ ಜಿಲ್ಲೆಯ ಪ್ರಥಮ ಚಿತ್ರಮಂದಿರ. ಇದರಂತೆ ೧೯೫೧ರಲ್ಲಿ ಆರಂಭವಾದ ಅಶೋಕ, ೧೯೫೨ರಲ್ಲಿ ಪ್ರಾರಂಭವಾದ ಶಾಂತಿ ಆರಂಭಿಕ ಚಿತ್ರಮಂದಿರಗಳೆನಿಸಿಕೊಳ್ಳುತ್ತವೆ. ಇದರ ಹೊರತು ಪದ್ಮಾಂಜಲಿ, ಶಿವಾಜಿ, ಗೀತಾಂಜಲಿ, ತ್ರಿಶೂಲ್ ಮುಂತಾದ ಪ್ರಮುಖ ಚಿತ್ರಮಂದಿರಗಳಲ್ಲಿ ಕನ್ನಡ ಚಿತ್ರಗಳಿಗೆ ಆದ್ಯತೆ.

೧೯೭೩ರ ಏಪ್ರಿಲ್ ೪ರಂದು ಆರ್. ಹನುಮಂತಪ್ಪ ಮತ್ತು ಮಕ್ಕಳು ನಿರ್ಮಿಸಿದ ಪುಷ್ಪಾಂಜಲಿ ಚಿತ್ರಮಂದಿರವನ್ನು ದಾವಣಗೆರೆ ಜನತೆಗೆ ಅರ್ಪಿಸಲಾಯಿತು. ಆದರೆ ೧೯೭೪ರ ಏಪ್ರಿಲ್ ಹದಿನೈದಕ್ಕೆ ಮುಂದೂಡಲ್ಪಟ್ಟು ಉದ್ಘಾಟನೆಯಾದ ಪುಷ್ಪಾಂಜಲಿ ಚಿತ್ರಮಂದಿರದ ಆರಂಭದ ಚಿತ್ರ 'ಬಿಡುಗಡೆ'.

ಧಾರವಾಡ ಜಿಲ್ಲೆ: ಈ ಜಿಲ್ಲೆಯಲ್ಲಿ ಇರುವ ಚಿತ್ರಮಂದಿರಗಳ ಒಟ್ಟು ಸಂಖ್ಯೆ ೩೦. ಇವುಗಳಲ್ಲಿ ಖಾಯಂ ಚಿತ್ರ ಮಂದಿರಗಳ ಸಂಖ್ಯೆಯೇ ಅಧಿಕ. ಧಾರವಾಡ ಹಾಗೂ ಹುಬ್ಬಳ್ಳಿ ತಾಲ್ಲೂಕುಗಳು ಸೇರಿದಂತೆ ೨೬ ಖಾಯಂ ಚಿತ್ರಮಂದಿರಗಳಿವೆ. ಇದರಲ್ಲಿಯೂ ಹುಬ್ಬಳ್ಳಿಯ ಪಾಲು ಹೆಚ್ಚಾಗಿದೆ. ೧೮ ಚಿತ್ರಮಂದಿರಗಳು ಹುಬ್ಬಳ್ಳಿ ತಾಲ್ಲೂಕೊಂದರಲ್ಲೇ ಇವೆ. ಇನ್ನುಳಿದಿರುವ ನಾಲ್ಕು ತಾತ್ಕಾಲಿಕ ಚಿತ್ರ ಮಂದಿರಗಳು ಕುಂದಗೋಳ ಹಾಗು ನವಲಗುಂದ ತಾಲ್ಲೂಕಿನಲ್ಲಿವೆ.

ಧಾರವಾಡ ಜಿಲ್ಲೆಯಲ್ಲಿ ಆರಂಭವಾದ ಪ್ರಥಮ ಚಿತ್ರಮಂದಿರವೆಂದರೆ ಶ್ರೀ ವಿಜಯ ಟಾಕೀಸ್. ೧೯೨೯ರಲ್ಲಿ ಮೂಕಿ ಚಿತ್ರವೊಂದನ್ನು ಪ್ರದರ್ಶಿಸುವುದರ ಮೂಲಕ ಇದರ ಉದ್ಘಾಟನೆಯಾಯಿತು. ಈ ಚಿತ್ರಮಂದಿರವನ್ನು ಎನ್.ಎ.ಮುಧೋಳ್‌ಕರ್ ಮತ್ತು ಮಕ್ಕಳು ಕಟ್ಟಿಸಿದ್ದರು. ಆರಂಭಿಕ ಹೆಸರು ಅನ್ನಪೂರ್ಣ ಡ್ರಾಮಾ ಥಿಯೇಟರ್. ಅನಂತರ ವಿಜಯ ಟಾಕೀಸ್ ಎಂದು ಬದಲಾವಣೆಯಾಯ್ತು. ಇದರ ಮಾಲೀಕರಾದ ನಾರಾಯಣ್. ಎ. ಮುಧೋಳ್‌ಕರ್ ಅವರು ಉತ್ತರ ಕರ್ನಾಟಕದ ಪ್ರಪ್ರಥಮ ಚಿತ್ರ ನಿರ್ಮಾಪಕರಾಗಿಯೂ ಇತಿಹಾಸ ಮಾಡಿದರು. ಇವರು ತಯಾರಿಸಿದ ಕನ್ನಡ ಚಿತ್ರ 'ಚಿರಂಜೀವಿ'.

ಧಾರವಾಡದಲ್ಲಿ ಕನ್ನಡ ಚಿತ್ರಗಳನ್ನು ಪ್ರೇಕ್ಷಕರು ಉತ್ತಮವಾಗಿಯೇ ಸ್ವೀಕರಿಸುತ್ತಾರೆ. ವಿಜಯ, ಶ್ರೀನಿವಾಸ್, ಪದ್ಮ, ರೀಗಲ್ ಮುಂತಾದ ಚಿತ್ರಮಂದಿರಗಳು ಕನ್ನಡ ಚಿತ್ರಗಳ ಪ್ರದರ್ಶನಕ್ಕೆ ಒತ್ತು ನೀಡುತ್ತಿವೆ. 'ಭಕ್ತ ಸಿರಿಯಾಳ', 'ಒಡಹುಟ್ಟಿದವರು', 'ಹಳ್ಳಿ ಮೇಷ್ಟ್ರು', 'ರಾಮಾಚಾರಿ', 'ಪ್ರೇಮಲೋಕ' ಮೊದಲಾದ ಚಿತ್ರಗಳು ಇಲ್ಲಿ ಹೆಚ್ಚು ದಿನಗಳ ಪ್ರದರ್ಶನ ಕಂಡು ದಾಖಲೆ ನಿರ್ಮಿಸಿದ್ದವು.

ರಾಯಚೂರು ಜಿಲ್ಲೆ : ಈ ಜಿಲ್ಲೆಯಲ್ಲಿ ೧೦ ಖಾಯಂ ಚಿತ್ರಮಂದಿರಗಳು, ೧೯ ಅರೆ ಖಾಯಂ ಚಿತ್ರಮಂದಿರಗಳು ಹಾಗೂ ಐದು ಸಂಚಾರಿ ಚಿತ್ರಮಂದಿರಗಳೂ ಸೇರಿದಂತೆ ಒಟ್ಟು ೩೪ ಚಿತ್ರಮಂದಿರಗಳಿವೆ. ಇಲ್ಲಿ ಅರೆ ಖಾಯಂ ಚಿತ್ರಮಂದಿರಗಳ ಸಂಖ್ಯೆಯೇ ಅಧಿಕ. ಜಿಲ್ಲೆಯಲ್ಲಿ ಇರುವ ಒಟ್ಟು ೧೦ ಖಾಯಂ ಚಿತ್ರ ಮಂದಿರಗಳಲ್ಲಿ ರಾಯಚೂರು ತಾಲ್ಲೂಕೊಂದರಲ್ಲಿ ಆರು ಚಿತ್ರಮಂದಿರಗಳಿವೆ. ಉಳಿದ ಮೂರು ಮಾನ್ವಿ ಹಾಗೂ ಒಂದು ಲಿಂಗಸೂಗೂರಿನಲ್ಲಿದೆ.

ರಾಯಚೂರು ಜಿಲ್ಲೆಯ ಮೊಟ್ಟ ಮೊದಲ ಚಿತ್ರಮಂದಿರವೆಂಬ ಖ್ಯಾತಿಗೆ ಪಾತ್ರವಾಗಿರುವುದು ರವಿಮಹಲ್. ೧೯೪೮ ರಲ್ಲಿ ಇದು ಆರಂಭವಾಯಿತು. ರವಿಮಹಲ್ ಚಿತ್ರಮಂದಿರದ ಮೊದಲಿನ ಹೆಸರು ರಣಜಿತ್ ಟಾಕೀಸ್ ಎಂದಾಗಿತ್ತು. ಈ ಜಿಲ್ಲೆಯಲ್ಲಿ ಕನ್ನಡ ಚಿತ್ರಗಳನ್ನೇ ಹೆಚ್ಚಾಗಿ ಪ್ರದರ್ಶಿಸುವ ಚಿತ್ರಮಂದಿರಗಳೆಂದರೆ ಚಂದ್ರಕಾಂತ, ನೀಲಕಂಠ, ರವಿಮಹಲ್, ಹನುಮಾನ್ ಮುಂತಾದವು. ಇಲ್ಲಿ ಚಿತ್ರದ ಪ್ರಚಾರವನ್ನು ಪೋಸ್ಟರ್ ಅಂಟಿಸುವುದರೊಂದಿಗೆ ಜಟಕಾ ಬಂಡಿಯಲ್ಲೂ ಮಾಡಲಾಗುತ್ತದೆ. 'ನಂಜುಂಡಿ ಕಲ್ಯಾಣ', 'ಸಂಪತ್ತಿಗೆ ಸವಾಲ್', 'ವೀರಪ್ಪ ನಾಯಕ', 'ಉಪೇಂದ್ರ', 'ಸೂರಪ್ಪ' ಮೊದಲಾದ ಚಿತ್ರಗಳು ಹೆಚ್ಚು ದಿನಗಳ ಪ್ರದರ್ಶನ ಕಂಡಿವೆ. ಈಗ ಇಲ್ಲಿನ ಕೆಲವು ಚಿತ್ರಮಂದಿರಗಳು ಸ್ಟೀರಿಯೋ ಸೌಂಡ್ ಸಿಸ್ಟಮ್ ಹೊಂದಿವೆ.

ಕೊಪ್ಪಳ ಜಿಲ್ಲೆ: ಈ ಜಿಲ್ಲೆಯಲ್ಲಿ ಒಟ್ಟು ೪೩ ಚಿತ್ರಮಂದಿರಗಳಿವೆ. ಇಲ್ಲಿ ಅರೆಖಾಯಂ ಚಿತ್ರಮಂದಿರಗಳ ಸಂಖ್ಯೆಯೇ ಅಧಿಕ. ಇಲ್ಲಿ ೩೧ ಅರೆ ಖಾಯಂ ಚಿತ್ರಮಂದಿರಗಳಿದ್ದರೆ, ಖಾಯಂ ಚಿತ್ರಮಂದಿರಗಳ ಸಂಖ್ಯೆ ಕೇವಲ ಆರು. ಇನ್ನುಳಿದಂತೆ ಆರು ಸಂಚಾರಿ ಚಿತ್ರಮಂದಿರಗಳಿವೆ. ಈ ಜಿಲ್ಲೆಯ ಕೊಪ್ಪಳ ತಾಲ್ಲೂಕಿನಲ್ಲಿ ಎರಡು ಖಾಯಂ ಹಾಗೂ ಎಂಟು ಅರೆ ಖಾಯಂ ಚಿತ್ರಮಂದಿರಗಳಿವೆ. ಯಲಬುರ್ಗಾ ತಾಲ್ಲೂಕಿನಲ್ಲಿ ಐದು ಅರೆಖಾಯಂ ಹಾಗೂ ಒಂದು ಸಂಚಾರಿ ಚಿತ್ರಮಂದಿರವಿದೆ. ಕೊಪ್ಪಳ ಜಿಲ್ಲೆಯಲ್ಲಿ ಅತಿ ಹೆಚ್ಚು ಚಿತ್ರಮಂದಿರಗಳಿರುವ ತಾಲ್ಲೂಕೆಂದರೆ ಗಂಗಾವತಿ. ಇಲ್ಲಿ ಒಟ್ಟು ೧೭ ಚಿತ್ರಮಂದಿರಗಳಿವೆ. ಇದರಲ್ಲಿ ೧೨ ಅರೆಖಾಯಂ, ನಾಲ್ಕು ಖಾಯಂ ಹಾಗೂ ಒಂದು ಸಂಚಾರಿ ಚಿತ್ರಮಂದಿರಗಳು. ಕುಷ್ಟಗಿಯಲ್ಲಿ ನಾಲ್ಕು ಸಂಚಾರಿ ಚಿತ್ರಮಂದಿರಗಳು ಹಾಗೂ ನಾಲ್ಕು ಅರೆಖಾಯಂ ಚಿತ್ರಮಂದಿರಗಳಿವೆ.

೧೯೭೪ ರಲ್ಲಿ ಆರಂಭವಾದ ಸ್ಟಾರ್ ಚಿತ್ರಮಂದಿರವೇ ಕೊಪ್ಪಳ ಜಿಲ್ಲೆಯ ಪ್ರಥಮ ಚಿತ್ರಮಂದಿರ. ಕರ್ನಾಟಕದಲ್ಲಿ ಚಿತ್ರೋದ್ಯಮದ ಬೆಳವಣಿಗೆ ಆರಂಭವಾದ ಮೂರು ದಶಕಗಳ ನಂತರವೇ ಕೊಪ್ಪಳಕ್ಕೆ ಚಿತ್ರಮಂದಿರ ಕಾಲಿಟ್ಟಿದ್ದು. ಸ್ಟಾರ್ ಚಿತ್ರಮಂದಿರವನ್ನು ಕಟ್ಟಿಸಿದವರು ಎಸ್.ಎಸ್.ಹೆಚ್.ಖಾದರ್. ಹಿಂದಿ ಚಿತ್ರ 'ದೋಸ್ತಿ'ಯ ಪ್ರದರ್ಶನದೊಂದಿಗೆ ಸ್ಟಾರ್ ಚಿತ್ರಮಂದಿರ ಆರಂಭವಾಯಿತು.

ಮಹೇಶ್ವರಿ, ಸ್ಟಾರ್, ಶಾರದ, ಅಮರ್ ಮೊದಲಾದ ಚಿತ್ರಮಂದಿರಗಳು ಕನ್ನಡ ಚಿತ್ರಗಳನ್ನು ಹೆಚ್ಚಾಗಿ ಪ್ರದರ್ಶಿಸುತ್ತವೆ. 'ಜನುಮದ ಜೋಡಿ', 'ಸೂರ್ಯವಂಶ', 'ಹಬ್ಬ' ಯಶಸ್ವಿಯಾಗಿದೆ. ಕೇಬಲ್ ಹಾಗೂ ಟಿ.ವಿ ಮಾಧ್ಯಮದ ಪ್ರಭಾವದಿಂದಾಗಿ ಚಿತ್ರಮಂದಿರಗಳು ಪ್ರೇಕ್ಷಕರನ್ನು ಸೆಳೆಯುವಲ್ಲಿ ಸೋಲುತ್ತಿವೆ. ಮಾಲೀಕರು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ. ಹೀಗಾಗಿ ಇಲ್ಲಿ ಚಿತ್ರಮಂದಿರಗಳಿಗೆ ಆಧುನಿಕ ಸವಲತ್ತುಗಳನ್ನು ಅಳವಡಿಸುವುದು ಸಾಧ್ಯವಿಲ್ಲದಂತಾಗಿದೆ. ಇಲ್ಲಿಯೂ ಜಟಕಾ ಬಂಡಿಯಲ್ಲಿ ಪ್ರಚಾರ ಮಾಡುವ ಕ್ರಮ ರೂಢಿಯಲ್ಲಿದೆ.

ಕಲಬುರ್ಗಿ ಜಿಲ್ಲೆ : ಈ ಜಿಲ್ಲೆಯ ಒಟ್ಟು ಚಿತ್ರಮಂದಿರಗಳ ಸಂಖ್ಯೆಯಲ್ಲಿ ಖಾಯಂ ಚಿತ್ರಮಂದಿರಗಳ ಸಂಖ್ಯೆಯೇ ಅಧಿಕವಾಗಿದೆ. ಇಲ್ಲಿ ೨೦ ಖಾಯಂ ಚಿತ್ರಮಂದಿರಗಳಿವೆ. ಅರೆಖಾಯಂ ಚಿತ್ರ ಮಂದಿರಗಳ ಸಂಖ್ಯೆ ಕೇವಲ ಮೂರು, ಆದರೆ ೧೦ ಸಂಚಾರಿ ಚಿತ್ರಮಂದಿರಗಳಿವೆ ಹಾಗೂ ಎರಡು ತಾತ್ಕಾಲಿಕ ಚಿತ್ರಮಂದಿರಗಳು. ಹೀಗೆ ಕಲಬುರ್ಗಿ ಜಿಲ್ಲೆಯ ಒಟ್ಟು ಚಿತ್ರಮಂದಿರಗಳ ಸಂಖ್ಯೆ ೩೫. ಕಲಬುರ್ಗಿ ತಾಲ್ಲೂಕಿನಲ್ಲಿರುವ ಏಳು ಚಿತ್ರ ಮಂದಿರಗಳಲ್ಲಿ ಪ್ರಕಾಶ್, ನ್ಯೂ ಮದನ್, ಸಂತೋಷ್, ಸಂಗಮ್ ಮುಖ್ಯವಾದವು. ಇಲ್ಲಿನ ಲಕ್ಷ್ಮಿ ಚಿತ್ರಮಂದಿರ ಸ್ಥಗಿತಗೊಂಡಿದೆ.

೧೯೩೭ರಲ್ಲಿ ಆರಂಭವಾದ ಶ್ರೀ ಲಕ್ಷ್ಮಿ ಚಿತ್ರಮಂದಿರವೇ ಕಲಬುರ್ಗಿ ಜಿಲ್ಲೆಯ ಮೊದಲ ಚಿತ್ರಮಂದಿರ. ಖುಭ ಎನ್ನುವವರು ಇದನ್ನು ನಿರ್ಮಿಸಿದರು. ಈಗ ಇಲ್ಲಿ ಕನ್ನಡ ಚಿತ್ರಗಳನ್ನು ಪ್ರದರ್ಶಿಸುವ ಚಿತ್ರಮಂದಿರಗಳೆಂದರೆ ಮಿನಿ ಸಂತೋಷ್, ತ್ರಿವೇಣಿ, ಮದನ್. ಈ ಜಿಲ್ಲೆಯಲ್ಲಿ ಯಶಸ್ವಿಯಾದ ಚಿತ್ರಗಳು 'ಸಂಪತ್ತಿಗೆ ಸವಾಲ್', 'ಶ್ರೀ ಕೃಷ್ಣ ದೇವರಾಯ', 'ಬಂಗಾರದ ಮನುಷ್ಯ', 'ಸತ್ಯ ಹರಿಶ್ಚಂದ್ರ' ಇತ್ಯಾದಿ. ಇಲ್ಲಿಯೂ ಕೇಬಲ್ ಹಾಗೂ ಟಿ.ವಿಯಿಂದ ಚಿತ್ರಮಂದಿರಗಳು ಸೊರಗುತ್ತಿವೆ. ಜಟಕಾ ಬಂಡಿಯಲ್ಲಿ ಪ್ರಚಾರ ಮಾಡುವ ಕ್ರಮ ಇಲ್ಲಿ ರೂಢಿಯಲ್ಲಿದೆ.

ಬೀದರ್ ಜಿಲ್ಲೆ : ಈ ಜಿಲ್ಲೆಯಲ್ಲಿ ಒಟ್ಟು ೧೮ ಚಿತ್ರಮಂದಿರಗಳಿವೆ. ಇವುಗಳಲ್ಲಿ ೧೫ ಖಾಯಂ ಚಿತ್ರಮಂದಿರಗಳು, ಒಂದು ಅರೆಖಾಯಂ ಮತ್ತು ಎರಡು ಸಂಚಾರಿ ಚಿತ್ರಮಂದಿರಗಳು. ಕಮಲ ಹಾಗೂ ಲಕ್ಷ್ಮಿ ಎಂಬೆರಡು ಸಂಚಾರಿ ಚಿತ್ರಮಂದಿರಗಳಲ್ಲಿ ಕಮಲ ಮುಚ್ಚಿಹೋಗಿದೆ. ಖಾಯಂ ಚಿತ್ರಮಂದಿರಗಳಲ್ಲಿ ಜವಾಹರ್ ಕೂಡ ಸಗಿತಗೊಂಡಿದೆ. ಪ್ರಮುಖ ಖಾಯಂ ಚಿತ್ರಮಂದಿರಗಳು ಬೀದರ್ ತಾಲ್ಲೂಕಿನಲ್ಲೇ ಸ್ಥಾಪನೆಗೊಂಡಿದೆ. ಇಲ್ಲಿ ಎಂಟು ಖಾಯಂ ಚಿತ್ರಮಂದಿರಗಳಿವೆ. ಇವುಗಳಲ್ಲಿ ಗುಲ್ಜಾರ್, ಚಿತ್ರಲೇಖಾ, ದೀಪಕ್, ಸಪನಾ, ಸಂಗಮ್ ಮೊದಲಾದವು ಮುಖ್ಯವಾದವು.

ಬೀದರ್ ಜಿಲ್ಲೆಯ ಮೊದಲ ಚಿತ್ರಮಂದಿರವೆಂದು ಇತಿಹಾಸ ಬರೆದದ್ದು ಗುಲ್ಜಾರ್ ಚಿತ್ರಮಂದಿರ. ಇದನ್ನು ಮಹಿಪಾಲ್ ಸಿಂಗ್ ಪವಾರ್ ನಿರ್ಮಿಸಿದರು. ಈಗ ಈ ಜಿಲ್ಲೆಯಲ್ಲಿ ಕನ್ನಡ ಚಿತ್ರಗಳಿಗೆ ಆದ್ಯತೆ ನೀಡುವ ಚಿತ್ರಮಂದಿರಗಳೆಂದರೆ ದೀಪಕ್, ಸಪನಾ, ಫಿರೋಜ್, ಗುಲ್ಜಾರ್, ಮಿನಿ ದೀಪಕ್ ಮುಂತಾದವು. ಕೇಬಲ್ ಹಾಗೂ ಟಿ.ವಿ. ಮಾಧ್ಯಮದ ಹೊಡೆತದಿಂದಾಗಿ ಚಿತ್ರಮಂದಿರಗಳು ಆರ್ಥಿಕವಾಗಿ ಸಂಕಷ್ಟ ಸ್ಥಿತಿಯಲ್ಲಿವೆ. ಆದರೂ 'ತವರಿನ ತೊಟ್ಟಿಲು', 'ರಣಧೀರ', 'ಪ್ರೇಮಲೋಕ', 'ಎರಡು ಕನಸು', 'ಶಂಕರ್ ಗುರು', 'ಸಿಪಾಯಿ', 'ಚೆಲುವ' ಮೊದಲಾದ ಚಿತ್ರಗಳು ಇಲ್ಲಿ ಯಶಸ್ವಿ ಪ್ರದರ್ಶನ ಕಂಡಿವೆ.

ಮಂಡ್ಯ ಜಿಲ್ಲೆ : ರಾಜ್ಯದ ಚಲನಚಿತ್ರ ಮಾರುಕಟ್ಟೆಯಲ್ಲಿ ಮಂಡ್ಯ ಜಿಲ್ಲೆಗೊಂದು ಪ್ರಮುಖ ಸ್ಥಾನವಿದೆ. ಇಲ್ಲಿ ಚಿತ್ರಮಂದಿರಗಳ ಸಂಖ್ಯೆಯೂ ಅಧಿಕವಾಗಿದೆಯಲ್ಲದೆ ಇಡೀ ಜಿಲ್ಲೆಯಲ್ಲಿ ಕನ್ನಡ ಚಿತ್ರಗಳಿಗೆ ಆದ್ಯತೆ ನೀಡಲಾಗುತ್ತದೆ. ಅಂಬರೀಷ್ ಇದೇ ಜಿಲ್ಲೆಯಿಂದ

ಬಂದುದರಿಂದ ಅಲ್ಲಿನ ಜನರಿಗೆ ಸಿನಿಮಾ ಬಗ್ಗೆ ಹೆಚ್ಚಿನ ಆಸಕ್ತಿ ಬೆಳೆಯಲು ಕಾರಣವಾಯಿತೆನ್ನಬಹುದು.

ಮಂಡ್ಯ ಜಿಲ್ಲೆಯಲ್ಲಿ ೨೯ ಖಾಯಂ ಚಿತ್ರಮಂದಿರಗಳಿವೆ. ಸಂಜಯ್, ಸಿದ್ಧಾರ್ಥ, ಗುರುಶ್ರೀ, ಮಹಾವೀರ್ ಮೊದಲಾದವು ಮುಖ್ಯವಾದವು. ಧರ್ಮಶ್ರೀ ೧೯೯೮ರಲ್ಲೂ ರಾಧಾಕೃಷ್ಣ ಚಿತ್ರಮಂದಿರ ೧೯೯೯ರಲ್ಲೂ ಸ್ಥಗಿತಗೊಂಡವು. ಎಂಟು ಅರೆಖಾಯಂ ಚಿತ್ರಮಂದಿರಗಳಿದ್ದು, ಖಾಯಂ ಹಾಗೂ ತಾತ್ಕಾಲಿಕ ಚಿತ್ರಮಂದಿರಗಳ ಸಂಖ್ಯೆಗೆ ಹೋಲಿಸಿದರೆ ತೀರಾ ಕಡಿಮೆ. ಅವರಲ್ಲೂ ದಯಾನಂದ ಎಂಬ ಅರೆ ತಾತ್ಕಾಲಿಕ ಚಿತ್ರಮಂದಿರವೊಂದು ಸ್ಥಗಿತಗೊಂಡಿದೆ. ಮಂಡ್ಯ ಜಿಲ್ಲೆಯಲ್ಲಿ ಹೇರಳವಾಗಿರುವುದು ತಾತ್ಕಾಲಿಕ ಚಿತ್ರಮಂದಿರಗಳು. ಮೊದಲಿದ್ದ ಇಂತಹ ೫೦ ಚಿತ್ರಮಂದಿರಗಳ ಪೈಕಿ ೧೭ ಚಿತ್ರಮಂದಿರಗಳು ಈಗ ಪ್ರದರ್ಶನ ನೀಡುತ್ತಿಲ್ಲ. ಉಳಿದಂತೆ ಏಳು ಸಂಚಾರಿ ಚಿತ್ರಮಂದಿರಗಳಿದ್ದರೂ ಅವುಗಳಲ್ಲಿಯೂ ನಾಲ್ಕು ಮುಚ್ಚಿ ಹೋಗಿವೆ. ಈ ಜಿಲ್ಲೆಯಲ್ಲಿ ಇಷ್ಟು ಚಿತ್ರಮಂದಿರಗಳ ಭರಾಟೆಯ ನಡುವೆಯೂ ಐದು ವೀಡಿಯೋ ಕೇಂದ್ರಗಳಿವೆ.

ಮಂಡ್ಯ ಜಿಲ್ಲೆಯಲ್ಲಿ ಪ್ರಥಮ ಬಾರಿಗೆ ಆರಂಭವಾಗಿದ್ದು ಸಂಜಯ ಚಿತ್ರಮಂದಿರ. ೧೯೪೭ನೇ ಸೆಪ್ಟಂಬರ್ ೨೬ ರಂದು ಹೆಚ್.ಸಿ. ಚನ್ನಯ್ಯನವರು ಈ ಚಿತ್ರಮಂದಿರವನ್ನು ಆರಂಭಿಸಿದರು. ಇದಕ್ಕೆ ಆರಂಭದಲ್ಲಿ ಮಂಡ್ಯ ಚಿತ್ರಮಂದಿರವೆಂದೇ ಹೆಸರಿಡಲಾಗಿತ್ತು. ನಂತರ ಹೆಸರು ಬದಲಾಯಿತು.

ಈ ಜಿಲ್ಲೆಯಲ್ಲಿ ಕನ್ನಡ ಚಿತ್ರಗಳಿಗೆ ಪ್ರಾಮುಖ್ಯವಿದ್ದು ಇಲ್ಲಿ 'ರಾಜ ಬೀದಿ', 'ನಂಜುಂಡಿ ಕಲ್ಯಾಣ', 'ಜೀವನ ಚೈತ್ರ', 'ಬಂಗಾರದ ಮನುಷ್ಯ', 'ಜನುಮದ ಜೋಡಿ', 'ಸಪ್ತಪದಿ ಅಪ್ಪಣ್ಣ', 'ಕುಂಕುಮ ಭಾಗ್ಯ', 'ರಥ ಸಪ್ತಮಿ', 'ಮನಮೆಚ್ಚಿದ ಹುಡುಗಿ', 'ಓಂ' ಮೊದಲಾದ ಚಿತ್ರಗಳು ದಾಖಲೆ ಎನಿಸುವಂಥ ಪ್ರದರ್ಶನ ಕಂಡಿವೆ. ಕೇಬಲ್ ಹಾಗೂ ಟಿ.ವಿ. ಮಾಧ್ಯಮದ ಹಾವಳಿ ಇಲ್ಲಿಯೂ ಇದ್ದರೂ ಚಿತ್ರಮಂದಿರಗಳು ಡಿ.ಟಿ.ಎಸ್ ಮುಂತಾದ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ಉತ್ತಮ ರೀತಿಯಲ್ಲಿ ನಡೆಯುತ್ತಿವೆ.

ಬಿಜಾಪುರ ಜಿಲ್ಲೆ : ಈ ಜಿಲ್ಲೆಯಲ್ಲಿ ಚಿತ್ರಮಂದಿರಗಳ ಸಂಖ್ಯೆ ಕಡಿಮೆ. ಇಲ್ಲಿ ೧೦ ಖಾಯಂ ಚಿತ್ರಮಂದಿರಗಳು, ಐದು ಅರೆ ಖಾಯಂ ಚಿತ್ರಮಂದಿರಗಳು, ೧೦ ತಾತ್ಕಾಲಿಕ ಚಿತ್ರಮಂದಿರಗಳು ಹಾಗೂ ಎರಡು ಸಂಚಾರಿ ಚಿತ್ರಮಂದಿರಗಳಿವೆ. ಉಳಿದಂತೆ ಆರು ವೀಡಿಯೊ ಥಿಯೇಟರ್‌ಗಳೂ ಇವೆ. ಬಿಜಾಪುರ ನಗರ ಪ್ರದೇಶದಲ್ಲಿನ ಪ್ರಮುಖ ಚಿತ್ರಮಂದಿರಗಳು ಅಮೀರ್, ಅಲಂಕಾರ್, ಜಯಶ್ರೀ, ಡ್ರೀಮ್‌ಲ್ಯಾಂಡ್ ಮುಂತಾದವು.

ಇಲ್ಲಿ ಕನ್ನಡ ಚಿತ್ರಗಳನ್ನು ಪ್ರದರ್ಶಿಸುವ ಚಿತ್ರಮಂದಿರಗಳೆಂದರೆ ತ್ರಿಪುರ ಸುಂದರಿ, ಲಕ್ಷ್ಮಿ, ಅಲಂಕಾರ್, ಅಮೀರ್ ಮುಂತಾದವುಗಳು. ಚಿತ್ರಮಂದಿರಗಳ ಮಾಲೀಕರು ಆರ್ಥಿಕವಾಗಿ ಸಬಲರಾಗಿಯೇ ಇದ್ದಾರೆ. 'ಬೇಡರ ಕಣ್ಣಪ್ಪ', 'ಎಲ್ಲಮ್ಮ', 'ಕರುಳಿನ ಕೂಗು', 'ಕರುಣೆಯೇ ಕುಟುಂಬದ ಕಣ್ಣು', 'ಬಾಲ ನಾಗಮ್ಮ', 'ರಾಘವೇಂದ್ರ ಮಹಾತ್ಮೆ' ಮುಂತಾದ ಚಿತ್ರಗಳು ಇಲ್ಲಿ ಯಶಸ್ವಿ ಪ್ರದರ್ಶನ ಕಂಡಿವೆ.

ಬಿಜಾಪುರ ಜಿಲ್ಲೆಯ ಚಿತ್ರಮಂದಿರಗಳ ಇತಿಹಾಸದಲ್ಲಿ ತ್ರಿಪುರಸುಂದರಿ ಚಿತ್ರಮಂದಿರಕ್ಕೆ ವಿಶೇಷ ಸ್ಥಾನವಿದೆ. ಇದು ಜಿಲ್ಲೆಯ ಮೊದಲ ಚಿತ್ರಮಂದಿರವೂ ಹೌದು. ೧೯೦೦ರಲ್ಲಿ ಕಾಶೀನಾಥ ದತ್ತ ಭತ್ರೆ ಅವರು ಇದನ್ನು ಸ್ಥಾಪಿಸಿದರು. ಈ ಚಿತ್ರಮಂದಿರದ ಹಿನ್ನೆಲೆಯೂ ಸ್ವಾರಸ್ಯಕರವಾಗಿದೆ.

ಪ್ರದರ್ಶನ ಕ್ಷೇತ್ರದಲ್ಲಿ ಈ ಚಿತ್ರಮಂದಿರ ನೂರು ವರ್ಷಗಳನ್ನು ಪೂರೈಸಿದೆ. ಮೊದಲು ಇದು ನರಸಿಂಹ ಸರ್ಕಸ್ ಥಿಯೇಟರ್ ಆಗಿತ್ತು. ನಂತರ ೧೯೩೭ರಲ್ಲಿ ಇದೇ ಥಿಯೇಟರ್‌ಗೆ ತ್ರಿಪುರಸುಂದರಿ ಚಿತ್ರಮಂದಿರ ಎಂದು ಮರು ನಾಮಕರಣ ಮಾಡಲಾಯಿತು. ಅಂದಿನಿಂದ ಇಂದಿನವರೆಗೆ ಕಾಲಕಾಲದ ಅಭಿರುಚಿಗೆ ತಕ್ಕಂತೆ ಈ ಥಿಯೇಟರ್ ಸಾಕಷ್ಟು ಬದಲಾವಣೆಗಳನ್ನು ಕಂಡಿದೆ. ಅನೇಕ ಕ್ರಿಯಾಶೀಲ ಚಟುವಟಿಕೆಗಳಿಗೆ ವೇದಿಕೆಯಾಗಿದೆ. ೧೯೨೪ರಲ್ಲಿ ರಂಗಭೂಮಿಯಾಗಿ, ೧೯೩೭ರಲ್ಲಿ ಚಿತ್ರಮಂದಿರವಾಗಿ ಜನರನ್ನು ರಂಜಿಸಿದೆ. ಸುಮಾರು ಹನ್ನೆರಡು ವರ್ಷಗಳ ಕಾಲ ರಂಗಭೂಮಿ ಚಟುವಟಿಕೆಗೆ ಮೀಸಲಾಗಿದ್ದ ಈ ಮಂದಿರದಲ್ಲಿ ಆಗ ಗುಬ್ಬಿ ವೀರಣ್ಣನವರು, ಸುಬ್ಬಯ್ಯನಾಯ್ಡು, ಗರೂಡ ಸದಾಶಿವರಾಯರು, ಬಾಲಗಂಧರ್ವ, ಸೊಹ್ರಾಬ್ ಮೋದಿ ಮೊದಲಾದವರು ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದ್ದರು. ಗಾನಗಂಧರ್ವರಾದ ಹೀರಾಬಾಯಿ ಬಡೋದೇಕರ್ ಮತ್ತು ಅಬ್ದುಲ್ ಕರೀಮ್ ಖಾನ್ ಮುಂತಾದವರು ಸಂಗೀತ ರಸಿಕರನ್ನು ಇದೇ ಮಂದಿರದಲ್ಲಿ ತಣಿಸಿದ್ದರು. ಕೆ.ಸಿ.ಲಾಲ್, ಘೋಷ್, ರಘುವೀರರ ಜಾದೂ ಪ್ರದರ್ಶನಗಳೂ ಇಲ್ಲಿ ನಡೆದಿದ್ದವು.

ಎಲ್ಲಕ್ಕಿಂತ ಮುಖ್ಯವಾಗಿ ರಾಷ್ಟ್ರಪಿತ ಗಾಂಧೀಜಿಯವರು ಬಿಜಾಪುರಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಇದೇ ವೇದಿಕೆಯ ಮೇಲೆ ಅವರನ್ನು ಸನ್ಮಾನಿಸಲಾಗಿತ್ತು. ಇಂಥ ಹಲವಾರು ಕಾರಣಗಳಿಗಾಗಿ ತ್ರಿಪುರಸುಂದರಿ ಚಿತ್ರಮಂದಿರ ಬಿಜಾಪುರ ಜಿಲ್ಲೆಯಲ್ಲಿ ಪ್ರಮುಖ ಸ್ಥಾನ ಪಡೆಯುತ್ತದೆ.

ಚಿತ್ರದುರ್ಗ ಜಿಲ್ಲೆ : ಈ ಜಿಲ್ಲೆಯಲ್ಲಿ ೨೩ ಖಾಯಂ ಚಿತ್ರಮಂದಿರಗಳಿವೆ. ತಾತ್ಕಾಲಿಕ, ಅರೆಖಾಯಂ ಚಿತ್ರಮಂದಿರಗಳು ೪೦ರ ಸಂಖ್ಯೆಯಲ್ಲಿ ಇವೆ. ಬಸವೇಶ್ವರ, ಪ್ರಸನ್ನ, ರೂಪವಾಣಿ, ಶಂಕರ್, ಯೂನಿಯನ್, ವೆಂಕಟೇಶ್ವರ ಖಾಯಂ ಚಿತ್ರಮಂದಿರಗಳು ಚಿತ್ರದುರ್ಗದಲ್ಲೇ ಇವೆ. ನಗರದ ದಾವಣಗೆರೆಯಲ್ಲಿ (ಈಗ ಜಿಲ್ಲೆಯಾಗಿದೆ) ಅರುಣ, ಅಶೋಕ, ಗೀತಾಂಜಲಿ, ಮೋತಿ, ಪದ್ಮಾಂಜಲಿ, ಪುಷ್ಪಾಂಜಲಿ, ಶಾಂತಿ, ಶಿವಾಲಿ, ತ್ರಿಶೂಲ್, ಅಮಿತ್ ಮೊದಲಾದ ಚಿತ್ರಮಂದಿರಗಳಿವೆ. ಹಿರಿಯೂರು, ಚಿಕ್ಕಜಾಜೂರು, ಹರಿಹರ ಮೊದಲಾದ ಪ್ರಮುಖ ಪ್ರದೇಶಗಳಲ್ಲಿ ಸುಸಜ್ಜಿತ ಚಿತ್ರಮಂದಿರಗಳಿವೆ. ಕನ್ನಡ ಚಿತ್ರಗಳನ್ನು ಹೆಚ್ಚಾಗಿ ಪ್ರದರ್ಶಿಸುತ್ತವೆ. ಈ ಜಿಲ್ಲೆ ಕನ್ನಡ ಚಿತ್ರಗಳ ಪ್ರದರ್ಶನ ಕನ್ನಡ ಕಲಾವಿದರನ್ನು ಕರೆಸಿ ಗೌರವಿಸುವುದೇ ಮೊದಲಾದ ಅನೇಕ ಕನ್ನಡಪರ ಕೆಲಸಗಳಲ್ಲಿ ನಿರತವಾಗಿರುತ್ತದೆ.

ಕೋಲಾರ ಜಿಲ್ಲೆ : ಎಪ್ಪತ್ತೆಂಟು ಪ್ರದರ್ಶನ ಮಂದಿರಗಳಿವೆ. ಅವುಗಳಲ್ಲಿ ೩೮ ಖಾಯಂ ಆದರೆ, ಅರೆಖಾಯಂ-ಸಂಚಾರಿ ಸೇರಿ ೪೦ ಚಿತ್ರಮಂದಿರಗಳಿವೆ.

ಕೋದಂಡ ರಾಮಯ್ಯರ್ ಅವರು ೧೯೪೭ರಲ್ಲಿ ಪ್ರಾರಂಭಿಸಿದ ಶಾರದಾ ಟಾಕೀಸ್ ಅತ್ಯಂತ ಹಳೆಯದು. ಪಲ್ಲವಿ, ವೆಂಕಟೇಶ್ವರ, ಪ್ರಭಾ ಮೊದಲಾದವು ಹೆಸರಾಂತ ಚಿತ್ರಮಂದಿರಗಳು. ಜಿಲ್ಲೆಯ ಚಿಂತಾಮಣಿ, ಬಂಗಾರಪೇಟೆ, ರಾಬರ್ಟ್‌ಸನ್ ಪೇಟೆ, ಬಾಗೇಪಲ್ಲಿ, ಬೇತಮಂಗಲ, ಕೆ.ಜಿ.ಎಫ್, ಚಿಕ್ಕಬಳ್ಳಾಪುರ, ಗೌರಿಬಿದನೂರು, ಮಾಲೂರು, ಮುಳಬಾಗಿಲು ಮೊದಲಾದ ಪ್ರಮುಖ ಸ್ಥಳಗಳಲ್ಲಿ ಸುಸಜ್ಜಿತ ಚಿತ್ರಮಂದಿರಗಳಿವೆ. ಚಿಂತಾಮಣಿಯ ವೆಂಕಟೇಶ್ವರ ಟೂರಿಂಗ್ ಟಾಕೀಸ್ ಅತ್ಯಂತ ಹಿರಿದು ಮತ್ತು ಇಲ್ಲಿ ಮೊದಲು ಪ್ರದರ್ಶಿಸಿದ ಚಿತ್ರ 'ಗುಣಸುಂದರಿ ಕಥಾ' ಎನ್ನುತ್ತಾರೆ.

ಕನ್ನಡ ರಾಜ್ಯದ ಅಂಚಿನಲ್ಲಿದೆ. ಬಹುತೇಕ ಕನ್ನಡೇತರರೇ ಇದ್ದಾರೆ. ಕನ್ನಡಿಗರೂ ಹೊಂದಿಕೊಂಡು ಬಿಟ್ಟಿದ್ದಾರೆ. ಮೊದಲೆಲ್ಲ ಕನ್ನಡ ಚಿತ್ರಗಳು ಸಂಖ್ಯೆಯಲ್ಲಿ ಕಡಿಮೆ. ಕಡಿಮೆ ಹಣಕ್ಕೆ ಬೇರೆ ಭಾಷೆಯ ಚಿತ್ರಗಳು ಸಿಗುತ್ತಿದ್ದವು. ಅದೇ ನೋಡಿ ಅಭ್ಯಾಸವೂ ಆಗಿಹೋಗಿದೆ. ಕನ್ನಡ ಚಿತ್ರಗಳನ್ನು ಪ್ರೇಕ್ಷಕರು ಕೇಳಲಿಲ್ಲ. ಹೆಚ್ಚು ಗಳಿಕೆ ಇಲ್ಲ ಎಂಬ ಕಾರಣಕ್ಕೆ ಕನ್ನಡ ನಿರ್ಮಾಪಕರೂ ಚಿತ್ರ ಪ್ರದರ್ಶಿಸಲು ಅಂಜುತ್ತಿದ್ದರು. ಗಣಿಗಾರಿಕೆಯ ಕಾರಣ ವಲಸೆ ಬಂದ ಜನರಿಂದಾಗಿ ಮತ್ತಷ್ಟು ಕನ್ನಡೇತರರೇ ತುಂಬಿಹೋದರು. ಮುಖ್ಯ ಸಂಗತಿಯೆಂದರೆ ಕನ್ನಡ ಚಳವಳಿಗಳ ಅಬ್ಬರವಿದ್ದಾಗ ಒಂದೋ ಎರಡೋ ಪ್ರದರ್ಶಿತವಾಗುತ್ತಿದ್ದ ಕನ್ನಡ ಚಿತ್ರ ಪ್ರದರ್ಶನವೂ ನಿಂತುಹೋಯಿತು. ಕೆಲವು ಹಿತಾಸಕ್ತಿಗಳು ಕನ್ನಡ ಚಿತ್ರ ಪ್ರದರ್ಶನ ತಡೆದವು. ಈ ಬಗ್ಗೆ ಸಾಹಿತ್ಯ ಸಮ್ಮೇಳನದಲ್ಲಿ ಪ್ರಶ್ನಿಸಲಾಯಿತು. ವ್ಯವಸ್ಥಿತ ಆಂದೋಲನವನ್ನೇ ಕನ್ನಡಪರ ಸಂಘಟನೆಗಳು ಕೈಗೆತ್ತಿಕೊಂಡವು. ಅವಲ್ಲದೆ ಹಿನ್ನೆಲೆಯಲ್ಲಿ ಕನ್ನಡ ಚಿತ್ರಗಳಿಗೂ ಪ್ರದರ್ಶನಾವಕಾಶ ಸಾಧ್ಯವಾಗಿದೆ. ಎಲ್ಲವೂ ತೃಪ್ತಿದಾಯಕವಂತೂ ಅಲ್ಲ.

(ಚಿತ್ರ ೭) ೧೯೨೦ರಲ್ಲಿ ಮೂಕಿ ಚಿತ್ರಗಳ ಪ್ರದರ್ಶನದೊಂದಿಗೆ ಆರಂಭವಾದ ಮೈಸೂರಿನ ಶ್ರೀಕೃಷ್ಣ ಟಾಕೀಸ್ ಈಗ ವಾಣಿಜ್ಯ ಸಂಕೀರ್ಣವಾಗಿದೆ. ನಾಲ್ವಡಿ ಕೃಷ್ಣರಾಜ ಒಡೆಯರ ಗೌರವಾರ್ಥವಾಗಿ ಚಿತ್ರಮಂದಿರಕ್ಕೆ ಶ್ರೀಕೃಷ್ಣ ಎಂದು ಹೆಸರಿಸಲಾಯಿತು.

(ಚಿತ್ರ ೮) ೧೯೨೦ರಲ್ಲಿ ಆರಂಭವಾದ ಮೈಸೂರಿನ ಒಲಂಪಿಯಾ ಚಿತ್ರಮಂದಿರದ ಈಗಿನ ರೂಪ

ಚಿಕ್ಕಮಗಳೂರು ಜಿಲ್ಲೆ : ಈ ಜಿಲ್ಲೆಯಲ್ಲಿ ೨೩ ಖಾಯಂ ಚಿತ್ರಮಂದಿರಗಳಿವೆ. ಅರೆಖಾಯಂ, ಸಂಚಾರಿ ಸೇರಿ ೧೮ ಚಿತ್ರಮಂದಿರಗಳಿವೆ. ಅತ್ಯಂತ ಹಳೆಯ ಚಿತ್ರಮಂದಿರ ಅಬ್ದುಲ್ಲಾ. ಮುಂದೆ ಇದು ಕ್ರಮವಾಗಿ ಬೇಬಿ ಥಿಯೇಟರ್, ಜ್ಯೋತಿ, ಸೆಂಟ್ರಲ್ ಟಾಕೀಸ್ ಎಂದು ಬದಲಾಯಿತು. ೧೯೩೦ರಲ್ಲೇ ಪ್ರಾರಂಭವಾದ ಚಿತ್ರಮಂದಿರದಲ್ಲಿ ಮೊದಲು ಮೂಕಿಚಿತ್ರವೊಂದನ್ನು ಪ್ರದರ್ಶಿಸಲಾಗಿತ್ತು. ೮೦೦ ಆಸನಗಳಿದ್ದವು. ಗಳಿಕೆಯಲ್ಲಿ ನಷ್ಟವುಂಟಾಗಿದ್ದರಿಂದ ೧೯೮೯-೯೦ರಲ್ಲಿ ಚಿತ್ರಮಂದಿರ ಪ್ರದರ್ಶನಗಳನ್ನು ನಿಲ್ಲಿಸಿತು.

೧೯೪೮ರಲ್ಲಿ ಪ್ರಾರಂಭವಾದ ಗುರುನಾಥ ಟಾಕೀಸ್ ಕೂಡಾ ಹಳೆಯದು. ಅನಂತರ ಇದು ಗುರುನಾಥ ಡಿಲಕ್ಸ್ ಥಿಯೇಟರ್ ಎಂದು ಬದಲಾಯಿತು. ಕಿಟ್ಟಪ್ಪಶೆಟ್ಟಿ, ಅಣ್ಣಪ್ಪಶೆಟ್ಟಿ, ನಾಗರಾಜಶೆಟ್ಟಿ, ಪಾರ್ಶ್ವನಾಥ್ ಮತ್ತು ರಾಮನಾಥ್ ಚಿತ್ರಮಂದಿರದ ಮಾಲೀಕರಾಗಿದ್ದರು. ೫೫೦ ಆಸನಗಳಿದ್ದ ಈ ಚಿತ್ರಮಂದಿರದಲ್ಲಿ ಅತಿ ಹೆಚ್ಚು ದಿನ (ಒಂದು ವರ್ಷ ಕಾಲ) ಪ್ರದರ್ಶನಗೊಂಡ ಚಿತ್ರ 'ಮನೆಯೇ ಮಂತ್ರಾಲಯ'. ೩೦೦ ದಿನಗಳ ಕಾಲ ಪ್ರದರ್ಶನ ಕಂಡ ಮತ್ತೊಂದು ಚಿತ್ರ 'ಆನಂದ್'.

೫೦೦ ಆಸನಗಳಿರುವ ರತ್ನಮಾಲಾ, ಮಿಲನ್ ಮೊದಲಾದವು ಕನ್ನಡ ಚಿತ್ರ ಪ್ರದರ್ಶನದಲ್ಲಿ ಮುಂದಿವೆ. ಗುರುನಾಥ ಚಿತ್ರಮಂದಿರದ ಮಾಲೀಕರಲ್ಲಿ ಒಬ್ಬರಾದ ನಾಗರಾಜಶೆಟ್ಟರು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷರೂ ಆಗಿ ಒಂದು ಅವಧಿಗೆ ಸೇವೆ ಸಲ್ಲಿಸಿದರು. ಇವರ ಮಕ್ಕಳಾದ ಪಾರ್ಶ್ವನಾಥ್, ರಾಮನಾಥ್ ಕೂಡಾ ಚಿತ್ರನಿರ್ಮಾಣ, ವಿತರಣೆ, ಪ್ರದರ್ಶನಗಳಲ್ಲಿ ಆಸಕ್ತಿ ಹೊಂದಿ ಮುನ್ನಡೆದರು.

ಚಿಕ್ಕಮಗಳೂರಿನಲ್ಲಿರುವ ಶ್ರೀಲೇಖಾ, ಪ್ರಭಾ, ನಾಗಲಕ್ಷ್ಮಿ, ಅನುಪಮ ಕೂಡ ಸುಸಜ್ಜಿತ ಚಿತ್ರಮಂದಿರಗಳು. ತರೀಕೆರೆಯ ವಿನಾಯಕ, ಮೂಡಿಗೆರೆಯ ಸಂದೇಶ್, ಕಡೂರಿನ ವೆಂಕಟೇಶ್ವರ ಮತ್ತು ಮಲ್ಲಿಕಾರ್ಜುನ ಹಾಗೂ ಬೀರೂರಿನ ಎರಡು ಚಿತ್ರಮಂದಿರಗಳಾದ ಶೃಂಗಾರ್ ಮತ್ತು ತ್ರಿನೇತ್ರ ಕೂಡಾ ಆಸನಗಳು, ವಿಶಾಲವಾದ ಸ್ಥಳ, ಶುಚಿಗೆ ಹೆಸರಾಗಿವೆ.

ಇದಿಷ್ಟು ಜಿಲ್ಲಾವಾರು ವಿಭಾಗದ ಚಿತ್ರಮಂದಿರಗಳ ಸಂಖ್ಯೆ ಮತ್ತು ಅವುಗಳ ಒಂದಷ್ಟು ಇತಿಹಾಸವಾಯಿತು. ಇನ್ನು ಮುಂದೆ ಕನ್ನಡ ಚಿತ್ರ ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸಿದ ಮೈಸೂರು ಜಿಲ್ಲೆಯ ಚಿತ್ರಮಂದಿರಗಳ ಇತಿಹಾಸದ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಗಮನಿಸಬಹುದು.

ಮೈಸೂರು ಬ್ರಿಟಿಷ್ ಆಳ್ವಿಕೆಯ ಕಾಲದಲ್ಲೂ ಕಲೆ, ಸಂಸ್ಕೃತಿಗಳಲ್ಲಿ ತನ್ನತನವನ್ನು ಉಳಿಸಿಕೊಂಡು ಬಂದಿತ್ತು. ಜೊತೆಗೆ ರಾಜಾಶ್ರಯವಿದ್ದುದರಿಂದ ೧೮೮೧-೧೯೦೨ರ ಅವಧಿಯಲ್ಲಿ ಸಂಗೀತ, ನೃತ್ಯ, ನಾಟಕ ಮೊದಲಾದ ಲಲಿತ ಕಲೆಗಳ ತವರೂರಾಗಿ ರಾರಾಜಿಸುತ್ತಿತ್ತು. ಇವರೊಂದಿಗೆ ೧೯೨೬ರ ಸುಮಾರಿನಲ್ಲಿ ವೈಶ್ಯ ಜನಾಂಗದ ಕಾವೇರಿ ಪಟ್ನಂ ಟ್ರಸ್ಟ್ ಅವರಿಂದ ಗಾಂಧಿ ಸರ್ಕಲ್ ನಲ್ಲಿ ಮೊದಲ ಚಿತ್ರಮಂದಿರ ತಲೆ ಎತ್ತಿತ್ತು. ಇದರ ಹೆಸರು ಶ್ರೀ ಕೃಷ್ಣಾ ಟಾಕೀಸ್ . ಆಗಿನ್ನೂ ಮೂಕಿ ಚಿತ್ರಗಳ ಯುಗವಾದ್ದರಿಂದ ಭಾಷೆಯ ಕಟ್ಟುಪಾಡಿಲ್ಲದೆ ಭಾರತದ ಎಲ್ಲ ಭಾಗಗಳ ಚಿತ್ರಗಳೂ ಇಂಗ್ಲಿಷ್ ಚಿತ್ರಗಳೂ ಬಿಡುಗಡೆಯಾಗುತ್ತಿದ್ದವು. ಈ ಚಿತ್ರಮಂದಿರದಲ್ಲಿ ಪ್ರದರ್ಶಿತವಾದ 'ಎಲ್ಮಾ ದಿ ಮೈಟಿ' ಹೆಚ್ಚು ಗಮನ ಸೆಳೆದ ಮೂಕಿ ಚಿತ್ರ. ೧೯೩೪ರಿಂದ ಇಲ್ಲಿ ಟಾಕಿ ಚಿತ್ರಗಳ ಪ್ರದರ್ಶನ ಆರಂಭವಾಯಿತು. 'ಜೆಂಟ್ಲರ್ ೪ ಎಪಿಸೋಡ್' ಇಲ್ಲಿ ತೆರ ಕಂಡಿತು. ಲೀಲಾ ಚಿಟ್ನೀಸ್, ಅಶೋಕ್ ಕುಮಾರ್ ಅವರ 'ಕಂಗನ್', 'ಜಿಂದಾ ಲಾಷ್', 'ಪುಕಾರ್' ಮುಂತಾದ ಹಿಂದಿ ಚಿತ್ರಗಳು, ಕನ್ನಾಂಬ, ನಾಗಯ್ಯ ಪಾತ್ರಧಾರಿಗಳಾಗಿದ್ದ 'ಗೃಹಲಕ್ಷ್ಮಿ', 'ನಲ್ಲತಂಗಾಳ್' ಚಿತ್ರಗಳು ಮತ್ತು ಕನ್ನಡ ಚಿತ್ರ 'ಕೃಷ್ಣ ಲೀಲಾ' ಇಲ್ಲಿ ಪ್ರದರ್ಶನಗೊಂಡಿದ್ದವು. ಎಂ.ಜಿ.ಎಂ. ಅವರ ಇಂಗ್ಲಿಷ್ ಚಿತ್ರಗಳ ಪ್ರದರ್ಶನಕ್ಕೆ ಮೈಸೂರು ಶ್ರೀ ಕೃಷ್ಣಾ ಟಾಕೀಸ್ ಒಪ್ಪಂದ ಮಾಡಿಕೊಂಡಿತ್ತು. ೧೯೨೬ರಲ್ಲಿ ಆರಂಭವಾದ ಮೊದಲ ಚಿತ್ರಮಂದಿರ ಶ್ರೀಕೃಷ್ಣ ಟಾಕೀಸ್ ೧೯೪೨ರಲ್ಲಿ ಮುಚ್ಚಿತು.

ಇಪ್ಪತ್ತನೆ ಶತಮಾನದ ಅಂಚಿನಲ್ಲಿ ದೊಡ್ಡ ಗಡಿಯಾರದ ಬಳಿಯ ಮೈಸೂರು ಚರಿತ್ರೆಯಲ್ಲಿ ಉಳಿಯುವಂತಹ ವಿಶಾಲವಾದ ವರಾಂಡ, ಅಲಂಕೃತ ಕಮಾನಿನ ಮೇಲು ಛಾವಣಿಗಳಿಂದ ಅಲಂಕೃತವಾದ ಉಡುಪಿ ಹೋಟೇಲ್ ನೆಲಸಮವಾಯಿತು. ಈ ಸ್ಥಳದಲ್ಲಿ ಹಿಂದೆ ಲಕ್ಷ್ಮಿ ಮೂಕಿ ಚಿತ್ರಮಂದಿರವಿತ್ತು. ಇದಲ್ಲದೆ ಕೃಷ್ಣರಾಜೇಂದ್ರ ಸರ್ಕಲ್ ನಲ್ಲಿದ್ದ ಕ್ರೈಸ್ತ ಶಾಲೆಯೊಂದರಲ್ಲೂ ಚಿತ್ರಮಂದಿರ ಸ್ವಲ್ಪ ಕಾಲ ನಡೆದು ನಿಂತು ಹೋಯಿತು.

ಮಹಾರಾಣಿ ಕೆಂಪನಂಜಮ್ಮಣ್ಣಿಯವರ ಕಾಲದಲ್ಲಿ ಸಾಕಷ್ಟು ಸಾರ್ವಜನಿಕ ಕಟ್ಟಡಗಳು ಕಲಾತ್ಮಕ ಸೊಗಸನ್ನು ಪಡೆದು ರಾರಾಜಿಸುತ್ತಿದ್ದುದರಿಂದ ಮೈಸೂರಿನ ಸಾಕಷ್ಟು ಚಿತ್ರಮಂದಿರಗಳು ಇತರ ಊರುಗಳ ಚಿತ್ರಮಂದಿರಗಳಿಗಿಂತ ಹೆಚ್ಚು ಕಲಾತ್ಮಕವಾಗಿರಲು ಕಾರಣವಾಯಿತು.

ಟಾಕಿ ಚಿತ್ರಗಳು ಬರುವ ಮೊದಲು ಮೂಕಿ ಚಿತ್ರಗಳ ಪ್ರದರ್ಶನದ ಪ್ರಾರಂಭದಲ್ಲಿ ಓಲಗದವರು ವಾದ್ಯ ನುಡಿಸುತ್ತಿದ್ದರು. ಪ್ರದರ್ಶನ ಪ್ರಾರಂಭವಾಗುವ ಮುಂಚೆ ಗಂಟೆಯಾದೊಡನೆ ಓಲಗ ನಿಲ್ಲಿಸುತ್ತಿದ್ದರು. ಒಲಂಪಿಯಾ ಚಿತ್ರಮಂದಿರದಲ್ಲಿ ಚಿತ್ರದುದ್ದಕ್ಕೂ ಪಕ್ಕವಾದ್ಯ ನುಡಿಸುತ್ತಿದ್ದರು.

ಒಲಂಪಿಯ ಟಾಕೀಸ್ (೧೯೨೦), ಐ.ಎಸ್. ಸಿನಿಮಾ ಅಂದರೆ ಇಸ್ಮಾಯಿಲ್ ಷರೀಫ್ ಸಿನಿಮಾ ಎಂದೇ ಆರಂಭವಾದ ಈ ಚಿತ್ರಮಂದಿರ ಮೂಕಿ ಚಿತ್ರಗಳ ಕಾಲದಿಂದಲೂ ಗಮನ ಸೆಳೆದಿತ್ತು. ಆಗ ಷೇಕ್ ಪೀರ್ ಮತ್ತು ಅಬ್ದುಲ್ ವಹಾಬ್ ಇಬ್ಬರೂ ಹಾರ್ಮೋನಿಯಂ, ತಬಲಗಳೊಡನೆ ಚಿತ್ರ ಪ್ರದರ್ಶನವಾಗುತ್ತಿದ್ದಾಗ ದೃಶ್ಯಗಳಿಗೆ ತಕ್ಕಂತೆ ಹಿನ್ನೆಲೆ ಸಂಗೀತ ನುಡಿಸುತ್ತಿದ್ದರು. ಆಗ ಇದ್ದಿದ್ದು ಮಧ್ಯಾಹ್ನ ಮತ್ತು ಸಂಜೆಯ ಪ್ರದರ್ಶನಗಳು ಮಾತ್ರ. ಬಾಲ್ಕನಿಗೆ ನಾಲ್ಕಾಣೆ ಹಾಗೂ ಕೆಳಗಡೆ ಎರಡಾಣೆಯ ಪ್ರವೇಶದರವಿತ್ತು. ಹೆಂಗಸರಿಗೆ ಪ್ರತ್ಯೇಕ ಆಸನ ವ್ಯವಸ್ಥೆಯಿತ್ತು. ರಾಜಮನೆತನದವರೂ ಈ ಚಿತ್ರಮಂದಿರಕ್ಕೆ ಸಿನಿಮಾ ನೋಡಲು ಬರುತ್ತಿದ್ದುದುಂಟು. ಅವರು ಬರುವ

(ಚಿತ್ರ ೯) ಮೈಸೂರಿನಲ್ಲಿ ೧೯೫೩ರಲ್ಲಿ ಇದ್ದ ಚಿತ್ರಮಂದಿರಗಳ ಮ್ಯಾನೇಜರ್‌ಗಳ ಒಂದು ಸಮೂಹ ಚಿತ್ರ

(ಚಿತ್ರ ೧೦) ರಾಯಲ್ ಅಪೇರಾ ಟಾಕೀಸ್

ಸಮಯದಲ್ಲಿ ಅವರು ಕೂರುವ ಸ್ಥಳದ ಮುಂದೆ ಅಡ್ಡಲಾಗಿ ತೆರೆಯಿಟ್ಟು ಚಿತ್ರ ಪ್ರಾರಂಭವಾದೊಡನೆ ಸರಿಸಿ, ಮತ್ತೆ ಮುಕ್ತಾಯದಲ್ಲಿ ತೆರೆಯ ಮರೆಯಲ್ಲಿ ಅವರು ನಿರ್ಗಮಿಸುತ್ತಿದ್ದರು. ಕೆಲವೊಮ್ಮೆ ಜಗನ್ಮೋಹನ ಅರಮನೆಗೇ ಚಿತ್ರಗಳ ಪ್ರತಿಗಳನ್ನು ತರಿಸಿಕೊಂಡೂ ನೋಡುತ್ತಿದ್ದರು.

ಈಗ ಒಲಂಪಿಯಾ ಟಾಕೀಸ್ ಎಂ.ವಿ.ಅಜಿತ್ ಕುಮಾರ್ ಅವರ ಮಾಲೀಕತ್ವದಲ್ಲಿ ನಡೆಯುತ್ತಿದೆ. ಎರಡು ಬಾರಿ ನವೀಕರಣಗೊಂಡು ಅಮೆರಿಕಾದ ಫೋಟೋಫೋನ್, ಸ್ಟಿರಿಯೋ ವ್ಯವಸ್ಥೆಯನ್ನೊಳಗೊಂಡಿದೆ. ಸಿನಿಮಾಸ್ಕೋಪ್ ತೆರೆಯ ವ್ಯವಸ್ಥೆ ಇರುವ ಈ ಚಿತ್ರಮಂದಿರದಲ್ಲಿ ೫೮೭ ಆಸನಗಳಿವೆ.

'ಕಾಗಜ್ ಕ ಫೂಲ್', 'ಪರದೇಶಿ', 'ಜಿಸ್ ದೇಶ್ ಮೇ ಗಂಗಾ ಬಹತಿ ಹೈ', 'ಗಂಗಾ ಜಮುನಾ', 'ಆರಾಧನಾ', 'ಗೈಡ್', 'ರಾಮ್ ತೇರಿ ಗಂಗಾ ಮೈಲಿ', 'ಪಡುವಾರಹಳ್ಳಿ ಪಾಂಡವರು', 'ಕೃಷ್ಣ ನೀ ಬೇಗನೆ ಬಾರೂ', 'ಜನುಮದ ಜೋಡಿ', 'ಪೊಲೀಸನ ಹೆಂಡ್ತಿ' ಮುಂತಾದ ಚಿತ್ರಗಳು ಅದ್ಭುತ ಯಶಸ್ಸನ್ನು ಕಂಡಿದ್ದವು. ಇದು ಕರ್ನಾಟಕದ ಮೊಟ್ಟ ಮೊದಲ ೭೦ ಎಂ.ಎಂ. ಹವಾನಿಯಂತ್ರಣ ಚಿತ್ರಮಂದಿರ. ಬೆಂಗಳೂರಿನ ಲಿಡೋ ಥಿಯೇಟರ್‌ನ ಎಂ.ವಿ.ವೀರೇಂದ್ರ ಕುಮಾರ್ ಒಲಂಪಿಯಾ ಟಾಕೀಸ್‌ನ ಸಂಸ್ಥಾಪಕರು.

(ಚಿತ್ರ ೧೨) 'ಸತಿ ಸುಲೋಚನಾ' ಚಿತ್ರದ ನಿರ್ಮಾಪಕ ಸಿ.ಭೂರ್‌ಮಲ್ ಮೈಸೂರಿನ ರಾಜೇಂದ್ರ ಟಾಕೀಸ್‌ನ (ಈಗಿನ ಚಾಮುಂಡೇಶ್ವರಿ ಚಿತ್ರಮಂದಿರ) ಮಾಲೀಕರಾಗಿದ್ದರು. ದಿವಾನರಾಗಿದ್ದ ಮಿರ್ಜಾ ಇಸ್ಮಾಯಿಲ್‌ರವರು ಹಾಗೂ ಪುಟ್ಟಣ್ಣಶೆಟ್ಟರು ಚಿತ್ರಮಂದಿರಕ್ಕೆ ಭೇಟಿ ನೀಡಿದ ಸಂದರ್ಭದ ನೆನಪಿನ ಚಿತ್ರ - ತಿಮ್ಮಾಚಾರ್, ಮಿರ್ಜಾ ಇಸ್ಮಾಯಿಲ್, ಶ್ರೀಮತಿ ವಜೀಫ್ದಾರ್, ಪುಟ್ಟಣ್ಣಶೆಟ್ಟರು, ಸಿ.ಭೂರ್‌ಮಲ್ ಮತ್ತು ಅರಮನೆ ಕಂಟ್ರಾಕ್ಟರ್ ಯಾಲಕ್ಯಾಚಾರ್ (ನಿಂತಿರುವವರು)

(ಚಿತ್ರ ೧೧) ಚಾಮುಂಡೇಶ್ವರಿ ಟಾಕೀಸ್

ರಾಯಲ್ ಅಪೇರ ಟಾಕೀಸ್, ಮೊಟ್ಟ ಮೊದಲು ೧೯೨೫ರಲ್ಲಿ ವಿ.ತಿಮ್ಮಯ್ಯನವರ ಮಾಲೀಕತ್ವದಲ್ಲಿ ಪ್ರಾರಂಭವಾದ ನ್ಯೂ ಅಪೇರಾ ಟಾಕೀಸ್ ೧೯೩೫ ರಿಂದ ವಿ.ಟಿ.ರಾಮನ್ ಅವರ ನಾಯಕತ್ವದಲ್ಲಿ ರಾಯಲ್ ಅಪೇರಾ ಟಾಕೀಸ್ ಎಂಬ ಹೆಸರಿನಲ್ಲಿ ನಡೆಯಲಾರಂಭಿಸಿತು. ಆರ್. ಸಿ. ಎ.ಫೋಟೋಫೋನ್ ಪ್ರೊಜೆಕ್ಟರ್ ವ್ಯವಸ್ಥೆ (ಅಮೆರಿಕಾ) ಇದೆ. ೧೧೦೦ ಆಸನಗಳಿರುವ ಪ್ರದರ್ಶನ ಮಂದಿರದಲ್ಲಿ ಆರಂಭದಲ್ಲಿ ಹೆಚ್ಚು ತಮಿಳು ಚಿತ್ರಗಳು ಪ್ರದರ್ಶನವಾಗುತ್ತಿದ್ದವು. ರಾಜಕುಮಾರ್ ಪ್ರಥಮಬಾರಿಗೆ ಅಭಿನಯಿಸಿದ 'ಬೇಡರ ಕಣ್ಣಪ್ಪ' ಇದೇ ಚಿತ್ರಮಂದಿರದಲ್ಲಿ ಬಿಡುಗಡೆ ಕಂಡಿತ್ತು. 'ಸತಿ ಸುಕನ್ಯ', 'ಬೇಡರ ಕಣ್ಣಪ್ಪ'. 'ಆರ್ಯಮಾಲಾ' ಮೊದಲಾದ ಚಿತ್ರಗಳು ಇಲ್ಲಿ ದಾಖಲೆ ಪ್ರದರ್ಶನ ಕಂಡಿವೆ.

ಈ ಚಿತ್ರಮಂದಿರದ ವ್ಯವಸ್ಥೆಯನ್ನು ಮೆಚ್ಚಿ ರಾಜಮನೆತನದ ನಾಲ್ವಡಿ ಕೃಷ್ಣರಾಜ ಒಡೆಯರು, ಜಯ ಚಾಮರಾಜೇಂದ್ರ ಒಡೆಯರು ಚಿತ್ರ ವೀಕ್ಷಿಸಲು ಬರುತ್ತಿದ್ದರು. ವಾರ್ನರ್ ಬ್ರದರ್ಸ್ ಹಾಗೂ ಪ್ಯಾರಮೌಂಟ್ ನಿರ್ಮಾಣದ ಇಂಗ್ಲಿಷ್ ಚಿತ್ರಗಳು ಇಲ್ಲಿ ಪ್ರದರ್ಶನವಾಗುತ್ತಿದ್ದವು. ಪುಷ್ ಬ್ಯಾಕ್ ಸುಖಾಸೀನವನ್ನು ಅಳವಡಿಸಿದ ಪ್ರಥಮ ಚಿತ್ರಮಂದಿರವಿದು. ಆ ಕಾಲದಲ್ಲಿ ಅತಿ ಹೆಚ್ಚು ಆಸನಗಳಿರುವ ಚಿತ್ರಮಂದಿರವೆಂದು ಖ್ಯಾತಿಯಿದ್ದ ಈ ಚಿತ್ರಮಂದಿರದಲ್ಲಿ ಮೈಸೂರಿನಲ್ಲಿಯೇ ಮೊದಲ ಬಾರಿಗೆ ಬೆಳಗಿನ ಪ್ರದರ್ಶನಗಳು ಆರಂಭವಾದವು.

ಚಾಮುಂಡೇಶ್ವರಿ ಚಿತ್ರ ಮಂದಿರ, ಮೈಸೂರಿನ ಮಧ್ಯ ಭಾಗದಲ್ಲಿರುವ ಈ ಚಿತ್ರಮಂದಿರ ೧೯೩೩ರಲ್ಲಿ ಆರಂಭವಾಯಿತು. ರಾಜೇಂದ್ರ ಟಾಕೀಸ್ ಎಂದೇ ಪ್ರಾರಂಭವಾದ ಈ ಚಿತ್ರಮಂದಿರ ಮೊದಲ ಅಂತಸ್ತಿನಲ್ಲಿದ್ದು ೬೨೭ ಆಸನ ವ್ಯವಸ್ಥೆ ಹೊಂದಿದೆ. ಇದು ಅಚ್ಚುಕಟ್ಟಾದ, ಸುಸಜ್ಜಿತ ಚಿತ್ರಮಂದಿರ. ಮೇಲೆ ಹೋಗುವ ಮೆಟ್ಟಿಲ ಇಕ್ಕೆಡಗಳಲ್ಲಿ ಗಾಜಿನ ಒಳಗೆ ಪ್ರಾಣಿಗಳ ಮಾಡೆಲ್‌ಗಳಿವೆ. ತನುಮನ ತಣಿಸುವಂತೆ ೨೪ ರೀಲುಗಳಷ್ಟು ಸಂಗೀತ, ಸಾಹಿತ್ಯ ಕಥಾ ಪ್ರಧಾನವಾಗಿದ್ದ ಎಂ.ಕೆ.ತ್ಯಾಗರಾಜ ಭಾಗವತರ್, ಟಿ.ಆರ್.ರಾಜಕುಮಾರಿ, ಟಿ.ಚೌಡಯ್ಯ, ಎಂ.ಎಸ್.ಸುಬ್ಬುಲಕ್ಷ್ಮಿ ಮೊದಲಾದವರ ಅಭಿನಯದ ಚಿತ್ರಗಳು ಇಲ್ಲಿ ಪ್ರದರ್ಶನವಾಗುತ್ತಿದ್ದು ಸಂಗೀತ ಪ್ರೇಮಿಗಳಿಗೆ ಹುಚ್ಚು ಹಿಡಿಸಿತ್ತು.

ರಾಜಕುಮಾರ್ ಅವರ 'ಬಂಗಾರದ ಮನುಷ್ಯ' ೬೦ ವಾರಗಳು, 'ಎರಡು ಕನಸು' ಮತ್ತು 'ಮಯೂರ' ೨೫ ವಾರಗಳು ಹಾಗೂ 'ಬಾಳು ಬೆಳಗಿತು', 'ನಮ್ಮ ಸಂಸಾರ', 'ತಾಯಿ ದೇವರು' ಶತದಿನೋತ್ಸವಗಳನ್ನು ಆಚರಿಸಿ ಚಿತ್ರಮಂದಿರದ ಕೀರ್ತಿಯನ್ನು ಹೆಚ್ಚಿಸಿದವು. ಜಯಚಾಮರಾಜೇಂದ್ರ ಒಡೆಯರ್ ಅವರೂ ಇಲ್ಲಿ ಚಿತ್ರಗಳನ್ನು ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದ್ದರು.

ರಾಜ್ ಕಮಲ್ ಥಿಯೇಟರ್, ಈ ಚಿತ್ರಮಂದಿರವನ್ನು ೧೯೪೭ರ ಜೂನ್ ೧೯ ರಂದು ಆರಂಭಿಸಲಾಯಿತು. ಮೈಸೂರು ಮಹಾರಾಜರ ಆಪ್ತ ಕಾರ್ಯದರ್ಶಿಗಳಾದ ಟಿ.ತಂಬೂಚೆಟ್ಟಿ ಹಾಗೂ ಅವರ ಪತ್ನಿ ಉದ್ಘಾಟಿಸಿದರು. ೯೦೭ ಆಸನಗಳಿವೆ. ೧೯೯೪-೯೫ರಲ್ಲಿ ೩೫ ಲಕ್ಷ ರೂಪಾಯಿಗಳ ಬಂಡವಾಳ ಹಾಕಿ ಕರ್ನಾಟಕದಲ್ಲೇ ಮೊದಲ ಬಾರಿಗೆ ಡಿ.ಟಿ.ಎಸ್ ಧ್ವನಿ ವ್ಯವಸ್ಥೆ ಅಳವಡಿಸಿದ ಚಿತ್ರಮಂದಿರವಿದು.

(ಚಿತ್ರ ೧೩) ರಾಜಕಮಲ್ ಥಿಯೇಟರ್

ಮನರಂಜನಾ ತೆರಿಗೆ ಇಲಾಖೆಯಿಂದ ೧೯೭೬-೭೭ನೇ ಸಾಲಿನಲ್ಲಿ ವಿಳಂಬವಿಲ್ಲದೆ ತೆರಿಗೆ ಪಾವತಿ ಮಾಡಿದ್ದಕ್ಕೆ ಪ್ರಶಂಸಾಪತ್ರವನ್ನು ಚಿತ್ರಮಂದಿರ ಪಡೆದಿದೆ. ಶಂಕರ್ ಸಿಂಗ್ ಅವರ 'ಜಗನ್ಮೋಹಿನಿ' ಚಿತ್ರ ಸೇರಿದಂತೆ 'ಭಾರತಿ', 'ಸ್ಕೂಲ್ ಮಾಸ್ಟರ್', 'ರತ್ನಗಿರಿ ರಹಸ್ಯ', 'ರಾಜಾ ವಿಕ್ರಮ', 'ಆದಿ ಪರಾಶಕ್ತಿ', 'ಕಿತ್ತೂರು ಚೆನ್ನಮ್ಮ' 'ಭಾಗ್ಯ ಚಕ್ರ' ಚಿತ್ರಗಳು ಇಲ್ಲಿ ಯಶಸ್ವಿ ಪ್ರದರ್ಶನ ಕಂಡಿವೆ. ಇಲ್ಲಿ ಕನ್ನಡ ಚಿತ್ರಗಳ ಪ್ರದರ್ಶನ ಅಪರೂಪ, ಇಂಗ್ಲಿಷ್ ಚಿತ್ರಗಳ ಪ್ರದರ್ಶನವೇ ಹೆಚ್ಚು.

ಪದ್ಮಾ ಚಿತ್ರಮಂದಿರ, ೧೯೪೭ರಲ್ಲಿ ಮೋತಿಲಾಲ್ ಎಂಬ ಹೆಸರಿನಲ್ಲಿ ಪ್ರಾರಂಭವಾದ ಈ ಚಿತ್ರಮಂದಿರ ಕೌಟುಂಬಿಕ ಚಿತ್ರಗಳಿಗೆ ಆದ್ಯತೆ ನೀಡಿತ್ತು. ನಂತರ ಇದು ಪ್ರಭುದೇವ ಚಿತ್ರಮಂದಿರವಾಗಿ ಮರುನಾಮಕರಣಗೊಂಡಿತು. ಈಗ ಎಂ.ಎ.ಅಜಿತ್ ಪ್ರಸಾದ್ ಜೈನ್ ಅವರ ಮಾಲೀಕತ್ವದಲ್ಲಿ ಪದ್ಮಾ ಚಿತ್ರಮಂದಿರವಾಗಿ ನಡೆಯುತ್ತಿದೆ. ಉತ್ತಮ ಧ್ವನಿ ವ್ಯವಸ್ಥೆ ಇರುವ ಈ ಚಿತ್ರಮಂದಿರದಲ್ಲಿ ೬೫೦ ಆಸನಗಳಿದ್ದು ಕನ್ನಡ ಚಿತ್ರಗಳೇ ಹೆಚ್ಚು ಪ್ರದರ್ಶನಗೊಳ್ಳುತ್ತವೆ.

ಕನ್ನಡದ ಪ್ರಥಮ ವರ್ಣಚಿತ್ರ 'ಅಮರ ಶಿಲ್ಪಿ ಜಕಣಾಚಾರಿ' ಇಲ್ಲಿ ೧೦೦ ದಿನಗಳ ಪ್ರದರ್ಶನಗೊಂಡು ದಾಖಲೆ ನಿರ್ಮಿಸಿತು. 'ಶ್ರೀ ಕೃಷ್ಣದೇವರಾಯ' ೨೫ ವಾರಗಳು ಪ್ರದರ್ಶನವಾದ ನಂತರ 'ನಾಗರ ಹಾವು', 'ಗಂಧದ ಗುಡಿ' ನೂರು ದಿನಗಳ ಕಾಲ ಪ್ರದರ್ಶನ ಕಂಡವು. 'ಬೂತಯ್ಯನ ಮಗ ಅಯ್ಯು' ಕೂಡಾ ರಜತ ಮಹೋತ್ಸವ ಆಚರಿಸಿತು.

ವುಡ್‌ಲ್ಯಾಂಡ್ಸ್ ಚಿತ್ರಮಂದಿರ, ಕಟ್ಟಡಗಳ ಕಲಾತ್ಮಕ ಸೌಂದರ್ಯಕ್ಕೆ ಖ್ಯಾತಿಯಾದ ಮೈಸೂರಿನ ಅರಮನೆ ಕಂಟ್ರಾಕ್ಟರ್ ಮುನಿವೆಂಕಟಪ್ಪನವರು ಯುರೋಪ್ ಶೈಲಕ್ಷಣ್ಯಗಳುಳ್ಳ ಮಹಾದ್ವಾರಗಳು, ಕಮಾನುಗಳು, ಕಿಟಕಿಗಳು ಹಾಗೂ ರೋಮನ್

(ಚಿತ್ರ ೧೪) ವುಡ್‌ಲ್ಯಾಂಡ್ ಚಿತ್ರಮಂದಿರ

ಶಿಲ್ಪಗಾರಿಕೆಯ ಮೊಗಸಾಲೆಗಳಿಂದ ಕಂಗೊಳಿಸುವ ಕಟ್ಟಡ ನಿರ್ಮಿಸಿದರು. ಇದನ್ನು ಸುಮಾರು ೧೯೩೦ರಲ್ಲಿ ನಿರ್ಮಿಸಲಾಯಿತು. ಮೊದಲು ಈ ಕಟ್ಟಡದಲ್ಲಿ ಪ್ರಧಾನ ಅಂಚೆ ಕಛೇರಿಯಿದ್ದು ಅದು ಸ್ಥಳಾಂತರಗೊಂಡ ಮೇಲೆ ರಣಜಿತ್ ಚಿತ್ರಮಂದಿರವಾಯಿತು. ಗುತ್ತಿಗೆದಾರರು ಪಕ್ಕದಲ್ಲೇ ರಣಜಿತ್ ಚಿತ್ರಮಂದಿರ ಕಟ್ಟಿಸಿಕೊಂಡ ಮೇಲೆ ವುಡ್‌ಲ್ಯಾಂಡ್ಸ್ ಚಿತ್ರಮಂದಿರದ ಹೆಸರಿನಲ್ಲಿ ಪ್ರದರ್ಶನಗಳು ಇಂದಿಗೂ ನಡೆಯುತ್ತಿವೆ. ಟಿ.ಪಿ.ಇಸ್ಸಾರ್ ಅವರ ಪ್ರತಿಷ್ಠಿತ ಪುಸ್ತಕ ರಾಯಲ್ ಸಿಟಿ' ಯಲ್ಲಿ ಈ ಕಟ್ಟಡದ ಚಿತ್ರ ದಾಖಲಾಗಿರುವುದು ವಿಶೇಷ. ಮೈಸೂರು ದಿವಾನರಾಗಿದ್ದ ಮಿರ್ಜಾ ಇಸ್ಮಾಯಿಲ್ ಅವರು ೧೯೪೭ರ ಜೂನ್ ೧೪ ರಂದು ಮಂದಿರವನ್ನು ಉದ್ಘಾಟನೆ ಮಾಡಿದ್ದರು. ಫೋಟೋಫೋನ್ ಪ್ರೊಜೆಕ್ಟರ್, ವಿಶಾಲವಾದ ೭೦ ಎಂ. ಎಂ. ತೆರೆ, ಡಿ.ಟಿ.ಎಸ್ ಸೌಲಭ್ಯ ಹೊಂದಿರುವ ಈ ಚಿತ್ರಮಂದಿರದಲ್ಲಿ ಅಚ್ಚುಕಟ್ಟಾದ ೯೮೫ ಆಸನಗಳಿವೆ.

ಈ ಚಿತ್ರಮಂದಿರದಲ್ಲಿ ಮೊದಲು ಶತದಿನೋತ್ಸವ ಕಂಡಿದ್ದು 'ವೀಡು' ಎಂಬ ತಮಿಳು ಚಿತ್ರ. ಸುಬ್ಬಯ್ಯ ನಾಯ್ಡು ಅವರ 'ಭಕ್ತ ಪ್ರಹ್ಲಾದ' ೫೦ ದಿನ, 'ನಟಶೇಖರ' ೧೮೦ ದಿನ, 'ಜಂಗ್ಲಿ', 'ಹಾಥಿ ಮೇರಿ ಸಾಥಿ', ೨೫ ವಾರ ಪ್ರದರ್ಶನ ಕಂಡರೆ 'ಗೆಜ್ಜೆ ಪೂಜೆ', 'ಹೃದಯ ಸಂಗಮ', 'ಉಪಾಸನೆ', 'ನಾಗರ ಹೊಳೆ' ಚಿತ್ರಗಳು ಶತದಿನೋತ್ಸವ ಕಂಡಿವೆ. 'ಅವಳೇ ನನ್ನ ಹೆಂಡ್ತಿ' ೨೫ ವಾರಗಳು ಪ್ರದರ್ಶಿತವಾಗಿತ್ತು.

ಪ್ರಭಾ ಚಿತ್ರಮಂದಿರ, ಸಚಿವ ಎಚ್.ಸಿ.ದಾಸಪ್ಪನವರಿಂದ ೧೯೪೮ರಲ್ಲಿ ಪ್ರಭಾ ಚಿತ್ರಮಂದಿರ ಉದ್ಘಾಟನೆಯಾಯಿತು. ರಟ್ಟಿಹಳ್ಳಿ ರಾಮಪ್ಪ ಮತ್ತು ಮಕ್ಕಳು ಇದರ ಮಾಲೀಕರು. ಇಂದಿನ ಮ್ಯಾನೇಜಿಂಗ್ ಪಾರ್ಟನರ್ ಆರ್. ವಿ.ಗಣೇಶ್.

ಸೆಂಚುರಿ (ಅಮೆರಿಕಾ) ಪ್ರೊಜೆಕ್ಟರ್ ಮತ್ತು ಡಿ.ಟಿ.ಎಸ್ ಧ್ವನಿ ವ್ಯವಸ್ಥೆ ಇದ್ದು ೭೦ ಎಂ.ಎಂ ತೆರೆಯ ವ್ಯವಸ್ಥೆಯಿದೆ. ಈಗ ಮುಚ್ಚಿರುವ ಗಣೇಶ ಚಿತ್ರಮಂದಿರವನ್ನು ಬಿಟ್ಟರೆ

(ಚಿತ್ರ ೧೫) ಪದ್ಮಾ ಚಿತ್ರಮಂದಿರ

(ಚಿತ್ರ ೧೬) ಪ್ರಭಾ ಚಿತ್ರಮಂದಿರ

(ಚಿತ್ರ ೧೭) ಗಾಯತ್ರಿ ಚಿತ್ರಮಂದಿರ

೧೯೬೫ರಲ್ಲಿ ೭೦ ಎಂ.ಎಂ ಅಳವಡಿಸಿದ ಎರಡನೇ ಚಿತ್ರಮಂದಿರ ಇದು. ೭೭೮ ಆಸನಗಳ ವ್ಯವಸ್ಥೆಯಿದೆ.

ಪ್ರಾರಂಭದಲ್ಲಿ ಪರಭಾಷಾ ಚಿತ್ರಗಳಿಗೆ ಒತ್ತು ಕೊಡುತ್ತಿದ್ದು ಅನಂತರ ಕನ್ನಡ ಚಿತ್ರಗಳಿಗೆ ಆದ್ಯತೆ ನೀಡಲಾಯಿತು. 'ಶರಪಂಜರ', 'ರಣಧೀರ', 'ನೀ ಬರೆದ ಕಾದಂಬರಿ', 'ಮತ್ತೆ ಹಾಡಿತು ಕೋಗಿಲೆ', 'ಸೂರ್ಯವಂಶ', 'ಜನುಮದ ಜೋಡಿ', 'ಶಬರಿವೇಧಿ', ಮುಂತಾದ ಚಿತ್ರಗಳು ಈ ಚಿತ್ರಮಂದಿರದಲ್ಲಿ ಅದ್ಭುತ ಯಶಸ್ಸು ಗಳಿಸಿವೆ.

ಗಾಯತ್ರಿ ಚಿತ್ರಮಂದಿರ, ಮೊದಲು ಈ ಕಟ್ಟಡದಲ್ಲಿ ಹಾಸ್ಟೆಲ್ ನಡೆಯುತ್ತಿತ್ತು. ನಂತರ ಎಂ.ಸಿ.ತಿಮ್ಮಯ್ಯಾಚಾರ್ ಫ್ಯಾಮಿಲಿ ಟ್ರಸ್ಟ್‌ನಿಂದಾಗಿ ೧೯೪೮ರ ಜೂನ್ ೧೮ರಂದು ಗಾಯತ್ರಿ ಚಿತ್ರಮಂದಿರವಾಗಿ ಪ್ರಾರಂಭವಾಯಿತು. ೧೯೯೭-೯೮ರಲ್ಲಿ ಸುವರ್ಣ ಮಹೋತ್ಸವ ಆಚರಿಸಿತು. ೧೯೯೮-೯೯ರಲ್ಲಿ ನವೀಕರಣಗೊಂಡ ಈ ಚಿತ್ರಮಂದಿರದಲ್ಲಿ ಫೋಟೋಫೋನ್ ಪ್ರೊಜೆಕ್ಟರ್, ಡಿ.ಟಿ.ಎಸ್, ಸಿನಿಮಾಸ್ಕೋಪ್ ಹಾಗೂ ೭೮೧ ಪುಶ್ ಬ್ಯಾಕ್ ಆಸನಗಳ ವ್ಯವಸ್ಥೆಯಿದೆ. ೧೯೭೬ರ ನಂತರ ಇಂಗ್ಲಿಷ್ ಚಿತ್ರಗಳ ಪ್ರದರ್ಶನ ನಿಲ್ಲಿಸಿ ಕನ್ನಡ ಹಾಗೂ ಮತ್ತಿತರ ಭಾಷಾ ಚಿತ್ರಗಳಿಗೆ ಪ್ರಾಧಾನ್ಯ ನೀಡಲಾಯಿತು. 'ಮರೋ ಚರಿತ್ರ' ೭೭ವಾರ, 'ಸಿರಿ ಸಿರಿ ಮುವ್ವ' ಒಂದು ವರ್ಷ, 'ಸಾಗರ ಸಂಗಮಂ' ಒಂದು ವರ್ಷ, 'ಅನುಭವ' ೩೬ ವಾರ, 'ಜನುಮದ ಜೋಡಿ' ೩೦ ವಾರ, 'ಓಂ' ೨೫ ವಾರ ಪ್ರದರ್ಶಿತವಾದವು. 'ಯಾರಿಗೆ ಸಾಲುತ್ತೆ ಸಂಬಳ', 'ಪ್ರೀತ್ಸೆ', 'ಎ', ಹೃದಯ ಹಾಡಿತು', 'ಸುಪ್ರಭಾತ', 'ಪೋಲೀಸನ ಹೆಂಡ್ತಿ' ಮುಂತಾದ ಚಿತ್ರಗಳು ಶತದಿನ ಕಂಡಿವೆ.

ರಣಜಿತ್ ಚಿತ್ರಮಂದಿರ, ೧೯೪೯ರಲ್ಲಿ ಪ್ರಾರಂಭವಾದ ರಣಜಿತ್ ಚಿತ್ರಮಂದಿರದ ಮಾಲೀಕರು ರಾಮ್‌ಭಾಯಿ ಪಟೇಲ್ ಮತ್ತು ಮಕ್ಕಳು. ೮೭೦ ಆಸನಗಳನ್ನು ಹೊಂದಿರುವ ಈ ಚಿತ್ರಮಂದಿರ ಈಗ ಹವಾನಿಯಂತ್ರಿತವಾಗಿದೆ. ಫೋಟೋಫೋನ್ ಪ್ರೊಜೆಕ್ಟರ್, ಸಿನಿಮಾ ಸ್ಕೋಪ್ ತೆರೆ, ಡಿ.ಟಿ.ಎಸ್ ಧ್ವನಿ ವ್ಯವಸ್ಥೆಯನ್ನು ಹೊಂದಿದೆ. ಪ್ರಾರಂಭದಲ್ಲಿ 'ಶಹನಾಯ್' ಮೊದಲಾದ ಯಶಸ್ವಿ ಹಿಂದಿ ಚಿತ್ರಗಳು ಇಲ್ಲಿ ತೆರಕಂಡಿದವು. ನಂತರ ಕನ್ನಡದ 'ಶಂಕರ್ ಗುರು' ೪೪ ವಾರ, 'ಚಲಿಸುವ ಮೋಡಗಳು', 'ಆಕಸ್ಮಿಕ', 'ಜೀವನ ಚೈತ್ರ', 'ಭಾಗ್ಯದ ಲಕ್ಷ್ಮಿ ಬಾರಮ್ಮ', ಮತ್ತು 'ಮನ ಮೆಚ್ಚಿದ ಹುಡುಗಿ' ಚಿತ್ರಗಳು ರಜತ ಮಹೋತ್ಸವ ಪ್ರದರ್ಶನ ಕಂಡಿದವು. 'ಬಿಡುಗಡೆ', 'ರಥ ಸಪ್ತಮಿ', 'ಗಿರಿಕನ್ಯೆ' ಮುಂತಾದ ಚಿತ್ರಗಳು ನೂರು ದಿನಗಳ ಪ್ರದರ್ಶನ ಕಂಡರೆ 'ಹೊಸ ಬೆಳಕು', 'ಸೂರಪ್ಪ' ೫೦ ದಿನಗಳು ಪ್ರದರ್ಶಿತವಾಗಿದವು.

ಲಕ್ಷ್ಮಿ ಟಾಕೀಸ್, ೧೯೫೦ ರಲ್ಲಿ ಆರಂಭವಾದ ಲಕ್ಷ್ಮಿ ಟಾಕೀಸ್‌ನ ಮಾಲೀಕರು ಕೆ.ರಾಮರಾವ್ ಮತ್ತು ಪಾಲುದಾರರು. ಈ ಚಿತ್ರಮಂದಿರದಲ್ಲಿ ಆಧುನಿಕ ತಂತ್ರಜ್ಞಾನಗಳನ್ನು ಅಳವಡಿಸಲಾಗಿದೆ. ಆರಂಭದಿಂದಲೂ ಕನ್ನಡ ಚಿತ್ರಗಳಿಗೆ ಆದ್ಯತೆ ನೀಡುತ್ತ ಬಂದಿರುವ ಈ ಚಿತ್ರಮಂದಿರದಲ್ಲಿ ಪರಭಾಷಾ ಚಿತ್ರಗಳೂ ಪ್ರದರ್ಶನವಾಗುತ್ತಿವೆ. ೧೯೭೦ರಲ್ಲಿ ಈ ಚಿತ್ರಮಂದಿರ ನವೀಕರಣಗೊಂಡಿದೆ.

'ಸತ್ಯ ಹರಿಶ್ಚಂದ್ರ', 'ಹಸಿರು ತೋರಣ', 'ಹಾಲುಂಡ ತವರು', 'ಹಬ್ಬ', 'ಉಪೇಂದ್ರ', 'ಸನಾದಿ ಅಪ್ಪಣ್ಣ', 'ಅಮೃತ ವರ್ಷಿಣಿ', 'ಬಂಧನ', 'ಯಾರೇ ನೀನು ಚೆಲುವೆ', 'ನಿಶ್ಯಬ್ದ', 'ಚಂದ್ರೋದಯ', 'ನಾಗದೇವತೆ' ಮುಂತಾದ ಚಿತ್ರಗಳು ಈ ಚಿತ್ರಮಂದಿರದಲ್ಲಿ ಭಾರಿ ಯಶಸ್ಸನ್ನು ಕಂಡಿವೆ.

ಉಮಾ ಡಿಲಕ್ಸ್, ವಿ.ಟಿ.ವೆಂಕಟನಾರಾಯಣ್‌ರ ಮಾಲೀಕತ್ವದಲ್ಲಿ ೧೯೫೦ರಲ್ಲಿ ಆಧುನಿಕ ತಂತ್ರಜ್ಞಾನ ಸೌಲಭ್ಯಗಳೊಂದಿಗೆ ಆರಂಭವಾದ ಈ ಚಿತ್ರಮಂದಿರದಲ್ಲಿ ಎಲ್ಲ ಭಾಷೆಯ ಚಿತ್ರಗಳೂ ಪ್ರದರ್ಶನಗೊಂಡಿವೆ.

ಶ್ರೀ ನಾಗರಾಜ ಚಿತ್ರಮಂದಿರ, ಮೋತಿಲಾಲ್ ಎಂಬ ಹೆಸರಿನಲ್ಲಿ ೧೯೪೯ರಲ್ಲಿ ಆರಂಭವಾಗಿ, ನಂತರ ಶ್ರೀ ಎಂಬ ಪುನರ್‌ನಾಮಕರಣ ಪಡೆದು, ಈಗ ಅಶೋಕ್‌ಗುಪ್ತ ಅವರ ನಿರ್ವಹಣೆಯಲ್ಲಿ ಶ್ರೀ ನಾಗರಾಜ ಆಗಿರುವ ಈ ಚಿತ್ರಮಂದಿರ ೬೧೯ ಆಸನಗಳು ಹಾಗೂ ಆಧುನಿಕ ತಂತ್ರಜ್ಞಾನ ಸೌಲಭ್ಯವನ್ನು ಹೊಂದಿದ. ಪ್ರಾರಂಭದಲ್ಲಿ ಕನ್ನಡ, ತಮಿಳು ಚಿತ್ರಗಳು ಹೆಚ್ಚಾಗಿ ಪ್ರದರ್ಶಿತವಾಯಿತಾದರೂ ಈಗ ಹಿಂದಿ ಚಿತ್ರಗಳಿಗೆ ಇಲ್ಲಿ ಪ್ರಾಧಾನ್ಯ.

ಸಂಗಮ್ ಚಿತ್ರಮಂದಿರ, ವಿಶಾಲವಾದ ಗಾರ್ಡನ್ ಹೋಟೇಲ್ ಇದ್ದ ಸ್ಥಳದಲ್ಲಿ ಈ ಚಿತ್ರಮಂದಿರ ವಿಶಾಲವಾದ ಸ್ಥಳದಲ್ಲಿ ಆಲಂಕಾರಿಕ ಉದ್ಯಾನವನ, ಅನುಕೂಲಕರವಾದ ವಾಹನ ನಿಲುಗಡೆಗೆ ಸ್ಥಳಾವಕಾಶಗಳೊಡನೆ ಶ್ರೀಕಂಠದತ್ತ ನರಸಿಂಹರಾಜ ಒಡೆಯರಿಂದ ೧೯೭೧ರ ಆಗಸ್ಟ್ ೪ರಂದು ಉದ್ಘಾಟನೆಗೊಂಡಿತು.

ಆರ್.ಎನ್.ಪಾಂಡ್ರೆಯವರ ಪಾಲುದಾರಿಕೆಯಲ್ಲಿ ನಡೆಯುತ್ತಿರುವ ಈ ಚಿತ್ರಮಂದಿರ ವೆಸ್ಟ್ರೆಕ್ಸ್ ಪ್ರೊಜೆಕ್ಟರ್, ಡಿ.ಟಿ.ಎಸ್ ಸೌಂಡ್ ಸಿಸ್ಟಮ್ ಸೌಲಭ್ಯಗಳನ್ನು ಹೊಂದಿದೆ. ಸಿನಿಮಾ ಸ್ಕೋಪ್ ತೆರೆ ಹೊಂದಿರುವ ಈ ಚಿತ್ರಮಂದಿರದಲ್ಲಿ ೯೬೨ ಪುಷ್‌ಬ್ಯಾಕ್ ಆಸನಗಳಿವೆ. ಆರಂಭದಲ್ಲಿ ಹಿಂದಿ, ತಮಿಳು ಚಿತ್ರಗಳಿಗೆ ಒತ್ತು ನೀಡುತ್ತಿದ್ದರೂ ನಿಧಾನವಾಗಿ ಕನ್ನಡ ಚಿತ್ರಗಳಿಗೆ ಆದ್ಯತೆ ಸಿಗಲಾರಂಭಿಸಿತು. 'ರಾಮಾಚಾರಿ', 'ಉಪೇಂದ್ರ', 'A.K. 47' ಇಲ್ಲಿ ಶತದಿನೋತ್ಸವ ಆಚರಿಸಿದರೆ 'ಆನಂದ್' ರಜತಮಹೋತ್ಸವ ಆಚರಿಸಿದೆ. ಇದು ಇಲ್ಲಿನ ಪ್ರಥಮ ಹವಾನಿಯಂತ್ರಿತ ಚಿತ್ರಮಂದಿರ.

ಶಾಲಿಮಾರ್, ಮೈಸೂರಿನ ಪ್ರಥಮ ಹವಾನಿಯಂತ್ರಿತ ಮಿನಿ ಚಿತ್ರಮಂದಿರವಾದ ಇಲ್ಲಿ ೩೬೫ ಆಸನಗಳಿವೆ. ಸುಸಜ್ಜಿತವಾದ ಈ ಚಿತ್ರಮಂದಿರದಲ್ಲಿ ಹಿಂದಿ ಹಾಗೂ ಇಂಗ್ಲಿಷ್ ಚಿತ್ರಗಳೇ ಹೆಚ್ಚು ತೆರೆಕಂಡಿವೆ. ಎಂ.ವಿ.ಅಜಿತ್‌ಕುಮಾರ್ ಈ ಚಿತ್ರ ಮಂದಿರದ ಮಾಲೀಕರು.

ಶಾಂತಲಾ ಚಿತ್ರಮಂದಿರ, ಪವಕಿ ಮತ್ತು ಟಿಪ್‌ಸನ್ ಮಾಲೀಕತ್ವದಲ್ಲಿ ೧೯೭೪ರಲ್ಲಿ ಆರಂಭವಾದ ಶಾಂತಲಾ ಚಿತ್ರಮಂದಿರ ೯೩೦ ಆಸನಗಳು, ಹವಾನಿಯಂತ್ರಣ, ಡಿ.ಟಿ.ಎಸ್ ಧ್ವನಿ, ಸಿನಿಮಾ ಸ್ಕೋಪ್ ತೆರೆ ಮುಂತಾದ ವ್ಯವಸ್ಥೆಗಳನ್ನು ಒಳಗೊಂಡಿದೆ. ಕನ್ನಡ ಚಿತ್ರಗಳಿಗೆ ಆದ್ಯತೆ ನೀಡುತ್ತಿರುವ ಈ ಚಿತ್ರಮಂದಿರದಲ್ಲಿ 'ಬಂಗಾರದ ಮನುಷ್ಯ', 'ಭಕ್ತ ಕುಂಬಾರ', 'ನಾ ನಿನ್ನ ಮರೆಯಲಾರೆ', 'ದೇವರ ಗುಡಿ', 'ಶುಭಮಂಗಳ', 'ಅಂತ' ಮೊದಲಾದ ಚಿತ್ರಗಳು ಶತದಿನ ಕಂಡವು. 'ನಾನು ನನ್ನ ಹೆಂಡ್ತೀರು' ೫೦ ದಿನಗಳು ಪ್ರದರ್ಶನಗೊಂಡರೆ 'ಹೊಸಬೆಳಕು', 'ಇಂಡಿಯನ್', 'ಅಮೆರಿಕಾ ಅಮೆರಿಕಾ'



(ಚಿತ್ರ ೧೮) ಶಾಂತಲ ಚಿತ್ರಮಂದಿರ



(ಚಿತ್ರ ೧೯) ಸರಸ್ವತಿ ಚಿತ್ರಮಂದಿರ

೨೫ ವಾರ ಪ್ರದರ್ಶಿತವಾಗಿವೆ. ೧೯೯೯ರಲ್ಲಿ ರಜತ ಮಹೋತ್ಸವ ಆಚರಿಸಿದ ಈ ಚಿತ್ರಮಂದಿರ 'ಉತ್ತಮ ಚಿತ್ರ ಮಂದಿರ' ಪ್ರಶಸ್ತಿಯನ್ನು ಪಡೆದಿದೆ. ಇಲ್ಲಿ ಬಿಡುಗಡೆಯಾದ ಪ್ರಥಮ ಚಿತ್ರ - ಬಂಗಾರದ ಪಂಜರ.

ಲಿಡೋ ಚಿತ್ರಮಂದಿರ, ಅಜಿತ್‌ಕುಮಾರ್ ಅವರ ಕಾರ್ಯ ನಿರ್ವಾಹಕ ಪಾಲುಗಾರಿಕೆಯಲ್ಲಿರುವ ಲಿಡೋ, ಫೋಟೋ ಫೋನ್ ಪ್ರೊಜೆಕ್ಟರ್ ಆರು ಟ್ರ್ಯಾಕ್, (೭೦ ಎಂ.ಎಂ) ಧ್ವನಿ ವ್ಯವಸ್ಥೆ ಹೊಂದಿದೆ. ಈ ಚಿತ್ರಮಂದಿರದಲ್ಲಿ ೮೫೬ ಆಸನಗಳಿವೆ. 'ಸಂಪತ್ತಿಗೆ ಸವಾಲ್' ಚಿತ್ರದ ಮೂಲಕ ಚಿತ್ರಮಂದಿರವನ್ನು ಉದ್ಘಾಟಿಸಲಾಯಿತು. 'ಸಂಪತ್ತಿಗೆ ಸವಾಲ್', 'ಮಯೂರ', 'ಚಲಿಸುವ ಮೋಡಗಳು' ಶತದಿನೋತ್ಸವ ಆಚರಿಸಿದರೆ 'ಬಂಧನ' ೨೫ ವಾರಗಳ ಪ್ರದರ್ಶನ ಕಂಡಿತು.

ತಿಬ್ಬಾದೇವಿ, ೧೯೭೫ರಲ್ಲಿ ಪಿ.ಶಿವಣ್ಣನವರ ಮಾಲೀಕತ್ವದಲ್ಲಿ ಆಧುನಿಕ ತಂತ್ರಜ್ಞಾನ ಸೌಲಭ್ಯದೊಂದಿಗೆ ಆರಂಭವಾದ ಈ ಚಿತ್ರಮಂದಿರದಲ್ಲಿ ೬೭೬ ಆಸನಗಳಿವೆ. ಈ ಚಿತ್ರಮಂದಿರದಲ್ಲಿ ಕನ್ನಡಕ್ಕೆ ಆದ್ಯತೆ.

ರತ್ನ, ಎಂ.ಸಿ.ಶಿವಕುಮಾರ್ ಮಾಲೀಕತ್ವದಲ್ಲಿ ೧೯೭೭ರಲ್ಲಿ ಆರಂಭವಾದ ಈ ಚಿತ್ರಮಂದಿರ ೫೬೨ ಆಸನಗಳನ್ನು ಹೊಂದಿದೆ.

ಮೈಸೂರಿನಲ್ಲಿ ಪ್ರಥಮ ಬಾರಿಗೆ ಅವಳಿ ಚಿತ್ರ ಮಂದಿರಗಳಾಗಿ ಸ್ಕೈಲೈನ್ ಹಾಗೂ ಸ್ಟರ್ಲಿಂಗ್ ಚಿತ್ರಮಂದಿರಗಳು ರೂಪುಗೊಂಡವು. ಅವರ ಸ್ಕೈಲೈನ್ ಮೊದಲೇ ಮುಚ್ಚಲ್ಪಟ್ಟು, ಸ್ಟರ್ಲಿಂಗ್ ೨೦೦೦ನೇ ಫೆಬ್ರವರಿ ೧೮ರಂದು ಮುಚ್ಚಿತು. ಈಗ ಸ್ಟರ್ಲಿಂಗ್ ಕಲ್ಯಾಣ ಮಂಟಪವಾಗಿ ರೂಪುಗೊಂಡಿದೆ. ಸ್ಕೈಲೈನ್ ಮತ್ತೆ ಜೀವ ಪಡೆಯುವ ಹಂತದಲ್ಲಿದೆ.

ರೀಜೆನ್ಸಿ ಚಿತ್ರಮಂದಿರ, ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರ ಮಾಲೀಕತ್ವದಿಂದಾಗಿ ರಾಜ ಮನೆತನದವರ ಚಿತ್ರಮಂದಿರವೆಂಬ ಭಾವನೆ ಜನರಲ್ಲಿ ಮೂಡಿತ್ತು. ೧೯೭೭ರ ಫೆಬ್ರವರಿ ೨೫ರಂದು ಮುಖ್ಯಮಂತ್ರಿ ದೇವರಾಜ ಅರಸ್ ಉದ್ಘಾಟಿಸಿದಾಗ ಇದಕ್ಕೆ ಶ್ಯಾಮಸುಂದರ್ ಎಂಬ ಹೆಸರಿಡಲಾಗಿತ್ತು. ೭೫೦ ಆಸನಗಳ ಈ ಸುವ್ಯವಸ್ಥಿತ ಚಿತ್ರಮಂದಿರ ಈಗ ಸ್ಥಗಿತಗೊಂಡಿದೆ.

ಸರಸ್ವತಿ, ಸಿ.ಜಿ.ನಾರಾಯಣ್, ಕೆ.ಬಿ.ಹರೀಶ್ ಮತ್ತು ಕೆ.ಆರ್.ಪ್ರದೀಪ್ ಇವರ ಮಾಲೀಕತ್ವದಲ್ಲಿ ೧೯೮೬ರಲ್ಲಿ ಆರಂಭವಾದ ಚಿತ್ರಮಂದಿರ. ಮೈಸೂರಿನಲ್ಲಿ ಮೊದಲ ಬಾರಿಗೆ ಫೋರ್ ವೇ ಮಲ್ಟಿ ಟ್ರ್ಯಾಕ್ ಅಳವಡಿಸಿಕೊಂಡಿರುವ ಖ್ಯಾತಿಗೆ ಪಾತ್ರವಾಗಿದೆ.

ಗೋಕುಲ್, ೧೯೮೨ರಲ್ಲಿ ಕೆ.ಭೀಮಯ್ಯನವರ ಮಾಲೀಕತ್ವದಲ್ಲಿ ಆರಂಭವಾದ ಚಿತ್ರಮಂದಿರ. ೬೭೭ ಆಸನಗಳುಳ್ಳ ಈ ಚಿತ್ರಮಂದಿರದಲ್ಲಿ ಕನ್ನಡ ಚಿತ್ರಗಳಿಗೇ ಆದ್ಯತೆ.

ಮೈಸೂರಿನ ಪ್ರಮುಖ ಚಿತ್ರಮಂದಿರಗಳಲ್ಲಿ ಶಾಲಿಮಾರ್ (ಮಿನಿ), ತಿಬ್ಬಾದೇವಿ, ರತ್ನ, ಸರಸ್ವತಿ, ಉಮಾ, ಶ್ರೀ ನಾಗರಾಜ ಮತ್ತು ಗೋಪಾಲ್ ಯಶಸ್ವಿಯಾಗಿ ನಡೆಯುತ್ತಿರುವ ಚಿತ್ರಮಂದಿರಗಳು. ಅವರ ಸಾಕಷ್ಟು ಚಿತ್ರಮಂದಿರಗಳು ಛತ್ರಗಳಾಗಿ, ಸರ್ಕಾರಿ ಕಛೇರಿಗಳಾಗಿ ಬದಲಾಗಿವೆ. ಕಲವೆಡೆ ಕಾಂಪ್ಲೆಕ್ಸ್‌ಗಳು ನಿರ್ಮಾಣವಾಗಿವೆ. ಹಿಂದೆ ಉತ್ತಮ ಕೌಟುಂಬಿಕ ಚಿತ್ರಗಳನ್ನು ಪ್ರದರ್ಶಿಸುತ್ತಿದ್ದ ವಿದ್ಯಾರಣ್ಯ ಚಿತ್ರಮಂದಿರ ಇಂದು ಆದಾಯ ತೆರಿಗೆ ಕಛೇರಿಯಾಗಿದೆ. ಶ್ರೀನಿವಾಸ ಚಿತ್ರಮಂದಿರದ ಮಾಲೀಕರು ನವೀಕರಣಗೊಳಿಸಿ ಗುತ್ತಿಗೆಗೆ ಅದನ್ನು ಕೊಡಲು ತಯಾರಾಗಿದ್ದಾರೆ. ಇದು ಮೈಸೂರಿನ ಚಿತ್ರಮಂದಿರಗಳ ಕಥೆ.

ಉಡುಪಿ : ಇಲ್ಲಿ ಕಳೆದ ಆರು ದಶಕಗಳಿಂದ ಸಿನಿಮಾ ಪ್ರದರ್ಶನವನ್ನು ಯಶಸ್ವಿಯಾಗಿ ನಡೆಸುತ್ತಿರುವ ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಎನ್ನುವ ಸಾರ್ವಜನಿಕ ಶೇರುದಾರರ ಸಂಸ್ಥೆಯಲ್ಲಿ ನಾಲ್ಕು ದಶಕಗಳ ಕಾಲ ಸಂಸ್ಥಾಪಕ ನಿರ್ದೇಶಕರಾಗಿ ದುಡಿದಿರುವ ಉಡುಪಿ ಪೆಹಲ್ವಾನರೆಂದೇ ಜನಪ್ರಿಯರಾಗಿದ್ದ ಶೀನಶೆಟ್ಟಿಯವರು ಉಡುಪಿಯ ಚಿತ್ರಮಂದಿರಗಳ ಇತಿಹಾಸವನ್ನು ಈ ರೀತಿ ನಿರೂಪಿಸುತ್ತಾರೆ:

ಉಡುಪಿಯ ಅತ್ಯಂತ ಹಳೆಯ ಆಸ್ಪತ್ರೆ ಎನಿಸಿರುವ ಮಿಷನ್ ಆಸ್ಪತ್ರೆ ಕಂಪೌಂಡ್ ಪ್ರದೇಶದ ಬಯಲಲ್ಲಿ ಹಿಂದೆ ಟೂರಿಂಗ್ ಸರ್ಕಸ್‌ಗಳು ಡೇರೆ ಹಾಕುತ್ತಿದ್ದವು. ಅಂದಿನ ದಿನಗಳಲ್ಲಿ ಸರ್ಕಸ್ ಕಂಪನಿಗಳಂತೆ ಸಿನಿಮಾ ಪ್ರದರ್ಶನ ಮಾಡುತ್ತಿದ್ದ ಸ್ಥಳಗಳಿಗೂ ಟೂರಿಂಗ್ ಟಾಕೀಸ್ ಕಂಪನಿಗಳೆಂದೇ ಹೆಸರು. ಬೇರೆ ಕಡೆಗಳಲ್ಲಿ ಬಟ್ಟೆಗಳಿಂದ ರಚಿಸುತ್ತಿದ್ದ ಡೇರೆಗಳಿರುತ್ತಿದ್ದರೆ ಈ ಕರಾವಳಿ ಪ್ರದೇಶದಲ್ಲಿ ತೆಂಗಿನ ಸೋಗೆಗಳಲ್ಲಿ ರಚಿಸಲ್ಪಡುವ ಚಪ್ಪರದ ಥಿಯೇಟರ್‌ಗಳನ್ನು ನಿರ್ಮಿಸಲಾಗುತ್ತಿತ್ತು. ಉಡುಪಿಯ ಅಜ್ಜರಕಾಡು ಪ್ರದೇಶ ಕೂಡ ಆ ದಿನಗಳಲ್ಲಿ ಟೂರಿಂಗ್‌ಟಾಕೀಸ್‌ಗಳನ್ನು ನಡೆಸುವ ತಾಣವಾಗಿತ್ತು.

ಮಂಗಳೂರಿನಲ್ಲಿ ಮೂವತ್ತರ ದಶಕದಲ್ಲಿ ಕೃಷ್ಣೋಜಿ ಎಂಬುವವರು ಟೂರಿಂಗ್ ಥಿಯೇಟರ್ ಉದ್ಯಮಕ್ಕೆ ಕೈ ಹಾಕಿದವರಲ್ಲಿ ಮೊದಲಿಗರು. ಆಗ ಮೂಕಿ ಚಿತ್ರಗಳು ನಡೆಯುತ್ತಿದ್ದುದರಿಂದ ಜನರು ಈ ಸಂಚಾರಿ ಟೆಂಟ್‌ಗಳನ್ನು ಸೈಲೆಂಟ್ ಥಿಯೇಟರ್ ಎಂದೇ ಕರೆಯುತ್ತಿದ್ದರು. ಆಗ ಉಡುಪಿಯ ಸುತ್ತಮುತ್ತಲ ಪ್ರದೇಶವಾದ ಬಾರಕೂರು, ಸಾಲಿಗ್ರಾಮ, ಬ್ರಹ್ಮಾವರ ಮೊದಲಾದ ಕಡೆ ಚಿತ್ರಪ್ರದರ್ಶನ ನಡೆಯುತ್ತಿತ್ತು. ಹೆಚ್ಚಾಗಿ ಮಾಸ್ಟರ್ ವಿಠಲ್ ಮತ್ತು ನಾಡಿಯಾ ಅಭಿನಯಿಸಿದ ಸ್ಟಂಟ್ ಚಿತ್ರಗಳು ಯಶಸ್ವಿಯಾಗಿ ಪ್ರದರ್ಶಿತವಾಗುತ್ತಿದ್ದವು.

ಅಂದಿನ ಸಂಚಾರಿ ಚಿತ್ರಮಂದಿರಗಳಲ್ಲಿ ಕೆಲವೊಂದು ಜನಪ್ರಿಯ ಚಿತ್ರಗಳಿಗೆ ಸನ್ನಿವೇಶಕ್ಕೆ ತಕ್ಕಂತೆ ಸ್ಥಳೀಯ ನಾಟಕಕಾರರು ಬರೆದ ಸಂಭಾಷಣೆಗಳನ್ನು ತೆರೆಯ ಮರೆಯಲ್ಲಿ ನಿಂತ ವ್ಯಕ್ತಿಗಳಿಂದ ಮೈಕ್‌ನಲ್ಲಿ ಹೇಳಿಸುವ ವ್ಯವಸ್ಥೆಯನ್ನು ಮಾಡಲಾಗುತ್ತಿತ್ತು. ಇದರಿಂದ ಮೂಕಿ ಚಿತ್ರಗಳನ್ನು ನೋಡುವಾಗಲೂ ಪ್ರೇಕ್ಷಕರಿಗೆ ಟಾಕಿ ಚಿತ್ರಗಳನ್ನು ನೋಡಿದ ಅನುಭವವಾಗುತ್ತಿತ್ತು.

ಕೆಲವೊಮ್ಮೆ ಮುಂಬಯಿ, ಕಾಶ್ಮೀರದ ಕಡೆಯಿಂದ ಬರುವ ನೃತ್ಯ ತಂಡಗಳಿಂದ ಆಕರ್ಷಕವೆನಿಸುವ ಸಿನಿಮಾ ಮಾದರಿ ನೃತ್ಯಗಳನ್ನು ಏರ್ಪಡಿಸಲಾಗುತ್ತಿತ್ತು. ಅಂಥ ನೃತ್ಯಗಳನ್ನು ಜನ ಸಿನಿಮಾದ ಒಂದು ಭಾಗವೆಂದೇ ಭಾವಿಸುತ್ತಿದ್ದರು. ಅಂದಿನ ದಿನಗಳಲ್ಲಿ ಮೂಕಿ ಚಿತ್ರಗಳನ್ನು ಪ್ರದರ್ಶಿಸುತ್ತಿದ್ದ ಕೆಲವು ಸಂಚಾರಿ ಚಿತ್ರಮಂದಿರಗಳೆಂದರೆ ವಾಣಿ, ಅಶೋಕ, ಗುರುಪ್ರಸಾದ್ ಇತ್ಯಾದಿ. ಉಡುಪಿಯಲ್ಲಿ ಡಾ|ಪಿ.ಜಿ.ಆಚಾರ್ಯ ಹಾಗೂ ಅವರ ಸಹೋದರರು ಸಂಚಾರಿ ಥಿಯೇಟರ್ ಉದ್ಯಮಕ್ಕೆ ತೊಡಗಿದವರಲ್ಲಿ ಮೊದಲಿಗರು.

ಉಡುಪಿಯಲ್ಲಿ ೧೯೩೫ರ ಸುಮಾರಿಗೆ ಅಜ್ಜರಕಾಡಿನಲ್ಲಿ ಅಂದು ಹಾಕಲಾಗಿದ್ದ ಟೆಂಟ್ ಸಿನಿಮಾ ಥಿಯೇಟರ್ ಅಗ್ನಿ ಅನಾಹುತದಲ್ಲಿ ಸುಟ್ಟು ಹೋಯಿತು. ಮದ್ರಾಸ್ ಪ್ರೆಸಿಡೆನ್ಸಿಯ ಅಂದಿನ ಚುನಾವಣೆಯ ಸಂದರ್ಭದಲ್ಲಿಯೇ ಈ ಅಗ್ನಿ ಅನಾಹುತ ಸಂಭವಿಸಿತು. ಹೆಚ್ಚು ಕಡಿಮೆ ಈ ಅಗ್ನಿ ಅನಾಹುತದಿಂದಾಗಿ ಉಡುಪಿ ಬಳಿಯ ಸಂಚಾರಿ ಚಿತ್ರ ಮಂದಿರಗಳ ಅವಸಾನ ಆರಂಭವಾಯಿತು.

ಡಾ|ಟಿ.ಎಂ.ಎ.ಪೈ ಅವರ ಸಹೋದರರಾದ ಉಪೇಂದ್ರ ಪೈಗಳು ಉಡುಪಿಯಲ್ಲಿ ವ್ಯವಸ್ಥಿತ ಕಟ್ಟಡದಲ್ಲಿ ಸಿನಿಮಾ ಪ್ರದರ್ಶನ ಆರಂಭಿಸಲು ಕಾರಣವಾದರು. ಇದರಿಂದಾಗಿ ೧೯೪೮ ಅಕ್ಟೋಬರ್ ೩೧ ರಂದು ರಾಮಕೃಷ್ಣ ಚಿತ್ರಮಂದಿರ ಆರಂಭವಾಯಿತು. ಉಡುಪಿಯ ಪ್ರಮುಖ ರಸ್ತೆಯಾದ ಕವಿಮುದ್ದಣ್ಣ ಮಾರ್ಗದಲ್ಲಿ ಇರುವ ಇಂದಿನ ಅಲಂಕಾರ್ ಚಿತ್ರಮಂದಿರವೇ ಆಗಿನ ರಾಮಕೃಷ್ಣ ಥಿಯೇಟರ್. ಉಪೇಂದ್ರ ಪೈಗಳು ರಾಮಕೃಷ್ಣ ಪರಮಹಂಸರ ಪರಮ ಭಕ್ತರಾದುದರಿಂದ ಆ ಹೆಸರನ್ನು ಇಟ್ಟಿದ್ದರು. ಆಗ ಸಂಜೆ ಹಾಗೂ ರಾತ್ರಿಯ ಪ್ರದರ್ಶನಗಳು ಮಾತ್ರ ಇದ್ದವು. ಹಾಗಾಗಿ ಬೆಳಿಗ್ಗೆಯಿಂದ ಸಂಜೆಯವರೆಗೆ ಆ ಚಿತ್ರಮಂದಿರದಲ್ಲಿ ಆಧ್ಯಾತ್ಮಿಕ ಕಾರ್ಯಕ್ರಮಗಳು ನಡೆಯುತ್ತಿದ್ದವು.

(ಚಿತ್ರ ೨೦) ಕುಮಟಾದ ಚಿತ್ತರಂಜನ್ ಚಿತ್ರಮಂದಿರ (೧೯೩೯)

(ಚಿತ್ರ ೨೧) ಕುಮಟಾದ ನವೀಕೃತ ಚಿತ್ತರಂಜನ್ ಚಿತ್ರಮಂದಿರ (೧೯೫೨)

ಹಾಗೆಯೇ ಉಡುಪಿಯನ್ನು ಸಂದರ್ಶಿಸುವ ಹೊರನಾಡಿನ ನೃತ್ಯ ತಂಡಗಳು, ನಾಟಕ ತಂಡಗಳು ಇದೇ ಮಂದಿರದಲ್ಲಿ ಪ್ರದರ್ಶನ ನೀಡುತ್ತಿದ್ದವು.

ಇದೇ ಸಮಯದಲ್ಲಿ ಗೀತಾಂಜಲಿ, ಪೂರ್ಣಿಮಾ, ಮಂಜುನಾಥ, ಶಂಕರ್ ಮುಂತಾದ ಚಿತ್ರಮಂದಿರಗಳು ಆರಂಭವಾಗಿ ಪ್ರದರ್ಶನ ಮಂದಿರಗಳ ಬೆಳವಣಿಗೆಗೆ ಪೂರಕವಾದವು.

ಉಡುಪಿ ಜಿಲ್ಲೆಯಂತೆ ಉತ್ತರ ಕರ್ನಾಟಕ ಜಿಲ್ಲೆಯಲ್ಲೂ ಚಿತ್ರ ಪ್ರದರ್ಶನ ಬೆಳೆದು ಬಂದ ಇತಿಹಾಸ ವಿಶೇಷವಾಗಿಯೇ ಇದೆ. ರಂಗಭೂಮಿಯನ್ನೇ ನೆಚ್ಚಿಕೊಂಡಿದ್ದ ಕಾಲದಲ್ಲಿ ಅದಕ್ಕಿಂತ ಭಿನ್ನವಾದ ತಂತ್ರಜ್ಞಾನದೊಂದಿಗೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಬೆಳ್ಳಿ ತೆರೆಯ ಸಿನಿಮಾ ಪ್ರಪಂಚ ತಳವೂರಲು ಕಾರಣರಾದ ವ್ಯಕ್ತಿ ನರಹರಿ ರಾಯ್ಕರ್. ಉತ್ತರ ಕನ್ನಡ ಜಿಲ್ಲೆಗೆ ಸಿನಿಮಾ ಎಂಬ ಮಾಯಾಲೋಕ ಕಾಲಿಟ್ಟಿದ್ದು ೧೯೪೨ರ ವೇಳೆಗೆ.

ಇದಕ್ಕೂ ಮೊದಲು ಅನುಕೂಲವಿದ್ದವರು ದೂರದ ಪಟ್ಟಣಕ್ಕೆ ಹೋಗಿ ಸಿನಿಮಾ ನೋಡುತ್ತಿದ್ದರು. ಆದರೆ ಬಡವರಿಗೆ ಇದು ಸಾಧ್ಯವಿರಲಿಲ್ಲ. ಇದಕ್ಕಿಂತ ಹೆಚ್ಚಾಗಿ ಸಿನಿಮಾ ವೀಕ್ಷಣೆ ಮಡಿವಂತಿಕೆಗೆ ವಿರುದ್ಧವೆನ್ನುವ ವಾತಾವರಣವಿತ್ತು. ಇಂಥ ಸಮಯದಲ್ಲಿ ಸಿನಿಮಾ ಪ್ರದರ್ಶನವನ್ನು ಉತ್ತರ ಕನ್ನಡ ಜಿಲ್ಲೆಗೂ ತಂದ ಕೀರ್ತಿ ನರಹರಿ ರಾಯ್ಕರ್ ಅವರದು. ತಮ್ಮ ಹನ್ನೆರಡರ ವಯಸ್ಸಿನಲ್ಲಿ ಸಿನಿಮಾ ಗೀಳು ಅಂಟಿಸಿಕೊಂಡ ರಾಯ್ಕರ್ ೧೯೪೨ರ ಹೊತ್ತಿಗೆ ಅದರಲ್ಲೇ ಭಾಗಿಯಾಗಿದ್ದರು. ಕುಮಟಾ ತಾಲೂಕಿನ ಬಾಡಕಾಗಲ್ ಇವರ ಹುಟ್ಟೂರು. ೧೯೪೨ರಲ್ಲಿ ಮೂಕಿ ಚಲನಚಿತ್ರವಾಗಿ ತಯಾರಾದ 'ನಳದಮಯಂತಿ', ಕಪ್ಪು ಬಿಳುಪಿನ ಚಿತ್ರ ಇವನ್ನು ಜಿಲ್ಲೆಯಲ್ಲೇ ಪ್ರಥಮ ಬಾರಿಗೆ ಹೊನ್ನಾವರದಲ್ಲಿ ಪ್ರದರ್ಶನ ಮಾಡಲಾಯಿತು.

ಆದರೆ ಆರಂಭದ ದಿನಗಳು ಆಶಾದಾಯಕವಾಗಿರಲಿಲ್ಲ. ಯಕ್ಷಗಾನ, ಹರಿಕಥೆ ಮುಂತಾದ ಕಲಾಪ್ರಕಾರಗಳಿಗೆ ಒಗ್ಗಿ ಹೋಗಿದ್ದರಿಂದ ಜನ ಅಷ್ಟಾಗಿ ಚಿತ್ರಮಂದಿರದತ್ತ ಬರುತ್ತಿರಲಿಲ್ಲ. ಇದರೊಂದಿಗೆ ಆಗ ಕಂಪನಿ ನಾಟಕಗಳಿಗೆ ಸುಗ್ಗಿ ಕಾಲ.ಹೀಗಾಗಿ ಉತ್ತರ ಕರ್ನಾಟಕದಿಂದ ಚಿತ್ರಮಂದಿರ ಎತ್ತಂಗಡಿಯಾಗುವ ಹಂತ ತಲುಪಿತ್ತು. ಆದರೆ ಛಲ ತೊಟ್ಟ ರಾಯ್ಕರ್ ತಮ್ಮ ಸಂಚಾರಿ ಚಿತ್ರಮಂದಿರದೊಂದಿಗೆ ಸತತ ನಾಲ್ಕು ವರ್ಷಗಳ ಕಾಲ ಜಾತ್ರೆಯ ಸಂದರ್ಭದಲ್ಲಿ ಪ್ರತಿ ತಾಲ್ಲೂಕಿಗೆ ಭೇಟಿ ನೀಡಿ ಹೋರಾಟ ಮಾಡಿದರು. ಆ ಸಮಯದಲ್ಲಿ ಸಿದ್ಧವಾದ ಕಪ್ಪು ಬಿಳುಪಿನ ಪೌರಾಣಿಕ ಚಿತ್ರಗಳನ್ನು ಕುಮಟಾ, ಅಂಕೋಲಾ, ಕಾರವಾರ ಮೊದಲಾದ ಪ್ರದೇಶಗಳಲ್ಲಿ ಪ್ರದರ್ಶಿಸಿ ಮಡಿವಂತರನ್ನು ಸೆಳೆಯುವಲ್ಲಿ ಯಶಸ್ವಿಯಾದರು.

ಸಂಚಾರಿ ಚಿತ್ರಮಂದಿರದ ಪರಿಕರಗಳನ್ನು ಒಂದೆಡೆಯಿಂದ ಇನ್ನೊಂದೆಡೆಗೆ ಸಾಗಿಸುವುದು, ಮತ್ತೆ ಅಲ್ಲಿ ತಳವೂರಲು ಎದುರಾಗುವ ಹತ್ತಾರು ಸಮಸ್ಯೆಗಳನ್ನು ಮೀರಿ ಇದನ್ನು ಸಾಧಿಸುವುದು ಸುಲಭದ ಮಾತಾಗಿರಲಿಲ್ಲ. ಕೆಲವೆಡೆ ಹಾನಿಯಾಗಿ ಚಿತ್ರಮಂದಿರವನ್ನೇ ಮುಚ್ಚಲಾಗಿತ್ತು.

೧೯೪೬ರ ವೇಳೆ ಜಿಲ್ಲೆಯಲ್ಲೇ ಪ್ರಥಮವಾಗಿ ಹೊನ್ನಾವರದಲ್ಲಿ ಖಾಯಂ ಚಿತ್ರಮಂದಿರ ಜನ್ಮ ತಾಳಿತು.ಆಗ ಮೂಕಿ ಚಿತ್ರಗಳು ನಿಂತು ಮಾತಿನ ಚಿತ್ರಗಳ ಭರಾಟೆ ಆರಂಭವಾಗಿತ್ತು. ಇದೇ ಸಮಯದಲ್ಲಿ ಕಾರವಾರ, ಧಾರವಾಡ, ಬೆಳಗಾವಿ, ಬಿಜಾಪುರ, ಗದಗ, ಬಾಗಲಕೋಟೆ, ಹಾವೇರಿ ಜಿಲ್ಲೆಗಳನ್ನು ಫಿಲ್ಮ್ ಟ್ರೇಡ್ ನಲ್ಲಿ ಮುಂಬೈ ಕರ್ನಾಟಕ ವಲಯ ಎಂದು ಗುರುತಿಸಲಾಗಿತ್ತು. ಮುಂಬಯಿ ಸರ್ಕಾರದ ಮುಖ್ಯಸ್ಥರಾಗಿದ್ದ ಮುರಾರ್ಜಿ ದೇಸಾಯಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಜ್ಯೋತಿ ಥಿಯೇಟರ್ಸ್ ಸಹಭಾಗಿತ್ವದ ಚಲನಚಿತ್ರ ಮಂದಿರ ನಿರ್ವಹಣಾ ಸಂಸ್ಥೆಯ ರಚನೆಗೆ ಸರ್ಕಾರದಿಂದ ಪರವಾನಗಿ ನೀಡಿ ಸಂಚಾರಿ ಚಿತ್ರಮಂದಿರದಿಂದ ಖಾಯಂ ಚಿತ್ರಮಂದಿರ ನಿರ್ಮಾಣಕ್ಕೆ ಹೊಸ ರೂಪುರೇಷೆ ನೀಡಿದರು.

೬೦ ಜನ ಸದಸ್ಯರ ಸಹ ಭಾಗಿತ್ವದಲ್ಲಿ ನಿರ್ಮಾಣವಾದ ಜ್ಯೋತಿ ಥಿಯೇಟರ್ ನ ಸ್ಫೂರ್ತಿಯಿಂದ ಜಿಲ್ಲೆಯ ಇತರ ಕಡೆಗಳಲ್ಲೂ ಚಿತ್ರಮಂದಿರ ನಿರ್ಮಾಣ ಪ್ರಕ್ರಿಯೆ ಆರಂಭವಾಯಿತು. ಕ್ರಮೇಣ ಇದರತ್ತ ಜನಾಕರ್ಷಣೆಯೂ ವೃದ್ಧಿಸಿತು. ಚಿತ್ರಮಂದಿರ ನಿರ್ಮಾಣ ಕಾನೂನು ಜಾರಿಗೆ ತಂದ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರು ಸಂಚಾರಿ ಚಿತ್ರಮಂದಿರಗಳನ್ನು ಅರೆಖಾಯಂ ಚಿತ್ರಮಂದಿರಗಳನ್ನಾಗಿ ಪರಿವರ್ತಿಸಿ ಉದ್ಯಮಕ್ಕೆ ಹೊಸ ಚಾಲನೆ ನೀಡಿದರು. ಆರಂಭದಲ್ಲಿ ನರಹರಿ ರಾಯ್ಕರ್ ಅವರ ಒಂದೇ ಒಂದು ಸಂಚಾರಿ ಮಂದಿರವಿದ್ದುದು ಇಂದು ಇಪ್ಪತ್ತು ಚಿತ್ರಮಂದಿರಗಳು ಈ ಜಿಲ್ಲೆಯಲ್ಲಿ ತಲೆಯೆತ್ತಿ ನಿಂತಿವೆ. ಸುಮಾರು ೬೦ ವರ್ಷಗಳ ಕಾಲ ನರಹರಿ ರಾಯ್ಕರ್ ಉತ್ತರ ಕನ್ನಡ ಜಿಲ್ಲೆಯಲ್ಲಿ ಸಿನಿಮಾ ಪ್ರದರ್ಶನದ ಹರಿಕಾರರಾಗಿ ಕೀರ್ತಿಶೇಷರಾಗಿದ್ದಾರೆ. ಈಗ ರಾಯ್ಕರ್ ಥಿಯೇಟರ್ಸ್ ಎಂಬ ಹೆಸರಿನಲ್ಲಿ ಎಂಟು ಚಿತ್ರಮಂದಿರಗಳು ಉತ್ತರ ಕರ್ನಾಟಕದಲ್ಲಿ ಅಸ್ತಿತ್ವದಲ್ಲಿವೆ.

ಈ ಜಿಲ್ಲೆಯಲ್ಲಿ ಪ್ರದರ್ಶನ ಉದ್ಯಮ ಇಷ್ಟು ಭದ್ರವಾಗಿ ಬೇರೂರಿದ್ದರೂ ಕಿರುತೆರೆಯ ಸ್ಪರ್ಧೆಯಿಂದ ಇಲ್ಲಿಯೂ ವ್ಯಾಪಾರ ಕ್ಷೀಣಿಸುತ್ತಿದೆ. ಹೆಂಗಸರು ಧಾರಾವಾಹಿಗಳನ್ನು ನೆಚ್ಚಿಕೊಂಡಿದ್ದರಿಂದ ಅವರು ಚಿತ್ರಮಂದಿರದತ್ತ ಬರುವುದು ಕಡಿಮೆಯಾಗಿ ವಹಿವಾಟು ಕುಂಠಿತಗೊಂಡಿದೆ.

ಇಲ್ಲಿನ ಕುಮಟಾದ ಚಿತ್ತರಂಜನ್ ಚಿತ್ರಮಂದಿರವೂ ತನ್ನದೇ ಇತಿಹಾಸ ಹೊಂದಿದೆ. ೧೯೩೯ರಲ್ಲಿ ಅನಂತ ರಾಮಚಂದ್ರ ಪೈ ಅವರು ಇದನ್ನು ನಿರ್ಮಿಸಿದರು. ಆಗ ಅವರು ಮುಂಬೈನಿಂದ ಆರ್.ಸಿ.ಎ. ಸೌಂಡ್ ಸಿಸ್ಟಮ್, ಪ್ರೊಜೆಕ್ಟರ್ ಹಾಗೂ ಡೀಸೆಲ್ ಇಂಜಿನ್ ತಂದು ತಮ್ಮದೇ ಜಾಗದಲ್ಲಿ ಸುತ್ತಲೂ ತಗಡುಗಳನ್ನು ಕಟ್ಟಿ ಚಿತ್ರಮಂದಿರ ನಿರ್ಮಿಸಿದರು.

೧೯೫೨ರಲ್ಲಿ ಈ ಚಿತ್ರಮಂದಿರವನ್ನು ಮತ್ತಷ್ಟು ಸುಸಜ್ಜಿತಗೊಳಿಸಿ 'ಸತಿ ಅನುಸೂಯಾ' ಚಿತ್ರವನ್ನು ಪ್ರದರ್ಶನ ಮಾಡಿದರು. ೧೯೭೪ರ ಹೊತ್ತಿಗೆ ಹೊಸ ಆಡಳಿತ ಮಂಡಳಿ ಚಿತ್ತರಂಜನ್ ಟಾಕೀಸ್‌ನ ನಿರ್ವಹಣೆ ಹೊತ್ತುಕೊಂಡಿತು. ಡಿಲಕ್ಸ್ ಎಂಟರ್ ಪ್ರೈಸಸ್ ಹೆಸರಿನಲ್ಲಿ ನಾಲ್ವರು ಪಾಲುದಾರರು ಇದರ ನಿರ್ವಹಣೆಯ ಜವಾಬ್ದಾರಿ ಹೊತ್ತರು. ೧೯೭೯ರಲ್ಲಿ ಎರಡು ವೆಸ್ಟ್ರೆಕ್ಸ್ ಪ್ರೊಜೆಕ್ಟರ್ ಹಾಗೂ ಉತ್ತಮ ಸೌಂಡ್ ಸಿಸ್ಟಮ್ ಅಳವಡಿಸಲಾಯಿತು. ಹೀಗೆ ಬೆಳೆಯುತ್ತಾ ಬಂದ ಚಿತ್ತರಂಜನ್ ಚಿತ್ರಮಂದಿರ ೧೯೮೮ರಲ್ಲಿ ಹೊಸ ಕಟ್ಟಡದಲ್ಲಿ ಸುಸಜ್ಜಿತಗೊಂಡು ಉತ್ತಮ ಚಿತ್ರಗಳನ್ನು ಪ್ರದರ್ಶಿಸುತ್ತ ಚಿತ್ರಾಭಿಮಾನಿಗಳನ್ನು ಆಕರ್ಷಿಸುತ್ತಿದೆ.ಇದೇ ರೀತಿ ಕರ್ನಾಟಕ ರಾಜಧಾನಿಯ ಕೆಲವು ಪ್ರಮುಖ ಚಿತ್ರಮಂದಿರಗಳ ಆರಂಭ ಹಾಗೂ ವಿಶೇಷಗಳನ್ನು ಅವಲೋಕಿಸಬಹುದು :

(ಚಿತ್ರ ೨೨) ಎಲ್ಗಿನ್ ಟಾಕೀಸ್

ಬೆಂಗಳೂರಿನ ಚಿತ್ರಮಂದಿರಗಳು

ರಾಜ್ಯದ ಪ್ರಮುಖ ಚಿತ್ರಮಂದಿರಗಳಲ್ಲಿ ಹೆಚ್ಚಿನ ಚಿತ್ರಮಂದಿರಗಳು ಬೆಂಗಳೂರಿನಲ್ಲಿಯೇ ಇರುವುದು ವಿಶೇಷ.ಬೆಂಗಳೂರಿನಲ್ಲಿ ಗೀತಾ ಚಿತ್ರಮಂದಿರ ೧೯೪೯ರಲ್ಲಿ ಆರಂಭವಾಯಿತು. ಸೆಲೆಕ್ಟ್ ಚಿತ್ರಮಂದಿರವಿದ್ದ ಜಾಗದಲ್ಲಿ ಹೊಸದಾಗಿ ನಿರ್ಮಿತವಾದ ಈ ಚಿತ್ರಮಂದಿರ 'ಲಾಹೋರ್' ಚಿತ್ರದೊಂದಿಗೆ ಮೇ ೧ರಂದು ಆರಂಭವಾಯಿತು. ಗೀತಾ ಚಿತ್ರಮಂದಿರ ಈಗ ಉಳಿದಿಲ್ಲ.

ಬೆಂಗಳೂರಿನ ಕೆಂಪೇಗೌಡ ರಸ್ತೆಯಲ್ಲಿ ಈಗ ಮೇನಕಾ ಚಿತ್ರಮಂದಿರವಿರುವ ಸ್ಥಳದಲ್ಲಿ ಹಿಂದೆ ಜೈ ಹಿಂದ್ ಚಿತ್ರಮಂದಿರವಿದ್ದಿತು. ಈ ಚಿತ್ರಮಂದಿರ ಮಾಲೀಕರಾದ ಅರಸು ಅವರು ಸ್ವತಃ ಮರಮುಟ್ಟು ತಜ್ಞರಾಗಿದ್ದು ಜೈ ಹಿಂದ್ ಚಿತ್ರಮಂದಿರದ ಕಟ್ಟಡವನ್ನು ವೈಜ್ಞಾನಿಕವಾಗಿ ಸಂಸ್ಕರಿಸಲಾದ ಮರವನ್ನು ಉಪಯೋಗಿಸಿ ಕಟ್ಟಿಸಿದ್ದರು. ಆಗ ಉಪಯೋಗಿಸಿದ ಮರ ಕಬ್ಬಿಣದ ಗರ್ಡರ್-ಪಿಲ್ಲರ್‌ಗಳಿಗಿಂತ ಗಟ್ಟಿಯಾಗಿದ್ದು, ಬಹುಕಾಲ ಬಾಳಿಕೆ ಬರುವಂತಹುದಾಗಿತ್ತು. ಜೈ ಹಿಂದ್ ಅನ್ನು ಕೆಡವಿ ಮೇನಕಾ ನಿರ್ಮಿಸಲಾಯಿತು. ಕನ್ನಡ ಚಿತ್ರಗಳಿಗೆ ಮೇನಕಾ ಪ್ರಮುಖ ಚಿತ್ರಮಂದಿರವಾಗಿದೆ.

ಬೆಂಗಳೂರು ಕಂಪೇಗೌಡ ರಸ್ತೆಯಲ್ಲಿ ಅಲಂಕಾರ್ ಎಂಬ ಚಿತ್ರಮಂದಿರ ೧೯೫೭ರ ಜುಲೈ ತಿಂಗಳಲ್ಲಿ ಪ್ರಾರಂಭವಾಯಿತು. ಈ ಚಿತ್ರಮಂದಿರ ಹೆಸರಿನಷ್ಟೇ ಸುಂದರವಾಗಿತ್ತು. ಇಲ್ಲಿನ ಓರಣ, ವರ್ಣ ವಿನ್ಯಾಸ, ಆಸನಗಳ ಸೌಕರ್ಯ ಮುಂತಾದ ವ್ಯವಸ್ಥೆಗಳು ದಕ್ಷಿಣ ಭಾರತದ ಯಾವುದೇ ಚಿತ್ರಮಂದಿರವನ್ನು ಮೀರಿಸುವಂತಿದ್ದವು. ಕೊನೆಯ ತರಗತಿಯಿಂದ ಮೊದಲನೆ ತರಗತಿಯವರೆಗೂ ಒಂದೇ ರೀತಿಯ ಆಸನ ವ್ಯವಸ್ಥೆಯಿದ್ದು ಚಿತ್ರ ಆರಂಭವಾದ ಮೇಲೂ ಕಾಣುವಂತೆ ಕಾಲ್ಬೆಳಕಿನ ವ್ಯವಸ್ಥೆ ಮಾಡಲಾಗಿತ್ತು. ನೂತನ ಯಂತ್ರಗಳಿಂದ ಸುಸಜ್ಜಿತವಾದ ಈ ಮಂದಿರದಲ್ಲಿ ಪ್ಲಾಸ್ಟಿಕ್ ತೆರೆಯ ಸೌಂದರ್ಯ ಮೋಹಕವಾಗಿತ್ತು. ಪ್ರತ್ಯೇಕ ಪಾರ್ಕಿಂಗ್ ವ್ಯವಸ್ಥೆ ಇತ್ತು. ಹೆಂಗಸರಿಗೆ ಪ್ರತ್ಯೇಕ ಸ್ಥಳ ಇಲ್ಲದಿದ್ದರೂ ಬೇರ ಹಜಾರ ಮತ್ತು ಪ್ರತ್ಯೇಕ ಟಾಯ್ಲೆಟ್ ವ್ಯವಸ್ಥೆ ಮಾಡಲಾಗಿತ್ತು. ಇಲ್ಲಿ ಒಬ್ಬ ಸ್ತ್ರೀ ಸಹಾಯಕಿಯನ್ನು ಏರ್ಪಡಿಸಲಾಗಿತ್ತು. ಈಗ ಅಲಂಕಾರ್ ಚಿತ್ರಮಂದಿರವಿದ್ದ ಜಾಗದಲ್ಲಿ ಅಲಂಕಾರ್ ಪಲ್ಸ್‌ಪ್ಲಾಜ ಎಂಬ ವಾಣಿಜ್ಯ ಸಂಕೀರ್ಣ ತಲೆಯೆತ್ತಿ ನಿಂತಿದೆ.

ಬೆಂಗಳೂರಿನ ಸುಬೇದಾರ್ ಛತ್ರಂ ರಸ್ತೆಯಲ್ಲಿರುವ ತ್ರಿವೇಣಿ ಚಿತ್ರಮಂದಿರ ೧೯೬೫ರಲ್ಲಿ ಆರಂಭವಾಯಿತು. ನಿರಾಡಂಬರ, ಸುಂದರ ಹಾಗೂ ಉತ್ತಮ ಸೌಕರ್ಯ ಈ ಚಿತ್ರಮಂದಿರದ ವಿಶೇಷತೆ. ಮುಂಬೈನ ಪ್ರಸಿದ್ಧ ಆರ್ಕಿಟೆಕ್ಟ್ ಮಾತ್ರೆ ಅವರು ಇದರ ವಿನ್ಯಾಸ ಮಾಡಿದರು. ೧೦೩೦ ಆಸನಗಳಿರುವ ತ್ರಿವೇಣಿಯಲ್ಲಿ ಸೊಗಸಾದ, ವಿಶಾಲವಾದ ಆಡಿಟೋರಿಯಂ ಮತ್ತು ಸ್ಟೀರಿಯೋ ಫೋನಿಕ್ ಧ್ವನಿ ವ್ಯವಸ್ಥೆ ಇದೆ. ೧೯೬೫ರಲ್ಲಿ ಬಿಡುಗಡೆಯಾದ ಸುಚಿತ್ರಾ ಮೂವೀಸ್ ರವರ 'ವಾತ್ಸಲ್ಯ' ಚಿತ್ರದೊಂದಿಗೆ ಈ ಚಿತ್ರಮಂದಿರ ಉದ್ಘಾಟನೆಯಾಯ್ತು. ತ್ರಿವೇಣಿ ಚಿತ್ರಮಂದಿರ ಆಧುನಿಕ ವೆಸ್ಟೆಕ್ಸ್-ಎಸ್ ಮಾದರಿಯ ಡಬಲ್ ಪ್ರೊಜೆಕ್ಟರ್ ಹೊಂದಿದೆ. ರಾಜ್ಯದಲ್ಲೇ ಪ್ರಥಮ ಬಾರಿಗೆ ಇಲ್ಲಿ 'ಪ್ಯಾರಲಾಕ್ಸ್' ಸ್ಕ್ರೀನ್ ಬಳಸಲಾಗಿತ್ತು. ತ್ರಿವೇಣಿ ಚಿತ್ರಮಂದಿರದ ಪಕ್ಕದಲ್ಲೇ ಅಪರ್ಣಾ ಚಿತ್ರಮಂದಿರವಿದೆ. ಇದು ಕನ್ನಡ ಚಿತ್ರಗಳಿಗೆ ಆದ್ಯತೆ ನೀಡುತ್ತಿರುವ ಸುಸಜ್ಜಿತವಾದ ಚಿತ್ರಮಂದಿರ.

ಬೆಂಗಳೂರಿನ ಜಯನಗರ ೪ನೇ ಬ್ಲಾಕಿನಲ್ಲಿ ೧೯೬೭ರಲ್ಲಿ ಆರಂಭವಾದ ನಂದಾ ಕನ್ನಡ ಚಿತ್ರಗಳನ್ನೇ ಪ್ರದರ್ಶಿಸುವ ಮತ್ತೊಂದು ಚಿತ್ರಮಂದಿರ. ಸಾವಿರಕ್ಕೂ ಹೆಚ್ಚು ಆಸನ ವ್ಯವಸ್ಥೆಯುಳ್ಳ ಈ ಚಿತ್ರಮಂದಿರ 'ಗಂಗೆ ಗೌರಿ' ಚಿತ್ರದೊಂದಿಗೆ ಆರಂಭಗೊಂಡಿತು.

೧೯೬೮ರ ಜನವರಿ ೨೨ರಂದು ವಿಧಾನಪರಿಷತ್ ಸದಸ್ಯರೂ ಆಗಿದ್ದ ರಾಜಗೋಪಾಲ್ ಮತ್ತು ಕೆ.ಎ.ಗೋಪಾಲ್ ಅವರ ಜಂಟಿಪ್ರಯತ್ನದಿಂದ ಭಾರತದ ಪ್ರಪ್ರಥಮ ಸಿನೆರಮಾ ಚಿತ್ರಮಂದಿರ ಕಪಾಲಿ ಪ್ರಾರಂಭವಾಯಿತು. ಏಷ್ಯಾದಲ್ಲೇ ಅತಿ ದೊಡ್ಡದಾದ ಈ ಚಿತ್ರಮಂದಿರ ಜಗತ್ತಿನ ಪ್ರಮುಖ ೫೫ ಚಿತ್ರಮಂದಿರಗಳಲ್ಲಿ ಮೂರನೇ ಸ್ಥಾನ ಹೊಂದಿತ್ತು. ತೆರೆಯ ಅಳತೆ ೮೩ ಅಡಿ ಅಗಲ ಹಾಗೂ ೩೩ ಅಡಿ ಎತ್ತರವಿತ್ತು. ಸಿನಿರಮಾಕ್ಕೆ ಬಳಸಲಾಗುವ ನಾಲ್ಕು ಪ್ರೊಜೆಕ್ಟರ್‌ಗಳಿದ್ದವು. ಇದರೊಂದಿಗೆ ೭೦ ಎಂ.ಎಂ. ಹಾಗೂ ೩೫ ಎಂ. ಎಂ ಚಿತ್ರಗಳ ಪ್ರದರ್ಶನಕ್ಕೆ ಉಪಯೋಗಿಸಲಾಗುವ ಮೂರು ಪ್ರೊಜೆಕ್ಟರ್‌ಗಳಿದ್ದವು. ಒಟ್ಟು ೧೪೫೦ ಆಸನಗಳಿರುವ ಈ ಚಿತ್ರಮಂದಿರದಲ್ಲಿ ಸ್ಟೀರಿಯೋ ಫೋನಿಕ್ ಸೌಂಡ್ ಸಿಸ್ಟಮ್ ಇದೆ. ಸಂಪೂರ್ಣ ಹವಾನಿಯಂತ್ರಿತ ಚಿತ್ರಮಂದಿರ. ಆಗ ಈ ಚಿತ್ರಮಂದಿರದ ನಿರ್ಮಾಣಕ್ಕೆ ೩೨ ಲಕ್ಷ ರೂಪಾಯಿಗಳನ್ನು ವ್ಯಯಿಸಲಾಗಿತ್ತು. ಅರ್ನೆಸ್ಟ್ ಮುಸ್ಸರ್ ಈ ಚಿತ್ರಮಂದಿರ ನಿರ್ಮಾಣದ ಸಲಹೆಗಾರರು.

ಕಪಾಲಿ ಚಿತ್ರಮಂದಿರದ ಪ್ರಾರಂಭೋತ್ಸವವೂ ಒಂದು ಹಗರಣವಾಯಿತು. ಆಹ್ವಾನ ಪತ್ರಿಕೆಯಲ್ಲಿ ಮೊರಾರ್ಜಿ ದೇಸಾಯಿಯವರು ಚಿತ್ರಮಂದಿರದ ಉದ್ಘಾಟನೆ ಮಾಡುತ್ತಾರೆಂದು ಪ್ರಕಟಿಸಲಾಗಿತ್ತು. ಆದರೆ ಉದ್ಘಾಟನೆಗೆ ಮೊರಾರ್ಜಿ ದೇಸಾಯಿಯವರು ಬರಲಿಲ್ಲ. ಹೇಳಿಕೆ, ಪ್ರತಿಹೇಳಿಕೆಗಳಾದವು.

ಕರ್ನಾಟಕದಲ್ಲಿ ಆರಂಭವಾಗುವ ಚಿತ್ರಮಂದಿರದಲ್ಲಿ ಆರಂಭದಲ್ಲಿ ಕನ್ನಡ ಚಿತ್ರವನ್ನು ಪ್ರದರ್ಶಿಸಬೇಕೆಂಬುದು ಅಲಿಖಿತ ನಿಯಮ. ಆದರೆ ಕಪಾಲಿ ಚಿತ್ರಮಂದಿರದಲ್ಲಿ ಅಂದು ಕನ್ನಡ ಚಿತ್ರವಿರಲಿಲ್ಲ. ಹಾಗಾಗಿ ಆರಂಭವೇ ಗಲಭೆಯಿಂದಾಯಿತು. ಮುಖ್ಯಮಂತ್ರಿ ನಿಜಲಿಂಗಪ್ಪನವರ ಹೇಳಿಕೆಯ ಪ್ರಕಾರ, ಮೊರಾರ್ಜಿ ದೇಸಾಯಿಯವರು ಉದ್ಘಾಟನೆಗೆ ಬಾರದಿರುವುದಕ್ಕೆ ಚಿತ್ರಮಂದಿರಕ್ಕೆ ಅಗತ್ಯವಾದ ಲೈಸನ್ಸ್ ಇಲ್ಲದಿದ್ದುದೇ ಕಾರಣವೇ ಹೊರತು ಅಂದು ನಡೆದ ಗಲಭೆ ಕಾರಣವಲ್ಲ. ಕಪಾಲಿ ಚಿತ್ರಮಂದಿರದಲ್ಲಿ ಕನ್ನಡ ಚಿತ್ರಪ್ರದರ್ಶನಕ್ಕೆ ಅನಾನುಕೂಲವಿದ್ದಿತು. ಸರ್ಕಾರಮಾದಂಥ ತಾಂತ್ರಿಕ ಕಾರಣಗಳಿಂದ ಕೂಡಲೇ ಇದು ಸಾಧ್ಯವಾಗುತ್ತಿರಲಿಲ್ಲ. ಇಂಥ ಭವ್ಯವಾದ ಕಪಾಲಿ ಚಿತ್ರಮಂದಿರ ೧೯೮೩ರಲ್ಲಿ ಪಕ್ಕದ ಗಂಗಾರಾಮ್ ಕಟ್ಟಡ ಕುಸಿತದ ಪರಿಣಾಮವಾಗಿ ಭೀಕರವಾಗಿ ಜಖಂಗೊಂಡು ಮತ್ತೆ ನವೀಕರಣಗೊಳ್ಳಲು ಕೆಲವು ಸಮಯವೇ ಹಿಡಿಯಿತು. ಆ ವೇಳೆಗಾಗಲೇ ಈ ಚಿತ್ರಮಂದಿರದಲ್ಲಿ ಹಲವಾರು ಕನ್ನಡ ಚಿತ್ರಗಳು ಯಶಸ್ವಿಯಾಗಿ ಪ್ರದರ್ಶನಗೊಂಡಿದ್ದವು. 'ಮಣ್ಣಿನ ಮಗ' ಚಿತ್ರ ಇಲ್ಲಿ ಶತದಿನೋತ್ಸವ ಕಂಡಿತು.

ಅನುಕರಣೀಯ

ಬೆಂಗಳೂರಿನ ಕೆಲವು ಚಿತ್ರಮಂದಿರಗಳಲ್ಲಿ ವ್ಯವಸ್ಥಾಪಕರಾಗಿ ಕೆಲಸ ಮಾಡಿದ ಕೆಲವರು ಎಂದಿಗೂ ನೆನಪಿನಲ್ಲಿ ಉಳಿಯುವಂತಹವರು. ಪ್ರಭಾತ್ ಚಿತ್ರಮಂದಿರದ ಅಪ್ಪಚ್ಚು, ಮಂದಣ್ಣ ಮತ್ತು ನಾಗರಾಜರಾವ್, ಸ್ಟೇಟ್ಸ್‌ನ ಸದಾಶಿವರಾವ್, ಭಾರತ್ ಚಿತ್ರಮಂದಿರದ ಲಕ್ಷ್ಮಣ್, ಮಿನರ್ವದ ಪರಮೇಶ್ವರನ್ (ಮೇಸನ್), ಶಿವಾಜಿಯ ಪಾರೂ ಲಾಲ್, ಕಲ್ಪನಾ ಚಿತ್ರಮಂದಿರದ ಕೃಷ್ಣಮೂರ್ತಿ, ಸಂಗಮ್ ಚಿತ್ರಮಂದಿರದ ಗಜೇಂದ್ರ ಸಿಂಗ್ - ಹೀಗೆ ಕೆಲವರು ಪ್ರೇಕ್ಷಕರು, ಚಿತ್ರೋದ್ಯಮಿಗಳು, ಪತ್ರಕರ್ತರು ಎಲ್ಲರಿಗೂ ಬೇಕಾಗಿದ್ದವರಾಗಿದ್ದರು. ಚಿತ್ರಮಂದಿರದ ಘನತೆಯನ್ನು ಬೆಳಸುವಲ್ಲಿ ಇವರ ಶ್ರಮ ಮಾದರಿಯಾದುದು. ದಶಕಗಳ ಕಾಲ ಚಿತ್ರಮಂದಿರದ ಬಗ್ಗೆ ಪ್ರೇಕ್ಷಕರಲ್ಲಿ-ಉದ್ಯಮಿಗಳಲ್ಲಿ ಉತ್ತಮ ಅಭಿಪ್ರಾಯ ಉಳಿಯುವಂತೆ ಮಾಡುವಲ್ಲಿ, ಚಿತ್ರಮಂದಿರಗಳ ನೈರ್ಮಲ್ಯವನ್ನು ಕಾಪಾಡುವಲ್ಲಿ, ಶಿಸ್ತು-ಸಂಯಮಗಳನ್ನು ಚಿತ್ರಮಂದಿರಗಳಲ್ಲಿ ಮೂಡಿಸುವಲ್ಲಿ, ಚಿತ್ರಾಸಕ್ತರ ಅಭಿರುಚಿಯನ್ನು ಅರಿತು ನಡೆಯುವಲ್ಲಿ ಈ ಮೇಲೆ ಹೇಳಿದವರ ದುಡಿಮೆ ಇಂದಿಗೂ ಅನುಕರಣೀಯ.

(ಚಿತ್ರ ೨೩) ಉಮಾ ಚಿತ್ರಮಂದಿರ

ಹೀಗೆ ಇತಿಹಾಸದಲ್ಲಿ ಪರಿಳಿತ ಕಂಡ ಕಪಾಲಿ ಇಂದಿಗೂ ಬೆಂಗಳೂರು ನಗರದ ಪ್ರಮುಖ ಚಿತ್ರಮಂದಿರವಾಗಿ ಉಳಿದಿದೆ. ಮೇಲ್ತರಗತಿ - ಕೆಳತರಗತಿಗಳೆಲ್ಲ ಸೇರಿ ೧೧೩೧ ಸುಖಾಸೀನಗಳಿದ್ದು, ಆಸನ ಸಾಲುಗಳ ನಡುವೆ ಓಡಾಡಲು - ಕಾಲುಚಾಚಲು ಸಾಕಷ್ಟು ಅಂತರವನ್ನು ಹೊಂದಿದೆ. ೫೨ ಅಡಿ ಅಗಲ - ೨೫ ಅಡಿ ಎತ್ತರದ ಪ್ಲಾಸ್ಟಿಕ್ ಪರದೆ ಹೊಂದಿದೆ.

೧೯೭೦ನೇ ಡಿಸೆಂಬರ್ ೨೫ರಂದು ನಟರಾಜ್ ಹಾಗೂ ಸಂಜಯ ಚಿತ್ರಮಂದಿರಗಳು ಪ್ರಾರಂಭವಾದವು. ಚಿತ್ರಮಂದಿರಗಳ ನಗರವೆಂದು ಖ್ಯಾತಿಯಾದ ಬೆಂಗಳೂರಿನ ೫೬ ಹಾಗೂ ೫೭ನೇ ಚಿತ್ರಮಂದಿರಗಳಿವು.

ತ್ರಿವೇಣಿ ಚಿತ್ರಮಂದಿರದ ಸ್ಥಳ ರಾಜಕಾರಣಿಗಳಾಗಿದ್ದ ಆರ್.ಸುಬ್ಬಣ್ಣ ಮತ್ತು ಅವರ ಸಹೋದರರಿಗೆ ಸೇರಿತು. ಇಲ್ಲಿ ಚಿತ್ರಮಂದಿರ ಕಟ್ಟಿದವರು ಬಿ.ಸಿ.ಎಸ್.ನಾರಾಯಣ್ ಮತ್ತು ಪಾಲುದಾರರು.

ಸಂತೋಷ್ ಚಿತ್ರಮಂದಿರ ಸಹ ಬಿ.ಸಿ.ಎಸ್.ನಾರಾಯಣ್ ಅವರ ನಿರ್ಮಾಣ. ಅಲ್ಲಿ ಶಿಸ್ತು, ಚೊಕ್ಕತನಗಳು ದೇಶದ ಗಮನ ಸೆಳೆದಿತ್ತು. ಭಾರತದಲ್ಲೇ ಉತ್ತಮ ಚಿತ್ರಮಂದಿರವೆಂದು ಉಲ್ಲೇಖವಾಗಿತ್ತು.

ವೆಂಕಪ್ಪ-ತಿಮ್ಮಯ್ಯ ಇವರಿಬ್ಬರ ಪಾಲುದಾರಿಕೆಯಲ್ಲಿ ಒಕ್ಕಲಿಗರ ಸಂಘಕ್ಕೆ ಸೇರಿದ್ದ ಕಲ್ಲು ಕಟ್ಟಡವನ್ನು ಶಾರದ ಚಿತ್ರಮಂದಿರವಾಗಿ ಪರಿವರ್ತಿಸಿದರು. ಅದನ್ನು ಒಡೆದು ಹೊಸದಾಗಿ ಕಟ್ಟಿದ ಅತ್ಯಂತ ವಿಶಾಲ ಚಿತ್ರಮಂದಿರ ಸಂಜಯ. ಈಗ ಅದನ್ನು ಕುವೆಂಪು ಕಲಾಕ್ಷೇತ್ರ ಹೆಸರಿನಲ್ಲಿ ರಂಗಮಂದಿರವಾಗಿ ಪರಿವರ್ತಿಸಲಾಗಿದೆ.

೧೯೭೨ ನವೆಂಬರ್ ೨೪ ರಂದು ಬೆಂಗಳೂರಿನ ಚಾಮರಾಜಪೇಟೆಯ ಬಳಿ ಉಮಾ ಚಿತ್ರಮಂದಿರ ಉದ್ಘಾಟನೆಯಾಯಿತು. ಕಾರ್ಪೊರೇಷನ್ ಬ್ಯಾಂಕ್‌ನ ಸಲಹೆಗಾರ ಬಿ.ವಿ.ಭಂಡಾರಿ ಇದನ್ನು ಉದ್ಘಾಟಿಸಿದರು. ಇದರಲ್ಲಿ ೭೦ ಎಂ.ಎಂ ವಿಶಾಲತೆರೆ ಹಾಗೂ ೧೦೫೦ ಆಸನಗಳಿವೆ. 'ಮರೆಯದ ದೀಪಾವಳಿ' ಪ್ರಥಮವಾಗಿ ಪ್ರದರ್ಶನಗೊಂಡ ಚಿತ್ರ.

ಶಾಂತಿ ಎಂಟರ್‌ಪ್ರೈಸಸ್ ಸಂಸ್ಥೆಯ ಮಾಲೀಕರಾದ ಕೆ.ಚಂಗಮರಾಜು, ಕೆ.ರಾಮರಾಜು, ಹಾಗೂ ಎ.ಎಂ.ಚಂದ್ರಶೇಖರರಾಜು ಉಮಾ ಚಿತ್ರಮಂದಿರವನ್ನು ನಿರ್ಮಿಸಿದರು.

ಜಯನಗರದ ಬಳಿಯ ಯಡಿಯೂರಿನ ಟರ್ಮಿನಸ್‌ನಲ್ಲಿನ ಶಾಂತಿ ಚಿತ್ರಮಂದಿರ ಕನ್ನಡ ಚಿತ್ರಗಳಿಗೇ ಮೀಸಲಾದ ಚಿತ್ರಮಂದಿರವೆನಿಸಿದೆ.

೧೯೭೨ ರಲ್ಲಿ ಮುಖ್ಯಮಂತ್ರಿ ದೇವರಾಜ ಅರಸ್ ಅವರು ಉದ್ಘಾಟಿಸಿದ ಬ್ಲೂಮೂನ್ ಬೆಂಗಳೂರಿನ ೬೧ನೇ ಚಿತ್ರಮಂದಿರ. ಅಂದು ಚಿತ್ರಮಂದಿರಗಳ ಸಂಖ್ಯೆ ಹೆಚ್ಚಿಸಲು ಕರೆ ಕೊಟ್ಟ ಅರಸ್, 'ಬೆಂಗಳೂರಿನಲ್ಲಿಯೇ ಲಕ್ಷಾಂತರ ರೂಪಾಯಿ ವೆಚ್ಚದಲ್ಲಿ ಟಾಕೀಸ್‌ಗಳನ್ನು ನಿರ್ಮಿಸುವ ಉದ್ಯಮಿಗಳು ಅಷ್ಟೇ ಉತ್ಸಾಹದಿಂದ ಹೊರಗಿನ ಊರುಗಳಲ್ಲಿ ಚಿತ್ರಮಂದಿರಗಳನ್ನು ನಿರ್ಮಿಸಬೇಕು' ಎಂದರು. ಅಂದು ಅವರು 'ಪ್ರಾಯಶಃ ಬ್ಲೂಮೂನ್ ಬೆಂಗಳೂರಿನ ಅತ್ಯಂತ ವೈಭವೋಪೇತವಾದ ಚಿತ್ರಮಂದಿರ ಎಂದು ಶ್ಲಾಘಿಸಿದರು'. ಸಾವಿರಕ್ಕೂ ಹೆಚ್ಚು ಆಸನಗಳು, ೭೦ ಎಂ.ಎಂ. ವಿಶಾಲತರ, ೫೦ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ನಿರ್ಮಿತವಾಗಿದ್ದ ಬ್ಲೂಮೂನ್ ಮತ್ತು ಅದರ ಬದಿಯಲ್ಲಿಯೇ ಇದ್ದ ಮಿನಿ ಚಿತ್ರಮಂದಿರ ಬ್ಲೂ ಡೈಮಂಡ್ ಈಗಿಲ್ಲ.

೧೯೭೩ರಲ್ಲಿ ಬೆಂಗಳೂರಿನ ೬೪ನೇ ಚಿತ್ರಮಂದಿರ ಮತ್ತು ನಗರದ ಪ್ರಥಮ ಮಿನಿ ಚಿತ್ರಮಂದಿರ ಸಪ್ನಾ ಕೆಂಪೇಗೌಡ ರಸ್ತೆಯ ನರ್ತಕಿ ಚಿತ್ರಮಂದಿರದ ಆವರಣದಲ್ಲಿ ವೈಭವದಿಂದ ಉದ್ಘಾಟನೆಯಾಯಿತು. ೩೭೫ ಆಸನಗಳಿರುವ ಈ ಚಿತ್ರಮಂದಿರದಲ್ಲಿ ಮೊದಲು ಪ್ರದರ್ಶಿತವಾದ ಕನ್ನಡ ಚಿತ್ರ' ಯಾವ ಜನ್ಮದ ಮೈತ್ರಿ'.

೧೯೭೩ರಲ್ಲಿ ಮೈಸೂರು ರಸ್ತೆಯಲ್ಲಿ ಭವ್ಯವಾದ 'ನಳಂದ' ಚಿತ್ರಮಂದಿರ ಪ್ರಾರಂಭವಾಯಿತು. ೧೧೦೦ ಆಸನಗಳಿರುವ ಈ ಚಿತ್ರಮಂದಿರ ಹವಾನಿಯಂತ್ರಿತ ವ್ಯವಸ್ಥೆ ಹೊಂದಿದೆ.

೧೯೭೩ರ ಯುಗಾದಿ ಹಬ್ಬದಂದು ಬೆಂಗಳೂರಿನ ಚಿತ್ರಪ್ರೇಮಿಗಳಿಗೆ ಹಾಗೂ ಉದ್ಯಮಕ್ಕೆ ವಿಶೇಷ ದಿನ. ಅಂದು ನಗರದಲ್ಲಿ ಮೂರು ಪ್ರಮುಖ ದೊಡ್ಡ ಚಿತ್ರಮಂದಿರಗಳು ಉದ್ಘಾಟನೆಗೊಂಡವು. ಅವುಗಳೆಂದರೆ ಕೆಂಪೇಗೌಡ ರಸ್ತೆಯ ಒಂದೇ ಆವರಣದಲ್ಲಿರುವ ನರ್ತಕಿ ಹಾಗೂ ಸಂತೋಷ್ ಮತ್ತು ಶಿವಾಜಿನಗರದ ಬಸ್ ನಿಲ್ದಾಣದ ಬಳಿ ಇರುವ ಸಂಗೀತ್ ಚಿತ್ರಮಂದಿರ.

ಸಂಗೀತ್‌ನಲ್ಲಿ ೧೨೫೦, ಸಂತೋಷ್‌ನಲ್ಲಿ ೧೨೦೦, ನರ್ತಕಿಯಲ್ಲಿ ೧೧೦೦ ಆಸನಗಳಿವೆ. ೨೫ ಲಕ್ಷ ರೂಪಾಯಿ ವೆಚ್ಚದಲ್ಲಿ ನಿರ್ಮಿತವಾದ ನರ್ತಕಿ ಮತ್ತು ೩೦ ಲಕ್ಷ ರೂಪಾಯಿ ವೆಚ್ಚದ ಸಂತೋಷ್ ಚಿತ್ರಮಂದಿರಗಳನ್ನು ಉದ್ಘಾಟಿಸಿದ ದೇವರಾಜ ಅರಸ್ ಅವರು 'ಬೆಂಗಳೂರಿನಲ್ಲಿ ನಾಡಿನ ಯಾವುದೇ ಭಾಗದ ಚಿತ್ರಮಂದಿರಗಳಿಗೆ ಸಾಟಿಯಾಗಬಲ್ಲ ಚಿತ್ರಮಂದಿರಗಳು ನಿರ್ಮಾಣವಾಗಿರುವುದು ಸಂತೋಷ' ಎಂದರು. ಕೆಂಪೇಗೌಡ ರಸ್ತೆಯ ಅಕ್ಕಪಕ್ಕದಲ್ಲಿ ಅಧಿಕ ಸಂಖ್ಯೆಯ ಚಿತ್ರಮಂದಿರಗಳು ನಿರ್ಮಾಣವಾಗುತ್ತಿವೆ. ಇನ್ನು ಮುಂದೆ ಈ ಸ್ಥಳಗಳಲ್ಲಿ ಲೈಸನ್ಸ್ ಕೊಡುವುದನ್ನು ನಿಲ್ಲಿಸಲಾಗುವುದೆಂದೂ ಎಚ್ಚರಿಸಿದರು. ಸಂತೋಷ್ ಚಿತ್ರಮಂದಿರದ ಹೊರಗಿನ ಗೋಡೆಯ ಪ್ಯಾನಲ್‌ನಲ್ಲಿ ಖ್ಯಾತ ಕಲಾವಿದರಾದ 'ಸಂಸ್ಕಾರ' ಚಿತ್ರದ ಕಲಾನಿರ್ದೇಶಕರಾದ ಎಸ್.ಜಿ.ವಾಸುದೇವ್ ಅವರು ವಿಶೇಷ ಭಿತ್ತಿಚಿತ್ರಗಳನ್ನು ಆಧುನಿಕ ಶೈಲಿಯಲ್ಲಿ ರಚಿಸಿದ್ದಾರೆ.

ಅಶೋಕ್ ಅಂಡ್ ಸನ್ಸ್ ಸಂಸ್ಥೆಯ ಶಿಂಧೆ ಸಹೋದರರು ನರ್ತಕಿ ಚಿತ್ರಮಂದಿರವನ್ನು ನಿರ್ಮಿಸಿದರು. ಇವರು ಹೈದರಾಬಾದ್, ಸಿಕಂದರಾಬಾದ್‌ಗಳಲ್ಲಿ ಪ್ರಥಮಬಾರಿಗೆ ೭೦ ಎಂ.ಎಂ ತೆರೆಯ ಚಿತ್ರಮಂದಿರ ನಿರ್ಮಿಸಿದವರು. ಸಂತೋಷ್ ಚಿತ್ರಮಂದಿರದ ಮೊದಲ ಚಿತ್ರ 'ಸಹಧರ್ಮಿಣಿ'. ನರ್ತಕಿ ಚಿತ್ರಮಂದಿರದಲ್ಲಿ ಮೊದಲು ಬಿಡುಗಡೆಯಾದ ಚಿತ್ರ 'ಬಿಡುಗಡೆ'.

೧೯೭೪ರಲ್ಲಿ ಬೆಂಗಳೂರಿನ ಕಂಟೋನ್ಮೆಂಟ್ ಪ್ರದೇಶದಲ್ಲಿ ಬಾಲಾಜಿ ಚಿತ್ರಮಂದಿರ ಆರಂಭವಾಯಿತು. ಇದು ಬೆಂಗಳೂರಿನ ೬೭ನೇ ಚಿತ್ರಮಂದಿರ. ೧೫ ಲಕ್ಷ ರೂಪಾಯಿ ವೆಚ್ಚದಲ್ಲಿ ನಿರ್ಮಾಣವಾದ ಈ ಚಿತ್ರಮಂದಿರದಲ್ಲಿ ೮೮೪ ಆಸನಗಳಿವೆ. ಈ ಚಿತ್ರಮಂದಿರದ ಪ್ರಥಮ ಚಿತ್ರ 'ಚಾಮುಂಡೇಶ್ವರಿ ಮಹಿಮೆ'.



(ಚಿತ್ರ ೨೪) ಸಂತೋಷ್ ಚಿತ್ರಮಂದಿರ

(ಚಿತ್ರ ೨೫) ಪ್ರಸನ್ನ ಚಿತ್ರಮಂದಿರ

೧೯೭೪ರಲ್ಲಿ ಬೆಂಗಳೂರಿನ ಓಕಳಿಪುರಂನಲ್ಲಿ ಆರಂಭವಾದ ಮತ್ತೊಂದು ಚಿತ್ರಮಂದಿರ ದೇವಿ. ಇದನ್ನು ಬೆಂಗಳೂರಿನ ಮೇಯರ್ ಟಿ.ಡಿ.ನಾಗಣ್ಣನವರು ಆಗಸ್ಟ್ ೨೨ರಂದು ಉದ್ಘಾಟಿಸಿದರು. ಶಾಂತಿ ಮತ್ತು ಉಮಾ ಚಿತ್ರಮಂದಿರಗಳನ್ನು ನಿರ್ಮಿಸಿದವರೇ ಇದನ್ನು ನಿರ್ಮಿಸಿದ್ದಾರೆ. ೯೫೦ ಆಸನಗಳಿರುವ ದೇವಿ ಚಿತ್ರಮಂದಿರದಲ್ಲಿ ಪ್ರಥಮ ಬಾರಿಗೆ ಪ್ರದರ್ಶನಗೊಂಡ ಚಿತ್ರ 'ಸಂಪತ್ತಿಗೆ ಸವಾಲ್'. ೧೯೭೪ರ ಅಗಸ್ಟ್ ೨೯ರಂದು ಮಾಗಡಿ ರಸ್ತೆಯಲ್ಲಿ ಪ್ರಸನ್ನ ಚಿತ್ರಮಂದಿರ ಆರಂಭವಾಯಿತು. ೧೯೭೪ ರಲ್ಲಿ ಪ್ರಾರಂಭವಾದ ಮತ್ತೊಂದು ಚಿತ್ರಮಂದಿರ ವಿನಾಯಕ. ಬೆಂಗಳೂರಿನ ಮೈಸೂರು ರಸ್ತೆಯಲ್ಲಿ ಪೊಲೀಸ್ ಕ್ವಾರ್ಟರ್ಸ್ ಬಳಿ ಇರುವ ಈ ಚಿತ್ರಮಂದಿರದಲ್ಲಿ ೧೧೦೫ ಆಸನಗಳಿವೆ. ಈ ಚಿತ್ರಮಂದಿರದ ಪ್ರಥಮ ಚಿತ್ರ 'ಬಂಗಾರದ ಮನುಷ್ಯ'.

ರಾಜ್ಯದ ಪ್ರಥಮ ಹವಾನಿಯಂತ್ರಿತ ಚಿತ್ರಮಂದಿರ ಸಂಗಮ್ ಟಾಕೀಸ್‌ನ ಮಾಲೀಕರು ಆರ್. ಎಸ್. ಮಾಂತ್ರೆ (ಸಂಗಮ್ ಎಂಟರ್ ಪ್ರೈಸಸ್). ಇದರಲ್ಲಿ ಆರಂಭದ ಮೂರು ವರ್ಷಗಳಲ್ಲಿ ೧೮ ಚಿತ್ರಗಳು ಪ್ರದರ್ಶನಗೊಂಡಿದ್ದವು.

೧೯೭೭ರ ಆಗಸ್ಟ್ ೧೭ ರಂದು ರಾಜಕುಮಾರ್ ಅಧ್ಯಕ್ಷತೆಯಲ್ಲಿ ಮುಖ್ಯಮಂತ್ರಿ ದೇವರಾಜ ಅರಸ್ ಉದ್ಘಾಟಿಸಿದ ಬೆಂಗಳೂರಿನ ಅಭಿನಯ್ ಚಿತ್ರಮಂದಿರ ದಕ್ಷಿಣ ಭಾರತದಲ್ಲೇ ಪ್ರಥಮ ಬಾರಿಗೆ ಚಲಿಸುವ ಮೆಟ್ಟಿಲುಗಳನ್ನೊಳಗೊಂಡಿತ್ತು. ಇದರಲ್ಲಿ ದಂಪತಿಗಳಿಗೆ ಪ್ರತ್ಯೇಕ ಬಾಲ್ಕನಿ ವ್ಯವಸ್ಥೆಯಿದ್ದು ಚಿಕ್ಕ ಮಕ್ಕಳಿಗಾಗಿ ಕ್ರೀಚ್ ಕೂಡ ಇತ್ತು. ಈ ಚಿತ್ರಮಂದಿರದಲ್ಲಿ ೧೧೦೪ ಆಸನಗಳ ವ್ಯವಸ್ಥೆಯಿದೆ. ಈ ಚಿತ್ರಮಂದಿರದ ಮಾಲೀಕರು ತಲ್ಲಂ ನಂಜುಂಡ ಶೆಟ್ಟಿ. ಹೊಸತನ, ಶ್ರೀಮಂತಿಕೆಗೆ ಆದ್ಯತೆ ಕೊಟ್ಟು ಚಿತ್ರಮಂದಿರ ನಿರ್ಮಿಸಿದರು. ಚಿತ್ರಮಂದಿರವೇ ಎಲ್ಲವೂ ಅಲ್ಲ. ಅವರದು ಬೇರೆ ಬೇರೆ ಉದ್ಯಮಗಳಿವೆ. ಅಷ್ಟು ಆಸಕ್ತಿ ತೆಗೆದುಕೊಂಡರೂ ಅವರನ್ನು ಟೀಕಿಸುವುದುಂಟು. ಏಕೆಂದರೆ ಅವರಾಗಲೇ ಮೂರು ಚಿತ್ರಮಂದಿರ ಕೆಡವಿ ಹಾಕಿದರು. ಅವೇ ಗೀತಾ, ಅಲಂಕಾರ್, ಇನ್ನೇನು ನೆಲ ಮುಟ್ಟಲು ಕಾಯುತ್ತಿರುವ ಸ್ಟೇಟ್ಸ್.

೧೯೪೦ರ ಫೆಬ್ರುವರಿ ೨೦ ರಂದು ಪ್ರಾರಂಭವಾದ ಪ್ರಭಾತ್ ಚಿತ್ರಮಂದಿರ ಚಿತ್ರಮಂದಿರಗಳ ಇತಿಹಾಸದಲ್ಲಿ ತನ್ನದೇ ಆದ ಸ್ಥಾನ ಪಡೆದಿದೆ. ಹಿಂದಿ ಭಾಷೆಯ 'ಆದ್ಮಿ' ಇಲ್ಲಿ ಪ್ರದರ್ಶನಗೊಂಡ ಮೊದಲ ಚಿತ್ರ. ಸಾಮಾನ್ಯವಾಗಿ ಚಿತ್ರಮಂದಿರದ ಆರಂಭಕ್ಕೆ ಕನ್ನಡ ಚಿತ್ರವನ್ನೇ ಪ್ರದರ್ಶನ ಮಾಡುವ ಪರಿಪಾಠ ಆರಂಭವಾಗಿದ್ದು ೧೯೬೩ ರಿಂದ. ಈ ಚಿತ್ರಮಂದಿರವನ್ನು ಕಟ್ಟಿಸಿದವರು ಇರಾನಿ ಸಹೋದರರೆಂಬ ಪಾರ್ಸಿಗಳು. ನಂತರದಲ್ಲಿ ಜಯಂತಿಲಾಲ್ ಠಾಕೂರ್ ಆಡಳಿತ ವಹಿಸಿಕೊಂಡರು. ಪ್ರಭಾತ್ ಮತ್ತು ಭಾರತ್ ಚಿತ್ರಮಂದಿರಗಳ ವಾಸ್ತುಶಿಲ್ಪ ಒಂದೇ ತೆರನಾಗಿತ್ತು. ಪ್ರಭಾತ್ ಚಿತ್ರಮಂದಿರ ಮುಂಭಾಗ ಪ್ರಭಾತ್ ಸಂಸ್ಥೆಯ ಲಾಂಛನ ಹೊಂದಿದ್ದಿತು.

೧೯೫೭ರ ಜೂನ್ ೧೯ರಂದು 'ಚೋಟಿ ಬಹು' ಎಂಬ ಹಿಂದಿ ಚಿತ್ರದೊಂದಿಗೆ ಕೆಂಪೇಗೌಡ ರಸ್ತೆಯಲ್ಲಿ ಅಲಂಕಾರ್ ಚಿತ್ರಮಂದಿರ ಆರಂಭವಾಯಿತು. ಜಯಂತಿಲಾಲ್ ಠಾಕೂರ್ ಅವರ ಗುರುಗಳಾದ ಹನ್ಸ್ ದೇವ್ ಮಹಾರಾಜ್ ಇವನ್ನು ಉದ್ಘಾಟಿಸಿದರು. ಚಿತ್ರಮಂದಿರಕ್ಕೆ ಒಂದು ತಿಂಗಳ ಮುಂಚೆಯೇ ನಗರ ಸಭೆಯ ಪರವಾನಗಿ ಸಿಕ್ಕಿದರೂ ಜಯಂತಿಲಾಲ್ ಠಾಕೂರ್ ಪ್ರೊಜೆಕ್ಷನ್ ವ್ಯವಸ್ಥೆಯ ನಿಖರತೆಯ ಬಗ್ಗೆ ಸಮಾಧಾನವಾದ ಮೇಲೆಯೇ ಆರಂಭಿಸಿದ್ದು.

ಪ್ರಭಾತ್ ಹಾಗೂ ಅಲಂಕಾರ್ ಎಂಬೆರಡು ಕನಸಿನ ಮಂದಿರಗಳು ಶಿಸ್ತು ಹಾಗೂ ಘನತೆಗೆ ಹೆಸರಾಗಿದ್ದವು. ಈ ಚಿತ್ರಮಂದಿರಗಳಲ್ಲಿ ಚಿತ್ರ ವೀಕ್ಷಿಸುವುದೇ ಹೆಮ್ಮೆ ಎನಿಸಿತ್ತು. ಈ ಎರಡು ಚಿತ್ರಮಂದಿರಗಳು ಇಂದು ಇಲ್ಲವಾಗಿರುವುದು ನಿಜಕ್ಕೂ ದುಃಖದ ಸಂಗತಿ. ಈ ಎರಡು ಚಿತ್ರಮಂದಿರಗಳು ಇನ್ನಿಲ್ಲವೆಂದಾದಾಗ ಪ್ರೇಕ್ಷಕರು ತಮ್ಮ ಸೂರನ್ನೇ ಕಳೆದುಕೊಂಡವರಂತೆ ಮರುಗಿದರು. ಕೆಂಪೇಗೌಡ ರಸ್ತೆಯಲ್ಲಿರುವ ಈ ಎರಡು ಚಿತ್ರಮಂದಿರಗಳು ಕೇವಲ ಮನರಂಜನೆಯ ತಾಣವಾಗಿರದೆ ಕನ್ನಡ ಚಿತ್ರಗಳಿಗೆ ಆದ್ಯತೆ, ಶುದ್ಧವಾದ ಪರಿಸರಗಳಿಂದ ಖ್ಯಾತಿಯಾಗಿದ್ದವು. ಆರಂಭವಾದ ೪೫ ವರ್ಷಗಳ ನಂತರ ಪ್ರಭಾತ್ ಚಿತ್ರಮಂದಿರ ಅಂತ್ಯ ಕಂಡರೆ ೨೬ ವರ್ಷಗಳ ನಂತರ ಅಲಂಕಾರ್ ಚಿತ್ರಮಂದಿರ ಕಾಣದಾಯಿತು.

ಚಿತ್ರ ಹಂಚಿಕಾ ಕ್ಷೇತ್ರದಲ್ಲಿ ಇಡೀ ದಕ್ಷಿಣ ಭಾರತದಲ್ಲಿ ಪ್ರಖ್ಯಾತವಾಗಿದ್ದ ಫೇಮಸ್ ಪಿಕ್ಚರ್ಸ್ ಅವರು ಅಂದಿನ ಬಹು ಜನಪ್ರಿಯ ಚಿತ್ರ ನಿರ್ಮಾಣ ಸಂಸ್ಥೆಯಾಗಿದ್ದ ಪ್ರಭಾತ್ ಫಿಲಂ ಕಂಪೆನಿಯ ಎಲ್ಲ ಚಿತ್ರಗಳ ಹಂಚಿಕೆಯನ್ನು ನಿರ್ವಹಿಸುತ್ತಿದ್ದರು. ಹೀಗಾಗಿ ಈ ಸಂಸ್ಥೆಯ ಒಡೆಯರಾದ ಜಯಂತಿಲಾಲ್ ಠಾಕೂರ್ ತಮ್ಮ ಚಿತ್ರಮಂದಿರಕ್ಕೂ ಪ್ರಭಾತ್ ಎಂದೇ ನಾಮಕರಣ ಮಾಡಿದರು. ಈ ಚಿತ್ರಮಂದಿರದಲ್ಲಿ ಪ್ರಭಾತ್ ಫಿಲಂ ಕಂಪನಿಯ ಚಿತ್ರಗಳಷ್ಟೇ ಅಲ್ಲದ ನ್ಯೂ ಥಿಯೇಟರ್ಸ್, ಬಾಂಬೆ ಟಾಕೀಸ್, ರಾಜ್‌ಕಮಲ್, ಆರ್.ಕೆ.ಫಿಲಂಸ್ ಮುಂತಾದ ಸಂಸ್ಥೆಗಳ ಚಿತ್ರಗಳ ಪ್ರದರ್ಶನವೂ ನಡೆಯುತ್ತಿತ್ತು.

ಅತ್ಯಂತ ನಿರ್ಮಲ ವಾತಾವರಣ, ಅತ್ಯುತ್ತಮ ಪ್ರೊಜೆಕ್ಷನ್ ಹಾಗೂ ಧ್ವನಿವ್ಯವಸ್ಥೆ, ಸುಖಾಸನ ಮುಂತಾದ ಸೌಲಭ್ಯಗಳು ಪ್ರೇಕ್ಷಕನಿಗೆ ಪ್ರಭಾತ್‌ನಲ್ಲಿ ಸಿಗುತ್ತಿದ್ದವಲ್ಲದೆ ಇಲ್ಲಿ ಶ್ರೇಷ್ಠ ಚಿತ್ರಗಳೂ ಪ್ರದರ್ಶನಗೊಳ್ಳುತ್ತಿದ್ದವು. ಪ್ರತಿ ಪ್ರದರ್ಶನ ಆರಂಭಗೊಳ್ಳುವ ಮುನ್ನ ಚಿತ್ರಮಂದಿರದ ನಿರ್ವಹಣಾಧಿಕಾರಿಯಾಗಿದ್ದ ಅಪ್ಪಚ್ಚು ಅವರು ಚಿತ್ರಮಂದಿರದೊಳಗೆ ಬಂದು ಕುಳಿತಿರುವ ಪ್ರೇಕ್ಷಕರಿಗೆ ಸ್ವಾಗತ ಕೋರಿ ಹೋಗುತ್ತಿದ್ದರು. ಆಗಿನ ರಾಷ್ಟ್ರಪತಿಗಳಾಗಿದ್ದ ಡಾ|ರಾಜೇಂದ್ರ ಪ್ರಸಾದ್ ಅವರು ಫೇಮಸ್ ಪಿಕ್ಚರ್ಸ್‌ರವರು ನಿರ್ಮಿಸಿದ್ದ 'ಗಾಂಧಿ' ಸಾಕ್ಷ್ಯ ಚಿತ್ರವನ್ನು ಪ್ರಭಾತ್ ಚಿತ್ರಮಂದಿರದಲ್ಲಿ ನೆಹರು, ರಾಜಗೋಪಾಲಾಚಾರಿ ಮುಂತಾದ ಗಣ್ಯರೊಂದಿಗೆ ವೀಕ್ಷಿಸಿ ಚಿತ್ರಮಂದಿರದ ಬಗ್ಗೆ ಮುಕ್ತ ಕಂಠದಿಂದ ಮೆಚ್ಚುಗೆ ಸೂಚಿಸಿದ್ದರು. ಸಾರ್ವಜನಿಕರಿಗಾಗಿ ನಿರ್ಮಿಸಲ್ಪಟ್ಟ ಚಿತ್ರಮಂದಿರದಲ್ಲಿ ರಾಷ್ಟ್ರಪತಿಗಳು ಚಿತ್ರವನ್ನು ವೀಕ್ಷಿಸಿದ್ದು ಇದೇ ಮೊದಲ ಬಾರಿ ಎಂಬುದು ದಾಖಲೆಯ ಸಂಗತಿ. ವಿಶ್ವದಾದ್ಯಂತ ಪ್ರಶಂಸಿಸಲ್ಪಟ್ಟ 3D ಚಿತ್ರ 'ಹೌಸ್ ಆಫ್ ವ್ಯಾಕ್ಸ್' ಇಂಗ್ಲಿಷ್ ಚಿತ್ರವನ್ನು ಪ್ರದರ್ಶಿಸಿದ ಹೆಮ್ಮೆ ಈ ಚಿತ್ರಮಂದಿರದ್ದು.

ಪ್ರಭಾತ್ ಚಿತ್ರಮಂದಿರದಲ್ಲಿ ಮೊದಲು ಪ್ರದರ್ಶಿತವಾದ ಕನ್ನಡ ಚಿತ್ರ 'ಗೌರಿ'. ೧೯೬೩ರಲ್ಲಿ ಬಿಡುಗಡೆಯಾದ ರಾಜ ಕುಮಾರ್, ಸಾಹುಕಾರ್ ಜಾನಕಿ ಅಭಿನಯಿಸಿದ್ದ ಈ ಚಿತ್ರದಿಂದ ಚಿತ್ರರಸಿಕರು ಅತೀವ ಆನಂದ ಪಟ್ಟು ಚಿತ್ರಮಂದಿರಕ್ಕೆ ವಿಶೇಷ ಅಲಂಕಾರ

(ಚಿತ್ರ ೨೬) ಬಾಲ್ಕನಿಯಲ್ಲಿ ಮಾದರಿ ಸುಖಾಸನಗಳು

(ಚಿತ್ರ ೨೭) ನ್ಯೂಸಿಟಿ ಚಿತ್ರಮಂದಿರ

(ಚಿತ್ರ ೨೮) ಕೆಂಪೇಗೌಡ ಚಿತ್ರಮಂದಿರ

ಮಾಡಿ ಕುಂಬಳಕಾಯಿ ನಿವಾಳಿಸಿ ದೃಷ್ಟಿ ತೆಗೆದಿದ್ದರಂತೆ. ನಂತರ 'ಚಂದವಳ್ಳಿಯ ತೋಟ', 'ಮಿಸ್ ಲೀಲಾವತಿ', 'ಮದ್ವೇ ಮಾಡ್ನೋಡು', 'ಒಂದೇ ಬಳ್ಳಿಯ ಹೂಗಳು', 'ಸರ್ವ ಮಂಗಳ', 'ಆನಂದ ಕಂದ', 'ನಮ್ಮ ಊರು', 'ಧೂಮಕೇತು', 'ನಮ್ಮ ಸಂಸಾರ', 'ಕಪ್ಪು ಬಿಳುಪು', 'ಸೀತಾ', 'ಬಿಡುಗಡೆ', 'ಸಂಕಲ್ಪ', 'ಅಬಚೂರಿನ ಪೋಸ್ಟಾಫೀಸ್', 'ಉಪಾಸನೆ', 'ಹೊಂಬಿಸಿಲು', 'ಭಾಗ್ಯವಂತ', 'ಅಮೃತ ಘಳಿಗೆ' ಮುಂತಾದ ಚಿತ್ರಗಳು ಪ್ರಭಾತ್ ನಲ್ಲಿ ಯಶಸ್ವಿ ಪ್ರದರ್ಶನ ಕಂಡಿದವು.

ಆಗ ಬೆಂಗಳೂರಿನ ಚಿತ್ರಮಂದಿರಗಳಲ್ಲಿ ನಡೆಯುತ್ತಿದುದು ಎರಡು ಪ್ರದರ್ಶನಗಳು ಮಾತ್ರ. ಶನಿವಾರ, ಭಾನುವಾರ ಮಾತ್ರ ಮೂರು ಪ್ರದರ್ಶನಗಳಿರುತ್ತಿದವು. ನಂತರ ಪ್ರತೀ ದಿನವೂ ಮೂರು ಪ್ರದರ್ಶನಗಳ ಪದ್ಧತಿಯನ್ನು ಆರಂಭಿಸಿದ್ದು, ಮುಂಗಡ ಬುಕ್ಕಿಂಗ್ ಪ್ರಾರಂಭಿಸಿದು, ಟಿಕೆಟ್‌ಗಳಿಗೆ ಒಂದೊಂದು ತರಗತಿಗೂ ಪ್ರತ್ಯೇಕ ಕೌಂಟರ್ ತೆರೆದದು ಪ್ರಭಾತ್‌ನ ಪ್ರಮುಖ ದಾಖಲೆಗಳು.

ಬೆಂಗಳೂರಿನ ಕೆಂಪೇಗೌಡ ರಸ್ತೆಯಲ್ಲಿನ ಸಾಗರ್ ಮತ್ತು ಶೇಷಾದ್ರಿಪುರದಲ್ಲಿನ ಸೆಂಟ್ರಲ್ ಚಿತ್ರಮಂದಿರಗಳೆರಡರ ವಾಸ್ತು ಶಿಲ್ಪವು ಒಂದೇ ಮಾದರಿಯಲ್ಲಿದಿತು. ಕಾಲಾನಂತರದಲ್ಲಿ ಸಾಗರ್ ನವೀಕರಣ ಕಂಡು ಹೊಸ ರೂಪ ತಾಳಿತು. ಸೆಂಟ್ರಲ್ ಹಾಗೆಯೇ ಉಳಿದಿತ್ತು. ಕೊನೆಗೆ ಸೆಂಟ್ರಲ್ ಚಿತ್ರಮಂದಿರ ಸಗಿತಗೊಂಡು, ವಾಣಿಜ್ಯ ಸಂಕೀರ್ಣ ನಿರ್ಮಾಣಕ್ಕಾಗಿ ಕಟ್ಟಡ ಕಡವಲ್ಪಟ್ಟಿತು. ಗಾಂಧಿನಗರದ ಹೃದಯವೋ ಎಂಬಂತಿರುವ ತ್ರಿಭುವನ್, ಕೈಲಾಷ್ ಚಿತ್ರಮಂದಿರಗಳು ಬಹಳಷ್ಟು ಕಾರಣಗಳಿಗೆ ಗಮನಾರ್ಹ. ಬೆಂಗಳೂರಿನಲ್ಲಿ ಮೊದಲ ಬಾರಿಗೆ ಮಹಡಿ ಮೇಲೆ ಚಿತ್ರಮಂದಿರ ಕಟ್ಟಲಾಯಿತು. ಈ ಅವಳಿ ಚಿತ್ರಮಂದಿರಗಳಿಗೆ ಬಿ.ಸಿ.ಎಸ್.ನಾರಾಯಣ್ ಅವರ ಸಹೋದರ ಅಗರಬತ್ತಿ ಉದ್ಯಮಿ ಬಿ.ಸಿ.ಶ್ರೀನಿವಾಸ್, ರಾಜಕಾರಣಿ ದೇವಕುಮಾರ್, ಪ್ರೊಜೆಕ್ಷನ್ ಸಂಸ್ಥೆಯ ರೇಷ್ಮ ವ್ಯಾಪಾರಿ ಅಶ್ವತ್ ನಾರಾಯಣ್ ಇವರುಗಳು ಭಾಗಸ್ಥರು.

ಅತ್ಯಾಧುನಿಕ, ತಂತ್ರಜ್ಞಾನವನ್ನು ಅಳವಡಿಸಿಕೂಂಡ ವಿಶಾಲ ಚಿತ್ರಮಂದಿರ 'ಕಾವೇರಿ'ಯನ್ನು ಶಕ್ತಿ ಸಿಲ್ಕ್ ಫ್ಯಾಕ್ಟರಿಯ ಮಾಲೀಕರಾದ ನರಸಿಂಹಯ್ಯನವರು ಕಟ್ಟಿಸಿದರು. ಎರಡು ಬಾಲ್ಕನಿಗಳು ಇದರ ವಿಶೇಷ.

ಅಷ್ಟೇ ವಿಶಾಲವು, ಆಕರ್ಷಣೀಯವೂ ಆದ ಚಿತ್ರಮಂದಿರ 'ಪಲ್ಲವಿ'ಯನ್ನು ಉದ್ಯಮಿ ಟಿ.ರಾಮಕೃಷ್ಣ, ಶಿವರಾಮ್ ಅವರೊಂದಿಗೆ ಪಾಲುದಾರರಾಗಿ ಕಟ್ಟಿಸಿದರು. ಪಲ್ಲವಿ ಚಿತ್ರಮಂದಿರದಲ್ಲಿ ಚಿತ್ರ ವೀಕ್ಷಣೆ ಎಂದರೆ ಪ್ರೇಕ್ಷಕನಿಗೆ ತುಂಬಾ ಪ್ರಿಯವಾದ ಸಂಗತಿ.

ರೇಷ್ಮೆ ಉದ್ಯಮಿ, ಶ್ರೀಮಂತ ಚಿತ್ರ ನಿರ್ಮಾಣ, ವಿತರಣೆ ಎನ್ನುತ್ತ ಕನ್ನಡ ಚಿತ್ರೋದ್ಯಮವನ್ನು ಭದ್ರ ಬುನಾದಿಯ ಮೇಲೆ ನಿಲ್ಲಿಸಲು ಶ್ರಮಿಸಿದ ಕೆ.ಸಿ.ಎನ್.ಗೌಡರು ರಾಜಾಜಿನಗರದಲ್ಲಿ 'ನವರಂಗ್' ಹಾಗೂ ಮಾವಳ್ಳಿ ಬಳಿ 'ಊರ್ವಶಿ' ಚಿತ್ರಮಂದಿರ ಕಟ್ಟಿದರು. ಎರಡೂ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಂಡ ಉತ್ತಮ ಚಿತ್ರಮಂದಿರಗಳು. ಗೌಡರು ಅವರ ಸ್ವಸ್ಥಳ ದೊಡ್ಡಬಳ್ಳಾಪುರದಲ್ಲೂ ಚಿತ್ರಮಂದಿರ ಕಟ್ಟಿಸಿದ್ದಾರೆ.

ನಗರದ ಮಲ್ಲೇಶ್ವರದ ಬಳಿ ಇರುವ ಸಂಪಿಗೆ, ಸವಿತಾ ಚಿತ್ರಮಂದಿರಗಳು ರಾಜಾ ಮಿಲ್ ಮುಚ್ಚಿದಾಗ ಉಳಿದ ಜಾಗದಲ್ಲಿ ಮೇಲೆದ್ದವು. ಚಿತ್ರಮಂದಿರಗಳ ಮಾಲೀಕರು ವೆಂಕಟೇಶಯ್ಯ ಮತ್ತು ನರಸಿಂಹಯ್ಯ.

ಗೀತಾಂಜಲಿ ಚಿತ್ರಮಂದಿರ ಕೂಡಾ ಕನ್ನಡ ಚಿತ್ರ ಪ್ರದರ್ಶನಕ್ಕೇ ಹೆಸರಾದದ್ದು. ಮೊದಲು ಚಿದಾನಂದ ಆಶ್ರಮವಿದ್ದ ಜಾಗವನ್ನು ಪಡೆದು ಮಧು ದೇಸಾಯಿ ಎನ್ನುವವರು ಇದನ್ನು ಕಟ್ಟಿಸಿದರು.

ರಂಗಭೂಮಿಯ ವಿಶ್ವವಿದ್ಯಾಲಯ ಎಂದೆನಿಸಿಕೊಂಡಿದ್ದ ಗುಬ್ಬಿ ವೀರಣ್ಣನವರು ಚಿತ್ರರಂಗದಲ್ಲಿಯೂ ಸಾಕಷ್ಟು ಕೃಷಿ ಮಾಡಿದರು. ಚಲನಚಿತ್ರ ನಿರ್ಮಾಣ ಕ್ಷೇತ್ರದಲ್ಲಷ್ಟೇ ಅಲ್ಲದೆ ಪ್ರದರ್ಶನ ಕ್ಷೇತ್ರದಲ್ಲಿಯೂ ತಮ್ಮ ಛಾಪು ಮೂಡಿಸಿದ್ದರು. ಬೆಂಗಳೂರಿನ ಕೆಂಪೇಗೌಡ ಸರ್ಕಲ್‌ನಲ್ಲಿದ್ದ ಗೀತಾ ಚಿತ್ರಮಂದಿರ ವೀರಣ್ಣನವರ ಕೊಡುಗೆಯೇ ಆಗಿತ್ತು. ಅದರ ಮೊದಲಿನ ಹೆಸರು 'ಗುಬ್ಬಿ ಚನ್ನಬಸವೇಶ್ವರ ಟಾಕೀಸ್' ನಂತರ ಈ ಚಿತ್ರಮಂದಿರ ಸೆಲೆಕ್ಟ್ ಎಂದು ಮರುನಾಮಕರಣಗೊಂಡಿತು. ಕೊನೆಗೆ ಗೀತಾ ಎಂದು ಹೆಸರಾದ ವೀರಣ್ಣನವರ ಚಿತ್ರಮಂದಿರ ಈಗಿಲ್ಲ.

ಸುಬೇದಾರ್ ಛತ್ರಂ ರಸ್ತೆಯಲ್ಲಿರುವ ಮೂವಿಲ್ಯಾಂಡ್ ಚಿತ್ರಮಂದಿರವನ್ನು ಕೂಡಾ ನಿರ್ಮಿಸಿದು ಗುಬ್ಬಿ ವೀರಣ್ಣನವರ. ಈ ಚಿತ್ರಮಂದಿರದ ಮೊದಲಿನ ಹೆಸರು ಶಿವಾನಂದ. ಇಷ್ಟೇ ಅಲ್ಲದೆ ಕೆಲವು ವರ್ಷಗಳ ಹಿಂದೆ ನವೀಕರಣಗೊಂಡಿರುವ ಸಾಗರ್‌ಟಾಕೀಸ್ ಸಹ ಗುಬ್ಬಿ ವೀರಣ್ಣನವರದೇ ಆಗಿತ್ತು. ಆದರೆ ಈಗ ಈ ಯಾವ ಚಿತ್ರಮಂದಿರದ ಒಡೆತನವೂ ಅವರ ಸಂಬಂಧಿಕರಿಗಿಲ್ಲ.

ಗಾಂಧಿನಗರದ ಗುಬ್ಬಿ ಚನ್ನಬಸವೇಶ್ವರ ಥಿಯೇಟರ್ ನ ವಿಚಾರವೇ ಬೇರೆ. ವೀರಣ್ಣನವರು ಕಾರ್ಪೊರೇಷನ್ ನಿಂದ ಆ ನಿವೇಶನವನ್ನು ಗುತ್ತಿಗೆಯಾಗಿ ಪಡೆದಿದರು. ಆ ಗುತ್ತಿಗೆಯಲ್ಲಿ ಒಂದು ವಿಚಿತ್ರ ಷರತ್ತಿತ್ತು. ವೀರಣ್ಣನವರು ಒಂದು ದಿನವೂ ಬಿಡದಂತೆ ಅಲ್ಲಿ ನಾಟಕಗಳನ್ನು ಅಭಿನಯಿಸಿ ಆಡಿ ತೋರಿಸ ಬೇಕೆಂಬುದೇ ಆ ಷರತ್ತು. ಹಿಂದಿನ ವಿಜೃಂಭಣೆಯ ಸ್ಮರಣೆಯಲ್ಲಿ ಆ ಷರತ್ತಿಗೆ ಒಪ್ಪಿಕೊಂಡರು. ಕೆಲವೇ ವರ್ಷಗಳಲ್ಲಿ ಚಲನಚಿತ್ರಗಳ ವ್ಯಾಮೋಹದಿಂದ ವಾತಾವರಣ ಬದಲಾಯಿತು. ಷರತ್ತು ಮುರಿದು

(ಚಿತ್ರ ೨೯) ಹಿಮಾಲಯ ಚಿತ್ರಮಂದಿರ

ಬಿತ್ತು. ಮುಂದೆ ಕಾರ್ಪೊರೇಷನ್ ಹಾಗೂ ವೀರಣ್ಣನವರ ನಡುವೆ ವಿವಾದ ಏರ್ಪಟ್ಟು ಕೊನೆಗೆ ಹೇಗೋ ಒಂದು ವಿಧದಲ್ಲಿ ಅದು ಇತ್ಯರ್ಥವೂ ಆಯಿತು. ಮುಂದೆ ಅಲ್ಲಿ ಕಾರ್ಪೊರೇಷನ್ ನಾಟ್ಯಗೃಹವನ್ನು ನಿರ್ಮಿಸಿ ಅದಕ್ಕೆ 'ಗುಬ್ಬಿ ಚನ್ನಬಸವೇಶ್ವರ' ಎಂದು ಹೆಸರಿಡಲು ಒಪ್ಪಿಕೊಂಡಿತು. ಈಗ ನಾಟಕದ ಥಿಯೇಟರ್ ನಡೆಯುತ್ತಿದೆ. ಉತ್ತರ ಕರ್ನಾಟಕ ವೃತ್ತಿರಂಗಭೂಮಿಯವರು ನಿರಂತರವಾಗಿ ನಾಟಕ ಪ್ರದರ್ಶನ ನಡೆಸಿದ್ದಾರೆ.

ಇದೇ ಸಮಯದಲ್ಲಿ ಅಂದರೆ ೧೯೭೨ರ ಸುಮಾರಿನಲ್ಲಿ ಬೆಂಗಳೂರು ನಗರದಲ್ಲಿ ಕನ್ನಡ ಚಲನಚಿತ್ರ ಪ್ರದರ್ಶನಕ್ಕೆ ಚಿತ್ರಮಂದಿರದ ಕೊರತೆಯನ್ನು ನಿವಾರಿಸುವ ಹಾಗೂ ನಗರ ಕಾರ್ಪೊರೇಷನ್ ವರಮಾನ ಹೆಚ್ಚಿಸುವ ದೃಷ್ಟಿಯಿಂದ ಕಾರ್ಪೊರೇಷನ್ ವತಿಯಿಂದ ಒಂದು ಚಿತ್ರಮಂದಿರವನ್ನು ನಿರ್ಮಿಸಲು ತೀರ್ಮಾನಿಸಲಾಗಿದೆಯೆಂದು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅಧ್ಯಕ್ಷ ಪಿ.ಕೃಷ್ಣಪ್ಪ ಕಾರ್ಪೊರೇಷನ್ ಸಭೆಯಲ್ಲಿ ತಿಳಿಸಿದ್ದಲ್ಲದೆ ಇದಕ್ಕಾಗಿ ಬಜೆಟ್‌ನಲ್ಲಿ ಮೂರು ಲಕ್ಷ ರೂಪಾಯಿಗಳನ್ನು ನಿಗದಿ ಮಾಡಲಾಗಿದೆಯೆಂದೂ ಹೇಳಿದರು.

(ಚಿತ್ರ ೩೦) ಆರಂಭ ದಿನಗಳಲ್ಲಿ ಕನ್ನಡ ಚಿತ್ರಗಳಿಗೆ ಪ್ರಾಧಾನ್ಯತೆ ಕೊಡುತ್ತಿದ್ದ ಸೂಪರ್ ಟಾಕೀಸ್

ಬೆಂಗಳೂರಿನ ಮೇಯರ್‌ರಾಗಿದ್ದ ಕೆ.ಎಸ್.ನಾಗಣ್ಣನವರ ಶಿವಾಜಿ ಚಿತ್ರಮಂದಿರ ಜಯಚಾಮರಾಜೇಂದ್ರ ರಸ್ತೆಯಲ್ಲಿದ್ದು, ತಮಿಳು ಚಿತ್ರಗಳಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಿದ್ದಿತು. ಈಗ ಈ ಚಿತ್ರಮಂದಿರ ಸ್ಥಗಿತವಾಗಿದ್ದು, ಗೋದಾಮಾಗಿದೆ.

ಹೀಗೆ ಚಿತ್ರಮಂದಿರಗಳ ಆರಂಭ ಮತ್ತು ಬೆಳವಣಿಗೆಯ ಹಿಂದೆ ಸಾಕಷ್ಟು ಕತೆಗಳಿವೆ. ಆದರೆ ಈ ಪ್ರಯತ್ನ, ಶ್ರಮಗಳೆಲ್ಲ ನಿರರ್ಥಕವಾದವೆಂಬಂತೆ ಅನೇಕ ಚಿತ್ರಮಂದಿರಗಳು ನಗರ ಬೆಳೆಯುತ್ತಿದ್ದಂತೆ ಕಣ್ಮರೆಯಾದವು. ಬೆಂಗಳೂರಿನಲ್ಲೇ ಅಲಂಕಾರ್, ಪ್ರಭಾತ್, ಹಿಮಾಲಯ, ನಾಜ್, ನ್ಯೂ ಅಪೇರಾ, ಬ್ಲೂ ಡೈಮಂಡ್, ಬ್ಲೂಮೂನ್, ಗ್ಲೋಬ್, ನ್ಯೂ ಎಂಪೈರ್, ಬಿ.ಆರ್.ವಿ., ಭಾರತ್, ಮಿನರ್ವ, ಶಿವಾಜಿ, ಗೀತಾ, ಸ್ವಸ್ತಿಕ್, ಸೆಂಟ್ರಲ್, ಜಯಶ್ರೀ, ಸಂಜಯ ಮುಂತಾದ ಚಿತ್ರಮಂದಿರಗಳು ಮಾಯವಾಗಿವೆ. ಅತಿ ಹೆಚ್ಚು ಸಂಖ್ಯೆಯಲ್ಲಿ ಚಿತ್ರಮಂದಿರಗಳನ್ನು ಕೆಡವಿದ ದಾಖಲೆ ಕೂಡಾ ಬೆಂಗಳೂರಿಗೇ ಸಲ್ಲುತ್ತದೆ. ಹೀಗೆ ಚಿತ್ರಮಂದಿರ ಕಣ್ಮರೆಯಾಗುವುದರ ಕಾರಣ ಬಹುತೇಕ ವಾಣಿಜ್ಯ ಮಳಿಗೆ ನಿರ್ಮಿಸುವುದು, ತನ್ಮೂಲಕ ಹೆಚ್ಚಿನ ಆದಾಯ ಪಡೆಯುವುದು. ಮತ್ತು ಅಲ್ಲಿ ಚಿತ್ರಮಂದಿರ ನಿರ್ಮಿಸಿ, ನಡೆಸಲು ಅಗತ್ಯವಾಗಿ ಅನುಸರಿಸಬೇಕಾದ ಸಿನಿಮಾಟೊಗ್ರಫಿ ಆ್ಯಕ್ಟ್‌ನ ಕಟ್ಟುನಿಟ್ಟಾದ ಪಾಲನೆಯ ಅಗತ್ಯವಿಲ್ಲವೆಂಬುದು ಒಂದು ಮುಖ್ಯ ಕಾರಣ. ಕೆಲವು ಕಡೆಗಳಲ್ಲಿ ಕಾನೂನು, ಅನುಮತಿ, ವ್ಯಾಜ್ಯ ಮುಂತಾದ ಅಂಶಗಳು ಚಿತ್ರಮಂದಿರ ನಾಶವಾಗಲು ಕಾರಣವಾಗುತ್ತೆಂಬುದೂ ನಿಜ.

ಚಿತ್ರಮಂದಿರಗಳನ್ನು ಹೀಗೆ ನಾನಾ ಕಾರಣಗಳಿಂದ ಕೆಡವುತ್ತ ಹೋದರೆ ಚಿತ್ರೋದ್ಯಮವೇ ಕುಸಿದು ಬೀಳುವ ಅಪಾಯವಿದೆಯೆಂದು ಅರಿತು ಕಾನೂನಿನಲ್ಲಿ ಎಲ್ಲಿ ಚಿತ್ರಮಂದಿರ ಕೆಡವಿ ವಾಣಿಜ್ಯ ಸಂಕೀರ್ಣ ಕಟ್ಟಲಾಗುತ್ತದೆಯೋ ಅಲ್ಲಿ ಒಂದು ಟಾಕೀಸ್ ನಿರ್ಮಿಸಲೇಬೇಕೆಂಬ ಆದೇಶ ಹೊರಟಿತಾದರೂ ಇದನ್ನು ಯಾರೂ ಅನುಷ್ಠಾನಕ್ಕೆ ತರಲಿಲ್ಲ. ಇದು ಕೇವಲ ಆದೇಶವೇ ಹೊರತು ನಿಯಮವಲ್ಲವಾದ್ದರಿಂದ ಯಾರೂ ಅದರತ್ತ ಗಮನ ಹರಿಸಲಿಲ್ಲ. ಅಲ್ಲದೆ ಹಾಗೊಂದು ಉಗ್ರವಾದ ಕಾನೂನು ಮಾಡುವುದು ಅಸಾಧ್ಯದ ಮಾತು. ಹೀಗೆಯೇ ಸುಮಾರು ನೂರಾರು ಟಾಕೀಸ್ ಗಳು ಕಣ್ಮರೆಯಾಗಿವೆ. ಈ ಸಂಖ್ಯೆ ದಿನೇ ದಿನೇ ಹೆಚ್ಚುತ್ತಲೇ ಇದೆ.

ಚಿತ್ರಮಂದಿರಗಳು ಬೆಳೆದು ಬಂದ ಹಾದಿಯಲ್ಲಿ ಕೆಲವು ಸ್ಮರಣೀಯ ವ್ಯಕ್ತಿಗಳೂ ಇದ್ದಾರೆ. ಅಂಥವರಲ್ಲಿ ಬೇಲೂರು ಸಿ.ರಾಮಸ್ವಾಮಿ ಅವರು ಒಬ್ಬರು. ೧೯೨೨ರಲ್ಲಿ ಚಿತ್ರದುರ್ಗದಲ್ಲಿ ಜನಿಸಿದ ಇವರು ಎಲ್. ಎಸ್.ವರೆಗೆ ಚಿಕ್ಕಬಳ್ಳಾಪುರದಲ್ಲಿ ಮತ್ತು ಚಿತ್ರದುರ್ಗದಲ್ಲಿ ಐದನೆ ಫಾರಂ (ಈಗಿನ ೯ನೇ ತರಗತಿ) ವರೆಗೆ ವಿದ್ಯಾಭ್ಯಾಸ ಮಾಡಿದರು. ತಮ್ಮ ೧೬ನೇ ವಯಸ್ಸಿನಲ್ಲಿ ದಾವಣಗೆರೆಯ ವಿನೋದ ಚಿತ್ರಮಂದಿರದಲ್ಲಿ ಮೇಲ್ವಿಚಾರಕರಾಗಿ ವೃತ್ತಿಯನ್ನು ಪ್ರಾರಂಭಿಸಿದರು. ನಂತರ ಟೂರಿಂಗ್ ಟಾಕೀಸ್ ಗಳ ಮಾಲೀಕರಾಗಿ ಬೆಳೆದರು.

ಬೇಲೂರು ರಾಮಸ್ವಾಮಿಯವರು ಟೂರಿಂಗ್ ಟಾಕೀಸ್ ಮಾಲೀಕರಾಗಿ ಅನೇಕ ಹೊಸ ಪ್ರಯೋಗಗಳನ್ನು ಮಾಡಿದವರು. ಕರ್ನಾಟಕದಲ್ಲಿ ಪ್ರಥಮ ಬಾರಿಗೆ ಮ್ಯಾಟನಿ ಪ್ರದರ್ಶನವನ್ನು ಪ್ರಾರಂಭಿಸಿದರು. ೧೯೪೮ರಲ್ಲಿ ನೆಲಮಂಗಲದಲ್ಲಿ, ೧೯೫೪ ರಲ್ಲಿ ಅರಸೀಕೆರೆಯಲ್ಲಿ ಮತ್ತು ೧೯೫೬ ರಲ್ಲಿ ಸಕಲೇಶಪುರದಲ್ಲಿ ಬಟ್ಟೆಯ ಟೆಂಟ್‌ನಲ್ಲಿ ಚಿತ್ರ ಪ್ರದರ್ಶನ ನಡೆಸಿದರು. ಒಂಟಿ ಪ್ರೊಜೆಕ್ಟರ್‌ನಲ್ಲಿಯೇ ಎರಡು ಪ್ರೊಜೆಕ್ಟರ್ ರೀತಿಯಲ್ಲಿ ಕಾರ್ಯ ನಡೆಸಿದವರು. ಇದನ್ನು ಕಾಸರಗೋಡಿನಲ್ಲಿ ನೋಡಿ ಕಲಿತು ೧೯೫೪ರಲ್ಲಿ ಕರ್ನಾಟಕದಲ್ಲಿ ಪ್ರಯೋಗ ಮಾಡಿದರು.

ಆಗಿನ ಕಾಲದಲ್ಲಿ ನಾಲ್ಕು ತಿಂಗಳಿಗೊಮ್ಮೆ ಸಿನಿಮಾ ನಡೆಸಲು ಸುಲಭವಾಗಿ ಲೈಸನ್ಸ್ ಸಿಗುತ್ತಿತ್ತು. ಎಲೆಕ್ಟ್ರಿಕಲ್ ಸರ್ಟಿಫಿಕೇಟ್ ಒಂದುವರ್ಷಕ್ಕೆ ನೀಡುತ್ತಿದ್ದರೂ ಮುಂದಿನ ಕ್ಯಾಂಪ್‌ಗೂ ಇದೇ ಸರ್ಟಿಫಿಕೇಟ್‌ನಲ್ಲಿ ಲೈಸನ್ಸ್ ನೀಡುತ್ತಿದ್ದರು. ಈ ಕಾಲದಲ್ಲಿರುವಂತೆ ಅನೇಕ ಸರ್ಟಿಫಿಕೇಟ್ ಪಡೆಯುವ ಅಗತ್ಯವಿರಲಿಲ್ಲ. ರಾಮಸ್ವಾಮಿಯವರು ನಾಟಕರಂಗದಲ್ಲಿಯೂ ಸಹ ಅನೇಕ ಹೊಸ ತಾಂತ್ರಿಕ ಕೆಲಸ ಮಾಡಿರುತ್ತಾರೆ.

ರಂಗವೇದಿಕೆಯಲ್ಲಿ ಸೊಳ್ಳೆಪರದ ತೆರೆ ಕಟ್ಟಿ ಸಿನಿಮಾ ಪ್ರೊಜೆಕ್ಟರ್‌ನಿಂದ ಖಾಲಿ ಕಲರ್ ರೀಲನ್ನು ನಾಟಕದ ನೃತ್ಯ ಮತ್ತು ದೃಶ್ಯದ ಮೇಲೆ ಬಿಡುತ್ತಿದ್ದಾಗ ಆಗಿನ ಕಾಲದಲ್ಲಿ ಪ್ರೇಕ್ಷಕರಿಗೆ ಇದು ವಿಶೇಷ ಆಕರ್ಷಣೆಯಾಗಿತ್ತು. ಈ ಪ್ರಯೋಗವನ್ನು ರಾಮಸ್ವಾಮಿಯವರು ಪ್ರಥಮ ಬಾರಿಗೆ ಮಾಡಿದರು. ಗುಬ್ಬಿ ಕಂಪೆನಿ ನಿಂತ ಮೇಲೆ ರಾಮಸ್ವಾಮಿಯವರು ಅರಸೀಕೆರೆಯಲ್ಲಿ ಟೂರಿಂಗ್ ಟಾಕೀಸ್ ನಡೆಸುತ್ತಿದ್ದರು. ಈ ಕಾಲದಲ್ಲಿ ರಾಜಕುಮಾರ್ ಹಾಗೂ ಇತರರು ರಾಮಸ್ವಾಮಿಯವರ ಟೂರಿಂಗ್ ಟಾಕೀಸ್ ಗೆ ಅತಿಥಿಗಳಾಗಿ ಬರುತ್ತಿದ್ದರು.

''ಆಗಿನ ಕಾಲದಲ್ಲಿ ನೈಟ್ರೇಟ್ ಫಿಲಂ ಇತ್ತು. ಇದರಲ್ಲಿ ಬೆಂಕಿಯ ಅಪಾಯವಿತ್ತು. ಈ ರೀತಿಯ ಅನಾಹುತದಿಂದ ತಿಪಟೂರಿನಲ್ಲಿ ಒಬ್ಬ ಸಿನಿಮಾ ಆಪರೇಟರ್ ಆಕಸ್ಮಿಕವಾಗಿ ಮರಣ ಹೊಂದಿದ. ನಂತರ ಸಿನಿಮಾ ಪ್ರಿಂಟ್‌ಗಳನ್ನು ಬೇರೆ ಕಡೆ ಶೇಖರಿಸಿ ಇಡಬೇಕೆಂದು ಸರ್ಕಾರ ಕಾನೂನು ಮಾಡಿತು'' ಎನ್ನುತ್ತಾರೆ ರಾಮಸ್ವಾಮಿ.

ರಾಮಸ್ವಾಮಿಯವರು ತಮ್ಮ ೬೦ ವರ್ಷಗಳನ್ನು ಚಲನಚಿತ್ರೋದ್ಯಮದಲ್ಲಿ ಕಳೆದು ಚಿತ್ರರಂಗದ ಅನೇಕ ಏರುಪೇರುಗಳನ್ನು ಕಂಡಿದ್ದಾರೆ. ಬೇಲೂರು ರೇಣುಕಾ ಟಾಕೀಸ್ ಅನ್ನು ಬಾಡಿಗೆಯ ಮೇಲೆ ನಡೆಸಿದರು. ಅನುಭವ, ಶ್ರಮ ಎಲ್ಲಾ ಇದ್ದರೂ ಸ್ವಂತ ಚಿತ್ರಮಂದಿರ ನಿರ್ಮಾಣ ಮಾಡಲು ಆಗಲಿಲ್ಲ ಎನ್ನುವ ಕೊರಗು ಅವರದು. ಆರ್ಥಿಕವಾಗಿ ಸೋತ ಇವರು ಹಂಚಿಕೆದಾರರಾಗಿ, ಪ್ರದರ್ಶಕರಾಗಿ ಮಾಡಿರುವ ಸಾಲವನ್ನು

(ಚಿತ್ರ ೩೧) ಕಂಟೋನ್ಮೆಂಟ್ ಪ್ರದೇಶದ ಅಪೇರಾ ಚಿತ್ರಮಂದಿರ- ಈಗ ವಾಣಿಜ್ಯ ಸಂಕೀರ್ಣವಾಗಿ ಬೆಳೆಯುತ್ತಿದೆ.

(ಚಿತ್ರ ೩.೨)ಕೆ.ಆರ್.ತೋಪಯ್ಯ

ಸಂಚಾರಿ ಚಿತ್ರಮಂದಿರದ ಜನಕ

(ಚಿತ್ರ ೩.೩)ಕೆ.ಟಿ.ರಂಗಪ್ಪ

ಹಳೇ ಮೈಸೂರು ಸಂಸ್ಥಾನದಲ್ಲಿ ಪ್ರಪ್ರಥಮ ಬಾರಿಗೆ ಸಂಚಾರಿ ಚಿತ್ರಮಂದಿರವನ್ನು ಆರಂಭಿಸಿದ ಕೀರ್ತಿ ಕುದೂರಿನ ಕೆ.ಆರ್.ತೋಪಯ್ಯನವರದು. ವ್ಯವಸಾಯ, ಜವುಳಿ ವ್ಯಾಪಾರ, ರೈಸ್‌ಮಿಲ್ ಹೀಗೆ ಬಹುಮುಖ ವ್ಯಾಪಾರ-ವ್ಯವಹಾರಗಳಲ್ಲಿ ತೊಡಗಿದ್ದ ತೋಪಯ್ಯನವರ ವ್ಯಾವಹಾರಿಕ ದೃಷ್ಟಿ ಚಲನಚಿತ್ರರಂಗದತ್ತ ಹರಿದಾಗ ಚಿತ್ರಮಂದಿರದ ಕಲ್ಪನೆ ಅವರಲ್ಲಿ ಮೂಡಿತು. ಮೂಕಿ ಚಿತ್ರಗಳ ಕಾಲದಲ್ಲೇ ೧೯೩೩ರ ಸುಮಾರಿನಲ್ಲಿ ಬೆಂಗಳೂರು ಜಿಲ್ಲೆಯ ಮಾಗಡಿ ತಾಲ್ಲೂಕಿನಲ್ಲಿನ ತಮ್ಮ ಊರಾದ ಕುದೂರಿನಲ್ಲಿ ಮಾರುತಿ ಸಂಚಾರಿ ಚಿತ್ರಮಂದಿರವನ್ನು ಪ್ರಾರಂಭಿಸಿದ ಅವರೇ ಕರ್ನಾಟಕದಲ್ಲಿ ಸಂಚಾರಿ ಚಿತ್ರಮಂದಿರಗಳ ಜನಕರೆಂದು ಗುರುತಿಸಲಾಗಿದೆ. ತೋಪಯ್ಯನವರು ತಮ್ಮ ಮಾರುತಿ ಚಿತ್ರಮಂದಿರವನ್ನು ಕರ್ನಾಟಕಾದ್ಯಂತ ಮಾತ್ರವಲ್ಲದೆ, ತಮಿಳುನಾಡಿಗೂ ಕೊಂಡೊಯ್ದು ಯಶಸ್ವಿಯಾದವರು. ಅವರದು ಸಾಹಸದ ಪ್ರವೃತ್ತಿ. ಆ ಕಾಲದಲ್ಲಿ ಊರುಗಳ ಜಾತ್ರೆಯ ಸಂದರ್ಭದಲ್ಲಿ ೧೫-೨೦ ದಿನ ಬೀಡು ಬಿಡುತ್ತಿದ್ದ ಈ ಚಿತ್ರಮಂದಿರದಲ್ಲಿ ನಾಲ್ಕೈದು ಬೇರೆ ಬೇರೆ ಚಿತ್ರಗಳನ್ನು ಪ್ರದರ್ಶಿಸುವುದು ಪರಿಪಾಠವಾಗಿತ್ತು. ಜಾತ್ರೆ ಹಬ್ಬಗಳ ವಿಶೇಷ ಆಕರ್ಷಣೆಯೂ ಆಗುತ್ತಿತ್ತು. ಹಂಚಿಕೆದಾರರೂ ಕೂಡ ಹಬ್ಬ ಹಾಗೂ ಜಾತ್ರೆಗಳ ಸಂದರ್ಭದಲ್ಲಿ ಉತ್ತಮ ಚಿತ್ರಗಳಲ್ಲಿ ಪ್ರದರ್ಶನಕ್ಕೆ ನೀಡುತ್ತಿದ್ದರು. ತಮ್ಮ ಮಾರುತಿ ಚಿತ್ರಮಂದಿರದಲ್ಲಿ ಕನ್ನಡದ ಪ್ರಥಮ ವಾಕ್ಚಿತ್ರವನ್ನು ಪ್ರದರ್ಶಿಸಿದ ಹೆಮ್ಮೆ ತೋಪಯ್ಯನವರದು. ೧೯೬೦ರವರೆಗೂ ಸಂಚಾರಿಯಾಗಿದ್ದ 'ಮಾರುತಿ' ನಂತರ ಕುದೂರಿನಲ್ಲಿ ಖಾಯಂ ಚಿತ್ರಮಂದಿರವಾಗಿ ನೆಲೆಗೊಂಡಿದೆ.

೧೯೩೬ರಲ್ಲಿ ತೋಪಯ್ಯನವರು ಕಲ್ಲಿದ್ದಲು ಬಳಸಿ ನಡೆಸುವ ಬಸ್ ಸರ್ವೀಸೊಂದನ್ನು ಮಾರುತಿ ಮೋಟಾರ್ಸ್ ಹೆಸರಿನಲ್ಲಿ ಬೆಂಗಳೂರು ಕುದೂರು ನಡುವೆ ಪ್ರಾರಂಭಿಸಿದರು. ಗ್ರಾಮಾಂತರ ಪ್ರದೇಶದಲ್ಲಿ ಜನಿಸಿ, ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿಗಾಗಿ ಪ್ರೌಢಶಾಲೆ, ಆಸ್ಪತ್ರೆ ಮುಂತಾದವುಗಳ ಸ್ಥಾಪನೆಗೆ ಕಾರಣವಾದುದಕ್ಕೆ ಅಂದಿನ ಮೈಸೂರು ಮಹಾರಾಜರಾದ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಅವರಿಂದ ಸಾರ್ವಜನಿಕ ಸೇವಾ ಸುವರ್ಣ ಪದಕವನ್ನು ಪಡೆದರು.

ತೋಪಯ್ಯನವರ ನಂತರ ಅವರ ಮಗ ಕೆ.ಟಿ.ರಂಗಪ್ಪನವರು ಮಾರುತಿ ಚಿತ್ರಮಂದಿರವನ್ನು ನಡೆಸಿಕೊಂಡು ಬಂದರು. ಈಗ ತೋಪಯ್ಯನವರ ಮೊಮ್ಮಕ್ಕಳು ಈ ಚಿತ್ರಮಂದಿರವನ್ನಲ್ಲದೆ, ಸನಿಹದ ಇನ್ನೂ ಎರಡು ಚಿತ್ರಮಂದಿರಗಳನ್ನು ನಿರ್ವಹಿಸಿಕೊಂಡು ಬರುತ್ತಿದ್ದಾರೆ. ಕರ್ನಾಟಕದ ಪ್ರಥಮ ಸಂಚಾರಿ ಚಿತ್ರಮಂದಿರವಾಗಿ ಪ್ರಾರಂಭಗೊಂಡ ಮಾರುತಿ, ಆರೂವರೆ ದಶಕಗಳ ಕನ್ನಡ ಚಿತ್ರರಂಗದ ಇತಿಹಾಸದೊಂದಿಗೆ ನಡೆದು ಬಂದಿದೆ.

ಮನೆಯನ್ನು ಮಾರಿದಾಗಲೂ ತೀರಿಸಲಾಗಲಿಲ್ಲ. ಅನುಭವವೊಂದೇ ಇವರು ಸಂಪಾದಿಸಿರುವ ಆಸ್ತಿ.

ಇಂಥದೇ ಸಾಹಸ ಮಾಡಿದವರು ಕೆ.ಆರ್.ನಗರದ ಪುಟ್ಟಣ್ಣಯ್ಯ. ಇಂಥ ಅನೇಕರ ಪರಿಶ್ರಮದಿಂದ ಸಂಚಾರಿ ಸಿನಿಮಾ ಮಂದಿರಗಳೂ ಅಲ್ಲಿಂದ ಖಾಯಂ ಚಿತ್ರಮಂದಿರಗಳೂ ನೆಲೆಯೂರಲು ಕಾರಣವಾದವು.

ಸಂಚಾರಿ ಚಿತ್ರಮಂದಿರಗಳೇ ಮೊದಲು ಚಲನಚಿತ್ರ ಪ್ರದರ್ಶನಕ್ಕೆ ಭದ್ರಬುನಾದಿ. ತದನಂತರ ಖಾಯಂ ಚಿತ್ರಮಂದಿರಗಳು ಬರಲು ಪ್ರಾರಂಭವಾದವು. ಗ್ರಾಮೀಣ ಜನರ ನೆರವಿಗೆ ಆರಂಭದಲ್ಲಿ ಬಂದುದು ಈ ಸಂಚಾರಿ ಚಿತ್ರಮಂದಿರಗಳ. ಪ್ರಾರಂಭದ ದಿನಗಳಲ್ಲೇ ಈ ಚಿತ್ರ ಮಂದಿರಗಳು ಒಂದು ಊರಿನಿಂದ ಮತ್ತೊಂದು ಊರಿಗೆ ಪ್ರವಾಸ ಮಾಡುವಾಗ ಯಂತ್ರೋಪಕರಣಗಳು, ಡೇರೆಗಳು ಹಾಗೂ ಸಾಮಾನು ಸರಂಜಾಮುಗಳನ್ನು ಸಹ ವಾಹನಗಳಲ್ಲಿ ಸಾಗಿಸುತ್ತಿದುದು ಸಹಜವಾಗಿತ್ತು. ಆದರೆ ಈ ಚಿತ್ರಮಂದಿರಗಳ ಸಂಖ್ಯೆ ಗ್ರಾಮೀಣ ಪ್ರದೇಶಗಳಲ್ಲಿ ಬಹಳಷ್ಟು ಹೆಚ್ಚುತ್ತ ಬಂದಾಗ ಸಂಚಾರ ಮಾಡುವ ಪ್ರಮೇಯ ಕಡಿಮೆಯಾಗುತ್ತ ಬಂತು. ಈಗಾಗಲೇ ಕರ್ನಾಟಕದಲ್ಲಿ ಸುಮಾರು ೭೭೦ ಸಂಚಾರಿ ಚಿತ್ರಮಂದಿರಗಳಿದು ಅವುಗಳ ಸ್ವರೂಪ ಬದಲಾಗಿದೆ. ಸರ್ಕಾರ ತನ್ನ ನಿಲುವನ್ನು ಸಡಿಲಿಸಿ ಇವುಗಳಿಗೆ ಒಂದು ನೆಲೆಯನ್ನು ಒದಗಿಸಿದೆ. ಇದರೊಂದಿಗೆ ಸರ್ಕಾರ ಈ ಚಿತ್ರಮಂದಿರಗಳಿಗೆ ನೀಡುತ್ತಿರುವ ಸಹಕಾರದ ಜೊತೆಗೆ ಬಹಳ ಹಳೆಯದಾಗಿರುವ ಸಿನಿಮಾ ಕಾಯಿದೆಯನ್ನು ಸರಳೀಕರಿಸಿದರೆ ನಶಿಸುತ್ತಿರುವ ಈ ಚಿತ್ರಮಂದಿರಗಳಿಗೆ ಜೀವದಾನ ಮಾಡಿದಂತಾದೀತು.

(ಚಿತ್ರ ೩.೪) ಸಾಂಬಶಿವಯ್ಯ

ಸಾಂಬಶಿವಯ್ಯ ತಮ್ಮ ಸಂಚಾರಿ ಚಿತ್ರಮಂದಿರದಲ್ಲಿ ಕನ್ನಡ ಚಿತ್ರಗಳನ್ನು ಪ್ರದರ್ಶಿಸಿ ಅವುಗಳನ್ನು ಜನಪ್ರಿಯಗೊಳಿಸಿದರು. ಕೋರ್ಟು ವ್ಯವಹಾರ ಚತುರರಾದ ಸಾಂಬಶಿವಯ್ಯನವರು ಕಾನೂನು ಹೋರಾಟ ಕೂಡ ನಡೆಸಿ ಸಂಚಾರಿ ಚಿತ್ರಮಂದಿರಗಳಿಗೆ ಖಾಯಂ ಸ್ಥಾನವನ್ನು ಕೊಡಿಸಲು ಶ್ರಮಿಸಿದರು.

ಮೊದಲು ಸಂಚಾರಿ ಚಿತ್ರಮಂದಿರಗಳಿಗೆ ಮೂರು ತಿಂಗಳ ಅವಧಿಗೆ ಪರವಾನಗಿ ದೊರೆಯುತ್ತಿತ್ತು. ಇದು ವಿದ್ಯುಚ್ಛಕ್ತಿ ಸಂಪರ್ಕಕ್ಕೂ ಅನ್ವಯಿಸುತ್ತಿತ್ತು. ಆರಂಭಕ್ಕೆ ಆಮಂತ್ರಣ ಪತ್ರಿಕೆಯನ್ನು ಪರವಾನಗಿಗಾಗಿ ನೀಡುವುದು ರೂಢಿಯಾಗಿತ್ತು. ನಂತರ ಆರು ತಿಂಗಳವರೆಗೆ ಪರವಾನಗಿಯನ್ನು ವಿಸ್ತರಿಸಲಾಯಿತು. ಸುಮಾರು ೭೦ ರ ದಶಕದವರೆಗೂ ಹೀಗೆಯೇ ನಡೆದು ಬಂತು. ಈ ನಿಯಮವನ್ನು ಬದಲಾವಣೆ ಮಾಡಬೇಕೆಂದು ಸಂಚಾರಿ ಚಿತ್ರಮಂದಿರಗಳ ಮಾಲೀಕರು ಸರ್ಕಾರವನ್ನು ಒತ್ತಾಯಿಸಿದ್ದರ ಫಲವಾಗಿ ೧೯೭೦ರಲ್ಲಿ ಒಂದೇ ಜಾಗದಲ್ಲಿ ಎರಡೂವರೆ ವರ್ಷಗಳ ಕಾಲ ಚಿತ್ರಮಂದಿರ ಇರಲು ಅನುಮತಿ ನೀಡುವ ಕಾನೂನು ಜಾರಿಗೆ ಬಂತು. ಅದುವರೆಗೆ ಇದ್ದ ಸಂಚಾರಿ ಚಿತ್ರಮಂದಿರವೊಂದು ಖಾಯಂ ಚಿತ್ರಮಂದಿರಕ್ಕಿಂತ ಮೂರು ಮೈಲಿ ಅಂತರದಾಚೆಗೆ ಇರಬೇಕೆಂಬ ಕಾನೂನು ಮಾಯವಾಯಿತು. ಗೋಪಾಲ್, ಸತ್ಯನಾರಾಯಣ, ಶಂಕರ್, ಲಕ್ಷ್ಮಿ, ಲಿಯೋ, ರಂಗನಾಥ, ಮನೋಹರ ಮುಂತಾದವು ಆರಂಭದ ಕೆಲವು ಚಿತ್ರಮಂದಿರಗಳು.

೧೯೭೦ ರಲ್ಲಿ ಸಮುರೋಪಾದಿಯಲ್ಲಿ ಹೈಕೋರ್ಟಿನಲ್ಲಿ ಮಾಡಿದ ಹೋರಾಟದ ಫಲವಾಗಿ ಸಂಚಾರಿ ಚಿತ್ರಮಂದಿರಗಳಿಗೆ ಜೀವ ಬಂತು. ಆರಂಭದಲ್ಲಿ ಮೂರು ಕಂಬಗಳ ಟೆಂಟ್‌ಗಳನ್ನು ಹಾಕಿ ಚಿತ್ರ ಪ್ರದರ್ಶನ ಮಾಡುತ್ತಿದ್ದರು. ಜೋರಾದ ಮಳೆ, ಗಾಳಿ ಬಂತೆಂದರೆ ಟೆಂಟ್ ಅನ್ನು ಇಳಿಸುತ್ತಿದ್ದರು.

೧೯೬೪-೬೫ರಲ್ಲಿ ತೆಂಗಿನ ಗರಿಗಳಿಂದ ಶೆಡ್‌ಗಳನ್ನು ಕೊಂಚ ವ್ಯವಸ್ಥಿತವಾಗಿ ನಿರ್ಮಿಸುವ ಪರಿಪಾಠ ಬೆಳೆದಂತೆ ಮೂರು ಕಂಬಗಳ ಟೆಂಟ್ ಪದ್ಧತಿ ಕಣ್ಮರೆಯಾಯಿತು. ಆದರೆ ತೆಂಗಿನ ಗರಿಯ ಶೆಡ್‌ಗಳಲ್ಲಿ ಬೆಂಕಿಯ ಅಪಾಯ ವಿಪರೀತವಾಗಿತ್ತು. ಕಲವೊಂದೆಡೆ ಅಗ್ನಿ ದುರಂತವೂ ಸಂಭವಿಸಿತು. ಹೀಗಾಗಿ ೧೯೭೦ರ ಸುಮಾರಿಗೆ ಸಂಚಾರಿ ಚಿತ್ರಮಂದಿರಗಳಿಗೆ ಕಲ್ನಾರಿನ ಲಘುವಾದ ಶೀಟ್‌ಗಳನ್ನು ಬಳಸುವ ಕ್ರಮ ರೂಢಿಯಾಯಿತು. ಎರಡೂವರೆ ವರ್ಷಗಳ ಕಾಲಕ್ಕೆ ಇದ್ದ ಅನುಮತಿ 'ತಾತ್ಕಾಲಿಕ' ಎಂದು ಪರಿವರ್ತನೆಯಾಗಿದ್ದು ಇದಕ್ಕೆ ಕಾರಣವಾಯ್ತು.

ಈಗ ಸಂಚಾರಿ ಚಿತ್ರಮಂದಿರಗಳು ಹೆಸರಿಗಷ್ಟೇ ಇದರೂ ಅವು ಒಂದು ಕಡೆಯಿಂದ ಮತ್ತೊಂದು ಕಡೆಗೆ ಕದಲುತ್ತಿಲ್ಲ. ಕಾನೂನು ಕೂಡ ಇದಕ್ಕೆ ಅನುವು ಮಾಡಿಕೊಟ್ಟಿದೆ. ಇಂದು ಹೊಸದೊಂದು ಖಾಯಂ ಚಿತ್ರಮಂದಿರ ನಿರ್ಮಾಣ ಮಾಡುವುದು ಸುಲಭದ ಮಾತಲ್ಲ. ಈಗಲೂ ರೂಢಿಯಲ್ಲಿರುವ ತೀರಾ ಹಳೆಯ ಕಾನೂನು ನೂರಾರು ಅಡ್ಡಿ ಆತಂಕಗಳನ್ನು ತಂದೊಡ್ಡುತ್ತದೆ. ಆದರೆ ಈ ಸಂಚಾರಿ ಚಿತ್ರಮಂದಿರಗಳನ್ನು ಖಾಯಂ ಚಿತ್ರಮಂದಿರವೆಂದು ಪರಿವರ್ತಿಸುವುದು ಕಷ್ಟದ ಕೆಲಸವೇನಲ್ಲ. ಆದರೂ ಇಂದು ಇಷ್ಟೊಂದು ಸಂಖ್ಯೆಯ ಚಿತ್ರಮಂದಿರಗಳು ಸಂಚಾರಿ ಚಿತ್ರಮಂದಿರಗಳ ಹೆಸರಿನಲ್ಲೇ ಉಳಿದಿರುವ ಕಾರಣವೇನೆಂದರೆ ಬಂಡವಾಳದ ಕೊರತೆ. ಖಾಯಂ ಚಿತ್ರ ಮಂದಿರ ಮಾಡುವುದಾದರೆ ಅಲ್ಲಿರುವ ಯಂತ್ರೋಪ ಕರಣಗಳ ಹೊರತು ಮತ್ತಾವುದೇ ವಸ್ತುಗಳಾಗಲಿ, ಕಟ್ಟಡವಾಗಲಿ ಉಪ ಯೋಗಕ್ಕೆ ಬರುವುದಿಲ್ಲ. ಅದೂ ಅಲ್ಲದೆ ಈಗಿನ ಆಧುನಿಕ ಉಪಕರಣಗಳಿಗೆ ಹೋಲಿಸಿದರೆ ಹಿಂದಿನ ಯಂತ್ರಗಳನ್ನು ಖಾಯಂ ಚಿತ್ರಮಂದಿರಕ್ಕೆ ಜೋಡಿಸುವುದು ಕೂಡಾ ಅರ್ಥಹೀನ.

ಇಂದು ಚಿತ್ರಗಳ ಗಳಿಕೆಯಲ್ಲಿ ಸಂಚಾರಿ ಚಿತ್ರಮಂದಿರಗಳ ಪಾಲೂ ಮುಖ್ಯವಾದದ್ದೆ. ಇಂಥ ಕೆಲವು ಚಿತ್ರಮಂದಿರಗಳು ಖಾಯಂ ಚಿತ್ರಮಂದಿರಕ್ಕೆ ಸರಿಸಮಾನವಾಗಿ ಸಜ್ಜಾಗಿ

ನಿಂತಿದ್ದೂ ಸುಳ್ಳಲ್ಲ. ಮೊದ ಮೊದಲು ಹೊಸ ಚಿತ್ರವೊಂದು ಬಿಡುಗಡೆಯಾಗಿ ಸಂಚಾರಿ ಮಂದಿರಕ್ಕೆ ಒಂದು ವರ್ಷದ ನಂತರ ಬರುತ್ತಿದ್ದರೆ ಈಗ ಕೆಲವು ಸಂಚಾರಿ ಚಿತ್ರಮಂದಿರಗಳಲ್ಲಿ ಚಿತ್ರದ ಪ್ರಥಮ ಬಿಡುಗಡೆಯಾಗುವಷ್ಟು ಬದಲಾವಣೆಗಳಾಗಿವೆ.

೧೯೬೫ರಲ್ಲಿದ್ದ ಪ್ರದರ್ಶನ ವ್ಯವಸ್ಥೆಯಲ್ಲಿ ಶೇಕಡಾ ೬೦ ಭಾಗವನ್ನು ಟೂರಿಂಗ್ ಸಿನಿಮಾ ಆವರಿಸಿಕೊಂಡಿದ್ದವು. ಅದೇ ಸಂದರ್ಭದಲ್ಲಿ ಸರ್ಕಾರ ಇನ್ನಷ್ಟು ಟೂರಿಂಗ್ ಸಿನಿಮಾಗಳಿಗೆ ಲೈಸನ್ಸ್ ನೀಡಬೇಕೆಂಬ ಒತ್ತಾಯವೂ ಇತ್ತು. ಆ ಅವಧಿಯಲ್ಲಿ ಬಂಡವಾಳ ಹಾಗೂ ವ್ಯವಹಾರದಲ್ಲಿ ಹೊರಗಿನವರ ಪ್ರಭಾವವೇ ಜಾಸ್ತಿ ಇತ್ತು. ಆಗ ಥಿಯೇಟರ್‌ಗಳ ನಿಗದಿತ ಬಾಡಿಗೆಯ ಜೊತೆಗೆ ಕಪ್ಪುಹಣ ಕೊಡಬೇಕೆಂಬ ಷರತ್ತು ಅಘೋಷಿತವಾಗಿ ಚಲಾವಣೆಯಲ್ಲಿತ್ತು. ಇದನ್ನು ಪೂರೈಸುವುದು ಕನ್ನಡ ನಿರ್ಮಾಪಕರಿಗೆ ಕಷ್ಟವಾಗಿದ್ದರಿಂದ ಈ ದೌರ್ಬಲ್ಯದ ಲಾಭವನ್ನು ಹಿಂದಿ ಹಾಗೂ ಇನ್ನಿತರ ಭಾಷೆಯ ನಿರ್ಮಾಪಕರು ಪಡೆದು ವಿಜೃಂಭಿಸತೊಡಗಿದರು. ೧೯೬೫ರ ಸುಮಾರಿನಲ್ಲಿ ಕನ್ನಡ ಚಿತ್ರಗಳ ಗಳಿಕೆಯ ಸ್ಥಿತಿ ಹೀಗಿತ್ತು: ೨೫ ಚಿತ್ರಗಳ ಪೈಕಿ ೨೦ ಚಿತ್ರಗಳು ಒಂದೂವರೆ ಲಕ್ಷ ರೂಪಾಯಿಗಳಿಗಿಂತ ಕಡಿಮೆ ಆದಾಯ ತಂದರೆ ಮೂರು ಚಿತ್ರಗಳು ಒಂದೂವರೆಯಿಂದ ಎರಡೂವರ ಲಕ್ಷ ಗಳಿಸಿದರೆ, ಒಂದೆರಡು ಚಿತ್ರಗಳಷ್ಟೇ ಐದು ಲಕ್ಷ ರೂಪಾಯಿಗಳನ್ನು ಎರಡು ವರ್ಷಗಳ ಅವಧಿಯಲ್ಲಿ ಗಳಿಸುತ್ತಿದ್ದವು.

೧೯೭೩ರ ವೇಳೆಗೆ ಟೈಪ್ ಡಿಸೈನ್ ಸಿನಿಮಾಗಳ ವಿಷಯದಲ್ಲಿ ಪ್ರಗತಿ ಕಂಡು ಬರತೊಡಗಿತು. ಪ್ರವಾಸಿ ಚಿತ್ರಮಂದಿರಗಳು ಪೂರ್ಣವಾಗಿ ತಾತ್ಕಾಲಿಕ ವ್ಯವಸ್ಥೆಯನ್ನು ಹೊಂದಿದ್ದು ಆ ಮೂಲಕ ಐವತ್ತು ಸಾವಿರ ಜನಸಂಖ್ಯೆ ಇರುವ ಎಲ್ಲಾ ಸ್ಥಳಗಳಲ್ಲಿ ಟೈಪ್ ಡಿಸೈನ್‌ಗಳಿಗೆ ಅನುಗುಣವಾಗಿ ಕಡಿಮೆ ವೆಚ್ಚದಲ್ಲಿ ನಿರ್ಮಿಸಬಹುದಾದ ಚಿತ್ರಮಂದಿರಗಳ ನಿರ್ಮಾಣಕ್ಕೆ ಅವಕಾಶವಾಗುವಂತೆ ಕರಡು ನಿಯಮಾವಳಿಗಳು ಸಿದ್ಧವಾದವು.

ಮಂಡಳಿ ಆರು ಟೈಪ್ ಡಿಸೈನ್‌ಗಳನ್ನು ರೂಪಿಸಿ ಸರ್ಕಾರದ ಅನುಮೋದನಗೆ ಕಳಿಸಿತ್ತು. ಒಟ್ಟಿನಲ್ಲಿ ೧೫ ಟೈಪ್ ಡಿಸೈನ್‌ಗಳಿರುತ್ತವೆ. ಕಡಿಮೆ ವೆಚ್ಚದ ಚಿತ್ರಮಂದಿರಗಳನ್ನು ಕಟ್ಟಲು ನಿವೇಶನವನ್ನು ಮಂಜೂರು ಮಾಡುವಲ್ಲಿ ಸಂಚಾರಿ ಚಿತ್ರಮಂದಿರಗಳನ್ನು ನಡೆಸುತ್ತಿರುವವರಿಗೆ ಆದ್ಯತೆ ನೀಡಬೇಕೆಂದು ವಾಣಿಜ್ಯ ಮಂಡಳಿಯೂ ಶಿಫಾರಸು ಮಾಡಿತ್ತು.

ಇದಕ್ಕೂ ಮೊದಲು, ಅಂದರೆ ೧೯೭೨ರಲ್ಲಿ, ಈ ಚಿತ್ರಮಂದಿರದ ನಿರ್ಮಾಣಕ್ಕೆ ಅನುವಾಗುವಂತೆ ನಿಬಂಧನೆಗಳನ್ನು ಸಾಕಷ್ಟು ಸಡಿಲಗೊಳಿಸುವುದಾಗಿ ಮುಖ್ಯಮಂತ್ರಿಗಳಾಗಿದ್ದ ದೇವರಾಜ ಅರಸ್ ಅವರು ವಾಣಿಜ್ಯ ಮಂಡಳಿಯ ನಿಯೋಗವೊಂದಕ್ಕೆ ಭರವಸೆ ನೀಡಿದ್ದರು.

ಆಗ ಚೇಂಬರ್ ರಾಜ್ಯ ಸರ್ಕಾರಕ್ಕೆ ಸಲ್ಲಿಸಿದ ಯೋಜನೆಯ ಪ್ರಕಾರ ರಾಜ್ಯದಲ್ಲಿನ ಪ್ರದರ್ಶನ ಮಂದಿರಗಳ ಶೀಘ್ರ ಅಭಾವ ಸರಿದೂಗಿಸಲು ಸುಮಾರು ೩೦೦ ಅರೆಶಾಶ್ವತ ಚಿತ್ರಮಂದಿರಗಳು ಮೊದಲ ಹಂತದಲ್ಲಿ ನಿರ್ಮಾಣವಾಗಬೇಕು. ಆಗ ಒಂದೊಂದು ಚಿತ್ರ ಮಂದಿರಕ್ಕೆ ತಗಲುತ್ತಿದ್ದ ಅಂದಾಜು ಖರ್ಚು ಎರಡು ಲಕ್ಷ ರೂಪಾಯಿಗಳು.ಆಗ ವಾಣಿಜ್ಯ ಮಂಡಳಿಯ ಅಧ್ಯಕ್ಷರಾಗಿದ್ದ ಭಕ್ತವತ್ಸಲ ಮತ್ತು ಉಪಾಧ್ಯಕ್ಷರಾಗಿದ್ದ ಆರ್.ಎನ್.ಮಾಂಡ್ರೆ ನೇತೃತ್ವದಲ್ಲಿ ಚೇಂಬರ್‌ನ ಕಾರ್ಯಕಾರಿ ಸಮಿತಿಯ ನಿಯೋಗ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದಾಗ ಪ್ರಾದೇಶಿಕ ಚಿತ್ರರಂಗಕ್ಕೆ ನೆರವಾಗಲು ರಾಜ್ಯ ಫಿಲಂ ಫೈನಾನ್ಸ್ ಕಾರ್ಪೊರೇಷನ್ ಒಂದನ್ನು ಸ್ಥಾಪಿಸುವ ಸಲಹೆಯನ್ನು ಮಾಡಲಾಗಿತ್ತು.ಆದರೆ ಆಗಷ್ಟೇ ರಾಜ್ಯ ಫಿಲಂ ಡೆವಲಪ್‌ಮೆಂಟ್ ಕಾರ್ಪೊರೇಷನ್ ಅನ್ನು ಪುನಶ್ಚೇತನಗೊಳಿಸಿದ್ದರಿಂದ ಫೈನಾನ್ಸ್ ಕಾರ್ಪೊರೇಷನ್ ಸ್ಥಾಪನೆ ಅನಗತ್ಯವೆಂದು ಮುಖ್ಯಮಂತ್ರಿಗಳು ಅಭಿಪ್ರಾಯ ಪಟ್ಟಿದ್ದರು.

ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ರಾಜ್ಯದಲ್ಲಿನ ಸಂಚಾರಿ ಮತ್ತು ತಾತ್ಕಾಲಿಕ ಚಿತ್ರಮಂದಿರಗಳಿಗೆ ವಿದ್ಯುತ್ ದರವನ್ನು ಕಡಿಮೆ ಮಾಡಬೇಕೆಂದೂ ಅವುಗಳಿಗೆ ಶಾಶ್ವತ ವಿದ್ಯುಚ್ಛಕ್ತಿ ಸಂಪರ್ಕ ಒದಗಿಸಬೇಕೆಂದೂ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ಒತ್ತಾಯ ಮಾಡಿದ್ದರ ಫಲವಾಗಿ ವಿದ್ಯುತ್ ಮಂಡಳಿ ತಡವಾದರೂ ಅದನ್ನು ಊರ್ಜಿತಗೊಳಿಸುವ ಸಂಬಂಧ ೧೯೯೫ರ ಜನವರಿ ೧೮ರಂದು ಸೂಕ್ತ ಸುತ್ತೋಲೆಯನ್ನು ಹೊರಡಿಸಿತು. ಅದರಂತೆ ಒಂದು ವರ್ಗ ಮತ್ತು ಇದಕ್ಕೆ ಮೇಲಟ್ಟವರಿಗೆ ಪರವಾನಗಿ ನೀಡಲಾದ ಸಂಚಾರಿ ಚಿತ್ರಮಂದಿರಗಳಿಗೆ ಸಾಮಾನ್ಯ ವಿದ್ಯುತ್ ದರ (ಎಲ್.ಟಿ.೩:೧೯೯೩) ನೀಡಲು ಒಪ್ಪಲಾಯಿತು.

ಇದರೊಂದಿಗೆ ಜನಪ್ರಿಯ ನಾಯಕನಟರ ಚಿತ್ರಗಳು ಸಂಚಾರಿ ಚಿತ್ರಮಂದಿರಗಳಲ್ಲಿ ಆರಂಭದಲ್ಲಿ ಪ್ರದರ್ಶಿತವಾಗುವುದು ತಮ್ಮ ನಾಯಕನಿಗೆ ಅವಮಾನವೆಂದು ಅಭಿಮಾನಿಗಳು ಸಿಡಿದೇಳುವುದೂ ಇದೆ. ಇದು ನಟರ ಇಮೇಜ್‌ಗೆ ಸಂಬಂಧಿಸಿದ ಪ್ರಶ್ನೆ. ಇಂಥ ಮಾನದಂಡಗಳಿಂದ ಇಮೇಜ್ ಅನ್ನು ಅಳೆಯುವ ರೂಢಿ ಬೆಳೆದಿದ್ದರಿಂದ ಸಂಚಾರಿ ಚಿತ್ರಮಂದಿರಗಳಿಗೆ ಪರಭಾಷಾ ಚಿತ್ರಗಳ ಪ್ರವೇಶ ಸುಲಭ ಹಾಗೂ ಅನಿವಾರ್ಯ ಆಯಿತಲ್ಲದೆ ಅವು ಹಣವನ್ನೂ ಗಳಿಸತೊಡಗಿದವು. ಇದೇ ಅವಕಾಶವನ್ನು ಅಶ್ಲೀಲ ಚಿತ್ರಗಳೂ ಪಡೆದವು. ಇಂದು ಅನೇಕ ಟೆಂಟ್‌ಗಳು ಇಂಥ ಚಿತ್ರಗಳ ಪ್ರದರ್ಶನಕ್ಕೆ ಗಂಟು ಬಿದ್ದಿರುವುದು ಸಾಕಷ್ಟು ಪ್ರಮಾಣದಲ್ಲಿ ಕಂಡು ಬರುತ್ತದೆ.

ವಿಷ್ಣುವರ್ಧನ್ ಚಿತ್ರವೊಂದು ಟೆಂಟ್‌ನಲ್ಲಿ ಬಿಡುಗಡೆ ಎಂಬ ಪ್ರಕಟಣೆ ಬಂದಾಗ ಅಭಿಮಾನಿಗಳು ಗಲಾಟೆ ಮಾಡಿದ್ದರು. 'ಸಾಂಗ್ಲಿಯಾನ', 'ನ್ಯೂ ಡೆಲ್ಲಿ', 'ಬಾಳೊಂದು ಭಾವಗೀತೆ' ಈ ಸಾಲಿನ ಇನ್ನಿತರ ಚಿತ್ರಗಳು. ಆದರೆ ಇಲ್ಲಿ ನಿರ್ಮಾಪಕ ಹಾಗೂ ಹಂಚಿಕೆದಾರನ ಅನಿವಾರ್ಯ ಸ್ಥಿತಿ ನಾಯಕ ನಟನ ಅಭಿಮಾನಿಗಳಿಗೆ ಗೋಚರಿಸಿದಂತಿಲ್ಲ.

ಸಾಮಾನ್ಯವಾಗಿ ಟೆಂಟ್‌ಗಳೆಂದರೆ ಅವ್ಯವಸ್ಥೆಗಳ ಆಗರವೆಂಬ ಪ್ರತೀತಿಯಿದೆ. ಈಗಲೂ ಅದಕ್ಕೆ ನಿದರ್ಶನಗಳೂ ಸಿಗುತ್ತವೆ. ಅದರಲ್ಲೂ ಗ್ರಾಮೀಣ ಪ್ರದೇಶಗಳ ಇಂಥ ಚಿತ್ರಮಂದಿರಗಳಂತೂ ಯಾವುದೇ ರೀತಿಯಿಂದಲೂ ವ್ಯವಸ್ಥಿತವಾಗಿರುವುದಿಲ್ಲ. ಅಲ್ಲಿನ ಪ್ರೇಕ್ಷಕರು ಕಂಡಲ್ಲಿ ಬೀಡಾ ಜಗಿದು ಉಗಿಯುತ್ತಾ, ಬೀಡಿ ಸಿಗರೇಟು ತುಂಡುಗಳನ್ನು ಎಸೆಯುತ್ತಾ ಇರುವುದು ಮಾಮೂಲಿ ದೃಶ್ಯ. ೧೯೭೧ರಲ್ಲಿ ಅರಸೀಕೆರೆಯ ಬಾಣಾವರದ ಪ್ರವಾಸಿ ಚಿತ್ರಮಂದಿರವೊಂದರಲ್ಲಿ ನಡೆದ ಘಟನೆಯನ್ನು ಇಲ್ಲಿ ಉಲ್ಲೇಖಿಸಬಹುದು:

೧೯೭೧ರ ಫೆಬ್ರವರಿ ೧೮ರ ರಾತ್ರಿ 'ಮಿಸ್ಟರ್ ರಾಜಕುಮಾರ್' ಚಿತ್ರ ನೋಡುತ್ತಿದ್ದ ಚಲುವನಹಳ್ಳಿಯ ಬೊಮ್ಮನಾಯಕ ಎಂಬ ೪೮ರ ಪ್ರಾಯದ ಪ್ರೇಕ್ಷಕ ಚಿತ್ರಮಂದಿರದೊಳಗೆ ಬೀಡಿ ಸೇದಿದ. ಈ ಆರೋಪಕ್ಕಾಗಿ ಅವನು ಕೋರ್ಟಿನ ಕಟ್ಟೆ ಹತ್ತಬೇಕಾಯಿತು. ಮ್ಯಾಜಿಸ್ಟ್ರೇಟರು ಅವನಿಗೆ ೧೦ ರೂಪಾಯಿ ದಂಡ ವಿಧಿಸಿದರು. ತಪ್ಪಿದರೆ ಐದು ದಿನ ಸಾದಾ ಸಜೆಯೆಂದು ಹೇಳಿದರು. ಆದರೆ ಆತ ಪುನರ್‌ಪರಿಶೀಲನೆಗೆ ಅರ್ಜಿ ಹಾಕಿದ. ಅಲ್ಲಿ ನ್ಯಾಯಾಧೀಶರಾಗಿದ್ದ ನೇಸರ್ಗಿಯವರು ೧೯೫೨ನೇ ಶಾಸನದ ಮೂರನೆಯ ವಿಧಿಯಲ್ಲಿ ಯಾವುದೇ ವ್ಯಕ್ತಿ ಶಾಸನಕ್ಕೆ ವಿರುದ್ಧವಾಗಿ ಧೂಮಪಾನ ಮಾಡಿದರೆ ಪೋಲೀಸರು ಎಚ್ಚರಿಸಬೇಕು. ಆ ಮಾತನ್ನು ಲಕ್ಷಿಸದಿದ್ದರೆ ಚಿತ್ರಮಂದಿರದಿಂದ ಹೊರಗೆ ಹಾಕುವ, ಶಿಕ್ಷಿಸುವ ಅಧಿಕಾರ ಇರುತ್ತದೆ ಎಂಬ ನಿಯಮವಿದೆ. ಈ ಪ್ರಕರಣದಲ್ಲಿ ಬೊಮ್ಮನಾಯಕ ಧೂಮಪಾನ ಮಾಡಿದ್ದಕ್ಕೆ ಸಾಕ್ಷಿ ಇದೆಯಾದರೂ ಪೋಲೀಸರು ಎಚ್ಚರಿಕೆ ನೀಡಿದ್ದಕ್ಕಾಗಲಿ, ಆತ ಅದನ್ನು ನಿರ್ಲಕ್ಷ್ಯ ಮಾಡಿದ್ದಕ್ಕಾಗಲಿ ಸಾಕ್ಷಿ ಇಲ್ಲವಾದ್ದರಿಂದ ಆತನಿಗೆ ಶಿಕ್ಷೆ ವಿಧಿಸುವಂತಿಲ್ಲ ಎಂದು ತೀರ್ಪು ನೀಡಿದ್ದರು. ನಿಜಕ್ಕೂ ಇದೊಂದು ಅಪರೂಪದ ಪ್ರಸಂಗ. ಈಗ ಎಲ್ಲ ನಿಯಮಗಳು ಗಾಳಿಗೆ ತೂರಿ ಹೋಗಿವೆ.

ಮೂಕಿ ಚಿತ್ರಗಳ ಕಾಲದಿಂದಲೂ ಕನ್ನಡ ಚಿತ್ರೋದ್ಯಮಕ್ಕೆ ಮುಖ್ಯವಾಹಕವಾಗಿ ಸೇವೆ ಸಲ್ಲಿಸುತ್ತಾ ಬಂದಿರುವ ಸಂಚಾರಿ ಚಿತ್ರಮಂದಿರಗಳ ಆಯುಷ್ಯ ಇನ್ನು ಹೆಚ್ಚು ಕಡಿಮೆ ಕೊನೆಗೊಂಡಂತೆಯೆ. ೧೯೮೪ರ ಡಿಸೆಂಬರ್ ತಿಂಗಳಲ್ಲಿ ಸರ್ಕಾರ ಆದೇಶವೊಂದನ್ನು ಪ್ರಕಟಿಸಿ ರಾಜ್ಯದಲ್ಲಿರುವ ಎಲ್ಲ ಸಂಚಾರಿ ಚಿತ್ರಮಂದಿರಗಳೂ ೧೯೮೬ರ ಡಿಸೆಂಬರ್ ಒಳಗೆ ಅರೆಖಾಯಂ ಚಿತ್ರಮಂದಿರಗಳಾಗಿ ಮಾರ್ಪಡಬೇಕೆಂದು ತಿಳಿಸಿತ್ತು. ಪ್ರಸ್ತುತ ರಾಜ್ಯದಲ್ಲಿರುವ ೧೨೦೦ ಚಿತ್ರಮಂದಿರಗಳ ಪೈಕಿ ಸುಮಾರು ಅರ್ಧದಷ್ಟು ಸಂಚಾರಿ ಚಿತ್ರಮಂದಿರಗಳು. ಇವುಗಳಲ್ಲಿ ಕೆಲವು ಅರೆಖಾಯಂ ಆಗಿಯೂ ಮತ್ತೆ ಕೆಲವು ಖಾಯಂ ಚಿತ್ರಮಂದಿರಗಳಾಗಿಯೂ ಪರಿವರ್ತನೆಗೊಂಡಿವೆ. ಬಹಳ ವರ್ಷಗಳಿಂದ ಸಂಚಾರಿ ಚಿತ್ರಮಂದಿರಗಳು ನಡೆಯುತ್ತ ಬರುತ್ತಿದ್ದು ಅವು ಕನ್ನಡ ಚಿತ್ರಗಳಿಗೆ ಹೆಚ್ಚಿನ ರೀತಿಯಲ್ಲಿ ಸಹಾಯಕವಾಗಿವೆ. ಮಿಗಿಲಾಗಿ ಕನ್ನಡ ಚಿತ್ರಗಳಿಗೆ ಒಂದು ರೀತಿಯಲ್ಲಿ ಪ್ರಚಾರವಾಹಕಗಳಾಗಿ ಇವು ಸೇವೆ ಸಲ್ಲಿಸಿವೆ.

ಸಂಚಾರಿ ಚಿತ್ರಮಂದಿರವೆಂದರೆ ಒಂದೇ ಜಾಗದಲ್ಲಿ ಹೆಚ್ಚುಕಾಲ ಇರಬಾರದೆಂಬ ನಿಯಮವಿತ್ತು. ಆಗ ಈ ಚಿತ್ರಮಂದಿರಗಳು ಜಾಗ ಬದಲಾಯಿಸದೆ ಒಂದೇ ಕಡೆ ಇರುವುದರ ಬಗ್ಗೆ ಖಾಯಂ ಚಿತ್ರಮಂದಿರಗಳ ಮಾಲೀಕರು ನ್ಯಾಯಾಲಯಕ್ಕೆ ಹೋಗುವಂತಾಗಿ ಆ ವಿವಾದಗಳು ನಾಲ್ಕಾರು ವರ್ಷ ನಡೆದಿದ್ದ ಉದಾಹರಣೆಗಳು ಇವೆ. ಶ್ರೇಷ್ಠ ನ್ಯಾಯಾಲಯ ಈ ಬಗ್ಗೆ ತೀರ್ಪಿತ್ತು ಅದು ಸಂಚಾರಿ ಚಿತ್ರಮಂದಿರಕ್ಕೆ ವ್ಯತಿರಿಕ್ತವಾದುದರಿಂದ ಸುಮಾರು ೬೦೦ ಚಿತ್ರಮಂದಿರಗಳು ಮುಚ್ಚುವ ಪರಿಸ್ಥಿತಿ ಉಂಟಾಯಿತು. ಆಗ ರಾಮಕೃಷ್ಣ ಹೆಗಡೆ ಮುಖ್ಯಮಂತ್ರಿಗಳಾಗಿದ್ದರು. ಅವರು

(ಚಿತ್ರ ೩೫) ಮೂರು ಕಂಬಗಳ ಆಸರೆಯಲ್ಲಿ ನಿಂತ, ನಾಲ್ಕು ತುಂಡು ಟೆಂಟ್ ಬಟ್ಟೆ (ಟಾರ್ಪಾಲ್)ಗಳಿಂದ ನಿರ್ಮಿತವಾದ ತಲಕಾಡಿನ ಭಾಗ್ಯಲಕ್ಷ್ಮೀ ಚಿತ್ರಮಂದಿರ ವಿಶ್ವನಾಥ್ ಇದರ ಮಾಲೀಕರು



(ಚಿತ್ರ ೩೬)ಕೆಸ್ತೂರಿನ ಶ್ರೀರಂಗ ಚಿತ್ರಮಂದಿರದ ಒಳನೋಟ ಪ್ರೊಜೆಕ್ಟರಿನ ಕ್ಯಾಬಿನ್ ಹಾಗೂ ಗ್ಯಾಲರಿಗಳನ್ನು ಕಾಣಬಹುದು

(ಚಿತ್ರ ೩೭) ಹಾಲಿಯೂರುದುರ್ಗದ ಶ್ರೀ ವಿನಾಯಕ ಚಿತ್ರಮಂದಿರ (೧೯೬೫). ಮಾಲೀಕರು : ಎಚ್.ಆರ್.ಶಿವಣ್ಣ

ಸಂಚಾರಿ ಚಿತ್ರಮಂದಿರಗಳು

ಚಿತ್ರಗಳನ್ನು, ಮುಖ್ಯವಾಗಿ ಕನ್ನಡ ಚಿತ್ರಗಳನ್ನು ನೋಡುವ ಅಭಿರುಚಿ ಬೆಳೆಸುವಲ್ಲಿ ಸಂಚಾರಿ ಚಿತ್ರಮಂದಿರಗಳೆಂಬ ಟೆಂಟ್ ಸಿನಿಮಾಗಳ ಪಾತ್ರ ಹಿರಿದಾದುದು. ತಾಲ್ಲೂಕಿನ, ಗ್ರಾಮಾಂತರ ಪ್ರದೇಶಗಳ ಜನರ ಬಳಿಗೇ ಹೋಗುವ ಈ ಚಿತ್ರಮಂದಿರಗಳಲ್ಲಿನ ಪ್ರವೇಶ ದರ ಕೇವಲ ಆಣೆ ಎರಡಾಣೆಯನ್ನು ಮೀರಿರುತ್ತಿರಲಿಲ್ಲವಾದ ಕಾರಣ ಇದು ಅತ್ಯಂತ ಜನಪ್ರಿಯ ವ್ಯವಸ್ಥೆಯಾಯಿತು.

ಆರಂಭದ ದಿನಗಳಲ್ಲಿ ಸಂಚಾರಿ ಚಿತ್ರಮಂದಿರಗಳನ್ನು ಪ್ರಾರಂಭಿಸುವವರಿಗೆ ರೂ. ೨೫,೦೦೦ಕ್ಕಿಂತ ಹೆಚ್ಚಿನ ಬಂಡವಾಳ ಅಗತ್ಯವಿರಲಿಲ್ಲ ಎಂದು ಇತ್ತೀಚಿನವರೆಗೂ ಟೆಂಟ್ ಸಿನಿಮಾಗಳನ್ನು ನಡೆಸುತ್ತಿದ್ದ ಕೆಸ್ತೂರಿನ ಶ್ರೀರಂಗ ಚಿತ್ರಮಂದಿರದ ಮಾಲೀಕರಾದ ಹೆಚ್.ಆರ್.ಹೊನ್ನಪ್ಪ ಹೇಳುತ್ತಾರೆ.

ಪ್ರೊಜೆಕ್ಟರ್ ಇರುವ ಕ್ಯಾಬಿನ್ ಮುಂದೆ ಸಾಲು ಬೆಂಚುಗಳು, ಅದನ್ನು ಗ್ಯಾಲರಿ ಎಂದು ಕರೆಯುತ್ತಿದ್ದರು. ೨೦೦ರಿಂದ ೩೦೦ ಆಸನಗಳು, ಗ್ಯಾಲರಿ ಮತ್ತು ಪರದೆಯ ನಡುವಣ ಭಾಗ ಗ್ರೌಂಡ್ ಕ್ಲಾಸ್ ಅಂದರೆ ನೆಲ. ಇಲ್ಲಿ ಮುನ್ನೂರು ಅಥವಾ ಅದಕ್ಕೂ ಹೆಚ್ಚು ಜನ ಕೂಡಬಹುದು. ಬಂದವರಿಗೆ ಟಿಕೆಟ್ 'ಇಲ್ಲ' ಎನ್ನುವ ಉತ್ತರವೇ ದೊರೆಯದು. ಗ್ಯಾಲರಿ ಮತ್ತು ನೆಲದ ತರಗತಿಗಳನ್ನು ವಿಂಗಡಿಸಲು ಮಧ್ಯೆ ಬಿದಿರಿನ ಕಟಕಟೆ.

ಹೊಸ ಟೆಂಟ್ ಗಾಳಿಯ ಹೊಡೆತಕ್ಕೆ, ಮಳೆಯ ರಭಸಕ್ಕೆ ಸಿಲುಕಿ ಹರಿದು ಹೋಗತೊಡಗುವುದು ಸಹಜ. ಟೆಂಟ್ ಹರಿದು ಹೋದಂತೆಲ್ಲಾ ಹರಿದ ಭಾಗಕ್ಕೆ ತೇಪೆ ಹಾಕುತ್ತಾ ಹೋಗುತ್ತಾರೆ. ಟೆಂಟ್ ಹಳೆಯದಾದಂತೆ ತೇಪೆಗಳೂ ಹೆಚ್ಚು ಹೆಚ್ಚು ರಾರಾಜಿಸುತ್ತವೆ. ಆದರೂ ಟೆಂಟ್ ಚಿರಂಜೀವಿ. ಸಂಜೆ ಮುಗಿದು ಕತ್ತಲು ಕವಿಯಲು ಆರಂಭವಾದ ಮೇಲೆಯೇ ಟೆಂಟ್‌ನಲ್ಲಿ ಆಟ ಆರಂಭ - ಚಿತ್ರ ಪ್ರಾರಂಭ.

ಅನಧಿಕೃತ ಪ್ರವೇಶವನ್ನು ತಡೆಯಲು ಟೆಂಟ್‌ನ ಸುತ್ತ ಬಿದಿರಿನ ಹೆಣಿಕೆಯ ಬೇಲಿ ಕಟ್ಟಲಾಗುತ್ತದೆ. ಟೆಂಟ್‌ನ ಕಂಬದ ಮೇಲೆ ಕಟ್ಟಲಾಗಿರುವ ಧ್ವನಿವರ್ಧಕದ ಹಾರನ್‌ನಿಂದ ಮೊಳಗುವ ಚಿತ್ರಗೀತೆಗಳೇ ಜನರಿಗೆ ಸಿನಿಮಾ ನೋಡಲು ಕರೆಗಂಟೆಯಾಗುತ್ತವೆ.

೨-೩-೪ ಕಂಬಗಳ ಸಂಚಾರಿ ಸಿನಿಮಾಗಳು ಕತ್ತಲಾದ ಮೇಲೆಯೇ ಚಿತ್ರಪ್ರದರ್ಶನ ಆರಂಭಿಸುತ್ತಿದ್ದವು. ಈ ಸಮಸ್ಯೆಯನ್ನು ನಿವಾರಿಸಲು ನಾಲ್ಕು ಗೋಡೆಯ ಮೇಲೆ ತೆಂಗಿನಮಟ್ಟೆಯ ಹೊದಿಕೆ ಇರುವ ಚಿತ್ರಮಂದಿರಗಳು ೬೦ರ ದಶಕದಲ್ಲಿ ಅಸ್ತಿತ್ವಕ್ಕೆ ಬಂದವು. ಪ್ರೊಜೆಕ್ಷನ್ ರೂಂ ಚಲನಚಿತ್ರದ ಪ್ರಕ್ಷೇಪಕ ಯಂತ್ರದ ಕೊಠಡಿ ಕಟ್ಟಡದ ಒಂದು ತುದಿಯಲ್ಲಿದ್ದು, ಅದಕ್ಕೆ ಮಾತ್ರ ಜಿಂಕ್‌ಷೀಟ್ ಹೊದಿಕೆ ಇರುತ್ತಿತ್ತು. ಸುಮಾರು ೬೦' x ೪೦' ಆಕಾರದ ಚಿತ್ರಮಂದಿರದಲ್ಲಿ ಕುರ್ಚಿ, ಬೆಂಚು, ನೆಲ - ಮೂರು ತರಗತಿಗಳಿದ್ದು, ಸುಮಾರು ೬೦೦ ಜನ ಪ್ರೇಕ್ಷಕರು ಒಮ್ಮೆಗೆ ಚಿತ್ರ ನೋಡಬಹುದಾಗಿತ್ತು. ಚಿತ್ರಮಂದಿರದ ಸುತ್ತ ಬಿದಿರು-ತೆಂಗಿನಮಟ್ಟೆ ಕಾಂಪೌಂಡ್. ಮಾಡು, ಪರದೆಯ ಬಾಗಿಲು, ಕಿಟಕಿಗಳನ್ನು ಅಳವಡಿಸಿದ ಕಾರಣ ಸೂರ್ಯ ಮುಳುಗುವುದಕ್ಕೆ ಕಾಯದೆ, ಚಿತ್ರವನ್ನು ಪ್ರದರ್ಶಿಸಬಹುದಾಗಿತ್ತು. ಇದರಿಂದ ಸಂಚಾರಿ ಚಿತ್ರಮಂದಿರಗಳಲ್ಲಿ ಮ್ಯಾಟ್ನಿ ಷೋ ನಡೆಸುವುದು ಆರಂಭವಾಯಿತು.

ಸಂಚಾರಿ ಚಿತ್ರಮಂದಿರಗಳಿಗೆ ಮೂರು ವರ್ಷ ಕಾಲ ಒಂದೇ ಜಾಗದಲ್ಲಿ ಇರಲು ನಿಯಮದ ಅನುಕೂಲ ಮಾಡಿಕೊಟ್ಟರು. ಆದರೆ ಇದನ್ನು ಪಾಲಿಸದ ಸಂಚಾರಿ ಚಿತ್ರಮಂದಿರಗಳು ೧೦ ವರ್ಷಗಳಾದರೂ ಒಂದೇ ಕಡೆ ಬೀಡು ಬಿಟ್ಟಿವೆ. ಅವಕ್ಕೆ ತಕ್ಕುದಾದ ಕಟ್ಟಡಗಳನ್ನು ಹೊಂದಿವೆ. ಕನ್ನಡ ಚಿತ್ರರಂಗಕ್ಕೆ ಈ ಸಂಚಾರಿ ಚಿತ್ರಮಂದಿರಗಳಿಂದ ಒಂದು ವರ್ಷಕ್ಕೆ ಬರುವ ಆದಾಯ ೩೫ ಕೋಟಿಗಳಿಂದ ೫೫ ಕೋಟಿ. ಈ ಸಂಚಾರಿ ಚಿತ್ರಮಂದಿರಗಳೇನಾದರೂ ಮುಚ್ಚಿ ಹೋದರೆ ಈ ಆದಾಯ ಸಂಪೂರ್ಣ ಖೋತಾ ಆಗುತ್ತದೆ.

ಸಂಚಾರಿ ಚಿತ್ರಮಂದಿರಗಳು ಅರೆಖಾಯಂ ಚಿತ್ರಮಂದಿರಗಳಾಗಿ ಸುಧಾರಿತಗೊಂಡಿದ್ದರೂ ಭದ್ರತೆಯ ವಿಷಯದಲ್ಲಿ ವಿಫಲತೆಯುಂಟಾಗಿ ದುರಂತಗಳು ಸಂಭವಿಸುತ್ತಲೇ ಇವೆ. ಬೆಂಗಳೂರಿನ ಮತ್ತಿಕೆರೆಯಲ್ಲಿ ಅರೆಖಾಯಂ ಚಿತ್ರಮಂದಿರವೊಂದು ಬಿರುಗಾಳಿ ಮಳೆಯಿಂದ ದುರಂತಕ್ಕೀಡಾದ ಸಂದರ್ಭದಲ್ಲಿ ಉಂಟಾದ ಪ್ರಾಣಹಾನಿ ಎಲ್ಲರ ಕಣ್ಣು ತೆರೆಸಿ ಭದ್ರತೆಯತ್ತ ಕಾಳಜಿವಹಿಸುವಂತೆ ಮಾಡಿತು. ಆದರೂ ನಿರೀಕ್ಷಿತ ಪರಿಣಾಮವಾಗಲಿಲ್ಲ. ಇಟ್ಟಿಗೆ ಗೋಡೆಗಳು, ಉತ್ತಮ ಮೇಲ್ಛಾವಣಿ, ಉಕ್ಕಿನ ಕಂಬಗಳ ಆಧಾರ ಇರಬೇಕೆಂದು ೧೯೬೧ ರ ಸಿನಿಮಾ ಕಾಯಿದೆಯನ್ನು ತಿದ್ದುಪಡಿ ಮಾಡಲಾಯಿತು. ಸರ್ಕಾರ ಎಷ್ಟೇ ಸವಲತ್ತು ನೀಡಿದರೂ ಕಾನೂನು ಸಡಿಲಿಸಿದರೂ ಪ್ರೇಕ್ಷಕರಿಗೆ ಉತ್ತಮ ವ್ಯವಸ್ಥೆ ಮಾಡುವಲ್ಲಿ ಬಹುತೇಕ ಸಂಚಾರಿ ಚಿತ್ರಮಂದಿರಗಳು ಸೋತಿರುವುದು ಸತ್ಯ. ಆದರೆ ಇವಕ್ಕೆ ತಮ್ಮದೇ ಆದ ಸಮಸ್ಯೆಗಳಿವೆಯೆಂದು ಮಾಲೀಕರು ಹೇಳುವುದರಲ್ಲಿ ಕೆಲವು ಸತ್ಯಾಂಶಗಳು ಇವೆ.

ಸಂಚಾರಿ ಚಿತ್ರಮಂದಿರಗಳಿಗೆ ಬೇಕಾದ ಜಾಗ ಸಿಗುವುದು ತುಂಬಾ ಕಷ್ಟ. ಅಷ್ಟು ವರ್ಷಗಳ ಕಾಲ ಜಾಗ ಕೊಡಲು ಅದರ ಮಾಲೀಕ ಒಪ್ಪುವುದಿಲ್ಲ. ಜೊತೆಗೆ ಅರೆಖಾಯಂ ಚಿತ್ರಮಂದಿರವನ್ನಾಗಿ ಪರಿವರ್ತಿಸಲು ಕನಿಷ್ಠ ಹತ್ತು ಲಕ್ಷ ರೂಪಾಯಿಗಳು ಬೇಕು. ಈಗಿನ ವಹಿವಾಟಿನಲ್ಲಿ ಸಂಚಾರಿ ಚಿತ್ರಮಂದಿರಗಳ ಮಾಲೀಕರಿಗೆ ಇದು ಸುಲಭ ಸಾಧ್ಯವಲ್ಲ.

ಸಾಕಷ್ಟು ಸಂಖ್ಯೆಯಲ್ಲಿರುವ ಸಂಚಾರಿ ಚಿತ್ರಮಂದಿರಗಳು ಉಳಿಯಲು ಅಥವಾ ಅವು ಅರೆಖಾಯಂ ಚಿತ್ರಮಂದಿರಗಳಾಗಿ ಪರಿವರ್ತಿತವಾಗಲು ಸರ್ಕಾರ ಕಾನೂನು ಹಾಗೂ ಆರ್ಥಿಕ ಸಹಾಯ ಮಾಡಬೇಕೆಂದು ಚಲನ ಚಿತ್ರ ವಾಣಿಜ್ಯಮಂಡಳಿ ಸರ್ಕಾರವನ್ನು ಒತ್ತಾಯಿಸುತ್ತಿದೆಯಾದರೂ ಸೂಕ್ತ ರೀತಿಯ ಪ್ರತಿಫಲ ದೊರೆಯುತ್ತಿಲ್ಲ.

ರಾಜ್ಯದಲ್ಲಿ ಸಮಸ್ಯೆಗಳು ಕೇವಲ ಸಂಚಾರಿ ಚಿತ್ರಮಂದಿರಗಳಿಗಷ್ಟೇ ಅಲ್ಲದೆ ಖಾಯಂ, ಅರೆಖಾಯಂ ಹಾಗೂ ತಾತ್ಕಾಲಿಕ ಚಿತ್ರಮಂದಿರಗಳಿಗೂ ಇವೆ. ಪ್ರಸ್ತುತ ನಮ್ಮ ರಾಜ್ಯದಲ್ಲಿ ಇತರ ರಾಜ್ಯಗಳಿಗಿಂತ ಕಡಿಮೆ ಚಿತ್ರಮಂದಿರಗಳಿವೆ. ಸುಮಾರು ೩೦,೦೦೦ ಜನಕ್ಕೆ ಒಂದರಂತೆ ಚಿತ್ರಮಂದಿರ ಇದೆ. ಸಂಖ್ಯಾವಾರು ಲೆಕ್ಕದಲ್ಲಿ ಈ ಸಂಖ್ಯೆ ತೀರಾ ಕಡಿಮೆ. ನಮ್ಮಲ್ಲಿ ಚಿತ್ರಮಂದಿರಗಳ ಸಂಖ್ಯೆ ಬೆಳೆಯದಿರಲು ಪ್ರಮುಖ ಕಾರಣ ಯಾವುದೋ ಕಾಲದಲ್ಲಿ ಮಾಡಿಟ್ಟಿರುವ ಕಾಯಿದೆ. ಈ ಕಾಯಿದೆಯನ್ನು ಈಗಿನ ಕಾಲಕ್ಕೆ ತಕ್ಕಂತೆ ಸರಳೀಕರಿಸದಿದ್ದರೆ ಯಾವುದೇ ವ್ಯಕ್ತಿ ಹೊಸದೊಂದು ಚಿತ್ರಮಂದಿರ ನಿರ್ಮಿಸುವುದು ಸಾಧ್ಯವಿಲ್ಲವೆಂಬ ಪರಿಸ್ಥಿತಿ ಇದೆ. ಇಂದು ಒಂದು ಸಾಮಾನ್ಯ ಚಿತ್ರಮಂದಿರವನ್ನು ನಿರ್ಮಿಸಲು ಸುಮಾರು ೫೦ ಲಕ್ಷ ರೂಪಾಯಿಗಳ ವೆಚ್ಚ ಬೇಕಾಗುತ್ತದೆ. ಹೊರಗಿನ ಆರ್ಥಿಕ ನೆರವಿಲ್ಲದೆಯೂ ಚಿತ್ರಮಂದಿರ ಕಟ್ಟಲು ಮುಂದಾಗುವವರನ್ನು ಈಗಿರುವ ಕ್ಲಿಷ್ಟ ಕಾನೂನು ತಡೆದು ನಿಲ್ಲಿಸುತ್ತದೆ.

ಇವೆಲ್ಲವುಗಳ ಜೊತೆ ಕರ್ನಾಟಕದಲ್ಲಿ ಇರುವ ಅತ್ಯಧಿಕ ತೆರಿಗೆಯ ಹೊರೆ. ಇಡೀ ದಕ್ಷಿಣ ಭಾರತದಲ್ಲೇ ಕರ್ನಾಟಕ ರಾಜ್ಯದಲ್ಲಿ ಅತಿ ಹೆಚ್ಚು ತೆರಿಗೆಯಿದ್ದು ಚಿತ್ರಮಂದಿರಗಳ ಮಾಲೀಕರು ತತ್ತರಿಸಿ ಹೋಗುತ್ತಿದ್ದಾರೆ. ಈ ಭಯವೂ ಕೂಡ ಯಾವುದೇ ಉದ್ಯಮಿ ಚಿತ್ರಮಂದಿರ ನಿರ್ಮಾಣಕ್ಕೆ ಕೈ ಹಾಕದಂತೆ ತಡೆಯುತ್ತಿದೆ. ಚಿತ್ರಮಂದಿರಗಳಿಗೆ ಸಾಲಕೊಡಲು ಬ್ಯಾಂಕ್ ಮತ್ತು ಸರ್ಕಾರಿ ಹಣಕಾಸು ಸಂಸ್ಥೆಗಳು ಹಿಂದೇಟು ಹಾಕುತ್ತಿವೆ. ರಾಷ್ಟ್ರೀಯ ಚಲನಚಿತ್ರ ಅಭಿವೃದ್ಧಿ ನಿಗಮ ಹಾಗೂ ಕೆ.ಎಫ್. ಐ.ಡಿ.ಸಿ ಯವರು ಸಾಲ ನೀಡುವ ವಿಚಾರದಲ್ಲಿ ತೀರಾ ಮಂದಗತಿಯಲ್ಲಿದ್ದು ನಿಷ್ಪ್ರಯೋಜಕವೆನಿಸಿವೆ. ಇದನ್ನು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಗೆ ವಹಿಸಿದಲ್ಲಿ ಸಹಾಯವಾಗಬಹುದೆಂಬ ನಂಬಿಕೆ ಉದ್ಯಮದವರದ್ದು.

ಇಂದು ಹೊಸ ಚಿತ್ರಮಂದಿರವೊಂದನ್ನು ನಿರ್ಮಿಸಲು ಎಷ್ಟು ಹೆಣಗಾಡಬೇಕಾಗಿದೆ ಎನ್ನುವುದನ್ನು ತಿಳಿಯುತ್ತ ಹೊರಟರೆ ನಿಜಕ್ಕೂ ಅದು ಕೈಗೆಟುಕದ ಸಂಗತಿಯೆನಿಸುತ್ತದೆ. ಚಿತ್ರಮಂದಿರದ ಸ್ಥಾಪನೆಯ ಆರಂಭ ಈ ರೀತಿಯಿಂದಾಗಬೇಕಾಗಿದೆ :

ಮೊಟ್ಟ ಮೊದಲಿಗೆ ಚಿತ್ರಮಂದಿರ ನಿರ್ಮಿಸುವ ಜಮೀನಿಗೆ ಸಂಬಂಧಿಸಿದ ವಿಚಾರ. ಚಿತ್ರಮಂದಿರವನ್ನು ನಿರ್ಮಿಸುವವನ ಸ್ವಂತದ್ದಾಗಿರಲಿ ಅಥವಾ ಇನ್ನೊಬ್ಬರದ್ದಾಗಿರಲಿ ಆ ವ್ಯಕ್ತಿಗೆ ಸಂಬಂಧಿಸಿದಂತೆ ಜಮೀನಿನ ಐ.ಎಲ್. ಆರ್. ಆರ್ ತೆರಿಗೆ ಪಾವತಿ ರಶೀತಿ ಹಾಗೂ ಇನ್ನಿತರ ದಾಖಲೆಗಳು ಮತ್ತು ನಕ್ಷೆಯನ್ನು ಜಿಲ್ಲಾಧಿಕಾರಿಯ ಆಫೀಸಿನಲ್ಲಿ ಕೊಡಬೇಕು. ಜಮೀನು ಪರಕೀಯರದ್ದಾಗಿದ್ದರೆ ಅವರ ಅನುಮೋದನೆಯ ಪತ್ರವನ್ನು ಲಗತ್ತಿಸಬೇಕು. ಇದನ್ನೆಲ್ಲ ಪರಿಶೀಲಿಸಿ ಎಲ್ಲವೂ ಸೂಕ್ತವಾಗಿದ್ದಲ್ಲಿ ಜಿಲ್ಲಾಧಿಕಾರಿ ಕಛೇರಿಯವರು ಎರಡು ಪ್ರಮುಖ ವಾರ್ತಾ ಪತ್ರಿಕೆಗಳಲ್ಲಿ ಈ ಜಮೀನಿನ ಕುರಿತಾಗಿ ಪ್ರಕಟಣೆ ಹೊರಡಿಸುತ್ತಾರೆ. ಇದಕ್ಕೆ ಮೂವತ್ತು ದಿನಗಳ ಗಡುವು ನೀಡಿ ಅಷ್ಟರಲ್ಲಿ ಆ ಜಮೀನಿಗೆ ಸಂಬಂಧಿಸಿದಂತೆ ಯಾರಿಂದಲೂ ಯಾವುದೇ ತಗಾದೆ ಬಾರದಿದ್ದರೆ ಜಿಲ್ಲಾಧಿಕಾರಿ ಕಛೇರಿಯಿಂದ ಆ ಜಮೀನಿನಲ್ಲಿ ಚಿತ್ರಮಂದಿರ ನಿರ್ಮಿಸಬಹುದೆಂಬ ಅನುಮತಿ ಸಿಗುತ್ತದೆ. ಆದರೆ ಈ ಅನುಮತಿ ಕೇವಲ ಜಮೀನಿನ ದಾಖಲೆಗೆ ಸಂಬಂಧಿಸಿದ್ದಾಗಿರುತ್ತದೆ.

ಇದಾದ ನಂತರ ಲೋಕೋಪಯೋಗಿ ಇಲಾಖೆ, ವಿದ್ಯುಚ್ಛಕ್ತಿ ಮಂಡಳಿ, ಆರೋಗ್ಯ ಇಲಾಖೆ, ಕಾರ್ಪೋರೇಷನ್ ಅಥವಾ ಸ್ಥಳೀಯ ಸಂಸ್ಥೆ, ಪೋಲೀಸ್ ಇಲಾಖೆ ಹಾಗೂ ಅಗ್ನಿ ಶಾಮಕ ದಳದ ಇಲಾಖೆಗಳ ವತಿಯಿಂದ ಜಿಲ್ಲಾಧಿಕಾರಿ ಕಛೇರಿಯಿಂದ ಅನುಮೋದಿಸಲ್ಪಟ್ಟ ಜಮೀನಿನಲ್ಲಿ ಚಿತ್ರಮಂದಿರ ನಿರ್ಮಿಸಲು ಎನ್. ಓ. ಸಿ (ನೊ ಅಬ್ಜೆಕ್ಷನ್ ಸರ್ಟಿಫಿಕೇಟ್) ಪಡೆಯಬೇಕು. ಈ ಸರ್ಟಿಫಿಕೇಟ್ ಸಿಗುವುದು ಆ ಜಾಗದಲ್ಲಿ ಕೇವಲ ಒಂದು ಕಟ್ಟಡ ಕಟ್ಟುವುದಕ್ಕೆ ಮಾತ್ರ. ಇಷ್ಟು ಇಲಾಖೆಗಳಿಂದ ನಿರಾಕ್ಷೇಪಣಾ ಪತ್ರ ಪಡೆಯುವುದು ಇಂದಿನ ವ್ಯವಸ್ಥೆಯಲ್ಲಿ ಎಷ್ಟು ಕಷ್ಟವೆನ್ನುವುದನ್ನು ವಿವರಿಸಬೇಕಾಗಿಲ್ಲ. ಇವೆಲ್ಲ ಮುಗಿದ ಮೇಲೆ ಚಿತ್ರಮಂದಿರಕ್ಕೆ ಬೇಕಾದ ರೀತಿಯ ಕಟ್ಟಡವನ್ನು ನಿರ್ಮಿಸಬೇಕು. ಕಟ್ಟಡ ನಿರ್ಮಾಣವಾಗಿ ಯಂತ್ರೋಪಕರಣಗಳ ಜೋಡಣೆಯಾದ ನಂತರ ಮತ್ತೆ ಪುನಃ ಅಷ್ಟು ಇಲಾಖೆಗಳು ಕಟ್ಟಡದ ಭದ್ರತೆ ಹಾಗೂ ಇನ್ನಿತರ ವ್ಯವಸ್ಥೆಗಳ ಬಗ್ಗೆ ಭರವಸೆಯನ್ನು ಅಧಿಕೃತವಾಗಿ ನೀಡಬೇಕು.

ಇವೆಲ್ಲ ಮುಗಿದ ನಂತರ ಕೊನೆಯ ಹಂತವಾಗಿ ಮತ್ತೆ ಜಿಲ್ಲಾಧಿಕಾರಿಯವರಿಗೆ ಚಿತ್ರಮಂದಿರವನ್ನು ನಡೆಸಲು ಅನುಮತಿಯನ್ನು ಕೋರಬೇಕು. ಅವರು ಎಲ್ಲವನ್ನೂ ಪರೀಕ್ಷಿಸಿ ಕಾನೂನು ರೀತಿ ಅನುಮತಿಯನ್ನು ನೀಡಬೇಕು. ಇಷ್ಟು ಸಿಕ್ಕಿದ ನಂತರ ಚಿತ್ರಮಂದಿರ ಆರಂಭವಾಗುತ್ತದೆ. ಆದರೆ ಇದಾವುದೂ ಅಷ್ಟು ಸುಲಭವಾಗಿ ಸಾಧ್ಯವಾಗುವ ಮಾತಲ್ಲ. ಹಾಗಾಗಿ ಕಾನೂನಿನ ಸರಳೀಕರಣವಾಗಬೇಕೆಂಬುದು ಉದ್ಯಮಿಗಳ ಕೂಗು.

ಚಿತ್ರಮಂದಿರ ಹಾಗೂ ಹೀಗೂ ಆರಂಭವಾದರೂ ಆದಾಯ ಹೇಗೇ ಇರಲಿ ಭಾರಿ ತೆರಿಗೆಯ ಹೊರೆಯನ್ನಂತೂ ಹೊರಲೇ ಬೇಕು. ೧೯೫೮ರ ಸುಮಾರಿಗೆ ಆರಂಭವಾದ ಮನರಂಜನಾ ತೆರಿಗೆ ಶೇಕಡಾ ೫೫ ರಷ್ಟು ಇತ್ತು.

ಇನ್ನು ಉದ್ಯಮದೊಳಗೆ ಬಂದರೂ ಒಂದು ಸರಪಣಿ ವ್ಯವಸ್ಥೆಯಾಗಿರುವ ನಿರ್ಮಾಪಕ, ಹಂಚಿಕೆದಾರ ಹಾಗೂ ಪ್ರದರ್ಶಕರಲ್ಲಿ ಒಮ್ಮತವಿಲ್ಲ. ಸಂದರ್ಭಾನುಸಾರವಾಗಿ ಅವರು ತಮ್ಮ ಸ್ವಾರ್ಥವನ್ನೇ ನೋಡುತ್ತಿರುವುದರಿಂದ ಒಂದು ಉತ್ತಮ ವ್ಯವಸ್ಥೆ ರೂಪುಗೊಳ್ಳಲಿಲ್ಲ. ಇಲ್ಲಿ ನಿರ್ಮಾಪಕನಾಗಲಿ, ಹಂಚಿಕೆದಾರನಾಗಲಿ ಸಿನಿಮಾ ಸೋತಾಗ ನಷ್ಟ ಅನುಭವಿಸಬಹುದು. ಆದರೆ ಸಿನಿಮಾ ಹೇಗೇ ಇರಲಿ ತನ್ನ ಬಾಡಿಗೆ ಪಡೆದು ಪ್ರದರ್ಶಕ ಯಾವಾಗಲೂ ಸುರಕ್ಷಿತವಾಗಿರುತ್ತಾನೆ ಎಂಬ ಮಾತಿದೆ. ಆದರೆ ಇದು ಕೆಲವೇ ಚಿತ್ರಮಂದಿರಗಳಿಗೆ ಸೀಮಿತವಾಗಿರುವ ಮಾತು.

ಕಲವು ಜಿಲ್ಲೆಗಳಲ್ಲಿ ನಗರ ಕೇಂದ್ರ ಪ್ರದೇಶಗಳಲ್ಲಿರುವ ಪ್ರಮುಖ ಚಿತ್ರಮಂದಿರಗಳು ಮಾತ್ರ ಬಾಡಿಗೆಯ ಆಧಾರದ ಮೇಲೆ ನಡೆಯುತ್ತಿದ್ದರೆ ಬಹುತೇಕ, ಅಂದರ ಸಾವಿರಾರು ಚಿತ್ರಮಂದಿರಗಳು, ಪರ್ಸೆಂಟೇಜ್ ಆಧಾರದ ಮೇಲೆಯೇ ನಡೆಯುತ್ತಿವೆ. ಈ ಸಂದರ್ಭಗಳಲ್ಲಿ ನಿರ್ಮಾಪಕ ಅಥವಾ ಹಂಚಿಕೆದಾರನಷ್ಟೇ ಅಭದ್ರತೆ ಪ್ರದರ್ಶಕನಿಗೂ ಇರುತ್ತದೆ. ಇಂದು ಬಾಡಿಗೆ ವ್ಯವಸ್ಥೆಯ ಬಗ್ಗೆ ಕಿಡಿಕಾರುವ ನಿರ್ಮಾಪಕ, ಹಂಚಿಕೆದಾರರೇ ಬಾಡಿಗೆ ಪದ್ಧತಿಯನ್ನು ತಂದಿದ್ದು ಎನ್ನುವುದು ಚೋದ್ಯದ ಸಂಗತಿ. ಒಟ್ಟಿನಲ್ಲಿ ಬಹುತೇಕ ಚಿತ್ರಮಂದಿರಗಳು ನಾನಾ ಕಾರಣಗಳಿಗಾಗಿ ಚಿಂತಾಜನಕ ಸ್ಥಿತಿಯಲ್ಲಿವೆ.

ನಮ್ಮಲ್ಲಿ ಚಿತ್ರಮಂದಿರಗಳ ಬೆಳವಣಿಗೆಯ ಕಥೆಯೇ ವಿಶಿಷ್ಟ. ನಗರ ಭಾಗಗಳಲ್ಲಷ್ಟೇ ಅಲ್ಲದೆ ಜಿಲ್ಲೆಗಳಲ್ಲಿ ಕೂಡ ಇವು ನಿರ್ಮಾಣವಾದ ರೀತಿಯೂ ವಿಚಿತ್ರವೆ. ಆಯಾ ಜಿಲ್ಲೆಯ ಪ್ರದೇಶಗಳಲ್ಲಿ ಹವ್ಯಾಸದ ದೃಷ್ಟಿಯಿಂದಲೇ ಶ್ರೀಮಂತರು ತಮ್ಮ ಆವರಣದಲ್ಲಿ ಅಥವಾ ತಮ್ಮದೇ ಜಮೀನಿನಲ್ಲಿ ಚಿತ್ರಮಂದಿರ ನಿರ್ಮಿಸುತ್ತಿದ್ದರು. ಅವರಿಗೆ ವ್ಯಾಪಾರ ಅಷ್ಟಾಗಿ ಮುಖ್ಯವಾಗಿರಲೂ ಇಲ್ಲ. ವರ್ಷಗಳು ಉರುಳಿದಂತೆ ಚಿತ್ರಮಂದಿರಗಳು ಜನಾಕರ್ಷಣೆಯ ಕೇಂದ್ರಗಳಾಗಿ ಲಾಭದಾಯಕ ವಹಿವಾಟಾಗಿ ಮಾರ್ಪಾಟಾದಾಗ ಇವರು ಎಚ್ಚರಗೊಂಡು ಅದನ್ನು ದೊಡ್ಡ ವ್ಯಾಪಾರವಾಗಿಸಿಕೊಂಡರು. ಇಂದು ಸರ್ಕಾರದ ಬೊಕ್ಕಸಕ್ಕೆ ಚಿತ್ರಮಂದಿರಗಳಿಂದಲೇ ಕೋಟ್ಯಾಂತರ ರೂಪಾಯಿಯ ಬೃಹತ್ ಆದಾಯ ಮನರಂಜನಾ ತರಿಗೆಯ ರೂಪದಲ್ಲಿ ಸೇರುತ್ತಿದೆ. ಕನ್ನಡ ಚಿತ್ರಗಳಿಗೆ ಮನರಂಜನಾ ತೆರಿಗಯನ್ನು ರದ್ದುಗೊಳಿಸಿದ ನಂತರ ಈ ಆದಾಯಕ್ಕೆ ಕತ್ತರಿ ಬಿತ್ತು.

೧೯೩೪ ರಿಂದ ೧೯೫೦ರ ತನಕ ೩೧ ಕನ್ನಡ ಚಿತ್ರಗಳು ತಯಾರಾದವು. ಆದರೆ ತೆಲುಗಿನಲ್ಲಿ ಅಷ್ಟರಲ್ಲಿ ೧೬೩, ತಮಿಳಿನಲ್ಲಿ ೪೫೯ ಚಿತ್ರಗಳು ತೆರೆಗೆ ಬಂದವು. ಇಂಥ ಪರಿಸ್ಥಿತಿಯಲ್ಲಿ ಕರ್ನಾಟಕದ ಚಿತ್ರಮಂದಿರಗಳಲ್ಲಿ ಕನ್ನಡೇತರ ಚಿತ್ರಗಳೇ ಹೆಚ್ಚು ವಿಜೃಂಭಿಸತೊಡಗಿದವು. ಕನ್ನಡ ಜನತೆಗೆ ಪರಭಾಷಾ ಚಿತ್ರಗಳ ಬಗ್ಗೆ ವ್ಯಾಮೋಹ ಆರಂಭದಿಂದಲೇ ಬೆಳೆಯಲು ಕನ್ನಡ ಚಿತ್ರಗಳ ಕೊರತೆಯೂ ಮುಖ್ಯ ಕಾರಣವೆಂದು ಹೇಳಬಹುದು.

ಹಾಗೆಯೇ ವರ್ಷವಿಡೀ ಕನ್ನಡ ಚಿತ್ರಗಳನ್ನೇ ಪ್ರದರ್ಶಿಸುವ ಚಿತ್ರಮಂದಿರಗಳೂ ಇವೆ. ಬೆಂಗಳೂರಿನಂಥ ಪ್ರಮುಖ ನಗರಗಳಲ್ಲಿ ಈಗಲೂ ಕನ್ನಡ ಚಿತ್ರಗಳು ಹಿಂದಿ, ತಮಿಳು, ತೆಲುಗುಗಳಂಥ ಪ್ರಮುಖ ಭಾಷಾ ಚಿತ್ರಗಳೊಂದಿಗೆ ಸ್ಪರ್ಧಿಸುವ ಅನಿವಾರ್ಯತೆಯಿದೆ. ಕೆಲವು ಪ್ರಮುಖ ಚಿತ್ರಮಂದಿರಗಳಂತೂ ಪರಭಾಷಾ ಚಿತ್ರಗಳಿಗೆಂದೇ ಮೀಸಲಾಗಿವೆ. ಈಚೆಗೆ ಚಿತ್ರಮಂದಿರಗಳವರ ಕನ್ನಡ ಪ್ರೇಮ ಸುಧಾರಿಸಿದೆ. ಹೊಸ ಕನ್ನಡ ಚಿತ್ರವೊಂದು ಬಿಡುಗಡೆ ಆಯಿತೆಂದರೆ ಈಗ ಸಾಕಷ್ಟು

ಚಿತ್ರಮಂದಿರಗಳು ದೊರೆಯುತ್ತವೆ. ಬೆಂಗಳೂರೊಂದರಲ್ಲೇ ೮-೧೦ ಚಿತ್ರಮಂದಿರಗಳು ಲಭ್ಯವಾಗುತ್ತವೆ.

"ಕನ್ನಡ ಚಿತ್ರಗಳಿಗೆ ಕಡ್ಡಾಯ ಪ್ರದರ್ಶನ ಬೇಕು ಎಂದು ಕೇಳುವುದು ನಮಗೆ ತರವಲ್ಲ. ಕಡ್ಡಾಯ ಪ್ರದರ್ಶನವನ್ನು ನಾವು ಮಾಡಿ ತೋರಿಸಬೇಕು" ಹೀಗೆಂದು ಹೇಳಿದವರು ೧೯೮೩ರಲ್ಲಿ ವಾಣಿಜ್ಯ ಮಂಡಳಿಯ ಅಧ್ಯಕ್ಷರಾಗಿದ್ದ ಬಿ.ಎ.ಅರಸುಕುಮಾರ್.

"ಕರ್ನಾಟಕದಲ್ಲಿರುವ ಚಿತ್ರಮಂದಿರಗಳಲ್ಲಿ ಕನ್ನಡ ಚಿತ್ರಗಳಿಗೆ ಪ್ರದರ್ಶನವಕಾಶ ಸಾಲದು ಎಂಬ ಕಾರಣದಿಂದ ಚಿತ್ರಾಭಿಮಾನಿಗಳು, ಚಿತ್ರೋದ್ಯಮಿಗಳು ವರ್ಷಕ್ಕೆ ಇಂತಿಷ್ಟು ಅವಧಿ ಕನ್ನಡ ಚಿತ್ರಗಳನ್ನು ಪ್ರದರ್ಶನ ಮಾಡಲೇಬೇಕೆಂಬ ನಿಯಮವನ್ನು ಹೊರಡಿಸಬೇಕೆಂದು ಬಯಸಿದರು. ನಂತರ ಈ ನಿಯಮವೂ ಜಾರಿಗೆ ಬಂತು. ಆದರೆ ನಿಯಮದ ಅನುಸರಣೆ ಮಾತ್ರ ನಮ್ಮ ಚಿತ್ರರಂಗದಿಂದ ಸರಿಯಾಗಿ ಆಗುತ್ತಿಲ್ಲ. ಉದಾಹರಣೆಗೆ ಬೆಂಗಳೂರಿನಲ್ಲಿರುವ ಸುಮಾರು ನೂರು ಚಿತ್ರಮಂದಿರಗಳ ಪೈಕಿ ಇಂದು ಕೆಲವೇ ನಿರ್ದಿಷ್ಟ ಚಿತ್ರಮಂದಿರಗಳಲ್ಲಿ ಮಾತ್ರ ಕನ್ನಡ ಚಿತ್ರಗಳ ಪ್ರದರ್ಶನವನ್ನು ನಾವು ಕಾಣುತ್ತೇವೆ. ಉಳಿದ ಚಿತ್ರಮಂದಿರಗಳು ಪರಭಾಷಾ ಚಿತ್ರಗಳಿಗೇ ಗಂಟು ಬಿದ್ದಿವೆ. ಕಾರಣ ಅವರಿಗೊದಗಿರುವ ಕನ್ನಡ ಚಿತ್ರಗಳ ಅಭಾವ. ವಾಸ್ತವವಾಗಿ ಇದು ಜನಗಳಿಗೆ ತಿಳಿಯುವುದಿಲ್ಲ. ಹೀಗಾಗಿ ಅವರು ಮಂಡಳಿಯನ್ನು ದೂರುತ್ತಾರೆ" ಎಂದು ಅರಸುಕುಮಾರ್ ಸಾರ್ವಜನಿಕ ಸಮಾರಂಭವೊಂದರಲ್ಲಿ ಹೇಳಿದರು. ಇದರೊಂದಿಗೆ ಅವರು ಕನ್ನಡ ಚಿತ್ರ ನಿರ್ಮಾಪಕರು, ಹಂಚಿಕದಾರರು ಕೆಲವೇ ಪ್ರಮುಖ ಚಿತ್ರಮಂದಿರಗಳನ್ನು ಬಯಸುವುದು ತಪ್ಪು. ಪರಭಾಷಾ ಚಿತ್ರಗಳನ್ನೇ ನೆಚ್ಚಿಕೊಂಡ ಚಿತ್ರಮಂದಿರಗಳಲ್ಲಿ ಕನ್ನಡ ಚಿತ್ರ ಬಿಡುಗಡೆಯಾದರೂ ಜನ ಅತ್ತ ಬರುವುದಿಲ್ಲ ಎಂಬ ಅಭಿಪ್ರಾಯ ಸರಿಯಲ್ಲ. ಉತ್ತಮ ಚಿತ್ರಗಳು ಜನರನ್ನು ಅಲ್ಲಿಗ ಸೆಳೆಯಬೇಕು. ಉದಾಹರಣೆಗೆ ಒಂದು ಕಾಲಕ್ಕೆ ಕನ್ನಡ ಚಿತ್ರ ಪ್ರದರ್ಶನ ಸಾಧ್ಯವೇ ಇಲ್ಲ ಎನ್ನುವ ದಂಡು ಪ್ರದೇಶದಲ್ಲಿನ ಆದರ್ಶ, ಮಾರುತಿ, ಅಜಂತಾ ಚಿತ್ರಮಂದಿರಗಳಲ್ಲಿ ಈಗ ಕನ್ನಡ ಚಿತ್ರಗಳು ಸತತವಾಗಿ ನಡಯುತ್ತಿವೆ. ಉದ್ಯಮದವರು ನಗರದಲ್ಲಿನ ಪ್ರಮುಖ ಚಿತ್ರಮಂದಿರಗಳಾದ ಪಲ್ಲವಿ, ಸ್ವಸ್ತಿಕ್, ಮೆಜೆಸ್ಟಿಕ್ ಮುಂತಾದ ಟಾಕೀಸ್‌ಗಳನ್ನು ಸರಿಯಾಗಿ ಬಳಸಿಕೊಳ್ಳುತ್ತಿಲ್ಲ. ಚಿತ್ರದ ಹಾಗೂ ಚಿತ್ರಮಂದಿರದ ಗುಣಮಟ್ಟ ಉತ್ತಮವಾಗಿದ್ದರೆ ಯಾವುದೇ ಚಿತ್ರಮಂದಿರದಲ್ಲಿದ್ದರೂ ಜನ ನೋಡಿಯೇ ನೋಡುತ್ತಾರೆ" ಎಂದು ಅರಸುಕುಮಾರ್ ಅಭಿಪ್ರಾಯ ಪಟ್ಟಿದ್ದರು. ಒಂದೇ ದಿನ ಎರಡು ಮೂರು ಕನ್ನಡ ಚಿತ್ರಗಳು ಬಿಡುಗಡೆ ಆಗುವುದನ್ನು ಅರಸುಕುಮಾರ್ ಬೆಂಬಲಿಸಿದರು. ಕಾರಣ ಹೆಚ್ಚು ಚಿತ್ರಮಂದಿರಗಳಿಗೆ ಕನ್ನಡ ಚಿತ್ರಗಳು ಸಿಗುತ್ತವೆನ್ನುವುದು.

ಕನ್ನಡ ಚಿತ್ರಗಳಿಗೆ ಚಿತ್ರಮಂದಿರಗಳು ಸಿಗುವುದಿಲ್ಲವೆನ್ನುವ ವಾದ ಅಷ್ಟಾಗಿ ಸರಿಯಲ್ಲ. ಇಂಥದೇ ಚಿತ್ರಮಂದಿರ ಬೇಕೆಂದು ಹಟ ಹಿಡಿದಾಗ ಮಾತ್ರ ಈ ಸಮಸ್ಯೆ ಉದ್ಭವವಾಗುತ್ತದೆ. ಇಲ್ಲವಾದಲ್ಲಿ ಕರ್ನಾಟಕದಲ್ಲಿ ಇರುವ ಚಿತ್ರಮಂದಿರಗಳಿಗಲ್ಲಾ ಚಿತ್ರಗಳನ್ನು ಪೂರೈಸುವ ತಾಕತ್ತು ಕನ್ನಡ ಚಿತ್ರರಂಗಕ್ಕೆ ಇಲ್ಲವೇ ಇಲ್ಲ ಎನ್ನುವ ಸತ್ಯವನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಅದರಲ್ಲೂ ನಿರ್ಮಾಪಕ, ಹಂಚಿಕೆದಾರ ಹಾಗೂ ಪ್ರದರ್ಶಕರಲ್ಲಿ ಒಮ್ಮತವಿದ್ದರೆ ಇಂಥ ಅವ್ಯವಸ್ಥೆಗಳಿಗೆ ಅವಕಾಶವೂ ಇರುವುದಿಲ್ಲ. ಇಂದು ಕಿರುತೆರೆಯಲ್ಲಿ ದಿನವೊಂದಕ್ಕೆ ಸುಮಾರು ನೂರು ಚಿತ್ರಗಳು ಪ್ರದರ್ಶನಗೊಳ್ಳುತ್ತವೆ. ಅಂಥದ್ದರಲ್ಲಿ ಚೆನ್ನಾಗಿ ಓಡುವ ಚಿತ್ರವೊಂದನ್ನು ಕಿತ್ತು ಹಾಕಿ ತಮ್ಮ ಚಿತ್ರ ಹಾಕಬೇಕೆಂದು ಹಟ ಹಿಡಿಯುವುದು ಸರಿಯಲ್ಲ ಎನ್ನುವುದು ಪ್ರದರ್ಶಕರ ವಾದ. 'ಇಷ್ಟಾಗಿಯೂ ನಾವು ಅನೇಕ ಬಾರಿ ಇಂಥ ಸಂದರ್ಭಗಳಲ್ಲಿ ಕನ್ನಡ ಚಿತ್ರಗಳ ಪ್ರದರ್ಶನಕ್ಕೆ ಅವಕಾಶ ನೀಡಿದ್ದೂ ಇದೆ. ಆದರೆ ಇಂಥದ್ದೇ ಚಿತ್ರಮಂದಿರ ಬೇಕೆಂದು ಪ್ರಭಾವ ಬೀರುವುದು, ಧರಣಿ ಮಾಡುವುದು ಸೂಕ್ತವಲ್ಲ. ಕನ್ನಡ ಚಿತ್ರಗಳನ್ನು ಪ್ರದರ್ಶನ ಮಾಡಬಾರದೆಂಬ ಅಭಿಪ್ರಾಯ ನಮಗಿಲ್ಲ. ಕರ್ನಾಟಕದಲ್ಲಿ ಕನ್ನಡ ಚಿತ್ರಗಳಿಗೆ ಆದ್ಯತೆ ನೀಡಬೇಕಾದದ್ದು ನಮ್ಮ ಕರ್ತವ್ಯ ಹೌದು. ಆದರೆ ಇದು ನಮಗೆ ವ್ಯಾಪಾರವೂ ಹೌದು. ಅಲ್ಲದೆ ಜನಕ್ಕೂ ಪರಭಾಷಾ ಚಿತ್ರಗಳು ಬೇಕು. ಇದು ಇಂದು ನಿನ್ನೆಯ ಬೆಳವಣಿಗೆಯಲ್ಲ. ಬದಲಾವಣೆ ಅಷ್ಟು ಸುಲಭವೂ ಅಲ್ಲ. ಕೆಲವೊಮ್ಮೆ ಪರಭಾಷಾ ಚಿತ್ರಕ್ಕೆ ಚಿತ್ರಮಂದಿರವೊಂದು ಮೊದಲೇ ಬುಕ್ ಆಗಿ ಪ್ರಚಾರವೂ ಆಗಿ ಇನ್ನೇನು ಬಿಡುಗಡೆಯಾಗಬೇಕು ಎನ್ನುವ ಸಂದರ್ಭದಲ್ಲಿ ಅಲ್ಲಿ ಕನ್ನಡ ಚಿತ್ರ ಹಾಕಬೇಕೆಂದು ಒತ್ತಡ ತರುತ್ತಾರೆ. ಇದು ನಿಜಕ್ಕೂ ದುರದೃಷ್ಟಕರ. ಇಂಥ ಸಂದರ್ಭದಲ್ಲಿಯೂ ಪ್ರಚಾರ ಮಾಡಿದ ಪರಭಾಷಾ ಚಿತ್ರ ನಿಲ್ಲಿಸಿ ಕನ್ನಡ ಚಿತ್ರಗಳಿಗೆ ಅವಕಾಶ ಮಾಡಿಕೊಟ್ಟಿದ್ದು ಇದೆ' ಎಂದು ಪ್ರದರ್ಶಕರ ಸಂಘದ ಥಾಮಸ್ ಡಿಸೋಜ ಅಭಿಪ್ರಾಯ ಪಡುತ್ತಾರೆ. ಆಗಾಗ ಭೂಗತ ದೊರೆಗಳು ಪ್ರದರ್ಶಕರಿಗೆ ಚಿತ್ರಮಂದಿರಗಳನ್ನು ಇಂಥ ಚಿತ್ರಕ್ಕೆ ಕೊಡಬೇಕೆಂದು ಬೆದರಿಕೆ ಹಾಕುತ್ತಾರೆಂಬ ಸುದ್ದಿ ಹರಡಿದ್ದನ್ನು ಅವರು ಒಪ್ಪಿಕೊಳ್ಳುವುದಿಲ್ಲ. "ಕೆಲವು ಕಿಡಿಗೇಡಿಗಳು ದೂರವಾಣಿಯಲ್ಲಿ ಈ ರೀತಿ ಬೆದರಿಸುವುದಿದೆ. ಈರೀತಿಯಾಗಿ ಚಿತ್ರಮಂದಿರ ಪಡೆಯುವುದು ಸಾಧ್ಯವಿಲ್ಲ. ಸಾಧುವೂ ಅಲ್ಲ, ಇದುವರೆಗೆ ಹಾಗೆ ನಡೆದೂ ಇಲ್ಲ" ಎನ್ನುತ್ತಾರೆ ಥಾಮಸ್ ಡಿಸೋಜ.

೧೯೭೩ರ ಸಮಯದಲ್ಲಿ ಪರಭಾಷಾ ಚಿತ್ರಗಳು ಕನ್ನಡ ಚಿತ್ರಗಳನ್ನು ನುಂಗಿಹಾಕುವ ಕಾಲದಲ್ಲಿಯೂ ಕನ್ನಡ ಚಿತ್ರಗಳನ್ನು ನೋಡುವ ಆಸಕ್ತಿ ಪ್ರೇಕ್ಷಕನಲ್ಲಿ ಬೆಳೆಯತೊಡಗಿತ್ತು. ಅಂಥ ಸಂದರ್ಭವನ್ನು ಸರಿಯಾಗಿ ಬಳಸಿಕೊಳ್ಳಬೇಕು. ಒಂದೇ ಸಲಕ್ಕೆ ಹಲವು ಚಿತ್ರಗಳು ಬಿಡುಗಡೆಯಾದರೆ ಲಾಭ ಹಂಚಿ ಹೋಗುತ್ತಲ್ಲದೆ, ಯಶಸ್ಸು ಕುಂಠಿತವಾಗುತ್ತದೆ. ಇದನ್ನು ಅರ್ಥಮಾಡಿಕೊಳ್ಳದೆ ಸ್ಪರ್ಧಾತ್ಮಕವಾಗಿ ಆಗ 'ಮಂಗಳ ಮುಹೂರ್ತ', 'ಕಲಾವತಿ', 'ರಾಮಾಂಜನೇಯ ಯುದ್ಧ', 'ಹಳ್ಳಿ ಹುಡುಗಿ', ಚಿತ್ರಗಳು ಒಂದೇ ತಿಂಗಳಲ್ಲಿ ತೆರೆಗೆ ಬರಲು ಪೈಪೋಟಿ ನಡೆಸಿದವು. ಅದಾಗಲೇ ತೆಲುಗು ಚಿತ್ರರಂಗದಲ್ಲಿ ಇಂಥದೇ ವಿಪರೀತ ಸ್ಪರ್ಧೆಗಳುಂಟಾಗಿ ಕೊನೆಗೆ ಅವರು ಒಪ್ಪಂದವೊಂದನ್ನು ಮಾಡಿಕೊಂಡಿದ್ದರು. ಈಗ ಕನ್ನಡ ಚಿತ್ರರಂಗದಲ್ಲಿ ರಜಾ ಸಮಯದಲ್ಲಿ ಮತ್ತು ಹಬ್ಬ ಮೊದಲಾದ ವಿಶೇಷ ದಿನಗಳ ಹೊರತು ಒಂದೇ ದಿನ ಎರಡಕ್ಕಿಂತ ಹೆಚ್ಚು ಚಿತ್ರಗಳನ್ನು ಬಿಡುಗಡೆ ಮಾಡಬಾರದೆಂಬ ಒಪ್ಪಂದ ಮಾಡಿಕೊಳ್ಳಲಾಗಿದೆ. ವಾಣಿಜ್ಯ ಮಂಡಳಿ ಇದನ್ನು ಸರಿಯಾಗಿ ಪಾಲಿಸುವಂತೆ ನೋಡಿಕೊಳ್ಳುತ್ತಿದೆ.

ಇದರೊಂದಿಗೆ ಕನ್ನಡ ಚಿತ್ರಗಳಿಗೆ ತೆರಿಗೆಯನ್ನು ಸರ್ಕಾರ ರದ್ದು ಮಾಡಿದ ಹಿನ್ನೆಲೆಯಲ್ಲಿ ಕೆಲವು ಚಿತ್ರಮಂದಿರಗಳ ಮಾಲೀಕರು ಪರಭಾಷಾ ಚಿತ್ರಗಳನ್ನು ಪ್ರದರ್ಶಿಸಿ ಡಿ.ಸಿ.ಆರ್ ನಲ್ಲಿ ಕನ್ನಡ ಚಿತ್ರವೆಂದು ತೋರಿಸಿ ತೆರಿಗೆ ಮೋಸಮಾಡುವ ಪರಿಪಾಠವೂ ಬೆಳೆದಿದೆ. ಅಶ್ಲೀಲ ಇಂಗ್ಲಿಷ್ ಚಿತ್ರಗಳನ್ನು ಪ್ರದರ್ಶಿಸುವ ಕೆಲ ಚಿತ್ರಮಂದಿರಗಳು ಈಗಲೂ ಇಂಥ ವ್ಯವಹಾರದಲ್ಲಿ ತೊಡಗಿವೆ.

೧೯೭೩ರಲ್ಲಿ 'ಇನ್ನು ಮುಂದೆ ರಾಜ್ಯ ಚಿತ್ರಮಂದಿರಗಳು ಕನ್ನಡ ಚಿತ್ರಗಳನ್ನು ವಾರದ ಬಾಡಿಗೆ ಆಧಾರದ ಮೇಲೆ ಪ್ರದರ್ಶಿಸುವಂತಿಲ್ಲ' ಎಂದು ವಾಣಿಜ್ಯ ಮಂಡಳಿಯ ಹಂಚಿಕದಾರ ಮತ್ತು ನಿರ್ಮಾಪಕರ ಕೌನ್ಸಿಲ್ ಗಳು ಸ್ಪಷ್ಟ ನಿರ್ಧಾರ ಕೈಗೊಂಡವು. ಇದನ್ನು ಪ್ರದರ್ಶಕರಿಗೂ ತಿಳಿಸಲಾಯಿತು. ಆದರೆ ಬೆಂಗಳೂರಿನ ಆಚೆ ಇರುವ ಚಿತ್ರಮಂದಿರಗಳಲ್ಲಿ ಕನ್ನಡ ಚಿತ್ರಗಳನ್ನು ನಿಗದಿತ ಬಾಡಿಗೆ ಆಧಾರದ ಮೇಲೆ ಪ್ರದರ್ಶಿಸಬೇಕೆ ಅಥವಾ ಶೇಕಡಾವರು ರೀತ್ಯಾ ಪ್ರದರ್ಶಿಸಬೇಕೆ ಎಂಬ ತೀರ್ಮಾನವನ್ನು ಹಂಚಿಕೆದಾರರು ಹಾಗೂ ಪ್ರದರ್ಶಕರ ನಿಲುವಿಗೆ ಬಿಡಲಾಯಿತು. ಅದೇ ಸಂದರ್ಭದಲ್ಲಿ ಬೆಂಗಳೂರಿನ ಕೆಂಪೇಗೌಡ ರಸ್ತೆಯ ಚಿತ್ರಮಂದಿರಗಳಲ್ಲಿ ವರ್ಷಕ್ಕೆ ಕನಿಷ್ಠ ಎಂಟು ವಾರಗಳಾದರೂ ಕನ್ನಡ ಚಿತ್ರಗಳನ್ನು ಪ್ರದರ್ಶಿಸಲೇಬೇಕೆಂಬ ನಿಯಮ ರೂಪಿಸಲಾಯಿತು.

ಇದೆಲ್ಲದರ ನಡುವೆಯೂ ಕೆಲವು ಪ್ರದರ್ಶಕರಿಗೆ ಪರಭಾಷಾ ಚಿತ್ರಗಳ ವ್ಯಾಮೋಹವೂ ಇದೆ. ಹೊಸಪೇಟೆ ಕನ್ನಡಿಗರ ಊರಾದರೂ ಅಲ್ಲಿ ಕನ್ನಡ ಚಿತ್ರಗಳು ಮೂಲೆಗುಂಪಾಗುತ್ತಿವೆ. ದಾವಣಗೆರೆಯಲ್ಲೂ ಇಂಥದೇ ವಾತಾವರಣವಿತ್ತು. ಇನ್ನು ಗಡಿ ಪ್ರದೇಶಗಳಲ್ಲಂತೂ ಪರಭಾಷಾ ಚಿತ್ರಗಳದೇ ಕಾರುಬಾರು.

೧೯೭೨ರಲ್ಲಿ ಬೆಂಗಳೂರಿಗೆ ಭೇಟಿ ಕೊಟ್ಟ ಖ್ಯಾತ ಚಿತ್ರೋದ್ಯಮಿ ವಿ.ಶಾಂತಾರಾಂ ನಗರದ ಚಿತ್ರಮಂದಿರಗಳಿಗೆ ವಿಪರೀತ ಬಾಡಿಗೆ ಕೊಟ್ಟು ಸೊರಗಿದ್ದ ನಿರ್ಮಾಪಕರಿಗೆ ಪರಿಹಾರ ಒದಗಿಸಿಕೊಡುವ ವಿಷಯದಲ್ಲಿ ನೆರವಾದರು. ವಾಣಿಜ್ಯ ಮಂಡಳಿ ನೀಡಿದ ಔತಣ ಕೂಟದಲ್ಲಿ ಅವರು ಪ್ರದರ್ಶಕರನ್ನು ಶೇಕಾಡವಾರು ಪದ್ಧತಿಯಂತೆ ಚಿತ್ರಪ್ರದರ್ಶನ ಮಾಡುವಂತೆ ಕೋರಿಕೊಂಡರಲ್ಲದೆ ಅದಕ್ಕೆ ಸಹಮತವನ್ನೂ ಪಡೆದರು. ಬೆಂಗಳೂರಿನಲ್ಲೇ ಶೇಕಡಾವಾರು ವ್ಯವಸ್ಥೆ ಪ್ರಾರಂಭವಾದರೆ ಅದರ ನೆರಳು ರಾಜ್ಯಾದ್ಯಂತ ಬೀಳುವುದೆಂದು ಚಿತ್ರೋದ್ಯಮಿಗಳು ಆಶಯ ವ್ಯಕ್ತಪಡಿಸಿದರು.

ಇನ್ನು ಪ್ರದರ್ಶನ ಮಂದಿರಗಳ ಗುಣಮಟ್ಟದ ವಿಷಯಕ್ಕೆ ಬಂದರೆ ನಗರದ ಪ್ರಮುಖ ಚಿತ್ರಮಂದಿರಗಳಲ್ಲೂ ಈ ಕೊರತೆ ಎದ್ದು ಕಾಣುತ್ತದೆ. ಚಿತ್ರಮಂದಿರಗಳಲ್ಲಿನ ನ್ಯೂನತೆಗಳು ಒಂದೆರಡಲ್ಲ. ಶೌಚಾಲಯ ವ್ಯವಸ್ಥೆಯಿಂದ ಹಿಡಿದು ಆಸನಗಳ ವ್ಯವಸ್ಥೆಯವರೆಗೂ ಎಲ್ಲಾ ಅಧ್ವಾನವಾಗಿರುತ್ತದೆ. ಶುಚಿತ್ವದ ಕಡೆಗೆ ಅಷ್ಟಾಗಿ ಗಮನ ಕೊಡುವುದಿಲ್ಲ. ಹಿಂದಿನಂತೆ ಪ್ರದರ್ಶಕರು ಚಿತ್ರಮಂದಿರವನ್ನು ಜೋಪಾನವಾಗಿ ಇಟ್ಟುಕೊಳ್ಳುತ್ತಿಲ್ಲ. ಇದಕ್ಕೆ ಕಾರಣ ಚಿತ್ರಮಂದಿರದ ಮಾಲೀಕರು ಮಂದಿರವನ್ನು

ಲೀಸ್‌ಗೆ ನಡೆಸಲು ಕೊಡುವ ಪದ್ಧತಿ ಕೈಯಿಂದ ಕೈಗೆ ಬದಲಾದಾಗ ಕೇವಲ ಹಣಕ್ಕಾಗಿ ನಡೆಸುವ ಚಿತ್ರಮಂದಿರದ ಮಾಲೀಕರು ಚಿತ್ರದ ಬಗ್ಗೆಯಾಗಲೀ, ಉತ್ತಮ ಆಡಳಿತದ ಕುರಿತಾಗಲಿ ಅಥವಾ ಉತ್ತಮ ಗುಣಮಟ್ಟದ ಪ್ರದರ್ಶನ ವ್ಯವಸ್ಥೆಯ ಬಗ್ಗೆಯಾಗಲಿ ಯೋಚಿಸುವುದಿಲ್ಲ. ಚಿತ್ರಮಂದಿರಗಳ ಅವ್ಯವಸ್ಥೆಯೂ ಜನರು ಚಿತ್ರಮಂದಿರಕ್ಕೆ ಬಾರದಿರಲು ಒಂದು ಕಾರಣ ಎಂಬ ಟೀಕೆಗಳು ಪತ್ರಿಕೆ, ಸಾರ್ವಜನಿಕರಿಂದ ಬಂದವು.

ಆಡಿಟೋರಿಯಂ ಒಳಗೆ ಬೀಡಿ, ಸಿಗರೇಟ್, ಗುಟ್ಕಾ ಇತ್ಯಾದಿ ಉಪಯೋಗಿಸಬಾರದೆಂದಿದ್ದರೂ ಎಲ್ಲಾ ಕಡೆ ಇದನ್ನು ಪಾಲಿಸುವುದಿಲ್ಲ. ಗುಟ್ಕಾ ತಿಂದು ಗೋಡೆಯ ಪಕ್ಕದಲ್ಲಿ ಉಗಿಯುವುದು ಸಾಮಾನ್ಯವಾಗಿ ಎಲ್ಲ ಚಿತ್ರಮಂದಿರಗಳಲ್ಲೂ ಸಿಗುವ ನೋಟ.

ಕಾಳಸಂತೆಯಲ್ಲಿ ಟಿಕೆಟ್ ಮಾರಾಟವಾಗುವುದು, ಅದರಲ್ಲಿ ಕೆಲವೊಮ್ಮೆ ಚಿತ್ರಮಂದಿರದ ಆಡಳಿತ ವರ್ಗ ಶಾಮೀಲಾಗಿದ್ದಾರೆಂಬುದು ದೊಡ್ಡ ಆಪಾದನೆ. ಮಾಲೀಕರು ಇದು ತಮ್ಮ ಗಮನಕ್ಕೆ ಬರುತ್ತಿಲ್ಲವೆಂದು ಹೇಳುತ್ತಾರೆ. ಸರದಿಯಲ್ಲಿ ಟಿಕೆಟ್ ಪಡೆಯಲು ನಿಂತವರಿಗೆ ಇದರಿಂದ ಅನ್ಯಾಯವಾಗುವುದಂತೂ ನಿಜ. ಸರ್ಕಾರ ಚಿತ್ರಮಂದಿರದ ನಿರ್ವಹಣೆಗಾಗಿ ಪ್ರತಿ ಟಿಕೆಟ್‌ನಲ್ಲಿ ಒಂದಂಶ ಕೊಡುತ್ತದಾದರೂ ಅದರ ಬಳಕೆ ಎಲ್ಲಿಯೂ ಸರಿಯಾಗಿ ಆಗುತ್ತಿಲ್ಲ. ಜಿಲ್ಲಾಧಿಕಾರಿ ಕಛೇರಿಯಿಂದ ವರ್ಷಕ್ಕೊಮ್ಮೆ ಚಿತ್ರಮಂದಿರದ ತಪಾಸಣೆಯಾಗಬೇಕು. ಆದರೆ ಆ ರೀತಿ ಆಗುತ್ತಿಲ್ಲ. ಆಗಾಗ ಚಿತ್ರಮಂದಿರಗಳಿಗೆ ಭೇಟಿ ನೀಡಿ ಅವ್ಯವಸ್ಥೆಯ ಬಗ್ಗೆ ಕಾನೂನು ಕ್ರಮ ಕೈಗೊಳ್ಳುವುದಂತೂ ಮೊದಲೇ ಇಲ್ಲ.

ಮೊದಲು ಚಿತ್ರಮಂದಿರಗಳಲ್ಲಿ ಚಿತ್ರ ಮುಗಿದಾಗ ರಾಷ್ಟ್ರಗೀತೆ ಪ್ರಸಾರ ಮಾಡುವ ಕ್ರಮವಿತ್ತು. ಜನ ಮನೆಗೆ ಹೋಗುವ ಆತುರದಲ್ಲಿ ರಾಷ್ಟ್ರಗೀತೆ ಮುಗಿಯುವವರೆಗೆ ನಿಂತಿದ್ದು ಗೌರವ ತೋರಿಸದೆ ಇದ್ದುದರಿಂದ ಈಗ ಎಲ್ಲಿಯೂ ಆ ಪದ್ಧತಿ ಇಲ್ಲ. ಚಿತ್ರದ ಆರಂಭಕ್ಕೆ ನ್ಯೂಸ್ ರೀಲ್ ತೋರಿಸುವ ಕಾನೂನಿದೆಯಾದರೂ ಪಾಲನೆಯಾಗುತ್ತಿಲ್ಲ. ಇದಕ್ಕೆ ಅವರು ಕೊಡುವ ಕಾರಣ 'ಹತ್ತಾರು ಟಿ.ವಿ ಚಾನೆಲ್ ಗಳು ಬಂದ ಮೇಲೆ ಕ್ಷಣಾರ್ಧದಲ್ಲಿ ಜಗತ್ತಿನ ಮೂಲೆ ಮೂಲೆಯ ಸುದ್ದಿಗಳನ್ನು ತಿಳಿಯುವ ಈ ಕಾಲದಲ್ಲಿ, 'ಹಳೆಯ ಸುದ್ದಿಗಳನ್ನು ಹಾಕಿದರೆ ಯಾರು ನೋಡುತ್ತಾರೆ? ಮಾತ್ರವಲ್ಲದೆ ನ್ಯೂಸ್‌ರೀಲ್ ಹಾಕಿದರೆ ಪ್ರೇಕ್ಷಕರು ಗಲಾಟೆ ಮಾಡಿ ಕೂಡಲೇ ಚಿತ್ರ ಆರಂಭಿಸಲು ಕೇಳುತ್ತಾರೆ' ಎನ್ನುವುದು.

ಇವಲ್ಲದೆ ಅನೇಕ ಚಿತ್ರಮಂದಿರಗಳಲ್ಲಿ ಸಿಬ್ಬಂದಿಯವರು ಸೌಜನ್ಯವೆಂದರೇನೆಂದೇ ಅರಿತಿರುವುದಿಲ್ಲ. ಪ್ರೇಕ್ಷಕರನ್ನು ತುಚ್ಛವಾಗಿ ನೋಡುವ ನೌಕರರೂ ಇದ್ದಾರೆ. ಇದನ್ನು ಮಾಲೀಕರ ಗಮನಕ್ಕೆ ತಂದರೆ ಆ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಾರೆ ಎಂದು ಪ್ರದರ್ಶಕರ ಸಂಘದ ಥಾಮಸ್ ಡಿಸೋಜ ಹೇಳುತ್ತಾರೆ. ಆದರೆ ಪ್ರದರ್ಶಕರ ಸಂಘ ಅಷ್ಟೇನೂ ಕ್ರಿಯಾಶೀಲವಾಗಿಲ್ಲ. ಅದನ್ನು ಮುನ್ನಡೆಸುವ ನಾಯಕನ ಕೊರತೆ ಇದೆ ಎನ್ನುವ ಥಾಮಸ್ ಡಿಸೋಜ ಶೀಘ್ರದಲ್ಲೇ ಪ್ರದರ್ಶಕರ ಸಂಘ ಜೀವ ತುಂಬಿ ಕ್ರಿಯಾಶೀಲವಾಗುವುದೆಂಬ ಭರವಸೆ ನೀಡುತ್ತಾರೆ. ಈ ಮೂಲಕ ಮಾಡಬೇಕಾಗಿರುವ ಕೆಲಸಗಳು ಬೇಕಾದಷ್ಟಿವೆ ಎಂದವರು ಅಭಿಪ್ರಾಯ ಪಡುತ್ತಾರೆ.

ಚಿತ್ರಮಂದಿರಗಳ ಅವ್ಯವಸ್ಥೆಗೆ ಸರ್ಕಾರವೂ ಹೊಣೆಯಾಗುತ್ತದೆ. ಕಾನೂನಿಗೆ ಮೀರಿದ ನ್ಯೂನತೆಗಳಿದ್ದರೆ ಲೈಸನ್ಸ್ ನಿಲ್ಲಿಸುವ ಅಧಿಕಾರವಿದೆಯಾದರೂ ಜಿಲ್ಲಾಧಿಕಾರಿಯ ಪ್ರತಿನಿಧಿಗಳು ಚಿತ್ರಮಂದಿರಕ್ಕೆ ಭೇಟಿ ನೀಡುವ ಕಾರ್ಯಕ್ರಮವನ್ನೇ ಇಟ್ಟುಕೊಳ್ಳುವುದಿಲ್ಲ. ಇದು ಕ್ರಮೇಣ ಇಡೀ ಚಿತ್ರೋದ್ಯಮ ವ್ಯವಸ್ಥೆಗೆ ಹಾನಿಯಾಗುವ ವಿಚಾರ. ಇದರೊಂದಿಗೆ ಪ್ರೇಕ್ಷಕರ ಅತಿಯಾದ ಅಭಿಮಾನವೂ ಚಿತ್ರಮಂದಿರದ ಹಾನಿಗೆ ಕಾರಣವಾಗುತ್ತದೆ. ಇಲ್ಲಿ ಅಭಿಮಾನಿಗಳು ಖುಷಿಯಾದರೂ ತೊಂದರೆ ತಪ್ಪುವುದಿಲ್ಲ. ತಮ್ಮ ಅಭಿಮಾನದ ನಟನ ಚಿತ್ರ ಕೆಟ್ಟದಾಗಿದ್ದರೂ ಅವರು ಸಹಿಸುವುದಿಲ್ಲ. ಅದರ ಪರಿಣಾಮ ಮಾತ್ರ ಚಿತ್ರಮಂದಿರದ ಮೇಲೆ. ಇದಕ್ಕಾಗಿ ಕೆಲವು ಚಿತ್ರಮಂದಿರಗಳಲ್ಲಿ ಹರಿದ ಸೀಟ್ ಗಳನ್ನು ಹೊಲಿಯಲು ಖಾಯಂ ಆಗಿ ಒಬ್ಬ ಟೈಲರ್ ಅನ್ನು ಇರಿಸಿಕೊಳ್ಳುತ್ತಾರೆ. ಸೀಟು ನಾಶವಾಗುವ ಕಾರಣಕ್ಕೆ ಈಗ ಹಾಳಾಗದ ಫೈಬರ್ ಸೀಟ್ ಗಳನ್ನು ಬಳಸುವುದೂ ಇದೆ. ಕೆಟ್ಟ ಚಿತ್ರಗಳನ್ನು ಪ್ರದರ್ಶಿಸುವ ಚಿತ್ರಮಂದಿರಗಳಿಗೆ ಈ ಹಾನಿ ತಪ್ಪಿದ್ದಲ್ಲ. ಇದಕ್ಕೆ ಕಾರಣವೆಂದರೆ ಅಂಥ ಚಿತ್ರಗಳನ್ನು ವೀಕ್ಷಿಸಲು ಬರುವ ವೀಕ್ಷಕನ ಮನೋಭಾವವೂ ಅದೇ ಮಟ್ಟದ್ದಾಗಿರುತ್ತದೆ. ಕೆಲವೊಮ್ಮೆ ಕಾರ್ಬನ್‌ಗಳ ಬಳಕೆ ಸರಿಯಾಗಿಲ್ಲದೆ ಚಿತ್ರದ ಗುಣಮಟ್ಟ ಹಾಳಾಗಿ ಪ್ರೇಕ್ಷಕರು ಸಿಡಿದೆದ್ದು ಹಾನಿ ಮಾಡುವುದೂ ಇದೆ. ಇದೇ ರೀತಿ ಧ್ವನಿವರ್ಧಕದ ಅವ್ಯವಸ್ಥೆಯೂ ಕಾರಣವಾಗುತ್ತದೆ. ಜೊತೆಗೆ ತಮ್ಮ ಅಭಿಮಾನದ ನಟನ ಪ್ರಮುಖ ದೃಶ್ಯವನ್ನೋ, ಮುಖ್ಯವಾದ ಹಾಡನ್ನೋ ಮತ್ತೆ ಪ್ರದರ್ಶನ ಮಾಡಲು ಹೇಳಿ ಗಲಾಟೆ ಮಾಡುವುದೂ ಇದೆ. ಕೆಲವು ಚಿತ್ರಮಂದಿರಗಳಲ್ಲಿ ತಿಗಣೆ, ಹೆಗ್ಗಣ, ಬೆಕ್ಕುಗಳು ಓಡಾಡುವುದು ರೂಢಿಯಾಗಿರುತ್ತದೆ. ಜೊತೆಗೆ ಕೆಲವು ಚಿತ್ರಮಂದಿರಗಳಲ್ಲಿ ವೇಶ್ಯೆಯರ ಕಾರುಬಾರೂ ಇರುವುದರಿಂದ ಸಂಸಾರಸ್ಥರು ಅಂಥ ಕಡೆ ಹೋಗಲು ಹಿಂಜರಿಯುವುದೂ ಇದೆ. ಈಗ ಇಂಗ್ಲಿಷ್ ಚಿತ್ರಗಳಿಗೆ ಮೀಸಲಾಗಿರುವ ಚಿತ್ರಮಂದಿರಗಳು ಸ್ವಲ್ಪ ಮಟ್ಟಿಗೆ ಗುಣಮಟ್ಟ ಉಳಿಸಿಕೊಂಡಿವೆಯಷ್ಟೆ. ಕನ್ನಡ ಚಿತ್ರಗಳನ್ನು ಪ್ರದರ್ಶಿಸುವ ಕೆಲವೇ ಚಿತ್ರಮಂದಿರಗಳು ವ್ಯವಸ್ಥಿತವಾಗಿವೆ. ಬೆಂಗಳೂರಿನ ಪುಟ್ಟಣ್ಣ ಚಿತ್ರಮಂದಿರ ಸರ್ಕಾರ ನಡೆಸುತ್ತಿರುವುದರಿಂದಲೇ ನಿರ್ಲಕ್ಷ್ಯಕ್ಕೆ ಒಳಗಾಯಿತೆನ್ನುವುದು ಹೊಸ ವಿಚಾರವಲ್ಲ. ಆಂಧ್ರದಲ್ಲಿ ಕೆಲವು ಚಿತ್ರಮಂದಿರಗಳಿಗೆ ಜನ ಚಿತ್ರ ನೋಡಲು ಹೋಗುವುದಿಲ್ಲ. ಆದರೂ ಟಿಕೆಟ್ ಖರೀದಿಸಿ ಒಳಗೆ ಹೋಗಿ ಎರಡು ಗಂಟೆ ಆರಾಮವಾಗಿ ಮಲಗುತ್ತಾರೆ. ಕಾರಣ ಅಲ್ಲಿ ಕಡಿಮೆ ಬೆಲೆಯ ಟಿಕೆಟ್ ಮತ್ತು ಉತ್ತಮ ಆಸನ ಹಾಗೂ ಹವಾನಿಯಂತ್ರಣ ವ್ಯವಸ್ಥೆ ಇದೆ.

ಈಗ ಕರ್ನಾಟಕದಲ್ಲಿ ಚಿತ್ರಮಂದಿರಗಳಲ್ಲಿ ಟಿಕೆಟ್ ದರವೂ ವಿಪರೀತವಾಗಿ ಇಂದು ಸಂಸಾರ ಸಮೇತ ಸಿನಿಮಾ ನೋಡುವುದು ಮಧ್ಯಮ ವರ್ಗದವರಿಗೆ ದುಸ್ಸಾಧ್ಯವೆನಿಸಿದೆ. ಇದಕ್ಕೆ ಸರಿಯಾಗಿ ಚಿತ್ರ ಬಿಡುಗಡೆಯಾದ ಕೆಲವೇ ಸಮಯದಲ್ಲಿ ಮನೆಯಲ್ಲೇ ಟಿ.ವಿ.ಯಲ್ಲಿ ಅದೇ ಚಿತ್ರ ಬರುವುದರಿಂದ ಚಿತ್ರಮಂದಿರಗಳಿಗೆ ಹೋಗುವ ರೂಢಿ ಕಡಿಮೆಯಾಗುತ್ತಿದೆ. ಇದಕ್ಕೆ ನಿರ್ಮಾಪಕರೇ ಕಾರಣ. ಹಣದಾಸೆಗಾಗಿ ಟಿ.ವಿ. ಚಾನೆಲ್‌ಗೆ ಬಿಡುಗಡೆಗೆ ಮೊದಲೇ ಚಿತ್ರವನ್ನು ಮಾರಿ ಪ್ರದರ್ಶನ ಮಂದಿರಗಳ ಆಕರ್ಷಣೆ ಕಡಿಮೆ ಮಾಡುತ್ತಾರೆ. ಟಿ.ವಿಯಲ್ಲಿ ಪ್ರಚಾರದ ಹೆಸರಲ್ಲಿ ಅರ್ಧ ಸಿನಿಮಾ ತೋರಿಸುವುದರಿಂದ ಜನರಲ್ಲಿ ಕುತೂಹಲವೂ ಉಳಿಯುವುದಿಲ್ಲ. ಕುತೂಹಲ ಕೆರಳಿಸಿಕೊಂಡು ಪ್ರಚಾರ ಮಾಡುವ ಕಲೆ ನಮ್ಮಲ್ಲಿ ಅನೇಕರಿಗೆ ತಿಳಿದೂ ಇಲ್ಲ. ಅದು ಅಪಪ್ರಚಾರವಾಗುವ ಸಾಧ್ಯತೆಯೇ ಹೆಚ್ಚು.

ಕನ್ನಡ ಚಿತ್ರಗಳು ನಮ್ಮಲ್ಲಿ ಹೆಚ್ಚು ಬೆಳವಣಿಗೆ ಕಾಣದಿರಲು ಭಾಷಾಭಿಮಾನದ ಕೊರತೆಯೂ ಕಾರಣ. ನೆರೆಯ ತಮಿಳುನಾಡು ಹಾಗೂ ಆಂಧ್ರದಲ್ಲಿ ಜನರ ವಿಪರೀತ ಭಾಷಾಭಿಮಾನದ ಲಾಭವನ್ನು ಉದ್ಯಮ ಪಡೆದಿದೆ.

ಒಂದೊಮ್ಮೆ ಚಿತ್ರಮಂದಿರಗಳನ್ನು ರಾಷ್ಟ್ರೀಕರಣ ಮಾಡುವ ಬಗ್ಗೆ ಮಾತು ಬಂದಿತ್ತು. ೧೯೭೩ ರಲ್ಲಿ ಸಂಚಾರಿ ಚಿತ್ರಣ ಘಟಕವೊಂದರ ಉದ್ಘಾಟನೆ ಮಾಡುತ್ತಾ 'ರಾಜ್ಯದ ಚಿತ್ರೋದ್ಯಮದಲ್ಲಿ ಕಂಡುಬರುತ್ತಿರುವ ಶೋಷಣೆ ಮತ್ತು ಅಡ್ಡ ದಾರಿಯ ವಿಧ್ಯಮಾನಗಳು ತಕ್ಷಣ ನಿಲ್ಲದಿದ್ದಲ್ಲಿ ರಾಷ್ಟ್ರೀಕರಣ ಅನಿವಾರ್ಯ' ಎಂದು ಮುಖ್ಯಮಂತ್ರಿ ದೇವರಾಜ ಅರಸ್ ಎಚ್ಚರಿಕೆ ನೀಡಿದ್ದರು. ಈ ದುಃಸ್ಥಿತಿಗೆ ನಿರ್ಮಾಪಕರು, ಹಂಚಿಕದಾರರು, ಪ್ರದರ್ಶಕರು ಎಲ್ಲರೂ ಕಾರಣವೆಂದು ದೂರಿದ್ದರು.

ರಾಜ್ಯದಲ್ಲಿನ ಎಲ್ಲಾ ಚಿತ್ರಮಂದಿರಗಳನ್ನು ರಾಷ್ಟ್ರೀಕರಣ ಮಾಡಲು ಪಂಜಾಬ್ ಸರ್ಕಾರ ಕೈಗೊಂಡ ತೀರ್ಮಾನ ಮತ್ತು ಇದನ್ನು ತಮಿಳುನಾಡು ಮುಖ್ಯಮಂತ್ರಿ ಕರುಣಾನಿಧಿ ಬೆಂಬಲಿಸಿದ್ದು ಚಿತ್ರರಂಗದಲ್ಲಿ ಕಳವಳ ಉಂಟು ಮಾಡಿತ್ತು. ದೇವರಾಜ ಅರಸ್ ಇದರ ಬಗ್ಗೆ ಪ್ರಸ್ತಾಪಿಸಿದಾಗ ಮಾತಿನಲ್ಲಿದ್ದ ವಿಷಯ ಸಾಧ್ಯವಾಗುವ ಹಂತವನ್ನು ತಲುಪಿತ್ತು. ಆಗ ಇದರ ಬಗ್ಗೆ ಪ್ರತಿಭಟನೆ ಸೂಚಿಸಲು ಫಿಲಂ ಫೆಡರೇಷನ್ ಆಫ್ ಇಂಡಿಯಾ ನಿಯೋಗವೊಂದು ಕೇಂದ್ರ ವಾರ್ತಾ ಸಚಿವ ಗುಜ್ರಾಲ್ ಅವರನ್ನು ಭೇಟಿ ಮಾಡಿತ್ತು.

ಗುಜ್ರಾಲ್ ಅವರು ಚಿತ್ರಮಂದಿರಗಳನ್ನು ರಾಷ್ಟ್ರೀಕರಣ ಮಾಡುವ ಬಗ್ಗೆ ತಮಗೆ ಒಲವಿಲ್ಲವೆಂದು ತಿಳಿಸಿದರೂ ಚಿತ್ರಮಂದಿರಗಳ ಅವ್ಯವಸ್ಥೆಯ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದರು. ಚಿತ್ರಮಂದಿರಗಳ ಹತೋಟಿಗೆ ಪರ್ಯಾಯ ಕ್ರಮ ಕೈಗೊಳ್ಳುವುದು ಅನಿವಾರ್ಯವೆಂದು ತಿಳಿಸಿದ್ದರು. ಅಂತಿಮವಾಗಿ ಲೋಕಸಭೆಯಲ್ಲಿ ಮಾತಾಡಿದ ಗುಜ್ರಾಲ್ ಪಂಜಾಬ್ ಮತ್ತು ತಮಿಳುನಾಡು ಮುಂತಾದ ರಾಜ್ಯ ಸರ್ಕಾರಗಳು ಚಿತ್ರಮಂದಿರಗಳನ್ನು ರಾಷ್ಟ್ರೀಕರಣ ಮಾಡಬೇಕೆಂಬ ಬೆದರಿಕೆ ಹಾಕಿದ ಹಿನ್ನೆಲೆಯಲ್ಲಿ ಚಿತ್ರಮಂದಿರಗಳ ರಾಷ್ಟ್ರೀಕರಣ ಪ್ರಶ್ನೆಯೇ ಇಲ್ಲವೆಂದು ಸ್ಪಷ್ಟವಾಗಿ ಹೇಳಿ ಆ ವಿಷಯಕ್ಕೆ ಅಂತಿಮ ತೆರೆ ಎಳೆದರು. ಆ ಸಂದರ್ಭದಲ್ಲಿ ಮಾತಾಡಿದ ಗುಜ್ರಾಲ್ ದೇಶದಲ್ಲಿರುವ ಒಟ್ಟು ೭೫೦೦ ಚಿತ್ರಮಂದಿರಗಳು ಏನೇನೂ ಸಾಲದಿರುವುದರಿಂದ ಮಾಲೀಕರು ಹಂಚಿಕೆದಾರರನ್ನು ಹಾಗೂ ನಿರ್ಮಾಪಕರನ್ನು ಶೋಷಣೆ ಮಾಡುತ್ತಿರುವುದಾಗಿ ತಿಳಿಸಿ ಚಿತ್ರಮಂದಿರಗಳ ಸಂಖ್ಯೆ ಹೆಚ್ಚಿಸಲು ಕ್ರಮ ತಗೆದುಕೊಳ್ಳುವುದಾಗಿ ಭರವಸೆ ನೀಡಿದ್ದರು.

ಅಂಕಿ - ಅಂಶ

ರಾಜ್ಯದಲ್ಲಿರುವ ಖಾಯಂ ಚಿತ್ರಮಂದಿರಗಳು: (ಜಿಲ್ಲಾವಾರು)

ಬೆಂಗಳೂರು-೧೩೨, ಕೋಲಾರ-೩೭, ತುಮಕೂರು-೨೫, ಮೈಸೂರು-೬೦, ಮಂಡ್ಯ-೨೯, ಕೊಡಗು-೧೧, ಹಾಸನ-೨೩, ಚಿಕ್ಕಮಗಳೂರು-೧೯, ಶಿವಮೊಗ್ಗ ೩೦, ಚಿತ್ರದುರ್ಗ-೩೮, ಬಳ್ಳಾರಿ-೩೮, ಧಾರವಾಡ-೫೪, ಬೆಳಗಾವಿ-೫೭, ಬಿಜಾಪುರ-೩೬, ಬೀದರ್-೧೫, ರಾಯಚೂರು-೩೧, ಗುಲ್ಬರ್ಗ-೧೬, ಉತ್ತರ ಕನ್ನಡ-೧೯ ಮತ್ತು ದಕ್ಷಿಣ ಕನ್ನಡ-೩೨. (ಒಟ್ಟು ೭೦೨ ಖಾಯಂ ಚಿತ್ರಮಂದಿರಗಳು)

ಬೆಂಗಳೂರು ನಗರದಲ್ಲಿರುವ ಖಾಯಂ ಚಿತ್ರಮಂದಿರಗಳು :

೧.ಅಭಿನಯ್, ೨.ಅಭಿಮಾನ್, ೩.ಆದರ್ಶ, ೪.ಅಜಂತ, ೫.ಅಂಜನ್, ೬.ಆನಂದ್, ೭.ಅಪರ್ಣ, ೮.ಅಪ್ಸರ, ೯.ಅರುಣ, ೧೦.ಅಶೋಕ್, ೧೧.ಬಾಲಾಜಿ, ೧೨.ಕಾವೇರಿ, ೧೩.ದೇವಿ, ೧೪.ಡಿಫೆನ್ಸ್ ಎಸ್. ಸಿ. ಪಶ್ಚಿಮ, ೧೫.ಡಿಫೆನ್ಸ್ ಎಸ್. ಸಿ. ಪೂರ್ವ, ೧೬.ಎಲ್ಗಿನ್, ೧೭.ಈಶ್ವರಿ, ೧೮.ಎವರೆಸ್ಟ್, ೧೯.ಗಲಾಕ್ಸಿ, ೨೦.ಗೀತಾಂಜಲಿ, ೨೧.ಗೋಪಾಲ್, ೨೨.ಗೋವರ್ಧನ್, ೨೩.ಗಣೇಶ್, ೨೪.ಹಿಮಾಲಯ, ೨೫.ಹೆಚ್. ಎಂ.ಟಿ. ಆಡಿಟೋರಿಯಂ, ೨೬.ಕೆಂಪೇಗೌಡ, ೨೭.ಕಲ್ಪನ, ೨೮.ಕೈಲಾಶ್ (ಮಿನಿ), ೨೯.ಕೇಶವ, ೩೦.ಕಿನೋ, ೩೧.ಕಣಗಾಲ್ ಪುಟ್ಟಣ್ಣ, ೩೨.ಕಪಾಲಿ, ೩೩.ಲಿಡೋ, ೩೪.ಲಾವಣ್ಯ, ೩೫.ಲಕ್ಷ್ಮಿ, ೩೬.ಮೆಜೆಸ್ಟಿಕ್, ೩೭.ಮೇನಕ, ೩೮.ಮಾರುತಿ, ೩೯.ಮೋಹನ್, ೪೦.ಮುಕುಂದ, ೪೧.ನಳಂದ, ೪೨.ನರಸಿಂಹ, ೪೩.ನರ್ತಕಿ, ೪೪.ನಟರಾಜ್, ೪೫.ನವರಂಗ್, ೪೬.ನಂದಿನಿ, ೪೭.ನಾಗ, ೪೮.ನ್ಯೂ ಇಂಪೀರಿಯಲ್, ೪೯.ನ್ಯೂ ಅಪೇರಾ, ೫೦.ನಂದ, ೫೧.ನ್ಯೂ ಸಿಟಿ, ೫೨.ಮೂವಿಲ್ಯಾಂಡ್, ೫೩.ಪ್ರಸನ್ನ, ೫೪.ಪ್ರಮೋದ್, ೫೫.ಪ್ಲಾಜಾ, ೫೬.ಪಲ್ಲವಿ, ೫೭.ಪರಿಮಳ, ೫೮.ಪ್ರದೀಪ್, ೫೯.ಪೂರ್ಣಿಮ, ೬೦.ರಂಗನಾಥ (ಮಿನಿ), ೬೧.ರಾಮೇಶ್ವರ, ೬೨.ರೇಣುಕಾ, ೬೩.ರೆಕ್ಸ್, ೬೪.ರಾಜೇಶ್ವರಿ, ೬೫.ಸಂದೀಪ್, ೬೬.ಸಪ್ನ (ಮಿನಿ), ೬೭.ಸಂತೋಷ್, ೬೮.ಸ್ಟೇಟ್ಸ್, ೬೯.ಸಾಗರ್, ೭೦.ಸಂಗಂ, ೭೧.ಸಂಪಿಗೆ, ೭೨.ಸವಿತಾ (ಮಿನಿ), ೭೩.ಸಂಗೀತ್, ೭೪.ಶಂಕರನಾಗ್, ೭೫.ಶೋಭಾ (ಕೆಂಪಾಪುರ), ೭೬.ಶ್ರೀನಿವಾಸ (ಮಾರತ್ತಹಳ್ಳಿ), ೭೭.ಶ್ರೀನಿವಾಸ (ಸುದ್ದಗುಂಟಪಾಳ್ಯ), ೭೮.ಸುಜಾತ, ೭೯.ಸ್ವಾಗತ್, ೮೦.ಶಾಂತಿ, ೮೧.ಶಾರದಾ, ೮೨.ಶಿವಾನಂದ, ೮೩.ಸೂಪರ್, ೮೪.ತ್ರಿಭುವನ್, ೮೫.ತ್ರಿವೇಣಿ, ೮೬.ತುಳಸಿ, ೮೭.ಉಲ್ಲಾಸ್, ೮೮.ಉಮಾ, ೮೯.ಊರ್ವಶಿ, ೯೦.ವೆಂಕಟೇಶ್ವರ (ಆವಲಹಳ್ಳಿ), ೯೧.ವಿನಾಯಕ, ೯೨.ವಿಜಯಲಕ್ಷ್ಮಿ, ೯೩.ವಿದ್ಯಾಮಂದಿರ ಆಡಿಟೋರಿಯಂ, ೯೪.ಭಾರತಿ(ಚೊಕ್ಕಸಂದ್ರ), ೯೫.ರಾಜಶೇಖರ್ (ಚಿಕ್ಕಲಸಂದ್ರ), ೯೬. ಬಾಲಾಜಿ (ಚಿಕ್ಕಲಸಂದ್ರ), ೯೭.ಕೃಷ್ಣ (ದೇವಸಂದ್ರ), ೯೮.ಅಲಂಕಾರ್ (ಹೊಸಕೋಟೆ), ೯೯.ಶ್ರೀನಿವಾಸ (ಕಾಡುಗೋಡಿ), ೧೦೦.ವೀರಭದ್ರೇಶ್ವರ (ಕಮಲಾನಗರ), ೧೦೧.ಮಾನಸ (ಕೋಣನ ಕುಂಟೆ), ೧೦೨.ಶ್ರೀನಿವಾಸ (ಕದಿರೇನ ಹಳ್ಳಿ), ೧೦೩.ಶಿವ (ಕೋರಮಂಗಲ), ೧೦೪. ಕವಿತಾ (ಕುಮೂರು), ೧೦೫.ವೀರೇಶ (ಮಾಗಡಿ ರಸ್ತೆ), ೧೦೬.ವಿಜಯ್ (ಬ್ಯಾಟರಾಯನಪುರ), ೧೦೭.ಪುಷ್ಪಾಂಜಲಿ (ಮಠದಹಳ್ಳಿ), ೧೦೮.ಪುಷ್ಪಾಂಜಲಿ (ಶಿವನಹಳ್ಳಿ).

ಬೆಂಗಳೂರು ಜಿಲ್ಲೆಯಲ್ಲಿನ ಇತರ ಖಾಯಂ ಚಿತ್ರಮಂದಿರಗಳು

ರೂಪ ಮತ್ತು ಶಾಂತಲಾ(ನೆಲಮಂಗಲ), ಶ್ರೀರಾಮ ಮತ್ತು ರಾಜ್ (ರಾಮನಗರ), ನಿರ್ಮಲ, ಬಾಲಾಜಿ ಮತ್ತು ಮಾರುತಿ ಮೋಹನ್(ಮಾಗಡಿ), ಶ್ರೀ ಲಕ್ಷ್ಮೀನರಸಿಂಹ(ಹೆಸರಘಟ್ಟ), ವೆಂಕಟೇಶ್ವರ(ದೇವನಹಳ್ಳಿ), ಗೋಪಾಲ್, ಲಕ್ಷ್ಮೀ, ರಾಜಕಮಲ್, ಸೌಂದರ್ಯಮಹಲ್ ಮತ್ತು ಸೊಬಗು(ದೊಡ್ಡಬಳ್ಳಾಪುರ), ಅಪರ್ಣ(ಚಿಕ್ಕಮುದವಾಡಿ), ಮೂರ್ತಿಮಹಲ್, ಪಾರ್ವತಿ ಮತ್ತು ಶಿವಾನಂದ(ಚನ್ನಪಟ್ಟಣ), ಚೇತನ್ (ಬೆಳ್ಳೂರು), ಗೌರಿಶಂಕರ (ಅತ್ತಿಬೆಲೆ), ಜಯಲಕ್ಷ್ಮಿ, ಶ್ರೀಲಕ್ಷ್ಮಿ ಮತ್ತು ವೆಂಕಟೇಶ್ವರ(ಆನೆಕಲ್ಲು), ವಾಣಿ ಮತ್ತು ಅರ್ಕಾವತಿ(ಕನಕಪುರ).

ವಾಣಿಜ್ಯ ಮಳಿಗೆಗಳಾಗಿ ಮಾರ್ಪಟ್ಟ ಹಿಂದಿನ ಚಿತ್ರಮಂದಿರಗಳು

೧.ಮಿನರ್ವ, ೨.ಭಾರತ್, ೩.ಶಿವಾಜಿ(ಗೋದಾಮು ಆಗಿದೆ), ೪.ಪ್ರಭಾತ್, ೫.ಅಲಂಕಾರ್, ೬.ಗೀತಾ(ಸೆಲೆಕ್ಟ್), ೭.ಸ್ವಸ್ತಿಕ್, ೮.ಸೆಂಟ್ರಲ್ (ಕಟ್ಟಡ ನಿರ್ಮಾಣ ಸಾಗಿದೆ). ಸಂಜಯ್ ಚಿತ್ರಮಂದಿರ ಮುಚ್ಚಿ ಹೋಗಿದ್ದು, ಅಲ್ಲಿ ಸಾಂಸ್ಕೃತಿಕ-ಕಲಾ ಕಾರ್ಯಕ್ರಮಗಳು ನಡೆಯುತ್ತಿವೆ.

ಮುಚ್ಚಿ ಹೋದ ಚಿತ್ರಮಂದಿರಗಳು

೧.ತಾಜ್, ೨.ಲಿಬರ್ಟಿ, ೩.ನ್ಯೂ ಎಂಪೈರ್, ೪.ಬ್ಲೂಮೂನ್, ೫.ಬ್ಲೂ ಡೈಮಂಡ್, ೬.ಬಿ.ಆರ್.ವಿ, ೭.ಡ್ರೈವ್- ಇನ್-ಥಿಯೇಟರ್, ೮.ಗ್ಲೋಬ್, ೯.ಜಯಶ್ರೀ, ೧೦.ರೀಗಲ್, ೧೧.ಕೆಂಪೇಗೌಡ, ೧೨.ಹಿಮಾಲಯ.

ಬೆಂಗಳೂರು ಮಹಾನಗರ ಪಾಲಿಕೆ ಬೆಂಗಳೂರು ದಂಡು ಪ್ರದೇಶದಲ್ಲಿ ಸಿಂಪೋನಿ ಮತ್ತು ಜಯನಗರದ ನಾಲ್ಕನೆಯ ಬ್ಲಾಕ್‌ನಲ್ಲಿ ಪೂನಮ್ ಎಂಬ ಎರಡು ಚಿತ್ರಮಂದಿರಗಳನ್ನು ನಿರ್ಮಿಸಿದ್ದು, ಸಿಂಫೋನಿ ಚಿತ್ರಮಂದಿರವು ಶಂಕರ್‌ನಾಗ್ ಚಿತ್ರಮಂದಿರವಾಗಿಯೂ ಮತ್ತು ಪೂನಮ್ ಚಿತ್ರಮಂದಿರವು ಕಣಗಾಲ್ ಪುಟ್ಟಣ್ಣ ಚಿತ್ರಮಂದಿರವಾಗಿಯೂ ಹೆಸರು ಬದಲಾವಣೆ ಪಡೆದವು. ಕರ್ನಾಟಕ ಚಲನಚಿತ್ರೋದ್ಯಮ ಅಭಿವೃದ್ಧಿ ನಿಗಮವು ಶಂಕರ್‌ನಾಗ್ ಚಿತ್ರಮಂದಿರದ ನಿರ್ವಹಣೆಯ ಹೊಣೆ ಹೊತ್ತಿದ್ದು, ತನ್ನ ಆಫೀಸನ್ನೂ ಆ ಚಿತ್ರಮಂದಿರದ ಆವರಣದಲ್ಲಿಯೇ ಹೊಂದಿದೆ.

ರಾಜ್ಯದಲ್ಲಿರುವ ಸಂಚಾರಿ ಚಿತ್ರಮಂದಿರಗಳು

ರಾಜ್ಯಾದ್ಯಂತ ಒಟ್ಟು ೭೭೦ ಸಂಚಾರಿ ಚಿತ್ರಮಂದಿರಗಳಿವೆ. ಅವುಗಳಲ್ಲಿ ೯೪ ಚಿತ್ರಮಂದಿರಗಳು ಬೆಂಗಳೂರು ಜಿಲ್ಲೆಯಲ್ಲಿವೆ.

ಚಿತ್ರಮಂದಿರಗಳ ವಿಪರೀತ ತೆರಿಗೆ ಹೆಚ್ಚಳದ ಬಗ್ಗೆ ಫ್ರಾನ್ಸ್‌ನ ಪ್ರದರ್ಶನ ಮಂದಿರಗಳು ಪ್ರತಿಭಟಿಸಿದ ರೀತಿ ಜನ ಬೆಂಬಲ ಗಳಿಸಲು ನೆರವಾಯಿತು. ಅವರು ಪ್ರತಿಭಟನೆಯನ್ನು ಉಚಿತ ಪ್ರದರ್ಶನ ನೀಡುವುದರ ಮೂಲಕ ಮಾಡಿದರು. ಸರ್ಕಾರ ಬಗ್ಗಿತಲ್ಲದೆ ಅವರ ಬೇಡಿಕೆಯನ್ನು ಈಡೇರಿಸಿತು. ಮಧ್ಯಪ್ರದೇಶದಲ್ಲಿ ೧೯೬೫ರಲ್ಲಿ ಎಲ್ಲ ೪೫೦ ಚಿತ್ರಮಂದಿರಗಳನ್ನೂ ಮುಚ್ಚುವ ಮೂಲಕ ಪ್ರತಿಭಟನ ಮಾಡಿ ಬೇಡಿಕೆ ಈಡೇರಿಸಿಕೊಳ್ಳಲಾಗಿತ್ತು.

ಯಾವುದೇ ಚಿತ್ರಮಂದಿರವನ್ನಾದರೂ ಅಭಿಮಾನಿಗಳು ಅಲಂಕಾರ ಮಾಡಿದಷ್ಟೇ ಸಲೀಸಾಗಿ ಹಾನಿ ಮಾಡುವುದೂ ಹೊಸದಲ್ಲ. ಚಿತ್ರಮಂದಿರದ ಮುಂಭಾಗದಲ್ಲಿ ಕಟೌಟ್, ಬ್ಯಾನರ್ ಗಳನ್ನು ವಿರೂಪಗೊಳಿಸುವುದು, ಸ್ಟಾರ್ ಗಳನ್ನು ಕಟ್ಟಿ ಅಂದ ಹಾಳು ಮಾಡುವುದು ಇತ್ಯಾದಿ ನಡೆಯುತ್ತದೆ. ತಾವು ಇಷ್ಟಪಡದ ನಟನ ಚಿತ್ರದ ಬಗ್ಗೆ ಅಪಪ್ರಚಾರ ಮಾಡುವುದು, ಕತ್ತಲೆ ಮಧ್ಯದಲ್ಲಿ ನುಗ್ಗುವುದು, ಗಲಾಟೆ ಮಾಡುವುದು, ಟಿಕೆಟ್ ಸಿಗದಿದ್ದರೆ ಚಿತ್ರಮಂದಿರಕ್ಕೆ ಹಾನಿಮಾಡುವುದು ಈ ಅಭಿಮಾನದ ಒಂದು ಭಾಗವಾಗಿದೆ. ಮುಂದಿನ ಆಸನದ ಮೇಲೆ ಕಾಲಿಡುವುದು, ಶಬ್ದ ಮಾಡುವುದು, ವಿಷಲ್ ಊದುವುದು, ದೊಡ್ಡದಾಗಿ ಕೂಗಿ ಕೆಲವು ನಟ ನಟಿಯರನ್ನು ಗೇಲಿ ಮಾಡುವುದು. ಚಿಲ್ಲರೆ ಎಸೆಯುವುದು, ಬೆಳ್ಳಿ ಪರದೆಯತ್ತ ಹೋಗಿ ತಮ್ಮ ನೆಚ್ಚಿನ ನಟನ ಕಾಲಿಗೆ ಬಿದ್ದು ಹುಚ್ಚುತನ ಪ್ರದರ್ಶಿಸಿ ಬೇರೆಯವರಿಗೆ ತೊಂದರೆ ಮಾಡುವುದು ನಡೆದೇ ಇದೆ. ಇನ್ನು ಕೆಲವರು ಆಪರೇಟರ್‌ಗಳನ್ನು ಕೆಟ್ಟದಾಗಿ ಬಯ್ಯುವುದು, ಧೂಮಪಾನ ಮಾಡುವುದು, ಮದ್ಯಪಾನ ಮಾಡುವುದು, ಕಂದಲ್ಲಿ ಬೀಡಾ ಜಗಿದು ಉಗಿಯುವುದು, ಶೌಚಗೃಹವನ್ನು ಕೆಟ್ಟದಾಗಿ ಉಪಯೋಗಿಸುವುದು, ಮಹಿಳಾ ವರ್ಗದವರನ್ನು ಅವಮಾನ ಮಾಡುವುದು ಇವಲ್ಲ ಮಾಡುತ್ತಾರೆ. ಕೆಲವು ಅಭಿಮಾನಿಗಳಂತೂ ತಮ್ಮ ನೆಚ್ಚಿನ ನಟನ ಚಿತ್ರವನ್ನು ಪ್ರೇಕ್ಷಕರ ಕೊರತೆಯಿದರೂ ೧೦೦ ದಿನ, ೨೫ ವಾರ ಪ್ರದರ್ಶಿಸುವಂತೆ ಪ್ರದರ್ಶಕರನ್ನು ಬೆದರಿಸುವುದೂ ಇದೆ. ಇದಲ್ಲದೆ ಚಿತ್ರಮಂದಿರದ ಹೊರಗೆ ನಟರ, ತಂತ್ರಜ್ಞರ ಮೇಲೆ ಹಲ್ಲೆ ನಡೆಸುವುದು, ಚಿತ್ರಮಂದಿರಗಳಿಗೆ ಕಲ್ಲೆಸೆಯುವುದನ್ನೂ ಮಾಡುತ್ತಾರೆ.

ಇಂಥ ಸಂಕಷ್ಟ ಸ್ಥಿತಿಯಲ್ಲಿ ಪರದಾಡುವ ಚಿತ್ರಮಂದಿರಗಳ ಬಗ್ಗೆ ಸರ್ಕಾರ ಮೃದು ಧೋರಣೆ ತಾಳದಿದ್ದರೆ ಕೆಲವೇ ವರ್ಷಗಳಲ್ಲಿ ಚಿತ್ರಮಂದಿರಗಳ ಸಂಖ್ಯೆ ಅರ್ಧಕ್ಕೆ ಇಳಿಯುವ ಸಾಧ್ಯತೆ ತುಂಬಾ ಇದೆ. ಎಷ್ಟೇ ಒತ್ತಾಯಿಸಿದರೂ ಕಾನೂನಿನಲ್ಲಿ ಸಡಿಲಿಕೆ ಆಗುತ್ತಿಲ್ಲ. ಕಡೆಗೆ ವಿದ್ಯುಚ್ಛಕ್ತಿ ಅನುಮತಿ ಪಡೆಯಬೇಕೆಂದರೆ ಚಿತ್ರ ಮಂದಿರದ ಮಾಲೀಕರು ಕರ್ನಾಟಕದ ಯಾವ ಮೂಲೆಯಿಂದಾದರೂ ಬೆಂಗಳೂರಿಗೇ ಬರಬೇಕು. ಯಾವುದೇ ಆರ್ಥಿಕ ನೆರವೂ ಸರಿಯಾದ ರೀತಿಯಲ್ಲಿ ಸಿಗದಿರುವುದು ಸರ್ಕಾರದ ಅಸಡ್ಡೆಯನ್ನು ತೋರಿಸುತ್ತದೆ. ಚಿತ್ರಮಂದಿರಕ್ಕೆ ಕೊಡುವ ಪರವಾನಗಿಯನ್ನು ಆಗಾಗ

ಸಮೀಕರಣ ಮಾಡುತ್ತ ಇರಬೇಕು. ಪಾರ್ಕಿಂಗ್ ಜಾಗ ಇರಬೇಕೆಂಬ ನಿಯಮ ಪಾಲಿಸಿದರೆ ನಗರ ಪ್ರದೇಶಗಳಲ್ಲಿ ಚಿತ್ರಮಂದಿರ ನಿರ್ಮಾಣ ಮಾಡುವುದು ಸಾಧ್ಯವೇ ಇಲ್ಲ. ಕಾನೂನಿನಲ್ಲಿ ಸರಳೀಕರಣ ಆಗುವವರೆಗೆ ಚಿತ್ರಮಂದಿರಗಳ ಉದ್ಧಾರ ಸಾಧ್ಯವಿಲ್ಲವೆನ್ನುವುದು ಪ್ರದರ್ಶಕರ ಅಭಿಪ್ರಾಯ. ಈಗಿನ ಟಿಕೆಟ್ ಪದ್ಧತಿಯಲ್ಲಿ ಮೊಹರು ಹಾಕುತ್ತಿದ್ದರೆ ಹಿಂದೆ ತಾಲ್ಲೂಕು ಆಫೀಸಿನಿಂದ ಸ್ಟ್ಯಾಂಪ್ ತಂದು ಟಿಕೆಟ್ ಅಂಟಿಸಿಕೊಡುವ ಕ್ರಮವಿತ್ತು. ಕೆಲವೆಡೆ ನಿಗದಿತ ತೆರಿಗೆ ಪದ್ಧತಿಯಿದೆ. ೧೫ ಸಾವಿರಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಗ್ರಾಮಗಳಲ್ಲಿ ಈ ಪದ್ಧತಿ ಜಾರಿಯಲ್ಲಿದೆ.

ನಮ್ಮ ರಾಜ್ಯದಲ್ಲಿ ಚಿತ್ರಮಂದಿರಗಳ ಸಂಖ್ಯೆ ಕಡಿಮೆ ಇದ್ದರೂ ಅವುಗಳೂ ಉಳಿವಿಗಾಗಿ ನಿತ್ಯ ಹೋರಾಟ ನಡೆಸುತ್ತಿರುವುದು ಸತ್ಯ. ಚಿತ್ರೋದ್ಯಮದ ಒಂದು ಪ್ರಮುಖ ಭಾಗವಾದ ಚಿತ್ರಮಂದಿರಗಳ ಬಗ್ಗೆ ಚಿತ್ರೋದ್ಯಮಿಗಳು ಹಾಗೂ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುವುದು ಉಚಿತ.

ಚಿತ್ರಮಂದಿರಗಳು ಔದ್ಯೋಗಿಕ ಸಂಸ್ಥೆಗಳ ಪರಿಧಿಯಲ್ಲಿ ಬರುತ್ತವಾದರೂ ಇಲ್ಲಿನ ನೌಕರರಿಗೆ ಕಾರ್ಖಾನೆ ಮತ್ತಿತರ ಉದ್ದಿಮೆಗಳ ನೌಕರರಿಗೆ ದೊರೆಯುವ ಸೌಲಭ್ಯಗಳು ದೊರೆಯುತ್ತಿಲ್ಲ ಎಂಬುದು ಚಿತ್ರಮಂದಿರಗಳ ಕಾರ್ಮಿಕರ ದೂರು. ಚಿತ್ರಮಂದಿರದ ವ್ಯವಸ್ಥಾಪಕ, ಬುಕ್ಕಿಂಗ್ ಆಫೀಸಿನ ಗುಮಾಸ್ತರು, ಆಪರೇಟರುಗಳು, ನಿರ್ಮಲೀಕರಣದ ಕೆಲಸಗಾರರು. ವಾಚ್‌ಮನ್ ಹಾಗೂ ಗೇಟ್ ಕೀಪರುಗಳು ಸಾಮಾನ್ಯವಾಗಿ ಚಿತ್ರಮಂದಿರಗಳಲ್ಲಿನ ನೌಕರರು. ಈ ಕೆಲಸಗಾರರ ಸಂಬಳ-ಸಾರಿಗ ಇತರ ಕಾರ್ಮಿಕರ ಸಂಬಳ-ಸಾರಿಗಗಳ ಮಟ್ಟದಲ್ಲಿರುವುದಿಲ್ಲ. ಇತರರಿಗೆ ದೊರೆಯುವ ಸೌಲಭ್ಯಗಳಿಂದಲೂ ಇವರು ವಂಚಿತರು. ಹೀಗಾಗಿ ಚಿತ್ರಮಂದಿರಗಳ ನೌಕರರು ಹಿಂದ್ ಮಜ್ದೂರ್ ಸಭಾ ಆಶ್ರಯದಲ್ಲಿ ಟ್ರೇಡ್‌ಯೂನಿಯನ್ ಸಂಘ ಸ್ಥಾಪಿಸಿಕೊಂಡು ಹೋರಾಟಕ್ಕಿಳಿದರು. ಅದು ಅವರಿಗೆ ಅನಿವಾರ್ಯವಾಗಿತ್ತು.

೧೯೭೭ರಲ್ಲಿ ಬೆಂಗಳೂರು ನಗರದ ೪೪ ಚಿತ್ರಮಂದಿರಗಳ ನೌಕರರು ಮತ್ತು ಆಡಳಿತ ವರ್ಗಗಳ ನಡುವಿನ ವಿವಾದವನ್ನು ರಾಜ್ಯ ಸರ್ಕಾರವು ನಗರದ ಇಂಡಸ್ಟ್ರಿಯಲ್ ಟ್ರಿಬ್ಯೂನಲ್ (ಕೈಗಾರಿಕಾ ನ್ಯಾಯಾಧಿಕರಣ)ಗೆ ಒಪ್ಪಿಸಿತು. ನೌಕರರ ಹಲವು ವರ್ಷಗಳ ಹೋರಾಟಕ್ಕೆ ವಾಣಿಜ್ಯ ಮಂಡಳಿಯಿಂದಾಗಲೀ, ಕಾರ್ಮಿಕ ನ್ಯಾಯಾಲಯಗಳ ಪ್ರಯತ್ನದಿಂದಾಗಲೀ ಏನೂ ಪ್ರಯೋಜನವಾಗಿರಲಿಲ್ಲ. ನ್ಯಾಯಯುತ ವೇತನ ಬೇಡಿಕೆಗಳು ನನೆಗುದಿಗೆ ಬಿದ್ದಿದ್ದವು.

ಕರ್ನಾಟಕದಲ್ಲಿನ ಚಿತ್ರೋದ್ಯಮದಲ್ಲಿ ಚಿತ್ರಮಂದಿರಗಳ ಕಾರ್ಮಿಕರ ಸಂಘಟನೆಯೇ ಟ್ರೇಡ್‌ಯೂನಿಯನ್ ನಿಯಮಾವಳಿಯನ್ನು ಅನುಸರಿಸಿ ರೂಪುಗೊಂಡ ಏಕೈಕ ಹಾಗೂ ಪ್ರಪ್ರಥಮ ಸಂಘಟನೆ ಇದಾಗಿದೆ.

ಇಂದಿಗೂ ಚಿತ್ರಮಂದಿರಗಳ ಕಾರ್ಮಿಕರ ವೇತನ ಹಾಗೂ ಇತರೆ ಸೌಲಭ್ಯಗಳ ಬೇಡಿಕೆ ತೃಪ್ತಿಕರವಾಗಿ ಪರಿಹಾರಗೊಂಡಿಲ್ಲ. ಇತರೆ ಉದ್ದಿಮೆಯ ಕಾರ್ಮಿಕರಿಗೆ ಹೋಲಿಸಿದರೆ ಈ ತಾರತಮ್ಯ ನಿಚ್ಚಳವಾಗಿ ಕಾಣಬರುತ್ತದೆ. ವಾಣಿಜ್ಯ ಮಂಡಳಿಯ ಸಂಧಾನ ಪ್ರಕ್ರಿಯೆಗಳೂ ಫಲಪ್ರದವಾಗಿಲ್ಲ.- ಎಂಬುದು ಇಲ್ಲಿನ ಕಾರ್ಮಿಕವರ್ಗದ ಸಾಮಾನ್ಯ ಅನಿಸಿಕೆ.

ಕರ್ನಾಟಕದಲ್ಲಿನ ಪ್ರಸ್ತುತ ಅನುಷ್ಠಾನದಲ್ಲಿರುವ ಸಿನಿಮಾಸ್ ರೆಗ್ಯುಲೇಷನ್ ಆ್ಯಕ್ಟ್ ನಿಯಮಾವಳಿಗಳು ತೀರಾ ಹಳೆಯವು. ಚಲನಚಿತ್ರೋದ್ಯಮದಲ್ಲಿ ಆಗಿಂದಾಗ್ಗೆ ನಡೆದಿರುವ ಆವಿಷ್ಕಾರದ ಪರಿಣಾಮವಾಗಿ ತಾಂತ್ರಿಕತೆಯಲ್ಲಿ ಆಧುನಿಕತೆ ಮೂಡಿ ಬಂದಿದ್ದರೂ, ಸಾಕಷ್ಟು ಬದಲಾವಣೆಗಳಾಗಿದ್ದರೂ ಆ್ಯಕ್ಟ್‌ನ ನಿಯಮಾವಳಿಗಳು ಮಾತ್ರ ಬದಲಾಗಿಲ್ಲ. ೧೯೬೪ರಿಂದಲೂ ಹಾಗೆಯೇ ಇವೆ.

ಹಿಂದೆ ಹಲವು ಸುರಕ್ಷಣಾ ವ್ಯವಸ್ಥೆಗಳಿಗಾಗಿ ಮಾಡಿದ ನಿಯಮಗಳು ಹಾಗೂ ಆಗಿನ ಜನಸಂಖ್ಯಾ ಪ್ರಮಾಣಕ್ಕೆ ತಕ್ಕಂತೆ ರೂಪಿತವಾದ ಕಟ್ಟುಪಾಡುಗಳು ಇಂದಿಗೂ ಹಾಗೆಯೇ ಉಳಿದಿವೆ. ಹಾಗಾಗಿ ಚಲನಚಿತ್ರ ಪ್ರದರ್ಶನಕ್ಕಾಗಿ ಚಿತ್ರಮಂದಿರಗಳನ್ನು ನಿರ್ಮಿಸಲು ಆಸಕ್ತಿ ತಳೆಯುವವರು ನಿಯಮಗಳಂತೆ ಇಲಾಖೆಯಿಂದ ಇಲಾಖೆಗೆ ಅಲೆಯಬೇಕಾಗಿದೆ. ಇವೆಲ್ಲವನ್ನೂ ಮೀರಿ ಹೆಜ್ಜೆ ಹೆಜ್ಜೆಯಲ್ಲೂ ಅಧಿಕಾರಸ್ಥರ ಕಿರುಕುಳವನ್ನು ಅನುಭವಿಸಬೇಕಾಗಿದೆ. ಚಿತ್ರಮಂದಿರ ನಿರ್ಮಾಣ ಸುಲಭ ಸಾಧ್ಯವಲ್ಲದ ಪ್ರಯತ್ನವೆನಿಸಿ, ಬದಲಾಗಿ ಬೇರೆ ವ್ಯಾಪಾರ-ವ್ಯವಹಾರವೇ ಮೇಲು ಎಂಬ ಭಾವನೆ ಮೂಡಿ, ಅಂಥ ಪ್ರಯತ್ನಶೀಲರ ಉತ್ಸಾಹಕ್ಕೆ ತಣ್ಣೀರೆರಚುವಂತಿದೆ.

ಆದ ಕಾರಣ ಚಲನಚಿತ್ರ ಪ್ರದರ್ಶಕರು ಬಹುಕಾಲದಿಂದ ಆ್ಯಕ್ಟ್‌ನಲ್ಲಿ ಸುಧಾರಣೆ ಕೋರಿ ಸರ್ಕಾರಕ್ಕೆ ವಿನಂತಿ ಸಲ್ಲಿಸುತ್ತಲೇ ಬಂದಿದ್ದಾರೆ. ಆದರೆ ಸರ್ಕಾರ ಈ ವರೆವಿಗೂ ಆ ಬಗ್ಗೆ ಯಾವುದೇ ಗಮನ ಹರಿಸದ, ಅಜ್ಜ ನಟ್ಟ ಆಲದ ಮರಕ್ಕೆ ಜೋತು ಬಿದ್ದಿದೆ. ಬಹುಶಃ ಸಂಬಂಧಪಟ್ಟ ಇಲಾಖೆಯವರಿಗೆ ಚಲನಚಿತ್ರ ತಂತ್ರ ವಿಜ್ಞಾನದಲ್ಲಿನ ಪ್ರಗತಿ-ಸಾಧನೆಗಳ ಬಗ್ಗೆ ತಿಳಿದಿಲ್ಲದಿರುವುದೇ ಇದಕ್ಕೆ ಕಾರಣವೇನೋ.

ಚಿತ್ರಮಂದಿರಗಳ ಸ್ಥಿತಿಗತಿ, ಸರ್ಕಾರದ ಕಾನೂನು, ನಿಯಮಗಳು ಎಲ್ಲವನ್ನು ಆಮೂಲಾಗ್ರವಾಗಿ ಪರಿಶೀಲಿಸಿ, ಪ್ರದರ್ಶಕರೊಂದಿಗೆ ವಿಚಾರ ವಿನಿಮಯ ಮಾಡಿ, ಕಾನೂನು ಹಾಗೂ ನಿಯಮಾವಳಿಗಳು ತೀರಾ ಹಳೆಯದೆಂದು ಅಭಿಪ್ರಾಯ ಪಟ್ಟು, ಚಿತ್ರಮಂದಿರಗಳ ನಿರ್ಮಾಣ-ಅವುಗಳನ್ನು ನಡೆಸಿಕೊಂಡು ಬರುವಲ್ಲಿನ ಆತಂಕಗಳನ್ನು ಗಮನಿಸಿ ಹಲವು ಸುಧಾರಣೆಗಳ ಬಗ್ಗೆ ಶಿಫಾರಸ್ಸುಗಳನ್ನು ಸುಬ್ಬರಾವ್ ಸಮಿತಿಯು ಮಾಡಿತು. ಅವನ್ನು ಸರ್ಕಾರವು ಜಾರಿಗೆ ತಂದಲ್ಲಿ ರಾಜ್ಯದ ಚಿತ್ರಮಂದಿರಗಳ ಬಹಳಷ್ಟು ಸಮಸ್ಯೆಗಳು ಪರಿಹಾರವಾಗುವ ಸಾಧ್ಯತೆಯಿದೆ.

ಕರ್ನಾಟಕದ ರಾಜಧಾನಿ ಪಂಚಭಾಷಾ ಕೇಂದ್ರ

ಚಲನಚಿತ್ರೋದ್ಯಮದಲ್ಲಿ ಬೆಂಗಳೂರು ಮಹಾನಗರಕ್ಕೆ ಒಂದು ವಿಶಿಷ್ಟವಾದ ಸ್ಥಾನವಿದೆ. ಕರ್ನಾಟಕ ರಾಜಧಾನಿಯಾದ ಈ ನಗರದಲ್ಲಿ ನೂರಕ್ಕೂ ಹೆಚ್ಚು ಚಲನಚಿತ್ರ ಪ್ರದರ್ಶನ ಮಂದಿರಗಳಿವೆ. ಒಂದು ಕಿಲೋಮೀಟರ್‌ನಷ್ಟು ಅಂತರವಿಲ್ಲದೆ, ಒಂದೇ ರಸ್ತೆಯಲ್ಲಿ ಹಲವು ಚಿತ್ರಮಂದಿರಗಳನ್ನು ಹೊಂದಿರುವುದು ಈ ನಗರದ ವಿಶೇಷ. ಕೆಂಪೇಗೌಡ ರಸ್ತೆ ಅದರ ಸಮೀಪದಲ್ಲಿಯೇ ಈಗ ಮೂವಿಲ್ಯಾಂಡ್, ಕಪಾಲಿ, ಮೆಜೆಸ್ಟಿಕ್, ಸಂತೋಷ್, ನರ್ತಕಿ, ಸಪ್ನ, ತ್ರಿಭುವನ್, ಮಂದಿರಗಳಿವೆ. ಹಿಂದೆ ಪ್ರಭಾತ್, ಕೆಂಪೇಗೌಡ, ಅಲಂಕಾರ್, ಗೀತ, ಹಿಮಾಲಯ ಚಿತ್ರಮಂದಿರಗಳೂ ಇದೇ ರಸ್ತೆಯಲ್ಲೇ ಇದ್ದವು. ಜೆ. ಸಿ. ರಸ್ತೆ, ಎಸ್.ಆರ್. ರಸ್ತೆ, ಸುತ್ತಮುತ್ತಲಲ್ಲಿ ಶಿವಾಜಿ, ಭಾರತ್, ಮಿನರ್ವ, ನ್ಯೂಸಿಟಿ, ಹಾಗೂ ನಾಜ್ ಚಿತ್ರಮಂದಿರಗಳಿದ್ದು ಈಗ ನ್ಯೂಸಿಟಿ ಮಾತ್ರ ಉಳಿದಿದೆ. ಹೀಗೆ ಹತ್ತಿರ ಹತ್ತಿರದಲ್ಲಿ ಅನೇಕ ಚಿತ್ರಮಂದಿರಗಳನ್ನು ಹೊಂದಿರುವ ಖ್ಯಾತಿ ಬೆಂಗಳೂರಿನದು.

ಭಾರತದಲ್ಲಿ ಬೇರೆ ಯಾವ ರಾಜ್ಯದಲ್ಲಿಯೂ ಇಲ್ಲದ ವೈಶಿಷ್ಟ್ಯ ಬೆಂಗಳೂರು ಮಹಾನಗರದ್ದು. ಇತರೆ ರಾಜ್ಯಗಳಲ್ಲಿ ಇಂಗ್ಲೀಷ್ ಹಾಗೂ ರಾಜ್ಯದ ಭಾಷೆಯ ಚಿತ್ರಗಳು ಮಾತ್ರ ಪ್ರದರ್ಶನಗೊಂಡರೆ ಬೆಂಗಳೂರು ನಗರದಲ್ಲಿ ಕನ್ನಡ, ಹಿಂದಿ, ತಮಿಳು, ತೆಲುಗು ಹಾಗೂ ಇಂಗ್ಲಿಷ್, ಐದು ಭಾಷೆಗಳ ಚಿತ್ರಗಳು ಸದಾ ಕಾಲ ಪ್ರದರ್ಶಿತವಾಗುತ್ತವೆ. ಕೆಲವೊಮ್ಮೆ ಮಲಯಾಳಂ ಭಾಷೆಯ ಚಿತ್ರಗಳೂ ಕೂಡಾ. ಕಂಟೋನ್ಮೆಂಟ್-ಸಿವಿಲ್ ಏರಿಯಾ, ಪ್ರದೇಶದಲ್ಲಿ ಇಂಗ್ಲಿಷ್ ಚಿತ್ರಗಳಿಗೇ ಆದ್ಯತೆಯಾದರೆ ನಗರದಲ್ಲಿ ಹಿಂದಿ, ತಮಿಳು, ತೆಲುಗು ಚಿತ್ರಗಳು ಹತ್ತಾರು ಚಿತ್ರ ಮಂದಿರಗಳಲ್ಲಿ ಏಕಕಾಲದಲ್ಲಿ ಪ್ರದರ್ಶನಾವಕಾಶ ಪಡೆಯುತ್ತವೆ. ಕನ್ನಡ ಚಿತ್ರಗಳಿಗೆ ಈ ನಗರದ ಸುಮಾರು ಇಪ್ಪತ್ತಾರು ಚಿತ್ರಮಂದಿರಗಳಲ್ಲಿ ಮಾತ್ರ ಅವಕಾಶ. ಕನ್ನಡೇತರ ಚಿತ್ರಗಳು ಈ ನಗರದಲ್ಲಿ ದಾಖಲೆಯ ಪ್ರದರ್ಶನ ಕಾಣುವುದು ಒಂದು ವಿಶೇಷ. ಭಾರತದ ಯಾವುದೇ ರಾಜ್ಯದಲ್ಲಿ ಹೀಗೆ ಐದು ಭಾಷೆಗಳ ಚಿತ್ರಗಳು ಸಮಕಾಲಿನ ಪ್ರದರ್ಶನ ಕಾಣುವ ದಾಖಲೆ ಈ ನಗರದಲ್ಲಿ ಬಿಟ್ಟರೆ ಬೇರೆಲ್ಲೂ ಇಲ್ಲ.

ಕರ್ನಾಟಕ ರಾಜ್ಯದ ಕೋಲಾರ, ಚಿಂತಾಮಣಿ, ಚಿಕ್ಕಬಳ್ಳಾಪುರ, ಗೌರಿಬಿದನೂರು ಮತ್ತಿತರ ಪ್ರದೇಶಗಳಲ್ಲಿ ತೆಲುಗು ಚಿತ್ರಗಳದೇ ಮೇಲುಗೈ. ಹಾಗೆಯೇ ದಕ್ಷಿಣ ಕನ್ನಡದ ಮಂಗಳೂರು ಮತ್ತಿತರ ಕಡೆಗಳಲ್ಲಿ ತಮಿಳು ಚಿತ್ರಗಳಿಗೇ ಅಗ್ರಪೀಠ. ಉತ್ತರ ಕರ್ನಾಟಕದ ಹಲವು ಭಾಗಗಳಲ್ಲಿ ಹಿಂದಿ ಚಿತ್ರಗಳಿಗೇ ಪ್ರಾಮುಖ್ಯ. ಉಳಿದೆಡೆಗಳಲ್ಲಿ ಕನ್ನಡೇತರ ಚಿತ್ರಗಳದೇ ಪೈಪೋಟಿ. ಹಲವು ಇತಿ-ಮಿತಿಗಳ ಬಂಧನವಿದ್ದೂ, ಅತ್ಯಂತ ಕಿರಿದಾದ ಮಾರುಕಟ್ಟೆಯನ್ನು ಹೊಂದಿರುವ ಕನ್ನಡ ಚಿತ್ರೋದ್ಯಮ ವರ್ಷಕ್ಕೆ ೭೦ ೮೦ ಚಿತ್ರಗಳನ್ನು ತೆರೆಗೆ ನೀಡಿ, ಸುಮಾರು ೩೦-೪೦ ಚಿತ್ರಗಳನ್ನು ತಯಾರಿಕೆಯ ವಿವಿಧ ಹಂತಗಳಲ್ಲಿ ತನ್ನ ಒಡಲೊಳಗೆ ಇರಿಸಿಕೊಳ್ಳುತ್ತಿದೆ. ಕೋಟ್ಯಾಂತರ ರೂಪಾಯಿಗಳ ಬಂಡವಾಳ ಹೂಡಿ ಕನ್ನಡ ಚಿತ್ರ ನಿರ್ಮಿಸುತ್ತಿದೆ. ಇದು ದಾಖಲಿಸಬೇಕಾದ ವೈಶಿಷ್ಟ್ಯ.



ಯಶಸ್ಸಿನ ಬೆನ್ನೆಲುಬು

ಪ್ರಚಾರದ ಬಲವಿಲ್ಲದೆ ಯಾವುದೇ ವಸ್ತು - ಪ್ರಾಡಕ್ಟ್ - ಗ್ರಾಹಕರನ್ನು ತಲುಪುವುದು ಅಸಾಧ್ಯ. ವಿಶ್ವದ ಎಲ್ಲ ಕಡೆಗಳಲ್ಲೂ ಪ್ರತಿ ವಸ್ತುವೂ ಮಾರುಕಟ್ಟೆಯನ್ನು ಪ್ರವೇಶಿಸುವ ಸಂದರ್ಭದಲ್ಲಿ ಅದರ ಬಗ್ಗೆ ಪ್ರಚಾರದ ಮೂಲಕ ಗ್ರಾಹಕರಲ್ಲಿ ಆಸಕ್ತಿಯನ್ನು ಉಂಟುಮಾಡಬೇಕಾದ್ದು ಅತ್ಯಗತ್ಯ. ಇತ್ತೀಚಿನ ದಿನಗಳಲ್ಲಂತೂ ಯಾವುದೇ ತಯಾರಿಕೆ ವಿವಿಧ ಮಾಧ್ಯಮಗಳ ಮೂಲಕ ಪ್ರಚಾರವಿಲ್ಲದ ಮನೆ-ಮನಗಳನ್ನು ಮುಟ್ಟುವುದು ಸಾಧ್ಯವೇ ಇಲ್ಲ. ಕರಪತ್ರಗಳು, ವರ್ಣರಂಜಿತ ಬ್ರೋಷರುಗಳು, ಪೋಸ್ಟರುಗಳು, ಸ್ಟಿಕರ್‌ಗಳು, ದ್ವಿಚಕ್ರ ವಾಹನಗಳ ಸ್ಟೆಪ್ನಿ ಕವರುಗಳು, ಬ್ಯಾನರ್‌ಗಳು, ಹೋರ್ಡಿಂಗ್‌ಗಳು, ಗೋಡೆ ಬರಹಗಳು, ಪತ್ರಿಕೆಗಳು ಮತ್ತು ನಿಯತಕಾಲಿಕೆಗಳಲ್ಲಿನ ಜಾಹಿರಾತುಗಳು, ರೇಡಿಯೋ-ಟಿವಿ ಇಂಟರ್‌ನೆಟ್‌ಗಳಲ್ಲಿನ ಜಾಹಿರಾತುಗಳು ಇವೆಲ್ಲ ಇಂದಿನ ಪ್ರಚಾರ ಪ್ರಕ್ರಿಯೆಯ ಪ್ರಮುಖ ಸಾಧನಗಳು.

ಇದು ಜಾಹಿರಾತು ಪ್ರಚಾರಗಳ ಯುಗ. ಚಲನಚಿತ್ರಗಳಿಗಂತೂ ಪ್ರಚಾರವೇ ಊರುಗೋಲು, ಅವುಗಳಿಗೆ ಮಾಮೂಲು ಸರಕುಗಳಂತೆ ನಿರ್ದಿಷ್ಟ ಮಾರುಕಟ್ಟೆಯಿಲ್ಲ. ಪ್ರತಿ ಚಿತ್ರವೂ ಒಂದು ಹೊಸ ಅನುಭವ. ಅದರ ಭವಿಷ್ಯ ಚಿತ್ರ ಬಿಡುಗಡೆಯಾದ ನಂತರವೇ ನಿರ್ಧಾರವಾಗಬೇಕು. ಆದರೆ ಬಿಡುಗಡೆಯ ಮುಂಚೆ ಎಷ್ಟು ಪ್ರಚಾರ ಸಾಧ್ಯವೋ ಅಷ್ಟನ್ನೆಲ್ಲಾ ಮಾಡಿ ಪ್ರೇಕ್ಷಕರನ್ನು ಚಿತ್ರಮಂದಿರಗಳಿಗೆ ಎಳೆದು ತರಬೇಕು. ಚಲನಚಿತ್ರಗಳ ಪ್ರಚಾರದಲ್ಲಿ ಹಲವು ಹನ್ನೊಂದು ವೈವಿಧ್ಯಗಳು. ಆದ್ದರಿಂದಲೇ ಚಿತ್ರಗಳ ಪ್ರಚಾರವೇ ಒಂದು ವಿಶಿಷ್ಟ ಕಲೆ. ಒಂದು ವಿಭಿನ್ನ ಸವಾಲು. ಕಲ್ಪನೆ ಚಿತ್ರಗಳಿಗೆ ಎಷ್ಟು ಮುಖ್ಯವೋ ಪ್ರಚಾರಕ್ಕೂ ಅಷ್ಟೇ ಮುಖ್ಯ. ಚಲನಚಿತ್ರ ಅತ್ಯಂತ ದುಬಾರಿ ಪ್ರದರ್ಶನ ಕಲೆ. ಆದರಿಂದ ಅದರ ಪ್ರಚಾರ ಕೂಡ ಅಷ್ಟೇ ದುಬಾರಿಯಾಗಿರುವುದೂ ಕೂಡ ಅನಿವಾರ್ಯ.

ಒಂದು ಚಲನಚಿತ್ರವನ್ನು ತಯಾರಿಸಿ ಅದನ್ನು ಸಾರ್ವಜನಿಕರ ಮುಂದಿಡುವ ಮುನ್ನ ಆ ಚಿತ್ರವನ್ನು ಕುರಿತು ನಿರ್ಮಾಣ, ತಾಂತ್ರಿಕತೆ, ತಾರಾಗಣಗಳ ವಿಶೇಷಗಳನ್ನು ಕುರಿತು ಪ್ರೇಕ್ಷಕರಿಗೆ ಎಲ್ಲ ಮಾಹಿತಿಗಳನ್ನೂ ನೀಡಿ ಚಿತ್ರದ ಬಗ್ಗೆ ಅವರ ಆಸಕ್ತಿಯನ್ನು ಕೆರಳಿಸುವುದೇ ಪ್ರಚಾರದ ಏಕೈಕ ಧ್ಯೇಯ. ಆರಂಭದ ದಿನಗಳಲ್ಲಿ ಚಲನಚಿತ್ರ ಸೃಷ್ಟಿಯೇ ಒಂದು ಹೊಸ ಆವಿಷ್ಕಾರ, ನೂತನ ಕ್ರಾಂತಿ ಎನಿಸಿತ್ತು. ಜನ ಸಾಮಾನ್ಯರಲ್ಲಿ ಆ ಬಗ್ಗೆ ಕುತೂಹಲ ಆಸಕ್ತಿಗಳನ್ನು ಉಂಟುಮಾಡಬೇಕಾಗಿತ್ತು. ಅವರನ್ನು ಕಲ್ಪನಾ ಲೋಕದ ಭ್ರಮೆಯಲ್ಲಿ ಮುಳುಗಿಸ ಬೇಕಾಗಿತ್ತು. ಹೀಗಾಗಿ ಚಲನಚಿತ್ರಗಳ ಪ್ರಚಾರ ಕಲಾತ್ಮಕವಾಗಿರುವುದರ ಜೊತೆಗ ವೈವಿಧ್ಯಮಯವೂ ಆಗಲೇಬೇಕಾಗಿತ್ತು. ಚಲನಚಿತ್ರ ಜನಿಸಿದ ಮೂವತ್ತು ನಲವತ್ತರ ದಶಕಗಳಲ್ಲಿ ಈಗಿನಂತ ಚಲನಚಿತ್ರಗಳಿಗಾಗಿಯೇ ಮೀಸಲಾದ ಪತ್ರಿಕೆಗಳಿರಲಿಲ್ಲ, ಇದರೂ ಅತಿ ವಿರಳ. ಅಂದಿನ ದಿನಪತ್ರಿಕೆ, ನಿಯತಕಾಲಿಕೆಗಳಲ್ಲಿ ಸಿನಿಮಾ ಸುದ್ದಿಗಳಿಗಾಗಿ ನಿಗದಿತ ಕಾಲಂಗಳಿರಲಿಲ್ಲ. ಪತ್ರಿಕೆಗಳ ಹರವೂ ಕೂಡ ಕಡಿಮೆಯೇ ಇತ್ತು. ಆದರಿಂದ ಪತ್ರಿಕೆಗಳು ಪ್ರಧಾನ ಪ್ರಚಾರ ಮಾಧ್ಯಮವಾಗಿರಲಿಲ್ಲ. ಚಿತ್ರ ಬಿಡುಗಡೆಗೊಂಡಾಗ ಪತ್ರಿಕೆಗಳಲ್ಲಿ ಒಂದು ಪುಟ್ಟ ಜಾಹಿರಾತು ಮಾತ್ರ. ಅದರ ಇದು ಪ್ರಚಾರದ ಅಗತ್ಯವನ್ನು ಪೂರೈಸುತ್ತಿರಲಿಲ್ಲ. ವರ್ಣ ಮುದ್ರಣ ಆರಂಭವಾಗುವ ಪೂರ್ವದಲ್ಲಿ ಕಲ್ಲಚ್ಚು (ಲಿಥೋ) ಪೋಸ್ಟರುಗಳು ಹೆಚ್ಚು ಬಳಕೆಯಲ್ಲಿದ್ದವು. ಚಿತ್ರಮಂದಿರದ ಹೆಸರು, ಬಿಡುಗಡೆಯ ದಿನಾಂಕ, ಮುಖ್ಯ ಕಲಾವಿದರ ಹೆಸರು, ಚಿತ್ರದ ಹೆಸರು - ಕೆಲವೊಮ್ಮೆ ಚಿತ್ರದ ಕಲಾವಿದರ ರೇಖಾಚಿತ್ರಗಳು ಲಿಥೋ ಪೋಸ್ಟರಿನಲ್ಲಿರುತ್ತಿದ್ದವು. ಈಗಲೂ ಈ ಬಗೆಯ ಪೋಸ್ಟರುಗಳು ಬಳಕೆಯಲ್ಲಿವೆ. ವರ್ಣ ಮುದ್ರಣ ಆರಂಭವಾದ ಮೇಲೆ ಕಲಾವಿದರ ಹಾಗೂ ಸನ್ನಿವೇಶಗಳ ಬಣ್ಣಬಣ್ಣದ ಛಾಯಾಚಿತ್ರಸಹಿತ ಬಣ್ಣದ ಪೋಸ್ಟರುಗಳು ಸಿದ್ಧವಾಗತೊಡಗಿದವು. ಆದರೆ ಮೊದಲಲ್ಲಿ ೧೦ ಅಂ. x ೨೦ ಅಂ. ಸೈಜಿನಲ್ಲಿ ಬರಲಾರಂಭಿಸಿದವು. ನಂತರ ೨೦ ಅಂ. x ೩೦ ಅಂ. ಹಾಗೂ ಡಿ.ಆರ್.(ಡಬ್ಬಲ್ ರಾಯಲ್) ೩೦ x ೪೦ ಅಂ. ಸೈಜುಗಳ ಮುದ್ರಣ ನಡೆಯಿತು. ೩೦ ಅಂ. x ೪೦ ಅಂ. ಸೈಜಿನ ಪೋಸ್ಟರುಗಳು ಇಂದಿಗೂ ಬಳಕೆಯಲ್ಲಿವೆ. ಇದನ್ನು ಡಿ.ಆರ್. ಅಥವಾ ಸಿಂಗಲ್ ಶೀಟ್ ಪೋಸ್ಟರುಗಳೆನ್ನುತ್ತಾರೆ.

ಹಿಂದೆ ಬಿದಿರಿನಲ್ಲಿ ಡಿ.ಆರ್.ಸೈಜಿನ ತಟ್ಟಿಗಳನ್ನು ಹೆಣೆಸಿ ಅವುಗಳಿಗೆ ಚಿತ್ರದ ಪೋಸ್ಟರುಗಳನ್ನು ಅಂಟಿಸಿ ವ್ಯಾಪಾರ ಸ್ಥಳಗಳಲ್ಲಿ ಅಂಗಡಿಗಳ ಮುಂದೆ ಪ್ರದರ್ಶನಕ್ಕಿಡುತ್ತಿದ್ದರು. ಆ ಚಿತ್ರವನ್ನು ಒಮ್ಮೆ ಉಚಿತವಾಗಿ ನೋಡಲು ಅಂಗಡಿಯವರಿಗೆ ಪಾಸು ನೀಡುತ್ತಿದ್ದರು. ಹಾಗೆಯೇ ಮರದ ರಿಪೀಸಿನ ನಾಲ್ಕು ಮೂಲೆಯ ಫ್ರೇಮಿಗೆ ಬಿಗಿಯಾಗಿ ಅಳವಡಿಸಿದ ಕೋರಾ ಬಟ್ಟೆಯ ಮೇಲೆ ಕುಂಚ ಕಲಾವಿದರು ಚಿತ್ರಿಸಿದ ಚಿತ್ರದ ಬ್ಯಾನರುಗಳನ್ನು ಅಂಗಡಿ ಮುಂಗಟ್ಟುಗಳಲ್ಲಿ, ಕಟ್ಟಡಗಳ ಮೇಲೆ ಪ್ರಚಾರಕ್ಕಾಗಿ ಇರಿಸುತ್ತಿದರು. ಅಂಗಡಿಯವರಿಗೆ ಚಿತ್ರ ಪ್ರದರ್ಶನವಾದಷ್ಟು ಕಾಲದಲ್ಲಿ ತಿಂಗಳಿಗೊಮ್ಮೆ ಬಾಲ್ಕನಿ ತರಗತಿಯಲ್ಲಿ ಕುಳಿತು ಚಿತ್ರ ವೀಕ್ಷಿಸಲು ಉಚಿತ ಪಾಸು ಸಿಗುತ್ತಿತ್ತು. ದೊಡ್ಡ ದೊಡ್ಡ ಬ್ಯಾನರುಗಳನ್ನು ಚಿತ್ರಮಂದಿರದ ಹೊರಾವರಣಕ್ಕೆ ಅನುಗುಣವಾಗಿ ಅಳವಡಿಸಲಾಗುತ್ತಿತ್ತು. ಅನೇಕ ಕಲಾವಿದರಿಗೆ ಈ ಬ್ಯಾನರುಗಳನ್ನು ವಿನ್ಯಾಸಗೊಳಿಸುವುದೇ ವೃತ್ತಿಯಾಯಿತು.

(ಚಿತ್ರ ೧) ಕರಪತ್ರಗಳ ಹಂಚಿಕೆ

ಡಿ.ಆರ್.ಸೈಜಿನ ಪೋಸ್ಟರುಗಳನ್ನು ಅಂಟಿಸಿದ ಬಿದಿರಿನ ತಟ್ಟಿಗಳನ್ನು ಅಂದಿನ ದಿನಗಳಲ್ಲಿ ಜನಪ್ರಿಯವಾಗಿದ್ದ ಜಟಕಾ ಬಂಡಿ ಅಥವಾ ಎತ್ತಿನ ಗಾಡಿಯ ಎಡ - ಬಲಗಳಲ್ಲಿ ಕಟ್ಟಿ ಧ್ವನಿವರ್ಧಕದ ಮೂಲಕ ೭೮ ಆರ್.ಪಿ.ಎಂ.ನ ಗ್ರಾಮಾ ಫೋನ್ ಧ್ವನಿಮುದ್ರಿಕೆಯಲ್ಲಿನ ಹಾಡುಗಳನ್ನು ಕೇಳಿಸುತ್ತ ಕರಪತ್ರಗಳನ್ನು ಎಸೆಯುತ್ತ ಪ್ರಚಾರ ಮಾಡಲಾಗುತ್ತಿತ್ತು. ಹಾಗೆಯೇ ಸೈಕಲ್‌ನ ಹಿಂದಿನ ಚಕ್ರದ ಹಿಂಬದಿಯಲ್ಲಿ ಇಕ್ಕೆಲಗಳಲ್ಲೂ ಪೋಸ್ಟರ್ ಅಂಟಿಸಿದ ಬಿದಿರು ತಟ್ಟಿಗಳನ್ನು ತೂಗುಹಾಕಿಕೊಂಡು ಚಿತ್ರವಿಚಿತ್ರ ಸದ್ದು ಮಾಡುತ್ತ, ಕರಪತ್ರಗಳನ್ನು ವಿತರಿಸುತ್ತ ಪ್ರಚಾರ ಮಾಡಲಾಗುತ್ತಿತ್ತು. ಈ ಬಗೆಯ ಪ್ರಚಾರ ಗ್ರಾಮಾಂತರಗಳಲ್ಲಿ ಹೆಚ್ಚಾಗಿ ನಡೆಯುತ್ತಿತ್ತು. ಹಾಡಿನ ಧ್ವನಿ ಅಥವಾ ವಿಚಿತ್ರ ಸದ್ದು ಕೇಳಿ ಮನೆಯೊಳಗಿಂದ ಹೆಂಗಸರು, ಗಂಡಸರು ಹೊರಬಂದು ಈ ಪ್ರಚಾರ ವೈಖರಿಯನ್ನು ವೀಕ್ಷಿಸುತ್ತಿದ್ದರೆ ಹುಡುಗರು ಓಡುವ ಗಾಡಿಯ ಹಿಂದ ಓಡುತ್ತ ಕರಪತ್ರಗಳನ್ನು ಸಂಗ್ರಹಿಸುತ್ತಿದ್ದುದು ಸಾಮಾನ್ಯ ದೃಶ್ಯವಾಗಿತ್ತು. ಸಾಧ್ಯವಾದಷ್ಟೂ ಹೆಚ್ಚು ಕರಪತ್ರಗಳನ್ನು ಸಂಗ್ರಹಿಸಲು ಹುಡುಗರಲ್ಲಿ ಪೈಪೋಟಿಯೂ ನಡೆಯುತ್ತಿತ್ತು. ಗ್ರಾಹಕರಿಗೆ ವಿತರಿಸಲಿಕ್ಕಾಗಿ ಕರಪತ್ರಗಳನ್ನು ಅಂಗಡಿ ಮತ್ತು ಹೋಟೆಲುಗಳಿಗೆ ಕೊಡಲಾಗುತ್ತಿತ್ತು. ಹಿಂದಿನ ಕಾಲದ ಕಾರುಗಳ ಸುತ್ತ ಬ್ಯಾನರುಗಳನ್ನು ಕಟ್ಟಿ ಕಟೌಟುಗಳಿಂದ ಅಲಂಕರಿಸಿಯೂ ಧ್ವನಿವರ್ಧಕಗಳ ಮೂಲಕ ಪ್ರಚಾರ ಮಾಡಲಾಗುತ್ತಿತ್ತು. ಸಾರಿಗೆ ಬಸ್ಸುಗಳ ಅಕ್ಕ- ಪಕ್ಕ ಹಾಗೂ ಹಿಂಬದಿಗಳಲ್ಲಿ ಬರೆಸುವ ಮೂಲಕ ಸಿನಿಮಾ ಪ್ರಚಾರ ಮಾಡಲಾಗುತ್ತಿತ್ತು. ಈಚೆಗೆ ಈ ಪದ್ಧತಿ ಮತ್ತೆ ಚಾಲನೆ ಪಡೆದಿದೆ.

(ಚಿತ್ರ ೨) ಟೆಂಟ್ ಸಿನಿಮಾ ಪ್ರಚಾರ

ಸುಮಾರು ೪೦ರ ದಶಕದಲ್ಲಿ ಕುಚೇಲನ ಕಥೆಯ ತೆಲುಗು ಚಿತ್ರವೊಂದು ಬೆಂಗಳೂರಿನಲ್ಲಿ ಬಿಡುಗಡೆಯಾದಾಗ ಆ ಚಿತ್ರದ ಹೆಸರನ್ನು ಮುದ್ರಿಸಿದ ಕಾಗದದ ಚೀಲಗಳಲ್ಲಿ ಅವಲಕ್ಕಿ ಹಾಕಿ ಮನೆ ಮನೆಗೂ ಹಂಚಿ ಪ್ರೇಕ್ಷಕರನ್ನು ಆಕರ್ಷಿಸಲಾಯಿತು. ವೆಂಕಟರಮಣಸ್ವಾಮಿ ಕಥೆಯ ಬಾಲಾಜಿ ಚಿತ್ರ ಬಿಡುಗಡೆಯಾದಾಗ ಚಿತ್ರಮಂದಿರದ ಮುಂಭಾಗದಲ್ಲಿ ವೆಂಕಟೇಶ್ವರನ ಬೃಹದಾಕಾರದ ಪ್ರತಿಕೃತಿಯನ್ನು ಹಾಗೂ ಹುತ್ತವೊಳಗಿನ ಬಾಲಾಜಿಗೆ ಹಾಲು ಕರೆಯುತ್ತಿರುವ ಗೋವಿನ ಪ್ರತಿಕೃತಿಗಳನ್ನು ತಯಾರಿಸಿಟ್ಟು ದಿನ ನಿತ್ಯ ಪೂಜೆ ಪುನಸ್ಕಾರ ಮಾಡುತ್ತ ಜನಮನ ಸೆಳೆಯಲಾಯಿತು. ದೇವಿ ಸಂಬಂಧದ ಕಥಾ ಚಿತ್ರಗಳ ಸಂದರ್ಭದಲ್ಲಿ ದೇವಿಯ ಪ್ರತಿಮೂರ್ತಿಯನ್ನು ಚಿತ್ರಮಂದಿರದ ಮುಂದೆ ಇರಿಸಿ ಪೂಜೆ ಕೈಂಕರ್ಯಗಳನ್ನು ವ್ಯವಸ್ಥೆ ಮಾಡಿದ್ದಲ್ಲದೆ, ಚಿತ್ರ ವೀಕ್ಷಣೆಗೆ ಬರುವ ಮಹಿಳೆಯರಿಗೆ ಅರಿಶಿನ-ಕುಂಕುಮ-ಗಾಜಿನ ಬಳೆಗಳ ಸಹಿತ ಮಂಗಳ ದ್ರವ್ಯವನ್ನು ವಿತರಿಸಿ ಪ್ರಚಾರ ಮಾಡುತ್ತಿದ್ದರು. ಹಿಂದೆ 'ನಾಗಿನ್' ಚಿತ್ರದ ಪ್ರದರ್ಶನ ಕಾಲದಲ್ಲಿ ಚಿತ್ರದಲ್ಲಿನ ಪುಂಗಿಯ ನಾದ ಮಾಧುರ್ಯಕ್ಕೆ ಮರುಳಾಗಿ ಸರ್ಪವೊಂದು ಚಿತ್ರಮಂದಿರದೊಳಗೆ ನುಗ್ಗಿ ತೆರೆಯ ಬಳಿ ಕಾಣಿಸಿಕೊಂಡ ವರದಿ ಇದರೆ, ಈಚೆಗೆ 'ನಾಗದೇವತೆ' ಚಿತ್ರದ ಪ್ರದರ್ಶನ ಸಮಯದಲ್ಲಿಯೂ ನಾಗರಹಾವು ಚಿತ್ರಮಂದಿರದಲ್ಲಿ ಕಾಣಿಸಿಕೊಂಡ ಸುದ್ದಿಯೂ ಇದೆ. ದೇವರನ್ನು ಕುರಿತ ಚಿತ್ರಗಳು ತೆರೆಕಂಡಾಗ ಚಿತ್ರಮಂದಿರಗಳ ಮುಂದೆ ದೇವಸ್ಥಾನಗಳೇ ರೂಪುಗೊಂಡ ಸಂದರ್ಭಗಳೂ ಹಲವಾರಿವೆ. 'ಸೀತಾರಾಮ ಕಲ್ಯಾಣ' ಚಿತ್ರ ತೆರೆಗೆ ಬಂದಾಗ ದಶರಥನ ಪುತ್ರ ರಾಮಚಂದ್ರನಿಗೂ ಜನಕನ ಪುತ್ರಿ ಸೀತೆಗೂ ಮದುವೆ ಎಂದು ಲಗ್ನಪತ್ರಿಕೆ ಮುದ್ರಿಸಿ ಹಂಚಲಾಗಿತ್ತು.

ದಶಕಗಳ ಹಿಂದೆ 'ಮಾಯಾ ಬಜಾರ್' ಚಿತ್ರ ಬಿಡುಗಡೆಯಾದಾಗ ಚಿತ್ರದ ಬಗ್ಗೆ ಪ್ರಚಾರವಿರುವ ಹೋಟೆಲ್ ಬಿಲ್ ಪುಸ್ತಕಗಳನ್ನು ಆಯಾ ಹೋಟೆಲಿನ ಹೆಸರಿನೊಂದಿಗೆ ಸಿದ್ಧಪಡಿಸಿಕೊಡಲಾಗಿತ್ತು. ಇದು ಆ ದಿನಗಳಲ್ಲಿ ಪ್ರಚಾರಕರ್ತರಾಗಿದ್ದ ಕಟಕ ಅಡ್ವರ್ಟೈಸಿಂಗ್‌ನ ಎಸ್. ಎಸ್.ಗುಪ್ತ ಅವರ ಕಲ್ಪನೆಯ ಫಲ. ಗ್ರಾಹಕ ಬಿಲ್‌ನತ್ತ ಕಣ್ಣಾಡಿಸುವುದು ಸಹಜ. ಆ ಸಂದರ್ಭದಲ್ಲಿ ಬಿಲ್‌ನ ಮೇಲ್ಭಾಗದಲ್ಲಿ ಸಚಿತ್ರವಾಗಿ ಮುದ್ರಿತವಾದ ಚಿತ್ರದ ಪ್ರಚಾರ ಅವರನ್ನು ಸೆಳೆಯುತ್ತದೆ ಎಂಬ ಕಾರಣದಿಂದಾಗಿಯೇ ಈ ಬಗೆಯ ಪ್ರಚಾರ ಕೈಗೊಳ್ಳಲಾಗಿತ್ತು.

ಸಿಂಗಲ್ ಶೀಟ್ ಪೋಸ್ಟರುಗಳನ್ನು ಬಿದಿರಿನ ತಟ್ಟಿಗಳಿಗೆ ಹಚ್ಚಿ ವ್ಯಾಪಾರ ಕೇಂದ್ರಗಳಲ್ಲಿಡುತ್ತಿದ್ದುದರ ಜೊತೆಗೆ ವಿಶಾಲವಾದ ಗೋಡೆಗಳು, ಕಾಂಪೌಂಡುಗಳು ಈ ಪೋಸ್ಟರುಗಳಿಂದ ಅಲಂಕೃತಗೊಳ್ಳುತ್ತಿದ್ದವು. ಈ ಗಾತ್ರದ ಪೋಸ್ಟರುಗಳನ್ನು ಅಂಟಿಸುವ ಸಲುವಾಗಿಯೇ ಕಟ್ಟಡಗಳ ಮಾಲೀಕರು ಹೊರಗೋಡೆಯ ಮೇಲೆ ಸಿಮೆಂಟ್ ಚೌಕಟ್ಟಿನ ವಿಶಾಲ ಅಂಕಣಗಳನ್ನು ಮಾಡಿಸಿಕೊಡುತ್ತಿದ್ದರು. ಯಾವುದೇ ಊರಿನ ಸಾರ್ವಜನಿಕ ಗೋಡೆಗಳು ಪೋಸ್ಟರುಮಯವೇ ಆಗಿರುತ್ತಿದ್ದವು. ಈಚೆಗೆ ಬೆಂಗಳೂರು ಮಹಾನಗರ ಪಾಲಿಕೆಯವರು ನಗರದ ಸೌಂದರ್ಯವನ್ನು ರಕ್ಷಿಸಲು ಸಾರ್ವಜನಿಕ ಸ್ಥಳಗಳಲ್ಲಿ ಪೋಸ್ಟರುಗಳನ್ನು ಅಂಟಿಸುವುದನ್ನು ನಿಷೇಧಿಸಿದ್ದಾರೆ. ಅನಧಿಕೃತವಾಗಿ ಅಂಟಿಸಿದವನ್ನು ತೆಗೆಸುತ್ತಿದ್ದಾರೆ. ಸಿಂಗಲ್ ಶೀಟ್ ಅಲ್ಲದೆ ಎರಡು, ನಾಲ್ಕು, ಎಂಟು, ಹನ್ನೆರಡು, ಇಪ್ಪತ್ತನಾಲ್ಕು ಮತ್ತು ಮೂವತ್ತೆರಡು ಹಾಳೆಗಳ ಪೋಸ್ಟರ್‌ಗಳನ್ನು ಮುದ್ರಿಸಿ, ಗೋಡೆಗಳಿಗೆ ಅಂಟಿಸಿ ಜನರ ಗಮನವನ್ನು ಸೆಳೆಯುವ ಯತ್ನ ಇದೀಗ ಇತಿಹಾಸವಾಗಿದೆ. ಒಂದು ಘಟ್ಟದಲ್ಲಿ ಕರ್ನಾಟಕ ಚಲನಚಿತ್ರ ವಾಣಿಜ್ಯ

(ಚಿತ್ರ ೩, ೪) ಚಿತ್ರಮಂದಿರಗಳ ಮುಂದೆ ಭಿತ್ತಿಚಿತ್ರಗಳ ಅಲಂಕಾರ

ಪೋಸ್ಟರುಗಳನ್ನು ಹೊತ್ತು ನಗರದ ರಸ್ತೆಗಳಲ್ಲಿ ಗೋಡೆಗಳಿಗೆ ಅಂಟಿಸುತ್ತಿದ್ದರು. ತಿರುಮಲ ಪಬ್ಲಿಸಿಟೀಸ್, ಎಂಪೈರ್ ಪಬ್ಲಿಸಿಟೀಸ್, ವಿಜಯಾ ಪಬ್ಲಿಸಿಟೀಸ್ ಮುಂತಾದ ಸಂಸ್ಥೆಗಳು ಹಿಂದೆ ಈ ಕೆಲಸದ ಹೊಣೆ ಹೊರುತ್ತಿದ್ದವು. ಹಾಗೆಯೇ ಚಿತ್ರಮಂದಿರಗಳ ಮುಂದೆ ಹಾಗೂ ನಿಗದಿತ ಸ್ಥಳಗಳಲ್ಲಿ ಬ್ಯಾನರುಗಳನ್ನು ಕಟ್ಟುವ ಕೆಲಸವನ್ನು ಈ ಸಂಸ್ಥೆಗಳೇ ನಿರ್ವಹಿಸುತ್ತಿದ್ದವು. ಜನಸಂಚಾರ ಕಡಿಮೆಯಾದ ರಾತ್ರಿ ಹೊತ್ತಿನಲ್ಲಿ ರಸ್ತೆಯಗಲದ ಬ್ಯಾನರುಗಳನ್ನು ಕೆಲಸಗಾರರು ತಲೆಯ ಮೇಲೆ ಹೊತ್ತು ಸೈಕಲ್ ಮೇಲೆ ಚಿತ್ರಮಂದಿರಗಳಿಗೆ ಕೊಂಡೊಯ್ಯುತ್ತಿದ್ದುದು ವಿಶೇಷವೆನಿಸುತ್ತಿತ್ತು.

ಚಲನಚಿತ್ರೋದ್ಯಮ ಬೆಳೆದಂತೆ, ಹೆಚ್ಚು ಚಿತ್ರಗಳು ತಯಾರಾಗ ತೊಡಗಿದಂತೆ ಪ್ರಚಾರ ಕ್ಷೇತ್ರವೂ ವಿಸ್ತಾರವಾಗುತ್ತ ಬಂದಿತು. ಚಿತ್ರವೊಂದರ ಬಿಡುಗಡೆಗೆ ಮುನ್ನ, ಹಾಗೂ ಬಿಡುಗಡೆಯ ನಂತರ ರೇಡಿಯೋ ಮೂಲಕ ಜಾಹಿರಾತು ನೀಡುವ ಪದ್ಧತಿ ಬಂತು. ಚಿತ್ರದ ಪ್ರಮುಖ ಹಾಡುಗಳ ಪಲ್ಲವಿಯೊಡನೆ ಚಿತ್ರದ ವಿವರಗಳನ್ನು ಧ್ವನಿ ಮುದ್ರಿಸಿಕೊಂಡು ಧ್ವನಿಸುರುಳಿಯನ್ನು ರೇಡಿಯೋದಲ್ಲಿನ ಪ್ರಚಾರಕ್ಕೆಂದೇ ಪಬ್ಲಿಸಿಟಿ ಏಜೆಂಟರ ಮೂಲಕ ಆಕಾಶವಾಣಿ ವಿವಿಧ ಭಾರತಿಯಲ್ಲಿ ಪ್ರಸಾರ ಮಾಡುವ ಪರಿಪಾಠ ಬಹಳ ಪರಿಣಾಮಕಾರಿಯೆನಿಸಿತು. ಆಕಾಶವಾಣಿ ಪ್ರತಿ ಹತ್ತು ಸೆಕೆಂಡುಗಳಿಗೆ ಇಷ್ಟೆಂಬ ಆಧಾರದ ಮೇಲೆ ಜಾಹಿರಾತು ದರಗಳನ್ನು ನಿಗದಿ ಮಾಡುತ್ತಿತ್ತು. ಈ ಪದ್ಧತಿ ಇಂದಿಗೂ


ಶ್ರೀ
॥ ಶುಭಮಸ್ತು ॥

ಕಲ್ಯಾಣಾದ್ಭುತ ಗಾತ್ರಾಯ ಕಾಮಿತಾರ್ಥ ಪ್ರದಾಯಿನೇ । ಶ್ರೀಮದ್ವೇಂಕಟನಾಥಾಯ ಶ್ರೀನಿವಾಸಾಯ ಮಂಗಳಂ ॥
ಸೌಭಾಗ್ಯ ಕುಶವಾಂ ದೇವೀಂ । ಆಯುರಾರೋಗ್ಯ ಭೂಷಣಂ ॥ ಧೀಯಶಂ ಮಾಂಗಲ್ಯ ವೃದ್ಧಿಶ್ಚ । ಲಿಖ್ಯತೇ ಲಗ್ನಪತ್ರಿಕಾ ॥

ಸೀತಾರಾಮಕಲ್ಯಾಣ ಮಹೋತ್ಸವಾಹ್ವಾನ ಪತ್ರಿಕಾ

ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕಾಬ್ದಾಃ ೧೮೮೨ ವರ್ತಮಾನ ಶಾರ್ವರಿನಾಮ ಸಂವತ್ಸರದ ಪುಷ್ಯಮಾಸ ಕೃಷ್ಣಪಕ್ಷ ಪಂಚಮಿ (ತಾ॥ 6-1-1961)ನೇ ಶುಕ್ರವಾರ ಈ ಶುಭದಿವಸ ಸೂರ್ಯೋದಯಾದಿ 18 ರಿಂದ 20 ಘಳಿಗೆ (2 ಘಂಟೆ) ಯೊಳಗೆ ಸಲ್ಲುವ ಶುಭ ವೃಷಭ ಲಗ್ನದಲ್ಲಿ,

ಶ್ರೀಮಾನ್ ದಶರಥ ಮಹಾರಾಜರವರ ಜ್ಯೇಷ್ಠ ಪುತ್ರ ಚಿರಂಜೀವಿ ಅಖಿಲಾಂಡ ಬ್ರಹ್ಮಾಂಡ ನಾಯಕರಾದ **ಶ್ರೀ ರಾಮಚಂದ್ರ ಮೂರ್ತಿ** ಎಂಬ ವರನಿಗೆ	ಶ್ರೀಮಾನ್ ಜನಕ ಮಹಾರಾಜರವರ ಪುತ್ರಿ ಚಿ॥ ಕುಂ॥ ಕೋ॥ ಸೌಭಾಗ್ಯವತಿ ಲೋಕಮಾತೆ **ಸೀತಾ ದೇವಿ** ಎಂಬ ಕನ್ಯೆಯನ್ನು

ಕೊಟ್ಟು ವಿವಾಹ ಮುಹೂರ್ತ ನಡೆಸಲು ನಿಶ್ಚಂiಸಲಾಗಿ ಶುಭವಾಗಿರುತ್ತೆ.
ಈ ಶುಭ ಮುಹೂರ್ತವು **ಬೆಂಗಳೂರು ಸ್ಟೇಟ್ಸ್ ಟಾಕೀಸಿನಲ್ಲಿ** ನಡೆಸುವುದಾಗಿ ಗುರು ಹಿರಿಯರು ನಿಶ್ಚಯ ಮಾಡಿರುವುದರಿಂದ ತಾವು ಸಕುಟುಂಬ ಸಪರಿವಾರ ಸಹಿತ ಬಂದು ವಧೂ-ವರರ ಕಲ್ಯಾಣೋತ್ಸವವನ್ನು ನೋಡಿ ಆನಂದಿಸಿ ಶ್ರೀ ಸೀತಾರಾಮರ ಅನುಗ್ರಹಕ್ಕೆ ಪಾತ್ರರಾಗಬೇಕಾಗಿ ಬೇಡಿಕೊಳ್ಳುವ,

ತಮ್ಮ ವಿಧೇಯರು,
ದಶರಥ ರಾಜ ಮತ್ತು ಜನಕ ರಾಜ

With the best compliments of
VENUS MOVIES, Bangalore.
STATES, Bangalore.

ದರ ಮತ್ತು ಪ್ರದರ್ಶನ ಕಾಲ
ಮಾಮೂಲಿನಂತೆ

(ಚಿತ್ರ ೫) 'ಸೀತಾರಾಮ ಕಲ್ಯಾಣ'ದ ಕರೆಯೋಲೆ

ಮುಂದೆ ಕೂಡ ಮಧ್ಯೆ ಪ್ರವೇಶಿಸಿ ಬೆಂಗಳೂರು ಮಹಾನಗರ ಪಾಲಿಕೆಯ ಸಹಕಾರದೊಂದಿಗೆ ನಗರದ ಎಲ್ಲ ಕಡೆಗಳಲ್ಲಿಯೂ ಪೋಸ್ಟರುಗಳು ಅಂಟಿಸಲೆಂದೇ ಅನೇಕ ಜಾಗಗಳನ್ನು ನಿಗದಿಗೊಳಿಸಿತು. ಇದರಿಂದ ನಗರದ ಸೌಂದರ್ಯ ಕೆಡಬಾರದೆಂದೂ, ರಸ್ತೆ ಅಪಘಾತಗಳು ಕಡಿಮೆಯಾಗಬೇಕೆಂದೂ ಉದ್ದೇಶ. ಆದರೆ ಈ ವ್ಯವಸ್ಥೆ ಮುರಿದು ಬೀಳಲು ಬಹಳ ಕಾಲ ಹಿಡಿಯಲಿಲ್ಲ.

ಮಹಾನಗರ ಪಾಲಿಕೆಗೆ ಶುಲ್ಕ ಕಟ್ಟಿ, ಮೊಹರು ಹಾಕಿಸಿಕೊಂಡ ನಂತರವೇ ಪೋಸ್ಟರ್‌ಗಳನ್ನು ನಿಯಮಿತ ಸ್ಥಳಗಳಲ್ಲಿ ಮಾತ್ರ ಅಂಟಿಸಬೇಕೆಂಬ ನಿಯಮವಿದ್ದರೂ ಕಲವೇ ಪೋಸ್ಟರ್‌ಗಳಿಗೆ ಶುಲ್ಕ ಕಟ್ಟಿ ಅದರ ಎರಡು-ಮೂರು ಪಟ್ಟು ಪೋಸ್ಟರ್‌ಗಳನ್ನು ಅಂಟಿಸುತ್ತಿದ್ದುದೂ ಉಂಟು. ಪ್ರಸ್ತುತ ಪ್ರಮುಖ ಸ್ಥಳಗಳಲ್ಲಿ ಹೋರ್ಡಿಂಗ್ ಹಾಕಲು ಪ್ರಚಾರ ಸಂಸ್ಥೆಗಳಿಗೆ ಶುಲ್ಕಾಧಾರಿತ ಅನುಮತಿ ನೀಡಲಾಗುತ್ತಿದೆ. ನಿಯಮಗಳ ಪ್ರಕಾರ ಎಲ್ಲೆಂದರಲ್ಲಿ ಪೋಸ್ಟರ್‌ಗಳನ್ನು ಅಂಟಿಸುವಂತಿಲ್ಲ. ಬ್ಯಾನರುಗಳೂ ಚಿತ್ರಮಂದಿರಗಳ ಮುಂಭಾಗದ ಅಲಂಕರಣಕ್ಕೆ ಮಾತ್ರ ಮಿತಿಯಾಗಿವೆ. ಹೀಗಾಗಿ ಬ್ಯಾನರ್ ಬರೆಯುವ ಕಲಾವಿದರಿಗೆ, ಪೋಸ್ಟರ್ ಮುದ್ರಣವನ್ನೇ ಹೆಚ್ಚು ನಂಬಿದ ಮುದ್ರಣಾಲಯದವರಿಗೆ ವ್ಯಾಪಾರ ಇಳಿದಿದೆ. ಬದಲಾಗಿ ಖಾಲಿ ಸ್ಥಳವಿರುವ ಕಾಂಪೌಂಡ್ ಮೇಲೆ ಬರಹಗಳ ಮೂಲಕ ಪ್ರಚಾರ ಸಾಗಿದ್ದು ಮಹಾನಗರ ಪಾಲಿಕೆಯವರ ಕಂಗಣ್ಣು ಈ ಬಗೆಯ ಪ್ರಚಾರದ ಮೇಲೆಯೂ ಬೀಳುವಂತಾಗಿದೆ. ಹಿಂದೆ ಜಟಕಾ ಗಾಡಿಗಳಿಗೆ ತಟ್ಟೆಗಳನ್ನು ಕಟ್ಟಿ ಪ್ರಚಾರ ಮಾಡುತ್ತಿದ್ದ ಪದ್ಧತಿ ಮಾರ್ಪಾಟಾಗಿ ತ್ರಿಚಕ್ರ ನಾಲ್ಕು ಚಕ್ರಗಳ ವಾಹನಗಳನ್ನು ನಾಲ್ಕು ಭಾಗಗಳಲ್ಲಿ ಬ್ಯಾನರ್, ಕಟೌಟ್ ಹಾಗೂ ಪೋಸ್ಟರ್‌ಗಳಿಂದ ಅಲಂಕರಿಸಿ ರಸ್ತೆ ರಸ್ತೆಗಳಲ್ಲಿ ಮೊಬೈಲ್ ಪ್ರಚಾರ ಮಾಡುವ ಪದ್ಧತಿ ಬಂದಿದೆ.

ವಿವಿಧ ಸೈಜುಗಳಲ್ಲಿನ ಪೋಸ್ಟರ್‌ಗಳನ್ನು ವಿತರಕರಿಂದ ಪಡೆದು ಅಂಟಿಸಲು ಪ್ರತ್ಯೇಕ ಸಂಸ್ಥೆಗಳಿದ್ದು, ಅವರು ಅಂಟಿಸುವ ಹೊಣೆಯನ್ನು ಹೊರುತ್ತಿದ್ದರು. ಅವರ ಬಳಿ ಸಾಕಷ್ಟು ಮಂದಿ ಕೆಲಸಗಾರರು ಇರುತ್ತಿದ್ದರು. ರಾತ್ರಿಯ ವೇಳೆಯಲ್ಲಿ ಆ ಕೆಲಸಗಾರರು ಸೈಕಲ್ಲಿಗೆ ಏಣಿಯನ್ನು ಕಟ್ಟಿಕೊಂಡು, ಮೈದಾದ ಪಾಯಸ ತುಂಬಿದ ಡಬ್ಬಿಗಳೊಡನೆ

(ಚಿತ್ರ ೬) ನಾಯಕನ ಮುಂದೆ ಕುಬ್ಜವಾದ ಚಿತ್ರಮಂದಿರ

(ಚಿತ್ರ ೭) ಕೆ.ಎಸ್.ರಾಜು

(ಚಿತ್ರ ೮) ಕುಂಭಲಿಂಗಂ

ಸ್ವಲ್ಪ ಮಟ್ಟಿಗೆ ಜಾರಿಯಲ್ಲಿದ್ದರೂ ಟೆಲಿವಿಷನ್ ಯುಗ ಪ್ರಾರಂಭವಾದ ನಂತರ ದೂರದರ್ಶನದಲ್ಲಿ ಚಿತ್ರದ ಹಾಡಿನ ಸನ್ನಿವೇಶಗಳ ಜೊತೆಗೆ ಚಿತ್ರದ ಬಗಗಿನ ವಿವರಗಳನ್ನೂ ಒಳಗೊಂಡ ಕಾರ್ಡನ್ನೂ ಪ್ರದರ್ಶಿಸುವ ಪದ ತಿಯನ್ನು ವಿತರಕರು, ನಿರ್ಮಾಪಕರು ಪ್ರಾರಂಭಿಸಿದರು. ಪ್ರಸಾರ ಸಾಮಾನ್ಯವಾಗಿ ಐದು ನಿಮಿಷಗಳ ಅವಧಿಯದಾಗಿರುತ್ತಿದ್ದು, ಚಿತ್ರದ ಬಿಡುಗಡೆಗೆ ಮೊದಲು ಹಾಗೂ ಚಿತ್ರದ ಬಿಡುಗಡೆಯ ನಂತರದ ಕೆಲವು ದಿನಗಳು ಚಾಲ್ತಿಯಲ್ಲಿರುತ್ತಿತ್ತು. ಈಚೆಗೆ ದೂರದರ್ಶನವೇ ಅಲ್ಲದೆ, ಉದಯ, ಕಾವೇರಿ, ಸುಪ್ರಭಾತ, ಈ ಟಿವಿ ಮುಂತಾದ ಸ್ಯಾಟಲೈಟ್ ಚಾನಲ್‌ಗಳು ಮತ್ತು ಅನೇಕ ಕೇಬಲ್ ಚಾನಲ್‌ಗಳು ಆರಂಭವಾಗಿದ್ದು ಟೆಲಿವಿಷನ್ ಮೂಲಕ ಕನ್ನಡ ಚಿತ್ರಗಳ ಪ್ರಚಾರಕ್ಕೆ ವ್ಯಾಪಕವಾದ ಅವಕಾಶವಿದೆ. ಬಿ.ಹೆಚ್.ಶ್ಯಾಮ್, ರಾಘವಾಚಾರ್ ಈ ಮಾಧ್ಯಮಗಳಲ್ಲಿನ ಪ್ರಚಾರದ ಪ್ರಮುಖ ಏಜೆಂಟರುಗಳಾಗಿದ್ದರು.

ಈ ಚಾನಲ್‌ಗಳು ತಮ್ಮ ಜನಪ್ರಿಯತೆಗೆ ಮುಖ್ಯವಾಗಿ ಸಿನಿಮಾವನ್ನೇ ಅವಲಂಬಿಸಿರುವುದರಿಂದ ಕನ್ನಡ ಚಿತ್ರಗಳಿಗೆ ವಿಫುಲವಾದ ಪ್ರಚಾರ ಸಿಗುತ್ತಿದೆ. ಚಾನೆಲ್‌ಗಳು ಮಾತ್ರವಲ್ಲದೆ ದೂರದರ್ಶನ ಕೂಡ ಸಿನಿಮಾವನ್ನು ಆಧಾರವಾಗಿಟ್ಟುಕೊಂಡೇ ವಿಧವಿಧವಾದ ಕಾರ್ಯಕ್ರಮಗಳನ್ನು ರೂಪಿಸುತ್ತಿದೆ. ಈ ಕಾರ್ಯಕ್ರಮಗಳಿಗೆ ಚಿತ್ರದ ಹಾಡು-ನೃತ್ಯ-ಸನ್ನಿವೇಶಗಳು ಬಹಳ ಮುಖ್ಯ. ಟಿ.ವಿ ತಂಡಗಳು ಚಿತ್ರೀಕರಣ, ಮುಹೂರ್ತಗಳಿಗೆ ಹೋಗಿ ಚಿತ್ರಗಳ ಬಗ್ಗೆ ಸಚಿತ್ರ, ಸವಿವರ ವರದಿಗಳನ್ನು ನೀಡುತ್ತಿವೆ. ನಿರ್ಮಾಪಕರ, ನಿರ್ದೇಶಕರ, ಕಲಾವಿದರ ಸಂದರ್ಶನಗಳಂತೂ ಹೇರಳವಾಗಿವೆ. ಇಂದು ಇಂಟರ್‌ನೆಟ್ ಮೂಲಕವೂ ಚಲನಚಿತ್ರಗಳ ಪ್ರಚಾರ ಸಾಧ್ಯವಾಗಿದೆ. ಹೀಗೆ ತರಂಗಾಂತರಗಳ ಮೂಲಕ ಕನ್ನಡ ಚಿತ್ರೋದ್ಯಮದ ಪ್ರಚಾರ ನಿರಂತರವಾಗಿ ನಡೆಯುತ್ತಿದೆ.

ಕಲವು ವರ್ಷಗಳಿಂದೀಚೆಗೆ ಕನ್ನಡ ಚಿತ್ರಗಳ ಪ್ರಚಾರಕ್ಕಾಗಿ ಸ್ಟಿಕರ್‌ಗಳ ಬಳಕೆ ಪ್ರಾರಂಭವಾಗಿದೆ. ಪ್ರಚಾರ ಕಲಾ ನಿಪುಣರು ಸಿದ್ಧಪಡಿಸಿಕೊಟ್ಟ ವಿನ್ಯಾಸವನ್ನು ಮುದ್ರಿಸಿ ಅವುಗಳ ಹಿಂಬದಿ ಅಥವಾ ಮುಂಬದಿಗ ಅಂಟು ಮತ್ತಿಸಿ, ಅಂಟಿನ ಮೇಲೊಂದು ಹಾಳೆಯನ್ನು ಅಂಟಿಸಿ ಸ್ಟಿಕರ್‌ಗಳಾಗಿ ಸಿದ್ಧಪಡಿಸಿಕೊಮತ್ತಾರೆ. ಈ ಸ್ಟಿಕರ್‌ಗಳಲ್ಲಿ ಚಿತ್ರದ ನಾಯಕ-ನಾಯಕಿಯರ ಆಕರ್ಷಕ ಚಿತ್ರಗಳಿರುತ್ತವೆ. ಇವುಗಳನ್ನು ವಾಹನಗಳ ಗಾಜಿನ ಕಿಟಕಿ, ಬಾಗಿಲುಗಳಿಗೆ ಅಂಟಿಸುವ ಮೂಲಕ ಪ್ರಚಾರ ನಡೆಯುತ್ತಿದೆ. ಯುವ ಪೀಳಿಗೆಯನ್ನು ಆಕರ್ಷಿಸುವಲ್ಲಿ ಈ ಮಾರ್ಗ ಯಶಸ್ವಿ.

ಈಚಗೆ ಬ್ಯಾನರ್‌ಗಳಿಗೆ ಹೆಚ್ಚಿನ ಬೇಡಿಕ ಇಲ್ಲ. ಬ್ಯಾನರ್ ಸಿದ್ಧಪಡಿಸುವ ವೃತ್ತಿಯಲ್ಲಿರುವವರಿಗೂ ಆದಾಯ ಇಳಿದಿದೆ. ಎಲ್ಲೆಂದರಲ್ಲಿ ಬ್ಯಾನರ್ ಕಟ್ಟಲು ಅವಕಾಶವಿಲ್ಲದಿರುವುದೇ ಇದಕ್ಕ ಕಾರಣ. ಚಿತ್ರ ಪ್ರದರ್ಶಿತವಾಗುವ ಚಿತ್ರಮಂದಿರಗಳ ಮುಂದೆ ಮಾತ್ರ ಬ್ಯಾನರ್ ಕಟ್ಟಲು ಅವಕಾಶವಿದೆ. ಜೊತಗೆ ಚಿತ್ರದ ಪ್ರಧಾನ ಕಲಾವಿದರ ಬೃಹತ್ ಕಟೌಟ್‌ಗಳು ಚಿತ್ರಮಂದಿರಗಳ ಮುಂಭಾಗದಲ್ಲಿ ರಾರಾಜಿಸುತ್ತವ. ಹಿಂದ ಇಷ್ಟು ದೊಡ್ಡ ಬ್ಯಾನರುಗಳನ್ನು ಕಟ್ಟುತ್ತಿರಲಿಲ್ಲ, ಇಷ್ಟು ದೊಡ್ಡ ಕಟೌಟ್‌ಗಳನ್ನು ನಿಲ್ಲಿಸುತ್ತಿರಲಿಲ್ಲ. ಕಟೌಟ್‌ಗಳ ಅಳತಗ ತಕ್ಕಂತೆ ಅಭಿಮಾನಿಗಳು ಬೃಹತ್ ಹೂವಿನ ಹಾರಗಳನ್ನು ಮಾಡಿಸಿ ಕಟೌಟಿನಲ್ಲಿನ ತಮ್ಮ ಮೆಚ್ಚಿನ ಕಲಾವಿದರ ಪ್ರತಿಕೃತಿಗಳನ್ನು ಅಲಂಕರಿಸುವ, ಕಟೌಟ್‌ಗಳಿಗೆ ಹಾಲಿನ ಅಭಿಷೇಕಾದಿಗಳನ್ನು ಮಾಡುವ ಪದ್ಧತಿ ಬೆಳೆದಿದೆ. ಕಟೌಟ್‌ಗಳ ಎತ್ತರದಲ್ಲಿ ಪೈಪೋಟಿ ಸಾಗಿರುವುದೂ ಉಂಟು. ಈ ಅಭಿಮಾನಿಗಳು ತಮ್ಮ ಮೆಚ್ಚಿನ ನಟ ಅಭಿನಯಿಸಿದ ಚಿತ್ರದ ಬಿಡುಗಡೆಯ ಸಂದರ್ಭದಲ್ಲಿ ಚಿತ್ರದ ವಿತರಕರಿಂದ ಪೋಸ್ಟರ್‌ಗಳನ್ನು ಪಡೆದು ವಿವಿಧ ಗಾತ್ರಗಳ ನಕ್ಷತ್ರಗಳನ್ನು ತಯಾರಿಸಿ ತಮ್ಮ ಅಭಿಮಾನಿ ನಟನ ಚಿತ್ರಗಳನ್ನು ಅಂಟಿಸಿ, ತಾವು ಸಿದ್ಧಪಡಿಸಿದ ನಕ್ಷತ್ರಗಳನ್ನು ಮೆರವಣಿಗೆಯಲ್ಲಿ ಚಿತ್ರಮಂದಿರಗಳಿಗ ಒಯ್ದು ಕಟ್ಟುವ ಸಂಸ್ಕೃತಿಯೂ ಇತ್ತೀಚಿನ ದಶಕಗಳಲ್ಲಿ ಬೆಳೆದಿದೆ. ಕಲವೊಮ್ಮೆ ಬಾಜಾಭಜಂತ್ರಿಗಳೊಂದಿಗೆ ಸ್ಪರ್ಧಾತ್ಮಕವಾಗಿ ಈ ನಕ್ಷತ್ರಗಳ ಮೆರವಣಿಗ ನಡೆದದ್ದೂ ಉಂಟು.

ಈ ಪದ್ಧತಿಯಿಂದಾಗಿ ತಾರಾ ವರ್ಚಸ್ಸು ಕೂಡ ಗಮನೀಯವಾಗಿ ಹಿಗ್ಗಿದೆ. ಒಂದು ದೃಷ್ಟಿಯಲ್ಲಿ ಯಾವ ನಾಯಕ ನಟ ಇಂದು ಅತ್ಯಂತ ಜನಪ್ರಿಯ ಎಂಬುದಕ್ಕೆ ಈ ನಕ್ಷತ್ರಗಳು, ಕಟೌಟ್‌ಗಳು ಕೂಡ ಒಂದು ಅಳತಗೋಲು. ಈ ಅಭಿಮಾನಿ ಸಂಸ್ಕೃತಿ ಬೆಳೆಯುತ್ತಲೇ ಇದೆ. ಈ ಸಂಸ್ಕೃತಿಯನ್ನು ಮೊದಲು ಪ್ರಾರಂಭಿಸಿದವರು ಇತರ ಭಾಷಾ ಚಿತ್ರಗಳವರು. ಈಗ ಕನ್ನಡ ಚಿತ್ರರಂಗ ಅವುಗಳ ದಾಖಲೆಯನ್ನೂ ಮೀರಿಸಿದೆ. ಕೆ.ಎಸ್.ಎನ್.ಬ್ರದರ್ಸ್‌ನ ಕುಂಭ ಲಿಂಗಮ್, ಸೀನು ಆರ್ಟ್ಸ್‌ನ ಸೀನು, ಚಿತ್ರಶಾಲಾದ ಕೆ.ಎಸ್.ರಾಜು ಮತ್ತು ಏಕನಾಥ್, ರಾಜಾ ಆರ್ಟ್ಸ್‌ನ ಗಂಗಾಧರ್, ಶ್ರೀ ಆರ್ಟ್ಸ್‌ನ ದೊರೈ ಮತ್ತು ರವಿ ಹಾಗೂ ಕೆ.ಎಂ.ಆರ್ಟ್ಸ್ ಇವರು ಚಲನಚಿತ್ರಗಳ ಬ್ಯಾನರುಗಳು ಹಾಗೂ ಕಟೌಟುಗಳನ್ನು ರೂಪಿಸುವಲ್ಲಿ ಪರಿಣತರು. ಹಿಂದೆ ಗಾಂಧಿನಗರದ ಸುತ್ತಮುತ್ತಲಲ್ಲಿಯೇ ಇದ್ದ ಈ ಬ್ಯಾನರ್ ಕಲಾವಿದರು ಈಗ ನಗರಾದ್ಯಂತ ಚದುರಿ ಹೋಗಿದ್ದಾರೆ. ಆರಂಭದ ದಿನಗಳಲ್ಲಿ ಬ್ಯಾನರುಗಳನ್ನು ಬರೆಯುವ ಕಲಾವಿದರು ಬೆಂಗಳೂರಿನಲ್ಲಿ ಇದ್ದಿರಲಿಲ್ಲ. ಗುಜರಾತಿ ಚಿತ್ರೋದ್ಯಮಿಯೊಬ್ಬರು ತಾವು ಬಂಡವಾಳ ಹೂಡಿದ ತೆಲುಗು ಚಿತ್ರವೊಂದರ ಬಿಡುಗಡೆ ಸಂದರ್ಭದಲ್ಲಿ, ಮದರಾಸಿನಲ್ಲಿ ಟಿ.ವಿ.ಎಸ್.ಶರ್ಮರ ಬಳಿಯಲ್ಲಿದ್ದ ಕೆ.ಎಸ್.ರಾಜು ಅವರನ್ನು ಮದರಾಸಿನಿಂದ ಬೆಂಗಳೂರಿಗೆ ಕರೆತಂದು ಬ್ಯಾನರುಗಳನ್ನು ಬರೆಸಿದರು. ರಾಜು ಬೆಂಗಳೂರಿನಲ್ಲಿಯೇ ನೆಲೆಸಿ, ಮೂವಿಲ್ಯಾಂಡ್ ಚಿತ್ರಮಂದಿರದ ಎದುರಿನಲ್ಲಿ 'ಚಿತ್ರಶಾಲಾ' ತೆರೆದರಲ್ಲದೆ, ಮದರಾಸಿನಿಂದ ಕುಂಭಲಿಂಗಂ ಮತ್ತಿತರರನ್ನು ಕರೆತಂದರು. ನಂತರದಲ್ಲಿ ಕುಂಭಲಿಂಗಂ ತಮ್ಮದೇ ಕಲಾಶಾಲೆ ತೆರೆದರು. ಬೆಂಗಳೂರಿನಲ್ಲಿ ಬರೆಯಲಾಗುವ ಬ್ಯಾನರ್‌ಗಳು ಹೆಚ್ಚು ಸಹಜವಾಗಿ ಆಕರ್ಷಕವಾಗಿ ಇರುತ್ತಿದ್ದವು.

ಬಣ್ಣದ ಪೋಸ್ಟರುಗಳು ಹೆಚ್ಚಾಗಿ ಶಿವಕಾಶಿಯಲ್ಲಿ, ಕಲವೊಮ್ಮೆ ಮದರಾಸಿನಲ್ಲಿ ಮುದ್ರಿತವಾಗಿ ಗಾಂಧಿನಗರದ ವಿತರಕರ ಕಚೇರಿಗಳಿಗೆ ಬಂದು ಸೇರುತ್ತಿದ್ದವು. ಈಚಗೆ ಸಫೈರ್ ಸಂಸ್ಥೆಯವರು ಮತ್ತು ರಾಜನ್ ಬಣ್ಣದ ಪೋಸ್ಟರುಗಳ ಆಫ್‌ಸೆಟ್ ಮುದ್ರಣದ ಜವಾಬ್ದಾರಿ ಹೊರುತ್ತಿದ್ದಾರೆ. ಆರಂಭದಲ್ಲಿ ತ್ರಿವರ್ಣದಲ್ಲಿ ಮುದ್ರಿತವಾಗುತ್ತಿದ್ದ ಬಣ್ಣದ ಪೋಸ್ಟರುಗಳು ಆಫ್‌ಸಟ್ ಮುದ್ರಣ ಸೌಲಭ್ಯ ಬಂದ ಮೇಲೆ ಬಹುಬಣ್ಣ (ಮಲ್ಟಿ ಕಲರ್)ದಲ್ಲಿ ಮುದ್ರಿತವಾಗತೊಡಗಿದವು.

ಹಿಂದಿನ ದಿನಗಳಲ್ಲಿ ಮೂವಿಲ್ಯಾಂಡ್ ಚಿತ್ರಮಂದಿರದ ಹಿಂಭಾಗದ ಕಟ್ಟಡದಲ್ಲಿ, ಹಿಂದೆ ಆರ್ಟ್ ಲಿಥೋ ಪ್ರೆಸ್ಸಿನಲ್ಲಿ ಕಲಸ ಮಾಡುತ್ತಿದ್ದ ಹನುಮಂತರಾವ್ ಎಂಬುವವರು ಮಾರುತಿ ಲಿಥೋ ಪ್ರೆಸ್ ನಡೆಸುತ್ತಿದ್ದರು. ಆ ದಿನಗಳಲ್ಲಿ ಬಿಡುಗಡೆಯಾಗುತ್ತಿದ್ದ ಚಿತ್ರಗಳಲ್ಲಿ ಬಹುತೇಕ ಚಿತ್ರಗಳ ಕಲ್ಲಚ್ಚು ಭಿತ್ತಿಪತ್ರ (ಲಿಥೋ ಪೋಸ್ಟರ್)ಗಳು ಅವರಲ್ಲಿಯೇ ಮುದ್ರಿತವಾಗುತ್ತಿದ್ದವು. ಈಗಲೂ ಗಾಂಧಿನಗರದಲ್ಲಿ ಕಲವು ಲಿಥೋ ಪ್ರೆಸ್‌ಗಳಿದ್ದು ಚಿತ್ರರಂಗದ ಅವಶ್ಯಕತೆಗಳನ್ನು ಪೂರೈಸುತ್ತಿವೆ.

ಆಧುನಿಕ ಡಿಜಿಟಲ್ ಮುದ್ರಣ ತಂತ್ರಗಳಿಂದಾಗಿ ಪೋಸ್ಟರ್-ಬ್ಯಾನರ್‌ಗಳನ್ನು ಮೀರಿಸುವ ಆಕರ್ಷಕ ಗ್ಲೋಸೈನ್ ಹೋರ್ಡಿಂಗ್‌ಗಳು ಈಚಿನ ವರ್ಷಗಳಲ್ಲಿ ತಲೆಯತ್ತಿವೆ. ಎಲ್ಲ ಪ್ರಮುಖ ನಗರಗಳಲ್ಲಿ ಹೋರ್ಡಿಂಗ್ ಪ್ರಚಾರದಲ್ಲಿ ಪರಿಣತಿ ಹೊಂದಿದ ಪ್ರಚಾರ ಸಂಸ್ಥೆಗಳೇ ಹುಟ್ಟಿಕೊಂಡಿವೆ. ಹೋರ್ಡಿಂಗ್‌ಗಳು ನಿಗದಿತ ಅವಧಿಗಾಗಿ ಪ್ರಚಾರಕ್ಕ ದೊರೆಯುತ್ತವೆ. ನಗರದ ಜನಸಂಚಾರ ಹೆಚ್ಚಿರುವ ಪ್ರದೇಶಗಳಲ್ಲಿ, ವೃತ್ತಗಳಲ್ಲಿ, ಟ್ರಾಫಿಕ್ ಸಿಗ್ನಲ್‌ಗಳಿರುವ ಕಡಗಳಲ್ಲಿ ವಿವಿಧ ಚಿತ್ತಾರಗಳಿರುವ ಹೋರ್ಡಿಂಗ್‌ಗಳನ್ನು ಕಾಣಬಹುದು. ಈ ಹೋರ್ಡಿಂಗಗಳು ಮೊದಮೊದಲು ಚಲನಚಿತ್ರೇತರ ದಿನನಿತ್ಯದ ಬಳಕಯ ವಸ್ತುಗಳ ಪ್ರಚಾರಕ್ಕ ಸೀಮಿತವಾಗಿದವು. ಆದರ ಈಗ ಚಿತ್ರಗಳ ಪ್ರಚಾರಕ್ಕೂ ಬಳಕಯಾಗುತ್ತಿವೆ.

ಇದು ದುಬಾರಿ ಮಾಧ್ಯಮವಾದರೂ ದೊಡ್ಡ ದೊಡ್ಡ ಚಿತ್ರಗಳಿಗ ಬಹಳ ಉಪಯುಕ್ತವೆನಿಸಿದೆ. ಬೃಹತ್ ಪ್ರಚಾರವನ್ನು ನಂಬಿದ ಸಾಹಸಿ ನಿರ್ಮಾಪಕರು ಹೆಚ್ಚಾಗಿ ಈ ಮಾಧ್ಯಮವನ್ನು ಬಳಸಿಕೊಳ್ಳುತ್ತಿದ್ದಾರ.

ಎಪತ್ತನಯ ದಶಕದ ಮಧ್ಯ ಭಾಗದವರೆವಿಗೂ ಚಿತ್ರದ ಕಥಾ ಸಾರಾಂಶ, ಹಾಡುಗಳು, ತಾರಾಗಣ ಹಾಗೂ ತಂತ್ರಜ್ಞರ ವಿವರಗಳನ್ನೊಳಗೊಂಡ ಕಿರುಹೊತ್ತಿಗಗಳನ್ನು ಮುದ್ರಿಸಿ ಚಿತ್ರಮಂದಿರಗಳಲ್ಲಿ, ಸುತ್ತಲಿನ ಅಂಗಡಿಗಳಲ್ಲಿ ಮಾರಲಾಗುತ್ತಿತ್ತು. ಇದೂ ಚಲನಚಿತ್ರ ಪ್ರಚಾರದ ಮತ್ತೊಂದು ವಿಧಾನ. ಈ ಪುಸ್ತಕಗಳನ್ನು ಆಸಕ್ತರು ಕೊಳ್ಳುತ್ತಿದರು. ಕೊಂಡವರಿಂದ ಇನ್ನೊಬ್ಬರು ಮತ್ತೊಬ್ಬರು ಓದುತ್ತಿದ್ದರು. ಚಿತ್ರದ ಬಗ್ಗೆ ಆಸಕ್ತರಾಗುತ್ತಿದರು. ಆದರೆ ಈ ಹಾಡಿನ ಪುಸ್ತಕ

(ಚಿತ್ರ ೯) ಜನಪ್ರಿಯತೆಯೊಂದಿಗೆ ಏರಿದ ಎತ್ತರ

ಬುಕ್‌ಲೆಟ್ ಮಾರಾಟ ಮಾಡುವುದರಿಂದ ಬರುವ ಆದಾಯ ಕುರಿತು ತೆರಿಗೆ ಇಲಾಖೆಗೆ ಲೆಕ್ಕ ಒಪ್ಪಿಸಿ, ಮಾರಾಟ ತೆರಿಗೆ ಪಾವತಿ ಮಾಡಬೇಕಾದ ನಿಯಮ ಜಾರಿಗೆ ಬಂದಾಗ ಹಾಡಿನ ಪುಸ್ತಕ ಮುದ್ರಿಸಿ ಮಾರಾಟ ಮಾಡುವ ಪದ್ಧತಿ ನಿಂತು ಹೋಯಿತು. ಆದರೆ ಹಿಂದಿ ಚಿತ್ರರಂಗದಲ್ಲಿ ಇಂದಿಗೂ ಈ ಪದ್ಧತಿ ಮುಂದುವರೆದಿದೆ.

ಅನಕ್ಷರಸ್ಥರನ್ನು ಆಕರ್ಷಿಸಬಲ್ಲ ಈ ಎಲ್ಲ ಪ್ರಚಾರಸಾಧನಗಳೂ ಚಾಲ್ತಿಯಲ್ಲಿದ್ದರೂ ಇಂದು ಪತ್ರಿಕಾ ಪ್ರಚಾರದ್ದೇ ಮೇಲುಗೈ. ಚಿತ್ರದ ತಯಾರಿಕೆಯ ಆರಂಭದಿಂದ ಬಿಡುಗಡೆಯವರೆಗೆ ಸುದ್ದಿ ವಿಶೇಷಗಳನ್ನು, ಸ್ಥಿರ ಚಿತ್ರಗಳನ್ನು, ಪತ್ರಿಕಾ ಗೋಷ್ಠಿಗಳ ವರದಿಗಳನ್ನು, ವಿಮರ್ಶೆಗಳನ್ನು, ಸಂದರ್ಶನಾದಿ ಲೇಖನಗಳನ್ನು ಪತ್ರಿಕೆಗಳು ಪ್ರಕಟಿಸುತ್ತಲೇ ಬಂದಿವೆ. ಈ ಬರಹಗಳಲ್ಲಿ ಬಳಕೆಯಾಗುವ ರೋಚಕ ಭಾಷೆ ಮತ್ತು ಶೈಲಿ ವಾಚಕರ ಮೇಲೆ ನೇರವಾದ ಪರಿಣಾಮವನ್ನು ಬೀರುತ್ತವೆ. ವಾಸ್ತವವಾಗಿ ಕೆಲವು ಆಯ್ದ ಪತ್ರಿಕೆಗಳಲ್ಲಿ ಮಾತ್ರ ಪ್ರಕಟವಾಗುವ ಜಾಹಿರಾತುಗಳಿಗಿಂತ ಎಲ್ಲ ಪತ್ರಿಕೆಗಳಲ್ಲೂ ವ್ಯಾಪಕವಾಗಿ ಹಬ್ಬಿರುವ ಈ ಬರಹಗಳೇ ಹೆಚ್ಚು ಪರಿಣಾಮಕಾರಿ.

ಕನ್ನಡ ಪತ್ರಿಕೆಗಳಲ್ಲಿ ಈ ಮೊದಲು ಎಲ್ಲ ಭಾಷೆಗಳ ಮುಖ್ಯವಾಗಿ ಇಂಗ್ಲಿಷ್, ಹಿಂದಿ, ತಮಿಳು, ತೆಲುಗು ಭಾಷೆಗಳ ಚಿತ್ರಗಳ ಸುದ್ದಿಸಮಾಚಾರ, ವಿಮರ್ಶೆ, ಲೇಖನಗಳು ಪ್ರಕಟವಾಗುತ್ತಿದ್ದವು. ಕನ್ನಡ ಭಾಷೆಯಲ್ಲಿ ಚಲನಚಿತ್ರಗಳ ತಯಾರಿಕೆ ಹೆಚ್ಚಿದಂತೆ ಕನ್ನಡ ಪತ್ರಿಕೆಗಳು ಕನ್ನಡ ಚಿತ್ರಗಳಿಗೇ ಹೆಚ್ಚು ಆದ್ಯತೆ ಕೊಡಲಾರಂಭಿಸಿದವು. ಅನ್ಯಭಾಷಾ ಚಿತ್ರಗಳ ಸ್ಪರ್ಧೆಯನ್ನು ಎದುರಿಸಲಾಗದೆ ಕನ್ನಡ ಚಿತ್ರರಂಗ ಸೊರಗತೊಡಗಿದಾಗ ಕನ್ನಡ ಚಿತ್ರೋದ್ಯಮವನ್ನು ಪುನಃಶ್ಚೇತನಗೊಳಿಸಲು ಕನ್ನಡನಾಡಿನ ಪತ್ರಿಕೆಗಳು ತೋರಿದ ಔದಾರ್ಯದಿಂದಾಗಿ ಕನ್ನಡ ಚಿತ್ರಗಳಿಗೆ ಪ್ರಚಂಡ ಪ್ರಚಾರ ಸಿಗುತ್ತಿದೆ. ಕನ್ನಡ ಪತ್ರಿಕೆಗಳಲ್ಲಿನ ಸಿನಿಮಾ ಪುರವಣಿಗಳು ಪೂರ್ಣವಾಗಿ ಕನ್ನಡ ಚಿತ್ರಗಳಿಗೇ ಮೀಸಲಾದಂತಾಗಿವೆ. ಅರುವತ್ತನೆಯ ದಶಕದಿಂದೀಚೆಗೆ ಕನ್ನಡ ನಾಡಿನ ಪತ್ರಿಕೆಗಳಲ್ಲಿ ಕನ್ನಡ ಚಲನಚಿತ್ರಗಳಿಗೆ ಅಧಿಕ ಪ್ರಚಾರ ಸಿಗುತ್ತಿದೆ ಎನ್ನುವುದರಲ್ಲಿ ಎರಡು ಮಾತಿಲ್ಲ.

ಚಲನಚಿತ್ರ ಪತ್ರಕರ್ತರು ಚಿತ್ರವೊಂದರ ಮುಹೂರ್ತ ಸಮಾರಂಭಕ್ಕೂ ಮುಂಚಿನಿಂದಲೇ ಪ್ರಚಾರ ನೀಡುತ್ತ ಬಂದಿದ್ದಾರೆ. ನಿರ್ಮಾಪಕ ತನ್ನ ಚಿತ್ರ ನಿರ್ಮಾಣದ ಬಗ್ಗೆ ಹೊಳಹು ಹಾಕಿಕೊಂಡಾಗಲೇ ಸುದ್ದಿ ಪ್ರಕಟಿಸಿ, ನಿರ್ಮಾಣದ ಪ್ರತಿ ಹೆಜ್ಜೆಯನ್ನೂ ದಾಖಲಿಸುತ್ತ ಬಂದು ಚಿತ್ರ ಬಿಡುಗಡೆಯಾದ ನಂತರ ವಿಮರ್ಶೆ ಬರೆಯುವವರೆವಿಗೂ ಚಿತ್ರವನ್ನು ಸುದ್ದಿಯಲ್ಲಿಟ್ಟಿದ್ದಾರೆ. ಚಿತ್ರ ಯಶಸ್ವಿಯಾಗಿ ಸಮಾರಂಭಗಳು ಏರ್ಪಟ್ಟಾಗ ವರದಿ ಮಾಡಿದ್ದಾರೆ. ಉತ್ಸವ-ಪ್ರಶಸ್ತಿ ಸಂದರ್ಭಗಳ ಬಗ್ಗೆ ಸಚಿತ್ರ ವರದಿಗಳನ್ನು ನೀಡಿದ್ದಾರೆ. ಅಲ್ಲದೆ ಸಂದರ್ಶನ, ಮುಖಾಮುಖಿ ಇತ್ಯಾದಿಗಳ ಮೂಲಕ ಚಿತ್ರಗಳಿಗೆ ಪರೋಕ್ಷ ಪ್ರಚಾರವನ್ನು ನೀಡಿದ್ದಾರೆ. ಈ ಬಗೆಯ ಪ್ರಚಾರ ಚಿತ್ರ ನಿರ್ಮಾಪಕರಿಗೆ ಉಚಿತವಾಗಿ, ನಿರಂತರವಾಗಿ ದೊರೆಯುತ್ತಲೇ ಬಂದಿದೆ. ಒಂದು ಲೆಕ್ಕದಲ್ಲಿ ನೋಡಿದರೆ ನಿರ್ಮಾಪಕರೊಬ್ಬರು ತಮ್ಮ ಚಿತ್ರದ ಬಗ್ಗೆ ಪತ್ರಿಕೆಗಳಲ್ಲಿ ನೀಡುವ ಜಾಹಿರಾತುಗಳಿಗಾಗಿ ಖರ್ಚು ಮಾಡುವ ಹಣದ ಮೌಲ್ಯಕ್ಕಿಂತ ಹಲವು ಪಟ್ಟು ಮೌಲ್ಯ ತಗುಲಬಹುದಾದಷ್ಟು ಪ್ರಚಾರವನ್ನು ಪತ್ರಿಕೆಗಳಿಂದ ಉಚಿತವಾಗಿಯೇ ಪಡೆಯುತ್ತಾರೆ. ಪತ್ರಿಕೆಗಳ ಬೆಳವಣಿಗೆಗೂ ಚಲನಚಿತ್ರ ಸುದ್ದಿಗಳು ಚಿತ್ರಗಳು, ಸಂದರ್ಶನಗಳು, ಗಾಸಿಪ್‌ಗಳು, ವಿಮರ್ಶೆಗಳು, ವಿಶ್ಲೇಷಣೆಗಳು ಮುಖ್ಯ. ಆದರೆ ಅದೇ ಸಮಯದಲ್ಲಿ ಪತ್ರಕರ್ತರು ಉದ್ಯಮವನ್ನು ಗಮನೀಯವಾಗಿ ಬೆಳೆಸಿಕೊಂಡು ಬಂದಿರುವುದೂ ಅಷ್ಟೇ ನಿಜ. ಚಲನಚಿತ್ರ ಜಾಹಿರಾತುಗಳಿಂದ ಪತ್ರಿಕೆಗಳಿಗೆ ಆಗುವ ಸಂಪಾದನೆ ತೀರಾ ಗೌಣ. ಎಲ್ಲ ಪತ್ರಿಕೆಗಳಿಗೂ ಸಿನಿಮಾ ಜಾಹಿರಾತುಗಳು ಸಿಗುವುದಿಲ್ಲ. ಆದರೂ ಓದುಗರಿಗೆ ಪತ್ರಿಕೆಗಳ ಚಲನಚಿತ್ರ ಪುರವಣಿಗಳು ಒಂದು ದೊಡ್ಡ ಆಕರ್ಷಣೆ. ಈ ನಡುವೆ ಚಿತ್ರರಂಗದ ಪ್ರಮುಖ ಚಟುವಟಿಕೆಗಳನ್ನು, ಘಟನೆಗಳನ್ನು ತಮ್ಮ ಸುದ್ದಿ ಕಾಲಂಗಳಲ್ಲಿಯೇ ದಿನಪತ್ರಿಕೆಗಳು ಪ್ರಕಟಿಸಲು ಪ್ರಾರಂಭಿಸಿರುವುದಕ್ಕೂ ಇದೇ ಕಾರಣ, ಆದರೆ ಚಿತ್ರೋದ್ಯಮಕ್ಕೆ ಇವರಿಂದ ಆಗಿರುವ ಉಪಕಾರ ಅಪಾರ.

ಎಲ್ಲ ಪತ್ರಿಕೆಗಳಿಗೂ ಚಲನಚಿತ್ರ ಜಾಹಿರಾತುಗಳು ಲಭ್ಯವಾಗದಿರುವುದು ಒಂದು ರೀತಿಯ ವಿಪರ್ಯಾಸವೇ ಹೌದು. ಈಚೆಗೆ ಜಿಲ್ಲಾವಾರು ವಿತರಣಾ ವ್ಯವಸ್ಥೆ ಜಾರಿಗೆ ಬಂದ ನಂತರ ಕೆಲವು ಜಿಲ್ಲಾ ಮಟ್ಟದ ಪತ್ರಿಕೆಗಳಿಗೆ ಸ್ಥಳೀಯ ಹಂಚಿಕೆದಾರರು, ಕೆಲವೊಮ್ಮೆ ಪ್ರದರ್ಶಕರು, ಜಾಹಿರಾತುಗಳನ್ನು ನೀಡುತ್ತಿದ್ದರೂ ರಾಜ್ಯ ಮಟ್ಟದಲ್ಲಿ ಚಲನಚಿತ್ರ ಜಾಹಿರಾತುಗಳು ಪ್ರಕಟವಾಗುವುದು ಮೂರು ನಾಲ್ಕು ಪತ್ರಿಕೆಗಳಲ್ಲಿ ಮಾತ್ರ. ಆದರೆ ಇಲ್ಲಿಯೂ ಪತ್ರಿಕೆಗಳ ಪ್ರಸಾರ ಸಂಖ್ಯೆಗೂ, ಚಲನಚಿತ್ರ ಜಾಹಿರಾತುಗಳಿಗಾಗಿ ಪತ್ರಿಕೆಗಳ ಆಯ್ಕೆಗೂ ಸಂಬಂಧವೇ ಇಲ್ಲ. ಇದಕ್ಕೆ ಮೂಲ ಕಾರಣವೆಂದರೆ ಅಧಿಕ ಪ್ರಸಾರವಿರುವ ದಿನಪತ್ರಿಕೆಗಳ ಜಾಹಿರಾತು ದರಗಳು ದುಬಾರಿ. ಚಲನಚಿತ್ರ ಜಾಹಿರಾತುಗಳಿಗೆ ಈ ದರಗಳನ್ನು ಕಡಿಮೆ ಮಾಡಲು ಅನೇಕ ಪತ್ರಿಕೆಗಳು ಸಿದ್ಧವಾಗಿಲ್ಲ. ಒಂದು ವೇಳೆ ಇದ್ದರೂ ವಾಣಿಜ್ಯ ಜಾಹಿರಾತುಗಳ ದರಗಳಿಗೂ, ಚಲನಚಿತ್ರ ಜಾಹಿರಾತುಗಳ ದರಗಳಿಗೂ ಬಹಳ ಅಂತರವಿರಬಾರದೆನ್ನುವುದು ಅವುಗಳ ನೀತಿ. ಇಂತಹ ಅಂತರಕ್ಕೆ ಒಪ್ಪುವ ಪತ್ರಿಕೆಗಳಿಗೆ ಮಾತ್ರ ಚಲನಚಿತ್ರ ಜಾಹಿರಾತುಗಳು ಬಿಡುಗಡೆಯಾಗುತ್ತಿವೆ. ಒಂದರ್ಥದಲ್ಲಿ ಚಲನಚಿತ್ರ ಜಾಹಿರಾತುಗಳು ಸುದ್ದಿಗಳಷ್ಟೇ ವಾಚಕರ ಗಮನವನ್ನು ಸೆಳೆಯುವುದರಿಂದ ಅವುಗಳಿಂದಾಗಿ ಪತ್ರಿಕೆಗಳ ಪ್ರಸಾರವು ಹೆಚ್ಚಲೆಂಬ ಕಾರಣದಿಂದ ಕೆಲವು ಪತ್ರಿಕೆಗಳು ಇಷ್ಟು ದೊಡ್ಡ ಅಂತರಕ್ಕೆ ಒಪ್ಪಿವೆ. ಹೀಗಾಗಿ ಅತ್ಯಧಿಕ ಪ್ರಸಾರವುಳ್ಳ ಪತ್ರಿಕೆಗಳಲ್ಲಿ ಚಲನಚಿತ್ರ ಜಾಹಿರಾತುಗಳಿಲ್ಲ. ಅವಕ್ಕಿಂತ ಗಮನೀಯವಾಗಿ ಕಡಿಮೆ ಪ್ರಸಾರವುಳ್ಳ ಪತ್ರಿಕೆಗಳಲ್ಲಿ ಅಂತಹ ಜಾಹಿರಾತುಗಳು

ರಾರಾಜಿಸುತ್ತಿವೆ. ಚಿತ್ರೋದ್ಯಮವನ್ನು ಬಿಟ್ಟು ಇನ್ಯಾವ ಉದ್ಯಮವೂ ಇಂತಹ ವ್ಯವಸ್ಥೆಯನ್ನು ಒಪ್ಪುವುದಿಲ್ಲ. ಆದರೆ ಅನೇಕ ಅನಗತ್ಯ ಬಾಬುಗಳಿಗೆ ಹಣವನ್ನು ಸುರಿಯುವ ಚಿತ್ರೋದ್ಯಮ ಪ್ರಚಾರದ ಪ್ರಶ್ನೆ ಬಂದಾಗ ಮಾತ್ರ ಕೈ ಹಿಡಿಯುತ್ತದೆ, ಪತ್ರಿಕೆಗಳಲ್ಲಿ ಕಾಲಂಗಟ್ಟಲೆ ಪುಕ್ಕಟೆ ಸಿಗುವ ಪ್ರಚಾರವೇ ಸಾಕೆಂಬ ಧೋರಣೆ ತಾಳುತ್ತದೆ. ಇದೊಂದು ವಿಚಿತ್ರವೆನಿಸಿದರೂ ನಡೆದುಕೊಂಡು ಬಂದಿರುವ ವಾಸ್ತವ ಪರಿಸ್ಥಿತಿ.

ಇತ್ತೀಚೆಗೆ ಕೆಲವು ಸಾಹಸಿ ನಿರ್ಮಾಪಕರು ಕನ್ನಡ ಚಿತ್ರೋದ್ಯಮವನ್ನು ಪ್ರವೇಶಿಸಿ ಕೋಟಿ ಕೋಟಿ ರೂಪಾಯಿಗಳ ವೆಚ್ಚದಲ್ಲಿ ಅದ್ದೂರಿ ಚಿತ್ರಗಳನ್ನು ನಿರ್ಮಿಸುವ ಹೊಸ ಪರಂಪರೆ ಪ್ರಾರಂಭವಾದ ಮೇಲೆ ಪತ್ರಿಕಾ ಜಾಹಿರಾತುಗಳ ಗಾತ್ರ ಬಡಾಯಿಸುತ್ತಿದೆ. ಪೂರ್ಣ ಪುಟದ ಜಾಹಿರಾತುಗಳೂ, ಎರಡು ಪುಟಗಳಷ್ಟು ವರ್ಣಮಯ 'ಸ್ಪ್ರೆಡ್'ಗಳೂ ಇಂದು ಸಾಮಾನ್ಯವೆನಿಸಿಬಿಟ್ಟಿವೆ. ಇದರಿಂದಾಗಿ ಅನೇಕ ಸಣ್ಣ ಚಿತ್ರಗಳೂ ಸಾಮಾನ್ಯ ಜನರನ್ನು ಮುಟ್ಟಲಾಗದ ಚಿತ್ರಗಳೂ ಇಂತಹ ಆಕರ್ಷಣೆಗೆ ಒಳಗಾಗಲು ಪ್ರಾರಂಭಿಸಿವೆ. ಈ ಪದ್ಧತಿ ತರ್ಕರಹಿತ. ಆದ್ದರಿಂದಲೇ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಮಧ್ಯೆ ಪ್ರವೇಶಿಸಿ ಜಾಹಿರಾತುಗಳ ಗಾತ್ರವನ್ನು ನಿಯಂತ್ರಿಸುವ ಕಾರ್ಯಕ್ಕೆ ಕೈ ಹಾಕಿದೆ. ಹಿಂದೆ ಕೂಡ ಒಮ್ಮೆ ವಾಣಿಜ್ಯ ಮಂಡಳಿ ಇದೇ ರೀತಿಯ ನಿಯಮಗಳನ್ನು ಜಾರಿಗೆ ತಂದಿತ್ತು. ಆದರೆ ಅವು ಹೆಚ್ಚು ಕಾಲ ಉಳಿಯಲಿಲ್ಲ. ಕೋಟ್ಯಂತರ ರೂಪಾಯಿಗಳ ವೆಚ್ಚದಲ್ಲಿ ಚಿತ್ರಗಳು ತಯಾರಾಗಲಾರಂಭಿಸಿರುವಾಗ ಇಂತಹ ನಿಯಂತ್ರಣ ಎಷ್ಟರ ಮಟ್ಟಿಗೆ ಯಶಸ್ವಿಯಾಗಬಹುದೆಂಬುದರ ಬಗ್ಗೆ ಪ್ರಾಮಾಣಿಕ ಅನುಮಾನವಿದ್ದೇ ಇದೆ.

ಯಾವುದೇ ಚಿತ್ರದ ಬಿಡುಗಡೆಯ ಸಂದರ್ಭದಲ್ಲಿ ಪತ್ರಿಕಾ ಜಾಹಿರಾತನ್ನು ಕುರಿತಂತೆ ಒಂದು ಅಂದಾಜು ಬಜೆಟ್ ಹಾಕಿಕೊಳ್ಳುವುದು ಹಿಂದೆ ಜಾರಿಯಲ್ಲಿದ್ದ ಪದ್ಧತಿ. ಪ್ರಚಾರದ ಏಜೆಂಟರು ಎಲ್ಲ ಪತ್ರಿಕೆಗಳ ಜಾಹಿರಾತು ದರಗಳ ಪಟ್ಟಿಯನ್ನು ಚಿತ್ರದ ಹಂಚಿಕೆದಾರರಿಗೆ ನೀಡುತ್ತಿದ್ದರು, ಹಂಚಿಕೆದಾರರು-ನಿರ್ಮಾಪಕರು-ಏಜೆಂಟರು ಪರಸ್ಪರ ಸಮಾಲೋಚಿಸಿ ಯಾವ ಪತ್ರಿಕೆಗೆ ಎಷ್ಟು ಮೊತ್ತದ ಜಾಹಿರಾತೆಂದು ನಿರ್ಧರಿಸಿ ಬಜೆಟ್ ಹಾಕಿಕೊಳ್ಳುತ್ತಿದ್ದರು. ಈ ವೆಚ್ಚ ಚಿತ್ರದ ಯೋಗ್ಯತೆಯನ್ನು ಅವಲಂಬಿಸಿರುತ್ತದೆ. ಆದರೆ ಈಗ ಪ್ರಚಾರಕ್ಕೆ ನಿಗದಿತ ಬಜೆಟ್ ಎಂಬುದೇ ಇಲ್ಲ. ಒಂದೆರಡು ಲಕ್ಷದಿಂದ ೨೫ ಲಕ್ಷದವರೆಗೂ ಖರ್ಚಾದ ದಾಖಲೆಗಳಿವೆ.

(ಚಿತ್ರ ೯) 'ಹಂಸಗೀತೆ'ಯ ಕಲಾತ್ಮಕ ಪ್ರತಿಬಿಂಬ

ಸಾಮಾನ್ಯವಾಗಿ ನಿರ್ಮಾಪಕರು ತಮ್ಮ ಚಿತ್ರದ ತಯಾರಿಕಾ ವೆಚ್ಚದಲ್ಲಿ ಪ್ರಚಾರ ಹಾಗೂ ಪ್ರಿಂಟುಗಳಿಗೆ ಇಷ್ಟು ಮೊತ್ತವೆಂದು ನಿಗದಿ ಮಾಡಿಕೊಳ್ಳುವುದು ಪದ್ಧತಿ. ಇದನ್ನು 'ಪ್ರಿಂಟ್ ಅಂಡ್ ಪಬ್ಲಿಸಿಟಿ ಅಮೌಂಟ್' ಎಂದು ಕರೆಯುತ್ತಿದ್ದರು. ಒಟ್ಟಾರೆ ಪ್ರಚಾರಕ್ಕಾಗಿ ಅಂದಾಜು ಮಾಡಿದ ಮೊತ್ತದಲ್ಲಿಯೇ ಪೋಸ್ಟರ್ಸ್, ಲಿಥೋಸ್, ಫೋಟೋಕಾರ್ಡ್ಸ್ ಸ್ಟಿಕರ್ಸ್, ಬ್ಯಾನರ್ಸ್, ಚಿತ್ರಮಂದಿರಗಳ ಅಲಂಕಾರ, ರೇಡಿಯೋ-ಟಿ.ವಿ., ಪ್ರಚಾರ, ಇತರೆ ಪ್ರಚಾರ ವಿಧಾನಗಳು, ಮತ್ತು ಪತ್ರಿಕಾ ಜಾಹಿರಾತುಗಳ ವೆಚ್ಚವೂ ಸೇರಿರುತ್ತದೆ. ಇದು ಕನ್ನಡ ಚಿತ್ರಗಳ ಹಂಚಿಕಾ ವ್ಯವಸ್ಥೆ ಕೇಂದ್ರೀಕೃತವಾಗಿದ್ದ ಕಾಲದವರೆಗೂ ನಡೆದು ಬಂದ ಪದ್ಧತಿ. ಚಿತ್ರಗಳನ್ನು ಜಿಲ್ಲಾವಾರು ಮಾರಾಟ ಮಾಡುವ ವ್ಯವಸ್ಥೆ ಆರಂಭವಾದ ಮೇಲೆ ಬಿಡುಗಡೆಯ ಪೂರ್ವದ ಜಾಹಿರಾತಿನ ವೆಚ್ಚವನ್ನು ನಿರ್ಮಾಪಕರೇ ಭರಿಸತೊಡಗಿದರು. ಜಿಲ್ಲಾವಾರು ಹಂಚಿಕೆದಾರರು ಚಿತ್ರದ ಬಿಡುಗಡೆಯ ನಂತರದ ಜಾಹಿರಾತುಗಳ ಹೊಣೆ ಹೊತ್ತರು.

ಪತ್ರಿಕೆಗಳಿಗೆ ಸಿನಿಮಾ ಜಾಹಿರಾತುಗಳು ಕೆಲವು ಪ್ರಚಾರ ಸಂಸ್ಥೆಗಳ ಮೂಲಕ ಬಿಡುಗಡೆಯಾಗುತ್ತವೆ. ಈ ವ್ಯವಸ್ಥೆಯಲ್ಲಿಯೂ ಒಂದು ವಿಪರ್ಯಾಸವಿದೆ. ಒಂದು ಚಿತ್ರದ ಪ್ರಚಾರವನ್ನು ಮೊದಲಿನಿಂದ ಕೊನೆಯವರೆಗೆ ನಿಯೋಜಿಸಿ, ಅದಕ್ಕೆ ತಕ್ಕ ಪರಿಕರಗಳನ್ನು ಸಿದ್ಧಪಡಿಸಿಕೊಂಡು, ತನ್ನ ಪರಿಣತಿಯನ್ನು ಬಳಸುವ ಪ್ರಚಾರ ಸಂಸ್ಥೆಗೆ ನಿರ್ಮಾಪಕನಾಗಲಿ, ನಿರ್ದೇಶಕನಾಗಲಿ ಚಿಕ್ಕಾಸೂ ಕೊಡುವುದಿಲ್ಲ. ಜಾಹಿರಾತುಗಳನ್ನು ಬಿಡುಗಡೆ ಮಾಡಿದ್ದಕ್ಕಾಗಿ ಪತ್ರಿಕಾ ಸಂಸ್ಥೆಗಳು ಒಟ್ಟು ಬಿಲ್ ಮೊತ್ತದ ಮೇಲೆ ಕೊಡುವ ಶೇ.೧೦ರಿಂದ ೧೫ ಕಮಿಷನ್ ಮಾತ್ರ ಪ್ರಚಾರ ಸಂಸ್ಥೆಯ ಸಂಪಾದನೆ. ಈ ಸಂಪಾದನೆಗೂ ಪ್ರಚಾರ ಸಂಸ್ಥೆಯ ಕ್ರಿಯಾಶಕ್ತಿಗೂ ಯಾವ ಸಂಬಂಧವೂ ಇಲ್ಲ. ಜಾಹಿರಾತುಗಳನ್ನು ವಿನ್ಯಾಸಗೊಳಿಸಿದ ಕಲಾವಿದನಿಗೆ ಮಾತ್ರ ನಿರ್ಮಾಪಕ ಸಂಭಾವನೆ ಕೊಡುತ್ತಾನೆ. ಆದರೆ ಅದು ಕೂಡ ಹೇಳಿಕೊಳ್ಳುವಂಥ ಸಂಭಾವನೆಯೇನೂ ಅಲ್ಲ. ಅದರಿಂದಾಗಿಯೇ ನಮ್ಮ ಚಲನಚಿತ್ರ ಜಾಹಿರಾತುಗಳಲ್ಲಿ ವೈವಿಧ್ಯ ಸಾಲದು. ಈ ಪರಿಸ್ಥಿತಿ ಇತ್ತೀಚೆಗೆ ತಕ್ಕಮಟ್ಟಿಗೆ ಸುಧಾರಿಸುತ್ತಿದ್ದರೂ ಈ ಸುಧಾರಣೆ ಸಾಲದು. ಪ್ರಚಾರ ಸಂಸ್ಥೆಗಳಲ್ಲಿ ಸೃಜನಶೀಲತೆ ಹೆಚ್ಚಾಗಿ ಬೆಳೆಯಲಿಲ್ಲ. ನಾವು ಚಲನಚಿತ್ರ ಜಾಹಿರಾತುಗಳಲ್ಲಿ ಕಾಣುತ್ತಿರುವ ಅಲ್ಪಸ್ವಲ್ಪ ಸೃಜನಶೀಲತೆಗೂ ಎಷ್ಟೋ ಸಾರಿ ಕಲಾವಿದ ಕಾರಣನೇ ಹೊರತು ಪ್ರಚಾರ ಸಂಸ್ಥೆಗಳಲ್ಲ. ಇಂತಹ ವ್ಯವಸ್ಥೆಯಿಂದಾಗಿ ಬಹುತೇಕ ಚಲನಚಿತ್ರ ಪ್ರಚಾರ ಸಂಸ್ಥೆಗಳು ವಾಣಿಜ್ಯ ಪ್ರಪಂಚದಲ್ಲಿನ ಇತರ ಪ್ರಚಾರ ಸಂಸ್ಥೆಗಳಷ್ಟು ಸೃಜನಶೀಲತೆಯನ್ನು ಬೆಳೆಸಿಕೊಂಡಿಲ್ಲ.

ಚಿತ್ರಾ ಪಬ್ಲಿಸಿಟೀಸ್, ಕಟಕ ಅಡ್ವರ್ಟೈಸಿಂಗ್, ಶುಭಾ ಅಡ್ವರ್ಟೈಸಿಂಗ್, ವಿಜಯಾ ಪಬ್ಲಿಸಿಟೀಸ್, ಎಂಪೈರ್ ಪಬ್ಲಿಸಿಟೀಸ್ ಬೆಂಗಳೂರಿನಲ್ಲಿ ೬೦-೭೦ರ ದಶಕಗಳಲ್ಲಿ ಬಹಳ ಚಟುವಟಿಕೆಯಿಂದಿದ್ದ ಪ್ರಚಾರ ಸಂಸ್ಥೆಗಳು. ಎಂಪೈರ್ ಸಂಸ್ಥೆ ಪತ್ರಿಕಾ ಜಾಹಿರಾತುಗಳನ್ನು ಬಿಡುಗಡೆ ಮಾಡುವುದು ಮಾತ್ರವಲ್ಲದ ಹೊರಾಂಗಣ ಪ್ರಚಾರದಲ್ಲಿ ಹೆಚ್ಚಿನ ಅನುಭವ ಗಳಿಸಿತ್ತು. ಪೋಸ್ಟರ್‌ಗಳು, ಬ್ಯಾನರ್‌ಗಳು, ಹೋರ್ಡಿಂಗ್‌ಗಳು ಕೂಡ ಅದರ ಕಾರ್ಯವ್ಯಾಪ್ತಿಯಲ್ಲಿದ್ದವು. ಈ ಸಂಸ್ಥೆಗಳಲ್ಲದೆ ಕೆಲವು ವ್ಯಕ್ತಿಗಳೂ ಈ ಕ್ಷೇತ್ರದಲ್ಲಿ ಸಕ್ರಿಯವಾಗಿದ್ದರು. ಅವರ ಪೈಕಿ ಎಂ.ಹೀರಾನಾಥರಾವ್ ಅವರ ಹೆಸರು ಉಲ್ಲೇಖನೀಯ. ಆದರೆ ಅವರು ಹೆಚ್ಚಾಗಿ ಇಂಗ್ಲಿಷ್ ಮತ್ತು ಹಿಂದಿ ಚಿತ್ರಗಳಿಗೆ ಪ್ರಚಾರ ಮಾಡುತ್ತಿದ್ದುದರಿಂದ ಕನ್ನಡ ಚಿತ್ರೋದ್ಯಮಕ್ಕೆ ಅವರು ಹೆಚ್ಚು ಪರಿಚಿತರಾಗಿರಲಿಲ್ಲ.

ಒಂದೊಂದು ಹಂಚಿಕಾ ಸಂಸ್ಥೆಯೂ ಒಂದೊಂದು ಪ್ರಚಾರ ಸಂಸ್ಥೆಯೊಂದಿಗೆ ಸಂಪರ್ಕವನ್ನಿಟ್ಟುಕೊಂಡಿತ್ತು. ಜೊತೆಗೆ ಕೆಲವು ದೊಡ್ಡ ನಿರ್ಮಾಪಕರೂ ಈ ಸಂಸ್ಥೆಗಳ ಸೇವೆಯನ್ನು ಪಡೆಯುತ್ತಿದ್ದರು.

ಚಿತ್ರಾ, ಕಟಕ ಮತ್ತು ಶುಭಾ ಸಂಸ್ಥೆಗಳು ಒಂದೇ ಕುಟುಂಬದವರು ನಡೆಸುತ್ತಿದ್ದ ಸಂಸ್ಥೆಗಳಾದ್ದರಿಂದ ಒಡೆಯದೆ ಮುಂದುವರಿದುಕೊಂಡು ಬಂದವು. ಆದರೆ ವಿಜಯ ಪಬ್ಲಿಸಿಟೀಸ್ ಅಂತಹ ಕೌಟುಂಬಿಕ ಸಂಸ್ಥೆಯಲ್ಲದ್ದರಿಂದ ಒಡೆದು ಅದರ ನಿರ್ವಾಹಕರಾಗಿದ್ದ ಜಿ.ಕೆ.ಟಿ.ಅಯ್ಯಂಗಾರ್ ತಮ್ಮದೇ ಆದ ಜಿ.ಕೆ.ಟಿ. ಅಡ್ವರ್ಟೈಸಿಂಗ್ ಸಂಸ್ಥೆಯನ್ನು ಪ್ರಾರಂಭಿಸಿದರು. ಸಂಸ್ಥೆಯಲ್ಲಿದ್ದ ಮತ್ತೊಬ್ಬ ನೌಕರ ಸೂರ್ಯನಾರಾಯಣ ಸ್ವತಂತ್ರರಾಗಿ ಮಣಿ ಎಂಟರ್‌ಪ್ರೈಸಸ್ ಸಂಸ್ಥೆಯನ್ನು ಸ್ಥಾಪಿಸಿ ಇಂದಿನವರೆಗೂ ನಡೆಸಿಕೊಂಡು ಬಂದಿದ್ದಾರೆ. ಜಿ.ಕೆ.ಟಿ. ಅಯ್ಯಂಗಾರ್ ಇಂದು ನಮ್ಮೊಂದಿಗಿಲ್ಲ.

(ಚಿತ್ರ ೧೦) ಉಪೇಂದ್ರನ ವಿಭಿನ್ನ ರೂಪ

ನಂತರ ಈ ಕ್ಷೇತ್ರವನ್ನು ಪ್ರವೇಶಿಸಿದ ಪ್ರಚಾರ ಸಂಸ್ಥೆಗಳಲ್ಲಿ ಪ್ರಮುಖವೆನಿಸಿದವು ಛಾಯಾಗ್ರಾಹಕ ಬಿ.ಎಸ್.ಆಚಾರ್ ಅವರ ಅಶ್ವಿನಿ ಪಬ್ಲಿಸಿಟೀಸ್ ಮತ್ತು ರಾಮದಾಸ್ ಅವರ ರಾಮ್ ಅಡ್ವರ್ಟೈಸಿಂಗ್.

ಇದೇ ರೀತಿ ಹುಬ್ಬಳ್ಳಿ ಮತ್ತು ಮಂಗಳೂರುಗಳಲ್ಲಿಯೂ ಕೆಲವು ಜಾಹಿರಾತು ಸಂಸ್ಥೆಗಳು ಚಲನಚಿತ್ರ ಪ್ರಚಾರಕ್ಕೆ ವಿಶೇಷ ಗಮನ ಕೊಟ್ಟವು. ಹುಬ್ಬಳ್ಳಿಯ ಕಡಕೋಳ್ ಪಬ್ಲಿಸಿಟೀಸ್ ಬಹಳ ವರ್ಷಗಳಿಂದ ಅಸ್ತಿತ್ವದಲ್ಲಿರುವ ಪ್ರತಿಷ್ಠಿತ ಸಂಸ್ಥೆ.

ಬೆಂಗಳೂರಿನ ಚಿತ್ರಾ ಪಬ್ಲಿಸಿಟೀಸ್ ಮಾಲೀಕ ಹೆಚ್.ವೆಂಕೋಬರಾಯರು ಚಲನಚಿತ್ರ ಮಾಸಪತ್ರಿಕೆ 'ವಾಕ್ಚಿತ್ರ'ದ ಮಾಲೀಕರು ಕೂಡ. ೬೦-೭೦ರ ದಶಕಗಳಲ್ಲಿ ಪ್ರಖ್ಯಾತ ನಿರ್ಮಾಣ ಸಂಸ್ಥೆಗಳಾಗಿದ್ದ ಬಿ.ಆರ್. ಪಂತುಲುರವರ ಪದ್ಮಿನಿ ಪಿಕ್ಚರ್ಸ್, ಆರ್.ನಾಗೇಂದ್ರರಾಯರ ಆರ್.ಎನ್.ಆರ್.ಪಿಕ್ಚರ್ಸ್, ಬಿ.ಎಸ್.ರಂಗಾರವರ ವಿಕ್ರಂ ಪ್ರೊಡಕ್ಷನ್ಸ್ ಮತ್ತು ನಂತರ ದೊಡ್ಡ ಪ್ರಮಾಣದಲ್ಲಿ ನಿರ್ಮಾಣಕ್ಕಿಳಿದ ರಾಜಕುಮಾರ್‌ರವರ ಸಂಸ್ಥೆಗಳಿಗೆ ಅವರೇ ಪ್ರಚಾರ ಸಂಯೋಜಕರು. ವೃದ್ಧಾಪ್ಯದಲ್ಲಿಯೂ ಅವರು ತಮ್ಮ ಸಂಸ್ಥೆಯನ್ನು ಮುಂದುವರಿಸಿಕೊಂಡು ಬಂದಿದ್ದಾರೆ.

ಅಂದಿನ ದಿನಗಳಲ್ಲಿ ಕನ್ನಡ ಚಿತ್ರಗಳ ನಿರ್ಮಾಣ ಮದರಾಸಿನಲ್ಲಿಯೇ ಕೇಂದ್ರೀಕೃತವಾಗಿದ್ದರೂ ಪಂತುಲು, ನಾಗೇಂದ್ರರಾವ್, ರಂಗಾ ಮುಂತಾದ ಪ್ರತಿಷ್ಠಿತ ನಿರ್ಮಾಪಕರ ಹಿತವನ್ನು ಬೆಂಗಳೂರಿನಲ್ಲಿ ಕಾಪಾಡುತ್ತಿದ್ದ ಹಿರಿಮೆ ವೆಂಕೋಬರಾಯರದು. ತಮ್ಮದೇ ಆದ ಮುದ್ರಣ ಸಂಸ್ಥೆ ಚಿತ್ರಾ ಪ್ರಿಂಟರಿಯಲ್ಲಿ ಅತ್ಯಧಿಕ ಸಂಖ್ಯೆಯಲ್ಲಿ ಕನ್ನಡ ಚಿತ್ರಗಳ ಹಾಡಿನ ಪುಸ್ತಕಗಳನ್ನು ಮುದ್ರಿಸಿದ ದಾಖಲೆಯನ್ನು ಮಾಡಿದ ವೆಂಕೋಬರಾಯರು ತಮ್ಮ ಪ್ರಚಾರ ಸಂಸ್ಥೆಗೆ ಚಿತ್ರಾ ಪಬ್ಲಿಸಿಟೀಸ್ ಎಂಬ ಹೆಸರನ್ನಿಡಲು ಕಾರಣ ಅವರಿಗೂ ಮತ್ತು ಕನ್ನಡ ಚಿತ್ರರಂಗಕ್ಕೂ ಇದ್ದ ನಿಕಟವಾದ ನಂಟು. ಆಗಿನ ಕಾಲದಲ್ಲಿ ಬಹುತೇಕ ಕನ್ನಡ ಚಿತ್ರಗಳು ಮದರಾಸಿನಲ್ಲಿಯೇ ತಯಾರಾಗುತ್ತಿದ್ದರಿಂದ ಅಲ್ಲಿಗೆ ಬೆಂಗಳೂರಿನಿಂದ ಪತ್ರಕರ್ತರನ್ನು ಕರದೊಯ್ದು ಶೂಟಿಂಗ್ ತೋರಿಸುವ, ನಟ ನಟಿಯರನ್ನು, ತಂತ್ರಜ್ಞರನ್ನು ಭೇಟಿ ಮಾಡಿಸುವ ಸಂಪ್ರದಾಯವನ್ನು ಪ್ರಾರಂಭಿಸಿದವರೇ ವೆಂಕೋಬರಾಯರು.

ಅಂದಿನ ಕಾಲದಲ್ಲಿ ಚಿತ್ರಾ ಪಬ್ಲಿಸಿಟೀಸ್‌ನ ನಿರ್ವಾಹಕರಾಗಿದ್ದ ಹೆಚ್.ವಿ. ನಾರಾಯಣ್ ಅನೇಕ ವರ್ಷಗಳ ನಂತರ ರಾಜೀನಾಮೆಯಿತ್ತು ಕಟಕ ಅಡ್ವರ್ಟೈಸಿಂಗ್ ಮಾಲೀಕ ಎಸ್. ಎನ್.ಗುಪ್ತ ಅವರಿಗೆ ನೆರವಾದರು. ಗುಪ್ತ ಕ್ರಿಯಾಶೀಲ ವ್ಯಕ್ತಿ. ಏನನ್ನಾದರೂ ಹೊಸದಾಗಿ ಮಾಡಲೇಬೇಕೆನ್ನುವ ತುಡಿತ ಅವರದ್ದು. ತಾವು ಪ್ರಚಾರ ಮಾಡಿದ ಯಾವುದೇ ಚಿತ್ರವನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಿ ಅದಕ್ಕೆ ಯಾವ ರೀತಿಯ ಪ್ರಚಾರ ಹೆಚ್ಚು ಪ್ರಶಸ್ತವೆನ್ನುವುದನ್ನು ಗುಪ್ತ ನಿರ್ಧರಿಸುತ್ತಿದ್ದರು. ಕೇವಲ ಜಾಹಿರಾತುಗಳನ್ನು ಪತ್ರಿಕಾ ಕಾರ್ಯಾಲಯಗಳಿಗೆ ರವಾನಿಸುವುದರಲ್ಲಿ ಮಾತ್ರ ಅವರು ತೃಪ್ತರಾಗಲಿಲ್ಲ. ಚಲನಚಿತ್ರಗಳಿಗಾಗಿಯೇ ಪತ್ರಿಕೆಗಳು ಹೆಚ್ಚು ಸ್ಥಳವನ್ನು ಮೀಸಲಾಗಿ ಇಡದಿದ್ದ ಆ ದಿನಗಳಲ್ಲಿಯೂ ಅವರು ತಾವು ಪ್ರಚಾರ ನೀಡುತ್ತಿದ್ದ ಚಿತ್ರಗಳು ಪತ್ರಿಕೆಗಳಲ್ಲಿ ನಿರಂತರವಾಗಿ ಸುದ್ದಿಯಲ್ಲಿರುವಂತೆ ನೋಡಿಕೊಳ್ಳುತ್ತಿದ್ದರು. ವೃತ್ತಿಪರ ಪತ್ರಕರ್ತರ ನೆರವನ್ನು ಪಡೆದು ಆಕರ್ಷಕವಾದ 'ರೈಟ್ ಅಪ್'ಗಳನ್ನು, ಲೇಖನಗಳನ್ನು ಸಿದ್ಧಪಡಿಸಿ ಚಿತ್ರಗಳ ಬಗ್ಗೆ ಪ್ರೇಕ್ಷಕರ ಆಸಕ್ತಿಯನ್ನು ಕೆರಳಿಸುತ್ತಿದ್ದರು. ಅಂದಿನ ಪತ್ರಿಕಾ ಜಾಹಿರಾತುಗಳನ್ನು ಹೆಚ್ಚು ವೈವಿಧ್ಯಪೂರ್ಣವಾಗಿ, ಕಲಾತ್ಮಕವಾಗಿ ಮತ್ತು ಪರಿಣಾಮಕಾರಿಯಾಗಿ ವಿನ್ಯಾಸಗೊಳಿಸುತ್ತಿದ್ದ ಕೀರ್ತಿಯೂ ಗುಪ್ತರಿಗೆ ಸಲ್ಲಬೇಕು. ಅವರು ಸ್ವಾತಂತ್ರ್ಯ ಹೋರಾಟಗಾರರೂ ಆಗಿದ್ದರಿಂದ ರಾಜಕೀಯ ರಂಗದಲ್ಲಿ ಅವರಿಗಿದ್ದ ಪ್ರಭಾವವನ್ನು ಕನ್ನಡ ಚಿತ್ರಗಳ ಮತ್ತು ರಾಜ್ಯ ಸರ್ಕಾರದ ನಡುವೆ ಹೆಚ್ಚಿನ ಸಾಮರಸ್ಯವನ್ನುಂಟುಮಾಡಲು ಉಪಯೋಗಿಸಿಕೊಂಡರು. ಸಂಜೆಯಾಯಿತೆಂದರೆ ಹಳೆಯ ಪುಸ್ತಕ, ಪತ್ರಿಕೆಗಳ ಮಳಿಗೆಗಳಿಗೆ ಹೋಗಿ ಪರಭಾಷಾ ಪತ್ರಿಕೆಗಳಲ್ಲಿನ ಜಾಹಿರಾತುಗಳಲ್ಲಿ ತಾವು ಗುರುತಿಸಿದ ಆವಿಷ್ಕಾರಗಳನ್ನು ಸ್ಥಳೀಯ ವಿನ್ಯಾಸಕಾರರ ಗಮನಕ್ಕೆ ತಂದು ಅಂಥ ವಿನ್ಯಾಸಗಳನ್ನು ಕನ್ನಡ ಚಿತ್ರಗಳ ಜಾಹಿರಾತುಗಳಲ್ಲಿಯೂ ಅಳವಡಿಸುವುದರಲ್ಲಿ ಗುಪ್ತ ವಿಶೇಷ ಆಸ್ಥೆ ತೋರುತ್ತಿದ್ದರು. ಜಾಹಿರಾತುಗಳಿಗೆ ಆಕರ್ಷಕ 'ಕ್ಯಾಪ್ಷನ್'ಗಳನ್ನು ಕೊಟ್ಟವರಲ್ಲಿಯೂ ಅವರು ಮೊದಲಿಗರು. ಬೆಂಗಳೂರಿನಲ್ಲಿ ಅಂದಿನ ಪ್ರತಿಷ್ಠಿತ ನಿರ್ಮಾಣ/ವಿತರಣಾ ಸಂಸ್ಥೆಗಳಾಗಿದ್ದ ಕರ್ನಾಟಕ ಫಿಲಂಸ್, ವಿಜಯ ಪಿಕ್ಚರ್ಸ್ ಸರ್ಕ್ಯೂಟ್, ವಿಜಯ ಕಂಬೈನ್ಸ್‌ಗಳಿಗೆ ಜಾಹಿರಾತು ಸಲಹೆಗಾರರಾಗಿದ್ದ ಎಸ್. ಎನ್. ಗುಪ್ತ ೧೯೮೬ರಲ್ಲಿ ನಿಧನರಾದರು.

ಎ.ಸಿ.ನರಸಿಂಹಮೂರ್ತಿ ಮತ್ತು ಅವರ ಕೆಲವು ಮಿತ್ರರು ಸೇರಿ ಪ್ರಾರಂಭಿಸಿದ ವಿಜಯ ಪಬ್ಲಿಸಿಟೀಸ್ ಸಂಸ್ಥೆ ಕೂಡ ಸಾಕಷ್ಟು ಕ್ರಿಯಾತ್ಮಕ ಪ್ರಚಾರಕ್ಕೆ ಹೆಸರಾಯಿತು. ಆ ಸಂಸ್ಥೆಯ ಯಶಸ್ಸಿಗೆ ಮೂಲತಃ ಕಾರಣರು ಜಿ.ಕೆ.ಟಿ.ಅಯ್ಯಂಗಾರ್. ಸಂಸ್ಥೆ ಬಿಡುಗಡೆ ಮಾಡುತ್ತಿದ್ದ ಜಾಹಿರಾತುಗಳಿಗೆ ಆಕರ್ಷಕ 'ಕ್ಯಾಪ್ಷನ್'ಗಳನ್ನು ನೀಡುವುದರಲ್ಲಿ ಅವರ ಕೈವಾಡವಿತ್ತು. ನರಸಿಂಹಮೂರ್ತಿಗಳು ನಿರ್ಮಾಣ ಮತ್ತು ನಿರ್ದೇಶನಗಳಿಗೆ ಇಳಿದ ಮೇಲೆ ಅವರಿಗೆ ವಿಜಯ ಪಬ್ಲಿಸಿಟೀಸ್ ಬಗ್ಗೆ ಆಸಕ್ತಿಯೂ ಕಡಿಮೆಯಾಯಿತು. ಜಿ.ಕೆ.ಟಿ. ನಂತರ ತಮ್ಮದೇ ಆದ ಪ್ರಚಾರ ಸಂಸ್ಥೆಯನ್ನಾರಂಭಿಸಿ ಮಾಂಡ್ರೆ ಪಿಕ್ಚರ್ಸ್ ಹಂಚಿಕಾ ಸಂಸ್ಥೆಯೊಂದಿಗೆ ಒಡನಾಟವನ್ನು ಬೆಳೆಸಿಕೊಂಡರು. ೯೦ರ ದಶಕದಲ್ಲಿ ನಿಧನರಾದರು.

ಶುಭಾ ಅಡ್ವರ್ಟೈಸಿಂಗ್‌ನ ಎಂ.ಸುಬ್ಬಾಶಾಸ್ತ್ರಿಗಳ ಕಾರ್ಯವೈಖರಿಯೇ ಬೇರೆ. ಶುದ್ಧ ವ್ಯವಹಾರಗಳಿಗೆ ಹೆಸರಾದ ಅವರು ತಮ್ಮ ಸೇವೆಯನ್ನು ಪಡೆದ ಸಂಸ್ಥೆಗಳಿಂದ ವೇಳೆಗೆ ಸರಿಯಾಗಿ ಹಣ ಬರಲಿ, ಬಿಡಲಿ, ಪತ್ರಿಕೆಗಳಿಗೆ ಸಮಯಕ್ಕೆ ಸರಿಯಾಗಿ ಬಿಲ್‌ಗಳನ್ನು ಚುಕ್ತಾ ಮಾಡುವ ಸಂಪ್ರದಾಯವನ್ನು ಕೊನೆಯವರೆಗೂ ಬಿಟ್ಟುಕೊಡಲಿಲ್ಲ. ಹಳೆಯ ಮೌಲ್ಯಗಳನ್ನು ಭದ್ರವಾಗಿ ನಂಬಿದ್ದ ಶಾಸ್ತ್ರಿಗಳು ಗಾಂಧಿವಾದಿಗಳು ಕೂಡ. ಯಾವಾಗಲೂ ಕೇವಲ ಖಾದಿಯನ್ನೇ ಉಡುತ್ತಿದ್ದರು. ತಲೆಗೆ ಟೋಪಿ, ಪಂಚೆ, ಜುಬ್ಬಾ ಮತ್ತು ಶಾಲು







(ಚಿತ್ರ ೧೧-೧೩) ಎಸ್.ಎನ್.ಗುಪ್ತ ಹೆಚ್.ವೆಂಕೋಬರಾವ್ ಎಂ.ಸುಬ್ಬಾಶಾಸ್ತ್ರಿ

(ಚಿತ್ರ ೧೪) ಕಾಫಿ ವೀಡಿಯೋ ಪಾರ್ಲರ್ ಮುಂದೆ ನಕ್ಷತ್ರ - ಭಿತ್ತಿ ಚಿತ್ರ ಪ್ರಚಾರ

ಅವರ ಮೆಚ್ಚಿನ ವಸ್ತ್ರಗಳು. ತಾವೇ ಸೈಕಲ್ಲನ್ನೇರಿ ಬೆಳಿಗ್ಗೆಯಿಂದ ಸಂಜೆಯವರೆಗೆ ಗಾಂಧಿನಗರದ, ಪತ್ರಿಕಾಲಯಗಳ ಪರ್ಯಟನೆ ಮಾಡುತ್ತಿದ್ದ ಶಾಸ್ತ್ರಿಗಳು ಪ್ರಚಾರಕಾರ್ಯದಲ್ಲಿ ತಮ್ಮ ಮಕ್ಕಳಾದ ಶ್ರೀನಿವಾಸ್ ಮತ್ತು ರಾಮಮೂರ್ತಿಗಳಿಗೆ ತರಬೇತಿ ನೀಡಿದರು. ಇಂದು ಶ್ರೀನಿವಾಸ್ ತಮ್ಮ ಪುತ್ರರಾದ ಪ್ರಸಾದ್ ಮತ್ತು ಪ್ರವೀಣ್‌ರೊಂದಿಗೆ ಪ್ರವೀಣ್ ಅಡ್ವರ್ಟೈಸಿಂಗ್ ಸಂಸ್ಥೆಯನ್ನು ನಡೆಸುತ್ತಿದ್ದಾರೆ. ರಾಮಮೂರ್ತಿ ಸಣ್ಣ ಪ್ರಮಾಣದಲ್ಲಿ ಶುಭ ಅಡ್ವರ್ಟೈಸಿಂಗ್ ಸಂಸ್ಥೆಯನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರ.

ಕಟಕ ಅಡ್ವರ್ಟೈಸಿಂಗ್ ಮಾಲೀಕ ಎಸ್.ಎನ್.ಗುಪ್ತ ನಿಧನರಾಗುವ ಸ್ವಲ್ಪ ಮೊದಲು ಅನೇಕ ವರ್ಷಗಳ ಕಾಲ ಅವರಿಗೆ ಸಹಾಯಕರಾಗಿ ದುಡಿದ ಅವರ ಸೋದರಳಿಯ ಎಂ.ಪ್ರಭಾಕರ ಗುಪ್ತ ತಮ್ಮದೇ ಆದ ಎಂ.ಪಿ.ಜಿ. ಆ್ಯಡ್ಸ್ ಸಂಸ್ಥೆಯನ್ನು ಪ್ರಾರಂಭಿಸಿ ಬೃಹದಾಕಾರದಲ್ಲಿ ಬೆಳೆಸಿದರು. ಅವರ ಸಂಸ್ಥೆ ಎಷ್ಟು ವೇಗವಾಗಿ ಬೆಳೆಯಿತೆಂದರೆ ಪತ್ರಿಕಾ ಜಾಹಿರಾತುಗಳಲ್ಲಿ ಅರ್ಧಕ್ಕೂ ಹೆಚ್ಚು ಭಾಗ ಅವರ ಮೂಲಕವೇ ಬಿಡುಗಡೆಯಾಗುತ್ತಿತ್ತು. ಕೆಲವು ಚಲನಚಿತ್ರ ಪತ್ರಕರ್ತರ ನೆರವನ್ನು ಪಡೆದು ಚಿತ್ರಗಳ ಬಗ್ಗೆ ವೃತ್ತಿಪರ ಪ್ರಚಾರ ಸಾಮಗ್ರಿಯನ್ನು ಸಿದ್ಧಪಡಿಸುವ ಹೊಸ ಸಂಪ್ರದಾಯವನ್ನು ಪ್ರಾರಂಭಿಸಿದ ಪ್ರಭಾಕರ ಗುಪ್ತ ಇಂದಿಗೂ ತಮ್ಮ ಸಂಸ್ಥೆಯನ್ನು ನಡೆಸಿಕೊಂಡು ಬಂದಿದ್ದಾರೆ.

ಚಿತ್ರಾ ಮತ್ತು ಕಟಕ ಸಂಸ್ಥೆಗಳ ಮೇಲ್ಪಂಕ್ತಿಯನ್ನು ಅನುಸರಿಸಿಕೊಂಡು ಬಂದಿರುವ ಪ್ರಭಾಕರ ಗುಪ್ತ ತಾವು ಪ್ರಚಾರ ಮಾಡಿರುವ ಚಿತ್ರಗಳ ಸಂಖ್ಯೆಯ ದೃಷ್ಟಿಯಿಂದ ದಾಖಲೆಯನ್ನೇ ನಿರ್ಮಿಸಿದ್ದಾರೆ. ಅನೇಕ ಹೊಸ ಪ್ರತಿಭೆಗಳನ್ನು ಸಮೂಹ ಮಾಧ್ಯಮಗಳಿಗೆ ಪರಿಚಯ ಮಾಡಿಸಿಕೊಟ್ಟ ಹಿರಿಮೆಯೂ ಅವರದ್ದು.

ಹೆಚ್ಚಾಗಿ ತೆಲುಗು ಚಿತ್ರಗಳನ್ನು ವಿತರಿಸುತ್ತಿದ್ದ ನವಯುಗ ಪಿಕ್ಚರ್ಸ್‌ನ ಮಾಲೀಕರಾದ ಪಿ.ನಾರಾಯಣ ರಡ್ಡಿ ಯುನೈಟೆಡ್ ಆ್ಯಡ್ಸ್ ಹೆಸರಿನಲ್ಲಿ ತಮ್ಮದೇ ಆದ ಪ್ರಚಾರ ಸಂಸ್ಥೆಯನ್ನು ಪಾಲುಗಾರರೊಂದಿಗೆ ಪ್ರಾರಂಭಿಸಿ ಎಂ.ಪಿ.ಜಿ. ಆಡ್ಸ್‌ಗೆ ಸವಾಲೊಡ್ಡಿದರು. ಈಚೆಗೆ ಅವರು ಸ್ವತಂತ್ರವಾಗಿ ವಿಜಯ ಆ್ಯಡ್ಸ್ ಎಂಬ ಪ್ರಚಾರ ಸಂಸ್ಥೆಯನ್ನು ಸ್ಥಾಪಿಸಿದ್ದಾರೆ. ಹಿರಿಯ ಪತ್ರಕರ್ತ ಮತ್ತು ಸಂಗ್ರಹಕಾರ ಎಂ.ವಿ.ರಾಮಕೃಷ್ಣಯ್ಯನವರು ತಮ್ಮದೇ ಆದ ಎಂ.ವಿ.ಆರ್. ಆ್ಯಡ್ಸ್ ಸಂಸ್ಥೆಯನ್ನು ಪ್ರಾರಂಭಿಸಿ ಕೆಲವೊಂದು ಚಿತ್ರಗಳ ಪ್ರಚಾರಕರಾದರು. ಕಲಾವಿದ ರಾಮಚಂದ್ರ ಅಚ್ಚು ಆ್ಯಡ್ಸ್ ಹೆಸರಿನಲ್ಲಿ ಜಾಹಿರಾತು ಸಂಸ್ಥೆಯೊಂದನ್ನು ಹುಟ್ಟುಹಾಕಿ ಚಲನಚಿತ್ರ ಜಾಹಿರಾತುಗಳ ವಿನ್ಯಾಸದಲ್ಲಿ ಹೊಸತನ ಮೂಡಿಸುವ ಶ್ಲಾಘನೀಯ ಪ್ರಯತ್ನ ಮಾಡಿದರು. ಈ ಆಕರ್ಷಕ ಜಾಹಿರಾತುಗಳಿಗೆ ಇಂಗ್ಲಿಷ್ 'ಕ್ಯಾಪ್ಷನ್'ಗಳನ್ನು ಕೊಡುವ ಮೂಲಕ ಉದ್ಯಮದ, ಪತ್ರಿಕಾ ಓದುಗರ ವಿಶೇಷ ಗಮನವನ್ನು ಸೆಳೆದರು. ಪಾಪ್ಯುಲರ್ ಆ್ಯಡ್ಸ್ ಎಂಬ ನೂತನ ಸಂಸ್ಥೆಯೂ ಚಲನಚಿತ್ರ ಪತ್ರಿಕಾ ಪ್ರಚಾರ ಕ್ಷೇತ್ರದಲ್ಲಿ ಇಳಿದಿದೆ.

ಮೈಸೂರಿನಲ್ಲಿ ಬಹಳ ವರ್ಷಗಳ ಕಾಲ ರಂಗಕರ್ಮಿಯಾಗಿ, ಸ್ಥಿರಚಿತ್ರ ಛಾಯಾಗ್ರಾಹಕರಾಗಿ ದುಡಿದು ಹೆಸರು ಗಳಿಸಿಕೊಂಡಿದ್ದ ಬಿ.ಎಸ್.ಆಚಾರ್ ಬೆಂಗಳೂರಿಗೆ ಬಂದು ಒಬ್ಬಿಬ್ಬರು ನುರಿತ ಪತ್ರಕರ್ತರ ಸಹಯೋಗದೊಂದಿಗೆ ಆರಂಭಿಸಿದ ಅಶ್ವಿನಿ ಪಬ್ಲಿಸಿಟೀಸ್ ಸಂಸ್ಥೆ ಈ ಕ್ಷೇತ್ರದಲ್ಲಿ ಮಾಡಿದ ಕ್ರಿಯಾಶೀಲ ಕಾರ್ಯ ಗಮನಾರ್ಹ. ಈ ಸಂಸ್ಥೆ ಭಾರತದಲ್ಲಿ ಮೊಟ್ಟಮೊದಲ ಬಾರಿಗೆ ಬೆಂಗಳೂರಿಗೆ ಬಂದ ಸಿನಿರಮಾ ಚಿತ್ರಗಳಿಗೆ ಕಪಾಲಿ ಚಿತ್ರಮಂದಿರದ ಪಾಲುದಾರರಾಗಿದ್ದ ಡಿ.ರಾಜಗೋಪಾಲ್ ಅವರ ಉತ್ಸಾಹದ ಮೇಲೆ ಸೃಜನಶೀಲವೆನಿಸಬಹುದಾದ ಪತ್ರಿಕಾ ಪ್ರಚಾರವನ್ನು ನಡೆಸಿಕೊಟ್ಟಿತು. ವಿಶ್ವದ ಅಂದಿನ ಅತ್ಯಂತ ಪ್ರಮುಖ ಘಟನೆಗಳ ಆಧಾರದ ಮೇಲೆ ಸಣ್ಣ ಸಣ್ಣ ಆಕಾರದ ಜಾಹಿರಾತುಗಳಿಗೆ ತಲೆಬರಹಗಳನ್ನು ನೀಡಿ ಅಶ್ವಿನಿ ಪಬ್ಲಿಸಿಟೀಸ್ ಉದ್ಯಮದ, ಓದುಗರ ವಿಶೇಷ ಗಮನ ಸೆಳೆಯಿತು. ಈ ಸಂಸ್ಥೆ ೭೦ರ ದಶಕದಲ್ಲಿ ಬೆಂಗಳೂರಿನಲ್ಲಿ ಅಸ್ತಿತ್ವಕ್ಕೆ ಬಂದ ಬಹುತೇಕ ಚಿತ್ರಮಂದಿರಗಳ ಜಾಹಿರಾತುಗಳಿಗೆ ಆಧುನಿಕ ಮಾದರಿಯ ಪ್ರಚಾರ ತಂತ್ರಗಳನ್ನು ಬಳಸಿಕೊಂಡು ಪ್ರೇಕ್ಷಕರನ್ನು ಆಕರ್ಷಿಸಿತು. ಕೆಲವಾರು ಪ್ರಮುಖ ಕನ್ನಡ ಚಿತ್ರಗಳಿಗೆ ಕೂಡ ವಿನೂತನ ರೀತಿಯಲ್ಲಿ ಪತ್ರಿಕಾ ಜಾಹಿರಾತುಗಳನ್ನು ವಿನ್ಯಾಸಗೊಳಿಸಿತು. ಆಚಾರ್ ನಂತರ ಹೊಸ ಅಲೆ ಚಿತ್ರಗಳ ಪ್ರವಾಹದಲ್ಲಿ ಮುಳುಗಿ ಈ ಕ್ಷೇತ್ರವನ್ನು ಬಿಟ್ಟರು. ೯೦ರ ದಶಕದಲ್ಲಿ ನಿಧನರಾದರು.

ಆಗೆಲ್ಲ ಪತ್ರಿಕಾ ಜಾಹಿರಾತುಗಳಿಗೆ ಅಗತ್ಯವಾದ ಡಿಸೈನ್‌ಗಳನ್ನು ಮದರಾಸಿನಲ್ಲಿಯೇ ತಯಾರಿಸಲಾಗುತ್ತಿತ್ತು. ಪಡಿಯಚ್ಚುಗಳು ಕೂಡ ಅಲ್ಲೇ ತಯಾರಾಗುತ್ತಿದ್ದವು. ಸಾಮಾನ್ಯವಾಗಿ ಈ ಡಿಸೈನ್‌ಗಳಲ್ಲಿ ವೈವಿಧ್ಯವೇನೂ ಇರಲಿಲ್ಲ. 'ಬರಲಿದೆ', 'ತಾರೀಖಿನಿಂದ', 'ನಾಳೆಯಿಂದ', 'ಇಂದಿನಿಂದ', ಯಶಸ್ವಿಯಾಗಿ ನಡೆಯುತ್ತಿದೆ' ಎಂಬ ತಲೆ ಬರಹಗಳನ್ನು ಹೊತ್ತ ಈ ಜಾಹಿರಾತುಗಳಲ್ಲಿ ಪ್ರಮುಖ ಕಲಾವಿದರ ತಲೆಗಳನ್ನು ಜೋಡಿಸಲಾಗುತ್ತಿತ್ತು. ಚಿತ್ರನಿರ್ಮಾಪಕರ, ನಿರ್ದೇಶಕರು ಹಾಗೂ ಪ್ರಮುಖ ಕಲಾವಿದರ ಹೆಸರುಗಳಿರುತ್ತಿದ್ದವು. ಒಂದೇ ಸಾರಿ ೫೦ ದಿನಗಳ ಪ್ರದರ್ಶನದವರೆಗೂ ಪಡಿಯಚ್ಚುಗಳು ಸಿದ್ಧವಾಗುತ್ತಿದ್ದವು. ಚಿತ್ರದ ಬಿಡುಗಡೆಯ ನಂತರವೂ ಅಗತ್ಯ ಬಿದ್ದಲ್ಲಿ ಆಲ್ಬಮ್ ತರಿಸಿಕೊಂಡು ಅದರಿಂದ ತಮಗೆ ಅಗತ್ಯವಾದ ಚಿತ್ರಗಳನ್ನು ಆಯ್ದುಕೊಂಡು ವಿವಿಧ ಗಾತ್ರಗಳಲ್ಲಿ ಪ್ರಿಂಟ್ ಹಾಕಿಸಿ ಡಿಸೈನ್‌ಗಳನ್ನು ಸಿದ್ಧಪಡಿಸುತ್ತಿದ್ದರು. ಪಡಿಯಚ್ಚುಗಳು ಬೆಂಗಳೂರಿಗೆ ರವಾನೆಯಾದ ನಂತರ ಅವುಗಳನ್ನು ಪತ್ರಿಕೆಗಳಿಗೆ ಬಿಡುಗಡೆ ಮಾಡುವ ಜವಾಬ್ದಾರಿ ಪ್ರಚಾರ ಸಂಸ್ಥೆಗಳದಾಗಿತ್ತು. ಸಾಮಾನ್ಯವಾಗಿ ಒಂದೆರಡು ಪಡಿಯಚ್ಚುಗಳನ್ನೆ ವಿವಿಧ ಪತ್ರಿಕೆಗಳಿಗೆ ಓಡಾಡಿಸುವ ಅನಿವಾರ್ಯವೂ ಇತ್ತು. ದಿನಪತ್ರಿಕೆಗಳಿಗೆ ಹೇಗೋ ಪಡಿಯಚ್ಚುಗಳು ತಲಪುತ್ತಿದ್ದವು. ಆದರೆ ವಾರಪತ್ರಿಕೆಗಳ ಪಾಡು ಬೇಡ. ಒಬ್ಬರನ್ನೊಬ್ಬರು ಅನುಸರಿಸಿಕೊಂಡು ಹೋಗುವುದೇ ದೊಡ್ಡ ಕಸರತ್ತಾಗುತ್ತಿತ್ತು.

ಆಗ ಜಾಹಿರಾತುಗಳಿಗೆ, ಭಿತ್ತಿ ಪತ್ರಗಳಿಗೆ ಡಿಸೈನ್ ಒದಗಿಸುತ್ತಿದ್ದ ಕಲಾವಿದರಲ್ಲಿ ಪ್ರಮುಖರು ಆರ್ಟ್ಸ್ ಆ್ಯಂಡ್ ಕಂಪೆನಿಯ ಸುಂದರರಾವ್, ಡಿ.ಟಿ.ರಾಜನ್ ಮತ್ತು ಗಂಗಾಧರ್. ಸುಂದರರಾಯರು ಕನ್ನಡಿಗರು, ನಿರ್ದೇಶಕ ಎನ್.ಲಕ್ಷ್ಮೀನಾರಾಯಣ್ ಅವರ ಅಣ್ಣಂದಿರು, ಅನೇಕ ಕನ್ನಡ ಚಿತ್ರಗಳ ಟೈಟಲ್ ಕಾರ್ಡ್‌ಗಳನ್ನೂ ಅವರೇ ವಿನ್ಯಾಸಗೊಳಿಸುತ್ತಿದ್ದರು. ತಪ್ಪಿಲ್ಲದ ದುಂಡು ಅಕ್ಷರಗಳು ಅವರ ಹೆಚ್ಚಳ. ಅವರ ವಿನ್ಯಾಸಗಳಲ್ಲಿ ಹೊಸದೇನೂ ಇಲ್ಲದಿದ್ದರೂ ಸರಳತೆ ಇದ್ದಿತ್ತು. ಸುಂದರರಾಯರು ಆ ಕಾಲದಲ್ಲಿ ಕನ್ನಡ ಚಿತ್ರೋದ್ಯಮಿಗಳ ಪೈಕಿ ಎಷ್ಟು ಜನಪ್ರಿಯರಾಗಿದರೆಂದರೆ ಹೆಚ್ಚು ಕಡಿಮೆ ಅಂದಿನ ಎಲ್ಲಾ ಪ್ರಮುಖ ಉದ್ಯಮಿಗಳೂ ಮದರಾಸಿನ ರಾಯಪೇಟೆಯ ಅವರ ಸಣ್ಣ ಕಛೇರಿಯಲ್ಲಿಯೇ ದಿನವೂ ಸೇರುತ್ತಿದ್ದರು.

(ಚಿತ್ರ ೧೫) ಸುಂದರರಾವ್

ಡಿ.ಟಿ.ರಾಜನ್ ಶೈಲಿ ಕೂಡ ಹೆಚ್ಚು ಕಡಿಮೆ ಸುಂದರರಾಯರ ಶೈಲಿಯೇ ಆಗಿತ್ತು. ಆದರೆ ಅವರು ಅಕ್ಷರಗಳನ್ನು ಬರೆಯುತ್ತಿದ್ದ ರೀತಿಯೇ ಬೇರ. ಅವರಿಗೆ ಸುಖಜೀವ್ ಎಂಬ ಇನ್ನೊಂದು ಹೆಸರೂ ಇತ್ತು, ಅವರು ತಮಿಳಿನವರು.

ಇವರಿಬ್ಬರಿಗೂ ಹೋಲಿಸಿದರೆ ತೆಲುಗರಾದ ಗಂಗಾಧರ್ ಹೆಚ್ಚು ಸೃಜನಾತ್ಮಕ ಕಲಾವಿದರು. ತೆಲುಗು ಚಿತ್ರರಂಗದಲ್ಲಿ ದೊಡ್ಡ ಹೆಸರಾಗಿದ್ದ ಅವರು ಹಾಫ್‌ಟೋನ್ ಮತ್ತು ಲೈನ್ ವಿಧಾನಗಳನ್ನು ಯಶಸ್ವಿಯಾಗಿ ಮಿಲನಗೊಳಿಸುತ್ತಿದ್ದರು. ಅಕ್ಷರಗಳ ವಿನ್ಯಾಸದಲ್ಲಿ ಕೂಡ ಅವರು ಕೆಲವು ಯಶಸ್ವಿ ಬದಲಾವಣೆಗಳನ್ನು ಮಾಡಿದರು. ಅವರು ಮೂಲತಃ ರೇಖಾ ಚಿತ್ರಕಾರರು. ಅವರ ಅನೇಕ ಜಾಹಿರಾತು

ವಿನ್ಯಾಸಗಳಲ್ಲಿ ರೇಖಾಚಿತ್ರಗಳ ಗುಣವೂ ಎದ್ದು ಕಾಣುತ್ತಿತ್ತು. ಕನ್ನಡ ಚಿತ್ರರಂಗದ ಚಟುವಟಿಕೆಗಳು ಬೆಂಗಳೂರಿಗೆ ಸ್ಥಳಾಂತರಗೊಂಡ ಮೇಲೆ ಅವರೂ ಬೆಂಗಳೂರಿನಲ್ಲಿಯೇ ಬೀಡು ಬಿಟ್ಟು ಅವರ ಮಗನಿಗೆ ಇದೇ ಕ್ಷೇತ್ರದಲ್ಲಿ ತರಬೇತಿ ನೀಡಿದರು. ಮದರಾಸಿನಲ್ಲಿಯೇ ಇದ್ದು, ಕನ್ನಡ ಚಿತ್ರಗಳ ಟೈಟಲ್ ಕಾರ್ಡ್‌ನಿಂದ ಹಿಡಿದು ಪತ್ರಿಕಾ ಜಾಹಿರಾತು ವಿನ್ಯಾಸಗಳನ್ನು ಸಿದ್ಧಪಡಿಸಿಕೊಡುತ್ತಿದ್ದ ಇನ್ನೊರ್ವ ಪ್ರಚಾರ ಕಲಾವಿದರೆಂದರೆ ಪಾರ್ಥನ್. ಇವರ ಬಳಿ ಕೆಲಸ ಮಾಡಿದ ಅನೇಕರು ನಂತರ ವಿವಿಧ ಭಾಷೆಗಳಲ್ಲಿ ಪ್ರಚಾರ ಕಲೆಯಲ್ಲಿ ಮಿಂಚಿದರು.

ನಂತರ ಕನ್ನಡದಲ್ಲಿ ಹುಟ್ಟಿಕೊಂಡ ಇನ್ನೊಂದು ಪ್ರತಿಭೆ ಮಸ್ತಾನ್. ಈ ಯುವಕ ಕೂಡ ಸಾಕಷ್ಟು ಪ್ರಯೋಗಶೀಲ. ಆರ್ಟ್ಸ್ ಆರ್ಟ್ಸ್‌ನ ರಾಮಚಂದ್ರ ಅವರೂ ಹಾಗೆಯೇ. ಇವರಿಬ್ಬರೂ ಕನ್ನಡ ಚಿತ್ರಗಳ ಜಾಹಿರಾತುಗಳ ವಿನ್ಯಾಸ ಕ್ರಮವನ್ನೇ ಗಮನಾರ್ಹವಾಗಿ ಬದಲಾಯಿಸಿದರು. ಕನ್ನಡ ಭಾಷೆಯಲ್ಲಿ ಭಾರಿ ಬಜೆಟ್‌ನ ಬಹುತಾರಾ ಚಿತ್ರಗಳ ಆರಂಭವಾದ ಮೇಲಂತೂ ಈ ಕಲಾವಿದರ ಪ್ರತಿಭೆ ಹೆಚ್ಚು ಮಿಂಚುತ್ತ ಬಂತು. ಇಂದು ಕನ್ನಡ ನಿರ್ಮಾಪಕರು ತಮ್ಮ ಪ್ರಚಾರ ಸಾಮಗ್ರಿಗಳ, ಜಾಹಿರಾತುಗಳ ವಿನ್ಯಾಸಕ್ಕಾಗಿ ಹೊರ ರಾಜ್ಯಗಳ ಕಲಾವಿದರನ್ನು ಅವಲಂಬಿಸಬೇಕಾಗಿಲ್ಲ ಎನ್ನುವುದೇ ಒಂದು ಉಲ್ಲೇಖನಾರ್ಹ ಬೆಳವಣಿಗೆ. ಇವರಲ್ಲದೆ ಭವಾನಿ, ಓಂ ಸತೀಶ್, ಗೀಚಿ ಇವರೂ ವಿನ್ಯಾಸ ಮಾಡಿಕೊಡುತ್ತಿದ್ದಾರೆ. ಓಂ ಸತೀಶ್ ೧೯೮೧ ರಿಂದಲೂ ೫೦೦ಕ್ಕೂ ಹೆಚ್ಚು ಕನ್ನಡ ಚಿತ್ರಗಳ ಪ್ರಚಾರ ವಿನ್ಯಾಸವನ್ನು ಮಾಡುತ್ತಾ ಬಂದಿರುವುದಲ್ಲದೆ, ಪತ್ರಿಕಾ ಪ್ರಚಾರ ಸಂಪರ್ಕವನ್ನೂ ಅನೇಕ ಚಿತ್ರಗಳಿಗೆ ಒದಗಿಸಿಕೊಟ್ಟಿದ್ದಾರೆ.

ಮುದ್ರಣ ಕ್ಷೇತ್ರದಲ್ಲಿಯೂ ಹೊಸ ಹೊಸ ಬದಲಾವಣೆಗಳು ಪ್ರಾರಂಭವಾದಂತೆ ಲೆಟರ್ ಪ್ರೆಸ್ ಮುದ್ರಣ, ಪಡಿಯಚ್ಚುಗಳು ಎಲ್ಲವೂ ಮಾಯವಾಗತೊಡಗಿದವು. ಆಫ್‌ಸೆಟ್ ಮುದ್ರಣ ಹೆಚ್ಚು ಜನಪ್ರಿಯವಾದಂತೆ ಕಲಾವಿದರ ಪ್ರತಿಭೆ ಅರಳಲು ಕೂಡ ಪ್ರಶಸ್ತವಾದ ವಾತಾವರಣ ಸೃಷ್ಟಿಯಾಯಿತು. ನಂತರ ಗಣಕೀಕೃತ ಕಂಪೋಸಿಂಗ್, ವಿನ್ಯಾಸ ಮತ್ತು ಮುದ್ರಣಗಳು ಜಾರಿಗೆ ಬಂದವು. ಇದೀಗ ಈ ಎಲ್ಲ ಕೆಲಸಗಳಿಗೂ ಡಿಜಿಟಲ್ ತಂತ್ರಜ್ಞಾನದ ಮೆರುಗು ಬಂದಿದೆ. ವಿನ್ಯಾಸಗಳು ಕಾಂಪ್ಯಾಕ್ಟ್ ಡಿಸ್ಕ್‌ಗಳಲ್ಲಿ ಅಡಕವಾಗುವ ಕಾಲವೂ ಬಂದಿದೆ. ನಮ್ಮ ವಿನ್ಯಾಸಕರು, ಮುದ್ರಕರು ಈ ತಂತ್ರಜ್ಞಾನವನ್ನು ಸೊಗಸಾಗಿ ಅಳವಡಿಸಿಕೊಳ್ಳುತ್ತಿದ್ದಾರೆ.

ಮೊದಲು ಪತ್ರಿಕಾ ಜಾಹಿರಾತು ಹಾಗೂ ಪತ್ರಿಕಾ ಪ್ರಚಾರ ಎರಡರ ಹೊಣೆಯನ್ನೂ ಪಬ್ಲಿಸಿಟಿ ಏಜನ್ಸಿಗಳೇ ಹೊರುತ್ತಿದ್ದವು. ಆದರೆ ೧೯೭೭ರಲ್ಲಿ ಪತ್ರಿಕಾ ಪ್ರಚಾರವೇ ಪ್ರತ್ಯೇಕ ಆಯಾಮವನ್ನು ಕಂಡುಕೊಂಡಿತು. ಕನ್ನಡದಲ್ಲಿ ಪಿ.ಆರ್.ಓ. (ಪತ್ರಿಕಾ ಸಂಪರ್ಕಕಾರರು) ರೂಪುಗೊಂಡು ವ್ಯವಸ್ಥಿತ ರೀತಿಯ ಪ್ರಚಾರಕಾರ್ಯ ಆರಂಭವಾಯಿತು. ಆ ವರ್ಷ ತೆರೆಗೆ ಬಂದ 'ಸೊಸೆ ತಂದ ಸೌಭಾಗ್ಯ' ಕನ್ನಡದ ಪ್ರಥಮ ಸಿನಿಮಾಸ್ಕೋಪ್ ವರ್ಣ ಚಿತ್ರದ ಮೂಲಕ ಡಿ.ವಿ.ಸುಧೀಂದ್ರ ಹೊಸ ರೀತಿಯಲ್ಲಿ ಈ ಕ್ಷೇತ್ರವನ್ನು ಪ್ರವೇಶಿಸಿದರು. ಅವರ ಅಂದಿನ ಸಹಾಯಕರು ರಾಮಮೂರ್ತಿ. ಅವರಿಬ್ಬರೇ ಕನ್ನಡ ಚಿತ್ರರಂಗದ ಪ್ರಥಮ ಅಧಿಕೃತ ಪಿ.ಆರ್.ಓ.ಗಳು. ಇವರು ಚಿತ್ರದ ನಿರ್ಮಾಪಕರು, ನಿರ್ದೇಶಕರು, ನಟನಟಿಯರು, ತಂತ್ರಜ್ಞರು ಹಾಗೂ ಪತ್ರಕರ್ತರ ನಡುವೆ ಓಡಾಡಿಕೊಂಡು ಪತ್ರಿಕೆಗಳಿಗೆ ಚಿತ್ರಗಳ ಬಗ್ಗೆ ಸುದ್ದಿ, ಸ್ಥಿರಚಿತ್ರ, 'ರೈಟ್ ಅಪ್' ಗಳನ್ನು ಒದಗಿಸತೊಡಗಿದರು. ಪತ್ರಿಕಾಗೋಷ್ಠಿ, ಸಂತೋಷಕೂಟಗಳನ್ನು ಏರ್ಪಡಿಸುವುದು ಮುಂತಾದ ಹೊಣೆಗಳನ್ನು ಇವರು ಹೊತ್ತರು. ಈ ಜೋಡಿ ಪ್ರಾರಂಭಿಸಿದ ಪ್ರಚಾರ ಪರಂಪರೆಯನ್ನು ಈಗ ಹಲವಾರು ಮಂದಿ ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ರಾಮಮೂರ್ತಿ ಡಿ.ವಿ.ಸುಧೀಂದ್ರರಿಂದ ಬೇರೆಯಾದ ಮೇಲೆ ವೆಂಕಟೇಶ್ ಆ ಸ್ಥಾನವನ್ನು ತುಂಬಿದ್ದಾರೆ. ಗಣೇಶ್, ಹರೀಶ್, ವಿಜಯಕುಮಾರ್, ನಾಗೇಂದ್ರ, ಲಿಂಗರಾಜ್, ರಾಮಕೃಷ್ಣ, ಬಸವರಾಜ್, ಮಧು, ರಮೇಶ್ ಮತ್ತಿತರರು ಪಿ.ಆರ್.ಓ.ಗಳಾಗಿ ಈ ಕ್ಷೇತ್ರದಲ್ಲಿ ಉತ್ಸಾಹದಿಂದ ದುಡಿಯುತ್ತಿದ್ದಾರೆ. ಹಿಂದಿ ಚಿತ್ರೋದ್ಯಮದಲ್ಲಿ ಪ್ರಾರಂಭಿಕ ದಿನಗಳಿಂದಲೇ ನಿರ್ಮಾಪಕರಿಗೆ ಮಾತ್ರವಲ್ಲದೆ ನಟ-ನಟಿಯರಿಗೂ ತಮ್ಮದೇ ಆದ ಸಾರ್ವಜನಿಕ ಸಂಪರ್ಕಾಧಿಕಾರಿಗಳಾಗಿದ್ದರು. ಅವರಲ್ಲಿ ಅನೇಕರು ಸೊಗಸಾದ ಬರಹಗಾರರೂ ಕೂಡ, ಅವರಿಗೆ ಪತ್ರಿಕಾಲಯಗಳಲ್ಲಿ ಕೆಲಸ ಮಾಡಿದ ಹಿನ್ನೆಲೆಯೂ ಇತ್ತು. ಈ ಪದ್ಧತಿ ಅಲ್ಲಿ ಇನ್ನೂ ಹೆಚ್ಚು ಪ್ರವರ್ಧಮಾನಕ್ಕೆ ಬಂದಿದೆ. ಆದರೆ ಕನ್ನಡ ಚಿತ್ರರಂಗದಲ್ಲಿ ಇದುವರೆಗೆ ನಟ-ನಟಿಯರು ಪಿ.ಆರ್.ಓ. ಗಳನ್ನು ನೇಮಿಸಿಕೊಳ್ಳುವ ಪರಿಪಾಠವಿಲ್ಲ. ಕನ್ನಡದಲ್ಲಿ ಪಿ.ಆರ್.ಓ.ಗಳಾಗಿ ದುಡಿಯುತ್ತಿರುವವರಲ್ಲಿ ಡಿ.ವಿ.ಸುಧೀಂದ್ರ, ರಾಮಮೂರ್ತಿ ಜೋಡಿ ಪಾಲುದಾರಿಕೆಯಲ್ಲಿಳಿದು ಚಿತ್ರತಯಾರಿಕೆಯಲ್ಲಿಯೂ ಪಾಲ್ಗೊಂಡರು. ಹಿರಿಯ ಚಲನಚಿತ್ರ ಪತ್ರಕರ್ತ ಬಿ.ಕೆ.ಗುರುರಾಜ್ ಅವರ ಪುತ್ರ ನಾಗೇಂದ್ರ ಪಿ.ಆರ್.ಓ.ವೃತ್ತಿಯೊಂದಿಗೆ ಚಿತ್ರನಿರ್ಮಾಣದಲ್ಲಿಯೂ ಪಾಲುದಾರರಾದರು. ರಾಮಕೃಷ್ಣ ಅಭಿನಯಕ್ಕೆ ಅಂಟಿಕೊಂಡರು. ಲಿಂಗರಾಜ್ ಹಿರಿ-ಕಿರುತೆರೆಗಳ ದೈನಿಕ ಸಂಪಾದನಾ ಕಾರ್ಯದಲ್ಲಿ ತೊಡಗಿದರು. ಈ ಪಿ.ಆರ್.ಓ.ಗಳು ರೂಪುಗೊಳ್ಳಲು 'ಲಾವಣ್ಯ' ವಾರಪತ್ರಿಕೆಯೇ ಕಾರಣ. ಇಂದು ಪಿ.ಆರ್.ಓ.ಗಳಾಗಿರುವವರಲ್ಲಿ ಅನೇಕರು ಲಾವಣ್ಯ ಲೇಖಕರ ಬಳಗದಲ್ಲಿದ್ದವರು.

ಚಲನಚಿತ್ರ ಪತ್ರಿಕಾ ಪ್ರಚಾರಕರ್ತರಿಂದ ಸರಬರಾಜಾಗುವ ಸುದ್ದಿ-ಸಮಾಚಾರಗಳು ಎಲ್ಲ ಸಂದರ್ಭಗಳಲ್ಲಿಯೂ ಪತ್ರಿಕೆಗಳ ಮಟ್ಟ, ಅಗತ್ಯಗಳಿಗೆ ತಕ್ಕಂತೆ ಇರುವುದಿಲ್ಲ. ವೈವಿಧ್ಯ-ವೈಶಿಷ್ಟ್ಯಗಳಂತೂ ದೂರವೇ ಉಳಿದ ಮಾತು. ಎಲ್ಲ ಪತ್ರಿಕೆಗಳಲ್ಲೂ ಒಂದೇ ವಿಧದ ತಲೆಬರಹದಡಿಯಲ್ಲಿ ಒಂದೇ ಬಗೆಯ ಸುದ್ದಿ. ಒಂದು ಪತ್ರಿಕೆಯಲ್ಲಿ ಓದಿದ್ದನ್ನೇ ಇನ್ನೊಂದರಲ್ಲೂ ಯಥಾವತ್ತಾಗಿ ಓದಬೇಕಾದಂಥ ಪರಿಸ್ಥಿತಿ. ಇಂಥ ಸಂದರ್ಭಗಳಲ್ಲಿ ಚಲನಚಿತ್ರ ಪತ್ರಕರ್ತರು ತಾವೇ ಸ್ವತಂತ್ರರಾಗಿ ಸುದ್ದಿ ಸಂಗ್ರಹಿಸುತ್ತಾರೆ. ಸಂದರ್ಶನಗಳನ್ನು ನಡೆಸುತ್ತಾರೆ. ಪತ್ರಿಕಾ ಪ್ರಚಾರಕರ್ತರಿಂದ ರವಾನೆಯಾಗುವ ಸುದ್ದಿ-ಸಮಾಚಾರಗಳು ಏಕತಾನತೆಯಿಂದ ಕೂಡಿರುತ್ತವೆ ಎಂಬುದು ಪತ್ರಿಕೆಯವರ ಅನಿಸಿಕೆ.

ಚಲನಚಿತ್ರ ಪತ್ರಿಕಾ ಪ್ರಚಾರ ಕುರಿತಂತೆ ಪ್ರಸ್ತಾಪಿಸುವ ಸಂದರ್ಭದಲ್ಲಿ ಪತ್ರಿಕೆಗಳು ಹಾಗೂ ಉದ್ಯಮದ ನಡುವಣ ಸಂಬಂಧ ಕುರಿತಂತೆಯೂ ಗಮನ ಹರಿಸುವುದು ಅಗತ್ಯ. ಪತ್ರಿಕೆಗಳು ಚಲನಚಿತ್ರೋದ್ಯಮ ಹಾಗೂ ಪ್ರೇಕ್ಷಕರ ನಡುವ ಸೇತುವೆಯಾಗಿ ಕೆಲಸ ಮಾಡುತ್ತಿವೆ. ಆದರೆ ಉದ್ಯಮ ಹಲವು ಬಾರಿ ಪತ್ರಿಕೆಗಳಿಂದ ದೂರ ಹೋಗಿರುವುದೂ ಉಂಟು. ದಶಕಗಳ ಹಿಂದೆ ಅತ್ಯಧಿಕ ಪ್ರಸಾರವಿದ್ದ ಕಾರಣ ಡೆಕ್ಕನ್ ಹೆರಾಲ್ಡ್-ಪ್ರಜಾವಾಣಿ ಬಳಗ ಚಲನಚಿತ್ರ ಜಾಹಿರಾತಿನ ದರಗಳನ್ನು ಹೆಚ್ಚಿಸಿತು. ಚಲನಚಿತ್ರ ವಾಣಿಜ್ಯ ಮಂಡಳಿ ಈ ಹೆಚ್ಚಳವನ್ನು ವಿರೋಧಿಸಿತು. ಆದರೆ ಆ ಪತ್ರಿಕಾ ಬಳಗ ಜಗ್ಗಲಿಲ್ಲ. ಆ ಪತ್ರಿಕೆಗಳಿಗೆ ಜಾಹಿರಾತು ನೀಡದಂತೆ ವಾಣಿಜ್ಯ ಮಂಡಳಿ ನಿರ್ಬಂಧ ಹೇರಿತು. ನಿರ್ಮಾಪಕರು ತಮ್ಮ ಚಿತ್ರಗಳ ಮೌಲ್ಯದ ಆಧಾರದ ಮೇಲೆ ಪತ್ರಿಕಾ ಜಾಹಿರಾತುಗಳನ್ನು ನೀಡುತ್ತಿದ್ದರು. ವಾಣಿಜ್ಯ ಮಂಡಳಿ ಯಾವ ಯಾವ ಸಂದರ್ಭದಲ್ಲಿ ಎಷ್ಟೆಷ್ಟು ಜಾಹಿರಾತು ನೀಡಬೇಕೆಂದು ಸಂಹಿತೆ ರೂಪಿಸಿ ಪುಟಗಟ್ಟಲೆ ಪ್ರಕಟವಾಗುತ್ತಿದ್ದ ಜಾಹಿರಾತುಗಳಿಗೆ ಕಡಿವಾಣ ಹಾಕಿತು. 'ಕನ್ನಡ ಪ್ರಭ' ಪತ್ರಿಕೆಯೂ ಒಮ್ಮೆ ವಾಣಿಜ್ಯ ಮಂಡಳಿಯ ಅವಕೃಪೆಗೆ ಪಾತ್ರವಾಗಿ ಚಲನಚಿತ್ರಗಳ ಜಾಹಿರಾತುಗಳನ್ನು ಕೆಲಕಾಲ ಕಳೆದುಕೊಳ್ಳಬೇಕಾಯಿತು. ಆ ಸಂದರ್ಭದಲ್ಲಿ 'ಉದಯವಾಣಿ'ಯಲ್ಲಿ ಚಲನಚಿತ್ರಗಳ ಜಾಹಿರಾತುಗಳು ಹೆಚ್ಚಾದವು. ವಾಣಿಜ್ಯ ಮಂಡಳಿ ರೂಪಿಸಿದ ಜಾಹಿರಾತು ಸಂಹಿತೆ ಸಡಿಲಗೊಂಡು ಪುಟಗಟ್ಟಲೆ ಜಾಹಿರಾತುಗಳು ಮತ್ತೆ 'ಉದಯವಾಣಿ'ಯನ್ನು ಅಲಂಕರಿಸಿದವು. ಕೆಲವೊಮ್ಮೆ 'ಕನ್ನಡಪ್ರಭ'ವನ್ನೂ ಕೂಡ.

ಇಷ್ಟಾಗಿ ಮೊದಲೇ ಹೇಳಿದಂತೆ ಉಳಿದ ಪತ್ರಿಕೆಗಳಿಗೆ ಈ ಮಟ್ಟದಲ್ಲಿ ಜಾಹಿರಾತುಗಳನ್ನು ನೀಡುತ್ತಿಲ್ಲ. ಪತ್ರಿಕೆಗಳೇನೋ ಚಲನಚಿತ್ರ ಜಾಹಿರಾತುಗಳಿಗೆ ಪ್ರತ್ಯೇಕ ದರಗಳನ್ನೇ ನಿಗದಿ ಮಾಡಿವೆ. ಆದರೆ ಕೋಟ್ಯಾಂತರ ರೂಪಾಯಿಗಳ ವೆಚ್ಚದಲ್ಲಿ ಚಿತ್ರಗಳನ್ನು ನಿರ್ಮಿಸುತ್ತಿರುವ ಉದ್ಯಮ ಪತ್ರಿಕೆಗಳಿಗೆ ಹೆಚ್ಚು ಸಹಕಾರ ಕೊಡುತ್ತಿಲ್ಲ.

ಕನ್ನಡ ಚಲನಚಿತ್ರಗಳಿಗೆ ಗೋಡೆ ಬರಹದ ಪ್ರಚಾರವನ್ನು ಮೊದಲು ವ್ಯಾಪಕವಾಗಿ ಬೆಳೆಸಿದವರು ಶಾಸಕ-ಉದ್ಯಮಿ ಯೋಗೀಶ್ವರ್. ಈಗ ಇಂತಹ ಬರಹಗಳು ಹೆಚ್ಚುತ್ತಲೇ ಬಂದು ಅವುಗಳ ಮೇಲೆ ಬೆಂಗಳೂರು ಮಹಾನಗರ ಪಾಲಿಕೆಯ ಕಣ್ಣು ಬಿದ್ದಿದೆ. ಅವುಗಳ ಮೇಲೆ ನಿರ್ಬಂಧ ಹೇರಲಾಗುತ್ತಿದೆ. ಈ ವಿಷಯದಲ್ಲಿ ಮಹಾನಗರ ಪಾಲಿಕೆ ಮತ್ತು ನಿರ್ಮಾಪಕರ ನಡುವೆ ಜಗ್ಗಾಟ ನಡೆಯುತ್ತಿದೆ.



ಸಂವೇದನಾಶೀಲ ಪ್ರೇಕ್ಷಕರ ನಿರ್ಮಾಣ

ಕಳೆದ ಒಂದು ಶತಮಾನದಲ್ಲಿ 'ಚಲನಚಿತ್ರ' ಸಾಂಸ್ಕೃತಿಕ ಅಭಿವ್ಯಕ್ತಿಯಾಗಿ ಬೆಳೆದು ಬಂದಿದೆ. ಅದರ ಜೊತೆಯಲ್ಲೇ ಮನೋರಂಜನೆಯ ಮಾಧ್ಯಮವಾಗಿ, ಆ ಮೂಲಕ ಬೃಹತ್ ವಾಣಿಜ್ಯ ವಹಿವಾಟಾಗಿ ಬೆಳೆದು ನಿಂತಿದೆ. ವಾಣಿಜ್ಯಾತ್ಮಕ ಉದ್ದೇಶಗಳು ಚಿತ್ರ ತಯಾರಿಕೆಯನ್ನು ಗಮನಾರ್ಹವಾಗಿ ನಿಯಂತ್ರಿಸುವ ಹಂತದಲ್ಲಿ ನಿಂತು ಒಮ್ಮೆ ಹಿಂದೆ ನೋಡಿದರೆ ಹೇಗಿದ್ದ ಮಾಧ್ಯಮ ಹೇಗಾಯಿತು ಎಂದು ಅನ್ನಿಸದೇ ಇರದು. ಎರಡನೇ ಮಹಾಯುದ್ಧದ ನಂತರ ವಾಣಿಜ್ಯ ಕಾರಣಗಳಿಗೆ ಸಿನಿಮಾ ತಯಾರಿಕೆ ಹೆಚ್ಚಾದ ನಂತರ ತನ್ನ ಆಶಯಕ್ಕೆ ಅನುಗುಣವಾಗಿ ಮಾಧ್ಯಮವನ್ನು ದುಡಿಸಿಕೊಳ್ಳುವ ನಿರ್ದೇಶಕರ ಸಂಖ್ಯೆ ತಗ್ಗಿ ಜನರಿಗೆ ಬೇಕಾದ್ದನ್ನು ನೀಡುವ ಹುಂಬ ಸಿದ್ಧಾಂತಕ್ಕೆ ಕಟ್ಟುಬಿದ್ದು ಕನಸುಗಳನ್ನು ಹಂಚುವ ಕಾರ್ಖಾನೆಯಾಗಿ ಚಿತ್ರಮಾಧ್ಯಮದ ವೃತ್ತಿ ಸೀಮಿತವಾಯಿತು. ಇದಕ್ಕೆ ಗೆರೆ ಹಾಕಿದಷ್ಟು ಖಚಿತವಾಗಿ ದೂರ ಉಳಿದು ಬೆಳೆದ ಕಲಾತ್ಮಕ ಅಭಿವ್ಯಕ್ತಿ ಚಿತ್ರಗಳು ಕೆಲವರ ಸ್ವತ್ತಾದವು. ಸಿನಿಮಾ ಬಗ್ಗೆ ತಿಳುವಳಿಕೆ ಹೆಚ್ಚಿಸುವ ಕೆಲಸ ಸಮರ್ಪಕವಾಗಿ ನಡೆಯದಿದ್ದದ್ದು ಇವಕ್ಕೆ ಮುಖ್ಯ ಕಾರಣ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಅಧ್ಯಯನ ಸಂಸ್ಥೆಗಳ ಮೂಲಕ ಇಂತಹ ಕೆಲಸ ಸಾಕಷ್ಟು ನಡೆದಿದೆ. ಅಂತಹ ಕೆಲಸಗಳು ನಮ್ಮಲ್ಲಿನ್ನೂ ಆರಂಭವಾಗಬೇಕಾಗಿದೆ. ಸೂಕ್ತ ಸಾಂಸ್ಕೃತಿಕ ಪರಿಸರದ ನಿರ್ಮಾಣ ಅಂದರೆ ಸದಭಿರುಚಿಯ ಪ್ರೇಕ್ಷಕರ ನಿರ್ಮಾಣ. ಸಾಹಿತ್ಯ, ಚಿತ್ರಕಲೆ, ಸಂಗೀತ ಮುಂತಾದ ಕಲೆಗಳಿಗೆ ಅದರದ್ದೇ ಆದ ಸಂವೇದನಾಶೀಲ ಆಸಕ್ತರು ಇರುವ ಹಾಗೆ, ಚಲನಚಿತ್ರಕ್ಕೂ ಅಂತಹ ಪ್ರೇಕ್ಷಕರ ನಿರ್ಮಾಣ ಆಗಬೇಕು. ಆಗಲೇ ಮಾಧ್ಯಮ ಬೆಳೆಯುವುದು ಸಾಧ್ಯ. ಫ್ರೆಂಚ್ ಲೇಖಕ ಆಂದ್ರೆ ಮಾಲ್‌ರಾಕ್ಸ್ ಹೇಳಿದ ಹಾಗೆ ''ನಾವು ಪ್ರಬುದ್ಧ ಪ್ರೇಕ್ಷಕರಾದಾಗಲೇ ಮಹಾನ್ ಚಿತ್ರಗಳ ನಿರ್ಮಾಣ ಸಾಧ್ಯ.'' ಇಂತಹ ಸೃಷ್ಟಿಶೀಲ ಪ್ರೇಕ್ಷಕ ತಂಡದ ನಿರ್ಮಾಣದ ಜವಾಬ್ದಾರಿಯನ್ನು ಜಗತ್ತಿನಾದ್ಯಂತ ವಿನೀತವಾಗಿ ಕೊಡುತ್ತ ಬಂದಿರುವುದು 'ಚಿತ್ರ ಸಮಾಜಗಳು'. ಮಾಧ್ಯಮದ ಬೆಳವಣಿಗೆಗೆ ಗುಪ್ತಗಾಮಿನಿಯಾಗಿ ಅವು ಸಲ್ಲಿಸುತ್ತಿರುವ ಸೇವೆ ಸಾಂಸ್ಕೃತಿಕವಾಗಿ ಆಳವಾದ ಅಧ್ಯಯನಕ್ಕೆ ಅರ್ಹವಾದ ವಸ್ತುವಾಗಿದೆ.

ಹುಟ್ಟು ಬೆಳವಣಿಗೆ

ಚಿತ್ರ ಸಮಾಜಗಳ ಕಲ್ಪನೆ ಹುಟ್ಟಿಕೊಂಡಿದ್ದು ಕಳೆದ ಶತಮಾನದ ಇಪ್ಪತ್ತರ ದಶಕದಲ್ಲಿ ಇಂಗ್ಲೆಂಡಿನಲ್ಲಿ. ಮಾಧ್ಯಮದ ಕುರಿತ ಕುತೂಹಲ, ತಮ್ಮ ಪ್ರದೇಶದಲ್ಲಿ ತಯಾರಾಗುವ ಒಂದೇ ಮಾದರಿ ಚಿತ್ರಗಳನ್ನು ಕುರಿತು ಹುಟ್ಟಿಕೊಳ್ಳಬಹುದಾದ ನಿಷೇಧಾತ್ಮಕ ಭಾವನೆ ಇವೆಲ್ಲವುಗಳಿಂದ ಲಂಡನ್ನಿನ ಕೆಲವು ಚಿತ್ರಾಸಕ್ತರು (ಜಾರ್ಜ್ ಬರ್ನಾಡ್ ಶಾ ಅವರನ್ನು ಒಳಗೊಂಡಂತೆ) ಮೊದಲ ಚಿತ್ರ ಸಮಾಜವನ್ನು ೧೯೨೫ರ ಅಕ್ಟೋಬರ್‌ನಲ್ಲಿ ಪ್ರಾರಂಭಿಸಿದರು. ಆರಂಭದಲ್ಲಿ ಮಾಧ್ಯಮದ ಕುರಿತ ಚರ್ಚೆ ಸಂವಾದಗಳು ಪ್ರಧಾನವಾಗಿರುತ್ತಿದ್ದ ಚಿತ್ರ ಸಮಾಜ ಕ್ರಮೇಣ ಪರ್ಯಾಯ ಜವಾಬ್ದಾರಿಯೊಂದನ್ನು ವಹಿಸಿಕೊಳ್ಳಬೇಕಾದ ಸಂದರ್ಭವೂ ಬಂದಿತು. 'ಬ್ಯಾಟಲ್‌ಷಿಪ್ ಪೊಟೆಮ್‌ಕಿನ್' ಎಂಬ ಚಿತ್ರಕ್ಕೆ ಸಾರ್ವಜನಿಕ ಪ್ರದರ್ಶನಕ್ಕ ಅವಕಾಶ ಸಿಕ್ಕಲಿಲ್ಲ. ಚಿತ್ರದ ಹೊಸತನ ಅರಿತ ಹಲವರು ಚಿತ್ರ ಸಮಾಜದ ಮೂಲಕ ಅದರ ಪ್ರದರ್ಶನಕ್ಕ ವ್ಯವಸ್ಥೆ ಮಾಡಿದರು. ಮುಂದ ಇದೊಂದು ಪರಂಪರೆಯಾಗಿ ಬೆಳೆಯಿತು. ಯುರೋಪಿನಾದ್ಯಂತ ಒಂದು ಸಾಂಸ್ಕೃತಿಕ ಚಳವಳಿಯೋಪಾದಿಯಲ್ಲಿ ಚಿತ್ರ ಸಮಾಜಗಳು ಹುಟ್ಟಿಕೊಂಡವು. ಫ್ರಾನ್ಸ್, ಜರ್ಮನಿ ಮುಂತಾದ ದೇಶಗಳಲ್ಲಿ ಚಲನಚಿತ್ರ ಮಾಧ್ಯಮವನ್ನು ಜನಪ್ರಿಯಗೊಳಿಸಿದ್ದೇ ಚಿತ್ರ ಸಮಾಜಗಳು.

ಎರಡನೇ ಮಹಾಯುದ್ಧದ ನಂತರ ಎರಡು ಪ್ರಮುಖ ಬದಲಾವಣೆಗಳಾದವು. ಅದುವರೆಗೂ ಜಗತ್ತು ಬಿಡಿಬಿಡಿಯಾಗಿ ದೇಶಗಳಲ್ಲಿ ಹಂಚಿಹೋಗಿದ್ದ ೨೦ನೇ ಶತಮಾನದ ವೈಜ್ಞಾನಿಕ ಪ್ರಗತಿಯಿಂದ ದೇಶಗಳ ನಡುವಿನ ಸಂವಹನ ಹೆಚ್ಚಾಯಿತು. ಜಗತ್ತು ಒಂದು ಗ್ರಾಮವಾಗಿ ರೂಪುಗೊಂಡ ಇಂದಿನ ಬೆಳವಣಿಗೆಗೆ ಆರಂಭಿಕ ಹೆಜ್ಜೆ ಶುರುವಾಗಿದ್ದೇ ಅಲ್ಲಿಂದ. ಇನ್ನೊಂದು ಪ್ರಮುಖ ಬದಲಾವಣೆ ಎಂದರೆ ಎರಡನೇ ಮಹಾಯುದ್ಧದ ನಂತರ ಬಹುತೇಕ ರಾಷ್ಟ್ರಗಳು ವಸಾಹತುಶಾಹಿ ಹಿಡಿತದಿಂದ ಹೊರಬಂದವು. ಸ್ವಾತಂತ್ರ್ಯದ ಕಹಳೆ ಎಲ್ಲೆಡೆ ಕೇಳಿಬಂದಿತು. ಇವೆರಡು ಬೆಳವಣಿಗೆಗಳಿಂದ ಇಡೀ ಜಗತ್ತೇ ಪುನರ್ ನಿರ್ಮಾಣಗೊಳ್ಳತೊಡಗಿತು. ಇದರ ಪರಿಣಾಮ ಚಿತ್ರ ಮಾಧ್ಯಮದ ಮೇಲೆಯೂ ಆಯಿತು. ಅಲ್ಲಿಯವರೆಗೂ 'ಕಲೆ'ಯಾಗಿ ಬೆಳೆದಿದ್ದ ಮಾಧ್ಯಮ ಸಂಪೂರ್ಣ ವಾಣಿಜ್ಯೀಕರಣಗೊಂಡಿತು. ಹಣದ ಹೊಳೆ ಹರಿಯಲು ಆರಂಭವಾಯಿತು. ಇದರಿಂದ ಸದಭಿರುಚಿಯ ಪ್ರಯೋಗಾತ್ಮಕ ಚಿತ್ರಗಳ ಪ್ರದರ್ಶನ ಕಷ್ಟವಾಯಿತು. ಈಗ ಚಿತ್ರ ಸಮಾಜಗಳು ಸಾಂಸ್ಕೃತಿಕ ಜವಾಬ್ದಾರಿ ಹೊತ್ತುಕೊಳ್ಳಬೇಕಾಯಿತು. ಅವುಗಳ ಮಹತ್ವವೂ ಹೆಚ್ಚಿತು. ಇದಕ್ಕೆ ಸರಿಯಾಗಿ ತಾಂತ್ರಿಕ ಪ್ರಗತಿಯಿಂದ ೧೬ ಎಂ.ಎಂ. ಉಪಕರಣ, ಪ್ರೊಜೆಕ್ಟರ್ ಲಭ್ಯವಾಗಿದ್ದರಿಂದ ಖಾಸಗಿ ಪ್ರದರ್ಶನ ಸುಲಭವಾಯಿತು. ಐವತ್ತು ಮತ್ತು ಅರುವತ್ತರ ದಶಕದಲ್ಲಿ ಯುರೋಪಿನ ಪ್ರಮುಖ ರಾಷ್ಟ್ರಗಳಲ್ಲಿ ರಸ್ತೆಗೊಂದು ಚಿತ್ರಸಮಾಜ ಇತ್ತಂತೆ. ಚಿತ್ರ ಪ್ರದರ್ಶನದ ವಿವರ ಬಾಯಿಂದ ಬಾಯಿಗೆ ಹಬ್ಬುತ್ತಿದ್ದವಂತೆ. ನಮ್ಮಲ್ಲಿನ 'ಬಾಂಬೆವಾಲ'ನ ತರಹ ಪ್ರೊಜೆಕ್ಟರ್ ಅನ್ನು ಹೆಗಲ ಮೇಲೆ ಹೊತ್ತು ಊರೂರು ತಿರುಗುತ್ತಿದ್ದ ಚಿತ್ರಪ್ರೇಮಿಗಳಿದ್ದರಂತೆ ಎಂಬುದು ನಮಗೀಗ ದಂತಕತೆಯಂತೆ ಕಾಣಬಹುದು. ಚಲನಚಿತ್ರದ ಜಾಗತಿಕ ಇತಿಹಾಸದಲ್ಲಿ ಇವಕ್ಕೆಲ್ಲ ಭಾರೀ ಮಹತ್ವವಿದೆ. ಯುರೋಪಿನಲ್ಲಿ ಅದರಲ್ಲೂ ಮುಖ್ಯವಾಗಿ ಫ್ರಾನ್ಸ್, ಇಟಲಿ, ಜರ್ಮನಿ, ಸ್ವೀಡನ್‌ನಲ್ಲಿ ನಿರ್ಮಿತವಾಗುವ ಚಿತ್ರಗಳ ಗುಣಮಟ್ಟಕ್ಕೆ ಇಂತಹ ಸಾಂಸ್ಕೃತಿಕ ಚಳವಳಿಯೇ ಕಾರಣವಾಗಿರಬಹುದಾದ ಸಾಧ್ಯತೆ ಇದೆ. ಹೀಗೆ ಚಿತ್ರ ಸಮಾಜಗಳ ಹುಟ್ಟು ಬೆಳವಣಿಗೆ ಮಾಧ್ಯಮದ ಒಂದು ಪ್ರಮುಖ ಅಂಗವಾಯಿತು ಮತ್ತು ಆ ಮೂಲಕವೇ ಮಾಧ್ಯಮ ತನ್ನ ಆರೋಗ್ಯವನ್ನು ಕಾಪಾಡಿಕೊಂಡು ಕೇವಲ ಪದಾರ್ಥ (Product) ಮಟ್ಟಕ್ಕೆ ಇಳಿಯದೆ ಉಳಿದುಕೊಂಡು ಬಂದಿದೆ.

ಭಾರತಕ್ಕೆ ಕಾಲಿಟ್ಟ ಚಿತ್ರ ಸಮಾಜ

ಭಾರತದಲ್ಲಿ 'ಸಿನಿಮಾ' ಪ್ರಭಾವಶಾಲಿ ಮಾಧ್ಯಮವಾಗಿ ಬೆಳೆದಿದ್ದೇ ವಿಳಂಬವಾಗಿ. ಇಲ್ಲಿ ಪ್ರದರ್ಶನ ಮಾಧ್ಯಮವಾಗಿ ನಾಟಕ ಮತ್ತು ಅದೇ ಮಾದರಿಯ ಇತರ ಪ್ರಕಾರಗಳಿದ್ದವು. ಅವುಗಳಲ್ಲೆಲ್ಲ ದೀರ್ಘತೆ ಮತ್ತು ಮುಂದುವರಿಕೆ ಪ್ರಮುಖ ಲಕ್ಷಣಗಳಾಗಿದ್ದವು. ಗೀತೆಗಳು ಭಾರತೀಯ ದೃಶ್ಯ ಕಲೆಯ ಪ್ರಮುಖ ಲಕ್ಷಣವಾಗಿತ್ತು. ಇವೆಲ್ಲ ಪಾಶ್ಚಾತ್ಯ ಪ್ರಣೀತ ದೃಶ್ಯ ಮಾಧ್ಯಮಕ್ಕೆ ಭಿನ್ನವಾದ ಕಲ್ಪನೆಗಳಾದ್ದರಿಂದ ನಮ್ಮಲ್ಲಿ ಚಲನಚಿತ್ರ ಕಾಲಿಟ್ಟು ನಾಟಕ ಮಾಧ್ಯಮಕ್ಕೆ ಎದುರಾಗಿ ಉಳಿದು ಬೆಳೆದ ಬಗೆ ಸಂಘರ್ಷ, ಆಕ್ರಮಣ, ಆಕರ್ಷಣೆ, ಮಂಥನ, ಮೈಥುನ ಎಲ್ಲವೂ ಕೂಡ. ಸ್ವಾತಂತ್ರ್ಯ ಪೂರ್ವದಲ್ಲಿ ಚಿತ್ರ ಮಾಧ್ಯಮದ ಬಗ್ಗೆ ನಮ್ಮಲ್ಲಿದ್ದ ಕಲ್ಪನೆ ಅಸ್ಪಷ್ಟವಾಗಿತ್ತು. ಆ ದಿನಗಳಲ್ಲಿ ಬ್ರಿಟಿಷ್ ಅಳ್ವಿಕ ಇದ್ದುದರಿಂದ ಸಾರ್ವಜನಿಕರಿಗೆ ಲಭ್ಯವಾಗುತ್ತಿದ್ದುದು ಬ್ರಿಟಿಷ್ ಸಿನಿಮಾಗಳೇ. ಜೊತೆಗೆ ನಮ್ಮಲ್ಲಿನ ಆರಂಭಿಕ ಚಿತ್ರಗಳು ನಾಟಕದ ದೃಶ್ಯರೀತಿ ಮತ್ತು ಬ್ರಿಟಿಷ್ ಪ್ರಭಾವಕ್ಕೆ ಸಿಕ್ಕು ಬೆಳೆದವಾದ್ದರಿಂದ 'ಒಟ್ಟು ಕಲ್ಪನೆ' ಹಲವರಲ್ಲಿ ಅಸ್ಪಷ್ಟವಾಗಿಯೇ ಇತ್ತು. ೧೯೪೭ರಲ್ಲಿ ಚಿದಾನಂದ ದಾಸ್ ಗುಪ್ತ ಮತ್ತು ಸತ್ಯಜಿತ್ ರೇ ಭಾರತದ ಮೊದಲ ಚಿತ್ರ ಸಮಾಜ 'ಕಲ್ಕತ್ತ ಫಿಲಂ ಸೊಸೈಟಿ' ಆರಂಭಿಸಿದರು. ಇಲ್ಲಿ ವಿಶ್ವದ ಪ್ರಮುಖ ಚಿತ್ರಗಳ ಪ್ರದರ್ಶನ, ಚರ್ಚೆ ಆರಂಭವಾಯಿತು. ರೇ ಇಂತಹ ಸೊಸೈಟಿ ಮೂಲಕವೆ 'ಬ್ಯಾಟ್ಲ್ ಷಿಪ್ ಪೊಟೆಮ್‌ಕಿನ್' ಅನ್ನು ೨೫ ಬಾರಿ ನೋಡಿದರು. ೧೯೪೯ರಲ್ಲಿ ಫ್ರೆಂಚ್

ನಿರ್ದೇಶಕ ಜೀನ್ ರೆನ್ವಾ ತಮ್ಮ 'ರಿವರ್' ಚಿತ್ರದ ಚಿತ್ರೀಕರಣಕ್ಕೆ ಕಲ್ಕತ್ತೆಗೆ ಬಂದಿದ್ದರು. ಅವರನ್ನು ಭೇಟಿಯಾದ ರೇ ತಮ್ಮ ಚಿಂತನೆಗಳನ್ನು ವಿವರಿಸಿದಾಗ ಪ್ರಭಾವಿತರಾದ ರೆನ್ವಾ ತಮ್ಮ ಸಂಸ್ಥೆಯಿಂದ ರೇ ಅವರನ್ನು ಲಂಡನ್‌ಗೆ ಐದು ತಿಂಗಳ ತರಬೇತಿಗಾಗಿ ಕಳುಹಿಸಿದರು. (ರೇ ಅವರು ಗ್ರಾಫಿಕ್ ಆರ್ಟಿಸ್ಟ್ ಆಗಿ ಕೆಲಸಕ್ಕಿದ್ದ ಸಂಸ್ಥೆ ಕಳುಹಿಸಿತು ಎಂದೂ ಹೇಳುತ್ತಾರೆ) ಇಲ್ಲಿ ರೇ ಅವರಿಗೆ 'ವಿಶ್ವ ಸಿನಿಮಾ' ಜಗತ್ತಿನ ಪರಿಚಯವಾಯಿತು. ಲಂಡನ್‌ನ ಚಿತ್ರ ಸಮಾಜಗಳ ನಿಕಟ ಸಂಪರ್ಕಕ್ಕೆ ಬಂದ ರೇ, ಅಂತಹ ಸಮಾಜಗಳ ಮೂಲಕವೇ ೯೫ ಚಿತ್ರಗಳನ್ನು ನೋಡಿದೆ ಎಂದು ತಮ್ಮ ಆತ್ಮಚರಿತ್ರೆಯಲ್ಲಿ ಹೇಳಿಕೊಂಡಿದ್ದಾರೆ. ಇಟಲಿಯ ವಿಟ್ಟೋರಿಯಾ ಡಿಸಿಕಾ ನಿರ್ದೇಶಿಸಿದ 'ಬೈಸಿಕಲ್ ಥೀವ್ಸ್' ಅವರ ಮೇಲೆ ತೀವ್ರ ಪರಿಣಾಮ ಬೀರಿತು. ಕಲ್ಕತ್ತೆಗೆ ಹಿಂತಿರುಗಿದ ರೇ ಅವರ ಜೊತೆಗೆ ಒಂದು ಹೊಸ ಇತಿಹಾಸವೇ ಭಾರತಕ್ಕೆ ಕಾಲಿಟ್ಟಿತು.

(ಚಿತ್ರ ೧) ಬೆಂಗಳೂರಿನಲ್ಲಿ ಆರಂಭವಾದ ಮೊದಲ ಚಿತ್ರಸಮಾಜ 'ಫಿಲಂ ಸೊಸೈಟಿ ಆಫ್ ಬೆಂಗಳೂರು' ಉದ್ಘಾಟನೆ ಸಂಬಂಧದಲ್ಲಿ ಪ್ರಕಟವಾದ ಸ್ಮರಣ ಸಂಚಿಕೆ

೧೯೫೫ರಲ್ಲಿ ಸತ್ಯಜಿತ್ ರೇ ಅವರ 'ಪಥೇರ್ ಪಾಂಚಾಲಿ' ತೆರೆ ಕಂಡಿತು. ಅದು ಭಾರತೀಯ ಕಲಾತ್ಮಕ ಚಿತ್ರಗಳ ಹಾದಿಯಲ್ಲಿ ಒಂದು ಮೈಲುಗಲ್ಲಾಯಿತು. ಚಲನಚಿತ್ರ ಭಾಷೆಯ ಸ್ವರೂಪ ಮತ್ತು ಕಲಾತ್ಮಕ ಮೌಲ್ಯಗಳ ಬಗೆಗಿನ ಕಳಕಳಿ ಇಲ್ಲಿಂದ ಮುಂದೆ ಹೊಸ ಸಾಧ್ಯತೆಯ ಕಡೆಗೆ ಹಿಗ್ಗಿತು. 'ಪಥೇರ್ ಪಾಂಚಾಲಿ' ಅನುಸರಿಸಿ ಇತರ ಭಾರತೀಯ ಭಾಷೆಗಳಲ್ಲಿ ಕಲಾತ್ಮಕ ಚಿತ್ರಗಳ ತಯಾರಿಕೆ ಆರಂಭವಾಯಿತು ಮತ್ತು ಆ ಚಿತ್ರಗಳು ತಮ್ಮದೇ ಆದ ಪ್ರೇಕ್ಷಕ ವೃಂದವನ್ನು ಕಟ್ಟಿಕೊಂಡವು. ಇಂತಹ ಪ್ರೇಕ್ಷಕರು ತಮ್ಮ ಸಹ ಆಸಕ್ತರೊಡಗೂಡಿ 'ಚಿತ್ರ ಸಮಾಜ'ಗಳನ್ನು ಸ್ಥಾಪಿಸಿಕೊಳ್ಳಲು ಆರಂಭಿಸಿದರು. ಕಲ್ಕತ್ತ, ಮುಂಬೈ, ಪಾಟ್ನಾ, ದೆಹಲಿ ಮತ್ತು ಮದರಾಸಿನಲ್ಲಿ ಮುಖ್ಯವಾಗಿ ಇಂತಹ ಹಲವಾರು ಚಿತ್ರ ಸಮಾಜಗಳು ತಲೆ ಎತ್ತಿದವು.

೧೯೭೦ರ ಸುಮಾರಿಗೆ ದೇಶಾದ್ಯಂತ 'ಹೊಸ ಅಲೆ'ಯ ಚಿತ್ರಗಳ ಒಂದು ಚಳವಳಿಯೇ ಪ್ರಾರಂಭವಾಯಿತು. ಈ ಹೊತ್ತಿಗಾಗಲೇ 'ಭಾರತೀಯ ಚಿತ್ರ ಸಮಾಜಗಳ ಒಕ್ಕೂಟ, (Federation of Film Societies of India) ಅಸ್ತಿತ್ವಕ್ಕೆ ಬಂದಿತ್ತು. ಈ ಒಕ್ಕೂಟಕ್ಕೆ ಸರ್ಕಾರದ ಅಧಿಕೃತ ಮನ್ನಣೆ ಮತ್ತು ಅನುದಾನವೂ ಲಭ್ಯವಾಗಿ 'ಚಿತ್ರ ಸಮಾಜ'ಗಳ ಅಸ್ತಿತ್ವ ಸಾಂಸ್ಥೀಕರಿಸಲ್ಪಟ್ಟಿತು. ಮುಂದೆ ಹೊಸ ಅಲೆ ಚಿತ್ರಗಳ ರಭಸ ತಗ್ಗಿದಂತೆ 'ಚಿತ್ರ ಸಮಾಜ'ಗಳ ಬೆಳವಣಿಗೆಯೇ ಕುಂಠಿತವಾಯಿತು. ಕ್ರಿಯಾಶೀಲತೆ ತಗ್ಗಿದ ಚಿತ್ರ ಸಮಾಜಗಳು ಕಾಲ ಪ್ರವಾಹದಲ್ಲಿ ಸಿಕ್ಕಿ ನಾಶವಾದವು. ಬಹಳ ಮುಖ್ಯವಾಗಿ ಪಶ್ಚಿಮ ಬಂಗಾಳ ಮತ್ತು ಕೇರಳ ಬಿಟ್ಟು ಉಳಿದ ರಾಜ್ಯಗಳಲ್ಲಿದ್ದ ಸೊಸೈಟಿಗಳು ಬಹುತೇಕ ನಗರ ಕೇಂದ್ರೀಕೃತವಾಗಿಯೂ ಏಕವ್ಯಕ್ತಿ ಪ್ರದರ್ಶನವಾಗಿಯೂ ಉಳಿದುಕೊಂಡಿದ್ದವು. ಹೀಗಾಗಿ ಅವು ಒಂದು ಚಳವಳಿಯನ್ನು ಬೆಳೆಸುವಲ್ಲಿ ವಿಫಲವಾದವು.

ಕರ್ನಾಟಕದಲ್ಲಿ ಚಿತ್ರ ಸಮಾಜದ ಚಟುವಟಿಕೆಗಳು

ಕರ್ನಾಟಕಕ್ಕೆ ಚಿತ್ರ ಸಮಾಜದ ಪರಿಕಲ್ಪನೆ ಕಾಲಿಟ್ಟಿದ್ದು ೬೦ರ ದಶಕದಲ್ಲಿ. ಈ ದಶಕದಲ್ಲೇ ಕನ್ನಡ ಚಿತ್ರರಂಗ ತಮಿಳು, ತೆಲುಗು ಭಾಷೆಯ ಪ್ರಭಾವದಿಂದ ಹೊರಬಂದು ತನ್ನ ಸ್ವಂತಿಕೆಯನ್ನು ರೂಪಿಸಿಕೊಳ್ಳಲು ಆರಂಭಿಸಿದ್ದು. ಚಿತ್ರ ತಯಾರಿಕೆಯಲ್ಲಿ ದಿಢೀರ್ ಹೆಚ್ಚಳ ಕಂಡುಬಂದಿತು. ಈವರೆಗಿನ ಮೂರು ದಶಕಗಳ ಚಲನಚಿತ್ರ ಇತಿಹಾಸದಲ್ಲಿ ಕೇವಲ ೯೮ ಚಿತ್ರಗಳು ತೆರೆ ಕಂಡರೆ, ೬೦ರ ದಶಕ ಬಂದರಲ್ಲೇ ೨೦೨ ಚಿತ್ರಗಳು ತೆರೆ ಕಂಡವು. ಈ ಹೆಚ್ಚಳ ಸಂಖ್ಯೆಯಲ್ಲಿ ಮಾತ್ರವಲ್ಲ ವಸ್ತುವಿನಲ್ಲೂ ವೈವಿಧ್ಯ ಕಾಣುವಂತಾಯಿತು. ೧೯೬೪ರಲ್ಲಿ 'ಫಿಲಂ ಸೊಸೈಟಿ ಆಫ್ ಬೆಂಗಳೂರು' ಆರಂಭವಾಯಿತು. ಪತ್ರಕರ್ತ ವಿ.ಎನ್.ಸುಬ್ಬರಾವ್ ಮತ್ತು ನಿರ್ದೇಶಕ ಎಂ.ವಿ.ಕೃಷ್ಣಸ್ವಾಮಿ ಮತ್ತು ಇತರ ಚಿತ್ರಾಸಕ್ತರ ಉತ್ಸಾಹದಿಂದ ಆರಂಭವಾದ ಈ ಸಂಘಟನೆ ತನ್ನ ಮೊದಲ ವರ್ಷದಲ್ಲೇ ಅನೇಕ ಮಹತ್ತರ ಚಿತ್ರಗಳ ಪ್ರದರ್ಶನ ಏರ್ಪಡಿಸಿದ್ದಲ್ಲದೆ 'ಇಮೇಜ್ ಆಫ್ ದಿ ಇಂಡಿಯನ್ ಸಿನಿಮಾ' ಎಂಬ ಶೀರ್ಷಿಕೆಯ ಸಿರ ಚಿತ್ರ ಪ್ರದರ್ಶನ ಏರ್ಪಡಿಸಿತ್ತು. ಚಲನಚಿತ್ರ ಇತಿಹಾಸದ ಮೈಲಿಗಲ್ಲುಗಳು ಈ ಉತ್ಸವದಲ್ಲಿ ಪ್ರದರ್ಶಿತವಾಗಿದ್ದವು. ಹೆಸರಾಂತ ವಿಮರ್ಶಕ ಬಿ.ಡಿ.ಗಾರ್ಗ ಇವರ ನಿರ್ವಹಣೆ ನಡೆಸಿದರು. ಆ ಸಂದರ್ಭದಲ್ಲಿ ಹೊರತಂದ ಸ್ಮರಣ ಸಂಚಿಕೆಯಲ್ಲಿ ಸತ್ಯಜಿತ್ ರೇ ಅವರ ಲೇಖನವೂ ಸೇರಿರುವುದರಿಂದ ಅದಕ್ಕೆ ಐತಿಹಾಸಿಕ ಮಹತ್ವವಿದೆ. ಈ ಸ್ಮರಣ ಸಂಚಿಕೆಯಲ್ಲಿ ಸಂಘದ ಉದ್ದೇಶಗಳ ಕುರಿತು ''ಜಗತ್ತಿನ ಕ್ಲಾಸಿಕ್, ಪ್ರಯೋಗಾತ್ಮಕ ಮತ್ತು ಸಮಕಾಲೀನ ಜಗತ್ತಿನ ಉತ್ತಮ ಚಿತ್ರಗಳು ಸದಸ್ಯರಿಗೆ ನೋಡಲು ಲಭ್ಯವಾಗಬೇಕು ಮತ್ತು ಆ ಮೂಲಕ ಸಿನಿಮಾ ಒಂದು ಕಲೆಯಾಗಿ ಬೆಳೆದು ಸದಭಿರುಚಿ ನಿರ್ಮಾಣವಾಗಬೇಕು'' ಎಂದು ಹೇಳಿಕೊಳ್ಳಲಾಗಿದೆ. 'ಇದನ್ನು ಚಳವಳಿಯಾಗಿ ಬೆಳೆಸಬೇಕು' ಎಂಬ ಉನ್ನತ ಆಶಯ ಇಟ್ಟುಕೊಂಡ ಈ ಸಂಘಟನೆ ಆರಂಭದಲ್ಲಿ ಗಮನಾರ್ಹ ಕೆಲಸ ಮಾಡಿ ಕ್ರಿಯಾಶೀಲವಾಗಿದ್ದು ಕಾಲಕ್ರಮೇಣ ಸ್ಥಗಿತಗೊಂಡಿತು.

'ಫಿಲಂ ಸೊಸೈಟಿ ಆಫ್ ಬೆಂಗಳೂರು' ತನ್ನ ಚಟುವಟಿಕೆಯನ್ನು ಸ್ಥಗಿತಗೊಳಿಸಿದರೂ ಅದರ ಪ್ರಭಾವ ಇನ್ನು ಹಲವರ ಮೇಲೆ ಅಚ್ಚಳಿಯದೆ ಉಳಿದಿತ್ತು. ಇದರ ಉನ್ನತ ಆಶಯಗಳ ಗುಂಗಿನಲ್ಲೇ ೧೯೬೫-೬೬ರ ಸುಮಾರಿಗೆ 'ಮಯೂರ ಫಿಲಂ ಸೊಸೈಟಿ' ಜನ್ಮ ತಾಳಿತು. ಡಾ|ಎಂ.ಎನ್.ಶ್ರೀನಿವಾಸ್, ಎಂ.ಬಿ.ಎಸ್.ಪ್ರಸಾದ್, ರಾಮಮೂರ್ತಿ, ನಾಗಪ್ಪ, ಹಮ್‌ಜು ಇಮಾಮ್, ಎಚ್.ಎಸ್.ಅಬ್ಬಾಸಿ, ಟಿ.ಜಿ.ವೈದ್ಯನಾಥನ್, ಅರಸು, ವೆಂಕಟಸುಬ್ಬಯ್ಯ ಮುಂತಾದ ಸ್ನೇಹಿತರು ಈ ಸೊಸೈಟಿಯ ಬೆಳವಣಿಗೆಗೆ ದುಡಿದರು. ಸತ್ಯಜಿತ್ ರೇ ಅವರನ್ನು ಬೆಂಗಳೂರಿಗೆ ಕರೆಸಿ ಅವರ ಚಿತ್ರಗಳ ಉತ್ಸವ, ಚರ್ಚೆ ನಡೆಸಿತ್ತು. ನ್ಯೂ ಥಿಯೇಟರ್ಸ್ ಚಿತ್ರೋತ್ಸವ, ಯಂಗ್ ಜರ್ಮನ್ ಚಿತ್ರೋತ್ಸವ, ಫ್ರೆಂಚ್ ಚಿತ್ರೋತ್ಸವ, 'ಕ್ಯಾವಲ್ ಕೇಡ್ ಆಫ್ ಇಂಡಿಯನ್ ಸಿನಿಮಾ' ಎಂಬ ಫಿರೋಜ್ ರಂಗೂನ್‌ವಾಲಾ ಅವರ ಭಿತ್ತಿ ಚಿತ್ರಗಳು, ಸಿರಚಿತ್ರಗಳು, ಕಿರುಹೊತ್ತಿಗೆ ಮತ್ತು ನಿಯತ ಕಾಲಿಕಗಳ ಮೂಲಕ ಭಾರತ ಚಿತ್ರರಂಗದ ಇತಿಹಾಸವನ್ನು ಸ್ವಾರಸ್ಯಕರವಾಗಿ ನಿರೂಪಿಸುವ ಪ್ರದರ್ಶನ ಮಯೂರ ಫಿಲಂ ಸೊಸೈಟಿಯ ಕೀರ್ತಿಯನ್ನು ಹೆಚ್ಚಿಸಿತ್ತು. ತನ್ನ ಸ್ವಶಕ್ತಿಯಿಂದ ಮಾತ್ರವಲ್ಲ, ಮ್ಯಾಕ್ಸ್‌ಮುಲ್ಲರ್ ಮತ್ತು ಅಲಯನ್ಸ್ ಫ್ರಾಂಚೈಸ್ (ಫ್ರಾನ್ಸ್) ನ ಸಹಯೋಗದೊಂದಿಗೆ 'ಮಯೂರ ಫಿಲಂ ಸೊಸೈಟಿ' ಚಿತ್ರ ಪ್ರದರ್ಶನವನ್ನು ಏರ್ಪಡಿಸಿ ಉತ್ತಮ ಅಭಿರುಚಿ ನಿರ್ಮಾಣ ಮಾಡುವಲ್ಲಿ ಶ್ರಮಿಸಿತು. 'ಮಯೂರ ಫಿಲಂ ಸೊಸೈಟಿ' ತನ್ನ ಉತ್ತುಂಗದ ದಿನಗಳಲ್ಲಿ 'ಮಯೂರ ಫಿಲಂಸ್' ಎಂಬ ಸಹಕಾರಿ ಸಂಸ್ಥೆಯನ್ನು ಸ್ಥಾಪಿಸಿ ಅನೇಕ ಸ್ನೇಹಿತರುಗಳಿಂದ ಸದಸ್ಯತ್ವ ಸಂಗ್ರಹಿಸಿ 'ಕಂಕಣ' ಎಂಬ ಕನ್ನಡ ಚಿತ್ರವನ್ನು ತಯಾರಿಸಿತು. ಈ ಚಿತ್ರಕ್ಕೆ ರಾಜ್ಯ ಪ್ರಶಸ್ತಿ ಮತ್ತು ರಾಷ್ಟ್ರ ಪ್ರಶಸ್ತಿಗಳೂ ದೊರಕಿ ಸಂಘದ ಕೀರ್ತಿ ಮುಗಿಲೆತ್ತರಕ್ಕೆ ಏರಿತು. ಆದರೆ ಈ ಚಿತ್ರ ನಿರ್ಮಾಣವೇ ಸಂಘದ ಒಟ್ಟು ಉತ್ಸಾಹಕ್ಕೆ ಪೆಟ್ಟು ಕೊಟ್ಟಿತು. ಅಂತಿಮವಾಗಿ ೧೯೭೪ರ ಸುಮಾರಿಗೆ ಅದು ಸ್ಥಗಿತಗೊಳ್ಳಲು ಕಾರಣವಾಗಿದ್ದು ಒಂದು ವಿಪರ್ಯಾಸ. ಇದೇ ಹೊತ್ತಿಗೆ, ಅಂದರೆ ಎಪ್ಪತ್ತರ ದಶಕದ ಆರಂಭಕ್ಕೆ ಬೆಂಗಳೂರಿನಲ್ಲಿ ಅನೇಕ ಚಿತ್ರ ಸಮಾಜಗಳು ತಲೆ ಎತ್ತಿದವು. ಅವುಗಳ ಪೈಕಿ ಸುಚಿತ್ರ ಫಿಲಂ ಸೊಸೈಟಿ ಮತ್ತು ಬೆಂಗಳೂರು ಫಿಲಂ ಸೊಸೈಟಿ ಮಾತ್ರ ಇಂದಿಗೂ ಉಳಿದು ಬೆಳೆಯುತ್ತಿವೆ.

ಹೊಸ ಅಲೆ ಚಿತ್ರಗಳ ಹುರುಪಿನಲ್ಲಿ 'ಆರಾಧನಾ ಫಿಲಂ ಸೊಸೈಟಿ', 'ಚಿತ್ರ ಸಮುದಾಯ', 'ಚಲನ ಫಿಲಂ ಸೊಸೈಟಿ', 'ಚೈತ್ರ ಫಿಲಂ ಸೊಸೈಟಿ' ಅಸ್ತಿತ್ವಕ್ಕೆ ಬಂದವು. ಒಟ್ಟಿಗೆ ಸುಮಾರು ನಾಲ್ಕು ಸಾವಿರ ಮಂದಿ ಸದಸ್ಯರನ್ನು ಒಳಗೊಂಡಿದ್ದ ಈ ಚಿತ್ರ ಸಮಾಜಗಳು ಒಂದು ಸಾಂಸ್ಕೃತಿಕ ಚಳವಳಿ ಹುಟ್ಟುಹಾಕುವಲ್ಲಿ ಪ್ರಮುಖ ಪಾತ್ರ ವಹಿಸಿದ್ದವು. ೧೯೭೩ರ ಫೆಬ್ರವರಿ ೨ರಂದು 'ಕಲ್ಪನಾ ಫಿಲಂ ಸೊಸೈಟಿ'ಯನ್ನು ಉದ್ಘಾಟಿಸುತ್ತಾ ಅಂದಿನ ರಾಜ್ಯಪಾಲ ಮೋಹನ್‌ಲಾಲ್ ಸುಖಾಡಿಯಾ ''ಇತರ ರಾಜ್ಯದಲ್ಲಿ ಯಶಸ್ವಿಯಾಗಿ ಕೆಲಸ ಮಾಡುತ್ತಿರುವ ಫಿಲಂ ಸೊಸೈಟಿಗಳ ಸಂಖ್ಯೆಗೆ ಹೋಲಿಸಿದರೆ, ಮೈಸೂರು ರಾಜ್ಯದಲ್ಲಿನ ಫಿಲಂ ಸೊಸೈಟಿಗಳ ಸಂಖ್ಯೆ ಸಾಲದು'' ಎಂದು ಈ ಫಿಲಂ ಸೊಸೈಟಿಗಳ ಚಿನ್ನದ ದಿನಗಳಲ್ಲೇ ಹೇಳಿದರೆಂಬುದನ್ನು ನೆನಪಿಸಿಕೊಂಡಾಗ ಇವತ್ತಿನ ಸ್ಥಿತಿ ನಿಜಕ್ಕೂ ದಿಗಿಲು ಹುಟ್ಟಿಸುವಂತಹುದೇ.

ಚಿತ್ರ ಸಮಾಜಗಳನ್ನು ಕುರಿತ ಚರ್ಚೆಯಲ್ಲಿ ದಾಖಲಿತವಾಗಬೇಕಾದ ಇನ್ನೊಂದು ಮುಖ್ಯ ಹೆಸರು 'ವೀಕ್ಷಕ ಫಿಲಂ ಆಪ್ರೀಸಿಯೇಷನ್ ಸೊಸೈಟಿ'ಯದು. ೧೯೭೩ರಲ್ಲಿ ಆರಂಭವಾದ ಈ ಸಂಸ್ಥೆ ಉತ್ತಮ ಚಿತ್ರಗಳ ವೀಕ್ಷಣೆ, ಅವುಗಳ ಬಗ್ಗೆ ಚರ್ಚೆ, ಪೂರಕ ಸಾಹಿತ್ಯ ಪ್ರಕಟಣೆಯನ್ನು ಅತ್ಯಂತ ವ್ಯವಸ್ಥಿತವಾಗಿ ನಡಸಿತು. ೧೯೮೩ರಿಂದ ಮೂರು ವರ್ಷಗಳ ಕಾಲ ಚಲನಚಿತ್ರ ಪತ್ರಕರ್ತರ ಸಹಯೋಗದೊಂದಿಗೆ ಪ್ರತಿವರ್ಷ ಚಲನಚಿತ್ರ ರಸಗ್ರಹಣ ಶಿಬಿರ ಅರ್ಥಪೂರ್ಣವಾಗಿ ನಡೆಸಿತು. 'ಪಲ್ಲವಿ', 'ತಬ್ಬಲಿಯು ನೀನಾದೆ ಮಗನೆ', 'ಘಟಶ್ರಾದ್ಧ', 'ಅನುರೂಪ', 'ಅರಿವು' ಮುಂತಾದ ಚಿತ್ರಗಳ ಕುರಿತ ವಿಚಾರ ಸಂಕಿರಣ ನಡೆಸಿ ಮಾಧ್ಯಮದ ಕುರಿತು ಹೊಸ ಅರಿವನ್ನು ಹುಟ್ಟಿಸುವಲ್ಲಿ ಸಫಲ ವಾಯಿತು. ಇವರ ಜೊತೆಗೆ ಚಲನಚಿತ್ರ ಕುರಿತ ಪೂರಕ ಪುಸ್ತಕಗಳೇ ಇಲ್ಲದಿದ್ದ ಕಾಲದಲ್ಲಿ ಅಂತಹ ಹಲವು ಪುಸ್ತಕಗಳನ್ನು ಪ್ರಕಟಿಸಿದ ಕೀರ್ತಿ 'ವೀಕ್ಷಕ'ದ್ದು. ವೀಕ್ಷಕ ತ್ರೈಮಾಸಿಕ, 'ಘಟಶ್ರಾದ್ಧ' ಮತ್ತು ಬರ್ಗ್‌ಮನ್ ಚಿತ್ರಗಳ ಬಗೆಗಿನ ಸ್ಮರಣ ಸಂಚಿಕಗಳು, ರಸಗ್ರಹಣ ಶಿಬಿರದ ಸಂದರ್ಭದಲ್ಲಿಯ ಸ್ಮರಣ ಸಂಚಿಕೆಗಳು, ಗಿರೀಶ್ ಕಾಸರವಳ್ಳಿ ಸಂಪಾದಿಸಿದ 'ಸಿನಿಮಾ ಕಲೆ ಮತ್ತು ನೆಲೆ', ಜಿ.ವಿ.ಅಯ್ಯರ್‌ರವರ 'ಮೂರು ಚಿತ್ರ ಮೂರು ದಾರಿ' ಮತ್ತು ಇನ್ನೊಬ್ಬ ಲೇಖಕರ 'ಆಫ್ರಿಕಾ ದೇಶದ ಚಿತ್ರಗಳು' ಎಂಬ ವೈಚಾರಿಕ ಹಾಗೂ ಪೂರಕ ಪುಸ್ತಕಗಳನ್ನು ಹೀಗೆ ಮೊದಲ ಬಾರಿಗೆ ಪ್ರಕಟಿಸಿದ ಖ್ಯಾತಿ ವೀಕ್ಷಕದ್ದಾಗಿದೆ. ಅತ್ಯಂತ ಚಟುವಟಿಕಯಿಂದಿದ್ದ ಎಂಬ ಹಲವರ ನಿರೀಕ್ಷೆಯೊಂದಿಗೆ ಬೆಳೆದ ಸಂಸ್ಥೆ ೧೯೮೦ರ ದಶಕದ ಕೊನೆಗೆ ಇತಿಹಾಸ ಸೇರಿತು.

(ಚಿತ್ರ ೨) ಕರ್ನಾಟಕ ಚಲನಚಿತ್ರ ಪತ್ರಕರ್ತರ ಪರಿಷತ್ ಮತ್ತು ವಿಶ್ವೇಶ್ವರಯ್ಯ ಮ್ಯೂಜಿಯಂ ಸಹಯೋಗದೊಂದಿಗೆ ನಡೆದ 'ನಾಸ್ಟಾಲ್ಜಿಯ' ಚಿತ್ರೋತ್ಸವದ ಸ್ಮರಣ ಸಂಚಿಕ

ರಾಜ್ಯದ ಇತರೆಡೆ ಚಿತ್ರ ಸಮಾಜದ ಚಟುವಟಿಕೆಗಳು

ಕರ್ನಾಟಕದ ವಿವಿಧ ಭಾಗಗಳಲ್ಲಿಯೂ 'ಚಿತ್ರ ಸಮಾಜ'ಗಳು ಸ್ಥಾಪಿತಗೊಂಡು ತಮ್ಮ ಚಟುವಟಿಕೆಗಳ ಮೂಲಕ ಸಾಂಸ್ಕೃತಿಕ ಜೀವಂತಿಕೆಯನ್ನು ಕಾಯ್ದುಕೊಂಡು ಬಂದಿವೆ. ಧಾರವಾಡದ 'ಚಿತ್ರ ಫಿಲಂ ಸೊಸೈಟಿ' ಷೆಫಿಜಾಸ್ ಅವರ ನೇತೃತ್ವದಲ್ಲಿ ಸುಮಾರು ಎರಡು ದಶಕಗಳ ಕಾಲ ಅಸ್ತಿತ್ವದಲ್ಲಿದ್ದು ಉತ್ತರ ಕರ್ನಾಟಕ ಭಾಗದಲ್ಲಿ ಚಿತ್ರಗಳ ಕುರಿತು ಸದಭಿರುಚಿ ಬೆಳೆಸುವಲ್ಲಿ ಶ್ರಮಿಸಿತ್ತು. 'ಸಿ.ಎಫ್.ಟಿ.ಆರ್.ಐ. ಫಿಲಂ ಸೊಸೈಟಿ, ಮೈಸೂರು' ಇಂತಹದೇ ಕಾರ್ಯವನ್ನು ಮೈಸೂರು ನಗರದಲ್ಲಿ ಸಮರ್ಥವಾಗಿ ನಿರ್ವಹಿಸಿದೆ. ದಾವಣಗೆರೆಯ 'ಪ್ರತಿಮಾ ಚಿತ್ರಕೂಟ' ವಾಣಿಜ್ಯ ನಗರಿಯಲ್ಲಿ ಹೊಸ ಅರಿವನ್ನು ಮೂಡಿಸುವಲ್ಲಿ ಯಶಸ್ವಿಯಾಗಿತ್ತು. ಹಾಲಪ್ಪ ಮುಂತಾದ ಸ್ಥಳೀಯರ ಆಸಕ್ತಿಯೇ ಬಂಡವಾಳವಾಗಿದ್ದ 'ಪ್ರತಿಮಾ ಚಿತ್ರ ಕೂಟ'ದ ಮೂಲಕ ಹಲವು ಉತ್ತಮ ಚಿತ್ರಗಳು ದಾವಣಗೆರೆ ನಾಗರಿಕರಿಗೆ ಲಭ್ಯವಾದವು. ಮಲನಾಡಿನ ಕೇಂದ್ರಸ್ಥಾನವಾದ ಶಿವಮೊಗ್ಗದಲ್ಲಿ 'ಸಹ್ಯಾದ್ರಿ ಚಿತ್ರ ಸಮಾಜ' ಚಿತ್ರೋತ್ಸವಗಳನ್ನು ಏರ್ಪಡಿಸುವುದೇ ಅಲ್ಲದೆ ವಿಚಾರ ಸಂಕಿರಣಗಳನ್ನು, ರಸಗ್ರಹಣ ಶಿಬಿರಗಳನ್ನು ಏರ್ಪಡಿಸುವ ಮೂಲಕ ಇವತ್ತಿಗೂ ಕ್ರಿಯಾಶೀಲವಾಗಿದೆ. ಹಾಸನದ 'ಹಾಸನ ಫಿಲಂ ಸೊಸೈಟಿ', ತಿಪಟೂರಿನ 'ಕಲ್ಪತರು ಚಿತ್ರ ಸಮಾಜ', ದೊಡ್ಡಬಳ್ಳಾಪುರದ 'ಚುಲಿಕ ಫಿಲಂ ಸೊಸೈಟಿ', ಸಿರಿಗೆರೆಯ 'ಸಮತಾ ಚಿತ್ರಕೂಟ' ಗಮನಾರ್ಹವಾಗಿ ಸೇವೆ ಸಲ್ಲಿಸಿದ ಇನ್ನಿತರ ಚಿತ್ರ ಸಮಾಜಗಳು.

ಎ.ಪಿ.ದೇಸಾಯಿಯವರು ಕರ್ನಾಟಕ ಚಲನಚಿತ್ರ ಅಭಿವೃದ್ಧಿ ಪ್ರಾಧಿಕಾರದ ಮ್ಯಾನೇಜಿಂಗ್ ಡೈರೆಕ್ಟರ್ ಆಗಿದ್ದಾಗ 'ಕರ್ನಾಟಕ ಫಿಲಂ ಸೊಸೈಟೀಸ್ ಡೆವಲಪ್‌ಮೆಂಟ್ ಕೌನ್ಸಿಲ್' ಎಂಬ ಸಂಸ್ಥೆಯನ್ನು ಸ್ಥಾಪಿಸಿ ಅದರಿಂದ ರಾಜ್ಯದಲ್ಲಿ ಚಲನಚಿತ್ರಸಮಾಜಗಳ ಅಭಿವೃದ್ಧಿಗೆ ಪ್ರಯತ್ನಪಟ್ಟರು. ಆದರೆ, ಅನೇಕ ಕಾರಣಗಳಿಂದಾಗಿ ಅವರು ಕೆ.ಎಫ್.ಐ.ಡಿ.ಸಿ. ಇಂದ ವರ್ಗಾವಣೆಯಾದ ಮೇಲ ಕಲವೇ ವರ್ಷಗಳಲ್ಲಿ ಈ ಸಂಸ ನಿಂತು ಹೋಯಿತು. ಮ್ಯಾಗ್ಸೇಸೆ ಪ್ರಶಸ್ತಿ ವಿಜೇತ ಕೆ.ವಿ.ಸುಬ್ಬಣ್ಣನವರ 'ನೀನಾಸಂ' ನಾಟಕದ ಕುರಿತು ಹೇಗ ಹೊಸ ಅರಿವನ್ನು ಹೆಚ್ಚಿಸಿತೋ ಹಾಗೆ 'ಚಲನಚಿತ್ರ' ಕುರಿತೂ ಹೊಸ ಅರಿವನ್ನು ಮೂಡಿಸುತ್ತಿದೆ. ವಿಶ್ವದ ಪ್ರಮುಖ ಚಿತ್ರಗಳ ಪ್ರದರ್ಶನ, ಅವುಗಳ ಕುರಿತ ಚರ್ಚೆ, ರಸಗ್ರಹಣ ಶಿಬಿರಗಳು, ವಿಚಾರ ಸಂಕಿರಣಗಳು ಹೀಗೆ ನೀನಾಸಂ ಕೈ ಚಾಚಿರುವ ಕ್ಷೇತ್ರಗಳಿಗೆ ಕೊನೆಯೇ ಇಲ್ಲ. ಹಾಗೆಯೇ ಚಲನಚಿತ್ರಗಳ ಚಿತ್ರಕಥೆಯ ಪೂರ್ಣಪಾಠ ಪ್ರಕಟಿಸುವುದು, ಚಲನಚಿತ್ರದ ಕುರಿತ ವಿಶ್ವದ ಪ್ರಮುಖ ಪುಸ್ತಕಗಳನ್ನು ಭಾಷಾಂತರಿಸಿ ಪ್ರಕಟಿಸುವುದು, ಚಿತ್ರ ಅಧ್ಯಯನಕ್ಕೆ ಪೂರಕವಾದ ಸಾಮಗ್ರಿ ಪ್ರಕಟಿಸುವುದು ಮುಂತಾದ ಚಟುವಟಿಕೆಯಿಂದ ಒಂದು 'ಚಿತ್ರ ಸಮಾಜ'ದ ಕೆಲಸವನ್ನೇ ನೀನಾಸಂ ಅತ್ಯಂತ ಸಮರ್ಥವಾಗಿ ಮಾಡುತ್ತಾ ಬಂದಿದೆ.

ಸುಚಿತ್ರ ಫಿಲಂ ಸೊಸೈಟಿ

ಉಳಿದ ಚಿತ್ರ ಸಮಾಜಗಳು ಅಕಾಲಿಕ ಮರಣ ವನ್ನಪ್ಪಿದ ನಂತರ ಕೂಡ ಸಮರ್ಥವಾಗಿ ತನ್ನ ಚಟುವಟಿಕೆಗಳನ್ನು ನಡೆಸುತ್ತಾ ಬಂದ ಎರಡು ಚಿತ್ರ ಸಮಾಜಗಳೆಂದರ 'ಸುಚಿತ್ರ ಫಿಲಂ ಸೊಸೈಟಿ' ಮತ್ತು 'ಬೆಂಗಳೂರು ಫಿಲಂ ಸೊಸೈಟಿ'. ಕಾಲಕ್ಕೆ ತಕ್ಕಂತೆ ತನ್ನ ಅಭಿರುಚಿಯಲ್ಲಿ ರಾಜಿ ಮಾಡಿಕೊಳ್ಳದೆ, ತನ್ನ ಉನ್ನತ ಆಶಯಕ್ಕೆ ಅನುಗುಣವಾಗಿಯೇ ಎಲ್ಲಾ ಕಷ್ಟ-ನಷ್ಟಗಳನ್ನು ಎದುರಿಸಿ ನಿಂತಿದ್ದೇ ಈ ಸಮಾಜದ ಉಳಿವಿಗೆ ಕಾರಣವಾಗಿದೆ.

೧೯೭೧ರ ಆಗಸ್ಟ್‌ನಲ್ಲಿ ಪ್ರಾರಂಭವಾದ ಸುಚಿತ್ರ ಚಿತ್ರ ಸಮಾಜ ಇಂದಿಗೂ ಕ್ರಿಯಾಶೀಲವಾಗಿರುವ ಚಿತ್ರ ಸಮಾಜಗಳ ಪೈಕಿ ಪ್ರಮುಖವಾದದ್ದು. ಬೆಂಗಳೂರಿನ ಚಾಮರಾಜಪೇಟೆಯಲ್ಲಿ ತನ್ನ ಆರಂಭಿಕ ಹೆಜ್ಜೆಯೂರಿದ ಈ ಸೊಸೈಟಿ ೧೯೭೧ರ ಆಗಸ್ಟ್ ೨೮ರಂದು ಬಸವನಗುಡಿ ನ್ಯಾಷನಲ್ ಕಾಲೇಜಿನ ಸಭಾಂಗಣದಲ್ಲಿ ವಿ.ಶಾಂತರಾಂ ಅವರ 'ಡಾ|ಕೊಟ್ನಿಸ್ ಕಿ ಅಮರ್ ಕಹಾನಿ' ಚಿತ್ರದೊಂದಿಗೆ ಆರಂಭವಾಯಿತು. ಸುಚಿತ್ರದ ಆರಂಭಿಕ ಅಧ್ಯಕ್ಷರಾದ ಬಿ.ಎನ್.ನಾರಾಯಣ್ ಮತ್ತು ಅವರ ಸಂಗಡಿಗರು ಆರಂಭದ ದಿನದಿಂದಲೇ ತಮ್ಮ ಚಟುವಟಿಕೆಗಳಲ್ಲಿ ಹೊಸತನ ಇರುವಂತೆ ನೋಡಿಕೊಂಡು ಬಂದಿದ್ದರಿಂದ, ಅದು ಬಹು ಬೇಗನೆ ಗಟ್ಟಿ ಹೆಜ್ಜೆಗಳನ್ನು ಊರುವುದು ಸಾಧ್ಯವಾಯಿತು. ೧೯೭೩ರಲ್ಲಿ ರಾಷ್ಟ್ರೀಯ ಚಲನಚಿತ್ರ ಭಂಡಾರದ ಸಹಯೋಗದೊಂದಿಗೆ ನಡೆಸಿದ ಬರ್ಗ್‌ಮನ್ ಚಿತ್ರೋತ್ಸವ ಸುಚಿತ್ರಕ್ಕೆ ಸಾಕಷ್ಟು ಖ್ಯಾತಿಯನ್ನು ತಂದುಕೊಟ್ಟಿತು. ೧೯೭೭ರಲ್ಲಿ ಕರ್ನಾಟಕ ಚಲನಚಿತ್ರ ಪತ್ರಕರ್ತರ ಪರಿಷತ್ ಮತ್ತು ವಿಶ್ವೇಶ್ವರಯ್ಯ ಮ್ಯೂಜಿಯಂ ಸಹಯೋಗದೊಂದಿಗೆ ನಾಸ್ಟಾಲ್ಜಿಯಾ (NOSTALGIA) ಚಿತ್ರೋತ್ಸವವನ್ನು ಅದ್ದೂರಿಯಾಗಿ ಆಚರಿಸಲಾಯಿತು. ಈ ಉತ್ಸವದಲ್ಲಿ ಪ್ರತಿಷ್ಠಿತರಾದ ಜೈರಾಜ್, ದೇವಿಡ್, ನರ್ಗಿಸ್, ಕಾಮಿನಿ ಕೌಶಲ್, ನಳಿನಿ ಜಯವಂತ್, ಜೆಮಿನಿ ಗಣೇಶನ್, ತಂಗವೇಲು, ಆರ್.ಸಿ.ಬೋರಾಲ್ ಸೇರಿದಂತೆ ಐವತ್ತಕ್ಕಿಂತ ಹೆಚ್ಚು ಭಾರತೀಯ ಚಿತ್ರೋದ್ಯಮದ ಗಣ್ಯರು ಭಾಗವಹಿಸಿದ್ದರು. ಇದಕ್ಕೆ ಪೂರಕವಾಗಿ ನಡೆದ ವಿಚಾರ ಸಂಕಿರಣ ಮತ್ತು ಸ್ಮರಣ ಸಂಚಿಕೆ ಎರಡೂ ಉತ್ಸವದ ಘನತೆಗೆ ತಕ್ಕಂತೆಯೇ ಇದ್ದವು. ಈ ಉತ್ಸವದಲ್ಲಿ ಉತ್ಸಾಹಿಯಾಗಿ ಭಾಗವಹಿಸಿದ್ದ ಎನ್.ವಿದ್ಯಾಶಂಕರ್ 'ವಿಜಯ ಚಿತ್ರ'ದ ವಜ್ರಮಹೋತ್ಸವದ ವಿಶೇಷ ಸಂಚಿಕೆ (೧೯೯೩)ಯಲ್ಲಿ ನೆನೆಪಿಸಿಕೊಂಡಿರುವುದು ಹೀಗೆ : 'ಸತ್ಯಜಿತ್ ರೇ ಅವರ 'ಪಥೇರ್ ಪಾಂಚಾಲಿ'ಯೂ ಸೇರಿದಂತೆ ಹಲವಾರು ಜಗತ್ಪ್ರಸಿದ್ಧ ಚಿತ್ರಗಳನ್ನು ಈ ಉತ್ಸವದಲ್ಲಿ ಪ್ರದರ್ಶಿಸಲಾಯಿತು. ಬಹುಶಃ ಆ ಚಿತ್ರೋತ್ಸವ ಹಲವಾರು ಪ್ರೇಕ್ಷಕರ ಮೇಲೆ ನಿರ್ಣಾಯಕವಾದ ಪ್ರಭಾವವನ್ನು ಬೀರಿತ್ತು. ಬರ್ಗ್‌ಮನ್, ಕುರಾಸೋವ, ಚಾಪ್ಲಿನ್, ಗೊಡಾರ್ಡ್ ಮುಂತಾದವರ ಚಿತ್ರಗಳು ಹಲವರಲ್ಲಿ ಚಿತ್ರೋದ್ಯಮದ ಬಗ್ಗೆ ಆಸಕ್ತಿ ಮೂಡಿಸಿದ್ದಲ್ಲದೆ, ಕೆಲವರನ್ನು ಚಿತ್ರ ನಿರ್ಮಾಣಕ್ಕೆ ಪ್ರೇರೇಪಿಸಿತ್ತು. ಕುಳಿತಲ್ಲೇ ಕಣ್ಣೆದುರಲ್ಲೇ ಬೇರೆ ಬೇರೆ ಪ್ರದೇಶಗಳು, ಭಿನ್ನ ಸಂಸ್ಕೃತಿ ಅನಾವರಣಗೊಳ್ಳುತ್ತಿದ್ದ ಮಾಧ್ಯಮದ ಶಕ್ತಿಯನ್ನು ಸೂಚಿಸುತ್ತಿದವು. ಹಾಲಿವುಡ್‌ನ ಸೂತ್ರಬದ್ಧ ಚಿತ್ರಗಳು ಮತ್ತು ಥಳುಕಿಗೆ ಮಾತ್ರ ಪ್ರೇಕ್ಷರಾಗಿದ್ದ ಸ್ಥಳೀಯ ಚಿತ್ರಾಸಕ್ತರಿಗೆ ಹೊಸ ಅವಕಾಶವನ್ನು ಈ ಉತ್ಸವ ತೋರಿಸಿತ್ತು. ೧೯೮೩ರಲ್ಲಿ 'ಚಿತ್ರ ಭಾರತಿ' ಉತ್ಸವ ಸುಚಿತ್ರದ ಇನ್ನೊಂದು ಮೈಲಿಗಲ್ಲು. ಚೌಡಯ್ಯ ಸಭಾಂಗಣದಲ್ಲಿ ೧೫ ದಿನಗಳ ಕಾಲ ನಡೆದ ಉತ್ಸವದಲ್ಲಿ ಭಾರತದ ಎಲ್ಲಾ ಭಾಷೆಗಳಿಂದಲೂ ಆಯ್ದ ಚಿತ್ರಗಳನ್ನು ಪ್ರದರ್ಶಿಸಲಾಯಿತು. ಈ ಉತ್ಸವದಿಂದ ಸಂಗ್ರಹಿಸಿದ ಹಣದಿಂದ 'ಸುಚಿತ್ರ'



(ಚಿತ್ರ ೩) ಸತ್ಯಜಿತ್ ರೇ ಅವರಿಂದ ಸುಚಿತ್ರ ಸಿನಿಮಾ ಆ್ಯಂಡ್ ಕಲ್ಚರಲ್ ಅಕಾಡೆಮಿ ಉದ್ಘಾಟನೆ

ಸ್ವಂತ ಕಟ್ಟಡವನ್ನು ಹೊಂದುವಂತಾಯಿತು. ಸತ್ಯಜಿತ್ ರೇ ಅವರು ೧೯೮೦ರ ಜನವರಿ ೭ರಂದು ಸುಚಿತ್ರ ಸಿನಿಮಾ ಆ್ಯಂಡ್ ಕಲ್ಚರಲ್ ಅಕಾಡೆಮಿ ಉದ್ಘಾಟಿಸಿದರು. ಮುಂದೆ ೧೯೮೬ರಲ್ಲಿ ಸುಚಿತ್ರ ಸಭಾಂಗಣ ಪ್ರಾರಂಭವಾಗಿ ಭಾರತದಲ್ಲೇ ಸ್ವಂತ ಕಟ್ಟಡ ಹೊಂದಿದ ಪ್ರಥಮ ಚಿತ್ರಸಮಾಜ ಎಂಬ ಹೆಗ್ಗಳಿಕೆಗೆ ಸುಚಿತ್ರ ಪಾತ್ರವಾಯಿತು. ಮುಂದೆ ಇದೇ ಸಂಕೀರ್ಣದಲ್ಲಿ ಪೀರ್ ರಂಗಸ್ಥಳ ಕೂಡ ಆರಂಭವಾಗಿ ಸಮಷ್ಟಿ ಅಧ್ಯಯನಕ್ಕೆ ನೆರವಾಯಿತು.

ಕಳೆದ ಮೂರು ದಶಕಗಳಲ್ಲಿನ ಸುಚಿತ್ರ ಚಿತ್ರಸಮಾಜದ ಸಾಧನೆಗಳು ಅಪಾರ. ಇದುವರೆಗೂ ಒಂದು ಅಂದಾಜಿನಂತೆ ೩೦೦೦ಕ್ಕೂ ಹೆಚ್ಚು ಚಿತ್ರಗಳು ಇಲ್ಲಿ ಪ್ರದರ್ಶಿತವಾಗಿವೆ. ೨೦೦ಕ್ಕೂ ಹೆಚ್ಚು ಚಿತ್ರೋತ್ಸವಗಳು ಜರುಗಿವೆ. ತನ್ನ ಸ್ವಂತ ಗ್ರಂಥಾಲಯ ಮತ್ತು ಸಭಾಂಗಣಗಳಿಂದ ಸುಚಿತ್ರ ಹಲವು ಸವಾಲುಗಳನ್ನು ಯಶಸ್ವಿಯಾಗಿ ಎದುರಿಸಿದೆ. ಸುಚಿತ್ರದ ಸಾಧನೆ ಕೇವಲ ಚಿತ್ರೋತ್ಸವಗಳು ಮಾತ್ರವಲ್ಲ, ಸಿನಿಮಾ ಕುರಿತ ಶಾಸ್ತ್ರೀಯ ಅಧ್ಯಯನ ಮತ್ತು ವಿಶ್ಲೇಷಣೆಗಳು ಅದಕ್ಕೆ ಖ್ಯಾತಿಯನ್ನು ತಂದಿವೆ. 'ಸ್ಟಡಿ ಆಫ್ ಎ ಡೈರೆಕ್ಟರ್' ಮಾಲಿಕೆಯಲ್ಲಿ ಸಿದ್ದಲಿಂಗಯ್ಯ, ನಾಗಾಭರಣ, ದೊರೈ-ಭಗವಾನ್, ಗೀತಪ್ರಿಯರಂತಹ ನಿರ್ದೇಶಕರೊಂದಿಗೆ ನಡೆಸಿದ ಚರ್ಚೆ, ಸಂವಾದಗಳು ಸುಚಿತ್ರದ ವಿನೂತನತೆಗೆ ಸಾಕ್ಷಿಯಾಗಿದೆ. ಸತ್ಯಜಿತ್ ರೇ, ವಿ.ಶಾಂತಾರಾಂ, ಹೃಷಿಕೇಶ್ ಮುಖರ್ಜಿ, ಕೆ.ಎ.ಅಬ್ಬಾಸ್, ಗೋಪಾಲಕೃಷ್ಣನ್, ಷಾಜೀಕರಣ್, ಬಾಲು ಮಹೇಂದ್ರ, ಶ್ಯಾಮ್ ಬೆನಗಲ್, ಮೃಣಾಲ್ ಸೇನ್, ಜಿ.ಎಸ್.ರಟ್ಟಿ ಮುಂತಾದವರು ಸುಚಿತ್ರ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಪ್ರಶಂಸಿಸಿದ್ದಾರೆ. ಶಾಲಾ ಮಕ್ಕಳಿಂದ ಹಿಡಿದು ಸಮಾಜದ ಎಲ್ಲಾ ಸ್ತರದವರನ್ನು ಸಿನಿಮಾ ಮಾಧ್ಯಮದ ಲಕ್ಷಣಗಳಿಗೆ ತೆರೆದುಕೊಳ್ಳಲು ಪ್ರೇರೇಪಿಸುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವುದು ಸುಚಿತ್ರದ ಚಟುವಟಿಕೆಗಳು ಜೀವಂತವಾಗಿರಲು ಮುಖ್ಯ ಕಾರಣವಾಗಿದೆ.

ಈ ಹಂತದಲ್ಲಿ 'ಮಂಥನ ಚಿತ್ರ ಸಮಾಜ' ಬೆಂಗಳೂರು, ಕುರಿತು ಒಂದು ಮಾತು ಸೇರಿಸಬಹುದು. ಕೇವಲ ಆರು ಚಿತ್ರಗಳನ್ನು ಮಾತ್ರ ತೋರಿಸಿ ಒಂದು ವರ್ಷ ಬದುಕಿ ಅಕಾಲಿಕ ಮರಣವನ್ನಪ್ಪಿದರೂ ಇದು ಬಹಳ ಮುಖ್ಯವಾಗುವುದು, ಪ್ರತಿ ಸಿನಿಮಾ ಪ್ರದರ್ಶನದ ಜೊತೆಗೂ ಆ ಸಿನಿಮಾಕ್ಕೆ ಸಂಬಂಧಿಸಿದಂತೆ ಅದು ತರುತ್ತಿದ್ದ ನೂರಿಪ್ಪತ್ತು ಪುಟಗಳ ಪುಸ್ತಕದಿಂದ. ಆ ಪುಸ್ತಕದಲ್ಲಿ ಚಿತ್ರಕಥೆ, ಒಂದೆರಡು ವಿಮರ್ಶೆಗಳು, ಚಿತ್ರದ ವಿನ್ಯಾಸದ ನಕ್ಷೆ, ತಾಂತ್ರಿಕ ವಿವರಗಳು, ನಿರ್ದೇಶಕನ ಹೇಳಿಕೆ, ಆತನ ರಾಜಕೀಯ-ಸಾಮಾಜಿಕ ನಿಷ್ಠೆ ಕುರಿತಂತೆ ಚರ್ಚೆ ಇರುತ್ತಿದ್ದವು. ಈ ಬಗೆಯಾಗಿ ೧) ಹಿರೋಷಿಮಾ, ೨) ಫೆಲಿನಿ, ೩) ಬರ್ಗ್‌ಮನ್, ೪) ಕುರೋಸಾವಾ ಇತ್ಯಾದಿ ಪುಸ್ತಕಗಳನ್ನು (cyclostyled) ಪ್ರಕಟಿಸಿದ್ದರು. ಅಲ್ಲದೆ, ಮೂರು ಜನ ತಂತ್ರಜ್ಞರೊಡನೆ ದೀರ್ಘ ಸಂವಾದ ಏರ್ಪಡಿಸಿದ್ದರು (ಅಮೆರಿಕನ್ ಸಿನಿಮಾಟೊಗ್ರಾಫರ್ ಮಾದರಿಯಲ್ಲಿ) ೧) ಸಂಗೀತ ರಾಜೀವ್ ತಾರಾನಾಥ್, ೨) ಛಾಯಾಗ್ರಹಣ - ಯು.ಎಂ.ಎನ್.ಷರೀಫ್, ೩) ಧ್ವನಿ - ಕೆ.ಎಸ್.ಕೃಷ್ಣಮೂರ್ತಿ.

ರಾಜೀವ್ ತಾರಾನಾಥ್‌ರ ಸಂವಾದ 'ರೂಪತಾರಾ'ದಂತಹ ಜನಪ್ರಿಯ ಪತ್ರಿಕೆಯಲ್ಲಿ ೨ ಕಂತುಗಳಲ್ಲಿ ಪ್ರಸಾರವಾಗಿ ಜನಪ್ರಿಯವಾಯಿತು. ಸಿನಿಮಾ ಸಂಗೀತದ ಹಲವಾರು ಮುಖಗಳ ಚರ್ಚೆ ಅದರಲ್ಲಿತ್ತು. ಆ ಲೇಖನ ನಂತರ ಇನ್ನೊಂದೆರಡು ಪತ್ರಿಕೆಗಳಲ್ಲೂ ಮರು ಪ್ರಕಟವಾಗಿತ್ತು.

ಬೆಂಗಳೂರು ಫಿಲಂ ಸೊಸೈಟಿ

೧೯೭೦ರ ದಶಕದ ಅಂತ್ಯದಲ್ಲಿ 'ಬೆಂಗಳೂರು ಫಿಲಂ ಸೊಸೈಟಿ'ಯನ್ನು ಮಹೇಶ್ ಷಾ ಅವರು ಪ್ರಾರಂಭಿಸಿದರು. ಕಳೆದ ಕಾಲು ಶತಮಾನದಿಂದ ಭಿನ್ನ ಮಾದರಿಯಲ್ಲಿ ಕಾರ್ಯ ನಡೆಸಿರುವ ಈ ಸಂಸ್ಥೆ ಬೆಂಗಳೂರಿನಲ್ಲಿ ತನ್ನದೇ ಸ್ಥಾನ ಗಳಿಸಿಕೊಂಡಿದೆ. ಸಾಕ್ಷ್ಯ ಚಿತ್ರಗಳ ನಿರ್ಮಾಣದಲ್ಲಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿರುವ ಶ್ರೀ ಚಿಲಂ ಬೆನ್ನೂರ್‌ಕರ್ ಬೆಳೆದು ಬಂದಿದ್ದು ಈ ಸೊಸೈಟಿಯ ಮೂಲಕ. ತನ್ನ ಸದಸ್ಯರಿಗೆ ಟಾರ್ಕೊವ್‌ಸ್ಕಿ, ಹಾರ್ಜೋಗ್, ಬರ್ಗ್‌ಮನ್, ಸತ್ಯಜಿತ್ ರೇ, ಅರವಿಂದನ್, ಅಡೂರ್, ಬಿಮಲ್‌ರಾಯ್, ಲಕ್ಷ್ಮೀನಾರಾಯಣ್ ಅವರ ಚಿತ್ರಗಳನ್ನು ಪ್ರದರ್ಶಿಸಿ ಅಭಿರುಚಿಯ ಗುಣಮಟ್ಟ ಹಿಗ್ಗಿಸುವಲ್ಲಿ ನೆರವು ನೀಡಿದೆ.

ಈ ಸಮಾಜದ ಮುಖ್ಯ ಸಾಧನೆ ಎಂದರೆ ಅದು ಪ್ರಕಟಿಸುತ್ತಿರುವ 'ಡೀಪ್ ಫೋಕಸ್' ಪತ್ರಿಕೆ. ಈ ಪತ್ರಿಕೆ ರಾಷ್ಟ್ರಮಟ್ಟದಲ್ಲೇ ಚಿತ್ರಾಸಕ್ತರ ಗಮನವನ್ನು ತನ್ನ ಕಡೆಗೆ ಸೆಳೆದುಕೊಂಡಿದೆ. ಚಲನಚಿತ್ರ ಮತ್ತು ಅದರ ನಿರ್ದೇಶಕರ ಬಗ್ಗೆ ಇರುವ ಪ್ರಬಂಧಗಳು, ಅರ್ಥಪೂರ್ಣ ಸಂವಾದ, ಸಂದರ್ಶನಗಳು ಈ ಪತ್ರಿಕೆಯಲ್ಲಿ ಪ್ರಕಟಗೊಳ್ಳುತ್ತವೆ. ಮುಖ್ಯವಾಗಿ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಭಾಗವಹಿಸುವ ಚಿತ್ರಾಸಕ್ತರಿಗೆ "Deep Focus" ಸಿದ್ಧ ಕೈ ಹೊತ್ತಿಗೆಯಾಗಿ ನೆರವಾಗುತ್ತದೆ. ಈ ಸಂಸ್ಥೆಯ ಬೆಳವಣಿಗೆಯಲ್ಲಿ ಶ್ರೀ ಜಾರ್ಜ್ ಕುಟ್ಟಿ ಅವರ ಪಾತ್ರ ಮಹತ್ವದ್ದಾಗಿದೆ. ಯುವ ಪೀಳಿಗೆಯವರನ್ನು ತೊಡಗಿಸಿಕೊಳ್ಳುವಲ್ಲಿ ಹೆಚ್ಚು ಆಸಕ್ತವಾಗಿರುವ ಈ ಸಂಸ್ಥೆ ಈ ಕಾರಣಕ್ಕಾಗಿಯೇ ಅರ್ಥಪೂರ್ಣ ಎನ್ನಿಸಿಕೊಂಡಿದೆ.

ಸಿ.ಎಫ್.ಟಿ.ಆರ್.ಐ. ಫಿಲಂ ಸೊಸೈಟಿ

ಮಾಧ್ಯಮದ ಪ್ರಯೋಗಶೀಲತೆಯನ್ನು ಅರಿತುಕೊಳ್ಳುವ ಉತ್ಸಾಹದಿಂದ ೧೯೬೨ರಲ್ಲಿ ಮೈಸೂರಿನಲ್ಲಿ ಈ ಚಿತ್ರಸಮಾಜ ಸ್ಥಾಪನೆ ಆಯಿತು. ಸಂಸ್ಥೆಯ ಅಂದಿನ ಡೆಪ್ಯುಟಿ ಡೈರೆಕ್ಟರ್ ಡಾ|ಎ.ರೆಹಮಾನ್ ಇದರ ಸಂಸ್ಥಾಪಕ ಕಾರ್ಯದರ್ಶಿ. ದೇಶದಲ್ಲಿ ಆಗಿನ್ನು ಚುರುಕು ಪಡೆದುಕೊಳ್ಳುತ್ತಿದ್ದ ಕಲಾತ್ಮಕ ಚಿತ್ರಗಳ ಚಳವಳಿ ಬಗೆಗಿನ ಕುತೂಹಲ ಇಲ್ಲಿನ ಆರಂಭಿಕ ಸದಸ್ಯರಲ್ಲಿ ಸಾಮಾನ್ಯವಾದ ಅಂಶವಾಗಿತ್ತು. ಚಿತ್ರಗಳಲ್ಲಿ ಕಂಡುಬರುವ ಸಾಂಕೇತಿಕತೆ ಪ್ರತಿಮಾ ವಿಧಾನ ಮತ್ತು ವಿದೇಶಿ ಚಿತ್ರಗಳ ವೀಕ್ಷಣೆ ಮತ್ತು ತೌಲನಿಕ ಅಧ್ಯಯನದಿಂದ ಸಂಘದ ಚಟುವಟಿಕೆಗಳು ಆರಂಭವಾದವು. ವಾರ್ಷಿಕವಾಗಿ ಸದಸ್ಯರ ಸಭೆ ಸೇರಿ ಕಾರ್ಯಕಾರಿ ಸಮಿತಿಯವರ ಚುನಾವಣೆಯೊಂದಿಗೆ ಸಂಘಟನಾತ್ಮಕತೆಯನ್ನು ಕಂಡುಕೊಂಡಿತು. ಆರಂಭದಲ್ಲಿ ಸದಸ್ಯ ಶುಲ್ಕವಿರಲಿಲ್ಲ. ಸದಸ್ಯತ್ವಕ್ಕೆ ಯಾವುದೇ ರೀತಿಯ ನಿರ್ಬಂಧವಿಲ್ಲದ ಕಾರಣ ವಿದ್ಯಾರ್ಥಿಗಳು, ವ್ಯಾಪಾರ ಉದ್ಯಮಿಗಳು, ವೈದ್ಯರು, ಇಂಜಿನಿಯರ್‌ಗಳು, ಕಲಾವಿದರು, ಪತ್ರಿಕೋದ್ಯಮಿಗಳು ಎಲ್ಲರೂ ಇವರ ಸದಸ್ಯರಾದರು. ೧೯೯೧ರಿಂದ ರೂ.೪೭ರ ವಾರ್ಷಿಕ ಮತ್ತು



(ಚಿತ್ರ ೪) ಸುಚಿತ್ರಾ ಚಿತ್ರಸಮಾಜದ ಆಶ್ರಯದಲ್ಲಿ ನಡೆದ ಸರ್ಕಾರ ಮತ್ತು ಸಿನಿಮಾ ಕುರಿತ ವಿಚಾರ ಸಂಕಿರಣ ಪತ್ರಕರ್ತ ಬಿ.ಕೆ.ಕರಂಜಿಯ, ರಾಮಕೃಷ್ಣ ಹೆಗಡೆ, ಎಂ.ವಿ.ಕೃಷ್ಣಸ್ವಾಮಿ

(ಚಿತ್ರ ೫-೬) ಬೆಂಗಳೂರು ಫಿಲಂ ಸೊಸೈಟಿ ಹಲವಾರು ವಿಷಯಪ್ರಧಾನ ಚಿತ್ರೋತ್ಸವಗಳನ್ನು ವ್ಯವಸ್ಥೆಗೊಳಿಸಿತ್ತು. 'ಮಹಿಳೆಯ ದೃಷ್ಟಿಯಲ್ಲಿ ಪ್ರೇಮ' ಮತ್ತು 'ಮಾನವ ಹಕ್ಕುಗಳು' ಚಿತ್ರೋತ್ಸವಗಳಿಗೆ ಸಂಬಂಧಪಟ್ಟ ಸ್ಮರಣ ಸಂಚಿಕೆಗಳು

ರೂ.೩೦೦ರ ಆಜೀವ ಸದಸ್ಯತ್ವ ಶುಲ್ಕವನ್ನು ಸಂಗ್ರಹಿಸಲಾಗುತ್ತಿದೆ. ೨೨೫ ಜನ ಸದಸ್ಯ ಬಲದ ಈ ಸೊಸೈಟಿಯಲ್ಲಿ ಟಿ.ವಿ. ಮಾಧ್ಯಮದ ಪರಿಣಾಮದಿಂದಾಗಿ ಕೊಂಚ ಇಳಿಕೆ ಕಾಣುತ್ತಿದೆ.

ವರ್ಷದಲ್ಲಿ ಎರಡು ಮೂರು ಚಿತ್ರೋತ್ಸವ, ಇಂಗ್ಲಿಷ್, ಚೈನಾ, ಜರ್ಮನಿ, ಯುಗೋಸ್ಲೋವಿಯಾ, ಇಟಲಿ, ಪೋಲಿಷ್, ಫ್ರೆಂಚ್ ಮುಂತಾದ ಭಾಷೆಗಳ ಚಿತ್ರಪ್ರದರ್ಶನ, ಕನ್ನಡ ಮತ್ತು ಇತರ ಭಾರತೀಯ ಭಾಷೆಗಳ ಚಿತ್ರಪ್ರದರ್ಶನ ಬಹುಕಾಲದಿಂದ ನಡೆದುಬಂದಿದೆ. ಮಕ್ಕಳ ಚಿತ್ರೋತ್ಸವ, ಚೈನಾ ಚಿತ್ರೋತ್ಸವ, ಯುಗೋಸ್ಲೋವಿಯ ಚಿತ್ರೋತ್ಸವಗಳನ್ನು ಏರ್ಪಡಿಸಿ ಖ್ಯಾತಿ ಪಡೆದಿರುವ ಈ ಸಂಸ್ಥೆ ಚಿತ್ರ ಪ್ರದರ್ಶನವಷ್ಟೇ ಅಲ್ಲದೆ ಕಥಾಸಾರಾಂಶವನ್ನು ಎಲ್ಲರಿಗೂ ಹಂಚಿ ಚರ್ಚೆ-ಸಂವಾದ ನಡಸುವ ಪರಿಪಾಠ ಇಟ್ಟುಕೊಂಡಿದೆ. ಪ್ರಶಸ್ತಿ ವಿಜೇತರ ಚಿತ್ರೋತ್ಸವ, ರಸಗ್ರಹಣ ಶಿಬಿರ ಹೀಗೆ ಹಲವು ಯೋಜನೆ ಹೊಂದಿರುವ ಸಂಸ್ಥೆ ಇಂತಹ ಕನಸುಗಳಿಂದಲೇ ಇಂದಿಗೂ ಸಕ್ರಿಯವಾಗಿದೆ. ಎಸ್.ಉಮೇಶ್ (೮೦-೯೦), ಅಕ್ಮಲ್ ಪಾಷಾ (೯೦-೯೧)ರ ಕಾಲದಲ್ಲಿ ಪ್ರಗತಿ ಕಂಡ ಸಂಸ್ಥೆಗೆ ೨೦೦೦ದಲ್ಲಿ ಪಿ.ಎಫ್.ಬಾಲಕೃಷ್ಣ ಅಧ್ಯಕ್ಷರು.

ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯನ್ ಲಾಂಗ್ವೇಜಸ್ ಫಿಲಂ ಸೊಸೈಟಿ

ಸಂಸ್ಥೆಯಲ್ಲಿ ಹೊಸ ಪ್ರೊಜೆಕ್ಟರ್ ಮತ್ತು ಚಿತ್ರಪ್ರದರ್ಶನಕ್ಕೂ ಉತ್ತಮವಾದ ಸಭಾಂಗಣ ಇದ್ದುದರಿಂದ ನಿರ್ದೇಶಕರಾದ ಡಿ.ಪಿ.ಪಟ್ನಾಯಕ್ ಅವರ ಮುಖ್ಯ ಪೋಷಕತ್ವದಲ್ಲಿ (Chief Patron) ಲಿಂಗದೇವರು ಹಳೇಮನೆ, ಕೃಷ್ಣಾ ಆಲನಹಳ್ಳಿಯವರ ನೇತೃತ್ವದಲ್ಲಿ ಸಿ.ಐ.ಐ.ಎಲ್.ಫಿಲಂ ಸೊಸೈಟಿ ಯಾವ ರೀತಿಯ ಸಾಂಪ್ರದಾಯಿಕ ಉದ್ಘಾಟನಾ ಸಮಾರಂಭವಿಲ್ಲದೆ ಸರಳವಾಗಿ ೧೯೭೭ರಲ್ಲಿ ಪ್ರಾರಂಭವಾಯಿತು.

ಮೈಸೂರು ದಸರಾ ಸಮಯದಲ್ಲಿ ನಡಯುವ ದಸರಾ ಚಿತ್ರೋತ್ಸವಕ್ಕೆ ಬರುತ್ತಿದ್ದ ಚಿತ್ರಗಳಲ್ಲಿ ಉತ್ತಮವಾದುದನ್ನು ಆಯ್ಕೆ ಮಾಡಿ ಪ್ರದರ್ಶಿಸುತ್ತಿದ್ದರು.

ಗಂಗೋತ್ರಿಯಲ್ಲಿರುವ ಉಪನ್ಯಾಸಕರು, ಪ್ರಾಧ್ಯಾಪಕರು, ವಿದ್ಯಾರ್ಥಿ, ವಿದ್ಯಾರ್ಥಿನಿಯರು, ಸಂಶೋಧನಾ ವಿದ್ಯಾರ್ಥಿಗಳು ಹಾಗೂ ಹೊರಗಿನವರಿಗೂ ಪ್ರವೇಶಾವಕಾಶವಿತ್ತು. ಕ್ರಮೇಣ ಎರಡು ರೂಪಾಯಿ ಪ್ರವೇಶ ದರ ಮಾಡಿದರು.

ಪೂನಾ ಇನ್‌ಸ್ಟಿಟ್ಯೂಟ್‌ನ ನಾಯಕ್ ಮತ್ತು ಸತೀಶ್ ಬಹದೂರ ಅವರ ಸಹಕಾರದಿಂದ ಒಂದು ವಾರದ ರಸಗ್ರಹಣ ಶಿಬಿರ (Film Appreciation Course) ನಡಸಲಾಗಿತ್ತು. ಲಂಕೇಶ್ ಚಿತ್ರಗಳ ಬಗ್ಗೆಯೇ ವಿಚಾರಗೋಷ್ಠಿ ನಡೆಸಲಾಯಿತು. ೧೯೮೫ರ ನಂತರ ನಿಧನಿಧಾನವಾಗಿ ಕರಗಿಹೋಯಿತು.

ಚಿತ್ರ ಸಮಾಜಗಳ ಹುಟ್ಟು ಮತ್ತು ಬೆಳವಣಿಗೆಯ ಜೊತೆಗ ಹೊಸ ಅಲೆ ಚಿತ್ರಗಳಿಗೆ ನೇರ ಸಂಪರ್ಕವಿದೆ. ಪ್ರಾಂತೀಯ ಚಿತ್ರ ಚಳವಳಿ ಎಂಬ ಅರ್ಥದಲ್ಲಿ ಇಂತಹ ಚಿತ್ರಗಳು ಮೂಡಿ ಬರಲು 'ಚಿತ್ರ ಸಮಾಜ'ಗಳ ಕಾಣಿಕೆ ಸಾಕಷ್ಟಿದೆ. ಎಪ್ಪತ್ತರ ದಶಕದ ಅಂತ್ಯದಲ್ಲಿ ಹೊಸ ಅಲೆ ಚಿತ್ರಗಳು ತಮ್ಮ ಬೌದ್ಧಿಕ ಭಾರದಿಂದ ಕುಸಿದು ಬಿದ್ದು ನಾಶವಾದವು. ಅನಂತರದ ಇಂತಹ ಪ್ರಯತ್ನಗಳು ಬಿಡಿ ಬಿಡಿಯಾಗಿ ದ್ವೀಪದಂತ ಕಂಗೊಳಿಸುತ್ತವೆಯೇ ಹೊರತು ಚಳವಳಿಯಾಗಲಿಲ್ಲ. ಅದರ ಪರಿಣಾಮ 'ಚಿತ್ರ ಸಮಾಜ'ದ ಮೇಲೆ ಆಯಿತು. ೯೦ರ ದಶಕದಲ್ಲಿ 'ಕಿರುತೆರೆ' ಪ್ರಬಲವಾಗಿ ಬೆಳೆಯಿತು. ನೂರೆಂಟು ಚಾನಲ್‌ಗಳು ಮನೆಯಂಗಳದಲ್ಲಿ ಕಾಲಿಟ್ಟಿವೆ. ಆರಾಮ ಕುರ್ಚಿಯಲ್ಲಿ ಒರಗಿ ಬಟನ್ ಒತ್ತಿದರೆ ಬಯಸಿದ ಚಿತ್ರ ಪ್ರತ್ಯಕ್ಷವಾಗುವ ಇಂದಿನ ದಿನ ಅಕ್ಷರಶಃ 'ಚಿತ್ರ ಸಮಾಜ'ಗಳಿಗೆ ಸವಾಲಾಗಿದೆ.

ಈ ಲೇಖನದ ಮೊದಲ ಭಾಗದಲ್ಲಿ 'ಚಿತ್ರ ಸಮಾಜ'ಗಳ ಹುಟ್ಟು ಬೆಳವಣಿಗೆಯನ್ನು ಚರ್ಚಿಸಿದ್ದೇವೆ. 'ಚಿತ್ರ ಸಮಾಜ' ಭಾರತದಲ್ಲಿ ಅರ್ಧ ಶತಮಾನಕ್ಕಿಂತ ಹೆಚ್ಚಿನ ಅಸ್ತಿತ್ವವನ್ನು ಹೊಂದಿದೆ. ಇಲ್ಲಿ ಅಭಿವ್ಯಕ್ತಿಸಲ್ಪಟ್ಟಿರುವ ಬಹುತೇಕ ಚಿಂತನೆಗಳು ಕರ್ನಾಟಕದಲ್ಲಿನ 'ಚಿತ್ರ ಸಮಾಜ'ವನ್ನು ಕುರಿತದ್ದಾಗಿದೆ ಎಂದು ಮೊದಲೇ ಗಮನಕ್ಕೆ ತಂದು ಇದರ ಸೋಲು-ಗೆಲುವುಗಳನ್ನು ಕುರಿತು ಹೆಚ್ಚು ತಾತ್ವಿಕವಾಗಿ ಈ ಭಾಗದಲ್ಲಿ ಚರ್ಚಿಸಬಹುದು.

'ಚಿತ್ರ ಸಮಾಜ'ಗಳು ಆರಂಭವಾದಾಗ ಅದಕ್ಕಿದ್ದ ಕೆಲವು ಮುಖ್ಯ ಆಶಯಗಳನ್ನು ಹೀಗೆ ಸಂಗ್ರಹಿಸಬಹುದು:

೧. ಇತರ ಮಾಧ್ಯಮಗಳಿಗೆ ಇರುವಂತೆ 'ಅಭಿರುಚಿ' ನಿರ್ಮಾಣ ಮಾಡಬೇಕು. ಸಿನಿಮಾ ಉಳಿದ ಕಲಾಪ್ರಕಾರಗಳಿಗಿಂತ ಭಿನ್ನವಾದುದು ಎಂಬುದನ್ನು ಗಮನದಲ್ಲಿರಿಸಿ, ಕಣ್ಣು, ಕಿವಿ ಮತ್ತು ಗ್ರಹಿಕೆಗಳಿಗೆ ಸಂಸ್ಕಾರ ನೀಡಬೇಕು.

೨. ಜಗತ್ತಿನ ಅತ್ಯುತ್ತಮ ಚಿತ್ರಗಳು ನೋಡಲು ಲಭ್ಯವಾಗಬೇಕು ಮತ್ತು ಅವುಗಳ ಮೂಲಕ ನಮ್ಮ ಅರಿವಿನ ಪರಿಧಿ ಹಿಗ್ಗಬೇಕು.

೩. ವಾಣಿಜ್ಯ ಉದ್ದೇಶಗಳನ್ನು ಉಳ್ಳ ಚಿತ್ರಗಳಿಗೆ ಪರ್ಯಾಯವಾಗಿ 'ಸಿನಿಮಾ' ತನ್ನದೇ ಆದ ಗುಣಗಳನ್ನು ಉಳಿಸಿಕೊಂಡು ಮಾಧ್ಯಮವಾಗಿ ಬೆಳೆಯಲು ನೆರವಾಗಬೇಕು.

೪. 'ಸಿನಿಮಾ' ಮನೋರಂಜನೆಗೆ ಎಂಬ ಕಲ್ಪನೆ ದೂರವಾಗಿ ಚರ್ಚೆ, ಸಂವಾದ, ರಸಗ್ರಹಣಗಳು ಸಾಧ್ಯವಾಗಬೇಕು. ಚಿತ್ರ ಸಂಸ್ಕೃತಿ ಹರಡಬೇಕು.

ಲೇಖನದಲ್ಲಿ ಇದನ್ನು ಪ್ರಮುಖ ಆಶಯವಾಗಿ ಗುರುತಿಸುವ ಪ್ರಯತ್ನ ಮಾಡಲಾಗಿದೆ. ಇದಕ್ಕಿಂತ ಭಿನ್ನವಾದ ಬೇರೆ ಆಶಯಗಳು ಇರುವ 'ಚಿತ್ರಸಮಾಜ'ಗಳೂ ಇರಬಹುದು. ಚಿತ್ರ ನಿರ್ಮಾಣವನ್ನು ಪ್ರಧಾನವಾಗಿರಿಸಿ ಕೊಂಡಿರಬಹುದು, ಇತರ ಮಾಧ್ಯಮಗಳ ಜೊತೆಗೆ ಬಹುಮುಖಿ ಸಂವಾದ ಸಾಧಿಸುವಂತಹುದಿರಬಹುದು. ಆದರೆ ಇಡೀ ಚಳವಳಿಯನ್ನು ಗಮನಿಸಿದರೆ ಇದು ಪ್ರಧಾನ ಆಶಯ ಎಂಬುದು ಸ್ಪಷ್ಟವಾಗುತ್ತದೆ. ಇಲ್ಲಿ ಎರಡು ಪ್ರಮುಖ ಪ್ರಶ್ನೆಗಳಿವೆ: ಒಂದು, ಅಭಿರುಚಿ ನಿರ್ಮಾಣದು. ಎರಡು, ಪರ್ಯಾಯ ಚಿತ್ರ ಸಂಸ್ಕೃತಿ ಹರಡುವುದು. ಈ ಎರಡು ಪ್ರಶ್ನೆಗಳ ನೆಲೆಯಲ್ಲಿ ನೋಡಿದರೆ 'ಚಿತ್ರ ಸಮಾಜ'ಗಳು ತಮ್ಮ ಉದ್ದೇಶದಲ್ಲಿ ಸಾರ್ಥಕತೆ ಕಂಡಿಲ್ಲವೇನೋ ಎಂದೆನಿಸುತ್ತದೆ. ಇದಕ್ಕೆ ಇರಬಹುದಾದ ಕಾರಣಗಳನ್ನು ಹೀಗೆ ಗುರುತಿಸಬಹುದು:

ಅ. 'ಚಿತ್ರ ಸಂಸ್ಕೃತಿ' ಬೆಳೆಸುವುದು ಎಂದರೆ ವಾಣಿಜ್ಯಾತ್ಮಕ ಉದ್ದೇಶಗಳಿಗೆ ತನ್ನತನವನ್ನು ಕಳೆದುಕೊಳ್ಳುತ್ತಿರುವ 'ಮಾಧ್ಯಮ'ದ ನಿಜವಾದ

ಆಶಯಗಳು ನೆಲೆ ನಿಲ್ಲುವಂತಹ ಚಿತ್ರಗಳನ್ನು ಉಳಿಸಿಕೊಳ್ಳುವುದು ಮತ್ತು ಆ ಮೂಲಕ ಮಾಧ್ಯಮದ ಆರೋಗ್ಯವನ್ನು ಕಾಪಾಡುವುದು. ಇಲ್ಲಿನ ಮೊದಲ ಸಮಸ್ಯೆ ಎಂದರೆ ವಾಣಿಜ್ಯ ಚಿತ್ರಗಳು ಮತ್ತು ಕಲಾತ್ಮಕ ಚಿತ್ರಗಳು ಎಂಬುದು ಗೆರೆ ಕೊರೆದು ಇಡಬಹುದಾದ ಪರಿಕಲ್ಪನೆಗಳಲ್ಲ. ಇವೆರಡರ ನಡುವೆ ಪೂರಕ ಮತ್ತು ವಿರೋಧಾತ್ಮಕ ಎರಡೂ ಲಕ್ಷಣಗಳಿವೆ. ಕ್ಲಾಸಿಕ್ಸ್ ನೋಡುವುದಕ್ಕೆ ಮೊದಲು ಸಾಕಷ್ಟು ಸಿದ್ಧತೆಗಳು ಬೇಕಾಗುತ್ತವೆ. ಜಡ್ಡು ಗಟ್ಟಿದ ಭಾಷೆಯಲ್ಲಿ ಚಿತ್ರವನ್ನು ನೋಡಿದವರಿಗೆ, ಹೊಸ ಭಾಷೆಯನ್ನು ಅರಗಿಸಿಕೊಳ್ಳುವುದು ಕಷ್ಟ. ಇದನ್ನು ಇನ್ನೂ ವಿಸ್ತರಿಸಿ ಹೇಳಬೇಕಾದರೆ, ಚಿತ್ರ ಪ್ರದರ್ಶನದಲ್ಲಿ ತೋರಿಸಿದ ಆಸಕ್ತಿಯನ್ನು 'ಚಿತ್ರ ಸಮಾಜ'ಗಳು ಅದಕ್ಕೆ ಪೂರಕವಾದ ವಾತಾವರಣ ಕಲ್ಪಿಸುವಲ್ಲಿ ತೋರಲಿಲ್ಲ. ಹೀಗಾಗಿ 'ಚಿತ್ರ ಪ್ರದರ್ಶನ'ಕ್ಕೆ ನೂಕು ನುಗ್ಗಲಿದ್ದರೆ ಅವರ ಕುರಿತ ಚರ್ಚೆಗೆ ಬರಲಿಚ್ಛೆಯನ್ನು ಜನರಿರುತ್ತಿದ್ದರು. ಇದರಿಂದ ಒಟ್ಟು ಆಶಯವೇ ವಿಫಲವಾಯಿತು. ಇದರ ಜೊತೆಗೆ 'ಚಿತ್ರ ಸಮಾಜ'ದ ಸದಸ್ಯರಲ್ಲಿ ಅನೇಕರು 'ಲೈಂಗಿಕ ಸ್ವಚ್ಛಂದತೆ'ಯ ಚಿತ್ರಗಳು ಸಿಕ್ಕುತ್ತವೆ ಎಂದು ಬರಲಾರಂಭಿಸಿದ್ದರಿಂದ 'ಸದಭಿರುಚಿ' ಎನ್ನುವುದೇ ಅರ್ಥಹೀನವಾಯಿತು. ವಾಸ್ತವವಾಗಿ ಕಲೆಯನ್ನು ತಮ್ಮದಾಗಿಸಿಕೊಳ್ಳುವ 'ಮನೋಸ್ಥಿತಿ' ಮೊದಲು ಕಲಿಕೆಯ ವಸ್ತುವಾಗಬೇಕಿತ್ತು. ಇದು ನೈಜ ಕಾಳಜಿಯಿಂದ ಮಾತ್ರ ಸಾಧ್ಯ. ಆಂತರಿಕ ಬಯಕೆ ಮತ್ತು ಬಾಹ್ಯ ಅಭಿವ್ಯಕ್ತಿ ಎರಡಕ್ಕೂ ಸಂಬಂಧವೇ ಇಲ್ಲದೇ ಹೋದ ಪ್ರಸಂಗ ಬಟ್ಟಿದಾಗ 'ಚಿತ್ರ ಪ್ರದರ್ಶನ'ವೇ ಮುಖ್ಯ ಆಕರ್ಷಣೆಯಾಯಿತು. ಪೂರಕ ಸಾಮಗ್ರಿ ಎಂದರೆ ಚಿತ್ರಕಥೆಗಳ ಪೂರ್ಣಪಾಠ, ನಿರ್ದೇಶಕರ ಪರಿಚಯ, ಕಥಾವಸ್ತುವಿನ ಸಂಗ್ರಹ ಇಷ್ಟರಲ್ಲೇ ಮುಗಿದರೆ ಈ ಕಲಿಕೆ ಆರಂಭವಾಗುವುದಾದರೂ ಎಲ್ಲಿಂದ ? ಚಿತ್ರದ ಮೂಲ ಆಶಯದ ಚರ್ಚೆ ಅನೇಕ 'ಚಿತ್ರ ಸಮಾಜ' ಸಿದ್ಧಪಡಿಸಿದ ಪೂರಕ ಸಾಮಗ್ರಿಗಳಲ್ಲಿರುವುದಿಲ್ಲ. ಹೀಗಾಗಿ 'ಚಿತ್ರ ಸಮಾಜ'ದಿಂದ ಎಲ್ಲೋ ಬೆರಳೆಣಿಕೆಯ ಕಲವರು ಬೆಳೆದರೇ ಹೊರತು ಒಂದು ಸಮುದಾಯ ಬೆಳೆಯಲಿಲ್ಲ. ಸಮುದಾಯ ಬೆಳೆಯದ ಹೊರತು ಅದಕ್ಕೆ ಚಳವಳಿಯ ಅರ್ಥ ಬರುವುದಿಲ್ಲ.

ಆ. ಇನ್ನೊಂದು ಪ್ರಮುಖ ಸಮಸ್ಯೆ ಎಂದರೆ ಹೆಚ್ಚಿನ ಚಿತ್ರ ಸಮಾಜಗಳು ಏಕವ್ಯಕ್ತಿ ಸಂಸ್ಥೆಗಳಾಗಿ ಬೆಳೆದವು. ಇದರಿಂದ ಒಬ್ಬ ವ್ಯಕ್ತಿಯ ದೌರ್ಬಲ್ಯ ಚಿತ್ರಸಮಾಜದ ದೌರ್ಬಲ್ಯವೂ ಆಯಿತು. ಆ ವ್ಯಕ್ತಿಯ ಸೋಲು ಇಡೀ ಚಿತ್ರ ಸಮಾಜದ ಸೋಲೂ ಆಯಿತು. ಅಭಿರುಚಿ ನಿರ್ಮಾಣ ಎನ್ನುವುದು ಒಂದು ಸಮಷ್ಟಿ ಕ್ರಿಯೆ, ಅದು ಒಬ್ಬ ವ್ಯಕ್ತಿಯಿಂದ ಆಗುವ ಕೆಲಸವಲ್ಲ. ವ್ಯಕ್ತಿ ಗೌಣವಾಗಿ ಸಮಾಜ ಬೆಳೆಯುವ ಕೆಲಸ ನಮ್ಮಲ್ಲಿ ಸಮರ್ಪಕವಾಗಿ ಆಗಲಿಲ್ಲ. ಇಂತಹ ಸಂದರ್ಭದಲ್ಲಿ ಆರೋಪ-ಪ್ರತ್ಯಾರೋಪಗಳು ಹೆಚ್ಚುವ ಸಂಭವ ಇದೆ. ಎಲ್ಲಕ್ಕಿಂತ ಹೆಚ್ಚಾಗಿ ಯಾರನ್ನೋ ಹೊಗಳಲೆಂದೇ 'ವಿಚಾರ ಸಂಕಿರಣ'ಗಳೂ 'ಚಿತ್ರ ಪ್ರದರ್ಶನ'ಗಳೂ ನಡೆದರೆ ಒಟ್ಟು ಆಶಯವೇ ಸೋಲುತ್ತದೆ. ಇಲ್ಲಿಯೂ ಹಾಗಾಯಿತು, ಚಿತ್ರ ಚೆನ್ನಾಗಿರಲಿ, ಬಿಡಲಿ ವಿಚಾರ ಏನೇ ಇರಲಿ ಸಂವಾದದ ಬದಲು ನಾವು ಹೇಳಿದ್ದನ್ನು ಒಪ್ಪಬೇಕೆಂಬ ಅಪ್ಪಣೆಯ ಮಾತನಾಡುವವರು ಕೆಲವರು. ಮಾತನಾಡುವುದು ಅದೇ ಚರ್ವಿತ ಚರ್ವಣ. 'ಚಲನ ಚಿತ್ರ'ಗಳ ಮೌಲ್ಯ ನಿರ್ಧಾರದ ಪ್ರಯತ್ನಗಳು ನಡೆದದ್ದೇ ಅಪರೂಪ. ಅಭಿಪ್ರಾಯ ನಿರ್ಮಾಣದ ಬದಲು ಅಭಿಪ್ರಾಯ 'ಹೇರಿಕೆ' ಹೆಚ್ಚಾದಾಗ ಕಿರೀಟ ಕಟ್ಟಿಕೊಂಡ ಕೆಲವರು ಮಾತ್ರವೇ ಉಳಿದರು. ಪರದೆ ಬಿದ್ದರೂ ಅಂಕ ಬಿಟ್ಟೇಳದ ಈ ಧೀರರಿಂದ ರಂಗಸ್ಥಳ ಖಾಲಿಯಾಯಿತು.

ಇ. 'ಚಿತ್ರ ಸಮಾಜ'ಗಳು ತಮ್ಮ ಉದ್ದೇಶ ಸಾಧಿಸಿಕೊಳ್ಳದೆ ಹೋದದ್ದಕ್ಕೆ ಇನ್ನೊಂದು ಮುಖ್ಯ ಕಾರಣವೆಂದರೆ, ಅವು ಆಯ್ಕೆಯ ಮನೋಧರ್ಮ ಬೆಳೆಸಿಕೊಳ್ಳದೆ 'ಕುರುಡು ಸೂತ್ರ'ಕ್ಕೆ ಬಲಿಯಾದದ್ದು. ದೆಹಲಿಯಲ್ಲಿ ಕುಳಿತ ಯಾರೋ ಕೆಲವರು 'ಕ್ಲಾಸಿಕ್ಸ್' ಅಂದದ್ದನ್ನು ಒಪ್ಪಿಕೊಳ್ಳುವುದಾದರೆ, ಇದು ವ್ಯಾಪಾರಿ ಚಿತ್ರ ವ್ಯವಸ್ಥೆಗಿಂತ ಬೇರೆಯಾಗುವುದಾದರೂ ಹೇಗೆ ? ಕಲಾಕೃತಿ ಎನ್ನುವುದು ವ್ಯಕ್ತಿಗತ ಗ್ರಹಿಕೆ ಎಂದು ನಂಬುವವರು, ಎಲ್ಲರ ಮಿದುಳು ಒಂದೇ ಎರಕದಲ್ಲಿ ಹೊಯ್ದದ್ದು ಎಂಬ ತೀರ್ಮಾನಕ್ಕೆ ಬಂದದ್ದು ಹೇಗೆ ? ಇದು ಎಲ್ಲಾ ಚಿತ್ರ ಸಮಾಜಗಳು ಎದುರಿಸಬೇಕಾದ ಪ್ರಶ್ನೆ. ಪರ್ಯಾಯ ಎಂದರೆ ಇನ್ನೊಂದು ವ್ಯವಸ್ಥೆಯಲ್ಲ. ಅಲ್ಲಿನ ತಪ್ಪು ಇಲ್ಲಿ ಎದುರಾಗದ ಗ್ರಹಿಕೆ, ಇದು ನಿಜವಾದ ಅರ್ಥದಲ್ಲಿ ನಮ್ಮಲ್ಲಿ ಸಾಧ್ಯವಾಗಲಿಲ್ಲ.

ಈ. ಬಹುತೇಕ 'ಚಿತ್ರ ಸಮಾಜ'ಗಳು ನಗರ ಕೇಂದ್ರಿತವಾದವುಗಳು. ಅದರಲ್ಲೂ ಉನ್ನತ ವರ್ಗದವರ ತಾಣವಾಗಿ ಮೆರೆದವುಗಳು. ಅಂತಹವರ ಪಾಲಿಗೆ ಇದೂ ಒಂದು ಪ್ರತಿಷ್ಠಿತ ಕ್ಲಬ್ ಆಯಿತು. ಹೀಗಾಗಿ 'ಚಿತ್ರ ಸಮಾಜ'ದ ಸದಸ್ಯತ್ವ ಪಡೆಯುವುದು ಮುಖ್ಯವೇ ಹೊರತು ಅಲ್ಲಿನ ಚಟುವಟಿಕೆಗಳಲ್ಲಿ ಭಾಗವಹಿಸುವುದಲ್ಲ ಎಂದು ನಂಬುವವರು ಹೆಚ್ಚಾದರು. ಇಂತಹವರನ್ನು ಆಧರಿಸಿ ಯಾವುದೇ ಚಳವಳಿಗಳು ಹುಟ್ಟುವುದು ಸಾಧ್ಯವಿರಲಿಲ್ಲ. ಮುಖ್ಯವಾಗಿ 'ಚಿತ್ರ ಸಮಾಜ'ಗಳು ವಿಕೇಂದ್ರೀಕರಣಗೊಂಡು ಗ್ರಾಮಾಂತರ ಪ್ರದೇಶದಲ್ಲೂ ಬೆಳೆಯಬೇಕಿತ್ತು. ನಮ್ಮಲ್ಲಿ - ಕಲಮಟ್ಟಿಗೆ ನೀನಾಸಂನಲ್ಲಿ ಬಿಟ್ಟರೆ - ಬೇರಲ್ಲೂ ಈ ಕೆಲಸ ಆದಂತಿಲ್ಲ. ಇದು 'ಚಿತ್ರ ಸಮಾಜ'ಗಳ ಒಟ್ಟು ಆಶಯಕ್ಕೆ ಪೂರಕವಾಗಿರಲಿಲ್ಲ.

ಉ. ಕೊನೆಯದಾಗಿ ನಮ್ಮಲ್ಲಿ 'ಚಿತ್ರ ಪ್ರದರ್ಶನ' ಎಂದರೆ ವಿದೇಶಿ ಚಿತ್ರ ಪ್ರದರ್ಶನ ಎಂಬ ನಂಬಿಕೆ ಬೆಳೆಯಿತೇ ಹೊರತು ಪ್ರಾದೇಶಿಕ ಚಿತ್ರ ಪ್ರದರ್ಶನಕ್ಕೆ ಹೆಚ್ಚಿನ ಒತ್ತು ಸಿಕ್ಕಿರಲಿಲ್ಲ. ಬೇರೆ, ಬೇರೆ ಭಾರತೀಯ ಭಾಷೆಗಳ ನಡುವಿನ ಅರ್ಥಪೂರ್ಣ ಸಂವಾದ 'ಚಿತ್ರ ಸಮಾಜ'ದ ಮೂಲಕ ಆಗುವುದು ಸಾಧ್ಯವಿತ್ತು. ಆದರೆ ಒಟ್ಟಾಗಿ ಒಂದು ಶಿಸ್ತು ರೂಪುಗೊಳ್ಳದೆ ಹೋದದ್ದರಿಂದಲೋ ಏನೋ ಇಂತಹ ಪ್ರಯತ್ನ ಅಷ್ಟಾಗಿ ನಡೆಯಲಿಲ್ಲ. ಬರ್ಗ್‌ಮನ್, ಐಸೆನ್‌ಸ್ಟೈನ್, ಕುರಸೋವ, ಗೊಡಾರ್ಡ್ ಮುಂತಾದವರ ಚಿತ್ರಗಳನ್ನು ನೋಡುವುದೇ ಮುಖ್ಯವಾಯಿತೇ ಹೊರತು ಇತರ ಭಾಷೆಯ ಚಿತ್ರಗಳನ್ನು ನೋಡುವುದಲ್ಲ. ಇದರಿಂದ 'ಸಿನಿಮಾಕ್ಕೊಂದು ಭಾಷೆ' ಎಂದು ನಂಬುವವರಿಗೇ ಭಾರತೀಯ ಸಿನಿಮಾಕ್ಕೆ ಬೇರೆ ಭಾಷೆಯಿದೆ ಎಂದು ಅರ್ಥವಾಗಲಿಲ್ಲ. ಇದರ ಪರಿಣಾಮವೆಂದರೆ ಅವರ ನೋಡುವ ಕಣ್ಣು ಯುರೋಪ್‌ನದ್ದಾಯಿತು. ಈ ಮೂಲಕ ಕಂಡ ಭಾರತೀಯ ಚಿತ್ರಗಳು ಗೇಲಿಯ ವಸ್ತುವಾದುವೆ ಹೊರತು ಇಡೀ ಒಂದು ಸಾಧ್ಯತೆ ಎಂಬುದು ಅವರ ಅರಿವಿಗೆ ಬರಲಿಲ್ಲ. ಇದರಿಂದ ವ್ಯಾಪಾರಿ ಚಿತ್ರಗಳ ಕುರಿತು ಒಂದು ಮಾದರಿ ಉಡಾಫೆ ಧೋರಣೆ ಇರುವುದನ್ನು ನಾವು ನೋಡುತ್ತಿದ್ದೇವೆ. ಹೀಗಾಗಿ ಚಿತ್ರ ಸಮಾಜಗಳು ಒಟ್ಟಾಗಿ ಸಾಂಸ್ಕೃತಿಕ ಸಂವಾದ ಮೂಡಿಸುವಲ್ಲಿ ವಿಫಲವಾದವು.

ಚಿತ್ರ ಸಮಾಜದ ಸಾಧನೆಗಳು ಮತ್ತು ಸಮಸ್ಯೆಗಳು

ಹೀಗಾದರೆ 'ಚಿತ್ರ ಸಮಾಜ'ಗಳು ನಮ್ಮಲ್ಲಿ ಸಂಪೂರ್ಣ ವಿಫಲವಾದುವೆ ? ಎಂಬ ಪ್ರಶ್ನೆ ಬರುವುದು ಸಹಜ. ಒಂದು ಸಾಂಸ್ಕೃತಿಕ ಚಳವಳಿ ಬಗ್ಗೆ ಮಾತನಾಡುವಾಗ ಇಂತಹ ಆತುರದ ತೀರ್ಮಾನಕ್ಕೆ ಬರುವುದು ಸಾಧ್ಯವಿಲ್ಲ. ಅಥವಾ ಕಾಲಘಟ್ಟದ ಯಾವುದೋ ಒಂದು ಬಿಂದುವಿನಲ್ಲಿ ನಿಂತು ಅಂತಹ ದುಡುಕು ತೀರ್ಮಾನಕ್ಕೆ ಬರುವುದು ಸರಿಯಲ್ಲ. 'ಚಿತ್ರ ಸಮಾಜ' ಎಂಬುದು ನಮ್ಮ ಮಟ್ಟಿಗೆ ಒಂದು ಹೊಸ ಕಲ್ಪನೆ ಮತ್ತು ಅದು 'ಚಿತ್ರ ಮಾಧ್ಯಮ'ವನ್ನು ಅವಲಂಬಿಸಿದ ಕಲ್ಪನೆ ಇದನ್ನು ಒತ್ತಿ ಹೇಳಬೇಕಾಗಿದೆ. ಏಕೆಂದರೆ 'ಚಿತ್ರ ಸಮಾಜ' ಸೋತಿದ್ದರೆ ಅದಕ್ಕೆ ಅವನ್ನು ನಾವು ಹೊಣೆಗಾರರನ್ನಾಗಿಸುವುದು ಸರಿಯಲ್ಲ. ಇದಕ್ಕೆ ಪೂರಕ ವಾತಾವರಣ ನಮ್ಮಲ್ಲಿ ರೂಪುಗೊಳ್ಳಲಿಲ್ಲ ಎಂಬುದೂ ಅಷ್ಟೇ ಸತ್ಯ. ಹೀಗಾಗಿ 'ಚಿತ್ರ ಸಮಾಜ'ಗಳು ಕೆಲವು ಸಾಧನೆಗಳನ್ನು ಮಾಡಿವೆ. ಉತ್ತಮ ವಾತಾವರಣವನ್ನು ನಿರ್ಮಿಸಿವೆ. ಸಿನಿಮಾ ಒಂದು ವಾಣಿಜ್ಯಾತ್ಮಕ ಸರಕಾಗಿದ್ದ ಕಾಲದಲ್ಲಿ ಅದೂ 'ಒಂದು ಕಲೆ' ಎಂಬ ಅರಿವು ಹುಟ್ಟಲು 'ಚಿತ್ರ ಸಮಾಜ'ಗಳ ಕಾಣಿಕೆ ಬಹಳ ದೊಡ್ಡದಾಗಿದೆ. ಸಿನಿಮಾ ಕುರಿತ ಚರ್ಚೆ ಸಂವಾದಗಳು ಸಾಕಷ್ಟು ಚಿಂತನಶೀಲರನ್ನು ಕೊಟ್ಟಿದೆ. 'ಚಿತ್ರಸಮಾಜ'ಗಳು ನಡೆಸಿದ ಚಿತ್ರೋತ್ಸವವನ್ನು ನೋಡಿ ಅವುಗಳ ಮೂಲಕ ಮಾಧ್ಯಮದ ಬಗ್ಗೆ ಆಸಕ್ತಿ ಹುಟ್ಟಿಸಿಕೊಂಡವರ ಸಂಖ್ಯೆಯೇ ನಮ್ಮಲ್ಲಿ ಸಾಕಷ್ಟಿದೆ. ಹೊಸ ಅಲೆ ಚಿತ್ರಗಳ ಬೆಳವಣಿಗೆಗೆ 'ಚಿತ್ರಸಮಾಜ'ದ ಕಾಣಿಕೆ ಬಹಳ ದೊಡ್ಡದಿದೆ. 'ಮಯೂರ ಫಿಲಂ ಸೊಸೈಟಿ'ಯು 'ಕಂಕಣ' ಚಿತ್ರವನ್ನು ನಿರ್ಮಿಸಿತ್ತು ಎಂಬುದನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬಹುದು. 'ಹೊಸಅಲೆ' ಚಿತ್ರಗಳ ಚಳವಳಿ ಬತ್ತಿ ಹೋದುದಕ್ಕೆ 'ಚಿತ್ರ ಸಮಾಜ'ಗಳನ್ನೇನು ಆರೋಪಿಗಳ ಸ್ಥಾನದಲ್ಲಿ ನಿಲ್ಲಿಸುವಂತಿಲ್ಲ. ವಾಸ್ತವವಾಗಿ ಆ

ಚಿತ್ರಗಳು ಮಾಧ್ಯಮದ ಸಾಧ್ಯತೆಯನ್ನು ನೆಲದ ಮಣ್ಣಿನ ಗುಣಕ್ಕೆ ಒಗ್ಗಿಸುವಲ್ಲಿ ವಿಫಲವಾದ ಕಾರಣಕ್ಕೆ ಸೋತವು. ಈ ಸೋಲು ತಪ್ಪು ದಲ್ಲದ ತಪ್ಪಿಗೆ 'ಚಿತ್ರ ಸಮಾಜ'ಗಳು ಹೊಣೆಯಾಗುವಂತೆ ಮಾಡಿತು ಎಂಬುದಂತೂ ನಿಜ.

ಈ ಸೋಲು, ಗೆಲುವಿನ ಒಟ್ಟು ಹಿನ್ನೆಲೆಯಲ್ಲಿ 'ಚಿತ್ರ ಸಮಾಜ'ಗಳು ಎದುರಿಸುತ್ತಿರುವ 'ಸಮಸ್ಯೆ' ಕುರಿತು ಹೀಗೆ ಹೇಳಬಹುದು:

ಅ) ನಮ್ಮಲ್ಲಿ 'ಚಿತ್ರ ಸಮಾಜ'ಗಳು ಮೂರು ದಶಕಗಳ ಅಸ್ತಿತ್ವವನ್ನು ಹೊಂದಿದ್ದರೂ ಚಿತ್ರೋದ್ಯಮದ ವ್ಯಕ್ತಿಗಳು ಇವರಲ್ಲಿ ಭಾಗಿಗಳಾಗದೆ ಹೋದದ್ದು ಒಂದು ಮುಖ್ಯ ಸಮಸ್ಯೆ. ಹೀಗನ್ನುವಾಗ ಇವು ಚಿತ್ರೋದ್ಯಮಕ್ಕೆ ಪರ್ಯಾಯವಾಗಿ ರೂಪುಗೊಂಡ ವ್ಯವಸ್ಥೆಯಾದ್ದರಿಂದ ಅವರೇಕೆ ಇವರಲ್ಲಿ ಭಾಗಿಗಳಾಗಬೇಕು ಎಂಬ ಪ್ರಶ್ನೆ ಬರುವುದು ಸಹಜ. ಅಥವಾ ಇಂತಹ ಕಲ್ಪನೆ ಅವರಲ್ಲಿ ಬೇರೂರಿದ್ದರಿಂದಲೇ ಅಂತರ ಬಂದಿರುವುದೂ ಸಾಧ್ಯ. ಭಾಗವಹಿಸುವಿಕೆ ಎನ್ನುವುದು ಪ್ರಯೋಗಶೀಲ ಸಿನಿಮಾಗಳಿಗೆ ಅನ್ವಯಿಸುವ ಮಾತು. ವಾಣಿಜ್ಯ ಉದ್ದೇಶವುಳ್ಳ ಚಿತ್ರಗಳು ಮುಖ್ಯವಾಗಿ ಹಣ ಗಳಿಕೆಯನ್ನೇ ಅವಲಂಬಿಸಿರುವುದರಿಂದ, ಅದಕ್ಕೆ ಸರಿ ಹೊಂದುವ ಒಂದು ವ್ಯವಸ್ಥೆಯನ್ನು ನಿರ್ಮಿಸಿಕೊಂಡಿರುತ್ತವೆ. ಇದೇ ವ್ಯವಸ್ಥೆಯ ಮೂಲಕ ಅಲ್ಪ ಬಜೆಟ್ಟಿನ ಪ್ರಯೋಗಶೀಲ ಸಿನಿಮಾಗಳು ಅಭಿವ್ಯಕ್ತಿಗೊಳ್ಳುವ ಸಾಧ್ಯತೆ ಕಡಿಮೆ. ಹೀಗಾಗಿ ಅವು 'ಚಿತ್ರ ಸಮಾಜ'ಗಳ ಪರ್ಯಾಯ ಮಾರ್ಗವನ್ನು ಹುಡುಕಿಕೊಳ್ಳಬೇಕಿತ್ತು. ಆದರೆ ಪಶ್ಚಿಮ ಬಂಗಾಳ ಮತ್ತು ಕೇರಳಗಳಲ್ಲಾದಂತೆ ನಮ್ಮಲ್ಲಿ ಪ್ರಯೋಗಶೀಲ ಚಿತ್ರ ನಿರ್ಮಾಪಕರು ಯಾವುದೇ ಸಂವಾದಕ್ಕೆ ತಮ್ಮನ್ನು ತೆರೆದುಕೊಳ್ಳಲಿಲ್ಲ. ಅಭಿವ್ಯಕ್ತಿ ಸ್ವಾತಂತ್ರ್ಯದ ಬಗ್ಗೆ ಮಾತನಾಡುವ ಇವರು ತಮ್ಮ ಚಿತ್ರದ ಬಗ್ಗೆ ಮಾತನಾಡಲು ಇತರರಿಗೂ ಅಭಿವ್ಯಕ್ತಿ ಸ್ವಾತಂತ್ರ್ಯ ಇದೆ ಎಂಬುದನ್ನು ಅರ್ಥ ಮಾಡಿಕೊಳ್ಳಲಿಲ್ಲ. ಹೀಗಾಗಿ 'ಚಿತ್ರ ಸಮಾಜ'ಗಳನ್ನು ನಮ್ಮ ಚಿತ್ರರಂಗ ಇಂದಿಗೂ ತನ್ನ ಅವಿಭಾಜ್ಯ ಅಂಗ ಎಂದು ಒಪ್ಪಿಕೊಂಡಿಲ್ಲ. ಇದರ ಪರಿಣಾಮ ಸಹಜವಾಗಿಯೇ ಅವುಗಳ ಬೆಳವಣಿಗೆಯ ಮೇಲೆ ಆಗಿದೆ.

ಆ) ಕೇಂದ್ರ ಸರ್ಕಾರ ತನ್ನ ನೀತಿಯಲ್ಲಿ 'ಚಿತ್ರ ಸಮಾಜ'ಗಳಿಗೆ ಮಾನ್ಯತೆ ಕೊಟ್ಟು ವಾರ್ಷಿಕ ಅನುದಾನ ನೀಡಿ ಅವುಗಳ ಬೆಳವಣಿಗೆ ಬಗ್ಗೆ ಆಸಕ್ತಿ ವಹಿಸಿದೆ. ರಾಜ್ಯ ಸರ್ಕಾರವೂ ಹಿಂದೆ 'ಚಿತ್ರ ಸಮಾಜ'ಗಳ ಬೆಳವಣಿಗೆ ಬಗ್ಗೆ ಆಸಕ್ತಿ ವಹಿಸಿತ್ತು. ಒಂದೂವರೆ ಲಕ್ಷದವರೆಗೆ ಅನುದಾನವನ್ನು ಕೊಟ್ಟಿತ್ತು. ಆದರೆ ನಂತರ ಸರ್ಕಾರದ ನೀತಿ ಅಸ್ಪಷ್ಟವಾಯಿತು. ಇವತ್ತಿಗೂ 'ಚಿತ್ರ ಸಮಾಜ'ಗಳು ಅಧಿಕೃತ ಮಾನ್ಯತೆಯನ್ನು ರಾಜ್ಯ ಸರ್ಕಾರದಿಂದ ಪಡೆದಿಲ್ಲ. ನೀತಿ-ನಿರ್ಧಾರಣಾ ಸಮಿತಿಗಳಲ್ಲಿ ಅವಕ್ಕೆ ಯಾವ ಸ್ಥಾನಗಳೂ ಇರುವುದಿಲ್ಲ. ಅವು ವಾಣಿಜ್ಯ ಅಭಿವೃದ್ಧಿ ಮಂಡಳಿಯ ಅಂಗವೇ ಅಲ್ಲ. ಹೀಗಾಗಿ ಒಂದು ರೀತಿಯ ಅಘೋಷಿತ ಅಸ್ಪೃಶ್ಯತ 'ಚಿತ್ರ ಸಮಾಜ'ಗಳ ಚಳವಳಿ ಸೊರಗಲು ಕಾರಣವಾಯಿತು ಎನ್ನಬಹುದು.

ಇ) 'ಚಿತ್ರಸಮಾಜ' ಮತ್ತು 'ಚಲನಚಿತ್ರ ಪತ್ರಿಕೋದ್ಯಮ'ದ ನಡುವೆ ಸುಮಧುರ ಸಂಬಂಧ ಎಪ್ಪತ್ತರ ದಶಕದಲ್ಲಿ ಸಾಧ್ಯವಾಗಿತ್ತು. ನಂತರ ಚಲನಚಿತ್ರ ಪತ್ರಿಕೋದ್ಯಮ ತನ್ನ ಗುಣಮಟ್ಟ ಕಳೆದುಕೊಳ್ಳುತ್ತ ಬಂದಿತು. ಹೀಗಾಗಿ 'ಸಿನಿಮಾ ಪುರವಣಿ'ಗಳು ಗಾಸಿಪ್‌ಗಳಿಂದ ತುಂಬಿ ಹೋಗಿ ಗಂಭೀರ ಚರ್ಚೆ ಅಪರೂಪವಾಗಿರುತ್ತದೆ. ಒಟ್ಟು ವಾತಾವರಣ 'ಚಿತ್ರ ಸಮಾಜ'ಕ್ಕೆ ಪೂರಕವಾಗಿರಲಿಲ್ಲ. ಚಲನಚಿತ್ರ ಅಕಾಡೆಮಿ ಸ್ಥಾಪನೆ ಸುದ್ದಿ ಹಬ್ಬಿದ್ದರೂ ಅದರ ಒಟ್ಟು ಪರಿಕಲ್ಪನೆಯೇ ಅಸ್ಪಷ್ಟವಾಗಿದೆ. ಕೇರಳ ಮತ್ತು ಪಶ್ಚಿಮ ಬಂಗಾಳದಲ್ಲಿ 'ಚಿತ್ರ ಸಮಾಜ' ಒಟ್ಟು ಚಿತ್ರ ಮಾಧ್ಯಮದ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. ನಮ್ಮಲ್ಲಿ ಇಂತಹ ಸಂವಾದವೇ ಸಾಧ್ಯವಾಗದ್ದರಿಂದ 'ಚಿತ್ರ ಸಮಾಜ'ಗಳು, ಮಾಧ್ಯಮ ಎರಡೂ ನಷ್ಟ ಅನುಭವಿಸಬೇಕಾಯಿತು.

'ಚಿತ್ರ ಸಮಾಜ' ಎಂಬ ಕಲ್ಪನೆ ಹುಟ್ಟಿ ಬೆಳೆದ ಯುರೋಪಿನಲ್ಲಾಗಲಿ, ಅದು ಭಾರತದಲ್ಲಿ ಕಾಲಿಟ್ಟ ಪಶ್ಚಿಮ ಬಂಗಾಳದಲ್ಲಾಗಲಿ 'ಚಿತ್ರ ಸಮಾಜ' ಎಂದರೆ ಅದೊಂದು ಸಾಂಘೀಕರಣಗೊಂಡ ವ್ಯವಸ್ಥೆ. ನಾಲ್ಕು ಸಾವಿರಕ್ಕೂ ಮಿಕ್ಕ ಸದಸ್ಯರುಳ್ಳ ಸೊಸೈಟಿಗಳಲ್ಲಿ, ವರ್ಷದ ಎಲ್ಲಾ ದಿನವೂ ಪ್ರದರ್ಶನದ ವ್ಯವಸ್ಥೆ ಇರುತ್ತದೆ. ಮತ್ತು ಈ ಸೊಸೈಟಿಗಳು ಯಾವುದೋ ಸಿದ್ಧಾಂತಕ್ಕೆ, ರಾಜಕೀಯ ಪಕ್ಷಕ್ಕೆ ನಿಷ್ಠವಾಗಿರುತ್ತವೆ. ಇಂತಹ ಸೊಸೈಟಿಗಳಿಗೆ ಅನ್ವಯಿಸುವ ಇಂಥ ಯಾವ ಪರಿಕಲ್ಪನೆಯೂ ನಮ್ಮ ಸೊಸೈಟಿಗಳಿಗೆ ಅನ್ವಯಿಸುವುದಿಲ್ಲ. ನಮ್ಮಲ್ಲಿ ಚಿತ್ರರಂಗ ಹೇಗೆ ಬೆಳೆದು ಬಂದಿತು ಎಂಬುದನ್ನು ಕೂಡ ನಾವು ಗಮನಿಸಬೇಕಾಗುತ್ತದೆ. ಜರ್ಮನಿಯಲ್ಲಿ ಸರ್ಕಾರವೇ ಚಿತ್ರ ಸಮಾಜವನ್ನು ನಿಯಂತ್ರಿಸಲು ಪ್ರಯತ್ನಿಸಿತು. ಇದರ ಪರಿಣಾಮವಾಗಿ ಒಂದು ಚಳವಳಿ ಹುಟ್ಟುಹಾಕುವ ಬದಲು 'ಚಿತ್ರ ಸಮಾಜ'ಗಳು ಆಡಳಿತ ಯಂತ್ರದ ಒಂದು ಭಾಗವಾಗಿಬಿಟ್ಟವು. ಆದರೆ ಅದೇ ಫ್ರಾನ್ಸ್, ಇಂಗ್ಲೆಂಡ್‌ಗಳಲ್ಲಿ ಚಳವಳಿಯನ್ನು ಚಿಂತಕರು ಮೂಡಿಸಿದರು. ಇದರ ಪರಿಣಾಮ ಅಲ್ಲಿ ಮಾಧ್ಯಮದ ಗುಣಮಟ್ಟ ಹೆಚ್ಚಿತು. ಹೀಗಾಗಿ 'ಚಿತ್ರ ಸಮಾಜ'ದ ಬೆಳವಣಿಗೆ ಆ ಪ್ರದೇಶದ ಮಾಧ್ಯಮದ ಸಾಧ್ಯತೆಯನ್ನು ಅವಲಂಬಿಸಿದೆ.

ನಮ್ಮಲ್ಲಿ 'ಚಿತ್ರರಂಗ' ನಾಟಕದ ಹ್ಯಾಂಗೋವರ್ ಆಗಿಯೇ ಬೆಳೆದು ಬಂದದ್ದು. ಹೀಗಾಗಿ ಆರಂಭಿಕ ಚಿತ್ರಗಳು ನಾಟಕಗಳ ದೃಶ್ಯೀಕರಣವೇ ಆಗಿದ್ದವು. ಮುಂದೆ ಮಾಧ್ಯಮ ಸಾಧ್ಯತೆಯನ್ನು ಬೇರೆ ದೇಶದ, ಬೇರೆ ಭಾಷೆಯ ಚಿತ್ರಗಳನ್ನು ನೋಡಿ ತಿಳಿದವರು ಚಿತ್ರೋದ್ಯಮ ಎಂದರೆ ಇದಷ್ಟೇ ಅಲ್ಲ ಎಂಬ ತೀರ್ಮಾನಕ್ಕೆ ಬಂದರು. ಇಂತಹ ಕುತೂಹಲ, ಆಸಕ್ತಿಯೇ ನಮ್ಮಲ್ಲಿ 'ಚಿತ್ರ ಸಮಾಜ'ಗಳ ಹುಟ್ಟಿಗೆ ಕಾರಣವಾಯಿತು. ಆದರೆ ಈ ಪರಿಕಲ್ಪನೆ ಮುಂದೆ ಸಂಕೀರ್ಣವಾಗುತ್ತ ಹೋಯಿತು. 'ಹೊಸ ಅಲೆ ಚಿತ್ರ'ಗಳು ಬಂದಾಗ 'ಚಿತ್ರ ಮಾಧ್ಯಮ'ದ ಸಾಧ್ಯತೆಯನ್ನು ಬಲ್ಲವರು ಕೂಡ ನಮ್ಮಲ್ಲಿ ಇಂತಹ ಪ್ರಯೋಗ ಆಗುತ್ತಿದೆ ಎಂಬ ಕಾರಣದಿಂದ ಅಗತ್ಯಕ್ಕಿಂತ ಹೆಚ್ಚಾಗಿ ಹೊಗಳಿದರು. ಹೊಸ ಅಲೆ ಸಿನಿಮಾ ತೆಗೆದವರಲ್ಲಿ ಬಹಳ ಜನ ಸಾಹಿತ್ಯ ಕ್ಷೇತ್ರದಿಂದ ಬಂದವರಾಗಿದ್ದರು. ಅವರಿಗೆ ಹೊಸ ಮಾಧ್ಯಮವನ್ನು ಒಪ್ಪಿಕೊಳ್ಳಲು ಬೇಕಾದ 'ವಿನಯ' ಅನೇಕ ಬಾರಿ ಇರಲಿಲ್ಲ. ಇದರ ಪರಿಣಾಮ ಏನಾಯಿತೆಂದರೆ, ಅನೇಕ ಹೊಸ ಅಲೆ ಚಿತ್ರಗಳು ಸಾಹಿತ್ಯ ಕೃತಿಯ ದೃಶ್ಯರೂಪವಾಗಿದ್ದವು. 'ಚಿತ್ರ ಸಮಾಜ'ಗಳು ಈ ಸತ್ಯವನ್ನು ಹೇಳಬೇಕಿತ್ತು. ಆದರೆ ಅನೇಕ ಕಾರಣಗಳಿಂದ ಇದು ಸಾಧ್ಯವಾಗಲಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಕೆಲವು 'ಹೊಸ ಅಲೆ' ಚಿತ್ರಗಳು ಪ್ರಾಮಾಣಿಕತೆ ಸೋಗಿನಲ್ಲಿ ಪ್ರತಿಗಾಮಿತನವನ್ನು ಬಿಂಬಿಸುತ್ತಿದ್ದವು. ಇಲ್ಲೆಲ್ಲ 'ಚಿತ್ರ ಸಮಾಜ'ಗಳು ಮಾಧ್ಯಮಕ್ಕಿಂತ ಮೇಲೆ ನಿಂತು ಮಾತನಾಡಬೇಕಿತ್ತು. ಆದರೆ ಏಕೋ 'ಚಿತ್ರ ಸಮಾಜ'ಗಳು ಕೆಲವು ಬಾರಿ ಈ ಸಿನಿಮಾ ಮಾಧ್ಯಮಗಳ ಹಂಗಿಗೆ ಸಿಕ್ಕಂತೆ ವರ್ತಿಸಿದವು. ಇದರಿಂದ ಮಾಧ್ಯಮದ ಬೆಳವಣಿಗೆ ಸಾಧ್ಯವಾಗದೆ, ಎಲ್ಲೋ ಕೆಲವು ವ್ಯಕ್ತಿಗಳ ಬೆಳವಣಿಗೆ ಸಾಧ್ಯವಾಯಿತು. ಹೀಗೆ ಇದೊಂದು ಸಂಕೀರ್ಣವಾದ ಸಮಸ್ಯೆ. ಸಾರಾಸಗಟಾಗಿ, ಅಲ್ಲೆಲ್ಲ ಬೆಳವಣಿಗೆ ಆಗಿದೆ, ನಮ್ಮಲ್ಲಿ ಆಗಿಲ್ಲ ಎಂದು ಕೊರಗುವುದರಲ್ಲಿ ಅರ್ಥವಿಲ್ಲ. ಚಿತ್ರ ಸಮಾಜದ ಪರಿಕಲ್ಪನೆಯನ್ನೇ ನಾವಿನ್ನೂ ಸಂಪೂರ್ಣವಾಗಿ ನಮ್ಮದಾಗಿಸಿಕೊಂಡಿಲ್ಲ. ಸಾಹಿತ್ಯದ ಕುರಿತು, ಚಿತ್ರ ಕಲೆ ಕುರಿತು, ಸಂಗೀತದ ಕುರಿತು, ಸದಭಿರುಚಿಯ ಸಂಸ್ಥೆಗಳಿದ್ದಂತೆ ಚಲನಚಿತ್ರಕ್ಕೆ 'ಚಿತ್ರ ಸಮಾಜ'ಗಳು ಎಂಬುದನ್ನು ಇನ್ನೂ ನಾವು ಪೂರ್ತಿಯಾಗಿ ಒಪ್ಪಿಕೊಂಡಿಲ್ಲ. ಚಲನಚಿತ್ರ ಎಂದಕೂಡಲೆ ಅಲ್ಲಿ 'ಹಣದ ಹೊಳೆ' ಹರಿಯುತ್ತದೆ ಎಂಬುದು ಒಂದು ತಿಳಿವಳಿಕೆ. ಹೀಗಾಗಿ 'ಚಿತ್ರ ಸಮಾಜ' ಒಂದು ಅಭಿರುಚಿ ನಿರ್ಮಾಣದ ಸಂಸ್ಥೆಯಾಗಿ ಬೆಳೆಯಲು ನಮ್ಮಲ್ಲಿ ಸಿನಿಮಾ ಮಾಧ್ಯಮ ಬೆಳೆಯಬೇಕು. ಅದಕ್ಕೆ ಪೂರಕವಾಗಿ ಆಕರಗಳು ಬೆಳೆಯಲಿಲ್ಲ. ನಮ್ಮಲ್ಲಿ ಆರ್ಕೈವ್ಸ್ ಬಿಟ್ಟರೆ ಬೇರ ಆಕರ ಸಂಸ್ಥೆ ಇಲ್ಲ. ಅಲ್ಲಿಯೂ ಕೂಡ ಎಲ್ಲವೂ ವ್ಯವಸ್ಥಿತವಾಗಿಲ್ಲ. ಹೀಗಿರುವಾಗ 'ಚಿತ್ರ ಸಮಾಜ'ದ ಕಲ್ಪನೆ ನಮ್ಮಲ್ಲಿ ಬೇರೂರುವುದು ಕಷ್ಟವಾಗಿದೆ.

'ಜನಪ್ರಿಯ ಚಿತ್ರ'ಗಳನ್ನು ನಮ್ಮ ಬೌದ್ಧಿಕ ವಲಯ ಆರಂಭದಿಂದಲೂ ಅನುಮಾನದಿಂದಲೇ ನೋಡಿಕೊಂಡು ಬಂದಿದೆ. ಜನಪ್ರಿಯವಾದರೆ ಅಪಾಯಕಾರಿ ಎಂಬ ಹುಂಬ ಸಿದ್ಧಾಂತವೂ ಕೆಲವೆಡೆ ಪ್ರತಿಪಾದಿಸಲ್ಪಟ್ಟಿದೆ. ಜನಪ್ರಿಯ ಚಿತ್ರಗಳು ಮೂಡಿಸುವ ಭ್ರಾಮಕತೆ ಬಗ್ಗೆ ಸರಿಯಾದ ಚರ್ಚೆಗಳಾಗಿಯೇ ಇಲ್ಲ. ಒಟ್ಟಾಗಿ ಜನಪ್ರಿಯ ಚಿತ್ರಗಳ ಒಳ್ಳೆಯ ಗುಣವನ್ನು ಗುರುತಿಸುವ, ಅವುಗಳ ಅಪಾಯಕಾರಿ ಲಕ್ಷಣದ ವಿರುದ್ಧ ಜನರನ್ನು ಜಾಗೃತರನ್ನಾಗಿಸುವ ಒಂದು ಬಹಳ ಮುಖ್ಯ ಕೆಲಸ ನಮ್ಮಲ್ಲಿ ಆಗಲಿಲ್ಲ. ಒಂದೆರಡು ಅಪವಾದಗಳನ್ನು ಬಿಟ್ಟರೆ ಚಿತ್ರಸಮಾಜಗಳು ಈ ಜವಾಬ್ದಾರಿಯಿಂದ ಸಂಪೂರ್ಣ ಹಿಂದುಳಿದವು. ಜನಪ್ರಿಯ ಚಿತ್ರಗಳ ಪ್ರದರ್ಶನ ಅಷ್ಟು ಅಗತ್ಯವಾದ ವಿಷಯ ಅಲ್ಲ. ಅದು ವ್ಯವಸ್ಥೆಯಲ್ಲಿಯೇ ಸುಗಮವಾಗಿ ನಡೆಯುವ ಕೆಲಸ. ಆದರೆ ಅವುಗಳ ಕುರಿತು ಚರ್ಚೆ ಆಗಬೇಕಿತ್ತು. ಗೆರೆ ಹಾಕಿದಂತೆ ಜನಪ್ರಿಯ ಚಿತ್ರ ನಿರ್ಮಾಪಕರು, ಕಲಾತ್ಮಕ ಚಿತ್ರ ನಿರ್ಮಾಪಕರು ದೂರ ನಿಂತು ಪರಸ್ಪರರನ್ನು ನಿಂದಿಸುವ ಸದ್ಯದ ವಾತಾವರಣ

(ಚಿತ್ರ ೭) 'ಪ್ರೇಕ್ಷಕ ಫಿಲಂ ಅಪ್ರಿಸಿಯೇಷನ್' ಸೊಸೈಟಿ ಏರ್ಪಡಿಸಿದ್ದ 'ಚಲನಚಿತ್ರ ರಸ ಗ್ರಹಣ ಶಿಬಿರ'ವೊಂದರ ಉದ್ಘಾಟನೆಯನ್ನು ಎನ್.ಪಿ.ಕೆ. ಮೂರ್ತಿ ನೆರವೇರಿಸಿದರು. ಚಿತ್ರದಲ್ಲಿ ಪಿ.ಎನ್. ಸುಬ್ಬರಾವ್, ಜಿ.ಪಿ. ಅಯ್ಯರ್, ಪಿ.ಕೆ. ನಾಯಕ್ ಮತ್ತು ಗಿರೀಶ್ ಕಾಸರವಳ್ಳಿ

ಚಲನಚಿತ್ರ ಮಾಧ್ಯಮಕ್ಕೆ ಒಳ್ಳೆಯ ಹೆಸರು ತರುವಂತಹುದಲ್ಲ. ಬೆಳವಣಿಗೆಗೂ ಸಹಕಾರಿಯಲ್ಲ. ಈ ಸಮಸ್ಯೆಗೆ ಪರಿಹಾರವನ್ನು 'ಚಿತ್ರ ಸಮಾಜ'ಗಳು ಮಾತ್ರ ನೀಡಬಲ್ಲವು.

ಇವತ್ತು ಚಲನಚಿತ್ರ ಮಾಧ್ಯಮವೇ ಹೊಸ ಸವಾಲುಗಳನ್ನು ಎದುರಿಸುತ್ತಿದೆ. ಕಿರುತೆರೆ ಮೂಲಕ ಮನೆಯಲ್ಲಿಯೇ ಕುಳಿತು ನೋಡುವ ಸಾಧ್ಯತೆಗಳು ಹೆಚ್ಚಿವೆ. ಅಂತರ್ಜಾಲದ ತಂತ್ರಜ್ಞಾನ ತೀವ್ರವಾಗಿ ಬೆಳೆಯುತ್ತಲಿದ್ದು ಸಿ.ಡಿ.ಗಳ ಮೂಲಕ ದಾಖಲಿಸುವುದು, ವೆಬ್‌ಸೈಟ್‌ಗಳ ಮೂಲಕ ಸಂಪಾದಿಸುವುದು ಸಹಜವಾಗುತ್ತಿದೆ. ಈ ಬೆಳವಣಿಗೆಗಳ ಹಿನ್ನೆಲೆಯಲ್ಲಿ 'ಚಿತ್ರ ಸಮಾಜ'ಗಳು ಹೊಸರೂಪವನ್ನು ಪಡೆದುಕೊಳ್ಳುವ ಎಲ್ಲಾ ಸಾಧ್ಯತೆಗಳಿವೆ. ಹೃಷಿಕೇಶ್ ಮುಖರ್ಜಿ ''ದೊಡ್ಡ ಚಿತ್ರ ಮಂದಿರ ಕಟ್ಟಬೇಡಿ, ಚಿಕ್ಕದು ಆಗಲಿ. ಬ್ರೀಫ್ ಕೇಸ್ ತುಂಬಾ ಚಿತ್ರ ತರುತ್ತೇನೆ'' ಅಂತ ದಶಕದ ಹಿಂದೆ ಹೇಳಿದ್ದ ಮಾತು ಇವತ್ತು ಹೆಚ್ಚು ನಿಜವಾಗುತ್ತಿದೆ. 'ಚಿತ್ರ ಸಮಾಜ'ಗಳು ವಿಶಾಲ ಪರದೆಯನ್ನೇ ಇನ್ನು ಮುಂದೆ ಅವಲಂಬಿಸಬೇಕಾಗಿಲ್ಲ. ಕಿರುತೆರೆಯಲ್ಲಿ ಚಿತ್ರಗಳನ್ನು ನೋಡುವುದು - ತಾಂತ್ರಿಕತೆಯೇ - ಮುಖ್ಯವಾಗದ ಕಡೆ ಸುಲಭದ ಹಾದಿಯಾಗಲಿದೆ. ಎಲ್ಲಕ್ಕಿಂತ ಮುಖ್ಯವಾಗಿ 'ಚಿತ್ರ ಸಮಾಜ'ಗಳಿಗಿದ್ದ ಬಹು ದೊಡ್ಡ ಸಮಸ್ಯೆ ಜನರು ಒಂದೆಡೆ ಸೇರುವುದು. ಇದು ಭೌಗೋಳಿಕವಾಗಿ ಕಷ್ಟವಾಗಿ, ಸಂಪಾದಕ್ಕೆ ಪೆಟ್ಟು ಬಿದ್ದಿದೆ. ಈಗ ಅಂತರ್ಜಾಲದ ಸಾಧ್ಯತೆಯನ್ನು ಹೆಚ್ಚು ಸಮರ್ಪಕವಾಗಿ ಬಳಸಿಕೊಂಡರೆ, ದೂರದಲ್ಲೇ ಕೂತು ಕಂಪ್ಯೂಟರ್ ಮೂಲಕ ಸಂವಾದಿಸುವ, ವಿಷಯಗಳನ್ನು ಹಂಚಿಕೊಳ್ಳುವ, ಅಷ್ಟೇ ಏಕೆ 'ಚಿತ್ರ'ಗಳನ್ನು ನೋಡುವುದೂ ಸಾಧ್ಯವಾಗಿದೆ. 'ಚಿತ್ರ ಸಮಾಜ'ಗಳು ಈ ಮಾದರಿ ವೆಬ್ ಸೈಟ್‌ಗಳನ್ನು ಸ್ಥಾಪಿಸಿಕೊಂಡು ತಮ್ಮ ಕೆಲಸವನ್ನು ಯಶಸ್ವಿಯಾಗಿ ಮಾಡಬಲ್ಲವಾಗಿವೆ. ಹೊಸ ತಂತ್ರಜ್ಞಾನಕ್ಕೆ ತೆರೆದುಕೊಂಡು ತಮ್ಮ ಸದಾಶಯಗಳನ್ನು ಉಳಿಸಿಕೊಂಡಿದ್ದೇ ಆದರೆ 'ಚಿತ್ರ ಸಮಾಜಗಳ' ಭವಿಷ್ಯ ಉಜ್ವಲವಾಗುತ್ತದೆ. ಹೀಗಾಗಿ 'ಚಿತ್ರ ಸಮಾಜ' ಚಳುವಳಿಯಲ್ಲಿರುವ ಹಿರಿಯರು ಯಾವುದೇ ಮಾಧ್ಯಮದ ಹಂಗಿಗೆ ಬೀಳದೆ, ಮಾಧ್ಯಮವೇ ತಮ್ಮ ಹಂಗಿಗೆ ಬೀಳುವಂತೆ ಮಾಡಿದರೆ, ನಿಜಕ್ಕೂ 'ಚಿತ್ರ ಸಮಾಜ'ಗಳು ಸದ್ದಿಲ್ಲದೆ ಸಾಂಸ್ಕೃತಿಕ ಚಳವಳಿ ಹುಟ್ಟುಹಾಕಬಲ್ಲವು.

ಚಿತ್ರ ಸಮಾಜ ಮತ್ತು ತೆರಿಗೆ ವಿನಾಯಿತಿ

ಯಾವುದೇ ಒಂದು ಚಿತ್ರಸಮಾಜ (ಅಂದರೆ ಫಿಲಂ ಸೊಸೈಟಿ ಅಥವಾ ಫಿಲಂ ಕ್ಲಬ್) ಕರ್ನಾಟಕ ಮನರಂಜನಾ ತೆರಿಗೆ ಅಧಿನಿಯಮ ೧೯೫೮, ನಿಯಮ ೭ರ ಉಪನಿಯಮ ೧೫ರ ಪ್ರಕಾರ ಮನ್ನಣೆ ಪಡೆದು, ಮನರಂಜನಾ ತೆರಿಗ ನೀಡಿಕೆಯ ಮನ್ನಾ ಅವಕಾಶ ಪಡೆಯಲು ಈ ಕೆಲವು ಅಂಶಗಳನ್ನು ಪೂರೈಸಲೇಬೇಕು :

ಕರ್ನಾಟಕ ಸಂಘ (ಸೊಸೈಟಿ) ನೋಂದಣಿ ಅಧಿನಿಯಮ ೧೯೬೦ರ ಅನ್ವಯ ಚಿತ್ರಸಮಾಜ ನೋಂದಣಿಯಾಗಿರಬೇಕು.

ಅದು ಭಾರತದ ಚಿತ್ರಸಮಾಜಗಳ ಒಕ್ಕೂಟ (ಫೆಡರೇಷನ್ ಆಫ್ ಫಿಲಂ ಸೊಸೈಟೀಸ್ ಆಫ್ ಇಂಡಿಯಾ) ಸದಸ್ಯತ್ವ ಪಡೆದಿರಬೇಕು ಅಥವಾ ಕರ್ನಾಟಕ ರಾಜ್ಯ ಚಿತ್ರಸಮಾಜದ ಅಭಿವೃದ್ಧಿ ಪರಿಷತ್ತಿನಲ್ಲಿ (Council) ನೋಂದಣಿಯಾಗಿ ಒಂದು ವರ್ಷವಾಗಿರಬೇಕು.

ಈ ರೀತಿಯ ಚಿತ್ರಸಮಾಜದ ರಚನೆಯ ಏಕೈಕ ಉದ್ದೇಶ, ಅದರ ಸದಸ್ಯರನ್ನು ನೇರವಾಗಿ ಚಲನಚಿತ್ರ ಕ್ಷೇತ್ರ, ಕಲೆ, ಕೌಶಲ್ಯ, ಸಿನಿಮಾ ತಂತ್ರಜ್ಞಾನಕ್ಕೆ ಒಳಪಡಿಸುವುದಾಗಿರಬೇಕು ಹಾಗೂ ಇದರ ಸದಸ್ಯರು ಹವ್ಯಾಸಿಗಳು ಅಥವಾ ಮೇಲಿನ ಕ್ಷೇತ್ರಗಳಲ್ಲಿ ತರಬೇತು ಪಡೆಯುವವರಾಗಿರಬೇಕು.

ಚಿತ್ರಸಮಾಜದ ನಿಯಮಾವಳಿಗಳಲ್ಲಿ ಸದಸ್ಯರಲ್ಲದವರನ್ನು ಹಾಗೂ ಮಕ್ಕಳನ್ನು ಚಿತ್ರಸಮಾಜದ ಮನರಂಜನಾ ಪ್ರದರ್ಶನಗಳಿಗೆ ಪ್ರವೇಶಿಸುವುದನ್ನು ನಿರ್ಬಂಧಿಸುವವರಿಬೇಕು. ಇದು ಕೇವಲ ನಿಜವಾದ ಸದಸ್ಯರಿಗೆ ಹಾಗೂ ಕರ್ತವ್ಯದ ಮೇಲಿರುವ ರಾಜ್ಯ ಸರ್ಕಾರದ ತೆರಿಗೆ ಇಲಾಖೆ ಅಧಿಕಾರಿಗಳಿಗೆ ಮುಕ್ತವಾಗಿರಬೇಕು.

ಭಾರತ ಚಿತ್ರಸಮಾಜ ಒಕ್ಕೂಟದಿಂದ ಒಪ್ಪಿಗೆ ಪಡೆಯಲಾದ ಚಿತ್ರಗಳ ಹೊರತು ಇನ್ನಾವ ಚಿತ್ರಗಳನ್ನೂ ಈ ಸಮಾಜಗಳು ಪ್ರದರ್ಶಿಸಕೂಡದು.

ಚಿತ್ರಸಮಾಜದ ಸದಸ್ಯರಿಗೆ ವಾರ್ಷಿಕ ಸದಸ್ಯತ್ವ ಶುಲ್ಕವಲ್ಲದೆ ಬೇರೆ ಇನ್ನಾವುದೇ ಪ್ರವೇಶ ದರವನ್ನು ಮನರಂಜನಾ ಪ್ರದರ್ಶನಗಳಿಗೆ ವಿಧಿಸಕೂಡದು.

ತೆರಿಗೆ ಇಲಾಖೆಯ ಕಮೀಷನರ್‌ಗೆ ಚಿತ್ರಸಮಾಜದ ಹಣಕಾಸು ವರ್ಷ ಮುಕ್ತಾಯವಾದ ಮೂರು ತಿಂಗಳೊಳಗೆ ತನ್ನ ವಾರ್ಷಿಕ ವರದಿ ಹಾಗೂ ಪರಿಶೀಲಿಸಿದ ಲೆಕ್ಕಪತ್ರ ದಾಖಲೆಗಳನ್ನು ಸಲ್ಲಿಸಬೇಕು ಅಥವಾ ಈ ವಿಷಯದಲ್ಲಿ ಕಮೀಷನರ್‌ಗೆ ನೀಡಿದ ಹೆಚ್ಚಿನ ಕಾಲಾವಧಿ ಆಧರಿಸಿಯೂ ನೀಡಬಹುದು.

ಚಿತ್ರಸಮಾಜ ಮನ್ನಣೆ ಪಡೆಯಲು ಹಾಕುವ ಅರ್ಜಿಗೆ ನೂರು ರೂಪಾಯಿ ಶುಲ್ಕ ನೀಡಿದ ರಸೀದಿ ಲಗತ್ತಿಸಿರಬೇಕು ಹಾಗೂ ಇದನ್ನು ಪ್ರತಿ ವರ್ಷ ಸಮಯದಲ್ಲಿ ಸಂದಾಯ ಮಾಡಿ ನವೀಕರಿಸಬೇಕು.

ಚಿತ್ರಸಮಾಜವು ಮೂರು ದಿವಸ ಮುಂಚಿತವಾಗಿಯೇ ಪ್ರದರ್ಶಿತವಾಗಲಿರುವ ಚಿತ್ರದ ಹೆಸರು, ಭಾಷೆ, ದಿನಾಂಕ, ಸಮಯ, ಪ್ರದರ್ಶನಗಳ ಸಂಖ್ಯೆ ಕುರಿತು ವಾಣಿಜ್ಯ ತೆರಿಗೆ ಕಮೀಷನರ್, ಡೆಪ್ಯುಟಿ ಕಮೀಷನರ್ ಮತ್ತು ಮನರಂಜನಾ ತೆರಿಗೆ ಅಧಿಕಾರಿಗೆ ತಿಳಿಸಬೇಕು.

ಚಿತ್ರಸಮಾಜದ ಮನ್ನಣೆ ಅರ್ಹತಾ ಪತ್ರಕ್ಕೆ ಅರ್ಜಿಯನ್ನು ನವೀಕರಿಸಲು, ಈಗಾಗಲೇ ನೀಡಿರುವ ಅವಧಿ ಕೊನೆಗೊಳ್ಳುವ ಒಂದು ತಿಂಗಳ ಮುಂಚೆ ಸಂಬಂಧಪಟ್ಟ ಮನರಂಜನಾ ತೆರಿಗೆ ಅಧಿಕಾರಿಗೆ ತಿಳಿಸುತ್ತ, ಕಮಿಷನರ್‌ಗೆ ಸಲ್ಲಿಸಬೇಕು. ಕಮೀಷನರ್ ನವೀಕರಣ ಅರ್ಜಿಯನ್ನು, ಅವಧಿ ನೀಡಿದ ಎಷ್ಟು ದಿನ ಮುಂಚೆ ಬೇಕಾದರೂ ಸ್ವೀಕರಿಸಬಹುದು.

ಮನ್ನಣಾ ಪತ್ರದಲ್ಲಿ ವಿಧಿಸಲಾಗಿರುವ ನಿಯಮಗಳನ್ನು ಉಲ್ಲಂಘಿಸಿದಲ್ಲಿ ಅಥವಾ ಪಾಲಿಸದಿದ್ದಲ್ಲಿ ಅಂತಹ ಮನ್ನಣಾ ಪತ್ರವನ್ನು ರದ್ದುಗೊಳಿಸಬಹುದು.

ಯಾವುದೇ ಚಿತ್ರಸಮಾಜ ಈ ನಿಯಮಗಳಲ್ಲಿ ಯಾವುದನ್ನೇ ಉಲ್ಲಂಘಿಸಿದರೂ ಅದಕ್ಕೆ ಐದು ನೂರು ರೂಪಾಯಿಗಳವರೆಗೂ ದಂಡ ವಿಧಿಸಬಹುದು. ಆದರೆ ಇಂತಹ ಕ್ರಮ ಕೈಗೊಳ್ಳುವ ಮುನ್ನ ಚಿತ್ರಸಮಾಜದವರು ಇದರ ಕುರಿತು ಏನಾದರೂ ಮನವಿ ಸಲ್ಲಿಸುವುದಿದ್ದರೆ ಅವರಿಗೆ ಮನವಿ ಸಲ್ಲಿಸಲು ಅವಕಾಶ ನೀಡಬೇಕು. ಚಿತ್ರಸಮಾಜ ಮನ್ನಣೆ ಪತ್ರ ಪಡೆಯಲು ವಿಧಿಸಲಾದ ಶುಲ್ಕವನ್ನು ಸರ್ಕಾರಿ ಖಜಾನೆಯಲ್ಲಿ ಸಲ್ಲಿಸಿ, ಅದರ ರಸೀದಿ (ಚಲನ್)ಯನ್ನು ಅರ್ಜಿಯ ಜೊತೆ ಲಗತ್ತಿಸಿ, ಕಮೀಷನರ್‌ಗೆ ನೀಡಬೇಕು.

ಚಿತ್ರಸಮಾಜಕ್ಕೆ ಮನ್ನಣೆ ನೀಡುವುದನ್ನು ನಿರಾಕರಿಸಿದಲ್ಲಿ, ಈ ಶುಲ್ಕವನ್ನು ಮರಳಿಸಲಾಗುವುದು. ಆದರೆ ಚಿತ್ರಸಮಾಜವು ನಿಯಮ ಉಲ್ಲಂಘಿಸಿ, ಅದರ ಮನ್ನಣೆ ಪತ್ರ ರದ್ದಾದರೆ ಈ ಶುಲ್ಕ ಮರಳಿಸಲಾಗುವುದಿಲ್ಲ.

ಚಿತ್ರಸಮಾಜದ ಪ್ರದರ್ಶನ ಸ್ಥಳದಲ್ಲಿ ನಿಯಮಗಳ ಪಾಲನೆ ಕುರಿತು ಪರಿಶೀಲಿಸಲು ಅಗತ್ಯವಾದ ವಿಚಾರಣೆ ಮಾಡಲು ಸರ್ಕಾರದ ಪ್ರತಿನಿಧಿ ಪ್ರವೇಶಿಸಬಹುದು.

ಚಿತ್ರಸಮಾಜಕ್ಕೆ ಮನ್ನಣೆ ನೀಡಿದ ಕಾಲಾವಧಿಯಲ್ಲಿ ಮಾತ್ರ ಮನರಂಜನಾ ತೆರಿಗೆಯಿಂದ ಮನ್ನಾ ಸೌಲಭ್ಯ ನೀಡಲಾಗುವುದು.

ಸೃಜನಶೀಲತೆಗೆ ಭದ್ರ ಬುನಾದಿ

ಚಿತ್ರರಂಗದ ಥಳಕು-ಬಳುಕಿನ ಜೀವನ, ಅಪಾರ ಪ್ರಸಿದ್ಧಿ, ಅಗಾಧ ಹಣ ಸಂಪಾದನೆಗೆ ಇರುವ ಅವಕಾಶವು ಚಿತ್ರ ಇತಿಹಾಸದ ಆರಂಭ ಕಾಲದಿಂದಲೂ ಸಾವಿರಾರು ತರುಣ-ತರುಣಿಯರನ್ನು ತನ್ನತ್ತ ಆಕರ್ಷಿಸಿದೆ. ಇವರಲ್ಲಿ ಶೇಕಡಾ ತೊಂಬತ್ತು ಪರದೆಯ ಮೇಲೆ ಮಿಂಚಲು ಪ್ರಯತ್ನಿಸಿದರೆ, ಉಳಿದ ಶೇಕಡಾ ಹತ್ತರಷ್ಟು ಜನರು ಮಾತ್ರ ಪರದೆಯ ಹಿಂದೆ ನಿರ್ದೇಶಕನಾಗಲು ಅಥವಾ ತಂತ್ರಜ್ಞರಾಗಲು ಕನಸು ಕಂಡವರು. ಆದರೆ ಇವರಲ್ಲಿ ಎಷ್ಟು ಶೇಕಡಾ ಜನರ ಕನಸು ನನಸಾಯಿತು, ಉಳಿದೆಷ್ಟು ಜನರ ಜೀವನ ದೀಪದ ಹುಳುವಿನಂತೆ ಕೊನೆಗೊಂಡಿತು ಎಂದು ಖಚಿತವಾಗಿ ಹೇಳುವುದು ಬಲು ಕಷ್ಟ.

ಚಲನಚಿತ್ರ ಇತಿಹಾಸದ ಆರಂಭಕಾಲದಲ್ಲಿ, ಅದರಲ್ಲಿ ದುಡಿದ ಬಹುತೇಕ ಮಂದಿ ರಂಗಭೂಮಿಯವರು. ಆಗ ರಂಗಭೂಮಿಯೇ ಒಂದು ತರಬೇತಿ ಕೇಂದ್ರ. ಅಲ್ಲಿದ್ದವರ ಅಪಾರ ಶ್ರದ್ಧೆ, ಛಲ, ಆಸಕ್ತಿಯ ಫಲದಿಂದಾಗಿ ಹಾಗೂ ತಾಳ್ಮೆಯಿಂದ ಅವರು ತಂತ್ರವನ್ನು ಅರಿಯುತ್ತಲೇ ಚಲನಚಿತ್ರ ಕ್ಷೇತ್ರದ ಪಥದಲ್ಲಿ ನಡೆದರು, ಎಡವಿದರು, ಮುಗ್ಗರಿಸಿದರು, ಬಿದ್ದರು, ಎದ್ದರು, ತಾವು ಅರೆಹೊಟ್ಟೆ ತಿಂದಾದರೂ ಕನ್ನಡ ಚಿತ್ರರಂಗಕ್ಕೆ ಒಂದು ಅಡಿಪಾಯ ಹಾಕಿ, ಪ್ರಸಿದ್ಧಿ ತಂದುಕೊಟ್ಟರು. ಕ್ರಮೇಣ ತೆರೆಮರೆಗೆ ಸರಿದರು. ಆದರೆ ಈಗಿನ ತಲೆಮಾರಿಗೆ ಅವಕಾಶಗಳು ಹಲವಾರಿದ್ದರೂ ಆಗಿನವರಿಗಿದ್ದಷ್ಟು ತಾಳ್ಮೆ, ಸಮಯಾವಕಾಶ ಇಲ್ಲ. ಆದ್ದರಿಂದ ಚಿತ್ರರಂಗ ಪ್ರವೇಶಕ್ಕೆ ಬೇರೆಯದೇ ಆದ ಸುವ್ಯಸ್ಥಿತ, ಸುರಕ್ಷಿತ ಮಾರ್ಗಗಳನ್ನು ಕಂಡುಕೊಳ್ಳಬೇಕಾಗಿದೆ. ಅಂತಹ ಹಲವಾರು ದಾರಿಗಳೂ ಇವೆ. ಆಯ್ಕೆ ಮಾತ್ರ ಅವರವರ ಯೋಗ್ಯತೆ ಹಾಗೂ ಅಗತ್ಯಕ್ಕೆ ತಕ್ಕಂತೆ ಎನ್ನಬಹುದು.

ಚಿತ್ರರಂಗ ಪ್ರವೇಶಿಸಲು ತರಬೇತಿಯ ಅವಶ್ಯಕತೆ ಇದೆ ಎಂದು ತೋರಿಸಲು ನಮ್ಮ ಕಣ್ಮುಂದೆ ಪ್ರಬಲ ಉದಾಹರಣೆಗಳಿವೆ. ಅಂದು ಚಿತ್ರರಂಗದಲ್ಲಿ ಒಂದು ಸಂಸ್ಥೆಯಂತಿದ್ದ ಏಕಮೇವ ವ್ಯಕ್ತಿ ಆರ್.ನಾಗೇಂದ್ರರಾಯರು ಕನ್ನಡ ಚಿತ್ರರಂಗಕ್ಕೆ ತಮ್ಮ ಪುತ್ರರನ್ನು ತರುವ ಮುನ್ನ ಆರ್.ಎನ್.ಕೃಷ್ಣಪ್ರಸಾದ್‌ರನ್ನು ಛಾಯಾಗ್ರಹಣ ತರಬೇತಿಗೆ, ಆರ್.ಎನ್.ಜಯಗೋಪಾಲ್‌ರನ್ನು ಧ್ವನಿಗ್ರಹಣ ತರಬೇತಿಗೆ ಬೆಂಗಳೂರಿನಲ್ಲಿದ್ದ, ಆಗ ಭಾರತದ ಏಕೈಕ ಫಿಲಂ ಇನ್‌ಸ್ಟಿಟ್ಯೂಟ್ ಎನಿಸಿದ್ದ ಎಸ್.ಜೆ.ಪಿ.ಗೆ ಸೇರಿಸಿದರು. ಇನ್ನೊಬ್ಬ ಮಗ (ಸುದರ್ಶನ್)ನಿಗೆ ತಾವೇ ಅಭಿನಯ ಹೇಳಿಕೊಟ್ಟರು. ಕನ್ನಡದಲ್ಲಿ ಒಂದು ಸಂಸ್ಥೆಯಂತಿರುವ ನಟ ರಾಜಕುಮಾರ್ ಸಹ ತಮ್ಮ ಪುತ್ರರನ್ನು ಅಭಿನಯ ಕ್ಷೇತ್ರಕ್ಕೆ ತರುವ ಮುನ್ನ ಮದರಾಸಿನ ಫಿಲಂ ಇನ್‌ಸ್ಟಿಟ್ಯೂಟಿನಲ್ಲಿ ಅಭಿನಯ ತರಬೇತಿ ಪಡೆಯಲು ಅವಕಾಶ ಮಾಡಿದರು. ಚಿತ್ರರಂಗದಲ್ಲೇ ಇರುವ ತಂತ್ರಜ್ಞರ ಸಾಮೀಪ್ಯ, ಸಂಬಂಧ ಇದ್ದರೆ, ಹಾಗೂ ಕಲಿಯುವವರಿಗೆ ಅಪಾರ ಆಸಕ್ತಿ, ಕುತೂಹಲ, ಶ್ರದ್ಧೆ, ಸಂಯಮ, ಸಮಯವೂ ಇದ್ದರೆ ನಟ, ನಿರ್ದೇಶಕನಾಗುವುದು ಕಷ್ಟವೇನಲ್ಲ. ಅವರಲ್ಲಿ ಹುಣಸೂರು ಕೃಷ್ಣಮೂರ್ತಿಯವರ ಹತ್ತಿರದ ಸಂಬಂಧಿಗಳಾದ ದ್ವಾರಕೀಶ್, ಭಾರ್ಗವರನ್ನು ಹೆಸರಿಸಬಹುದು. ಆದರೆ ಎಲ್ಲರಿಗೂ ಈ ರೀತಿಯ 'ದೈವಪಿತ' (ಗಾಡ್‌ಫಾದರ್) ಬೆಂಬಲಕ್ಕೆ ಸಿಗುವುದು ವಿರಳ. ಅವರ ಕಲಿಯುವ ಆಸೆ ಇರುವವರ ನೆರವಿಗೆ ಬರುವ ಸಂಸ್ಥೆಗಳೆಂದರೆ ಫಿಲಂ ಇನ್‌ಸ್ಟಿಟ್ಯೂಟ್‌ಗಳು.

ಈ ಮಾತು ಹಿಂದಿ ಚಿತ್ರರಂಗಕ್ಕೂ ಅನ್ವಯಿಸುತ್ತದೆ. ಇಂದು ಛಾಯಾಗ್ರಹಣ ಕ್ಷೇತ್ರದಲ್ಲಿ ಹೆಸರಾದ ಪ್ರೇಮಸಾಗರ್ ಅವರು 'ರಾಮಾಯಣ' ಟಿ.ವಿ. ಸೀರಿಯಲ್ ಖ್ಯಾತಿಯ ರಮಾನಂದ್ ಸಾಗರ್‌ರವರ ಪುತ್ರ. ಅಭಿನಯ ಕ್ಷೇತ್ರದಲ್ಲಿ ನಟ ಆಗಾ ಅವರ ಪುತ್ರ ಜಲಾಲ್ ಆಗಾ, ಜೀವನ್ ಅವರ ಪುತ್ರ ಕಿರಣ್ ಕುಮಾರ್, ಮುರಾದ್‌ರ ಮಗ ರಾಜಾಮುರಾದ್, ಕವಿ ಕೈಫಿ ಆಜ್ಮಿ ಮಗಳು ಶಬನಾ ಆಜ್ಮಿ - ಇವರೆಲ್ಲರೂ ಗಾಡ್‌ಫಾದರ್ ಇದ್ದರೂ ಫಿಲಂ ಇನ್‌ಸ್ಟಿಟ್ಯೂಟ್‌ನಲ್ಲಿ ತರಬೇತಿ ಪಡೆದವರು.

ಇಂದಿಗೂ ಸಹ ಚಿತ್ರರಂಗ ಸೇರಲು ಇರುವ ನೂಕುನುಗ್ಗಲಿನಲ್ಲಿ ನಟ-ನಟಿಯರಾಗಲು ಬಯಸುವವರೇ ಹೆಚ್ಚಿನವರು. ಹೊಸ ಮುಖಗಳು ಬೇಕು ಎಂದೊಡನೆ ಬರುವ ಹಿಂಡು ಹಿಂಡು ಯುವಕ-ಯುವತಿಯರಿಗೆ ತರಬೇತಿ ಪಡೆದವರಿಗೆ ಆದ್ಯತೆ ಎಂದೊಡನೆ ನಿರಾಸೆ. ಹೀಗಾಗಿ ಅವರ ಕುತೂಹಲದ ಪ್ರಶ್ನೆ, ಸಿನಿಮಾ ನಟ-ನಟರಾಗಲು ತರಬೇತಿ ಆಗಿರಲೇಬೇಕೆ ಎಂಬುದು. ಅದಕ್ಕೆ ಖಚಿತ ಉತ್ತರ ಹೌದೆನ್ನಬಹುದು. ಕಾರಣವಿಷ್ಟೇ: ಚಿತ್ರರಂಗದಲ್ಲಿ ಅತ್ಯಮೂಲ್ಯವಾದದ್ದು ಸಮಯ ಮತ್ತು ಹಣ. ಅನಿವಾರ್ಯ ಸಂದರ್ಭಗಳಲ್ಲಿ ಇವೆರಡೂ ಮಂದು ವೆಚ್ಚ ಆಗುತ್ತಿರುತ್ತವೆ. ಆದರೆ ಎಲ್ಲ ನಿರ್ಮಾಪಕರೂ ಈ ಎರಡು ಅಂಶಗಳಿಂದಾಗಿ ಅತೀವ ಒತ್ತಡದಲ್ಲಿ ಕಾರ್ಯಕೈಗೊಳ್ಳಬೇಕಾಗುತ್ತದೆ. ನಿರ್ಮಾಣಕ್ಕಾಗಿ ತಂದ ಹಣಕ್ಕೆ ನೀಡಬೇಕಾದ ಅಪಾರ ಬಡ್ಡಿ ದರ, ಕೈಮೀರಿದ ನಿರ್ಮಾಣ ವೆಚ್ಚ, ಸ್ಪರ್ಧೆಯಲ್ಲಿ ಬಿಡುಗಡೆಗೆ ಚಿತ್ರಮಂದಿರ ಪಡೆದ ದಿನಾಂಕ ಹಾಗೂ ದೊರೆತ ಅವಕಾಶ, ನಿಯಮಿತ ಅವಧಿಗಾಗಿ ತಾರೆಗಳು ನೀಡಿದ ಚಿತ್ರೀಕರಣ ದಿನಾಂಕ – ಈ ಎಲ್ಲವೂ ಅವನಿಗೆ ಚಿತ್ರದ ನಿರ್ಮಾಣ ಕಾರ್ಯ ವಿಳಂಬಗೊಳ್ಳದೇ ಚುರುಕಾಗಿ ಸಾಗಲು ಪ್ರೇರೇಪಿಸುತ್ತದೆ. ಸಿನಿಮಾದಂತಹ ಕ್ಲಿಷ್ಟ ಮಾಧ್ಯಮದಲ್ಲಿ ನೂರಾರು ಜನರ ಸಂಘಟಿತ ಶ್ರಮ, ಪ್ರತಿಭೆಯನ್ನು ಪಣಕ್ಕೆ ಒಡ್ಡಿರುವಾಗ ಯಾವುದೇ ಒಬ್ಬ ವ್ಯಕ್ತಿಯ ಅಜ್ಞಾನ, ಅನನುಭವಗಳು ಎಲ್ಲರ ಶ್ರಮ, ಸಮಯ ಹಾಗೂ ಹಣ ವ್ಯರ್ಥಗೊಳಿಸಿದ್ದರೆ ಎಲ್ಲರಿಗೂ ಬೇಸರವಾಗುವುದು ಸಹಜ. ಹೀಗಾಗಿ ಸಿನಿಮಾ ನಿರ್ಮಾಣದ ಎಲ್ಲ ಕ್ಷೇತ್ರಗಳಲ್ಲಿ ಪಾದರಸದಂತೆ ಕೆಲಸ ಮಾಡುವವರಿಗೇ ಪ್ರಾಶಸ್ತ್ಯ ಮತ್ತು ಬೇಡಿಕೆ.

ಕೆಲವು ಬಾರಿ ಅವಕಾಶ ಕೇಳಲು ಬಂದ ಕಲಾವಿದರು ಕುತೂಹಲದಿಂದ ಕೇಳುವ ಪ್ರಶ್ನೆ ಕೆಲವು ಚಿತ್ರಗಳಲ್ಲಿ ನಾಯಿ, ಮಂಗ, ಆನೆ, ಹಾವು, ಕತ್ತೆ, ಕುದುರೆಗಳೂ ಕೆಲಸ ಮಾಡಿವೆ, ಅವೂ ಸಹ ತರಬೇತಿ ಪಡೆದಿವೆಯೋ ಎಂದು. ಉತ್ತರ ಹೌದು ಎಂದೇ ಹೇಳಬೇಕು. ಆದರೆ ಅವು ಯಾವ ಫಿಲಂ ಇನ್‌ಸ್ಟಿಟ್ಯೂಟ್‌ನಲ್ಲಿ ಓದಿರದಿದ್ದರೂ ಒಬ್ಬ ತರಬೇತಿದಾರನ ಅಡಿಯಲ್ಲಿ ಪಳಗಿರುತ್ತವೆ. ನಿರ್ದೇಶಕನ ಅಗತ್ಯಕ್ಕೆ ತಕ್ಕಂತೆ ಅವುಗಳಿಂದ ಕೆಲಸವನ್ನು ಮಾಡಿಸಲಾಗುತ್ತದೆ. ಈ ಕಾರಣದಿಂದಾಗಿಯೇ ಮದ್ರಾಸಿನಂತಹ ಸುಸಂಘಟಿತ ಚಲನಚಿತ್ರ ನಿರ್ಮಾಣಕೇಂದ್ರದಲ್ಲಿ ಈಗಲೂ ಕೇವಲ ಒಂದು ಫೋನ್ ಮಾಡಿದರೆ ಸಾಕು, ತರಬೇತಾದ ನೂರಾರು ಗಿಣಿ, ಇಲಿಗಳನ್ನು ಪೂರೈಸುವ ಏಜೆಂಟರು ಸಿಗುವರು. ಬಹುಶಃ ಈ ತರಬೇತಿ ಕಲೆಯನ್ನು ಸದುಪಯೋಗ ಮಾಡಿಕೊಂಡು ಭಾರತೀಯ ಚಿತ್ರರಂಗಕ್ಕೆ ಸ್ಯಾಂಡೋ ಎಂ.ಎಂ.ಎ. ಚಿನ್ನಪ್ಪ ದೇವರ್ ನೀಡಿದಷ್ಟು ಕೊಡುಗೆ ಇನ್ನಾರೂ ನೀಡಿಲ್ಲವೆಂದೇ ಹೇಳಬಹುದು. ಇವರು ಹಿಂದಿಯಲ್ಲೂ ಸಹ ಖ್ಯಾತ ನಟ-ನಟಿಯರೊಂದಿಗೆ ಆನೆ, ಹಸು, ಹಾವು, ಹುಲಿ, ಟಗರು ಬಳಸಿ ಯಶಸ್ವೀ ಚಿತ್ರ ನಿರ್ಮಿಸಿದರು. ಇಂತಹ ಒಂದು ವಿಶೇಷ ಕಾರಣಕ್ಕಾಗಿ, ಅಂದರೆ ಒಮ್ಮೆ ಹೇಳಿದ್ದನ್ನು ಚಾಚೂ ತಪ್ಪದೇ, ಯಾವ ಮುಜುಗರ ಮತ್ತು ಸಂಕೋಚವಿಲ್ಲದೆ ಹಲವಾರು ಜನರ ನಡುವೆ ಮತ್ತೆ ಮಾಡಿ ತೋರಿಸುವ ಕಲೆ ಕೆಲವೇ ಮಕ್ಕಳಿಗೂ ಒಲಿದಿರುವುದರಿಂದ ಬಾಲ ನಟ-ನಟಿಯರೂ ಸಹ ಯಾವುದೇ ತರಬೇತಿ ಇಲ್ಲದೇ ಇದ್ದರೂ ಯಶಸ್ವಿಯಾದ ಉದಾಹರಣೆಗಳಿವೆ. ಮಕ್ಕಳೆನ್ನುವ ವಿಶೇಷ ಕಾರಣದಿಂದಾಗಿ ಚಿತ್ರತಂಡ ಸ್ವಲ್ಪ ಸಹನೆ, ತಾಳ್ಮೆ, ಔದಾರ್ಯ ತೋರಿದರೂ ಅವರ ನಡವಳಿಕೆ ವೃತ್ತಿನಿರತ ಕಲಾವಿದರಂತೆ ಇರುವುದು ಒಂದು ವಿಶೇಷ.

ಯಾವುದೇ ಒಂದು ಫಿಲಂ ಇನ್‌ಸ್ಟಿಟ್ಯೂಟ್ ಒಬ್ಬ ಕಲಾವಿದನಿಗೆ, ತಂತ್ರಜ್ಞನಿಗೆ ತರಬೇತಿ ನೀಡಬಹುದು, ತಂತ್ರ ಹೇಳಿಕೊಡಬಹುದು ಮತ್ತು ಅವನಲ್ಲಿರುವ ಪ್ರತಿಭೆ ಅರಳಲು, ವ್ಯಕ್ತಿತ್ವ ವಿಕಾಸವಾಗಲು ಅಗತ್ಯವಾದ ಹೊಸ ಚಿಂತನೆ, ಹೊಸ ವಾತಾವರಣ ಕಲ್ಪಿಸಬಹುದು. ಆದರೆ ತಾನು ಕಲಿತಿದ್ದನ್ನು ಬಳಸುವ, ಹೊಸದನ್ನು ಆವಿಷ್ಕರಿಸುವ, ಹಳತನ್ನು ಪರಿಷ್ಕರಿಸುವ, ಅನಗತ್ಯವಾದದ್ದನ್ನು ತಿರಸ್ಕರಿಸುತ್ತಲೇ ಸೃಜನಾತ್ಮಕವಾಗಿ ಬೆಳೆಯುವ ಪ್ರಕ್ರಿಯೆ ಆಯಾ ವ್ಯಕ್ತಿಯ ಬದುಕಿನ ಹಿನ್ನೆಲೆ, ಪಾಲಿಸುವ ಮೌಲ್ಯಗಳು, ಸರಿ ಹಾಗು ತಪ್ಪು ಎಂಬುದರ ವಿವೇಚನೆ ಇವುಗಳನ್ನು ಅವಲಂಬಿಸಿರುತ್ತದೆ. ಅದು ಅವನನ್ನು ಯಶಸ್ಸಿನ ತುಟ್ಟ ತುದಿಗೂ ಒಯ್ಯಬಹುದು. ಅಥವಾ ನೆಟ್ಟ ಮೈಲಿಗಲ್ಲಾಗಿಸಬಹುದು. ಅದಕ್ಕೆ ತರಬೇತಿ ನೀಡಿದ ಸಂಸ್ಥೆಯೇ ಹೊಣೆಗಾರ ಆಗಬೇಕಾಗಿಲ್ಲ.

ಭಾರತದ ಹೆಮ್ಮರ - ಕರ್ನಾಟಕದ ಹೆಮ್ಮೆ 'ಎಸ್.ಜೆ.ಪಿ'

ಆಳುವ ಅರಸನಿಗೆ ಅಭಿರುಚಿ, ಸಂಸ್ಕೃತಿ, ಸಂಸ್ಕಾರಗಳಿದ್ದರೆ ಪ್ರಜೆಗಳ ಬದುಕು ಬಂಗಾರ. ಅಂತಹವರಿಗೆ ಉತ್ತಮ ದೂರದೃಷ್ಟಿಯ ಜನಸೇವಕ, ದಿವಾನರು ದೊರೆತರೆ ಪ್ರಜೆಗಳ ರೊಟ್ಟಿ ಜಾರಿ ತುಪ್ಪದಲ್ಲಿ ಬಿದ್ದಂತೆ. ಈ ದೃಷ್ಟಿಯಿಂದ ಮೈಸೂರು ಸಂಸ್ಥಾನದ ಸ್ಥಾನ ಭಾರತದಲ್ಲಿ ಪ್ರಥಮ. ಬಹುಶಃ ಇದನ್ನು ಗಮನಿಸಿಯೇ ಗಾಂಧೀಜಿಯವರು 'ಮೈಸೂರಿನಂತಹ ರಸಋಷಿ ಅರಸರು ಭಾರತದ ಎಲ್ಲ ಸಂಸ್ಥಾನಗಳಲ್ಲಿದ್ದು ಆಳಿದರೆ ನಾನು ಪ್ರಜಾಪ್ರಭುತ್ವವನ್ನೇ ನಿರೀಕ್ಷಿಸುವುದಿಲ್ಲ' ಎಂದದ್ದು. ಈ ಮಾತು ಅಕ್ಷರಶಃ ಸತ್ಯ ಎನಿಸಿದ್ದು ಕರ್ನಾಟಕ ಏಕೀಕರಣವಾದಾಗ, ಮುಂಬಯಿ ಕರ್ನಾಟಕ ಎನಿಸಿಕೊಂಡಿದ್ದ ಇತಿಹಾಸದಲ್ಲಿ ಮರಾಠರ ರಣಭೂಮಿಯಾಗಿ ಪರಿವರ್ತಿತವಾಗಿದ್ದ ಪ್ರದೇಶ ಹಾಗೂ ವಿಷಯಲೋಲುಪ ನಿಜಾಮನ ಆಡಳಿತದಲ್ಲಿ ಸಿಕ್ಕು ನಲುಗಿದ ಹೈದರಾಬಾದ್ ಕರ್ನಾಟಕದ ಶೈಕ್ಷಣಿಕ, ಸಾಂಸ್ಕೃತಿಕ ಬದುಕು ನೋಡಿದಾಗ. ಈ ದೃಷ್ಟಿಯಿಂದ ಮೈಸೂರು ಪ್ರಾಂತದವರೇ ಪುಣ್ಯವಂತರು.

೧೯೧೩ರಲ್ಲೇ ಆಗಿನ ದಿವಾನರು ನೀಡಿದ ಸ್ಫೂರ್ತಿಯಿಂದಾಗಿ ಮೈಸೂರು ಸರ್ಕಾರವು ಆಗ ಚೀಫ್ ಇಂಜಿನಿಯರ್ ಆಗಿದ್ದ ಸರ್. ಎಂ.ವಿಶ್ವೇಶ್ವರಯ್ಯನವರ ಅಧ್ಯಕ್ಷತೆಯಲ್ಲಿ 'ಶಿಕ್ಷಣ ಮತ್ತು ಸಾರ್ವಜನಿಕ ಕಾರ್ಯ' ಇಲಾಖೆಯ ಸದಸ್ಯರೊಡಗೂಡಿ ತಾಂತ್ರಿಕ ಶಿಕ್ಷಣದ ರೂಪುರೇಷೆ ನಿರೂಪಿಸಲು ಒಂದು ಸಮಿತಿಯನ್ನು ರಚಿಸಿತು.

೧೯೩೭ರಲ್ಲಿ, ಭಾರತದಲ್ಲಿ ವೃತ್ತಿ ಶಿಕ್ಷಣ (vocational education) ಕುರಿತು ಅಬಟ್ (Abbot) ಹಾಗೂ ವುಡ್ (Wood) ಸಲ್ಲಿಸಿದ ವರದಿಯಲ್ಲಿ ಯುವಕರಿಗೆ ತಮ್ಮ ವೃತ್ತಿಯಲ್ಲಿ ನೈಪುಣ್ಯ ಸಾಧಿಸಲು ತಾಂತ್ರಿಕ ಶಿಕ್ಷಣದ ಅಗತ್ಯವನ್ನು ಒತ್ತಿ ಹೇಳಿದ್ದನ್ನು ಅಂದಿನ ಮೈಸೂರು ಸರ್ಕಾರ ಸ್ವೀಕರಿಸಿತು. ಅದರಂತೆ ೧೯೩೭ರಿಂದಲೇ ಮ್ಯಾಟ್ರಿಕ್ ಪರೀಕ್ಷೆಯಲ್ಲಿ ಅನೇಕ ವೃತ್ತಿಪರ ವಿಷಯಗಳನ್ನು ಪರಿಚಯಿಸಿತು.

ಆದರೆ ೧೯೪೩ರಲ್ಲಿ ಸರ್. ಎಂ.ವಿಶ್ವೇಶ್ವರಯ್ಯನವರು ಉದಾರವಾಗಿ ನೀಡಿದ ಎರಡು ಲಕ್ಷರೂಪಾಯಿಗಳ ಧನಸಹಾಯದಿಂದ ಬೆಂಗಳೂರಿನಲ್ಲಿ, ಆಗಸ್ಟ್ ೨ರಂದು ಶ್ರೀ ಜಯಚಾಮರಾಜೇಂದ್ರ ವೃತ್ತಿ ಶಿಕ್ಷಣ ಸಂಸ್ಥೆ (Jayachamarajendra Occupational Institure) ಪ್ರಾರಂಭಿಸಲಾಯಿತು. ಇದೊಂದು ಐತಿಹಾಸಿಕ ಹೆಜ್ಜೆ.

ಈ ಸಂಸ್ಥೆಯಲ್ಲಿ ೧೨ ಬಗೆಯ ವಿಷಯಗಳಲ್ಲಿ ಶಿಕ್ಷಣ ತರಬೇತಿ ನೀಡಲಾಗುತ್ತಿತ್ತು. (೧) ಮೆಕ್ಯಾನಿಕಲ್ ಇಂಜಿನಿಯರಿಂಗ್, (೨) ಮೆಶಿನಿಸ್ಟ್, (೩) ಇನ್‌ಸ್ಟ್ರುಮೆಂಟ್ ಮೆಕ್ಯಾನಿಕ್ಸ್, (೪) ವೆಲ್ಡಿಂಗ್, (೫) ಆಟೋಮೊಬೈಲ್ ಇಂಜಿನಿಯರಿಂಗ್, (೬) ಬಾಯ್ಲರ್ಸ್ ಮತ್ತು ಇಂಜಿನ್ಸ್, (೭) ಸಿವಿಲ್ ಮತ್ತು ಮೆಕ್ಯಾನಿಕಲ್ ಡ್ರಾಫ್ಟ್‌ಮನ್‌ಶಿಪ್, (೮) ಎಲೆಕ್ಟ್ರಿಕಲ್ ವೈರಿಂಗ್, (೯) ರೇಡಿಯೋ ಟೆಕ್ನೀಷಿಯನ್, (೧೦) ಟೇಲರಿಂಗ್, (೧೧) ಪ್ರಿಂಟಿಂಗ್, (೧೨) ಮೆಟಲ್ ಟೆಕ್ನಾಲಜಿ, (೧೦) ಸೆರಾಮಿಕ್ಸ್ ಮತ್ತು ಗ್ಲಾಸ್ ಟೆಕ್ನಾಲಜಿ, (೧೧) ಮೈನಿಂಗ್, (೧೨) ಸಿನಿಮಾಟೊಗ್ರಫಿ - ಇವೇ ಆ ವ್ಯಾಸಂಗ ವಿಷಯಗಳು.

ಈ ಸಂಸ್ಥೆ ಆರಂಭವಾದ ವರ್ಷವೇ ಇದ್ದ ವಿದ್ಯಾರ್ಥಿಗಳ ಸಂಖ್ಯೆ ೧೬೫. ಇವರಿಗೆ ಮೈಸೂರು ಅರಮನೆಯಿಂದ, ಕೆಲವು ಜಿಲ್ಲಾ ಮಂಡಳಿಗಳಿಂದ ಹಾಗೂ ಪುರಸಭೆಗಳಿಂದ ವಿದ್ಯಾರ್ಥಿವೇತನಗಳನ್ನು ಕೊಡಲಾಗುತ್ತಿತ್ತು.

ಆ ವರ್ಷವೇ ಮೈಸೂರು ಸರ್ಕಾರ ಜೆ.ಓ.ಐ.ಗೆ ಸ್ವಂತ ಕಟ್ಟಡ ನಿರ್ಮಾಣ ಮಾಡಲು ನಿರ್ಣಯ ಕೈಗೊಂಡಿತು. ವರ್ಕ್‌ಶಾಪ್ ಕಟ್ಟಡವನ್ನು ಸಿದ್ಧಪಡಿಸಿತು. ಸಾವಿರದ ಒಂದು ನೂರ ಅರವತ್ತು (೧೧೬೦) ಪುಸ್ತಕಗಳನ್ನು ಒಳಗೊಂಡಿದ್ದ ಗ್ರಂಥಾಲಯಕ್ಕೆ ತಾಂತ್ರಿಕ ಪತ್ರಿಕೆಗಳು, ವರದಿಗಳು, ಮಾಹಿತಿ ಗ್ರಂಥಗಳನ್ನು ದೇಶ-ವಿದೇಶದಿಂದ ಕೊಡುಗೆಯಾಗಿ ಮತ್ತು ಕೆಲವು ನಿಯತಕಾಲಿಕ, ದಿನಪತ್ರಿಕೆಗಳನ್ನು ಚಂದಾ ನೀಡಿ ತರಿಸಲಾಗುತ್ತಿತ್ತು. ವಿವಿಧ ವೃತ್ತಿಗಳ ಕುರಿತು ಸಮಗ್ರ ಮಾಹಿತಿಯ ಆಕರ ಸೇವೆ ಕೈಗೊಂಡಿತು.

ಎರಡನೇ ಮಹಾಯುದ್ಧ ಕಾಲವಾದ್ದರಿಂದ, ನಿಸ್ತಂತು ವಿಭಾಗದಲ್ಲಿ (wireless) ಒಂಬತ್ತು ಜನರ ಎರಡು ತಂಡಗಳನ್ನು ಸೈನ್ಯದಿಂದ ಇಲ್ಲಿಗೆ ತರಬೇತಿಗೆಂದು ಕಳುಹಿಸಲಾಯಿತು. ಹೀಗಾಗಿ ಸಂಪೂರ್ಣವಾಗಿ ಸಜ್ಜುಗೊಂಡ ರೇಡಿಯೋ ಪ್ರಯೋಗಶಾಲೆ, ಸಿನಿ ಸ್ಟುಡಿಯೋ ಮತ್ತು ಲ್ಯಾಬೊರೇಟರಿಗಳನ್ನು ತರಬೇತಿಗಾಗಿ ಒದಗಿಸಲಾಯಿತು.

ಆ ವರ್ಷವೇ ಚೀನಾ, ಪರ್ಷಿಯಾ ಹಾಗೂ ದೇಶೀಯ ಕೋಟಾ ಸಂಸ್ಥಾನದ ಅರಸರು ಅತಿಥಿಯಾಗಿ ಈ ಕೇಂದ್ರಕ್ಕೆ ಭೇಟಿ ನೀಡಿದರು.

ಮುಂದಿನ ವರ್ಷ, ಅಂದರೆ ೧೯೪೪-೪೫ರಲ್ಲಿ ಇರುವ ಅಭ್ಯಾಸ ವಿಷಯಗಳಿಗೆ (ಚಲನಚಿತ್ರ) ಧ್ವನಿಗ್ರಹಣ ಸೇರ್ಪಡೆಯಾಗಿ ಸಿನಿಮಾಟೊಗ್ರಫಿ ಎಂಬುದು ಮೋಷನ್ ಪಿಕ್ಚರ್ ಟೆಕ್ನಿಕ್ಸ್ ಎಂದು ಮುಂದುವರಿಯಿತು. ಈ ಸಂಸ್ಥೆಯ ಆಡಳಿತ ಮಂಡಳಿಯ ಅಧ್ಯಕ್ಷ ಹಾಗೂ ವಿಶೇಷಾಧಿಕಾರಿಯಾಗಿದ್ದ ಪಿ.ಎಚ್.ಕೃಷ್ಣರಾವ್ ಅವರು ಭಾರತ ಸರ್ಕಾರಕ್ಕೆ ವರ್ಗವಾಗಿದ್ದರಿಂದ ಅವರ ಸ್ಥಾನಕ್ಕೆ ಮೈಸೂರು ವಿಶ್ವವಿದ್ಯಾಲಯದ ಉಪಕುಲಪತಿಗಳು ಅಧ್ಯಕ್ಷರಾದರು.

ಸಿನಿಮಾ ಪ್ರೊಜೆಕ್ಷನ್ ಕುರಿತು ನಿಯಮಿತವಾಗಿ ವಿದ್ಯಾರ್ಥಿಗಳಿಗೆ ತರಬೇತಿ ನೀಡಲಾಯಿತು. ಸಿವಿಲ್ ಮತ್ತು ಮಿಲಿಟರಿ ಕ್ಷೇತ್ರದ ಪರಿಣತರಿಂದ ವ್ಯಾಸಂಗ ವಿಷಯದ (syllabus) ಬಗ್ಗೆ ಅಭಿಪ್ರಾಯ, ಸಲಹೆ ಪಡೆಯಲಾಯಿತು. ಅದೇ ವರ್ಷ ಧ್ವನಿಗ್ರಹಣ ಮತ್ತು ಪ್ರಕ್ಷೇಪಣ (projection) ಉಪಕರಣಗಳನ್ನು 'ಮೋಷನ್ ಪಿಕ್ಚರ್ ಟೆಕ್ನಿಕ್' ವ್ಯಾಸಂಗಕ್ಕೆ ೭೫ ಸಾವಿರ ರೂಪಾಯಿ ವೆಚ್ಚ ಮಾಡಿ ಖರೀದಿಸಲಾಯಿತು.

ನವಂಬರ್ ೧, ೧೯೪೪ರಿಂದ ಗ್ರಾಮೀಣ ವಿದ್ಯಾರ್ಥಿಗಳಿಗಾಗಿ ವಸತಿಗೃಹ (Hostel) ಆರಂಭಿಸಲಾಯಿತು. ವಿದ್ಯಾರ್ಥಿಗಳಿಗಾಗಿ ಸರ್ಕಾರದ ಅನುದಾನ ಹಾಗೂ ಖಾಸಗಿ ದಾನಿಗಳ ನೆರವಿನಿಂದ ಉಪಹಾರಗೃಹ (Canteen) ಸೇವೆ ಪ್ರಾರಂಭಿಸಿತು.

(ಚಿತ್ರ ೧) ಜಯಚಾಮರಾಜೇಂದ್ರ ಶಿಕ್ಷಣ ಸಂಸ್ಥೆಯಲ್ಲಿ ವಿದ್ಯಾರ್ಥಿಗಳಿಗೆ ಹೊರಾಂಗಣ ಚಿತ್ರೀಕರಣ ತರಬೇತಿ

(ಚಿತ್ರ ೨) ಬೆಂಗಳೂರಿನ ಹೆಸರುಘಟ್ಟದಲ್ಲಿರುವ ವಿಶ್ವ ಬ್ಯಾಂಕ್ ನೆರವಿನಿಂದ ಅಸ್ತಿತ್ವಕ್ಕೆ ಬಂದಿರುವ ಕರ್ನಾಟಕ ಸರ್ಕಾರದ ಚಲನಚಿತ್ರ ಮತ್ತು ದೂರದರ್ಶನ ಸಂಸ್ಥೆ

ಸಂಸ್ಥೆಯ ಕಾರ್ಪೆಂಟರಿ ವಿಭಾಗದವರೇ ಇತರ ವ್ಯಾಸಂಗದ ವಿಭಾಗಕ್ಕೆ ಬೇಕಾದಪೀಠೋಪಕರಣಗಳನ್ನು ತಯಾರಿಸಿದರು. ಗ್ರಂಥಾಲಯದಲ್ಲಿ ನಿಯತಕಾಲಿಕೆಗಳ ಸಂಖ್ಯೆ ಹಾಗೂ ಪುಸ್ತಕಗಳ ಖರೀದಿ ಪ್ರಗತಿ ಸಾಧಿಸಿತು.

ಎಲ್ಲ ವ್ಯಾಸಂಗ ವಿಷಯಗಳ ಎರಡನೇ ವರ್ಷದ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಪ್ರವಾಸ (Study Tour) ಕ್ಕೆಂದು ವಿವಿಧ ತಾಂತ್ರಿಕ ಸಂಸ್ಥೆಗಳಿಗೆ ಕರೆದೊಯ್ಯುವ ಪರಂಪರೆ ಆರಂಭಿಸಿದರು.

ಆ ವರ್ಷದ ಇನ್ನೊಂದು ಮಹತ್ವದ ಯೋಜನೆಯೆಂದರೆ 'ಪಿಕ್ಚರಸ್ ಮೈಸೂರು' ಹಾಗೂ 'ಗೋಲ್ಡ್ ಮೈನಿಂಗ್ ಇನ್ ಮೈಸೂರು' ಎಂಬ ಎರಡು ಸಾಕ್ಷ್ಯಚಿತ್ರಗಳ ನಿರ್ಮಾಣದ ನಿರ್ಧಾರ ಮಾಡಿ ಕಾರ್ಯವನ್ನು ಕೈಗೊಳ್ಳಲಾಯಿತು. ಗ್ರಾಮೀಣ ಪ್ರಚಾರ (Rural Propaganda) ಕುರಿತು ಇನ್ನೊಂದು ಸಾಕ್ಷ್ಯಚಿತ್ರ ನಿರ್ಮಾಣದ ರೂಪುರೇಷೆ ರೂಪಿಸಲಾಯಿತು. ಈ ಪ್ರತಿ ಸಾಕ್ಷ್ಯಚಿತ್ರದ ನಿರ್ಮಾಣ ವೆಚ್ಚ, ಅದರ ಕಚ್ಚಾಫಿಲಂನ ಬೆಲೆಯನ್ನು ಹೊರತುಪಡಿಸಿ ಪ್ರತಿ ಚಿತ್ರಕ್ಕೆ ಹದಿನಾರು ಸಾವಿರದ ಮುನ್ನೂರ ನಲವತ್ತು (೧೬,೩೪೦.೦೦) ರೂಪಾಯಿಯಾಗಿತ್ತು.

ಆ ವರ್ಷದ ಇನ್ನೊಂದು ಐತಿಹಾಸಿಕ ಘಟನೆ - ಸರ್. ಎಂ.ವಿಶ್ವೇಶ್ವರಯ್ಯನವರು ಅತಿಥಿಯಾಗಿ ಸಂಸ್ಥೆಗೆ ಭೇಟಿ ನೀಡಿದ್ದು.

೧೯೪೫-೪೬ ರಲ್ಲಿ ಎಲ್ಲ ವಿದ್ಯಾರ್ಥಿಗಳಂತೆ (ಸಿನಿಮಾಟೊಗ್ರಫಿ ಹಾಗೂ ಸೌಂಡ್ ರಿಕಾರ್ಡಿಂಗ್) ಛಾಯಾಗ್ರಹಣ ಹಾಗೂ ಧ್ವನಿಗ್ರಹಣದ ಅಂತಿಮ ವರ್ಷದ ವಿದ್ಯಾರ್ಥಿಗಳನ್ನು ಮೂರು ತಿಂಗಳ ಪ್ರಯೋಗಾತ್ಮಕ ತರಬೇತಿ (Practical Training)ಗೆ ವಿವಿಧ ಸ್ಟುಡಿಯೋಗೆ ಕಳುಹಿಸಲಾಯಿತು. ಇದಲ್ಲದೆ ಶೈಕ್ಷಣಿಕ ಪ್ರವಾಸವೂ ಏರ್ಪಟ್ಟಿತ್ತು. ಆ ವರ್ಷ ಎಸ್.ಜೆ.ಪಿ. ಸಂಸ್ಥೆಯ ಮೂರು ಮಹಡಿಗಳ ಕಟ್ಟಡ ನಿರ್ಮಾಣ ಪೂರ್ತಿಗೊಂಡಿತು.

'ಪಿಕ್ಚರಸ್ ಮೈಸೂರು' ಚಿತ್ರದ ಚಿತ್ರೀಕರಣ ಮುಗಿದು, ಧ್ವನಿಗ್ರಹಣ ಮಾತ್ರ ಉಳಿಯಿತು. ಈ ಚಿತ್ರದ ಒಂದಿಷ್ಟು ಭಾಗವನ್ನು ಭಾರತ ಸರ್ಕಾರವು ಕೊಂಡುಕೊಂಡಿತು.

ಆ ವರ್ಷವೂ ಅಮೆರಿಕ, ಬ್ರಿಟನ್‌ನಿಂದ ಹಾಗೂ ಭಾರತದ ಅನೇಕ ಗಣ್ಯರು ಸಂಸ್ಥೆಗೆ ಭೇಟಿ ನೀಡಿದರು.

ಯುದ್ಧದ ಸಮಯದಲ್ಲಿ ಹಾಗೂ ಯುದ್ಧಾನಂತರದ ಕಾಲದಲ್ಲಿ ವಿಸ್ತರಿಸಲಾದ ಕೈಗಾರಿಕೆಯಿಂದಾಗಿ ಎಲ್ಲ ಬಗೆಯ ತಂತ್ರಜ್ಞರ ಬೇಡಿಕೆ ಹೆಚ್ಚಾದ್ದರಿಂದ ಆ ಕೊರತೆ ತುಂಬಲು ಇದ್ದ ತಾಂತ್ರಿಕ ತರಬೇತಿ ಶಾಲೆಗಳನ್ನು ವಿಸ್ತರಿಸಿ, ವೃತ್ತಿಶಿಕ್ಷಣ ಸಂಸ್ಥೆಗಳಲ್ಲಿ ಹೆಚ್ಚಿನ ವಿಷಯಗಳನ್ನು ಅಧ್ಯಯನಕ್ಕೆ ಆರಂಭಿಸಲಾಯಿತು. ಇದರಂತೆ ೧೯೪೬ರಲ್ಲಿ ಮತ್ತೆ ಎಂಟು ಹೆಚ್ಚಿನ ಅಧ್ಯಯನ ವಿಷಯಗಳನ್ನು ಎಸ್.ಜೆ.ಪಿ. ಸಂಸ್ಥೆಗೆ ಸೇರ್ಪಡೆ ಮಾಡಲಾಯಿತು. ಹೀಗಾಗಿ ಒಟ್ಟು ೨೫ ಅಧ್ಯಯನ ವ್ಯಾಸಂಗ ಕ್ರಮಗಳು (courses) ಆರಂಭವಾದವು.

ಈ ವರ್ಷದ ವಿಶೇಷ ಸಾಧನೆಯೆಂದರೆ ಶೈಕ್ಷಣಿಕ ಚಿತ್ರಗಳ ಕೇಂದ್ರ ಭಂಡಾರ (Central Library of Educational Films) ಸಂಘಟಿಸಲು ಐದು ಸಾವಿರ ರೂಪಾಯಿ ಮಂಜೂರು ಮಾಡಲಾಯಿತು.

ಇನ್ನೊಂದು ಮಹತ್ತರ ಹೆಜ್ಜೆ - 'ದ ಯೂತ್ ಫೆಸ್ಟಿವಲ್ ಅ್ಯಂಡ್ ಮೈಸೂರು ಒಲಿಂಪಿಕ್ಸ್' ಎಂಬ ಒಂದು ಸಾಕ್ಷ್ಯ ಚಿತ್ರದ ನಿರ್ಮಾಣ ಹಾಗೂ 'ಜೋಗ್ ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್' ಕುರಿತು ಇನ್ನೊಂದು ಸಾಕ್ಷ್ಯಚಿತ್ರ ನಿರ್ಮಾಣವನ್ನು ವರ್ಣದಲ್ಲಿ ತಯಾರಿಸಲಾಯಿತು. ಧ್ವನಿಗ್ರಹಣ ವಿಭಾಗದವರು 'ಮೀರಾ' ತಮಿಳು ಚಿತ್ರವನ್ನು ಕನ್ನಡಕ್ಕೆ ಧ್ವನಿ ಮರುಜೋಡಣೆ (ಡಬ್ಬಿಂಗ್) ಮಾಡಿದರು. ಆಧುನಿಕ ರೀತಿಯ ಸಿನಿಮಾ ಸ್ಟುಡಿಯೋ ಆರಂಭಿಸುವ ಯೋಜನೆಯನ್ನೂ ಪರಿಶೀಲನೆ ಮಾಡಲಾಯಿತು.

ಆ ವರ್ಷ ಸಂಸ್ಥೆಗೆ ಭೇಟಿ ನೀಡಿದ ಗಣ್ಯರಲ್ಲಿ ದಿವಾನ್ ಬಹದ್ದೂರ್ ಎ.ಲಕ್ಷ್ಮಣಸ್ವಾಮಿ ಮೊದಲಿಯಾರ್, ಭಾರತ ಸರ್ಕಾರದ ಕೃಷಿ ಸಚಿವರಾಗಿದ್ದ ಡಾ|ರಾಜೇಂದ್ರಪ್ರಸಾದ್ ಹಾಗೂ ಸ್ಯಾನ್‌ಫ್ರಾನ್ಸಿಸ್ಕೋದಿಂದ ಬಂದಿದ್ದ ಸಿನಿಮಾ ಹಾಗೂ ರೇಡಿಯೋ ತಜ್ಞ ಡೇನ್ ಡಿಕ್ಸನ್ (Deane Dickson) ಪ್ರಮುಖರು.

೧೯೪೭ರಲ್ಲಿ ಡಿಪ್ಲೊಮಾ ಓದಲು ಬೇಕಾದ ಕನಿಷ್ಠ ವಿದ್ಯಾರ್ಹತೆ ಇಲ್ಲದೇ ಇರುವವರು, ಆದರೆ ಇಂತಹ ಸಂಸ್ಥೆಯಲ್ಲಿ ಕೆಲಕಾಲ ದುಡಿದು ತಮ್ಮ ವೃತ್ತಿ, ನೈಪುಣ್ಯ ಹೆಚ್ಚಿಸಿಕೊಳ್ಳಲು ಇಚ್ಛಿಸುವವರಿಗೆ ಹಾಗೂ ಮಾಜಿ ಸೈನಿಕರಿಗೆ (Ex-serviceman) 'ಸಿನಿಮಾ ಪ್ರೊಜೆಕ್ಷನ್' ಕುರಿತು ತರಬೇತಿ ಆರಂಭಿಸಲಾಯಿತು.

ಆ ವರ್ಷದ ಸಾಧನೆ, ಆರ್.ಸಿ.ಎ. (R.C.A) ಕಂಪನಿಯ ಒಂದು ಫಿಲಂ ರೆಕಾರ್ಡರ್, ಒಂದು ಡಿಸ್ಕ್ ರಿಕಾರ್ಡರ್, ಒಂದು ಬೆಂಚ್ ಟ್ರಾನ್ಸ್ ಮೀಟರ್, ಒಂದು ಅಟೋಮ್ಯಾಟಿಕ್ ಫಿಲಂ ಫಿನಿಶಿಂಗ್ ಮೆಶೀನ್ ಹಾಗೂ ಮೀಟರ್ ಟೆಸ್ಟಿಂಗ್ ಉಪಕರಣ ಕೊಂಡುಕೊಳ್ಳಲಾಯಿತು.

ಆ ವರ್ಷದ ಇನ್ನೊಂದು ಮಹತ್ತರ ಸಾಧನೆ 'ಮೈಸೂರಿನಲ್ಲಿನ ಗ್ರಾಮೀಣ ಪ್ರಗತಿ' ಸಾಕ್ಷ್ಯಚಿತ್ರದ ಧ್ವನಿಗ್ರಹಣ, ಸಂಗೀತ ಗ್ರಹಣ ಕೈಗೊಳ್ಳಲಾಯಿತು.

೧೯೪೮ ಭಾರತದ ಇತಿಹಾಸದಲ್ಲಿ ಕರಾಳ ವರ್ಷ. ಅದೇ ವರ್ಷ ಗಾಂಧೀಜಿಯವರ ಚಿತಾಭಸ್ಮವನ್ನು ಪಶ್ಚಿಮವಾಹಿನಿಯಲ್ಲಿ ವಿಸರ್ಜಿಸುವುದನ್ನು ಹಾಗೂ ಅವರ ನಂತರ ಮೈಸೂರು ಮಹಾರಾಜರ ಸಮಕ್ಷಮದಲ್ಲಿ ಬೆಂಗಳೂರಿನಲ್ಲಿ ನಡೆದ ಸಮಾರಂಭವನ್ನು ವರ್ಣದಲ್ಲಿ ಚಿತ್ರೀಕರಿಸಿ ಸಾರ್ವಜನಿಕರಿಗೆ ಪ್ರದರ್ಶನ ಮಾಡಿದ್ದು ಒಂದು ಐತಿಹಾಸಿಕ ದಾಖಲೆ ಎನ್ನಬಹುದು. ಇದಲ್ಲದೆ ಒಲಂಪಿಕ್ ಸ್ಟೇಡಿಯಂನಲ್ಲಿ ನಡೆದ ಶೋಕಸಭೆಯಲ್ಲಿನ ಮೈಸೂರು ಮಹಾರಾಜರ ಹಾಗೂ ಸಚಿವರುಗಳ ಭಾಷಣವನ್ನು ಧ್ವನಿಗ್ರಹಣ (Electrical Recording) ಮಾಡಲಾಯಿತು. ಜೊತೆಗೆ ಈ ಸಂಸ್ಥೆಗೆ ಭೇಟಿ ಇತ್ತಾಗ ಡಾ|ರಾಜೇಂದ್ರಪ್ರಸಾದರು ನೀಡಿದ ಸಂದೇಶವನ್ನು ಹಾಗೂ ಭಾರತ ಸರ್ಕಾರದ ಔದ್ಯಮ ಮತ್ತು ಪೂರೈಕೆ ಸಚಿವರಾಗಿದ್ದ ಡಾ|ಶಾಮಪ್ರಸಾದ ಮುಖರ್ಜಿಯವರು ವಿಮಾನೋದ್ಯಮದ ಮಹತ್ವ ಕುರಿತು ನೀಡಿದ ಸಂದೇಶವನ್ನು ಧ್ವನಿಗ್ರಹಣ ಮಾಡಲಾಯಿತು.

ಭಾರತ ೧೯೪೭ರಲ್ಲಿ ಸ್ವತಂತ್ರವಾಯಿತು. ಹೀಗಾಗಿ ಎಸ್.ಜೆ.ಪಿ.ಗೆ ಪ್ರವೇಶ ಪಡೆಯಲು ಅಖಿಲ ಭಾರತದಿಂದ ಅರ್ಜಿಗಳು ಬಂದವು. ಇನ್ನೂ ವಿಶೇಷವೆಂದರೆ ಕೆಲವು ಜನ ಮೈಸೂರೇತರರು ಹಾಗೂ ಕೆಲವು ಜನ ನಿರಾಶ್ರಿತರಿಗೂ (Refugee) ಪ್ರವೇಶ ನೀಡಲಾಯಿತು.ಈ ವರ್ಷದಿಂದಲೇ ಪ್ರಥಮ ಬಾರಿಗೆ ಫೇಲಾದ ವಿದ್ಯಾರ್ಥಿಗಳಿಗೆ ಸಪ್ಲಿಮೆಂಟರಿ ಪರೀಕ್ಷೆ ಆರಂಭಿಸಲಾಯಿತು. ಎರಡನೇ ಹಾಗೂ ಮೂರನೇ ವರ್ಷದ ವಿದ್ಯಾರ್ಥಿಗಳಿಗೆ ಮದ್ರಾಸ್, ಬಾಂಬೆ, ಪೂನಾ, ಕೊಯಮತ್ತೂರು, ತಿರುಚನಾಪಳ್ಳಿ, ಕಲ್ಕತ್ತಾಗಳಿಗೆ ಶೈಕ್ಷಣಿಕ ಪ್ರವಾಸ ಕರೆದೊಯ್ಯಲಾಯಿತು.

ಆ ವರ್ಷ ಮೈಸೂರಿನ ಮಹಾರಾಜರು ಎಸ್.ಜೆ.ಪಿ. ಸಂಸ್ಥೆಗೆ ಭೇಟಿ ನೀಡಿ ಅಲ್ಲಿನ ಚಟುವಟಿಕೆಗಳ ಬಗ್ಗೆ ಆಸಕ್ತಿಪೂರ್ಣ ವಿಚಾರಣೆ ನಡೆಸಿದರು.

ಮೈಸೂರು ಪ್ರಾಂತದಲ್ಲಿನ ಗ್ರಾಮೀಣ ವಿಕಾಸ ಸಾಕ್ಷ್ಯಚಿತ್ರವನ್ನು ಪೂರ್ತಿಗೊಳಿಸಿ, ಸರ್ಕಾರಕ್ಕೆ ರಾಜ್ಯದ ಹಲವಾರು ಕೇಂದ್ರದಲ್ಲಿ ಪ್ರದರ್ಶಿಸಲು ನೀಡಲಾಯಿತು.

ಈ ಸಂಸ್ಥೆಯಿಂದ ಉತ್ತೀರ್ಣರಾದ ಹಲವಾರು ವಿದ್ಯಾರ್ಥಿಗಳು ರಾಜ್ಯದ ವಿವಿಧ ಇಲಾಖೆಗಳಲ್ಲಿ ಉದ್ಯೋಗವಕಾಶ ಪಡೆದರು. ಇನ್ನುಳಿದವರು ಕೇಂದ್ರ ಸರ್ಕಾರದ ವಾರ್ತಾ ಮತ್ತು ಪ್ರಸಾರ ಖಾತೆಯಲ್ಲಿ ಅವಕಾಶ ಪಡೆದರು.

೧೯೪೯ರ ವಿಶೇಷ ಸಾಧನೆಯೆಂದರೆ ಮೈಸೂರು ರಾಜ್ಯದ ವಿಧಾನಸಭೆ, ವಿಧಾನ ಪರಿಷತ್ತು ಸದಸ್ಯರ ಸಮ್ಮೇಳನಕ್ಕೆ ಹಾಗೂ ಮೈಸೂರಿನಲ್ಲಿ ಜರುಗಿದ ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆ (ಐ.ಎಲ್.ಓ), ಶೈಕ್ಷಣಿಕ ಸಂಕಿರಣ ಹಾಗೂ ಸರ್ಕಾರಿ ಇಲಾಖೆಯ ಕಾರ್ಯಕ್ರಮಗಳಿಗೆ ಧ್ವನಿವರ್ಧಕ, ಮೈಕ್ರೋಫೋನ್ ಸಲಕರಣೆಯನ್ನು ಒದಗಿಸಿ, ಅಲ್ಲಿಯ ಸಿಬ್ಬಂದಿ ಹಾಗೂ ಧ್ವನಿಗ್ರಹಣದ ವಿದ್ಯಾರ್ಥಿಗಳು ತಮ್ಮ ಸೇವೆ ನೀಡಿದರು.

೧೯೫೦ರಲ್ಲಿ ಮೈಸೂರೇತರರು, ನಿರಾಶ್ರಿತರು ಅಲ್ಲದೆ, ರಾಜ್ಯ ಸರ್ಕಾರಗಳು ಹಾಗೂ ಕೇಂದ್ರ ಸರ್ಕಾರವು ಕರ್ತವ್ಯದ ಮೇಲೆ ಕಳುಹಿಸಿದ ಅಭ್ಯರ್ಥಿಗಳಿಗೆ ಸಹ ಪ್ರವೇಶಾನುಮತಿ ನೀಡಿತು. ಆ ವರ್ಷವೇ ಧ್ವನಿಗ್ರಹಣ ವಿಭಾಗಕ್ಕೆ ನೆಲೆ ಒದಗಿಸಲು ಪಶ್ಚಿಮ ಕಟ್ಟಡ ನಿರ್ಮಾಣ ಕೈಗೊಳ್ಳಲಾಯಿತು. ಅದೇ ವರ್ಷ ಇಥಿಯೋಪಿಯಾ, ಸ್ವಿಟ್ಜರ್‌ಲೆಂಡ್, ಸ್ಕಾಟ್‌ಲೆಂಡ್, ಫಿಲಿಪೈನ್ಸ್, ಕೆನ್ಯಾದಿಂದ ಅತಿಥಿಗಳು ಹಾಗೂ ಜನರಲ್ ಕೆ.ಎಂ.ಕಾರಿಯಪ್ಪ ಭಾರತ ಸೈನ್ಯದ ಮುಖ್ಯಾಧಿಕಾರಿಯಾಗಿ ಭೇಟಿ ನೀಡಿದರು.

೧೯೫೧ರ ವಿಶೇಷವೆಂದರೆ ಆಕರ್ಷಕವಲ್ಲದ, ಬೇಡಿಕೆ ಇಲ್ಲದ ಐದು ವ್ಯಾಸಂಗ ಕ್ರಮ (course) ಗಳನ್ನು ಎಸ್.ಜೆ.ಪಿ.ಯಿಂದ ಕಿತ್ತು ಹಾಕಲಾಯಿತು. ಅಲ್ಲಿಯ ತನಕ ಪಾಲಿಸುತ್ತಿದ್ದ ಎಲ್ಲ ಕೋರ್ಸ್‌ಗಳ ವ್ಯಾಸಂಗ ವಿಷಯಗಳನ್ನು (Syllabuses), ಇದಕ್ಕಾಗಿಯೇ ರಚಿಸಲಾದ ವಿಶೇಷ ಮಂಡಳಿ (Board) ಪರಿಷ್ಕರಿಸಿ, ಅದೇ ವರ್ಷ ಜಾರಿಗೆ ತಂದಿತು. ಕೋರ್ಸ್‌ಗಳ ಹೆಸರುಗಳನ್ನು (Nomenclature) ಸೂಕ್ತವಾಗಿ ಬದಲಾಯಿಸಿತು. ವರ್ಷದ ಕೊನೆಗೆ ಮುಂದಿನ ವರ್ಗಕ್ಕೆ ಸೇರಿಸುವ ಸ್ಥಳೀಯ ಪರೀಕ್ಷೆಯ ಪದ್ಧತಿ ಕೈಬಿಟ್ಟು ಹೊಸ ಯೋಜನೆಯಡಿ 'ಸಾರ್ವಜನಿಕ ಪರೀಕ್ಷಾ ಪದ್ಧತಿ' (Public Examination) ಜಾರಿಗೆ ತರಲಾಯಿತು. ಹಳೆಯ ಪದ್ಧತಿಯಲ್ಲಿ ಓದುತ್ತಿದ್ದವರಿಗೆ ಅದೇ ಪದ್ಧತಿ ಮುಂದುವರಿಸಲಾಯಿತು.

೧೯೫೨ರಲ್ಲಿ 'ಸಿನೆಫೋಟೋ ಸರ್ವಿಸ್ ಲ್ಯಾಬೊರೇಟರಿ' ಹೊರಗಿನವರ ಫೋಟೋ ತೆಗೆಯುವ ಕಾರ್ಯ ನಿರ್ವಹಿಸಿ ಹಾಗೂ ಚಿತ್ರ ನಿರ್ಮಾಪಕರಿಗೆ ಸಿನಿಮಾ ಉಪಕರಣಗಳನ್ನು ಬಾಡಿಗೆಗೆ ನೀಡಿ ಸುಮಾರು ಐದು ಸಾವಿರ ರೂಪಾಯಿ ಗಳಿಸಿತು. ಇದೇ ರೀತಿ ಧ್ವನಿಗ್ರಹಣ ವಿಭಾಗದವರು ಖಾಸಗೀ ನಿರ್ಮಾಪಕರಿಗಾಗಿ ಸಿನಿಮಾ ಹಾಗೂ ಡಿಸ್ಕ್‌ಗಳ ನಿರ್ಮಾಣ ಕಾರ್ಯ ಹಾಗೂ ಇಲಾಖೆಗಳಿಗೂ ಈ ಸೇವೆ ನೀಡಿ ಒಂದು ಸಾವಿರ ರೂಪಾಯಿ ಗಳಿಸಿತು.

೧೯೪೪ರಿಂದಲೇ ಕಾರ್ಯ ನಿರ್ವಹಿಸುತ್ತಿದ್ದ ಚಿತ್ರ ನಿರ್ಮಾಣ ಘಟಕವನ್ನು (Film Production Unit) ಉಳಿತಾಯದ ದೃಷ್ಟಿಯಿಂದ ಆರ್ಥಿಕ ಕ್ರಮವೆಂದು ಸ್ಥಗಿತಗೊಳಿಸಲಾಯಿತು.

ಶ್ರವಣಬೆಳಗೊಳದಲ್ಲಿ ಗೊಮ್ಮಟೇಶ್ವರ ಮಹಾ ಮಸ್ತಕಾಭಿಷೇಕ ಸಂದರ್ಭದಲ್ಲಿ ನಡೆದ ವಸ್ತು ಪ್ರದರ್ಶನದಲ್ಲಿ ಈ ಸಂಸ್ಥೆ ಭಾಗವಹಿಸಿ, ಮೈಸೂರು ದಸರಾ ಪ್ರದರ್ಶನದಲ್ಲಿಯಂತೆ ಇಲ್ಲೂ ಸಹ ಸಾರ್ವಜನಿಕ ಆಸಕ್ತಿ ಕೆರಳಿಸಿ, ಪ್ರಶಂಸೆ ಗಳಿಸಿತು.

೧೯೫೩ರಲ್ಲಿ ನಡೆದ ದಾಖಲಾತಿಗೆ 'ಪ್ರವೇಶ ಸಮಿತಿ' ಅಭ್ಯರ್ಥಿಗಳನ್ನು ಸಂದರ್ಶಿಸಿ ಆಯ್ಕೆ ಮಾಡಿತು. ಕೇಂದ್ರೀಯ ತಾಂತ್ರಿಕ ಪರೀಕ್ಷಾ ಮಂಡಳಿಯು ವಾರ್ಷಿಕ ಪರೀಕ್ಷೆಗಳನ್ನು ನಡೆಸಿತು. ಈ ವರ್ಷವೂ ಸಹ ಛಾಯಾಗ್ರಹಣ ವಿಭಾಗ ಹಾಗೂ ಧ್ವನಿಗ್ರಹಣ ವಿಭಾಗವು ತನ್ನ ಉಪಕರಣಗಳನ್ನು ಬಾಡಿಗೆಗೆ ನೀಡಿ, ಹಾಗೂ ತನ್ನ ಸೇವೆ ಒದಗಿಸಿ ಒಟ್ಟು ಸುಮಾರು ಇಪ್ಪತ್ತು ಸಾವಿರ (೨೦,೦೦೦.೦೦) ರೂಪಾಯಿ ಗಳಿಸಿತು. ಈ ವರ್ಷದ ವಿಶೇಷವೆಂದರೆ ಐದು ಸಾವಿರ ರೂಪಾಯಿ ವಿಶೇಷ ಅನುದಾನದಿಂದ ಆನೆಗಳನ್ನು ಹಿಡಿಯುವ, ಪಳಗಿಸುವ ತಂತ್ರ ಕುರಿತು 'ಖೆಡ್ಡಾ ಆಪರೇಷನ್ಸ್' ಚಿತ್ರ ತಯಾರಿಸಲಾಯಿತು.

೧೯೫೪ರ ವೈಶಿಷ್ಟ್ಯವೆಂದರೆ ಛಾಯಾಗ್ರಹಣ ವಿಭಾಗದವರು ವಿಧಾನಸೌಧ ನಿರ್ಮಾಣವಾಗುತ್ತಿರುವುದರ ಕಾರ್ಯ ಪ್ರಗತಿಯನ್ನು ಚಿತ್ರೀಕರಿಸಿದರು.

೧೯೫೫ ವಿಶೇಷ ವರ್ಷ. ಮೈಸೂರಿನ ಮಹಾರಾಜರು ರೇಡಿಯೋ ಧ್ವನಿಗ್ರಹಣ ವಿಭಾಗದ ಎರಡನೇ ಮುಖ್ಯ ಬ್ಲಾಕ್ ಕಟ್ಟಡವನ್ನು ಉದ್ಘಾಟಿಸಿದರು. ಆ ವರ್ಷವೇ ವಿದ್ಯಾರ್ಥಿಗಳ ಸಂಘವು ಐದುನೂರು ರೂಪಾಯಿಗಳ ಜನರಲ್ ಪುಸ್ತಕಗಳನ್ನು ಕಾಣಿಕೆಯಾಗಿ ನೀಡಿತು. ಬೆಂಗಳೂರಿನಲ್ಲಿರುವ ಅಮೆರಿಕ ವಾರ್ತಾ ಸಂಸ್ಥೆಯ ಗ್ರಂಥಾಲಯವು (United States Information Library) ನಲವತ್ತು ಪುಸ್ತಕಗಳನ್ನು ನೀಡಿತು. ವಿಧಾನಸೌಧ ನಿರ್ಮಾಣ ಕಾರ್ಯದ ಪ್ರಗತಿಯ ಚಿತ್ರೀಕರಣ ಈ ವರ್ಷವೂ ಮುಂದುವರಿಯಿತು. ನಿರಾಶ್ರಿತರು ಈ ಸಂಸ್ಥೆಗೆ ಪ್ರವೇಶ ಪಡೆಯುವುದು ಈ ವರ್ಷದಿಂದ ಕ್ರಮೇಣ ನಿಂತು ಹೋಯಿತು.

೧೯೫೬ರಲ್ಲಿ ಒಟ್ಟು ಕೋರ್ಸ್‌ಗಳನ್ನು ೧೫ ಡಿಪ್ಲೊಮಾ ಕೋರ್ಸ್‌ಗಳೆಂದು, ನಾಲ್ಕು ಸರ್ಟಿಫಿಕೇಟ್ ಕೋರ್ಸ್‌ಗಳೆಂದು ವಿಭಜಿಸಿದರು. ಛಾಯಾಗ್ರಹಣ, ಧ್ವನಿಗ್ರಹಣ ಡಿಪ್ಲೊಮಾ ಕೋರ್ಸ್‌ಗಳೆನಿಸಿದವು. ರೇಡಿಯೋ ಮೆಕ್ಯಾನಿಕ್ಸ್ ಸರ್ಟಿಫಿಕೇಟ್ ಕೋರ್ಸ್‌ಗೆ ಸೇರಿತು.

ಅದುವರೆಗೆ ಛಾಯಾಗ್ರಹಣದಲ್ಲಿ ಉತ್ತೀರ್ಣರಾದವರಿಗೆ ಎಲ್.ಎಂ.ಪಿ.ಪಿ. (Licentiated motion picture photographer) ಎಂದು, ನಂತರ ಎಲ್.ಸಿ.ಟಿ. (Licentiated Cinematography Technology) ಎಂದು, ಆಮೇಲೆ ಡಿ.ಸಿ.ಟಿ. (Diploma in Cinema Technology) ಹಾಗೂ ಧ್ವನಿ ವ್ಯಾಸಂಗಕ್ಕೆ ಡಿ.ಎಸ್.ಇ. (Diploma in Sound Engineering) ಎಂದು ಪ್ರಮಾಣಪತ್ರ ನೀಡಲು ಆರಂಭಿಸಿತು.

೧೯೫೬ರಲ್ಲಿ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಕೌನ್ಸಿಲ್ ನೀಡಿದ ಸಲಹೆಯ ಮೇರೆಗೆ ರಾಜ್ಯ ಮಟ್ಟದ ತಾಂತ್ರಿಕ ಶಿಕ್ಷಣ ಹಾಗೂ ತರಬೇತಿ ಮಂಡಳಿ ರಚಿಸಲು ಒಪ್ಪಿಗೆ ನೀಡಲಾಯಿತು. ಈ ಮಂಡಳಿಯು ನಮ್ಮ ರಾಜ್ಯದಲ್ಲಿ ಲಭ್ಯವಿರುವ ತಾಂತ್ರಿಕ ಶಿಕ್ಷಣದ ಬಗ್ಗೆ ಇರುವ ಸೌಲಭ್ಯ ಕುರಿತು ಅಧ್ಯಯನ ಮಾಡಿ ಕೆಲ ನಿರ್ಣಯ ಕೈಗೊಂಡಿತು. ಅವರಲ್ಲಿ (೧) ಏಕರೂಪ ವ್ಯಾಸಂಗ ಕ್ರಮ (common courses) ಹಾಗೂ ಏಕರೀತಿಯ ವ್ಯಾಸಂಗ ವಿಷಯ (common syllabuses) ಸಮಾನವಾದ ಶಿಕ್ಷಣ ಶುಲ್ಕ, ವಿದ್ಯಾರ್ಥಿ ವೇತನ, ಪರೀಕ್ಷಾ ಶುಲ್ಕವನ್ನು ತನ್ನ ಇಲಾಖೆಯ ಅಡಿಯಲ್ಲಿರುವ ಶಿಕ್ಷಣ ಸಂಸ್ಥೆಗಳಿಗೆ ರೂಪಿಸಿತು. (೨) ತಾಂತ್ರಿಕ ಪರೀಕ್ಷೆಯನ್ನು ಕೇಂದ್ರ ತಾಂತ್ರಿಕ ಶಿಕ್ಷಣ ಮಂಡಳಿಯ ಬದಲು ರಾಜ್ಯದಲ್ಲಿನ ತಾಂತ್ರಿಕ ಶಿಕ್ಷಣ ಪರೀಕ್ಷೆ ಕೈಗೊಳ್ಳಲು ರಾಜ್ಯ ಮಟ್ಟದ ಮಂಡಳಿ ರಚಿಸಲು ಸೂಚಿಸಿತು. (೩) ಖಾಸಗೀ ತಾಂತ್ರಿಕ ಶಿಕ್ಷಣ ಸಂಸ್ಥೆಗಳಿಗೆ ನೀಡಬೇಕಾದ ಅನುದಾನ ಹಾಗೂ ಅವುಗಳಿಗೆ ಮನ್ನಣೆ ನೀಡುವುದನ್ನು ಸೂಚಿಸಿತು. ಈ ವರ್ಷದಿಂದಲೇ ಎಲ್ಲ ವೃತ್ತಿಪರ ಶಿಕ್ಷಣ ಕೇಂದ್ರಗಳ ಹೆಸರನ್ನು 'ಪಾಲಿಟೆಕ್ನಿಕ್ಸ್' ಎಂದು ಮರುನಾಮಕರಣ ಮಾಡಲಾಯಿತು. ಇದೇ ಅವಧಿಯಲ್ಲಿ ಅಂದರೆ ಎರಡನೇ ಪಂಚವಾರ್ಷಿಕ ಯೋಜನೆ ಅವಧಿಯಲ್ಲಿ ಹಲವಾರು ಯೋಜನೆಗಳು ತಾಂತ್ರಿಕ ಶಿಕ್ಷಣ ಕುರಿತು ಜಾರಿಗೆ ಬಂದವು. ಅಲ್ಲದೆ ಘೋಷ್ ಚಂದ್ರಕಾಂತ ಸಮಿತಿ ಸಲಹೆಗಳೂ ಜಾರಿಗೆ ಬಂದವು. ಈ ವರ್ಷವೂ ಎಸ್.ಜೆ.ಪಿ. ಹೆಚ್ಚು ಉಪಕರಣ ಕೊಳ್ಳಲು ಎಂಬತ್ಮೂರು ಸಾವಿರ (೮೩,೦೦೦.೦೦) ರೂಪಾಯಿ ವ್ಯಯಿಸಿತು.

೧೯೫೮-೫೯, ಈ ಶೈಕ್ಷಣಿಕ ವರ್ಷದಲ್ಲಿ ರಾಜ್ಯ ತಾಂತ್ರಿಕ ಶಿಕ್ಷಣ ಮಂಡಳಿಯು ಸಭೆ ಸೇರಿ ತಾಂತ್ರಿಕ ಶಿಕ್ಷಣದ ಸೌಲಭ್ಯ ಕುರಿತು ಪರಿಶೀಲಿಸಿ, ಡಿಗ್ರಿ ಮತ್ತು ಡಿಪ್ಲೊಮಾ ಮಟ್ಟದಲ್ಲಿ ಸಂಕ್ಷಿಪ್ತ ವ್ಯಾಸಂಗ ಕ್ರಮ (condensed courses), ಜ್ಯೂನಿಯರ್ ಟೆಕ್ನಿಕಲ್ ಸ್ಕೂಲನ್ನು ಕೇಂದ್ರ ಸರ್ಕಾರ ಸೂಚಿಸಿದಂತೆ ಮತ್ತು ರಾಜ್ಯ ತಾಂತ್ರಿಕ ಶಿಕ್ಷಣ ಮಂಡಳಿಯ ಸದಸ್ಯರನ್ನು ಅನುದಾನ ಸಂಸ್ಥೆಗಳ ಕೌನ್ಸಿಲ್‌ನ ಸದಸ್ಯರಾಗಿ ನೇಮಿಸಲು ಸೂಚಿಸಿತು. ವಯಸ್ಕ ನಾಗರಿಕರ ತರಬೇತಿ ಕೇಂದ್ರಗಳು ಬೆಂಗಳೂರಿನ ಪಾಲಿಟೆಕ್ನಿಕ್‌ಗೆ ಹೊಂದಿಕೊಂಡು ಸಮರ್ಪಕವಾಗಿ ಕಾರ್ಯ ನಿರ್ವಹಿಸಿದವು.

೧೯೫೯-೬೦ರಲ್ಲಿ ತಾಂತ್ರಿಕ ಶಿಕ್ಷಣ ಮಂಡಳಿಯು ತಮ್ಮ ವೃತ್ತಿಯಲ್ಲಿ ಸಾಕಷ್ಟು ಸೇವೆ ಸಲ್ಲಿಸಿರುವ ಡಿಪ್ಲೊಮಾ ಪದವೀಧರರಿಗೆ ಇಂಜಿನಿಯರಿಂಗ್ ಡಿಗ್ರಿ ಪಡೆಯಲು ಒಂದು ಅವಕಾಶ ನೀಡಬೇಕೆಂದು ಸೂಚಿಸಿತು, ಹಾಗೂ ತಾಂತ್ರಿಕ ಶಿಕ್ಷಣ ನೀಡುವ ಶಿಕ್ಷಕರಿಗೆ ಭಾರತ ಸರ್ಕಾರ ಸೂಚಿಸಿದ ಸ್ಕೇಲಿನಲ್ಲಿ ಸಂಬಳ ನೀಡಲು ಪರಿಶೀಲಿಸಿತು. ಆಗಲೂ ಸಹ ಶೇಕಡಾ ೮೮ರಷ್ಟು ಫಲಿತಾಂಶಗಳು ಹೊರಬೀಳುತ್ತಿದ್ದವು. ಪ್ರಾಕ್ಟಿಕಲ್ ಟ್ರೈನಿಂಗ್ ಅವಧಿಯಲ್ಲಿ ಭಾರತ ಸರ್ಕಾರವು ವೃತ್ತಿವೇತನ ನೀಡತೊಡಗಿತು.

೧೯೬೦-೬೧ರಲ್ಲಿ ರಾಜ್ಯ ತಾಂತ್ರಿಕ ಶಿಕ್ಷಣ ಮಂಡಳಿಯು ಮೂರು ಬಾರಿ ಸಭೆ ಸೇರಿ ತಾಂತ್ರಿಕ ಶಿಕ್ಷಣ ಜಾರಿಗೊಳಿಸಲು ಇರುವ ಸೌಲಭ್ಯಗಳನ್ನು ಪರಶೀಲಿಸಿತು. ಚಾಲ್ತಿಯಲ್ಲಿರುವ ವಿದೇಶಿ ವಿನಿಮಯದ ಇತಿ-ಮಿತಿ, ತಾಂತ್ರಿಕ ಶಿಕ್ಷಣ ಹೊಂದಿರುವ ಅರ್ಹ ಮಾನವ ಸೇವೆಯ ಕೊರತೆ, ಸ್ಥಳದ ಅಭಾವ ಹೀಗೆ ಹಲವಾರು ತೊಂದರೆಗಳನ್ನು ಎದುರಿಸುತ್ತಲೇ ಇಲಾಖೆಯು ಪ್ರಗತಿಯತ್ತ ಹೆಜ್ಜೆ ಇಟ್ಟಿದೆ. ಅದರ ಯೋಜನೆಗಳು

(ಚಿತ್ರ ೩) ನಾನ್‌ಲೀನಿಯರ್ ಎಡಿಟಿಂಗ್ ಉಪಕರಣದ ನೆರವಿನಿಂದ ಸಂಕಲನ ಶಿಕ್ಷಣ

ಪ್ರಗತಿ ಸಾಧಿಸಿ, ಮಾಡಿದ ದೊಡ್ಡ ಖರ್ಚನ್ನು ಸಾರ್ಥಕಗೊಳಿಸಿ ಕಾಣುವಂತಹ ಫಲ ನೀಡಿ ಗುರಿಯತ್ತ ಸಾಗುತ್ತಿವೆ.

ಪತ್ರಾಗಾರದ ದಾಖಲೆಗಳಲ್ಲಿ

ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆಯಲ್ಲಿನ 'ಮೈಸೂರು ಅಡ್ಮಿನಿಸ್ಟ್ರೇಟಿವ್ ರಿಪೋರ್ಟ್' (ಮೈಸೂರು ಆಡಳಿತಾತ್ಮಕ ವರದಿ) ಎಂಬ ವಾರ್ಷಿಕ ವರದಿಗಳನ್ನು ಪರಿಶೀಲಿಸಲಾಯಿತು. ಅದರಲ್ಲಿ ೧೯೪೨-೪೩ರ ತನಕ ಎಸ್.ಜೆ.ಪಿ. ಸಂಸ್ಥೆಯ ಉಲ್ಲೇಖವೇ ಇಲ್ಲ. ಇದರ ನಂತರ ೧೯೪೩-೪೪ರ ವಾರ್ಷಿಕ ವರದಿಯಲ್ಲಿ ಈ ಸಂಸ್ಥೆ ಅಸ್ತಿತ್ವಕ್ಕೆ ಬಂದ ಉಲ್ಲೇಖವಿದೆ. ವಿಶೇಷವೆಂದರೆ, ೧೯೪೩ರಿಂದ ೧೯೪೬ರವರೆಗೆ ಮೂರು ವರ್ಷಗಳ ಕಾಲ ಇದು 'ವೃತ್ತಿ ಮತ್ತು ವಾಣಿಜ್ಯ' (ಟ್ರೇಡ್ ಅಂಡ್ ಕಾಮರ್ಸ್)ದ ಅಧ್ಯಯನದಡಿ, ನಂತರ ೧೯೪೬ರಿಂದ ೧೯೫೧ರವರೆಗೆ 'ವೃತ್ತಿ ಮತ್ತು ಉದ್ಯಮ' (ಟ್ರೇಡ್ ಅಂಡ್ ಇಂಡಸ್ಟ್ರೀಸ್) ಅಧ್ಯಯನದಡಿ, ೧೯೫೧ರಿಂದ 'ಸಾರ್ವಜನಿಕ ಶಿಕ್ಷಣ' (ಪಬ್ಲಿಕ್ ಇನ್‌ಸ್ಟ್ರಕ್ಷನ್) ಈ ಅಧ್ಯಾಯದಡಿ ವರದಿ ಪ್ರಕಟಿಸಿತು. ಅದುವರೆಗೆ 'ಶ್ರೀಜಯಚಾಮರಾಜೇಂದ್ರ ಅಕ್ಯುಪೇಷನಲ್ ಇನ್‌ಸ್ಟಿಟ್ಯೂಟ್' ಶೀರ್ಷಿಕೆಯಡಿ ಮಹತ್ವ ಗಳಿಸುತ್ತಿದ್ದ ಈ ಸಂಸ್ಥೆ ನಂತರ ಇತರ ಅಕ್ಯುಪೇಷನಲ್ ಸಂಸ್ಥೆಗಳ ಜೊತೆಗೆ ಉಲ್ಲೇಖ ಪಡೆಯತೊಡಗಿತು. ನಂತರ ೧೯೫೫ರಿಂದ 'ತಾಂತ್ರಿಕ ಶಿಕ್ಷಣ' ತಲೆಬರಹದಡಿ ಎಲ್ಲ ಪಾಲಿಟೆಕ್ನಿಕ್‌ಗಳ ಜೊತೆ ಇದರ ಉಲ್ಲೇಖವೂ ಆಗತೊಡಗಿತು. ೧೯೬೧ರ ನಂತರ 'ಶ್ರೀಜಯಚಾಮರಾಜೇಂದ್ರ ಪಾಲಿಟೆಕ್ನಿಕ್' (ಎಸ್.ಜೆ.ಪಿ.) ಸಂಸ್ಥೆಯ ಪ್ರತ್ಯೇಕ ಉಲ್ಲೇಖವನ್ನೇ ನಿಲ್ಲಿಸಿತು. ಹೀಗಾಗಿ ಇದೂ ಸಹ ಹತ್ತರಲ್ಲಿ ಹನ್ನೊಂದನೇ ಸಂಸ್ಥೆ ಎಂಬಂತಹ ಸ್ವರೂಪ ಮತ್ತು ಅಧಿಕಾರಿಗಳ ಕೈಯಲ್ಲಿ ಚಿಕಿತ್ಸೆ ಪಡೆಯಿತು.

೧೯೪೩ರಿಂದ, ಅಂದರೆ ಈ ಸಂಸ್ಥೆಯ ಆರಂಭಕಾಲದಿಂದಲೂ ಛಾಯಾಗ್ರಹಣ ಹಾಗೂ ಧ್ವನಿಗ್ರಹಣ ಅಧ್ಯಯನ ವಿಷಯಗಳಲ್ಲಿ ಮಾಡಿದ ಸಾಧನೆ, ಪ್ರಗತಿ ಕುರಿತು ಗುರುತಿಸುವುದು ಬಲು ಕಷ್ಟದ ಕೆಲಸವಾಗಿದೆ. ಏಕೆಂದರೆ ಆರಂಭಕಾಲದಿಂದಲೂ ಈ ಅಧ್ಯಯನ ವಿಷಯಗಳ ಜೊತೆ ಇತರೆ ೧೨ ಬಗೆಯ ವಿಷಯಗಳು ಇದ್ದುದರಿಂದ ಸಿನಿಮಾ ಕಲೆಯ ವಿಷಯಗಳ ಕುರಿತು ನಿಶ್ಚಿತವಾಗಿ ಉಲ್ಲೇಖಿಸುವುದು ಕಷ್ಟವಾಗುತ್ತದೆ.

ಛಾಯಾಗ್ರಹಣ ಹಾಗೂ ಧ್ವನಿಗ್ರಹಣ ವಿಭಾಗಗಳಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳ ಖಚಿತ ಸಂಖ್ಯೆ, ಅವರ ವೃತ್ತಿಯಲ್ಲಿ ನೀಡಲಾದ ಶಿಷ್ಯವೇತನ, ಅವರಲ್ಲಿ ಹಾಸ್ಟೆಲಿನಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳ ಸಂಖ್ಯೆ, ಅವರ ವೃತ್ತಿಗೆ ಪೂರಕವಾದ ಪುಸ್ತಕಗಳ ಹಾಗೂ ನಿಯತಕಾಲಿಕೆಗಳ ಖರೀದಿಯನ್ನು ಗ್ರಂಥಾಲಯ ಮಾಡಿದ್ದರ ವಿವರ, ಇವೆರಡು ವೃತ್ತಿಗೆ ಸಂಬಂಧಪಟ್ಟಂತೆ ಖರೀದಿಸಲಾದ ಉಪಕರಣಗಳ (equipments) ಉಲ್ಲೇಖ, ಉತ್ತೀರ್ಣರಾದ ವಿದ್ಯಾರ್ಥಿಗಳ ಸಂಖ್ಯೆ ಹಾಗೂ ಅವರ ವಿಶೇಷ ಸಾಧನೆ, ಅವರ ವೃತ್ತಿಗೆ ಸಂಬಂಧಪಟ್ಟಂತೆ ಬಂದಿರುವ ವೃತ್ತಿಪರ ಅತಿಥಿ ಉಪನ್ಯಾಸಕರ ಉಲ್ಲೇಖ, ಈ ವೃತ್ತಿಗೆ ಮೀಸಲಿಟ್ಟ ವಿಶೇಷ ವಿದ್ಯಾರ್ಥಿವೇತನಗಳು, ಇವುಗಳ ಉಲ್ಲೇಖ ಪ್ರತ್ಯೇಕವಾಗಿ ಇಲ್ಲವಾದ್ದರಿಂದ ಒಂದು ದೊಡ್ಡ ತೊಡಕು. ಇನ್ನೂ ಖೇದಕರ ಸಂಗತಿಯೆಂದರೆ, ಈ ಸಂಸ್ಥೆಯು ತಯಾರಿಸಿದ ಯಾವುದೇ ಸಾಕ್ಷ್ಯಚಿತ್ರದ ನೆಗೆಟಿವ್, ಪಾಸಿಟಿವ್ ಅಥವಾ ಸ್ಥಿರ ಚಿತ್ರಗಳೂ ಈಗ ಲಭ್ಯವಿಲ್ಲ. ಹೀಗಾಗಿ ಐತಿಹಾಸಿಕ ಅಧ್ಯಯನಕ್ಕೆ ಬರುವವರಿಗೆ ಯಾವ ಆಧಾರಗಳೂ ಸಿಗುತ್ತಿಲ್ಲ.

ಇನ್ನು ಈ ಸಂಸ್ಥೆಗೆ ಭಾರತದ ಬೇರೆ ಬೇರೆ ರಾಜ್ಯಗಳಿಂದ ಮತ್ತು ನಿರಾಶ್ರಿತರು ಕೂಡ ಪ್ರವೇಶ ಪಡೆದ ಉಲ್ಲೇಖವಿದೆ. ಈ ಅಪರೂಪದ ಸಾಧನೆಯ ಪ್ರತ್ಯೇಕ ಮಾಹಿತಿಗಳ ಉಲ್ಲೇಖ ಇಲ್ಲದ್ದು ಒಂದು ದೊಡ್ಡ ಕೊರತೆ.

ಇದೇ ರೀತಿ ಈ ವೃತ್ತಿಯಲ್ಲಿ ಉತ್ತೀರ್ಣರಾದವರು ಹಲವಾರು ರಾಜ್ಯಗಳ ಹಾಗೂ ಕೇಂದ್ರ ಸರ್ಕಾರದಲ್ಲಿ ಉದ್ಯೋಗಾವಕಾಶ ಪಡೆದುಕೊಂಡುದರ ಉಲ್ಲೇಖವಿದೆ. ಆದರೆ ಖಚಿತವಾದ ಅಂಕಿ-ಅಂಶ, ವಿವರಗಳು ಸಿಗುವುದಿಲ್ಲ.

ಇಂತಹ ಸಂಸ್ಥೆಗಳ 'ಮಾಜಿ ವಿದ್ಯಾರ್ಥಿಗಳ ಸಂಘ'ವಾದರೂ ಇದ್ದಿದ್ದರೆ ಅದರಿಂದ ಪ್ರಕಟಿತ ಸ್ಮರಣ ಸಂಚಿಕೆ ಅಥವಾ ಈ ಸಂಸ್ಥೆಯ ಆಡಳಿತ ವರ್ಗವೇ ಬೆಳ್ಳಿಹಬ್ಬ, ಸುವರ್ಣ ವರ್ಷ ಆಚರಿಸಿ, ಇದರ ಸಾಧನೆಯ ಕುರಿತು ಸ್ಮರಣ ಸಂಚಿಕೆ, ವಿದ್ಯಾರ್ಥಿಗಳ ವಿವಿಧ ಕ್ಷೇತ್ರದಲ್ಲಿನ ಸಾಧನೆ ಪ್ರಕಟಿಸಿದ್ದರೆ ಅಲ್ಲಿಂದ ಹೊರ ಬರುವ ವಿದ್ಯಾರ್ಥಿಗಳಿಗೂ ಒಂದು ಕೈಪಿಡಿಯಾಗಿರುತ್ತಿತ್ತು. ಈ ಸಂಸ್ಥೆ ಕುರಿತು ಅಧ್ಯಯನ ಮಾಡುವವರಿಗೂ ಒಂದು ಆಕರ ಗ್ರಂಥವಾಗುತ್ತಿತ್ತು. ಈ ರೀತಿಯ ಸೇವೆಯನ್ನು ಸಿನಿಮಾ ಕುರಿತ ಇತರ ಶೈಕ್ಷಣಿಕ ವೃತ್ತಿ ಸಂಸ್ಥೆಗಳು ಕೈಗೊಂಡಿವೆಯಾದ್ದರಿಂದ ಈ ನಿರೀಕ್ಷೆ ಅಸಹಜವೇನಲ್ಲ. ಆದರೆ ಆರಂಭದಿಂದಲೂ ಆ ದೃಷ್ಟಿ ಹಾಗೂ ಆ ಧೋರಣೆ ಹೊಂದದೇ ಇರುವುದೇ ಈ ಸಂಸ್ಥೆಯ ಪ್ರಗತಿಗೆ ಮಾರಕವಾಯಿತು.

ರಾಜ್ಯ ಸರ್ಕಾರ ಒದಗಿಸುವ ಹಣ (Budget) ದಲ್ಲಿ ಹೆಚ್ಚಿನಂಶವನ್ನು ಇತರೇ ವೃತ್ತಿಶಿಕ್ಷಣ ವಿಭಾಗಗಳು ಸೆಳೆದುಕೊಂಡು ಬಿಡುತ್ತಿದ್ದವು. ಹೀಗಾಗಿ ಉಪಕರಣ ಖರೀದಿ, ಅವುಗಳ ಆಧುನೀಕರಣ ಅಥವಾ ಪುಸ್ತಕ, ನಿಯತಕಾಲಿಕೆ ಖರೀದಿ ಇವುಗಳಲ್ಲಿ ಸಿಗಬೇಕಾದಷ್ಟು ಪಾಲೂ ಸಿಗಲಿಲ್ಲ. ಬೇಕು ಬೇಡಗಳ ಮಹತ್ವದ ನಿರ್ಣಯ ಕೈಗೊಳ್ಳುವ ಪ್ರತ್ಯೇಕ ಸ್ವಾತಂತ್ರ್ಯವೂ ಇರಲಿಲ್ಲ. ಆದರೆ ಈ ವೃತ್ತಿಗಳು ತಮ್ಮ ಸಾಧನೆಯಿಂದ ಸಂಸ್ಥೆಗೆ ತಂದುಕೊಟ್ಟ ಪ್ರಚಾರ, ಕೀರ್ತಿ ಹಾಗೂ ವಾರ್ಷಿಕ ಆದಾಯವು ಇತರೆ ವ್ಯಾಸಂಗ ವಿಷಯಗಳು ಇವುಗಳನ್ನು ಪ್ರತ್ಯೇಕವಾಗಲು ಬಿಡಲಿಲ್ಲ. ಹೀಗಾಗಿ ಇವು ನೆಮ್ಮದಿಯಾಗಿ ಬಾಳಲಿಲ್ಲ, ಬೆಳೆಯಲಿಲ್ಲ ಎನ್ನಬಹುದು.

ಈ ಮೇಲಿನ ದೌರ್ಬಲ್ಯಗಳನ್ನು ಅರಿತೇ ಎಪ್ಪತ್ತರ ದಶಕದಲ್ಲಿ ಸೋವಿಯತ್ ಯೂನಿಯನ್‌ನಿಂದ ಬಂದ ಆಯೋಗವು ಈ ಸಂಸ್ಥೆಯ ಅಡಿಪಾಯ ಗುರುತಿಸಿ, ಈ ಎರಡೂ ವ್ಯಾಸಂಗ ವಿಷಯಗಳನ್ನು ಉಳಿದವುಗಳಿಂದ ಪ್ರತ್ಯೇಕಗೊಳಿಸಿದರೆ ಮಿತಿಯಿಲ್ಲದಷ್ಟು ಉಪಕರಣ ಹಾಗೂ ಧನಸಹಾಯ ನೀಡುವ ಯೋಜನೆ ಮುಂದಿಟ್ಟು ಇದನ್ನು ಅಂತರರಾಷ್ಟ್ರೀಯ ಮಟ್ಟದ ಶೈಕ್ಷಣಿಕ ಸಂಸ್ಥೆಯಾಗಿಸುವ ಅವಕಾಶ ನೀಡಿತು. ಆದರೆ ಸರ್ಕಾರೀ ಯಂತ್ರ ಈ ಸಲಹೆಯನ್ನು ತಿರಸ್ಕರಿಸಿತು.

ಇದಕ್ಕೂ ಮುನ್ನ ಎಸ್.ಕೆ.ಪಾಟೀಲ್ ವಿಚಾರಣಾ ಆಯೋಗವು ಬೆಂಗಳೂರಿನಲ್ಲಿ ಫಿಲಂ ಇನ್‌ಸ್ಟಿಟ್ಯೂಟ್ ಸ್ಥಾಪಿಸಲು ಒಳ್ಳೆಯ ನೆಲೆ ಇದೆ ಎಂಬ ಸಲಹೆ ಭಾರತ ಸರ್ಕಾರಕ್ಕೆ ನೀಡಿತು. ಆಗ ಈ ಸಂಸ್ಥೆ ತನ್ನ ಪಾಲಿಟೆಕ್ನಿಕ್ ಸ್ವರೂಪ ಕಳಚಿಕೊಂಡಿದ್ದರೆ ಅಂದೇ ಇದು ಭಾರತದ ಏಕಮೇವ ಫಿಲಂ ಇನ್‌ಸ್ಟಿಟ್ಯೂಟ್ ಆಗಿ ಮುಂದುವರಿಯುವ ಸಾಧ್ಯತೆ ಇತ್ತು. ಆದರೆ ಆ ಅವಕಾಶವೂ ತಪ್ಪಿಹೋಯಿತು.

ಈಗ, ಸೆಪ್ಟೆಂಬರ್ ೧೯೯೬ರಿಂದ ಈ ಎರಡು ಅಧ್ಯಯನ ವಿಷಯಗಳನ್ನು ಉಳಿದ ವೃತ್ತಿ ವಿಷಯಗಳಿಂದ ಪ್ರತ್ಯೇಕಿಸಿ 'ಗವರ್ನಮೆಂಟ್ ಫಿಲಂ ಅಂಡ್ ಟೆಲಿವಿಷನ್ ಇನ್‌ಸ್ಟಿಟ್ಯೂಟ್' ಎಂದು 'ವಿಶ್ವಬ್ಯಾಂಕ್ ಆರ್ಥಿಕ ನೆರವಿನ ಯೋಜನೆಗಳು' ಅಡಿಯಲ್ಲಿ ಮರು ಸ್ಥಾಪಿಸಲಾಯಿತು.

ಹೆಸರಘಟ್ಟದ ಬಳಿ ಬೆಂಗಳೂರಿನಿಂದ ಸುಮಾರು ೩೮ ಕಿ.ಮೀ. ದೂರದಲ್ಲಿ ೨೫ ಎಕರೆ ವಿಶಾಲವಾದ ಸ್ಥಳದಲ್ಲಿ ಆಡಳಿತ ವಿಭಾಗ ಕಟ್ಟಡ, ಚಿತ್ರೀಕರಣದ ಫ್ಲೋರುಗಳು, ವ್ಯಾಸಂಗ ಚಿತ್ರಮಂದಿರ ಕೊಠಡಿಗಳು, ಧ್ವನಿಗ್ರಹಣ ಹಾಗೂ ಛಾಯಾಗ್ರಹಣ ಅಧ್ಯಯನ ಕಟ್ಟಡಗಳು ಹೀಗೆ ನಾಲ್ಕು ವಿಶಾಲವಾದ ವಿಭಾಗಗಳನ್ನು ಹೊಂದಿದೆ. ೧೯೯೮ರ ಜೂನ್‌ನಿಂದ ಡಿಸೆಂಬರ್ ಅವಧಿಯಲ್ಲಿ ಇಲ್ಲಿಗೆ ಸಂಪೂರ್ಣವಾಗಿ ಸ್ಥಳಾಂತರಗೊಂಡಿತು.

ಎರಡು ವರ್ಷದ ಪಿ.ಯು.ಸಿ. (ವಿಜ್ಞಾನದಲ್ಲಿ) ತೇರ್ಗಡೆಯಾದ ೨೦ ವಿದ್ಯಾರ್ಥಿಗಳನ್ನು ಪ್ರತಿ ಅಧ್ಯಯನ ವಿಷಯಕ್ಕೆ ಆಯ್ಕೆ ಮಾಡುವರು. ಹಿಂದುಳಿದ ವರ್ಗ, ಪರಿಶಿಷ್ಟ ಜಾತಿ, ಪರಿಶಿಷ್ಟ ಜನಾಂಗ, ಗ್ರಾಮೀಣ ಕ್ಷೇತ್ರದ ಹಾಗೂ ಅಂಗವಿಕಲ ವಿದ್ಯಾರ್ಥಿಗಳಿಗೆ ಕೆಲವು ಸ್ಥಳಗಳನ್ನು ಮೀಸಲಿರಿಸಿ, ಅಂಕಪಟ್ಟಿ ಆಧಾರದ ಮೇಲೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ. ಮಹಿಳೆಯರೂ ಅಧ್ಯಯನಕ್ಕೆ ಬರುತ್ತಾರೆ. ೧೯೮೫ರಿಂದ ಆರಂಭವಾದ ಈ ಪರಂಪರೆಯಲ್ಲಿ ಎಂ.ಲೀಲಾ, ಆರ್.ಲಕ್ಷ್ಮಿ, ಬಿ.ಉಮಾದೇವಿ, ಗೌರಿಮಠ, ಆರ್.ಸುಧಾಕುಮಾರಿ, ಪಿ.ಜಯಶ್ರಿ, ಎಂ.ನಿರ್ಮಲಾ ಉತ್ತೀರ್ಣರಾಗಿ ದೂರದರ್ಶನದಲ್ಲಿ ಸೇವಾನಿರತರಾದರು. ಕಾಶ್ಮೀರದಿಂದ ಇಬ್ಬರು ಮತ್ತು ಗುಜರಾತಿನಿಂದ ಒಬ್ಬ ಮಹಿಳೆ ಅಭ್ಯಾಸ ಮಾಡಿದರು. ಈಗ ಮೂರು ವರ್ಷಗಳ ಅವಧಿಯ ಛಾಯಾಗ್ರಹಣ, ಧ್ವನಿಗ್ರಹಣ ಮತ್ತು ಧ್ವನಿ ತಾಂತ್ರಿಕತೆ (Sound Recording & Sound Engineering) ಎಂಬ ಎರಡು ವ್ಯಾಸಂಗ ವಿಷಯಗಳು ಇವೆ.

(ಚಿತ್ರ ೪) ಚಲನಚಿತ್ರ ಮತ್ತು ದೂರದರ್ಶನ ಸಂಸ್ಥೆಯ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಒಂದಕ್ಕಿಂತ ಹೆಚ್ಚು ಕ್ಯಾಮರಾ ಬಳಸಿ ಚಿತ್ರಣ ಹಾಗೂ ಜೊತೆಯಲ್ಲೇ ಚಿತ್ರದ ಸಂಕಲನ ಮಾಡುವ ಸಂಕೀರ್ಣ ಶಿಕ್ಷಣ

ಟೆಲಿವಿಷನ್ ಬೆಳೆಯುತ್ತಿರುವ ಕ್ಷೇತ್ರವಾದ್ದರಿಂದ ಈ ಎರಡೂ ವ್ಯಾಸಂಗ ಕ್ರಮಗಳಲ್ಲಿ ಹೆಚ್ಚಿನ ವ್ಯಾಸಂಗ ವಿಷಯಗಳಾಗಿ ಟೆಲಿವಿಷನ್‌ಗೆ ಸಂಬಂಧಪಟ್ಟಂತೆ ವೀಡಿಯೊ ಛಾಯಾಗ್ರಹಣ, ಧ್ವನಿಮುದ್ರಣ, ವೀಡಿಯೊ ಸಂಕಲನಗಳ ಬಗ್ಗೆ ಆಧುನಿಕ ಉಪಕರಣಗಳ ಜೊತೆಗೆ ತರಬೇತಿ, ಕಿರುಚಿತ್ರ ನಿರ್ಮಾಣಕ್ಕೆ ಅವಕಾಶ ನೀಡಲಾಗುತ್ತದೆ. ಇವಲ್ಲದೆ ಸಿನಿಮಾ ವಿಷಯ ಕುರಿತಂತೆ ಮೊದಲಿನಿಂದಲೂ ಪಾಲಿಸುತ್ತಿದ್ದ ಪಠ್ಯಕ್ರಮದಂತೆ ಛಾಯಾಗ್ರಹಣ, ಧ್ವನಿಗ್ರಹಣದ ವಿದ್ಯಾರ್ಥಿಗಳಿಗೆ ಚಿತ್ರಸಾಹಿತ್ಯ ರಚನೆ (script writing), ಚಿತ್ರ ನಿರ್ಮಾಣ ನಿರ್ವಹಣೆ (Film production orientation), ಚಲನಚಿತ್ರ ನಿರ್ದೇಶನ, ಸಂಕಲನ ಇವುಗಳ ಜೊತೆಗೆ ಸಂಗೀತ, ಅಭಿನಯ ಕುರಿತು ಹೆಚ್ಚಿನ ಜ್ಞಾನ ಒದಗಿಸುವರು.

ಛಾಯಾಗ್ರಹಣ ವಿಭಾಗದಲ್ಲಿ ಈಗಾಗಲೇ ಇರುವ ಚಲನಚಿತ್ರ ತಂತ್ರಕ್ಕೆ ಸಂಬಂಧಪಟ್ಟ ಹಲವಾರು ಉಪಕರಣಗಳು ತಂತ್ರದ ದೃಷ್ಟಿಯಿಂದ ಹಳೆಯದಾದರೂ, ಅಧ್ಯಯನ ಹಾಗೂ ಚಲನಚಿತ್ರ ಇತಿಹಾಸ ದೃಷ್ಟಿಯಿಂದ ಅವಶ್ಯವಾಗಿ ಬೇಕಾದಂಥವು. ಇದರಲ್ಲಿ ಸ್ಥಿರಚಿತ್ರ (Still Photography) ಗಳಿಗೆ ಸಂಬಂಧಪಟ್ಟಂತೆ ಲಿನ್‌ಹಾಫ್, ಯಾಶಿಕಾ, ರೋಲಿಫ್ಲೆಕ್ಸ್ ಕ್ಯಾಮರಾಗಳು ಹಾಗೂ 3D ವ್ಯೂ ಮಾಸ್ಟರ್ ಇವೆ. ಈ ಸರ್ವ ಉಪಕರಣಗಳ ಜೊತೆಗೆ ನಿಕಾನ್ ಕ್ಯಾಮರಾ ಸೇರಿದೆ. ಈ ಮೊದಲು ಕಪ್ಪು-ಬಿಳುಪು ಕತ್ತಲೆ ಕೋಣೆ ಉಪಕರಣಗಳಲ್ಲಿ ಒಂದು ಎನ್‌ಲಾರ್ಜರ್ ಹಾಗೂ ಕಾಂಟ್ಯಾಕ್ಟ್ ಫ್ರೇಮ್ ಪ್ರಿಂಟರ್ ಹೊಂದಿದ್ದರೆ, ಈಗ ವರ್ಣಲ್ಯಾಬ್ ಜೊತೆಗೆ ಡ್ರಸ್ಟ್ ಎನ್‌ಲಾರ್ಜರ್, ವರ್ಣ ಸ್ಥಿರಚಿತ್ರ ನೆಗೆಟಿವ್ ಸಂಸ್ಕರಣ ಘಟಕ, ವರ್ಣ ವಿಶ್ಲೇಷಕಗಳನ್ನು ಹೊಂದಿವೆ. ೧೬ ಎಂ.ಎಂ. ಪಿಲ್ಲಿಯರ್ಡ್ ಬೋಲೆಕ್ಸ್ ಮತ್ತು ಅರಿಕಾನ್ ಮೂವಿ ಕ್ಯಾಮರಾಗಳಿದ್ದು, ೩೫ ಎಂ.ಎಂ.ನಲ್ಲಿ ಎರ್ರಿಫ್ಲೆಕ್ಸ್ III ಹಾಗೂ ಮಿಚೆಲ್ ಕ್ಯಾಮರಾ ಹೊಂದಿದೆ. ಈಗ ಅವಕ್ಕೆ ಎರ್ರಿಫ್ಲೆಕ್ಸ್ 535B ಕ್ಯಾಮರಾ, ಅದಕ್ಕೆ ವೀಡಿಯೊ ಅಸಿಸ್ಟ್ ಸೌಲಭ್ಯವೂ ಇದೆ. ಕಪ್ಪು-ಬಿಳುಪು ಮೂವಿ ಸಂಸ್ಕರಣ ಘಟಕದ ಅಂಗವಾಗಿ ಅಂಡ್ರಿ-ದೆಬ್ರಿ ಪ್ರಿಂಟರ್, ಡೆವಲಪರ್ ಘಟಕಗಳಿವೆ. ಸಂಕಲನ ವಿಭಾಗದಲ್ಲಿ ೩೫ ಎಂ.ಎಂ. ಮೂವಿಯೋಲಾ, ಫಿಲಂ ಸಿಂಕ್ರೊನೈಜರ್, ಫಿಲಂ ವೈಂಡರ್, ಸ್ಪ್ಲೈಸರ್ ಹಾಗೂ ೧೬ ಮತ್ತು ೩೫ ಎಂ.ಎಂ. ಪೋರ್ಟೆಬಲ್ ಪ್ರೊಜೆಕ್ಟರ್ ಹೊಂದಿದೆ. ಈಗ ಅತ್ಯಾಧುನಿಕವಾದ ಟಿ.ವಿ. ತಂತ್ರಜ್ಞಾನಕ್ಕೆ ಸಂಬಂಧಪಟ್ಟ ಸೋನಿ ಬೀಟಾ ಕ್ಯಾಮರಾ 637 ಕ್ಯಾಮಕಾರ್ಡರ್, ಸೋನಿ ಹೈಬ್ಯಾಂಡ್ ಯುಮ್ಯಾಟಿಕ್ಸ್ 637 ಮತ್ತು ವಿದ್ಯಾರ್ಥಿಗಳು ಉಪಯೋಗಿಸಿ ಕಲಿಯಲು ಸೂಪರ್ ವಿಎಚ್‌ಎಸ್ 3 ಸಿಸಿಡಿ-ಜೆವಿಸಿ ಕ್ಯಾಮರಾ, ಪ್ಯಾನಾಸೋನಿಕ್ ಸಿಸಿಡಿ ಕ್ಯಾಮರಾ ಹಾಗೂ ರಿಕಾರ್ಡರ್, ಸೋನಿ ಕಲರ್ ಮಾನಿಟರ್ಸ್, ಎಂಎಕ್ಸ್50 ವೀಡಿಯೊ ಸ್ವಿಚ್ಚರ್, ಸಿಂಕ್ ಜನರೇಟರ್, ಮಲ್ಟಿಮೀಡಿಯಾ ಸೆಟ್‌ಅಪ್ ಹೀಗೆ ಸರ್ವ ವಿಧದಲ್ಲೂ ಸುಸಜ್ಜಿತ, ಸಮರ್ಪಕ ಉಪಕರಣ ಹೊಂದಿದೆ.

ಇದೇ ರೀತಿ ಧ್ವನಿಗ್ರಹಣ ವಿಭಾಗದಲ್ಲಿ ಈ ಮೊದಲು ಲಭ್ಯವಿದ್ದ ವೆಸ್ಟ್ರೆಕ್ಸ್ ಕಂಪನಿಯ ಸಿಂಗಲ್ ಟ್ರ್ಯಾಕ್ ರಿಕಾರ್ಡರ್, ಫೋರ್ ಟ್ರ್ಯಾಕ್ ರಿಕಾರ್ಡರ್, ರಿ-ರಿಕಾರ್ಡರ್, ಮಿಕ್ಸರ್ ಮತ್ತು ಇಂಟರ್‌ಲಾಕ್ ಸೌಲಭ್ಯವಿರುವ ಪ್ರೊಜೆಕ್ಟರುಗಳು, ಜೊತೆಗೆ ಸಿಂಪ್ಲೆಕ್ಸ್ ಪ್ರೊಜೆಕ್ಟರ್, ಆರ್.ಸಿ.ಎ. ಆಪ್ಟಿಕಲ್ ರಿಕಾರ್ಡರ್, ೧೬ ಎಂ.ಎಂ. ಮೌರರ್ ಆಪ್ಟಿಕಲ್ ರಿಕಾರ್ಡರ್, ಬಿಇಎಲ್ ತಯಾರಿಕೆಯ ಹಾಗೂ ನಿಪ್ಪಾನ್ ಕಂಪನಿಯ ವೃತ್ತಿಪರ ಟೇಪ್‌ರಕಾರ್ಡರ್‌ಗಳು, ಮೆಲ್ಟ್ರಾನ್ ಪೋರ್ಟೆಬಲ್ ರಿಕಾರ್ಡರ್‌ಗಳನ್ನು ಹೊಂದಿವೆ. ಈ ವಿಭಾಗಕ್ಕೆ ರಿ-ರಿಕಾರ್ಡಿಂಗ್ ಸ್ಟುಡಿಯೋದಲ್ಲಿ ಅತ್ಯಾಧುನಿಕವಾದ ೨೪ ಚಾನಲ್‌ಗಳ ಸ್ಟೂಡರ್ ಆಡಿಯೋ ಮಿಕ್ಸರ್, ಟಾಸ್ಕ್ಯಾಮ್ ಮಲ್ಟಿಟ್ರ್ಯಾಕ್ ಡಿಜಿಟಲ್ ರಿಕಾರ್ಡರ್, ಸೊಂಡೋರ್ ಫೋರ್‌ಟ್ರ್ಯಾಕ್ ರಿಕಾರ್ಡರ್-ರಿಪ್ರೊಡ್ಯೂಸರ್, ರಾಕ್ ಎಂಡ್ ರೋಲ್ ಪ್ರೊಜೆಕ್ಟರ್-ಸಿನಿಮಾಸ್ಕೋಪ್ ಹಾಗೂ ವೀಡಿಯೊ ಸೌಲಭ್ಯ ಸಹಿತ ಹೊರಾಂಗಣ ಧ್ವನಿಗ್ರಹಣಕ್ಕೆ ಪೋರ್ಟೆಬಲ್ ಡಿಜಿಟಲ್ ರಿಕಾರ್ಡರ್, ಕಾರ್ಡ್‌ಲೆಸ್ ಮೈಕ್ರೋಫೋನ್‌ಗಳು ಲಭ್ಯವಿವೆ. ಚಿತ್ರೀಕರಣ ನಂತರದ ವೀಡಿಯೊ ಕಾರ್ಯಕ್ಕೆ 'ನಾನ್ ಲೀನಿಯರ್ ಎಡಿಟಿಂಗ್' ಪದ್ಧತಿಯ ಬೀಟಾಕ್ಯಾಂ ರಿಕಾರ್ಡರ್, ಮ್ಯಾಜಿಕ್ ವೇವ್ ಸ್ಪೆಷಲ್ ಎಫೆಕ್ಟ್ ಜನರೇಟರ್, ಫೋರ್ ಟ್ರ್ಯಾಕ್ ಪೋಟಾನ್ ಸ್ಟುಡಿಯೋ, ಆಡಿಯೋ ಕಾರ್ಯಕ್ಕೆ 'ಸೌಂಡ್‌ಸ್ಕೋಪ್' ಡಿಜಿಟಲ್ ಆಡಿಯೋ ವರ್ಕ್ ಸ್ಟೇಷನ್, ಎಫೆಕ್ಟ್ಸ್ ಲೈಬ್ರರಿ, ಮಲ್ಟಿಟ್ರ್ಯಾಕ್ ಡಿಎ ೮೮ ಹಾಗೂ ಡಿಎ-೨೦ ರಿಕಾರ್ಡರ್, ಎಂಪ್ಲಿಫೈಯರ್, ಸ್ಪೀಕರ್ ಇವೆ. ಇದಲ್ಲದೆ ಸರ್ವ ಸುಸಜ್ಜಿತ ಎಲೆಕ್ಟ್ರಾನಿಕ್ ಲ್ಯಾಬ್ ಹಾಗೂ ಕಂಪ್ಯೂಟರ್ ಲ್ಯಾಬ್ ಸಹ ಇದೆ.

ಈಗ ಲಭ್ಯವಿರುವ ಉಪಕರಣಗಳು ಹಾಗೂ ಸೌಲಭ್ಯಗಳನ್ನು ಬಳಸಿ ಸರ್ಕಾರಿ ಸೇವೆಯಲ್ಲಿ ಈಗಾಗಲೇ ಇರುವ ಶಿಕ್ಷಕ ಸಿಬ್ಬಂದಿ ಹಾಗೂ ಶಿಕ್ಷಕೇತರ ಸಿಬ್ಬಂದಿಗಳ ಜೊತೆ ಸರ್ಕಾರ ಒಪ್ಪಿಗೆ ನೀಡಿರುವ ಹುದ್ದೆಗಳಿಗೆ ಅಗತ್ಯವಾದ ಮಾನವಶಕ್ತಿಯನ್ನು ನೇಮಿಸಿದಲ್ಲಿ ವೀಡಿಯೊ ಎಡಿಟಿಂಗ್ ಹಾಗೂ ಬ್ರಾಡ್‌ಕಾಸ್ಟ್ ಇಂಜಿನಿಯರಿಂಗ್ ಎಂಬ ಈ ಎರಡು

ಹೊಸ ವ್ಯಾಸಂಗ ಕ್ರಮಗಳನ್ನು ಪ್ರಾರಂಭ ಮಾಡಬಹುದು. ಇದರಿಂದ ಈಗ ಟಿ.ವಿ.ಮಾಧ್ಯಮದಲ್ಲಿ ಅತಿ ಬೇಡಿಕೆಯಿರುವ ಈ ತಂತ್ರಜ್ಞರನ್ನು ಒದಗಿಸುವಲ್ಲಿ ಈ ಸಂಸ್ಥೆ ಮಹತ್ವದ ಪಾತ್ರ ವಹಿಸಬಲ್ಲದು.

ವಿದ್ಯಾರ್ಥಿಗಳಿಗೆ ಕಾರ್ಯಶೀಲವಾಗಿ ಕಲಿಯಲು ಚಿತ್ರರಂಗದೊಡನೆ ನಿರ್ಮಾಣ ಚಟುವಟಿಕೆಯಲ್ಲಿ ಭಾಗವಹಿಸಲು ಅವಕಾಶವೊದಗಿದಾಗ ಮಾತ್ರ ಸಾಧ್ಯ. ಈ ನಿಟ್ಟಿನಲ್ಲಿ ಸಂಸ್ಥೆ ತನ್ನಲ್ಲಿರುವ ಚಲನಚಿತ್ರ ನಿರ್ಮಾಣಕ್ಕೆ ಅಗತ್ಯವಾದ ಉಪಕರಣಗಳನ್ನು ಚಲನಚಿತ್ರ ನಿರ್ಮಾಪಕರಿಗೆ ಒದಗಿಸಿ, ಜೊತೆಗೆ ವಿದ್ಯಾರ್ಥಿಗಳನ್ನು ತೊಡಗಿಸುವ ಕಾರ್ಯಕ್ರಮ ಹೊಂದಿದೆ. ಈ ಸಂಸ್ಥೆಯಲ್ಲಿ ಹೊರಾಂಗಣ, ಒಳಾಂಗಣ ಚಿತ್ರೀಕರಣಕ್ಕೆ ಅಗತ್ಯ ಉಪಕರಣಗಳು, ಧ್ವನಿ ಮುದ್ರಣ ಹಾಗೂ ಸಂಕಲನ ಸೌಲಭ್ಯಗಳನ್ನು ಹೊಂದಿದೆ.

ಇದೇ ರೀತಿ, ಧ್ವನಿಗ್ರಹಣ ವಿಭಾಗದಲ್ಲಿ ಹಾಡುಗಳ ಧ್ವನಿಮುದ್ರಣಕ್ಕೆ ಸರ್ವರೀತಿಯಿಂದ ಧ್ವನಿ ಚಿಕಿತ್ಸೆ ಪಡೆದಿರುವ (Accostically treated), ಹವಾನಿಯಂತ್ರಿತ ಸ್ಟುಡಿಯೋ, ಡಬ್ಬಿಂಗ್, ರಿ-ರಿಕಾರ್ಡಿಂಗ್‌ಗೆ ಅನುಕೂಲಗಳು ಹಾಗೂ ಹೊರಾಂಗಣ ಸಿನಿಮಾ ಧ್ವನಿಮುದ್ರಣಕ್ಕೆ, ಜೊತೆಗೆ ಪ್ರದರ್ಶನಕ್ಕೆ ಚಿತ್ರಮಂದಿರದ ಅನುಕೂಲವೂ ಇದೆ. ಇವೆಲ್ಲವನ್ನು ಚಿತ್ರೋದ್ಯಮ, ಟಿ.ವಿ. ರಂಗದವರಿಗೆ ಬಾಡಿಗೆಗೆ ಕೊಡಲು ಸಂಸ್ಥೆ ಸಿದ್ಧವಿದೆ. ಇದರ ಹಿಂದೆ ಕೇವಲ ಸರ್ಕಾರಕ್ಕೆ ಆದಾಯ ತಂದುಕೊಡುವ ಉದ್ದೇಶವಿರದೇ ಉದ್ಯಮಗಳು ತಮಗೆ ಅಗತ್ಯವಿರುವ ಮಾನವ ಶಕ್ತಿಯನ್ನು ತಾವೇ ಪೋಷಿಸಿ, ರೂಪಿಸುವ ಹೊಣೆಗಾರರೂ ಆಗುತ್ತಾರೆ. ಈ ದೃಷ್ಟಿಯಿಂದ ಎರಡೂ ಉದ್ಯಮಗಳು ಸಹಕರಿಸಬೇಕಿದೆ. ಬೆಂಗಳೂರು ನಗರದಿಂದ ಸ್ವಲ್ಪ ದೂರವಿರುವ ಈ ಕೇಂದ್ರಕ್ಕೆ ಸರ್ಕಾರ ತಕ್ಷಣದಲ್ಲಿ ಉತ್ತಮ ರಸ್ತೆ ಹಾಗೂ ಅಲ್ಲಿಗೆ ಸುಲಭವಾಗಿ ತಲುಪಲು ಸಾರಿಗೆ ವ್ಯವಸ್ಥೆ, ಪ್ರವಾಸೋದ್ಯಮ ಇಲಾಖೆಯ ಹೋಟೇಲು, ವಿದ್ಯಾರ್ಥಿಗಳಿಗೆ ವಸತಿಗೃಹ ಒದಗಿಸಿದರೆ ಆಗ ಈ ಸಂಸ್ಥೆಯೊಡನೆ ಒಡನಾಟ ಸುಲಭವಾಗಬಹುದು.

ಇದಲ್ಲದೇ ಈ ಸಂಸ್ಥೆಯು ಶೈಕ್ಷಣಿಕ ಸಿಬ್ಬಂದಿಗಳ ಮಾರ್ಗದರ್ಶನ ಹಾಗೂ ಚಿತ್ರೋದ್ಯಮದ ಸಹಕಾರದಿಂದ ವಿದ್ಯಾರ್ಥಿಗಳು ಪ್ರತಿವರ್ಷ ಕಿರುಚಿತ್ರ, ಸಾಕ್ಷ್ಯಚಿತ್ರ, ಟೆಲಿಚಿತ್ರ ತಯಾರಿಸಿ ಹಲವಾರು ವಾಹಿನಿಗಳ ಮೂಲಕ ಜನರನ್ನು ಹಾಗೂ ಉದ್ಯಮವನ್ನು ಸುಲಭವಾಗಿ ತಲುಪಿ ಉದ್ಯೋಗಾವಕಾಶ ನಿರ್ಮಿಸಲು ನೆರವಾಗಬಹುದು. ಇಲ್ಲಿ ತರಬೇತಿ ಪಡೆದವರು ಈಗಾಗಲೇ ಸಾಧಿಸಿರುವಂತೆ ಇನ್ನೂ ಅನೇಕರು ವೀಡಿಯೊ ಉಪಕರಣಗಳನ್ನು ಬಾಡಿಗೆಗೆ ಕೊಡುವ ಸೌಲಭ್ಯ ಇರುವ ಘಟಕಗಳನ್ನು ತೆರೆಯಬಹುದು.

ಇಲ್ಲಿನ ಛಾಯಾಗ್ರಹಣ ವಿಭಾಗಕ್ಕೆ ಮುಖ್ಯಾಧಿಕಾರಿಯಾಗಿ (H.O.D) ಸೇವೆ ಸಲ್ಲಿಸಿದವರು - ಲಕ್ಷ್ಮೀನರಸು, ಟಿ.ಕಾಶೀನಾಥ, ಲಕ್ಷ್ಮೀನಾರಾಯಣ, ಬಿ.ಮರುಳಪ್ಪ, ಕೆ.ಸಿ.ನರಸಿಂಹಯ್ಯ ಹಾಗೂ ಈಗ ಎಸ್.ವೆಂಕಟೇಶಮೂರ್ತಿ. ಇವರಿಗೆ ನೆರವಾಗಿ ಅಶ್ವತ್ಥನಾರಾಯಣಶೆಟ್ಟಿ, ಕೆ.ವಿ.ವೀರಣ್ಣ, ತ್ಯಾಗರಾಜ ಅರಸ್, ಭೈರಪ್ಪ, ಅ.ವಿಜಯಕುಮಾರ ತಮ್ಮ ಸೇವೆ ನೀಡಿದರು. ಇದೇ ರೀತಿ ಧ್ವನಿ ವಿಭಾಗದಲ್ಲಿ ಮುಂಬೈ ಕ್ಸೇವಿಯರ್ ಇನ್‌ಸ್ಟಿಟ್ಯೂಟ್‌ನಿಂದ ಬಂದ ಎ.ಎನ್.ದೇಸಾಯಿ, ದ್ವಾರಕಾನಾಥ್, ರಾಮಮೂರ್ತಿ, ಕೇಶವಮೂರ್ತಿ ಹಾಗೂ ಈಗ ಎಸ್.ಡಿ.ಪ್ರಸಾದ್ (H.O.D) ಮುಖ್ಯಸ್ಥರಾಗಿರುವರು. ಇವರಿಗೆ ನೆರವಾಗಿ ಜೆ.ರಮೇಶ್, ಎಸ್.ರೇಣುಕಾನಾಯ್ಡು ತಮ್ಮ ಸೇವೆ ನೀಡುತ್ತಿರುವರು. ಈ ಸಂಸ್ಥೆಗೆ ಈಗಲೂ ಹೊರರಾಜ್ಯಗಳಿಂದ ವಿದ್ಯಾರ್ಥಿಗಳು ಅಧ್ಯಯನಕ್ಕಾಗಿ ಪ್ರವೇಶ ಪಡೆಯುತ್ತಿದ್ದಾರೆ. ಈ ಮೊದಲು ನಿರಾಶ್ರಿತರು, ಬೇರೆ ರಾಜ್ಯ ಸರ್ಕಾರಗಳು, ಕೇಂದ್ರ ಸರ್ಕಾರ ಕರ್ತವ್ಯದ ಮೇಲೆ ಕಳುಹಿಸಿದವರನ್ನು (On Deputation) ತರಬೇತಿಗೆ ಸೇರಿಸುತ್ತಿದ್ದರು. ಈಗ ವಿಶ್ವಬ್ಯಾಂಕ್ ನೆರವಿನ ನಿಯಮದಿಂದಾಗಿ ಕೆಲ ರಾಜ್ಯಗಳು ಈ ಸೌಲಭ್ಯ ಪಡೆಯಲು ಅರ್ಹವಾಗಿವೆ. ಇಲ್ಲಿಂದ ಹೊರಬಂದ ಅನೇಕ ಕನ್ನಡಿಗರು, ದೇಶ-ವಿದೇಶದಲ್ಲಿ ಉದ್ಯೋಗವಕಾಶ ಪಡೆದಿದ್ದಾರೆ. ಇವರೆಲ್ಲರ ಬಗ್ಗೆ, ಮುಂದೆ ಶಿಕ್ಷಣ ಮುಗಿಸಿ ಹೊರಡುವವರ ಬಗ್ಗೆ ಮಾಹಿತಿ ದಾಖಲಿಸುವುದು ಮುಂದಿನ ಅಧ್ಯಯನ ದೃಷ್ಟಿಯಿಂದ ಮುಖ್ಯ.

ಪ್ರತಿಭಾವಂತರು

ಈ ಸಂಸ್ಥೆಯಿಂದ ಉತ್ತೀರ್ಣರಾಗಿ ಹೊರಬಂದ ಕೆಲವರು ವಿವಿಧ ಕ್ಷೇತ್ರಗಳಲ್ಲಿ ಮಹತ್ತರ ಸಾಧನೆಯನ್ನು ಕೈಗೊಂಡಿದ್ದಾರೆ. ಸಮಗ್ರವಲ್ಲದಿದ್ದರೂ ಕೆಲವರ ಉಲ್ಲೇಖ ಇಲ್ಲಿ ಕೇವಲ ಕುತೂಹಲ ತಣಿಸಲು ಮಾತ್ರವಲ್ಲ, ನಮ್ಮ ಇತಿ-ಮಿತಿಯ ಕುರುಹಾಗಿ ಉಲ್ಲೇಖಿಸಲಾಗಿದೆ. ಕರ್ನಾಟಕ ರಾಜ್ಯ ಸರ್ಕಾರವು ರಾಜ್ಯ ಚಲನಚಿತ್ರ ಪ್ರಶಸ್ತಿಗಳನ್ನು ನೀಡಲು ಆರಂಭ ಮಾಡಿದ್ದು ೧೯೬೬-೬೭ನೇ ವರ್ಷದಿಂದ. ಅದರ ಮರುವರ್ಷವೇ, ೧೯೬೭-೬೮ರಲ್ಲಿ ಅತ್ಯುತ್ತಮ ಛಾಯಾಗ್ರಹಣ ಪ್ರಶಸ್ತಿ, ತಮ್ಮ ಕಪ್ಪು-ಬಿಳುಪು ಛಾಯಾಗ್ರಹಣಕ್ಕಾಗಿ 'ಬೆಳ್ಳಿಮೋಡ' ಚಿತ್ರಕ್ಕೆ ಪಡೆದವರು ಆರ್.ಎನ್.ಕೃಷ್ಣಪ್ರಸಾದ್.

೧೯೬೮-೬೯ರಲ್ಲಿ 'ನಮ್ಮ ಮಕ್ಕಳು' ಚಿತ್ರಕ್ಕಾಗಿ ಅತ್ಯುತ್ತಮ ಸಂಭಾಷಣಾ ಲೇಖಕರಾಗಿ, ಧ್ವನಿಗ್ರಹಣ ತಜ್ಞರಾಗಿದ್ದ ಆರ್.ಎನ್.ಜಯಗೋಪಾಲ್ ಈ ಪ್ರಶಸ್ತಿ ಪಡೆದು ತಮ್ಮ ಬಹುಮುಖ ಪ್ರತಿಭೆ ಮೆರೆದರು.

೧೯೭೩-೭೪ರಲ್ಲಿ 'ಭೂತಯ್ಯನ ಮಗ ಅಯ್ಯು' ಚಿತ್ರಕ್ಕೆ ಅತ್ಯುತ್ತಮ ನಟ ಪ್ರಶಸ್ತಿ ಪಡೆದವರು ಛಾಯಾಗ್ರಹಣ ತಜ್ಞ ಲೋಕೇಶ್. ಇದು ಅವರ ಪ್ರತಿಭೆ ಹಾಗೂ ಪಡೆದ ತರಬೇತಿಗೆ ಇನ್ನೊಂದು ಆಯಾಮ ನೀಡಿತು.

೧೯೭೪-೭೫ರಲ್ಲಿ ದ್ವಿತೀಯ ಅತ್ಯುತ್ತಮ ನಿರ್ದೇಶಕರೆಂದು 'ಕಂಕಣ' ಚಿತ್ರಕ್ಕಾಗಿ ಪ್ರಶಸ್ತಿ ಪಡೆದವರು ಛಾಯಾಗ್ರಹಣ ತಜ್ಞ ಎಂ.ಬಿ.ಎಸ್.ಪ್ರಸಾದ್.

೧೯೭೭-೭೮ರಲ್ಲಿ 'ಸ್ಪಂದನ' ಚಿತ್ರಕ್ಕಾಗಿ ಅತ್ಯುತ್ತಮ ಛಾಯಾಗ್ರಾಹಕ ಪ್ರಶಸ್ತಿ ಪಡೆದ ಇನ್ನೊಬ್ಬ ಯುವ ಪ್ರತಿಭೆ ಬಿ.ಸಿ.ಗೌರಿಶಂಕರ್.

೧೯೭೯-೮೦ರಲ್ಲಿ ಮಾದರಿಯೆಂಬಂತೆ ವರ್ಣಚಿತ್ರ 'ಮಿಂಚಿನ ಓಟ' ಹಾಗೂ ಕಪ್ಪು-ಬಿಳುಪು ಚಿತ್ರ 'ಅರಿವು' ಚಿತ್ರಕ್ಕಾಗಿ ಎರಡೂ ವಿಭಾಗದ ಅತ್ಯುತ್ತಮ ಛಾಯಾಗ್ರಾಹಕ ಪ್ರಶಸ್ತಿಯನ್ನು ಪಡೆದವರು ಬಿ.ಸಿ.ಗೌರಿಶಂಕರ್.

೧೯೮೦-೮೧ರಲ್ಲಿ 'ರಾಘವೇಂದ್ರ ವೈಭವ' ಚಿತ್ರದಲ್ಲಿ ಅಭಿನಯಕ್ಕಾಗಿ ಅತ್ಯುತ್ತಮ ನಟ ಪ್ರಶಸ್ತಿಯನ್ನು ಛಾಯಾಗ್ರಹಣ ತಜ್ಞ ಶ್ರೀನಾಥ್ ಪಡೆದರೆ, ಅದೇ ವರ್ಷ ವರ್ಣಚಿತ್ರ 'ಮರೆಯದ ಹಾಡು' ಛಾಯಾಗ್ರಹಣಕ್ಕೆ ಆರ್.ಎನ್.ಕೃಷ್ಣಪ್ರಸಾದ್ ಪ್ರಶಸ್ತಿ ಪಡೆದರು.

೧೯೮೨-೮೩ರಲ್ಲಿ 'ಪಲ್ಲವಿ ಅನುಪಲ್ಲವಿ'ಯ ಸಂಭಾಷಣೆಗೆ ಅತ್ಯುತ್ತಮ ಪ್ರಶಸ್ತಿ ಆರ್.ಎನ್.ಜಯಗೋಪಾಲ್ ಪಡೆದು, ಮಾತಿಗೂ ಧ್ವನಿಗೂ ಇರುವ ಸಂಬಂಧ ದೃಢಪಡಿಸಿದರು.

೧೯೮೩-೮೪ರಲ್ಲಿ 'ಅಮೃತ ಘಳಿಗೆ' ವರ್ಣಚಿತ್ರದ ಛಾಯಾಗ್ರಹಣಕ್ಕಾಗಿ ಅತ್ಯುತ್ತಮ ಪ್ರಶಸ್ತಿಯನ್ನು ಬಿ.ಎಸ್.ಬಸವರಾಜ್ ಪಡೆದು ಚಿತ್ರರಂಗದ ಗಮನ ಸೆಳೆದರು.

೧೯೮೪-೮೫ರಲ್ಲಿ 'ಅವಳ ಅಂತರಂಗ' ವರ್ಣಚಿತ್ರದ ಛಾಯಾಗ್ರಹಣಕ್ಕೆ ಮತ್ತೆ ಆರ್.ಎನ್.ಕೃಷ್ಣಪ್ರಸಾದ್ ಪಡೆದರೆ, ೧೯೮೫-೮೬ರಲ್ಲಿ ಬಿ.ಸಿ.ಗೌರಿಶಂಕರ್ 'ಧ್ರುವತಾರೆ' ಚಿತ್ರದ ಛಾಯಾಗ್ರಹಣಕ್ಕೆ ಪ್ರಶಸ್ತಿ ಪಡೆದರು. ಅದೇ ವರ್ಷ 'ಸ್ವಾಭಿಮಾನ'ದಲ್ಲಿ ಅರ್ಥಪೂರ್ಣ ಗೀತೆಗಳನ್ನು ಬರೆದು ಆರ್.ಎನ್. ಜಯಗೋಪಾಲ್ ಮತ್ತೊಮ್ಮೆ ತಮ್ಮ ಲೇಖನಿಯ ಜಯ ಸಾರಿದರು.

೧೯೯೧-೯೨ರಲ್ಲಿ 'ಗೌರಿಗಣೇಶ' ಚಿತ್ರಕ್ಕೆ ಚುರುಕಾದ ಹಾಸ್ಯ ಸಂಭಾಷಣೆ ಬರೆದ ಛಾಯಾಗ್ರಹಣ ತಜ್ಞ ಕುಣಿಗಲ್ ನಾಗಭೂಷಣ್ ಪ್ರಶಸ್ತಿ ಪಡೆದರೆ, ಬಿ.ಸಿ.ಗೌರಿಶಂಕರ್ 'ಮೈಸೂರು ಮಲ್ಲಿಗೆ' ಚಿತ್ರಕ್ಕೆ ಛಾಯಾಗ್ರಹಣ ಪ್ರಶಸ್ತಿ ಪಡೆದರು.

೧೯೯೪-೯೫ರಲ್ಲಿ 'ಯಾರಿಗೂ ಹೇಳ್ಬೇಡಿ' ಚಿತ್ರಕ್ಕೆ ನವಿರಾದ ಸಂಭಾಷಣೆ ಬರೆದು 'ಅತ್ಯುತ್ತಮ ಸಂಭಾಷಣಾ ಲೇಖಕ' ಪ್ರಶಸ್ತಿಯನ್ನು ಕುಣಿಗಲ್ ನಾಗಭೂಷಣ್ ಪಡೆದರೆ, ಅದೇ ವರ್ಷ 'ಅರಗಿಣಿ' ವರ್ಣಚಿತ್ರದ ಛಾಯಾಗ್ರಹಣಕ್ಕೆ ಅತ್ಯುತ್ತಮ ಪ್ರಶಸ್ತಿಯ ಗರಿಯನ್ನು ಇನ್ನೊಬ್ಬ ಯುವ ಪ್ರತಿಭೆ ಅರ್.ಮಂಜುನಾಥ ಪಡೆದರು.

೧೯೯೫-೯೬ರಲ್ಲಿ 'ಓಂ' ವರ್ಣಚಿತ್ರದ ಛಾಯಾಗ್ರಹಣಕ್ಕೆ ಬಿ.ಸಿ.ಗೌರಿಶಂಕರ್ ಪ್ರಶಸ್ತಿ ಪಡೆದರೆ, ೧೯೯೭-೯೮ರಲ್ಲಿ 'ಎ' ಚಿತ್ರಕ್ಕೆ ಅತ್ಯುತ್ತಮ ಧ್ವನಿಗ್ರಹಣ ಮಾಡಿ ಕೆ.ಎಸ್.ಮುರಳಿ ಈ ವಿಭಾಗದಲ್ಲಿ ಒಂದು ದಾಖಲೆಯನ್ನೇ ಸೃಷ್ಟಿಸಿದರು.

ಇವೆಲ್ಲವುದಕ್ಕೆ ಕಳಶವಿಟ್ಟಂತೆ, ೧೯೯೩-೯೪ರಲ್ಲಿ ವಿಶೇಷ ಬಹುಮಾನ ಪಡೆದ 'ಹೂವು ಹಣ್ಣು' ಚಿತ್ರಕ್ಕೆ ಛಾಯಾಗ್ರಹಣ ನೀಡಿದವರು ವಿ.ಕೆ.ಮೂರ್ತಿ. ಇವರು ಜಯಚಾಮರಾಜೇಂದ್ರ ಆಕ್ಯುಪೇಷನಲ್ ಇನ್‌ಸ್ಟಿಟ್ಯೂಟ್‌ನಲ್ಲಿ ಪದವಿ ಪಡೆದ ಪ್ರಥಮರು. ಹಿಂದಿ ನಟ ಗುರುದತ್ ಚಿತ್ರಗಳಿಗೆ ಛಾಯಾಗ್ರಹಣ ಸೇವೆ ನೀಡಿ, 'ಕಾಗಜ್ ಕೆ ಫೂಲ್' ಭಾರತದ ಪ್ರಥಮ ಸಿನಿಮಾಸ್ಕೋಪ್ ಚಿತ್ರದ 'ತಾರೆ' (Star Cameraman) ಯಾಗಿ ಮೆರೆದವರು.



(ಚಿತ್ರ ೫) ಬೆಂಗಳೂರಿನ ಚಲನಚಿತ್ರ ಮತ್ತು ದೂರದರ್ಶನ ಶಿಕ್ಷಣ ಕೇಂದ್ರದಲ್ಲಿ ಚಿತ್ರ ಪ್ರದರ್ಶನ ಮತ್ತು ವಿಡಿಯೋದಿಂದ ಸಿನಿ ಮಾಧ್ಯಮಕ್ಕೆ ಪರಿವರ್ತನೆ ಶಿಕ್ಷಣ ವಿಭಾಗ

ಕರ್ನಾಟಕದಲ್ಲಿ ರಾಜ್ಯ ಪ್ರಶಸ್ತಿಗಳನ್ನು ನೀಡುವುದಕ್ಕೂ ಮೊದಲೇ, ೧೯೫೭ರಲ್ಲಿ ರಾಷ್ಟ್ರ ಪ್ರಶಸ್ತಿ ಪಡೆದ ಚಿತ್ರ 'ಪ್ರೇಮದ ಪುತ್ರಿ'ಗೆ ಸಂಭಾಷಣೆ ಬರೆದ ಆರ್.ಎನ್.ಜಯಗೋಪಾಲರು ತಂದೆಯ ನಿರ್ದೇಶನದಲ್ಲಿ ದುಡಿದ ಖ್ಯಾತಿಗೆ ಪಾತ್ರರು.

ಇದಲ್ಲದೆ ಆರ್.ಎನ್.ಜಯಗೋಪಾಲ್ ಸ್ವತಂತ್ರ ನಿರ್ದೇಶಕರಾಗಿ ೧೯೬೮ರಲ್ಲಿ ಸರ್ಕಸ್ ಜೀವನ ಕುರಿತ ಮೊದಲ ಚಿತ್ರ 'ಧೂಮಕೇತು', ನಂತರ 'ಕೆಸರಿನ ಕಮಲ', ೧೯೭೯ರಲ್ಲಿ 'ಮುತ್ತು ಒಂದು ಮುತ್ತು', ೧೯೮೧ರಲ್ಲಿ 'ಮರೆಯದ ಹಾಡು', ೧೯೮೩ರಲ್ಲಿ 'ಮಕ್ಕಳೇ ದೇವರು', ೧೯೮೭ರಲ್ಲಿ 'ಹೃದಯ ಪಲ್ಲವಿ' ಚಿತ್ರಗಳನ್ನು ನೀಡಿದರು.

೧೯೭೧ರಲ್ಲಿ ರಾಷ್ಟ್ರಪ್ರಶಸ್ತಿ ಪಡೆದ 'ನಗುವ ಹೂವು' ಚಿತ್ರದ ಛಾಯಾಗ್ರಹಣ, ನಿರ್ದೇಶನ ನೀಡಿದವರು ಆರ್.ಎನ್.ಕೃಷ್ಣಪ್ರಸಾದ್.

೧೯೭೪ರಲ್ಲಿ ಎಂ.ಬಿ.ಎಸ್.ಪ್ರಸಾದ್ ನಿರ್ದೇಶನದ 'ಕಂಕಣ', ರಾಷ್ಟ್ರಮಟ್ಟದಲ್ಲಿ ಅತ್ಯುತ್ತಮ ಪ್ರಾದೇಶಿಕ ಚಿತ್ರಪ್ರಶಸ್ತಿ ಗಳಿಸಿತು. ಅಂತರರಾಷ್ಟ್ರೀಯ ಮಹಿಳಾವರ್ಷದ ಅಂಗವಾಗಿ ಬರ್ಲಿನ್ ಚಿತ್ರೋತ್ಸವದಲ್ಲಿ ಭಾಗವಹಿಸಿತು.

೧೯೭೫ರಲ್ಲಿ ಕುಣಿಗಲ್ ನಾಗಭೂಷಣ್ 'ಆಶೀರ್ವಾದ' ಚಿತ್ರ ನಿರ್ದೇಶಿಸಿದರೆ, ೧೯೮೦ರಲ್ಲಿ ಬೆಂಗಳೂರು ನಾಗೇಶ್ 'ಮಂಜಿನ ತೆರೆ' ಚಿತ್ರವನ್ನು ನೀಡಿದರು.

೧೯೭೯ರಲ್ಲಿ 'ದೊಂಬರ ಕೃಷ್ಣ' ನೀಡಿದ ಹೆಚ್.ಎಂ.ಕೆ.ಮೂರ್ತಿ, ೧೯೮೦ರಲ್ಲಿ ಮತ್ತೆ 'ರಾಜೇಶ್ವರಿ' ಚಿತ್ರ ನಿರ್ದೇಶಿಸಿದರು.

೧೯೮೭ರಲ್ಲಿ 'ಕೆಂಡದ ಮಳೆ', ೧೯೮೮ರಲ್ಲಿ 'ಏಳು ಸುತ್ತಿನ ಕೋಟೆ', ೧೯೯೦ರಲ್ಲಿ 'ಆಟ ಬೊಂಬಾಟ' ನಿರ್ದೇಶಿಸಿದವರು ಬಿ.ಸಿ.ಗೌರಿಶಂಕರ್.

೧೯೯೫ರಲ್ಲಿ 'ಹೆಂಡ್ತಿ ಎಂದರೆ ಹೀಗಿರಬೇಕು' ಹಾಗೂ ೧೯೯೯ರಲ್ಲಿ 'ಮೀಸೆ ಹೊತ್ತ ಗಂಡಸಿಗೆ ಡಿಮ್ಯಾಂಡಪ್ಪೋ ಡಿಮ್ಯಾಂಡು' ಚಿತ್ರವನ್ನು ತಮ್ಮ ಬಂಧು ಕಾಶೀನಾಥ್ ನಿರ್ದೇಶನದಲ್ಲಿ ಜಿ.ವಿ.ಉಮಾಪತಿ ಛಾಯಾಗ್ರಹಣ ಮಾಡಿದರು. ಈ ಪಟ್ಟಿಗೆ ಇತ್ತೀಚಿನ ಸೇರ್ಪಡೆ 'ಶ್' ಚಿತ್ರದ ಛಾಯಾಗ್ರಾಹಕ ಅಶೋಕ್ ಕಶ್ಯಪ್.

ಕನ್ನಡ ಚಿತ್ರರಂಗದಲ್ಲಿ ಇನ್ನೂ ಸಕ್ರಿಯವಾಗಿ ತಮ್ಮನ್ನು ಛಾಯಾಗ್ರಾಹಕರಾಗಿ ತೊಡಗಿಸಿಕೊಂಡಿರುವ ಕೆಲವರಲ್ಲಿ ಆರ್.ಸಿ.ಮಾಪಾಕ್ಷಿ, ವಸಂತಕುಮಾರ್, ಎಂ.ಎ.ರವೀಂದ್ರ, ಎ.ಎಸ್.ನಾರಾಯಣ ಅಯ್ಯಂಗಾರ್, ಜಾನಕೀರಾಮ್, ಎಚ್.ಜಿ.ರಾಜು ಉಲ್ಲೇಖನೀಯರು. ಇದೇ ರೀತಿ ಧ್ವನಿಗ್ರಹಣದಲ್ಲಿ ಈ ಮೊದಲು ಕೆ.ಎಫ್.ಐ.ಡಿ.ಸಿ.ಯಲ್ಲಿದ್ದ ಜೆ.ರಮೇಶ್ ಹಾಗೂ ಮಂಜುನಾಥ ಸೇವೆ ನೀಡಿದರೆ, ಚಿತ್ರರಂಗದಲ್ಲಿ ನಿರತರಾಗಿರುವವರು ಜಿ.ವಿ.ಸೋಮಶೇಖರ್ (ಸಂಕೇತ್), ಹಾಗೂ ಮುರಳಿ. ನಟರಾಗಿ ವಜ್ರಮುನಿ ಮತ್ತು ತ್ಯಾಗರಾಜ್ ಅರಸ್ ತಮ್ಮ ಸೇವೆ ಸಲ್ಲಿಸಿದ್ದಾರೆ.

ಸ್ಥಳೀಯ ಪತ್ರಿಕೆಗಳಲ್ಲಿ ಸ್ಥಿರಚಿತ್ರ ಛಾಯಾಗ್ರಾಹಕರಾಗಿ ಮೆರೆದವರು ಎಸ್.ಎಂ.ಸಾಗರ್, ಎಸ್.ರಾಮಸ್ವಾಮಿ, ಜಯರಾಮ್, ಭಗವಾನ್, ವಿ.ಶ್ರೀನಿವಾಸಮೂರ್ತಿ, ಬಿ.ಎಲ್.ಮುರಳೀಧರ್.

ಮುಂಬೈ ಚಿತ್ರರಂಗದಲ್ಲಿ ಮೆರೆದ ಛಾಯಾಗ್ರಾಹಕ ಪ್ರತಿಭೆಗಳಲ್ಲಿ ವಿ.ಕೆ.ಮೂರ್ತಿ, ಕೆ.ಮಲ್ಲಿಕ್, ಸಿ.ಎಸ್.ಪುಟ್ಟು, ಡಿ.ಕೆ.ಪ್ರಭಾಕರ್, ಪಿ.ಆರ್.ಕೆ.ರಾಮನ್, ಎಂ.ಸಂಪತ್, ಎಂ.ವಿ.ಶ್ರೀನಿವಾಸ್, ಕೆ.ಆರ್.ಮೂರ್ತಿ, ಕೆ.ಜಿ.ಪ್ರಭಾಕರ್, ಈಶ್ವರ್ ಕೆ.ಬಾಬು, ಬಿದರಿ, ಎಚ್.ಲಕ್ಷ್ಮೀ ನಾರಾಯಣ, ಜಿ.ಬಿ.ಕುಲಕರ್ಣಿ ಕೆಲವರು. ಇಲ್ಲಿಂದ ಬಂದ ಕನ್ನಡೇತರರಲ್ಲಿ ಚಮನ್ ದಿಲೀಪ್ ದತ್ತಾ, ಆನಂದ್ ಗಡ್ನಿಸ್, ಶ್ರೀನಿವಾಸ್ ಮಹಾಪಾತ್ರಾ, ಜೆಮಿನಿ ರಾಜೇಂದ್ರನ್, ರಾಜೇಂದ್ರನ್, ಗೋವಿಂದ ನಿಹಲಾನಿ, ಕೊಡಕ್ ಕೃಷ್ಣನ್, 'ಇಂದು' ಫಿಲಂನ ಕೆ.ಎನ್.ಸೋಮಶೇಖರ್ ಪ್ರಮುಖರು.

ಕೇಂದ್ರ ಸರ್ಕಾರದ ಫಿಲ್ಮ್ ಡಿವಿಜನ್ನಿನಲ್ಲಿ ಛಾಯಾಗ್ರಾಹಕ, ನಿರ್ದೇಶಕರಾಗಿದ್ದ ಎಸ್.ಎನ್.ಎಸ್.ಶಾಸ್ತ್ರಿ, ಹೆಚ್.ಎಂ.ಕೆ.ಮೂರ್ತಿ, ಹೆಚ್.ಎಸ್.ಅದ್ವಾನಿ, ಬಿ.ಎನ್.ಮೂರ್ತಿ, ಪ್ರಮೋದ್ ಪತಿ, ಬಿ.ಕೆ.ಪಾರ್ಥಸಾರಥಿ, ಎನ್.ಎಸ್.ಮೂರ್ತಿ, ಎ.ಎನ್.ಪರಮೇಶ್, ಪಿ.ಗಣೇಶ ರಾವ್, ಎ.ಎಸ್.ನಾಗರಾಜ್ ಕೆಲವು ಪ್ರಮುಖರು.

ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಛಾಯಾಗ್ರಾಹಕರಾಗಿ ಸೇವೆ ನೀಡಿದ ಹಲವಾರು ಪ್ರತಿಭೆಗಳಲ್ಲಿ ಎನ್.ರಾಮಚಂದ್ರಯ್ಯ, ಚಲಂ, ವಿ.ಎಸ್.ಎಂ.ರಾವ್, ಎನ್.ಕೆ.ದಾಸಪ್ಪ, ಕೆ.ವಿ.ಗುರುಪ್ರಸಾದ್, ಕೆಂಪಣ್ಣ, ಎಂ.ಸಿ.ಪರಪ್ಪ,ಎನ್.ಈಶ್ವರಯ್ಯ, ಬಿ.ಕೆ.ಇಂದುಪ್ರಕಾಶ್, ಎಸ್.ಆರ್.ಪುಟ್ಟಸ್ವಾಮಿ, ಟಿ.ಸೋಮಶೇಖರ್, ಎಸ್. ತಿಪ್ಪೆಸ್ವಾಮಿ, ಉದಯಶಂಕರ್, ಈಗ ಸೇವಾನಿರತರಾಗಿದ್ದವರಲ್ಲಿ ಕೆಲವು ಪ್ರಮುಖರು.

ಈಗ ದೂರದರ್ಶನದಲ್ಲಿ ಹಾಗೂ ಹಲವಾರು ಸ್ಯಾಟಲೈಟ್ ಚಾನಲ್‌ಗಳಲ್ಲಿ ಛಾಯಾಗ್ರಹಣ, ಧ್ವನಿಗ್ರಹಣ ಹಾಗೂ ಧ್ವನಿತಂತ್ರಜ್ಞಾನ ವಿಭಾಗದಲ್ಲಿ ಕಾರ್ಯನಿರತರಾಗಿರುವವರ ಕುರಿತು ಬರೆದರೆ ಅದೇ ಒಂದು ವಿಶೇಷ ಲೇಖನವಾದೀತು. ಇವರೆಲ್ಲ ಆಗಾಗ ಚಿತ್ರರಂಗದತ್ತ ಇಣುಕಿ ತಮ್ಮ ಪ್ರತಿಭೆ ಮೆರೆಯುವುದುಂಟು.

ಇನ್ನು ಮುಂದಾದರೂ ಟೆಲಿವಿಜನ್ ಕ್ಷೇತ್ರದ ಅವರ ಸಾಧನೆಯನ್ನು ಈಗ 'ಸರ್ಕಾರಿ ಫಿಲಂ ಅಂಡ್ ಟೆಲಿವಿಷನ್ ಇನ್‌ಸ್ಟಿಟ್ಯೂಟ್' ಹೊಸ ಶಿರೋನಾಮೆಯಲ್ಲಿ ಕಾರ್ಯ ಮುಂದುವರಿಸಿದ ಸಂಸ್ಥೆ ಈಗಿನಿಂದಲೇ ದಾಖಲಿಸಿದರೆ ಸಂಸ್ಥೆಗೂ, ಉದ್ಯಮಕ್ಕೂ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದಲೂ ಉತ್ತಮ ಕ್ರಮವಾದೀತು. ಆ ನಿಟ್ಟಿನಲ್ಲಿ ಸಂಸ್ಥೆ ಯೋಚಿಸಬೇಕು, ಯೋಜಿಸಬೇಕು.

ಪುಣೆಯ ಫಿಲಂ ಅಂಡ್ ಟೆಲಿವಿಷನ್ ಇನ್‌ಸ್ಟಿಟ್ಯೂಟ್

ಕಾಲು ಶತಮಾನದ ಅವಧಿ ಒಂದು ಸಂಸ್ಥೆಯ ಕಾಲಮಾನದಲ್ಲಿ ಒಂದು ದೊಡ್ಡ ಘಟ್ಟವೇನಲ್ಲ. ಆದರೂ ಅದು ಇಂತಹ ಅಲ್ಪಾವಧಿಯಲ್ಲಿ ರಾಷ್ಟ್ರ ಮಟ್ಟದಲ್ಲಿ ಜನತೆ ಚರ್ಚಿಸುವಂತಹ ಸಾಧನೆ ಮಾಡಿದಾಗ ಅದರ ಬಗ್ಗೆ ತಿಳಿದುಕೊಳ್ಳಬೇಕೆಂಬ ಕುತೂಹಲ ಎಲ್ಲರಿಗೂ ಇರುವುದು ಸಹಜ.

ಇದಕ್ಕೆ ಉದಾಹರಣೆ ಪುಣೆಯ ಫಿಲಂ ಇನ್‌ಸ್ಟಿಟ್ಯೂಟ್ ಎಂದು ಹೇಳಬಹುದು. ಇಂದು ಅಂತರರಾಷ್ಟ್ರೀಯ ಮಟ್ಟದಲ್ಲಿ ನಿರ್ದೇಶನ ಕ್ಷೇತ್ರದಲ್ಲಿ ಮಣಿಕೌಲ್, ಕುಮಾರ್ ಸಹಾನಿ, ಅಡೂರ್ ಗೋಪಾಲ ಕೃಷ್ಣನ್, ಗಿರೀಶ್ ಕಾಸರವಳ್ಳಿ, ಜಾನು ಬರುವಾ, ಅರುಣ ಖೋಪ್‌ಕರ್, ಕೇತನ್ ಮೆಹ್ತಾ, ಕುಂದನ್ ಷಹಾ, ಮುಜಫರ್ ಅಲಿ, ಶಾಹಜೀ ಕರುಣ್, ಬಾಲು ಮಹೇಂದ್ರ, ಅರುಣ (ವಿಕಾಸ್) ದೇಸಾಯಿ ಇವರ ಹೆಸರುಗಳು ಮಿಂಚಲು ಕಾರಣ ಅವರ ಕಲಾತ್ಮಕ ಕೃತಿಗಳಾದರೂ ಅವರ ಹಿಂದೆ ಇರುವ ಶಕ್ತಿರೂಪ ಸಂಸ್ಥೆ ಒಂದೇ, ಅದೇ ಪುಣೆಯ ಫಿಲಂ ಇನ್‌ಸ್ಟಿಟ್ಯೂಟ್.

(ಚಿತ್ರ ೬) ಪುಣೆ ಫಿಲಂ ಅಂಡ್ ಟೆಲಿವಿಷನ್ ಇನ್‌ಸ್ಟಿಟ್ಯೂಟ್‌ನಲ್ಲಿ ವಿದ್ಯಾರ್ಥಿಗಳಿಗೆ ಚಿತ್ರೀಕರಣ ತರಬೇತಿ

ಇದರಂತೆ ಅಭಿನಯ ಕ್ಷೇತ್ರದಲ್ಲಿ ಕೇವಲ ಮೆರೆಯದೇ ಪ್ರಶಸ್ತಿ ಗಳಿಸಿದ ಕಲಾವಿದರಲ್ಲೂ ಸಹ ರೆಹನಾ ಸುಲ್ತಾನಾ, ಸಾಧು ಮೆಹರ್, ಮಿಥುನ್ ಚಕ್ರವರ್ತಿ, ಜಯಬಾಧುರಿ, ಶಬಾನಾ ಆಜ್ಮಿ, ಶತ್ರುಘ್ನ ಸಿನ್ಹಾ, ಡ್ಯಾನಿ ಡೆಂಝೋಪಾ, ಅಸ್ರಾನಿ, ಪೈಂಟಲ್, ಅಮ್ಜದ್ ಖಾನ್, ಸುಭಾಷ್ ಘಾಯ್, ನವೀನ ನಿಶ್ಚಲ್, ರೀಟಾ ಭಾದುರಿ, ಶೈಲೇಂದ್ರ ಸಿಂಗ್ ಕೆಲವು ಪ್ರಮುಖರು.

ಇನ್ನು ತೆರೆಮರೆಯಲ್ಲಿ ದುಡಿವ ಹಲವಾರು ಕ್ಷೇತ್ರದ ಪ್ರತಿಭೆಗಳು ಇದೇ ಸಂಸ್ಥೆಯಿಂದ ಬಂದಿರುವುದು ಒಂದು ವಿಶೇಷ. ಇಂದು ಪ್ರಾದೇಶಿಕ ಚಿತ್ರರಂಗಕ್ಕೆ ಅಪಾರ ಕೊಡುಗೆ ನೀಡಿರುವವರಲ್ಲಿ ಈ ಇನ್‌ಸ್ಟಿಟ್ಯೂಟ್‌ನಿಂದ ಬಂದ ಪ್ರತಿಭೆಗಳೇ ಹೆಚ್ಚಿನವರು ಎಂಬುದು ಉಲ್ಲೇಖಾರ್ಹ ಸಂಗತಿ. ಇಂದಿಗೂ ಸಹ ರಾಷ್ಟ್ರ ಮಟ್ಟದಲ್ಲಿರಲಿ, ರಾಜ್ಯ ಮಟ್ಟದಲ್ಲಿರಲಿ, ಪ್ರಶಸ್ತಿಗಳಲ್ಲಿ ಸಿಂಹಪಾಲು ಪುಣೆ ಫಿಲಂ ಇನ್‌ಸ್ಟಿಟ್ಯೂಟ್‌ನ ಪದವೀಧರರಿಗೆ ಸಲ್ಲುತ್ತಿರುವುದು ಅಭಿಮಾನದ ಸಾಧನೆ ಎನ್ನಬಹುದು. ಆದರೆ ಇಷ್ಟು ಅವಧಿಯಲ್ಲಿ ಇಂತಹ ಸಾಧನೆ ಹೇಗೆ ಸಾಧ್ಯವಾಯಿತೆಂಬ ಪ್ರಶ್ನೆಗೆ ಈ ಸಂಸ್ಥೆಯ ಇತಿಹಾಸ ಕೆದಕುವುದೇ ಉತ್ತಮ ಮಾರ್ಗ ಎನ್ನಬಹುದು.

ಸ್ಥಾಪನೆ : ೧೯೫೧ರಲ್ಲಿ ಎಸ್.ಕೆ.ಪಾಟೀಲರ 'ಚಲನಚಿತ್ರ ವಿಚಾರಣಾ ಸಮಿತಿ' ವರದಿ ಆಧರಿಸಿ ೧೯೬೦ರಲ್ಲಿ ಭಾರತ ಸರ್ಕಾರವು ಒಂದು ವಿಶೇಷ 'ಕಾರ್ಯಾಂಗ ಆಜ್ಞೆ' (Executive Order) ಯ ಮೂಲಕ ಈ ಸಂಸ್ಥೆಯನ್ನು ಸ್ಥಾಪಿಸಿತು. ಈ ಉದ್ದೇಶಕ್ಕಾಗಿ ಆಗ ಪುಣೆಯಲ್ಲಿದ್ದ ನಿರ್ಮಾಪಕ-ನಿರ್ದೇಶಕ ವಿ.ಶಾಂತಾರಾಂ ಹಾಗೂ ಇತರ ಪಾಲುದಾರರಿಗೆ ಸೇರಿದ್ದ ಪ್ರಭಾತ್ ಸ್ಟುಡಿಯೋವನ್ನು - ಅದರ ೨೧ ಎಕರೆ ಜಮೀನು, ಅವರಲ್ಲಿದ್ದ ಕಟ್ಟಡ ಹಾಗೂ ಸಿನಿಮಾ ನಿರ್ಮಾಣದ ಉಪಕರಣಗಳ ಸಹಿತ - ಸುಮಾರು ಹನ್ನೊಂದು ಲಕ್ಷ ರೂಪಾಯಿಗಳಿಗೆ ಏಪ್ರಿಲ್ ೧೯೬೦ರಲ್ಲಿ ಖರೀದಿಸಿತು. ಈ ಕಾರ್ಯದಲ್ಲಿ ಆಗಿನ ವಾರ್ತಾ ಮತ್ತು ಪ್ರಸಾರ ಸಚಿವರಾಗಿದ್ದ ಬಿ.ವಿ.ಕೇಸ್ಕರ್ ಅಪಾರ ಆಸಕ್ತಿ ವಹಿಸಿದರು.

ಕೇಂದ್ರ ಸರ್ಕಾರದ ವಾರ್ತಾ ಮತ್ತು ಪ್ರಸಾರ ಸಚಿವಾಲಯವು ಫ್ರಾನ್ಸ್ ದೇಶದ ಪ್ಯಾರಿಸ್‌ನಲ್ಲಿರುವ 'ಇನ್‌ಸ್ಟಿಟ್ಯೂಟ್ ದೆಸ್ ಹೌಟೇಸ್ ಎಟ್ಯೂಡಸ್ ಸಿನಿಮಾಟೊಗ್ರಾಫಿಕ್ಸ್' (IDHEC - Institute Des Hautes Etudes Cinematographiques) ಸಂಸ್ಥೆಯ ನಿರ್ದೇಶಕರಾದ ರೆಮಿ ಟೆಸ್ನಿಯೊ (Remy Tessonneau) ಇವರ ಸಲಹೆಯ ಮೇರೆಗೆ ಐದು ವ್ಯಾಸಂಗ ವಿಷಯ ಹಾಗೂ ಪಠ್ಯಕ್ರಮವನ್ನು ೧೯೬೧ರಲ್ಲಿ ರೂಪಿಸಿತು. ಇದರಂತೆ (೧) ಚಲನಚಿತ್ರ ನಿರ್ದೇಶನ, (೨) ಚಲನಚಿತ್ರ ಕಥಾ ರಚನೆ, (೩) ಧ್ವನಿಗ್ರಹಣ ಹಾಗೂ ಧ್ವನಿ ತಂತ್ರಜ್ಞಾನ, (೪) ಚಲನಚಿತ್ರ ಛಾಯಾಗ್ರಹಣ, (೫) ಚಲನಚಿತ್ರ ಸಂಕಲನ - ಎಂದು ನಿರ್ಧರಿಸಲಾಯಿತು. ನಂತರ ಅದಕ್ಕೆ (೬) ಚಲನಚಿತ್ರ ಅಭಿನಯದ ವ್ಯಾಸಂಗ ಕ್ರಮವನ್ನು ಸೇರ್ಪಡೆ ಮಾಡಲಾಯಿತು. ೧೯೬೧, ಆಗಸ್ಟ್ ತಿಂಗಳಿನಿಂದ ೪೦ ವಿದ್ಯಾರ್ಥಿಗಳೊಂದಿಗೆ ನಿರಂತರ ವ್ಯಾಸಂಗ ಕ್ರಮ ಆರಂಭವಾಯಿತು. ಈ ಸಂಸ್ಥೆಗೆ ಈಗ ಭಾರತ ದೇಶದಿಂದ ಮಾತ್ರವಲ್ಲ ಆಫ್‌ಘಾನಿಸ್ತಾನ, ಸಿಲೋನ್, ನೇಪಾಳ, ಟಾಂಜಾನಿಯಾ, ನೈಜೀರಿಯಾ, ಜೋರ್ಡಾನ್, ಸಿಂಗಾಪೂರ್, ಚೀನಾ, ಇಂಡೋನೇಷಿಯಾ, ಫಿಲಿಫೈನ್ಸ್, ಮಲೇಷಿಯಾ, ಸೆನೆಗಾಲ್, ಬಲ್ಗೇರಿಯಾ, ಅಮೆರಿಕಾದಿಂದಲೂ ವಿದ್ಯಾರ್ಥಿಗಳು ಚಲನಚಿತ್ರ ಕ್ಷೇತ್ರದ ವಿವಿಧ ವಿಷಯಗಳ ಅಧ್ಯಯನಕ್ಕೆ ಬಂದಿರುವುದು ಒಂದು ವಿಶೇಷ. ಈ ಸಂಸ್ಥೆಗೆ ೧೯೭೧ರಲ್ಲಿ ಟೆಲಿವಿಷನ್ ತರಬೇತಿ ವಿಭಾಗ ಸೇರಿಸಿ ವಿಸ್ತರಣೆ ಮಾಡಿ ಇದನ್ನು 'ಫಿಲಂ ಅಂಡ್ ಟೆಲಿವಿಷನ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ' (FTII - Film and Television Institute of India) ಪುಣೆ, ಎಂದು ಮರುನಾಮಕರಣ ಮಾಡಲಾಯಿತು. ಈ ಸಂಸ್ಥೆ ಅಂತರರಾಷ್ಟ್ರೀಯ ಮಟ್ಟದ ILECT (International Liaison Centre of Cinema and Television Schools, Paris) ಇದರ ಸದಸ್ಯನಾಯಿತು. ಇದಲ್ಲದೇ ಯುನೆಸ್ಕೊ (UNESCO) ಗಾಗಿ ಪ್ರಾದೇಶಿಕ ತರಬೇತಿ ಕೇಂದ್ರವಾಗಿ ಕಾರ್ಯ ಕೈಗೊಳ್ಳತೊಡಗಿತು. ನಿರ್ದೇಶನ, ಚಿತ್ರಕಥೆ ರಚನೆ, ಛಾಯಾಗ್ರಹಣ, ಧ್ವನಿಗ್ರಹಣ - ಈ ವ್ಯಾಸಂಗ ವಿಷಯಗಳು ೩ ವರ್ಷ ಅವಧಿಯದಾಗಿದ್ದು, ಸಂಕಲನ ಹಾಗೂ ಅಭಿನಯದ ವ್ಯಾಸಂಗ ಕಾಲಾವಧಿ ೨ ವರ್ಷವೆಂದು ರೂಪಿತವಾಯಿತು. ಪ್ರತಿ ವ್ಯಾಸಂಗದ ಕ್ರಮದಲ್ಲೂ ೧೦ ವಿದ್ಯಾರ್ಥಿಗಳು ಹಾಗೂ ಅಭಿನಯದಲ್ಲಿ ಯುವಕ-ಯುವತಿ ಸೇರಿ ೨೦ ವಿದ್ಯಾರ್ಥಿಗಳು ಆಯ್ಕೆಯಾಗುವರು. ಈ ಆಯ್ಕೆಯನ್ನು ಭಾರತದ ಪ್ರಮುಖ ನಗರಗಳಾದ ದೆಹಲಿ, ಮುಂಬಯಿ, ಕಲ್ಕತ್ತ, ರಾಂಚಿ, ಅಲಹಾಬಾದ್, ಮದ್ರಾಸ್ ಇಲ್ಲಿ ಲಿಖಿತ ಪರೀಕ್ಷೆಯ ಮೂಲಕ ಹಾಗೂ ಇವರಲ್ಲಿ ಉತ್ತೀರ್ಣರಾದವರಿಗೆ ಪುಣೆಯಲ್ಲಿ ಮೌಖಿಕ ಪರೀಕ್ಷೆ (viva) ಮೂಲಕ ಅಂತಿಮವಾಗಿ ೮ ದೇಶಿ ವಿದ್ಯಾರ್ಥಿಗಳನ್ನು (೨ ಸ್ಥಳ ವಿದೇಶದ ವಿದ್ಯಾರ್ಥಿಗಳಿಗೆ ಮೀಸಲಿಟ್ಟು) ಆಯ್ಕೆ ಮಾಡುವರು. ಲಿಖಿತ ಪರೀಕ್ಷೆಯಲ್ಲಿ 'ಸಾಮಾನ್ಯ ಇಂಗ್ಲಿಷ್ ಜ್ಞಾನ', 'ಸಾಮಾನ್ಯ ಜ್ಞಾನ' ಹಾಗೂ 'ಸಿನಿಮಾ' ಬಗ್ಗೆ ಒಂದು ಪ್ರಶ್ನೆ ಪತ್ರಿಕೆ ಇದ್ದು, ಮೌಖಿಕದಲ್ಲಿ ನಿಮ್ಮ ಆಯ್ಕೆಯ ವ್ಯಾಸಂಗಕ್ರಮಕ್ಕೆ ನಿಮ್ಮಲ್ಲಿರುವ ವಿಶೇಷ ಗುಣಾರ್ಹತೆ (Special Aptitude) ಪರೀಕ್ಷೆ ಮಾಡಲಾಗುವುದು. ಈ ಮೌಖಿಕ ಸಮಿತಿಯಲ್ಲಿ ೬ ಜನರು ಆಯ್ಕೆ ಸದಸ್ಯರಾಗಿದ್ದು, ಚಿತ್ರರಂಗದ ಇಬ್ಬರು ಪ್ರಮುಖ ಅತಿಥಿಗಳು ಹಾಗೂ ವಿಷಯ ಪರಿಣಿತಿಯ ಇಬ್ಬರು ಪ್ರಮುಖರು ಮತ್ತು ಪ್ರಿನ್ಸಿಪಲ್, ಆಡಳಿತಾಧಿಕಾರಿ, ಇವರಿಂದ ಪ್ರತಿ ಅಭ್ಯರ್ಥಿಗೆ ಅರ್ಧ ತಾಸಿನ ಪ್ರಶ್ನೋತ್ತರ - ಚರ್ಚೆ ನಡೆಯುತ್ತದೆ. ಹೀಗಾಗಿ ಅಂತಿಮವಾಗಿ ಆಯ್ಕೆಯಾಗುವ ವಿದ್ಯಾರ್ಥಿಗಳು ರಾಷ್ಟ್ರ ಮಟ್ಟದಲ್ಲಿ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಮನೋವಿಜ್ಞಾನ, ತತ್ವಜ್ಞಾನ, ತರ್ಕಶಾಸ್ತ್ರ, ಗಣಿತ, ಸಾಹಿತ್ಯ, ವೈದ್ಯಕೀಯ, ಸಂಗೀತ, ನೃತ್ಯ, ಚಿತ್ರಕಲೆ ಇದರಲ್ಲಿ ಮಿಂಚಿದ ಪ್ರತಿಭೆಗಳು ಈ ಮಾಧ್ಯಮದ ಆಕರ್ಷಣೆಗೆ ಈಡಾಗಿ ಪ್ರವೇಶ ಪಡೆಯುವರು. ಕನಿಷ್ಠ ವಿದ್ಯಾರ್ಹತೆ ಇದ್ದು, ಚಿತ್ರರಂಗದಲ್ಲಿ ಅವರ ಸಂಬಂಧಿಕರು ಯಾರಾದರೂ ಇದ್ದರೆ ಅಂತಹವರಿಗೆ ಆಯ್ಕೆಯಲ್ಲಿ ಪ್ರಾಶಸ್ತ್ಯ ನೀಡಲಾಗುವುದು.

ಈ ಇನ್‌ಸ್ಟಿಟ್ಯೂಟ್‌ನಲ್ಲಿ ಯುವಕರಿಗೆ, ಯುವತಿಯರಿಗೆ ಪ್ರತ್ಯೇಕ ಹಾಸ್ಟೆಲು, ಊಟದ ವ್ಯವಸ್ಥೆ, ಕ್ಯಾಂಟೀನ್, ಚಿತ್ರೀಕರಣಕ್ಕೆ ಸ್ಟುಡಿಯೋ ಫ್ಲೋರುಗಳು, ಧ್ವನಿಗ್ರಹಣ ಸ್ಟುಡಿಯೋಗಳು, ಸಂಕಲನ ಕೋಣೆಗಳು, ಹೊರಾಂಗಣಕ್ಕೆ ಕಾಡು, ದೇವಾಲಯ, ಕೊಳ, ಹಿನ್ನೆಲೆಯಲ್ಲಿ ಹನುಮಾನ್ ಬೆಟ್ಟ, ಚಿತ್ರೀಕರಣಕ್ಕೆ ಆಧುನಿಕ ಉಪಕರಣಗಳು, ಹೊರಾಂಗಣ ಘಟಕ, ವಸ್ತ್ರಾಗಾರ, ವರ್ಣಾಲಂಕಾರ ಕೋಣೆ, ಕಲಾ ವಿಭಾಗ ಹಾಗೂ ತನ್ನದೇ ಆದ ಕಪ್ಪು-ಬಿಳುಪು ಸಂಸ್ಕರಣ ಕೇಂದ್ರ ಮತ್ತು ಪ್ರದರ್ಶನ ಮಂದಿರ ಹೊಂದಿರುವುದು ವಿಶೇಷ ಅನುಕೂಲ ಎನ್ನಬಹುದು.

ಇದಲ್ಲದೆ ಉತ್ತಮವಾದ ಪುಸ್ತಕ ಭಂಡಾರ ಇದೆ. ದೇಶ-ವಿದೇಶಗಳ ಚಲನಚಿತ್ರಗಳ ಸಂಗ್ರಹವಿರುವ 'ರಾಷ್ಟ್ರೀಯ ಚಲನಚಿತ್ರಾಗಾರ' (National Film Archives) ೧೯೬೪ರಲ್ಲಿ ಸ್ಥಾಪಿಸಲಾಗಿದ್ದು ಇದು ವಿದ್ಯಾರ್ಥಿಗಳ ನಿತ್ಯ ಉಪಯೋಗಕ್ಕೆ ಎಟಕುವಂತಿದೆ. ವಿಷಯ ನೈಪುಣ್ಯ ಪಡೆದ ಶಿಕ್ಷಕ ವರ್ಗವಲ್ಲದೆ, ಚಿತ್ರರಂಗದಿಂದ ಪ್ರತಿವರ್ಷವೂ ಅತಿಥಿ ಉಪನ್ಯಾಸಕರಾಗಿ ಹಲವಾರು ಪ್ರತಿಭೆಗಳನ್ನು ದೇಶ-ವಿದೇಶಗಳಿಂದ ಇನ್‌ಸ್ಟಿಟ್ಯೂಟ್‌ಗೆ ಕರೆಸುವುದು ವಾಡಿಕೆ. ಆರಂಭ ಕಾಲದಿಂದಲೂ ಚಿತ್ರ ನಿರ್ಮಾಣದಲ್ಲಿಯೂ ಅನುಭವವಿರುವ ವ್ಯಕ್ತಿಯೇ ಈ ಸಂಸ್ಥೆಯ

ಪ್ರಾಂಶುಪಾಲರಾಗಿರಬೇಕೆಂಬ ನಿಯಮದಂತೆ ಆರಂಭಕಾಲದ ಗಜಾನನ ಜಾಗೀರ್‌ದಾರ್‌ರಿಂದ ಇತ್ತೀಚೆಗೆ ಗಿರೀಶ್ ಕಾರ್ನಾಡ್, ಮೋಹನ್ ಅಘಾಸೇ ಯಂತಹವರು ಚಿತ್ರರಂಗದಿಂದ ಬಂದು ಈ ಸಂಸ್ಥೆಗೆ ತಮ್ಮ ಸೇವೆ ಸಲ್ಲಿಸಿದ್ದಾರೆ.

ವಿದ್ಯಾರ್ಥಿಗಳಿಗೆ ಹಲವಾರು ರಾಜ್ಯ ಸರ್ಕಾರಗಳು ತಮ್ಮ ತಮ್ಮ ರಾಜ್ಯದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ (Scholorship) ನೀಡುತ್ತಿವೆ. ಇದರಂತೆ ೧೯೭೦ರಲ್ಲೇ ಬೇರೆ ರಾಜ್ಯ ಸರ್ಕಾರಗಳು ೨೫೦ರಿಂದ ೩೦೦ ರೂ. ವಿದ್ಯಾರ್ಥಿವೇತನ ನೀಡುತ್ತಿರುವಾಗ ಕರ್ನಾಟಕ ಸರ್ಕಾರ ತಿಂಗಳಿಗೆ ಕೇವಲ ೫೦ ರೂ. ವಿದ್ಯಾರ್ಥಿವೇತನ ನೀಡುತ್ತಿತ್ತು. ಇದನ್ನು ನಂತರ ೧೫೦ ರೂ.ಗೆ ದೇವರಾಜ ಅರಸು ಅವರು ಮುಖ್ಯಮಂತ್ರಿಯಾಗಿದ್ದಾಗ ಹೆಚ್ಚಿಸಲಾಯಿತು. ಆದರೆ ನಂತರ ಆಗಾಗ ಅದನ್ನು ಪರಿಷ್ಕರಿಸಿ, ಹೆಚ್ಚಿಸುವ ಅಗತ್ಯವನ್ನು ಕರ್ನಾಟಕ ಸರ್ಕಾರ ಇಂದಿಗೂ ಮನಗಂಡಿಲ್ಲ.

ಅರ್ವೋ ಫಿಲಂ ತಯಾರಿಸುವ ಕಂಪನಿಗಳು ಸಹ ಛಾಯಾಗ್ರಹಣದಲ್ಲಿನ ಅಭ್ಯರ್ಥಿಗಳಿಗೆ ಶಿಷ್ಯವೇತನ ನೀಡುತ್ತವೆ. ಇದರಂತೆ ಖಾಸಗಿ ಕ್ಷೇತ್ರದವರೂ ಸಹ ಅಭಿನಯದ ವಿದ್ಯಾರ್ಥಿಗಳಿಗೆ 'ಹಿಂದೂಸ್ತಾನ ಲಿವರ್ ಲಿಮಿಟೆಡ್ ಶಿಷ್ಯ ವೇತನ', ಗುರುದತ್ ಸ್ಮಾರಕ ಶಿಷ್ಯ ವೇತನ' ನೀಡುತ್ತಿರುವರು. ತಾಂತ್ರಿಕ ವಿಭಾಗದಲ್ಲಿ ನಿರ್ದೇಶನಕ್ಕೆ 'ಸ್ಕ್ರೀನ್' ಪತ್ರಿಕೆಯ ಸುವರ್ಣ ಪದಕ, ಛಾಯಾಗ್ರಹಣ ಹಾಗೂ ಧ್ವನಿಗ್ರಹಣಕ್ಕೆ ಬುಲ್‌ದಾಸ್‌ಗುಪ್ತಾ ಸುವರ್ಣ ಪದಕ, ಸಂಕಲನ ಹಾಗೂ ಅಭಿನಯಕ್ಕೆ 'ಸ್ಟಾರ್ ಅಂಡ್‌ಸ್ಟೈಲ್' ಪತ್ರಿಕೆಯ ಸ್ವರ್ಣಪದಕ, ಛಾಯಾಗ್ರಹಣಕ್ಕೆ ಆರ್.ಡಿ.ಮಾಥುರ್ ಬೆಳ್ಳಿ ಪದಕ ಮತ್ತು ನಿರ್ದೇಶನದಕ್ಕೆ ಡಾ|ಪಿ.ವಿ.ಪಾಥೆ ಸ್ಮಾರಕ ಬಹುಮಾನ ನೀಡುವರು. ಈ ರೀತಿಯ ಶಿಷ್ಯವೇತನ, ಪದಕಗಳು ಆಗಾಗ ಹೊಸ ಹೊಸ ಸೇರ್ಪಡೆಯಾಗಿ ಬದಲಾವಣೆಗಳಾಗುತ್ತಲೇ ಇರುತ್ತವೆ.

ಪ್ರತಿಯೊಬ್ಬ ವಿದ್ಯಾರ್ಥಿಯು ಆರಂಭದ ಒಂದು ವರ್ಷ ಕಾಲ ಇತರ ಎಲ್ಲ ವಿಭಾಗಗಳ ವಿಷಯಗಳ ಪರಿಚಯಾತ್ಮಕ ಅಧ್ಯಯನ (Common Orientation) ಮಾಡಿ, ನಂತರ ಛಾಯಾಗ್ರಹಣ-ನಿರ್ದೇಶನ ತತ್ವ ಅರಿಯಲು ಒಂದು ಮೂಕಿಚಿತ್ರ ಹಾಗೂ ಒಂದು ಧ್ವನಿ (ಸಂಭಾಷಣಾ) ಚಿತ್ರ ತಯಾರಿಸುವರು. ಕೊನೆಯ ವರ್ಷ ಪ್ರತಿ ವಿಭಾಗದ ಒಬ್ಬೊಬ್ಬ ವಿದ್ಯಾರ್ಥಿಯನ್ನು ಒಂದು ತಂಡ (Unit) ಮಾಡಿ ಒಂದು ವರ್ಣ ಜಾಹೀರಾತು ಚಿತ್ರ, ಒಂದು ಸಾಕ್ಷ್ಯಚಿತ್ರ, ಒಂದು ಗೀತಚಿತ್ರಣ (Song Picturisation) ಹಾಗೂ ಒಂದು ಡಿಪ್ಲೊಮಾ ಕಿರುಚಿತ್ರ ತಯಾರಿಸುವ ಅವಕಾಶ ಕಲ್ಪಿಸಲಾಗುವುದು. ಈ ಕಾರ್ಯಕ್ಕಾಗಿ ಪ್ರತಿ ವಿದ್ಯಾರ್ಥಿಯ ಮೇಲೆ ಸರ್ಕಾರ ಸುಮಾರು ಒಂದು ಲಕ್ಷ ರೂ.ಗಳಿಗೂ ಮೇಲ್ಪಟ್ಟು ವ್ಯಯ ಮಾಡುತ್ತದೆ.

ಈ ಚಿತ್ರಗಳ ಮೌಲ್ಯಮಾಪನಕ್ಕೆ ಪರೀಕ್ಷಕರಾಗಿ ಹಾಗೂ ವ್ಯಾಸಂಗ ಕ್ರಮ ನಿರೂಪಕರಾಗಿ ಕರ್ನಾಟಕದ ಹಿರಿಯ ನಿರ್ದೇಶಕ ಎಂ.ವಿ.ಕೃಷ್ಣಸ್ವಾಮಿ ಹಾಗೂ ಎಸ್.ಜೆ.ಪಿ.ಸಂಸ್ಥೆಯ ಧ್ವನಿ ತಂತ್ರಜ್ಞ ರಾಮಮೂರ್ತಿ ತಮ್ಮ ಸೇವ ನೀಡಿರುವರು. ಸರ್ಕಾರಿ ಸೇವೆಯಲ್ಲಿದ್ದು ಈ ಸಂಸೆಗೆ ತಮ್ಮ ಸೇವೆ ಸಲ್ಲಿಸಿದ ಇನ್ನಿಬ್ಬರು ಕನ್ನಡಿಗರು ಛಾಯಾಗ್ರಹಣ ಅಧ್ಯಾಪಕರಾಗಿ ಜಿ.ಬಿ.ಕುಲಕರ್ಣಿ, ಸಂಕಲನದ ಅಧ್ಯಾಪಕರಾಗಿ ಆರ್.ಕೆ.ರಾಮಚಂದ್ರನ್ ಹಾಗೂ ಆಡಳಿತಾಧಿಕಾರಿಯಾಗಿ ಎನ್.ವಿ.ಕೆ.ಮೂರ್ತಿ ಉಲ್ಲೇಖನೀಯರು.

ವಿದ್ಯಾರ್ಥಿಗಳು ಸಿದ್ಧ ಮಾಡಿದ ಚಿತ್ರಗಳು ಸೆನ್ಸಾರ್ ಆಗಿ ಚಿತ್ರೋತ್ಸವದಲ್ಲಿ ಭಾಗವಹಿಸಿ ಪ್ರಶಸ್ತಿ ಪಡೆದಿವೆ, ಚಿತ್ರಮಂದಿರದಲ್ಲಿ ಪ್ರದರ್ಶಿತವಾಗಿವೆ. ಚಿತ್ರರಂಗದವರ ವಿಶೇಷ ತಿಳುವಳಿಕೆಗಾಗಿ ಹಾಗೂ ಈ ಪದವೀಧರರಿಗೆ ಅವಕಾಶ ನೀಡಿ ಪ್ರತಿಭೆ ಹೊರತರಲೆಂದು ೧೯೬೯ರಲ್ಲಿ ವಿದ್ಯಾರ್ಥಿಗಳೇ ಸೇರಿ ಸಂಸ್ಥೆಯ ಪರವಾಗಿ 'ರಾಖೀ ರಾಖೀ', 'ಪಿಯಾ ಕಾ ಘರ್', 'ಜಯ್ ಜವಾನ್ - ಜಯ್ ಕಿಸಾನ್' ಕಥಾಚಿತ್ರಗಳನ್ನು (Feature Films) ತಯಾರಿಸಿ ಚಿತ್ರಮಂದಿರಗಳಲ್ಲಿ ಬಿಡುಗಡೆ ಮಾಡಿದೆ. ಇದಲ್ಲದೆ ಇವರ ಕಿರುಚಿತ್ರಗಳನ್ನು ಭಾರತದ ವಿವಿಧ ನಗರಗಳಲ್ಲಿ 'ಉದ್ಯಮ ಪ್ರದರ್ಶನ' (Trade Show) ಏರ್ಪಡಿಸಿ ಪತ್ರಿಕೆಗಳಲ್ಲಿ ಪ್ರಚಾರ ನೀಡುತ್ತದೆ.

ಇಲ್ಲಿಯ ಪದವೀಧರರಿಗೆ ಭಾರತ ಸರ್ಕಾರದ ಫಿಲಂ ಡಿವಿಜನ್ನು, ದೂರದರ್ಶನ, ಆಕಾಶವಾಣಿ, ಫಿಲಂ ಡವಲಪ್‌ಮೆಂಟ್ ಕಾರ್ಪೊರೇಷನ್ ಇವುಗಳಲ್ಲಿ ಉದ್ಯೋಗ, ಆರಂಭದ ಪ್ರಶಿಕ್ಷಣ ವೇತನ (Stipend) ಒದಗಿಸಿ, ನಂತರ ಇಂತಹ ಪ್ರತಿಭೆಗಳು ಪಡೆದಿರುವ ಉದ್ಯೋಗವಕಾಶದ ದಾಖಲೆಗಳನ್ನು ಸಂಗ್ರಹಿಸಿ, ಮುದ್ರಿಸುತ್ತಾರೆ. ಇದು ಮುಂಬರುವ ವಿದ್ಯಾರ್ಥಿಗಳಿಗೆ ಸಂಪರ್ಕ ಸೇತುವಾಗಿ ಅವರ ಆತ್ಮವಿಶ್ವಾಸ ಬೆಳೆಸುವಲ್ಲಿ ನೆರವಾಗುತ್ತದೆ.

ಇಷ್ಟಾದರೂ ವಿಭಿನ್ನ ಹಿನ್ನೆಲೆಯಿಂದ ಬರುವ ಪ್ರಾಂಶುಪಾಲರು ಹಾಗೂ ಹೊಸ ಚಿಂತನೆಯ ವಿದ್ಯಾರ್ಥಿಗಳ ತಲೆಮಾರಿನ ಅಂತರದಿಂದಾಗಿ ಆಗಾಗ ಘಟಿಸುವ ಮುಷ್ಕರ ರಾಷ್ಟ್ರಮಟ್ಟದಲ್ಲಿ ಮಾಧ್ಯಮದ ಚಿತ್ತ ಸೆಳೆಯುತ್ತವೆ. ಇಂತಹುದನ್ನು ತಡೆಯಲು ಭಾರತ ಸರ್ಕಾರ, ೧೯೭೨ರಲ್ಲಿ ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶ ಜೆ.ಡಿ.ಖೋಸ್ಲಾ ಅಧ್ಯಕ್ಷತೆಯಲ್ಲಿ ರಚಿಸಿದ ವಿಚಾರಣಾ ಆಯೋಗವು ಹೃಷಿಕೇಷ ಮುಖರ್ಜಿ, ತೇಜಿ ಬಚ್ಚನ್, ಕೆ.ಎಲ್.ಖಾಂಡಪುರ್, ಮಣಿಕೌಲ್, ವಿ.ಕೆ.ನಾರಾಯಣ್ ಮೆನನ್, ಕೆ.ಕೆ.ಖಾನ್ ಈ ಆರು ಜನ ಸದಸ್ಯರನ್ನು ಒಳಗೊಂಡಿತ್ತು. ಸಮಿತಿಯ ಸಲಹೆಯ ಮೇರೆಗೆ ಇನ್‌ಸ್ಟಿಟ್ಯೂಟ್ 'ಸ್ವಾಯತ್ತ ಸಂಸ್ಥೆ' (Autonomous Body) ಯಾಗಿ ಸಂಸತ್ತಿನ ಅಧಿನಿಯಮಗಳ ಮೂಲಕ ಪರಿವರ್ತಿತವಾಯಿತು. ಇದರ ಪ್ರಕಾರ ಈಗ ಇನ್‌ಸ್ಟಿಟ್ಯೂಟ್‌ನ ವ್ಯವಹಾರ, ಆಡಳಿತವನ್ನು ವಿದ್ಯಾರ್ಥಿ ಪ್ರತಿನಿಧಿಯು ಇರುವ 'ಅಕಡೆಮಿಕ್ ಕೌನ್ಸಿಲ್'ನಿಂದ ನಡೆಸಲ್ಪಡುತ್ತದೆ. ಇದಕ್ಕೆ ಪೂರಕವಾಗಿ ಚಿತ್ರರಂಗದ ಪ್ರತಿನಿಧಿ, ಬೇರೆ ಕ್ಷೇತ್ರದ ಪರಿಣತರು ಹಾಗೂ ವಿದ್ಯಾರ್ಥಿಗಳು ಮತ್ತು ಸಂಸ್ಥೆಯ ಆಡಳಿತಾಧಿಕಾರಿ ಒಳಗೊಂಡಿರುವ 'ಪರಾಮರ್ಶನ ಸಮಿತಿ' (Consultative Committee)ಯೂ ತನ್ನ ಸೇವ ಒದಗಿಸುತ್ತಿದೆ. ಇಂತಹ ಚಿಂತನಯ ಸ್ವರೂಪದ ಫಲವಾಗಿ ಇಂದು 'ನಿರ್ದೇಶನ-ಚಿತ್ರಕಥೆ ರಚನೆ' ವ್ಯಾಸಂಗಕ್ರಮ ವಿಲೀನವಾಗಿದೆ, ಅಭಿನಯ ವ್ಯಾಸಂಗ ಕ್ರಮವನ್ನು ಸಂಪೂರ್ಣ ಬದಲಾಯಿಸಿ, ಅದಕ್ಕೆ ಬೇಕಾದ ಕನಿಷ್ಠ ವಿದ್ಯಾರ್ಹತೆಯನ್ನು ಹೆಚ್ಚಿಸಲಾಗಿದೆ.

ಕರ್ನಾಟಕದ ಕೊಡುಗೆ

ಇಂತಹ ಒಂದು ಸಂಸ್ಥೆ ಕನ್ನಡ ನಾಡಿನಲ್ಲಿರುವ ಗ್ರಾಮೀಣ ಕ್ಷೇತ್ರದ ಯಾವುದೋ ರೈತ ಕುಟುಂಬದ ವಿದ್ಯಾರ್ಥಿಯನ್ನು ಅಥವಾ ಹಿಂದುಳಿದ ಯಾವುದೋ ಜಿಲ್ಲೆಯ ಸರ್ಕಾರಿ ನೌಕರನ ಮಗನನ್ನೋ ತನಗೆ ಚಿತ್ರರಂಗದಲ್ಲಿ ಯಾವ ನೆಂಟರೂ ಇಲ್ಲ, ಕೈಯಲ್ಲಿ ಗಂಟೂ ಇಲ್ಲ ಎಂಬ ಅರಿವಿನಿಂದಾಗಿ ಚಿತ್ರರಂಗ ಸೇರಲು ಇದೊಂದೇ ಸುಭದ್ರ-ಸುಗಮ ಉಪಾಯವೆಂದು ಆಕರ್ಷಿಸಿದರೆ, ಆಯ್ಕೆಯಾದರೆ ಯಾರೂ ಅಚ್ಚರಿ ಪಡಬೇಕಿಲ್ಲ.

ಹೀಗಾಗಿ ೧೯೬೩ರಲ್ಲಿ ಕರ್ನಾಟಕ (ಆಗಿನ ಮೈಸೂರು ರಾಜ್ಯ) ದಿಂದ ಪುಣೆಯ ಫಿಲಂ ಇನ್‌ಸ್ಟಿಟ್ಯೂಟ್‌ನಲ್ಲಿ ಚಿತ್ರಕಥೆ ರಚನೆ ಮತ್ತು ಮೂಲಭೂತ ನಿರ್ದೇಶನ (Screenplay writting-cum-Elements of Direction)ದ ೨ ವರ್ಷ ಅವಧಿಯ ವ್ಯಾಸಂಗಕ್ರಮಕ್ಕೆ ಪ್ರವೇಶ ಪಡೆದ ಪ್ರಥಮರು - ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕಿನ ಕಾರಮರಡಿ ಗ್ರಾಮದ ಕೆ.ಎಂ.ಶಂಕರಪ್ಪ.

ಮಾರ್ಚ್ ೧೯೬೧ರಲ್ಲಿ ಆರಂಭವಾದ ಈ ಸಂಸ್ಥೆ ಆಗಸ್ಟ್ ೧೯೬೧ರಲ್ಲಿ ಕೇವಲ ೪೦ ವಿದ್ಯಾರ್ಥಿಗಳ ಆಯ್ಕೆಯೊಂದಿಗೆ ತನ್ನ ಪ್ರಥಮ ತಂಡದ ತರಬೇತಿ ಆರಂಭಿಸಿತು. ೧೯೬೩ರಲ್ಲಿ ಈ ಸಂಸ್ಥೆಯ ಪ್ರಥಮ 'ಪದವೀಪ್ರದಾನ ಸಮಾರಂಭ' (Convocation) ನಡೆಯಿತು. ಇದನ್ನು ಉದ್ದೇಶಿಸಿ ಅಂದಿನ ವಾರ್ತಾ ಸಚಿವರಾದ ಸತ್ಯನಾರಾಯಣ ಸಿನ್ಹಾ ಭಾಷಣ ಮಾಡಿದರು. ೧೯೬೪ರಲ್ಲಿ ೨ನೇ ಪದವೀಪ್ರದಾನ ಸಮಾರಂಭಕ್ಕೆ ವಾರ್ತಾ ಮತ್ತು ಪ್ರಸಾರ ಇಲಾಖೆ ಸಚಿವರಾಗಿದ್ದ ಶ್ರೀಮತಿ ಇಂದಿರಾಗಾಂಧಿ ಘಟಿಕೋತ್ಸವ ಭಾಷಣ ಮಾಡಿದರು.

೧೯೬೫ರಲ್ಲಿ ೩ನೇ ಘಟಿಕೋತ್ಸವಕ್ಕೆ ವಾರ್ತಾ ಮತ್ತು ಪ್ರಸಾರ ಇಲಾಖೆಯ ಉಪಸಚಿವರಾಗಿದ ಸಿ.ಆರ್.ಪಟ್ಟಾಭಿರಾಮನ್ ಘಟಿಕೋತ್ಸವ ಭಾಷಣ ಮಾಡಿ ಪದವಿ ನೀಡಿದರು. ಆ ವರ್ಷ ಇಂತಹ ಸದವಕಾಶ ಪಡೆದ ಮೊದಲ ಕನ್ನಡಿಗರು ಕೆ.ಎಂ.ಶಂಕರಪ್ಪ. ಇವರೊಂದಿಗೆ ಕರ್ನಾಟಕದೊಂದಿಗೆ ಸಂಬಂಧವಿದ್ದು ಇಲ್ಲಿಗೆ ಬಂದು ನೆಲೆಸಿದ್ದ ಪಾರ್ವತಿನಾಯರ್ ಚಿತ್ರಕಥೆ-ನಿರ್ದೇಶನದಲ್ಲಿ ಹಾಗೂ ಇಲ್ಲಿಂದ ಮುಂಬಯಿಗೆ ವಲಸೆ ಹೋಗಿದ್ದ ಧಾರವಾಡದ ಅಪ್ಪಾಸಾಹೇಬ್ ಉಮ್ರಾಣಿ ಅಭಿನಯದಲ್ಲಿ ಪದವಿ ಪಡೆದರು.

೧೯೬೬ರಲ್ಲಿ ನಡೆದ ೪ನೇ ಘಟಿಕೋತ್ಸವದಲ್ಲಿ ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವರಾಗಿದ್ದ ರಾಜ ಬಹದ್ದೂರ್ ಇವರು ಪದವಿ ಪ್ರದಾನ ಮಾಡಿದರು. ತಮ್ಮ ಅಧ್ಯಯನವನ್ನು ಇನ್ನೊಂದು ವರ್ಷ ಮುಂದುವರೆಸಿದ್ದ ಕೆ.ಎಂ.ಶಂಕರಪ್ಪ 'ಪ್ರೌಢ ನಿರ್ದೇಶನ' (Advanced Direction) ವ್ಯಾಸಂಗ ಕ್ರಮದಲ್ಲಿ ಅಂತಿಮ ಪದವಿ ಪಡೆದರು.

ವ್ಯಾಸಂಗ ಕ್ರಮದ ಅಂಗವಾಗಿ ವಿದ್ಯಾರ್ಥಿಗಳು ಸ್ವತಂತ್ರವಾಗಿ ಕಿರುಚಿತ್ರ ಮಾಡುವ ಅವಕಾಶವನ್ನು ಬಳಸಿಕೊಂಡು 'ಅಪಘಾತ' (The Accident) ಶೀರ್ಷಿಕೆಯ ರಕ್ತ

(ಚಿತ್ರ ೭) ಪುಣೆ ಫಿಲಂ ಅಂಡ್ ಟೆಲಿವಿಷನ್ ಇನ್‌ಸ್ಟಿಟ್ಯೂಟಿನ ಸಂಕಲನ ವಿಭಾಗ

ದಾನದ ಮಹತ್ವ ಕುರಿತು ಚಿತ್ರ ನಿರ್ಮಿಸಿದ ಕೆ.ಎಂ.ಶಂಕರಪ್ಪ, ಕೊನೆಯ ವರ್ಷದ ಅಂಗವಾಗಿ ಕನ್ನಡದ ಸಾಹಿತಿ ಕೆ.ಸದಾಶಿವರ ಸಣ್ಣಕಥೆ 'ನಲ್ಲಿಯಲ್ಲಿ ನೀರು ಬಂತು' ಆಧರಿಸಿ 'Water in the Tap' ಚಿತ್ರವನ್ನು ಚಿತ್ರಕಥೆ ಬರೆದು ನಿರ್ದೇಶಿಸಿದರು. ಎರಡು ಹೆಣ್ಣುಗಳ ನಡುವಿನ ಸ್ವಭಾವ, ಭಾವನೆಗಳ ತಾಕಲಾಟಕ್ಕೆ ಹೆಚ್ಚು ಒತ್ತು ಕೊಟ್ಟು ತಯಾರಿಸಿದ ಈ ಚಿತ್ರ ನೈಜ ಪರಿಸರ ಹಾಗೂ ಅಭಿನಯದಿಂದ ವಿಮರ್ಶಕರ ಪ್ರಶಂಸೆ ಗಳಿಸಿತು. ಈ ಚಿತ್ರದಲ್ಲಿ ಅಭಿನಯ ವ್ಯಾಸಂಗಕ್ರಮದಲ್ಲಿ ಅವರ ಸಹಪಾಠಿಯಾಗಿದ್ದ ನಟಿ ರೆಹನಾ ಸುಲ್ತಾನಾ ನಟಿಸಿದ್ದು ಒಂದು ವಿಶೇಷ. ಈ ಚಿತ್ರವು ೧೯೬೮ರಲ್ಲಿ ಸ್ಪೇನ್ ದೇಶದಲ್ಲಿ ನಡೆದ 'ವಾಲ್ಲೋಡೊಲಿಡ್ (Valladolid) ಚಲನಚಿತ್ರೋತ್ಸವ'ದಲ್ಲಿ ಭಾಗವಹಿಸಿದ ಪ್ರಮಾಣಪತ್ರ (Certificate of Participation) ಪಡೆಯಿತು.

ಇದಾದ ನಂತರ ೧೯೬೬ರಲ್ಲಿ ಪ್ರವೇಶ ಪಡೆದು ೧೯೬೯ರಲ್ಲಿ ಚಲನಚಿತ್ರ ಛಾಯಾಗ್ರಹಣ ವಿಷಯದಲ್ಲಿ ಉತ್ತೀರ್ಣರಾಗಿ ಹೊರಬಂದವರು ಚಿತ್ರದುರ್ಗದವರಾದ ಯು.ಎಂ.ಎನ್.ಶರೀಫ್. ೧೯೬೭ರಲ್ಲಿ ಪ್ರವೇಶ ಪಡೆದು ಇವರೊಂದಿಗೆ ೧೯೬೯ರಲ್ಲಿ ಸಂಕಲನದಲ್ಲಿ ಪದವಿ ಪಡೆದವರು ಹುಬ್ಬಳ್ಳಿಯ ಅರುಣಾ ರಾಜೇ ಪಾಟೀಲ್. ಇವರು 'ಸ್ಟಾರ್ ಅಂಡ್ ಸ್ಟೈಲ್' ಪತ್ರಿಕೆಯು ನೀಡುವ ಸುವರ್ಣಪದಕವನ್ನು 'ಅತ್ಯುತ್ತಮ ಸಂಕಲನ ವಿದ್ಯಾರ್ಥಿ' ಎಂದು ಪಡೆದರು. ಮತ್ತೆ ೧೯೭೦ರಲ್ಲಿ ಆಹ್ವಾನಿತ ಪದವೀಧರ (Ex-Student)ರಾಗಿ ಬಂದ ಶರೀಫ್ ಅಂದಿನ ವಿದ್ಯಾರ್ಥಿಗಳಾಗಿದ್ದ ಜಯಾಭಾದುರಿ, ಡ್ಯಾನಿ ಡೆಂಝೋಂಪಾ ನಟಿಸಿದ 'ಸುಮನ್' ಚಿತ್ರದ ಛಾಯಾಗ್ರಹಣ ಕೈಗೊಂಡರು.

೧೯೭೦ರಲ್ಲಿ ನಡೆದ ೮ನೇ ಘಟಿಕೋತ್ಸವದಲ್ಲಿ ಬೆಂಗಳೂರಿನ ಇನ್ನೋರ್ವ ವಿದ್ಯಾರ್ಥಿ ಎಸ್.ರಾಮಚಂದ್ರ ಛಾಯಾಗ್ರಹಣ ವಿಷಯದಲ್ಲಿ ಹಾಗೂ ಬೆಂಗಳೂರಿನವರೇ ಆದ ಕುಮಾರಿ ಹೆಚ್.ಪಿ.ಎಸ್.ಅಯ್ಯಂಗಾರ್ ಸಂಕಲನ ವಿಷಯದಲ್ಲಿ ಪದವಿ ಪಡದರು.

ಇನ್‌ಸ್ಟಿಟ್ಯೂಟ್ ಆರಂಭವಾದಾಗಿನಿಂದ ಕೇವಲ ಮೂರು ವರ್ಷಗಳ ಕಾಲ ಪ್ರಿನ್ಸಿಪಾಲರಾಗಿದ್ದ ನಟ ಗಜಾನನ ಜಾಗೀರ್‌ದಾರ್ ನಿವೃತ್ತಿಯ ನಂತರ, ಜಗತ್ ಮುರಾರಿ ಪ್ರಾಂಶುಪಾಲರಾದರು. ಇವರ ಅವಧಿಯಲ್ಲಿ ಇನ್‌ಸ್ಟಿಟ್ಯೂಟ್‌ನ ಪ್ರತಿಭೆಗಳಿಗೆ ಚಿತ್ರರಂಗದಲ್ಲಿ ಸಾಕಷ್ಟು ಮನ್ನಣೆ, ಅವಕಾಶಗಳು ದೊರಕಿದವು. ಜೊತೆಗೆ 'ಗ್ಲಾಮರ್ ಫ್ಯಾಕ್ಟರಿ' ನಿರೂಪಿಸುತ್ತಿರುವ ವ್ಯಕ್ತಿ ಎಂಬ ಅಪಪ್ರಚಾರ ದೊರೆತು, ೧೯೭೦ರಲ್ಲಿ ಬೇರೆಡೆಗ ವರ್ಗವಾದರು. ಇವರ ಕಾಲಾವಧಿಯಲ್ಲಿ ಐತಿಹಾಸಿಕ ಮುಷ್ಕರವನ್ನು ವಿದ್ಯಾರ್ಥಿಗಳು ಕೈಗೊಂಡು, ಭಾರತ ಸರ್ಕಾರವು ವಿದ್ಯಾರ್ಥಿಗಳ ಬೇಡಿಕೆಯಂತೆ ಇನ್‌ಸ್ಟಿಟ್ಯೂಟ್‌ನ ಕಾರ್ಯವೈಖರಿ ವಿಚಾರಣೆಗೆ ಖೋಸ್ಲಾ ಸಮಿತಿ ನೇಮಿಸಿತು. ಇದೇ ಅವಧಿಯಲ್ಲಿ ಡಿ.ಎಸ್.ದೀಕ್ಷಿತ್ ಎಂಬುವವರು ಆಕಾಶವಾಣಿಯಿಂದ ಬಂದು ಇಲ್ಲಿ ಪ್ರಾಂಶುಪಾಲರಾದರು. ಅವರ ಉಸ್ತುವಾರಿಯಲ್ಲಿ ೧೯೭೧ರಲ್ಲಿ ನಡೆದ ಒಂಬತ್ತನೇ ಘಟಿಕೋತ್ಸವದಲ್ಲಿ ಬೆಂಗಳೂರಿನ ಕೆ.ಎಸ್.ಕೃಷ್ಣಮೂರ್ತಿ ಧ್ವನಿಗ್ರಹಣ ಮತ್ತು ಧ್ವನಿ ತಂತ್ರಜ್ಞಾನ (Sound Recording & Sound Engineering)ದಲ್ಲಿ ಪದವಿ ಪಡೆದರು.

೧೯೭೨ ವಿಶೇಷ ವರ್ಷ. ಇನ್‌ಸ್ಟಿಟ್ಯೂಟ್‌ನ ಇತಿಹಾಸದಲ್ಲಿ ೧೦ನೆಯ ಘಟಿಕೋತ್ಸವ. ೧೯೬೨ರಲ್ಲಿ ಈ ಸಂಸ್ಥೆಗೆ ಆಗ ಪ್ರವೇಶ ಅರಸಿ ಬಂದ ಅರ್ಜಿಗಳು ೩೩೦. ಆದರೆ ೧೯೭೨ರಲ್ಲಿ ಬಂದ ಅರ್ಜಿಗಳ ಸಂಖ್ಯೆ ೩,೩೦೦. ಈಗಾಗಲೇ ಇನ್‌ಸ್ಟಿಟ್ಯೂಟ್‌ನಿಂದ ಹೊರಬಂದ ಅನೇಕ ಪ್ರತಿಭೆಗಳು ರಾಷ್ಟ್ರ ಮಟ್ಟದಲ್ಲಿ ಮಿಂಚತೊಡಗಿದ್ದವು. ೧೯೭೦ರಲ್ಲಿ ರಾಷ್ಟ್ರ ಮಟ್ಟದಲ್ಲಿ ಅತ್ಯುತ್ತಮ ನಟಿ ಎಂದು 'ಊರ್ವಶಿ' ಪ್ರಶಸ್ತಿಯನ್ನು 'ದಸ್ತಕ್' ಚಿತ್ರಕ್ಕಾಗಿ ರೆಹನಾ ಸುಲ್ತಾನಾ ಪಡೆದಿದ್ದರೆ, ೧೯೭೦ರಲ್ಲಿ 'ಸಾರಾ ಆಕಾಶ್' ಹಾಗೂ ೧೯೭೧ರಲ್ಲಿ 'ಉಸ್ಕಿ ರೋಟಿ' ಛಾಯಾಗ್ರಹಣಕ್ಕಾಗಿ ರಾಷ್ಟ್ರ ಮಟ್ಟದಲ್ಲಿ ಎರಡು ಬಾರಿ ಸತತವಾಗಿ ಅತ್ಯುತ್ತಮ ಛಾಯಾಗ್ರಹಣ ಪ್ರಶಸ್ತಿ ಪಡೆದರು ಕೆ.ಕೆ.ಮಹಾಜನ್. ಮಣಿಕೌಲ್ 'ಉಸ್ಕಿ ರೋಟಿ' ಚಿತ್ರಕ್ಕೆ, ಟಿ.ಸಿ.ಜಾನ್ 'ಜನ್ಮಭೂಮಿ'ಗೆ, ಪಿ.ಕುಮಾರ್ ವಾಸುದೇವ್ 'ಎಟ್‌ಫೈವ್ ಪಾಸ್ಟ್‌ಫೈವ್'ಗೆ ರಾಷ್ಟ್ರ ಪ್ರಶಸ್ತಿ ಗಳಿಸಿದ್ದರು.

೧೯೭೨ರಲ್ಲಿ ಅಂದಿನ ವಾರ್ತಾ ಮತ್ತು ಪ್ರಸಾರ ಖಾತೆಯ ಸಚಿವರಾಗಿದ್ದ ಐ.ಕೆ.ಗುಜ್ರಾಲ್ ಅವರು ೧೦ನೆಯ ಘಟಿಕೋತ್ಸವ ಭಾಷಣ ಮಾಡಿ ಪದವಿ ನೀಡಿದರು. ಆ ವರ್ಷ ಧ್ವನಿಗ್ರಹಣ ಹಾಗೂ ಧ್ವನಿ ತಂತ್ರಜ್ಞಾನ ವಿಷಯದಲ್ಲಿ ಧಾರವಾಡದ ಎ.ಎಂ.ಮುಲ್ಲಾ, ಬೆಳಗಾವಿಯ ಎಸ್.ಕೆ.ಪವಾರ್, ಅಭಿನಯ ವ್ಯಾಸಂಗದಲ್ಲಿ ಬೆಂಗಳೂರಿನ ಜಯಲಕ್ಷ್ಮಿ, ಹುಬ್ಬಳ್ಳಿಯ ಎಂ.ಎಸ್.ಮಕಾನ್‌ದಾರ್ (ನಂತರ ತೆರೆಯ ಮೇಲೆ ವಿಕ್ರಮ್) ಹಾಗೂ ಸಂಕಲನ ವಿಷಯದಲ್ಲಿ ಗುಲ್ಬರ್ಗ ಜಿಲ್ಲೆಯ ಉಮೇಶ್ ಕುಲಕರ್ಣಿ ಪದವಿ ಸ್ವೀಕರಿಸಿದರು. ಅತಿ ಹೆಚ್ಚು ವಿದ್ಯಾರ್ಥಿಗಳು ಕರ್ನಾಟಕದಿಂದ ಬಂದದ್ದು ಆ ವರ್ಷವೇ.

(೧೯೭೪ರಲ್ಲಿ ತೆರೆಕಂಡ 'ಮಾಡಿ ಮಡಿದವರು' ಚಿತ್ರದ ನಿರ್ದೇಶಕರು ಕೆ.ಎಂ.ಶಂಕರಪ್ಪ. ಈ ಚಿತ್ರ ರಾಜ್ಯ ಮಟ್ಟದಲ್ಲಿ ದ್ವಿತೀಯ ಅತ್ಯುತ್ತಮ ಚಿತ್ರ ಪ್ರಶಸ್ತಿ ಪಡೆಯಿತು. ಇದರ ಛಾಯಾಗ್ರಹಣ, ಧ್ವನಿಗ್ರಹಣ, ಸಂಕಲನ ಕಾರ್ಯವನ್ನು ಪುಣೆಯ ಫಿಲಂ ಇನ್‌ಸ್ಟಿಟ್ಯೂಟ್‌ನ ಪದವೀಧರ ಕನ್ನಡಿಗರು ವಹಿಸಿದ್ದು ವಿಶೇಷ ದಾಖಲೆ. ಈ ಚಿತ್ರವು ಅತ್ಯುತ್ತಮ ಛಾಯಾಗ್ರಹಣಕ್ಕಾಗಿ ಪ್ರಶಸ್ತಿ ಪಡೆಯಿತು. ಇದರ ಸಂಗೀತವನ್ನು ನೀಡಿದ್ದು ಪುಣೆಯ ಇನ್‌ಸ್ಟಿಟ್ಯೂಟ್‌ನ ಸಂಗೀತದ ಪ್ರಾಧ್ಯಾಪಕ ಭಾಸ್ಕರ್ ಚಂದಾವರ್ಕರ್).

೧೯೭೩ರಲ್ಲಿ ಹೊನ್ನಾವರದ ಡಾ|ವಿ.ವಿ.ಭಟ್ ಚಿತ್ರಕಥೆ ರಚನೆಯಲ್ಲಿ ಪದವಿ ಪಡೆದರು. ಈ ವ್ಯಾಸಂಗ ಕ್ರಮವನ್ನು ಅಧ್ಯಯನ ಮಾಡಿದವರಲ್ಲಿ ಇದುವರೆವಿಗೂ ಕರ್ನಾಟಕದಿಂದ ಇವರೊಬ್ಬರೇ. ನಂತರ ಇವರು 'ವಾತ್ಸಲ್ಯಪಥ' ಚಿತ್ರಕ್ಕೆ ಚಿತ್ರಕಥೆ ಬರೆದರು. ಇವರೊಂದಿಗೆ ಅದೇ ವರ್ಷ ಅಭಿನಯದಲ್ಲಿ ಪದವಿ ಪಡೆದುಬಂದವರು ಎನ್.ಎಸ್.ಅನಿಲ್ ಕುಮಾರ್. ನಂತರ ಇವರು 'ಬಿಳಿಹೆಂಡ್ತಿ' ಚಿತ್ರದ ನಾಯಕರಾಗಿ ಚಿತ್ರರಂಗದಲ್ಲಿ ಪ್ರವೇಶಿಸಿದರು.

೧೯೭೪ರಲ್ಲಿ ಬೆಂಗಳೂರಿನ ಬಿ.ಜಿ.ಶ್ರೀನಿವಾಸ್ ಛಾಯಾಗ್ರಹಣದಲ್ಲಿ. ಮೈಸೂರಿನ ರಮೇಶ್ ಕಾಮತ್ ಹಾಗೂ ಚನ್ನರಾಯಪಟ್ಟಣದ ಕೆ.ಸುಬ್ರಹ್ಮಣ್ಯ ಧ್ವನಿಗ್ರಹಣದಲ್ಲಿ ಪದವಿ ಪಡೆದರು. ೧೯೭೫ರಲ್ಲಿ ಧ್ವನಿಗ್ರಹಣ ಅಧ್ಯಯನ ಮಾಡಿದ ಜಿ.ಆರ್.ಶೆಣೈ ಕನ್ನಡ ಚಿತ್ರರಂಗದಲ್ಲಿ ಸಂಗೀತ ನಿರ್ದೇಶಕರಾದರು.

೧೯೭೫ರಲ್ಲಿ ಸಾಗರದ ಕೆ.ಜಿ.ಗಿರೀಶ್ ಚಲನಚಿತ್ರ ನಿರ್ದೇಶನದಲ್ಲಿ ಪದವಿ ಪಡೆದರು. ಇವರು ಇನ್‌ಸ್ಟಿಟ್ಯೂಟ್‌ನಲ್ಲಿ ಅಧ್ಯಯನ ಅಂಗವಾಗಿ ನಿರ್ಮಿಸಿದ್ದು 'ಅವಶೇಷ' ಕಿರುಚಿತ್ರ. 'ಅವಶೇಷ' ಚಿತ್ರದಲ್ಲಿ ಆಧುನಿಕ ಜೀವನದ ಜಂಜಾಟದಲ್ಲಿ ಕುಟುಂಬದಲ್ಲಿನ ಸದಸ್ಯರ ನಡುವಿನ ಸಂಬಂಧಗಳ ಕಂದರವನ್ನು ಮೊಮ್ಮಗ-ಅಜ್ಜಿಯ ಮೂಲಕ ನವಿರಾಗಿ, ಸಾಂಕೇತಿಕವಾಗಿ ಚಿತ್ರಿಸಿದ್ದು ಒಂದು ವಿಶೇಷ. ಇದು ೨೩ನೇ ರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ೧೯೭೬ರ ಅತ್ಯುತ್ತಮ ಪ್ರಾಯೋಗಿಕ ಚಿತ್ರವೆಂದು ಪ್ರಶಸ್ತಿ ಗಳಿಸಿ, ೧೯೭೮ರಲ್ಲಿ ಮದರಾಸಿನಲ್ಲಿ ಜರುಗಿದ ಇಂಡಿಯನ್ ಪನೋರಮಾ ಫಿಲ್ಮೋತ್ಸವದಲ್ಲಿ ಪ್ರದರ್ಶಿತಗೊಂಡಿತು. ನಂತರ ಇವರು 'ಘಟಶ್ರಾದ್ಧ' ಚಿತ್ರ ನಿರ್ದೇಶಿಸುವ ಮೂಲಕ ಗಿರೀಶ್ ಕಾಸರವಳ್ಳಿ ಎಂದು ಕನ್ನಡ ಚಿತ್ರರಂಗಕ್ಕೆ ಪರಿಚಿತರಾದರು.

೧೯೭೭ರಲ್ಲಿ ಸಿರಸಿಯ ಎಸ್.ಆರ್.ಭಟ್ ಛಾಯಾಗ್ರಹಣದಲ್ಲಿ ಹಾಗೂ ಪವನ್‌ಕುಮಾರ್ ಮಾನ್ವಿ ನಿರ್ದೇಶನದಲ್ಲಿ ಪದವಿ ಗಳಿಸಿದರು. ಕನ್ನಡ ಸಾಹಿತಿ ಎ.ಕೆ.ರಾಮಾನುಜನ್ ಬರೆದ 'ಒಂದು ತಲೆಯ ಕಥೆ' ಆಧರಿಸಿ ಮಾನ್ವಿ ಕಿರುಚಿತ್ರ ನಿರ್ಮಿಸಿದ್ದು ವಿಶೇಷ.

೧೯೮೦ರಲ್ಲಿ ಜಿ.ಎಸ್.ಭಾಸ್ಕರ್, ೧೯೮೩ರಲ್ಲಿ ಎ.ರಾಘವೇಂದ್ರ, ಬಾಲಚಂದ್ರ, ಎಂ.ಗಾಂಧೇಕರ್ ಛಾಯಾಗ್ರಹಣದಲ್ಲಿ ಪದವಿ ಪಡೆದರು. ೧೯೮೪ರಲ್ಲಿ ಬೆಂಗಳೂರಿನ ಎಂ.ಸಿ.ವಿನೋದ್‌ರಾಜ್ ಛಾಯಾಗ್ರಹಣದಲ್ಲಿ ಹಾಗೂ ೧೯೯೨ರಲ್ಲಿ ಉಡುಪಿಯ ರಾಮಚಂದ್ರ ಬಲ್ಲಾಳ ನಿರ್ದೇಶನದಲ್ಲಿ ಪದವಿ ಪಡೆದು 'ಸುರಭಿ' ಕಾರ್ಯಕ್ರಮದಲ್ಲಿ ತೊಡಗಿದರು. ಬೆಂಗಳೂರಿನ ಆನಂದ ಸುಬ್ರಮಣ್ಯ ನಿರ್ದೇಶನದಲ್ಲಿ ಪದವಿ ಪಡೆದು ನಾಗಾಭರಣರ 'ಮೈಸೂರು ಮಲ್ಲಿಗೆ' ಚಿತ್ರದಲ್ಲಿ ಅಭಿನಯಿಸಿದರು. ೧೯೯೩ರಲ್ಲಿ ಬೆಂಗಳೂರಿನ ಶ್ರೀಕಾಂತ, ವಿ.ಪ್ರಭು ಚಲನಚಿತ್ರ ನಿರ್ದೇಶನ ಪದವಿ ಪಡೆದರು. ಇವರು ತಮ್ಮದೇ ಸಾಹಿತ್ಯ ಆಧರಿಸಿ ನಿರ್ಮಿಸಿದ ಕಿರುಚಿತ್ರ 'ಪರಿಭ್ರಮಣ್', ೧೯೯೪ರಲ್ಲಿ ಜಪಾನಿನ ಟೋಕಿಯೋದಲ್ಲಿ ಜರುಗಿದ ಸಿನಿಮಾ ವಿದ್ಯಾರ್ಥಿಗಳ ನಾಲ್ಕನೆಯ ಅಂತರರಾಷ್ಟ್ರೀಯ ಚಿತ್ರೋತ್ಸವದಲ್ಲಿ ಅಂತಿಮ ಪ್ರಶಸ್ತಿಗೆ ಸೂಚಿಸಲಾದ ಇಪ್ಪತ್ತೊಂದು ಕಿರುಚಿತ್ರಗಳಲ್ಲಿ ಇದೂ ಒಂದಾಗಿತ್ತು. ೧೯೯೫ರಲ್ಲಿ ಹೆಚ್.ಎಂ.ರಾಮಚಂದ್ರ ಛಾಯಾಗ್ರಹಣದಲ್ಲಿ ಪದವಿ ಗಳಿಸಿದರು. ಇವರ ಛಾಯಾಗ್ರಹಣದ ಕಿರುಚಿತ್ರ 'ದಿ ರೆಬೆಲ್' (ನಿರ್ದೇಶನ ರಾಜಶ್ರೀ) ೧೯೯೭ರ ೪೫ನೇ ರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಅತ್ಯುತ್ತಮ ಕಥಾಕಿರುಚಿತ್ರ (Best Short Fiction Film) ಪ್ರಶಸ್ತಿ ಪಡೆಯಿತು. ಅದೇ ವರ್ಷ ಇಸ್ರೇಲಿನ ಟೆಲ್ ಅವಿವ್‌ನಲ್ಲಿ ನಡೆದ ಆರನೆಯ ಅಂತರರಾಷ್ಟ್ರೀಯ ವಿದ್ಯಾರ್ಥಿಗಳ ಚಿತ್ರೋತ್ಸವದಲ್ಲಿ ಇದನ್ನು ಪ್ರದರ್ಶಿಸಲಾಯಿತು. ೧೯೯೭ರಲ್ಲಿ ಕೇರಳದ ತಿರುವನಂತಪುರದ ಇಂಡಿಯನ್ ಪನೋರಮಾದ ಕಥಾಯೇತರ ವಿಭಾಗದಲ್ಲಿ ಪ್ರದರ್ಶಿಸಲಾಯಿತು. ಹೆಚ್.ಎಂ.ರಾಮಚಂದ್ರ ವೈಯಕ್ತಿಕವಾಗಿ ಎಲ್ಲ ವಿಭಾಗಕ್ಕೂ ಸೇರಿ ಅತ್ಯುತ್ತಮ ವಿದ್ಯಾರ್ಥಿಯಾಗಿ 'ದಾದಾ ಸಾಹೇಬ್ ಫಾಲ್ಕೆ' ಪ್ರಶಸ್ತಿ ಪಡೆದರು. ೧೯೯೮ರಲ್ಲಿ ಹೊಸಪೇಟೆಯ ಆರ್.ಜಿ.ಗುರುರಾಜ ಛಾಯಾಗ್ರಹಣದಲ್ಲಿ ಪದವಿ ಪಡೆದು 'ಲಗಾನ್' ಚಿತ್ರಕ್ಕೆ ಸಹಾಯಕ ಛಾಯಾಗ್ರಾಹಕರಾಗಿ ದುಡಿದರು.

ಇನ್‌ಸ್ಟಿಟ್ಯೂಟ್‌ನಿಂದ ಚಿತ್ರರಂಗಕ್ಕೆ ಬಂದ ನಂತರ ತಮ್ಮ ಅನುಭವ, ಶ್ರಮ ಹಾಗೂ ಸಾಹಸದಿಂದ ತರಬೇತಿ ತಂತ್ರಜ್ಞಾನದ್ದಾದರೂ ನಿರ್ದೇಶನಕ್ಕೆ ಕೈ ಹಾಕಿದವರು ಛಾಯಾಗ್ರಾಹಕ ಎಸ್.ಆರ್.ಭಟ್, ಧ್ವನಿಗ್ರಾಹಕ ರಮೇಶ್ ಕಾಮತ್, ಸಂಕಲನಕಾರರಾದ ಅರುಣಾರಾಜೇ ದೇಸಾಯಿ ಹಾಗೂ ಉಮೇಶ್ ಕುಲಕರ್ಣಿ. ಇದುವರೆಗೆ ಇನ್‌ಸ್ಟಿಟ್ಯೂಟ್‌ನಿಂದ ಬಂದು ಕಥಾಚಿತ್ರಗಳಲ್ಲಿ ತಮ್ಮ ಮೂಲವೃತ್ತಿಯಲ್ಲಿ ದುಡಿದ ಎಲ್ಲ ತಂತ್ರಜ್ಞರು ರಾಜ್ಯ ಪ್ರಶಸ್ತಿ, ಕೆಲವರು ರಾಷ್ಟ್ರಪ್ರಶಸ್ತಿ ಹಾಗೂ ಇತರ ವಿಭಾಗಗಳಲ್ಲಿ ರಾಷ್ಟ್ರ ಪ್ರಶಸ್ತಿ ಗಳಿಸಿರುವುದು ಒಂದು ಸಾಧನೆ.

ಚಿತ್ರರಂಗ ಸದಾ ಕಾಲವೂ ಪ್ರತಿಭೆಗಳನ್ನು ಗುರುತಿಸಿ, ಅದು ಯಾವ ದೇಶ, ಭಾಷೆ, ಜಾತಿಯವಾದರೂ ಗುಣಕ್ಕೆ ಗೌರವ ಕೊಟ್ಟು ಆಹ್ವಾನಿಸಿದೆ, ಅವಕಾಶ ನೀಡಿದೆ, ಮನ್ನಣೆಯ ಮಣೆ ಹಾಕಿದೆ. ಈ ರೀತಿ ಹೊರನಾಡಿನವರಾಗಿದ್ದೂ ಕನ್ನಡ ಚಿತ್ರರಂಗಕ್ಕೆ ಬಂದು ತಮ್ಮ ಸೇವೆಯನ್ನು ಸಲ್ಲಿಸಿದ ಪುಣೆ ಫಿಲಂ ಇನ್‌ಸ್ಟಿಟ್ಯೂಟ್‌ನ ಕೆಲವು ಪ್ರತಿಭೆಗಳನ್ನೂ ನೆನೆಯುವುದು ಅಗತ್ಯ. ಕನ್ನಡಕ್ಕೆ ಅಪರೂಪವಾದ 'ಕೋಕಿಲಾ' ಚಿತ್ರ ನೀಡಿದ ಬಾಲು ಮಹೇಂದ್ರ, ಜಿ.ವಿ.ಅಯ್ಯರ್, ಪ್ರೇಮಾಕಾರಂತ್ ಮೊದಲಾದವರ ಚಿತ್ರಗಳಿಗೆ ಛಾಯಾಗ್ರಹಣ ಮಾಡಿದ ಮಧು ಅಂಬಟ್, ಗಿರೀಶ್ ಕಾರ್ನಾಡರ ಚಿತ್ರಗಳಿಗೆ ಛಾಯಾಗ್ರಹಣ ನೀಡಿದ ಎ.ಕೆ.ಬೀರ್, ನಾಗಾಭರಣ ಮತ್ತು ಆರ್ಯರ ಚಿತ್ರಕ್ಕೆ ಛಾಯಾಗ್ರಹಣ ನೀಡಿದ ದೇವು ದೇವಧರ್, ಟಿ.ಎಸ್.ರಂಗಾ ಅವರ ಚಿತ್ರಗಳನ್ನು ಚಿತ್ರೀಕರಿಸಿದ ಬರುಣ್ ಮುಖರ್ಜಿ, ಹಲವಾರು ಯಶಸ್ವಿ ಉತ್ತಮ ಚಿತ್ರಗಳ ಛಾಯಾಗ್ರಹಣ-ನಿರ್ದೇಶನ ಮಾಡಿದ ದಿನೇಶ್ ಬಾಬು ಇವರು ಮುಖ್ಯರು.

'ಬಿಳಿ ಹೆಂಡ್ತಿ' ಚಿತ್ರದಲ್ಲಿ ನಾಯಕನಟನಾಗಿ ಅನಿಲ್ ಕುಮಾರ್, 'ಕರಾವಳಿ', 'ಪರಸಂಗದ ಗೆಂಡೆತಿಮ್ಮ'ದಲ್ಲಿ ರೀಟಾ ಅಂಚನ್, 'ಬೀಸಿದ ಬಲೆ', 'ಸೀತೆಯಲ್ಲ ಸಾವಿತ್ರಿ'ಯಲ್ಲಿ ಜಯಲಕ್ಷ್ಮಿ, 'ಒಂದೇ ಗೂಡಿನ ಹಕ್ಕಿಗಳು', 'ಪಲ್ಲವಿ ಅನುಪಲ್ಲವಿ'ಯಲ್ಲಿ ವಿಕ್ರಮ್ ಅಭಿನಯಿಸಿದರು. 'ಕೂಗು' ಚಿತ್ರದಲ್ಲಿ ಜರೀನಾ ವಹಾಬ್, 'ಕನಕಾಂಬರ'ದಲ್ಲಿ ತಲ್ಲೂರಿ ರಾಮೇಶ್ವರಿ, 'ಕನ್ನೇಶ್ವರರಾಮ'ದಲ್ಲಿ ಶಬಾನಾ ಆಜ್ಮಿ, ಟಾಮ್ ಆಲ್ಟರ್, 'ಮಧುರ ಸಂಗಮ'ದಲ್ಲಿ ರಾಧಾ ಸಲೂಜಾ, 'ಮನೆ', 'ತಬ್ಬಲಿಯು ನೀನಾದೆ ಮಗನೆ'ಯಲ್ಲಿ ನಸೀರುದ್ದೀನ್ ಷಹಾ, 'ನನ್ನ ಪ್ರಾಯಶ್ಚಿತ್ತ'ದಲ್ಲಿ ಆಕಾಸಜ್ ದೇವ್, ರೆಹನಾ ಸುಲ್ತಾನಾ, 'ಲವ್ ಲೆಟರ್'ನಲ್ಲಿ ಕಂವರ್‌ಜೀತ್, ಪೈಂಟಲ್, ಜಿ.ಕೆ.ಅಸ್ರಾನಿ, ರಾಜಾ ಮುರಾದ್, 'A.K.47' ಚಿತ್ರದಲ್ಲಿ ಓಂಪುರಿ, ವಿಜಯೇಂದ್ರ ಘಾಟ್ಗೇ, ರೀಟಾ ಭಾದುರಿ, ರಾಕೇಶ್ ಪಾಂಡೇ ಕನ್ನಡ ಚಿತ್ರಗಳಲ್ಲಿ ನಟಿಸಿದರು. ಇದಲ್ಲದೆ, ಲಂಕೇಶ್‌ರ 'ಪಲ್ಲವಿ' ಚಿತ್ರವನ್ನು ಸಂಕಲನ ಮಾಡಿದ ಎ.ರಮೇಶ್ ಹಾಗೂ ಕರ್ನಾಟಕದ ಕಿರುಚಿತ್ರಗಳಿಗೆ ದುಡಿದ ಪಾರ್ವತಿ ನಾಯರ್, ರಾಹತ್ ಯೂಸಫಿ, ಪರ್ವೇಜ್ ಮೇರ್ವಾನ ಜೀ ಚಿತ್ರ ಮಾಧ್ಯಮವನ್ನು ಗಂಭೀರವಾಗಿ ತೆಗೆದುಕೊಂಡರು.

ಕೇಂದ್ರ ಸರ್ಕಾರದ ಎಸ್.ಕೆ.ಪಾಟೀಲ್ ವಿಚಾರಣಾ ಸಮಿತಿ ತನ್ನ ವರದಿ ಸಲ್ಲಿಸಿದಾಗ ಆರಂಭ ಕಾಲದಲ್ಲೇ ಒಂದು ವಿಶೇಷ ಅಂಶವನ್ನು ಒತ್ತಿ ಹೇಳಿತು : "ಈ ಸಂಸ್ಥೆಗೆ ಬರುವ ಎಲ್ಲ ವಿದ್ಯಾರ್ಥಿಗಳು ತಮ್ಮ ಕ್ಷೇತ್ರದಲ್ಲಿ 'ಸ್ಟಾರ್' ಆಗಲಾರರೆಂಬ ಅರಿವು ನಮಗಿದೆ. ಅದರೆ ಇಲ್ಲಿಂದ ಉತ್ತೀರ್ಣರಾಗಿ ಹೊರ ಹೋಗುವ ವಿದ್ಯಾರ್ಥಿಗಳಲ್ಲಿ ಶೇಕಡಾ ೧೦ರಷ್ಟು ಜನರ ಪ್ರತಿಭೆ ಮಿಂಚಿದರೆ ಸಾಕು ಈ ಫಿಲಂ ಇನ್‌ಸ್ಟಿಟ್ಯೂಟ್ ತನ್ನನ್ನು ತಾನು ಅಭಿನಂದಿಸಿಕೊಳ್ಳಲು ಅರ್ಹವಾಗುತ್ತದೆ" ಎಂದು ದಾಖಲಿಸಿದ್ದರು.

ಈ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿ ಪುಣೆ ಫಿಲಂ ಇನ್‌ಸ್ಟಿಟ್ಯೂಟ್ ಪದವೀಧರರು ಮಾಡಿದ ಚಿತ್ರ, ಪಡೆದ ರಾಜ್ಯ ಪ್ರಶಸ್ತಿ, ನಡೆದ ಹಾದಿ ಗುರುತಿಸಬಹುದು.

ವರ್ಷ ಪ್ರಶಸ್ತಿ ವಿಭಾಗ	ವ್ಯಕ್ತಿಗಳು ಚಿತ್ರದ ಹೆಸರು
೧೯೭೧-೭೨ ಅತ್ಯುತ್ತಮ ಸಂಕಲನಕಾರ್ತಿ	ಅರುಣಾ ದೇಸಾಯಿ 'ವಂಶವೃಕ್ಷ'
೧೯೭೨-೭೩ ಅತ್ಯುತ್ತಮ ಛಾಯಾಗ್ರಾಹಕ	ಎಸ್.ರಾಮಚಂದ್ರ 'ಸಂಕಲ್ಪ'
೧೯೭೨-೭೩ ಅತ್ಯುತ್ತಮ ಸಂಕಲನಕಾರ	ಉಮೇಶ್ ಕುಲಕರ್ಣಿ 'ಸಂಕಲ್ಪ'
೧೯೭೩-೭೪ ಅತ್ಯುತ್ತಮ ದ್ವಿತೀಯ ನಿರ್ದೇಶಕ	ಕೆ.ಎಂ.ಶಂಕರಪ್ಪ 'ಕಾಡಿ ಮಡಿದವರು'
೧೯೭೩-೭೪ ಅತ್ಯುತ್ತಮ ಛಾಯಾಗ್ರಾಹಕ	ಯು.ಎಂ.ಎನ್.ಶರೀಫ್ 'ಕಾಡಿ ಮಡಿದವರು'
೧೯೭೪-೭೫ ಅತ್ಯುತ್ತಮ ಛಾಯಾಗ್ರಾಹಕ	ಎಸ್.ರಾಮಚಂದ್ರ 'ಕಂಕಣ'
೧೯೭೫-೭೬ ಅತ್ಯುತ್ತಮ ಧ್ವನಿಗ್ರಾಹಕ	ಕೆ.ಎಸ್.ಕೃಷ್ಣಮೂರ್ತಿ 'ಚೋಮನದುಡಿ'
೧೯೭೬-೭೭ ಅತ್ಯುತ್ತಮ ಛಾಯಾಗ್ರಾಹಕ	ಎಸ್.ರಾಮಚಂದ್ರ 'ಋಷ್ಯಶೃಂಗ'
೧೯೭೭-೭೮ ಅತ್ಯುತ್ತಮ ಪ್ರಥಮ ನಿರ್ದೇಶಕ	ಗಿರೀಶ್ ಕಾಸರವಳ್ಳಿ 'ಘಟಶ್ರಾದ್ಧ'
೧೯೭೭-೭೮ ಅತ್ಯುತ್ತಮ ಚಿತ್ರಕಥಾ ಲೇಖಕ	ಗಿರೀಶ್ ಕಾಸರವಳ್ಳಿ 'ಘಟಶ್ರಾದ್ಧ'
೧೯೭೮-೭೯ ಅತ್ಯುತ್ತಮ ಛಾಯಾಗ್ರಾಹಕ (ವರ್ಣ)	ಬರುಣ ಮುಖರ್ಜಿ 'ಸಾವಿತ್ರಿ'
೧೯೭೮-೭೯ ಅತ್ಯುತ್ತಮ ಛಾಯಾಗ್ರಾಹಕ (ಕ ಬಿ)	ಎಸ್.ರಾಮಚಂದ್ರ 'ಘಟಶ್ರಾದ್ಧ'
೧೯೮೦-೮೧ ಅತ್ಯುತ್ತಮ ದ್ವಿತೀಯ ನಿರ್ದೇಶಕ	ಗಿರೀಶ್ ಕಾಸರವಳ್ಳಿ 'ಮೂರು ದಾರಿಗಳು'
೧೯೮೦-೮೧ ಅತ್ಯುತ್ತಮ ಚಿತ್ರಕಥೆ	ಗಿರೀಶ್ ಕಾಸರವಳ್ಳಿ 'ಮೂರು ದಾರಿಗಳು'
೧೯೮೦-೮೧ ಅತ್ಯುತ್ತಮ ಛಾಯಾಗ್ರಾಹಕ	ಎಸ್.ಆರ್.ಭಟ್ 'ಮೂರು ದಾರಿಗಳು'
೧೯೮೨-೮೩ ಅತ್ಯುತ್ತಮ ಛಾಯಾಗ್ರಾಹಕ	ಬಾಲು ಮಹೇಂದ್ರ 'ಪಲ್ಲವಿ ಅನುಪಲ್ಲವಿ'
೧೯೮೬ ೮೭	ಗಿರೀಶ್ ಕಾಸರವಳ್ಳಿ

ಅತ್ಯುತ್ತಮ ಪ್ರಥಮ ನಿರ್ದೇಶಕ	'ತಬರನ ಕಥೆ'
೧೯೮೬-೮೭	ಎಸ್.ಆರ್.ಭಟ್
ಅತ್ಯುತ್ತಮ ಛಾಯಾಗ್ರಾಹಕ	'ಸೂರ್ಯ'
೧೯೮೮-೮೯	ದಿನೇಶ್ ಬಾಬು
ಅತ್ಯುತ್ತಮ ಛಾಯಾಗ್ರಾಹಕ	'ಸುಪ್ರಭಾತ'
೧೯೮೮-೮೯	ಕೆ.ಎಸ್.ಕೃಷ್ಣಮೂರ್ತಿ
ಅತ್ಯುತ್ತಮ ಧ್ವನಿಗ್ರಾಹಕ	'ತರ್ಕ'
೧೯೮೯-೯೦	ಗಿರೀಶ್ ಕಾಸರವಳ್ಳಿ
ಅತ್ಯುತ್ತಮ ಚಿತ್ರಕಥಾ ಲೇಖಕ	'ಮನೆ'
೧೯೮೯-೯೦	ಗಿರೀಶ್ ಕಾಸರವಳ್ಳಿ
ತೀರ್ಪುಗಾರರ ವಿಶೇಷ ಪ್ರಶಸ್ತಿ	'ಮನೆ'
೧೯೮೯-೯೦	ಎಸ್.ರಾಮಚಂದ್ರ
ಅತ್ಯುತ್ತಮ ಛಾಯಾಗ್ರಾಹಕ	'ಮನೆ'
೧೯೯೦-೯೧	ಕೆ.ಎಸ್.ಕೃಷ್ಣಮೂರ್ತಿ
ಅತ್ಯುತ್ತಮ ಧ್ವನಿಗ್ರಾಹಕ	'ಮಹೇಶ್ವರ'
೧೯೯೧-೯೨	ಅರುಣಾ (ದೇಸಾಯಿ) ಪಾಟೀಲ್
ತೃತೀಯ ಅತ್ಯುತ್ತಮ ನಿರ್ದೇಶಕಿ	'ಪತಿತ ಪಾವನಿ'
೧೯೯೧-೯೩	ಕೆ.ಎಸ್.ಕೃಷ್ಣಮೂರ್ತಿ
ಅತ್ಯುತ್ತಮ ಧ್ವನಿಗ್ರಾಹಕ	'ಮೈಸೂರು ಮಲ್ಲಿಗೆ'
೧೯೯೫-೯೬	ಗಿರೀಶ್ ಕಾಸರವಳ್ಳಿ
ದ್ವಿತೀಯ ಅತ್ಯುತ್ತಮ ನಿರ್ದೇಶಕ	'ಕ್ರೌರ್ಯ'
೧೯೯೬-೯೭	ದಿನೇಶ್ ಬಾಬು
ಅತ್ಯುತ್ತಮ ಚಿತ್ರಕಥಾ ಲೇಖಕ	'ಅಮೃತ ವರ್ಷಿಣಿ'
೧೯೯೬-೯೭	ಜಿ.ಎಸ್.ಭಾಸ್ಕರ್
ಅತ್ಯುತ್ತಮ ಛಾಯಾಗ್ರಾಹಕ	'ನಾಗಮಂಡಲ'
೧೯೯೭-೯೮	ಗಿರೀಶ್ ಕಾಸರವಳ್ಳಿ
ಅತ್ಯುತ್ತಮ ಪ್ರಥಮ ನಿರ್ದೇಶಕ	'ತಾಯಿ ಸಾಹೇಬ'
೧೯೯೭-೯೮	ಹೆಚ್.ಎಂ.ರಾಮಚಂದ್ರ
ಅತ್ಯುತ್ತಮ ಛಾಯಾಗ್ರಾಹಕ	'ತಾಯಿ ಸಾಹೇಬ'
೧೯೯೭-೯೮	ದಿನೇಶ್ ಬಾಬು
ಅತ್ಯುತ್ತಮ ದ್ವಿತೀಯ ನಿರ್ದೇಶಕ	'ಲಾಲಿ'
೧೯೯೭-೯೮	ಗಿರೀಶ್ ಕಾಸರವಳ್ಳಿ
ಪುಟ್ಟಣ್ಣ ಕಣಗಾಲ್ ಪ್ರಶಸ್ತಿ.	(ಸಾಧನೆ-ಕೊಡುಗೆ ಗುರುತಿಸಲು)

ತಾವು ಪ್ರಶಸ್ತಿಯನ್ನು ವೈಯಕ್ತಿಕವಾಗಿ ಪಡೆಯದಿದ್ದರೂ ಒಂದು ಹೊಸ ಚಳವಳಿ, ಅಲೆಗೆ ಬದ್ಧರಾಗಿ ದುಡಿದು ಪ್ರಶಸ್ತಿ ಪಡೆದ ಕೆಲವು ಚಿತ್ರಗಳನ್ನು ಉಲ್ಲೇಖಿಸಬೇಕು. ತೀರ್ಪುಗಾರರ ವಿಶೇಷ ಪ್ರಶಸ್ತಿ ಪಡೆದ ಚಿತ್ರ 'ಕಿತಾಪತಿ'ಯ ಛಾಯಾಗ್ರಾಹಕ ದೇವು ದೇವಧರ, 'ಫಣಿಯಮ್ಮ', 'ಶಂಕರಾಚಾರ್ಯ', 'ಮಧ್ವಾಚಾರ್ಯ', 'ರಾಮಾನುಜಾಚಾರ್ಯ', 'ಭಗವದ್‌ಗೀತೆ', 'ಸ್ವಾಮಿ ವಿವೇಕಾನಂದ' ಚಿತ್ರದ ಛಾಯಾಗ್ರಾಹಕ ಮಧು ಅಂಬಟ್, 'ಅನ್ವೇಷಣೆ', 'ಅಸ್ಫೋಟ','ಅವಸ್ಥೆ','ಕಾಡಿನ ಬೆಂಕಿ','ಬೆಳ್ಳಿ ಬೆಳಕು','ಭುಜಂಗಯ್ಯನ ದಶಾವತಾರ', 'ಗಂಗವ್ವ ಗಂಗಾಮಾಯಿ', 'ಬೆರಳ್ಗೆ ಕೊರಳ್' ಇವುಗಳ ಛಾಯಾಗ್ರಾಹಕ ಎಸ್.ರಾಮಚಂದ್ರ, 'ಕುಬಿ ಮತ್ತು ಇಯಾಲ', 'ಚೋಮನ ದುಡಿ', 'ಮಲೆಯ ಮಕ್ಕಳು' ಚಿತ್ರದ ಸಹಾಯಕ ನಿರ್ದೇಶಕ ಗಿರೀಶ್ ಕಾಸರವಳ್ಳಿ, 'ಕೋಕಿಲಾ' ಚಿತ್ರದ ಛಾಯಾಗ್ರಾಹಕ-ನಿರ್ದೇಶಕ ಬಾಲುಮಹೇಂದ್ರ, ಸಂಕಲನಕಾರ ಉಮೇಶ್ ಕುಲಕರ್ಣಿ, 'ವಾತ್ಸಲ್ಯಪಥ' ಚಿತ್ರಕಥೆ ರಚಿಸಿದ ಡಾ।ಪಿ.ವಿ.ಭಟ್, 'ಒಂದಾನೊಂದು ಕಾಲದಲ್ಲಿ' ಚಿತ್ರದ ವಿ.ಕೆ.ಮೂರ್ - ಕೆಲವು ಪ್ರಮುಖ ಹೆಸರುಗಳು.

ಇದೇ ರೀತಿ ರಾಷ್ಟ್ರಪ್ರಶಸ್ತಿ ವಿಜೇತ ಚಿತ್ರಗಳತ್ತ ಕಣ್ಣು ಹಾಯಿಸಿದರೆ ಅಲ್ಲೂ ಕೆಲವು ಸಾಧನೆಗಳು ಕಣ್ಣಿಗೆ ಬೀಳುವುದು ಖಚಿತ.

ವರ್ಷ ಪ್ರಶಸ್ತಿ ವಿಭಾಗ	ವ್ಯಕ್ತಿಗಳು ಚಿತ್ರದ ಹೆಸರು
೧೯೭೬	ಎಸ್.ರಾಮಚಂದ್ರ
ಅತ್ಯುತ್ತಮ ವರ್ಣ ಛಾಯಾಗ್ರಹಣ ಪ್ರಶಸ್ತಿ	'ಋಷ್ಯಶೃಂಗ'
೧೯೭೭	ಗಿರೀಶ್ ಕಾಸರವಳ್ಳಿ
ರಾಷ್ಟ್ರಪತಿ ಸುವರ್ಣ ಪದಕ	'ಘಟಶ್ರಾದ್ಧ'
೧೯೭೭	ಬಾಲುಮಹೇಂದ್ರ
ಅತ್ಯುತ್ತಮ (ಕ/ಬಿ) ಛಾಯಾಗ್ರಹಣ ಪ್ರಶಸ್ತಿ	'ಕೋಕಿಲಾ'
೧೯೮೧	ಶ್ರೀಪಾದ ಆರ್.ಭಟ್
ಅತ್ಯುತ್ತಮ (ಕ/ಬಿ) ಛಾಯಾಗ್ರಹಣ ಪ್ರಶಸ್ತಿ	'ಮೂರು ದಾರಿಗಳು'
೧೯೮೬	ಗಿರೀಶ್ ಕಾಸರವಳ್ಳಿ
ರಾಷ್ಟ್ರಪತಿ ಸುವರ್ಣ ಪದಕ	'ತಬರನ ಕಥೆ'
೧೯೮೬	ಉಮೇಶ್ ಕುಲಕರ್ಣಿ
ಅತ್ಯುತ್ತಮ ಪ್ರಾದೇಶಿಕ ಚಿತ್ರ	'ಶಂಖನಾದ'
೧೯೮೮	ಗಿರೀಶ್ ಕಾಸರವಳ್ಳಿ
ಅತ್ಯುತ್ತಮ ಪ್ರಾದೇಶಿಕ ಚಿತ್ರ	'ಬಣ್ಣದ ವೇಷ'
೧೯೮೯	ಗಿರೀಶ್ ಕಾಸರವಳ್ಳಿ
ಅತ್ಯುತ್ತಮ ಪ್ರಾದೇಶಿಕ ಚಿತ್ರ	'ಮನೆ'
೧೯೯೫	ಗಿರೀಶ್ ಕಾಸರವಳ್ಳಿ
ಅತ್ಯುತ್ತಮ ಪ್ರಾದೇಶಿಕ ಚಿತ್ರ	'ಕ್ರೌರ್ಯ'
೧೯೯೭	ಗಿರೀಶ್ ಕಾಸರವಳ್ಳಿ
ರಾಷ್ಟ್ರಪತಿ ಸುವರ್ಣ ಪದಕ	'ತಾಯಿಸಾಹೇಬ'

ಇವಲ್ಲದೇ, ಗಿರೀಶ್ ಕಾಸರವಳ್ಳಿಯವರ ಚಿತ್ರಗಳಾದ 'ಘಟಶ್ರಾದ್ಧ' (೧೯೭೮), 'ಆಕ್ರಮಣ' (೧೯೮೦), 'ತಬರನ ಕತೆ' (೧೯೮೮), 'ಮನೆ' (೧೯೯೧), 'ಕ್ರೌರ್ಯ' (೧೯೯೭), 'ತಾಯಿಸಾಹೇಬ' (೧೯೯೯) ಹಾಗೂ ಬಾಲು ಮಹೇಂದ್ರರ 'ಕೋಕಿಲಾ' (೧೯೭೮) ಹಾಗು ರಾಹುಲ್ ಯೂಸುಫಿ ನಿರ್ದೇಶಿಸಿದ 'ನೈರಾಶ್ಯ' (೧೯೯೭) ಪನೋರಮಾದಲ್ಲಿ ಪ್ರದರ್ಶನಗೊಂಡ ಚಿತ್ರಗಳು.

ಆದರ್ಶ ಫಿಲಂ ಇನ್‌ಸ್ಟಿಟ್ಯೂಟ್

ಸಿನಿಮಾ ತಾಂತ್ರಿಕ ಕ್ಷೇತ್ರದಲ್ಲಿ ತರಬೇತಿ ನೀಡಲು ೧೯೪೩ರಿಂದ ಬೆಂಗಳೂರು ಜಯಚಾಮರಾಜೇಂದ್ರ ಪಾಲಿಟೆಕ್ನಿಕ್ ಸಂಸ್ಥೆ ಅಸ್ತಿತ್ವದಲ್ಲಿ ಇದ್ದ ಹೆಗ್ಗಳಿಕೆ ನಮ್ಮದಾದರೆ ಚಲನಚಿತ್ರ ಅಭಿನಯ, ಹಿನ್ನೆಲೆ ಗಾಯನ, ಶಾಸ್ತ್ರೀಯ ಹಾಗೂ ಚಲನಚಿತ್ರ ನೃತ್ಯ ಇವುಗಳ ಕುರಿತು ತರಬೇತಿ ನೀಡುವ ಸಂಸ್ಥೆ ನಮ್ಮಲ್ಲಿ ಇಲ್ಲವಲ್ಲ ಎಂಬ ಕೊರತೆ ಇತ್ತು. ಒಂದೆಡೆ ಚಿತ್ರರಂಗಕ್ಕೆ ಹಲವಾರು ಕ್ಷೇತ್ರದಲ್ಲಿ ಪ್ರತಿಭೆಗಳ ಅಗತ್ಯ ಹಾಗೂ ಲಭ್ಯತೆಯ ಕೊರತೆ, ಇನ್ನೊಂದೆಡೆ ಕೇವಲ ಉತ್ಸಾಹವಿರುವ ಪ್ರತಿಭೆಗಳು ಚಿತ್ರರಂಗಕ್ಕೆ ಪ್ರವೇಶಿಸಲು ಹಾತೊರೆಯುವ ವಾತಾವರಣ. ಇವೆರಡಕ್ಕೆ ನಡುವೆ ತರಬೇತಿ ನೀಡುವ ಸಮನ್ವಯ ವ್ಯವಸ್ಥೆಯ ಅಗತ್ಯವಿದ್ದರೂ ಆ ನಿಟ್ಟಿನಲ್ಲಿ ಚಿತ್ರರಂಗವಾಗಲಿ, ಸರ್ಕಾರವಾಗಲಿ ಚಿಂತಿಸಿರಲಿಲ್ಲ.

ಪುಣೆ ಫಿಲಂ ಇನ್‌ಸ್ಟಿಟ್ಯೂಟ್‌ನಿಂದ ೧೯೭೩ರಲ್ಲಿ ಅಭಿನಯದಲ್ಲಿ ತರಬೇತಿ ಪಡೆದು ಬಂದ ನುಗ್ಗೇನಹಳ್ಳಿ ನಾರಾಯಣ ಅನಿಲ್‌ಕುಮಾರ್ (ಬಿಳೀಹೆಂಡ್ತಿ ಚಿತ್ರದ ನಾಯಕನಟ) ಇಂತಹ ಒಂದು ಸಂಸ್ಥೆಯ ಅಗತ್ಯದ ಅರಿವಾಗಿ ಆ ವಿಚಾರವನ್ನು ಚಿತ್ರರಂಗದ ವಿತರಣ ಕ್ಷೇತ್ರದ ಬಿ.ಆರ್.ಪಿ.ಸ್ವಾಮಿಯವರ ಮನಸ್ಸಿನಲ್ಲಿ ಬಿತ್ತಿದರು. ಇದರ ಫಲವೇ ಆದರ್ಶ ಫಿಲಂ ಇನ್‌ಸ್ಟಿಟ್ಯೂಟ್‌ನ ಜನ್ಮ.

೧೯೭೩ರಲ್ಲಿ ಫ್ರೇಜರ್‌ಟೌನ್ ಕೋಲ್ಸ್ ಪಾರ್ಕ್ ಬಳಿ ಖಾಸಗಿ ಬಂಗಲೆಯೊಂದನ್ನು ಬಾಡಿಗೆಗೆ ಪಡೆದು, ಇಂತಹ ಒಂದು ಸಂಸ್ಥೆಯ ಅಗತ್ಯವನ್ನು ಚಿತ್ರ ನಿರ್ಮಾಣ ಕಾಲದಲ್ಲಿ ಸಕ್ರಿಯವಾಗಿದ್ದಾಗಲೇ ಅರಿತಿದ್ದ, ಅನುಭವಿಸಿದ್ದ ಆರ್.ನಾಗೇಂದ್ರರಾಯರನ್ನು ಈ ಸಂಸ್ಥೆಯ ಪ್ರಾಂಶುಪಾಲರಾಗಿ ನೇತೃತ್ವ, ಮಾರ್ಗದರ್ಶನ ನೀಡಲು ಒಪ್ಪಿಸಿ, ಮೇ ತಿಂಗಳಲ್ಲಿ ೨೦ ವಿದ್ಯಾರ್ಥಿಗಳೊಂದಿಗೆ ಆರಂಭಿಸಲಾಯಿತು.

ಕನ್ನಡ ಮಾಧ್ಯಮದಲ್ಲಿ ಹಾಗೂ ಕನಿಷ್ಠ ಎಸ್.ಎಸ್.ಎಲ್.ಸಿ. ವಿದ್ಯಾರ್ಹತೆ ಹೊಂದಿರುವ ಕರ್ನಾಟಕ ವಿದ್ಯಾರ್ಥಿಗಳಿಗೆ ಇದೊಂದು ಒಳ್ಳೆಯ ಅವಕಾಶವಾಗಿ ಒದಗಿ

(ಚಿತ್ರ ೮) ಹೆಸರುಘಟ್ಟದಲ್ಲಿರುವ ಆದರ್ಶ ಫಿಲಂ ಇನ್‌ಸ್ಟಿಟ್ಯೂಟ್

ಬಂದಿತು. ಕೆ.ಕೆ.ಮೂರ್ತಿಯವರ ಅಧ್ಯಕ್ಷತೆಯಲ್ಲಿ ಆಗಿನ ಮುಖ್ಯಮಂತ್ರಿಗಳಾದ ಡಿ.ದೇವರಾಜ ಅರಸುರವರು ದೀಪ ಬೆಳಗಿಸಿ ಈ ಸಂಸ್ಥೆಯನ್ನು ಉದ್ಘಾಟಿಸಿದರು. ಈ ಸಂಸ್ಥೆಗೆ ಆಡಳಿತ ಮಂಡಳಿ ರಚಿಸಿ ಅದರಲ್ಲಿ ನಾಗೇಂದ್ರರಾಯರ ಜೊತೆ ಆರ್.ಸೀತಾರಾಮರಾಜು, ಡಾ|ಪುಟ್ಟಣ್ಣ, ಆರ್.ತಮ್ಮಯ್ಯ, ಟಿ.ಆರ್.ರಂಗಪ್ಪಗೌಡ, ಎಚ್.ಕೆ.ಹಾಲೇಗೌಡ ಹಾಗೂ ಬಿ.ಆರ್.ಪಿ.ಸ್ವಾಮಿ ಸದಸ್ಯರಾದರು. ಬಿ.ಆರ್.ಪಿ.ಸ್ವಾಮಿಯವರು ವ್ಯವಸ್ಥಾಪಕ ನಿರ್ದೇಶಕರಾಗಿ ಕಾರ್ಯಸೂತ್ರ ವಹಿಸಿಕೊಂಡರು.

ಮೊದಲ ಹಂತದಲ್ಲಿ ಉಪ-ಪ್ರಾಂಶುಪಾಲರಾಗಿ ಸಿ.ಕೆ.ನಾಗರಾಜರಾವ್, ಕು.ರ.ಸೀತಾರಾಮಶಾಸ್ತ್ರಿ, ಜಿ.ವಿ.ಶಿವಾನಂದ್, ಅನಿಲ್ ಕುಮಾರ್, ಜಿ.ಪ್ರಭಾಕರ ಇವರನ್ನು ಅಭಿನಯ, ಸಾಹಸ ಶಿಕ್ಷಕರಾಗಿ ಸೇವೆ ನೀಡಿದರು. ಬಿ.ಎನ್.ನಾರಾಯಣ್ (ಮೇಕಪ್ ನಾಣಿ), ಆರ್.ಟಿ.ರಮಾ ಹೊರಗಿನಿಂದಲೇ ನೆರವಾದರು.

೧೯೭೪ರಲ್ಲಿ ಸಂಗೀತ ನಿರ್ದೇಶಕದ್ವಯರಾದ ರಾಜನ್-ನಾಗೇಂದ್ರರ ಸಲಹೆಯಂತೆ ಒಂದು ವರ್ಷದ ಹಿನ್ನೆಲೆ ಗಾಯನ ತರಬೇತಿ ವಿಷಯವನ್ನು ವ್ಯಾಸಂಗಕ್ರಮವಾಗಿ ಸೇರಿಸಲಾಯಿತು. ಜಿ.ಎನ್.ಶ್ರೀನಿವಾಸಮೂರ್ತಿ ಈ ವಿಷಯದ ಅಧ್ಯಾಪಕರಾದರು.

೧೯೭೩ರಿಂದ ೧೯೭೭ರವರೆಗೆ ಬಿ.ಆರ್.ಪಿ.ಸ್ವಾಮಿಯವರು ತಮ್ಮ ಸ್ವಂತ ಬಂಡವಾಳದಲ್ಲಿ ಈ ಸಂಸ್ಥೆಯನ್ನು ನಡೆಸಿಕೊಂಡು ಬಂದರು. ಇವರ ಅಗತ್ಯ ಹಾಗೂ ಸೇವೆ ಮನಗಂಡು ಕರ್ನಾಟಕ ರಾಜ್ಯ ಸರ್ಕಾರ ೧೯೭೮ರಲ್ಲಿ ಮಾನ್ಯತೆ ನೀಡಿ, ಅಂಗೀಕೃತಗೊಳಿಸಿ, ಆ ವರ್ಷದಿಂದಲೇ ಅನುದಾನ (Grant) ನೀಡುತ್ತಿದೆ. ೧೯೭೯ರಲ್ಲಿ ಪ್ರತ್ಯೇಕವಾದ ಅನುದಾನ ಸಂಹಿತೆ ರಚಿಸಿ, ಸರ್ಕಾರದಿಂದ ಸಿಬ್ಬಂದಿವೇತನ ಪಡೆಯಲು ಅನುಮೋದನೆ ನೀಡಿತು. ಕನ್ನಡ ಸಂಸ್ಕೃತಿ ಇಲಾಖೆಯು ಹತ್ತು ಲಕ್ಷ ರೂಪಾಯಿ ಅನುದಾನ ನೀಡುತ್ತಿದೆ.

೧೯೭೭ರಲ್ಲಿ ಆರ್.ನಾಗೇಂದ್ರರಾಯರು ನಿಧನರಾದಾಗ ಕನ್ನಡಪ್ರಭ ಉಪಸಂಪಾದಕ ನಾರಾಯಣಸ್ವಾಮಿಯವರ ಸಲಹೆಯ ಮೇರೆಗೆ ಬಿ.ವಿ.ಕಾರಂತರು ಈ ಸಂಸ್ಥೆಗೆ ೧೯೭೭ ಹಾಗೂ ೧೯೭೮ರವರೆಗೆ ಪ್ರಾಂಶುಪಾಲರಾದರು. ಇವರ ಅವಧಿಯಲ್ಲಿ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ಪರೀಕ್ಷೆ ನಡೆಸಲು ಸರ್ಕಾರದಿಂದ ಆದೇಶ ಹೊರಡಿಸಲಾಯಿತು. ಅನಂತರ ಮಂಡಳಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಅರ್ಹತಾಪತ್ರ ನೀಡಲಾರಂಭಿಸಿತು.

ಪುಣೆ ಫಿಲಂ ಇನ್‌ಸ್ಟಿಟ್ಯೂಟ್‌ನಲ್ಲಿ ನಿರ್ದೇಶನ ಪದವೀಧರರಾಗಿ ೧೯೭೭ರಲ್ಲಿ ಹೊರಬಂದಿದ ಗಿರೀಶ್ ಕಾಸರವಳ್ಳಿಯವರು ೧೯೭೯ರಲ್ಲಿ ಈ ಸಂಸ್ಥೆಗೆ ಪ್ರಾಂಶುಪಾಲರಾದರು. ಇವರ ಕಾಲಾವಧಿಯಲ್ಲಿ ಅಭಿನಯದ ವಿವಿಧ ವಿಷಯಗಳನ್ನು ಕಲಿಸಲು ಪ್ರೇಮಾ ಕಾರಂತ, ಬಿ.ಜಯಶ್ರೀ, ನಾಗಾಭರಣ, ಎಸ್.ಮಾಲತಿ ನೇಮಕವಾದರು.

(ಚಿತ್ರ ೯) ಆದರ್ಶ ಫಿಲಂ ಇನ್‌ಸ್ಟಿಟ್ಯೂಟ್
ಸಂಸ್ಥಾಪಕ ಬಿ.ಪಿ.ಆರ್.ಸ್ವಾಮಿ

೧೯೮೦ರಲ್ಲಿ ಅಭಿನಯದ ವಿದ್ಯಾರ್ಥಿಗಳಿಗೆ ಹಾಗೂ ಹಿನ್ನೆಲೆ ಗಾಯನದ ವಿದ್ಯಾರ್ಥಿಗಳಿಗೆ ಅನುಕೂಲವಾಗಲು ಡಬ್ಬಿಂಗ್, ರಿ-ರಿಕಾರ್ಡಿಂಗ್ ಪ್ರೊಜೆಕ್ಷನ್ ಥಿಯೇಟರ್ ನಿರ್ಮಿಸಿದರು. ಅದೇ ವರ್ಷ ಪ್ರಾಯೋಗಿಕ ತರಬೇತಿ ನೀಡಲು ವೀಡಿಯೊ ಕ್ಯಾಮರಾ ಹಾಗೂ ಇತರ ಸಲಕರಣೆಗಳನ್ನು ಸಂಸ್ಥೆಯು ಕೊಂಡುಕೊಂಡಿತು. ಗಿರೀಶ್ ಕಾಸರವಳ್ಳಿಯವರು ಏಳು ವರ್ಷದ ಸೇವೆ ನೀಡಿ ಸಂಸ್ಥೆಯಿಂದ ನಿರ್ಗಮಿಸಿದರು.

೧೯೮೭ರಲ್ಲಿ ಚಲನಚಿತ್ರ ನಿರ್ದೇಶಕ ಎಸ್.ಎಸ್.ಧನಂಜಯ (ದತ್ತು) ಈ ಸಂಸ್ಥೆಗೆ ಪ್ರಾಂಶುಪಾಲರಾಗಿ ೧೯೮೯ರವರೆಗೆ ತಮ್ಮ ಸೇವೆ ನೀಡಿದರು. ಚಿತ್ರ ನಿರ್ದೇಶಕ ಎ.ಎಲ್.ಆಚಾರ್ಯರು ಅಧ್ಯಾಪಕರಾಗಿದ್ದರು. ೧೯೮೮ರಲ್ಲಿ ಈ ಸಂಸ್ಥೆ ತನ್ನ ೧೫ನೇ ವಾರ್ಷಿಕೋತ್ಸವವನ್ನು ವಿಜೃಂಭಣೆಯಿಂದ ಚೌಡಯ್ಯ ಸ್ಮಾರಕ ಭವನದಲ್ಲಿ ಆಚರಿಸಿ ಸ್ಮರಣ ಸಂಚಿಕೆ ಹೊರತಂದಿತು. ಈ ಸಂದರ್ಭದಲ್ಲಿ ಈ ಸಂಸ್ಥೆಯಲ್ಲಿನ ಅಭಿನಯ, ಹಿನ್ನೆಲ ಗಾಯನ, ನೃತ್ಯ ವಿಷಯ ಕ್ರಮದ ಯಶಸ್ವಿ ವಿದ್ಯಾರ್ಥಿಗಳಿಗೆ ಭಾರತ ಸರ್ಕಾರ ಹಾಗೂ ಅಜಂತಾ ಮೂವೀಸ್‌ನ ಎ.ಆರ್.ರಾಜು ನೀಡುವ ಪ್ರತ್ಯೇಕ ವಿದ್ಯಾರ್ಥಿವೇತನ ಹಾಗೂ ಸಂಸ್ಥೆಯೇ ನೀಡುವ ಬೆಳ್ಳಿ ಪದಕಗಳನ್ನು ಹಿನ್ನೆಲೆ ಗಾಯನದ ವಿದ್ಯಾರ್ಥಿನಿ ಕೆ.ಶ್ರೀಲಕ್ಷ್ಮಿಗೆ ನೀಡಿ ಗೌರವಿಸಿತು.

ನಿರ್ದೇಶಕ ನಾಗಾಭರಣರು ೧೯೮೯ರಿಂದ ೧೯೯೩ರವರೆಗೆ ಪ್ರಾಂಶುಪಾಲರಾಗಿದರು. ೧೯೯೩ರಿಂದ ೧೯೯೫ರವರೆಗೆ ಛಾಯಾಗ್ರಾಹಕ-ನಿರ್ದೇಶಕ-ನಿರ್ಮಾಪಕ ಜಾನಕೀರಾಮ್ ಇವರು ಪ್ರಾಂಶುಪಾಲರಾದರು. ೧೯೯೫ರಿಂದ ಚಲನಚಿತ್ರ ನಿರ್ದೇಶಕದ್ವಯ (ದೊರೆ-ಭಗವಾನ್)ರಲ್ಲಿ ಒಬ್ಬರಾದ ಎಸ್.ಕೆ.ಭಗವಾನ್ ಪ್ರಾಂಶುಪಾಲರಾದರು.

ಈಗ ಈ ಸಂಸ್ಥೆ ಬೆಂಗಳೂರಿನಿಂದ ೩೫ ಕಿ.ಮೀ. ದೂರದಲ್ಲಿರುವ ಹೆಸರಘಟ್ಟದ ಬಳಿಯ ಫಿಲಂ ಸಿಟಿಗೆ ಮೀಸಲಾಗಿದ್ದ ಜಮೀನಿನಲ್ಲಿ ೧೦ ಎಕರೆ ಭೂಮಿಯನ್ನು ಸರ್ಕಾರದಿಂದ ಮಂಜೂರು ಮಾಡಿಸಿಕೊಂಡಿದೆ. ಅಲ್ಲಿ ತನ್ನ ಸ್ವಂತ ಕಟ್ಟಡ ಹೊಂದಿದೆ. ಅಲ್ಲಿಗೆ ಬೆಂಗಳೂರು ನಗರದಿಂದ ಹೋಗಿ ಬರಲು ಸ್ವಂತ ವಾಹನ ವ್ಯವಸ್ಥೆಯೂ ಇದೆ. ಪರಸ್ಥಳದಿಂದ ಬರುವ ವಿದ್ಯಾರ್ಥಿಗಳಿಗೆ ವಸತಿಗೃಹ (Hostel) ಸೌಲಭ್ಯವೂ ಒದಗಿಸಲಾಗಿದೆ. ೨೦೦೧ನೇ ವರ್ಷದಿಂದ ಅಭಿನಯ ತರಗತಿಗಳು ಈ ಹೊಸ ಸ್ಥಳದಲ್ಲಿ ಪ್ರಾರಂಭ. ಈಗ ಇಲ್ಲಿ ೧೬ರಿಂದ ೩೦ ವರ್ಷ ವಯೋಮಿತಿ ಇರುವ ವಿದ್ಯಾರ್ಥಿಗಳಿಗೆ ಒಂದು ವರ್ಷದ ಅಭಿನಯ ತರಬೇತಿ (Film Acting) ನೀಡಲಾಗುತ್ತಿದೆ. ಇದಕ್ಕಾಗಿ ಇರುವ ವಾರ್ಷಿಕ ಶುಲ್ಕ (Fees) ಸುಮಾರು ೫,೦೦೦ ರೂಪಾಯಿ ಇದ್ದು, ವಿದ್ಯಾರ್ಥಿನಿಯರಿಗೆ ಶಿಕ್ಷಣ ಶುಲ್ಕದಲ್ಲಿ ಶೇಕಡಾ ಐವತ್ತು ರಿಯಾಯತಿ ನೀಡುವರು.

ರಾಷ್ಟ್ರದಲ್ಲೇ ಮೊಟ್ಟಮೊದಲ ಬಾರಿಗೆ ಹಿನ್ನೆಲೆ ಗಾಯನ (Play-back singing) ತರಬೇತಿ ನೀಡುವ ಈ ವ್ಯಾಸಂಗ ಕ್ರಮಕ್ಕೆ ಸೇರಲು ಕನಿಷ್ಠ ವಿದ್ಯಾರ್ಹತೆ : ೮ನೇ ತರಗತಿ. ವಯೋಮಿತಿ : ೧೬ರಿಂದ ೩೦ ವರ್ಷ. ಇದರ ಅವಧಿ : ಒಂದು ವರ್ಷದ್ದಾಗಿದೆ. ಇದರ ವಾರ್ಷಿಕ ಶುಲ್ಕ ಸುಮಾರು ೩,೦೦೦ ರೂಪಾಯಿ ಇದ್ದು, ಹಾಡುಗಾರಿಕೆಯಲ್ಲಿ ಪೂರ್ವಜ್ಞಾನ, ಪರಿಶ್ರಮ, ಹಿನ್ನೆಲೆ ಇದ್ದವರಿಗೆ ಆದ್ಯತೆ ಇದೆ.

ಇನ್ನು ಶಾಸ್ತ್ರೀಯ ನೃತ್ಯ (Classical dance) ಮತ್ತು ಚಲನಚಿತ್ರ ನೃತ್ಯ (Film dance) ಕುರಿತು ಎರಡು ವರ್ಷಗಳ ಪ್ರಾಥಮಿಕ ತರಬೇತಿ ಇದ್ದು, ಇಲ್ಲೂ ಸಹ ೮ರಿಂದ ೨೫ ವರ್ಷ ವಯೋಮಿತಿ ಇರುವವರಿಗೆ ಪ್ರವೇಶ ಇದೆ. ಆದರೆ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಪರೀಕ್ಷೆಗೆ ಕೂರಲು ಅಭ್ಯರ್ಥಿಗೆ ಕನಿಷ್ಠ ೧೨ ವರ್ಷ ತುಂಬಿರಬೇಕು. ಇದರಲ್ಲಿ ಭರತನಾಟ್ಯವನ್ನು ಮಾತ್ರ ಕಲಿಸಲಾಗುವುದು. ಚಲನಚಿತ್ರ ನೃತ್ಯದಲ್ಲಿ ಪಾಶ್ಚಿಮಾತ್ಯ ಹಾಗೂ ಭಾರತೀಯ ಜನಪದ ನೃತ್ಯಶೈಲಿ ಕಲಿಸಲಾಗುವುದು. ಇದೇ ಎರಡು ವಿಷಯಗಳನ್ನು ಕುರಿತು ೨ ವರ್ಷಗಳ ಕಾಲಾವಧಿಯ ಪ್ರೌಢ ಮಟ್ಟದ ತರಬೇತಿ ನೀಡಲಾಗುವುದು. ಇಲ್ಲೂ ಸಹ ೧೩ರಿಂದ ೨೫ ವರ್ಷ ವಯೋಮಿತಿ ಇದ್ದವರಿಗೆ ಪ್ರವೇಶ. ಆದರೆ ೧೩ ವರ್ಷ ತುಂಬಿದವರಿಗೆ ಹಾಗೂ ಪ್ರಾಥಮಿಕ ಪರೀಕ್ಷೆಯಲ್ಲಿ ಉತ್ತೀರ್ಣರಾದವರು ಮಾತ್ರ ಮಂಡಳಿಯ ಪರೀಕ್ಷೆಗೆ ಕೂರಬಹುದು. ಇದರ ಒಟ್ಟು ವಾರ್ಷಿಕ ಶುಲ್ಕ ಸುಮಾರು ೧,೦೦೦ ರೂಪಾಯಿ. ತಿಂಗಳಿಗೆ ೧೫೦ ರೂ. ದರದಂತೆ ವಸತಿ ಸೌಕರ್ಯ ಲಭ್ಯ. ಆದರೆ ವಿದ್ಯಾರ್ಥಿ ಹತ್ತು ತಿಂಗಳ ಶುಲ್ಕವನ್ನು ಪ್ರವೇಶ ಪಡೆಯುವಾಗಲೇ ಒಮ್ಮೆಲೆ ಪಾವತಿಸಬೇಕು.

(ಚಿತ್ರ ೧೦) ಆದರ್ಶ ಫಿಲಂ ಇನ್‌ಸ್ಟಿಟ್ಯೂಟಿನ ಮೊದಲ ಪ್ರಾಂಶುಪಾಲರಾದ ಆರ್.ನಾಗೇಂದ್ರರಾಯರಿಂದ ವಿದ್ಯಾರ್ಥಿಗಳಿಗೆ ಅಭಿನಯದ ಬಗ್ಗೆ ಮಾರ್ಗದರ್ಶನ

ಅತ್ಯುತ್ತಮ ವಿದ್ಯಾರ್ಥಿಗಳಿಗೆ ಚಲನಚಿತ್ರರಂಗದಿಂದ ಡಾ|ರಾಜಕುಮಾರ್, ಡಾ|ರಾಮಾನಾಯಿಡು, ರಾಮು-ಮಾಲಾಶ್ರಿ, ಚಲನಚಿತ್ರ ನಿರ್ಮಾಪಕ ಎಸ್.ಎ.ಗೋವಿಂದರಾಜ್ ಹಾಗೂ ಬಸಂತಕುಮಾರ್ ಪಾಟೀಲ್ ಇವರುಗಳ ವಿದ್ಯಾರ್ಥಿ ವೇತನಗಳು ದೊರೆಯುವುದು. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಜನಾಂಗಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ ಕರ್ನಾಟಕ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಗಳಿಂದ ವಿದ್ಯಾರ್ಥಿ ವೇತನಗಳಿವೆ. ವಿದ್ಯಾರ್ಥಿಗಳಿಗೆ ನಗರ ಸಾರಿಗೆ ಹಾಗೂ ರೈಲ್ವೆ ಪ್ರಯಾಣದಲ್ಲಿ ರಿಯಾಯಿತಿ ಪಾಸ್ ದೊರೆಯುತ್ತದೆ.

ಈಗಿರುವ ಶಿಕ್ಷಕರ ತಂಡದಲ್ಲಿ ಅಲ್ಲಿಯ ಹಳೆಯ ವಿದ್ಯಾರ್ಥಿಗಳಾದ ವಿಶಾಲ್‌ರಾಜ್ (ನೃತ್ಯ), ಎಸ್.ಬಾಲಸುಬ್ರಹ್ಮಣ್ಯಂ (ಹಿನ್ನೆಲೆ ಗಾಯನ), ರಾಜಗೋಪಾಲ (ನಾಟಕ) ಕಲಿಸುವರು. ಇವಲ್ಲದೇ ಸಾಹಸ, ಹೋರಾಟ ವಿಷಯಕ್ಕೆ ಸೂರ್ಯ ಪ್ರಕಾಶ್, ಪಾಶ್ಚಿಮಾತ್ಯ ನೃತ್ಯಕ್ಕೆ ದೇವರಾಜ್, ಸಂಗೀತ ವಾದ್ಯಗಳ ಕಲಿಸುವಿಕೆಯಲ್ಲಿ ಕೆ.ನಟೇಶ್, ಎ.ಎ.ರಾಜು ಹಾಗೂ ಭರತನಾಟ್ಯದಲ್ಲಿ ಕುಮಾರಿ ಗೋದಾ ನಿರತರಾಗಿದ್ದಾರೆ.

ಯಾವುದೇ ಸಂಸ್ಥೆಯನ್ನು ನಾವು ಗುರುತಿಸುವುದು ಅಲ್ಲಿನ ಕಾರ್ಯಗಳು ಫಲ ನೀಡುವುದು ಕಣ್ಣಿಗೆ ಕಾಣಲು ಆರಂಭವಾದಾಗ ಮಾತ್ರ. ಇದು ಎಲ್ಲ ರಂಗಗಳಲ್ಲೂ ಇರುವ ಸಾಮಾನ್ಯ ಪರಂಪರೆ.

ಈ ದೃಷ್ಟಿಯಿಂದ ಆದರ್ಶ ಫಿಲಂ ಇನ್‌ಸ್ಟಿಟ್ಯೂಟ್‌ನಿಂದ ಅಭಿನಯ ಕ್ಷೇತ್ರದಲ್ಲಿ ಉತ್ತೀರ್ಣರಾಗಿ ಬಂದು ತಮ್ಮ ಬಹುಮುಖ ಪ್ರತಿಭೆಯಿಂದ ನಿರ್ದೇಶಕರಾದವರು ಹಲವಾರು ಜನ. ಅವರಲ್ಲಿ ಸಂಸ್ಥೆಯ ಪ್ರಥಮ ತಂಡದಲ್ಲಿ ಉತ್ತೀರ್ಣರಾದ ಡಿ.ರಾಜೇಂದ್ರಬಾಬು, ನಂತರದ ಸುನೀಲ್ ಕುಮಾರ್ ದೇಸಾಯಿ, ಪಿ.ನಂಜುಂಡಪ್ಪ, ಸುರೇಶ್ ದಾವಣಗೆರೆ, ರಾಮ್ ಪ್ರಸಾದ್, ರಾಮದಾಸ್ ನಾಯ್ಡು, ನಂಜುಂಡಸ್ವಾಮಿ, ದಿನೇಶ್ ಮಂಗಳೂರು, ಸುಹಾಸ್ ಕುಲಕರ್ಣಿ, ಸಂಜು ತೆರೆಯ ಹಿಂದೆ ದುಡಿದರೆ, ತೆರೆಯ ಮೇಲ ಜಗ್ಗೇಶ್, ಕಾಶೀನಾಥ್, ಚರಣ್‌ರಾಜ್, ಜೂನಿಯರ್ ನರಸಿಂಹರಾಜು, ಜಿ.ಕೆ.ಅರವಿಂದ್, ಎಂ.ಎ.ಅರವಿಂದ್, ಕಾಸರಗೋಡು ಚಿನ್ನ, ಸುನೀಲ್ ಪುರಾಣಿಕ್, ಉಮೇಶ್‌ನವಲೆ, ಶಿವರಂಜನ್, ಯೋಗೇಶ್ವರ್, ಶಿವಮೂರ್ತಿ ಇವು ಪ್ರಮುಖ ಹೆಸರುಗಳು.

ಇದೇ ರೀತಿ ಹಿನ್ನೆಲೆ ಗಾಯನ-ಸಂಗೀತ ಕ್ಷೇತ್ರದಲ್ಲಿ ಅಚ್ಯುತ್, ಬಾಲು ಅತ್ರೇಯ, ಇಂದು ವಿಶ್ವನಾಥ್, ಉಷಾ ಗಣೇಶ್, ವಿದ್ಯಾರಾಣಿ, ಇಂದುಮತಿ, ಮಲ್ಲೇಶ್, ಕೃಷ್ಣಮೂರ್ತಿ, ಗೋಪಿ ಉಲ್ಲೇಖನೀಯರು.

ವಿಜಯ ಸಂಗೀತ ಮತ್ತು ಚಲನಚಿತ್ರ ಶಿಕ್ಷಣ ಸಂಸ್ಥೆ

೧೯೬೦ರಲ್ಲಿ ಬೆಂಗಳೂರಿನ ಶೇಷಾದ್ರಿಪುರಂನಲ್ಲಿ ಚಿಕ್ಕ ಕೋಣೆಯೊಂದರಲ್ಲಿ ವಾದ್ಯಗೋಷ್ಠಿ (Orchestra) ತಂಡ ರಚಿಸಿ, ಸಿನಿಮಾ ನಟರ ಸಂಗೀತ ಕಾರ್ಯಕ್ರಮ, ನಾಟಕಗಳಿಗ ವಾದ್ಯ ನುಡಿಸುತ್ತಿದ್ದ ಈ.ಈಶ್ವರ್ ಅವರ ವಿಜಯ ವಾದ್ಯಗೋಷ್ಠಿ ಆಗ ಜನಪ್ರಿಯ ಸಂಸ್ಥೆ. ೧೯೬೭ರಲ್ಲಿ ಈ ವಾದ್ಯಗೋಷ್ಠಿಯಲ್ಲಿ ಸೇರಿ ಹಾಡುಗಳನ್ನು ಹಾಡಿದವರು ಆಗ ಶಾಸಕರಾಗಿದ್ದ ಎಸ್.ಬಂಗಾರಪ್ಪ. ಈ ಸಂಸ್ಥೆ ೧೯೭೫ರಲ್ಲಿ ವಿಜಯ ಸಂಗೀತ ವಿದ್ಯಾಲಯ ಎಂದು ವಿಸ್ತಾರಗೊಂಡು ಶಾಸ್ತ್ರೀಯ, ಲಘು ಶಾಸ್ತ್ರೀಯ ಸಂಗೀತ ಹೇಳಿಕೊಡುವ ಶಾಲೆಯಾಗಿ ಮುಂದುವರಿಯಿತು.

೧೯೮೨ರಲ್ಲಿ ಈ ಸಂಸ್ಥೆ ಸಂಗೀತದೊಂದಿಗೆ ಚಲನಚಿತ್ರ ಅಭಿನಯ, ಚಲನಚಿತ್ರ ಹಿನ್ನೆಲೆ ಗಾಯನ ಹೇಳಿಕೊಡಲು ಆರಂಭಿಸಿದರು. ಆಗ ಈ ಸಂಸ್ಥೆಯ ಹೆಸರು 'ವಿಜಯ ಸಂಗೀತ ಮತ್ತು ಚಲನಚಿತ್ರ ಸಂಸ್ಥೆ' ಎಂದು ಬದಲಾಯಿತು. ೧೯೮೫ರಲ್ಲಿ ರಾಜಾಜಿನಗರಕ್ಕೆ ಬದಲಾಯಿಸಿಕೊಂಡ ಈ ಸಂಸ್ಥೆ ವಿಜಯಾ ಫಿಲಂ ಇನ್‌ಸ್ಟಿಟ್ಯೂಟ್ ಎಂದೇ ಚಿತ್ರರಂಗದವರಿಗೆ ಪರಿಚಿತ.

೧೯೬೭ರಿಂದಲೂ ಈ ಸಂಸ್ಥೆಯ ಗೌರವ ಅಧ್ಯಕ್ಷರಾಗಿರುವ ಎಸ್.ಬಂಗಾರಪ್ಪನವರು ೧೯೯೨ರಲ್ಲಿ ರಾಜಾಜಿನಗರದಲ್ಲಿನ ಈ ಸಂಸ್ಥೆಯ ಹೊಸ ಕಟ್ಟಡ ಉದ್ಘಾಟಿಸಿ ಸರ್ಕಾರದಿಂದ ಅನುದಾನ ಮಂಜೂರು ಮಾಡಿದರು. ಈ ಸಂಸ್ಥೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹತ್ತು ಲಕ್ಷ ರೂಪಾಯಿ ಅನುದಾನ ನೀಡುತ್ತಿದೆ. ೧೯೯೦ರಿಂದ ಈ ಸಂಸ್ಥೆಗೆ ಪ್ರಾಂಶುಪಾಲರಾಗಿ ಚಲನಚಿತ್ರ ನಿರ್ದೇಶಕ ಗೀತಪ್ರಿಯರ ಸೇವೆ ಲಭ್ಯವಾದದು ಒಂದು ವಿಶೇಷ.

೧೯೯೫ರಲ್ಲಿ ಸಂಸ್ಥಾಪಕ ನಿರ್ದೇಶಕರಾದ ಈ.ಈಶ್ವರ್ ನಿಧನಾನಂತರ ಅವರ ಪುತ್ರರಾದ ಈ.ಎ.ಕುಮಾರ್ ವ್ಯವಸ್ಥಾಪಕ ನಿರ್ದೇಶಕರಾದರು. ಇವರೂ ಸಹ ಅನೇಕ ವಾದ್ಯ ನುಡಿಸುವಲ್ಲಿ ಪರಿಣತರು ಹಾಗೂ ಆ ವಿಷಯದಲ್ಲಿ ತರಬೇತಿ ನೀಡುವರು.

ಈ ಸಂಸ್ಥೆಯಲ್ಲಿ ಅಭಿನಯ, ಹಿನ್ನೆಲೆಗಾಯನ ವ್ಯಾಸಂಗಕ್ರಮ (course) ಒಂದು ವರ್ಷದ ಅವಧಿಯದ್ದಾಗಿದೆ. ಇದರಲ್ಲಿ ಸಿನಿಮಾ ಹಾಡುಗಾರರಿಗೆ ವಾದ್ಯ ನುಡಿಸುವಿಕೆ ಮತ್ತು ಅಭಿನಯ, ಕರಾಟೆ, ಬ್ರೇಕ್ ಡ್ಯಾನ್ಸ್, ಭರತನಾಟ್ಯ ತರಗತಿಗಳನ್ನು ನಡೆಸುತ್ತಿದ್ದಾರೆ. ಇಲ್ಲಿ ಅರೆಕಾಲಿಕ ಹಾಗೂ ಖಾಯಂ ಶಿಕ್ಷಕರಾಗಿ ೨೫ ಜನ ಸೇವೆ ಸಲ್ಲಿಸುತ್ತಿದ್ದಾರೆ. ಸುಮಾರು ೨೫೦ ಜನ ವಿದ್ಯಾರ್ಥಿಗಳು ಬೇರೆ ಬೇರೆ ವಿಭಾಗಗಳಲ್ಲಿ ದಿನಕ್ಕೆ ಎರಡು ತಂಡ (Batch) ಗಳಲ್ಲಿ ತರಬೇತಿ ಪಡೆಯುತ್ತಿದ್ದ ಕಾಲವಿತ್ತು. ಹತ್ತು ವರ್ಷಗಳ ಕಾಲ ನಡೆದ ಈ ಪದ್ಧತಿ ಸಿಬ್ಬಂದಿಯ ಪ್ರತಿಭಟನೆಯಿಂದ ನಿಂತು ಹೋಯಿತು.

ಒಂದು ವರ್ಷದ ಅವಧಿಯ ತರಬೇತಿಯಲ್ಲದೆ, ಕಡಿಮೆ ಅವಧಿಯ, ಕಡಿಮೆ ಶುಲ್ಕ (Fees) ದ ತರಬೇತಿಗಳ ವ್ಯಾಸಂಗ ವಿಷಯಗಳೂ ಇವೆ. ಅವುಗಳಲ್ಲಿ ಡ್ರಮ್‌ಸೆಟ್ ಬಾರಿಸುವಿಕೆ, ಬ್ರೇಕ್‌ಡ್ಯಾನ್ಸ್, ಫಿಲಂ ಡ್ಯಾನ್ಸ್ ಎಂದು ವಿಭಜಿಸಲಾಗಿದೆ. ಪೂರ್ಣಾವಧಿಗೆ ೩,೦೦೦ ರೂಪಾಯಿ ಶುಲ್ಕವಿದ್ದರೆ, ಕಡಿಮೆ ಅವಧಿ ತರಬೇತಿಗೆ ೫೦೦ ರೂ. ಶುಲ್ಕ ಪಡೆಯುವರು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗದವರಿಗ ಶುಲ್ಕದಲ್ಲಿ ರಿಯಾಯಿತಿ ಇದೆ.

ಈಗ ಈ ಸಂಸ್ಥೆಯಲ್ಲಿ ಸಂಗೀತ ವಿಭಾಗದಲ್ಲಿ ಹೆಚ್.ಕೆ.ನಾರಾಯಣ್, ಸುಂದರಮೂರ್ತಿ ಹಿನ್ನೆಲೆ ಗಾಯನಕ್ಕೆ, ಸುಧೀರ್ ಕುಮಾರ್ ನೃತ್ಯಕ್ಕೆ, ಸಂಜು, ವೆಂಕಟಸ್ವಾಮಿ, ಶಿವಶಂಕರರಾಜು ಅಭಿನಯಕ್ಕೆ, ಗೀತಪ್ರಿಯ ಚಲನಚಿತ್ರ ಇತಿಹಾಸ ಮತ್ತು ತಂತ್ರಜ್ಞಾನಕ್ಕೆ ಅಧ್ಯಾಪಕರಾಗಿದ್ದಾರೆ.

ಈ ಸಂಸ್ಥೆಯಿಂದ ಈಗಾಗಲೇ ಅಭಿನಯದಲ್ಲಿ ತರಬೇತಿ ಪಡೆದು ಉತ್ತೀರ್ಣರಾಗಿ ಅವಕಾಶ ಪಡೆದವರಲ್ಲಿ ಚಿತ್ರರಂಗದಲ್ಲಿ ಸುರೇಶ್‌ರಾಜ್, ಪ್ರವೀಣ್ ಕುಮಾರ್,

ವಿಜಯಲಕ್ಷ್ಮಿ, ವತ್ಸಲ ಹಾಗೂ ಟಿ.ವಿ.ಮಾಧ್ಯಮದಲ್ಲಿ ಶ್ರೀಕಂಠ ಹಾಗೂ ಸಂಜೀವ್ ಕುಲಕರ್ಣಿ, ಹಿನ್ನಲೆ ಗಾಯನದಲ್ಲಿ ಎಂ.ಎಸ್.ಶ್ರೀವಳ್ಳಿ, ಕೆ.ಗೀತ, ಜಯಪಾಲ್ ಹಾಗೂ ನಿರ್ದೇಶನ ಕ್ಷೇತ್ರದಲ್ಲಿ ಸೀತಾರಾಂ ಕಾರಂತರ ಹೆಸರು ಉಲ್ಲೇಖನೀಯ.

ಈಗ ಬೆಂಗಳೂರಿನಲ್ಲಿ ಇದೇ ರೀತಿ ಗಣೇಶ ರೇವಣ್ಕರ್ ಅವರಿಂದ ಬಸವೇಶ್ವರನಗರದಲ್ಲಿ ಹಾಗೂ ಉಮೇಶ್ ನಾಯಕ್ ಅವರಿಂದ ವಿಲ್ಸನ್ ಗಾರ್ಡನ್‌ನಲ್ಲಿ ಚಲನಚಿತ್ರ ತರಬೇತಿ ಸಂಸ್ಥೆಗಳು ಕಾರ್ಯಕೈಗೊಳ್ಳುತ್ತಿವೆ.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಚಲನಚಿತ್ರ ಅಧ್ಯಯನ ಸಂಸ್ಥೆ

ಮೈಸೂರಿನಲ್ಲಿ ನವಜ್ಯೋತಿ ಸ್ಟುಡಿಯೋದಿಂದ ಪ್ರಾರಂಭವಾದ ಚಿತ್ರೋದ್ಯಮ ಪ್ರೀಮಿಯರ್ ಸ್ಟುಡಿಯೋ ಪ್ರಾರಂಭವಾದ ನಂತರ ಸರ್ವಭಾಷಾ ಚಿತ್ರಗಳು ತಯಾರಾಯಿತು. ಆದರೆ ಚಲನಚಿತ್ರ ಉದ್ಯಮವಿರುವ ಇಲ್ಲಿನ ಪ್ರತಿಭಾವಂತರು ಚಲನಚಿತ್ರ ಪ್ರವೇಶಿಸಲು ಪೂರ್ವಭಾವಿಯಾಗಿ ಅಭಿನಯ, ಮತ್ತಿತರ ಚಲನಚಿತ್ರ ವಿಭಾಗಗಳ ಬಗ್ಗೆ ತರಬೇತಿ ಕೊಡುವ ಅಧ್ಯಯನ ಸಂಸ್ಥೆಯ ಅವಶ್ಯಕತೆಯ ಕೊರಗು ಕಾಡುತ್ತಿತ್ತು. ಮೈಸೂರು ವಿಶ್ವವಿದ್ಯಾಲಯದಲ್ಲಿ 'ಚಲನಚಿತ್ರ ಅಧ್ಯಯನ ಸಂಸ್ಥೆ'ಯ ಅವಶ್ಯಕತೆ ಇತರ ಅಧ್ಯಯನ ಸಂಸ್ಥೆಗಳಂತೆಯೇ ಮುಖ್ಯವೆಂಬ ಉತ್ಸಾಹದ ಮನಸ್ಸು ಮೈಸೂರು ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಎಂ.ಮಾದಯ್ಯನವರಿಗೆ ಮೂಡಿದ್ದರ ಪ್ರತಿಫಲ ಹಾಗೂ ಅಂದಿನ ಮುಖ್ಯಮಂತ್ರಿಗಳಾಗಿದ್ದ ಎಂ.ವೀರಪ್ಪ ಮೊಯಿಲಿಯವರ ಆಸಕ್ತಿಯ ಪ್ರಾಬಲ್ಯದಿಂದ ಭಾರತದಲ್ಲೇ ವಿಶ್ವವಿದ್ಯಾಲಯ ಮಟ್ಟದಲ್ಲಿ ಪ್ರಪ್ರಥಮವಾಗಿ ಮೈಸೂರು ವಿಶ್ವವಿದ್ಯಾಲಯದಲ್ಲಿ ಚಲನಚಿತ್ರ ಕುರಿತ ಅಧ್ಯಯನ ಸಂಸ್ಥೆ ತಲೆಯೆತ್ತಿರುವುದು ಕರ್ನಾಟಕಕ್ಕೆ ಹೆಮ್ಮೆಯ ವಿಷಯ. ಇದಕ್ಕೆ ಪೂರ್ವಭಾವಿಯಾಗಿ ಒಂದು ಸಮಿತಿಯನ್ನು ಚಲನಚಿತ್ರ ನಿರ್ದೇಶಕರಾದ ಎಸ್.ವಿ.ರಾಜೇಂದ್ರಸಿಂಗ್ ಬಾಬು, ಗಿರೀಶ್ ಕಾಸರವಳ್ಳಿ, ಸಾಹಿತಿ ಎಚ್.ಕೆ.ಯೋಗಾನರಸಿಂಹ, ನಟ ಜಿ.ವಿ.ಶಿವಾನಂದ, ನಿರ್ದೇಶಕಿ ಪ್ರೇಮಕಾರಂತ, ಎಂ.ಬಿ.ನಾಗೇಶ್ ಕುಮಾರ್ ಹಾಗೂ ಸಿಂಧುವಳ್ಳಿ ಅನಂತಮೂರ್ತಿ ಅವರನ್ನು ಆಹ್ವಾನಿಸಿ ರೂಪಿಸಲಾಯಿತು. ಮದರಾಸು, ಪೂನಾ ಫಿಲಂ ಇನ್‌ಸ್ಟಿಟ್ಯೂಟ್‌ಗಳ ಪಠ್ಯಕ್ರಮದ ರೂಪರೇಖೆಗಳಲ್ಲೇ ಪಠ್ಯಕ್ರಮ, ಸಂಸ್ಥೆಗೆ ಬೇಕಾಗುವ ಸಕಲ ವಸ್ತುಗಳು, ಸಂಸ್ಥೆಗೆ ಸೇರಲು ವಿದ್ಯಾರ್ಥಿಗಳಲ್ಲಿರಬೇಕಾದ ವಿದ್ಯಾರ್ಹತೆ, ಇದಕ್ಕೆ ಪೋಷಕವಾದ ಅನುಭವಿ ಅಧ್ಯಾಪಕರು ಮೊದಲಾದ ಸಮಗ್ರ ವಿಷಯಗಳ ಬಗ್ಗೆ ಚರ್ಚಿಸಿ ಸಮಿತಿಯು ವರದಿಯನ್ನು ಮಂಡಿಸಲಾಯಿತು. ಅದು ಸಿಂಡಿಕೇಟ್‌ನಲ್ಲೂ ಒಪ್ಪಿಗೆ ಪಡೆಯಿತು. ಆದರೆ ಈ ಸಂಸ್ಥೆಯನ್ನು ತರೆಯಲು ಮಂಗಳೂರು ವಿಶ್ವವಿದ್ಯಾನಿಲಯದವರೂ ಅಷ್ಟೇ ಆಸಕ್ತಿ ತೋರಿಸಿದರು. ನಿಸರ್ಗ ಪರಿಸರದ ಅಯಸ್ಕಾಂತತೆ ಮತ್ತು ಇಲ್ಲಿ ಸಿಗುವ ಮೂಲಭೂತ ಸವಲತ್ತುಗಳ ಬಗ್ಗೆ ದೀರ್ಘ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದರಿಂದ ಕೊನೆಗೆ ಮೈಸೂರಿನಲ್ಲೇ ನೆಲೆಯಾಯಿತು.

ಮಹಾರಾಜ ಕಾಲೇಜ್‌ನ ಶತಮಾನೋತ್ಸವ ಭವನದ ಕಟ್ಟಡದಲ್ಲಿ ೧೯೭೩ ಆಗಸ್ಟ್ ತಿಂಗಳಲ್ಲಿ ಡಾ।ಎಂ.ಮಾದಯ್ಯನವರ ಶ್ರಮದ ಕೊಡುಗೆಯಾಗಿ ಪ್ರಾರಂಭವಾಯಿತು. ಹಿಂದಿ ವಿಭಾಗದ ಮುಖ್ಯಸ್ಥರು ರಾಜ್ಯ ಪ್ರಶಸ್ತಿ ಪುರಸ್ಕೃತರಾದ ಹಾಗೂ 'ಸಂಕಲ್ಪ' ಚಿತ್ರ ನಿರ್ದೇಶಕರಾದ ಡಾ।ಪಿ.ವಿ.ನಂಜರಾಜ ಅವರನ್ನು ವಿಭಾಗದ ಮುಖ್ಯಸ್ಥರನ್ನಾಗಿ ರೂಪಿಸಲಾಯಿತು. ಕುಲಪತಿಗಳಾದ ಡಾ।ಎಂ.ಮಾದಯ್ಯ ಅವರ ಅಧ್ಯಕ್ಷತೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಚಲನಚಿತ್ರ ಅಧ್ಯಯನ ಸಂಸ್ಥೆಯ ಪ್ರಾರಂಭೋತ್ಸವ ನಡೆಯಿತು. ಹಿರಿಯ ನಟ-ನಿರ್ದೇಶಕ-ನಿರ್ಮಾಪಕ ದ್ವಾರಕೀಶ್, ನಿರ್ಮಾಪಕ ಸಂದೇಶ್ ನಾಗರಾಜ್, ತೂಗುದೀಪ ಶ್ರೀನಿವಾಸ್, ಶ್ರೀಮತಿ ಪ್ರತಿಮಾದೇವಿಸಿಂಗ್ ಮುಖ್ಯ ಅತಿಥಿಗಳಾಗಿದ್ದರು.

ಚಲನಚಿತ್ರ ನಿರ್ದೇಶನ ಹಾಗೂ ಚಲನಚಿತ್ರ ಅಭಿನಯ ಕುರಿತಂತೆ ಎರಡು ವಿಷಯಗಳೊಡನೆ ಸಂಸ್ಥೆ ಚಾಲನೆಗೊಂಡಿತು. ೨ ವರ್ಷಗಳ ಅವಧಿಯ ನಿರ್ದೇಶನ ತರಗತಿಗೆ ಕನಿಷ್ಠ ೧೦ ವಿದ್ಯಾರ್ಥಿಗಳಿಗೂ, ೧ ವರ್ಷ ಅವಧಿಯ ಅಭಿನಯ ತರಗತಿಗೆ ಕನಿಷ್ಠ ೨೦ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶಕ್ಕೆ ಎಡೆ ಮಾಡಿಕೊಡಲಾಯಿತು. ತರಬೇತಿಯ ಕಾಲದಲ್ಲಿ ಮೂಲ ವಿಷಯಗಳಾಗಿರುವ ಛಾಯಾಗ್ರಹಣ, ಸಂಕಲನ, ಶಬ್ದಗ್ರಹಣ, ಚಿತ್ರಕಥಾ ರಚನೆ, ಚಲನಚಿತ್ರಕ್ಕೆ ಸಂಬಂಧಪಟ್ಟ ಸಂಗೀತ (Film Music), ಅಭಿನಯ, ರಸಗ್ರಹಣ ಮೊದಲಾದ ವಿಷಯಗಳ ಬಗ್ಗೆ ವಿದ್ಯಾರ್ಥಿಗಳಿಗೆ ಕೊಡುವ ಶಿಕ್ಷಣದೊಡನೆ ಪ್ರಯೋಗಾತ್ಮಕವಾದ ಸಾಕ್ಷ್ಯಚಿತ್ರಗಳು, ಕಿರುಚಿತ್ರಗಳು, ಜಾಹಿರಾತು ಚಿತ್ರಗಳನ್ನು ತಯಾರಿಸುವ ಯೋಜನೆ ಹಮ್ಮಿಕೊಂಡಿತು.

ಕನಿಷ್ಠ ಪಿ.ಯು.ಸಿ. ಉತ್ತೀರ್ಣರಾದವರು ಪ್ರವೇಶಕ್ಕೆ ನೊಂದಾಯಿಸಿಕೊಂಡಾಗ ಅವರಿಗೆ ಸಿನಿಮಾ ವಿಷಯಕ್ಕೆ ಅನುಗುಣವಾದ ಸಾಮಾನ್ಯ ಜ್ಞಾನ ಮತ್ತು ಮೌಖಿಕ ಪರೀಕ್ಷೆಯ ನಂತರ ಪ್ರವೇಶದ ಅವಕಾಶವೆಂಬ ನಿಯಮವಿದೆ. ಇದಲ್ಲದೆ ಸಮಿತಿಯೊಂದನ್ನು ಪ್ರವೇಶಕ್ಕಾಗಿ ರಚಿಸಿ ಅದರಲ್ಲಿ ಸಿನಿಮಾ ರಂಗದ ಗಣ್ಯರೂ, ವಿಶ್ವವಿದ್ಯಾಲಯದ ಆಡಳಿತ ವರ್ಗದವರಿಂದ ಆಯ್ಕೆಯು ತೀರ್ಮಾನವಾಗುವುದು.

ಚಲನಚಿತ್ರ ಅಧ್ಯಯನ ಸಂಸ್ಥೆ ಪ್ರಾರಂಭವಾದದ್ದು ೧೯೭೩ರಿಂದ. ಇದುವರೆಗೆ ೫ ತಂಡಗಳ ವಿದ್ಯಾರ್ಥಿಗಳು ಹೊರಬಂದಿದ್ದಾರಲ್ಲದೆ ಚಲನಚಿತ್ರ ಹಾಗೂ ದೂರದರ್ಶನ ಕೇಂದ್ರಗಳ ನಾನಾ ವಿಭಾಗಗಳಲ್ಲಿ ಸುಮಾರು ೩೦ ವಿದ್ಯಾರ್ಥಿಗಳು ಕಾರ್ಯ ನಿರ್ವಹಿಸುತ್ತಿದ್ದಾರೆ.

ಪ್ರಾರಂಭದಲ್ಲಿ ನಿರ್ದೇಶನ ಹಾಗೂ ಅಭಿನಯ ವಿಷಯಗಳಲ್ಲಿ ಅಧ್ಯಯನವಿತ್ತು. ಆದರೆ 'ಚಲನಚಿತ್ರ ಅಭಿನಯ'ಕ್ಕೆ ವಿದ್ಯಾರ್ಥಿಗಳ ಹೆಚ್ಚು ಪ್ರತಿಕ್ರಿಯೆ ಇಲ್ಲದ ಕಾರಣ ೧೯೭೭ರಲ್ಲಿ ಆ ತರಬೇತಿಯನ್ನು ಸಗಿತಗೊಳಿಸಲಾಯಿತು.

ಮಂಗಳೂರಿಗೆ ಈ ಯೋಜನೆ ಹಾಗೂ ಅವಕಾಶ ಎಲ್ಲಿ ಜಾರಿಬಿಡುತ್ತದೋ ಎಂಬ ತರಾತುರಿಯಲ್ಲಿ ಯಾವ ಪೂರ್ವಭಾವಿಯಾದ ಆರ್ಥಿಕ ಯೋಜನೆ, ಸಮರ್ಥ ಬೋಧಕರ ಕೊರತೆ (Faculty), ಸೂಕ್ತ ಉಪಕರಣಗಳಿಲ್ಲದೆ ಹಾಗೂ ಒಂದು ರೀತಿಯ 'ಲಾಬಿ'ಯಿಂದಾಗಿ ಒಂದು ಮರದ ಕೆಳಗೆ ಪ್ರಾರಂಭವಾದ ಈ ಸಂಸ್ಥೆಗೆ ಎರಡು ಕೊಠಡಿಗಳು (ಒಂದು ದೊಡ್ಡ ತರಗತಿ ಕೊಠಡಿ, ಒಂದು ಗ್ರೀನ್ ರೂಂ) ನಂತರ ಸೇರ್ಪಡೆಯಾಯಿತು. ಈ ಸಂಸ್ಥೆಗೆ ಡಾ।ಪಿ.ವಿ.ನಂಜರಾಜ ಅರಸು ಅವರು ಮೊದಲ ಸಂಯೋಜಕ (ವಿಭಾಗದ ಮುಖ್ಯಸ್ಥ) ರಾದರು. ಕ್ರಮೇಣ ಮಹಾರಾಜ ಕಾಲೇಜಿನ ಪತ್ರಿಕೋದ್ಯಮ ವಿಭಾಗದ ಆರ್.ಎಸ್.ಪದ್ಮನಾಭ್ ಹಾಗೂ ಕೆ.ಜೆ.ಜೋಸೆಫ್ ಅವರೂ ಸಂಯೋಜಕರಾಗಿ ಕಾರ್ಯ ನಿರ್ವಹಿಸಿದರು. ೧೯೭೫ರಿಂದ ಕುಶಲ್ ಕುಮಾರ್ ಇದುವರೆಗೂ ಸಂಯೋಜಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಅಲ್ಲದೆ ವಿದ್ವಾನ್ ಸಿ.ಎ.ಶ್ರೀಧರ್ ಅವರು ಲಲಿತ ಕಲಾ ಕಾಲೇಜಿನ ಕಾಯರ್ (Choir)ಗಳಲ್ಲದೆ, ಇಲ್ಲೂ ಸಂಗೀತದ ತರಗತಿಗಳನ್ನು ನಡೆಸುತ್ತಿದ್ದಾರೆ.

ಪರೀಕ್ಷೆ ಮೊದಲಾದ ಆಂತರಿಕ ವಿಷಯಗಳಿಗೆ ಸಂಬಂಧಿಸಿದಂತೆ ತರಗತಿಗಳನ್ನು ನಡೆಸುವುದೇ ತೊಡಕಾಗಿ ಕಾಡಿದ ಸಂದರ್ಭದಲ್ಲಿ ಕೆ.ಜೆ.ಜೋಸೆಫ್‌ರವರು ಹಾರ್ದಿಕವಾಗಿ ನಡೆಯುವಂತೆ ಚಾಲನೆ ಕೊಟ್ಟರು. ಕೆ.ಜೆ.ಜೋಸೆಫ್‌ರವರು ಒಂದೇ ಕಡೆ ಸೀಮಿತವಾಗಿದ್ದ ವಿದ್ಯಾರ್ಥಿಗಳನ್ನು ಅವರ ಹಣದ ಕೊಡುಗೆಯಿಂದಲೆ (Students Contribution) ಮೈಸೂರಿನಿಂದ ಇತರ ದೂರದರ್ಶನ ಕೇಂದ್ರಗಳಿಗೆ ಕರದೊಯ್ದು ಅಧ್ಯಯನಾನುಭವವನ್ನು ಮೂಡಿಸಿದರು.

ಅಲ್ಲದೆ ಸಾಕಷ್ಟು ತಜ್ಞರಿಂದ ಸಂಸ್ಥೆಗೆ ನೆರವನ್ನು ಪಡೆಯಲಾಯಿತು. ಮೈಸೂರಿನ ಹಿರಿಯ ಪತ್ರಕರ್ತ ಎಸ್.ಪದ್ಮನಾಭ್ ಚಿತ್ರ ನಿರ್ದೇಶನದ ಬಗ್ಗೆ ಗೌರವ ಉಪನ್ಯಾಸಕರಾಗಿ, ಇವರ ಸೋದರ ನಟ ಚೇತನ ರಾಮರಾವ್ ಅಭಿನಯ ತರಬೇತಿಗೆ ಸಲಹೆಗಾರರಾಗಿ, ಆರ್.ಎಸ್.ಪದ್ಮನಾಭ್ ನಿರ್ದೇಶನದ ಬಗ್ಗೆ, ಬೆಂಗಳೂರಿನ ಜಯಚಾಮರಾಜೇಂದ್ರ ತಾಂತ್ರಿಕ ಸಂಸ್ಥೆಯ ರಾಜಶೇಖರ್ ಅವರು ಚಲನಚಿತ್ರಕಲೆಯ ಬಗ್ಗೆ, ಸಾಹಸ ಕಲಾವಿದ ಲಿಜ್ಜು ಅಭಿನಯದ ಬಗ್ಗೆ, ಖ್ಯಾತ ಸಾಹಿತಿ, ರಂಗಭೂಮಿ ಕಲಾವಿದ, ನಿರ್ದೇಶಕ ಎಚ್.ಕೆ.ಯೋಗಾನರಸಿಂಹ ಚಿತ್ರಸಾಹಿತ್ಯದ ಬಗ್ಗೆ, ರಾಮನಾಥ (ರಂಗತಜ್ಞ) ಅಭಿನಯದ ಬಗ್ಗೆ, ಮೈಮ್ ತಜ್ಞ ರಮೇಶ್ ಸಂದರ್ಶಕ ಉಪನ್ಯಾಸಕರಾಗಿ ಕಾರ್ಯ ನಿರ್ವಹಿಸಿದ್ದಾರೆ. ಗುರುಕಿರಣ್, ಉಪೇಂದ್ರ, ಸುರೇಶ್ ಅರಸ್ (ರಾಷ್ಟ್ರೀಯ ಪ್ರಶಸ್ತಿ ವಿಜೇತ ಸಂಕಲನಕಾರ) ಅವರವರ ಅನುಭವಗಳ ಬಗ್ಗೆ ಉಪನ್ಯಾಸ ನೀಡಿದ್ದಾರೆ. ಮೈಸೂರು ಆರ್.ಜಯರಾಂ ಮೇಕಪ್ ಬಗ್ಗೆ ಗೌರವ ಉಪನ್ಯಾಸಕರಾಗಿ ಕಾರ್ಯ ನಿರ್ವಹಿಸಿರುವರು.

ಸಂಸ್ಥೆಯಲ್ಲಿ ಕಳೆದ ಸುಮಾರು ವರ್ಷಗಳಿಂದಲೂ ನಾಲ್ಕೈದು ಮಂದಿ ಉಪನ್ಯಾಸಕರಿದ್ದಾರೆ. ಅವರಲ್ಲಿ - ಪ್ರವೀಣ್ ಕುಮಾರ್ : ಸಂಕಲನ, ಶಬ್ದಗ್ರಹಣ, ಚಲನಚಿತ್ರಕಥೆ, ಅಭಿನಯ, ಎಸ್.ಮಂಜುನಾಥ್ : ಸಿನಿಮಾ ವ್ಯಾಕರಣ, ಛಾಯಾಗ್ರಹಣ, ಪ್ರಸಾದನ, ವಿದ್ವಾನ್ ಸಿ.ಎ.ಶ್ರೀಧರ್ : ಚಲನಚಿತ್ರ ಸಂಗೀತ, ಆರ್.ಕುಶಲ್ ಕುಮಾರ್ : ಚಲನಚಿತ್ರ ರಸಗ್ರಹಣ, ಸೌಂದರ್ಯ ಪ್ರಜ್ಞೆ, ಚಿತ್ರ ನಿರ್ದೇಶನದ ಬಗ್ಗೆ ಬೋಧನೆ ನೀಡುತ್ತಿದ್ದಾರೆ.

ಈ ಸಂಸ್ಥೆಯಲ್ಲಿ ವೀಡಿಯೂ ಚಿತ್ರೀಕರಣಕ್ಕೆ ಅನುಕೂಲವಾಗುವಂತೆ ನ್ಯಾಷನಲ್ ಪ್ಯಾನಾಸೋನಿಕ್ ಎಂ-೩೦೦೦ (National Panasonic M-3000) ಎರಡು

(ಚಿತ್ರ ೧೧) ಮೈಸೂರು ವಿಶ್ವವಿದ್ಯಾಲಯ ಚಲನಚಿತ್ರ ಅಧ್ಯಯನ ಸಂಸ್ಥೆಯ ವಿದ್ಯಾರ್ಥಿಗಳ ಪ್ರಾಯೋಗಿಕ ತರಬೇತಿಗಾಗಿ ತಯಾರಿಸಿದ ವಿಡಿಯೋ ಕಿರುಚಿತ್ರ 'ವೈದೇಹಿ' ಪ್ರಾರಂಭೋತ್ಸವದಲ್ಲಿ ಕುಲಪತಿಗಳಾದ ಪ್ರೊ|ಎನ್.ಮಾದಯ್ಯ, ಚೇತನ ರಾಮರಾವ್, ಆರ್.ಎಸ್.ಪದ್ಮನಾಭ ಮತ್ತು ಇತರರು

ಕ್ಯಾಮರಾಗಳು, ೨ ವಿ.ಸಿ.ಆರ್.ಗಳು, ೨ ವರ್ಣ ಟಿ.ವಿ. (Color T.V.) ಗಳು ಮತ್ತು ೧೦ ಕೆ.ವಿ. (K.W.) ಶಕ್ತಿಯ ಮೂರು ವಿದ್ಯುತ್ ದೀಪ (Light) ಗಳಿವೆ. ಆದರೆ ಮೂಲಭೂತವಾಗಿ ಚಲನಚಿತ್ರ ಚಿತ್ರೀಕರಣಕ್ಕೆ ಬೇಕಾಗುವ ಉಪಕರಣಗಳು ಇಲ್ಲದೇ ಇರುವುದೊಂದು ಕೊರತೆಯಾಗಿದೆ, ಹಾಗೂ ತರಬೇತಿಗೆ ಇವರ ಅತ್ಯಂತ ಅವಶ್ಯಕತೆಯಿದೆ. ೧೯೯೩ರಿಂದ ೨೦೦೦ದವರೆಗೆ ಅಭಿನಯದಲ್ಲಿ ೩೦ ಮಂದಿ ಹಾಗೂ ನಿರ್ದೇಶನದಲ್ಲಿ ೫೩ ಮಂದಿ ತರಬೇತಿಯನ್ನು ಪಡೆದಿದ್ದಾರೆ.

ವಾಣಿಜ್ಯ, ಹಿಂದಿ, ಸ್ನಾತಕೋತ್ತರ ತರಗತಿಗಳು ನಡೆಯುತ್ತಿದ್ದ ಸೆಂಟಿನರಿ ಹಾಲ್‌ನ ತರಗತಿಯ ಕೊಠಡಿಗಳಲ್ಲಿ ನಡೆಯುತ್ತಿದ್ದ ಚಲನಚಿತ್ರ ಅಧ್ಯಯನ ಸಂಸ್ಥೆಯು, ಮೈಸೂರಿನ ಹುಣಸೂರು ರಸ್ತೆ (ವಿನೋಭ ರಸ್ತೆ)ಯಲ್ಲಿರುವ ವಿಶ್ವವಿದ್ಯಾನಿಲಯದ ಪ್ರಸಾರಾಂಗದ ಕಟ್ಟಡದಲ್ಲಿ ತನ್ನ ಕಾರ್ಯ ಚಟುವಟಿಕೆಗಳನ್ನು ಮುಂದುವರಿಸಿತು. ಮೈಸೂರು ವಿಶ್ವವಿದ್ಯಾನಿಲಯ ಪತ್ರಿಕೋದ್ಯಮ ವಿಭಾಗದ ಉಪನ್ಯಾಸಕರಾದ ಕುಶಲ್ ಕುಮಾರ್ ಚಲನಚಿತ್ರ ಅಧ್ಯಯನ ಸಂಸ್ಥೆಯ ಸಂಯೋಜಕರಾಗಿ ಕಾರ್ಯ ನಿರ್ವಹಿಸಿದರು.

ಮೈಸೂರಿನಲ್ಲಿ ಖಾಸಗಿ ಚಲನಚಿತ್ರ ತರಬೇತಿ ಸಂಸ್ಥೆಗಳು

ವಿಶ್ವವಿದ್ಯಾನಿಲಯಕ್ಕೆ ಹೊರತಾಗಿ ಮೈಸೂರಿನ ಕುವೆಂಪುನಗರದಲ್ಲಿರುವ ಆದಿಚುಂಚನಗಿರಿ ರಸ್ತೆಯಲ್ಲಿ ಕಳೆದ ಎರಡು ವರ್ಷಗಳಿಂದ ಕೀರ್ತಿ ಫಿಲಂ ಇನ್‌ಸ್ಟಿಟ್ಯೂಟ್ ಕಾರ್ಯ ನಿರ್ವಹಿಸುತ್ತಿದೆ. ಇದರ ಸಂಸ್ಥಾಪಕ ವ್ಯವಸ್ಥಾಪಕರು ರಾಚಪ್ಪ. ಚಿತ್ರನಟಿ ಪವಿತ್ರಾ ಲೋಕೇಶ್ ಪ್ರಿನ್ಸಿಪಾಲರಾಗಿ. ಚಿತ್ರನಟ ಮಂಡ್ಯರಮೇಶ್ ಉಪ ಪ್ರಿನ್ಸಿಪಾಲರಾಗಿ ಕಾರ್ಯ ನಿರ್ವಹಿಸುತ್ತಿರುವರು. ಆದರೆ ಅಲ್ಲಿ ವ್ಯವಸ್ಥಿತವಾದ ಸಲಕರಣೆಗಳಿಲ್ಲದಿರುವ ಬಗ್ಗೆ ಆಗಾಗ್ಗೆ ಪತ್ರಿಕೆಗಳಲ್ಲಿ ಸುದ್ದಿಯ ಕಿಡಿ ಸಿಡಿಯುತ್ತಲೇ ಇರುತ್ತವೆ. ಆದರೂ ಇದು ನಡೆಯುತ್ತಿದೆ. ಇಲ್ಲಿ ಪ್ರವೇಶ ಶುಲ್ಕ ಸುಮಾರು ೨,೦೦೦.೦೦ ರೂಪಾಯಿ ಇದೆ.

ಮೈಸೂರು ವಿಶ್ವವಿದ್ಯಾನಿಲಯದ ಚಲನಚಿತ್ರ ಅಧ್ಯಯನ ಸಂಸ್ಥೆಯಿಂದ ನಿರ್ದೇಶನ ತರಬೇತಿ ಮುಗಿಸಿರುವ ಮಹೇಶ್.ಬಿ, ಅಭಿನಯ ತರಬೇತಿ ಮುಗಿಸಿರುವ ನಟರಾಜ್.ಎಂ.ಪಿ. ಬಸವೇಗೌಡ (ಮಾಜಿ 'ಮೂಡಾ' (MUDA) ಅಧ್ಯಕ್ಷ) ಅವರನ್ನು ಗೌರವಾಧ್ಯಕ್ಷರನ್ನಾಗಿಸಿ, ಜಾನ್ ಕ್ರಿಸ್ಟೋಫರ್ ಅಧ್ಯಕ್ಷರಾಗಿ, ಹಿರಿಯ ಚಲನಚಿತ್ರ ಕಲಾವಿದ ಚೇತನ ರಾಮರಾವ್ ಪ್ರಾಂಶುಪಾಲರಾಗಿ ತಾವೇ ಮಂಡಳಿ ಸದಸ್ಯರಾಗಿ ೧೯೯೯ರಿಂದ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದ ಎದುರಿನ ಮಹಾರಾಜ ಕಾಂಪ್ಲೆಕ್ಸ್‌ನಲ್ಲಿ ಡಾ|ರಾಜ್ ಕುಮಾರ್ ಫಿಲಂ ಇನ್‌ಸ್ಟಿಟ್ಯೂಟ್ (ರಿ)., ಸಂಸ್ಥೆಯನ್ನು ಪ್ರಾರಂಭಿಸಿ, ಚಲನಚಿತ್ರ ನಿರ್ದೇಶನ ಡಿಪ್ಲೊಮಾ, ಚಲನಚಿತ್ರ ಅಭಿನಯ ಡಿಪ್ಲೊಮಾ, ಚಲನಚಿತ್ರಕ್ಕೆ ಸಂಬಂಧಿಸಿದ ನೃತ್ಯಗಳು ಮತ್ತು ವೀಡಿಯೊ ಶೂಟಿಂಗ್ ಎಂಬ ಅಧ್ಯಯನ ವಿಷಯಗಳ ಬಗ್ಗೆ ಪ್ರತಿಯೊಂದಕ್ಕೂ ಒಂದು ವರ್ಷ ಅವಧಿಯ ನಾಲ್ಕು ವ್ಯಾಸಂಗ ಕ್ರಮವನ್ನು ಆರಂಭಿಸಿದರು. ಇಲ್ಲಿ ಪ್ರವೇಶ ಶುಲ್ಕ ಎರಡು ಸಾವಿರ (೨,೦೦೦.೦೦) ರೂಪಾಯಿ. ಈ ಸಂಸ್ಥೆಯಲ್ಲಿ ಅಭಿನಯ ವಿಭಾಗದಲ್ಲಿ ಚೇತನ ರಾಮರಾವ್ ಹಾಗೂ ನಟರಾಜ್ ಶಿವು, ನಿರ್ದೇಶನ ವಿಭಾಗದಲ್ಲಿ ಪತ್ರಕರ್ತ ಎಸ್.ಪದ್ಮನಾಭ್, ಮಹೇಶ್ ಕೃಷ್ಣನ್ ಮತ್ತು ಪುರುಷೋತ್ತಮ್, ಛಾಯಾಚಿತ್ರ ವಿಭಾಗದಲ್ಲಿ ಮಹೇಶ್ ಕೃಷ್ಣನ್, ಪುರುಷೋತ್ತಮ್, ನೃತ್ಯ ವಿಭಾಗದಲ್ಲಿ ಚಾಮರಾಜ್‌ರವರು ಉಪನ್ಯಾಸಕರಾಗಿ ಕಾರ್ಯ ನಿರ್ವಹಿಸಿದರು

ಮದರಾಸಿನ ಇನ್‌ಸ್ಟಿಟ್ಯೂಟ್ ಆಫ್ ಫಿಲ್ಮ್ ಆಕ್ಟಿಂಗ್

ದಕ್ಷಿಣ ಭಾರತ ಚಲನಚಿತ್ರ ವಾಣಿಜ್ಯ ಮಂಡಳಿಯು ಒಂದು ಕಾರ್ಯಕಾರಿ ಮಂಡಳಿ ರಚಿಸಿಕೊಂಡರು. ಇದರ ಅಧ್ಯಕ್ಷರಾಗಿ ಬಿ.ನಾಗಿರೆಡ್ಡಿ, ಪತ್ರಿಕಾ ಪ್ರತಿನಿಧಿಯಾಗಿ ಡಿ.ವಿ.ಎಸ್.ರಾಜು, ಸಮಿತಿಯ ಸದಸ್ಯರನ್ನಾಗಿ ಪಿ.ಪುಲ್ಲಯ್ಯ, ವಿ.ಸಿ.ಸುಬ್ಬರಾಮನ್, ಸುಂದರ್ ಲಾಲ್ ನಹತಾ, ಸಿ.ರಾಮಾನುಜಂ, ರಾಮೂ ಕಾರಿಯಟ್, ವೈ.ಆರ್.ಸ್ವಾಮಿ, ಎ.ಪಿ.ನಾಗರಾಜನ್, ಬಿ.ಎನ್.ರೆಡ್ಡಿ ಹಾಗೂ ಪಂಜು ಇವರನ್ನು ಒಳಗೊಂಡಿತು. ೧೯೭೨, ಫೆಬ್ರುವರಿ ೧೫ರಂದು ಚಲನಚಿತ್ರ ನಟನಾ ಶಿಕ್ಷಣಾಲಯವು ಆರಂಭವಾಗಿ, ಇದರ ಪ್ರಥಮ ಪ್ರಾಂಶುಪಾಲರಾಗಿ ರಾಮದಾಸ್ ಕಾರ್ಯಭಾರ ವಹಿಸಿಕೊಂಡರು. ಪುಣೆಯ ಫಿಲಂ ಇನ್‌ಸ್ಟಿಟ್ಯೂಟ್ ಮಾದರಿಯಾಗಿಟ್ಟುಕೊಂಡು ಅಲ್ಲಿಯ ಅಭ್ಯಾಸ ಕ್ರಮ, ವ್ಯಾಸಂಗ ವಿಷಯಗಳನ್ನು ಅಳವಡಿಸಿಕೊಂಡು ಆರಂಭವಾದ ಈ ಸಂಸ್ಥೆ ಅಲ್ಲಿಯಂತೆ ಶಿಕ್ಷಣ ಮಾಧ್ಯಮವಾಗಿ ಇಂಗ್ಲಿಷ್, ಹಿಂದೀ ಭಾಷೆಯ ಜ್ಞಾನಕ್ಕೆ ಒತ್ತು ಕೊಡಲಿಲ್ಲ. ಬದಲಾಗಿ ದಕ್ಷಿಣದ ನಾಲ್ಕು ಭಾಷೆಗಳಲ್ಲಿ ಶಿಕ್ಷಣ ನೀಡಲು ನಿರ್ಧರಿಸಿ, ನಾಲ್ಕೂ ಭಾಷೆಗೆ ಪ್ರತ್ಯೇಕ ಅನುಭವಿ. ಡಿಪ್ಲೊಮಾ ಪಡೆದಿರುವ ಅಧ್ಯಾಪಕರನ್ನು ನೇಮಿಸಿದರು.

ಫಿಲಂ ಚೇಂಬರ್‌ನ ಆವರಣದಲ್ಲಿ ಆರಂಭವಾದ ಈ ತರಬೇತಿ ಕೇಂದ್ರದಲ್ಲಿ ಪ್ರತಿ ಭಾಷೆಗೆ ಹದಿನೈದಕ್ಕೂ ಮೀರದಂತೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುತ್ತಿದ್ದರು. ಎಸ್.ಎಸ್.ಎಲ್.ಸಿ. ಕನಿಷ್ಠ ವಿದ್ಯಾರ್ಹತೆ ಹೊಂದಿರುವ, ೧೮ರಿಂದ ೨೪ ವರ್ಷದ ಯುವಕರು, ೧೬ರಿಂದ ೨೨ ವರ್ಷ ವಯಸ್ಸಿನ ಯುವತಿಯರನ್ನು 'ಸ್ಕ್ರೀನ್ ಟೆಸ್ಟ್' ಬಳಿಕ ಆಯ್ಕೆ ಮಾಡುತ್ತಿದ್ದರು. ಎರಡು ವರ್ಷ ಅವಧಿಯ ಈ ಕೋರ್ಸ್‌ನಲ್ಲಿ ಮೊದಲ ವರ್ಷದಲ್ಲಿ ನಾಟಕದಲ್ಲಿನ ಸಂಭಾಷಣೆ ಹೇಳುವ ರೀತಿ, ಕಲಾವಿದರ ಚಲನೆ ವಲನೆ, ಮೂಕಾಭಿನಯ, ಅಭಿನಟನೆ, ಪ್ರತಿಕ್ರಿಯಿಸುವ ಕಲೆ ಹಾಗೂ ಯೋಗಾಭ್ಯಾಸದ ತರಬೇತಿ ನೀಡಲಾಗುತ್ತಿತ್ತು. ಕನ್ನಡತಿ ಉಷಾ ಅರಸ್ ಮತ್ತು ಜಿ.ವಿ.ಶಿವಾನಂದ ಕನ್ನಡ ವಿಭಾಗದಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸಿದರು.

ಎರಡನೇ ವರ್ಷದಲ್ಲಿ ಚಲನಚಿತ್ರ ಅಭಿನಯಕ್ಕೆ ಒತ್ತು ನೀಡಿ, ಮೂಕಾಭಿನಯ, ಪರಿಶೀಲನಾ ಶಕ್ತಿಯ ಬೆಳವಣಿಗೆ, ವಿಭಿನ್ನ ರಸ ನಿರೂಪಣೆಯ ಪಾತ್ರಗಳ ಅಭಿನಯ, ಇತರ ನಟರ ಅಭಿನಯದ ವಿಶ್ಲೇಷಣೆ ಹಾಗೂ ಸಿನಿಮಾ ತಂತ್ರದ ಭಾಷೆಯ ಜ್ಞಾನ ನೀಡಿ, ಕೊನೆಗೆ ೧೬ ಎಂ.ಎಂ.ನಲ್ಲಿ ಚಿತ್ರ ನಿರ್ಮಿಸಿ, ಅವರ ಪ್ರತಿಭೆಯ ಅಂತಿಮ ಸ್ವರೂಪವನ್ನು ದಾಖಲು ಮಾಡುತ್ತಿದ್ದರು.

ಮದ್ರಾಸ್ ಅಲ್ಲಿನ ಚಿತ್ರೋದ್ಯಮದ ಕೇಂದ್ರ. ಹೀಗಾಗಿ ವಿದ್ಯಾರ್ಥಿಗಳಿಗೆ ಬೇಕಾದ ಬಗೆ ಬಗೆಯ ಚಲನಚಿತ್ರಗಳನ್ನು ಅಧ್ಯಯನಕ್ಕೆ ನೀಡಿ, ಅಲ್ಲಿನ ಪರಿಣತ ತಂತ್ರಜ್ಞರು, ಅನುಭವಿ ನಿರ್ದೇಶಕರು ಅತಿಥಿ ಉಪನ್ಯಾಸಕರಾಗಿ ತಮ್ಮ ಸೇವೆ ನೀಡುತ್ತಿದ್ದರು. ಅಂತಿಮ ಪರೀಕ್ಷೆಯ ಫಲಿತಾಂಶವನ್ನು ಮೌಲ್ಯಮಾಪನ ಮಾಡಿ, ಅವರ ಪ್ರತಿಭೆ. ಪರಿಶ್ರಮಕ್ಕೆ ತಕ್ಕಂತೆ ಪ್ರಥಮ, ದ್ವಿತೀಯ ಎಂದು ವಿಂಗಡಿಸುತ್ತಿದ್ದರು. ಈ ಸಂಸ್ಥೆಯಲ್ಲಿ ಪ್ರಥಮ ತಂಡದಲ್ಲಿ ಅಧ್ಯಯನ ಮಾಡಿದವರು ಬೆಂಗಳೂರಿನಲ್ಲಿ ಸಿಟಿ ಬಸ್ ಕಂಡಕ್ಟರ್ ಆಗಿದ್ದ ಶಿವಾಜಿರಾವ್ ಗಾಯಕವಾಡ. ಆರಂಭದಲ್ಲೇ ಕೆ.ಬಾಲಚಂದರ್ ಅವರಿಂದ ಅಭಿನಯ ಅವಕಾಶ ಪಡೆದು ಮುಂದೆ ತಮಿಳು ಚಿತ್ರರಂಗದ ಅತ್ಯಂತ ಜನಪ್ರಿಯ ಹಾಗೂ ದುಬಾರಿ ನಟ ರಜನೀಕಾಂತ್ ಎಂದು ಗುರುತಿಸಲ್ಪಟ್ಟರು. ಇವರ ತಂಡದಲ್ಲಿದ್ದ ಇತರ ವಿದ್ಯಾರ್ಥಿಗಳು ಚಂದ್ರಹಾಸ ಆಳ್ವಾ, ಅಶೋಕ್, ಅಮರ್, ರಾಘವೇಂದ್ರರಾವ್, ರವೀಂದ್ರನಾಥ್ ಪ್ರಮುಖರು. ಹಲವು ವರ್ಷಗಳ ಕಾಲ ಕಾರ್ಯ ಕೈಗೊಂಡ ಈ ಸಂಸ್ಥೆ, ನಂತರ ತಮಿಳುನಾಡು ಸರ್ಕಾರ ನಡೆಸುತ್ತಿದ್ದ 'ಚಲನಚಿತ್ರ ತಾಂತ್ರಿಕ ಶಾಲೆ'ಯ ಜೊತೆ ಸೇರಿ, ಸಿನಿಮಾ ಅಭ್ಯಾಸ ಕ್ರಮಕ್ಕೆ ಒಂದು ವ್ಯಾಪಕತೆ, ಪರಿಪೂರ್ಣತೆ ನೀಡಲು ನಿರ್ಧರಿಸಿತು. ಈ ಸಂಸ್ಥೆಯಲ್ಲಿ ಅಭಿನಯದಲ್ಲಿ ತರಬೇತಾಗಿ ಬಂದವರಲ್ಲಿ ಕೆ.ಆರ್.ಶಾಂತಾರಾಂ, ಶಿವರಾಜಕುಮಾರ್, ರಾಘವೇಂದ್ರರಾಜಕುಮಾರ್ ಹೆಸರಿಸಲೇಬೇಕಾದವರು.

'ಚಿತ್ರ ಸಂಪದ'

'ಚಿತ್ರ ಸಂಪದ' ವಿಭಾಗವು ೧೯೩೪-೨೦೦೦ವರೆಗೆ ತೆರೆಕಂಡ ಕನ್ನಡ ಚಿತ್ರಗಳ ವಿವರವನ್ನು ಒಳಗೊಂಡಿದೆ. ಪ್ರಾರಂಭದ ದಿನಗಳಲ್ಲಿ ಮಹಾರಾಷ್ಟ್ರ, ಮದರಾಸು ಮೊದಲಾದ ಕಡೆ ಸ್ಟುಡಿಯೋಗಳಲ್ಲಿ ಚಿತ್ರೀಕರಣವಾಗುತ್ತಿತ್ತು. ಸ್ಟುಡಿಯೋದಲ್ಲೇ ಇರುತ್ತಿದ್ದ ತಂತ್ರಜ್ಞರು ಆಯಾ ಕೆಲಸಗಳನ್ನು ನಿರ್ವಹಿಸುತ್ತಿದ್ದರು. ಹೀಗಾಗಿ ನಮಗೆ ಸಂಪೂರ್ಣವಾದ ಮಾಹಿತಿ ಸಿಕ್ಕಿಲ್ಲ. ನಟರೇ ಗಾಯಕರೂ ಆಗಿರುತ್ತಿದ್ದರು. ಒಂದೊಂದು ಚಿತ್ರದಲ್ಲಿ ೨೦ಕ್ಕೂ ಹೆಚ್ಚು ಹಾಡುಗಳು ಇರುತ್ತಿದ್ದವು. ಅವೆಲ್ಲವನ್ನು ಪಟ್ಟಿ ಮಾಡಲು ಸಾಧ್ಯವಾಗಿಲ್ಲ.

ಚಿತ್ರ ನಿರ್ಮಾಣಕ್ಕೆ ಹರಸಾಹಸ ಮಾಡುತ್ತಿದ್ದ ಹಿಂದಿನ ಕಾಲದ ನಿರ್ಮಾತೃ-ನಿರ್ದೇಶಕರಿಂದ ಇಂದಿನ ನಿರ್ಮಾತೃ-ನಿರ್ದೇಶಕರವರೆಗೆ ಐತಿಹಾಸಿಕ ಪ್ರಜ್ಞೆ ಇದ್ದದ್ದು ವಿರಳ. ಮುಂದಿನ ಪೀಳಿಗೆಯವರಿಗಾಗಿ ದಾಖಲಾತಿಗಳನ್ನು ಉಳಿಸಬೇಕೆಂದು ಅವರು ಎಂದೂ ಯೋಚಿಸಿಲ್ಲ. ಆರಂಭದ ದಿನಗಳ ಚಿತ್ರಗಳ ಪ್ರತಿಗಳು ಆಸಿಟೇಟ್ ಮೂಲದವು. ಕೆಲವು ಸುಟ್ಟು ಹೋದವು. ಮತ್ತೆ ಕೆಲವು ಜೀರ್ಣವಾದವು. ಅನಂತರ ನಿರ್ಮಾಣವಾದ ಕೆಲವು ಚಿತ್ರಗಳ ನೆಗೆಟಿವ್ ಬೆಂಕಿಯಲ್ಲಿ ಸುಟ್ಟು ಹೋದವು. ಅವಜ್ಞೆಯಿಂದ ನಾಶವಾದವು. ಕೆಲವೇ ಕೆಲವು ಸಂಗ್ರಾಹಕರ ಬಳಿ ಇರುವ ಕೆಲವೇ ಕೆಲವು ಚಿತ್ರಗಳ ಹೊರತಾಗಿ ಬೇರೇನೂ ಉಳಿದಿಲ್ಲ. ಮಾಹಿತಿ ಸಂಗ್ರಹಕ್ಕೆ ಇರುವ ಮೂಲಗಳೆಂದರೆ, ವೀಡಿಯೋ ಕ್ಯಾಸೆಟ್, ಆಡಿಯೋ ಕ್ಯಾಸೆಟ್, ಹಾಡಿನ ಪುಸ್ತಕಗಳು, ಪತ್ರಿಕೆಗಳಲ್ಲಿ ಅಚ್ಚಾದ ಮಾಹಿತಿಗಳು ಹಾಗೂ ಹಿರಿಯರ ಸ್ಮೃತಿಚಿತ್ರಗಳು ೬೦ರ ದಶಕದ ನಂತರ ಜನಪ್ರಿಯ ಚಿತ್ರಗಳ ವೀಡಿಯೋ ಕ್ಯಾಸೆಟ್‌ಗಳ ಲಭ್ಯವಿದೆ. ಆದರೆ ೧೯೭೮-೮೦ರ ನಂತರ ಕ್ಯಾಸೆಟ್‌ಗಳಲ್ಲಿ ಚಿತ್ರದ ತಾಂತ್ರಿಕ ವಿವರಗಳನ್ನೆಲ್ಲಾ ಮೊಟಕು ಮಾಡಲಾಗಿದೆ. ೧೯೫೫-೬೮ರವರೆಗೆ ಚಿತ್ರದ ಕಥಾ ಸಾರಾಂಶ, ಚಿತ್ರದ ಹಾಡುಗಳ ಜೊತೆಗೆ ನಟರು, ತಾಂತ್ರಿಕ ವರ್ಗದ ವಿವರ ಇರುತ್ತಿದ್ದ ಹಾಡಿನ ಪುಸ್ತಕಗಳು ಪ್ರಕಟಣೆಯಾಗುತ್ತಿತ್ತು. ಸರ್ಕಾರ ಹಾಡಿನ ಪುಸ್ತಕದ ಮೇಲೆ ತೆರಿಗೆ ವಿಧಿಸಿದ ಕಾರಣ ನಿರ್ಮಾಪಕರೂ ಅದರ ಪ್ರಕಟಣೆ ನಿಲ್ಲಿಸಿದರು. ಹಾಡಿನ ಕ್ಯಾಸೆಟ್‌ಗಳು ಬಂದವು. ಕ್ಯಾಸೆಟ್ ಸಂಸ್ಥೆಯವರು ಜನಪ್ರಿಯ ಚಿತ್ರಗಳ ಹಾಡುಗಳನ್ನು ಮಾತ್ರ ಸಿದ್ಧ ಮಾಡುತ್ತಿದ್ದರು. ಕ್ಯಾಸೆಟ್‌ಗೆ ಮುನ್ನ ಇದ್ದ ಗ್ರಾಮಾಫೋನ್ ಕಂಪೆನಿಗಳು ತಯಾರಿಸುತ್ತಿದ್ದ ಗಾನಮುದ್ರಿಕಗಳ ಸಂಗ್ರಹ ಆಕಾಶವಾಣಿಯಲ್ಲಿದೆ. ಮುರಿದ ಧ್ವನಿಮುದ್ರಿಕಗಳನ್ನು ಆಕಾಶವಾಣಿಯವರು ಮತ್ತೆ ಸಂಗ್ರಹಿಸಲಿಲ್ಲ. ಹೀಗೆ ಮಾಹಿತಿ ಸಂಗ್ರಹ ಮೂಲಗಳು ಬತ್ತಿದವು. ಚಲನಚಿತ್ರಗಳು ಇರಲಿ, ೩೪-೬೦ರ ದಶಕದ ಸ್ಥಿರಚಿತ್ರಗಳೂ ಅಲಭ್ಯ. ಕಾರಣ ಹಲವಾರು ನಿರ್ಮಾಪಕರು, ವಿತರಕರ ವಿಳಾಸವೇ ಅಲಭ್ಯ. ಸೆನ್ಸಾರ್ ಬೋರ್ಡ್ ತಾಂತ್ರಿಕ ವಿವರ ಪಡೆಯಬಹುದಾದ ಇನ್ನೊಂದು ಮೂಲ. ಆದರೆ ಅಲ್ಲಿ ಸೆನ್ಸಾರ್ ಆದ ಚಲನಚಿತ್ರಕ್ಕೆ ಸಂಬಂಧಪಟ್ಟ ಎಂಟು ಅಂಶಗಳ ಬಗೆಗೆ ಮಾತ್ರ ದಾಖಲೆ ಇದೆ.

ಕೆಲವು ಹಿರಿಯ ಪತ್ರಕರ್ತರು, ಚಿತ್ರ ನಿರ್ಮಾಪಕರ ಕುಟುಂಬದವರ ಸಂಗ್ರಹದಲ್ಲಿರುವ ಸ್ಮೃತಿಚಿತ್ರಗಳು ಪತ್ರಿಕೆಗಳಲ್ಲಿ ಪ್ರಕಟವಾದ ಮಾಹಿತಿ, ಹಿರಿಯರು ನೀಡುವ ಸ್ಮೃತಿಚಿತ್ರಗಳು ಈಗ ಮಾಹಿತಿಗಳ ಆಕರ. ನಮಗೆ ಲಭ್ಯವಿರುವ ಮಾಹಿತಿ ನೀಡಿದ್ದೇವೆ. ಕನ್ನಡ ಚಿತ್ರೋದ್ಯಮದ ಸ್ಪಷ್ಟ ಇತಿಹಾಸ ಬಯಸುವ ನಾಳಿನ ಪೀಳಿಗೆಯವರಿಗಾಗಿ, ಚಿತ್ರ ಇತಿಹಾಸಕಾರರಿಗಾಗಿ ನಾವು ನಿಖರವಾದ ಮಾಹಿತಿ ಸಂಗ್ರಹ ಮಾಡುವ ದೃಷ್ಟಿಯಿಂದ ಓದುಗರ ಸಹಕಾರವನ್ನು ಬಯಸುತ್ತಿದ್ದೇವೆ.

ಈ ಗ್ರಂಥವನ್ನು ಗಮನಿಸಿದವರು ಇಲ್ಲಿ ಬಿಟ್ಟುಹೋಗಿರುವ ಮಾಹಿತಿಗಳೇನಾದರೂ ತಮಗೆ ತಿಳಿದಿದ್ದರೆ ದಯಮಾಡಿ ಬರೆದು ಕಳುಹಿಸಿರಿ. ಚಿತ್ರ (ಸ್ಟಿಲ್ಸ್)ಗಳು ಲಭ್ಯವಿದ್ದರೆ ಕಳುಹಿಸಿಕೊಡಿ. ಆ ವಿವರಗಳನ್ನು ಮರುಮುದ್ರಣದಲ್ಲಿ ಸೇರಿಸಿಕೊಳ್ಳುತ್ತೇವೆ.

ದಶಕಗಳ ಇತಿಹಾಸ ಭಾಗದಲ್ಲಿ ಚಲನಚಿತ್ರಕ್ಕೆ ಸಂಬಂಧಪಟ್ಟಂತೆ ಚಿತ್ರಗಳು ಪ್ರಕಟವಾಗಿದೆ. ಚಿತ್ರಸಂಪದದಲ್ಲಿ, ಆ ಚಲನಚಿತ್ರಗಳಿಗೆ ಸಂಬಂಧಿಸಿದ ಚಿತ್ರಗಳನ್ನು ಪುನರಾವರ್ತನೆಯಾಗುವುದು ಬೇಡವೆಂಬ ದೃಷ್ಟಿಯಿಂದ ಕೈ ಬಿಡಲಾಗಿದೆ. ನಮಗೆ ಲಭ್ಯವಿದ್ದಷ್ಟು ಮಾಹಿತಿ ಕೊಟ್ಟಿದ್ದೇವೆ.

ಪ್ರತಿಯೊಂದು ಚಿತ್ರದ ಬಗಗೂ ಇರುವ ಮಾಹಿತಿಗಳನ್ನು ಸೂಚಿಸುವ ಗುರುತುಗಳು ಹೀಗಿವೆ :-

ಲಾ : ಲಾಂಛನ	ಪ್ರೊ : ನಿರ್ಮಾಪಕರು	ನಿ : ನಿರ್ದೇಶನ	ಸ.ನಿ : ಸಹನಿರ್ದೇಶನ
ಅ : ಅಭಿನಯ	ಕ : ಕಥೆ	ಚಿ.ಕ : ಚಿತ್ರಕಥೆ	ಮಾ : ಸಂಭಾಷಣೆ
ಗೀ : ಗೀತರಚನೆ	ಗಾ : ಗಾಯಕರು	ಸಂ : ಸಂಕಲನ	ಛಾ : ಛಾಯಾಗ್ರಹಣ
ಕಲೆ : ಕಲಾನಿರ್ದೇಶನ	ಸ : ಸಂಗೀತ	ಧ್ವ : ಧ್ವನಿಗ್ರಹಣ, (ಮಾ) ಮಾತು, (ಹಾ) ಹಾಡು	ನೃ : ನೃತ್ಯ
ಸಾ : ಸಾಹಸ	ವ : ವಸ್ತ್ರಾಲಂಕಾರ	ಪ್ರ : ಪ್ರಸಾಧನ	ಸ್ಟು : ಸ್ಟುಡಿಯೋ
ಹಾ : ಹಾಡುಗಳು	ವಿ : ವಿಶೇಷ	ಸೆ : ಸೆನ್ಸಾರ್	ಕ.ಸಾ : ಕಥಾಸಾರಾಂಶ

ತಾವು ಸಂಪರ್ಕಿಸಬೇಕಾದ ವಿಳಾಸ :

ಚಲನಚಿತ್ರ ಇತಿಹಾಸ ಸಮಿತಿ

ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ

೨೮, ೧ನೇ ಮುಖ್ಯರಸ್ತೆ, ಕ್ರೆಸೆಂಟ್ ರಸ್ತೆ, ಹೈಗ್ರೌಂಡ್ಸ್,

ಬೆಂಗಳೂರು - ೫೬೦ ೦೦೧. ದೂರವಾಣಿ : ೨೨೬೫೩೬೦ / ೨೨೬೫೩೬೧

ಕನ್ನಡದ ಪ್ರಥಮ ವಾಕ್ಚಿತ್ರ "ಸತಿ ಸುಲೋಚನ" ನಟ - ಸಂಗೀತ ನಿರ್ದೇಶಕ
ಆರ್. ನಾಗೇಂದ್ರ ರಾವ್

೧೯೩೪-೪೦

೧. ಸತಿ ಸುಲೋಚನಾ

(೧೯೩೪ / ಕಪ್ಪು-ಬಿಳುಪು / ಪೌರಾಣಿಕ)
ಲಾ: ಸೌತ್ ಇಂಡಿಯಾ ಮೂವೀಟೋನ್
ಪ್ರೊ: ಷಾ ಚಮನ್‌ಮಲ್ ಡುಂಗಾಜಿ, ಷಾ ಭೂರ್‌ಮಲ್ ಚಮನ್‌ಮಲ್‌ಜಿ
ನಿ: ವೈ.ವಿ.ರಾವ್
ಸ.ನಿ: ಎಂ.ಪಿ.ಆಚಾರ್ (ನಿರ್ಮಾಣ ನಿರ್ವಾಹಕ)
ಅ: ಎಂ.ವಿ.ಸುಬ್ಬಯ್ಯನಾಯ್ಡು (ಇಂದ್ರಜಿತು), ತ್ರಿಪುರಾಂಬ (ಸುಲೋಚನಾ), ಆರ್.ನಾಗೇಂದ್ರರಾವ್ (ರಾವಣ), ಲಕ್ಷ್ಮೀಬಾಯಿ (ಮಂಡೋದರಿ), ವೈ.ವಿ.ರಾವ್ (ಲಕ್ಷ್ಮಣ), ಸಿ.ವಿ.ಶೇಷಾಚಲಂ (ನಾರದ), ಡಿ.ವಿ.ಮೂರ್ತಿರಾವ್ (ರಾಮ), ಎಸ್.ಕೆ.ಪದ್ಮಾದೇವಿ (ಸಖಿ)
ಕ/ಚಿ.ಕ/ಮಾ/ಗೀ: ಬೆಳ್ಳಾವೆ ನರಹರಿಶಾಸ್ತ್ರಿ
ಗಾ: ಪಾತ್ರಧಾರಿಗಳೇ ಹಾಡುತ್ತಿದರು
ಸಂ/ಛಾ: ಸ್ಟುಡಿಯೋ ತಂತ್ರಜ್ಞರು
ಸ: ಆರ್.ನಾಗೇಂದ್ರರಾವ್, ಹೆಚ್.ಆರ್.ಪದ್ಮನಾಭಶಾಸ್ತ್ರಿ
ಸ್ಟು: ಛತ್ರಪತಿ ಸಿನಿಟೋನ್, ಕೊಯಮತ್ತೂರು
ಹಾ: 'ಭಲೆ ಭಲೇ ಪಾರ್ವತಿ ಬಲು ಚತುರೆ ಭಲೇ ಭಲೇ ಪಾರ್ವತಿ...' ಮತ್ತು ೧೫ ಹಾಡುಗಳು
ವಿ: ಕನ್ನಡದ ಮೊದಲ ವಾಕ್ಚಿತ್ರ, ಬ್ರಿಟಿಷ್ ಫಿಲಂ ಸೆನ್ಸಾರ್ ಬೋರ್ಡ್ ವತಿಯಿಂದ ಸೆನ್ಸಾರ್ ಆದರೂ ಆಯಾ ಜಿಲ್ಲೆಗಳಲ್ಲಿ ಪ್ರದರ್ಶನಕ್ಕೆ ಮೊದಲು ಪುನಃ ಸೆನ್ಸಾರ್ ಅನುಮತಿ ಪಡೆಯಬೇಕಿತ್ತು. (ನೋಡಿ: ಸೆನ್ಸಾರ್ ಲೇಖನ)
ಸೆ : ಬೆಂಗಳೂರಿನಲ್ಲಿ ಸೌತ್ ಇಂಡಿಯನ್ ಫಿಲ್ಮ್ ಸಪ್ಲೈ ಅವರಿಗಾಗಿ ಸೆನ್ಸಾರ್ ಆಯಿತು. ಉದ್ದ - ೧೫,೦೦೦ ಅಡಿ, ೨೮-೦೨-೧೯೩೪ ರಂದು ಬ್ರಿಟಿಷ್ ಫಿಲಂ ಸೆನ್ಸಾರ್ ಬೋರ್ಡ್ ಸೆನ್ಸಾರ್ ಮಾಡಿದಾಗ : ೧೫,೫೦೦ ಅಡಿ ಉದ್ದ, ಬಿ: ೧೬೨೯೦, ಆರ್.ಟಿ. (ರನ್ನಿಂಗ್ ಟೈಮ್) ೧೭೩ ನಿಮಿಷಗಳು
ಕ.ಸಾ.: ರಾವಣನ ಸೊಸೆ ಸುಲೋಚನೆಗೆ ರಾಮ-ರಾವಣರ ಯುದ್ಧವನ್ನು ನಿಲ್ಲಿಸಿ, ಸೀತೆಯನ್ನು ಕ್ಷೇಮವಾಗಿ ಕಳುಹಿಸಬೇಕೆಂಬ ಹಂಬಲ. ಪತಿ ಇಂದ್ರಜಿತು ಈ ಮಾತನ್ನು ಪರಿಗಣಿಸದೆ, ಶಕ್ತಿವಶೀಕರಣ ಯಾಗ ಮಾಡಿ ಅದ್ಭುತ ಶಕ್ತಿ ಸಂಪಾದಿಸುತ್ತಾನೆ. ಆ ಶಕ್ತಿಯಿಂದ ಲಕ್ಷ್ಮಣನನ್ನು ಮೂರ್ಛೆ ಹೋಗುವಂತೆ ಮಾಡುತ್ತಾನೆ. ಹನುಮಂತ ಸಂಜೀವಿನಿ ಮೂಲಿಕೆ ತಂದು ಲಕ್ಷ್ಮಣನನ್ನು ಎಚ್ಚರಿಸುತ್ತಾನೆ. ಇಂದ್ರಜಿತು ಮಾಯಾ ಸೀತೆಯನ್ನು ರೂಪಿಸಿ ತಂದು ಲಕ್ಷ್ಮಣನ ಮುಂದೆ ಕೊಲ್ಲುತ್ತಾನೆ. ವಿಭೀಷಣನಿಂದ ನಿಜ ತಿಳಿದ ಲಕ್ಷ್ಮಣ ಇಂದ್ರಜಿತುವನ್ನು ಸಂಹರಿಸುತ್ತಾನೆ. ಸುಲೋಚನಾ ಪತಿಯೊಡನೆ ಅಗ್ನಿ ಪ್ರವೇಶ ಮಾಡಿ ಸತಿಯಾಗುತ್ತಾಳೆ.

೨. ಭಕ್ತಧ್ರುವ / ಧ್ರುವಕುಮಾರ

(೧೯೩೪ / ಕಪ್ಪು-ಬಿಳುಪು / ಪೌರಾಣಿಕ)
ಲಾ: ಜಯವಾಣಿ ಟಾಕೀಸ್
ಪ್ರೊ: ಡಾ|ಯು.ಎಲ್.ನಾರಾಯಣರಾವ್
...ನಾಥ ಆಲ್ಟೇಕರ್
...ದ್ವಾರಕಾನಾಥ್
...ಮುತ್ತು (ಧ್ರುವ), ಜಿ.ನಾಗೇಶರಾವ್
...ನಾದ), ಟಿ.ಕನಕಲಕ್ಷ್ಮಮ್ಮ (ಸುನೀತಿ), ಲಕ್ಷಮ್ಮ
..., ಎಂ.ಜಿ.ಮರಿರಾವ್ (ಕಪಿಂಜಲ),
...ನಾಥ್ (ನಾರದ), ದೇವುಡು ನರಸಿಂಹಶಾಸ್ತ್ರಿ,
...ಮ್ಮ, ಹೆಚ್.ಎಸ್.ಕೃಷ್ಣಸ್ವಾಮಿ ಅಯ್ಯಂಗಾರ್ (ನಾರಾಯಣ), ತಾರಾನಾಥ್ (ಧ್ರುವನ ಗೆಳೆಯ), ಮಾ|ನಾರಾಯಣ್ (ಧ್ರುವನ ಗೆಳೆಯ)
ಕ/ಚಿ.ಕ/ಮಾ/ಗೀ: ದೇವುಡು ನರಸಿಂಹಶಾಸ್ತ್ರಿ
ಗಾ: ಪಾತ್ರಧಾರಿಗಳೇ ಹಾಡಿದರು
ಸಂ: ಸ್ಟುಡಿಯೋ ತಂತ್ರಜ್ಞರು
ಛಾ: ಸ್ಟುಡಿಯೋ ತಂತ್ರಜ್ಞರು
ಸ: ಹಾರ್ಮೋನಿಯಂ ಹೆಚ್.ಕೆ.ಶೇಷಗಿರಿರಾವ್, ಕಿಟ್ಟಣ್ಣ (ತಬಲ)
ಸ್ಟು: ಅಜಂತಾ ಸಿನಿಟೋನ್, ಮುಂಬೈ
ಹಾ: ೧) 'ಜಯ ಜಯವಾಗಲಿ ಶ್ರೀ ಜಯವಾಣಿ...', ೨) 'ಕರಕರ ವಿಚಾರ ವಿಕಾರ ಮರೆದಿರೆ...', ೩) 'ಆಡಿರೋ ಆಡುವಿರಾ, ಬೇಡಿದುದ ನೀಡುವಿರಾ...', ೪) 'ಹಗೆಗಳ ಸಿಗಿವೆನು ದುಗುಡವು ಏಕೆ...'
ವಿ: ಮೂರು ತಿಂಗಳಲ್ಲಿ ಚಿತ್ರ ಸಿದ್ಧವಾಯಿತು. ಮೊದಲು 'ಧ್ರುವ' ತಯಾರಾದರೂ ಬಿಡುಗಡೆಯಾದದ್ದು 'ಸತಿ ಸುಲೋಚನಾ' ಚಿತ್ರ.
ಸೆ: ಸೆಲೆಕ್ಟ್ ಥಿಯೇಟರ್ಸ್ ಅವರಿಗಾಗಿ ೦೫-೦೪-೧೯೩೪ರಂದು ಸೆನ್ಸಾರ್ ಆಯಿತು. ೧೨,೮೦೦ ಅಡಿ ಉದ್ದವಿತ್ತು. ಬ್ರಿಟಿಷ್ ಫಿಲಂ ಸೆನ್ಸಾರ್‌ನಲ್ಲಿ ಮೊದಲು ಸೆನ್ಸಾರ್ ಆದದ್ದು 'ಭಕ್ತಧ್ರುವ'. ಆದರೆ ದಾಖಲೆಯಂತೆ ಜಿಲ್ಲಾಮಟ್ಟದ ಸೆನ್ಸಾರ್ ಬೋರ್ಡ್‌ನಲ್ಲಿ ಇದರ ನಮೂದು ಸಿಗುವುದಿಲ್ಲ. 'ಸತಿ ಸುಲೋಚನಾ' ಸೆನ್ಸಾರ್ ತಾರೀಖು ಸಿಗುತ್ತದೆ.
ಕ.ಸಾ: ಚಾಲುಕ್ಯ ಚಕ್ರವರ್ತಿ ಆದಿತ್ಯನನ್ನು ಮಂಗಳಪುರಿಯ ರಾಜಕುಮಾರಿ ನಂದಿನಿ ವರಿಸುವ ಕನಸು ಕಾಣುತ್ತಾಳೆ. ಆದರೆ ಸರಸವಾಡಲು ಹೋಗಿ ವಿರಸವುಂಟಾಗಿ ನಂದಿನಿಯ ದಾಸಿ ಮಂಗಳೆ ಆದಿತ್ಯನ ಮಹಾರಾಣಿಯಾಗುತ್ತಾಳೆ. ಕೋಪಗೊಂಡ ನಂದಿನಿ ಸೇಡು ತೀರಿಸಿಕೊಳ್ಳಲು ಹವಣಿಸಿ ಆ ನಿಟ್ಟಿನಲ್ಲಿ ಯಶಸ್ವಿಯಾಗುತ್ತಾಳೆ. ಮಹಾರಾಣಿಯ ಉದರದಲ್ಲಿ ಜನಿಸಿದ ರಾಜಕುಮಾರ ಗಜೇಂದ್ರವರ್ಮನನ್ನು ಕಾದುಪಾಲು ಮಾಡುತ್ತಾಳೆ. ತನ್ನ ಹಿಂದೆ ಸುತ್ತುವ

ಮಂತ್ರವಾದಿ ಮಹೇಂದ್ರನ ತಂತ್ರ ವಿದ್ಯೆಯಿಂದ ಮಹಾರಾಣಿಯನ್ನು ಮುದುಕಿಯನ್ನಾಗಿ ಮಾಡಿ, ಮಹಾರಾಜನನ್ನು ಮುತ್ತುಮಾಲೆಯಾಗಿ ಮಾಡುತ್ತಾಳೆ. ಕಡೆಗೊಂದು ದಿನ ಎಲ್ಲಾ ಕೆಡುಕಿಗೂ ಅಂತ್ಯ ಬರುತ್ತದೆ. ಮಹಾರಾಜ, ಮಹಾರಾಣಿ ಮತ್ತು ರಾಜಕುಮಾರರ ಸಮ್ಮಿಲನವಾಗುತ್ತದೆ.

೮೨. ರಾಯರ ಸೊಸೆ

(೧೯೫೭ / ಕಪ್ಪು-ಬಿಳುಪು / ಸಾಮಾಜಿಕ)

ಲಾ: ಶ್ರೀ ಪಾಂಡುರಂಗ ಪ್ರೊಡಕ್ಷನ್ಸ್
ಪ್ರೊ: ಎಂ. ಪಂಢರಿಬಾಯಿ
ನಿ: ಆರ್.ರಾಮಮೂರ್ತಿ, ಕೆ.ಎಸ್.ಮೂರ್ತಿ
ಅ: ಪಂಢರಿಬಾಯಿ, ಮೈನಾವತಿ, ರಮಾದೇವಿ, ಜಯಶ್ರೀ, ಇಂದಿರಾ ಆಚಾರ್ಯ, ಲಕ್ಷ್ಮೀದೇವಿ, ಶಾರದಮ್ಮ, ರಾಮಚಂದ್ರಶಾಸ್ತ್ರಿ, ಕಲ್ಯಾಣಕುಮಾರ್, ರಾಜಕುಮಾರ್, ಆನಂದ್, ನರಸಿಂಹರಾಜು, ಬಾಲಕೃಷ್ಣ, ಗಣಪತಿಭಟ್, ಹನುಮಂತಾಚಾರ್, ಮರಿರಾವ್, ಹನುಮಂತ ರಾವ್, ಕೃಷ್ಣಶಾಸ್ತ್ರಿ, ಗುಂಡೂರಾವ್, ನೃತ್ಯ : ಪದ್ಮಿನಿ ಪ್ರಿಯದರ್ಶಿನಿ, ಬೇಬಿ ಲಕ್ಷ್ಮಿ
ಮಾ/ಗೀ: ಪ. ಗುಂಡೂರಾವ್
ಗಾ: ಎ.ಎಂ.ರಾಜಾ, ಎಂ.ಪ್ರಭಾಕರ್, ಪಿ.ನಾಗೇಶ್ವರರಾವ್, ಭಗವತಿ, ಎಸ್.ಜಾನಕಿ
ಸಂ: ಆರ್.ರಾಮಮೂರ್ತಿ, ಆರ್.ಶ್ರೀರಾಮಯ್ಯ
ಛಾ: ಆರ್.ಸಂಪತ್
ಕಲೆ: ಆರ್.ಬಿ.ಎಸ್. ಮಣಿ
ಸ: ಆರ್.ದಿವಾಕರ್
ಧ್ವ: ಈ.ಐ.ಜೀವಾ, ವಿಶ್ವನಾಥ್, ಕರುಣಾಕರನ್
ನೃ: ಗೋಪಾಲಕೃಷ್ಣ
ಪ್ರ: ಆರ್ಮುಗಂ
ಸ್ಟು: ಪ್ಯಾರಾಮೌಂಟ್, ನ್ಯುಟೋನ್
ಹಾ: ೧)'ಓಂಕಾರ ನಾರಾಯಣೀ...', ೨)'ಸತ್ಯವೆಂಬುದೇ ಸ್ನಾನ ಉಪವಾಸ ಜಪನೇ...', ೩)'ರಾಜವೈಭವವನ್ನೆ - ತೃಣವೆಂದು...', ೪)'ತಾಳಲೆಂತು ಶೋಕಾ ವೇಗಾ...', ೫)'ಬಾರೆ ಸುಂದರಿ ಮೋಹಮಂಜರಿ...', ೬)'ತಾಳುವಿಕೆಗಿಂತನ್ಯ ತಪವು...', ೭)'ತಿಂಡಿಬೇಕೂ ನಂಗೆ ತಿಂಡಿಬೇಕೂ ಒಳ್ಳೆ...', ೮)'ದುಷ್ಟನಾಸೆಯು ಮನದೆ...', ೯)'ಈರೂಪೀ ಜಗದೀರೂಪೀ...'
ವಿ: ರಾಜಕುಮಾರ್ ಅಭಿನಯದ ಮೊದಲ ಸಾಮಾಜಿಕ ಚಿತ್ರ.
ಕ.ಸಾ: ವರದಕ್ಷಿಣೆಗಾಗಿ ಪೀಡಿಸುವ ಹೆತ್ತವರನ್ನು ಎದುರಿಸಲಾಗದ, ಆದರೆ ಹೆಂಡತಿಯನ್ನು ಬಹುವಾಗಿ ಪ್ರೀತಿಸುವ ಅಸಹಾಯಕ ಗಂಡ. ಹೊರದೂಡಲ್ಪಟ್ಟ ಹೆಂಡತಿಗೆ ಬೇರೆ ಕಡೆ ಆಶ್ರಯಕೊಟ್ಟು ಸಂಸಾರ ಮಾಡಿದ. ಅಂತಿಮವಾಗಿ ಸತ್ಯ ತಿಳಿದು, ತಪ್ಪಿನ ಅರಿವಾದ ಅತ್ತೆ ಮನೆಯವರು ಸೊಸೆ-ಮೊಮ್ಮಗನನ್ನು ಬರಮಾಡಿಕೆಂಡಾಗ ಸುಖಾಂತ.

೮೩. ಸತೀ ನಳಾಯಿನಿ

(೧೯೫೭ / ಕಪ್ಪು-ಬಿಳುಪು / ಜಾನಪದ)

ಲಾ: ಕಾಮಧೇನು ಫಿಲಂಸ್
ನಿ: ಟಿ.ಆರ್.ಎಸ್.ಗೋಪು
ಅ: ರಾಜಕುಮಾರ್, ಪಂಢರಿಬಾಯಿ, ಮೈನಾವತಿ, ಜಯಶ್ರೀ,

ಶಾರದಾಂಬಾಳ್, ಸಿದ್ದಯ್ಯಸ್ವಾಮಿ, ನರಸಿಂಹರಾಜು, ರಾಮಚಂದ್ರಶಾಸ್ತ್ರಿ, ಸಿ.ವಿ.ವಿ. ಪಂತುಲು
ಕ/ಚಿ.ಕ/ಮಾ: ಹುಣಸೂರು ಕೃಷ್ಣಮೂರ್ತಿ
ಗಾ: ಪಿ. ಲೀಲ, ಸೌಂದರರಾಜನ್, ಗೋವಿಂದರಾಜನ್, ಸೂಲಮಂಗಲಂ ರಾಜಲಕ್ಷ್ಮಿ
ಛಾ: ಸಿ.ಜೆ. ಮೋಹನರಾವ್
ಸ: ಟಿ.ಕೆ. ಕುಮಾರಸ್ವಾಮಿ
ಸ್ಟು: ನ್ಯೂಟೋನ್, ಪ್ಯಾರಾಮೌಂಟ್
ಹಾ: ೧)'ಯಾರಡಿಯ ಧೂಳಾಗಿ ಕೈವಲ್ಯ ಸಾಧಿಸಲಿ...', ೨)'ಮಣ್ಣೊಳಗೈದಾ ಈ ಬೊಂಬೇ...', ೩)'ತೋರದಯ್ಯಾ ವಿಧಿ...', ೪)'ಜಯ ಜಯತು ಹೇ ಪ್ರಭುವೇ...', ೫)'ಹಗಲಿರುಳು ಪತಿ ಸೇವೆ ಗೈದ ಸತಿ ನಾನು...',
ಕ.ಸಾ: ಪತಿವ್ರತಾ ಶಿರೋಮಣಿ ನಳಾಯಿನಿಯ ಕಥೆ. ಪತಿ ಕೌಶಿಕನಿಗೆ ಕುಷ್ಠರೋಗ. ಅವನಿಗೆ ಒಲಿದ ನರ್ತಕಿಯನ್ನು ಪತಿಗಾಗಿ ಕರೆದು ತರುತ್ತಾಳೆ. ಮಹಡಿಯಿಂದ ಕೆಳಗೆ ಬಿದ್ದ ಪತಿರಾಯನನ್ನು ಹೊತ್ತು ತರುವಾಗ ಋಷಿ ಶಾಪಕ್ಕೆ ಗುರಿಯಾಗುತ್ತಾನೆ. ಸೂರ್ಯೋದಯದೊಳಗೆ ಅವನ ಶಿರಸ್ಸು ಛೇದವಾಗಲಿ ಎಂದರೆ ಸೂರ್ಯನನ್ನೇ ಉದಯಿಸದಂತೆ ನಿಲ್ಲಿಸುವ ಪತಿಪರಾಯಣೆಯ ಕಥೆ.

೮೪. ಶುಕ್ರದೆಸೆ

(೧೯೫೭ / ಕಪ್ಪು-ಬಿಳುಪು / ಸಾಮಾಜಿಕ)

ಲಾ: ಜಗನ್ನಾಥ್ ಪ್ರೊಡಕ್ಷನ್ಸ್
ಪ್ರೊ: ಪಿ.ಕೆ.ಜನಾರ್ಧನ್
ನಿ: ಆರೂರು ಪಟ್ಟಾಭಿ

ಸ.ನಿ: ಎ. ಭೀಮರಾವ್, ಟಿ.ಎಂ. ಮಂಜುನಾಥ್
ಅ: ಬಾಲಕೃಷ್ಣ, ಅದವಾನಿ ಲಕ್ಷ್ಮೀದೇವಿ, ಸೂರ್ಯಕಲಾ, ರಮಾದೇವಿ, ಪಿ.ಕೆ.ಬಾಲಚಂದ್ರ, ಹನುಮಂತಾಚಾರ್, ಸಿ.ಟಿ.ಶೇಷಾಚಲಂ, ರಾಮಚಂದ್ರಶಾಸ್ತ್ರಿ, ಗಣಪತಿಭಟ್, ಈಶ್ವರಪ್ಪ, ವೈ.ಎಂ. ಚಂದ್ರಯ್ಯ, ಹನುಮಂತರಾವ್, ಎಸ್. ಶಂಕರಪ್ಪ, ಎಂ.ವಿ. ರಾವ್, ಭುಜಂಗರಾವ್, ಹೊನ್ನಪ್ಪ, ಪಾಪಮ್ಮ, ಬೇಬಿ ಸರಳಾ
ಕ: ಆನಂದ್, ಎ.ಕೆ. ಪಟ್ಟಾಭಿ
ಮಾ: ಆನಂದ್
ಗೀ: ಟಿ.ಎಸ್. ಬಾಲಕೃಷ್ಣ
ಗಾ: ಎ.ಎಂ. ರಾಜಾ, ಬಾಗೇವಲ್ಲಿ ಸುಬ್ರಹ್ಮಣ್ಯಂ, ಸಿ.ಎಸ್. ಸರೋಜಿನಿ
ಸಂ: ಎಂ. ತಾತಯ್ಯ
ಛಾ: ಕೆ. ಜಾನಕೀರಾಮ್
ಕಲೆ: ರಾಮಲಿಂಗಂ
ಸ: ಟಿ.ಎ.ಕಲ್ಯಾಣಂ
ಧ್ವ: ಎಂ.ಬಿ. ವಾಲ್ಕೆ
ವ: ಅಶ್ವತ್
ಪ್ರ: ಎಂ.ವಿ. ಸ್ವಾಮಿ
ಸ್ಟು: ಫಿಲಂ ಸೆಂಟರ್ (ಪ್ರೈವೇಟ್) ಲಿಮಿಟೆಡ್
ಹಾ: ೧)'ಶ್ರೀ ತುಳಸೀ ಮಾತೆ...', ೨)'ಸಾಲ, ಕಡೆಗೆ ಜೋಳಿಗೆ ತಾಳ...', ೩)'ಶುಭಂ ಕರೋತಿ ಕಲ್ಯಾಣಂ...', ೪)'ಹೊಳೆವ ಬೆಳ್ಳಿ ಮದ್ದೇ...', ೫)'ಚೆಲುವ ಹೆಣ್ಣಿಗೇ ಗುಣ...', ೬)'ಡೇಂಜರ್ ಡೇಂಜರ್...', ೭)'ಚಂದ್ರಮಾ ಓ ಚಂದ್ರಮಾ...', ೮)'ಅಮರ ಪ್ರೇಮದ ಮಿಲನಾ...', ೯)'ಚೆಲುವ ಗಂಡಿಗೆ - ಗುಣ ಸಂಪನ್ನಗೆ...',
ಕ.ಸಾ: ಪ್ರೈಮರಿ ಶಾಲೆಯೊಂದರ ಬಡ ಶಿಕ್ಷಕನಾದ ನಾರಾಯಣ ಹಾಗೂ ಅತನ ಹೆಂಡತಿ ಲಕ್ಷ್ಮಿಗೆ ಶ್ರೀಮಂತರಾಗುವ ಆಸೆ. ಅದಕ್ಕಾಗಿ ಅವರಿಬ್ಬರೂ ಏನೇನು ಮಾಡುತ್ತಾರೆ ಎನ್ನುವ ಹಾಸ್ಯ ಮಿಶ್ರಿತ ಕಥೆಯೇ ಶುಕ್ರದೆಸೆ.

೮೫. ವರದಕ್ಷಿಣೆ

(೧೯೫೭ / ಕಪ್ಪು-ಬಿಳುಪು / ಸಾಮಾಜಿಕ)

ಲಾ: ವೆಂಕಟೇಶ್ವರ ಪ್ರೊಡಕ್ಷನ್ಸ್
ಪ್ರೊ: ಡಿ.ಶಂಕರಸಿಂಗ್
ನಿ: ಚಂದ್ರಮೋಹನ್ (ಡಿ.ಶಂಕರಸಿಂಗ್)
ಅ: ಉದಯಕುಮಾರ್, ಸೂರ್ಯಕಲಾ, ನರಸಿಂಹರಾಜು, ಪ್ರತಿಮಾದೇವಿ, ಲಕ್ಷ್ಮಿದೇವಿ, ಢಿಕ್ಕಿಮಾಧವರಾವ್, ಬಾಲಕೃಷ್ಣ, ರಾಜೇಂದ್ರ ಪ್ರಸಾದ್, ಸುರೇಂದ್ರನಾಥ ಪಂಡಿತ್, ಕಮಲಮ್ಮ, ಸುಂದರಮ್ಮ, ಯು. ಮಹಾಬಲರಾವ್
ಕ/ಮಾ/ಗೀ: ಹೆಚ್.ಎಲ್.ನಾರಾಯಣರಾವ್
ಗಾ: ರಾಣಿ, ಬಾಗೇಪಲ್ಲಿ ಸುಬ್ರಹ್ಮಣ್ಯಂ, ಫಿಲಿಪ್ಸ್ ಸ್ಟೀಫನ್ಸ್
ಸಂ: ಕೆ.ವಿ.ಪದ್ಮನಾಭನ್, ರಾಮಸ್ವಾಮಿ
ಛಾ: ಎಸ್.ಕೆ.ವರದರಾಜನ್, ಗೋವಿಂದಸ್ವಾಮಿ, ರಾಚಪ್ಪನ್
ಸ: ಪಿ.ಶಾಮಣ್ಣ
ಧ್ವ: ಕೆ.ಆರ್.ಸೀತಾರಾಮ್, ಜಿ.ವಿ.ರಾಮನ್, ಮುರುಗನ್
ಪ್ರ: ಎಂ.ಎಸ್.ಸುಬ್ಬಣ್ಣ
ಸ್ಟು: ಪ್ರೀಮಿಯರ್
ಹಾ: ೮ ಹಾಡುಗಳು
ವಿ: ಡಿ.ಶಂಕರಸಿಂಗ್ ಅವರು ಚಂದ್ರಮೋಹನ್ ಹೆಸರಿನಲ್ಲಿ ಈ ಚಿತ್ರ ನಿರ್ದೇಶಿಸಿದರು.
ಕ.ಸಾ: ಹೆಸರೇ ಸೂಚಿಸುವಂತೆ ವರದಕ್ಷಿಣೆ ಸಮಸ್ಯೆ ಕುರಿತಂತೆ ಈ ಚಿತ್ರದ ಕಥೆಯಿತ್ತು.

೮೬. ಸ್ಕೂಲ್ ಮಾಸ್ಟರ್

(೧೯೫೮ / ಕಪ್ಪು-ಬಿಳುಪು / ಸಾಮಾಜಿಕ)

ಲಾ: ಪದ್ಮಿನಿ ಪಿಕ್ಚರ್ಸ್
ಪ್ರೊ/ನಿ: ಬಿ.ಆರ್.ಪಂತುಲು
ಸ.ನಿ: ಕೆ. ಸಿಂಗಮುತ್ತು, ಎಸ್.ಆರ್. ಪುಟ್ಟಣ್ಣ, ಷಣ್ಮುಗಂ
ಅ: ಬಿ.ಆರ್.ಪಂತುಲು, ಎಂ.ವಿ.ರಾಜಮ್ಮ, ಢಿಕ್ಕಿ ಮಾಧವರಾವ್, ಉದಯಕುಮಾರ್, ನರಸಿಂಹರಾಜು, ಸಾಹುಕಾರ್ ಜಾನಕಿ, ಬಿ.ಸರೋಜಾದೇವಿ, ಶಿವಾಜಿ ಗಣೇಶನ್, ಸೂರ್ಯಕುಮಾರ್, ಬಾಲಕೃಷ್ಣ, ವಿಮಲ, ಅನ್ನಪೂರ್ಣಮ್ಮ, ಹೆಚ್. ಕೃಷ್ಣಶಾಸ್ತ್ರಿ, ಮಹೇಶ್ವರಯ್ಯ, ಚಿ। ಉದಯಶಂಕರ್, ಯು.ಕೆ. ವ್ಯಾಸರಾವ್, ಶಿವಶಂಕರ್, ಗೌತಮ್, ಅನಂತರಾವ್, ರವಿ, ಶ್ರೀನಿವಾಸ್, ಚಂದ್ರಯ್ಯಸ್ವಾಮಿ, ಮಾ। ಗೋಪಾಲ್, ವೆಂಕಟೇಶ್, ಅನಂತರಾಮು, ಪದ್ಮಾವತಿ
ಕ: ಶಿರವಾಡ್ಕರ್ ಅವರ 'ವೈಷ್ಣವಿ' ಕಥೆ ಆಧಾರಿತ
ಚಿ.ಕ: 'ಪದ್ಮಿನಿ ಪಿಕ್ಚರ್ಸ್' ಸಾಹಿತ್ಯ ಶಾಖೆ
ಮಾ/ಗೀ: ಕಣಗಾಲ್ ಪ್ರಭಾಕರಶಾಸ್ತ್ರಿ
ಗಾ: ರಾಜಲಕ್ಷ್ಮಿ, ಪಿ.ಲೀಲಾ, ಕೃಷ್ಣವೇಣಿ, ಕೋಮಲ, ಜಮುನಾ ರಾಣಿ, ಎ.ಎಂ.ರಾಜಾ, ಸುಶೀಲ, ನಾಗೇಶ್ವರರಾವ್, ಟಿ.ಜಿ. ಲಿಂಗಪ್ಪ
ಸಂ: ಆರ್.ದೇವರಾಜನ್
ಛಾ: ಡಬ್ಲ್ಯೂ.ಆರ್. ಸುಬ್ಬರಾವ್, ಕರ್ಣನ್
ಕಲೆ: ವರ್ತೂರ್ಕರ್
ಸ: ಟಿ.ಜಿ.ಲಿಂಗಪ್ಪ
ಧ್ವ: ಇ.ಐ. ಜೀವ, ರಾಜಗೋಪಾಲ್, ನಾದನ್, ರಾಜಾರಾಂ
ವ: ಎಂ.ಜಿ. ನಾಯ್ಡು, ಎಂ. ರಾಧ, ಟಿ.ಎಸ್. ಪೊನ್ನರಾಜ್
ಪ್ರ: ಹರಿಬಾಬು, ಎ. ರಾಮದಾಸ್
ಸ್ಟು: ಭರಣಿ, ಪ್ಯಾರಾಮೌಂಟ್
ಹಾ: ೧)'ರಾಧಾ ಮಾಧವ ವಿನೋದ ಹಾಸ..', ೨)'ಅತಿ ಮಧುರಾ ಅನುರಾಗ...', ೩)'ಸೊಂಪಾದ ಸಂಜೆ ವೇಳೆ...', 'ಭಾಮೆಯ ನೋಡಲು ತಾ ಬಂದ...', ೪)'ಸ್ವಾಮಿ ದೇವನೆ ಲೋಕ ಪಾಲನೆ...', ೫)'ಬನ್ನಿರೈ.. ಬನ್ನಿರೈ...', ೬)'ನಾನು ನೀನು ಜೋಡಿ...', ೭)'ಇನ್ನೇನು ಆನಂದ ಬೇಕಾಗಿದೆ...', ೮)'ಎಲ್ಲಾರು ನಮ್ಮವರೆ ಜಗದೆ...'

ವಿ: ಶಿವಾಜಿ ಗಣೇಶನ್ ಇನ್ಸ್‌ಪೆಕ್ಟರ್ ಪಾತ್ರ ವಹಿಸಿದ್ದರು. ಬೆಂಗಳೂರಿನಲ್ಲಿ ೨೫ ವಾರ ಪ್ರದರ್ಶನಗೊಂಡು ಸಂಯೋಜಿತವಾಗಿ ೫೬ ವಾರ ಪ್ರದರ್ಶನಗೊಂಡಿತು. ಏಕಕಾಲದಲ್ಲಿ ಕನ್ನಡ, ತಮಿಳು, ತೆಲುಗು ಭಾಷೆಯಲ್ಲಿ ಚಿತ್ರ ಸಿದ್ಧವಾಯಿತು. ಕೇಂದ್ರ ಸರ್ಕಾರದಿಂದ ದ್ವಿತೀಯ ಅತ್ಯುತ್ತಮ ಕಥಾಚಿತ್ರಕ್ಕೆ ಇರುವ 'ರಾಷ್ಟ್ರಪತಿಗಳ ರಜತ ಪದಕ' ಲಭ್ಯವಾಯಿತು.
ಸೆ: ಯು - ೧೬,೭೦೪ ಅಡಿಗಳು, ೧೭ ರೀಲ್‌ಗಳು
ಕ.ಸಾ: ರಂಗಣ್ಣ ನಿಷ್ಠಾವಂತ ಶಿಕ್ಷಕ. ಶಾಲಾ ಕಟ್ಟಡವನ್ನು ಸ್ವಂತಕ್ಕೆ ಬಳಸುತ್ತಿದ್ದ ಊರ ಪಂಚಾಯ್ತಿ ಅಧ್ಯಕ್ಷ ನಾಗಪ್ಪನ ವಂಚನೆಯನ್ನು ಖಂಡಿಸುತ್ತಾರೆ. ಮಕ್ಕಳಲ್ಲಿ ಪ್ರೀತಿ, ಅನುರಾಗ, ವಿಶ್ವಾಸವನ್ನು ಬೆಳೆಸುತ್ತಾರೆ. ರಂಗಣ್ಣನ ಮಕ್ಕಳಿಬ್ಬರೂ ಓದಿ ಬೇರೆ ಬೇರೆ ಊರಿನಲ್ಲಿ ಕೆಲಸಕ್ಕೆ ಸೇರುತ್ತಾರೆ. ರಂಗಣ್ಣನಿಗೆ ನಿವೃತ್ತಿಯಾಗುತ್ತದೆ. ನಾಗಪ್ಪನ ಮೋಸದಿಂದ ಮಕ್ಕಳ ಓದಿನ ಸಾಲ ರಂಗಣ್ಣನ ಮೇಲೆ ಬರುತ್ತದೆ. ಗಂಡಹೆಂಡತಿಯರಿಬ್ಬರೂ ಬೇರೆಬೇರೆಯಾಗಿ ಮಕ್ಕಳ ಮನೆಗೆ ಹೋಗಿ ವಾಸಿಸಬೇಕಾಗಿ ಬರುತ್ತದೆ. ಕಷ್ಟ-ಸಂಕಟದ ಸರಮಾಲೆ. ಊರಿನ ಮನೆ ಹರಾಜಾಗುತ್ತಿದ್ದಾಗ ಬಾಲ್ಯದಲ್ಲಿ ತನಗೆ ಕಲಿಸಿದ ಗುರು ಎಂಬ ನೆನಪಿನಿಂದ ಶಿಷ್ಯ ಇನ್ಸ್‌ಪೆಕ್ಟರ್ ಕೊಂಡು ಗುರುಕಾಣಿಕೆ ಸಲ್ಲಿಸುತ್ತಾನೆ. ಮಕ್ಕಳೆಲ್ಲ ತಪ್ಪರಿತುಕೊಂಡು ತಂದೆ ತಾಯಿಗಳ ಕ್ಷಮೆ ಕೋರುತ್ತಾರೆ

೮೭. ಭೂಕೈಲಾಸ

(೧೯೫೮ / ಕಪ್ಪು-ಬಿಳುಪು / ಪೌರಾಣಿಕ)
ಲಾ: ಎ.ವಿ.ಎಂ.ಪ್ರೊಡಕ್ಷನ್
ಪ್ರೊ: ಎ.ವಿ.ಮೇಯಪ್ಪನ್
ನಿ: ಕೆ.ಶಂಕರ್
ಸ.ನಿ: ಎಸ್.ರಾಮನಾಥನ್, ಎಸ್.ಪಿ.ವೆಂಕಟರಾಮನ್, ಬಿ.ಹೆಚ್.ವೆಂಕಟೇಶ್ವರರಾವ್
ಅ: ರಾಜಕುಮಾರ್ (ರಾವಣ), ಕಲ್ಯಾಣಕುಮಾರ್ (ನಾರದ), ಅಶ್ವತ್ಥ್ (ಈಶ್ವರ), ಸಿದ್ದಯ್ಯಸ್ವಾಮಿ (ಇಂದ್ರ), ಅನಿಲ್‌ಕುಮಾರ್ (ವಿಷ್ಣು), ಎಸ್.ವಿ.ರಂಗರಾವ್ (ಮಾಯಾಸುರ), ಜಮುನಾ (ಮಂಡೋದರಿ), ಬಿ.ಸರೋಜಾದೇವಿ (ಪಾರ್ವತಿ), ಹೇಮಲತಾ (ಕೈಕಸೆ), ಮಾ|ಬಾಜಿ (ಗಣೇಶ), ಗುರುಸಿದ್ದಯ್ಯಸ್ವಾಮಿ (ಕುಂಭಕರ್ಣ), ವಾಸಪ್ಪ, ಲಕ್ಷ್ಮೀ, ಶಾಂತಾ
ಚಿ.ಕ/ಮಾ/ಗೀ: ಕು.ರ. ಸೀತಾರಾಮಶಾಸ್ತ್ರಿ
ಗಾ: ಎಸ್.ಜಯರಾಮನ್, ಎಸ್.ಗೋವಿಂದರಾಜನ್, ಎಂ.ಎಲ್.ವಸಂತಕುಮಾರಿ, ಪಿ.ಸುಶೀಲ, ಟಿ.ಎಸ್.ಭಗವತಿ, ಎ.ಪಿ.ಕೋಮಲ
ಸಂ: ಕೆ.ಶಂಕರ್, ಕೆ.ನಾರಾಯಣನ್
ಛಾ: ಮಾಧವ ಬುಲ್‌ಬುಲೆ
ಸ: ಆರ್.ಸುದರ್ಶನಂ, ಆರ್.ಗೋವರ್ಧನಂ
ಧ್ವ: (ಹಾ)ಪಿ.ಎಸ್.ವಿಶ್ವ, (ಮಾ)ಎಸ್.ಪಿ.ರಾಮನಾಥನ್
ನೃ: ಕೆ.ಎನ್.ದಂಡಾಯುಧಪಾಣಿ (ನೃತ್ಯ: ಗೋಪಿಕೃಷ್ಣ, ಕಮಲಾಲಕ್ಷ್ಮಣ್, ಸರೋಜಾ)
ವ: ಕೆ.ರೆಹಮಾನ್
ಪ್ರ: ಕೆ.ಎನ್.ಕಿಣಿ, ಕೆ.ಸೋಮು
ಸ್ಟು: ಎ.ವಿ.ಎಂ. (ಮದರಾಸು)
ಹಾ: ೧) 'ಕ್ಷೀರಾಬ್ಧಿ ವರಧಾಮ ನಾಗಶಯನ...', ೨) 'ನಾಕವನೇ ನಾಚಿಸುವ ಲೋಕವಿದೇನೋ...', ೩) 'ಸುಂದರಾಂಗ ಬಂದನೀಗ...', ೪) 'ರಾಮನ ಅವತಾರ ರಘುಕುಲ..', ೫) 'ಬಾಲೆಯ ಹೃದಯವನ್ನಾವರಿಸಿರುವ...', ೬) 'ದೂರ ಹೋದ ಆನಾಥ ನಾದ...', ೭) 'ಈ ರಾತ್ರಿ ಮಹಾರಾತ್ರಿ..', ೮) 'ತರವೇ ವರವಾಸ ಶಿರವ...', ೯) 'ಈ ದೇಹ ಮೂರು ದಿನ ಅಲ್ಲವೇನೋ...', ೧೦) 'ಭಕ್ತವತ್ಸಲಾ ಬಾರಾ ನಿತ್ಯನಿರ್ಮಲಾ ತೋರಾ...'
ಕ.ಸಾ: ರಾವಣ ಆತ್ಮಲಿಂಗಕ್ಕಾಗಿ ಶಿವನನ್ನು ಒಲಿಸಿಕೊಂಡು ಪಾರ್ವತಿಯನ್ನೂ ಕೇಳುತ್ತಾನೆ. ಪಾರ್ವತಿಯನ್ನು ಕರೆದುಕೊಂಡು ಹೋಗುತ್ತಿರುವಾಗ ಆಕೆ ತನ್ನ ಘೋರ ರೂಪ ದರ್ಶನ ಮಾಡಿಸುತ್ತಾಳೆ. ಹೆದರಿ ಹಿಂತಿರುಗಿದ ರಾವಣ ಮತ್ತೆ ಆಕೆಯನ್ನು ಹುಡುಕಲು ಪಾತಾಳಕ್ಕೆ ಹೋಗುತ್ತಾನೆ. ಅಲ್ಲಿ ಪಾರ್ವತಿಯೆಂದು ಬಗೆದು ಮಂಡೋದರಿಯನ್ನು ವಿವಾಹವಾಗುತ್ತಾನೆ. ಪಾರ್ವತಿಯನ್ನು ಮೋಹಿಸಿದ್ದಕ್ಕಾಗಿ ಪಶ್ಚಾತ್ತಾಪ ಪಟ್ಟು ಶಿವನಿಗೆ ತನ್ನ ತಲೆಯನ್ನೇ ಅರ್ಪಿಸುತ್ತಾನೆ. ಶಿವ ಆತನ ಭಕ್ತಿಗೆ ಮೆಚ್ಚಿ ಆತನಿಗೆ ಜೀವದಾನ ಮಾಡಿ ತನ್ನ ಆತ್ಮಲಿಂಗವನ್ನು ನೀಡುತ್ತಾನೆ. ದಾರಿ ಮಧ್ಯೆ ಸಂಧ್ಯಾವಂದನೆಗೆ ತೆರಳಲು ದನಗಾಹಿ ರೂಪದ ಗಣಪತಿಯ ಕೈಗೆ ಲಿಂಗವನ್ನು ನೀಡುತ್ತಾನೆ. ಅವನು ಅದನ್ನು ಭೂಮಿಗಿಡಲು ಲಿಂಗ ಅಲ್ಲಿಯೇ ಪ್ರತಿಷ್ಠಾಪಿತವಾಗುತ್ತದೆ. ಮುಂದೆ ಇದೇ ಭೂಕೈಲಾಸವೆಂದು ಪ್ರಖ್ಯಾತವಾಗುತ್ತದೆ.

೮೮. ಭಕ್ತ ಪ್ರಹ್ಲಾದ

(೧೯೫೮ / ಕಪ್ಪು-ಬಿಳುಪು / ಪೌರಾಣಿಕ)
ಲಾ/ಪ್ರೊ: ಎಸ್.ಎಸ್.ಎಸ್.ನಾಟಕ ಮಂಡಳಿ
ನಿ: ಹೆಚ್.ಎಸ್.ಕೃಷ್ಣಸ್ವಾಮಿ, ಎಂ.ವಿ. ಸುಬ್ಬಯ್ಯ ನಾಯ್ಡು
ಅ: ಎಂ.ವಿ.ಸುಬ್ಬಯ್ಯ ನಾಯ್ಡು, ಉದಯಕುಮಾರ್, ನರಸಿಂಹರಾಜು, ಮಾ|ಲೋಕೇಶ್, ಪಿ.ಆರ್.ವೇಣುಗೋಪಾಲ್, ಹೆಚ್.ಆರ್.ಹನುಮಂತರಾವ್, ಹೆಚ್.ಕೃಷ್ಣಶಾಸ್ತ್ರಿ, ಬಾಲಕೃಷ್ಣ, ಜಿ.ಉದಯಶಂಕರ್, ಎಸ್.ವಿ. ನರಸಯ್ಯ, ಬಾಲಕೃಷ್ಣಶೆಟ್ಟಿ, ಶಿವಕುಮಾರ್, ಕಣ್ಣಪ್ಪ ಭಾಗವತರ್, ಬೇ|ಎಂ.ಎಸ್.ಲೋಕನಾಥ್, ಬೇ|ಎಂ.ಎಸ್.ದೇವರಾಜು, ಲಕ್ಷ್ಮೀಬಾಯಿ, ಎಂ.ಲೀಲಾವತಿ, ಟಿ.ಅಮ್ಮಾಜಿ, ಕೆ.ಇಂದ್ರಾಣಿ
ಕ/ಮಾ: ಎಂ.ಎಸ್.ಬಂಗಾರಮ್ಮ
ಗೀ: ಜಿ.ಮಹಾಲಿಂಗ ಭಾಗವತರ್, ವಚನ- ಟಿ.ಆರ್.ಸಾರಂಗಪಾಣಿ, ಪಾರ್ಥಸಾರಥಿ
ಗಾ: ಟಿ.ರಾಜಗೋಪಾಲಶರ್ಮ, ಪಿ.ಬಿ.ಶ್ರೀನಿವಾಸ್, ಮಾಧವಪೆದ್ದಿ ಸತ್ಯಂ, ಎ.ಪಿ.ಕೋಮಲ, ರಾಣಿ, ಸರೋಜ, ಅನುಸೂಯ
ಸಂ: ವಿ.ಎಸ್.ರಾಜನ್, ಪೆರುಮಾಳ್
ಛಾ: ಕೆ.ಬಾಲು
ಕಲೆ: ವರ್ತೂರ್ಕರ್
ಸ: ಎಲ್.ಮಲ್ಲೇಶ್ವರರಾವ್
ಧ್ವ: ಆರ್.ಕಣ್ಣನ್
ನೃ: ಕೆ.ತಂಗಪ್ಪನ್ ಮತ್ತು ಚಿತ್ರ
ಪ್ರ: ಸ್ವರ್ಣಪ್ಪ
ಸ್ಟು: ರೇವತಿ, ವಿಜಯ
ಹಾ: ೧) 'ಉತ್ತಿಷ್ಠೋತ್ತಿಷ್ಠ ಗೋವಿಂದ...', ೨) 'ವೇದಾಂತವಧೂ ಹೃದಯ ವಿಹಾರಿ..', ೩) 'ಅನ್ಯಥಾ ಶರಣಂ ನಾಸ್ತಿ...', ೪) 'ಪನೀ ವಿವಾದ ಲೀಲೆ...', ೫) 'ಶರಣು ಶ್ರೀ ತುಳಸೀ..', ೬) 'ಹೇ ಯೋಗೀಶ್ವರ ತಾಪಸೇಂದ್ರ...', ೭) 'ಓಂ ನಮೋ ನಾರಾಯಣಾ ದಯಾಘನ...', ೮) 'ಶ್ರೀ ವಿಹಾರವೆ ಶಾರದಾಂಬೆಯ ಪ್ರಾಣನಾಯಕ...', ೯) 'ಜಯ ಜಯತು ನವನಿಧಿಯ ಕುಲದ ಕಣ್ಮಣಿಯೆ..', ೧೦) 'ತಾಯೇ ಕರುಣಾ ನಿಧಿಯೇ ಧರಣಿಯೇ...', ೧೧) 'ಯಾಕುಂದೇಂದು ತುಷಾರ ಹಾರ ಧವಳಾ...', ೧೨) 'ನಾರಾಯಣಾ ನಾರಾಯಣಾ ನತಜನಪಾಲ...', ೧೩) 'ಅಗ್ನಿಯೇ ಸ್ವರ್ಣ ರೂಪಾಯ..', ೧೪) 'ಸಶಂಖ ಚಕ್ರಂ ಸಕಿರೀಟ ಕುಂಡಲಂ...', ೧೫) 'ಪಾಲಿಸು ದೇವ ದೀನರ ಕಾವ ಕಮಲಾ ಜೀವ...', ೧೬) 'ಮಾಧವ ಕೇಶವ ಶ್ರೀಲೋಲಾ...', ೧೭) 'ರಾಜಾ ಧನ್ಯ ನಾಗರಾಜ....', ೧೮) 'ದೇವ ದಾನವ ಕೋಟಿ ಪಾಲ್ಗಡಲ ಕಡವಾಗ...', ೧೯) 'ಹರಿ ನಾರಾಯಣ ನಿನ್ನಯ...', ೨೦) 'ಜಗದೊಳಗೆ ನಾನೇ ಮೂಜಗವನ್ನು ಜಯಿಸಿರ್ಪ...'
ವಿ: ಲೋಕೇಶ್ ಬಾಲನಟರಾಗಿ ಪ್ರಹ್ಲಾದನ ಪಾತ್ರದಲ್ಲಿ ಅಭಿನಯಿಸಿದ ಚಿತ್ರ. ನಿರ್ದೇಶಕ ವಿ.ಸೋಮಶೇಖರ್ ಕ್ಲಾಪ್ ಬಾಯ್ ಆಗಿ ಚಿತ್ರರಂಗ ಪ್ರವೇಶಿಸಿದ ಚಿತ್ರ.
ಕ.ಸಾ: ಮಹಾವಿಷ್ಣು ನರಸಿಂಹನ ಅವತಾರ ಎತ್ತಿ ಹಿರಣ್ಯ ಕಶಿಪುವನ್ನು ಸಂಹರಿಸಿ, ಪ್ರಹ್ಲಾದನಿಗೆ ಒಲಿದ ಕಥೆ.

೮೯. ಶ್ರೀ ಕೃಷ್ಣಗಾರುಡಿ

(೧೯೫೮ / ಕಪ್ಪು-ಬಿಳುಪು / ಪೌರಾಣಿಕ)
ಲಾ: ನಂದಿ ಪಿಕ್ಚರ್ಸ್
ಪ್ರೊ: ಕೆ.ಎಂ.ನಾಗಣ್ಣ
ನಿ: ಹುಣಸೂರು ಕೃಷ್ಣಮೂರ್ತಿ
ಅ: ರಾಜಕುಮಾರ್, ಸಿದ್ದಯ್ಯಸ್ವಾಮಿ, ಸೂರ್ಯಕಲಾ, ನರಸಿಂಹರಾಜು, ಹನುಮಂತರಾವ್, ರಾಮಚಂದ್ರಶಾಸ್ತ್ರಿ, ವೀರಣ್ಣ ಮಂಗಳೂರ್‌ಕರ್, ರಾಜೇಂದ್ರಕೃಷ್ಣ, ಬಸವರಾಜು, ಅನಿಲ್ ಕುಮಾರ್, ಗಣಪತಿ ಭಟ್, ವಾದಿರಾಜ್, ಚಂದ್ರಯ್ಯಸ್ವಾಮಿ, ರೇವತಿ, ರಮಾದೇವಿ, ಜಯಲಕ್ಷ್ಮೀ, ಲಲಿತಾರಾವ್, ನೃತ್ಯ - ಪದ್ಮಿನಿ ಪ್ರಿಯದರ್ಶಿನಿ, ಸುನಂದ, ಸುಶೀಲ
ಕ: ಬೆಳ್ಳಾವೆ ನರಹರಿಶಾಸ್ತ್ರಿ
ಚಿ.ಕ/ಮಾ/ಗೀ: ಹುಣಸೂರು ಕೃಷ್ಣಮೂರ್ತಿ
ಗಾ: ಘಂಟಸಾಲ, ಮಾಧವಪೆದ್ದಿ, ಪಿ.ನಾಗೇಶ್ವರರಾವ್, ಪಿ.ಬಿ.ಶ್ರೀನಿವಾಸ್, ಮಲ್ಲಿಕ್, ಸುಶೀಲ, ಜಿಕ್ಕಿ, ಎಸ್.ಜಾನಕಿ, ಪದ್ಮ, ವೈದೇಹಿ, ಸುಬ್ಬಲಕ್ಷ್ಮೀ, ರಾಣಿ
ಸಂ: ಮಾಣಿಕ್ಯಂ
ಛಾ: ಜಿ.ದೊರೈ
ಕಲೆ: ಗೋದ್‌ಗಾಂವ್‌ಕರ್
ಸ: ಪೆಂಡ್ಯಾಲ ನಾಗೇಶ್ವರರಾವ್
ಧ್ವ: ಕೃಷ್ಣಯ್ಯರ್, ಜೀವ, ರಂಗಸ್ವಾಮಿ, ವಿಶ್ವನಾಥನ್
ನೃ: ಎ.ಕೆ.ಚೋಪ್ರಾ
ವ: ಕೆ.ಅಚ್ಯುತರಾವ್
ಪ್ರ: ದೊರೆಸ್ವಾಮಿ
ಸ್ಟು: ವಾಹಿನಿ, ರೇವತಿ (ಮದರಾಸು)
ಹಾ: ೧) 'ಬೊಂಬೆಯಾಟವಯ್ಯಾ ಬ್ರಹ್ಮಾಂಡವೇ ಆ ದೇವನಾಡುವ...., ೨) 'ಭಲೇ ಭಲೇ ಗಾರುಡಿ...', ೩) 'ನನ್ನವರ ಸ್ಥಿತಿಗತಿ...', ೪) 'ಬಾ ಹಾಡುವ ಸಖಿ ದೇವರ ಘನತೆ...', ೫) 'ಯದುವೀರನಿಗೆ.. ಯುಗಪುರುಷನಿಗೆ.., ೬) 'ಝುಮ್ಮಝುಮಝುಮ - ಝುಮ್ಮ ಎನುತ...', ೭) 'ಆನಂದದ ಪರಮಾನಂದದ - ನವಗೀತ...', ೮) 'ಒಡಲಿನ ಹಸಿವ ನೋವ...', ೯) 'ಈ ಮಾಯವೇನೋ.. ಈ ಜಾಲವೇನೋ...', ೧೦) 'ಎಂಥ ಶಕ್ತಿವಂತನಮ್ಮ...'
ಸೆ: ೪೫೭೬.೩೧ ಮೀ. ೧೮ ರೀಲುಗಳು, ೫೨೩೦೯, ದಿನಾಂಕ: ೨೨-೦೫-೧೯೫೮
ಕ.ಸಾ: ಶ್ರೀಕೃಷ್ಣನು ಗಾರುಡಿಗನ ವೇಷದಲ್ಲಿ ಬಂದು ಭೀಮಾರ್ಜುನರ ಗರ್ವಭಂಗ ಮಾಡುವ ಮಹಾಭಾರತದ ಸನ್ನಿವೇಶವೊಂದರ ಸುತ್ತ ಹೆಣೆದ ಕಥೆ.

೯೦. ಮನೆ ತುಂಬಿದ ಹೆಣ್ಣು

(೧೯೫೮ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ವಿರ್ಕಲ್ ಪ್ರೊಡಕ್ಷನ್ಸ್
ಪ್ರೊ/ನಿ: ಬಿ.ವಿಠಲಾಚಾರ್ಯ
ಸ.ನಿ: ಸಿದ್ದಲಿಂಗಯ್ಯ, ಎಸ್.ಎ.ಮೂರ
ಅ: ಆದವಾನಿ ಲಕ್ಷ್ಮೀದೇವಿ, ಲಲಿತಾರಾವ್, ಜಯಶ್ರೀ, ರಮಾದೇವಿ, ಉದಯಕುಮಾರ್, ನರಸಿಂಹರಾಜು, ಬಾಲಕೃಷ್ಣ, ಹೆಚ್.ಆರ್.ಶಾಸ್ತ್ರಿ, ಸಿದ್ದಯ್ಯಸ್ವಾಮಿ, ಹನುಮಂತರಾವ್, ಕೃಷ್ಣಶಾಸ್ತ್ರಿ, ರಾಜಲಕ್ಷ್ಮೀ, ಚಂದ್ರಯ್ಯಸ್ವಾಮಿ, ಬಿ.ಎಸ್.ಗೌತಮ್, ಇ.ವಿ. ಸರೋಜಾ, ರಾಜೇಂದ್ರ ಪ್ರಸಾದ್, ನಂಜಪ್ಪ, ರಾಜು, ಶಿವಾಜಿ, ಹನುಮಂತಾಚಾರ್, ಪುಟ್ಟಾಚೋಯಿಸ, ನೃತ್ಯ - ಗೋಪಿಕೃಷ್ಣ ಮತ್ತು ಲಕ್ಷ್ಮೀಕಾಂತಂ
ಕ/ಚಿ.ಕ/ಮಾ: ಇಂದಿರಾತನಯ (ವಿ.ಆರ್. ವ್ಯಾಸ್)
ಗೀ: ಸೋರಟ್ ಅಶ್ವತ್ಥ್
ಗಾ: ಜಿಕ್ಕಿ, ಬಾಲ ಸರಸ್ವತಿ, ರಾಣಿ, ಎಸ್.ಜಾನಕಿ, ನಾಗೇಂದ್ರ, ಉಮಾ
ಸಂ: ಜಿ.ವಿಶ್ವನಾಥ್
ಛಾ: ಎಂ.ಎಸ್.ಮಣಿ, ಎಚ್.ಎಸ್.ವೇಣು
ಕಲೆ: ಬಿ.ಸಿ. ಬಾಬು
ಸ: ರಾಜನ್ ನಾಗೇಂದ್ರ

ಧ್ವ: ಎ.ಕೃಷ್ಣನ್, ಟಿ.ಎಸ್.ಕೃಷ್ಣನ್
ನೃ: ಎಸ್. ತಂಗಪ್ಪನ್
ಸಾ: ವೈ.ಶಿವಯ್ಯ
ವ: ಅಶ್ವತ್ಥ್
ಪ್ರ: ಭದ್ರಯ್ಯ, ವೈ.ಮಾಧವಯ್ಯ
ಸ್ಟು: ವಿಜಯ-ವಾಹಿನಿ (ಮದರಾಸು)
ಹಾ: ೧)'ನಮೋ ನಮೋ ನೀಲಮೇಘ ಶ್ಯಾಮಸುಂದರಾ...',
೨)'ಝಣ ಝಣ ತಕತ, ಝಮಝಮವೆನುತ...',
೩)'ಸಾಕೀ ವಿನೋದಭಾವಾ ಸಹಿಸಲಾರದೋ ಜೀವಾ...',
೪)'ಅಮ್ಮಾ, ಏಕೆ ಎನ್ನ ಉಳಿಸಿ ಹೋದೆಯಮ್ಮ...',
೫)'ನನ್ನ ರನ್ನ ಚಿನ್ನದರಸನ ಕಂಡೆ ಕಂಡೆ ನಾ...',
೬)'ಓಂಕಾರಾದಿ ಮಹಾವಿದ್ಯಾ ಮಹಾಪುಣ್ಯ ರೂಪಿಣಿ...',
೭)'ಚಂದಮಾಮ ಚಂದಮಾಮ ತಂದೆ ಈ ಪ್ರೇಮದಾನಂದ ಸೀಮಾ...', ೮)'ಓ ಜನನೀ...' ಏನಿದೇನು ಘೋರ ಶಿಕ್ಷೆ ನೀಡಿದೆ ನೀ...',
ವಿ: ವೈ.ಶಿವಯ್ಯ ಸಾಹಸ ನೀಡಿದ ಮೊದಲ ಕನ್ನಡ ಚಿತ್ರ
ಕ.ಸಾ:ಹೆಸರೇ ಹೇಳುವಂತೆ ಮನೆಗೆ ಕುಲವಧುವಾಗಿ ಬಂದ ಹೆಣ್ಣಿನ ಸುತ್ತ ಹೆಣೆದ ಕಥೆ. ಅತ್ತೆಯಿಂದ ಪಡಬಾರದ ಹಿಂಸೆಯನ್ನು ಅನುಭವಿಸಿದರೂ ಬೀದಿಗೆ ಬಂದ ಅತ್ತೆ ಹಾಗೂ ಅವಳ ಮಕ್ಕಳನ್ನು ತನ್ನ ಸಹನೆಯಿಂದ ದಾರಿಗೆ ತರುವ ಹೆಣ್ಣೊಬ್ಬಳ ಕಥೆ.

೯೧. ಅಣ್ಣತಂಗಿ

(೧೯೫೮ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಗಿರಿಜಾ ಪ್ರೊಡಕ್ಷನ್ಸ್
ಪ್ರೊ: ಟಿ.ಎಸ್.ಕರಿಬಸಯ್ಯ
ನಿ: ಕು.ರ.ಸೀತಾರಾಮಶಾಸ್ತ್ರಿ
ಸ.ನಿ: ಕಂದಗಲ್ ವೀರಣ್ಣ
ಅ: ರಾಜಕುಮಾರ್, ಈಶ್ವರಪ್ಪ, ಕೆ.ಎಸ್.ಅಶ್ವತ್ಥ್, ಟಿ.ಎನ್.ಬಾಲಕೃಷ್ಣ, ನರಸಿಂಹರಾಜು, ಗಣಪತಿಭಟ್, ಆರ್.ಎನ್.ಮಾಗಡಿ, ವಾಸುದೇವ ಗಿರಿಮಾಜಿ, ಗುಗ್ಗು, ಬಿ.ಜಯಮ್ಮ, ಬಿ.ಸರೋಜಾದೇವಿ, ವಿದ್ಯಾವತಿ, ಲಕ್ಷ್ಮೀದೇವಿ
ಕ/ಚಿ.ಕ/ಮಾ/ಗೀ: ಕು.ರ.ಸೀತಾರಾಮಶಾಸ್ತ್ರಿ
ಗಾ: ಪಿ. ನಾಗೇಶ್ವರರಾವ್, ರಾಜೇಶ್ವರಿ, ಸೌಮಿತ್ರಿ
ಸಂ: ಬಾಲ್.ಜಿ.ಯಾದವ್, ತಾತಯ್ಯ
ಛಾ: ಕೆ.ಪ್ರಭಾಕರ್
ಕಲೆ: ಜಯವಂತ್ ಖಿರೋಟ್
ಸ: ಜಿ.ಕೆ.ವೆಂಕಟೇಶ್
ಧ್ವ: ಎಂ.ಬಿ. ವಾಲ್ಕೆ
ನೃ: ಕೆ.ತಂಗಪ್ಪನ್
ಪ್ರ: ಎಂ.ಡಿ.ಸ್ವಾಮಿ
ಸ್ಟು: ಫಿಲಂ ಸೆಂಟರ್ (ಮದರಾಸು)
ಹಾ: ೧)'ಎಚ್ಚರಿಕೆ ಎಚ್ಚರಿಕೆ ನಾಲ್ಕು ಜನ...', ೨)'ಬಂದಾನೆ ಅವ ಬಂದಾನೆ...', ೩)'ಕಂಡರೂ ಕಾಣದ್ಹಾಂಗೆ...', ೪)'ಭೂಮಿಗ್ಯಾಕೆ ಬಂದಿ ಅಂತ...', (೭ ಹಾಡುಗಳಿವೆ)
ವಿ: ತಮಿಳಿನ 'ಮಕ್ಕಳೈ ಪೆಟ್ರ ಮಹರಾಸಿ' ಚಿತ್ರದ ಪುನರವತರಣಿಕೆ. ಸಂಭಾಷಣೆಯಲ್ಲಿ ಗ್ರಾಮ್ಯವನ್ನು ಸೊಗಸಾಗಿ ಬಳಸಲಾಗಿತ್ತು.
ಕ.ಸಾ: ಸೋದರ ಸೋದರಿಯರ ನಡುವಿನ ಪ್ರೀತಿ ವಾತ್ಸಲ್ಯದ ಸುತ್ತ ಹೆಣೆದ ಕಥೆ. ತಂಗಿಗಾಗಿ ಅಣ್ಣ ಎಂಥ ತ್ಯಾಗಕ್ಕಾದರೂ ಸಿದ್ಧ. ಅಣ್ಣನಿಗಾಗಿ ಪ್ರೀತಿಯನ್ನು ತ್ಯಾಗ ಮಾಡಲು ಅಣಿಯಾಗುವ ತಂಗಿ ಹೀಗೆ ಗ್ರಾಮೀಣ ಪರಿಸರದಲ್ಲಿನ ಸಹಜತೆಯೊಂದಿಗೆ ಚಿತ್ರಿತವಾಗಿತ್ತು.

೯೨. ಮಾಂಗಲ್ಯಯೋಗ

(೧೯೫೮ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಪುಷ್ಪಾಂಜಲಿ ಪಿಕ್ಚರ್ಸ್
ನಿ: ಪಿ.ಕೆ.ಲಾಲ್
ಅ: ಬಾಲಕೃಷ್ಣ, ಲೀಲಾಕಿರಣ್
ಸ: ರಾಜನ್ ನಾಗೇಂದ್ರ
ವಿ: ಕನ್ನಡಿಗರೇ ಆಗಿದ್ದು ಮುಂಬೈನಲ್ಲಿ ಹತ್ತಾರು ವರ್ಷ ನೆಲೆಸಿ ಹಿಂದಿ ಹಾಗು ಇನ್ನಿತರ ಭಾಷಾ ಚಿತ್ರಗಳಿಗೆ ಕೆಲಸ ಮಾಡಿದ ಪಿ.ಕೆ.ಲಾಲ್ ಅವರು ಈ ಚಿತ್ರವನ್ನು ನಿರ್ದೇಶಿಸಿದರು. ಎಂ. ಲೀಲಾವತಿ 'ಲೀಲಾಕಿರಣ್' ಎಂಬ ಹೆಸರಿನಿಂದ ನಾಯಕಿಯಾಗಿ ಅಭಿನಯಿಸಿದ ಪ್ರಥಮ ಚಿತ್ರ. (ಹೆಚ್ಚು ಮಾಹಿತಿ ಲಭ್ಯವಿಲ್ಲ)

೯೩. ಮಂಗಳಸೂತ್ರ

(೧೯೫೯ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ವೆಂಕಟೇಶ್ವರ ಪ್ರೊಡಕ್ಷನ್ಸ್
ಪ್ರೊ: ಟಿ.ಶಂಕರಸಿಂಗ್
ನಿ: ಚಂದ್ರಮೋಹನ್
ಅ: ಬಾಲಕೃಷ್ಣ, ಭಗವಾನ್, ಅದವಾನಿ ಲಕ್ಷ್ಮೀದೇವಿ, ಸೂರ್ಯಕಲಾ, ಪ್ರತಿಮಾದೇವಿ



ಗಾ: ಪಿ.ಬಿ.ಎಸ್., ಪಿ. ಸುಶೀಲ
ಛಾ: ಎಸ್.ಕೆ. ವರದರಾಜ್
ಸ: ಪಿ. ಶಾಮಣ್ಣ
ಧ್ವ: ಕೆ.ಆರ್. ಸೀತಾರಾಂ
ಪ್ರ: ಎಂ.ಎಸ್. ಸುಬ್ಬಣ್ಣ
ಸ್ಟು: ಪ್ರೀಮಿಯರ್
ಹಾ: ೧)'ಮಂಗಳಸೂತ್ರ ಹರಿದು ಹೋದ ಮೇಲೆ...', ೨)'ಬೀಸೋ ಗಾಳಿಯಲ್ಲಿ ಹರಿವ ನೀರು...',
ವಿ: ಶಂಕರ್‌ಸಿಂಗ್ ಅವರು ಈ ಚಿತ್ರವನ್ನು ಚಂದ್ರಮೋಹನ್ ಹೆಸರಿನಲ್ಲಿ ನಿರ್ದೇಶಿಸಿದರು.

೯೪. ಮನೆಗೆ ಬಂದ ಮಹಾಲಕ್ಷ್ಮಿ

(೧೯೫೯ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಮಂಜುನಾಥ ಪ್ರೊಡಕ್ಷನ್ಸ್
ಪ್ರೊ: ರಾಜಗೋಪಾಲ್
ನಿ: ಬಿ.ವಿ.ಆಚಾರ್ಯ ಮತ್ತು ಗೋವಿಂದಯ್ಯ
ಸ.ನಿ: ರಾಜಾರಾಂ
ಅ: ಕಲ್ಯಾಣಕುಮಾರ್, ಅಶ್ವತ್ಥ್, ರಾಮಚಂದ್ರಶಾಸ್ತ್ರಿ, ಜಿ.ವಿ.ಅಯ್ಯರ್, ಉದಯಕುಮಾರ್, ಕೆ.ಎಲ್. ಲಕ್ಷ್ಮೀಪತಿ ರಾವ್, ಕೃಷ್ಣಶಾಸ್ತ್ರಿ, ಮಹಾಲಿಂಗಭಾಗವತರ್, ಬಿ.ವಿ. ರಾಜು, ಮೈನಾವತಿ, ರಮಾದೇವಿ, ಎಸ್. ಸರೋಜಮ್ಮ, ಜಯಲಕ್ಷ್ಮಿ, ಜೂ। ರೇವತಿ, ಸುಶೀಲಪುರಿ, ಮಧುರೈ ಮೀನಾಕ್ಷಿ, ಎಸ್. ರೇವತಿ
ಚಿ.ಕ: ಬಿ.ವಿ. ಆಚಾರ್ಯ
ಮಾ/ಗೀ:ಇಂದಿರಾತನಯ
ಗಾ: ಪಿ. ಲೀಲ, ರಾಜಲಕ್ಷ್ಮಿ, ಜಮುನಾರಾಣಿ, ನಾಗೇಂದ್ರ
ಸಂ:ಪಿ.ಎಸ್. ಮೂರ್ತಿ
ಛಾ: ಎಂ.ಎಸ್. ಮಣಿ
ಕಲೆ: ಬಿ.ಸಿ. ಬಾಬು
ಸ: ರಾಜನ್ ನಾಗೇಂದ್ರ
ಧ್ವ:ದೊರೆಸ್ವಾಮಿ, ಸಾರಂಗನ್, ಇ.ಐ. ಜೀವ, ಟಿ.ಎಸ್. ರಂಗಸ್ವಾಮಿ
ನೃ: ಎ.ಕೆ. ಚೋಪ್ರಾ, ಭರತನಾಟ್ಯ: ಬಿ. ಜಯರಾಂ
ವ: ಶ್ರೀನಿವಾಸನ್
ಪ್ರ: ನಾರಾಯಣಸ್ವಾಮಿ, ಮಾಧವಯ್ಯ
ಹಾ: ೧)'ಪ್ರಭೋ ಮಂಜುನಾಥಾ...', ೨)'ಬಾರೆನ್ನ ಬಾಚೆನ್ನ...', ೩)'ಮೂಡಿಹುದು ಮೋಹದೇಹ...', ೪)'ಆನಂದ ನೀಡಿದ ಧೀರಾ...', ೫)'ಸಂಶಯದಾ.. ಸಿಡಿಲೊಡೆದೂ...', ೬)'ಕ್ಷೇಮದಿ ಬಾಳು...'
ಕ.ಸಾ:ಜಮೀನ್ದಾರನ ಎರಡನೆ ಹೆಂಡತಿಯ ಇಚ್ಛೆಗೆ ವಿರುದ್ಧವಾಗಿ ಆಕೆಯ ಮಲಮಗ ಹೆಣ್ಣೊಂದನ್ನು ಮದುವೆಯಾಗುತ್ತಾನೆ. ಆಕೆ ಗುಣಸಂಪನ್ನೆ. ಕಿರುಕುಳ ತಾಳದೆ ಮನೆಬಿಟ್ಟು ಹೊರಡುತ್ತಾಳೆ. ಕುತಂತ್ರ ಮಾಡಿದವರು ಕೆಟ್ಟು ಆ ಸಂಪನ್ನೆಯ ಆಶ್ರಯಕ್ಕೆ ಬರುತ್ತಾರೆ. ಎಲ್ಲವೂ ಸುಖಾಂತವಾಗುತ್ತದೆ.

೯೫. ಜಗಜ್ಯೋತಿ ಬಸವೇಶ್ವರ

(೧೯೫೯ / ಕಪ್ಪು-ಬಿಳುಪು / ಐತಿಹಾಸಿಕ)
ಲಾ: ಶಶಿಕಲಾ ಚಿತ್ರ
ಪ್ರೊ: ಜಿ.ಎಸ್.ಎಸ್.ಮೂರ್ತಿ
ನಿ: ಟಿ.ವಿ.ಸಿಂಗ್ ಠಾಕೂರ್
ಸ.ನಿ: ಜಿ.ವಿ. ಅಯ್ಯರ್ ಹಾಗೂ ಭಗವಾನ್
ಅ: ಹೊನ್ನಪ್ಪ ಭಾಗವತರ್, ರಾಜ್‌ಕುಮಾರ್, ಕೆ.ಎಸ್.ಅಶ್ವತ್ಥ್, ಬಿ.ಸರೋಜಾದೇವಿ, ಟಿ.ಎನ್.ಬಾಲಕೃಷ್ಣ, ಜಿ.ವಿ.ಅಯ್ಯರ್, ಸಂಧ್ಯಾ, ಲೀಲಾವತಿ, ಬಿ.ಸದಾಶಿವಯ್ಯ, ನರಸಿಂಹರಾಜು, ಹೆಚ್.ರಾಮಚಂದ್ರಶಾಸ್ತ್ರಿ, ಈಶ್ವರಪ್ಪ, ವೀರಭದ್ರಪ್ಪ, ವೆಂಕಟಸುಬ್ಬಯ್ಯ, ಆರ್.ಎನ್.ಮಾಗಡಿ, ಹುಲಿಮನೆ ಸೀತಾರಾಮಶಾಸ್ತ್ರಿ, ಸಿದ್ದಯ್ಯಸ್ವಾಮಿ, ಅನಿಲ್‌ಕುಮಾರ್, ಬಿ.ಉದಯಶಂಕರ್, ಚಂದ್ರಯ್ಯಸ್ವಾಮಿ, ಪದ್ಮಿನಿ ಪ್ರಿಯದರ್ಶಿನಿ, ಅದವಾನಿ ಲಕ್ಷ್ಮೀದೇವಿ, ಎಂ.ಎನ್.ಲಕ್ಷ್ಮೀದೇವಿ, ರಮಾದೇವಿ, ಜಯಶ್ರೀ, ಇಂದ್ರಾಣಿ, ಸುನಿತಾರಾಯ್, ಬೇಬಿ ಉಮಾ
ಕ: ಮಾ. ನಂ. ನಂಜಪ್ಪ
ಚಿ.ಕ/ಮಾ: ಜಿ.ವಿ.ಅಯ್ಯರ್
ಗೀ: ಬಸವಣ್ಣನವರು ಮತ್ತು ಮಾ. ನಂ.ನಂಜಪ್ಪ
ಗಾ: ಹೊನ್ನಪ್ಪ ಭಾಗವತರ್, ಸೂಲಮಂಗಲಂ ರಾಜಲಕ್ಷ್ಮಿ
ಸಂ: ಎನ್.ಸಿ. ರಾಜನ್-ವೆಂಕಟರಾಮ್
ಛಾ: ಬಿ.ದೊರೈರಾಜ್
ಕಲೆ: ಆರ್.ಬಿ.ಎಸ್. ಮಣಿ
ಸ: ಜಿ.ಕೆ.ವೆಂಕಟೇಶ್
ಧ್ವ: ಜೀವ, ಕಣ್ಣಯಪ್ಪನ್, ಕೃಷ್ಣಯ್ಯ, ಆರ್.ಜಿ.ಪಿಳ್ಳೆ
ನೃ: ಚೋಪ್ರಾ
ವ: ರಹಮಾನ್
ಪ್ರ: ದೊರೆಸ್ವಾಮಿ, ಮಾಧವಯ್ಯ
ಸ್ಟು: ವಿಕ್ರಂ, ಪ್ಯಾರಾಮೌಂಟ್, ಶ್ಯಾಮಲಾ, ಗೋಲ್ಡನ್
ಹಾ: ೧)'ಶಾಂತಂ.. ಪದ್ಮಾಸನಸಂ...', ೨)'ಎನ್ನ ಆಪತ್ತು ಸುಖದುಃಖ...', ೩)'ಯುದ್ಧಕ್ಕೆ ಬಂದವರಿಬ್ಬರು.., ೪)'ಲಾಲಿಸು ಹೇಳುವೆ...'. ೫)'ಸಂತೋಷ ಬೇಕೆಂದ...', ೬)'ಹಾವಿನ ಬಾಯ ಕಪ್ಪೆ...', ೭)'ಅಂತರಂಗ ಬಹಿರಂಗ.., ೮)'ಮಾಡಿ ಮಾಡಿ ಕೆಟ್ಟರು...', ೯)'ಧೃತಿಗೆಟ್ಟು ಅನ್ಯರ ಬೇಡವಂತೆ...', ೧೦)'ಪಾಪಿಯ ಧನ...', ೧೧)'ಆಲಿಂಗನದಲಿ ಸ್ವರ್ಗದ ಸುಖವಿದೆ...', ೧೨)'ಸುಖ ಬಂದದೆ ಪುಣ್ಯ...', ೧೩)'ಕಳಬೇಡ ಕೊಲಬೇಡ...', ೧೪)'ನೀನೊಲಿದರೆ ಕೊರಡು...', ೧೫)'ತನಗ ಮುನಿಯುವವರಿಗೆ ತಾ.., ೧೬)'ಮಡಿಕಯ ಮಾಡುವರೆ...', ೧೭)'ದಯವಿಲ್ಲದಾ ಧರ್ಮವು...', ೧೮)'ನಂಬಿರು ನೆಚ್ಚರು...', ೧೯)'ಗಿಳಿಯೋದಿ ಫಲವೇನು?...', ೨೦)'ಗುರುಸಂಗ ಶಿವಲಿಂಗ...', ೨೧)'ಅರಸು ಮುನಿದಡೆ ನಾಡೊಳಿರಬಾರದಯ್ಯಾ...', ೨೨)'ಎನಿಸು ಕಾಲ ಕಲ್ಲು...', ೨೩)'ಕಾಯುವ ಕತ್ತಲೆಯಾ ಕಳೆಯಯ್ಯಾ...', ೨೪)'ಶರಣು ಶರಣು ಎನೆ...', ೨೫)'ಜೀವಿನ ಬೀಜವ ಬಿತ್ತಿ...', ೨೬)'ಮಧುರಾ ಮಂಜುಳ...', ೨೭)'ಆನೆಯ ನೇರಿಕೊಂಡು ಹೋದಿರೇ...', ೨೮)'ಕಂಗಳು ತುಂಬಿದ ಬಳಿಕ...'
ವಿ: ರಾಷ್ಟ್ರಪ್ರಶಸ್ತಿ ಅರ್ಹತಾ ಪತ್ರ ಪಡೆದುಕೊಂಡ ಚಿತ್ರ. ಭಗವಾನ್ ಸಹಾಯಕ ನಿರ್ದೇಶಕರಾಗಿ ಪ್ರವೇಶಿಸಿದ ಚಿತ್ರ.
ಕ.ಸಾ: ಬಸವೇಶ್ವರನ ಬಾಲ್ಯದಿಂದ ಹಿಡಿದು ಬಿಜ್ಜಳನ ಬಳಿ ಮಹಾಮಂತ್ರಿಯಾಗಿ ಶಿವಶರಣರ ಸೇವೆ ಮಾಡಿ ಮೇಲು-ಕೀಳು ಎನ್ನದೆ ಎಲ್ಲಾ ಜಾತಿಗಳನ್ನು ಒಂದುಗೂಡಿಸುವವರೆಗೆ ಕಥಾ ಹಂದರ ಹರಡಿದೆ.

೯೬. ಧರ್ಮವಿಜಯ

(೧೯೫೯ / ಕಪ್ಪು-ಬಿಳುಪು / ಭಕ್ತಿಪ್ರಧಾನ)
ಲಾ: ಹೆಚ್.ಎಂ.ಬಾಬಾ ಪ್ರೊಡಕ್ಷನ್ಸ್
ಪ್ರೊ: ಟಿ. ಮದಾರ್
ನಿ: ಎನ್.ಜಗನ್ನಾಥ್
ಅ: ರಾಜಕುಮಾರ್, ನರಸಿಂಹರಾಜು, ಲೀಲಾವತಿ, ಹರಿಣಿ, ಲಲಿತಾರಾವ್, ಸದಾಶಿವಯ್ಯ, ಸಿದ್ದಯ್ಯಸ್ವಾಮಿ, ಕೃಷ್ಣಶಾಸ್ತ್ರಿ, ಸೋರಟ್ ಅಶ್ವತ್ಥ್, ರಾಜಲಕ್ಷ್ಮಿ, ವಾದಿರಾಜ್, ವಾಸುದೇವ ಗಿರಿಮಾಜಿ, ಮಹಾಲಿಂಗ ಭಾಗವತರ್, ರಾಮಚಂದ್ರಶಾಸ್ತ್ರಿ, ದೇಶಿರಾಜು, ರಾಮರಾವ್, ಮಧು, ಮಾ। ವೆಂಕಟೇಶ್, ರತ್ನಾಕರ, ಹೇಮಲತ, ಲಕ್ಷ್ಮಿ, ಗೀತಾ
ಕ: ಟಿ. ಮದಾರ್
ಚಿ.ಕ/ಮಾ/ಗೀ: ಸೋರಟ್ ಅಶ್ವತ್ಥ್
ಗಾ: ಜಿಕ್ಕಿ, ಎಸ್.ಜಾನಕಿ, ಕೋಮಲ, ಜಮುನಾ ರಾಣಿ, ಬಾಲ ಸರಸ್ವತಿ, ಪಿಠಾಪುರಂ ನಾಗೇಶ್ವರರಾವ್
ಸಂ: ಬಾಲ್ ಜಿ. ಯಾದವ್
ಛಾ: ಎಸ್.ಎಸ್.ವರ್ಮ
ಕಲೆ: ಸಿ.ಹೆಚ್.ಇ. ಪ್ರಸಾದ್‌ರಾವ್
ಸ: ಜಿ.ಕೆ.ವೆಂಕಟೇಶ್
ಧ್ವ: ಎಂ.ಜಿ. ವಾಲ್ಕೆ
ನೃ: ವೇಣುಗೋಪಾಲ್ (ನೃತ್ಯ: ಲಲಿತರಾವ್)
ವ: ಜೋಧಾಲು
ಹಾ: ೧) 'ಕಣ್ಣ ಮುಚ್ಚುವ ಮುನ್ನ...', ೨) 'ಬಂದಾನು ಬಾನಿನಿಂದ ರಾಯಾ...', ೩) 'ತಡವೇಕೆ ಬಾ ಮೋಹನಾ...', ೪) 'ಹಾಯಾದ ಕಾಲವಿಂದು ಬಾರಾ...', ೫) 'ಶಾಭವಾ ನೀಡ.. ಜ್ಯೋತಿ...', ೬) 'ಕಣ್ಣಾರ ಕಂಡೇನಾ ಮೋಹಗೊಂಡೇ...', ೭) 'ಕಂದಾ ಬಾರೋ ಕಣ್ಮಣಿಯೇ...', ೮) 'ಧರ್ಮ ತಲೆ ಕಾವುದೆಂಬ...', ೯) 'ಅಮ್ಮಾ ಏನೀ.. ಧರ್ಮ ಕೊನೆ...'
ಕ.ಸಾ: ವಿಜಯ ಧರ್ಮದೇವತೆ ಅನ್ನಪೂರ್ಣಾದೇವಿಯ ಮಗ. ಈತ ಧರ್ಮಪುರಿ ರಾಜ್ಯದಲ್ಲಿರುತ್ತಾನೆ. ಅರ್ಥವಿಲ್ಲದ ಆಚರಣೆಗಳ ಬಗ್ಗೆ ಈತನ ವಿರೋಧ. ವಿಜಯನನ್ನು ದೇಶದ ರಾಜ ಧರ್ಮಭ್ರಷ್ಟ ಎಂದು ಸಾರಿ ದೇಶದಿಂದ ಹೊರಹಾಕುತ್ತಾನೆ. ವಿಜಯ ಮನೆ ಬಿಟ್ಟು ಹೋಗುತ್ತಾನೆ. ನಾನಾ ತೊಂದರೆಗಳನ್ನು ಅನುಭವಿಸಿದ ನಂತರ ಸತ್ಯ ಅರಿವಾಗುತ್ತದೆ. ಧರ್ಮ ಅಮರವಾಗುತ್ತದೆ.

೯೭. ಮಹಿಷಾಸುರ ಮರ್ದಿನಿ

(೧೯೫೯ / ಕಪ್ಪು-ಬಿಳುಪು / ಪೌರಾಣಿಕ)
ಲಾ: ವಿಕ್ರಂ ಪ್ರೊಡಕ್ಷನ್ಸ್
ಪ್ರೊ/ನಿ: ಬಿ.ಎಸ್.ರಂಗಾ
ಸ.ನಿ: ಪಿ.ಜಿ.ಮೋಹನ್, ಸದಾಶಿವಯ್ಯ
ಅ: ರಾಜಕುಮಾರ್ (ಮಹಿಷ), ಉದಯಕುಮಾರ್ (ರಂಭೇಷ), ಕೆ.ಎಸ್.ಅಶ್ವತ್ಥ್ (ನಾರದ), ಗಣಪತಿ ಭಟ್ (ಕರಿಷ), ನರಸಿಂಹರಾಜು (ವ್ಯಗ್ರಸಿಂಹ, ರಕ್ತಬೀಜನ ತಂದೆ), ವಿ.ನಾಗಯ್ಯ (ಶುಕ್ರಾಚಾರ್ಯ), ಸಾಹುಕಾರ್ ಜಾನಕಿ (ಮಹಿಷನ ಪತ್ನಿ ಗುಣವತಿ), ಸಂಧ್ಯಾ (ತ್ರಿಪುರಸುಂದರಿ), ಬಿ.ಉದಯಶಂಕರ್ (ವಿಷ್ಣು), ಇಂದ್ರಾಣಿ (ಶಚಿದೇವಿ), ರಾಜನಾಲ (ಇಂದ್ರ), ರಮಾದೇವಿ (ಗುಡಾಣಿ), ಕುಚಲಕುಮಾರಿ (ನಾಗರಾಣಿ), ಸೂರ್ಯಕಲಾ (ಮಹಿಷಿ), ಎಂ.ಎನ್.ಲಕ್ಷ್ಮೀದೇವಿ (ಕಾಳಿನಿ), ಸದಾಶಿವಯ್ಯ, ವಾಸುದೇವ ಗಿರಿಮಾಜಿ, ಪಾಪಮ್ಮ, ಶಾಂತಮ್ಮ, ಹನುಮಂತರಾವ್, ಅನಿಲ್‌ಕುಮಾರ್, ಸೂರ್ಯಕುಮಾರ್, ರಾಜೇಂದ್ರಕೃಷ್ಣ, ವೈ.ಎಸ್.ಎಸ್. ಸ್ವಾಮಿ, ರಂಗಸ್ವಾಮಿ
ಚಿ.ಕ: ಬಿ.ಎಸ್.ರಂಗಾ
ಮಾ/ಗೀ: ಜಿ.ಸದಾಶಿವಯ್ಯ
ಗಾ: ಪಿ.ಸುಶೀಲಾ, ಎಸ್.ಜಾನಕಿ, ಪಿ.ಬಿ.ಶ್ರೀನಿವಾಸ್, ರಾಜೇಶ್ವರಿ, ಪಿ.ಲೀಲಾ, ರಾಜಕುಮಾರ್, ಎ.ಪಿ. ಕೋಮಲ
ಸಂ: ಪಿ.ಜಿ.ಮೋಹನ್, ದೇವೇಂದ್ರನಾಥ್
ಛಾ: ಬಿ.ಎಸ್.ರಂಗಾ
ಕಲೆ: ಟಿ.ಎಸ್.ಮುನಿಸ್ವಾಮಿ, ಕೆ.ಆರ್.ಶರ್ಮ, ವಿ.ಎಸ್.ನಟರಾಜನ್
ಸ: ಜಿ.ಕೆ.ವೆಂಕಟೇಶ್
ಧ್ವ: ಎಸ್.ಶೇಷಾದ್ರಿ, ಬಿ.ಎಸ್. ಶಾಮಣ್ಣ
ನೃ: ಎ.ಕೆ.ಚೋಪ್ರಾ (ನಾಟ್ಯ: ಮದ್ರಾಸು ಸಹೋದರಿಯರು ಶಶಿ, ಕಲಾ, ಮಾಲಾ)
ವ: ವಾಲಿ ಕೆ.ಎನ್.ಮೂರ್ತಿ
ಪ್ರ: ಕೆ.ವಿ.ಸ್ವರ್ಣಪ್ಪ, ಕೆ.ವಿ.ಷಣ್ಮುಗಂ, ಹರಿಬಾಬು, ಪೀತಾಂಬರಂ
ಸ್ಟು: ವಿಕ್ರಂ, ಮದರಾಸು
ಹಾ: ೧) 'ತುಂಬಿತು ಮನವ ತಂದಿತು ಸುಖವ...', ೨) 'ನಾರಾಯಣ ವನಮಾಲೀ ವರದಾ...', ೪) 'ಧೀರ ವೀರ ಶೂರ ಮಹಿಷಾಸುರ ಸುಂದರ...', ೫) 'ಜಯ ಜಗದೀಶ್ವರಿ ಜಯಹೇ ಶಂಕರಿ..', ೬) 'ಸುರಗಾನ ನಾಟ್ಯ ಸುಖ ಭೋಗದಾ...', ೭) 'ಬಾರಯ್ಯ ನನ್ನ ಪ್ರೇಮ...', ೮) 'ಗಗನದಲಿ ಮುಗಿಲನೇರಿ...', ೯) 'ಬಾಬಾರ ನಾಗವೇಣಿ ಕೀರವಾಣೀ...', ೧೦) 'ಅಂದದ ಮಕರಂದ ನಮ್ಮ...', ೧೧) 'ಜೋಜೋಜೋ ನಾಗರಾಣಿ...', ೧೧) 'ಕೇಳಿದ್ದೆಲ್ಲ ತಥಾಸ್ತು...', ೧೨) 'ಅಂಬಾ ಜಗನ್ಮಾತಾ ಕಾಪಾಡು...'
ವಿ: ರಾಜಕುಮಾರ್ ಅವರು 'ತುಂಬಿತು ಮನವ ತಂದಿತು ಸುಖವ..' ಗೀತೆಯನ್ನು ಎಸ್.ಜಾನಕಿಯವರೊಂದಿಗೆ ಹಾಡಿದರು.
ಕ.ಸಾ: ರಾಕ್ಷಸ ರಾಜ ರಂಭೇಷನ ತಮ್ಮನನ್ನು ಇಂದ್ರ ಸಂಹರಿಸಿದಾಗ ರಂಭೇಷ ಚಿರಂಜೀವಿಯಾಗಲು ನಾಗಲೋಕಕ್ಕೆ ಹೊರಡುತ್ತಾನೆ. ಇಂದ್ರ ವಿಷ್ಣುವನ್ನು ಸುಂದರಿಯನ್ನಾಗಿಸಿ ರಂಭೇಷ ಮೋಹಿಸುವಂತೆ ಮಾಡುತ್ತಾನೆ. ಮಹಿಷಾಸುರ ಅವಳಿಂದ ಜನಿಸುತ್ತಾನೆ. ಬ್ರಹ್ಮನಿಂದ ಅಜೇಯತ್ವದ ವರ ಪಡೆದ ಮಹಿಷನ ಉಪಟಳ ಹೆಚ್ಚುತ್ತದೆ.
ಬ್ರಹ್ಮ-ವಿಷ್ಣು-ಮಹೇಶ್ವರರು ತಮ್ಮ ಶಕ್ತಿಯನ್ನು ಧಾರೆ ಎರೆದು ಆದಿಶಕ್ತಿಯನ್ನು ಚಾಮುಂಡಿಯಾಗಿಸಿ ಕಳುಹಿಸುತ್ತಾರೆ. ಈಕೆ ಮಹಿಷನನ್ನು ಸಂಹಾರ ಮಾಡುತ್ತಾಳೆ.

೯೮. ಅಬ್ಬಾ ಆ ಹುಡುಗಿ

(೧೯೫೯ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಶ್ರೀ ಜಮುನಾ ಪ್ರೊಡಕ್ಷನ್ಸ್
ಪ್ರೊ/ನಿ: ಹೆಚ್.ಎಲ್.ಎನ್.ಸಿಂಹ
ಸ.ನಿ: ಎಂ.ಎಸ್.ಬಾಲಸುಬ್ರಹ್ಮಣ್ಯಂ, ಎಂ. ವೇಣುಗೋಪಾಲ್, ಎಂ.ಎ.ವಿ.ರಾಜರತ್ನಂ
ಅ: ಬಿ.ಆರ್.ಪಂತುಲು, ರಾಜಾಶಂಕರ್, ರಾಜಕುಮಾರ್, ನರಸಿಂಹರಾಜು, ಧಿಕ್ಕಿಮಾಧವರಾವ್, ಎಂ.ವಿ.ನಾರಾಯಣರಾವ್, ಹೆಚ್.ಎಲ್.ಎನ್.ಸಿಂಹ, ಶ್ರೀರಂಗ, ಗುಗ್ಗು, ಮಹೇಶ್ವರಯ್ಯ, ಹೆಚ್.ಆರ್.ಹನುಮಂತರಾವ್, ಮೈನಾವತಿ. ಪಂಢರಿಬಾಯಿ, ಎಂ.ವಿ.ರಾಜಮ್ಮ, ಆದವಾನಿ ಲಕ್ಷ್ಮೀದೇವಿ, ಮೈಸೂರು ಲಕ್ಷ್ಮೀ, ಲೀಲಾವತಿ, ರಮಾದೇವಿ, ಲೀಲಾಂಜಲಿ, ರೀಟ, ರಮಾ, ಬೇಬಿ ನಿರ್ಮಲ, ರಜನಿ, ಶಾಂತಾ. ನೃತ್ಯ - ಅಂಬಿಕಾ, ರತನ್, ಸುಕುಮಾರಿ
ಕ: ಷೇಕ್ಸ್‌ಪಿಯರ್ ಮಹಾಕವಿಯ 'ಟೇಮಿಂಗ್ ಆಫ್ ದಿ ಶ್ರ್ಯೂ' ಸ್ಫೂರ್ತಿ
ಚಿ.ಕ/ಮಾ/ಗೀ: ಹೆಚ್.ಎಲ್.ಎನ್.ಸಿಂಹ
ಗಾ: ಎಸ್.ಜಾನಕಿ, ಮೋಹನ ಕುಮಾರಿ, ಭಗವತಿ, ಸ್ವರ್ಣಲತಾ, ಪಿ.ಬಿ.ಶ್ರೀನಿವಾಸ್, ಪಿ.ಕಾಳಿಂಗರಾವ್
ಸಂ: ಆರ್.ರಾಮಮೂರ್ತಿ
ಛಾ: ಬಿ.ದೊರೈರಾಜ್
ಕಲೆ: ಆರ್.ಬಿ.ಎಸ್. ಮಣಿ
ಸ: ಪಿ.ಕಾಳಿಂಗರಾವ್
ಧ್ವ: (ಹಾ)ಎ.ಕೃಷ್ಣನ್, ವಿ.ಶಿವರಾಮ್, ಜೆ.ಎಸ್.ಕೃಷ್ಣ, (ಮಾ)ಸಿ.ಪಿ.ಸಿ.ಶೇಖರ್
ನೃ: ಜೈಶಂಕರ್
ವ: ಕೆ.ಎ.ರಹಮಾನ್, ಜಿ.ಎನ್.ಮೂರ್ತಿ, ಸ್ಟಾಂಡರ್ಡ್ ಡ್ರೆಸಸ್, ನಜಿಖಾನ್ ಸಾಹೇಬ್, ಎಸ್.ಟಿ.ಎಸ್.ರಾವ್
ಪ್ರ: ಜೆ.ಬಿ. ರುದ್ರಪ್ಪ, ಎಂ.ಪೀತಾಂಬರ್, ಸೋಮು, ನಾರಾಯಣಸ್ವಾಮಿ, ಭಕ್ತವತ್ಸಲಂ, ಗಂಗಾಧರ
ಸ್ಟು: ವಿಜಯವಾಹಿನಿ (ಮದರಾಸು)
ಹಾ: ೧) 'ಹೃದಯ ದೇವಿಯೇ ನಿನ್ನ ಅಧರ ರಸವನು...', ೨) 'ಬಾರೆನ್ನ ಮನೋಹರಾ ಓ...', ೩) 'ವಿರಹಾಗ್ನಿ ತಾಪದುರಿಯಾ ನಾನೆಂತು ಸಹಿಸಲೆ...', ೪) 'ಆನಂದದಾಯಕವು ಪ್ರಿಯಕರನ ಒಲವು..', ೫) 'ಅಂಧಕಾರಾ ಕವಿದ ಮನವು....', ೬) 'ಏನಿತು ಮನೋಹರವೀ.....', ೭) 'ಬಾ ಚಿನ್ನ ಮೋಹನ ನೋಡೆನ್ನ...'
ವಿ: ಹೆಚ್.ಎಲ್.ಎನ್.ಸಿಂಹ ಅಭಿನಯಿಸಿದ್ದಾರೆ. ಚಲನಚಿತ್ರದಲ್ಲಿ 'ಸಂಸಾರ ನೌಕ' ನಾಟಕ ಅಳವಡಿಸಲಾಗಿದೆ.
ಕ.ಸಾ: ಶ್ರೀಮಂತ ವ್ಯಕ್ತಿಗೆ ಇಬ್ಬರು ಹೆಣ್ಣು ಮಕ್ಕಳು. ಶರ್ಮಿಷ್ಠೆ ಪುರುಷ ದ್ವೇಷಿ. ತಂಗಿ ಸರಸಳು ಸುರೇಶನನ್ನು ಪ್ರೀತಿಸುತ್ತಾಳೆ. ಗೆಳತಿ ಜ್ಯೋತಿಯ ಸಹೋದರ ಪುರುಷೋತ್ತಮ, ಗೆಳತಿ ರತ್ನ ಮೊದಲಾದವರ ಪ್ರಯತ್ನದಿಂದ ಆಕೆ ಪುರುಷೋತ್ತಮನನ್ನು ಮದುವೆಯಾಗುವಂತೆ ಮಾಡುತ್ತಾರೆ. ಗಂಡಹೆಂಡಿರಲ್ಲಿ ಹೊಂದಾಣಿಕೆಯಾಗುವುದಿಲ್ಲ. ಕೊನೆಗೆ ಹಲವರ ಪ್ರಯತ್ನದಿಂದ ಆಕೆಯ ಗರ್ವಭಂಗವಾಗಿ ಎಲ್ಲವೂ ಸುಖಾಂತವಾಗುತ್ತದೆ.

೯೯. ಶಿವಲಿಂಗ ಸಾಕ್ಷಿ

(೧೯೬೦ / ಕಪ್ಪು-ಬಿಳುಪು / ಭಕ್ತಿಪ್ರಧಾನ)
ಲಾ: ವೀನಸ್ ಫಿಲಂ ಎಕ್ಸ್‌ಛೇಂಜ್
ಪ್ರೊ: ಡಿ.ಶಂಕರ್‌ಸಿಂಗ್
ನಿ: ಚಂದ್ರಮೋಹನ್ (ಡಿ.ಶಂಕರ್‌ಸಿಂಗ್)
ಅ: ಪ್ರತಿಮಾದೇವಿ, ಅರುಣಕುಮಾರಿ, ರಮಾದೇವಿ, ಲಕ್ಷ್ಮೀ, ಅಶ್ವತ್ಥ್, ಉದಯಕುಮಾರ್, ಬಾಲಕೃಷ್ಣ, ಸುಬ್ರಹ್ಮಣ್ಯಂ, ಶ್ರೀಕಾಂತ್, ಶ್ಯಾಮರಾವ್, ಎಂ.ಆರ್.ಶ್ರೀನಿವಾಸ್, ಎಂ.ಮಹದೇವ್, ಕುಪ್ಪಣ್ಣ, ಪುರೋಹಿತರು
ಕ/ಚಿ.ಕ: ತ.ರಾ.ಸು
ಮಾ: ತ.ರಾ.ಸು; ಹಾಸ್ಯ - ಬಾಲಕೃಷ್ಣ
ಗೀ: ಎಸ್.ಕೆ.ಕರೀಂಖಾನ್
ಸಂ: ಪದ್ಮನಾಭನ್
ಛಾ: ಗೋವಿಂದಸ್ವಾಮಿ
ಕಲೆ: ವೆಂಕಟರಾವ್
ಸ: ಪಿ.ಶಾಮಣ್ಣ
ಧ್ವ: ಎಂ.ಎ.ಎಸ್.ಅಯ್ಯಂಗಾರ್
ನೃ: ಭರತಕಲಾಮಣಿ ರಾಧಾಕೃಷ್ಣ, ಭೂಪಾಲ್
ವ: ಎಂ.ಎಸ್.ಪಿಳ್ಳೈ
ಪ್ರ: ವರದರಾಜುಲು
ಸ್ಟು: ಪ್ರೀಮಿಯರ್ (ಮೈಸೂರು)
ಹಾ: ೧) 'ಬಾ ರಾಜಾ ಎಲ್ಲಿರುವೆ...', ೨) 'ನಗುತಿದೆ ಬಾಳಿನ ಸುಂದರ...', ೩) 'ಹೇ ಸನಾತನ ಸರ್ವದರ್ಶನ ಶಂಭುವೆ...', ೪) 'ಬಳೀ ಜೇಕೇ ನಮ್ಮ...', ೫) 'ಬಾರೆನ್ನ ಮನದನ್ನ ನೋಡು...', ೬) 'ಪ್ರಭುವೇ ನೀನೆ ಪರಮ...', ೭) 'ಮೋಹಾಭಿಮಾನ ನೀಗಿ...', ೮) 'ನೀರಿಗ್ಹೋಗೂ ಹೆಣ್ಣೇ ನಿಲ್ಲೇ...', ೯) 'ಆನಂದ ಪ್ರಿಯಾ ನಲಿದಾಡುತಿದೆ...'
ಕ.ಸಾ: ಕೈಲಾಸದ ರುದ್ರಕನ್ಯೆ ಹಾಗೂ ಅವಳ ಪ್ರಿಯಕರ ಶಿವನಿಂದ ಶಾಪ ಪಡೆದು ಭೂಲೋಕದಲ್ಲಿ ಜನಿಸುವರು. ರುದ್ರಕನ್ಯೆ ದೇವದಾಸಿಯ ಮಗಳಾಗಿ ಬೆಳೆದರೆ, ಅವಳ ಪ್ರಿಯಕರ ಪೂಜಾರಿಯ ಮಗನಾಗಿ ಬೆಳೆಯುವನು. ಕಾಲಾಂತರದಲ್ಲಿ ಆಕೆಯ ಸೌಂದರ್ಯಕ್ಕೆ ಮರುಳಾದ ಊರಿನ ಶೆಟ್ಟಿಯ ಹಿಂಸೆಗೆ ಆಕೆ ಜಗ್ಗದೆ, ತನ್ನ ಪ್ರಿಯಕರನನ್ನು ಸೇರಲು ಪ್ರಯತ್ನಿಸುತ್ತಾಳೆ. ಈ ಮಧ್ಯೆ ಶೆಟ್ಟಿಯನ್ನು ಭೂತವೊಂದು ಕೊಂದು ಆ ಕೊಲೆಯ ಆಪಾದನೆ ಪ್ರಿಯಕರನ ಮೇಲೆ ಬರುತ್ತದೆ. ಕಡೆಗೆ ರುದ್ರಕನ್ಯೆಯ ಭಕ್ತಿಗೆ ಶಿವನೇ ಸಾಕ್ಷಿ ಹೇಳುತ್ತಾನೆ.

೧೦೦. ರಣಧೀರ ಕಂಠೀರವ

(೧೯೬೦ / ಕಪ್ಪು-ಬಿಳುಪು / ಐತಿಹಾಸಿಕ)
ಲಾ: ಕನ್ನಡ ಚಲನಚಿತ್ರ ಕಲಾವಿದರ ಸಂಘ
ಪ್ರೊ: ರಾಜಕುಮಾರ್, ಜಿ.ವಿ.ಅಯ್ಯರ್, ಬಾಲಕೃಷ್ಣ, ನರಸಿಂಹರಾಜು
ನಿ: ಎನ್.ಸಿ.ರಾಜನ್
ಸ.ನಿ: ಜಿ.ವಿ.ಅಯ್ಯರ್

ಅ: ರಾಜಕುಮಾರ್, ಬಾಲಕೃಷ್ಣ, ನರಸಿಂಹರಾಜು, ಸಂಧ್ಯಾ, ಲೀಲಾವತಿ, ಕೆ.ಎಸ್.ಅಶ್ವತ್ಥ್, ಜಿ.ವಿ.ಅಯ್ಯರ್, ವೀರಭದ್ರಪ್ಪ, ಈಶ್ವರಪ್ಪ, ರಮಾದೇವಿ, ರಾಮಚಂದ್ರಶಾಸ್ತ್ರಿ, ಕೃಷ್ಣಶಾಸ್ತ್ರಿ, ಎಂ.ಎಸ್.ಸುಬ್ಬಣ್ಣ, ಸೋರಟ್ ಅಶ್ವತ್ಥ್, ಆರ್.ನಾಗೇಂದ್ರರಾವ್ (ಗೌರವ ನಟ), ಉದಯಕುಮಾರ್, ಹನುಮಂತರಾವ್, ಕಾಂತಾರಾವ್, ಅನಿಲ್‌ಕುಮಾರ್, ಶ್ಯಾಮ್‌ಸುಂದರ್, ಚಿ। ಉದಯಶಂಕರ್, ಶಾಂತಮ್ಮ, ನಾಗರತ್ನಮ್ಮ

ಕ/ಚಿ.ಕ/ಮಾ/ಗೀ: ಜಿ.ವಿ.ಅಯ್ಯರ್

ಗಾ: ಪಿ.ಬಿ.ಶ್ರೀನಿವಾಸ್, ಮೋತಿ, ರಾಧಾ ಜಯಲಕ್ಷ್ಮಿ, ಎ.ಪಿ.ಕೋಮಲ, ಸೂಲಮಂಗಲಂ ರಾಜಲಕ್ಷ್ಮಿ, ಪದ್ಮ, ಜಾನಕಿ (ಎ.ವಿ.ಎಂ.), ಜಿ.ಗೋಪಾಲರಾವ್

ಸಂ: ಎಸ್.ಸಿ.ರಾಜನ್

ಛಾ: ಬಿ. ದೊರೈರಾಜ್

ಸ: ಜಿ.ಕೆ.ವೆಂಕಟೇಶ್

ಧ್ವ: ಎನ್.ಶೇಷಾದ್ರಿ, ಬಿ.ಎಸ್.ರಾಮಣ್ಣ

ನೃ: ಪಿ.ಎಸ್.ಗೋಪಾಲಕೃಷ್ಣ

ಸಾ: ಶ್ಯಾಮ್‌ಸುಂದರ್, ಸೀತಾರಾಂ (ಸಹಾಯಕ)

ವ: ರೆಹಮಾನ್ (ಎ.ವಿ.ಎಂ), ಕೃಷ್ಣನ್ (ಸಹಾಯಕ)

ಪ್ರ: ದೊರೆಸ್ವಾಮಿ

ಸ್ಟು: ವಿಕ್ರಂ (ಮದರಾಸು)

ಹಾ: ೧) 'ರಾಧಾಮಾಧವ ಯೋಜನೆಯಂತೆ...', ೨) 'ಬೇಟೆಗಾಯಿ ದಳವಾಯಣ್ಣ ..', ೩) 'ಕರುಣಾವ ವರಮುಡಿ ಕಂಠೀರವಾ...', ೪) 'ಕಬ್ಬಿನ ಬಿಲ್ಲನು ಕೈಯಲಿ ಹಿಡಿದು...', ೫) 'ಸಂಗೀತ ದೇವತೆಯೇ ಸಾಷ್ಟಾಂಗ ವಂದನೆಯೇ...', ೬) 'ಹಸಿದು ರೋಷ ವೀರಾವೇಶಾ...', ೭) 'ಸಂಚಾರೀ . ಮನಸೋತೇ...', ೮) 'ಹೂವನದಿಂದ ಇಳಿದನಿಯಿಂದೆ...', ೯) 'ಎನ್ನ ಮೊಗವನೋಡ ಕನ್ನಡಿ...',

ವಿ: ರಾಜಕುಮಾರ್, ಜಿ.ವಿ.ಅಯ್ಯರ್, ಬಾಲಕೃಷ್ಣ ಹಾಗೂ ನರಸಿಂಹರಾಜು ಸೇರಿಕೊಂಡು ಕನ್ನಡ ಕಲಾವಿದರ ಸಂಘ ಎಂಬ ಸಂಸ್ಥೆ ಸ್ಥಾಪಿಸಿಕೊಂಡು ತಯಾರಿಸಿದ ಚಿತ್ರ. ನಾಟಕ ಆಡಿ ಉಳಿಸಿದ ರೂ.೩೫,೦೦೦ ಹಣವನ್ನು ಈ ಚಿತ್ರದ ಮೇಲೆ ತೊಡಗಿಸಿದರು. ತಲಾ ರೂ.೪,೦೦೦ ಲಾಭ ದೊರೆಯಿತು. ರಾಜಕುಮಾರ್ ಮೊದಲ ಬಾರಿಗೆ ಚಾರಿತ್ರಿಕ ಪಾತ್ರದಲ್ಲಿ ಅಭಿನಯಿಸಿದರು. ಜಿ.ವಿ.ಅಯ್ಯರ್ ಮೊದಲ ಬಾರಿಗೆ ಗೀತೆಗಳನ್ನು ರಚಿಸಿದರು.

ಸೆ: ೩೫ ಎಂ.ಎಂ., ೫೩೩೧.೫೭ ಅಡಿ, ೧೯ ರೀಲು

ಕ.ಸಾ: ದಳವಾಯಿ ವಿಕ್ರಮರಾಯ ಶಕ್ತಿಶಾಲಿ. ಇವನ ಕುತಂತ್ರದಿಂದ ಇಮ್ಮಡಿ ರಾಜ ಒಡೆಯ ಕೊಲೆಯಾದ. ನಂತರ ರಣಧೀರ ಕಂಠೀರವ ನರಸರಾಜ ಒಡೆಯರು ಪಟ್ಟಕ್ಕೆ ಬರುತ್ತಾರೆ. ತುಂಬಾ ಶಕ್ತಿಶಾಲಿಯಾದ ರಣಧೀರ ಕಂಠೀರವ ಬಿಜಾಪುರದ ರಣಮಲ್ಲಖಾನನೊಡನೆ ಹೋರಾಡಿ ಗೆಲ್ಲುತ್ತಾನೆ. ಮೈಸೂರು ರಾಜ್ಯವನ್ನು ವಿಸ್ತರಿಸಿ, ಸಂಪತ್ತು-ಶಕ್ತಿಯನ್ನು ವರ್ಧಿಸುತ್ತಾನೆ. ತಿರುಚನಾಪಲ್ಲಿಯಲ್ಲಿ ಅಜೇಯ ಕುಸ್ತಿಪಟುವನ್ನು ಸೋಲಿಸುತ್ತಾನೆ. ನೃತ್ಯಗಾತಿ ದೊಡ್ಡಿಯನ್ನು ಅರಮನೆಗೆ ಕರೆತರುತ್ತಾನೆ. ರಾಜ ಹಾಗು ದೊಡ್ಡಿಯನ್ನು ಕೊಲೆಮಾಡಲು ದಳವಾಯಿ ಸಂಚು ಹೂಡುತ್ತಾನೆ. ಕಂಠೀರವ ಸಂಚಿನಿಂದ ಪಾರಾದರೂ ದೊಡ್ಡಿ ಹತ್ಯೆಗೀಡಾಗುತ್ತಾಳೆ.

೧೦೧. ಭಕ್ತ ಕನಕದಾಸ

(೧೯೬೦ / ಕಪ್ಪು-ಬಿಳುಪು / ಭಕ್ತಿಪ್ರಧಾನ)

ಲಾ: ಶ್ಯಾಮಪ್ರಸಾದ್ ಮೂವೀಸ್

ಪ್ರೊ: ಡಿ.ಆರ್.ನಾಯ್ಡು

ನಿ: ವೈ.ಆರ್.ಸ್ವಾಮಿ

ಅ: ರಾಜಕುಮಾರ್, ಉದಯಕುಮಾರ್, ಕೃಷ್ಣಕುಮಾರಿ, ಕೆ.ಎಸ್.ಅಶ್ವತ್ಥ್, ಹೆಚ್.ರಾಮಚಂದ್ರಶಾಸ್ತ್ರಿ, ಜಯಾ, ಸೋರಟ್ ಅಶ್ವತ್ಥ್, ಸಿ.ವಿ.ಶಿವಶಂಕರ್, ರತ್ನಾಕರ್, ವಾಸುದೇವ ಗಿರಿಮಾಜಿ, ಎಂ.ಎಸ್.ಸುಬ್ಬಣ್ಣ, ಜಯಶ್ರೀ, ಲಕ್ಷ್ಮೀದೇವಿ

ಕ/ಚಿ.ಕ/ಮಾ/ಗೀ: ಹುಣಸೂರು ಕೃಷ್ಣಮೂರ್ತಿ

ಗಾ: ಪಿ.ಬಿ.ಶ್ರೀನಿವಾಸ್, ಪಿ.ಸುಶೀಲ, ಕೃಷ್ಣವೇಣಿ

ಛಾ: ಆರ್.ಮಧು

ಕಲೆ: ಸೈಯದ್ ಅಹಮದ್

ಸ: ಎಂ.ವೆಂಕಟರಾಜು

ಧ್ವ: ಕನ್ನಿಯಪ್ಪನ್, ಮೋಹನ್‌ಸುಂದರಂ, ನಾಗೇಶ್ವರನ್

ನೃ: ವೆಂಪಟಿಸತ್ಯಂ, ಸಹಾಯ: ತಂಗಪ್ಪನ್

ವ: ಬಿ.ಅಪ್ಪಾರಾವ್

ಪ್ರ: ಎಂ.ಎಸ್.ಸುಬ್ಬಣ್ಣ, ಬಿ.ವೀರರಾಜು

ಸ್ಟು: ಗೋಲ್ಡನ್

ಹಾ: ೧) 'ಬಕ್ಕಯಂತೆ ಮಲ್ಲೆ ಬಾಜಿ ನೋಡೇ ಹೆಣ್ಣೆ...', ೨) 'ಬಯಕೆದೆನು ಬಯಕೆದನು ಭವ ಎನಗೆ ಹಿಂಗಿತು...', ೩) 'ಕುಲ ಕುಲವೆಂದು ಹೊಡೆದಾಡದಿರಿ...', ೪) 'ಈತನೀಗ ವಾಸುದೇವನೂ ಈ ಲೋಕದೊಡೆಯ...', ೫) 'ಬಾಗಿಲನು ತೆರೆದು ಸೇವೆಯನು ಕೊಡೋ ಹರಿಯೇ..', ೬) 'ಸಿಂಗಾರಶೀಲ ಸಂಗೀತ ಲೋಲ...', ೭) 'ಈತ ನಿನ್ನ ಚರಣ ಭಜನೆ ಆಸೆಯಿಂದ ಮಾಡಿದೆನು...', ೮) 'ಚಿನ್ನದಂತೆ, ಚಿನ್ನದಂತೆ ಚಿನ್ನಾ...', ೯) 'ವೇದಶಾಸ್ತ್ರ ಪುರಾಣ...', ೧೦) ಗಿಳಿಯು ಮರಿಯನು ತಂದು...', ೧೧) 'ಪಿಂಜರದೊಳಗಿರುವ ಪ್ರಾಣ...', ೧೨) 'ಇರಾಳೂ ಎಲ್ಲಲ್ಲೂ ಕಾರಿರುಳೂ...', ೧೩) 'ದೀನ ನಾನು ಸಮಸ್ತ .', ೧೪) 'ತಿರುಕನೋರ್ವ ನೂರ ಮುಂದೆ...', ೧೫) 'ಎಂಟು ಗೇಣಿನ ದೇಹ...', ೧೬) 'ಹರಿಭಕ್ತ ಸಾರ...'

ವಿ: ಕೇಂದ್ರ ಸರ್ಕಾರದ 'ಅರ್ಹತಾ ಪ್ರಶಸ್ತಿ ಪತ್ರ' ಪಡೆದ ಚಿತ್ರ

ಕ.ಸಾ: ಪಾಳೇಗಾರ ವೀರನಾಯಕ ಹಾಗು ಬಚ್ಚಮ್ಮ ದಂಪತಿಗಳ ಪುತ್ರನಾಗಿ ಜನಿಸಿದ ತಿಮ್ಮಪ್ಪನಾಯಕ ಮಲ್ಲನಾಯಕನ ಪುತ್ರಿ ಲಚ್ಚಿಯನ್ನು ಪ್ರೀತಿಸುತ್ತಾನೆ. ಶ್ರೀನಿವಾಸ ಕನಸಿನಲ್ಲಿ ಕಾಣಿಸಿಕೊಂಡು ನೀಡಿದ ಅಪ್ಪಣೆಯಂತೆ ಭೂಮಿಯನ್ನು ಅಗೆದಾಗ ಶ್ರೀನಿವಾಸ ವಿಗ್ರಹ ಹಾಗೂ ಹೇರಳ ಚಿನ್ನ ದೊರೆತು ಮುಂದೆ ಕನಕನಾಯಕನಾಗುತ್ತಾನೆ. ಲಚ್ಚಿಯ ವಿಷಯದಲ್ಲಿ ನಡೆದ ಹೊಡೆದಾಟದಿಂದ ಬೇಸತ್ತ ಕನಕನಾಯಕ ದೇಶ ಸಂಚಾರ ಹೋಗುತ್ತಾನೆ. ವ್ಯಾಸರಾಯರಿಂದ ಅನುಗ್ರಹೀತನಾಗಿ ವಿಷ್ಣು ಭಕ್ತನಾಗಿ ಕನಕದಾಸನಾಗುತ್ತಾನೆ. ಉಡುಪಿಯಲ್ಲಿ ಕೃಷ್ಣನೇ ಹಿಂದಕ್ಕೆ ತಿರುಗಿ ನಿಂತು ಕನಕದಾಸನಿಗೆ ದರ್ಶನ ನೀಡುತ್ತಾನೆ. ಅಪೂರ್ವ ಸಾಹಿತ್ಯ ಸೃಷ್ಟಿ ಕನಕದಾಸರಿಂದ ಆಗುತ್ತದೆ.

೧೦೨. ರಾಣಿ ಹೊನ್ನಮ್ಮ

(೧೯೬೦ / ಕಪ್ಪು-ಬಿಳುಪು / ಜಾನಪದ)

ಲಾ: ಗಿರಿಜಾ ಮತ್ತು ಸೂರ್ಯಪ್ರಭಾ ಪ್ರೊಡಕ್ಷನ್ಸ್

ಪ್ರೊ: ಟಿ.ಎಸ್.ಕರಿಬಸಯ್ಯ

ನಿ: ಕು.ರ.ಸೀತಾರಾಮಶಾಸ್ತ್ರಿ

ಸ.ನಿ: ಎಸ್.ರಾಮನಾಥನ್, ಬಿ.ಎಸ್. ವಿಶ್ವನಾಥ್

ಅ: ರಾಜಕುಮಾರ್, ಲೀಲಾವತಿ, ಲಲಿತಾರಾವ್, ಬಾಲಕೃಷ್ಣ, ನರಸಿಂಹರಾಜು, ಲಕ್ಷ್ಮಿ, ವೀರಭದ್ರಯ್ಯ, ಈಶ್ವರಪ್ಪ, ಸುಬ್ಬಣ್ಣ, ರಾಮಚಂದ್ರಶಾಸ್ತ್ರಿ, ಗುಗ್ಗು, ಜಿ.ವಿ.ಅಯ್ಯರ್, ಶಿವಾಜಿರಾವ್

ಕ/ಚಿ.ಕ/ಮಾ/ಗೀ: ಕು.ರ.ಸೀತಾರಾಮಶಾಸ್ತ್ರಿ

ಸಂ: ಬಾಲ್ ಜಿ.ಯಾದವ್, ಎಂ. ತಾತಯ್ಯ

ಛಾ: ಕೆ.ಪ್ರಭಾಕರ್, ಬಾಬುಲ್‌ನಾಥ್

ಕಲೆ: ಎಸ್.ಅಮ್ಮಯಪ್ಪನ್

ಸ: ವಿಜಯಭಾಸ್ಕರ್

ಧ್ವ: (ಹಾ) ಎಂ.ಬಿ.ವಾಲ್ಕೆ, (ಮಾ) ಫ್ರಾನ್ಸಿಸ್ ಎ.ಸಾಮಿ

ನೃ: ಕೆ.ತಂಗಪ್ಪನ್

ಪ್ರ: ಎಂ.ವಿ.ಸ್ವಾಮಿ

ಸ್ಟು: ಫಿಲಂ ಸೆಂಟರ್

ಹಾ: ೧) 'ಕೋಲುಗೆಜ್ಜೆ ಸಾಲುಹೆಜ್ಜೆ ತಂದನಾನ...', ೨) 'ಎತ್ತ ಹೋಗೇನು ಹ್ಯಾಂಗ ಬಾಳೇನು..', ೩) 'ಮಲಗಿದ ಹಾವಿದು...', ೪) 'ಜೀವನ ಹೂವಿನ ಹಾಸಿಗೆ....', ೫) 'ಬಾರಾ ನೀರಾ ಮನೋಹರ...', ೬) 'ಹಾರುತ ದೂರ ದೂರ ಮೇಲೇರುವ ಬಾರಾ..', ೭) 'ಎದೆ ಬಿರಿದ ವಿಧವೆಯು...', ೮) 'ಶ್ರೀಕೃಷ್ಣನೇಕಿಂಥ ಸ್ತ್ರೀಲೋಲನೇ...', ೯) 'ರಾಜರಾಜೇಶ್ವರಿಯು ನೇಮದಿ...'

ಸೆ: ಉದ್ದ ೧೬,೧೫೦ ಅಡಿಗಳು, ದಿನಾಂಕ: ೮-೦೪-೧೯೬೦

ಕ.ಸಾ: ಪಾಳೇಗಾರನನ್ನು ಮೀರಿಸಿ ಮೆರೆಯುವ ದಳವಾಯಿಯು ಕಾಟದಿಂದ ತಪ್ಪಿಸಿಕೊಂಡ ಚೆಲುವೆ, ಅಪವಾದಗಳ ಸಾಲುಸಾಲೇ ಎದುರಾದಾಗ ದಿಟ್ಟವಾಗಿ ನಿಲ್ಲುತ್ತಾಳೆ. ವಿವಾಹವಾದ ಬಳಿಕ ಗಂಡನನ್ನು ಅಪ್ಸರೆಯೊಬ್ಬಳು ಮಾಯ ಮಾಡುತ್ತಾಳೆ. ಬಂದ ಅಪವಾದ, ಕಾಡಿನವಾಸ ಎಲ್ಲವನ್ನೂ ನಿವಾರಿಸಿಕೊಂಡು ಹೆತ್ತ ಮಗನಿಂದಲೇ ಸೇಡು ತೀರಿಸಿಕೊಳ್ಳುತ್ತೇನೆಂದು ತನ್ನ ಶಪಥವನ್ನು ಪೂರೈಸಿ, ಗಂಡನನ್ನು ಹೊಂದುವ ಪತಿವ್ರತೆಯ ಕಥೆ.

೧೦೩. ಮಕ್ಕಳರಾಜ್ಯ

(೧೯೬೦ / ಕಪ್ಪು-ಬಿಳುಪು / ಜಾನಪದ)

ಲಾ: ಎಂ.ವಿ.ಆರ್.ಪ್ರೊಡಕ್ಷನ್ಸ್ ಮತ್ತು ಪದ್ಮಿನಿ ಪಿಕ್ಚರ್ಸ್

ಪ್ರೊ/ನಿ: ಬಿ ಆರ್.ಪಂತುಲು

ಸ.ನಿ: ಎಸ್.ಆರ್. ಪುಟ್ಟಣ್ಣ ಕಣಗಾಲ್, ಕೆ. ಸಿಂಗಮುತ್ತು

ಅ: ಮಾ। ಉಮೇಶ್, ಕು. ಲಕ್ಷ್ಮಿ, ಶಿವಾಜಿಗಣೇಶನ್, ಛಕ್ರಿಮಾಧವರಾವ್, ಬಾಲಕೃಷ್ಣ, ಹನುಮಂತಾಚಾರ್, ಬಿ.ಆರ್.ಪಂತುಲು, ಎಂ.ವಿ.ರಾಜಮ್ಮ, ನರಸಿಂಹರಾಜು, ರಾಮಚಂದ್ರಶಾಸ್ತ್ರಿ, ಬೇಬಿ ಇಂದಿರಾ, ಚಿ.ಉದಯಶಂಕರ್, ಪಾಪಮ್ಮ, ಕಾಂಚನಾ, ಎಂ.ಎನ್.ಲಕ್ಷ್ಮೀದೇವಿ, ಬೇಬಿ ಚಂದ್ರಕಲಾವತಿ

ಕ: ದಾದಾ ಮಿರಾಸಿ

ಮಾ: ಚಿ.ಸದಾಶಿವಯ್ಯ

ಗೀ: ಕಣಗಾಲ್ ಪ್ರಭಾಕರ ಶಾಸ್ತ್ರಿ, ಚಿ. ಸದಾಶಿವಯ್ಯ

ಗಾ: ಪಿ.ಬಿ.ಶ್ರೀನಿವಾಸ್, ಪಿ.ಸುಶೀಲ, ಜಿಕ್ಕಿ, ಜಮುನಾರಾಣಿ, ರಾಜೇಶ್ವರಿ, ಕೆ. ಕಮಲ, ಪದ್ಮ, ಜಾನಕಿ, ಶೀರ್ಕಾಳಿ, ಗೋವಿಂದರಾಜನ್

ಸಂ: ಆರ್. ದೇವರಾಜನ್

ಛಾ: ಡಬ್ಲ್ಯು.ಆರ್.ಸುಬ್ಬರಾವ್, ಎಂ.ಕರ್ಣನ್

ಕಲೆ: ವಡ್ಡೂರ್ಕರ್

ಸ: ಟಿ.ಜಿ.ಲಿಂಗಪ್ಪ

ಧ್ವ: ಪಿ.ವಿ.ಕೋಟೇಶ್ವರರಾವ್, ಡಿ.ವಿ.ನಾದನ್

ನೃ: ಜಯರಾಂ (ಉಡುಪಿ), ಮಾಧವನ್

ಸಾ: ತೂತ್ತುಕುಡಿ ಎಸ್.ಅರುಣಾಚಲಂ ಪಾರ್ಟಿ

ವ: ಎಂ.ರಾಧ, ಆರ್.ಬಾಬು

ಪ್ರ: ಹರಿಬಾಬು, ಶ್ರೀನಿವಾಸನ್, ಪಿ.ಕೃಷ್ಣರಾಜು

ಸ್ಟು: ಭರಣಿ, ಫಿಲಂ ಸೆಂಟರ್

ಹಾ: ೧) 'ನಿನ್ನ ನೋಡಿ ಮನಸು ಕೂಡಿ....', ೨) 'ಆಡುವ ಆಸೆಯ ಉಯ್ಯಾಲೆ...', ೩) 'ನಗಲು ಬಾರದೋ ನಗಲು ಬಾರದೋ...', ೪) 'ಅಮ್ಮ ಈ ಬೇಗ ಕಾಣದೋ...', ೫) 'ಜಾತಕ ಬಲವೇ ಬಲವಯ್ಯಾ...', ೬) 'ಸಾಕು ಈ ಜಂಬ ಗಿಂಬ ಸಾಕು...', ೭) 'ಜಯ ಜಯ ಗೋಕುಲ ಬಾಲ...', ೮) 'ಮಧುಪಾನ ಗಾನಸುಧಾ...'

ವಿ: ಹಾಸ್ಯನಟ ಎಂ.ಎಸ್. ಉಮೇಶ್ ಬಾಲನಟನಾಗಿ ಈ ಚಿತ್ರದ ಮೂಲಕ ಚಿತ್ರರಂಗ ಪ್ರವೇಶಿಸಿದರು. ಶಿವಾಜಿ ಗಣೇಶನ್ ವಿಜ್ಞಾನಿಯ ವಿಶೇಷ ಪಾತ್ರ ಮಾಡಿದರು. ಮಕ್ಕಳೇ ಹೆಚ್ಚು ಈ ಚಿತ್ರದಲ್ಲಿ ಅಭಿನಯಿಸಿದ್ದಾರೆ. ಚಂದ್ರಲೋಕಕ್ಕೆ ವಾಹನದಲ್ಲಿ ಹೋಗಿ ಬರುವ ದೃಶ್ಯ ಅಳವಡಿಸಲಾಗಿದೆ.

ಕ.ಸಾ: ಮೇಧಾವಿ ಮಹಾರಾಜ ನ್ಯಾಯ ನಿಷ್ಠವಾದಿ. ಮಂತ್ರಿ ವಿಜಯ ಒಳ್ಳೆಯವನಲ್ಲ. ರಾಜ್ಯಾಡಳಿತ ತನ್ನ ಕೈಗೆ ತೆಗೆದುಕೊಳ್ಳಲು ಹೊಂಚು ಹಾಕುತ್ತಿರುತ್ತಾನೆ. ರಾಜ-ರಾಣಿಯರನ್ನು ಸೆರೆಯಲ್ಲಿರಿಸಿ ಸಿಂಹಾಸನವನ್ನು ಏರುತ್ತಾನೆ. ಅವನು ಮನಸೋ ಇಚ್ಛೆ ರಾಜ್ಯಭಾರ ಮಾಡಿ ಪ್ರಜೆಗಳ ವಿರೋಧ ಕಟ್ಟಿಕೊಳ್ಳುತ್ತಾನೆ. ರಾಜ್ಯದಲ್ಲಿ ಹಾಹಾಕಾರವಾಗುತ್ತದೆ. ಬಾಲ್ಯಾವಸ್ಥೆಯಲ್ಲಿನ ರಾಜಕುಮಾರ ಗೆಳೆಯರ ಗುಂಪನ್ನು ಕಟ್ಟಿಕೊಂಡು ಮಂತ್ರಿಯ ವಿರುದ್ಧ ಹೋರಾಟ ಮಾಡಿ ಮೇಧಾವಿ ರಾಜನನ್ನು ಸೆರೆಯಿಂದ ಬಿಡಿಸುತ್ತಾನೆ.

೧೦೪. ಆಶಾಸುಂದರಿ

(೧೯೬೦ / ಕಪ್ಪು-ಬಿಳುಪು / ಜಾನಪದ)

ಲಾ: ಗೌರಿ ಪ್ರೊಡಕ್ಷನ್ಸ್

ಪ್ರೊ: ಎಸ್.ಭಾವನಾರಾಯಣ

ನಿ: ಹುಣಸೂರು ಕೃಷ್ಣಮೂರ್ತಿ

ಸ.ನಿ: ಕೆ.ಎಸ್.ಆರ್.ದಾಸ್, ಸಿ.ವಿ.ಶಿವಶಂಕರ್, ಎ.ಬಿ.ಜಗಮೋಹನರಾವ್, ಎಸ್.ಸುಬ್ಬರಾಯನ್
ಅ: ರಾಜಕುಮಾರ್, ಕೃಷ್ಣಕುಮಾರಿ, ಹರಿಣಿ, ನರಸಿಂಹರಾಜು, ಶಿವಶಂಕರ್, ರಾಜನಾಲ, ರಾಮಚಂದ್ರಶಾಸ್ತ್ರಿ, ಎಂ.ಎನ್.ಲಕ್ಷ್ಮೀದೇವಿ, ರಾಜಶ್ರೀ, ಕಾಂತಾರಾವ್, ಹನುಮಂತರಾವ್, ಹೇಮಲತಾ
ಕ: ಭಾವನಾರಾಯಣ
ಚಿ.ಕ/ಮಾ/ಗೀ: ಹುಣಸೂರು ಕೃಷ್ಣಮೂರ್ತಿ
ಗಾ: ಪಿ.ಬಿ.ಶ್ರೀನಿವಾಸ್, ಪಿ.ಸುಶೀಲ, ಎಸ್.ಜಾನಕಿ, ವರಲಕ್ಷ್ಮಿ, ಘಂಟಸಾಲ
ಸಂ: ವಿ.ಎಸ್.ನಾರಾಯಣನ್
ಛಾ: ಎಸ್.ವೇಣು, ಜಿ.ಸತ್ಯನಾರಾಯಣ
ಕಲೆ: ಗೊಡ್ಗಾಂವ್ಕರ್
ಸ: ವಕ್ಕಿಣಾಮೂರ್ತಿ (ಸುಸರ್ಲ ದಕ್ಷಿಣಾಮೂರ್ತಿ)
ಧ್ವ: ಎ.ಕೃಷ್ಣನ್, ಪಿ.ವಿ.ಕೃಷ್ಣರಡ್ಡಿ
ನೃ: ಕೆ.ಛೋಪ್ರ, ಮಾಧವನ್
ವ: ಬಿ.ನಾರಾಯಣರಾವ್
ಪ್ರ: ಭದ್ರಯ್ಯ, ವೀರರಾಜು, ದೊರೆಸ್ವಾಮಿ
ಸ್ಟು: ವಿಜಯವಾಹಿನಿ
ಹಾ: ೧)'ಜಯ ಜಯ ಗಂಗಾಧರ ಜಯ ಜಯ ಗೌರಿವರ...', ೨)'ಓ ಸಖೀ ಓ ಸಖೀ ಅಮೃತಮಯವೀ ಸ್ನೇಹ..', ೩)'ಸಾಗಿ ಬಾ ರಾಜ ಸಾಗಿ ಬಾ..', ೪)'ನೀಲ ಮೇಘಾಳಿಯೋಳ್ ನೆಲಸಿರುವ ಬೆಳಕೋಲ್...', ೫)'ಶೃಂಗಾರ ಸಾರ ಸುರ ಸೌಖ್ಯಧಾರೆ..', ೬)'ಓ ರಾಜಕುಮಾರಿ ನಿನ್ನ ವಿಧಿ ಬರಹ ಹೀಗಿತ್ತೆ..', ೭)'ಗುಟ್ಟೇನಿದೇ ಗಟ್ಟಿ ಮಾತು ಕೊಟ್ಟಾಯಿತು..', ೮)'ಜೋ ಜೋ ಜೋ ರಾಜಕುಮಾರಾ...', ೯)'ಚಿತ್ತವ ಕೆಣಕಿದ ವೀರ ನಿನಗಿತ್ತೆನು ಒಲವಿನ ಸಾರ...', ೧೦)'ಅಕಳಂಕ ನೀನೆಂದು ಪೂಜಿಸಿದ ಸತಿ ನಾನು...'
ಸೆ: ರೀಲು - ೧೬, ಉದ್ದ - ೧೫೪೬೬ ಅಡಿ
ವಿ: ತರುಣಿಯರಿಬ್ಬರ ಪ್ರೇಮ ಅಸಹಜವೆಂಬ ಟೀಕೆ ಬಂತು.
ಕ.ಸಾ: ರಾಜಕುಮಾರಿ ಹೇಮಾವತಿಯ ಬದುಕಿಗೆ ಗೆಳತಿಯಾಗಿ ಪ್ರವೇಶಿಸಿದ ಯಕ್ಷಕನ್ಯೆ ಮಿತ್ರವೃಂದಳು ಗುಣಶೀಲ ಎಂಬ ಯುವಕ ಹಾಗು ಹೇಮಾವತಿಯರ ನಡುವಿನ ಪ್ರೀತಿಯ ನಡುವೆ ಮುಳ್ಳಾಗಿ ನಾನಾ ತೊಂದರೆಗಳನ್ನು ನೀಡುತ್ತಾಳೆ. ಜಾನಪದ ಶೈಲಿಯ ಈ ಕಥಾನಕದಲ್ಲಿ ಮಾಯಾ ಮಂತ್ರಗಳನ್ನು ವಿಪುಲವಾಗಿ ಬಳಸಿಕೊಳ್ಳಲಾಗಿದೆ. ಹೇಮಾವತಿ ಹೃದಯದ ಜ್ವಾಲೆಯಿಂದ ಮಿತ್ರವೃಂದ ಭಸ್ಮವಾಗುವ ಸಂದರ್ಭ ಬರುತ್ತದೆ. ಮಿತ್ರವೃಂದ ಹೇಮಾವತಿಗೆ ಶರಣಾಗುತ್ತಾಳೆ. ಸುಖಾಂತವಾಗುತ್ತದೆ.

೧೦೫. ದಶಾವತಾರ

(೧೯೬೦ / ಕಪ್ಪು-ಬಿಳುಪು / ಪೌರಾಣಿಕ)
ಲಾ: ವಿಕ್ರಂ ಪ್ರೊಡಕ್ಷನ್ಸ್
ಪ್ರೊ: ಬಿ.ಎಸ್.ರಂಗಾ
ನಿ: ಪಿ.ಜಿ.ಮೋಹನ್
ಸ.ನಿ: ಜಿ.ವಿ.ಅಯ್ಯರ್, ಭಗವಾನ್
ಅ: ರಾಜಕುಮಾರ್ (ಹಿರಣ್ಯ ಕಶಿಪು, ರಾವಣ, ಶಿಶುಪಾಲ), ಉದಯಕುಮಾರ್ (ಸೋಮಕಾಸುರ, ಹನುಮಂತ, ಕಂಸ), ರಾಜಾಶಂಕರ್ (ವಿಷ್ಣು, ಪರಶುರಾಮ, ರಾಮ, ಕೃಷ್ಣ, ಬುದ್ಧ), ಅಶ್ವತ್ಥ್ (ನಾರದ), ಆದವಾನಿ ಲಕ್ಷ್ಮೀದೇವಿ (ಲಕ್ಷ್ಮಿ, ಸೀತೆ, ರುಕ್ಮಿಣಿ), ಲೀಲಾವತಿ (ಕಯಾದು, ಮಂಡೋದರಿ, ದ್ರೌಪದಿ), ರಾಮಚಂದ್ರಶಾಸ್ತ್ರಿ (ಶುಕ್ರಾಚಾರ್ಯ), ರಾಜಶ್ರೀ (ಮೋಹಿನಿ, ರಾಧೆ), ನರಸಿಂಹರಾಜು (ರಾಹು, ಮಕರಂದ), ಈಶ್ವರಪ್ಪ (ಹಿರಣ್ಯಾಕ್ಷ), ಜಯಶ್ರೀ (ರೇಣುಕಾ), ಪಾಪಮ್ಮ (ಶಬರಿ), ಜಯಾ (ಯಶೋಧಾಸಖಿ), ಗಣಪತಿಭಟ್ (ರುಕ್ಮಾಂಗದ), ಹೆಚ್.ಆರ್. ಸರೋಜ, ಜಯಲಕ್ಷ್ಮಿ, ಇಂದ್ರಾಣಿ, ವೀರಭದ್ರಪ್ಪ, ಶ್ರೀಕಂಠಯ್ಯ, ರತ್ನಾಕರ್, ಹನುಮಂತರಾವ್, ಮಹಾಲಿಂಗಭಾಗವತರ್, ಗಿರಿಮಾಜಿ, ಕೃಷ್ಣಶಾಸ್ತ್ರಿ, ಎ.ವಿ. ಸುಬ್ಬರಾವ್, ಕುಪ್ಪುರಾಜ್, ದೇಶರಾಜ್, ಕೇಶವಮೂರ್ತಿ, ವರದರಾಜ್
ಕ/ಚಿ.ಕ/ಮಾ/ಗೀ: ಜಿ.ವಿ.ಅಯ್ಯರ್
ಗಾ: ಪಿ.ಬಿ.ಶ್ರೀನಿವಾಸ್, ಪೀಠಾಪುರಂ ನಾಗೇಶ್ವರರಾವ್, ರಾಧಾ, ಜಯಲಕ್ಷ್ಮಿ, ಕೋಮಲ, ಎಸ್.ಜಾನಕಿ
ಸಂ: ಪಿ.ಜಿ.ಮೋಹನ್, ದೇವೇಂದ್ರನಾಥ
ಛಾ: ಬಿ.ದೊರೈರಾಜ್
ಕಲೆ: ಕೆ.ಆರ್. ಶರ್ಮ, ನಟರಾಜನ್
ಸ: ಜಿ.ಕೆ.ವೆಂಕಟೇಶ್
ಧ್ವ: ಎನ್.ಶೇಷಾದ್ರಿ, ಬಿ.ಎಸ್.ಶಾಮಣ್ಣ
ನೃ: ಛೋಪ್ರಾ
ವ: ವಾಲಿ, ಮೂರ್ತಿ
ಪ್ರ: ಸ್ವರ್ಣಪ್ಪ, ಷಣ್ಮುಗಂ
ಸ್ಟು: ವಿಕ್ರಂ (ಮದರಾಸು)
ಹಾ: ೧)'ಗೋದಾವರಿ ದೇವಿ ಮೌನವಾಗಿಹೆ ಏಕೆ...', ೨)'ರಘುಪತಿ ರಾಘವ ರಾಜಾರಾಮನ ನಗುಮೊಗ ನೋಡಲು...', ೩)'ಒಂದೇ ಬಳ್ಳಿಯ ಹೂವು ಇದು ಒಂದೇ ದೇವಿಯ ಪಾದ....', ೪)'ನಂದನಾ ನಂದನಾ ಆನಂದ ಕಂದನ...', ೫)'ಬಾರೇ ರಾಧಿಕೇ - ಕೋಪ ವಿತಕೆ...', ೬)'ಕಲಿಯುಗದೆ ಉದಾರ ಗುಣ...', ೭)'ಜಗದಲಿ ಸ್ತ್ರೀಯರ ಮನವ...', ೮)'ವಿಲ್ಲಿಹತನುಜಾತಾ, ಮಾಧವನೆಲ್ಲಿಹ...', ೯)'ಶೃಂಗಾರ ಮೋಹಿನಿ....', ೧೦)'ಕೇಶವ ಮಾಧವ...', ೧೧)'ಆನಂದ ಮಹದಾನಂದ...'
ವಿ: ಪ್ರಮುಖ ಕಲಾವಿದರು ಒಂದಕ್ಕಿಂತಲೂ ಹೆಚ್ಚಿನ ಪಾತ್ರ ಮಾಡಿದ್ದಾರೆ. ವಿಷ್ಣು, ಜೌದಾ ವತಾರದ ದೃಶ್ಯಗಳು ವರ್ಣದಲ್ಲಿವೆ.
ಕ.ಸಾ: ಲೋಕ ಕಲ್ಯಾಣಕ್ಕಾಗಿ ವಿಷ್ಣು ಮತ್ಸ್ಯ, ವರಾಹ, ನರಸಿಂಹ, ವಾಮನ, ಪರಶುರಾಮ, ಕೃಷ್ಣ, ಬುದ್ಧ ಹಾಗೂ ಕಲ್ಕಿ ಅವತಾರಗಳನ್ನು ಎತ್ತುವ ಕಥೆ.

೧೯೬೧

೧೦೬. ಶ್ರೀಶೈಲ ಮಹಾತ್ಮೆ

(೧೯೬೧ / ಕಪ್ಪು-ಬಿಳುಪು / ಪೌರಾಣಿಕ)
ಲಾ: ಶ್ರೀಶೈಲ ಪಿಕ್ಚರ್ಸ್
ಪ್ರೊ: ಎನ್.ತಾಳಿಕೇರಪ್ಪ
ನಿ: ಆರೂರು ಪಟ್ಟಾಭಿ
ಅ: ರಾಜಕುಮಾರ್, ಡಿಕ್ಕಿಮಾಧವರಾವ್, ಅನಿಲ್‌ಕುಮಾರ್, ಬಾಲಕೃಷ್ಣ, ಹನುಮಂತಾಚಾರ್, ಗೋಪಾಲಕೃಷ್ಣ, ಮಹಾಲಿಂಗ ಭಾಗವತರ್, ಕೃಷ್ಣಕುಮಾರಿ, ಸಂಧ್ಯಾ, ಶೇಷಕುಮಾರಿ, ಲಕ್ಷ್ಮೀದೇವಿ, ಶಾಂತಾ, ಪಾಪಮ್ಮ, ರಾಜಲಕ್ಷ್ಮಿ
ಚಿ.ಕ: ಆರೂರು ಪಟ್ಟಾಭಿ
ಮಾ: ಸೋರಟ್ ಅಶ್ವತ್ಥ್, ಟಿ.ಎನ್.ಬಾಲಕೃಷ್ಣ (ಹಾಸ್ಯ)

ಗೀ: ಹುಣಸೂರು ಕೃಷ್ಣಮೂರ್ತಿ, ವಿಜಯ ನಾರಸಿಂಹ, ರತ್ನಾಕರ್, ಸೋರಟ್ ಅಶ್ವತ್ಥ್, ಎಂ.ನರೇಂದ್ರಬಾಬು
ಗಾ: ಪಿ.ಬಿ.ಶ್ರೀನಿವಾಸ್, ಮಂಗಪತಿ, ಸಿ.ಎಸ್.ಸರೋಜಿನಿ, ಟಿ.ಎಸ್.ಭಗವತಿ, ಗಜಲಕ್ಷ್ಮಿ, ರುಕ್ಮಿಣಿ
ಸಂ: ಎಂ.ಜಿ.ಬಾಲುರಾವ್
ಛಾ: ಜಾನಕಿರಾಂ
ಕಲೆ: ಚಲಂ
ಸ: ಟಿ.ಎ.ಕಲ್ಯಾಣಂ
ಧ್ವ: ಆರ್.ಎಸ್.ರಂಗಸ್ವಾಮಿ
ನೃ: ಬಿ.ಜಯರಾಂ, ಕೃಷ್ಣಮೂರ್ತಿ
ಪ್ರ: ಚೌಧುರಿ
ಸ್ಟು: ವಿಜಯ ವಾಹಿನಿ, ಭರಣಿ, ಗೋಲ್ಡನ್, ಮೆಜೆಸ್ಟಿಕ್
ಹಾ: ೧)'ಮಲ್ಲಿಕಾರ್ಜುನನು ನೆಲಸಿದ...', ೨)'ಕೈಲಾಸ ಗಿರಿವಾಸ...', ೩)'ಪಾಹಿಮಾಂ ಹೇಳಾ ಜಯ ಜಗದೀಶ.....', ೪)'ಮಾಣಿಕ್ಯ ಕೆತ್ತಿದ ತೊಟ್ಟಿಲಲ್ಲಿ...', ೫)'ಅನುಪಮ ಭಾಗ್ಯವಿದೇ..', ೬)'ದಯಾಘನಾ ಗತಿಕಾಣೆನಾ...', ೭)'ಬಿರುಗಾಳಿ ಬೀಸಿದಾಗ...', ೮)'ಮಾನವ ಭೋಗವ ಹಾದಿಗೆ...', ೯)'ಶಂಕರಾ ದಯಾಸಾಗರಾ ಜೀವಾಧಾರಾ...', ೧೦)'ಮಲ್ಲೆ ಮೊಗ್ಗಾ ನಾನೇರೀ...', ೧೧)'ಕುಮಾರ ಹೆತ್ತ ತಂದೆಗೆ ಮಂತ್ರ...', ೧೨)'ಪಿತನಳಿವನೆಂದಳಲಿ..', ೧೩)'ಶಿವ ಶಿವಾ ಏಕಿಂತಾ ಸೋಜಿಗದ ಸಲ್ಲೀಲೆ...', ೧೪)'ಮಲ್ಲಿಕಾರ್ಜುನನು ನೆಲಸಿದಾ...'
ಕ.ಸಾ: ದೂರ್ವಾಸರಿಂದ ಶಪಿಸಲ್ಪಟ್ಟ ಪಾರ್ವತಿ, ಯಕ್ಷಕನ್ಯೆಯೊಬ್ಬಳಿಂದ ಶಪಿಸಲ್ಪಟ್ಟ ಋಷಿಪುತ್ರ ಇಬ್ಬರೂ ಭೂಲೋಕದಲ್ಲಿ ಜನಿಸುವರು. ಪಾರ್ವತಿ ಭೂಮಿಯಲ್ಲಿ ಯಕ್ಷಕನ್ಯೆಯಿಂದ ಶಪಿಸಲ್ಪಟ್ಟ ವ್ಯಕ್ತಿಯ ಸಾಕುಮಗಳಾಗಿ ಆತನ ಪಟ್ಟದ ರಾಣಿಯಿಂದ ಬೆಳೆಯುತ್ತಾಳೆ. ಯುದ್ಧದಿಂದ ಹಿಂತಿರುಗಿದ ರಾಜ ತನ್ನ ಸಾಕುಮಗಳನ್ನೇ ಮಡದಿಯಾಗಲು ಹಠ ಹಿಡಿಯುವನು. ಆಕೆ ರಾಜ್ಯ ಪರಿತ್ಯಾಗ ಮಾಡಿ ಶ್ರೀಶೈಲಕ್ಕೆ ತೆರಳಿ ತಪೋಮಗ್ನಳಾಗಿ ಶಿವನನ್ನು ಹೊಂದುವಳು.

೧೦೭. ಕಿತ್ತೂರು ಚೆನ್ನಮ್ಮ

(೧೯೬೧ / ಕಪ್ಪು-ಬಿಳುಪು / ಐತಿಹಾಸಿಕ)
ಲಾ: ಪದ್ಮಿನಿ ಪಿಕ್ಚರ್ಸ್
ಪ್ರೊ/ನಿ: ಬಿ.ಆರ್.ಪಂತುಲು
ಸ.ನಿ: ಪುಟ್ಟಣ್ಣ ಕಣಗಾಲ್, ಡಿ. ದಶರಥ ರಾಮರೆಡ್ಡಿ
ಅ: ಬಿ.ಸರೋಜಾದೇವಿ, ರಾಜಕುಮಾರ್, ಲೀಲಾವತಿ, ರಾಜಾಶಂಕರ್, ಎಂ.ವಿ.ರಾಜಮ್ಮ, ಚಿಂದೋಡಿ ಲೀಲಾ, ನರಸಿಂಹರಾಜು, ಬಾಲಕೃಷ್ಣ, ಕೆ.ಎಸ್.ಅಶ್ವತ್ಥ್, ಹನುಮಂತಾಚಾರ್, ರಮಾದೇವಿ, ಡಿಕ್ಕಿಮಾಧವರಾವ್, ಹೆಚ್.ಟಿ.ಅರಸ್, ಈಶ್ವರಪ್ಪ, ವೀರಪ್ಪ ಚಿಂದೋಡಿ, ಶ್ರೀಧರರಾವ್, ಶ್ರೀಕಾಂತ್, ರಾಜಶೇಖರ್, ಶ್ಯಾಮ್‌ಸುಂದರ್, ಸೂರ್ಯಕುಮಾರ್, ಸೇತುಪತಿ, ವಸಂತಸಾ, ಗಿರಿಮಾಜಿ, ಹೂಗಾರ, ಶಿವಾಜಿರಾವ್, ಸುಬ್ಬಣ್ಣ, ಮಹಾಲಿಂಗ ಭಾಗವತರ್, ಮಹೇಶ್ವರಯ್ಯ, ಎಂ.ಎನ್.ನಂಜಪ್ಪ, ಶಾರದಾ, ಅನಂತನಾರಾಯಣ್
ಕ/ಚಿ.ಕ/ಮಾ/ಗೀ: ಜಿ.ವಿ.ಅಯ್ಯರ್, ಹೆಚ್.ಎನ್.ಹೂಗಾರ
ಗಾ: ಪಿ.ಸುಶೀಲಾ, ಪಿ.ಕಾಳಿಂಗರಾವ್, ಪಿ.ಬಿ.ಶ್ರೀನಿವಾಸ್, ರುದ್ರಪ್ಪ, ಕೋಮಲ, ಎಸ್.ಜಾನಕಿ, ರಾಘವಲು
ಸಂ: ಎಸ್.ದೇವರಾಜನ್
ಛಾ: ಡಬ್ಲ್ಯು.ಆರ್.ಸುಬ್ಬರಾವ್, ಎಂ.ಕರ್ಣನ್
ಕಲೆ: ವರ್ತೂರ್ಕರ್
ಸ: ಟಿ.ಜಿ.ಲಿಂಗಪ್ಪ
ಧ್ವ: ಪಿ.ವಿ. ಕೋಟೇಶ್ವರರಾವ್
ನೃ: ಬಿ.ಜಯರಾಮ್, ಕೃಷ್ಣಕುಮಾರ್
ವ: ರಹಮಾನ್, ಎಂ.ರಾಧ
ಪ್ರ: ಹರಿಬಾಬು, ಎಂ. ಶ್ರೀನಿವಾಸ್
ಸ್ಟು: ಭರಣಿ
ಹಾ: ೧)'ನಯನದಲಿ ದೊರೆಯಿರಲು ಯಾರ ಕಾಣಲಿ...', ೨)'ತನುಕರಗದವರಲ್ಲಿ ಪುಷ್ಪವನೊಲ್ಲೆಯಯ್ಯಾ ನೀನು...', ೩)'ಅಲಕ್ಕೆ ಹೂವಿಲ್ಲ...', ೪)'ಹೂವಿನ ಹಂತ ಹತ್ತುವ

ಜಾಣೆ...', ೫)'ಅಕ್ಕಿಯ ಚೆಲ್ಲವ ಚೆಲ್ಲುತ...', ೬)'ಶೃಂಗಾರ ಹೆಣ್ಣಿನ ಮಾನ...', ೭)'ಕೋಲುತುದಿಯ ಕೋಡಗನಂತೆ...', ೮)'ಕಿತ್ತೂರ ರಾಣಿಯು ಹೆತ್ತಳು...', ೯)'ದೇವರೂ ದೇವರೂ...', ೧೦)'ಸನ್ನೆ ಪನೇನೋ...', ೧೧)'ಅಹೋ ರಾತ್ರಿ ನಿಲದೋಡಿ...', ೧೨)'ತಾಯಿದೇವಿಯನು...'

ವಿ: ರಾಜಕುಮಾರ್ ಅವರು ಪದ್ಮಿನಿ ಪಿಕ್ಚರ್ಸ್ ಲಾಂಛನದಲ್ಲಿ ಮೊದಲ ಬಾರಿಗೆ ಅಭಿನಯಿಸಿದರು. ಕಿತ್ತೂರು ರಾಣಿ ಚೆನ್ನಮ್ಮನ ಬಗ್ಗೆ ಇದ್ದ ಎಲ್ಲಾ ಕಥೆ, ಇತಿಹಾಸ ಕಲೆ ಹಾಕಿ ಅಧ್ಯಯನ ಮಾಡಿ ಈ ಚಿತ್ರಕಥೆ ಸಿದ್ಧಪಡಿಸಲಾಯಿತು. ಭಾರತ ಸರ್ಕಾರ ಈ ಚಿತ್ರಕ್ಕೆ ರಜತ ಪದಕ ನೀಡಿ ಪುರಸ್ಕರಿಸಿತು.

ಕ.ಸಾ: ಕಿತ್ತೂರು ಸಂಸ್ಥಾನದ ಮಲ್ಲಸರ್ಜನ ಎರಡನೇ ರಾಣಿಯಾಗಿ ಬಂದ ಚೆನ್ನಮ್ಮ. ಪತಿಯ ಮರಣಾನಂತರ ಏಕಾಂಗಿಯಾಗಿ ಬ್ರಿಟಿಷ್ ಚಕ್ರಾಧಿಪತ್ಯದ ವಿರುದ್ಧ ಹೋರಾಟ ನಡೆಸಿ ಕೊನೆಗೆ ಆಕೆಯ ದೇಹಾಂತದೊಂದಿಗೆ ಆಕೆಯ ಹೆಸರು ಚರಿತ್ರೆಯಲ್ಲಿ ಅಮರವಾಗುತ್ತದೆ.

೧೦೮ ರಾಜಾಸತ್ಯವ್ರತ

(೧೯೬೧ / ಕಪ್ಪು-ಬಿಳುಪು / ಭಕ್ತಿಪ್ರಧಾನ)

ಲಾ: ಪಾರಿಜಾತ ಫಿಲ್ಮ್ಸ್
ಪ್ರೊ: ಎನ್.ಬಿ.ವತ್ಸಲನ್
ನಿ: ಟಿ.ಶಂಕರಸಿಂಗ್
ಸ.ನಿ: ಜಿ.ವೆಂಕಟರಾಮನ್
ಅ: ಉದಯಕುಮಾರ್, ಹಿಕ್ಕಿಮಾಧವರಾವ್, ಬಾಲಕೃಷ್ಣ, ಸೋರಟ್ ಅಶ್ವತ್, ರತ್ನಾಕರ್, ವೀರಭದ್ರಪ್ಪ, ಹನುಮಂತಾಚಾರ್, ಶ್ರೀಕಾಂತ್, ಪ್ರತಿಮಾದೇವಿ, ಇಂದಿರಾ, ಲಕ್ಷ್ಮೀದೇವಿ, ಕಮಲೇಶ ಕುಮಾರಿ, ಶೇಷ ಕುಮಾರಿ, ಪ್ರಮೀಳ ಗುರು, ಬೇಬಿ ಉಮಾ, ಮಾ| ಸಂಗ್ರಾಮ್‌ಸಿಂಗ್, ಜಯರಾಜ್



ಕ/ಚಿ.ಕ/ಮಾ/ಗೀ: ವಿಶ್ವಾಮಿತ್ರ
ಗಾ: ಎಸ್.ಜಾನಕಿ, ಪಿ.ಬಿ.ಶ್ರೀನಿವಾಸ್, ರಾಣಿ
ಸಂ: ಪದ್ಮನಾಭನ್, ವೆಂಕಟರಾಮನ್
ಛಾ: ವರದರಾಜನ್, ಗೋವಿಂದಸ್ವಾಮಿ, ಬಾಬೂಲಾಲ್
ಸ: ಎಂ.ವೆಂಕಟರಾಜು
ಧ್ವ: (ಹಾ)ರಾಮಚಂದ್ರರಾವ್, ಸ್ವಾಮಿ, (ಹಾ)ಎಂ.ಬಿ.ಪಾಲ್ಯ
ನೃ: ಭೂಪಾಲ್
ವ: ನಟೇಶ ಪಿಳ್ಳೆ
ಪ್ರ: ವೀರರಾಜು, ಮಾಧವಯ್ಯ, ಶಿವರಾಂ, ರಾಜಗೋಪಾಲ್, ಶಿವರಾಜ್
ಸ್ಟು: ಪ್ರಕಾಶ್. ಫಿಲಂ ಸೆಂಟರ್ (ಮದರಾಸು)
ಹಾ: ೧)'ಓಂಕಾರ ರೂಪಿಣಿ ಕಲ್ಯಾಣಿ...', ೨)'ಬಾರೋ ಬಾರ, ಗಿಣಿಯ ಬಾರ...', ೩)'ಬಿಡಬೇಡ ಸದ್ಗುಣವ...', ೪)'ಅರಿಯೇನೋ.. ಅಂತ್ಯವೇನೋ...', ೫)'ಮಣ್ಣಿನಿಂದಲೇ ಬಂದಂಥ...', ೬)'ಮರವು ಗಿಡಬಳ್ಳಿಗಳು...', ೭)'ನನ್ನೆದೆಯ ವೀಣೆಯ ತಂತಿಗಳ...', ೮)'ಅರಿಯದ ಮಹಿತೇ...', ೯)'ಜಯನಮೋ. ಮಹಿಮಾ ವಿರಾಜಿತ...',

ವಿ: ಟಿ.ಶಂಕರಸಿಂಗ್ ಅವರು ತಮ್ಮ ದಲ್ಲಿದ ಸಂಸ್ಥೆಯ ಚಿತ್ರಕ್ಕೆ ನಿರ್ದೇಶನ ನೀಡಿದರು. ಶಂಕರಸಿಂಗ್‌ರ ಇಷ್ಟೊಬ್ಬ ಪುತ್ರ ಸಂಗ್ರಾಮ್‌ಸಿಂಗ್ ಬಾಲನಟರಾಗಿ ಅಭಿನಯಿಸಿದರು.

ಕ.ಸಾ: ರಾಜಾ ಸತ್ಯವ್ರತನು ಶನಿದೇವರನ್ನು ಜರಿದಾಗ, ಶನಿದೇವರು ರಾಜನ ರಾಶಿ ಹೊಕ್ಕು, ಬಗೆಬಗೆಯ ಕಷ್ಟ ನೀಡುವುದು. ದೇವನ ಆರಾಧನೆಯ ನಂತರ ಕಷ್ಟನಿವಾರಣೆಯಾಗಿ ಸುಖಾಂತವಾಗುತ್ತದೆ.

೧೦೯. ಕಣ್ತೆರೆದು ನೋಡು

(೧೯೬೧ / ಕಪ್ಪು-ಬಿಳುಪು / ಸಾಮಾಜಿಕ)

ಲಾ: ಅರುಣಾಚಲಂ ಸ್ಟುಡಿಯೋಸ್
ಪ್ರೊ: ಎ.ಕೆ. ವೇಲನ್
ನಿ: ಟಿ.ವಿ.ಸಿಂಗ್ ಠಾಕೂರ್
ಸ.ನಿ: ಜಿ.ವಿ ಅಯ್ಯರ್, ಸಹಾಯಕ ಭಗವಾನ್
ಅ: ರಾಜಕುಮಾರ್, ಲೀಲಾವತಿ, ಬಾಲಕೃಷ್ಣ, ಜಿ.ವಿ.ಅಯ್ಯರ್, ನರಸಿಂಹರಾಜು, ರಾಜಶ್ರೀ, ರಮಾದೇವಿ, ಜಯಶ್ರೀ, ಈಶ್ವರಪ್ಪ, ಭರದ್ವಾಜ್, ಪಾಪಮ್ಮ, ವಿಜಯಕುಮಾರಿ, ಗಣಪತಿಭಟ್, ವಸಂತಿ, ರೇವತಿ, ಶಕುಂತಲಾ

ಕ: ಜಿ.ಕೆ.ವೆಂಕಟೇಶ್, ಎ.ಕೆ. ವೇಲನ್ (ಮೂಲಕಥೆ)
ಚಿ.ಕ/ಮಾ/ಗೀ: ಜಿ.ವಿ.ಅಯ್ಯರ್
ಗಾ: ಪಿ.ಬಿ.ಶ್ರೀನಿವಾಸ್, ಎಸ್.ಜಾನಕಿ, ಜಿ.ಕೆ.ವೆಂಕಟೇಶ್, ರಾಜೇಶ್ವರಿ
ಸಂ: ವೆಂಕಟರಾಮ್, ರಘುಪತಿ
ಛಾ: ಬಿ. ದೊರೆರಾಜ್
ಕಲೆ: ಆರ್.ಬಿ.ಎಸ್.ಮಣಿ
ಸ: ಜಿ.ಕೆ.ವೆಂಕಟೇಶ್
ಧ್ವ: (ಹಾ)ಇ.ಐ.ಜೀವ, (ಮಾ)ಕೆ.ಎಸ್.ಪಾಣ್ಡುರಂಗ
ನೃ: ಪಿ.ಎಸ್.ಗೋಪಾಲಕೃಷ್ಣ
ವ: ಮಾಣಿಕ್ಯಂ
ಪ್ರ: ದೊರೆಸ್ವಾಮಿ
ಸ್ಟು: ಅರುಣಾಚಲಂ
ಹಾ: ೧)'ಶರಣು ಕಾವೇರಿ ತಾಯೇ....', ೨)'ಕಲ್ಲು ಸಕ್ಕರೆ ಕೊಳ್ಳಿರೋ ನೀವೆಲ್ಲರು..', ೩)'ಜಗವೆಲ್ಲಾ ಇದು ನಾಳಿಗೆ ಸಿಗದು...', ೪)'ನಿನಗಿದು ನ್ಯಾಯವೇ ದೇವಾ...', ೫)'ಬಂಗಾರದೂಡವೆ ಬೇಕೆ ನೀರೆ...', ೬)'ಹೆಣ್ಣಿನ ಮೇಲೆ ಕಣ್ಣಿಡುವಾಗ...', ೭)'ಕನ್ನಡದ ಮಕ್ಕಳೆಲ್ಲಾ ಒಂದಾಗಿ ಬನ್ನಿ....', ೮)'ಏಡವಿದರೆ ನಾಕುರುಳು ನುಡಿಜಾರ ಮೂರುರುಳು....', ೯)'ಹಗಲು ಇರುಳು ಕೊರಗಿ...'

ವಿ: ಜಿ.ಕೆ.ವೆಂಕಟೇಶ್ ಸಂಗೀತ ನಿರ್ದೇಶಿಸಿ ಹಾಡೊಂದನ್ನು ಹಾಡಿದಾರ

ಕ.ಸಾ: ಕಣ್ಣಿಲ್ಲದ ಯುವಕನೊಬ್ಬ ಹಾಡುಗಾರ. ಯುವತಿಯೊಬ್ಬಳು ಪ್ರೀತಿಸಿದವಳು. ಆಪರೇಷನ್ ಮಾಡಿಸಿ ಕಣ್ಣು ಬರುವಂತೆ ಮಾಡುತ್ತಾಳೆ. ಯುವಕ ಆಕರ್ಷಕ ಕವನಗಳನ್ನು ರಚಿಸುತ್ತಾನೆ. ವ್ಯಕ್ತಿಯೊಬ್ಬ ಮೋಸದಿಂದ ಕವಿತೆ ಅಪಹರಿಸಿ ತನ್ನ ಹೆಸರಿನಲ್ಲಿ ಕವನ ಸಂಕಲನ ತರುತ್ತಾನೆ. ಕೊನೆಗೆ ಸತ್ಯ ಬಯಲಾಗಿ ಯುವಕನಿಗೆ ನ್ಯಾಯ ದೊರೆಯುತ್ತದೆ.

೧೧೦. ಕೈವಾರ ಮಹಾತ್ಮೆ

(೧೯೬೧ / ಕಪ್ಪು-ಬಿಳುಪು / ಭಕ್ತಿಪ್ರಧಾನ)

ಲಾ: ಕೈವಾರ ಫಿಲಂಸ್
ಪ್ರೊ: ಕೈವಾರ ಫಿಲಂಸ್ (ಪ್ರ) ಲಿ.
ನಿ: ಟಿ.ವಿ.ಸಿಂಗ್ ಠಾಕೂರ್
ಸ.ನಿ: ಜಿ.ವಿ.ಅಯ್ಯರ್, ಎಸ್.ಕೆ. ಭಗವಾನ್

ಅ: ರಾಜಕುಮಾರ್, ಲೀಲಾವತಿ, ಬಾಲಕೃಷ್ಣ, ನರಸಿಂಹರಾಜು, ಜಿ.ವಿ.ಅಯ್ಯರ್, ಕೆ.ಎಸ್.ಅಶ್ವತ್, ರಾಮಚಂದ್ರಶಾಸ್ತ್ರಿ, ಭರದ್ವಾಜ್, ಜಯಶ್ರೀ, ರೇವತಿ, ಶಕುಂತಲಾ, ಪಾಪಮ್ಮ, ಶಾಂತಮ್ಮ, ಜಯಲಕ್ಷ್ಮಿ, ವಿಜಯಕುಮಾರಿ, ವಸಂತ, ಇಂದ್ರಾಣಿ, ಜಯ, ಪದ್ಮಮ್ಮ, ಕುಮಾರಿ, ಗಿರಿಮಾಜಿ, ಶ್ರೀಕಾಂತ್, ಕುಪ್ಪುರಾಜ್, ಮಹಾಲಿಂಗಭಾಗವತರ್, ಹೆಚ್.ಕೆ. ಶಾಸ್ತ್ರಿ
ಚಿ.ಕ/ಮಾ/ಗೀ: ಜಿ.ವಿ. ಅಯ್ಯರ್
ಗಾ: ಪಿ.ಕಾಳಿಂಗರಾವ್, ಎಸ್. ಜಾನಕಿ
ಸಂ: ವೆಂಕಟರಾಂ, ನಜೀರ್
ಛಾ: ಬಿ.ದೊರೈರಾಜ್
ಕಲೆ: ಆರ್.ಬಿ.ಎಸ್.ಮಣಿ
ಸ: ಜಿ.ಕೆ.ವೆಂಕಟೇಶ್
ಧ್ವ: ಟಿ.ಎಸ್.ರಂಗಸ್ವಾಮಿ
ನೃ: ಪಿ.ಎಸ್.ಗೋಪಾಲಕೃಷ್ಣ
ವ: ಅಶ್ವತ್
ಪ್ರ: ನಾರಾಯಣಸ್ವಾಮಿ
ಸ್ಟು: ಮೆಜೆಸ್ಟಿಕ್
ಹಾ: ೧)'ಜಾಣರ ಜಾಣಾ...', ೨)'ನಿದಿರಾದೇವಿ ಕರೆಯೇ...', ೩)'ಕಲಕಲ ನಗುತಲಿ...', ೪)'ಇರಬೇಕಣ್ಣಾ ಇರಬೇಕು..., ೫)'ಆನಂದಕಾರಣ ಬಾಲೋಕ...', ೬)'ಝಣ್‌ಝಣ್...', ೭)'ಯಾರಲಿ ಬೇಡಲೋ.. ಅಯ್ಯೋ...', ೮)'ಮಾತು ಬಲ್ಲೋರೆಲ್ಲಾ...', ೯)'ಏನ್ನೋಲಿದ ವಯ್ಯಾರಿ...', ೧೦)'ಬಾರಮ್ಮ ಗಂಗಾ ಭವಾನಿ...', ೧೧)'ನೆಟ್ಟಿಗಣ್ಣು ನಟ್ಟಂತೆ...', ೧೨)'ಅಭಯ ನೀಡು ಮಾಹೇಶ್ವರಿ ..'

ಕ.ಸಾ: ಕೋಲಾರ ಜಿಲ್ಲೆಯ ಕೈವಾರದಲ್ಲಿ ಜನಿಸಿದ ನಾರಾಯಣಪ್ಪ ಎಂಬ ವಿಷ್ಣು ಭಕ್ತನ ಕುರಿತ ಕತೆ. ದಾಸ ಸಾಹಿತ್ಯಕಾರರೂ, ತತ್ವಜ್ಞಾನಿಯೂ ಹಾಗೂ ಕಾಲಜ್ಞಾನಿಯೂ ಆದ ನಾರಾಯಣಪ್ಪನ ಮಹಿಮೆ ಕಥಾ ವಸ್ತು.

೧೧೧. ಭಕ್ತ ಚೇತ

(೧೯೬೧ / ಕಪ್ಪು-ಬಿಳುಪು / ಭಕ್ತಿಪ್ರಧಾನ)

ಲಾ: ವೆಂಕಟೇಶ್ವರ ಪ್ರೊಡಕ್ಷನ್ಸ್
ಪ್ರೊ: ಟಿ.ಶಂಕರಸಿಂಗ್
ನಿ: ಎಂ.ಬಿ.ಗಣೇಶ್
ಅ: ರಾಜಕುಮಾರ್, ಪ್ರತಿಮಾದೇವಿ, ಬಾಲಕೃಷ್ಣ, ರಾಮಚಂದ್ರಶಾಸ್ತ್ರಿ, ಹಿಕ್ಕಿಮಾಧವರಾವ್, ಜಾರ್ಜ್ ಇಂದಿರಾ, ಸಿ.ವಿ.ಶಿವಶಂಕರ್, ಮಾ|ರಾಜೇಂದ್ರಸಿಂಗ್ ಬಾಬು, ಅಂಕಪ್ಪ, ನಂಜಪ್ಪ, ಮಹದೇವ್, ಇಂದಿರಾದೇವಿ, ದೇಶಿರಾಜ್
ಕ/ಮಾ: ಹುಣಸೂರು ಕೃಷ್ಣಮೂರ್ತಿ
ಗೀ: ಹೆಚ್.ಎಲ್.ನಾರಾಯಣರಾವ್

ಗಾ: ಪಿ.ಬಿ.ಶ್ರೀನಿವಾಸ್, ಎಸ್.ಜಾನಕಿ, ಎಲ್.ಆರ್.ಈಶ್ವರಿ, ಬಿ.ಕೆ.ಸುಮಿತ್ರ
ಸಂ: ಪಿ.ಜಿ.ಎಸ್.ಮಣಿಯಂ
ಛಾ: ಕೆ.ಎಸ್.ಗೋವಿಂದಸ್ವಾಮಿ
ಕಲೆ: ಪಿ.ಎಂ. ವೆಂಕಟರಾಮಯ್ಯ
ಸ: ಶ್ರೀನಿವಾಸ ಅಯ್ಯಂಗಾರ್, ಫೋಟೋ ರಾಜ್
ಧ್ವ: (ಹಾ)ಈ.ಐ.ಜೀವ, (ಮಾ)ಕೆ.ಆರ್.ಸೀತಾರಾಂ, ಅಬ್ದುಲ್ ರಜಾಕ್
ಸ್ಟು: ಪ್ರೀಮಿಯರ್ (ಮೈಸೂರು), ಫಿಲಂ ಸೆಂಟರ್ (ಮದರಾಸು)
ಹಾ: ೧) 'ತರಣಿ ತರಣಿ ನರಸಿಂಹನಿಗೆ...', ೨) 'ಕಾಯುವ ನಂಬಿ ನೀ ಕಡಬೇಡ...', ೩) 'ಜಯನಾರಾಯಣ...',
ವಿ: ಪ್ರತಿಮಾದೇವಿಯವರು ರಾಜಕುಮಾರ್ ಅವರೊಂದಿಗೆ ನಾಯಕಿಯಾಗಿ ಅಭಿನಯಿಸಿದ ಪ್ರಥಮ ಚಿತ್ರ.
ಕ.ಸಾ: ಚಪ್ಪಲಿ ಮಾಡುವ ಕಾಯಕದಲ್ಲಿದ್ದ ಚೇತ ಮನೆಮಂದಿಯೆಲ್ಲ ಉಪವಾಸವಿದ್ದರೂ ಬಿರುಗಾಳಿಯಲ್ಲಿ ನಡೆಯುವ ಬ್ರಾಹ್ಮಣನಿಗೆ ಚಪ್ಪಲಿ ದಾನ ಮಾಡುತ್ತಾನೆ. ಗುರುವಿನಿಂದ ಉಪದೇಶ ಪಡೆದು ನಾರಾಯಣನ ಪೂಜೆ ಮಾಡಲಾರಂಭಿಸುತ್ತಾನೆ. ಪರಮಪಂಡಿತನಾಗುತ್ತಾನೆ. ನಂತರ ಅಸ್ಪೃಶ್ಯನೆಂಬ ಕಾರಣಕ್ಕೆ ರಾಜಗುರುವಿನಿಂದ ನಾನಾ ತೊಂದರೆಗೆ ಸಿಲುಕಿ ಕಡೆಗೆ ವಿಷ್ಣುವಿನ ದಯೆಯಿಂದ ಪಾರಾಗಿ ಮಹಾಮಹಿಮನೆನಿಸುತ್ತಾನೆ.

೧೧೨. ವಿಜಯನಗರದ ವೀರಪುತ್ರ

(೧೯೬೧ / ಕಪ್ಪು-ಬಿಳುಪು / ಜಾನಪದ)
ಲಾ: ಆರ್.ಎನ್.ಆರ್.ಪಿಕ್ಚರ್ಸ್
ಪ್ರೊ: ನಿ: ಆರ್.ನಾಗೇಂದ್ರರಾವ್
ಸ.ನಿ: ಎನ್.ಲಕ್ಷ್ಮೀನಾರಾಯಣ್, ವಿ.ಸೋಮಶೇಖರ್
ಅ: ಆರ್.ನಾಗೇಂದ್ರರಾವ್, ಆರ್.ಎನ್.ಸುದರ್ಶನ್, ಉದಯಕುಮಾರ್, ಜಿ.ಉದಯಶಂಕರ್, ಕಲ್ಯಾಣಕುಮಾರ್, ಬಿ.ಸರೋಜಾದೇವಿ, ಸಂಧ್ಯಾ, ರಮಾದೇವಿ, ಬಾಲಕೃಷ್ಣ, ಹೆಚ್.ರಾಮಚಂದ್ರಶಾಸ್ತ್ರಿ, ಗಣಪತಿಭಟ್, ನರಸಿಂಹರಾಜು, ಎಂ.ಜಿ.ಮರಿರಾವ್, ಎಂ.ಎನ್.ಲಕ್ಷ್ಮೀದೇವಿ, ಶ್ಯಾಂಸುಂದರ್, ಜಿ.ಎಂ.ನಂಜಪ್ಪ, ದೇಶರಾಜ್, ಶಂಕರನಾರಾಯಣ, ಸ್ಟಾಂಡೋ ಪ್ರಕಾಶ್, ಹನುಮಂತಾಚಾರ್, ಗುಗ್ಗು, ಶಿವಾಜಿರಾವ್, ಮಹೇಶ್ವರಯ್ಯ, ಗೋಪಾಲರಾವ್, ನೃತ್ಯ: ಶಕುಂತಲ, ಶಶಿ, ಲೀಲಾ, ಕಲಾ, ಮಾಲಾ, ಜನಾರ್ಧನ್
ಕ/ಚಿ.ಕ/ಮಾ/ಗೀ: ಆರ್.ಎನ್.ಜಯಗೋಪಾಲ್
ಗಾ: ಪಿ.ಬಿ.ಶ್ರೀನಿವಾಸ್, ಪಿ.ಸುಶೀಲ, ಎಲ್.ಆರ್.ಈಶ್ವರಿ, ಪಿ.ನಾಗೇಶ್ವರರಾವ್, ಜಮುನಾ ರಾಣಿ, ಪಿ. ಲೀಲ, ಎಸ್. ಜಾನಕಿ, ಮನಮೋಹನ ಠಾಕೂರ್
ಸಂ: ಎಸ್.ಎಮ್.ಶಾಲಿ
ಛಾ: ಆರ್.ಎನ್.ಕೃಷ್ಣಪ್ರಸಾದ್, ವಿ.ಮನೋಹರ್
ಕಲೆ: ವರ್ತೂರ್ಕರ್
ಸ: ಎಂ.ಎಸ್.ವಿಶ್ವನಾಥನ್, ಬಿ.ಕೆ.ರಾಮಮೂರ್ತಿ
ಧ್ವ: ಟಿ.ಎಸ್.ರಂಗಸ್ವಾಮಿ
ನೃ: ಹೀರಾಲಾಲ್, ಪಿ.ಎಸ್.ಗೋಪಾಲಕೃಷ್ಣನ್
ಸಾ: ಶ್ಯಾಮ್‌ಸುಂದರ್
ವ: ಆರ್.ಅಶ್ವತ್, ರೆಹಮಾನ್
ಪ್ರ: ಕೆ.ಸೋಮು, ನಾರಾಯಣಸ್ವಾಮಿ, ಸುಬ್ಬಣ್ಣ, ಹರಿಬಾಬು
ಸ್ಟು: ಮೆಜೆಸ್ಟಿಕ್ (ಮದರಾಸು)
ಹಾ: ೧) 'ಅಪಾರ ಕೀರ್ತಿ ಗಳಿಸಿ ಮೆರೆದ ಭವ್ಯ ನಾಡಿದು...', ೨) 'ಮಧುರಾ ಮೋಹನ ವೀಣಾ ಗಾನ....', ೩) 'ವೈಯ್ಯಾರ ತೋರುವ ಶೃಂಗಾರ ಬೀರುವ....', ೪) 'ಮಾತಿನ ಮಲ್ಲ ತೋರುವನಲ್ಲ ಬಿಡದೆ ಚಿನ್ನ ಬಿಡಿಹನಲ್ಲ...', ೫) 'ಅರಳಿ ರಾಶಿಗಳಂತೆ ಹಾಲ್ಗಡಲ...', ೬) 'ಏನ ಮನ ಮಂದಿರದೆ...', ೭) 'ಮಧುಬನದೆ ಹೃದಯವಿದು...', ೮) 'ದಾರಲಿ ನಿಂತಿಹುದೇಕೆ...'
ವಿ: ಆರ್.ಎನ್.ಸುದರ್ಶನ್ ಅಭಿನಯದ ಮೊದಲ ಚಿತ್ರ. ರಾಷ್ಟ್ರೀಯ ಚಲನಚಿತ್ರ ಹಣಕಾಸು ನಿಗಮದ ನೆರವು ಪಡೆದ ಮೊದಲ ಚಿತ್ರ. ಕೃಷ್ಣದೇವರಾಯನ ಸಿಂಹಾಸನ ರೂಪಿಸಲು ತಗುಲಿದ ವೆಚ್ಚ ಒಂದೂವರೆ ಲಕ್ಷ ರೂಪಾಯಿ. ನಾಗೇಂದ್ರರಾವ್ ಹಾಗು ಸುದರ್ಶನ್ ಅಭಿನಯಿಸಿದ ತಂದೆ ಮಗನ ಪಾತ್ರಗಳ ನಡುವೆ ನಡೆಯುವ ಕತ್ತಿ ಕಾಳಗವನ್ನು ಸಹಜವಾಗಿ ಚಿತ್ರೀಕರಿಸಲಾಯಿತು. ವಿ.ಸೋಮಶೇಖರ್ ಸಹಾಯಕ ನಿರ್ದೇಶಕರಾದ ಮೊದಲ ಚಿತ್ರ. ಸಾವಿರಾರು ಸಿಪಾಯಿಗಳು, ಕಠಾರಿ ವೀರರು, ಕುದುರೆ ಸವಾರರು, ನರ್ತಕಿಯರು ತುಂಬಿ ತುಳುಕುತ್ತಿದ್ದರು. ಚಿತ್ರವನ್ನು ತಮಿಳು ಹಾಗು ತೆಲುಗಿಗೆ ಡಬ್ ಮಾಡಲಾಯಿತು.
ಕ.ಸಾ: ಕೃಷ್ಣದೇವರಾಯನ ಸಾಮ್ರಾಜ್ಯದಲ್ಲಿ ಗುರುವರಾಯ ಎಂಬ ಸಾಮಂತ ರಾಜನೊಬ್ಬನಿರುತ್ತಾನೆ. ರಾಜ್ಯದಾಸೆಗಾಗಿ ಕೃಷ್ಣದೇವರಾಯನನ್ನು ಕೊಲ್ಲುವ ಸಂಚು ಮಾಡುತ್ತಾನೆ. ಗುರುವರಾಯನ ಮಗ ವಿಕ್ರಮ ವಿಷಯ ತಿಳಿದು ತಂದೆಯ ಕುಕೃತ್ಯದ ವಿರುದ್ಧ ತಿರುಗಿ ಬೀಳುತ್ತಾನೆ. ಬಹುಮನೀ ಸುಲ್ತಾನನ ಜೊತೆ ಸೇರಿ ಗುರುವರಾಯ ಹೂಡಿದ ಕುತಂತ್ರವನ್ನು ವಿಕ್ರಮ ಬಯಲು ಮಾಡುತ್ತಾನೆ. ವಿಕ್ರಮ ಕೃಷ್ಣದೇವರಾಯನ ಪ್ರೀತಿಗೆ ಪಾತ್ರನಾಗುತ್ತಾನೆ.

೧೧೩. ನಾಗಾರ್ಜುನ

(೧೯೬೧ / ಕಪ್ಪು-ಬಿಳುಪು / ಪೌರಾಣಿಕ)
ಲಾ: ನಂದಿ ಪಿಕ್ಚರ್ಸ್
ಪ್ರೊ: ಕೆ.ಎನ್.ಮಲ್ಲಿಕಾರ್ಜುನ
ನಿ: ವೈ.ವಿ.ರಾವ್
ಸ.ನಿ: ಆರ್.ಶ್ರೀನಿವಾಸ್, ಕುಂದಾನಿ ಸತ್ಯನ್

ಅ: ರಾಜಕುಮಾರ್, ವರಲಕ್ಷ್ಮಿ, ವಿ.ನಾಗಯ್ಯ, ಸಂಧ್ಯಾ, ಕಾಂತಾರಾವ್, ಕೆ.ಎಸ್.ಅಶ್ವತ್, ಹರಿಣಿ, ನರಸಿಂಹರಾಜು, ರಾಜನಾಲ, ರಾಘವೇಂದ್ರರಾವ್, ರಮಾದೇವಿ, ಕುಮಾರಿ ಮೀನಾ, ಕಲಾವತಿ, ಪಾರ್ವತಿ, ಜಯಮ್ಮ, ಶಾರದಮ್ಮ, ಗಂಗೂಬಾಯಿ, ನರ್ಮದಾದೇವಿ, ಬಿ. ನಾರಾಯಣ. ನೃತ್ಯ ಮದರಾಸು ಸಹೋದರಿಯರು
ಕ: ತಾಂಡ್ರ ಸುಬ್ರಹ್ಮಣ್ಯಂ
ಮಾ: ಹೆಚ್.ಎಲ್.ನಾರಾಯಣರಾವ್
ಗೀ: ಹುಣಸೂರು ಕೃಷ್ಣಮೂರ್ತಿ, ವಿಜಯ ನಾರಸಿಂಹ
ಗಾ: ಪಿ.ಲೀಲಾ, ಪಿ.ಸುಶೀಲ, ಜಿಕ್ಕಿ, ರಾಜಲಕ್ಷ್ಮಿ, ಎಸ್.ಜಾನಕಿ, ಸಿ.ಎಸ್.ಸರೋಜಿನಿ, ಪಿ.ಬಿ.ಶ್ರೀನಿವಾಸ್, ಮಾಧವ ಪೆದ್ದಿ ಸತ್ಯಂ, ಪೀಠಾಪುರಂ ನಾಗೇಶ್ವರರಾವ್, ಎಂ.ಎಸ್.ರಾಮರಾವ್, ಶ್ರೀರಾಮುಲು, ರಾಮಚಂದ್ರಶರ್ಮ, ಅಪ್ಪಾರಾವ್, ಕೋಮಲ, ಶೀರ್ಕಾಳಿ ಗೋವಿಂದರಾಜನ್, ನಾಗೇಂದ್ರ
ಸಂ: ಕೆ.ವಿ.ಪದ್ಮನಾಭನ್
ಛಾ: ಎನ್.ಪ್ರಕಾಶ್
ಕಲೆ: ಎಸ್.ಎಸ್.ಪ್ರಕಾಶರಾವ್
ಸ: ರಾಜನ್ ನಾಗೇಂದ್ರ, ಜೆ.ಲಕ್ಷ್ಮೀನಾರಾಯಣ (ಪದ್ಯ ಸಂಗೀತ)
ಧ್ವ: ಎಂ.ಎ.ಎಸ್.ಅಯ್ಯಂಗಾರ್, ಕೆ.ಆರ್.ಸೀತಾರಾಂ
ನೃ: ಹೆಚ್.ಎಸ್.ಛೋಪ್ರಾ, ವೇಣುಗೋಪಾಲ್
ಸಾ: ಟಿ.ವಿ.ಆರ್.ಚಂದ್ರನ್
ವ: ಟಿ.ಎಸ್.ಮಣಿ
ಪ್ರ: ಆರ್.ವರದರಾಜುಲು ನಾಯ್ಡು, ಎಂ.ರಾಘವಯ್ಯ
ಸ್ಟು: ಪ್ರೀಮಿಯರ್ (ಮೈಸೂರು)
ಹಾ: ೧) 'ಆನಂದ ತಂದ ಚಂದಿರ..', ೨) 'ಆನಂದ ಕಂದ ರಾಜಶೇಖರ...', ೩) 'ಮಾತಾಡೆ ಚಿನ್ನ ಮಾತಾಡ...', ೪) 'ಮನದೊಳು ತುಂಬಿತು ಆನಂದ...', ೫) 'ಬಾಳು ಕಂದನ ಬೆಳಗೂ...', ೬) 'ನಿನ್ನವಳು ನಾನೆಂದು ಕಾಯೇ...', ೭) 'ಶಾಂತಿ ಸಮಾಧಾನ ನಮ್ಮ...', ೮) 'ಚೆಲುವಾ ಚೆಲುವಾ', 'ನಿನಗಾಗಿ ನಾಕಾದೆನೊ...', ೯) 'ಶೃಂಗಶಿರರುಧಿರ ಜಲ...', ೧೦) 'ಪನೀತತ್ವ ವಿಚಾರ...', ೧೧) 'ಗಂಗೋತ್ತುಂಗಧರಂ ಶಶಿಕಳಾ...', ೧೨) 'ಘನ ಧನುರ್ವಿದ್ಯೆಯಲಿ...', ೧೩) 'ರಾಗಾಲಾಪಕೆ ಸಮಯವೆ...', ೧೪) 'ಓಲೋಕ ಮಾತೆ ಈ ನಿಂದೆ...'
ಸೆ: ೧೬೭೬ ಅಡಿ, ೧೬ ರೀಲು
ಕ.ಸಾ: ಉಲೂಚಿ-ಅರ್ಜುನರು ಗಾಂಧರ್ವ ವಿವಾಹವಾಗುತ್ತಾರೆ. ಶಾಪದಿಂದಾಗಿ ಅರ್ಜುನ ಉಲೂಚಿಯನ್ನು ಮರೆಯುತ್ತಾನೆ. ನಾಗಾರ್ಜುನ ಇವರ ಪುತ್ರ. ಇವನಿಗೆ ಶಿರದಲ್ಲಿ ಶೃಂಗವಿರುತ್ತದೆ. ಪಾಂಡುರಾಜನಿಗೆ ಸ್ವರ್ಗಪ್ರಾಪ್ತಿಯಾಗಲು ಶೃಂಗಶಿರದ ಬಾಲಕನ ಬಲಿ ಅನಿವಾರ್ಯ. ಇಂತಹ ಬಾಲಕನ ಹುಡುಕಾಟದಲ್ಲಿ ಅರ್ಜುನನಿದ್ದಾಗ ನಾಗಾರ್ಜುನ ಕಾಣಿಸುತ್ತಾನೆ. ತಂದೆ ಮಗನಿಗೆ ಯುದ್ಧ ನಡೆಯುತ್ತದೆ. ನಾಗಾರ್ಜುನನ ಪರವಾಗಿ ಪಾರ್ವತಿ, ಅರ್ಜುನನ ಪರವಾಗಿ ಕೃಷ್ಣ ನಿಲ್ಲುತ್ತಾರೆ. ಅರ್ಜುನ ಸೋತು ಅಗ್ನಿ ಪ್ರವೇಶಕ್ಕೆ ಸಿದ್ಧನಾದಾಗ ನಾಗಾರ್ಜುನ ತಾನೇ ತಲೆ ಕತ್ತರಿಸಿಕೊಂಡು ಪಾಂಡುರಾಜನ ಸ್ವರ್ಗಾರೋಹಣಕ್ಕೆ ಕಾರಣನಾಗುತ್ತಾನೆ.

೧೯೬೨

೧೧೪. ರತ್ನಮಂಜರಿ

(೧೯೬೨ / ಕಪ್ಪು-ಬಿಳುಪು / ಜಾನಪದ)
ಲಾ: ಎವರ್‌ಗ್ರೀನ್ ಪ್ರೊಡಕ್ಷನ್ಸ್
ಪ್ರೊ: ಹುಣಸೂರು ಕೃಷ್ಣಮೂರ್ತಿ, ಡಿ.ಪುಟ್ಟಸ್ವಾಮಿ
ನಿ: ಹುಣಸೂರು ಕೃಷ್ಣಮೂರ್ತಿ
ಸ.ನಿ: ಕೆ.ಎಂ.ರತ್ನಾಕರ್, ಸಿ.ವಿ.ಶಿವಶಂಕರ್
ಅ: ಉದಯಕುಮಾರ್, ಅಶ್ವತ್, ಶ್ರೀರಂಗ, ಎಂ.ಪಿ.ಶಂಕರ್, ನರಸಿಂಹರಾಜು, ಹೆಚ್.ರಾಮಚಂದ್ರಶಾಸ್ತ್ರಿ, ಹೆಚ್.ಕೃಷ್ಣಶಾಸ್ತ್ರಿ, ಸಿ.ವಿ.ಶಿವಶಂಕರ್, ಎಂ.ಎಸ್.ಸುಬ್ಬಣ್ಣ, ಹೆಚ್.ಆರ್.ಹನುಮಂತರಾವ್, ವಾಸುದೇವಗಿರಿಮಾಜಿ, ಸೋರಟ್ ಅಶ್ವತ್, ಎಂ.ಲೀಲಾವತಿ, ರಾಜಶ್ರೀ, ಜಯಶ್ರೀ, ಹರಿಣಿ, ಶಾಂತಮ್ಮ, ಎಂ.ಎನ್.ಲಕ್ಷ್ಮೀದೇವಿ, ಮಾಸ್ಟರ್ ಹುಣಸೂರ್, ಸಿರಿಪ್ರಸಾದ್, ಹನುಮಂತಾಚಾರ್, ಬಾಲ ಜಯಕೀರ್ತಿ, ಬಾಲ ಚಿಂತಾಮಣಿ, ನೃತ್ಯ ಮದರಾಸು ಸಹೋದರಿಯರು
ಕ/ಚಿ.ಕ/ಮಾ/ಗೀ: ಹುಣಸೂರು ಕೃಷ್ಣಮೂರ್ತಿ
ಗಾ: ಪಿ.ಲೀಲಾ, ಜಿಕ್ಕಿ, ಎಸ್.ಜಾನಕಿ, ಸೂಲಮಂಗಲಂ ರಾಜಲಕ್ಷ್ಮಿ, ರಾಣಿ, ಕಮಲ, ಸರಸ್ವತಿ, ಪಿ.ಬಿ.ಶ್ರೀನಿವಾಸ್,

ನಾಗೇಂದ್ರ, ಪೀಠಾಪುರಂ ನಾಗೇಶ್ವರರಾವ್
ಸಂ: ಪಿ.ಎಸ್.ಮೂರ್ತಿ
ಛಾ: ಆರ್.ಮಧು
ಕಲೆ: ಬಿ.ಸಿ.ಬಾಬು
ಸ: ರಾಜನ್ ನಾಗೇಂದ್ರ
ಧ್ವ: (ಹಾ)ಮೋಹನಸುಂದರಂ, (ಮಾ)ನಾಗೇಶ್ವರನ್
ನೃ: ಎ.ಕೆ.ಛೋಪ್ರಾ, ರತ್ನಕುಮಾರ್
ಸಾ: ವೈ.ಶಿವಯ್ಯ

ವ: ಆರ್.ಅಶ್ವತ್, ರಾಮಚಂದ್ರ
ಪ್ರ: ಎಂ.ಎಸ್.ಸುಬ್ಬಣ್ಣ
ಸ್ಟು: ಗೋಲ್ಡನ್ ಸಿನಿ ಸ್ಟುಡಿಯೋ (ಮದರಾಸು)
ಹಾ: ೧) 'ಸಿರಿವರನ ದಯದಿಂದ ಜನಿಸಿ ಬಂದಿಹೆ ಕಂದ...', ೨) 'ಜಯಹೇ ಜೀವನದೊಡೆಯ ಜಯಹೇ ಪಾವನ...', ೩) 'ಕಂಬನಿಯ ಕಡಲಿನಲಿ ನಾ ಮುಳುಗಿ ಕರೆದಾಗ....', ೪) 'ಗಿಲ್‌ಗಿಲ್ ಗಿಲಿ ಗಿಲಕ್ಕು ಕಾಲಗೆಜ್ಜೆ ಝಣಕ್ಕು....', ೫) 'ಯಾರು ಯಾರು ನೀ ಯಾರು ಎಲ್ಲಿಂದ ಬಂದ...', ೬) 'ಕರುಣಿಸೋ ನಾಗರಾಜ ಕರುಣಿಸೋ ನಿನ್ನ ತೇಜಾ...', ೭) 'ಜನಿಸಿ ಬಂದವರಲ್ಲ...', ೮) 'ಯಾ ವಿದ್ಯಾ ಶಿವಕೇಶವಾದಿ...', ೯) 'ಅಮೃತವ ನೀಡಿದೆಯೆಂದು...', ೧೦) 'ನಲ್ಲ ನಿನ್ನ ಸುತ್ತ...', ೧೧) 'ತುಂಬ ಯೌವನ ತಳೆದಿದೆಯೆ...', ೧೨) 'ಪಾಹಿಮಾಂ ಪಾಹಿಮಾಂ'
ವಿ: ಎಂ.ಪಿ.ಶಂಕರ್ ಚಲನಚಿತ್ರರಂಗ ಪ್ರವೇಶಿಸಿದರು.
ಕ.ಸಾ: ತಪಸ್ಸಿನಲ್ಲಿದ್ದ ಏಕನಾಥ ಋಷಿಗಳ ಶಾಪಕ್ಕೀಡಾಗಿ ಗಂಧರ್ವ ಕನ್ಯೆಯೊಬ್ಬಳು ಶಾಪಗ್ರಸ್ತಳಾಗಿ ಚಂದ್ರಗಿರಿಯ ರಾಜನ ಪುತ್ರಿಯಾಗಿ ಜನಿಸುತ್ತಾಳೆ. ಜಯಕೀರ್ತಿ ಎಂಬ ಯುವಕ ಗುರುಗಳೊಬ್ಬರ ಬಳಿ ವಿದ್ಯೆ ಕಲಿಯುತ್ತಾನೆ. ಗುರು ಪುತ್ರಿ ಮಂಜರಿ ಅವನ ಸಹಪಾಠಿ. ವಿದ್ಯಾಭ್ಯಾಸದ ನಂತರ ವಿವಾಹವಾಗೆಂಬ ಮಂಜರಿಯ ಕೋರಿಕೆಯನ್ನು ಜಯಕೀರ್ತಿ ನಿರಾಕರಿಸಿ ಗುರು ಶಾಪಕ್ಕೀಡಾಗುತ್ತಾನೆ.
ರಾಜಕುಮಾರನಂತೇ ಇದ್ದ ಜಯಕೀರ್ತಿ ರಾಜಕುಮಾರನ ಜಾಗದಲ್ಲಿ ನಿಂತು ರಾಜಕುಮಾರಿಯನ್ನು ವಿವಾಹವಾಗುತ್ತಾನೆ. ರಾಜಕುಮಾರಿ ತನ್ನ ಅರ್ಧ ಆಯಸ್ಸು ನೀಡಿ ಜಯಕೀರ್ತಿಯನ್ನು ಬದುಕಿಸಿಕೊಳ್ಳುತ್ತಾಳೆ. ಮಂಜರಿ ಜಯಕೀರ್ತಿಗೆ ತೊಂದರೆ ಕೊಡುವ ಉದ್ದೇಶದಿಂದ ಅವನನ್ನು ವಿಕಾರ ಮಾಡುತ್ತಾಳೆ. ಮಾರ್ತಾಂಡನೆಂಬ ಮಾಂತ್ರಿಕ ಮಂಜರಿಯನ್ನು ನಾಯಿಯಾಗಿಸುತ್ತಾನೆ.
ಜಯಕೀರ್ತಿಯಿಂದಲೇ ಪುನರ್ ರೂಪ ಪಡೆದು ಪುನ: ಜಯಕೀರ್ತಿಗೆ ನಾನಾ ತೊಂದರೆ ಕೊಡುತ್ತಾಳೆ. ಕಡೆಗೆ ಎಲ್ಲವೂ ಸುಖಾಂತವಾಗುತ್ತದೆ.

೧೧೫. ಗಾಳಿಗೋಪುರ

(೧೯೬೨ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಪದ್ಮಿನಿ ಪಿಕ್ಚರ್ಸ್
ಪ್ರೊ/ನಿ: ಬಿ.ಆರ್. ಪಂತಲು
ಸ.ನಿ: ಎಸ್.ಆರ್.ಪುಟ್ಟಣ್ಣಕಣಗಾಲ್, ಟಿ.ದಶರಥರಾಮರೆಡ್ಡಿ, ಪಿ.ಎಲ್.ಸೆಲ್ವರಾಜ್
ಅ: ರಾಜಕುಮಾರ್, ಕಲ್ಯಾಣಕುಮಾರ್, ನರಸಿಂಹರಾಜು, ಬಾಲಕೃಷ್ಣ, ಅಶ್ವತ್, ಆರ್.ನಾಗೇಂದ್ರರಾವ್, ಉದಯಕುಮಾರ್, ಎಂ.ವಿ.ರಾಜಮ್ಮ, ಲೀಲಾವತಿ, ಎಂ.ಎನ್.ಲಕ್ಷ್ಮೀದೇವಿ, ಬಿಂದೊಡಿಲೀಲಾ, ರಮಾದೇವಿ, ಜಯಮ್ಮ
ಕ: ಎಂ.ಎಸ್.ಸೋಲಮಲೈ
ಚಿ.ಕ: ಪದ್ಮಿನಿ ಪಿಕ್ಚರ್ಸ್ ಸಾಹಿತ್ಯ ಶಾಖೆ
ಮಾ/ಗೀ: ಜಿ.ವಿ.ಅಯ್ಯರ್
ಗಾ: ಘಂಟಸಾಲ, ಪಿ.ಬಿ.ಶ್ರೀನಿವಾಸ್, ಮಾಧವಪೆದ್ದಿ ಸತ್ಯಂ, ರಾಘವಲು, ಪಿ.ಸುಶೀಲ, ರೇಣುಕಾ, ರಾಣಿ
ಸಂ: ಆರ್. ದೇವರಾಜನ್
ಛಾ: ಡಬ್ಲ್ಯೂ.ಆರ್.ಸುಬ್ಬರಾವ್, ಕರ್ಣನ್
ಕಲೆ: ವಿತರ್ಲಿರ್ಕ್ಯರ್



ಸ: ಟಿ.ಜಿ.ಲಿಂಗಪ್ಪ
ಧ್ವ: (ಹಾ) ಪಿ.ವಿ.ಕೋಟೇಶ್ವರರಾವ್, (ಮಾ) ಟಿ.ವಿ.ನಾಥನ್
ನೃ: ಉಡುಪಿ ಜಯರಾಂ
ಸಾ: ಸಾಂಬಶಿವರಾವ್
ಪ್ರ: ಹರಿಬಾಬು, ಎಂ.ಕೆ.ಶ್ರೀನಿವಾಸನ್, ಎಸ್.ಪಾರ್ಥಸಾರಥಿ
ಸ್ಟು: ಭರಣಿ
ಹಾ: ೧) 'ಯಾರಿಗೆ ಯಾರುಂಟು...', ೨) 'ಧೂಳಿಯಾಯಿತು ಗಾಳಿಗೋಪುರ...'. ೩) 'ನೀನೇ ಕಿಲಾಡಿ ಹೆಣ್ಣು...', ೪) 'ಅನುರಾಗದ ನೀ ಪಾಡಲೇಕೆ...', ೫) 'ನನ್ನಾಕೆ ನೀ ಹಾಗೆ ನೋಡುವೆ...', ೬) 'ಬಾಳೇ ಬಂಗಾರಾ - ನಾಳೆ...', ೭) 'ತಂದತನಾ ಎಂದು ಕೊಂತ...', ೮) 'ಕಾಲ ನಮ್ಮ ಆಳು ಎಂಬ ಕನಸು...', ೯) 'ಓ ಚಿನ್ನಯ್ಯ... ತನ್ನತನ...'
ಸೆ: ಉದ್ದ - ೪೫೬೨.೦೦, ೧೭ ರೀಲ್‌ಗಳು
ಕ.ಸಾ: ಗೆಳೆಯನ ಮಗನನ್ನು ಅವನ ಮರಣಾವಸ್ಥೆಯಲ್ಲಿ ತನ್ನ ವಶಕ್ಕೆ ತೆಗೆದುಕೊಂಡ ಗೋವಿಂದಯ್ಯ, ಗೆಳೆಯನ ಹಣದಿಂದ ಶ್ರೀಮಂತನಾಗಿ ತನ್ನ ಮಗನನ್ನು ಚೆನ್ನಾಗಿ ಓದಿಸಬೇಕೆಂಬ ನಿಶ್ಚಯ ಮಾಡಿ ಗೆಳೆಯನ ಮಗನನ್ನು ರೈತನನ್ನಾಗಿ ಮಾಡುತ್ತಾನೆ. ಕಡೆಗೆ ಕಡೆಗಣಿಸಿದ ಸಾಕುಮಗನೇ ನೆರವಾಗುತ್ತಾನೆ. ಮಗನ ಬಗ್ಗೆ ಕಟ್ಟಿದ ಆಸೆಯ ಗೋಪುರ ಗಾಳಿಗೋಪುರವಾಗುತ್ತದೆ.

೧೧೬. ದೈವಲೀಲೆ

(೧೯೬೨ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಬಯಾಸ್ಕೋಪ್
ಪ್ರೊ: ಆರ್.ಟಿ. ಅರಸು
ನಿ: ಸಿ.ಎಸ್.ಕೃಷ್ಣಕುಮಾರ್
ಅ: ಕಲ್ಯಾಣಕುಮಾರ್, ಬಾಲಕೃಷ್ಣ, ಗಣಪತಿಭಟ್, ಸಿ.ಕೆ.ನಾಗರಾಜರಾವ್, ವಾಸುದೇವ ಗಿರಿಮಾಜಿ, ಡಾ।ಗಿರಿ, ಶಿವಾಜಿ, ಶ್ರೀಕಂಠಸ್ವಾಮಿ, ಸಾಹುಕಾರ್ ಜಾನಕಿ, ಹೆಚ್.ಪಿ.ಸರೋಜ, ಜಯಶ್ರೀ, ಜಯ, ಪಾಪಮ್ಮ, ಬೇಬಿ ಲಕ್ಷ್ಮಿ, ಲಲಿತ
ಮಾ: ಸಿ.ಕೆ.ನಾಗರಾಜರಾವ್
ಗೀ: ಸಿ.ಕೆ.ನಾಗರಾಜರಾವ್, ಗೀತಪ್ರಿಯ
ಗಾ: ಸಿ.ಎಸ್. ಸರೋಜಿನಿ, ಎಸ್.ಜಾನಕಿ, ಪಿ.ಬಿ.ಶ್ರೀನಿವಾಸ್, ಜಿಕ್ಕಿ, ನಾಗೇಂದ್ರಪ್ಪ
ಸಂ: ಮಹಮ್ಮದ್ ನಯೀಂ
ಛಾ: ಬಿ.ದೊರೆರಾಜ್
ಕಲೆ: ಬಿ.ಸಿ.ಬಾಬು
ಸ: ಬಿ.ಎಂ.ಎಸ್.ಮೂರ್ತಿ, ಸಿ.ಕೆ.ಎಸ್.ರಾವ್
ಸ್ಟು: ಮಜೆಸ್ಟಿಕ್
ಹಾ: ೧) 'ಪ್ರೀತಿ ಲೋಕದ.. ಪೂರ್ಣ ಚಂದ್ರಮಾ...', ೨) 'ನಾನೇ ನಿನ್ನ ಸರಿಗಮಾ...', ೩) 'ಆಶಾ ನೌಕಯ ಸುಳಿಯಲಿ...', ೪) 'ಅಮ್ಮಾ ಪಾರು ಮಾತು...', ೫) 'ಜಪಾ ಕುಸುಮ ಸಂಕಾಶಂ...', ೬) 'ಹೃದಯಗಳು ನಮ್ಮಾ...'
ವಿ: ಖ್ಯಾತ ಕಾದಂಬರಿಕಾರ ಸಿ.ಕೆ.ನಾಗರಾಜರಾವ್ ಈ ಚಿತ್ರಕ್ಕೆ ಸಂಭಾಷಣೆ ರಚಿಸಿದರಲ್ಲದೆ ಅಭಿನಯಿಸಿದರು. ಕಲ್ಯಾಣಕುಮಾರ್ ದ್ವಿಪಾತ್ರದಲ್ಲಿ ಅಭಿನಯಿಸಿದ್ದಾರೆ.
ಕ.ಸಾ: ಕಚೇರಿಯೊಂದರ ಟೈಪಿಸ್ಟ್. ತನ್ನ ಹೆಂಡತಿ ರಾಧಾಳೊಂದಿಗೆ ವಿರಸದ ಫಲವಾಗಿ ಊರು ಬಿಟ್ಟು ಮದರಾಸಿಗೆ ಬರುತ್ತಾನೆ. ಅಲ್ಲಿ ತನ್ನಂತೆ ಇರುವ ಮತ್ತೊಬ್ಬನನ್ನು ಕಂಡು ಆಶ್ಚರ್ಯ ಹೊಂದುತ್ತಾನೆ. ಆತನೊಬ್ಬ ದೊಡ್ಡ ನಟ. ಅವನಿಗೆ ಆ ಜೀವನ ನರಕವಾಗಿರುತ್ತದೆ. ಇಬ್ಬರು ಅದಲು ಬದಲಾಗುತ್ತಾರೆ. ನಂತರ ನಡೆಯುವ ಚಿತ್ರವಿಚಿತ್ರ ಘಟನೆಗಳು. ಎಲ್ಲವೂ ಸರಿಯಾಗಿ ಸುಖಾಂತವಾಗುತ್ತದೆ.

೧೧೭. ಭೂದಾನ

(೧೯೬೨ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಅನಂತಲಕ್ಷ್ಮೀ ಪಿಕ್ಚರ್ಸ್
ಪ್ರೊ/ನಿ: ಪಿ.ಎಸ್.ಗೋಪಾಲಕೃಷ್ಣ, ಜಿ.ವಿ.ಅಯ್ಯರ್
ಸ.ನಿ: ಎಸ್.ಕೆ.ಭಗವಾನ್, ರಾಮಚಂದ್ರ
ಅ: ರಾಜಕುಮಾರ್, ಕಲ್ಯಾಣ್‌ಕುಮಾರ್, ಉದಯಕುಮಾರ್, ಅಶ್ವತ್, ನರಸಿಂಹರಾಜು, ಬಾಲಕೃಷ್ಣ, ಹೆಚ್.ರಾಮಚಂದ್ರಶಾಸ್ತ್ರಿ, ವೀರಭದ್ರಪ್ಪ, ಭಾರದ್ವಾಜ್, ಕುಪ್ಪರಾಜ್, ನಾರಾಯಣಸ್ವಾಮಿ, ಮಹಾಲಿಂಗ ಭಾಗವತರ್, ಲೀಲಾವತಿ, ಆದವಾನಿ ಲಕ್ಷ್ಮೀದೇವಿ, ಶಕುಂತಲ, ವಿಜಯಕುಮಾರಿ, ಜಯಲಕ್ಷ್ಮಿ, ಮೂರ್ತಿ
ಕ/ಚಿ.ಕ/ಮಾ/ಗೀ: ಜಿ.ವಿ.ಅಯ್ಯರ್
ಗಾ: ಪಿ.ಬಿ.ಶ್ರೀನಿವಾಸ್, ಜಿ.ಕೆ.ವೆಂಕಟೇಶ್, ಎಸ್.ಜಾನಕಿ, ರಾಧಾ-ಜಯಲಕ್ಷ್ಮಿ
ಸಂ: ಎನ್.ಸಿ.ರಾಜನ್
ಛಾ: ಬಿ.ದೊರೈರಾಜ್
ಕಲೆ: ಆರ್.ಬಿ.ಎಸ್.ಮಣಿ
ಸ: ಜಿ.ಕೆ.ವೆಂಕಟೇಶ್
ಧ್ವ: (ಹಾ) ಈ.ಐ.ಜೀವ, (ಮಾ) ಷಣ್ಮುಗಂ, ದೊರೆಸ್ವಾಮಿ
ನೃ: ಪಿ.ಎಸ್.ಗೋಪಾಲಕೃಷ್ಣ
ವ: ಕೃಷ್ಣ
ಪ್ರ: ನಾರಾಯಣಸ್ವಾಮಿ
ಸ್ಟು: ಮೆಜೆಸ್ಟಿಕ್ (ಮದರಾಸು)
ಹಾ: ೧) 'ಭಾಗ್ಯದ ಲಕ್ಷ್ಮಿ ಬಾರಮ್ಮ ನಮ್ಮಮ್ಮ ನೀ ಸೌಭಾಗ್ಯದ ಲಕ್ಷ್ಮೀ ಬಾರಮ್ಮ...' ೨) 'ನೋವಿನಿಂದ ಹಾಡಿದೆ ನೀ...', ೩) 'ಓ ಬನ್ನಿ ಎನ್ನವರೇ...', ೪) 'ಪಾಠಶಾಲೆಯಿಲ್ಲದೆ...', ೫) 'ಯಾರಿಗೆ ಯಾರೋ...', ೬) 'ನೆಂಟರೇಳೋ ಕಿವಿಗೊಟ್ಟು..'
ವಿ: ರಾಜಕುಮಾರ್, ಕಲ್ಯಾಣಕುಮಾರ್, ಉದಯಕುಮಾರ್ ಮೂವರೂ ಪೂರ್ಣ ಪ್ರಮಾಣದಲ್ಲಿ ಅಭಿನಯಿಸಿದ ಏಕೈಕ ಚಿತ್ರ. ಜಿ.ವಿ.ಅಯ್ಯರ್ ನಿರ್ದೇಶಿಸಿದ ಮೊದಲ ಚಿತ್ರ. ವಿನೋಬಾ ಭಾವೆಯವರ ಭೂದಾನ ಚಳವಳಿಯಿಂದ ಪ್ರೇರಣೆಗೊಂಡು ತಯಾರಿಸಿದ ಚಿತ್ರ.
ಕ.ಸಾ: ಲಕ್ಷ್ಮೀಪತಿ ಎಂಬ ಶ್ರೀಮಂತ ಜಮೀನ್ದಾರ ಮಹಾಸ್ವಾರ್ಥಿ. ಈತನ ಬಳಿ ದಾಸಣ್ಣ (ರಾಜಕುಮಾರ್) ಹಾಗೂ ಅವರ ಪುತ್ರರಾದ ರಾಮ (ಉದಯಕುಮಾರ್) ಮತ್ತು ಲಕ್ಷ್ಮಣ (ಕಲ್ಯಾಣಕುಮಾರ್) ಜೀತದಾಳುಗಳು. ಇವರಿಗೆ ಸ್ವಂತ ಭೂಮಿ ಹೊಂದುವ ಆಸೆ. ತುಂಡು ಭೂಮಿಯನ್ನಾದರೂ ತನಗೆ ನೀಡುವಂತೆ ದಾಸಣ್ಣ ಮಾಲೀಕರಲ್ಲಿ ಪದೇ ಪದೇ ಮನವಿ ಮಾಡುತ್ತಾನೆ. ಜಮೀನ್ದಾರ ಹುಸಿ ಭರವಸೆ ನೀಡುತ್ತಲೇ ಬರುತ್ತಾನೆ. ಭೂದಾನ ಚಳವಳಿ ಆರಂಭಗೊಂಡು ಕಾರ್ಯಕರ್ತರು ಈ ಹಳ್ಳಿಗೆ ಬಂದಾಗ ಲಕ್ಷ್ಮೀಪತಿ ಐದು ಎಕರೆ ಭೂಮಿ ದಾನ ನೀಡುತ್ತಾನೆ. ಕಾರ್ಯಕರ್ತರು ಈ ಭೂಮಿಯನ್ನು ದಾಸಣ್ಣನಿಗೆ ನೀಡುತ್ತಾರೆ. ದಾಸಣ್ಣ ಭೂಮಿಯಲ್ಲಿ ಫಲವತ್ತಾದ ಬೆಳೆ ಬೆಳೆದಾಗ ಲಕ್ಷ್ಮೀಪತಿಗೆ ಅಸೂಯೆವುಂಟಾಗುತ್ತದೆ. ಪತ್ನಿಯ ಬಲವಂತಕ್ಕೆ ಮಣಿದು ಲಕ್ಷ್ಮೀಪತಿ ಭೂಮಿಯನ್ನು ದಾಸಣ್ಣನಿಂದ ಮರಳಿ ಪಡೆಯುತ್ತಾನೆ. ದಾಸಣ್ಣ ಹುಚ್ಚನಾಗುತ್ತಾನೆ. ರಾಮ, ಲಕ್ಷ್ಮಣರು ಮತಾಂತರಗೊಳ್ಳುತ್ತಾರೆ.

೧೧೮. ಸ್ವರ್ಣಗೌರಿ

(೧೯೬೨ / ಕಪ್ಪು-ಬಿಳುಪು / ಭಕ್ತಿಪ್ರಧಾನ)
ಲಾ: ಶ್ಯಾಮಪ್ರಸಾದ್ ಮೂವೀಸ್
ಪ್ರೊ: ಟಿ.ಆರ್.ನಾಯ್ಡು
ನಿ: ವೈ.ಆರ್.ಸ್ವಾಮಿ
ಅ: ರಾಜಕುಮಾರ್ (ಕಾಳಿಂಗ), ಸತ್ಯನಾರಾಯಣ (ಈಶ್ವರ), ಕೆ.ಎಸ್.ಅಶ್ವತ್ (ನಾರದ), ಗಣಪತಿಭಟ್ (ನಂದೀಶ್ವರ), ಉದಯಕುಮಾರ್ (ಮಣಿಪುರ ರಾಜ), ರಾಮಚಂದ್ರಶಾಸ್ತ್ರಿ (ಶಂಭುದಾಸ), ನರಸಿಂಹರಾಜು (ಗಣಪತಿ), ಸ್ಟೋರಟ್ ಅಶ್ವತ್ (ಸಾಂಬಯ್ಯ), ರಾಜಶ್ರೀ (ಮಾಲಿನಿ), ಸಂಧ್ಯಾ (ಪಾರ್ವತಿ), ಜಯಶ್ರೀ (ಪ್ರಿಯಂವದ), ಕೃಷ್ಣಕುಮಾರಿ (ಗೌರಿ), ರಮಾದೇವಿ, ಜಯಾ, ವಾದಿರಾಜ್
ಚಿ.ಕ: ವೈ.ಆರ್.ಸ್ವಾಮಿ
ಕ/ಮಾ/ಗೀ: ಎಸ್.ಕೆ.ಕರೀಂಖಾನ್
ಗಾ: ಎಸ್.ಜಾನಕಿ, ಪಿ.ಬಿ.ಶ್ರೀನಿವಾಸ್, ಬಾಲಮುರಳಿಕೃಷ್ಣ, ಚಿತ್ರರಂಜನ್

ಸಂ: ಎಸ್.ಕೃಷ್ಣ, ಭೋಜರಾಜು
ಛಾ: ಆರ್.ಮಧು
ಸ: ಎಂ.ವೆಂಕಟರಾಜು
ನೃ: ವೇಣುಗೋಪಾಲ್
ವ/ಪ್ರ: ಅಪ್ಪಾರಾವ್, ವೀರಾಸ್ವಾಮಿ
ಹಾ: ೧)'ಮಹಿಮನ ಶಿವಗುಣ ಸಂಕೀರ್ತನಾ....',
೨)'ನಟವರ ಗಂಗಾಧರ ಉಮಾಶಂಕರ....', ೩)'ಬಾರೇ ನೀ ಚೆಲುವೇ ನಿನ್ನೊಲವು ನಲಿವು ಮಕರಂದಾ....',
೪)'ಜಯಗೌರಿ ಜಗದೀಶ್ವರಿ ಕಾವುದೆನ್ನ ದಯಾಸಾಗರಿ...',
೫)'ಬಾರಾ ಚಂದ್ರಮಾ ಚೆನ್ನರ ಚೆಲುವಾ ಬಾ...'
ಸೆ: ೧೭ ರೀಲ್‌ಗಳು, ೩೮೯೫.೦೩ ಅಡಿಗಳು
ಕ.ಸಾ: ಮಾಲಿನಿಯ ನೃತ್ಯಕ್ಕೆ ಕಾಳಿಂಗ ಶಿವನ ಸನ್ನಿಧಿಯಲ್ಲಿ ಹಾಡುತ್ತಾನೆ. ಮಾಲಿನಿ ಕಾಳಿಂಗನ ಸ್ನೇಹ ಬಯಸಿದಾಗ ಅವನು ನಿರಾಕರಿಸುತ್ತಾನೆ. ಶಿವ ಪಾರ್ವತಿ ಪಗಡೆಯಾಡಿ ಶಿವ ಸೋತಿದನ್ನು ಶಿವನ ಕೊರಳಿನಲ್ಲಿದ್ದ ಕಾಳಿಂಗ ನೋಡಿ ನಂದೀಶ್ವರನಿಗೆ ತಿಳಿಸಿದ್ದನ್ನು ಮಾಲಿನಿ ಕದ್ದು ಕೇಳುತ್ತಾಳೆ. ಅವಳು ಈ ವಿಷಯವನ್ನು ಜಗಜ್ಜಾಹೀರು ಮಾಡಿದಾಗ ಕಾಳಿಂಗನ ಮೇಲೆ ಶಿವನಿಗೆ ಅನುಮಾನ ಬಂದು ಭೂಲೋಕದಲ್ಲಿ ಜನಿಸಲು ಶಾಪ ನೀಡುತ್ತಾನೆ. ಭೂಲೋಕದಲ್ಲಿ ಮಣಿಪುರ ಅರಸನ ಮಗ ಚಂದ್ರಶೇಖರನಾಗಿ ಜನಿಸಿ ಶಂಭುರಾಜನ ಪುತ್ರಿ ಶಿವಭಕ್ತೆ ಗೌರಿಯನ್ನು ವಿವಾಹವಾಗುತ್ತಾನೆ. ವಿವಾಹಾನಂತರ ಮಾಲಿನಿಯ ಕುತಂತ್ರದಿಂದ ಗೌರಿ ಕಳಂಕಿನಿ ಪಟ್ಟ ಹೊರಬೇಕಾಗುತ್ತದೆ. ಗೌರಿ ತನ್ನ ಪಾತಿವ್ರತ್ಯ ಬಲದಿಂದ ಕಷ್ಟಗಳನ್ನೆಲ್ಲ ಎದುರಿಸುತ್ತಾಳೆ.

೧೧೯. ಶ್ರೀಧರ್ಮಸ್ಥಳ ಮಹಾತ್ಮೆ

(೧೯೬೨ / ಕಪ್ಪು-ಬಿಳುಪು / ಭಕ್ತಿಪ್ರಧಾನ)
ಲಾ: ಮಹಾತ್ಮ ಪಿಕ್ಚರ್ಸ್
ಪ್ರೊ/ನಿ: ಡಿ.ಶಂಕರಸಿಂಗ್
ಸ.ನಿ: ಜಿ.ವಿ.ರಾಮನ್
ಅ: ಹೆಚ್.ಟಿ.ಅರಸ್, ಧಿಕ್ಕಿಮಾಧವರಾವ್, ರಾಮಚಂದ್ರಶಾಸ್ತ್ರಿ, ಕೃಷ್ಣಶಾಸ್ತ್ರಿ, ಸೋರಟ್ ಅಶ್ವತ್, ಸಿ.ವಿ.ಶಿವಶಂಕರ್, ಡಿ.ಎನ್.ಒಡೆಯರ್, ಮಹಾದೇವಪ್ಪ, ಮಲ್ಲಿಕಾರ್ಜುನಪ್ಪ, ಅನಂತರಾಮ್ ಮಚ್ಚೇರಿ, ರಾಜೇಂದ್ರಪ್ರಸಾದ್, ಪ್ರತಿಮಾದೇವಿ, ಇಂದಿರಾ, ಕಲ್ಯಾಣಿ, ಕಲಾವತಿ, ಶ್ರೀರಂಗ, ಶ್ರೀಕಾಂತ್. ವೆಂಕಟಪ್ಪ, ವೆಂಕಟರಾಮಯ್ಯ, ಶಾಮಸಿಂಗ್, ಹನುಮಂತರಾವ್, ಜಾರ್ಜ್, ಅಂಕಪ್ಪ, ನಂಜುಂಡಪ್ಪ, ಚಂದ್ರಾ ಜಯಂತಿ
ಕ/ಚಿ.ಕ/ಮಾ/ಗೀ: ಹುಣಸೂರು ಕೃಷ್ಣಮೂರ್ತಿ
ಗಾ: ಪಿ.ಬಿ.ಶ್ರೀನಿವಾಸ್, ಘಂಟಸಾಲ, ಎ.ಎಂ.ರಾಜಾ, ಎಸ್.ಜಾನಕಿ

ಸಂ: ಪದ್ಮನಾಭನ್, ಜಿ.ವಿ.ರಾಮನ್
ಛಾ: ಕೆ.ಎಸ್.ಗೋವಿಂದಸ್ವಾಮಿ
ಸ: ಎಂ.ವೆಂಕಟರಾಜು
ಧ್ವ: ಕೆ.ಆರ್.ಸೀತಾರಾಂ, ಎಂ.ಬಿ.ವಾಲ್ಕೆ
ಪ್ರ: ಶಿವರಾಜ್
ಸ್ಟು: ಪ್ರೀಮಿಯರ್ (ಮೈಸೂರು), ಫಿಲಂ ಸೆಂಟರ್ (ಮದರಾಸು)
ಹಾ: ೧)'ಸರ್ವಾಕಾರಂ ಸಕಲ...', ೨)'ಪ್ರಕೃತಿಯಾ ರಮ್ಯತೆಯ...', ೩)'ಜಯಜಯ ಲೋಕಾವನ...', ೪)'ಹರನ ನೇತ್ರದೊಳುದಿಸಿ ಕಲುಷ...', ೫)'ಚಂದ್ರನಾಥಾ, ಪರಮಪೂತಾ...', ೬)'ಗತಿಕಾಣೆ ಹೇ ದಯಾಮಯಾ...', ೭)'ಜಗಹಿತಕಾಗಿ ತಾಮಸ...', ೮)'ಸರ್ವಾಕಾರಂ ಸಕಲಲೋಕಾಧಾರ...'
ವಿ: ಅನಂತರಾಮ್ ಮಚ್ಚೇರಿ ಅಭಿನಯದ ಮೊದಲ ಚಿತ್ರ
ಕ.ಸಾ: ಧರ್ಮಸ್ಥಳದ ಸ್ಥಳ ಮಹಿಮೆ ಹಾಗು ಮಂಜುನಾಥನ ಮಹಿಮೆ ಕುರಿತಂತೆ ಈ ಚಿತ್ರದ ಕಥೆ ಹಣೆಯಲಾಗಿತ್ತು.

೧೨೦. ದೇವಸುಂದರಿ

(೧೯೬೨ / ಕಪ್ಪು-ಬಿಳುಪು / ಜಾನಪದ)
ಲಾ: ಮೂನಾಸ್ ಮೂವಿಟೋನ್
ಪ್ರೊ: ಎಂ.ಹೆಚ್.ಎಂ.ಮೂನಾಸ್
ನಿ: ಸಿ.ವಿ.ರಾಜು
ಸ.ನಿ: ಪಿ.ಭಕ್ತವತ್ಸಲಂ
ಅ: ರಾಜಕುಮಾರ್, ಕಲ್ಯಾಣ್‌ಕುಮಾರ್, ಬಾಲಕೃಷ್ಣ, ನರಸಿಂಹರಾಜು, ವಹಾಬ್ ಕಾಶ್ಮೀರಿ, ಈಶ್ವರಪ್ಪ, ವೀರಣ್ಣ ಮಂಗಳೂರ್‌ಕರ್, ರಾಮಚಂದ್ರಶಾಸ್ತ್ರಿ, ಕಾಂತಾರಾವ್, ಬಿ.ಸರೋಜಾದೇವಿ, ಎಂ.ಎನ್.ಲಕ್ಷ್ಮೀದೇವಿ, ಕೃಷ್ಣಜ್ಯೋತಿ, ಅಮ್ಮಾಜಿ, ರಂಭಾ
ಕ: ಶ್ರೀಮತಿ ಎಂ.ಹೆಚ್.ಎಂ.ಮೂನಾಸ್



ಮಾ: ಎಂ.ಹೆಚ್.ಎಂ.ಮೂನಾಸ್ (ಅನುವಾದ - ಬಾಲಕೃಷ್ಣ)
ಗೀ: ಟಿ.ಎಸ್.ಬಾಲಕೃಷ್ಣ
ಗಾ: ಟಿ.ಆರ್.ಮಹಾಲಿಂಗಂ, ಎ.ಎಂ.ರಾಜಾ, ರಾಧಾ-ಜಯಲಕ್ಷ್ಮಿ
ಸಂ: ಸಿ.ವಿ.ರಾಜು
ಛಾ: ಡಿ.ಎಸ್.ಕೋಟ್ನಿಸ್
ಸ: ಪಾಂಡುರಂಗನ್
ಸ್ಟು: ಮೂನಾಸ್ ಸ್ಟುಡಿಯೋ (ಮದರಾಸು)
ಹಾ: ೧)'ಜಯಜಯ ಅಮರಾಧಿಪಾ...', ೨)'ಪಾಲಿಸು ದೇವ...', ೩)'ಸುಮನೋಹರಾ ಸುರಸುಂದರಾ.., ೪)'ಕಲಿವಾಣಯೋ ಭುವನ ಸುಂದರಿಯೋ...', ೫)'ರಮ್ಯಕನಸಲಿ ಮನವು...', ೬)'ಮನದೋಳ್ ಮನವಿದು...', ೭)'ಚೆಲುವ ಚಂದ್ರನಾ ಕಾಂತಿ.., ೮)'ಮೋಹನ ರೂಪ ದಯಾಮಯ...', ೯)'ಜನ್ಮಜನ್ಮ ಪುಣ್ಯವೇ...', ೧೦)ಗಾಂಧಾರ ಪಾಲಕರು ಇವರು...', ೧೧)'ಕರುಣೆ ನಲಿಸೆಯಾದೇವಾ...', ೧೨)'ದಾರಿಕಾಣೆ ಭಾಗ್ಯಹೀನೆ...', ೧೩)'ಅತ್ತೆಯ ಮಗಳೆಂಬ ಯಾವಂ...', ೧೪)'ಬಾಧೆ ತಾಳೆನೇ ಹೆಣ್ಣ...', ೧೫)'ಕಾವಿ ಬಟ್ಟೆಯ ತೊಟ್ಟವರೆಲ್ಲ...', ೧೬)'ವಿಶ್ವಾಸಮಿಲ್ಲಾ ಕನಸಾಗಿ...',
ವಿ: ಮೂನಾಸ್ ಅವರು ಶ್ರೀಲಂಕಾದವರು. ಒಂಬತ್ತು ಭಾಷೆಯಲ್ಲಿ ಈ ಚಿತ್ರವನ್ನು ತಯಾರಿಸುವ ಸಲುವಾಗಿ ಮದರಾಸಿನಲ್ಲಿ ಸ್ವಂತ ಸ್ಟುಡಿಯೋ ಆರಂಭಿಸಿದರು. ಕೊನೆಗೆ ನಾಲ್ಕು ಭಾಷೆಯಲ್ಲಿ ಚಿತ್ರ ಸಿದ್ಧವಾಯಿತು. ತಮಿಳಿನ ೪೦ ಪ್ರಿಂಟ್ ಒಂದೇ ಬಾರಿ ಹಾಕಿಸಿ ದಾಖಲೆ ಮಾಡಿದರು. 'ಜೀವನ ನಾಟಕ' ನಿರ್ದೇಶಕ ವಹಾಬ್ ಕಾಶ್ಮೀರಿ ಈ ಚಿತ್ರದಲ್ಲಿ ಅಭಿನಯಿಸಿದರು. ಪಿ.ಭಕ್ತವತ್ಸಲಂ ಅವರು ಸಹನಿರ್ದೇಶಕ ಸಹಾಯಕ ಸಂಕಲನಕಾರರಾಗಿ ಚಿತ್ರರಂಗ ಪ್ರವೇಶಿಸಿದರು. 'ಕಾವಿ ಬಟ್ಟೆಯ ತೊಟ್ಟವರೆಲ್ಲ...' ಎಂಬ ಹಾಡನ್ನು ನರಸಿಂಹರಾಜು ಅವರಿಗಾಗಿ ರಾಜಕುಮಾರ್ ಹಾಡಿದರು.
ಕ.ಸಾ: ಮಾನವ ಕನ್ಯೆ ದೇವಸುಂದರಿ ಅತಿ ಚೆಲುವೆ. ದೇವಲೋಕದ ಶಂಖಪಾಲನೊಂದಿಗೆ ಪ್ರಣಯ ಸಾಧಿಸಿದಳು. ಆದರೆ ಅವಳನ್ನೊಲಿದ ಬೇರೊಬ್ಬ ಯುವರಾಜ ನಿರಾಶನಾಗಿ ಯುದ್ಧ ಮಾಡಿದ. ಅವಳನ್ನೇ ಅಪಹರಿಸಿದ. ಶಂಖಪಾಲನ ನೆರವಿನಿಂದ ಪಾರಾದಳು. ದೇವತೆಗಳಿಗಿಂತ ಮಾನವರು ಅಧಿಕಾರಮಾನ್ಯರು, ಶ್ರೇಷ್ಠರು ಎಂಬ ತತ್ತ್ವವನ್ನು ಪ್ರತಿಪಾದಿಸಲು ಹಲವು ಕಷ್ಟಕೋಟಲೆಗಳನ್ನು ತಂದು ಮಾನವತೆಯನ್ನು ಒರೆಗಿಡುವ, ಪ್ರೇಮ-ನಿಷ್ಠೆ, ಪಾತಿವ್ರತ್ಯವನ್ನು ಬಿಂಬಿಸುವ ಕಥೆ

೧೨೧. ಕರುಣೆಯೇ ಕುಟುಂಬದ ಕಣ್ಣು

(೧೯೬೨ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಶೈಲಶ್ರೀ ಪ್ರೊಡಕ್ಷನ್ಸ್
ಪ್ರೊ: ಎ.ಸಿ.ನರಸಿಂಹಮೂರ್ತಿ
ನಿ: ಟಿ.ವಿ.ಸಿಂಗ್ ಠಾಕೂರ್
ಸ.ನಿ: ಎಸ್.ಕೆ.ಭಗವಾನ್
ಅ: ರಾಜಕುಮಾರ್, ರಾಜಾಶಂಕರ್, ಉದಯಕುಮಾರ್, ಲೀಲಾವತಿ, ಬಾಲಕೃಷ್ಣ, ನರಸಿಂಹರಾಜು, ಕೆ.ಎಸ್.ಅಶ್ವತ್ಥ್, ಹರಿಣಿ, ರಾಜಶ್ರೀ, ಜಯಶ್ರೀ, ಮಾ।ಉದಯಶಂಕರ್ (ಎ.ಸಿ.ನರಸಿಂಹಮೂರ್ತಿಯವರ ಪುತ್ರ), ಆದವಾನಿ ಲಕ್ಷ್ಮೀದೇವಿ, ಪದ್ಮ, ಕುಪ್ಪುರಾಜ್, ವಿಜಯರಾವ್, ರಾಮನ್, ಗಣಪತಿಭಟ್ಟ
ಕ: ಕೃಷ್ಣಮೂರ್ತಿ ಪುರಾಣಿಕರ 'ಧರ್ಮದೇವತೆ' ಕಾದಂಬರಿ.
ಮಾ: ಚಿ। ಸದಾಶಿವಯ್ಯ
ಗೀ: ಶಂಕರಾನಂದ ಯೋಗಿಗಳು, ಕಣಗಾಲ್ ಪ್ರಭಾಕರಶಾಸ್ತ್ರಿ
ಗಾ: ಎಸ್. ಜಾನಕಿ, ಪಿ.ಬಿ.ಶ್ರೀನಿವಾಸ್
ಸಂ: ವಿ.ಎನ್. ರಘುಪತಿ
ಛಾ: ಬಿ.ದೊರೈರಾಜ್
ಕಲೆ: ಆರ್.ಬಿ.ಎಸ್.ಮಣಿ
ಸ: ಜಿ.ಕೆ.ವೆಂಕಟೇಶ್
ಧ್ವ: ಇ.ಎ.ಜೀವ, ಸಿ.ಡಿ.ವಿಶ್ವನಾಥ್, ಕೆ.ಎನ್.ಷಣ್ಮುಗಂ
ವ: ರಾಮಮೂರ್ತಿ, ರೆಹಮಾನ್, ಮಾಣಿಕ್ಯಂ
ಪ್ರ: ನಾರಾಯಣಸ್ವಾಮಿ
ಸ್ಟು: ಎ.ವಿ.ಎಂ. ಜೆಮಿನಿ, ಅರುಣಾಚಲಂ, ಫಿಲಂ ಸೆಂಟರ್
ಹಾ: ೧)'ಬಾರಮ್ಮ ಗುರು ಸೇವೆ ಮಾಡುವ....', ೨)'ಆಶಾಗಾನ ಮೋಹನ....', ೩)'ಝಣ್ ಝಣ್ ಕಾಲ ಗೆಜ್ಜೆ ಝಣ್....', ೪)'ಕರುಣೆಯೇ ಕುಟುಂಬದ ಕಣ್ಣು ದೈವಶಕ್ತಿ...', ೫)'ನಿಜವ್ಯೋ ಸುಳ್ಳೋ ನಿರ್ಧರಿಸಿ...', ೬)'ನಾಗರೀಕನೆ ನಿನ್ನ...', ೭)'ಪ್ರೇಮಗಾನ ತಂದಾ...'.'
ವಿ: ಕನ್ನಡದ ಕಾದಂಬರಿ ಆಧಾರಿತ ಮೊದಲ ಚಿತ್ರ. ಶೈಲಶ್ರೀ ಪ್ರೊಡಕ್ಷನ್ಸ್ ಸಂಸ್ಥೆ ನಿರ್ಮಿಸಿದ ಮೊದಲ ಚಿತ್ರ.
ಕ.ಸಾ: ಕುಮಾರ್ ತಂದೆ-ತಾಯಿಯರ ಅಕ್ಕರೆಯ ಪುತ್ರ. ಬಾಲ್ಯದಲ್ಲಿ ಇವನು ಮಾಡುವ ಚೇಷ್ಟೆಗಳನ್ನು ಪೋಷಕರು ಸಂತೋಷವಾಗಿ ಸ್ವೀಕರಿಸುತ್ತಾರೆ. ಈ ಸ್ಥಿತಿಯಲ್ಲೇ ಬೆಳೆದು ದೊಡ್ಡವನಾದ ಕುಮಾರ್ ಅಡ್ಡ ದಾರಿ ಹಿಡಿಯುತ್ತಾನೆ. ಹೆಂಡತಿಯನ್ನು ಕಡೆಗಣಿಸುತ್ತಾನೆ. ಗಂಡ ನೀಡುವ ಹಿಂಸೆಗಳನ್ನೆಲ್ಲ ನುಂಗಿ ಪತಿಯನ್ನು ತಿದ್ದಿ ಮನುಷ್ಯನನ್ನಾಗಿಸಲು ತುಂಗ ಪ್ರಯತ್ನಿಸುತ್ತಾಳೆ. ಕುಮಾರ್ ಕಣ್ಣು ಕಳೆದುಕೊಂಡು ಅಂಧನಾದಾಗ ಪತ್ನಿ ತುಂಗ ತನ್ನ ಬದುಕಿಗೆ ಕಣ್ಣಾಗಿ ತೋರಿದ ಪ್ರೀತಿ ವಿಶ್ವಾಸಗಳಿಗೆ ಮಾರುಹೋಗುತ್ತಾನೆ. ತನ್ನ ಪಾಲಿಗೆ ಹೊಸ ಜಗತ್ತನ್ನು ತೋರಿದ ಪತ್ನಿ ಧರ್ಮದೇವತೆ ಎಂದು ಮನಗಂಡ ಕುಮಾರ್ ಸದ್ಗುಣಿಯಾಗುತ್ತಾನೆ.

೧೨೨. ತಾಯಿ ಕರುಳು

(೧೯೬೨ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಜಿ.ವಿ.ಅಯ್ಯರ್ ಪ್ರೊಡಕ್ಷನ್ಸ್
ಪ್ರೊ/ನಿ: ಜಿ.ವಿ.ಅಯ್ಯರ್
ಸ.ನಿ: ಕೆ.ಎಸ್.ಎಲ್.ಸ್ವಾಮಿ (ರವೀ)
ಅ: ಕಲ್ಯಾಣ್‌ಕುಮಾರ್, ಉದಯಕುಮಾರ್, ಕೆ.ಎಸ್.ಅಶ್ವತ್ಥ್, ಎಸ್.ಎಂ.ವೀರಭದ್ರಪ್ಪ, ಟಿ.ಎನ್.ಬಾಲಕೃಷ್ಣ, ಟಿ.ಆರ್.ನರಸಿಂಹರಾಜು, ಕುಪ್ಪರಾಜ್, ಭಾರದ್ವಾಜ್, ಗಣಪತಿಭಟ್, ಎಂ.ವಿ.ರಾಜಮ್ಮ, ವಂದನಾ, ಲೀಲಾವತಿ, ಪಾಪಮ್ಮ, ಜಯಲಕ್ಷ್ಮಿ, ಕಮಲೇಶಕುಮಾರಿ, ವಸಂತಿ, ಲೀಲಾ



ಕ: ಸಿಹಾರ್ ರಂಜನ್ ಗುಪ್ತ
ಚ.ಕ/ಮಾ/ಗೀ: ಜಿ.ವಿ.ಅಯ್ಯರ್
ಗಾ: ಪಿ.ಬಿ.ಶ್ರೀನಿವಾಸ್, ಜಿ.ಕೆ.ವೆಂಕಟೇಶ್, ರಾಘವನ್, ಎಸ್.ಜಾನಕಿ, ಜಮುನಾರಾಣಿ, ಕೋಮಲ, ಎಲ್.ಆರ್.ಈಶ್ವರಿ
ಸಂ: ಎಸ್.ಸಿ.ರಾಜನ್
ಛಾ: ಬಿ.ದೊರೈರಾಜ್
ಕಲೆ: ಆರ್.ಬಿ.ಎಸ್.ಮಣಿ (ಸಹಾಯ: ನಜೀರ್)
ಸ: ಜಿ.ಕೆ.ವೆಂಕಟೇಶ್
ಧ್ವ: (ಹಾ)ರಂಗಸ್ವಾಮಿ, ಎಂ.ಬಿ.ವಾಲ್ಕೆ (ಆಮ್ಕೊ), (ಮಾ)ಶ್ರೀನಿವಾಸ್, ದೊರೈ
ನೃ: ಜಯರಾಂ
ವ: ಎಂ.ಜಿ.ನಾಯ್ಡು, ಕೃಷ್ಣ
ಪ್ರ: ನಾರಾಯಣಸ್ವಾಮಿ, ಹರಿಬಾಬು, ಶ್ರೀನಿವಾಸ್
ಸ್ಟು: ಮೆಜೆಸ್ಟಿಕ್
ಹಾ: ೧)'ಹೂವು ತರುವರ ಮನೆಗೆ...', ೨)'ತಾಯಿ ತಂದೆ ಇಬ್ಬರೂ...', ೩)'ಬಾ ತಾಯಿ ಭಾರತಿಯೆ...', ೪)'ಮನಸು ಮನಸು ಕಲೆತರೇನೇ...', ೫)'ನೆನ್ನೆಯಿಂದಿನ ನೆನಪಂತ...', ೬)'ದೂರದಿಂದ ಬಂದವರೇ...', ೭)'ಹೆಣ್ಣು ಹೊನ್ನು ಮಣ್ಣು...', ೮)'ನಸೀಬು ಖೋಟಾ ಆದ ಮೇಲೆ...', ೯)'ಶೃಂಗಾರ ಯಾರಿಗೆಂದು...',
ವಿ: ಕೆ.ಎಸ್.ಎಲ್.ಸ್ವಾಮಿ (ರವೀ) ಸಹಾಯಕ ನಿರ್ದೇಶಕರಾಗಿ ಚಲನಚಿತ್ರರಂಗ ಪ್ರವೇಶಿಸಿದ ಚಿತ್ರ.
ಕ.ಸಾ: ಕುರೂಪಿಯಾದರೇನು ತಾಯಿ ಮನಸ್ಸು ಮಗಳನ್ನು ಬಿಡದು. ಗುಣ, ಕಲಾವಂತಿಕೆ ರೂಪದಲ್ಲಿಲ್ಲ ನಡತೆಯಲ್ಲಿದೆ. ಮಕ್ಕಳಿಗಾಗಿ ತಾಯಿ ಮಾಡುವ ತ್ಯಾಗವೇ ಈ ಚಿತ್ರದ ಪ್ರಧಾನ ಕಥಾ ವಸ್ತು.

೧೨೩. ಮಹಾತ್ಮ ಕಬೀರ್

(೧೯೬೨ / ಕಪ್ಪು-ಬಿಳುಪು / ಭಕ್ತಿಪ್ರಧಾನ)
ಲಾ: ಸರ್ವೋದಯ ಚಿತ್ರಾ
ಪ್ರೊ: ಟಿ.ಎನ್.ರೆಡ್ಡಿ
ನಿ: ಪಿ.ಶ್ರೀನಿವಾಸ್
ಸ.ನಿ: ಜಿ.ಎಸ್.ನಾರಾಯಣ್
ಅ: ರಾಜಕುಮಾರ್, ಕೃಷ್ಣಕುಮಾರಿ, ಉದಯಕುಮಾರ್, ಎಂ.ಎನ್.ಲಕ್ಷ್ಮೀದೇವಿ, ಪಾಪಮ್ಮ, ಮಹಾಲಿಂಗ ಭಾಗವತರ್, ಟಿ.ಎನ್.ಬಾಲಕೃಷ್ಣ, ಶಿವಾಜಿ, ಭುಜಂಗರಾವ್, ಶ್ರೀಕಾಂತ್, ಪಿ.ಎಸ್.ಮಣಿ, ಎಂ.ಎಸ್.ರಂಗನಾಥ, ರಾಮು, ಶಿವಪ್ಪ, ಚಿ। ಸದಾಶಿವಯ್ಯ, ಸೋಹನ್‌ಬಾಬು, ಬೇಬಿ ಸೀತಾ,



ಕು। ಸುಚಿತ್ರಾ, ಬೇಬಿ ಚಂದ್ರಕಲಾ, ಜಿ.ಎಸ್.ನಾರಾಯಣ್, ರವಿ, ಮಂಜು, ನಂದಗೋಪಾಲ್
ಮಾ/ಗೀ: ಎಂ.ನರೇಂದ್ರಬಾಬು, ಚಿ। ಸದಾಶಿವಯ್ಯ
ಗಾ: ಘಂಟಸಾಲ, ಬಾಲಮುರಳಿ ಕೃಷ್ಣ, ಸಿ.ಎಸ್.ಸರೋಜಿನಿ, ಲತಾ, ಜಿ.ಕಮಾಲ್, ಬಿ.ಗೋಪಾಲಂ, ನಾಗೇಂದ್ರ, ಎಸ್.ಜಾನಕಿ, ಜಯದೇವ್, ರಾಮಚಂದ್ರರಾವ್
ಸಂ: ಎಂ.ಎ. ಪೆರುಮಾಳ್
ಛಾ: ಜಾನಕೀರಾಂ
ಕಲೆ: ಬಿ.ಸಿ.ಬಾಬು
ಸ: ಅನುಸೂಯಾದೇವಿ
ಧ್ವ: ಮೋಹನಸುಂದರಂ, ಡಿ.ಲಾಜರಸ್
ನೃ: ವೆಂಪಟಿ ಚಿನ್ನ ಸತ್ಯಂ
ವ: ಪಿ.ಬಿ. ಕೃಷ್ಣಮೂರ್ತಿ
ಪ್ರ: ಬಿ.ನಾರಾಯಣ ರಾವ್, ಚೌಧುರಿ ದೊರೆಸ್ವಾಮಿ
ಸ್ಟು: ಗೋಲ್ಡನ್
ಹಾ: ೧)'ನಗುತಿರು ಚೆಂದ...', ೨)'ರಾಮಾ ಮಂಗಳ ನಾಮಾ...', ೩)'ಜಯಜಯ ಮಂಗಳ...', ೪)'ಗುರುಬ್ರಹ್ಮ: ಗುರುವಿಷ್ಣು:...', ೫)'ಗುರುವೆ ತಂದೆಯು...', ೬)'ತಾ ಸವಿದ ಪ್ರೇಮ...', ೭)'ಮೂಲೋಕದಾನಾಥ...', ೭)'ಕೂಡಿಸಿದ ಹಣಕೆ...', ೮)'ಕೆರೆಯಲ್ಲಿ ನದಿಯಲ್ಲಿ...', ೯)'ಇರುವ ನೆಲ ತಾವೊಂದೆ...', ೧೦) ತಂದೆ ಹೋದೆಯಾ...', ೧೧)'ಜಯಜಯ ಶ್ರೀರಾಮನೇ...', ೧೨)'ಇನ್ನು ಚಿಂತಿಲ್ಲ...', ೧೩)'ನಿನಗೇಕ ಮನಸೋತು..., ೧೪)'ಸಮೋಹಂ ಸರ್ವಭೂತೇಷು...', ೧೫)'ರವಿತಾರೆ...', ೧೬)'ಚೆಲ್ಲಿ ಸೂಸುವ ತೆರದಿ...', ೧೭)'ಅಂದದ ಸುಂದರ...', ೧೮)'ಮತಿಹೀನಳಾದೆನೇ ಪ್ರಭೋ...', ೧೯)'ವರಯೋಗಿಗಳೆ...', ೨೦) ದೇವನೇ ಶಿವರಾಮಾ..', ೨೧)'ಗುರುವು ಹೇಳಿದ ಮೇಲೆ...', ೨೨)'ಕರೆಯುತಿದೆ ಕೇಳ...'
ವಿ: ಕನ್ನಡದ ಮೊದಲ ಮಹಿಳಾ ಸಂಗೀತ ನಿರ್ದೇಶನವನ್ನು ಹೊಂದಿದ ಚಿತ್ರ
ಕ.ಸಾ: ಯಾವುದೇ ಧರ್ಮ, ಜಾತಿಗೆ ಸೇರದೆ ಮಾನವ ಕುಲಕ್ಕೆ ಸೇರಿದವರೆಂದು ಬಾಳಿ ಲೋಕಕಲ್ಯಾಣಕ್ಕೆ ಜೀವನವನ್ನು ಮುಡಿಪಾಗಿಟ್ಟ ಮಹಾತ್ಮ ಕಬೀರರ ಜೀವನ ಚರಿತ್ರೆಯನ್ನು ಬಿಂಬಿಸಿದ ಚಿತ್ರ.

೧೨೪. ವಿಧಿ ವಿಲಾಸ

(೧೯೬೨ / ಕಪ್ಪು-ಬಿಳುಪು / ಜಾನಪದ)
ಲಾ: ಮುರುಗನ್ ಪ್ರೊಡಕ್ಷನ್ಸ್
ಪ್ರೊ: ಎಸ್.ಎನ್.ಮುರುಗಯ್ಯನ್
ನಿ: ಎಸ್.ವಿ.ಮಹೇಶ್
ಸ.ನಿ: ಎಸ್.ಅಯ್ಯಾಸ್ವಾಮಿ, ಕುಂದಾನಿ ಸತ್ಯಂ

ಅ: ರಾಜಕುಮಾರ್, ಉದಯಕುಮಾರ್, ಕೆ.ಎಸ್.ಅಶ್ವತ್ಥ್, ನರಸಿಂಹರಾಜು, ಲೀಲಾವತಿ, ಹರಿಣಿ, ಎಂ.ಎನ್.ಲಕ್ಷ್ಮೀದೇವಿ, ಜಯಾ, ವಾಸಂತಿ, ರತ್ನಮಾಲಾ
ಕ/ಚ.ಕ/ಮಾ/ಗೀ: ಹೆಚ್.ಎಲ್.ನಾರಾಯಣರಾವ್
ಗಾ: ಪಿ.ಬಿ.ಶ್ರೀನಿವಾಸ್, ಎಸ್.ಜಾನಕಿ, ಜಮುನಾರಾಣಿ, ಸಿ.ಎಸ್.ಸರೋಜಿನಿ, ನಾಗೇಂದ್ರ, ಶಾಂತಾ
ಸಂ: ಪಿ.ಎಸ್.ಮೂರ್ತಿ, ಪಿ.ವಿ.ಎಸ್.ಮಣಿ, ವಿ.ಎಸ್.ಮಣಿ
ಛಾ: ಕೆ.ಎಸ್.ಗೋವಿಂದಸ್ವಾಮಿ, ದ್ವಾರಕಾನಾಥ್, ಎಸ್.ಕೆ. ವರದರಾಜನ್
ಕಲೆ: ಆರ್.ಬಿ.ಎಸ್.ಮಣಿ
ಸ: ಟಿ.ಪದ್ಮನ್
ಧ್ವ: ಕೆ.ಆರ್.ಸೀತಾರಾಂ, ಇ.ಐ.ಜೀವ
ನೃ: ಬಿ.ಜಯರಾಂ (ಉಡುಪಿ)
ಸಾ: ನಲ್ಲೈರಾಜು, ಶ್ಯಾಮಸನ್, ದಯಾಳನ್, ರಮೇಶ್
ವ: ಕೆ.ಎಸ್. ಜಾರ್ಜ್
ಪ್ರ: ಸಿ.ವಿ.ರಾಜು, ತಂಗಪ್ಪನ್
ಸ್ಟು: ಪ್ರೀಮಿಯರ್ (ಮೈಸೂರು), ನ್ಯೂಟೋನ್ (ಮದರಾಸು)
ಹಾ: ೧)'ಆನಂದ ಸಾಮ್ರಾಜ್ಯಾಭಿಷೇಚನ ವಿನೆಂಬೆ ನೀ ಭಾಗ್ಯ ಮನಮೋಹನಾ...', ೨)'ಅರಿಯದೇ ನಿನ್ನಯ ಗುಣಗಳ ಜರಿದರಲಾ ಕರಿಣನೆಂಮ...', ೩)'ಸರಸಕೆ ಬಾ ಸುಕುಮಾರ ಅನುಮಾನವೇಕೆ ಧೀರ....', ೪)'ನಾನೇ ನೀನು ನೀನೇ ನಾನು ಇನ್ನೇನು ಬೇಡ ನಮಗೆ...', 'ಮಾತಾ ಹೇ ಗಿರಿಜಾತಾ...', 'ದಾರಿ ಕಾಣೆನೆ - ನೋವ...', ೫)'ಬಿಡುಗೋಪಿ, ಜನಚಾರನೆ...'
ಕ.ಸಾ: ವಿಧಿಯ ಮುಂದೆ ಮನುಷ್ಯ ಪ್ರಯತ್ನ ಏನೂ ಅಲ್ಲ ಎಂಬುದನ್ನು ಈ ಕಥೆ ನಿರೂಪಿಸುತ್ತದೆ. ರಾಜ ಮಲಯಕೇತುಗೆ ಒಮ್ಮೆ ವಿಧಿ ಎದುರಾಗಿ ಆತನ ಪುತ್ರಿ ಹಾಗು ಸೇನಾಪತಿಯ ಮಗ ವಿವಾಹವಾಗಿ ಅವರಿಂದ ಜನಿಸುವ ಮಗುವೇ ಸಾವಿಗೆ ಕಾರಣವಾಗುತ್ತಾನೆ ಎಂದು ಹೇಳುತ್ತದೆ. ಮಗಳು ದೊಡ್ಡವಳಾದಂತೆ ಸೇನಾಪತಿಯ ಮಗ ಮಾಧವಸಿಂಹ (ರಾಜಕುಮಾರ್) ರಾಜಕುಮಾರಿ ಮಾಲತಿ (ಲೀಲಾವತಿ)ಯನ್ನು ಮೋಹಿಸುತ್ತಾನೆ. ಒಮ್ಮೆ ಶತ್ರುಗಳು ರಾಜಕುಮಾರಿಯನ್ನು ಅಪಹರಿಸುವ ಸಂದರ್ಭದಲ್ಲಿ ಮಾಧವಸಿಂಹ ಅವರ ಮೇಲೆ ಎರಗಿ ರಕ್ಷಿಸುತ್ತಾನೆ. ಮಾಧವಸಿಂಹ ತನ್ನ ಪುತ್ರಿಯನ್ನು ಮೋಹಿಸುತ್ತಿದ್ದಾನೆಂದು ಅರಿತ ರಾಜ ಆತನಿಗೆ ನಾನಾ ಕಷ್ಟಗಳ ಕೆಲಸ ಹೇಳುತ್ತಾನೆ. ಗಾಂಧರ್ವ ವಿವಾಹವಾಗಿದ್ದ ಕಾರಣ ರಾಜಕುಮಾರಿ ಗಂಡು ಮಗುವಿನ ತಾಯಿಯಾಗುತ್ತಾಳೆ. ರಾಜ ತಾಯಿ-ಮಗುವನ್ನು ಬೇರ್ಪಡಿಸಿ ಮಗಳನ್ನು ಸೆರೆಮನೆಗೆ ದೂಡುತ್ತಾನೆ. ರಾಜಕುಮಾರಿ ತಪ್ಪಿಸಿಕೊಂಡು ಹೊರ ಬರುತ್ತಾಳೆ. ಮೋಹಿನಿಯೊಬ್ಬಳು ಮಾಧವಸಿಂಹನನ್ನು ಅರ್ಧ ಶಿಲೆ ಮಾಡಿರುತ್ತಾಳೆ. ಉಪಾಯದಿಂದ ಮೋಹಿನಿಯನ್ನು ಕೊಂದು ಮಾಧವನನ್ನು ಮಾಲತಿ ರಕ್ಷಿಸಿಕೊಳ್ಳುತ್ತಾಳೆ. ರಾಜ ಮಗುವನ್ನು ಕಾಡಿಗೆ ಬಿಟ್ಟು ಬರಲು ಬರುತ್ತಾನೆ. ಮಗು ಮಾಯವಾಗಿ ಬೆಟ್ಟದ ಮೇಲಿಂದ ಬೀಳುತ್ತಿರುವಂತೆ ಭಾಸವಾಗುತ್ತದೆ. ರಾಜ ಮಲಯಕೇತು ರಕ್ಷಿಸಲು ಧಾವಿಸಿ ತಾನೇ ಬೆಟ್ಟದ ಮೇಲಿಂದ ಬಿದ್ದು ಸಾಯುತ್ತಾನೆ. ವಿಧಿಯ ಮುಂದೆ ಮನುಷ್ಯನ ಯತ್ನ ನಡೆಯುವುದಿಲ್ಲ.

೧೨೫. ತೇಜಸ್ವಿನಿ

(೧೯೬೨ / ಕಪ್ಪು-ಬಿಳುಪು / ಜಾನಪದ)
ಲಾ: ಪಾಂಡುರಂಗ ಪ್ರೊಡಕ್ಷನ್ಸ್
ಪ್ರೊ: ಎಂ.ಪಂಢರಿಬಾಯಿ
ನಿ: ಹೆಚ್.ಎಲ್.ಎನ್.ಸಿಂಹ
ಸ.ನಿ: ಎಂ.ಎಸ್.ಬಾಬು
ಅ: ರಾಜಕುಮಾರ್, ರಾಜಾಶಂಕರ್, ಪಂಢರಿಬಾಯಿ, ಆದವಾನಿ ಲಕ್ಷ್ಮೀದೇವಿ, ರಾಜಶ್ರೀ, ಬಿಂದೋಟಿ ಲೀಲಾ, ನರಸಿಂಹರಾಜು, ಎಂ.ಎನ್.ಲಕ್ಷ್ಮೀದೇವಿ, ಸಹಸ್ರನಾಮಂ, ಥಿಕ್ಕಿಮಾಧವರಾವ್, ಬಾಲಕೃಷ್ಣ, ಅಶ್ವತ್, ಈಶ್, ರಾಮಚಂದ್ರಶಾಸ್ತ್ರಿ, ಹನುಮಂತಾಚಾರ್, ಗಣಪತಿಭಟ್, ರಮಾದೇವಿ, ಹೆಚ್.ವಿ.ನರಸಿಂಹನ್, ವಿಮಲಾನಂದ ದಾಸ್

ಕ: 'ಕರ್ಮವೀರ' ಪತ್ರಿಕೆಯಲ್ಲಿ ಪ್ರಕಟವಾದ ಗೋವಿಂದಮೂರ್ತಿ ದೇಸಾಯಿಯವರ ಸಣ್ಣ ಕಥೆ 'ಹೊಲತಿ ಕೋಟೆ' ಆಧರಿತ
ಚಿ.ಕ/ಮಾ: ಹೆಚ್.ಎಲ್.ಎನ್.ಸಿಂಹ
ಗೀ: ಕು.ರ.ಸೀತಾರಾಮಶಾಸ್ತ್ರಿ
ಗಾ: ಪಿ.ಬಿ.ಶ್ರೀನಿವಾಸ್, ಪಿ.ನಾಗೇಶ್ವರರಾವ್, ಪಿ.ಲೀಲಾ, ಸ್ವರ್ಣಲತಾ
ಸಂ: ಪಿ.ಆರ್.ಸಬಾಸ್ಟಿಯನ್
ಛಾ: ಆರ್.ಸಂಪತ್, ಬಿ.ದೊರೈರಾಜ್
ಕಲೆ: ಆರ್.ಬಿ.ಎಸ್.ಮಣಿ
ಸ: ಎಂ.ವೆಂಕಟರಾಜು
ಧ್ವ: ಈ.ಐ.ಜೀವ, ರಂಗಸ್ವಾಮಿ, ಮೋಹನಸುಂದರಂ
ನೃ: ಎ.ಕೆ.ಚೋಪ್ರಾ, ಎಂ.ರಾಧಾಕೃಷ್ಣನ್
ಸಾ: ವೈ.ಶಿವಯ್ಯ
ವ: ಫ್ರಾನ್ಸಿಸ್
ಪ್ರ: ಕೆ.ನಾರಾಯಣಸ್ವಾಮಿ, ತಿರುನಾವಕ್ಕರಸು
ಸ್ಟು: ಮೆಜೆಸ್ಟಿಕ್. ಅಪ್ಪೊ, ನೆಪ್ಚೂನ್, ಶ್ಯಾಮಲಾ (ಮದರಾಸು)
ಹಾ: ೧)'ನಂದಿನೀ ನಳಿನೀ...', ೨)'ರಸಫಳಿಗೆ ಬಾರದು...', ೩)'ಮಾಧುರ್ಯ ತುಂಬಿದ...', ೪)'ಅಳಿಯಿತೇ ಮುಳುಗಿತೇ...', ೫)'ಅನೆ! ಅಂಬಾರೀ!...', ೬)'ತನಿವಣ್ಣ ಆರಿಸಿ, ತನೆವಾಲ...', ೭)'ಪಾಲಕ ಮುನಿದರೆ...'
ವಿ: ರಾಜಶ್ರೀ ಹಾಗು ಚಿಂದೋಡಿ ಲೀಲಾ ನೃತ್ಯಗಾರ್ತಿಯರು. ಹೆಚ್.ಎಲ್.ಎನ್.ಸಿಂಹ ಒಂದು ಸಣ್ಣ ಪಾತ್ರವನ್ನು ಮಾಡಿದ್ದಾರೆ.
ಕ.ಸಾ: ರಂಗನಾಯಕಿ (ಪಂಢರಿಬಾಯಿ) ಹೀನಕುಲದಲ್ಲಿ ಜನಿಸಿದರೂ ಆಕೆ ಉತ್ತಮ ಸಂಸ್ಕೃತಿಯ ಹೆಣ್ಣೆಂಬುದನ್ನು ಆಕೆಯ ಆರಾಧ್ಯ ದೈವ ನಾಗರಾಜ ಸಮಾಜಕ್ಕೆ ತಿಳಿಸುವುದೇ ಈ ಚಿತ್ರದ ಕಥಾ ಸಾರಾಂಶ. ಶಿವಪ್ಪ ನಾಯಕ (ರಾಜಕುಮಾರ್) ಈಕೆಯನ್ನು ಮೋಹಿಸುತ್ತಾನೆ. ಸ್ವತಃ ನಾಗರಾಜನೇ ಪ್ರಸಾದ ನೀಡಿದ್ದರಿಂದ ವಿವಾಹಿತನಾಗಿದ್ದರೂ ಈತ ರಂಗನಾಯಕಿಯನ್ನು ಮದುವೆ ಮಾಡಿಕೊಳ್ಳುತ್ತಾನೆ. ಮತ್ಸರ ಚೋದನೆಯಿಂದ ಶಿವಪ್ಪ ನಾಯಕನ ತಮ್ಮ ರಾಮನಾಯಕ (ರಾಜಾಶಂಕರ್) ಅಣ್ಣನ ಮೇಲೆ ಹಗೆ ಸಾಧಿಸುವುದಲ್ಲದೆ ಅತ್ತಿಗೆಯನ್ನೇ ಮೋಹಿಸುತ್ತಾನೆ. ವಿರೋಧಿಗಳ ಕುತಂತ್ರದಿಂದ ಶಿವಪ್ಪನಾಯಕ ರಾಜ್ಯ ಕಳೆದುಕೊಳ್ಳುತ್ತಾನಲ್ಲದೆ ಅಂಧನಾಗುತ್ತಾನೆ. ರಂಗನಾಯಕಿಯ ಪೂಜಾ ಪ್ರಭಾವದಿಂದ ಶಿವಪ್ಪನಾಯಕನಿಗೆ ಕಣ್ಣುಗಳು ಬಂದು ರಾಜ್ಯ ದಕ್ಕುತ್ತದೆ. ತಮ್ಮನೂ ಸಹ ಒಳ್ಳೆಯವನಾಗುತ್ತಾನೆ.

೧೯೬೩

೧೨೬. ಸಂತತುಕಾರಾಂ

(೧೯೬೩ / ಕಪ್ಪು-ಬಿಳುಪು / ಭಕ್ತಿಪ್ರಧಾನ)
ಲಾ: ಗಣೇಶ್ ಪ್ರಸಾದ್ ಮೂವೀಸ್
ಪ್ರೊ: ಬಿ. ರಾಧಾಕೃಷ್ಣ
ನಿ: ಸುಂದರರಾವ್ ನಾದಕರ್ಣಿ
ಅ: ರಾಜಕುಮಾರ್, ಉದಯಕುಮಾರ್, ಬಾಲಕೃಷ್ಣ, ವಾದಿರಾಜ್, ರಾಜಶ್ರೀ, ಲೀಲಾವತಿ, ಪಂಢರಿಬಾಯಿ, ಬೇಬಿಸುಮ, ಬೇಬಿ ಕಲಾ, ಶಿವಶಂಕರ್, ಅಶ್ವತ್, ಹನುಮಂತಾಚಾರ್, ಸುಂದರರಾವ್
ಮಾ: ಚಿ.ಉದಯಶಂಕರ್
ಗೀ: ಚಿ.ಸದಾಶಿವಯ್ಯ
ಗಾ: ಪಿ.ಬಿ.ಶ್ರೀನಿವಾಸ್. ಎಸ್.ಜಾನಕಿ, ಎಲ್.ಆರ್.ಈಶ್ವರಿ, ಪೀಠಾಪುರಂ ನಾಗೇಶ್ವರರಾವ್, ರಾಮದಾಸ್, ಭೋಜರಾವ್
ಛಾ: ಡಿ.ವಿ.ರಾಜಾರಾಂ
ಸ: ವಿಜಯಭಾಸ್ಕರ್
ಹಾ: ೧)'ಜಯತು ಜಯ ವಿಠಲ ಪಾಂಡುರಂಗ ಪಂಡರಿನಾಥ....', ೨)'ಈ ನನ್ನ ತೌರುಮನೆಯಾ...', ೩)'ಜೇಡ ಕೃಷ್ಣ ರಂಗನಾಟ...', ೪)'ಪತಿವ್ರತೆ ಕುರುಡಳು ಇತರರ ಅಂದಕೆ...', ೫)'ಭಿಕ್ಷಾಪಾತ್ರ ಅವಲಂಬಿ ನಾ...', ೬)'ನಾಮ ಸಂಕೀರ್ತನೆಯು...', ೭)'ಸದಾ ಕಣ್ಣ ಮುಂದೇ...', ೮)'ಆದಿಬೀಜ ಒಂದೇನೇ...', ೯)'ಮನೆಯಲೆಲ್ಲಾ ನಲಿಯುತಿಹಳು...', ೧೦)'ಪುಂಡಲೀಕನಿಗಾಗಿ...', ೧೧)'ವಿಳಯ್ಯ ಮನಮೋಹನಾ...', ೧೨)'ಮರೆಯದೆ ಸೂರ್ಯನು...', ೧೩)'ಮಣ್ಣಿಂದ ಕಾಯವು...', ೧೪)'ಕೂಡಿಸಯ್ಯಾಧನಾ...', ೧೫)'ಅಮೃತಕ್ಕೂ ತಾ ರುಚಿ...', ೧೬)'ಕಣ್ಣಲ್ಲಿ ಕರೆವ...', ೧೭)'ತುಕಾ ಎಂದ ಮಾತ್ರ...', ೧೮)'ತೊರಟೆ ಸೇರ ನಮ್ಮೂರ...'
ವಿ: ಹಿಂದಿಯಲ್ಲು ಈ ಚಿತ್ರ ತಯಾರಾಗಿದ್ದು ವಿಷ್ಣುಪಂತ್ ಪಗ್ನೀಸ್‌ರವರು ತುಕಾರಾಮನ ಪಾತ್ರ ಮಾಡಿದರು. ರಾಷ್ಟ್ರಮಟ್ಟದಲ್ಲಿ ರಜತ ಪದಕ ಪಡೆದ ಚಿತ್ರ. ಡಿ.ವಿ.ರಾಜಾರಾಂ ಛಾಯಾಗ್ರಹಣ ನೀಡಿದ ಮೊದಲ ಚಿತ್ರ. ಚಿ.ಉದಯಶಂಕರ್ ಸಂಭಾಷಣೆ ರಚಿಸಿದ ಪ್ರಥಮ ಚಿತ್ರ.
ಕ.ಸಾ: ವಿಠ್ಠಲನ ಅನನ್ಯ ಭಕ್ತನಾದ ತುಕಾರಾಮನ ಜೀವನ ಚರಿತ್ರೆ ಕುರಿತ ಚಿತ್ರ.

೧೨೭. ಸಾಕುಮಗಳು

(೧೯೬೩ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಪದ್ಮಿನಿ ಪಿಕ್ಚರ್ಸ್
ಪ್ರೊ/ನಿ: ಬಿ.ಆರ್.ಪಂತುಲು
ಸ.ನಿ: ಪುಟ್ಟಣ್ಣ ಕಣಗಾಲ್, ಸಿಂಗಮುತ್ತು
ಅ: ರಾಜಕುಮಾರ್, ರಾಜಾಶಂಕರ್, ನರಸಿಂಹರಾಜು, ಬಾಲಕೃಷ್ಣ, ಡಿಕ್ಕಿಮಾಧವರಾವ್, ಸಾಹುಕಾರ್ ಜಾನಕಿ, ಕಲ್ಪನಾ, ಪಾಪಮ್ಮ, ರಾಜಲಕ್ಷ್ಮಿ, ಕೃಷ್ಣಶಾಸ್ತ್ರಿ, ಶಿವಾಜಿರಾವ್, ಮಹೇಶ್ವರಯ್ಯ, ಬಸಪ್ಪ, ರಮಾದೇವಿ, ಎಂ.ಎನ್.ಲಕ್ಷ್ಮೀದೇವಿ, ಶೆಣೈ, ವಿಜಯರಾವ್, ಶ್ರೀನಿವಾಸ್
ಕ: ಈ.ರ. ಷಣ್ಮುಗಂ
ಮಾ: ಜಿ.ವಿ.ಅಯ್ಯರ್
ಗೀ: ಕಣಗಾಲ್ ಪ್ರಭಾಕರಶಾಸ್ತ್ರಿ
ಗಾ: ಘಂಟಸಾಲ, ಪಿ.ಬಿ.ಶ್ರೀನಿವಾಸ್, ಪಿ.ಸುಶೀಲ, ಎಸ್.ಜಾನಕಿ, ಪಿ.ಲೀಲ
ಸಂ: ಆರ್.ದೇವರಾಜ್
ಛಾ: ವಿ.ರಾಮಮೂರ್ತಿ
ಸ: ಟಿ.ಜಿ.ಲಿಂಗಪ್ಪ
ಧ್ವ: (ಹಾ) ಜೀವ, (ಮಾ) ಷಣ್ಮುಗಂ, ಪಾರ್ಥಸಾರಥಿ, ಎಂ.ಶಿವರಾವ್
ನೃ: ಪಿ.ಎಸ್.ಗೋಪಾಲಕೃಷ್ಣ
ವ: ಎ.ಟಿ.ಷಣ್ಮುಗಂ-ಮಣಿ
ಪ್ರ: ಹರಿಬಾಬು, ಎಂ.ಕೆ.ಶ್ರೀನಿವಾಸ್, ವಿ.ಪಾರ್ಥಸಾರಥಿ, ವೀರರಾಜು,
ಸ್ಟು: ವಿಜಯ ವಾಹಿನಿ, ಅರುಣಾಚಲಂ
ಹಾ: ೧)'ಹೇಳಿದ ಮಾತೇ ಕೇಳಿ ಇದು ಹೇಳಿದ ಮಾತೇ ಕೇಳಿ....', ೨)'ಒಂದೇ ಒಂದು ಹೊಸ ಹಾಡು ಎಂದೂ ಮರೆಯದ....', ೩)'ಬಾ ಬೇಗ ಮನಮೋಹನ....', ೪)'ಜೀವನರಾಗ ಈ ಅನುರಾಗ ಮಧುರಾನಂದವಿದೇ....', ೫)'ನಾನು ಅಂಧಳಾದೆ ನೀನು ಮೂಗನಾದ ಬದುಕಲ್ಲಿ ಬೇವಾದ ಬೆಲ್ಲದ ಹಾಗೆ....', ೬)'ಎಲ್ಲೀ ಹೊಂಬೆಳಕೆಲ್ಲಿ....'
ವಿ: ಕಲ್ಪನಾ ಚಿತ್ರರಂಗ ಪ್ರವೇಶಿಸಿದರು.
ಕ.ಸಾ: ಜೀವನದಲ್ಲಿ ಶಿಸ್ತಿಲ್ಲದೆ ಉಡಾಫೆ ಹೊಡೆಯುತ್ತಿದ್ದ ತಂದೆಯಂತೆಯೇ ಮಗ ರಘು (ರಾಜಕುಮಾರ್) ಉಂಡಾಡಿ ಗುಂಡನಾದ. ತಂಗಿ ಉಮಾ (ಕಲ್ಪನಾ) ಶಾಲಾ ಶಿಕ್ಷಕಿಯಾಗಿದ್ದು ತಂದೆ, ಅಣ್ಣ, ರೋಗಿಷ್ಠ ತಾಯಿಯನ್ನು ಸಲಹಬೇಕಾಗಿತ್ತು. ತಾಯಿ ಸಾಯುವಾಗ ಉಮಾ ಸಾಕುಮಗಳು ಎಂದು ತಿಳಿಸಿ ಸಾಯುತ್ತಾಳೆ. ಉತ್ತಮ ಗಾಯಕಿಯೂ ಆದ ಉಮಾಳ ಹಾಡನ್ನು ಆಕಾಶವಾಣಿಯಲ್ಲಿ ಕೇಳಿ ಶ್ರೀಮಂತ ವಾಸು (ರಾಜಾಶಂಕರ್) ಉಮಾಳನ್ನು ಇಷ್ಟ ಪಡುತ್ತಾನೆ. ಮನೆಯಲ್ಲಿನ ಕಷ್ಟಗಳಿಂದಾಗಿ ಉಮಾ ಮುದುಕನೊಬ್ಬನನ್ನು ಮದುವೆಯಾಗಲು ಒಪ್ಪಿ, ಹಣ ತಂದು ಜೈಲಿಗೆ ಸೇರಿದ್ದ ಅಣ್ಣನನ್ನು ಬಿಡಿಸಿಕೊಳ್ಳುತ್ತಾಳೆ. ತಾಳಿ ಕಟ್ಟಿಸಿಕೊಳ್ಳಲು ನೋಡಿದರೆ ವಾಸುವೇ ವರವಾಗಿರುತ್ತಾನೆ. ವಾಸು ತಂಗಿ ಮಂಜುಳಾ ಅಂಧಳಾಗಿರುತ್ತಾಳೆ. ಮನಃ ಪರಿವರ್ತನೆಯಾಗಿದ್ದ ರಘು ಸೇವೆ ಮಾಡಿ ಮಂಜುಳಾಗೆ ಕಣ್ಣು ಬರಿಸುತ್ತಾನೆ. ವಾಸು ವಿದೇಶಕ್ಕೆ ಹೋದ ಸಂದರ್ಭದಲ್ಲಿ ಉಮಾಳನ್ನು ಹೊರಹಾಕಿರುತ್ತಾರೆ. ಅವಳು ಹಳ್ಳಿಯೊಂದರಲ್ಲಿ ಗಂಡು ಮಗುವಿನ ತಾಯಿಯಾಗುತ್ತಾಳೆ. ಕೊನೆಗೆ ಎಲ್ಲರೂ ಒಟ್ಟಿಗೆ ಸೇರುತ್ತಾರೆ.

೧೨೮. ಲಾಯರ ಮಗಳು

(೧೯೬೩ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಜಿ.ವಿ.ಅಯ್ಯರ್ ಪ್ರೊಡಕ್ಷನ್ಸ್
ಪ್ರೊ/ನಿ: ಜಿ.ವಿ.ಅಯ್ಯರ್
ಅ: ಕಲ್ಯಾಣ್‌ಕುಮಾರ್, ಉದಯಕುಮಾರ್, ಬಾಲಕೃಷ್ಣ, ನರಸಿಂಹರಾಜು, ಸಿ.ವಿ.ಶಿವಶಂಕರ್, ನಾಗೇಶ್, ವಂದನಾ, ಜಯಶ್ರೀ, ಎಂ.ಎನ್.ಲಕ್ಷ್ಮೀದೇವಿ



ಕ/ಚಿ.ಕ/ಮಾ/ಗೀ: ಜಿ.ವಿ.ಅಯ್ಯರ್
ಗಾ: ಪಿ.ಬಿ.ಶ್ರೀನಿವಾಸ್, ಎಸ್.ಜಾನಕಿ, ಎ.ಪಿ.ಕೋಮಲ, ಬಿ.ಆರ್.ಲತ
ಸಂ: ಎನ್.ಸಿ.ರಾಜನ್
ಛಾ: ಬಿ.ದೊರೈರಾಜ್
ಕಲೆ: ಆರ್.ಬಿ.ಎಸ್.ಮಣಿ
ಸ: ಜಿ.ಕೆ.ವೆಂಕಟೇಶ್
ಧ್ವ: (ಹಾ) ಎಂ.ಬಿ.ವಾಲ್ಕೆ, (ಮಾ) ನಾಗೇಶ್, ಮೋಹನ ಸುಂದರಂ
ನೃ: ಬಿ.ಜಯರಾಂ
ಪ್ರ: ಸಿಂಗ್
ಸ್ಟು: ಗೋಲ್ಡನ್ (ಮದರಾಸು), ಗ್ರಾಮಾಫೋನ್ ರಿಕಾರ್ಡಿಂಗ್ (ಕೊಲಂಬಿಯಾ)
ಹಾ: ೧)'ವಂದೇ ಮಾತರಂ...', ೨)'ನೀನಾಳು ನಾ ನಿನ್ನಾಳು...', ೩)'ಪ್ರಿಯತಮಾ.. ಓ... ಪ್ರಿಯತಮಾ..., ೪)'ಎಲ್ಲಿ ಏನು ಹೇಗೆ...',
ವಿ: ವಂದನಾ ದ್ವಿಪಾತ್ರದಲ್ಲಿ ಅಭಿನಯಿಸಿದರು.
ಕ.ಸಾ: ಲಂಚಾವತಾರಿ ಲಾಯರ್‌ಗೆ ಅವಳಿ ಹೆಣ್ಣು ಮಕ್ಕಳು. ಒಬ್ಬಳು ಕಪ್ಪು, ಒಬ್ಬಳು ಬಿಳುಪು. ಇಬ್ಬರ ಮದುವೆ ಚಿಂತೆಗೀಡು ಮಾಡಿತ್ತು. ಬಣ್ಣದ ಗೀಳಿನ ವ್ಯಕ್ತಿಗೆ ಬುದ್ಧಿ ಕಲಿಸಲು ಅದಲುಬದಲಾಗಿ ಆಟವಾಡುತ್ತಾರೆ. ಕಡೆಗೆ ಸುಖಾಂತ.

೧೨೯. ಕನ್ಯಾರತ್ನ

(೧೯೬೩ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಟಿ.ಬಿ.ಎನ್.ಪ್ರೊಡಕ್ಷನ್ಸ್
ಪ್ರೊ: ಡಿ.ಬಿ.ನಾರಾಯಣ್
ನಿ: ಜೆ.ಡಿ.ತೋಟಾನ್
ಸ.ನಿ: ಪಿ.ಕೃಷ್ಣದೇವರಾವ್

ಅ: ರಾಜಕುಮಾರ್, ರಾಜಾಶಂಕರ್, ಧೀಕ್ಷಿತ್ ಮಾಧವರಾವ್, ಬಾಲಕೃಷ್ಣ, ಸಾಹುಕಾರ್ ಜಾನಕಿ, ಲೀಲಾವತಿ, ರಮಾದೇವಿ, ಪಾಪಮ್ಮ, ರತ್ನಾಕರ್, ಜಯ, ಹನುಮಂತರಾವ್, ಎಂ.ಶಿವಾಜಿ, ಅಶ್ವತ ನಾರಾಯಣ, ಕುಪ್ಪುರಾಜ್, ಶಾರದಾದೇವಿ
ಕ/ಚಿ.ಕ/ಮಾ/ಗೀ: ಕು.ರ.ಸೀತಾರಾಮಶಾಸ್ತ್ರಿ
ಗೀ: ಕು.ರ.ಸೀ., ವಿಜಯನಾರಸಿಂಹ, ಚಿ। ಸದಾಶಿವಯ್ಯ, ಕಣಗಾಲ್ ಪ್ರಭಾಕರ ಶಾಸ್ತ್ರಿ
ಗಾ: ಪಿ.ಬಿ.ಶ್ರೀನಿವಾಸ್, ಎಸ್.ಜಾನಕಿ, ಮೋತಿ
ಛಾ: ಎಂ.ಕೆ.ರಾಜು
ಕಲೆ: ಎಸ್.ಕೃಷ್ಣರಾವ್
ಸ: ಜಿ.ಕೆ.ವೆಂಕಟೇಶ್
ಧ್ವ: ಹರನಾಥ್
ನೃ: ಕೃಷ್ಣಕುಮಾರ್
ಸ್ಟು: ವಿಜಯ ವಾಹಿನಿ
ಹಾ: ೧)'ಬಿಂಕದ ಸಿಂಗಾರಿ ಮೈ ಡೊಂಕಿನ ವೈಯ್ಯಾರಿ....', ೨)'ಸುಪ್ಪಿ ಸುಪ್ಪಿ ಸುಪ್ಪಾಲಿ ಕಣ್ಣೆ ಕರೆಯೋಳೆ....', ೩)'ಒಂದೇ ಮಾತು ಒಂದೇ ಮನಸು ಒಂದೇ ನೀತಿ ಬೇಕು...', ೪)'ಮನವ ಕವ ನನ್ನಯ...'. ೫)'ಎಲ್ಲಿಹರೋ ನಲ್ಲ...'. ೬)'ಮೈಸೂರು ದಸರಾ ಬೊಂಬೆ...'
ಕ.ಸಾ: ಶಾಂತಾ ತನ್ನ ಮಲತಾಯಿ, ಮಲತಮ್ಮನನ್ನು ತಂದೆ ತೀರಿದ ಬಳಿಕ ಸಾಕುತ್ತಾಳೆ. ಮಲತಮ್ಮ ಪೇಟೆಯಲ್ಲಿ ಓದುತ್ತಾ ದುಂದುವೆಚ್ಚ ಮಾಡಿ ಸಾಲದ ಹೊರೆ ಹೆಚ್ಚಿದಾಗ, ಶಾಂತಳ ಮದುವೆಗ ಊರಿನ ಸಾಹುಕಾರ ಹಣ ಕೊಡುವುದಿಲ್ಲ. ಬದಲಿಗ ಅವಳ ಮೇಲೆ ಕಣ್ಣು ಹಾಕುತ್ತಾನೆ. ತಾಯಿಗೆ ಆಘಾತವಾಗುತ್ತದೆ. ಕಷ್ಟಗಳು ಕರಗಿ ಸುಖಾಂತವಾಗುತ್ತದೆ.

೧೩೦. ಗೌರಿ

(೧೯೬೩ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಕಲಾಭಾರತಿ
ಪ್ರೊ: ಕೆ.ನಾರಾಯಣರಾವ್
ನಿ: ಎಸ್.ಕೆ.ಎ.ಚಾರಿ
ಸ.ನಿ: ಟಿ.ಕೆ.ನಾಗರಾಜರಾವ್
ಅ: ರಾಜಕುಮಾರ್. ಸಾಹುಕಾರ್ ಜಾನಕಿ, ಭಗವಾನ್, ಕೆ.ಎಸ್.ಅಶ್ವತ್, ರಾಮಚಂದ್ರಶಾಸ್ತ್ರಿ, ಎಂ.ಎನ್.ಲಕ್ಷ್ಮೀದೇವಿ, ಸಂಧ್ಯಾ, ಕೃಷ್ಣಶಾಸ್ತ್ರಿ, ಎಂ.ಎಸ್.ಸುಬ್ಬಣ್ಣ, ಗಣಪತಿಭಟ್, ಮಾ। ಫ್ರಾನ್ಸಿಸ್, ಮಾ। ಚಂದ್ರಶೇಖರ್
ಚಿ.ಕ: ಎಸ್.ಕೆ.ಎ.ಚಾರಿ
ಮಾ: ಕು.ರ.ಸೀತಾರಾಮಶಾಸ್ತ್ರಿ, ನಾಗರಾಜರಾವ್
ಗೀ: ಕುವೆಂಪು, ಕು.ರ.ಸೀತಾರಾಮಶಾಸ್ತ್ರಿ, ಕೆ.ಎಸ್.ನರಸಿಂಹಸ್ವಾಮಿ, ಕಣಗಾಲ್ ಪ್ರಭಾಕರಶಾಸ್ತ್ರಿ
ಗಾ: ಎಸ್.ಜಾನಕಿ, ಪಿ.ಬಿ.ಶ್ರೀನಿವಾಸ್, ಲತಾ
ಸಂ: ಜಿ.ನಾರಾಯಣಯ್ಯ
ಛಾ: ಅಣ್ಣಯ್ಯ
ಕಲೆ: ಟಿ.ವಿ. ಅಣ್ಣಾಮಲೆ
ಸ: ಜಿ.ಕೆ.ವೆಂಕಟೇಶ್
ಧ್ವ: ಮೋಹನ ಸುಂದರಂ, ಟಿ.ಲಾಜರಸ್
ನೃ: ಚಿನ್ನಿ ಸಂಪತ್
ವ: ಅಚ್ಯುತರಾವ್
ಪ್ರ: ವೀರರಾಜು, ಎಂ.ಕೆ.ಗೋಪಾಲ್, ಎಂ.ಎಸ್.ಸುಬ್ಬಣ್ಣ
ಸ್ಟು: ಗೋಲ್ಡನ್
ಹಾ: 'ಯಾವ ಜನ್ಮದ ಮೈತ್ರಿ ಈ ಜನ್ಮದಲಿ ಬಂದು...', 'ಇವಳು ಯಾರು ಬಲ್ಲೆಯೇನು....', 'ಪುಟ್ಟ ಪುಟ್ಟ ಹೆಜ್ಜೆ ಇಟ್ಟು ಬಣ್ಣದ ಅಂಗಿ ತೊಟ್ಟ ತಂಗಿ...'
ಸೆ: ಉದ ೪೪೯೧.೬೨, ೧೪ ರೀಲುಗಳು
ಕ.ಸಾ: ರಾಮಯ್ಯ ಕುದುರೆಗಾಡಿ ಓಡಿಸುವ ಪ್ರಾಮಾಣಿಕ. ಪತ್ನಿ ಗೌರಿ ಸಾಹುಕಾರ್ ಬಸಪ್ಪನವರ ಮನೆಯಲ್ಲಿ ಕೆಲಸದಾಳು. ಬಸಪ್ಪ ತನ್ನ ಪತ್ನಿ ದಾಕ್ಷಾಯಿಣಿಗೆ ಮಕ್ಕಳಾಗಲಿಲ್ಲವೆಂಬ ಕಾರಣಕ್ಕೆ ಮರು ಮದುವೆ ಆಗ ಬಯಸುತ್ತಾನೆ. ಭಾವಮೈದ ಶಿವು ಪರಿಸ್ಥಿತಿ ಅರಿತು ತಂಗಿ ಮನೆಗೆ ಬಂದು ಭಾವನ ಬಳಿ ತನ್ನ ಪತ್ನಿ ಗರ್ಭಿಣಿ ಎನ್ನುತ್ತಾನೆ. ಅದೇ ವೇಳೆಗೆ ಗೌರಿಯು ಗರ್ಭಿಣಿಯಾಗಿರುತ್ತಾಳೆ. ಶಿವು ರಹಸ್ಯವಾಗಿ ಗೌರಿ ಮನೆಗೆ ಬಂದು ವಿಷಯ ತಿಳಿಸಿ ಹುಟ್ಟುವ ಮಗುವನ್ನು ದಾಕ್ಷಾಯಿಣಿಗೆ ನೀಡಲು ಕೋರುತ್ತಾನೆ. ಗುಟ್ಟಾಗಿ ತನ್ನ ಪತ್ನಿ ಶಿವುನನ್ನು ಭೇಟಿಯಾಗಿದಳೆಂದು ರಾಮಯ್ಯ ಪತ್ನಿಯ ಶೀಲ ಶಂಕಿಸಿ ಅವಳನ್ನು ಮನೆಯಿಂದ ಹೊರಹಾಕುತ್ತಾನೆ. ಶಿವು ಅವಳನ್ನು ಇರಿಸಿಕೊಂಡು ಹುಟ್ಟುವ ಮಗುವನ್ನು ತಂಗಿಗೆ ನೀಡುತ್ತಾನೆ. ಗೌರಿಯನ್ನು ದಾಕ್ಷಾಯಿಣಿ ಮನೆಯಿಂದ ಹೊರಹಾಕುತ್ತಾಳೆ. ರಾಮಯ್ಯ ನಿಜ ತಿಳಿದು ಪತ್ನಿಯನ್ನು ಕರೆತರುತ್ತಾನೆ.

೧೩೧. ಜೀವನ ತರಂಗ

(೧೯೬೩ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಶ್ಯಾಮಪ್ರಸಾದ್ ಮೂವೀಸ್
ಪ್ರೊ: ಡಿ.ಆರ್.ನಾಯ್ಡು
ನಿ: ಬಂಗಾರರಾಜು
ಅ: ರಾಜಕುಮಾರ್, ಕೆ.ಎಸ್.ಅಶ್ವತ್, ರಾಜಾಶಂಕರ್, ಧೀಕ್ಷಿತ್ ಮಾಧವರಾವ್, ಬಾಲಕೃಷ್ಣ, ನರಸಿಂಹರಾಜು, ಹನುಮಂತಾಚಾರ್, ಲೀಲಾವತಿ, ಜೂ.ರೇವತಿ, ಜಯಶ್ರೀ, ಆದವಾನಿ ಲಕ್ಷ್ಮೀದೇವಿ, ಚಂದ್ರಕಲಾ, ಎಂ.ಎನ್.ಲಕ್ಷ್ಮೀದೇವಿ, ಎಂ.ಎಸ್. ಸುಬ್ಬಣ್ಣ, ಡಿ.ಆರ್.ನಾಯ್ಡು
ಕ/ಚಿ.ಕ: ಬಂಗಾರರಾಜು
ಮಾ/ಗೀ: ಎಸ್.ಕೆ. ಕರೀಂಖಾನ್
ಗಾ: ಪಿ.ಬಿ.ಶ್ರೀನಿವಾಸ್, ಎಸ್.ಜಾನಕಿ
ಸಂ: ಎಸ್.ಪಿ.ಎನ್.ಕೃಷ್ಣ, ವೇಲಾಯುಧನ್
ಛಾ: ಎಸ್.ವಿ.ಶ್ರೀಕಾಂತ್
ಕಲೆ: ಸಯ್ಯದ್ ಅಹಮದ್
ಸ: ಎಂ.ವೆಂಕಟರಾಜು
ಧ್ವ: (ಹಾ)ಡಿ.ಮೋಹನಸುಂದರಂ, (ಮಾ)ಡಿ.ಲಾಜರಸ್, ಪಿ.ಜಿ.ಲಕ್ಷ್ಮಣನ್

ನೃ: ವೇಣುಗೋಪಾಲ್
ಸಾ: ಪುಲಿಕೇಶಿ
ವ: ವಿ.ರಾಮನಾಥನ್
ಪ್ರ: ಸುಬ್ಬಣ್ಣ, ರಾಜಗೋಪಾಲ್
ಸ್ಟು: ಗೋಲ್ಡನ್
ಹಾ: ೧)'ಚಾರು ಮಂದಾರ ವಿಲಾಸ ಗಂಭೀರ ವಿಶೇಷಾ...', ೨)'ಬಂತು ನವ ಯೌವ್ವನ ಆನಂದ ವಿನೋದಾ...', ೩)'ಬಂತಮ್ಮ ಮದುವೆ ಬಂತಮ್ಮ...', ೪)'ಹೆಣ್ಣಾಗಿ ಬಂದ ಮೇಲೆ...', ೫)'ಮನದೇ ಮುನಿದೇ ನೀವೇನು....'
ವಿ: ಚಂದ್ರಕಲಾ ಚಿಕ್ಕ ಪಾತ್ರದಲ್ಲಿ ಅಭಿನಯಿಸುವ ಮೂಲಕ ಚಿತ್ರರಂಗ ಪ್ರವೇಶಿಸಿದರು. ನಿರ್ಮಾಪಕ ಡಿ.ಆರ್. ನಾಯ್ಡು ಈ ಚಿತ್ರದಲ್ಲಿ ಅಭಿನಯಿಸಿದರು.
ಸೆ: ರೀಲು ೧೬, ಉದ ೪೧೫೨.೨೮ ಅಡಿ
ಕ.ಸಾ: ಶಾಮಣ್ಣ, ಡಾ।ರಾಮಣ್ಣ ಹಾಗೂ ಕುಮಾರ್ ಮೂವರೂ ಅಣ್ಣ ತಮ್ಮಂದಿರು. ರಾಮಣ್ಣನನ್ನು ವೈದ್ಯನನ್ನಾಗಿಸಲು ಶಾಮಣ್ಣ ಜೀವನ ಸವೆಸುತ್ತಾನೆ. ಇದ ಒಬ್ಬ ತಂಗಿಯ ಮದುವೆಗೂ ರಾಮಣ್ಣ ಬರುವುದಿಲ್ಲ. ಕುಮಾರನಿಗೆ ನಗರದಲ್ಲಿ ಕೆಲಸ ಸಿಗುತ್ತದೆ. ಸುಮತಿ ಎಂಬ ಶ್ರೀಮಂತ ಹುಡುಗಿಯ ಪರಿಚಯವಾಗಿ ಪ್ರೇಮಕ್ಕೆ ತಿರುಗುತ್ತದೆ. ರಾಮಣ್ಣನ ಪತ್ನಿ ಸರಸ ಇವರ ಮೇಲೆ ಇಲ್ಲದ ಚಾಡಿ ಹೇಳಿ ಕುಮಾರ ಕೆಲಸ ಕಳೆದು ಕೊಳ್ಳಬೇಕಾಗುತ್ತದೆ. ರಾಮಣ್ಣ ಮನೆ ಮಾರಿ ಆಶ್ರಯ ಇಲ್ಲದವನಾಗುತ್ತಾನೆ. ಕೊನೆಗೆ ರಾಮಣ್ಣ ಪಶ್ಚಾತ್ತಾಪ ಪಟ್ಟು ಎಲ್ಲರೂ ಒಂದಾಗುತ್ತಾರೆ.

೧೩೨. ಕುಲವಧು

(೧೯೬೩ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಶೈಲಶ್ರೀ ಪ್ರೊಡಕ್ಷನ್ಸ್
ಪ್ರೊ: ಎ.ಸಿ.ನರಸಿಂಹಮೂರ್ತಿ ಮತ್ತು ಮಿತ್ರರು
ನಿ: ಟಿ.ವಿ.ಸಿಂಗ್ ಠಾಕೂರ್
ಸ.ನಿ: ಎಸ್.ಕೆ.ಭಗವಾನ್
ಅ: ರಾಜಕುಮಾರ್, ಅಶ್ವತ್, ಬಾಲಕೃಷ್ಣ, ನರಸಿಂಹರಾಜು, ಮಾ।ಉದಯಶಂಕರ್, ಲೀಲಾವತಿ, ಸಾಧನಾ, ಜಯಶ್ರೀ, ಪಾಪಮ್ಮ, ಶಾಂತಮ್ಮ, ಶಾರದಮ್ಮ, ಜಯಾ

ಕ: ಕೃಷ್ಣಮೂರ್ತಿ ಪುರಾಣಿಕರ 'ಕುಲವಧು' ಕಾದಂಬರಿ.
ಮಾ: ಕೃಷ್ಣಮೂರ್ತಿ ಪುರಾಣಿಕ, ಭಗವಾನ್
ಗೀ: ವಿ.ಸೀ, ದ.ರಾ.ಬೇಂದ್ರೆ, ಎಂ.ಗೋವಿಂದ ಪೈ, ಕಣಗಾಲ್ ಪ್ರಭಾಕರಶಾಸ್ತ್ರಿ
ಗಾ: ಪಿ.ಬಿ.ಶ್ರೀನಿವಾಸ್, ಎಸ್.ಜಾನಕಿ
ಸಂ: ವೆಂಕಟರಾಂ, ರಘುಪತಿ
ಛಾ: ಬಿ.ದೊರೈರಾಜ್
ಕಲೆ: ಆರ್.ಬಿ.ಎಸ್.ಮಣಿ
ಸ: ಜಿ.ಕೆ.ವೆಂಕಟೇಶ್
ಧ್ವ: (ಹಾ)ಇ.ಐ.ಜೀವ, (ಮಾ)ಸ್ವಾಮಿ
ವ: ಮಾಣಿಕ್ಯಂ
ಪ್ರ: ನಾರಾಯಣಸ್ವಾಮಿ
ಸ್ಟು: ಫಿಲಂ ಸೆಂಟರ್ (ಮದರಾಸು)
ಹಾ: ೧)'ಎಮ್ಮ ಮನೆಯಂಗಳದಿ ಬೆಳೆದೊಂದು ಹೂವನ್ನು.....', ೨)'ಯುಗ ಯುಗಾದಿ ಕಳೆದರೂ ಯುಗಾದಿ ಮರಳಿ ಬರುತಿದೆ....', ೩)'ತಾಯ ಬಾರ ಮೊಗವ ತೋರ ಕನ್ನಡಿಗರ ಮಾತೆಯೇ....', ೪)'ಒಲವಿನ ಪ್ರಿಯಲತೆ ಅವಳದೇ ಚಿಂತೆ....'
ವಿ: ಎಮ್ಮ ಮನೆಯಂಗಳದಿ - ಗೀತೆ ವಿ.ಸೀ. ಅವರ ರಚನೆ. ಮನೆಮನೆಗಳಲ್ಲಿ ಇಂದೂ ಹೆಣ್ಣೊಪ್ಪಿಸಿ ಕೊಡುವಾಗ ಈಗೀತೆ ಹಾಡುತ್ತಾರೆ.
ಕ.ಸಾ: ಮೈಸೂರು ಧರ್ಮರಾಯ ಶ್ರೀಮಂತನಾದರೂ ಜಿಪುಣ. ಕಿರಿ ಹೆಂಡತಿ ಮಕ್ಕಳು ಸೂರಿ ಹಾಗು ಮಾಲತಿ ಒಳ್ಳೆಯವರು. ಸದ್ಗೃಹಸ್ಥ ಗಣಪತಿ ತನ್ನ ಏಕೈಕ ಪುತ್ರಿ ಸೀತಾಳನ್ನು ಸೂರಿಗೆ ತಂದುಕೊಳ್ಳಲಿ ಎಂದು ಕೇಳಿದಾಗ ಧರ್ಮರಾಯ ಹತ್ತು ಸಾವಿರ ರೂಪಾಯಿ ವರದಕ್ಷಿಣೆ ಕೇಳುತ್ತಾನೆ. ಗಣಪತಿ ತನ್ನ ಆಸ್ತಿ ಮಾರಿ ಮದುವೆ ಮಾಡುತ್ತಾನಾದರೂ ಇನ್ನೂ ಮೂರು ಸಾವಿರ ರೂಪಾಯಿ ಕೊರತೆ ಬೀಳುತ್ತದೆ. ಸೂರಿ ಇಲ್ಲದ ಸಮಯದಲ್ಲಿ ಸೀತಾಳನ್ನು

ಮನೆಯಿಂದ ಹೊರಹಾಕುತ್ತಾರೆ. ತವರಿಗೆ ಬಂದ ಸೀತಾ ಶಿಕ್ಷಕಿ ಕೆಲಸಕ್ಕೆ ಸೇರುತ್ತಾಳೆ. ಇತ್ತ ಅಪಘಾತಕ್ಕೀಡಾದ ಸೂರಿ ಬುದ್ಧಿ ಭ್ರಮಣೆಗೊಳಗಾಗುತ್ತಾನೆ. ಸೀತಾ ಸಂಪಾದನೆ ಮಾಡಿ ವರದಕ್ಷಿಣೆ ಸಾಲ ತೀರಿಸಿ ಮನೆಗೆ ಬಂದು ತನ್ನ ಗಂಡನ ಶುಶ್ರೂಷೆ ಮಾಡುತ್ತಾಳೆ. ಧರ್ಮರಾಯ ಬುದ್ಧಿ ಕಲಿತು ಯಜಮಾನಿಕೆಯನ್ನು ಸೊಸೆಗೆ ನೀಡುತ್ತಾನೆ.

೧೩೩. ಮಲ್ಲಿ ಮದುವೆ

(೧೯೬೩ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಜ್ಯುಪಿಟರ್ ಪಿಕ್ಚರ್ಸ್ (ಲಿ)
ನಿ: ಜಿ.ಆರ್.ನಾದನ್
ಸ.ನಿ: ವಾಸುದೇವ ಗಿರಿಮಾಜಿ, ಎಂ.ಸಿ. ಗೋಪಾಲಕೃಷ್ಣನ್
ಅ: ರಾಜಕುಮಾರ್, ಲೀಲಾವತಿ, ಉದಯಕುಮಾರ್, ಸಾಹುಕಾರ್ ಜಾನಕಿ, ರಾಜಾಶಂಕರ್, ಕೆ.ಎಸ್.ಅಶ್ವತ್, ನರಸಿಂಹರಾಜು, ಮೀನಾಕುಮಾರಿ, ರಮಾದೇವಿ, ಪಾಪಮ್ಮ, ಜಾರ್ಜ್ ಇಂದಿರಾ, ಗಣಪತಿಭಟ್, ಕುಪ್ಪುರಾಜ್, ಶ್ರೀಕಂಠನ್, ಕೃಷ್ಣಶಾಸ್ತ್ರಿ

ಮಾ: ಕಣಗಾಲ್ ಪ್ರಭಾಕರಶಾಸ್ತ್ರಿ, ಹುಣಸೂರು ಕೃಷ್ಣಮೂರ್ತಿ
ಗೀ: ಕು.ರ.ಸೀ., ಕಣಗಾಲ್ ಪ್ರಭಾಕರ್ ಶಾಸ್ತ್ರಿ
ಗಾ: ಪಿ.ಸುಶೀಲ, ಎಸ್.ಜಾನಕಿ, ಪಿ.ಬಿ.ಶ್ರೀನಿವಾಸ್, ಜಿ.ಕೆ.ವೆಂಕಟೇಶ್
ಸಂ: ಕೆ. ಗೋವಿಂದಸ್ವಾಮಿ
ಛಾ: ಪಿ.ದತ್ತಾತ್ರೇಯ
ಕಲೆ: ಪಿ.ಎಸ್.ರಾವ್
ಸ: ಜಿ.ಕೆ.ವೆಂಕಟೇಶ್
ಧ್ವ: ಪಿ.ಕೋಟೇಶ್ವರರಾವ್, ರಂಗಸ್ವಾಮಿ. ನಾದನ್. ಪಿ.ಎ.ಶೇಖರ್
ನೃ: ಗೋಪಾಲಕೃಷ್ಣ - ಜಯರಾಮನ್ ಕುಮಾರ್
ವ: ಪಿ. ನಾರಾಯಣಮೂರ್ತಿ, ಎ.ದಾವೂದ್
ಪ್ರ: ಶಂಕರರಾವ್ ಸಿಥಾದ್ಕರ್, ದೊರೆಸ್ವಾಮಿ
ಸ್ಟು: ಭರಣಿ, ನಪ್ತ್ಯೂನ್
ಹಾ: ೧)'ಮಹಾಪುರುಷರ...', ೨)'ಮಂಗನ ಮೋರೆಯ ಮುದಿ...', ೩)'ನಗುವೇ ನಾಕ...', ೪)'ಆಡೋಣ ಬಾ ಬಾ...', ೫)'ಬಲುವಂತ ಗಲುವಂತ...'. ೬)'ನನ್ನ ನಿನ್ನ ಸಲ್ಲಾಪವನೆಲ್ಲ...', ೭)'ಮದುವೆ ಎಂಬ ಸಂತೆಗೆ
ಸೆ: ಉದ ೪೩೮೮.೮೪, ೧೫ ರೀಲುಗಳು
ಕ.ಸಾ: ಜಮೀನ್ದಾರ ಬಹಳ ಮಠಾಸಯುವನು. ಅವನಿಗಿಬ್ಬರು ಮಕ್ಕಳು. ಇಬ್ಬರದು ಅಜಗಜಾಂತರ ರೀತಿಯ ಅಭಿಪ್ರಾಯಗಳು. ಮತ್ತೊಬ್ಬರ ಆಸ್ತಿಯನ್ನು ದೋಚುವ ಜಮೀನ್ದಾರನಿಂದ ಅನ್ಯಾಯಕ್ಕೊಳಗಾದ ನತದೃಷ್ಟನೊಬ್ಬ ಜಮೀನ್ದಾರನಿಗೆ ಬುದ್ಧಿ ಕಲಿಸುತ್ತಾನೆ.

೧೩೪. ಕಲಿತರೂ ಹೆಣ್ಣೇ

(೧೯೬೩ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಶ್ರೀ ಗಣೇಶ್ ಚಿತ್ರ
ಪ್ರೊ: ಜಯಾ ಬಾಲಕೃಷ್ಣ
ನಿ: ಎಸ್.ಸಿ.ರಾಜನ್
ಸ.ನಿ: ಬಾಲಕೃಷ್ಣ
ಅ: ರಾಜಕುಮಾರ್, ಲೀಲಾವತಿ, ಆದವಾನಿ ಲಕ್ಷ್ಮೀದೇವಿ, ನಾಗೇಂದ್ರರಾವ್, ಉದಯಕುಮಾರ್, ಅಶ್ವತ್, ನರಸಿಂಹರಾಜು, ಜಿ.ವಿ.ಅಯ್ಯರ್, ಈಶ್ವರಪ್ಪ, ಎ.ಜಿ.ಶ್ಯಾಂ, ಹನುಮಂತರಾವ್, ರಾಮಚಂದ್ರಶಾಸ್ತ್ರಿ, ಗುಗ್ಗು, ಸತ್ಯಂ, ಬಸಪ್ಪ, ಜಯಶ್ರೀ, ಪಾಪಮ್ಮ, ಉಷಾ
ಕ: ಜಯಾ ಬಾಲಕೃಷ್ಣ
ಮಾ: ಬಾಲಕೃಷ್ಣ
ಗೀ: ಕು.ರ.ಸೀ.
ಗಾ: ಎಸ್.ಜಾನಕಿ, ಮನಮೋಹನ ಠಾಕೂರ್, ಜಿ.ಕೆ. ವೆಂಕಟೇಶ್
ಸಂ: ಎಸ್.ಸಿ.ರಾಜನ್
ಛಾ: ಕೆ. ಜಾನಕೀರಾಂ
ಕಲೆ: ಬಿ.ಸಿ.ಬಾಬು, ಅಮ್ಮಯ್ಯಪ್ಪನ್
ಸ: ಜಿ.ಕೆ.ವೆಂಕಟೇಶ್
ಧ್ವ: ಮೋಹನಸುಂದರಂ, ಎಂ.ಬಿ.ವಾಲ್ಕೆ
ನೃ: ಉಡುಪಿ ಜಯರಾಂ
ವ: ಕೃಷ್ಣನ್
ಪ್ರ: ಸೆಲ್ವರಾಜ್, ನಾರಾಯಣಸ್ವಾಮಿ, ದೊರೆಸ್ವಾಮಿ
ಸ್ಟು: ಮೆಜೆಸ್ಟಿಕ್
ಹಾ: ೧)'ತಾವರೆ ಮ್ಯಾಗಣ ಜಲದಂಗ...', ೨)'ಓದಿ ಓದಿ...', ೩)'ಇಂಗುತಿಂದ ಮಂಗನಾದೆ...', ೪)'ಗೆಲುವಾಗಲಿ ಗೆಲುವಾಗಲಿ...',
ಕ.ಸಾ: ನಿರ್ಗತಿಕ ನಾಗಯ್ಯನ ಆತ್ಮಹತ್ಯೆ ತಪ್ಪಿಸಿ ಅವನ ಮಗಳನ್ನು ತನ್ನ ಹಿರಿಯ ಮಗನಿಗೆ ತಂದುಕೊಳ್ಳುತ್ತಾನೆ ಸೂರಿಗೌಡ. ಕಾಲಕ್ರಮೇಣ ನಾಗಯ್ಯ ಶ್ರೀಮಂತನಾಗಿ ದರ್ಪದಿಂದ ಮೆರೆಯುತ್ತಾನೆ. ಪದವೀಧರೆಯಾದ ಮಗಳನ್ನು ಅತ್ತಮನೆಗೆ ಕಳಿಸದೆ ಅವಮಾನ ಮಾಡುತ್ತಾನೆ. ಮಗಳಿಗೆ ಅತ್ತೆ ಮನೆಯ ಹಂಬಲ ಹೆಚ್ಚಾಗಿ ಅಪ್ಪನನ್ನು ಧಿಕ್ಕರಿಸಿ ಅತ್ತೆಯೊಂದಿಗೆ ಊರಿಗೆ ಬಂದು ಆದರ್ಶಪ್ರಾಯಳಾಗಿ ಬಾಳುತ್ತಾಳೆ.

೧೩೫. ಬೇವು-ಬೆಲ್ಲ

(೧೯೬೩ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಭಾರ್ಗವ ಪ್ರೊಡಕ್ಷನ್ಸ್
ಪ್ರೊ: ಟಿ.ಎಸ್.ಗೋಪಾಲಕೃಷ್ಣ ಅಯ್ಯರ್, ವಿ.ರಾಮರಾವ್
ನಿ: ಸಿ.ಪಿ.ಜಂಬುಲಿಂಗಂ
ಸ.ನಿ: ಜಿ.ಎಸ್.ನಾರಾಯಣ್
ಅ: ರಾಜಾಶಂಕರ್, ಲೀಲಾವತಿ, ಉದಯಕುಮಾರ್, ಹೆಚ್.ಆರ್.ಶಾಸ್ತ್ರಿ, ಹನುಮಂತರಾವ್, ಕುಪ್ಪುರಾಜ್, ಗಣಪತಿಭಟ್, ಗುಗ್ಗು, ನಾರಾಯಣ್, ರಾಜಶ್ರೀ, ವಸಂತಿ. ಪಾಪಮ್ಮ, ಜಯಾ, ವಾಸವಿ

ಮಾ/ಗೀ: ಎಸ್.ಕೆ. ಕರೀಂಖಾನ್
ಗಾ: ಪಿ.ಬಿ.ಶ್ರೀನಿವಾಸ್, ಎಸ್.ಜಾನಕಿ, ಬೆಂಗಳೂರು ಲತಾ, ಎಂ.ಎಸ್.ಪದ್ಮ, ಮಾಧವಪೆದ್ದಿ ಸತ್ಯಂ
ಸಂ: ಸಿ.ಪಿ.ಜಂಬುಲಿಂಗಂ
ಛಾ: ಟಿ.ಕೆ.ವೆಂಕಟ್
ಕಲೆ: ವಿ.ರಾಮರಾವ್
ಸ: ಪಿ.ಎಸ್.ದಿವಾಕರ್
ಧ್ವ: ಎಂ.ಶಿವರಾಮ್, ಎಂ.ವಿ.ಪಾರ್ಥಸಾರಥಿ
ನೃ: ಎ.ಕೆ. ಚೋಪ್ರಾ, ಟಿ.ಸಿ.ತಂಗರಾಜ್, ಕೃಷ್ಣಕುಮಾರ್
ಸಾ: ಸೂಪರಮ್ಯಾನ್ ದೊರೆ
ವ: ಕೆ. ಸೂರ್ಯರಾವ್, ಎಂ.ರಾಮು
ಪ್ರ: ಶಂಕರ್‌ರಾವ್, ದೊರೆಸ್ವಾಮಿ
ಸ್ಟು: ವಿಜಯ-ವಾಹಿನಿ
ಹಾ: ೧)'ಜೀವನವೆಲ್ಲ ಬೇವು ಬೆಲ್ಲ...', ೨)'ಅಪೂರ್ವ ಪೂರ್ಣ ಚಂದ್ರಮಾ...', ೩)'ನಗುತಿದೆ ಅನುರಾಗ...', ೪)'ಮನವೇನಾಡಿತೋ ಕಾಣೆನು ನಾ...', ೫)'ಬಡಮಾನವ ರಾಜೀವನ...', ೬)'ಮೋಹನ ಗಾನ ರಸಮಯ ತಾನ...'
ಕ.ಸಾ: ಸಾಹುಕಾರನೊಬ್ಬ ಬಡರೈತನ ಮಗಳನ್ನು ಪಡೆಯಲು ವಿಧವಿಧವಾಗಿ ಪ್ರಯತ್ನಿಸಿ ನಿರಾಶನಾಗಿ ರೈತನನ್ನು ಕೊಂದು ಆ ಹುಡುಗಿಯನ್ನು ಮನೆಗೆ ಕರೆತರುವನು. ಸಾಹುಕಾರನ ತಂಗಿಯ ಸ್ನೇಹಿತ ಆಕೆಗೆ ಮನಸೋಲುವನು. ಆಕೆಯ ಮೇಲೆ ಸಾಹುಕಾರನ ಕೆಟ್ಟ ಕಣ್ಣು ಬೀಳಲು ಆಕೆ ಅಲ್ಲಿಂದ ತಪ್ಪಿಸಿಕೊಂಡು ಹೋಗುವಳು. ಕಡೆಗೆ ಸಾಹುಕಾರನಿಗೆ ಒಳ್ಳೆಯ ಬುದ್ಧಿ ಬಂದು ಎಲ್ಲವೂ ಸರಿಯಾಗುವುದು.

೧೩೬. ವೀರಕೇಸರಿ

(೧೯೬೩ / ಕಪ್ಪು-ಬಿಳುಪು / ಜಾನಪದ)
ಲಾ: ರಾಜಲಕ್ಷ್ಮಿ ಪ್ರೊಡಕ್ಷನ್ಸ್
ಪ್ರೊ: ಸುಂದರಲಾಲ್ ನೆಹತಾ, ದಂಡಿ
ನಿ: ಬಿ.ವಿಠ್ಠಲಾಚಾರ್ಯ
ಸ.ನಿ: ಜಿ.ಕೃಷ್ಣಮೂರ್ತಿ
ಅ: ರಾಜಕುಮಾರ್, ಉದಯಕುಮಾರ್, ಆರ್.ನಾಗೇಂದ್ರರಾವ್, ಕೆ.ಎಸ್.ಅಶ್ವತ್, ಹನುಮಂತಾಚಾರ್, ನರಸಿಂಹರಾಜು, ಲೀಲಾವತಿ, ಎಂ.ಎನ್.ಲಕ್ಷ್ಮೀದೇವಿ, ರಾಮಚಂದ್ರಶಾಸ್ತ್ರಿ, ಜಯಶ್ರೀ, ಈ.ವಿ.ಸರೋಜ, ಜಯ, ರತ್ನಾಕರ್, ಶಿವಶಂಕರ್, ಸತ್ಯಂ, ಗುಗ್ಗು

ಕ/ಚಿ.ಕ: ಬಿ. ವಿಠ್ಠಲಾಚಾರ್ಯ
ಮಾ: ಘೋರಟ್ ಅಶ್ವತ್
ಗೀ: ಘೋರಟ್ ಅಶ್ವತ್, ಕು.ರ.ಸೀತಾರಾಮಶಾಸ್ತ್ರಿ
ಗಾ: ಘಂಟಸಾಲ, ಪಿ.ಲೀಲಾ, ಪಿ.ಸುಶೀಲಾ
ಸಂ: ಎಲ್.ಎಸ್.ಪ್ರಕಾಶ್
ಛಾ: ರವಿಕಾಂತ ನಗಾಯಿಚ್
ಕಲೆ: ಎಸ್.ಕೃಷ್ಣರಾವ್, ಶ್ರೀನಿವಾಸನ್. ಶ್ರೀಕಂಠನ್
ಸ: ಘಂಟಸಾಲ
ಧ್ವ: ಎನ್.ಶಿವರಾಂ, ಎ.ವಿ. ಪಾರ್ಥಸಾರಥಿ
ನೃ: ಚಿನ್ನಿ - ಸಂಪತ್
ಸಾ: ಎಂ.ಎಸ್.ಸ್ವಾಮಿನಾಥನ್
ವ: ವಿ.ಎಸ್.ಗಾಂಧೀ, ಕಾಮೇಶ್ವರರಾವ್
ಪ್ರ: ಎಂ.ಎಸ್.ಸುಬ್ಬಣ್ಣ, ರಂಗಸ್ವಾಮಿ, ಮಾಧವಯ್ಯ
ಸ್ಟು: ವಾಹಿನಿ (ಮದರಾಸು)
ಹಾ: ೧)'ಸ್ವಾಭಿಮಾನದ ನಲ್ಲೆ ಸಾಕು ಸಂಯಮ ಬಲ್ಲೆ....', ೨)'ಮಂದು ಮಲ್ಲೆ ಮಂದು ಮಲ್ಲೆ ಮಂದು ಮಲ್ಲೆ....', ೩)'ಓನಾಮ ಬಾರದ ಓರಾಮಯ್ಯ....', ೪)'ಹರೆಯುಕ್ಕಿದೆ.. ಉಕ್ಕಿದೆ....', ೫)'ಮೆಲ್ಲುಸಿರೇ ಸವಿಗಾನ....', ೬)'ಪ್ರಜರ ಮಾತನು, ಮೀರದೆ...', ೭)'ಮೊಗಮುಚ್ಚಿ ಯೋಗ ಮುದ್ರೆಯಲಿ...'
ವಿ: ಭಾಗವತ ವರ್ಣ
ಸೆ: ಉದ ೪೩೭೪.೮೪, ರೀಲು ೧೬.
'ಯು' ಸರ್ಟಿಫಿಕೇಟ್
ಕ.ಸಾ: ಪ್ರಜಾ ಪರಿಪಾಲನೆಯೇ ಸರ್ವಸ್ವ ಎಂದು ತಿಳಿದಿದ್ದ ರಾಜನೊಬ್ಬನ ಬಳಿ ಆತನ ಬಂಧು ಶೂರಸೇನ ಸೇರಿಕೊಂಡು ದೇಶದಲ್ಲಿ ಅರಾಜಕತೆ ಹುಟ್ಟಿಸುತ್ತಾನಲ್ಲದೆ

ರಾಜಕುಮಾರಿಯನ್ನು ವಿವಾಹವಾಗಲು ಸಂಚು ಮಾಡುತ್ತಾನೆ. ಮುಸುಕು ವ್ಯಕ್ತಿಯೊಬ್ಬ ಜನಗಳಿಗೆ ಸಹಾಯ ಮಾಡುತ್ತಿರುತ್ತಾನೆ. ಮುಸುಕು ವ್ಯಕ್ತಿ ಒಮ್ಮೆ ರಾಜಕುಮಾರಿಯ ಆಭರಣ ಕಿತ್ತುಕೊಳ್ಳಲು ಮುಂದಾದಾಗ ನರಸಿಂಹ ಎಂಬ ಯುವಕ ಕಾಪಾಡಿ ರಕ್ಷಿಸುತ್ತಾನೆ. ಮುಸುಕುಧಾರಿ ವ್ಯಕ್ತಿ ತನ್ನ ಚಿಕ್ಕಪ್ಪ ಎಂದು ಅರಿವಾಗುತ್ತದೆ. ಅಲ್ಲದೆ ಶೂರಸೇನನ ಅಕೃತ್ಯಗಳು ನರಸಿಂಹನಿಗೆ ತಿಳಿಯುತ್ತದೆ. ನರಸಿಂಹ ಒಂದು ಪಡೆಯನ್ನೇ ಕಟ್ಟಿ ಶೂರಸೇನನ ವಿರುದ್ಧ ಹೋರಾಡಿ ಸತ್ಯಕ್ಕೆ ಜಯ ತಂದುಕೊಡುತ್ತಾನೆ.

೧೩೭. ವಾಲ್ಮೀಕಿ

(೧೯೬೩ / ಕಪ್ಪು-ಬಿಳುಪು / ಜಾನಪದ)

ಲಾ: ಜ್ಯೂಪಿಟರ್ ಪಿಕ್ಚರ್ಸ್

ಪ್ರೊ: ಎಸ್.ಕೆ.ಹಬೀಬುಲ್ಲ

ನಿ: ಸಿ.ಎಸ್.ರಾವ್

ಸ.ನಿ: ಸಿದ್ದಲಿಂಗಯ್ಯ, ತ್ರಿವಿಕ್ರಮರಾವ್

ಅ: ರಾಜಕುಮಾರ್, ನರಸಿಂಹರಾಜು, ರಾಜನಾಲ, ಕಾಂತಾರಾವ್, ಲೀಲಾವತಿ, ರಾಜಸುಲೋಚನ, ಜಯಾ, ಎಂ.ಎನ್.ಲಕ್ಷ್ಮೀದೇವಿ, ಶಾರದ

ಚಿ.ಕ: ಸಿ.ಎಸ್.ರಾವ್

ಮಾ/ಗೀ: ಕಣಗಾಲ್ ಪ್ರಭಾಕರಶಾಸ್ತ್ರಿ

ಗಾ: ಘಂಟಸಾಲ, ಪಿ.ಸುಶೀಲ, ಎಸ್.ಜಾನಕಿ, ಕೋಮಲ, ರಾಘವುಲು, ಸತ್ಯಂ

ಸಂ: ಕೆ.ಗೋವಿಂದಸ್ವಾಮಿ

ಛಾ: ಪಿ.ದತ್ತಾತ್ರೇಯ

ಸ: ಘಂಟಸಾಲ

ಧ್ವ: ವಿ.ಸಿ.ಶೇಖರ್, ಎ.ಕೆ.ಕಣ್ಣನ್, ಗೋವಿಂದಸ್ವಾಮಿ

ಸ್ಥ: ಪಿ.ಎಸ್.ಗೋಪಾಲಕೃಷ್ಣನ್

ಸಾ: ಸ್ವಾಮಿನಾಥನ್

ವ: ಮಾಧವನ್, ತಂಗವನ್

ಪ್ರ: ಎಂ.ಎಸ್.ಸುಬ್ಬಣ್ಣ

ಸ್ಟು: ಜ್ಯೂಪಿಟರ್

ಹಾ: ೧)'ಜಲಲ ಜಲಲ ಜಲಧಾರ...', ೨)'ಮನದೇ ಮಹಾ ಬಯಕೆ ಏನೇನೋ ರೂಪರೇಖೆ...', ೩)'ಅನುರಾಗದೆಲೆ ಆನಂದದೆಲೆ....', ೪)'ತಾಳಲಾರೆ ನಾ ತಾಳಲಾರೆ ಬಾರೇ ಕಣ್ಮಣಿ....', ೫)'ನಮೋ ನಾರಾಯಣ ಪಾವನ...', ೬)'ಶ್ರೀರಾಮಾಯಣ ಕಾವ್ಯಸುಧೇ....'

ವಿ: 'ಶ್ರೀರಾಮಾಯಣ ಕಾವ್ಯಸುಧೇ...' ೨೦ ನಿಮಿಷದ ಹಾಡಾಗಿದೆ. ಈ ಕಥಾನಕದಲ್ಲಿ ವಾಲ್ಮೀಕಿ ರಾಮಾಯಣ ರಚಿಸುತ್ತಿರುವಂತೆ ಆರಂಭಗೊಂಡು ರಾಮಾಯಣ ಸಂಪೂರ್ಣ ಕಥಾ ಭಾಗವನ್ನು ತೆರೆಯ ಮೇಲೆ ಕಾಣಿಸಲಾಗಿದೆ. ಕಾಂತಾರಾವ್ ವಿಷ್ಣು ಪಾತ್ರ ಮಾಡಿದ್ದಾರೆ.

ಕ.ಸಾ: ರತ್ನ (ರಾಜಕುಮಾರ್) ಅರಣ್ಯದಲ್ಲಿ ಜೀವಿಸುವಾತ. ದರೋಡೆ, ಕೊಲೆ ಇವನ ಬದುಕು. ಒಮ್ಮೆ ರಾಜಕುಮಾರಿ ಕಲ್ಯಾಣಿ (ಲೀಲಾವತಿ) ಕಾಡಿಗೆ ಬಂದಾಗ ಅವಳ ಆಭರಣ ದರೋಡೆ ಮಾಡಿ ಸಿಕ್ಕಿಕೊಳ್ಳುತ್ತಾನೆ. ರಾಜಕುಮಾರಿ ಅವನಲ್ಲಿ ಅನುರಾಗ ಹೊಂದಿ ತನ್ನ ತಂದೆಗೆ ಅಪ್ರತಿಮ ಶೂರನೆಂದು ಪರಿಚಯಿಸುತ್ತಾಳೆ. ಸುಳ್ಳು ಹೇಳದ ರತ್ನ ತಾನು ದರೋಡೆಕೋರನೆಂದೇ ಹೇಳುತ್ತಾನೆ. ರಾಜ ಮರಣದಂಡನೆ ವಿಧಿಸುತ್ತಾನೆ. ತಪ್ಪಿಸಿಕೊಂಡ ರತ್ನ ಬೆಟ್ಟದಿಂದ ನದಿಗೆ ಹಾರುತ್ತಾನೆ. ಅಲ್ಲಿ ಬೇಡ ಕನ್ಯೆ ತಾರ (ರಾಜಸುಲೋಚನ) ರಕ್ಷಿಸುತ್ತಾಳೆ. ಅಲ್ಲಿಗೆ ಬಂದ ಕಲ್ಯಾಣಿ ತಾರಾಳನ್ನು ಕೊಲ್ಲುವ ಸಂಚು ಮಾಡುತ್ತಾಳೆ. ರತ್ನ ತಾರ ವಿವಾಹ ಮಾಡಿಕೊಳ್ಳುತ್ತಾರೆ. ಅಸೂಯೆಯಿಂದ ಕಲ್ಯಾಣಿ ಈ ದಂಪತಿಗಳಿಗೆ ವಿರಸದುರಿಯಿಂದ ಬೇಯುವ ಶಾಪವೀಯುತ್ತಾಳೆ. ತಾರ ನಾಗರತ್ನ ಮಾಲೆ ಬೇಕೆಂದು ಕೇಳಿದಾಗ ಸಾವಿರಾರು ಸರ್ಪಗಳನ್ನು ಕೊಲ್ಲುತ್ತಾನೆ. ಲಕ್ಷ್ಮೀ ವಿಗ್ರಹದ ಮೇಲೆ ಹತ್ತಿ ಅಲ್ಲಿದ್ದ ಮಾಲೆ ಪಡೆದುಕೊಂಡರೂ ಲಕ್ಷ್ಮೀ ಮಾಯ ಮಾಡುತ್ತಾಳೆ. ನಾರದ ತನ್ನ ಬಳಿ ಮಾಲೆ ಇದ್ದು, ನೀನು ಮಾಡುವ ಕೊಲೆ-ದರೋಡೆಗಳಲ್ಲಿ ನಿನ್ನ ಮನೆಯವರ ಪಾಲೆಷ್ಟು ಎಂಬ ಪ್ರಶ್ನೆಗೆ ಉತ್ತರ ಹೇಳಿದರೆ ಮಾಲೆ ನೀಡುವುದಾಗಿ ತಿಳಿಸುತ್ತಾನೆ. ಮನೆಗೆ ಬಂದು ಕೇಳಿದರೆ ಅವನ ಪಾಪದ ಪಾಲು ಹೊರಲು ಯಾರೂ ಸಿದ್ಧರಿರುವುದಿಲ್ಲ. ರತ್ನನಿಗೆ ಜ್ಞಾನೋದಯವಾಗಿ ನಾರದನ ಸೂಚನೆಯಂತೆ ತಪಸ್ಸಿಗೆ ಕೂರುತ್ತಾನೆ. ತಾರಳಿಗೆ ಸ್ವರ್ಗ ಪ್ರಾಪ್ತಿಯಾಗುವುದು. ರತ್ನನ ಮೇಲೆ ಹುತ್ತ ಬೆಳೆದು ಹಣ್ಣು ಹಣ್ಣು ಮುದುಕನಾಗುತ್ತಾನೆ. ರಾಕ್ಷಸರಿಬ್ಬರನ್ನು ಕ್ರೌಂಚ ಪಕ್ಷಿಗಳಾಗಿಸಿ ವಿಷ್ಣು ಕಿರಾತಕ ವೇಷ ಧರಿಸಿ ಬಂದು ಒಂದು ಪಕ್ಷಿಯನ್ನು ಕೊಲ್ಲುತ್ತಾನೆ. ವಾಲ್ಮೀಕಿ 'ಮಾ ನಿಷಾದ...' ಎಂದು ಆರಂಭಿಸಿ ವಿಷ್ಣುವಿಗೆ ಶಾಪ ನೀಡಲು ಹೋಗುತ್ತಾನೆ. ನಾರದ ವಿಷಯ ತಿಳಿಸಿದಾಗ 'ಮಾ ನಿಷಾದ...' ಎಂಬ ಪದದಿಂದಲೇ ಆರಂಭಿಸಿ ರಾಮಾಯಣ ಮಹಾಕಾವ್ಯ ಬರೆಯುತ್ತಾನೆ.

೧೩೮. ಮನಮೆಚ್ಚಿದ ಮಡದಿ

(೧೯೬೩ / ಕಪ್ಪು-ಬಿಳುಪು / ಸಾಮಾಜಿಕ)

ಲಾ: ಸರ್ವಮಂಗಳ ಚಿತ್ರ

ಪ್ರೊ: ಎನ್.ಜಿ.ವತ್ಸಲನ್, ಎನ್.ರಾಮಚಂದ್ರ

ನಿ: ಕು.ರ.ಸೀತಾರಾಮಶಾಸ್ತ್ರಿ

ಅ: ರಾಜಕುಮಾರ್, ಉದಯಕುಮಾರ್, ಅಶ್ವತ್ಥ್, ಈಶ್ವರಪ್ಪ, ಕುಪ್ಪುರಾಜ್, ಬಸಪ್ಪ, ಶಿವಾಜಿ, ನರಸಿಂಹರಾಜು, ಬಾಲಕೃಷ್ಣ, ಲೀಲಾವತಿ, ಜಯಶ್ರೀ, ರಮಾ, ಪ್ರಭಾ, ಇಂದಿರಾದೇವಿ, ಜೂ.ರೇವತಿ

ಕ: ಕು.ರ.ಸೀತಾರಾಮಶಾಸ್ತ್ರಿ

ಮಾ: ಕು.ರ.ಸೀತಾರಾಮಶಾಸ್ತ್ರಿ, ಟಿ.ಎನ್.ಬಾಲಕೃಷ್ಣ(ಹಾಸ್ಯ ಸಂಭಾಷಣೆ)

ಗೀ: ಕು.ರ.ಸೀತಾರಾಮಶಾಸ್ತ್ರಿ, ಕುವೆಂಪು

ಗಾ: ಪಿ.ಬಿ.ಶ್ರೀನಿವಾಸ್, ಪಿ.ಸುಶೀಲ, ಎಸ್.ಜಾನಕಿ, ಎಲ್.ಆರ್.ಈಶ್ವರಿ, ಜಮುನಾರಾಣಿ, ಲತಾ, ಸಿ.ಎಸ್.ಸರೋಜಿನಿ, ಪಾಣಿಗ್ರಾಹಿ

ಸಂ: ಬಾಲ್ ಜಿ.ಯಾದವ್, ಎಂ.ತಾತಯ್ಯ

ಛಾ: ಬಾಬುಲ್‌ನಾಥ್

ಕಲೆ: ಪ್ರಸಾದ್ ರಾವ್

ಸ: ವಿಜಯಭಾಸ್ಕರ್

ಧ್ವ: ಎಂ.ಬಿ.ವಾಲ್ಕೆ, ಎಫ್.ವಿ.ಸ್ವಾಮಿ

ಸ್ಟು: ಫಿಲಂ ಸೆಂಟರ್ (ಮದರಾಸು)

ಹಾ: ೧)'ಜೈ ಭಾರತ ಜನನಿಯ ತನುಜಾತೆ...', ೨)'ತುಟಿಯ

ಮೇಲೆ ತುಂಟ ಕಿರುನಗೆ...', ೩)'ಸಿರಿತನ ಬೇಕೆ ಬಡತನ ಸಾಕೇ....', ೪)'ಲವ್ ಲವ್ ಎಂದರೇನು ಒಲವು...', ೫)'ಎತ್ತಿದರಾರತಿಯ. .', ೬)'ಏಸು ನದಿಗಳ ದಾಟಿ...'

ಕ.ಸಾ: ರಾವ್‌ಬಹದ್ದೂರ್ ಕಪಿನಿಪತಿರಾಯರ ಬಳಿ ಗುಮಾಸ್ತನಾಗಿದ್ದ ಉಮಾಕಾಂತನ ಪತ್ನಿ ಮಗುವನ್ನು ಹಡೆದು ಸತ್ತಾಗ ಕಪನೀಪತಯ್ಯನ ಮಗಳನ್ನು ವಿವಾಹವಾದ. ಮೊದಲ ಹೆಂಡತಿಯ ಮಗ ಶ್ರೀನಾಥ್ ತಾತನ ಬಳಿ ಬೆಳೆದು ಸಜ್ಜನನಾಗುತ್ತಾನೆ. ಉಮಾಕಾಂತನ ಎರಡನೆ ಪತ್ನಿಗೆ ಜನಿಸುವ ರಮೇಶ್ ಉಂಡಾಡಿಗುಂಡನಾಗಿ ಬೆಳೆಯುತ್ತಾನೆ. ವಿದ್ಯಾಭ್ಯಾಸಕ್ಕಾಗಿ ಪಟ್ಟಣಕ್ಕೆ ಬಂದ ಶ್ರೀನಾಥ್ ದೇವರಾಜಯ್ಯನವರ ಮನೆಯಲ್ಲಿ ನೆಲೆಸುತ್ತಾನೆ. ಅವರ ಪುತ್ರಿ ಸುಮನಾಳಲ್ಲಿ ಶ್ರೀನಾಥ್ ಅನುರಕ್ತನಾಗುತ್ತಾನೆ. ಇಬ್ಬರ ವಿವಾಹವೂ ಆಗುತ್ತದೆ. ಹಳ್ಳಿಗೆ ಬಂದ ಶ್ರೀನಾಥ್ ಜನರಲ್ಲಿ ಸಾಮಾಜಿಕ ಕಳಕಳಿ ಮೂಡಿಸುತ್ತಾನೆ. ಉಮಾಕಾಂತ್‌ನ ಮಾವ ಕಪಿನಿಪತಿರಾಯರು ಶ್ರೀನಾಥ್ ಹೆಸರಿಗೆ ಇಟ್ಟಿದ್ದ ವಿಮಾ ಹಣ ಒಂದು ಲಕ್ಷ ರೂಪಾಯಿ ಶ್ರೀನಾಥನ ಕೈ ಸೇರುತ್ತದೆ. ಉಮಾಕಾಂತ್‌ಗೆ ಅಪಘಾತವಾಗುತ್ತದೆ. ಉಮಾಕಾಂತನನ್ನು ಶ್ರೀನಾಥ್ ರಕ್ಷಿಸಿಕೊಳ್ಳುತ್ತಾನೆ. ಸುಖಾಂತ್ಯವಾಗುತ್ತದೆ.

೧೩೯. ಆನಂದ ಭಾಷ್ಪ

(೧೯೬೩ / ಕಪ್ಪು-ಬಿಳುಪು / ಸಾಮಾಜಿಕ)

ಲಾ: ಆರ್.ಎನ್.ಆರ್.ಪಿಕ್ಚರ್ಸ್

ಪ್ರೊ/ನಿ: ಆರ್.ನಾಗೇಂದ್ರರಾವ್

ಸ.ನಿ: ಹೆಚ್.ರೇಣುಕಾಶರ್ಮ

ಅ: ಆರ್.ಎನ್.ಸುದರ್ಶನ್, ಕೆ.ಎಸ್.ಅಶ್ವತ್ಥ್, ಬಾಲಕೃಷ್ಣ, ಆರ್.ನಾಗೇಂದ್ರರಾವ್, ಅರುಣ್‌ಕುಮಾರ್, ಮಾ।ಯೋಗೀಂದ್ರಕುಮಾರ್, ಗಣಪತಿಭಟ್, ಎಂ.ಶಿವರಾಂ, ಶಿವಾಜಿರಾವ್, ಹರಿಣಿ, ಲಕ್ಷ್ಮೀಬಾಯಿ, ರಜನಿ

ಕ/ಚಿ.ಕ/ಮಾ/ಗೀ: ಆರ್.ಎನ್.ಜಯಗೋಪಾಲ್

ಗಾ: ಎಸ್.ಜಾನಕಿ, ಎಲ್.ಆರ್.ಈಶ್ವರಿ, ಪಿ.ಬಿ.ಶ್ರೀನಿವಾಸ್, ಆರ್.ನಾಗೇಂದ್ರರಾವ್, ಜಿ.ಕೆ.ವೆಂಕಟೇಶ್

ಸಂ: ಎಸ್.ಎಂ.ಶಾಲಿ

ಛಾ: ಆರ್.ಎನ್.ಕೆ.ಪ್ರಸಾದ್, ವಿ.ಮನೋಹರ್ (ಸಹಾಯ)

ಕಲೆ: ವರ್ತೂರ್ಕರ್

ಸ: ಜಿ.ಕೆ.ವೆಂಕಟೇಶ್

ಧ್ವ: (ಹಾ)ಎಂ.ಬಿ.ವಾಲ್ಕೆ, (ಮಾ)ವೆಂಕಟರಮಣನ್

ಸ್ಥ: ಪಿ.ಎಸ್.ಗೋಪಾಲಕೃಷ್ಣ

ಸಾ: ಎಂ.ಶ್ಯಾಮಸುಂದರ್

ಪ್ರ: ಕೆ.ಸೋಮು, ಎಂ.ಎಸ್.ಸುಬ್ಬಣ್ಣ

ಸ್ಟು: ವಾಹಿನಿ

ಹಾ: ೧)'ನಿಜದೆ ಯೌವ್ವನ ಮೋಟರು ಗಾಡಿ...', ೨)'ಕನ್ನಡಿಯಲಿ ಕಾಣುತಿಹ ಕನ್ನಿಕೆ...', ೩)'ಏನೋ ಏಕೋ ಹೊಸಭಾವ ತುಂಬಿರಲು ಹೃದಯದಲಿ......', ೪)'ಗುಲಾಮಳಾ ಸಲಾಮಿದೋ ಜಿಯಾ....', ೫)'ಅಂದು ಮಾನಿನಿ ಮನವಾ ಮುದದಲಿ ಸೆಳೆದಾ...', ೬)'ಮಲಗೋ ಮಗನೆ ಹಾಯಾಗಿ....'

ವಿ: ಹೆಚ್.ರೇಣುಕಾಶರ್ಮ ಸಹಾಯಕ ನಿರ್ದೇಶಕರಾಗಿ ಚಿತ್ರರಂಗ ಪ್ರವೇಶಿಸಿದ ಚಿತ್ರ. ಹರಿಕಥಾ ಕೀರ್ತನಕಾರ ಗುರುರಾಜುಲುನಾಯ್ಡು ಅರುಣಕುಮಾರ್ ಆಗಿ, ಖಳನಾಯಕನಾಗಿ ಚಿತ್ರರಂಗ ಪ್ರವೇಶಿಸಿದ ಚಿತ್ರ.

ಕ.ಸಾ: ರಮೇಶ ವೈದ್ಯಕೀಯ ವಿದ್ಯಾರ್ಥಿ. ಕೆಟ್ಟ ಚಟಗಳಿಗೆ ಬಲಿಯಾಗಿ ತಂದೆಯ ಚಿಂತೆಗೆ ಕಾರಣನಾದ. ಮದುವೆ ಮಾಡಿದರೆ ಸರಿಹೋಗಬಹುದೆಂದು ಲಕ್ಷ್ಮೀಯೊಂದಿಗೆ ವಿವಾಹ ಮಾಡಿದರು. ಸರಿಹೋದ ರಮೇಶನನ್ನು ಸ್ನೇಹಿತ ಬಾಲು ದಾರಿ ತಪ್ಪಿಸಿದ. ಗಂಡ-ಹೆಂಡತಿ ನಡುವೆ ಭಿನ್ನಾಭಿಪ್ರಾಯ ಬಂದು ಕೊನೆಗೆ ಲಕ್ಷ್ಮೀ ಗಂಡನನ್ನೇ ತೊರೆದು ಹೋಗುವಳು. ರಮೇಶ್ ಪುನಃ ಸರಿಯಾಗಿ ಸತಿ-ಪತಿ ಒಂದಾಗುವುದೇ ಈ ಚಿತ್ರದ ಕಥೆ.

೧೪೦. ಚಂದ್ರಕುಮಾರ

(೧೯೬೩ / ಕಪ್ಪು-ಬಿಳುಪು / ಜಾನಪದ)
ಲಾ: ಹೆಚ್.ಎಂ.ಬಾಬು ಪ್ರೊಡಕ್ಷನ್ಸ್
ಪ್ರೊ: ಟಿ.ಮದಾರ್
ನಿ: ಎಸ್.ಎಸ್.ವರ್ಮ
ಸ.ನಿ: ಡಿ.ಆರ್.ಆದಿತ್ಯ, ಕೆ.ರಾಜಾರಾಂ
ಅ: ರಾಜಕುಮಾರ್, ಉದಯಕುಮಾರ್, ಕೃಷ್ಣಕುಮಾರಿ, ರಾಜಶ್ರೀ, ಈಶ್ವರಪ್ಪ, ನರಸಿಂಹರಾಜು, ರಾಜಾಶಂಕರ್, ಬಾಲಕೃಷ್ಣ, ಜಾರ್ಜ್ ಇಂದಿರಾ, ಜಯಾ, ಗಣಪತಿಭಟ್, ಜಯಶ್ರೀ, ಶೇಷಕುಮಾರಿ, ಹನುಮಂತರಾವ್, ರಾಜೇಂದ್ರಕೃಷ್ಣ
ಕ: ಟಿ.ಮದಾರ್
ಚಿ.ಕ: ಟಿ.ಮದಾರ್, ಕೆ.ಆರ್.ಸಂಜೀವಿ



ಮಾ/ಗೀ: ಎಸ್.ಕೆ.ಕರೀಂಖಾನ್
ಗಾ: ಪಿ.ಸುಶೀಲ, ಎಸ್.ಜಾನಕಿ, ಪೀಠಾಪುರಂ ನಾಗೇಶ್ವರರಾವ್, ಪಿ.ಬಿ.ಶ್ರೀನಿವಾಸ್
ಸಂ: ಪಿ.ಎಸ್.ಮೂರ್ತಿ
ಛಾ: ಎಸ್.ಎಸ್.ವರ್ಮ, ವಿ.ಜಿ.ಸುಬ್ಬರಾವ್, ಹೇಗ್ ನಾರಾಯಣ
ಕಲೆ: ಎಸ್. ಅಮ್ಮಯ್ಯಪ್ಪನ್
ಸ: ಎಂ.ವೆಂಕಟರಾಜು, ಟಿ.ಚಲಪತಿರಾವ್
ಧ್ವ: ಕೆ. ಶ್ರೀನಿವಾಸನ್
ನೃ: ವೇಣುಗೋಪಾಲ್
ಸಾ: ರಾಜನ್
ವ: ಪಿ. ಬಂಟಿಬಾಬು, ಬೋಡಲು, ಜಿ.ಚೆಲ್ಲಾರಾವ್
ಪ್ರ: ವೀರರಾಜು, ದೊರೈಸ್ವಾಮಿ, ನಾರಾಯಣಸ್ವಾಮಿ
ಸ್ಟು: ಮೆಜೆಸ್ಟಿಕ್
ಹಾ: ೧)'ಮನಮೋಹನನ ಚರಣವಲೀ....', ೨)'ಬಣ್ಣದಿಂದ ಬಂಗಾರದಂದ ತಂದ ಕಣ್ಣಾಸೆ ತುಂಬಿ ಬಂದ ಆನಂದಾ...', ೩)'ನೀನೆ ನೀರೇ ಮಂದಾರ...', ೪)'ಗೆಜ್ಜೆ ಝಣ್ ಝಣ್ ನುಡಿದಾವೆ....', ೫)'ಬ್ರಹ್ಮದೇವಾ.. ಬ್ರಹ್ಮದೇವಾ...', ೬)'ಗತಿ ಕಾಣೆನೋ...'
ವಿ: ಉದಯಕುಮಾರ್ ನಾಯಕರಾಗಿಯೂ, ರಾಜಕುಮಾರ್ ಋಷಿಯಾಗಿಯೂ ಅಭಿನಯಿಸಿದ ಚಿತ್ರ.
ಸೆ: ಉದ - ೪೩೧೮.೪೦, ೧೭ ರೀಲುಗಳು, ಎ೦-೩೧೮೫, ೨೭-೬-೧೯೬೩
ಕ.ಸಾ: ಅವರವರ ಪ್ರಾರಬ್ಧ ಕರ್ಮಗಳನ್ನು, ಬ್ರಹ್ಮ ಬರೆವ ಹಣೆಬರಹವನ್ನು ಅವರವರೇ ಅನುಭವಿಸಿ ತೀರಬೇಕೆಂದು ನಿರೂಪಿಸುವ ಚಿತ್ರ. ಪ್ರಚಂಡ ಎಂಬ ತಪೋನಿಷನು ಜ್ಯೋತಿಷ್ಯಶಾಸ್ತ್ರ ಪ್ರವೀಣ ಮಾರ್ತಾಂಡನು ನುಡಿದ ಭವಿಷ್ಯವನ್ನು ಸುಳ್ಳು ಮಾಡಲು ನಡೆಸುವ ಪ್ರಯತ್ನದೊಡನೆ ಚಂದ್ರಕುಮಾರನ ಕಥೆ ವಿಸ್ತರಿಸಿಕೊಂಡಿದೆ.

೧೪೧. ಬಂಗಾರಿ

(೧೯೬೩ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಅನಂತಲಕ್ಷ್ಮಿ ಫಿಲಂಸ್
ಪ್ರೊ/ನಿ: ಜಿ.ವಿ.ಅಯ್ಯರ್
ಸ.ನಿ: ಕೆ.ಎಸ್.ಎಲ್.ಸ್ವಾಮಿ (ರವೀ)
ಅ: ಕಲ್ಯಾಣ್‌ಕುಮಾರ್, ಪಂಡರಿಬಾಯಿ, ಕೆ.ಎಸ್.ಅಶ್ವತ್, ಜಯಶ್ರೀ, ಆದವಾನಿ ಲಕ್ಷ್ಮೀದೇವಿ, ನರಸಿಂಹರಾಜು, ಜಯ, ಕುಪ್ಪುರಾಜ್, ಗಂಗೂಬಾಯಿ, ಗುಗ್ಗು, ಉಷಾ, ನಂಜಪ್ಪ, ಲಕ್ಷ್ಮಿ, ಹನುಮಂತರಾವ್, ಇಂದ್ರಾಣಿ, ಅನಂತರಾವ್, ಶಿವಾಜಿರಾವ್, ಜಿ.ವಿ.ಅಯ್ಯರ್
ಕ: ಕೃಷ್ಣಮೂರ್ತಿ ಪುರಾಣಿಕರ 'ದೇವರ ಕೂಸು' ಕಾದಂಬರಿ.
ಚಿ.ಕ/ಮಾ/ಗೀ: ಜಿ.ವಿ.ಅಯ್ಯರ್,
ಗಾ: ರಾಧಾ ಜಯಲಕ್ಷ್ಮಿ, ಎಸ್.ಜಾನಕಿ, ಪಿ.ಬಿ.ಶ್ರೀನಿವಾಸ್, ಜಿ.ಕೆ.ವೆಂಕಟೇಶ್, ರಘುನಾಥ್, ಪಾಣಿಗ್ರಾಹಿ
ಸಂ: ಎಸ್.ಸಿ.ರಾಜನ್ ಭಾಸ್ಕರ್
ಛಾ: ಬಿ.ದೊರೈರಾಜ್
ಕಲೆ: ಆರ್.ಬಿ.ಎಸ್.ಮಣಿ
ಸ: ಜಿ.ಕೆ.ವೆಂಕಟೇಶ್
ಧ್ವ: ಮೋಹನಸುಂದರಂ, ನಾಗೇಶ್
ವ: ವಾಲಿ
ಪ್ರ: ಸಿಂಗ್, ಶ್ರೀನಿವಾಸ, ರಾಜಗೋಪಾಲ್
ಸ್ಟು: ಗೋಲ್ಡನ್
ಹಾ: ೧)'ನಾ ಹುಟ್ಟಿ ಬೆಳೆದುದು...', ೨)'ಕನ್ನಡದ ಮಗಳೆ...', ೩)'ತಾಯಿ ತಿಂದ ತಪ್ಪಲಿ...', ೪)'ನಿನ್ನ ಕೈ ಬಳೆ...', ೫)'ಯಾರೇನ ಮಾಡುವರೋ...'
ವಿ: ಕಾವೇರಿಯ ವರ್ಣನೆ ಕರುನಾಡ ಬಣ್ಣನೆ
ಕ.ಸಾ: ಮಕ್ಕಳಿಲ್ಲದ ದೇಸಾಯಿ ಆತನ ಪತ್ನಿ ಚಂದಯ್ಯನೆಂಬ ಅನಾಥನನ್ನು ಸಾಕಿಕೊಳ್ಳುತ್ತಾರೆ. ಕೀಳು ಮನಸ್ಸಿನ ಜನ ತಾಯಿ ಮಗನಿಗೆ ಕೆಟ್ಟ ಅರ್ಥ ಕಲ್ಪಿಸುತ್ತಾರೆ. ತಾಯಿ ತನ್ನ ಅಣ್ಣನ ಮಗಳನ್ನೇ ಸೊಸೆಯಾಗಿ ತರುತ್ತಾಳೆ. ಪರಿಸ್ಥಿತಿ ಸುಧಾರಿಸಿ ಎಲ್ಲವೂ ಸರಿಯಾಗುತ್ತದೆ. ಬಂಗಾರಿ ಮನೆ-ಮನ ತುಂಬಿ ಒಡೆದು ಹೋದ ಸಂಸಾರವನ್ನು ಸರಿಪಡಿಸುತ್ತಾಳೆ.

೧೪೨. ಜೇನುಗೂಡು

(೧೯೬೩ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಸರಸ್ವತಿ ಚಿತ್ರ
ಪ್ರೊ: ಟಿ.ವಾಸಣ್ಣ, ಶ್ರೀಮತಿ ಹೀರಾ
ನಿ: ವೈ.ಆರ್.ಸ್ವಾಮಿ
ಸ.ನಿ: ರತ್ನಾಕರ್
ಅ: ಕೆ.ಎಸ್.ಅಶ್ವತ್ಥ್, ಜಿ.ವಿ.ಶಿವರಾಜ್, ಪಂಢರಿಬಾಯಿ, ಜಯಂತಿ, ಚಂದ್ರಕಲಾ, ರತ್ನಾಕರ್, ಉದಯಕುಮಾರ್, ಸೂರ್ಯಕುಮಾರ್, ಜಯಶ್ರೀ, ಬಾಲಕೃಷ್ಣ, ಎಂ.ಎನ್.ಲಕ್ಷ್ಮೀದೇವಿ
ಕ/ಚಿ.ಕ: ವೈ.ಆರ್.ಸ್ವಾಮಿ
ಮಾ: ಸೋರಟ್ ಅಶ್ವತ್ಥ್
ಗೀ: ಕು.ರ.ಸೀತಾರಾಮಶಾಸ್ತ್ರಿ
ಗಾ: ಘಂಟಸಾಲ, ನಾಗೇಂದ್ರ, ಸುಶೀಲ, ಪಿ.ಬಿ.ಶ್ರೀನಿವಾಸ್, ರಾಘವ, ಎಸ್.ಜಾನಕಿ, ಎಲ್.ಆರ್.ಈಶ್ವರಿ
ಸಂ: ಪಿ.ಎಸ್.ಮೂರ್ತಿ
ಛಾ: ಆರ್.ಮಧು
ಕಲೆ: ಬಿ.ಸಿ.ಬಾಬು
ಸ: ವಿಜಯಕೃಷ್ಣಮೂರ್ತಿ
ಧ್ವ: ಮೋಹನಸುಂದರಂ, ಲಾಜರಸ್
ಪ್ರ: ವೇಣುಗೋಪಾಲ್
ವ: ಮೊರ್ರ್ಯ ಕಣ್ಣು - ತಂಗಪ್ಪನ್
ಪ್ರ: ಎಂ.ಎಸ್.ಸುಬ್ಬಣ್ಣ, ವೀರ್ರಾಜು, ಮಾಧವಯ್ಯ
ಸ್ಟು: ಗೋಲ್ಡನ್
ಹಾ: ೧)'ಜಗಿ ಜಗಿಯುತ ನಲಿ ಗಗಗದ ಬಯಲಲಿ....', ೨)'ಬಾಳೊಂದು ನಂದನ ಅನುರಾಗ ಬಂಧನ....', ೩)'ಒಂದಾಗಿ ಬಾಳುವ...',
ವಿ: ಜಯಂತಿ ಅಭಿನಯದ ಮೊದಲ ಕನ್ನಡ ಚಿತ್ರ. ಗುಬ್ಬಿ.ವೀರಣ್ಣನವರ ಮಗ ಜಿ.ವಿ. ಶಿವರಾಜ್ ಚಿತ್ರರಂಗ ಪ್ರವೇಶಿಸಿದ ಚಿತ್ರ
ಕ.ಸಾ: ಐಕ್ಯತೆಯ ಸಂದೇಶ ಸಾರುವ ಚಿತ್ರ. ರಘು-ಶಾಂತಾ ತಪಸ್ಸಿನಿಂದ ಕಟ್ಟಿದ ಮನೆ ಜೇನುಗೂಡಿನಂಥದು. ತಮ್ಮಂದಿರ ಹೆಂಡತಿಯರಿಂದ ಒಡೆದು ದಿಕ್ಕಾಪಾಲಾದಾಗ, ರಘು-ಶಾಂತಾ ನಿರ್ಗತಿಕರಾಗುತ್ತಾರೆ. ಕಡೆಗೆ ಒಗ್ಗಟ್ಟಿನಲ್ಲಿ ಬಲವಿದೆ, ಒಲವಿದೆ ಎಂಬ ತಿಳಿವು ಬರುತ್ತದೆ. ಮತ್ತೆ ಎಲ್ಲರೂ ಒಂದಾಗುತ್ತಾರೆ.

೧೪೩. ನಂದಾದೀಪ

(೧೯೬೩ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಶ್ರೀ ಭಾರತಿ ಚಿತ್ರ
ಪ್ರೊ: ವಾದಿರಾಜ್-ಜವಹರ್
ನಿ: ಎಂ.ಆರ್.ವಿಠಲ್
ಸ.ನಿ: ರತ್ನಾಕರ್
ಅ: ರಾಜಕುಮಾರ್, ಉದಯಕುಮಾರ್, ಕೆ.ಎಸ್.ಅಶ್ವತ್, ಸೋರಟ್ ಅಶ್ವತ್ಥ್, ನರಸಿಂಹರಾಜು, ರತ್ನಾಕರ್, ರಾಮಚಂದ್ರಶಾಸ್ತ್ರಿ, ಬಾಲಕೃಷ್ಣ, ವಾದಿರಾಜ್, ಹನುಮಂತಾಚಾರ್, ಹರಿಣಿ, ಲೀಲಾವತಿ, ಜಯಶ್ರೀ, ಎಂ.ಎನ್.ಲಕ್ಷ್ಮೀದೇವಿ, ರಮಾದೇವಿ, ನರೇಶ್, ರಘುನಂದನ್, ಕೆ. ಸೀತಾಪತಿ
ಕ: ವಾದಿರಾಜ್
ಚಿ.ಕ/ಮಾ/ಗೀ: ಸೋರಟ್ ಅಶ್ವತ್ಥ್
ಗಾ: ಪಿ.ಬಿ.ಶ್ರೀನಿವಾಸ್, ನಾಗೇಂದ್ರ, ಎಸ್.ಜಾನಕಿ, ಪಿ.ಲೀಲಾ, ಜಿಕ್ಕಿ
ಸಂ: ಪಿ.ಎಸ್.ಮೂರ್ತಿ
ಛಾ: ಆರ್.ಮಧು
ಕಲೆ: ಬಿ.ಸಿ.ಬಾಬು
ಸ: ಎಂ.ವೆಂಕಟರಾಜು
ಧ್ವ: ಮೋಹನಸುಂದರಂ, ನಾಗೇಶ್ವರನ್
ನೃ: ಬಿ.ಜಯರಾಂ
ವ: ದೊರೈಕಣ್ಣು
ಪ್ರ: ಎಂ.ಎಸ್.ಸುಬ್ಬಣ್ಣ
ಸ್ಟು: ಗೋಲ್ಡನ್
ಹಾ: ೧)'ಕನಸೊಂದ ಕಂಡ ಕನ್ನಡ ಮಾತೆ.....', ೨)'ನಲಿವ ಮನ ಹೊಂದೀ ದಿನಾ....', ೩)'ಒಂದು ಗೂಡಿದೆ ನೀ ಒಲ್ಮೆ ತೋರಿದೆ...', ೪)'ಗಾಳಿಗೋಪುರಾ ನಿನ್ನಾಶಾತೀರಾ.....', ೫)'ನಾಡಿನಂದ ಈ ದೀಪಾವಳಿ ಬಂತು....', ೬)'ಯಾರಿಗೆ ಯಾರೋ ನಿನಗಿನ್ಯಾರೋ......', ೭)'ನ್ಯಾಯಕ್ಕೆ ಕಣ್ಣಿಲ್ಲ ಪ್ರೀತಿಗೆ ಬೆಲೆಯಿಲ್ಲ....'
ವಿ: ಎಂ.ಆರ್.ವಿಠಲ್ ನಿರ್ದೇಶನದ ಮೊದಲ ಚಿತ್ರ. ರಾಷ್ಟ್ರಪತಿಗಳ ಅರ್ಹತಾ ಪತ್ರ ಪಡೆದ ಚಿತ್ರ. ವಿ.ಶಾಂತಾರಾಮ್ ಅವರ ಚಿತ್ರವೊಂದರ ಸ್ಫೂರ್ತಿಯಿಂದ ವಾದಿರಾಜ್ ಅವರು ಈ ಚಿತ್ರದ ಕಥೆ ಬರೆದರು. ವಾದಿರಾಜ್ ಸೋದರರ ನಿರ್ಮಾಣದ ಮೊದಲ ಚಿತ್ರ.
ಕ.ಸಾ: ಶಾಮಯ್ಯನೆಂಬ ಬಡ ವ್ಯಕ್ತಿಗೆ ರವಿ ಹಾಗು ಗೌರಿ ಮಕ್ಕಳು. ರವಿ ಪಟ್ಟಣಕ್ಕೆ ಹೋಗಿ. ಶ್ರೀಮಂತ ವ್ಯಕ್ತಿ ಶ್ರೀಕಾಂತ್ ಅಳಿಯನಾಗಿ ವಿದೇಶಕ್ಕೆ ಹೋಗುತ್ತಾನೆ. ತಂದೆ ಬಡತನ ಅನುಭವಿಸುತ್ತಿದ್ದಾಗ ಆ ಊರಿನ ಆದರ್ಶ ಯುವಕ ಶಂಕರ್ ಗೌರಿಯನ್ನು ವಿವಾಹವಾಗಲು ಮುಂದೆ ಬರುತ್ತಾನೆ. ಮಗಳು ಅಳಿಯ ವಿದೇಶಕ್ಕೆ ಹೋದ ನಂತರ ಒಂಟಿತನ ಅನುಭವಿಸುತ್ತಿದ್ದ ಶ್ರೀಕಾಂತ್ ವಿವಾಹವಾಗ ಬಯಸಿದಾಗ ತಂದೆಯ ಕಷ್ಟ ನೀಗಿಸಲು ಗೌರಿ ಅವನನ್ನು ವಿವಾಹವಾಗುತ್ತಾಳೆ. ಶಂಕರ್ ಮಾನಸಿಕವಾಗಿ ಆಘಾತಗೊಳ್ಳುತ್ತಾನೆ. ಗೌರಿ ಶ್ರೀಕಾಂತನ ಮಡದಿ ಆದ ನಂತರ ಮನೆ ನಂದನವನವಾಗುತ್ತದೆ. ರಾಧ ಹಾಗು ರವಿ ಲಂಡನ್‌ನಿಂದ ಬಂದಾಗ ರವಿಗೆ ತನ್ನ ತಂಗಿಯೇ ತನ್ನ ಅತ್ತೆ ಆಗಿರುವ ವಿಷಯ ತಿಳಿದು ಆಘಾತಕ್ಕೊಳಗಾಗುತ್ತಾನೆ. ಗೌರಿ ಗರ್ಭಿಣಿಯಾಗಿ ಬಳಲಿ ಬಂದಾಗ ರವಿ ಓಡಿಮಕೊಳ್ಳುತ್ತಾನೆ. ರಾಧಾಗೆ ಗಂಡನ ಮೇಲೆ ಅನುಮಾನ ಬರುತ್ತದೆ. ಗೌರಿ ಸ್ವಂತ ತಂಗಿ ಎಂದು ರವಿ ಹೇಳುತ್ತಾನೆ. ಮನೆ ಬಿಟ್ಟು ಹೋದ ಗೌರಿಯನ್ನರಸಿ ಎಲ್ಲರೂ ಹೋದಾಗ ಡೈನಾಮೆಟ್ ಸಿಡಿತಕ್ಕೆ ಒಳಗಾಗಿ ಗೌರಿ ಸಾಯುತ್ತಾಳೆ.

೧೪೪. ಪಾಲಿಗೆ ಬಂದದ್ದೇ ಪಂಚಾಮೃತ

(೧೯೬೩ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಪ್ರೀಮಿಯರ್ ಸ್ಟುಡಿಯೋಸ್
ಪ್ರೊ: ಕೆ.ಕೃಷ್ಣಸ್ವಾಮಿ
ನಿ: ಎಂ.ಬಿ.ಗಣೇಶ್‌ಸಿಂಗ್
ಅ: ಧೀಕ್ಕಿಮಾಧವರಾವ್, ಪ್ರತಿಮಾದೇವಿ, ಸರಸ್ವತಿ, ಇಂದಿರಾ,

ಚಂದ್ರಮತಿ, ಪರಮೇಶ್ವರಹೆಗಡೆ, ಮಚ್ಚೇರಿ, ದೇವನ್, ಶಾಮರಾವ್, ರಾಮರಾವ್, ಕೃಷ್ಣದೇಸಾಯಿ, ಬೇಬಿ ಸುಜಾತ
ಮಾ ಗೀ: ಹೆಚ್.ಎಸ್.ಹೂಗಾರ್
ಸಂ: ಕೆ.ವಿ. ಪದ್ಮನಾಭನ್
ಛಾ: ಕೆ.ಎಸ್.ಗೋವಿಂದಸ್ವಾಮಿ
ಕಲೆ: ವೆಂಕಟರಾಮಯ್ಯ
ಸ: ಎ.ಆರ್.ಕೆ.ಸ್ವಾಮಿ
ಧ್ವ: ಕೆ.ಆರ್.ಸೀತಾರಾಮ್
ಪ್ರ: ಶಿವರಾಜ್
ಸ್ಟು: ಪ್ರೀಮಿಯರ್, ಫಿಲಂ ಸೆಂಟರ್
ಹಾ: ೧)'ಎಷ್ಟು ಓದಿದರೇನು ನಾರಿ...', ೨)'ನಲ್ಲೆ ಕನಸಂದು ಕಾಣುತ್ತೆ...', ೩)'ದೂರಾಯಿತು ಮನವಾಶಾ...', ೪)'ಬಟ್ಟೆ ಒಗೆಯುವ ಆಗಸ...', ೪)'ಧರ್ಮಕ್ಕೆ ದಯಬಾರದೀ ಕಾಲ...', ೫)'ತಪ್ಪಲಾರದು ಪೂರ್ವಜನ್ಮದ...', ೬)'ಕರುಣಿಸೋ ಕರುಣಾಕರನೆ...', ೭)'ಹುಟ್ಟು ಸಾವುಗಳು...', ೮)'ಕಪಿ ಎಂದು ಜರಿಯದಿರು...'
ಸೆ: ಉದ - ೪೦೮೫.೨೫, ೧೫ ರೀಲ್‌ಗಳು
ಕ.ಸಾ: ಹೆಂಡತಿ ತೀರಿಹೋದ ಮೇಲೆ ಬಸವರಾಜ ಕಲಾವತಿಯನ್ನು ಮರು ಮದುವೆಯಾದ. ಕಲಾವತಿ ಹೆಂಡತಿಯಾದಳೇ ಹೊರತು ತಾಯಿಯಾಗಲಿಲ್ಲ. ಅಶೋಕ ಬಸವರಾಜನ ಮಗ. ಲಿಂಗರಾಜ ಶ್ರೀಮಂತ. ಅವರ ಮಗಳು ಮಾಲಾ. ಕಾಲೇಜು ಕನ್ಯೆ. ಕಾಲೇಜಿನಲ್ಲಿ ಬಸವರಾಜರ ಮಗ ಅಶೋಕನನ್ನು ಪ್ರೇಮಿಸಿ, ನಿರಾಶಳಾಗುತ್ತಾಳೆ. ಅಶೋಕ ಸೀಲಾ ಎಂಬ ಬೇರೊಬ್ಬಳನ್ನು ಮದುವೆಯಾದ. ತಂದೆಯ ಮಾತಿಗೆ ಕಟ್ಟುಬಿದ್ದು ರಾಜಕುಮಾರನನ್ನು ಮದುವೆಯಾಗುತ್ತಾಳೆ. ಮದುವೆಯಾದರೂ ಅಶೋಕನನ್ನು ಮರೆಯದಂತೆ ಇರುತ್ತಾಳೆ. ಇತ್ತ ಸೀಲಾ-ಅಶೋಕ್ ಅನ್ಯೋನ್ಯವಾದ ದಂಪತಿಗಳಾಗಿರುತ್ತಾರೆ. ಮಾಲಾ ಕುಯುಕ್ತಿಯವಳಾಗಿ ಕಲಾವತಿಯೊಡನೆ ಸೇರಿ ಸೀಲಾಳನ್ನು ಕಾಡಿಗೆ ಅಟ್ಟುತ್ತಾಳೆ. ಹೆಂಡತಿಯಿಲ್ಲದೆ ರಾಜಕುಮಾರ ದುಃಖಿತನಾಗುತ್ತಾನೆ. ಕಡೆಗೆ ಸೀಲಳ ಪಾತಿವ್ರತ್ಯದ ಮುಂದೆ ಮಾಲ ಮಣಿದು 'ಪಾಲಿಗೆ ಬಂದದ್ದೇ ಪಂಚಾಮೃತ' ಎಂಬುದನ್ನು ಒಪ್ಪಿಕೊಳ್ಳುತ್ತಾಳೆ.

೧೪೫. ಶ್ರೀರಾಮಾಂಜನೇಯ ಯುದ್ಧ

(೧೯೬೩ / ಕಪ್ಪು-ಬಿಳುಪು / ಪೌರಾಣಿಕ)
ಲಾ/ಪ್ರೊ: ಅಮೃತಕಲಾ ಪ್ರೊಡಕ್ಷನ್ಸ್
ನಿ: ಎಂ.ಎಸ್.ನಾಯಕ್
ಸ.ನಿ: ಎಂ.ನಾಗೇಶ್ವರರಾವ್, ಪಿ.ಕೃಷ್ಣದೇವರಾವ್
ಅ: ರಾಜಕುಮಾರ್, ಉದಯಕುಮಾರ್, ಕೆ.ಎಸ್.ಅಶ್ವತ್ಥ್, ಧೀರೇಂದ್ರ ಮಾಧವರಾವ್, ಶ್ರೀಕಂಠಸ್ವಾಮಿ, ಜಯಂತಿ, ರಾಘವೇಂದ್ರರಾವ್. ಪಂಢರಿಬಾಯಿ, ಚಂದ್ರಕಲಾ, ಸೂರ್ಯಕುಮಾರಿ, ಆದವಾನಿ ಲಕ್ಷ್ಮಿದೇವಿ, ಜಯಶ್ರೀ, ಬೇಬಿ ಅಮೃತಕಲಾ, ಬೇಬಿ ಪದ್ಮಿನಿ, ಮಾ। ಗೋಪಾಲ್, ಕು। ಉಷಾ, ಹೆಚ್.ಆರ್.ಶಾಸ್ತ್ರಿ, ಸೂರ್ಯಕುಮಾರ್, ರಾಜೇಂದ್ರಕೃಷ್ಣ, ವಿದ್ಯಾಸಾಗರ್, ಶ್ರೀಕಂಠಸ್ವಾಮಿ, ಶಿವಾಜಿರಾವ್, ನರಸಿಂಹಯ್ಯ
ಮಾ/ಗೀ: ಗೀತಪ್ರಿಯ



ಗಾ: ಘಂಟಸಾಲ, ಪಿ.ಬಿ.ಶ್ರೀನಿವಾಸ್, ಮಾಧವಪೆದ್ದಿ ಸತ್ಯಂ, ಎಸ್.ಜಾನಕಿ, ಬಿ.ಆರ್.ಲತಾ, ವಸಂತ
ಸಂ: ಬಾಲ್ ಜಿ.ಯಾದವ್
ಛಾ: ವೆಂಕಟ್
ಕಲೆ: ಬಿ.ಎಸ್.ಕೃಷ್ಣ
ಸ: ಸತ್ಯಂ
ಧ್ವ: (ಹಾ)ಎಂ.ಬಿ.ವಾಲ್ಕೆ, (ಮಾ)ಫ್ರಾನ್ಸಿಸ್ ಎ.ಸಾಮಿ
ನೃ: ವೆಂಪಟಿ ಚಿನ್ನಸತ್ಯಂ
ವ: ತಂಬು - ಬಾಬುರಾವ್
ಪ್ರ: ಎಂ.ಎಸ್.ಸುಬ್ಬಣ್ಣ, ವೀರರಾಜು, ಮಾಧವಯ್ಯ
ಸ್ಟು: ಫಿಲಂ ಸೆಂಟರ್ (ಮದರಾಸು)
ಹಾ: ೧)'ಹನುಮನ ಪ್ರಾಣ ಪ್ರಭೋ ರಘುರಾಮ ದಿನಕುಲಸೋಮ...', ೨)'ಜಗದೀಶನಾಡುವ ಜಗವೇ ನಾಟಕ ರಂಗ...', ೩)'ರಾಮಾಭಿರಾಮಂ...', ೪)'ಝಣಾ ಝಣಾ ಝಣ್ ಝಣಾ...', ೫)'ಜಯ ಜಯರಾಮ ಜಯ ಘನಶ್ಯಾಮ...', ೬)'ಬೆಳಗುವರೆ ಅನ್ಯಾಯವನೆ...', ೭)'ಶ್ರೀರಾಮಂ ರಮಣೀಯ...', ೮)'ಮಾತಾ ರಾಮಾ ಮತ್...', ೯)'ರಾಮಾ ರಾಮಾ...', ೧೦)ಸ್ವಾಮಿಯಾಜ್ಞೆಯ...', ೧೧)'ಸತಿಯೋರ್ವಳ ಆಸೆ...', ೧೨)'ಬ್ರಹ್ಮಾದಿ ಬೃಂದಾರಕರು...', ೧೩)'ವಾನರನು ನೀನೆಂದು.., ೧೪)'ವಾನರನು ವಾರಿಧಿಯ...', ೧೫)'ಇಕ್ಷ್ವಾಕು ವಂಶೋದ್ಭವ ನಾನಾಗಿ...', ೧೬)'ಮುಕ್ತಿಧಾಮ ಶ್ರೀರಾಮನ...',
ವಿ: ರಾಜೇಶ್ ಅವರು ಈ ಚಿತ್ರದಲ್ಲಿ ವಿದ್ಯಾಸಾಗರ್ ಎಂಬ ಹೆಸರಿನಲ್ಲಿ ಭರತನ ಪಾತ್ರ ಮಾಡಿದ್ದಾರೆ. ಡಾ।ರಾಜ್ ಅಭಿನಯದ ೫೦ನೇ ಚಿತ್ರ. ಸತ್ಯಂ ಸಂಗೀತ ನೀಡಿದ ಮೊದಲ ಚಿತ್ರ.
ಕ.ಸಾ: ಭಕ್ತಿ ಹಾಗು ಶಕ್ತಿಯ ನಡುವಿನ ವ್ಯತ್ಯಾಸವೇ ಈ ಚಿತ್ರದ ಕಥಾ ತಿರುಳು. ಚಂದ್ರಭಾನು ಮಹಾರಾಜ ಜಿಂಕೆಯೊಂದಕ್ಕೆ ಬಾಣ ಬಿಟ್ಟನೆಂಬ ಕಾರಣಕ್ಕೆ ಅವನನ್ನು ಶಿಕ್ಷಿಸಲು ರಾಮನಿಗೆ ಆದೇಶ ನೀಡುವಾಗ, ಚಂದ್ರಭಾನು ಹನುಮಂತನಲ್ಲಿ ಶರಣಾಗುತ್ತಾನೆ. ರಾಮ-ಹನುಮಂತರಿಗೆ ಘೋರ ಯುದ್ಧ ನಡೆಯುತ್ತದೆ.

೧೪೬. ಸತಿಶಕ್ತಿ

(೧೯೬೩ / ಕಪ್ಪು-ಬಿಳುಪು / ಜಾನಪದ)
ಲಾ: ಮಾತಾ ಪಿಕ್ಚರ್ಸ್
ಪ್ರೊ/ನಿ: ಕಣಗಾಲ್ ಪ್ರಭಾಕರ ಶಾಸ್ತ್ರಿ
ಅ: ರಾಜಕುಮಾರ್, ಎಂ.ವಿ.ರಾಜಮ್ಮ, ಅಶ್ವತ್ಥ್, ಸಾಹುಕಾರ್ ಜಾನಕಿ, ವರದರಾಜ್, ರಾಮ್‌ಕುಮಾರ್, ನರಸಿಂಹರಾಜು, ವಿಜಯಕುಮಾರ್, ಸೋರಟ್ ಅಶ್ವತ್ಥ್, ರಾಧಿಕ, ಸ್ವಾಮಿ, ಲಕ್ಷ್ಮೀನಾರಾಯಣ್, ರಾಣಿ, ಮಹಾದೇವಿ, ಸುಜಾತ, ಪಾಪಮ್ಮ
ಕ/ಚಿ.ಕ/ಮಾ/ಗೀ: ಕಣಗಾಲ್ ಪ್ರಭಾಕರಶಾಸ್ತ್ರಿ
ಗಾ: ಘಂಟಸಾಲ, ಪಿ.ಬಿ.ಎಸ್., ಪಿ.ಲೀಲ, ಎಸ್.ಜಾನಕಿ, ಎ.ಪಿ.ಕೋಮಲ, ಜೋಳಾರ್ ಭೋಜರಾವ್
ಸಂ: ಸಿ.ವಿ.ರಾಜು
ಛಾ: ಕರ್ಣನ್-ಸುಂದರ್‌ಬಾಬು
ಕಲೆ: ವಿ.ಎಂ.ವತ್ತೂರ್ಕರ್
ಸ: ಟಿ.ಜಿ.ಲಿಂಗಪ್ಪ
ಧ್ವ: ಮದನಗೋಪಾಲ್
ನೃ: ಬಿ.ಜಯರಾಂ, ಪಿ.ಎಸ್.ಗೋಪಾಲಕೃಷ್ಣ
ಸಾ: ಕೆ.ಮಾಧವನ್, ಎಂ.ಡಿ.ಖಾನ್
ವ: ಆರ್.ಅಶ್ವತ್ಥ್
ಪ್ರ: ಎಂ.ಎಸ್.ಸುಬ್ಬಣ್ಣ
ಸ್ಟು: ವಿಜಯವಾಹಿನಿ
ಹಾ: ೧)'ಪವಡಿಸು ಫಾಲಾಕ್ಷ ಶ್ರೀ ವಿರೂಪಾಕ್ಷ...', ೨)'ಮಾತೆಗೆ ಮಿಗಿಲಾದ ದೇವರಿಲ್ಲ.. ಭೀತಿಗೆ...', ೩)'ದೇವೀ ಪ್ರಪನ್ನಾರ್ತಿ...', ೪)'ಆಡಿ ಪಾಡಿ ಒಡನಾಡಿ...', ೫)'ಜಾರೀ ಬಿದ್ದೀಯೇ...', ೬)'ಹುಯ್ಯೋ ಹುಯ್ಯೋ...', ೭)'ಅಚ್ಚಮಲ್ಲಿಗೆ ಹೂವು ಮುಚ್ಚಿಕೋ...', ೮)'ಶ್ರೀಮಾತೆ ಪಂಪಾಂಬೆ...', ೯)'ಚಂದಮಾಮ ಬಾಯಿ...', ೧೦)ಮಂದಾರನಂದನ ಸುಗಂಧಸರೋಜ...', ೧೧)'ಜಯ ವಿಜಯೀಭವ...', ೧೨)'ಮಾತೃ ದೇವೋಭವ...', ೧೩)'ಯಾರು ನೀನೆಲೆ ನಾರಿ, ಮಾನವಿಯೋ...',
ವಿ: ಕಣಗಾಲ್ ಪ್ರಭಾಕರಶಾಸ್ತ್ರಿಗಳು ನಿರ್ದೇಶಿಸಿದ ಮೊದಲ ಚಿತ್ರ. ರಾಜಕುಮಾರ್ ದ್ವಿಪಾತ್ರದಲ್ಲಿ ಅಭಿನಯಿಸಿದ ಮೊದಲ ಚಿತ್ರ.
ಕ.ಸಾ: ಒಂದೇ ತೆರನಾಗಿದ್ದ ಇಬ್ಬರು ವ್ಯಕ್ತಿಗಳು. ಒಬ್ಬ ಸಾಧು ಮತ್ತೊಬ್ಬ ಮಾಂತ್ರಿಕ. ಮಾಂತ್ರಿಕ ತನ್ನ ಮಾಟಮಂತ್ರದಿಂದ ಎಲ್ಲವನ್ನೂ ಜಯಿಸಬಹುದೆಂದು ನಂಬಿ ಹಿಂಸಿಸುವವನು. ಮಾಂತ್ರಿಕ ತನ್ನ ಮಂತ್ರಶಕ್ತಿಯಿಂದ ಮಹಾಸಾಧ್ವಿಯೊಬ್ಬಳ ಪತಿಯನ್ನು ತನ್ನ ಕಪಿಮುಷ್ಟಿಯಲ್ಲಿ ಹಿಡಿದುಕೊಂಡು ಆಡುವಾಗ ಆಕೆಯ ಮಹಾಶಕ್ತಿಯು ಮಾಂತ್ರಿಕನ ಅಟ್ಟಹಾಸವನ್ನು ಮುರಿಯುತ್ತದೆ.

೧೯೬೪

೧೪೭. ನವಕೋಟಿ ನಾರಾಯಣ

(೧೯೬೪ / ಕಪ್ಪು-ಬಿಳುಪು / ಭಕ್ತಿಪ್ರಧಾನ)
ಲಾ: ಶ್ಯಾಮಪ್ರಸಾದ್ ಮೂವೀಸ್
ಪ್ರೊ: ಡಿ.ಆರ್.ನಾಯ್ಡು
ನಿ: ಎಸ್.ಕೆ.ಎ.ಚಾರಿ
ಸ.ನಿ: ಜಯಕುಮಾರ್, ಸುಶೀಲ್ ಕುಮಾರ್
ಅ: ರಾಜಕುಮಾರ್, ಸಾಹುಕಾರ್ ಜಾನಕಿ, ರಾಮಚಂದ್ರಶಾಸ್ತ್ರಿ, ಧೀರೇಂದ್ರ ಮಾಧವರಾವ್, ಬಿ.ವಿ.ರಾಧಾ, ಭಾಸ್ಕರ್, ಗುರುರಾಜ್, ಅಶ್ವತ್ಥ ನಾರಾಯಣ, ಅಯ್ಯಂಗಾರ್, ಲಕ್ಷ್ಮೀನಾರಾಯಣ್, ಸುಂದರರಾವ್, ಮಾಲಾ, ರಮಾ, ತಾರಾ, ಸುಜಾತಾ, ಪ್ರಭಾ, ಶ್ಯಾಮ್‌ಪ್ರಸಾದ್, ಸತ್ಯಂ, ಜಯಕುಮಾರ್, ಪ್ರಧಾನ್, ಗುಗ್ಗು, ಎಲ್.ಎಸ್.ಸ್ವಾಮಿ, ಕೆಂಪರಾಜ್, ಶ್ರೀಕಂಠಸ್ವಾಮಿ
ಚಿ.ಕ: ನರೇಂದ್ರಬಾಬು, ಎಸ್.ಕೆ.ಎ.ಚಾರಿ
ಮಾ: ನರೇಂದ್ರಬಾಬು
ಗೀ: ನರೇಂದ್ರಬಾಬು, ಪುರಂದರದಾಸರು
ಗಾ: ಪಿ.ಬಿ.ಶ್ರೀನಿವಾಸ್, ಪಿ.ಲೀಲಾ, ಎಸ್.ಜಾನಕಿ, ಸುಬ್ಬನರಸಯ್ಯ, ಬಾಲಮುರಳಿ ಕೃಷ್ಣ, ಚೆಲ್ಲಂ
ಸಂ: ಎಸ್.ಪಿ.ಎನ್.ಕೃಷ್ಣ, ಹರಿನಾರಾಯಣಯ್ಯ
ಛಾ: ಎಸ್.ವಿ.ಶ್ರೀಕಾಂತ್
ಕಲೆ: ಅಹಮದ್
ಸ: ಶಿವಪ್ರಸಾದ್
ಧ್ವ: ಜೀವ, ರಂಗಸ್ವಾಮಿ
ನೃ: ಎಲ್ಲಪ್ಪ ಪಿಳ್ಳೆ
ವ: ರಾಮನಾಥನ್, ತಂಗಪ್ಪನ್
ಪ್ರ: ವೆಂಕಟೇಶ, ದೊರೆಸ್ವಾಮಿ
ಸ್ಟು: ಮೆಜೆಸ್ಟಿಕ್, ನ್ಯೂಟೋನ್ (ಮದರಾಸು)
ಹಾ: ೧)'ಆವದೆಲ್ಲಾ ಒಳಿತೇ ಆಯಿತು....', ೨)'ಮಧುಕರ ವೃತ್ತಿ ಎನ್ನದೂ....', ೩)'ಕೆರೆಯ ನೀರನು ಕೆರೆಗೆ ಚೆಲ್ಲಿ....', ೪)'ಇಂದಿನ ದಿನವೇ ಶುಭದಿನವೂ....', ೫)'ಮಾನವ ಜನ್ಮ ದೊಡ್ಡದು...', ೬)'ಕಣ್ಣಾರೆ ಕಂಡೆ ಅಚ್ಯುತನ...', ೭)'ಭಂಗಾರವಿಡಬಾರೆ...', ೮)'ಪದುಮನಾಭ...', ೯)'ಘಲ್ಲು ಘಲ್ಲು ಘಲ್ಲು...', ೧೦)ದಾಸರೆಂದರೆ ಪುರಂದರ ದಾಸರಯ್ಯಾ...', ೧೧)'ರಂಗಾ ಬಾರ ಬಾಲೇ...', ೧೨)'ದ್ವಾವಿಮೌ ಪುರುಷಾ...', ೧೩)'ಬಿನ್ನಹಕೆ ಬಾಯಿಲ್ಲವಯ್ಯ...', ೧೪)'ವರವೇದ ಪುರಾಣ...', ೧೫)'ಅಚ್ಯುತಾನಂತ ಗೋವಿಂದ.., ೧೬)'ಆನೆಯನು ಕಾಯುವಾಗ...'
ವಿ: ಬಿ.ವಿ.ರಾಧಾ ಚಿತ್ರರಂಗ ಪ್ರವೇಶಿಸಿವರು.
ಕ.ಸಾ: ಶ್ರೀನಿವಾಸ ನಾಯಕನೆಂಬ ಶ್ರೀಮಂತ ಅತಿ ಜಿಪುಣ. ಇವನಲ್ಲಿ ಭಗವಂತ ಮನಃ ಪರಿವರ್ತನೆ ಮಾಡಿದ. ಹಣ, ಸಂಪತ್ತನ್ನೆಲ್ಲ ದಾನ ಮಾಡಿ ಹರಿನಾಮ ಸ್ಮರಣೆ ಮಾಡುತ್ತಾ ದೇಶ ಸಂಚರಿಸಿದ ಈತ ಪುರಂದರದಾಸನಾದ. ಸಾವಿರಾರು ಕೀರ್ತನೆಗಳನ್ನು ರಚಿಸಿ, ವಿಠಲನ ಧ್ಯಾನ ಮಾಡುತ್ತಾ ಕೊನೆಗೆ ದೇವರಲ್ಲಿ ಲೀನವಾಗುತ್ತಾನೆ.

೧೪೮. ಮಂಗಳ ಮುಹೂರ್ತ

(೧೯೬೪ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಮಹಾಶಕ್ತಿ ಪ್ರೊಡಕ್ಷನ್ಸ್
ಪ್ರೊ: ಯು.ಸುಬ್ಬರಾವ್
ನಿ: ಎಂ.ಆರ್.ವಿಠಲ್

ಸ.ನಿ: ಕೆ.ಸೀತಾರಾಂ
ಅ: ರಾಜಾಶಂಕರ್, ಕೆ.ಎಸ್.ಅಶ್ವತ್ಥ್, ಆರ್.ಎನ್.ಸುದರ್ಶನ್, ನರಸಿಂಹರಾಜು, ಹೆಚ್.ರಾಮಚಂದ್ರಶಾಸ್ತ್ರಿ, ಹನುಮಂತಾಚಾರ್, ಹೆಚ್.ಕೃಷ್ಣಶಾಸ್ತ್ರಿ, ಬಸವರಾಜು, ಕೆ.ಸೀತಾರಾಂ, ವೈ.ಎನ್.ಶ್ರೀಕಂಠಸ್ವಾಮಿ, ಹರಿಣಿ, ಜೂ.ರೇವತಿ, ಜಯಶ್ರೀ, ಪಾಪಮ್ಮ, ಶಾಂತಮ್ಮ, ರಮಾ, ಸೀತಾಪತಿ (ಗೌರವ ನಟ)
ಕ/ಮಾ/ಗೀ: ವಿಜಯನಾರಸಿಂಹ
ಗಾ: ಎಸ್.ಜಾನಕಿ, ಪಿ.ಬಿ.ಶ್ರೀನಿವಾಸ್, ಎಲ್.ಆರ್.ಈಶ್ವರಿ, ಎಂ.ಎಸ್.ಪದ್ಮ, ನಾಗೇಂದ್ರ
ಸಂ: ಸತ್ಯಮೂರ್ತಿ
ಛಾ: ಎಸ್.ವಿ.ಶ್ರೀಕಾಂತ್
ಕಲೆ: ಬಿ.ಸಿ.ಬಾಬು
ಸ: ರಾಜನ್-ನಾಗೇಂದ್ರ
ಧ್ವ: ಮೋಹನಸುಂದರಂ, ನಾಗೇಶ್ವರನ್
ವ: ಮ್ಯಾಕ್ಸ್‌ಫ್ಯಾಕ್ಟರ್ ಟೈಲರ್ಸ್
ಪ್ರ: ವೈ.ಮಾಧವಯ್ಯ, ರಾಜಗೋಪಾಲ್
ಸ್ಟು: ಗೋಲ್ಡನ್ (ಮದರಾಸು)
ಹಾ: ೧)'ಒಲವ ಲತೆಗೆ.., ೨)'ಹಳ್ಳಿಯಾ ಹೂಗಳಿರಾ...', ೩)'ಜ್ಯೋತಿಯೇ, ಜಗನ್ಮಾತೆಯೇ.., ೪)'ಲಕ್ಕಿ ಲಕ್ಕಿ ಲಕ್ಕ...' ೫)'ಎಲ್ಲಾದರು ಇರು ಎಂತಾದರೂ ಇರು...', ೬)'ನಿರಾಧಾರಳಾದೆ, ನಿರಾಪರಣ ಜಗದೆ...'
ಕ.ಸಾ: ಆಧುನಿಕತೆಗೆ ಜೋತು ಬಿದ್ದ ನಾಯಕಿ ಸಂಗಾತಿಯನ್ನು ತಿರಸ್ಕರಿಸಿ ಅವಘಡಗಳಿಗೆ ಕಾರಣಳಾಗುತ್ತಾಳೆ. ಆಕೆಯನ್ನು ತಿದ್ದುವ ಹಾದಿಯಲ್ಲಿ ಕ್ಷಯರೋಗಿಯಾದ ಅಣ್ಣ, ಸಭ್ಯ ಸಾಮಾಜಿಕರು, ಹಿರಿಯರು, ಸ್ನೇಹದ ಹೆಸರಿನಲ್ಲಿ ವರ್ತಿಸುವವರು ಹೀಗೆ ಹಲವು ಪ್ರಸಂಗಗಳು ಎದುರಾಗಿ, ಆಧುನಿಕತೆಯ ಮುಖವಾಡ ಕಳಚಿ ನಿಜವಾದ ಮೌಲ್ಯಗಳೇನೆಂದು ತಿಳಿಯುತ್ತದೆ.

೧೪೯. ಚಂದವಳ್ಳಿಯ ತೋಟ

(೧೯೬೪ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಪಾಲ್ಸ್ ಅಂಡ್ ಕೋ., ಮದರಾಸು
ಪ್ರೊ: ಟಿ.ಎನ್.ಶ್ರೀನಿವಾಸನ್ (ಸಹ ನಿರ್ಮಾಪಕ)
ನಿ: ಟಿ.ವಿ.ಸಿಂಗ್ ಠಾಕೂರ್
ಸ.ನಿ: ಎಸ್.ಕೆ.ಭಗವಾನ್
ಅ: ರಾಜಕುಮಾರ್, ಉದಯಕುಮಾರ್, ಬಾಲಕೃಷ್ಣ, ರಾಘವೇಂದ್ರರಾವ್, ಜಯಂತಿ, ಜಯಶ್ರೀ, ಗಣಪತಿಭಟ್, ಶಾಂತಮ್ಮ, ರಾಜಶ್ರೀ, ಪಾಪಮ್ಮ, ಆದವಾನಿ ಲಕ್ಷ್ಮೀದೇವಿ, ಶಾರದಮ್ಮ, ಅಶ್ವತ್ಥನಾರಾಯಣ, ಶೇಷಪ್ಪ, ಶ್ರೀಧರ್, ಶೇಷಪ್ಪ, ಶೆಣೈ, ಜಯಕುಮಾರ್, ಬಸಪ್ಪ
ಕ/ಮಾ: ತ.ರಾ.ಸು.
ಗೀ: ತ.ರಾ.ಸು, ಆರ್.ಎನ್.ಜಯಗೋಪಾಲ್
ಗಾ: ಪಿ.ಬಿ.ಶ್ರೀನಿವಾಸ್, ಎಸ್.ಜಾನಕಿ, ಜೇಸುದಾಸ್, ಎಲ್.ಆರ್.ಈಶ್ವರಿ, ಪೀಠಾಪುರಂ ನಾಗೇಶ್ವರರಾವ್
ಸಂ: ವೆಂಕಟರಾಮ್, ರಘುಪತಿ
ಛಾ: ಬಿ.ದೊರೆರಾಜ್
ಕಲೆ: ಆರ್.ಬಿ.ಎಸ್.ಮಣಿ
ಸ: ಟಿ.ಜಿ ಲಿಂಗಪ್ಪ
ಧ್ವ: (ಹಾ) ಸಿ.ಪಿ.ಜೀವ, ಸೂರ್ಯನಾರಾಯಣರಾವ್
ನೃ: ಜಯರಾಂ, ಟಿ ಆರ್.ಸುರೇಶ (ಹಳ್ಳಿ ನೃತ್ಯ)
ವ: ಮಾಣಿಕ್ಯಂ
ಪ್ರ: ಬಿ.ಆರ್.ಸಿಂಗ್
ಸ್ಟು: ವೀನಸ್ (ಮದರಾಸು)
ಹಾ: ೧)'ಓ ನನ್ನ ಬಾಂಧವರೆ ಕನ್ನಡ ಕುಲಪುತ್ರರೆ...', ೨)'ಒಂದಾಗುವ ಮುಂದಾಗುವ ನೆರವಾಗುವ ಎಲ್ಲರು ಸೇರಿ....', ೩)'ಬಳ್ಳಿ ಹಂಗೆ ಬಳುಕುತಲಿ ಮಳ್ಳಿ ಹಂಗೆ ನೋಡುತಲಿ...', ೪)'ಸುಮ ಬಾಲೆಯ ಪ್ರೇಮದ ಸಿರಿಯೇ....', ೫)'ನಮ್ಮ ಮನೆಯ ನಂದನಾ ಇದುವೆ ಬೃಂದಾವನಾ....', ೬)'ಈ ನೀತಿ ಈ ನ್ಯಾಯ ಏನೆಂಬೆ....'
ವಿ: ರಾಷ್ಟ್ರಪತಿಗಳ ರಾಷ್ಟ್ರೀಯ ಅರ್ಹತಾ ಪ್ರಶಸ್ತಿ ಪಡೆದ ಚಿತ್ರ
ಕ.ಸಾ: ಚಂದವಳ್ಳಿ ಊರಿಗೆ ಮಾದರಿಯಾದ ಹಳ್ಳಿ. ಅಲ್ಲಿನ ಮುಖಂಡ ಶಿವನಂಜೇಗೌಡ. ಅವನ ಮನೆ ಆದರ್ಶಪ್ರಾಯವಾದಂಥದ್ದು. ಅವನಿಗಿಬ್ಬರು ಗಂಡುಮಕ್ಕಳು. ಮೊದಲ ಮಗ, ಸೊಸೆ ಸಂಪನ್ನರು. ಎರಡನೆ ಸೊಸೆ ಮಹಾ ಬಜಾರಿ. ಒಂದಾಗಿದ್ದ ಮನೆ-ಮನ ಒಡೆದು ಕಡೆಗೆ ಇಡೀ ಕುಟುಂಬವೇ ಸರ್ವನಾಶವಾಗುತ್ತದೆ. ಒಂದೇ ಒಂದು ಚಾಡಿ ಮಾತಿನಿಂದ ಇಡೀ ಊರಿಗೆ ಮಾದರಿಯಾಗಿದ್ದ ಮನೆ ಹೇಳಹೆಸರಿಲ್ಲದಂತಾಗುತ್ತದೆ.

೧೫೦. ಶಿವರಾತ್ರಿ ಮಹಾತ್ಮೆ

(೧೯೬೪ / ಕಪ್ಪು-ಬಿಳುಪು / ಭಕ್ತಿಪ್ರಧಾನ)
ಲಾ: ಅಂಬಿಕಾ ಫಿಲಂಸ್
ಪ್ರೊ: ಎಸ್.ಎಸ್.ರಾಜು, ಪಿ.ಆರ್.ಕೌಂಡಿನ್ಯ
ನಿ: ಪಿ.ಆರ್.ಕೌಂಡಿನ್ಯ
ಸ.ನಿ: ಚಿ। ಉದಯಶಂಕರ್
ಅ: ರಾಜಕುಮಾರ್, ಲೀಲಾವತಿ, ಕೆ.ಎಸ್.ಅಶ್ವತ್ಥ್, ಜಯಶ್ರೀ, ನರಸಿಂಹರಾಜು, ವಾಸುದೇವ ಗಿರಿಮಾಜಿ, ಧೂಳಿಪಾಲ, ಪ್ರಭಾಕರರೆಡ್ಡಿ, ಮೀನಾಕುಮಾರಿ, ಸೀತಾರಾಮಶಾಸ್ತ್ರಿ, ರಾಜಶ್ರೀ, ಚಿ.ಸದಾಶಿವಯ್ಯ, ಕಾಶೀನಾಥ್, ಅನ್ನಪೂರ್ಣ, ದತ್ತರಾಜ್, ಮಹೇಶ್ವರಯ್ಯ, ಅಶ್ವತ್ಥನಾರಾಯಣ, ವಿಜಯರಾವ್
ಕ/ಚಿ.ಕ: ಚಿ.ಸದಾಶಿವಯ್ಯ, ಕೌಂಡಿನ್ಯ
ಮಾ/ಗೀ: ಚಿ.ಉದಯಶಂಕರ್, ಚಿ.ಸದಾಶಿವಯ್ಯ
ಗಾ: ಪಿ.ಬಿ.ಶ್ರೀನಿವಾಸ್, ಎಸ್.ಜಾನಕಿ, ಸ್ವರ್ಣಲತ, ಮಾಧವ ಪೆದ್ದಿ ಸತ್ಯಂ, ನಾಗೇಂದ್ರ

ಸಂ: ಕೆ.ಎ.ಮಾರ್ತಾಂಡ್
ಛಾ: ಮಾಥುರ್
ಕಲೆ: ಬಿ.ಎನ್. ಕೃಷ್ಣ
ಸ: ಶಿವಪ್ರಸಾದ್
ಧ್ವ: ಕಣ್ಣನ್
ನೃ: ವಿ.ಜೆ.ಶರ್ಮ
ಸ್ಟು: ವೀನಸ್ (ಮದರಾಸು)
ಹಾ: ೧)'ಹುಷ್ ಅಪ್ಪ ಸಾಕು, ಸಾಕಪ್ಪ ಸಾಕು....', ೨)'ಆನಂದವೀವ ಕರುಣಾಳು ದೇವ....', ೩)'ತಾಪಸೇಂದ್ರ ಓ ರಾಜಚಂದ್ರ.....', ೪)'ಶ್ರೀಮನ್ಮಹಾದೇವ ಸುಜ್ಞಾನ ಸಂಬೋಧ್ಯ....', ೫)'ಜೋ ಜೋ ಜೋ ಮಲಗಯ್ಯ ಕಂದ....', ೬)'ಬಾರಯ್ಯ ನನ್ನ ಪ್ರೇಮ ಸಂಪನ್ನ....', ೭)'ನಗುವೆ ಜೀವನಸಾರ, ನಗುವೆ ಬಾಳಾಧಾರ....', ೮)'ರಮಣೀಯ ಮಧುಮಾಸವು....', ೯)'ಶಿವನೇ ಇದೇನು ಶೋಧನೇ.....', ೧೦)'ಮನಮೋಹಿನಿ ನರಿಸೆಯಾ ನಾಚಿಕೆಯಾ ತೆರೆಯಾ....', ೧೧)'ವರಸಿದ್ಧಿ ಗಣಪತಿಯ ಕರಗಳಲಿ...'
ವಿ: ಚಿ.ಉದಯಶಂಕರ್ ಹಾಡುಗಳನ್ನು ರಚಿಸಿದ ಮೊದಲ ಚಿತ್ರ. ರಾಜಕುಮಾರ್ ದುಷ್ಟಗುಣಗಳನ್ನು ಹೊಂದಿದ ರಾಜಕುಮಾರನ ಪಾತ್ರದಲ್ಲಿ ಅಭಿನಯಿಸಿದ್ದು, ಆಗ ಪತ್ರಿಕೆಗಳು ರಾಜಕುಮಾರ್ ಇಂತಹ ಪಾತ್ರದಲ್ಲಿ ಅಭಿನಯಿಸುವುದು ಪ್ರೇಕ್ಷಕರಿಗೆ ಇಷ್ಟವಿರಲಿಲ್ಲ ಎಂದು ಬರೆದಿದ್ದವು.
ಕ.ಸಾ: ರಾಜನ ಮಗ ದುಶ್ಚಟಗಳ ದಾಸ. ಅಪ್ಪ ಅಮ್ಮ ಶಿವಭಕ್ತರು. ಮಗ ನಾಸ್ತಿಕ. ಅವನಿಗೊಂದು ಮದುವೆ ಮಾಡುತ್ತಾರೆ. ಅವಳು ಪತಿವ್ರತೆ ಹಾಗೂ ಮಹಾ ಶಿವಭಕ್ತೆ. ರಾಜಕುಮಾರ ತಂದೆತಾಯಿಯರನ್ನು ಸೆರೆಯಲ್ಲಿಟ್ಟು ಹೆಂಡತಿಯನ್ನು ಕಾಡಿಗಟ್ಟಿ ನರ್ತಕಿಯ ಹಿಂದೆ ಬಿದ್ದಿರುತ್ತಾನೆ. ಮೋಹದ ಪೊರೆ ಕಳಚುವ ಹೊತ್ತಿಗೆ ಕುರುಡನಾಗಿರುತ್ತಾನೆ. ಮಹಾಸಾಧ್ವಿಯಾದ ಪತ್ನಿ ಶಿವನನ್ನು ಆರಾಧಿಸಿ ಒಲಿಸಿಕೊಳ್ಳುತ್ತಾಳೆ, ಸುಖಾಂತ್ಯವಾಗುತ್ತದೆ.

೧೫೧. ವೀರಸಂಕಲ್ಪ

(೧೯೬೪ / ಕಪ್ಪು-ಬಿಳುಪು / ಐತಿಹಾಸಿಕ)
ಲಾ: ಎವರ್‌ಗ್ರೀನ್ ಪ್ರೊಡಕ್ಷನ್ಸ್
ಪ್ರೊ/ನಿ: ಹುಣಸೂರು ಕೃಷ್ಣಮೂರ್ತಿ
ಸ.ನಿ: ಭಾರ್ಗವ, ಬಿ.ಎಸ್. ದ್ವಾರಕಾನಾಥ್
ಅ: ಹುಣಸೂರು ಕೃಷ್ಣಮೂರ್ತಿ, ಮಾ।ಹುಣಸೂರ್, ಎಂ.ಎಸ್.ಆಚಾರ್ಯ, ಬಿ.ಎಂ.ವೆಂಕಟೇಶ್, ಬಿ.ಎಸ್.ದ್ವಾರಕನಾಥ್, ಎಂ.ಪಿ.ಶಂಕರ್, ವಿದ್ಯಾಸಾಗರ್, ಶ್ರೀರಂಗ, ಶ್ರೀಕಾಂತ್, ಜಯಶ್ರೀ, ಲಕ್ಷ್ಮಿ, ಆದವಾನಿ ಲಕ್ಷ್ಮೀದೇವಿ, ರತ್ನಕುಮಾರಿ, ವಾಣಿಶ್ರೀ, ನರಹರಿ, ಸೀತಾರಾಂ, ಬಂಗೇರಪ್ಪ, ಜಿ.ವಿ.ಜಿ., ರಘು, ರಾಮಸಂಜೀವಯ್ಯ
ಕ/ಚಿ.ಕ/ಮಾ: ಹುಣಸೂರು ಕೃಷ್ಣಮೂರ್ತಿ
ಗೀ: ಹುಣಸೂರು ಕೃಷ್ಣಮೂರ್ತಿ, ಶ್ರೀ ಭಾರತೀಂದ್ರ ಸ್ವಾಮಿಗಳು, ಚಿ। ಉದಯಶಂಕರ್
ಗಾ: ಪೀಠಾಪುರಂ ನಾಗೇಶ್ವರರಾವ್, ಸತ್ಯವತಿ, ಎಲ್.ಆರ್.ಈಶ್ವರಿ, ಎಸ್. ಜಾನಕಿ, ಸಿ.ಎಸ್. ಕೃಷ್ಣನ್
ಸಂ: ಪಿ.ಎಸ್.ಮೂರ್ತಿ
ಛಾ: ಹೆಚ್.ಎಸ್.ವೇಣು
ಕಲೆ: ಬಿ.ಎನ್.ಕೃಷ್ಣ
ಸ: ರಾಜನ್-ನಾಗೇಂದ್ರ
ಧ್ವ: ಮೋಹನಸುಂದರಂ, ನಾಗೇಶ್ವರನ್
ನೃ: ಎ.ಕೆ. ಚೋಪ್ರಾ, ರತನ್‌ಕುಮಾರ್
ಸಾ: ವೈ.ಶಿವಯ್ಯ
ವ: ಪಿ. ಚಂಟಿಬಾಬು
ಪ್ರ: ಮಾಧವಯ್ಯ
ಸ್ಟು: ಗೋಲ್ಡನ್ ಸಿನಿ ಸ್ಟುಡಿಯೋಸ್ (ಮದ್ರಾಸ್)
ಹಾ: ೧)'ಹಾಡು ಬಾ ಕೋಗಿಲೆ ನಲಿದಾಡು ಬಾರೆ ನವಿಲೆ.....', ೨)'ಸಿಟ್ಯಾಕೋ ಸಿಡುಕ್ಯಾಕೋ ನನ ಜಾಣ....', ೩)'ಯಾವುರಯ್ಯಾ ನೀ ಮುಕ್ಕ...', ೪)'ಯುದ್ಧ ಯುದ್ಧ ಯುದ್ಧ ಶತ್ರು ಮೈ ಮೇಲೆ ಬಿದ್ದ....', ೫)'ಕನ್ನಡದ ತಾಯಿ ಶ್ರೀ...', ೬)'ದುಡುಕದಿರು ದುಡುಕದಿರು...', ೭)'ಪರಶಿವನೋ ಸಿರಿವರನೋ...'
ವಿ: ಬಿ.ಎಸ್.ದ್ವಾರಕಾನಾಥ್ ಹೆಸರಿನಲ್ಲಿ ದ್ವಾರಕೀಶ್ ಚಿಕ್ಕರಾಮನ ಪಾತ್ರದಲ್ಲಿ ಅಭಿನಯಿಸುವ ಹಾಗೂ ಸಹನಿರ್ದೇಶಕರಾಗುವ ಮೂಲಕ ಚಿತ್ರರಂಗ ಪ್ರವೇಶಿಸಿದರು. ಭಾರ್ಗವ ಈ ಚಿತ್ರದ ಮೂಲಕ ಸಹಾಯಕ ನಿರ್ದೇಶಕರಾದರು. ಹುಣಸೂರು ಕೃಷ್ಣಮೂರ್ತಿ ಕಥಾನಾಯಕನ ಪಾತ್ರ ನಿರ್ವಹಿಸಿದರು. ವಾಣಿಶ್ರೀ, ಬಿ.ಎಂ.ವೆಂಕಟೇಶ್ ಅವರ ಮೊದಲ ಚಿತ್ರ ಇದಾಗಿತ್ತು. ಹಂಪೆಯ ಭಗ್ನಾವಶೇಷಗಳನ್ನು ಚಿತ್ರೀಕರಿಸಲಾಗಿದೆ. ಲಂಡನ್ನಿನಲ್ಲಿ ವ್ಯಾಸಂಗ ಮಾಡಿ, ಆರ್ಕಿಟೆಕ್ಟ್‌ನಲ್ಲಿ ಡಿಪ್ಲೊಮಾ ಪಡೆದ ಶ್ರೀಕೃಷ್ಣ ಎನ್ನುವವರು ಹಂಪೆ, ಚಂದ್ರಗಿರಿ, ಪೆನುಗೊಂಡೆಗೆ ಹೋಗಿ ಅಧ್ಯಯನ ಮಾಡಿ ಸೆಟ್ ನಿರ್ಮಿಸಿದರು. ಆಲೂರು ವೆಂಕಟರಾಯರು, ಬಿ.ಸೂರ್ಯನಾರಾಯಣರಾಯರು, ಫೆರಿಸ್, ಮ್ಯಾಸಿಸ್, ಸಾಲುಕೋಟೆ ಮುಂತಾದ ಇತಿಹಾಸಕಾರರ ಕಾದಂಬರಿ, ಲೇಖನಗಳನ್ನು ಅಧ್ಯಯನ ಮಾಡಿ ಹುಣಸೂರರು ಈ ಚಿತ್ರದ ಕಥೆ ರಚಿಸಿದರು. ಬೆಂಗಳೂರಿನ ಹನುಮಾನ್ ವ್ಯಾಯಾಮ ಶಾಲೆಯ ಕುಸ್ತಿಪಟುಗಳು ಚಿತ್ರದ ಯುದ್ಧ ಸನ್ನಿವೇಶದಲ್ಲಿ ಪಾಲ್ಗೊಂಡರು.
ಕ.ಸಾ: ರಕ್ಕಸತಂಗಡಿಯ ಯುದ್ಧಾನಂತರ ಕರ್ನಾಟಕ ಸಾಮ್ರಾಜ್ಯವನ್ನು ವೆಂಕಟಪತಿ ಮಹಾರಾಜ ಚಂದ್ರಗಿರಿಯಿಂದ ಆಳುತ್ತಾರೆ. ಜಗರಾಯ ಎಂಬಾತ ರಾಜ ಕುಟುಂಬದ ವಿರುದ್ಧ

ಹಗ ಸಾಧಿಸುತ್ತಾನೆ. ಅಂಗರಕ್ಷಕ ಲಕ್ಷ್ಮಣನಾಯಕ ರಾಜ ಕುಟುಂಬದವರನ್ನು ರಕ್ಷಿಸಲು ಎಷ್ಟು ಕಷ್ಟ ಪಟ್ಟರೂ ಜಗರಾಯ ಮೋಸದಿಂದ ಮಹಾರಾಜರ ಸಾಕು ಪುತ್ರ ಶ್ರೀರಂಗರಾಯನನ್ನು ಕೊಲ್ಲುವನು. ಲಕ್ಷ್ಮಣನಾಯಕ ರೊಚ್ಚಿಗೆದ್ದು ದ್ರೋಹಿಗಳನ್ನು ನಿರ್ನಾಮ ಮಾಡುವ ವೀರಸಂಕಲ್ಪ ತೊಟ್ಟು ತಮ್ಮ ಪ್ರತಿಜ್ಞೆಯನ್ನು ನೆರವೇರಿಸಿಕೊಳ್ಳುತ್ತಾನೆ.

೧೫೨. ಕಲಾವತಿ

(೧೯೬೪ / ಕಪ್ಪು-ಬಿಳುಪು / ಸಾಮಾಜಿಕ)

ಲಾ: ಕೃಷ್ಣೋದಯ ಚಿತ್ರ
ಪ್ರೊ: ಎ.ಸಿ.ನರಸಿಂಹಮೂರ್ತಿ, ದ್ವಾರಕಾನಾಥ್, ಎ.ವಾಸುದೇವರಾವ್
ನಿ: ಟಿ.ವಿ.ಸಿಂಗ್ ಠಾಕೂರ್
ಸ.ನಿ: ಎಸ್.ಕೆ.ಭಗವಾನ್
ಅ: ಉದಯಕುಮಾರ್, ಆದವಾನಿ ಲಕ್ಷ್ಮೀದೇವಿ, ಜಿ.ವಿ.ಲತಾ, ಜಯಂತಿ, ಬಾಲಕೃಷ್ಣ, ನರಸಿಂಹರಾಜು, ಭಾಸ್ಕರ್, ಜಯಶ್ರೀ, ವಿಜಯರಾವ್, ಟಿ. ದ್ವಾರಕಾನಾಥ್, ಮಾ।ಉದಯಶಂಕರ್, ಗುಗ್ಗು, ಶೇಷಪ್ಪ, ಶ್ರೀಧರ್, ನಂಜಪ್ಪ



ಕ/ಚಿ.ಕ: ಎ.ಸಿ.ನರಸಿಂಹಮೂರ್ತಿ, ದ್ವಾರಕಾನಾಥ್
ಮಾ: ಇಂದಿರಾತನಯ
ಗೀ: ಕುವೆಂಪು, ಆರ್.ಎನ್.ಜಯಗೋಪಾಲ್, ಬಿಟಗೇರಿ ಕೃಷ್ಣಶರ್ಮ (ಆನಂದಕಂದ)
ಗಾ: ಎಸ್.ಜಾನಕಿ, ಮೋತಿ, ಮನ್ನಾಡೆ, ಸುಮನ್ ಕಲ್ಯಾಣಪುರ್, ಎಂ.ಎಸ್.ಪದ್ಮ, ಮನಮೋಹನ್ ಠಾಕೂರ್, ಲೋಕಯ್ಯ, ಆರ್.ಎನ್.ಜಯಗೋಪಾಲ್
ಸಂ: ವೆಂಕಟರಾಮ್, ರಘುಪತಿ
ಛಾ: ಬಿ.ದೊರೈರಾಜ್
ಕಲೆ: ಆರ್.ಬಿ.ಎಸ್.ಮಣಿ
ಸ: ಜಿ.ಕೆ.ವೆಂಕಟೇಶ್, ಲಕ್ಷ್ಮಣ್‌ಬರ್ಲೇಕರ್
ಧ್ವ: (ಹಾ) ಇ.ಐ.ಜೀವ, (ಮಾ) ಸೂರ್ಯನಾರಾಯಣರಾವ್
ನೃ: ಛೋಪ್ರಾ, ರತನ್
ವ: ವಾಲಿ, ಬಾಬೂರಾವ್
ಪ್ರ: ಬಿ.ಆರ್.ಸಿಂಗ್
ಸ್ಟು: ವೀನಸ್
ಹಾ: ೧)'ಕುಹೂ ಕುಹೂ ಎನ್ನುತ ಹಾಡುವ ಕಿನ್ನರ ಕಂಠದ ಕೋಗಿಲೆಯೇ...', ೨)'ಒಡನಾಡಿ ಬೇಕೆಂದು.....', ೩)'ಮರಮರ ಮೋಡಿ ಸರಸರ ನಡೆದು...', ೪)'ನಿಲ್ಲೇ ನಲ್ಲೇ ಅಲ್ಲೇ.....', ೫)'ಸಲ್ಲದೆಲೇ ಶ್ಯಾಮಲೆ ಈ ಸರಸಾ...', ೬)'ನಮೋ ನಮೋ ಶ್ರೀ ಮಹಾದೇವ...', ೭)'ಓಂದಿಂದ ಬಂದು ಮರೆಯಾಗಿ ನಿಂದು...', ೮)'ಗುರುಬ್ರಹ್ಮ ಗುರುರ್ವಿಷ್ಣು...'
ವಿ: ಆರ್.ಎನ್.ಜಯಗೋಪಾಲ್ ಮೊದಲ ಬಾರಿಗೆ ಹಾಡಿದರು. ಗುಬ್ಬಿವೀರಣ್ಣನವರ ಪುತ್ರಿ ಜಿ.ವಿ.ಲತಾ ಈ ಚಿತ್ರದ ಮೂಲಕ ಚಿತ್ರರಂಗ ಪ್ರವೇಶಿಸಿದರು. ಮನ್ನಾಡೆ, ಸುಮನ್ ಕಲ್ಯಾಣಪುರ್ ಕನ್ನಡಕ್ಕಾಗಿ ಹಾಡಿದರು.
ಕ.ಸಾ: ಸುರೇಶ್ ಕಲೋಪಾಸನೆಯಲ್ಲಿ ಆಸಕ್ತ. ಇವನ ಆದರ್ಶಗಳಿಗೆ ಮೆಚ್ಚಿ ಮಾಯಾ ಬಾಳ ಸಂಗಾತಿಯಾಗುತ್ತಾಳೆ. ಸುರೇಶ್‌ನ ಕಲಾ ಶಾಲೆಯಲ್ಲಿ ಶ್ರೀಮಂತರ ಮನೆಯ ವನಜಾ ಹಾಗು ಬಡ ವಿದ್ಯಾರ್ಥಿನಿ ಕಲಾ ವೃತ್ತಿ ಶಿಕ್ಷಣ ಪಡೆಯುತ್ತಾರೆ. ಸ್ಪರ್ಧೆಯೊಂದರಲ್ಲಿ ಈ ಇಬ್ಬರು ಸ್ಪರ್ಧಿಗಳಾಗುತ್ತಾರೆ. ಕಲಾಳ ಕಾಲಿಗೆ ಸೂಜಿ ಚುಚ್ಚುವಂತೆ ಮೋಸ ಮಾಡಿ ವನಜ ಅವಳನ್ನು ಸೋಲಿಸುತ್ತಾಳೆ. ಕಲಾಳನ್ನು ಸುರೇಶ್ ಮನೆಯಲ್ಲಿರಿಸಿಕೊಂಡು ತರಬೇತಿಗೊಳಪಡಿಸಿದಾಗ ಮಾಯಾಗೆ ಸಂಶಯ ಬರುತ್ತದೆ. ಅಖಿಲ ಭಾರತ ಸ್ಪರ್ಧೆಯಲ್ಲಿ ಕಲಾವತಿ ವಿಜೇತಳಾಗುತ್ತಾಳೆ. ವನಜಾಳು ಸುರೇಶ್ ಹಾಗು ಕಲಾ ನಡುವೆ ಇಲ್ಲದ ಸುದ್ದಿ ಹಬ್ಬಿಸುತ್ತಾಳೆ. ಕಲಾವತಿಯೇ ಬಂದು ಸಾಕ್ಷ್ಯ ಹೇಳಿದಾಗ ಸುರೇಶ್ ಮೇಲಿನ ಕಳಂಕ ನಿವಾರಣೆಯಾಗುತ್ತದೆ.

೧೫೩. ಅಮರಶಿಲ್ಪಿ ಜಕಣಾಚಾರಿ

(೧೯೬೪ / ಬಣ್ಣ / ಜಾನಪದ)

ಲಾ: ವಿಕ್ರಂ ಪ್ರೊಡಕ್ಷನ್ಸ್
ಪ್ರೊ/ನಿ: ಬಿ.ಎಸ್. ರಂಗಾ
ಸ.ನಿ: ಚಿ। ಸದಾಶಿವಯ್ಯ, ಟಿ. ದಯಾಸಾಗರ್, ಕೆ. ಧರ್ಮರಾಜ್
ಅ: ಕಲ್ಯಾಣ್‌ಕುಮಾರ್, ಬಿ.ಸರೋಜಾದೇವಿ, ರಾಜಾ, ವಿ.ನಾಗಯ್ಯ, ನರಸಿಂಹರಾಜು, ಸೀತಾರಾಮಶಾಸ್ತ್ರೀ, ಉದಯಕುಮಾರ್, ಎ.ವಿ.ಸುಬ್ಬರಾವ್, ಚಿ।ಬಾಬು, ರಮಾದೇವಿ, ಗಿರಿಜಾ, ಪುಷ್ಪವಲ್ಲಿ, ಶಕುಂತಲಾ, ಎಚ್.ಪಿ.ಸರೋಜ, ಚಿ।ಕಾಳೇಶ್ವರೀ, ರಾಜಶ್ರೀ, ಜಯಲಲಿತ ರತನ್ (ನೃತ್ಯ)
ಕ/ಚಿ.ಕ/ಮಾ/ಗೀ: ಚಿ। ಸದಾಶಿವಯ್ಯ
ಗಾ: ಪಿ.ಸುಶೀಲ, ಮಾಧವಪೆದ್ದಿ ಸತ್ಯಂ, ಘಂಟಸಾಲ, ವಸಂತ, ಸ್ವರ್ಣಲತ, ಎಂ.ಎಸ್.ಪದ್ಮ, ಪಿ.ಬಿ.ಶ್ರೀನಿವಾಸ್
ಸಂ: ಪಿ.ಜಿ. ಮೋಹನ್
ಛಾ: ಬಿ.ಎಸ್.ರಂಗಾ
ಕಲೆ: ಶೇಖರ್
ಸ: ಎಸ್. ರಾಜೇಶ್ವರರಾವ್
ಧ್ವ: ಎಸ್. ಶೇಷಾದ್ರಿ
ನೃ: ಬಿ.ಹೀರಾಲಾಲ್, ದಂಡಾಯುಧಪಾಣಿ, ಎ.ಕೆ. ಛೋಪ್ರಾ, ಸರಸ
ಸ್ಟು: ವಿಕ್ರಂ ಸ್ಟುಡಿಯೋ
ಹಾ: ೧)'ಈ ಕಪ್ಪನೆ ಶಿಲೆಯಲಿ...', ೨)'ಚೆಲುವಾಂತ ಚೆನ್ನಿಗನೆ...', ೩)'ಏನೋ ಎಂತೋ...', ೪)'ನಿಲ್ಲು ನೀ ನಿಲ್ಲುನೀ...', ೫)'ಮನಸೆ ಮುದವಾಂತಿದೆ...', ೬)'ಸುರಸುಂದರಾಂಗ...', ೭)'ಎಲ್ಲಿಗಯ್ಯ ಈ ಪಯಣ...', ೮)'ಜಂತರ ಮಂತರ ಮಾಟವ್ರೋ..., ೯)'ಮಲ್ಲಿಗೆಯ ಹೂವಿನಂತ...', ೧೦) ಕನ್ನಡಿಯ ನೋಡುತಿಹ...', ೧೧)'ತನವೂ ಮನವೂ...', ೧೨)'ಜಯತು ಕನ್ನಡ ನಾಡ...'
ವಿ: ಕನ್ನಡದ ಪ್ರಥಮ ಸಂಪೂರ್ಣ ವರ್ಣ ಚಿತ್ರ
ಕ.ಸಾ: ನರ್ತಕಿಯೊಬ್ಬಳಿಗೆ ಮನಸೋತ ನಿಪುಣ ಶಿಲ್ಪಿ ಜಕಣಾಚಾರಿ, ವಿವಾಹದ ನಂತರ ಒತ್ತಡಕ್ಕೆ ಮಣಿದು ರಾಜನ ಮುಂದೆ ನರ್ತಿಸುವ ಆಕೆಯನ್ನು ತೊರೆದು ಶಿಲ್ಪಕಲೆಯಲ್ಲಿ ಮೈಮರೆಯುತ್ತಾನೆ. ಅವನ ಮಗ ಅವನನ್ನು ಮೀರಿಸುವ ಶಿಲ್ಪಿ. ದೂರವಾಗಿದ್ದ ಅವನಿಂದ ಅಪ್ಪ-ಅಮ್ಮ ಒಂದಾಗುತ್ತಾರೆ.

೧೫೪. ನವಜೀವನ

(೧೯೬೧ / ಕಪ್ಪು-ಬಿಳುಪು / ಸಾಮಾಜಿಕ)

ಲಾ: ಶ್ರೀ ಭಾರತಿ ಚಿತ್ರ
ಪ್ರೊ: ವಾದಿರಾಜ್ ಜವಹರ್
ನಿ: ಪಿ.ಎಸ್.ಮೂರ್ತಿ
ಸ.ನಿ: ಕೆ.ಎಂ. ರತ್ನಾಕರ್
ಅ: ಅಶ್ವತ್, ಸುದರ್ಶನ್, ನರಸಿಂಹರಾಜು, ರತ್ನಾಕರ್, ಬಸವರಾಜ್, ಚಿಂದೋಡಿ ಶಿವರಾಜ್, ಕೃಷ್ಣಶಾಸ್ತ್ರಿ, ಗಿರಿಮಾಜಿ, ವಾದಿರಾಜ್, ಪಂಢರಿಬಾಯಿ, ರೇವತಿ(ಜೂ), ಚಿಂದೋಡಿಲೀಲಾ, ಮೈನಾವತಿ, ಸೂರ್ಯಕಲಾ, ಜಯಶ್ರೀ, ರಮಾದೇವಿ, ರಮಾ, ಹರಿಣಿ, ಆರ್.ನಾಗೇಂದ್ರರಾವ್, ಕೆಂಪರಾಜ ಅರಸ್, ಜಿ.ವಿ. ಶಿವರಾಜ್, ವೀರಭದ್ರಪ್ಪ, ಸೂರ್ಯಕುಮಾರ್, ಹನುಮಂತಾಚಾರ್, ಸುಬ್ಬಣ್ಣ.
ಕ: ರಸವಾದಿ
ಚಿ.ಕ/ಮಾ/ಗೀ: ಸೋರಟ್ ಅಶ್ವತ್
ಗಾ: ಪಿ.ಬಿ.ಶ್ರೀನಿವಾಸ್, ನಾಗೇಂದ್ರ, ಪಿ.ಸುಶೀಲ, ಎಸ್.ಜಾನಕಿ, ಎಲ್.ಆರ್.ಈಶ್ವರಿ
ಸಂ: ಪಿ.ಎಸ್.ಮೂರ್ತಿ
ಛಾ: ಆರ್.ಮಧು
ಕಲೆ: ಬಿ.ಸಿ.ಬಾಬು
ಸ: ರಾಜನ್-ನಾಗೇಂದ್ರ
ಧ್ವ: ಮೋಹನಸುಂದರಂ, ಡಿ.ಲಾಜರಸ್
ವ: ಮಣಿ, ಮ್ಯಾಕ್ಸ್ ಟೈಲರ್ಸ್
ಪ್ರ: ಎಂ.ಎಸ್.ಸುಬ್ಬಣ್ಣ
ಸ್ಟು: ಗೋಲ್ಡನ್
ಹಾ: ೧)'ಇದೇ ಇದೇ ಸವಿ ಬಾಳದಿನ...', ೨)'ಭಾಮಾ ಭಾಮಾ ಇದೇನು...', ೩)'ಲೀಲಾಮಯ ಹೇ ದೇವ.., ೪)'ಯೋ ಯೋ ಯೊಂ.. ಯೋಂ...', ೫)'ಕರೆಯೇ ಕೋಗಿಲೆ...', ೬)'ಪ್ರೀತಿ ಹೊನಲೇ...'
ವಿ: ಬಹುದೊಡ್ಡ ತಾರಾ ಸಮೂಹವೇ ಇತ್ತು. ಕೇಂದ್ರ ಸರ್ಕಾರದ 'ಅರ್ಹತಾ ಪ್ರಶಸ್ತಿ' ಪತ್ರ ಪಡೆಯಿತು
ಸೆ: ಉದ್ದ - ೪೪೨೪ ಅಡಿಗಳು, ೧೬ ರೀಲ್‌ಗಳು, 'ಯು' ಸರ್ಟಿಫಿಕೇಟ್
ಕ.ಸಾ: ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದ ಪ್ರಯಾಣಿಕರು ಬಸ್ ಕೆಟ್ಟುಹೋದದ್ದರಿಂದ ಗತ್ಯಂತರವಿಲ್ಲದೇ ಪ್ರವಾಸಿಮಂದಿರವೊಂದರಲ್ಲಿ ತಂಗಬೇಕಾಗಿ ಬರುತ್ತದೆ. ಅಲ್ಲಿ ತಂಗಿದ್ದ ಒಬ್ಬೊಬ್ಬರದು ಒಂದೊಂದು ಸಮಸ್ಯೆ. ಪ್ರತಿಯೊಂದು ಸಮಸ್ಯೆಯನ್ನೂ ನಿಧಾನವಾಗಿ ಪರಿಶೀಲಿಸಿ ಎಂತಹ ಸಮಸ್ಯೆಗಳನ್ನೂ ಪರಿಹರಿಸಬಹುದು ಎಂಬುವನ್ನು ನಿರೂಪಿಸುವ ಚಿತ್ರ 'ನವಜೀವನ'

೧೫೫. ಅನ್ನಪೂರ್ಣ

(೧೯೬೪ / ಕಪ್ಪು-ಬಿಳುಪು / ಸಾಮಾಜಿಕ)

ಲಾ: ಶ್ರೀಪಾಂಡುರಂಗಾ ಪ್ರೊಡಕ್ಷನ್ಸ್
ಪ್ರೊ: ಪಂಢರಿಬಾಯಿ
ನಿ: ಆರೂರು ಪಟ್ಟಾಭಿ
ಅ: ಪಂಢರಿಬಾಯಿ, ಮೈನಾವತಿ, ರಮಾದೇವಿ, ಬೇಬಿ ರವಿಕಲಾ, ಪದ್ಮಮ್ಮ, ರಾಜಕುಮಾರ್, ಕೆ.ಎಸ್.ಅಶ್ವತ್ಥ್, ಟಿ.ಎನ್.ಬಾಲಕೃಷ್ಣ, ರತ್ನಾಕರ್, ಆರ್.ನಾಗೇಂದ್ರರಾವ್, ವಿ.ನಾಗಯ್ಯ, ವೀರಭದ್ರಪ್ಪ, ಚಿ.ಸದಾಶಿವಯ್ಯ, ಭಾಸ್ಕರ್, ಗಣಪತಿಭಟ್, ಹನುಮಂತಾಚಾರ್, ಕಲ್ಯಾಣಕುಮಾರ್, ಕೃಷ್ಣಶಾಸ್ತ್ರಿ

ಮಾ: ಚಿ.ಸದಾಶಿವಯ್ಯ
ಗೀ: ಚಿ.ಉದಯಶಂಕರ್
ಗಾ: ಎಸ್.ಜಾನಕಿ, ಪಿ.ಲೀಲಾ, ಜಯದೇವ್, ಪಿ.ಬಿ.ಶ್ರೀನಿವಾಸ್, ಎ.ಎಲ್.ರಾಘವನ್
ಸಂ: ಆರೂರು ಪಟ್ಟಾಭಿ
ಛಾ: ಮಧು
ಕಲೆ: ಆರ್.ಬಿ.ಎಸ್.ಮಣಿ
ಸ: ರಾಜನ್-ನಾಗೇಂದ್ರ
ಧ್ವ: ಇ.ಐ.ಜೀವ
ನೃ: ಜಯರಾಮನ್
ವ: ಫ್ರಾನ್ಸಿಸ್
ಪ್ರ: ಶ್ರೀನಿವಾಸನ್, ತಿರುನಾವುಕ್ಕರಸು
ಸ್ಟು: ವಾಹಿನಿ, ಫಿಲಂ ಸೆಂಟರ್
ಹಾ: ೧)'ಅಂದ ಚಂದದ ಹೂವೇ ಮಮತೆಯ ಮಗುವೇ...', ೨)'ಕನ್ನಡವೇ ತಾಯ್‌ನುಡಿಯು ಕರುನಾಡು

ತಾಯ್‌ನಾಡು....', ೩)'ಹೃದಯವೀಣೆ ಮಿಡಿಯೆ ತಾನೆ ಕಾರಣ ನೀನೇ ಓ ಜಾಣೇ.....', ೪)'ಚೆಲುವಿನ ಸಿರಿಯೇ ಬಾರೆಲೆ.....', ೫)'ಬಿಡು ಬಿಡು ಕೋಪವ...'
ವಿ: ರಾಜಕುಮಾರ್ ಮೈನಾವತಿ ಮೊದಲಬಾರಿಗೆ ಜೋಡಿಯಾಗಿ ನಟಿಸಿದ ಚಿತ್ರ.
ಕ.ಸಾ: ಅನ್ನಪೂರ್ಣ ಬ್ಯಾಂಕ್ ಅಧಿಕಾರಿಯ ಪುತ್ರಿ. ತಂದೆಯ ವ್ಯಾಪಾರ ನಷ್ಟ ಆಗಿ ಲಕ್ಷಾಂತರ ರೂ. ನಷ್ಟವಾಗುವುದು. ಶಿವಶಂಕರ್ ಎಂಬ ವಕೀಲರನ್ನು ಎರಡನೆಯ ವಿವಾಹ ಮಾಡಿಕೊಳ್ಳಬೇಕಾಗಿ ಬರುವುದು. ಕೃಷ್ಣ ಮಗನಾಗಿ ಜನಿಸುವನು. ಶಿವಶಂಕರನ ಅಕ್ಕನ ಮಗ ಕಾಶೀ ಮನೆಯಲ್ಲೇ ಇದ್ದು ಹಣ ಪೋಲು ಮಾಡುತ್ತಿದ್ದ. ಅನ್ನಪೂರ್ಣ ಇದನ್ನು ವಿರೋಧಿಸಿದ್ದರಿಂದ ಅವಳ ಮೇಲೇ ಅನುಮಾನ ಬರುವಂತೆ ಮಾಡಿ ಮನೆಯಿಂದ ಹೊರಹಾಕಿದಾಗ, ಅನ್ನಪೂರ್ಣಳಿಗೆ ಅಪಘಾತವಾಗಿ ತಾಯಿ-ಮಗ ಬೇರಾದರು. ಕೃಷ್ಣ ಬೆಳೆದು ಲಂಡನ್ನಿಗೆ ಹೋಗಿ ಬಂದ. ಅನ್ನಪೂರ್ಣಗೆ ಕೃಷ್ಣ ತನ್ನ ಮಗನೆಂದು ತಿಳಿಯಿತು. ರಾಧ-ಕೃಷ್ಣರ ವಿವಾಹ ನಿಗದಿಯಾಯಿತು. ಕಾಶೀ ಇಲ್ಲಿಯೂ ತೊಡಕಾದ. ಶಿವಶಂಕರನಿಗೂ ಆ ವೇಳೆಗೆ ಸತ್ಯದ ಅರಿವಾಗಿತ್ತು. ಎಲ್ಲರೂ ಒಂದಾಗುವರು.

೧೫೬. ತುಂಬಿದ ಕೊಡ

(೧೯೬೪ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಶ್ರೀವೆಂಕಟೇಶ ಚಿತ್ರ
ಪ್ರೊ: ಜಿ.ಕೆ.ವೆಂಕಟೇಶ್ ಮತ್ತು ಮಿತ್ರರು
ನಿ: ಎನ್.ಸಿ.ರಾಜನ್
ಸ.ನಿ: ಪಿ.ಕೃಷ್ಣದೇವರಾವ್
ಅ: ರಾಜಕುಮಾರ್, ಲೀಲಾವತಿ, ಜಯಂತಿ, ನರಸಿಂಹರಾಜು, ಬಾಲಕೃಷ್ಣ, ಕೆ.ಎಸ್.ಅಶ್ವತ್, ಜೂ.ರೇವತಿ, ಪಾಪಮ್ಮ, ಚಿಂದೋಡಿ ಲೀಲಾ, ಜಯಶ್ರೀ, ಚಿ.ಉದಯಶಂಕರ್, ಬೆಂಗಳೂರು ನಾಗೇಶ್, ಶಾರದಮ್ಮ, ಸೀತಾಲಕ್ಷ್ಮಿ, ಗುಗ್ಗು, ಅಶ್ವಥ್‌ನಾರಾಯಣ, ಭುಜಂಗರಾವ್, ಮಾ।ನರಸಿಂಹನ್
ಕ: ಜಾನಕೀಸುತ
ಚಿ.ಕ/ಮಾ/: ಕು.ರ.ಸೀತಾರಾಮಶಾಸ್ತ್ರಿ
ಗೀ: ಕು.ರ.ಸೀ., ಕೆ.ಎಸ್. ನರಸಿಂಹಸ್ವಾಮಿ
ಗಾ: ಪಿ.ಕಾಳಿಂಗರಾವ್, ಪಿ.ಬಿ.ಶ್ರೀನಿವಾಸ್, ಎಸ್.ಜಾನಕಿ, ಮೋತಿ, ಲತಾ, ಜಿ.ಕೆ.ವೆಂಕಟೇಶ್, ಎಂ.ಸಿ. ಪದ್ಮ
ಸಂ: ಎನ್.ಸಿ.ರಾಜನ್, ಎ.ತಂಗರಾಜ್
ಛಾ: ಅಣ್ಣಯ್ಯ
ಕಲೆ: ಆರ್.ಬಿ.ಎಸ್.ಮಣಿ
ಸ: ಜಿ.ಕೆ.ವೆಂಕಟೇಶ್, ಜಿ.ಕೆ.ರಘು (ಸಹಾಯ)
ಧ್ವ: (ಮಾ)ಎಂ.ಲೋಗನಾಥನ್, (ಹಾ)ಬಿ.ಎಂ.ವಾಲ್ಕೆ
ನೃ: ಬಿ.ಜಯರಾಂ, ಮಾಧವನ್
ಪ್ರ: ಸುಬ್ಬಣ್ಣ, ದೊರೈಸ್ವಾಮಿ
ಸ್ಟು: ಶ್ರೀ ವೆಂಕಟೇಶ್ವರ ಸಿನಿಟೋನ್ (ಲೆಸ್ಲೀಸ್, ನ್ಯೂಟೋನ್, ಮದ್ರಾಸ್)
ಹಾ: ೧)'ಅಂಥಿಂಥ ಹೆಣ್ಣು ನೀನಲ್ಲ ನಿನ್ನಂಥ ಹೆಣ್ಣು ಇನ್ನಿಲ್ಲ...', ೨)'ಮದುಮಗ ಬಂದ ಹೊಸಿಲಲಿ ನಿಂದ...', ೩)'ಬಲ್ಲೆ ಬಲ್ಲೆ ನಾ ಬಲ್ಲೆ...', ೪)'ಜಾಡಿತ ಆ ಬಾಳ ಸಿರಿಯ ಹೂಬನ....', ೫)'ಕಂಡರೂ ಕಾಣದ್ಹಾಂಗೆ...'
ವಿ: ಈ ಚಿತ್ರದ 'ಕಾಲೇಜು ದಿನ' ದೃಶ್ಯವೊಂದರಲ್ಲಿ ಕಾದಂಬರಿಕಾರ ಅ.ನ.ಕೃ. ಶಾಸಕ ಡಾ। ಟಿ.ಪಾರ್ಥಸಾರಥಿ ಮತ್ತು ಗಾಯಕ ಪಿ.ಕಾಳಿಂಗರಾವ್ ಮುಖ್ಯ ಅತಿಥಿಗಳಾಗಿ ಭಾಗವಹಿಸಿದಾರೆ.
ಕ.ಸಾ: ಸೀತಾಪತಿ ಶ್ರೀಮಂತರಷ್ಟೇ ಅಲ್ಲದೆ ತುಂಬಿದ ಕೊಡವೂ ಹೌದು. ಮಗಳು ಉಮಾಳನ್ನು ಗೆಳೆಯನ ಮಗ ರಾಮಚಂದ್ರನಿಗೆ ನೀಡಬೇಕೆಂಬ ಯೋಚನೆ ಅವರದು. ಸೀತಾಪತಿ ಇಚ್ಛೆಯಂತೆ ರಾಮಚಂದ್ರ ವೈದ್ಯಕೀಯ ವ್ಯಾಸಂಗಕ್ಕಾಗಿ ಬೆಂಗಳೂರಿಗೆ ತೆರಳುತ್ತಾನೆ. ಸಹಪಾಠಿ ರಾಧಳ ಪ್ರೀತಿಯಲ್ಲಿ ಸಿಲುಕುವ ರಾಮಚಂದ್ರ ಅವಳನ್ನು ರಿಜಿಸ್ಟರ್ ವಿವಾಹವಾಗುತ್ತಾನೆ. ಆಕೆ ಗರ್ಭಿಣಿಯೂ ಆಗುತ್ತಾಳೆ. ಉಮಾ-ರಾಮಚಂದ್ರರ ವಿವಾಹ ಸಿದ್ಧತೆ ನಡೆದಾಗ ರಾಮಚಂದ್ರ ತತ್ತರಿಸಿದ. ವಿಷಯ ತಿಳಿದ ಉಮಾ ತ್ಯಾಗ ಮಾಡುತ್ತಾಳೆ.

೧೫೭. ಶಿವಗಂಗೆ ಮಹಾತ್ಮೆ

(೧೯೬೪ / ಕಪ್ಪು-ಬಿಳುಪು / ಭಕ್ತಿಪ್ರಧಾನ)
ಲಾ: ಬಾಲಕೃಷ್ಣ ಮೂವೀಸ್
ಪ್ರೊ: ಬಿ.ಸಿ.ತಿಮ್ಮರಾಯಪ್ಪ
ನಿ: ಗೋವಿಂದಯ್ಯ
ಅ: ರಾಜಕುಮಾರ್, ಉದಯಕುಮಾರ್, ಕೆ.ಎಸ್.ಅಶ್ವತ್ಥ್, ಬಾಲಕೃಷ್ಣ, ರತ್ನಾಕರ್, ಟಿ.ಸುಬ್ಬರಾವ್, ಹರಿಣಿ, ಜಯಶ್ರೀ, ರಾಜಶ್ರೀ, ಹೆಚ್.ಪಿ.ಸರೋಜಾ, ಜಯಾ, ಸುಚಿತ್ರ, ಶ್ಯಾಮಸುಂದರ್, ಬಸಪ್ಪ, ಸತ್ಯನಾರಾಯಣ
ಕ/ಚಿ.ಕ/ಮಾ: ಸೋರಟ್ ಅಶ್ವತ್ಥ್
ಗೀ: ಸೋರಟ್ ಅಶ್ವತ್ಥ್, ಗೀತಪ್ರಿಯ

ಗಾ: ಪಿ.ಬಿ.ಶ್ರೀನಿವಾಸ್, ಎಸ್.ಜಾನಕಿ, ಎಲ್.ಆರ್.ಈಶ್ವರಿ, ಎ.ಪಿ.ಕೋಮಲ, ಜಿ.ಕೆ.ವೆಂಕಟೇಶ್
ಸಂ: ಪಿ.ಎಸ್.ಮೂರ್ತಿ
ಛಾ: ಎಂ.ಎಸ್.ಮಣಿ
ಕಲೆ: ಬಿ.ಸಿ.ಬಾಬು
ಸ: ಜಿ.ಕೆ.ರಘು
ಧ್ವ: ಎ.ಮೋಹನ್
ವ: ಚಂಟಿಬಾಬು
ಪ್ರ: ವೈ.ಮಾಧವಯ್ಯ, ರಾಜಗೋಪಾಲ್
ಸ್ಟು: ಪ್ರಕಾಶ್, ನ್ಯೂಟೋನ್, ಮೆಜೆಸ್ಟಿಕ್
ಹಾ: ೧)'ಕನ್ನಡಿಗರೆ ಊದಿರೆಲ್ಲ ಕನ್ನಡ ತುತ್ತೂರಿಯಾ....', ೨)'ಒಂದೇ ಎನ್ನುವ ನೀತಿ ತಾಯ್ನಾಡ ಕೀರ್ತಿಯ ಜ್ಯೋತಿ.....', ೩)'ಓ ಗಿಳಿಯೇ ನೀ ತಿಳಿಯೇ....', ೪)'ಶಿವಗಂಗಾ ವರಕ್ಷೇತ್ರದ ಮಹಿಮೆಯ ಆಲಿಸಿ ಕೇಳಯ್ಯ.....', ೫)'ಶೃಂಗಾರ ಸಾಕೇ ಹೇಳೇ ಸುಮಾ ಸಂತೋಷ ತಾಳೇ ಹಾ ಪ್ರಿಯತಮಾ....', ೬)'ಚಂದುಳ್ಳಿ ಹೆಣ್ಣೇ ತೊಂಡೆಯ ಹಣ್ಣೇ....', ೭)'ಹನಗ್ಯೆದರು ತೀರದಾ ಋಣವೂ....'
ಕ.ಸಾ: ಧರ್ಮಪಾಲನೆಂಬ ರಾಜನನ್ನು ಸದ್ಗುಣನೆಂಬ ಸೇನಾಧಿಪತಿ ನಾನಾ ಹಿಂಸೆಗೆ ಗುರಿಪಡಿಸಿದ. ರಾಣಿ ಹಾಗೂ ಚಿಕ್ಕ ಮಗುವನ್ನು ದೇಶಭ್ರಷ್ಟ ಮಾಡಿದ. ರಾಜ ಮತಿಹೀನನಾದಾಗ ತನ್ನ ಅನುಕೂಲಕ್ಕೆ ತಕ್ಕಂತೆ ಮೋಹಿನಿ ಎಂಬುವಳನ್ನು ತಂದು ರಾಜನಿಗೆ ವಿವಾಹ ಮಾಡಿದ. ಸೇನಾಧಿಪತಿಯ ಮಗ ದುರ್ಜಯ ಸಹ ಹಲವಾರು ವೇಷಗಳನ್ನು ಮಾಡುತ್ತಾನೆ. ಕಾಡು ಪಾಲಾಗಿದ್ದ ರಾಣಿಯು ತನ್ನ ಮಗ ಅಶೋಕನನ್ನು ಬೆಳೆಸುತ್ತಾಳೆ. ಅಶೋಕ ಬೆಳೆದು ದೊಡ್ಡವನಾಗುತ್ತಾನೆ. ಶಿವಗಂಗಾ ಕ್ಷೇತ್ರದ ಮಹಿಮೆಯಿಂದ ಅಶೋಕ ತನ್ನ ರಾಜ್ಯವನ್ನು ಮರಳಿ ಪಡೆದು, ಸೆರೆಯಲ್ಲಿದ್ದ ತಂದೆಯನ್ನು ರಕ್ಷಿಸುತ್ತಾನೆ.

೧೫೮. ಪೋಸ್ಟ್ ಮಾಸ್ಟರ್

(೧೯೬೪ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಅನಂತಲಕ್ಷ್ಮಿ ಫಿಲಂಸ್ ಫಿಲಂ ಆರ್ಟ್ಸ್
ಪ್ರೊ/ನಿ: ಜಿ.ವಿ.ಅಯ್ಯರ್
ಸ.ನಿ: ಕ.ಎಸ್.ಎಲ್.ಸ್ವಾಮಿ (ರವೀ), ಕೆ.ರಾಮಚಂದ್ರನ್ ಮೊರ
ಅ: ಬಿ.ಎಂ.ವೆಂಕಟೇಶ್, ಜಿ.ವಿ.ಶಿವರಾಜ್, ವಂದನಾ, ಬಾಲಕೃಷ್ಣ, ಬಿ.ಕೆ.ಈಶ್ವರಪ್ಪ, ಜಿ.ವಿ.ಚೆನ್ನಬಸಪ್ಪ, ಶಿವಶಂಕರ್, ಬಸವರಾಜ್, ಪಾಪಮ್ಮ, ಪ್ರಭ, ಶಾರದ, ಲೀಲಾ
ಕ/ಚಿ.ಕ/ಮಾ/ಗೀ: ಜಿ.ವಿ.ಅಯ್ಯರ್
ಗಾ: ಎಲ್.ಆರ್.ಈಶ್ವರಿ, ವಾಣಿಗ್ರಾಹಿ, ಪಿ.ಬಿ.ಶ್ರೀನಿವಾಸ್, ಎಸ್.ಜಾನಕಿ
ಸಂ: ಭಾಸ್ಕರ್
ಛಾ: ಇ.ಎಸ್.ಬಾಲಕೃಷ್ಣ
ಕಲೆ: ಎನ್.ಚಂದ್ರನ್
ಸ: ವಿಜಯಭಾಸ್ಕರ್
ಧ್ವ: ಶ್ರೀನಿವಾಸ್, ಎಂ.ಎ.ಎನ್.ಅಯ್ಯಂಗಾರ್, ಮೋಹನಸುಂದರಂ
ನೃ: ಬಿ.ಜಯರಾಂ
ವ: ಮಹದೇವ್
ಪ್ರ: ರಾಜಗೋಪಾಲ್
ಸ್ಟು: ಪ್ರೀಮಿಯರ್ (ಮೈಸೂರು)
ಹಾ: ೧)'ಮುತ್ತಿನ ನತ್ತೊಂದು ಮೂಗಿಂದ ಜಾರಿತು....', ೨)'ಎರಡು ರೆಂಬೆಯ ನಡುವೆ ಬೆಳೆದಾ....', ೩)'ಇಂದೇನು ಹುಣ್ಣಿಮೆಯೋ...', ೪)'ನಾನೆಷ್ಟೋ ಸಲ ನೋಡಿದ ಚಂದ್ರಾ...',
೫)'ಕನ್ನಡದ ಕುಲದೇವಿ...'
ವಿ: ಜನಗಳಲ್ಲಿ ಕಣ್ಣಿನ ಆಪರೇಷನ್ ಬಗ್ಗೆ ಇದ್ದ ಭಯ ಹೋಗಲಾಡಿಸಲು ಈ ಚಿತ್ರದಲ್ಲಿ ಖ್ಯಾತ ನೇತ್ರ ಚಿಕಿತ್ಸಕ ಎಂ.ಸಿ. ಮೋದಿಯವರು ನಡೆಸುವ ಆಪರೇಷನ್ ಅನ್ನು ತೋರಿಸಲಾಗಿದೆ. ಇದರ ವೀಕ್ಷಣೆಗೆ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಂದಿದ್ದರು.
ಕ.ಸಾ: ಆನಂದತೀರ್ಥ ಉತ್ತಮ ಗುಣಗಳನ್ನು ಹೊಂದಿದ ಪೋಸ್ಟ್ ಮಾಸ್ಟರ್. ಪಕ್ಕದ ಮನೆಯ ಬೆಳ್ಳುಳ್ಳಪ್ಪ ಮೋಸಗಾರ. ಬೆಳ್ಳುಳ್ಳಪ್ಪನ ಆಶ್ರಯದಲ್ಲಿ ಬೆಳೆದ ಜಯಣ್ಣ ಎಂಬ ಯುವಕ ಆನಂದತೀರ್ಥನ ಬಳಿ ಸಹಾಯಕ ಹಾಗೂ ಅಷ್ಟೇ ಪ್ರಾಮಾಣಿಕ. ಆನಂದ ತೀರ್ಥನ ಮಗಳು ರೂಪ ಜಯಣ್ಣನನ್ನು ಮೋಹಿಸುತ್ತಾಳೆ. ಬೆಳ್ಳುಳ್ಳಪ್ಪ ಅಂಚೆ ಕಚೇರಿಯ ಹಣದ ಚೀಲ ಲಪಟಾಯಿಸಿ ಜಯಣ್ಣನ ಮೇಲೆ ಅಪಾದನೆ ಬರುವಂತೆ ಮಾಡಿದ. ಆನಂದತೀರ್ಥ ಆರೋಪ ತನ್ನ ಮೇಲೆ ಹಾಕಿಕೊಂಡ. ಪತ್ನಿಗೆ ಕಣ್ಣು ಹೋದವು. ಜಯಣ್ಣ ಸೈನ್ಯ ಸೇರಿಕೊಂಡ. ಆನಂದತೀರ್ಥ ನಾಪತ್ತೆಯಾದ. ಅಂತಿಮವಾಗಿ ಪೋಸ್ಟ್ ಮಾಸ್ಟರ್ ಆರೋಪದಿಂದ ಮುಕ್ತಿಗೊಂಡ. ಪುನಃ ಎಲ್ಲರೂ ಒಂದಾಗುತ್ತಾರೆ.

೧೫೯. ಮುರಿಯದ ಮನೆ

(೧೯೬೪ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಕರ್ನಾಟಕ ಫಿಲಂಸ್
ಪ್ರೊ: ಜಿ.ಹೆಚ್.ವೀರಣ್ಣ, ಸಿ.ಆರ್.ಬಸವರಾಜು, ಎಸ್.ಗುರುನಾಥ್
ನಿ: ವೈ.ಆರ್.ಸ್ವಾಮಿ
ಸ.ನಿ: ಸಿದ್ದಲಿಂಗಯ್ಯ
ಅ: ರಾಜಕುಮಾರ್, ಜಯಂತಿ, ಪಂಢರಿಬಾಯಿ, ಬಾಲಕೃಷ್ಣ, ಇಂದ್ರಾಣಿ, ವಾಣಿಶ್ರೀ, ಅಶ್ವತ್ಥ್, ನರಸಿಂಹರಾಜು, ಶ್ರೀಕಂಠಸ್ವಾಮಿ, ಪಾಪಮ್ಮ, ಜೂ.ರೇವತಿ, ಉದಯಕುಮಾರ್
ಕ: ತಮಿಳಿನ 'ಭಾಗ ಪಿರಿವಿನ್ನೈ' ಚಿತ್ರ
ಮಾ/ಗೀ: ಕು.ರ.ಸೀತಾರಾಮಶಾಸ್ತ್ರಿ
ಗಾ: ಘಂಟಸಾಲ, ಪಿ.ಬಿ.ಶ್ರೀನಿವಾಸ್, ಪಿ.ಸುಶೀಲ, ಎಲ್.ಆರ್.ಈಶ್ವರಿ, ರಾಘವ
ಸಂ: ಆರ್.ಹನುಮಂತರಾವ್
ಛಾ: ಆರ್.ಮಧು
ಕಲೆ: ಕೃಷ್ಣ
ಸ: ವಿಜಯ ಕೃಷ್ಣಮೂರ್ತಿ
ಧ್ವ: ಮೋಹನ ಸುಂದರಂ, ಟಿ.ಲಾಜರಸ್
ನೃ: ವೇಣುಗೋಪಾಲ್
ವ: ಜಯಪಾಲ್
ಪ್ರ: ಮಾಧವಯ್ಯ, ಎಂ.ಎಸ್.ಸುಬ್ಬಣ್ಣ

ಸ್ಟು: ಗೋಲ್ಡನ್ ಸಿನಿ (ಮದರಾಸು)
ಹಾ: ೧)'ಆದಿ ಪೂಜೆಯ ಕೊಂಬ ಆನೆ ಮೊಗನೇ.....',
೨)'ಕೇದಿಗೆ ಹೂ ಮುಡಿದು ಅಧರದ ನಗೆ ಮಿಡಿದು.....',
೩)'ಪತಿಹೀನೆ, ಕೈಕೇಯಿ...', ೪)'ಅಂದಚೆಂದವೇತಕೆ
ಅಂತರಂಗ ಕ್ಷಪಕೆ.....', ೫)'ಮೊಲ್ಲೆ ಮಲರಿ
ಘಮಿಸುತಿರೆ...', ೬)'ಪತಿಹೀನ ನಾನಾಗ ತಂದೆ,
ಮಗುವಾಗಿ ನೀನೇಕೆ ಬಂದೆ.....'.
ಕ.ಸಾ: ರಾಮೇಗೌಡ, ದೇವೇಗೌಡ ಪ್ರೀತಿಯ
ಅಣ್ಣ ತಮ್ಮಂದಿರು. ದೇವೇಗೌಡನ ಪತ್ನಿ ಶಾಂತಮ್ಮ ಹೆಸರಿಗೆ
ತಕ್ಕಂತಹ ಹೆಣ್ಣು. ಈಕೆಯ ಮಗ ಚೆನ್ನ ವಿದ್ಯುತ್ ಕಂಬಕ್ಕೆ ಹತ್ತಿ
ಅಂಗವಿಕಲನಾದ. ಕಿರಿಯ ಮಗ ಓದಿ ಪದವೀಧರನಾದ.
ದೊಡ್ಡಮ್ಮ ರುದ್ರಮ್ಮ ನಾಗರಾಜನನ್ನು ಮರುಳುಮಾಡಿ
ತಾನು ಹೇಳಿದಂತೆ ಕೇಳುವ ಹಾಗೆ ಮಾಡಿ ತನ್ನ ಸೋದರ
ಸೊಸೆ ಕಾವೇರಿಯನ್ನು ಅವನಿಗೆ ಕಟ್ಟುವ ಸನ್ನಾಹ ಮಾಡಿದಳು.
ಶಾಂತಮ್ಮನ ಸೋದರ ಸೊಸೆ ಮಲ್ಲಿಗೆ ಅಂಗವಿಕಲನಾದರೂ
ಚೆನ್ನನ ಪ್ರೀತಿಗೆ ಮಾರುಹೋಗಿ ಮದುವೆ ಮಾಡಿಕೊಂಡಳು.
ಮನೆಮುರುಕ ರುದ್ರಮ್ಮನ ಯೋಜನೆಗಳು ತಲೆಕೆಳಗಾಗಿ
ಎಲ್ಲವೂ ಒಳ್ಳೆಯದಾಗುವುದು.

೧೬೦. ಪ್ರತಿಜ್ಞೆ

(೧೯೬೪ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ವಿಕ್ರಂ ಪ್ರೊಡಕ್ಷನ್ಸ್
ಪ್ರೊ/ನಿ: ಬಿ.ಎಸ್.ರಂಗಾ
ಸ.ನಿ: ಚಿ.ಸದಾಶಿವಯ್ಯ, ಕೆ.ಧರ್ಮರಾಜು,
ಅ: ರಾಜಕುಮಾರ್, ಕೆ.ಎಸ್.ಅಶ್ವತ್ಥ್, ನರಸಿಂಹರಾಜು,
ಗಣಪತಿಭಟ್, ರತ್ನಾಕರ್, ಜಯಂತಿ, ಪಂಢರಿಬಾಯಿ,
ರಮಾದೇವಿ, ರಮಾ, ಜಯಾ, ಬೇಬಿ ವಿಶಾಲಾಕ್ಷ್ಮಿ,
ವಿಜಯರಾವ್, ಗಿರಿಮಾಜಿ, ಮಾಬಾಯಿ, ಬೇಬಿ
ಶ್ಯಾಮಸುಂದರ್
ಕ: ಶ್ಯಾಮಲಾದೇವಿ
ಮಾ/ಗೀ: ಚಿ.ಸದಾಶಿವಯ್ಯ
ಗಾ: ಪಿ.ಸುಶೀಲ, ಪೀಠಾಪುರಂ ನಾಗೇಶ್ವರರಾವ್
ಎಲ್.ಆರ್.ಈಶ್ವರಿ, ಪಿ.ಬಿ.ಶ್ರೀನಿವಾಸ್. ಪಿ.ಲೀಲಾ.
ಬಿ.ಲತಾ, ಎಂ.ಸಿ.ಪದ್ಮ, ಮಾಧವಪೆದ್ದಿ ಸತ್ಯಂ, ಜಮುನಾರಾಣಿ
ಸಂ: ಪಿ.ಜಿ.ಮೋಹನ್
ಛಾ: ಬಿ.ಎಸ್.ರಂಗಾ
ಕಲೆ: ಪಿ.ಎಸ್.ನಟರಾಜನ್
ಸ: ಎಸ್.ಹನುಮಂತರಾವ್
ಧ್ವ: ಎನ್.ಶೇಷಾದ್ರಿ
ನೃ: ರತನ್ ಕುಮಾರ್
ವ: ಪಿ.ಎನ್.ಮೂರ್ತಿ
ಪ್ರ: ಸ್ವರ್ಣಪ್ಪ, ಷಣ್ಮುಗಂ, ದೊರೈಸ್ವಾಮಿ, ವಿಶ್ವಂಭರನ್
ಸ್ಟು: ವಿಕ್ರಂ (ಮದರಾಸು)
ಹಾ: ೧)'ಬಡವರ ಸೇವೆಯೇ ಭಗವಂತನ ಸೇವೆ...',
೨)'ದೀಪಾವಳಿಯು ಕಾಣಿಯುತ ಬಂತು...', ೩)'ತಾಯೇ
ದೀನ ಶರಣ್ಯ.....', ೪)'ನಾ ನಿನ್ನ ಮೋಹಿಸಿ ಬಂದಿಹೆನು.....',
೫)'ಕನಸಿನಾ ದೇವಿಯಾಗಿ ಮನಸಿನಾ.....', ೬)'ಬಾರೋ
ಬಾರೋ ರಂಗಯ್ಯ.....' ೭)'ತಂಗಾಳಿಯಲಿಯೂ
ಕೋಗಿಲೆಯುಲಿಯೂ...', ೮)'ಮನದಾ ಆನಂದನು ಮನೆಗೆ
ತಾ ಬಂದನು...', ೯)'ಆಹಾ ಎಂಥ ಚೆಲುವು ಈ
ಕೋಪಗೊಂಡ ಮುಖವು...', ೧೦) ಚಂದ ಮಾಮ
ಬಂದನಮ್ಮ...'
ಕ.ಸಾ: ಶಂಕರ್ ಎಂಬ ಯುವಕ ವೈದ್ಯಕೀಯ ಪದವಿ
ಪಡೆಯಲು ಹೋಗಿ ತನ್ನ ಸಹಪಾಠಿ ರಾಗಿಣಿಯನ್ನು
ಮದುವೆಯಾಗಿ ತಂದೆ ತಾಯಿಯನ್ನು ಮರೆಯುತ್ತಾನೆ.
ತಂದೆಗೂ ಶಂಕರ್ ಚಿಕಿತ್ಸೆ ಕೊಡಿಸದಂತೆ ರಾಗಿಣಿಯ ತಾಯಿ
ರಮಾಬಾಯಿ ಮೋಸ ಮಾಡುತ್ತಾಳೆ. ತಂದೆ ಸಾಯುತ್ತಾನೆ.
ಅನಾಥಳಾದ ತಾಯಿ ಶಂಕರ್ ಮನೆಯಲ್ಲಿಯೇ ಕೆಲಸದಾಳಾಗಿ
ಸೇರುತ್ತಾಳೆ. ಶಂಕರ್‌ನ ಮಗು ಅಜ್ಜಿಯನ್ನು ಹಚ್ಚಿಕೊಳ್ಳುತ್ತದೆ.
ಮಗುವನ್ನು ಅಜ್ಜಿ ಅಪಾಯದಿಂದ ಕಾಪಾಡುತ್ತಾಳೆ. ಅಜ್ಜಿಗೆ
ಕೆಲಸ ಹೋಗುತ್ತದೆ. ಶಂಕರ್‌ಗೆ ವಿಷಯ ತಿಳಿದು ಪಶ್ಚಾತ್ತಾಪ
ಪಡುತ್ತಾನಲ್ಲದೆ, ನಗರದ ವೈಭವ ಬಿಟ್ಟು ಗಂಡ ಹೆಂಡತಿ
ಹಳ್ಳಿಯ ಸೇವೆಗೆ ಹೊರಡುತ್ತಾರೆ.

೧೬೧. ಚಿನ್ನದ ಗೊಂಬೆ

(೧೯೬೪ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಪದ್ಮಿನಿ ಪಿಕ್ಚರ್ಸ್
ಪ್ರೊ/ನಿ: ಬಿ.ಆರ್.ಪಂತುಲು
ಸ.ನಿ: ಪುಟ್ಟಣ್ಣ ಕಣಗಾಲ್
ಅ: ಬಿ.ಆರ್.ಪಂತುಲು, ಎಂ.ವಿ.ರಾಜಮ್ಮ,
ಕಲ್ಯಾಣಕುಮಾರ್, ಕಲ್ಪನಾ, ಅಶ್ವತ್ಥ್, ಬಾಲಕೃಷ್ಣ,
ಜಯಲಲಿತ, ನರಸಿಂಹರಾಜು, ಸಂಧ್ಯಾ, ರಾಜಾಶಂಕರ್.
ಕುಪ್ಪುರಾಜ್. ಗುಗ್ಗು, ಜಯ, ಕೃಷ್ಣಶಾಸ್ತ್ರಿ, ಮಹೇಶ್ವರಯ್ಯ.
ಬಸಪ್ಪ, ಐಯ್ಯಂಗಾರ್, ಬೇಬಿ ವಿಶಾಲಾಕ್ಷಿ, ಹೆಚ್.ಟಿ.ಅರಸ್
ಕ: ಪದ್ಮಿನಿ ಪಿಕ್ಚರ್ಸ್ ಕಥಾ ವಿಭಾಗ
ಮಾ: ಕಣಗಾಲ್ ಪ್ರಭಾಕರಶಾಸ್ತ್ರಿ
ಗೀ: ಆರ್.ಎನ್.ಜಯಗೋಪಾಲ್, ವಿಜಯನಾರಸಿಂಹ
ಗಾ: ಪಿ.ಬಿ.ಶ್ರೀನಿವಾಸ್, ಪಾಣಿಗ್ರಾಹಿ, ಪಿ.ಸುಶೀಲ,
ಎಸ್.ಜಾನಕಿ, ಸೂಲಮಂಗಲಂ ರಾಜಲಕ್ಷ್ಮಿ
ಸಂ: ಆರ್.ದೇವರಾಜನ್
ಛಾ: ವಿ.ರಾಮಮೂರ್ತಿ
ಕಲೆ: ಸೆಲ್ವರಾಜ್
ಸ: ಟಿ.ಜಿ.ಲಿಂಗಪ್ಪ
ಧ್ವ: (ಮಾ)ಎಂ.ಶಿವರಾಮ್, (ಹಾ)ಮಾಣಿಕ್ಯಂ
ನೃ: ಉಡುಪಿ ಜಯರಾಂ
ವ: ಎಂ.ರಾಘ
ಹಾ: ೧)'ಸೇವಂತಿಗೆ ಚೆಂಡಿನಂಥ ಮುದ್ದು ಕೋಳಿ...',
೨)'ತಾವರೆ ಹೂ ಕರೆಯಲಿ ಸಂಜೆವೆಣ್ಣ ಚೆಲುವಲಿ.....',
೩)'ಗೂಡಿನಲಿ ಒಂದು ಜಾನಾಡಿ ಅದು ಹಾಡುತಲಿ ಇರ
ಮೆರೆವಾಡಿ..', ೪)'ಮಣ್ಣಲಿ ಕಲೆಯ ರೂಪಿಸುವೆ ಎನ್
ಒಲವಿಗೆ ಕಲಶವ ನಾನಿಡುವೆ...', ೫)'ನೋಡಲ್ಲಿ ಮೆರವಣಿಗೆ
ನೂತನ ದಂಪತಿಗಳಿಗೆ.....', ೬)'ಹೊನ್ನಾಸೆ ಉಳ್ಳವಗೆ
ದಯೆಯಿಲ್ಲ.....'
ವಿ: ಈ ಚಿತ್ರದಲ್ಲಿ ಪ್ರೊಫೆಸರ್ ರಾಯ್ ಅವರ ಮಾತನಾಡುವ
ಬೊಂಬೆಯನ್ನು ಅಳವಡಿಸಿಕೊಳ್ಳಲಾಗಿದೆ.
ಕ.ಸಾ: ಅನ್ಯೋನ್ಯವಾಗಿದ್ದ ಅಣ್ಣ ತಮ್ಮ ಸಣ್ಣ ಕಾರಣಕ್ಕಾಗಿ
ಬೇರೆಯಾಗುತ್ತಾರೆ. ಅತ್ತಿಗೆಗೆ ಪ್ರೀತಿಯ ಮೈದುನ,
ಬೇರೆಯಾದರೂ ಆ ಕುಟುಂಬಕ್ಕಾಗಿ ಪರಿತಪಿಸುತ್ತಾನೆ.
ತಂಗಿಯನ್ನು ಒಳ್ಳೆಯ ಮನೆ ಸೇರಿಸಲು ಕಷ್ಟ ಪಡುತ್ತಾನೆ.
ಶ್ರೀಮಂತನೊಬ್ಬನ ಗುಣವನ್ನು ಬದಲಿಸಿ ತಂಗಿಗೆ ವಿವಾಹ
ಮಾಡುತ್ತಾನೆ. ಅಣ್ಣ-ತಮ್ಮ ಒಂದಾಗುತ್ತಾರೆ.

೧೬೨. ಪತಿಯೇ ದೈವ

(೧೯೬೪ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಆರೆನ್ನಾರ್ ಪ್ರೊಡಕ್ಷನ್ಸ್
ಪ್ರೊ/ನಿ: ಆರ್. ನಾಗೇಂದ್ರರಾವ್
ಸ.ನಿ: ಬೆಂಗಳೂರು ನಾಗೇಶ್
ಅ: ನಾಗೇಂದ್ರರಾವ್, ಸುದರ್ಶನ್, ಕಲ್ಪನಾ, ಜಯಂತಿ,
ಅಶ್ವತ್ಥ್, ಬಾಲಕೃಷ್ಣ, ಚಿ। ಉದಯಶಂಕರ್, ವೀರಭದ್ರಪ್ಪ,
ಹನುಮಂತರಾವ್, ಪಂಢರೀಬಾಯಿ, ಬಿ.ರಮಾದೇವಿ,
ಮೈನಾವತಿ, ಜಯಶ್ರೀ, ತಾಳಿಕೋಟೆ ಲಕ್ಷ್ಮೀದೇವಿ
ಕ/ಚಿ.ಕ/ಮಾ/ಗೀ: ಆರ್.ಎನ್.ಜಯಗೋಪಾಲ್
ಗಾ: ಪಿ.ಸುಶೀಲ, ಎಸ್.ಜಾನಕಿ, ಲತಾ, ಅಂಜಲಿ,
ಎಲ್.ಆರ್.ಈಶ್ವರಿ, ಪಿ.ಬಿ.ಶ್ರೀನಿವಾಸ್, ಜಯದೇವ್
ಸಂ: ಎಸ್.ಎಂ.ಶಾಲಿ
ಛಾ: ಆರ್.ಎನ್.ಕೆ.ಪ್ರಸಾದ್
ಕಲೆ: ವರ್ತೂರ್ಕರ್
ಸ: ವಿಜಯಭಾಸ್ಕರ್
ಧ್ವ: ಎಂ.ಬಿ.ವಾಲ್ಕೆ, ವೆಂಕಟರಮಣನ್, ಲೋಕನಾಥನ್,
ಸೂರ್ಯನಾರಾಯಣರಾವ್
ನೃ: ಬಿ.ಜಯರಾಂ
ಪ್ರ: ಎಂ.ಎಸ್.ಸುಬ್ಬಣ್ಣ, ನಾರಾಯಣಸ್ವಾಮಿ, ಸೇಲಂ ರಾಮು
ಸ್ಟು: ವಾಹಿನಿ

ಹಾ: ೧)'ಮಾಲೆಯ ಹಿಡಿದು...', ೨)'ಕಣ್ಣೆಂಬ ಕಣ್ಣಿಂದ...',
೩)'ನಗ ಮೊಗದಿ...', ೪)'ಮಂಗಳ ಮೂರುತಿ...',
೫)'ಪೂಜಿಪ ದೈವವೇ...', ೬)'ಬೀಗರ ಮನೆಯ...',
೭)'ಕೋಪವೇಕೆ ಕೋಪವೇಕೆ...', ೮)'ಜಯ
ರಘುರಾಮ...', ೯)'ಮಾತಾರಾಮೋ ಮತ್ಪಿತಾ...',
ಕ.ಸಾ: ಅಗ್ನಿಸಾಕ್ಷಿಯಾಗಿ ಕೈ ಹಿಡಿದ ಪತಿಯು ಸಾಕ್ಷಾತ್ ದೈವ
ಸ್ವರೂಪವೆಂದು ಹಿಂದಿನ ಕಾಲದಿಂದಲೂ ರೂಢಿಯಲ್ಲಿ ಬಂದ
ನಂಬಿಕೆ. ಇದನ್ನು ಬಿಂಬಿಸುವ ಕಥಾಹಂದರ.

೧೬೩. ನಾಂದಿ

(೧೯೬೪ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಶ್ರೀ ಭಾರತಿ ಚಿತ್ರ
ಪ್ರೊ: ವಾದಿರಾಜ್-ಜವಹರ್
ನಿ: ಎನ್.ಲಕ್ಷ್ಮೀನಾರಾಯಣ್
ಸ.ನಿ: ಕೆ.ಎಸ್.ನಾಗಭೂಷಣ
ಅ: ರಾಜಕುಮಾರ್, ಹರಿಣಿ, ಕಲ್ಪನಾ, ಬಾಲಕೃಷ್ಣ,
ವಾದಿರಾಜ್, ದಿನೇಶ್, ಗಣಪತಿ ಭಟ್, ಶೈಲಶ್ರೀ,
ಉದಯಕುಮಾರ್, ಸೋರಟ್ ಅಶ್ವತ್ಥ್,
ಹನುಮಂತಾಚಾರ್, ಶ್ರೀಧರ್, ನಾರಾಯಣ್, ಜಯಶ್ರೀ
ಕ/ಚಿ.ಕ: ಎನ್.ಲಕ್ಷ್ಮೀನಾರಾಯಣ್
ಮಾ/ಗೀ: ಆರ್.ಎನ್.ಜಯಗೋಪಾಲ್
ಗಾ: ಎಸ್.ಜಾನಕಿ, ಪಿ.ಬಿ.ಶ್ರೀನಿವಾಸ್, ಲತಾ, ಜಯದೇವ್,
ಎಲ್.ಆರ್.ಈಶ್ವರಿ
ಸಂ: ಪಿ.ಎಸ್.ಮೂರ್ತಿ
ಛಾ: ಆರ್.ಎನ್.ಕೃಷ್ಣಪ್ರಸಾದ್
ಕಲೆ: ಬಿ.ಸಿ.ಬಾಬು
ಸ: ವಿಜಯಭಾಸ್ಕರ್
ಧ್ವ: (ಹಾ) ಮೋಹನಸುಂದರಂ,
(ಮಾ)ಎಂ.ಎಸ್.ನಾಗೇಶ್ವರನ್
ನೃ: ಬಿ.ಜಯರಾಂ
ಕೇಶಾಲಂಕಾರ ರಾಜಗೋಪಾಲ್
ವ: ಮಣಿ
ಪ್ರ: ಎಂ.ಎಸ್.ಸುಬ್ಬಣ್ಣ
ಸ್ಟು: ಗೋಲ್ಡನ್
ಹಾ: ೧)'ಉಡುಗೊರೆಯೊಂದ ತಂದಾ ಎನ್ನಯ
ಮನದಾನಂದ.....', ೨)'ಚಂದ್ರಮುಖಿ ಪ್ರಾಣಸಖಿ ಚತುರ ನೀ
ಪೇಳೇ.....', ೩)'ನಮ್ಮ ತಾಯಿ ಭಾರತಿ ನಮ್ಮ ನಾಡು
ಭಾರತ.....', ೪)'ನಮ್ಮ ಪಾಪಾ ನಮ್ಮ ಪಾಪಾ.....',
೫)'ಹಾಡೊಂದ ಹಾಡುವೆ ನೀ ಕೇಳು ಮಗುವೆ...'
ವಿ: ದಿನೇಶ್ ಅಭಿನಯಿಸಿದ ಮೊದಲ ಚಿತ್ರ. ನಂದಿ ಬೆಟ್ಟದ
ಬಗ್ಗೆ ಸಮಗ್ರ ಪರಿಚಯ. ಕಿವುಡರಿಗೆ ಪಾಠ ಹೇಳಿಕೊಡುವ
ಬಗ್ಗೆ ಮಾಹಿತಿ. ಲಂಡನ್‌ನಲ್ಲಿ ನಡೆದ ಕಾಮನ್‌ವೆಲ್ತ್
ಚಿತ್ರೋತ್ಸವದಲ್ಲಿ ಪ್ರದರ್ಶನ. ಎನ್.ಲಕ್ಷ್ಮೀನಾರಾಯಣ್
ನಿರ್ದೇಶನದ ಮೊದಲ ಚಿತ್ರ.ಬೆಳ್ಳಿಯಂಥ ಕಿವುಡ ಮೂಗರ
ತಜ್ಞೆ ಮೇರಿ ಬಾಪುರವರ ಸಲಹೆ ಪಡೆದುಕೊಂಡ ಚಿತ್ರ. ಎಲ್ಲ
ಅರ್ಹತೆಯಿದ್ದೂ ರಾಷ್ಟ್ರ ಪ್ರಶಸ್ತಿಯಿಂದ ವಂಚಿತವಾದುದಕ್ಕೆ
ಜನತೆಯೇ ಪ್ರತಿಭಟಿಸಿತ್ತು.
ಕ.ಸಾ: ಮೂರ್ತಿ ಉತ್ತಮ ನಡವಳಿಕೆಯ ಶಿಕ್ಷಕ. ನಿರ್ಮಲ
ಮೆಚ್ಚಿನ ಮಡದಿ. ಹೆರಿಗೆ ಸಮಯದಲ್ಲಿ ಗಂಡು ಮಗುವನ್ನು
ಹೆತ್ತು ನಿರ್ಮಲ ಸಾಯುತ್ತಾಳೆ. ಮಗುವಿಗಾಗಿ ಮೂರ್ತಿ
ಮೂಕಿ ಗಂಗಾಳನ್ನು ವಿವಾಹವಾಗುತ್ತಾನೆ. ಮಗು ಸಹ
ಕಿವುಡುತನದಿಂದ ಕೂಡಿರುತ್ತದೆ. ಕಿವುಡ ಮೂಗರ ಶಾಲೆಗೆ
ಹೋಗಿ ಅಲ್ಲಿನ ಶಿಕ್ಷಣ ರೀತಿ ಕಲಿತು ಬಂದ ಮೂರ್ತಿ,

ತಾಯಿ-ಮಗುವಿಗೆ ಆ ಶಿಕ್ಷಣ ನೀಡುತ್ತಾನೆ. ಮಗುವಿಗೆ ಒಮ್ಮೆ ಬೆಂಕಿ ಹೊತ್ತಿಕೊಂಡು ಅದು ಅರಚುತ್ತಿದರೂ, ಮೂಕಿ ಗಂಗಾಳಿಗೆ ಕೇಳಿಸದೇ ಹೋಗಿ ಮಗು ಅಗ್ನಿಗಾಹುತಿಯಾಗುತ್ತದೆ. ಮೂರ್ತಿ ಹಾಗು ಗೆಳೆಯ ಗೋಪಾಲರಾವ (ದಿನೇಶ) ಸೇರಿ ಕಿವುಡ-ಮೂಗರ ಶಾಲೆ ಆರಂಭಿಸುತ್ತಾರೆ. ಗಂಗಾ ಹೆಣ್ಣು ಮಗುವಿನ ತಾಯಿಯಾಗುತ್ತಾಳೆ. ಆ ಮಗುವಿಗೆ ಅಂಗವೈಕಲ್ಯವಿಲ್ಲ ಎಂಬಲ್ಲಿಗೆ ಚಿತ್ರ ಮುಗಿಯುತ್ತದೆ.

೧೬೪. ಮನೆ ಅಳಿಯ

(೧೯೬೪ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಪ್ರಸಾದ್ ಆರ್ಟ್ ಪಿಕ್ಚರ್ಸ್
ಪ್ರೊ: ಎ.ವಿ.ಸುಬ್ಬರಾವ್
ನಿ: ಎಸ್.ಕೆ.ಎ.ಚಾರಿ
ಸ.ನಿ: ವಾಸುದೇವ ಗಿರಿಮಾಜಿ, ಸುಶೀಲ್ ಕುಮಾರ್
ಅ: ಕಲ್ಯಾಣ್‌ಕುಮಾರ್, ಜಯಲಲಿತಾ, ನರಸಿಂಹರಾಜು, ಅಶ್ವತ್ಥ್, ಎಂ.ಪಿ.ಶಂಕರ್, ಗೀತಾ, ಬಾಲಕೃಷ್ಣ, ರಮಾ ವಾಣಿಶ್ರೀ, ಥಿಕ್ಕಿಮಾಧವರಾವ್, ಗುಗ್ಗು, ಸಂಧ್ಯಾ, ಸೂರ್ಯಕಲಾ, ಗಿರಿಮಾಜಿ, ಹನುಮಂತಾಚಾರ್. ರಂಗಭೂಮಿ ನಾರಾಯಣ್, ಲಕ್ಷ್ಮೀದೇವಿ ತಾಳಿಕೋಟೆ, ತಂಗಪ್ಪನ್, ಶಿವಾಜಿ, ಅನಂತರಾವ್, ಹೆಚ್.ಆರ್.ಶರ್ಮ
ಕ: ಸದಾಶಿವ ಬ್ರಹ್ಮಂ
ಮಾ: ನರೇಂದ್ರ ಬಾಬು



ಗೀ: ಎಂ.ನರೇಂದ್ರಬಾಬು, ವಿಜಯನಾರಸಿಂಹ, ಎಸ್.ಕೆ.ಕರೀಂಖಾನ್, ಆರ್.ಎನ್.ಜಯಗೋಪಾಲ್, ಕೆ.ಎಸ್.ನರಸಿಂಹಸ್ವಾಮಿ
ಗಾ: ಪಿ.ಬಿ.ಶ್ರೀನಿವಾಸ್, ಎಸ್.ಜಾನಕಿ, ಜಿಕ್ಕಿ, ಜಯದೇವ್, ಸತ್ಯಂ, ವಸಂತ
ಸಂ: ಜಿ.ಕೃಷ್ಣಸ್ವಾಮಿ
ಛಾ: ಅಣ್ಣಯ್ಯ
ಕಲೆ: ಚಲಂ
ಸ: ಟಿ.ಚಲಪತಿರಾವ್
ಧ್ವ: ಮೋಹನ ಸುಂದರಂ, ರಾಮನಾಥನ್
ನೃ: ತಂಗಪ್ಪನ್, ಚಿನ್ನಿಸಂಪತ್
ವ: ಸೂರ್ಯರಾವ್
ಪ್ರ: ಎಂ.ಗೋಪಾಲ್, ಪೀತಾಂಬರಂ
ಕೇಶಾಲಂಕಾರ: ಭಾಸ್ಕರರಾವ್
ಸ್ಟು: ಗೋಲ್ಡನ್ (ಮದರಾಸು)
ಹಾ: ೧) 'ಹೇಳುವ ಒಗಟನು ಒಡೆದು....', ೨) 'ಪ್ರೀತಿಯ ಹೂಗಳ ಮುಡಿದವಳೇ ಬಳುಕುವ ಬಳ್ಳಿಯ ಮೈಯವಳೇ...', 'ಸರಸಮಯ ಇದು ಸಮಯ....', ೩) 'ಈ ಮುನಿಸು ಈ ಬಿರುಸು....', ೪) 'ನಿಲ್ಲೆ ಗೊಲ್ಲರ ಬಾಲೆ ನಿಲ್ಲೆ....', ೫) 'ಛಲೇ ಛಾನ್ಸಿದೆ ಚಲೋ ಛಾನ್ಸಿದೆ...', ೬) 'ನಿಲ್ಲಲೇ ಸಣ್ಣ ನಡುವಿನವಳೇ....'
ವಿ: ಕೇಂದ್ರ ಸರ್ಕಾರದ 'ಅರ್ಹತಾ ಪ್ರಶಸ್ತಿ ಪತ್ರ' ಪಡೆದ ಚಿತ್ರ
ಕ.ಸಾ: ಶ್ರೀಮಂತ ಶಿವಣ್ಣನವರ ಪುತ್ರಿ ಮೀನಾ ಕಾಲೇಜಿನ ಸಹ ವಿದ್ಯಾರ್ಥಿ ಸೋಮುವನ್ನು ಪ್ರೀತಿಸಿದಳು. ಸೋಮು ತಬ್ಬಲಿ. ಸೋಮು ಶಿವಣ್ಣನವರ ಮನೆ ಅಳಿಯನಾಗಲು ಒಪ್ಪಿದ. ಶಿವಣ್ಣನ ಪತ್ನಿ ನಾಗಮ್ಮ ಹಾಗು ಆಕೆಯ ತಮ್ಮಂದಿರಿಗೆ ಈ ವಿವಾಹ ಇಷ್ಟವಿರಲಿಲ್ಲ. ಮೀನಾಳ ತಲೆ ಕೆಡಿಸಿ ಗಂಡ ಹೆಂಡತಿಯರಿಗೆ ಆಗದಂತೆ ಮಾಡಿದರು. ಶಿವಣ್ಣನವರು ತೀರಿಕೊಂಡ ನಂತರ ಸೋಮುವಿನ ಪರಿಸ್ಥಿತಿ ವಿಪರೀತಕ್ಕಿಟ್ಟುಕೊಂಡಿತು. ಕಳ್ಳತನ, ಹಣ ದುರುಪಯೋಗ, ವ್ಯಭಿಚಾರ, ಪಿತೂರಿ ಮುಂತಾದ ಆಪಾದನೆಗಳನ್ನು ಸೋಮು ಹೊರಬೇಕಾಯಿತು. ಸೋಮು ಮೀನಾಳ ಭ್ರಮೆಯನ್ನು ಹೋಗಲಾಡಿಸಿ ತಾನು ತ್ಯಾಗಶೀಲ ಎಂಬುದನ್ನು ಸಾಬೀತುಪಡಿಸಿದ.

೧೬೫. ಕವಲೆರಡು ಕುಲವೊಂದು

(೧೯೬೪ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಶೈಲಶ್ರೀ ಪ್ರೊಡಕ್ಷನ್ಸ್
ಪ್ರೊ: ಎ.ಸಿ.ನರಸಿಂಹಮೂರ್ತಿ ಮತ್ತು ಮಿತ್ರರು
ನಿ: ಟಿ.ವಿ.ಸಿಂಗ್‌ರಾಕೂರ್
ಸ.ನಿ: ಎಸ್.ಕೆ.ಭಗವಾನ್

ಅ: ಉದಯಕುಮಾರ್, ರಮೇಶ್, ಕಲ್ಪನಾ, ಜಯಂತಿ, ಆದವಾನಿ ಲಕ್ಷ್ಮೀದೇವಿ, ಬಾಲಕೃಷ್ಣ, ಗಣಪತಿಭಟ್, ಶ್ರೀಧರ, ವಿಜಯರಾವ್, ಕುಪ್ಪುರಾಜ್, ಬಾಲನಟ ಪ್ರಶಾಂತ್, ಬೆಂಗಳೂರು ಬಸಪ್ಪ, ರಾಮಮೂರ್ತಿ, ಶ್ರೀನಿವಾಸ್, ಮೂರ್ತಿ
ಕ: ಶ್ರೀಧರ್
ಮಾ: ಎಂ.ನರೇಂದ್ರಬಾಬು
ಗೀ: ಕಣಗಾಲ್ ಪ್ರಭಾಕರಶಾಸ್ತ್ರಿ, ಆರ್.ಎನ್.ಜಯಗೋಪಾಲ್, ನರೇಂದ್ರಬಾಬು
ಗಾ: ಎಸ್.ಜಾನಕಿ, ಪಿ.ಬಿ.ಶ್ರೀನಿವಾಸ್, ಬಿ.ಕೆ.ಸುಮಿತ್ರ, ಮೋತಿ, ಎಲ್.ಆರ್.ಈಶ್ವರಿ
ಸಂ: ವೆಂಕಟರಾಮ್
ಛಾ: ಬಿ.ದೊರೈರಾಜ್
ಕಲೆ: ಆರ್.ಬಿ.ಎಸ್.ಮಣಿ
ಸ: ಜಿ.ಕೆ.ವೆಂಕಟೇಶ್
ಧ್ವ: ಇ.ಐ.ಜೀವ, ಜೆ.ಸೂರ್ಯನಾರಾಯಣರಾವ್
ನೃ: ಬಿ.ಜಯರಾಂ
ವ: ಬಾಬು
ಪ್ರ: ಬಿ.ಆರ್.ಸಿಂಗ್
ಸ್ಟು: ವೀನಸ್, ಮದ್ರಾಸ್
ಹಾ: ೧) 'ಸುಖ ಸೌಭಾಗ್ಯವೆಲ್ಲ ನಮದಾಗಿದೆ....', ೨) 'ಯಾರಲ್ಲೂ ಹೇಳಬೇಡ ಊರೆಲ್ಲಾ ದೂರಬೇಡ....', ೩) 'ಜೋಪಾನ ಯೌವ್ವನ ಚಂದಿರನೋ ಬಲು ಸುಂದರನೋ....', ೪) 'ಇದೇ ರಕ್ತ ಸಂಬಂಧ ಆತ್ಮಾನುಬಂಧ....', ೫) 'ಛೇ ಛೇ ಛೇ ನಿಲ್ಲಯ್ಯ ಅಲ್ಲೇ ನೀನು.....', ೬) 'ಕನ್ನೆ ನಿನ್ನಯ ಕೋಪವಿದೇನೋ...'
ವಿ: ಬಿ.ಕೆ.ಸುಮಿತ್ರ ಈ ಚಿತ್ರದ ಮೂಲಕ ಕನ್ನಡ ಚಿತ್ರರಂಗಕ್ಕೆ ಪರಿಚಯವಾದವರು. ಮುಂಬೈನಲ್ಲಿ ಎಸ್ಸೋ ಕಂಪೆನಿ ಅಧಿಕಾರಿಯಾಗಿದ್ದ ರಮೇಶ್ ಈ ಚಿತ್ರದಿಂದ ಚಿತ್ರರಂಗಕ್ಕೆ ಬಂದರು.
ಕ.ಸಾ: ಅಣ್ಣ ತಮ್ಮಂದಿರಿಬ್ಬರು ಚಿಕ್ಕಂದಿನಲ್ಲಿ ದೂರಾಗುತ್ತಾರೆ. ಅಣ್ಣ ಸುಂದರ್ ಶ್ರೀಮಂತನಾದರೆ, ತಮ್ಮ ರಾಜ ಕಳ್ಳನಾಗುತ್ತಾನೆ. ಸುಂದರ್ ಯುವತಿಯೊಬ್ಬಳ ಪ್ರೀತಿಗೆ ಮಾರು ಹೋಗಿ ಹೆಂಡತಿ, ಮಗುವನ್ನು ಮರೆಯುತ್ತಾನೆ. ರಾಜ ತೆರೆ ಹಿಂದೆ ನಿಂತು ಅವರ ಸಂಸಾರ ಸರಿಪಡಿಸುತ್ತಾನೆ.

೧೯೬೫

೧೬೬. ಬೆರೆತ ಜೀವ

(೧೯೬೫ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಕರ್ನಾಟಕ ಫಿಲಂಸ್ । ವಿವಿಧ ಭಾರತಿ
ಪ್ರೊ: ಕು.ರ.ಸೀತಾರಾಮಶಾಸ್ತ್ರಿ, ಎಸ್. ಶಿವರಾಂ
ನಿ: ಕು.ರ.ಸೀ.
ಸ.ನಿ: ವಿಶ್ವನಾಥನ್

ಅ: ಕಲ್ಯಾಣ್‌ಕುಮಾರ್, ಬಿ.ಸರೋಜಾದೇವಿ, ಜಯಂತಿ, ಅಶ್ವತ್ಥ್, ಶಿವರಾಂ, ಬಾಲಕೃಷ್ಣ, ನರಸಿಂಹರಾಜು, ರಾಮಚಂದ್ರಶಾಸ್ತ್ರಿ, ರಾಘವೇಂದ್ರರಾವ್, ಶಿವರಾಜ್, ಜಯಶ್ರೀ, ಲಕ್ಷ್ಮೀದೇವಿ, ಜಯಾ
ಕ/ಚಿ.ಕ/ಮಾ/ಗೀ: ಕು.ರ.ಸೀ. (ತಮಿಳು ಚಿತ್ರದ ಪುನರವತರಣಿಕೆ)
ಗಾ: ಪಿ.ಬಿ.ಶ್ರೀನಿವಾಸ್, ಪಿ.ಸುಶೀಲಾ
ಸಂ: ಬಾಲ್ ಜಿ.ಯಾದವ್
ಛಾ: ಕೆ.ಜಾನಕೀರಾಂ
ಕಲೆ: ಸಿ.ಹೆಚ್.ಇ.ಪ್ರಸಾದ್‌ರಾವ್
ಸ: ವಿಜಯಭಾಸ್ಕರ್
ಧ್ವ: ಎಂ.ಬಿ.ವಾಲ್ಕೆ, ಫ್ರಾನ್ಸಿಸ್ ಎ.ಸ್ವಾಮಿ
ಪ್ರ: ರಾಮದಾಸ್, ಮಾಧವಯ್ಯ
ಸ್ಟು: ಫಿಲಂ ಸೆಂಟರ್
ಹಾ: ೧) 'ಏನು ಬೇಕು ಏನು ಬೇಕು...', ೨) 'ಕಂಡಂಥ ಕನಸೆಲ್ಲ...', ೩) 'ಬಂದದ್ದೆಲ್ಲಾ ಬರಲಿ...', ೪) 'ನನ್ನ ಧಾಟಿಯ ನೀನರಿಯೆ...', ೫) 'ಅಂಕದ ಪರದೆ ಜಾರಿದ ಮೇಲೆ...'
ವಿ: ಎಸ್.ಶಿವರಾಂ ಚಿತ್ರರಂಗ ಪ್ರವೇಶಿಸಿದರು. ಎಸ್.ರಾಮನಾಥನ್ ಸಹೋದರ ಶಿವರಾಂ ಹೆಸರಿನಲ್ಲಿ ನಿರ್ಮಾಪಕರಾದರು. ಬಿ.ಸರೋಜಾದೇವಿ ದ್ವಿಪಾತ್ರದಲ್ಲಿ
ಕ.ಸಾ: ಅನಾಥನಾದ ಹುಡುಗ ಹೃದಯವಂತ ದಂಪತಿಗಳ ಸಹಕಾರದೊಂದಿಗೆ ವೈದ್ಯನಾಗುತ್ತಾನೆ. ಮೆಚ್ಚಿ ನರ್ಸ್ ಒಬ್ಬಳ ಕೈ ಹಿಡಿಯುತ್ತಾನೆ. ಅವನ ಧ್ಯೇಯ ಕ್ಯಾನ್ಸರ್‌ಗೆ ಔಷಧಿ ಕಂಡುಹಿಡಿಯುವುದು. ಮದುವೆಯ ನಂತರ ಗುರಿ ಸಾಧ್ಯವಾಗದು ಎಂದು ಅರಿತ ಹೆಂಡತಿ ದೂರ ಸರಿಯುತ್ತಾಳೆ. ವೈದ್ಯ ನಿರಾಶನಾಗುತ್ತಾನೆ. ನಂತರ ಹಲವರ ಪ್ರಯತ್ನದಿಂದ ಅತ ತನ್ನ ಗುರಿ ಸಾಧಿಸುವಲ್ಲಿ ಯಶಸ್ವಿಯಾಗುತ್ತಾನೆ.

೧೬೭. ನಾಗಪೂಜಾ

(೧೯೬೫ / ಕಪ್ಪು-ಬಿಳುಪು / ಜಾನಪದ)
ಲಾ: ಮಾರುತಿ ಫಿಲಂಸ್
ಪ್ರೊ: ಭಕ್ತವತ್ಸಲಂ, ಗೀತಾದೇವಿ
ನಿ: ಡಿ.ಎಸ್.ರಾಜಗೋಪಾಲ್
ಸ.ನಿ: ತಿಪಟೂರು ರಘು
ಅ: ರಾಜಕುಮಾರ್, ರಾಜಶ್ರೀ, ಲೀಲಾವತಿ, ಪಾಪಮ್ಮ, ರಾಘವೇಂದ್ರರಾವ್, ಶಾಂತ, ಹನುಮಂತರಾವ್, ರಾಜೇಂದ್ರಕೃಷ್ಣ, ಗೀತಾದೇವಿ, ನರೇಶ್, ಗುರುಸಿದ್ದಪ್ಪ, ನಂಜುಂಡಪ್ಪ, ತಿಪಟೂರು ರಘು, ಶಿವಾಜಿರಾವ್, ಬಾಲು, ಗುಗ್ಗು, ಲಕ್ಷ್ಮೀರಾಜ್ಯಂ (ನೃತ್ಯ)
ಚಿ.ಕ/ಮಾ/ಗೀ: ಗೀತಪ್ರಿಯ
ಗಾ: ಪಿ.ಬಿ.ಶ್ರೀನಿವಾಸ್, ಪಿ.ಸುಶೀಲ, ಎಲ್.ಆರ್.ಈಶ್ವರಿ, ಪೀಠಾಪುರಂ ನಾಗೇಶ್ವರರಾವ್, ಪಿ.ಲೀಲಾ
ಸಂ: ಪಿ.ಭಕ್ತವತ್ಸಲಂ
ಛಾ: ಕೆ.ಜಾನಕಿರಾಂ
ಕಲೆ: ಗೋಡ್‌ಗಾಂವ್‌ಕರ್
ಸ: ಟಿ.ಜಿ.ಲಿಂಗಪ್ಪ
ಧ್ವ: ಮಾಣಿಕ್ಯಂ, ರಾಮನಾಥನ್, ನಾಗೇಶ್ವರನ್
ನೃ: ತಂಗರಾಜ್ - ಕೃಷ್ಣಕುಮಾರ್
ಪ: ಕುಪ್ಪುಸ್ವಾಮಿ
ಪ್ರ: ಮಣಿ-ದೊರೆಸ್ವಾಮಿ
ಸ್ಟು: ಗೋಲ್ಡನ್
ಹಾ: ೧) 'ಓ ಪ್ರೇಮದ ಪೂಜಾರಿ ಬಾ ಎನ್ನ ಮನಸ್ಸಿನ

ಸಂಚಾರಿ...', ೨)'ಲಾಲಿ ಲಾಲೀ ಬಾಲ ಮುಕುಂದ.....', ೩)'ಸ್ಯೆ ಸ್ಯೆ ಸ್ಯೆ ಎನ್ನುವ ಮನಸು...', ೪)'ಮಧುಮಯ ಚಂದ್ರನ ಮಧುಮಯ ಹಾಸವೆ....', ೫)'ಓ ಕನ್ನಡ ನಾಡಿನ ಕುಲನಾರಿ ನಿನ ಭಾವನೆ ಲೋಕಕ ದಾರಿ...'. ೬)'ಹೇ ಕಾಮಧೇನು ತಾಯೇ....', ೭)'ನೀತಿಯ ನಿಲಿಸಿ ನ್ಯಾಯವನುಳಿಸಿ...', ೮)'ಬೆಳಗಿಸು ಬೆಳಗಿಸು...',
ವಿ: ಸರ್ಪವೊಂದು ವಿಶೇಷವಾಗಿ ಅಭಿನಯ ನೀಡಿದೆ. ಪಿ.ಭಕ್ತವತ್ಸಲಂ ಸಂಕಲನ ನೀಡಿದ ಮೊದಲ ಚಿತ್ರ.
ಕ.ಸಾ: ನಾಗಕುಮಾರನೊಬ್ಬ ಭೂಲೋಕದಲ್ಲಿ ಮಾನವನಾಗಿ ಜನಿಸುತ್ತಾನೆ. ಅವನನ್ನು ಮೋಹಿಸಿ ವಿಫಲಳಾದ ನಾಗಕನ್ಯೆ ಇವನ ಮೇಲೆ ಸೇಡು ತೀರಿಸಿಕೊಳ್ಳಲು ಕಾಯುತ್ತಿರುತ್ತಾಳೆ. ನಾಗಕುಮಾರ ಚಂಪಾಳನ್ನು ವಿವಾಹವಾದ ದಿನವೇ ಚಂಪಾಳನ್ನು ನಾಗಮತಿ ಕಚ್ಚುತ್ತಾಳೆ. ಪುಂಗಿ ನಾದ ಕೇಳಿದರೆ ಮೈದೂಗುತ್ತಿದ ನಾಗಕುಮಾರನನ್ನು ನಾಗಕನ್ಯೆ ಹಿಂಸಿಸುತ್ತಾಳೆ. ನಾಗಕನ್ಯೆ ಚಂಪಾಳಿಗೆ ನಾನಾ ತೊಂದರೆ ನೀಡುತ್ತಾಳೆ. ನಾಗಕುಮಾರ ಶಾಶ್ವತವಾಗಿ ಸರ್ಪವಾದಾಗ ಸರ್ಪವನ್ನರಸಿ ಚಂಪಾ ಹೋಗುತ್ತಾಳೆ. ನಾಗದೇವನ ವರದಿಂದ ಎಲ್ಲವೂ ಒಳ್ಳೆಯದಾಗುತ್ತದೆ.

೧೬೮. ಚಂದ್ರಹಾಸ

(೧೯೬೫ / ಕಪ್ಪು-ಬಿಳುಪು / ಜಾನಪದ)
ಲಾ: ವಸಂತ್ ಪಿಕ್ಚರ್ಸ್
ಪ್ರೊ/ನಿ: ಬಿ.ಎಸ್.ರಂಗಾ
ಸ.ನಿ: ಚಿ.ಸದಾಶಿವಯ್ಯ, ಟಿ.ದಯಾಸಾಗರ್, ಕೆ.ಧರ್ಮರಾಜು
ಅ: ರಾಜಕುಮಾರ್, ಉದಯಕುಮಾರ್, ಕೆ.ಎಸ್.ಅಶ್ವತ್, ನರಸಿಂಹರಾಜು, ಆರ್.ಎನ್.ಸುದರ್ಶನ್, ರತ್ನಾಕರ್, ಕೃಷ್ಣಶಾಸ್ತ್ರಿ, ಲೀಲಾವತಿ, ವಾಣಿಶ್ರೀ, ಪಂಢರಿಬಾಯಿ, ಸೂರ್ಯಕಲಾ, ಸಬಿತಾದೇವಿ, ರಮಾ, ಜಯಾ, ರಾಧಾ ಕುಮಾರಿ, ಆರ್.ನಾಗೇಂದ್ರರಾವ್ (ಗೌರವ ನಟ), ವಿಜಯರಾವ್, ಶ್ರೀಕಾಂತ್, ಮಾ। ಬಾಬು, ಎ.ವಿ.ಸುಬ್ಬರಾವ್, ಶಿವಾಜಿರಾವ್, ಹನುಮಂತರಾವ್, ಕಸ್ತೂರಿರಾಜ್, ಎಲ್.ಎನ್.ಸ್ವಾಮಿ, ಆರ್.ಶ್ರೀನಿವಾಸರಾವ್,

ಸುಬ್ರಹ್ಮಣ್ಯಂ, ಕಾಶೀನಾಥ್
ಕ/ಚಿ.ಕ/ಮಾ/ಗೀ: ಚಿ.ಸದಾಶಿವಯ್ಯ
ಗಾ: ಘಂಟಸಾಲ, ಪಿ.ಬಿ.ಶ್ರೀನಿವಾಸ್, ಪಿ.ಸುಶೀಲ, ಎಸ್.ಜಾನಕಿ, ಪಿ.ಲೀಲಾ, ಬೆಂಗಳೂರು ಲತಾ, ನರಸಿಂಹರಾಜು, ಮಾಧವಪೆದ್ದಿ ಸತ್ಯಂ
ಸಂ: ಪಿ.ಜಿ.ಮೋಹನ್
ಛಾ: ಬಿ.ಎನ್.ಹರಿದಾಸ್
ಕಲೆ: ವಾಲಿ
ಸ: ಎಸ್.ಹನುಮಂತರಾವ್
ಧ್ವ: ಎನ್.ಶೇಷಾದ್ರಿ, ಬಿ.ಎಸ್.ರಾಮಣ್ಣ
ನೃ: ಎ.ಕೆ.ಛೋಪ್ರ, ಪಿ.ಎಸ್.ಗೋಪಾಲಕೃಷ್ಣ, ವೆಂಪಟಿಸತ್ಯಂ
ಸಾ: ಪಿ.ಎ.ಪುಲಿಕೇಶಿ
ವ: ವಿ.ಎನ್.ಮೂರ್ತಿ
ಪ: ಕೆ.ವಿ.ಸ್ವರ್ಣಪ್ಪ, ಕೆ.ಪಿ.ಷಣ್ಮುಗಂ, ದೊರೆಸ್ವಾಮಿ, ವಿಶ್ವಂಭರಂ
ಕೇಶಾಲಂಕಾರ: ಜೋಸೇಫೈನ್ - ರಾಜಗೋಪಾಲ್
ಸ್ಟು: ವಿಕ್ರಂ (ಮದರಾಸು)
ಹಾ: ೧)'ಶ್ರೀ ಹರಿನಾರಾಯಣ ಶಾಂತಿ....', ೨)'ಹೇ ಶೇಷಶಯನ ನಾರಾಯಣ.....', ೩)'ಲೋಕಪಾವನಾ ಭಕ್ತ ತಾರಣಾ....', ೪)'ಭಪ್ಪರೆ ಭಳಿರೆ ತಾಯಿತೀ ಇದು.....', ೫)'ಹಸಿದೀ ಅಂದವು ಪತಕೀ ಬಂಧವು...', ೬)'ಶಿವಶಿವ ಶಿವಶಂಭೋ ದೇವ...', ೭)'ಹುಣ್ಣಿಮೆಯ ಚಂದ ಆಕಾಶದಿಂದ ಬಂದ....', ೮)'ಯಾವ ಕವಿಯ ಶೃಂಗಾರ ಕಲ್ಪನೆಯೋ....', ೯)'ಓ ಪ್ರಾಣಸಖಾ ನೀ ಎಲ್ಲಿರುವೆ....', ೧೦)'ಜನನೀ ಜಯಗೌರಿ ಶ್ರೀ ತ್ರಿಪುರ ಸುಂದರಿ.....', ೧೧)'ಜಗವೆಲ್ಲ ತುಂಬಿರುವ...'
ಕ.ಸಾ: ಕೇರಳದ ಮೇಧಾವಿ ಎಂಬ ರಾಜನ ಪುತ್ರ ಚಂದ್ರಹಾಸ. ಸುಬುದ್ಧಿ ಎಂಬ ಮಂತ್ರಿ ರಾಜನನ್ನು ಕೊಂದು ರಾಜ್ಯವನ್ನು ವಶಪಡಿಸಿಕೊಂಡ. ಆಪ್ತ ದಾಸಿ ನಂದನಿ ಚಂದ್ರಹಾಸನನ್ನು ಕರೆದುಕೊಂಡು ತಪ್ಪಿಸಿಕೊಂಡು ಹೋದಳು. ವನವೊಂದರಲ್ಲಿ ಮಲಗಿದ್ದ ಚಂದ್ರಹಾಸ ಪತ್ತೆಯಾಗಿ, ಅವನ ತಲೆ ಕಡಿಯಲು ಮಂತ್ರಿಯು ಕಟುಕರಿಗೆ ಅಪ್ಪಣೆ ಮಾಡಿದ. ಕಟುಕರು ಅವನನ್ನು ಕಾಡಿನಲ್ಲಿ ಬಿಟ್ಟು ಹೋದರು. ಚಂದ್ರಹಾಸ ಧೀರ, ವೀರ, ಶೂರ, ಸುಂದರನಾಗಿದ. ಸುಬುದ್ಧಿಯು ತನ್ನ ಪುತ್ರನಿಗ ವಿಷ ಕೊಡೆಂದು ಪತ್ರ ಬರೆದು ಚಂದ್ರಹಾಸನ ಕೈಯಲ್ಲಿ ಕಳುಹಿಸಿದ. ವಿಷಯೆ ಮಂತ್ರಿಯ ಮಗಳಾಗಿದ್ದಳು. ವಿಷಯೆಯನ್ನು ಕೊಡೆಂದು ತಂದೆ ಬರೆದಿದ್ದಾರೆಂದು ಗ್ರಹಿಸಿ ವಿವಾಹ ಮಾಡಿದ. ಚಂದ್ರಹಾಸ ಚಕ್ರವರ್ತಿಯಾದ.

೧೬೯. ಸರ್ವಜ್ಞಮೂರ್ತಿ

(೧೯೬೫ / ಕಪ್ಪು-ಬಿಳುಪು / ಐತಿಹಾಸಿಕ)
ಲಾ: ನಿರಂಜನ ಚಿತ್ರ
ಪ್ರೊ: ನರೇಂದ್ರಬಾಬು
ನಿ: ಆರೂರು ಪಟ್ಟಾಭಿ
ಸ.ನಿ: ಹೆಚ್.ಆರ್.ಶರ್ಮ, ಪಿ.ಬಾಬು
ಅ: ರಾಜಕುಮಾರ್, ಹರಿಣಿ, ಮೈನಾವತಿ, ಬಾಲಕೃಷ್ಣ, ವರದರಾಜ್, ಕೃಷ್ಣಶಾಸ್ತ್ರಿ, ಉದಯಕುಮಾರ್, ಅಶ್ವತ್, ನಿರಂಜನ್, ಥಿಕ್ಕಿ ಮಾಧವರಾವ್, ಗಣಪತಿಭಟ್, ಹನುಮಂತಾಚಾರ್, ಹನುಮಂತರಾವ್, ಅಂಬುಜಮ್ಮ, ಲಕ್ಷ್ಮೀದೇವಿ, ಹೆಚ್.ಎನ್.ರಾಜಮ್ಮ, ಹೆಚ್.ಪಿ.ಸರೋಜ, ಪದ್ಮಮ್ಮ, ಸೂರ್ಯಾ, ಸರೋಜಮ್ಮ, ಜಯಂತಿ
ಕ/ಚಿ.ಕ/ಮಾ/ಗೀ: ಎಂ.ನರೇಂದ್ರಬಾಬು
ಗಾ: ಪಿ.ನಾಗೇಶ್ವರರಾವ್, ಸಿ.ಎಸ್.ಸರೋಜಿನಿ, ಎಸ್.ಜಾನಕಿ, ಆರಾಧ್ಯ, ಬಸವರಾಜು
ಸಂ: ಎಂ.ಜಿ.ಬಾಲುರಾವ್
ಛಾ: ಕೆ.ಜಾನಕಿರಾಂ
ಕಲೆ: ಸಿ.ಹೆಚ್.ಇ.ಪ್ರಸಾದ್‌ರಾವ್
ಸ: ಜಿ.ಕೆ.ವೆಂಕಟೇಶ್
ಧ್ವ: ಎಂ.ಜಿ.ವಾಲ್ಕೆ
ನೃ: ಉಡುಪಿ ಜಯರಾಂ
ವ: ಬೇಲೂರು ಕೃಷ್ಣಮೂರ್ತಿ, ಗುರುಸ್ವಾಮಿ
ಪ: ಎಂ.ಗೋಪಾಲ್, ದೊರಸ್ವಾಮಿ, ಸುಬ್ಬಣ್ಣ, ಎಂ.ಎಸ್.ನಾರಾಯಣಸ್ವಾಮಿ, ಜಂಬು
ಸ್ಟು: ಫಿಲಂ ಸೆಂಟರ್, ಮೆಜೆಸ್ಟಿಕ್
ಹಾ: ೧)'ಸರ್ವಜ್ಞ ಮತ್ತೊಮ್ಮೆ...', ೨)'ಬೆಳಗಾಗಿ ನಾನೆದು ಯಾರ್‍ಯಾರ...', ೩)'ನೀನೆಲ್ಲರಂತೆ ಅಲ್ಲ...', ೪)'ಬಳುಕುವೀ ಚೆಲ್ವಲತೆಯಲ್ಲಿ...' ೫)'ನೋಟಲ್ಲಿ ನೋಡೆ...', ೬)'ಬಿಭಿನಲ್ಲಿದೆ ಜಗಕೆ...'
ವಿ: ರೆವರೆಂಡ್ ಚೆನ್ನಪ್ಪ ಉತ್ತಂಗಿಯವರು ಈ ಚಿತ್ರದ ಕಥೆ ಹಾಗೂ ವಚನಗಳಿಗೆ ಮಾರ್ಗದರ್ಶನ ಮಾಡಿದರು. ರಾಜಕುಮಾರ್ ಸರ್ವಜ್ಞರಾಗಿ, ಅವರ ತಮ್ಮ ವರದರಾಜ್ ಗಿರ್ವಜ್ಞನಾಗಿ ಈ ಚಿತ್ರದಲ್ಲಿ ನಟಿಸಿದರು. ಸರ್ವಜ್ಞ ವಚನಗಳನ್ನು ಬಳಸಲಾಗಿದ.
ಕ.ಸಾ: ಕನ್ನಡ ನಾಡಿನ ದಾರ್ಶನಿಕ, ತತ್ವಜ್ಞಾನಿ, ಕವಿ, ಸಮಾಜ ಸುಧಾರಕ ಸರ್ವಜ್ಞನ ಜೀವನ ಆಧರಿತ ಚಿತ್ರ.

೧೭೦. ವಾತ್ಸಲ್ಯ

(೧೯೬೫ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಸುಚಿತ್ರ ಮೂವೀಸ್
ಪ್ರೊ: ಎಸ್.ಹೀರಾ
ನಿ: ವೈ.ಆರ್.ಸ್ವಾಮಿ
ಸ.ನಿ: ಸಿದಲಿಂಗಯ್ಯ

ಅ: ರಾಜಕುಮಾರ್, ಲೀಲಾವತಿ, ಪಾಪಮ್ಮ, ನರಸಿಂಹರಾಜು, ಉದಯಕುಮಾರ್, ಜಯಂತಿ, ಗಣಪತಿಭಟ್, ಶಿವರಾಜ್, ಕುಪ್ಪುರಾಜ್, ರಮ, ಬೇಬಿ ರಮಾಮಣಿ, ಬೇಬಿ ಸುನೀತ, ಕೃಷ್ಣಶಾಸ್ತ್ರಿ, ಸಂಜಪ್ಪ, ಸಿದ್ದರಾಜ್, ಸಿದ್ಧಲಿಂಗಪ್ಪ, ನಾರಾಯಣ್
ಕ: ಜಿ.ವಿ.ಕೃಷ್ಣ (ತಮಿಳಿನ 'ಪಾಸಮಲರ್' ರಿಮೇಕ್)
ಚಿ.ಕ: ವೈ.ಆರ್.ಸ್ವಾಮಿ
ಮಾ/ಗೀ: ಸೋರಟ್ ಅಶ್ವತ್
ಗಾ: ಘಂಟಸಾಲ, ಪಿ.ಬಿ.ಶ್ರೀನಿವಾಸ್, ಪಿ.ಸುಶೀಲ, ಜಿಕ್ಕಿ, ಎಲ್.ಆರ್.ಈಶ್ವರಿ
ಸಂ: ಆರ್.ಹನುಮಂತರಾವ್
ಛಾ: ಆರ್.ಮಧು
ಕಲೆ: ಬಿ.ಎನ್.ಕೃಷ್ಣ
ಸ: ವಿಜಯಾ ಕೃಷ್ಣಮೂರ್ತಿ
ಧ್ವ: ಟಿ.ಮೋಹನ ಸುಂದರಂ, ಎಸ್.ಪಿ.ರಾಮನಾಥನ್, ಟಿ.ಲಾಜರಸ್
ನೃ: ಆರ್.ವೇಣುಗೋಪಾಲ್
ವ: ದೊರೈಕಣ್ಣನ್
ಪ: ವೈ.ಮಾಧವಯ್ಯ, ಸುಬ್ಬಣ್ಣ, ರಾಜಗೋಪಾಲ್
ಸ್ಟು: ಗೋಲ್ಡನ್ (ಮದರಾಸು)
ಹಾ: ೧)'ಇದುವೇ ವಾತ್ಸಲ್ಯ....', ೨)'ಶ್ರಮದಿ ನಾವ್ ದುಡಿದು ಬೆವರ ಹನಿ ತೆಗೆದು....', ೩)'ಮಾಗಿದ ಹಣ್ಣು ಬಳಿಯಿರಲಿನ್ನು.....', ೪)'ಮುದ ತುಂಬಿ ಮೆರೆವ ಮದುಮಗಳೇ.....', ೫)'ನೀ ನಾಚಲೇಕ ತೀರೇ ಹಾರೈಕೆ....', ೬)'ಮರೆಯಲಾಗದ ಹಿಂದಿನಾ ನನ್ನ ಕಥೆಯ ಕೇಳು.....', ೭)'ಸೋದರೀ ಸೋದರರ ಪ್ರೇಮ ಅಮರವಾಯಿತು....'
ವಿ: ರಾಜಕುಮಾರ್ ಹಾಗೂ ಲೀಲಾವತಿ ಅಣ್ಣಾತಂಗಿಯರಾಗಿ ಅಭಿನಯಿಸಿದ ಏಕೈಕ ಚಿತ್ರ
ಕ.ಸಾ: ಅಣ್ಣಾ ತಂಗಿಯರಿಬ್ಬರ ವಾತ್ಸಲ್ಯದ ಕಥ ಇದು. ರಾಜಶೇಖರ್ ಬಡತನದಿಂದ ಮೇಲೇರಿ ಬಂದು ಕಾರ್ಖಾನೆ ಮಾಲೀಕನಾಗುತ್ತಾನೆ. ಕಾರ್ಖಾನೆಯ ನೌಕರ ಆನಂದ್‌ನನ್ನು ತಂಗಿ ರಾಧ ಪ್ರೀತಿಸುತ್ತಾಳೆ. ತಂಗಿಯ ವಾತ್ಸಲ್ಯಕ್ಕೆ ಮಣಿದು ಈ ವಿವಾಹ ಮಾಡುತ್ತಾನೆ. ಆನಂದ್ ಹಾಗು ಅವರ ಮನೆಯವರು ಸೇರಿ ರಾಜಶೇಖರನನ್ನು ಬೀದಿಪಾಲು ಮಾಡುತ್ತಾರೆ. ಹುಚ್ಚನಂತಾದ ರಾಜಶೇಖರ್ ಕಣ್ಣು ಕಳೆದುಕೊಂಡು ತಂಗಿಯ ಹತ್ತಿರ ಬರುತ್ತಾನ. ಅಣ್ಣಾ ತಂಗಿ ಇಬ್ಬರೂ ಸಾಯುತ್ತಾರೆ.

೧೭೧. ಸತ್ಯಹರಿಶ್ಚಂದ್ರ

(೧೯೬೫ / ಕಪ್ಪು-ಬಿಳುಪು /ಪೌರಾಣಿಕ)
ಲಾ: ವಿಜಯಾ ಪ್ರೊಡಕ್ಷನ್ಸ್
ಪ್ರೊ: ಕೆ.ವಿ.ರೆಡ್ಡಿ
ನಿ: ಹುಣಸೂರು ಕೃಷ್ಣಮೂರ್ತಿ
ಸ.ನಿ: ಯು.ವಿ.ಸತ್ಯಂ
ಅ: ರಾಜಕುಮಾರ್, ಉದಯಕುಮಾರ್, ನರಸಿಂಹರಾಜು, ಎಂ.ಎಸ್.ಸುಬ್ಬಣ್ಣ, ಎಂ.ಪಿ.ಶಂಕರ್, ಕುಪ್ಪರಾಜು, ಪಂಢರಿಬಾಯಿ, ರಮಾದೇವಿ, ವಿಜಯಲಕ್ಷ್ಮಿ, ವಾಣಿಶ್ರೀ, ಬೇಬಿ ಪದ್ಮಿನಿ, ರಾಮಚಂದ್ರಶಾಸ್ತ್ರಿ, ಅಶ್ವತ್, ಕೃಷ್ಣಶಾಸ್ತ್ರಿ, ದ್ವಾರಕೀಶ್, ರತ್ನಾಕರ್, ರೇಲಂಗಿ, ನಾಗೇಶ್, ಎಂ.ಎಸ್.ಸುಬ್ಬಣ್ಣ, ರಾಜಶ್ರೀ, ಮೀನಾಕುಮಾರಿ
ಚಿ.ಕ: ಕೆ.ವಿ.ರೆಡ್ಡಿ

ಮಾ/ಗೀ: ಹುಣಸೂರು ಕೃಷ್ಣಮೂರ್ತಿ
ಗಾ: ಪಿ.ಲೀಲಾ, ಪಸುಮರ್ತಿ ಕೃಷ್ಣಮೂರ್ತಿ, ಪಿ.ಸುಶೀಲ, ಘಂಟಸಾಲ, ನಾಗೇಂದ್ರಪ್ಪ, ಸ್ವರ್ಣಲತಾ, ಜಗನ್ನಾಥ್, ಬಿ.ಗೋಪಾಲಂ
ಸಂ: ಜಿ.ಕಲ್ಯಾಣ ಸುಂದರಂ, ಪಿ.ಜಿ.ಜಯರಾಂ
ಛಾ: ಮಾಧವ ಬುಲ್‌ಬುಲೆ
ಕಲೆ: ಗೋಖಲೆ, ಕಳಾಧರ್
ಸ: ಪೆಂಡ್ಯಾಲ ನಾಗೇಶ್ವರರಾವ್
ಧ್ವ: ಎಂ.ಬಿ.ವಾಲ್ಕೆ, ವೆಂಕಟರಮಣನ್
ನೃ: ಪಸುಮರ್ತಿ ಕೃಷ್ಣಮೂರ್ತಿ
ಪ್ರ: ದೊರೆಸ್ವಾಮಿ
ಸ್ಟು: ವಿಜಯ ವಾಹಿನಿ (ಮದರಾಸು)
ಹಾ: ೧)'ನೀನು ನಮಗೆ ಸಿಕ್ಕಿ ಬಿದ್ದೆಯೋ ರಾಜ.....', ೨)'ಆನಂದ ಸದನ ಅರವಿಂದ ನಯನಾ....', ೩)'ಏನಿದೀ ಗ್ರಹಚಾರವೋ.....', ೪)'ನಮೋ ಭೂತನಾಥ....', ೫)'ಕಲಿದೆ ಕಾಲದ......', ೬)'ಕುಲದಲ್ಲಿ ಮೇಲಾವುದೋ ಹುಚ್ಚಪ್ಪ.....', ೭)'ನನ್ನ ನೀನು ನಿನ್ನ ನಾನೂ.....', ೮)'ವಿಧಿ ವಿಪರೀತ.....', ೯)ಕಾಲ ಕೌಶಿಕನ ಮುಂದೆ...'. ೧೦) ತಾಳಿ ಕಟ್ಟಿದ...', ೧೧)'ಅದಿಗೋ ಆದಿತ್ಯ ೧೨)'ಸತ್ಯವನು...'
ವಿ: ರಾಷ್ಟ್ರಪತಿಗಳ 'ಅರ್ಹತಾ ಪ್ರಶಸ್ತಿ' ಪಡೆದ ಚಿತ್ರ
ಕ.ಸಾ: ಋಷಿ ಮುನಿಗಳಾದ ವಸಿಷ್ಠ ಹಾಗೂ ವಿಶ್ವಾಮಿತ್ರರ ನಡುವೆ ಪಂದ್ಯವೊಂದು ಬಿದ್ದು ಹರಿಶ್ಚಂದ್ರ ಮಹಾರಾಜ ಯಾವುದೇ ಸಂದರ್ಭದಲ್ಲಿ ಸುಳ್ಳು ಹೇಳುವುದಿಲ್ಲವೆಂಬುದನ್ನು ಪರೀಕ್ಷಿಸಲು ವಿಶ್ವಾಮಿತ್ರ ಹರಿಶ್ಚಂದ್ರನಿಗೆ ನಾನಾ ಪರೀಕ್ಷೆಗಳನ್ನು ಒಡ್ಡುತ್ತಾನೆ. ರಾಜ್ಯ ಕೋಶಾದಿಗಳನ್ನಲ್ಲದೆ ಹೆಂಡತಿ, ಮಕ್ಕಳನ್ನೂ ಕಳೆದುಕೊಂಡು ಸ್ಮಶಾನದ ಕಾವಲುಗಾರನಾಗುವ ಹರಿಶ್ಚಂದ್ರ ವಧಾ ಸ್ಥಾನದಲ್ಲಿ ತನ್ನ ಪತ್ನಿಯನ್ನೇ ಕೊಲ್ಲಬೇಕಾದ ಸಂದರ್ಭ ಬರುತ್ತದೆ. ಆ ಸಮಯದಲ್ಲಿ ಶಿವ ಪ್ರತ್ಯಕ್ಷನಾಗುತ್ತಾನೆ. ವಿಶ್ವಾಮಿತ್ರ ಹರಿಶ್ಚಂದ್ರನ ಸತ್ಯ ಸಂಧತೆಯನ್ನು ಮೆಚ್ಚಿಕೊಳ್ಳುತ್ತಾನೆ. ಮಗ ಬದುಕಿ ರಾಜ್ಯ, ಕೋಶಾಧಿಗಳು ಮರಳಿ ದೊರೆಯುತ್ತವೆ.

೧೭೨. ಅಮರಜೀವಿ

(೧೯೬೫ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಎಮರಾಲ್ಡ್ ಪ್ರೊಡಕ್ಷನ್ಸ್
ಪ್ರೊ: ಡಿ. ನಾರಾಯಣಪ್ಪ
ನಿ: ಜಿ.ಕೃಷ್ಣಮೂರ್ತಿ
ಸ.ನಿ: ಕೆ.ಎಸ್.ನಾಗಭೂಷಣ್, ಕೊಂಡಯ್ಯ



ಅ: ರಾಜಾಶಂಕರ್, ಬಾಲಕೃಷ್ಣ, ನರಸಿಂಹರಾಜು, ಈಶ್ವರಪ್ಪ, ರಾಘವೇಂದ್ರರಾವ್, ರಾಮಕುಮಾರ್, ನಾಗಪ್ಪ, ಹರಿಣಿ, ಅಶ್ವತ್ಥ ನಾರಾಯಣ, ಲಕ್ಷ್ಮೀದೇವಿ, ರಮಾದೇವಿ, ಪಾಪಮ್ಮ, ಜಯ, ಶಾಂತಮ್ಮ, ಮುನಿಯಪ್ಪ, ಬೇಬಿ ಪ್ರಶಾಂತ್
ಕ/ಚಿ.ಕ: ಜಿ.ಕೃಷ್ಣಮೂರ್ತಿ
ಮಾ: ಗೀತಪ್ರಿಯ
ಗೀ: ಕಣಗಾಲ್ ಪ್ರಭಾಕರಶಾಸ್ತ್ರಿ, ಕು.ರ.ಸೀತಾರಾಮಶಾಸ್ತ್ರಿ, ಗೀತಪ್ರಿಯ
ಗಾ: ಪಿ.ಬಿ.ಶ್ರೀನಿವಾಸ್, ಎಲ್.ಆರ್.ಈಶ್ವರಿ, ಬೆಂಗಳೂರು ಲತಾ, ಪಿ.ನಾಗೇಶ್ವರರಾವ್
ಸಂ: ಎಸ್.ಎಂ.ಶಾಲಿ
ಛಾ: ಎಸ್.ಕೆ.ವರದರಾಜ್
ಕಲೆ: ಜಿ.ಸಿ.ಬಾಬು
ಸ: ವಿಜಯಭಾಸ್ಕರ್
ಧ್ವ: (ಮಾ)ಶೇಖರ್, (ಹಾ)ಎಂ.ಬಿ.ವಾಲ್ಕೆ, ವಿ.ಶಿವರಾಂ
ನೃ: ಚಿನ್ನಿ-ಸಂಪತ್
ವ: ಕೃಷ್ಣ, ವಾಸು
ಪ್ರ: ರಾಜಗೋಪಾಲ್, ಎಂ.ಎಸ್.ಸುಬ್ಬಣ್ಣ
ಸ್ಟು: ವಾಹಿನಿ, ಸತ್ಯ
ಹಾ: ೧)'ನಿಲ್ಲೇ ನಿಲ್ಲೇ...', ೨)'ಇದೇ ಇದೇ ನೋಡು...', ೩)'ಹಳ್ಳಿಯೂರ ಹಮ್ಮೀರ...', ೪)'ಸುಬ್ಬಿ ಬಂದ...', ೫)'ಭಲಾರೆ ಹೆಣ್ಣೆ...', ೬)'ಸೋಜಾನೆ ಸೋಜಾನೆ...'
ವಿ: ಮೊದಲು 'ಹಳ್ಳೀ ಹುಡುಗಿ' ಎಂದು ಹೆಸರಿಡಲಾಗಿತ್ತು. ರಾಜಾಶಂಕರ್ ಕೆಲವು ದಿನಗಳ ವಿರಾಮದ ನಂತರ ಈ ಚಿತ್ರದ ಮೂಲಕ ಮರು ಪ್ರವೇಶ ಮಾಡಿದರು.
ಕ.ಸಾ: ಒರಟು ವ್ಯಕ್ತಿಯಾದ ನಾಯಕ ಒಳ್ಳೆ ಮನಸ್ಸಿನವನು. ಅವನ ವೈರಿಗಳು ಊರಿನ ಸಾಹುಕಾರ ಮತ್ತು ಪೂಜಾರಿ. ಸೀತೆ ಅವನನ್ನು ತಿದ್ದಿ ತೀಡಿ ಪ್ರೀತಿಸುತ್ತಾಳೆ. ಮದುವೆಯಾಗುವುದರೊಳಗೆ ಕೊಲೆ ಆರೋಪ ಬಂದು ಆತ ಸೆರೆಮನೆಗೆ ಹೋಗುತ್ತಾನೆ. ಕಡೆಗೆ ಅವನು ನಿರಪರಾಧಿ ಎಂದು ತೀರ್ಮಾನವಾಗುತ್ತದೆ.

೧೭೩. ನನ್ನ ಕರ್ತವ್ಯ

(೧೯೬೫ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಮೂವಿ ಮೇಕರ್ಸ್
ಪ್ರೊ: ಕೆ.ಎಸ್. ಸತ್ಯನಾರಾಯಣ, ಆರ್. ಸುಂದರಂ
ನಿ: ವೇದಾಂತಂ ರಾಘವಯ್ಯ
ಅ: ಕಲ್ಯಾಣಕುಮಾರ್, ಜಯಲಲಿತ, ಆರ್. ನಾಗೇಂದ್ರರಾವ್, ಕೃಷ್ಣಶಾಸ್ತ್ರಿ, ರಮಾ, ಗಣಪತಿಭಟ್, ಬೆಂಗಳೂರು ನಾಗೇಶ್, ಚಂದ್ರಬಾಬು, ನರಸಿಂಹರಾಜು, ಸಂಧ್ಯಾ
ಕ: ಸತ್ಯನಾರಾಯಣ
ಚಿ.ಕ: ಜಾನಕೀಸುತ
ಮಾ: ಜಾನಕೀಸುತ, ನಾಗೇಶ್‌ಬಾಬ
ಗೀ: ಆರ್.ಎಸ್.ಜಯಗೋಪಾಲ್, ನಂಜು ಕವಿ
ಗಾ: ಪಿ.ಬಿ.ಶ್ರೀನಿವಾಸ್, ಎಸ್.ಜಾನಕಿ, ಜಿ.ಕೆ.ವೆಂಕಟೇಶ್
ಛಾ: ಆರ್.ಎನ್.ಕೆ.ಪ್ರಸಾದ್
ಸ: ಜಿ.ಕೆ.ವೆಂಕಟೇಶ್
ಸ್ಟು: ವೀನಸ್
ಹಾ: ೧)'ಹಾಡಲೇನು ಗೀತೆ ನಾನು...', ೨)'ಹದಿನಾರರ ಹರೆಯದ ಹುಡುಗಿ...', ೩)'ಬೆಳಗಿದೆ ಭೂಮಿಯು...', ೪)'ನನ್ನಲ್ಲಿ ನೀನಾಗಿ ನಿನ್ನಲ್ಲಿ ನಾನಾಗಿ...',
ವಿ: ಜಯಲಲಿತ ಬಾಲವಿಧವೆ ಪಾತ್ರದಿಂದ ಚಿತ್ರರಂಗ ಪ್ರವೇಶಿಸಿದರು.
ಕ.ಸಾ: ಚಿತ್ರದ ನಾಯಕಿ ವಿಧವೆಯಾದಾಗ ಆವಳನ್ನು ಕಾಲೇಜಿಗೆ ಸೇರಿಸುವುದರೊಂದಿಗೆ ವಿಧವಾ ವಿವಾಹವನ್ನು ಪ್ರೋತ್ಸಾಹಿಸುವ ಕಥೆ.

೧೭೪. ಬಾಲರಾಜನ ಕತೆ

(೧೯೬೫ / ಕಪ್ಪು-ಬಿಳುಪು / ಜಾನಪದ)
ಲಾ: ಆರ್.ವೈ.ಸಿ. ಫಿಲಂಸ್
ನಿ: ವೇಣುನಾಥ್
ಅ: ಕಲ್ಯಾಣ್‌ಕುಮಾರ್, ಜಿ.ವಿ. ಲತಾ, ನರಸಿಂಹರಾಜು, ಸೂರ್ಯಕಲಾ, ಉದಯಕುಮಾರ್, ಆರ್.ನಾಗೇಂದ್ರರಾವ್, ಬಿ.ಜಯಮ್ಮ, ರಮಾದೇವಿ, ಹನುಮಂತಾಚಾರ್,

ಗಣಪತಿಭಟ್, ಸೂರ್ಯಕುಮಾರ್, ವಾಸುದೇವಗಿರಿಮಾಜಿ, ವಿಜಯರಾವ್, ಆರ್.ವೈ.ಚೌಧುರಿ
ಚಿ.ಕ: ವೇಣುನಾಥ್
ಮಾ/ಗೀ: ಹುಣಸೂರು ಕೃಷ್ಣಮೂರ್ತಿ
ಗಾ: ಎಸ್.ಜಾನಕಿ, ದಕ್ಷಿಣಾಮೂರ್ತಿ, ಪಿ.ಬಿ.ಶ್ರೀನಿವಾಸ್, ವಸಂತ, ಬಸವೇಶ್ವರ
ಸಂ: ವಾಸು
ಛಾ: ಸಾಂಬಶಿವರಾವ್
ಕಲೆ: ತೋಟ
ಸ: ಎಸ್.ದಕ್ಷಿಣಾಮೂರ್ತಿ
ನೃ: ವೆಂಪಟಿ ಚಿನ್ನ, ಸತ್ಯಂ, ಚಿನ್ನಿ ಸಂಪತ್
ಪ್ರ: ಪೀತಾಂಬರಂ, ವೆಂಕಟರತ್ನಂ
ಹಾ: ೧)'ಮಂಜುಳ ಮುರಳೀ...', ೨)'ಎಲ್ಲ ಜಲ್ಲವೊಳ್ಳೆ ಗೊಲ್ಲಬಾಲನಾ...', ೩)'ಏನಿದು ಮನದ ಬೇಸರ...', ೪)'ಗಂಗಮ್ಮಾ ದಯೆಯಿಡಮ್ಮಾ...', ೫)'ಓ ರಾಜಾ ರಾಜಾ..., ೬)'ಓ ರಾಜಾ ಓಡದಿರೋ...', ೭)'ಯಾರೀ ವೈಯ್ಯಾರಿ...', ೮)'ಹಾ ಸೀತಾ ಸೀತಾ ಎಂದು...', ೯)'ಎಲ್ಲಿ ನೀ ಮರೆಯಾದೆ?...', ೧೦) ಮುನಿಸು ಏತಕೊ...', ೧೧)'ನಿಜರೂಪವ ಕರುಣಿಸ್ಯೆ...', ೧೨)'ಹೊತ್ತು ಮುಳುಗಿ...', ೧೩)'ಸ್ಫಟಿಂ ಸ್ಫಟಿಕ ಸತ್ರಭಂ...',
ಕ.ಸಾ: ಪ್ರೇಮ ಎನ್ನುವುದು ದೈವಿಕವಾದದ್ದು. ಅದರ ಸಾಧನೆಗೋಸ್ಕರ ಅನೇಕ ಪ್ರೇಮಿಗಳು ನಾನಾ ಜನ್ಮವನ್ನು ಎತ್ತಿ ಕಷ್ಟಗಳನ್ನು ಅನುಭವಿಸಿ ಕೊನೆಗೆ ಸಿದ್ಧಿಯನ್ನು ಪಡೆಯುವ ದಿವ್ಯಪ್ರೇಮಿಗಳ ಕಥೆ.

೧೭೫. ಮಹಾಸತಿ ಅನುಸೂಯ

(೧೯೬೫ / ಕಪ್ಪು-ಬಿಳುಪು / ಪೌರಾಣಿಕ)
ಲಾ: ವಿಕ್ರಂ ಪ್ರೊಡಕ್ಷನ್ಸ್
ಪ್ರೊ/ನಿ: ಬಿ.ಎಸ್.ರಂಗಾ

ಸ.ನಿ: ಕೆ.ಧರ್ಮರಾಜ, ಚಿ.ಉದಯಶಂಕರ್
ಅ: ರಾಜಕುಮಾರ್, ಪಂಢರಿಬಾಯಿ, ಅಶ್ವತ್ಥ್, ಲೀಲಾವತಿ, ಬಾಲಕೃಷ್ಣ, ಜಯಂತಿ, ಆರ್.ಟಿ.ರಮಾ, ವಾಣಿಶ್ರೀ, ಮೈನಾವತಿ, ನರಸಿಂಹರಾಜು, ಶ್ರೀಕಾಂತ್, ಶ್ರೀಕಂಠಸ್ವಾಮಿ, ಸೂರ್ಯಕುಮಾರ್, ಈಶ್ವರಪ್ಪ, ಮೈಸೂರು ಲಕ್ಷ್ಮೀಬಾಯಿ
ಚಿ.ಕ/ಮಾ/ಗೀ: ಚಿ.ಉದಯಶಂಕರ್
ಗಾ: ಪಿ.ಬಿ.ಶ್ರೀನಿವಾಸ್, ಎಲ್.ಆರ್.ಈಶ್ವರಿ, ಎಸ್.ಜಾನಕಿ, ಬಿ.ಕೆ.ಸುಮಿತ್ರ, ಲತಾ
ಸಂ: ಪಿ.ಜಿ.ಮೋಹನ್
ಛಾ: ಬಿ.ಎನ್.ಹರಿದಾಸ್
ಕಲೆ: ವಾಲಿ
ಸ: ಎಸ್.ಹನುಮಂತರಾವ್
ಧ್ವ: ಎನ್.ಶೇಷಾದ್ರಿ
ನೃ: ವೆಂಪಟಿ ಸತ್ಯಂ
ಸ್ಟು: ವಿಕ್ರಂ, ಮದರಾಸ್
ಹಾ: ೧)'ನಾರಾಯಣಂ ಭಜರೇ....', ೨)'ಸಮಾನರಾರಿಹರು ಸರಿಸಮಾನರಾರಿಹರು.....', ೩)'ಆದಿ ದೇವ ಆದಿ ಮೂಲ ಆದಿ ಬ್ರಹ್ಮ ಜೋ ಜೋ....', ೪)'ಆದೌ ಬ್ರಹ್ಮ ಹರಿರ್ಮಧ್ಯೇ...', ೫)'ಯಾವ ಜನುಮದ ಪುಣ್ಯ...', ೬)'ಪತಿಯೇ ನನ್ನಾರಾಧ್ಯ...', ೭)'ಓ ಸತೀಮಹಾಸತೀ...', ೮)'ಶ್ರೀಧರ ಕೇಶವ ನಾರಾಯಣ...., ೯)'ಕಮಲವ ಮುಡಿಸಿ...', ೧೦) ಆಂಡಪಿಂಡ...', ೧೧)'ಆ ದೇವ ಈ ದೇವ...', ೧೨)'ಮದನಾ ಮನದನ್ನ...',

ಕ.ಸಾ: ಅತ್ರಿ ಮುನಿಯ ಪತ್ನಿ ಅನುಸೂಯ ಮಹಾಸಾಧ್ವಿ, ಪತಿವ್ರತೆ. ಇವಳನ್ನು ಪರೀಕ್ಷಿಸಲು ಲಕ್ಷ್ಮಿ, ಸರಸ್ವತಿ, ಪಾರ್ವತಿ ಮಾಡುವ ತಂತ್ರಗಳಿಂದಾಗಿ ಬ್ರಹ್ಮ, ವಿಷ್ಣು, ಮಹೇಶ್ವರರು ಪರೀಕ್ಷಿಸಲು ಬರುತ್ತಾರೆ. ಅನಸೂಯ ಅವರನ್ನೇ ಮಕ್ಕಳಾಗಿ ಪರಿವರ್ತಿಸಿ ಬಿಡುತ್ತಾಳೆ. ಇದು ದತ್ತಾತ್ರೇಯ ಅವತಾರದ ಕಥೆ.

೧೭೬. ವೀರವಿಕ್ರಮ

(೧೯೬೪ / ಕಪ್ಪು-ಬಿಳುಪು /ಜಾನಪದ)

ಲಾ: ಸತೀಶ್ ಪಿಕ್ಚರ್ಸ್
ಪ್ರೊ/ನಿ: ಎಸ್.ಆರ್. ರಾಜನ್
ಸ.ನಿ: ಎ. ಪಳನಿ
ಅ: ಉದಯಕುಮಾರ್, ಲೀಲಾವತಿ, ನರಸಿಂಹರಾಜು, ರಾಜನ್, ಎಂ.ಎನ್.ಲಕ್ಷ್ಮೀದೇವಿ, ಮೈಸೂರು ಪುಟ್ಟಣ್ಣ, ಕುಪ್ಪರಾಜು, ಹೆಚ್.ಆರ್.ಶಾಸ್ತ್ರಿ, ಜಯಶ್ರೀ, ವಾಸು, ಜೋಸೆಫ್, ರಾಜೇಂದ್ರ ಕೃಷ್ಣ, ಶ್ರೀಶೈಲ ಕುಮಾರ್, ಮಾ।ಸತೀಶ್, ನೃತ್ಯಗಳು: ವಸಂತಿ, ರೇಣುಕಾ, ಮಧುಶಾಲಿನಿ

ಮಾ: ಜಿ.ಎಂ.ಶಂಕರ್
ಗೀ: ವಿಜಯನಾರಸಿಂಹ, ಎಂ.ಎನ್.ಆರಾಧ್ಯ
ಗಾ: ಜಿ.ಕೆ.ವೆಂಕಟೇಶ್, ಟಿ.ಎ.ಮೋತಿ, ಪಿ.ನಾಗೇಶ್ವರರಾವ್, ಬೆಂಗಳೂರು ಲತಾ, ಎಲ್.ಆರ್.ಈಶ್ವರಿ
ಸಂ: ಎ. ಪಳನಿ
ಛಾ: ಜಿ. ಚಂದ್ರನ್
ಕಲೆ: ಜಯರಾಂ
ಸ: ಟಿ.ಎ.ಮೋತಿ
ಧ್ವ: ದಾದಾವಾಲ್ಕೆ
ನೃ: ಕೃಷ್ಣಕುಮಾರ್, ಜನಾರ್ಧನ್
ವ: ವಿ.ಎಂ.ವರ್ಧೂರ್‌ಕರ್
ಪ್ರ: ಎಸ್.ವಿ. ಮಾಣಿಕ್ಯಂ
ಸ್ಟು: ಫಿಲಂಸೆಂಟರ್ ಪ್ರಕಾಶ್, ಮದರಾಸು
ಹಾ: ೧)'ಓಂ ನಮಃ ಶಿವಾಯ ದಯತೋರು ದೇವ...', ೨)'ಕಣ್ಣಿನ ಕಾಮಿನಿ ಬಾ ಕಾಮನ ಮನ ಮೋಹಿನಿ ಬಾ...', ೩)'ಓ ರಾಗವೇ ನಿನ್ನ ಆಲಾಪವೇ...', ೪)'ಯಾರದ್ರ ಜಗದಾಗೆ ನನ್ನಂಗೆ...', ೫)'ಝುಂ ಝುಂ ಜವ್ವನದ ಝೇಂಕಾರನಾದ...', ೬)'ರಂಗಾದ ವೇಳೆ ಬಂದಿದೆ...', ೭)'ಗತಿ ಕಾಣೆನಾ...',
ವಿ: ಎಸ್.ಆರ್.ರಾಜನ್ ನಿರ್ಮಿಸಿ, ನಿರ್ದೇಶಿಸಿ ದ್ವಿಪಾತ್ರದಲ್ಲಿ ಅಭಿನಯಿಸಿದರು.
ಕ.ಸಾ: ರತ್ನಪುರಿಯ ರಾಜ ರತ್ನವರ್ಮ ತನ್ನ ಮಾಜೀ ದಂಡನಾಯಕ ವೀರನಾಯಕನ ಒಳಸಂಚಿನಿಂದ ರಾಜ್ಯ ಕಳೆದುಕೊಂಡು ರಾಣಿಯೊಡನೆ ಸೆರೆಮನೆಗೆ ತಳ್ಳಲ್ಪಡುತ್ತಾನೆ. ಅತ್ತ ಅವಳಿ ರಾಜಕುಮಾರರಾದ ವಿಜಯವಿಕ್ರಮರು ರಾಜಗುರು ಹಾಗೂ ಲಿಂಗಣ್ಣನಾಯಕನ ಬಳಿ ಬೆಳೆದು ಕಾಲಾಂತರದಲ್ಲಿ ದುಷ್ಟನ ವಿರುದ್ಧ ಸೇಡು ತೀರಿಸಿಕೊಳ್ಳುತ್ತಾರೆ.

೧೭೭. ಇದೇ ಮಹಾಸುದಿನ

(೧೯೬೫ / ಕಪ್ಪು-ಬಿಳುಪು / ಸಾಮಾಜಿಕ)

ಲಾ: ಶಾಂತ ಫಿಲಂಸ್
ಪ್ರೊ: ಉದಯಕುಮಾರ್, ಧನ್‌ಜೀ ಕಲ್ಯಾಣ್‌ಜೀ
ನಿ: ಬಿ.ಸಿ. ಶ್ರೀನಿವಾಸ್

ಸ.ನಿ: ತೆಕ್ಕಟೆ ನಾಗರಾಜ್
ಅ: ರಾಜಕುಮಾರ್, ಉದಯಕುಮಾರ್, ಲೀಲಾವತಿ, ದಿನೇಶ್, ಜಯಾ, ಹರಿಣಿ, ಬಾಲಕೃಷ್ಣ, ರಾಘವೇಂದ್ರರಾವ್. ಜಯಶ್ರೀ, ಎಚ್.ಪಿ.ಸರೋಜಾ, ಲಕ್ಷ್ಮಿ, ವಿಜಯಭಾರತಿ, ಸೂರ್ಯಕುಮಾರಿ, ಸಂಜೀವರಾವ್, ವಿ.ನಾರಾಯಣ್, ಗುಗ್ಗು, ಎಂ.ಎಸ್.ಸುಬ್ಬಣ್ಣ, ಸಂಪಿಗೆ ಶಂಕರ್, ವಿ.ಎನ್.ಸಿಂಹ, ಕೃಷ್ಣ. ಕೃಷ್ಣಶಾಸ್ತ್ರಿ
ಕ/ಮಾ: ಬಿ.ಸಿ.ಶ್ರೀನಿವಾಸ್
ಗೀ: ಉದಯಕುಮಾರ್
ಗಾ: ಪಿ.ನಾಗೇಶ್ವರರಾವ್, ನಾದಹಂಸ ಗೋಪಾಲ್, ಎಲ್.ಆರ್.ಈಶ್ವರಿ, ಎಸ್.ಜಾನಕಿ, ಪಿ.ಬಿ.ಶ್ರೀನಿವಾಸ್
ಸಂ: ಬಿ.ಕಂದಸ್ವಾಮಿ
ಛಾ: ದಿಪ್ತಿ ಎಂ.ಎಸ್.ಮಣಿ
ಕಲೆ: ರಂಗರಾವ್
ಸ: ನಾದಹಂಸ ಬಿ. ಗೋಪಾಲ್
ಧ್ವ: (ಹಾ) ಇ.ಐ.ಜೀವ, (ಮಾ) ವಿ. ಮೋಹನ್
ನೃ: ಕೃಷ್ಣಕುಮಾರ್ ಧಾರವಾಡ, ವೇಣುಗೋಪಾಲ್
ಪ್ರ: ಎಂ.ಎಸ್.ಸುಬ್ಬಣ್ಣ, ಮಾಧವಯ್ಯ, ರಾಜಗೋಪಾಲ್, ಜಿ.ಎಸ್.ದಾಸು
ಹಾ: ೧)'ಇದೇ ಮಹಾಸುದಿನ...', ೨)'ಚಿಗುರಲಿ ನಗುನಗುತಾ...', ೩)'ಸುಗಂಧ ಪರಿಮಳ ಭೂಷಿತೆ...', ೪)'ಆಗಸದ ಅಂಚಿನಲೀ ಬೆಳಗುವ...', ೫)'ಅನುಪಮ ವಿಲಾಸಿನೀ ಜಗದೀಶ್ವರೀ...', ಗಗನದಲಿ ಸಂಚರಿಪ...'
ವಿ: ನಟ ಉದಯಕುಮಾರ್ ಈ ಚಿತ್ರದ ಮೂಲಕ ನಿರ್ಮಾಪಕರೆನಿಸಿದರು
ಕ.ಸಾ: ಸಿರಿತನದ ಅಹಂಕಾರದಿಂದ ಉಂಟಾಗುವ ಅನರ್ಥ. ಬಡತನದ ಬೇಗೆಯಲ್ಲಿ ಬೆಂದರೂ ಅದಕ್ಕೆ ದೊರಕುವ ಪ್ರತಿಫಲ, ಸ್ವಾಮಿನಿಷ್ಠೆಯ ಸಾಕ್ಷಾತ್ಕಾರಗಳನ್ನೊಳಗೊಂಡ ಕಥೆ.

೧೭೮. ಮಾವನ ಮಗಳು

(೧೯೬೫ / ಕಪ್ಪು-ಬಿಳುಪು / ಸಾಮಾಜಿಕ)

ಲಾ: ಪ್ರಸಾದ್ ಆರ್ಟ್ ಪಿಕ್ಚರ್ಸ್
ಪ್ರೊ: ಎ.ವಿ.ಸುಬ್ಬರಾವ್
ನಿ: ಎಸ್.ಕೆ.ಎ.ಚಾರಿ
ಸ.ನಿ: ವಾಸುದೇವ ಗಿರಿಮಾಜಿ
ಅ: ಕಲ್ಯಾಣ್‌ಕುಮಾರ್, ಕೆ.ಎಸ್.ಅಶ್ವತ್, ಟಿ.ಎನ್.ಬಾಲಕೃಷ್ಣ, ನರಸಿಂಹರಾಜು, ರಂಗ, ಜಯಲಲಿತ, ಬಿ.ಜಯಮ್ಮ, ವಿದ್ಯಾವತಿ, ಜಯಶ್ರೀ, ಶಾರದ, ವಾಸಂತಿ, ಬೇಬಿ ಪದ್ಮಶ್ರೀ, ಯೋಗೀಂದ್ರಕುಮಾರ್, ಮಾ।ಬಸವರಾಜ್ ರಂಗಭೂಮಿ ನಾರಾಯಣ, ಗುಗ್ಗು, ಗಿರಿಮಾಜಿ
ಕ: ಆಶಾಪೂರ್ಣಾದೇವಿ
ಮಾ: ಎಂ.ನರೇಂದ್ರಬಾಬು



ಗೀ: ಎಂ.ನರೇಂದ್ರಬಾಬು, ಕು.ರ.ಸೀ., ಕುವೆಂಪು, ಆರ್.ಎನ್.ಜಯಗೋಪಾಲ್, ವಿಜಯನಾರಸಿಂಹ
ಗಾ: ಪಿ.ಬಿ. ಶ್ರೀನಿವಾಸ್, ಪಿ.ನಾಗೇಶ್ವರರಾವ್, ಜಯದೇವ್, ಎಸ್.ಜಾನಕಿ, ಸ್ವರ್ಣಲತಾ, ವಸಂತ
ಛಾ: ಅಣ್ಣಯ್ಯ
ಕಲೆ: ಚಲಂ
ಸ: ಟಿ. ಚಲಪತಿ ರಾವ್
ಧ್ವ: (ಹಾ) ಪಿ.ರಾಮನಾಥನ್, ಸ್ವಾಮಿನಾಥನ್, (ಮಾ) ಪಿ.ಕೃಷ್ಣಂರಾಜು
ನೃ: ತಂಗಪ್ಪನ್, ಚಿನ್ನಿಸಂಪತ್
ವ: ಸೂರ್ಯರಾವ್
ಪ್ರ: ಚೌಧುರಿ ಮತ್ತು ಎಂ.ಗೋಪಾಲ್
ಕೇಶಾಲಂಕಾರ: ಮಿಸೆಸ್ ಮಿಲೀನ್, ಭಾಸ್ಕರರಾವ್
ಸ್ಟು: ಶ್ರೀ ಸಾರಥಿ ಸ್ಟುಡಿಯೋಸ್ (ಹೈದರಾಬಾದ್)
ಹಾ: ೧)'ಮಲ್ಲಿಗೆ ಅರಳಿಗೆ...', ೨)'ಅವುದೊ ಅವುದೊ...', ೩)'ಇನ್ನೂ ಯಾಕೆ ಅಂಜಿಕೆ...', ೪)'ಮಧುರ ಮಿಲನದಾ ಸವಿ ನೆನಪೊಂದು...', ೫)'ನಾನೇ ವೀಣೆ ನೀನೇ ತಂತಿ...', ೬)'ಸಲಿಸಿದೆ ದೇವನ ರಸಪೂಜೆ ನಾ...', ೭)'ಪ್ರೇಮಾ ಪ್ರೇಮಾ...', ೮)'ಚಂದ್ರೋದಯ ಮಂದಾನಿಲ...', ೯)'ಚಂದ್ರೋದಯಕ್ಕೆ ಅಂಬುಧಿ...'(ಬಸವೇಶ್ವರ ವಚನ)
ವಿ: ಬಂಗಾಳಿಯ ಖ್ಯಾತ ಕಥಾ ಲೇಖಕಿ ಆಶಾಪೂರ್ಣಾದೇವಿ ಅವರ ಕತೆ ಆಧಾರಿತ ಚಿತ್ರ
ಕ.ಸಾ: ಬಾಲ್ಯವಿವಾಹ ನಡೆದು, ನಂತರ ವೈಮನಸ್ಯದಿಂದಾಗಿ ಕುಟುಂಬಗಳು ದೂರವಾಗಿ ಎಷ್ಟೋ ಸಮಯದ ನಂತರ ತನ್ನ ಗಂಡನೆಂಬ ವ್ಯಕ್ತಿ ಎದುರಾದಾಗ ಮಾವನ ಮಗಳು ಪಡುವ ಪೇಚಾಟ ಹಾಗೂ ಹಾಸ್ಯಮಯ ಚಿತ್ರಣವಿದ ಚಿತ್ರ.

೧೭೯. ಬೆಟ್ಟದ ಹುಲಿ

(೧೯೬೫ / ಕಪ್ಪು-ಬಿಳುಪು / ಸಾಮಾಜಿಕ)

ಲಾ/ಪ್ರೊ: ಶ್ರೀ ಭಗವತಿ ಪ್ರೊಡಕ್ಷನ್ಸ್
ನಿ: ಎ.ವಿ.ಶೇಷಗಿರಿರಾವ್
ಸ.ನಿ: ಸುಶೀಲ್ ಕುಮಾರ್
ಅ: ರಾಜಕುಮಾರ್, ಉದಯಕುಮಾರ್, ಪಂಢರಿಬಾಯಿ, ಜಯಂತಿ, ಕೆ.ಎಸ್.ಅಶ್ವತ್, ಎಂ.ಪಿ.ಶಂಕರ್, ಪಾಪಮ್ಮ, ನರಸಿಂಹರಾಜು, ಗಣಪತಿಭಟ್, ಕುಪ್ಪರಾಜು, ದಿನೇಶ್, ಜಯಾ, ಬಸಪ್ಪ, ಜಿ.ಎನ್.ಶಾಮಫೋಗ್, ಬಿ.ಎನ್.ಗೀತಾ, ಎಂ.ಎಸ್.ರಂಗನಾಥ್, ಮಾಲಿ (ನೃತ್ಯ)
ಕ/ಚಿ.ಕ: ಎ.ಎಲ್.ನಾರಾಯಣ್
ಮಾ/ಗೀ: ಗೀತಪ್ರಿಯ
ಗಾ: ಪಿ.ಬಿ.ಶ್ರೀನಿವಾಸ್, ಎಸ್.ಜಾನಕಿ, ಎಲ್.ಆರ್.ಈಶ್ವರಿ
ಸಂ: ಪಿ.ಭಕ್ತವತ್ಸಲಂ
ಛಾ: ಕೆ.ಜಾನಕಿರಾಂ
ಕಲೆ: ಗೋಡ್‌ಗಾಂವ್‌ಕರ್
ಸ: ಟಿ.ಜಿ.ಲಿಂಗಪ್ಪ
ಧ್ವ: ರಾಮನಾಥನ್
ನೃ: ಜಯರಾಂ (ಉಡುಪಿ)
ಸಾ: ಪುಲಿಕೇಶಿ
ವ: ದಾವೂದ್, ಮೊಹಿದೀನ್
ಪ್ರ: ಮಾಧವಯ್ಯ, ದೊರೆಸ್ವಾಮಿ, ನಾರಾಯಣಸ್ವಾಮಿ, ರಾಮಕೃಷ್ಣ
ಸ್ಟು: ಗೋಲ್ಡನ್ (ಮದರಾಸು)
ಹಾ: ೧) 'ಆಡುತಿರುವ ಮೋಡಗಳೇ ಹಾರುತಿರುವ ಹಕ್ಕಿಗಳೇ....', ೨)'ಅತ್ತೇಯ ಮಗಳೆ ಪತಕೆ ರಗಳೆ....', ೩)'ಆಕಾಶದ ಲೋಕದಿ ದೂರ....', ೪)'ಮದುಮಗಳು ನಾನಾಗಿ....', ೫)'ಏಕೋ ಈ ದಿನ...'
ವಿ: ಗ್ರೇಟ್ ಈಸ್ಟರ್ನ್ ಸರ್ಕಸ್‌ನ ಹುಲಿ 'ಕಮಲ' ಈ ಚಿತ್ರದಲ್ಲಿ ಅಭಿನಯಿಸಿದೆ.
ಕ.ಸಾ: ಬೆಟ್ಟ ಗುಡ್ಡಗಳ ನಡುವೆ ವಾಸವಾಗಿದ್ದ ಭೈರವ ಹಾಗು ಈಶ್ವರಪ್ಪನ ನಡುವೆ ದ್ವೇಷ. ಈಶ್ವರಪ್ಪನ ಹೆಂಡತಿ ಮಗನನ್ನು ತಂದು ಸೆರೆ ಇರಿಸಿಕೊಂಡ. ಈಶ್ವರಪ್ಪನ ಮಗ ರಾಜುವನ್ನು ತನ್ನ ಮಗನಂತೆ ಬೆಳೆಸಿ ತಂದೆಯ ವಿರುದ್ಧವೇ ಎತ್ತಿಕಟ್ಟಿದ.

ಈಶ್ವರಪ್ಪನ ಮನೆಯಲ್ಲಿ ಸಾಕು ಪುತ್ರಿಯಂತಿದ್ದ ಸೀತೆಯ ಪರಿಚಯವಾಗಿ ಪ್ರಣಯವಾಗಿ ತಿರುಗಿತು. ಅಧಿಕಾರ ತಂದೆ ಹಾಗು ದರೋಡೆಕೋರ ಮಗನ ನಡುವೆ ನಡೆಯುವ ಹೋರಾಟವೇ ಈ ಚಿತ್ರದ ಕಥಾವಸ್ತು.

೧೮೦. ಸತಿಸಾವಿತ್ರಿ

(೧೯೬೫ / ಕಪ್ಪು-ಬಿಳುಪು / ಪೌರಾಣಿಕ)

ಲಾ: ವಸಂತ್ ಪಿಕ್ಚರ್ಸ್
ಪ್ರೊ: ಎನ್.ವಿಶ್ವೇಶ್ವರಯ್ಯ
ನಿ: ಪಿ.ಆರ್.ಕೌಂಡಿನ್ಯ
ಸ.ನಿ: ಚಿ.ಸದಾಶಿವಯ್ಯ, ಕೆ.ನಾಗಭೂಷಣ್
ಅ: ರಾಜಕುಮಾರ್, ಕೃಷ್ಣಕುಮಾರಿ, ಉದಯಕುಮಾರ್, ಕೆ.ಎಸ್.ಅಶ್ವತ್ಥ್, ಜಯಶ್ರೀ, ರಾಮಚಂದ್ರಶಾಸ್ತ್ರಿ, ನರಸಿಂಹರಾಜು, ಬಿ.ರಾಘವೇಂದ್ರರಾವ್, ರುಕ್ಮಿಣಿ, ಜಯಾ, ಎಲ್.ಎನ್.ಸ್ವಾಮಿ



ಕ/ಚಿ.ಕ/ಮಾ: ಚಿ.ಸದಾಶಿವಯ್ಯ
ಗೀ: ಚಿ.ಸದಾಶಿವಯ್ಯ, ಆರ್.ಎನ್.ಜಯಗೋಪಾಲ್, ಚಿ.ಉದಯಶಂಕರ್
ಗಾ: ಪಿ.ಬಿ.ಶ್ರೀನಿವಾಸ್, ಎಸ್.ಜಾನಕಿ, ಬಾಲಮುರಳಿಕೃಷ್ಣ
ಸಂ: ಟಿ.ಚಕ್ರಪಾಣಿ
ಛಾ: ಬಿ.ಎನ್.ಹರಿದಾಸ್
ಕಲೆ: ವಾಲಿ
ಸ: ಜಿ.ಕೆ.ವೆಂಕಟೇಶ್
ಧ್ವ: ಎನ್.ಶೇಷಾದ್ರಿ, ಬಿ.ಎಸ್.ಶಾಮಣ್ಣ
ನೃ: ಬಿ.ಜಯರಾಂ
ವ: ವಿ.ಎನ್.ಮೂರ್ತಿ
ಪ್ರ: ನಾರಾಯಣಸ್ವಾಮಿ, ವೀರರಾಜು, ದೊರೆಸ್ವಾಮಿ
ಸ್ಟು: ವಿಕ್ರಂ (ಮದರಾಸು)
ಹಾ: ೧)'ಕಲ್ಪನೆಯ ಕುದುರೆ ಏರೀ...', ೨)'ಏನಿದೋ.. ಏತಕೋ...', ೩)'ಸಾಕೆಲೆ ಬಿಂಕದ ನೋಟವು ಹರಿಣಿ....', ೪)'ಬಿಲ್ಲನಗಲಿದ ಅಂಬಿನ ತೆರದಲಿ....' ೫)'ಶ್ರೀ ಸತಿ ಮನೋವಿಹಾರಿ...', ೬)'ಸಪ್ತಲೋಕ ಪ್ರಪೂಜಿತೇ...', ೭)'ದೇವೀ.. ಜನನೀ...',
ಕ.ಸಾ: ಸಾಳ್ವ ದೇಶದ ರಾಜಕುಮಾರ ಚಿತ್ರಾಶ್ವ (ಸತ್ಯವಾನ) ಅರಣ್ಯಕ್ಕೆ ಬಂದಾಗ ಮದ್ರ ದೇಶದ ರಾಜಕುಮಾರಿ ಸಾವಿತ್ರಿಯಲ್ಲಿ ಅನುರಕ್ತನಾಗಿ ವಿವಾಹವಾಗುತ್ತಾನೆ. ಸಾಳ್ವ ರಾಜ ಶತ್ರು ದಾಳಿಗೆ ಸಿಲುಕಿ ದೇಶ ಭ್ರಷ್ಟನಾಗುತ್ತಾನೆ. ಅಲ್ಪಾಯುಷಿಯಾದ ಸತ್ಯವಾನ ಸಾಯುತ್ತಾನೆ. ಸಾವಿತ್ರಿ ಪ್ರಾಣ ಒಯ್ಯಲು ಬಂದ ಯಮನ ಹಿಂದೆ ಹೋಗಿ ಪತಿಯ ಪ್ರಾಣವನ್ನು ಹಿಂದಕ್ಕೆ ಪಡೆದು ಬರುತ್ತಾಳೆ.

೧೮೧. ಮಿಸ್ ಲೀಲಾವತಿ

(೧೯೬೫ / ಕಪ್ಪು-ಬಿಳುಪು / ಸಾಮಾಜಿಕ)

ಲಾ: ಕಲಾಜ್ಯೋತಿ
ಪ್ರೊ: ಕೆ.ಎಸ್.ಜಗನ್ನಾಥ್
ನಿ: ಎಂ.ಆರ್.ವಿಠಲ್
ಸ.ನಿ: ಕೆ.ಸೀತಾರಾಂ
ಅ: ಉದಯಕುಮಾರ್, ರಮೇಶ್, ಅರುಣ್‌ಕುಮಾರ್, ಜಯಂತಿ, ಜಯಶ್ರೀ, ಬಸವರಾಜ್, ವಾಣಿಶ್ರೀ, ಕೆ.ಎಸ್.ಅಶ್ವತ್ಥ್, ನರಸಿಂಹರಾಜು, ಸೂರ್ಯಕಲಾ, ರೇವತಿ, ರಮಾ, ಬೇಬಿ ಸುಮ, ಹನುಮಂತಾಚಾರ್, ಗುಗ್ಗು, ರಾಮಕೃಷ್ಣ, ಸುರೇಶ್, ಮಾ|ಯೋಗೇಂದ್ರಕುಮಾರ್, ಮಾ|ನಟರಾಜ್
ಕ: ಕೊರಟಿ ಶ್ರೀನಿವಾಸರಾವ್
ಚಿ.ಕ: ಎಂ.ಆರ್.ವಿಠಲ್
ಮಾ: ಕೊರಟಿ ಶ್ರೀನಿವಾಸರಾವ್
ಗೀ: ಕುವೆಂಪು, ವಿಜಯನಾರಸಿಂಹ
ಗಾ: ಎಸ್.ಜಾನಕಿ, ಪಿ.ಬಿ.ಶ್ರೀನಿವಾಸ್, ಪಿ.ಜಯದೇವ್, ರಾಮಚಂದ್ರ
ಸಂ: ಎಸ್.ಪಿ.ಎನ್.ಕೃಷ್ಣ, ಟಿ.ಪಿ.ವೇಲಾಯುಧಂ
ಛಾ: ಎಸ್.ವಿ.ಶ್ರೀಕಾಂತ್, ಕುಮಾರ್
ಕಲೆ: ಬಿ.ಕ್ರಿಷನ್
ಸ: ಆರ್.ಸುದರ್ಶನಂ
ಧ್ವ: (ಹಾ)ಎಸ್.ಪಿ.ರಾಮನಾಥನ್, ಟಿ.ಮೋಹನಸುಂದರಂ, (ಮಾ)ಡಿ.ಲಾಜರಸ್
ನೃ: ಆರ್.ಕೃಷ್ಣರಾಜು
ವ: ಶ್ರೀಮತಿ ವಿಠಲ್, ಮ್ಯಾಕ್ಸ್ ಟೈಲರ್ಸ್
ಪ್ರ: ವೈ.ಮಾಧವಯ್ಯ, ರಾಜಗೋಪಾಲ್
ಕೇಶಾಲಂಕಾರ - ರಾಜಲಕ್ಷ್ಮಿ
ಸ್ಟು: ಗೋಲ್ಡನ್
ಹಾ: ೧)'ಹಿರಿಯ ಸಾಗರ ನಂಜು ಮರಿಸಾಗರ ಪಾಲು...', ೨)'ದೋಣಿ ಸಾಗಲಿ ಮುಂದೆ ಹೋಗಲಿ ದೂರ ತೀರವ ಸೇರಲಿ.....', ೩)'ನೋಡು ಬಾ ನೋಡು ಬಾ ನಮ್ಮೂರಾ....', ೪)'ಬಯಕೆ ಬಳ್ಳಿ ಚಿಗುರಿ ನಗುತಿರೆ....', ೫)'ನೀರಿನಲ್ಲಿ ಮೀನು ನೀನು...'
ವಿ: ವೆಸ್ಟ್ ಜರ್ಮನಿಯ ಫ್ರಾಂಕ್‌ಫರ್ಟ್‌ನಲ್ಲಿ ನಡೆದ ನಾಲ್ಕನೆಯ ಏಷಿಯನ್ ಫಿಲಂ ಫೆಸ್ಟಿವಲ್‌ನಲ್ಲಿ ಪ್ರದರ್ಶನಗೊಂಡಿದೆ. ಕನ್ನಡ ಚಿತ್ರರಸಿಕರ ಸಂಘದ ಏಳು ಪ್ರಶಸ್ತಿಗಳನ್ನು ಪಡೆಯಿತು. ಕುವೆಂಪು ಅವರ ಸೂಚನೆಯಂತೆ 'ದೋಣಿ ಸಾಗಲಿ...' ಹಾಡನ್ನು ಕೊಡೈಕೆನಾಲ್‌ನ ಸುಂದರ ಪರಿಸರದಲ್ಲಿ ಚಿತ್ರೀಕರಿಸಲಾಯಿತು. ಕೇಂದ್ರಸರ್ಕಾರದ 'ಅರ್ಹತಾ ಪ್ರಶಸ್ತಿ ಪತ್ರ' ಪಡೆಯಿತು.
ಕ.ಸಾ: ಆಲೋಚನೆಗೂ, ಬದುಕಿಗೂ ವ್ಯತ್ಯಾಸಗಳಿವೆ. ಸಮಾಜ ಒಪ್ಪಂದಗಳನ್ನು ಬೇಡುತ್ತದೆ ಎಂದು ಹೇಳುವ ವಸ್ತು. ಮಿಸ್ ಲೀಲಾವತಿ ಪ್ರಗತಿಪರ ಭಾವನೆಗಳ ಆಧುನಿಕ ಯುವತಿ. ವಿಶ್ವನಾಥರಾಯರ ಏಕೈಕ ಪುತ್ರಿ. ಶ್ಯಾಂಸುಂದರ ಲೀಲಾವತಿಯ ಅಣ್ಣ, ತಂಗಿಯನ್ನು ಕಂಡರೆ ಅಪಾರ ಪ್ರೀತಿ. ಲೀಲಾವತಿಯ ಬಾಳ ಹಾದಿಯಲ್ಲಿ ಕಾಣಿಸಿಕೊಳ್ಳುವ ದಿವಾಕರ, ಸುಧಾಕರ, ಕನಕಮ್ಮ, ರಾಜಿ ಮುಂತಾದವರಿಂದ ಆಕೆಗೆ ಕಷ್ಟಗಳು ಎದುರಾದವು.

೧೮೨. ಪಾತಾಳಮೋಹಿನಿ

(೧೯೬೫ / ಕಪ್ಪು-ಬಿಳುಪು / ಜಾನಪದ)

ಲಾ: ಮೋಹಿನಿ ಪ್ರೊಡಕ್ಷನ್ಸ್
ಪ್ರೊ/ನಿ: ಎಸ್.ಎನ್.ಸಿಂಗ್
ಸ.ನಿ: ಜಿ.ವಿ.ರಾಮನ್
ಅ: ಬಿ.ಎಂ.ವೆಂಕಟೇಶ್, ನರಸಿಂಹರಾಜು, ವಾಣಿಶ್ರೀ, ಬಾಲಕೃಷ್ಣ, ಪ್ರತಿಮಾದೇವಿ, ಉದಯಕುಮಾರ್, ಈಶ್ವರಪ್ಪ, ಎಂ.ಎನ್.ಲಕ್ಷ್ಮೀದೇವಿ, ಹೆಚ್.ಟಿ.ಅರಸ್, ಯು.ಮಹಾಬಲರಾವ್, ಡಿ.ಸಿದ್ದಪ್ಪಾಜಿ, ಹನುಮಂತಪ್ಪ, ಸದಾಶಿವಯ್ಯ, ಎಂ.ಆರ್.ಶ್ರೀನಿವಾಸನ್
ಕ: ಮೋಹಿನಿ ಪ್ರೊಡಕ್ಷನ್ಸ್ ಕಥಾ ವಿಭಾಗ
ಮಾ: ಕುಂದಾನಿ ಸತ್ಯನ್
ಗೀ: ಹುಣಸೂರು ಕೃಷ್ಣಮೂರ್ತಿ
ಗಾ: ಎಸ್.ಜಾನಕಿ, ಪಿ.ಬಿ.ಶ್ರೀನಿವಾಸ್, ಎಲ್.ಆರ್.ಈಶ್ವರಿ, ನಾಗೇಂದ್ರ
ಸಂ: ಆರ್.ಇ.ಚಿನ್ನಪ್ಪ
ಛಾ: ಎಸ್.ಗೋವಿಂದಸ್ವಾಮಿ
ಕಲೆ: ಪಿ. ವೆಂಕಟರಾಮಯ್ಯ
ಸ: ರಾಜನ್-ನಾಗೇಂದ್ರ
ಧ್ವ: ಕೆ.ಆರ್.ಸೀತಾರಾಂ
ಪ್ರ: ಮಾಧವಯ್ಯ
ಸ್ಟು: ಪ್ರೀಮಿಯರ್ (ಮೈಸೂರು)
ಹಾ: ೧)'ಚಿಲಿಪಿಲಿಗುಟ್ಟುವ ಹಕ್ಕಿಯು ಕಂಠದಿ...'. ೨)'ಮಾವನ ಮಗಳೇ ಮುತ್ತಿನ ಹರಳೇ....', ೩)'ಓ ಬ್ರಹ್ಮಚಾರಿ ಬಾ ಬಾರೋ ಬ್ರಹ್ಮಚಾರಿ....', ೪)'ಏನಿದು ಯಾರಿದು...', ೫)'ಆನಂದಸಾರ ಪ್ರಭೂ...', ೬)'ಹಗಲು ಇರುಳು ನಿನ್ನ ಹಿಂದೇ...'
ಕ.ಸಾ: ಜಮೀನ್ದಾರನ ಮಗ, ಹಳ್ಳಿಯ ಚೆಲುವೆ ಚೆನ್ನಿ ಪ್ರೇಮಿಗಳು. ಇವರ ಪ್ರೇಮ ಸಹಿಸದ ಭೈರ ಚೆನ್ನಿಯ ಮೇಲೆ ಅತ್ಯಾಚಾರವೆಸಗಲು ಹೋದಾಗ ಆಕೆ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ.. ನಂತರ ಜಮೀನ್ದಾರ ತನ್ನ ಮಗನಿಗೆ ಸುಗುಣ ಸಂಪನ್ನೆಯಾದ ಹುಡುಗಿಯನ್ನು ಮದುವೆ ಮಾಡುತ್ತಾನೆ. ಅಲ್ಪಾಯುಷಿ ಚೆನ್ನಿ ಪ್ರೇತಾತ್ಮವಾಗಿ ಕಾಡಲು ಆರಂಭಿಸುತ್ತಾಳೆ. ಮದುವೆಯಾದ ಹೆಣ್ಣಿಗೆ ನಾನಾ ರೀತಿಯ ಕಷ್ಟಗಳನ್ನು ನೀಡುತ್ತಾಳೆ. ಅವಳ ಪತಿಭಕ್ತಿಯ ಮುಂದೆ ಮೋಹಿನಿಯಾದ ಚೆನ್ನಿ ಸೋಲುತ್ತಾಳೆ.

೧೮೩. ಮದುವೆ ಮಾಡಿ ನೋಡು

(೧೯೬೫ / ಕಪ್ಪು-ಬಿಳುಪು / ಸಾಮಾಜಿಕ)

ಲಾ: ವಿಜಯಾ ಪ್ರೊಡಕ್ಷನ್ಸ್
ಪ್ರೊ: ನಾಗಿರೆಡ್ಡಿ, ಚಕ್ರಪಾಣಿ
ನಿ: ಹುಣಸೂರು ಕೃಷ್ಣಮೂರ್ತಿ
ಸ.ನಿ: ಎಂ.ವಿ.ಸತ್ಯಂ
ಅ: ರಾಜಕುಮಾರ್, ಆರ್.ನಾಗೇಂದ್ರರಾವ್, ಉದಯಕುಮಾರ್, ನರಸಿಂಹರಾಜು, ಅಶ್ವತ್ಥ್, ರಾಮಚಂದ್ರಶಾಸ್ತ್ರಿ, ರತ್ನಾಕರ್, ಹನುಮಂತಾಚಾರ್, ದ್ವಾರಕೀಶ್, ಮಾ|ಬಸವರಾಜ್, ಲೀಲಾವತಿ, ವಂದನಾ, ಜಯಶ್ರೀ, ರಮಾದೇವಿ, ರಮಾ

ಚಿ.ಕ: ಚಕ್ರಪಾಣಿ
ಮಾ/ಗೀ: ಹುಣಸೂರು ಕೃಷ್ಣಮೂರ್ತಿ
ಗಾ: ಪಿ.ಬಿ.ಎಸ್., ಎಸ್.ಜಾನಕಿ, ಪಿ.ಸುಶೀಲ
ಸಂ: ಜಿ.ಕಲ್ಯಾಣ ಸುಂದರಂ, ಡಿ.ಜಿ.ಜಯರಾಂ
ಛಾ: ಮಾಧವ್ ಬುಲ್‌ಬುಲೆ
ಕಲೆ: ಕೃಷ್ಣರಾವ್, ಕಳಾಧರ್
ಸ: ಘಂಟಸಾಲ
ಧ್ವ: ವಿ.ಶಿವರಾಮ್, ಹರಿನಾಥ್
ನೃ: ವೆಂಪಟಿ ಚಿನ್ನಸತ್ಯಂ
ಸ್ಟು: ವಾಹಿನಿ
ಹಾ: ೧)'ಬ್ರಹ್ಮಯ್ಯ...'ಓ ಬ್ರಹ್ಮಯ್ಯ...', ೨)'ಯಾರ್ ಬರ್ತಾರೋ ನೋಡೋಣ....', ೩)'ಮದುವೆ ಮಾಡಿ ನೋಡೋಣ....', ೪)'ಎಲ್ಲಿರುವೇ ಪ್ರಿಯಾ ಎಲ್ಲಿರುವೆ....', ೫)'ಈ ಜಗವೆಲ್ಲ ಒಂದು ನಿತ್ಯ ನೂತನ ನಾಟಕರಂಗ....', ೬)'ಓ ಭಾವಿ ಭಾರತ ಭಾಗ್ಯವಿಧಾತರೇ....', ೭)'ಮನಸೇ ನಾ ಯಾರೋ ನೀ ಬಲ್ಲೆಯಾ....', ೮)'ಓ ಮನಸನಾಳೋ ಮನಸೇ...', ೯)'ವೆಂಕಟಾಚಲವಾಸ ಹೇ ಶ್ರೀನಿವಾಸ...', ೧೦)'ಅಮ್ಮಾ ವೇದನೆ ಅಜ್ಜಮ್ಮಾ ತಾಳೆನೇ....', ೧೧)'ಅಳಬೇಡ ಅಳಬೇಡ ಮುದ್ದು ಕಂದಯ್ಯ....', ೧೨)'ಭಯವ್ಯಾತಕೇ ಪುಟ್ಟಿ ಭಯವ್ಯಾತಕೇ.....', ೧೩)'ಏನಮ್ಮ ಮುಂದೇನಮ್ಮಾ ಬಂದೊದಗುವಗತಿ ಏನಮ್ಮ...', ೧೪)'ಯಾರೋ.. ಯಾರೋ...'
ವಿ: ಕೇಂದ್ರ ಸರ್ಕಾರದ 'ಅರ್ಹತಾ ಪ್ರಶಸ್ತಿ ಪತ್ರ' ದೊರೆಯಿತು.
ಕ.ಸಾ: ಅಣ್ಣ ತನ್ನ ತಂಗಿಗೆ ಮದುವೆ ಮಾಡ ಹೊರಟು

ಅನುಭವಿಸುವ ನಾನಾ ಕಷ್ಟಗಳು ಇಲ್ಲಿವೆ. ತಂಗಿಯ ಮದುವೆಗಾಗಿ ತಾನು ಒಂದೆಡೆ ವಿವಾಹವಾಗಿ ಮಾವನ ನೆರವಿನಿಂದ ಗಂಡು ಹುಡುಕಿದ. ವರದಕ್ಷಿಣೆ ನೀಡಲಿಲ್ಲವೆಂಬ ಕಾರಣಕ್ಕಾಗಿ ತಂಗಿ ಮನೆಯಿಂದ ಹೊರಬರಬೇಕಾಯಿತು. ತಂಗಿಯ ಗಂಡ ಹಾಗು ಅಣ್ಣ ಮಾಡಿದ ಯೋಜನೆಯಿಂದ ಎಲ್ಲವೂ ಸರಿಯಾಯಿತು.

೧೮೪೪. ಪತಿವ್ರತ

(೧೯೬೫ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಚಿರಂಜೀವಿ ಫಿಲಂಸ್
ಪ್ರೊ: ಎಂ.ಎಸ್.ಶ್ರೀನಿವಾಸ್
ನಿ: ಪಿ.ಎಸ್.ಮೂರ್ತಿ
ಸ.ನಿ: ವಿ.ಬಿ.ಎಸ್.ಮಣಿ
ಅ: ರಾಜಕುಮಾರ್, ಉದಯಕುಮಾರ್, ಬಾಲಕೃಷ್ಣ, ನರಸಿಂಹರಾಜು, ರಾಮಚಂದ್ರಶಾಸ್ತ್ರಿ, ಕುಪ್ಪರಾಜ್, ಗುಗ್ಗು, ಹರಿಣಿ, ಅವಧಾನಿ ಲಕ್ಷ್ಮೀದೇವಿ, ಎಂ.ಎನ್.ಲಕ್ಷ್ಮೀದೇವಿ, ಕುಮಾರಿ ರೇಣುಕಾ, ಕುಮಾರಿ ಎನ್.ಮಾಲತಿ, ಕುಮಾರಿ ಎನ್.ನಾಗಮಣಿ, ಕುಮಾರಿ ರಮಾ
ಗೀ: ಕುಮಾರ ವೆಂಕಣ್ಣ, ಹಿ.ಮ.ನಾಗಯ್ಯ, ವಿಜಯನಾರಸಿಂಹ
ಗಾ: ಎಲ್.ಆರ್.ಈಶ್ವರಿ, ಜಾನಕಿ, ರಘುನಾಥ ಪಾಣಿಗ್ರಾಹಿ, ಸಿ.ಎಸ್.ಸರೋಜಿನಿ, ಪಿ.ಬಿ.ಶ್ರೀನಿವಾಸ್, ಬೆಂಗಳೂರು ಲತಾ, ಪಿ.ಸುಶೀಲಾ, ವ್ಯಂಜನ ಮೂರ್ತಿ ಸತ್ಯಂ
ಸಂ: ಪಿ.ಎಸ್.ಮೂರ್ತಿ
ಛಾ: ಎಲ್ಲಪ್ಪನ್
ಕಲೆ: ಬಿ.ಸಿ.ಬಾಬು

ಸ: ಟಿ.ಎ.ಮೋತಿ
ಧ್ವ: (ಹಾ)ರೇವತಿ ಸ್ಟುಡಿಯೋ
ನೃ: ತಂಗಪ್ಪನ್
ಪ್ರ: ದೊರೆಸ್ವಾಮಿ, ಮಾಣಿಕ್ಯಂ, ಸುಬ್ಬಣ್ಣ, ಮಾಧವಯ್ಯ
ಸ್ಟು: ವೆಂಕಟೇಶ್ವರ ಸಿನಿಟೋನ್ ಮತ್ತು ಮದರಾಸ್ ಸ್ಟುಡಿಯೋಸ್
ಹಾ: ೧)'ಏನು ಸೊಬಗು...', ೨)'ಹೆಣ್ಣಿನ ಮೇಲಿನ...', ೩)'ನಿನ್ನದು ಆ ತೀರ...', ೪)'ಗೋಪಾಲನಾ...', ೫)'ಕುರುಡು ಸಮಾಜ...', ೬)'ಮಡಿಯೋಣ ದುಡಿಯೋಣ...', ೭)'ಸಂಶಯ ಭೂತವ...', ೮)'ಬಾ ಮಗಳೆ ಬಾ ತಂಗಿ...'
ಕ.ಸಾ: ಗುಣವಂತನಾದರೂ ಸ್ನೇಹಿತರಿಂದ ಮಸ್ಟಟಿಗಳ ದಾಸನಾಗಿರುವ ವ್ಯಕ್ತಿಗೆ ನರ್ತಕಿಯ ಕಲೆ, ಗುಣವಂತಿಕೆಗಳು, ಅರ್ಪಣಾ ಭಾವಗಳಲ್ಲಿ ಆಸಕ್ತಿ. ಆತನನ್ನೇ ನಂಬಿದ ಬಾಲ್ಯ ಸ್ನೇಹಿತೆಗೆ ನೋವು ತರುತ್ತದೆ. ವೇಶ್ಯೆಯೊಬ್ಬಳು ಸಾಧ್ವಿ, ಪತಿವ್ರತೆ ಆಗಲು ಸಾಧ್ಯ ಎಂದು ಹೇಳುವ ಕಥೆ.

೧೯೬೬

೧೮೪೫. ಮಮತೆಯ ಬಂಧನ

(೧೯೬೬ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ತುಂಗಾ ಪಿಕ್ಚರ್ಸ್
ಪ್ರೊ: ದ್ವಾರಕೀಶ್, ವೀರ್ರಾಜು, ಮಾಧವಯ್ಯ
ನಿ: ಬಿ.ಎಸ್.ನಾರಾಯಣ್
ಸ.ನಿ: ಶ್ರೀನಿವಾಸ್, ರತ್ನಾಕರ್, ವಿಕ್ರಂ
ಅ: ಬಿ.ಎಂ.ವೆಂಕಟೇಶ್, ಜಯಂತಿ, ದ್ವಾರಕೀಶ್,

ನರಸಿಂಹರಾಜು, ಕೆ.ಎಸ್.ಅಶ್ವತ್, ಜಯಶ್ರೀ. ಬಿ.ರಾಘವೇಂದ್ರರಾವ್, ಹನುಮಂತಾಚಾರ್, ರತ್ನಾಕರ್, ಕುಪ್ಪರಾಜ್, ಶಿವಾಜಿ, ಅನಿಲ್‌ಕುಮಾರ್, ರಮಾದೇವಿ, ಇಂದಿರಾ, ಜಾನಕಿ ಚಂದರ್, ಬೇಬಿ ಪ್ರಶಾಂತ್, ನೃತ್ಯ : ಶಾಂತ, ರಾಜೇಶ್ವರಿ
ಮಾ/ಗೀ: ಸೋರಟ್ ಅಶ್ವತ್
ಗಾ: ಪಿ.ಬಿ. ಶ್ರೀನಿವಾಸ್, ಪಿ.ಸುಶೀಲಾ, ಎಸ್.ಜಾನಕಿ, ಬೆಂಗಳೂರು ಲತಾ, ಅನಂತರಾಂ
ಸಂ: ಆರ್.ಎಂ.ವೇಣು
ಛಾ: ದೇಪ್ರಿ ಮಣಿ
ಕಲೆ: ಬಿ.ಎನ್.ಕೃಷ್ಣ
ಸ: ಸತ್ಯಂ
ಧ್ವ: (ಹಾ)ಸ್ವಾಮಿನಾಥನ್
ನೃ: ಕೆ.ಎಸ್.ರೆಡ್ಡಿ
ವ: ಪಿ.ಚೆಂಟಿಬಾಬು
ಪ್ರ: ವೀರ್ರಾಜು, ಮಾಧವಯ್ಯ
ಸ್ಟು: ವೆಂಕಟೇಶ್ವರ ಸಿನಿಟೋನ್ (ಮದರಾಸು)
ಹಾ: ೧)'ಸಿಂಗಾರಿ.. ಬಂಗಾರಿ...', ೨)'ಯಾರು ಹಡೆದರು...', ೩)'ಪ ಮೈಸೂರ್ ಮಲ್ಲೆ...', ೪)'ಓಡಿ ಬಾರಯ್ಯ...', ೫)'ಓತವಚನಾಯನ...', ೬)'ಅಮ್ಮಾ ಕಂದ ನಾನಮ್ಮ...'
ವಿ: ದ್ವಾರಕೀಶ್ ನಿರ್ಮಿಸಿದ ಮೊದಲ ಚಿತ್ರ
ಕ.ಸಾ: ಕುಟುಂಬದಲ್ಲಿನ ಬಂಧನವನ್ನು ಸಾರುವ ಕಥೆ. ಗಂಡ-ಹೆಂಡತಿ, ತಾಯಿ-ತಂದೆ, ಅಣ್ಣ-ತಂಗಿಯರ ನಡುವಣ ಸಂಬಂಧವನ್ನು ಅದರ ಮಹತ್ವವನ್ನು ಬಿಂಬಿಸುತ್ತದೆ.

೧೮೪೬. ಎಂದೂ ನಿನ್ನವನೇ

(೧೯೬೬ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಆರ್.ಕೆ.ಪಿಕ್ಚರ್ಸ್
ಪ್ರೊ/ನಿ: ಕಲ್ಯಾಣ್‌ಕುಮಾರ್
ಅ: ಕಲ್ಯಾಣ್‌ಕುಮಾರ್, ಲತಾದೇವಿ, ರಮೇಶ್, ಜಯಂತಿ, ರತ್ನಾಕರ್, ಆರ್.ನಾಗೇಂದ್ರರಾವ್, ರಾಮಚಂದ್ರಶಾಸ್ತ್ರಿ, ಗಣಪತಿಭಟ್, ದ್ವಾರಕೀಶ್, ದ್ವಾರಕಾನಾಥ್, ಸರೋಜಮ್ಮ, ಜಯಾ, ಲಕ್ಷ್ಮಿ, ವನಮಾಲ, ಅತಿಥಿ ನಟರು - ಬಾಲಕೃಷ್ಣ, ಆರ್.ಎನ್.ಸುದರ್ಶನ್



ಕ/ಚಿ.ಕ/ಮಾ: ರೇವತಿ ಕಲ್ಯಾಣ್‌ಕುಮಾರ್
ಗೀ: ವಿಜಯನಾರಸಿಂಹ
ಗಾ: ಪಿ.ಬಿ.ಶ್ರೀನಿವಾಸ್, ಎಸ್.ಜಾನಕಿ, ಎಲ್.ಆರ್.ಈಶ್ವರಿ, ರಾಜನ್, ಲತಾ, ಕಲ್ಯಾಣ್‌ಕುಮಾರ್, ನಾಗೇಂದ್ರ
ಸಂ: ಎಸ್.ಎಂ.ಶಾಲಿ
ಛಾ: ಚಿಟ್ಟಿಬಾಬು
ಕಲೆ: ಚಲಂ
ಸ: ರಾಜನ್ ನಾಗೇಂದ್ರ
ಧ್ವ: ನಾಗೇಶ್, ಡಿ.ಲಾಜರಸ್, ರಾಮನಾಥನ್
ವ: ಕಣ್ಣನ್
ಹಾ: ೧)'ಹಾಡು ಬಾರೆ ಗಿಣಿ...', ೨)'ಎಂದೂ ನಿನ್ನವನೆ...', ೩)'ಈ ಹರುಷ ವರ್ಷಧಾರೆ...', ೪)'ಕಣ್ಣು ಕಣ್ಣು ಕಲೆತಾಗ...', ೫)'ಜಗವೇ ನಗುವಾ...'
ವಿ: ಕಲ್ಯಾಣ್‌ಕುಮಾರ್ ನಿರ್ದೇಶನದ ಮೊದಲ ಚಿತ್ರ. ರೇವತಿ ಮತ್ತು ಕಲ್ಯಾಣ್‌ಕುಮಾರ್ ಸೇರಿ ಆರ್.ಕೆ.ಪಿಕ್ಚರ್ಸ್ ಲಾಂಛನ ಆರಂಭಿಸಿದರು.
ಕ.ಸಾ: ಬಡವನಾದ ಯುವಕ ಹಳ್ಳಿಯಲ್ಲಿ ನಾಟಕವಾಡಲು ಹೋದಾಗ ಹುಡುಗಿಯೊಬ್ಬಳ ಪರಿಚಯವಾಗಿ ಪ್ರೇಮದಲ್ಲಿ ಪರಿವರ್ತನೆಯಾಗುತ್ತದೆ. ಆದರೆ ಹುಡುಗಿಯ ತಾಯಿ ಮದುವೆಗೆ ಒಪ್ಪುವುದಿಲ್ಲ. ನಂತರ ಮತ್ತೊಂದು ಹುಡುಗಿ ಅವನ ಬಾಳಿನಲ್ಲಿ ಬಂದರೂ ಆತನಿಗೆ ಅದೇ ಹುಡುಗಿಯ ನೆನಪು. ಇಬ್ಬರೂ ಹುಡುಗಿಯರು ಸಿಗದೆ ಆತ ನಿರಾಶನಾಗುತ್ತಾನೆ.

೧೮೪೭. ಮನೆ ಕಟ್ಟಿ ನೋಡು

(೧೯೬೬ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ತಿಪಟೂರ್ ಫಿಲಂಸ್
ಪ್ರೊ: ಸಿ.ವಿ.ಶಿವಶಂಕರ್

ನಿ: ಶ್ರೀ ಸದ್ಗುರು
ಸ.ನಿ: ಎಸ್.ಸುಬ್ಬರಾಯನ್, ತಿಪಟೂರು ರಘು, ಸಿ.ವಿ.ಶಿವಶಂಕರ್
ಅ: ಉದಯಕುಮಾರ್, ಪ್ರಭಾಕರ್, ಮಧುಕುಮಾರ್, ಹನುಮಂತರಾವ್, ಶಿವಶಂಕರ್, ತಿಪಟೂರು ರಘು, ದ್ವಾರಕೀಶ್, ರಾಮದಾಸ್, ರಾಮು, ಶಾಂತಲ, ಲಲಿತ, ಮೀನಾಕುಮಾರಿ, ಅಂಬುಜಾದೇವಿ, ಚಂದ್ರ, ಲೀಲಾಜಯಂತಿ, ಅರುಣ್‌ಕುಮಾರ್, ಕೃಷ್ಣಪ್ಪ, ವೆಂಕಟಾಚಲಯ್ಯ, ಆರ್.ಜಯಂತಿ, ಬೇಬಿ ಮಂಜುಳ, ಬೇಬಿ ವಸುಧ, ಬೇಬಿ ರೇಖ, ಬೇಬಿ ಕನ್ನಿಕ
ಕ/ಚಿ.ಕ/ಮಾ/ಗೀ: ಸಿ.ವಿ.ಶಿವಶಂಕರ್
ಗಾ: ಎಸ್.ಜಾನಕಿ, ಪಿ.ಬಿ.ಶ್ರೀನಿವಾಸ್, ನಾಗೇಂದ್ರ, ರೇಣುಕ, ಎಲ್.ಆರ್.ಈಶ್ವರಿ, ರಾಮಚಂದ್ರ, ಕೆ.ಎಸ್.ಎಲ್.ಸ್ವಾಮಿ
ಸಂ: ಕೆ.ಪಿ.ಕೃಷ್ಣ, ಚಿನ್ನಪ್ಪ, ಎಸ್.ಪಳನಿ
ಛಾ: ಜಿ.ಚಂದ್ರನ್, ಗೋವಿಂದಸ್ವಾಮಿ, ರಾಜಪ್ಪನ್
ಸ: ಆರ್. ರತ್ನ
ಧ್ವ: (ಹಾ) ಶೇಷಾದ್ರಿ, (ಮಾ) ಕಣ್ಣನ್, ಕರುಣಾಕರನ್, ಸೀತಾರಾಂ
ಸಾ: ನಂದಕುಮಾರ್, ವೆಂಕಟೇಶ್, ಸತ್ಯನ್, ರಾಮು
ಪ್ರ: ಎಸ್.ಪಿ.ರಾಜಶೇಖರ್, ಮುತ್ತು
ಸ್ಟು: ಪ್ರೀಮಿಯರ್ (ಮೈಸೂರು) ನ್ಯೂಟೋನ್ (ಮದ್ರಾಸು)
ಹಾ: ೧)'ಬಾಳಿನಲ್ಲಿ ಒಂದೊಂದೇ ಶುಭದಿನ...', ೨)'ಗಂಗಾಧರಾ ಗೌರೀವರಾ...', ೩)'ಜಯನಗರ ವಿಜಯನಗರ...', ೪)'ಜಾರಿ ಬಿದ್ದ ಜಾಲಕ್ಕೆ...', ೫)'ಇಲ್ಲಿಗೇ ಋಣವು ತೀರಿತು...', ೬)'ಚಾಮರಾಜಪೇಟೇಲಿ...', ೭)'ಕಂಡೇ.. ಕಂಡೇ...'
ಕ.ಸಾ: ಒಂದು ಮನೆ ಕಟ್ಟುವ ವಿದ್ಯಮಾನಗಳ ಹಿನ್ನೆಲೆಯಲ್ಲಿ ಮಧ್ಯಮ ವರ್ಗದವರ ಸಮಸ್ಯೆಯೇ ಕಥಾವಸ್ತು.

೧೮೮. ಮಂತ್ರಾಲಯ ಮಹಾತ್ಮೆ

(೧೯೬೬ / ಕಪ್ಪು-ಬಿಳುಪು / ಭಕ್ತಿಪ್ರಧಾನ)

ಲಾ: ಜಗಜ್ಯೋತಿ ಫಿಲಂಸ್
ಪ್ರೊ: ಟಿ.ವಿ.ಸಿಂಗ್ ಠಾಕೂರ್, ಬಿ.ದೊರೆರಾಜ್, ಎಸ್.ಕೆ.ಭಗವಾನ್
ನಿ: ಟಿ.ವಿ.ಸಿಂಗ್ ಠಾಕೂರ್
ಸ.ನಿ: ಎಸ್.ಕೆ.ಭಗವಾನ್
ಅ: ರಾಜಕುಮಾರ್, ಉದಯಕುಮಾರ್, ರಮೇಶ್, ಹೆಚ್.ರಾಮಚಂದ್ರಶಾಸ್ತ್ರಿ, ಕುಪ್ಪರಾಜ್, ರಾಮಮೂರ್ತಿ, ಭಾರದ್ವಾಜ್, ಹನುಮಂತಾಚಾರ್, ಜಯಂತಿ, ಆದವಾನಿ ಲಕ್ಷ್ಮೀದೇವಿ, ಸುಗುಣ, ಗೌರವ ನಟರು : ಕಲ್ಪನಾ, ಜೂ.ರೇವತಿ, ಜಯಶ್ರೀ, ಜಯಾ, ಕುಮಾರಿ ಸುಮಾ, ಕು|ಲಲಿತ, ಗಣಪತಿಭಟ್, ಬೆಂಗಳೂರು ನಾಗೇಶ್, ಬೆಂಗಳೂರು ಬಸಪ್ಪ, ಅಶ್ವತ್ಥನಾರಾಯಣ, ಎಂ.ಎಸ್.ಸುಬ್ಬಣ್ಣ, ಶ್ರೀಕಾಂತ್, ಕಾಶೀನಾಥ್, ಶ್ರೀಧರ್, ಆರ್.ಆರ್.ಕುಂಜೂರ್, ತಂತ್ರಿ, ಡಾ|ಶೇಷಗಿರಿರಾವ್
ಮಾ: ಜಿ.ವಿ.ಅಯ್ಯರ್
ಗೀ: ಜಿ.ವಿ.ಅಯ್ಯರ್, ರಾಘವೇಂದ್ರಸ್ವಾಮಿಗಳು
ಗಾ: ಪಿ.ಬಿ.ಶ್ರೀನಿವಾಸ್, ಎಸ್.ಜಾನಕಿ, ಪಿ.ಲೀಲಾ, ಎಲ್.ಆರ್.ಈಶ್ವರಿ, ಸಿ.ಎಸ್.ಸರೋಜಿನಿ, ಬೆಂಗಳೂರು ಲತಾ, ವೀರಮಣಿ
ಸಂ: ಎನ್.ಸಿ.ರಾಜನ್
ಛಾ: ಬಿ.ದೊರೈರಾಜ್
ಕಲೆ: ಆರ್.ಬಿ.ಎಸ್.ಮಣಿ
ಸ: ರಾಜನ್ ನಾಗೇಂದ್ರ
ಧ್ವ: (ಹಾ)ಇ.ಐ.ಜೀವ, (ಮಾ)ಆರ್.ಜಿ.ಪಿಳ್ಳೆ
ನೃ: ಉಡುಪಿ ಬಿ. ಜಯರಾಂ (ನೃತ್ಯ: ರಾಧಿಕ ಮತ್ತು ಜ್ಯೋತಿ)
ವ: ಸೆಲ್ವರಾಜ್, ಬಿ.ಆರ್.ಸಿಂಗ್
ಪ್ರ: ಬಿ.ಆರ್.ಸಿಂಗ್
ಸ್ಟು: ವೀನಸ್ (ಮದರಾಸು), ಅರುಣಾಚಲಂ ಸ್ಟುಡಿಯೋ
ಹಾ: ೧)'ತುಂಗಾತೀರ ವಿರಾಜಂ...', ೨)'ಕಾವ್ಯರತಿ ಮಂದಿರದ...', ೩)'ಆಭರಣದ ಅಲಂಕಾರವೇನೂ...', ೪)'ಕಲಿಯಿರೊಂದು ಪಾತವನ್ನು...', ೫)'ನೀನು ಬಾರಲೆಲ್ಲ...', ೬)'ಇಂದು ಎನಗೆ ಗೋವಿಂದ...', ೭)'ರಸಿಕಾ ಸಾಲದೇ ರಸದಾ...'
ವಿ: ಉದ್ದ - ೪೬೧೮.೮೪, ೧೭ ರೀಲುಗಳು
ಕ.ಸಾ: ರಾಘವೇಂದ್ರಸ್ವಾಮಿಗಳ ಹುಟ್ಟು, ಸ್ವಾಮಿಗಳಾದ ನಂತರದ ಪವಾಡ, ಮಹಿಮೆಯನ್ನು ಈ ಚಿತ್ರ ಒಳಗೊಂಡಿದೆ.

೧೮೯. ದುಡ್ಡೇ ದೊಡ್ಡಪ್ಪ

(೧೯೬೬ / ಕಪ್ಪು-ಬಿಳುಪು / ಸಾಮಾಜಿಕ)

ಲಾ: ಪದ್ಮಿನಿ ಪಿಕ್ಚರ್ಸ್
ಪ್ರೊ/ನಿ: ಬಿ.ಆರ್.ಪಂತುಲು
ಸ.ನಿ: ಎಸ್.ಆರ್.ಶಿವರಾಮ್, ಸೆಲ್ವರಾಜ್
ಅ: ಬಿ.ಆರ್.ಪಂತುಲು, ರಮೇಶ್, ನರಸಿಂಹರಾಜು, ಸೂರ್ಯಕುಮಾರ್, ಗಿರಿಯನ್, ಗುರುರಾಜ್, ಗಣಪತಿಭಟ್, ಗುಗ್ಗು, ಹನುಮಂತಾಚಾರ್, ಹೆಚ್.ಕೃಷ್ಣಶಾಸ್ತ್ರಿ, ನಾಗಪ್ಪ, ಭವಾನಿ ಶಂಕರ್, ಎಂ.ವಿ.ರಾಜಮ್ಮ, ಭಾರತಿ, ಶಾರದ, ಪಾಪಮ್ಮ, ಶಾಂತಮ್ಮ, ಸುಗುಣ, ಸೂರ್ಯಕುಮಾರಿ, ವಿಜಯಭಾರತಿ.
ಯಕ್ಷಗಾನ ನೃತ್ಯ: ಕೃಷ್ಣಕುಮಾರ್, ವಿ.ಆರ್.ಲಕ್ಷ್ಮಿ,

ಬಿಪ್ಪಾಲಿ ನೃತ್ಯ: ಕುಮಾರಿ ಯಶೋದ, ಪದ್ಮಾವತಮ್ಮ, ವಿಜಯಕುಮಾರಿ
ಕ: ಮಾ.ರಾ.
ಚಿ.ಕ: ಪದ್ಮಿನಿ ಪಿಕ್ಚರ್ಸ್ ಸಾಹಿತ್ಯ ಶಾಖೆ
ಮಾ: ಕಣಗಾಲ್ ಪ್ರಭಾಕರಶಾಸ್ತ್ರಿ
ಗೀ: ಆರ್.ಎನ್.ಜಯಗೋಪಾಲ್, ವಿಜಯನಾರಸಿಂಹ
ಗಾ: ಪಿ.ಬಿ.ಶ್ರೀನಿವಾಸ್, ಬಾಲಮುರಳಿಕೃಷ್ಣ, ಪಿ.ನಾಗೇಶ್ವರರಾವ್, ಪೋತಿ, ರುದ್ರಪ್ಪ, ಹನುಮಂತಾಚಾರ್, ರೇಣುಕಾ, ಲತಾ, ಎ.ಪಿ.ಕೋಮಲಾ, ಎಸ್.ಜಾನಕಿ
ಸಂ: ಆರ್.ದೇವರಾಜನ್
ಛಾ: ರಾಮಮೂರ್ತಿ
ಕಲೆ: ಸೆಲ್ವರಾಜ್
ಸ: ಟಿ.ಜಿ.ಲಿಂಗಪ್ಪ
ಧ್ವ: (ಮಾ)ಎಂ.ಶಿವರಾಮ್, (ಹಾ)ರಂಗಸ್ವಾಮಿ, ನರಸಿಂಹಮೂರ್ತಿ
ನೃ: ಕೃಷ್ಣಕುಮಾರ್, ಧಾರವಾಡ
ಸಾ: ಅಳಗಿರಿ
ವ: ಎಂ.ರಾಧಾ
ಪ್ರ: ಧನಕೋಟಿ, ಎಂ.ಕೆ.ಶ್ರೀನಿವಾಸ್, ವಿ.ಪಾರ್ಥಸಾರಥಿ
ಸ್ಟು: ವಿಜಯ (ಮದರಾಸು)
ಹಾ: ೧)'ಯೌವನದಾ ಹೊಸಹಾಡು ಮೂಡಿಹುದು ಹೃದಯದಲಿ....', ೨)'ಕಣ್ಣುಗಳ ಸನ್ನೆಯಲಿ ಕಾವ್ಯಗಳ ತುಂಬಿರಲು....', ೩)'ಹಗಲಿನಲಿ ಇರುಳು ಹೃದಯವು ಅಗಲಿರಲು....', ೪)'ಭಕ್ತಿ ಬೇಕು ವಿರಕ್ತಿ ಬೇಕು ಸರ್ವಶಕ್ತಿ ಬೇಕು...', ೫)'ಯಾರೆಲೆ ನೀರ ನಾರೀಮಣಿಯೆ....', ೬)'ಹಣವೇ ನಿನ್ನಯ ಗುಣ ಎಷ್ಟು ವರ್ಣಿಸಲಿ...', ೭)'ನೀನು ನಾನು ಯಾರೋ ಏನೊ ಒಲಿದು ಒಂದಾದೆವು...', ೮)'ನೋಡು ಕಣ್ಣಾರ ಹೆಣ್ಣ ವಯ್ಯಾರ...', ೯)'ಮತಿಬೇಕು ಸುಗುಣವತಿಗೆ....', ೧೦)'ಸೋ ಸೋ ಸೋ ಹಾಡಾದ ಸೋನು ಡಾನು ಥಕ್ಕಿ ಹೊಡದರೆ ನೋಡಾ....'
ವಿ: ರಮೇಶ್-ಭಾರತಿ ಜೋಡಿಯಾಗಿ ಅಭಿನಯಿಸಿದ ಮೊದಲ ಚಿತ್ರ. ಯಕ್ಷಗಾನ, ಬಿಪ್ಪಾಲಿ ವಿಶೇಷ ರೀತಿಯಲ್ಲಿ ಸೇರಿವೆ.
ಕ.ಸಾ: ಹಣವಿದ್ದಾಗ ನೀರಿನಂತೆ ಖರ್ಚು ಮಾಡಿ, ಇಲ್ಲದಾಗ ಬಾಯಿಬಿಡುವ ಬದಲು ಗಳಿಸಿದ ಹಣದ ಮೌಲ್ಯವನ್ನು ಅರಿತುಕೊಂಡು ಬಾಳುವ ನೀತಿಯೊಂದಿಗೆ ಕಾಲ ಹಾಗೂ ದುಡಿಮೆಯ ಬೆಲೆಯ ಬಗ್ಗೆ ಅರಿವು ಮೂಡಿಸುವ ಕಥಾ ಹಂದರವನ್ನು ಈ ಚಿತ್ರ ಒಳಗೊಂಡಿದ.

೧೯೦. ಕಠಾರಿವೀರ

(೧೯೬೬ / ಕಪ್ಪು-ಬಿಳುಪು / ಜಾನಪದ)

ಲಾ: ಸರಸ್ವತಿ ಚಿತ್ರಾ
ಪ್ರೊ: ಟಿ.ವಾಸಣ್ಣ (ದಾವಣಗೆರೆ), ಎಸ್.ಹೀರಾ

ನಿ: ವೈ.ಆರ್.ಸ್ವಾಮಿ
ಸ.ನಿ: ಶಿವಲಿಂಗಯ್ಯ
ಅ: ರಾಜಕುಮಾರ್, ಉದಯಕುಮಾರ್, ನರಸಿಂಹರಾಜು, ಬಾಲಕೃಷ್ಣ, ರತ್ನಾಕರ್, ನಾಗಪ್ಪ, ಕುಪ್ಪರಾಜ್, ಪೈಲ್ವಾನ್ ಸ್ಟಾರ್ ನಾಗಪ್ಪ, ಉದಯ ಚಂದ್ರಿಕಾ, ವಾಣಿಶ್ರೀ, ಶೋಭಾರಾಣಿ, ಪಾಪಮ್ಮ, ಬೇಬಿ ಸುನೀತಾ, ವಿಧುಶ್ರೀ, ಜಾನಕಿ, ಹೊನ್ನಪ್ಪ, ಶ್ರೀಕಾಂತ್, ಶ್ಯಾಮ್‌ಸುಂದರ್, ಡಿ.ಟಿ.ಶಶಿರಾಜ್
ಚಿ.ಕ: ವೈ.ಆರ್.ಸ್ವಾಮಿ
ಮಾ/ಗೀ: ಸೋರಟ್ ಅಶ್ವತ್ಥ್
ಗಾ: ಪಿ.ಬಿ.ಶ್ರೀನಿವಾಸ್, ಪಿ.ಸುಶೀಲ, ಎಸ್.ಜಾನಕಿ, ಎಲ್.ಆರ್.ಈಶ್ವರಿ, ನಾಗೇಂದ್ರ, ಸ್ವರ್ಣಲತಾ
ಸಂ: ಆರ್. ಹನುಮಂತರಾವ್
ಛಾ: ಆರ್.ಮಧು
ಕಲೆ: ಬಿ.ಎನ್.ಕೃಷ್ಣ
ಸ: ಉಪೇಂದ್ರಕುಮಾರ್
ಧ್ವ: ರಾಮನಾಥನ್
ವ: ದೊರೈಕಣ್ಣನ್, ತಂಗಪ್ಪನ್
ಪ್ರ: ವೈ.ಮಾಧವಯ್ಯ, ಸುಬ್ಬಣ್ಣ, ರಾಜಗೋಪಾಲ್
ಸ್ಟು: ಗೋಲ್ಡನ್ ಸಿನಿ (ಮದರಾಸು)
ಹಾ: ೧)'ತೋರಲೆ ನೀ ಪ್ರಿಯನಾ...', ೨)'ಹಾದಲೇ? ಆಡಲೇ...', ೩)'ಕಿವಿ ಮಾತೊಂದ ಹೇಳೆ...', ೪)'ಹಾಯಾದ ಈ ಸಂಗಮಾ...', ೫)'ಬರಿ ಮಾತೆಲ್ಲ ಬೇಡ...', ೬)'ಬರಿ ಮಾತೆಲ್ಲ ಬೇಡ...', ೭)'ಚೆಂಗು ಚೆಂಗೆಂದು ಹಾರುವ...'
ವಿ: ಉಪೇಂದ್ರಕುಮಾರ್ ಸಂಗೀತ ಹಾಗೂ ಉದಯಚಂದ್ರಿಕಾ ಪ್ರಥಮ ಚಿತ್ರ
ಕ.ಸಾ: ಅರಸನನ್ನು ಕೊಂದು ಅರಸಿಯನ್ನು ಸೆರೆಯಲ್ಲಿಟ್ಟು ರಾಜಕುಮಾರಿಯ ಮೇಲೆ ಕಣ್ಣುಹಾಕುತ್ತಾನೆ ಸೇನಾಧಿಪತಿ. ರಾಜಭಕ್ತ ಮಂತ್ರಿ ರಾಜವಂಶದ ಕುಡಿಯನ್ನು ಎತ್ತಿಕೊಂಡು ಪರಾರಿಯಾಗಿ, ಅವನನ್ನು ಬೆಳಸುವ ನಿರ್ಧಾರ ಮಾಡುತ್ತಾನೆ. ರಾಜಕುಮಾರಿ ವೇಷ ಮರೆಸಿಕೊಂಡು ವೀರನಾದ ಯುವಕನನ್ನು ಸೇರಿ ಸೇನಾಧಿಪತಿಯನ್ನು ಸದೆ ಬಡಿಯುತ್ತಾಳೆ.

೧೯೧. ಬಾಲನಾಗಮ್ಮ

(೧೯೬೬ / ಕಪ್ಪು-ಬಿಳುಪು / ಜಾನಪದ)

ಲಾ: ಸನಾತನ ಕಲಾಮಂದಿರ
ಪ್ರೊ: ವಿಕ್ರಂ ಶ್ರೀನಿವಾಸ್

ನಿ: ಪಿ.ಆರ್.ಕೌಂಡಿನ್ಯ
ಸ.ನಿ: ಕುಣಿಗಲ್ ನಾಗಭೂಷಣ್
ಅ: ರಾಜಕುಮಾರ್, ಉದಯಕುಮಾರ್, ಬಾಲಕೃಷ್ಣ, ನರಸಿಂಹರಾಜು, ಪಂಢರಿಬಾಯಿ, ಕಲ್ಪನಾ, ರಾಜಶ್ರೀ, ರಮಾದೇವಿ, ಪಾಪಮ್ಮ, ನಾಗಯ್ಯ, ಶಾರದಾ, ಮಾ| ಬಾಬು, ಚಿ| ಸದಾಶಿವಯ್ಯ
ಕ/ಮಾ: ಚಿ.ಉದಯಶಂಕರ್
ಗೀ: ಚಿ.ಸದಾಶಿವಯ್ಯ, ಚಿ.ಉದಯಶಂಕರ್
ಗಾ: ಪಿ.ಬಿ.ಶ್ರೀನಿವಾಸ್, ಎಲ್.ಆರ್.ಈಶ್ವರಿ, ಎಸ್.ಜಾನಕಿ, ಬೆಂಗಳೂರು ಲತಾ
ಸಂ: ಟಿ.ಚಕ್ರಪಾಣಿ
ಛಾ: ಬಿ.ಎನ್.ಹರಿದಾಸ್
ಸ: ಎಸ್.ರಾಜೇಶ್ವರರಾವ್
ಧ್ವ: (ಹಾ)ಎನ್.ಶೇಷಾದ್ರಿ, (ಮಾ)ಬಿ.ಎಸ್.ಶಾಮಣ್ಣ
ನೃ: ಚಿನ್ನಿ ಸಂಪತ್
ವ: ವಿ.ಎನ್.ಮೂರ್ತಿ
ಪ್ರ: ನಾರಾಯಣಸ್ವಾಮಿ, ದೊರೆಸ್ವಾಮಿ, ವೀರರಾಜು
ಸ್ಟು: ವಿಕ್ರಂ (ಮದರಾಸು)
ಹಾ: ೧)'ಬಂಗಾರ ಬೊಂಬೆಗಳೇ ಆನಂದ ಕಂದಗಳೇ...', ೨)'ಈ ಹೆಣ್ಣ ವಿಲಾಸ ನೋಡು...', ೩)'ಇಬ್ಬರೊಂದಿರ....', ೪)'ಕಂದ ಕಣ್ಮಣಿಯೇ ಅಮ್ಮನ ಅರಗಿಣಿಯೇ....', ೫)'ಕಾಲ ಬಂದಿತು ನಿನಗೆ ಕಾಲ ಬಂದಿತು...', ೬)'ಈ ಅಂದದ ಸೃಷ್ಟಿಯ...'

ಕ.ಸಾ: ಮಾಯಾಮರಾಠಿ ಎಂಬ ಮಾಂತ್ರಿಕ ಬಾಲನಾಗಮ್ಮನನ್ನು ಮೋಹಿಸಿ ತನ್ನ ಮಾಯಾಜಾಲದಿಂದ ಗುಹೆಗೆ ಕರೆದೊಯ್ಯುವನು. ಅವಳನ್ನು ರಕ್ಷಿಸಲು ಹೋದ ಪತಿ ಶಿಲೆಯಾಗುವನು. ಬಾಲನಾಗಮ್ಮನ ಮಗನೇ ಬಂದು ತಂದೆ ತಾಯಿಯನ್ನು ರಕ್ಷಿಸುವನು. ಹಲವಾರು ಮಾಯಾ ಚಮತ್ಕಾರಗಳನ್ನು ಈ ಚಿತ್ರದಲ್ಲಿ ಅಳವಡಿಸಿರುವುದು ಒಂದು ವಿಶೇಷ.

೧೯೨. ತೂಗುದೀಪ

(೧೯೬೬ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಶ್ರೀ ಲಲಿತಾ ಫಿಲಂಸ್
ಪ್ರೊ: ಆರ್.ಜಿ.ಕೇಶವಮೂರ್ತಿ, ಎಸ್.ಪುಟ್ಟಣ್ಣ ಮತ್ತು ಮಿತ್ರರು
ನಿ: ಕೆ.ಎಸ್.ಎಲ್.ಸ್ವಾಮಿ (ರವೀ)
ಸ.ನಿ: ಆರ್.ಜಿ.ಕೇಶವಮೂರ್ತಿ, ಎಸ್.ಪುಟ್ಟಣ್ಣ
ಅ: ರಾಜಕುಮಾರ್, ಲೀಲಾವತಿ, ನರಸಿಂಹರಾಜು, ಬಿ.ವಿ.ರಾಧಾ, ಬಾಲಕೃಷ್ಣ, ರಮಾದೇವಿ, ಆರ್.ನಾಗೇಂದ್ರರಾವ್, ಹೆಚ್.ಆರ್.ಶಾಸ್ತ್ರಿ, ಶ್ರೀನಿವಾಸ್, ಜಯಶ್ರೀ, ಗಣಪತಿಭಟ್, ಲಕ್ಷ್ಮಿ, ಬೇಬಿ ಪ್ರಶಾಂತ್

ಕ: ಶರತ್‌ಚಂದ್ರ ಚಟರ್ಜಿ
ಚಿ.ಕ: ಕೆ.ಎಸ್.ಎಲ್.ಸ್ವಾಮಿ
ಮಾ: ಆರ್.ಎನ್.ಜಯಗೋಪಾಲ್, ಪಿ.ವಿ. ನಂಜರಾಜ ಅರಸ್, ಬಿ.ನಾಗೇಶ್ ಬಾಬ
ಗೀ: ಆರ್.ಎನ್.ಜಯಗೋಪಾಲ್. ಕೆ.ಎಸ್.ಎಲ್.ಸ್ವಾಮಿ, ಪಿ.ವಿ.ನಂಜರಾಜಅರಸ್
ಗಾ: ಪಿ.ಬಿ.ಶ್ರೀನಿವಾಸ್, ಎಲ್.ಆರ್.ಈಶ್ವರಿ, ಪಿ.ಸುಶೀಲಾ
ಸಂ: ಬಾಲ್.ಜಿ.ಯಾದವ್
ಛಾ: ಆರ್.ಎನ್.ಕೆ.ಪ್ರಸಾದ್
ಕಲೆ: ವಿ.ಎಂ.ವತ್ರ್ಕರ್
ಸ: ವಿಜಯಭಾಸ್ಕರ್
ಧ್ವ: (ಹಾ) ಎಂ.ಬಿ.ವಾಲ್ಕೆ, (ಮಾ) ಫ್ರಾನ್ಸಿಸ್ ವಿ.ಸ್ವಾಮಿ
ನೃ: ಉಡುಪಿ ಜಯರಾಂ
ಪ್ರ: ಎಂ.ಎಸ್.ಸುಬ್ಬಣ್ಣ
ಸ್ಟು: ಫಿಲಂ ಸೆಂಟರ್
ಹಾ: ೧) 'ಮನವೇ ಮಂದಿರ ಸ್ನೇಹ ದೇಗುಲ...', ೨) 'ಮೌನವೇ ಆಭರಣ...', ೩) 'ಹೇಳಲೇ ಹಾಡಲೇ ಒಲವಿನಾ...', ೪) 'ಅಂದು ಜನಕಸುತೆ...', ೫) 'ನಿಮ್ಮ ಮುದಿನ ಕಂದ...', ೬) 'ಎಲ್ಲಿಂದ ನೀ ಬಂದೆ...', ೭) 'ಓಹೋಹೋ ಮೈಫೇರ್ ಲೇಡಿ...',
ವಿ: ಕೆ.ಎಸ್.ಎಲ್.ಸ್ವಾಮಿ ನಿರ್ದೇಶಿಸಿದ ಪ್ರಥಮ ಚಿತ್ರ. ಶ್ರೀನಿವಾಸ್ ಖಳನಟರಾಗಿ, ತೂಗುದೀಪ ಶ್ರೀನಿವಾಸ್ ಆದರು.
ಸೆ: ಉದ್ದ - ೪೫೫೬.೮೧, ೧೭ ರೀಲ್‌ಗಳು, 'ಯು'
ಕ.ಸಾ: ತಂದೆ ತಾಯಿಯಿಲ್ಲದ ಹುಡುಗ, ಅಡುಗೆ ಕೆಲಸ ಮಾಡುವ ಹೆಂಗಸಿನ ಮಗಳನ್ನು ಪ್ರೀತಿಸಿ ಸಾಕಿದವರ ವಿರೋಧದೊಡನೆ ಮದುವೆಯಾಗುತ್ತಾನೆ. ಆಕೆಗೆ ಕಿರುಕುಳಕೊಟ್ಟು ಮನೆಯಿಂದ ಹೊರಹಾಕುತ್ತಾರೆ. ಗಂಡಹೆಂಡಿರು ದೂರವಾಗುತ್ತಾರೆ. ಎಲ್ಲಾ ಸಂದೇಹ ಪರಿಹಾರವಾಗಿ ಕಡೆಗೆ ಒಂದಾಗುತ್ತಾರೆ.

೧೯೩. ಮಹಾಶಿಲ್ಪಿ

(೧೯೬೬ / ಕಪ್ಪು-ಬಿಳುಪು / ಜಾನಪದ)
ಲಾ: ಪದ್ಮಾ ಪ್ರೊಡಕ್ಷನ್ಸ್ (ಹಾಸನ)

ಪ್ರೊ: ಹೆಚ್.ಬಿ.ಆದಿರಾಜಯ್ಯ, ಹೆಚ್.ಬಿ.ಜ್ವಾಲನಯ್ಯ, ಗೋಕುಲದಾಸ ಹಾಗೂ ಇತರರು
ನಿ: ಎಸ್.ವಿ.ದೊರೆಸ್ವಾಮಿ
ಸ.ನಿ: ಸತ್ಯಾದ್ರಿ
ಅ: ಹೆಚ್.ಬಿ.ಜ್ವಾಲನಯ್ಯ, ಕೆ.ಎಸ್.ಅಶ್ವತ್ಥ್, ಎಂ.ಎಸ್.ಸುಬ್ಬಣ್ಣ, ರಾಜಾರಾಂ ಗಿರಿಯನ್, ಸೋರಟ್ ಅಶ್ವತ್, ಎಂ.ಪಿ.ಶಂಕರ್, ಪೈಲ್ವಾನ್ ಬಜ್ಜಯ್ಯ, ಜಯಂತಿ, ಎಂ.ಎನ್.ಲಕ್ಷ್ಮೀದೇವಿ, ಜಯಶ್ರೀ, ಲಕ್ಷ್ಮೀಬಾಯಿ, ಪಾಪಮ್ಮ, ರಾಜಲಕ್ಷ್ಮಿ, ಶಾಂತಮ್ಮ, ಝಾನ್ಸಿರಾಣಿ, ರಮಾ-ಪ್ರಭಾ (ನರ್ತಕಿಯರು, ಬೇಬಿ ಚೇತನಾ (ಚಂದ್ರ)
ಕ: ಹೆಚ್.ಬಿ.ಜ್ವಾಲನಯ್ಯನವರ ಕಾದಂಬರಿ
ಚಿ.ಕ: ಎಸ್.ವಿ.ದೊರೆಸ್ವಾಮಿ
ಮಾ/ಗೀ: ಹೆಚ್.ಬಿ.ಜ್ವಾಲನಯ್ಯ
ಗಾ: ಸ್ವರ್ಣಲತಾ, ಜಯದೇವ್, ಪಿ.ಸುಶೀಲ, ಎಸ್.ಜಾನಕಿ, ಎಲ್.ಆರ್.ಈಶ್ವರಿ, ಪಿ.ಕಾಳಿಂಗರಾವ್
ಸಂ: ಪಿ.ಎಸ್.ಮೂರ್ತಿ
ಛಾ: ಎಸ್.ವಿ.ಶ್ರೀಕಾಂತ್
ಸ: ಪಿ.ಕಾಳಿಂಗರಾವ್
ಧ್ವ: (ಮಾ) ಕರುಣಾಕರನ್, ನಾಗೇಶ್ವರರಾವ್, (ಹಾ) ಕಣ್ಣನ್
ನೃ: ಕೃಷ್ಣರಾಜ್, ಕೃಷ್ಣಕುಮಾರ್
ವ: ಆರ್.ಕೃಷ್ಣ
ಪ್ರ: ಎಂ.ಎಸ್.ಸುಬ್ಬಣ್ಣ, ರಾಜಗೋಪಾಲ್
ಸ್ಟು: ಗೋಲ್ಡನ್, ವೆಂಕಟೇಶ್ವರ ಸಿನಿಟೋನ್, ವೀನಸ್
ಹಾ: ೧) 'ಚೆಂದುಳ್ಳಿ ಹೆಣ್ಣೆ ಗಜನಿಂಬೆ ಹೆಣ್ಣೆ...', ೨) 'ಶ್ಯಾಮಲ ಗಗನದಿ ಮಿನುಗುವ ತಾರೆ....', ೩) 'ಜೋ ಜೋ ಜೋ ಲಾಲೀ ಲಾಲೀ ಲಾಲೀ ವಸುಮತಿಯ ಕಂದ ನಮ್ಮೂರ ಚೆಂದಾ...', ೪) 'ಓಡಿಮಣ್ಣೋ ಓಡಿ ಬೂದಿಯೋ ಬಾಳಿಗೆಲ್ಲ ಇದೆ ಕೊನೆಯೋ, ೫) 'ಸೊಗಸುಗಾರ ಸೇರೆಗಾರ ಓಡಿ ಬಾ ಓಡಿ ಬಾ ಕಾಡಬೇಡ ಓಡಿ ಬಾ.....', ೬) 'ಬಾಹುಬಲಿಯೇ ಬಾಹುಬಲಿಯೇ....', ೭) 'ಭುವಿಯಲ್ಲಿ ಭಗವಂತನವತಾರ...'
ವಿ: ಶ್ರವಣಬೆಳಗೊಳ ಬೆಟ್ಟ ಗೊಮ್ಮಟೇಶ, ಮುಂತಾದವುಗಳನ್ನು ಚಿತ್ರೀಕರಿಸಲಾಗಿದೆ.
ಕ.ಸಾ: ಶ್ರವಣಬೆಳಗೊಳದ ಗೊಮ್ಮಟಗಿರಿಯ ಮೇಲೆ ಶಾಂತಿ-ಸಹನಾ ಮೂರ್ತಿಯಾಗಿ ನಿಂತಿರುವ ಭವ್ಯ ಬಾಹುಬಲಿಯ ವಿಗ್ರಹವನ್ನು ಕಡೆದ ಮಹಾಶಿಲ್ಪಿಯ ಸಾಹಸ ಕಥೆಯನ್ನು ಈ ಚಿತ್ರ ಒಳಗೊಂಡಿದೆ.

೧೯೪. ಬದುಕುವದಾರಿ

(೧೯೬೬ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಬಲರಾಮ ಪಿಕ್ಚರ್ಸ್
ಪ್ರೊ: ವಿ.ಎಸ್.ಆರ್.ಆಂಜನೇಯಲು
ನಿ: ಕೆ.ಎಸ್.ಪ್ರಕಾಶ್‌ರಾವ್
ಸ.ನಿ: ಪಿ.ಆರ್.ವೇಣುಗೋಪಾಲರಾವ್
ಅ: ಕಲ್ಯಾಣಕುಮಾರ್, ಜಯಲಲಿತ, ಉದಯಕುಮಾರ್, ವಂದನ, ನರಸಿಂಹರಾಜು, ಜಯಶ್ರೀ, ಬಾಲಕೃಷ್ಣ, ಎಂ.ಎನ್.ಲಕ್ಷ್ಮೀದೇವಿ, ರಮೇಶ್, ಲಕ್ಷ್ಮೀಕಾಂತಂ, ಗುಗ್ಗು, ಬೇಬಿ ಕನಕ, ರಾಂಬಾಬು, ಚಂದ್ರು, ಬಿ.ಎಸ್.ವಿಶ್ವನಾಥ್, ರಾಜಗೋಪಾಲ್, ಮಾ|ರವಿ, ಆರ್.ನಾಗೇಂದ್ರರಾವ್, ಕೆ.ಎಸ್.ರೆಡ್ಡಿ, ಗೀತಾಂಜಲಿ (ನೃತ್ಯ)
ಕ/ಚಿ.ಕ/ಮಾ : ಹುಣಸೂರು ಕೃಷ್ಣಮೂರ್ತಿ
ಗೀ: ಹುಣಸೂರು ಕೃಷ್ಣಮೂರ್ತಿ, ಕು.ರ.ಸೀ., ಕುಯಿಲಿನ್, ಆರುದ್ರ, ದತ್ತ, ಭಾಸ್ಕರನ್
ಗಾ: ಪಿ.ಬಿ.ಶ್ರೀನಿವಾಸ್, ಪಿ.ಸುಶೀಲಾ, ವಸಂತ, ಜಯದೇವ್, ಎಸ್.ಜಾನಕಿ, ಮಾಧವಪೆದ್ದಿ ಸತ್ಯಂ, ಪಿ.ನಾಗೇಶ್ವರರಾವ್
ಸಂ: ವೀರಪ್ಪ
ಛಾ: ಜೆ.ಸತ್ಯನಾರಾಯಣ
ಕಲೆ: ಸೂರಣ್ಣ
ಸ: ಟಿ. ಚಲಪತಿರಾವ್
ಧ್ವ: (ಹಾ) ಸ್ವಾಮಿನಾಥನ್, (ಮಾ) ಮೋಹನಸುಂದರಂ
ನೃ: ವಸುಮರ್ತಿ ಕೃಷ್ಣಮೂರ್ತಿ, ಚಿನ್ನಿ-ಸಂಪತ್, ಚೋಪ್ರಾ, ಕೆ.ಎಸ್.ರೆಡ್ಡಿ
ಸಾ: ಮಾಧವನ್
ವ: ನಾರಾಯಣಮೂರ್ತಿ
ಪ್ರ: ಗೋಪಾಲ್, ನಾರಾಯಣ, ನರಸಿಂಹಲು
ಸ್ಟು: ಸದರನ್ ಮೂವಿಟೋನ್ (ಹೈದರಾಬಾದ್)

ಹಾ: ೧) 'ಉದ್ಯೋಗ ಸಿಗುವ ಒಳಗುಟ್ಟು...', ೨) 'ಇಲ್ಲೂ ಇರುವೇ ಅಲ್ಲೂ ಇರುವೇ...', ೩) 'ಮಾಗೀಕಾಲ-ಸಾಯಂಕಾಲ...', ೪) 'ತಾಯೆ ಕನ್ನಡ ತಾಯೆ...', ೫) ಭಾವೈಕ್ಯತೆ ಸಾರುವ ಒಂದು ಹಾಡು, ೬) 'ತಾಯಿ ತಂದೆಯ ಬಿಟ್ಟು...', ೭) 'ಜೋರು ಜೋರಲಿ ಸಾಗೋ...', ೮) 'ಮಂಜುಳ ಮುರಳೀ...'
ವಿ: ಭಾವೈಕ್ಯತೆ ಸಾರುವ ಹಲವು ಭಾಷೆಗಳ ಕವಿಗಳು ಬರೆದ ಹಾಡನ್ನು ಬಳಸಿದೆ.
ಕ.ಸಾ: ಪ್ರತಿಯೊಬ್ಬ ಮನುಷ್ಯ ಜೀವನದಲ್ಲಿ ಬದುಕಲು ನಡೆಸುವ ಹೋರಾಟದ ಚಿತ್ರಣ. ಬದುಕಿಗಾಗಿ ಏನೆಲ್ಲ ಮೋಸ, ಕಪಟ, ವಂಚನೆಗಳನ್ನು ಮಾಡಬೇಕಾಗುತ್ತದೆ ಎಂಬುದರ ಹಾಸ್ಯ ಚಿತ್ರಣ.

೧೯೫. ಪ್ರೇಮಮಯಿ

(೧೯೬೬ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಶ್ರೀಕಾಂತ್ ಅಂಡ್ ಶ್ರೀಕಾಂತ್ ಎಂಟರ್‌ಪ್ರೈಸಸ್
ಪ್ರೊ: ಶ್ರೀಕಾಂತ್ ನಹತಾ, ಶ್ರೀಕಾಂತ್ ಪಟೇಲ್
ನಿ: ಎಂ.ಆರ್.ವಿಠಲ್
ಸ.ನಿ: ವಿ.ಕುಮಾರ್, ವಿ.ರಾಮಚಂದ್ರ
ಅ: ರಾಜಕುಮಾರ್, ಅಶ್ವತ್ಥ್, ಲೀಲಾವತಿ, ಜಯಂತಿ, ಜಯಮ್ಮ.ಬಿ, ಜಯ, ಬಿ.ವಿ.ರಾಧ, ರಮಾ, ಮಾ|ಪ್ರಶಾಂತ್, ಅರುಣಕುಮಾರ್, ರಂಗ, ಧಿಕ್ಕಿಮಾಧವರಾವ್, ಸುಬ್ಬಣ್ಣ, ರಾಘವೇಂದ್ರರಾವ್, ಕುಪ್ಪರಾಜ್



ಕ: ಸೇತುನಾಥ್
ಚಿ.ಕ: ಎಂ.ಆರ್.ವಿಠಲ್
ಮಾ: ಎಂ.ನರೇಂದ್ರಬಾಬು
ಗೀ: ವಿಜಯನಾರಸಿಂಹ, ನರೇಂದ್ರಬಾಬು
ಗಾ: ಟಿ.ಎಂ.ಸೌಂದರರಾಜನ್, ಎಸ್.ಜಾನಕಿ, ಜೇಸುದಾಸ್
ಸಂ: ಎಸ್.ಪಿ.ಎನ್.ಕೃಷ್ಣ, ಟಿ.ಪಿ.ವೇಲಾಯುಧನ್
ಛಾ: ಶ್ರೀಕಾಂತ್, ರಾಜಾರಾಂ
ಕಲೆ: ಬಿ.ಚಲಂ
ಸ: ಆರ್.ಸುದರ್ಶನ್
ವ್ವ: (ಹಾ)ಎಸ್.ಪಿ.ರಾಮನಾಥನ್, (ಮಾ)ಆರ್.ಜಿ.ಪಿಳ್ಳೈ
ನೃ: ಉಡುಪಿ ಜಯರಾಂ
ವ: ಪಿ.ಬಿ.ಕೃಷ್ಣಮೂರ್ತಿ
ಪ್ರ: ಎಂ.ಎಸ್.ಸುಬ್ಬಣ್ಣ, ರಾಜಗೋಪಾಲ್;
ಕೇಶಾಲಂಕಾರ: ಶ್ರೀಮತಿ ಎಂ.ಆರ್.ವಿಠಲ್
ಸ್ಟು: ವೀನಸ್, ಅರುಣಾಚಲ, ವಿಜಯ ಲ್ಯಾಬ್
ಹಾ: ೧)'ತಂಗಳ್ಳಾ ತೂಗಾಡೇ ತಂಗಾಳಿಯೇ....',
೨)'ಮನೆಯ ಜ್ಯೋತಿ...', ೩)'ಟೂ.. ಟೂ.. ಬೇಡಪ್ಪ...',
೪)'ಹೆಣ್ಣೇ ನಿನ್ನ...'
ಸೆ: ಉಪ ೪೩೬೮, ೧೭ ರೀಲ್‌ಗಳು, 'ಯು'
ಕ.ಸಾ: ಮಮತಾಮಯಿಯಾದ ಅತ್ತಿಗೆ ಹಾಗೂ ಅಣ್ಣನಿಗೆ ಒಬ್ಬನೇ ತಮ್ಮ. ಆತ ಪ್ರೀತಿಸಿ ಮದುವೆಯಾದ ಹೆಣ್ಣು ಮನೆ ಒಡೆಯುತ್ತಾಳೆ. ಪ್ರೇಮಮಯಿಯಾದ ಅತ್ತಿಗೆ ಮನೆ ಉಳಿಸಲು ಬಹಳ ಹೆಣಗಾಡುತ್ತಾಳೆ. ಕಡೆಗೆ ಅದಕ್ಕಾಗಿ ತನ್ನ ಪ್ರಾಣವನ್ನೇ ಪಣವಾಗಿಡುತ್ತಾಳೆ. ಮನೆ ಉಳಿಸುತ್ತಾಳೆ.

೧೯೬. ದೇವಮಾನವ

(೧೯೬೬ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಧನಲಕ್ಷ್ಮೀ ಫಿಲಂಸ್
ಪ್ರೊ: ರಾವಣ
ನಿ: ಸಿ.ಪಿ.ಜಂಬುಲಿಂಗಂ
ಅ: ಉದಯಕುಮಾರ್, ಜಯಂತಿ, ಬಿ.ವಿ.ರಾಧಾ, ಆವಪಾಸಿ ಲಕ್ಷ್ಮೀದೇವಿ, ಕುಪ್ಪುರಾಜ್, ತಾಯ್ ನಾಗೇಶ, ಕೆ.ಎಸ್.ಅಶ್ವತ್ಥ್, ವಂದನ, ಜಯಾ, ಶ್ರೀಕಾಂತ್, ಜೇಜಿಧನಲಕ್ಷ್ಮಿ, ನಳಿನಿ, ಅಯ್ಯಂಗಾರ್, ಸಂಜೀವಿ
ಕ: ರಾವಣ
ಮಾ/ಗೀ: ಎಸ್.ಕೆ. ಕರೀಂಖಾನ್
ಗಾ: ಪಿ.ಸುಶೀಲಾ, ಎಸ್.ಜಾನಕಿ, ಪಿ.ಬಿ.ಶ್ರೀನಿವಾಸ್, ಎಲ್.ಆರ್.ಈಶ್ವರಿ



ಸ: ಎಸ್.ಎಂ.ಸುಬ್ಬಯ್ಯನಾಯ್ಡು
ಸ್ಟು: ವಾಹಿನಿ, ಸತ್ಯ
ಹಾ: ೧)'ಜಣ್ಣ ಜಣ್ಣ ತುಂಬಿತಣ್ಣ...', ೨)'ನಡೆ ನಿನ್ನ ನಡೆಯ ಜಿಡ...', ೩)'ಯೌವ್ವನವೇ ಕಣ್ಣಲಿ ತುಂಬಿ...',
೪)'ಮನಮಿನಿಯ ನನ್ನ...', ೫)'ಓ ಹೆಣ್ಣಿನ ಚಂದ...',
೬)'ಲೋಕದ ನ್ಯಾಯ...',
ವಿ: ಮೊದಲು 'ಹುಟ್ಟಿಗುಣ ಸುಟ್ಟರೂ ಹೋಗದು' ಎಂಬ ಹೆಸರಿತ್ತು. ನಂತರ ಬದಲಾಯಿಸಿ 'ದೇವಮಾನವ' ಎಂದು ಹೆಸರಿಡಲಾಯಿತು.
ಕ.ಸಾ: ಸುಂದರ ಮಧ್ಯಮವರ್ಗದ ಹಳ್ಳಿಯ ರೈತ. ರಾಜ ಅವನ ತಮ್ಮ. ಅಣ್ಣನಿಗೆ ತಮ್ಮನನ್ನು ದೇಶದ ಸತ್ಪ್ರಜೆಯನ್ನಾಗಿ ಮಾಡಬೇಕೆಂಬ ಹಂಬಲ. ಆದರೆ ರಾಜ ಅಣ್ಣನ ಎಲ್ಲಾ ಆಸೆಯನ್ನು ಮಣ್ಣುಗೂಡಿಸಿ ಕಂಟಕಪ್ರಾಯನಾಗಿ ಬೆಳೆಯುತ್ತಾನೆ. ಅಣ್ಣ ಆತನನ್ನು ಕೊಂದು ಸಮಾಜಕ್ಕೆ ದೇವಮಾನವನಾಗುತ್ತಾನೆ.

೧೯೭. ಸುಬ್ಬಾಶಾಸ್ತ್ರಿ

(೧೯೬೬ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಶ್ರೀರಂಗ ಪ್ರೊಡಕ್ಷನ್ಸ್
ಪ್ರೊ/ನಿ: ಎಂ.ವಿ.ಕೃಷ್ಣಸ್ವಾಮಿ
ಸ.ನಿ: ಎಂ.ಬಿ.ಎಸ್.ಪ್ರಸಾದ್
ಅ: ಕಲ್ಯಾಣ್‌ಕುಮಾರ್, ಕೆ.ಎಸ್.ಅಶ್ವತ್ಥ್, ಅರುಣ್‌ಕುಮಾರ್ (ಗುರುರಾಜಲುನಾಯ್ಡು), ಹರಿಣಿ, ಚಂದ್ರಕಲಾ, ಮೈನಾವತಿ, ಜಿ.ವಿ.ಶಿವಾನಂದ್, ಶಿವರಾಜ್, ಕಾನಕಾನಹಳ್ಳಿ ಗೋಪಿ, ಎಂ.ಎಸ್.ಸುಬ್ಬಣ್ಣ, ಲಕ್ಷ್ಮಮ್ಮ, ಜಾರ್ಜ್ ಇಂದೂ
ಕ: ಪ್ರೊ॥ ಎ.ಎನ್.ಮೂರ್ತಿರಾಯರ 'ಆಷಾಢಭೂತಿ' ನಾಟಕ
ಚಿ.ಕ: ಎಂ.ವಿ.ಕೃಷ್ಣಸ್ವಾಮಿ, ಪ್ರೊ॥ ಎ.ಎನ್.ಮೂರ್ತಿರಾವ್
ಮಾ: ಪ್ರೊ॥ ಎ.ಎನ್.ಮೂರ್ತಿರಾವ್
ಗೀ: ಬಸವಣ್ಣನವರ ವಚನಗಳು, ಕನಕದಾಸರು ಹಾಗೂ ಪುರಂದರದಾಸರ ರಚನೆಗಳು, ಪು.ತಿ.ನರಸಿಂಹಾಚಾರ್ (ನೃತ್ಯರೂಪಕ)
ಗಾ: ಎಂ.ಬಾಲಮುರಳಿಕೃಷ್ಣ, ಶ್ರೀರಂಗಂ ಗೋಪಾಲರತ್ನಂ
ಸಂ: ಎಸ್.ಜಯರಾಂ
ಛಾ: ಹೆಚ್.ಎಂ.ಕೆ.ಮೂರ್ತಿ
ಕಲೆ: ಎಂ.ಎಸ್.ಜಾನಕೀರಾಂ
ಸ: ವೀಣಾ ದೊರೆಸ್ವಾಮಿ ಅಯ್ಯಂಗಾರ್, ಎಸ್.ಕೃಷ್ಣಮೂರ್ತಿ
ಸ್ಟು: ಜೆಮಿನಿ (ಮದರಾಸು)
ಹಾ: ೧)'ಕಳಬೇಡ ಕೊಲಬೇಡ ಹುಸಿಯ ನುಡಿಯಲು ಬೇಡ...', ೨)'ತನು ನಿನ್ನದು ಜೀವನ ಎನ್ನದು ರಂಗ...',
೩)'ಅರುಣೋದಯದಲೆದ್ದು ಅತಿ ಸ್ನಾನಗಳ ಮಾಡಿ...',
೪)'ಏನು ಮಾಡಿದರೇನು ಭವ ಹಿಂಗದು...',
೫)'ಕೊಳಲನೂದುವ ಚದುರನಾರೆ ಪೇಳಮ್ಮಯ್ಯ...',
೬)'ಕೃಷ್ಣನಾ ಕೊಳಲಿನ ಕರೆ ಆಲಿಸು...',
೭)'ಕುಸುಮಾಂಜಲಿ ಹರಿಚರಣಕೆ...', ೮)'ಮಂಗಳ ಜಯ ಮಂಗಳ...', ೯)'ಕರಾರವಿಂದೇನ...', ೧೦) 'ಶ್ರೀ ಮತ್ಪಯೋನಿಧಿ...', ೧೧)'ಲೋಕಾನುಸ್ಮದಯನ್...'
ವಿ: ಮೇಲುಕೋಟೆಯಲ್ಲಿ ಬಹುಪಾಲು ಚಿತ್ರೀಕರಣ. ವೀಣಾ ದೊರಸ್ವಾಮಿ ಅಯ್ಯಂಗಾರರ ಸಂಗೀತ ನಿರ್ದೇಶನ. ಪು.ತಿ.ನ.ಕೃತಿಗಳ ಬಳಕೆ.
ಕ.ಸಾ: ಮೇಲುಕೋಟೆಗೆ ಬರುವ ಸುಬ್ಬಾಶಾಸ್ತ್ರಿ ಗಾಯಕ, ದೈವಭಕ್ತನಂತೆ ನಟಿಸಿ ಶಂಕರಪ್ಪ ಎಂಬ ಸದ್ಗೃಹಸ್ಥನನ್ನು ನಂಬಿಸುತ್ತಾನೆ. ಮನೆಯವರೆಲ್ಲರ ವಿರೋಧದ ನಡುವೆಯೂ ಶಂಕರಪ್ಪ ಸುಬ್ಬಾಶಾಸ್ತ್ರಿಯನ್ನು ಮನೆಯಲ್ಲಿರಿಸಿಕೊಳ್ಳುತ್ತಾನೆ. ಶಂಕರಪ್ಪನ ಪತ್ನಿ ಶಾರದೆಯ ಮೇಲೆ ಕಣ್ಣು ಹಾಕಿದರೂ ಶಂಕರಪ್ಪ ಅದನ್ನು ನಂಬುವುದಿಲ್ಲ. ಶಂಕರಪ್ಪ ತನ್ನ ಆಸ್ತಿಯನ್ನೆಲ್ಲ ಸುಬ್ಬಾಶಾಸ್ತ್ರಿಯ ಹೆಸರಿಗೆ ಬರೆಯುತ್ತಾನೆ. ಸುಬ್ಬಾಶಾಸ್ತ್ರಿ ತನ್ನ ನಿಜವೇಷವನ್ನು ತೋರಿಸಿ ಶಂಕರಪ್ಪನನ್ನೇ ಮನೆಯಿಂದ ಹೊರ ಹೋಗಲು ಹೇಳುತ್ತಾನೆ. ಕೊನೆಗೆ ಪೋಲೀಸರ ಪ್ರವೇಶ ಆಗಿ ಸುಬ್ಬಾಶಾಸ್ತ್ರಿಯ ಮೋಸವನ್ನು ಬಯಲು ಮಾಡಿ ಬಂಧಿಸುತ್ತಾರೆ.

೧೯೮. ಲವ್ ಇನ್ ಬೆಂಗಳೂರು

(೧೯೬೬ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಧಾರಿಣಿ ಪಿಕ್ಚರ್ಸ್
ಪ್ರೊ: ಕಲ್ಯಾಣ್‌ಕುಮಾರ್
ನಿ: ಎಂ. ಸಂಪತ್‌ಕುಮಾರ್
ಅ: ಕಲ್ಯಾಣ್‌ಕುಮಾರ್, ನರಸಿಂಹರಾಜು, ಗಣಪತಿಭಟ್, ಸೂರ್ಯಕುಮಾರ್, ದ್ವಾರಕಾನಾಥ್, ಭಾರತಿ, ಜೂ.ರೇವತಿ, ಬಿ.ಜಯ, ಸರೋಜಮ್ಮ, ಬಿ.ಲಕ್ಷ್ಮಿ, ಚಿ। ಉದಯಶಂಕರ್, ಕುಪ್ಪುರಾಜ್, ಎಲ್.ಎನ್.ಸ್ವಾಮಿ, ಕಮೆಡಿಯನ್ ಗುಗ್ಗು, ಮಾ। ಪ್ರಭಾಕರ್
ಕ/ಚಿ.ಕ/ಮಾ: ರೇವತಿ ಕಲ್ಯಾಣ್‌ಕುಮಾರ್
ಗೀ: ವಿಜಯನಾರಸಿಂಹ

ನೃ: ಚಿನ್ನಿ-ಸಂಪತ್
ಛಾ: ಸಂಪತ್‌ಕುಮಾರ್
ಗಾ: ಎಸ್.ಜಾನಕಿ, ಎಲ್.ಆರ್.ಈಶ್ವರಿ, ರಾಣಿ, ಜೇಸುದಾಸ್
ಸ: ಎಸ್.ಪಿ. ಕೋದಂಡಪಾಣಿ
ಹಾ: ೧)'ಮನ ನಿನ್ನಲಿದೇ ತನು...', ೨)'ಇಂದುಮುಖಿ ಸೀತೆಗೆ...', ೩)'ಕೃಷ್ಣಾ ನೀ ಬೇಗನೆ ಬಾರೋ...', ೪)'ಲವ್ ಇನ್ ಬೆಂಗಳೂರು...', ೫)'ನಾನೇ ಮಧುರ ಮಯ ಗಾನಾ...'
ವಿ: ಭಾರತಿ ಚಿತ್ರರಂಗ ಪ್ರವೇಶ
ಕ.ಸಾ: ಹಾಸ್ಯ ಪ್ರಧಾನ ಸಾಮಾಜಿಕ ಕಥೆ.

೧೯೯. ಕಿಲಾಡಿರಂಗ

(೧೯೬೬ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ವಸಂತ್ ಪಿಕ್ಚರ್ಸ್
ಪ್ರೊ: ಬಿ.ಎಸ್.ರಂಗಾ
ನಿ: ಜಿ.ವಿ.ಅಯ್ಯರ್
ಸ.ನಿ: ದೊರೆ
ಅ: ರಾಜಕುಮಾರ್, ಎಂ.ಪಿ.ಶಂಕರ್, ನರಸಿಂಹರಾಜು, ಬಿ.ವಿ.ರಾಧ, ಜಯಶ್ರೀ, ರಾಘವೇಂದ್ರರಾವ್, ಜಯಂತಿ, ಸಬ್ಬು

ಕ/ಚಿ.ಕ: ಸದಾಶಿವ ಬ್ರಹ್ಮಂ, ಚಿ.ಸದಾಶಿವಯ್ಯ, ಜಿ.ವಿ.ಅಯ್ಯರ್
ಮಾ/ಗೀ: ಜಿ.ವಿ.ಅಯ್ಯರ್
ಗಾ: ಪಿ.ಬಿ.ಶ್ರೀನಿವಾಸ್, ಎಸ್.ಜಾನಕಿ, ಎಲ್.ಆರ್.ಈಶ್ವರಿ, ಪಿ.ನಾಗೇಶ್ವರರಾವ್
ಸಂ: ಪಿ.ಜಿ.ಮೋಹನ್
ಛಾ: ಬಿ.ಎನ್.ಹರಿದಾಸ್
ಸ: ಜಿ.ಕೆ.ವೆಂಕಟೇಶ್
ವ್ವ: ಎನ್.ಶೇಷಾದ್ರಿ, ಬಿ.ಎಸ್.ರಾಮಣ್ಣ
ಸ್ಟು: ವಿಕ್ರಂ (ಮದರಾಸು)
ಹಾ: ೧)'ಕೈ ಮುಗಿದ ಕನ್ನಡ ತಾಯೇ ನೀನೊಲಿಯೆ ನಾಲಿಗೆ ಮೇಲೆ....', ೨)'ಯಾರಿಗೆ ಮುಡಿಪೋ ನಾ ಕಾಣೇ...',
೩)'ಯಾವುದು ಒಳ್ಳೇದು ಯಾವುದು ಕೆಟ್ಟದು....',
೪)'ಅರಳಿದ ಗುಲಾಬಿ ಹೂ ಬಂದಿದೆ....', ೫)'ನೀನೊಂದು ಸಲ ನಕ್ಕು ಎನ್ನನ್ನೂ ನಗಿಸು....', ೬)'ಎದೆಯಲಿ ಸರ ಪಟಾಕಿ ಹತ್ತಿಸಿ ಬಿಟ್ಟೆ ನೀ.....', ೭)'ಮಲ್ಲಿಗೆಯರಳೇ ಮೈ ಸೂರವಳೇ.....'
ಕ.ಸಾ: ರಂಗ ಕಳ್ಳತನಕ್ಕಾಗಿ ಅರಮನೆಗೆ ಬರುತ್ತಾನೆ. ಮರುದಿನ ಯುವರಾಜ ಸಂಜಯನ ಪಟ್ಟಾಭಿಷೇಕವಾಗಬೇಕಿದ್ದು, ದುರ್ಜಯನೆಂಬಾತ ಕೊಲೆ ಸಂಚು ನಡೆಸುತ್ತಿರುತ್ತಾನೆ. ಸಂಜಯ ಸಹ ರಂಗನಂತೆಯೇ ಇರುತ್ತಾನೆ. ಆತನಿಗೆ ಒದಗಿರುವ ಆಪತ್ತನ್ನು ವಿವರಿಸಿದ ರಂಗ

ತಾನು ನೆರವಾಗುವುದಾಗಿ ತಿಳಿಸುತ್ತಾನೆ. ರಂಗನಿಗೆ ಪಟ್ಟಾಭಿಷೇಕವಾಗುತ್ತದೆ. ದುರ್ಜಯ ಸಂಜಯನನ್ನು ಸೆರೆಯಲ್ಲಿರಿಸಿ ಮಂತ್ರಿಯನ್ನು ಕೊಲ್ಲಿಸುತ್ತಾನೆ. ರಂಗ ಅವನ ಎಲ್ಲಾ ಸಂಚನ್ನು ವಿಫಲಗೊಳಿಸುತ್ತಾನೆ. ಹಳ್ಳಿಯೊಂದಕ್ಕೆ ಹೋದ ಸಂಜಯ ಸಾಮಾನ್ಯರಂತೆ ಜೀವಿಸುತ್ತಾನೆ. ಕೊನೆಗೆ ರಂಗ ದುರ್ಜಯನ ಸಂಚನ್ನು ನಾಶಮಾಡಿ ಸಂಜಯನನ್ನು ಕರೆಸಿ ರಾಜ್ಯ ಒಪ್ಪಿಸುತ್ತಾನೆ.

೨೦೦. ಮಧುಮಾಲತಿ

(೧೯೬೬ / ಕಪ್ಪು-ಬಿಳುಪು / ಜಾನಪದ)
ಲಾ: ತ್ರಿಮೂರ್ತಿ ಫಿಲಂಸ್
ಪ್ರೊ: ಎಂ.ಸಂಪತ್
ನಿ: ಎಸ್.ಕೆ.ಎ.ಚಾರಿ
ಸ.ನಿ: ವಾಸುದೇವ ಗಿರಿಮಾಜಿ
ಅ: ರಾಜಕುಮಾರ್, ಉದಯಕುಮಾರ್, ಅರುಣ್ ಕುಮಾರ್, ಕೆ.ಎಸ್.ಅಶ್ವತ್ಥ್, ಎಂ.ಪಿ.ಶಂಕರ್, ರಂಗ, ಕುಪ್ಪುರಾಜ್, ಮಿಚ್ಚೇರಿ, ಭಾರತಿ, ಜಯಶ್ರೀ, ಗಿರಿಮಾಜಿ, ನಾರಾಯಣ್, ಬಿ.ಆರ್.ಹೇಮಾ, ಎಲ್.ಎನ್.ಸ್ವಾಮಿ, ಹೊನ್ನಪ್ಪ, ಕೇಶವಮೂರ್ತಿ, ಶ್ಯಾಮ್‌ಸುಂದರ್, ಲಕ್ಷ್ಮಯ್ಯ, ಕೃಷ್ಣಶಾಸ್ತ್ರಿ, ಜ್ಯೂಡೋರತ್ನಂ, ಗೌರವ ನಟ - ಆರ್.ನಾಗೇಂದ್ರರಾವ್,



ಕ: ಎಸ್.ಕೆ.ಎ.ಚಾರಿ
ಚಿ.ಕ/ಮಾ: ಕು.ರ.ಸೀತಾರಾಮಶಾಸ್ತ್ರಿ, ನರೇಂದ್ರಬಾಬು
ಗೀ: ಕುವೆಂಪು, ಕು.ರ.ಸೀತಾರಾಮಶಾಸ್ತ್ರಿ, ವಿಜಯನಾರಸಿಂಹ
ಗಾ: ಪಿ.ಬಿ.ಶ್ರೀನಿವಾಸ್, ಮೋತಿ, ಲತಾ, ಎಸ್.ಜಾನಕಿ
ಸಂ: ಜಿ.ಹರಿನಾರಾಯಣಯ್ಯ
ಛಾ: ಬಿ.ದೊರೈರಾಜ್
ಕಲೆ: ಚಲಂ
ಸ: ಜಿ.ಕೆ.ವೆಂಕಟೇಶ್
ಧ್ವ: ಎಸ್.ಪಿ.ರಾಮನಾಥನ್
ನೃ: ಚಿನ್ನಿ ಸಂಪತ್ - ಜಯರಾಂ, ಲಕ್ಷ್ಮೀನಾರಾಯಣ್
ವ: ಸೂರ್ಯರಾವ್-ರಾಮರಾವ್
ಪ್ರ: ಸುಬ್ಬಣ್ಣ, ವೀರರಾಜು; (ಕೇಶಾಲಂಕಾರ) ಭಾಸ್ಕರರಾವ್
ಸ್ಟು: ಗೋಲ್ಡನ್
ಹಾ: ೧)'ಅಂಜಿಕೆ ನಾಚಿಕೆ ಏತಕೇ.....', ೨)'ಷೋಡಷ ಚೈತ್ರದ ಸುಂದರಿ ನೀನೂ.....', ೩)'ಯಾರೇ ಏನೋ ಬಲ್ಲವರಾರೂ.....', ೪)'ಈ ಭಾವ ಭಂಗಿ ನಿನಗಾಗಿ ನಿನ್ನ ಒತಕಾಗಿ.....', ೫)'ಷೋಡಷಿ ಷೋಡಷಿ ಮೂಡಿ ಬಾ ಷೋಡಷಿ...', ೬)'ಪ್ರಿಯತಮೆ ಮಧುಮಯಿ ಮಧುಮಾಲತಿ...'
ಕ.ಸಾ: ಕೇಶವ ಚಂದ್ರಗುಪ್ತ ಉಜ್ಜಯಿನಿಯ ಶ್ರೀಮಂತ ವ್ಯಾಪಾರಿ. ಮಧುಮಾಲತಿ ಈತನ ಪುತ್ರಿ. ಹದಿನಾರು ವಯಸ್ಸಿನೊಳಗೆ ವಿವಾಹವಾಗದಿದ್ದಲ್ಲಿ ಈಕೆ ಅಲ್ಪಾಯುಷಿ ಆಗುತ್ತಾಳೆ. ಮಾಂತ್ರಿಕ ಈಕೆಯನ್ನು ಅಪಹರಿಸಲು ಪ್ರಯತ್ನಿಸಿದಾಗ ಮಧುಸೂದನ ಶರ್ಮ ಜ್ಯೋತಿಷ್ಯದಿಂದಲೂ, ವಾಮನದತ್ತ ಮಂತ್ರಶಕ್ತಿಯಿಂದಲೂ, ವಿಕ್ರಮಸೇನ ಪರಾಕ್ರಮದಿಂದಲೂ ರಕ್ಷಿಸುತ್ತಾರೆ. ಈ ಮೂವರೂ ಮಧುಮಾಲತಿಯನ್ನು ಮೋಹಿಸುತ್ತಾರೆ. ಸರ್ಪ ಕಚ್ಚಿ ಮಧುಮಾಲತಿ ಸಾಯುತ್ತಾಳೆ. ವಿಕ್ರಮಸೇನ ಅವಳ ಬೂದಿಯನ್ನಿರಿಸಿಕೊಂಡು ತಿರುಗುತ್ತಾನೆ. ಮಧುಸೂದನ ಶರ್ಮ ಸಂಜೀವಿನಿ ಮಂತ್ರ ಕಲಿತು ಬಂದು ಬೂದಿಯಿಂದಲೇ ಬದುಕಿಸುತ್ತಾನೆ. ಅವಳು ಮರಳಿ ಎದ್ದಾಗ ಯಾರನ್ನು ವಿವಾಹವಾಗಬೇಕೆಂದು ಜಿಜ್ಞಾಸೆ ಬರುತ್ತದೆ. ವಿಕ್ರಮಾದಿತ್ಯ ಮಹಾರಾಜ ಇವರ ಕಥೆ ಕೇಳಿ ವಿಕ್ರಮಸೇನನೇ ವರ ಎಂದು ತೀರ್ಪು ಕೊಡುತ್ತಾನೆ.

೨೦೧. ಎಮ್ಮೆತಮ್ಮಣ್ಣ

(೧೯೬೬ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಪದ್ಮಿನಿ ಪಿಕ್ಚರ್ಸ್
ಪ್ರೊ/ನಿ: ಬಿ.ಆರ್.ಪಂತುಲು
ಸ.ನಿ: ಎಸ್.ಆರ್.ಶಿವರಾಂ, ಪೊನ್ನುಸ್ವಾಮಿ

ಅ: ರಾಜಕುಮಾರ್, ಭಾರತಿ, ಬಿ.ಆರ್.ಪಂತುಲು, ಎಂ.ವಿ.ರಾಜಮ್ಮ, ಲತಾ, ಥಿಕ್ಕಿಮಾಧವರಾವ್, ಪಾಪಮ್ಮ, ನರಸಿಂಹರಾಜು, ಕೃಷ್ಣಶಾಸ್ತ್ರಿ, ಕುಪ್ಪುರಾಜ್, ಸೂರ್ಯಕುಮಾರಿ, ಜಯಾ, ಸುಬ್ಬಣ್ಣ, ಗುಗ್ಗು, ಭವಾನಿಶಂಕರ್, ನಾರಾಯಣ್, ಲಕ್ಷ್ಮಯ್ಯ, ಅನಂತರಾಂ ಮಚ್ಚೇರಿ, ನಂಜಪ್ಪ
ಕ: ಎ.ಕೆ.ವೇಲನ್
ಚಿ.ಕ: ಪದ್ಮಿನಿ ಪಿಕ್ಚರ್ಸ್ ಸಾಹಿತ್ಯ ಶಾಖೆ
ಮಾ/ಗೀ: ಜಿ.ವಿ.ಅಯ್ಯರ್
ಗಾ: ಪಿ.ಬಿ.ಶ್ರೀನಿವಾಸ್, ಎಸ್.ಜಾನಕಿ, ಬೆಂಗಳೂರು ಲತಾ, ಪಿ.ನಾಗೇಶ್ವರರಾವ್
ಸಂ: ಆರ್.ದೇವರಾಜನ್
ಛಾ: ಡಿ.ಎಲ್.ನಾಗಪ್ಪ
ಕಲೆ: ಸೆಲ್ವರಾಜ್
ಸ: ಟಿ.ಜಿ.ಲಿಂಗಪ್ಪ
ಧ್ವ: ಎಂ.ಶಿವರಾವ್, ರಾಮಚಂದ್ರ, (ಮಾ) ಕಣ್ಣನ್, ಡಬ್ಲ್ಯು. ನರಸಿಂಹಮೂರ್ತಿ
ನೃ: ಕೃಷ್ಣಕುಮಾರ್
ಸಾ: ದಾಸ್
ವ: ಎಂ.ರಾಧಾ
ಪ್ರ: ಧನಕೋಟಿ, ಎಂ.ಎಸ್.ಸುಬ್ಬಣ್ಣ, ಮಾಣಿಕ್ಯಂ, ಎಂ.ಕೆ.ಶ್ರೀನಿವಾಸ್, ವಿ.ಪಾರ್ಥಸಾರಥಿ
ಸ್ಟು: ವಿಜಯಾ, ಅರುಣಾಚಲಂ
ಹಾ: ೧)'ನೀನಾರಿಗಾದೆಯೋ ಎಲೆ ಮಾನವ...', ೨)'ಕೊಳಲನೂದಿ ಕುಣಿವ...', ೩)'ಎಮ್ಮೆ ಎಲ್ಲಾ ಎಲ್ಲಣ್ಣ...', ೪)'ಬೆಳ್ಳೀ ಹಕ್ಕಿ ಆಗುವಾ...', ೫)'ಕಣ್ಣೆರಡೂ ಕರೆಯುತಿದೆ...', ೬)'ಕತ್ತರಿಸು ಕತ್ತರಿಸು...'
ಕ.ಸಾ: ಒಂದೇ ರೂಪಿನ ಇಬ್ಬರು ಯುವಕರು. ಅವರನ್ನು ತಪ್ಪು ತಿಳಿದುಕೊಳ್ಳುವ ಇತರರು, ಇವರನ್ನು ಪ್ರೀತಿಸುವ ಎರಡು ಹುಡುಗಿಯರ ಸುತ್ತ ಹೆಣೆವ ಹಾಸ್ಯಮಯ ಚಿತ್ರಣ.

೨೦೨. ಮೋಹಿನಿ ಭಸ್ಮಾಸುರ

(೧೯೬೬ / ಕಪ್ಪು-ಬಿಳುಪು / ಪೌರಾಣಿಕ)
ಲಾ: ಹೆಚ್.ಎಂ.ಬಾಬಾ ಪ್ರೊಡಕ್ಷನ್ಸ್
ಪ್ರೊ: ಟಿ.ಮದಾರ್, ವಿ.ಎಂ.ಕುಪ್ಪಯ್ಯ ಚೆಟ್ಟಿಯಾರ್
ನಿ: ಎಸ್.ಎಸ್.ವರ್ಮ
ಸ.ನಿ: ಕಿತ್ತಾನೆ ಎಸ್. ನಾಗೇಶ್
ಅ: ರಾಜಕುಮಾರ್, ಲೀಲಾವತಿ, ಉದಯಕುಮಾರ್, ರಾಜಶ್ರೀ, ಇಂದಿರಾ, ವಾಣಿಶ್ರೀ, ಜಯ, ಝೂನ್ಸಿ, ಬಾಲಕೃಷ್ಣ, ಶ್ರೀಕಂಠಸ್ವಾಮಿ, ಕೃಷ್ಣಶಾಸ್ತ್ರಿ, ಬಿ.ರಾಘವೇಂದ್ರರಾವ್, ಗಣಪತಿಭಟ್, ಗುಗ್ಗು, ಎಲ್.ಎನ್.ಸ್ವಾಮಿ, ವೆಂಕಟಪ್ಪ, ರಂಗನಾಥ್, ಹನುಮಂತರಾವ್

ಮಾ/ಗೀ: ವಿಜಯನಾರಸಿಂಹ
ಗಾ: ಪಿ.ನಾಗೇಶ್ವರರಾವ್, ಎಸ್.ಜಾನಕಿ, ವಸಂತ, ಪಿ.ಬಿ.ಶ್ರೀನಿವಾಸ್, ಜಯದೇವ್
ಸಂ: ಎಸ್.ಎಸ್.ನಜೀರ್
ಕಲೆ: ನರಸಿಂಹರಾವ್
ಸ: ಟಿ. ಚಲಪತಿರಾವ್
ನೃ: ವೇಣುಗೋಪಾಲ್
ಪ್ರ: ನಾರಾಯಣಸ್ವಾಮಿ, ದೊರೆಸ್ವಾಮಿ, ಭದ್ರಯ್ಯ
ಸ್ಟು: ಶಾರದ
ಹಾ: ೧)'ಚಂದ್ರಶೇಖರ ಪಾಹಿಮಾಂ...', ೨)'ತೂಗುವರಾರೂ ತೊಟ್ಟಿಲ...', ೩)'ತನುವು ನಿನ್ನದು...', ೪)'ಸುರಪತಿ ನಿನಗೆಣೆ ಇಲ್ಲ...', ೫)'ಅಂಗೈ ಮೇಲೆ ಕೈಲಾಸ...', ೬)'ರಸಮಯ ಮಧುಮಾಸ...', ೭)'ಚಪಲಾ ನಿನಗೇತಕೆ...', ೮)'ಪಾಹಿಮಾಂ ಪ್ರಭೋಶಂಕರ...'
ವಿ: ರಾಜಕುಮಾರ್ ಈ ಚಿತ್ರದಲ್ಲಿ ಭರತನಾಟ್ಯ ಮಾಡಿದ್ದಾರೆ.
ಕ.ಸಾ: ಪುರಾಣ ಪ್ರಸಿದ್ಧ ಮೋಹಿನಿ-ಭಸ್ಮಾಸುರ ಕಥೆಯೇ ಚಿತ್ರಕ್ಕೆ ಪ್ರೇರಣೆ.

೨೦೩. ಶ್ರೀ ಕನ್ನಿಕಾ ಪರಮೇಶ್ವರಿ ಕಥಾ

(೧೯೬೬ / ಕಪ್ಪು-ಬಿಳುಪು / ಪೌರಾಣಿಕ)
ಲಾ: ಎವರ್‌ಗ್ರೀನ್ ಪ್ರೊಡಕ್ಷನ್ಸ್
ಪ್ರೊ/ನಿ: ಹುಣಸೂರು ಕೃಷ್ಣಮೂರ್ತಿ
ಸ.ನಿ: ಹೆಚ್.ಆರ್.ಭಾರ್ಗವ
ಅ: ರಾಜಕುಮಾರ್, ಪಂಢರಿಬಾಯಿ, ಬಿ.ಎಂ.ವೆಂಕಟೇಶ್, ಕಲ್ಪನಾ, ಆರ್.ನಾಗೇಂದ್ರರಾವ್, ಜಯಶ್ರೀ, ಶಾರದಾ, ರಮಾದೇವಿ, ರಮಾ, ರಮಾಪ್ರಭ, ವಿಜಯಲಲಿತ, ಸುಬ್ಬಣ್ಣ, ರಾಮಚಂದ್ರಶಾಸ್ತ್ರಿ, ಅಶ್ವತ್ಥ್, ಎಂ.ಪಿ.ಶಂಕರ್, ದ್ವಾರಕೀಶ್, ನರಸಿಂಹರಾಜು, ರಂಗನಾಥ್
ಕ/ಚಿ.ಕ/ಮಾ/ಗೀ: ಹುಣಸೂರು ಕೃಷ್ಣಮೂರ್ತಿ
ಗಾ: ಪಿ.ಲೀಲಾ, ಎಸ್.ಜಾನಕಿ, ಎಲ್.ಆರ್.ಈಶ್ವರಿ, ಪಿ.ಬಿ.ಶ್ರೀನಿವಾಸ್, ನಾಗೇಂದ್ರ, ಮಾಧವ ಪೆದ್ದಿ ಸತ್ಯಂ
ಸಂ: ಪಿ.ಎಸ್.ಮೂರ್ತಿ
ಛಾ: ಡಿ.ವಿ.ರಾಜಾರಾಂ
ಕಲೆ: ರಂಗರಾವ್
ಸ: ರಾಜನ್-ನಾಗೇಂದ್ರ
ಧ್ವ: (ಹಾ) ಸ್ವಾಮಿನಾಥನ್, (ಮಾ) ಸ್ವಾಮಿ
ನೃ: ಬಿ.ಜಯರಾಂ, ಲಕ್ಷ್ಮೀನಾರಾಯಣ್
ವ: ಎಂ.ಚೆಂಟಿಬಾಬು
ಪ್ರ: ಮಾಧವಯ್ಯ, ದೊರೆಸ್ವಾಮಿ, ನಾರಾಯಣಸ್ವಾಮಿ
ಸ್ಟು: ವಾಹಿನಿ, ವೀನಸ್, ಫಿಲಂ ಸೆಂಟರ್
ಹಾ: ೧)'ಕೃತೇಚ ರೇಣುಕಾದೇವಿ...', ೨)'ಶಂಭೋ ಶಂಕರ...', ೩)'ಸಕಲ ಲೋಕಾರಾಧ್ಯ...', ೪)'ಬಯಸಿ ಬಂದ ಚೆಲುವೆ...', ೫)'ಜನುಮ ಜನುಮಗಳ...', ೬)'ನಿಂತಲ್ಲಿ ಅವಳು...', ೭)'ಏನೆಂದು ಹೇಳಲಿ..., ೮)'ನಿನ್ನ ಚರಣಾಂಬುಜದ...', ೯)'ಗಂಡಿನ ಕಡೆಯ...', ೧೦) ಸಂದೇಶನಿತ್ತು...'
ಕ.ಸಾ: ಶಾಪಗ್ರಸ್ತ ಗಂಧರ್ವನೊಬ್ಬ ರಾಜನಾಗಿ ಹುಟ್ಟುತ್ತಾನೆ. ಅವನ ಸ್ಪರ್ಶದ ಕಾರಣ ಪಾರ್ವತಿ ಮಾನವಳಾಗಿ ಜನಿಸುತ್ತಾಳೆ. ಅವಳನ್ನು ನೋಡಿ ಆತ ಕಾಮುಕನಾಗಿ ಆಕೆಯನ್ನು ಬಯಸುತ್ತಾನೆ. ಆಕೆ ವಿವಾಹ ನಿರಾಕರಿಸಲು ರೊಚ್ಚಿಗೆದ್ದು ಧ್ವಂಸ ಮಾಡಲು ತೊಡಗುತ್ತಾನೆ. ರಾಜಕುಮಾರಿ ಆತನಿಂದ ತಪ್ಪಿಸಿಕೊಳ್ಳಲು ಅಗ್ನಿಗೆ

ಆಹುತಿಯಾಗುತ್ತಾಳೆ. ಅವನೂ ಅಗ್ನಿಗೆ ಹಾರುತ್ತಾನೆ. ಆಕೆ ಕನ್ನಿಕಾಪರಮೇಶ್ವರಿಯಾಗಿ ನೆಲಸುತ್ತಾಳೆ.

೨೦೪. ಸಂಧ್ಯಾರಾಗ

(೧೯೬೬ / ಕಪ್ಪು-ಬಿಳುಪು / ಸಾಮಾಜಿಕ)

ಲಾ: ಶೈಲಶ್ರೀ ಪ್ರೊಡಕ್ಷನ್ಸ್
ಪ್ರೊ: ಎ.ಸಿ. ನರಸಿಂಹಮೂರ್ತಿ, ಎ. ಪ್ರಭಾಕರ್‌ರಾವ್
ನಿ: ಎ.ಸಿ.ನರಸಿಂಹಮೂರ್ತಿ, ಎಸ್.ಕೆ.ಭಗವಾನ್
ಅ: ರಾಜಕುಮಾರ್, ಭಾರತಿ, ಉದಯಕುಮಾರ್, ಪಂಢರಿಬಾಯಿ, ಕೆ.ಎಸ್.ಅಶ್ವತ್, ನರಸಿಂಹರಾಜು, ಶೈಲಶ್ರೀ, ಹೆಚ್.ರಾಮಚಂದ್ರಶಾಸ್ತ್ರಿ. ರಾಘವೇಂದ್ರರಾವ್, ಹೆಚ್.ಕೃಷ್ಣಶಾಸ್ತ್ರಿ, ಜೂ.ರೇವತಿ
ಕ: ಅ.ನ.ಕೃ ಅವರ 'ಸಂಧ್ಯಾರಾಗ' ಕಾದಂಬರಿ
ಚಿ.ಕ: ಭಗವಾನ್
ಮಾ: ನರೇಂದ್ರಬಾಬು
ಗೀ: ಪುರಂದರದಾಸರು, ಜಿ.ವಿ.ಅಯ್ಯರ್, ಆರ್.ಎನ್.ಜಯಗೋಪಾಲ್
ಗಾ: ಭೀಮಸೇನ್ ಜೋಶಿ, ಬಾಲಮುರಳಿಕೃಷ್ಣ, ಪಿ.ಬಿ.ಶ್ರೀನಿವಾಸ್, ಎಸ್.ಜಾನಕಿ
ಸಂ: ಎನ್.ಸಿ.ರಾಜನ್
ಛಾ: ಬಿ.ದೊರೈರಾಜ್
ಕಲೆ: ಚಲಂ
ಸ: ಜಿ.ಕೆ.ವೆಂಕಟೇಶ್, ಬಾಲಮುರಳಿ ಕೃಷ್ಣ (ಕರ್ನಾಟಕ ಸಂಗೀತ ಮಾತ್ರ)
ಧ್ವ: ಸ್ವಾಮಿನಾಥನ್, ಸ್ವಾಮಿ
ಪ್ರ: ಎಂ.ಎಸ್.ಸುಬ್ಬಣ್ಣ
ಸ್ಟು: ವೀನಸ್
ಹಾ: ೧)'ನಂಬಿದೆ ನಿನ್ನ ನಾದ ದೇವತೆಯೇ....' (ಈ ಹಾಡನ್ನು ಬಾಲಮುರಳಿಕೃಷ್ಣ, ಪಿ.ಬಿ.ಶ್ರೀನಿವಾಸ್ ಹಾಗು ಎಸ್.ಜಾನಕಿ ಅವರು ಪ್ರತ್ಯೇಕವಾಗಿ ಹಾಡಿದ್ದು ಮೂರು ಬಾರಿ ಅಳವಡಿಸಲಾಗಿದೆ), ೨)'ಕನ್ನಡತಿ ತಾಯೆ ಬಾ.....', ೩)'ಈ ಪರಿಯ ಸೊಬಗು ಇನ್ನಾವ....', ೪)'ದೀನ ನಾ ಬಂದಿರುವೆ ಬಾಗಿಲೊಳು ನಿಂದಿರುವೆ....', ೫)'ತೇಲಿಸೋ ಇಲ್ಲಾ ಮುಳುಗಿಸೋ...', ೬)'ಗುರುವಿನ ಗುಲಾಮನಾಗುವ...'
ವಿ: ಶೈಲಶ್ರೀ (ಆಶಾ) ಚಿತ್ರರಂಗ ಪ್ರವೇಶಿಸಿದರು. ರಾಜ್ಯ ಸರ್ಕಾರ ಚಲನಚಿತ್ರ ಪ್ರಶಸ್ತಿ ಪರಿಪಾಠ ಆರಂಭಿಸಿದ ಮೊದಲ ವರ್ಷವೇ ತೃತೀಯ ಅತ್ಯುತ್ತಮ ಚಿತ್ರ ಪ್ರಶಸ್ತಿಗೆ ಪಾತ್ರವಾದ ಚಿತ್ರ. ರಾಜಕುಮಾರ್‌ರವರಿಗೆ ಮೊದಲ ಬಾರಿಗೆ ಅತ್ಯುತ್ತಮ ನಟ ಪ್ರಶಸ್ತಿ ತಂದುಕೊಟ್ಟ ಚಿತ್ರ. ಭೀಮಸೇನ್ ಜೋಶಿಯವರು ಹಿಂದೂಸ್ತಾನಿ ರಾಗದಲ್ಲಿ ಹಾಡಿರುವ ಹಾಡುಗಳ ಬಳಕೆ ಆಗಿದೆ.
ಕ.ಸಾ: ಲಕ್ಷ್ಮಣರಾವ್‌ಗೆ ಸಂಗೀತವೆಂದರೆ ಪ್ರಾಣ. ತಂದೆ-ತಾಯಿ ಲಕ್ಷ್ಮಣನಲ್ಲಿನ ಕಲಾವಂತಿಕೆಯನ್ನು ಪ್ರೋತ್ಸಾಹಿಸುತ್ತಾರೆ. ಅಣ್ಣ ರಾಮಚಂದ್ರರಾವ್‌ಗೆ ತಮ್ಮನ ಮೇಲೆ ಹೊಟ್ಟೆಕಿಚ್ಚು. ರಾಮುವಿಗೆ ಪದ್ಮಳೊಂದಿಗೆ ಹಾಗು ಲಕ್ಷ್ಮಣನಿಗೆ ಜಯಲಕ್ಷ್ಮಿಯೊಂದಿಗೆ ವಿವಾಹವಾಗುತ್ತದೆ. ತಂದೆ-ತಾಯಿ ಸತ್ತ ನಂತರ ರಾಮು ಲಕ್ಷ್ಮಣನಿಗೆ ತೊಂದರೆ ಕೊಡಲು ಆರಂಭಿಸುತ್ತಾನೆ. ಸಂಗೀತ ಉಪಾಸನೆ ಮಾಡುವ ಲಕ್ಷ್ಮಣನಿಗೆ ಜೀವನ ನಿರ್ವಹಣೆ ಕಷ್ಟವಾಗುತ್ತದೆ. ಅನಾರೋಗ್ಯ ಪೀಡಿತಳಾದ ಪತ್ನಿಗೆ ಚಿಕಿತ್ಸೆ ಕೊಡಿಸಲು ಸಾಧ್ಯವಾಗದೇ ಕಳೆದುಕೊಳ್ಳಬೇಕಾಗುತ್ತದೆ. ದೇಶಾಂತರ ಹೋಗುವ ಲಕ್ಷ್ಮಣ ರಂಭಾಪುರಿಯಲ್ಲಿ ಗುರುಗಳ ಬಳಿ ಸಂಗೀತ ಕಲಿತು ದೊಡ್ಡ ಹಾಡುಗಾರನಾಗುತ್ತಾನೆ. ಬೆಂಗಳೂರಿಗೆ ಬಂದಾಗ ರಾಮುವಿಗೆ ಪಶ್ಚಾತ್ತಾಪವಾಗುತ್ತದೆ. ಕಲಾಭವನದಲ್ಲಿ ಸಂಗೀತ ಕಛೇರಿ ಏರ್ಪಾಡು ಮಾಡುತ್ತಾನೆ. ಅವನಿಗೊಲಿದ ಪೂರ್ವಿಕಲ್ಯಾಣಿ ರಾಗ ಹಾಡುತ್ತಲೇ ಲಕ್ಷ್ಮಣ ಸಾಯುತ್ತಾನೆ.

೧೯೬೭

೨೦೫. ಒಂದೇ ಬಳ್ಳಿಯ ಹೂಗಳು

(೧೯೬೭ / ಕಪ್ಪು-ಬಿಳುಪು / ಸಾಮಾಜಿಕ)

ಲಾ: ಅಮೃತಕಲಾ ಪ್ರೊಡಕ್ಷನ್ಸ್
ಪ್ರೊ: ವನಮಾಲ ಎಸ್.ನಾಯಕ್
ನಿ: ಎಂ.ಎಸ್.ನಾಯಕ್, ಎಂ.ನಾಗೇಶ್ವರರಾವ್
ಸ.ನಿ: ಪಿ.ಕೃಷ್ಣದೇವರಾವ್
ಅ: ಕೆ.ಎಸ್.ಅಶ್ವತ್, ರಾಜಾಶಂಕರ್, ರಂಗಾ, ಬಿ.ವಿ.ರಾಧಾ, ಚಂದ್ರಕಲಾ, ಬಿ.ಎಂ.ವೆಂಕಟೇಶ್, ಥಿಕ್ಕಿಮಾಧವರಾವ್, ಪಂಢರಿಬಾಯಿ, ರಮಾ, ಶ್ರೀನಾಥ್, ಬಾಲಕೃಷ್ಣ, ಜಯಂತಿ, ಅನ್ನಪೂರ್ಣ, ಅಶ್ವತನಾರಾಯಣ, ಮುನಿಯಪ್ಪ, ಶ್ರೀರಂಗಮೂರ್ತಿ, ಭುಜಂಗರಾವ್, ಶ್ರೀನಿವಾಸನ್, ಸೋಮಶೇಖರ್, ಎ.ವಿ.ಕೆ.ಮೂರ್ತಿ
ಮಾ/ಗೀ: ಗೀತಪ್ರಿಯ

ಗಾ: ಮಹಮದ್ ರಫಿ, ಪಿ.ಬಿ.ಶ್ರೀನಿವಾಸ್, ಜೇಸುದಾಸ್, ಬಿ.ಕೆ.ಸುಮಿತ್ರ, ಎಸ್.ಜಾನಕಿ
ಸಂ: ಬಾಲ್ ಜಿ.ಯಾದವ್, ತಾತಯ್ಯ
ಛಾ: ಎಸ್.ಜೆ.ಥಾಮಸ್
ಕಲೆ: ಬಿ.ಎನ್.ಕೃಷ್ಣ
ಸ: ಸತ್ಯಂ
ಧ್ವ: (ಹಾ)ಸ್ವಾಮಿನಾಥನ್, ಬಿ.ಎಂ.ವಾಲ್ಕೆ, (ಮಾ)ಕೆ.ಆರ್.ಸೀತಾರಾಂ
ನೃ: ಚಂದ್ರಕಲಾ
ವ: ಶಿವರಾಂ
ಪ್ರ: ಎಂ.ಎಸ್.ಸುಬ್ಬಣ್ಣ, ರಾಜಗೋಪಾಲ್, ವೀರಾಸ್ವಾಮಿ
ಸ್ಟು: ಪ್ರೀಮಿಯರ್ (ಮೈಸೂರು), ವಾಸು ಸ್ಟುಡಿಯೋ (ಮದ್ರಾಸ್)
ಹಾ: ೧)'ಅಣ್ಣ ನಿನ್ನ ಸೋದರಿಯನ್ನ ಮರೆಯದಿರು ಎಂದೆಂದೂ...', ೨)'ಪಕೋ ಪಕೋ ಪತಕೋ ಪಕೀ ಭಾದನೆ ಪತಕೋ....', ೩)'ಓರೆ ನೋಟದ ಒಯ್ಯಾರಿ ಬಾರೆ ನಾಚದೆ ಬಂಗಾರಿ....', ೪)'ದಾರಿಕಾಣದೆ ಬಂದವಳೆ ನೂರು ಆಸೆಯ ತಂದವಳೆ...', ೫)'ರಿಕ್ಷಾಗಾಡಿ ಮಿಸ್ಟರ್ ನಾ ರಿಕ್ಷಾಗಾಡಿ ಮಿಸ್ಟರ್....', ೬)'ನೀನೆಲ್ಲಿ ನಡೆವೆ ದೂರ ಎಲ್ಲೆಲ್ಲು ಲೋಕವೆ (ಗಾಯಕ - ಮಹಮದ್ ರಫಿ)
ವಿ: ಮಹಮ್ಮದ್ ರಫಿ ಪ್ರಥಮ ಬಾರಿಗೆ ಕನ್ನಡ ಚಿತ್ರದಲ್ಲಿ ಹಾಡಿದರು.
ಕ.ಸಾ: ರಾಜಣ್ಣ ಮತ್ತು ಶಂಕರ ಪ್ರೀತಿಯ ಸಹೋದರರು. ಸುಮಾ ಇವರಿಬ್ಬರ ಅಚ್ಚುಮೆಚ್ಚಿನ ತಂಗಿ. ಶಂಕರನ ಓದಿಗಾಗಿ ರಾಜಣ್ಣ ದುಡಿದ. ಸುಮಾಳಿಗೆ ಒಳ್ಳೆಯ ಸಂಬಂಧ ದೊರೆಯಿತು. ರಾಜಣ್ಣ ಚಿಕ್ಕಪ್ಪನ ಬಳಿ ಇರಿಸಿದ್ದ ಹಣ ಕೊಡಲಿಲ್ಲ. ಮದುವೆ ನಿಂತು ಹೋಯಿತು. ಸುಮಾ ಕುರುಡಿಯಾದಳು. ಶಂಕರ ಶ್ರೀಮಂತ ಶಾರದೆಯನ್ನು ಮದುವೆಯಾದ. ಮೊದ ಮೊದಲು ಸುಮಾಳನ್ನು ಪ್ರೀತಿಸುತ್ತಿದ್ದ ಶಾರದ ಬದಲಾದಳು. ಶಂಕರ-ಶಾರದ ಮನೆ ಬಿಟ್ಟು ಹೋದರು. ರಾಜಣ್ಣನಿಗೆ ಕೆಲಸ ಹೋಯಿತು. ಚಿಕ್ಕಪ್ಪ ಮನೆ ಬಿಡಿಸಿದ. ಕಷ್ಟಗಳೆಲ್ಲ ಕಳೆದು ಕೊನೆಗೆ ಎಲ್ಲರೂ ಒಂದಾಗುವರು.

೨೦೬. ಅನುರಾಧ

(೧೯೬೭ / ಕಪ್ಪು-ಬಿಳುಪು / ಸಾಮಾಜಿಕ)

ಲಾ: ಶ್ರೀ ಪಾಂಡುರಂಗಾ ಪ್ರೊಡಕ್ಷನ್ಸ್
ಪ್ರೊ: ಎಂ.ಪಂಢರಿಬಾಯಿ
ನಿ: ಆರೂರ್ ಪಟ್ಟಾಭಿ
ಅ: ಕೆ.ಎಸ್.ಅಶ್ವತ್ಥ್, ಪಂಢರಿಬಾಯಿ. ರಾಜಾಶಂಕರ್, ಮೈನಾವತಿ, ಜಯಂತಿ, ರಮಾದೇವಿ, ರಮಾ, ನರಸಿಂಹರಾಜು, ಬೆಂಗಳೂರು ನಾಗೇಶ್, ರತ್ನಾಕರ್, ಸುಮ, ಲಕ್ಷ್ಮಿ, ಭಾಸ್ಕರ್, ಈಶ್ವರಪ್ಪ, ಶ್ರೀರಂಗಮೂರ್ತಿ, ಕುಟ್ಟಿಪದ್ಮಿನಿ

ಕ/ಚಿ.ಕ/ಮಾ/ಗೀ: ಚಿ। ಉದಯಶಂಕರ್
ಗಾ: ಪಿ.ಬಿ.ಶ್ರೀನಿವಾಸ್, ಎಸ್.ಜಾನಕಿ, ಪಿ.ಲೀಲಾ, ಬಿ.ಕೆ.ಸುಮಿತ್ರ
ಸಂ: ಎಂ.ಜಿ.ಬಾಲುರಾವ್ ' ಬಾಬು
ಛಾ: ಆರ್.ಮಧು ಮತ್ತು ಜಾನಕಿರಾಮ್
ಕಲೆ: ಆರ್.ಬಿ.ಎಸ್.ಮಣಿ
ಸ: ರಾಜನ್ ನಾಗೇಂದ್ರ
ಧ್ವ: (ಹಾ) ಇ.ಐ.ಜೀವ, (ಮಾ) ಕೆ.ಆರ್.ಸೀತಾರಾಂ
ನೃ: ಜನಾರ್ಧನ್
ಪ್ರ: ಕೆ.ನಾರಾಯಣಸ್ವಾಮಿ
ಸ್ಟು: ಪ್ರೀಮಿಯರ್ (ಮೈಸೂರು)
ಹಾ: ೧)'ಬಂದೆಯಾ ಕರೆಯ ಕೇಳಿ...', ೨)'ನಿನ್ನ ಕಣ್ಣ ನೋಡಿ...', ೩)'ಗುಮ್ಮನ ಕರೆಯದಿರೆ...', ೪)'ತೂಗುವೆ ರಂಗನ ತೂಗುವೆ...', ೫)'ತೂಗುವೆ ರಂಗನ...'
ವಿ: ಕರ್ನಾಟಕ ಸರ್ಕಾರ ಸಬ್ಸಿಡಿ ಘೋಷಿಸಿದ ಮೇಲೆ ಮೊಟ್ಟಮೊದಲ ಬಾರಿಗೆ ಪೂರ್ತಿಯಾಗಿ ಕನ್ನಡ ನೆಲದಲ್ಲಿ ಚಿತ್ರೀಕರಣಗೊಂಡ ಚಿತ್ರ.
ಕ.ಸಾ: ಕುಟುಂಬ ಯೋಜನೆ ಹಾಗೂ ಅದರ ಮಹತ್ವವನ್ನು ತಿಳಿಸುವ ಚಿತ್ರ.

೨೦೭. ಪದವೀಧರ

(೧೯೬೭ / ಕಪ್ಪು-ಬಿಳುಪು / ಸಾಮಾಜಿಕ)

ಲಾ: ಶ್ರೀ ಸದ್ಗುರು ಫಿಲಂಸ್
ಪ್ರೊ: ಸಿ.ಕೆ.ಗೌಡ, ಎಸ್.ಶ್ರೀನಿವಾಸಯ್ಯ
ನಿ: ಸಿ.ವಿ.ಶಿವಶಂಕರ್
ಸ.ನಿ: ರಘು, ಎಂ.ವಿ.ಚಲಂ
ಅ: ಉದಯಕುಮಾರ್, ನರಸಿಂಹರಾಜು, ಬಾಲಕೃಷ್ಣ, ಹನುಮಂತರಾವ್, ಶಿವಶಂಕರ್, ವಿಜಯಪ್ರಸಾದ್ (ಹೊಸಮುಖ), ಶಕ್ತಿಪ್ರಸಾದ್, ನರೇಶ್, ಕಲ್ಪನಾ, ಎಂ.ಎನ್.ಲಕ್ಷ್ಮೀದೇವಿ, ಜಯಶ್ರೀ, ವಾಣಿಶ್ರೀ, ಪ್ರೇಮಕುಮಾರಿ, ಮೀನಾಕುಮಾರಿ, ವಿಜಯಭಾರತಿ, ವಸಂತಿ, ಆರ್.ಜಯಂತಿ, ದತ್ತಾತ್ರೇಯ

ಕ: ಎಂ.ವಿ.ಚಲಂ
ಚಿ.ಕ/ಮಾ/ಗೀ: ಸಿ.ವಿ.ಶಿವಶಂಕರ್
ಗಾ: ಪಿ.ಬಿ.ಶ್ರೀನಿವಾಸ್, ಎಸ್.ಜಾನಕಿ, ಪಿ.ಸುಶೀಲ, ಸೂಲಮಂಗಲಂ ರಾಜಲಕ್ಷ್ಮಿ, ಡಾ॥ ಕೆ.ಜಿ.ಲಕ್ಷ್ಮಿ, ಬೆಂಗಳೂರು ಲತಾ, ಆರ್.ಶಂಕರ್
ಸಂ: ಕೆ.ಪಿ.ಕೃಷ್ಣನ್
ಛಾ: ಜಿ.ಚಂದ್ರನ್
ಕಲೆ: ವರ್ತೂರ್ಕರ್
ಸ: ಆರ್.ರತ್ನ

ನೃ: ಉಡುಪಿ ಜಯರಾಂ
ವ: ಗಾಂಧಿ, ವಿ.ಎಸ್.ಚಿನ್ನಾರಾವ್
ಪ್ರ: ಮುತ್ತು, ಕುಪ್ಪುಸ್ವಾಮಿ, ಎಸ್.ಪಿ.ರಾಜಶೇಖರ್
ಸ್ಟು: ಪ್ರಕಾಶ್, ನ್ಯೂಟೋನ್
ಹಾ: ೧)'ಕಲಿವಾ ನುಡಿವಾ ಕಲಿತು ನಡೆವಾ....', ೨)'ಕರ್ನಾಟಕ ಸಾಮ್ರಾಜ್ಯ ಹೊಯ್ಸಳಾ....', ೩)'ಯಾರಿಗೆ ಹೋಲಿಸಲೀ ನಿನ್ನೀ ನಗು ಮುಖವಾ....', ೪)'ಬಣ್ಣದಲೇನು ಬೆಡಗಿನಲೇನು....', ೫)'ಯಾರಿಗಾಗಿ ಬದುಕಿದನೂ ಅವನು....', ೬)'ನನ್ನಂತೆ ನೀನಿಲ್ಲ ನಿನ್ನಂತೆ ನಾನಿಲ್ಲ....', ೭)'ಅಮ್ಮಾ ಎಂಬ ಎರಡಕ್ಷರದ ನುಡಿಯು....', ೮)'ನೆನೆಸಿರಲಿಲ್ಲ ನಾನೆಂದೂ....'
ಕ.ಸಾ: ಪದವೀಧರನಾದ ಮೋಹನನಿಗೆ ಸಮಾಜಸೇವೆ ಮಾಡಬೇಕೆಂಬ ಅವನ ಬಯಕೆ. ವೇಷ ಮರೆಸಿಕೊಂಡು ತನ್ನ ಸಹಪಾಠಿ ಸೀತಾಳಿಗೆ ಪಾಠ ಹೇಳಿಕೊಡುತ್ತಿದ್ದ. ಸೀತಾಳ ತಂದೆ ಜನಾರ್ಧನಯ್ಯನ ಬಳಿ ಇರುವ ಅಪಾರ ಹಣವನ್ನು ಸೀತಾಳ ಸಹಾಯದಿಂದ ಹಣ ಅಪಹರಿಸಿ ತಂದ. ಆವರೆ ತಾಯಿ ಹೃದಯ ಸ್ತಂಭನದಿಂದ ಸತ್ತಳು. ಹಣ ಹಿಂದಿರುಗಿಸಹೋದರೆ ಸೀತಾ ತಿರಸ್ಕರಿಸುವಳು. ಆ ಹಣದಿಂದಲೇ ಜನಾರ್ಧನ ಬಟ್ಟೆ ಗಿರಣಿಯನ್ನು ಆರಂಭಿಸಿ ಜನಾರ್ಧನಯ್ಯನವರ ಕೈಯಿಂದಲೇ ಉದ್ಘಾಟಿಸಿದ. ಗಿರಣಿಯಲ್ಲಿ ನಿರುದ್ಯೋಗಿಗಳಿಗೆ ಕೆಲಸ ನೀಡಿದ.

೨೦೮. ನಕ್ಕರೆ ಅದೇ ಸ್ವರ್ಗ

(೧೯೬೭ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಶ್ರೀಕಾಂತ್ ಅಂಡ್ ಶ್ರೀಕಾಂತ್ ಎಂಟರ್‌ಪ್ರೈಸಸ್
ಪ್ರೊ: ಶ್ರೀಕಾಂತ್ ನಹತಾ, ಶ್ರೀಕಾಂತ್ ಪಟೇಲ್
ನಿ: ಎಂ.ಆರ್.ವಿಠಲ್
ಅ: ನರಸಿಂಹರಾಜು, ಅರುಣ್‌ಕುಮಾರ್, ಆರ್.ನಾಗೇಂದ್ರರಾವ್, ಶೈಲಶ್ರೀ, ಧೀರೇಂದ್ರ ಗೋಪಾಲ್ ... ಧಿಕ್ಕಿಮಾಧವರಾವ್, ರಂಗ, ಸಂಪತ್, ಜಯಂತಿ, ಜೂ.ರೇವತಿ
ಕ/ಚಿ.ಕ: ಎಂ.ಆರ್.ವಿಠಲ್
ಮಾ: ಆರ್.ಎನ್.ಜಯಗೋಪಾಲ್
ಗೀ: ಆರ್.ಎನ್.ಜಯಗೋಪಾಲ್, ವಿಜಯನಾರಸಿಂಹ
ಗಾ: ಪಿ.ಸುಶೀಲ, ಪಿ.ಬಿ.ಶ್ರೀನಿವಾಸ್, ಎಲ್.ಆರ್.ಈಶ್ವರಿ, ಎಸ್.ಪಿ.ಬಾಲಸುಬ್ರಹ್ಮಣ್ಯಂ
ಸಂ: ಎಸ್.ಪಿ.ಎನ್.ಕೃಷ್ಣ, ವೇಲಾಯುಧನ್
ಛಾ: ಎಸ್.ವಿ.ಶ್ರೀಕಾಂತ್, ಟಿ.ವಿ.ರಾಜಾರಾಂ
ಕಲೆ: ಬಿ.ಚಲಂ
ಸ: ಎಂ.ರಂಗರಾವ್
ಧ್ವ: (ಹಾ)ಸ್ವಾಮಿನಾಥನ್, (ಮಾ)ಕೆ.ಆರ್.ಸೀತಾರಾಂ
ನೃ: ಜೋಸೆಫ್
ವ: ಕೃಷ್ಣಮೂರ್ತಿ
ಪ್ರ: ರಾಜಗೋಪಾಲ್, ಶ್ರೀನಿವಾಸ್, (ಕೇಶಾಲಂಕಾರ) ಶ್ರೀಮತಿ ರಾಜಮ್ಮ ಎಂ.ಆರ್.ವಿಠಲ್
ಸ್ಟು: ಪ್ರೀಮಿಯರ್ (ಮೈಸೂರು)
ಹಾ: ೧)'ಕನಸಿದೋ ನನಸಿದೋ ಮುಗಿದ ಮನಸ ಬಯಕೆಯೋ....', ೨)'ಬಾಳೊಂದು ಭಾವಗೀತೆ ಆನಂದ ತುಂಬಿದ ಕವಿತೆ....', ೩)'ನಗಬೇಕು ನಗಿಸಬೇಕು ಇದೇ ನನ್ನ ಧರ್ಮ...', ೪)'ಈ ಹಾಯಿ ಇನ್ನೆಲ್ಲಿ ಇಲ್ಲೇನೇ ಈ ಬಾಳಲ್ಲೀ....'
ವಿ: ಎಸ್.ಪಿ.ಬಾಲಸುಬ್ರಹ್ಮಣ್ಯಂ ಅವರು ಮೊದಲ ಬಾರಿಗೆ ಕನ್ನಡ ಚಿತ್ರಕ್ಕಾಗಿ ಹಾಡಿದರು. ಅರುಣ್‌ಕುಮಾರ್ ಅವರಿಗಾಗಿ ಎಸ್.ಪಿ.ಬಾಲಸುಬ್ರಹ್ಮಣ್ಯಂ ಅವರು 'ಕನಸಿದೋ ನನಸಿದೋ..' ಗೀತೆಯನ್ನು ಹಾಡಿದರು. ಎಂ.ರಂಗಾರಾವ್ ಸಂಗೀತ ನಿರ್ದೇಶನದ ಮೊದಲ ಚಿತ್ರ. ನರಸಿಂಹರಾಜು ಅವರು ನಾಯಕನಟರಾಗಿ ಅಭಿನಯಿಸಿದ ಚಿತ್ರ. ನರಸಿಂಹರಾಜು ಅಭಿನಯದ ೧೦೦ನೆ ಚಿತ್ರ. ರಾಜ್ಯ ಸರ್ಕಾರ ಚಲನಚಿತ್ರಗಳಿಗೆ ಪ್ರಶಸ್ತಿ ನೀಡುವ ಪರಿಪಾಠ ಆರಂಭಿಸಿದ ವರ್ಷ (೧೯೬೬-೬೭)' ಈ ಚಿತ್ರ ದ್ವಿತೀಯ ಅತ್ಯುತ್ತಮ ಚಿತ್ರ ಪ್ರಶಸ್ತಿಗೆ ಪಾತ್ರವಾಯಿತು. ಆ ವರ್ಷ ಪ್ರಥಮ ಪ್ರಶಸ್ತಿ ಯಾವ ಚಿತ್ರಕ್ಕೂ ಲಭಿಸಲಿಲ್ಲ. ಇದು ಕೇವಲ ೧೯ ದಿನಗಳಲ್ಲಿ ಚಿತ್ರೀಕರಣ ಮುಗಿಸಿದ ಚಿತ್ರ.

ಕ.ಸಾ: ಶ್ರೀಮಂತ ತಂದೆಯ ಶ್ರೀಮಂತಿಕೆಯ ವ್ಯಾಮೋಹ ಹಾಗು ಮಗನ ನಡುವಿನ ದ್ವಂದ್ವವೇ ಈ ಚಿತ್ರದ ವಸ್ತು. ಪ್ರೀತಿಸಿ ಬಡವನನ್ನು ಮದುವೆಯಾದ ಮಗಳು ಕರುಣಾ ನೆಮ್ಮದಿಯಿಂದ ಬದುಕಿದರೆ ರಾಯರು ಶ್ರೀಮಂತ ಹೆಣ್ಣನ್ನು ಸೊಸೆಯಾಗಿ ತಂದುಕೊಂಡು ಮಗನ ಬಾಳು ನರಕ ಮಾಡುತ್ತಾರೆ. ಪತ್ರಕರ್ತನಾಗಿ ಹೊಸ ಬದುಕು ಆರಂಭಿಸಿದ ರಾಜಾ ಕೊನೆಗೆ ಬಡ ಹುಡುಗಿಯನ್ನು ವಿವಾಹವಾಗುತ್ತಾನೆ.

೨೦೯. ಸತಿಸುಕನ್ಯಾ

(೧೯೬೭ / ಕಪ್ಪು-ಬಿಳುಪು / ಭಕ್ತಿಪ್ರಧಾನ)
ಲಾ: ಭುವನೇಶ್ವರಿ ಪ್ರೊಡಕ್ಷನ್ಸ್
ಪ್ರೊ/ನಿ: ವೈ.ಆರ್.ಸ್ವಾಮಿ
ಸ.ನಿ: ರತ್ನಾಕರ್
ಅ: ರಾಜಕುಮಾರ್, ಉದಯಕುಮಾರ್, ಕೆ.ಎಸ್.ಅಶ್ವತ್ಥ್, ಬಾಲಕೃಷ್ಣ, ನರಸಿಂಹರಾಜು, ಎಂ.ಪಿ.ಶಂಕರ್, ರತ್ನಾಕರ್, ವಿದ್ಯಾಸಾಗರ್, ರಾಜಾಶಂಕರ್, ಬೆಂಗಳೂರು ನಾಗೇಶ್, ಹರಿಣಿ, ಜಯಶ್ರೀ, ಜಾರ್ಜ್ ಇಂದಿರಾ, ಆರ್.ಟಿ.ರಮಾ, ಜ್ಯೋತಿ, ಕುಪ್ಪುರಾಜ್, ನಂದಿನಿ, ಜಾನಕಿ, ಶ್ರೀರಂಗ, ಗುಗ್ಗು, ನಾಗೇಶ್

ಕ: ಶ್ರೀರಾಮಚಂದ್ರನ್
ಮಾ: ಸೋರಟ್ ಅಶ್ವತ್ಥ್
ಗೀ: ಎಂ.ಎನ್.ಆರಾಧ್ಯ
ಗಾ: ಪಿ.ಬಿ.ಶ್ರೀನಿವಾಸ್, ಎಸ್.ಜಾನಕಿ, ಪಿ.ಲೀಲಾ, ನಾಗೇಂದ್ರ, ಬಿ.ಕೆ.ಸುಮಿತ್ರ, ಎಲ್.ಆರ್.ಈಶ್ವರಿ, ರತ್ನಾಕರ, ಪ್ರೇಮ
ಸಂ: ಪಿ.ಎಸ್.ಮೂರ್ತಿ
ಛಾ: ಆರ್.ಮಧು
ಕಲೆ: ಬಿ.ಎನ್.ಕೃಷ್ಣ
ಸ: ರಾಜನ್ ನಾಗೇಂದ್ರ
ನೃ: ವೇಣುಗೋಪಾಲ್
ಸ್ಟು: ಗೋಲ್ಡನ್ (ಮದ್ರಾಸ್)
ಹಾ: ೧)'ಎಲ್ಲೆ ಎಲ್ಲೆ ಚೋರೀ ಯಾರೇ ನಿನ್ನ ಶೌರೀ....', ೨)'ಎನಿತು ರಮ್ಯವಯ್ಯ ಈ ನಿಲಯ...', ೩)'ಜಯ ಜಯ ಶಂಕರಿ...', ೪)'ಮಧುರ ಮಧುರವೀ ಮಂಜುಳಗಾನ...', ೫)'ಕಾತ್ಯಾಯಿನಿ ಕಾಮಿತ...', ೬)'ಝುಣ್ ಝುಣ್...', ೭)'ಪತಿಸೇವೆ ಪುಣ್ಯಫಲ...', ೮)'ಅರುಣೋದಯ ಕಾಲ...', ೯)'ಯಾವ ಲೋಕ...', ೧೦)ಅನ್ನಪೂರ್ಣೆ ಕೃಪಾಪೂರ್ಣೇ...', ೧೧)'ಹೆಣ್ಣಿನ ಕಣ್ಣಿನ ನೋಟ...', ೧೨)'ನಮಸ್ತುಭ್ಯಂ ಮಹಾದೇವಿ...'
ವಿ: ಮುಂದೆ ರಾಜೇಶ್ ಆದ ವಿದ್ಯಾಸಾಗರ್ ಅಶ್ವಿನಿ ದೇವತೆಗಳ ದ್ವಿಪಾತ್ರದಲ್ಲಿ ಅಭಿನಯಿಸಿದ್ದಾರೆ.
ಕ.ಸಾ: ರಾಜಕುಮಾರಿ ಸುಕನ್ಯಳು ತಿಳಿಯದೆ ಹುತ್ತವೊಂದಕ್ಕೆ ಕಡ್ಡಿಯಿಂದ ಚುಚ್ಚಿದಾಗ ಒಳಗೆ ತಪಸ್ಸಿನಲ್ಲಿದ್ದ ಚ್ಯವನ ಋಷಿ ಅಂಧನಾಗುತ್ತಾನೆ. ಆಕೆ ಆತನನ್ನೇ ವಿವಾಹವಾಗುತ್ತಾಳೆ. ಅಶ್ವಿನಿ ದೇವತೆಗಳ ವರದಿಂದ ಮರಳಿ ಕಣ್ಣು ಪಡೆದ ಚ್ಯವನನ ಸೇವೆಯಲ್ಲಿ ಪರೀಕ್ಷಿಸುವವರೆದುರು ತನ್ನ ಪಾತಿವ್ರತ್ಯವನ್ನು ಕಾಯ್ದುಕೊಂಡು ಸಾಧ್ವಿಯಾದವಳು.

೨೧೦. ಬ್ಲಾಕ್ ಮಾರ್ಕೆಟ್

(೧೯೬೭ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಮೋಹಿನಿ ಪ್ರೊಡಕ್ಷನ್ಸ್
ಪ್ರೊ/ನಿ: ಎಸ್.ಎನ್.ಸಿಂಗ್

ಸ.ನಿ: ಎಸ್.ಎ.ಆರ್.ಸಿಂಗ್ (ಸಹ ನಿರ್ಮಾಪಕ)
ಅ: ನರಸಿಂಹರಾಜು, ವಂದನಾ, ಸಂಪತ್, ಧಿಕ್ಕಿಮಾಧವರಾವ್, ಮೀಸೆ ಮುನಿಯಪ್ಪ, ಸದಾಶಿವಯ್ಯ, ರಾಮರಾಜ ಅರಸ್, ಕಮಲಮ್ಮ, ಸಂಪಿಗೆ ಶಂಕರ್, ಶ್ರೀನಿವಾಸ್, ಗುರುಮೂರ್ತಿ, ರಾಮನಾಯಕ್, ಕೋದಂಡರಾಮ್, ಮಾ|ಜಯರಾಜ್, ಶಾರದ, ಬೇಬಿ ಸುಜಾತ
ಕ/ಚಿ.ಕ./ಮಾ: ಮೋಹಿನಿ ಪ್ರೊಡಕ್ಷನ್ಸ್ ಕಥಾವಿಭಾಗ
ಗೀ: ಎಂ.ನರೇಂದ್ರಬಾಬು
ಗಾ: ಎಲ್.ಆರ್.ಈಶ್ವರಿ, ಪಿ.ಕಾಳಿಂಗರಾವ್, ನಾಗೇಂದ್ರ
ಸಂ: ಆರ್.ಇ.ಚಿನ್ನಪ್ಪ
ಛಾ: ಕೆ.ಎಸ್.ಗೋವಿಂದಸ್ವಾಮಿ, ಸಹಾಯಕರು - ವಿಕ್ಟರ್, ವರದ
ಕಲೆ: ಪಿ.ಎಸ್.ವೆಂಕಟರಾಮಯ್ಯ
ಸ: ಸತ್ಯಂ
ಧ್ವ: ಕೆ.ಆರ್.ಸೀತಾರಾಂ, ಆರ್ಮುಗಂ ವಾಸನ್ (ಸಹಾಯಕ)
ನೃ/ಸಾ/ವ: ಪ್ರೀಮಿಯರ್ ಸ್ಟುಡಿಯೋ ತಂತ್ರಜ್ಞರು
ಪ್ರ: ಶಿವರಾಜ್, ರಾಜಗೋಪಾಲ್, ಚಿನ್ನಸ್ವಾಮಿ
ಸ್ಟು: ಪ್ರೀಮಿಯರ್ (ಮೈಸೂರು)
ಹಾ: 'ಕನ್ನಡ ನಾಡಿನ ಮಹಿಮೆಯ ಕೇಳಿರಿ...', 'ಈ ಹೆಣ್ಣಿನಾ ಗುಣ ಒಂದು ಸರಿ ಇಲ್ಲಾ...', 'ಬಾರೆನ್ನಾ ಬೆಚ್ಚನ್ನೆ ಬ್ಯೂಟಿ....', 'ನೀನೆಲ್ಲಿ ಬಾಬಾಬಾಬಾ ಜಾಣ...'
ಸೆ: ೪೯೫೧.೭೫ ಮೀ., ೧೫ ರೀಲು
ಕ.ಸಾ: ಆಲೂರಿನ ಶ್ರೀಮಂತ ಬಸಪ್ಪ ಬ್ಲಾಕ್ ಮಾರ್ಕೆಟ್ ಕುಳ. ಇವನಿಂದ ಬಡವರಿಗೆ ಕಷ್ಟ ಅಪ್ಪಿತಪ್ಪಲ್ಲ. ಬ್ಲಾಕ್ ಮಾರ್ಕೆಟ್‌ನಿಂದ ಇಡೀ ಕುಟುಂಬವನ್ನು ಕಳೆದುಕೊಂಡ ನಾಣಿ ಹಾಗೂ ಅವನ ಸ್ನೇಹಿತ ಬ್ರೋಕರ್ ಗೋವಿಂದಯ್ಯ ಈ ಬ್ಲಾಕ್ ಮಾರ್ಕೆಟ್ ಪಿಡುಗನ್ನು ತೊಡೆದು ಹಾಕಲು ನಿರ್ಧರಿಸುತ್ತಾರೆ. ಗೋವಿಂದಪ್ಪ ಹಾಗೂ ನಾಣಿ ಸೇರಿ ಸಹಕಾರ ಬ್ಯಾಂಕ್ ತೆರೆದು ಕಪ್ಪು ಹಣವನ್ನೆಲ್ಲಾ ಬಿಳಿ ಹಣವನ್ನಾಗಿ ಮಾಡುವುದಾಗಿ ತಿಳಿಸುತ್ತಾರೆ. ಬಸಪ್ಪ ಸಹ ಅಲ್ಲಿ ಹಣ ತಂದಿರುತ್ತಾನೆ. ಒಂದು ದಿನ ಬ್ಯಾಂಕ್ ಮುಚ್ಚಿ ಹೋಗುತ್ತದೆ. ಗೋವಿಂದಯ್ಯ ಸಿ.ಐ.ಡಿ. ಎಂದು ಗೊತ್ತಾಗುತ್ತದೆ. ಬಸಪ್ಪ ದುಡ್ಡು ಕಳೆದುಕೊಂಡು ಬುದ್ಧಿ ಕಲಿಯುತ್ತಾನೆ.

೨೧೧. ಪಾರ್ವತಿಕಲ್ಯಾಣ

(೧೯೬೭ / ಕಪ್ಪು-ಬಿಳುಪು / ಪೌರಾಣಿಕ)
ಲಾ: ವಿಕ್ರಂ ಪ್ರೊಡಕ್ಷನ್ಸ್
ಪ್ರೊ/ನಿ: ಬಿ.ಎಸ್.ರಂಗಾ
ಸ.ನಿ: ಬಿ.ಸದಾಶಿವಯ್ಯ, ಧರ್ಮರಾಜ್, ದಯಾಸಾಗರ್
ಅ: ರಾಜಕುಮಾರ್, ಉದಯಕುಮಾರ್, ಜಯಶ್ರೀ, ಎಂ.ಪಿ. ಶಂಕರ್, ಚಂದ್ರಕಲಾ, ಆರ್.ಟಿ.ರಮಾ,

ಪಂಢರಿಬಾಯಿ, ಅನಂತರಾಮ್ ಮಚ್ಚೇರಿ,
ರಾಘವೇಂದ್ರರಾವ್
ಮಾ/ಗೀ: ಚಿ.ಸದಾಶಿವಯ್ಯ
ಗಾ: ಪಿ.ಬಿ.ಶ್ರೀನಿವಾಸ್, ಎಲ್.ಆರ್.ಈಶ್ವರಿ, ಎಸ್.ಜಾನಕಿ, ಬೆಂಗಳೂರು ಲತಾ
ಸಂ: ಪಿ.ಜಿ.ಮೋಹನ್
ಛಾ: ಬಿ.ಎನ್.ಹರಿದಾಸ್
ಕಲೆ: ವಾಲಿ
ಸ: ಜಿ.ಕೆ.ವೆಂಕಟೇಶ್
ಧ್ವ: ಎನ್.ಶೇಷಾದ್ರಿ
ನೃ: ಜಯರಾಂ
ವ: ವಿ.ಎನ್.ಮೂರ್ತಿ
ಪ್ರ: ದೊರಸ್ವಾಮಿ-ಷಣ್ಮುಗಂ
ಸ್ಟು: ವಿಕ್ರಂ (ಮದರಾಸು)
ಹಾ: ೧)'ವನಮಾಲೀ ವೈಕುಂಠಪತೇ...', ೨)'ಮಾರಾ ಚಿತ್ತ ಚೋರಾ ಸುಮ ಸುಂದರಾ....', ೩)'ಗಂಗೆಯ ಧರಿಸವನಾ....','ಜಯಶಂಕರ ಭಾವಗೋಚರ....', ೪)'ಬಾಲೆಯ ಮೊರೆಯಿದು ಕೇಳದೇ.....', ೫)'ಜಯಹೇ ಶಂಕರ ಜಯ ಅಭಯಂಕರ...', ೬)'ನವವಸಂತ ನಗುತ...', ೭)'ಸಶಂಖ ಚಕ್ರಂ...', ೮)'ವಿಶ್ವವಂದ್ಯ ವಿಘ್ನೇಶ...', ೯)'ಶರವಣ ಭವತೇ...'
ವಿ: ಉದ್ಘ - ೩೬೭೩.೨೧, ೧೪ ರೀಲುಗಳು, 'ಯು' ಸರ್ಟಿಫಿಕೇಟ್
ಕ.ಸಾ: ದಕ್ಷಬ್ರಹ್ಮ ಮರ್ಧನ, ಪಾರ್ವತಿ ಕಲ್ಯಾಣ, ತಾರಕಾಸುರ ಸಂಹಾರ, ಗಣೇಶನ ಜನನ ಮುಂತಾದ ಪೌರಾಣಿಕ ಅಂಶಗಳನ್ನು ಆಧರಿಸಿ ಈ ಚಿತ್ರದ ಕಥೆ ಹೆಣೆಯಲಾಗಿದೆ. ಶಿವನ ಪತ್ನಿ ಸತಿದೇವಿಗೆ ಆಹ್ವಾನ ನೀಡದೇ ತಂದೆ ದಕ್ಷಬ್ರಹ್ಮ ಯಜ್ಞವೊಂದನ್ನು ಕೈಗೊಂಡಿರುತ್ತಾನೆ. ಆಹ್ವಾನವಿಲ್ಲದೆ ಬಂದ ಮಗಳನ್ನು ಅವಮಾನಿಸುತ್ತಾನೆ. ನೊಂದ ಸತಿದೇವಿ ಯಜ್ಞ ಕುಂಡವಲ್ಲೇ ಬಿದ್ದು ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಸಿಟ್ಟಾದ ಶಿವ ವೀರಭದ್ರನಿಂದ ದಕ್ಷಬ್ರಹ್ಮನನ್ನು ಸಂಹಾರ ಮಾಡಿಸುತ್ತಾನೆ. ಸತಿದೇವಿ ಪರ್ವತರಾಜನ ಮಗಳು ಪಾರ್ವತಿಯಾಗಿ ಜನಿಸಿ ಶಿವನನ್ನು ವಿವಾಹ ಮಾಡಿಕೊಳ್ಳುತ್ತಾಳೆ.

೨೧೨. ಬೆಳ್ಳಿಮೋಡ

(೧೯೬೭ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಶ್ರೀನಿವಾಸ ಆರ್ಟ್ ಪ್ರೊಡಕ್ಷನ್ಸ್
ಪ್ರೊ: ಟಿ.ಎಸ್. ಶ್ರೀನಿವಾಸನ್
ನಿ: ಎಸ್.ಆರ್.ಪುಟ್ಟಣ್ಣಕಣಗಾಲ್
ಸ.ನಿ: ತೆಕ್ಕಟ್ಟೆ ನಾಗರಾಜ
ಅ: ಕಲ್ಯಾಣ್‌ಕುಮಾರ್, ಕಲ್ಪನಾ, ಕೆ.ಎಸ್.ಅಶ್ವತ್ಥ್, ಪಂಢರಿಬಾಯಿ, ಬಾಲಕೃಷ್ಣ, ಗಣಪತಿಭಟ್, ಜಯಾ, ರಾಘವೇಂದ್ರರಾವ್, ದ್ವಾರಕೀಶ್, ಬೇಬಿರಾಣಿ, ಪಾಪಮ್ಮ
ಕ: ತ್ರಿವೇಣಿ ಅವರ ಕಾದಂಬರಿ
ಚಿ.ಕ: ಎಸ್.ಆರ್.ಪುಟ್ಟಣ್ಣಕಣಗಾಲ್
ಮಾ: ತ್ರಿವೇಣಿ, ಆರ್.ಎನ್.ಜಯಗೋಪಾಲ್
ಗೀ: ಆರ್.ಎನ್.ಜಯಗೋಪಾಲ್. ದ.ರಾ.ಬೇಂದ್ರೆ
ಗಾ: ಪಿ.ಬಿ.ಶ್ರೀನಿವಾಸ್, ಪಿ.ಸುಶೀಲಾ, ಎಸ್.ಜಾನಕಿ, ಬಿ.ಕೆ.ಸುಮಿತ್ರ
ಸಂ: ವಿ.ಪಿ.ಕೃಷ್ಣನ್
ಛಾ: ಆರ್.ಎನ್.ಕೆ.ಪ್ರಸಾದ್
ಕಲೆ: ಆರ್.ಬಿ.ಎಸ್.ಮಣಿ
ಸ: ವಿಜಯಭಾಸ್ಕರ್
ಧ್ವ: ಇ.ಐ.ಜೀವ
ವ: ವಾಸು
ಪ್ರ: ಬಿ.ಆರ್.ಸಿಂಗ್
ಸ್ಟು: ವೀನಸ್. ಶಾರದ. ವೆಂಕಟೇಶ್ವರ ಸಿನಿಟೋನ್
ಹಾ: ೧)'ಮೂಡಣ ಮನೆಯ...', ೨)'ವಂದೇ ಮಾತರಂ ಅಂಬಿಕಾಂ...', ೩)'ಇದೇನಾ ಉತ್ತರ...', ೪)'ಬೆಳ್ಳಿಮೋಡದ ಅಂಚಿನಿಂದ...', ೫)'ಮುದಿನ ಗಿಣಿಯ...', ೬)'ಒಡೆಯಿತು ಒಲವಿನ ಕನ್ನಡಿ...'.
ವಿ: ಪುಟ್ಟಣ್ಣ ನಿರ್ದೇಶನದ ಮೊದಲ ಕನ್ನಡ ಚಿತ್ರ
ಕ.ಸಾ: ಎಸ್ಟೇಟ್ ಮಾಲೀಕರ ಒಬ್ಬಳೇ ಮಗಳನ್ನು ನೋಡಲು ಬರುವ ನಾಯಕ ಅವಳಿಗೆ ಮನಸೋತು, ವಿದೇಶಕ್ಕೆ ತೆರಳುತ್ತಾನೆ. ನಾಯಕಿಗೊಬ್ಬ ತಮ್ಮ ಹುಟ್ಟುತ್ತಾನೆ. ಆಸ್ತಿಯ ಮೇಲೆ ಕಣ್ಣಿದ್ದ ನಾಯಕನಿಗೆ ಆ ಮಗುವಿನ ಹುಟ್ಟು ಸರಿಬರುವುದಿಲ್ಲ. ನಾಯಕಿಯ ಮನಸ್ಸು ಒಡೆಯುತ್ತದೆ. ನಾಯಕನಿಗೆ ತಪ್ಪಿನ ಅರಿವಾದರೂ ನಾಯಕಿ ಒಪ್ಪಿಕೊಳ್ಳುವುದಿಲ್ಲ.

೨೧೩. ಗಂಗೆಗೌರಿ

(೧೯೬೭ / ಕಪ್ಪು-ಬಿಳುಪು / ಪೌರಾಣಿಕ)
ಲಾ: ಪದ್ಮಿನಿ ಪಿಕ್ಚರ್ಸ್
ಪ್ರೊ/ನಿ: ಬಿ.ಆರ್.ಪಂತುಲು
ಸ.ನಿ: ಎಸ್.ಆರ್.ಶಿವರಾಂ, ಸಿ.ಪೊನ್ನುಸ್ವಾಮಿ
ಅ: ರಾಜಕುಮಾರ್, ಕೆ.ಎಸ್.ಅಶ್ವತ್ಥ್, ಎಂ.ಪಿ.ಶಂಕರ್, ಭಾರತಿ, ಲೀಲಾವತಿ, ಪಾಪಮ್ಮ, ನರಸಿಂಹರಾಜು, ದಿನೇಶ್, ಜಯಾ, ಹನುಮಂತರಾವ್, ರಮಾ, ಪ್ರೇಮಲತಾ, ಕೃಷ್ಣಶಾಸ್ತ್ರಿ, ವಿದ್ಯಾಸಾಗರ್, ಲಕ್ಷ್ಮಯ್ಯ, ಅನಂತರಾಂ ಮಚ್ಚೇರಿ
ಕ: ಎ.ಎಸ್.ನಾಗರಾಜ್
ಚಿ.ಕ: ಪದ್ಮಿನಿ ಪಿಕ್ಚರ್ಸ್ ಸಾಹಿತ್ಯ ವಿಭಾಗ

ಮಾ/ಗೀ: ಜಿ.ವಿ.ಅಯ್ಯರ್
ಗಾ: ಪಿ.ಬಿ.ಶ್ರೀನಿವಾಸ್, ಬಾಲಮುರಳೀಕೃಷ್ಣ, ಪಿ.ಲೀಲಾ, ಎಸ್.ಜಾನಕಿ, ಬೆಂಗಳೂರು ಲತಾ
ಸಂ: ಆರ್.ದೇವರಾಜನ್
ಛಾ: ಪಿ.ಎಲ್.ನಾಗಪ್ಪ
ಕಲೆ: ಸೆಲ್ವರಾಜ್
ಸ: ಟಿ.ಜಿ.ಲಿಂಗಪ್ಪ
ಧ್ವ: ರಾಮನಾಥನ್, ರಾಮಚಂದ್ರ
ನೃ: ಕೃಷ್ಣಕುಮಾರ್ (ಧಾರವಾಡ)
ಸಾ: ಜ್ಯೂಡೋ ರತ್ನಂ
ವ: ಎಂ.ರಾಧಾ, ಎಂ.ಜಿ.ನಾಯ್ಡು
ಪ್ರ: ಎಂ.ಎಸ್.ಸುಬ್ಬಣ್ಣ, ಎಂ.ಕೆ.ಶ್ರೀನಿವಾಸ್, ಮಾಣಿಕ್ಯಂ, ವಿ.ಪಾರ್ಥಸಾರಥಿ
ಸ್ಟು: ಅರುಣಾಚಲಂ
ಹಾ: ೧)'ಜಯ ಜಯ ಜಗದೀಶಾ...', ೨)'ಭವತೀ ಭಿಕ್ಷಾಂದೇಹಿ...', ೩)'ತುಂಗಾಭದ್ರಾ ಕಾವೇರಿ...', ೪)'ಎನಗೂ ನಿನಗೂ...', ೫)'ಮಿಂಚಿನ ಹೊಳೆಯಲಿ...', ೬)'ನೀರ ಹೊತ್ತ...', ೭)'ಚೆಲುವರಲ್ಲಿ ಚೆಲುವಾ...',
ವಿ: ಡಬ್ಲ್ಯು.ಹೆಚ್.ಸುಬ್ಬರಾವ್ ಅವರ ಛಾಯಾ ಚಮತ್ಕಾರ.
ಕ.ಸಾ: ಶನಿದೇವರು ಪರಮೇಶ್ವರನ ಪಟ್ಟವನ್ನು ಹೊಂದುವ ಪ್ರಯತ್ನ ಪಡುತ್ತಾನೆ. ಶಿವನ ಸಾನ್ನಿಧ್ಯದಲ್ಲಿದ್ದ ಗಂಗೆ-ಗೌರಿಯರು ತಾವು ಮಾಡಿದ ಸಂವಾದದಿಂದಾಗಿ ಭೂಲೋಕದಲ್ಲಿ ಜನಿಸುತ್ತಾರೆ. ಪರಮೇಶ್ವರನೂ ಭೂಲೋಕಕ್ಕೆ ಬಂದು ಜನಗಳಲ್ಲಿ ದೈವಭಕ್ತಿ, ಶ್ರದ್ಧೆ ಉಂಟು ಮಾಡುತ್ತಾನೆ.

೨೧೪. ಕಲ್ಲು ಸಕ್ಕರೆ

(೧೯೬೭ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಕಲ್ಯಾಣ್ ಥಿಯೇಟರ್ಸ್
ಪ್ರೊ/ನಿ: ಕಲ್ಯಾಣ್‌ಕುಮಾರ್
ಅ: ಕಲ್ಯಾಣ್‌ಕುಮಾರ್, ರೇವತಿ ಕಲ್ಯಾಣ್‌ಕುಮಾರ್, ಕೆ.ಎಸ್.ಅಶ್ವತ್ಥ್, ವಂದನಾ. ಜಯಂತಿ, ನರಸಿಂಹರಾಜು, ಬಿ.ವಿ.ರಾಧ, ಕೃಷ್ಣಾರೆಡ್ಡಿ, ಎಸ್.ಸರೋಜಮ್ಮ, ಶಶಿರಾಜ್, ಥಿಕ್ಕಿಮಾಧವರಾವ್, ಸಂಪತ್, ಗಣಪತಿಭಟ್, ಅನಂತಲಕ್ಷ್ಮಮ್ಮ, ಎಸ್.ರೇವತಿ, ಅನಂತರಾಂ ಮಚ್ಚೇರಿ, ಬೇಬಿ ಗೀತಾ
ಕ/ಚಿ.ಕ/ಮಾ: ರೇವತಿ ಕಲ್ಯಾಣ್‌ಕುಮಾರ್
ಗೀ: ವಿಜಯನಾರಸಿಂಹ, ಡಿ.ವಿ.ಜಿ.
ಗಾ: ಪಿ.ಬಿ.ಶ್ರೀನಿವಾಸ್, ಎಸ್.ಜಾನಕಿ, ಎಲ್.ಆರ್.ಈಶ್ವರಿ, ಶೀಲಾ, ಪುಷ್ಪಲತಾ, ಸರೋಜ, ಶ್ರೀನಿವಾಸನ್, ಗೋಪಾಲರಾವ್

ಸಂ: ಎಂ.ಉಮಾನಾಥ್
ಛಾ: ಚಿಟ್ಟಿಬಾಬು
ಕಲೆ: ವೆಂಕಟರಾಮ್
ಸ: ಎನ್.ಎಸ್.ತ್ಯಾಗರಾಜನ್
ಧ್ವ: ಮೀನಾಕ್ಷಿ ಸುಂದರಂ, ಇ.ಐ.ಜೀವಾ, ಕೆ.ಆರ್.ಸೀತಾರಾಂ
ನೃ: ಉಡುಪಿ ಜಯರಾಂ
ಸಾ: ವೈ.ಶಿವಯ್ಯ
ವ: ಕಣ್ಣನ್
ಪ್ರ: ಜಿ.ವಿ.ರಾಜಗೋಪಾಲ್, ರಾಜಗೋಪಾಲ್
ಸ್ಟು: ಪ್ರೀಮಿಯರ್ (ಮೈಸೂರು)
ಹಾ: ೧)'ವನಸುಮದೊಳೆನ್ನ...', ೨)'ಹಲೋ ಮಿಸ್ಟರ್ ಪ್ಯಾಂಟ್ಶಾರೀ...', ೩)'ನನ್ನಲ್ಲಿ ಏಕಿಂತು ಆನಂದ...', ೪)'ಗುಲಾಬಿ ಹೂವೆ ಬಾ...', ೫)'ಈ ಮನೆಯ ಮಂಗಳದ...'
ಕ.ಸಾ: ಮನಸಾರ ಪ್ರೇಮಿಸಿದ ಹುಡುಗಿ ಸಿಗುವುದಿಲ್ಲ. ಆಕೆ ಚಿಕ್ಕಮ್ಮನಾಗಿ ಬರುತ್ತಾಳೆ. ಮತ್ತೊಬ್ಬ ಹುಡುಗಿ ಹುಡುಗನನ್ನು ಅತಿಯಾಗಿ ಹಚ್ಚಿಕೊಂಡಿರುತ್ತಾಳೆ. ಅವರೆ ನಾಯಕನಿಗೆ ಅವಳೆಂದರ ಆಗುವುದಿಲ್ಲ. ಇಬ್ಬರೂ ಇಲ್ಲದೆ ಕಡೆಗೆ ಮೂರನೆಯ ಹೆಣ್ಣನ್ನು ಮದುವೆಯಾಗುವುದರೊಂದಿಗೆ ಸುಖಾಂತ್ಯ.

೨೧೫. ರಾಜಶೇಖರ

(೧೯೬೭ / ಕಪ್ಪು-ಬಿಳುಪು / ಜಾನಪದ)
ಲಾ: ವಸಂತ್ ಪಿಕ್ಚರ್ಸ್
ಪ್ರೊ: ಬಿ.ಎಸ್.ರಂಗಾ
ನಿ: ಜಿ.ವಿ.ಅಯ್ಯರ್
ಸ.ನಿ: ದೊರೈ, ಬಿ.ಎಸ್.ವಿಶ್ವನಾಥ್
ಅ: ರಾಜಕುಮಾರ್, ಉದಯಕುಮಾರ್, ಬಿ.ಎಂ.ವೆಂಕಟೇಶ್, ಟಿ.ಎನ್.ಬಾಲಕೃಷ್ಣ, ನರಸಿಂಹರಾಜು, ರಾಘವೇಂದ್ರರಾವ್, ಕುಪ್ಪುರಾಜ್, ದಿನೇಶ್, ಮಚ್ಚೇರಿ, ಶ್ಯಾಮ್, ಭಾರತಿ, ವಂದನಾ, ರಮಾದೇವಿ, ಪಾಪಮ್ಮ, ಭಾನುಮತಿ, ರಮಾ
ಕ: ಬಿ.ಎಸ್.ರಂಗಾ
ಮಾ/ಗೀ: ಜಿ.ವಿ.ಅಯ್ಯರ್
ಗಾ: ಎಸ್.ಜಾನಕಿ, ಪಿ.ಬಿ.ಶ್ರೀನಿವಾಸ್, ಎಲ್.ಆರ್.ಈಶ್ವರಿ
ಸಂ: ಪಿ.ಜಿ.ಮೋಹನ್, ದೇವೇಂದ್ರನಾಥ್, ಚಕ್ರಪಾಣಿ
ಛಾ: ಬಿ.ಎನ್.ಹರಿದಾಸ್
ಕಲೆ: ವಾಲಿ, ವಿ.ಎಸ್.ನಟರಾಜನ್ (ಶಿಲ್ಪ)
ಸ: ಜಿ.ಕೆ.ವೆಂಕಟೇಶ್
ಧ್ವ: ಎನ್.ಶೇಷಾದ್ರಿ

ನೃ: ಬಿ.ಜಯರಾಂ, ಚಿನ್ನಿ-ಸಂಪತ್
ವ: ವಿ.ಎಸ್.ಮೂರ್ತಿ
ಪ್ರ: ಷಣ್ಮುಗಂ, ದೊರೆಸ್ವಾಮಿ
ಸ್ಟು: ವಿಕ್ರಂ (ಮದರಾಸು)
ಹಾ: ೧)'ಚಿಟ್ಟೆಯಂತೆ ಹಾರಬೇಡ ....', ೨)'ಸರ ಸರ ನೀನು ಜಾರಿ ಹೋದರೆ ಎಲ್ಲರ ಕಣ್ಣಲ್ಲೇ....', ೩)'ಮಣ್ಣು ನೀರು ಗಾಳಿಯು ಬೆಳಕೂ ಒಂದನು ಒಂದು ಹೊಂದಿಕೊಂಡಿರುವುದು....', ೪)'ಇನಿಯಾ ಬಾ ಬಾ ಬಾ ಇಲ್ಲಿ ಮೆಲ್ಲ ಮೆಲ್ಲಗೆ....', ೫)'ತಕ್ಕದಿಮ್ಮಿ ತಾತಯ್ಯ ಆಸೆ ಏನಯ್ಯ.....', ೬)'ಮುತ್ತಂಥ ಮಗನಾಗಿ ಹೆತ್ತವಳ ಸಿರಿಯಾಗಿ.....'
ಕ.ಸಾ: ರಾಜಶೇಖರ ಬ್ರಹ್ಮಚಾರಿ. ಪಕ್ಕದ ರಾಜ್ಯದ ರಾಜಕುಮಾರಿ ಪಂಕಜವಲ್ಲಿ ಅಜಯಸಿಂಹನ ವೇಷದಲ್ಲಿ ಯುದ್ಧಕ್ಕೆ ಕರೆ ಕಳುಹಿಸುತ್ತಾಳೆ. ಯುದ್ಧದಲ್ಲಿ ಅವಳು ಹೆಣ್ಣೆಂಬುದನ್ನು ಅರಿತು ಅರಮನೆಗೆ ಕರೆತಂದು ರಾಜಶೇಖರ ಉಪಚರಿಸುತ್ತಾನೆ. ಪಂಕಜವಲ್ಲಿ ರಾಜಶೇಖರನಲ್ಲಿ ಅನುರಕ್ತಳಾಗುತ್ತಾಳೆ. ಆದರೆ ರಾಜಶೇಖರ ಹಳ್ಳಿಯ ಹುಡುಗಿ ಗೌರಿಯನ್ನು ಮದುವೆಯಾಗುತ್ತಾನೆ. ಕುಪಿತಳಾದ ಪಂಕಜವಲ್ಲಿ ಮಂತ್ರಿಯೊಂದಿಗೆ ಸೇರಿಕೊಂಡು ನಾನಾ ತರಹದ ತೊಂದರೆಯನ್ನು ಕೊಡುತ್ತಾಳೆ. ಗಂಡ-ಹೆಂಡತಿಯರನ್ನು ಅಗಲಿಸುತ್ತಾಳೆ. ರಾಜಶೇಖರನ ಪ್ರಾಣಮಿತ್ರ ಜಗಮಲ್ಲನನ್ನು ಕೊಲ್ಲಿಸುತ್ತಾಳೆ. ಕೊನೆಗೆ ರಾಜಶೇಖರ-ಗೌರಿ ಒಂದಾಗುತ್ತಾರೆ. ಜಗಮಲ್ಲನೂ ಸತ್ತಿರುವುದಿಲ್ಲ. ಪಂಕಜವಲ್ಲಿಯ ಮನಃ ಪರಿವರ್ತನೆಯಾಗುತ್ತದೆ.

೨೧೬. ಮಿಸ್ ಬೆಂಗಳೂರ್

(೧೯೬೭ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಪದ್ಮಾವತಿ ಪಿಕ್ಚರ್ಸ್
ಪ್ರೊ: ಪದ್ಮಾವತಿ ಅಮ್ಮಾಳ್
ನಿ: ಪಿ.ಎಸ್.ಮೂರ್ತಿ
ಅ: ನರಸಿಂಹರಾಜು, ಜಯಂತಿ, ವಂದನ, ಪಾಪಮ್ಮ, ಬಾಲಕೃಷ್ಣ, ಬಿ.ಎಂ.ವೆಂಕಟೇಶ್, ಅರುಣ್‌ಕುಮಾರ್, ರತ್ನಾಕರ್, ಬೆಂಗಳೂರು ಬಸಪ್ಪ, ಗಣಪತಿಭಟ್, ಬೆಂಗಳೂರು ನಾಗೇಶ್
ಕ: ಕೆ. ದೊರೈ
ಮಾ/ಗೀ: ಸೋರಟ್ ಅಶ್ವತ್
ಗಾ: ಎಲ್.ಆರ್.ಈಶ್ವರಿ, ಎಸ್.ಜಾನಕಿ, ಪಿ.ಬಿ.ಶ್ರೀನಿವಾಸ್
ಸಂ: ಪಿ.ಎಸ್.ಮೂರ್ತಿ
ಛಾ: ಶೇಖರ್
ಸ: ಶ್ರೀರಾಮುಲು
ಧ್ವ: ಕೋಟೇಶ್ವರರಾವ್
ನೃ: ಜೋಸೆಫ್, ಲಕ್ಷ್ಮೀನಾರಾಯಣ
ಸ್ಟು: ಶಾರದ, ಭರಣಿ
ಹಾ: ೧)'ಎಲ್ಲಾ ಮೋಸವು ಓ ಭಗವಾನ್...', ೨)'ಲೈಫಲ್ಲಿ ಜಾಲೀ ದಿನಾ...', ೩)'ಅಮ್ಮಮ್ಮಮ್ಮ ಉಲ್ಲಾಸ ಬಾಳಿಗೆ...', ೪)'ಬಾರೆಂದು ನಿನ ಕೂಗಿತೂ...', ೫)'ಹಾಲಂಥಾ ಈ ಮನಕೇ...',
ಕ.ಸಾ: ಒಬ್ಬ ವಿಷಯಲಂಪಟ, ಪಿಕ್‌ಪಾಕೆಟ್ ಯುವಕನೊಬ್ಬನ ಸುತ್ತ ಹೆಣೆಯಲಾಗಿದೆ. ಹಳ್ಳಿಯ ಹುಡುಗಿಯೊಬ್ಬಳ ಒಳ್ಳೆಯತನದಿಂದ ಸುಧಾರಿಸಿ ಕೊನೆಗೆ ಹೃದಯ ಕಶ್ಮಲಗಳನ್ನು ತೊಳೆದುಕೊಳ್ಳುವ ಕಥೆ.

೨೧೭. ಲಗ್ನಪತ್ರಿಕೆ

(೧೯೬೭ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಬಾಬಾ ಮೂವಿಟೋನ್
ಪ್ರೊ: ಎ.ಎಂ.ಸಮೀವುಲ್ಲಾ
ನಿ: ಕೆ.ಎಸ್.ಎಲ್.ಸ್ವಾಮಿ (ರವೀ)
ಸ.ನಿ: ತಿಪಟೂರು ರಘು, ರಾಜೇಂದ್ರಸಿಂಗ್ (ಬಾಬು)
ಅ: ರಾಜಕುಮಾರ್, ನರಸಿಂಹರಾಜು, ದ್ವಾರಕೀಶ್, ಚಿ.ಉದಯಶಂಕರ್, ಶಿವರಾಂ, ಪಿ.ಆರ್.ಶ್ರೀಕಂಠಯ್ಯ, ತಿಪಟೂರು ರಘು, ಶ್ರೀರಂಗ, ಹನುಮಂತಾಚಾರ್, ಜಯಂತಿ, ಜಯಶ್ರೀ, ಬಿ.ವಿ.ರಾಧ, ಜೂ.ರೇವತಿ
ಕ/ಚಿ.ಕ/ಮಾ/ಗೀ: ಚಿ.ಉದಯಶಂಕರ್
ಗಾ: ಪಿ.ಬಿ.ಶ್ರೀನಿವಾಸ್, ಎಲ್.ಆರ್.ಈಶ್ವರಿ, ಎಸ್.ಜಾನಕಿ, ಎ.ಎಲ್.ರಾಘವನ್
ಸಂ: ಬಾಲ್ ಜಿ.ಯಾದವ್
ಛಾ: ಕೆ.ಜಾನಕಿರಾಂ
ಕಲೆ: ವರ್ತೂರ್ಕರ್
ಸ: ವಿಜಯಭಾಸ್ಕರ್
ಧ್ವ: ಮೋಹನ ಸುಂದರಂ
ನೃ: ಬಿ.ಜಯರಾಂ, ವೇಣುಗೋಪಾಲ್
ಸಾ: ವೈ.ಶಿವಯ್ಯ
ವ: ಹಮೀದ್‌ಖಾನು, ನಿಷಾದ್ ಖಾನು, ವಜಿದ್ ತಾಬ್ಲ
ಪ್ರ: ಎಂ.ಎಸ್.ಸುಬ್ಬಣ್ಣ, ರಾಜಗೋಪಾಲ್, ವೀರಾಸ್ವಾಮಿ
ಸ್ಟು: ಪ್ರೀಮಿಯರ್ (ಮೈಸೂರು)
ಹಾ: ೧)'ಇಲ್ಲಿ ಯಾರೂ ಇಲ್ಲ ಇಲ್ಲಿ ನಾವೇ ಎಲ್ಲ...', ೨)'ಬಲು ಅಪರೂಪ ನಮ್ಜೋಡಿ...', ೩)'ನಿನ್ನಿಂದ ನಾನೆಂದು ಹಗಲಿರುಳು ಹಂಬಲಿಸೀ...', ೪)'ಬ್ರಹ್ಮಚಾರಿ ಶರಣಾದ ಪ್ರೇಮದೇವಿಗೆ ವರವಾದ...', ೫)'ಗಂಡು ಮುತ್ತಿನ ಚೆಂಡು...', ೬)'ಮಲ್ಲಮ್ಮ ಜಯಮ್ಮ...'
ಸೆ: ೩೯೯೮.೨೫, ೧೪ ರೀಲುಗಳು
ವಿ: 'ಬಲು ಅಪರೂಪ ನಂಜೋಡಿ' ಗೀತೆ ಜನಪ್ರಿಯವಾಯಿತು. ಚಿ.ಉದಯಶಂಕರ್-ಎಸ್.ಶಿವರಾಂ ಸೀನು- ಸುಬ್ಬು ಜೋಡಿ ಎಂತಲೇ ಪ್ರಖ್ಯಾತರಾದರು.
ಕ.ಸಾ: ರಘುರಾಮ ದೇಶದ ಸುಧಾರಣೆಗೆ ಯುವಕರೆಲ್ಲ ಬ್ರಹ್ಮಚಾರಿಗಳಾಗಿರಬೇಕೆಂಬ ಅಭಿಮತದವನು. ಅವಕ್ಕೊಂದು ಸಂಘ. ಸಂಘದ ಸದಸ್ಯರೇ ಬೇರೆ ಹೆಣ್ಣುಗಳಲ್ಲಿ ಅನುರಾಗ ಹೊಂದಿದವರು. ಗೆಳೆಯನ ಮದುವೆಗೆ ಹೋದಾಗ ರೈಲಿನಲ್ಲಿ ಪರಿಚಯವಾದ ಸೀತಾಳೊಂದಿಗೆ ಮೊದಮೊದಲು ಜಗಳವಾಡಿ ಕೊನೆಗೆ ಜ್ವರದಿಂದ ಮಲಗಿದ್ದಾಗ ಸೀತಾಳಿಂದ ಆರೈಕೆ ಮಾಡಿಸಿಕೊಳ್ಳುತ್ತಾನೆ. ಇಬ್ಬರಲ್ಲಿಯೂ ಪ್ರೀತಿ ಮೂಡಿ, ವಿವಾಹವಾಗುವ ಮೂಲಕ ಸುಖಾಂತ್ಯವಾಗುತ್ತದೆ.

೨೧೮. ಮುದ್ದು ಮೀನ

(೧೯೬೭ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಪ್ರಗತಿ ಚಿತ್ರ
ಪ್ರೊ: ಎಸ್.ಓರಾ, ಎಂ.ಹೆಚ್.ನಾರಾಯಣಪ್ಪ ಮತ್ತು ಮಿತ್ರರು
ನಿ: ವೈ.ಆರ್.ಸ್ವಾಮಿ
ಸ.ನಿ: ಕುಣಿಗಲ್ ಭೂಷಣ್
ಅ: ಕಲ್ಯಾಣ್‌ಕುಮಾರ್, ಜಯಂತಿ, ಕೆ.ಎಸ್.ಅಶ್ವತ್ಥ್, ಎಂ.ಪಿ.ಶಂಕರ್, ನರಸಿಂಹರಾಜು, ಪಂಢರಿಬಾಯಿ, ಜಯಾ, ದಿನೇಶ್, ಜ್ಯೋತಿ, ಕಮಲಮ್ಮ, ಬೇಬಿ ಸುನೀತಾ, ಕಲಾವತಿ, ಚೇತನ್, ಜಾರ್ಜ್ ಇಂದಿರಾ, ಮಾ। ಬಸವರಾಜು, ಚಿನ್ನಮ್ಮಣ್ಣಿ, ಬೇಬಿ ಉಷಾ, ಬೇಬಿ ಗಾಯಿತ್ರಿ, ಬೇಬಿ ನಾಗರತ್ನ,

ಶಶಿಕುಮಾರ್, ಕುಣಿಗಲ್ ಭೂಷಣ್, ರಜ್ಜು, ಬೇಬಿ ಉಮಾ
ಕ: ಮ.ನ.ಮೂರ್ತಿ
ಚಿ.ಕ: ವೈ.ಆರ್.ಸ್ವಾಮಿ
ಮಾ/ಗೀ: ಸೋರಟ್ ಅಶ್ವತ್ಥ್
ಗಾ: ಜೇಸುದಾಸ್, ಪಿ.ಬಿ.ಶ್ರೀನಿವಾಸ್, ಬಿ.ಕೆ.ಸುಮಿತ್ರ, ಪಿ.ಲೀಲ, ಎಸ್.ಜಾನಕಿ
ಸಂ: ಆರ್.ಹನುಮಂತರಾವ್
ಛಾ: ಆರ್.ಮಧು
ಕಲೆ: ಬಿ.ಎಸ್.ಕೃಷ್ಣ
ಸ: ಉಪೇಂದ್ರಕುಮಾರ್
ಧ್ವ: (ಹಾ)ಎಸ್.ಪಿ.ರಾಮನಾಥನ್, (ಮಾ)ಕೆ.ಆರ್.ಸೀತಾರಾಂ
ನೃ: ವೇಣುಗೋಪಾಲ್
ಸಾ: ವೈ.ಶಿವಯ್ಯ
ವ: ದೊರೈ, ಕಣ್ಣನ್
ಪ್ರ: ಎಂ.ಎಸ್.ಸುಬ್ಬಣ್ಣ, ರಾಜಗೋಪಾಲ್
ಸ್ಟು: ಪ್ರೀಮಿಯರ್ (ಮೈಸೂರು)
ಹಾ: ೧)'ಇದೇ ವಿಧಿಲೀಲೆ ತಂದಾ ಸಾವಿನಾ ಕರೆಯೋಲೆ....', ೨)'ಓ ಗೆಳತಿ ನಿನ ಮನಸಿನ ಬಯಕೆ ನೂರಾರು...', ೩)'ಟುವ್ವಿ ಟುವ್ವಿ ತಾ ಬಂತು ಶನಿವಾರ ಸ್ಕೂಲಿಗೆ ಒಪ್ಪತ್ತು...', ೪)'ಅಮ್ಮನ ಮಡಿಲಲ್ಲಿ ಆಡೇ ಕಂದಮ್ಮ....', ೫)'ಬೆಂಗಳೂರ ದುಂಡುಮಲ್ಲೆ ನೋಡೋ ಬಾ ಓ ಮಾವ...'
ವಿ: ಉಪೇಂದ್ರಕುಮಾರ್ ಸಂಗೀತ ನೀಡಿದ ಮೊದಲ ಚಿತ್ರ. ಪಿ.ಎಸ್.ಪ್ರಕಾಶ್ ಛಾಯಾಗ್ರಹಣ ಸಹಾಯಕರಾಗಿದರು.
ಕ.ಸಾ: ಮೀನ ತಂದೆ-ತಾಯಿಯನ್ನು ಕಳೆದುಕೊಂಡ ತಬ್ಬಲಿ. ಅಣ್ಣ ರಾಜು ಆಶ್ರಯದಲ್ಲಿ ಶಾಲೆಗೆ ಸೇರಿದ ಇವಳಿಗೆ ತಾಯಿ ಬೇಕೆನ್ನುವ ಹಂಬಲ. ರಾಜು ತನ್ನ ಗೆಳತಿ ನಿರ್ಮಲಾಳನ್ನು ತನ್ನ ತಂಗಿಯ ತಾಯಿಯಾಗಿ ನಟಿಸಲು ಬೇಡಿಕೊಂಡ. ಅವಳ ತಂದೆ ತನ್ನ ಮಗಳ ಭವಿಷ್ಯ ಹಾಳಾಗುವುದೆಂದು ಬಗೆದು ಮೀನಾಳನ್ನು ಕಾಡುಪಾಲು ಮಾಡಿದ. ಅನೇಕ ಕಷ್ಟಗಳನ್ನು ಅನುಭವಿಸಿದ ಮೀನ ಅಣ್ಣನ ಪ್ರಾಣ ಕಾಪಾಡಿದಳು.

೨೧೯. ರಾಜದುರ್ಗದ ರಹಸ್ಯ

(೧೯೬೭ / ಕಪ್ಪು-ಬಿಳುಪು / ಜಾನಪದ)
ಲಾ: ಕೃಷ್ಣೋದಯ ಚಿತ್ರ



ಪ್ರೊ: ಎ.ವಾಸುದೇವರಾವ್, ಟಿ.ದ್ವಾರಕಾನಾಥ್
ನಿ: ಎ.ಸಿ.ನರಸಿಂಹಮೂರ್ತಿ, ಎಸ್.ಕೆ.ಭಗವಾನ್
ಅ: ರಾಜಕುಮಾರ್, ಉದಯಕುಮಾರ್, ಭಾರತಿ, ನರಸಿಂಹರಾಜು, ದಿನೇಶ್, ಬೆಂಗಳೂರು ನಾಗೇಶ್, ಕಾಶೀನಾಥ್, ಗಣಪತಿಭಟ್, ಜ್ಯೋತಿ, ಸೂರ್ಯಕುಮಾರಿ, ಲಕ್ಷ್ಮಿ
ಕ/ಚಿ.ಕ: ನಂದನ
ಮಾ/ಗೀ: ಆರ್.ಎನ.ಜಯಗೋಪಾಲ್
ಗಾ: ಪಿ.ಬಿ.ಶ್ರೀನಿವಾಸ್, ಎಸ್.ಜಾನಕಿ
ಸಂ: ಎನ್.ಸಿ.ರಾಜನ್
ಛಾ: ಬಿ.ದೊರೈರಾಜ್
ಕಲೆ: ಬಿ. ಚಲಂ
ಸ: ಜಿ.ಕೆ.ವೆಂಕಟೇಶ್
ಧ್ವ: ರಾಮನಾಥನ್, ನಾಗೇಶ್ವರನ್
ನೃ: ಉಡುಪಿ ಜಯರಾಂ, ಚಿನ್ನಿ-ಸಂಪತ್
ಸಾ: ವೈ.ಶಿವಯ್ಯ
ವ: ಅಪ್ಪಾರಾವ್
ಪ್ರ: ಸಿಂಗ್, ದೊರೆಸ್ವಾಮಿ, ಭಾಸ್ಕರ್
ಸ್ಟು: ಗೋಲ್ಡನ್
ಹಾ: ೧)'ನುಂಗುವಂತೆ ನೋಡುವಾ...', ೨)'ಮೂಡಣದಿಂದ ಮೆಲ್ಲಮೆಲ್ಲನೆ...', ೩)'ಕಾಣುವ ತವಕ ನೀ...', ೪)'ಬಳ್ಳಿ ಸೊಂಟದಾ...', ೫)'ದೇವಿ ದೇವಿ ನನ್ನ ದೇವಿ...'
ಕ.ಸಾ: ರಾಮಣ್ಣನಾಯಕ ಹಾಗೂ ಸೋಮಣ್ಣನಾಯಕ ಮಹಾರಾಜನ ತಮ್ಮನ ಮಕ್ಕಳು. ನೋಡಲು ಒಬ್ಬರಂತೇ

ಬಚ್ಚಿರಿಧರು. ರಾಮಣ್ಣನಾಯಕ ಸಚ್ಚ ಯುವಕನಾದರೆ, ಸೋಮಣ್ಣನಾಯಕ ಭೋಗಲಾಲಸೆಯಲ್ಲಿ ಮುಳುಗಿದವನು. ರಾಜನ ಭಾವಮೈದ ಮಾರನಾಯಕ ಈ ರಾಜನನ್ನು ಸೆರೆಯಲ್ಲಿರಿಸಿ ಅರಮನೆಗೆ ಬೆಂಕಿ ಇರಿಸುತ್ತಾನೆ. ರಾಮಣ್ಣ ಅಣ್ಣ ಸೋಮಣ್ಣನ ಕೊಲೆಯನ್ನು ಮಾಡಿ ಬೆಂಕಿ ಇಟ್ಟನೆಂದು ಆಪಾದಿಸುತ್ತಾನೆ. ಸೋಮಣ್ಣನಿಗೆ ಪಟ್ಟಾಭಿಷೇಕದ ಸಮಯದಲ್ಲಿ ರಾಮಣ್ಣ ಬರುತ್ತಾನೆ. ಕಾದಾಟದಲ್ಲಿ ಸೋಮಣ್ಣ ಸಾಯುತ್ತಾನೆ. ರಾಮಣ್ಣ ದುಷ್ಟ ಶಕ್ತಿಗಳ ವಿರುದ್ಧದ ಹೋರಾಟದಲ್ಲಿ ಜಯಶೀಲನಾಗುತ್ತಾನೆ.

೨೨೦. ದೇವರ ಗೆದ್ದ ಮಾನವ

(೧೯೬೭ / ಕಪ್ಪು-ಬಿಳುಪು / ಜಾನಪದ)
ಲಾ: ಗೌರಿ ಆರ್ಟ್ ಫಿಲಂಸ್
ಪ್ರೊ: ವೈ.ವಿ.ರಾವ್
ನಿ: ಹುಣಸೂರು ಕೃಷ್ಣಮೂರ್ತಿ
ಸ.ನಿ: ಎಂ.ಎಸ್.ರಂಗನಾಥ್, ಕೆ.ಎಲ್.ನಾರಾಯಣರಾವ್
ಅ: ರಾಜಕುಮಾರ್, ನರಸಿಂಹರಾಜು, ಎಂ.ಪಿ.ಶಂಕರ್, ಗುಗ್ಗು, ಎಂ.ಎಸ್.ರಂಗನಾಥ್, ಶ್ಯಾಂಸುಂದರ್, ಸತ್ಯ, ಜಯಕೃಷ್ಣ, ಜಯಂತಿ, ಶೈಲಶ್ರೀ, ವಿಜಯಲಲಿತ, ಜಯಶ್ರೀ, ರಮಾದೇವಿ, ಛಾಯಾದೇವಿ, ರೇಣು, ಸರಸ್ವತಿ
ಕ: ಎಸ್. ಭಾವನಾರಾಯಣ
ಚಿ.ಕ/ಮಾ/ಗೀ: ಹುಣಸೂರು ಕೃಷ್ಣಮೂರ್ತಿ
ಗಾ: ಪಿ.ಬಿ.ಶ್ರೀನಿವಾಸ್, ನಾಗೇಂದ್ರ, ಪಿ.ಸುಶೀಲಾ,

ಎಸ್.ಜಾನಕಿ, ಎಲ್.ಆರ್.ಈಶ್ವರಿ
ಸಂ: ಎನ್.ಸಿ.ರಾಜನ್
ಛಾ: ಜಿ.ಚಂದ್ರನ್
ಸ: ರಾಜನ್-ನಾಗೇಂದ್ರ
ಧ್ವ: ಎಸ್.ಪಿ.ರಾಮನಾಥನ್
ನೃ: ಎ.ಕೆ.ಛೋಪ್ರಾ, ರತನ್‌ಕುಮಾರ್, ಕೆ.ಎಸ್.ರಡ್ಡಿ
ಸಾ: ಕೆ.ಮಾಧವನ್
ವ: ಬಿ.ನಾರಾಯಣರಾವ್
ಪ್ರ: ವೀರರಾಜು, ವೈ.ಮಾಧವಯ್ಯ, ರಾಮಕೃಷ್ಣ
ಹಾ: ೧)'ಕಟ್ಟಾಣಿ ಬೊಂಬೆನಯ್ಯಾ, ಕಸ್ತೂರಿ ಕೊಂಬೆನಯ್ಯಾ...', ೨)'ಅನುಪಮ ಸುಂದರಿಯ...', ೩)'ಜಾಂಗು ಭಲಾ ಭಲ್...', ೪)'ಭಯಾನಾಂ ಭಯಂ, ಭೀಷಣಂ...', ೫)'ಯಾರೆನ್ನ ಸರಿಸಾಟಿಯೆ, ಓ ಲಲನೆ...', ೬)'ನಲ್ಲೆ ಬಳಿಗೆ ಬಾರೆ, ನಿನ್ನ ಒಲವ ತೋರೆ...', ೭)'ಗುರುವಯ್ಯ ಕಂಚಿಂಥ ಘನವಾದ...', ೮)'ಭಲೆ ಭಲೆ ಹೆಣ್ಣೋ ಹೆಣ್ಣೋ...', ೯)'ಕೋರಿ ವಯಸು 'ಕೋ' ಅಂತು...'
ಕ.ಸಾ: ಮಾನವನೊಬ್ಬ ತನ್ನ ಶೌರ್ಯ, ಬುದ್ಧಿವಂತಿಕೆಯಿಂದ ದೇವಕನ್ಯೆಯೊಬ್ಬಳ ಮನ ಒಲಿಸಿ, ಆಕೆಯನ್ನು ಭೂಲೋಕಕ್ಕೆ ಕರೆದು ತರುವ ಕಥೆ.

೨೨೧. ಬೀದಿಬಸವಣ್ಣ

(೧೯೬೭ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಪದ್ಮಿನಿ ಪಿಕ್ಚರ್ಸ್
ಪ್ರೊ/ನಿ: ಬಿ.ಆರ್.ಪಂತುಲು
ಸ.ನಿ: ಆರ್.ಶಿವರಾಂ, ಎ.ಪೊನ್ನುಸ್ವಾಮಿ
ಅ: ರಾಜಕುಮಾರ್, ನರಸಿಂಹರಾಜು, ದಿನೇಶ್, ಹನುಮಂತರಾವ್, ಭಾರತಿ, ವಂದನ, ಪಾಪಮ್ಮ, ಜಯಾ, ಹೇಮ, ಶಾಂತಮ್ಮ, ಕೃಷ್ಣಶಾಸ್ತ್ರಿ, ಬಸಪ್ಪ, ಗುಗ್ಗು, ಶ್ಯಾಮ್, ಶಿವಾಜಿ, ನಾರಾಯಣ್, ಕೇಶವಮೂರ್ತಿ, ಬಿ.ಆರ್.ಪಂತುಲು
ಕ: ರಾಜಶ್ರೀ
ಚಿ.ಕ: ಪದ್ಮಿನಿ ಪಿಕ್ಚರ್ಸ್ ಸಾಹಿತ್ಯ ವಿಭಾಗ
ಮಾ/ಗೀ: ಜಿ.ವಿ.ಅಯ್ಯರ್, ವಿಜಯನಾರಸಿಂಹ
ಗಾ: ಪಿ.ಬಿ.ಶ್ರೀನಿವಾಸ್, ಪಿ.ನಾಗೇಶ್ವರರಾವ್, ಎಸ್.ಜಾನಕಿ, ಬಿ.ಆರ್.ಲತಾ
ಸಂ: ಆರ್.ದೇವರಾಜನ್
ಛಾ: ಪಿ.ಎಲ್.ನಾಗಪ್ಪ
ಕಲೆ: ಸೆಲ್ವರಾಜ್
ಸ: ಟಿ.ಜಿ.ಲಿಂಗಪ್ಪ
ಧ್ವ: (ಹಾ) ಎಸ್.ಪಿ.ರಾಮನಾಥನ್, (ಮಾ) ಎನ್. ರಾಮಚಂದ್ರನ್
ನೃ: ಕೃಷ್ಣಕುಮಾರ್
ಸಾ: ವೈ.ಶಿವಯ್ಯ
ವ: ಎಂ.ರಾಧಾ
ಪ್ರ: ಎಂ.ಎಸ್.ಸುಬ್ಬಣ್ಣ, ದೊರೆಸ್ವಾಮಿ, ಎಂ.ಕೆ.ಶ್ರೀನಿವಾಸ್, ಪಾರ್ಥಸಾರಥಿ, ರಾಜಗೋಪಾಲ್, ರಾಜ
ಸ್ಟು: ಭರಣಿ, ಅರುಣಾಚಲಂ

ಹಾ: ೧)'ಅಮ್ಮಾ ಅಮ್ಮಾ ನೋಡೆ...', ೨)'ನಿನ್ನ ನೀನೇ ನೋಡಿಕೋ...', ೩)'ಬೇಡಾ ಬೇಡಾ ಬಾಗಿಲು...', ೪)'ಲೌಲೌಲೌ ಅಂದ್ರೆ ಪ್ರೇಮಾ...', ೫)'ದಾಟಿ ಏಪ್ಪತ್ತು ನಿಂಗ...', ೬)'ಏಕಾಂತವಾಗಿ ಮಾತಾಡೆ...'
ಕ.ಸಾ: ತನ್ನ ತಂದೆಗೆ ಮೋಸಮಾಡಿ ತಾಯಿಯನ್ನು ಊರು ಬಿಡುವಂತೆ ಮಾಡಿದ ವ್ಯಕ್ತಿಯ ವಿರುದ್ಧ ಸೇಡು ತೀರಿಸಿಕೊಳ್ಳಲು ಬರುವ ನಾಯಕ, ಅವನನ್ನು ಪ್ರೀತಿಸುವ ವಿರೋಧಿಯ ಮಗಳು. ಕಡೆಗೆ ಸುಖಾಂತ್ಯ

೨೨೨. ಮನಸ್ಸಿದ್ದರೆ ಮಾರ್ಗ

(೧೯೬೭ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಶ್ರೀಕಾಂತ್ ಅಂಡ್ ಶ್ರೀಕಾಂತ್ ಎಂಟರ್‌ಪ್ರೈಸಸ್
ಪ್ರೊ: ಶ್ರೀಕಾಂತ್ ನಹತಾ, ಶ್ರೀಕಾಂತ್ ಪಟೇಲ್
ನಿ: ಎಂ.ಆರ್.ವಿಠಲ್
ಸ.ನಿ: ಕೆ.ಸೀತಾರಾಮ್
ಅ: ರಾಜಕುಮಾರ್, ರಾಜಾಶಂಕರ್, ನರಸಿಂಹರಾಜು, ಕೆ.ಎಸ್.ಅಶ್ವತ್ಥ್, ಎಂ.ಪಿ.ಶಂಕರ್, ದಿನೇಶ್, ರಂಗ, ರತ್ನಾಕರ್, ಶಾಸ್ತ್ರಿ, ಜಯಂತಿ, ಉದಯಚಂದ್ರಿಕ, ಶೈಲಶ್ರೀ, ಬಿ.ವಿ.ರಾಧ, ಕಮಲಮ್ಮ, ಪದ್ಮಶ್ರೀ, ಬೇಬಿ
ಕ/ಚಿ.ಕ: ಎಂ.ಆರ್.ವಿಠಲ್
ಮಾ: ಎಂ.ನರೇಂದ್ರಬಾಬು
ಗೀ: ಎಂ.ನರೇಂದ್ರಬಾಬು, ವಿಜಯನಾರಸಿಂಹ
ಗಾ: ಪಿ.ಬಿ.ಶ್ರೀನಿವಾಸ್, ಎಲ್.ಆರ್.ಈಶ್ವರಿ, ಎ.ಪಿ.ಕೋಮಲ, ಪಿ.ಸುಶೀಲ, ಘಂಟಸಾಲ
ಸಂ: ಎಸ್.ಪಿ.ಎನ್.ಕೃಷ್ಣ

ಛಾ: ಶ್ರೀಕಾಂತ್, ಡಿ.ವಿ.ರಾಜಾರಾಂ
ಕಲೆ: ಚಲಂ
ಸ: ಎಂ.ರಂಗರಾವ್
ಧ್ವ: ಕೆ.ಆರ್.ಸೀತಾರಾಂ
ನೃ: ಬಿ.ಜಯರಾಮ್
ಸ್ಟು: ಪ್ರೀಮಿಯರ್ (ಮೈಸೂರು)
ಹಾ: ೧)'ನಂಬಿನಲ್ಲೆ ನನ್ನನ್ನ ಆದೇ ಚೆನ್ನಾ....', ೨)'ಈ ಜೀವನ ಬೇವು ಬೆಲ್ಲ...', ೩)'ಮಧುರ ಮೋಜಿನ ಬಜಾನೆಯ....', ೪)'ಅದೋ ಗುರಿ ಅದೇ ಸರಿ ಸಾಗುಮುಂದಕೆ....', ೫)'ಓಓ ಚಂದಮಾಮ ಮುಖ ತೋರೆಯಾ ಮಾತಾಡೆಯಾ...', ೬)'ಅದೇಜನ ಅದೇಮನ ಲೋಕ ಬಂದಿದೇ....', ೭)'ಹೊಸ ಹೆಣ್ಣು ನಿಜವಿಲ್ಲೆ ಮಜ....'
ಕ.ಸಾ: ಶ್ರೀಮಂತನಾಗಿದ್ದ ರಾಮು ಪ್ರವಾಹದಿಂದ ಸರ್ವಸ್ವವನ್ನು ಕಳೆದುಕೊಂಡು ತಮ್ಮ ಶ್ರೀಕಾಂತ, ಹೆಂಡತಿ, ಮಕ್ಕಳೊಂದಿಗೆ ಬೆಂಗಳೂರು ಸೇರಿದ. ರಿಕ್ಷಾ ತುಳಿದು ತಮ್ಮನನ್ನು ಓದಿಸಿ, ಸಂಸಾರ ನಿರ್ವಹಿಸಿದ. ಶ್ರೀಕಾಂತ್‌ಗೆ ಪೋಲೀಸ್ ಇನ್ಸ್‌ಪೆಕ್ಟರ್ ಹುದ್ದೆ ದೊರೆಯುವುದು. ಇನ್ಸ್‌ಪೆಕ್ಟರ್ ಮಗಳನ್ನು ಶ್ರೀಕಾಂತ್‌ಗೆ ನೀಡಿ ವಿವಾಹ ಮಾಡಲು ಮಾತುಕತೆ ನಡೆಯುವುದು. ದರೋಡೆಕೋರರು ಕ್ಯಾಬರೆ ನರ್ತಕಿಯೊಬ್ಬಳನ್ನು ಕೊಂದು ಆ ಆಪಾದನೆಯನ್ನು ರಾಮು ಮೇಲೆ ಹಾಕುವರು. ನಿಜ ಹೇಳಿದರೆ ಸಂಸಾರ ನುಚ್ಚುನೂರು ಮಾಡುವುದಾಗಿ ಬೆದರಿಸುವರು. ತಮ್ಮನೇ ಅಣ್ಣನನ್ನು ಬಂಧಿಸುವನು. ಸತ್ಯ ಹೊರಗೆ ಬಂದು ಸುಖಾಂತ್ಯವಾಗುವುದು. ದುಷ್ಟರನ್ನು ಸದೆ ಬಡಿಯಲಾಗುವುದು.

೨೨೩. ಬಂಗಾರದ ಹೂವು

(೧೯೬೭ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಶ್ರೀ ಶ್ರೀನಿವಾಸ ಚಿತ್ರಾಲಯ
ಪ್ರೊ/ನಿ: ಬಿ.ಎ.ಅರಸುಕುಮಾರ್
ಸ.ನಿ: ದೊರೈ, ಆರ್.ಸತ್ಯನಾರಾಯಣ್
ಅ: ರಾಜಕುಮಾರ್, ಉದಯಕುಮಾರ್, ಬಾಲಕೃಷ್ಣ, ನರಸಿಂಹರಾಜು, ಶ್ರೀಕಂಠಯ್ಯ, ಪ್ರಭಾಕರ್, ದಿನೇಶ್, ತಂತ್ರಿ, ಕಲ್ಪನಾ, ಪಂಢರಿಬಾಯಿ, ಶೈಲಶ್ರೀ, ಶಾಂತಮ್ಮ, ನಾಗು, ರಾಜೇಶ್ವರಿ, ಪ್ರೇಮಾ, ವಿಮಲ, ಬೇಬಿ ಪ್ರಶಾಂತ್, ಹೆಚ್.ಪಿ.ರಾಮಕೃಷ್ಣ, ನಜ್ರೆ ನಾರಾಯಣ್, ಮೋಹನ್, ನಾರಾಯಣಗೌಡ, ಎಂ.ಜಿ. ಜಯದೇವ್
ಕ/ಚಿ.ಕ: ಬಿ.ಎ.ಅರಸುಕುಮಾರ್
ಮಾ: ಟಿ.ಉದಯಶಂಕರ್
ಗೀ: ಟಿ.ಉದಯಶಂಕರ್, ವಿಜಯನಾರಸಿಂಹ
ಗಾ: ಎಲ್.ಆರ್.ಈಶ್ವರಿ, ಪಿ.ಬಿ.ಶ್ರೀನಿವಾಸ್, ಪಿ.ಸುಶೀಲ, ಎಸ್.ಜಾನಕಿ
ಸಂ: ವಿ.ಉಮಾನಾಥ್, ಶೇಖರ್, ಮಣಿ, ದೊರೈ
ಛಾ: ಬಿ.ಎನ್.ಹರಿದಾಸ್
ಕಲೆ: ವೆಂಕಟ್
ಸ: ರಾಜನ್-ನಾಗೇಂದ್ರ
ಧ್ವ: (ಹಾ)ಎಸ್.ಪಿ.ರಾಮನಾಥನ್, ಕೋಟೀಶ್ವರರಾವ್, (ಮಾ)ನಾಗೇಶ್, ಡಿ.ಲಾಜರಸ್
ನೃ: ಬಿ.ಜಯರಾಂ
ಸಾ: ವೈ.ಶಿವಯ್ಯ
ವ: ಮ್ಯಾಕ್ಸ್ ಟೈಲರ್ಸ್, ಪ್ರಸಾದ್
ಪ್ರ: ಎಂ.ಎಸ್.ಸುಬ್ಬಣ್ಣ, ರಾಜಗೋಪಾಲ್
ಸ್ಟು: ಗೋಲ್ಡನ್ ಸಿನಿ ಸ್ಟುಡಿಯೋ
ಹಾ: ೧)'ಡೂಡು ಡೂಡು ಬಸವಣ್ಣ ಡೀಡೀ ಕೊಡುವೆ ಬಾರಣ್ಣ, ೨)'ಆ ಮೊಗವು ಎಂಥಾ ಚೆಲುವು...', ೩)'ಓಡುವ ನದಿ ಸಾಗರವ ಬೆರೆಯಲೆ ಬೇಕು.....', ೪)'ಓದಿ ಓದಿ ಓದಿ ಓದಿ ಕೂಚು ಭಟ್ಟನಾಗಬೇಕು.....', ೫)'ಮದುವೆ ಮದುವೆ ಮದುವೆ ಹೆಣ್ಣಿಗು ಗಂಡಿಗು ಮದುವೆ....', ೬)'ನೀ ನಡೆವ ಹಾದಿಯಲ್ಲಿ ನಗೆ ಹೂವು ಬಾಡದಿರಲಿ....'
ವಿ: ಅರಸುಕುಮಾರ್ ಅವರ ಜನಪ್ರಿಯ ನಾಟಕ, ಅವರೇ ಚಿತ್ರಿಸಿದ್ದು, ಕುಷ್ಠರೋಗ ವಾಸಿಯಾಗಬಲ್ಲದು ಎಂದು ಹೇಳುವುದು. ಜಾತ್ರೆಯ ವಿಶೇಷ ಚಿತ್ರಣ.
ಕ.ಸಾ: ಶ್ರೀಮಂತೆ ಸಾವಿತ್ರಮ್ಮನ ಒಬ್ಬನೆ ಮಗ ಆನಂದ ಸರ್ಕಾರಿ ಕೆಲಸ ದೊರೆತು ಹಳ್ಳಿಯೊಂದಕ್ಕೆ ಹೋದ. ರಾಮಕೃಷ್ಣಯ್ಯನ ಮಗಳು ಸೀತಾ ಹಾಗು ಆನಂದನ ನಡುವೆ ಅನುರಾಗವುಂಟಾಯಿತು. ಹಿರಿಯರ ಮನವೊಲಿಸಿ ಮದುವೆ ಆಗಬೇಕೆನ್ನುವ ಹೊತ್ತಿಗೆ ಸೀತಾಗೆ ಕುಷ್ಠರೋಗ ತಗುಲಿತು. ಕಡೆಗೂ ರೋಗವಾಸಿಯಾಗಿ, ವಿವಾಹವಾಗುತ್ತದೆ.

೨೨೪. ಚಕ್ರತೀರ್ಥ

(೧೯೬೭ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಶ್ರೀ ಭಗವತಿ ಪ್ರೊಡಕ್ಷನ್ಸ್
ಪ್ರೊ: ಎಸ್.ಎನ್.ಪಾಲ್
ನಿ: ಪೇಕೇಟಿ ಶಿವರಾಂ
ಸ.ನಿ: ಕುಣಿಗಲ್ ನಾಗಭೂಷಣ್
ಅ: ರಾಜಕುಮಾರ್, ಉದಯಕುಮಾರ್, ಬಾಲಕೃಷ್ಣ, ಬಿ.ಎಂ.ವೆಂಕಟೇಶ್, ಗಣಪತಿಭಟ್, ಡಾ|ಶೇಷಗಿರಿರಾವ್, ಮಾ|ಪ್ರಭಾಕರ್, ಜಯಂತಿ (ದ್ವಿಪಾತ್ರ), ಜಯಶ್ರೀ, ಶಾಂತಲಾದೇವಿ, ಬೇಬಿ ರಾಜಿ, ಮಾಧವಿ (ನವನಟಿ), ರಾಜಾನಂದ್
ಕ/ಚಿ.ಕ ಮಾ: ತ.ರಾ.ಸು
ಗೀ: ದ.ರಾ.ಬೇಂದ್ರೆ, ತ.ರಾ.ಸು., ಆರ್.ಎನ್.ಜಯಗೋಪಾಲ್
ಗಾ: ಪಿ.ಬಿ.ಶ್ರೀನಿವಾಸ್, ಪಿಠಾಪುರಂ ನಾಗೇಶ್ವರರಾವ್, ಎಸ್.ಜಾನಕಿ, ಪಿ.ಸುಶೀಲ, ಬಿ.ಕೆ.ಸುಮಿತ್ರ, ಬೆಂಗಳೂರು ಲತಾ, ಎಲ್.ಆರ್.ಈಶ್ವರಿ
ಸಂ: ಪಿ.ಭಕ್ತವತ್ಸಲಂ
ಛಾ: ಆರ್.ಚಿಟ್ಟಿಬಾಬು
ಕಲೆ: ಬಿ.ಎನ್.ಕೃಷ್ಣ
ಸ: ಟಿ.ಜಿ.ಲಿಂಗಪ್ಪ
ಧ್ವ: (ಮಾ)ಕೆ.ಆರ್.ಸೀತಾರಾಂ, (ಹಾ) ಎಸ್.ಪಿ.ರಾಮನಾಥನ್
ನೃ: ಬಿ.ಜಯರಾಂ
ವ: ದೊರೈ, ಕಣ್ಣನ್
ಪ್ರ: ಎಂ.ಎಸ್.ಸುಬ್ಬಣ್ಣ, ರಾಜಗೋಪಾಲ್, ವೀರಾಸ್ವಾಮಿ
ಸ್ಟು: ಪ್ರೀಮಿಯರ್ (ಮೈಸೂರು)
ಹಾ: ೧)'ಹಗಲು ಹರಿಯಿತು ಮುಗಿಲು ಕರೆಯಿತು, ೨)'ಓಡಿ ಬಾ ಓಡೋಡಿ ಬಾ ಚಿನ್ನ ನನ್ನ ಚಿನ್ನ ಹಿಂದೆ ಓಡಿ ಬಾ....', ೩)'ನಿನ್ನ ರೂಪ ಕಣ್ಣಲಿ ನಿನ್ನ ದನಿಯು ಕಿವಿಯಲಿ....', ೪)'ಕುಣಿಯೋಣ ಬಾರಾ ಕುಣಿಯೋಣ ಬಾ...', ೫)'ಏಕೋ ಈ ಪುಲಕ ಏಕೋ ಈ ನಡುಕ....', ೬)'ವಿಧಿಯು ತಳೆದ ಕೋಪ ಇದು ವಿರಸ ತಂದ ಶಾಪ....'
ವಿ: ಜಯಂತಿ ದ್ವಿಪಾತ್ರದಲ್ಲಿ ಅಭಿನಯಿಸಿದ ಚಿತ್ರ. ಅತ್ಯುತ್ತಮ ಪೋಷಕ ನಟ (ಉದಯಕುಮಾರ್) (೬೭-೬೮) ಪ್ರಶಸ್ತಿ ತ.ರಾ.ಸು. ಅವರೇ ಪ್ರಾರಂಭದಲ್ಲಿ ಮಾತಾಡುತ್ತಾರೆ.
ಕ.ಸಾ: ಕಾಶೀಪತಯ್ಯನವರ ಮುದ್ದಿನ ಮಗಳು ಕಮಲ ಬಡವ ಶ್ರೀನಿವಾಸನನ್ನು ಪ್ರೀತಿಸಿ ವಿವಾಹವಾಗುತ್ತಾಳೆ. ತಂದೆ ಮಗಳನ್ನು ತನ್ನ ಮನೆಗೆ ಕಾಲಿಡಬೇಡವೆನ್ನುತ್ತಾರೆ. ಲಲಿತ ಇವರಿಬ್ಬರ ಮಗಳಾಗಿ ಬೆಳೆಯುತ್ತಾಳೆ. ಒಡೆದು ಹೋದ ಸಂಸಾರವನ್ನು ಒಂದುಗೂಡಿಸುವ ಸಲುವಾಗಿ ಶ್ರೀನಿವಾಸ ತನ್ನ ಮಗಳನ್ನು ಭಾವ ಮೈದುನ ಚಿದಂಬರನಿಗೆ ನೀಡಿ ವಿವಾಹ ಮಾಡಲು ಇಚ್ಛಿಸುತ್ತಾನೆ. ಆದರೆ ಶ್ರೀನಿವಾಸ ಸಾಯುವಾಗ ತನ್ನ ಮಗಳನ್ನು ಕಾಶೀಪತಯ್ಯನ ಸೊಸೆ ಮಾಡಬೇಡ ಎಂದು ಪತ್ನಿಗೆ ಹೇಳುತ್ತಾನೆ. ಕಾಶೀಪತಯ್ಯನ ಮನಃ ಪರಿವರ್ತನೆ ಆಗಿ ತನ್ನ ಮಗನಿಗೆ ಲಲಿತಾಳನ್ನು ಕೊಡುವಂತ ಕೇಳುತ್ತಾನೆ. ತಾನು ಬದುಕಿರುವವರೆಗೂ ಈ ಯುವ ಜೋಡಿ ಒಂದಾಗಲು ಸಾಧ್ಯವಿಲ್ಲವೆಂಬುದನ್ನು ಅರಿತ ಕಮಲ ಚಕ್ರತೀರ್ಥದಲ್ಲಿ ಬಿದ್ದು ಸಾಯುತ್ತಾಳೆ.

೨೨೫. ಶ್ರೀಪುರಂದರದಾಸರು

(೧೯೬೭ / ಕಪ್ಪು-ಬಿಳುಪು / ಭಕ್ತಿಪ್ರಧಾನ)
ಲಾ: ಹಂಸ ಚಿತ್ರ
ಪ್ರೊ: ಶ್ರೀಮತಿ ಜಯಲಕ್ಷ್ಮಿ
ನಿ: ಸಿ.ವಿ.ರಾಜು, ಆರ್.ರಾಮಮೂರ್ತಿ
ಸ.ನಿ: ತಕ್ಕೆಟ್ಟಿ ನಾಗರಾಜ್, ವಿಶ್ವನಾಥ್
ಅ: ಕೆ.ಎಸ್.ಅಶ್ವತ್ಥ್, ಆರ್.ನಾಗೇಂದ್ರರಾವ್, ರಾಜಾಶಂಕರ್, ಉದಯಕುಮಾರ್, ಬಾಲಕೃಷ್ಣ, ನರಸಿಂಹರಾಜು, ದ್ವಾರಕೀಶ್, ಬೆಂಗಳೂರು ನಾಗೇಶ್, ಗಣಪತಿಭಟ್, ರಾಘವೇಂದ್ರರಾವ್, ರಾಮಚಂದ್ರಶಾಸ್ತ್ರಿ, ಪಂಢರಿಬಾಯಿ, ವಾದಿರಾಜ್, ಮೈನಾವತಿ, ರಮಾದೇವಿ, ಹರಿಣಿ, ಶಾಂತಮ್ಮ, ರತ್ನಾಕರ್, ಜಾನಕಿ, ಪಾಪಮ್ಮ, ವಂದನ, ಸರೋಜ, ಬೇಬಿ ಪದ್ಮಿನಿ, ವೀಣೆ ಚಿಟ್ಟಿಬಾಬು, ಮಾ|ಶ್ರೀಧರ್
ಕ: ಪುರಂದರದಾಸರ ಜೀವನ ಚರಿತ್ರೆ
ಚಿ.ಕ: ಸಿ.ವಿ.ರಾಜು
ಮಾ: ಜಿ.ಉದಯಶಂಕರ್
ಗೀ: ಪುರಂದರದಾಸರು, ಚಿ. ಉದಯಶಂಕರ್
ಗಾ: ಬಾಲಮುರಳಿಕೃಷ್ಣ, ಪಿ.ಬಿ.ಶ್ರೀನಿವಾಸ್, ಪಿ.ಲೀಲಾ, ಎಂ.ಎಲ್.ವಸಂತಕುಮಾರಿ, ಸಿ.ಎಸ್.ಸರೋಜಿನಿ, ಪ್ರೇಮ, ಸರೋಜ
ಸಂ: ಸಿ.ವಿ.ರಾಜು
ಛಾ: ರಾಜಾರಾಂ, ಮೀನಾಕ್ಷಿ, ಸುಂದರಂ
ಕಲೆ: ವರ್ತೂರ್ಕರ್
ಸ: ಸಿ.ಎನ್.ಪಾಂಡುರಂಗ
ಧ್ವ: ಕಣ್ಣನ್, ಎಸ್.ಪಿ.ರಾಮನಾಥನ್
ಸ್ಟು: ಗೋಲ್ಡನ್ ಸ್ಟುಡಿಯೋ (ಪ್ರ) ಲಿ.
ಹಾ: ೧)'ವರದಪ್ಪನಾಯಕ...', ೨)'ಮನುಜಾ ಮಾನವ



ಜನ್ಮದ ಬೆಲೆ ತಿಳಿಯೊ...', ೩)'ಶ್ರೀಗಣನಾಥ ಸಿಂಧೂರವರ್ಣ...', ೪)'ಜಗದೋದ್ಧಾರನ ಆಡಿಸಿದಳೆಶೋದೆ...', ೫)'ಹಾಡಿದರೆ ಎನ್ನೊಡೆಯನ ಹಾಡುವೆ...', ೬)'ಈ ಪರಿಯ ಸೊಬಗ ಇನ್ನಾವ ದೇವರಲಿ...', ೭)'ಹೋಲೆಯ ಹೊರಗಿಹನೆ...', ೮)'ಸಕಲ ಗ್ರಹಬಲ ನೀನೆ...', ೯)'ಆಡಿದನೋ ರಂಗ...', ೧೦) ಅಪರಾಧಿ ನಾನಲ್ಲ ಅಪರಾಧವೆನಗಿಲ್ಲ...', ೧೧)'ತಿರುಪತಿ ವೆಂಕಟರಮಣ ನಿನಗೇತಕೆ ಬಾರದು ಕರುಣ...', ೧೨)'ಬಡವರೊಳಗೆ ಎನ್ನಿಂದಾರು ಬಡವರಿಲ್ಲ...', ೧೩)'ರಾಮನಾಮ ಪಾಯಸಕ್ಕೆ...', ೧೪)'ಗಿಳಿಯು ಪಂಜರದೊಳಿಲ್ಲ...', ೧೫)'ಚಂದ್ರಚೂಡ ಶಿವಶಂಕರ...', ೧೬)'ಜಗವಸುತ್ತಿಹುದಲ್ಲ...', ೧೭)'ಕಂಡುಕಂಡು ನೀ ಎನ್ನ...', ೧೮)'ದಾರಿಯಾವುದಯ್ಯ...'
ವಿ: ಒಂದೇ ಕಥಾವಸ್ತು ಆಧರಿಸಿ ಎರಡು ಚಿತ್ರಗಳಾದವು. ಮತ್ತೊಂದು ಚಿತ್ರ 'ನವಕೋಟಿ ನಾರಾಯಣ' ಈ ಚಿತ್ರ ನಿರ್ಮಿಸಿದವರು ಪಂಢರಿಬಾಯಿ.
ಕ.ಸಾ: ಶ್ರೀಮಂತ ಸೀನಪ ನಾಯಕ ಬಿಡಿಗಾಸು ಬಿಚ್ಚದ ಜಿಪುಣ. ಈತ ನವಕೋಟಿ ನಾರಾಯಣನೆಂದೇ ಪ್ರಖ್ಯಾತ. ವಿಷ್ಣು ಇವನನ್ನು ಬದಲಾವಣೆ ಮಾಡುತ್ತಾನೆ. ನಾಯಕ ನಗ ನಾಣ್ಯ ಬಡವರಿಗೆ ಹಂಚಿ ಭಗವನ್ನಾಮಸ್ಮರಣೆ ಮಾಡುತ್ತ ಪುರಂದರದಾಸನಾಗಿ ಸಾವಿರಾರು ಕೀರ್ತನೆಗಳನ್ನು ರಚಿಸುತ್ತಾನೆ. ಸಾಹಿತ್ಯ ಸರಳೀಕರಿಸಿದ್ದಕ್ಕಾಗಿ ತ್ಯಾಗರಾಜರೂ ಪ್ರಶಂಸೆ ಮಾಡುತ್ತಾರೆ.

೨೨೬. ಜಾಣರಜಾಣ

(೧೯೬೭ / ಕಪ್ಪು-ಬಿಳುಪು / ಪತ್ತೇದಾರಿ)
ಲಾ: ಆದಿತ್ಯ ಫಿಲಂಸ್
ಪ್ರೊ: ಜಿ.ಕೆ.ಮೂರ್ತಿ
ನಿ: ಬಿ.ಸತ್ಯಂ
ಸ.ನಿ: ವಾಸುದೇವ ಗಿರಿಮಾಜಿ
ಅ: ರಾಜಾಶಂಕರ್, ಎಂ.ಪಿ.ಶಂಕರ್, ವಾಣಿಶ್ರೀ, ಶೈಲಶ್ರೀ, ರಂಗ, ಆರ್.ನಾಗೇಂದ್ರರಾವ್, ನರಸಿಂಹರಾಜು, ವಾಸುದೇವ ಗಿರಿಮಾಜಿ, ನಿರಂಜನ್, ಮೈನಾವತಿ, ಗಾಯತ್ರಿ, ಮಾಧವಿ, ಮಾ| ಅರುಣ್‌ಕುಮಾರ್

ಕ: ಶಿವರಾಮ ಕೃಷ್ಣ
ಚಿ.ಕ: ಸತ್ಯಂ
ಮಾ: ಸೋರಟ್ ಅಶ್ವತ್ಥ್
ಗೀ: ಕು.ರ.ಸೀತಾರಾಮಶಾಸ್ತ್ರಿ
ಗಾ: ಎಸ್.ಜಾನಕಿ, ಕೋಮಲ, ಪಿ.ಬಿ.ಶ್ರೀನಿವಾಸ್
ಸಂ: ಜಿ.ರಾಧಾಕೃಷ್ಣ
ಛಾ: ಸಂಜೀವಿ
ಕಲೆ: ಸಿ.ಹೆಚ್.ಇ.ಪ್ರಸಾದ್‌ರಾವ್
ಸ: ಜಿ.ಕೆ.ವೆಂಕಟೇಶ್
ಧ್ವ: ರಾಮಚಂದ್ರರಾವ್
ನೃ: ಸಂಪತ್ ಮತ್ತು ಈಶ್ವರಲಾಲ್
ಸಾ: ವೈ.ಶಿವಯ್ಯ
ವ: ಮಚ್ಚಕಲೆ
ಪ್ರ: ಭದ್ರಯ್ಯ
ಸ್ಟು: ಓಂಕಾರ್ (ಬೆಂಗಳೂರು)
ಹಾ: ೧)'ಒಲವ ಸುಳಿಯುದ ಮೈ ಚೆಲುವು ಎಲ್ಲಿದೆ....', ೨)'ಮರ ಮರ ಮರ ತರ ತರ....', ೩)'ಹಾರ್ಮನಿ ಬಂದಾಗ ನಾ ಹೌಹಾರಿ ದೂರಾದಿರಿ....', ೪)'ಬಾರಾ ಬಳಿ ಬಾ....'
ವಿ: ಬೆಂಗಳೂರಿನಲ್ಲಿ ಸ್ಥಾಪನೆಗೊಂಡ ಓಂಕಾರ್ ಸ್ಟುಡಿಯೋವಿನಲ್ಲಿ ಪೂರ್ಣವಾಗಿ ತಯಾರಾದ ಪ್ರಥಮ ಚಿತ್ರ
ಕ.ಸಾ: ಪೊಲೀಸ್ ಅಧಿಕಾರಿಯೊಬ್ಬ ಕಳ್ಳಸಾಗಾಣಿಕೆದಾರರನ್ನು ಪತ್ತೆ ಹಚ್ಚಲು ಬಂದಾಗ ಕಳ್ಳಸಾಗಾಣಿಕೆ ತಂಡದವರು ಒಡ್ಡುವ ಜಾಲಗಳನ್ನು, ರಹಸ್ಯಗಳನ್ನು ಭೇದಿಸುವುದೇ ಈ ಚಿತ್ರದ ಕಥಾವಸ್ತು.

೨೨೭. ಧನಪಿಶಾಚಿ

(೧೯೬೭ / ಕಪ್ಪು-ಬಿಳುಪು / ಪತ್ತೇದಾರಿ)
ಲಾ: ಮೋಹಿನಿ ಪ್ರೊಡಕ್ಷನ್ಸ್
ಪ್ರೊ/ನಿ: ಎಸ್.ಎನ್.ಸಿಂಗ್
ಸ.ನಿ: ಎಸ್.ವಿ.ಆರ್.ಸಿಂಗ್
ಅ: ರಂಗಾ, ಕಲ್ಪನಾ, ಕೆ.ಎಸ್.ಅಶ್ವತ್ಥ್, ವಂದನಾ, ಸಂಪತ್, ದ್ವಾರಕೀಶ್, ಬಿ.ಎಂ.ವೆಂಕಟೇಶ್, ಥಿಕ್ಕಿಮಾಧವರಾವ್, ರಾಜಾನಂದ್, ಅನಂತರಾಂ ಮಚ್ಚೇರಿ, ಸಂಪಿಗೆ ಶಂಕರ್, ಭಾಸ್ಕರ್, ರಾಮರಾಜೇ ಅರಸ್, ಎಂ.ಆರ್.ಶ್ರೀನಿವಾಸ್, ರಾಮರಾವ್, ವೆಂಕಟರಾಮಯ್ಯ
ಕ: ಹೆಚ್.ಜಿ.ಮಹಂತೇಶಶಾಸ್ತ್ರಿ
ಚಿ.ಕ/ಮಾ: ಮೋಹಿನಿ ಪ್ರೊಡಕ್ಷನ್ಸ್ ಕಥಾ ವಿಭಾಗ
ಗೀ: ಹುಣಸೂರು ಕೃಷ್ಣಮೂರ್ತಿ, ಉದಯಶಂಕರ್
ಗಾ: ಪಿ.ಬಿ.ಶ್ರೀನಿವಾಸ್, ಎಸ್.ಜಾನಕಿ, ಎಲ್.ಆರ್.ಈಶ್ವರಿ
ಛಾ: ಕೆ.ಎಸ್.ಗೋವಿಂದಸ್ವಾಮಿ
ಸ: ಸತ್ಯಂ
ಸ್ಟು: ಪ್ರೀಮಿಯರ್ (ಮೈಸೂರು)
ಹಾ: ೧)'ನೀ ಎಲ್ಲಿ ಹೋಗುವೇ ನಾ ಅಲ್ಲೇ ಕಾಣುವೇ....', ೨)'ಓ ಬೀಸೋ ತಂಗಾಳಿಯೇ ಕುಣಿವ ಕುಸುಮಾಳಿಯೇ.....', ೩)'ಕೂಗುತಿದೆ ಮನಸು...', ೪)'ಕುಣಿಯುವನು ಜಾಣ...', ೫)'ಕುಳ್ಳನಾನಾಗಿದ್ರೆ...'
ಕ.ಸಾ: ರಾಮರಾಯರು ಮನೆಯೊಂದರ ಬಳಿ ಹೋಗಿ ನೀರು ಕೇಳುತ್ತಾರೆ. ಅವಾ ನೀರು ನೀಡಿ ಸತ್ತು ಹೋಗುತ್ತಾಳೆ. ಅವಳ ಹಣವನ್ನು ಲಪಟಾಯಿಸಿ ಮೋಜು ಮಾಡುತ್ತಾನೆ. ಹಲವಾರು ತಿಂಗಳುಗಳ ನಂತರ ಕೊಲೆಯ ಹಿಂದಿನ ರಹಸ್ಯ ಪತ್ತೆಯಾಯಿತು.

೨೨೮. ಕ್ರಾಂತಿವೀರ ಸಂಗೊಳ್ಳಿರಾಯಣ್ಣ

(೧೯೬೭ / ಕಪ್ಪು-ಬಿಳುಪು / ಐತಿಹಾಸಿಕ)
ಲಾ: ಚಿತ್ರವಾಣಿ
ಪ್ರೊ: ಅನಂತ ಹೀರೇಗೌಡರ್
ನಿ: ಬಾಬುರಾವ್ ಆಥಣಿ
ಸ.ನಿ: ಅನಂತ ಹಿರೇಗೌಡರ್
ಅ: ಅಭಿಭಟ್ಟಾಚಾರ್ಯ, ಕಾಮಿನಿಕದಂ, ವಿ.ಎಸ್.ಪಾಟೀಲ್, ದಾದಾ ಸಾಳ್ವಿ, ಸರೋಜ್ ಬೋರ್ಕರ್, ವಿಭೂತಿ, ರೇಣುಕಮ್ಮ ಮುರುಗೋಡ್, ರಾಂಗೋಪಾಲ್
ಕ/ಚಿ.ಕ/ಮಾ/ಗೀ: ರಣಜಿತ್ ದೇಸಾಯಿ, ಟಿ.ಕೆ. ಪಾಟೀಲ್ (ಕನ್ನಡಕ್ಕೆ)
ಗಾ: ಲತಾ ಮಂಗೇಶ್ಕರ್, ಆಶಾಬೋಂಸ್ಲೆ, ಉಷಾಮಂಗೇಶ್ಕರ್, ಮನ್ನಾಡೆ
ಸಂ: ಭೋಂಸ್ಲೆ
ಛಾ: ಶಂಕರ್ ಸಾವೇಕರ್
ಕಲೆ: ಸದಾಶಿವ ಗಾಯಕ್‌ವಾಡ್
ಸ: ಲಕ್ಷ್ಮಣ ಬರ್ಲೇಕರ್
ಧ್ವ: ಬಾಂಬೆ ಸೌಂಡ್ ಸರ್ವೀಸ್
ಸ್ಟು: ಕೊಲ್ಹಾಪುರ ಜಯಪ್ರಭಾ ಸ್ಟುಡಿಯೋ
ಹಾ: ೧)'ಬೆಳ್ಳನೆ ಬೆಳಗಾಯಿತು...', ೨)'ಎಲ್ಲಾರಾ ಇರ್ತೀರೋ...', ೩)'ಭುಜೇಂದ್ರ ಮಹೇಶ...'
ವಿ: ಉತ್ತರ ಕರ್ನಾಟಕದ ಸಂಭಾಷಣ ಶೈಲಿಯಲ್ಲಿನ ಚಿತ್ರ. ಚಿತ್ರೀಕರಣ ಮುಗಿಸಲು ತೆಗೆದುಕೊಂಡ ಅವಧಿ ೧೦ ವರ್ಷ
ಕ.ಸಾ: ರಾಯಣ್ಣ ಕಿತ್ತೂರು ಸಂಸ್ಥಾನದ ಸಾಮಾನ್ಯ ಪ್ರಜೆ. ಕಿತ್ತೂರಿನ ಹೋರಾಟದಲ್ಲಿ ಜೈಲು ಸೇರಿ, ಹೊರಬಂದು ಬ್ರಿಟಿಷರ ವಿರುದ್ಧ ಸೆಣೆಸಾಡಲು ಸಾಹಸಿಗಳ ಗುಂಪನ್ನು ಕಟ್ಟಿದ. ಖಾನಾಪುರದಲ್ಲಿ ಬ್ರಿಟಿಷ್ ಸೈನ್ಯದ ಮೇಲೆ ದಾಳಿ ಮಾಡಿ, ಕಛೇರಿಗಳನ್ನು ಸುಟ್ಟು, ಠಾಣೆಗಳ ಮೇಲೆ ಎರಗಿದ. ಬ್ರಿಟಿಷರ ಸೈನ್ಯಕ್ಕೆ ಸಿಲುಕದೆ ನುಣುಚಿಕೊಳ್ಳುತ್ತಿದ್ದ. ಖಜಾನೆ ಲೂಟಿ ಮಾಡಿ ಬ್ರಿಟಿಷರಿಗೆ ಸಿಂಹಸ್ವಪ್ನನಾದ. ದೇಶದ್ರೋಹಿಗಳ ನೆರವಿನಿಂದ ರಾಯಣ್ಣನನ್ನು ಸೆರೆಹಿಡಿದ ಬ್ರಿಟಿಷರು ಗಲ್ಲಿಗೇರಿಸಿದರು.

೨೨೯. ಇಮ್ಮಡಿ ಪುಲಿಕೇಶಿ

(೧೯೬೭ / ಕಪ್ಪು-ಬಿಳುಪು / ಐತಿಹಾಸಿಕ)
ಲಾ/ಪ್ರೊ: ಶ್ರೀವೆಂಕಟೇಶ್ ಚಿತ್ರ
ನಿ: ಎನ್.ಸಿ.ರಾಜನ್
ಸ.ನಿ: ವಿ.ಸೋಮಶೇಖರ್, ವಿಶ್ವನಾಥ್
ಅ: ರಾಜಕುಮಾರ್, ಉದಯಕುಮಾರ್, ಬಾಲಕೃಷ್ಣ, ರಾಮಚಂದ್ರಶಾಸ್ತ್ರಿ, ಅರುಣಕುಮಾರ್, ಸುದರ್ಶನ್, ನರಸಿಂಹರಾಜು, ಕೆ.ಎಸ್.ಅಶ್ವತ್ಥ್, ಗಣಪತಿಭಟ್, ಬಿ.ಜಯಮ್ಮ, ಜಯಂತಿ, ಕಲ್ಪನಾ, ಎಂ.ಎನ್.ಲಕ್ಷ್ಮೀದೇವಿ, ಶಕ್ತಿಪ್ರಸಾದ್, ಕೇಶವಮೂರ್ತಿ, ನಾಗಪ್ಪ, ಬಜ್ಜಣ್ಣ, ಎಂ.ಆರ್.ತಿಲಕಂ, ಸುಮಿತ್ರ, ನಂದಕುಮಾರ್, ಭಾನುಮತಿ, ಚಂದ್ರ (ನೃತ್ಯ)
ಕ: ಇತಿಹಾಸ ಆಧಾರಿತ ಕಥೆ
ಚಿ.ಕ/ಮಾ/ಗೀ: ಜಿ.ವಿ.ಅಯ್ಯರ್
ಗಾ: ಪಿ.ಬಿ.ಶ್ರೀನಿವಾಸ್, ಎಸ್.ಜಾನಕಿ, ರಮಣ, ಮೋತಿ
ಸಂ: ಎನ್.ಸಿ.ರಾಜನ್, ಎಸ್.ಎ.ಜಾನ್
ಛಾ: ದೊರೈರಾಜ್, ಡಿ.ವಿ.ರಾಜಾರಾಂ
ಕಲೆ: ಆರ್.ಬಿ.ಎಸ್.ಮಣಿ
ಸ: ಜಿ.ಕೆ.ವೆಂಕಟೇಶ್
ಧ್ವ: ಸೂರ್ಯನಾರಾಯಣ, ಆರ್.ಜಿ.ಪಿಳ್ಳೈ, ರಾಮನಾಥನ್
ನೃ: ಬಿ.ಜಯರಾಂ
ಸಾ: ವೈ.ಶಿವಯ್ಯ, ರಾಮರಾವ್
ವ: ವೆಂಕಟರಾವ್
ಪ್ರ: ಬಿ.ಆರ್.ಸಿಂಗ್, ದೊರೆಸ್ವಾಮಿ ನಾಯ್ಡು
ಸ್ಟು: ವೀನಸ್
ಹಾ: ೧)'ಚೆಲುವಿನ ಒಡೆತನ ಬೇಡುವೆಯಾ...', ೨)'ದೇವ ದೇವ ಮಹಾದೇವಾ. ..', ೩)'ತಾನಿರಲು ಮನೆ ಕೇಳಿ ಬಂದವನ್ಯಾರೇ.....', ೪)'ಅತ್ತಿಗೆ ನಾಳೆ ಹೊತ್ತಿಗೆ...', ೫)'ಕಮ್ಮ ನೋಡುವ ಹೆಣ್ಣೆ...', ೬)'ಅಗಜಾನನ ಪದ್ಮಾರ್ಕಂ...', ೭)'ಕನ್ನಡದ ಕುಲತಿಲಕ...'
ವಿ: ಬಾಲಕೃಷ್ಣ ಅಭಿನಯದ ೧೦೦ನೆಯ ಚಿತ್ರ. ಶಾಸನಾದಿಗಳನ್ನು ಆಧರಿಸಿ ಅಧಿಕೃತವಾಗಿ ವಸ್ತ್ರವಿನ್ಯಾಸಾದಿಗಳನ್ನು ನಿರ್ವಹಿಸಿದ್ದರು.
ಕ.ಸಾ: ಇಮ್ಮಡಿ ಪುಲಿಕೇಶಿ ಚಾಲುಕ್ಯ ವಂಶದ ಶಕ್ತಿವಂತ. ತಂದೆ ಒಂದನೆಯ ಕೀರ್ತಿವರ್ಮ, ಪುಲಿಕೇಶಿ ಹಾಗು ಗೂನ ವಿಷ್ಣುವರ್ಧನ ಸಹೋದರರು. ಬಾಲಕರಾಗಿದ್ದಾಗಲೇ ಮರಣ ಹೊಂದಿದ ಪುಲಿಕೇಶಿಯ ಚಿಕ್ಕಪ್ಪ ಮಂಗಳೇಶ ಚಾಲುಕ್ಯ ಸಾಮ್ರಾಜ್ಯ ವಿಸ್ತರಿಸಿದರೂ ಸ್ವಂತ ಮಕ್ಕಳಿಗೆ ಪಟ್ಟಕಟ್ಟುವ ದುರುದ್ದೇಶದಿಂದ ಅಣ್ಣ-ತಮ್ಮಂದಿರಲ್ಲಿ ವೈಮನಸ್ಯ ತಂದ. ಚಿಕ್ಕಪ್ಪನನ್ನು ಎದುರಿಸಿ ರಾಜ್ಯ ವಶಪಡಿಸಿಕೊಂಡ ಇಮ್ಮಡಿ ಪುಲಿಕೇಶಿ ನಂತರ ಧರ್ಮ ರಾಜ್ಯ ಸ್ಥಾಪನೆ ಮಾಡಿದ. ಕದಂಬರೂ, ಮೌರ್ಯರು, ಕನೂಜಿನ ಹರ್ಷವರ್ಧನರನ್ನು ಸೋಲಿಸಿ ದಿಗ್ವಿಜಯ ಸ್ಥಾಪಿಸಿ ಚಾಲುಕ್ಯ ರಾಜ್ಯ ವಿಸ್ತರಿಸಿದ.

೨೩೦. ಪ್ರೇಮಕ್ಕೂ ಪರ್ಮಿಟ್ಟೆ

(೧೯೬೭ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ವಿಜಯಭಾರತಿ ಚಿತ್ರ
ಪ್ರೊ: ಹರಿಣಿ
ನಿ: ಆರ್.ನಾಗೇಂದ್ರರಾವ್
ಸ.ನಿ: ಎನ್.ಟಿ.ಜಯರಾಮರೆಡ್ಡಿ
ಅ: ಕಲ್ಯಾಣ್‌ಕುಮಾರ್, ಅರುಣ್‌ಕುಮಾರ್, ದಿನೇಶ್, ರಾಮಚಂದ್ರಶಾಸ್ತ್ರಿ, ವಾದಿರಾಜ್, ನರಸಿಂಹರಾಜು, ಆರ್.ನಾಗೇಂದ್ರರಾವ್, ಕಲ್ಪನಾ, ರಮಾದೇವಿ, ಜೂ.ರೇವತಿ, ಲಲಿತಾ, ಕಮಲಮ್ಮ, ಇಂದ್ರಾಣಿ

ಕ: ಶಿವಕುಮಾರ್
ಮಾ/ಗೀ: ಆರ್.ಎನ್.ಜಯಗೋಪಾಲ್
ಗಾ: ಪಿ.ಬಿ.ಶ್ರೀನಿವಾಸ್, ಎಸ್.ಜಾನಕಿ, ಪಿ.ಸುಶೀಲ
ಸಂ: ಪಿ.ಎಸ್.ಮೂರ್ತಿ
ಛಾ: ವಿ.ಮನೋಹರ್
ಕಲೆ: ವರ್ತೂರ್‌ಕರ್
ಸ: ವಿಜಯಭಾಸ್ಕರ್
ಧ್ವ: (ಹಾ)ಸ್ವಾಮಿನಾಥನ್, (ಮಾ)ಕೆ.ಆರ್.ಸೀತಾರಾಂ
ನೃ: ಬಿ.ಜಯರಾಂ
ಸಾ: ವೈ.ಶಿವಯ್ಯ
ವ: ಅಪ್ಪಾರಾವ್, ಗೋಪಾಲ್, ಸುರೇಶ್
ಪ್ರ: ಅಳಗಿರಿ, ರಾಮು, ರಾಜಗೋಪಾಲ್
ಸ್ಟು: ಪ್ರೀಮಿಯರ್ (ಮೈಸೂರು)
ಹಾ: ೧)'ಕೆಂಪುರೋಜಾ ಮೊಗದವಳೇ ಕೆಂಡ ಸಂಪಿಗೆ ಮುಡಿದವಳೇ....', ೨)'ಎಚ್ಚರವಿರಬೇಕು ಮೈಯಲಿ ಎಚ್ಚರವಿರಬೇಕು.....', ೩)'ಪ್ರೇಮಿಸೋಣ ಬಾರಾ....', ೪)'ಉಸಿರೆ ಒಡಲ ತೊರೆಯುವೆಯಾ.....', ೫)'ಮುಗುಳು ನಗೆಯ ಮಲ್ಲಿಗೆ....'
ಕ.ಸಾ: ಹಳ್ಳಿಯ ಹುಡುಗ ದಿವಾಕರ್ ಕಾಲೇಜು ವ್ಯಾಸಂಗಕ್ಕೆ ಹೋಗಿ ಪಟ್ಟಣದ ಶ್ರೀಮಂತ ಹುಡುಗಿ ವಿಜಯಲಕ್ಷ್ಮಿಯನ್ನು ಪ್ರೀತಿಸುತ್ತಾನೆ. ಎರಡು ಕುಟುಂಬಗಳ ನಡುವಿನ ಶ್ರೀಮಂತಿಕೆ, ಅಂತಸ್ತು ಮದುವೆಗೆ ಅಡ್ಡಿ ಬರುತ್ತದೆ. ನಾನಾ ತೊಂದರೆ, ತಿರುವುಗಳ ನಡುವೆ ಪ್ರೇಮಿಗಳು ಒಂದಾಗುತ್ತಾರೆ.

೧೯೬೮

೨೩೧. ಜೇಡರಬಲೆ

(೧೯೬೮ / ಕಪ್ಪು-ಬಿಳುಪು / ಬಾಂಡ್‌ಶೈಲಿ)
ಲಾ: ಮಂತ್ರಾಲಯ ಮೂವೀಸ್
ಪ್ರೊ: ಟಿ.ಪಿ.ವೇಣುಗೋಪಾಲ್
ನಿ: ಬಿ.ದೊರೈರಾಜ್, ಎಸ್.ಕೆ.ಭಗವಾನ್
ಸ.ನಿ: ಎಂ.ಕೆ.ಅಪ್ಪಣ್ಣ
ಅ: ರಾಜಕುಮಾರ್, ಉದಯಕುಮಾರ್, ನರಸಿಂಹರಾಜು, ಕೆ.ಎಸ್.ಅಶ್ವತ್ಥ್, ಎಂ.ಪಿ.ಶಂಕರ್, ಶಕ್ತಿಪ್ರಸಾದ್, ಜಾನಕಿರಾಂ, ದಿನೇಶ್, ಕಾಶಿನಾಥ್, ಜಯಂತಿ, ಶೈಲಶ್ರೀ, ರಮಾ, ವಿಜಯಲಲಿತ, ಸಾಧನಾ, ರತ್ನಶ್ರೀ, ಧನಶ್ರೀ, ಶೀಲಾ, ಉಮಾ, ಜೋನ್ಸ್, ಸಂಪತ್ಕುಮಾರಿ, ರತ್ನಂ, ಭೀಮರಾಜು, ನಚ್ಚು, ಅನಂದಮೋಹನ್, ದೇಶರಾಜು ರಾಮರಾವ್, ಕೆ.ಎನ್.ಕೃಷ್ಣ
ಕ/ಚಿ.ಕ: ಎಸ್.ಕೆ.ಭಗವಾನ್
ಮಾ: ಎಂ.ನರೇಂದ್ರಬಾಬು, ಎಸ್.ಕೆ.ಭಗವಾನ್
ಗೀ: ಆರ್.ಎನ್.ಜಯಗೋಪಾಲ್
ಗಾ: ಎಸ್.ಜಾನಕಿ, ಎಲ್.ಆರ್.ಈಶ್ವರಿ
ಸಂ: ಎನ್.ಸಿ.ರಾಜನ್, ರಘುಪತಿ
ಛಾ: ಬಿ.ದೊರೈರಾಜ್, ಚಿಟ್ಟಿಬಾಬು
ಕಲೆ: ಬಿ.ಚಲಂ
ಸ: ಜಿ.ಕೆ.ವೆಂಕಟೇಶ್
ಧ್ವ: ಎಸ್.ಪಿ.ರಾಮನಾಥನ್
ನೃ: ಬಿ.ಜಯರಾಂ
ಸಾ: ಜ್ಯೂಡೊ ರತ್ನಂ
ವ: ಬಿ.ಅಪ್ಪಾರಾವ್, ಗೇಲಾರ್ಡ್, ಎಂ.ನಾಥ್
ಪ್ರ: ದೊರೆಸ್ವಾಮಿ, ಬಿ.ಎಂ.ಸಿಂಗ್
ಸ್ಟು: ಗೋಲ್ಡನ್
ಹಾ: ೧)'ಹಲೋ ಮಿಸ್ಟರ್ ಕಮಾನ್ ಫಾಸ್ಟರ್', ೨)'ಅಂಜದೇ ಅಳುಕದೇ ಆಡು ರಾಜ....', ೩)'ಯಾರೋ ಆಡಲು ಬಂದವರು....', ೪)'ಇನಿಯಾ ಬಂದ ಸಮಯ....'
ವಿ: ದೊರೈ-ಭಗವಾನ್ ಜೋಡಿ ನಿರ್ದೇಶಿಸಿದ ಮೊದಲ ಚಿತ್ರ. ಕನ್ನಡದ ಪ್ರಪ್ರಥಮ ಬಾಂಡ್ ಚಿತ್ರ
ಕ.ಸಾ: ನಾಸಿಕ್ ಟಂಕಸಾಲೆಯ ನಿವೃತ್ತ ಅಧಿಕಾರಿ ಸಿಂಹ ಅವರನ್ನು ಕಳ್ಳಸಾಗಾಣಿಕೆದಾರರ ಗುಂಪೊಂದು ಹಾರಿಸಿಕೊಂಡು ಹೋಗುವುದು. ಖೋಟಾ ನೋಟು ಮುದ್ರಿಸುವ ಕಲೆ ಕಲಿಯುವುದೇ ಈ ಸಮಾಜ ವಿರೋಧಿ ಶಕ್ತಿಗಳ ಉದ್ದೇಶ. ಸರ್ಕಾರ ಸಿ.ಐ.ಡಿ.೯೯ನ್ನು ನೇಮಿಸಿ ಬೇಬಿಯನ್ನು ಸಹಾಯಕನನ್ನಾಗಿ ನೀಡಿತು. ಸಮಾಜ ವಿರೋಧಿ ಗುಂಪನ್ನು ಪತ್ತೆ ಮಾಡಿ 'ಜೇಡರ ಬಲೆ'ಯಲ್ಲಿ ಬೀಳಿಸುವ ಪತ್ತೇದಾರಿ ಕೆಲಸವನ್ನು ಸಿ.ಐ.ಡಿ.೯೯ ಸಮರ್ಪಕವಾಗಿ ನಿರ್ವಹಿಸಿದ.

೨೩೨. ಮಾತೆಯೇ ಮಹಾಮಂದಿರ

(೧೯೬೮ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ವಿಜಯಶ್ರೀ ಫಿಲಂಸ್
ಪ್ರೊ: ಎನ್.ಎಸ್.ಮಣಿ
ನಿ: ಬಿ.ಸಿ.ಶ್ರೀನಿವಾಸ್
ಅ: ಉದಯಕುಮಾರ್, ಬಿ.ಎಂ.ವೆಂಕಟೇಶ್, ಜಯಂತಿ, ನರಸಿಂಹರಾಜು, ಉದಯಚಂದ್ರಿಕಾ, ಜಯಶ್ರೀ
ಸಂ: ಕಂದಸ್ವಾಮಿ
ಛಾ: ಟಿ.ಎಲ್ಲಪ್ಪ
ಸ: ಬಿ.ಗೋಪಾಲ್
ಕ.ಸಾ: ಮಾತೆಯ ಮಮತೆ-ವಾತ್ಸಲ್ಯ ಹಾಗೂ ಮಾತೃ ಸ್ಥಾನದ ಮಹತ್ವವನ್ನು ಸಾರುವ ಚಿತ್ರ

೨೩೩. ಅರುಣೋದಯ

(೧೯೬೮ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಶ್ರೀನಿವಾಸ್ ಆರ್ಟ್ಸ್ ಪ್ರೊಡಕ್ಷನ್ಸ್
ಪ್ರೊ: ಟಿ.ಎನ್.ಶ್ರೀನಿವಾಸನ್

ನಿ: ಸಿ.ಶ್ರೀನಿವಾಸನ್
ಸ.ನಿ: ಸಹ್ಯಾದ್ರಿ
ಅ: ಕಲ್ಯಾಣ್‌ಕುಮಾರ್, ರಾಜಶ್ರೀ, ಸಾಹುಕಾರ್ ಜಾನಕಿ, ಉದಯಕುಮಾರ್, ಬಾಲಕೃಷ್ಣ, ಟಿ.ಬಿ.ನಾಗಪ್ಪ, ದ್ವಾರಕೀಶ್, ರಮಾ, ಬೇಬಿರಾಣಿ, ಬಸಪ್ಪ, ಮಾ।ರಾಜಕುಮಾರ್, ಗಣಪತಿಭಟ್, ಶ್ಯಾಂಸುಂದರ್
ಕ: ನಿಹಾರ್ ರಂಜನ್ ಗುಪ್ತ
ಚಿ.ಕ/ಮಾ: ಎಂ.ವಿ.ಕರುಣಾಕರನ್, ಸಿ.ಶ್ರೀನಿವಾಸನ್
ಮಾ: ಜಿ.ವಿ.ಅಯ್ಯರ್
ಗೀ: ಆರ್.ಎನ್.ಜಯಗೋಪಾಲ್
ಗಾ: ಪಿ.ಸುಶೀಲ, ಎಸ್.ಜಾನಕಿ, ಎಲ್.ಆರ್.ಈಶ್ವರಿ, ಪಿ.ಬಿ.ಶ್ರೀನಿವಾಸ್
ಸಂ: ಉಮಾನಾಥ್
ಛಾ: ಯು.ರಾಜಗೋಪಾಲ್
ಕಲೆ: ಆರ್.ಬಿ.ಎಸ್.ಮಣಿ
ಸ: ಆರ್.ಸುದರ್ಶನಂ
ಧ್ವ: ಆರ್.ಕಣ್ಣನ್
ನೃ: ಉಡುಪಿ ಜಯರಾಂ, ಕೆ.ಎಸ್.ರೆಡ್ಡಿ
ಸಾ: ತ್ಯಾಗರಾಜನ್
ವ: ಟಿ.ಎಸ್.ವಾಸು
ಪ್ರ: ಬಿ.ಆರ್.ಸಿಂಗ್
ಸ್ಟು: ವೆಂಕಟೇಶ್ವರ ಮೂವಿಟೋನ್
ಹಾ: ೧)'ಮೂಗುತಿ...', ೨)'ಚಿನ್ನ ಚೆಲುವ ಪಾಪ...', ೩)'ಸೊಕ್ಕಿ ನೀ ನಿಲಬೇಡ...', ೪)'ಜನಕು ಜನಕು ಮಂಗಣ್ಣ...'

೨೩೪. ಗಾಂಧಿನಗರ

(೧೯೬೮ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ವಿಜಯವರ್ಧನ್ ಮೂವೀಸ್
ಪ್ರೊ: ಸಿ.ವೆಂಕಾ-ಭಾವನಾರಾಯಣರೆಡ್ಡಿ
ನಿ: ಕೆ.ಎಸ್.ಎಲ್.ಸ್ವಾಮಿ (ರವೀ)
ಸ.ನಿ: ಸಿದ್ಧಲಿಂಗಯ್ಯ
ಅ: ರಾಜಕುಮಾರ್, ಕಲ್ಪನಾ, ಜಯಶ್ರೀ, ರಮಾದೇವಿ, ದ್ವಾರಕೀಶ್, ಅಶ್ವತ್ಥ್, ನರಸಿಂಹರಾಜು, ಬಾಲಕೃಷ್ಣ, ಪಾಪಮ್ಮ, ನಾಗಪ್ಪ, ಪಂಢರಿಬಾಯಿ, ರಾಘವೇಂದ್ರರಾವ್, ಹನುಮಂತಾಚಾರ್, ದಿನೇಶ್, ಕೃಷ್ಣಶಾಸ್ತ್ರಿ, ಜೂ।ರೇವತಿ, ಬಿ.ವಿ.ರಾಧ, ರಾಧಾಕುಮಾರಿ, ಕುಪ್ಪರಾಜ್, ಗಣಪತಿಭಟ್, ಜಿ.ಪ್ರಭಾಕರ್



ಕ/ಚಿ.ಕ: ಎಸ್.ಭಾವ ನಾರಾಯಣ
ಮಾ/ಗೀ: ಚಿ.ಉದಯಶಂಕರ್
ಗಾ: ಪಿ.ಬಿ.ಶ್ರೀನಿವಾಸ್, ಎಸ್.ಜಾನಕಿ, ಪಿ.ಸುಶೀಲ, ಎಲ್.ಆರ್.ಈಶ್ವರಿ, ಪಿ.ಗೋಪಾಲನ್, ಪಟ್ಟಾಭಿ, ಎಸ್.ಪಿ.ಬಾಲಸುಬ್ರಹ್ಮಣ್ಯಂ
ಸಂ: ಬಾಲ್ ಜಿ.ಯಾದವ್
ಛಾ: ಕೆ.ಜಾನಕಿರಾಂ
ಕಲೆ: ಗೋಡ್ಗಾಂವ್‌ಕರ್
ಸ: ಸತ್ಯಂ
ಧ್ವ: ಎಸ್.ಪಿ.ರಾಮನಾಥನ್, ಜಿ.ಲಾಜರಸ್
ನೃ: ಉಡುಪಿ ಜಯರಾಂ, ಎ.ಕೆ.ಚೋಪ್ರಾ
ವ: ಗಾಂಧಿ
ಪ್ರ: ಮಾಧವಯ್ಯ, ದೊರೆಸ್ವಾಮಿ, ಕೃಷ್ಣ, ರಾಮು, ನಾರಾಯಣಸ್ವಾಮಿ
ಸ್ಟು: ಗೋಲ್ಡನ್ ಸಿನಿ ಸ್ಟುಡಿಯೊ (ಮದರಾಸು)
ಹಾ: ೧)'ರಘುಪತಿ ರಾಘವ ರಾಜಾರಾಂ ಪತಿತ ಪಾವನ ಸೀತಾರಾಂ.....', ೨)'ನೀ ಮುಡಿದಾ ಮಲ್ಲಿಗೆ ಹೂವಿನ ಮಾಲೆ....', ೩)'ತರವೆ ಇಂಥ ನಯ ವಂಚನೆ....', ೪)'ಓ ಡಾರ್ಲಿಂಗ್ ಓ ಡೈಮಂಡ್....', ೫)'ಕಾಣದ ಊರಲಿ ನೀ ಕುಳಿತಿರುವೆ.....', ೬)'ಸರಸಕಾಗಲಿ ವಿರಸಕಾಗಲಿ......'
ವಿ: ನಿರ್ಮಾಪಕ ಭಾವನಾರಾಯಣ ಗತಿಸಿದ ಮಗಳು ಶೇಷಮ್ಮನ ನೆನಪಿಗಾಗಿ ಅರ್ಪಿಸಿದ್ದರು.
ಕ.ಸಾ: ಗಾಂಧಿನಗರ ಸಂಕೀರ್ಣದ ಯಜಮಾನ ಲಕ್ಷ್ಮೀಪತಯ್ಯ ಸಹೃದಯಿ. ವಠಾರದ ಮನೆಗಳಲ್ಲಿ ವಾರಾನ್ನ ಮಾಡಿಕೊಂಡು ಬೆಳೆವ ಶೇಖರ್ ಗುಣ ಸಂಪನ್ನ. ವಠಾರದಲ್ಲೆ ಇದ್ದ ಬಡ ಹುಡುಗಿ ಶಾಂತಾಳನ್ನು ಪ್ರೇಮಿಸುತ್ತಾನೆ. ಬೇರೆ ಯಾರದೋ ಒಳಿತಿಗಾಗಿ ಕಳ್ಳತನವೊಂದನ್ನು ತನ್ನ ಮೇಲೆ ಹಾಕಿಕೊಳ್ಳುವ ಶೇಖರ್ ಸೆರೆಮನೆ ಸೇರಿ 'ಅಪರಾಧಿಗಳೂ ಮನುಷ್ಯರೆ' ಎಂಬ ಪುಸ್ತಕ ಬರೆಯುತ್ತಾನೆ. ಇಡೀ ಗಾಂಧಿನಗರದ ಮಾಲೀಕ ಶೇಖರ್ ಆಗಿದ್ದು, ತಾನು ಈ ಸ್ವತ್ತಿನ ಉಸ್ತುವಾರಿ ನೋಡಿಕೊಳ್ಳುತ್ತಿದ್ದೆ ಎಂಬ ಸತ್ಯವನ್ನು ಲಕ್ಷ್ಮೀಪತಯ್ಯ ಹೊರಹಾಕುತ್ತಾರೆ.

೨೩೫. ಭಾಗ್ಯದ ಬಾಗಿಲು

(೧೯೬೮ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಎಸ್.ಜಿ.ಕೆ. ಪ್ರೊಡಕ್ಷನ್ಸ್
ಪ್ರೊ: ಜಯಣ್ಣ
ನಿ: ಕೆ.ಎಸ್.ಎಲ್.ಸ್ವಾಮಿ (ರವೀ)
ಸ.ನಿ: ಮಣಿರತ್ನ
ಅ: ರಾಜಕುಮಾರ್, ವಂದನಾ, ಬಿ.ವಿ.ರಾಧಾ, ದ್ವಾರಕೀಶ್, ಬಾಲಕೃಷ್ಣ, ಪಾಪಮ್ಮ, ಜಯಶ್ರೀ, ಶ್ರೀನಿವಾಸ್, ಶ್ರೀರಂಗಮೂರ್ತಿ, ಜಯ, ಕೆ.ಎಸ್.ಅಶ್ವಥ್ (ಗೌರವನಟ)
ಕ: ದೊರೈ
ಚಿ.ಕ: ರವೀ
ಮಾ/ಗೀ: ಚಿ। ಉದಯಶಂಕರ್
ಗಾ: ಪಿ.ಬಿ.ಶ್ರೀನಿವಾಸ್, ಎಸ್.ಜಾನಕಿ
ಸಂ: ಬಾಲ್ ಜಿ.ಯಾದವ್
ಛಾ: ಕೆ.ಜಾನಕೀರಾಂ
ಕಲೆ: ಅರುಣ್
ಸ: ವಿಜಯಭಾಸ್ಕರ್
ಧ್ವ: ಕೆ.ಆರ್.ಸೀತಾರಾಂ, ಶಿವರಾಂ
ನೃ: ಉಡುಪಿ ಜಯರಾಂ - ದೇವಿ
ಸಾ: ವೈ.ಶಿವಯ್ಯ
ವ: ತಂಗಪ್ಪನ್
ಪ್ರ: ರಾಜಗೋಪಾಲ್
ಸ್ಟು: ಪ್ರೀಮಿಯರ್
ಹಾ: ೧)'ನಾನೇ ರಾಜಕುಮಾರಾ...', ೨)'ನೀ ನನ್ನ ಜೊತೆ ಇರಲು...', ೩)'ಹಗಲೇನು ಇರುಳೇನು...', ೪)'ನೀನಗಲು ನಗೆ ತುಂಬಿರಲು...', ೫)'ರಾಮಶಾಸ್ತ್ರವ ಹೇಳುವೆ...', ೬)'ನಾ ಬರುವೇ ನಿನ್ನೊಡನೇ...'
ವಿ: ರಾಜಕುಮಾರ್ ಅವರ ನೂರನೇ ಚಿತ್ರ
ಕ.ಸಾ: ನಾಯಕ ಒಬ್ಬ ಮಧ್ಯಮವರ್ಗದವನು. ಆತನನ್ನು ಪ್ರೀತಿಸುವ ಎರಡು ಹೆಣ್ಣುಗಳು. ನಾಯಕ ಒಬ್ಬಳನ್ನು ಮಾತ್ರ ಪ್ರೀತಿಸುತ್ತಾನೆ. ಅವಳ ಮೇಲೆ ಮತ್ತೊಬ್ಬನ ಕಣ್ಣು. ಕಡೆಗೆ ಅದಕ್ಕಾಗಿ ದ್ವೇಷ. ನಾಯಕನ ಭಾಗ್ಯದ ಬಾಗಿಲು ತೆರೆವಾಗ ಅವನ ದಾರಿಯಲ್ಲಿ ಸಂತಸದ ಕ್ಷಣಗಳು.

೨೩೬. ಮನಸ್ಸಾಕ್ಷಿ

(೧೯೬೮ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಎ.ಎಲ್.ಎಸ್.ಪ್ರೊಡಕ್ಷನ್ಸ್
ಪ್ರೊ: ಎ.ಎಲ್.ಶ್ರೀನಿವಾಸನ್
ನಿ: ಎಸ್.ಕೆ.ಎ.ಚಾರಿ
ಸ.ನಿ: ಕೃಷ್ಣಮೂರ್ತಿ, ಎಲ್.ವಿ.ರಾಜೇಂದ್ರನ್
ಅ: ರಾಜಕುಮಾರ್, ನರಸಿಂಹರಾಜು, ಎಂ.ಪಿ.ಶಂಕರ್, ರಂಗ, ನಾಗಪ್ಪ, ಸೂರ್ಯಕುಮಾರ್, ರಾಮಚಂದ್ರಶಾಸ್ತ್ರಿ, ಗುಗ್ಗು, ಭಾರತಿ, ಸಾಹುಕಾರ್ ಜಾನಕಿ, ಶೈಲಶ್ರೀ, ಬಿ.ವಿ.ರಾಧ, ಜಯಶ್ರೀ, ಶಾಂತಮ್ಮ, ನಾಗಮಣಿ, ಸಾಧನ, ಸಾಬು (ನಾಯಿ)
ಮಾ: ಎಂ.ನರೇಂದ್ರಬಾಬು
ಗೀ: ಕು.ರ.ಸೀತಾರಾಮಶಾಸ್ತ್ರಿ, ವಿಜಯನಾರಸಿಂಹ
ಗಾ: ಪಿ.ಸುಶೀಲ, ಪಿ.ಬಿ.ಶ್ರೀನಿವಾಸ್, ಎಲ್.ಆರ್.ಈಶ್ವರಿ
ಸಂ: ಎ.ಪಿ.ಕೃಷ್ಣನ್, ಷಣ್ಮುಗಂ
ಛಾ: ವಿ.ಸೆಲ್ವರಾಜ್
ಸ: ಜಿ.ಕೆ.ವೆಂಕಟೇಶ್
ಧ್ವ: (ಮಾ)ಟಿ.ಆರ್.ಸಾರಂಗನ್, (ಹಾ)ರಂಗಸ್ವಾಮಿ, ಇ.ಐ.ಜೀವ
ನೃ: ಸಲೀಂ
ಸಾ: ವೈ.ಶಿವಯ್ಯ
ವ: ಗಂಗಾಧರನ್
ಪ್ರ: ಕೃಷ್ಣರಾಜ್, ಸೆಲ್ವರಾಜ್, ಸುಬ್ಬಣ್ಣ, ಶ್ರೀನಿವಾಸ್, ನಾರಾಯಣಸ್ವಾಮಿ, ಕೇಶಾಲಂಕಾರ: ಸೆಲ್ವರಾಜ್
ಸ್ಟು: ಶಾರದ
ಹಾ: ೧)'ಮೈನಿಮಿರಿ ನಿಂತು ಮುದವೇರಿ ಬಂತು.....', ೨)'ಹೋಯ್ ಹೋಯ್ ಹೋಯ್ ಸೊಗಸುಗಾರ....', ೩)'ಹತ್ತಿ ಬಂದ ಗೀಳು ಗಿಲಿ ಇಳಿಯಲಿಲ್ಲವೇ...', ೪)'ಅಲೆ ಅಲೆಯಲಿ ಉಲಿಯುತಿದೆ ಧರ್ಮದ ಸಾಕ್ಷಿ, ೫)'ಬಾಳ ಪದಕೆ ನಲಿವು ನೋವು...'
ಕ.ಸಾ: ಪಟ್ಟಣಕ್ಕೆ ಬಂದ ಹಳ್ಳಿ ಹುಡುಗಿ ಗೌರಿ ಅಣ್ಣನನ್ನು ಹುಡುಕುತ್ತಿರುವಾಗ ಜೇಬುಗಳ್ಳ ಸೋಮು ಅವಳ ಹಣವನ್ನು ಹಾರಿಸಿದ. ಗೌರಿ ಅವನ ಮನಸ್ಸನ್ನು ಗೆದ್ದು ಕಳ್ಳತನ ಕೆಟ್ಟದೆಂದು ನಿರೂಪಿಸುತ್ತಾಳೆ. ಅವನ ಅಣ್ಣನ ಮಗಳು ಚಂಚಲೆ ಸಹ ಸೋಮುವನ್ನು ಇಷ್ಟ ಪಡುತ್ತಾಳೆ. ಗುರುಸ್ವಾಮಿಯ ಹಣವನ್ನು ಸೋಮು ಕದಿಯುತ್ತಾನೆ. ಬ್ಯಾಗಿನಲ್ಲಿದ್ದ ಚೀಟಿಯ ಆಧಾರದ ಮೇಲೆ ಗುರುಸ್ವಾಮಿಯ ಊರಿಗೆ ಹೋದಾಗ ಗುರುಸ್ವಾಮಿ ಸತ್ತಿರುತ್ತಾನೆ. ಗೌರಿ ಅವನ ತಂಗಿ ಎಂಬುದು ಅರಿವಾಗುತ್ತದೆ. ತನ್ನ ತಪ್ಪಿಗೆ ಪಶ್ಚಾತ್ತಾಪ ಪಟ್ಟ ಸೋಮು ಗೌರಿಯನ್ನು ವಿವಾಹವಾಗಿ, ರಾಜಶೇಖರಯ್ಯನ ಕುತಂತ್ರಗಳನ್ನು ಬಯಲಿಗೆಳೆಯುತ್ತಾನೆ.

೨೩೭. ಮಂಕುದಿಣ್ಣೆ

(೧೯೬೮ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಬಾಬಾ ಮೂವಿಟೋನ್
ಪ್ರೊ: ಎ.ಎಂ.ಸಮೀವುಲ್ಲಾ
ನಿ: ಕೆ.ಎಸ್.ಎಲ್.ಸ್ವಾಮಿ (ರವೀ)
ಸ.ನಿ: ಸಿದ್ಧಲಿಂಗಯ್ಯ



ಅ: ಕಲ್ಯಾಣ್‌ಕುಮಾರ್, ವಂದನಾ, ಬಾಲಕೃಷ್ಣ, ಜಯಶ್ರೀ, ನರಸಿಂಹರಾಜು, ಜ್ಯೂ.ರೇವತಿ, ದ್ವಾರಕೀಶ್, ಬಿ.ವಿ.ರಾಧ, ದಿನೇಶ್, ಶೈಲಶ್ರೀ
ಕ: ಚಿ.ಉದಯಶಂಕರ್
ಚಿ.ಕ: ಎ.ಎಂ.ಸಮೀವುಲ್ಲಾ
ಮಾ/ಗೀ: ಚಿ। ಉದಯಶಂಕರ್
ಗಾ: ಪಿ.ಬಿ.ಶ್ರೀನಿವಾಸ್, ಎಸ್.ಜಾನಕಿ, ಎಲ್.ಆರ್.ಈಶ್ವರಿ, ಪಿ.ಸುಶೀಲಾ
ಸ: ಬಾಲ್ ಜಿ.ಯಾದವ್
ಛಾ: ಕೆ.ಜಾನಕೀರಾಂ
ಕಲೆ: ಬಿ.ಚಲಂ
ಸ: ವಿಜಯಭಾಸ್ಕರ್

ಧ್ವ: ಕೆ.ಆರ್.ಸೀತಾರಾಂ
ನೃ: ಬಿ.ಜಯರಾಂ
ಸಾ: ಜ್ಯುಡೋ ರತ್ನಂ
ವ: ಷಮೀಮ್ ಬಾನು
ಪ್ರ: ಎಂ.ಎಸ್.ಸುಬ್ಬಣ್ಣ, ರಾಜಗೋಪಾಲ್, ರಾಜಶೇಖರ್
ಸ್ಟು: ಪ್ರೀಮಿಯರ್
ಹಾ: ೧)'ಬಾ ಬೇಗ ಮನ ಮೋಹಿನಿ....', ೨)'ಏನೋ ಈ ನೋವಾ ಅರಿಯೇ....', ೩)'ಮಧು ಮಧುರ ಅಧರ ಸೋಕೇ...', ೪)'ಗ್ಯಾರಂಟಿ ಸ್ವೀಟ್ ಸೆವೆಂಟೀನ್.....'
ಕ.ಸಾ: ಮದುವೆಯೆಂಬ ವ್ಯವಸ್ಥೆಯ ಬಗ್ಗೆ ಸಮಾಜದ ಕುರುಡು ನಂಬಿಕೆಗಳ ಬಗ್ಗೆ ಹಾಗೂ ವ್ಯಕ್ತಿಗಳ ಅನಿಸಿಕೆಗಳ ಬಗೆಗಿನ ಚಿಂತನೆ.

೨೩೮. ಗೌರಿಗಂಡ

(೧೯೬೮ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಶ್ರೀಗಣೇಶ್ ಮೂವಿಟೋನ್
ಪ್ರೊ/ನಿ: ಸುಂದರರಾವ್ ನಾಡಕರ್ಣಿ
ಸ.ನಿ: ಸಹ್ಯಾದ್ರಿ, ಶರ್ಮ
ಅ: ನರಸಿಂಹರಾಜು, ರಾಜಾಶಂಕರ್, ಗಣಪತಿಭಟ್, ಮೈನಾವತಿ, ವಂದನಾ, ಬಿ.ಜಯಾ, ಬಿ.ಸರಸ, ಬಿ.ರಾಮಮೂರ್ತಿ, ಬೆಂಗಳೂರು ನಾಗೇಶ್, ಆರ್.ಟಿ.ರಮಾ, ಸರೋಜಮ್ಮ, ವತ್ತರಾಜ್



ಕ: ಗೋ.ಬ.ದೇವರ್
ಚಿ.ಕ: ಸುಂದರರಾವ್ ನಾಡಕರ್ಣಿ
ಮಾ: ಚಿ.ಉದಯಶಂಕರ್
ಗೀ: ಚಿ.ಉದಯಶಂಕರ್, ಎ.ಭಾಸ್ಕರರಾವ್, ವೈ.ಕೃಷ್ಣಭಟ್, ಬಿ.ಡಿ.ಗಣಪತಿ
ಗಾ: ಪಿ.ಬಿ.ಶ್ರೀನಿವಾಸ್, ಎಸ್.ಜಾನಕಿ, ಎಲ್.ಆರ್.ಈಶ್ವರಿ, ಪುಷ್ಪ, ಎಂ.ನಾಡಕರ್ಣಿ, ಬಿ.ಕೆ.ಸುಮಿತ್ರ, ಸಾಯಿಬಾಬು
ಸಂ: ಸುಂದರರಾವ್ ನಾಡಕರ್ಣಿ, ಪಿ.ಕೆ.ಕೃಷ್ಣ, ಸೆಬಾಸ್ಟಿಯನ್
ಛಾ: ಡಿ.ವಿ.ರಾಜಾರಾಂ
ಸ: ತಾರ್ಕೆಗಣೇಶ್
ಧ್ವ: ಕಣ್ಣನ್
ನೃ: ರಾಜಕುಮಾರ್, ತಂಗರಾಜ್
ವ: ಎ.ಎನ್.ಸುಬ್ಬರಾಮನ್
ಪ್ರ: ನಾರಾಯಣಸ್ವಾಮಿ, ರಾಜಗೋಪಾಲ್, ವೇಲಾಯುಧಂ
ಸ್ಟು: ಸತ್ಯ, ಪ್ರಕಾಶ್, ಅರುಣಾಚಲಂ
ಹಾ: ೧)'ನಿನ್ನ ನೀಚ ಬುದ್ಧಿಯ ಬಿಡು ನಾಲಿಗೆ....', ೨)'ಬೆಂಗಳೂರು ಬ್ಯೂಟಿಫುಲ್ ಹೆಣ್ಣೇ....', ೩)'ತಪ್ಪು ದೊಡ್ಡ ತಪ್ಪು ತುಂಬಾ ದೊಡ್ಡ ತಪ್ಪು.....', ೪)'ಬಾಳಿಗಂದೇ ಮಂಗಳ ದಿನವು....', ೫)'ಅಬ್ಬ ಮುಟ್ಟ್ಯಾ ಕನ್ನಾವೇವಿ ನನ್ನ ಗಂಡಾ ಎಲ್ಲಿಹೋದ....', ೬)'ಅಡಿಗೆ ಕೆಲ್ಸ ನಾ ಬಿಡುವೆ....'
ವಿ: ಕನ್ನಡ, ಕೊಂಕಣಿ, ತುಳು, ಕೊಡಗು, ಹಿಂದಿ ಹಾಡುಗಳನ್ನು ಸೇರಿಸಿ ಹೆಣೆದ ಹಾಡಿದೆ. ನರಸಿಂಹರಾಜು-ಮೈನಾವತಿ ಜೋಡಿಯಿದೆ.
ಕ.ಸಾ: ರಾಮಣ್ಣ ಮಹಾ ಸಂದೇಹದ ವ್ಯಕ್ತಿ. ತನ್ನ ಹೆಂಡತಿ ಗೌರಿಯ ಬಗ್ಗೆ ಇಲ್ಲಸಲ್ಲದ ಅನುಮಾನ. ಮದನ್ ಮೋಹನ್ ಎಂಬ ಸುಂದರ ತರುಣ ಯಾಮಿನಿದೇವಿಯನ್ನು ವಿವಾಹವಾಗಿ ಗುಟ್ಟಾಗಿರಿಸಿದ. ಯಾಮಿನಿ ದೇವಿ ಕಾಲ್ಸಿಡಿಗೆಯಲ್ಲಿ ಚಾಮುಂಡಿ ಬೆಟ್ಟ ಹತ್ತುತ್ತಿರುವಾಗ ತಲೆ ಸುತ್ತು ಬಂದು ಬಿದಳು. ರಾಮಣ್ಣ ಉಪಚರಿಸುತ್ತಿರುವುದನ್ನು ಕಂಡ ಗೌರಿಗೆ ಗಂಡನ ಮೇಲೆ ಅನುಮಾನ . ಯಾಮಿನಿದೇವಿ ಬೀಳಿಸಿಕೊಂಡು ಹೋದ ಮದನ್‌ಮೋಹನ್‌ನ ಚಿತ್ರ ಗೌರಿಗೆ ಸಿಕ್ಕಿ, ಅವಳ ಕೈಲಿ ಆ ಚಿತ್ರ ಇದ್ದುದನ್ನು ಕಂಡ ರಾಮಣ್ಣನಿಗೆ ಹೆಂಡತಿಯ ಮೇಲೆ ಅನುಮಾನ. ರಾಮಣ್ಣ ಆ ವ್ಯಕ್ತಿಯನ್ನು ಹುಡುಕಿಕೊಂಡು ಹೋದಾಗ ಅವನ ಬಳಿ ತನ್ನ ಭಾವಚಿತ್ರ ಇರುವುದನ್ನು ಕಂಡು ಮೋಹನನಿಗೆ ಯಾಮಿನಿದೇವಿ ಮೇಲೆ ಅನುಮಾನ. ಎರಡು ಕುಟುಂಬಗಳು ಒಡೆದು ಹೋಗುವ ಸ್ಥಿತಿಯಲ್ಲಿದ್ದು, ಮತ್ತೆ ಒಂದಾಗುತ್ತವೆ.

೨೩೯. ಸರ್ವಮಂಗಳಾ

(೧೯೬೮ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಶ್ರೀನಾಗೇಂದ್ರ ಚಿತ್ರಕಲಾ
ಪ್ರೊ: ಶ್ರೀಮತಿ ದೊಡ್ಡಮ್ಮಣ್ಣಿ ಸುಬ್ರಹ್ಮಣ್ಯರಾಜೇ ಅರಸ್
ನಿ: ಚದುರಂಗ
ಸ.ನಿ: ಎಸ್.ವಿ.ದೊರೆಸ್ವಾಮಿ
ಅ: ರಾಜಕುಮಾರ್, ಕಲ್ಪನಾ, ಅಶ್ವತ್ಥ್, ಲಕ್ಷ್ಮೀಬಾಯಿ, ಸಂಪತ್, ಜಯಶ್ರೀ, ಪಾಪಮ್ಮ, ಎಂ.ಎನ್.ಲಕ್ಷ್ಮೀದೇವಿ, ಸಿ.ಕೆ.ಕಲಾವತಿ, ಬಿ.ಎಸ್.ಕೆ.ಅರಸ್, ಬೇಬಿ ಸರ್ವಮಂಗಳ, ಶಾಂತಾದೇವಿ, ಶ್ರೀರಂಗಮೂರ್ತಿ ಶಾಂತಲಾ, ನಾಮದೇವ್, ಮಲ್ಲಿಕಾರ್ಜುನಪ್ಪ, ಬೇಬಿ ಸರ್ವಮಂಗಳಾ, ಬೇಬಿ ಗಿರಿಜಾ, ಮಾ। ವಿಕ್ರಂ
ಕ/ಚಿ.ಕ/ಮಾ: ಚದುರಂಗ
ಗೀ: ಕೆ.ಎಸ್.ನರಸಿಂಹಸ್ವಾಮಿ, ಜಾನಪದ ಗೀತೆಗಳು
ಗಾ: ಪಿ.ಬಿ.ಶ್ರೀನಿವಾಸ್, ಪಿ.ಸುಶೀಲ, ಎಸ್.ಜಾನಕಿ, ಎಲ್.ಆರ್.ಈಶ್ವರಿ
ಸಂ: ಪಿ.ಎಸ್.ಮೂರ್ತಿ, ಪಿ.ಯು.ಎಸ್.ಮಣಿಯಂ
ಛಾ: ವಿ.ಮನೋಹರ್
ಕಲೆ: ಪಿ.ವೆಂಕಟರಾಮಯ್ಯ
ಸ: ಸತ್ಯಂ
ಧ್ವ: ಕೆ.ಅರ್.ಸೀತಾರಾಂ, ಶಿವರಾಂ(ಹಾ)
ನೃ: ಆರ್.ಕೃಷ್ಣರಾಜು (ನೃತ್ಯಪಟುಗಳು : ಕುಮಾರಿ, ಈಶ್ವರಿ, ನಾಗೇಶ್ವರರಾವ್)
ವ: ಆರ್.ಅಶ್ವತ್ಥ್, ಸುಂದರರಾಜ್
ಪ್ರ: ಎಂ.ಎಸ್.ಸುಬ್ಬಣ್ಣ, ವೀರಾಸ್ವಾಮಿ, ರಾಜಗೋಪಾಲ್, ರಾಮಣ್ಣ
ಸ್ಟು: ಪ್ರೀಮಿಯರ್ (ಮೈಸೂರು)
ಹಾ: ೧)'ಉಂಡಾಡಬಹುದು ಓಡಿ ಬಾ ಎನ್ನಪ್ಪ....', ೨)'ನನ್ನವಳು ನನ್ನೆದೆಯ ಹೊನ್ನಾಡನಾಳುವಳು.....', ೩)'ಕತ್ತೆಯಾ ಮರಿ ಚೆಂದ...', ೪)'ಹಸುರು ಹೂವಮ್ಮಾ...', ೫)'ಶ್ರೀ ಪಾರ್ವತಿಯ...', ೬)'ಧಿಂಗಾಲವ್ವ ಧಿಂಗಾಲವ್ವ...', ೭)'ಜೋ ಜೋ ಜಗಜ್ಯೋತಿ...', ೮)'ಜವರಾಯ ಬಂದಾರೇ...'
ವಿ: ಖ್ಯಾತ ಕಾದಂಬರಿಕಾರ ಚದುರಂಗ ತಮ್ಮದೇ ಕಾದಂಬರಿ ಆಧರಿಸಿ ತಾವೇ ನಿರ್ದೇಶಿಸಿದ ಚಿತ್ರ. ೧೯೬೭-೬೮ರಲ್ಲಿ ತೃತೀಯ ಅತ್ಯುತ್ತಮ ಚಿತ್ರ ಪ್ರಶಸ್ತಿ. ಚದುರಂಗ ಅವರಿಗೆ ಅತ್ಯುತ್ತಮ ಕಥೆ ಹಾಗು ಸಂಭಾಷಣೆ ಪ್ರಶಸ್ತಿ. ಕೆ.ಎಸ್. ಅಶ್ವತ್ಥ್ ಈ ಚಿತ್ರದಲ್ಲಿ ವಿಶಿಷ್ಟ ಪಾತ್ರವನ್ನು ನಿರ್ವಹಿಸಿದರು.
ಸೆ: ೪೨೮೨.೭೪ ಮೀ. ೧೫ ರೀಲುಗಳು.
ವಿ: ಅಂತ್ಯ ದುರಂತವಾದರೆ ಜನಪ್ರಿಯ ನಟರ ಅಭಿಮಾನಿಗಳು ಒಪ್ಪಲಾರರೆಂದು ಮತ್ತೆ ಚಿತ್ರಿಕೆ ಸೇರಿಸಿ ಸುಖಾಂತ್ಯ ಮಾಡಿದ್ದರು.
ಕ.ಸಾ: ನಟರಾಜ ಚಿಕ್ಕಂದಿನಲ್ಲಿಯೇ ಅನಾಥನಾಗಿ ಅಕ್ಕನ ಆಶ್ರಯದಲ್ಲಿ ಬೆಳೆದ. ಅಕ್ಕನ ಮಗಳು ಸರ್ವಮಂಗಳ ಹಾಗು ನಟರಾಜ ಒಬ್ಬರಿಗೊಬ್ಬರು ಇಷ್ಟ ಪಟ್ಟರು. ವಿದ್ಯಾಭ್ಯಾಸಕ್ಕೆ ಪಟ್ಟಣಕ್ಕೆ ತೆರಳಿದ ನಟರಾಜ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲ್ಗೊಂಡು ಸೆರೆವಾಸಿಯಾದ. ಊರಿಗೆ ಬರುವ ವೇಳೆಗೆ ಸರ್ವಮಂಗಳಳನ್ನು ಆಕೆಯ ತಂದೆ ವಿಷಕಂಠಯ್ಯ ಹಣದಾಸೆಯಿಂದ ಕುರೂಪಿ ಸುಬ್ಬರಾಯನಿಗೆ ಮದುವೆ ಮಾಡಿದ. ಕ್ಷಯರೋಗಿಯಾಗಿ ಆಸ್ಪತ್ರೆಯಲ್ಲಿದ್ದಾಗ ಸರ್ವಮಂಗಳ ಶುಶ್ರೂಷೆ ಮಾಡಿದಳು. ನಟರಾಜ ಸತ್ತ. ಸರ್ವಮಂಗಳ ಹಳ್ಳಿಯಲ್ಲಿ ದುಡಿದು ದುಡಿದು ನ್ಯೂಮೋನಿಯಾಕ್ಕೆ ತುತ್ತಾದಳು.

೨೪೦. ಚಿನ್ನಾರಿ ಪುಟ್ಟಣ್ಣ

(೧೯೬೮ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಪದ್ಮಿನಿ ಪಿಕ್ಚರ್ಸ್
ಪ್ರೊ/ನಿ: ಬಿ.ಆರ್.ಪಂತುಲು
ಸ.ನಿ: ಎಸ್.ಆರ್.ಶಿವರಾಂ, ಪೊನ್ನುಸ್ವಾಮಿ
ಅ: ಬಿ.ಆರ್.ಪಂತುಲು, ರಮೇಶ್, ನರಸಿಂಹರಾಜು, ರಂಗ, ದಿನೇಶ್, ವಂದನ, ಉದಯಚಂದ್ರಿಕ, ರೇವತಿ(ಜ್ಯೂ), ಲಲಿತ, ಪಾಪಮ್ಮ, ಶಾಂತಮ್ಮ, ರಾಮಚಂದ್ರಶಾಸ್ತ್ರಿ, ನಾಗಪ್ಪ, ಗುಗ್ಗು, ಮಚ್ಚೇರಿ, ನಾರಾಯಣ್, ಶಂಕರ್, ಶ್ಯಾಮ್, ಮಲ್ಲೇಶ್, ರಂಗನಾಥ್, ಮಾ।ಬಸವರಾಜ್, ಬಿ।ವಿಶ್ವನಾಥ್
ಕ: ಬಿ.ವಿ.ಕಾರಂತ್
ಚಿ.ಕ: ಪದ್ಮಿನಿ ಪಿಕ್ಚರ್ಸ್
ಮಾ/ಗೀ: ಜಿ.ವಿ.ಅಯ್ಯರ್

ಗಾ: ಪಿ.ಬಿ.ಶ್ರೀನಿವಾಸ್, ಎಸ್.ಜಾನಕಿ, ರುದ್ರಪ್ಪ, ಜಯದೇವ್, ಎಲ್.ಆರ್.ಈಶ್ವರಿ, ಬೆಂಗಳೂರು ಲತಾ, ರೇಣುಕಾ
ಸಂ: ಆರ್.ದೇವರಾಜನ್
ಛಾ: ಎ.ಷಣ್ಮುಗಂ
ಕಲೆ: ಸೆಲ್ವರಾಜ್
ಸ: ಟಿ.ಜಿ.ಲಿಂಗಪ್ಪ
ಧ್ವ: (ಹಾ) ಎಸ್.ಪಿ.ರಾಮನಾಥನ್, (ಮಾ) ವಿ.ಸಿ.ಶೇಖರ್
ನೃ: ಕೃಷ್ಣಕುಮಾರ್ (ಧಾರವಾಡ)
ಸಾ: ಕೆ.ಕೆ.ರತ್ನಂ
ವ: ಎಂ.ರಾಘ
ಪ್ರ: ಮಾಣಿಕ್ಯಂ, ಪಾರ್ಥಸಾರಥಿ, ರಾಜಗೋಪಾಲ್
ಸ್ಟು: ಸತ್ಯಾ ಸ್ಟುಡಿಯೋ
ಹಾ: ೧)'ಹೂವ ತಂದು ಮಾರಿದಳು...', ೨)'ನನ್ನಲ್ಲಿ ನೀನಾಗಬೇಕು...', ೩)'ಚಾಚೂ ನಿನ್ನಾ ಕೈನಾ...', ೪)'ರೂಪಾಯಿ ತಾನೋಡಿ ಬಂತು...', ೫)'ಮದು ಮಗಳು ನೀನಮ್ಮ...'
ವಿ: ಬಿ.ವಿ.ಕಾರಂತ್ ಅವರ ಕತೆ ಆಧರಿಸಿ ತೆರೆಗೆ ಬಂದ ಚಿತ್ರ
ಕ.ಸಾ: ಬಡಹುಡುಗಿಯೊಂದು ಶ್ರೀಮಂತ ವ್ಯಕ್ತಿಯಿಂದ ಮೋಸಹೋಗಿ ಒಂದು ಗಂಡು ಮಗುವಿಗೆ ಜನ್ಮನೀಡಿ, ಮಗುವನ್ನು ತೊರೆದು ಹೋಗುವಳು. ನಂತರ ಪರಿಸ್ಥಿತಿಯ ಕೈಗೊಂಬೆಯಂತೆ ಮಗು ಒಬ್ಬರ ಕೈನಿಂದ ಇನ್ನೊಬ್ಬರಿಗೆ ಬದಲಾಗುತ್ತಾ ಹೋಗುತ್ತವೆ. ಕಡೆಗೆ ವಿಧಿಯಾಟದಂತೆ ಹೆತ್ತಮ್ಮನನ್ನು ಸೇರುವ ಸಾಮಾಜಿಕ ಚಿತ್ರಣ.

೨೪೧. ಮೈಸೂರು ಟಾಂಗ

(೧೯೬೮ / ಕಪ್ಪು-ಬಿಳುಪು / ಪತ್ತೇದಾರಿ)
ಲಾ: ವಿಜಯಲಕ್ಷ್ಮಿ ಮೂವಿಟೋನ್
ಪ್ರೊ: ಬಿ.ವಿಜಯಲಕ್ಷ್ಮಿ (ವಂದನಾ), ಕೆ.ರಾಮಚಂದ್ರರೆಡ್ಡಿ
ನಿ: ಜಿ.ವಿ.ಅಯ್ಯರ್, ಟಿ.ವಿ.ಸಿಂಗ್ ಠಾಕೂರ್
ಸ.ನಿ: ಬಿ.ಎಸ್.ವಿಶ್ವನಾಥ್, ದೊರೆ, ಉಗ್ರನರಸಿಂಹ
ಅ: ಕಲ್ಯಾಣಕುಮಾರ್, ಬಿ.ವಿಜಯಲಕ್ಷ್ಮಿ (ವಂದನಾ), ಬಾಲಕೃಷ್ಣ, ನರಸಿಂಹರಾಜು, ದಿನೇಶ್, ಗಣಪತಿಭಟ್, ಬೆಂಗಳೂರು ನಾಗೇಶ್, ಕುಪ್ಪುರಾಜ್, ಅನಂತರಾಮ ಮಚ್ಚೇರಿ, ಶ್ಯಾಮ್, ಶೈಲಶ್ರೀ, ಜೂ.ರೇವತಿ, ಉದಯಕುಮಾರ್, ವೆಂಕಟರಾಂ, ಸಚ್ಚು, ಹೇಮಾ, ಬಿ.ಜಯಾ, ಸರಸ, ಬೇಬಿ ಲಕ್ಷ್ಮಿ

ಕ/ಚಿ.ಕ/ಮಾ/ಗೀ: ಜಿ.ವಿ.ಅಯ್ಯರ್
ಗಾ: ಎಸ್.ಜಾನಕಿ, ಎಲ್.ಆರ್.ಈಶ್ವರಿ, ಬೆಂಗಳೂರು ಲತಾ, ಮುನಿರಾಜ್ (ಹೊಸ ಪರಿಚಯ)
ಸಂ: ಉಮಾನಾಥ್
ಛಾ: ಶ್ರೀಕಾಂತ್
ಕಲೆ: ಬಿ.ಚಲಂ
ಸ: ವಿಜಯಭಾಸ್ಕರ್
ಧ್ವ: (ಹಾ)ಸ್ವಾಮಿನಾಥನ್, ಎಂ.ಬಿ.ವಾಲ್ಕೆ, (ಮಾ)ಆರ್.ಜಿ.ಪಿಳ್ಳೈ, ಸೂರ್ಯನಾರಾಯಣರಾವ್
ನೃ: ಬಿ.ಜಯರಾಂ
ವ: ಕಣ್ಣನ್, ಕೃಷ್ಣಮೂರ್ತಿ
ಪ್ರ: ಎಂ.ಎಸ್.ಸುಬ್ಬಣ್ಣ, ರಾಜಗೋಪಾಲ್, ವೀರರಾಜು, ಕೆ.ರಾಜಗೋಪಾಲ್, ವೀರಾಸ್ವಾಮಿ
ಸ್ಟು: ವೀನಸ್ (ಮದರಾಸು)
ಹಾ: ೧)'ಓಡು ರಾಜ ಓಡೋಡು...', ೨)'ಮುಳ್ಳುದಾರಿಯಲ್ಲಿ ನಡೆಯೆ...', ೩)'ಎದೆಯಿಂದುಕ್ಕಿದ ಸಾವಿರ ಮಾತು...', ೪)'ಪಿನ್ನಜೀ ಓಹೋಹೋ ಪಿನ್ನಜೀ....', ೫)'ಪತಿಸೇವೆಯೆ ಸತಿ ಜೀವಾ...', ೬)'ಸ್ವಂತ ದುಡಿಮೆ ಮಾಡುವ ಹೆಣ್ಣು....', ೭)'ಲೆಫ್ಟ್ ರೈಟ್ ಲೆಫ್ಟ್ ರೈಟ್....'
ವಿ: ತಾರೆ ವಂದನಾ ನಿರ್ಮಾಣದ ಚಿತ್ರ. ವಿಶೇಷ ಡೆನ್ ಸೆಟ್‌ಗಳ, ಗ್ಲಾಸ್ ಒಡೆದು ನುಗ್ಗುವ ಸಾಹಸ ಪ್ರಥಮ ಬಾರಿಗೆ.
ಕ.ಸಾ: ಪ್ರಕಾಶ್ ಅನುಭವಿ ಪತ್ತೇದಾರ (ಸಿ.ಐ.ಡಿ.) ಮೈಸೂರಿನ ರಾವ್‌ಬಹದ್ದೂರ್ ಶಂಕರರಾಯನ ಎರಡನೆ ಹೆಂಡತಿ ಇಂದಿರಾ ಕೊಲೆ ಪತ್ತೆಹಚ್ಚಲು ಬಂದು ನಾನಾ ಸಮಸ್ಯೆಗಳಲ್ಲಿ ಸಿಲುಕಿಕೊಳ್ಳುತ್ತಾನೆ. ಟಾಂಗಾ ಓಡಿಸುವ ನಾರಿಯಿಂದ ಹಲವಾರು ರಹಸ್ಯಗಳು ಸಿಗುತ್ತವೆ. ಕೊನೆಗೆ ಸತ್ಯಕ್ಕೆ ಜಯವಾಗುತ್ತದೆ.

೨೪೨. ಭಾಗ್ಯದೇವತೆ

(೧೯೬೮ / ಕಪ್ಪು-ಬಿಳುಪು / ಜಾನಪದ)
ಲಾ: ಮನೋರಂಜನ್ ಫಿಲಂಸ್
ಪ್ರೊ: ವಿ.ಸುಂದರೇಶನ್
ನಿ: ರತ್ನಾಕರ್-ಮಧು
ಅ: ರಾಜಕುಮಾರ್, ಕೆ.ಎಸ್.ಅಶ್ವತ್ಥ್, ಎಂ.ಪಿ.ಶಂಕರ್, ಬಾಲಕೃಷ್ಣ, ನರಸಿಂಹರಾಜು, ಅನಂತರಾಮ್ ಮಚ್ಚೇರಿ, ಹೆಚ್.ರಾಮಚಂದ್ರಶಾಸ್ತ್ರಿ, ಹೆಚ್.ಕೃಷ್ಣಶಾಸ್ತ್ರಿ, ಲೀಲಾವತಿ, ಉದಯಚಂದ್ರಿಕಾ, ಬಿ.ವಿ.ರಾಧ, ಆದವಾನಿ ಲಕ್ಷ್ಮೀದೇವಿ, ರಮಾದೇವಿ, ಬೇಬಿ ಪ್ರಶಾಂತ್, ಬೇಬಿ ವಿಶಾಲಾಕ್ಷಿ, ಎಂ.ಎನ್.ಲಕ್ಷ್ಮೀದೇವಿ
ಕ: ಕಾಡು ಸಿದಮ್ಮನ ಕಥೆ ಆಧರಿಸಿದ್ದು (ಸೋರಟ್ ಅಶ್ವತ್ಥ್)
ಚಿ.ಕ/ಮಾ/ಗೀ: ಸೋರಟ್ ಅಶ್ವತ್ಥ್, ವಚನಗಳು
ಗಾ: ಎಸ್.ಜಾನಕಿ, ನಾಗೇಂದ್ರಪ್ಪ, ಪಿ.ಬಿ.ಶ್ರೀನಿವಾಸ್, ಎಲ್.ಆರ್.ಈಶ್ವರಿ, ಬಿ.ಕೆ.ಸುಮಿತ್ರ, ಬೆಂಗಳೂರು ಲತಾ, ಜಿ.ರೇಣುಕಾ
ಸಂ: ಪಿ.ಎಸ್.ಮೂರ್ತಿ
ಛಾ: ಆರ್.ಮಧು
ಸ: ಜ್ಞಾನಮಣಿ
ಸ್ಟು: ಗೋಲ್ಡನ್
ಹಾ: ೧)'ಕರುಣಾಮಯ ಶಂಕರದೇವಾ...', ೨)'ನಯನದೆ ನಯನಾ ತಾ ಸೇರೇ....', ೩)'ಎನ್ನ ಮಾಯದ ಮದವ ಮುರಿಯಯ್ಯ (ಅಕ್ಕಮಹಾದೇವಿ)', ೪)'ಆಡಿ ಕಾಲು ದಣಿಯವು ನೋಡಿ...'(ಬಸವಣ್ಣ), ೫)'ಗಂಗಾತರಂಗ ರಮಣೀಯ...', ೬)'ಓಹೋಹೋ ತಂಪಾನಿತಾನ...', 'ಗೆಜ್ಜೆನಾದಕೆ ಸಜ್ಜೆ ಮೋದಕೆ...', ೭)'ನಗೆಸಿಧಿ ನೀನೇ ನಲಿವಿನ ಜೇನೇ....', ೮)'ನಮಿಸಿ ನುತಿಪೆನೋ ಹೇ ಶೂಲಧಾರಿ....', ೯)'ಶರಣು ಹೇ ದಯಾ ಸಿಂಧೂ....'
ವಿ: ಪ್ರಚಲಿತವಲ್ಲಿನ ಜಾನಪದ ಕಥಾನಕ ಕಾಡು ಸಿದ್ದಮ್ಮನ ಕಥೆ ಆಧರಿಸಿ ಈ ಚಿತ್ರದ ಕಥೆ ರಚಿಸಲಾಯಿತು.
ಕ.ಸಾ: ಮಧುರಶೆಟ್ಟಿಯ ಮಗಳು ಸಿವಮ್ಮ ಚದುರಂಗ ಮಹಾರಾಜನ ಪತ್ನಿಯಾಗಿ ಗರ್ಭಿಣಿಯಾದಳು. ಎರಡು ಮಕ್ಕಳ ತಾಯಿಯಾದ ಅವಳನ್ನು ಕಂಡ ಹಿರಿಯ ರಾಣಿಯರು ಹೊಟ್ಟೆಯುರಿಯಿಂದ ಸುಳ್ಳು ಆರೋಪಗಳಿಂದ ರಾಜನನ್ನು ನಂಬಿಸಿ ಸಿವಮ್ಮನನ್ನು ಅರಮನೆಯಿಂದ ಅಟ್ಟುವರು. ಮಕ್ಕಳನ್ನು ಕೊಲ್ಲಲು ಸೂಚಿಸಿದರೂ ಆಳುಗಳು ಜೀವಂತವಾಗಿ ಎಸೆಯುವರು. ಮಕ್ಕಳು ದೊಡ್ಡವರಾದ ನಂತರ ರಾಜನಿಗೆ ಬೆಳಕಾಗುವರು. ಪತಿ-ಪತ್ನಿ ಒಂದಾಗುವರು.

೨೪೩. ಬೆಂಗಳೂರು ಮೈಲ್

(೧೯೬೮ / ಕಪ್ಪು-ಬಿಳುಪು / ಪತ್ತೇದಾರಿ)
ಲಾ: ಗೌರಿ ಆರ್ಟ್ ಫಿಲಂಸ್
ಪ್ರೊ: ವೈ.ವಿ.ರಾವ್, ಎಸ್.ಭಾವನಾರಾಯಣ (ನಿರ್ವಹಣೆ)
ನಿ: ಎಲ್.ಎಸ್.ನಾರಾಯಣ
ಸ.ನಿ: ಉಗ್ರನರಸಿಂಹ
ಅ: ರಾಜಕುಮಾರ್, ನರಸಿಂಹರಾಜು, ಕೊಟ್ವಾರ್‌ಕರ್, ಭಗವಾನ್, ವಿಜಯರಾವ್, ಜಯಂತಿ, ಬಿ.ವಿ.ರಾಧ, ವಿಜಯಲಲಿತ, ಜ್ಯೋತಿಲಕ್ಷ್ಮಿ, ಶ್ಯಾಮ್, ಕೆ.ಎಸ್.ಅಶ್ವತ್ಥ್
ಕ: ಭಾವನಾರಾಯಣ
ಮಾ/ಗೀ: ಚಿ.ಉದಯಶಂಕರ್
ಗಾ: ಪಿ.ಬಿ.ಶ್ರೀನಿವಾಸ್, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್.ಜಾನಕಿ, ಎಲ್.ಆರ್.ಈಶ್ವರಿ, ಬಿ.ಕೆ.ಸುಮಿತ್ರ, ವೆಂಕಟಾಚಲ ಸತ್ಯಂ

ಸಂ: ಬಾಲ್ ಜಿ.ಯಾದವ್
ಛಾ: ಆರ್.ಮಧು
ಸ: ಸತ್ಯಂ
ಧ್ವ: ಎಸ್.ಪಿ.ರಾಮನಾಥನ್
ನೃ: ಕೆ.ಚೋಪ್ರ, ರಾಮು, ವೆಂಪಟಿ ಸತ್ಯಂ
ಸಾ: ಮಾಧವನ್
ವ: ಬಿ.ನಾರಾಯಣರಾವ್
ಪ್ರ: ವೀರರಾಜು
ಹಾ: ೧)'ಪೋನಿ ಟೈಲು ನೋಡು ನೋಡು...', ೨)'ಬಂಗಾರ ಬಾಲೆಯು ನಾ....', ೩)'ಮುಂಗುರುಳೇ ತುಂಬಿಗಳು ಕಣ್ಣುಗಳೇ ಕಮಲಗಳು....', ೪)'ಆರೆ ಜಾಜಾ ಓಹೋ ನನ್ನ ರಾಜಾ.....', ೫)'ಕೂಗುತಿದೆ ವೈಯಾರಿ ಕಣ್ಣು ನಿನ್ನೇ ಕೂಗುತಿದೆ.....', ೬)'ಓರೆನೋಟ ಬಾಣಕೆ ತಲ್ಲಣಿಸಿ....'
ಕ.ಸಾ: ಬೆಂಗಳೂರು ಮೈಲ್‌ನಲ್ಲಿ ಮೃತ್ಯುಂಜಯರಾಯರ ಕೊಲೆ ನಡೆಯುತ್ತದೆ. ಈ ಕೊಲೆ ಪತ್ತೆ ಹಚ್ಚಲು ಸಿ.ಐ.ಡಿ. ಶ್ಯಾಮಸುಂದರ್ ನಿಯುಕ್ತನಾಗುತ್ತಾನೆ. ರೈಲಿನಲ್ಲಿ ಪ್ರಯಾಣಿಸುತ್ತಿದ ಬಾಬು ಶ್ಯಾಮಸುಂದರನಿಗ ಆತ್ಮೀಯನಾದಾಗ ಬಾಬುವಿನ ಅಪಹರಣವಾಗುತ್ತದೆ. ಶ್ಯಾಮಸುಂದರ್ ತುಂಬಾ ಸಾಹಸದಿಂದ ಕೊಲೆಗಡುಕರನ್ನು ಪತ್ತೆ ಹಚ್ಚುತ್ತಾನೆ.

೨೪೪. ಮಮತೆ

(೧೯೬೮ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಸುನೀತಾ ಮೂವೀಸ್
ಪ್ರೊ: ಶ್ರೀಮತಿ ಎಸ್.ಹೀರಾ
ನಿ: ವೈ.ಆರ್.ಸ್ವಾಮಿ
ಸ.ನಿ: ಕುಣಿಗಲ್ ನಾಗಭೂಷಣ್
ಅ: ಕಲ್ಯಾಣ್‌ಕುಮಾರ್, ಕೆ.ಎಸ್.ಅಶ್ವತ್ಥ್, ನರಸಿಂಹರಾಜು, ಬಾಲಕೃಷ್ಣ, ಕೆ.ನಾರಾಯಣ್, ವಿಜಯಲಕ್ಷ್ಮಿ (ವಂದನಾ), ಲೀಲಾವತಿ, ಬಿ.ವಿ.ರಾಧ, ಜಯಶ್ರೀ, ರಮಾದೇವಿ, ನಗೆ ನಟ ವೆಂಕು, ಟಿ.ನಾರಾಯಣ್, ಬೇಬಿ ಸುನೀತಾ, ಮಾ|ಚಂದ್ರಶೇಖರ್, ಬಿ.ಎಸ್.ರಾವ್, ಕೇಶವ್, ಪ್ರೀತಮ್, ಭೂಷಣ್
ಕ: ಪೂರ್ವೈ ಕೃಷ್ಣನ್
ಚಿ.ಕ: ವೈ.ಆರ್.ಸ್ವಾಮಿ
ಮಾ: ಕುಣಿಗಲ್ ನಾಗಭೂಷಣ್

ಗೀ: ಆರ್.ಎನ್.ಜಯಗೋಪಾಲ್
ಗಾ: ಪಿ.ಬಿ.ಶ್ರೀನಿವಾಸ್, ಎಸ್.ಜಾನಕಿ, ಬೆಂಗಳೂರು ಲತಾ, ವಸಂತ, ಬಿ.ಕೆ.ಸುಮಿತ್ರ
ಸಂ: ಹನುಮಂತರಾವ್
ಛಾ: ಮಧು, ಪ್ರಕಾಶ್
ಕಲೆ: ಬಿ.ಎನ್.ಕೃಷ್ಣ
ಸ: ಸತ್ಯಂ
ಧ್ವ: ಎಸ್.ಪಿ.ರಾಮನಾಥನ್, ಡಿ.ಲಾಜರಸ್
ನೃ: ರಾಮು
ವ: ದೊರೈ ಕಣ್ಣನ್
ಪ್ರ: ಸುಬ್ಬಣ್ಣ, ರಾಜಗೋಪಾಲ್
ಸ್ಟು: ಗೋಲ್ಡನ್ (ಮದರಾಸು)
ಹಾ: ೧)'ಹೂಬಳ್ಳಿ ಕೈ ಬೀಸಿದಾಗ ತಂಗಾಳಿ ಮೈ ಸೋಕಿದಾಗ...', ೨)'ಈ ಮೌನ ಇನ್ನೇಕೆ ನೀ ನಾಚಿ ನಿಲ್ಲಲೇಕೆ...', ೩)'ತಾರೇ ಸಾವಿರಾ ಸೇರಿ ಚಂದಿರಗೆ ಸಾಟಿಯೇ.....', ೪)'ಆಟದ ಗೊಂಬೆ ನಾವೆಲ್ಲ ನಿನಗೆ...', ೫)'ಚಿಕ್ಕ ಮಕ್ಕಳು ನಾವೂ ಪುಟ್ಟ ಮಕ್ಕಳೂ.....'
ಕ.ಸಾ: ರವಿ, ಬಾಬು, ಮೀನ ತಾಯಿಯಿಲ್ಲದ ಮಕ್ಕಳು. ಶ್ರೀಮಂತ ತಂದೆ ಸಿಂಗಪೂರಿಗೆ ಹೋದಾಗ ಮಂಜುಳಾ ಎಂಬಾಕೆಯನ್ನು ಎರಡನೆ ಪತ್ನಿಯಾಗಿ ತರುತ್ತಾನೆ. ಮಕ್ಕಳು ಆಕೆಯನ್ನು ಚಿಕ್ಕಮ್ಮನನ್ನಾಗಿ ಸ್ವೀಕರಿಸುವುದಿಲ್ಲ. ರವಿ ಮದುವೆ ಮಾಡಿಕೊಂಡು ಮನೆ ಬಿಟ್ಟು ಹೋಗುತ್ತಾನೆ. ಮೀನ ಮೇಲಿನಿಂದ ಬಿದ್ದು ಪ್ರಜ್ಞೆ ತಪ್ಪಿರುತ್ತಾಳೆ. ಅಣ್ಣ ಬಂದು ಔಷಧಿ ಕುಡಿಸಿದರೆ ಮಾತ್ರ ಕುಡಿಯುವುದಾಗಿ ಹೇಳುತ್ತಾಳೆ. ಮಂಜುಳಾ ತನ್ನ ಒಳ್ಳೆಯತನದಿಂದ ರವಿಯನ್ನು ಬರಮಾಡಿಕೊಳ್ಳುತ್ತಾಳೆ. ಮಂಜುಳ ಎಲ್ಲರ ತಾಯಿಯಾಗುತ್ತಾಳೆ.

೨೪೫. ಹಣ್ಣೆಲೆ ಚಿಗುರಿದಾಗ

(೧೯೬೮ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಶ್ರೀಕಾಂತ್ ಅಂಡ್ ಶ್ರೀಕಾಂತ್ ಎಂಟರ್‌ಪ್ರೈಸಸ್
ಪ್ರೊ: ಶ್ರೀಕಾಂತ್ ನಹತಾ, ಶ್ರೀಕಾಂತ್ ಪಟೇಲ್
ನಿ: ಎಂ.ಆರ್.ವಿಠಲ್
ಸ.ನಿ: ಕೆ.ಸೀತಾರಾಮ್
ಅ: ಆರ್.ನಾಗೇಂದ್ರರಾವ್, ರಾಜಕುಮಾರ್, ಅರುಣ್‌ಕುಮಾರ್, ದಿನೇಶ್, ರಂಗ, ಕಲ್ಪನಾ, ಬಿ.ವಿ.ರಾಧಾ, ಪಾಪಮ್ಮ, ಜಯಶ್ರೀ, ಜಾರ್ಜ್ ಇಂದಿರಾ, ಬೇಬಿ ರಾಣಿ, ಪ್ರೇಮಲತಾ, ಪ್ರಧಾನ್, ವಿಜಯಕುಮಾರ್
ಕ: ತ್ರಿವೇಣಿ ಅವರ ಕಾದಂಬರಿ
ಚಿ.ಕ: ಎಂ.ಆರ್.ವಿಠಲ್
ಮಾ: ತ್ರಿವೇಣಿ, ಆರ್.ಎನ್.ಜಯಗೋಪಾಲ್
ಗೀ: ಆರ್.ಎನ್.ಜಯಗೋಪಾಲ್
ಗಾ: ಪಿ.ಸುಶೀಲ, ಎಲ್.ಆರ್.ಈಶ್ವರಿ, ಪಿ.ಬಿ.ಶ್ರೀನಿವಾಸ್, ಬಾಲಮುರುಳಿಕೃಷ್ಣ, ಬೆಂಗಳೂರು ಲತಾ
ಸಂ: ಎಸ್.ಪಿ.ಎನ್.ಕೃಷ್ಣ, ವೇಲಾಯುಧನ್

ಛಾ: ಶ್ರೀಕಾಂತ್, ಕುಮಾರ್
ಕಲೆ: ಬಾಲನ್, ದಾಸ್
ಸ: ಎಂ.ರಂಗರಾವ್
ಧ್ವ: ಕೆ.ಆರ್.ಸೀತಾರಾಂ
ನೃ: ಬಿ.ಜಯರಾಂ
ಸ್ಟು: ಪ್ರೀಮಿಯರ್ (ಮೈಸೂರು)
ಹಾ: ೧)'ಹೂವು ಚೆಲುವೆಲ್ಲಾ ನಂದೆಂದಿತು....', ೨)'ಇದೇ ಹುಡುಗಿ ಇದೇ ಬೆಡಗಿ....', ೩)'ಹಾಲಲಿ ಮಿಂದವಳೋ ದಂತದ ಮೈಯವಳೋ......', ೪)'ಬಾರಾ ಒಲಿದು ಬಾರಾ ನಿದಿರೆ ತಾರಾ....', ೫)'ತಾಯಿ ತಂದೆಯ ಹೊತ್ತ...'
ವಿ: ರಾಜಕುಮಾರ್ ಅವರ ೧೦೦ನೆಯ ಚಿತ್ರ ಇದಾದರೂ, ಅವರಿಗೆ ಈ ಚಿತ್ರದಲ್ಲಿ ನಾಯಕನ ಪಾತ್ರ ಇಲ್ಲದೇ ಇದ್ದುದರಿಂದ 'ಭಾಗ್ಯದ ಬಾಗಿಲು' ಚಿತ್ರವನ್ನು ಶತಚಿತ್ರವೆಂದು ಪರಿಗಣಿಸಲಾಯಿತು. ಈ ಚಿತ್ರ ನಿರ್ಮಿಸಲು ಆರ್.ನಾಗೇಂದ್ರರಾವ್ ತ್ರಿವೇಣಿ ಅವರಿಂದ ಹಕ್ಕು ಪಡೆದಿದ್ದರಾದರೂ ಅದನ್ನು ಶ್ರೀಕಾಂತ್ ಸಂಸ್ಥೆಗೆ ನೀಡಿದರು. ಎಪ್ಪತ್ತೆಂಟನೆ ವಯಸ್ಸಿನಲ್ಲಿ ಆರ್. ನಾಗೇಂದ್ರರಾಯರು ಈ ಚಿತ್ರದ ನಾಯಕ ನಟನಾಗಿ ಲವಲವಿಕೆಯಿಂದ ಅಭಿನಯಿಸಿದರು. ೧೯೬೮-೬೯ರ ಸಾಲಿನ ಪ್ರಥಮ ಅತ್ಯುತ್ತಮ ಚಿತ್ರ. ಆರ್.ನಾಗೇಂದ್ರರಾವ್ ಅತ್ಯುತ್ತಮ ನಟ, ಕಲ್ಪನಾ ಉತ್ತಮ ನಟಿ ಹಾಗು ಎಂ.ರಂಗರಾವ್ ಉತ್ತಮ ಸಂಗೀತ ಪ್ರಶಸ್ತಿ ಪಡೆದ ಚಿತ್ರ.
ಕ.ಸಾ: ಅನಂತರಾಯರು ಮನೆಯ ಯಜಮಾನರು. ಹಳೆಯ ಸಂಪ್ರದಾಯಗಳನ್ನು ಪಾಲಿಸಿಕೊಂಡು ಬಂದವರು. ಐವರು ಗಂಡು ಮಕ್ಕಳು, ಒಬ್ಬ ಮಗಳು, ಮೊಮ್ಮಕ್ಕಳಿಂದ ಕೂಡಿದ ತುಂಬು ಸಂಸಾರ. ಮಗಳು ಮಾಲತಿ ವಿಧವೆಯಾಗಿ ಮನೆ ಸೇರಿದಾಗ ರಾಯರು ಅಧೀರರಾಗುತ್ತಾರೆ. ಮಗ ಶಿವ ಕಲಾವಿದೆಯೊಬ್ಬಳನ್ನು ಪ್ರೇಮಿಸಿದಾಗ ಅದು ತಮ್ಮ ಘನತೆಗೆ ಕಡಿಮೆ ಎಂದು ವಿರೋಧಿಸುತ್ತಾರೆ. ಪ್ರಸಾದ್ ಎಂಬ ಒಂದು ಮಗುವಿನ ವಿಧುರ ರಾಯರ ವಿಶ್ವಾಸಕ್ಕೆ ಪಾತ್ರನಾಗುತ್ತಾನೆ. ಮಗುವನ್ನು ರಾಯರ ಮನೆಯಲ್ಲಿ ಬಿಟ್ಟು ಕೆಲಸಕ್ಕೆ ಹೋಗುತ್ತಿರುತ್ತಾನೆ. ಪ್ರಸಾದ್-ಮಾಲತಿ ವಿವಾಹ ಮಾಡಿಕೊಳ್ಳ ಬಯಸಿದಾಗ ರಾಯರು ವಿರೋಧಿಸುತ್ತಾರೆ. ಕೊನೆಗೆ ರಾಯರ ಮನಃ ಪರಿವರ್ತನೆಯಾಗಿ ಪ್ರಸಾದ್-ಮಾಲತಿ ಹಾಗೂ ಶಿವು-ಜಯಂತಿ ವಿವಾಹಕ್ಕೆ ಒಪ್ಪಿಕೊಳ್ಳುತ್ತಾರೆ.

೨೪೬. ಮಹಾಸತಿ ಅರುಂಧತಿ

(೧೯೬೮ / ಕಪ್ಪು-ಬಿಳುಪು / ಪೌರಾಣಿಕ)
ಲಾ: ಸಂಜೀವಿ ಪಿಕ್ಚರ್ಸ್
ಪ್ರೊ: ಬಿ.ವಿ.ರೆಡ್ಡಿ
ನಿ: ಆರೂರು ಪಟ್ಟಾಭಿ
ಸ.ನಿ: ವೆಂಕಟರಾಮನ್, ಸಹ್ಯಾದ್ರಿ, ಉಗ್ರನರಸಿಂಹ
ಅ: ಕಲ್ಪನಾ, ರಾಜಕುಮಾರ್, ಅರುಣ್‌ಕುಮಾರ್, ಉದಯಕುಮಾರ್, ರಾಜಾಶಂಕರ್, ವಂದನಾ, ಗಣಪತಿಭಟ್, ಬೆಂಗಳೂರು ನಾಗೇಶ್, ವಿಜಯಲಕ್ಷ್ಮಿ, ಬೇಬಿ ರೋಜಾರಮಣಿ, ಸೂರ್ಯಕುಮಾರ್, ಗೀತಾಂಜಲಿ, ಆದವಾನಿ ಲಕ್ಷ್ಮೀದೇವಿ
ಕ: ಪೌರಾಣಿಕ



ಚಿ.ಕ/ಮಾ/ಗೀ: ಚಿ। ಉದಯಶಂಕರ್
ಗಾ: ಅರುಣ್‌ಕುಮಾರ್, ಎಸ್.ಜಾನಕಿ, ಪಿ.ಸುಶೀಲ, ರಮಣ, ಸಿ.ಎಸ್.ಸರೋಜಿನಿ
ಸಂ: ಪಿ.ಭಕ್ತವತ್ಸಲಂ
ಛಾ: ವೇಣು
ಸ: ಅಶ್ವತ್ಥಾಮ
ಧ್ವ: (ಹಾ) ಎಸ್.ಪಿ.ರಾಮನಾಥನ್, (ಮಾ) ಕಣ್ಣನ್
ನೃ: ಕೆ.ಎಸ್.ರೆಡ್ಡಿ
ಪ್ರ: ಮೂರ್ತಿ, ದೊರೆಸ್ವಾಮಿ, ರಾಮು
ಸ್ಟು: ಗೋಲ್ಡನ್,ಅರುಣಾಚಲಂ
ಹಾ: ೧)'ಸುರಪತಿ ದೇವೇಂದ್ರ...', ೨)'ನಿಶೆಯಲ್ಲಿ ಮೊಗ್ಗಾಗಿ...', ೩)'ಮದನನೂ ರಸಿಕನೆ...', ೪)'ನೀನೇ ನನ್ನ ಪ್ರಾಣ...', ೫)'ಹೋಗಿ ಬಾ ಮಗಳೇ...', ೬)'ಒಂದು ಗುಡಿಸಲ ಬೆಳಕು...', ೭)'ಬನ್ನಿ ಬನ್ನೀ ಪುಟಾಣಿ...', ೮)'ಧರೆಯ ನುಂಗುತಲಿಹುದು...', ೯)'ಮರಳ ಪಾಕವ ಮಾಡಿ...',
ಕ.ಸಾ: ಪೌರಾಣಿಕ ಕಥೆಯಲ್ಲಿ ಬರುವ ಆದರ್ಶ ದಂಪತಿಗಳಾದ ವಸಿಷ್ಠ ಮತ್ತು ಅರುಂಧತಿಯರ ಕಥೆ. ಅಸ್ಪೃಶ್ಯತೆಯನ್ನು ವಿರೋಧಿಸುವ ವಸ್ತು.

೨೪೭. ಬೇಡಿ ಬಂದವಳು

(೧೯೬೮ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಶ್ರೀನಿವಾಸ ಆರ್ಟ್ ಪ್ರೊಡಕ್ಷನ್ಸ್
ಪ್ರೊ: ಟಿ.ಎಸ್.ಶ್ರೀನಿವಾಸನ್
ನಿ: ಸಿ.ಶ್ರೀನಿವಾಸನ್
ಸ.ನಿ: ಸಹ್ಯಾದ್ರಿ
ಅ: ಕಲ್ಯಾಣ್‌ಕುಮಾರ್, ದ್ವಾರಕೀಶ್, ರಾಮರಾವ್, ರಾಜಾರಾಂ ಗಿರಿಯನ್, ಶ್ಯಾಂ ಸುಂದರ್, ಸಹ್ಯಾದ್ರಿ, ಚಂದ್ರಕಲಾ, ಲಲಿತಾ, ಕಮಲಮ್ಮ, ಮಾಲತಮ್ಮ, ಬೇಬಿ ಸುನಂದ, ರಂಗ, ಶೈಲಶ್ರೀ, ಬಿ.ಜಯಮ್ಮ, ಬೇಬಿ ರೋಜಾರಮಣಿ, ಬೇಬಿ ಪದ್ಮಶ್ರೀ, ಬೇಬಿ ಪ್ರೇಮ, ಬೇಬಿ ಜಯಂತಿ
ಕ: ಶ್ರೀಮತಿ ನೀಳಾದೇವಿ ಅವರ ಕಾದಂಬರಿ
ಮಾ/ಗೀ: ಆರ್.ಎನ್.ಜಯಗೋಪಾಲ್
ಗಾ: ಬೆಂಗಳೂರು ಲತಾ, ಪಿ.ಸುಶೀಲ, ಬಿ.ಕೆ.ಸುಮಿತ್ರ, ಪಿ.ಬಿ.ಶ್ರೀನಿವಾಸ್
ಸಂ: ವೇಲುಸ್ವಾಮಿ
ಛಾ: ವಿಜಯಾ ನಂಜಪ್ಪ
ಸ: ಆರ್.ಸುದರ್ಶನಂ
ಧ್ವ: (ಹಾ)ಕಣ್ಣನ್, (ಮಾ)ಆರ್.ಎನ್.ಜಯಗೋಪಾಲ್
ನೃ: ಜನಾರ್ಧನ್ (ಉಡುಪಿ)
ವ: ಲಕ್ಷ್ಮಣರಾವ್
ಪ್ರ: ವೆಂಕಟೇಶ್-ಸೆಲ್ವರಾಜ್
ಸ್ಟು: ಪ್ರೀಮಿಯರ್ (ಮೈಸೂರು)
ಹಾ: ೧)'ಕನ್ನಡದ ತಾಯೆ ನಮ್ಮನು ನೀ ಕಾಯೇ....', ೨)'ಏಳು ಸ್ವರವು ಸೇರಿ ಸಂಗೀತವಾಯಿತು....', ೩)'ಒಂದಾನೊಂದು ಊರು ಆ ಊರಿನಲ್ಲಿ ಇಲಿಗಳು ನೂರು...', ೪)'ನೀರಿನಲ್ಲಿ ಅಲೆಯ ಉಂಗುರ....', ೫)'ಬೇಡಿ ಬಂದವಳು, ಒಲವನು ಬೇಡಿ ಬಂದವಳು....'
ಕ.ಸಾ: ಇಂದು ಅನಾಥೆ. ಸೋದರ ಮಾವನ ಮನೆಯಲ್ಲಿ ಅತ್ತೆ ನೀಡಿದ ಹಿಂಸೆಗಳನ್ನು ಸಹಿಸಿಕೊಂಡು ಬೆಳೆದಳು. ವೈದ್ಯರ ನೆರವಿನಿಂದ ಅನಾಥಾಶ್ರಮ ಸೇರಿ ವಿದ್ಯಾಭ್ಯಾಸ ಕಲಿತಳು. ಶ್ರೀಮಂತರೊಬ್ಬರ ಮನೆಯಲ್ಲಿ ಪಾಠ ಹೇಳುವ ಕೆಲಸ ದೊರೆಯಿತು. ಯಜಮಾನ ಪ್ರಹ್ಲಾದನ ಪರಿಚಯವಾಗಿ ಅವನ ಗುಣಗಳಿಗೆ ಮಾರು ಹೋದಳು. ಅವನು ಮಾಲತಿ ಎಂಬ ಹೆಣ್ಣನ್ನು ವಿವಾಹವಾಗಲು ಬಯಸಿದ್ದ. ಕೆಲ ದಿನಗಳ ನಂತರ ಪ್ರಹ್ಲಾದ ಇಂದುವನ್ನೇ ಮದುವೆಯಾಗುವುದಾಗಿ ತಿಳಿಸಿದ. ಇಂದುಗೆ ಆನಂದವಾಯಿತಾದರೂ, ಪ್ರಹ್ಲಾದನಿಗೆ ಮೊದಲ ಮದುವೆಯಾಗಿದೆ ಎಂಬ ವಿಷಯ ತಿಳಿದು ಆಘಾತವಾಯಿತು. ಎಲ್ಲವು ಸರಿಯಾಗಿ ಅವರ ಬಾಳು ಸಂತೋಷಮಯವಾಗುವ ಸಮಯದಲ್ಲಿ ಇಂದು ಕುಷ್ಠ ರೋಗ ಪೀಡಿತಳಾಗುವಳು. ಚಿಕಿತ್ಸೆಯಿಂದ ಕುಷ್ಠ ರೋಗ ಪರಿಹಾರ ಸಾಧ್ಯ ಎಂದು ಹೇಳಿದ ಪ್ರಹ್ಲಾದ ಅವಳನ್ನು ರೋಗಮುಕ್ತಗೊಳಿಸಿ ವಿವಾಹವಾದ.

೨೪೮. ಆನಂದಕಂದ

(೧೯೬೮ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಶೈಲಶ್ರೀ ಪ್ರೊಡಕ್ಷನ್ಸ್
ಪ್ರೊ: ಎ.ಸಿ.ನರಸಿಂಹಮೂರ್ತಿ, ಎ.ಪ್ರಭಾಕರರಾವ್
ನಿ: ಎ.ಸಿ.ನರಸಿಂಹಮೂರ್ತಿ, ಟಿ.ದ್ವಾರಕಾನಾಥ್
ಸ.ನಿ: ಬೆಂಗಳೂರು ನಾಗೇಶ್
ಅ: ಕಲ್ಯಾಣ್‌ಕುಮಾರ್, ಕಲ್ಪನಾ, ಮೈನಾವತಿ, ಸಂಪತ್, ಜಯಶ್ರೀ, ರಂಗ, ಬೇಬಿ ರಾಣಿ, ಅನಂತರಾಂ ಮಚ್ಚೇರಿ, ನಚ್ಚು, ರಾಜ್‌ಮೋಹನ್
ಕ/ಚಿ.ಕ/ಮಾ/ಗೀ: ಆರ್.ಎನ್.ಜಯಗೋಪಾಲ್
ಗಾ: ಎಸ್.ಜಾನಕಿ, ಪಿ.ಸುಶೀಲ, ಪಿ.ಬಿ.ಶ್ರೀನಿವಾಸ್
ಛಾ: ಸಂಜೀವಿ
ಕಲೆ: ಪ್ರಸಾದ್
ಸ: ವಿಜಯಭಾಸ್ಕರ್
ಸ್ಟು: ಪ್ರೀಮಿಯರ್
ಹಾ: ೧)'ಹಗಲೂ ಇರುಳೂ...', ೨)'ತಣ್ಣನೆ ರಾತ್ರಿ...', ೩)'ಮಲಗು ಮಲಗು...', ೪) 'ನೀನಿದ್ದರೇನು ಹತ್ತಿರ...', ೫)'ಓರ್ವನ ಮಗಳಾಗಿ...'

ಕ.ಸಾ: ಮಾನವ ತಪ್ಪು ಮಾಡುವುದು ಸಹಜ. ತಪ್ಪನ್ನು ಒಪ್ಪಿಕೊಂಡು ತಿದ್ದಿಕೊಳ್ಳುವುದು ಒಂದು ವರ್ಗ. ಅದನ್ನು ಮರೆಮಾಚಲು ಪ್ರಯತ್ನಿಸುವುದು ಇನ್ನೊಂದು ವರ್ಗ. ಸತ್ಯವನ್ನು ಎದುರಿಸಲಾಗದೇ ಹೋದವರು ಬಾಳಿನಲ್ಲಿ ಅನುಭವಿಸುವ ಸಮಸ್ಯೆಗಳೇ 'ಅನಂದಕಂದ'ದ ಕತೆ.

೨೪೯. ಅಡ್ಡದಾರಿ

(೧೯೬೮ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಎವರ್‌ಗ್ರೀನ್ ಪ್ರೊಡಕ್ಷನ್ಸ್
ಪ್ರೊ/ನಿ: ಹುಣಸೂರು ಕೃಷ್ಣಮೂರ್ತಿ
ಸ.ನಿ: ಹೆಚ್.ಆರ್.ಭಾರ್ಗವ
ಅ: ಹುಣಸೂರು ಕೃಷ್ಣಮೂರ್ತಿ, ಬಿ.ಎಂ.ವೆಂಕಟೇಶ್, ದ್ವಾರಕೀಶ್, ರಮಾ, ಲೋಕೇಶ್, ರಾಜಾನಂದ್, ರಾಮಚಂದ್ರರಾವ್, ಮಲ್ಲಿಕಾರ್ಜುನಪ್ಪ, ಮುಕುಂದ, ನಾಗರತ್ನ, ಸತ್ಯವತಿ, ಜಾನಕಿ, ಮಹದೇವಯ್ಯ, ರಾಮಕೃಷ್ಣರಾಜು, ರಾಮರಾವ್, ವೆಂಕಟರಾಮಯ್ಯ, ಶ್ರೀನಿವಾಸ, ಮಾ।ಸೀನು
ಕ/ಚಿ.ಕ/ಮಾ/ಗೀ: ಹುಣಸೂರು ಕೃಷ್ಣಮೂರ್ತಿ
ಗಾ: ಪಿ.ಬಿ.ಶ್ರೀನಿವಾಸ್, ಎಸ್.ಜಾನಕಿ, ಎಲ್.ಆರ್.ಈಶ್ವರಿ, ಪಿ.ನಾಗೇಶ್ವರರಾವ್
ಸಂ: ಎನ್.ಸಿ.ರಾಜನ್
ಛಾ: ಕೆ.ಎಸ್. ಗೋವಿಂದಸ್ವಾಮಿ
ಕಲೆ: ಪಿ.ವೆಂಕಟರಾಮಯ್ಯ
ಸ: ರಾಜನ್-ನಾಗೇಂದ್ರ
ಧ್ವ: (ಹಾ) ಇ.ಐ.ಜೀವ, (ಮಾ) ಕೆ.ಆರ್.ಸೀತಾರಾಂ
ವ: ಪಿ.ಚೆಂಟಿಬಾಬು
ಪ್ರ: ವೀರಾಸ್ವಾಮಿ-ಶ್ರೀನಿವಾಸ

ಸ್ಟು: ಪ್ರೀಮಿಯರ್ (ಮೈಸೂರು)
ಹಾ: ೧)'ನನ್ನ ನಿನ್ನ ಕಣ್ಣು ಸೇರಿ ಅಂದೇ ನನ್ನವಳಾದೆ ನೀನು...', ೨)'ಮದುವೆ ಗಂಡನು ನೋಡಮ್ಮ....', ೩)'ತಾಳು ತಾಳೆಸೊ ರಂಗಯ್ಯ....', ೪)'ಎಚ್ಚರ ತಂಗಿ ಎಚ್ಚರ ಎಚ್ಚರ ತಮ್ಮ ಎಚ್ಚರ....', ೫)'ಆಡಿಸೆ ತಂಗಿ...',
ವಿ: ಲೋಕೇಶ್ ಅಭಿನಯಿಸಿದ ಮೊದಲ ಚಿತ್ರ.
ಸೆ: ಉದ್ದ - ೩೯೯೩.೭೯, ರೀಲು - ೧೫, 'ಯು' ಸರ್ಟಿಫಿಕೇಟ್

ಕ.ಸಾ: ಗೋವಿಂದ, ಗಜೇಂದ್ರ, ಮುಕುಂದ ಅಣ್ಣ ತಮ್ಮಂದಿರು. ಗೋವಿಂದ ಊರಿಗೆ ನ್ಯಾಯ ಹೇಳುವ ಮುಖಂಡ. ಊರಿನ ಸಹೋದರರನ್ನು ಪಾಲಾಗದಂತೆ ಮನವೊಲಿಸಿ ಅವಿಭಕ್ತ ಕುಟುಂಬಗಳಾಗಿಯೇ ಉಳಿಯುವಂತೆ ಮಾಡಿರುತ್ತಾನೆ. ಇಂತಹ ಮನೆಯಲ್ಲಿ ತಮ್ಮಂದಿರ ಹೆಂಡತಿಯರು ಮನೆ ಪಾಲಾಗಬೇಕೆಂದಾಗ ಇಬ್ಬರು ತಮ್ಮಂದಿರಿಗೆ ಮನೆ-ಆಸ್ತಿ ನೀಡಿ ಹೆಂಡತಿಯೊಂದಿಗೆ ಗೋವಿಂದ ಹೊರಬರುತ್ತಾನೆ. ಕಳ ಜಾತಿಯ ಸುಬ್ಬಣ್ಣ ಈ ದಂಪತಿಗಳಿಗೆ ಮನೆಯಲ್ಲಿ ಆಶ್ರಯ ನೀಡುತ್ತಾನೆ. ತಮ್ಮಂದಿರ ಮನಃ ಪರಿವರ್ತನೆಯಾಗುತ್ತದೆ. ಎಲ್ಲರೂ ಒಂದಾಗುತ್ತಾರೆ.

೨೫೦. ಅಣ್ಣ-ತಮ್ಮ

(೧೯೬೮ / ಕಪ್ಪು-ಬಿಳುಪು / ಸಾಮಾಜಿಕ)

ಲಾ: ರೂಪಶ್ರೀ
ಪ್ರೊ: ಎನ್.ಬಿ.ವತ್ಸಲನ್
ನಿ: ಕೆ.ಎಸ್.ಎಲ್.ಸ್ವಾಮಿ (ರವೀ)
ಅ: ಕಲ್ಯಾಣ್‌ಕುಮಾರ್, ಉದಯಕುಮಾರ್, ಕಲ್ಪನಾ, ಲೀಲಾವತಿ, ದ್ವಾರಕೀಶ್, ರಮಾ, ಥಿಕ್ಕಿಮಾಧವರಾವ್, ಈಶ್ವರಪ್ಪ, ರಾಘವೇಂದ್ರರಾವ್, ಜಯಶ್ರೀ
ಕ: ದೊರೈ
ಚಿ.ಕ/ಮಾ/ಗೀ: ಕು.ರ.ಸೀತಾರಾಮಶಾಸ್ತ್ರಿ

ಗಾ: ಪಿ.ಸುಶೀಲ, ರೇಣುಕಾ, ಬೆಂಗಳೂರು ಲತಾ
ಸಂ: ಬಾಲ್ ಜೆ.ಯಾದವ್
ಛಾ: ಸಂಜೀವಿ
ಕಲೆ: ಸಿ.ಹೆಚ್.ಇ.ಪ್ರಸಾದ್
ಸ: ವಿಜಯಭಾಸ್ಕರ್
ವ: ನಾರಾಯಣ
ಪ್ರ: ಶ್ರೀನಿವಾಸ್, ವೀರಾಸ್ವಾಮಿ
ಸ್ಟು: ಪ್ರೀಮಿಯರ್
ಹಾ: ೧)'ಇನಿಯಾ...' ಕೋಗಿಲೆಯೇ...', ೨)'ನುಡಿಯ ಹಗರಣ...', ೩)'ಕಂಡೆ ಕಂಡು ಕೊಂಡೆ...', ೪)'ನಯಭಯ ವಿನಯ...'
ಕ.ಸಾ: ಸಹೋದರರಿಬ್ಬರ ನಡುವಿನ ಆತ್ಮೀಯತೆ, ಸೋದರ ವಾತ್ಸಲ್ಯದ ಚಿತ್ರಣ.

೨೫೧. ನಮ್ಮ ಊರು

(೧೯೬೮ / ಕಪ್ಪು-ಬಿಳುಪು / ಸಾಮಾಜಿಕ)

ಲಾ: ಜೆ ಯೆಸ್ ಪ್ರೊಡಕ್ಷನ್ಸ್
ಪ್ರೊ: ನಾರಾಯಣ್
ನಿ: ಸಿ.ವಿ.ಶಿವಶಂಕರ್

ಅ: ರಾಜೇಶ್, ದಿನೇಶ್, ಶೈಲಶ್ರೀ, ಕೃಷ್ಣಕುಮಾರಿ, ಬಾಲಕೃಷ್ಣ, ನರಸಿಂಹರಾಜು
ಮಾ/ಗೀ: ಸಿ.ವಿ.ಶಿವಶಂಕರ್
ಗಾ: ಪಿ.ಬಿ.ಶ್ರೀನಿವಾಸ್, ಎಸ್.ರೇಣುಕಾ, ಎಲ್.ಆರ್.ಈಶ್ವರಿ, ಬಿ.ಕೆ.ಸುಮಿತ್ರ
ಸ: ಆರ್.ರತ್ನ
ಹಾ: ೧)'ಚೆಲುವಿನ ಗಣಿ...', ೨)'ಹೋಗದಿರೀ ಸೋದರರೇ...', ೩)'ಹಲೋ ಇಂಜಿನಿಯರ್...', ೪)'ತಾಳಕ್ಕೆ ತಕ್ಕಂತೆ ಕುಣಿದಾಡು...', ೫)'ನೋಡಬನ್ನಿ...'
ವಿ: ವಿದ್ಯಾಸಾಗರ್ ಎಂಬ ಹೆಸರಿನಲ್ಲಿ ನಟಿಸುತ್ತಿದ್ದ ರಂಗಭೂಮಿ-ಚಿತ್ರನಟ ಈ ಚಿತ್ರದಿಂದ 'ರಾಜೇಶ್' ಎಂದು ಪುನರ್‌ನಾಮಕರಣ ಪಡೆದರು.
ಕ: 'ಗಾಂಧಿಯವರ ತತ್ವದ ಹಿನ್ನೆಲೆಯಲ್ಲಿ ವಿದ್ಯಾವಂತರು ಗ್ರಾಮೀಣ ಪರಿಸರದಲ್ಲಿದ್ದು ಸಮಾಜ ಸೇವೆ ಮಾಡಬೇಕು. ನಗರದ ಆಸಕ್ತಿ ಬಿಡಿ' ಎನ್ನುತ್ತದೆ.

೨೫೨. ನಾನೇ ಭಾಗ್ಯವತಿ

(೧೯೬೮ / ಕಪ್ಪು-ಬಿಳುಪು / ಸಾಮಾಜಿಕ)

ಲಾ: ತ್ರಿಮೂರ್ತಿ ಫಿಲಂಸ್
ಪ್ರೊ: ಎಂ.ಸಂಪತ್
ನಿ: ಟಿ.ವಿ.ಸಿಂಗ್ ಠಾಕೂರ್, ಜಿ.ವಿ.ಅಯ್ಯರ್
ಸ.ನಿ: ಬಿ.ಎಸ್.ವಿಶ್ವನಾಥ್
ಅ: ಕಲ್ಯಾಣ್‌ಕುಮಾರ್, ಉದಯಕುಮಾರ್, ನರಸಿಂಹರಾಜು, ರಾಮಚಂದ್ರಶಾಸ್ತ್ರಿ, ಶ್ಯಾಮ್, ಗಣಪತಿಭಟ್, ಗುಗ್ಗು, ಹನುಮಂತರಾವ್, ಭಾರತಿ, ಮೈನಾವತಿ, ಬಿ.ಜಯಾ, ಜಯಶ್ರೀ, ಸೂರ್ಯಕುಮಾರಿ, ಪದ್ಮಮ್ಮ, ಗಂಗಾಧರ್, ಸಾಧನ, ಕಮಲೇಶ್ ಕುಮಾರಿ, ಆರ್.ಎನ್.ಮಾಗಡಿ, ಹೊನ್ನಪ್ಪ, ಶಂಕರ್, ಸರಸ, ಮೋಹನ್, ವಿಠ್ಠಲರಾವ್

ಚಿ.ಕ/ಮಾ/ಗೀ: ಜಿ.ವಿ.ಅಯ್ಯರ್
ಗಾ: ಪಿ.ಬಿ.ಶ್ರೀನಿವಾಸ್, ಬಾಲಮುರಳಿಕೃಷ್ಣ, ಎಸ್.ಜಾನಕಿ, ಎಲ್.ಆರ್.ಈಶ್ವರಿ, ಬೆಂಗಳೂರು ಲತಾ
ಸಂ: ಬಿ.ಹರಿನಾರಾಯಣ
ಛಾ: ಎಂ.ಸಂಪತ್
ಕಲೆ: ಆರ್.ಬಿ.ಎಸ್.ಮಣಿ
ಸ: ಟಿ.ಜಿ.ಲಿಂಗಪ್ಪ
ಧ್ವ: (ಹಾ) ಎಸ್.ಪಿ.ರಾಮನಾಥ್, (ಮಾ) ಸೂರ್ಯನಾರಾಯಣರಾವ್
ನೃ: ಬಿ.ಜಯರಾಂ
ವ: ಎನ್.ಅಶ್ವತ್ಥ್
ಪ್ರ: ಎಂ.ಎಸ್.ಸುಬ್ಬಣ್ಣ, ಶ್ರೀನಿವಾಸನ್, ನಾರಾಯಣಸ್ವಾಮಿ, ಕೆ.ರಾಜಗೋಪಾಲ್
ಸ್ಟು: ವೀನಸ್ (ಮದರಾಸು)
ಹಾ: ೧)'ಹೊಸ ಹರೆಯ ಹೊಸ ಕಳೆಯ...', ೨)'ತುಂಟ ತುಟಿಯಿಂದ ಕದ್ದು ಹೊರಬಂದ...', ೩)'ಚೆಲುವಿಗೆ ಸಾಳಿ ಗೆಲುವಿದೆ....', ೪)'ಹೊನ್ನ ಅಂಬಾರಿ ಬೇಕೆ...', ೫)'ನಾನೇ ಇಂದು ಭಾಗ್ಯವತಿ', ೬)'ಇನ್ನೇನು ಬೇಕು ಸಿಂಗಾರ.....', ೭)'ಶುಭರಾಗ ಮನವು ಆಗಲಿ...',
ವಿ: ಗಂಗಾಧರ್ ಚಿತ್ರರಂಗ ಪ್ರವೇಶ ಮಾಡಿದರು.
ಕ.ಸಾ: ಶ್ರೀಮಂತ ಯುವಕ ರಾಜಮೋಹನ್ ಬೃಂದಾವನದಲ್ಲಿ ವಿಹರಿಸುತ್ತಿದ್ದಾಗ ಕಲ್ಪನಾಳನ್ನು ಸಂಧಿಸಿ, ಗೆಳೆಯ ಉದಯನ ಮಧ್ಯಸ್ಥಿಕೆಯಿಂದ ಅವಳನ್ನೇ ವಿವಾಹವಾಗುತ್ತಾನೆ. ಉದಯ ಬೇರೆ ಊರಿಗೆ ಕಾರಿನಲ್ಲಿ ಹೋಗುತ್ತಿರುವಾಗ ಹಳ್ಳಿಯೊಂದರಲ್ಲಿ ತಾಯಿ-ಮಗಳ ಆತಿಥ್ಯಕ್ಕೆ ಒಳಗಾಗುತ್ತಾನೆ. ಮಗಳು ಭಾರತಿಯನ್ನು ವಿವಾಹವಾಗಲು ನಿರ್ಧರಿಸಿದಾಗ ಭಾರತಿಗೆ ಬಾಲ್ಯದಲ್ಲೇ ವಿವಾಹವಾಗಿರುವುದು ಗೊತ್ತಾಗುತ್ತದೆ. ಕೆಲವು ಸತ್ಯಗಳು ಹೊರಬಿದ್ದಾಗ ಉದಯನೇ ಚಿಕ್ಕಂದಿನಲ್ಲಿ ಭಾರತಿಯನ್ನು ವಿವಾಹವಾಗಿರುತ್ತಾನೆ.

೨೫೩. ರೌಡಿ ರಂಗಣ್ಣ

(೧೯೬೮ / ಕಪ್ಪು-ಬಿಳುಪು / ಸಾಮಾಜಿಕ)

ಲಾ: ಶ್ರೀರಾಮ ಎಂಟರ್‌ಪ್ರೈಸಸ್
ಪ್ರೊ/ನಿ: ಆರ್.ರಾಮಮೂರ್ತಿ

ಸ.ನಿ: ವಿ.ಸೋಮಶೇಖರ್, ಗಿರೀಶ್
ಅ: ರಾಜಕುಮಾರ್, ರಾಜಾಶಂಕರ್, ಟಿ.ಎನ್.ಬಾಲಕೃಷ್ಣ, ದಿನೇಶ್, ಈಶ್ವರಪ್ಪ, ರತ್ನಾಕರ್, ಜಯಂತಿ, ಚಂದ್ರಕಲಾ, ರಮಾದೇವಿ, ಲಲಿತಾ, ಎಂ.ಎನ್.ಲಕ್ಷ್ಮೀದೇವಿ, ಇಂದಿರಾ, ಭಗವಾನ್, ಗಣಪತಿಭಟ್, ಹೆಚ್.ರಾಮಚಂದ್ರಶಾಸ್ತ್ರಿ, ಗುಗ್ಗು, ಶ್ಯಾಮ್, ಹನುಮಂತರಾವ್, ಚಕ್ರವರ್ತಿ, ನರಸಿಂಹರಾಜು, ಪಂಢರಿಬಾಯಿ, ರಾಧಾಬಾಯಿ
ಕ: ಎ.ಕೆ.ವೇಲನ್
ಚಿ.ಕ/ಮಾ/ಗೀ: ಚಿ.ಉದಯಶಂಕರ್
ಗಾ: ಪಿ.ಬಿ.ಶ್ರೀನಿವಾಸ್, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಪಿ.ಸುಶೀಲ, ಎಸ್.ಜಾನಕಿ
ಸಂ: ಆರ್.ರಾಮಮೂರ್ತಿ
ಛಾ: ಬಿ.ದೊರೈರಾಜ್
ಕಲೆ: ಸಿ.ಹೆಚ್.ಇ.ಪ್ರಸಾದ್
ಸ: ಸತ್ಯಂ
ಧ್ವ: ಎಸ್.ಪಿ.ರಾಮನಾಥನ್
ನೃ: ಜಯರಾಂ, ಲಕ್ಷ್ಮೀನಾರಾಯಣ
ಸಾ: ಜ್ಯೂಡೋ ರತ್ನಂ
ವ: ಅಶ್ವತ್ಥ್, ಕೃಷ್ಣಮೂರ್ತಿ
ಪ್ರ: ಸುಬ್ಬಣ್ಣ, ರಾಜಗೋಪಾಲ್
ಸ್ಟು: ಗೋಲ್ಡನ್ (ಮದರಾಸು)
ಹಾ: ೧)'ಓ ಗೆಳೆಯ ರಾಮಯ್ಯ ಓ ಗೆಳೆಯ ಭೀಮಯ್ಯ....', ೨)'ಕಣ್ಣೆರಡು ಎನಗೆ ಕಂಬನಿಯ ಸುರಿಸೆ ಸಾಕಾಗದಾಗಿದೇ.....', ೩)'ಬಾರೇ ಓ ಚೆಲುವೇ ಬಳಿ ಬಾರೇ ಚೆಲುವೇ....', ೪)'ಧರಣಿಗೆ ಗಿರಿ ಭಾರವೇ ಗಿರಿಗೆ ಮರವು ಭಾರವೇ...', ೫)'ಆದದ್ದು ಒಂದು ಅಂದುಕೊಂಡಿದ್ದೊಂದು....'
ಕ.ಸಾ: ರಂಗಣ್ಣ ಕಾಲೇಜು ಮುಗಿಸಿ ಹಳ್ಳಿ ಸೇರಿದ್ದ ಆದರ್ಶವಾದಿ. ಖಂಡಿತವಾದಿಯಾದ ಇವನನ್ನು ವಿರೋಧಿಗಳು ರೌಡಿರಂಗಣ್ಣ ಎಂದು ಕರೆದರು. ಹಳ್ಳಿಯ ಶ್ರೀಮಂತ ಗುಂಡಣ್ಣ ಕಿತಾಪತಿ ಮನುಷ್ಯ. ರಂಗಣ್ಣ ತಂಗಿ ಗೌರಿಗೆ ಮದುವೆ ಮಾಡುತ್ತಿರುವಾಗ ಗುಂಡಣ್ಣ ತನ್ನ ಹಣ ನೀಡದೇ ವಿವಾಹ ಮಾಡುವಂತಿಲ್ಲವೆಂದು ಸರ್ಕಾರಿ ಆಜ್ಞೆ ತಂದನು. ರಂಗಣ್ಣ ಅವನ ಮೇಲೆ ಕೈ ಮಾಡಿದಾಗ ಅವನನ್ನು ಜೈಲಿಗೆ ಹಾಕಿಸುವನು. ತಂಗಿ ಅನಾಥವಾಗಿ ಅಲ್ಲಿ ಇಲ್ಲಿ ಕೆಲಸ ಮಾಡತೊಡಗಿದಾಗ ಗುಂಡಣ್ಣನ ಮಗ ಡಾ|ಶಂಕರ್ ಗೌರಿಯನ್ನು ವಿವಾಹವಾಗುವನು. ರಂಗಣ್ಣ ಸೇಡು ತೀರಿಸಿಕೊಳ್ಳಲು ಬಂದಾಗ ಶಂಕರ್ ತನ್ನ ಭಾವಮೈದ ಆಗಿರುವುದು ಕಂಡು ಸುಮ್ಮನಾದ. ಅಣ್ಣ-ತಂಗಿ ಮಾತನಾಡುತ್ತಿದ್ದದ್ದನ್ನು ಕೆಟ್ಟದಾಗಿ ಸುದ್ದಿ ಹಬ್ಬಿಸಿ ಶಂಕರನಿಗೆ ಗೌರಿಯ ಮೇಲೆ ಅನುಮಾನ ಬರುವಂತೆ ಮಾಡಿ ಗಂಡ-ಹೆಂಡಿರನ್ನು ಅಗಲಿಸುವನು. ಗರ್ಭಿಣಿ ಗೌರಿ ಬೀದಿ ಪಾಲಾದಳು. ಅಂತ್ಯದಲ್ಲಿ ಎಲ್ಲವೂ ಸರಿಯಾಗುವುದು.

೨೫೪. ಧೂಮಕೇತು

(೧೯೬೮ / ಕಪ್ಪು-ಬಿಳುಪು / ಪತ್ತೇದಾರಿ)

ಲಾ: ಶ್ರೀ ಭಗವತಿ ಆರ್ಟ್ ಪ್ರೊಡಕ್ಷನ್ಸ್
ಪ್ರೊ: ಎಸ್.ಎನ್.ಪಾಲ್
ನಿ: ಆರ್.ಎನ್.ಜಯಗೋಪಾಲ್
ಸ.ನಿ: ಕೆ.ಎಸ್.ನಾಗೇಶ್
ಅ: ರಾಜಕುಮಾರ್, ಉದಯಕುಮಾರ್, ನರಸಿಂಹರಾಜು, ರಂಗ, ಸಂಪತ್, ಕೆ.ಎಸ್.ಅಶ್ವತ್ಥ್, ಗಣಪತಿಭಟ್,

ಬೆಂಗಳೂರು ನಾಗೇಶ್, ಶಕ್ತಿಪ್ರಸಾದ್, ಗೋವಿಂದರಾಜ್, ನಾಗಪ್ಪ, ಸತ್ಯಪ್ಪ, ಶ್ರೀನಿವಾಸ್, ರಾಮು, ರಾಮಕೃಷ್ಣ, ನಂಜಪ್ಪ, ಶ್ರೀರಂಗಮೂರ್ತಿ, ಭಾಸ್ಕರ್, ಉದಯಚಂದ್ರಿಕ, ಸಾಧನ, ಶೈಲಶ್ರೀ, ಇಂದ್ರಾಣಿ, ಗಿರಿಜ, ಕ್ಲಾಡೆಟ್, ಸಂಜಲೀನ್, ಬೆಟ್ಟಿ
ಚಿ.ಕ/ಮಾ/ಗೀ: ಆರ್.ಎನ್.ಜಯಗೋಪಾಲ್
ಗಾ: ಪಿ.ಸುಶೀಲ, ಪಿ.ಬಿ.ಶ್ರೀನಿವಾಸ್, ಎಲ್.ಆರ್.ಈಶ್ವರಿ
ಸಂ: ಪಿ.ಭಕ್ತವತ್ಸಲಂ
ಛಾ: ಆರ್.ಎನ್.ಕೆ.ಪ್ರಸಾದ್
ಕಲೆ: ಬಾಲನ್
ಸ: ಟಿ.ಜಿ.ಲಿಂಗಪ್ಪ
ಧ್ವ: (ಹಾ) ಮೋಹನ ಸುಂದರಂ (ಮಾ) ಕೆ.ಆರ್.ಸೀತಾರಾಂ
ನೃ: ಉಡುಪಿ ಜಯರಾಂ
ಸಾ: ತಿರುವಾರೂರ್ ಎಂ.ಎಸ್.ದಾಸ್
ವ: ಬಿ.ಅಪ್ಪಾರಾವ್, ತಂಗಪ್ಪನ್
ಪ್ರ: ಎಂ.ಎಸ್.ಸುಬ್ಬಣ್ಣ
ಸ್ಟು: ಪ್ರೀಮಿಯರ್
ಹಾ: ೧)'ಬಂದು ತಾ ಇಂದು ತಾ...', ೨)'ಅಹಾ ಆಹಾ ಇದೇನು ನಡೆ...', ೩)'ರಂಗು ರಂಗಿನಾಟ...'
ವಿ: ಸರ್ಕಸ್ ಕಂಪೆನಿಯೊಂದರ ಸಾಹಸ-ಚಮತ್ಕಾರಗಳನ್ನು ಚಿತ್ರದಲ್ಲಿ ಬಳಸಿಕೊಳ್ಳಲಾಗಿದೆ.
ಕ.ಸಾ: ಕೊಲೆಯೊಂದು ನಡೆದಾಗ, ಕೊಲೆಗಾರರ ಪತ್ತೆ ಮಾಡಲು ಬರುವ ಪತ್ತೇದಾರ ಹಾಗೂ ಅವನ ಚಾಕಚಕ್ಯತೆಯ ಸುತ್ತ ಹೆಣೆದ ಕುತೂಹಲಮಯ ಚಿತ್ರಣ.

೨೫೫. ಅಮ್ಮ

(೧೯೬೪ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಪದ್ಮಿನಿ ಪಿಕ್ಚರ್ಸ್
ಪ್ರೊ/ನಿ: ಬಿ.ಆರ್.ಪಂತುಲು
ಸ.ನಿ: ಎಸ್.ಆರ್.ಶಿವರಾಂ, ಪಿ.ಸಿ.ಪೊನ್ನುಸ್ವಾಮಿ
ಅ: ರಾಜಕುಮಾರ್, ಭಾರತಿ, ಬಿ.ಆರ್.ಪಂತುಲು, ಎಂ.ವಿ.ರಾಜಮ್ಮ, ದಿನೇಶ್, ಅಶ್ವತ್ಥ್, ಮೈನಾವತಿ, ನರಸಿಂಹರಾಜು, ಪಾಪಮ್ಮ, ಸೀತಾಲಕ್ಷ್ಮಿ, ರಾಮಚಂದ್ರಶಾಸ್ತ್ರಿ, ಗುಗ್ಗು, ಅನಂತರಾಂ ಮಚ್ಚೇರಿ, ಪಂಢರೀಬಾಯಿ, ಬಿ. ಕೃಷ್ಣಕುಮಾರ್

ಕ: ಜಿ. ಬಾಲಸುಬ್ರಹ್ಮಣ್ಯಂ
ಚಿ.ಕ: ಪದ್ಮಿನಿ ಪಿಕ್ಚರ್ಸ್ ಸಾಹಿತ್ಯ ವಿಭಾಗ
ಮಾ/ಗೀ: ಜಿ.ವಿ.ಅಯ್ಯರ್
ಗಾ: ಶೀರ್ಕಾಳಿ ಗೋವಿಂದರಾಜನ್, ಪಿ.ಬಿ.ಶ್ರೀನಿವಾಸ್, ಬಾಲಮುರಳಿಕೃಷ್ಣ, ಪಿ.ನಾಗೇಶ್ವರರಾವ್, ಎಸ್.ಜಾನಕಿ, ಪಿ.ಲೀಲಾ, ಎಲ್.ಆರ್.ಈಶ್ವರಿ, ಬೆಂಗಳೂರು ಲತಾ
ಸಂ: ಆರ್.ದೇವರಾಜನ್
ಛಾ: ವಿ. ಪಣ್ಣುಗಂ
ಕಲೆ: ಸೆಲ್ವರಾಜ್
ಸ: ಟಿ.ಜಿ.ಲಿಂಗಪ್ಪ
ಧ್ವ: (ಹಾ) ವಿ.ಸಿ.ಶೇಖರ್, ರಾಮಚಂದ್ರನ್ (ಮಾ) ಮೋಹನಸುಂದರಂ
ನೃ: ಕೃಷ್ಣಕುಮಾರ್ (ಧಾರವಾಡ)
ವ: ಎಂ.ರಾಧಾ
ಪ್ರ: ದೊರೆಸ್ವಾಮಿ, ಮಾಣಿಕ್ಯಂ, ಪಾರ್ಥಸಾರಥಿ, ನಾರಾಯಣಸ್ವಾಮಿ, ಶ್ರೀನಿವಾಸ್
ಸ್ಟು: ಸತ್ಯಾ ಸ್ಟುಡಿಯೋ
ಹಾ: ೧)'ಸೀರೆಯಲ್ಲಿ ಮೋಹವಾಂತನ...', ೨)'ನನ್ನಂದು ನಾ ಬಂದೆ...', ೩)'ಧರ್ಮವೆ ಜಯವೆಂಬ...', ೪)'ಬಂಗಾರವಾಗಲಿ ನಿನ ಬಾಳೆಲ್ಲಾ...', ೫)'ಎಂಥ ಚೆಲುವ ನಗುವೊ...', ೬)'ಪಳೆಲೆ ಯೋಷಾ ಭೂಷಿಣಿ...', ೭)'ತಾತನೆ ಸೋಲದೆ...', ೮)'ರಾತ್ರಿಯಲಿ ಮಳೆಬಂದು...', ೯)'ಇರುತಿರೆ ದೂರ...', ೧೦) ನಿನ್ನ ಲಗ್ನಪತ್ರಿಕೆ...'
ಕ.ಸಾ: ಹೆತ್ತ ತಾಯಿ ಒಬ್ಬಳು, ಸಾಕಿದ ತಾಯಿ ಒಬ್ಬಳು. ಇಬ್ಬರೂ ಮಮತಾಮಯಿಗಳು. ಇಬ್ಬರಲ್ಲಿ ಯಾರನ್ನೂ ಬಿಡಲಾಗದ ನಾಯಕನ ಭಾವತೀವ್ರತೆಯೇ ವಸ್ತು.

೨೫೬. ಅತ್ತೆಗೊಂದು ಕಾಲ ಸೊಸೆಗೊಂದು ಕಾಲ

(೧೯೬೮ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಶ್ರೀ ವಿಜಯಭಟ್ ಮೂವೀಸ್
ಪ್ರೊ: ಎಸ್.ಎನ್.ಭಟ್, ಎ. ಕಾಮೇಶ್ವರರಾವ್
ನಿ: ವೈ.ಆರ್.ಸ್ವಾಮಿ
ಸ.ನಿ: ಕುಣಿಗಲ್ ನಾಗಭೂಷಣ್
ಅ: ಕಲ್ಯಾಣ್‌ಕುಮಾರ್, ಬಿ.ವಿ.ರಾಧಾ, ಲೀಲಾವತಿ, ಬಾಲಕೃಷ್ಣ, ವಿಜಯಕುಮಾರ್, ಟಿ.ನಾರಾಯಣ್, ರಮಾದೇವಿ, ಜಯಶ್ರೀ, ಮಹದೇವಪ್ಪ, ಸರೋಜಮ್ಮ, ಬಿ.ಎನ್.ರಾವ್, ಬಿ.ಜಯ, ಗುಗ್ಗು, ವಿದ್ಯಾಶ್ರೀ, ವಿಜಯಶ್ರೀ, ಜಯ, ಶಿವಾಜಿರಾವ್, ರಾಮಯ್ಯ, ಆರ್.ನಾಗೇಂದ್ರರಾವ್, ಶಾಂತ, ವಿಮಲ, ಸವಿತಾ, ವೆಂಕುದಾಸ್
ಕ/ಚಿ.ಕ: ವೈ.ಆರ್.ಸ್ವಾಮಿ
ಮಾ: ಕುಣಿಗಲ್ ನಾಗಭೂಷಣ್
ಗೀ: ಆರ್.ಎನ್.ಜಯಗೋಪಾಲ್, ವಿಜಯನಾರಸಿಂಹ
ಗಾ: ಪಿ.ಬಿ.ಶ್ರೀನಿವಾಸ್, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಪಿ.ಸುಶೀಲ, ಎಲ್.ಆರ್.ಈಶ್ವರಿ, ಬೆಂಗಳೂರು ಲತಾ, ಬಾಲಕೃಷ್ಣ
ಸಂ: ಎಸ್.ಸಿ.ರಾಜನ್, ರಾಜಗೋಪಾಲ್
ಛಾ: ಪಿ.ಎಸ್.ಪ್ರಕಾಶ್
ಕಲೆ: ಬಿ.ಎಸ್.ಕೃಷ್ಣ
ಸ: ಸತ್ಯಂ
ನೃ: ರಾಜಕುಮಾರ್
ಪ್ರ: ಎಂ.ಎಸ್.ಸುಬ್ಬಣ್ಣ, ರಾಜಗೋಪಾಲ್, ಚಕ್ರಪಾಣಿ
ಹಾ: ೧)'ಕರೆದೆ ಕರೆದೆ ಕಣ್ಣನಲಿ...', ೨)'ಮೈ ಮರೆಸಿದೆ...', ೩)'ಹೆಣ್ಣೇ ನಿನ್ನ ಪಾಲಿಗೆ...', ೪)'ಎನ್ನರಸ ಚೆನ್ನರಸ...', ೫)'ಆರು ಗುಂಡು ಪಿಸ್ತೂಲು ತಾ...', ೬)'ಕಣ್ತೆರೆಯದೆ ಇನ್ನು ಮನವೆ...', ೭)'ಸಿರಿ ಸಂಪದವ ಕೊಡುವ...', ೮)'ಶ್ರೀವನಿತೆಯರಸನೆ...'
ಕ.ಸಾ: ಇಬ್ಬರು ಅತ್ತೆಯರು ಇಬ್ಬರು ಸೊಸೆಯಂದಿರ ನಡುವಿನ ಸಂಕೀರ್ಣ ಸಂಬಂಧವನ್ನು ಕುರಿತ ಚಿತ್ರಣ. ಸೊಸೆಯರಿಗೆ ಕಂಟಕಪ್ರಾಯರಾದ ಅತ್ತೆಯರು ಹಾಗೂ ಅವರಿಗೆ ಬುದ್ಧಿ ಕಲಿಸುವ ಸೊಸೆಯರ ಸುತ್ತ ಹೆಣೆದ ಕಥೆ.

೨೫೭. ಸಿಂಹಸ್ವಪ್ನ

(೧೯೬೮ / ಕಪ್ಪು-ಬಿಳುಪು / ಜಾನಪದ)
ಲಾ: ಗೌರಿ ಆರ್ಟ್ ಫಿಲಂಸ್
ಪ್ರೊ: ಎಸ್.ಭಾವನಾರಾಯಣ(ನಿರ್ವಹಣೆ)
ನಿ: ಡಬ್ಲ್ಯೂ.ಆರ್.ಸುಬ್ಬರಾವ್
ಸ.ನಿ: ಉಗ್ರನರಸಿಂಹ, ಮಣಿ
ಅ: ರಾಜಕುಮಾರ್, ಉದಯಕುಮಾರ್, ನರಸಿಂಹರಾಜು, ಢಿಕ್ಕಿಮಾಧವರಾವ್, ದಿನೇಶ್, ಹನುಮಂತಾಚಾರ್, ಗುಗ್ಗು, ಜಯಂತಿ, ಬಿ.ವಿ.ರಾಧ, ಸಾಧನ, ರಮಾದೇವಿ, ರತ್ನಾಕರ್, ರಾಘವೇಂದ್ರರಾವ್, ನಾರಾಯಣರಾವ್, ಬಸಪ್ಪ, ಶ್ಯಾಮ್, ರಾಜು, ರಂಗನಾಥ್, ಜ್ಯೋತಿಲಕ್ಷ್ಮಿ (ನಾಟ್ಯ)
ಕ: ಎಸ್.ಭಾವನಾರಾಯಣ
ಮಾ/ಗೀ: ಚಿ.ಉದಯಶಂಕರ್
ಗಾ: ಸೌಂದರರಾಜನ್, ಪಿ.ಬಿ.ಶ್ರೀನಿವಾಸ್, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಪಿ.ಸುಶೀಲ, ಪೀಠಾಪುರಂ ನಾಗೇಶ್ವರರಾವ್, ಎಸ್.ಜಾನಕಿ
ಸಂ: ಆರ್.ಹನುಮಂತರಾವ್
ಛಾ: ಡಬ್ಲ್ಯೂ.ಆರ್.ಸುಬ್ಬರಾವ್
ಕಲೆ: ಗೋಡಗಾಂವ್‌ಕರ್
ಸ: ಸುಸರ್ಲ ದಕ್ಷಿಣಾಮೂರ್ತಿ
ಧ್ವ: ಎಸ್.ಪಿ.ರಾಮನಾಥನ್
ನೃ: ರತನ್‌ಕುಮಾರ್
ಸಾ: ಮಾಧವನ್
ವ: ಬಿ.ನಾರಾಯಣರಾವ್
ಪ್ರ: ದೊರೈಸ್ವಾಮಿ, ವೀರ್ರಾಜು
ಸ್ಟು: ಗೋಲ್ಡನ್ (ಮದರಾಸು)
ಹಾ: ೧)'ರಾಜರಾ ಮಹಲಿನಲಿ ಮಲ್ಲಿಗೆ ಹೂ ಅರಳೈತೆ....', ೨)'ಬೇಕೇನೂ ಬೇಕೇನೂ ರಂಗುರಂಗಿನ ಕರವಸ್ತ್ರ..', ೩)'ಅಂಗೈಲೇ ಆಗಸ ತೋರೋ ಮಾತಿನ ಮಲ್ಲ ಬಂದಾನಮ್ಮ.....', ೪)'ಬಿಳಿ ಆನೆ ದಂತ ಐತೆ, ಕರಿ ಕರಡಿ ಮೂಳೆ ಐತೆ...', ೫)'ಯಾವೂರು ದೊರೆ ಇವರು....', ೬)'ಮನದಾಸೆಯ ಹೇಳುವೆ ಇಂದು....', ೭)'ನಗು ನಗು ನಗು ನಗು ನನ್ನ ಹೂವೆ.....'
ಕ.ಸಾ: ದಾಯಾದಿ ಮತ್ಸರದಿಂದಾಗಿ ಧರ್ಮಪುರಿ, ಸಿಂಹಪುರಿ ಪ್ರತ್ಯೇಕ ರಾಜ್ಯಗಳಾಗುತ್ತವೆ. ಧರ್ಮಪುರಿಯನ್ನು ಶಾಂತಿಪ್ರಿಯನಾದ ಧರ್ಮಸಿಂಹ ಹಾಗೂ ಸಿಂಹಪುರಿಯನ್ನು ಸುಖಲೋಲುಪನಾದ ರುದ್ರಸಿಂಹನು ಆಳುತ್ತಿದ್ದರು. ಸಿಂಹಪುರಿಯ ಪ್ರಜೆಗಳು ಆಗಾಗ ಧರ್ಮಪುರಿಗೆ ನುಗ್ಗಿ ಕೊಳ್ಳೆ ಹೊಡೆಯುತ್ತಿದ್ದರು. ಚರ್ಚಿಸಲು ತಮ್ಮನನ್ನು ಕರೆದರೆ ಅವನು ಮೋಸದಿಂದ ಧರ್ಮಸಿಂಹನ ಬಳಿ ಇದ್ದ ಅರ್ಧ ನೀಲಮಣಿಯನ್ನು ಅಪಹರಿಸಿದ. ಮನೋಹರನೆಂಬ ಗೂಢಚಾರನನ್ನು ಧರ್ಮಸಿಂಹ ಸಿಂಹಪುರಿಗೆ ಕಳುಹಿಸುವನು. ಎರಡು ರಾಜ್ಯಗಳನ್ನು ಕಬಳಿಸಿ ಇಬ್ಬರೂ ರಾಜರನ್ನು ಮುಗಿಸಲು ಸಂಚು ಹೂಡಿದ್ದ ಸಿಂಹಪುರಿಯ ಮಂತ್ರಿ ಕಾಲಕೇಶ್ವರನ ಮೋಸದ ಜಾಲವನ್ನು ಬಯಲಿಗೆಳೆವ ಮನೋಹರ, ಸಿಂಹಪುರಿಯ ರಾಜಕುಮಾರಿಯನ್ನು ವಿವಾಹವಾಗಿ ಎರಡೂ ರಾಜ್ಯಗಳನ್ನು ಒಂದು ಮಾಡುವನು.

೨೫೮. ಪ್ರವಾಸಿಮಂದಿರ

(೧೯೬೮ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಆರ್.ಕೆ.ಪಿಕ್ಚರ್ಸ್
ಪ್ರೊ/ನಿ: ಕಲ್ಯಾಣ್‌ಕುಮಾರ್
ಸ.ನಿ: ದೊರೆ
ಅ: ಕಲ್ಯಾಣ್‌ಕುಮಾರ್, ಆರ್.ಎನ್.ಸುದರ್ಶನ್, ಆರ್.ನಾಗೇಂದ್ರರಾವ್, ಟಿ.ಎನ್.ಬಾಲಕೃಷ್ಣ, ಹೆಚ್.ಆರ್.ಶಾಸ್ತ್ರಿ, ದ್ವಾರಕೀಶ್, ಎಸ್.ಶಿವರಾಂ, ಗಣಪತಿಭಟ್, ವಂದನಾ, ಎಸ್.ರೇವತಿ, ರೇವತಿ(ಜ್ಯೂ), ಸುರೇಖಾ, ಬಿ.ಜಯ

ಕ: ಕಲ್ಯಾಣ್‌ಕುಮಾರ್
ಚಿ.ಕ/ಮಾ: ರೇವತಿ ಕಲ್ಯಾಣ್‌ಕುಮಾರ್
ಗೀ: ಚಿ| ಸದಾಶಿವಯ್ಯ, ವಿಜಯನಾರಸಿಂಹ, ಉದಯಕುಮಾರ್
ಗಾ: ಪಿ.ಬಿ.ಶ್ರೀನಿವಾಸ್, ಎಸ್.ಜಾನಕಿ
ಸಂ: ನಸೀರ್, ಅಮೀರ್‌ಜಾನ್
ಛಾ: ಕೃಷ್ಣಪ್ರಸಾದ್, ನಟರಾಜ್
ಸ: ರಾಜನ್-ನಾಗೇಂದ್ರ
ಧ್ವ: (ಹಾ) ಎಸ್.ಪಿ.ರಾಮನಾಥನ್, ಶೇಷಾದ್ರಿ (ಮಾ) ಸ್ವಾಮಿ, ಸೀತಾರಾಂ

ಸಾ: ವೈ.ಶಿವಯ್ಯ
ವ: ಕಣ್ಣನ್, ಗುರುಸ್ವಾಮಿ
ಪ್ರ: ರಾಜಗೋಪಾಲ್, ಚಕ್ರಪಾಣಿ
ಸ್ಟು: ಗೋಲ್ಡನ್, ವಿಕ್ರಂ, ಪ್ರೀಮಿಯರ್
ಹಾ: ೧)'ಲೋಕವೇ ಇದು ಪ್ರವಾಸಿ ಮಂದಿರ...',
೨)'ಜಯಹೇ ಶಿವಶಂಕರಾ...', ೩)'ಓ ಮಧುವೇ ನನಗೂ ನಿನಗೂ...'
ವಿ: ಹೊರಾಂಗಣದಲ್ಲಿ ಒಂದೇ ಸ್ಥಳದಲ್ಲಿ ನಡೆಯುವ ಕಥೆ.
ಕ.ಸಾ: ಒಂದು ಪ್ರವಾಸಿ ಮಂದಿರದಲ್ಲಿ ಕೆಲವೇ ಕೆಲವು ವ್ಯಕ್ತಿಗಳಿಂದ ಅವರ ಹೆಸರಿಗೆ ಧಕ್ಕೆಯಾಗುವಂತೆ ಹಿಂಸೆ, ಕೊಲೆಗಳೇ ನಡೆದು ಕೊನೆಗೆ ಸುಖಾಂತ್ಯವಾಗಿ ಕತೆ ಮುಕ್ತಾಯವಾಗುತ್ತದೆ.

೨೫೯. ಲಕ್ಷಾಧೀಶ್ವರ

(೧೯೬೮ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಮೋಹಿನಿ ಪ್ರೊಡಕ್ಷನ್ಸ್
ಪ್ರೊ: ಎಸ್.ವಿ.ರಾಜೇಂದ್ರಸಿಂಗ್, ಎಸ್.ಎನ್.ಸಿಂಗ್
ನಿ: ಎಸ್.ಎನ್.ಸಿಂಗ್
ಸ.ನಿ: ಎಸ್.ವಿ.ರಾಜೇಂದ್ರಸಿಂಗ್ ಬಾಬು

ಅ: ದಿನೇಶ್, ಥಿಕ್ಕಿಮಾಧವರಾವ್, ಭಾಸ್ಕರ್, ರಾಮಚಂದ್ರರಾವ್, ರಾಜಾನಂದ್, ಸಂಪಿಗೆ ಶಂಕರ್, ಗುರುಸ್ವಾಮಿ, ದ್ವಾರಕೀಶ್, ಶೈಲಶ್ರೀ, ಜಾನಕಿ, ಕಮಲಮ್ಮ
ಕ/ಚಿ.ಕ/ಮಾ: ಮೋಹಿನಿ ಪ್ರೊಡಕ್ಷನ್ಸ್
ಗೀ: ಚಿ.ಉದಯಶಂಕರ್
ಗಾ: ಪಿ.ಬಿ.ಶ್ರೀನಿವಾಸ್. ಪಿ.ನಾಗೇಶ್ವರರಾವ್, ಎಲ್.ಆರ್.ಈಶ್ವರಿ, ಬೆಂಗಳೂರು ಲತಾ, ಬಿ.ಕೆ.ಸುಮಿತ್ರ
ಸಂ: ಎಸ್.ವೇಣು
ಛಾ: ಕೆ.ಎಸ್.ಜಿ.ಸ್ವಾಮಿ
ಕಲೆ: ವೆಂಕಟರಾಮ್
ಸ: ಸತ್ಯಂ
ಧ್ವ: ಕೆ.ಆರ್.ಸೀತಾರಾಂ
ಪ್ರ: ಶಿವರಾಜ್, ಸೆಲ್ವರಾಜ್
ಹಾ: 'ಜಯ ಜಯ ಮಾದೇಶ್ವರ...'
(ಪೂರ್ಣ ಮಾಹಿತಿ ಲಭ್ಯವಿಲ್ಲ)

೨೬೦. ಗೋವಾದಲ್ಲಿ ಸಿ.ಐ.ಡಿ.೯೯೯

(೧೯೬೮ / ಕಪ್ಪು-ಬಿಳುಪು / ಪತ್ತೇದಾರಿ)
ಲಾ: ಅನುಪಂ ಮೂವೀಸ್
ಪ್ರೊ: ಎಸ್.ಕೆ.ಭಗವಾನ್, ಬಿ.ದೊರೈರಾಜ್
ನಿ: ದೊರೈ ಭಗವಾನ್
ಸ.ನಿ: ಎಸ್.ಎ.ಶ್ರೀನಿವಾಸ್

ಅ: ರಾಜಕುಮಾರ್, ನರಸಿಂಹರಾಜು, ರಾಘವೇಂದ್ರರಾವ್, ಲಕ್ಷ್ಮಿ, ಸುರೇಖಾ, ಜ್ಯೋತಿಲಕ್ಷ್ಮಿ, ಶಕ್ತಿಪ್ರಸಾದ್, ಶ್ಯಾಂ, ಕೇಶವಮೂರ್ತಿ, ವಿಜಯಭಾನು, ಸವಿತಾ
ಕ/ಚಿ.ಕ: ದೊರೈ-ಭಗವಾನ್
ಮಾ: ಎಂ. ನರೇಂದ್ರಬಾಬು
ಗೀ: ಆರ್.ಎನ್.ಜಯಗೋಪಾಲ್
ಗಾ: ಎಸ್.ಜಾನಕಿ, ಎಲ್.ಆರ್.ಈಶ್ವರಿ, ರೇಣುಕಾ
ಸಂ: ವೆಂಕಟರಾಂ
ಛಾ: ಬಿ.ದೊರೈರಾಜು
ಕಲೆ: ಬಿ.ಚಲಂ
ಸ: ಜಿ.ಕೆ.ವೆಂಕಟೇಶ್, ಹೆನ್ರಿ ಡೇನಿಯಲ್
ಧ್ವ: ಎಸ್.ಪಿ.ರಾಮನಾಥನ್
ನೃ: ಬಿ.ಜಯರಾಂ, ಚಿನ್ನಿ-ಸಂಪತ್
ವ: ಅಪ್ಪಾರಾವ್, ಎಂ.ನಾಥ್
ಪ್ರ: ಬಿ.ಆರ್.ಸಿಂಗ್
ಸ್ಟು: ಗೋಲ್ಡನ್
ಹಾ: ೧)'ಲವ್ ಇನ್ ಗೋವಾ ಬನ್ನಿ ಬನ್ನಿ ಎನ್ನುತಿದೆ ಗೋವಾ...', ೨)'ಕಣ್ಣಲೇ ಹೇಳಿರಿ ಮನಸಿನಾ ಕೋರಿಕೆ.....', ೩)'ಬಳಿಗೆ ಬಾ ನೀ ಬಳಿಗೆ ಬಾ ಆರಿಹುದು ದೀಪಾ....', ೪)'ಮಿಂಚಿದು ಈ ಹೆಣ್ಣು...',
ವಿ: ನಟಿ ಲಕ್ಷ್ಮಿ ಅಭಿನಯಿಸಿದ ಮೊದಲ ಕನ್ನಡ ಚಿತ್ರ
ಕ.ಸಾ: ಡಾ।ವಾಮನ್ ೩೦೦ ಕಿ.ಮೀ. ಹಾರುವ ಕ್ಷಿಪಣಿ ಕಂಡು ಹಿಡಿಯುತ್ತಾರೆ. ಭಾರತದ ಶತ್ರುಗಳು ವಾಮನ್‌ರನ್ನು ಕೊಂದು ಕ್ಷಿಪಣಿ ಅಪಹರಿಸುತ್ತಾರೆ. ೪ ಕೋಟಿ ರೂ. ನೀಡದಿದ್ದಲ್ಲಿ ಕ್ಷಿಪಣಿಯನ್ನು ದೆಹಲಿ ಮೇಲೆ ಹಾರಿಸುವುದಾಗಿ ಬೆದರಿಸುತ್ತಾರೆ. ಈ ಪ್ರಕರಣ ಪತ್ತೆ ಹಚ್ಚಲು ಹೋದ ಸಿ.ಐ.ಡಿ.೬೬೬ ಮತ್ತು ಸಿ.ಐ.ಡಿ.೭೭೭ ಕೊಲೆಗೀಡಾಗುತ್ತಾರೆ. ಈ ಪ್ರಕರಣ ಪತ್ತೆ ಹಚ್ಚಲು ಸಿ.ಐ.ಡಿ.೯೯೯ ಹಾಗೂ ಸಹಾಯಕನಾಗಿ ಸಿ.ಐ.ಡಿ.೮೮೮ ಯಶಸ್ವಿ ಕಾರ್ಯಾಚರಣೆ ನಡೆಸುವುದೇ ಈ ಕಥೆಯ ವಸ್ತು.

೨೬೧. ಹೂವುಮುಳ್ಳು

(೧೯೬೮ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಮಧು ಆರ್ಟ್ ಫಿಲಂಸ್
ಪ್ರೊ: ಎ.ಎಲ್.ಅಬ್ಬಾಯಿನಾಯ್ಡು
ನಿ: ಎ.ವಿ.ಶೇಷಗಿರಿರಾವ್

ಸ.ನಿ: ಎ.ಎಸ್.ರಾಜ್ (ಸುನಂದ)
ಅ: ಉದಯಕುಮಾರ್, ಕಲ್ಪನಾ, ಬಾಲಕೃಷ್ಣ, ಸಾಧನಾ, ಥಿಕ್ಕಿಮಾಧವರಾವ್, ಶಾಂತಿನಿದೇವಿ. ಎಂ.ಪಿ.ಶಂಕರ್, ವಿಜಯಲೀಲಾ, ಹೆಚ್.ಆರ್.ಶಾಸ್ತ್ರಿ, ಜಯಕುಮಾರಿ, ರಂಗ, ಎ.ಎಲ್.ಎ.ನಾಯ್ಡು
ಕ/ಚಿ.ಕ/ಮಾ/ಗೀ: ಗೀತಪ್ರಿಯ
ಗಾ: ಪಿ.ಬಿ.ಶ್ರೀನಿವಾಸ್, ಎಸ್.ಜಾನಕಿ. ಎಲ್.ಆರ್.ಈಶ್ವರಿ, ಎಸ್.ಪಿ.ಬಾಲಸುಬ್ರಹ್ಮಣ್ಯಂ
ಸಂ: ಪಿ.ಭಕ್ತವತ್ಸಲಂ
ಛಾ: ಟಿ.ಎಲ್ಲಪ್ಪ
ಕಲೆ: ತಿರುವೇಂಗಡಂ
ಸ: ಸತ್ಯಂ
ಧ್ವ: (ಹಾ) ಎಸ್.ಪಿ.ರಾಮನಾಥನ್
ನೃ: ಕೆ.ಎಸ್.ರೆಡ್ಡಿ. ಕೃಷ್ಣಕುಮಾರ್
ಸಾ: ವೈ.ಶಿವಯ್ಯ
ವ: ಜಿ.ಜಯರಾಂ
ಪ್ರ: ಸೀನ, ವೀರಾಸ್ವಾಮಿ, ಸೇಲಂರಾಮು
ಸ್ಟು: ಪ್ರೀಮಿಯರ್, ಓಂಕಾರ್
ಹಾ: ೧)'ಹೋಯ್ ಲಟ್ಟಾ ಪಟ್ಟಿ...', ೨)'ಓ ನನ್ನ ಗೆಣೆಯಾ...', ೩)'ಇದುವೇ ನಿನ್ನ ಪ್ರಪಂಚ...', ೪)'ಹಬ್ಬಾ ಈ ದಿನ ಹಬ್ಬಾ...', ೫)'ಅಮ್ಮಯ್ಯೋ.. ಹಾ...'ಹಾ...', ೫)'ಓ ಚೆಲುವಯ್ಯೋ.. ನೀ ಕೇಳಯ್ಯೋ...', ೬)'ಮಾನವದ್ವೇಷ...'
ವಿ: ಅಬ್ಬಾಯಿನಾಯಿಡು ನಿರ್ಮಾಪಕರಾದರು.
ಕ.ಸಾ: ಶೋಷಣೆಗೊಳಗಾದ ಮುಗ್ಧ ಯುವಕನೊಬ್ಬ ಪರಿಸ್ಥಿತಿಯ ಕೈಗೂಸಾಗಿ ಮುಳ್ಳಾಗಿ ಮಾರ್ಪಡುತ್ತಾನೆ. ನಂತರ ಹೆಣ್ಣೊಬ್ಬಳ ಪರಿಶ್ರಮದಿಂದ ಮತ್ತೆ ಹೂವಿನಂತಾಗುತ್ತಾನೆ.

೨೬೨. ಮಣ್ಣಿನ ಮಗ

(೧೯೬೮ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಸುದರ್ಶನ್ ಮೂವೀಸ್
ಪ್ರೊ: ಎಂ.ವಿ.ವೆಂಕಟಾಚಲಂ, ಪಿ.ಅಲೆಗ್ಸಾಂಡರ್
ನಿ: ಗೀತಪ್ರಿಯ
ಸ.ನಿ: ಎ.ಸುನಂದರಾಜ್, ಬಿ.ಎಸ್.ವಿಶ್ವನಾಥ್, ಬಸವರಾಜ್ ಕೆಸ್ತೂರ್
ಅ: ರಾಜಕುಮಾರ್, ಕಲ್ಪನಾ, ಎಂ.ಪಿ.ಶಂಕರ್, ರಾಮಚಂದ್ರಶಾಸ್ತ್ರಿ, ಥಿಕ್ಕಿಮಾಧವರಾವ್, ನಿರಂಜನ್, ಅಶ್ವತ್ಥನಾರಾಯಣ, ವಿಜಯಪ್ರಸಾದ್, ಈಶ್, ಡಾಲ್, ದೇವಯ್ಯ, ಕಿಟ್ಟಿ, ಬಿ.ಹೆಚ್.ಕೃಷ್ಣೇಗೌಡ, ದೇವು, ರಾಮು, ಅಶೋಕ್, ಅಶ್ವತ್ಥ ರಾಜ್, ವೆಂಕಟರಾಜು, ನಾಗಪ್ಪ, ಸತ್ಯನಾರಾಯಣ, ಜಯ, ಶಾಂತಮ್ಮ, ಇಂದಿರಾದೇವಿ, ರೇಣುಕಾ, ಪೂರ್ಣಿಮಾ, ಜಯಕುಮಾರಿ, ಲೀಲಾ, ಸುಮಿತ್ರ, ಜಯಚಿತ್ರ, ವಿಜಯ, ರಮಣಿ, ಜೂ.ಕಲ್ಪನಾ
ಕ/ಚಿ.ಕ/ಮಾ/ಗೀ: ಗೀತಪ್ರಿಯ
ಗಾ: ಪಿ.ಬಿ.ಶ್ರೀನಿವಾಸ್, ಎಸ್.ಜಾನಕಿ, ಪಿ.ಸುಶೀಲ
ಸಂ: ಬಾಲ್ ಜಿ.ಯಾದವ್
ಛಾ: ವಿ.ಮನೋಹರ್
ಸ: ವಿಜಯಭಾಸ್ಕರ್
ಧ್ವ: (ಹಾ)ಎಂ.ಬಿ.ವಾಲ್ಕೆ, (ಮಾ)ರಾಮಚಂದ್ರಪ್ಪ
ಪ್ರ: ಎಂ.ಎಸ್.ಸುಬ್ಬಣ್ಣ, ಸೀನು, ಬಾಬು, ರಾಮು
ಸ್ಟು: ಓಂಕಾರ್
ಹಾ: ೧)'ಭಗವಂತ ಕೈಕೊಟ್ಟ...', ೨)'ಇದೇನು ಸಭ್ಯತೆ...', ೩)'ಅಳುತಿಹುದು ಮಾನವತೆ...', ೪)'ಮೆಲ್ಲಗೆ ನಡೆಯೋಳೆ...', ೫)'ಬರೆಯದ ಕೈಗಳು...'
ವಿ: ಕರ್ನಾಟಕ ಸರ್ಕಾರದ ತೃತೀಯ ಅತ್ಯುತ್ತಮ ಚಿತ್ರ, ಅತ್ಯುತ್ತಮ ಚಿತ್ರ ನಾಟಕ ಪ್ರಶಸ್ತಿ ಪಡೆದಿದೆ.
ಕ.ಸಾ: ರಾಜ ದಾಯಾದಿಗಳ ಮೋಸ ವಂಚನೆಗಳಿಂದ ಜೈಲು ಸೇರಿ ಬಿಡುಗಡೆಹೊಂದಿದ ಮೇಲೆ ಊರಿನವರಿಂದ ಬಹಿಷ್ಕಾರಕ್ಕೆ ಒಳಗಾಗಿ ತನ್ನ ಪಾಲಿಗೆ ಬಂದ ಬಂಜರು ಭೂಮಿಯಲ್ಲೇ ಶ್ರಮದಿಂದ ದುಡಿದು ಒಳ್ಳೆಯ ಬೆಳೆ ತೆಗೆದು ಊರಿಗೆ ಆದರ್ಶಪ್ರಾಯನಾದ ರೈತನೆನಿಸುತ್ತಾನೆ. ಇವನಿಗೆ ಈ ನಿಟ್ಟಿನಲ್ಲಿ ಬೆನ್ನೆಲುಬಾಗಿ ಹೆಣ್ಣೊಬ್ಬಳು ನಿಲ್ಲುತ್ತಾಳೆ.

೧೯೬೯

೨೬೩. ಮಾರ್ಗದರ್ಶಿ

(೧೯೬೯ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಶ್ರೀಕಾಂತ್ ಅಂಡ್ ಶ್ರೀಕಾಂತ್ ಎಂಟರ್‌ಪ್ರೈಸಸ್
ಪ್ರೊ: ಶ್ರೀಕಾಂತ್ ಪಟೇಲ್, ಶ್ರೀಕಾಂತ್ ನಹತಾ
ನಿ: ಎಂ.ಆರ್.ವಿಠಲ್
ಸ.ನಿ: ಕೆ.ಸೀತಾರಾಂ
ಅ: ರಾಜಕುಮಾರ್, ಬಾಲಕೃಷ್ಣ, ಸಂಪತ್, ನರಸಿಂಹರಾಜು, ಎಂ.ಪಿ.ಶಂಕರ್, ನಾಗಪ್ಪ, ಥಿಕ್ಕಿಮಾಧವರಾವ್, ಚಂದ್ರಕಲಾ, ಜಯಶ್ರೀ, ಪಾಪಮ್ಮ, ಸಬಿತಾದೇವಿ. ಕಮಲಮ್ಮ, ಹೆಚ್.ಟಿ.ಅರಸು, ರಂಗ
ಕ/ಮಾ: ತ.ರಾ.ಸು
ಚಿ.ಕ.: ಎಂ.ಆರ್.ವಿಠಲ್
ಗೀ: ಕುವೆಂಪು, ವಿಜಯನಾರಸಿಂಹ

ಗಾ: ಪಿ.ಸುಶೀಲ, ಪಿ.ಬಿ.ಶ್ರೀನಿವಾಸ್, ಮನ್ನಾಡೆ, ಎಸ್.ಜಾನಕಿ
ಸಂ: ಎಸ್.ಪಿ.ಎನ್.ಕೃಷ್ಣ, ಟಿ.ಪಿ.ವೇಲಾಯುಧನ್
ಛಾ: ಶ್ರೀಕಾಂತ್, ಕುಮಾರ್
ಕಲೆ: ಜಾಲನ್
ಸ: ಎಂ.ರಂಗರಾವ್
ಧ್ವ: (ಮಾ) ಪಿ.ಜಿ.ಲಕ್ಷ್ಮಣ್, (ಹಾ) ಕೋಟೀಶ್ವರರಾವ್
ನೃ: ಬಿ.ಜಯರಾಮ್
ಸಾ: ವೈ.ಶಿವಯ್ಯ
ವ: ಕೃಷ್ಣಮೂರ್ತಿ, ಕಂದಸ್ವಾಮಿ
ಪ್ರ: ಎಂ.ಎಸ್.ಸುಬ್ಬಣ್ಣ, ರಾಜಗೋಪಾಲ್, ಸತ್ಯಂ
ಸ್ಟು: ಅಭಿಮಾನ್ (ಬೆಂಗಳೂರು)
ಹಾ: ೧) 'ನೆನೆದೇವು ನಿಮ್ಮ ಸಿರಿಪಾದವನ್ನ...', ೨) 'ಓಹೋಹೋ ಎಂಥಾ ಗಂಡು....', ೩) 'ಅಣು ಅಣುವಿನಲ್ಲಿ ವಿಷದ್ವೇಷ ಬಾಲೆ..' (ಮನ್ನಾಡೆ), ೪) 'ಕಣ್ಣಿಲ್ಲವೇನೋ ನಿಜ ಕಾಣದೇನೋ...' (ಮನ್ನಾಡೆ), ೫) 'ನಡೆಮುಂದೆ ನಡೆಮುಂದೆ ನುಗ್ಗಿ ನಡೆಮುಂದೆ...'
ವಿ: ಅತ್ಯುತ್ತಮ ಛಾಯಾಗ್ರಾಹಕ - ಎಸ್.ವಿ.ಶ್ರೀಕಾಂತ್, ಅತ್ಯುತ್ತಮ ಧ್ವನಿಗ್ರಾಹಕ - ಪಿ.ಜಿ.ಲಕ್ಷ್ಮಣ್, ಅತ್ಯುತ್ತಮ ಸಂಕಲನ - ಎಸ್.ಪಿ.ಎನ್.ಕೃಷ್ಣರಿಗೆ ರಾಜ್ಯ ಪ್ರಶಸ್ತಿ
ಸೆ: ಉದ್ದ ೩೬೭೦.೦೦, ೧೬ ರೀಲು
ಕ.ಸಾ: ಶ್ರೀಕಂಠ ಎಂಬ ಯುವಕ ವಿದ್ಯಾಭ್ಯಾಸಕ್ಕೆ ಶರಣು ಹೊಡೆದು ಹಳ್ಳಿಗೆ ಬಂದು ತನ್ನ ಆಸ್ತಿಯನ್ನು ನೀಡುವಂತೆ ಚಿಕ್ಕಪ್ಪನನ್ನು ಕೇಳುತ್ತಾನೆ. ಚಿಕ್ಕಪ್ಪ ಹತ್ತಾರು ತೊಂದರೆ ಕೊಡುತ್ತಾನೆ. ಊರಿಗೆ ಆದರ್ಶವಾಗಿ ನಿಂತ ಶ್ರೀಕಂಠ ಜನರಿಗೆ ಹತ್ತಾರು ಒಳ್ಳೆಯ ಕೆಲಸಗಳನ್ನು ಮಾಡುತ್ತಾನೆ. ಚಿಕ್ಕಪ್ಪನ ಮೋಸ ಬಯಲಾಗುತ್ತದೆ.

೨೬೪. ಸುವರ್ಣಭೂಮಿ

(೧೯೬೯ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಬಾವಾ ಮೂವೀಸ್
ಪ್ರೊ/ನಿ: ಎ.ಎಂ.ಸಮೀವುಲ್ಲಾ
ಸ.ನಿ: ಹೆಚ್.ಆರ್.ಶರ್ಮ
ಅ: ರಾಜೇಶ್, ಸುದರ್ಶನ್, ಶೈಲಶ್ರೀ, ಉದಯಚಂದ್ರಿಕಾ, ಪಂಢರೀಬಾಯಿ, ತಾರಾ, ಬೇಬಿ ದಿವ್ಯಮಣಿ, ಶಕ್ತಿಪ್ರಸಾದ್, ಎಂ.ಎಸ್.ಸತ್ಯ, ಹನುಮಂತರಾವ್, ಸುಬ್ಬರಾವ್, ತೂಗುದೀಪ ಶ್ರೀನಿವಾಸ್, ಮಾ। ರಾಜಕುಮಾರ್, ಮಾ। ಕೃಷ್ಣಕುಮಾರ್, ಮಾ। ಶ್ರೀಧರ್, ಮಾ। ಶ್ರೀನಿವಾಸ್
ಕ/ಚಿ.ಕ: ಎ.ಎಂ.ಸಮೀವುಲ್ಲಾ
ಮಾ/ಗೀ: ಕು.ರ.ಸೀತಾರಾಮಶಾಸ್ತ್ರಿ
ಗಾ: ಎಸ್.ಜಾನಕಿ, ಬಿ.ಕೆ.ಸುಮಿತ್ರ, ಪಿ.ಸುಶೀಲ, ಪಿ.ಬಿ.ಶ್ರೀನಿವಾಸ್, ಜೇಸುದಾಸ್
ಸಂ: ಭಕ್ತವತ್ಸಲಂ, ಅಚ್ಯುತನ್
ಛಾ: ಕೆ. ಜಾನಕೀರಾಂ
ಕಲೆ: ಬಿ.ಚಲಂ
ಸ: ವಿಜಯಭಾಸ್ಕರ್
ನೃ: ಬಿ.ಜಯರಾಂ
ಸಾ: ಜ್ಯುಡೋ ರತ್ನಂ
ವ: ನಾಜರೇ ಟೆಕ್ಸ್‌ಟೈಲ್ಸ್ ಸೆಂಟರ್, ರಾಮು
ಪ್ರ: ವೀರಾಸ್ವಾಮಿ, ಶ್ರೀನಿವಾಸ್



ಹಾ: ೧) 'ಕಾಣದಾ ದೇವರು...', ೨) 'ಭಲೆ ಸಂಚುಗಾರ ಮಹಾ ಮೋಸಗಾರ...', ೩) 'ಅಹ ಹುಯ್ಯಲೆ, ಹುಯ್ ಹುಯ್ಯಲೆ...', ೪) 'ಕಾಣದ ದೇವರು...', ೫) 'ಧರ್ಮವ ಕಾಯಲು...'
ಕ.ಸಾ: ತಾಯಿಗಿಬ್ಬರು ಮಕ್ಕಳು. ಒಬ್ಬ ಒರಟನಾದರೂ ನೀತಿವಂತ. ಮಾತೃಭಕ್ತಿಯಲ್ಲಿ ಮುಂದೆ. ಅಣ್ಣನ ಓದಿಗಾಗಿ ತಾನು ದುಡಿಯುತ್ತಾನೆ. ಅಣ್ಣ ಓದಿ ಪೊಲೀಸ್ ಅಧಿಕಾರಿಯಾದರೆ ತಮ್ಮ ವಿಧಿಯಾಟದಿಂದ ದರೋಡೆಕೋರನಾಗುತ್ತಾನೆ. ತಾಯಿಗೆ ಇಬ್ಬರೂ ಸಮ. ಎಂದು ಸಾರುವ ಕೌಟುಂಬಿಕ ಚಿತ್ರ.

೨೬೫. ಒಡಹುಟ್ಟಿದವರು

(೧೯೬೯ / ಕಪ್ಪು-ಬಿಳುಪು / ಪತ್ತೇದಾರಿ)
ಲಾ: ವಿಕ್ರಂ ಪ್ರೊಡಕ್ಷನ್ಸ್
ಪ್ರೊ: ಬಿ.ಎಸ್.ರಂಗಾ
ನಿ: ಬಿ.ಎನ್.ಹರಿದಾಸ್
ಅ: ಕಲ್ಯಾಣ್‌ಕುಮಾರ್, ಉದಯಕುಮಾರ್, ಬಾಲಕೃಷ್ಣ, ರತ್ನಾಕರ್, ಮಹಾದೇವಯ್ಯ, ಕಲ್ಪನಾ, ಪಂಢರಿಬಾಯಿ, ಜಯಾ, ವಿಜಯಲಕ್ಷ್ಮಿ

ಕ/ಚಿ.ಕ.: ವಿಕ್ರಂ ಸಾಹಿತ್ಯ ಶಾಖೆ
ಮಾ/ಗೀ: ಚಿ.ಸದಾಶಿವಯ್ಯ
ಗಾ: ಪಿ.ಬಿ.ಶ್ರೀನಿವಾಸ್, ಎಲ್.ಆರ್.ಈಶ್ವರಿ, ಎಸ್.ಜಾನಕಿ
ಸಂ: ಪಿ.ಜಿ.ಮೋಹನ್
ಛಾ: ಬಿ.ಎನ್.ಹರಿದಾಸ್
ಕಲೆ: ವಾಲಿ
ಸ: ಎಸ್.ಹನುಮಂತರಾವ್
ಧ್ವ: ಎನ್.ಶೇಷಾದ್ರಿ
ನೃ: ರಾಮರತ್ನಂ
ಸ್ಟು: ವಿಕ್ರಂ (ಮದರಾಸು)
ಹಾ: ೧) 'ಕಣ್ಣುಗಳ ಅಂಗಳದಿ ತಣ್ಣನೆಯ ಬೆಳಕೆರಚಿ...', ೨) 'ನಾನೇ ನಿನ್ನ ಡಾಕ್ಟರಾಗಿ ಬಂದೇ...', ೩) 'ತಾಯ ಪ್ರೇಮದಿ ಬೆಳೆದವನಾ...', ೪) 'ಹುಣ್ಣಿಮೆಯ ಚಂದ್ರ ಬೆಳಗಿ ನಗುತಿರುವಾಗ....', ೫) 'ತರುಣಿಯ ವಿಲಾಸ ತರುಣರ ಉಲ್ಲಾಸ...'
ವಿ: ೧೯೯೪ರನೇ ಇಸವಿಯಲ್ಲಿ ಅಂಬರೀಷ್-ರಾಜಕುಮಾರ್ ಅಭಿನಯದಲ್ಲಿ ಇದೇ ಹೆಸರಿನ ಚಿತ್ರ ಬಂತು.
ಕ.ಸಾ: ಮಂಗಳೂರಿನ ಕಡಲ ತೀರದಲ್ಲಿನ ಒಂದು ಕೊಲೆಯನ್ನು ಪತ್ತೆ ಹಚ್ಚಲು ಸಿ.ಐ.ಡಿ. ಆನಂದ ತನ್ನ ತಾಯಿಯೊಂದಿಗೆ ಬರುತ್ತಾನೆ. ಧರ್ಮಪ್ರಕಾಶ ಕೈಲಾಸನಾಥನ ಪುತ್ರಿ ಆಶಾ ಹಾಗೂ ಆನಂದ್ ಪ್ರೀತಿಸುವರು. ಕೈಲಾಸನಾಥ ಮನೆಗೆ ಬಂದಾಗ ಅವನೇ ತಂದೆಯನ್ನು ಸೆರೆಗೆ ತಳ್ಳಿದವನೆಂಬ ವಿಷಯ ತಾಯಿಯಿಂದ ಗೊತ್ತಾಯಿತು. ಕೈಲಾಸನಾಥನ ಭಂಟ ಸುಂದರನನ್ನು ಆನಂದನ ಮೇಲೆ ಛೂ ಬಿಟ್ಟರು. ಅವನು ತನ್ನ ಸ್ವಂತ ಅಣ್ಣನೆಂಬ ವಿಷಯವೂ ತಿಳಿಯಿತು. ಅಣ್ಣ-ತಮ್ಮಂದಿರಿಬ್ಬರೂ ಹೋರಾಡಿ ತಂದೆಯನ್ನು ಬಿಡಿಸಿ ತಂದರು. ಕೈಲಾಸನಾಥನೇ ಕೊಲೆಗಾರನಾಗಿದ್ದು ಸೆರೆವಾಸ ಅನುಭವಿಸಿದ.

೨೬೬. ನಿರಪರಾಧಿ

(೧೯೬೯ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಶಿವಶಕ್ತಿ ಫಿಲಂಸ್
ಪ್ರೊ: ಎಂ.ಟಿ.ಕುಳಂದೈವೇಲು
ನಿ: ಬಿ.ವಳ್ಳಿ ನಾಯಗಂ

ಸ.ನಿ: ಎನ್.ಚಂದ್ರಶೇಖರ ಶರ್ಮ
ಅ: ಕಲ್ಯಾಣ್‌ಕುಮಾರ್, ಸಾಹುಕಾರ್ ಜಾನಕಿ, ಬಿ.ಎಂ.ವೆಂಕಟೇಶ್, ಟಿ.ಎನ್.ಬಾಲಕೃಷ್ಣ, ಎಂ.ಪಿ.ಸಂಕರ್, ಅಂಗಮುತ್ತು, ಎನ್.ಮಲ್ಲೇಶ್ವರರಾವ್, ಎಲ್.ಎಸ್.ಸ್ವಾಮಿ, ಮಲ್ಲಿಕಾರ್ಜುನ, ವಂದನಾ, ಕೆ.ಎಸ್.ಅಶ್ವತ್ಥ್, ದ್ವಾರಕೀಶ್, ಡಿ.ಎಂ.ನಂಜುಂಡಪ್ಪ, ವಿ.ನಾರಾಯಣಸ್ವಾಮಿ, ಎಂ.ಆರ್.ರಾಮಲಿಂಗಂ
ಕ: ಕಣ್ಣನ್, ಶ್ರೀನಿವಾಸನ್
ಚಿ.ಕ: ಬಿ.ವಳ್ಳಿನಾಯಗಂ
ಮಾ: ರೇವತಿ ಕಲ್ಯಾಣ್‌ಕುಮಾರ್
ಗೀ: ಚಿ। ಸದಾಶಿವಯ್ಯ
ಗಾ: ಎಲ್.ಆರ್.ಈಶ್ವರಿ, ಬಿ.ಕೆ.ಸುಮಿತ್ರ, ಪಿ.ಬಿ.ಶ್ರೀನಿವಾಸ್,
ಸಂ: ಈ. ಅರುಣಾಚಲಂ, ಜಿ.ರಾಧಾ
ಛಾ: ಎ. ನಟರಾಜ್
ಕಲೆ: ಶ್ಯಾಮ್
ಸ: ಎನ್.ಎಸ್.ತ್ಯಾಗರಾಜನ್
ಧ್ವ: (ಹಾ) ಇ.ಐ.ಜೀವ, (ಮಾ) ಕಣ್ಣನ್, ಶ್ರೀನೀವಾಸನ್
ನೃ: ಡೆಸ್ಮಾಂಡ್, ಕೃಷ್ಣಕುಮಾರ್ (ಬಾಂಬೆ)
ಸಾ: ಜ್ಯೂಡೋ ಕೆ.ರತ್ನಂ
ವ: ರಾಮನ್
ಪ್ರ: ಆರ್.ನಾರಾಯಣಸ್ವಾಮಿ, ಚಕ್ರಪಾಣಿ
ಸ್ಟು: ಪ್ರೀಮಿಯರ್, ಶ್ಯಾಮಲ
ಹಾ: ೧) 'ಆಹಾ ಎಂಥಾ ಸೊಗಸೂ...', ೨) 'ಹೋಯಿತೆ ನಿನ್ನ ವಾಗ್ದಾನಾ...', ೩) 'ಮೊಂಬಾಸ, ಅಂದದ ಸುಂದರಿಯರೆ...', ೪) 'ಅಂತರಂಗದ ಕಥೆಯ...', ೪) 'ಬಾಳಿನ ಬೆಳಕೆ ಬಾರಾ...', ೬) 'ದೇವನೆ ನಿನ್ನ ಭಕುತರು...'
ಕ.ಸಾ: ತಪ್ಪು ಮಾಡದ ವ್ಯಕ್ತಿಯೊಬ್ಬ ಕೊಲೆಯ ಆಪಾದನೆ ಹೊತ್ತು ಜೈಲು ಸೇರುತ್ತಾನೆ. ಜೈಲಿನಿಂದ ತಪ್ಪಿಸಿಕೊಂಡು ಕೊಲೆಯ ಹಿಂದಿನ ರಹಸ್ಯವನ್ನು ಕಂಡುಹಿಡಿದು ತಾನು ನಿರಪರಾಧಿ ಎಂದು ನಿರೂಪಿಸುತ್ತಾನೆ.

೨೬೭. ಬ್ರೋಕರ್ ಭೀಷ್ಮಾಚಾರಿ

(೧೯೬೯ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಎಲ್‌ಬಿನ್ ಪ್ರೊಡಕ್ಷನ್ಸ್
ಪ್ರೊ: ಎಂ.ಎಸ್.ಶಿವರಾಜ್
ನಿ: ಬಿ.ಸಿ.ಶ್ರೀನಿವಾಸ್
ಸ.ನಿ: ಉಗ್ರನರಸಿಂಹ
ಅ: ರಾಜೇಶ್, ಜಯಂತಿ, ರಾಜಾಶಂಕರ್, ಶೈಲಶ್ರೀ, ನರಸಿಂಹರಾಜು, ಇಂದಿರ, ದಿನೇಶ್, ಎಂ.ಎನ್.ಲಕ್ಷ್ಮೀದೇವಿ, ಈಶ್ವರಪ್ಪ, ವಿಜಯಭಾನು, ಶ್ಯಾಂ, ಕುಪ್ಪುರಾಜ್, ಗುಗ್ಗು, ಮದನ್, ವಿಜಯಶ್ರೀ, ರಾಜೇಶ್ವರಿ
ಕ/ಚಿ.ಕ/ಮಾ/ಗೀ: ಬಿ.ಸಿ.ಶ್ರೀನಿವಾಸ್
ಗಾ: ಪಿ.ಬಿ.ಶ್ರೀನಿವಾಸ್, ಎಸ್.ಜಾನಕಿ, ಎಲ್.ಆರ್.ಈಶ್ವರಿ, ಬಿ.ಕೆ.ಸುಮಿತ್ರಾ, ಎಸ್.ಪಿ.ಬಾಲಸುಬ್ರಹ್ಮಣ್ಯಂ
ಸಂ: ರಾಜಕುಮಾರ್
ಛಾ: ಟಿ.ಎಲ್ಲಪ್ಪ
ಕಲೆ: ರಮೇಶ್
ಸ: ವಸಂತಕುಮಾರ್
ಧ್ವ: (ಹಾ) ಇ.ಐ.ಜೀವ (ಮಾ) ಎಸ್.ಪಿ.ರಾಮನಾಥನ್
ನೃ: ಕೃಷ್ಣಕುಮಾರ್ (ಧಾರವಾಡ)
ವ: ವೀರಾಸ್ವಾಮಿ

ಪ್ರ: ಎಂ.ಎಸ್.ಸುಬ್ಬಣ್ಣ, ರಾಜಗೋಪಾಲ್
ಸ್ಟು: ಗೋಲ್ಡನ್-ಅರುಣಾಚಲಂ
ಹಾ: ೧)'ಬ್ರೋಕರಾದೆ.. ಬ್ರೋಕರಾದೆ...', ೨)'ಕೋಳಿಯ ಪಾರ್ಟಿ ಮಜಾ...', ೩)'ಜಮಾಯಿಸೂ ಜಮಾಯಿಸೂ...', ೪)'ಕಣ್ಣಿಗೆ ಕಣ್ಣು ಕನಸಾಗಿ...', ೫)'ಕೃಷ್ಣಾ.. ಕರುಣಿಸು...', ೬)'ಕನ್ನಡ ಬಾಂಧವರೇ...'
ಸೆ: ಉದ್ದ-೪೮೦೩ ಅಡಿಗಳು, ೧೯ ರೀಲ್‌ಗಳು
ಕ.ಸಾ: ಸತ್ಯನಿಷ್ಠ ಬ್ರೋಕರ್ ಭೀಷ್ಮಾಚಾರಿ, ಕೊನೆಗೆ ಅಡ್ಡದಾರಿ ಹಿಡಿದು, ಸಿನಿಮಾ ಡೈರೆಕ್ಟರ್ ಆದ, ಭೂಮಿಯಲ್ಲಿ ಎರಡನೇ ಕುಬೇರನಾಗಿ ಮೆರೆದ. ಕೊನೆಗೆ ಸತ್ಯಶೋಧನೆಯಲ್ಲಿ ತೊಟ್ಟ ವೇಷ ಬಯಲಾಯಿತು.

೨೬೮. ಮಧುರ ಮಿಲನ

(೧೯೬೮ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ರಾಜೂ ಮೂವೀಸ್
ಪ್ರೊ: ಕೆ.ಸುಬ್ಬರಾಜ್ - ಎಸ್.ಎಲ್.ಎಸ್.ಭಟ್ಟ
ನಿ: ಎಸ್.ಕೆ.ಎ.ಚಾರಿ
ಸ.ನಿ: ಎಲ್.ವಿ.ರಾಜೇಂದ್ರನ್, ಎಂ.ಎಸ್.ರೂಪರಾಜ್
ಅ: ಉದಯಕುಮಾರ್, ಕೆ.ಎಸ್.ಅಶ್ವತ್ಥ್, ಬಾಲಕೃಷ್ಣ, ನರಸಿಂಹರಾಜು, ರಾಜಾರಾಂ, ನಾಗಪ್ಪ, ಮೋಹನ್, ನಂಜಪ್ಪ, ಶ್ರೀರಂಗಮೂರ್ತಿ, ಪಂಢರಿಬಾಯಿ, ಸಾಧನಾ, ಇಂದ್ರಾಣಿ, ಶ್ರೀನಾಥ್, ಚಂದ್ರು, ಪದ್ಮಾಂಜಲಿ, ವಿಜಯ, ಮಾ। ಕೃಷ್ಣ
ಕ/ಚಿ.ಕ: ಎಸ್.ಕೆ.ಎ.ಚಾರಿ
ಮಾ: ಕಣಗಾಲ್ ಪ್ರಭಾಕರ ಶಾಸ್ತ್ರಿ
ಗೀ: ಕಣಗಾಲ್ ಪ್ರಭಾಕರ ಶಾಸ್ತ್ರಿ, ಕು.ರ.ಸೀ., ವಿಜಯನಾರಸಿಂಹ
ಗಾ: ಪಿ.ಬಿ.ಶ್ರೀನಿವಾಸ್, ಜಯದೇವ್, ಎಸ್.ಜಾನಕಿ, ಎಲ್.ಆರ್.ಈಶ್ವರಿ, ವಸಂತ

ಸಂ: ಕೃಷ್ಣನ್
ಛಾ: ಪಾರ್ಥಸಾರಥಿ
ಸ: ಟಿ.ಚಲಪತಿರಾವ್
ಧ್ವ: (ಮಾ) ಕೆ.ಆರ್.ಸೀತಾರಾಂ
ಸಾ: ವೈ.ಶಿವಯ್ಯ
ಸ್ಟು: ಪ್ರೀಮಿಯರ್
ಹಾ: ೧)'ದೀಪಾವಳಿ ದೀಪಾವಳಿ...', ೨)'ಲಾಲ್‌ಬಾಗ್ ಗುಲಾಬಿ ರೋಜ...', ೩)'ಝಿಲ್ ಝಿಲ್ ಮೈ...', ೪)'ಬಯಕೆ ತಾವರೆ ಅರಳಿದ ಮೇಲೆ...'
ವಿ: ಶ್ರೀನಾಥ್ ಚಿತ್ರರಂಗ ಪ್ರವೇಶಿಸಿದರು.
ಕ.ಸಾ: ಜೀವಕ್ಕೆ ಜೀವ ಕೊಡುವ ಗೆಳೆತನವಿದ್ದ ಇಬ್ಬರಲ್ಲಿ ಮೂರನೆಯ ವ್ಯಕ್ತಿಯಿಂದ ಬಿರುಕು ಮೂಡುತ್ತದೆ. ಒಬ್ಬರನ್ನೊಬ್ಬರು ದ್ವೇಷಿಸುವ ಹಂತ ತಲುಪಿದ್ದ ಅವರ ಮಕ್ಕಳು ಪರಸ್ಪರ ಪ್ರೀತಿಸಿದ್ದರಿಂದ ಎರಡೂ ಕುಟುಂಬಗಳು ಒಂದಾಗುತ್ತವೆ.

೨೬೯. ನಮ್ಮ ಮಕ್ಕಳು

(೧೯೬೯ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ವಿಜಯ ಭಾರತಿ
ಪ್ರೊ: ಹರಿಣಿ
ನಿ: ಆರ್.ನಾಗೇಂದ್ರರಾವ್
ಸ.ನಿ: ಎನ್.ಟಿ.ಜಯರಾಮರೆಡ್ಡಿ
ಅ: ಕೆ.ಎಸ್.ಅಶ್ವತ್ಥ್, ಪಂಢರಿಬಾಯಿ, ಆರ್.ನಾಗೇಂದ್ರರಾವ್, ವಾದಿರಾಜ್, ನಾಗೇಶ್, ರಮಾದೇವಿ, ಆದವಾನಿ ಲಕ್ಷ್ಮೀದೇವಿ, ಜಯ, ರಾಜಾನಂದ್, ಲಲಿತಾ, ಭಾಸ್ಕರ್, ಅನುರಾಧ, ಇಂದ್ರಾಣಿ, ಶ್ರೀನಿವಾಸ್, ಕಮಲಮ್ಮ, ವೆಂಕಟರಾಮಯ್ಯ, ರಾಮಕೃಷ್ಣರಾಜು, ಮೋಹನ್, ಬಾಲಕೃಷ್ಣ, ಶಿವರಾಂ, ವಾಮನ್, ಕಲ್ಪನಾ, ರಾಜಶೇಖರ್, ಬಾಲ ನಟರು ಚಂದ್ರಶೇಖರ್, ನಾಗರಾಜ್, ಅಮರನಾಥ್, ರೋಹಿಣಿ, ಸರೋಜ, ಸರ್ವಮಂಗಳ, ನೃತ್ಯ: ಉಮಾರಾಣಿ, ಸುನಂದ, ರೇಖಾ, ಸುಮಿತ್ರ, ಗೀತಾ, ಉಮಾ, ಅನುರಾಧ
ಕ: ಎ.ಡಿ.ಗೋಪಾಲಕೃಷ್ಣ
ಮಾ/ಗೀ: ಆರ್.ಎನ್.ಜಯಗೋಪಾಲ್
ಗಾ: ಪಿ.ಬಿ.ಶ್ರೀನಿವಾಸ್, ಬಿ.ಕೆ.ಸುಮಿತ್ರ, ಅಂಜಲಿ, ಕೌಸಲ್ಯ, ಎಸ್.ಜಾನಕಿ
ಸಂ: ಪಿ.ಎಸ್.ಮೂರ್ತಿ
ಛಾ: ಎ.ಮನೋಹರ್
ಕಲೆ: ರಂಗಣ್ಣ
ಸ: ವಿಜಯಭಾಸ್ಕರ್
ಧ್ವ: (ಹಾ)ಮೋಹನಸುಂದರಂ, (ಮಾ)ಕೆ.ಆರ್.ಸೀತಾರಾಮ್
ನೃ: ಬಿ.ಜಯರಾಂ
ವ: ಅಪ್ಪಾರಾವ್ ಸುರೇಶ
ಪ್ರ: ಅಳಗಿರಿ, ರಾಮು
ಸ್ಟು: ಪ್ರೀಮಿಯರ್
ಹಾ: ೧)'ನಿನ್ನೊಲುಮೆ ನಮಗಿರಲಿ ತಂದೆ...'(೩ ಬಾರಿ), ೨)'ತಾರೆಗಳ ತೋಟದಿಂದ ಚಂದಿರ ಬಂದ...', ೩)'ಮನಸೇ ನಗಲೇಕೆ ಹರುಷದೆ ನೀನು...'
ವಿ: ಈ ಚಿತ್ರದಲ್ಲಿನ 'ಗಂಡುಗೊಡಲಿ' ಕಾವ್ಯನಾಟಕದ ಸಾಹಿತ್ಯವನ್ನು ಜಿ.ಪಿ.ರಾಜರತ್ನಂ ಬರೆದಿದ್ದಾರೆ. ಚಂದ್ರಶೇಖರ್ ಚಿತ್ರರಂಗ ಪ್ರವೇಶಿಸಿದರು.
ಕ.ಸಾ: ಶ್ರೀನಿವಾಸಯ್ಯ ಮತ್ತು ಪದ್ಮಾವತಮ್ಮನವರ ಮಗ ಕಥಾನಾಯಕ. ಅವನಿಗೆ ರೋಹಿಣಿ ಎಂಬ ತಂಗಿ ಮತ್ತು ರಾಜ ಎಂಬ ತಮ್ಮ. ತನ್ನ ತಂದೆಯ ಕೈಕೆಳಗೆ ಕೆಲಸ ಮಾಡುವವನ ಮಗ ಇವನ ಗೆಳೆಯ. ಗೆಳೆಯ ಕೇಳಿದ್ದನ್ನೆಲ್ಲ ಅವನ ತಂದೆ ಕೊಡಿಸುತ್ತಾರೆ. ಆದರೆ ಇವನ ತಂದೆ ಏನೂ ಕೊಡೋಲ್ಲ, ಕೊಡಿಸೋಲ್ಲ. ತಂದೆ-ಮಗನ ನಡುವೆ ಜಗಳ. ಮೂವರು ಮಕ್ಕಳೂ ನಿರಶನ ಸತ್ಯಾಗ್ರಹ ಆರಂಭಿಸಿದರು. ಹೆತ್ತವರು ಮಕ್ಕಳೇ ಎಲ್ಲ ಜವಾಬ್ದಾರಿ ನಿರ್ವಹಿಸುವ ಪ್ರಯೋಗ ಮಾಡಿಸಿದರು. ಸತ್ಯ ದರ್ಶನವಾಯಿತು. ನೆಮ್ಮದಿ ಮೂಡಿತು.

೨೭೦. ಗಂಡೊಂದು ಹೆಣ್ಣಾರು

(೧೯೬೯ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಪದ್ಮಿನಿ ಪಿಕ್ಚರ್ಸ್
ಪ್ರೊ/ನಿ: ಬಿ.ಆರ್.ಪಂತುಲು
ಸ.ನಿ: ಕೆ.ಸಿಂಗಮುತ್ತು, ಎಸ್.ಆರ್.ಶಿವರಾಂ, ಸಿ.ಪೊನ್ನುಸ್ವಾಮಿ
ಅ: ರಾಜಕುಮಾರ್, ಭಾರತಿ, ನರಸಿಂಹರಾಜು, ಮೈನಾವತಿ, ಬಾಲಕೃಷ್ಣ, ರಮಾದೇವಿ, ದಿನೇಶ್, ಪ್ರೇಮಲತ, ರಾಮಚಂದ್ರಶಾಸ್ತ್ರಿ, ರೇಣುಕ, ಹನುಮಂತಾಚಾರ್, ಸುಗುಣ, ಪಿ.ಗುಂಡೂರಾವ್, ಮೂಗೂರು ಜೇಜಮ್ಮ, ಗಣಪತಿಭಟ್, ನಾಗಪ್ಪ, ಗುಗ್ಗು, ಬಿ.ಆರ್.ಪಂತುಲು, ಪುಟ್ಟಸ್ವಾಮಿ, ನಾರಾಯಣರಾವ್, ಶಂಕರ್, ರಂಗನಾಥ್, ಸಿದ್ದರಾಮಯ್ಯ, ಮಲ್ಲೇಶ್, ಕು। ವಿ.ಲಕ್ಷ್ಮಿ, ಕು। ಹೇಮ, ಕು। ಚಂದ್ರ, ಕು।



ಜಯ, ಕು। ಪದ್ಮ, ಕು। ಮೀನಾ, ಕು। ಉಮಾ, ಕು। ಕಾಮಾಕ್ಷಿ
ಕ: ಎಂ.ರಾಮಚಂದ್ರ
ಚಿ.ಕ: ಪದ್ಮಿನಿ ಪಿಕ್ಚರ್ಸ್ ಕಥಾ ವಿಭಾಗ
ಮಾ: ಜಿ.ವಿ.ಅಯ್ಯರ್
ಗೀ: ಜಿ.ವಿ.ಅಯ್ಯರ್, ವಿಜಯನಾರಸಿಂಹ, ಕಣಗಾಲ್ ಪ್ರಭಾಕರ ಶಾಸ್ತ್ರಿ
ಗಾ: ಪಿ.ನಾಗೇಶ್ವರರಾವ್, ಎಸ್.ಜಾನಕಿ, ಪಿ.ಬಿ.ಶ್ರೀನಿವಾಸ್, ಎಲ್.ಆರ್.ಈಶ್ವರಿ, ಪಿ.ಲೀಲಾ, ಬೆಂಗಳೂರು ಲತಾ
ಸಂ: ಆರ್.ದೇವರಾಜನ್
ಛಾ: ಎ. ಷಣ್ಮುಗಂ, ಪಿ.ಎಲ್.ನಾಗಪ್ಪ
ಕಲೆ: ಸೆಲ್ವರಾಜ್
ಸ: ಟಿ.ಜಿ.ಲಿಂಗಪ್ಪ
ಧ್ವ: (ಹಾ) ಎಂ.ಎಸ್.ಮಾಧವನ್, ಟಿ.ಆರ್.ಸಾರಂಗನ್ (ಮಾ) ಮೋಹನ ಸುಂದರಂ
ನೃ: ಕೃಷ್ಣಕುಮಾರ್ (ಧಾರವಾಡ) ಪಿ.ಎಸ್.ಗೋಪಾಲಕೃಷ್ಣ, ಜನಾರ್ಧನ್
ಸಾ: ವೈ.ಶಿವಯ್ಯ
ವ: ಎಂ.ರಾಧಾ, ಆರ್ಮುಗಂ
ಪ್ರ: ಧನಕೋಟಿ, ದೊರೆಸ್ವಾಮಿ, ಮಾಣಿಕ್ಯಂ, ಶ್ರೀನಿವಾಸ್, ನಾರಾಯಣಸ್ವಾಮಿ, ಪಾರ್ಥಸಾರಥಿ
ಸ್ಟು: ಶಾರದ
ಹಾ: ೧)'ಬಂದೆ ನೀ ಬಂದೆ ಮನವ...', ೨)'ಕಾರಿನ ಸಾಹ್ಯೋರಾ...', ೩)'ಬಂಗಾರ ನೋಟ ಬಾಳಿನ ತೋಟ...', ೪)'ಮುಟ್ಟಬೇಡ ಮಾತಾಡ ಬೇಡ...', ೫)'ಬೆಳದಿಂಗಳಾಗಿ ಬಂದೆ...', ೬)'ಢಡ ಢಡ ಢಡ ಢಡ ಕಡಿದಿಡುವೆನು...', ೭)'ಕಾರ್ಯೇಷುದಾಸಿ...', ೮)'ಶ್ರೀಕೃಷ್ಣ ಪಾರಿಜಾತ...'-(ಸಂಗೀತ ನೃತ್ಯನಾಟಕ)
ಕ.ಸಾ: ಕೋಟ್ಯಾಧಿಪತಿಯೊಬ್ಬ ಆರು ಗುಣಗಳುಳ್ಳ ಒಂದು ಹೆಣ್ಣನ್ನು ಹುಡುಕಹೋಗಿ ಏಷ್ಟೋ ವಿಪತ್ತುಗಳನ್ನು ತಂದುಕೊಂಡು ಅದರಿಂದ ತಪ್ಪಿಸಿಕೊಳ್ಳುತ್ತ ಕಡೆಗೆ ಕೊಲೆಗಾರನೆಂಬ ಪಟ್ಟ ಕಟ್ಟಿಕೊಳ್ಳಬೇಕಾಗಿ ಬಂದು, ಅಂತ್ಯದಲ್ಲಿ ನಿರಪರಾಧಿ ಎಂದು ಸಾಬೀತು ಪಡಿಸಿಕೊಳ್ಳಲು ಹೆಣಗಾಡುವ ವಸ್ತು.

೨೭೧. ಕಾಡಿನ ರಹಸ್ಯ

(೧೯೬೯ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಶ್ರೀ ಭರಣಿ ಚಿತ್ರಾಲಯ
ಪ್ರೊ: ಎಂ.ಪಿ.ಶಂಕರ್, ಆರ್.ರಂಗಪ್ಪ
ನಿ: ಗೀತಪ್ರಿಯ
ಸ.ನಿ: ಸುನಂದ್
ಅ: ಸುದರ್ಶನ್, ಶೈಲಶ್ರೀ, ಕೆ.ಎಸ್.ಅಶ್ವತ್ಥ್, ಸಾಧನಾ, ಯಶ್ರಾಜ್, ತಾರಾಶ್ರೀ, ನರಸಿಂಹರಾಜು, ಶಿವಲಿಂಗಪ್ಪ, ದ್ವಾರಕೀಶ್, ಬೋರಯ್ಯ, ಎಂ.ಪಿ.ಶಂಕರ್, ಬೇಬಿ ಪಂಕಜ
ಕ/ಚಿ.ಕ: ಎಂ.ಪಿ.ಶಂಕರ್
ಮಾ/ಗೀ: ಗೀತಪ್ರಿಯ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್.ಜಾನಕಿ, ಜಯದೇವ್, ಎಲ್.ಆರ್.ಈಶ್ವರಿ, ಪಿ.ಬಿ.ಶ್ರೀನಿವಾಸ್
ಸಂ: ಬಾಲ್ ಜಿ.ಯಾದವ್
ಛಾ: ಆರ್.ಎನ್.ಕೆ.ಪ್ರಸಾದ್
ಕಲೆ: ಪಿ.ವೆಂಕಟರಾಂ, ಈಶ್ವರಪ್ಪ, ಗಣೇಶ
ಸ: ಸತ್ಯಂ
ಧ್ವ: ಎಸ್.ಪಿ.ರಾಮನಾಥನ್, ಕೋಟೇಶ್ವರರಾವ್, ಲಕ್ಷ್ಮಣ್, ರಾಜು
ನೃ: ಸಲೀಮ್
ಸಾ: ಜ್ಯೂಡೋ ರತ್ನಂ
ವ: ರಾಮಚಂದ್ರ, ಅಮೆರಿಕನ್ ಟೈಲರ್ಸ್ (ಮೈಸೂರು), ಬೇಲೂರು ಟೈಲರ್ಸ್ (ಮದ್ರಾಸು)
ಪ್ರ: ಜಿ.ಎಸ್.ವಾಸು, ವೀರಾಸ್ವಾಮಿ, ಭದ್ರಾರಾವ್
ಸ್ಟು: ಪ್ರೀಮಿಯರ್
ಹಾ: ೧)'ಗಗನದಲಿ ಹಾರುತಿರೆ...', ೨)'ಓಹೋ, ಬಳುಕಿ ಕುಲುಕುವ...', ೩)'ಇದೇ ಇದೇ ಸಖಾ...', ೪)'ಅಯ್ಯಮ್ಮ ಅಯ್ಯಮ್ಮ...'
ವಿ: ಯಶ್ರಾಜ್ ಎಂಬ ನವನಟನ ಪರಿಚಯ. ಬಂಡೀಪುರದ ಮೊದಲಾದ ಕಾಡುಗಳಲ್ಲಿ ಚಿತ್ರೀಕರಣ
ಸೆ: ಉದ್ದ ೪೧೬೪.೮೦ ಮೀ. ೧೫ ರೀಲು, 'ಯು' ಸರ್ಟಿಫಿಕೇಟ್
ಕ.ಸಾ: ಪ್ರಯೋಗಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಸಂಶೋಧನೆಗಾಗಿ ಕಾಡಿಗೆ ಬರುವ ವಿಜ್ಞಾನಿ, ಆತನ ಮಗಳು, ಆತನ ಅಳಿಯ ಹಾಗೂ ಸಹಾಯಕರು ಕಾಡನ್ನು

ಪ್ರವೇಶಿಸುತ್ತಿದಂತೆ ಹಲವಾರು ವಿಚಿತ್ರಗಳು ಎದುರಾಗುತ್ತವೆ. ಎರಡು ಕಣ್ಣುಗಳು ನಿರಂತರ ಹಿಂಬಾಲಿಸುತ್ತವೆ. ಕಾಡಿನ ತರುಣ ರಾಜ ನೆರವಾಗುತ್ತಾನೆ. ಕಾಡಿನಲ್ಲಿ ಪ್ರಾಣಿಗಳು-ಮನುಷ್ಯರ ಕೊಲೆ, ವಿಜ್ಞಾನಿಯ ಮಗಳ ಅಪಹರಣ ಹೀಗೆ ಒಂದಾದಮೇಲೊಂದು ಘಟನೆಗಳು ಎದುರಾಗಿ, ಅಂತ್ಯದಲ್ಲಿ ಕಾಡಿನ ರಹಸ್ಯ ಬಯಲಾಗುತ್ತದೆ.

೨೭೨. ಮಲ್ಲಮ್ಮನ ಪವಾಡ

(೧೯೬೯ / ಕಪ್ಪು-ಬಿಳುಪು / ಸಾಮಾಜಿಕ)

ಲಾ: ಎ.ಎಲ್.ಎಸ್.ಪ್ರೊಡಕ್ಷನ್ಸ್
ಪ್ರೊ: ಎ.ಎಲ್.ಎಸ್.ಪ್ರೊಡಕ್ಷನ್ಸ್ (ಎ.ಎಲ್.ಶ್ರೀನಿವಾಸನ್)
ನಿ: ಎಸ್.ಆರ್.ಪುಟ್ಟಣ್ಣ ಕಣಗಾಲ್
ಸ.ನಿ: ಸುಂದರಕೃಷ್ಣ ಅರಸ್

ಅ: ರಾಜಕುಮಾರ್, ಬಿ.ಸರೋಜಾದೇವಿ, ವಜ್ರಮುನಿ, ಸಂಪತ್, ಆದವಾನಿ ಲಕ್ಷ್ಮೀದೇವಿ, ದ್ವಾರಕೀಶ್, ಶಾಂತಮ್ಮ, ರಾಮಚಂದ್ರಶಾಸ್ತ್ರಿ, ಉದಯಚಂದ್ರಿಕಾ, ಬಾಲಕೃಷ್ಣ, ರಮಾದೇವಿ, ಅನಂತರಾಂ ಮಚ್ಚೇರಿ
ಕ: ಬಿ.ಪುಟ್ಟಸ್ವಾಮಯ್ಯ ಅವರ ಕಾದಂಬರಿ.
ಚಿ.ಕ: ಪುಲ್ಲಯ್ಯ
ಮಾ: ಕು.ರ.ಸೀತಾರಾಮಶಾಸ್ತ್ರಿ
ಗೀ: ಕಣಗಾಲ್ ಪ್ರಭಾಕರಶಾಸ್ತ್ರಿ, ವಿಜಯನಾರಸಿಂಹ
ಗಾ: ಪಿ.ಬಿ.ಶ್ರೀನಿವಾಸ್, ಪಿ.ಸುಶೀಲ, ಎಲ್.ಆರ್.ಈಶ್ವರಿ, ಬಿ.ಕೆ.ಸುಮಿತ್ರ
ಸಂ: ವಿ.ಪಿ.ಕೃಷ್ಣನ್, ಷಣ್ಮುಗಂ
ಛಾ: ವಿ.ಸೆಲ್ವರಾಜ್
ಕಲೆ: ರಾಧ
ಸ: ವಿಜಯಭಾಸ್ಕರ್
ಧ್ವ: ಟಿ.ಎಸ್.ರಂಗಸ್ವಾಮಿ, ಟಿ.ಆರ್.ಸಾರಂಗನ್
ನೃ: ರಾಜಕುಮಾರ್
ವ: ಟಿ.ಗಂಗಾಧರನ್
ಪ್ರ: ಸೆಲ್ವರಾಜ್, ದೊರೆಸ್ವಾಮಿ ನಾಯ್ಡು
ಸ್ಟು: ಶಾರದ (ಮದರಾಸು)
ಹಾ: ೧)'ನಾನೂನು ನಿಮ್ಮ ಹಾಗೆ ಬೊಂಬೇನೇ ಕಣ್ರೋ....', ೨)'ಶರಣೆಂಬೆ ನಾ ಶಶಿಭೂಷಣ....', ೩)'ಹುಚ್ಚರಲ್ಲ ನೀವು ಹುಚ್ಚರಲ್ಲ....', ೪)'ಮರೆಯದ ಮಾತಾಡೊ ಜಾಣ....', ೫)'ಆಶಾ ವಿಲಾಸಿ....', ೬)'ಹಾಡೋಣ ಒಲವಿನ ರಾಗಮಾಲೆ....'
ವಿ: ವಜ್ರಮುನಿ ಚಿತ್ರರಂಗ ಪ್ರವೇಶ
ಸೆ: ೧೭ ರೀಲ್
ಕ.ಸಾ: ಶಿವಪುರ ಜಮೀನ್ದಾರರ ಮೊದಲ ಮಗ ಚಂದ್ರುವನ್ನು ಅರೆ ಹುಚ್ಚನೆಂದು ಮೂಲೆಗುಂಪು ಮಾಡಿ ಮಲತಾಯಿ ಮೀನಾಕ್ಷಿ ಹಾಗೂ ಆಕೆಯ ಪುತ್ರ ಸೂರಿ ಜನರಿಗೆ ಉಪಟಳ ನೀಡುತ್ತಿರುತ್ತಾರೆ. ಮಲ್ಲಮ್ಮ ಚಂದ್ರುವನ್ನು ವಿವಾಹವಾಗಿ ಬಂದು ಮನೆಯನ್ನು ಸರಿಪಡಿಸಿ ಚಂದ್ರುವನ್ನು ಒಬ್ಬ ಮನುಷ್ಯನನ್ನಾಗಿ ಮಾಡುತ್ತಾಳೆ.

೨೭೩. ಕಪ್ಪು-ಬಿಳುಪು

(೧೯೬೯ / ಕಪ್ಪು-ಬಿಳುಪು / ಸಾಮಾಜಿಕ)

ಲಾ: ರವಿಕುಮಾರ್ ಮೂವೀಸ್
ನಿ: ಪುಟ್ಟಣ್ಣ ಕಣಗಾಲ್
ಸ.ನಿ: ಸುಂದರಕೃಷ್ಣ ಅರಸ್
ಅ: ಕಲ್ಪನಾ (ದ್ವಿಪಾತ್ರ), ಸುದರ್ಶನ್, ರಾಜೇಶ್, ರಾಮಚಂದ್ರಶಾಸ್ತ್ರಿ, ಬಾಲಕೃಷ್ಣ, ಅನಂತರಾಮ್ ಮಚ್ಚೇರಿ, ಆದವಾನಿ ಲಕ್ಷ್ಮೀದೇವಿ, ಆರ್.ಟಿ.ರಮಾ, ಜಾರ್ಜ್ ಇಂದಿರಾ, ಕಣಗಾಲ್ ಪ್ರಭಾಕರಶಾಸ್ತ್ರಿ (ಗೌರವ ನಟ), ಕು। ಭರಣಿ, ರೇಖ
ಕ: ಆರ್ಯಾಂಬ ಪಟ್ಟಾಭಿ ಅವರ ಕಾದಂಬರಿ
ಚಿ.ಕ: ಪುಟ್ಟಣ್ಣ ಕಣಗಾಲ್
ಮಾ/ಗೀ: ಆರ್.ಎನ್.ಜಯಗೋಪಾಲ್
ಗಾ: ಪಿ.ಬಿ.ಶ್ರೀನಿವಾಸ್, ಪಿ.ಸುಶೀಲ, ಎಲ್.ಆರ್.ಈಶ್ವರಿ
ಸಂ: ಜಿ.ವೇಲುಸ್ವಾಮಿ
ಛಾ: ವಿ.ವಿ.ರಾಜಾರಾಂ
ಕಲೆ: ರಮೇಶ್ಬಾಬು, ಆರ್.ಬಿ.ಎಸ್.ಮಣಿ
ಸ: ಆರ್.ರತ್ನ
ಧ್ವ: (ಹಾ) ಟಿ.ಎಸ್.ರಂಗಸ್ವಾಮಿ, (ಮಾ) ಕೆ.ಆರ್.ಸೀತಾರಾಂ
ನೃ: ಜಯರಾಂ, ಮಾಧುರಿ
ವ: ಆರ್.ಅಶ್ವತ್
ಪ್ರ: ವೆಂಕಟೇಶ್, ಸೇಲಂರಾಮು, ವೀರಾಸ್ವಾಮಿ
ಸ್ಟು: ಪ್ರೀಮಿಯರ್ (ಮೈಸೂರು)
ಹಾ: ೧)'ಅಮ್ಮ ನಿನ್ನ ತೋಳಿನಲ್ಲಿ ಕಂದ ನಾನು...', ೨)'ಭಲೆ ಬ್ರಹ್ಮಚಾರಿ ನೋಡು ಒಂದು ಬಾರಿ....', ೩)'ಇಂಡಿಯ ಹಿಂದೂ ದೇಶದ ನವ ಯುವಕರೇ....', ೪)'ಈ ಚಂದದ ಮನೆಯಲ್ಲಿ ಶ್ರೀಗಂಧದ ಗುಡಿಯಲ್ಲಿ...', ೫)'ಇದೇ ರೂಪಾ ಅದೆ ನೋಟಾ....', ೬)'ಚೆಲುವಿನಾ ಚಿನ್ನಯೇ ಚಿನ್ನದಾ ಗೊಂಬೆಯೇ....'
ಕ.ಸಾ: ಚಂದ್ರ ಮತ್ತು ವತ್ಸಲ ಅಕ್ಕ ತಂಗಿಯರ ಮಕ್ಕಳು. ರೂಪದಲ್ಲಿ ಇಬ್ಬರೂ ಒಂದೇ ತರಹ. ಚಂದ್ರ ಪಾಶ್ಚಾತ್ಯ ಸಂಸ್ಕೃತಿಗೆ ಮಾರು ಹೋದ ಯುವತಿ. ವತ್ಸಲಾ ಮಲತಾಯಿಯಿಂದಾಗಿ ಶಾಲೆಗೂ ಹೋಗಲಾಗದೆ ಮನೆಕೆಲಸ ಮಾಡಿಕೊಂಡಿರುವವಳು. ಚಂದ್ರಳನ್ನು ಮಧುವಿಗೆ ತಂದುಕೊಳ್ಳಬೇಕೆಂದು ಹಿರಿಯರು ನಿಶ್ಚಯಿಸಿದರು. ಚಂದ್ರ ಹಳ್ಳಿಗೆ ಹೋಗುವ ಬದಲು ವತ್ಸಲಳನ್ನು ಕಳುಹಿಸಿದಳು. ಅದಲು ಬದಲಾದವರ ಸ್ವಭಾವ, ನಡೆ-ನುಡಿ ಬೇರೆ. ದ್ವೇಷವೇ ಪ್ರೀತಿಯಾಗಿ ಮೆಚ್ಚಿದವಳೊಂದಿಗೆ ವಿವಾಹ. ಸಾಂಪ್ರದಾಯಿಕ ಮೌಲ್ಯಗಳು ಆಧುನಿಕತೆಯ ಹೋಲಿಕೆ ಮಾಡಲಾಗಿದೆ.

೨೭೪. ಎರಡು ಮುಖ

(೧೯೬೯ / ಕಪ್ಪು-ಬಿಳುಪು / ಮನೋವೈಜ್ಞಾನಿಕ)

ಲಾ: ಚಿತ್ರಶ್ರೀ ಇಂಟರ್‌ನ್ಯಾಷನಲ್
ಪ್ರೊ: ಬಿ.ವಿ.ಶ್ರೀನಿವಾಸ್, ಕೆ.ಎಸ್.ಪ್ರಸಾದ್, ಎ.ಎಸ್.ಭಕ್ತವತ್ಸಲಂ
ನಿ: ಎಂ.ಆರ್.ವಿಠಲ್
ಸ.ನಿ: ಕೆ.ಸೀತಾರಾಮ್, ಬಾಪಣ್ಣ
ಅ: ರಾಜೇಶ್, ಜಯಂತಿ, ಕೆ.ಎಸ್.ಅಶ್ವತ್, ನರಸಿಂಹರಾಜು, ಸಂಪತ್, ಜಯಾ, ಮಂಜುಳ, ಬೇಬಿ ಮಾಲ, ವಿಜಯಲೀಲ, ಇಂದ್ರಾಣಿ, ಯಮುನಾದೇವಿ, ಲಕ್ಷ್ಮಿ ಜನಾರ್ಧನ್, ವಿದ್ಯಾ, ರಂಗ, ತೂಗುದೀಪ ಶ್ರೀನಿವಾಸ್, ಸುಬ್ಬಣ್ಣ, ನಾಗಪ್ಪ
ಕ: ಆರ್ಯಾಂಬ ಪಟ್ಟಾಭಿ ಅವರ ಕಾದಂಬರಿ
ಚಿ.ಕ: ಎಂ.ಆರ್.ವಿಠಲ್
ಮಾ/ಗೀ: ಚಿ.ಉದಯಶಂಕರ್
ಗಾ: ಎಸ್.ಜಾನಕಿ, ಪಿ.ಸುಶೀಲ, ಎಲ್.ಆರ್.ಈಶ್ವರಿ, ಪಿ.ಬಿ.ಶ್ರೀನಿವಾಸ್, ಬಿ.ಕೆ.ಸುಮಿತ್ರ
ಸಂ: ಪಿ.ಭಕ್ತವತ್ಸಲಂ, ಕೆ.ಅಚ್ಯುತ್
ಛಾ: ಕೆ.ಜಾನಕಿರಾಮ್
ಕಲೆ: ಕೇಶವರಾವ್
ಸ: ವಿಜಯಭಾಸ್ಕರ್
ಧ್ವ: ಕೆ.ಆರ್.ಸೀತಾರಾಂ, ವಿಶ್ವನಾಥನ್
ನೃ: ಜಯರಾಂ, ಲಕ್ಷ್ಮೀನಾರಾಯಣ್
ವ: ನಾಜರ. ಕ್ಲಾನ್ಸ್
ಪ್ರ: ಸುಬ್ಬಣ್ಣ, ರಾಜಗೋಪಾಲ್
ಸ್ಟು: ಪ್ರೀಮಿಯರ್ (ಮೈಸೂರು)
ಹಾ: ೧)'ಬಾಳಿಗೊಂದು ಬಯಕೆ ಆಸರೆ...', ೨)'ಭಾವನೆಯು ಮನದಾಳದಲ್ಲೆ ಮೂಡಿ...', ೩)'ಹಹಹ ಹಾರುವಾ, ಹಿಹಿಹಿ ಈಜುವಾ....', ೪)'ಈ ಸಣ್ಣನ ನಡುವಿನ ಹೆಣ್ಣು....', ೫)'ಏಕೆ ಬಂದೆ ನನ್ನನರಸಿ ಬೆಳದಿಂಗಳ ಚೆಲುವೇ.....'
ವಿ: ಕಾದಂಬರಿಗಾರ್ತಿ ಆರ್ಯಾಂಬ ಪಟ್ಟಾಭಿ ಆರಂಭದಲ್ಲಿ ತೆರೆಯ ಮೇಲೆ ಕಾಣಿಸಿಕೊಂಡು ತಮ್ಮ ಕಾದಂಬರಿ ಬಗ್ಗೆ ಮಾತನಾಡುತ್ತಾರೆ. ಕರ್ನಾಟಕ ರಾಜ್ಯದ ತೃತೀಯ ಅತ್ಯುತ್ತಮ ಚಿತ್ರ ಪ್ರಶಸ್ತಿ
ಸೆ: ಉದ್ದ-೪೩೩೨.೧೮ಲ, ೧೬ ರೀಲುಗಳು, ಸಿ.ನಂ. ೫೪೫೫೩, ದಿನಾಂಕ: ೭-೪-೬೯
ಕ.ಸಾ: ರಮಾ ತಂದೆ ಇಲ್ಲದ ಯುವತಿ. ಸಂಸಾರ ನಿರ್ವಹಣೆಗಾಗಿ ಉದ್ಯೋಗಕ್ಕೆ ಸೇರುತ್ತಾಳೆ. ರೋಗಿ ತಾಯಿ, ಇಬ್ಬರು ಬೆಳೆಯುತ್ತಿರುವ ತಂಗಿಯರು. ತಮ್ಮನ ಆರೈಕೆ ಇವಳದಾಗಿರುತ್ತದೆ. ಅವಳ ಸನ್ನಡತೆಯನ್ನು ಕಂಡ ಸಹೋದ್ಯೋಗಿ ಶಶಿಧರ ಅವಳನ್ನು ಪ್ರೀತಿಸುತ್ತಾನೆ. ತಾಯಿ ಸತ್ತಾಗ ಅದೇ ಕೊರಗಿನಲ್ಲಿ ಮನೋವಿಕಲ್ಪಕ್ಕೆ ಒಳಗಾಗುತ್ತಾಳೆ. ತನ್ನ ಆಸೆ ಆಕಾಂಕ್ಷೆಗಳಿಗೆ ತಿಲಾಂಜಲಿ ಏಕೆ ನೀಡಬೇಕೆಂಬ ಮಾನಸಿಕ ತುಮುಲಕ್ಕೆ ಒಳಗಾಗುತ್ತಾಳೆ. ದುರ್ಬಲ ಮನಸ್ಸು ತಾನು ಉಮಾ ಎಂದು ಹೇಳಿಕೊಂಡು ಅಲಂಕಾರ ಮಾಡಿಕೊಂಡು, ಕ್ಲಬ್‌ಗೆ ಹೋಗುವುದು, ಸಿಗರೇಟ್ ಸೇವನೆ ಮುಂತಾದ ಚಟಗಳಿಗೆ ಬಲಿಯಾಗುತ್ತಾಳೆ. ಮನೋವೈದ್ಯರ ಚಿಕಿತ್ಸೆಯಿಂದ ಗುಣಮುಖಳಾಗಿ ವಿವಾಹವಾಗುತ್ತಾಳೆ.

೨೭೫. ಚೂರಿಚಿಕ್ಕಣ್ಣ

(೧೯೬೯ / ಕಪ್ಪು-ಬಿಳುಪು / ಸಾಮಾಜಿಕ)

ಲಾ: ಶ್ರೀರಾಮು ಎಂಟರ್‌ಪ್ರೈಸಸ್
ಪ್ರೊ/ನಿ: ಆರ್.ರಾಮಮೂರ್ತಿ
ಸ.ನಿ: ವಿ.ಸೋಮಶೇಖರ್, ಎಂ.ಜಿ.ಗಿರೀಶ್
ಅ: ರಾಜಕುಮಾರ್, ಕೆ.ಎಸ್.ಅಶ್ವತ್, ಗಣಪತಿಭಟ್, ನಾಗಪ್ಪ, ದಿನೇಶ್, ನರಸಿಂಹರಾಜು, ಜಯಂತಿ, ಬಿ.ವಿ.ರಾಧ, ಜಯಕುಮಾರಿ, ವಿಜಯಲಲಿತ, ಕೇಶವಮೂರ್ತಿ, ಶ್ರೀಕಂಠಸ್ವಾಮಿ, ನಾರಾಯಣರಾವ್, ಬಿ.ರಾಮಮೂರ್ತಿ, ಶ್ಯಾಮ್, ಜ್ಯೂಡೋ ರತ್ನಂ

ಕ: ಕೊಟ್ಟಾರಕರ
ಮಾ/ಗೀ: ಚಿ.ಉದಯಶಂಕರ್
ಗಾ: ಪಿ.ಬಿ.ಶ್ರೀನಿವಾಸ್, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್.ಜಾನಕಿ, ಎಲ್.ಆರ್.ಈಶ್ವರಿ, ಲತಾ, ಜಯದೇವ್, ರತ್ನಾಕರ್
ಸಂ: ಆರ್.ರಾಮಮೂರ್ತಿ
ಛಾ: ಬಿ.ದೊರೈರಾಜ್
ಕಲೆ: ಗೋಡ್‌ಗಾಂವ್‌ಕರ್
ಸ: ಸತ್ಯಂ
ಧ್ವ: ಮೋಹನ ಸುಂದರಂ
ನೃ: ಬಿ.ಜಯರಾಂ
ಸಾ: ಜ್ಯೂಡೋ ರತ್ನಂ
ವ: ಆರ್.ಅಶ್ವತ್
ಪ್ರ: ಎಂ.ಎಸ್.ಸುಬ್ಬಣ್ಣ, ರಾಜಗೋಪಾಲ್
ಸ್ಟು: ವೀನಸ್
ಹಾ: ೧)'ಸೈಕಲ್ ಮೇಲೆ ಬಂದ ನಮ್ಮ ಮೈನರ್....', ೨)'ಪಿಯಟ್ ಕಾರನೇರಿ ಬಂದ ನನ್ನ ಬ್ಯೂಟಿ....', ೩)'ನೀ ಮೊದಲು ಮೊದಲು ನನ್ನ ನೋಡಿದಾಗ....', ೪)'ಮಾದಯ್ಯ ಬಂದೆಯಾ ಕುಶಲವೇ ಹೇಳಯಾ...', ೫)'ಮೆಲ್ಲಗೆ ನಡೆ

ಮೆಲ್ಲಗೇ...', ೬)'ಕೇಳೆ ಕೇಳೆ ನನ್ನ ಕತೆ...', ೭)'ಲಕ್ಷ್ಮೀ ಕ್ಷೀರಸಮುದ್ರ
ಕ.ಸಾ: ದೇಶದಲ್ಲಿ ಬಾರಿ ಕಳ್ಳತನ, ಸುಲಿಗೆ, ಕೊಲೆಗಳು ನಡೆದಾಗ ಅಪರಾಧಿಯ ಯಾವುದೇ ಸುಳಿವು ಸಿಗುವುದಿಲ್ಲ. ಇಂತಹವರಲ್ಲಿ ಒಮ್ಮೆ ಚಿಕ್ಕಣ್ಣನ ಕೈಯಲ್ಲಿ ಆ ಕೊಲೆಗಾರ ಸಿಕ್ಕಿಹಾಕಿಕೊಳ್ಳುತ್ತಾನೆ. ಚಿಕ್ಕಣ್ಣನ ಬಲವನ್ನರಿತ ಜಾಪಾಸೇಟ್ ಆತನನ್ನು ತನ್ನ ಗುಂಪಿಗೆ ಸೇರಿಸಿಕೊಂಡು ಸಮಯ ನೋಡಿ ನೀರಿನಲ್ಲಿ ಮುಳುಗಿಸಿ ಸಾಯಿಸುತ್ತಾನೆ. ಹಲವು ವರುಷಗಳ ನಂತರ ಜಾಪಾಸೇಟ್ ತನ್ನ ಎಸ್ಟೇಟಿನಲ್ಲಿ ಭಾಸ್ಕರನೆಂಬ ಹುಡುಗನಿಗೆ ಕೆಲಸ ಕೊಡುತ್ತಾನೆ. ಆ ಯುವಕ ಚಿಕ್ಕಣ್ಣನೇ ಆಗಿರುತ್ತಾನೆ. ಜಾಪಾಸೇಟ್‌ನ ಮುಖವಾಡವನ್ನು ಕಳಚಿ ನಿಜವಾದ ಬಣ್ಣವನ್ನು ಬಯಲು ಮಾಡುತ್ತಾನೆ.

೨೭೬. ಶಿವಭಕ್ತ
(೧೯೬೯ / ಕಪ್ಪು-ಬಿಳುಪು / ಭಕ್ತಿಪ್ರಧಾನ)
ಲಾ: ವಸಂತ್ ಪಿಕ್ಚರ್ಸ್
ಪ್ರೊ: ಬಿ.ಎಸ್.ರಂಗಾ
ನಿ: ಕೆ.ವಿ.ಶ್ರೀನಿವಾಸ್
ಸ.ನಿ: ಚಿ.ಸದಾಶಿವಯ್ಯ
ಅ: ಉದಯಕುಮಾರ್, ಬಾಲಕೃಷ್ಣ, ಬಾಲಯ್ಯ, ದ್ವಾರಕೀಶ್, ವೆಂಕಟದಾಸ್, ನಾಗೇಶ್, ಶ್ಯಾಮ್, ಮಹಾದೇವಯ್ಯ, ಭಾರತಿ, ಶ್ರೀವಿದ್ಯಾ, ಮೈಸೂರು ಲಕ್ಷ್ಮೀದೇವಿ, ರಮಾದೇವಿ, ಸರಸಾ, ರಾಧಿಕಾ
ಚಿ.ಕ: ಕ.ವಿ.ಶ್ರೀನಿವಾಸ್
ಮಾ/ಗೀ: ಚಿ.ಉದಯಶಂಕರ್
ಗಾ: ಪಿ.ಬಿ.ಶ್ರೀನಿವಾಸ್, ಎಸ್.ಜಾನಕಿ, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಪೀಠಾಪುರಂ ನಾಗೇಶ್ವರರಾವ್, ಮಾಧವಪೆದ್ದಿ ಸತ್ಯಂ
ಸಂ: ಪಿ.ಜಿ.ಮೋಹನ್, ದೇವೇಂದ್ರನಾಥ್
ಛಾ: ಬಿ.ಎನ್.ಹರಿದಾಸ್
ಸ: ಎಸ್.ಹನುಮಂತರಾವ್
ಧ್ವ: ಎಸ್.ಶಾಸ್ತ್ರಿ, ಬಿ.ಶಾಮಣ್ಣ
ಸ್ಟು: ವಿಕ್ರಂ ಸ್ಟುಡಿಯೋಸ್
ಹಾ: ೧)'ಆಡಿದ ನಟರಾಜ ನವತಾಂಡವ...', ೨)'ಅಮ್ಮನ ಆಸೆಯೆಲ್ಲ ಒಂದಾಗಿ ನಿನ್ನ....', ೩)'ಬಾರೆಂದು ಕರೆದಾಗ ಬರಬಾರದೇ...', ೪)'ಬಾರೋ ಮನ್ಮಥ ಮೋಹನಾ....', ೫)'ಕರುಣಾಳು ನೀನಲ್ಲಿ ಕಮಪಾಪಿ ನಾನಿಲ್ಲಿ...', ೬)'ಏಕೆ ನೀ ಅಳುವೇ ಏಕೆ ನೀ ನಗುವೇ....' ೭)'ಒಂದಾನೊಂದು ಕಾಡು...', ೮)'ರಾಜಾಧಿರಾಜ ವೀರ ಪ್ರತಾಪ...'
ಕ.ಸಾ: ಶಿವಭಕ್ತ ನೀಲಕಂಠ ವೃತ್ತಿಯಲ್ಲಿ ಕುಂಬಾರ. ಅವನ ಪತ್ನಿ ಭವಾನಿಗೂ ಶಿವನಲ್ಲಿ ಪ್ರೇಮ. ಆದರೆ ಮಕ್ಕಳಿಲ್ಲ ಎಂಬ ಕೊರಗು. ಜನರು ನೀಲಕಂಠನನ್ನು ಪ್ರೀತಿಸುತ್ತಿದರು. ನೆರೆಮನೆಯ ಕುಂಬಾರ ತಿರುಪತಿ ಮಾತ್ರ ನೀಲಕಂಠನನ್ನು ದ್ವೇಷಿಸುತ್ತಿದ. ಶಿವಾಲಯದಲ್ಲಿ ನೀಲಕಂಠ ಗಾನಗಳನ್ನು ರಚಿಸಿ ಸ್ತುತಿಸುತ್ತಿದ. ನೃತ್ಯಗಾತಿ ಚಿಂತಾಮಣಿ ಸಹ ಇದನ್ನು ಹಾಡುತ್ತಿದಳು. ಒಮ್ಮೆ ನೀಲಕಂಠ ಹಣ ಸಂಪಾದಿಸಲು ತನ್ನ ಗಾನವನ್ನು ಹಾಡಕೂಡದೆಂದ. ಆ ಶಿವಭಕ್ತನ ಕೈಯಿಂದಲೇ ತನ್ನ ಕಾಲ ಗೆಜ್ಜೆಗಳನ್ನು ಕಟ್ಟಿಸಿಕೊಳ್ಳುವುದಾಗಿ ಚಿಂತಾಮಣಿ ಶಪಥ ಮಾಡಿದಳು. ಚಿಂತಾಮಣಿ ಅವನನ್ನು ಆಕರ್ಷಿಸುವಂತೆ ಮಾಡಿದಳು. ಅವಳೊಂದಿಗೆ ತನ್ನ ಪತಿ ಇರುವುದನ್ನು ಕಂಡ ಭವಾನಿ ಸ್ತ್ರೀ ಕುಲವನ್ನೇ ಮುಟ್ಟಬೇಡ ಎಂದು ಶಿವನ ಆಣೆ ಹೇಳಿ ಪ್ರಮಾಣ ಮಾಡಿಸಿದಳು. ಪತ್ನಿಯನ್ನೂ ಮುಟ್ಟಲಿಲ್ಲ. ವೃದ್ಧರಾದರು. ಶಿವ ಅವರಿಗೊಂದು ಪರೀಕ್ಷೆ ಇರಿಸಿ ಒಂದು ಗೂಡಿಸಿದನು.

೨೭೭. ಬಾಗೀರಥಿ
(೧೯೬೯ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಕಾವೇರಿ ಫಿಲಂಸ್
ಪ್ರೊ: ಜಿ.ಎನ್.ವಿಶ್ವನಾಥಶೆಟ್ಟಿ (ನಿರ್ವಹಣೆ)
ನಿ: ಟಿ.ವಿ.ಸಿಂಗ್ ಠಾಕೂರ್
ಸ.ನಿ: ಎಸ್.ಕೆ.ಭಗವಾನ್, ಜಿ.ಎಸ್.ಎಸ್.ಮೂರ್ತಿ, ಬಿ.ಎಸ್.ವಿಶ್ವನಾಥ್
ಅ: ಉದಯಕುಮಾರ್, ರಾಜಾಶಂಕರ್, ಅಶ್ವತ್ಥ್, ಬಾಲಕೃಷ್ಣ, ನರಸಿಂಹರಾಜು, ಕುಪ್ಪುರಾಜ್, ಪಂಢರೀಬಾಯಿ, ಜಯಂತಿ, ಆದವಾನಿ ಲಕ್ಷ್ಮೀದೇವಿ, ಶೈಲಶ್ರೀ, ರೇವತಿ (ಜ್ಯೂ), ಜಯಶ್ರೀ, ರಮಾದೇವಿ, ಅಶ್ವತನಾರಾಯಣ, ಅನಂತರಾಂ ಮಚ್ಚೇರಿ, ಬೆಂಗಳೂರು ನಾಗೇಶ್, ಮಹಾದೇವ್, ಪುಟ್ಟಸ್ವಾಮಿ, ಬೇಬಿಪೂರ್ಣಿಮಾ, ದತ್ತರಾಜ್, ಶ್ಯಾಂ, ಜೈಲಕ್ಷ್ಮಿ,
ನೃ: ಪಿ.ಎಸ್.ಸಬ್ಬು

ಕ/ಚಿ.ಕ: ಟಿ.ವಿ.ಸಿಂಗ್‌ಠಾಕೂರ್
ಮಾ: ಜಿ.ವಿ.ಅಯ್ಯರ್
ಗೀ: ಜಿ.ವಿ.ಅಯ್ಯರ್, ನಂಜುಕವಿ
ಗಾ: ಸೂಲಮಂಗಲಂ ರಾಜಲಕ್ಷ್ಮಿ, ಪಿ.ಬಿ.ಶ್ರೀನಿವಾಸ್, ಎಸ್.ಜಾನಕಿ
ಸಂ: ಎಸ್.ಪಿ.ರಾಜನ್
ಛಾ: ದೊರೆರಾಜ್, ಶ್ರೀಕಾಂತ್
ಕಲೆ: ಆರ್.ಬಿ.ಎಸ್.ಮಣಿ
ಸ: ಜಿ.ಕೆ.ವೆಂಕಟೇಶ್
ನೃ: ಬಿ.ಜಯರಾಂ
ವ: ಬಿ.ಆರ್.ಸಿಂಗ್
ಸ್ಟು: ವೀನಸ್ ಸ್ಟುಡಿಯೋ
ಹಾ: ೧)'ಓಂಕಾರಿ ಕಲ್ಯಾಣಿ...', ೨)'ಸ್ವರ್ಗಕ್ಕೆ ಹೋಗುವಾ...', ೩)'ನಲಿಯೋಣ ಬಾ...', ೪)'ಊರಿನಿಂದ ಬಂದಾಗ...'
ಸೆ: ಉದ ೧೦೩೫ ಅಡಿಗಳು, ಎಂ-೫೦೭೮,
ದಿನಾಂಕ: ೧೪-೧೧-೬೮
ಕ.ಸಾ: ಭಾಗೀರಥಿ ಎಂಬ ದಯಾಮಯಿ ಹೆಣ್ಣು ಪರರ ಕಷ್ಟಕ್ಕೆ ಒದಗುವವಳು. ಆದರ ಆಕೆಯ ಕಷ್ಟಕ್ಕೆ ಅವಳ ಸ್ವಂತ ಅಣ್ಣನೇ ಆಗದಾದಾಗ ಕಂಗಾಲಾಗುತ್ತಾಳೆ. ಗಂಡ ದುರ್ಮರಣಕ್ಕೀಡಾಗುತ್ತಾನೆ. ಡಾಕ್ಟರ್ ಮಗ ಅತ್ತೆ ಮನೆ ಸೇರುತ್ತಾನೆ. ಮತ್ತೊಬ್ಬ ಮಗ ಮನೆಬಿಟ್ಟು ಹೊರಟು ಹೋಗುತ್ತಾನೆ. ಸೊಸೆಯ ತಾತ್ಸಾರ ತಾಳಲಾರದೆ ಭಾಗೀರಥಿ ಮಕ್ಕಳೊಂದಿಗೆ ಬೀದಿಪಾಲಾಗುತ್ತಾಳೆ. ಅವಳ ಸಹನೆ, ಕಷ್ಟ ಸಹಿಷ್ಣುತೆ ಎಲ್ಲಾ ಸಮಸ್ಯೆಗಳನ್ನು ಪರಿಹರಿಸುತ್ತದೆ.

೨೭೮. ಮಕ್ಕಳೇ ಮನೆಗೆ ಮಾಣಿಕ್ಯ
(೧೯೬೯ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ರೂಪಶ್ರೀ
ಪ್ರೊ: ಎನ್.ಬಿ.ವತ್ಸಲನ್
ನಿ: ಎ.ವಿ.ಶೇಷಗಿರಿರಾವ್
ಸ.ನಿ: ಸುಶೀಲ್‌ಕುಮಾರ್
ಅ: ಉದಯಕುಮಾರ್, ಆರ್.ನಾಗೇಂದ್ರರಾವ್, ದಿನೇಶ್, ರಂಗ, ಸತ್ಯ, ಆದವಾನಿ ಲಕ್ಷ್ಮೀದೇವಿ, ಬಿ.ವಿ.ರಾಧಾ, ಶೈಲಶ್ರೀ, ಜಯಾ, ವೆಂಕಟರಾಮನ್, ಗೋವಿಂದರಾಜನ್, ಕುಮಾರ್,

ಶಿವಣ್ಣ, ಪ್ರಕಾಶ್, ಮಾ।ಕೃಷ್ಣಕುಮಾರ್, ಜ್ಯೋತಿಶ್ರೀ
ಕ: ಶ್ರೀರಾಮಚಂದ್
ಚಿ.ಕ: ಎ.ವಿ.ಶೇಷಗಿರಿರಾವ್
ಮಾ/ಗೀ: ಗೀತಪ್ರಿಯ
ಗಾ: ಪಿ.ಬಿ.ಶ್ರೀನಿವಾಸ್, ಬಿ.ಕೆ.ಸುಮಿತ್ರ, ಅಂಜಲಿ
ಸಂ: ಬಾಲ್ ಜಿ.ಯಾದವ್
ಛಾ: ಸಂಜೀವಿ
ಸ: ವಿಜಯಭಾಸ್ಕರ್
ಧ್ವ: ಎಂ.ಬಿ.ವಾಲ್ಕೆ, ಕೆ.ಸೀತಾರಾಂ
ನೃ: ಈಶ್ವರಲಾಲ್
ವ: ಕೃಷ್ಣಮೂರ್ತಿ
ಪ್ರ: ವೀರಾಸ್ವಾಮಿ
ಸ್ಟು: ಪ್ರೀಮಿಯರ್ (ಮೈಸೂರು)
ಸೆ: ಉದ್ದ ೩೯೬೧.೯ ಮೀ. ೧೫ ರೀಲು
ಕ.ಸಾ: ಪಾತ್ರಧಾರಿಗಳು ಮಕ್ಕಳಲ್ಲ. ಆದರೆ ಮನೆಯೊಂದು ಬೆಳಗಲು ಮಕ್ಕಳು ಮುಖ್ಯ ಅನ್ನುತ್ತದೆ.

೨೭೯. ಪುನರ್ಜನ್ಮ
(೧೯೬೯ / ಕಪ್ಪು-ಬಿಳುಪು / ಸಾಮಾಜಿಕ)
ಲಾ/ಪ್ರೊ: ಶ್ರೀ ಭಗವತಿ ಆರ್ಟ್ಸ್ ಪ್ರೊಡಕ್ಷನ್ಸ್
ನಿ: ಪೇಕೇಟಿ ಶಿವರಾಮ್
ಸ.ನಿ.: ಎನ್.ಚಂದ್ರಶೇಖರ ಶರ್ಮ, ಟಿ. ದಯಾಸಾಗರ್
ಅ: ರಾಜಕುಮಾರ್, ಜಯಂತಿ, ಚಂದ್ರಕಲಾ, ಬಾಲಕೃಷ್ಣ, ರಂಗ, ಜಯಶ್ರೀ, ಎಂ.ಎಸ್.ಸತ್ಯ, ರಮಾ, ಗೋವಿಂದರಾಜ್, ನಂಜಪ್ಪ, ದಿನೇಶ್, ಬಿ.ಆರ್.ಶ್ರೀನಾಥ್, ಗಣಪತಿಭಟ್, ರೇಣು, ನರಸಾರೆಡ್ಡಿ

ಕ/ಚಿ.ಕ/ಮಾ: ತ.ರಾ.ಸು
ಗೀ: ಆರ್.ಎನ್.ಜಯಗೋಪಾಲ್
ಗಾ: ಪಿ.ಬಿ.ಶ್ರೀನಿವಾಸ್, ಪಿ.ಸುಶೀಲ
ಸಂ: ಪಿ.ಭಕ್ತವತ್ಸಲಂ, ಕೆ.ಅಚ್ಯುತನ್
ಛಾ: ಆರ್.ಚಿಟ್ಟಿಬಾಬು
ಕಲೆ: ಬಾಲನ್, ದಾಸ್
ಸ: ದುಲಾಲ್‌ಸೇನ್
ಧ್ವ: (ಹಾ)ಮೋಹನಸುಂದರಂ, ಎಸ್.ಪಿ.ರಾಮನಾಥನ್, (ಮಾ)ಬಿ.ಎಲ್.ಆಶೀರ್ವಾದಂ, ರಾಮಚಂದ್ರ ಪ್ರ
ನೃ: ಬಿ.ಜಯರಾಂ (ಉಡುಪಿ)
ವ: ಎನ್.ಎಸ್.ರಂಗಪ್ಪನ್, ಸಿ.ವೇಲಾಯುಧಂ
ಪ್ರ: ಎಂ.ಎಸ್.ಸುಬ್ಬಣ್ಣ, ರಾಜಗೋಪಾಲ್, ಮಲ್ಲಿಕಾರ್ಜುನರಾವ್
ಸ್ಟು: ಅಭಿಮಾನ್
ಹಾ: ೧)'ಕನ್ನಡತಿ ನಮ್ಮೊಡತಿ ಕಣ್ಣು ತೆರೆದು ನೋಡು ನೀನೆಮಗೆ ವರವ ನೀಡು....', ೨)'ಹಕ್ಕಿ ಹಾಡೋ ಚಿಲಿಪಿಲಿರಾಗ ಹರಿವಾ ನೀರಾ ಕಲಕಲ ವೇಗ...', ೩)'ಒಲುಮೆಯ ಹೂವೆ...', ೪)'ಗೋಧೂಳಿ ಹಾರುವ ಹೊತ್ತು...', ೫)'ಮುಳುಗ ಬಯಸುವೆ...', ೬)'ಇಂದು ನಮ್ಮ ಪುನರ್ಜನ್ಮ...'
ವಿ: ಬಂಗಾಳಿ ಸಂಗೀತ ನಿರ್ದೇಶಕ ದುಲಾಲ್‌ಸೇನ್ ಸಂಗೀತ ನಿರ್ದೇಶನ. ರಂಗಾಗೆ ಅತ್ಯುತ್ತಮ ಪೋಷಕ ನಟ ಪ್ರಶಸ್ತಿ
ಸೆ: ೪೧೪೫.೦೪ ಮೀ. ೧೬ ರೀಲುಗಳು
ಕ.ಸಾ: ಹಳ್ಳಿಯ ಪಟೇಲ ಚೆನ್ನ ಪರೋಪಕಾರಿ. ಪತ್ನಿ ನೀಲಾ ಸದ್ಗುಣೆ. ಚೆನ್ನನ ತಮ್ಮ ಅನಾಯಕ. ಆ ಊರಿನ ಅನಾಥ

ಬಾಲಕಿ ಮೇಲೆ ಪೂಜಾರಿಯ ಕಣ್ಣು. ಒಮ್ಮೆ ಪೂಜಾರಿ ಮಾನಭಂಗಕ್ಕೆ ಯತ್ನಿಸಿದಾಗ ನೀಲಾ ಹಾಗೂ ಚೆನ್ನ ನಾಗಿಯನ್ನು ರಕ್ಷಿಸಿ ತಮ್ಮ ಮನೆಗೆ ಕರೆತಂದರು. ಪೂಜಾರಿಯ ಮಾತು ಕೇಳಿ ಹೊನ್ನ ನಾಗಿಯ ಮೇಲೆ ಅತ್ಯಾಚಾರ ಮಾಡಿದ. ಈ ವಿಷಯ ಯಾರಿಗೂ ಹೇಳಬಾರದೆಂದು ಚೆನ್ನನ ತಾಯಿ ನಾಗಿಯಿಂದ ಮಾತು ತೆಗೆದುಕೊಂಡಳು. ಚೆನ್ನನೇ ನಾಗಿಯ ಮೇಲೆ ಅತ್ಯಾಚಾರ ಮಾಡಿದ ಎಂದು ಪೂಜಾರಿ ಸುದ್ದಿ ಹಬ್ಬಿಸಿದ. ಮಾತು ನೀಡಿದ್ದ ನಾಗಿ ಮೌನವಾಗಿಯೇ ಇದಳು. ನೀಲಾ ಆತ್ಮಹತ್ಯೆ ಮಾಡಿಕೊಂಡಳು. ನಾಗಿ ಗಂಡು ಮಗುವಿನ ತಾಯಿ ಆದಳು. ಪೂಜಾರಿಯ ಕುತಂತ್ರಗಳು ಬಯಲಾಗಿ ಹೊನ್ನ ತಾನೇ ಮಗುವಿನ ತಂದೆ ಎಂದು ಒಪ್ಪಿಕೊಂಡು ನಾಗಿಯನ್ನು ವಿವಾಹವಾದ.

೨೮೦. ಮದುವೆ! ಮದುವೆ! ಮದುವೆ!!

(೧೯೬೯ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ವಿಜಯಶಾಲಿನಿ ಚಿತ್ರ
ಪ್ರೊ: ಶಾರದಮ್ಮ, ಚೋರಯ್ಯ
ನಿ: ಗೀತಪ್ರಿಯ
ಸ.ನಿ: ಸುನಂದ್
ಅ: ಉದಯಕುಮಾರ್, ಬಿ.ಎಂ.ವೆಂಕಟೇಶ್, ದಿನೇಶ್, ರಂಗ, ಬಾಲಕೃಷ್ಣ, ಜಯಂತಿ, ಸಿಂಗಣ್ಣ, ಗಣಪತಿಭಟ್, ವಿಜಯಕುಮಾರ್, ಸಾಧನ, ಪೂರ್ಣಿಮ, ಸುಂದರಮ್ಮ, ಜಯಕುಮಾರಿ
ಕ/ಚಿ.ಕ/ಮಾ/ಗೀ: ಗೀತಪ್ರಿಯ
ಗಾ: ಪಿ.ಬಿ.ಶ್ರೀನಿವಾಸ್, ಎಲ್.ಆರ್.ಈಶ್ವರಿ, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಬಿ.ಕೆ.ಸುಮಿತ್ರ
ಸಂ: ಬಾಲ್ ಜಿ.ಯಾದವ್, ವಿಕ್ಟರ್ (ಸಹಾಯ)

ಛಾ: ಟಿ.ವಿಲ್ಲಪ್ಪ
ಕಲೆ: ಪಿ.ವೆಂಕಟರಾಮ್
ಸ: ಸತ್ಯಂ
ಧ್ವ: ಎಸ್.ಪಿ.ರಾಮನಾಥನ್, ಕೋಟೀಶ್ವರರಾವ್
ನೃ: ಬಿ.ಜಯರಾಮ್, ಪಿ.ಎ.ಸಲೀಮ್
ಪ್ರ: ಜಿ.ಎಸ್.ವಾಸು, ವೀರಾಸ್ವಾಮಿ
ಕ.ಸಾ: ವೈದೀಕ ಸಂಪ್ರದಾಯದ ಶ್ರೋತ್ರಿಗಳ ಸೊಸೆ ವಿಧವೆ. ಕಾಲೇಜಿನಲ್ಲಿ ಓದು ಮುಂದುವರಿಸಿ ಇಂಗ್ಲಿಷ್ ಪ್ರಾಧ್ಯಾಪಕರನ್ನು ಪ್ರೀತಿಸುತ್ತಾಳೆ. ಮದುವೆಯೂ ಆಗುತ್ತಾಳೆ. ಆವಳ ಮಗ ತಾತನ ಬಳಿ ಬೆಳೆಯುತ್ತಾನೆ. ತಾಯಿಯನ್ನು ತಾಯಿ ಎಂದು ಆ ಮಗ ಒಪ್ಪಿಕೊಳ್ಳುವುದಿಲ್ಲ. ಅದೇ ಕೊರಗಿನಲ್ಲಿ ಆಕೆ ಹಾಸಿಗೆ ಹಿಡಿಯುತ್ತಾಳೆ. ಶ್ರೋತ್ರಿಗಳಿಗೆ ತಮ್ಮ ಜನ್ಮರಹಸ್ಯ ತಿಳಿದು ಭ್ರಮೆ ದೂರವಾಗಿ, ಸೊಸೆಯನ್ನು ಕ್ಷಮಿಸಿ ಆಕೆಯನ್ನು ಕಾಣಲು ಬರುತ್ತಾರೆ.

೩೭೩. ಸಿಪಾಯಿ ರಾಮು
(೧೯೭೨ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಶ್ರೀ ಭಗವತಿ ಪ್ರೊಡಕ್ಷನ್ಸ್
ಪ್ರೊ: ಶ್ರೀ ಭಗವತಿ ಪ್ರೊಡಕ್ಷನ್ಸ್
ನಿ: ವೈ.ಆರ್.ಸ್ವಾಮಿ
ಸ.ನಿ: ಕುಣಿಗಲ್ ನಾಗಭೂಷಣ್, ಕೆಎನ್.ಚಂದ್ರಶೇಖರ ಶರ್ಮ
ಅ: ರಾಜಕುಮಾರ್, ಕೆ.ಎಸ್.ಅಶ್ವತ್ಥ್, ಶಿವರಾಂ, ವಜ್ರಮುನಿ, ತೂಗುದೀಪ ಶ್ರೀನಿವಾಸ್, ಬಿ.ಆರ್.ನಾಗರಾಜ್, ಶಕ್ತಿಪ್ರಸಾದ್, ಲೀಲಾವತಿ, ಆರತಿ, ವಿಜಯಕಲಾ, ಜಯಶ್ರೀ, ಕಲಾ, ಜಯಾ, ನಳಿನಿ, ಶಾಂತಮ್ಮ, ಬೇಬಿ ಸುನಿತಾ (ಮುದ್ದು ಮೀನಾ), ಜ್ಯೂ. ಜಯಂತಿ
ಕ: ಎನ್.ಪಂಕಜ ಅವರ 'ಬರಲೆ ಇನ್ನು ಯಮುನೆ' ಕಾದಂಬರಿ
ಚಿ.ಕ: ಬಾಸುಮಣಿ
ಮಾ/ಗೀ: ಆರ್.ಎನ್.ಜಯಗೋಪಾಲ್
ಗಾ: ಪಿ.ಬಿ.ಶ್ರೀನಿವಾಸ್, ಪಿ.ಸುಶೀಲ, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಲ್.ಆರ್.ಈಶ್ವರಿ
ಸಂ: ಪಿ.ಭಕ್ತವತ್ಸಲಂ, ಅಚ್ಯುತನ್
ಛಾ: ಆರ್.ಚಿಟ್ಟಿಬಾಬು
ಕಲೆ: ಬಿ. ಚಲಂ
ಸ: ಉಪೇಂದ್ರಕುಮಾರ್
ಧ್ವ: (ಹಾ)ಕೋಟೇಶ್ವರರಾವ್, (ಮಾ)ಕೆ.ಶ್ರೀನಿವಾಸ್
ನೃ: ಚಿನ್ನಿ-ಸಂಪತ್
ಸಾ: ವೈ.ಶಿವಯ್ಯ
ವ: ಬಿ.ಅಪ್ಪಾರಾವ್, ಪಿ.ದೊರೈಕಣ್ಣನ್
ಪ್ರ: ದೊರೈಸ್ವಾಮಿ ನಾಯ್ಡು, ಮನ್ಮಥರಾವ್, ವಿಶ್ವನಾಥ್, ಕೇಶವ, ಶ್ರೀನಿವಾಸ್, ಕೇಶಾಲಂಕಾರ : ಸೆಲ್ವಂ ರಾಮು
ಸ್ಟು: ಕಂಠೀರವ, ಸುಜಾತ
ಹಾ: ೧)'ತಂಗಾಳಿ ಸಂಗೀತ ಹಾಡಿದೆ....', ೨)'ವಹ್ವಾರೆ ಮೇರಾ ಮುರುಗ ವಹ್ವಾರೆ ನನ್ನ ರಂಗ....', ೩)'ಕಣ್ಣ ನೋಟದಲ್ಲೇ ನೀ ಕಾಡಬೇಡ ಸಾಜನಾ....', ೪)'ನಿದಿರೆಯು ಸದಾ ಏಕೋ ದೂರಾ.....', ೫)'ಕಥೆ ಮುಗಿಯಿತೇ ಆರಂಭದಾ ಮುನ್ನ....'
ವಿ: ತೃತೀಯ ಅತ್ಯುತ್ತಮ ಚಿತ್ರ - ರಾಜ್ಯ ಪ್ರಶಸ್ತಿ, ಅತ್ಯುತ್ತಮ ಪೋಷಕ ನಟಿ - ಲೀಲಾವತಿ
ಸೆ: ಉದ್ದ - ೪೬೪೪.೭೨, ೧೮ ರೀಲ್‌ಗಳು
ಕ.ಸಾ: ಸೈನ್ಯದಿಂದ ಪರಮವೀರ ಚಕ್ರ ಪಡೆದು ಬಂದ ಸಿಪಾಯಿ ರಾಮುವಿನ ತಂಗಿ ದುಷ್ಟನೊಬ್ಬನ ಕಾಮಪಿಪಾಸೆಗೆ ಬಲಿಯಾಗಿ ಅತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ವಿಚಾರಣೆಗೆ ಹೋದ ರಾಮು ದುಷ್ಟನ ಜಾಲಕ್ಕೆ ಸಿಲುಕಿ ಕೊಲೆಯ ಆರೋಪ ಹೊತ್ತು ಸೆರೆಮನೆ ಸೇರಬೇಕಾಗುತ್ತದೆ. ಅಲ್ಲಿ ಡಕಾಯಿತ ಹರಿಸಿಂಗ್ ಪರಿಚಯವಾಗಿ ಚಂಬಲ್ ಕಣಿವೆ ಸೇರುತ್ತಾನೆ. ಅಲ್ಲಿ ಅನೇಕ ಸುಧಾರಣೆಗಳನ್ನು ಮಾಡುವನು. ಅವನನ್ನು ಹಿಡಿದು ಕೊಟ್ಟವರಿಗೆ ಹತ್ತು ಸಾವಿರ ರೂ.ಗಳ ಬಹುಮಾನವನ್ನು ಸರ್ಕಾರ ಘೋಷಿಸುತ್ತದೆ. ಊರಿಗೆ ಬಂದ ರಾಮು ಮಡದಿ - ಮಗ ಕಡುಬಡತನದಲ್ಲಿರುವುದನ್ನು ಕಂಡು, ತನ್ನ ಮಗನ ಮೂಲಕವೇ ಪೊಲೀಸರಿಗೆ ಸುಳಿವು ಕೊಡಿಸಿ, ಬಂಧಿತನಾಗಿ ಬಹುಮಾನದ ಹಣ ತನ್ನ ಕುಟುಂಬಕ್ಕೆ ಸೇರುವಂತೆ ಮಾಡುತ್ತಾನೆ.

೩೭೪. ವಿಷಕನ್ಯೆ
(೧೯೭೨ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಕರ್ನಾಟಕ ಮೂವೀಸ್
ಪ್ರೊ: ಎನ್.ಶಿವಣ್ಣ, ಪಿ.ಶ್ರೀನಿವಾಸಮೂರ್ತಿ
ನಿ: ಹುಣಸೂರು ಕೃಷ್ಣಮೂರ್ತಿ
ಅ: ರಾಜೇಶ್, ಧಿಕ್ಕಿಮಾಧವರಾವ್, ದ್ವಾರಕೀಶ್, ತೂಗುದೀಪ ಶ್ರೀನಿವಾಸ್, ಎಂ.ಪಿ.ಶಂಕರ್, ಎಚ್.ಟಿ.ಅರಸ್,

ನಂಜಪ್ಪ, ರಾಮರಾವ್, ರಾಮಕೃಷ್ಣರಾಜು, ಬಾಲಕೃಷ್ಣ, ನಂದಕುಮಾರ್. ಕೆ.ಎಸ್.ಅಶ್ವತ್ಥ್, ಬಿ.ಎಂ.ವೆಂಕಟೇಶ್, ಜಯಂತಿ, ಬಿ.ವಿ.ರಾಧ, ಎಂ.ಎನ್.ಲಕ್ಷ್ಮೀದೇವಿ, ಶಕುಂತಲ, ಶೈಲಶ್ರೀ
ಕ/ಚಿ.ಕ/ಮಾ/ಗೀ: ಹುಣಸೂರು ಕೃಷ್ಣಮೂರ್ತಿ
ಗಾ: ಪಿ.ಸುಶೀಲ, ಎಸ್.ಜಾನಕಿ, ಎಲ್.ಆರ್.ಈಶ್ವರಿ, ನಾಗೇಂದ್ರ
ಸಂ: ಪಿ.ಎಸ್.ಮೂರ್ತಿ
ಛಾ: ಕೆ.ಎಸ್.ಗೋವಿಂದಸ್ವಾಮಿ
ಕಲೆ: ಪಿ. ವೆಂಕಟರಾಮಯ್ಯ
ಪ: ರಾಜನ್ ನಾಗೇಂದ್ರ
ಧ್ವ: ಮೋಹನ ಸುಂದರಂ (ಹಾ)
ನೃ: ರತ್ನ ಕುಮಾರ್ (ಎನ್.ರಾಮು)
ಸಾ: ವೈ.ಶಿವಯ್ಯ, ಸ್ವಾಮಿ, ಸುಬ್ಬಯ್ಯ
ವ: ಪಿ.ಚಂಟಿಬಾಬು
ಸ್ಟು: ಪ್ರೀಮಿಯರ್
ಹಾ: ೧)'ಆಡೋ ಸಮಯದಲ್ಲಿ ನೀ ಆಡಬೇಕು...', ೨)'ಮದುವೆ ಅಂದರರ್ಥವೇನ ಹೇಳೆ ಮಲ್ಲಿಗೆ....', ೩)'ನಾನು ನಾನು ನಾನು ನಾನು ನಾನೇನಯ್ಯ....', ೪)'ಓ ರಾಮಣ್ಣ, ಲಿಂಗಣ್ಣ, ಚಂದಣ್ಣ, ಹನುಮಣ್ಣ, ಹೇಳಣ್ಣ...', ೫)'ಏನೋ ಇದೇನೋ ಯಾಕೋ ಅಳುಕಳುಕು....', ೬)'ಮಾರೋ ತಿಂಡಿ ಮಜ ಏಸ್ ಕಂಡಿ...'
ಪೆ: ೧೫ ರೀಲು
ಕ.ಸಾ: ಶ್ರೀಮಂತ ವ್ಯಕ್ತಿಯ ಮಗನನ್ನು ಪ್ರೀತಿಸಿದ ಹುಡುಗಿ, ಅದನ್ನು ಒಪ್ಪದ ತಂದೆ ಆ ಹುಡುಗಿಯನ್ನು ಅಪಹರಣ ಮಾಡಿಸಿ ಅವಳನ್ನು ವಿಷಕನ್ಯೆಯನ್ನಾಗಿ ಮಾಡಿರುತ್ತಾನೆ. ಅವಳ ಮುಖಾಂತರ ತನಗೆ ಅನುಕೂಲವಾದ ಕೆಲಸಗಳನ್ನು ಮಾಡಿಕೊಳ್ಳುತ್ತಿರುತ್ತಾನೆ. ಆ ಹುಡುಗಿಯ ಅಣ್ಣ ತಂಗಿಯನ್ನು ಪತ್ತೆಹಚ್ಚಲು ಹೊರಟು ಕೊಲೆಗಳ ಆರೋಪ ಹೊತ್ತು ಜೈಲು ಸೇರುವನು. ಪೇಪರ್ ಮಾರುವವ ನೀಡಿದ ಸುಳಿವನ್ನು ಅನುಸರಿಸಿ ಇನ್‌ಸ್ಪೆಕ್ಟರ್ ಸತ್ಯವನ್ನು ಬಯಲಿಗೆಳೆಯಲು ಸಿ.ಐ.ಡಿ. ಶೈಲಜಳನ್ನು ನೇಮಿಸುತ್ತಾನೆ. ಇನ್‌ಸ್ಪೆಕ್ಟರ್‌ನ ಮಗಳು ನೆರವಾಗುತ್ತಾಳೆ. ಶ್ರೀಮಂತ ವ್ಯಕ್ತಿಯ ಎರಡೂ ಮುಖಗಳನ್ನು ಬಯಲು ಮಾಡುತ್ತಾರೆ.

೩೭೫. ಉತ್ತರದಕ್ಷಿಣ

(೧೯೭೨ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಮಿನಿ ಮೂವೀಸ್
ಪ್ರೊ: ಉಮಾ ಸದಾಶಿವ್
ನಿ: ವಿಜಯಾ ಸತ್ಯಂ
ಅ: ರಮೇಶ್, ಶ್ರೀನಾಥ್, ಕೆ.ಎಸ್.ಅಶ್ವತ್ಥ್, ಸಂಪತ್, ನಾಗಪ್ಪ, ದ್ವಾರಕೀಶ್, ಕಲ್ಪನಾ, ಪಂಢರಿಬಾಯಿ, ಉದಯಚಂದ್ರಿಕಾ, ಬಿ.ಇಂದ್ರಾಣಿ, ಮಾ|ಶಿವಶಂಕರ್, ಮಾ|ದಶರಥ್, ಮಾ|ನಾಗಕುಮಾರ್, ಕು|ಚಂದಾ, ಕು|ಬಿಂದು,
ಕ: ಉಮಾ ಸದಾಶಿವ್
ಮಾ/ಗೀ: ವಿಜಯನಾರಸಿಂಹ
ಗಾ: ವಸಂತ, ಸರೋಜ, ಲತಾ, ಎಸ್.ಜಾನಕಿ, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಪಿ.ಬಿ.ಶ್ರೀನಿವಾಸ್
ಸಂ: ಜಿ.ವೆಂಕಟರಾಮ್
ಛಾ: ಅಣ್ಣಯ್ಯ
ಕಲೆ: ಸೋಮನಾಥ್
ಪ: ಎಂ.ರಂಗರಾವ್
ಸ್ಟು: ಪ್ರೀಮಿಯರ್, ಮೈಸೂರು
ಹಾ: ೧)'ಓಂ ಓಂ ಓಂ ಓಂ ನಮಃ ಶಿವಾಯ...', ೨)'ಚೆಲುವಾದ ಅರವಿಂದ ನಗೆ ಬೀರಿದೆ....', ೩)'ರವಿಯು ಬಂದ ಉಷೆಯ ಕೆನ್ನೆಗೆ ರಂಗು ತಂದಾ...', ೪)'ಕನ್ನಡ ನಾಡ ಭಾಗ್ಯದ ನಿಲಯಾ....', ೫)'ಕನ್ನಡ ದೇವಿಯ ಮಕ್ಕಳೇ....', ೬)'ಮಿಂಚೀಗ ಬಾಳಿನ ಮುನ್ನುಡಿ ಬರೆಯಿತು.....', ೭)'ಸುರಲೋಕದಿಂದ ಹರಿಪಾದ ತೊರೆದು ಧರೆಗಿಳಿದು ಬಂದ ಹೆಣ್ಣು....'

ವಿ: ಗಂಗಾ-ಕಾವೇರಿ ನದಿಯನ್ನು ಸೇರಿಸುವ ವಿಶ್ವೇಶ್ವರಯ್ಯನವರ ಕಲ್ಪನೆಯನ್ನು ತರಲಾಗಿದೆ.
ಕ.ಸಾ: ಕರ್ನಾಟಕದ ಹುಡುಗ ಬಂಗಾಳದ ಹುಡುಗಿಯನ್ನು ಮೆಚ್ಚಿ ಮದುವೆಯಾಗುತ್ತಾನೆ. ಆದರೆ ಹುಡುಗನ ತಾಯಿ ಈ ಮದುವೆಯನ್ನು ಒಪ್ಪುವುದಿಲ್ಲ. ನಾಯಕ ಅಣೆಕಟ್ಟೊಂದನ್ನು ಕಟ್ಟಿರುತ್ತಾನೆ. ಹಳೆಯ ದುಷ್ಟನೊಬ್ಬ ಆಣೆಕಟ್ಟನ್ನು ಸ್ಫೋಟಿಸುವ ಯತ್ನ ಮಾಡುತ್ತಾನೆ. ಆಗ ಅದನ್ನು ತಡೆಯುವ ಪ್ರಯತ್ನದಲ್ಲಿ ನಾಯಕ ನಾಯಕಿ ಬಲಿಯಾಗುತ್ತಾರೆ. ಈ ರೀತಿ ಉತ್ತರ-ದಕ್ಷಿಣ ಒಂದಾಗುತ್ತದೆ.

೩೭೬. ಸುಭದ್ರಾ ಕಲ್ಯಾಣ

(೧೯೭೨ / ಬಣ್ಣ / ಪೌರಾಣಿಕ)
ಲಾ: ಚಾಮುಂಡೇಶ್ವರಿ ಸ್ಟುಡಿಯೋ ಅಂಡ್ ಲ್ಯಾಬೋರೇಟರಿ
ಪ್ರೊ: ಕೆ.ಕಾಪ್ಪಸ್ವಾಮಿ ನಾಯ್ಡು
ನಿ: ಕಣಗಾಲ್ ಪ್ರಭಾಕರ ಶಾಸ್ತ್ರಿ
ಸ.ನಿ: ಸುಂದರಕೃಷ್ಣ ಅರಸ್
ಅ: ಗಂಗಾಧರ್, ರಾಜೇಶ್, ವಜ್ರಮುನಿ, ನರಸಿಂಹರಾಜು, ಭದ್ರಾಚಲಂ, ಗುರುರಾಜಲು ನಾಯ್ಡು, ಎ.ಎಸ್.ಮೂರ್ತಿ, ಕಲ್ಪನಾ, ಬಿ.ವಿ.ರಾಧಾ, ವಿಜಯಕಲಾ, ಗೌರಿ, ಸ್ವರ್ಣಮ್ಮ, ಪ್ರಭಾ
ಕ/ಚಿ.ಕ/ಮಾ/ಗೀ: ಕಣಗಾಲ್ ಪ್ರಭಾಕರ ಶಾಸ್ತ್ರಿ
ಗಾ: ಪಿ.ಬಿ.ಶ್ರೀನಿವಾಸ್, ಎಂ.ಎಸ್.ಶೀಲಾ, ಬೆಂಗಳೂರು ಲತಾ, ಪಿ.ಕಾಳಿಂಗರಾವ್, ಮುಸುರಿ ಕೃಷ್ಣಮೂರ್ತಿ, ಎಸ್.ಗೀತಾ, ಸರಯೂ ಸೂರ್ಯ, ನಾಗಮಣಿ ಶ್ರೀವತ್ಸ, ಸರೋಜಾ ಶ್ರೀ ಶೈಲನ್
ಸಂ: ಎ.ಪಿ.ಕೃಷ್ಣ
ಛಾ: ಶ್ರೀಕಾಂತ್
ಕಲೆ: ಸಿ.ಕೆ.ಜಾನ್
ಪ: ಎಂ.ಎಸ್.ಸುಬ್ಬಯ್ಯ ನಾಯ್ಡು
ಧ್ವ: ಎ.ಗೋವಿಂದಸ್ವಾಮಿ
ವಿ: ತಾಂತ್ರಿಕ ಅಂಶಗಳೆಲ್ಲವೂ ಸ್ಟುಡಿಯೋದಲ್ಲೇ ನಡೆಯಿತು.
ಸ್ಟು: ಚಾಮುಂಡೇಶ್ವರಿ
ಹಾ: ೨೧ ಪದ್ಯ ಹಾಗೂ ಗೀತೆಗಳು, ೧)'ಅರ್ಜುನ ಫಲ್ಗುಣ ಪಾರ್ಥ ಕಿರೀಟಿ ಶ್ವೇತವಾಹನಾ...', ೨)'ಜೀವನ ಜೇನಾಗೂ ರಸರಾಸ ಲೀಲೆ....', ೩)'ಹೂ ಬಾಣ ಹೂಡಿದ ಜಾಣ....', ೪)'ಶ್ರೀಹರಿ ಕಥಾವಿಲಾಸದ ಮಧುರ....', ೫)'ಫಲಿಸೀ ಫಲಿಸಿತು ಗುರುಪ್ರಸಾದ....', ೬)'ಬಳೇ ಬಳೇ ಗೌರಿ ಬಳೇ...', ೭)'ಮನದೊಳ್ ಪ್ರತಿಬಿಂಬಿಸುವವ್ರೋಲ್....', ೮)'ಚಿತ್ತೀವಸ್ತ್ರಿ ಪರಮೇಶ...', ೯)'ಬಾರಮ್ಮ ಬಾರೆ ಸೋದರಿ....', ೧೦)'ಸವಮಲ ಯಾತಿಗಳು ತಮ್ಮಯ....', ೧೧)'ಎಲ್ಲಿ ಬಲ್ಲಿ ನೀವು ಕಾಲಜ್ಞಾನಿ ಮೌನಿ...', ೧೨)'ಸಲೆ ಪೌರ್ಣಮಾ ಪೂರ್ಣ ಶಶಿಧರನ...', ೧೩)'ನಿನಗಾಗಿ ನಾ ಬಂದೆ ಯತಿರೂಪದಲಿ...', ೧೪)'ಯದುವೀರ ಬಲದೇವ ತಾಳ್ಮೆ ತಾಳಯ್ಯ....'
ಪ್ರ: ಅತ್ಯುತ್ತಮ ಧ್ವನಿಗ್ರಾಹಕ ರಾಜ್ಯ ಪ್ರಶಸ್ತಿ ಎ.ಗೋವಿಂದಸ್ವಾಮಿ (೭೧-೭೨)
ಕ.ಸಾ: ಅರ್ಜುನ ಸನ್ಯಾಸಿ ವೇಷದಲ್ಲಿ ಬಂದು ಸುಭದ್ರೆಯನ್ನು ಅಪಹರಿಸಿಕೊಂಡು ಹೋಗಿ ಮದುವೆಯಾಗುವ ಪೌರಾಣಿಕ ಕಥೆ.

೩೭೭. ಯಾರ ಸಾಕ್ಷಿ ?

(೧೯೭೨ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ರಾಜ್ ಕಂಬೈನ್ಸ್
ನಿ: ಎಂ.ಆರ್. ವಿಠಲ್
ಅ: ಮಂಜುಳಾ, ಸಂಪತ್, ಜಿ.ವಿ.ಶಿವಾನಂದ್, ಲೋಕನಾಥ್
ವಿ: ತಾರ ಮಂಜುಳಾ ಅಭಿನಯದ ಪ್ರಥಮ ಚಿತ್ರ

೩೭೮. ಬಾಳಪಂಜರ

(೧೯೭೨ / ಕಪ್ಪು-ಬಿಳುಪು / ಸಾಮಾಜಿಕ)
ಲಾ/ಪ್ರೊ: ಇಂಡಿಯನ್ ನ್ಯಾಷನಲ್ ಪಿಕ್ಚರ್ಸ್
ನಿ: ಎಂ.ಆರ್.ವಿಠಲ್
ಸ.ನಿ: ಕೆ.ಸೀತಾರಾಂ
ಅ: ಅಶ್ವತ್ಥ್, ನರಸಿಂಹರಾಜು, ರಂಗ, ತೂಗುದೀಪ ಶ್ರೀನಿವಾಸ್, ಪಂಢರಿಬಾಯಿ, ಶೈಲಶ್ರೀ, ಚೇತನ್, ರಮಾ, ಮಾಲಾಶ್ರೀ, ನಾರಾಯಣ್, ಸಂಪತ್, ಸೋಮಶೇಖರ್, ಜೇಜಮ್ಮ, ಮಾ| ನಾಗರಾಜ್, ಮಾ| ರವಿಶಂಕರ್, ಮಾ| ಕಂಠಿ, ಮಾ| ರವಿ, ಕು| ಸಾವಿತ್ರಿ, ಮಾ| ಗಣೇಶ್
ಕ: ಜಿ ಡಿ. ಮುದ್ನಾಳ್ಕರ್
ಮಾ: ತ.ರಾ.ಸು.
ಗೀ: ವಿಜಯನಾರಸಿಂಹ
ಗಾ: ಪಿ.ಬಿ.ಶ್ರೀನಿವಾಸ್, ಜೇಸುದಾಸ್, ಎಸ್.ಜಾನಕಿ, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಲ್.ಆರ್.ಈಶ್ವರಿ
ಸಂ: ಆರ್.ಎ.ಚಿನ್ನಪ್ಪ
ಛಾ: ಕುಮಾರ್
ಕಲೆ: ಕೇಶವರಾವ್ - ರಮೇಶ್
ಪ: ವಿಜಯಭಾಸ್ಕರ್
ಧ್ವ: (ಹಾ) ಮೋಹನಸುಂದರಂ (ಮಾ) ಕೆ.ಆರ್.ಸೀತಾರಾಂ, ಪಿ.ಜಿ.ಲಕ್ಷ್ಮಣ್
ವ: ನಜರ ನಾರಾಯಣ್, ವೇಲಾಯುಧಂ
ಪ್ರ: ರಾಜಗೋಪಾಲ್, ಎಂ.ಎಸ್.ಸುಬ್ಬಣ್ಣ, ವಿಶ್ವಂ, ಮಲ್ಲಿಕಾರ್ಜುನರಾವ್, ಭದ್ರಾರಾವ್
ಸ್ಟು: ಪ್ರೀಮಿಯರ್
ಹಾ: ೧)'ಹೂವ್ವಾಗಿ ಬಾಳಲ್ಲಿ...', ೨)'ಒಲವು ಹೃದಯ.. ನೀಡಿತು...', ೩)'ಕಾಳಾ ಕೆಂಚ ಕೇಳ್ರೋ...', ೪)'ಕಥೇನಾ ಚಿಕ್ಕಪ್ಪಾ.. ಭಲೆ.. ಖುಷಿ ತಮಾಷೆ...', ೪)'ಮಣ್ಣಿನ ದೇಹ...', ೫)'ಇದುವೆ ಸುಂದರ ಕಲ್ಯಾಣ ನಗರ...'
ಕ.ಸಾ: ಕಡುಬಡತನದಲ್ಲಿದ್ದ ಒಂದು ಕುಟುಂಬ ಜೀವನ ನಿರ್ವಹಣೆ ಸಾಧ್ಯವಾಗದ ಪರಿಸ್ಥಿತಿಯಲ್ಲಿ ಅದರ ಯಜಮಾನ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ನಂತರ ಅವನ ತಮ್ಮ ಸಂಸಾರದ ಹೊಣೆಹೊರುತ್ತಾನೆ. ದುಡಿದು ರೋಗಿಯಾಗುತ್ತಾನೆ. ಅತ್ತಿಗೆ, ಮಕ್ಕಳು ಎಲ್ಲರೂ ತೊರೆದು ಹೋಗುತ್ತಾರೆ. ಪರಿಸ್ಥಿತಿ ಸುಧಾರಿಸಿದ ಮೇಲೆ ಎಲ್ಲವೂ ಸರಿಹೋಗುತ್ತದೆ.

೩೭೯. ಬಂಗಾರದ ಮನುಷ್ಯ

(೧೯೭೨ / ಬಣ್ಣ / ಸಾಮಾಜಿಕ)
ಲಾ: ಶ್ರೀನಿಧಿ ಪ್ರೊಡಕ್ಷನ್ಸ್
ಪ್ರೊ: ಗೋಪಾಲ್-ಲಕ್ಷ್ಮಣ್
ನಿ: ಸಿದ್ದಲಿಂಗಯ್ಯ
ಸ.ನಿ: ಭಾರ್ಗವ
ಅ: ರಾಜಕುಮಾರ್, ಭಾರತಿ, ಬಾಲಕೃಷ್ಣ, ಎಂ.ಪಿ.ಶಂಕರ್, ಶ್ರೀನಾಥ್, ಶ್ಯಾಂ, ದ್ವಾರಕೀಶ್, ವಜ್ರಮುನಿ, ಲೋಕನಾಥ್, ನಾಗರಾಜ್, ಜೆಂ.ನಾಗೇಶ್, ಬಿ.ಹನುಮಂತಾಚಾರ್, ಹೆಚ್.ಆರ್.ಶಾಸ್ತ್ರಿ, ಗಣಪತಿಭಟ್, ಶನಿಮಹದೇವಪ್ಪ, ಮಹದೇವಪ್ಪ, ಆರತಿ, ಬಿ.ವಿ.ರಾಧ, ಆದವಾನಿ ಲಕ್ಷ್ಮೀದೇವಿ, ಕಲಾ, ಎಂ.ಎನ್.ಲಕ್ಷ್ಮೀದೇವಿ, ಜಾರ್ಜ್ ಇಂದಿರಾ, ಸುಶೀಲಾ, ಜಿ.ಶಾಂತಾ
ಕ: ಟಿ.ಕೆ.ರಾಮರಾವ್ ಅವರ ಕಾದಂಬರಿ
ಚಿ.ಕ: ಸಿದ್ದಲಿಂಗಯ್ಯ
ಮಾ: ಹುಣಸೂರು ಕೃಷ್ಣಮೂರ್ತಿ
ಗೀ: ಹುಣಸೂರು ಕೃಷ್ಣಮೂರ್ತಿ, ಚಿ.ಉದಯಶಂಕರ್, ಆರ್.ಎನ್.ಜಯಗೋಪಾಲ್, ವಿಜಯನಾರಸಿಂಹ,
ಗಾ: ಪಿ.ಬಿ.ಶ್ರೀನಿವಾಸ್, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಮೋತಿ, ಪಿ.ಸುಶೀಲ
ಸಂ: ಜಿ.ಕೆ.ವೆಂಕಟೇಶ್
ಛಾ: ಡಿ.ವಿ.ರಾಜಾರಾಂ
ಕಲೆ: ರಾಮ್‌ಕುಮಾರ್
ಪ: ಜಿ.ಕೆ.ವೆಂಕಟೇಶ್
ಧ್ವ: (ಹಾ)ಡಿ.ಮೋಹನ ಸುಂದರಂ, (ಮಾ)ಪಿ.ಜಿ.ಲಕ್ಷ್ಮಣ್, ಶ್ರೀನಿವಾಸ್
ನೃ: ಉಡುಪಿ ಬಿ.ಜಯರಾಂ, ದೇವಿ
ಸಾ: ವೈ.ಶಿವಯ್ಯ

ವ: ಕೆ.ಸಿ.ಎನ್.ಗೌಡ (ಸಲಹೆ), ಅಪ್ಪಾರಾವ್, ಎಂ.ನಾಥ್, ನಾಗರಾಜ್
ಪ್ರ: ದೊರೆಸ್ವಾಮಿ, ಮನ್ಮಥರಾವ್, ರಾಜಗೋಪಾಲ್, ಶ್ರೀನಿವಾಸ್, ವೀರಾಸ್ವಾಮಿ, ಕೇಶವ
ಸ್ಟು: ಕಂಠೀರವ
ಹಾ: ೧) 'ನಗುನಗುತಾ ನಲಿ ನಲೀ...', ೨) 'ಬಾಳ ಬಂಗಾರ ನೀನು ಹಣೆಯ ಸಿಂಗಾರ ನೀನು...', ೩) 'ಆಗದು ಎಂದು ಕೈಲಾಗದು ಎಂದು...', ೪) 'ಆಹಾ ಮೈಸೂರು ಮಲ್ಲಿಗೆ.....', ೫) 'ಹನಿ ಹನಿ ಗೂಡಿದ್ರೆ ಹಳ್ಳ...'
ವಿ: ಹುಲಿವೇಷ ಮತ್ತು ಕೀಲುಕುದುರೆ ನೃತ್ಯ ಇದೆ. ಕನ್ನಡ ಚಲನಚಿತ್ರರಂಗದಲ್ಲಿ ಅತಿ ಹೆಚ್ಚು ಕಾಲ ಪ್ರದರ್ಶನಗೊಂಡು ದಾಖಲೆ ಸ್ಥಾಪಿಸಿದ ಚಿತ್ರ. ಈ ಚಿತ್ರದ ಐದು ಹಾಡುಗಳೂ ಆರು ನಿಮಿಷಗಳ ಉದ್ದದ ಗೀತೆಗಳು. ರಾಜ್ಯ ಸರ್ಕಾರದ ದ್ವಿತೀಯ ಅತ್ಯುತ್ತಮ ಚಿತ್ರ, ಅತ್ಯುತ್ತಮ ಪೋಷಕ ನಟ ಬಾಲಕೃಷ್ಣ, ಅತ್ಯುತ್ತಮ ಚಿತ್ರಕತೆ - ಸಿದ್ದಲಿಂಗಯ್ಯ, ಅತ್ಯುತ್ತಮ ಛಾಯಾಗ್ರಾಹಕ - ಡಿ.ವಿ.ರಾಜಾರಾಂ, ಅತ್ಯುತ್ತಮ ಸಂಕಲನ - ಪಿ. ಭಕ್ತವತ್ಸಲಂ ಪ್ರಶಸ್ತಿಗಳು.
ಕ.ಸಾ: ಅಕ್ಕನ ಮನೆ, ಮಕ್ಕಳನ್ನು ಕಾಪಾಡಲು ತನ್ನ ಸುಖಸಂತೋಷಗಳನ್ನೇ ಬಲಿಕೊಟ್ಟ ತ್ಯಾಗ ಜೀವಿಯ ಬದುಕಿನ ಸಂಘರ್ಷವನ್ನು ಚಿತ್ರಿಸುವ ಹೃದಯ ಸ್ಪರ್ಶಿ ಕಥೆ.

೩೮೦. ಯಾವ ಜನ್ಮದ ಮೈತ್ರಿ

(೧೯೭೨ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಸುದರ್ಶನ್ ಫಿಲಂಸ್ (ಪ್ರೈ) ಲಿಮಿಟೆಡ್
ಪ್ರೊ: ಎಂ.ವಿ.ವೆಂಕಟಾಚಲಂ
ನಿ: ಗೀತಪ್ರಿಯ
ಸ.ನಿ: ಶ್ರೀಕೃಷ್ಣ
ಅ: ಕಲ್ಪನಾ, ಗಂಗಾಧರ್, ಕೆ.ಎಸ್.ಅಶ್ವತ್ಥ್, ರಾಮಚಂದ್ರಶಾಸ್ತ್ರಿ, ನರಸಿಂಹರಾಜು, ಡಾ|| ಸಂಪತ್‌ಕುಮಾರ್, ಬಿ.ವಿ.ರಾಧ, ಬೇಬಿ ಶ್ಯಾಂ, ವೈಶಾಲಿ (ಹೊಸ ಪರಿಚಯ), ಸುಶೀಲಾನಾಯ್ಡು, ಕೃಷ್ಣಚಂದ್ರ, ವಿಜಯಕುಮಾರ್, ವೆಂಕಟರಾಜು, ಸುಮತಿ, ಜ್ಯೂ| ಕಲ್ಪನಾ, ಅಪರ್ಣಾ, ಸರಸ್ವತಿ, ರತ್ನ, ವಿಜಯ, ರಮಾನಂದ್
ಕ: ಮಾ.ಭಿ.ಶೇಷಗಿರಿರಾವ್ ಅವರ 'ಜೀವನ ಚದುರಂಗ' ಕಾದಂಬರಿ
ಚಿ.ಕ/ಮಾ/ಗೀ: ಗೀತಪ್ರಿಯ
ಗಾ: ಪಿ.ಸುಶೀಲ, ಎಸ್.ಜಾನಕಿ
ಸಂ: ಬಾಲ್ ಜಿ.ಯಾದವ್, ಎಸ್.ಎಂ.ವಿಕ್ಟರ್
ಛಾ: ವಿ.ಮನೋಹರ್
ಕಲೆ: ಪೆರುಮಾಳ್
ಸ: ವಿಜಯಭಾಸ್ಕರ್
ಧ್ವ: (ಹಾ) ಮೋಹನಸುಂದರಂ, (ಮಾ) ಪಿ.ಜಿ.ಲಕ್ಷ್ಮಣ್
ವ: ಎಂ.ನಾಥ್, ಸಹಾಯ - ಕೆ.ಆರ್.ನಾಗರಾಜ್
ಪ್ರ: ಜಿ.ಎಸ್.ವಾಸು, ವೀರಾಸ್ವಾಮಿ, ರಾಜಗೋಪಾಲ್, ರಾಮಲಿಂಗಂ
ಸ್ಟು: ಸುಜಾತ
ಹಾ: ೧) 'ಮಧುರ ಮುರಳಿ ಲೋಲ ನಡೆದೆ ನೀನು ಎಲ್ಲೀ.....', ೨) 'ಮಂಜುಳ ನಾದ ಕಿವಿಯಲಿ ಇರಲಿ.....', ೩) 'ಜ್ಯೋತಿ ಕಿರಣ ಕಂಡೇ ಈ ದಿನ....', ೪) 'ಆನಂದ ಕಂದ ಹೇ ಮುಕುಂದ...', ೫) 'ಕೃಷ್ಣ ಹರೇ ಶ್ರೀಕೃಷ್ಣ ಹರೇ...' (ಭಜನೆ)
ವಿ: ೧೯೭೦-೭೧ನೇ ಸಾಲಿನ ತೃತೀಯ ಅತ್ಯುತ್ತಮ ಚಿತ್ರ. ವೈಶಾಲಿ ಅಭಿನಯದ ಮೊದಲ ಚಿತ್ರ.
ಸೆ: ಉದ ೪೪೫೧.೨೯, ೧೫ ರೀಲ್‌ಗಳು, 'ಯು' ಸರ್ಟಿಫಿಕೇಟ್
ಕ.ಸಾ: ನಗರದಿಂದ ಹಳ್ಳಿಗೆ ಬಂದ ನಾಯಕ, ಮದುವೆಯಾದ ಮೊದಲ ದಿನವೇ ಪತಿಯನ್ನು ಕಳೆದುಕೊಂಡು ಮಾನಸಿಕವಾಗಿ ಅಸ್ವಸ್ಥಳಾದ ನಾಯಕಿಯನ್ನು ಕಾಣುತ್ತಾನೆ. ಆಕೆ ಆತನನ್ನು ತನ್ನ ಗಂಡನೆಂದೇ ಭಾವಿಸುತ್ತಾಳೆ. ಆತನು ಕೂಡ ಆಕೆಯ ಕಾಯಿಲೆ ವಾಸಿಯಾಗಲು ಆಕೆಯ ಗಂಡನಂತೆ ವರ್ತಿಸುತ್ತಾನೆ. ಆದರೆ ಆತ ಮೊದಲೇ ವಿವಾಹಿತ. ಆತನ ಹೆಂಡತಿ ಈ ವಿಷಯ ತಿಳಿದು ಸಹಕರಿಸುತ್ತಾಳೆ. ಜೀವನದ ಚದುರಂಗದಾಟದಲ್ಲಿ ಕಾಯಿಗಳಾದರು ಎಲ್ಲರು.

೩೮೧. ಭಲೇ ರಾಣಿ

(೧೯೭೨ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಶ್ರೀ ರಾಣೀ ಕಂಪೈನ್ಸ್
ಪ್ರೊ: ಸಾಂಬಶಿವರಾವ್
ನಿ: ವಿಜಯಾ ಸತ್ಯಂ
ಅ: ಉದಯಕುಮಾರ್, ರಮೇಶ್, ಶ್ರೀನಾಥ್, ಅಶ್ವತ್ಥ್, ನಾಗಪ್ಪ, ತೂಗುದೀಪ ಶ್ರೀನಿವಾಸ್, ಪ್ರಸನ್ನ, ಉದಯಶಂಕರ್, ಶಕ್ತಿಪ್ರಸಾದ್, ಪಂಢರಿಬಾಯಿ, ದೇವಿಕ, ರಮಾದೇವಿ, ಸರೋಜ, ಬೇಬಿರಾಣಿ, ನಾಯಿ (ಮೋತಿ)
ಚಿ.ಕ: ವಿಜಯಾ ಸತ್ಯಂ
ಮಾ/ಗೀ: ವಿಜಯನಾರಸಿಂಹ
ಗಾ: ಎಲ್.ಆರ್.ಈಶ್ವರಿ, ಪಿ.ಬಿ.ಶ್ರೀನಿವಾಸ್, ಎಸ್.ಜಾನಕಿ, ಬಿ.ಕೆ.ಸುಮಿತ್ರಾ, ಎಸ್.ಪಿ.ಬಾಲಸುಬ್ರಹ್ಮಣ್ಯಂ
ಸಂ: ವೆಂಕಟರಾವ್
ಛಾ: ಮಣಿ
ಸ: ಸತ್ಯಾರಾವ್
ಧ್ವ: (ಹಾ) ಕೋಟೀಶ್ವರರಾವ್ (ಮಾ) ಮೋಹನ ಸುಂದರಂ
ಸ್ಟು: ಪ್ರೀಮಿಯರ್
ಹಾ: ೧) 'ದೊರೆಯದ ಸಿಹಿ ವೇಳೆ...', ೨) 'ಬಾರಮ್ಮಾ ಕಂದಮ್ಮ...', ೩) 'ದೂರವ್ವೋ ಈ ಪಯಣಾ...', ೪) 'ಏನೋ ನಿನ್ನಯ ಲೀಲೆ...', ೫) 'ಓ ನಗುನಗುತಾ ಕುಣಿ...', ೬) 'ನೀಡಿ ತಾಯಿ ಕರುಣೆಯುಳ್ಳ...', ೭) 'ಕಂದ ಚಿನ್ನ ಮಲಗಮ್ಮಾ...'
ಕ.ಸಾ: ಮಕ್ಕಳಿಲ್ಲದ ಕೊರಗಿನಲ್ಲಿದ್ದ ಜಮೀನ್ದಾರ ಹಾಗೂ ಅವನ ಹೆಂಡತಿಗೆ ಮಗಳಾಗಿ ಜನಿಸಿದ ರಾಣಿ, ಕುತಂತ್ರಿಗಳ ಆಟದಿಂದ ತಂದೆ ಜೈಲು ಸೇರಿದಾಗ, ತನ್ನ ತಂದೆ ನಿರಪರಾಧಿ ಎಂಬುದನ್ನು ಸಾಹಸ-ಬುದ್ಧಿವಂತಿಕೆಯಿಂದ ಸಾಬೀತು ಪಡಿಸುವಳು.

೩೮೨. ಕುಳ್ಳ ಏಜೆಂಟ್ ೦೦೦

(೧೯೭೨ / ಕಪ್ಪು-ಬಿಳುಪು / ಪತ್ತೇದಾರಿ)
ಲಾ: ದ್ವಾರಕಾ ಫಿಲಂಸ್
ಪ್ರೊ: ಅಂಬುಜಾ ದ್ವಾರಕೀಶ್
ನಿ: ರವೀ (ಕೆ.ಎಸ್.ಎಲ್.ಸ್ವಾಮಿ)
ಸ.ನಿ: ದತ್ತು, ಮಣಿ
ಅ: ದ್ವಾರಕೀಶ್, ವಜ್ರಮುನಿ, ಉದಯಕುಮಾರ್, ಸಂಪತ್, ಜ್ಯೋತಿಲಕ್ಷ್ಮಿ, ಶಕ್ತಿಪ್ರಸಾದ್, ಜಯಾ, ವಿಜಯಭಾನು, ಸೂರ್ಯಕುಮಾರಿ, ರಂಗನಾಥ, ಸಿದ್ದರಾಮಯ್ಯ, ಶ್ರೀಕಾಂತ್, (ನೃತ್ಯ : ತಾರಾ-ದೇವಕಿ)
ಕ: ದ್ವಾರಕಾ ಫಿಲಂಸ್
ಚಿ.ಕ: ರವೀ
ಮಾ/ಗೀ: ಚಿ.ಉದಯಶಂಕರ್
ಗಾ: ಕಿಶೋರ್ ಕುಮಾರ್, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಪಿ.ಸುಶೀಲ, ಎಲ್.ಆರ್.ಈಶ್ವರಿ
ಸಂ: ಬಾಲ್ ಜಿ.ಯಾದವ್, ಎಸ್.ಎಂ.ವಿಕ್ಟರ್,
ಛಾ: ಪ್ರಕಾಶ್
ಕಲೆ: ಕೇಶವರಾವ್
ಸ: ರಾಜನ್-ನಾಗೇಂದ್ರ
ಧ್ವ: (ಮಾ) ಶಾಮಣ್ಣ, ಸೂರ್ಯನಾರಾಯಣರಾವ್, (ಹಾ) ಕೋಟೀಶ್ವರರಾವ್, ಮೋಹನಸುಂದರಂ, ಬಸ್‌ಸಾಲಿ
ನೃ: ಉಡುಪಿ ಬಿ.ಜಯರಾಂ
ಸಾ: ಶ್ಯಾಂ ಸುಂದರ್
ವ: ಚಿಂಟಿ ಬಾಬು, ನಜ್ರೆ ನಾರಾಯಣ್, ತಂಬು
ಪ್ರ: ವೀರಾಸ್ವಾಮಿ, ಶ್ರೀನಿವಾಸ್ ಸಿಂಗ್
ಕೇಶಾಲಂಕಾರ: ವೆಂಕಟೇಶ್, ಮಹಾಲಿಂಗಂ
ಸ್ಟು: ವಿಕ್ರಂ, ವೀನಸ್
ಹಾ: ೧) 'ಏಕೋ ಏನೋ...', ೨) 'ಆಡೂ ಆಟ ಆಡೂ...', ೩) 'ಸಿಂಗಾಪೂರಿಂದ ಬಂದೆ...', ೪) 'ಎಲ್ಲಾ ಮಾಯವೋ ಪ್ರಭುವೇ...', ೫) 'ಕುಳ್ಳ ಏಜೆಂಟ್ ಜೀರೋ...'
ವಿ: ಜ್ಯೋತಿಲಕ್ಷ್ಮಿ ನಾಯಕಿಯಾಗಿ ಅಭಿನಯಿಸಿದ ಪ್ರಥಮ ಚಿತ್ರ, ಕಿಶೋರ್‌ಕುಮಾರ್ ಈ ಚಿತ್ರಕ್ಕಾಗಿ ಹಾಡಿದರು.
ಕ.ಸಾ: ಬಾಂಡ್ ಶೈಲಿ ಪತ್ತೇದಾರಿ ಕಥೆ, ದರೋಡೆಕಾರರನ್ನು ಹಿಡಿಯುವ ಕನಸು ಕಂಡ ಕುಳ್ಳ ಏಜೆಂಟ್ ಸಿ.ಐ.ಡಿ. ಉದ್ಯೋಗ ಪಡೆದ. ನೈಟ್‌ಕ್ಲಬ್ ನೃತ್ಯಗಾತಿ ಜ್ಯೋತಿಯ ಪರಿಚಯ ಪಡೆದ. ದರೋಡೆಕಾರ ಮಿಸ್ಟರ್ ಎಸ್ ನಿಂದ ಸಿಂಗಪುರದ ಕಳ್ಳಸಾಗಣೆದಾರ ಮಿಸ್ಟರ್ ಆರ್ ಭಾರತಕ್ಕೆ ಬಂದು ಬಾಸ್‌ನನ್ನು ಭೇಟಿಯಾಗುವ ವಿಷಯ ತಿಳಿದ. ಸಿಂಗಪುರಕ್ಕೆ ಹೊರಟ. ಧೂರ್ತರ ಕೈಲಿ ಸಿಲುಕಿದ. ಜಾಣತನದಿಂದ ತಪ್ಪಿಸಿಕೊಂಡ. ಧೂರ್ತರನ್ನು ಸೆರೆಹಿಡಿದುಕೊಟ್ಟ.

೩೮೩. ಹೃದಯ ಸಂಗಮ

(೧೯೭೨ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಎಂ.ಜಿ.ಎಂ.ಪ್ರೊಡಕ್ಷನ್ಸ್
ಪ್ರೊ: ಹೆಚ್.ಎನ್.ಮುದ್ದುಕೃಷ್ಣ, ಹೆಚ್.ಎನ್.ಜಯಸಿಂಹ, ಹೆಚ್.ಎನ್.ಮಾರುತಿ
ನಿ: ರಾಶಿ ಸಹೋದರರು
ಸ.ನಿ: ಉಗ್ರನರಸಿಂಹ
ಅ: ರಾಜಕುಮಾರ್, ಭಾರತಿ, ಕೆ.ಎಸ್.ಅಶ್ವತ್ಥ್, ಬಾಲಕೃಷ್ಣ, ಜಯರಾಂ, ಶಕ್ತಿಪ್ರಸಾದ್, ಲೋಕನಾಥ್, ಮಹದೇವಪ್ಪ, ಶಿವರಾಂ, ಪಂಢರಿಬಾಯಿ, ಜಯಕುಮಾರಿ, ರಮಾ

ಕ: ಹೆಚ್.ಎನ್.ಮುದ್ದುಕೃಷ್ಣ
ಚಿ.ಕ: ರಾಶಿ ಸಹೋದರರು
ಮಾ: ನವರತ್ನರಾಂ
ಗೀ: ಆರ್.ಎನ್.ಜಯಗೋಪಾಲ್, ವಿಜಯನಾರಸಿಂಹ, ಗೀತಪ್ರಿಯ, ಚಿ.ಉದಯಶಂಕರ್
ಗಾ: ಪಿ.ಬಿ.ಶ್ರೀನಿವಾಸ್, ಎಸ್.ಜಾನಕಿ, ಎಲ್.ಆರ್.ಈಶ್ವರಿ, ಅಂಜಲಿ, ಮಹೇಶ್
ಸಂ: ವಿ.ಪಿ.ಕೃಷ್ಣನ್
ಛಾ: ಡಿ.ವಿ.ರಾಜಾರಾಂ
ಕಲೆ: ರಾಂಕುಮಾರ್
ಸ: ವಿಜಯಭಾಸ್ಕರ್
ಧ್ವ: ಪಿ.ಜಿ.ಲಕ್ಷ್ಮಣ್, ಎ.ಶ್ರೀನಿವಾಸ್, ಮೋಹನಸುಂದರಂ
ನೃ: ಉಡುಪಿ ಬಿ.ಜಯರಾಂ
ಸಾ: ವೈ.ಶಿವಯ್ಯ
ವ: ಕಣ್ಣನ್, ಎಂ.ನಾಥ್, ನಾಗರಾಜ
ಪ್ರ: ದೊರೆಸ್ವಾಮಿ, ಶ್ರೀನಿವಾಸ್, ಮೂಗೂರು ಪಿ.ಗುರು, ಕೇಶವ
ಸ್ಟು: ಕಂಠೀರವ, ಸುಜಾತ
ಹಾ: ೧) 'ನೀ ತಂದ ಕಾಣಿಕೆ ನಗ ಹೂವ ಮಾಲಿಕೆ....', ೨) 'ನಡೆ ನಡೆ ನಡೆ ನಡೆ ನಡೆ ಮನವೇ....', ೩) 'ಗಂಧಾದ ನೆರಿಗ್ಯೋಳೆ....', ೪) 'ಏನೋ ಕುರುಡು ಭಾವನೆ.....', ೫) 'ಯಾರೂ ನೀ ಯಾರೂ.....', ೬) 'ನೀ ತಂದ ಕಾಣಿಕೆ....'
ವಿ: ರಾಜ್ಯಸರ್ಕಾರದ ನಾಲ್ಕನೇ ಅತ್ಯುತ್ತಮ ಚಿತ್ರ ಪ್ರಶಸ್ತಿ
ಸೆ: ಉದ - ೪೭೭೪.೧೯, ೧೭ ರೀಲು
ಕ.ಸಾ: ತಂದೆ-ತಾಯಿಯನ್ನು ಕಳೆದುಕೊಂಡು ಬೇರೊಬ್ಬರ ಆಶ್ರಯದಲ್ಲಿ ಬೆಳೆದ ಶ್ರೀಮಂತ ಯುವಕ ಹಳ್ಳಿಯ ಹುಡುಗಿಯನ್ನು ಮದುವೆಯಾಗುತ್ತಾನೆ. ಸಾಕಿದವನಿಗೆ ಈ ಮದುವೆ ಇಷ್ಟವಾಗದೆ, ಅವರಿಬ್ಬರೂ ಬೇರೆಯಾಗುವಂತಾಯಿತು. ಕಾಲಾಂತರದಲ್ಲಿ ಅವರಿಬ್ಬರ

ನಡುವಣ ಮಾನಸಿಕ ಗೊಂದಲವೆಲ್ಲವೂ ತಿಳಿಗೊಂಡು ಅವರಿಬ್ಬರ ಹೃದಯಸಂಗಮವಾಗುತ್ತದೆ.

೩೮೪. ಒಂದು ಹೆಣ್ಣಿನ ಕಥೆ

(೧೯೭೨ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಪದ್ಮಿನಿ ಪಿಕ್ಚರ್ಸ್
ಪ್ರೊ/ನಿ: ಬಿ.ಆರ್.ಪಂತುಲು
ಸ.ನಿ: ಕೆ.ಸಿಂಗಮುತ್ತು, ಎಸ್.ಆರ್.ಶಿವರಾಂ, ಸಿ.ಕೆ.ಪೊನ್ನುಸ್ವಾಮಿ
ಅ: ಎಂ.ವಿ.ರಾಜಮ್ಮ, ಜಯಂತಿ, ಬಿ.ವಿ.ರಾಧ, ರಾಜೇಶ್, ಸುದರ್ಶನ್, ವಜ್ರಮುನಿ, ನರಸಿಂಹರಾಜು, ರಾಘವನ್, ರಾಮಚಂದ್ರಶಾಸ್ತ್ರಿ, ಕೃಷ್ಣಶಾಸ್ತ್ರಿ, ವೆಂಕಟರಾವ್, ಶ್ರೀರಂಗಮೂರ್ತಿ, ಗುರು, ಸಿದ್ದಲಿಂಗಪ್ಪ, ರಾಜಣ್ಣ, ಮಣಿ, ಪದ್ಮ, ಇಂದ್ರಾಣಿ, ಕಮಲಮ್ಮ, ಕು। ಜ್ಯೋತಿ, ಬೇಬಿ ಪದ್ಮಿನಿ
ಕ: ಜಗದೀಶ್
ಚಿ.ಕ: ಪದ್ಮಿನಿ ಪಿಕ್ಚರ್ಸ್ ಸಾಹಿತ್ಯ ವಿಭಾಗ
ಮಾ: ಆರ್.ಎನ್.ಜಯಗೋಪಾಲ್
ಗೀ: ಆರ್.ಎನ್.ಜಯಗೋಪಾಲ್, ವಿಜಯನಾರಸಿಂಹ
ಗಾ: ಪಿ.ಬಿ.ಶ್ರೀನಿವಾಸ್, ಎಸ್.ಜಾನಕಿ, ಎಲ್.ಆರ್.ಈಶ್ವರಿ



ಸಂ: ವಿ.ಪಿ.ಕೃಷ್ಣನ್
ಛಾ: ಪಿ.ಎಲ್.ನಾಗಪ್ಪ
ಕಲೆ: ಬಿಮಿನಿ ಸುಬ್ರಹ್ಮಣ್ಯಂ
ಸ: ಟಿ.ಜಿ.ಲಿಂಗಪ್ಪ
ಧ್ವ: ಕೆ.ಆರ್.ಸೀತಾರಾಂ, ವಿ.ಮೋಹನಸುಂದರಂ
ನೃ: ಕೃಷ್ಣಕುಮಾರ್ (ಧಾರವಾಡ)
ಸಾ: ಮಾದಕುಳಂ ಅಳಗರ್‌ಸ್ವಾಮಿ
ವ: ಎಂ.ರಾಧ
ಪ್ರ: ಮಾಣಿಕ್ಯಂ, ಪಾರ್ಥಸಾರಥಿ, ರಾಜಗೋಪಾಲ್, ವೀರಾಸ್ವಾಮಿ
ಸ್ಟು: ಪ್ರೀಮಿಯರ್
ಹಾ: ೧)'ಅವಳೇ ಗುಣವತಿ...', ೨)'ಮಿನು ಮಿನುಗುವ...', ೩)'ಸಾಗರಕೆ ಚಂದಿರ ತಂದ...', ೪)'ಹಾಡಲೇ ಪಲ್ಲವಿ...', ೫)'ಹೂವರಡು ಅರಳಿದವು...', ೬)'ಬರುವರು ಇಲ್ಲಿಗ...'
ಕ.ಸಾ: ತಾಯಿ ಹೆಸರಾಂತ ಮ್ಯಾಜಿಸ್ಟ್ರೇಟ್. ಅವಳಿಂದ ದೂರವಾದ ಹಣ್ಣು ಮಗಳು ವೇಶ್ಯೆ. ಮತ್ತೊಬ್ಬ ಮಗಳು ಕಾಲೇಜು ಓದುವ ಕನ್ಯೆ. ತಾಯಿ ಸಮಾಜದ ಮುಂದೆ ವೇಶ್ಯೆಯೆನಿಸಿದ ಮಗಳನ್ನು ತನ್ನ ಸ್ವಂತ ಮಗಳೆಂದು ಒಪ್ಪಿಕೊಳ್ಳಲಾಗದಂಥ ಪರಿಸ್ಥಿತಿ. ಕೈಬಿಡಲಾರಳು. ತಾಯಿ-ಮಗಳ ನಡುವಿನ ಸಂಬಂಧದ ಚಿತ್ರಣ.

೩೮೫. ನಾ ಮೆಚ್ಚಿದ ಹುಡುಗ

(೧೯೭೨ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ವಿಜಯ ಭಾರತಿ
ಪ್ರೊ: ಹರಿಣಿ, ಸಹ ನಿರ್ಮಾಪಕರು ವಾದಿರಾಜ್, ಜವಹರ್
ನಿ: ಆರ್.ಎನ್.ಜಯಗೋಪಾಲ್
ಸ.ನಿ: ಸಿ.ಎಂ.ಗಿರಿ, ಚಂದ್ರಶೇಖರ್ ಕುಕ್ಕಿಕಟ್ಟೆ
ಅ: ಕಲ್ಪನಾ, ಕೆ.ಎಸ್.ಅಶ್ವತ್ಥ್, ಲೀಲಾವತಿ, ರಮೇಶ್, ಶ್ರೀನಾಥ್, ವಾದಿರಾಜ್, ಆರ್.ನಾಗೇಂದ್ರರಾವ್, ವಿಜಯ್, ರಮಾ, ಲಕ್ಷ್ಮೀದೇವಿ, ಶಿವರಾಮ್, ಇಂದ್ರಾಣಿ, ಕಮಲಮ್ಮ, ಕಲಾಶ್ರೀ, ಅಯ್ಯಂಗಾರ್, ವಿಜಯ, ಸಿ.ಎಂ.ಗಿರಿ, ಮಾ।ಅರುಣ್
ಕ: ಪಿ.ಎಸ್.ವೈದ್ಯನಾಥನ್
ಚಿ.ಕ/ಮಾ/ಗೀ: ಆರ್.ಎನ್.ಜಯಗೋಪಾಲ್
ಗಾ: ಎಸ್.ಜಾನಕಿ, ಪಿ.ಬಿ.ಶ್ರೀನಿವಾಸ್, ರಾಘವನ್, ಬಿ.ಕೆ.ಸುಮಿತ್ರ, ಅಂಜಲಿ
ಸಂ: ಎಸ್.ಸಿ.ರಾಜನ್
ಛಾ: ಟಿ.ಜಿ.ಶೇಖರ್
ಕಲೆ: ಪಿ.ವೆಂಕಟರಾಮಯ್ಯ
ಸ: ವಿಜಯಭಾಸ್ಕರ್
ಧ್ವ: (ಹಾ)ಮೋಹನ ಸುಂದರಂ, (ಮಾ)ಕೆ.ಆರ್.ಸೀತಾರಾಂ, ಆರ್ಮುಗಂ
ನೃ: ಸುಂದರ್, ಉಡುಪಿ ಜಯರಾಂ, ಸಹಾಯ ದೇವಿ, ತಾರಾ
ಸಾ: ಬಾಜೂಸಿಂಗ್, ಠಾಕೂರ್
ವ: ಸುರೇಶ್, ಕಣ್ಣನ್
ಪ್ರ: ವೀರಾಸ್ವಾಮಿ, ಶ್ರೀನಿವಾಸ್, ರಾಜಗೋಪಾಲ್, ಷಣ್ಮುಗಂ
ಸ್ಟು: ಪ್ರೀಮಿಯರ್
ಹಾ: ೧)'ನಾ ಮೆಚ್ಚಿದ ಹುಡುಗನಿಗ ಕಾಣಿಕೆ ತಂದಿರುವೆ...', ೨)'ಬೆಳದಿಂಗಳಿನಾ ನೊರೆಹಾಲು...', ೩)'ಚೆಲುವೆ ಓ ಚೆಲುವೆ ನಿನಗಾಗೇ ಬಂದಿರುವೆ.....', ೪)'ಮಂಗಳದ ಈ ಸುದಿನ ಮಧುರವಾಗಲೀ....', ೫)'ಅಪ್ಪ ಅಮ್ಮ ಜಗಳದಲಿ ಕೂಸು ಬಡವಾಯ್ತು....'
ಕ.ಸಾ: ಗಂಡ ವಕೀಲ. ಹೆಂಡತಿ ವೈದ್ಯೆ. ಮಗಳಿಗೆ ವಕೀಲನನ್ನು ತರಬೇಕೆಂದು ಅಪ್ಪ, ವೈದ್ಯನನ್ನು ತರಬೇಕೆಂದು ಅಮ್ಮ. ಗಂಡ-ಹೆಂಡಿರ ನಡುವೆ ಈ ವಾಗ್ಯುದ್ಧ ನಡೆಯುತ್ತಲೇ ಇರುತ್ತದೆ. ಗಂಡ ಹೆಂಡತಿ ಬೇರೆ ಬೇರೆ ಆಗುತ್ತಾರೆ. ಮಗಳು ಕಾಲೇಜಿನಲ್ಲಿ ಪ್ರೀತಿಸಿದವನನ್ನು ಮದುವೆಯಾಗುತ್ತಾಳೆ. ಎಲ್ಲರೂ ಒಂದಾಗುತ್ತಾರೆ.

೩೮೬. ಕ್ರಾಂತಿವೀರ

(೧೯೭೨ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಶ್ರೀರಾಮ ಎಂಟರ್‌ಪ್ರೈಸಸ್
ಪ್ರೊ/ನಿ: ಆರ್.ರಾಮಮೂರ್ತಿ
ಸ.ನಿ: ವಿ.ಸೋಮಶೇಖರ್
ಅ: ರಾಜಕುಮಾರ್, ರಾಜೇಶ್, ದಿನೇಶ್, ಸಂಪತ್, ದ್ವಾರಕೀಶ್, ವಜ್ರಮುನಿ, ರಂಗ, ಹೆಚ್.ಆರ್.ಶಾಸ್ತ್ರಿ, ಜೋಕರ್ ಶ್ಯಾಂ, ಕೇಶವಮೂರ್ತಿ, ರಾಮಮೂರ್ತಿ, ಶಿವಾಜಿರಾವ್, ಮಹದೇವ, ಸಿವರಾಮಯ್ಯ, ಜಯಂತಿ, ಬಿ.ವಿ.ರಾಧ, ಜಯಕುಮಾರಿ, ಶೈಲೇಂದ್ರ
ಕ: ಆರ್.ರಂಗರಾಜನ್
ಚಿ.ಕ: ಕೆ.ವಿ.ಶ್ರೀನಿವಾಸನ್
ಮಾ: ಚಿ.ಉದಯಶಂಕರ್
ಗೀ: ಚಿ.ಉದಯಶಂಕರ್, ದಾಸರ ಕೃತಿ
ಗಾ: ಪಿ.ಬಿ.ಶ್ರೀನಿವಾಸ್, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಂ.ಸತ್ಯಂ, ವಾಸುದೇವನ್, ವಸಂತ, ಎಲ್.ಆರ್.ಈಶ್ವರಿ, ಪಿ.ಸುಶೀಲ
ಸಂ: ಆರ್.ರಾಮಮೂರ್ತಿ
ಛಾ: ಬಿ.ದೊರೆರಾಜ್
ಕಲೆ: ಗೋಡಗಾಂವ್‌ಕರ್
ಸ: ಸತ್ಯಂ
ಧ್ವ: ವಿ.ಮೋಹನ ಸುಂದರಂ, ಶಿವರಾವ್
ನೃ: ಲಕ್ಷ್ಮೀನಾರಾಯಣ್
ಸಾ: ಜ್ಯೂಡೋ ಕೆ.ಕೆ.ರತ್ನಂ
ವ: ವೆಂಕಟರಾವ್
ಪ್ರ: ದೊರೆಸ್ವಾಮಿ, ರಾಜಗೋಪಾಲ್, ಮಲ್ಲಿಕಾರ್ಜುನರಾವ್, ಮುಂಗೂರು ಗುರು
ಸ್ಟು: ವಿಜಯಾ
ಹಾ: ೧)'ಯಾರು ಏನು ಮಾಡುವರು ನನಗೇನು ಕೇಡು ಮಾಡುವರು..', ೨)'ಮೊಳಗಲಿ ಮೊಳಗಲಿ ಕ್ರಾಂತಿ ಕಹಳೆ ಮೊಳಗಲಿ.......', ೩)'ಕರಿನಾಗ ಮರಿನಾಗ ಮಿಡಿನಾಗ ಏಳಿನಾಗ...', ೪)'ಎಲ್ಲಿ ಹರಿಕಥಾ ಪ್ರಸಂಗವೋ ಅಲ್ಲಿ ಗಂಗಾ ಯಮುನೆ...', ೫)'ಕಣಿವೆಯ ಕೆಳಗಿನ ಹೆಣ್ಣು ಅಹ ಅಂದದ ಕಾಡಿಗೆ ಕಣ್ಣು...'
ವಿ: ಯಾರಿಗೋ ಸವಾಲು ಹಾಕುವಂಥ ಗೀತೆಯ ಅಳವಡಿಕೆ. ಮುಂದೆ ಇದು ಪರಂಪರೆ ಆಯಿತು.
ಕ.ಸಾ: ಇಂದ್ರಪುರಿಯ ಮಹಾರಾಜನನ್ನು ಕೈಗೊಂಬೆಯಾಗಿ ಮಾಡಿಕೊಂಡು ಆಡಿಸುತ್ತಿದ್ದ ದಿವಾನ ಮಾರ್ತಾಂಡನ ಅಟ್ಟಹಾಸವನ್ನು ಅಡಗಿಸಲು ಅವನಿಂದ ಚಿತ್ರಹಿಂಸೆಗೆ ಗುರಿಯಾದ ಎಲ್ಲರೂ ಒಂದುಗೂಡಿ ಕ್ರಾಂತಿವೀರರ ಪಡೆಯೊಂದನ್ನು ಕಟ್ಟಿ ದಂಗೆಯೇಳುತ್ತಾರೆ. ಇದಕ್ಕೆ ಸ್ವತಃ ರಾಜಕುಮಾರನೇ ಕ್ರಾಂತಿವೀರನಾಗಿ ಸಹಾಯ ಮಾಡುತ್ತಾನೆ.

೩೮೭. ಭಲೆ ಹುಚ್ಚ

(೧೯೭೨ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಶ್ರೀಸಿಧಿ ಆರ್ಟ್ ಪ್ರೊಡಕ್ಷನ್ಸ್
ಪ್ರೊ: ಗೋಪಾಲ್-ಲಕ್ಷ್ಮಣ್
ನಿ: ವೈ.ಆರ್.ಸ್ವಾಮಿ
ಸ.ನಿ: ಬೆಂಗಳೂರು ನಾಗೇಶ್
ಅ: ರಾಜಕುಮಾರ್, ಶ್ರೀನಾಥ್, ಸಂಪತ್, ಲೋಕನಾಥ್, ವಜ್ರಮುನಿ, ದಿನೇಶ್, ಶಕ್ತಿಪ್ರಸಾದ್, ತೂಗುದೀಪ ಶ್ರೀನಿವಾಸ್, ಬೆಂಗಳೂರು ನಾಗೇಶ್, ಎಂ.ಎಸ್.ಸತ್ಯ, ಅಶ್ವತ್ಥನಾರಾಯಣ, ಜೋಕರ್ ಶ್ಯಾಂ, ರಾಜಾರಾಂ, ಗುಗ್ಗು, ಮಹದೇವಪ್ಪ, ಆರತಿ, ಬಿ.ವಿ.ರಾಧ, ಆದವಾನಿ ಲಕ್ಷ್ಮೀದೇವಿ, ಆರ್.ಸಿ.ಕಲಾ, ರಾಘವೇಂದ್ರರಾವ್, ಸುಶೀಲ, ಪುಷ್ಪರೇಖಾ, ವಿಮಲ, ಮಿಟಿಕೋ, ನೃತ್ಯ ಹೆಲೆನ್, ಹಲಂ
ಕ/ಚಿ.ಕ/ಮಾ: ಚಿ.ಉದಯಶಂಕರ್
ಗೀ: ಹುಣಸೂರು ಕೃಷ್ಣಮೂರ್ತಿ, ಚಿ.ಉದಯಶಂಕರ್, ಗೀತಪ್ರಿಯ, ವಿಜಯನಾರಸಿಂಹ
ಗಾ: ಪಿ.ಬಿ.ಶ್ರೀನಿವಾಸ್, ಎಸ್.ಜಾನಕಿ, ಎಲ್.ಆರ್.ಈಶ್ವರಿ
ಸಂ: ಪಿ.ಭಕ್ತವತ್ಸಲಂ
ಛಾ: ಮನೋಹರ್
ಕಲೆ: ಬಿ.ಎಸ್.ಕೇಶವರಾವ್
ಸ: ರಾಜನ್-ನಾಗೇಂದ್ರ
ಧ್ವ: ಪಿ.ಜೆ.ಲಕ್ಷ್ಮಣ್, ಶ್ರೀನಿವಾಸ್, ಮೋಹನ ಸುಂದರಂ
ನೃ: ಉಡುಪಿ ಜಯರಾಂ - ದೇವಿ
ಸಾ: ವೈ.ಶಿವಯ್ಯ
ವ: ತಂಗಪ್ಪ, ಎಂ.ನಾಥ್
ಪ್ರ: ಮನ್ಮಥರಾವ್, ದೊರೆಸ್ವಾಮಿ, ಬಲರಾಮ್, ಬೀರಸ್ವಾಮಿ, ಕೇಶವ. ಗುರು
ಸ್ಟು: ಕಂಠೀರವ
ಹಾ: ೧)'ಯಾರು ನೀನು ಹೇಳು ಏನು ಇದು ಗೋಳು....', ೨)'ಕಲ್ಲಾದ ಏಕೆಂದು ಬಲ್ಲೆ ಆ ಗುಟ್ಟನ್ನು ಹೇಳಲೇನು ಇಲ್ಲೆ....', ೩)'ಏನೇ ಸುಬ್ಬಿ ತುಂಬಿ ಕೊಬ್ಬಿ ಗೇಲಿ ಮಾಡಿ....', ೪)'ನೋಡು ಲೌಲಿ ಬ್ಯೂಟಿ...', ೫)'ಬಳ್ಳಿಗೆ ಹೂವು ಚೆಂದ...'
ವಿ: ೨೮ ದಿನಗಳಲ್ಲಿ ಚಿತ್ರೀಕರಣ ಮುಗಿಸಲಾಯಿತು. ನೃತ್ಯ ತಾರೆ ಹೆಲೆನ್ ಈ ಚಿತ್ರದಲ್ಲಿ ನರ್ತಿಸಿದರು.
ಸೆ: ೪೪೬೮.೬೬ ಮೀ. ೧೬ ರೀಲು
ಕ.ಸಾ: ಹುಚ್ಚಾಸ್ಪತ್ರೆಯಿಂದ ತಪ್ಪಿಸಿಕೊಂಡ ಯುವಕ ಓರ್ವ ಯುವತಿಯ ಮನೆ ಸೇರಿದ. ಅದೇ ಊರಿನ ದೇವಸ್ಥಾನದ ಬಳಿ ನಡೆಯುತ್ತಿದ್ದ ಖೋಟಾ ನೋಟಿನ ಧಂದೆಯನ್ನು ಪತ್ತೆ ಮಾಡಿ ಆ ರಹಸ್ಯವನ್ನು ಬಯಲು ಮಾಡಲು ಹೋಗಿ ವಿದೇಶಿ ಜಾಲವೊಂದರ ಕೈಗೆ ಸಿಕ್ಕಿ ನರಳುತ್ತಾನೆ. ಕಡೆಗೆ ಎಲ್ಲ ಶತ್ರುಗಳನ್ನು ಸದೆ ಬಡಿಯುತ್ತಾನೆ. ಆಗ ತಿಳಿಯುತ್ತದೆ ಅವನೊಬ್ಬ ಪೋಲೀಸ್ ಅಧಿಕಾರಿ ಎಂದು.

೩೮೮. ನಂದಗೋಕುಲ

(೧೯೭೨ / ಕಪ್ಪು-ಬಿಳುಪು / ಸಾಮಾಜಿಕ)
ಲಾ/ಪ್ರೊ: ಶ್ಯಾಮಪ್ರಸಾದ್ ಎಂಟರ್‌ಪ್ರೈಸಸ್
ನಿ: ವೈ.ಆರ್.ಸ್ವಾಮಿ
ಸ.ನಿ: ಕುಣಿಗಲ್ ನಾಗಭೂಷಣ್, ಕೆ.ಎಸ್.ಚಂದ್ರಶೇಖರ ವರ್ಮ
ಅ: ರಾಜಕುಮಾರ್, ಜಯಂತಿ, ರಮೇಶ್, ಕೆ.ಎಸ್.ಅಶ್ವತ್ಥ್, ಟಿ.ಎನ್.ಬಾಲಕೃಷ್ಣ, ದಿನೇಶ್, ಸಂಪತ್, ದ್ವಾರಕೀಶ್,



ಶಕ್ತಿಪ್ರಸಾದ್, ಬಿ.ವಿ.ರಾಧ, ಜಯಶ್ರೀ, ಆದವಾನಿ ಲಕ್ಷ್ಮೀದೇವಿ, ಎಂ.ಎನ್.ಲಕ್ಷ್ಮೀದೇವಿ, ವಿಜಯಶ್ರೀ (ನೃತ್ಯ), ಕಲಾ, ಜ್ಯೋತಿ, ಶ್ಯಾಂ, ಕೆ.ಪಿ.ಸಿದ್ದಲಿಂಗಯ್ಯ, ರಾಜು, ಶ್ರೀನಾಥ್
ಕ: ಟಿ.ಉದಯಶಂಕರ್
ಚಿ.ಕ: ವೈ.ಆರ್.ಸ್ವಾಮಿ
ಮಾ: ಚಿ.ಉದಯಶಂಕರ್
ಗೀ: ಚಿ.ಉದಯಶಂಕರ್, ವಿಜಯನಾರಸಿಂಹ
ಗಾ: ಪಿ.ಬಿ.ಶ್ರೀನಿವಾಸ್, ಪಿ.ಸುಶೀಲ, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಲ್.ಆರ್.ಅಂಜಲಿ
ಸಂ: ಪಿ.ಭಕ್ತವತ್ಸಲಂ
ಛಾ: ಆರ್.ಚಿಟ್ಟಿಬಾಬು
ಕಲೆ: ಬಿ.ಎನ್.ಕೃಷ್ಣ
ಸ: ವಿಜಯಭಾಸ್ಕರ್
ಧ್ವ: (ಹಾ) ಮೋಹನ ಸುಂದರಂ, (ಮಾ) ಕೆ.ಶ್ರೀನಿವಾಸ್
ನೃ: ಉಡುಪಿ ಬಿ.ಜಯರಾಂ, ದೇವಿ
ಸಾ: ವೈ.ಶಿವಯ್ಯ
ವ: ತಂಗಪ್ಪನ್, ಎಂ.ನಾಥ್, ನಜ್ರೆ ನಾರಾಯಣ್, ಸಹಾಯ - ಮೋರೆ ಕಣ್ಣನ್, ಕೃಷ್ಣ
ಪ್ರ: ದೊರೈಸ್ವಾಮಿ ನಾಯ್ಡು, ಮನ್ಮಥರಾವ್, ರಾಜಗೋಪಾಲ್, ವೀರಾಸ್ವಾಮಿ, ಕೇಶವ, ಸಹಾಯ : ಶ್ರೀನಿವಾಸ್
ಸ್ಟು: ಶ್ರೀ ಕಂಠೀರವ
ಹಾ: ೧) 'ನಂಜನಗೂಡಿಂದ ನಂಜುಂಡ ಬರುತಾನೆ...', ೨) 'ನೀ ಜನಿಸಿದ ದಿನವೂ ಅಳುವೆ....', ೩) 'ಈ ದಿನ ಜನುಮ ದಿನ....', ೪) 'ಮನದ ಮಾತಿಗೆ ಮೌನ ಬೇಲಿ....'
ಕ.ಸಾ: ಒಂದು ಮನೆ ಸ್ವರ್ಗವಾಗುವುದು ಅಲ್ಲಿರುವ ಎಲ್ಲಾ ವ್ಯಕ್ತಿಗಳೂ ಹೊಂದಿಕೊಂಡು ಹೋದಾಗ ಮಾತ್ರ. ಆ ರೀತಿ ಆದಾಗ ಆ ಮನೆ ನಂದಗೋಕುಲವಾಗುತ್ತದೆ ಎಂಬುದನ್ನು ಸಾರುವ ಚಿತ್ರಕತೆ.

೩೮೯. ಬಾಂಧವ್ಯ

(೧೯೭೨ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ದೀಪಕ್ ಚಿತ್ರ
ಪ್ರೊ: ಸೋರಟ್ ಅಶ್ವತ್ಥ್, ರತ್ನಾಕರ್, ಮಧು
ನಿ: ರತ್ನಾಕರ್ ಮಧು
ಅ: ಗಂಗಾಧರ್, ಕೆ.ಎಸ್.ಅಶ್ವತ್ಥ್, ರಾಜೇಶ್, ಅಶ್ವತ್ಥ್, ಕುಪ್ಪರಾಜ್, ಚೇತನ್, ಪಂಢರಿಬಾಯಿ, ಜಯಶ್ರೀ, ರಮಾದೇವಿ, ಬಿ.ವಿ.ರಾಧ, ಸಂಧ್ಯಾರಾಣಿ, ದಿನೇಶ್, ಮಂಜುನಾಥ್, ನಾಗರಾಜ್, ರಾಜೇಂದ್ರ ಪ್ರಸಾದ್, ಶಿವಲಿಂಗಂ, ವೆಂಕಟರಾಮಯ್ಯ, ಬಿ.ಡಿ.ದ್ವಾರಕಿ, ಕಮಲಾ, ಬೇಬಿ, ಆಶಾ, ಛಾಯಾ, ಮಂಗಳ, ಕಾಂಚನ (ನೃತ್ಯ)
ಕ/ಚಿ.ಕ/ಮಾ: ಸೋರಟ್ ಅಶ್ವತ್ಥ್
ಗೀ: ಸೋರಟ್ ಅಶ್ವತ್ಥ್, ಯೋಗಾನರಸಿಂಹ
ಗಾ: ಪಿ.ಬಿ.ಶ್ರೀನಿವಾಸ್, ಎಸ್.ಜಾನಕಿ, ಕುಬ್ಜ್ಯೋತಿ, ಎಸ್.ಪಿ.ಬಾಲಸುಬ್ರಹ್ಮಣ್ಯಂ
ಸಂ: ಪಿ.ವಿ ಎಸ್.ಮಣಿಯಂ
ಛಾ: ಆರ್.ಮಧು
ಕಲೆ: ವೆಂಕಟರಾಮು
ಸ: ಆರ್.ರತ್ನ
ಧ್ವ: ಕೆ.ಆರ್.ಸೀತಾರಾಂ, ಮೋಹನ ಸುಂದರಂ, ಕಣ್ಣನ್
ನೃ: ಉಡುಪಿ ಬಿ.ಜಯರಾಂ, ದೇವಿ
ಸಾ: ಎ.ಆರ್.ಬಾಷಾ
ವ: ಷಣ್ಮುಗಂ, ಅಪ್ಪಾರಾವ್
ಪ್ರ: ವೀರಾಸ್ವಾಮಿ, ಅಳಗಿರಿ, ಶ್ರೀನಿವಾಸ್
ಸ್ಟು: ಪ್ರೀಮಿಯರ್
ಹಾ: ೧) 'ಎಲ್ಲಾದರೂ ಹೋಗು ಮರಯಾಗು ದೂರ ಹೋಗು...', ೨) 'ಹಣಾ ಝಣಾ ಝಣಾ....', ೩) 'ನಿಲ್ಲು ನಿಲ್ಲೆನ್ನ ನಲ್ಲ...', ೪) 'ಬೆಂಗಳೂರು ಸಂಪಿಗೆ ದೇವರ ಪೂಜೆಗೆ....', ೫) ಕಮ ಓಡುವ ಏಕೆ...'
ವಿ: ಸೋರಟ್ ಅಶ್ವತ್ಥ್ ನಿರ್ಮಿಸಿದರು. ಸೋರಟ್ ಅವರ ಪುತ್ರಿ ಜ್ಯೋತಿ ಹಾಡಿದ ಮೊದಲ ಚಿತ್ರ.
ಸೆ: ೪೫೪೮.೮೬ ಮೀ. ೧೬ ರೀಲು
ಕ.ಸಾ: ಮಮತಾಪಾಶದಿಂದ ದೂರವಾದ ಮಾನವನಿಲ್ಲ. ಈ ಜಗತ್ತಿನ ಬದುಕಿನಾಟದಲ್ಲಿ ತಾಯಿ, ಮಕ್ಕಳು, ಅಣ್ಣ ತಮ್ಮ, ಅಕ್ಕ ತಂಗೀ, ದಂಪತಿ ಎಲ್ಲರೂ, ಮಮತೆಯ ಸೂತ್ರದ ಬೊಂಬೆಗಳು. ಪ್ರೀತಿ, ದಯೆ, ಕರುಣೆ ಇವುಗಳ ಕೊಂಡಿಗಳಿಂದ ಬಾಂಧವ್ಯಪಾಶದಲ್ಲಿ ಬಂಧಿಸಲ್ಪಟ್ಟವರು. ಈ ಬಾಂಧವ್ಯದ ಬಂಧನದಿಂದ ಮುಕ್ತರಾಗಿ ಬಾಳಲು ಸಾಧ್ಯವಾಗದು ಎಂದು ಬಿಂಬಿಸುವ ಚಿತ್ರಣ. ದೈಹಿಕವಾಗಿ ಕುರುಡಿಯಾದರೂ ಮಮತೆಯ ಕಣ್ಣುಳ್ಳ ತಾಯಿಯ ಮಕ್ಕಳು ನಾರಾಯಣ, ರಮೇಶ್ ಮತ್ತು ದೀಪು. ಬಹಳ ಕಾಲ ಬೇರೆಬೇರೆಯಾದ ಅಣ್ಣತಮ್ಮಂದಿರು ಕರುಳಿನ ಕೂಗಿಗೆ ಓಗೊಟ್ಟು ಒಂದಾಗುವರು.

೩೯೦. ಜಗಮೆಚ್ಚಿದ ಮಗ

(೧೯೭೨ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಶ್ರೀಗೌರಿ ಎಂಟರ್‌ಪ್ರೈಸಸ್
ಪ್ರೊ: ಎಸ್.ಭಾವನಾರಾಯಣ
ನಿ: ಹುಣಸೂರು ಕೃಷ್ಣಮೂರ್ತಿ
ಸ.ನಿ: ಭಾರ್ಗವ
ಅ: ರಾಜಕುಮಾರ್, ಕೆ.ಎಸ್.ಅಶ್ವತ್ಥ್, ಎಂ.ಪಿ.ಶಂಕರ್, ನರಸಿಂಹರಾಜು, ರಾಜಾನಂದ್, ಹೆಚ್.ಆರ್.ಶಾಸ್ತ್ರಿ, ಜೋಕರ್ ಶ್ಯಾಂ, ಶಕ್ತಿ ಪ್ರಸಾದ್, ಕುಪ್ಪರಾಜ್, ರಾಘವೇಂದ್ರರಾವ್, ಹನುಮಂತಾಚಾರ್, ಸೂರ್ಯಕುಮಾರ್, ಶಿವಾಜಿರಾವ್, ಬೇಬಿಗೌರಿ, ಜಯಾ, ಭಾರತಿ, ಎಂ.ವಿ.ರಾಜಮ್ಮ, ರಾಜಾ ಸುಲೋಚನ, ರಾಜಕುಮಾರಿ
ಕ: ಎಸ್.ಭಾವನಾರಾಯಣ
ಮಾ/ಗೀ: ಹುಣಸೂರು ಕೃಷ್ಣಮೂರ್ತಿ
ಗಾ: ಪಿ.ಬಿ.ಶ್ರೀನಿವಾಸ್, ಎಸ್.ಜಾನಕಿ, ಎಲ್.ಆರ್.ಈಶ್ವರಿ, ಪಿ.ಲೀಲಾ
ಸಂ: ಕೆ.ಗೋಪಾಲರಾವ್, ವೆಂಕಟೇಶ್ವರರಾವ್
ಛಾ: ಜಿ.ಸತ್ಯನಾರಾಯಣ
ಕಲೆ: ಗೋಡಗಾಂವ್‌ಕರ್
ಸ: ಸತ್ಯಂ
ಧ್ವ: ಸ್ವಾಮಿನಾಥನ್, ಕೋಟೀಶ್ವರರಾವ್, ಶಾಮಣ್ಣ, ಮೋಹನಸುಂದರಂ
ನೃ: ಎ.ಕೆ.ಚೋಪ್ರ, ರತ್ನ ಕುಮಾರ್
ಸಾ: ವೈ.ಶಿವಯ್ಯ, ಸಹಾಯ ಸ್ವಾಮಿ, ಸುಬ್ಬಯ್ಯ
ವ: ನಾರಾಯಣರಾವ್, ಸಹಾಯ ಚೆಲ್ಲಾರಾವು, ಬಾಬು
ಪ್ರ: ದೊರೈಸ್ವಾಮಿ, ಶ್ರೀನಿವಾಸ್, ಧನಕೋಟಿ, ಮಲ್ಲಿಕಾರ್ಜುನರಾವ್
ಸ್ಟು: ವಿಕ್ರಂ
ಹಾ: ೧) 'ಕನಸಲ್ಲಿ ನನಸಲ್ಲಿ ಮಾತಲ್ಲಿ ನಡೆಯಲ್ಲಿ...', ೨) 'ಒಳಗಿನ ಆಸೆ ಹೇಳುವ ಭಾಷೆ....', ೩) 'ತಾ ತೈ ಥೈ ಥಕ್ಕ ಕುಣಿಯುವ ಹೆಣ್ಣಿನ...', ೪) 'ಇದು ಯಾವ ಜನ್ಮದ ಸ್ನೇಹ....', ೫) 'ಓ ರಾಜ ಸಹನೆ ಇರಲಿ.....', ೬) 'ಏರಿ ಮೇಲೆ ಏರಿ ಮೇಲೆ ಕೆಳಗೆ ಹಾರಿ ..'
ಕ.ಸಾ: ಜ್ಯೋತಿಷ್ಯದಲ್ಲಿ ಅಪಾರ ನಂಬಿಕೆ ಇದ್ದ ಮಹಾರಾಜ ಮಹಾರಾಣಿಗೆ ಹೆಣ್ಣುಮಗುವಾಗುತ್ತದೆ ಎಂದು ಜ್ಯೋತಿಷಿ ಹೇಳಿದನ್ನು ನಂಬುತ್ತಾನೆ. ಆದರೆ ಮಹಾರಾಣಿಗೆ ಗಂಡು ಮಗುವಾಗಲು ರಾಜ ಮಹಾರಾಣಿಯ ಕೆಟ್ಟ ನಡತೆಯೇ ಕಾರಣ ಎಂದು ನಂಬಿ ಆಕೆಯನ್ನು, ಮಗುವನ್ನು ಕಾಡಿಗೆ ಅಟ್ಟುತ್ತಾನೆ. ಮಹಾರಾಣಿ ಕಷ್ಟಪಟ್ಟು ಮಗುವನ್ನು ಬೆಳೆಸಿ ದೊಡ್ಡವನನ್ನಾಗಿ ಮಾಡುತ್ತಾಳೆ. ಸಕಲ ವಿದ್ಯಾಪಾರಂಗತನಾದ ಆತ ಪ್ರಜೆಗಳನ್ನು ಚಿಕ್ಕಪ್ಪನ ಕಪಿಮುಷ್ಟಿಯಿಂದ ಬಿಡಿಸಿ ಪಾರುಮಾಡಿ, ತಾಯಿ ಶೀಲವತಿ ಎಂದು ಸಾಬೀತು ಪಡಿಸುತ್ತಾನೆ.

೩೯೧. ಮರೆಯದ ದೀಪಾವಳಿ

(೧೯೭೨ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಎಸ್.ವಿ.ಎಸ್.ಮೂವೀಸ್
ಪ್ರೊ: ಎಂ.ಜಗನ್ನಾಥರಾವ್
ನಿ: ಆರ್.ಸಂಪತ್
ಸ.ನಿ: ಟಿ.ವಿ.ಪಂಚಾಕ್ಷರಿ
ಅ: ರಾಜೇಶ್, ಕಲ್ಪನಾ, ಕೆ.ಎಸ್.ಅಶ್ವತ್ಥ್, ರಾಮಚಂದ್ರಶಾಸ್ತ್ರಿ, ಶ್ರೀ ಲಲಿತಾ, ಸಂಪತ್, ಸುದರ್ಶನ್, ಬೇಬಿ ರಾಣಿ, ಶಾಸ್ತ್ರಿ, ಚೇತನ್, ಜಾರ್ಜಿಯಾನ

ಕ: ಶ್ರೀಮತಿ ಶಿವಶಂಕರಿ
ಚಿ.ಕ: ಆರ್.ಸಂಪತ್
ಮಾ/ಗೀ: ಆರ್.ಎನ್.ಜಯಗೋಪಾಲ್
ಗಾ: ಪಿ.ಬಿ.ಶ್ರೀನಿವಾಸ್, ಎಸ್.ಜಾನಕಿ, ಬಿ.ಕೆ.ಸುಮಿತ್ರ
ಸಂ: ಬಿ.ಗೋಪಾಲರಾವ್
ಛಾ: ಆರ್.ಸಂಪತ್
ಕಲೆ: ತೋಟಾ ವೆಂಕಟೇಶ್ವರರಾವ್, ತೋಟಾ ಹೇಮಚಂದರ್
ಸ: ವಿಜಯಭಾಸ್ಕರ್
ಧ್ವ: (ಮಾ) ಕೆ.ಆರ್.ಸೀತಾರಾಂ, ಆರ್ಮುಗಂ, (ಹಾ) ಸ್ವಾಮಿನಾಥನ್, ಕೋಟೀಶ್ವರರಾವ್
ನೃ: ಉಡುಪಿ ಬಿ.ಜಯರಾಂ, ದೇವಿ
ವ: ಕಣ್ಣನ್, ಎಂ.ನಾಥ್
ಪ್ರ: ರಾಜಗೋಪಾಲ್, ಷಣ್ಮುಗಂ, ಮುತ್ತು
ಸ್ಟು: ಪ್ರೀಮಿಯರ್
ಹಾ: ೧) 'ಚಿರಾಯುವಾಗು ಕಂದಾ ಹೆತ್ತವರ ಬಾಳಿನಂದ....', ೨) 'ಅಮ್ಮ ಮುದ್ದು ಅಮ್ಮ ಎಂಥ ....', ೩) 'ಜೀವನವೇ ಸುಖ ಪಯಣ ಒಲವಿನಾ ಕವನ....', ೪) 'ಪಾಪ ಯಾರದೋ ಪರಿತಾಪ ಯಾರದೋ...', ೫) 'ಬೆಟ್ಟದ ಮೇಗಡ ಆಗಸದೆತ್ತರ ನಿಂತಿದ ನಿನ್ನ ಗುಡಿಯಮ್ಮ...', ೬) 'ಹೊಸ ಜಾತಿ ನಾವೆಲ್ಲಾ ಮುಳ್‌ಬೇಲಿ ನಮಗಿಲ್ಲ.....'
ಕ.ಸಾ: ಬಡ ವಿದ್ಯಾರ್ಥಿ ಶ್ರೀಮಂತರೊಬ್ಬರ ನೆರವಿನಿಂದ ವಿದೇಶಕ್ಕೆ ಹೋಗಿ ಬಂದ, ಅವರದೇ ಕಾರ್ಖಾನೆಯಲ್ಲಿ ಕೆಲಸ, ಅವರ ಮಗಳನ್ನೇ ಕೈ ಹಿಡಿದ. ಅಹಂಕಾರದ ಜತೆಗೆ ಅಧಿಕಾರವೂ ಬಂತು. ವಿದೇಶದಲ್ಲಿ ನಡೆದ ಅಚಾತುರ್ಯದಿಂದ ಜನಿಸಿದ ಮಗುವನ್ನು ತನ್ನದಲ್ಲವೆಂದು ನಿರಾಕರಿಸುತ್ತಾನೆ. ಅವನ ಹೆಂಡತಿ ಆ ಮಗುವನ್ನು ತಂದು ಸಾಕುತ್ತಾಳೆ. ಮಗುವನ್ನು ದ್ವೇಷಿಸುವ ಆತ ಮಗುವನ್ನು ಮನೆ ಬಿಡುವಂತೆ ಮಾಡುತ್ತಾನೆ. ಅಂದು ದೀಪಾವಳಿ, ಅದು ನಾಯಕಿಯ ಪಾಲಿಗೆ ಮರೆಯದ ದೀಪಾವಳಿಯಾಯಿತು.

೩೯೨. ಜೀವನ ಜೋಕಾಲಿ

(೧೯೭೨ / ಕಪ್ಪು-ಬಿಳುಪು / ಸಾಮಾಜಿಕ)
ಲಾ/ಪ್ರೊ: ಶ್ರೀ ತ್ರಿಪುರ ಸುಂದರಿ ಫಿಲಂಸ್
ನಿ: ಗೀತಪ್ರಿಯ

ಸ.ನಿ: ಸಹ್ಯಾದ್ರಿ
ಅ: ಗಂಗಾಧರ್, ಭಾರತಿ, ಸುಮಾ, ರಂಗ. ಬಾಲಕೃಷ್ಣ, ಲಕ್ಷ್ಮೀದೇವಿ, ಬೆಂಗಳೂರು ನಾಗೇಶ್, ಜಯ, ದಿನೇಶ್, ಬೇಬಿ ರೋಜಾರಮಣಿ, ಮಾ। ರಾಜಕುಮಾರ್, ಜಯಶ್ರೀ, ಭಾರದ್ವಾಜ್, ಸೀತಾಲಕ್ಷ್ಮಿ, ನಿರಂಜನ್, ಶಾಂತಮ್ಮ, ರಾಮಚಂದ್ರಶಾಸ್ತ್ರಿ, ಬೇಬಿ ಸುಮನ್, ಕುಪ್ಪುರಾಜ್, ನಾರಾಯಣ್ ತಂತ್ರಿ
ಕ: ನರಸರಾಜು
ಚಿ.ಕ/ಮಾ/ಗೀ: ಗೀತಪ್ರಿಯ
ಗಾ: ಪಿ.ಸುಶೀಲ, ಬಿ.ಕೆ.ಸುಮಿತ್ರ, ಪಿ.ಬಿ.ಶ್ರೀನಿವಾಸ್
ಸಂ: ವಿ.ಅಂಕಿರೆಡ್ಡಿ
ಛಾ: ಮನೋಹರ್, ನಾಗೇಂದ್ರಶಾಯಿ
ಕಲೆ: ತೋಟಾ
ಸ: ವಿಜಯಭಾಸ್ಕರ್
ಧ್ವ: (ಹಾ) ರಾಮನಾಥನ್, ಮೋಹನ ಸುಂದರಂ (ಮಾ) ಕೆ.ಆರ್.ರಾಮಸ್ವಾಮಿ
ನೃ: ಚಿನ್ನಿ ಸಂಪತ್
ಸಾ: ತ್ಯಾಗರಾಜನ್
ವ: ಸ್ಟೆಯದ್
ಪ್ರ: ವೆಂಕಟೇಶ್ವರರಾವ್
ಸ್ಟು: ಪ್ರಸಾದ್
ಹಾ: ೧) 'ಮಕ್ಕಳ ಮನವು ಪಾವನವಾದ...', ೨) 'ಚೆಲುವ ಬರುತಾನೆ ಗೆಲುವ ತರುತಾನೆ...', ೩) 'ನಿನ್ನ ಬಳುಕು ನಡಿಗೆಯಲ್ಲಿ...', ೪) 'ಜ್ಯೋತಿಯೊಡನೆ ಬನ್ನಿ...', ೫) 'ನೀಲಗಗನದಾ ಚಂದ್ರಮಾ...'
ಕ.ಸಾ: ಅಣ್ಣತಂಗಿಯರ ಪ್ರೀತಿಪ್ರೇಮಗಳ ಕಥಾಹಂದರವೇ ಚಿತ್ರದ ಕಥೆ. ಅತಿಯಾಗಿ ಪ್ರೀತಿಸುವ ಅಣ್ಣತಂಗಿಯರು ವಿಧಿಯ ಆಟದಂತೆ ಬೇರ ಬೇರೆಯಾಗಿ, ಅಣ್ಣ ಕಳ್ಳತನದಿಂದ ಜೈಲು ಸೇರಿದರೆ, ತಂಗಿ ಅನಾಥಾಶ್ರಮದಲ್ಲಿರುತ್ತಾಳೆ. ಬೆಳೆದು ದೊಡ್ಡವರಾದ ಮೇಲೆ ದೂರವಾಗಿದ್ದ ಅಣ್ಣತಂಗಿ ಒಂದಾಗುವರು.

೩೯೩. ನಾಗರಹಾವು

(೧೯೭೨ / ಬಣ್ಣ / ಸಾಮಾಜಿಕ)
ಲಾ: ಶ್ರೀಈಶ್ವರಿ ಪ್ರೊಡಕ್ಷನ್ಸ್
ಪ್ರೊ: ಎನ್.ವೀರಾಸ್ವಾಮಿ
ನಿ: ಎಸ್.ಆರ್.ಪುಟ್ಟಣ್ಣ ಕಣಗಾಲ್
ಸ.ನಿ: ಎನ್.ಎಸ್.ದತ್ತು, ಲಕ್ಷ್ಮೀನಾರಾಯಣ
ಅ: ವಿಷ್ಣುವರ್ಧನ್, ಕೆ.ಎಸ್.ಅಶ್ವತ್ಥ್, ಶಿವರಾಂ, ಹೆಚ್.ರಾಮಚಂದ್ರ ಶಾಸ್ತ್ರಿ, ರಾಘವೇಂದ್ರ ರಾವ್, ಸಿ.ಹೆಚ್.ಲೋಕನಾಥ್, ಅಂಬರೀಷ್, ಭದ್ರಾಚಲಂ, ಆರತಿ, ಶುಭಾ, ಲೀಲಾವತಿ, ಜಯಶ್ರೀ, ಎಂ.ಎನ್.ಲಕ್ಷ್ಮೀದೇವಿ, ನಾಗಮ್ಮ, ಕಲಾವತಿ, ವಿದ್ಯಾ ಕುಲಕರ್ಣಿ, ಮಾ।ಹೇಮಚಂದ್ರ, ಟೆಲಿಫೋನ್ ರಾಮಚಂದ್ರ, ಷರೀಫ್, ಪಾಶ, ರಾಮು, ರವಿಕುಮಾರ್, ಅಶ್ವತ್ ನಾರಾಯಣ, ಜ್ಯೋತಿ, ಮಮತ, ರಾಮಚಂದ್ರ, ಬೆಂಗಳೂರು ಬಸಪ್ಪ, ಮಹಾಲಿಂಗಪ್ಪ, ನಿಂಬಾಳ್‌ಕರ್, ಗೋಪಾಲ್, ಶ್ರೀನಿವಾಸ್, ರಮೇಶ್, ಪಾಪಮ್ಮ, ಎಂ.ಪಿ.ಶಂಕರ್, ರಂಗಾ, ವಜ್ರಮುನಿ, ರಾಜು, ಶಕ್ತಿಪ್ರಸಾದ್, ಜಯಂತಿ, ಪ್ರತಿಮಾದೇವಿ
ಕ: ತ.ರಾ.ಸು. ಅವರ ಮೂರು ಕಾದಂಬರಿಗಳ ಆಧಾರಿತ (ನಾಗರಹಾವು, ಒಂದು ಗಂಡು ಎರಡು ಹೆಣ್ಣು, ಸರ್ಪಮತ್ಸರ)
ಚಿ.ಕ: ಎಸ್.ಆರ್.ಪುಟ್ಟಣ್ಣ ಕಣಗಾಲ್
ಮಾ: ಚಿ.ಉದಯಶಂಕರ್
ಗೀ: ವಿಜಯನಾರಸಿಂಹ, ಚಿ.ಉದಯಶಂಕರ್, ಆರ್.ಎನ್.ಜಯಗೋಪಾಲ್
ಗಾ: ಪಿ.ಬಿ.ಶ್ರೀನಿವಾಸ್, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಪಿ.ಸುಶೀಲ
ಸಂ: ಪಿ.ಭಕ್ತವತ್ಸಲಂ, ಸಹಾಯ ಕೆ.ಅಚ್ಯುತನ್
ಛಾ: ಚಿಟ್ಟಿಬಾಬು
ಕಲೆ: ರಮೇಶ್
ಸ: ವಿಜಯಭಾಸ್ಕರ್
ಧ್ವ: (ಹಾ)ಮೋಹನ ಸುಂದರಂ, (ಮಾ)ಕೆ.ಆರ್.ಸೀತಾರಾಮ್, ಗೋವಿಂದಸ್ವಾಮಿ, ಲಕ್ಷ್ಮಣ್
ಸಾ: ಶ್ಯಾಂ ಸುಂದರ್
ವ: ರಾಜಗೋಪಾಲ್, ಸಹಾಯ - ಮಣಿ
ಪ್ರ: ಅಪ್ಪಾರಾವ್, ಸಹಾಯ- ರಾಮು, ಚಂದ್ರಯ್ಯ
ಸ್ಟು: ಪ್ರೀಮಿಯರ್. ಕಂಠೀರವ
ಹಾ: ೧) 'ಕರ್ಪೂರದಾ ಬೊಂಬೆ ನಾನು....', ೨) 'ಹಾವಿನ ದ್ವೇಷ ಹನ್ನೆರಡು ವರ್ಷ...', ೩) 'ಬಾರೇ ಬಾರೇ ಚೆಂದದ ಚೆಲುವಿನ ತಾರೆ...', ೪) 'ಕನ್ನಡ ನಾಡಿನ ವೀರರಮಣಿಯ...', ೫) 'ಸಂಗಮ ಸಂಗಮ ಅನುರಾಗ ಸಂಗಮ....', ೬) 'ಕಥೆ ಹೇಳುವೆ ನನ್ನ ಕಥೆ ಹೇಳುವೆ...'
ವಿ: ವಿಷ್ಣುವರ್ಧನ್ ನಾಯಕ ನಟನಾಗಿ ಹಾಗೂ ಅಂಬರೀಷ್ ಮತ್ತು ಧೀರೇಂದ್ರಗೋಪಾಲ್ ಚಿತ್ರರಂಗ ಪ್ರವೇಶಿಸಿದರು. ಸರ್ಕಾರದಿಂದ ಅತ್ಯುತ್ತಮ ದ್ವಿತೀಯ ಚಿತ್ರ, ಅತ್ಯುತ್ತಮ ನಟ (ವಿಷ್ಣುವರ್ಧನ್), ಅತ್ಯುತ್ತಮ ನಟಿ (ಆರತಿ), ಪೋಷಕ ನಟ (ಕೆ.ಎಸ್.ಅಶ್ವತ್ಥ್), ಪೋಷಕ ನಟಿ (ಶುಭಾ), ಕಥಾ ಲೇಖಕ (ತ.ರಾ.ಸು), ಚಿತ್ರಕಥೆ (ಪುಟ್ಟಣ್ಣ ಕಣಗಾಲ್), ಸಂಭಾಷಣೆ (ಚಿ.ಉದಯಶಂಕರ್) ಪ್ರಶಸ್ತಿಗಳನ್ನು ಪಡೆದುಕೊಂಡಿತು. 'ಕನ್ನಡ ನಾಡಿನ ವೀರರಮಣಿಯ...' ಹಾಡಿನ ಸನ್ನಿವೇಶದಲ್ಲಿ ಒನಕೆ ಓಬವ್ವನ ಪಾತ್ರವನ್ನು ನಿರ್ವಹಿಸಿದ ಜಯಂತಿಯವರ ಅಭಿನಯ ಅಪಾರ ಮೆಚ್ಚುಗೆಗೆ ಪಾತ್ರವಾಯಿತು.
ಕ.ಸಾ: ರಾಮಾಚಾರಿ ರೋಷ, ಉದಾತ್ತ ಗುಣಗಳ ಸಂಗಮ. ದೈವವೆಂದು ತಿಳಿದ ಚಾಮಯ್ಯ ಮೇಷ್ಟ್ರ ಮಾತಿಗೆ ಬೆಲೆ ಕೊಟ್ಟು, ಪ್ರೀತಿಸಿದ ಹುಡುಗಿ ಅಲಮೇಲುವನ್ನು ತ್ಯಾಗ ಮಾಡುತ್ತಾನೆ. ಜಗಳದಿಂದ ಆರಂಭಗೊಂಡು ಪ್ರಣಯಕ್ಕೆ ತಿರುಗಿದ ಕ್ರಿಶ್ಚಿಯನ್ ಹುಡುಗಿ ಮಾರ್ಗರೇಟ್‌ಳನ್ನು ತ್ಯಾಗ ಮಾಡಲು ಮೇಷ್ಟ್ರು ಕೇಳಿದಾಗ ಒಪ್ಪದ ರಾಮಾಚಾರಿ ಮೇಷ್ಟ್ರ ಸಾವಿಗೆ ಪರೋಕ್ಷವಾಗಿ ಕಾರಣನಾಗುತ್ತಾನೆ. ಇದರಿಂದ ನೊಂದ ರಾಮಾಚಾರಿ ತನ್ನ ಪ್ರೇಮಿಯೊಡನೆ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ.

೧೯೭೩

೩೯೪. ದೇವರು ಕೊಟ್ಟ ತಂಗಿ

(೧೯೭೩ / ಕಪ್ಪು-ಬಿಳುಪು / ಸಾಮಾಜಿಕ)
ಲಾ/ಪ್ರೊ: ಶ್ರೀರಾಘವೇಂದ್ರ ಪ್ರೊಡಕ್ಷನ್ಸ್
(ನಿರ್ವಹಣೆ : ಎನ್.ಭಕ್ತವತ್ಸಲನ್ - ಎನ್. ರಾಮಚಂದ್ರ)
ನಿ: ರವೀ (ಕೆ.ಎಸ್.ಎಲ್.ಸ್ವಾಮಿ)
ಸ.ನಿ: ದತ್ತರಾಜ್, ಮಣಿಮುರುಗನ್
ಅ: ರಾಜಕುಮಾರ್, ಜಯಂತಿ, ಶ್ರೀನಾಥ್, ಬಿ.ವಿ.ರಾಧ, ನರಸಿಂಹರಾಜು, ದ್ವಾರಕೀಶ್, ತೂಗುದೀಪ ಶ್ರೀನಿವಾಸ್, ಡಾ।। ಸಂಪತ್‌ಕುಮಾರ್, ಲೋಕನಾಥ್, ಕಲಾ, ಜಯಶ್ರೀ, ಎಂ.ಎನ್.ಲಕ್ಷ್ಮೀದೇವಿ, ಬಿ.ಜಯ
ಕ: ರವೀ
ಚಿ.ಕ: ಜಿ.ಬಾಲಸುಬ್ರಹ್ಮಣ್ಯಂ
ಮಾ: ಚಿ.ಉದಯಶಂಕರ್
ಗೀ: ಕು.ರ.ಸೀತಾರಾಮಶಾಸ್ತ್ರಿ, ಚಿ.ಉದಯಶಂಕರ್, ಶ್ರೀಪುರಂದರದಾಸರು
ಗಾ: ಪಿ.ಬಿ.ಶ್ರೀನಿವಾಸ್, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್.ಜಾನಕಿ
ಸಂ: ಬಾಲ್ ಜಿ.ಯಾದವ್
ಛಾ: ಎನ್.ಜಿ.ರಾವ್

ಕಲೆ: ರಮೇಶ್
ಸ: ವಿಜಯಭಾಸ್ಕರ್
ಧ್ವ: (ಹಾ)ಮೋಹನ ಸುಂದರಂ, (ಮಾ)ಗೋವಿಂದಸ್ವಾಮಿ, ಶ್ರೀನಿವಾಸ್
ನೃ: ಉಡುಪಿ ಜಿ.ಜಯರಾಂ
ಸಾ: ವೈ.ಶಿವಯ್ಯ
ವ: ಗುರುಸ್ವಾಮಿ, ರಾಮಚಂದ್ರ, ಎಂ.ನಾಥ್, ತಂಗಪ್ಪನ್, ನಚ್ಚಿ ನಾರಾಯಣ್
ಪ್ರ: ದೊರೆಸ್ವಾಮಿ, ರಾಜಗೋಪಾಲ್. ಕೇಶವ, ಮೂಗೂರು ಪಿ.ಗುರು
ಸ್ಟು: ಚಾಮುಂಡೇಶ್ವರಿ, ಕಂಠೀರವ, ಸುಜಾತ
ಹಾ: ೧) 'ಈ ಲೋಕವೆಲ್ಲ ನೀನೇ ಇರುವ ಪೂಜಾ ಮಂದಿರ...', ೨) 'ತನ್ನಿರೆ ಹಾಲಾ ತನಿ...', ೩) 'ಲಾಲಿಸಿದಳು ಮಗನ...', ೪) 'ಅಣ್ಣನ ಹರಕೆ ತಂಗಿಯ...'
ಸೆ: ೧೬ ರೀಲುಗಳು
ಕ.ಸಾ: ತಂದೆ-ತಾಯಿ ಇಲ್ಲದ ರಘುವಿಗೆ ತಂಗಿ ಸುಧಾ ಎಂದರೆ ಪಂಚಪ್ರಾಣ. ಆಕೆಯನ್ನು ಬಹಳ ಮುಚ್ಚಟೆ ಮಾಡಿ ಸಲಹುತ್ತಿರುತ್ತಾನೆ. ಆಕಸ್ಮಿಕವಾಗಿ ಪರಿಚಯವಾದ ವೈದ್ಯೆ ಶೋಭ ಇವನ ಗುಣಗಳಿಗೆ ಮಾರುಹೋಗುತ್ತಾಳೆ. ದುರಂತವೊಂದರಲ್ಲಿ ತಂಗಿಯನ್ನು ಕಳೆದುಕೊಂಡ ರಘುವಿಗೆ ಗೆಳೆಯ ರಾಮುವಿನ ಹೆಂಡತಿ ಸರಳ ದೇವರು ಕೊಟ್ಟ ತಂಗಿಯಂತೆ ಬರುತ್ತಾಳೆ. ನಂತರ ರಾಮುವಿಗೆ ವಿಚಿತ್ರ ಸಂಶಯ ಬರುತ್ತದೆ. ವೈದ್ಯೆ ಶೋಭಾ ಈ ಸಂಶಯವನ್ನು ಪರಿಹರಿಸಿ ಎಲ್ಲರನ್ನೂ ಒಂದು ಮಾಡುತ್ತಾಳೆ.

೩೯೫. ಬಂಗಾರದ ಕಳ್ಳ

(೧೯೭೩ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಮಹಾತ್ಮ ಪ್ರೊಡಕ್ಷನ್ಸ್
ಪ್ರೊ: ಬಾಬು
ನಿ: ಡಿ. ಶಂಕರ್‌ಸಿಂಗ್
ಸ.ನಿ: ಹೆಚ್.ರಮೇಶ್
ಅ: ಸಂಗ್ರಾಮ್‌ಸಿಂಗ್, ಸಂಪತ್, ತೂಗುದೀಪ ಶ್ರೀನಿವಾಸ್, ಅನಂತರಾಂ ಮಚ್ಚೇರಿ, ಕೃಷ್ಣಶಾಸ್ತ್ರಿ, ರಂಗ, ಎಂ.ಎಸ್.ಸತ್ಯ, ಅನಿತಾ, ಎಂ.ಎನ್.ಲಕ್ಷ್ಮೀದೇವಿ, ಬಿ.ವಿ.ರಾಧ, ಕಮಲಮ್ಮ, ತಮಾಷ್ ಮಾಧವರಾವ್

ಕ/ಚಿ.ಕ/ಮಾ: ಡಿ.ಶಂಕರ್‌ಸಿಂಗ್
ಗೀ: ಆರ್.ಎನ್.ಜಯಗೋಪಾಲ್
ಗಾ: ಪಿ.ಬಿ.ಶ್ರೀನಿವಾಸ್, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಲ್.ಆರ್.ಈಶ್ವರಿ, ವಸಂತ
ಸಂ: ಪಿ.ಯು.ಎಸ್.ಮಣಿಯಂ
ಛಾ: ಎಂ.ಆರ್.ಕೆ.ಮೂರ್ತಿ
ಕಲೆ: ಪಿ.ವೆಂಕಟರಾಮಯ್ಯ
ಸ: ಸತ್ಯಂ
ಧ್ವ: (ಹಾ) ಮೋಹನ ಸುಂದರಂ (ಮಾ) ಕೆ.ಆರ್.ಸೀತಾರಾಂ
ನೃ: ಎಂ.ಎಚ್.ಕೃಷ್ಣ
ಸಾ: ಗಣೇಶ್
ಪ್ರ: ಶಿವರಾಜ್, ಶ್ರೀನಿವಾಸ್, ಬುಚ್ಚಿಬಾಬು, ವೀರಾಸ್ವಾಮಿ
ಸ್ಟು: ಪ್ರೀಮಿಯರ್
ಹಾ: ೧) 'ಜೀವನ ಮೋಜಿನ ಆಟ...', ೨) 'ನನ್ನ ಕಣ್ಣಿಂದ ತುಟಿ ಅಂಚಿಂದ...', ೩) 'ಹೃದಯಕೆ ಕಣ್ಣೇ ಸಾಕ್ಷಿ...', ೪) 'ಕುಡಿಯುವನು ಜಾಣ...'

ಕ.ಸಾ: ಚಿನ್ನವನ್ನು ಕದಿಯುವ ವ್ಯಕ್ತಿಯ ತಂದೆ, ಐಷಾರಾಮವೇ ಬದುಕಾದ ಮಗ. ಇಬ್ಬರೂ ವಿಷಯ ಲಂಪಟರು. ಆದರೂ ಪ್ರೀತಿಸಿದ ಹುಡುಗಿ ಮಗನನ್ನು ಸರಿದಾರಿಗೆ ತರುತ್ತಾಳೆ. ಆಸ್ತಿ-ಹೆಣ್ಣುಗಳ ಕಾರಣಕ್ಕೆ ಕೊಲೆ ಮಾಡಿಸುವಂಥ ಕೀಳು ಮಟ್ಟಕ್ಕೆ ತಂದೆ ಹೋಗುತ್ತಾನೆ. ಅಂತಿಮವಾಗಿ ತಪ್ಪಿಗೆ ಶಿಕ್ಷೆಯಾಗುತ್ತದೆ.

೩೯೬. ಸಹಧರ್ಮಿಣಿ

(೧೯೭೩ / ಕಪ್ಪು-ಬಿಳುಪು / ಸಾಮಾಜಿಕ)

ಲಾ: ಶಶಿರಾಜ್ ಮೂವೀಸ್
ಪ್ರೊ: ಆರ್.ವಿ.ವಿಶ್ವನಾಥನ್, ಸಕುಂತರಾಜ್
ನಿ: ಕೆ.ಎಸ್.ಸತ್ಯನಾರಾಯಣ
ಸ.ನಿ: ಉಗ್ರನರಸಿಂಹ
ಅ: ಬಿ.ಸರೋಜಾದೇವಿ, ರಾಜೇಶ್, ಕೆ.ಎಸ್.ಅಶ್ವತ್ಥ್, ಬಾಲಕೃಷ್ಣ, ಎಂ.ಎಸ್.ಸತ್ಯ, ಲೀಲಾವತಿ, ಜಯಶ್ರೀ, ಶುಭಾ, ಶಾಂತಮ್ಮ, ತಿಪಟೂರು ರಘು, ಉಗ್ರನರಸಿಂಹ, ರವಿಕುಮಾರ್, ಪದ್ಮಾಂಜಲಿ, ಪುಷ್ಪ, ನವೀನ್‌ಕುಮಾರ್, ನಾರಾಯಣ, ಕಪನೀಪತಿ, ಮಾ। ಗುರು, ಬೇಬಿ ಶ್ಯಾಂ



ಚಿ.ಕ: ಕೆ.ಎಸ್.ಸತ್ಯನಾರಾಯಣ
ಮಾ: ಉಗ್ರನರಸಿಂಹ
ಗೀ: ಕೆ.ಎಸ್.ಸತ್ಯನಾರಾಯಣ
ಗಾ: ಪಿ.ಬಿ.ಶ್ರೀನಿವಾಸ್, ಪಿ.ಸುಶೀಲ, ಎಸ್.ಜಾನಕಿ, ಪಿ.ಎಂ.ನಾಗರಾಜ್
ಸಂ: ಕೆ.ಗೋಪಾಲರಾವ್, ವಿ.ಜಗದೀಶ್
ಛಾ: ಮೀನಾಕ್ಷಿ ಸುಂದರಂ
ಕಲೆ: ಪದ್ಮನಾಭದಾಸ್
ಸ: ಆರ್.ರತ್ನ
ಧ್ವ: (ಹಾ)ಕಣ್ಣನ್, ಮೋಹನ ಸುಂದರಂ, (ಮಾ)ಆರಾಧ್ಯ
ನೃ: ಉಡುಪಿ ಬಿ.ಜಯರಾಂ, ಸಹಾಯ - ದೇವಿ
ಸಾ: ಜ್ಯೂಡೋ ರತ್ನಂ, ತ್ಯಾಗರಾಜನ್
ವ: ಎಂ.ನಾಥ್, ನಟರಾಜ್
ಪ್ರ: ಮಲ್ಲಿಕಾರ್ಜುನರಾವ್, ಶ್ರೀನಿವಾಸ್, ಮಲ್ಲಿ
ಸ್ಟು: ಅಭಿಮಾನ್, ಸುಜಾತ
ಹಾ: ೧) 'ಚಂದಿರನಾ ಶೀತಲತೇ ಕುಸುಮಗಳ ಕೋಮಲತೇ...', ೨) 'ಪುಟ್ಟ ಪುಟ್ಟ ಮಕ್ಕಳೇ ಪುಟಾಣಿ ಮಕ್ಕಳೇ...', ೩) 'ಮನುಜಾ ನೀ ದೇವರ ಆಟದ ಗೊಂಬೆ...', ೪) 'ನಡೆನಡೆ ಸರಿಯಾಗಿ ಅತ್ತಿಗೇ ನೀ ಅತ್ತಿಗೇ...'
ಕ.ಸಾ: ಸಂಸಾರ ಸ್ವರ್ಗವಾಗಬೇಕಾದರೆ ಒಂದು ಹೆಣ್ಣೇ ಕಾರಣ ಎಂದು ಸಾರುವ ಚಿತ್ರ. ಸಂಸಾರದಲ್ಲಿ ಸಹಧರ್ಮಿಣಿಯಾದವಳು ಹೇಗೆ ನಡೆದರೆ ಸಂಸಾರ ಸುಖ ಸ್ವರ್ಗವಾಗುತ್ತದೆ. ಮತ್ಸರ, ದ್ವೇಷಗಳನ್ನು ತೋರಿ ನರಕಪ್ರಾಯವಾಗಿ ಮಾಡುವವಳೂ ಅವಳೇ ಎಂಬ ವಾಸ್ತವ ಚಿತ್ರಣ.

೩೯೭. ಬಿಡುಗಡೆ

(೧೯೭೩ / ಕಪ್ಪು-ಬಿಳುಪು / ಸಾಮಾಜಿಕ)

ಲಾ: ರಮೇಶ್ ಮೂವೀಸ್
ಪ್ರೊ: ಟಿ.ಪಿ.ವೇಣುಗೋಪಾಲ್
ನಿ: ವೈ.ಆರ್.ಸ್ವಾಮಿ
ಸ.ನಿ: ವಿ.ಸೋಮಶೇಖರ್, ಎಸ್.ವಿ.ಶ್ರೀನಿವಾಸ್
ಅ: ರಾಜಕುಮಾರ್, ಭಾರತಿ, ರಾಜೇಶ್, ಕೆ.ಎಸ್.ಅಶ್ವತ್ಥ್, ಸಂಪತ್, ಬಾಲಕೃಷ್ಣ, ನರಸಿಂಹರಾಜು, ದಿನೇಶ್, ವಜ್ರಮುನಿ, ಕಲಾ, ತೂಗುದೀಪ ಶ್ರೀನಿವಾಸ್, ಶಕ್ತಿಪ್ರಸಾದ್, ಸುಶೀಲಾನಾಯ್ಡು, ಜಯಶ್ರೀ, ಬಿ.ಸದಾಶಿವಯ್ಯ, ಹನುಮಂತಾಚಾರ್, ಜೋಕರ್ ಶ್ಯಾಂ, ಶನಿಮಹದೇವಪ್ಪ, ಕೇಶವ ಮೂರ್ತಿ, ಮಲ್ಲಿಕಾರ್ಜುನ, ಬಿ.ಎಸ್.ನಾರಾಯಣ್, ಭೀಮರಾವ್, ಶೈಲೇಂದ್ರ, ಶಿವಾಜಿರಾವ್, ರತ್ನಂ, ಶಿವಯ್ಯ, ಎಲ್ಲಪ್ಪ, ನಾರಾಯಣ್, ಸಿದ್ದರಾಮಯ್ಯ, ಬಿ.ಮಲ್ಲೇಶ್, ಬಿ.ನಾರಾಯಣರಾವ್, ಪರಮೇಶ್ವರಯ್ಯ, ಎನ್.ಎಸ್.ಕೆ.ರಾಜು, ಜನಾರ್ಧನ್, ಪದ್ಮನಾಭನ್, ದೊರೆಸ್ವಾಮಿ, ಜಾನಕೀರಾಂ, ಕಲ್ಪನ, ವಿಜಯಲಲಿತ
ಚಿ.ಕ: ವೈ.ಆರ್.ಸ್ವಾಮಿ
ಮಾ: ಚಿ.ಉದಯಶಂಕರ್
ಗೀ: ಚಿ.ಉದಯಶಂಕರ್, ಚಿ.ಸದಾಶಿವಯ್ಯ
ಗಾ: ಪಿ.ಬಿ.ಶ್ರೀನಿವಾಸ್, ಪಿ.ಸುಶೀಲಾ, ಎಸ್.ಜಾನಕಿ
ಸಂ: ಬಾಬು, ಎನ್.ಸಿ.ರಾಜನ್
ಛಾ: ಅಣ್ಣಯ್ಯ, ಮಲ್ಲಿಕ್
ಕಲೆ: ಬಿ.ಚಲಂ
ಸ: ಎಂ.ರಂಗರಾವ್
ಧ್ವ: ಕೋಟೀಶ್ವರರಾವ್
ನೃ: ಉಡುಪಿ ಬಿ.ಜಯರಾಂ
ಸಾ: ಜ್ಯೂಡೋ ರತ್ನಂ
ವ: ತಂಗಪ್ಪನ್, ಎಂ.ನಾಥ್
ಪ್ರ: ದೊರೈಸ್ವಾಮಿ, ವೇಣುಗೋಪಾಲ್, ಶ್ರೀನಿವಾಸ್
ಸ್ಟು: ವಿಕ್ರಂ, ಚಾಮುಂಡೇಶ್ವರಿ
ಹಾ: ೧) 'ಬೆಡಗಿನ ಹೆಣ್ಣಾ ಅರಳಿದ ಕಣ್ಣಾ....', ೨) 'ಬಾನಿಗೆ ನೀಲಿಯಾ ಮೇಘಕೆ ಬೆಳ್ಳಿಯಾ....', ೩) 'ನೆನ್ನೆಯೇ ಮುಗಿದ ಕಥೆ ನಾಳೆಯಾ ಚಿಂತೆ ವ್ಯಥೆ....', ೪) 'ನನ್ನ ಪುಟ್ಟ ಸಂಸಾರ ಲೋಕದಿಂದ ಬಹುದೂರ...'
ವಿ: ನಿರಪರಾಧಿಗೆ ಗಲ್ಲು ಶಿಕ್ಷೆಯಾಗುವಂತೆ ಚಿತ್ರೀಕರಣಗೊಂಡು ಬಿಡುಗಡೆಯಾದ ಈ ಚಿತ್ರ ಪ್ರೇಕ್ಷಕರ ಅಸಮ್ಮತಿಯಿಂದ ಪುನಃ ಬಂಧಮುಕ್ತಗೊಳ್ಳುವಂತೆ ಚಿತ್ರೀಕರಣಗೊಂಡು ಬಿಡುಗಡೆಯಾಯಿತು.
ಕ.ಸಾ: ಗೆಳೆಯರಿಬ್ಬರ ಪಂದ್ಯದ ಫಲವಾಗಿ ನಾಯಕ ಮಾಡದ ತಪ್ಪಿಗೆ ಶಿಕ್ಷೆಯಾಗಿ ಗಲ್ಲು ಶಿಕ್ಷೆಗೆ ಒಳಪಡುತ್ತಾನೆ. ಅವನ ಬಿಡುಗಡೆಗೆ ಪೂರಕವಾಗಿ ಬಂದ ಎಲ್ಲಾ ಸಾಕ್ಷ್ಯಗಳು ನಾಶವಾಗಿ ಕಡೆಗೆ ಅತ ಬಿಡುಗಡೆಗೊಳ್ಳುತ್ತಾನೆ.

೩೯೮. ಸಿಐಡಿ ೭೨

(೧೯೭೨ / ಕಪ್ಪು-ಬಿಳುಪು / ಪತ್ತೇದಾರಿ)

ಲಾ: ಶ್ಯಾಂ ಪ್ರಸಾದ್ ಮೂವೀಸ್
ಪ್ರೊ: ಡಿ.ಆರ್.ನಾಯ್ಡು
ನಿ: ಕೆ.ಎಸ್.ಎಲ್.ಸ್ವಾಮಿ (ರವೀ)
ಸ.ನಿ: ದತ್ತರಾಜ್, ಮಣಿಮುರುಗನ್
ಅ: ಶ್ರೀನಾಥ್, ರಾಜೇಶ್, ರಾಜಶ್ರೀ, ಬಿ.ವಿ.ರಾಧಾ, ತೂಗುದೀಪ ಶ್ರೀನಿವಾಸ್, ದ್ವಾರಕೀಶ್
ಕ/ಚಿ.ಕ: ಕೆ.ಎಸ್.ಎಲ್.ಸ್ವಾಮಿ
ಮಾ/ಗೀ: ಚಿ। ಉದಯಶಂಕರ
ಗಾ: ಪಿ.ಬಿ.ಶ್ರೀನಿವಾಸ್, ಪಿ.ಸುಶೀಲ, ಎಲ್.ಆರ್.ಈಶ್ವರಿ
ಸಂ: ಬಾಲ್ ಜಿ.ಯಾದವ್
ಛಾ: ಪಿ.ಎಸ್.ಪ್ರಕಾಶ್
ಕಲೆ: ರಮೇಶ್

ಸ: ವಿಜಯಭಾಸ್ಕರ್
ಧ್ವ: (ಹಾ) ಮೋಹನ ಸುಂದರಂ (ಮಾ) ಕೆ.ಆರ್.ಸೀತಾರಾಂ
ನೃ: ಉಡುಪಿ ಬಿ.ಜಯರಾಂ
ಸಾ: ಶ್ಯಾಂಸುಂದರ್ ಶೆಟ್ಟಿ
ಪ್ರ: ಜಿ.ವೆಂಕಟೇಶ್
ಸ್ಟು: ಪ್ರೀಮಿಯರ್
ಕ.ಸಾ: ಪತ್ತೇದಾರಿ ಕಥೆ

೩೯೯. ಬೀಸಿದ ಬಲೆ

(೧೯೭೩ / ಕಪ್ಪು-ಬಿಳುಪು / ಸಾಮಾಜಿಕ)

ಲಾ: ಶಾಂತಿ ಇಂಟರ್‌ನ್ಯಾಷನಲ್
ಪ್ರೊ: ಸಾಸ್ತಾನ್ ಫಿಲಿಫ್ ಲೂಯಿಸ್ ಮತ್ತು ಸಂಗಡಿಗರು
ನಿ: ಬಿ.ಎ.ಅರಸು ಕುಮಾರ್
ಸ.ನಿ: ಶರಣಪ್ಪ ವಾರದ್, ಜಗದೀಶ್ (ಸೀತಾರಾಂ)
ಅ: ಜಯಲಕ್ಷ್ಮಿ, ರವಿಕಲಾ, ಚಂದ್ರ (ಶ್ರೀವಾಣಿ), ವಾಸಂತಿ, ರಾಂಗೋಪಾಲ್, ಮೈಲಾರಿ ರಾವ್, ಸುಧೀರ್, ಬಸವರಾಜ್ ಬ್ಯಾಡಗಿ, ಚಾಣಕ್ಯ ಸುಬ್ಬರಾವ್, ಶ್ರೀನಿವಾಸ ಅಯ್ಯಂಗಾರ್, ಅಶ್ವತ್ಥನಾರಾಯಣ, ವಿಕ್ಸ್ ರಾಜು, ಸೀತಾರಾಂ, ನಾರಾಯಣಗೌಡ, ಗೋಪಾಲ್‌ರಾಜ್, ಜಯದೇವ್, ಚೆಲುವಯ್ಯ, ಶ್ರೀನಿವಾಸಮೂರ್ತಿ, ನಂದಗೋಪಾಲ್, ಜಯಕುಮಾರಿ (ನೃತ್ಯ)

ಕ/ಚಿ.ಕ/ಮಾ: ಬಿ.ಎ.ಅರಸು ಕುಮಾರ್
ಗೀ: ಬಿ.ಎ.ಅರಸುಕುಮಾರ್, ಚಿ.ಉದಯಶಂಕರ್, ಡಿ.ಎ.ಕೃಷ್ಣಮೂರ್ತಿ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಪಿ.ಸುಶೀಲ, ಬಿ.ಕೆ.ಸುಮಿತ್ರ, ಎಲ್.ಆರ್.ಈಶ್ವರಿ
ಸಂ: ಎಂ.ಉಮಾನಾಥ್, ಸಹಾಯ ಮಣಿ, ಜಯರಾಂ
ಛಾ: ಯು.ಎಂ.ಎನ್.ಷರೀಫ್, ಸಹಾಯ - ವಸಂತಕುಮಾರ್
ಕಲೆ: ಸಾಸ್ತಾನ್ ಫಿಲಿಫ್ ಲೂಯಿಸ್
ಸ: ರಾಜನ್-ನಾಗೇಂದ್ರ
ಧ್ವ: (ಮಾ)ರವೀಂದ್ರ, ಗೋವಿಂದಸ್ವಾಮಿ, ಮಣಿ, (ಹಾ)ಎಸ್.ಪಿ.ರಾಮನಾಥನ್
ನೃ: ಕೃಷ್ಣಕುಮಾರ್ (ಧಾರವಾಡ)
ಸಾ: ಬಾಬೂಸಿಂಗ್ ಠಾಕೂರ್
ವ: ಡಿ.ಪಿ.ಶ್ರೀನಿವಾಸಮೂರ್ತಿ
ಪ್ರ: ಬೆಂಗಳೂರು ಡಿ.ಮುತ್ತು, ಲಕ್ಷ್ಮಿ, ಸಹಾಯ ಪಳನಿ, ಶ್ರೀನಿವಾಸ್
ಸ್ಟು: ಚಾಮುಂಡೇಶ್ವರಿ
ಹಾ: ೧) 'ಜಾಣೆ ಜಾಗರದಲ್ಲೆಲ್ಲೆ ಜಗದಲಿ ನಿನ್ನಂಥ ಹೆಣ್ಣ ಕಾಣೆ....', ೨) 'ಬೇಕೇ ಹತ್ತಿರ ಬಾ ಜೋಕೇ ಮೆತ್ತಗೆ ಬಾ....', ೩) 'ಇಷ್ಟು ಹೆಣ್ಮಕ್ಕಿದೀರಾ ಎಂತದಾಮ್ರಿ ಹಾಡ್ತ ಮಾರಾಯ್ತಿರಾ....', ೪) 'ಕಸ್ತೂರಿ ಕನ್ನಡ ಕುಲದ ಮುದ್ದಾದ ಮದು ಮಗಳೆ...', ೫) 'ನಗಬೇಡ ಕಂದಾ ನಗಬೇಡ ಕಂದಾ...'
ವಿ: ಪುಣೆ ಫಿಲಂ ಇನ್ಸ್‌ಸ್ಟಿಟ್ಯೂಟ್‌ನಲ್ಲಿ ತರಬೇತಿ ಪಡೆದ ಜಯಲಕ್ಷ್ಮಿ ಈ ಚಿತ್ರದಿಂದ ಬೆಳ್ಳಿ ತೆರಗೆ ಪ್ರವೇಶ ಪಡೆದರು.
ಕ.ಸಾ: ಬೆಸ್ತರ ಬದುಕಿನ ಕಥೆ. ಪ್ರೇಮಿಗಳನ್ನು ಪೀಡಿಸುವ ಸಾಹುಕಾರನ ಕುತಂತ್ರಗಳು. ಬಿರುಗಾಳಿಗೆ ಸಿಕ್ಕಿ ಸತ್ತನೆಂದುಕೊಂಡ ಗಂಡ ಕಳ್ಳರ ಗುಂಪಿನಲ್ಲಿ ಸಿಕ್ಕಿಬಿದ್ದು, ತಿಳಿದ ಹೆಂಡತಿ ಮಲ್ಲಿ ಪೊಲೀಸರ ನೆರವಿನಿಂದ ಬಿಡಿಸಿ ಕರೆತರುತ್ತಾಳೆ.

೪೦೦. ತ್ರಿವೇಣಿ

(೧೯೭೩ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ನಾಗರಾಜ ಆರ್ಟ್ ಪ್ರೊಡಕ್ಷನ್ಸ್
ಪ್ರೊ: ಡಿ.ಜಿ.ನಾಗರಾಜ್, ಕೆ.ಗಿರಿಧರ್, ಯು.ಭಾವಜಾನ್, ಎಸ್.ಆರ್.ಬಲ್ಲಾಳ್, ಎಂ.ವೆಂಕಟರೆಡ್ಡಿ
ನಿ: ಎಂ.ಎಸ್.ಪ್ರಸಾದ್
ಸ.ನಿ: ಕುಂದಾಸಿ ಸತ್ಯನ್

ಅ: ಉದಯಕುಮಾರ್, ಕಲ್ಪನ, ನರಸಿಂಹರಾಜು, ವಿಜಯಕಲ, ದಿನೇಶ್, ಲಕ್ಷ್ಮೀದೇವಿ, ರಾಮಚಂದ್ರಶಾಸ್ತ್ರಿ, ಹಲಂ, ಶಕ್ತಿಪ್ರಸಾದ್, ಗುಗ್ಗು, ರತ್ನ, ಹೆಚ್.ಜಿ.ಸೋಮಶೇಖರರಾವ್, ಮಾ। ಪ್ರಸನ್ನ, ಜಿ.ಎಸ್.ಆನಂದ್, ಪ್ರಭಾಕರ್, ಜಿ.ವಿ.ಶಿವಾನಂದ್, ಕೃಷ್ಣರಾಜು, ಯು.ಕೆ.ಅರುಣ್, ಬೇಬಿ ಕವಿತ
ಕ: ಎಂ.ಎಸ್.ಪ್ರಸಾದ್, ಹಂಸಪ್ರಿಯ
ಚಿ.ಕ: ಎಂ.ಎಸ್.ಪ್ರಸಾದ್
ಮಾ: ಡಾ॥ ಎಸ್.ಲಲಿತ, ಕುಂದಾಸಿ ಸತ್ಯನ್, ನಾಡಿಗೇರ್ ಕೃಷ್ಣರಾವ್
ಗೀ: ಹಂಸಲೇಖ, ಹ.ವೆಂ.ನಾಗರಾಜರಾವ್, ಗೀತಪ್ರಿಯ, ಕು.ರ.ಸೀ.
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಪಿ.ಸುಶೀಲ, ಜೇಸುದಾಸ್, ಎಲ್.ಆರ್.ಈಶ್ವರಿ, ಪಿ.ಬಿ.ಶ್ರೀನಿವಾಸ್, ಹೆಚ್.ಪಿ.ಗೀತ, ಜಿ.ಬಾಲಕೃಷ್ಣ
ಸಂ: ಪಿ.ಸತ್ಯಮೂರ್ತಿ
ಛಾ: ಎಸ್.ಜಿ.ರಾವ್
ಕಲೆ: ಎ.ನಾರಾಯಣ್
ಸ: ಉಪೇಂದ್ರಕುಮಾರ್
ಧ್ವ: (ಹಾ) ಎಸ್.ಪಿ.ರಾಮನಾಥನ್, ಮೋಹನಸುಂದರಂ (ಮಾ) ರಾಜಗೋಪಾಲ್, ಗೋವಿಂದಸ್ವಾಮಿ
ನೃ: ಡಿ.ಕೃಷ್ಣಕುಮಾರ್
ಸಾ: ದೊರೆ
ವ: ಅಪ್ಪಾರಾವ್
ಪ್ರ: ಮನ್ಮಥರಾವ್, ಗುರು, ಕೇಶವ, ವಿಶ್ವನಾಥ್, ರಾಜಗೋಪಾಲ್, ಷಣ್ಮುಖಂ
ಸ್ಟು: ಪ್ರೀಮಿಯರ್, ಚಾಮುಂಡೇಶ್ವರಿ
ಹಾ: ೧) 'ಮನೆಮಂದಿಗೆಲ್ಲ ಸುಖ ನೀಡಬಲ್ಲ...', ೨) 'ಸಿರಿಸಂಪದಾ ಏನ ಕೇಳಲಿ...', ೩) 'ನೀನಾ ಭಗವಂತಾ...', ೪) 'ಏನಾಯಿತೀಗ.. ನೀಗ್ಯದ...', ೫) 'ಕವಿಯ ಮಧುರ ಕಲ್ಪನ...', ೬) 'ಸವಿಗ ಬಿಸಿ.. ಬಿಸಿ...', ೭) 'ಮನಸು ನವಿರು...'
ವಿ: ಹಂಸಲೇಖಾ ಗೀತೆ ಬರೆದರು. ಅವರ ಸಹೋದರ ಹಾಡಿದರು.
ಕ.ಸಾ: ನಂದಗೋಕುಲದಂತಿದ್ದ ಮನೆ. ಆ ಮನೆಯ ಒಡತಿ ತ್ರಿವೇಣಿ. ಸಂಬಂಧಿಕರ ಪ್ರವೇಶದಿಂದ ಮನೆ ನರಕವಾಯಿತು. ಕೊನೆಗೆ ಆಕೆ ತನ್ನ ಪತಿ, ಮನೆಯನ್ನು ಕಳೆದುಕೊಂಡು ಅಳಿಯನ ಸಹಾಯದಿಂದ ನೆಮ್ಮದಿ ಕಾಣುತ್ತಾಳೆ.

೪೦೧. ಸ್ವಯಂವರ

(೧೯೭೩ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಕರ್ನಾಟಕ ಫಿಲಂಸ್ ಲಿ.,
ಪ್ರೊ: ಸಿ.ಆರ್.ಬಸವರಾಜ್
ನಿ: ವೈ.ಆರ್.ಸ್ವಾಮಿ
ಸ.ನಿ: ಕುಣಿಗಲ್ ನಾಗಭೂಷಣ್
ಅ: ರಾಜಕುಮಾರ್, ಭಾರತಿ, ಬಾಲಕೃಷ್ಣ, ದಿನೇಶ್, ಸಂಪತ್, ರಾಘವೇಂದ್ರರಾವ್, ಬೆಂಗಳೂರು ನಾಗೇಶ್, ಭೀಮರಾವ್, ಜಯಶ್ರೀ, ಕುಣಿಗಲ್ ರಾಮನಾಥ್, ಕಲಾ, ನಾಗರತ್ನಮ್ಮ, ಜ್ಯೋತಿ, ಜಯಾ, ಸುಶೀಲ ನಾಯ್ಡು, ಸತ್ಯ, ಕಮಲ, ಲಕ್ಷ್ಮಮ್ಮ, ರಜಿನಾ, ಶನಿಮಹದೇವಪ್ಪ, ಪದ್ಮನಾಭರಾವ್, ಚಿಕ್ಕವೀರಯ್ಯ, ಸಿದ ಮಲ್ಲಯ್ಯ, ಪುಷ್ಪ, ಅನಂತಮಣಿ, ನೃತ್ಯ ಚಿತ್ರಾ ರಮೇಶ್, ದೇವಿ
ಕ: ಮ.ನ.ಮೂರ್ತಿ ಅವರ ಕಾದಂಬರಿ
ಮಾ: ಸೋರಟ್ ಅಶ್ವತ್
ಗೀ: ಆರ್.ಎನ್.ಜಯಗೋಪಾಲ್, ಚಿ.ಉದಯಶಂಕರ್, ಸೋರಟ್ ಅಶ್ವತ್ಥ್
ಗಾ: ಪಿ.ಬಿ.ಶ್ರೀನಿವಾಸ್, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್.ಜಾನಕಿ, ಪಿ.ಸುಶೀಲ
ಸಂ: ಪಿ.ಭಕ್ತವತ್ಸಲಂ. ಸಹಾಯ - ಕೆ.ಅಚ್ಯುತನ್, ಎಸ್.ಮನೋಹರ್
ಛಾ: ವಿ.ಮನೋಹರ್
ಕಲೆ: ಬಿ.ಎಸ್.ಕೇಶವರಾವ್
ಸ: ರಾಜನ್-ನಾಗೇಂದ್ರ
ಧ್ವ: (ಹಾ) ಎಸ್.ಪಿ.ರಾಮನಾಥನ್, (ಮಾ) ಕೆ.ಶ್ರೀನಿವಾಸ್
ನೃ: ಉಡುಪಿ ಬಿ.ಜಯರಾಂ, ಸಹಾಯ ದೇವಿ
ಸಾ: ವೈ.ಶಿವಯ್ಯ
ವ: ಎಂ.ನಾಥ್, ತಂಗಪ್ಪನ್, ನಾಗರಾಜ್
ಪ್ರ: ದೊರೆಸ್ವಾಮಿನಾಯ್ಡು, ಮನ್ಮಥರಾವ್, ಕೇಶವ, ಶ್ರೀನಿವಾಸ, ಮೂಗೂರು ಪಿ.ಗುರು
ಸ್ಟು: ಕಂಠೀರವ
ಹಾ: ೧) 'ಪ್ರಿಯ ಸಖೀ ಪ್ರಿಯಂವದೇ...', ೨) 'ಈ ಜಗವೊಂದು ನ್ಯಾಯಾಲಯಾ...', ೩) 'ಕೋಟಿಗೆ ಒಬ್ಬ ನಾಡಿಗೆ ಒಬ್ಬ...', ೪) 'ನಿನ್ನ ಕಣ್ಣ ಕನ್ನಡಿಯಲ್ಲಿ ಕಂಡೆ ನನ್ನ ರೂಪ....'
ವಿ: ಚಿತ್ರವನ್ನು ಗುಬ್ಬಿ ವೀರಣ್ಣನವರಿಗೆ ಅರ್ಪಿಸಲಾಗಿದೆ. ನಿರ್ವಾಹಕರಾಗಿ ಜಿ.ವಿ.ಶಿವಾನಂದ್ ಕೆಲಸ ಮಾಡಿದರು.
ಸೆ: ೧೬ ರೀಲು
ಕ.ಸಾ: ಕಥಾನಾಯಕಿಯ ತಂದೆ ಮಗಳಿಗೆ ಮದುವೆಯಾದರೆ ಮಾತ್ರ ಆಸ್ತಿ ಸಿಗುತ್ತದೆ ಎಂದು ವಿಲ್ ಬರೆದು ಸತ್ತಿರುತ್ತಾನೆ. ವಿಲ್ ನೋಡಿದ ನಾಯಕಿ ಉರಿದು ಬೀಳುತ್ತಾಳೆ. ಆಕೆ ಪುರುಷದ್ವೇಷಿ. ಅದಕ್ಕಾಗಿ ಮರಣದಂಡನೆಗೆ ಗುರಿಯಾದ ವ್ಯಕ್ತಿಯನ್ನು ವಿವಾಹವಾಗುತ್ತಾಳೆ. ಆದರೆ ವಿಧಿಯ ಲಿಖಿತವಂತೆ ಆತನಿಗೆ ಗಲ್ಲು ಶಿಕ್ಷೆಯಿಂದ ಮುಕ್ತಿ ದೊರೆಯುತ್ತದೆ. ಬಿಡುಗಡೆಯಾಗಿ ಆತ ಬಂದಾಗ ಆಕೆ ನಿರಾಕರಿಸುತ್ತಾಳೆ. ನಂತರ ಆಕೆಗೆ ನಿಜಸ್ಥಿತಿ ಅರಿವಾಗಿ ಆತನನ್ನು ಸೇರುತ್ತಾಳೆ.

೪೦೨. ಭಾರತದ ರತ್ನ

(೧೯೭೩ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಅಶ್ವಿನಿ ಫಿಲಂಸ್
ಪ್ರೊ: ಜಯದೇವ ಕುಮಾರ್
ನಿ: ಟಿ.ವಿ.ಸಿಂಗ್ ಠಾಕೂರ್
ಸ.ನಿ: ಸಹ್ಯಾದ್ರಿ
ಅ: ಉದಯಕುಮಾರ್, ಜಯಂತಿ, ಜಯದೇವ ಕುಮಾರ್, ಲೀಲಾವತಿ, ಬಾಲಕೃಷ್ಣ, ಶೈಲಶ್ರೀ, ನಾಗಪ್ಪ, ಜಯ, ರಂಗ, ಶಾಂತಾದೇವಿ, ಶಕ್ತಿಪ್ರಸಾದ್, ಸುಧಾ ಪಾಠಕ್, ಅರವಿಂದ ಕುಮಾರ್, ವಸಂತರಾವ್ ನಾಕೋಡ್, ಡಾ॥ನಾಗೂರ್, ಶೈಲೇಂದ್ರ, ವಿಜಯೇಂದ್ರ, ಕೆ.ಗೋಪಾಲರಾವ್, ಎಸ್.ರಾಮಯ್ಯ, ಕೆ.ಲಕ್ಕಣ್ಣ, ಎಂ.ಆರ್.ಶಂಕರ್, ವಿ.ಬಿ.ಶಂಕರ್, ಉಮೇಶ್, ಬಸವರಾಜ್, ನೇಮಿನಾಥ್, ರಾಮಣ್ಣ ಗಲಗಲಿ, ಬಸವರಾಜ ಬಾಲ, ದಾನಪ್ಪ ಜತ್ತಿ, ಹೆಚ್.ವೃಷಬೇಂದ್ರ, ಬಾಲರಾಜ್, ನಾಗವೇಣಿ
ಕ/ಚಿ.ಕ/ಮಾ/ಗೀ: ಜಯದೇವಕುಮಾರ್
ಗಾ: ಪಿ.ಬಿ.ಶ್ರೀನಿವಾಸ್, ಪಿ.ಸುಶೀಲ, ಎಸ್.ಜಾನಕಿ, ಎಲ್.ಆರ್.ಈಶ್ವರಿ
ಸಂ: ಎಸ್.ಪಿ.ರಾಜನ್, ಸಹಾಯ - ಆರ್.ದಾಸ್, ಕಣ್ಣನ್
ಛಾ: ವಿಜಯಾ ನಂಜಪ್ಪ
ಕಲೆ: ಕೆ.ಬಾಲನ್, ಸಹಾಯ - ಕೆ.ಸುರೇಶ್
ಸ: ಆರ್.ಸುದರ್ಶನಂ
ಧ್ವ: ಮೋಹನಸುಂದರಂ, ಸ್ವಾಮಿನಾಥನ್, ವಿಶ್ವನಾಥನ್, ಕೆ.ಶ್ರೀನಿವಾಸನ್, ಲಕ್ಷ್ಮಣ್
ನೃ: ಉಡುಪಿ ಬಿ.ಜಯರಾಂ, ಸಹಾಯ - ದೇವಿ
ಸಾ: ಬಾಬುಸಿಂಗ್, ಭಾವನಗರ್, ಬಾಬು ಸಾಲಿಯಾನ್
ವ: ಡಿ.ಅಣ್ಣಾಮಲೈ, ಎಸ್.ಎಚ್.ಅವಧಾನ್
ಪ್ರ: ರಾಜಗೋಪಾಲ್, ಮನ್ಮಥರಾವ್, ಭದ್ರರಾವ್, ವಿಶ್ವನಾಥ್, ಗುರು, ಪ್ರಸಾದ್
ಸ್ಟು: ಕಂಠೀರವ
ಹಾ: ೧) 'ದುಡಿಯೋಣ ಬನ್ನಿರಿ ದುಡಿಯೋಣ ಬನ್ನಿ...', ೨) 'ಹೋಯ್ ಹೋಯ್ ಬಂಜಾರೀ ನಿನ್ನ ಕೈಜಾರೀ ಆಹ...', ೩) 'ಯಾಡಿಕ್ಕಯ್ಯಾ ಇಡಿದೇನೋಯ್ ಸೂರ ಸುಂದರಾ..', ೪) 'ಅನುರಾಗದ ಆರಾಧನಾ ಅತಿಮಧುರಾ ಮೋಹನಾ...', ೫) 'ವಂದೇ ಮಾತರಂ.. ನಮ್ಮ ತಾಯಿ ಭಾರತಿ ಪಡೆದ ಪುನಿತ ಸಂತತಿ...', ೬) 'ಜಯ ಕನ್ನಡ ನಾಡ ಪ್ರಕಾಶ ಜಯಹೆ...', ೭) 'ಒಂದೇ ದಾರಿ ನಡೆದು ಬಂದ ದಾರಿ....'
ವಿ: 'ಭಾರತರತ್ನ' ಹೆಸರು, ಸೆನ್ಸಾರ್ ಕಾರಣದಿಂದ ಮಧ್ಯೆ 'ದ' ಸೇರಿತು.
ಕ.ಸಾ: ಹಳ್ಳಿ ಸುಧಾರಣೆ ಮತ್ತು ಜಾತಿ ಸಂಕರ ಹೋಗಲಾಡಿಸುವ ಕಥೆ. ಚಿಕ್ಕಪ್ರಾಯದಲ್ಲೇ ಸೈನ್ಯವನ್ನು ಸೇರಿ ಕ್ಯಾಪ್ಟನ್ ಪದವಿಗೇರಿದವ ಅನಾರೋಗ್ಯದಿಂದಾಗಿ ರಜೆಯ ಮೇಲೆ ಹುಟ್ಟೂರಿಗೆ ಮರಳಿ ಬರುವಾಗ ಲಂಬಾಣಿಗಳ, ಹರಿಜನರ ದುರ್ಭರ ಬದುಕನ್ನು ಕಾಣುತ್ತಾನೆ. ಹಳ್ಳಿ ಸೇರಿದಾಗ ತಾಯಿ ಸತ್ತಿದ್ದು, ಇದ್ದೊಂದು ಮನೆ ಪಟೇಲನ ತುತ್ತಾಗಿರುತ್ತದೆ. ರೈತನೊಬ್ಬನ ಮನೆಯಲ್ಲಿ, ಆತನ ವಿಧವೆ ಮಗಳ ಆಸರೆ-ಆರೈಕೆಗಳಲ್ಲಿ ಉಳಿದಾಗ, ಪಟೇಲ ಹಾಗೂ ಶ್ಯಾನುಭೋಗರ ದೌರ್ಜನ್ಯ ಕಂಡು ಹಳ್ಳಿಯ ಜನರು ಹಸನಾದ ಬಾಳು ಬಾಳುವಂತಾಗಲು ಪ್ರಯತ್ನಿಸುತ್ತಾನೆ. ಅಂತ್ಯದಲ್ಲಿ ಹರಿಜನರು ಹಾಗೂ ಲಂಬಾಣಿಗಳ ಬದುಕಿನ ಆಶಾಕಿರಣವಾಗುತ್ತಾನೆ.

೪೦೩. ಧರ್ಮಪತ್ನಿ

(೧೯೭೩ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಶರಾವು ಪಿಕ್ಚರ್ಸ್
ಪ್ರೊ: ಮಧ್ವರಾಜ್
ನಿ: ಆರೂರು ಪಟ್ಟಾಭಿ
ಸ.ನಿ: ಸೀತಾರಾಮ್ ಕುಲಾಲ್
ಅ: ರಾಜಾಶಂಕರ್, ಲೀಲಾವತಿ, ಕೆ.ಎಸ್.ಟೇಲರ್, ವಿಜಯಕಲಾ, ಶಶಿಕಲಾ, ವಸಂತಿ, ಸೋಮಶೇಖರ್, ರಾಮಚಂದ್ರ ಕೂಳೂರು, ಬಿ.ರಾಮ ಕಿರೋಡಿಯನ್, ಬಿ.ನರಸಪ್ಪ
ಕ: ಭವಾನಿ ಶಂಕರ್
ಚಿ.ಕ/ಮಾ: ಕೆ.ಎಸ್.ಟೈಲರ್
ಗೀ: ವಿಜಯಕುಮಾರ್, ಕೆ.ಎಸ್.ಟೈಲರ್
ಗಾ: ಎಸ್.ಜಯರಾಮನ್, ಸರೋಜಿನಿ ಪಟ್ಟಾಭಿ, ಪಿ.ಬಿ.ಶ್ರೀನಿವಾಸ್, ನಾಗೇಂದ್ರ
ಸಂ: ಬಾಬು
ಛಾ: ಕೆ.ಕೆ.ಮೆನನ್
ಸ: ರಾಜನ್ ನಾಗೇಂದ್ರ
ಧ್ವ: (ಹಾ) ಎಸ್.ಪಿ.ರಾಮನಾಥನ್, (ಮಾ) ಮೋಹನ ಸುಂದರಂ
ನೃ: ಲಕ್ಷ್ಮೀನಾರಾಯಣರಾವ್
ಸಾ: ತ್ಯಾಗರಾಜು, ರಾಮು
ವ: ವೆಂಕಟೇಶ್
ಪ್ರ: ಸುಂದರ್, ಶ್ರೀನಿವಾಸ್

ಸ್ಟು: ಪ್ರೀಮಿಯರ್
ಕ: ತುಳು ಚಿತ್ರ 'ದಾರೆದಬುಡೆದಿ'ಯ ಸಮಾನಾಂತರ ಚಿತ್ರ

೪೦೪. ಕೌಬಾಯ್ ಕುಳ್ಳ

(೧೯೭೩ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ದ್ವಾರಕೀಶ್ ಚಿತ್ರ
ಪ್ರೊ: ಅಂಬುಜಾ ದ್ವಾರಕೀಶ್
ನಿ: ವಿಜಯ್
ಸ.ನಿ: ಭಾರ್ಗವ
ಅ: ದ್ವಾರಕೀಶ್, ಉದಯಕುಮಾರ್, ಬಾಲಕೃಷ್ಣ, ವಜ್ರಮುನಿ, ರಂಗ, ತೂಗುದೀಪ ಶ್ರೀನಿವಾಸ್, ಶಕ್ತಿಪ್ರಸಾದ್, ಲೋಕನಾಥ್, ಪ್ರಭಾಕರ್, ವಿಠಲ್, ಅಶ್ವತ್ ನಾರಾಯಣ್, ರಾಜು, ಪಾಪ, ಮಾ।ಅರುಣ್, ಜ್ಯೋತಿಲಕ್ಷ್ಮಿ, ಸುರೇಖ, ಸುಶೀಲಾನಾಯ್ಡು, ಮೈಥಿಲಿ, ನೃತ್ಯ - ಜಯಶ್ರೀ (ಬಾಂಬೆ), ಹಲಂ
ಕ: ದ್ವಾರಕೀಶ್
ಚಿ.ಕ: ದ್ವಾರಕೀಶ್, ವಿಜಯ್, ಎಂ.ಡಿ.ಸುಂದರ್, ಚಿ.ಉದಯಶಂಕರ್
ಮಾ/ಗೀ: ಚಿ.ಉದಯಶಂಕರ್
ಗಾ: ಪಿ.ಸುಶೀಲ, ಎಲ್.ಆರ್.ಈಶ್ವರಿ, ಎಸ್.ಪಿ.ಬಾಲಸುಬ್ರಹ್ಮಣ್ಯಂ, ವಾಣಿ ಜಯರಾಂ, ರಾಜು
ಸಂ: ಬಾಲ್ ಜಿ.ಯಾದವ್
ಛಾ: ಪಿ.ಎಸ್.ಪ್ರಕಾಶ್
ಕಲೆ: ರಮೇಶ್
ಸ: ರಾಜನ್-ನಾಗೇಂದ್ರ
ಧ್ವ: (ಹಾ)ಮೋಹನ ಸುಂದರಂ, (ಮಾ)ಗೋವಿಂದಸ್ವಾಮಿ, ಶ್ರೀನಿವಾಸ್
ನೃ: ಉಡುಪಿ ಬಿ.ಜಯರಾಂ
ಸಾ: ಶ್ಯಾಂ ಸುಂದರ್
ವ: ಚಿಟ್ಟಿಬಾಬು, ತಂಬು, ನಜರೆ ನಾರಾಯಣ್
ಪ್ರ: ಮನ್ಮಥರಾವ್, ಸಿಂಗ್, ರಾಜು
ಸ್ಟು: ಚಾಮುಂಡೇಶ್ವರಿ, ಕಂಠೀರವ
ಹಾ: ೧)'ಒಂದೆನ್ನೋ ಒಂಟಿ ಹೆಣ್ಣು ಬಲ್ಲೆಯ ನೀನು...', ೨)'ಯಾರಿಗೇ ರುಕ್ಕಮ್ಮ ಮೋಡಿ ಮಾಡ್ತೀಯಾ...', ೩)'ಚೆನ್ನ ನಿನ್ನ ಕಂಡೆನು ಕನಸಲ್ಲಿ....', ೪)'ಮಾಗಿಯ ಚಳಿಯಲಿ ಕೊರೆಯುವ ನೀರಲಿ...', ೫)'ಭಂ ಭಂ ಭಂ ಭಜಿಸು ಭಂ ಭಂ ಭಂ...'
ಸೆ: ೧೬ ರೀಲು
ಕ.ಸಾ: ತನ್ನ ಹಾಗೂ ಹಳ್ಳಿಯ ಜನರ ಮೇಲೆ ದೌರ್ಜನ್ಯವೆಸಗಿದ ಐವರು ದಾಂಡಿಗರ ಮೇಲೆ ಸೇಡು ತೀರಿಸಿಕೊಳ್ಳಲು ದನ ಕಾಯುವ ಕುಳ್ಳ ಕೌಬಾಯ್ ಆದ. ಕೌಬಾಯ್ ಕುಳ್ಳ ಅವನ ಗೆಳತಿ ಜ್ಯೋತಿ ಇಬ್ಬರೂ ಜೀವನದಲ್ಲಿ ಒಂದೇ ತೆರನಾಗಿ ಶೋಷಣೆಗೆ ಒಳಗಾದವರು. ತಮ್ಮವರಿಗಾದ ಅನ್ಯಾಯದ ವಿರುದ್ಧ ಸೇಡು ತೀರಿಸಿಕೊಳ್ಳಲು ಇಬ್ಬರೂ ಪಣ ತೊಟ್ಟರು. ತಮ್ಮ ಗುರಿಯಲ್ಲಿ ಯಶಸ್ವಿಯೂ ಆದರು.

೪೦೫. ಸಂಕಲ್ಪ

(೧೯೭೩ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಕ್ಷಿತಿಜ ಪ್ರೊಡಕ್ಷನ್ಸ್
ಪ್ರೊ: ಪಿ.ವಿ.ನಂಜರಾಜ ಅರಸ್
ನಿ: ಪಿ.ವಿ.ನಂಜರಾಜ ಅರಸ್
ಸ.ನಿ: ಸುಂದರ ಕೃಷ್ಣ ಅರಸ್
ಅ: ಅನಂತ್ ನಾಗರಕಟ್ಟೆ, ಸಿ.ಆರ್.ಸಿಂಹ, ವಿಶ್ವನಾಥ ಶಾಸ್ತ್ರಿ, ಅನಂತರಾಮ್ ಮಚ್ಚೇರಿ, ಪ್ರೊ॥ ಶಂಕರ್, ಎಚ್.ಎಂ.ಚನ್ನಯ್ಯ, ಜಿ.ವಿ.ಅಯ್ಯರ್, ಬಿ.ಆರ್.ವೆಂಕಟರಾಂ, ವಿ.ಎಸ್.ರಾಘವೇಂದ್ರರಾವ್, ಸುಂದರಕೃಷ್ಣ ಅರಸ್, ಪೈಲ್ವಾನ್ ರಾಮಣ್ಣ, ಬಿಂದೂ ಜಯದೇವ್, ಸರೋಜಮ್ಮ, ಚಿತ್ರ, ಚಂದ್ರಕಲಾ, ಬೇಬಿ ಬೃಂದ, ಹರಿಣಿ, ವೀಣಾ (ಕ್ಯಾಬರೆ ನೃತ್ಯ ಕಲಾವಿದೆ), ಬೇಬಿ ಸಂಗೀತ
ಕ/ಚಿ.ಕ/ಮಾ : ಪಿ.ವಿ.ನಂಜರಾಜ ಅರಸ್
ಸಂ: ಉಮೇಶ್ ಕುಲಕರ್ಣಿ
ಛಾ: ಎಸ್.ರಾಮಚಂದ್ರ
ಸ: ವಿಜಯಭಾಸ್ಕರ್
ಧ್ವ: ಮೋಹನಸುಂದರಂ, ಕೆ.ಆರ್.ಸೀತಾರಾಂ
ವಿ: ೧೯೭೨-೭೩ರ ರಾಜ್ಯ ಸರ್ಕಾರದ ಪ್ರಶಸ್ತಿ: ಪ್ರಥಮ ಅತ್ಯುತ್ತಮ ಚಿತ್ರ, ಅತ್ಯುತ್ತಮ ಸಂಗೀತ ನಿರ್ದೇಶಕ (ವಿಜಯ ಭಾಸ್ಕರ್), ಅತ್ಯುತ್ತಮ ಛಾಯಾಗ್ರಾಹಕ (ಎಸ್.ರಾಮಚಂದ್ರ), ಅತ್ಯುತ್ತಮ ಧ್ವನಿಗ್ರಾಹಕ (ಸೀತಾರಾಂ, ಮೋಹನಸುಂದರಂ), ಅತ್ಯುತ್ತಮ ಸಂಕಲನಕಾರ (ಉಮೇಶ್ ಕುಲಕರ್ಣಿ), ಅತ್ಯುತ್ತಮ ಬಾಲನಟಿ (ಬೇಬಿ ಬೃಂದಾ). ಈ ಚಿತ್ರದ ಮೂಲಕ ಬೆಳ್ಳಿತೆರೆ ಪ್ರವೇಶಿಸಿದ ಅನಂತನಾಗರಕಟ್ಟೆ ನಂತರದಲ್ಲಿ ಜನಪ್ರಿಯ ನಟ ಅನಂತನಾಗ್ ಆದರು; ಜೆ.ಹೆಚ್.ಪಟೇಲರ ಸಚಿವ ಸಂಪುಟದಲ್ಲಿ ಮಂತ್ರಿಯೂ ಆದರು.
ಕ.ಸಾ: ಮನೋವೈದ್ಯ ಹಾಗೂ ಬಾಲಯೋಗಿ ಬಾಬಾ ಇಬ್ಬರ ನಡುವೆ ಇರುವ ವಿರುದ್ಧ ಅಭಿಪ್ರಾಯಗಳು. ಒಂದು ವಿಜ್ಞಾನ, ಇನ್ನೊಂದು ಕೇವಲ ನಂಬಿಕೆ. ಇವೆರಡರ ಸಂಘರ್ಷಕ್ಕೆ ಒಂದು ಕುಟುಂಬದ ಸದಸ್ಯರ ವರ್ತನೆಯನ್ನು ಬಳಸಿದ್ದಾರೆ. ಅನಾರೋಗ್ಯದ ಮಗುವೊಂದು ಈ ವೈರುಧ್ಯಗಳ ಮಧ್ಯೆ ಸಾಯುತ್ತದೆ. ನಂಬಿಕೆ ಮೂಢನಂಬಿಕೆಗಳು ಯಾವುದೇ ಆಧುನಿಕ ವಿಜ್ಞಾನವನ್ನು ಮೀರಿ ನಮ್ಮ ಬದುಕಿನಲ್ಲಿ ನಿರಂತರವಾಗಿ ಸೇರಿ ಹೋಗಿದೆ - ಎಂಬುದೇ ಕತೆಯ ತಿರುಳು.

೪೦೬. ಸೀತೆಯಲ್ಲ ಸಾವಿತ್ರಿ

(೧೯೭೩ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ವಿಜಯ ಭಾರತಿ
ಪ್ರೊ: ಜವಹರ್, ಕೆ.ಸಂಪತ್‌ರಾಜ್
ನಿ: ವಾದಿರಾಜ್
ಸ.ನಿ: ಸಿ.ಎಮ್.ಗಿರಿ
ಅ: ವಿಷ್ಣುವರ್ಧನ್, ಜಯಲಕ್ಷ್ಮಿ, ಅಂಬರೀಷ್, ಬಾಲಕೃಷ್ಣ, ಉದಯಚಂದ್ರಿಕಾ, ಲೀನಾ, ಅದವಾನಿ ಲಕ್ಷ್ಮೀದೇವಿ, ಎಂ.ಎಸ್.ಲಕ್ಷ್ಮೀದೇವಿ, ಕಳಲೆ ದೊರೆ, ರಾಮಚಂದ್ರಶಾಸ್ತ್ರಿ, ಕಲಾವತಿ, ರತ್ನಮ್ಮ, ಗಿರಿ

ಕ/ಚಿ.ಕ: ಯು.ಎಸ್.ವಾದಿರಾಜ್
ಮಾ: ಸೋರಟ್ ಅಶ್ವತ್ಥ್
ಗೀ: ಆರ್.ಎನ್.ಜಯಗೋಪಾಲ್, ವಿಜಯನಾರಸಿಂಹ
ಗಾ: ಪಿ.ಬಿ.ಶ್ರೀನಿವಾಸ್, ಎಲ್.ಆರ್.ಅಂಜಲಿ, ಕೌಸಲ್ಯ, ಸಿ.ಎಂ.ಗಿರಿ, ರುಕ್ಮಿಣಿ, ಎಸ್.ಜಾನಕಿ
ಸಂ: ನಾರಾಯಣರಾವ್
ಛಾ: ಆರ್.ಎನ್.ಕೆ.ಪ್ರಸಾದ್
ಕಲೆ: ವೆಂಕಟರಾಮಯ್ಯ
ಸ: ವಿಜಯಭಾಸ್ಕರ್
ಧ್ವ: (ಹಾ)ಮೋಹನಸುಂದರಂ, (ಮಾ)ಕೆ.ಆರ್.ಸೀತಾರಾಮ್, ಆರ್ಮುಗಂ
ನೃ: ಉಡುಪಿ ಬಿ.ಜಯರಾಂ, ಸುಂದರ್
ಸಾ: ಅಳಗಿರಿಸ್ವಾಮಿ
ವ: ಅಪ್ಪಾರಾವ್, ಶ್ರೀನಿವಾಸುಲು, ಸುರೇಶ್
ಪ್ರ: ವೀರಾಸ್ವಾಮಿ, ಜಿ.ಎಸ್.ವಾಸು
ಸ್ಟು: ಪ್ರೀಮಿಯರ್
ಹಾ: ೧)'ಡುಂ ಡುಂ ಡುಂ ಬಾರಿಸು ನಗಾರಿ...', ೨)'ಕಾಲ ಗೆಜ್ಜೆ ನಾಲಿಗೆ ಪಡೆದು ಮಾತಾಡುತಿವೆ...', ೩)'ಸಮಾಗಮಾ ಮನೋರಮಾ...', ೪)'ಜಲ್ಲೆಯಾ ಇನಿಯಾ ಬಲ್ಲೆಯಾ...', ೫)'ದೇವೀ ಆಟಗಾತಿಯು ನೀನು...'
ವಿ: ಯಕ್ಷಗಾನವನ್ನು ಈ ಚಿತ್ರದಲ್ಲಿ ಅಳವಡಿಸಲಾಗಿದೆ. (ಶ್ರೀ ನೃತ್ಯ ನಿಕೇತನ, ಮೈಸೂರು)
ಸೆ: ಉದ - ೪೨೦೯, ರೀಲ್ - ೧೬ - ನಿನಂ. - ೬೭೧೫೪, ೨೫-೦೭-೧೯೭೩, 'ಯು' ಸರ್ಟಿಫಿಕೇಟ್
ಕ.ಸಾ: ಹೆಣ್ಣು ಕೇವಲ ಭೋಗದ ವಸ್ತುವಲ್ಲ. ಅಲಂಕಾರದ ಗೊಂಬೆಯಲ್ಲ. ಗಂಡಿನ ಅಡಿಯಾಳಲ್ಲ. ಅವಳು ನರಕ ಪ್ರಾಯದ ಸಂಸಾರವನ್ನು ತಿದ್ದಿ ಸರಿಪಡಿಸಿ ಸ್ವರ್ಗವನ್ನಾಗಿ ಮಾಡುವ ದೈವಾಂಶ ಸಂಭೂತೆ ಎಂಬುದನ್ನು ನಿರೂಪಿಸುವ ಚಿತ್ರ. ಇಲ್ಲಿಯ ಹೆಣ್ಣು ಸೀತೆಯ ಆದರ್ಶಗಳನ್ನೂ, ಸಾವಿತ್ರಿಯ ದೃಢ ಸಂಕಲ್ಪವನ್ನು ಹೊಂದಿದವಳು. ಮೆಚ್ಚಿ ಮದುವೆಯಾದವ, ಸಹವಾಸದೋಷದಿಂದ ಅಡ್ಡದಾರಿಗಿಳಿದು ಹೆಣ್ಣು-ಹೆಂಡದ ದಾಸನಾದ. ಹೆಂಡತಿಯಾದವಳು ದೃಢ ಸಂಕಲ್ಪ - ದಿಟ್ಟ ನಿರ್ಧಾರ ಹಾಗೂ ಛಲದಿಂದ ಬದುಕನ್ನು ಹಸನಾಗಿಸುತ್ತಾಳೆ.

೪೦೭. ದೂರದ ಬೆಟ್ಟ

(೧೯೭೩ / ಕಪ್ಪು-ಬಿಳುಪು/ಭಾಗಶಃ ವರ್ಣ / ಸಾಮಾಜಿಕ)
ಲಾ: ಶ್ರೀನಿವಾಸ್ ಇಂಟರ್‌ನ್ಯಾಷನಲ್
ಪ್ರೊ: ವಿಕ್ರಂ ಶ್ರೀನಿವಾಸ್, ಆರ್.ಜಿ.ಶಿವಕುಮಾರ್
ನಿ: ಸಿದ್ಧಲಿಂಗಯ್ಯ
ಸ.ನಿ: ಭಾರ್ಗವ
ಅ: ರಾಜಕುಮಾರ್, ಕೆ.ಎಸ್.ಅಶ್ವತ್ಥ್, ಎಂ.ಪಿ.ಶಂಕರ್, ಬಾಲಕೃಷ್ಣ, ದ್ವಾರಕೀಶ್, ಚಿ.ಉದಯಶಂಕರ್, ಸಂಪತ್, ಲೋಕನಾಥ್, ಬೆಂಗಳೂರು ನಾಗೇಶ್, ಜೋಕರ್ ಶ್ಯಾಂ, ಹೆಚ್.ಆರ್.ಶಾಸ್ತ್ರಿ, ಶ್ರೀರಾಮ್, ಅಶ್ವತ್ಥನಾರಾಯಣ್, ಸತ್ಯನ್, ಮಾ।ಬಸವರಾಜ್, ಕಮೆಡಿಯನ್ ಗುಗ್ಗು, ಶನಿಮಹದೇವ್, ಭಾರತಿ, ಲೀಲಾವತಿ, ಪಾಪಮ್ಮ, ರಮಾದೇವಿ, ನೃತ್ಯ - ಉಷಾ ಚವ್ಹಾಣ್
ಚಿ.ಕ: ಸಿದ್ಧಲಿಂಗಯ್ಯ
ಮಾ: ಚಿ.ಉದಯಶಂಕರ್
ಗೀ: ಹುಣಸೂರು ಕೃಷ್ಣಮೂರ್ತಿ, ವಿಜಯನಾರಸಿಂಹ, ಚಿ.ಉದಯಶಂಕರ್
ಗಾ: ಆಶಾಭೋಂಸ್ಲೆ, ಪಿ.ಸುಶೀಲ, ಪಿ.ಬಿ.ಶ್ರೀನಿವಾಸ್, ಪಿ.ಮೋತಿ, ಚಿ.ಉದಯಶಂಕರ್
ಸಂ: ಎಸ್.ಸಿ.ರಾಜನ್
ಛಾ: ಡಿ.ವಿ.ರಾಜಾರಾಂ
ಕಲೆ: ನಸೀರ್ ಖಾನ್
ಸ: ಜಿ.ಕೆ.ವೆಂಕಟೇಶ್
ಧ್ವ: ಚಾಮುಂಡೇಶ್ವರಿ
ನೃ: ಉಡುಪಿ ಬಿ.ಜಯರಾಂ
ಸಾ: ವೈ.ಶಿವಯ್ಯ
ವ: ಎಂ.ನಾಥ್, ರಾಮಚಂದ್ರ, ಗುರುಸ್ವಾಮಿ, ನಾಗರಾಜ್
ಪ್ರ: ದೊರೆಸ್ವಾಮಿ, ಮನ್ಮಥರಾವ್, ಶ್ರೀನಿವಾಸ್, ವಿಶ್ವನಾಥ್, ಕೇಶವ, ಮೂಗೂರು ಪಿ.ಗುರು
ಸ್ಟು: ಚಾಮುಂಡೇಶ್ವರಿ
ಹಾ: ೧)'ಕಾಮಣ್ಣ ಮಕ್ಕಳು ಕಳ್ಳ ನನ್ನ ಮಕ್ಳು...', ೨)'ಪ್ರೀತಿನೇ ಆ ದ್ಯಾವ್ರು ತಂದ ಆಸ್ತಿ ನಮ್ಮ ಬಾಳ್ವೆಗೆ....', ೩)'ಗೆಜ್ಜೆಯ ಕಾಲಿನ ಹೆಜ್ಜೆಯ ಹಾಕಿ...'
ವಿ: ಆಶಾಭೋಂಸ್ಲೆ ಅವರು ಈ ಚಿತ್ರಕ್ಕಾಗಿ ಹಾಡಿದ್ದಾರೆ ('ಗೆಜ್ಜೆಯ ಕಾಲಿನ...')
ಕ.ಸಾ: ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸುವ ಇಬ್ಬರು ಯುವ ಪ್ರೇಮಿಗಳು. ತನ್ನ ಹೆಂಡತಿಯನ್ನು ಸುಖವಾಗಿಡಬೇಕೆಂದು ಹಳ್ಳಿಯಿಂದ ನಗರಕ್ಕೆ ಬರುವ ನಾಯಕನಿಗೆ ಒಬ್ಬ ದುಷ್ಟನ ಪರಿಚಯವಾಗಿ ಅವನ ದೆಸೆಯಿಂದ ಜೈಲು ಸೇರಬೇಕಾಗುತ್ತದೆ. ನಾಯಕನಿಲ್ಲದ ವೇಳೆ ನಾಯಕಿಯ ಮೇಲೆ ಕಣ್ಣು ಹಾಕುವ ದುಷ್ಟನಿಗೆ ಬುದ್ಧಿ ಕಲಿಸುತ್ತಾ ತಾನೂ ಜೈಲು ಸೇರುತ್ತಾಳೆ. ನಂತರ ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ ಎನ್ನುವಂತೆ ನಿಜ ಸಂಗತಿ ತಿಳಿದು ಪ್ರೇಮಿಗಳು ಹಳ್ಳಿಗೇ ಮರಳುತ್ತಾರೆ.

೪೦೮. ಜಯ ವಿಜಯ

(೧೯೭೩ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಸುಂದರ್ ಎಂಟರ್‌ಪ್ರೈಸಸ್
ಪ್ರೊ: ಕನಕಮ್ಮ
ನಿ: ಎ.ವಿ.ಶೇಷಗಿರಿರಾವ್
ಸ.ನಿ: ಪಂಚಾಕ್ಷರಿ, ರಮಣನ್
ಅ: ಜಯಂತಿ (ದ್ವಿಪಾತ್ರ), ಗಂಗಾಧರ್, ಬಾಲಕೃಷ್ಣ, ದಿನೇಶ್, ಸಂಪತ್, ತೂಗುದೀಪ ಶ್ರೀನಿವಾಸ್, ಜಯಶ್ರೀ, ಉಮಾ, ರಮಾ, ಪ್ರೇಂಕುಮಾರ್, ವೆಂಕಟಾಚಲಯ್ಯ, ವೈದ್ಯನಾಥನ್, ಕೆ.ಪಿ.ಸಿದ್ಧಲಿಂಗಪ್ಪ, ಮಾ। ಸುಂದರೇಶ್,
ನೃತ್ಯ : ಜಯಕುಮಾರಿ, ಹಲಂ

ಕ/ಚಿ.ಕ: ಎ.ವಿ.ಶೇಷಗಿರಿರಾವ್
ಮಾ: ಚಿ। ಉದಯಶಂಕರ್
ಗೀ: ಚಿ। ಉದಯಶಂಕರ್, ವಿಜಯನಾರಸಿಂಹ
ಗಾ: ಎಸ್.ಜಾನಕಿ, ಎಲ್.ಆರ್.ಅಂಜಲಿ
ಸಂ: ಪಿ.ಭಕ್ತವತ್ಸಲಂ
ಛಾ: ಪ್ರಕಾಶ್
ಕಲೆ: ಬಿ.ಎಸ್.ಕೇಶವರಾವ್
ಸ: ವಿಜಯಭಾಸ್ಕರ್
ಧ್ವ: ಮೋಹನಸುಂದರಂ, ಕೆ.ಆರ್.ಸೀತಾರಾಂ
ನೃ: ಉಡುಪಿ ಬಿ. ಜಯರಾಂ
ಸಾ: ವೈ.ಶಿವಯ್ಯ
ವ: ಎಂ.ನಾಥ್, ಸೂರ್ಯರಾವ್
ಪ್ರ: ರಾಜಗೋಪಾಲ್, ಮನ್ಮಥರಾವ್
ಸ್ಟು: ಪ್ರೀಮಿಯರ್
ಹಾ: ೧) 'ಆಡೋಣ ಬಾ ಆಡೋಣ...', ೨) 'ಕಣ್ಣಿನ ಬಯಕೆ ಆಸೆಯ...', ೩) 'ಹೆಣ್ಣಿನ ಯೌವ್ವನ ನೋಡಿ...', ೪) 'ಒಳಗೊಂದು ಹೊರಗೊಂದು...'
ವಿ: ಜಯಂತಿ ಮೂರನೇ ಬಾರಿಗೆ ದ್ವಿಪಾತ್ರದಲ್ಲಿ ಅಭಿನಯಿಸಿದ್ದರು.
ಸೆ: 'ಯು' ಸರ್ಟಿಫಿಕೇಟ್, ಉದ - ೪೦೩೫.೮೫ ಮೀ. ೧೫ ರೀಲು
ಕ.ಸಾ: ಬಾಲ್ಯದಲ್ಲಿಯೇ ಬೇರ್ಪಟ್ಟ ಸೋದರಿಯರು. ವಿಭಿನ್ನ ವಾತಾವರಣದಲ್ಲಿ ಬೆಳೆದು ಉತ್ತರ-ದಕ್ಷಿಣ ಧ್ರುವದಂತಿದ್ದರು. ದರೋಡೆಗಾರರ ನಾಯಕಿ. ಆದಲು ಬದಲಾಗಿ ವಿಜಯ ಜಯಳಿಗಾದ ಅನ್ಯಾಯವನ್ನು ಸರಿಪಡಿಸಿ, ಕಡೆಗೆ ಪೊಲೀಸರ ಗುಂಡಿಗೆ ಬಲಿಯಾಗುತ್ತಾಳೆ.

೪೦೯. ಜ್ವಾಲಾಮೋಹಿನಿ

(೧೯೭೩ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಮೋಹಿನಿ ಪ್ರೊಡಕ್ಷನ್ಸ್
ನಿ: ಎಸ್.ಎನ್.ಸಿಂಗ್
ಸ.ನಿ: ಎಚ್.ರಮೇಶ್
ಅ: ಸಂಪತ್, ರಂಗ, ಬಿ.ಎಂ.ವೆಂಕಟೇಶ್, ಹನುಮಂತಾಚಾರ್, ಡಿಕ್ಕಿಮಾಧವರಾವ್, ರಾಜಾನಂದ್, ರಾಜಶ್ರೀ, ಬಿ.ವಿ.ರಾಧಾ, ರಮಾ,
ಕ: ಡಿ.ಶಂಕರಸಿಂಗ್ (ಜಗನ್ಮೋಹಿನಿ ಚಿತ್ರದ ಆಧಾರದ ಮೇಲೆ)
ಮಾ: ಎಂ.ನರೇಂದ್ರಬಾಬು
ಗೀ: ಹುಣಸೂರು ಕೃಷ್ಣಮೂರ್ತಿ, ಚಿ.ಉದಯಶಂಕರ್
ಗಾ: ಪಿ.ಬಿ.ಶ್ರೀನಿವಾಸ್, ಎಸ್.ಜಾನಕಿ, ಎಲ್.ಆರ್.ಈಶ್ವರಿ
ಸಂ: ಪಿ.ವಿ.ಎಸ್.ಮಣಿಯಂ
ಛಾ: ಎಂ.ಆರ್.ಕೆ.ಮೂರ್ತಿ
ಕಲೆ: ಪಿ.ವೆಂಕಟರಾಮಯ್ಯ
ಸ: ಸತ್ಯಂ
ಧ್ವ: ಕೆ.ಆರ್.ಸೀತಾರಾಂ
ನೃ: ಎಂ.ಕೆ.ಕೃಷ್ಣಕುಮಾರ್
ಸಾ: ಪಿ.ಗಣೇಶ್
ಸ್ಟು: ಪ್ರೀಮಿಯರ್
ಹಾ: ೧) 'ಎಲ್ಲಿ ಹೋದರು ಒಂದು ಚೆಲುವೆ ಹೆಣ್ಣಿರಬೇಕು...', ೨) 'ಮಾಯ ಮಾಟ ಮೋಡಿಗೆಲ್ಲ ಸಿಕ್ಕಿ ಬೀಳೋ ಹೆಣ್ಣಲ್ಲ...', ೩) 'ಸಕ್ಕರೆ ಗೊಂಬೆ ಅಕ್ಕರೆಯಿಂದ...', ೪) 'ಕೆಣುಕುತಿದೆ ಈ ಸೊಗಸು..', ೫) 'ಆನಂದಕಾರ ಪ್ರಭು...'
ಕ.ಸಾ: ಜ್ವಾಲಾಮೋಹಿನಿಯೊಬ್ಬಳು ಒಂದು ಸಂಸಾರದ ಇಬ್ಬರು ಗಂಡುಮಕ್ಕಳಲ್ಲಿ ದೊಡ್ಡವನನ್ನು ಸಾಯಿಸುತ್ತಾಳೆ. ಎರಡನೆಯ ಮಗನಿಗೂ ಇದೇ ರೀತಿ ಕಾಟ ಕೊಡಲು ಆರಂಭಿಸಿದಾಗ ಆತನ ಸಾಧ್ವಿ ಹೆಂಡತಿ ತನ್ನ ಪತಿಯನ್ನು ಆಕೆಯಿಂದ ಉಳಿಸಿಕೊಳ್ಳಲು ಹೆಣಗಾಡುತ್ತಾಳೆ. ಕಡೆಗೆ ಯಶಸ್ವಿಯಾಗುತ್ತಾಳೆ.

೪೧೦. ಮನೆ ಬೆಳಗಿದ ಸೊಸೆ

(೧೯೭೩ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಪ್ರಸಾದ್ ಪ್ರೊಡಕ್ಷನ್ಸ್
ಪ್ರೊ: ಎಲ್.ವಿ.ಪ್ರಸಾದ್
ನಿ: ಶ್ರೀಕಾಂತ್
ಸ.ನಿ: ಸಹ್ಯಾದ್ರಿ, ಟಿ.ವಿ.ರಾಂ
ಅ: ವಿಷ್ಣುವರ್ಧನ್, ಭಾರತಿ, ಆರತಿ, ರಾಂಗೋಪಾಲ್, ರಂಗ, ರಮಾದೇವಿ, ಬಾಲಕೃಷ್ಣ, ದ್ವಾರಕೀಶ್, ಸಂಪತ್, ಸೂರ್ಯಕುಮಾರಿ, ಜಯಕುಮಾರ್, ಲೋಕನಾಥ್, ಅಶ್ವತ್ಥನಾರಾಯಣ್, ಬಲರಾಮ್
ಚಿ.ಕ/ಮಾ: ಹುಣಸೂರು ಕೃಷ್ಣಮೂರ್ತಿ
ಗೀ: ಹುಣಸೂರು ಕೃಷ್ಣಮೂರ್ತಿ, ವಿಜಯನಾರಸಿಂಹ, ಆರ್.ಎನ್.ಜಯಗೋಪಾಲ್
ಗಾ: ಎಸ್.ಜಾನಕಿ, ವಾಣಿ ಜಯರಾಂ, ಎಸ್.ಪಿ.ಬಾಲಸುಬ್ರಹ್ಮಣ್ಯಂ
ಸಂ: ವೇಣು
ಛಾ: ಥಾಮಸ್
ಕಲೆ: ತೋಟಾ
ಸ: ವಿಜಯಭಾಸ್ಕರ್
ನೃ: ಉಡುಪಿ ಜಯರಾಂ
ಸಾ: ಶ್ಯಾಂಸುಂದರ್
ವ: ಸಯ್ಯದ್
ಪ್ರ: ವೆಂಕಟೇಶ್ವರರಾವ್ ರಾಜೇಂದ್ರ
ಸ್ಟು: ಪ್ರಸಾದ್, ಅಭಿಮಾನ್
ಹಾ: ೧) 'ಒಲವಾ ರವಿಯೇ ನೀ ಮೂಡಿ ಬಾ...', ೨) 'ಪಾಪ ಅಯ್ಯೋ ಪಾಪ...', ೩) 'ನಮಸ್ಕಾರ ಓ ಗೆಳೆಯಾ...', ೪) 'ಚೌತಿ ಚೆಲುವು ತಂದ ಸುಂದರ...', ೫) 'ಮೋಹನಾಂಗ ನಿನ್ನ ಸಂಗ...', ೬) 'ಅಂದ ಚಂದ ತುಂಬಿ ಬಂದ...'
ಕ.ಸಾ: ದರ್ಪದ, ಅಹಂಕಾರದ ಅತ್ತೆಗೆ ಬುದ್ಧಿ ಕಲಿಸಲು ಬರುವ ಸೊಸೆ ತನ್ನ ಬುದ್ಧಿವಂತಿಕೆಯಿಂದ ಅತ್ತೆಯ ಕಣ್ಣು ತೆರೆಸುತ್ತಾಳೆ. ಮನೆ ಬೆಳಗಿಸುತ್ತಾಳೆ. ಧನದಾಹಿ - ಅಹಂಕಾರಿ ಅತ್ತೆ ಆಕೆಯ ಮಗ ಶ್ರಮಜೀವಿ, ಸಾಧು ಸ್ವಭಾವದವನು. ಗೆಳತಿಗೆ ನೆರವಾಗಲು ಬಂದ ಇನ್ನೊಬ್ಬ ಹುಡುಗಿ ವಿಭಿನ್ನ ಸ್ವಭಾವದ ವ್ಯಕ್ತಿಗಳಿಗೆ ಪಾಠ ಕಲಿಸಿ, ಮನೆ ಹೇಗಿರಬೇಕೆಂಬುದನ್ನು ನಿರೂಪಿಸುತ್ತಾಳೆ.

೪೧೧. ಗಂಧದ ಗುಡಿ

(೧೯೭೩ / ವರ್ಣ / ಸಾಮಾಜಿಕ)
ಲಾ: ಭರಣಿ ಚಿತ್ರ
ಪ್ರೊ: ಎಂ.ಪಿ.ಶಂಕರ್
ನಿ: ವಿಜಯ್
ಸ.ನಿ: ಬೆಂಗಳೂರು ನಾಗೇಶ್
ಅ: ರಾಜಕುಮಾರ್, ಕಲ್ಪನಾ, ವಿಷ್ಣುವರ್ಧನ್, ನರಸಿಂಹರಾಜು, ಹೆಚ್.ಆರ್.ಶಾಸ್ತ್ರಿ, ಪ್ರಭಾಕರ್, ಮಾಲೂರು ಸೊಣ್ಣಪ್ಪ, ಚಲುವೆಗೌಡ, ಎಂ.ಪಿ.ಶಂಕರ್, ಲೂಯಿಸ್, ಮಾ।ವಿರೂಪಾಕ್ಷ, ಮಾ।ಬಸವರಾಜ್, ಮಾ।ನಟರಾಜ್, ಅಬ್ದುಲ್ ಅಜೀಲ್ (ಕುಳ್ಳ), ಮಹಾದೇವಪ್ಪ, ಶ್ರೀರಾಂ, ಬೇಬಿ ಶ್ಯಾಂ, ಬಾಲಕೃಷ್ಣ, ಸಂಪತ್, ಶಕ್ತಿಪ್ರಸಾದ್, ತೂಗುದೀಪ ಶ್ರೀನಿವಾಸ್, ಆದವಾನಿ ಲಕ್ಷ್ಮೀದೇವಿ, ಬಿ.ಜಯ, ಪ್ರೇಮಕುಮಾರಿ
ಕ: ಎಂ.ಪಿ.ಶಂಕರ್
ಚಿ.ಕ: ವಿಜಯ್, ಎಂ.ಡಿ.ಸುಂದರ್
ಮಾ/ಗೀ: ಚಿ.ಉದಯಶಂಕರ್
ಗಾ: ಪಿ.ಬಿ.ಶ್ರೀನಿವಾಸ್, ಎಸ್.ಜಾನಕಿ, ಪಿ.ಸುಶೀಲ
ಸಂ: ಬಾಲ್ ಜಿ.ಯಾದವ್
ಛಾ: ಡಿ.ವಿ.ರಾಜಾರಾಂ
ಕಲೆ: ರಮೇಶ್
ಸ: ರಾಜನ್ ನಾಗೇಂದ್ರ
ಧ್ವ: ಎಸ್.ಪಿ.ರಾಮನಾಥನ್, ಗೋವಿಂದಸ್ವಾಮಿ, ಕೆ.ಆರ್.ಸೀತಾರಾಂ
ನೃ: ಉಡುಪಿ ಬಿ.ಜಯರಾಂ
ಸಾ: ವೈ.ಶಿವಯ್ಯ
ವ: ಎಂ.ನಾಥ್, ರಾಮಚಂದ್ರ, ಪ್ರಭಾಕರ್ ಅಫೀಸರ್ಸ್ ವೇರ್ ಹೌಸ್, ಪಿ.ಜಯರಾವ್ ಅಂಡ್ ಸನ್ಸ್
ಪ್ರ: ದೊರೆಸ್ವಾಮಿ, ಪಿ.ವೀರಾಸ್ವಾಮಿ, ಜಿ.ಎಸ್.ವಾಸು, ಷಣ್ಮುಗಂ, ಕೇಶವ, ಪಿ.ಗುರು, ಶ್ರೀನಿವಾಸ್
ಸ್ಟು: ಚಾಮುಂಡೇಶ್ವರಿ (ಬೆಂಗಳೂರು), ಪ್ರೀಮಿಯರ್ (ಮೈಸೂರು)
ಹಾ: ೧) 'ಅರರೆರೆ ಗಿಣೀ ರಾಮ ಹೊಯ್ ಪಂಚರಂಗೀ ರಾಮ...', ೨) 'ಎಲ್ಲೂ ಹೋಗೋಲ್ಲ ನಾನು ಎಲ್ಲೂ ಹೋಗೋಲ್ಲಾ...', ೩) 'ನಾವಾಡುವ ನುಡಿಯೇ ಕನ್ನಡ ನುಡಿ...'
ವಿ: ರಾಜಕುಮಾರ್-ವಿಷ್ಣುವರ್ಧನ್ ಒಟ್ಟಿಗೆ ಅಭಿನಯಿಸಿದ ಏಕೈಕ ಚಿತ್ರ. ರಾಜಕುಮಾರ್ ಅಭಿನಯದ ೧೫೦ನೇ ಚಿತ್ರ. ರಾಜ್ಯಪ್ರಶಸ್ತಿ, ಅತ್ಯುತ್ತಮ ಪೋಷಕ ನಟಿ (ಆದವಾನಿ ಲಕ್ಷ್ಮೀದೇವಿ), ಅತ್ಯುತ್ತಮ ಸಂಕಲನ (ಬಾಲ್ ಜಿ.ಯಾದವ್) (೭೩-೭೪)
ಸೆ: ಉದ್ದ-೪೫೯೧.೪೪, ೧೯ ರೀಲ್‌ಗಳು, ೧೪-೧೧-೧೯೭೩
ಕ.ಸಾ: ದಕ್ಷ ಅರಣ್ಯಾಧಿಕಾರಿ ಕಾಡಿನಲ್ಲಿ ನಡೆಯುವ ಕಳ್ಳ ಸಾಗಾಣಿಕೆಯನ್ನು ತಡೆಯಲು ತನ್ನ ಪ್ರಾಣವನ್ನೇ ಪಣವಾಗಿಟ್ಟು ಹೋರಾಡುವ, ಈ ನಿಟ್ಟಿನಲ್ಲಿ ತಾನು ಪ್ರೀತಿಯಿಂದ ಸಾಕಿದ ಮಗುವನ್ನು ಕಳೆದುಕೊಂಡರೂ ಕರ್ತವ್ಯ ಪರಿಪಾಲಿಸುವ ನಿಷ್ಠಾವಂತನ ಕಥೆ.

೪೧೨. ಎಡಕಲ್ಲು ಗುಡ್ಡದ ಮೇಲೆ

(೧೯೭೩ / ವರ್ಣ / ಸಾಮಾಜಿಕ)
ಲಾ: ಶ್ರೀಕಾಂತ್ ಅಂಡ್ ಶ್ರೀಕಾಂತ್ ಎಂಟರ್‌ಪ್ರೈಸಸ್
ಪ್ರೊ: ಶ್ರೀಕಾಂತ್ ನಹತ ಮತ್ತು ಶ್ರೀಕಾಂತ್ ಪಟೇಲ್
ನಿ: ಎಸ್.ಆರ್.ಪುಟ್ಟಣ್ಣ ಕಣಗಾಲ್
ಸ.ನಿ: ದತ್ತು
ಅ: ಜಯಂತಿ, ಆರತಿ, ಶಿವರಾಂ, ರಂಗಾ, ಚಂದ್ರಶೇಖರ್, ವಿ.ಅಶ್ವತ್ಥನಾರಾಯಣ, ಜೂ.ಜಯಂತಿ, ಜಯದೇವಕುಮಾರ್
ಕ: ಭಾರತಿಸುತ ಅವರ ಕಾದಂಬರಿ
ಚಿ.ಕ: ಎಸ್.ಆರ್.ಪುಟ್ಟಣ್ಣ ಕಣಗಾಲ್
ಮಾ: ಎಂ.ನರೇಂದ್ರಬಾಬು
ಗೀ: ಆರ್.ಎನ್.ಜಯಗೋಪಾಲ್, ಎಂ.ನರೇಂದ್ರಬಾಬು, ಕಣಗಾಲ್ ಪ್ರಭಾಕರಶಾಸ್ತ್ರಿ, ವಿಜಯನಾರಸಿಂಹ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಪಿ.ಸುಶೀಲ, ಎಸ್.ಜಾನಕಿ
ಸಂ: ಎಸ್.ಪಿ.ಎನ್.ಕೃಷ್ಣ, ಟಿ.ಪಿ.ವೇಲಾಯುಧಂ
ಛಾ: ಎಸ್.ವಿ.ಶ್ರೀಕಾಂತ್
ಕಲೆ: ಬಿ.ಚಲಂ
ಸ: ಎಂ.ರಂಗರಾವ್
ಧ್ವ: ಕೆ.ಸೀತಾರಾಂ, ಮೋಹನಸುಂದರಂ

ನೃ: ಉಡುಪಿ ಬಿ.ಜಯರಾಂ
ವ: ಅಪ್ಪಾರಾವ್
ಪ್ರ: ವೀರಾಸ್ವಾಮಿ, ರಾಜಗೋಪಾಲ್
ಸ್ಟು: ಪ್ರೀಮಿಯರ್
ಹಾ: ೧)'ವಿರಹಾ ನೂರು ನೂರು ತರಹಾ...', ೨)'ಗುಂಡಿನ ಮತ್ತೇ ಗಮ್ಮತ್ತು...', ೩)'ಸಂತೋಷ ಸಂಗೀತ ರಸಮಯ ಸಂತೋಷ...', ೪)'ಸನ್ಯಾಸಿ ಸನ್ಯಾಸಿ ಅರ್ಜುನ ಸನ್ಯಾಸಿ...', ೫)'ಯಾವೂರವ ಇವ ಯಾವೂರವ....', ೬)'ನಿಲ್ಲೇ ಪತಂಗ ಬೇಡ ಬೇಡ ಬೆಂಕಿಯ ಸಂಗ...'
ವಿ: ಚಲನಚಿತ್ರ ಬಿಡುಗಡೆ ಆಗುವ ಮುನ್ನವೇ ಪ್ರಮುಖ ಪಾತ್ರಧಾರಿ ನಟ ರಂಗ ನಿಧನರಾದರು. ರಾಜ್ಯಪ್ರಶಸ್ತಿ, ಅತ್ಯುತ್ತಮ ನಟಿ - ಜಯಂತಿ (೭೨-೭೩), ಅತ್ಯುತ್ತಮ ಪೋಷಕ ನಟ - ರಂಗ (೭೨-೭೩)
ಸೆ: ಉದ್ದ ೪೪೫೨.೨೦ ಮೀ. ೧೭ ರೀಲು
ಕ.ಸಾ: ಪುರುಷತ್ವವಿಲ್ಲದ ನಿವೃತ್ತ ಯೋಧನ ಪತ್ನಿ ಸಂದರ್ಭವೊಂದರಲ್ಲಿ ಗಂಡನ ಗೆಳೆಯನ ಕಾಮದಾಸೆಗೆ ಬಲಿಯಾಗುತ್ತಾಳೆ. ಮೊದಮೊದಲು ಅದು ತಪ್ಪೆನಿಸಿದರೂ ಕ್ರಮೇಣ ಅದೇ ಅವಳಿಗೆ ಸರಿಯೆನಿಸುವಂಥ ಹಂತಕ್ಕೆ ತಲುಪುತ್ತಾಳೆ. ತಂಗಿ ಅಕ್ಕನಿಗೆ ಬುದ್ಧಿ ಹೇಳುತ್ತಾಳೆ. ತನ್ನ ತಂಗಿಗೆ ತನ್ನ ಪ್ರಿಯಕರನೊಂದಿಗೆ ಮದುವೆ ಎಂದಾಗ ಅಕ್ಕ, ತಂಗಿಯ ಬಾಳು ಹಾಳಾಗಬಾರದೆಂದು ತಾನು ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ.

೪೧೩. ಕಾಣದ ಕೈ

(೧೯೭೩ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಶ್ರೀ ದ್ವಾರಕಾರಾಮ್ ಎಂಟರ್‌ಪ್ರೈಸಸ್
ಪ್ರೊ: ದ್ವಾರಕಾನಾಥ್ ಹೆಚ್.ಕಬಾಡಿ, ತುಳಸೀ ರಾಮ್ ಪಿ.ಕಲ್ಬುರ್ಗಿ, ವಿ. ತಿಮ್ಮಯ್ಯ
ನಿ: ಕೆ.ಸೀತಾರಾಮ್
ಸ.ನಿ: ಬಾಪಣ್ಣ
ಅ: ರಮೇಶ್, ಶೈಲಶ್ರೀ, ಶ್ರೀನಾಥ್, ಶ್ರೀಲಲಿತ, ದಿನೇಶ್, ಇಂದಿರಾಜಾರ್ಜ್, ಸತ್ಯ, ಪ್ರತಿಭ, ಚೇತನ್, ಗಿರಿಜ, ಸೋಮು, ಮಂಜುಳ, ಸುಂದರಕೃಷ್ಣ ಅರಸ್, ಬಲರಾಂ, ರಾಜಶೇಖರ್, ರಾಜಣ್ಣ, ಪಾಪಣ್ಣ, ಮಹದೇವಪ್ಪ, ನಂದಕುಮಾರ್, ಶ್ರೀನಿವಾಸ್, ಮಾ। ಬಲರಾಜ್, ನೃತ್ಯ: ತಾರಾ, ಜ್ಯೋತಿಕಣ್ಣ, ರಾಜೇಶ್ವರಿ
ಕ: ಟಿ.ಕೆ.ಸುಂದರಂ
ಚಿ.ಕ: ಕೆ.ಸೀತಾರಾಂ
ಮಾ: ನರೇಂದ್ರಬಾಬು
ಗೀ: ನರೇಂದ್ರಬಾಬು, ದ್ವಾರಕಾನಾಥ್ ಹೆಚ್.ಕಬಾಡಿ
ಗಾ: ಪಿ.ಬಿ.ಶ್ರೀನಿವಾಸ್, ಎಸ್.ಜಾನಕಿ, ಎಲ್.ಆರ್.ಈಶ್ವರಿ
ಸಂ: ಪಿ.ಭಕ್ತವತ್ಸಲಂ
ಛಾ: ಟಿ.ಜಿ.ಶೇಖರ್
ಕಲೆ: ಪಿ.ವೆಂಕಟರಾಮಯ್ಯ
ಸ: ಆರ್. ರತ್ನ
ಧ್ವ: (ಹಾ) ಮೋಹನಸುಂದರಂ, ಎಸ್.ಪಿ.ರಾಮನಾಥನ್
ನೃ: ಮೂಗೂರು ಸುಂದರ್
ಸಾ: ತ್ಯಾಗರಾಜನ್
ವ: ಸತ್ಯ ನಾರಾಯಣ್, ಷಣ್ಮುಗಂ
ಪ್ರ: ಶ್ರೀನಿವಾಸ್, ವೀರಾಸ್ವಾಮಿ, ಕೇಶ: ಮಲ್ಲಿ
ಸ್ಟು: ಪ್ರೀಮಿಯರ್
ಹಾ: ೧)'ಬಿರುಸಿನ ದುಂಬಿ...', ೨)'ಇಂದು ನಿನ್ನ ಜನುಮ ದಿನ...', ೩)'ಹಸಿರಾದ ಗರಿಯಲಿ...', ೪)'ರಘುಮ್ಮಂತಾ ಚಲಾಯಿಸು...', ೫)'ಎಲ್ಲಾ ಸ್ವಾರಸ್ಯ ಇಲ್ಲೇ...'
ಸೆ: ಉದ್ದ ೩.೫೧೦.೭೫, ೧೪ ರೀಲುಗಳು, ೫-೭-೧೯೭೩
ಕ.ಸಾ: ದುರಾಸೆ ಎಂಥ ಕಲಸಗಳನ್ನು ಮಾಡಿಸುತ್ತದೆ ಹಾಗೂ ಅವರಿಂದಾಗುವ ದುಷ್ಪರಿಣಾಮಗಳಾವುವು ಎಂಬುದನ್ನು ತೋರುವ ಚಿತ್ರ. ಶ್ರೀಮಂತನೊಬ್ಬನ ಕಗ್ಗೊಲೆ, ಆತನ ಪತ್ನಿಯ ಆಕಸ್ಮಿಕ ಸಾವು, ಮಗುವಿನ ಅಪಹರಣ ಪ್ರಯತ್ನ. ಮಗುವಿನ ರಕ್ಷಣೆಗಾಗಿ ಪ್ರಾಣವನ್ನೇ ಪಣವಾಗಿಡುವ ಯುವಕ ಇವುಗಳ ನಡುವೆ ಕಾಣದ ಕೈಯ ಪ್ರಭಾವಗಳನ್ನು ಕುರಿತ ಕತೆ.

ಕ.ಸಾ: ದೇವರೊಬ್ಬನೇ 'ಬಡವರ ಬಂಧು' ಎಂದು ನಿರೂಪಿಸುವ ಚಿತ್ರ. ನಾಯಕ ಹೋಟೆಲ್ ಒಂದರ ಸಾಮಾನ್ಯ ಉದ್ಯೋಗಿ. ಕೆಲಸಗಾರರೆಲ್ಲರ ಮುಂದಾಳು. ಪ್ರಾಮಾಣಿಕತನದ ಆತ ಮಾಲೀಕರ ವಿರೋಧಿಯಾಗಿ ಮಾರ್ಪಾಡಾಗುತ್ತಾನೆ. ನಂತರದ ದಿನಗಳಲ್ಲಿ ನಾಯಕನೇ ನಿಜವಾದ ಮಾಲೀಕನೆಂದು ತಿಳಿದು ಬರುತ್ತದೆ.

೫೦೦. ಸೂತ್ರದ ಬೊಂಬೆ

(೧೯೭೬ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಪದ್ಮಾಲಯ ಪಿಕ್ಚರ್ಸ್
ಪ್ರೊ: ಜಿ.ಹನುಮಂತರಾವ್
ನಿ: ಪೇಕೇಟಿ ಶಿವರಾಮ್
ಸ.ನಿ: ಎನ್.ಎಲ್.ಆರ್.ಸಹ್ಯಾದ್ರಿ, ಶರತ್ ಬಾಬು
ಅ: ಶ್ರೀನಾಥ್, ಮಂಜುಳ, ಚಂದ್ರಶೇಖರ್, ಉದಯ ಚಂದ್ರಿಕ, ದ್ವಾರಕೀಶ್, ಜಯಲಕ್ಷ್ಮೀ, ಉದಯಕುಮಾರ್, ಎಂ.ಎನ್.ಲಕ್ಷ್ಮೀದೇವಿ, ಅಶ್ವತ್, ಪಾಪಮ್ಮ, ಬಾಲಕೃಷ್ಣ, ಪ್ರಮೀಳಾ ಜೋಷಾಯ್ ಹನುಮಂಚಾಚಾರ್
ಕ: ಜಿ.ಹನುಮಂತರಾವ್
ಚಿ.ಕ: ಪೇಕೇಟಿ ಶಿವರಾಂ

ಮಾ/ಗೀ: ಚಿ.ಉದಯಶಂಕರ್
ಗಾ: ಪಿ.ಸುಶೀಲ, ಎಸ್.ಜಾನಕಿ, ಪಿ.ಬಿ.ಶ್ರೀನಿವಾಸ್, ಎಸ್.ಪಿ.ಬಾಲಸುಬ್ರಹ್ಮಣ್ಯಂ
ಸಂ: ಗೋಪಾಲ ರಾವ್
ಛಾ: ಜಿ.ಸತ್ಯನಾರಾಯಣ
ಕಲೆ: ಕೆ.ರಾಮಲಿಂಗೇಶ್ವರ ರಾವ್
ಸ: ಸತ್ಯಂ
ಧ್ವ: (ಹಾ) ಸ್ವಾಮಿನಾಥನ್, (ಮಾ) ಗೋವಿಂದಸ್ವಾಮಿ
ನೃ: ಹೀರಾಲಾಲ್, ರಾಜು, ಶೇಷು
ಸಾ: ರಾಘವುಲು
ವ: ನಾರಾಯಣ ರಾವ್
ಪ್ರ: ಮನ್ಮಥ ರಾವ್, ಕೇಶಾಲಂಕಾರ ಭಾಸ್ಕರ ರಾವ್, ನಾಗೇಶ್ವರ ರಾವ್
ಸ್ಟು: ಚಾಮುಂಡೇಶ್ವರಿ
ಹಾ: ೧) 'ಪ್ರಾಣಿಗಳಾ ರಾಜ್ಯವೊಂದು ಕಾಡಲಿ ಇರಲು...', ೨) 'ಅಮ್ಮಮ್ಮ ಅಕ್ಕರೆಯಿಂದ ನನ್ನ ಕೂಗಿದೆಯೇನು...', ೩) 'ನಿನ್ನ ಸೇರಿದಾಗ ಕಣ್ಣು ಕೂಡಿದಾಗ...', ೪) 'ಈ ಶುಭ ಸಮಯ ಆನಂದಮಯ...', ೫) 'ಬೀಸೋ ಗಾಳಿಗೆ ಬಳ್ಳಿ ನಡುವು...'
ಸೆ: ಉದ್ದ - ೩೯೨೩.೭೦, ರೀಲು - ೧೫
ಕ.ಸಾ: ರಾಜ್ಯಾಕಾಂಕ್ಷೆಯಿಂದ ಸಾಲು ಕೊಲೆಗಳನ್ನು ಮಾಡಿ ರಾಜಕುಮಾರಿಯನ್ನು ಕೊಲ್ಲಲು ಹವಣಿಸುತ್ತಾನೆ ಉಗ್ರಸಿಂಹ. ರಾಜ್ಯ ನಿಷ್ಠ ದಿವಾನ ಹಾಗೂ ದಿವಾನನ ಮಗ ವಿಜಯನ ನೆರವಿನಿಂದ ಬದುಕುಳಿದ ರಾಜಕುಮಾರಿ ತುಂಬಿದ ಸಭೆಯಲ್ಲಿ ಕಾಣಿಸಿಕೊಂಡಳು. ತಾವೇ ಕೊಂದ ರಾಜಕುಮಾರಿ ಜೀವಂತವಾಗಿ ಬಂದುದು ಯಕ್ಷಪ್ರಶ್ನೆ. ಇನ್ನೊಬ್ಬ ರಾಜಕುಮಾರಿ, ಮತ್ತೊಬ್ಬ ರಾಜಕುಮಾರಿಯರು ಬಂದು

ಸಮಸ್ಯೆ ತಂದರು. ನಿಜವಾದ ರಾಜಕುಮಾರಿ ಸೂತ್ರದ ಗೊಂಬೆಯಾಗಿರದೆ ರಾಜ್ಯವನ್ನು ಕಾಪಾಡುತ್ತಾಳೆ. ಸಸ್ಪೆನ್ಸ್, ಸಾಹಸ ಮುಂತಾದ ಮನರಂಜನಾತ್ಮಕ ಅಂಶಗಳನ್ನೊಳಗೊಂಡ ಚಿತ್ರ.

೫೦೧. ಬಾಳು-ಜೇನು

(೧೯೭೬ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಎಸ್.ಜಿ.ಎಸ್.ಫಿಲ್ಮ್ಸ್
ಪ್ರೊ: ಕೆ.ಆರ್.ರವಿಚಂದ್ರನ್
ನಿ: ಬಾಲನ್ ಕುಣಿಗಲ್ ನಾಗಭೂಷಣ್
ಸ.ನಿ: ಗದ್ದೂರು ಸುಬ್ಬು ಉಮೇಶ

ಅ: ಆರತಿ, ಗಂಗಾಧರ್, ರಾಮ್‌ಗೋಪಾಲ್, ರಜನೀಕಾಂತ್, ಜೇತನ್‌ರಾಮರಾವ್, ರಾಜಾನಂದ್, ವಸಂತಕುಮಾರ್, ಕುಣಿಗಲ್ ರಾಮನಾಥ್, ಸರಸ, ನವೀನ, ಮೀನ, ವೀಣಾ, ಉದಯಚಂದ್ರಿಕ, ಪಂಢರಿಬಾಯಿ
ಕ: ಪಂಜು ಅರುಣಾಚಲಂ
ಚಿ.ಕ/ಮಾ: ಕುಣಿಗಲ್ ನಾಗಭೂಷಣ್
ಗೀ: ಕುಣಿಗಲ್ ನಾಗಭೂಷಣ್, ಆರ್.ಎನ್.ಜಯಗೋಪಾಲ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಜೇಸುದಾಸ್, ಎಸ್.ಜಾನಕಿ
ಸಂ: ಪಿ.ಕೆ.ಕೃಷ್ಣನ್
ಛಾ: ಟಿ.ಎಂ.ಸುಂದರಬಾಬು
ಕಲೆ: ರಮೇಶ್
ಸ: ಜಿ.ಕೆ.ವೆಂಕಟೇಶ್
ಧ್ವ: (ಹಾ) ಎಸ್.ಪಿ.ರಾಮನಾಥನ್, ಕೋಟೇಶ್ವರರಾವ್
ಸಾ: ಅಳಗಿರಿ ಸ್ವಾಮಿ
ವ: ಎಂ.ಜಿ.ಕಣ್ಣನ್, ಅಯ್ಯಾ ಕಣ್ಣು
ಪ್ರ: ರಾಜಗೋಪಾಲ್
ಸ್ಟು: ಪ್ರೀಮಿಯರ್
ಹಾ: ೧)'ಆಸೆ ಅರಳಿದೆ...', ೨)'ಮಧುರ ಬಲು ಮಧುರ...', ೩)'ಸಂಸಾರದ ಸಂತೋಷವೇ...', ೪)'ಒಂದೇ ಒಂದು ಕಥೆಯ ಹೇಳುವೆ...'
ಕ.ಸಾ: ಹಾಸ್ಟೆಲ್‌ನಲ್ಲಿದ್ದುಕೊಂಡು ಓದುತ್ತಿದ್ದ ಹುಡುಗಿ ಯೌವ್ವನದ ಸುಳಿಯಲ್ಲಿ ಮೈಮರೆತು ಕಾಲು ಜಾರಿರುತ್ತಾಳೆ. ಮದುವೆಯಾಗುತ್ತೇನೆಂದು ನಂಬಿಕೆ ಇತ್ತವನು ಕಾರಣಾಂತರದಿಂದ ಜೈಲಿಗೆ ಹೋಗಿರುತ್ತಾನೆ. ಆತ್ಮಹತ್ಯೆಗೆ ಪ್ರಯತ್ನಿಸಿದ ಆಕೆಯನ್ನು ಕಾಪಾಡಿದ ವೈದ್ಯ ತಮ್ಮ ಆಕೆಯನ್ನು ಮದುವೆಯಾಗುತ್ತಾನೆ. ಪೂರ್ವಾಶ್ರಮದ ಬಗ್ಗೆ ಗೊತ್ತಿದ್ದ ಒಬ್ಬ ವ್ಯಕ್ತಿ ಬ್ಲಾಕ್‌ಮೇಲ್ ಮಾಡುತ್ತಾನೆ. ಪತಿ ಆಕೆಯನ್ನು ಕ್ಷಮಿಸುತ್ತಾನೆ. ಬಾಳು ಜೇನಾಗುತ್ತದೆ.

೫೦೨. ಫಲಿತಾಂಶ

(೧೯೭೬ / ವರ್ಣ / ಸಾಮಾಜಿಕ)
ಲಾ: ಎ.ಎನ್.ಮೂವಿಟೋನ್
ಪ್ರೊ: ಆರಗಲ್ ಸಹೋದರರು
ನಿ: ಎಸ್.ಆರ್. ಪುಟ್ಟಣ್ಣ ಕಣಗಾಲ್
ಅ: ಆರತಿ, ಜೈಜಗದೀಶ್, ಶುಭಾ, ಲೋಕನಾಥ್, ವೈಶಾಲಿ ಕಾಸರವಳ್ಳಿ, ಲೀಲಾವತಿ, ಪದ್ಮಾ ಕುಮುಟ
ಕ: ಶ್ರೀನಿವಾಸ ಕುಲಕರ್ಣಿ
ಚಿ.ಕ: ಎಸ್.ಆರ್.ಪುಟ್ಟಣ್ಣ ಕಣಗಾಲ್
ಮಾ: ಎಚ್.ಕೆ.ಯೋಗಾನರಸಿಂಹ
ಗೀ: ಆರ್.ಎನ್.ಜಯಗೋಪಾಲ್, ಶ್ಯಾಂಸುಂದರ ಕುಲಕರ್ಣಿ, ವಿ.ಉದಯಶಂಕರ್
ಗಾ: ವಾಣಿ ಜಯರಾಂ, ಎಸ್.ಜಾನಕಿ, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಪಿ.ಸುಶೀಲ
ಕಲೆ: ನಾಗರಾಜರಾವ್
ಧ್ವ: ಚಾಮುಂಡೇಶ್ವರಿ
ಛಾ: ಬಿ.ಎನ್.ಹರಿದಾಸ್
ಸ: ವಿಜಯಭಾಸ್ಕರ್
ಪ್ರ: ಜಿ.ರಾಜಗೋಪಾಲ್
ಸ್ಟು: ಚಾಮುಂಡೇಶ್ವರಿ
ಹಾ: ೧)'ಆಷ್ಟೋರಲ್ಲಾ ಅನ್ನಲಿ...', ೨)'ಲವ್ ಎಂಬರೆ ಯಾರೂ ಬಿಡಿಸದ ಬಂಧನ...', ೩)'ಪ್ಯಾಟೆಯಿಂದ ಬಂದವಳೆ...', ೪)'ಈ ಚೆಂಡಿನ ಆಟ...'
ವಿ: ಜೈಜಗದೀಶ್ ಅಭಿನಯದ ಮೊದಲ ಚಿತ್ರ.
ಕ.ಸಾ: ಪ್ರೇಮ ಎಂದೂ ನಿಲ್ಲದ ಸ್ಪಂದನವೆಂದು ಅರಸಿ ಹೊರಟ ಯುವಕನ ಸುತ್ತ ಹೆಣೆಯಲಾದ ಕಥೆ. ಈ ಯುವಕನಿಗೆ ಮೊದಲು ದೊರೆತ ಚೆಲುವೆ ಬೇರೊಬ್ಬನ ಜೀವನ ಸಂಗಾತಿಯಾಗುತ್ತಾಳೆ. ನಂತರ ಬರುವ ಚಂಚಲ ಈತನ ಕಾಲಿನ ಮಂಡಿ ಮುರಿದಾಗ ದೂರವಾಗುತ್ತಾಳೆ. ಆಗ ಸಮೀಪವಾಗುವ ಸರಳ ಅಷ್ಟೇ ಸರಳವಾಗಿ ಹಿಂದೆ ಸರಿಯುತ್ತಾಳೆ. ಕೊನೆಗೆ ತಂದೆ ತಾಯಿಯ ಬಲವಂತಕ್ಕೆ ಮದುವೆಯಾಗುವ ಶೀಲಳನ್ನು ಪರೀಕ್ಷಿಸಲು ಹೋದಾಗ...' ಫಲಿತಾಂಶ..?!

೫೦೩. ಅಪರಾಧಿ

(೧೯೭೬ / ವರ್ಣ / ಪತ್ತೇದಾರಿ)
ಲಾ: ಓಂ ಶಕ್ತಿ ಕ್ರಿಯೇಷನ್ಸ್
ಪ್ರೊ: ಎಸ್.ಹೀರಾಬಾಯಿ
ನಿ: ವೈ.ಆರ್.ಸ್ವಾಮಿ
ಸ.ನಿ:ಎ.ಟಿ.ರಘು
ಅ: ಶ್ರೀನಾಥ್, ಆರತಿ, ಬಾಲಕೃಷ್ಣ, ಸುನೀತ, ನರಸಿಂಹರಾಜು, ಮಮತಾ ಶೆಣೈ, ತೂಗುದೀಪ ಶ್ರೀನಿವಾಸ್, ಜಯಶ್ರೀ, ಪ್ರಭಾಕರ್, ಶಾಂತಿ, ಜೂ.ಶೆಟ್ಟಿ, ಎನ್.ಎಸ್.ರಾವ್, ಡಾ।ಶ್ರೀಧರ್, ಶರಪಂಜರ ಐಯ್ಯಂಗಾರ್, ವಜ್ರಮುನಿ, ಲೋಕನಾಥ್

ಕ: ಓಂ ಶಕ್ತಿ ಕ್ರಿಯೇಷನ್ಸ್ ಕಥಾ ವಿಭಾಗ
ಚಿ.ಕ: ವೈ.ಆರ್.ಸ್ವಾಮಿ
ಮಾ: ಚಿ.ಉದಯಶಂಕರ್
ಗೀ: ಚಿ.ಉದಯಶಂಕರ್, ವಿಜಯನಾರಸಿಂಹ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಪಿ.ಸುಶೀಲ, ಎಸ್.ಜಾನಕಿ
ಸಂ: ಪಿ.ಭಕ್ತವತ್ಸಲಂ
ಛಾ: ಆರ್.ಮಧುಸೂದನ್
ಸ: ಸತ್ಯಂ
ನೃ: ರಾಮು
ಸಾ: ಜ್ಯೂಡೋ ರತ್ನಂ
ವ: ಪಿ.ಅಪ್ಪಾರಾವ್, ನಜರ, ಅಯ್ಯಾ ಕಣ್ಣು
ಪ್ರ: ಮನ್ಮಥರಾವ್, ರಾಜಗೋಪಾಲ್, ವೀರಾಸ್ವಾಮಿ, ಶ್ರೀನಿವಾಸ್
ಸ್ಟು: ಚಾಮುಂಡೇಶ್ವರಿ
ಹಾ: ೧)'ಜೀವ ನಂಬಬೇಡ...', ೨)'ಓ ರಮ್ಮೀ ಬಾರಮ್ಮಿ ಕೂಡಿ ಹಾಡೋಣ...', ೩)'ನಗುವ ನಿನ್ನ ಮೊಗದ ಚೆನ್ನ...', ೪)'ಝುಂ ಜಾಲಿಯಾ ಜಾದುವೂ ಸುಖಮಯ...'
ಸೆ: ೧೫ ರೀಲು
ಕ.ಸಾ: ಕೊಲೆಯೊಂದರ ಜೀವಂತ ಸಾಕ್ಷಿಯಾದ ಬಾಲಕಿಯೊಬ್ಬಳು ಪೊಲೀಸರಿಗೆ ನಿಜ ಹೇಳಿದರೂ ಮನ್ನಣೆ ಸಿಗದೇ ಕೊಲೆಗಡುಕರ ಪೈಶಾಚಿಕ ಹಸ್ತದಿಂದ ತಪ್ಪಿಸಿಕೊಳ್ಳುತ್ತ ಓಡುವಾಗ ನಾಯಕ-ನಾಯಕಿಯರ ಕೈಗೆ ಸಿಕ್ಕಿ ಪಾರಾಗುತ್ತಾಳೆ. ನಂತರ ನಾಯಕ ನಿಧಿಯ ರಹಸ್ಯವೊಂದನ್ನು ಭೇದಿಸಿ ದ್ರೋಹಿಗಳ ಸದೆ ಬಡಿಯುವ ಸಸ್ಪೆನ್ಸ್, ಥ್ರಿಲ್ಲರ್ ಕತೆ

೫೦೪. ರಾಜನರ್ತಕಿಯ ರಹಸ್ಯ

(೧೯೭೬ / ವರ್ಣ / ಸಾಮಾಜಿಕ)
ಲಾ: ಶ್ರೀ ಪದ್ಮಲಕ್ಷ್ಮೀ ಪ್ರೊಡಕ್ಷನ್ಸ್
ಪ್ರೊ: ಗಬ್ಬಿಟ ವೆಂಕಟರಾವ್

ನಿ: ಜಿ.ಹರಿನಾರಾಯಣಯ್ಯ
ಸ.ನಿ: ಎಂ.ಎಸ್.ರಂಗನಾಥ್ (ಮಾಗಡಿ)
ಅ: ರಾಜೇಶ್, ಕಲ್ಪನ, ಉದಯಕುಮಾರ್, ಪಿ.ಆರ್.ವರಲಕ್ಷ್ಮೀ, ರಾಮಗೋಪಾಲ್, ಸುನೀತ, ಮುಸುರಿ ಕೃಷ್ಣಮೂರ್ತಿ, ಕಲೀನ, ದೊರೆ, ನಂಜುಂಡಪ್ಪ, ಸಿ.ಹೆಚ್.ಕೃಷ್ಣಮೂರ್ತಿ, ಅಡಾಲ ನಾರಾಯಣರಾವ್
ಕ: ಜಿ.ವೆಂಕಟರಾವ್
ಚಿ.ಕ: ಗಬ್ಬಿಟ ವೆಂಕಟರಾವ್
ಮಾ: ಉದಯಕುಮಾರ್
ಗೀ: ಉದಯಕುಮಾರ್, ಚಿ.ಸದಾಶಿವಯ್ಯ
ಗಾ: ಎಸ್.ಜಾನಕಿ, ಬಿ.ವಸಂತ, ಪಿ.ಬಿ.ಶ್ರೀನಿವಾಸ್
ಸಂ: ಜಿ.ಹರಿನಾರಾಯಣಯ್ಯ
ಛಾ: ಎಸ್.ಎಸ್.ಲಾಲ್, ಎಂ.ಜಿ.ಆರ್.ಮಣಿ
ಕಲೆ: ಮಹದೇವನ್.ಎಸ್
ಸ: ಬಿ.ವಸಂತ
ನೃ: ಚಿನ್ನಿ-ಸಂಪತ್, ನಟರಾಜ, ರಾಮಕೃಷ್ಣ
ವ: ಅಪ್ಪಾರಾವ್
ಪ್ರ: ಮಲ್ಲಿ, ಸುಂದರಂ, ಷಣ್ಮುಗಂ
ಹಾ: ೧)'ಸಾಕಯ್ಯೋ ಸಾಕಯ್ಯ ಸರಸಾಟ ಮಾವ...', ೨)'ಅದೇ ಚಂದ್ರನಾಟ ಅದೇ ನದಿಯ ಓಟ...', ೩)'ಕರ್ನಾಟಕವು ನನಮ ಕನ್ನಡ ಮಗಳು ನಾನು..', ೪)'ಎಂದೋ ಎಲ್ಲೋ ನೋಡುವ ದಿನವು..', ೫)'ಜಯ ಶಿವ ಶಂಕರ ಲೋಕ ಶುಭಂಕರ...', ೬)'ಅದೇ ಬಾಳ ಕಥೆಯು ಇದೇ ನೆನಪಿನಲೆಯು..'
ಕ.ಸಾ: ಪುರಾತನ ಕಾಲದ ಮನೆ. ಅಲ್ಲೊಬ್ಬ ನರ್ತಕಿಯ ಕೊಲೆ ಆಗಿರುತ್ತದೆ. ಸಾವಿರಾರು ವರ್ಷಗಳ ನಂತರ ಆಧುನಿಕ ಬದುಕಿನಲ್ಲಿ ಆ ಗತಿಸಿದ ಸ್ತ್ರೀಯ ಛಾಯೆ ಪ್ರವೇಶಿಸಿದಾಗ ಆಗುವ ಅನಾಹುತಗಳು, ಕ್ಷಣಕ್ಷಣಕ್ಕೂ ಕುತೂಹಲ, ವಿಸ್ಮಯಕರ ಘಟನೆಗಳನ್ನು ಜೋಡಿಸಿ ಹೇಳಲಾದ ಕತೆ.

೧೯೭೭

೫೦೫. ಸಂಘರ್ಷ

(೧೯೭೭ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಅಪರ್ಣಾ ಫಿಲಂಸ್
ಪ್ರೊ: ಮಾವಿನಕೆರೆ ರಂಗನಾಥನ್
ನಿ: ಬಸವರಾಜ ಕೆಸ್ತೂರ್

ಸ.ನಿ: ಶ್ರೀನಿವಾಸ್ ಬಾಲಕೃಷ್ಣ, ಜಿ.ಬಿ.ಮನೋಜ್, ಪುಟ್ಟಣ್ಣ
ಅ: ರಾಜವರ್ಧನ್, ಶ್ರೀಲಲಿತಾ, ಅರಿಕೇಸರಿ, ಶಕುಂತಲಾ, ತೇಜಸ್ವಿನಿ, ವಿಠುಕುಮಾರ್, ಆರ್.ಗುಂಡೂರಾವ್, ರಘುಪತಿ
ಕ: ಬಸವರಾಜ ಕಸ್ತೂರ್
ಚಿ.ಕ: ಅರಳುಮಲ್ಲಿಗೆ ಪಾರ್ಥಸಾರಥಿ
ಮಾ: ಎನ್.ಎಸ್.ರಾವ್
ಗೀ: ಬಸವರಾಜ್ ಕಸ್ತೂರ್
ಗಾ: ರವೀ, ಕಸ್ತೂರಿಶಂಕರ್, ಉಷಾ ಉತ್ತಪ್
ಸಂ: ಬಿ.ಹರಿನಾರಾಯಣಯ್ಯ
ಛಾ: ಟಿ.ಎಲ್ಲಪ್ಪ
ಕಲೆ: ಪಿ.ವೆಂಕಟರಾಮಯ್ಯ
ಸ: ವಿಜಯಭಾಸ್ಕರ್
ಧ್ವ: (ಹಾ) ಎಸ್.ಪಿ.ರಾಮನಾಥನ್ (ಮಾ) ಗೋವಿಂದಸ್ವಾಮಿ
ನೃ: ಕೃಷ್ಣಕುಮಾರ್, ಸಿ.ರಾಧಾಕೃಷ್ಣ
ವ: ಕೃಷ್ಣಸ್ವಾಮಿ
ಪ್ರ: ಧನಪಾಲ್, ಮುತ್ತು
ಸ್ಟು: ಅಭಿಮಾನ್
ಹಾ: ೧) 'ಯೌವನದ ಹೊಳೆಯಲ್ಲಿ...', ೨) 'ಮರೆತೆ ನಾನು ನನ್ನ ನಿಲುವು...', ೩) 'ಹೌ ಕ್ಯಾನ್ ಐ ಟೆಲ್ ಯೂ...', ೪) 'ಐ ಹ್ಯಾವ್ ಗಾಟ್...'
ವಿ: ಪತ್ರಕರ್ತ ನಾರಾಯಣ ಸ್ವಾಮಿಯವರು ಪ್ರಾರಂಭದ ಪಾಲುದಾರರು. ಮಾವಿನಕೆರೆ, ಅರಳುಮಲ್ಲಿಗೆ ಮೊದಲಾದ ಸಾಹಿತಿಗಳ ತೊಡಗುವಿಕೆ. ಆರ್. ಗುಂಡೂರಾವ್, ರಘುಪತಿ ಭಾಗವಹಿಸಿದ್ದು, ಉಷಾ ಉತ್ತಪ್, ರವೀ ಹಾಡಿಕೆ.
ಕ.ಸಾ: ಶೀಲಾ ಕಾಲೇಜು ದಿನಗಳಲ್ಲಿ ಸಹಪಾಠಿ ಪೀಟರ್ ಜೊತೆ ಬೆರೆತಿರುತ್ತಾಳೆ. ಸಜ್ಜನ ವ್ಯಕ್ತಿತ್ವದ ಪ್ರಸಾದ್‌ನನ್ನು ಮದುವೆಯಾಗಿ, ಗತವೆಲ್ಲ ಕೆಟ್ಟ ಕನಸೆಂದು ಮರೆಯಲೆತ್ನಿಸಿದಾಗ ಪೀಟರ್‌ನ ಪುನರಾಗಮನ - ಬಯಕೆ. ಈ ಸಂಕಷ್ಟದಲ್ಲಿದ್ದಾಗ ಪತಿಯ ಗೆಳೆಯ ಕತೆಗಾರ ಅವಳದೇ ಕಥೆ ಬರೆಯಲಾರಂಭಿಸುವನು. ಪತಿಗೆ ಎಲ್ಲವನ್ನೂ ತಿಳಿಸಿ ಕ್ಷಮೆಯಾಚಿಸುವಳು ಶೀಲಾ.

೫೦೬. ಬಬ್ರುವಾಹನ

(೧೯೭೭ / ವರ್ಣ / ಪೌರಾಣಿಕ)
ಲಾ: ರಾಜ್‌ಕಮಲ್ ಆರ್ಟ್ಸ್, ದೊಡ್ಡಬಳ್ಳಾಪುರ
ಪ್ರೊ: ಕೆ.ಸಿ.ಎನ್.ಚಂದ್ರಶೇಖರ್
ನಿ: ಹುಣಸೂರು ಕೃಷ್ಣಮೂರ್ತಿ
ಸ.ನಿ: ಭಾರ್ಗವ
ಅ: ರಾಜಕುಮಾರ್, ಕಾಂಚನ, ಬಿ.ಸರೋಜಾದೇವಿ, ಜಯಮಾಲ, ವಜ್ರಮುನಿ, ರಾಮಕೃಷ್ಣ, ತೂಗುದೀಪ ಶ್ರೀನಿವಾಸ್, ಶನಿ ಮಹದೇವಪ್ಪ, ಭಟ್ಟಿ ಮಹದೇವಪ್ಪ, ಸಂಪತ್, ಎಂ.ಎಸ್.ಸತ್ಯ, ಮಚ್ಚೇರಿ, ಬಿ.ಜಯಾ, ಪಾಪಮ್ಮ, ಶಾಂತಮ್ಮ
ಚಿ.ಕ/ಮಾ: ಹುಣಸೂರು ಕೃಷ್ಣಮೂರ್ತಿ
ಗೀ: ಹುಣಸೂರು ಕೃಷ್ಣಮೂರ್ತಿ, ಚಿ. ಉದಯಶಂಕರ್
ಗಾ: ಪಿ.ಬಿ.ಶ್ರೀನಿವಾಸ್, ಎಸ್.ಜಾನಕಿ, ರಾಜಕುಮಾರ್
ಸಂ: ಪಿ.ಭಕ್ತವತ್ಸಲಂ
ಛಾ: ಎಸ್.ವಿ.ಶ್ರೀಕಾಂತ್
ಕಲೆ: ಕೆ.ನಾಗೇಶ್ವರರಾವ್
ಸ: ಟಿ.ಜಿ.ಲಿಂಗಪ್ಪ
ಧ್ವ: (ಹಾ) ಎಸ್.ಪಿ.ರಾಮನಾಥನ್ (ಮಾ) ಗೋವಿಂದಸ್ವಾಮಿ
ನೃ: ಉಡುಪಿ ಜಯರಾಂ
ಸಾ: ವೈ. ಶಿವಯ್ಯ
ವ: ಎಸ್.ಎಸ್.ತಂಗಪ್ಪನ್
ಪ್ರ: ದೊರೆಸ್ವಾಮಿ
ಸ್ಟು: ವಾಹಿನಿ, ಪ್ರಸಾದ್, ಚಾಮುಂಡೇಶ್ವರಿ, ವಾಸು, ಕರ್ಪಗಂ
ಹಾ: ೧) 'ಯಾರು ತಿಳಿಯರು ನಿನ್ನ...', ೨) 'ಆರಾಧಿಸುವೆ ಮದನಾರಿ..', ೩) 'ನಿನ್ನ ಕಣ್ಣ ನೋಟದಲ್ಲೆ...', ೪) 'ಈ ಸಮಯ ಆನಂದಮಯ...'
ವಿ: ರಾಜ್ಯ ಪ್ರಶಸ್ತಿ ಅತ್ಯುತ್ತಮ ನಟ ರಾಜಕುಮಾರ್ (೭೭ 22), ರಾಜಕುಮಾರ್ ದ್ವಿಪಾತ್ರ (ತಂದೆ ಮಗ)
ಸೆ: ೧೮ ರೀಲುಗಳು. ೧೭ ೨-೧೯೭೭
ಕ.ಸಾ: ಪೌರಾಣಿಕ ಜಿನ್ನೈಮಿನಿಯ ಕತೆ. ಧರ್ಮನಂದನನ ಯಜ್ಞಾಶ್ವವನ್ನು ಬಬ್ರುವಾಹನ ಕಟ್ಟಿಹಾಕುವನು. ಅಶ್ವದೊಂದಿಗೆ ಬಂದಿದ್ದ ಅರ್ಜುನ, ಅಶ್ವವನ್ನು ಕಟ್ಟಿಹಾಕಿದವನು ಮಗನೆಂಬುದನ್ನರಿಯದೇ ಅವನ ಮೇಲೆ ಯುದ್ಧ ಮಾಡಬೇಕಾಗಿ ಬಂದ ಮಹಾಭಾರತದ ಒಂದು ಪ್ರಸಂಗ.

೫೦೭. ಎಲ್ಲಾ ಹಣಕ್ಕಾಗೇ

(೧೯೭೭ / ಕಪ್ಪು-ಬಿಳುಪು / ಪತ್ತೇದಾರಿ)
ಲಾ: ಜಯಪ್ರಕಾಶ್ ಪಿಕ್ಚರ್ಸ್
ಪ್ರೊ: ಬಿ.ಸಿ.ಲಾಲ್, ಸಿ.ಲೀಲಾ
ನಿ: ಬಿ.ಸಿ.ಲಾಲ್

ಅ: ಜಯಪ್ರಕಾಶ್, ನರಸಿಂಹರಾಜು, ಎಂ.ಆರ್.ರವಿ, ಗಣೇಶ್, ಜೀಬಿ, ದಿನೇಶ್, ಶಕ್ತಿಪ್ರಸಾದ್, ಜಯಪ್ರಭ, ಇಂದಿರಾ, ಜಯ
ಕ: ಸಿ.ಲೀಲಾ
ಮಾ: ಓಂಕಾರ ವಾಣಿ
ಗಾ: ಜೇಸುದಾಸ್, ಎಸ್.ಜಾನಕಿ
ಸಂ: ಅರುಣಾಚಲಂ
ಛಾ: ಮುರುಗೇಶ್
ಸ: ಟಿ.ವಿ.ಬಾಬು
ಸ್ಟು: ಚಾಮುಂಡೇಶ್ವರಿ
ಹಾ: ೧) 'ಎಂದು ನಿನ್ನ ನೋಡುವೆ...', ೨) 'ಪಾಪಚ್ಚಿ ಪುಟ್ಟಾಣಿ ಈ ಹುಡುಗೀ ನನ್ನ ಮಾಡುತಾಳೆ ಪ್ರೀತಿ..', ೩) 'ಜೀವ ಜೀವದ ಸಂಗಮ...'
ಸೆ: ರೀಲು - ೧೬, ಉದ - ೩೨೮೨.೦೯ ಮೀಟರ್
ಕ.ಸಾ: ನಾಲ್ವರು ಗೆಳೆಯರು. ಒಬ್ಬ ಶ್ರೀಮಂತ. ತಾಯಿ ಆಸ್ತಿಯ ಒಡತಿ. ಐಷಾರಾಮದ ಬದುಕಿಗೆ ಒಗ್ಗಿಹೋದ ಮಗ ಇತ್ತ ಬರಲಿಲ್ಲ. ಶ್ರೀಮಂತೆಯ ಮನೆಯಲ್ಲಿ ಸರಣಿ ಕೊಲೆಗಳು, ನಿಗೂಢತೆ, ಭಯ, ಆಕಸ್ಮಿಕಗಳಿಂದ ತುಂಬಿದ ಕಥೆ. ಕಡೆಗೂ ಸತ್ಯ ಬಯಲಾದಾಗ ತೀರಾ ಆಪ್ತಮಿತ್ರ ತನ್ನ ಬಡತನದ ಕಾರಣ ಈ ಕೃತ್ಯವೆಸಗಿದ.

೫೦೮. ಹರಕೆ

(೧೯೭೭ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ರಂಜನ ಫಿಲಂ ಎಂಟರ್‌ಪ್ರೈಸಸ್
ಪ್ರೊ: ಮಾಲತಿ ವಿಜಯಕುಮಾರ್, ಬಿ.ಎಸ್.ನಾರಾಯಣಸ್ವಾಮಿ, ಬಿ.ಎನ್.ದ್ವಾರಕಾನಾಥ್, ಎಸ್.ಎಸ್.ಶೆಟ್ಟರ್

ನಿ: ಕೆ.ನಾಗೇಶ್
ಅ: ರೂಪೇಶ್‌ಕುಮಾರ್, ಹರ್ಷ, ಸುಧೀರ್, ಬಸವರಾಜ್ ಮಟಿವಾಳ್, ಪ್ರಮೀಳಾ ಜೋಷಾಯ್, ವಿಜಯಶ್ರೀ, ಥೆರಸಾ, ಜಯಕಲ
ಕ/ಚಿ.ಕ/ಮಾ/ಗೀ: ಎಸ್.ಎಸ್.ಶೆಟ್ಟರ್
ಗಾ: ಪಿ.ಬಿ.ಶ್ರೀನಿವಾಸ್, ಎಲ್.ಆರ್.ಅಂಜಲಿ
ಸಂ: ಬಾಲ್ ಜಿ.ಯಾದವ್
ಛಾ: ವಿ.ಮನೋಹರ್
ಸ: ವಿಜಯಭಾಸ್ಕರ್
ಸ್ಟು: ಚಾಮುಂಡೇಶ್ವರಿ
ಹಾ: ೧) 'ಯಾರಾಸೆ ನಮಗಿಲ್ಲ ಭಾಗ್ಯದ ಬಲವಿಲ್ಲ...', ೨) 'ಮಗಳು ಎಂಥ ಚೆಲುವಿ...', ೩) 'ಊರ ಮುಂದಿರುವವನೆ ಶೂರನೆ ವೀರನೆ...'
ವಿ: ಪ್ರಮೀಳಾ ಜೋಷಾಯ್ ಚಿತ್ರರಂಗ ಪ್ರವೇಶಿಸಿದರು.
ಕ.ಸಾ: ಕರ್ನಾಟಕದ ಕೆಲವು ಪ್ರದೇಶಗಳಲ್ಲಿ ಚಾಲ್ತಿಯಲ್ಲಿರುವ ವಿಶಿಷ್ಟ ಅಷ್ಟೇ ವಿಚಿತ್ರ ಪದ್ಧತಿ - ಮನೆಯಲ್ಲಿ ಒಬ್ಬ ಹುಡುಗಿಯನ್ನು ದೇವರಿಗೆ ಮದುವೆ ಮಾಡಿ, ಅನಂತರ ಊರ ಶ್ರೀಮಂತರ ವೇಶ್ಯೆಯಾಗಿ ಬಳಸುವ ಹೀನಾಯ ಸ್ಥಿತಿ. ಇಟ್ಟುಕೊಂಡಂಥ ಶ್ರೀಮಂತನ ಮಕ್ಕಳನ್ನು ಹೆರುವುದು. ಇತ್ತ ದೇವದಾಸಿಯೂ ಅಲ್ಲದ, ಅತ್ತ ಸೂಳೆಯೂ ಅಲ್ಲದ ಇಬ್ಬಂದಿ ಬದುಕು. ಈ ಹರಕೆ ತೀರಿಸದಿದ್ದರೆ ದೇವರಿಗೆ ಸಿಟ್ಟು ಬಂದು ವಂಶನಾಶವಾಗುತ್ತದೆಂಬ ಮೂಢನಂಬಿಕೆ. ಸ್ವಾರ್ಥ-ಕಾಮಪಿಪಾಸೀ ಶ್ರೀಮಂತ ವರ್ಗ ಬೆಳೆಸಿದ ಕಟ್ಟಳೆ. ಈ ಪದ್ಧತಿಯನ್ನು ಧಿಕ್ಕರಿಸುವ ಹೆಣ್ಣಿನ ಕಥೆ.

೫೦೯. ದೇವರದುಡ್ಡು

(೧೯೭೭ / ವರ್ಣ / ಸಾಮಾಜಿಕ)
ಲಾ: ರಾಣಿ ಆರ್ಟ್ಸ್
ಪ್ರೊ: ಎನ್.ರಾಣಿ
ನಿ: ಕೆ.ಎಸ್.ಎಲ್.ಸ್ವಾಮಿ (ರವೀ)
ಸ.ನಿ: ಮಣಿಮುರುಗನ್



ಅ: ರಾಜೇಶ್, ಜಯಂತಿ, ಬಾಲಕೃಷ್ಣ, ಚಂದ್ರಶೇಖರ್, ಹೇಮಾ ಚೌಧರಿ, ಮನೋರಮ, ಶಿವರಾಂ, ಶ್ರೀನಾಥ್, ದ್ವಾರಕೀಶ್, ಶನಿ ಮಹದೇವಪ್ಪ, ಮಹದೇವಪ್ಪ, ಎ.ಎಸ್.ಮೂರ್ತಿ, ಶ್ರೀಧರ್, ದೋತಿ ಹನುಮಯ್ಯ, ಕೇಶವಮೂರ್ತಿ, ಲೋಕನಾಥ್
ಕ: ಕಲಿಯುಗ ಕಣ್ಣನ್ (ತಮಿಳು ಚಿತ್ರ)
ಚಿ.ಕ: ಕೆ.ಎ.ನಟರಾಜನ್
ಮಾ: ಎಂ.ನರೇಂದ್ರಬಾಬು
ಗೀ: ಆರ್.ಎನ್.ಜಯಗೋಪಾಲ್, ಹುಣಸೂರು ಕೃಷ್ಣಮೂರ್ತಿ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಪಿ.ಬಿ.ಶ್ರೀನಿವಾಸ್, ಎಸ್.ಜಾನಕಿ
ಸಂ: ಬಾಲ್ ಜಿ.ಯಾದವ್, ವಿಕ್ಟರ್
ಛಾ: ಎನ್.ಜಿ.ರಾವ್
ಕಲೆ: ಸಿ.ಕೆ.ಜಾನ್ -ಜಯರಾಜ್
ಸ: ರಾಜನ್ - ನಾಗೇಂದ್ರ
ಧ್ವ: (ಹಾ) ಎಸ್.ಪಿ.ರಾಮನಾಥನ್ (ಮಾ) ಗೋವಿಂದಸ್ವಾಮಿ. ಶಿವರಾಜ್
ನೃ: ಉಡುಪಿ ಜಯರಾಂ
ವ: ಮಣಿ, ತಂಗಪ್ಪನ್, ಎಂ.ನಾಥ್, ಪೊನ್ನುರಾಜ್, ಕೃಷ್ಣ, ಸುರೇಶ್

ಪ್ರ: ಮನ್ಮಥರಾವ್. ವಿ.ಎಸ್.ಎಸ್.ಮಣಿ, ರಾಜಗೋಪಾಲ್ (ಕೇಶಾಲಂಕಾರ: ರಾಜಲಕ್ಷ್ಮಿ - ವಾಣಿ)
ಸ್ಟು: ಚಾಮುಂಡೇಶ್ವರಿ
ಹಾ: ೧) 'ನಾನೇ ಎಂಬ ಭಾವ...', ೨) 'ತಲಕರ ಕರ ಪರಿ ಮೇಲೆ...', ೩) 'ಸಂಗಾತಿ ಮೊದಲು...', ೪) 'ಗಾಳಿಯ ಪಟದಂತೆ ನಾನಯ್ಯ...'
ಕ.ಸಾ: ದೇವರಿಗಾಗಿ ಮುಡಿಪಿಟ್ಟ ಹಣದಿಂದ ಶ್ರೀಮಂತನಾದ ವ್ಯಕ್ತಿ ದೇವರಿಗೆ ಎಷ್ಟು ಬಾರಿ ಬಂದು ಕೇಳಿದರೂ ಹಣ ಕೊಡುವುದಿಲ್ಲ. ಕಡೆಗೆ ಆತನಿಗೆ ಖಾಯಿಲೆ ಬಂದು ಏನನ್ನು ತಿನ್ನದಂತಾದಾಗ ದೇವರ ದುಡ್ಡನ್ನು ಕೊಡಲೊಪ್ಪುತ್ತಾನೆ. ಆದರೆ ಅವನು ಮಾಡಿದ ದಾನ ಧರ್ಮದ ಮೂಲಕ ದೇವರ ಸಾಲ ಸಂದಾಯವಾಗಿರುತ್ತದೆ.

೫೧೦. ದೀಪ

(೧೯೭೭ / ವರ್ಣ / ಸಾಮಾಜಿಕ)
ಲಾ: ಜಗತ್ ಪಿಕ್ಚರ್
ಪ್ರೊ: ರವಿಲಾಲ್ ಎಲ್.ಪಾ, ಎಫ್.ಎಸ್.ನಂದಾನಿ
ನಿ: ಸಿ.ವಿ ರಾಜೇಂದ್ರನ್
ಸ.ನಿ: ಬೆಂಗಳೂರು ನಾಗೇಶ್



ಅ: ಅಶೋಕ್, ಮಂಜುಳ, ಬಾಲಕೃಷ್ಣ. ಲೀಲಾವತಿ. ಸೀತಾರಾಂ, ಕೃಷ್ಣಕುಮಾರಿ, ಲೋಕನಾಥ್, ಹೇಮಾಚೌಧರಿ, ಜಯಕುಮಾರ್, ಪಾಪಮ್ಮ, ಮಾನಟರಾಜ್. ಯಶೋದ, ಶ್ರೀಧರ್, ಗುಗ್ಗು, ತಿಪಟೂರು ಸಿದ್ದರಾಮಯ್ಯ, ಸಂಜೀವಯ್ಯ
ಕ: ಸಿ.ಆನಂದರಾಮನ್
ಚಿ.ಕ: ಸಿ.ವಿ.ರಾಜೇಂದ್ರನ್
ಮಾ: ಚಿ.ಉದಯಶಂಕರ್
ಗೀ: ದೊಡ್ಡ ರಂಗೇಗೌಡ, ಚಿ.ಉದಯಶಂಕರ್, ಎಂ.ಎನ್.ವ್ಯಾಸರಾವ್, ವಿಜಯನಾರಸಿಂಹ
ಗಾ: ವಾಣಿ ಜಯರಾಂ, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಲ್.ಆರ್.ಅಂಜಲಿ
ಸಂ: ಭಕ್ತವತ್ಸಲಂ
ಛಾ: ಶ್ರೀಕಾಂತ್
ಸ: ವಿಜಯಭಾಸ್ಕರ್
ನೃ: ಉಡುಪಿ ಜಯರಾಂ
ವ: ತಂಗಪ್ಪ, ದೂರೆ
ಪ್ರ: ವೀರಾಸ್ವಾಮಿ, ನಾಗೇಶ್ವರರಾವ್. ಬಲರಾಮ್, ರಾಜು, ಭಾಸ್ಕರ್, ಮನ್ಮಥರಾವ್
ಸ್ಟು: ಚಾಮುಂಡೇಶ್ವರಿ
ಹಾ: ೧) 'ದಾರಿ ಕಾಣದಾಗಿದೆ ರಾಘವೇಂದ್ರನೆ..', ೨) 'ನಗು ನಗುತಿರುವ ಮೊಗದಲಿ..', ೩) 'ಕಂಡ ಕನಸು ನನಸಾಗಿ..', ೪) 'ಸಮಯ ಬಲಿದಿದೆ ನಲಿದಿದ...', ೫) 'ಬಾಳ ರಂಗಮಂಟಪದಲ್ಲಿ ನಟನೆ ಸಾಗಿದ...'
ಕ.ಸಾ: ಸದಾ ಮತ್ತೊಬ್ಬರ ಕಷ್ಟಕ್ಕೆ ಸ್ಪಂದಿಸುವ ತ್ಯಾಗಮಯಿ ಹೆಣ್ಣೊಬ್ಬಳ ಕತೆ. ಅನಿವಾರ್ಯ ಕಾರಣದಿಂದ ತನ್ನನ್ನು ಪ್ರೀತಿಸುವ ಯುವಕನನ್ನು ಬಿಟ್ಟು ವಯಸ್ಸನೊಬ್ಬನನ್ನು ಮದುವೆಯಾಗಬೇಕಾಗುತ್ತದ. ಎಲ್ಲ ಕಷ್ಟಗಳನ್ನು ತನ್ನ ಹೆಗಲ ಮೇಲೆ ಹಾಕಿಕೊಂಡು ತನ್ನನ್ನು ಪ್ರೀತಿಸಿದವನನ್ನು ತನ್ನ ಪತಿಯ ಮಗಳಿಗೆ ಮದುವೆ ಮಾಡಿಸುತ್ತಾಳೆ. ಕಡೆಗೆ ಕ್ಯಾನ್ಸರ್‌ನಿಂದ ಸಾಯುತ್ತಾಳೆ.

೫೧೧. ಶ್ರೀರೇಣುಕಾದೇವಿ ಮಹಾತ್ಮೆ

(೧೯೭೭ / ವರ್ಣ / ಪೌರಾಣಿಕ)
ಲಾ: ಪದ್ಮಲಕ್ಷ್ಮೀ ಕಂಬೈನ್ಸ್
ಪ್ರೊ: ಎನ್.ಎಸ್.ಮೂರ್ತಿ, ಎನ್.ಎನ್.ಭಟ್
ನಿ: ಎ.ಎಸ್.ರಾವ್
ಸ.ನಿ: ಎಂ.ಎಸ್.ರಂಗನಾಥ್
ಅ: ರಾಜೇಶ್, ಶ್ರೀನಾಥ್, ಉದಯಕುಮಾರ್, ದ್ವಾರಕೀಶ್. ವಜ್ರಮುನಿ. ಅಶ್ವತ್, ಬಿ.ಸರೋಜಾದೇವಿ, ಮಂಜುಳ, ಜಯಮಾಲಿನಿ. ರಾಮಗೋಪಾಲ್, ಗಂಗಾಧರ್, ಮುಸುರಿ ಕೃಷ್ಣಮೂರ್ತಿ, ಹೆಚ್.ಟಿ.ಅರಸು. ವಸಂತಕುಮಾರ್, ಪ್ರಭಾಕರ್, ಭವಾನಿ. ಸೂರ್ಯ, ಜಯಶ್ರೀ, ಹಲಂ, ಲಲಿತಮ್ಮ, ಭಾನುಶ್ರೀ. ವಜ್ರೇರಾವ ನಿರ್ಮಲ, ಭದ್ರಾಚಲಂ, ಅರವಿಂದ ಪ್ರಕಾಶ್



ಕ/ಚಿ.ಕ: ಜಿ.ವೆಂಕಟರಾವ್
ಮಾ: ಉದಯಕುಮಾರ್
ಗೀ: ವಿಜಯನಾರಸಿಂಹ, ಆರ್.ಎನ್.ಜಯಗೋಪಾಲ್, ಉದಯಕುಮಾರ್
ಗಾ: ಪಿ.ಸುಶೀಲ, ಎಸ್.ಜಾನಕಿ, ಬಿ.ವಸಂತ, ಪಿ.ಬಿ.ಶ್ರೀನಿವಾಸ್, ಎಸ್.ಪಿ.ಬಾಲಸುಬ್ರಹ್ಮಣ್ಯಂ
ಸಂ: ಬಿ.ಹರಿನಾರಾಯಣಯ್ಯ
ಛಾ: ಎಸ್.ಎಸ್.ಲಾಲ್
ಕಲೆ: ಬಿ.ನಾಗರಾಜರಾವ್
ಸ: ಎಸ್.ಹನುಮಂತರಾವ್
ಧ್ವ: ಸ್ವಾಮಿನಾಥನ್, ಮೋಹನಕುಮಾರ್, ಶ್ರೀನಿವಾಸ್
ನೃ: ಚಿನ್ನಿ-ಸಂಪತ್
ಸಾ: ರಮೇಶ್
ವ: ವೀರಾಸ್ವಾಮಿ
ಪ್ರ: ಮೈಸೂರು ಮಣಿ
ಸ್ಟು: ಕಂಠೀರವ
ಹಾ: ೧) 'ಮನವೇ ಮಧುವಾಗಿದೆ...', ೨) 'ಸಕಲ ಚರಾಚರ ಭಾಗ್ಯ ವಿಧಾತ..', ೩) 'ಜಯಹೇ ಸುಕುಮಾರ ವೀರ..', ೪) 'ರಾಮಲಾಲಿ ಭೃಗುಕುಲ ಸೋಮಲಾಲಿ...', ೫) 'ಪ್ರಿಯತಮ ಸ್ವಾಗತ...', ೬) 'ಮಾಡದೆ ಪಾಪ ದಾರುಣ ತಾಪ..', ೭) 'ಜಯಹೋ ರಾಜಾಧಿ ರಾಜಾ..', ೮) 'ಸರಿಯೊ ಕಾಣೆನೋ ಧರಣಿಯೊಳಗಮ್ಮಾ..', ೯) 'ಶಾಂತಾಕಾರಂ ಭುಜಗಶಯನಂ...', ೧೦) 'ಅಂಬಾ ಮೋಹಿನಿ ದೇವತಾ ತ್ರಿಭುವನಿ...', ೧೧) 'ಭವಾನಿ ಭವಾನಿ ಸಕಲಲೋಕ ಜನನಿ...'
ವಿ: ಬಿ.ಸರೋಜಾದೇವಿ ಅವರ ೧೫೦ನೇ ಚಿತ್ರ.
ಕ.ಸಾ: ಶ್ರೀ ರೇಣುಕಾದೇವಿಯ ಮಹಿಮೆಯ ಕತ. ಸುದರ್ಶನನ ಅಹಂಕಾರವಿಳಿಸಲು ನಾರದ ಮಾಡಿದ ಉಪಾಯದಿಂದಾಗಿ ಅವನು ಭೂಲೋಕದಲ್ಲಿ ಕಾರ್ತವೀರ್ಯಾರ್ಜುನನಾಗಿ ಜನ್ಮ ತಳೆಯಬೇಕಾಗುತ್ತದೆ. ರಾಜಕುಮಾರಿ ರೇಣುಕಾದೇವಿಯು ಜಮದಗ್ನಿ ಮುನಿಯನ್ನು ಪ್ರೇಮಿಸಿ. ಆತನ ಕಠಿಣ ಪರೀಕ್ಷೆಗಳನ್ನೆಲ್ಲಾ ಎದುರಿಸಿ ಆ ಮುನಿಯ ಕೈಹಿಡಿಯುವಳು. ರಾವಣನನ್ನು ಗೆದ್ದ ಕಾರ್ತವೀರ್ಯಾರ್ಜುನ ಯಜ್ಞಯಾಗಾದಿಗಳನ್ನು ನಿಷೇಧಿಸಿ ಋಷಿಮುನಿಗಳಿಗೆ ಹಿಂಸೆ ನೀಡುವನು. ಜಮದಗ್ನಿ ಅವನನ್ನು ಎದುರಿಸಿ ಜಯಶಾಲಿಯಾಗುವರು. ಪರಶುರಾಮ ಜಮದಗ್ನಿ ರೇಣುಕೆಯರ ಮಗನಾಗಿ ಜನಿಸಿದ. ಚಂಚಲ ಮನದ ಆರೋಪ ಹೊತ್ತ ತಾಯಿಯ ಶಿರವನ್ನೇ ಪರಶುರಾಮ ಛೇದಿಸಬೇಕಾಯಿತು. ಪಿತೃವಾಕ್ಯಪರಿಪಾಲನ ಮಾಡಿದ ಪರಶುರಾಮ ತಾಯಿ ಹಾಗೂ ಸೋದರರನ್ನು ಬದುಕಿಸಿಕೊಂಡ. ರೇಣುಕಾದೇವಿ ಎಲ್ಲಮ್ಮನಾಗಿ ಭಕ್ತರ ಕೋರಿಕೆ ಈಡೇರಿಸುವ ದೇವತೆಯಾದಳು.

೫೧೨. ಧನಲಕ್ಷ್ಮಿ

(೧೯೭೭ / ವರ್ಣ / ಸಾಮಾಜಿಕ)
ಲಾ: ಯೋಗೇಶ್ ಚಿತ್ರ
ಪ್ರೊ: ಹೆಚ್.ಎನ್.ಮಾರುತಿ
ನಿ: ಕೆ.ಎಸ್.ಎಸ್. ನಾರಾಯಣ್
ಸ.ನಿ: ಹೆಚ್.ಎಸ್.ನಾಗಭೂಷಣ, ವಿಜಯಕುಮಾರ್, ಚಂದ್ರಶೇಖರ್

ಅ: ಶ್ರೀನಾಥ್, ಮಂಜುಳ, ದ್ವಾರಕೀಶ್, ಲೀಲಾವತಿ, ಶಿವರಾಂ. ದಿನೇಶ್, ಬೇಬಿ ಇಂದಿರಾ, ಚಂದ್ರಿಕಾ, ಭದ್ರಾಚಲಂ, ಯಶೋದ, ಸ್ಟೀಫನ್, ರವಿ, ಸೋಮು, ಗುರು, ಜೂ.ನರಸಿಂಹರಾಜು, ಪುಷ್ಪ, ಶ್ಯಾಮಲ, ಪ್ರಿನ್ಸ್, ನೀಲಕಂಠ, ವೆಂಕಟರಾಂ, ಗೌ.ನಟರು - ಅಂಬರೀಷ್, ಶಕ್ತಿಪ್ರಸಾದ್, ವಜ್ರಮುನಿ
ಕ/ಚಿ.ಕ: ಎಂ.ಡಿ.ಸುಂದರ್
ಮಾ: ಚಿ.ಉದಯಶಂಕರ್
ಗೀ: ಚಿ.ಉದಯಶಂಕರ್, ಕೆ.ಎಸ್.ಸತ್ಯನಾರಾಯಣ್
ಗಾ: ಪಿ.ಬಿ.ಶ್ರೀನಿವಾಸ್, ಪಿ.ಸುಶೀಲ, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್.ಜಾನಕಿ, ಬೆಂಗಳೂರು ಲತಾ
ಸಂ: ಪಿ.ಭಕ್ತವತ್ಸಲಂ
ಛಾ: ಜದ್.ಎ.ಖಾನ್
ಕಲೆ: ರಂಗಾ
ಸ: ಎಂ.ರಂಗರಾವ್
ಧ್ವ: ಸೀತಾರಾಂ, ಗೋವಿಂದಸ್ವಾಮಿ, ಕೋಟೇಶ್ವರರಾವ್
ನೃ: ಉಡುಪಿ ಜಯರಾಂ, ಸಹಾಯ ದೇವಿ
ಸಾ: ಜ್ಯೂಡೋ ರತ್ನಂ
ವ: ನಜ್ರಿ ನಾರಾಯಣ್ (ವಿನ್ಯಾಸ), ತಂಗಪ್ಪನ್, ಟಿ.ಚಿಂಟಿಬಾಬು
ಪ್ರ: ವೀರಾಸ್ವಾಮಿ, ನಾಗೇಶ್ವರರಾವ್, ಮಾಧವ, ಕೇಶಾಲಂಕಾರ - ರಾಜು
ಸ್ಟು: ಪ್ರೀಮಿಯರ್
ಹಾ: ೧) 'ಮೂರು ಮೆಣಸಿನಕಾಯಿ ಎತ್ತರವೂ ಇಲ್ಲ...', ೨) 'ನಿನ್ನಂಥ ಚೆಲುವ ಈ ಹಳ್ಳೀಲೆ ಇಲ್ಲ..', ೩) 'ನಿಲ್ಲೇ ನೀನಲ್ಲೆ ಬಲ್ಲೆಯಾ ಸರಸವನು...', ೪) 'ಭೂಮಿಗೆ ಬಂದ ಕಾಮಣ್ಣನೋ...', ೫) 'ಪಾಲ್ಗಡಲಿನಿಂದುದಿಸಿ ಹರಿಯ ವರಿಸಿ...', ೬) 'ಹುಣ್ಣಿಮೆ ಬೆಳಕನು ಕಣ್ಣಲಿ ಚೆಲ್ಲುವ...'
ಸೆ: ೧೫-ರೀಲುಗಳು, ಉದ: ೪೦೧೦ ಮೀ
ಕ.ಸಾ: ಬಹುದೊಡ್ಡ ಮೊತ್ತದ ನಗದು ಆಸ್ತಿಯೊಂದು ಚಲಾವಣೆ ಇಲ್ಲದೆ ಕೂತಿರುತ್ತದೆ. ಅದನ್ನು ಪಡೆಯಲು ಸಾಲುಸಾಲಾಗಿ ಬರುವ ಕಳ್ಳರು. ಒಬ್ಬರನ್ನೊಬ್ಬರು ನಂಬುವುದಿಲ್ಲ. ಸಾಹಸ, ರಹಸ್ಯ, ಕುತೂಹಲ ತುಂಬಿದ ಕಥೆ. ಜೊತೆಗೆ ಶೃಂಗಾರ-ಪ್ರಣಯ. ಕೊನೆಗೂ ಯಾರಿಂದಲೂ ಹಣ ಕದಿಯಲಾಗಲಿಲ್ಲ. ಹಣ ಚಲಾವಣೆಯಲ್ಲಿರಬೇಕೇ ಹೊರತು ಕೂಡುಕೆಯಲ್ಲಲ್ಲ ಎಂದು ಸಾರುವ ಕಥೆ.

೫೧೩. ಬಯಸದೇ ಬಂದ ಭಾಗ್ಯ

(೧೯೭೭ / ವರ್ಣ / ಸಾಮಾಜಿಕ)
ಲಾ: ಶ್ರೀ ರಾಮ ಎಂಟರ್‌ಪ್ರೈಸಸ್
ಪ್ರೊ: ಆರ್.ರಾಮಶೇಷನ್, ಆರ್.ಕಾಶಿ ವಿಶ್ವನಾಥನ್
ನಿ: ಆರ್.ರಾಮಮೂರ್ತಿ



ಸ.ನಿ: ನಾಗರಾಜ್
ಅ: ವಿಷ್ಣುವರ್ಧನ್, ರಾಮ್‌ಗೋಪಾಲ್, ಮಂಜುಳ, ಶ್ರೀಲಲಿತ, ಇಂದಿರಾದೇವಿ, ಪಾಪಮ್ಮ, ಬಾಲಕೃಷ್ಣ, ದಿನೇಶ್, ಶಿವರಾಂ, ಜೋಕರ್ ಶ್ಯಾಂ
ಕ: ಬಾಲಮುರುಗನ್
ಚಿ.ಕ: ಆರ್.ರಾಮಮೂರ್ತಿ
ಮಾ/ಗೀ: ಚಿ. ಉದಯಶಂಕರ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಪಿ.ಬಿ.ಶ್ರೀನಿವಾಸ್, ಎಸ್.ಜಾನಕಿ, ವಿದ್ಯಾರಾಣಿ
ಸಂ: ಆರ್.ರಾಮಮೂರ್ತಿ
ಛಾ: ಚಿಟ್ಟಿಬಾಬು, ಗಣೇಶ ಪಾಂಡ್ಯನ್
ಕಲೆ: ಗೋಡ್‌ಗಾಂವ್ಕರ್
ಸ: ರಾಜನ್ ನಾಗೇಂದ್ರ
ಧ್ವ: (ಹಾ) ಎಸ್.ಪಿ.ರಾಮನಾಥನ್, ನರಸಿಂಹಮೂರ್ತಿ (ಮಾ) ಎಂ.ಡಿ.ರಾಜಾರಾಂ
ನೃ: ಲಕ್ಷ್ಮೀನಾರಾಯಣ್
ಸಾ: ಜ್ಯುಡೋ ರತ್ನಂ
ವ: ವೆಂಕಟರಾವ್
ಪ್ರ: ಮಲ್ಲಿಕಾರ್ಜುನ
ಸ್ಟು: ಎ.ವಿ.ಎಂ. ವಿಜಯವಾಹಿನಿ
ಹಾ: ೧) 'ನಾನೇ ಎಲ್ಲಾ ನನ್ನಿಂದ ಎಲ್ಲಾ ...', ೨) 'ಮುತ್ತಿನ ಹನಿಗಳು ಸುತ್ತಲೂ...', ೩) 'ಪ್ರೀತಿಸು ಸಮೀಪಿಸು...'
ಕ.ಸಾ: ಸ್ನೇಹಿತೆಯರಿಬ್ಬರು. ಒಬ್ಬಳು ಶ್ರೀಮಂತ, ಮತ್ತೊಬ್ಬಳು ಬಡವಿ. ಶ್ರೀಮಂತ ಕಲೆಕ್ಟರ್‌ನ ಹೆಂಡತಿಯಾದರೆ, ಬಡವಿ ಬಡ ಗುಮಾಸ್ತನ ಮಡದಿಯಾಗುತ್ತಾಳೆ. ಸಂದರ್ಭವೊಂದರಲ್ಲಿ ಶ್ರೀಮಂತ ಬಡ ಗೆಳತಿಗೆ ಅವಮಾನ ಮಾಡುತ್ತಾಳೆ. ಕೋಪಗೊಂಡ ಆಕೆ ಪಟ್ಟು ನಿಂತು ತನ್ನ ಗಂಡನನ್ನು ಆಕೆಯ ಗಂಡನಿಗಿಂತ ಸಮಾಜದಲ್ಲಿ ಉನ್ನತ ಸ್ಥಾನಕ್ಕೆ ಏರುವಂತೆ ಮಾಡುತ್ತಾಳೆ.

೫೧೪. ಭಾಗ್ಯವಂತರು

(೧೯೭೭ / ವರ್ಣ / ಸಾಮಾಜಿಕ)
ಲಾ: ದ್ವಾರಕೀಶ್ ಚಿತ್ರ
ಪ್ರೊ: ದ್ವಾರಕೀಶ್
ನಿ: ಭಾರ್ಗವ
ಸ.ನಿ: ಕೆ.ಎನ್.ಚಂದ್ರಶೇಖರ ಶರ್ಮ, ಫಣಿರಾಮಚಂದ್ರ
ಅ: ರಾಜಕುಮಾರ್, ಬಿ.ಸರೋಜಾದೇವಿ, ಅಶೋಕ್, ಸುಮಾ, ಮೈನಾವತಿ, ಶಶಿಕಲ, ಎಂ.ಎನ್.ಲಕ್ಷ್ಮೀದೇವಿ, ಬಾಲಕೃಷ್ಣ, ತೂಗುದೀಪ ಶ್ರೀನಿವಾಸ್, ರಾಜಾನಂದ್, ಎಂ.ಎಸ್.ಸತ್ಯ, ದ್ವಾರಕೀಶ್, ಶಿವಪ್ರಕಾಶ್, ಭೀಮರಾವ್, ಹನುಮಂತಾಚಾರ್, ಜಯ, ಪದ್ಮಶ್ರೀ, ಶಾಂತಾ, ರಮೇಶ್, ಹೊನ್ನವಳ್ಳಿ ಕೃಷ್ಣ
ಚಿ.ಕ: ಭಾರ್ಗವ
ಮಾ/ಗೀ: ಚಿ.ಉದಯಶಂಕರ
ಗಾ: ರಾಜಕುಮಾರ್, ಪಿ.ಬಿ.ಶ್ರೀನಿವಾಸ್, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್.ಜಾನಕಿ, ಪಿ.ಸುಶೀಲ
ಸಂ: ಬಾಲ್ ಜಿ.ಯಾದವ್
ಛಾ: ಡಿ.ವಿ.ರಾಜಾರಾಂ
ಕಲೆ: ರಮೇಶ್
ಸ: ರಾಜನ್ ನಾಗೇಂದ್ರ
ಧ್ವ: (ಹಾ) ಎಸ್.ಪಿ.ರಾಮನಾಥನ್, (ಮಾ) ಗೋವಿಂದಸ್ವಾಮಿ
ನೃ: ಉಡುಪಿ ಜಯರಾಂ ಸಹಾಯ: ದೇವಿ
ವ: ರಾಮಾಪುರಂ ಗುರುಸ್ವಾಮಿ, ಎಂ.ನಾಥ್, ಪೂರ್ಣರಾಜು
ಪ್ರ: ಮಾರಿಸ್ವಾಮಿ, ಕೇಶವ, ಮೂಗೂರು ಪಿ.ಗುರು, ಎನ್.ಬಿ.ಶಿವರಾಮ್, ವಿಶ್ವನಾಥ್, ಶ್ರೀನಿವಾಸ್, ಶಾಂತ
ಸ್ಟು: ಚಾಮುಂಡೇಶ್ವರಿ
ಹಾ: ೧) 'ನಿನ್ನ ಸ್ನೇಹಕೆ ನಾ ಸೋತು...', ೨) 'ನನ್ನ ನನ್ನ ಮನಸ್ಸು...', ೩) 'ಭಾಗ್ಯವಂತರು ನಾವ್ ಭಾಗ್ಯವಂತರು...'
ವಿ: ಭಾರ್ಗವ ಸ್ವತಂತ್ರ ನಿರ್ದೇಶಕರಾದರು.
ಸೆ: ೧೪ ರೀಲುಗಳು, ಉದ: ೪೬೨೯.೫೫ ಮೀ 'ಯು' ಸರ್ಟಿಫಿಕೇಟ್

ಕ.ಸಾ: ಪಿಳ್ಳೆಗಳು ಮಾಡಲಿಯಾಗುವಂಥ ದಂಪತಿಗಳು. ತಂದೆಯ ಆಸೆಯಾದ ಬಿಟ್ಟಂದ ಬೇಸತ್ತ ಮಕ್ಕಳಿಲ್ಲ ಅವರವರ ದಾರಿ ಹಿಡಿದು ಹೋಗುತ್ತಾರೆ. ದಂಪತಿಗಳಿಗೆ ಬಾಯಿಲ ಬಂದಾಗ ನಾನಾಗ ಮರಳುತ್ತಾರೆ. ಅವರೆ ಆದರ್ಶ ದಂಪತಿಗಳು ಸಾಯುತ್ತಾರೆ.

೫೧೫. ಕಾಕನಕೋಟೆ

(೧೯೭೭ / ವರ್ಣ / ಐತಿಹಾಸಿಕ)
ಲಾ: ರಾಜ್ ಎನ್ ರಾಜ್ ಕಂಬೈನ್ಸ್
ಪ್ರೊ: ಜಯರಾಜ್, ಸತ್ಯನಾರಾಯಣ
ನಿ: ಸಿ.ಆರ್.ಸಿಂಹ
ಅ: ಲೋಕೇಶ್, ಶ್ರೀನಾಥ್, ಲೋಕನಾಥ್, ಜಯರಾಜ್, ರಾಜಾರಾಂ, ಕೃಷ್ಣರಾಜ್, ಲಾವಣ್ಯ, ಗಿರಿಜಾ, ವೆಂಕಟಾಚಲಂ, ರಾಜಕುಮಾರ್, ವೆಂಕಟರಾವ್, ಶಂಕರರಾವ್
ಕ: ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ ನಾಟಕ
ಚಿ.ಕ: ಗಿರೀಶ್ ಕಾರ್ನಾಡ್
ಮಾ: ಮಾಸ್ತಿ ವೆಂಕಟೇಶ ಅಯ್ಯಂಗಾರ್
ಗೀ: ಮಾಸ್ತಿ ವೆಂಕಟೇಶ ಅಯ್ಯಂಗಾರ್, ಜನಪದ ಸಾಹಿತ್ಯ
ಗಾ: ಸಿ.ಅಶ್ವತ್ಥ್, ಬಿ.ವಿ.ಕಾರಂತ್, ಜಿ.ಕೆ.ವೆಂಕಟೇಶ್, ಸುಲೋಚನಾ, ಕೌಸಲ್ಯ, ಗಾಯತ್ರಿ
ಸಂ: ಬಾಲ್ ಜಿ.ಯಾದವ್
ಛಾ: ಇಷಾನ್ ಆರ್ಯ
ಕಲೆ: ಎಂ.ಎಸ್.ಸತ್ಯು
ಸ: ಸಿ.ಅಶ್ವತ್ಥ್
ಹಾ: ೧) 'ಬೆಟ್ಟದಾ ತುದಿಯಲ್ಲಿ ಕಾಡುಗಳಾದೆಯಲ್ಲಿ...', ೨) 'ಕರಿ ಹೆದಸೆಂಬೋರು ಮಾದೇಶ್ವರ..', ೩) 'ಬಂದು ದಿನ ಕರಿ ಹೆದ ಕಾಡಲ್ಲಿ ಅಲೆದಾನೋ..', ೪) 'ನೇಸರ ನೋಡು ನೇಸರ ನೋಡು..', ೫) 'ಸೋ ಎನ್ನಿರೇ ಸೋಬಾನ ಎನ್ನಿರೆ..'
ವಿ: ೧೯೭೭-೭೮ರ ರಾಜ್ಯ ಪ್ರಶಸ್ತಿ ಮಾಲಿಕೆಯಲ್ಲಿ ತೃತೀಯ ಅತ್ಯುತ್ತಮ ಚಿತ್ರ, ಡಾ|| ಮಾಸ್ತಿ (ಅತ್ಯುತ್ತಮ ಕಥೆ), ಬಾಲ್ ಜಿ.ಯಾದವ್ (ಅತ್ಯುತ್ತಮ ಸಂಕಲನ). ನಾಟಕ ಪ್ರದರ್ಶಿಸುತ್ತಿದ್ದ ಹವ್ಯಾಸಿ ರಂಗ ತಂಡ 'ನಟರಂಗ'ದ ಕಲಾವಿದರಲ್ಲಿ ಭಾಗವಹಿಸಿದರು.
ಸೆ: ಉದ ೩೭೭೭.೨೫ ಮೀ, ೧೭ ರೀಲುಗಳು, 'ಯು' ಸರ್ಟಿಫಿಕೇಟ್
ಕ.ಸಾ: ಗಿರಿಜನರ ಸಮುದಾಯವೊಂದು ಹೆಗ್ಗಡೆಯ ದಬ್ಬಾಳಿಕೆ, ಶೋಷಣೆಯ ವಿರುದ್ಧ ದಂಗೆಯೆತ್ತಿ, ದೊರೆಗೂ ದೂರು ನೀಡುತ್ತದೆ. ನ್ಯಾಯ ದೊರೆಯುತ್ತದೆ. ಗಿರಿಜನರು, ಕಾಡು ನಾಡಿನವರ ರಾಜ್ಯ ವ್ಯವಸೆ, ಆಚರಣೆ, ವಿಧಿವಿಧಾನಗಳ, ಸಂಪ್ರದಾಯಗಳ ಚಿತ್ರಣವಿತ್ತು.

೫೧೬. ಕರಾವಳಿ

(೧೯೭೭ / ವರ್ಣ / ಸಾಮಾಜಿಕ)
ಲಾ: ಕರಾವಳಿ ಮೂವೀಸ್
ಪ್ರೊ: ಬಿ.ದಾಮೋದರ್
ನಿ: ವಿಷ್ಣುಕುಮಾರ್
ಸ.ನಿ: ಎಸ್.ವಿ.ದೊರೆಸ್ವಾಮಿ
ಅ: ರೀಟಾ ಅಂಚನ್, ವಿಷ್ಣುಕುಮಾರ್, ಶ್ರೀಕಲಾ ಹಟ್ಟಂಗಡಿ, ವಿ.ಕೆ.ಗುರುರಾಜ್, ಎಸ್.ಜಿ.ಮೈಸೂರ್ ಮಠ್, ಜಿ.ಗಣಪತಿಭಟ್, ಎಸ್.ಆರ್.ಬಾಲಗೋಪಾಲ್, ಸದಾಶಿವ ಬ್ರಹ್ಮಾವರ್, ಎಸ್.ರಾಮಚಂದ್ರನಾಯ್ಡು, ವಿಶ್ವೇಶ್ವರ ಅವಧೂತ್, ಬಿ.ನಾಗೇಶ್ವರರಾವ್, ಟಿ.ಡಿ.ಕೆ.ಪಂಡಿತ್, ಕೆ.ಜಿ.ನಾಗಭೂಷಣ್, ಡಿ.ರಾಮದಾಸ್ ಮಂಜ, ಎನ್.ಅನ್ನಪೂರ್ಣ, ರತ್ನಮ್ಮ, ಸಾವಿತ್ರಿದೇವಿ, ಮೀನಾಕ್ಷಿ, ಸಂಧ್ಯಾ, ಗ್ರೇಟಾ ಪಿಂಟೋ
ಕ/ಚಿ.ಕ: ವಿಷ್ಣುಕುಮಾರ್
ಮಾ: ಕೆ.ಎಸ್.ನಾರಾಯಣಸ್ವಾಮಿ
ಗೀ: ವಿಷ್ಣುಕುಮಾರ್
ಸಂ: ಪಿ.ಭಕ್ತವತ್ಸಲಂ
ಛಾ: ಸಿಮಾಯನ್ ಫೋಗ್
ಕಲೆ: ಕೆ.ಕೆ.ರಾಮನ್

ಸ: ಹೇಮಂತ್‌ಕುಮಾರ್
ಧ್ವ: ರಾಬಿನ್ ಮುಖರ್ಜಿ (ಮಹಬೂಬ್), ಗೋವಿಂದಸ್ವಾಮಿ (ಚಾಮುಂಡೇಶ್ವರಿ)
ವ: ಎಂ.ಸಿ.ಸುವರ್ಣ
ಪ್ರ: ಟಿ.ಮುತ್ತು, ಪಿ.ಎಸ್.ರಾಮು
ವಿ: ಸೆನ್ಸಾರ್ ಸಮಸ್ಯೆ. ಮುಖ್ಯವಾಗಿ ಕರಾವಳಿ ಪ್ರದೇಶದಲ್ಲಿ ಪ್ರದರ್ಶಿಸಲು ಅವಕಾಶ ಕೊಡಲಿಲ್ಲ.
ಕ.ಸಾ: ಕರಾವಳಿ ಕರ್ನಾಟಕದ ಮೀನುಗಾರರ ಬದುಕಿನ ಚಿತ್ರಣ. ಕೋಮು ಸೌಹಾರ್ದವನ್ನು ಬಿಂಬಿಸುವ ಪ್ರಯತ್ನ. ಪವಿತ್ರವಾದ ಪ್ರೇಮ, ಅದಕ್ಕೊದಗುವ ಅಡ್ಡಿ ಆತಂಕಗಳ ವಿವರಗಳು. ಗ್ರಾಮ ಜೀವನದಲ್ಲಿನ ಬಡತನ, ಸಿರಿತನ, ಬ್ರಷತೆ, ಜಾತೀಯ ಪ್ರತ್ಯೇಕತೆ ಇತ್ಯಾದಿಗಳನ್ನು ಚಿತ್ರಿಸಲಾಗಿದೆ.

೫೧೭. ವೇದಾಂತ

(೧೯೭೭ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ವರಸಿದ್ಧಿ ವಿನಾಯಕ ಮೋಷನ್ ಪಿಕ್ಚರ್ಸ್
ಪ್ರೊ: ವಿ.ದರ್ಮಲಿಂಗಂ
ನಿ: ಕೆ.ಸಿ.ಪಾಂಡುಕ್
ಸ.ನಿ: ವೆಂಕಟೇಶ
ಅ: ವಿ.ಸೀತಾರಾಂ, ಶ್ರೀಲಲಿತ, ರಮೇಶ್‌ಭಟ್, ಕೃಷ್ಣವೇಣಿ, ಅರುಳ್‌ಭಾರತಿ, ನೀಲಕಂಠ ಅಡಿಗ, ಸತೀಶ್, ಆನಂದ್, ಬೇಬಿ ಪ್ರಫುಲ್ಲ
ಕ: ಕೆ.ಸಿ. ಪಾಂಡುಕ್
ಚಿ.ಕ: ವೇಣುಗೋಪಾಲ್
ಮಾ: ಕೆ.ಸಿ.ಪಾಂಡುಕ್
ಗೀ: ಆರ್.ಎನ್.ಜಯಗೋಪಾಲ್
ಗಾ: ಪಿ.ಬಿ.ಶ್ರೀನಿವಾಸ್, ಜಿ.ಕೆ.ವೆಂಕಟೇಶ್
ಸಂ:ಆರ್.ರಾಜಾನಂದರೆಡ್ಡಿ
ಛಾ: ಜಯ
ಕಲೆ: ಶ್ರೀಗಾಂಧಿ
ಸ: ಜಿ.ಕೆ.ವೆಂಕಟೇಶ್
ಧ್ವ: (ಹಾ) ಮೋಹನಸುಂದರಂ, (ಮಾ) ಗೋವಿಂದಸ್ವಾಮಿ
ವ: ಪ್ರಭಾತ್ ಸ್ಟೋರ್ಸ್
ಪ್ರ: ಆರ್ಮುಗಂ
ಸ್ಟು: ಚಾಮುಂಡೇಶ್ವರಿ, ವಾಹಿನಿ
ಸೆ: ಉದ - ೩೧೮೭.೯೨ ಮೀಟರ್, ರೀಲು - ೧೪, 'ಯು' ಸರ್ಟಿಫಿಕೇಟ್
ಕ.ಸಾ: ಶ್ರೋತ್ರೀಯರಾದ ಶಾಸ್ತ್ರಿಗಳ ಹೆಂಡತಿ ಮನೆಗೆ ಬಂದ ಸ್ನೇಹಿತನೊಬ್ಬನ ಆಕರ್ಷಣೆಗೆ ಒಳಗಾಗಿ ಅವನ ಹಿಂದೆ ಓಡಿ ಹೋಗುವಳು. ಇದರಿಂದ ಅವಮಾನಗೊಂಡ ಶಾಸ್ತ್ರಿಗಳು ಮಗನ ಸಾವಿನಿಂದ ನೊಂದು ಊರು ಬಿಡಲು ತಯಾರಾಗಿ ನಿಂತಾಗ ಹೆಂಡತಿ ವಾಪಸ್ಸು ಬರುತ್ತಾಳೆ. ಶಾಸ್ತ್ರಿಗಳು ವೇದಗ್ರಂಥವನ್ನು ಅವಳೆಡೆಗೆ ಎಸೆದು ದೇಶಾಂತರ ಹೊರಡುತ್ತಾರೆ.

೫೧೮. ಋಷ್ಯಶೃಂಗ

(೧೯೭೭ / ವರ್ಣ / ಜಾನಪದ)
ಲಾ: ಯಂಗ್ ಸಿನಿಮಾ
ಪ್ರೊ/ನಿ: ವಿ.ಆರ್.ಕೆ.ಪ್ರಸಾದ್
ಅ: ಸ.ರತ್ನ, ಸುರೇಶ್, ಎನ್.ಎಸ್.ವೆಂಕಟರಾಂ, ಸುಮತೀಂದ್ರ ನಾಡಿಗ್, ಸಿಂಧುವಳ್ಳಿ ಅನಂತಮೂರ್ತಿ, ಸುಂದರಶ್ರೀ, ಕವಿತ, ಸ್ವರ್ಣಮ್ಮ, ಶಾಂತ, ಶಿವಾನಂದ್, ಎ.ಎಸ್.ಮೂರ್ತಿ, ಬಿ.ಎಸ್.ಆಚಾರ್, ಜಿ.ವಿ.ಅಯ್ಯರ್, ವರಲಕ್ಷ್ಮಿ
ಕ: ಡಾ|ಚಂದ್ರಶೇಖರ ಕಂಬಾರರ ನಾಟಕ ಆಧಾರಿತ
ಚಿ.ಕ: ವಿ.ಆರ್.ಕೆ.ಪ್ರಸಾದ್
ಮಾ/ಗೀ: ಜಿ.ವಿ.ಅಯ್ಯರ್
ಗಾ: ರತ್ನಮಾಲ, ಉಮಾ, ಜಯಶ್ರೀ, ಸುರೇಶ್, ಬಿ.ವಿ.ಕಾರಂತ್
ಸಂ: ವಿ.ಆರ್.ಕೆ.ಪ್ರಸಾದ್
ಛಾ: ಎಸ್.ರಾಮಚಂದ್ರ

ಕಲೆ: ಪಿ.ಕೃಷ್ಣಮೂರ್ತಿ
ಸ: ಬಿ.ವಿ.ಕಾರಂತ್
ಧ್ವ: ಕೆ.ಎಸ್.ಕೃಷ್ಣಮೂರ್ತಿ, ಗೋವಿಂದಸ್ವಾಮಿ, ಮೋಹನಸುಂದರಂ
ಹಾ: ೧) 'ಹುಯ್ಯೋ ಹುಯ್ಯೋ ಮಳೆರಾಯ..', ೨) 'ಆಪಾ ಸೂತ್ರಧಾರ ಕೇಳೋ ಕನಸು ಕಂಡೆನೆ...', ೩) 'ಏ ಕುರುಬರಣ್ಣಾ ಸತ್ತುಳ್ಳ ಶರಣಾ...', ೪) 'ನಾ ಕುಣಿಬೇಕ ಮ್ಯಾ ಮಣಿಬೇಕ..'
ವಿ: ಸಾಹಿತಿಗಳ ಭಾಗವಹಿಸುವಿಕೆ. ವಿ.ಆರ್.ಕೆ.ಪ್ರಸಾದ್ ಸ್ವತಂತ್ರ ನಿರ್ದೇಶಕರಾದರು.
ಕ.ಸಾ: ಮನುಷ್ಯ ಸದಾ ಯಾವುದೋ ಪ್ರತೀಕ್ಷೆಯಲ್ಲಿರುತ್ತಾನೆ. ಹೊಸ ಬದುಕಿಗೆ, ಸುಖಕ್ಕೆ, ಮಳೆ ಬಿಸಿಲಿಗೆ ಕಡೆಗೆ ಹುಟ್ಟು ಸಾವಿಗೂ ಅವನ ಪ್ರತೀಕ್ಷೆ ಇದ್ದೇ ಇರುತ್ತದೆ. ಇದಕ್ಕಾಗಿ ನಂಬಿಕೆ, ಆಚರಣೆ, ಸಾಹಸ ಎಲ್ಲ ಅವನಲ್ಲಿ ಸಂಚರಿಸುತ್ತದೆ. ಜಾನಪದೀಯ ಅಂಶಗಳ ಬಳಸಿ ಭೂತ-ವರ್ತಮಾನಗಳ ಮೂಲಕ ಭವಿಷ್ಯವನ್ನು ಕಟ್ಟುವ ಅಸಂಗತ ಪ್ರಯತ್ನ.

೫೧೯. ಸೊಸೆ ತಂದ ಸೌಭಾಗ್ಯ

(೧೯೭೭ / ವರ್ಣ / ಸಿನಿಮಾಸ್ಕೋಪ್ / ಸಾಮಾಜಿಕ)
ಲಾ: ಭುವನೇಶ್ವರಿ ಆರ್ಟ್ಸ್ ಪ್ರೊಡಕ್ಷನ್ಸ್
ಪ್ರೊ: ಎಸ್.ಡಿ.ಅಂಕಲಗಿ, ಎಂ.ಜಿ.ಹುಬ್ಳೀಕರ್, ಬಿ.ಹೆಚ್.ಚಂದಣ್ಣವರ, ಸುರೇಂದ್ರ ಇಂಗಳೆ
ನಿ: ಎ.ವಿ.ಶೇಷಗಿರಿರಾವ್
ಸ.ನಿ: ಟಿ.ವಿ.ಪಂಚಾಕ್ಷರಿ
ಅ: ರಾಜೇಶ್, ವಿಷ್ಣುವರ್ಧನ್, ಮಂಜುಳ, ವಿಜಯಲಲಿತ, ಬಾಲಕೃಷ್ಣ, ಉಮಾ ಶಿವಕುಮಾರ್, ಅಶ್ವತ್ಥ್, ಜಯಶ್ರೀ, ವಜ್ರಮುನಿ, ಚಂದ್ರಶೇಖರ್, ಜ್ಯೋತಿಶ್ರೀ, ದ್ವಾರಕೀಶ್, ವನಜಶ್ರೀ, ಕಲಾವತಿ, ರಾಮಚಂದ್ರ ನಾಯ್ಡು, ರೇಖಾ, ದಿನೇಶ್, ಸಂಪಂಗಿ, ಗೊ.ರಾ.ಭೀಮರಾವ್, ಹೆಚ್.ಟಿ.ಅರಸ್
ಕ: ಪಿ.ಬಿ.ಧುತ್ತರಗಿ
ಚಿ.ಕ: ಎ.ವಿ.ಶೇಷಗಿರಿರಾವ್
ಮಾ: ಚಿ.ಉದಯಶಂಕರ್
ಗೀ: ಚಿ.ಉದಯಶಂಕರ್, ವಿಜಯನಾರಸಿಂಹ, ಆರ್.ಎನ್.ಜಯಗೋಪಾಲ್
ಗಾ: ಎಸ್.ಜಾನಕಿ, ಪಿ.ಬಿ.ಶ್ರೀನಿವಾಸ್, ಬಾಲಸುಬ್ರಹ್ಮಣ್ಯಂ
ಸಂ: ಎಸ್.ಪಿ.ಎನ್.ಕೃಷ್ಣ
ಛಾ: ಅಣ್ಣಯ್ಯ, ಮಲ್ಲಿಕ್
ಕಲೆ: ಬಿ.ಎಸ್.ಕೇಶವರಾವ್
ಸ: ಜಿ.ಕೆ.ವೆಂಕಟೇಶ್, ಸಹಾಯ ಇಳಯರಾಜ, ವೈದ್ಯನಾಥನ್
ಧ್ವ: ಸೀತಾರಾಮ್, ಗೋವಿಂದಸ್ವಾಮಿ, ಮೋಹನಸುಂದರಂ, ಕೋಟೇಶ್ವರರಾವ್
ಸ್ಥ: ಉಡುಪಿ ಜಯರಾಂ, ಸಹಾಯ ದೇವಿ
ನೃ: ವ್ಯ.ಶಿವಯ್ಯ
ವ: ಸಿ.ಕೆ.ಕಣ್ಣನ್, ನಾಗರಾಜ
ಪ್ರ: ಮನ್ಮಥರಾವ್, ಜಿ.ಎಸ್.ವಾಸು, ವೀರಾಸ್ವಾಮಿ, ನಾಗೇಶ್ವರರಾವ್, ನಾರಾಯಣರಾವ್, ಶ್ರೀನಿವಾಸುಲು, ಮಲ್ಲಿ, ಕೇಶಾಲಂಕಾರ ರಾಜು, ಬಲರಾಂ, ರುಕ್ಮಮ್ಮ
ಸ್ಟು: ಚಾಮುಂಡೇಶ್ವರಿ, ಪ್ರೀಮಿಯರ್
ಹಾ: ೧) 'ನಾಕು ವಿಷ್ಣುವನೇ ನಾಯಕಾರನು...', ೨) 'ಅತ್ತಿಗೆ ತಂಗಿ ನಿನ್ನ ಆಟ ನಡೆಯೋದಿಲ್ಲ..', ೩) 'ರವಿವರ್ಮನ ಕುಂಚದ ಕಲೆ ಬಲೆ ಸಾಕಾರವೊ...', ೪) 'ಓ ಹೆಣ್ಣೇ ನಿಲ್ಲು ನಿಲ್ಲು ನಿಳು ಸುತ್ತಿನ ದುಂಡು ಮಲ್ಲಿಗೆ..', ೫) 'ಏಕೆ ಅವಸರವು ಹೇಳು...', ೬) 'ದೇಸ ದೇಸದೊಳಗ ನಮ್ಮ ದೇಸ ಚೆಂದ...'
ವಿ: ಕನ್ನಡದ ಪ್ರಥಮ ಸಿನಿಮಾಸ್ಕೋಪ್, ಡಿ.ವಿ.ಸುಧೀಂದ್ರ ಅವರು ಪಿ.ಆರ್.ಒ. ಆದ ಪ್ರಥಮ ಚಿತ್ರ.
ಕ.ಸಾ: ಒಂದೇ ತಾಯಿಯ ಎರಡು ಹೆಣ್ಣು ಮಕ್ಕಳು ಒಂದು ಮನೆಯನ್ನು ಯಾವ ರೀತಿ ಬೆಳಗುತ್ತಾರೆ ಎಂಬುದರ ಚಿತ್ರಣ. ಅಕ್ಕ ಅಹಂಕಾರಿ, ಮುಂದು ಹಿಟ್ಟಿದವಳಾದರೆ, ತಂಗಿ ನಿರಹಂಕಾರಿ, ಮಿತವ್ಯಯಿ. ತಂಗಿ ಹುಟ್ಟಿದ ಮನೆ ಮೆಟ್ಟಿದ ಮನೆಗಳ ಸೌಭಾಗ್ಯಕ್ಕೆ ಕಾರಣಳಾಗುವಳು.

೫೨೦. ನಾಗರಹೊಳೆ

(೧೯೭೭ / ವರ್ಣ / ಸಾಮಾಜಿಕ)
ಲಾ: ವರುಣ ಪಿಕ್ಚರ್
ಪ್ರೊ: ಸಿ.ಹೆಚ್.ಬಾಲಾಜಿಸಿಂಗ್, ಎಸ್.ಎನ್.ಪಾರ್ಥನಾಥ್, ಆರ್.ಎಫ್.ಮಾಣಿಕ್ ಚಂದ್
ನಿ: ಎಸ್.ವಿ.ರಾಜೇಂದ್ರಸಿಂಗ್ ಬಾಬು
ಸ.ನಿ: ಕಲ್ಪೇಶ್
ಅ: ವಿಷ್ಣುವರ್ಧನ್, ಭಾರತಿ, ಶಿವರಾಂ, ಉಮಾ ಶಿವಕುಮಾರ್, ಶಕ್ತಿಪ್ರಸಾದ್, ಬಿ.ಎ.ರಾಧ, ದಿನೇಶ್, ಲಕ್ಷ್ಮೀದೇವಿ, ಸುಂದರ ಕೃಷ್ಣ ಅರಸ್, ಸುರೇಖ, ಉಮೇಶ್, ಕಾಂಚನ, ಹೆಚ್.ವಿ.ಸುಬ್ಬರಾವ್, ಅಶ್ವತ್ಥನಾರಾಯಣ, ಚೇತನ್ ರಾಮರಾವ್, ಜಿ.ಶೆಟ್ಟಿ, ಮಾ।ಪ್ರಸಾದ್, ಮಾ।ಭಾನುಪ್ರಕಾಶ್, ಮಾ।ಸತೀಶ್, ಬೇಬಿ ಇಂದಿರಾ, ಅಂಬರೀಷ್
ಕ/ಮಾ: ಹೆಚ್.ವಿ.ಸುಬ್ಬರಾವ್
ಚಿ.ಕ: ಎಸ್.ವಿ.ರಾಜೇಂದ್ರಸಿಂಗ್ ಬಾಬು
ಗೀ: ಚಿ.ಉದಯಶಂಕರ್, ಆರ್.ಎನ್.ಜಯಗೋಪಾಲ್, ವಿಜಯನಾರಸಿಂಹ
ಗಾ: ಪಿ.ಬಿ.ಶ್ರೀನಿವಾಸ್, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್.ಜಾನಕಿ, ಬೆಂಗಳೂರು ಲತಾ, ರವೀ, ವಿಷ್ಣು ಭಾರತಿ
ಸಂ: ಬಾಲ್ ಜಿ.ಯಾದವ್
ಛಾ: ಪಿ.ಎಸ್.ಪ್ರಕಾಶ್
ಕಲೆ: ಮಧುಕೃಷ್ಣ
ಸ: ಸತ್ಯಂ
ಧ್ವ: ಸೀತಾರಾಂ, ಗೋವಿಂದಸ್ವಾಮಿ, ವಿಶ್ವನಾಥ್, ಕೋಟೇಶ್ವರರಾವ್, ಎಸ್.ಪಿ.ರಾಮನಾಥನ್
ಸ್ಥ: ಉಡುಪಿ ಜಯರಾಂ
ಸಾ: ಶ್ಯಾಂ ಸುಂದರ್
ವ: ನಾಗರಾಜು, ಕೃಷ್ಣ, ವಾಸು, ಸೆಲ್ವಂ
ಪ್ರ: ಜಿ.ಎಸ್.ವಾಸು, ಎಂ.ಕೆ.ಶ್ರೀನಿವಾಸ್, ವೆಂಕಟೇಶ್, ಬಾಲರಾಮ್, ಕಾಂತಾರಾವ್
ಸ್ಟು: ಪ್ರೀಮಿಯರ್
ಹಾ: ೧) 'ಹೇ ಬಿಲ್ಲು ಹೇ ಹೇ ಬಿಲ್ಲು...', ೨) 'ಈ ನೋಟಕೆ ಮೈ ಮಾಟಕೆ ನಾಸೋತ ಈ ಸ್ನೇಹಕೆ...', ೩) 'ಇಲ್ಲಿ ಸ್ವರ್ಗ ಇಲ್ಲೇ ನರಕ ಮೇಲೇನಿಲ್ಲ ಸುಳ್ಳು ...', ೪) 'ಜೈಗರಿಜಿ ಅಪ್ಪೇ ನಕ್ಕಳಾ...'
ವಿ: 'ಈ ನೋಟಕೆ ಮೈ ಮಾಟಕೆ..' ಹಾಡನ್ನು ಸ್ವತಃ ವಿಷ್ಣು-ಭಾರತಿ ಹಾಡಿದರು. ಸುಂದರಕೃಷ್ಣ ಅರಸ್ ಖಳನಾಯಕನಾಗಿ ಅಭಿನಯಿಸಿದರು.
ಕ.ಸಾ: ಮಕ್ಕಳು ಕಾಡನ್ನು ಹೊಕ್ಕು ಸಾಹಸ ಎಸಗುವ ಸನ್ನಿವೇಶಗಳು. ಸಮಾನಾಂತರವಾಗಿ ದೊಡ್ಡವರ ಕತೆಯೂ ಸಾಗುತ್ತದೆ. ಸಾಹಸ, ಕೌತುಕ, ಕಾಡಿನ ವಿಸ್ಮಯಗಳ ನಡುವ ಬೆಳೆಯುವ ಸನ್ನಿವೇಶಗಳಿವೆ.

೫೨೧. ಗೆದ್ದವಳು ನಾನೇ

(೧೯೭೭ / ವರ್ಣ / ಸಾಮಾಜಿಕ)
ಲಾ: ಶ್ರೀರಾಘವೇಂದ್ರ ಕ್ರಿಯೇಷನ್ಸ್
ಪ್ರೊ: ಎಂ.ಆರ್.ಕೃಷ್ಣಪ್ಪ
ನಿ: ಆರೂರು ಕೆ.ಪಟ್ಟಾಭಿ
ಸ.ನಿ: ಚಂದ್ರಶೇಖರ್ ಕುಕ್ಕಿಕಟ್ಟೆ
ಅ: ಅಶೋಕ್, ಶಿವರಾಂ, ನಾರಾಯಣರಾವ್, ರಾಮಣ್ಣರ, ಶ್ರೀವಿದ್ಯಾ, ಮನೋರಮಾ, ಜಯಲಕ್ಷ್ಮೀ, ಉಮಾ ಶಿವಕುಮಾರ್
ಕ: ಬಿ.ಎ.ಕುಮಾರ್
ಚಿ.ಕ: ಶ್ರೀರಾಘವೇಂದ್ರ ಕ್ರಿಯೇಷನ್ಸ್ ಕಥಾ ವಿಭಾಗ
ಮಾ/ಗೀ: ಆರ್.ಎನ್.ಜಯಗೋಪಾಲ್
ಗಾ: ಪಿ.ಬಿ.ಶ್ರೀನಿವಾಸ್, ಜೇಸುದಾಸ್, ಪಿ.ಸುಶೀಲ, ಎಸ್.ಜಾನಕಿ, ಆರ್.ಮನೋರಮಾ
ಸಂ: ಟಿ.ವಿ.ವೇಲಾಯುಧನ್
ಛಾ: ಡಿ.ವಿ.ರಾಜಾರಾಮ್
ಕಲೆ: ಎ.ನಜೀರ್
ಸ: ಎಂ.ರಂಗರಾವ್
ಧ್ವ: (ಹಾ)ವಿಶ್ವನಾಥನ್, ಮೋಹನಸುಂದರಂ, (ಮಾ)ಆರ್ಮುಗಂ

ಸ್ಥ: ಧರ್ಮರಾಜ್
ವ: ಕೃಷ್ಣಸ್ವಾಮಿ
ಪ್ರ: ವೆಂಕಟೇಶ್, ಚೊಕ್ಕಮ್ಮ
ಸ್ಟು: ಪ್ರೀಮಿಯರ್
ಹಾ: ೧) 'ಗೆದ್ದವಳು ನಾನೇ ಬಾಳಿನಾ ಪಂದ್ಯದೇ...', ೨) 'ಪಿಳಿ ಪಿಳಿ ಕಣ್ಣಿನ ಬೊಂಬೆ..', ೩) 'ನಾನೂ ಕಾರಣಳಲ್ಲ ಇದಕ್ಕೆ...', ೪) 'ಸಾಕಪ್ಪ ಸಾಕು ಇನ್ನ್ಯಾಕಪ್ಪ ಬೇಕು..', ೫) 'ಹೆಂಡತಿಯಂತೆ, ಸಂಸಾರವಂತೆ...'
ಸೆ: ಉದ್ದ ೪೨೦೩.೮೦, ರೀಲು ೧೫, 'ಯು' ಸರ್ಟಿಫಿಕೇಟ್
ಕ.ಸಾ: ಸ್ವಾಭಿಮಾನಿ ಹೆಣ್ಣು, ಬಡವರ ಮಗಳು. ತನ್ನ ಆಫೀಸರ್‌ನನ್ನು ಪ್ರೀತಿಸಿ ಮದುವೆ ಆಗುತ್ತಾಳೆ. ಮಕ್ಕಳೆಂದರೆ ಇಷ್ಟ. ಆದರೆ ಮಗು ಹುಟ್ಟುವ ಮೊದಲೇ ಸತ್ತು, ಮತ್ತೇ ಮಕ್ಕಳಾಗುವುದಿಲ್ಲ ಎಂದು ತಿಳಿಸಿದಾಗ, ಮತ್ತೊಂದು ಮದುವೆ ಮಾಡುತ್ತಾಳೆ. ನಂತರ ಅದರಿಂದಲೂ ಪ್ರಯೋಜನವಿಲ್ಲ ಎಂದಾಗ ತಾನೇ ತಾಯಿಯಾಗುವ ನಿರ್ಧಾರ ಮಾಡಿ, ವಂಶ ಬೆಳೆಸಿ, ತಾನು ಸಾಯುತ್ತಾಳೆ.

೫೨೨. ಮಾಗಿಯ ಕನಸು

(೧೯೭೭ / ವರ್ಣ / ಸಾಮಾಜಿಕ)
ಲಾ: ಶ್ರೀನಿಧಿ ಪ್ರೊಡಕ್ಷನ್ಸ್
ಪ್ರೊ: ಗೋಪಾಲ್-ಲಕ್ಷ್ಮಣ್
ನಿ: ಕೆ.ಎಸ್.ಎಲ್.ಸ್ವಾಮಿ (ರವೀ)
ಸ.ನಿ: ಮಣಿಮುರುಗನ್, ಬಿ.ಎಲ್.ನಾಗರಾಜ್
ಅ: ಶ್ರೀನಾಥ್, ಆರತಿ, ಚಂದ್ರಶೇಖರ್, ಶುಭಾ, ಶಿವರಾಂ, ಅನುರಾಧ, ಅಂಬರೀಷ್, ತೆರೆಸಾ ಡಿಸೋಜಾ, ಸ್ವರ್ಣಮ್ಮ, ಚಂದ್ರ, ಅಶ್ವತ್ಥನಾರಾಯಣ
ಕ: ಶ್ರೀಮತಿ ಕೆ.ಸರೋಜಾರಾವ್ ಅವರ ಕಾದಂಬರಿ
ಚಿ.ಕ: ಹೆಚ್.ವಿ.ಸುಬ್ಬರಾವ್, ಕೆ.ಎಸ್.ಎಲ್.ಸ್ವಾಮಿ
ಮಾ: ಹೆಚ್.ವಿ.ಸುಬ್ಬರಾವ್
ಗೀ: ಕೆ.ಎಸ್.ಎಲ್.ಸ್ವಾಮಿ, ಚಂದ್ರಶೇಖರ ಕಂಬಾರ, ಎಂ.ಎನ್.ವ್ಯಾಸರಾವ್, ದೊಡ್ಡರಂಗೇಗೌಡ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಕಸ್ತೂರಿಶಂಕರ್, ಪಿ.ಬಿ.ಶ್ರೀನಿವಾಸ್, ವಾಣಿಜಯರಾಂ
ಸಂ: ಬಾಲ್ ಜಿ.ಯಾದವ್

ಛಾ: ಬಿ.ಪುರುಷೋತ್ತಮ್
ಕಲೆ: ರಮೇಶ್
ಸ: ವಿಜಯಭಾಸ್ಕರ್
ಧ್ವ: ಎಸ್.ಪಿ.ರಾಮನಾಥನ್, ಮೋಹನ ಸುಂದರಂ, ಗೋವಿಂದಸ್ವಾಮಿ
ಸ್ಥ: ಉಡುಪಿ ಜಯರಾಂ ದೇವಿ
ವ: ತಂಗವನ್ - ದೂರ
ಪ್ರ: ಮನ್ಮಥರಾವ್, ವೆಂಕಟಸ್ವಾಮಿ, ರಾಜಗೋಪಾಲ್
ಹಾ: ೧) 'ಎಲ್ಲೆಲ್ಲೂ ಹೊಸ ಚೆಲ್ಲಿರುವ ಜಾಣೆ...', ೨) 'ಯಾಕೋ ಪ್ರೀತಿ ಸರಿಯೋ ದೂರ...', ೩) 'ನೀನೇ ನನ್ನ ಕಾವ್ಯ ಕನ್ನಿಕೆ...', ೪) 'ಬಂದಿದೆ ಬದುಕಿಗೆ ಬಂಗಾರದಾ ದಿನ...', ೫) 'ಕಾಡಿನ ಹೂ ತನ್ನ ಪಾಡಿಗೆ ಅರಳಿತ...'
ಸೆ: ಉದ್ದ ೪೮೪೪ ಮೀಟರು, ೧೫ ರೀಲುಗಳು, 'ಯು' ಸರ್ಟಿಫಿಕೇಟ್
ಕ.ಸಾ: ಗ್ರಾಮ ಅಪರಾಚಿತ ಗಿರಿಜನರ ಬದುಕು. ಕವಿತ ಬರೆಯಲು ಸ್ಫೂರ್ತಿಗಂದು ಬಂದ ಹುಡುಗ ಗಿರಿಜನರ

ಹುಡುಗಿಯನ್ನು ಪ್ರೀತಿಸುತ್ತಾನೆ. ಅವನನ್ನೇ ಪ್ರೀತಿಸುತ್ತಿದ್ದ ಅತ್ತೆ ಮಗಳು ನೊಂದುಕೊಳ್ಳುತ್ತಾಳೆ. ಕಡೆಗೆ ಅತ್ತೆಯ ಮಗಳೇ ತ್ಯಾಗ ಮಾಡುತ್ತಾಳೆ. ಒಲಿದ ಹೃದಯಗಳು ಒಂದಾಗುತ್ತವೆ.

೫೨೩. ಲಕ್ಷ್ಮೀನಿವಾಸ

(೧೯೭೭ / ವರ್ಣ / ಸಾಮಾಜಿಕ)
ಲಾ: ಜಯಲಕ್ಷ್ಮೀ ಆರ್ಟ್ಸ್ ಎಂಟರ್‌ಪ್ರೈಸಸ್
ಪ್ರೊ: ಬಿ.ಹೆಚ್.ಜಯಣ್ಣ, ಬಿ.ಜಿ.ಎಲ್.ಪ್ರಕಾಶ್
ನಿ: ಕೆ.ಎಸ್.ಆರ್.ದಾಸ್
ಸ.ನಿ: ಜೋಸೈಮನ್, ವಿಜಯಕುಮಾರ್

ಅ: ರಾಮಗೋಪಾಲ್, ಪದ್ಮಪ್ರಿಯಾ (ದ್ವಿಪಾತ್ರ), ಬಾಳಕೃಷ್ಣ, ವಿಜಯಾ, ನರಸಿಂಹರಾಜು, ಕಲಾವತಿ, ತೂಗುದೀಪ ಶ್ರೀನಿವಾಸ್, ರಾಜಾನಂದ್, ಚೇತನ್ ರಾಮರಾವ್, ಬಿಂದೋಡಿ ಬಸವರಾಜು, ಜೂ। ರಟ್ಟಿ, ಮಣ್ಣೇರಿ, ಮನೋಹರ್, ಮಾನು, ಹಲಂ
ಚಿ.ಕ: ಎಂ.ಡಿ.ಸುಂದರ್
ಮಾ: ಚಿ.ಉದಯಶಂಕರ್
ಗೀ: ಚಿ.ಉದಯಶಂಕರ್, ಹುಣಸೂರು ಕೃಷ್ಣಮೂರ್ತಿ
ಸಂ: ಪಿ.ಯು.ಎಸ್.ಮಣಿಯಂ, ಕೆ.ಎಸ್.ಆರ್.ದಾಸ್
ಛಾ: ಲಾಲ್
ಸಂ: ಟಿ.ಜಿ.ಲಿಂಗಪ್ಪ
ನೃ: ವಿಜಯಕೃಷ್ಣ
ಸಾ: ಜ್ಯೂಡೋ ರತ್ನಂ
ಪ್ರ: ಸುಂದರ್, ಮಣಿ
ಸ್ಟು: ಪ್ರೀಮಿಯರ್, ಚಾಮುಂಡೇಶ್ವರಿ
ವಿ: ಪದ್ಮಪ್ರಿಯಾ ದ್ವಿಪಾತ್ರದಲ್ಲಿ ಅಭಿನಯಿಸಿದಾರ.
ಕ.ಸಾ: ಆಸ್ತಿಗಾಗಿ ತಂದೆಯನ್ನು ಕೊಂದ ದುಷ್ಟರ ವಿರುದ್ಧ ಅವಳಿ ಹೆಣ್ಣುಮಕ್ಕಳೇ ಬೆಳೆದು ದೊಡ್ಡವರಾಗಿ ಸೇಡು ತೀರಿಸಿಕೊಳ್ಳುವ ಕಥೆ.

೫೨೪. ಋತುಗಾನ

(೧೯೭೭ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಮಾರುತಿ ಫಿಲ್ಮ್ ಪ್ರೊಡಕ್ಷನ್ಸ್
ಪ್ರೊ: ಎ.ರಾಮನಾಥ್, ಎಸ್.ಶಿವಶಂಕರ್, ಕೆ.ಜಿ.ವೆಂಕಟೇಶ್, ಬಿ.ಆರ್.ಶಿವರಾಂ, ಸಿ.ಆರ್.ರಮೇಶ್ ಬಾಬು
ನಿ: ವಿಜಯಕುಮಾರ್
ಸ.ನಿ: ಆರ್.ಕೃಷ್ಣಮೂರ್ತಿ, ಸುರೇಶ್
ಅ: ದಿನೇಶ್, ಗಂಗಾಧರ್, ಸಾಯಿಕುಮಾರ್, ಸೋಮಶೇಖರ್, ಶ್ರೀರಾಮ್, ಮಾ।ಧನಂಜಯ, ಮಾಲ, ಬೇಬಿ ರಜನಿ, ಜ್ಯೋತಿಶ್ರೀ, ರಾ.ಶ್ರೀ.ನಾಯ್ಡು,



ಹೆಚ್.ಆರ್.ಕೃಷ್ಣ, ಶೋಭ, ವಿಜಯ, ಲಲಿತಾ ರಾಮಚಂದ್ರನ್, ಸರ್ವಮಂಗಳಮ್ಮ
ಕ/ಚಿ.ಕ: ಸುಂದರಕೃಷ್ಣ ಅರಸ್
ಮಾ/ಗೀ: ಜಯದೇವಕುಮಾರ್
ಗಾ: ಡಾ।ಬಾಲಮುರಳಿ ಕೃಷ್ಣ, ಎಸ್.ಜಾನಕಿ, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಕಸ್ತೂರಿಶಂಕರ್, ಎಲ್.ಆರ್.ಅಂಜಲಿ
ಸಂ: ಎಸ್.ಸಿ.ರಾಜನ್
ಛಾ: ಟಿ.ಜಿ.ಶೇಖರ್
ಕಲೆ: ಸಿ.ಡಿ.ಮುತ್ತುಕೃಷ್ಣ
ಸ: ಗುಣಸಿಂಗ್
ಧ್ವ: (ಹಾ) ಮೋಹನಸುಂದರಂ, ಎಸ್.ಪಿ.ರಾಮನಾಥನ್, (ಮಾ) ಗೋವಿಂದಸ್ವಾಮಿ
ನೃ: ಬಿ.ಆರ್.ಸುಂದರಕುಮಾರ್, ರಾಧಾಕೃಷ್ಣ
ವ: ಸುರೇಶ್, ಎನ್.ಎಸ್.ರಾವ್
ಪ್ರ: ಧನಪಾಲ್, ಪಿ.ಎಸ್.ರಾಮು
ಸ್ಟು: ಚಾಮುಂಡೇಶ್ವರಿ
ಹಾ: ೧) 'ದಾನಕಿಂತ ದೊಡ್ಡದಿಲ್ಲ...', ೨) 'ಋತುಗಾನಾ ನವ ಋತುಮಾನಾ...', ೩) 'ಅಭಿನಯ ರಸರಾಗ ರಂಜನೇ...', ೪) 'ಈ ಹೆಣ್ಣಿಗೆ ಒಲಿದಾ ಗೆಜ್ಜೆಯ ನಾದ..'
ವಿ: ದಿನೇಶ್ ಅವರ ನೂರನೇ ಚಿತ್ರ; ನಾಲ್ಕನೆಯ ಅತ್ಯುತ್ತಮ ಚಿತ್ರವಾಗಿ ೧೯೭೬-೭೭ರ ರಾಜ್ಯ ಸರ್ಕಾರದ ಪ್ರಶಸ್ತಿ
ಸೆ: ೧೪ ರೀಲುಗಳು
ಕ.ಸಾ: ನರ್ತಕಿ ಮತ್ತು ಕೊಳಲು ಪರಿಣತ, ಈ ಇಬ್ಬರ ಅನಂತ ಪ್ರೇಮದ ಕತೆ. ಇವರಿಬ್ಬರ ನಿಸ್ವಾರ್ಥ ಪ್ರೇಮಕ್ಕೆ ದಯಾಮಯನಾದ ಗುರುವೊಬ್ಬರಿಂದ ಮಾರ್ಗದರ್ಶನ. ಮೋಸ, ಸ್ವಾರ್ಥ, ವಂಚನೆಗಳ ಸುಳಿಯಿಂದ ತಪ್ಪಿಸಿಕೊಂಡು ಪ್ರೇಮಿಗಳು ಒಂದಾಗುತ್ತಾರೆ.

೫೨೫. ಪಾವನಗಂಗಾ

(೧೯೭೭ / ವರ್ಣ / ಸಾಮಾಜಿಕ)
ಲಾ: ವಿಜಯ ವಿನಾಯಕ ಎಂಟರ್‌ಪ್ರೈಸಸ್
ಪ್ರೊ: ಸಿ.ಜಯರಾಂ
ನಿ: ವೈ.ಆರ್.ಸ್ವಾಮಿ
ಸ.ನಿ: ಎ.ಟಿ.ರಘು
ಅ: ಶ್ರೀನಾಥ್, ಆರತಿ, ಬಿ.ವಿ.ರಾಧಾ, ಅಶೋಕ್, ಅನುರಾಧಾ, ಬಾಲಕೃಷ್ಣ, ದ್ವಾರಕೀಶ್, ಸಂಪತ್, ಮುಸುರಿ ಕೃಷ್ಣಮೂರ್ತಿ, ರಾಮಚಂದ್ರ ಶಾಸ್ತ್ರಿ, ಬಿ.ಎಸ್.ನಾರಾಯಣರಾವ್, ಎನ್.ಎಸ್.ರಾವ್, ಶರಪಂಜರ ಐಯ್ಯಂಗಾರ್, ಮಲ್ಲೇಶ್, ಎಲ್ಲಪ್ಪ, ಜೋಕರ್ ಶ್ಯಾಂ, ತಿಪಟೂರು ಸಿದ್ದರಾಮಯ್ಯ, ರಂಗೇಗೌಡ, ಎ.ಪದ್ಮನಾಭರಾವ್, ಬಿ.ಹೆಚ್.ಮನೋಹರ್, ಕುಣಿಗಲ್ ರಾಮನಾಥ್, ಕನ್ನಡ ರಾಜು, ಗೋವಿಂದು, ಮಾ।ಮಂಜು, ಸಂಜೂ, ಎಂ.ಎನ್.ಲಕ್ಷ್ಮೀದೇವಿ, ಬಿ.ಜಯಾ, ಬೇಬಿ ರಶ್ಮಿ
ಕ: ಕೃಷ್ಣಮೂರ್ತಿ ಪುರಾಣಿಕ
ಚಿ.ಕ: ವೈ.ಆರ್.ಸ್ವಾಮಿ
ಮಾ: ಹುಣಸೂರು ಕೃಷ್ಣಮೂರ್ತಿ

ಗೀ: ಚಿ.ಉದಯಶಂಕರ್
ಗಾ: ಎಸ್.ಜಾನಕಿ, ಎಸ್.ಪಿ.ಬಾಲಸುಬ್ರಹ್ಮಣ್ಯಂ
ಸಂ: ಪಿ.ಭಕ್ತವತ್ಸಲಂ
ಛಾ: ಆರ್.ಚಿಟ್ಟಿಬಾಬು
ಕಲೆ: ಬಿ.ಎಸ್.ಕೇಶವರಾವ್
ಸ: ರಾಜನ್ ನಾಗೇಂದ್ರ
ನೃ: ಚಿನ್ನಿ-ಸಂಪತ್, ರಾಮು
ವ: ರಾಮಪುರಂ ಗುರುಸ್ವಾಮಿ, ಅಯ್ಯಕಣ್ಣು, ನಜರೆ ನಾರಾಯಣ್
ಪ್ರ: ಎಂ.ಎಸ್.ಕೇಶವ, ಮನ್ಮಥರಾವ್, ಪಿ.ರಾಜಗೋಪಾಲ್, ಮೂಗೂರು ಗುರು
ಸ್ಟು: ಚಾಮುಂಡೇಶ್ವರಿ
ಹಾ: ೧) 'ಏಕೆ ಅವಸರವು.. ', ೨) 'ದೇಶ ದೇಶದ...', ೩) 'ನಾಕು ಎನ್ನುವನ.. ', ೪) 'ಹೂವೊಂದು ಬೇಕು ಬಳ್ಳಿಗೆ...', ೫) 'ಆಕಾಶ ದೀಪವು...', ೬) 'ಮೊದಲನೆ ದಿನವೇ...'
ವಿ: ಕೃಷ್ಣಮೂರ್ತಿ ಪುರಾಣಿಕರ 'ಕನ್ಯಾಮಣಿ, ಗಂಧದಬಳ್ಳಿ, ಪಾವನಗಂಗಾ' ಕಾದಂಬರಿಗಳ ಆಧಾರಿತ
ಕ.ಸಾ: ತಬ್ಬಲಿ ಗಂಗಾ ತಮ್ಮನನ್ನು ಬೆಳೆಸಲು, ಓದಿಸಲು ಸರ್ವಸ್ವವನ್ನೇ ತ್ಯಾಗ ಮಾಡುತ್ತಾಳೆ. ಆದರೆ ತಮ್ಮನ ಹೆಂಡತಿ ಅವಳನ್ನು ನಿಕೃಷ್ಟವಾಗಿ ಕಾಣುತ್ತಾಳೆ. ಕಡಗೆ ಅವಳ ತ್ಯಾಗ, ಸೇವಾಮನೋಭಾವನೆಗೆ ಫಲ ಸಿಗುತ್ತದೆ.

೫೨೬. ಕಾಡ್ಗಿಚ್ಚು

(೧೯೭೭ / ಕಪ್ಪು-ಬಿಳುಪು / ಸಾಮಾಜಿಕ)
ಲಾ/ಪ್ರೊ: ಮೋಹಿನಿ ಪ್ರೊಡಕ್ಷನ್ಸ್ ಪರಮೇಶ್ವರಿ ಫಿಲಂಸ್
ನಿ: ಎಸ್.ಎನ್.ಸಿಂಗ್
ಸ.ನಿ: ಜೋಸೈಮನ್

ಅ: ರಾಮ್ ಗೋಪಾಲ್, ದ್ವಾರಕೀಶ್, ಅಂಬರೀಷ್, ತೂಗುದೀಪ ಶ್ರೀನಿವಾಸ್, ರಾಜಾನಂದ್, ಚೇತನ್ ರಾಮರಾವ್, ಜೂ.ಶೆಟ್ಟಿ, ಇಂದುಶೇಖರ್, ಮಾ।ವಿನಯ್, ಶುಭಾ, ಉದಯಚಂದ್ರಿಕಾ, ಹಲಂ, ಜಯ
ಕ/ಚಿ.ಕ: ಡಿ.ಶಂಕರ್‌ಸಿಂಗ್
ಮಾ: ಎಂ.ನರೇಂದ್ರಬಾಬು
ಗೀ: ಹುಣಸೂರು ಕೃಷ್ಣಮೂರ್ತಿ, ಆರ್.ಎನ್.ಜಯಗೋಪಾಲ್
ಗಾ: ಪಿ.ಸುಶೀಲ, ಪಿ.ಬಿ.ಶ್ರೀನಿವಾಸ್, ಎಸ್.ಜಾನಕಿ
ಸಂ: ಪಿ.ಯು.ಎಸ್.ಮಣಿಯಂ
ಛಾ: ಎಸ್.ಕೆ.ವರದರಾಜ್
ಕಲೆ: ರಂಗಸ್ವಾಮಿ
ಸ: ಸತ್ಯಂ
ಧ್ವ: ಕೆ.ಆರ್.ಸೀತಾರಾಂ
ನೃ: ಕೃಷ್ಣಕುಮಾರ್
ಸಾ: ಜ್ಯೂಡೋ ರತ್ನಂ
ಪ್ರ: ವೆಂಕಟೇಶ್, ಮಾಧವನ್
ಸ್ಟು: ಪ್ರೀಮಿಯರ್ (ಮೈಸೂರು)
ಹಾ: ೧) 'ಎಂದೂ ಅಗಲದ ಎಂದೂ ಮುಗಿಯದ..', ೨) 'ಕೂಗುತಿದೆ ಮನಸು ನೀನಿದನಾಲಿಸು...', ೩) 'ನಿನಗಾಗಿ ನಾನು ಹುಟ್ಟಿದೆ..', ೪) 'ಸರದಾರ ಓ ಸರದಾರ...'
ಸೆ: ಉದ್ದ ೩೧೫೪.೦೫, ರೀಲು - ೧೫, 'ಎ' ಸರ್ಟಿಫಿಕೇಟ್
ಕ.ಸಾ: ನಿಷ್ಠಾವಂತ ಕಾಡಿನ ಸಂರಕ್ಷಕನಾದ ಒಬ್ಬ ವ್ಯಕ್ತಿಯ ಸಂಸಾರದಲ್ಲಿ ಅವನ ವೃತ್ತಿಪರತೆಯಿಂದಾಗುವ ಏರುಪೇರುಗಳು. ಕಳ್ಳಸಾಗಾಣಿಕದಾರರನ್ನು ಬಗ್ಗುಬಡಿಯುವಾಗ ನಡೆಯುವ ಹೊಡೆದಾಟ, ಅವರ ಸೇಡು. ಅದೆಲ್ಲದರ ಹೊರತಾಗಿ ಅವನ ಜೀವನದಲ್ಲಿ ಜರಗುವ ಮನಕಲಕುವ ದೃಶ್ಯಗಳು. ಕುತೂಹಲ ಕೆರಳಿಸುವ ಕಥೆ.

೫೨೭. ಗಿರಿಕನ್ಯೆ

(೧೯೭೭ / ವರ್ಣ / ಸಾಮಾಜಿಕ)
ಲಾ: ಪದ್ಮಶ್ರೀ ಎಂಟರ್‌ಪ್ರೈಸಸ್
ಪ್ರೊ: ಎ.ದ್ವಾರಕಾನಾಥ್
ನಿ: ದೊರೆ-ಭಗವಾನ್
ಸ.ನಿ: ಎಂ.ಎಸ್.ರಾಜಶೇಖರ್, ಹೆಚ್.ರೇಣುಕಾಶರ್ಮ, ಶ್ರೀಕುಮಾರ್

ಅ: ರಾಜಕುಮಾರ್, ಜಯಮಾಲಾ, ವಜ್ರಮುನಿ, ಕಲಾವತಿ, ತೂಗುದೀಪ ಶ್ರೀನಿವಾಸ್, ಶಾಂತಮ್ಮ, ಪ್ರಭಾಕರ್, ಸಂಪತ್, ಸುಶೀಲಾನಾಯ್ಡು, ವೆಂಕಟರಾಜು, ಶನಿಮಹಾದೇವ್, ಕೃಷ್ಣ, ಜೋಕರ್ ಶ್ಯಾಂ, ಮೂಗೂರು ಗುರು, ಎಂ.ಶ್ರೀನಿವಾಸ್, ರತ್ನಮಾಲಾ, ಜಯಾ
ಕ: ಭಾರತೀಸುತರ ಕಾದಂಬರಿ ಆಧಾರಿತ
ಚಿ.ಕ: ದೊರೆ-ಭಗವಾನ್
ಮಾ/ಗೀ: ಚಿ.ಉದಯಶಂಕರ್
ಗಾ: ರಾಜಕುಮಾರ್, ಪಿ.ಬಿ.ಶ್ರೀನಿವಾಸ್, ಎಸ್.ಜಾನಕಿ, ಎಸ್.ಪಿ.ಬಾಲಸುಬ್ರಹ್ಮಣ್ಯಂ
ಸಂ: ಜಿ.ಕೆ.ವೆಂಕಟೇಶ್
ಸಂ: ಪಿ.ಭಕ್ತವತ್ಸಲಂ
ಛಾ: ಆರ್.ಚಿಟ್ಟಿಬಾಬು
ಕಲೆ: ಜಿ.ಚಲಂ
ಸ: ರಾಜನ್ ನಾಗೇಂದ್ರ
ಧ್ವ: ಎಸ್.ಪಿ.ರಾಮನಾಥನ್, ಗೋವಿಂದಸ್ವಾಮಿ, ಶ್ರೀನಿವಾಸ್
ನೃ: ಉಡುಪಿ ಜಯರಾಂ, ಸಹಾಯ ದೇವಿ
ಸಾ: ವೈ.ಶಿವಮ್ಮ
ವ: ಎಂ.ನಾಥ್, ಅಪ್ಪಾರಾವ್, ರಾಮಚಂದ್ರ, ಸಹಾಯ ಪರಮೇಶ್, ಚಂದ್ರಯ್ಯ, ಬಾಬು
ಪ್ರ: ದೊರೆಸ್ವಾಮಿ, ಕೇಶವ, ಗುರು, ಶ್ರೀನಿವಾಸ್
ಸ್ಟು: ಕಂಠೀರವ
ಹಾ: ೧)'ಏನೆಂದು ನಾ ಹೇಳಲಿ...', ೨)'ಏ ಹೇ, ಯಾರು ನೀನು ಎಂದು ನನ್ನ ಕೇಳುವೆಯಲ್ಲಾ...', ೩)'ಘ್ಮ ಘ್ಮ ಘ್ಮ ಘ್ಮ ಬಂಗಾರಿ...', ೪)'ಕೂಡಿ ಬಾಳೋಣ..', ೫)'ನಗು ನಗುತಾ ನೀ ಬರುವೇ..'
ಸೆ: ಉದ್ದ ೪೯೫೮.೭೩, ರೀಲು - ೧೫, 'ಯು' ಸರ್ಟಿಫಿಕೇಟ್
ಕ.ಸಾ: ಎಸ್ಟೇಟ್ ಒಂದರಲ್ಲಿ ಕೆಲಸ ಮಾಡುವ ಕೂಲಿಗಳು. ಅವರಲ್ಲೊಬ್ಬ ಸುಂದರ ಚೆಲುವೆ. ಆಕೆ ಶಾಪಗ್ರಸ್ತೆ. ಹೊರಗಿನಿಂದ ಕೆಲಸಕ್ಕೆ ಬರುವ ತರುಣ ಅವಳಲ್ಲಿ ಅನುರಕ್ತನಾಗುತ್ತಾನೆ. ಚೆಲುವೆಯ ಮೇಲೆ ಕಣ್ಣು ಹಾಕುವ ಕಿಡಿಗೇಡಿ, ಅವಳಿಗಾಗಿ ತರುಣನಿಗೆ ನಾನಾ ರೀತಿಯ ತೊಂದರೆಗಳನ್ನು ಕೊಡುತ್ತಾನೆ. ತಂತ್ರ ಕುತಂತ್ರಗಳನ್ನು ಬಳಸಿ ಅಧಿಕಾರ ಚಲಾಯಿಸುವ ಶ್ರೀಮಂತ ಮಾಲೀಕರು, ಮೂಢನಂಬಿಕೆಗಳಿಗೆ ಗಂಟುಬಿದ್ದ ಬಡ ಕೆಲಸಗಾರರು ಎಲ್ಲರ ಕಣ್ಣು ತೆರೆಸಿ, ಎಲ್ಲವನ್ನೂ ಜಯಿಸಿ ಚೆಲುವೆಯ ಕೈ ಹಿಡಿಯುತ್ತಾನೆ ತರುಣ.

೫೨೮. ಸನಾದಿ ಅಪ್ಪಣ್ಣ

(೧೯೭೭ / ವರ್ಣ / ಸಾಮಾಜಿಕ)
ಲಾ: ಆನಂದ ಲಕ್ಷ್ಮೀ ಎಂಟರ್‌ಪ್ರೈಸಸ್
ಪ್ರೊ: ಎ.ಎಸ್.ಮುರಳಿ
ನಿ: ವಿಜಯ್
ಸ.ನಿ: ಚಿ.ದತ್ತುರಾಜ್, ಎಂ.ಎಸ್.ರಾಜಶೇಖರ್
ಅ: ರಾಜಕುಮಾರ್, ಜಯಪ್ರದ, ಅಶೋಕ್, ಬಾಲಕೃಷ್ಣ, ಆರ್.ಸಂಪತ್, ತೂಗುದೀಪ ಶ್ರೀನಿವಾಸ್, ಶಿವಪ್ರಕಾಶ್, ಸುಮ, ಪಾಪಮ್ಮ, ಎಂ.ಎನ್.ಲಕ್ಷ್ಮೀದೇವಿ, ಶಾಂತಮ್ಮ, ಸುನಂದ, ಬೇಬಿ ಮಾಧವಿ, ಬೇಬಿ ಸರಳಾ, ಮಾ|ಲೋಹಿತ್, ಎಂ.ಎಸ್.ರಾಜಶೇಖರ್, ಕೃಷ್ಣ ಹೊನ್ನವಳ್ಳಿ, ನಾಗಮಣಿ, ಭಟ್ಟಿ ಮಹದೇವಪ್ಪ, ಜೋಕರ್ ಶ್ಯಾಂ
ಕ: ಕೃಷ್ಣಮೂರ್ತಿ ಪುರಾಣಿಕರ ಕಾದಂಬರಿ
ಚಿ.ಕ/ಮಾ/ಗೀ: ಚಿ.ಉದಯಶಂಕರ್
ಗಾ: ರಾಜಕುಮಾರ್, ಪಿ.ಬಿ.ಶ್ರೀನಿವಾಸ್, ಎಸ್.ಜಾನಕಿ
ಸಂ: ಪಿ.ಭಕ್ತವತ್ಸಲಂ
ಛಾ: ಆರ್.ಚಿಟ್ಟಿಬಾಬು
ಕಲೆ: ಜಿ.ಚಲಂ
ಸ: ಜಿ.ಕೆ.ವೆಂಕಟೇಶ್
ಧ್ವ: (ಮಾ)ಶಾಂತಾರಾಂ, ರಾಮಣ್ಣ, ರಾಘವಯ್ಯ (ಹಾ) ಎಸ್.ಪಿ.ರಾಮನಾಥನ್
ನೃ: ಉಡುಪಿ ಜಯರಾಂ, ದೇವಿ
ಸಾ: ವೈ.ಶಿವಮ್ಮ
ವ: ಎಸ್.ಲಕ್ಷ್ಮಣರಾವ್
ಪ್ರ: ದೊರೆಸ್ವಾಮಿ ನಾಯ್ಡು, ಎಂ.ಎಸ್.ಕೇಶವ, ಮೂಗೂರು ಪಿ.ಗುರು, ಜಿ.ಕೃಷ್ಣ, ಕೇಶ: ಮೂಗೂರು ಪಿ.ಗುರು, ಕಮಲ
ಸ್ಟು: ಪ್ರಸಾದ್, ಎ.ವಿ.ಎಂ., ವಾಸು, ವಾಹಿನಿ
ಹಾ: ೧)'ಕರೆದರೂ ಕೇಳದೆ...', ೨)'ರಾಗ ಅನುರಾಗ...', ೩)'ನಿನಗಾಗಿ ಓಡೋಡಿ ಬಂದೆ...', ೪)'ನಾನೆ ತಾಯೀ ನಾನೇ ತಂದೆ...'
ವಿ: ಕನ್ನಡ ಚಿತ್ರವೊಂದಕ್ಕಾಗಿ ಬಿಸ್ಮಿಲ್ಲಾಖಾನ್ ಅವರು ಶಹನಾಯ್ ನುಡಿಸಿದ್ದು ವಿಶೇಷ.
ಸೆ: ೧೮ ರೀಲ್‌ಗಳು, 'ಯು' ಸರ್ಟಿಫಿಕೇಟ್
ಕ.ಸಾ: ಅಪ್ಪಣ್ಣ ಅಸಾಮಾನ್ಯ ಸನಾದಿ ವಾದಕ. ಆತನನ್ನು ಮೆಚ್ಚಿ ಕೈ ಹಿಡಿಯುವವಳು ಒಬ್ಬ ನರ್ತಕಿ. ದಂಪತಿಗಳಿಗೆ ಸಮಾರಂಭವೊಂದರಲ್ಲಿ ಜಾತಿಯ ವಿಷಯದಲ್ಲಿ ಅವಮಾನವಾಗುತ್ತದೆ. ನಾಯಕಿ ತನ್ನ ಮಗನಿಗೆ ಇಂಥ ಅವಮಾನವಾಗಬಾರದೆಂದು ಭಾಷೆ ತೆಗೆದುಕೊಂಡು ಸಾಯುತ್ತಾಳೆ. ನಾಯಕ ಆಕೆಯ ಇಚ್ಛೆಯಂತೆ ಮಗನನ್ನು ದೊಡ್ಡ ಅಧಿಕಾರಿಯನ್ನಾಗಿ ಮಾಡುತ್ತಾನೆ. ಆದರೆ ಆ ಮಗ ಅಪ್ಪನನ್ನು ಕಡೆಗಾಣಿಸುತ್ತಾನೆ. ಆದರೆ ಮೊಮ್ಮಗನಿಗೆ ಸನಾದಿಯೆಂದರೆ ಪಂಚಪ್ರಾಣ. ಬದುಕು ಅಸಹ್ಯವೆನಿಸಿದಾಗ ನಾಯಕ ಊರು ಬಿಟ್ಟು ಹೊರಡುತ್ತಾನೆ. ಮೊಮ್ಮಗ ತಾತನಿಲ್ಲದೆ ಸಾಯುವ ಸ್ಥಿತಿ ಬರುತ್ತದೆ. ಕಡೆಗೆ ತಾತ, ಸನಾದಿ ನುಡಿಸಿ ಮಗುವನ್ನು ಬದುಕಿಸಿ ತಾನು ಸಾಯುತ್ತಾನೆ. ಜಾತಿ, ಅಂತಸ್ತುಗಳನ್ನು ಮೀರಿ ತಲೆಮಾರಿನಿಂದ ತಲೆಮಾರಿಗೆ ಕಲೆ ಹರಿದು ಬರುತ್ತದೆ ಎಂಬ ಸಿದ್ಧಾಂತ ಸಾರುವ ಕಥೆ.

೫೨೯. ಮಹಾತಪಸ್ವಿ

(೧೯೭೭ / ಕಪ್ಪು-ಬಿಳುಪು / ಭಕ್ತಿಪ್ರಧಾನ)
ಲಾ: ತಿಪಟೂರು ಫಿಲಂಸ್
ಪ್ರೊ/ನಿ: ಸಿ.ವಿ.ಶಿವಶಂಕರ್
ಅ: ಜಿ.ಬಿ.ಯಾದವ್, ವಿಜಯಕಲಾ, ಜಯಶ್ರೀ, ಕೆ.ಡಿ.ಭೂತಿ, ಎಂ.ಎಸ್.ಯೋಗೀಶ, ರಾಘವೇಂದ್ರರಾವ್, ದಿನೇಶ್, ಶಾರದ, ಶಶಿಕಲಾ, ಸುಲೋಚನ



ಕ: ಪ್ರೊ.ಜಿ.ಎಸ್.ಹನ್ನೆರಡು ಮಠ
ಚಿ.ಕ: ಸಿ.ವಿ.ಶಿವಶಂಕರ್
ಮಾ/ಗೀ: ಪ್ರೊ.ಜಿ.ಎಸ್.ಹನ್ನೆರಡು ಮಠ, ಸಿ.ವಿ.ಶಿವಶಂಕರ್, ಸಂಗಮೇಶ ಹೊಸಮನಿ
ಗಾ: ಪಿ.ಬಿ.ಶ್ರೀನಿವಾಸ್, ಬಿ.ಕೆ.ಸುಮಿತ್ರ, ಗುರುಸ್ವಾಮಿ ಕಲಿಕೇರಿ, ಸೀರ್ಕಾಳಿ ಗೋವಿಂದರಾಜನ್, ವಾಣಿ ಜಯರಾಂ
ಸಂ: ಕೆ.ಪಿ.ಕೃಷ್ಣನ್
ಛಾ: ಎಂ.ಎಸ್.ರಾಜಪ್ಪನ್
ಕಲೆ: ಸಿ.ವಿ.ರಾಮು
ಸ: ನಾದಪ್ರಿಯ
ಧ್ವ: ಸೀತಾರಾಂ, ಕಣ್ಣನ್
ಪ್ರ: ದಾಸ್, ಸ್ವಾಮಿ, ರವಿ
ಸ್ಟು: ಪ್ರೀಮಿಯರ್
ಹಾ: ೧)'ಬಂದೆಯಾ ಬಾರೋ ತಂಗಾಳಿರಾಜ..', ೨)'ಗುರುವಿನ ಕರುಣೆಯ ಜಲವಲಿ ಮಿಂದು...', ೩)'ಗುರುವೇ ಪತಿ ಶೋಧನೆ...', ೪)'ವಿಜಯ ಮಹಾಂತೇಶಾ..', ೫)'ಭಕ್ತನಾದೊಡೆ ಭಯ ಭಕ್ತಿ ತುಂಬಿರಬೇಕು...', ೬)'ಕೂಗಿ ಹಾಡುವೆ ಭಕ್ತರ ಜೊತೆಗ...',

೭)'ಹೋಗುತ್ತಿದ್ದಿ ಒಬ್ಬಳೇ ನೋಡುತ್ತಿದ್ದಿ ಈ ಕಡೆ...', ೮)'ಓ ಯೋಗಿ ಶಿವಯೋಗಿ ವಿಶ್ವಶಂಕರ ಯೋಗಿ...'
ಕ.ಸಾ: ಚಿತ್ರರಗಿ ಪೀಠದ ಮಹಾಪ್ರಭು ಶಿವಯೋಗಿಗಳ ಬದುಕು, ತಪಸ್ಸು, ಸಿದ್ಧಿ, ಜನಸೇವೆ ಕುರಿತು ಸಮಗ್ರವಾದ ವಿವರಗಳನ್ನು ಒಳಗೊಂಡ ಕತೆ.

೫೩೦. ಮನಸ್ಸಿನಂತೆ ಮಾಂಗಲ್ಯ

(೧೯೭೭ / ವರ್ಣ / ಸಾಮಾಜಿಕ)
ಲಾ: ಜಿ.ಜಿ.ಫಿಲಂಸ್
ಪ್ರೊ/ನಿ: ಬಿ.ಗಿರಿಬಾಬು
ಸ.ನಿ: ಶ್ರೀಕೃಪಾ
ಅ: ಜಯಂತಿ, ಮಾನು, ಕೆ.ವಿಜಯಾ, ಬಾಲಕೃಷ್ಣ, ಅಂಬರೀಷ್, ದಿನೇಶ್, ಗಂಗಾಧರ್, ಜೋಕರ್ ಶ್ಯಾಂ, ಬಿ.ವಿ.ರಾಧ, ಎಂ.ಎನ್.ಲಕ್ಷ್ಮೀದೇವಿ, ಎಂ.ಎಸ್.ಸತ್ಯ, ರತ್ನಾಕರ್, ಧೀರೇಂದ್ರಗೋಪಾಲ್, ಹನುಮಂತಾಚಾರ್, ಬೇಬಿ ಅಪರ್ಣ, ಬೇಬಿ ಚಂದರ್, ಜಯಶ್ರೀ, ವಿಜಯಭಾನು, ಸುಶೀಲಾ ನಾಯ್ಡು
ಕ: ರಾಚಕೊಂಡ ವಿಶ್ವನಾಥಶಾಸ್ತ್ರಿ
ಚಿ.ಕ: ಬಿ.ಗಿರಿಬಾಬು
ಮಾ: ಗೀ: ಎಂ.ನರೇಂದ್ರಬಾಬು
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಪಿ.ಸುಶೀಲ, ಬೆಂಗಳೂರು ಲತಾ
ಸಂ: ಅಮರ್ತಿ ಹರಿನಾಥ್
ಛಾ: ಎ.ಎಸ್.ನಾರಾಯಣ ಅಯ್ಯಂಗಾರ್
ಕಲೆ: ವಿ.ರಂಗರಾವ್
ಸ: ರಮೇಶ್ ನಾಯ್ಡು
ಧ್ವ: (ಹಾ)ಕೋಟೀಶ್ವರರಾವ್, ಸ್ವಾಮಿನಾಥನ್, (ಮಾ)ಕೆ.ಶ್ರೀನಿವಾಸನ್ ಭೂಪತಿ
ನೃ: ನಂಬಿರಾಜ್
ವ: ಚಕ್ರಂ ಈಶ್ವರರಾವ್
ಪ್ರ: ರಾಜಗೋಪಾಲ್
ಸ್ಟು: ಕಂಠೀರವ
ಹಾ: ೧)'ಆಡುವಾ ತಂದನಾನೋ...', ೨)'ಇವನೇ ನಮ್ಮ ಮದ್ದುಳ್ಳ...', ೩)'ತಂಪು ಮಾವಿನ ತೋಟ ಹೂವ ಹೊಮ್ಮಿಸಿದೇ...', ೪)'ಸರಿಗಮ ಪದನಿಸ ಅರ್ಥ ಏನು ಗೊತ್ತೇ...'
ವಿ: ಮಾನು ಅಭಿನಯದ ಮೊದಲನೇ ಚಿತ್ರ. ಅತ್ಯುತ್ತಮ ನಟಿ ರಾಜ್ಯ ಪ್ರಶಸ್ತಿ - ಜಯಂತಿ (೭೬-೭೭)
ಕ.ಸಾ: ಬಲವಂತವಾಗಿ ವೇಶ್ಯಾವಾಟಿಕೆಗೆ ತಳ್ಳಲ್ಪಟ್ಟ ಹೆಣ್ಣೊಂದು, ಅದರಿಂದ ಹೊರಬಂದು ಪ್ರಾಮಾಣಿಕವಾಗಿ ಬದುಕುವ ಪ್ರಯತ್ನ ನಡೆಸಿದರೂ ಸಮಾಜ ಅವಳನ್ನು ಬದುಕಲು ಬಿಡುವುದಿಲ್ಲ. ತಪ್ಪು ಎಲ್ಲರೂ ಮಾಡುತ್ತಾರೆ. ಆದರೆ ತ್ಯಾಗ ಮಾತ್ರ ಕೆಲವರೇ ಮಾಡುತ್ತಾರೆ ಎನ್ನುವ ಸತ್ಯ ಸಾರುತ್ತದೆ.

೫೩೧. ಮುಗ್ಧ ಮಾನವ

(೧೯೭೭ / ವರ್ಣ / ಸಾಮಾಜಿಕ)
ಲಾ: ಶ್ರೀ ಗಿರಿಜಾಂಬಾ ಪ್ರೊಡಕ್ಷನ್ಸ್
ಪ್ರೊ: ಶ್ರೀಮತಿ ಲಲಿತಮ್ಮ
ನಿ: ಕೆ.ಎಸ್.ಎಲ್.ಸ್ವಾಮಿ (ರವೀ)
ಸ.ನಿ: ಕೆ.ಎಸ್.ಚಂದ್ರಶೇಖರ ಶರ್ಮ, ಮಣಿಮುರುಗನ್

ಅ: ಶ್ರೀನಾಥ್, ಶುಭ, ಕಲ್ಯಾಣಕುಮಾರ್, ಶಿವರಾಮ್, ಲೀಲಾವತಿ, ಉಮಾ ಶಿವಕುಮಾರ್, ಅಂಬರೀಷ್, ಅನುರಾಧ, ಹನುಮಂತಾಚಾರ್, ಸ್ವರ್ಣಮ್ಮ
ಕ: ಶ್ರೀಮತಿ ಎಸ್.ಮಂಗಳಾ ಸತ್ಯನ್ ಅವರ ಕಾದಂಬರಿ
ಚಿ.ಕ/ಮಾ: ಎಂ.ನರೇಂದ್ರಬಾಬು
ಗೀ: ಚಿ.ಉದಯಶಂಕರ್, ಎಂ.ನರೇಂದ್ರಬಾಬು, ಆರ್.ಎನ್.ಜಯಗೋಪಾಲ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಪಿ.ಬಿ.ಶ್ರೀನಿವಾಸ್, ವಾಣಿ ಜಯರಾಂ, ಬಿ.ಕೆ.ಸುಮಿತ್ರ, ರವೀ
ಸಂ: ಬಾಲ್ ಜಿ.ಯಾದವ್
ಛಾ: ಬಿ.ಪುರುಷೋತ್ತಮ್
ಕಲೆ: ರಮೇಶ್
ಸ: ವಿಜಯಭಾಸ್ಕರ್
ಸ್ಟು: ಪ್ರೀಮಿಯರ್
ಹಾ: ೧)'ನಗುವ ಸ್ನೇಹದ ಹಾಡೂ...', ೨)'ತಪ್ಪಂತೆ ಸರಿಯಂತೆ...', ೩)'ಮನೆ ಮನ ತುಂಬಾ...', ೪)'ನೀ ಇಡುವ ಹೊಸ ಹೆಜ್ಜೆ...', 'ಹಾಲಿನ ಬಟ್ಟಲಲೀ...'
ಕ.ಸಾ: ಕತ್ತೆಯಂತೆ ದುಡಿಯುವ ವ್ಯಕ್ತಿ, ಮುಗರಲ್ಲಿ ಅತೀ ಮುಗ. ಗ್ರಾಮ ಸೇವೆಗಾಗಿ ಬರುವ ಹೆಣ್ಣೊಬ್ಬಳಲ್ಲಿ ಆಕರ್ಷಿತನಾಗುತ್ತಾನೆ. ಆಕೆ ಹಲವು ತೊಡಕುಗಳನ್ನು ದಾಟಿ ಒಂದು ಆಸ್ಪತ್ರೆ ಕಟ್ಟಿಸಿ, ಗ್ರಾಮೋದ್ಧಾರ ಮಾಡುತ್ತಾಳೆ. ಮುಗ್ಧನನ್ನು ತಿದ್ದಿ ತೀಡಿ ಮನುಷ್ಯನನ್ನಾಗಿ ಮಾಡಿ ಅವನನ್ನೇ ವರಿಸುತ್ತಾಳೆ.

೫೩೨. ಕನ್ನೇಶ್ವರ ರಾಮ
(೧೯೭೭ / ವರ್ಣ / ಸಾಮಾಜಿಕ)
ಲಾ: ಶಾರದಾ ಮೂವೀಸ್ ಪ್ರೊಡಕ್ಷನ್ಸ್
ಪ್ರೊ: ಎಂ.ಭಕ್ತವತ್ಸಲ
ನಿ: ಎಂ.ಎಸ್.ಸತ್ಯು
ಸ.ನಿ: ಎಸ್.ರಾಮಸ್ವಾಮಿ, ಗುಲ್‌ನಾರ್ ಜಿಫೇರಿಸ್
ಅ: ಅನಂತನಾಗ್, ಬಿ.ವಿ.ಕಾರಂತ್, ಶಬನಾ ಆಜ್ಮಿ, ಅಮೋಲ್ ಪಾಲೇಕರ್, ಧೀರೇಂದ್ರ ಗೋಪಾಲ್, ಅಶೋಕ್ ಮಂದಣ್ಣ, ಶಾಂತಾರಾಂ, ಟಾಂ ಆಲ್ಟರ್, ಡೇವಿಡ್ ಹಾರ್ಸ್‌ಬರೋ, ಮಾಲತಿರಾವ್, ಉಮಾ ಶಿವಕುಮಾರ್
ಕ: ಎಸ್.ಕೆ.ನಾಡಿಗ್ (ಕಾದಂಬರಿ : 'ಕನ್ನಯ್ಯರಾಮ')
ಚಿ.ಕ: ಶಮಾ ಜೈದಿ, ಎಂ.ಎಸ್.ಸತ್ಯು
ಮಾ: ಎಸ್.ರಾಮಸ್ವಾಮಿ, ಸಲಹೆಗಾರರು: ಪೂರ್ಣಚಂದ್ರ ತೇಜಸ್ವಿ
ಗೀ: ಸಮದ್ ಸಾಹೆಬ್ (ಲಾವಣಿ), ಬಾಳಪ್ಪ ಹುಕ್ಕೇರಿ (ಜಾನಪದ ಗೀತ), ಎಸ್.ಕುಲಕರ್ಣಿ
ಗಾ: ಪಿ.ಬಿ.ಶ್ರೀನಿವಾಸ್, ಬಾಳಪ್ಪ ಹುಕ್ಕೇರಿ, ಸಮದ್‌ಸಾಹೆಬ್
ಛಾ: ಇಷಾನ್ ಆರ್ಯ, ಅಶೋಕ್ ಗುಂಜಾಲ್
ಸ: ಬಿ.ವಿ.ಕಾರಂತ್
ಧ್ವ: ಕೃಷ್ಣಮೂರ್ತಿ
ಪ್ರ: ಅನಿಲ್ ವಿ., ಪ್ರೇಮ ಗಿರಿಕರ್, ಜೋಸೆಫ್, ಹನ್ಸ್‌ರಾಮ್
ಹಾ: ೧)'ತಂದೆನೊಂದು ಕಳವಿನ ಮಾಲ...', ೨)'ನರವೀರ ಕನ್ನೇಶ್ವರ ರಾಮ...'
ವಿ: ಕನ್ನಡ ಮತ್ತು ಹಿಂದಿ ಭಾಷೆಗಳಲ್ಲಿ ಏಕಕಾಲದಲ್ಲಿ ಚಿತ್ರೀಕರಿಸಲಾಗಿದೆ.
ಕ.ಸಾ: ಬ್ರಿಟಿಷ್ ಕಾನೂನು ಪಾಲಕರ ದೃಷ್ಟಿಯಲ್ಲಿ ದರೋಡೆಕೋರ, ಹಿಂಸಾಚಾರ ಮಾಡುವವನು. ಆದರೆ ಜನತೆಯ ದೃಷ್ಟಿಯಲ್ಲಿ ಜನನಾಯಕ. ಸ್ವಾತಂತ್ರ್ಯಯೋಧ. ಇದ್ದವರಿಂದ ಕಸಿದು ಇಲ್ಲದವರ ಅಗತ್ಯ ಪೂರೈಸುತ್ತಿದ್ದ ಶಿವಮೊಗ್ಗ ಪ್ರಾಂತ್ಯದಲ್ಲಿ ಬಡವರ ಪಕ್ಷಪಾತಿಯೆಂದು ಹೆಸರಾಗಿದ್ದ ಕನ್ನೇಶ್ವರ ರಾಮನ ಸುತ್ತ ಹೆಣೆದ ಕಥೆ.

೫೩೩. ಪುನರ್ಮಿಲನ
(೧೯೭೭ / ವರ್ಣ / ಸಾಮಾಜಿಕ)
ಲಾ: ಸನ್‌ಷೈನ್ ಪಿಕ್ಚರ್ಸ್
ಪ್ರೊ: ಜೋಸೆಫ್ ವಿ.ಡಿಸೋಜ
ನಿ: ಎಂ.ಆರ್.ವಿಠಲ್
ಸ.ನಿ: ಕೆ.ವಿ.ಜಯರಾಂ, ಬಾಪಣ್ಣ
ಅ: ಚಂದ್ರಶೇಖರ್, ರಾಮ್ ಗೋಪಾಲ್, ಜೋಸೆಫ್ ವಿ.ಡಿಸೋಜ, ನಾಗರಾಜರಾವ್, ಇಂದುಶೇಖರ್, ಶ್ರೀಲಲಿತ, ಬಿ.ವಿ.ರಾಧ, ಮಮತಾಶೆಣೈ, ಇಂದಿರಾದೇವಿ, ರೋಹಿಣಿ, ವಿಜಯಶ್ರೀ, ಬಿ.ಜಯಮ್ಮ, ಲೋಕನಾಥ್



ಕ: ಎಂ.ಎಸ್.ನಾಡಿಗರ್
ಚಿ.ಕ: ಎಂ.ಆರ್.ವಿಠಲ್
ಮಾ: ಕೆ.ಎಸ್.ನಾರಾಯಣಸ್ವಾಮಿ
ಗೀ: ಕು.ರ.ಸೀತಾರಾಮಶಾಸ್ತ್ರಿ
ಗಾ: ಪಿ.ಸುಶೀಲ, ಎಸ್.ಪಿ.ಬಾಲಸುಬ್ರಹ್ಮಣ್ಯಂ, ವಾಣಿ ಜಯರಾಂ, ಜೇಸುದಾಸ್, ಬೆಂಗಳೂರು ಲತಾ
ಸಂ: ವಿ.ಚಕ್ರಪಾಣಿ
ಛಾ: ಯು.ಎಂ.ಎನ್.ಶರೀಫ್
ಕಲೆ: ಪಿ.ವೆಂಕಟರಾಮಯ್ಯ
ಸ: ಎಂ.ರಂಗರಾವ್, ಕೆ.ಹೆಚ್.ನಾರಾಯಣಸ್ವಾಮಿ
ಧ್ವ: (ಮಾ) ಆರಾಧ್ಯ, ಗೋವಿಂದಸ್ವಾಮಿ, (ಹಾ) ಎಸ್.ಪಿ.ರಾಮನಾಥನ್
ವ: ಶ್ರೀನಿವಾಸ್, ಗುಬ್ಬಿ ಚಿನ್ನಸ್ವಾಮಿ
ಸ್ಟು: ಚಾಮುಂಡೇಶ್ವರಿ, ಅಭಿಮಾನ್
ಹಾ: ೧)'ಏಕೆ ಏಕೆ ನಾಚಿಕೆ ಏಕೆ...', ೨)'ನಿನ್ನಂಗ ಚೆಲುವು...', ೩)'ಬಣ್ಣಿಸಲಾರದು ಹೃದಯ...', ೪)'ಸೀಮಂತ ದಿನ...'
ಕ.ಸಾ: ಎರಡು ಜೋಡಿಗಳು. ಒಂದು ಲವಲವಿಕ, ಹಟಬಿಂದ ಕೂಡಿದ ನ್ಯಾಯವಾದಿಗಳದು. ಇನ್ನೊಂದು ಮದುವೆಯಾದ ಮೊದಲ ರಾತ್ರಿಯೇ ಗಂಡ ಓಡಿಹೋದದು. ನ್ಯಾಯವಾದಿ ಗೆಳತಿ ನೆರವಿಗೆ ಬಂದು ಕೋರ್ಟಿನ ಕಟ್ಟೆ ಹತ್ತಿ, ಎದುರಾಳಿಯ ಪರ ನಿಂತ ಗಂಡನನ್ನೇ ಎದುರಿಸಿ ಕೊನೆಗೂ ಗೆಲ್ಲುತ್ತಾಳೆ. ಆ ಗಂಡಹೆಂಡತಿಗೇಕೆ ಅಂಥ ಸ್ಥಿತಿ ಬಂದಿತೆಂಬುದು ಮನೋವೈಜ್ಞಾನಿಕ ಸಂಗತಿಯಾದರೂ ಆ ಕುತೂಹಲವನ್ನು ಕೊನೆತನಕ ಉಳಿಸಿಕೊಳ್ಳುವ ಚಿತ್ರಕಥೆ.

೫೩೪. ಚಿನ್ನ ನಿನ್ನ ಮುದ್ದಾಡುವೆ
(೧೯೭೭ / ವರ್ಣ / ಸಾಮಾಜಿಕ)
ಲಾ: ಬಾವಾ ಮೂವೀಸ್
ಪ್ರೊ ನಿ: ಎ.ಎಂ.ಸಮೀವುಲ್ಲಾ
ಸ.ನಿ: ಎಸ್.ಎನ್.ಶರ್ಮ, ಮಲ್ಲೇಶ್
ಅ: ವಿಷ್ಣುವರ್ಧನ್, ಜಯಂತಿ, ಅಂಬರೀಷ್, ನರಸಿಂಹರಾಜು, ನವರತ್ನರಾಂ, ಹನುಮಂತಾಚಾರ್, ಮಲ್ಲೇಶ್, ರವೀಂದ್ರ, ಶ್ಯಾಮ್, ಮಣಿ, ಯು.ಕೆ.ಅರುಣ್, ಪ್ರಮೀಳಾ ಜೋಷಾಯ್, ಎಂ.ಎನ್.ಲಕ್ಷ್ಮೀದೇವಿ, ಟಿ.ಎನ್.ಬಾಲಕೃಷ್ಣ, ಬೇಬಿ ಇಂದಿರಾ, ಜಯಶ್ರೀ, ಶಾಂತಮ್ಮ, ಉಮಾ ಶಿವಕುಮಾರ್, ಅನ್ನಪೂರ್ಣಮ್ಮ, ಅಶ್ರಫ್ ಹಾಗೂ ಪ್ರಭಾತ್ ಕಲಾವಿದರ ತಂಡ
ಕ: ಚಿ.ಕ: ಸಲೀಲ್ ಚೌಧುರಿ
ಮಾ: ನವರತ್ನರಾಮ್
ಗೀ: ಚಿ.ಉದಯಶಂಕರ್, ಆರ್.ಎನ್.ಜಯಗೋಪಾಲ್
ಗಾ: ಎಸ್.ಜಾನಕಿ, ಅನಿತಾ ಚೌಧರಿ, ಜೇಸುದಾಸ್, ಸೌಮಿತ್ರ, ಕೃಷ್ಣಮೂರ್ತಿ, ಅಂಜಲಿ, ಎಸ್.ಪಿ.ಬಾಲಸುಬ್ರಹ್ಮಣ್ಯಂ
ಸಂ: ಶ್ರೀನಿವಾಸನ್, ಸುರೇಶ್
ಛಾ: ಕೆ.ಜಾನಕಿ ರಾಮ್
ಕಲೆ: ಬಿ.ಎನ್.ಕೃಷ್ಣ
ಸ: ಸಲೀಲ್ ಚೌಧುರಿ
ಧ್ವ: ಸಿ.ಡಿ.ವಿಶ್ವನಾಥನ್
ನೃ: ಚಿನ್ನಿ-ಸಂಪತ್
ಸಾ: ಜ್ಯೂಡೋ ರತ್ನಂ
ವ: ಗೋಪಾಲಕೃಷ್ಣ, ಶ್ರೀಶೈಲಂ
ಪ್ರ: ಜಿ.ರಾಜಗೋಪಾಲ್, ಶ್ರೀನಿವಾಸನ್
ಸ್ಟು: ಪ್ರೀಮಿಯರ್, ಚಾಮುಂಡೇಶ್ವರಿ
ಹಾ: ೧)'ಜೋ ಜೋ ಲಾಲಿ...', ೨)'ನಾನೇ ರಾಜ ಈ ಊರಿಗೆ...', ೩)'ದೇಹಕೆ ಉಸಿರೇ ಸದಾ ಭಾರ...'
ವಿ: ಇಂದಿರಾಗಾಂಧಿಯವರ ೨೦ ಅಂಶಗಳು, ಕುಟುಂಬ ಯೋಜನೆ ಬೆಂಬಲಿಸಿತ್ತು.
ಕ.ಸಾ: ಪ್ರಕೃತಿ, ಪ್ರಾಣಿ, ಮಕ್ಕಳೆಂದರೆ ಪ್ರಾಣ ಬಿಡುವ ಪುಟಾಣಿ ಹುಡುಗಿಯ ತಾಯಿ ಹೆರಿಗೆಯಲ್ಲಿ ಸಾಯುತ್ತಾಳೆ. ಬಾರದ ತಾಯಿಗೆ ಕಾಯುವ ಹುಡುಗಿ, ತನ್ನ ತಂದೆ ಇನ್ನೊಂದು ಮದುವೆ ಮಾಡಿಕೊಂಡು ಬಂದಾಗ ಸಹಿಸದೆ ಮನೆಬಿಟ್ಟು ಹೊರಟುಹೋಗುತ್ತಾಳೆ. ದಾರಿಯಲ್ಲಿ ಸಿಕ್ಕಸಿಕ್ಕವರನ್ನು ಆಶ್ರಯಿಸುತ್ತಾ ಹೋಗುತ್ತಾಳೆ. ಕಡೆಗೆ ಮಲತಾಯಿಯಲ್ಲೇ ತಾಯಿಯನ್ನು ಕಂಡು ಮನೆಗೆ ಮರಳುತ್ತಾಳೆ.

೫೩೫. ಶ್ರೀಮಂತನ ಮಗಳು
(೧೯೭೭ / ವರ್ಣ / ಸಾಮಾಜಿಕ)
ಲಾ: ವಿಜಯ್ ಆರ್ಟ್ಸ್ ಎಂಟರ್‌ಪ್ರೈಸಸ್
ಪ್ರೊ: ಚಂದನ್‌ಮಲ್ ಬಾಫಣಾ, ಉಗಮ್‌ಚಂದ್ ಕಠಾರಿಯ, ಸ್ವಾಗತ್ ಶುಕ್ಲ, ರಮೇಶ್ ಚಂದ್ ಸಿಂಗವಿ, ಧಲೀ ಚಂದ್ ಜೈನ್
ನಿ: ಎ.ವಿ.ಶೇಷಗಿರಿರಾವ್
ಸ.ನಿ: ಟಿ.ವಿ.ಪಂಚಾಕ್ಷರಿ, ಹೆಚ್.ಎಸ್.ನಾಗಭೂಷಣ್
ಅ: ವಿಷ್ಣುವರ್ಧನ್, ಜಯಂತಿ, ಉದಯಕುಮಾರ್, ಜಯಲಕ್ಷ್ಮಿ, ಚಂದ್ರಶೇಖರ್, ವಜ್ರಮುನಿ, ದ್ವಾರಕೀಶ್, ಜಯಶ್ರೀ, ಅಶ್ವತ್ಥ್, ಬಾಲಕೃಷ್ಣ, ಜಿ.ಎನ್.ಸ್ವಾಮಿ, ಪ್ರಭಾಕರ್, ಜೋಕರ್ ಶ್ಯಾಮ್, ಜ್ಯೂ. ಶೆಟ್ಟಿ, ರೀಟಾ (ನಾಯಿ)

ಕ/ಚಿ.ಕ: ಸ್ವಾಗತ್ ಶುಕ್ಲ
ಮಾ: ಚಿ. ಉದಯಶಂಕರ್
ಗೀ: ಚಿ. ಉದಯಶಂಕರ್, ಆರ್.ಎನ್.ಜಯಗೋಪಾಲ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್.ಜಾನಕಿ
ಸಂ: ಪಿ.ಭಕ್ತವತ್ಸಲಂ
ಛಾ: ಅಣ್ಣಯ್ಯ ಮಲ್ಲಿಕ್
ಕಲೆ: ಪಿ.ಚಲಂ
ಸ: ಜಿ.ಕೆ.ವೆಂಕಟೇಶ್
ಧ್ವ: (ಮಾ) ಗೋವಿಂದಸ್ವಾಮಿ, ಶ್ರೀನಿವಾಸ್, (ಹಾ) ಎಸ್.ಪಿ.ರಾಮನಾಥನ್
ನೃ: ಉಡುಪಿ ಜಯರಾಂ, ದೇವಿ, ಕೃಷ್ಣಕುಮಾರ್, ಚಿನ್ನಿ ಸಂಪತ್, ಮಧುರ ರಾಮು

ಸಾ: ವೆ.ಶಿವಯ್ಯ
ವ: ಲಕ್ಷ್ಮಣರಾವ್, ಕೃಷ್ಣ, ನಾಗರಾಜು, ಎ.ಎಲ್.ಬಾಲು
ಪ: ಮನ್ಮಥರಾವ್, ರಾಜಗೋಪಾಲ್, ವೀರಾಸ್ವಾಮಿ, ಶ್ರೀನಿವಾಸುಲು
ಸ್ಟು: ಚಾಮುಂಡೇಶ್ವರಿ, ಕಂಠೀರವ
ಹಾ: ೧)'ಬಂದಿದೇ ಹೊಸ ವಸಂತ...', ೨)'ಹೇ ಉಂಡಾಡಿ ಗುಂಡಣ್ಣ...', ೩)'ಬೀಸೋ ಗಾಳಿ ಇಂದು...', ೪)'ಮಂಗನ ಮೋರೆಯ ನೋಡು...', ೫)'ಕಣ್ಣುಗಳು ಕಮಲಗಳು...'
ಕ.ಸಾ: ಕೋಟ್ಯಾಧಿಪತಿಯ ಒಬ್ಬಳೇ ಮಗಳು. ಅತಿ ಮುದ್ದಿನಿಂದ ಹಮ್ಮುಹವಾಗಿ ಬೆಳೆದಿರುತ್ತಾಳೆ. ಆತನ ಆಸ್ತಿಯನ್ನು ಹೊಡೆಯಲು ಕುತಂತ್ರ ನಡೆಸುವ ಮುಷಲಿಂದ ಆ ಶ್ರೀಮಂತ ವ್ಯಕ್ತಿಯನ್ನು ಆತನ ಮಗಳನ್ನು ಪಾರು ಮಾಡುವ ನಾಯಕ. ಈ ಎಟ್ಟಿನಲ್ಲಿ ಮಗಳ ಮನಸನ್ನು ಕದ್ದು ಆ ಶ್ರೀಮಂತನ ಅಳಿಯನಾಗುತ್ತಾನೆ.

೫೩೬. ತಬ್ಬಲಿಯು ನೀನಾದೆ ಮಗನೆ

(೧೯೭೭ / ವರ್ಣ / ಸಾಮಾಜಿಕ)
ಲಾ: ಮಹಾರಾಜ ಮೂವೀಸ್
ಪ್ರೊ: ಬಿ.ಎಂ.ವೆಂಕಟೇಶ್, ಚಂದೂಲಾಲ್ ಜೈನ್
ನಿ: ಬಿ.ವಿ.ಕಾರಂತ್, ಗಿರೀಶ್ ಕಾರ್ನಾಡ್
ಸ.ನಿ: ಕಾನಕಾನಹಳ್ಳಿ ಗೋಪಿ, ನಾಗಾಭರಣ
ಅ: ಪೌಲ ಲಿಂಡ್ಸ ಬರ್ಲಿನ್, ಲಕ್ಷ್ಮೀ ಕೃಷ್ಣಮೂರ್ತಿ, ನಾರಾಯಣ್ ರಾವ್, ನಾಗಾಭರಣ, ಸುಂದರರಾಜ್, ಕಟ್ಟೆ ರಾಮಚಂದ್ರ, ಮಾನು, ಸೀತಾ, ರಾಜು, ರಂಗಾಚಾರ್, ಹಾ.ಸಾ.ಕೃ, ಸುಧೀ ಹೊಳ್ಳ
ಕ: ಎಸ್.ಎಲ್.ಭೈರಪ್ಪ ಅವರ ಕಾದಂಬರಿ
ಚಿ.ಕ: ಬಿ.ವಿ.ಕಾರಂತ್, ಗಿರೀಶ್ ಕಾರ್ನಾಡ್
ಮಾ: ಕಾನಕಾನಹಳ್ಳಿ ಗೋಪಿ
ಗಾ: ಬಿ.ಕೆ.ಸುಮಿತ್ರಾ, ಪಿ.ಬಿ.ಶ್ರೀನಿವಾಸ್, ವಿದ್ಯಾರಾಣಿ
ಸಂ: ವಿ.ಭಕ್ತವತ್ಸಲಂ
ಛಾ: ಎ.ಕೆ.ಬೀರ್
ಕಲೆ: ರಮೇಶ್
ಸ: ಭಾಸ್ಕರ್ ಚಂದಾವರ್ಕರ್
ಧ್ವ: ಗೋವಿಂದಸ್ವಾಮಿ, ಎಸ್.ಪಿ.ರಾಮನಾಥನ್
ನೃ: ವಸಂತಲಕ್ಷ್ಮಿ, ಕೇಶವಮೂರ್ತಿ
ವ: ಪ್ರೇಮಾ ಕಾರಂತ್
ಪ: ರಾಮಕೃಷ್ಣ
ಸ್ಟು: ಚಾಮುಂಡೇಶ್ವರಿ
ಹಾ: ೧)'ಧರಣಿಮಂಡಲ ಮಧ್ಯದೊಳಗೆ...'(ಗೋವಿನ ಕತೆಯ ಪದ್ಯ)
ವಿ: ಅತ್ಯುತ್ತಮ ಪೋಷಕ ನಟಿ ಲಕ್ಷ್ಮೀ ಕೃಷ್ಣಮೂರ್ತಿ (೭೭-೭೮)
ಕ.ಸಾ: ಗ್ರಾಮ ಪರಿಸರದಲ್ಲಿ ವ್ಯವಸಾಯ ಗೋಮಾತೆ ಬಹಳ ಪವಿತ್ರವೆಂಬ ಭಾವನೆಯುಂಟು. ಊರ ಮಗ ವಿದೇಶದಲ್ಲಿ ಕೃಷಿಯನ್ನೇ ಕಲಿತು ಬಂದರೂ ವಿಧಿಯಾಚರಣೆ, ನಂಬಿಕೆಗಳಲ್ಲಿ ಒಲವು ಕಡಿಮೆ. ಅದಕ್ಕೆ ಅವನ ವಿದೇಶಿ ಹೆಂಡತಿಯೂ ಕೊಂಚ ಮಟ್ಟಿಗೆ ಕಾರಣ. ಹೊರಗಿನ ಶಕ್ತಿ, ಒಳಗಿನ ನಂಬಿಕೆಗಳ ನಡುವಿನ ಸಂಘರ್ಷ ವಾಸ್ತವ ಅವಾಸ್ತವ ತಾಕಲಾಟವನ್ನು ಹೇಳುತ್ತ ಹೋಗಿದೆ. ವೈಜ್ಞಾನಿಕ ತಿಳುವಳಿಕೆಗಳನ್ನು ಮೀರಿದ ಯಾವುದೋ ನಂಬಿಕೆ, ಭಾರತೀಯರ ಜೀವನ ವಿಧಾನ ಕುರಿತಂತೆ ಘಟನಾವಳಿಗಳು, ತರ್ಕ, ಪ್ರಶ್ನೆಗಳು ತುಂಬಿದ ಗಂಭೀರವಾದ ಕಥಾ ಭಾಗ.

೫೩೭. ಕರ್ತವ್ಯದ ಕರೆ

(೧೯೭೭ / ವರ್ಣ / ಸಾಮಾಜಿಕ)
ಲಾ: ಕಿಸ್ಮತ್ ಮೂವೀಸ್
ಪ್ರೊ: ಮಹಮೂದ್
ನಿ: ಸುನಂದ್
ಸ.ನಿ: ಲೋಕೇಶ್
ಅ: ಉದಯಚಂದ್ರಿಕಾ, ಮಹೇಂದ್ರಾಜ್, ಬಿ.ವಿ.ರಾಧಾ, ರಂಗ, ದ್ವಾರಕೀಶ್, ದಿನೇಶ್, ಕಾಂಚನಾ, ಮಾ। ಅರವಿಂದ್, ನಂದಗೋಪಾಲ್, ಶ್ರೀಧರ್

ಕ: ಅಬ್ದುಲ್ ಗನಿ
ಚಿ.ಕ/ಮಾ: ಸುನಂದ್
ಗೀ: ಆರ್.ಎನ್.ಜಯಗೋಪಾಲ್, ವಿಜಯನಾರಸಿಂಹ, ಚಿ. ಉದಯಶಂಕರ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್.ಜಾನಕಿ, ಎಲ್.ಆರ್.ಈಶ್ವರಿ, ಪಿ.ಸುಶೀಲ, ಪಿ.ಬಿ.ಶ್ರೀನಿವಾಸ್
ಸಂ: ಬಾಲ್ ಜಿ.ಯಾದವ್
ಛಾ: ಟಿ.ಎಲ್ಲಪ್ಪ
ಕಲೆ: ಪಿ.ವೆಂಕಟರಾಮ್
ಸ: ಜಿ.ಕೆ.ವೆಂಕಟೇಶ್
ಧ್ವ: (ಹಾ) ಎಸ್.ಪಿ.ರಾಮನಾಥನ್, ಕೋಟೀಶ್ವರರಾವ್
ನೃ: ಸಲೀಂ
ಸಾ: ಗಣೇಶ್, ಅಪ್ಪು
ಪ: ಜಿ.ಎಸ್.ವಾಸು
ಸ್ಟು: ಪ್ರೀಮಿಯರ್

೫೩೮. ಒಂದು ಪ್ರೇಮದ ಕಥೆ

(೧೯೭೭ / ಕಪ್ಪು-ಬಿಳುಪು / ಸಿನಿಮಾಸ್ಕೋಪ್ / ಸಾಮಾಜಿಕ)
ಲಾ: ಆರ್.ಎಸ್.ಆರ್.ಕಂಬೈನ್ಸ್
ಪ್ರೊ: ಹೆಚ್.ರಮೇಶ್, ಟಿ.ಜಿ.ಆರ್.ಶಿವರಾಂ, ಟಿ.ರವಿ
ನಿ: ಜೋಸೈಮನ್
ಸ.ನಿ: ರಮೇಶ್, ಉಮೇಶ್

ಅ: ಎಲ್.ವಿ.ಶಾರದ, ಅಶೋಕ್, ರಜನೀಕಾಂತ್, ಕಟ್ಟೆ ರಾಮಚಂದ್ರ, ಮಾನು, ಆಶಾಲತಾ, ಪ್ರೇಮಾಕಾರಂತ್, ದೂರ, ಗೋಪಾಲಕೃಷ್ಣ, ಬಸವರಾಜು, ಎಸ್.ನಾಗರಾಜ್, ಮಾ। ಪುಟ್ಟೇಗೌಡ, ಜುವಲಿನ್, ಯಶೋದ, ರಾಜು
ಕ/ಚಿ.ಕ: ಬಿ.ಆರ್.ಲಕ್ಷ್ಮಣರಾವ್
ಮಾ: ಬಸವರಾಜು, ಮಾನಪ್ಪ
ಗೀ: ಆರ್.ಎನ್.ಜಯಗೋಪಾಲ್
ಗಾ: ಪಿ.ಬಿ.ಶ್ರೀನಿವಾಸ್, ಎಸ್.ಜಾನಕಿ
ಸಂ: ಪಿ.ಯು ಎಸ್.ಮಣಿಯಂ
ಛಾ: ಜೆಪ್.ಎ.ಬಾಸ್
ಸ: ಟಿ.ಪಿ.ಲಿಂಗಪ್ಪ
ಧ್ವ: ವಿಶ್ವನಾಥನ್, ಕೆ.ಆರ್.ಸೀತಾರಾಂ
ಪ: ಸುಂದರ್ ಮಲ್ಲಿ
ಸ್ಟು: ಪ್ರೀಮಿಯರ್
ಹಾ: ೧)'ಬಾಳಿಗೆ ಅರ್ಥ ಕಂಡಿದೆ...', ೨)'ನಾನೀ ಮುಂದೆ ಹಾದವಾರಿ...'
ವಿ: ೨೨ ದಿನದಲ್ಲಿ ತಯಾರಾಯಿತು. ಕನ್ನಡದ ಮೊದಲ ಸಿನಿಮಾಸ್ಕೋಪ್, ಕಪ್ಪು ಬಿಳುಪಿನಲ್ಲಿ. ಜೋಸೈಮನ್ ನಿರ್ದೇಶಕರಾದರು.
ಕ.ಸಾ: ಜಾತ್ಯಾತೀತವಾಗಿ ಒಲಿದು ವಿವಾಹವಾದರೂ ಔದ್ಯೋಗಿಕ ಅಂತಸ್ತುಗಳು, ಕೀಳರಿಮೆ, ಸ್ವಭಾವ ಸಹಜವಾದ ಗುಣ ಪರಿಶೀಲಿಸದೆ ಶಂಕಿಸುವ ಸ್ತ್ರೀ ಪ್ರವೃತ್ತಿ ಸಂಸಾರವನ್ನು ಛಿದ್ರಗೊಳಿಸುತ್ತದೆ. ಮನಸ್ಸುಗಳ ಪರಿವರ್ತನೆಯಿಂದ ಮಾತ್ರ ಇವೆಲ್ಲ ಸರಿಯಾಗುವುದು ಸಾಧ್ಯ.

೫೩೯. ಹೇಮಾವತಿ

(೧೯೭೭ / ವರ್ಣ / ಸಾಮಾಜಿಕ)
ಲಾ: ಜೈನ್ ಕಂಬೈನ್ಸ್
ಪ್ರೊ: ಎನ್.ವೀರಾಸ್ವಾಮಿ, ಎಸ್.ಪಿ.ವರದರಾಜ್, ಸಿದ್ಧಲಿಂಗಯ್ಯ, ಚಂದೂಲಾಲ್ ಜೈನ್
ನಿ: ಸಿದ್ಧಲಿಂಗಯ್ಯ
ಸ.ನಿ: ವಿ.ವಿ.ವಿ.ರಂಗಾಚಾರ್
ಅ: ಜಿ.ವಿ.ಅಯ್ಯರ್, ಉದಯಕುಮಾರ್, ಲೋಕನಾಥ್, ಶಿವರಾಂ, ಅಶ್ವಿನಿ, ಮೀರ, ಸತ್ಯಭಾಮ, ಎಂ.ವಿ.ಶಾರದ, ಸುಂದರಮ್ಮ, ಶ್ಯಾಮಲ, ಶ್ರೀಮತಿ, ಎಲ್.ವಿ.ಶಾರದ, ಯೋಗಾನರಸಿಂಹ, ಶರಪಂಜರ ಅಯ್ಯಂಗಾರ್, ಹನುಮಂತಾಚಾರ್, ಬಿ.ಎಂ.ಭದ್ರಾಚಲಂ, ಗೋಡೆ ಲಕ್ಷ್ಮೀನಾರಾಯಣ, ಗುಗ್ಗು, ಜಿ.ಕೆ.ಶ್ರೀನಿವಾಸಮೂರ್ತಿ, ಸದಾಶಿವ ಬ್ರಹ್ಮಾವರ್

ಕ: ಗೊರೂರು ರಾಮಸ್ವಾಮಿ ಅಯ್ಯಂಗಾರ್
ಚಿ.ಕ: ಸಿದ್ಧಲಿಂಗಯ್ಯ
ಮಾ: ಹುಣಸೂರು ಕೃಷ್ಣಮೂರ್ತಿ
ಗೀ: ಚಿ. ಉದಯಶಂಕರ್
ಗಾ: ಪಿ.ಬಿ.ಶ್ರೀನಿವಾಸ್, ಜೇಸುದಾಸ್, ಎಸ್.ಜಾನಕಿ
ಸಂ: ಬಿ.ಭಕ್ತವತ್ಸಲಂ
ಛಾ: ಶ್ರೀಕಾಂತ್
ಕಲೆ: ಎ.ನಜೀರ್, ವಿಶೇಷ ಪರಿಣಾಮ ತಾಂತ್ರಿಕತೆ : ನಾಗರಾಜರಾವ್
ಸ: ಎಲ್.ವೈದ್ಯನಾಥನ್
ಧ್ವ: (ಹಾ) ಎಸ್.ಪಿ.ರಾಮನಾಥನ್, (ಮಾ) ಗೋವಿಂದಸ್ವಾಮಿ, ಲಕ್ಷ್ಮಣ್
ನೃ: ಉಡುಪಿ ಜಯರಾಂ
ವ: ರಾಮಾಪುರಂ ಗುರುಸ್ವಾಮಿ
ಪ: ಮನ್ಮಥರಾವ್, ಜಿ.ಎಸ್.ವಾಸು, ರಾಜಗೋಪಾಲ್
ಸ್ಟು: ಚಾಮುಂಡೇಶ್ವರಿ, ಕಂಠೀರವ
ಹಾ: ೧)'ಶಿವ ಬ್ರಹ್ಮ ಪರಾತ್ಪರ ರಾಮ...', ೨)'ಬೇಡುವ ಬಾಳಿಗಿಂತ...', ೩)'ರಾಮಾ ರಾಮಾ ರಘುರಾಮ...', ೪)'ತಾಳು ತಾಳು ಗೋಪಾಲ...', ೫)'ಗುಹನಲ್ಲಿ ಸೋದರ...', ೬)'ಶಿವ ಶಿವ ಎನ್ನದ ನಾಲಿಗೆ ಏಕೆ...', ೭)'ಮಾನವರೋ ನೀವು.. ಇಲ್ಲಾ...'
ವಿ: 'ಶಿವಶಿವ ಎನ್ನದ..' ಹಾಡನ್ನು ಎಸ್.ಜಾನಕಿ ವಿಭಿನ್ನ ರಾಗದಲ್ಲಿ ಹಾಡಿದ್ದು, ಜಿ.ಕೆ.ಶ್ರೀನಿವಾಸಮೂರ್ತಿ ಚಿತ್ರರಂಗ ಪ್ರವೇಶ.
ಕ.ಸಾ: ಜಾತಿಜಾತಿಗಳ ನಡುವಿನ ಸಂಘರ್ಷ. ಸಾಂಪ್ರದಾಯಿಕತೆಯಲ್ಲಿ ನಂಬಿಕೆ ಇದ್ದರೂ ಹೃದಯ ವೈಶಾಲ್ಯ ಮತ್ತು ವೇದಶಾಸ್ತ್ರಗಳ ಸರಿಯಾದ ಗ್ರಹಿಕೆ ಇದ್ದರೆ ಮನುಷ್ಯ ಸಂಬಂಧಗಳಲ್ಲಿ ತರತಮ ಇರದ ಬದುಕು ಸಾಧ್ಯ ಎಂದು

ಹೇಳುವ ಕಥೆ. ಕುಟಿಲತೆ, ಸ್ವಾರ್ಥ, ಪರಪೀಡಕ ಪ್ರವೃತ್ತಿ ಉಚ್ಚ ಕುಲದಲ್ಲಿ ಅಧಿಕವಾಗಿದೆ. ಅದು ಜಾತಿ, ಧರ್ಮದ ಆವರಣ ಕಟ್ಟಿಕೊಂಡು ತಪ್ಪಿಸಿಕೊಳ್ಳುತ್ತದೆ. ಇಂಥ ಹುಸಿಗೋಡೆಗಳು ಸತ್ಯನಿಷ್ಠ, ಮುಖ್ಯವಾಗಿ ಕೀರ್ತಿ ಹಣದ ಎದುರಿಗೆ ಕುಸಿದು ಬಣ್ಣ ಬಯಲಾಗುತ್ತದೆ ಎಂಬ ತತ್ವ.

೫೪೦. ಸಹೋದರರ ಸವಾಲ್

(೧೯೭೭ / ವರ್ಣ / ಸಾಮಾಜಿಕ)
ಲಾ: ಅಜಂತಾ ಕಂಬೈನ್ಸ್
ಪ್ರೊ: ಎ.ಆರ್.ರಾಜು
ನಿ: ಕೆ.ಎಸ್.ಆರ್.ದಾಸ್
ಸ.ನಿ: ಜೋಸೈಮನ್
ಅ: ವಿಷ್ಣುವರ್ಧನ್, ರಜನೀಕಾಂತ್, ಕವಿತಾ, ಭವಾನಿ, ಲೀಲಾವತಿ, ದ್ವಾರಕೀಶ್, ಬಾಲಕೃಷ್ಣ, ಶಕ್ತಿಪ್ರಸಾದ್, ಹಲಂ, ಜಯಮಾಲಿನಿ, ಜಯಶ್ರೀ, ಪ್ರಮೀಳ ಜೋಷಾಯ್, ಪ್ರಭಾಕರ್, ಭೀಮರಾಜು, ಚೇತನ ರಾಮರಾವ್, ರಾಜಾನಂದ್, ಜಿ.ವಿ.ಜಿ., ರತ್ನಾಕರ್, ರಾಮು, ಮಾ। ಗುರುಪ್ರಸಾದ್, ಮಾ। ರಮೇಶ್

ಕ/ಚಿ.ಕ: ಎಂ.ಡಿ.ಸುಂದರ್
ಮಾ/ಗೀ: ಚಿ. ಉದಯಶಂಕರ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಪಿ.ಸುಶೀಲ, ರಮೇಶ್, ಎಸ್.ಜಾನಕಿ
ಸಂ: ಕೆ.ಎಸ್.ಆರ್.ದಾಸ್
ಛಾ: ಎಸ್.ಎಸ್.ಲಾಲ್
ಕಲೆ: ರಮೇಶ್
ಸ: ಸತ್ಯಂ
ಧ್ವ: ಸೀತಾರಾಂ, ಗೋವಿಂದಸ್ವಾಮಿ
ಸ್ಟ: ಚಿನ್ನಿ-ಸಂಪತ್
ಸಾ: ಆರ್.ಎಸ್.ಬಾಬು
ವ: ನಾಗರಾಜ್, ಎ.ಎಲ್.ಬಾಲು, ಅಬ್ಬುಲ್ಲ
ಪ್ರ: ವೀರರಾಜು, ಶ್ರೀನಿವಾಸ, ಕೃಷ್ಣ
ಸ್ಟು: ಪ್ರೀಮಿಯರ್
ಹಾ: ೧) 'ಓ ನಲ್ಲನೇ ಸವಿ ಮಾತೊಂದ...', ೨) 'ನನಗಾಗಿಯೇ ನಿನ್ನಂದವು...', ೩) 'ನಿನ್ನೆ ರಾತ್ರಿ ಮಿಂಚು...', ೪) 'ಏಕ ನೋಡುವೇ ಹಾಗೆ...', ೫) 'ಜಿಂಕೆಯಂಥ ಹೆಣ್ಣಿಗೆಂದು...'
ಕ.ಸಾ: ಕಿರಿಯರಿದ್ದಾಗ ಒಳ್ಳೆಯ ಕಾರಣಕ್ಕಾಗಿ ಕೆಟ್ಟವನಾದ ತಮ್ಮ, ತಾಯಿಯನ್ನು ಕಳೆದುಕೊಂಡು ಬೇರೆಬೇರೆಯಾದರು. ಹಲವು ವರ್ಷಗಳು ಕಳೆದು ಹೋದವು. ಅಣ್ಣ ಶ್ರೀಮಂತನಾಗುತ್ತಾನೆ. ಅವನಿಗೊಬ್ಬ ದತ್ತು ತಾಯಿ, ಆಕೆಯ ಮಗಳ ಜವಾಬ್ದಾರಿ. ದುಷ್ಟರಿಂದ ಹುಡುಗಿಯ ಅಪಹರಣ, ಪ್ರೇಮ, ಸರಸ, ಆಕಸ್ಮಿಕ ಘಟನೆಗಳನ್ನು, ಅನಿರೀಕ್ಷಿತ ಸಂಬಂಧಗಳನ್ನು ಜೋಡಿಸಿ ಸಹೋದರರು ಒಂದಾಗಿ ದುಷ್ಟರನ್ನು ಸಂಹಾರ ಮಾಡಿ, ಸುಖಾಂತಗೊಳಿಸುವರು.

೫೪೧. ಶನಿಪ್ರಭಾವ

(೧೯೭೭ / ವರ್ಣ / ಭಕ್ತಿಪ್ರಧಾನ)
ಲಾ: ಕಪಾಸಾಗರ ಚಿತ್ರಾಲಯ
ಪ್ರೊ: ಸೋರಟ್ ಅಶ್ವತ್
ನಿ: ಮಧು, ರತ್ನಾಕರ್
ಅ: ವಿಷ್ಣುವರ್ಧನ್, ಭವಾನಿ, ಸಂಪತ್, ರಾಂಗೋಪಾಲ್, ಬಾಲಕೃಷ್ಣ, ತೂಗುದೀಪ ಶ್ರೀನಿವಾಸ್, ರಾಜಶ್ರೀ,

ಧೀರೇಂದ್ರಮಾಧವರಾವ್, ಬಿ.ಸರೋಜಾದೇವಿ, ಗಂಗಾಧರ್, ಅಶ್ವತ್, ಅನಂತರಾಂ ಮಚ್ಚೇರಿ
ಕ/ಚಿ.ಕ/ಮಾ: ಸೋರಟ್ ಅಶ್ವತ್
ಗೀ: ಸೋರಟ್ ಅಶ್ವತ್, ಯೋಗಾನರಸಿಂಹ
ಗಾ: ಪಿ.ಬಿ.ಶ್ರೀನಿವಾಸ್, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್.ಜ್ಯೋತಿ
ಛಾ: ಆರ್.ಮಧು
ಸ: ಎಂ.ರಂಗರಾವ್
ಪ್ರ: ಜಿ.ವೆಂಕಟೇಶ್
ಸ್ಟು: ಪ್ರೀಮಿಯರ್
ಹಾ: ೧) 'ನಮೋ ನಮೋ ಶನಿರಾಜ...', ೨) 'ಶ್ರೀರಾಮ ಸುಗಣಾತಿ ರಾಮ...', ೪) 'ಆನಂದದಾ ನಂದನ...', ೫) 'ಬೆಳಗಿಸು ಕೈಲಾಸದಿ...'
ಕ.ಸಾ: ಪೌರಾಣಿಕ ಹಾಗೂ ಜಾನಪದ ಹಿನ್ನೆಲೆಯ ಕಥೆ. ಶನಿಮಹಾತ್ಮನನ್ನು ಧಿಕ್ಕರಿಸಿ ಕೇಡನನುಭವಿಸಿ, ಕಡೆಗೆ ಅವನ ಆರಾಧನೆಯಿಂದ ಸುಖಹೊಂದುವ ಕಥೆ.

೫೪೨. ತಾಯಿಗಿಂತ ದೇವರಿಲ್ಲ

(೧೯೭೭ / ವರ್ಣ / ಭಕ್ತಿಪ್ರಧಾನ)
ಲಾ: ವಜ್ರಮಹೇಶ್ವರ ಪಿಕ್ಚರ್ಸ್
ಪ್ರೊ: ಲಕ್ಷ್ಮೀ ವಜ್ರಮುನಿ
ನಿ: ವೈ.ಆರ್.ಸ್ವಾಮಿ
ಸ.ನಿ: ಎ.ಟಿ.ರಘು
ಅ: ಶ್ರೀನಾಥ್, ವಜ್ರಮುನಿ, ಜಯಂತಿ, ಮಂಜುಳ, ಜಯಶ್ರೀ, ಜಯಕುಮಾರ್, ಸೀತಾರಾಮ್, ಶಾಂತಮ್ಮ, ಪ್ರಮೀಳ ಜೋಷಾಯ್, ಭದ್ರಾಚಲಂ, ಹನುಮಂತಾಚಾರ್, ವಾಣಿಚಂದ್ರ, ಸ್ವಪ್ನ, ಪ್ರಮೀಳಾ, ಉದಯಶ್ರೀ, ಬೇಬಿ ರೇಖಾ, ಎನ್.ಎಸ್.ರಾವ್, ಬಿ.ಎಸ್.ನಾರಾಯಣರಾವ್, ಜೋಕರ್ ಶ್ಯಾಂ, ಭಟ್ಟೆ ಮಹದೇವಪ್ಪ

ಕ/ಚಿ.ಕ: ಕ.ಎಸ್.ಆರ್.ಮೂರ್ತಿ, ಎಂ.ಡಿ.ಸುಂದರ್
ಮಾ ಗೀ: ಚಿ.ಉದಯಶಂಕರ್
ಗಾ: ಎಸ್.ಜಾನಕಿ, ವಸಂತ, ಎಸ್.ಪಿ.ಬಾಲಸುಬ್ರಹ್ಮಣ್ಯಂ
ಸಂ: ಪಿ.ಭಕ್ತವತ್ಸಲಂ
ಛಾ: ಎಸ್.ಎಸ್.ಲಾಲ್
ಕಲೆ: ರಮೇಶ್
ಸ: ರಾಜನ್ ನಾಗೇಂದ್ರ
ಧ್ವ: ಎಸ್.ಪಿ.ರಾಮನಾಥನ್, ಹೆಚ್.ಆರ್.ಎಂ.ಆರಾಧ್ಯ, ಎಂ.ವಿ.ಶಿವರಾಜ್
ಸ್ಟ: ಉಡುಪಿ ಜಯರಾಂ, ದೇವಿ
ಸಾ: ರತ್ನಂ
ವ: ತಂಗಪ್ಪನ್, ಕೃಷ್ಣ, ಸತ್ಯ ನಾರಾಯಣ್, ವೇಣು, ಎಸ್.ಬಾಬು
ಪ್ರ: ಮನ್ಮಥರಾವ್, ವೀರಾಸ್ವಾಮಿ, ರಾಜಗೋಪಾಲ್, ಜಿ.ಎಸ್.ವಾಸು, ಟಿ.ನಾಗೇಶ್ವರರಾವ್ (ಕೇಶಾಲಂಕಾರ: ರಾಜಮ್ಮ, ರಾಜು, ಬಲರಾಂ)
ಸ್ಟು: ಚಾಮುಂಡೇಶ್ವರಿ
ಹಾ: ೧) 'ಮದುವೆಯಾಗೋ ಹೆಣ್ಣೇ...', ೨) 'ನೀ ತಂದ ಭಾಗ್ಯ ನನ್ನದಾಗಿದೆ...', ೩) 'ಅಮ್ಮಾ ಎಂದರೆ ಮೈ ಮನವೆಲ್ಲಾ...', ೪) 'ನಗಲಾರದೆ ಅಳಲಾರದೆ...'
ವಿ: ವಜ್ರಮುನಿ ಅವರು ನಿರ್ಮಾಪಕರಾದದ್ದು.
ಸೆ: ಉದ್ದ ೩೯೦೫.೦೯, ೧೫ ರೀಲುಗಳು
ಕ.ಸಾ: ಪ್ರೀತಿಸಿದವನು ಗರ್ಭಿಣಿಯನ್ನು ಬಿಟ್ಟು ಓಡಿದ. ಸಾಯಲಿದ್ದವಳನ್ನು ರಕ್ಷಿಸಿದ ತರುಣ ಆಕೆಗೆ ಬಾಳು ಕೊಡುತ್ತಾನೆ. ಅವನ ತಂದೆ ಈ ಮದುವೆಯನ್ನು ಒಪ್ಪುವುದಿಲ್ಲ. ಎರಡು ಮಕ್ಕಳಾಗುತ್ತವೆ. ಅಪಘಾತವೊಂದರಲ್ಲಿ ಆತ ಸಾವನ್ನಪ್ಪುತ್ತಾನೆ. ಅವಳ ಬಾಳು ನರಕವಾಗುತ್ತದೆ. ತಮ್ಮ ಮಗನಿಗೆ ಹುಟ್ಟಿದ ಹೆಣ್ಣುಮಗುವನ್ನು ಶ್ರೀಮಂತ ತಾತ ತೆಗೆದುಕೊಂಡು ಹೋಗಿ ಸಾಕುತ್ತಾನೆ. ತಾಯಿ-ಮಗಳು ಬೇರೆಬೇರೆಯಾದರು. ಎರಡು ಜೀವಗಳು ಒಬ್ಬರಿಗಾಗಿ ಇನ್ನೊಬ್ಬರು ಮಿಡಿಯುತ್ತಾರೆ. ಮಾತೃತ್ವದ ಹಿರಿಮೆಯನ್ನು ಸಾರುವ ಚಿತ್ರ.

೫೪೩. ಕೋಕಿಲ

(೧೯೭೭ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಕಮರ್ಶಿಯಲ್ ಫಿಲಂಸ್
ಪ್ರೊ: ಟಿ.ಪೋಚಂ ಫರ್ನಾಂಡೋ
ನಿ: ಬಾಲು ಮಹೇಂದ್ರ
ಸ.ನಿ: ಶಿವಾನಂದ್, ಶ್ರೀಧರ್, ಜಯಶ್ರೀ
ಅ: ಕಮಲಹಾಸನ್, ಮೋಹನ್, ಮಹದೇವ್, ಶಿವಾನಂದ್, ರಾಜಾರಾಮ್, ಆಚಾರ್, ರೊಟ್ಟಿ, ದೇವದಾಸ್, ಶೋಭಾ, ರೋಜಾರಮಣಿ, ಪಲ್ಲವಿ, ಮಂಜುಳಾರಾವ್, ಬೇಬಿ ಸುಷ್ಮಾ
ಕ/ಚಿ.ಕ: ಬಾಲು ಮಹೇಂದ್ರ
ಮಾ: ಜಿ.ವಿ.ಶಿವಾನಂದ್
ಗೀ: ಚಿ.ಉದಯಶಂಕರ್
ಗಾ: ಎಸ್.ಜಾನಕಿ, ವಾಣಿ ಜಯರಾಂ, ಎಸ್.ಪಿ.ಬಾಲಸುಬ್ರಹ್ಮಣ್ಯಂ
ಸಂ: ಉಮೇಶ್ ಕುಲಕರ್ಣಿ, ಸುರೇಶ್
ಛಾ: ಬಾಲು ಮಹೇಂದ್ರ
ಕಲೆ: ಭರತನ್
ಸ: ಸಲೀಲ್ ಚೌಧುರಿ
ಧ್ವ: ಶಿವರಾವ್, ಎಸ್.ಪಿ.ರಾಮನಾಥನ್, ಕೋಟೇಶ್ವರರಾವ್
ಸ್ಟು: ಚಾಮುಂಡೇಶ್ವರಿ
ಹಾ: ೧) 'ಸಂಜೆ ತಂಗಾಳಿ ಮೈ ಸೋಕಲು...', ೨) 'ಗುಂ ಗುಂ ಎಂದು ದುಂಬಿಗಳು ಹಾರಾಡಿ...'
ವಿ: ಬಾಲು ಮಹೇಂದ್ರ ಕನ್ನಡದಲ್ಲಿ ನಿರ್ದೇಶಿಸಿದ ಮೊದಲ ಚಿತ್ರ. ಈ ಚಿತ್ರದಲ್ಲಿ ನಟಿಸಿದ ಮೋಹನ್ ತಮಿಳು ಚಿತ್ರರಂಗದಲ್ಲಿ ನಾಯಕನಟರಾಗಿ ಖ್ಯಾತರಾದರು. ಕಮಲಹಾಸನ್ ಕನ್ನಡದಲ್ಲಿ ಅಭಿನಯಿಸಿದ್ದು.
ಕ.ಸಾ: ಹುಡುಗ-ಹುಡುಗಿ ಪ್ರೇಮಿಸುತ್ತಾರೆ. ಮನೆಗೆಲಸದ ಹುಡುಗಿಯೊಂದಿಗೆ ಹುಡುಗನಿಗೆ ಯಾವುದೋ ಒಂದು ಸಂದರ್ಭದಲ್ಲಿ ಸಂಬಂಧ ಉಂಟಾಗುತ್ತದೆ. ಆ ಫಲವಾಗಿ ಆಕೆ ಗರ್ಭಿಣಿಯಾಗುತ್ತಾಳೆ. ಪ್ರೇಯಸಿಯೋ ಇಲ್ಲ, ತನ್ನ ಮಗುವಿನ ತಾಯಿಯೋ ಎಂಬ ಸಂಘರ್ಷದಲ್ಲಿ ಕಡೆಗೆ ತನ್ನ ಕಾರಣದಿಂದ ಗರ್ಭಿಣಿಯಾದ ಹುಡುಗಿಗೆ ಒಲಿಯುವ ತೀರ್ಮಾನವಾಗಿ, ಹುಡುಗಿ ಹಿಂದೆ ಸರಿಯುತ್ತಾಳೆ.

೫೪೪. ಕುಂಕುಮ ರಕ್ಷೆ

(೧೯೭೭ / ವರ್ಣ / ಸಾಮಾಜಿಕ)
ಲಾ: ಎಸ್.ಪಿ.ವಿ.ಫಿಲಂಸ್
ಪ್ರೊ: ಕೆ.ಎನ್.ಸುಬ್ಬಯ್ಯ
ನಿ: ಎಸ್.ಕೆ.ಎ.ಚಾರಿ
ಸ.ನಿ: ಬೆಂಗಳೂರು ನಾಗೇಶ್
ಅ: ಅಶೋಕ್, ರಜನೀಕಾಂತ್, ಅಂಬರೀಷ್, ಶಿವರಾಂ,

ಸೀತಾರಾಮ್, ಚೇತನ್ ರಾಮರಾವ್, ವೆಂಕಟ್, ಬೆಂಗಳೂರು ನಾಗೇಶ್, ಮಂಜುಳ, ಲೀಲಾವತಿ, ರಮಾ, ಬೇಬಿ ರೇಖಾ, ಮಾಲತಿ, ಲೀನಾ, ಬಿ.ಜಯಾ, ಕೃಷ್ಣಮೂರ್ತಿ, ಯೋಗಾನರಸಿಂಹ
ಕ ಚಿ.ಕ: ಸಿ.ವಿ.ಶ್ರೀಧರ್
ಮಾ/ಗೀ: ಚಿ.ಉದಯಶಂಕರ್
ಗಾ: ವಾಣಿ ಜಯರಾಂ, ಎಸ್.ಪಿ.ಬಾಲಸುಬ್ರಹ್ಮಣ್ಯಂ
ಸಂ: ಬಾಲ್ ಜೆ.ಯಾದವ್, ಎನ್.ಎಂ.ವಿಕ್ಟರ್
ಛಾ: ಬಿ.ಸಂಜಪ
ಕಲೆ: ಬಿ.ಚಲಂ
ಸ: ವಿಜಯಭಾಸ್ಕರ್
ಧ್ವ: (ಹಾ) ಸಿ.ಡಿ.ವಿಶ್ವನಾಥ್, (ಮಾ) ಆರ್ಮುಗಂ, ಗೋವಿಂದಸ್ವಾಮಿ
ವ: ತಂಗಪ್ಪನ್
ಪ್ರ: ವಾಸು, ನಾಗೇಶ್ವರರಾವ್, ರಾಜು
ಸ್ಟು: ಪ್ರೀಮಿಯರ್
ಹಾ: ೧) 'ನೀನೂ ಬಳ್ಳಿ ನಾನೂ ಬಳ್ಳಿ...', ೨) 'ತಾನೊಂದು ನೆನೆದರೆ ..', ೩) 'ಬಾಡದ ಹೂವಾಗು...', ೪) 'ಹೇಗೇ ನುಡಿದ...', ೫) 'ಯಾವ ಬಯಕೆ...'
ಕ.ಸಾ: ಗಂಡ ಹೆಂಡತಿ, ಸುಖಸಂಸಾರ, ಗಂಡನಿಗೆ ಕ್ಯಾನ್ಸರ್, ವೈದ್ಯ ಆಕೆಯ ಮಾಜಿ ಪ್ರೇಮಿ. ಹೆಂಡತಿ ವಿಧವೆಯಾಗಬಾರದೆಂದು ಅವಳ ಮರುಮದುವೆ. ಆ ವೈದ್ಯನ ಜೊತೆಗ ಎಂದು ತೀರ್ಮಾನಿಸುತ್ತಾನೆ ತ್ಯಾಗಮಯಿ ಗಂಡ. ನಾಯಕಿ ವೈದ್ಯನ ಪ್ರಾಮಾಣಿಕತೆ ಬಗ್ಗೆ ಅನುಮಾನಿಸುತ್ತಾಳೆ. ವೈದ್ಯನಿಗೆ ಪ್ರಾಣ ಸಂಕಟ. ಕರ್ತವ್ಯ ಹಾಗೂ ಪ್ರೇಮಗಳ ಘರ್ಷಣೆಯಲ್ಲಿ ಕಡೆಗ ಕರ್ತವ್ಯ ಗೆಲ್ಲುತ್ತದ. ತಮಿಳು ಹಾಗೂ ಹಿಂದಿ ಭಾಷಗಳಲ್ಲಿ ತರೆಕಂಡ ಚಿತ್ರದ ಪುನರಾವೃತ್ತಿ.

೫೪೫. ಬನಶಂಕರಿ

(೧೯೭೭ / ವರ್ಣ / ಸಾಮಾಜಿಕ)
ಲಾ: ಗಜಲಕ್ಷ್ಮಿ ಚಿತ್ರ
ಪ್ರೊ: ಎಂ.ಪೀತಾಂಬರಂ
ನಿ: ಕೆ.ಎಸ್.ಎಲ್.ಸ್ವಾಮಿ (ರವೀ)
ಸ.ನಿ: ಮಣಿಮುರುಗನ್, ಲೋಕೇಶ್ (ಮೈಸೂರು)
ಅ: ಕಲ್ಯಾಣಕುಮಾರ್, ಕೆ.ಆರ್.ವಿಜಯ, ಶಿವರಾಂ, ಅಶ್ವತ್, ಉದಯಕುಮಾರ್, ತೂಗುದೀಪ ಶ್ರೀನಿವಾಸ್, ಜಯಂತಿ, ಬಿ.ವಿ.ರಾಧ, ಅಂಬರೀಷ್, ಹನುಮಂತಾಚಾರ್, ಭವಾನಿ, ಲೋಕನಾಥ್, ವಿಜಯಲಲಿತ, ಬಿ.ಜಯ, ಎಂ.ಎನ್.ಲಕ್ಷ್ಮೀದೇವಿ
ಕ: ಮಾ.ಲಕ್ಷ್ಮಣನ್
ಚಿ.ಕ: ಕೆ.ಎಸ್.ಎಲ್.ಸ್ವಾಮಿ (ರವೀ)
ಮಾ ಗೀ: ಚಿ.ಉದಯಶಂಕರ್
ಗಾ: ಪಿ.ಸುಶೀಲ, ವಾಣಿ ಜಯರಾಂ, ಅಂಜಲಿ, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಪಿ.ಬಿ.ಶ್ರೀನಿವಾಸ್
ಸಂ: ಸಿ.ವಿ.ಕೃಷ್ಣನ್, ಎ.ದಂಡಪಾಣಿ
ಛಾ: ಎಂ.ಸಿ.ಶೇಖರ್, ಎ.ಎಸ್.ಶೇಖರ್
ಕಲೆ: ಶ್ರೀನಿವಾಸರಾವ್
ಸ: ವಿಜಯಭಾಸ್ಕರ್
ಧ್ವ: ಸಿ.ಡಿ.ವಿಶ್ವನಾಥನ್, ಮೋಹನಸುಂದರಂ, ಆರು ಗಂ, ಶ್ರೀನಿವಾಸನ್
ನೃ: ಉಡುಪಿ ಜಯರಾಂ
ವ: ಎಂ.ಜಿ.ಕಣ್ಣಪ್ಪನ್, ಕೆ.ವಿ.ಮಣಿ
ಪ್ರ: ರಾಮು, ವೆಂಕಟೇಶ್ವರರಾವ್, ನಾರಾಯಣನ್, ರಾಜಗೋಪಾಲ್ (ಕೇಶಾಲಂಕಾರ: ರಾಜ್ಯಲಕ್ಷ್ಮೀ, ಬಲರಾಂ)
ಸ್ಟು: ಪ್ರೀಮಿಯರ್, ಕಂಠೀರವ
ಹಾ: ೧) 'ಹಯಗಿರಿ ನಂದಿನಿ...', ೨) 'ಬಳ್ಳಿ ಬಳ್ಳಿಯಲ್ಲೂ...', ೩) 'ನಾ ಸೋತೆ..', ೪) 'ಓಂ ವಿಶ್ವಶಕ್ತಿಗಳೆಲ್ಲಾ ಒಂದಾದ...', ೫) 'ವರನೇ ಮಂಗಳಕರನೇ...', ೬) 'ಅಮ್ಮಾ ಎಂದರೆ ಓಡುತ...'
ವಿ: ಕೆ.ಆರ್.ವಿಜಯಾ ನಟಿಸಿದ ಚಿತ್ರ
ಸೆ: ಸಿಸಿನಂ. ೭೯೭೪೧, ಉದ: ೪೪೫೮.೬೩, ೧೭-ರೀಲ್‌ಗಳು
ಕ.ಸಾ: ದೈವಭಕ್ತರಾದ ತಂದೆತಾಯಿಗಳಿಗೆ ವಿಷಯ ಲಂಪಟ ಮಗ. ಸ್ತ್ರೀ ವ್ಯಾಮೋಹಿಯಾದ ಅವನಿಂದ ಹಾಳಾದ ಹೆಣ್ಣುಗಳು ಎಷ್ಟೋ ಮಂದಿ. ಆತನನ್ನು ಸರಿದಾರಿಗೆ ತರಲು ಸಾಕ್ಷಾತ್ ಬನಶಂಕರಿಯೇ ಬರುತ್ತಾಳೆ. ದುಷ್ಟ ಶಿಕ್ಷಣ, ಶಿಷ್ಟ ರಕ್ಷಣ ಎನ್ನುವ ನೀತಿಯೇ ಈ ಚಿತ್ರದ ಕಥಾವಸ್ತು.

೫೪೬. ವೀರ ಸಿಂಧೂರ ಲಕ್ಷ್ಮಣ

(೧೯೭೭ / ವರ್ಣ / ಐತಿಹಾಸಿಕ)
ಲಾ: ಶ್ರೀ ಸಂಗಮೇಶ್ವರ ಪ್ರೊಡಕ್ಷನ್ಸ್
ಪ್ರೊ: ಎನ್.ಬಸವರಾಜ್ (ಗುಡಗೇರಿ)
ನಿ: ಹುಣಸೂರು ಕೃಷ್ಣಮೂರ್ತಿ
ಸ.ನಿ: ಹೆಚ್.ಆರ್.ಶರ್ಮ, ಕಲ್ಲೇಶ್
ಅ: ಎನ್.ಬಸವರಾಜು, ಮಂಜುಳಾ, ಲೀಲಾವತಿ, ಸುಧೀರ್, ಅಶ್ವತ್, ವಸಂತರಾವ್ ನಾಕೋಡ್, ವಜ್ರಮುನಿ, ಹನುಮಂತಾಚಾರ್, ಅನುರಾಧ, ಶಾಂತಮ್ಮ, ರಾಜಲಕ್ಷ್ಮಿ, ವನಜಾಕ್ಷಿ, ರಾಧ, ರುಕ್ಮಿಣಿ, ತರೇಸಮ್ಮ, ನಾಗರತ್ನಮ್ಮ, ಜಿ.ವಿ.ಕೃಷ್ಣ, ರಾಮರಾವ್ ದೇಸಾಯಿ, ಫಕೀರಪ್ಪ, ಆರ್.ವಿ.ಗಂಗಾಧರ್, ಗಿರಿಧರ ಪಾಟೀಲ್, ಷಹಬುದೀನ್, ಚಂದ್ರಮೌಳಿ ಸಿಂಗಪ್ಪ, ಕಲ್ಲೇಶ್, ಸಂಕಣ್ಣ, ಅನಿಲ್ ರಾಜ್
ಕ ಚಿ.ಕ/ಮಾ/ಗೀ: ಹುಣಸೂರು ಕೃಷ್ಣಮೂರ್ತಿ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್.ಜಾನಕಿ, ವಾಣಿ ಜಯರಾಂ
ಸಂ: ಆರ್.ರಾಜನ್
ಛಾ: ಜಿ.ಸತ್ಯನಾರಾಯಣ, ಜೆ.ಫಣಿಪ್ರಸಾದ್
ಸ: ಟಿ.ಜಿ.ಲಿಂಗಪ್ಪ
ಧ್ವ: ಎಸ್.ಪಿ.ರಾಮನಾಥನ್, ಸ್ವಾಮಿನಾಥನ್, ಸಂಪತ್, ಶಿವರಾಜ್, ರಾಮಚಂದ್ರ
ನೃ: ಕೃಷ್ಣಕುಮಾರ್ (ಧಾರವಾಡ)
ಸಾ: ವೈ.ಶಿವಯ್ಯ
ವ: ಶ್ರೀನಿವಾಸ್, ಅಣ್ಣಾಮಲೈ, ತಂಗಪ್ಪನ್
ಪ್ರ: ವಿಶ್ವನಾಥ್, ಗೋಪಾಲ್, ನಾಗೇಶ್ವರರಾವ್, ಸಾಯಿಬಾಬು (ಕೇಶಾಲಂಕಾರ: ರಾಜ-ಬಾಬು)
ಸ್ಟು: ಸುಜಾತಾ ಔಟ್‌ಡೋರ್
ಹಾ: ೧) 'ಸಿಂಧೂರ ಲಕ್ಷ್ಮಣನೆಂದರೆ...', ೨) 'ಗಜವದನ ಹೇರಂಭ...', ೩) 'ಇರೇ ಇರೇ ನನ ನೀರ...', ೪) 'ಕಂಡವರಿಲ್ಲ ಕೇಳವರಿಲ್ಲ...', ೫) 'ತಂದಾನ ತಾನೇನಾ ತಂದಾನ...', ೬) 'ಇದರ ಇರಬೇಕು...', ೭) 'ಉಂಡ ಉಪ್ಪಿನ ಋಣವನು...',
ಕ.ಸಾ: ಸ್ವಾತಂತ್ರ್ಯ ಪೂರ್ವದ ಕಥೆ. ಬ್ರಿಟಿಷರ ವಿರುದ್ಧ ಏಕಾಂಗಿಯಾಗಿ ಹೋರಾಟ ನಡೆಸಿದ ಸಿಂಧೂರಿನ ವೀರ ಲಕ್ಷ್ಮಣನ ಜೀವನ ಕಥೆ.

೫೪೭. ಘಟಶ್ರಾದ್ಧ

(೧೯೭೭ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಸುವರ್ಣಗಿರಿ ಫಿಲಂಸ್
ಪ್ರೊ: ಸದಾನಂದ ಸುವರ್ಣ
ನಿ: ಗಿರೀಶ್ ಕಾಸರವಳ್ಳಿ
ಸ.ನಿ: ಬಿ.ಎಸ್.ಅನಂತರಾಂ, ಎಸ್.ದಿವಾಕರ್
ಅ: ಮೀನಾ, ಅಜಿತ್ ಕುಮಾರ್, ಜಗನ್ನಾಥ್, ಬಿ.ಸುರೇಶ್, ರಾಮಸ್ವಾಮಿ ಅಯ್ಯಂಗಾರ್, ನಾರಾಯಣಶೆಟ್ಟಿ, ಶಾಂತಾ, ಎಚ್.ಎಸ್.ಪಾರ್ವತಿ, ಶ್ರೀಹರಿ, ಗೋಪಾಲಕೃಷ್ಣ ಶಾನುಭೋಗ್, ಜಗದೀಶ್, ರಾಂಪ್ರಸಾದ್, ಬಿ.ಎಸ್.ಅನಂತರಾಂ, ಬಿ.ಕೃಷ್ಣ, ಪ್ರಸನ್ನ, ವಾಸು, ನಾರಾಯಣಭಟ್
ಕ: ಯು.ಆರ್.ಅನಂತಮೂರ್ತಿರವರ ಕಾದಂಬರಿ
ಚಿ.ಕ: ಗಿರೀಶ್ ಕಾಸರವಳ್ಳಿ
ಮಾ: ಕೆ.ವಿ.ಸುಬ್ಬಣ್ಣ
ಸಂ: ಉಮೇಶ್ ಕುಲಕರ್ಣಿ
ಛಾ: ಎಸ್.ರಾಮಚಂದ್ರ
ಕಲೆ: ಕೆ.ವಿ.ಸುಬ್ಬಣ್ಣ
ಸ: ಬಿ.ವಿ.ಕಾರಂತ್
ಧ್ವ: (ಹಾ) ಗೋವಿಂದಸ್ವಾಮಿ, (ಮಾ) ಕೃಷ್ಣಮೂರ್ತಿ
ವ: ಮಲ್ಲೇಶ್
ಪ್ರ: ರಾಮಕೃಷ್ಣ
ಸ್ಟು: ಚಾಮುಂಡೇಶ್ವರಿ
ವಿ: ಸ್ವರ್ಣಕಮಲ ರಾಷ್ಟ್ರಪ್ರಶಸ್ತಿ (೭೭-೭೮), ಶ್ರೇಷ್ಠ ಸಂಗೀತ (ಬಿ.ವಿ.ಕಾರಂತ), ಶ್ರೇಷ್ಠ ಬಾಲನಟ ಪ್ರಶಸ್ತಿ (ಅರುಣ್ ಕುಮಾರ್), ಡಕಾಟ್ಸ್ ಅವಾರ್ಡ್, ಕ್ಯಾಥೋಲಿಕ್ ಚರ್ಚ್ ಅವಾರ್ಡ್, ಕರ್ನಾಟಕ ರಾಜ್ಯ ಸರ್ಕಾರದ ಅತ್ಯುತ್ತಮ ಚಿತ್ರ ಪ್ರಶಸ್ತಿ
ಸೆ: ೧೪ - ರೀಲ್‌ಗಳು, 'ಎ' ಸರ್ಟಿಫಿಕೇಟ್, ೧೪-೦೭-೧೯೭೭
ಕ.ಸಾ: ಸಾಂಪ್ರದಾಯಿಕ ಬ್ರಾಹ್ಮಣ ಕುಟುಂಬಗಳಲ್ಲಿ ಆಚರಣೆಯಲ್ಲಿದ್ದ ಒಂದು ಅಮಾನವೀಯ ಧಾರ್ಮಿಕ ಪದ್ಧತಿಯನ್ನು ಎಳೆಎಳೆಯಾಗಿ ಬಿಡಿಸುವ ಚಿತ್ರ 'ಘಟಶ್ರಾದ್ಧ'. ಬಾಲವಿಧವೆಯ ಬದುಕಿನ ಸುತ್ತ ಹೆಣೆಯಲಾಗಿದೆ.

೫೪೮. ದೇವರೇ ದಿಕ್ಕು

(೧೯೭೭ / ವರ್ಣ / ಸಾಮಾಜಿಕ)
ಲಾ: ರೇಣುಕ ಚಿತ್ರಾಲಯ
ಪ್ರೊ: ಆರ್.ತಿಮ್ಮಯ್ಯ
ನಿ: ಬಸವರಾಜ ಕೆಸ್ತೂರ್
ಸ.ನಿ: ತಾವರೆಕರೆ ಅನ್ವರ್
ಅ: ಜಯಸಿಂಹ, ರಾಮ್ ಗೋಪಾಲ್, ದಿನೇಶ್, ಟಿ.ಎನ್.ಬಾಲಕೃಷ್ಣ, ವಾಸುದೇವ ರಾವ್, ಭಾರತಿ, ಪ್ರಮೀಳಾ ಜೋಷಾಯ್, ಶಾಂತಲಾ, ಎನ್.ಎಸ್.ರಾವ್, ಹೊಳೆಯಪ್ಪ
ಕ/ಚಿ.ಕ: ಬಸವರಾಜ್ ಕೆಸ್ತೂರ್
ಮಾ: ಎನ್.ಎಸ್.ರಾವ್
ಗೀ: ಬಸವರಾಜ್ ಕೆಸ್ತೂರ್



ಗಾ: ವಾಣಿ ಜಯರಾಂ, ಎಸ್.ಪಿ.ಬಾಲಸುಬ್ರಹ್ಮಣ್ಯಂ
ಸಂ: ಹರಿನಾರಾಯಣಯ್ಯ
ಛಾ: ಟಿ.ಎಲ್ಲಪ್ಪ
ಕಲೆ: ಮುತ್ತುಕೃಷ್ಣ
ಸ: ವಿಜಯಭಾಸ್ಕರ್
ಧ್ವ: ಸಿ.ಡಿ.ವಿಶ್ವನಾಥ್, ಎಂ.ಶಿವರಾಜ್
ನೃ: ಕೃಷ್ಣಕುಮಾರ್ (ಧಾರವಾಡ), ಕೆ.ಜಮುನ
ಸಾ: ಜ್ಯೂಡೋ ರತ್ನಂ
ವ: ಎಸ್.ಕೃಷ್ಣಸ್ವಾಮಿ
ಪ್ರ: ಪಿ.ಎಸ್.ರಾಮು
ಸ್ಟು: ಚಾಮುಂಡೇಶ್ವರಿ
ಹಾ: ೧) 'ಗೌರಮ್ಮ ಬರುತಾಳೆ...', ೨) 'ಹೃದಯದಲ್ಲಿ ಆಸೆ

ಮಾಡಿ..', ೩)'ಭೂಮಿಯು ಬಿರಿದು..', ೪)'ಮಣ್ಣಿನ ಮಕ್ಕಳು ನಾವೇ ನಾವು..'

ಕ.ಸಾ: ಊರ ಜಮೀನ್ದಾರ, ಬಡಜನತೆಯನ್ನು ಬಿಡಮಟ್ಟ ಶೋಷಣೆ ಮಾಡಿ ಬೊಕ್ಕಸ ತುಂಬಿಕೊಳ್ಳುವ ಕ್ರೂರಿ. ಆತನಿಗೊಬ್ಬ ಚೆಲುವೆ. ಊರಿಗೆ ಬಂದ ವಿದ್ಯಾವಂತ ಯುವಕನಿಂದ ಗ್ರಾಮದ ನೊಂದವರಿಗೆ ಸಮಾಧಾನ ಸಿಗುತ್ತದೆ. ಸಾಹುಕಾರನ ವಿರುದ್ಧ ನಿಂತ ಯುವಕ, ಅವನ ಮಗಳನ್ನು ವಿವಾಹವಾದ ಮೇಲೆ ಆತನ ಮನಸ್ಸು ಪರಿವರ್ತನೆಯಾಗಿ ಆತನು ರಕ್ಷಕನಾಗುತ್ತಾನೆ. ಹಿಂಸೆಗಳ ಸಾಲುಸಾಲು ಘಟಿಸಿ ಆಕಸ್ಮಿಕಗಳಿಂದ ಆತ ಮತ್ತೆ ಹಳೆಯ ಆದರ್ಶ ವ್ಯಕ್ತಿಯಾಗಿ ಊರ ಹಿತ ಕಾಯುತ್ತಾನೆ.

೫೪೯. ಒಲವು ಗೆಲುವು

(೧೯೭೭ / ವರ್ಣ / ಸಾಮಾಜಿಕ)

ಲಾ: ಶೀನು ಕ್ರಿಯೇಷನ್ಸ್
ಪ್ರೊ: ಎಸ್.ಎ.ಶ್ರೀನಿವಾಸ್ (ಸಾಲಿಗ್ರಾಮ)
ನಿ: ಭಾರ್ಗವ
ಸ.ನಿ: ಕೆ.ಎಸ್.ಚಂದ್ರಶೇಖರ್ ಶರ್ಮ

ಅ: ರಾಜಕುಮಾರ್, ಲಕ್ಷ್ಮೀ, ಬಾಲಕೃಷ್ಣ, ಸಂಪತ್, ತೂಗುದೀಪ ಶ್ರೀನಿವಾಸ್, ಸೀತಾರಾಂ, ಪ್ರಭಾಕರ್, ಚೇತನ ರಾಮರಾವ್, ಜ್ಯೂ.ಶೆಟ್ಟಿ, ಸುರೇಖ, ಸುನಂದ, ಭಾರ್ಗವಿ, ಲಾವಣ್ಯ, ಶಶಿಕಲಾ, ವಿಜಯಲೀಲಾ, ಶ್ರೀಮತಿ, ಶ್ರೀದೇವಿ, ಗಾಯತ್ರಿ, ಭದ್ರಾಚಲಂ
ಕ: ಚಿ.ಕ: ಶಂಕರ್-ಸುಂದರ್
ಮಾ/ಗೀ: ಚಿ.ಉದಯಶಂಕರ್
ಗಾ: ರಾಜಕುಮಾರ್, ಎಸ್.ಜಾನಕಿ
ಸಂ: ಪಿ.ಭಕ್ತವತ್ಸಲಂ
ಛಾ: ಡಿ.ವಿ.ರಾಜಾರಾಂ
ಕಲೆ: ನಾಗೇಶ್ವರರಾವ್
ಸ: ಜಿ.ಕೆ.ವೆಂಕಟೇಶ್
ಧ್ವ: (ಹಾ)ಎಸ್.ಪಿ.ರಾಮನಾಥನ್, (ಮಾ)ಗೋವಿಂದಸ್ವಾಮಿ
ನೃ: ಉಡುಪಿ ಜಯರಾಂ, ದೇವಿ
ಸಾ: ವೈ.ಶಿವಯ್ಯ
ವ: ಎಂ.ನಾಥ್, ರಾಮಚಂದ್ರ, ನಾಗರಾಜ್
ಪ್ರ: ಮೂಗೂರು ಪಿ.ಗುರು, ದೊರೈಸ್ವಾಮಿ, ಕೇಶವ (ಕೇಶಾಲಂಕಾರ: ನಾಗಲಕ್ಷ್ಮೀ, ಮೂಗುರು ಪಿ.ಗುರು)
ಸ್ಟು: ಚಾಮುಂಡೇಶ್ವರಿ
ಹಾ: ೧)'ನನ್ನೆದೆ ಕೋಗಿಲೆಯು...', ೨)'ಸಂಗೀತವೇ ನೀ ನುಡಿಯುವ...', ೩)'ನಾ ಹೇಳಲಾರೆ..', ೪)'ಗಿಣಿಯೇ ನನ್ನ ಅರಗಿಣಿಯೇ...'
ಕ.ಸಾ: ನಾಯಕಿಗ ಸದಾ ಇನ್ನೊಬ್ಬರನ್ನು ಗೇಲಿ ಮಾಡಿ ಸಂತೋಷ ಪಡುವ ಪ್ರವೃತ್ತಿ. ಸನ್ಯಾಸಿಯಂತಿದ್ದ ಅಧ್ಯಾಪಕನನ್ನು ತನ್ನ ಬಲೆಯಲ್ಲಿ ಕೆಡವುತ್ತಾಳೆ. ಆರಂಭದಲ್ಲಿ ಸರಸ ಸಲ್ಲಾಪ, ನಾಟಕಗಳಿಂದ ಆರಂಭವಾದರೂ ಗಂಭೀರವಾಗುವ ಚಿತ್ರಕತೆ ಕಡೆಗೆ ನಾಯಕಿ-ನಾಯಕರ ಸಮಾಗಮದೊಂದಿಗೆ ಮುಕ್ತಾಯವಾಗುತ್ತದೆ.

೫೫೦. ಶುಭಾಶಯ

(೧೯೭೭ / ವರ್ಣ / ಸಾಮಾಜಿಕ)

ಲಾ: ಜಯಚಿತ್ರ ಪ್ರೊಡಕ್ಷನ್ಸ್
ಪ್ರೊ: ಟಿ.ಹೆಚ್.ರಾಮಮೂರ್ತಿ

ನಿ: ಎ.ಟಿ.ತ್ಯಾಗರಾಜನ್
ಸ.ನಿ: ವಾಸುದೇವ ಗಿರಿಮಾಜಿ
ಅ: ಶ್ರೀನಾಥ್, ಜಯಂತಿ, ಜಯಮ್ಮ, ಕಲ್ಯಾಣಕುಮಾರ್, ಹೇಮಾ ಚೌಧುರಿ, ದ್ವಾರಕೀಶ್, ಬೇಬಿ ರೇಖಾ
ಕ/ಚಿ.ಕ: ಬಾಲಮುರುಗನ್
ಮಾ: ಆರ್.ಎನ್.ಜಯಗೋಪಾಲ್
ಗೀ: ಆರ್.ಎನ್.ಜಯಗೋಪಾಲ್, ವಿಜಯನಾರಸಿಂಹ
ಗಾ: ಪಿ.ಸುಶೀಲ, ಎಸ್.ಪಿ.ಬಾಲಸುಬ್ರಹ್ಮಣ್ಯಂ
ಸಂ: ಕೆ.ಸಂಕುಣ್ಣಿ
ಛಾ: ಎಂ.ಕರ್ಣನ್
ಕಲೆ: ರಂಗಸ್ವಾಮಿ
ಸ: ಎಂ.ರಂಗರಾವ್
ಧ್ವ: ಆರ್ಮುಗಂ, ಎಸ್.ಪಿ.ರಾಮನಾಥನ್
ನೃ: ಉಡುಪಿ ಜಯರಾಂ-ದೇವಿ
ವ: ನಜರೆ, ಗೋಪಾಲಕೃಷ್ಣ
ಪ್ರ: ವೀರಾಸ್ವಾಮಿ, ರಾಜಗೋಪಾಲ್
ಸ್ಟು: ಪ್ರೀಮಿಯರ್
ಹಾ: ೧)'ಮಮತೆಯ ಬಳ್ಳಿಯಲಿ...', ೨)'ಅಮ್ಮ ಎನ್ನುವ ಕರೆ ಚಂದ..', ೩)'ರಾಮ ಕಂಡ ಸೀತೆಯೋ...', ೪)'ಪ್ರೇಮ ವೀಣೆಯ ಶೃತಿಯ ಸೇರಿಸಿದೆ...', ೫)'ಬಲವಾ ಒಡವೆ ತೊಟ್ಟ ಪ್ಯೆಯ್ಯಾರಿ...', ೬)'ಅಮ್ಮಾ ಎನ್ನುವ ಕರೆ ಚಂದ...'
ಸೆ: ಉದ್ದ: ೩೮೨೩.೪೧ ಅಡಿಗಳು, 'ಯು' ಸರ್ಟಿಫಿಕೇಟ್
ಕ.ಸಾ: ಅನಾಥಾಶ್ರಮದ ಅಧ್ಯಾಪಕಿಯರಿಬ್ಬರು ಆತ್ಮೀಯ ಗೆಳತಿಯರು. ಒಬ್ಬಳು ಚಿತ್ರಕಲಾವಿದನೊಬ್ಬನ ಕಲಾರಾಧಕಿ. ಪತ್ರಮುಖೇನ ಪ್ರೇಮಿಸುವ ಇವರು, ಆದರೆ ಆಕಸ್ಮಿಕವಾಗಿ ಅದಲು ಬದಲಾಗಿ ವಿವಾಹವಾಗುವರು. ಪ್ರೀತಿಗೂ, ತ್ಯಾಗಕ್ಕೂ ಸಣ್ಣ ವ್ಯತ್ಯಾಸ ಮಾತ್ರ. ಯಾವುದು ಯಾವುದಾಗಿಯಾದರೂ ಬದಲಾಗಿಬಿಡಬಹುದು. ಆದರೆ ದೇಹ - ಮನಸ್ಸು..? - ಕುತೂಹಲ ಕೆರಳಿಸುವ ಕತೆ.

೫೫೧. ಗಲಾಟೆ ಸಂಸಾರ

(೧೯೭೭ / ವರ್ಣ / ಸಾಮಾಜಿಕ)

ಲಾ: ಸಪ್ತಸ್ವರ ಮೂವಿ ಮೇಕರ್ಸ್
ಪ್ರೊ: ಸಿ.ಜಯರಾಂ
ನಿ: ಸಿ.ವಿ.ರಾಜೇಂದ್ರನ್
ಸ.ನಿ: ಮಲ್ಲೇಶ್, ಸಂತಾನಂ
ಅ: ವಿಷ್ಣುವರ್ಧನ್, ರಜನೀಕಾಂತ್, ಬಾಲಕೃಷ್ಣ, ಅಶ್ವತ್ಥ್, ವಜ್ರಮುನಿ, ಮಂಜುಳ, ಶುಭ, ಹಲಂ, ಗಾಯತ್ರಿ, ಲಾವಣ್ಯ, ಬೇಬಿ ರೇಖಾ, ದ್ವಾರಕೀಶ್, ಜೋಕರ್ ಶ್ಯಾಂ, ಅಯ್ಯಂಗಾರ್, ಭೀಮರಾವ್, ಅಶ್ವತ್ಥನಾರಾಯಣ
ಕ: ಗೋಪು

ಚಿ.ಕ: ಸಿ.ವಿ.ರಾಜೇಂದ್ರನ್
ಮಾ/ಗೀ: ಚಿ.ಉದಯಶಂಕರ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ವಾಣಿ ಜಯರಾಂ, ಎಸ್.ಜಾನಕಿ
ಸಂ: ಪಿ.ಭಕ್ತವತ್ಸಲಂ
ಛಾ: ಎಸ್.ವಿ.ಶ್ರೀಕಾಂತ್
ಕಲೆ: ನಾಗೇಶ್ವರರಾವ್
ಸ: ಜಿ.ಕೆ.ವೆಂಕಟೇಶ್
ಧ್ವ: (ಹಾ) ಎಸ್.ಪಿ.ರಾಮನಾಥನ್, (ಮಾ) ಕೋಟೇಶ್ವರರಾವ್
ನೃ: ಚಿನ್ನಿ-ಸಂಪತ್
ಸಾ: ವೈ.ಶಿವಯ್ಯ
ವ: ರಾಮಾಪುರಂ ಗುರುಸ್ವಾಮಿ, ನಾಗರಾಜ್, ತಂಗಪ್ಪನ್
ಪ್ರ: ಮನ್ಮಥರಾವ್, ಶ್ರೀನಿವಾಸನ್
ಸ್ಟು: ಚಾಮುಂಡೇಶ್ವರಿ
ಹಾ: ೧)'ನಾಳೆ ನಾ ಬರುವೆ...', ೨)'ಓ ಇನಿಯಾ..', ೩)'ಏನೇನೋ ಕೇಳುತಿದೆ..', ೪)'ಧರ್ತಿಕೋ ಆಕಾಶ್ ಪುಕಾರೆ...', ೫)'ಬಯಸಿದರೆ ಡಿಂ ಡಿಂ ಡಿಂ...'
ಸೆ: ಉದ್ದ - ೪೪೩೦.೫೨, 'ಯು' ಸರ್ಟಿಫಿಕೇಟ್, ೧೫-೧೦-೧೯೭೭
ಕ.ಸಾ: ಹಾಸ್ಯಪ್ರಧಾನವಾದ ಕಥೆ. ಅಸಮ ದಾಂಪತ್ಯ, ವಿರಸಗಳ ಮೂಲಕ ಯಾವುದೋ ಬೇನಾಮಿ ಆಸ್ತಿಯೊಂದನ್ನು ದಕ್ಕಿಸಿಕೊಳ್ಳುವ ಹಿನ್ನೆಲೆಯಲ್ಲಿ ಸಾಂದರ್ಭಿಕ ಹಾಸ್ಯವನ್ನು ತಂದು, ಸುಖಾಂತಗೊಳಿಸಲಾಗಿದೆ. ಯಾರೋ ಗಂಡ, ಯಾರದೋ ಹೆಂಡತಿ, ಯಾರೋ ಪ್ರೀತಿಸುವುದು.. ಆಸ್ತಿಗಾಗಿ ಎದ್ದು ಬರುವ ಪ್ರೀತಿ ಇತ್ಯಾದಿಗಳೇ ಸರಸಮಯವಾಗುತ್ತವೆ.

೫೫೨. ಚಂಡಮಾರುತ

(೧೯೭೭ / ಕಪ್ಪು-ಬಿಳುಪು / ಸಾಮಾಜಿಕ)

ಲಾ: ಪಟ್ಟಾಭಿರಾಮರೆಡ್ಡಿ ಪ್ರೊಡಕ್ಷನ್ಸ್
ಪ್ರೊ/ನಿ: ಪಟ್ಟಾಭಿರಾಮರೆಡ್ಡಿ
ಸ.ನಿ: ಸಿ.ಚಂದ್ರಶೇಖರ್
ಅ: ಎಂ.ಭಕ್ತವತ್ಸಲ, ಸ್ನೇಹಲತಾರೆಡ್ಡಿ, ಅಶೋಕ್ ಮಂದಣ್ಣ, ಮಂಜುಳ, ಸಿ.ಚಂದ್ರಶೇಖರ್, ನಂದನ ಇಹಾಬಿಲಿಯಾ, ಇ. ಸುರೇಂದ್ರನಾಥ್, ಎಂ.ಪಿ.ಭಾಸ್ಕರನ್, ಅಶಿಕಶ್ಯಪ್, ಇಳಾ ಚಂದ್ರಶೇಖರ್, ಕೋನಾರ್ಕ್ ರೆಡ್ಡಿ, ಲೆಸ್ಲೀ ಮಚಾಡೋ, ಬಿ.ಎಸ್.ಆಚಾರ್
ಕ/ಚಿ.ಕ/ಮಾ: ಪಟ್ಟಾಭಿರಾಮ ರೆಡ್ಡಿ
ಸಂ: ಹೃಷಿಕೇಶ್ ಮುಖರ್ಜಿ
ಛಾ: ಟಾಂ ಕೋವನ್
ಕಲೆ: ವಿದ್ಯಾಸಾಗರ್
ಸ: ಕೋನಾರ್ಕ್ ರೆಡ್ಡಿ
ಧ್ವ: (ಹಾ) ಗೋವಿಂದಸ್ವಾಮಿ
ವ: ಇಳಾ ಚಂದ್ರಶೇಖರ್
ವಿ: ೧೬ ಎಂ.ಎಂ.ನಿಂದ ೩೫ ಎಂ.ಎಂ.ಗೆ ಬ್ಲೋಅಪ್ ಆದದ್ದು
ಸೆ: ಉದ-೩೦೧೭, ೧೨-ರೀಲ್‌ಗಳು, 'ಯು' ಸರ್ಟಿಫಿಕೇಟ್, ೨೮-೧೧-೧೯೭೭
ಕ.ಸಾ: ೧೯೭೫ರ ರಾಜಕೀಯ, ಆರ್ಥಿಕ ಆತಂಕಗಳ ಹಿನ್ನೆಲೆಯಲ್ಲಿ ಯುವಜನಾಂಗ, ಜವಾಬ್ದಾರಿ ಸರ್ಕಾರವೊಂದನ್ನು ಬಯಸುತ್ತಿತ್ತು. ಅದಕ್ಕಾಗಿ ಜಯಪ್ರಕಾಶ್ ನಾರಾಯಣರ ಅಹಿಂಸಾ ವಿಧಾನ ಅಥವಾ ಹಿಂಸೆಯನ್ನು ಬೆಂಬಲಿಸಿದ ಗುಂಪುಗಳೊಂದಿಗೆ ತನ್ನನ್ನು ಗುರುತಿಸಿಕೊಳ್ಳುವ ತುಡಿತ. ಈ ಹಿನ್ನೆಲೆಯಲ್ಲಿ ಕಾಲೇಜು ವಿದ್ಯಾರ್ಥಿಗಳಿಬ್ಬರು ಹಿಂಸೆಯನ್ನು ಪ್ರಚೋದಿಸುತ್ತಿದ್ದ ತನ್ನ ಅಧ್ಯಾಪಕರ ಹಿಂಬಾಲಕರಾಗಿ ಪಡುವ ಸಂಕಷ್ಟಗಳು. ನಕ್ಸಲೈಟ್, ಪೋಲೀಸರ ಕ್ರೌರ್ಯ, ಇತ್ಯಾದಿಗಳ ಚಿತ್ರಣ.

೫೫೩. ಕಿಟ್ಟು-ಪುಟ್ಟು

(೧೯೭೭ / ವರ್ಣಚಿತ್ರ / ಸಾಮಾಜಿಕ)

ಲಾ: ದ್ವಾರಕೀಶ್ ಚಿತ್ರ
ಪ್ರೊ: ದ್ವಾರಕೀಶ್

ನಿ: ಸಿ.ವಿ.ರಾಜೇಂದ್ರನ್
ಸ.ನಿ: ಹೆಚ್.ವಿ.ಆರ್.ಸಿಂಗ್ (ಬಾಬು)
ಅ: ವಿಷ್ಣುವರ್ಧನ್, ದ್ವಾರಕೀಶ್, ಲೋಕನಾಥ್, ತೂಗುದೀಪ ಶ್ರೀನಿವಾಸ್, ಪ್ರಭಾಕರ್, ನಾಗೇಶ್, ನಾಗರಾಜ್, ಮಂಜುಳ, ವೈಶಾಲಿ, ಕೆ.ವಿಜಯ, ಹಲಂ
ಕ/ಚಿ.ಕ: ಎಂ.ಡಿ.ಸುಂದರ್
ಮಾ/ಗೀ: ಚಿ.ಉದಯಶಂಕರ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಜೇಸುದಾಸ್, ಎಸ್.ಜಾನಕಿ, ಪಿ.ಸುಶೀಲ
ಸಂ: ಯಾದವ್ ವಿಕ್ಟರ್
ಛಾ: ಎಸ್.ಎಸ್.ಲಾಲ್
ಕಲೆ: ರಮೇಶ್
ಸ: ರಾಜನ್ ನಾಗೇಂದ್ರ
ಧ್ವ: (ಹಾ) ರಾಮನಾಥನ್, (ಮಾ) ಗೋವಿಂದಸ್ವಾಮಿ
ನೃ: ಉಡುಪಿ ಜಯರಾಮ್, ದೇವಿ
ಸಾ: ಶ್ಯಾಂ ಸುಂದರ್ ಶೆಟ್ಟಿ
ವ: ನಾಗರಾಜ್
ಪ್ರ: ಬಲರಾಂ
ಸ್ಟು: ಚಾಮುಂಡೇಶ್ವರಿ
ಹಾ: ೧) 'ನಿಲ್ಲೇ ಗೌರಮ್ಮ...', ೨) 'ನಿಲ್ಲೋ ಕಾಮಣ್ಣ...', ೩) 'ಓ ಜಾನಿ...', ೪) 'ಮಾತೊಂದ ಹೇಳುವೆ...'
ಕ.ಸಾ: ಇಬ್ಬರು ಉಢಾಳ ಸಹೋದರರು. ಅವರಿಂದ ಹೆತ್ತವರಿಗೆ ಸಿಟ್ಟು. ಇಲ್ಲಿ ಪ್ರೇಮಕ್ಕೆ ಅಸ್ತಿತ್ವವಿಲ್ಲ. ಏನೂ ತೋಚದರೆಯಿಲ್ಲ. ಆದರೆ ಹುಡುಗರಲ್ಲಿ ಬಿಬ್ಬನ ತರನಾಗಿ ಬೇರೊಬ್ಬ ವ್ಯಕ್ತಿ ಬರುವುದರಿಂದ ಗೋಜಲುಗಳು, ಏನೆಲ್ಲಾ ಸಮಸ್ಯೆಗಳು ಉದ್ಭವಿಸಿ, ಕಡೆಗೆ ಹಾಸ್ಯ, ಸಾಹಸ, ಪ್ರಣಯಗಳ ಸಂಭ್ರಮದ ಮೂಲಕ ನಿರೂಪಿತವಾಗಿದೆ.

೫೫೪. ಗಂಡ-ಹೆಂಡತಿ

(೧೯೭೭ / ವರ್ಣ / ಸಾಮಾಜಿಕ)
ಲಾ: ಶ್ರೀ ಸತ್ಯ ಚಿತ್ರ
ಪ್ರೊ: ಸತ್ಯನಾರಾಯಣ, ಸೂರ್ಯನಾರಾಯಣ
ನಿ: ಕೆ.ಎಸ್.ಪ್ರಕಾಶರಾವ್
ಸ.ನಿ: ವಿ.ಪಟ್ಟಾಭಿ
ಅ: ಶ್ರೀನಾಥ್, ಜಯಂತಿ, ಮಂಜುಳಾ, ಲೀಲಾವತಿ, ದಿನೇಶ್, ಶಿವರಾಂ, ಪ್ರಮೀಳಾ ಜೋಷಾಯ್, ಉಮಾ ಶಿವಕುಮಾರ್, ಬಾಲಕೃಷ್ಣ, ದ್ವಾರಕೀಶ್, ಮಮತಾ ಶೆಣೈ, ವಾಣಿಚಂದ್ರ, ಮಾನಟರಾಜ್
ಕ: ಶ್ರೀಮತಿ ವಿಜಯಲಕ್ಷ್ಮೀ
ಚಿ.ಕ: ಕೆ.ಎಸ್.ಪ್ರಕಾಶರಾವ್
ಮಾ/ಗೀ: ಚಿ.ಉದಯಶಂಕರ್

ಗಾ: ಪಿ.ಸುಶೀಲ, ಎಸ್.ಪಿ.ಬಾಲಸುಬ್ರಹ್ಮಣ್ಯಂ, ವಾಣಿ ಜಯರಾಂ
ಸಂ: ಕೆ.ಗೋಪಾಲರಾವ್
ಛಾ: ಪಿ.ಭಾಸ್ಕರರಾವ್
ಕಲೆ: ತೋಟಾ
ಸ: ವಿಜಯಭಾಸ್ಕರ್
ಧ್ವ: ಎಸ್.ಪಿ.ರಾಮನಾಥನ್, ಗೋವಿಂದಸ್ವಾಮಿ
ನೃ: ಎಂ.ಎ.ಸಲೀಂ
ವ: ಎಂ.ಕೃಷ್ಣ
ಸ್ಟು: ಚಾಮುಂಡೇಶ್ವರಿ, ಪ್ರೀಮಿಯರ್
ಹಾ: ೧) 'ಆಡುವ ಬೊಂಬೆಗಳಿಲ್ಲ...', ೨) 'ಹೆಣ್ಣಿನ ಮಾತಿಗೆ...', ೩) 'ಇನ್ನೂ ಇನ್ನೂ ಹತ್ತಿರ ಬರಲೇನೇ...', ೪) 'ಕಣ್ಣಿನ ಮುಂದೆ...', ೫) 'ಹಾಡಬೇಕೆ, ಏಕೆ...'
ವಿ: ಶ್ರೀನಾಥ್ ದ್ವಿಪಾತ್ರಾಭಿನಯ
ಕ.ಸಾ: ಗಂಡ ಹೆಂಡತಿ, ಮಗು ಇರುವ ಸುಖಸಂಸಾರ. ಯಾರದೋ ಪ್ರೇರಣೆಯಿಂದ ಸಂಶಯದ ಬೀಜ, ಕೆಲವು ಕಾಕತಾಳೀಯದಿಂದಾಗಿ ಆ ಸಂಶಯದ ಬೀಜ ಚಿಗುರೊಡೆದು ಹೆಮ್ಮರವಾಯಿತು. ಸಂಸಾರ ಒಡೆಯಿತು. ತಾಯಿಗೆ ಮಗನನ್ನು ಬೆಳೆಸುವ ಹೊಣೆ, ಗಂಡ ಏನೇನೋ ಮಾಡಿ ಶ್ರೀಮಂತನಾದ. ಮಗನಿಗೆ ಮುಂದೆ ಓದಲು ಸಾಧ್ಯವಿಲ್ಲ. ನೆಂಟರಿಷ್ಟರು ಗೇಲಿ ಮಾಡಿದರು. ತಂದೆಯೇ ಹತ್ತಿರ ಕರೆದ, ನೆರವಾದ, ಆದರೆ ಛೇಡಿಸಿದ ನೆಂಟರಿಗೆ, ತನ್ನನ್ನು ಬಿಟ್ಟು ಹೋದ ಹೆಂಡತಿಗೆ ಬುದ್ಧಿ ಕಲಿಸುವ ಛಲ ಹೊತ್ತ. ವಿದ್ಯಾವಂತನಾದ ಮಗ ತಂದೆ-ತಾಯಿಯನ್ನು ಮತ್ತೆ ಒಂದುಗೂಡಿಸಿದ ರೀತಿಯೇ ಕಥೆಯ ತಿರುಳು.

೫೫೫. ಅನುರೂಪ

(೧೯೭೭ / ವರ್ಣ / ಸಾಮಾಜಿಕ)
ಲಾ: ಲಂಕೇಶ್ ಚಿತ್ರ
ಪ್ರೊ/ನಿ: ಪಿ.ಲಂಕೇಶ್
ಸ.ನಿ: ರಾ.ನಾಗೇಶ್, ಕೃಷ್ಣ ಮಾಸಡಿ

ಅ: ಅನಂತನಾಗ್, ಆರತಿ, ಪ್ರಶಾಂತಿ, ಟಿ.ಎನ್.ಸೀತಾರಾಮ್, ಸಿ.ಆರ್.ಸಿಂಹ, ಟಿ.ಎಂ.ಶ್ರೀಧರಮೂರ್ತಿ, ಜಯರಾಜನ್
ಕ/ಚಿ.ಕ/ಮಾ/ಗೀ: ಪಿ.ಲಂಕೇಶ್
ಗಾ: ಬಿ.ಕೆ.ಸುಮಿತ್ರ, ಮುರಳಿ, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಪಿ.ಸುಶೀಲ
ಸಂ: ಹೃಷಿಕೇಶ್ ಮುಖರ್ಜಿ
ಛಾ: ಬಿ.ಸಿ.ಗೌರಿಶಂಕರ್
ಕಲೆ: ಚಂದ್ರನಾಥ, ಕಮಲೇಶ್
ಸ: ರಾಜೀವ ತಾರನಾಥ್, ಸಿ.ಅಶ್ವತ್ಥ್
ಧ್ವ: ರಮೇಶ್ ಕಾಮತ್
ಹಾ: ೧) 'ನೀನಿರುವುದು ನಿಜವಾದರೂ...', ೨) 'ನಮ್ಮ ಹದಯದ ..', ೩) 'ಇಂಗ್ಲಿಷ್ ಮ್ಯಾಥಮ್ಯಾಟಿಕ್ಸ್...'
ವಿ: ರಾಜ್ಯಸರ್ಕಾರದ ಅತ್ಯುತ್ತಮ ಸಂಭಾಷಣೆ (ಪಿ.ಲಂಕೇಶ್), ತೃತೀಯ ಅತ್ಯುತ್ತಮ ಚಿತ್ರ (೭೭-೭೮) ಪ್ರಶಸ್ತಿಗಳು
ಕ.ಸಾ: ಕಾಲೇಜು ವಿದ್ಯಾರ್ಥಿಗಳು, ಬದಲಾಗುತ್ತಿರುವ ಮೌಲ್ಯಗಳು. ಅಲ್ಲಿ ನ್ಯಾಯ-ನಿಷ್ಠೆ ಬಯಸಿ ಬರುವ ವಿದ್ಯಾರ್ಥಿ ಅಧ್ಯಾಪಕರ ಪಾಡು. ಪ್ರೇಮ ದುರಂತ, ವಿದ್ಯಾಲಯದ ಒಳ ರಾಜಕೀಯ, ದೊಡ್ಡವರ ರಾಜೀ ಮನೋಭಾವ ಇತ್ಯಾದಿ ಅಂಶಗಳನ್ನು ಚಿತ್ರಿಸುವ ಪ್ರಯತ್ನ.

೧೯೭೮

೫೫೬. ಕುದುರೆ ಮುಖ

(೧೯೭೮ / ವರ್ಣ / ಪತ್ತೇದಾರಿ)
ಲಾ: ಶ್ರೀ ಭಗವತಿ ಪ್ರೊಡಕ್ಷನ್ಸ್
ಪ್ರೊ/ನಿ: ವೈ.ಆರ್.ಸ್ವಾಮಿ
ಸ.ನಿ: ಎ.ಟಿ.ರಘು

ಅ: ಅನಂತನಾಗ್, ಆರತಿ, ಅಂಬರೀಷ್, ಸುಂದರಕೃಷ್ಣ ಅರಸ್, ಜೂ.ಶೆಟ್ಟಿ, ಹಲಂ, ವಾಮನ್, ಜಯಮಾಲಿನಿ, ಮಮತಾ ಶೆಣೈ, ಎಂ.ಎಸ್.ಸತ್ಯ, ಶಾಂತಾರಾಂ, ಎನ್.ಎಸ್.ರಾವ್, ಬಿ.ಎಸ್.ನಾರಾಯಣರಾವ್, ಜಯಕಲಾ, ಬೇಬಿ ರೇಖಾ, ಶ್ರೀರಾಂ, ಪದ್ಮನಾಭರಾವ್
ಕ: ಶ್ರೀ ಭಗವತಿ ಪ್ರೊಡಕ್ಷನ್ಸ್ ಕಥಾ ವಿಭಾಗ
ಚಿ.ಕ: ಸ್ವಾಮಿ
ಮಾ: ಎನ್.ಎಸ್.ರಾವ್
ಗೀ: ವಿಜಯನಾರಸಿಂಹ, ಆರ್.ಎನ್.ಜಯಗೋಪಾಲ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್.ಜಾನಕಿ, ವಾಣಿ ಜಯರಾಂ, ಜೇಸುದಾಸ್
ಸಂ: ಪಿ.ಭಕ್ತವತ್ಸಲಂ
ಛಾ: ಆರ್.ಚಿಟ್ಟಿಬಾಬು
ಕಲೆ: ಬಿ.ಎಸ್.ಕೇಶವ ರಾವ್
ಸ: ಟಿ.ಜಿ.ಲಿಂಗಪ್ಪ
ಧ್ವ: ಎಸ್.ಪಿ.ರಾಮನಾಥನ್, ಸೀತಾರಾಂ
ನೃ: ಚಿನ್ನಿ-ಸಂಪತ್
ಸಾ: ವೆ.ಶಿವಯ್ಯ
ವ: ಬಿ.ಅಪ್ಪಾರಾವ್
ಪ್ರ: ಮನ್ಮಥರಾವ್, ವಿ.ರಾಜಗೋಪಾಲ್
ಸ್ಟು: ಕಂಠೀರವ
ಹಾ: ೧) 'ಸೈ ಸೈ ಲೆ ಸೈಲೆ ಸರದಾರ...', ೨) 'ಇಂದೇ ಸವಿ ಸಮಯ...', ೩) 'ತೂರಾಡೋರೆಲ್ಲಾ...', ೪) 'ನೀ ಬಂದೆ ಮನದಿ ನಿಂದೆ...'
ಕ.ಸಾ: ಆದಿತ್ಯರ ಕಾಲದ ನಿಧಿಯೊಂದನ್ನು ಕಂಡು ಹಿಡಿದ ಚರಿತ್ರಕಾರ, ಅದರ ನಕ್ಷೆ ಸಿದ್ಧಪಡಿಸಿ ದುಷ್ಟರಿಂದ ಹಿಂಬಾಲಿಸಲ್ಪಟ್ಟು, ಅದನ್ನು ಅವರ ಕೈಗೆ ಸಿಗದಂತೆ ಮರೆಸಿಡುವಲ್ಲಿ ಕೊಲೆಗೀಡಾಗುತ್ತಾನೆ. ನಂತರ ಅವನ ಮಗಳು ಕುದುರೆಮುಖದ ಲಾಂಛನವುಳ್ಳ ನಾಯಕನ ಸಹಾಯದಿಂದ ನಿಧಿಯನ್ನು ಪತ್ತೆ ಹಚ್ಚುತ್ತಾಳೆ. ಸಾಹಸ, ಪ್ರಣಯಭರಿತ ಚಿತ್ರ.

೫೫೭. ದೇವದಾಸಿ

(೧೯೭೮ / ವರ್ಣ / ಸಾಮಾಜಿಕ)
ಲಾ: ರಾಜ್ ಎಂಟರ್‌ಪ್ರೈಸಸ್
ಪ್ರೊ: ಎಂ.ಎಂ.ನಾರಾಯಣ್, ಎಂ.ಎಂ.ಕೋದಂಡರಾಮ್, ಎಂ.ಎಂ.ನಾಗರಾಜ್, ಸಿ.ವಿ.ರಾಜು
ನಿ: ಸಿ.ವಿ.ರಾಜು
ಸ.ನಿ: ಜಗದೀಶ್, ರಾಮರಾವ್
ಅ: ಮಾ।ಹಿರಣ್ಣಯ್ಯ (ದ್ವಿಪಾತ್ರ), ಜಯಂತಿ, ಉದಯಕುಮಾರ್, ನರಸಿಂಹರಾಜು, ಕೆ.ಆರ್.ವಿಠಲ್, ಲತಾ, ಪಂಢರಿಬಾಯಿ, ಲೀಲಾವತಿ, ರೇಖಾ, ರಾಜಶ್ರೀ, ಶಾಂತಾ ಉಪೇಂದ್ರ, ಮಾಲಿನಿ, ಅರುಣ್‌ಕುಮಾರ್,

ವಸಂತಕುಮಾರ್, ವೆಂಕಟರಾಮಯ್ಯ, ಡಿಂಗ್ರಿ ನಾಗರಾಜ್, ಆರ್ಮೋನಿ ಸುಬ್ಬಣ್ಣ, ಉಮೇಶ್, ದೊರೆ, ಎಂ.ಎಂ.ನಾಗರಾಜ್
ಕ: ಕೆ. ಹಿರಣ್ಣಯ್ಯ ವಿರಚಿತ 'ದೇವದಾಸಿ' ನಾಟಕ
ಚಿ.ಕ: ಸಿ.ವಿ.ರಾಜು
ಮಾ: ಮಾ।ಹಿರಣ್ಣಯ್ಯ
ಗೀ: ಕು.ರ.ಸೀತಾರಾಮಶಾಸ್ತ್ರಿ, ಕಣಗಾಲ್ ಪ್ರಭಾಕರಶಾಸ್ತ್ರಿ, ವಿಜಯನಾರಸಿಂಹ, ಕೆ.ಹಿರಣ್ಣಯ್ಯ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಪಿ.ಬಿ.ಶ್ರೀನಿವಾಸ್, ಎಸ್.ಜಾನಕಿ, ವಾಣಿ ಜಯರಾಂ, ಪೂರ್ಣಚಂದ್ರರಾವ್, ಕೃಷ್ಣಮೂರ್ತಿ
ಸಂ: ಸಿ.ವಿ.ರಾಜು
ಛಾ: ಬಿ.ಎನ್.ಹರಿದಾಸ್
ಕಲೆ: ವಾಲಿ
ಸ: ಜಿ.ಕೆ.ವೆಂಕಟೇಶ್
ಧ್ವ: ಗೋವಿಂದಸ್ವಾಮಿ, ಶಿವರಾವ್, ಸೀತಾರಾಂ, ರಾಮನಾಥನ್, ಕಣ್ಣನ್, ಮಾಣಿಕ್ಯಂ, ಸಂಪತ್
ನೃ: ಪಿ.ಎಸ್.ಗೋಪಾಲಕೃಷ್ಣ
ವ: ಸೆಲ್ವರಾಜ್, ಸೂರ್ಯನಾರಾಯಣ ಮೂರ್ತಿ, ರವಿ, ಸುಬ್ಬರಾವ್, ಗೋಪಾಲಕೃಷ್ಣ, ಚಂದ್ರಕಾಂತ್ ಟೈಲರ್ಸ್
ಪ್ರ: ಅರ್ಜುನರಾವ್, ಧನಕೋಟಿ, ರಾಜಗೋಪಾಲ್, ಪಾತ್ರುಡು
ಸ್ಟು: ಚಾಮುಂಡೇಶ್ವರಿ, ಪ್ರೀಮಿಯರ್
ಹಾ: ೧)'ಸಕಲ ಕಲಾ ವಲ್ಲಭ...', ೨)'ಬದುಕು ಜಟಕಾ ಬಂಡಿ...', ೩)'ಹೆಂಡ ಹೆಂಡ್ತಿ...', ೪)'ಅಥಾತೋ ಬ್ರಹ್ಮ...', ೫)'ಓರೆ ನೋಟ...', ೬)'ಕೃಷ್ಣ ಎನಬಾರದೆ..', ೭)'ಜಗವಾದಿ ದೇವತೆಯು...', ೮)'ಓ ರಸಿಕಾ ಈ ನಿಮಿಷಾ...', ೯)'ನೀ ಒಲಿದ ಸೆಳೆದ...', ೧೦)'ಲೋಕ ಸುಂಕೆ...', ೧೧)'ನಾ ಕಂಡೆ ನಿನ್ನಲ್ಲೆ...', ೧೨)'ಸುಖಿಜೀವ ಸುರಪಾನವಿದೇ...'
ವಿ: ಮಾ। ಹಿರಣ್ಣಯ್ಯ ದ್ವಿಪಾತ್ರದಲ್ಲಿ ಅಭಿನಯಿಸಿದಾರೆ.
ಸೆ: ಉದ ೪೫೧೩.೭೮, 'ಯು' ೭-೧-೧೯೭೮
ಕ.ಸಾ: ಒಳ್ಳೆಯ ಮನಸ್ಸಿನ ವೇಶ್ಯೆ, 'ಕಲಿ' ಗಿಂತ ಹೆಣ್ಣಿನಕ್ಕೆ ಆದ್ಯತೆ ನೀಡುವ ಶ್ರೀಮಂತ ಪುರುಷರು. ಇಂಥವರ ಮಧ್ಯೆ ದಳ್ಳಾಳಿಗಳ ಕಾಟ. ಬದುಕಿನ ವೈರುಧ್ಯಗಳ ಚಿತ್ರಣ.

೫೫೮. ಹಳ್ಳೀ ಹೈದ

(೧೯೭೮ / ವರ್ಣ / ಸಾಮಾಜಿಕ)
ಲಾ: ಗಜೇಂದ್ರ ಪ್ರೊಡಕ್ಷನ್ಸ್
ಪ್ರೊ: ಗಜೇಂದ್ರ ಮಣಿ
ನಿ: ಅಮೃತಂ
ಸ.ನಿ: ಇ.ದಾಮೋದರನ್, ವಿಶ್ವಕುಮಾರ್
ಅ: ಶ್ರೀನಾಥ್, ಕೆ.ಎಸ್.ಅಶ್ವತ್, ಟಿ.ಎನ್.ಬಾಲಕೃಷ್ಣ, ದ್ವಾರಕೀಶ್, ಶಿವರಾಂ, ಅಂಬರೀಷ್, ಮಂಜುಳ, ಶುಭ, ರೋಜಾರಮಣಿ, ಜಯಶ್ರೀ, ರಾಜೇಶ್ವರಿ, ರಾಜಾನಂದ್, ಜಿ.ಎಸ್.ವಾಸನ್, ನಟರಾಜ್, ಲೋಕೇಶ್, ನಾಗರಾಜ್, ಪುಟ್ಟಣ್ಣ, ರತ್ನಾಕರ್
ಕ/ಚಿ.ಕ: ಟಿ.ಎನ್.ಬಾಲು
ಮಾ: ಕ.ಸೀತಾರಾಮ್
ಗೀ: ಚಿ ಉದಯಶಂಕರ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್.ಜಾನಕಿ, ಎಲ್.ಆರ್.ಈಶ್ವರಿ
ಸಂ: ವೆಂಕಟರತ್ನಂ, ಶ್ಯಾಂಪ್ರಸಾದ್ ಮುಖರ್ಜಿ
ಛಾ: ಗಜೇಂದ್ರ ಮಣಿ
ಕಲೆ: ಬಿ.ನಾಗರಾಜನ್
ಸ: ಎಂ.ರಂಗರಾವ್
ಧ್ವ: ಸಿ.ಟಿ.ವಿಶ್ವನಾಥನ್
ನೃ: ಮಧುರ ರಾಮು
ಸಾ: ಅಂಬೂರ್ ಬಾಬು
ವ: ತಂಗಪ್ಪನ್, ದೊರೆ, ನಜ್ರೆ ನಾರಾಯಣ್
ಪ್ರ: ನಾಗೇಶ್ವರರಾವ್, ಜಿ.ಎಸ್.ವಾಸನ್, ಸುಬ್ರಹ್ಮಣ್ಯಂ (ಕೇಶಾಲಂಕಾರ: ರಾಜು)
ಸ್ಟು: ಪ್ರೀಮಿಯರ್
ಹಾ: ೧)'ಹೂವು ಬೇಕೆ ಹೂವು..', ೨)'ಅರಗಿಳಿ ಇನ್ನು...', ೩)'ಸುತ್ತಲೂ ಕಣ್ಣುಗಳು...', ೪)'ಹಾಡು ಕೇಳುವಾ..', ೫)'ಪ್ರೇಮ ಕಾವ್ಯ...'
ಕ.ಸಾ: ಹಳ್ಳಿಯ ಬದುಕಿನಲ್ಲಿ ಮುಗ್ಧರು ಮುಗ್ಧರು ಅಧಿಕ ಎಂಬುದರಿಂದ ಆರಂಭಿಸಿ, ಆಧುನಿಕ ವಿದ್ಯೆ, ಪಟ್ಟಣದ ಆಕರ್ಷಣೆ ಮುಗತೆಯನ್ನು ನಾಶ ಮಾಡುತ್ತದೆ ಎಂಬ ತೀರ್ಮಾನ. ಇದಕ್ಕೆ ಒಳ್ಳೆಯ-ಕೆಟ್ಟ ಹೆಣ್ಣುಗಳನ್ನು ತಳುಕು ಹಾಕಿ, ಸ್ವಾರ್ಥಿ ಶ್ರೀಮಂತರ ಬಗ್ಗು ಬಡಿದು ಮುಗ್ಧತೆಗೆ ಮರಳುವ ಕಥಾ ಹಂದರ.

೫೫೯. ಹೊಂಬಿಸಿಲು

(೧೯೭೮ / ವರ್ಣ / ಸಾಮಾಜಿಕ)
ಲಾ: ನಿರುಪಮಾ ಮೂವೀಸ್
ಪ್ರೊ: ಬಿ.ಎಸ್.ಸೋಮಸುಂದರ್, ಆರ್.ಸಂಪತ್‌ರಾಜ್
ನಿ: ಗೀತಪ್ರಿಯ
ಸ.ನಿ: ಸುಶೀಲ್ ಕುಮಾರ್
ಅ: ವಿಷ್ಣುವರ್ಧನ್, ಶಿವರಾಂ, ಸೀತಾರಾಂ, ಆರತಿ, ಲೀಲಾವತಿ, ವೈಶಾಲಿ, ಉಮಾ ಶಿವಕುಮಾರ್, ಎನ್.ಎಸ್.ರಾವ್, ಈಶ್ವರಪ್ಪ, ಅನ್ನಪೂರ್ಣಮ್ಮ, ಸುಶೀಲಾನಾಯ್ಡು, ಚೇತನ್ ರಾಮರಾವ್, ಹನುಮಂತಾಚಾರ್, ವೆಂಕಟರಾಂ, ಸಂಪತ್‌ಕುಮಾರ್, ಜ್ಯೋತಿಶ್ರೀ, ವಾಣಿಚಂದ್ರ, ಹೇಮಾವತಿ, ರಾಜೇಂದ್ರಪ್ರಸಾದ್
ಕ: ಉಷಾ ನವರತ್ನರಾಂ ಕಾದಂಬರಿ ಆಧಾರಿತ
ಚಿ.ಕ/ಮಾ: ಗೀತಪ್ರಿಯ
ಗೀ: ಆರ್.ಎನ್.ಜಯಗೋಪಾಲ್, ಗೀತಪ್ರಿಯ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್.ಜಾನಕಿ
ಸಂ: ಯಾದವ್ ವಿಕ್ಟರ್, ತ್ಯಾಗರಾಜ್, ಜೋಸೆಫ್, ಕುಮಾರ್
ಛಾ: ಎಸ್.ರಾಮಚಂದ್ರ
ಕಲೆ: ಮುತ್ತು ಕೃಷ್ಣ
ಸ: ರಾಜನ್-ನಾಗೇಂದ್ರ
ಧ್ವ: (ಹಾ)ಕೋಟೇಶ್ವರರಾವ್, (ಮಾ)ಸೀತಾರಾಮ್, ಶಿವರಾವ್
ನೃ: ಉಡುಪಿ ಜಯರಾಂ
ವ: ನಟರಾಜ-ಗೋಪಿ, ಅಯ್ಯಾಕಣ್ಣು, ನಾಗರಾಜ
ಪ್ರ: ರಾಜಗೋಪಾಲ್, ಷಣ್ಮುಗಂ
ಸ್ಟು: ಪ್ರೀಮಿಯರ್, ಚಾಮುಂಡೇಶ್ವರಿ
ಹಾ: ೧)'ಜೀವ ವೀಣೆ...', ೨)'ನೀರ ಬಿಟ್ಟು...', ೩)'ಹೂವಿಂದ ಹೂವಿಗೆ...', ೪)'ಮಾಗಿಯ ಚಳಿಯಲ್ಲಿ...'
ವಿ: ಅತ್ಯುತ್ತಮ ನಟ - ವಿಷ್ಣುವರ್ಧನ್ (೭೭ ೭೮) ರಾಜ್ಯ ಪ್ರಶಸ್ತಿ
ಕ.ಸಾ: ಗಂಡ ಹೆಂಡತಿಯರಿಬ್ಬರೂ ವೈದ್ಯರು. ಒಲಿದು ಮದುವೆಯಾದರೂ, ಕರ್ತವ್ಯ, ಅಹಂಗಳೆರಡರ ನಡುವೆ ದಾಂಪತ್ಯದಲ್ಲಿ ಬಿರುಕು ಮೂಡುತ್ತದೆ. ಇದರೊಂದಿಗೆ ಅತಿಯಾದ ಸಂಶಯ ನಾಯಕಿ-ನಾಯಕರಲ್ಲಿ ಕಂದಕವನ್ನು ನಿರ್ಮಿಸುತ್ತದೆ. ಕ್ರಮೇಣ ಸಂಶಯ ನಿವಾರಣೆಯಾಗಿ ಎಲ್ಲವೂ ಸರಿ ಹೋಗುತ್ತದೆ. ಮನ ಮನಗಳಲ್ಲಿ ಹೊಂಬಿಸಿಲು ಮೂಡುತ್ತದೆ.

೫೬೦. ಸಂದರ್ಭ

(೧೯೭೮ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಸುಂದರ್ ಇಂಟರ್‌ನ್ಯಾಷನಲ್
ಪ್ರೊ/ನಿ: ಗೌರಿಸುಂದರ್
ಸ.ನಿ: ನಾಗಾಭರಣ
ಅ: ಅನಂತನಾಗ್, ವಿಷ್ಣುವರ್ಧನ್, ಭಾರತಿ, ವಾಣಿ, ಕಲ್ಪನಾ, ರೀಟಾ ಅಂಚನ್, ರೂಪಶ್ರೀ, ಮೀನಾಕ್ಷಿ, ಗಿರೀಶ್ ಕಾರ್ನಾಡ್, ಜೆಮಿನಿ ಗಣೇಶನ್, ಚಂದ್ರಶೇಖರ್, ಮಾನು, ಮೈಸೂರು ಮಠ, ಮಧುಸೂದನ್, ರಮೇಶ್, ಶ್ರೀನಿವಾಸ, ವಿಜಯಕುಮಾರ್, ಅಜಯ್, ಆನಂದ್
ಕ/ಚಿ.ಕ: ಗೌರಿಸುಂದರ್
ಮಾ: ವಿ.ಎಸ್.ಮೂರ್ತಿ
ಗೀ: ಪುರಂದರದಾಸರು, ಚಂದ್ರಶೇಖರ ಕಂಬಾರ, ಗೌರಿಸುಂದರ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ವಿ.ವಿ.ಚಾರಿ, ವಿ.ಎಂ.ಗೌರಿ
ಸಂ: ಬಿ.ಹರಿನಾರಾಯಣಯ್ಯ
ಛಾ: ಸುಂದರನಾಥ ಸುವರ್ಣ
ಕಲೆ: ರಾ.ಸೂರಿ
ಸ: ಎಸ್.ಪಿ.ಬಾಲಸುಬ್ರಹ್ಮಣ್ಯಂ
ಧ್ವ: (ಹಾ) ಎಂ.ಶಿವರಾವ್ (ಮಾ) ಗೋವಿಂದಸ್ವಾಮಿ
ನೃ: ಸಿಂಡ್ರೆಲಾ ಮಾಲತಿ
ವ: ಮಿಸ್.ರೋಮಾ
ಪ್ರ: ಶ್ರೀನಿವಾಸ್
ಸ್ಟು: ಚಾಮುಂಡೇಶ್ವರಿ
ಹಾ: ೧)'ಸಂದರ್ಭ...', ೨)'ಎಲ್ಲಿ ನನ್ನ ಕುದುರೆ...'
ವಿ: ಜೆಮಿನಿ ಗಣೇಶನ್ ಪ್ರಥಮ ಬಾರಿಗೆ ಕನ್ನಡದಲ್ಲಿ ಅಭಿನಯಿಸಿದರು. ಎಸ್.ಪಿ.ಬಾಲಸುಬ್ರಹ್ಮಣ್ಯಂ ಪ್ರಥಮ ಬಾರಿಗೆ ಸಂಗೀತ ನಿರ್ದೇಶನ ಮಾಡಿದರು.
ಕ.ಸಾ: ಮಾನವನ ಬದುಕಿನಲ್ಲಿ ಸಂದರ್ಭಗಳು ಉಂಟು ಮಾಡುವ ಸಂದಿಗ್ಧತೆ - ಅದರ ಪರಿಣಾಮ ಕುರಿತ ಚಿತ್ರಣ. ಲೇಖಕಿಯೊಬ್ಬಳು ಕಾದಂಬರಿ ರಚಿಸುವಾಗಲೇ ಕಥೆ ಹೇಳುವುದು.

೫೬೧. ಹಾವಿನ ಹೆಜ್ಜೆ

(೧೯೭೮ / ವರ್ಣ / ಸಾಮಾಜಿಕ)
ಲಾ: ಗಿರಿಜಾಂಬ ಪ್ರೊಡಕ್ಷನ್ಸ್
ಪ್ರೊ: ಲಲಿತಮ್ಮ
ನಿ: ಮಣಿ ಮುರುಗನ್
ಸ.ನಿ: ಲೋಕೇಶ್ (ಮೈಸೂರು)



ಅ: ಶ್ರೀನಾಥ್, ಅಂಬರೀಷ್, ಶಿವರಾಂ, ಅಶ್ವತ್, ಪುಟ್ಟಣ್ಣ, ರೋಜಾರಮಣಿ, ಬಿ.ವಿ.ರಾಧ, ಕಮಲಮ್ಮ
ಕ/ಚಿ.ಕ/ಮಾ: ಎನ್.ಎಲ್.ಆರ್.ಸಹ್ಯಾದ್ರಿ
ಗೀ: ಆರ್.ಎನ್.ಜಯಗೋಪಾಲ್
ಗಾ: ವಾಣಿ ಜಯರಾಂ
ಸಂ: ವಿಕ್ಟರ್, ರಾಜಗೋಪಾಲ್
ಛಾ: ಬಿ.ಪುರುಷೋತ್ತಮ್
ಕಲೆ: ರಮೇಶ್
ಸ: ವಿಜಯಭಾಸ್ಕರ್
ಧ್ವ: ಎಸ್.ಶಿವರಾವ್, ಗೋವಿಂದಸ್ವಾಮಿ
ನೃ: ಬಿ.ಜಯರಾಂ, ದೇವಿ
ಸಾ: ಶ್ಯಾಂ ಸುಂದರ್
ವ: ತಂಗಪ್ಪನ್
ಪ್ರ: ಜಿ.ವೆಂಕಟೇಶ್
ಸ್ಟು: ಚಾಮುಂಡೇಶ್ವರಿ, ಪ್ರೀಮಿಯರ್
ಹಾ: ೧)'ಯಾರಲ್ಲೂ ಹೇಳೋಲ್ಲ...'

೫೬೨. ಶಂಕರ್ ಗುರು

(೧೯೭೮ / ವರ್ಣ / ಸಾಮಾಜಿಕ/ಪತ್ತೇದಾರಿ)
ಲಾ: ದಾಕ್ಷಾಯಿಣಿ ಕಂಬೈನ್ಸ್
ಪ್ರೊ: ಪಾರ್ವತಮ್ಮ ರಾಜಕುಮಾರ್
ನಿ: ವಿ.ಸೋಮಶೇಖರ್
ಸ.ನಿ: ಕುಂದಾನಿ ಸತ್ಯನ್, ಎಂ.ಎಸ್.ರಾಜಶೇಖರ್, ಹೊನ್ನವಳ್ಳಿ ಕೃಷ್ಣ
ಅ: ರಾಜಕುಮಾರ್, ಸಂಪತ್, ಬಾಲಕೃಷ್ಣ, ತೂಗುದೀಪ ಶ್ರೀನಿವಾಸ್, ವಜ್ರಮುನಿ, ಕಾಂಚನ, ಜಯಮಾಲ, ಪದ್ಮಪ್ರಿಯ, ಉಮಾ ಶಿವಕುಮಾರ್, ಚಂದ್ರಶೇಖರ್, ಹೆಚ್.ಪಿ.ಸರೋಜ, ವೈಶಾಲಿ, ಜ್ಯೂ.ಶೆಟ್ಟಿ, ಪದ್ಮಿನಿ, ಉದಯಶಂಕರ್, ಭದ್ರಾಚಲಂ, ಶಿವಪ್ರಕಾಶ್, ನಾಗೇಶ್, ಹೊನ್ನವಳ್ಳಿ ಕೃಷ್ಣ, ಗೀತ-ವೀಣಾ
ಕ: ದಾಕ್ಷಾಯಿಣಿ ಕಂಬೈನ್ಸ್ ಕಥಾ ವಿಭಾಗ
ಚಿ.ಕ/ಮಾ/ಗೀ: ಚಿ.ಉದಯಶಂಕರ್
ಗಾ: ರಾಜಕುಮಾರ್, ಪಿ.ಬಿ.ಶ್ರೀನಿವಾಸ್, ವಾಣಿ ಜಯರಾಂ
ಸಂ: ಪಿ.ಭಕ್ತವತ್ಸಲಂ
ಛಾ: ಆರ್.ಮಧುಸೂದನ್
ಕಲೆ: ಪೇಕೇಟಿ ರಂಗ
ಸ: ಉಪೇಂದ್ರ ಕುಮಾರ್
ಧ್ವ: ಎಸ್.ಪಿ.ರಾಮನಾಥನ್
ನೃ: ಉಡುಪಿ ಜಯರಾಂ, ದೇವಿ
ಸಾ: ವೈ.ಶಿವಯ್ಯ
ವ: ಲಕ್ಷ್ಮಣರಾವ್. ರಾಮಚಂದ್ರ, ಎಂ.ನಾಥ್
ಪ್ರ: ದೊರೆಸ್ವಾಮಿ, ಎಂ.ಎಸ್.ಕೇಶವ್, ಮೂಗೂರು ಪಿ.ಗುರು, ಮಣಿ, ಕೃಷ್ಣ (ಕೇಶಾಲಂಕಾರ: ಶ್ರೀನಿವಾಸ್)
ಸ್ಟು: ಪ್ರಸಾದ್. ವಾಹಿನಿ, ಎ.ವಿ.ಎಂ., ಶಾರದಾ
ಹಾ: ೧)'ಚೆಲುವೆಯ ನೋಟ ಚೆನ್ನ...', ೨)'ಲವ್ ಮಿ ಆರ್ ಹೇಟ್ ಮಿ...', ೩)'ಏನೋನೋ ಆಸ ನೀ ತಂದಾ ಭಾಷೆ...', ೪)'ಚಿನ್ನ ಬಾಳಲ್ಲಿ ಈ ರಾತ್ರಿ ಇನ್ನೆಂದು ಬರದು...', ೫)'ನಾ ಚೆಂಕಿಯಂತೆ...'
ವಿ: ರಾಜಕುಮಾರ್ ಎರಡನೇ ಬಾರಿಗೆ ತ್ರಿಪಾತ್ರದಲ್ಲಿ ಅಭಿನಯಿಸಿದರು. ಈ ಚಿತ್ರದಲ್ಲಿ ತ್ರಿಪಾತ್ರಗಳ ಚಿತ್ರೀಕರಣ ನಡೆಸಿದ ಛಾಯಾಗ್ರಾಹಕ ಆರ್.ಮಧುಸೂದನ್ ಪ್ರತಿಭೆ ವ್ಯಕ್ತವಾಯಿತು.
ಕ.ಸಾ: ನ್ಯಾಯಕ್ಕಾಗಿ ಹೋರಾಡುವ ವ್ಯಕ್ತಿಗಳ ಬದುಕನ್ನು ವಂಚನೆ ವಿಜೃಂಭಿಸಿ ಮುಚ್ಚಿಬಿಡುತ್ತದೆ. ವಿಗ್ರಹಚೋರರನ್ನು ವಿರೋಧಿಸಿ, ತಾನೇ ಶಿಕ್ಷೆಗೆ ಒಳಗಾಗುವ ತಂದೆ. ಅವನ ಇಬ್ಬರು ಮಕ್ಕಳು ಬೆಳೆದು ದೊಡ್ಡವರಾಗಿ ಅವರದೇ ರೀತಿಯಲ್ಲಿ ಕಾರ್ಯತತ್ಪರರು. ಪರಸ್ಪರ ಪರಿಚಯವಿಲ್ಲದಿರುವ ತಂದೆ. ಇಬ್ಬರು ಮಕ್ಕಳು, ತಾಯಿ ಕ್ಷಣಕ್ಷಣಕ್ಕೂ ಕುತೂಹಲ ಹುಟ್ಟಿಸುತ್ತ ಬೆಳೆಯುವ ಕಥೆ. ಎಂದಿನಂತೆ ಇನ್ಸ್‌ಪೆಕ್ಟರ್, ಕಳ್ಳ. ಕಳ್ಳನೆಂದು ಆರೋಪಕ್ಕೆ ಒಳಗಾದ ತಂದೆ ಈ ಮೂರು ಪಾತ್ರಗಳ ಸುತ್ತ ಹೆಣೆದ ಕಥೆ.

೫೬೩. ಕಿಲಾಡಿ ಕಿಟ್ಟು

(೧೯೭೮ / ವರ್ಣ / ಸಾಮಾಜಿಕ)
ಲಾ: ಎಸ್.ಎಸ್.ಕಾರ್ಪೋರೇಷನ್
ಪ್ರೊ: ಟಿ.ಎಸ್.ನರಸಿಂಗರಾವ್, ಟಿ.ಡಿ.ಎಸ್.ರಾವ್, ವೈ.ಆರ್.ಅಶ್ವತ್ಥನಾರಾಯಣರಾವ್
ನಿ: ಕೆ.ಎಸ್.ಆರ್.ದಾಸ್
ಸ.ನಿ: ರಾಜೇಂದ್ರಬಾಬು, ಕಿಶೋರ್ ರೆಡ್ಡಿ, ಕೃಷ್ಣ
ಅ: ವಿಷ್ಣುವರ್ಧನ್, ರಜನೀಕಾಂತ್, ವಜ್ರಮುನಿ, ಕವಿತಾ, ಶಿವರಾಂ, ಲೀಲಾವತಿ, ಸೀಮ, ರಮೇಶ್, ಶಕ್ತಿಪ್ರಸಾದ್, ಚೇತನ್ ರಾಮರಾವ್, ಬಾಲಕೃಷ್ಣ, ನರಸಿಂಹರಾಜು, ಅನಂತರಾಂ ಮಚ್ಚೇರಿ, ಅಶ್ವತ್ಥ ನಾರಾಯಣ, ಪಂಢರಿಬಾಯಿ, ಶಾಂತ ನಾಗರಾಜ್, ಪ್ರೇಮಕುಮಾರಿ, ಪದ್ಮಾ ಬಿನ್ನ, ಫೈಟರ್ ಶೆಟ್ಟಿ
ಕ/ಚಿ.ಕ: ಎಂ.ಡಿ.ಸುಂದರ್
ಮಾ: ಚಿ.ಉದಯಶಂಕರ್
ಗೀ: ಚಿ.ಉದಯಶಂಕರ್, ಆರ್.ಎನ್.ಜಯಗೋಪಾಲ್, ವಿಜಯನಾರಸಿಂಹ

ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಜೇಸುದಾಸ್, ಎಸ್.ಜಾನಕಿ, ವಿಷ್ಣುವರ್ಧನ್, ಪಿ.ಸುಶೀಲ
ಸಂ: ಕೆ.ಎಸ್.ಆರ್.ದಾಸ್
ಛಾ: ಎಸ್.ಎಸ್.ಲಾಲ್
ಕಲೆ: ರಮೇಶ್
ಸ: ಮೋಹನ್ ಕುಮಾರ್
ಧ್ವ: ಕೋಟೇಶ್ವರರಾವ್, ರಾಜ ಮಾಣಿಕ್ಯಂ
ನೃ: ಚಿನ್ನಿ ಸಂಪತ್, ಪಸುಮರ್ತಿ ಕೃಷ್ಣಮೂರ್ತಿ, ಕೃಷ್ಣಕುಮಾರ್
ಸಾ: ವೈ.ಶಿವಯ್ಯ
ವ: ಅಬ್‌ದಾಲಿ, ಟಿ.ನಾಗರಾಜ್, ವೇಣು, ಗುರು
ಪ್ರ: ವೀರರಾಜು, ಶ್ರೀನಿವಾಸ್, ಕೃಷ್ಣ, ವಿಜಯನ್, ಜಿ.ಎಸ್.ವಾಸು, ಜಿ.ವೆಂಕಟೇಶ್ (ಕೇಶಾಲಂಕಾರ: ತಾತಾರಾವ್)
ಸ್ಟು: ಪ್ರೀಮಿಯರ್, ಜೆಮಿನಿ
ಹಾ: ೧)'ಹೂವಂತೆ ಹೆಣ್ಣು...', ೨)'ತಾವರೆ ಹೂವು...', ೩)'ನನ್ನ ನಿನ್ನ ಒಲವು...' ೪)'ಈ ಚೆಲುವು ನಳಿವಾ ನಗುವು..', ೫)'ಮನಸನು ಕೊಡು..', ೬)'ಮಡಿಲಲ್ಲಿ ಮಗುವಾಗಿ...'
ಕ.ಸಾ: ಅನ್ಯಾಯದ ವಿರುದ್ಧ ನಿಲ್ಲುವ, ನ್ಯಾಯಕ್ಕಾಗಿ ಹೋರಾಡುವ ಕಿಟ್ಟು ಪ್ರೀತಿಸುವ ಹುಡುಗಿ ಬಾಲ ವಿಧವೆ. ಇನ್ಸ್‌ಪೆಕ್ಟರನ ತಂಗಿ. ದುಷ್ಟರ ಸಂಚನ್ನು ಮುರಿದು ಗೆದ್ದು ನ್ಯಾಯಕ್ಕಾಗಿ ಹೋರಾಡುವಾಗ ಪರ-ವಿರೋಧಗಳ ಜೊತೆಜೊತೆಗೆ ಕಾರ್ಯನಿರ್ವಹಿಸುವ ಕಿಟ್ಟು. ಸಾಹಸ, ಪ್ರಣಯ ಮುಂತಾದವುಗಳ ಕಥೆ.

೫೬೪. ಗೀಜಗನ ಗೂಡು

(೧೯೭೮ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಶ್ರೀಕಂಠೇಶ್ವರ ಚಿತ್ರಾಲಯ
ಪ್ರೊ: ಎನ್.ಎ.ಚಿದಂಬರ, ರಂಗನಾಥ್
ನಿ: ಟಿ.ಎಸ್.ರಂಗಾ
ಸ.ನಿ: ಎಂ.ಕೆ.ಸುಂದರ ರಾಜನ್
ಅ: ಆರತಿ ಮುದ್ದಯ್ಯ, ಶಂಕರ್, ಸೋಮಶೇಖರ್, ಶೋಭಾ ಜೋಶಿ, ರಾಮಕೃಷ್ಣ, ಅಶೋಕ್ ಬಾದರದಿನ್ನಿ, ಶ್ರೀನಿವಾಸ ಪ್ರಭು, ಸುಂದರ ರಾಜನ್, ಕೆ.ಆರ್.ಮೋಹನ್, ರಮೇಶ್‌ಭಟ್, ಲಕ್ಷ್ಮೀ ನಟರಾಜ್
ಕ/ಚಿ.ಕ: ಕೃಷ್ಣ ಆಲನಹಳ್ಳಿ
ಮಾ/ಗೀ/ಗಾ: ಟಿ.ಎಸ್.ರಂಗಾ
ಸಂ: ಪಿ.ಭಕ್ತವತ್ಸಲಂ
ಛಾ: ಎಸ್.ರಾಮಚಂದ್ರ
ಸ: ಬಿ.ವಿ.ಕಾರಂತ್
ಧ್ವ: ಕೃಷ್ಣಮೂರ್ತಿ, ಎಂ.ಶಿವರಾವ್
ಪ್ರ: ಎನ್.ಕೆ.ರಾಮಕೃಷ್ಣ
ಸೆ: ಉದ: ೩೮೪೭ ಮೀ. ೧೪ - ರೀಲುಗಳು, ೩೧-೧೨-೧೯೭೭
ವಿ: ಶೋಭಾಜೋಶಿ ಚಿತ್ರರಂಗ ಪ್ರವೇಶ ಮಾಡಿ ಶೋಭಾ ರಾಘವೇಂದ್ರರಾಗಿ ಜನಪ್ರಿಯರಾದರು. ಟಿ.ಎಸ್.ರಂಗಾ ಸ್ವತಂತ್ರ ನಿರ್ದೇಶಕರು.
ಕ.ಸಾ: ಕಾಡು. ಅದಕ್ಕೆ ಅದರದೇ ಅಸ್ತಿತ್ವವಿದೆ. ಅಂಥ ಕಾಡಿಗೆ ಬರುವ ಮೂವರು ವ್ಯಕ್ತಿಗಳ ಒಳ ಮನಸ್ಸನ್ನು ತೆರೆದಿಡುವ ಕಥಾ ಭಾಗ. ಆಧುನಿಕ ಬದುಕಿನ ವಿಸ್ಮಯಕರ ಘಟನೆಗಳು, ಬದುಕಿನ ರೀತಿಯ ಜೊತೆಗೆ ಕಾಡು ಜನರ ಸಮೃದ್ಧ ಬದುಕಿನ ಹೋಲಿಕೆ. ಹಾಡಿಗಳ ಜನಜೀವನ, ಅವರ ಹಾಡು, ಕುಣಿತಗಳ ಜೊತೆಗೆ ನಗರ ಜೀವನದ ವಿಕ್ಷಿಪ್ತತೆಯನ್ನು ಹೋಲಿಸುವ ಪ್ರಯತ್ನ.

೫೬೫. ವಂಶಜ್ಯೋತಿ

(೧೯೭೮ / ವರ್ಣ / ಸಾಮಾಜಿಕ)
ಲಾ: ಶ್ರೀರಾಂ ಪ್ರೊಡಕ್ಷನ್ಸ್
ಪ್ರೊ: ಎಸ್.ಎಂ.ಪಳನಿಯಪ್ಪನ್, ಎಂ.ಎಸ್.ಮುತ್ತುಕರುಪ್ಪನ್, ವಿ.ಇಂದಿರಾ
ನಿ: ಎ.ಭೀಮಸಿಂಗ್
ಸ.ನಿ: ಎನ್.ಎಲ್.ಆರ್.ಸಹ್ಯಾದ್ರಿ
ಅ: ವಿಷ್ಣುವರ್ಧನ್, ರಾಜೇಶ್, ಲೋಕೇಶ್, ಚಂದ್ರಶೇಖರ್, ಅಶ್ವತ್ಥ್, ದ್ವಾರಕೀಶ್, ಕಲ್ಪನಾ, ಭವಾನಿ, ಹೇಮಾ ಚೌಧುರಿ, ಜಯಾ, ಬಾಲಕೃಷ್ಣ, ಬಿ.ವಿ.ರಾಧ
ಕ: ಹುಣಸೂರು ಕೃಷ್ಣಮೂರ್ತಿ
ಚಿ.ಕ: ಎ.ಭೀಮಸಿಂಗ್
ಮಾ: ಹುಣಸೂರು ಕೃಷ್ಣಮೂರ್ತಿ
ಗೀ: ಹುಣಸೂರು ಕೃಷ್ಣಮೂರ್ತಿ, ಆರ್.ಎನ್.ಜಯಗೋಪಾಲ್, ವಿಜಯನಾರಸಿಂಹ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಜಿ.ಕೆ.ವೆಂಕಟೇಶ್, ಪಿ.ಸುಶೀಲ, ಎಸ್.ಜಾನಕಿ

ಸಂ: ಪಾಲ್ ದೊರೆಸಿಂಗ್
ಛಾ: ಕೆ.ಎಸ್.ಪ್ರಸಾದ್
ಕಲೆ: ಮಾಣಿಕ್ಯಂ
ಸ: ಜಿ.ಕೆ.ವೆಂಕಟೇಶ್
ಧ್ವ: ಎಸ್.ಪಿ.ರಾಮನಾಥನ್, ಕೋಟೇಶ್ವರರಾವ್
ನೃ: ಉಡುಪಿ ಜಯರಾಂ - ದೇವಿ
ವ: ಮಣಿ, ನಾಗರಾಜ್
ಪ್ರ: ಶ್ರೀನಿವಾಸನ್, ಮಲ್ಲಿ, ಸಂತಾನಂ, ನರೇಂದ್ರಬಾಬು
ಸ್ಟು: ಪ್ರೀಮಿಯರ್, ಚಾಮುಂಡೇಶ್ವರಿ
ಹಾ: ೧)'ಮನಸುಗಳ ಮಮತೆ...', ೨)'ಎಲ್ಲಿಯ ತಾನು...', ೩)'ಯಾವುದು ಗತಿಯಮ್ಮಾ...', ೪)'ಮೋಹದ ಬತ್ತಿ...'
ಸೆ: ಉದ್ದ ೩೫೯೦ ಮೀ. 'ಯು'
ಕ.ಸಾ: ದುಡಿಯುವ ಮಹಿಳೆ, ಇಡೀ ಕುಟುಂಬವನ್ನು ನಿರ್ವಹಿಸುತ್ತ ತನ್ನ ಬದುಕನ್ನೇ ತ್ಯಾಗ ಮಾಡುವ ಜೀವ. ಒಲಿದು ಬಂದವನನ್ನು ವಿವಾಹವಾಗದೆ ತಂಗಿಗೆ ಮದುವೆ ಮಾಡುತ್ತಾಳೆ. ತಮ್ಮಂದಿರನ್ನು ಓದಿಸುತ್ತಾಳೆ. ಆದರೆ ರೋಗಗ್ರಸ್ತೆಯಾಗಿ ಯಾರೂ ಆಕೆಯನ್ನು ಉಪಚರಿಸದೆ ಎಲ್ಲರಿಂದ ತಿರಸ್ಕಾರಕ್ಕೆ ಗುರಿಯಾಗಿ ಸಾಯುತ್ತಾಳೆ. ಮನೆಗಾಗಿ - ಕುಟುಂಬಕ್ಕಾಗಿ ಜೀವ ತೇಯ್ದು ವಂಶಜ್ಯೋತಿಯಾದ ಹೆಣ್ಣಿನ ದುರಂತ ಕಥೆ.

೫೬೬. ಮಾತು ತಪ್ಪದ ಮಗ

(೧೯೭೮ / ವರ್ಣ / ಸಾಮಾಜಿಕ)
ಲಾ: ಭರತ ಸಿನೆ ಆರ್ಟ್ಸ್
ಪ್ರೊ: ಕೆ.ಆರ್.ಬಲಾನಿ, ಭಗವಾನ್, ಎಸ್.ತ್ಯಾಗರಾಜನ್
ನಿ: ಪೇಕೇಟಿ ಶಿವರಾಂ
ಸ.ನಿ: ಬೆಂಗಳೂರು ನಾಗೇಶ್, ಕೆ.ಸುಬ್ಬಾರಾಜು
ಅ: ಅನಂತನಾಗ್, ಆರತಿ, ಊರ್ವಶಿ ಶಾರದಾ, ಶಿವರಾಂ, ಬಾಲಕೃಷ್ಣ, ಅಶ್ವತ್, ದ್ವಾರಕೀಶ್, ರಜನೀಕಾಂತ್,

ಲೀಲಾವತಿ, ಪಕೇಟೆ ಶಿವರಾಂ, ನರಸಿಂಹರಾಜು,
ಉದಯಕುಮಾರ್
ಕ/ಚಿ.ಕ: ಪೇಕೇಟಿ ಶಿವರಾಂ
ಮಾ/ಗೀ: ಆರ್.ಎನ್.ಜಯಗೋಪಾಲ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಪಿ.ಸುಶೀಲ, ಎಸ್.ಜಾನಕಿ
ಸಂ: ಕೆ.ಗೋಪಾಲರಾವ್
ಛಾ: ಜಿ.ಸತ್ಯನಾರಾಯಣ
ಕಲೆ: ಪೇಕೇಟಿ ರಂಗ
ಸ: ಇಳಯರಾಜ
ಧ್ವ: ಗೋವಿಂದಸ್ವಾಮಿ, ಸೀತಾರಾಂ
ನೃ: ಚಿನ್ನಿ-ಸಂಪತ್
ಸಾ: ಜ್ಯೂಡೋ ರತ್ನಂ
ವ: ತಂಗಪ್ಪನ್
ಪ್ರ: ಮನ್ಮಥರಾವ್, ರಾಜಗೋಪಾಲ್, ರಮಣ
ಸ್ಟು: ಚಾಮುಂಡೇಶ್ವರಿ, ಪ್ರಸಾದ್
ಹಾ: ೧) 'ಎಂಥಾ ಸೌಂದರ್ಯ...', ೨) 'ಭಾನು ಭೂಮಿಯು...', ೩) 'ಹೇಳೋರು ಕೇಳೋರು...', ೪) 'ಮರೆಯುವ ಹರುಷದ...',
ವಿ: ಊರ್ವಶಿ ಶಾರದಾ ಪ್ರಥಮ ಬಾರಿಗೆ ಕನ್ನಡದಲ್ಲಿ ಅಭಿನಯಿಸಿದರು. ಇಳಯರಾಜ ಸಂಗೀತ ನೀಡಿದರು.
ಸೆ: ಉದ್ದ - ೩೯೬೮.೨೨ ಮೀ., 'ಯು'
ಕ.ಸಾ: ತಾಯಿಗೆ ನೀಡಿದ ವಚನ ಪಾಲಿಸುವುದಕ್ಕಾಗಿ ಹೋರಾಡುವ ಮಗ. ಅದಕ್ಕಾಗಿ ಪ್ರೇಮಿಸಿದ ಹುಡುಗಿಯನ್ನು ಮರೆಯುತ್ತಾನೆ. ಗಂಡನ ಹಿತಕ್ಕಾಗಿ ಪ್ರಾಣ ಬಿಡಲು ತಯಾರಿರುವ ಹೆಂಡತಿ, ಆರಾಧಿಸುವ ಪ್ರೇಮಿ ಮೂವರ ನಡುವಿನ ಸಂಘರ್ಷದ ಚಿತ್ರಣ.

೫೬೭. ಮೈತ್ರಿ

(೧೯೭೮ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಮಹಾವೀರ್ ಮೂವೀಸ್
ಪ್ರೊ: ಹೆಚ್.ಶಾಂತಿಲಾಲ್, ವಿ.ಶಾಂತಿಲಾಲ್
ನಿ: ಎಂ.ಆರ್.ಕೆ.ಮೂರ್ತಿ
ಅ: ಎಲ್.ವಿ.ಶಾರದ, ಅಶ್ವತ್ಥ್, ದಿವ್ಯಾ ಅಧಿಕಾರಿ, ವಾಸುದೇವರಾವ್, ಬೇಬಿ ರೇಖಾ, ಬಿ.ವಿ.ರಾಧ, ಸಾಯಿಕುಮಾರ್, ಜಯಕುಮಾರ್, ನಿರ್ಮಲ ಉತ್ತಪ್ಪ
ಕ: ಪಿ.ರವೀಂದ್ರಬಾಬು (ಮೂಲ: ತೆಲುಗು - 'ಸಮಾಧಿ')
ಚಿ.ಕ: ಎಂ.ಆರ್.ಕೆ.ಮೂರ್ತಿ
ಮಾ: ಎಂ.ಜಿ.ಭೀಮರಾವ್ (ವಂಶಿ)
ಗೀ: ಆರ್.ಎನ್.ಜಯಗೋಪಾಲ್
ಗಾ: ಪಿ.ಬಿ.ಶ್ರೀನಿವಾಸ್, ಎಸ್.ಜಾನಕಿ
ಸಂ: ಪಿ.ಯು.ಎಸ್.ಮಣಿಯಂ
ಛಾ: ಕೆ.ಎಸ್.ಚಂದ್ರು
ಕಲೆ: ಪಿ.ವೆಂಕಟರಾಮಯ್ಯ
ಸ: ಸತ್ಯಂ
ಧ್ವ: ಸೀತಾರಾಂ
ಪ್ರ: ವೆಂಕಟೇಶ್, ವೆಂಕಟಸ್ವಾಮಿ, ಮಾಧವನ್
ಸ್ಟು: ಪ್ರೀಮಿಯರ್
ಹಾ: ೧) 'ಈ ಮೈತ್ರಿ ಅಪೂರ್ವ...', ೨) 'ಸಂಸಾರವೊಂದು ಸವಿಬಂಧ...'
ಸೆ: ಉದ್ದ ೩೯೨೦.೬೩ ಮೀ., 'ಯು', ೧೭ ರೀಲ್‌ಗಳು, ೭-೦೬-೧೯೭೭

ಕ.ಸಾ: ಮಗುವೊಂದು ಕೇಳುವ ಪ್ರಶ್ನೆಗೆ ಸಮರ್ಪಕವಾಗಿ ಉತ್ತರಿಸಲಾಗದ ಗಂಡ ಹೆಂಡಿರ ವಿರಸ. ಮಗು ಸಿಡುಕಿನ ಉತ್ತರವನ್ನೇ ನಿಜವೆಂದು ನಂಬಿ ಅನರ್ಥಗಳಿಗೆ ದಾರಿಯಾಗುತ್ತದೆ. ಸ್ಮಶಾನ ಕಾಯುವ ಮುದುಕನಲ್ಲಿ ಆತ್ಮೀಯತೆ, ಗೆಳೆತನ ಕಾಣುವ ಹುಡುಗಿ ಸಾಯುತ್ತದೆ. ಹಿರಿಯರ ನಿರ್ಲಕ್ಷ್ಯ, ಅಹಂ ಎಳೆಯ ಮಕ್ಕಳನ್ನು ಎಂಥ ಪರಿಸ್ಥಿತಿಗೆ ತರಬಲ್ಲದೆಂಬುದರ ಚಿತ್ರಣ.

೫೬೮. ಫೀನಿಕ್ಸ್

(೧೯೭೮ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಬೃಂದಾವನ ಚಿತ್ರಾಲಯ
ಪ್ರೊ: ಜಿ.ಮದನಗೋಪಾಲ್, ಶಿವರಾಮೇಗೌಡ
ನಿ: ಉಗ್ರನರಸಿಂಹ

ಅ: ಇಂದ್ರಜಿತ್, ರಾಮಯ್ಯ, ಶಿವರಾಂ, ಗುಗ್ಗು, ಜಯಲಕ್ಷ್ಮಿ, ಗೀತಾ, ಗೋಪಾಲ್, ಬೇಬಿ ಶ್ಯಾಂ, ಸತ್ಯ
ಕ: ಕೃಷ್ಣ ಆಲನಹಳ್ಳಿ
ಚಿ.ಕ: ಉಗ್ರನರಸಿಂಹ
ಮಾ: ಕೃಷ್ಣ ಆಲನಹಳ್ಳಿ
ಗೀ: ಚಿ.ಉದಯಶಂಕರ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್.ಜಾನಕಿ
ಸಂ: ಪಿ.ಭಕ್ತವತ್ಸಲಂ
ಛಾ: ಸುಂದರನಾಥ ಸುವರ್ಣ
ಸ: ರಾಜನ್-ನಾಗೇಂದ್ರ
ಹಾ: ೧) 'ಹಾಡಿತು ಬಾನಾಡಿ...', ೨) 'ನಾ ಬರೆದ ಕವನದಲಿ...'
ಕ.ಸಾ: ಪ್ರೇಮ-ಕಾಮಗಳೆರಡರ ನಡುವಿನ ಸೂಕ್ಷ್ಮತೆ ಅರಿಯದ ನಾಯಕ ಎರಡರ ನಡುವೆ ತೊಳಲಾಡುವ ಚಿತ್ರಣ

೫೬೯. ಮುಯ್ಯಿಗೆ ಮುಯ್ಯಿ

(೧೯೭೮ / ವರ್ಣ / ಸಾಮಾಜಿಕ)
ಲಾ: ಮೋಹನ್ ಮುರಳಿ ಪ್ರೊಡಕ್ಷನ್ಸ್
ಪ್ರೊ: ಪಿ.ಕೃಷ್ಣರಾಜ್
ನಿ: ವೈ.ಆರ್.ಸ್ವಾಮಿ
ಸ.ನಿ: ಎ.ಟಿ.ರಘು
ಅ: ಶ್ರೀನಾಥ್, ಮಂಜುಳ, ವಿಷ್ಣುವರ್ಧನ್, ಆರತಿ, ಚಂದ್ರಶೇಖರ್, ರೋಜಾರಮಣಿ, ಅಶ್ವತ್ಥ್, ಲೀಲಾವತಿ, ಶಿವರಾಂ, ಅಂಬರೀಷ್, ಲೋಕನಾಥ್, ಶಂಕರರಾವ್, ರಾಜಾರಾಂ, ಸುಶೀಲಾನಾಯ್ಡು, ಜಯಮಾಲಿನಿ, ಬೇಬಿ ರೇಖಾ, ಗುಗ್ಗು, ಕುಣಿಗಲ್ ರಾಮನಾಥ್, ಮಾ। ಮಧು
ಕ: ಎಲ್.ಎಸ್.ಅಯ್ಯರ್
ಚಿ.ಕ: ವೈ.ಆರ್.ಸ್ವಾಮಿ
ಮಾ: ಎಸ್.ಎಸ್.ರಾವ್
ಗೀ: ಚಿ. ಉದಯಶಂಕರ್, ದೊಡ್ಡರಂಗೇಗೌಡ, ವಿಜಯನಾರಸಿಂಹ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್.ಜಾನಕಿ, ಪಿ.ಬಿ.ಶ್ರೀನಿವಾಸ್, ಬೆಂಗಳೂರು ಲತಾ, ಪಿ.ಸುಶೀಲ, ಜೇಸುದಾಸ್
ಸಂ: ಯಾದವ್ ವಿಕ್ಟರ್
ಛಾ: ಆರ್.ಮಧುಸೂದನ್
ಕಲೆ: ಬಿ.ಎಸ್.ಕೇಶವರಾವ್
ಸ: ಸತ್ಯಂ
ನೃ: ಚಿನ್ನಿ-ಸಂಪತ್
ಸಾ: ಅಂಬೂರ್ ಆರ್.ಎಸ್.ಬಾಲು
ವ: ತಂಗಪ್ಪನ್, ದೊರೈ, ನಜರೆ ನಾರಾಯಣ್, ನಾಗರಾಜ್
ಪ್ರ: ಮನ್ಮಥರಾವ್, ಶ್ರೀನಿವಾಸನ್, ವಿ.ರಾಜಗೋಪಾಲ್, ನಾಗೇಶ್ವರರಾವ್
ಸ್ಟು: ಚಾಮುಂಡೇಶ್ವರಿ
ಹಾ: ೧) 'ಇವನಲ್ಲ ಅವನಲ್ಲ...', ೨) 'ಈ ಮೌನ ಏಕೆ ಗೆಳೆಯ...', ೩) 'ಈ ಸುಂದರ ಚಂದಿರನಿಂದ...', ೪) 'ನಿನ್ನೆ ಇಲ್ಲಿ ಬರದೆ...', ೫) 'ಬೆಳ್ಳಿ ಚುಕ್ಕಿ...'
ಕ.ಸಾ: ನಿಷ್ಠಾವಂತ ಪೊಲೀಸ್ ಅಧಿಕಾರಿಯನ್ನು ಕೊಂದು ಅವನ ಹೆಂಡತಿಯ ಮಾನಸಿಕ ರೋಗಕ್ಕೆ ಕಾರಣರಾದ ದುಷ್ಟರನ್ನು ಅವರ ಮೂವರು ಮಕ್ಕಳು ಗುರುತಿಸಿ ಸೇಡು ತೀರಿಸಿಕೊಳ್ಳುತ್ತಾರೆ.

೫೭೦. ಸಿರಿತನಕ್ಕೆ ಸವಾಲ್

(೧೯೭೮ / ವರ್ಣ / ಸಾಮಾಜಿಕ)
ಲಾ: ಆನಂದ ವಿಜಯ ಮೂವೀಸ್
ಪ್ರೊ: ಸಿ.ಡಿ.ಮೂರ್ತಿ
ನಿ: ರಾಮಣ್ಣ
ಸ.ನಿ: ಮಣಿವಣ್ಣನ್, ಕುಣಿಗಲ್ ವಸಂತಕುಮಾರ್
ಅ: ವಿಷ್ಣುವರ್ಧನ್, ಮಂಜುಳಾದೇವಿ, ಅಶ್ವತ್ಥ್, ಜಯಶ್ರೀ, ಸಂಪತ್, ಲೀಲಾವತಿ, ವಜ್ರಮುನಿ, ಸುಮ, ದ್ವಾರಕೀಶ್, ಸುಚಿತ್ರ, ಉದಯಕುಮಾರ್, ಅಂಬರೀಷ್, ವೆಂಕಟರಾಂ, ಹಲಂ, ಸಿ.ಐ.ಡಿ.ಶಕುಂತಲ

ಕ: ಮಲ್ಲಿಯಂ ರಾಜಗೋಪಾಲ್
ಚಿ.ಕ/ಮಾ: ಕುಣಿಗಲ್ ನಾಗಭೂಷಣ್
ಗೀ: ಕುಣಿಗಲ್ ನಾಗಭೂಷಣ್, ದೊಡ್ಡರಂಗೇಗೌಡ
ಗಾ: ವಿಷ್ಣುವರ್ಧನ್, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್.ಜಾನಕಿ, ವಾಣಿ ಜಯರಾಂ
ಸಂ: ಎಂ.ಎಸ್.ಮಣಿ
ಛಾ: ಜಿ.ಜಿ.ವಿಜಯಂ, ಜಿ.ವಿ.ಸುರೇಶ್
ಕಲೆ: ಬಿ.ನಾಗರಾಜರಾವ್
ಸ: ವಿಜಯಭಾಸ್ಕರ್
ಧ್ವ: (ಮಾ) ಕೋಟೇಶ್ವರರಾವ್, ಮೋಹನಸುಂದರಂ, ವಿಶ್ವನಾಥನ್
ನೃ: ಎಸ್.ಸುಂದರಂ, ಸಲೀಂ
ಸಾ: ವೆಂಕಟೇಶ್
ವ: ಸಿ.ಕೆ.ಕಣ್ಣನ್
ಪ್ರ: ರಾಮ್ ದಾಸ್, ಶ್ರೀನಿವಾಸನ್, ಶ್ರೀನಿವಾಸ್, (ಕೇಶಾಲಂಕಾರ: ಬಲರಾಮ್, ಜಾನ್)
ಸ್ಟು: ಪ್ರೀಮಿಯರ್
ಹಾ: ೧) 'ಬಾನಾಡಿ ಹಾರೋ...', ೨) 'ರಂಗು ರಂಗಿನಾ ಲಂಗಾ...', ೩) 'ನಿಲ್ಲು ನಿಲ್ಲು ಅತ್ತಿಗೆ...', ೪) 'ಶಶಿಯ ಕಂಡು ಮೋಡ...', ೫) 'ಒಂದೆಡೆ ಮಿನುಗುವ...'
ಸೆ: ಉದ್ದ - ೪೫೩೬.೦೩ ಮೀ.
ಕ.ಸಾ: ಶ್ರೀಮಂತರ ಸೊಕ್ಕಿನ ಅಟ್ಟಹಾಸಕ್ಕೆ ತಿರುಗಿ ಬಿದ್ದು ಅವರ ಸಿರಿತನಕ್ಕೆ ಸವಾಲ್ ಎಸೆದು ಮೇಲೆ ನಿಲ್ಲುವ ಸಾಹಸಿಯೊಬ್ಬನ ಕಥೆ.

೫೭೧. ಪಡುವಾರಳ್ಳಿ ಪಾಂಡವರು

(೧೯೭೮ / ವರ್ಣಚಿತ್ರ / ಸಾಮಾಜಿಕ)
ಲಾ: ಕಣಗಾಲ್ ಕ್ರಿಯೇಶನ್ಸ್
ಪ್ರೊ/ನಿ: ಎಸ್.ಆರ್.ಪುಟ್ಟಣ್ಣ ಕಣಗಾಲ್
ಸ.ನಿ: ಎನ್.ಎಸ್.ವತ್ಸ
ಅ: ಅಂಬರೀಷ್, ಜೈ ಜಗದೀಶ್, ರಾಮಕೃಷ್ಣ, ಮಹದೇವ, ಚಂದ್ರಹಾಸ, ಶ್ರೀಲಲಿತ, ಶಾಂತಲ, ಜಯಶ್ರೀ, ಧೀರೇಂದ್ರಗೋಪಾಲ್, ಮುಸುರಿ ಕೃಷ್ಣಮೂರ್ತಿ, ಜೂ.ಲೋಕೇಶ್, ಜಿ.ವಿ.ಕೃಷ್ಣ, ಆರತಿ, ಶುಭ, ವಿಶ್ವನಾಥ್.
ಕ: ರಾವ್ ಬಹದ್ದೂರ್
ಚಿ.ಕ: ಎಸ್.ಆರ್.ಪುಟ್ಟಣ್ಣ ಕಣಗಾಲ್
ಮಾ: ಯೋಗಾನರಸಿಂಹ ಮೂರ್ತಿ, ಬಾಬು ಕೃಷ್ಣಮೂರ್ತಿ
ಗೀ: ಕಯ್ಯಾರ ಕಿಂಞಣ್ಣ ರೈ, ಸೋರಟ್ ಅಶ್ವತ್ಥ್, ದೊಡ್ಡರಂಗೇಗೌಡ
ಗಾ: ಪಿ.ಬಿ.ಶ್ರೀನಿವಾಸ್, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಕಸ್ತೂರಿ ಶಂಕರ್
ಸಂ: ವಿ.ಪಿ.ಕೃಷ್ಣ
ಛಾ: ಮಾರುತಿರಾವ್
ಸ: ವಿಜಯಭಾಸ್ಕರ್
ಧ್ವ: (ಹಾ)ಕೋಟೀಶ್ವರರಾವ್, (ಮಾ)ಗೋವಿಂದಸ್ವಾಮಿ
ಸಾ: ಶ್ಯಾಂ ಸುಂದರ್
ವ: ಅಯ್ಯಾಕಣ್ಣು
ಪ್ರ: ರಾಜಗೋಪಾಲ್
ಸ್ಟು: ಚಾಮುಂಡೇಶ್ವರಿ
ಹಾ: ೧)'ತೂಕಡಿಸಿ ತೂಕಡಿಸಿ ಬೀಳದಿರು...', ೨)'ಕಣ್ಣು ಮುಚ್ಚಿ ಕುಳಿತರೆ...', ೩)'ಏಸು ವರ್ಷ ಆಯ್ತು ..', ೪)'ಅನ್ನ ನೀಡಿದ ಈ ಮಣ್ಣನು..', ೫)'ಸಾವಿರ ಸಾವಿರ...', ೬)'ಹಾಡೊಮ್ಮೆ ಹಾಡಬೇಕು...', ೭)'ಬಹಿಷ್ಕಾರ ಬಹಿಷ್ಕಾರ...', ೮)'ಶ್ರೀರಾಮ ಬಂದವ್ನೆ...'
ಕ.ಸಾ: ಹಳ್ಳಿಯೊಂದನ್ನು ಶೋಷಿಸುವ ಸಾಹುಕಾರ ಹಾಗೂ ಅವನ ಚೇಲಾಗಳು. ಅವರಿಂದ ಶೋಷಣೆಗೊಳಗಾದ ಮಂದಿ. ಅವರಿಗಾಗಿ ಹೋರಾಡುವ ಬಿಸಿರಕ್ತದ ತರುಣರ ಕಥೆ.

೫೭೨. ಹುಲಿ ಬಂತು ಹುಲಿ

(೧೯೭೮ / ವರ್ಣಚಿತ್ರ / ಸಾಮಾಜಿಕ)
ಲಾ: ಮಲ್ನಾಡ್ ಮೂವೀ ಮೇಕರ್ಸ್
ಪ್ರೊ: ಈರೇಗೌಡ ಮತ್ತು ಮಿತ್ರರು

ಕ/ಚಿ.ಕ/ಸಂ/ನಿ: ಸಿ.ಚಂದ್ರಶೇಖರ್
ಸ.ನಿ: ದೀಪಾ ಧನರಾಜ್
ಅ: ಎಂ.ವಿ.ವಾಸುದೇವರಾವ್, ರಾಮಕೃಷ್ಣ, ರಾಜಿ, ಆನಂದ್, ಶಾಂತಾರಾಂ, ಜೇನು ಕುರುಬರು
ಮಾ: ಕೆ.ನಾರಾಯಣ್
ಛಾ: ಬಿ.ಸಿ.ಗೌರಿಶಂಕರ್
ಸ: ರಾಜೀವ್ ತಾರಾನಾಥ್
ಧ್ವ: ಕೆ.ಎಸ್.ಕಿಟ್ಟಿ
ವಿ: ಚಂದ್ರಶೇಖರ್ ನಿರ್ದೇಶನದ ಪ್ರಥಮ ಚಿತ್ರ. ತಾರಾಪುರ ಅರಣ್ಯದಲ್ಲಿ ಚಿತ್ರೀಕರಣ.
ಕ.ಸಾ: ಮೃಗಗಳಿಗಿಂತ ಕಡೆಯಾದ ಆಧುನಿಕ ಮನುಷ್ಯನ ಕಾರ್ಯವನ್ನು ಹೇಳುತ್ತದೆ. ಜೇನು ಕುರುಬರ ಜೀವನ ವಿಧಾನದ ವಿವರಗಳಿವೆ.

೫೭೩. ಅನುರಾಗ ಬಂಧನ

(೧೯೭೮ / ವರ್ಣಚಿತ್ರ / ಸಾಮಾಜಿಕ)
ಲಾ: ಬಿ.ಪಿ.ಫಿಲಂಸ್
ಪ್ರೊ: ಬಿ.ಪಿ.ಫಿಲಂಸ್
ನಿ: ಗೀತಪ್ರಿಯ



ಸ.ನಿ: ಸುಶೀಲಕುಮಾರ್, ಕಲ್ಲೇಶ್, ಚಂದ್ರು ದೊಡ್ಡಮನಿ
ಅ: ಬಸಂತಕುಮಾರ್ ಪಾಟೀಲ, ಕಲ್ಯಾಣಕುಮಾರ್, ಅಂಬರೀಷ್, ಎಂ.ಎಸ್.ಸತ್ಯ, ದಿನೇಶ್, ದ್ವಾರಕೀಶ್, ಆರತಿ, ಕಲ್ಪನ, ಮಂಜುಳ, ಬೇಬಿ ರೇಖ, ಶಾಂತಲ, ಆದವಾನಿ ಲಕ್ಷ್ಮೀದೇವಿ, ರೇಖಾ ಮಾವಿನಕುರ್ವೆ, ಜಯಶ್ರೀ, ಸಂಪತ್, ನರಸಿಂಹರಾಜು, ವೆಂಕಟಸುಬ್ಬಯ್ಯ, ಸಿಂಬಾಳ್ಕರ್, ಟೊಮೆಟೋ ಸೋಮು, ರಮಾಕಾಂತ, ಅಜಿತ್ ಸಾಸನೂರ ಮಾ। ಅರುಣಕುಮಾರ್
ಕ/ಚಿ.ಕ: ಗೀತಪ್ರಿಯ
ಮಾ: ವಿಜಯನಾರಸಿಂಹ
ಗೀ: ಗೀತಪ್ರಿಯ, ಆರ್.ಎನ್.ಜಯಗೋಪಾಲ್, ವಿಜಯನಾರಸಿಂಹ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್.ಜಾನಕಿ
ಸಂ: ಜಿ.ವೆಂಕಟರಾಮ್
ಛಾ: ಡಿ.ವಿ.ರಾಜಾರಾಂ
ಕಲೆ: ಮುತ್ತುಕೃಷ್ಣ
ಸ: ರಾಜನ್-ನಾಗೇಂದ್ರ
ನೃ: ಉಡುಪಿ ಜಯರಾಂ, ಚಿನ್ನಿ-ಸಂಪತ್
ಪ್ರ: ಷಣ್ಮುಗಂ, ರಾಜಗೋಪಾಲ್, ನಾಗೇಶ್ವರರಾವ್, ನರೇಂದ್ರಬಾಬು
ಸ್ಟು: ಚಾಮುಂಡೇಶ್ವರಿ, ಕಂಠೀರವ
ಹಾ: ೧)'ಕಾಲೇಜಿನ ಕನ್ನೆ...', ೨)'ನಿನ್ನ ಸವಿನೆನಪೆ...', ೩)'ರಾಗೀ ಸಮಾಲ್..', ೪)'ಎಲ್ಲೆಲ್ಲೂ ಅಂದ ಆನಂದ...'
ಕ.ಸಾ: ಯುವಕನೊಬ್ಬ ತನ್ನ ಸಹಪಾಠಿಯನ್ನು ರಕ್ಷಿಸುವಾಗ ಆಕಸ್ಮಾತಾಗಿ ಎದುರಾಳಿಯ ಕೊಲೆಯಾಗಿ, ಜೈಲು ಸೇರುತ್ತಾನೆ. ಸನ್ನಡತೆಯಿಂದಾಗಿ ಹೊರಬಂದು ಒಳ್ಳೆಯ ಗುಣಗಳಿಗಾಗಿ, ಜನಮನ್ನಣೆ ಪಡೆದರೂ ಅವನ ಗತ ಜೀವನ, ಅವನ - ಅವನ ಮನೆಯವರ ಬದುಕನ್ನು ದುರಂತಕ್ಕೆ ತಳ್ಳುತ್ತದೆ.

೫೭೪. ಪ್ರತಿಮಾ

(೧೯೭೮ / ವರ್ಣಚಿತ್ರ / ಸಾಮಾಜಿಕ)
ಲಾ: ಎ.ಎಸ್.ಪ್ರೊಡಕ್ಷನ್ಸ್
ಪ್ರೊ/ನಿ: ಸುಧೀರ್ ಮೆನನ್
ಸ.ನಿ: ಬಿ.ನಾಗೇಶ್ ಬಾಬು

ಅ: ವಿಷ್ಣುವರ್ಧನ್, ಭಾರತಿ, ಸರ್ವಮಂಗಳ, ಮಮತಾ ಶೆಣೈ, ಎಂ.ಎಸ್.ಸತ್ಯ, ಕೆ.ಎಸ್.ಅಶ್ವತ್ಥ್, ಅಂಬರೀಷ್, ಹಲಂ
ಕ: ಸುಧೀರ್ ಮೆನನ್
ಚಿ.ಕ/ಮಾ/ಗೀ: ನರೇಂದ್ರಬಾಬು
ಗಾ: ಎಸ್.ಜಾನಕಿ
ಸಂ: ಪ್ರಭಾ ವಲ್ಲರ್
ಛಾ: ನಾರಾಯಣರಾವ್
ಕಲೆ: ಪಿ.ವೆಂಕಟರಾಮಯ್ಯ
ಸ: ಕನು ಘೋಷ್
ಧ್ವ: ಸೀತಾರಾಮ್, ಬಿ.ಎನ್.ಶರ್ಮ
ನೃ: ಚಿನ್ನಿ-ಸಂಪತ್
ವ: ತಾತಾರಾವ್
ಪ್ರ: ನಾಗರಾಜ್
ಸ್ಟು: ಪ್ರೀಮಿಯರ್
ಹಾ: ೧)'ಪೂಜೆಯೇ ಮನಕೆ...', ೨)'ಸೀ ಸೇನಾ ದಕ್ ಧಕ್..', ೩)'ಮುತ್ತು ಹನಿ ಬಿಟ್ಟು...', ೪)' ಲಾ ಲಾ ನಗುತ ನಗುತ..', ೫)'ಸೌಂದರ್ಯದ ಸಾರ..'
ವಿ: ಕಂಠದಾನ ಕಲಾವಿದೆಯಾದ ಸರ್ವಮಂಗಳ ಬಾಲನಟಿಯಾಗಿ ಅಭಿನಯಿಸಿದ ಚಿತ್ರ. ಎಕ್ಸಾರ್ಸಿಸ್ಟ್ ಚಿತ್ರದ ಸ್ಫೂರ್ತಿ.
ಕ.ಸಾ: ನೀತಿವಂತನಾದ ವ್ಯಕ್ತಿ ಪ್ರಾಮಾಣಿಕನಾಗಿ ಬದುಕಲು ಅಸಾಧ್ಯವೆನಿಸಿದಾಗ, ಸಮಾಜದ್ರೋಹಿಗಳ ಜೊತೆ ಶಾಮೀಲಾಗಿ ಅಕ್ರಮವಾಗಿ ಹಣ, ಆಸ್ತಿ ಸಂಪಾದಿಸಿ ಶ್ರೀಮಂತನಾಗುತ್ತಾನೆ. ಆತನ ಹೆಂಡತಿ, ಮಗಳಿಗೆ ಇದು ತಿಳಿಯದು. ದುರ್ಮಾರ್ಗಿ ಮಾಮಾಚಾರಿಯೊಬ್ಬನ ಬಲೆಗೆ ಸಿಲುಕಿ ಆತ ಒದ್ದಾಡುವುದು ಆತನ ಮಗಳಿಗೆ ತಿಳಿದು ಆಕೆ ಆತನ ಜೊತೆಗೆ ತನ್ನ ತಂದೆಯ ಅಕ್ರಮಗಳನ್ನು ಬಯಲಿಗೆಳೆಯುತ್ತಾಳೆ.

೫೭೫. ಸುಮಂಗಲಿ

(೧೯೭೮ / ವರ್ಣಚಿತ್ರ / ಸಾಮಾಜಿಕ)
ಲಾ: ಜ್ಯೋತಿ ಎಂಟರ್‌ಪ್ರೈಸಸ್
ಪ್ರೊ/ನಿ: ಟಿ.ವಿ.ಸಿಂಗ್ ಠಾಕೂರ್
ಅ: ರಮೇಶ್, ರಾಮ್‌ಗೋಪಾಲ್, ಶಿವರಾಂ, ಅಶ್ವತ್ಥ್‌ನಾರಾಯಣ, ಭವಾನಿ, ಸುರೇಖ, ಜಯಶ್ರೀ, ಸರೋಜ, ಅನ್ನಪೂರ್ಣ
ಕ/ಚಿ.ಕ: ಎಂ.ಬಿ.ಶೇಷಗಿರಿರಾವ್
ಮಾ/ಗೀ: ನರೇಂದ್ರಬಾಬು
ಗಾ: ಪಿ.ಬಿ.ಶ್ರೀನಿವಾಸ್, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್.ಜಾನಕಿ, ವಾಣಿ ಜಯರಾಂ
ಸಂ: ತಂಗವೇಲು
ಛಾ: ಎಂ.ಎಸ್.ಅನಂತ ಸಿಂಗ್
ಕಲೆ: ಜಿ.ಜ್ಞಾನಯಾತನ್
ಸ: ಟಿ.ಜಿ.ಲಿಂಗಪ್ಪ
ಸ್ಟು: ಕಂಠೀರವ, ಚಾಮುಂಡೇಶ್ವರಿ
ಹಾ: ೧)'ಎಂದೆಂದು ಶುಭವಾಗಲಿ...', ೨)'ಕನಸೇ ನಿಜವಾಗಿ...', ೩)'ನಾ ಕಂಡ ಬಾಳ ಮಂದಿರ...', ೪)'ಎಲ್ಲಾ ನನಗಾಗಿ..'
ಸೆ: ಉದ - ೩೯೫೬.೮೦ ಮೀ., 'ಯು' ೨೨-೩-೧೯೭೮
ಕ.ಸಾ: ಮುಗ್ಧ ಚೆಲುವೆಯೊಬ್ಬಳು ತನ್ನನ್ನು ಪ್ರೀತಿಸಿದ ಹುಡುಗನಿಗೆ ಬದಲಾಗಿ ತನ್ನನ್ನು ಅತ್ಯಾಚಾರ ಮಾಡಿದವನನ್ನು ವಿವಾಹವಾಗಿ ಅವನ ವಿಧವೆಯೂ ಆದಳು. ಚೆಲುವನ್ನು ಬೇಟೆಯಾಡುವ ದುಷ್ಟರ ಮಧ್ಯೆ ಸಿಲುಕಿ ಹಣ ಪಿಶಾಚಿಗಳ ಮಧ್ಯೆ ಹಣ್ಣಾಗುತ್ತಾಳೆ. ಅಂತಿಮವಾಗಿ ತನ್ನನ್ನು ಪ್ರೀತಿಸುವ, ರಕ್ಷಿಸಬಲ್ಲ ತರುಣನನ್ನು ಮರು ವಿವಾಹವಾಗುವ ಕಥೆ.

೫೭೬. ಅನುಬಂಧ

(೧೯೭೮ / ವರ್ಣಚಿತ್ರ / ಸಾಮಾಜಿಕ)
ಲಾ: ನೃಪತುಂಗ ಫಿಲಂಸ್
ಪ್ರೊ: ಕೆ.ಎನ್.ಪುರುಷೋತ್ತಮ, ಶಾಂತಮ್ಮ, ಶಾರದಮ್ಮ
ನಿ: ಬಿ.ಎಲ್.ಆಚಾರ್ಯ
ಅ: ಮಧುಸೂದನ್, ಸಾಯಿಕುಮಾರ್, ಅಶ್ವತ್ಥ್, ಕೇಶವ, ಹೇಮಾ ಚೌಧುರಿ, ಪ್ರಮೀಳ ಜೋಷಾಯ್, ಜಯಶ್ರೀ

ಕ/ಚಿ.ಕ/ಮಾ: ಎ.ಎಲ್.ಆಚಾರ್ಯ
ಗೀ: ಕು.ರ.ಸೀತಾರಾಮಶಾಸ್ತ್ರಿ
ಗಾ: ಪಿ.ಬಿ.ಶ್ರೀನಿವಾಸ್, ಬಿ.ಕೆ.ಸುಮಿತ್ರಾ, ಬೆಂಗಳೂರು ಲತಾ
ಸಂ: ಬಾಪಣ್ಣ, ರಾಜಾನಂದ ರೆಡ್ಡಿ
ಛಾ: ಜಿ.ಚಂದ್ರನ್
ಕಲೆ: ಎ.ಬಿ.ಮೂರ್ತಿ
ಸ: ಎಂ.ರಂಗರಾವ್
ಧ್ವ: (ಹಾ)ಪ್ಯೈ.ಪ್ಯೈ.ರೆಕಾರ್ಡಿಂಗ್, (ಮಾ)ಚಾಮುಂಡೇಶ್ವರಿ
ನೃ: ಉಡುಪಿ ಜಯರಾಂ
ಸ್ಟು: ಕಂಠೀರವ, ಚಾಮುಂಡೇಶ್ವರಿ
ಹಾ: ೧)'ಅನುಬಂಧ...', ೨)'ಕರ್ಮಣ್ಯೇವಾ ಅಧಿಕಾರಸ್ತೇ...', ೩)'ಮೂಲೋಕ ದೈವಗಳ...', ೪)'ಮನಸಾರ ದಂಡಿಪ...'.
ಕ.ಸಾ: ಹಳ್ಳಿಯೊಂದರ ಪರಿಸರದಲ್ಲಿ ನಡೆಯುವ ಕಥೆ. ಪರಂಪರಾಗತ ನಂಬಿಕೆಯೇ ಬದುಕಾದವರಿಗೆ ಹೊಸ ಮೌಲ್ಯ, ಸೌಲಭ್ಯ ಒಗ್ಗುವುದಿಲ್ಲ. ತಾನೂ ತನ್ನ ಪರಿಸರ, ಜನ ಕೂಡಾ ಅದೇ ಮೌಢ್ಯದಲ್ಲಿದ್ದರ ಮಾತ್ರ ಅವರ ಮೇಲೆ ತನ್ನ ಅಧಿಕಾರ ಸಾಧಿಸಬಹುದು ಎಂಬ ನಂಬಿಕೆಯ ಜಮೀನ್ದಾರ. ಆಧುನಿಕ ಶಿಕ್ಷಣ ಪಡೆದ ಅವನ ಇಬ್ಬರು ಮಕ್ಕಳ ಮೂಲಕ ವಿದ್ಯೆಯನ್ನು ಸರಿಯಾಗಿ ಬಳಸಿದರ ತನ್ನ ಬದುಕು, ಪರಿಸರವನ್ನು ಬೆಳಗಬಲ್ಲುದು ತಪ್ಪಾಗಿ ಬಳಕೆಯಾದರ ವ್ಯಕ್ತಿ-ಬದುಕು ಸರ್ವನಾಶವಾಗುವುದು ಸಾಧ್ಯ ಎಂದು ಹೇಳುವ ಪ್ರಯತ್ನ.

೫೭೭. ಅಪರಿಚಿತ

(೧೯೭೮ / ವರ್ಣಚಿತ್ರ / ಪತ್ತೇಧಾರಿ)
ಲಾ/ಪ್ರೊ: ಶ್ರೀ ಗಾಯತ್ರಿ ಆರ್ಟ್ಸ್
ನಿ: ಕಾಶೀನಾಥ್
ಸ.ನಿ: ರಾಮ್‌ದಾಸ್ ನಾಯ್ಡು
ಅ: ಎಲ್.ವಿ.ಶಾರದ, ಸುರೇಶ್ ಹೆಬ್ಳೀಕರ್, ಶ್ರೀಲಲಿತ, ಪ್ರೇಂ ದಿನಕರ್, ಹರೀಶ್, ಸುಂದರಶ್ರೀ, ಸುಂದರಕೃಷ್ಣ ಅರಸ್, ಅರವಿಂದ್, ಮಾ। ಪ್ರಕಾಶ್, ಎಂ.ವಿ.ವಾಸುದೇವರಾವ್
ಕ/ಚಿ.ಕ/ಮಾ/ಗೀ: ಕಾಶೀನಾಥ್
ಗಾ: ವಾಣಿ ಜಯರಾಂ, ಎಸ್.ಪಿ.ಬಾಲಸುಬ್ರಹ್ಮಣ್ಯಂ
ಸಂ: ಸುಬ್ರಹ್ಮಣ್ಯಂ. ಕಾಶೀನಾಥ್
ಛಾ: ಬಿ.ಸಿ.ಗೌರಿಶಂಕರ್
ಸ: ಪದ್ಮನಾಭನ್
ಹಾ: ೧)'ಸವಿನೆನಪುಗಳು ಬೇಕು ಸವಿಯಲೀ ಬದುಕು...', ೨)'ಈ ನಾಡ ಅಂದ...'
ಕ.ಸಾ: ಕಾಫಿ ಪ್ಲಾಂಟರ್‌ನ ಮಗನ ಸಾವಿನ ರಹಸ್ಯವನ್ನು ಬೇಧಿಸುವುದರ ಸುತ್ತ ಹೆಣೆಯಲಾದ ಕುತೂಹಲಕಾರಿ ಕಥೆ. ಕೌತುಕಮಯ ಸನ್ನಿವೇಶಗಳ ಮೂಲಕ ಸತ್ಯ ಅಸತ್ಯಗಳ ತೂಗುಯ್ಯಾಲೆಯ ಮಧ್ಯ ಕಥಾ ಹಂದರವನ್ನು ಕಟ್ಟಲಾಗಿದೆ. ಅಂತಿಮವಾಗಿ ಅಪರಾಧಿಯ ಸಾವು ಕೂಡ ಸತ್ಯ ಅಸತ್ಯಗಳ ತೂಗುಯ್ಯಾಲೆಯ ಸ್ಥಿತಿಯಲ್ಲಿ ನಿಲ್ಲುವುದ ಕಥೆಯ ಮುಖ್ಯ ಸಂಗತಿ ಹೊಸ ತಿರುವು

೫೭೮. ಪ್ರೇಮಾಯಣ

ಲಾ: ರೂಪಾಯನ್
ಪ್ರೊ: ಎಂ.ಪ್ರಭಾಕರ್
ನಿ: ಗೀತಪ್ರಿಯ
ಸ.ನಿ: ಸುಶೀಲ್ ಕುಮಾರ್
ಅ: ಅನಂತನಾಗ್, ಶಿವರಾಂ, ವಾದಿರಾಜ್, ಅನಿಲ್ ಕುಮಾರ್, ಲೋಕನಾಥ್, ಆರತಿ, ರಶ್ಮಿ, ಉಮಾ ಶಿವಕುಮಾರ್, ಪ್ರಭಾಕರ್, ಸರಸ್ವತಿ, ರಾಜೇಶ್ವರಿ, ಸಬೀನಾ
ಕ: ಎಸ್.ಕೆ.ಶೇಷಾದ್ರಿ
ಚಿ.ಕ: ರೂಪಾಯನ್ ಫ್ರೆಂಡ್ಸ್ ಗ್ರೂಪ್
ಮಾ: ನವರತ್ನರಾಮ್
ಗೀ: ದೊಡ್ಡರಂಗೇಗೌಡ
ಗಾ: ವಾಣಿ ಜಯರಾಂ, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್.ಜಾನಕಿ
ಸಂ: ಯಾದವ್ ವಿಕ್ಟರ್, ಜೋಸೆಫ್, ಕುಮಾರ್
ಛಾ: ಯು.ಎಂ.ಎನ್.ಶರೀಫ್, ನಾರಾಯಣಸ್ವಾಮಿ
ಸ: ವಿಜಯಭಾಸ್ಕರ್



ಧ್ವ: (ಹಾ)ಕೋಟೇಶ್ವರರಾವ್, (ಮಾ)ಶಿವರಾಜ್
ವ: ದೊರೈ, ಕೃಷ್ಣ
ಪ್ರ: ಮಾಧವನ್, ರಾಜಗೋಪಾಲ್
ಸ್ಟು: ಚಾಮುಂಡೇಶ್ವರಿ
ಹಾ: ೧)'ಒಲವಿನಿಂದ ಒಮ್ಮೆ ನಾನು...', ೨)'ಪಮ್ಮಿ ಅರವ್ರೋ ಪಮ್ಮಿ...', ೩)'ನಮಗೆ ಬಂದಿದೆ ಸಿರಿ...'
ಸೆ: ಉದ್ದ - ೩೭೯೬.೫೩, 'ಯು' ೨೧-೬-೧೯೭೮
ಕ.ಸಾ: ಪ್ರೇಮಿಗಳು, ಸದಾ ಸಂಶಯ, ಅಸೂಯೆಗಳಲ್ಲಿ ಸುಳಿದಾಡುವ ಅವರ ಪ್ರೇಮಕ್ಕ ಪರೀಕ್ಷೆ ಒಡ್ಡುವುದು ಒಂದು ಲಾಟರಿ ಟಿಕೆಟ್. ಅದಕ್ಕಾಗಿ ಸ್ವಲ್ಪ ಸಮಯ ವಿರಸ. ನಂತರ ಇಬ್ಬರೂ ತಪ್ಪನ್ನರಿತು ಒಂದಾಗುವ ವೇಳೆಗೆ ಲಾಟರಿಯಲ್ಲಿ ಹಣ ಬಂದಿರುತ್ತದೆ. ಮನುಷ್ಯ ಹಣಕ್ಕಾಗಿ ಏನೆಲ್ಲ ಬವಣೆ ಪಡುತ್ತಾನ ಎಂಬುದರ ಹಾಸ್ಯ ಚಿತ್ರಣ.

೫೭೯. ನನ್ನ ಪ್ರಾಯಶ್ಚಿತ್ತ

(೧೯೭೮ / ವರ್ಣಚಿತ್ರ / ಸಾಮಾಜಿಕ)
ಲಾ: ಆರ್.ಕೆ. ಎಂಟರ್‌ಪ್ರೈಸಸ್
ಪ್ರೊ: ವಸಂತಕುಮಾರ್
ನಿ: ಉಗ್ರನರಸಿಂಹ
ಅ: ವಿಷ್ಣುವರ್ಧನ್, ಭಾರತಿ, ಆರತಿ, ಮಂಜುಳ, ಜಯಲಕ್ಷ್ಮೀ, ರೆಹನಾ ಸುಲ್ತಾನ್, ಆಶಾ ಸಚ್‌ದೇವ್, ಚಂದ್ರಶೇಖರ್, ರಾಜೇಶ್, ದಿನೇಶ್, ಲೋಕೇಶ್, ಅಶ್ವತ್, ಸಂಪತ್
ಕ: ಮಧುಸಿನ್ಹ, ದೀಪಾರಾಣಿ ಶೇಠಿ
ಚಿ.ಕ: ವಿ.ಟಿ.ನಂದಕುಮಾರ್, ಜಸವಂತ ಕುಮಾರ್
ಮಾ: ಎಂ.ನರೇಂದ್ರಬಾಬು
ಗೀ: ಚಿ. ಉದಯಶಂಕರ್, ಉಗ್ರನರಸಿಂಹ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ವಾಣಿಜಯರಾಂ, ಬಾಗೇಪಲ್ಲಿ ಸುಬ್ರಹ್ಮಣ್ಯಂ
ಸಂ: ಸೆಬಾಸ್ಟಿಯನ್
ಛಾ: ಎಸ್.ಎನ್.ಮಣಿ
ಕಲೆ: ಎ.ಕ.ರಮೇಶ್, ಪಿ.ವೆಂಕಟರಾಮಯ್ಯ
ಸ: ಸೋನಿಕ್ ಓಮಿ
ಧ್ವ: (ಹಾ) ಗೋವಿಂದಸ್ವಾಮಿ (ಮಾ) ಕೋದಂಡಪಾಣಿ
ನೃ: ಸಾಯಿ (ಬೊಂಬಾಯಿ)
ವ: ರಂಗನಾಥ್, ಆರ್.ಎಸ್.ಮಣಿ
ಪ್ರ: ಟಿ.ಮುತ್ತು
ಸ್ಟು: ಅಭಿಮಾನ್
ವಿ: 'ಬಲಾತ್ಕಾರ' ಎಂಬ ಹೆಸರಿತ್ತು. ನಂತರ ಸೆನ್ಸಾರ್ ಆಕ್ಷೇಪವೆತ್ತಿದರಿಂದ 'ನನ್ನ ಪ್ರಾಯಶ್ಚಿತ್ತ' ಎಂದು ಹೆಸರಿಡಲಾಯಿತು. ಹಿಂದಿ ಚಿತ್ರರಂಗದ ರೆಹನಾ ಸುಲ್ತಾನ್, ಆಶಾಸಚದೇವ್, ಸಂಗೀತ ನಿರ್ದೇಶಕದ್ವಯರಾದ ಸೋನಿಕ್ ಓಮಿ ಪಾಲ್ಗೊಂಡ ಚಿತ್ರ.
ಕ.ಸಾ: ಅತಿಯಾದ ಶ್ರೀಮಂತಿಕೆಯಿಂದ ವಿಷಯಲಂಪಟನಾಗಿ ಬೆಳೆದ ಯುವಕ. ಯೌವ್ವನದ ಅಮಲಿನಲ್ಲಿ ಮಾಡಿದ್ದೇ ಸರಿ ಎನ್ನುವ ಮನೋಭಾವದವನು. ಹರಯದ ಹುಚ್ಚಾಟಗಳು, ಪ್ರಣಯ, ಅತ್ಯಾಚಾರ, ಜೈಲುವಾಸ, ಪಶ್ಚಾತ್ತಾಪ ಹೀಗೆ ಎಲ್ಲಾ ಅಂಶಗಳಿದ್ದ ಚಿತ್ರ.

೫೮೦. ಸವಾಲಿಗೆ ಸವಾಲ್

(೧೯೭೮ / ವರ್ಣಚಿತ್ರ / ಸಾಮಾಜಿಕ)
ಲಾ: ಟಿ.ಬಿ.ಆರ್. ಪ್ರೊಡಕ್ಷನ್ಸ್
ಪ್ರೊ: ಟಿ.ಬಿ.ಆರ್.ಬೋರಣ್ಣ ಸಹೋದರರು
ನಿ: ರಮೇಶ್ ಶಿವರಾಂ
ಸ.ನಿ: ಶಾಂತಾರಾಂ
ಅ: ಶಿವರಾಮ್, ಶ್ರೀಕಾಂತ್, ಜೈಜಗದೀಶ್, ತೂಗುದೀಪ ಶ್ರೀನಿವಾಸ್, ಜಯಮಾಲ, ಮಮತಾ ಶೆಣೈ, ಅನಂತರಾಂ ಮಚ್ಚೇರಿ, ಎಂ.ಎಸ್.ಉಮೇಶ್, ಸುಂದರಕೃಷ್ಣ ಅರಸ್, ಆಶಾಲತ, ರಾಜಾನಂದ್, ಇಂದಿರಾ, ಹೇಮಾ
ಕ: ಟಿ.ಬಿ.ಆರ್. ಪ್ರೊಡಕ್ಷನ್ಸ್ ಕಥಾ ವಿಭಾಗ
ಚಿ.ಕ: ರಮೇಶ್-ಶಿವರಾಂ
ಮಾ: ಸಿ.ಎಸ್.ಮಂಜು



ಗೀ: ಹುಣಸೂರು ಕೃಷ್ಣಮೂರ್ತಿ, ಎಂ.ಎನ್.ವ್ಯಾಸರಾವ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ವಿದ್ಯಾರಾಣಿ, ಎಸ್.ಜಾನಕಿ
ಛಾ: ಎಂ.ಆರ್.ಕೆ.ಮೂರ್ತಿ
ಸ: ಟಿ.ಜಿ.ಲಿಂಗಪ್ಪ
ಹಾ: ೧)'ಎಂಥ ನೋಟ.. ಎಂಥ ಮಾಟ...'

೫೮೧. ಸುಳಿ

(೧೯೭೮ / ವರ್ಣಚಿತ್ರ / ಸಾಮಾಜಿಕ)
ಲಾ: ವಿಕ್ರಂ ಪ್ರೊಡಕ್ಷನ್ಸ್
ಪ್ರೊ: ಕೆ.ಎಫ್.ಡಿ.ಸಿ. ಸಹಕಾರದೊಂದಿಗೆ ಬಿ.ಎಸ್.ರಂಗಾ
ನಿ: ಬಿ.ಎಸ್.ರಂಗಾ
ಸ.ನಿ: ಬಿ.ಆರ್.ರಾಮ್‌ಕುಮಾರ್
ಅ: ಅಶೋಕ್, ರಾಮಕೃಷ್ಣ, ಚಂದ್ರಕಲಾ, ಲೋಕೇಶ್, ಎಂ.ಎಸ್.ಸತ್ಯ, ಶನಿಮಹಾದೇವಪ್ಪ, ಭಾರತಿ (ಜ್ಯೂ), ಸುಶೀಲಾನಾಯ್ಡು, ರೂಪಾ ಚಕ್ರವರ್ತಿ, ಪಾಪಮ್ಮ
ಕ: ಕೃಷ್ಣಮೂರ್ತಿ ಪುರಾಣಿಕರ ಕಾದಂಬರಿ ಆಧಾರಿತ
ಚಿ.ಕ/ಮಾ: ಚಿ. ಉದಯಶಂಕರ್
ಗೀ: ಚಿ. ಉದಯಶಂಕರ್, ಪುರಂದರದಾಸರು



ಗಾ: ಪಿ.ಬಿ.ಶ್ರೀನಿವಾಸ್, ರಾಮಕೃಷ್ಣ, ಎಲ್.ಆರ್.ಅಂಜಲಿ, ಟಿ.ಎಂ.ಸೌಂದರರಾಜನ್, ಕಸ್ತೂರಿ ಶಂಕರ್
ಛಾ: ಬಿ.ಎನ್.ಹರಿದಾಸ್
ಕಲೆ: ಬಿ.ಎಸ್.ಕೇಶವರಾವ್
ಸ: ಉಪೇಂದ್ರಕುಮಾರ್
ಸ್ಟು: ಚಾಮುಂಡೇಶ್ವರಿ, ಕಂಠೀರವ
ಹಾ: ೧)'ಮನದ ಮಾತ ಹೇಳುತಿದೆ...', ೨)'ಮೆಲ್ಲ ಮೆಲ್ಲನೆ...', ೩)'ಉಟ್ಟ ಸೀರೆ ತೊಟ್ಟು...', ೪)'ಆದದೆಲ್ಲಾ ಒಳಿತೇ ಆಯಿತು...'
ಕ.ಸಾ: ತಾಯಿ ತಂದೆ ಸತ್ತ ಮೇಲೆ ತಮ್ಮನನ್ನು ಕಷ್ಟಪಟ್ಟು ಓದಿಸುವ ತ್ಯಾಗಮಯಿ ಅಕ್ಕನಿಗೆ, ಒಬ್ಬ ಪ್ರೇಮಿ, ಮತ್ತೊಬ್ಬ ಅವಳ ಆರಾಧಕ. ತಮ್ಮನಿಂದ ಕಡೆಗಣಿಸಲ್ಪಟ್ಟ ಅಕ್ಕ ಆತ್ಮಹತ್ಯೆಗೆ ಪ್ರಯತ್ನ ಪಡುತ್ತಾಳೆ. ಆಗ ಅವಳನ್ನು ರಕ್ಷಿಸುವ ಸಂದರ್ಭದಲ್ಲಿ, ಆಕೆ, ತಮ್ಮ, ಪ್ರೇಮಿ, ಆರಾಧಕ ನಾಲ್ವರೂ ವಿಧಿಯ ಸುಳಿಗೆ ಸಿಲುಕುತ್ತಾರೆ.

೫೮೨. ಆಪರೇಷನ್ ಡೈಮಂಡ್ ರ್‍ಯಾಕೆಟ್

(೧೯೭೮ / ವರ್ಣಚಿತ್ರ / ಪತ್ತೇದಾರಿ)
ಲಾ: ಅನುಪಮ್ ಮೂವೀಸ್
ಪ್ರೊ/ನಿ: ದೊರೆ-ಭಗವಾನ್
ಸ.ನಿ: ಹೆಚ್.ರೇಣುಕಾ ಶರ್ಮ
ಅ: ರಾಜಕುಮಾರ್, ಪದ್ಮಪ್ರಿಯ, ತೂಗುದೀಪ ಶ್ರೀನಿವಾಸ್, ರಾಜಾನಂದ್, ಮಮತಾ ಶೆಣೈ, ಪ್ರಭಾಕರ್, ಜೆನ್ನಿಫರ್, ಚಂದ್ರಲೇಖ
ಕ/ಚಿ.ಕ: ದೊರೆ-ಭಗವಾನ್
ಮಾ/ಗೀ: ಚಿ.ಉದಯಶಂಕರ್
ಗಾ: ರಾಜಕುಮಾರ್, ವಾಣಿ ಜಯರಾಂ, ಎಸ್.ಜಾನಕಿ
ಸಂ: ಪಿ.ಭಕ್ತವತ್ಸಲಂ
ಛಾ: ಪಿ.ಎಸ್.ಪ್ರಕಾಶ್
ಕಲೆ: ಬಿ.ಚಲಂ
ಸ: ಜಿ.ಕೆ.ವೆಂಕಟೇಶ್
ಧ್ವ: (ಹಾ)ಕೋಟೇಶ್ವರರಾವ್, (ಮಾ) ಎಸ್.ಪಿ.ರಾಮನಾಥನ್
ನೃ: ಉಡುಪಿ ಜಯರಾಂ, ದೇವಿ
ಸಾ: ವ.ಶಿವಯ್ಯ
ವ: ಎಂ.ನಾಥ್, ಅಪ್ಪಾರಾವ್
ಪ್ರ: ದೊರೆ, ಕೇಶವ, ಮಣಿ
ಸ್ಟು: ಎ.ವಿ.ಎಂ., ವಾಹಿನಿ
ಹಾ: ೧)'ಇಫ್ ಯು ಕಮ್ ಟುಡೇ...', ೨) 'ನೋಡಿದೆಯಾ...', ೩)'ಅಲ್ಲಿ ಇಲ್ಲಿ ನೋಡುವೆ ಏಕೆ...', ೪)'ನೀ ನಡುಗುವೆ ಏಕೆ...'
ಕ.ಸಾ: ದುಷ್ಟರನ್ನು ಬೆನ್ನಟ್ಟಿ ಸದೆಬಡಿಯುವ, ಬುದ್ಧಿ, ಸಾಹಸಗಳನ್ನು ಪ್ರದರ್ಶಿಸುವ ಪತ್ತೇದಾರನ ಕಥೆ.

೫೮೩. ಒಂದಾ ಊರಿನ ಕಥೆ

(೧೯೭೮ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಮೈತ್ರಿ ಆರ್ಟ್ಸ್
ಪ್ರೊ: ರಾಜಲಕ್ಷ್ಮಿ, ರಾಮಚಂದ್ರಪ್ಪ, ಗಾಯತ್ರಿ ಶ್ವೇತಾದ್ರಿ
ನಿ: ಬರಗೂರು ರಾಮಚಂದ್ರಪ್ಪ
ಸ.ನಿ: ಸುರೇಶ್, ಪರಮೇಶ್ ಕಾರ್ತೀಕ್
ಅ: ಪ್ರಮೀಳಾ, ವಿಮಲಾಕ್ಷಿ, ಉಮಾ, ವಾಸುದೇವ ರಾವ್, ಉಮೇಶ್, ಲೋಹಿತಾಶ್ವ, ಪ್ರಸನ್ನ, ವೆಂಕೋಜಿರಾವ್, ರಾಮಚಂದ್ರ, ಗೋವಿಂದಯ್ಯ, ಭೈರಪ್ಪ, ನಾಯ್ಡು
ಕ/ಚಿ.ಕ/ಮಾ/ಗೀ: ಬರಗೂರು ರಾಮಚಂದ್ರಪ್ಪ
ಗಾ: ಬಿ.ಕೆ.ಸುಮಿತ್ರ
ಸಂ: ಎ.ಸುಬ್ರಹ್ಮಣ್ಯ
ಛಾ: ಸುಂದರನಾಥ ಸುವರ್ಣ
ಸ: ಬಿ.ವಿ.ಕಾರಂತ್
ಧ್ವ: (ಹಾ) ಎಸ್.ಪಿ.ರಾಮನಾಥನ್, (ಮಾ) ಗೋವಿಂದಸ್ವಾಮಿ
ಪ್ರ: ರಾಮಕೃಷ್ಣ
ವಿ: ಅತ್ಯುತ್ತಮ ಕಥೆ ಹಾಗೂ ಅತ್ಯುತ್ತಮ ಸಂಭಾಷಣೆ (ಬರಗೂರು ರಾಮಚಂದ್ರಪ್ಪ) ರಾಜ್ಯ ಪ್ರಶಸ್ತಿ (೭೮-೭೯)
ಕ.ಸಾ: ಗ್ರಾಮೀಣ ಪರಿಸರ. ಮುಗ್ಧರ ಬದುಕಿನಲ್ಲಿ ಕಾಲದಿಂದ ಬಂದಿರುವ ಜಾತಿ, ವರ್ಗಗಳ ಭೇದ, ಕೆಳ ಜಾತಿಯಲ್ಲೂ ಒಳಗಿನ ಭೇದಭಾವ, 'ಎಡಗೈ ಬಲಗೈ' ಬಗ್ಗೆ ಒಂದು ಪ್ರಣಯ ಪ್ರಸಂಗ ಮೂಲಕ ಒಳ ರಾಜಕಾರಣ ಪರಿಚಯಿಸುವ ಪ್ರಯತ್ನ. ಕನ್ನಡ ಚಿತ್ರರಂಗದಲ್ಲಿ ಪ್ರಥಮ ಪ್ರಯತ್ನವೂ ಹೌದು.

೫೮೪. ಪರಸಂಗದ ಗೆಂಡೆತಿಮ್ಮ

(೧೯೭೮ / ವರ್ಣಚಿತ್ರ / ಸಾಮಾಜಿಕ)
ಲಾ: ಕಲಾಕ್ಷೇತ್ರ
ಪ್ರೊ: ಮಣಿ ಮಿತ್ರರು (ಎಂ.ಸುಬ್ರಮಣಿ, ಹೊನ್ನಯ್ಯ, ಟಿ.ಪಿ.ದೊರೈರಾಜ್, ಅನ್ನದಾನಪ್ಪ ಶಿವರಾಮ್, ಎಂ.ನಾಗರಾಜನ್)
ನಿ: ಮಾರುತಿ ಶಿವರಾಂ
ಸ.ನಿ: ಕೆ.ವಿ.ಜಯರಾಂ, ಎಂ.ಕೆ.ಸುರೇಶ್, ಶ್ರೀಧರ್
ಅ: ಲೋಕೇಶ್, ರೀಟಾ ಅಂಚನ್, ಮಾನು, ಶ್ಯಾಮಲ, ಲಲಿತಮ್ಮ, ಕು||ಪದ್ಮ, ಮಂಗಳ ಶಿವರಾಮ್, ಹೊನ್ನಯ್ಯ, ಬಿ.ಆರ್.ಜಯರಾಮ್, ಸಿದ್ಧಾರ್ಥ, ರಾಮಕೃಷ್ಣ, ಆರ್.ನಾಗರತ್ನಮ್ಮ, ಡಿಂಗ್ರಿ ನಾಗರಾಜ್, ಮಾ| ಲಿಂಗೇಶ್
ಕ/ಚಿ.ಕ: ಶ್ರೀಕೃಷ್ಣ ಆಲನಹಳ್ಳಿ
ಮಾ: ಮಾರುತಿ ಶಿವರಾಂ, ಕೃಷ್ಣ ಆಲನಹಳ್ಳಿ
ಗೀ: ದೊಡ್ಡರಂಗೇಗೌಡ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್.ಜಾನಕಿ
ಸಂ: ಜಿ.ಸ್ವಾಮಿ
ಛಾ: ಎಸ್.ರಾಮಚಂದ್ರ
ಕಲೆ: ಸು. ಭೈ.ಸಿದ್ದಪ್ಪ
ಸ: ರಾಜನ್ ನಾಗೇಂದ್ರ
ಧ್ವ: (ಹಾ)ಕೋಟೇಶ್ವರರಾವ್, ಎಸ್.ಪಿ.ರಾಮನಾಥನ್, (ಮಾ) ಶಿವರಾವ್, ಶಿವರಾಜ್
ವ: ಕೂಸೇರಿ, ಗುಬ್ಬಿ ಚನ್ನಸ್ವಾಮಿ
ಪ್ರ: ರಾಮಕೃಷ್ಣ, (ಕೇಶಾಲಂಕಾರ: ಹಬೀಬ್ ಖಾನ್, ಮುಂಬೈ)
ಸ್ಟು: ಚಾಮುಂಡೇಶ್ವರಿ, ಎ.ವಿ.ಎಂ.
ಹಾ: ೧)'ನೋಟದಾಗ ನಗೆಯ ಮೀಟಿ...', ೨)'ತೇರ ಏರಿ ಅಂಬರದಾಗ...', ೩)'ಸಿನ್ನಾ ರೂಪು ಎದೆಯ ಕಲಕಿ ಮಿಂದಾಗ...', ೪)'ನೋಟದಾಗೆ ನಗಯ ಮೀಟಿ...'
ವಿ: ತೃತೀಯ ಅತ್ಯುತ್ತಮ ಚಿತ್ರ (೭೮-೭೯), ಅತ್ಯುತ್ತಮ ನಟ : ಲೋಕೇಶ್, ಅತ್ಯುತ್ತಮ ಸಂಗೀತ : ರಾಜನ್ ನಾಗೇಂದ್ರ
ಕ.ಸಾ: ಪಟ್ಟಣದಿಂದ ಪದಾರ್ಥ ತಂದು ಮಾರುವ ಹಳ್ಳಿಯ ಮುಗ್ಧ ತಿಮ್ಮ. ಆಧುನಿಕ ಚೆಲುವೆ ಹೆಂಡತಿಯ ಪ್ರೇರಣೆಯಿಂದ ಗ್ರಾಮಕ್ಕೆ ನಾಜೂಕಿನ ಪದಾರ್ಥಗಳನ್ನು ಪರಿಚಯಿಸುತ್ತಾನೆ. ತಿಮ್ಮನಿಗೆ ಒಂದೆಡೆ ಹಳ್ಳಿಯಿಂದ ಬಹಿಷ್ಕಾರ, ಮತ್ತೊಂದೆಡೆ ಹೆಂಡತಿಯಿಂದಲೂ ವಂಚನೆ. ನಾಗರಿಕತೆ ಗ್ರಾಮೀಣ ಪರಿಸರವನ್ನು, ಮೌಲ್ಯಗಳನ್ನು ನಾಶಮಾಡುತ್ತದೆ ಎಂದು ಹೇಳುತ್ತದೆ.

೫೮೫. ಒಂದಾನೊಂದು ಕಾಲದಲ್ಲಿ

(೧೯೭೮ / ವರ್ಣಚಿತ್ರ / ಸಾಮಾಜಿಕ)
ಲಾ: ಎಲ್.ಎನ್.ಕಂಬೈನ್ಸ್
ಪ್ರೊ: ಜಿ.ಎನ್.ಲಕ್ಷ್ಮೀಪತಿ-ಕೆ.ಎನ್.ನಾರಾಯಣ್
ನಿ: ಗಿರೀಶ್ ಕಾರ್ನಾಡ್
ಸ.ನಿ: ಕಾನಕಾನಹಳ್ಳಿ ಗೋಪಿ
ಅ: ಶಂಕರ್‌ನಾಗ್, ಸುಂದರಕೃಷ್ಣ ಅರಸ್, ಅಕ್ಷತಾರಾವ್, ಸುಂದರರಾಜನ್, ಅನಿಲ್ ಠಕ್ಕರ್, ನಾಗಾಭರಣ, ಲಕ್ಷ್ಮೀಪತಿ, ಲಕ್ಷ್ಮೀಕೃಷ್ಣಮೂರ್ತಿ, ಸುಶೀಲೇಂದ್ರ ಜೋಶಿ, ಪಿ.ರಾಮಮೂರ್ತಿ, ವಸಂತರಾವ್ ನಾಕೋಡ್, ರೇಖಾ ಸಬನೀಸ್, ಅಜಿತ್ ಸಾಲ್ದಾನಾ, ಸೂರಿ, ರಾಜೀಕೃಷ್ಣ, ಸುರೇಶ್ ಕುಲಕರ್ಣಿ
ಕ/ಚಿ.ಕ: ಗಿರೀಶ್ ಕಾರ್ನಾಡ್, ಕೃಷ್ಣ ಬಸರೂರು
ಮಾ: ಜಿ.ಬಿ.ಜೋಷಿ
ಗೀ: ಚಂದ್ರಶೇಖರ ಕಂಬಾರ
ಗಾ: ಕವಿತಾ ಕೃಷ್ಣಮೂರ್ತಿ, ಚಂದ್ರಶೇಖರ ಕಂಬಾರ
ಸಂ: ಪಿ.ಭಕ್ತವತ್ಸಲಂ
ಛಾ: ಅಪೂರ್ವ ಕಿಶೋರ್ ಬೀರ್
ಕಲೆ: ಜಯೂ ನಚಿಕೇತ
ಸ: ಭಾಸ್ಕರ್ ಚಂದಾವರ್ಕರ್
ಧ್ವ: ಚಾಮುಂಡೇಶ್ವರಿ ಸ್ಟುಡಿಯೋ ತಂತ್ರಜ್ಞರು
ಹಾ: ೧)'ಒಡೆದೆನೇನೋ ಬೆರಕಿ...', ೨)'ಒಂದಾನೊಂದು ಕಾಲದಾಗ ಏನೊಂದು ಮುದವಿತ್ತ...'
ವಿ: ಶಂಕರ್‌ನಾಗ್ ಚಿತ್ರರಂಗ ಪ್ರವೇಶಿಸಿದರು. ಅಕಿರಾ ಕುರಾಸೋವನ ಚಿತ್ರದ ಸ್ಫೂರ್ತಿ. 'ಸೆವೆನ್ ಸಮುರಾಯ್'
ಕ.ಸಾ: ಒಂದು ಕಾಲಘಟ್ಟದಲ್ಲಿ ನಡೆಯುವ ಕತೆ. ಸಹೋದರರೇ ಆದರೂ ಆಸ್ತಿ ಸಂಚಯದ ಹಿನ್ನೆಲೆಯಲ್ಲಿ ವಿರೋಧಿಗಳಾದ ಶ್ರೀಮಂತರು. ಅವರವರ ರಕ್ಷಣೆಗೆ ಬಾಡಿಗೆ ಬಂಟರನ್ನಿಟ್ಟು ಯುದ್ಧ ಸಾರುವುದು. ಧಣಿಯ ರಕ್ಷಣೆಗೆ ನಿಂತ ಆಳಿಗವರೇ ಒಂದಾದಾಗ ಧಣಿಗಳೆಲ್ಲ ಒಂದಾಗುತ್ತಾರೆ. ಪರಸ್ಪರ ಸಂಶಯಗಳಲ್ಲೇ ಹೋರಾಟವೂ ಇರುತ್ತದೆ. ಕರ್ನಾಟಕದ ಇತಿಹಾಸದಲ್ಲಿಯ ಒಂದು ಕಾಲಘಟ್ಟದ ಅಸ್ಪಷ್ಟ ಪುಟ.

೫೮೬. ಸ್ನೇಹ-ಸೇಡು

(೧೯೭೮ / ವರ್ಣಚಿತ್ರ / ಸಾಮಾಜಿಕ)
ಲಾ: ಮಹೀಜಾ ಫಿಲಂಸ್
ಪ್ರೊ: ಸಿ.ಎಚ್.ಪ್ರಕಾಶರಾವ್
ನಿ: ವಿ.ಮಧುಸೂದನರಾವ್
ಸ.ನಿ: ರೇಣುಕಾಪ್ರಸಾದ್



ಅ: ವಿಷ್ಣುವರ್ಧನ್, ಅಂಬರೀಷ್, ವಜ್ರಮುನಿ, ನರಸಿಂಹರಾಜು, ಬಾಲಕೃಷ್ಣ, ಮಂಜುಳ, ಅನುಪಮ, ಜಯಶ್ರೀ, ಬಿಂದೋಡಿ ಲೀಲ, ಶಿವರಾಂ, ಜೂ.ಶೆಟ್ಟಿ, ಸುರೇಂದರ್, ರಾಜ-ನಾಗೇಶ್, ಅಶ್ವಥ್‌ನಾರಾಯಣ್, ಸುಶೀಲಾನಾಯ್ಡು, ಚೇತನ್ ರಾಮರಾವ್
ಕ: ಮಹೀಜಾ ಫಿಲಂಸ್ ಕಥಾ ವಿಭಾಗ
ಚಿ.ಕ: ವಿ. ಮಧುಸೂದನರಾವ್
ಮಾ/ಗೀ: ಚಿ.ಉದಯಶಂಕರ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ವಾಣಿ ಜಯರಾಂ, ರಾಮಕೃಷ್ಣ, ಪಿ.ಸುಶೀಲ
ಸಂ: ವೀರಪ್ಪನ್
ಛಾ: ಬಾಲಕೃಷ್ಣ.ಎನ್
ಕಲೆ: ಕೆ.ನಾಗೇಶ್ವರರಾವ್
ಸ: ಎಸ್.ರಾಜೇಶ್ವರರಾವ್
ಧ್ವ: ಸ್ವಾಮಿನಾಥನ್
ನೃ: ಚಿನ್ನಿಲಾಲ್
ಸಾ: ರಾಘವುಲು
ವ: ಚಕ್ರಂ
ಪ್ರ: ನಾಗೇಶ್ವರರಾವ್, ಶ್ರೀನಿವಾಸನ್, ಟಿ.ನಾಗೇಶ್ವರರಾವ್
ಸ್ಟು: ಚಾಮುಂಡೇಶ್ವರಿ, ಜೆಮಿನಿ
ಹಾ: ೧)'ಸಾಕು-ಸಾಕು ಮಾತು ಸಾಕು...', ೨)'ಮಾತೊಂದ ಒಳ್ಳೇ ಮಾತೊಂದ...', ೩)'ಏರೇ ನೋಟ...', ೪)'ಬಡವರ ಮಾತಿಗು...', ೫)'ಎಂಥ ಸೊಗಸು...', ೬)'ನಾಗರಾಣಿಯು ಹೊರಗೆ...'

ಕ.ಸಾ: ಎರಡು ಕುಟುಂಬಗಳ ಯುವ ಪೀಳಿಗೆಯ ಅಪ್ಪಂದಿರಿಗೆ, ದ್ವೇಷಸಾಧನೆಗೆ ಊರಿನ ಜಮೀನ್ದಾರನ ಸ್ವಾರ್ಥ, ಕುತಂತ್ರಗಳು ಕಾರಣವಾಗುತ್ತದೆ. ಮನುಷ್ಯನ ಮನಸ್ಸು ಒಳ್ಳೆಯದು. ಅದನ್ನು ಕಲುಷಿತಗೊಳಿಸುವ ಕೆಟ್ಟ ವಾತಾವರಣ ಇರುವವರೆಗೆ ಸ್ನೇಹ ಸಿಂಧುವಾಗದು. ಇಬ್ಬರು ಮಿತ್ರರು. ಅವರ ಅವರಿಗೇ ತಿಳಿಯದ ಹಾಗೆ ಶತ್ರುಗಳು. ಶ್ರೀಮಂತವರ್ಗ ದುರ್ಬಲರನ್ನು ಕೀಲು ಬೊಂಬೆ ಮಾಡಿಕೊಳ್ಳುತ್ತದೆ. ಚಿತ್ರದಲ್ಲಿ ಯುವಕರು ದುಡುಕದೆ ಸರಿಯಾದ ತೀರ್ಮಾನ ಕಗೊಳ್ಳುತ್ತಾರೆ.

೫೮೭. ಆತ್ಮಶಕ್ತಿ

(೧೯೭೮ / ವರ್ಣಚಿತ್ರ / ಸಾಮಾಜಿಕ)
ಲಾ: ಶ್ರೀ ಗುರು ನರಸಿಂಹ ಎಂಟರ್‌ಪ್ರೈಸಸ್
ಪ್ರೊ: ಟಿ.ಶಂಕರರಾವ್, ಎಂ.ವಿ.ಎಸ್.ಪುರಾಣಿಕ್, ಕೆ.ಆರ್.ಕೃಷ್ಣಮೂರ್ತಿ ಹೊಳ್ಳ
ನಿ: ರಾಜಾ
ಸ.ನಿ: ರಾಮು, ಮೃತ್ಯುಂಜಯ



ಅ: ವಾಸುದೇವರಾವ್, ರಾಜೇಶ್, ಪ್ರತಿಮಾ, ಶಕ್ತಿಪ್ರಸಾದ್, ಪ್ರವೀಣಾ, ಅರವಿಂದ್, ಸೌಜನ್ಯ, ಗುರುರಾಜ್, ರತ್ನಾಕರ್, ರಾಮು, ಬಾಲು, ಚೆಲುವರಾಜ್, ಪೃಥ್ವಿಸಾಗರ್, ಕೇಶವ ಉರಾಳ
ಕ/ಚಿ.ಕ/ಮಾ: ರಾಜಾ
ಗೀ: ತಕ್ಕಟೆ ನಾಗರಾಜ್
ಗಾ: ಪಿ.ಬಿ.ಶ್ರೀನಿವಾಸ್, ವಾಣಿ ಜಯರಾಂ, ಗೀತಾ ಉಪೇಂದ್ರಕುಮಾರ್
ಸಂ: ವಳ್ಳಿಯಪ್ಪ
ಛಾ: ಎಂ.ಎಸ್.ಲಕ್ಷ್ಮಣಪ್ಪ
ಸ: ಉಪೇಂದ್ರಕುಮಾರ್
ದ: ರಾಮು, ಮೃತ್ಯುಂಜಯ
ಪ್ರ: ಮಲ್ಲಿ
ಸ್ಟು: ಪ್ರೀಮಿಯರ್
ಹಾ: ೧) 'ಸಹಸ್ರ ಕಿರಣೋ...', ೨) 'ಪ್ರಾತಃಸ್ಮರಾಮಿ ಶ್ರೀಲಲಿತ...', ೩) 'ದೇವಿ ಜಗಜ್ಜನನೀ...'. ೪) 'ಕರೆಯುತಿಹಳು ಕೈ ಬೀಸಿ..'
ಕ.ಸಾ: ಗ್ರಾಮೀಣ ಜನತೆಯನ್ನು ಶೋಷಿಸಿ ಜೊಕ್ಕಸ ತುಂಬಿಕೊಳ್ಳುವ ಶ್ರೀಮಂತರು. ಅವರ ಅಧೀನದಲ್ಲಿ ಜೀತಕ್ಕಿದ್ದು ನರಳುವ ಜನರು. ಇವನ್ನೆಲ್ಲ ಸಮಾಜ ಸುಧಾರಣೆಯಂಥ ನೈತಿಕ ಶಕ್ತಿ ಸರಿಪಡಿಸೀತು. ಆದರೆ ಶ್ರೀಮಂತವರ್ಗಕ್ಕೆ ಬೆಂಬಲವಾಗಿ ನಿಲ್ಲುವ ಮತ್ತೊಂದು ಶಕ್ತಿ ವಾಮಾಚಾರ. ಅದನ್ನು ಬಳಸಿ ಎಲ್ಲವನ್ನು ತಿರುವು ಮುರುವು ಮಾಡಿ ಅಟ್ಟಹಾಸಗೈಯುವವರನ್ನು ಮಣಿಸಬಲ್ಲದು ಒಂದೇ ಆತ್ಮಶಕ್ತಿ ಎಂಬ ದೃಢ ನಂಬಿಕೆಯನ್ನು ಆಧರಿಸಿ ಗೆಲ್ಲುವ, ಸುಖ-ಶಾಂತಿ ಸಾಧಿಸುವ ಪ್ರಯತ್ನ.

೫೮೮. ಕಿಲಾಡಿ ಜೋಡಿ

(೧೯೭೮ / ವರ್ಣಚಿತ್ರ, / ಸಾಮಾಜಿಕ)
ಲಾ: ವಿ.ವಿ ಇಂಟರ್‌ನ್ಯಾಷನಲ್
ಪ್ರೊ: ಕೆ.ವೆಂಕಟೇಶ್ ದತ್ (ವೆಂಕಿ)
ನಿ: ಎಸ್.ವಿ.ರಾಜೇಂದ್ರಸಿಂಗ್ (ಬಾಬು)
ಸ.ನಿ: ಕೆ.ಎಸ್.ಚಂದ್ರಶೇಖರ ಶರ್ಮ
ಅ: ಶ್ರೀನಾಥ್, ವಿಷ್ಣುವರ್ಧನ್, ವಜ್ರಮುನಿ, ದಿನೇಶ್, ಎಂ.ಪಿ.ಶಂಕರ್, ಲಕ್ಷ್ಮೀ, ಪಂಢರೀಬಾಯಿ, ಲೀಲಾವತಿ, ಉಮಾ ಶಿವಕುಮಾರ್, ಅಶ್ವತ್ಥ್, ಉಮೇಶ್, ಜ್ಯೂ. ಶೆಟ್ಟಿ, ಅಂಬರೀಷ್, ದ್ವಾರಕೀಶ್, ಶಕ್ತಿಪ್ರಸಾದ್, ಸೀತಾರಾಮ್, ಯಶರಾಜ್, ಎ.ಆರ್.ಸಿಂಗ್, ರಮಣ, ನಂದಗೋಪಾಲ್, ರಣಧೀರ್, ಹೊನ್ನಪ್ಪ, ರಘುವೀರ್, ಸತೀಶ್, ಜಯಮಾಲಿನಿ
ಕ: ಹೆಚ್.ವಿ.ಸುಬ್ಬಾರಾವ್
ಚಿ.ಕ: ಎಸ್.ವಿ.ರಾಜೇಂದ್ರಸಿಂಗ್ (ಬಾಬು)
ಮಾ: ಹೆಚ್.ವಿ.ಸುಬ್ಬಾರಾವ್
ಗೀ: ಚಿ. ಉದಯಶಂಕರ್, ದೊಡ್ಡರಂಗೇಗೌಡ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್.ಜಾನಕಿ, ಜೇಸುದಾಸ್
ಸಂ: ಕೆ.ಬಾಲು
ಛಾ: ಪಿ.ಎಸ್.ಪ್ರಕಾಶ್
ಕಲೆ: ವಿ.ಕೆ.ರಮೇಶ್, ಸಿ.ಕೆ.ಜಾನ್
ಸ: ರಾಜನ್ ನಾಗೇಂದ್ರ
ಧ್ವ: (ಹಾ) ಕೋಟೀಶ್ವರರಾವ್, (ಮಾ) ಆರ್.ಗೋವಿಂದಸ್ವಾಮಿ, ಕೆ.ಆರ್.ಸೀತಾರಾಮ್
ನೃ: ಉಡುಪಿ ಜಯರಾಂ ದೇವಿ
ಸಾ: ಶ್ಯಾಂ ಸುಂದರ್, ಗನಿ, ಭಾಷಾ
ವ: ನಾಗರಾಜ್, ನಾಜರ ನಾರಾಯಣ್
ಪ್ರ: ಜಿ.ಎಸ್.ವಾಸು, ಶ್ರೀನಿವಾಸನ್, ರಾಮಮೂರ್ತಿ, (ಕೇಶ) ಶ್ರೀಮತಿ ನಾಗಲಕ್ಷ್ಮೀ, ತಾತಾರಾವ್
ಸ್ಟು: ಪ್ರೀಮಿಯರ್, ಕಂಠೀರವ
ಹಾ: ೧) 'ಕನಸಿನಲಿ ನೋಡಿದೆನು ಒಲವಿನಲಿ ಸೇರಿದನು...', ೨) 'ಕಿಲಾಡಿ ಜೋಡಿ ಕಿಲಾಡಿ ಜೋಡಿ.', ೩) 'ನಾಚಿಕೆ ಇನ್ನೇಕೆ ಅಂಜಿಕೆ ಇನ್ನೇಕೆ...', ೪) 'ಕೃಷ್ಣಸ್ವಾಮಿ ಎಸ್ ಮೇಡಂ...', ೫) 'ಆಡಬೇಕೂ ಕರಾಟೆ ಆಡಬೇಕು...'
ವಿ: ಲಕ್ಷ್ಮಿ ದ್ವಿಪಾತ್ರದಲ್ಲಿ ನಟಿಸಿದ ಚಿತ್ರ.
ಕ.ಸಾ: ಗೆಳೆಯರಿಬ್ಬರ ಸಾಹಸದ ಕಥೆ. ಮೂಲತಃ ಶ್ರೀಮಂತರ ಜೊಕ್ಕಸ ಬರಿದು ಮಾಡಿ ಹಿಗ್ಗುವ ಪ್ರವೃತ್ತಿ. ಅವರಿಗೊಬ್ಬ ಚೆಲುವೆ. ಪ್ರಣಯ ತ್ರಿಕೋನ, ಸಾಹಸ, ದುಷ್ಟರ ಸಂಚನ್ನು ಭೇದಿಸಿ, ಸಾಹಸದಿಂದ ಗೆಲ್ಲುವುದು ವಿಶೇಷ. ಎಲ್ಲವೂ ಲಘುವಾದ ಧಾಟಿಯಲ್ಲಿ ಬಂದು ಹೋಗುವುದರಿಂದ ರಂಜನೀಯವಾಗಿ ಗಂಭೀರವಾದ ಸಂಗತಿಯನ್ನು ಹೇಳುವ ಪ್ರಯತ್ನ ಎನ್ನಬಹುದು.

೫೮೯. ಮಲೆಯ ಮಕ್ಕಳು

(೧೯೭೮ / ವರ್ಣಚಿತ್ರ / ಸಾಮಾಜಿಕ)
ಲಾ: ಚಿತ್ರ ದರ್ಪಣ ಫಿಲಂಸ್
ನಿ: ಕೆ.ಎಸ್.ಕಾರಂತ್ (ಕೋಟಾ ಶಿವರಾಮ ಕಾರಂತ್)
ಸ.ನಿ: ಕೆ.ಎಸ್.ಶ್ರೀಧರ್
ಅ: ಹಳದಿ ನಾಗೇಶ್, ಸುಬ್ರಹ್ಮಣ್ಯ, ನರಸಿಂಹ, ಜಯಮ್ಮ, ಅಶೋಕ್ ಹೆಗ್ಡೆ, ಕಲ್ಪನಾ, ರೋಹಿಣಿ, ಸುಮನ, ರಜನಿ, ಸರೋಜ
ಕ/ಚಿ.ಕ/ಮಾ/ಗೀ: ಕೋಟಾ ಶಿವರಾಮ ಕಾರಂತ್ (ಅವರದೇ ಕಾದಂಬರಿ ಆಧಾರ)
ಸಂ: ಪಿ.ಭಕ್ತವತ್ಸಲಂ
ಛಾ: ಎಸ್.ರಾಮಚಂದ್ರ
ಸ: ಪದ್ಮ ಚರಣ್
ಸ್ಟು: ಚಾಮುಂಡೇಶ್ವರಿ
ವಿ: ಸ್ಥಳದಲ್ಲೇ ಧ್ವನಿ ಮುದ್ರಿಸುವ ಪ್ರಯತ್ನ. ಕೆಲವು ಭಾಗ ಎಸ್.ಜಿ.ಪಿ.ಯಲ್ಲಿ ಡಬ್ ಮಾಡಿದ್ದುಂಟು.
ಕ.ಸಾ: ಶಿವರಾಮ ಕಾರಂತರ 'ಕುಡಿಯರ ಕೂಸು' ಕಾದಂಬರಿ ಆಧಾರ. ಅವರೇ ನಿರ್ದೇಶಿಸಿದ್ದು. ಒಂದು ಜನಾಂಗ, ಅವರ ಪರಿಸರ, ಜೀವನ ವಿಧಾನವನ್ನು ಹೇಳುತ್ತ ಅಲ್ಲಿಯೂ ಬಡತನ, ಈರ್ಷೆ, ಚೆಲುವು ಸುಖದ ಹಂಬಲ, ಅದಕ್ಕಾಗಿ ಕೊಲೆಯಂಥ ಕಠಿಣ ಕ್ರಿಯೆಗೂ ಸಿದ್ಧರಾಗುವ ಹೆಣ್ಣುಗಳನ್ನು ಕುರಿತು ಹೇಳುವ ಕಥೆ.

೫೯೦. ತಪ್ಪಿದ ತಾಳ

(೧೯೭೮ / ವರ್ಣಚಿತ್ರ / ಸಾಮಾಜಿಕ)
ಲಾ: ಲಲಿತಲಕ್ಷ್ಮೀ ಕಂಬೈನ್ಸ್
ಪ್ರೊ: ಬಿ.ಎಂ.ವೆಂಕಟೇಶ್, ಬಿ.ವಿ.ರಾಮಾನುಜಾಚಾರ್ಯ, ಚಂದೂಲಾಲ್ ಜೈನ್, ಜಿ.ಆರ್.ಪ್ರಸನ್ನಕುಮಾರ್
ನಿ: ಕೆ.ಬಾಲಚಂದರ್
ಸ.ನಿ: ರವಿ
ಅ: ರಜನೀಕಾಂತ್, ಸುಂದರ್, ಶಾಂತಾರಾಂ, ಪ್ರಮೀಳಾ ಜೋಷಾಯ್, ಸರಿತಾ, ಸುಶೀಲನಾಯ್ಡು, ಕಮಲಹಾಸನ್, ರೂಪ, ಇಂದುಶ್ರೀ, ಹೆಚ್.ಸಿ.ಶ್ರೀನಿವಾಸ, ಪ್ರಣವಮೂರ್ತಿ
ಕ/ಚಿ.ಕ/ಮಾ: ಕೆ.ಬಾಲಚಂದರ್
ಗೀ: ಹುಣಸೂರು ಕೃಷ್ಣಮೂರ್ತಿ, ಚಿ. ಉದಯಶಂಕರ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯ
ಸಂ: ಎನ್.ಆರ್.ಕಿಟ್ಟು
ಛಾ: ಬಿ.ಎಸ್.ಲೋಕನಾಥ್
ಕಲೆ: ಅರುಣ್
ಸ: ವಿಜಯಭಾಸ್ಕರ್
ಧ್ವ: ಗೋವಿಂದಸ್ವಾಮಿ
ಸ್ಟು: ಚಾಮುಂಡೇಶ್ವರಿ
ಹಾ: ೧) 'ತಪ್ಪಿದ ತಾಳಗಳು...', ೨) 'ಯಾತರ ವಿಚಿತ್ರ ಬಾಳು...', ೩) 'ಒಲವಿಂದ ನಲ್ಲೆ ಮನವ ತುಂಬಲು...'
ವಿ: ಸರಿತಾ ಈ ಚಿತ್ರದಿಂದ ಕನ್ನಡ ಚಿತ್ರರಂಗ ಪ್ರವೇಶಿಸಿದರು.
ಕ.ಸಾ: ಎರಡು ಗಂಡು, ಒಂದು ಹೆಣ್ಣಿನ ಸುತ್ತ ಹೆಣೆಯಲಾದ ಕಥೆ. ಸ್ತ್ರೀ ವೇಶ್ಯೆ, ಗಂಡು ದುರ್ಮಾರ್ಗಿ, ಇಬ್ಬರೂ ಅವೆಲ್ಲ ಬಿಟ್ಟು ಸನ್ಮಾರ್ಗದಿಂದ ಬದುಕಲು ಇಚ್ಛಿಸುತ್ತಾರೆ. ಆದರೆ ಎದುರಾದ ಕೆಲವು ಸಮಸ್ಯೆಗಳು ಅವರನ್ನು ಮತ್ತ ಅದೇ ತಪ್ಪು ಮಾಡಲು ಪ್ರೇರಿಸುತ್ತವೆ. ಅವರೆ ಅವರ ಪರಿಣಾಮ ಮಾತ್ರ ಅತಿ ಘೋರ. ಎಲ್ಲವೂ ತಿಳಿಯಾಗಲು ತೆರಬೇಕಾದ್ದು ಬಹಳಷ್ಟು.

೫೯೧. ವಸಂತಲಕ್ಷ್ಮಿ

(೧೯೭೮ / ವರ್ಣಚಿತ್ರ / ಸಾಮಾಜಿಕ)
ಲಾ: ವಿಠಲ್ ಮೂವೀಸ್
ಪ್ರೊ: ಕೆ.ವಿಠ್ಠಲ್‌ಕುಮಾರ್, ಕೆ.ವಿ.ಹೊನ್ನಪ್ಪ, ಕೆ.ವಿ.ಗುರುನಾಥ್



ನಿ: ಎ.ವಿ.ಶೇಷಗಿರಿರಾವ್
ಸ.ನಿ: ಟಿ.ವಿ.ಪಂಚಾಕ್ಷರಿ, ಹೆಚ್.ಎಸ್.ನಾಗಭೂಷಣ್
ಅ: ಶ್ರೀನಾಥ್, ವಿಷ್ಣುವರ್ಧನ್, ಎಂ.ಪಿ.ಶಂಕರ್, ಅಶ್ವತ್ಥ್, ಆರತಿ, ಮಂಜುಳ, ಲೀಲಾವತಿ, ಪಂಢರೀಬಾಯಿ, ಬಾಲಕೃಷ್ಣ, ತೂಗುದೀಪ ಶ್ರೀನಿವಾಸ್, ನರಸಿಂಹರಾಜು, ಪ್ರಭಾಕರ್, ಜ್ಯೂ.ಶೆಟ್ಟಿ, ಬೇಬಿ ಇಂದಿರಾ, ಬಿ.ವಿ.ರಾಧ, ಬೇಬಿ ಜಯಶಾಂತಿ, ದ್ವಾರಕೀಶ್, ದಿನೇಶ್, ಎಂ.ಎಸ್.ಸತ್ಯ, ಉಮೇಶ್, ಬಿ.ಅಶ್ವತ್ಥನಾರಾಯಣ, ಗುಗ್ಗು, ಜಯ, ನವೀನ, ಜಯಮಾಲಿನಿ
ಕ/ಮಾ: ಹೆಚ್.ವಿ.ಸುಬ್ಬರಾವ್
ಚಿ.ಕ.: ಎ.ವಿ.ಶೇಷಗಿರಿರಾವ್
ಗೀ: ಚಿ.ಉದಯಶಂಕರ್, ಆರ್.ಎನ್.ಜಯಗೋಪಾಲ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಜೇಸುದಾಸ್, ಪಿ.ಸುಶೀಲ. ಎಸ್.ಜಾನಕಿ, ವಾಣಿ ಜಯರಾಂ
ಸಂ: ಪಿ.ಭಕ್ತವತ್ಸಲಂ
ಛಾ: ಶ್ರೀಕಾಂತ್
ಕಲೆ: ರಮೇಶ್
ಸ: ವಿಜಯಭಾಸ್ಕರ್
ಧ್ವ: ಮೋಹನಸುಂದರಂ, ಕೋಟೀಶ್ವರರಾವ್,

(ಮಾ) ಕೆ.ಆರ್.ಸೀತಾರಾಂ, ಗೋವಿಂದಸ್ವಾಮಿ, ಶ್ರೀನಿವಾಸ್
ನೃ: ಉಡುಪಿ ಜಯರಾಂ
ಸಾ: ಶ್ಯಾಂ ಸುಂದರ್
ವ: ತಂಗಪನ್, ನಾಜರ ನಾರಾಯಣ್, ನಾಗರಾಜ್
ಪ್ರ: ವೀರಾಸ್ವಾಮಿ, ಶ್ರೀನಿವಾಸ್, ರಾಜಗೋಪಾಲ್,
ನಾಗೇಶ್ವರರಾವ್, ವಿಜಯನ್ (ಕೇಶ: ರಾಜು, ರಾಜು)
ಸ್ಟು: ಪ್ರೀಮಿಯರ್, ಕಂಠೀರವ, ಚಾಮುಂಡೇಶ್ವರಿ
ಹಾ: ೧)'ಹೆಣ್ಣುಗಳೆಂದು ಅಬಲೆಯರಲ್ಲ...', ೨)'ಕಣ್ಣು ಕಣ್ಣು ಬಿಟ್ಟುಕೊಂಡು...', ೩)'ಬೆಳ್ಳಿ ಮೋಡವೆ ಎಲ್ಲಿ ಓಡುವೆ...', ೪)'ನಡೆಯಲು ನಡುವು...', ೫)'ದೇವರು ತಂದ ಈ ಅನುಬಂಧ...'
ಕ.ಸಾ: ತಂದೆಗೆ ಅನ್ಯಾಯ ಮಾಡಿದವನಿಗೆ ಬುದ್ಧಿ ಕಲಿಸಲು ಅವನ ಮನೆಗೆ ಸೊಸೆಯಂದಿರಾಗಿ ಬರುವ ವಸಂತ-ಲಕ್ಷ್ಮಿ ತಂದೆ ತಾಯಿಗಾದ ಅನ್ಯಾಯಕ್ಕೆ ಅತ್ತೆ-ಮಾವನಿಗೆ ಶಿಕ್ಷೆ ನೀಡುತ್ತಾರೆ. ಕಡೆಗೆ ಮಾವ ನಿರಪರಾಧಿ ಎಂದು ಗೊತ್ತಾಗಲು ದುಷ್ಟರಿಗೆ ಬುದ್ಧಿ ಕಲಿಸುತ್ತಾರೆ.

೫೯೨. ಅಳುಕು

(೧೯೭೮ / ವರ್ಣಚಿತ್ರ / ಸಾಮಾಜಿಕ)
ಲಾ: ಲಲಿತ ಚಿತ್ರಾಲಯ
ಪ್ರೊ: ಕೆ.ಎಸ್.ಎಲ್.ಸ್ವಾಮಿ (ರವೀ)
ನಿ: ರವೀ (ಕೆ.ಎಸ್.ಎಲ್.ಸ್ವಾಮಿ)



ಅ: ರಮೇಶ್ ಭಟ್, ಎ.ಎಸ್.ಮೂರ್ತಿ, ಸಿ.ಆರ್.ಸಿಂಹ, ಸುಧಾ ಸಿಂಧೂರ್, ಸರ್ವಮಂಗಳ
ಕ/ಚಿ.ಕ: ರವೀ
ಮಾ: ಎಂ.ನರೇಂದ್ರಬಾಬು
ಗೀ: ರವೀ, ಬಸವರಾಜ ಕೆಸ್ತೂರ್
ಗಾ: ರವೀ, ಕಸ್ತೂರಿ ಶಂಕರ್
ಸಂ: ಎನ್.ಎಂ.ವಿಕ್ಟರ್
ಛಾ: ಬಿ.ಪುರುಷೋತ್ತಮ್
ಕಲೆ: ಕೆ.ರಮೇಶ್
ಸ: ವಿಜಯಭಾಸ್ಕರ್
ಧ್ವ: ಎಸ್.ಪಿ.ರಾಮನಾಥನ್
ಸ್ಟು: ಪ್ರೀಮಿಯರ್
ವಿ: ರಮೇಶ್‌ಭಟ್ ನಾಯಕನಾಗಿ ಬಂದರು. ಸುಧಾಸಿಂಧೂರ್ ಚಿತ್ರರಂಗ ಪ್ರವೇಶ. ನಿರ್ದೇಶಕ ರವೀ ಅವರು ನಿರುದ್ಯೋಗ, ಪ್ರಣಯ ಪ್ರಧಾನ ಕಥೆಯನ್ನು ಪ್ರತಿಮೆ ರೂಪಕಗಳನ್ನು ಬಳಸಿ ಹೇಳಲು ಪ್ರಯತ್ನಿಸಿದರು.

೫೯೩. ಅಮರನಾಥ್

(೧೯೭೮ / ವರ್ಣಚಿತ್ರ / ಸಾಮಾಜಿಕ)
ಲಾ: ಶಿಲ ಚಿತ್ರ
ಪ್ರೊ: ನಜ್ರಿ ನಾರಾಯಣ್, ವಿ.ಕೆ.ರಮೇಶ್, ವಾಲ್ಕೆ
ನಿ: ಕೆ.ಮಣಿಮುರುಗನ್
ಸ.ನಿ: ಲೋಕೇಶ್
ಅ: ವಿಷ್ಣುವರ್ಧನ್, ಅಂಬರೀಷ್, ಸುಂದರಕೃಷ್ಣ ಅರಸ್, ಅಶ್ವತ್ಥ್, ಧೀರೇಂದ್ರ ಗೋಪಾಲ್, ಮುಸುರಿ ಕೃಷ್ಣಮೂರ್ತಿ, ಪ್ರಮೀಳಾ ಜೋಷಾಯ್, ಶ್ರೀಕಲಾ, ಲೀಲಾವತಿ, ಪ್ರಭಾವತಿ, ಗಾಯತ್ರಿ, ಪ್ರವೀಣಾ, ಸುಭದ್ರಾ, ಸುಚಿತ್ರಾ, ಪ್ರೇಮಕುಮಾರಿ, ರಾಮಣ್ಣ ರ
ಕ: ವಿ.ಕೆ.ರಮೇಶ್



ಮಾ: ಎನ್.ಎಸ್.ರಾವ್
ಗೀ: ಬಸವರಾಜ ಕಸ್ತೂರ್, ದೊಡ್ಡರಂಗೇಗೌಡ
ಗಾ: ಎಸ್.ಜಾನಕಿ, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಪಿ.ಸುಶೀಲ
ಸಂ: ರಾಜಗೋಪಾಲ್
ಛಾ: ಬಾಬುಲ್‌ನಾಥ್ ವಾಲ್ಕೆ, ಕುಲಶೇಖರ್
ಕಲೆ: ರಾಜು
ಸ: ವಿಜಯಭಾಸ್ಕರ್
ಧ್ವ: (ಹಾ)ಕೋಟೇಶ್ವರರಾವ್, ಆರ್ಮುಗಂ
ನೃ: ಉಡುಪಿ ಜಯರಾಂ, ದೇವಿ
ಸಾ: ಅಂಬೂರ್ ಬಾಬು
ವ: ಕುಮಾರ್, ನಜ್ರಿ ನಾರಾಯಣ್
ಪ್ರ: ಮಣಿ
ಸ್ಟು: ಪ್ರೀಮಿಯರ್
ಹಾ: ೧)'ಈ ಲೋಕದ ಜನರಿಗೆ...', ೨)'ಹಣಕ್ಕೆ ದೌಲತ್ತು..', ೩)'ಹಣವೆ ಎಲ್ಲಾ ಬಾಳ ತುಂಬಾ...', ೪)'ಒಲಿದಿಹ ಮನಗಳ...'
ವಿ: ಅಂಬರೀಷ್‌ರ ಮೂಲ ಹೆಸರು ಅಮರನಾಥ್. ಅವರನ್ನು ನಾಯಕನಾಗಿಸಿದ ಚಿತ್ರ.
ಕ.ಸಾ: ಗ್ರಾಮೀಣ ಪರಿಸರದಲ್ಲಿ ಶ್ರೀಮಂತರ ಅಟ್ಟಹಾಸ. ದೀನರಾಗಿ ನಿಲ್ಲುವ ಬಡವರು, ಅವರ ಹೆಂಗಸರು. ಶೋಷಣೆಯನ್ನು ಎದುರಿಸಿ ನಿಂತ ಯುವಕನಿಗೆ ಜೈಲುವಾಸ. ಆತ ಹಿಂತಿರುಗಿ ಬಂದು ತನ್ನದೇ ಆದ ರೀತಿಯಲ್ಲಿ ಯೋಜನೆಗಳನ್ನು ರೂಪಿಸಿ ದುಷ್ಟರನ್ನು ಸದೆಬಡಿದ. ಗ್ರಾಮದ ಜನತೆಗೆ ದೇವರಾದ. ಪ್ರಣಯ, ಸಾಹಸ, ಪ್ರಾಮಾಣಿಕತೆಯನ್ನು ಎತ್ತಿ ಹಿಡಿದ ಕಥೆ.

೫೯೪. ಬಲು ಅಪರೂಪ ನಮ್ ಜೋಡಿ

(೧೯೭೮ / ವರ್ಣಚಿತ್ರ / ಸಾಮಾಜಿಕ)
ಲಾ: ಶ್ರೀರಾಂ ಫಿಲಂಸ್
ಪ್ರೊ/ನಿ: ಜಾನಕೀರಾಮ್
ಸ.ನಿ: ನಂಜನಗೂಡು ಬಾಲು
ಅ: ಶ್ರೀನಾಥ್, ಅಂಬರೀಷ್, ದ್ವಾರಕೀಶ್, ಬಾಲಕೃಷ್ಣ, ಲೋಕನಾಥ್, ರಾಜ್‌ನಾಗೇಶ್, ಅಶ್ರಫ್, ಗುರುರಾವ್, ಜಯಂತಕುಮಾರ್, ಹನುಮಂತಾಚಾರ್, ರಾಮಕೃಷ್ಣ, ವಜ್ರಮುನಿ, ಆರತಿ, ಮಾಲ, ಕೆ.ವಿಜಯ, ವಾಣೀಚಂದ್ರ, ಅನ್ನಪೂರ್ಣಮ್ಮ
ಕ/ಚಿ.ಕ: ಎ.ಎಂ.ಸಮೀವುಲ್ಲಾ
ಮಾ: ನವರತ್ನರಾಂ
ಗೀ: ಚಿ. ಉದಯಶಂಕರ್
ಗಾ: ಎಸ್.ಜಾನಕಿ, ಎಸ್.ಪಿ.ಬಾಲಸುಬ್ರಹ್ಮಣ್ಯಂ, ರಾಮಕೃಷ್ಣ, ರಮೇಶ್, ಪಿ.ಬಿ.ಶ್ರೀನಿವಾಸ್



ಸಂ: ಟಿ.ಆರ್.ಶ್ರೀನಿವಾಸನ್
ಛಾ: ಜಾನಕೀರಾಂ
ಕಲೆ: ಬಿ.ಎನ್.ಕೃಷ್ಣ
ಸ: ರಾಮ್‌ಲಾಲ್‌ಸೆಹರಾ
ಧ್ವ: (ಹಾ) ಸ್ವಾಮಿನಾಥನ್ (ಮಾ) ಶ್ರೀನಿವಾಸ್
ನೃ: ಚಿನ್ನಿ ಸಂಪತ್
ಸಾ: ಜ್ಯೂಡೋ ರತ್ನಂ
ವ: ಗೋಪಾಲಕೃಷ್ಣ, ಗಂಗರಾಜ್
ಪ್ರ: ಜಿ.ರಾಜಗೋಪಾಲ್, ವೀರಾಸ್ವಾಮಿ, ರಾಜಗೋಪಾಲ್
ಸ್ಟು: ಕಂಠೀರವ
ಹಾ: ೧)'ಹೊಸದಾಗಿ ಅರಳಿದ ಹೂವೋ...', ೨)'ಬಲು ಅಪರೂಪ...', ೩)'ಹಬ್ಬದೂಟ ಬೇಕೇ...', ೪)'ಥೈಥೈಥೈ ಎಂದು ಕುಣಿಯಲೆ...', ೫)'ಚುಕುಪುಕು ಚುಕುಪುಕು...'
ಸೆ: ೧೫ ರೀಲುಗಳು, ೨೦-೬-೧೯೭೮
ಕ.ಸಾ: ಹೊಟೇಲ್ ಮಾಲೀಕನಿಗೆ ಮೂವರು ಹೆಣ್ಣು ಮಕ್ಕಳು. ಅವರಲ್ಲಿ ಒಬ್ಬಳನ್ನು ಮದುವೆಯಾಗಲು ಮೂವರು ಹುಡುಗರು. ನಾನಾ ರೀತಿಯ ನಾಟಕಗಳನ್ನಾಡಿ ಪೇಚಿಗೆ ಸಿಲುಕುವ ಹಾಸ್ಯ ಕಥೆ.

೫೯೫. ಚಿತೆಗೂ ಚಿಂತೆ

(೧೯೭೮ / ವರ್ಣಚಿತ್ರ / ಸಾಮಾಜಿಕ)
ಲಾ: ಸಾವನ್ ಮೂವೀಸ್
ಪ್ರೊ: ಜಿ.ಎನ್.ಲಕ್ಷ್ಮೀಪತಿ
ನಿ: ಎಂ.ಎಸ್.ಸತ್ಯು
ಸ.ನಿ: ವಿಜಯ್ ತಲವಾರ್
ಅ: ರಾಮ್ ಪ್ರಕಾಶ್, ಸಿ.ಆರ್.ಸಿಂಹ, ಶಿವರಾಮ್, ಸುಂದರಕೃಷ್ಣ ಅರಸ್, ಅನಂತರಾಮ್ ಮಚ್ಚೇರಿ, ಧೀರೇಂದ್ರ ಗೋಪಾಲ್, ಮಂಜುಳ, ಪೌಲಾ ಲಿಂಡ್ಸೆ, ಉಮಾಶಿವಕುಮಾರ್, ಪದ್ಮಶ್ರೀ, ಮ್ಯಾಕ್ ಮೋಹನ್, ಜಯಾ, ಕುಣಿಗಲ್ ರಾಮನಾಥ್, ಮೂರ್ತಿ, ನಾಗರಾಜ್, ಜಮಾಲ್
ಕ/ಚಿ.ಕ: ಜಾವೇದ್
ಮಾ/ಗೀ: ಎಸ್.ರಾಮಸ್ವಾಮಿ
ಗಾ: ಜೇಸುದಾಸ್, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಪ್ರಭಾಕರ್, ಎಸ್.ಜಾನಕಿ, ಬಿ.ಕೆ.ಸುಮಿತ್ರಾ
ಸಂ: ಚಕ್ರವರ್ತಿ, ತೋಪಣ್ಣ, ತ್ಯಾಗರಾಜ್
ಛಾ: ಅಶೋಕ್ ಗುಂಜಾಲ್
ಕಲೆ: ಬಿಜೋಯ್‌ದಾಸ್ ಗುಪ್ತ
ಸ: ಜಿ.ಕೆ.ವೆಂಕಟೇಶ್
ಧ್ವ: (ಹಾ) ಎಸ್.ಪಿ.ರಾಮನಾಥನ್, ಮೋಹನಸುಂದರಂ (ಮಾ)ಶಿವರಾವ್
ಸಾ: ರಾಮ್ ಪ್ರಕಾಶ್
ವ: ಮಾಲತಿ ರಾವ್
ಪ್ರ: ಜೋಸೆಫ್
ಸ್ಟು: ಚಾಮುಂಡೇಶ್ವರಿ, ವಾಹಿನಿ, ಹ್ಯಾಪ್ಪಿ
ವಿ: ಮಲ್ಲೇಶ್ವರದ ಕರಾಟೆ ತಂಡವನ್ನು ಈ ಚಿತ್ರದಲ್ಲಿ ಬಳಸಿಕೊಳ್ಳಲಾಗಿದೆ (ಜವಂಲ್, ಅಮಿಂಗ್, ಹಪ್ರಾಕ್)
ಸೆ: ಉದ್ಯ ೩೫೫೮.೨೩, 'ಯು' ೨೩ ೮-೭೮
ಕ.ಸಾ: ಒಂದು ಸ್ವತಂತ್ರ ರಾಜ್ಯ. ಅಲ್ಲೊಂದು ಚಿತ್ರ ನಿರ್ಮಾಣ ಸಂಸ. ಕರಾಟೆಪಟು ಚಿತ್ರದ ನಾಯಕ. ಚಿತ್ರರಂಗದ ಹಲವು ಅಂಶಗಳ ವಿಡಂಬನೆಯಿದೆ. ಕುರುಡರ ಶಾಲೆಯ ಮುಖ್ಯಸ್ಥ ಭೂಗತ ದೊರೆ. ಆತ ತನ್ನ ಕೆಲಸಗಳಿಗಾಗಿ ನಾಯಕನನ್ನು ಉಪಯೋಗಿಸಿಕೊಳ್ಳುತ್ತಾನೆ. ಅವನಿಂದ ಯಾರದೋ ಕೊಲೆ. ರಾಜಕೀಯ ವಾತಾವರಣ. ರೋಗಿಯೊಬ್ಬ ತನ್ನ ಪಾದ. ಕಿರುಬೆರಳಿನಿಂದ ಅಧಿಕಾರ ಚಲಾಯಿಸುವುದು. ಸಂಚಿನಿ ಮೋಸ ಮಾಡುವುದು. ಸಂಚು...' ಅಂತಿಮವಾಗಿ ವಿದೇಶಿ ಸಿಐಡಿಗಳ ಪ್ರವೇಶ. ಎಲ್ಲ ರಹಸ್ಯ ಬಯಲು.

೫೯೬. ಭಲೇ ಹುಡುಗ

(೧೯೭೮ / ವರ್ಣಚಿತ್ರ / ಸಾಮಾಜಿಕ)
ಲಾ: ರಾಯಲ್ ಪಿಕ್ಚರ್ಸ್
ಪ್ರೊ: ಆರ್.ಗಣೇಶ್, ಟಿ.ಆರ್.ಚಿತ್ರಾ, ಟಿ.ಆರ್.ನಳಿನ

ನಿ: ರಾಮಣ್ಣ
ಸ.ನಿ: ಕುಣಿಗಲ್ ವಸಂತಕುಮಾರ್
ಅ: ವಿಷ್ಣುವರ್ಧನ್, ದ್ವಾರಕೀಶ್, ಉದಯಕುಮಾರ್, ಮಂಜುಳ, ರಾಜಿ, ಕೆ.ವಿಜಯ, ಚಿಂದೋಡಿ ಲೀಲಾ, ಜೈಕುಮಾರಿ, ವಾಣಿಚಂದ್ರ, ಶಶಿಕಲಾ, ಸುಧಾಶ್ರೀ, ತೂಗುದೀಪ ಶ್ರೀನಿವಾಸ್, ಚೇತನ್ ರಾಮರಾವ್, ಥಿಕ್ಕಿ ಮಾಧವರಾವ್, ಕುಣಿಗಲ್ ನಾಗಭೂಷಣ್, ವಸಂತಕುಮಾರ್, ಮಾ। ರವಿಶಂಕರ್, ರಾಮು, ರಂಗಣ್ಣ, ಮಂಜು;
ನೃತ್ಯ: ಜಯಮಾಲಿನಿ
ಚಿ.ಕ/ಮಾ: ಕುಣಿಗಲ್ ನಾಗಭೂಷಣ್
ಗೀ: ಚಿ.ಉದಯಶಂಕರ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್.ಜಾನಕಿ, ಪಿ.ಬಿ.ಶ್ರೀನಿವಾಸ್, ಬೆಂಗಳೂರು ಲತಾ
ಸಂ: ಶ್ರೀನಿವಾಸುಲು
ಛಾ: ಸುರೇಶ್
ಕಲೆ: ನಾಗರಾಜರಾವ್
ಸ: ಜಿ.ಕೆ.ವೆಂಕಟೇಶ್
ಧ್ವ: (ಮಾ)ಸೀತಾರಾಂ, (ಹಾ) ಜೆ.ಜೆ.ಮಾಣಿಕ್ಯಂ, ಸಂಪತ್, ವೆಂಕಟರಾಂ
ನೃ: ಮೂಗೂರು ಸುಂದರ್
ಸಾ: ಶ್ಯಾಂಸುಂದರ್
ವ: ತಂಗಪ್ಪನ್, ಸಿ.ಕೆ.ಕಣ್ಣನ್
ಪ್ರ: ಮನ್ಮಥರಾವ್, ಶ್ರೀನಿವಾಸ್, ಶ್ರೀನಿವಾಸನ್, ಮಾಧವನ್
ಸ್ಟು: ಪ್ರೀಮಿಯರ್
ಹಾ: ೧) 'ಬಾರ ಹೆಣ್ಣೆ ಬಾರೆ...', ೨) 'ಒಂದು ಎರಡು ಮೂರು..', ೩) 'ಕಣ್ಣಲಿ ಮಿಂಚು...', ೪) 'ಇಲ್ಲಿ ಯಾರಿಲ್ಲ ಬಾ...', ೫) 'ನಂಬಿಸಿ ನಿನ್ನ...', ೬) 'ಹಬ್ಬ ಮಾಡ್ತೀನಿ ಬಾರೋ...'
ಸೆ: ಉದ್ದ - ೪೦೬೯.೫೮, 'ಯು', ೧೫-೧೧-೧೯೭೮
ಕ.ಸಾ: ವಯಸ್ಸಾದರೂ ಕಿರಿಯ ವಯಸ್ಸಿನ ಹೆಣ್ಣನ್ನು ಮದುವೆಯಾದ ತಂದೆ. ಪ್ರಾಯಕ್ಕೆ ಬಂದ ಮಗಳಿರುವಾಗ ಇದು ಸರಿಯಲ್ಲ ಎಂದು ಮಗ ತನ್ನ ತಂಗಿಯ ಜೊತೆಗೆ ಪಟ್ಟಣಕ್ಕೆ ಬಂದ. ಶ್ರೀಮಂತನ ಆಸ್ತಿ ಹೊಡೆಯುವ ಸಂಚು ಮಾಡುವ ಜನ. ಇವೆಲ್ಲ ಸಮಸ್ಯೆಗಳನ್ನು ನಗುನಗುತ್ತ ಸರಿಪಡಿಸುವ ನಾಯಕ, ಅವನ ಮಿತ್ರ. ಹಾಸ್ಯವೇ ಪ್ರಧಾನವಾದರೂ ಅನೇಕ ಗಂಭೀರವಾದ ವಿಷಯಗಳನ್ನು ಚರ್ಚಿಸುವಂಥ ಕಥೆ.

೪೯೭. ಸ್ಪಂದನ

(೧೯೭೮ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ನಿಸರ್ಗ ಫಿಲಂಸ್ ಅಕಾಡೆಮಿ
ಪ್ರೊ: ರಾಮಚಂದ್ರ ಗೌಡ
ನಿ: ಪಿ.ಎಸ್.ಶ್ರೀನಿವಾಸ್
ಅ: ಪಿ.ಎಸ್.ಶ್ರೀನಿವಾಸ್, ಅಪರ್ಣಾ ನಾರಂಗ್, ಪಿ.ಕೃಷ್ಣರಾಜ್, ಹಯವದನ ರಾವ್, ಕು॥ರೇವತಿ
ಕ/ಚಿ.ಕ/ಮಾ: ಪಿ.ಎಸ್.ಶ್ರೀನಿವಾಸ್
ಗೀ: ಲಕ್ಷ್ಮೀನಾರಾಯಣ ಭಟ್ಟ
ಸಂ: ರಾಜಾನಂದ ರಡಿ
ಛಾ: ಬಿ.ಸಿ.ಗೌರಿಶಂಕರ್
ಸ: ಸಿ.ಅಶ್ವತ್
ಧ್ವ: (ಹಾ) ಕೋಟೇಶ್ವರರಾವ್, (ಮಾ) ಗೋವಿಂದಸ್ವಾಮಿ
ವ: ರಾಮಕೃಷ್ಣ
ಸ್ಟು: ಚಾಮುಂಡೇಶ್ವರಿ
ವಿ: ದ್ವಿತೀಯ ಅತ್ಯುತ್ತಮ ಚಿತ್ರ (೭೭-೭೮), ಅತ್ಯುತ್ತಮ ನಟಿ (ಅಪರ್ಣಾ ನಾರಂಗ್), ಅತ್ಯುತ್ತಮ ಛಾಯಾಗ್ರಾಹಕ (ಬಿ.ಸಿ.ಗೌರಿಶಂಕರ್), ಅತ್ಯುತ್ತಮ ಧ್ವನಿ (ಕೋಟೇಶ್ವರರಾವ್). ಅತ್ಯುತ್ತಮ ಸಂಗೀತ (ಸಿ.ಅಶ್ವತ್)
ಸೆ: ಉದ್ದ ೩೫೦೦.೦೦, ರೀಲು - ೧೪, 'ಎ' ಸರ್ಟಿಫಿಕೇಟ್
ಕ.ಸಾ: ಬದುಕಿನಲ್ಲಿ ಆಸಕ್ತಿಯೇ ಇಲ್ಲದ ವಿಧುರನೊಬ್ಬ ಚೆಲುವೆಯೊಬ್ಬಳನ್ನು ಎರಡನೇ ಹೆಂಡತಿಯಾಗಿ ಪಡೆದ. ಜಿಪುಣನಾದ, ಸೌಂದರ್ಯಾರಾಧಕನಲ್ಲದ ಗಂಡ, ಅವನ ಮೊದಲ ಹೆಂಡತಿಯ ಕಿವುಡು-ಮೂಗ ಮಗು ಅವಳ ಬದುಕನ್ನು ನೀರಸಗೊಳಿಸಿದವು. ಪ್ರವಾಸಕ್ಕೆ ಹೊರಟ ಸಂಸಾರಕ್ಕೆ ಹಾದಿಯಲ್ಲಿ ಒಬ್ಬ ವ್ಯಕ್ತಿಯ ಪರಿಚಯವಾಗುತ್ತದೆ. ಶೀಲ, ಆಂತರಿಕ ತುಮುಲ. ಮಾನವೀಯ ಸಂಬಂಧಗಳನ್ನು, ಮೌಲ್ಯಗಳನ್ನು ಹುಡುಕುವ ಪ್ರಯತ್ನ.

೪೯೮. ಶ್ರೀದೇವಿ

(೧೯೭೮ / ಕಪ್ಪು-ಬಿಳುಪು / ಸಾಮಾಜಿಕ)
ಲಾ: ಭಾರ್ಗವಿ ಆರ್ಟ್ ಫಿಲಂಸ್
ಪ್ರೊ: ಜೆ.ಡಿ. ಮಲ್ಲಿಕಾರ್ಜುನ
ನಿ: ವಿ.ಎಲ್.ಆಚಾರ್ಯ
ಸ.ನಿ: ಕೆ.ಎಸ್.ರೆಡ್ಡಿ
ಅ: ಜಯಂತಿ, ಶಿವರಾಂ, ಸಾಯಿಕುಮಾರ್, ಹೇಮಾ, ಅಶ್ವತ್, ಜಯಶ್ರೀ, ಶಾಂತಮ್ಮ

ಕ: ಮಾಲತಿ ಆಚಾರ್ಯ
ಚಿ.ಕ/ಮಾ/ಗೀ: ವಿ.ಎಲ್.ಆಚಾರ್ಯ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಪಿ.ಬಿ.ಶ್ರೀನಿವಾಸ್, ಎಸ್.ಜಾನಕಿ, ಬೆಂಗಳೂರು ಲತ
ಸಂ: ಆರ್.ಇ.ಚಿನ್ನಪ್ಪ
ಛಾ: ಸಿ. ವಸಂತಕುಮಾರ್
ಕಲೆ: ಪಿ.ವೆಂಕಟರಾಮಯ್ಯ
ಸ: ಎಂ.ರಂಗರಾವ್
ಧ್ವ: (ಹಾ) ವಿ.ಆರ್ಮುಗಂ (ಮಾ) ಕೆ.ಆರ್.ಸೀತಾರಾಂ
ನೃ: ಉಡುಪಿ ಜಯರಾಮ್-ದೇವಿ
ಪ್ರ/ವ: ಜಿ.ಗೋಪಾಲಕೃಷ್ಣ
ಸ್ಟು: ಪ್ರೀಮಿಯರ್
ವಿ: ಮೊದಲು ''ಕೊಲೆಗೆ ಬಲೆ'' ಎಂಬ ಹೆಸರಿತ್ತು.
ಕ.ಸಾ: ದುಷ್ಟನೊಬ್ಬ ಹುಡುಗಿಯೊಂದನ್ನು ಪ್ರೀತಿಸುವ ನಾಟಕ



ಮಾಡಿ ಅವಳ ಕೊಲೆ ಮಾಡಿ, ಅದನ್ನು ನಾಯಕ ವಿಕ್ರಮ್ ಮೇಲೆ ಬರುವಂತೆ ಮಾಡಿರುತ್ತಾನೆ. ನಾಯಕ ತನ್ನ ಜಾಣತನದಿಂದ ಈ ಆರೋಪದಿಂದ ಹೊರಬರುತ್ತಾನೆ ದುಷ್ಟವ್ಯಕ್ತಿಗೆ ಬುದ್ಧಿ ಕಲಿಸುತ್ತಾನೆ.

೯೮೨. ಮಾನವ ದಾನವ

(೧೯೮೫ / ವರ್ಣ / ಸಾಮಾಜಿಕ)
ಲಾ: ಶ್ರೀ ರಾಮ್ ಫಿಲಂಸ್
ಪ್ರೊ/ನಿ: ಜಾನಕಿ ರಾಮ್
ಸ.ನಿ: ಕೆ.ಬಿ.ಹಿರೇಮಠ, ಎಸ್.ಸುಂದರ್
ಅ: ಶಂಕರ್‌ನಾಗ್, ವಜ್ರಮುನಿ, ಮುಸುರಿ ಕೃಷ್ಣಮೂರ್ತಿ, ಎನ್.ಎಸ್.ರಾವ್, ಮಾ|ಮಂಜುನಾಥ್, ಉಮಾ ಶಿವಕುಮಾರ್, ರೂಪಾ ಚಕ್ರವರ್ತಿ, ಗಾಯತ್ರಿ, ಶಾಂತಮ್ಮ, ಭಾರತಿ
ಕ: ಶಮೀಮ್ ಬಾನು
ಚಿ.ಕ: ಎ.ಎಂ.ಸಮೀವುಲ್ಲಾ
ಮಾ: ನವರತ್ನರಾಂ
ಗೀ: ಆರ್.ಎನ್.ಜಯಗೋಪಾಲ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಪಿ.ಸುಶೀಲ, ವಾಣಿ ಜಯರಾಂ, ಎಸ್.ಪಿ.ಪಲ್ಲವಿ. ಎಸ್.ಪಿ.ವಸಂತಲಕ್ಷ್ಮೀ
ಸಂ: ಸುರೇಶ್ ಅರಸ್
ಛಾ: ಜಾನಕೀ ರಾಮ್, ದಶರಥ ರಾಮ್
ಕಲೆ: ಕೇಶವ ರಾವ್
ಸ: ರಮೇಶ್ ನಾಯ್ಡು
ಧ್ವ: (ಹಾ) ಎ.ವಿ.ಎಂ, ಆರ್.ಆರ್. ಥಿಯೇಟರ್,



(ಮಾ) ಗೋವಿಂದಸ್ವಾಮಿ
ನೃ: ಚಿನ್ನಿ ಪ್ರಕಾಶ್, ವೇಣುಗೋಪಾಲ್
ಸಾ: ಜ್ಯೂಡೋ ರತ್ನಂ
ವ: ಕಲಿಕಾ ಮೂರ್ತಿ
ಪ್ರ: ವೆಂಕಟೇಶ್
ಸ್ಟು: ಕಂಠೀರವ, ಚಾಮುಂಡೇಶ್ವರಿ
ಹಾ: ೧) 'ಮೆಲ್ಲಗೆ ಮೆಲ್ಲಗೆ ಬಾರಮ್ಮ...', ೨) ನಮಗೆ ಬೇಕಮ್ಮಾ ನಮಗೆ ಬೇಕಮ್ಮಾ ನೀವು...'.
೩) ಗುಡ್ ಮಾರ್ನಿಂಗ್ ಶುಭದಿನ ಸುಪ್ರಭಾತ...',
೪) 'ಈ ಸುದಿನ ನಿನ್ನ ಜನುಮದಿನ...',
ವಿ: ಶಂಕರ್‌ನಾಗ್ ಎರಡು ವಿಭಿನ್ನ ಪಾತ್ರಗಳಲ್ಲಿ ಅಭಿನಯಿಸಿದರು.
ಕ.ಸಾ: ಮಾನವೀಯತೆಯೇ ಮೈತಾಳಿ ಬಂದಂತಿದ್ದ ವ್ಯಕ್ತಿ ಎರಡು ಅನಾಥ ಮಕ್ಕಳನ್ನು ಸಾಕುತ್ತಿರುತ್ತಾನೆ. ಆತನನ್ನು ಕೈ ಹಿಡಿದವಳೂ

ಸದ್ಗುಣ ಸಂಪನ್ನೆ. ನಾಯಕ ಅಪಘಾತವೊಂದರಲ್ಲಿ ಸಾಯುತ್ತಾನೆ. ಮಕ್ಕಳು ನಾಯಕನಿಲ್ಲದ ಬದುಕುವುದಿಲ್ಲವೆಂದಾಗ ನಾಯಕಿಗೆ, ನಾಯಕನಂತೆ ಇರುವ ಮತ್ತೊಬ್ಬ ವ್ಯಕ್ತಿ ಪರಿಚಯವಾಗುತ್ತಾನೆ. ರೂಪಿನಲ್ಲಿ ನಾಯಕನಂತೆ ಇದ್ದರೂ ಗುಣದಲ್ಲಿ ಆತ ದಾನವ. ಮಕ್ಕಳಿಗಾಗಿ ಆತ ಬದಲಾಗುತ್ತಾನೆ. ದಾನವ ಮಾನವನಾಗಿ ಪರಿವರ್ತನೆ ಹೊಂದುವ ಹೃದಯಸ್ಪರ್ಶಿ ಕಥೆ.

೯೮೩. ಹಾವು ಏಣಿ ಆಟ

(೧೯೮೫ ವರ್ಣ ಸಾಮಾಜಿಕ)
ಲಾ: ಶ್ರೀ ಸಾಯಿ ಗುರು ಚಿತ್ರ
ಪ್ರೊ: ಎಂ.ಎಸ್.ಎಸ್. ಮೂರ್ತಿ, ಶೇಷಾದ್ರಿ
ನಿ: ವಿ.ಆರ್.ಕೆ.ಪ್ರಸಾದ್
ಅ: ಅನಂತನಾಗ್, ಸೀತಾರಾಮ್, ಉದಯಕುಮಾರ್, ಸುರೇಶ್ ಹೆಬ್ಳೀಕರ್, ಲೋಕನಾಥ್, ಉದಯಶಂಕರ್, ಶಕ್ತಿಪ್ರಸಾದ್, ದಾಮೋದರರಾವ್, ಯೋಗಾನರಸಿಂಹ, ಸುಧೀರ್, ಆರತಿ, ಉಮಾ ಶಿವಕುಮಾರ್, ರತಿ
ಚಿ.ಕ/ಮಾ: ಯೋಗಾ ನರಸಿಂಹ
ಗೀ: ದೊಡ್ಡ ರಂಗೇಗೌಡ, ಆರ್.ಎನ್.ಜಯಗೋಪಾಲ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ವಾಣಿ ಜಯರಾಂ
ಸಂ: ವಿ.ಆರ್.ಕೆ.ಪ್ರಸಾದ್
ಛಾ: ಮಧು ಅಂಬಟ್
ಸ: ವಿಜಯ ಭಾಸ್ಕರ್
ಧ್ವ: (ಹಾ) ಸಿ.ಡಿ.ವಿಶ್ವನಾಥನ್ (ಮಾ) ಗೋವಿಂದಸ್ವಾಮಿ
ಸಾ: ಅಂಬೂರು ಬಾಬು
ಪ್ರ: ವೆಂಕಟೇಶ್ವರ ರಾವ್
ಸ್ಥ: ವಸಂತ್
ಹಾ: ೧)'ಈ ಯೌವ್ವನಾ ರೋಮಾಂಚನಾ...', ೨)ಸಂಗಾತಿ ನೀನಾಗಿ ಬಳಿ ಬಾರೋ...', ೩)'ಕವಡಿದೆ ಒಲವಿನ ಭಾವನೆ...', ೪)'ಕೈಗೆ ಬಾಯಿಗೆ ಇಲ್ಲ...',
ವಿ: ಪತ್ರಕರ್ತರು ನಿರ್ಮಿಸಿದ ಚಿತ್ರ. ವಿ.ಎನ್. ಸುಬ್ಬರಾಯರೂ ನಿರ್ಮಾಪಕರಲ್ಲೊಬ್ಬರು.
ಕ.ಸಾ: ಧೂರ್ತರಿಬ್ಬರು ಬ್ಯಾಂಕನ್ನು ಲೂಟಿಮಾಡಿ, ಹಣವನ್ನೆಲ್ಲಾ ರಹಸ್ಯವಾಗಿಟ್ಟು ವಿದೇಶಕ್ಕೆ ತೆರಳಿದರು. ಐದು ವರ್ಷದ ನಂತರ ಮರಳಿಬಂದಾಗ ಹಣ ಹೂತಿಟ್ಟ ಜಾಗದಲ್ಲಿ ಭಾರಿ ಬಂಗಲೆ ಎದ್ದು ನಿಂತಿತ್ತು. ನಿಧಿಯ ಹುಡುಕಾಟದ ಹಿಂದೆ ಅನೇಕ ಹುನ್ನಾರಗಳು, ವಿಚಿತ್ರ ವ್ಯಕ್ತಿಗಳ ಸ್ವಭಾವಗಳ ಅನಾವರಣ. ವಶೀಕರಣ, ಸಮ್ಮೋಹಿನಿಯಂಥ ವಿದ್ಯೆಯ ಬಳಕೆ. ಅಂತಿಮವಾಗಿ ನಿಧಿ ಸಿಕ್ಕರೂ ಸರ್ಕಾರಕ್ಕೆ ಸೇರಿತು.

೯೮೪. ಬಾಳೊಂದು ಉಯ್ಯಾಲೆ

(೧೯೮೫ / ವರ್ಣ / ಸಾಮಾಜಿಕ)
ಲಾ: ಆಂಡಾಳ್ ಪ್ರೊಡಕ್ಷನ್ಸ್
ಪ್ರೊ: ರಾಮ ಅರಂಗಣ್ಣಲ್
ನಿ: ಅಮೃತಂ
ಸ.ನಿ: ಕೆ.ಸೀತಾರಾಂ
ಅ: ಶ್ರೀನಾಥ್, ದ್ವಾರಕೀಶ್, ಶಾಂತಿ, ಲೀಲಾವತಿ, ತೂಗುದೀಪ ಶ್ರೀನಿವಾಸ್
ಕ: ಕೆ.ಬಾಲಚಂದರ್
ಚಿ.ಕ: ಅಮೃತಂ
ಮಾ/ಗೀ: ಚಿ.ಉದಯಶಂಕರ್
ಗಾ: ರಮೇಶ್, ವಾಣಿ ಜಯರಾಂ, ಬಿ.ಆರ್.ಛಾಯಾ, ಎಲ್.ಆರ್.ಈಶ್ವರಿ, ಜೇಸುದಾಸ್
ಸಂ: ಪಿ.ವೆಂಕಟೇಶ್ವರರಾವ್
ಛಾ: ಎಸ್.ಮಾರುತಿರಾವ್
ಕಲೆ: ಬಿ.ನಾಗರಾಜರಾವ್
ಸ: ಎಂ.ಎಸ್.ವಿಶ್ವನಾಥ್
ನೃ: ತಾರಾ
ವ: ಪ್ರಸಾದ್, ವೀರರಾಜು, ಬಶೀರ್
ಪ್ರ: ಪಿ.ವೀರಾಸ್ವಾಮಿ, ಷಣ್ಮುಗಂ (ಕೇಶ) ಕಣ್ಣಯ್ಯನ್
ಹಾ: ೧)'ತಪ್ಪು ಮಾಡಿದೆ ಒಪ್ಪಿಕೊಳ್ಳುವೆ ...', ೨)'ಬಾಳಲ್ಲಿ ಇಂಥಾ ಸಮಯ ...', ೩)'ಇರಲಿ ಹೋಗೆ ...', ೪)'ನೀನೋ ನಾನೋ ...'
ಕ.ಸಾ: ಗಂಡನ ಆಶ್ರಯವಿಲ್ಲದೇ ತನ್ನ ಮಕ್ಕಳನ್ನು ಧೈರ್ಯವಾಗಿ ಸಾಕಿ ಬೆಳಸುವ ತಾಯಿ, ಮಕ್ಕಳ ಆಸೆ ಆಕಾಂಕ್ಷೆಗಳನ್ನು ಅರ್ಥ ಮಾಡಿಕೊಳ್ಳುವ ಗೋಜಿಗೆ ಹೋಗದೆ ಸದಾ ಒಂದು ನೀಮಾರೇಖೆಯಲ್ಲಿ ಬಂಧಿತಳಾಗಿರುತ್ತಾಳೆ. ಮಕ್ಕಳಿಬ್ಬರೂ ತಮ್ಮ ತಮ್ಮ ಇಷ್ಟ ಪಟ್ಟವರನ್ನು ವರಿಸುವುದರಿಂದ ಕೋಪ ಬರುತ್ತದೆ. ಅದರ ನಾಯಕನ ಜಾಣತನದಿಂದ ಚದುರಿ ಹೋದ ಎಲ್ಲಾ ಸಂಬಂಧಗಳೂ ಸರಿ ಹೋಗಿ ಸುಖಾಂತವಾಗುತ್ತದೆ.

೯೮೫. ದೇವರ ಮನೆ

(೧೯೮೫ ವರ್ಣ ಸಾಮಾಜಿಕ)
ಲಾ: ಮಣಿ ಪದ್ಮ ಫಿಲಂಸ್
ಪ್ರೊ: ಆರ್.ಎಫ್.ಮಾಣಿಕ್‌ಚಂದ್
ನಿ: ಎ.ಟಿ.ರಘು
ಸ.ನಿ: ಆರ್.ಸಿ.ರಂಗಾ, ಬಿ.ಎಂ.ನಾಗರಾಜ್, ಹಲಗೂರ್ ವೆಂಕಟೇಶ್, ಉಮೇಶ್
ಅ: ಅಂಬರೀಷ್, ರಾಜೇಶ್, ತೂಗುದೀಪ ಶ್ರೀನಿವಾಸ್, ಪಲ್ಲವಿ, ಚಕಮಕಿ ರಾಧಾ, ಕಷ್ಣೇಗೌಡ, ಛಾಯಾದೇವಿ, ಯಮುನಾ, ವಾಗೀವಿ
ಕ: ಜಯಕಾಂತನ್
ಚಿ.ಕ/ಮಾ: ಹೆಚ್.ವಿ.ಸುಬ್ಬರಾವ್
ಗೀ: ಗೀತಪ್ರಿಯ, ದೊಡ್ಡರಂಗೇಗೌಡ, ಶ್ಯಾಮ ಸುಂದರ ಕುಲಕರ್ಣಿ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಪಿ.ಸುಶೀಲ, ವಾಣಿ ಜಯರಾಂ
ಸಂ: ಜಿ.ಸ್ಟ್ಯಾನ್ಲಿ
ಛಾ: ಎಸ್.ಆರ್.ಕೆ.ಮೂರ್ತಿ
ಕಲೆ: ನಂಜುಂಡಪ್ಪ
ಸ: ಕೆ.ಜೆ.ಜಾಯ್
ಧ್ವ: (ಹಾ) ಪಾಂಡು, ರಾಜಗೋಪಾಲ್ (ಮಾ) ಕೋದಂಡಪಾಣಿ
ನೃ: ಜೀವಾ-ಪಾಲ್‌ರಾಜ್
ಸಾ: ಸಾಹುಲ್

ವ: ದೊರೈ ಕಣ್ಣನ್ (ಕೇಶ : ಭಾಸ್ಕರ್‌ರಾವ್)
ಪ್ರ: ಜಿ.ಎಸ್.ವಾಸು, ಸತ್ಯಂ
ಹಾ: ೧)'ಪೇಟೆಯ ಬೀದಿ ಸುತ್ತಿ ...', ೨)'ಮೈಯ್ಯಾಗೆ ಶ್ಯಾನೆ ಶ್ಯಾನೆ ...', ೩)'ಕೆಂಪು ದೀಪದ ...', ೪)'ಯಾರೂ ಸಾಯೆ ಹೋದ್ರ ...
ಸೆ: ಯು ೪೭೪೭.೪೭, ರೀಲು-೧೫, ೩೧-೦೫-೮೫
ಕ.ಸಾ: ಕರ್ತವ್ಯ ನಿರತ ಜೈಲರ್‌ಗೆ ಸೆರೆಮನೆ ದೇವರ ಮನೆ ಎಂಬಂಥ ಭಾವನೆ. ಅಲ್ಲಿರುವ ಯಾವೊಬ್ಬ ಖೈದಿಯನ್ನೂ ಅವನು ಹಿಂಸಿಸುವುದಿಲ್ಲ. ಅವನ ನಡತೆಯಿಂದ ಎಲ್ಲರೂ ಆತನನ್ನು ಆರಾಧಿಸುತ್ತಾರ. ಮಾಡದ ತಪ್ಪಿಗೆ ಶಿಕ್ಷೆ ಅನುಭವಿಸುವ ವ್ಯಕ್ತಿ ಜೈಲರ್‌ನ ಅನುಮತಿ ಪಡೆದು ಹೊರಹೋಗಿ ತನಗೆ ಶಿಕ್ಷೆಯಾಗುವಂತೆ ಮಾಡಿದ ವ್ಯಕ್ತಿಯನ್ನು ಶಿಕ್ಷಿಸಿ ಜೈಲ್‌ಗೆ ಬಂದು ಸೇರುವಲ್ಲಿಗೆ ಜೈಲರ್‌ನ ಗೌರವವನ್ನು ಕಾಪಾಡಿ ಒಬ್ಬ ನಿರಾಪರಾಧಿಯ ಶಿಕ್ಷೆಯನ್ನು ಕಡಿಮೆ ಮಾಡುತ್ತಾನೆ.

೯೮೬. ನೀ ಬರೆದ ಕಾದಂಬರಿ

(೧೯೮೫ / ವರ್ಣ / ಸಾಮಾಜಿಕ)
ಲಾ: ದ್ವಾರಕೀಶ್ ಚಿತ್ರ
ಪ್ರೊ/ನಿ: ದ್ವಾರಕೀಶ್
ಸ.ನಿ: ರಾಜ್‌ಕಿಶೋರ್
ಅ: ವಿಷ್ಣುವರ್ಧನ್, ಭವ್ಯ, ಸಿ.ಆರ್.ಸಿಂಹ, ಸುಂದರ್‌ರಾಜ್, ಹೇಮಾ ಚೌಧುರಿ, ಉಮಾ ಶಿವಕುಮಾರ್, ಲೋಹಿತಾಶ್ವ, ರಾಮರಾವ್, ಮಾ|ಅರ್ಜುನ್, ದೇವಿಕಾರಾಣಿ, ಜಯಶ್ರೀ
ಕ/ಚಿ.ಕ: ಹಿಂದಿ ಚಿತ್ರದ ರೀಮೇಕ್
ಮಾ: ಚಿ.ಉದಯಶಂಕರ್
ಗೀ: ಆರ್.ಎನ್.ಜಯಗೋಪಾಲ್, ಚಿ.ಉದಯಶಂಕರ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್.ಜಾನಕಿ, ಮಂಜುಳಾ
ಸಂ: ಗೌತಮ್ ರಾಜು
ಛಾ: ಆರ್. ದೇವಿ ಪ್ರಸಾದ್
ಕಲೆ: ಕೆ.ಎಸ್.ವೇಣು
ಸ: ವಿಜಯಾನಂದ್
ಧ್ವ: (ಮಾ) ಪ್ರಸಾದ್
ನೃ: ಚಿನ್ನಿ ಪ್ರಕಾಶ್, ಸುರೇಖ
ಸಾ: ಜ್ಯೂಡೋ ರತ್ನಂ
ವ: ನಾಗರಾಜ್, ಬಡಾ ಸಾಬ್ (ಜಾಂಬೆ)

ಪ್ರ: ಬಿ.ವೀರರಾಜು, ಶ್ರೀನಿವಾಸ್
ಹಾ: ೧) 'ನೀ ಮೀಟಿದ ನೆನಪೆಲ್ಲವೂ ಎದೆ ತುಂಬಿ ಹಾಡಾಗಿದೆ...', ೨)'ಈ ಪ್ರೇಮ ಹಿತವಾಗಿದೆ...', ೩)'ಸೂರ್ಯ ಚಂದ್ರ ಆಕಾಶಕೆ...',
ವಿ: ದ್ವಾರಕೀಶ್ ನಿರ್ದೇಶಕರಾದದ್ದು.
ಸೆ: ರೀಲು - ೧೪, 'ಯು', ೩೯೦೦-೮೩, ೧೯-೬-೮೫
ಕ.ಸಾ: ಫೋಟೋಗ್ರಾಫರ್ ಒಬ್ಬ ಶ್ರೀಮಂತ ಹುಡುಗಿಯನ್ನು ಪ್ರೀತಿಸಿ ಮದುವೆಯಾಗುತ್ತಾನೆ. ತಂದೆ ಇಬ್ಬರನ್ನು ಅಗಲಿಸುವ ಪ್ರಯತ್ನ ಮಾಡಿ ಯಶಸ್ವಿಯಾಗುತ್ತಾನೆ. ಅವಳಿಗೆ ಹುಟ್ಟಿದ ಮಗುವನ್ನು ಅನಾಥಾಶ್ರಮಕ್ಕೆ ಬಿಟ್ಟು ಬರುತ್ತಾನೆ. ನಾಯಕ ಮಗುವನ್ನು ತಂದು ಮುಚ್ಚಟೆ ಮಾಡಿ ಬೆಳಸುತ್ತಾನೆ. ಹುಡುಗಿ ಮಾನಸಿಕ ರೋಗಿಯಾಗುತ್ತಾಳೆ. ದೂರ ಸರಿದ ಅಪ್ಪ ಅಮ್ಮನನ್ನು ಬೆಳೆದ ಮಗು ಒಂದು ಮಾಡುತ್ತದೆ.

೯೮೭. ಸ್ನೇಹ ಸಂಬಂಧ

(೧೯೮೫ / ವರ್ಣ / ಸಾಮಾಜಿಕ)
ಲಾ: ಪದ್ಮಾವತಿ ಕಂಬೈನ್ಸ್
ಪ್ರೊ: ಯು.ಎಸ್.ಎನ್.ಬಾಬು
ನಿ/ಚಿ.ಕ: ರಾಜಾಚಂದ್ರ
ಅ: ಅಂಬರೀಷ್, ರಾಮಕೃಷ್ಣ, ಸುಂದರಕೃಷ್ಣ ಅರಸ್, ಲೀಲಾವತಿ, ಪೂಜಾ ಸಕ್ಸೇನಾ, ಕೆ.ವಿಜಯಾ, ಉಮಾಶ್ರೀ, ಸಂಯುಕ್ತ, ಅಶ್ವತ್ಥ್, ಮುಖ್ಯಮಂತ್ರಿಚಂದ್ರು, ಡಿಂಗ್ರಿ ನಾಗರಾಜ್, ಬೆಂಗಳೂರು ನಾಗೇಶ್, ಬಿ.ಕೆ.ಶಂಕರ್
ಮಾ/ಗೀ: ಚಿ. ಉದಯಶಂಕರ್
ಛಾ: ಕೆ. ಎಸ್. ಹರಿ
ನೃ: ತರುಣ್
ಸ: ಜಿ.ಕೆ. ವೆಂಕಟೇಶ್
ಸೆ: 'ಯು' ಸರ್ಟಿಫಿಕೇಟ್
ಹಾ: ೧)'ಕಾಣೆ ನಾನು ನಿನ್ನನ್ನು ಕಂಡಾಗ......',
ಕ.ಸಾ: ಒಂದು ಸುಂದರವಾದ ಸಂಸಾರ. ತುಂಬಿದ ಮನೆ. ಆ ಮನೆಯಿಂದ ಜೀವನದಲ್ಲಿ ಬೆಳಕು ಕಂಡವರು ಎಷ್ಟೋ ಮಂದಿ

ಅಂಥವರಲ್ಲಿ ನಾಯಕ ಒಬ್ಬ. ವ್ಯಾಪಾರದಲ್ಲಾದ ನಷ್ಟದಿಂದ ಮನೆ ಯಜಮಾನ ಸಾಯುತ್ತಾನೆ. ತುಂಬಿದ ಮನೆ ಬರಿದಾಗುತ್ತದೆ. ಸೊಸೆಯರ ಹಿಂಬಾಲಕರಾದ ಮಕ್ಕಳಿಂದ ಮುದಿ ತಾಯಿ, ತಂಗಿ, ಅಮ್ಮನಿಗೆ ಆಶ್ರಯ ಸಿಗುವುದಿಲ್ಲ. ಆಗ ಸ್ನೇಹಿತನಾದ ನಾಯಕ ನೆರವಿಗೆ ಬಂದು ಅವರನ್ನು ಕಾಪಾಡಿ ಸ್ನೇಹ, ಸಂಬಂಧಕ್ಕಿಂತ ದೊಡ್ಡದೆಂದು ಸಾಬೀತುಪಡಿಸುತ್ತಾನೆ.

೯೮೮. ಪವಿತ್ರ ಪಾಪಿ

(೧೯೮೫ / ವರ್ಣ / ಸಾಮಾಜಿಕ)
ಲಾ: ಸರ್ವಶಕ್ತಿ ಚಿತ್ರ
ಪ್ರೊ: ಎಂ.ಸಂಜೀವ್, ಶ್ರೀನಿವಾಸ ಮೂರ್ತಿ, ವಿ.ಕೆ.ರಮೇಶ್,
ನಿ: ವಿಜಯ್
ಸ.ನಿ: ನಾಗೇಶ್
ಅ: ವಿಜಯ್, ಜೈಜಗದೀಶ್, ಸುಂದರರಾಜ್, ವಿಶ್ವನಾಥ್, ದೊಡ್ಡಣ್ಣ, ಶ್ರೀನಾಥ್, ಜ್ಯೋತಿ, ಶಶಿಕಲಾ, ಶಕ್ತಿ ಪ್ರಸಾದ್ ಪ್ರಶಾಂತಿ ನಾಯಕ್, ಕಮಿನೀಧರನ್, ಬಸವರಾಜ ಕಸ್ತೂರ್, ಚೇತನ್ ರಾಮರಾವ್, ಪ್ರೇಮಾ ನಾರಾಯಣ್.
ಕ: ವಿ.ಕೆ ರಮೇಶ್
ಚಿ.ಕ/ಮಾ: ಬಸವರಾಜ ಕೆಸ್ತೂರ್, ಭಂಗೀರಂಗ
ಗೀ: ರುದ್ರಮೂರ್ತಿ ಶಾಸ್ತ್ರಿ, ಬಸವರಾಜ್ ಕೆಸ್ತೂರ್, ದತ್ತುಪ್ರಸಾದ್, ದೊಡ್ಡರಂಗೇಗೌಡ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್.ಜಾನಕಿ
ಸಂ: ವಿಕ್ಟರ್ ಯಾದವ್
ಛಾ: ಬಾಬುಲ್‌ನಾಥ್ ವಾಲ್ಕೆ
ಸ: ಉಪೇಂದ್ರ ಕುಮಾರ್
ನೃ: ಚಿನ್ನಿ - ಪ್ರಕಾಶ್
ಸಾ: ವಿಜಯ್
ಸ್ಟು: ಚಾಮುಂಡೇಶ್ವರಿ, ಪ್ರಸಾದ್
ಹಾ: ೧)'ಆಡುವಾ ನಲಿದು ಬಿಡುವಾ...', ೨) ಈ ದೇಹದ ಒಂದೊಂದು ಅಂಗ...', ೩)'ಓ ಬೆಳ್ಳಿ ಮೀಸೆ ತಾತ...', ೪)'ಮೈಯಾಗೆ ಬಿಸಿ ರಂಗಾಗಿ...',
ವಿ: ಸಾಹಸ ನಿರ್ದೇಶಕ ವಿಜಯ್ ನಿರ್ದೇಶಕರಾದರು.
ಕ.ಸಾ.: ಸಮಾಜದಿಂದ ಶೋಷಣೆಗೊಳಗಾದ ನಾಲ್ವರು ಒಟ್ಟಾಗಿ ತಮಗೆ ಅನ್ಯಾಯ ಮಾಡಿದವರ ದೌರ್ಬಲ್ಯವನ್ನು ಮುಂದಿಟ್ಟುಕೊಂಡು ಬುದ್ಧಿ ಕಲಿಸುತ್ತಾರೆ.

೯೮೯. ಮಾವನೋ ಅಳಿಯನೋ

(೧೯೮೫ ವರ್ಣ ಸಾಮಾಜಿಕ)
ಲಾ: ರಾಧಾರವಿ ಚಿತ್ರ
ಪ್ರೊ: ಬಿ.ವಿ.ರಾಧಾ
ನಿ: ಕೆ.ಎಸ್.ಚಂದ್ರಶೇಖರ ಶರ್ಮ
ಅ: ಅಶೋಕ್, ಲೋಕೇಶ್, ಭವ್ಯ, ಬಿ.ವಿ.ರಾಧಾ, ಜಯಮಾಲಿನಿ, ಅನುರಾಧಾ, ಜೈಜಗದೀಶ್, ದೊಡ್ಡಣ್ಣ
ಕ/ಚಿ.ಕ: ಆರ್.ಕೆ.ಧರ್ಮರಾಜ್
ಮಾ: ಎಂ.ನರೇಂದ್ರಬಾಬು
ಗೀ: ಚಿ.ಉದಯಶಂಕರ್, ಆರ್.ಎನ್.ಜಯಗೋಪಾಲ್, ದೊಡ್ಡರಂಗೇಗೌಡ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ವಾಣಿ ಜಯರಾಂ
ಸಂ: ವಿಕ್ಟರ್ ಯಾದವ್
ಛಾ: ಎನ್.ಕೆ.ಸತೀಶ್
ಕಲೆ: ವಿ.ಕೆ.ರಮೇಶ್
ಸ: ವಿಜಯಭಾಸ್ಕರ್
ಧ್ವ: (ಹಾ) ರಾಜ್‌ಗೋಪಾಲ್ (ಮಾ) ಕೋದಂಡಪಾಣಿ
ಸಾ: ವಿಜಯ್
ವ: ಕೆ.ರಾಮ ಕಲ್ಯಾಣ ಕುಮಾರ್
ಪ್ರ: ಜಿ.ವೆಂಕಟೇಶ್, ರವಿ
ಸ್ಟು: ಕಂಠೀರವ
ವಿ: ಕಥೆಯ ಬಗ್ಗೆ ಸ್ವಾಮ್ಯದ ಬಗ್ಗೆ ವಿವಾದಗಳಾದವು
ಕ.ಸಾ: ಮಾವ ಕರ್ತವ್ಯ ನಿಷ್ಠ ಪೊಲೀಸ್ ಅಧಿಕಾರಿ. ಒಳ್ಳೆಯ

ಅತ್ತೆ. ನಾಯಕ ವೃತ್ತಿಯಲ್ಲಿ ಲಾಯರ್. ಇವರಿಬ್ಬರಿಂದ ಶಿಕ್ಷೆಗೆ ಒಳಗಾದ ವ್ಯಕ್ತಿಯೊಬ್ಬನ ದ್ವೇಷಕ್ಕೆ ಅತ್ತೆ ಸಾವಿಗೀಡಾಗಿ, ಆಕೆಯ ಕೊಲೆ ಅಪಾದನೆ ಅಳಿಯನ ಮೇಲೆ ಬರುತ್ತದೆ. ಕಿಲಾಡಿ ಅಳಿಯ ತನ್ನ ಮೇಲೆ ಬಂದ ಅಪಾದನೆಯಿಂದ ಮುಕ್ತನಾಗುವುದಲ್ಲದೇ ಅತ್ತೆಯನ್ನು ಕೊಂದವರ ಮೇಲೆ ಸೇಡು ತೀರಿಸಿಕೊಳ್ಳುತ್ತಾನೆ.

೯೯೦. ಗಿರಿಬಾಲೆ

(೧೯೮೫/ವರ್ಣ/ಸಾಮಾಜಿಕ)
ಲಾ: ಶ್ರೀ ಅಂಬಾ ಭವಾನಿ ಆರ್ಟ್ ಫಿಲಂಸ್
ಪ್ರೊ: ಎಸ್.ವೆಂಕಟೇಶ್, ವಿ.ಜೆ.ಶ್ಯಾಂ ಸುಂದರ್, ಕೆ.ವಿ.ರಾವ್
ನಿ: ಬಿ.ಮಲ್ಲೇಶ್
ಸ.ನಿ: ವಿರೂಪಾಕ್ಷ, ಎಂ.ಪಿ.ಆನಂದರಾವ್
ಅ: ಅಂಬರೀಷ್, ಗೀತಾ, ಶೋಭನಾ, ಲೀಲಾವತಿ, ಅಶ್ವತ್ಥ್, ಲೋಕನಾಥ್, ಶಕ್ತಿಪ್ರಸಾದ್, ಮುಸುರಿ ಕೃಷ್ಣಮೂರ್ತಿ
ಕ: ಎಂ.ಕೆ.ಇಂದಿರಾ ಅವರ ಕಾದಂಬರಿ
ಚಿ.ಕ/ಮಾ: ಬಿ.ಮಲ್ಲೇಶ್
ಗೀ: ಚಿ.ಉದಯಶಂಕರ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್.ಜಾನಕಿ, ವೆಂಕಟೇಶ್ (ಶ್ಲೋಕ)
ಸಂ: ಎಸ್.ಮನೋಹರ್
ಕಲೆ: ಜಾಕ್‌ಪಾಟ್ ರಾಮು
ಸ: ರಾಜನ್-ನಾಗೇಂದ್ರ
ಧ್ವ: (ಹಾ) ಎಸ್.ಪಿ.ರಾಮನಾಥನ್ (ಮಾ) ಕೋದಂಡಪಾಣಿ
ನೃ: ಮೂಗೂರು ಸುಂದರ್, ಉಡುಪಿ ಜಯರಾಂ
ಸಾ: ಸಾಹುಲ್
ವ: ಚಿನ್ನಯ್ಯ, ಬಾಬೂಜಿ
ಪ್ರ: ಮಾಧವನ್, ಸೀನೂ
ಸ್ಟು: ಪ್ರಸಾದ್, ಚಾಮುಂಡೇಶ್ವರಿ
ಹಾ: ೧) 'ಚಿನ್ನಾ ನಿನಗಾಗಿ ನಾನು...', ೨)'ಕಣ್ಣಾಗೆ ಆಸೆ



ತುಂಬುವೆ...', ೩)'ಕೃಷ್ಣಾ ಬಾರೊ ಮಾಧವ ಬಾರೊ...', ೪)'ಸಂತೋಷ ನೀಡಲೆಂದೇ ...',
ಕ.ಸಾ: ನಾಯಕ ಓದುತ್ತಿರುವಾಗಲೇ ಒಬ್ಬ ಹುಡುಗಿಯನ್ನು ಪ್ರೀತಿಸಿರುತ್ತಾನೆ. ನಾಯಕನ ತಾಯಿ ಆ ಹುಡುಗಿಯ ಮನೆಗೆ ಹೆಣ್ಣು ಕೇಳಲು ಹೋದಾಗ ಅವಮಾನ ಮಾಡುತ್ತಾರೆ. ನಾಯಕನ ಇಚ್ಛೆಗೆ ವಿರುದ್ಧವಾಗಿ ಬೇರೊಂದು ಹುಡುಗಿಯ ಜೊತೆಗೆ ಮದುವೆಯಾಗುತ್ತದೆ. ಸುಶೀಲೆಯಾದ ಹೆಣ್ಣು ಮನೆ ತುಂಬಿದರೂ ಮನ ತುಂಬುವುದಿಲ್ಲ. ನಾಯಕಿಗೆ ತಾನು ಬಂಜೆ ಎನ್ನುವ ಕೊರಗು. ಹಠ ಮಾಡಿ ನಾಯಕ ಮೊದಲು ಪ್ರೀತಿಸಿದ ಹುಡುಗಿಯನ್ನು ಮರು ಮದುವೆ ಮಾಡುತ್ತಾಳೆ. ಮನೆಗೆ ಬಂದ ಹುಡುಗಿ ಮೊದಲ ಹೆಂಡತಿಯನ್ನು ಕಡೆಗಣಿಸುತ್ತಾಳೆ. ನಾಯಕ ಇಕ್ಕಟ್ಟಿಗೆ ಸಿಲುಕಿದ ಯಾರಿಗೂ ಮನಶ್ಯಾಂತಿ ಇಲ್ಲ ಎನ್ನಿಸಿದಾಗ ನಾಯಕಿ ಬೆಟ್ಟದಿಂದ ಧುಮುಕಿ ಪ್ರಾಣತ್ಯಾಗ ಮಾಡುತ್ತಾಳೆ.

೯೯೧. ಮಾರುತಿ ಮಹಿಮೆ

(೧೯೮೫/ವರ್ಣ/ಸಾಮಾಜಿಕ)
ಲಾ: ರವಿಚಿತ್ರ ಫಿಲಂಸ್
ಪ್ರೊ: ವೈ.ವಿ.ರಾವ್
ನಿ: ಪೇರಾಲ
ಸ.ನಿ: ಲಿಂಗರಾಜ್
ಅ: ಚರಣ್‌ರಾಜ್, ವಜ್ರಮುನಿ, ದಿನೇಶ್, ಸೀತಾರಾಂ , ಕುಣಿಗಲ್ ನಾಗಭೂಷಣ್, ಭವ್ಯ, ಉಮಾಶ್ರೀ, ವೈಶಾಲಿ, ರಶ್ಮಿ, ಶಾಂಕುತಲ
ಕ/ಚಿ.ಕ: ಪೇರಾಲ
ಮಾ: ಕುಣಿಗಲ್ ನಾಗಭೂಷಣ್
ಗೀ: ಆರ್.ಎನ್.ಜಯಗೋಪಾಲ್, ವಿಜಯನಾರಸಿಂಹ
ಗಾ: ಎಸ್.ಜಾನಕಿ, ಬೆಂಗಳೂರು ಲತಾ, ಪಿ.ಬಿ.ಶ್ರೀನಿವಾಸ್, ರಾಜಕುಮಾರ್ ಭಾರತಿ
ಸಂ: ರಾಜಗೋಪಾಲ್
ಛಾ: ಕಬೀರ್‌ಲಾಲ್
ಕಲೆ: ಎಂ. ಕೃಷ್ಣ
ಸ: ಸತ್ಯಂ
ಧ್ವ: (ಹಾ) ಕೋಟೇಶ್ವರರಾವ್ (ಮಾ) ಗೋವಿಂದಸ್ವಾಮಿ
ನೃ: ಶಿವಶಂಕರ್
ಸಾ: ಕೆ.ಎಸ್.ಮಾಧವನ್
ವ: ಟಿ.ನಾರಾಯಣರಾವ್
ಪ್ರ: ಪಿ.ನಾಗೇಶ್ವರರಾವ್
ಹಾ: ೧)' ಎಲ್ಲಿ ರಾಮನೋ ಅಲ್ಲಿ ಹನುಮನು...',



೨)'ಕಣ್ಣಿನ ಹೊನ್ನಿರಳಲ್ಲಿ ಕವಿ ಪ್ರೇಮ...'. ೩) ಅಮ್ಮಾ ಸೀತಮ್ಮ ಲಜ್ಜೆ ಏಕಮ್ಮಾ...',
ವಿ: ಪ್ರಾಣಿಗಳ ಸಾಹಸ ಸಂದರ್ಭದಲ್ಲಿ ಅಭಿನಯ
ಕ.ಸಾ: ಮಾರುತಿಯ ಮಹಾಭಕ್ತೆಯಾದ ಸೀತೆ ಎಂಬ ಯುವತಿಯನ್ನು ಹಲವು ಸಂಕಷ್ಟಗಳಿಂದ ಮಾರುತಿ ಕಾಪಾಡಿ ಸಲಹುವ ಕಥೆ.

೯೯೨. ಚದುರಂಗ

(೧೯೮೫/ವರ್ಣ/ಸಾಮಾಜಿಕ)
ಲಾ: ಪ್ರೇಮಾಲಯ ಪಿಕ್ಚರ್ಸ್
ಪ್ರೊ: ಆರ್.ವೆಂಕಟರಾಮನ್, ಸಹ ನಿರ್ಮಾಪಕ ಟಿ.ಎ.ರಾಮಾನುಜಾಚಾರ್ಯ

ನಿ: ವಿ.ಸೋಮಶೇಖರ್
ಸ.ನಿ: ಹೆಚ್.ಎಂ.ಕೃಷ್ಣಮೂರ್ತಿ (ನಂದಿ)
ಅ: ಅಂಬರೀಷ್, ಅಂಬಿಕ, ವಜ್ರಮುನಿ. ಮುಖ್ಯಮಂತ್ರಿ ಚಂದ್ರು, ಶಿವರಾಮ್, ಸುಧೀರ್, ವಿಶ್ವವಿಜೇತ, ಕಾಂಚನಾ, ಶಶಿಕಲಾ, ಕಮಲಾ ಕಾಮೇಶ್, ರತ್ನಮಾಲ, ಸ್ವಪ್ನ, ಪ್ರಹ್ಲಾದ್, ಲೋಹಿತಾಶ್ವ, ಎನ್.ಎಸ್.ರಾವ್, ಲಕ್ಷ್ಮಣ್, ರತ್ನಾಕರ್, ಭಟ್ಟಿ ಮಹದೇವಪ್ಪ, ಹನುಮಂತಾಚಾರ್, ಟೊಮೆಟೊ ಸೋಮು, ಕೃಷ್ಣೇಗೌಡ
ಕ/ಚಿ.ಕ: ಎಂ.ಡಿ.ಸುಂದರ್
ಮಾ/ಗೀ: ಚಿ.ಉದಯಶಂಕರ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ವಾಣಿ ಜಯರಾಂ, ಎಸ್.ಜಾನಕಿ
ಸಂ: ವಿಕ್ಟರ್ ಯಾದವ್
ಛಾ: ಹೆಚ್.ಜಿ.ರಾಜು
ಕಲೆ: ನಜೀರ್
ಸ: ಜಿ.ಕೆ.ವೆಂಕಟೇಶ್
ಧ್ವ: (ಮಾ) ಸೆಲ್ವರಾಜ್ (ಮಾ) ಕೋದಂಡಪಾಣಿ
ನೃ: ಉಡುಪಿ ಜಯರಾಂ
ಸಾ: ಸಾಹುಲ್
ವ: ಸತ್ಯಂ
ಪ್ರ: ಎಂ.ಎಸ್.ಕೇಶವ

ಸ್ಟು: ವಾಹಿನಿ, ಪ್ರಸಾದ್, ಎ.ವಿ.ಎಂ, ಅರಸು ಸ್ಟುಡಿಯೋಸ್
ಸೆ: ಉದ ೪೨೪೮ ೯೧, ರೀಲು ೧೫, ೨೪ ೫ ೮೫
ಕ.ಸಾ: ರಾಜಕೀಯ ವ್ಯಕ್ತಿಗಳ ಕೈಗೊಂಬೆಯಾಗಲೊಪ್ಪದ ವೈದ್ಯೆಯ ಕೊಲೆಯಾಗುತ್ತದೆ. ಆಕೆಯ ಮಗ ರಾಜಕಾರಣಿಗಳ ವಿರುದ್ಧ ಸಿಡಿದೇಳುತ್ತಾನೆ. ರಾಜಕೀಯ ಚದುರಂಗದಲ್ಲಿ ಗೆಲ್ಲುತ್ತಾನೆ.

೯೯೩. ಅಜೇಯ

(೧೯೮೫/ವರ್ಣ/ಸಾಮಾಜಿಕ)
ಲಾ: ಕಾಮಧೇನು ಆರ್ಟ್ ಪ್ರೊಡಕ್ಷನ್ಸ್
ಪ್ರೊ: ಸಿದ್ದಲಿಂಗಯ್ಯ, ಎಸ್.ಡಿ.ಮುರಳಿ
ನಿ: ಸಿದಲಿಂಗಯ್ಯ
ಸ.ನಿ: ವೈದ್ಯನಾಥನ್, ಸುರೇಶ್
ಅ: ಮುರಳಿ, ವಿಜಯಕಾಶಿ, ದೊಡ್ಡಣ್ಣ, ರಾಜಾರಾಂ, ಸಂಧ್ಯಾ, ಲೀಲಾವತಿ, ಆಶಾಲತಾ, ಅನುರಾಧ, ಅರವಿಂದ್, ಲೀಲಾವತಿ
ಕ/ಚಿ.ಕ/ಮಾ: ಬಿ.ಎಲ್.ವೇಣು
ಗೀ: ಶ್ಯಾಮ ಸುಂದರ ಕುಲಕರ್ಣಿ, ದೊಡ್ಡ ರಂಗೇಗೌಡ
ಗಾ: ಮಲೇಷಿಯಾ, ವಾಸುದೇವನ್, ಎಸ್.ಜಾನಕಿ
ಸಂ: ಆರ್.ರಾಜನ್
ಛಾ: ವಿ.ಕೆ.ಕಣ್ಣನ್
ಕಲೆ: ವಿ.ನಜೀರ್
ಸ: ಇಳಯ ರಾಜ
ಧ್ವ: (ಹಾ) ಎಸ್.ಪಿ.ರಾಮನಾಥನ್, (ಮಾ) ಗೋವಿಂದಸ್ವಾಮಿ
ನೃ: ಮೂಗೂರು ಸುಂದರ್
ಸಾ: ವೈ.ಶಿವಯ್ಯ
ವ: ಸುಬ್ಬಾರಾವ್
ಪ್ರ: ವೆಂಕಟಸ್ವಾಮಿ
ಸ್ಟು: ಚಾಮುಂಡೇಶ್ವರಿ
ಹಾ: ೧) 'ಎಲ್ಲ ಕಲಿಯಬಹುದ್ಲೇ ನಿನಗೆಲ್ಲ ಕಲಿಸಬಲ್ಲೆ...',



೨) 'ಮಾತಿಗೊಮ್ಮೆ ನೋಟಿನ ಕಂತೆ...', ೩) 'ಸಿಹಿಮುತ್ತ ನೀಡಿ ಪಸೋ ಮೋಡಿ ಮಾಡಿ...', ೪) 'ಅಲ್ಲಿ ಆ ಚಂದಿರ ಇಲ್ಲಿ ಈ ಮಂದಿರ...', ೫) 'ಹೀರೊ ಹೀರೊ ನಾನೆ ನಾನೆ..',
ಕ.ಸಾ: ನಾಯಕಿ ಶ್ರೀಮಂತೆ, ಅಹಂಕಾರಿ, ನಾಯಕ ಬಡವ, ಸ್ವಾಭಿಮಾನಿ. ಒಬ್ಬರಿಗೊಬ್ಬರು ಜಗಳವಾಡುತ್ತಾರೆ. ಅನಂತರ ಪ್ರೀತಿಸಲು ಆರಂಭಿಸುತ್ತಾರೆ. ಇನ್ನೇನು ಅವರು ಮದುವೆಯಾಗುತ್ತಾರೆ ಎನ್ನುವ ವೇಳೆಗೆ ಅಪಘಾತವೊಂದರಲ್ಲಿ ಸಾಯುತ್ತಾನೆ. ನಂತರ ಇದಕ್ಕಿದ್ದಂತೆ ಒಂದು ದಿನ ಒಬ್ಬರಲ್ಲ ಇಬ್ಬರು ನಾಯಕರು ಪ್ರತ್ಯಕ್ಷವಾಗುತ್ತಾರೆ. ನಾಯಕಿಗೀಗ ಸಂದಿಗ್ಧ. ನಕಲಿ ನಾಯಕನ ಸಂಚು ಬಯಲಾಗಿ ನಾಯಕ ಅಜೇಯ ನೆನಿಸುತ್ತಾನೆ.

೯೯೪. ಕಿಲಾಡಿ ಅಳಿಯ

(೧೯೮೫/ವರ್ಣ/ಸಾಮಾಜಿಕ)
ಲಾ: ಚಂದ್ರಿಕಾ ಫಿಲಂಸ್
ಪ್ರೊ: ಉದಯ ಚಂದ್ರಿಕಾ
ನಿ: ವಿಜಯ್
ಸ.ನಿ: ಪಿ.ಜೆ. ಸುಧೀರ್, ಶ್ರೀನಿವಾಸರೆಡ್ಡಿ
ಅ: ಶಂಕರ್‌ನಾಗ್, ಗಾಯತ್ರಿ, ದಿನೇಶ್, ಮುಸುರಿ ಕೃಷ್ಣಮೂರ್ತಿ, ಸುಂದರಕೃಷ್ಣ ಅರಸ್, ಉದಯಚಂದ್ರಿಕಾ, ಸುಧೀರ್, ಕಮಿನೀಧರನ್, ಜಯಲಕ್ಷ್ಮಿ, ಹೇಮಾ
ಕ/ಚಿ.ಕ: ಎಂ.ಡಿ.ಸುಂದರ್
ಮಾ: ಕುಣಿಗಲ್ ನಾಗಭೂಷಣ್
ಗೀ: ಚಿ.ಉದಯಶಂಕರ್, ಆರ್.ಎನ್.ಜಯಗೋಪಾಲ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಜೇಸುದಾಸ್, ಪಿ.ಸುಶೀಲ
ಸಂ: ಪಿ.ವೆಂಕಟೇಶ್ವರರಾವ್
ಛಾ: ಮಹೇಂದ್ರ, ಆರ್.ಚಿಟ್ಟಿಬಾಬು
ಕಲೆ: ಸಿ.ಕೆ.ಜಾನ್
ಸ: ಸತ್ಯಂ
ಧ್ವ: (ಹಾ) ಪ್ರಸಾದ್ (ಮಾ) ಚಾಮುಂಡೇಶ್ವರಿ
ನೃ: ಚಿನ್ನಿಪ್ರಕಾಶ್
ಸಾ: ವೈ.ಶಿವಯ್ಯ
ವ: ಅಪ್ಪಾರಾವ್
ಪ್ರ: ವೀರರಾಜು
ಸ್ಟು: ಕಂಠೀರವ, ಅಭಿಮಾನ್
ಕ.ಸಾ: ತನ್ನನ್ನು, ತನ್ನ ಮಗಳನ್ನು ಶತ್ರುಗಳ ಕಪಿಮುಷ್ಟಿಯಿಂದ ಪಾರು ಮಾಡಿದ ಯುವಕನನ್ನು ನಂಬಿ ತನ್ನ ಮಗಳನ್ನು ಕೊಟ್ಟು, ಮದುವೆ ಮಾಡಿ ಸಂಪೂರ್ಣ ಅಧಿಕಾರವನ್ನು ಅಳಿಯನ ಕೈಗೆ ಒಪ್ಪಿಸುತ್ತಾನೆ. ನಂತರ ಅಳಿಯನಾದವನು ಹಳೆಯ ದ್ವೇಷ ಸಾಧನೆಗಾಗಿ ಮಾವ, ಹೆಂಡತಿ, ಅತ್ತೆಯನ್ನು ಹಿಂಸಿಸುತ್ತಾನೆ. ಮಾವ ನಿರಪರಾಧಿ ಎಂದು ತಿಳಿದಾಗ ಶತ್ರುಗಳ ಸದೆಬಡಿದು ಕಿಲಾಡಿ ಅಳಿಯನೆನಿಸಿಕೊಳ್ಳುತ್ತಾನೆ.

೯೯೫. ಸೇಡಿನ ಹಕ್ಕಿ

(೧೯೮೫/ವರ್ಣ/ಸಾಮಾಜಿಕ)
ಲಾ: ವರಲಕ್ಷ್ಮೀ ಮೂವೀಸ್
ನಿ: ದೊರೆ-ಭಗವಾನ್
ಸ.ನಿ: ಬಲರಾಮ್
ಅ: ಅನಂತನಾಗ್, ಪ್ರಭಾಕರ್, ರಾಜೀವ್, ದಿನೇಶ್, ತಿಮ್ಮಯ್ಯ, ಲಕ್ಷ್ಮೀ, ಜಯಮಾಲಿನಿ, ಶಾಂತಮ್ಮ, ಕಮಿನೀಧರನ್
ಕ: ಟಿ.ಕೆ.ರಾಮರಾವ್
ಚಿ.ಕ/ಮಾ: ಬಿ.ಎಲ್.ವೇಣು
ಗೀ: ಆರ್.ಎನ್.ಜಯಗೋಪಾಲ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್. ಜಾನಕಿ
ಸಂ: ಪಿ.ಭಕ್ತವತ್ಸಲಂ
ಛಾ: ಚಿಟ್ಟಿಬಾಬು
ಕಲೆ: ನಜೀರ್
ಸ: ರಾಜನ್ - ನಾಗೇಂದ್ರ
ನೃ: ಉಡುಪಿ ಜಯರಾಂ
ಸಾ: ವೈ. ಶಿವಯ್ಯ
ವ: ಚಿನ್ನಯ್ಯ
ಪ್ರ: ರಾಮಕೃಷ್ಣ
ಹಾ: ೧) 'ಈ ಕಂಗಳು ಕವಿ ಮಾತಲೆ...', ೨) 'ಹೊಸ

ಯೌವ್ವನ ಮೂಡಿದೆ ಆಡಿದೆ...', ೩) 'ನಯನದ ತುಂಬ ನಿನ್ನದೇ ಬಿಂಬ
ಕ.ಸಾ: ನಿರಪರಾಧಿ ಯುವತಿ ತನಗೆ ಶಿಕ್ಷೆ ನೀಡಿದ ನ್ಯಾಯಾಧೀಶನ ಮೇಲೆ ಸೇಡು ತೀರಿಸಿಕೊಳ್ಳುತ್ತಾಳೆ. ಅವಳಿಗೆ ಈ ನಿಟ್ಟಿನಲ್ಲಿ ಅವಳ ಪ್ರೇಮಿ ಸಹಾಯ ಮಾಡುತ್ತಾನೆ.

೯೯೬. ತಾಯಿತಂದೆ

(೧೯೮೫/ವರ್ಣ/ಸಾಮಾಜಿಕ)
ಲಾ: ಯು.ಎಸ್.ಆರ್.ಪಿಕ್ಚರ್ಸ್
ಪ್ರೊ: ಯು.ಎಸ್.ಆರ್.ಮೋಹನರಾವ್
ನಿ: ವಿ. ಸತ್ಯನಾರಾಯಣ
ಸ.ನಿ: ಸತ್ಯಣ್ಣ, ಚಂದ್ರಮೋಹನ, ಎಂ.ವೆಂಕಟರಾವ್
ಅ: ಕಲ್ಯಾಣ್‌ಕುಮಾರ್. ಬಿ ಸರೋಜಾದೇವಿ, ಇಂದಿರಾ ಸತೀಶ್, ರಾಜಲಕ್ಷ್ಮಿ, ಎಂ.ಎಸ್.ಲಕ್ಷ್ಮೀದೇವಿ, ದಿನೇಶ್, ಸಿ.ಆರ್.ಸಿಂಹ, ರವಿಚಂದ್ರ
ಕ: ಪರಚೂರಿ ಬ್ರದರ್ಸ್
ಮಾ/ಗೀ: ಚಿ.ಉದಯಶಂಕರ್
ಗಾ: ಪಿ.ಸುಶೀಲ, ಎಸ್.ಜಾನಕಿ, ಎಸ್.ಪಿ.ಬಾಲಸುಬ್ರಹ್ಮಣ್ಯಂ, ರಾಜ್‌ಸೀತಾರಾಮ್, ಎ.ಎಂ.ಕೃಷ್ಣಮೂರ್ತಿ
ಸಂ: ಮುರಳಿ ರಾಮಯ್ಯ
ಛಾ: ಆರ್.ಕೆ.ರಾಜು
ಕಲೆ: ಪ್ರಕಾಶ್‌ರಾವ್
ಸ: ಟಿ.ಚಲಪತಿರಾವ್
ಧ್ವ: (ಹಾ) ಜಿ.ಬಾಬು, ರಾಜಗೋಪಾಲ್ (ಮಾ) ಸತೀಶ್ ಜಿ.ಬಾಬು
ನೃ: ರಾಜು
ಸಾ: ರಾಜಾರಾಮ್
ವ: ಕುಮಾರ್
ಪ್ರ: ರೇಲಂಗಿ ಸತ್ಯಂ, ಸುಬ್ರಹ್ಮಣ್ಯಂ, (ಕೇಶ : ದೀಪ, ಸುಶೀಲ)
ಸ್ಟು: ಶಾರದ, ಎ.ವಿ.ಎಂ, ವಾಹಿನಿ, ಅರುಣಾಚಲಂ
ಹಾ: ೧) 'ತಾಯಿ ತಂದೆ ಗುರುವೆ ...'
ಕ.ಸಾ: ಹೆತ್ತವರು ಮಕ್ಕಳನ್ನು ಸಲಹಲು ಪಡಬಾರದ ಕಷ್ಟ ಪಡುತ್ತಾರೆ. ಆದರೆ ಆ ಮಕ್ಕಳು ಬೆಳೆಯುತ್ತಾ ಹೋದಂತೆ ತಂದೆ-ತಾಯಿಗಳನ್ನು ಕಡೆ ಗಾಣಿಸುತ್ತಾರೆ. ತಾಯಿ, ತಂದೆ, ಮಕ್ಕಳ ಸಂಬಂಧಗಳನ್ನು ಸವಿವರವಾಗಿ ಚಿತ್ರಿಸುವ ಕಥೆ.

೯೯೭. ಜ್ವಾಲಾಮುಖಿ

(೧೯೮೫ ವರ್ಣ ಸಾಮಾಜಿಕ)
ಲಾ: ಕಾತ್ಯಾಯಿನಿ ಸಿನಿ ಆರ್ಟ್ ಕಂಬೈನ್ಸ್
ಪ್ರೊ: ಎಸ್.ಎ ಚಿನ್ನೇಗೌಡ, ಎಸ್.ಎ.ಶ್ರೀನಿವಾಸ್
ನಿ: ಸಿಂಗೀತಂ ಶ್ರೀನಿವಾಸರಾವ್
ಸ.ನಿ: ಎಂ.ಆರ್.ಪ್ರಕಾಶ್, ಎ.ಗೋವಿಂದರಾಜ್
ಅ: ರಾಜಕುಮಾರ್, ಗಾಯತ್ರಿ, ಕೆ.ಎಸ್.ಅಶ್ವತ್, ತೂಗುದೀಪ ಶ್ರೀನಿವಾಸ್, ಮುಖ್ಯಮಂತ್ರಿ ಚಂದ್ರು, ಲೀಲಾವತಿ, ಅದವಾನಿ ಲಕ್ಷ್ಮೀದೇವಿ, ವಿಜಯಲಕ್ಷ್ಮೀ, ಹೊನ್ನವಳ್ಳಿ ಕೃಷ್ಣ, ಬ್ರಹ್ಮಾವರ್, ಭೀಮರಾವ್, ಬಬಿತಾ, ಸುಜಾತ, ಶಿವರಾಂ, ಶಿವಪ್ರಕಾಶ್, ಮೈಸೂರು ಲೋಕೇಶ್, ತಿಮ್ಮಯ್ಯ, ಹನುಮಂತಾಚಾರ್, ಮೂಗೂರು ಪಿ. ಗುರು
ಕ: ವಿಜಯ ಸಾಸನೂರ್ ಅವರ ಕಾದಂಬರಿ.
ಚಿ.ಕ: ಸಿಂಗೀತಂ ಶ್ರೀನಿವಾಸರಾವ್
ಮಾ/ಗೀ: ಚಿ।ಉದಯಶಂಕರ್
ಗಾ: ರಾಜಕುಮಾರ್, ಎಸ್.ಜಾನಕಿ, ಬೆಂಗಳೂರು ಲತಾ
ಸಂ: ಪಿ.ಭಕ್ತವತ್ಸಲಂ
ಛಾ: ಬಿ.ಸಿ.ಗೌರಿಶಂಕರ್
ಕಲೆ: ಪೇಕೇಟಿ ರಂಗ
ಸ: ಎಂ.ರಂಗರಾವ್
ಧ್ವ: (ಹಾ) ಪಾಂಡುರಂಗನ್ (ಮಾ) ಗೋವಿಂದಸ್ವಾಮಿ
ಸಾ: ಸ್ವಾಮಿ
ವ: ವೆಂಕಟರಾವ್, ಆಂಜನೇಯ ರಾವ್, ಬಾಬು
ಪ್ರ: ದೊರೆಸ್ವಾಮಿ ನಾಯ್ಡು, ವಿಶ್ವನಾಥ್, ಮೂಗೂರು ಗುರು (ಕೇಶ: ನಾಗೇಶ್ವರರಾವ್)
ಸ್ಟು: ಎ.ವಿ.ಎಂ, ವಾಹಿನಿ
ಹಾ: ೧) 'ಏಕೊ ಏನೊ ಈ ನನ್ನ ಮನವು...', ೨) 'ಹೇಳುವುದು ಒಂದು ಮಾಡುವುದು ಇನ್ನೊಂದು...', ೩) 'ನೋಡಿ ನೋಡಿ ಎಲ್ಲ ನೋಡಿ...', ೪) 'ಬಾಳೀ ಪ್ರೇಮಗೀತೆ ನಲ್ಲ ನಲ್ಲೆ ಸೇರಿದಾಗ...',
ಕ.ಸಾ: ನಾಯಕ, ನಾಯಕಿ ಪತ್ರಕರ್ತರು. ಅನ್ಯಾಯವನ್ನು ಖಂಡಿಸುವ ನಾಯಕ ಈ ನಿಟ್ಟಿನಲ್ಲಿ ಹಲವಾರು ದುಷ್ಟರ ಹಗೆತನವನ್ನು ಕಟ್ಟಿಕೊಳ್ಳಬೇಕಾಗುತ್ತದೆ. ಇದೇ ವೇಳೆಗೆ ನಾಯಕಿ ರಹಸ್ಯ ಪತ್ತೇದಾರಿಣಿ ಎಂದು ತಿಳಿದು ಬರುತ್ತದೆ. ನಾಯಕ ದುಷ್ಟರನ್ನು ಸದೆ ಬಡಿದ.

೯೯೮. ಪಿತಾಮಹ

(೧೯೮೫ ವರ್ಣ/ಸಾಮಾಜಿಕ)
ಲಾ: ಸಿಂಗ್ ಬ್ರದರ್ಸ್

ಪ್ರೊ: ಸಂಗ್ರಾಮ್‌ಸಿಂಗ್, ಜೈರಾಜ್‌ಸಿಂಗ್
ನಿ: ಕೆ.ಎಸ್.ಎಲ್.ಸ್ವಾಮಿ (ರವೀ)
ಅ: ರಾಜೇಶ್, ಉದಯಕುಮಾರ್, ರವಿಚಂದ್ರನ್, ವಿಜಯಲಕ್ಷ್ಮೀ ಸಿಂಗ್, ತೂಗುದೀಪ ಶ್ರೀನಿವಾಸ್, ಸುಂದರಕೃಷ್ಣ ಅರಸ್, ಅನು, ಪ್ರಶಾಂತಿನಾಯಕ್, ಕೋಕಿಲ, ಜೈಜಗದೀಶ್, ಧೀರೇಂದ್ರ ಗೋಪಾಲ್, ಜಯಕುಮಾರ್, ಸಾಯಿಕುಮಾರ್, ಮೈಸೂರು ಲೋಕೇಶ್, ಅರಿಕೇಸರಿ, ಜಯವರ್ಧನ್, ಅಶ್ವತ್ಥನಾರಾಯಣ.
ಕ: 'ವಿಜೇತ' ಹಿಂದಿ ಚಿತ್ರದ ಪುನರವತರಣಿಕ
ಮಾ/ಗೀ: ಚಿ.ಉದಯಶಂಕರ್
ಸಂ: ವಿ.ಪಿ.ಕೃಷ್ಣನ್
ಛಾ: ಡಿ.ವಿ.ರಾಜಾರಾಂ
ಕಲೆ: ವೆಂಕಟರಾಮಯ್ಯ
ಸ: ಎಂ.ರಂಗರಾವ್
ನೃ: ಚಿನ್ನಿಪ್ರಕಾಶ್
ಸಾ: ಸ್ವಾಮಿ
ವ: ಜಿ. ವೆಂಕಟೇಶ್
ಪ್ರ: ಮಾಯೀಮ್
ಹಾ: ೧) 'ಅಂಗೈಲಿರುವ ರೇಖೆ ...', ೨) 'ಮರೆಯದಿರು ಆ ಶಕ್ತಿಯ ...' ೩) 'ಕುಡಿ ಬಾ...'
ಕ.ಸಾ: ಇಬ್ಬರು ರೈಲ್ವೆಯಲ್ಲಿ ಕೆಲಸ ಮಾಡುತ್ತಿದ್ದ ಆತ್ಮೀಯ ಗೆಳೆಯರು. ಒಬ್ಬ ದೇವರಲ್ಲಿ ಅತಿಯಾದ ನಂಬಿಕೆಯುಳ್ಳವನಾದರೆ ಮತ್ತೊಬ್ಬ ದೇವರನ್ನು ಕಂಡರೆ ಆಗದವನು. ತಾನು ಮಾಡಿದ ತಪ್ಪಿಗಾಗಿ ಶಿಕ್ಷೆ ಅನುಭವಿಸುವ ವ್ಯಕ್ತಿ ದೇವರಲ್ಲಿ ವಿಮುಖನಾಗಿ, ಭೂಗತ ದೊರೆಯಾಗುತ್ತಾನೆ. ಮೊಮ್ಮಗನಿಗೆ ತಾತ ಭೂಗತ ದೊರೆ ಎಂದು ಗೊತ್ತಾದಾಗ ಸಿಡಿದು ಹೊರಬರುತ್ತಾನೆ. ಹೊರಬಂದು ಪ್ರಾಣತ್ಯಾಗ ಮಾಡಿ ಪಿತಾಮಹನೆನಿಸಿಕೊಳ್ಳುತ್ತಾನೆ.

೯೯೯. ಕುಂಕುಮ ತಂದ ಸೌಭಾಗ್ಯ

(೧೯೮೫/ವರ್ಣ/ಸಾಮಾಜಿಕ)
ಲಾ: ವಿಠಲ್ ಮೂವೀಸ್
ಪ್ರೊ: ಕೆ.ವಿಠಲ್‌ಕುಮಾರ್
ನಿ: ಎ.ವಿ.ಶೇಷಗಿರಿರಾವ್
ಸ.ನಿ: ಶಿವರಾಮ್, ಪರಮೇಶ್ ಕಾರ್ತಿಕ್
ಅ: ಶ್ರೀನಾಥ್, ಆರತಿ, ಚರಣ್‌ರಾಜ್, ಮಹಾಲಕ್ಷ್ಮೀ, ವಜ್ರಮುನಿ, ರತ್ನಾಕರ್, ಜೂನಿಯರ್ ನರಸಿಂಹರಾಜು, ಶಿವರಾಂ, ಮುಸುರಿ ಕೃಷ್ಣಮೂರ್ತಿ, ಸಿಲ್ಕ್‌ಸ್ಮಿತಾ, ಅನುರಾಧ, ಆರ್.ಎನ್.ಜಯಗೋಪಾಲ್
ಕ: ಕೆ.ವೆಂಕಟರಾಮ ರಾಜು
ಚಿ.ಕ: ಕೆ.ವಿಠಲ್‌ಕುಮಾರ್
ಮಾ: ಕುಣಿಗಲ್ ನಾಗಭೂಷಣ್
ಗೀ: ಚಿ.ಉದಯಶಂಕರ್, ಆರ್.ಎನ್.ಜಯಗೋಪಾಲ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್.ಜಾನಕಿ
ಸಂ: ವೆಂಕಟೇಶ್ವರರಾವ್
ಛಾ: ಆರ್.ಚಿಟ್ಟಿಬಾಬು
ಕಲೆ: ರಾಮಚಂದ್ರಸಿಂಗ್
ಸ: ಎಂ.ರಂಗರಾವ್
ಧ್ವ: (ಹಾ) ಎಸ್.ಪಿ. ರಾಮನಾಥನ್ (ಮಾ) ಗೋವಿಂದಸ್ವಾಮಿ
ನೃ: ಸಂಪತ್, ತಾರಾ
ಸಾ: ಜೈದಿ ರಾಜು
ವ: ನಾಗರಾಜ್, ವೀರರಾಜ್
ಪ್ರ: ವೀರಸ್ವಾಮಿ, ರಾಜಗೋಪಾಲ್, ಕೃಷ್ಣರಾವ್

ಸ್ಟು: ಪ್ರಸಾದ್, ಎ.ವಿ.ಎಂ, ವಾಹಿನಿ, ಅರುಣಾಚಲಂ, ಸತ್ಯ
ಹಾ: ೧) 'ಪ್ರೇಮ ಪ್ರೇಮ ನಿನ್ನಲ್ಲೇ ಆಸೆಯು...', ೨) 'ಭಜಗೋವಿಂದಂ ಬೇಕೇ ಬೇಕು ನಿನ್ನ ಜೊತೆ...', ೩) 'ಗುಂ ತನಕ್ಕುಂ ಬರಿಮಾತು ಸಾಕು...'. ೪) 'ಅನುರಾಗ ಮೂಡಿದಾಗ ಸವಿಮಾತ ಹಾಡಿದಾಗ...',
ಸೆ: ೮೪-೧೮
ಕ.ಸಾ: ಹೆಂಡತಿ ಮುದ್ದಾದ ಮಗುವಿನ ಜೊತೆಗೆ ಸುಖಸಂಸಾರ ಮಾಡಿಕೊಂಡಿದ್ದ ವ್ಯಕ್ತಿ ತಾನು ಮಾಡದ ತಪ್ಪಿಗಾಗಿ ಶಿಕ್ಷೆಗೆ ಒಳಗಾಗುತ್ತಾನೆ. ನಂತರ ಸತ್ತು ಹೋದನೆಂದು ತಿಳಿದ ಗಂಡ ಬಂದು ನಿಂತಾಗ ಹೆಂಡತಿಗೆ ಕಳೆದುಹೋದ ನಿಧಿ ಸಿಕ್ಕಿದಂತಾಗುತ್ತದೆ. ಅಪರಾಧಿ ಕಾನೂನಿನ ಹಿಡಿತಕ್ಕೆ ಸಿಕ್ಕುತ್ತಾನೆ. ಸುಖಾಂತವಾಗುತ್ತದೆ.

೧೦೦೦. ಸ್ವಾಭಿಮಾನ

(೧೯೮೫/ವರ್ಣ/ಸಾಮಾಜಿಕ)
ಲಾ: ಎ.ಎನ್.ಎಸ್.ಪ್ರೊಡಕ್ಷನ್ಸ್
ಪ್ರೊ: ಎನ್.ನಾರಾಯಣ್, ಬಿ.ಎನ್.ಗಂಗಾಧರ್
ನಿ: ಡಿ.ರಾಜೇಂದ್ರಬಾಬು
ಸ.ನಿ: ಎಸ್. ಉಮೇಶ್
ಅ: ರವಿಚಂದ್ರನ್, ಮಹಾಲಕ್ಷ್ಮೀ, ಪ್ರಭಾಕರ್, ಉಮಾಶ್ರೀ, ಎನ್.ಎಸ್.ರಾವ್, ಶಿವರಾಂ, ಬಾಲಣ್ಣ, ಶಾಂತಮ್ಮ, ಜ್ಯೋತಿ, ಪ್ರಿಯಾಂಕಾ, ಭಟ್ಟಿ ಮಹದೇವಪ್ಪ
ಕ.ಮಾ: ಕೆ.ಎಸ್.ಸತ್ಯನಾರಾಯಣ
ಚಿ.ಕ: ಡಿ.ರಾಜೇಂದ್ರಬಾಬು
ಗೀ: ಆರ್.ಎನ್.ಜಯಗೋಪಾಲ್, ಚಿ.ಉದಯಶಂಕರ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್.ಜಾನಕಿ
ಸಂ: ಕೆ.ಬಾಲು
ಛಾ: ಡಿ.ಎಸ್.ಪ್ರಸಾದ್ ಬಾಬು
ಕಲೆ: ನಾಗೇಶ್ವರರಾವ್
ಸ: ಶಂಕರ್-ಗಣೇಶ್
ನೃ: ಚಿನ್ನಿ-ಪ್ರಕಾಶ್
ಸಾ: ಸಾಹುಲ್
ವ: ರಾಮನಾಥ್
ಪ್ರ: ಕೇಶವ
ಸ್ಟು: ಕಂಠೀರವ, ಪ್ರೀಮಿಯರ್
ಹಾ: ೧) 'ದೂರದ ಊರಿಂದ ಹಮ್ಮೀರ ಬಂದ...', ೨) 'ಒಂದು ಎರಡು ಮೂರು ಇನ್ನು ಬೇಕೆ...', ೩) 'ಬರುವಾಗ ಒಂಟಿ ನೀನು...', ೪) 'ಹಾಲು ಜೇನು ಸವಿದ ಹಾಗೆ...'.
ಕ.ಸಾ : ಅವಿದ್ಯಾವಂತ, ಯುವಕನೊಬ್ಬ ವಿದ್ಯಾವಂತೆಯಾದ ಹುಡುಗಿಯನ್ನು ಮೆಚ್ಚಿ ಮದುವೆಯಾಗುತ್ತಾನೆ. ನಂತರ ಸಂದರ್ಭ, ಪರಿಸರ, ತಪ್ಪು ಗ್ರಹಿಕೆಯಿಂದ ಹೆಂಡತಿಯನ್ನು ದೂರ ಮಾಡಿ ವಿಚ್ಛೇಧನಕ್ಕೆ ಮುಂದಾಗುತ್ತಾನೆ. ಹುಡುಗಿಯೂ ತನ್ನ ಸ್ವಾಭಿಮಾನಕ್ಕೆ ಪೆಟ್ಟಾಯಿತೆಂದು ವ್ಯಗ್ರಳಾಗುತ್ತಾಳೆ. ಕಡೆಗೆ ಇನ್ನೂ ಹುಟ್ಟದ ಮಗುವಿನಿಂದ ಇಬ್ಬರೂ ಒಂದಾಗುತ್ತಾರೆ.

೧೦೦೧. ದೇವರೆಲ್ಲಿದ್ದಾನೆ?

(೧೯೮೫/ವರ್ಣ/ಸಾಮಾಜಿಕ)
ಲಾ: ಶ್ರೀ ಚಾಮುಂಡಿ ಪ್ರೊಡಕ್ಷನ್ಸ್
ಪ್ರೊ: ಶ್ರೀಮತಿ ಗೌರಮ್ಮ
ನಿ: ವಿ.ಸೋಮಶೇಖರ್
ಸ.ನಿ: ಈಶ್ವರ್
ಅ: ಅಂಬರೀಷ್, ಕಲ್ಯಾಣ್‌ಕುಮಾರ್, ಗೀತಾ, ಉಮಾ ಶಿವಕುಮಾರ್, ಎನ್.ಎಸ್.ರಾವ್, ಮನದೀಪ್‌ರಾಯ್, ಬಿ.ಕೆ.ಶಂಕರ್, ವಜ್ರಮುನಿ, ಸುಧೀರ್, ಮುಖ್ಯಮಂತ್ರಿ ಚಂದ್ರು, ರಮಾಕಾಂತ್, ಪ್ರಕಾಶ್, ವಿಜಯಕುಮಾರ್, ಚಂದ್ರಲೇಖ, ಶಾಂತಮ್ಮ
ಕ: ವಿ.ಸೋಮಶೇಖರ್
ಚಿ.ಕ: ಭೀಮೇಶ್ವರರಾವ್
ಗೀ: ಚಿ.ಉದಯಶಂಕರ್
ಗಾ: ಎಸ್.ಪಿ. ಬಾಲಸುಬ್ರಹ್ಮಣ್ಯಂ, ಎಸ್. ಜಾನಕಿ
ಛಾ: ಹೆಚ್.ಜಿ.ರಾಜು
ಕ: ನಜೀರ್
ಸ: ಎಸ್.ಪಿ.ಬಾಲಸುಬ್ರಹ್ಮಣ್ಯಂ
ಸಾ: ವೈ.ಶಿವಯ್ಯ
ವ: ಸತ್ಯಂ
ಪ್ರ: ಕೇಶವ

ಕ.ಸಾ.: ಮಕ್ಕಳಿಲ್ಲದ ದಂಪತಿಗಳಿಗೆ ಒಂದು ಗಂಡುಮಗುವಾಗುತ್ತದೆ. ಅವರ ಆಕಸ್ಮಿಕವೊಂದರಲ್ಲಿ ಮಗು ಸಾಯುತ್ತದೆ. ತಾಯಿ ಮನೋರೋಗಿಯಾಗುತ್ತಾಳೆ. ಮನೆಯ ಕೆಲಸದಾಳು ಸತ್ತ ಮಗುವಿನ ಪ್ರತಿರೂಪದಂತೆ ಮತ್ತೊಂದು ಮಗುವನ್ನು ಕರೆತರುತ್ತಾನೆ. ಆ ಮಗು ಆತನ ಮಗಳಮ್ಮ. ಎರಡು ಮಕ್ಕಳ ತಂದೆ ಒಂದೇ ಎಂಬ ಸತ್ಯ ತಿಳಿಯಲು ಕೆಲಸದವನ ಮಗಳ ತ್ಯಾಗದೊಂದಿಗೆ ಸಂಕಷ್ಟ ದೂರವಾಗುತ್ತದೆ.

೧೦೦೨. ವಜ್ರಮುಷ್ಠಿ

(೧೯೮೫/ವರ್ಣ ಸಾಮಾಜಿಕ)
ಲಾ: ಮೋಹನ ಮುರಳಿ ಪ್ರೊಡಕ್ಷನ್ಸ್
ಪ್ರೊ: ಕೃಷ್ಣರಾಜು
ನಿ: ಹೆಚ್.ಆರ್.ಭಾರ್ಗವ
ಅ: ಶಂಕರ್‌ನಾಗ್, ಎಂ.ಪಿ.ಶಂಕರ್, ವಜ್ರಮುನಿ, ಮುಖ್ಯಮಂತ್ರಿ ಚಂದ್ರು, ಧೀರೇಂದ್ರ ಗೋಪಾಲ್, ಶಕ್ತಿ ಪ್ರಸಾದ್, ಪಿ.ಕೃಷ್ಣರಾಜ್, ಮುಸುರಿ ಕೃಷ್ಣಮೂರ್ತಿ, ಚರಣ್‌ರಾಜ್, ದಿನೇಶ್, ಮಾ|ಅರ್ಜುನ್, ಆರತಿ, ಅನುರಾಧ
ಕ/ಚಿ.ಕ/ಮಾ: ಸೋಮಶೇಖರ್
ಗೀ: ಚಿ.ಉದಯಶಂಕರ್, ದೊಡ್ಡರಂಗೇಗೌಡ, ಶ್ಯಾಮ ಸುಂದರ ಕುಲಕರ್ಣಿ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್.ಜಾನಕಿ
ಸಂ: ಎಸ್.ಎಂ.ವಿಕ್ಟರ್
ಛಾ: ಆರ್.ಮಧುಸೂದನ್
ಕಲೆ: ಕೇಶವ ರಾವ್
ಸ: ಸತ್ಯಂ
ಸಾ: ಅಂಬೂರ್ ಬಾಬು
ವ: ವೆಂಕಟಸ್ವಾಮಿ
ಪ್ರ: ಅಪ್ಪಾರಾವ್
ಸ್ಟು: ಚಾಮುಂಡೇಶ್ವರಿ, ಕಂಠೀರವ

ಹಾ: ೧)'ತಾಳೆನು ನಾ ವಿರಹ...', ೨) 'ಮೈಯ್ಯ ಮೇಲೆ ಸೀರೆ ಇಲ್ಲಾ...', ೩)'ಎಲ್ಲಿದೆಯೊ ದೇವಾ ಎಲ್ಲಿದೆಯೊ...',
ಕ.ಸಾ: ನಿಷ್ಠಾವಂತ ಪೋಲೀಸ್ ಅಧಿಕಾರಿ ಕೂಡ ಕೊಲೆ ಮಾಡಿ, ಅಪರಾಧಿಯಾಗುವಂಥ ಸ್ಥಿತಿಯನ್ನು ಹೇಳುತ್ತದೆ. ಲೋಕದ ಕಣ್ಣಲ್ಲಿ ದುಷ್ಟರು ಮಾಡುವ ಅನ್ಯಾಯಗಳೆದುರು ಯಾವ ಸಾಕ್ಷಿಯೂ ಸಿಲ್ಲುವುದಿಲ್ಲ. ಪೋಲೀಸ್ ಅಧಿಕಾರಿ ಇವನ್ನೆಲ್ಲಾ ಹೊರತೆಗೆದ ಕಥೆ.

೧೦೦೩. ಭಯಂಕರ ಭಸ್ಮಾಸುರ

(೧೯೮೫/ವರ್ಣ/ಸಾಮಾಜಿಕ)
ಲಾ: ಪ್ರತಾಪ್ ಪ್ರೊಡಕ್ಷನ್ಸ್
ಪ್ರೊ: ಬಿ.ಮುರಳಿ
ನಿ: ಸಿ.ಎಸ್.ರಾವ್
ಅ: ಅಶೋಕ್, ಉದಯಕುಮಾರ್, ಅನಂತರಾಂ ಮಚ್ಚೇರಿ, ಮಂಜುಳಾ, ಪ್ರಮೀಳಾ ಜೋಷಾಯ್, ಹೇಮಾಚೌಧುರಿ, ಜೈಶ್ರೀ, ಸರಳಾ
ಕ/ಚಿ.ಕ/ಮಾ: ಕೌಟಿನ್ಯ
ಗೀ: ವಿಜಯನಾರಸಿಂಹ, ಆರ್.ಎನ್.ಜಯಗೋಪಾಲ್
ಸಂ: ವೆಂಕಟೇಶ್ವರರಾವ್
ಛಾ: ಬಾಬೂರಾವ್
ಸ: ಎಂ.ರಂಗರಾವ್
ಹಾ: ೧) 'ಸೀರೆ ಸೆರಗ ಬಿಡೋ...', ೨)'ಬಾರಾ ಜೊತೆಗಾರ ಯುವತಿಯ...', ೩)'ಇದು ನಿನ್ನ ಜೀವನದ...', ೪)'ಆಳಲೆಂದೇ ಹೆಣ್ಣಾಗಿ ಬಂದೆ...'
ಕ.ಸಾ: ಗೋಮುಖ ವ್ಯಾಘ್ರನಂತಿರುವ ಶ್ರೀಮಂತ. ಊರ ಹೆಣ್ಣುಗಳನ್ನೆಲ್ಲ ಅನುಭವಿಸಿ, ನೇಣು ಹಾಕುವಂಥ ದುಷ್ಟನೆಂದು ಮಗಳಿಗೆ ತಿಳಿಯಿತು. ಮಗಳೇ ತಂದೆ, ಮತ್ತವನ ದುಷ್ಟಕೂಟವನ್ನು ಮುಗಿಸಿದಳು.

೧೦೦೪. ತಾಯಿ ಮಮತೆ

(೧೯೮೫/ವರ್ಣ/ಸಾಮಾಜಿಕ)
ಲಾ: ಮೂಕಾಂಬಿಕಾ ಎಂಟರ್‌ಪ್ರೈಸಸ್
ಪ್ರೊ: ಹೆಚ್.ಟಿ.ಗಂಗರಾಜ್
ನಿ: ಬಿ.ಸುಬ್ಬರಾವ್



ಸ.ನಿ: ಎ.ಎಲ್.ಆಚಾರ್ಯ, ಎಸ್.ಶ್ರೀನಿವಾಸರಾವ್
ಅ: ಪ್ರಭಾಕರ್, ಶಾರದಾ, ರಾಜೀವ್, ಶಿವರಾಮ್, ರಾಜಾನಂದ್, ಸುಮಲತಾ, ವಜ್ರಮುನಿ, ಮಾ|ಸಂಜಯ್, ಮಾ|ಹರೀಶ್, ಮಾ|ಸುಧಾಕರ್, ಅನುರಾಧ, ಭೀಮರಾಜು, ಜಗ್ಗು, ವಿಜಯಕುಮಾರ್
ಚಿ.ಕ: ಆಂಜನೇಯ ಪುಷ್ಪಾನಂದ್
ಮಾ: ಕುಣಿಗಲ್ ನಾಗಭೂಷಣ್, ಗೋವಿಂದಸ್ವಾಮಿ
ಗೀ: ಚಿ.ಉದಯಶಂಕರ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ
ಸಂ: ಪಿ.ಭಕ್ತವತ್ಸಲಂ
ಛಾ: ಆರ್.ಮಧುಸೂದನ್
ಕಲೆ: ಕುಮರವಲ್ಲಿ ನಾಗೇಶ್ವರರಾವ್
ಸ: ಸತ್ಯಂ
ಧ್ವ: ಕೋಟೇಶ್ವರರಾವ್
ನೃ: ಉಡುಪಿ ಜಯರಾಂ
ಸಾ: ವೈ.ಶಿವಯ್ಯ
ವ: ರಾಮನಾಥನ್
ಪ್ರ: ಎಂ.ಎಸ್.ಕೇಶವ
ಸ್ಟು: ಪ್ರಸಾದ್, ವಾಹಿನಿ, ಎ.ವಿ.ಎಂ., ಸತ್ಯ, ವಿಜಯ ಲ್ಯಾಬ್
ವಿ: ಪ್ರಭಾಕರ್ ತ್ರಿಪಾತ್ರದಲ್ಲಿದ್ದರು
ಕ.ಸಾ: ತಂದೆಗೆ ಬೇಡವಾದ ಮಗು ಒಂದು ಅನಾಥಾಶ್ರಮಕ್ಕೆ ಸೇರಿತು. ಇತ್ತ ಆತನ ತಾಯಿಗೆ ಮತ್ತೊಂದು ಸುಂದರ ಗಂಡು ಮಗು ಹುಟ್ಟಿತು. ಕುರೂಪಿಯಾದ ಮಗನಿಗೂ ಹಾಗೂ ತಾಯಿಗೂ ತಾವು ತಾಯಿ ಮಗ ಎಂದು ಗೊತ್ತಾಗಿ ದುಃಖಿಸುತ್ತಾರೆ. ತನಗೆ ಸಿಗದ ತಾಯಿ ಮಮತೆಗಾಗಿ ಪರಿತಪಿಸುವ ಯುವಕ ಕಡೆಗೆ ತಮ್ಮನನ್ನು ಕಾಪಾಡುವ ಸಲುವಾಗಿ ತಾನೇ ಸಾಯುತ್ತಾನೆ.

೧೦೦೫. ಮರೆಯದ ಮಾಣಿಕ್ಯ

(೧೯೮೫/ವರ್ಣ/ಸಾಮಾಜಿಕ)
ಲಾ: ಜಯದೇವಿ ಮೂವೀಸ್
ಪ್ರೊ: ಶ್ರೀಮತಿ ಶಾರದಾ
ನಿ: ವಿಜಯ್
ಸ.ನಿ: ಶ್ರೀನಿವಾಸರೆಡ್ಡಿ, ಎ.ಎಲ್.ಆಚಾರ್ಯ
ಅ: ವಿಷ್ಣುವರ್ಧನ್, ಕೆ.ಆರ್.ವಿಜಯ, ಗೀತಾ, ಎನ್.ಎಸ್.ರಾವ್, ರವಿಚಂದ್ರ, ರಾಜಾನಂದ್, ಚೇತನ್‌ರಾಮರಾವ್, ಮುಸುರಿ ಕೃಷ್ಣಮೂರ್ತಿ, ಧೀರೇಂದ್ರಗೋಪಾಲ್, ವೇದಪ್ರದ, ಹರಿ
ಕ: ಶಾರದಾ
ಚಿ.ಕ: ಕೆ.ಸಿ.ಕೊಟ್ಟಾರಕರ
ಮಾ: ಕುಣಿಗಲ್ ನಾಗ್‌ಭೂಷಣ್
ಗೀ: ಆರ್.ಎನ್.ಜಯಗೋಪಾಲ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ರಾಜ್‌ಸೀತಾರಾಮ್, ವಾಣಿ ಜಯರಾಮ್, ಮಂಜುಳಾ, ಬೆಂಗಳೂರು ಲತಾ
ಸಂ: ವೆಂಕಟರಾಮನ್
ಛಾ: ವಿ.ಮನೋಹರ್
ಕಲೆ: ಬಾಲನ್
ಸ: ಶಂಕರ್ ಗಣೇಶ್
ನೃ: ಚಿನ್ನಿಪ್ರಕಾಶ್
ಸಾ: ಗೋಪಾಲ್ ಗುರುಕಳ್
ವ: ಕೆ.ಪ್ರಭಾಕರ್
ಪ್ರ: ಶ್ರೀನಿವಾಸ್, ರಾಮಮೂರ್ತಿ
ಸ್ಟು: ಚಾಮುಂಡೇಶ್ವರಿ, ಜೆಮಿನಿ
ಕ.ಸಾ.: ದುಷ್ಟ ಶಕ್ತಿಗಳ ಕುತಂತ್ರಕ್ಕೆ ಸಿಕ್ಕಿ ಬಲಿಯಾದ ಗೆಳೆಯನ ಸಾವಿಗೆ ಪ್ರತಿಕಾರ ತೆಗೆದುಕೊಳ್ಳುವ ನಾಯಕ ದುಷ್ಟರ ಪಾಲಿಗೆ ಸಿಂಹಸ್ವಪ್ನವಾಗುತ್ತಾನೆ. ಹೆತ್ತವರ ಪಾಲಿಗೆ ಮರೆಯದ ಮಾಣಿಕ್ಯವಾಗುತ್ತಾನೆ.

೧೦೦೬. ಕರಿನಾಗ

(೧೯೮೫/ವರ್ಣ/ಸಮಾಜಿಕ)
ಲಾ: ಬೀನಾ ಸಿನಿ ಕ್ರಿಯೇಷನ್ಸ್
ಪ್ರೊ: ದೇಚಮ್ಮ ಸುಬ್ಬಯ್ಯ , ಅನಿತಾ ಕೃಷ್ಣನ್.
ನಿ: ಬಸವರಾಜ್ ಕೆಸ್ತೂರ್
ಸ.ನಿ: ವಿ.ಆರ್. ಭಾಸ್ಕರ್
ಅ: ಶಂಕರ್‌ನಾಗ್, ವೆಣ್ಣಿರಾಡೈ ನಿರ್ಮಲ, ಸುಂದರ ಕೃಷ್ಣ ಅರಸ್, ದಿನೇಶ್, ಮುಸುರಿ ಕೃಷ್ಣಮೂರ್ತಿ, ಶರಪಂಜರ ಅಯ್ಯಂಗಾರ್, ಎನ್.ಎಸ್.ರಾವ್.ರಾಮಣ್ಣ ರೈ, ಬೇಬಿ ವೀಣಾ, ಬೀನಾಶ್ರೀ, ಎನ್.ಪಿ.ಮನೋಜ್, ವಿ.ಆರ್.ಭಾಸ್ಕರ್, ಸಿ.ಆರ್.ರಾಜು
ಕ: ಎಂ.ಮಧು.
ಚಿ.ಕ: ಬಸವಾರಾಜ್ ಕೆಸ್ತೂರ್.
ಮಾ: ಎನ್.ಎಸ್. ರಾವ್, ಭಂಗಿರಂಗ.
ಗೀ: ಬಸವರಾಜ್ ಕೆಸ್ತೂರ್.
ಗಾ: ಜಯಚಂದ್ರನ್, ಮಲೇಷಿಯಾ ವಾಸುದೇವನ್, ಎಸ್.ಜಾನಕಿ.ವಾಣಿಜಯರಾಂ, ರಮಣಿ.
ಸಂ: ಹರಿಹರಪುತ್ರನ್
ಛಾ: ಆರ್.ಆರ್.ರಾಜ್‌ಕುಮಾರ್
ಕಲೆ: ಆರ್.ಕೆ.ಸುಂದರಂ
ಸ: ಶಂಕರ್ ಗಣೇಶ್
ಧ್ವ: ಜೆ.ಜೆ.ಮಾಣಿಕ್ಯಂ. ಬಿ.ಶಿವರಾಮ್ (ಆರ್ಮುಗಂ)
ನೃ: ಉಡುಪಿ ಜಯರಾಂ, ದೇವಿ
ಸಾ: ಎಂ.ಸುಬ್ಬಯ್ಯ
ವ: ರಾಮು
ಪ್ರ: ಶ್ರೀನಿವಾಸ್.ಜಿ.ವೆಂಕಟೇಶ್
ಸ್ಟು: ಪ್ರೀಮಿಯರ್, ಅಭಿಮಾನ್
ಹಾ: ೧)'ಕಂದಮ್ಮ ನಗುವಾಗ ಚಂದಿರನು ನಗುತಾನ...', ೨)'ಬಂಗಾರದ ಎರಕ ಹೊಯ್ದು...', ೩)'ಮರದಾ ಮರೆಯಲ್ಲಿಯೇ...', ೪)'ಅಪ್ಪಾ ಮಾದಪ್ಪಾನೇ ಒಪ್ಪತ್ತು...',
ಕ.ಸಾ: ಕರಿನಾಗ ಮುಗ್ಧ - ಒರಟ. ನಿಷ್ಠಾವಂತ ಸೇವಕ . ಊರಿನವರ ಮೇಲೆ ದೌರ್ಜನ್ಯ, ಅತ್ಯಾಚಾರ ಎಸಗುವ ಚಿಕ್ಕ ಜಮೀನ್ದಾರನ ಪಾಲಿಗೆ ಸಿಂಹಸ್ವಪ್ನ. ಊರಿಗೆ ಬಂದ ವೈದ್ಯೆಯ ನೆರವಿನಿಂದ ಒಳ್ಳೆಯ ಕೆಲಸ ಮಾಡುತ್ತಾ, ಸ್ನೇಹಿತರನ್ನೆಲ್ಲ ಸಂಘಟಿಸಿ ಅನ್ಯಾಯದ ವಿರುಧ ಹೋರಾಡುತ್ತಾನೆ.

೧೦೦೭. ಶಬ್ದಗಳು

(೧೯೮೫/ಕಪ್ಪು-ಬಿಳುಪು /ಸಾಮಾಜಿಕ)
ಲಾ: ಶ್ರೀ ಬಹದ್ದೂರ್ ಆರ್ಟ್ಸ್
ಪ್ರೊ/ನಿ: ಎಂ.ಸುರೇಶ್ ದಾವಣಗೆರೆ



ಅ: ಅನಂತ್‌ನಾಗ್, ಧಾರವಾಡ್‌ಆನಂದ್, ಸುರೇಶ್, ಪ್ರದೀಪ್, ಮೀರಾ
ಕ/ಚಿ.ಕ/ಮಾ/ಗೀ: ಕೆ.ಟಿ. ಗಟ್ಟಿ.
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ
ಸಂ: ಉಮೇಶ್ ಕುಲಕರ್ಣಿ
ಛಾ: ಸಿಮಾಯ್ ಘೋಷ್
ಕಲೆ: ಎಂ.ವೆಂಕಟೇಶ ರಾವ್
ಸ: ರಾಜನ್ ನಾಗೇಂದ್ರ
ಸ್ಟು: ಚಾಮುಂಡೇಶ್ವರಿ
ಹಾ: ೧)'ರೂಪಿಣಿ ಓ ರೂಪಿಣಿ...', ೨)'ಜೀವನಾ.. ಕಾಲವ ಕವಲಿದೇ...'

೧೦೦೮. ಧ್ರುವತಾರೆ

(೧೯೮೫ / ವರ್ಣ / ಸಾಮಾಜಿಕ)
ಲಾ: ನಿರುಪಮಾ ಆರ್ಟ್ ಕಂಬೈನ್ಸ್
ಪ್ರೊ: ಎಸ್.ಎ.ಗೋವಿಂದರಾಜ್, ಎ.ಭರತ್‌ರಾಜ್
ನಿ: ಎಂ.ಎಸ್.ರಾಜಶೇಖರ್
ಅ: ರಾಜಕುಮಾರ್, ಗೀತಾ, ದೀಪಾ, ಬಾಲಕೃಷ್ಣ, ತೂಗುದೀಪ ಶ್ರೀನಿವಾಸ್, ಅಶ್ವತ್ಥ್, ರಾಜಾನಂದ್, ಶಿವರಾಂ, ಕೋಕಿಲ
ಕ: ವಿಜಯ ಸಾಸನೂರು
ಚಿ.ಕ/ಮಾ/ಹಾ: ಚಿ.ಉದಯಶಂಕರ್
ಗಾ: ಬೆಂಗಳೂರು ಲತಾ, ವಾಣಿ ಜಯರಾಂ, ರಾಜಕುಮಾರ್, ಎಸ್.ಜಾನಕಿ,
ಸಂ: ಭಕ್ತವತ್ಸಲಂ
ಛಾ: ಬಿ.ಸಿ.ಗೌರಿಶಂಕರ್
ಕಲೆ: ಪಿ.ರಂಗರಾವ್
ಸ: ಉಪೇಂದ್ರಕುಮಾರ್
ಸ್ಟು: ಚಾಮುಂಡೇಶ್ವರಿ,
ಹಾ: ೧)'ಆ ಮೋಡ ಬಾನಲ್ಲಿ ತೇಲಾಡುತಾ...', ೨)'ಆ... ರತಿಯೇ ಧರೆಗಿಳಿದಂತೇ...', ೩)'ಓ ನಲ್ಲೇ ಸವಿನುಡಿಯ ಹೇಳೇ...', ೪)'ನ್ಯಾಯವೆಲ್ಲಿ ಅಡಗಿದೇ?...',
ವಿ: ೧೯೮೫-೮೬ರ ರಾಜ್ಯ ಪ್ರಶಸ್ತಿ, ದ್ವಿತೀಯ ಅತ್ಯುತ್ತಮ ಚಿತ್ರ, ಅತ್ಯುತ್ತಮ ಕಥಾ ಲೇಖಕ: (ವಿಜಯ ಸಾಸನೂರು), ಅತ್ಯುತ್ತಮ ಛಾಯಾಗ್ರಾಹಕ (ಬಿ.ಸಿ ಗೌರಿಶಂಕರ್)
ಕ.ಸಾ: ತಾನು ಬಯಸುವಂತೆ ಚಿತ್ರಗಾರನಾಗಲು ಸಾಧ್ಯವಾಗದಿದ್ದರೂ ತಂದೆಯ ಒತ್ತಾಯದ ಮೇರೆಗೆ ಸಾಗರ್ ವಕೀಲನಾಗುತ್ತಾನೆ. ಜಿಲ್ಲಾಧಿಕಾರಿಯನ್ನು ಅಳಿಯನನ್ನಾಗಿ ಮಾಡಿಕೊಂಡು ಹಳ್ಳಿಗರ ಮೇಲೆ ದೌರ್ಜನ್ಯ ನಡೆಸುವ ಕಾಳಿಂಗನನ್ನು ಎದುರಿಸಿ ರೈತರ ಪರ ಹೋರಾಡುವ ಸಾಗರ್ ಜೈಲು ಸೇರುತ್ತಾನೆ. ಆದರ ತನ್ನ ಹೆಂಡತಿ ಸುಧಾ ರೈತ ಚಳವಳಿಯನ್ನು ಮುಂದುವರಿಸುವಂತೆ ಮಾಡುತ್ತಾನೆ. ಬಿಡುಗಡೆಯ ನಂತರ ಪ್ರಾಣವನ್ನು ಲೆಕ್ಕಿಸದೆ ರೈತರಿಗಾಗಿ ಹೋರಾಡುವ ಸಾಗರ್ ಧ್ರುವತಾರೆ ಎನಿಸಿಕೊಳ್ಳುತ್ತಾನೆ.

೧೦೦೯. ನಾನು ನನ್ನ ಹೆಂಡತಿ

(೧೯೮೫ / ವರ್ಣ / ಸಾಮಾಜಿಕ)
ಲಾ: ಶ್ರೀ ಈಶ್ವರಿ ಪ್ರೊಡಕ್ಷನ್ಸ್
ಪ್ರೊ: ಎನ್.ವೀರಾಸ್ವಾಮಿ
ನಿ: ಟಿ.ರಾಜೇಂದ್ರಬಾಬು

ಅ: ರವಿಚಂದ್ರನ್, ಊರ್ವಶಿ, ಎನ್.ಎಸ್.ರಾವ್, ಮುಖ್ಯಮಂತ್ರಿ ಚಂದ್ರು, ಲೀಲಾವತಿ, ಉಮಾಶ್ರೀ.
ಕ/ಚಿ.ಕ:ಎನ್.ಎಸ್.ರಾವ್.
ಮಾ/ಗೀ: ಹಂಸಲೇಖ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ
ಸಂ: ಬಾಲು
ಛಾ: ಆರ್.ಮಧುಸೂದನ್
ಕಲೆ: ನಾಗೇಶ್ವರ್‌ರಾವ್
ಸ: ಶಂಕರ್ ಗಣೇಶ್
ನೃ: ಚಿನ್ನಿಪ್ರಕಾಶ್
ಸ್ಟು: ಚಾಮುಂಡೇಶ್ವರಿ ಕಂಠೀರವ
ಹಾ: ೧)'ಇದು ಹೂವಿನಾ ಲೋಕವೇ...', ೨)'ಅಕ್ಕಿಪೇಟೆ ಲಕ್ಕಮ್ಮಾ...', ೩)'ಕರುನಾಡ ತಾಯಿ ...', ೪)'ಯಾರೇ ನೀನು ಚಲುವೇ...', ೫)'ರಾತ್ರಿ ಆಯ್ತು ಮಲಗೋಣ...'.
ಸೆ: ೮-೧೭
ಕ.ಸಾ: ಆಗಿನ ಸಮಸ್ಯೆ ನಿವಾರಿಸಿಕೊಳ್ಳಲು ಹೇಳುವ ಸುಳ್ಳೇ ವಾಸ್ತವವೇ ಆದಾಗ ಯುವಕನೊಬ್ಬ ಎದುರಿಸುವ ಘಟನಾವಳಿಗಳು. ಆಕಾಶವಾಣಿ ಕಲಾವಿದನಾಗಲು ನಗರಕ್ಕೆ ಬರುವ ಗಾಯಕನೊಬ್ಬ ಮನೆ ಬಾಡಿಗೆ ಹಿಡಿಯಲು ಮದುವೆಯಾಗಿರುವುದಾಗಿ ಸುಳ್ಳು ಹೇಳುತ್ತಾನೆ, ಆದರ ಅವನು ತನ್ನ ಹೆಂಡತಿ ಎಂದು ತೋರಿಸಿದ ಫೋಟೋದಲ್ಲಿದ್ದ ಹುಡುಗಿಯೇ ನಿಜವಾಗಿಯೂ ಹೆಂಡತಿಯೆಂದು ಬಂದು ಸೇರಿಕೊಳ್ಳುತ್ತಾಳೆ. ಅವಳನ್ನು ನಿರಾಕರಿಸುವಂತಿಲ್ಲ ಒಪ್ಪಿಕೊಳ್ಳಲು ಸಾಧ್ಯವೂ ಇರುವುದಿಲ್ಲ, ಇದೇ ಪೇಚಾಟಗಳು ನಡೆದು ಕೊನೆಗ ಅವಳೇ ಮನ ಮೆಚ್ಚಿದ ಸತಿಯಾಗಿತ್ತಾಳೆ.

೧೦೧೦ ಯೌವನದಾ ಸುಳಿಯಲ್ಲಿ

(೧೯೮೫ / ವರ್ಣ / ಸಾಮಾಜಿಕ)
ಲಾ: ಮೇನಕಾ ಪಿಕ್ಚರ್ಸ್
ಪ್ರೊ: ಟಿ.ಜನಾರ್ದನ್
ಅ: ಅಭಿನಯ, ಉಮಾಶ್ರೀ, ಶ್ಯಾಂ ಸುಂದರ್, ಮಂಜುಮಾಲಿನಿ
(ಹೆಚ್ಚಿನ ವಿವರಗಳು ಲಭ್ಯವಿಲ್ಲ)

೧೦೧೧. ನನ್ನ ಪ್ರತಿಜ್ಞೆ

(೧೯೮೫ / ವರ್ಣ / ಸಾಮಾಜಿಕ)
ಲಾ: ಮಕ್ಕಳ ತಿಲಕಂ ಪಿಕ್ಚರ್ಸ್
ಪ್ರೊ: ಪದ್ಮನಾಭಂ
ನಿ: ಕೆ.ಎಸ್.ಆರ್.ದಾಸ್.
ಸ.ನಿ: ಶಿವ, ಜಗನ್, ಹೆಚ್.ಆರ್.ರಂಗನಾಥ್
ಅ: ವಿಷ್ಣುವರ್ಧನ್, ವಜ್ರಮುನಿ, ಅಹಲ್ಯ, ಕಾಂಚನ, ಜಯಶ್ರೀ, ಲಕ್ಷ್ಮಿ, ಸುಲೋಚನಾ, ಮಲ್ಲೇಶ್ವರಿ
ಕ/ಚಿ.ಕ: ಕೆ.ಎಸ್.ಆರ್.ದಾಸ್
ಮಾ/ಗೀ: ಚಿ.ಉದಯಶಂಕರ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಪಿ.ಸುಶೀಲ, ವಾಣಿ

ಜಯರಾಂ, ರಾಜಕುಮಾರ್‌ಭಾರತಿ
ಸಂ: ಪಿ.ವೆಂಕಟೇಶ್ವರರಾವ್
ಛಾ: ಕಬೀರ್‌ಲಾಲ್
ಕಲೆ: ಎಂ.ಕೃಷ್ಣ
ಸ: ಸತ್ಯಂ
ನೃ: ಚಿನ್ನಿಪ್ರಕಾಶ್, ತರುಣ್
ಸಾ: ಮಾಧವನ್
ವ: ಕೃಷ್ಣ, ಬಡಾಸಾಬ್
ಪ್ರ: ಆರ್.ಗೋಪಿ, ಸೆಲ್ವರಾಜ್, ಶ್ರೀನಿವಾಸ್
ಹಾ: ೧)'ನ್ಯಾಯಕ್ಕೆ ತಲೆ ಬಾಗಿ..', ೨)'ನಾ ಕೊಟ್ಟಿರ ಕಲ್ಲಿನ ಕೋಟೆಯ..', ೩)'ಬೀಸುವ ಗಾಳಿ..', ೪)ಪ್ರೇಮಿಗಳು ಎಂದೂ..'
ಕ.ಸಾ: ತನ್ನ ತಂದೆಯ ಸಾವಿಗೆ ಕಾರಣವಾದ ಊರ ಗೌಡನಿಗೆ ಬುದ್ಧಿ ಕಲಿಸಲು ನಾಯಕ ಆತನ ಮಗಳ ಸಹಾಯ ತೆಗೆದುಕೊಳ್ಳುತ್ತಾನೆ. ಜಾಣತನದಿಂದ ಪ್ರತೀಕಾರ ತೆಗೆದುಕೊಳ್ಳುವ ನಾಯಕ ಆ ಮೂಲಕ ತಾಯಿಯ ಮನಸ್ಸಿಗೆ ನೆಮ್ಮದಿ ತರುವ ಸಾಹಸಮಯ ಕಥೆ.

೧೦೧೨. ಬೆಂಗಳೂರು ರಾತ್ರಿಯಲ್ಲಿ

(೧೯೮೫ / ವರ್ಣ / ಪತ್ತೆದಾರಿ)
ಲಾ: ಡಿ.ಕೆ.ಫಿಲಂಸ್
ಪ್ರೊ: ರೆಹಮತುಲ್ಲಾ ಶರೀಫ್

ನಿ: ಮಹಮ್ಮದ್ ಫಕ್ರುದ್ದೀನ್
ಸ.ನಿ: ಸಿ.ಸತ್ಯನ್ , ಶಶಿಕಿರಣ್
ಅ: ಶ್ರೀನಾಥ್, ರೂಪಾ ದೇವಿ, ಶಿವರಾಮ್, ಲೋಕನಾಥ್, ವಾಸುದೇವರಾವ್, ಸಿ.ಆರ್.ಸಿಂಹ, ಉಮೇಶ್, ಜೈಜಗದೀಶ್, ಜಯಮಾಲಿನಿ,
ಕ: ಇನಾಯತುಲ್ಲಾ ಖಾನ್
ಚಿ.ಕ: ಮೊಹಮ್ಮದ್ ಫಕ್ರುದ್ದೀನ್
ಮಾ: ಎಸ್.ಕೆ.ಕರೀಂಖಾನ್
ಗೀ: ಮೊಹಮ್ಮದ್ ಫಕ್ರುದೀನ್, ಕರೀಂಖಾನ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್.ಜಾನಕಿ, ಪಿ.ಸುಶೀಲ
ಸಂ: ಪಿ.ಭಕ್ತವತ್ಸಲಂ
ಛಾ: ಬಿ.ಸಿ.ಗೌರೀಶಂಕರ್
ಸ: ಪ್ರಭಾಕರ ಬದ್ರಿ
ಧ್ವ: (ಹಾ) ಕೋಟೀಶ್ವರ ರಾವ್, (ಮಾ) ಗೋವಿಂದಸ್ವಾಮಿ
ನೃ: ತಾರ-ಕೃಷ್ಣ
ಸಾ: ಹಾಸನ್ ರಘು
ವ: ವೀರರಾಜು
ಪ್ರ: ವೀರಾಸ್ವಾಮಿ
ಸ್ಟು: ಕಂಠೀರವ ಚಾಮುಂಡೇಶ್ವರಿ
ಹಾ: ೧) 'ಕುಹು ಕುಹು ಎನ್ನಾ ಕೋಗಿಲೆ...', ೨)'ಕನ್ನಡ

ನಾಡಿನ ಚೆಲುವಿನ ಆಗರ..', ೩)'ಜೀವ ನನ್ನ ಕಣಕಣ ಕಾಡುತಿದೆ...', ೪)'ತಾನಂ ತನನಂ...'.
ಕ.ಸಾ: ಒಂದು ರಾತ್ರಿಯಲ್ಲಿ ನಡೆಯುವ ಕೊಲೆ ಹಾಗೂ ಪತ್ತೇದಾರಿ ಅಧಿಕಾರಿಯೊಬ್ಬ ಜಾಣತನದಿಂದ ರಹಸ್ಯ ಭೇದಿಸುವ ಸಸ್ಪೆನ್ಸ್, ಥ್ರಿಲ್ಲರ್ ಕಥೆ.

೧೦೧೩ ಜೀವನಚಕ್ರ

(೧೯೮೫ / ವರ್ಣ / ಸಾಮಾಜಿಕ)
ಲಾ: ಕಲಾಕೃತಿ
ಪ್ರೊ: ಭಾರ್ಗವ ರಾಜಾರಾಂ
ನಿ: ಭಾರ್ಗವ
ಸ.ನಿ: ಫಣಿ ರಾಮಚಂದ್ರ



ಅ: ವಿಷ್ಣುವರ್ಧನ್, ರಾಧಿಕಾ, ವಿಜಯಕಾಶಿ, ಸರೋಜ, ರಮೇಶ್‌ಭಟ್, ಸಿ.ಆರ್. ಸಿಂಹ, ಸುಧೀರ್, ಉಮಾಶಂಕರ್, ಶಂಕರ್‌ರಾವ್, ಜಯಮಾಲಿನಿ, ಅನುರಾಧ, ಜಾನಕಿ, ಜಯಶ್ರೀ, ಬೆಮಲ್ ಸೋಮಣ್ಣ, ಶಂಕರ್‌ಪಾಟೀಲ್, ಶ್ರೀರಾಮಚಂದ್ರ, ಎಂ.ಎಸ್.ಕಾರಂತ್
ಕ: ಪ್ರಭಾಕರ್ ರಷ್ಟಿ
ಚಿ.ಕ/ಮಾ/ಗೀ: ಚಿ.ಉದಯಶಂಕರ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್.ಜಾನಕಿ, ವಾಣಿ ಜಯರಾಂ
ಸಂ: ವಿಕ್ಟರ್ ಯಾದವ್
ಛಾ: ಡಿ.ರಾಜಾರಾಂ
ಕಲೆ: ನಜೀರ್
ಸ: ರಾಜನ್-ನಾಗೇಂದ್ರ
ಧ್ವ: (ಹಾ) ಅನಂತು, (ಮಾ) ಜೆ. ಶೇಷಾದ್ರಿ
ನೃ: ಉಡುಪಿ ಜಯರಾಂ, ಸಂಪತ್
ಸಾ: ಸೂಪರ್ ಸುಬ್ಬರಾಯನ್
ವ: ನಾಗರಾಜ್, ಜಡಾಸಾಬ್, ಸುಬ್ಬಾರಾವ್
ಪ್ರ: ಎಂ.ಕೆ.ಶ್ರೀನಿವಾಸ್, ರಾಮಮೂರ್ತಿ
ಸ್ಥಿ: ಪ್ರಸಾದ್, ಅರುಣಾಚಲಂ, ಎ.ವಿ.ಎಂ.ಸತ್ಯ
ಹಾ: ೧) 'ಆನಂದ ಆನಂದ ಆನಂದವೇ ನೀ ತಂದಾ ಪ್ರೀತಿಯಿಂದಾ...', ೨)'ನನ್ನವರು ಯಾರೂ ಇಲ್ಲಾ...'
ಸೆ: ರೀಲು ೧೪, ಉದ್ದ ೪೩೦೫.೩೬, ೧೯-೦೯-೧೯೮೮
ಕ.ಸಾ: ತಂದೆಯ ಆಸ್ತಿಯನ್ನು ಧಿಕ್ಕರಿಸಿ ಪ್ರೀತಿಸಿದವನೊಂದಿಗೆ ಬಾಳುವ ನಾಯಕಿ ಒರಟನಾದ ನಾಯಕನನ್ನು ತಿದ್ದಿ ತೀಡಿ ಖ್ಯಾತ ಉದ್ಯಮಿಯನ್ನಾಗಿ ಮಾಡುತ್ತಾಳೆ. ಕಾಲಕ್ರಮದಲ್ಲಿ ಇವರಿಬ್ಬರಿಗೆ ಹುಟ್ಟಿದ ಮಗಳು ಅವರ ಹಾಗೆ ಪ್ರೀತಿಸಿ ಮನೆ ಮನಸ್ಸನ್ನು ಮುರಿದು ಹೋಗುತ್ತಾಳೆ. ತಂದೆಯನ್ನು ಜರಿಯುತ್ತಾಳೆ. ನೊಂದ ತಾಯಿ ಪ್ರಾಣಬಿಡುತ್ತಾಳೆ. ತಂದೆ ಸಮಸ್ತ ಆಸ್ತಿಯನ್ನು ಮಗಳ ಹೆಸರಿಗೆ ಬರೆದು ದೇಶಾಂತರ ಹೊರಡುತ್ತಾನೆ.

೧೦೧೪ ಅನುರಾಗ ಸ್ವರದಲ್ಲಿ ಅಪಸ್ವರ

(೧೯೮೫ / ವರ್ಣ / ಸಾಮಾಜಿಕ)
ಲಾ: ಎಸ್.ಡಿ.ಕಂಬೈನ್ಸ್
ಪ್ರೊ: ಎಸ್.ಅಶೋಕ್, ಎಸ್.ಆರ್.ಗೌಡ, ಎಂ.ಗೌಸ್
ನಿ: ವಿ.ರಾಜನ್

ಸ.ನಿ: ವಿ.ವಿ.ರಾಮನ್, ಹ.ಸೂ. ರಾಜಶೇಖರ್
ಅ: ಜಯಚಂದ್ರನ್, ಪದ್ಮನಾಭ ಅಯ್ಯರ್, ಅರಿಕೇಸರಿ, ರಮಾದೇವಿ, ಎಸ್.ಎ.ಅಶೋಕ್, ಕೇಸರಿಶಂಕರ್, ಶೋಭ, ಶ್ರೀವಾಣಿ, ನಯನ, ಕಾಂಚನಮಾಲ, ರಾಮ್‌ದೇವ್, ವಿ.ವಿ.ರಾಮನ್, ಮಂಜುಳಮ್ಮ, ಬೇಬಿಉಷಾ
ಕ/ಚಿ.ಕ/ಗೀ: ವಿ.ರಾಜನ್
ಮಾ: ವಿ.ನಾರಾಯಣಸ್ವಾಮಿ, ವಿ.ವಿ.ರಾಜನ್
ಗಾ: ಬೆಂಗಳೂರು ಗೋಪಿ, ವೆಂಕಟೇಶ್, ಜೆಂಪೆಟ್ ಮೋಹನ್, ಎಂ.ಜಿ.ಮುನಿರತ್ನಂ, ಬೆಂಗಳೂರು ಲೀಲಾ, ಟಿ.ಎನ್.ವಿರೂಪಾಕ್ಷ, ಕುಶಲ
ಸಂ: ಸುರೇಶ್ ಅರಸ್
ಛಾ: ಟಿ.ಎಲ್ಲಪ್ಪ
ಕಲೆ: ಮುಕ್ತಾರ್
ಸ: ಪ್ರೇಮ್ ಕುಮಾರ್
ಧ್ವ: ದಶರಥ್
ನೃ: ಮೈಸೂರ್ ಮೂರ್ತಿ
ವ: ಕುಪ್ಪುಸ್ವಾಮಿ
ಪ್ರ: ಶ್ಯಾಂ
ಸ್ಥಿ: ವಸಂತ
ಹಾ: ೧) 'ಉಯ್ಯಾಲೆ ಬೆಳ್ಳಿಯ ಮೋಡದಲ್ಲಿ...', ೨)'ತಯ್ಯಾರ ತಕ ಮಯೂರಿ...', ೩)'ಓ ಶಂಕರೀ ಶಿವ ಶಂಕರೀ...', ೪) 'ಬಾ ರಾಜ ಈ ಚೆಲುವೆ ನಿನಗಾಗಿ...', ೫)'ಆಸೆಯ ಚೆಲ್ಲಾಟ ಬಾ ಕಣ್ಣೀರ ತೂರೆಯಲಿ...',

೧೦೧೫ ಮಸಣದ ಹೂವು

(೧೯೮೫ / ವರ್ಣ / ಸಾಮಾಜಿಕ)
ಲಾ: ಅನುಗ್ರಹ ಮೂವಿ ಮೇಕರ್ಸ್
ಪ್ರೊ: ಎಸ್.ಪಿ.ಸರ್ವೋತ್ತಮ ಕಣಗಾಲ್
ನಿ: ಎಸ್.ಆರ್.ಪುಟ್ಟಣ್ಣಕಣಗಾಲ್
ಸ.ನಿ: ರಾಮಣ್ಣ, ಚಂದ್ರಹಾಸ ಆಳ್ವ, ರಾಮನಾಥ ಋಗ್ವೇದಿ
ಅ: ಜಯಂತಿ, ಅಂಬರೀಷ್, ಅಪರ್ಣ, ಲೋಕನಾಥ್, ಮುಖ್ಯಮಂತ್ರಿಚಂದ್ರು, ವಿಜಯಲಕ್ಷ್ಮಿಸಿಂಗ್, ಹೇಮಾ ಚೌಧುರಿ, ಶಿವಕುಮಾರ್
ಕ: ತ.ರಾ.ಸುಬ್ಬರಾವ್ ಕಾದಂಬರಿ
ಚಿ.ಕ: ಎಸ್.ಆರ್.ಪುಟ್ಟಣ್ಣಕಣಗಾಲ್
ಮಾ: ಟಿ.ಜಿ.ಅಶ್ವತ್ಥನಾರಾಯಣ
ಗೀ: ವಿಜಯನಾರಸಿಂಹ, ಎಸ್.ಆರ್.ಏಕ್ಕುಂಡಿ
ಗಾ: ಜಯಚಂದ್ರನ್, ವಾಣಿ ಜಯರಾಂ, ಎಸ್.ಪಿ.ಬಾಲಸುಬ್ರಹ್ಮಣ್ಯಂ
ಸಂ: ವಿ.ಪಿ.ಕೃಷ್ಣ
ಛಾ: ಎಸ್.ಮಾರುತಿ ರಾವ್
ಕಲೆ: ಅರುಣ್ ಡಿ.ಗೊಡಗಾಂವ್ಕರ್
ಸ: ವಿಜಯಭಾಸ್ಕರ್
ಧ್ವ: (ಹಾ) ಸಿ.ಡಿ.ವಿಶ್ವನಾಥ್, (ಮಾ) ಗೋವಿಂದಸ್ವಾಮಿ
ನೃ: ಪಿ.ಸಿ.ಸುಬ್ರಹ್ಮಣ್ಯಂ
ಸಾ: ಹಾಸನ್‌ರಘು
ವ: ವೆಂಕಟಸ್ವಾಮಿ
ಪ್ರ: ಕೆ.ಪಿ.ಜಯರಾಂ, ಕೃಷ್ಣ
ಸ್ಥಿ: ಕಂಠೀರವ
ಹಾ: ೧)'ಕನ್ನಡ ನಾಡಿನ ಕರಾವಳೀ...', ೨)'ಉಪ್ಪಿನಸಾಗರಕೂ..', ೩)'ಯಾವ ಕಾಣಿಕೆ ನೀಡಲಿ ನಿನಗೇ..
ವಿ: ಚಿತ್ರ ತಯಾರಿಕೆ ಮುಕ್ಕಾಲು ಭಾಗ ಮಾಡಿದಾಗ ಪುಟ್ಟಣ್ಣನವರ ಹಠಾತ್ ನಿಧನದಿಂದಾಗಿ ನಿರ್ದೇಶಕ ರವೀ ಚಿತ್ರದ ಉಳಿದ ಕೆಲಸವನ್ನು ಪೂರೈಸಿದರು. ೧೯೮೫ ಆ ಸಾಲಿನ ರಾಜ್ಯಪ್ರಶಸ್ತಿ : ಜಯಂತಿ (ಅತ್ಯುತ್ತಮ ನಟಿ), ಅಂಬರೀಷ್(ಅತ್ಯುತ್ತಮ ಪೋಷಕ ನಟ), ಟಿ.ಜಿ.ಅಶ್ವತ್ ನಾರಾಯಣ (ಅತ್ಯುತ್ತಮ ಸಂಭಾಷಣಾ ಕರ್ತೃ), ಎಸ್.ಮಾರುತಿರಾವ್ (ಅತ್ಯುತ್ತಮ ಛಾಯಾಗ್ರಾಹಕ), ಸಿ.ಡಿ.ವಿಶ್ವನಾಥ್ (ಅತ್ಯುತ್ತಮ ಧ್ವನಿಗ್ರಾಹಕ)
ಕ.ಸಾ: ಹಳ್ಳಿ ಹುಡುಗಿ ಪಾರ್ವತಿ ಕಾರಣಾಂತರದಿಂದ ವೇಶ್ಯಾವಾಟಿಕೆಗೆ ತಳ್ಳಲ್ಪಡುತ್ತಾಳೆ. ಅಲ್ಲಿರುವ ಒಬ್ಬೊಬ್ಬರದು ಒಂದೊಂದು ಕಥೆ. ಸಿಂಗಾರು, ಪಾರ್ವತಿಯನ್ನು ಮನಸಾರೆ ಪ್ರೀತಿಸುತ್ತಾನೆ. ಆದರೆ ಪಾರ್ವತಿಗೆ ಇನ್ನೂ ತಾನು ಪ್ರೀತಿಸಿದ ಹುಡುಗನ ಮೇಲೆ ನಂಬಿಕೆ. ಅವಳ ನಂಬಿಕೆ ಹುಸಿಯಾದಾಗ ಸಿಂಗಾರು ಮದುವೆಯಾಗುತ್ತೇನೆಂದು ಮಾತು ಕೊಟ್ಟರೂ ತಾನು ಯಾರಿಗೂ ಬೇಡದ ಮಸಣದ ಹೂವೆಂದು ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ.

೧೦೧೬ ಮಮತೆಯ ಮಡಿಲು

(೧೯೮೫ / ವರ್ಣ / ಸಾಮಾಜಿಕ)
ಲಾ: ಮಾಸ್ಟರ್ ಪ್ರೊಡಕ್ಷನ್ಸ್
ಪ್ರೊ: ಜಿ.ಚಂದುಲಾಲ್‌ಜೈನ್
ನಿ/ಚಿ.ಕ: ಈರಂಕಿ ಶರ್ಮ
ಸ.ನಿ: ರಮೇಶ್
ಅ: ಅಂಬರೀಷ್, ಸಂಧ್ಯಾ, ಗೀತ, ಶ್ರೀನಿವಾಸಮೂರ್ತಿ,

ಶಿವರಾಂ, ಸದಾಶಿವ ಬ್ರಹ್ಮಾವರ, ಭೀಮರಾವ್, ಶ್ರೀಶೈಲನ್
ಕ: ಅನುಸೂಯಾ ರಡ್ಡಿ ಅವರ ಕಾದಂಬರಿ
ಮಾ/ಗೀ: ಆರ್.ಎನ್.ಜಯಗೋಪಾಲ್
ಗಾ: ಜೇಸುದಾಸ್, ಪಿ.ಸುಶೀಲ, ವಾಣಿ ಜಯರಾಂ, ರಮೇಶ್, ಶಶಿರೇಖ
ಸಂ: ಡಿ.ವೆಂಕಟರತ್ನಂ
ಛಾ: ಬಿ.ಎಸ್.ಲೋಕನಾಥ್
ಕಲೆ: ಬಿ.ಎಸ್.ಕೇಶವರಾವ್
ಸ: ಎಂ.ಎಸ್.ವಿಶ್ವನಾಥನ್
ಧ್ವ: (ಹಾ) ಕೋಟೇಶ್ವರರಾವ್, ಸಂಪತ್ (ಮಾ) ಎ.ಗೋವಿಂದಸ್ವಾಮಿ
ನೃ: ಶೇಷು
ಸಾ: ಕರಾಟೆ ವಿಜಯ್
ವ: ಪಿ.ಕೊಂಡಯ್ಯ
ಪ್ರ: ಶ್ರೀನಿವಾಸ್, ಮಲ್ಲಿಕಾರ್ಜುನರಾವ್
ಸ್ಥಿ: ಕಂಠೀರವ
ಕ.ಸಾ: ನಾಯಕ ವೈದ್ಯ. ಆತನಿಗೊಬ್ಬ ಗೆಳೆಯ. ಇಬ್ಬರದು ಗಾಢ ಸ್ನೇಹ. ನಾಯಕ ಮೆಚ್ಚಿ ಮದುವೆಯಾದ ಹುಡುಗಿ ಪ್ರಸವದ ವೇಳೆ ಮಗುವಿಗೆ ಜನ್ಮವಿತ್ತು ಅಸುನೀಗುತ್ತಾಳೆ. ಅತ್ತ ನಾಯಕನ ಗೆಳೆಯನ ಪತ್ನಿ ಸತ್ತ ಮಗುವಿಗೆ ಜನ್ಮ ನೀಡುತ್ತಾಳೆ. ನಾಯಕ ವಿಧಿಯಿಲ್ಲದೆ ತನ್ನ ಮಗುವನ್ನು ಆಕೆಗೆ ನೀಡುತ್ತಾನೆ. ಆ ರಹಸ್ಯ ಅವನೊಬ್ಬನಿಗೆ ಮಾತ್ರ ಗೊತ್ತು. ಹಾಗಾಗಿ ನಾಯಕ ಆಗಾಗ ಆ ಮನೆಗೆ ಹೋಗುತ್ತಿರುತ್ತಾನೆ. ಇದರಿಂದ ಗೆಳೆಯ ಅವರಿಬ್ಬರ ಸಂಬಂಧದ ಬಗ್ಗೆ ತಪ್ಪು ತಿಳಿಯುತ್ತಾನೆ. ಬೇಸರಗೊಂಡ ನಾಯಕ

ಮುಚ್ಚು, ನಾಯಿ ಕಡಿದವರೂ ಚಿಕಿತ್ಸೆ ಪಡೆಯುವುದಿಲ್ಲ. ನಾಯಕ ಸಾಯುವುದರೊಂದಿಗೆ ಕಥೆ ಮುಗಿಯುತ್ತದೆ.

೧೦೧೭ ಶಿವಕೊಟ್ಟ ಸೌಭಾಗ್ಯ

(೧೯೮೫ / ವರ್ಣ / ಜಾನಪದ)

ಲಾ: ಸಂತೋಷ್ ಕಂಬೈನ್ಸ್

ಪ್ರೊ: ವಿ.ವರ್ಗೀಸ್

ನಿ/ಚಿ.ಕ: ಚಿತ್ರಬ್ರಹ್ಮ

ಅ: ಲೋಕೇಶ್, ರಾಜಾನಂದ್, ತ್ಯಾಗರಾಜ ಅರಸ್, ಡಿಂಗ್ರಿ

ನಾಗರಾಜ್, ಬಿ.ಸಿ. ವೆಂಕಟೇಶಪ್ಪ, ಬಿ.ಕೆ.ಶಂಕರ್, ಆರತಿ, ಜಯಂತಿ, ರೂಪಾ ಚಕ್ರವರ್ತಿ, ಶೋಭ, ಕೋಕಿಲ

ಕ/ಚಿ.ಕ/ಮಾ: ಚಿತ್ರಬ್ರಹ್ಮ

ಗೀ: ಚಿತ್ರಬ್ರಹ್ಮ, ಹುಣಸೂರು ಕೃಷ್ಣಮೂರ್ತಿ

ಗಾ: ಜಯಚಂದ್ರನ್. ಜೋಲಿಅಬ್ರಹಾಂ, ಪಿ.ಸುಶೀಲ, ಸುಲೋಚನ,

ಸಂ: ಪಿ.ರಾಜನ್

ಛಾ: ಕೆ.ಮಲ್ಲಿಕ್

ಕಲೆ: ಬಿ.ಎಸ್.ಕೇಶವರಾವ್

ಸ: ಟಿ.ಜಿ.ಲಿಂಗಪ್ಪ

ನೃ: ಉಡುಪಿ ಜಯರಾಂ

ಸಾ: ಸ್ವಾಮಿ

ವ: ಸುಬ್ಬಾರಾವ್

ಪ್ರ: ಮೈಸೂರು ಮಲ್ಲಿ

ಸ್ಟು: ಅಭಿಮಾನ್, ಕಂಠೀರವ

ಕ.ಸಾ: ಶಿವನ ಮಾನಸ ಪುತ್ರಿಯನ್ನು ಹಿಂಸಿಸಿದ್ದಕ್ಕಾಗಿ ಶಾಪಗ್ರಸ್ತನಾದ ವ್ಯಕ್ತಿ ಭೂಲೋಕಕ್ಕೆ ಬಂದು, ಅಲ್ಲಿ ಬೇಡರ ಮನೆಯಲ್ಲಿ ಬೆಳೆದು ರಾಜಕುಮಾರಿಯನ್ನು ಪ್ರೀತಿಸಿ ರಾಜನಿಂದ ಕಣ್ಣುಗಳನ್ನು ಕೀಳಿಸಿಕೊಂಡು ದುಃಖಿಸುವಾಗ ಪಾರ್ವತಿಯ ಕೋರಿಕೆಯಂತೆ ಶಿವ ಭೂಲೋಕಕ್ಕೆ ಬಂದು ಶಾಪದಿಂದ ಪರಿಹಾರವಾಗುವಂತೆ ಮಾಡುತ್ತಾನೆ. ಅಲ್ಲಿಗೆ ಭೂಲೋಕಕ್ಕೆ ಆತ ಬಂದ ಕಲಸ ಮುಗಿಯುತ್ತದೆ.

೧೦೧೮ ತುಳಸೀದಳ

(೧೯೮೫ / ವರ್ಣ / ವಾಮವಿದ್ಯೆ)

ಲಾ: ವಿವೇಕ್ ಸಿನಿ ಆರ್ಟ್ಸ್

ಪ್ರೊ: ಕೆ.ಎನ್.ಪದ್ಮಾಮೂರ್ತಿ

ನಿ: ವೇಮಗಲ್ ಜಗನ್ನಾಥರಾವ್

ಸ.ನಿ: ಬಿ.ರಾಮಮೂರ್ತಿ

ಅ: ಆರತಿ, ಶರತ್ ಬಾಬು, ಬಾಲಕೃಷ್ಣ, ಅರಸ್, ಸೀತಾರಾಮ್, ಬೇಬಿ ರೇಖಾ, ವಾಸುದೇವರಾವ್, ತಾರ (ಹೊಸಪರಿಚಯ), ಕೋಕಿಲ, ಸರಸ್ವತಿ, ಶಿವರಾಮ್, ರಾಜಾನಂದ್, ಉಮೇಶ್, ಮುಖ್ಯಮಂತ್ರಿ ಚಂದ್ರು, ಅರಿಕೇಸರಿ, ಜಿ.ಕೆ.ಗೋವಿಂದರಾವ್, ಮೈಸೂರುಲೋಕೇಶ್, ವೀರೇಂದ್ರನಾಥ್

ಕ: ಯಂಡಮೂರಿ ವೀರೇಂದ್ರನಾಥ್

ಚಿ.ಕ/ಮಾ: ವೇಮಗಲ್ ಜಗನ್ನಾಥ್

ಗೀ: ಚಿ.ಉದಯಶಂಕರ್

ಗಾ: ಪಿ.ಸುಶೀಲ, ಜಯಚಂದ್ರನ್

ಸಂ: ಸುಬ್ರಹ್ಮಣ್ಯಂ

ಛಾ: ಅಣ್ಣಯ್ಯ-ಮಲ್ಲಿಕ್

ಕಲೆ: ಆರ್.ಕೆ.ಮುಕ್ತಿಯಾರ್

ಸ: ಉಪೇಂದ್ರಕುಮಾರ್

ಧ್ವ: ದಶರಥ್

ವ: ಟಿ.ಎಸ್.ವಿಠಲ್‌ರಾವ್

ಪ್ರ: ಮಲ್ಲೇಶ್ ಹರ್ತಿ

ಸ್ಟು: ಕಂಠೀರವ, ಚಾಮುಂಡೇಶ್ವರಿ, ಪ್ರಸಾದ್

ವಿ: ೧೯೮೫-೮೬ರ ಸಾಲಿನ ರಾಜ್ಯಪ್ರಶಸ್ತಿ : ವಿಶೇಷ ತಂತ್ರಜ್ಞಾನ, ಬೇಬಿ ರೇಖಾ (ಅತ್ಯುತ್ತಮ ಬಾಲನಟಿ), ಮಲ್ಲೇಶ್‌ಹರ್ತಿ (ಪ್ರಸಾಧನ)

ಸೆ: ರೀಲು - ೧೪, ಉದ್ದ ೩೫೦೩.

ಕ.ಸಾ: ವಾಮಾಚಾರ, ಮಾಟ, ಮಂತ್ರ, ದೈವಶಕ್ತಿ ಮೊದಲಾದವುಗಳ ಸಂಗಮ. ಒಂದು ಮುಗ್ಧ ಹುಡುಗಿಯನ್ನು ತನ್ನ ಕಾರ್ಯಸಾಧನೆಗೆ ಬಳಸಿಕೊಳ್ಳಲು ಯತ್ನಿಸುವ ಮಾಂತ್ರಿಕ ಹಾಗೂ ಆ ಹುಡುಗಿಯನ್ನು ಬದುಕಿಸಿಕೊಳ್ಳಲು ಹೋರಾಡುವ, ದೈವ ಭಕ್ತರಾದ ತಂದೆ,ತಾಯಿಗಳ ಸುತ್ತ ಹೆಣೆದ ಕಥೆ.

೧೦೧೯ ನ್ಯಾಯದಕಣ್ಣು

(೧೯೮೫ / ವರ್ಣ / ಸಾಮಾಜಿಕ)

ಲಾ: ಶುಭ ಭೂಷಿಣಿ ಆರ್ಟ್ಸ್

ಪ್ರೊ: ಜಯಲಕ್ಷ್ಮಿ ಚಲುವ ಮೂರ್ತಿ

ನಿ: ಕೆ.ಸಿ.ಶ್ರೀಧರರಾಜ್

ಅ: ಅಶೋಕ್, ಲೋಕನಾಥ್, ಸುಂದರಕೃಷ್ಣ ಅರಸ್, ರಾಜಾನಂದ್, ಉಮೇಶ್, ಡಿಂಗ್ರಿನಾಗರಾಜ್, ವನಿತಾಶ್ರೀ,

ಪಂಢರಿಬಾಯಿ, ಕೋಕಿಲ. ಜಯಮಾಲಿನಿ

ಕ: ರಾಮಕೃಷ್ಣ

ಚಿ.ಕ/ಮಾ: ಕೆ.ಸಿ.ಶ್ರೀಧರರಾಜ್

ಗೀ: ದೊಡ್ಡರಂಗೇಗೌಡ, ಶ್ರೀ ರಾಮಕೃಷ್ಣ

ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ವನಿತಾಶ್ರೀ, ಕುಸ್ತೈಲಜ, ಎಸ್.ಜಾನಕಿ

ಸಂ: ಸುರೇಶ್ ಅರಸ್

ಛಾ: ಆರ್.ಪಿ.ವಿಜಯನ್

ಸ: ಆಟೋ ಬಾಲು

ನೃ: ಚಿನ್ನಿ ಪ್ರಕಾಶ್, ಸಂಪತ್

ಸಾ: ಹಾಸನ್ ರಘು

ಸ್ಟು: ವಸಂತ್, ಕಂಠೀರವ

ಹಾ: ೧) 'ನಿನ್ನ ಮಿಲನ ...', ೨) 'ಜೀವನಾ ಸುಖ ಪಯಣ...', ೩) 'ಬಾನ ಸೂರ್ಯ ಇದರತಾನೆ...', ೪) 'ಪ್ರೀತಿ ಹುಟ್ಟಿದೆ...

೧೦೨೦ ಹೆಂಡ್ತಿ ಬೇಕು ಹೆಂಡ್ತಿ

(೧೯೮೫ / ವರ್ಣ / ಸಾಮಾಜಿಕ)

ಲಾ: ಪ್ರಭಾತ್ ಪಿಕ್ಚರ್ಸ್

ಪ್ರೊ: ಹೆಚ್.ಎ.ನಾಗೇಂದ್ರಪ್ಪ

ನಿ: ಅನಿಲ್ ಆನಂದ್

ಸ.ನಿ: ವಿಜಯಕುಮಾರ್, ಸರಿಗಮ ವಿಜಿ, ಕಡಾಂಬಿ ಗೋಪಾಲನ್

ಅ: ಅನಂತ್‌ನಾಗ್, ದಿನೇಶ್, ಗಾಯತ್ರಿ, ಉಮಾಶ್ರೀ, ಶಶಿಕಲ, ಪ್ರಸಾದ್, ಅನಿಲ್, ಮಂದೀಪ್‌ರಾಯ್, ವಸುಂಧರ, ಸರಿಗಮವಿಜಿ, ಲಲಿತ, ಕುಸುಮ

ಕ: ಎಂ.ಡಿ.ರವೀಂದ್ರನಾಥ್(ನಗರ್‌ಕರ್)

ಚಿ.ಕ: ಅನಿಲ್‌ಆನಂದ್

ಮಾ: ದತ್ತಪ್ರಸಾದ್

ಗೀ: ಆರ್.ಎನ್.ಜಯಗೋಪಾಲ್, ಹೆಚ್.ವಿ.ನಾಗೇಂದ್ರಪ್ಪ

ಗಾ: ಜೇಸುದಾಸ್, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಸುರೇಂದ್ರ, ಎಸ್. ಜಾನಕಿ,

ಸಂ: ಎಸ್.ಮನೋಹರ್

ಛಾ: ದೇವಧರ್

ಕಲೆ: ಕೇಶವ, ಮುನಿರಾಜು, ಶಂಕರ, ಕೃಷ್ಣ

ಸ: ಎಂ.ರಂಗರಾವ್

ಧ್ವ: (ಹಾ) ತರಂಗಿಣಿ (ಮಾ) ಕೋದಂಡಪಾಣಿ

ನೃ: ಎಂ.ಕೆ.ಕೃಷ್ಣಕುಮಾರ್

ವ: ಚಿನ್ನಯ್ಯ

ಪ್ರ: ಪಿ.ವಿ.ಮಾಧವನ್

ಹಾ: ೧) 'ಬೇಲೂರ ಶಿಲೆಯ ಬೆಡಗು...', ೨) 'ಮೈಯೆಲ್ಲ ಜುಮ್ಮೆಂದು...', ೩) 'ಸಂಜೆ ಸೆರಗಲಿ ಮೋಹ ಅರಳುತಿದೆ..', ೪) 'ಬೆಳ್ಳಗಿದ್ರೂ ಪರವಾಗಿಲ್ಲ...

ಕ.ಸಾ: ತಾನು ಮದುವೆಯಾಗಬೇಕಾದ ಹುಡುಗಿ ಹೀಗೆ ಇರಬೇಕು ಹಾಗೆ ಹೀಗೆ ಎಂದು ಯೋಚಿಸುವ ನಾಯಕ. ಆತನ ಅಭಿರುಚಿಗೆ ಹೊಂದುವಂಥ ಹುಡುಗಿಯರಿಲ್ಲ. ಅದೊಂದು ನಿರಂತರ ಹುಡುಕಾಟ. ಹಾಸ್ಯಮಯ ಕಥಾವಸ್ತು.

೧೦೨೧ ನೀ ತಂದ ಕಾಣಿಕೆ

(೧೯೮೫ / ವರ್ಣ / ಸಾಮಾಜಿಕ)

ಲಾ: ದ್ವಾರಕೀಶ್ ಚಿತ್ರ

ಪ್ರೊ/ನಿ/ಕ/ಚಿ.ಕ: ದ್ವಾರಕೀಶ್

ಸ.ನಿ: ರಾಜಕಿಶೋರ್

ಅ: ವಿಷ್ಣುವರ್ಧನ್, ಗಿರೀಶ್ ಕಾರ್ನಾಡ್, ಜಯಸುಧ,

ಸತೀಶ್, ಸಿ.ಆರ್.ಸಿಂಹ, ವಾದಿರಾಜ್, ಸುಧೀರ್

ಮಾ: ಚಿ.ಉದಯಶಂಕರ್

ಗೀ: ಆರ್.ಎನ್.ಜಯಗೋಪಾಲ್, ಚಿ.ಉದಯಶಂಕರ್

ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಬಿ.ಆರ್.ಛಾಯ, ಉಪಾಗಣೇಶ್

ಸಂ: ಗೌತಮ್‌ರಾಜು

ಕಲೆ: ಕೆ.ಎಸ್.ವೇಣು

ಸ: ವಿಜಯಾನಂದ್

ನೃ: ಚಿನ್ನಿ ಪ್ರಕಾಶ್, ಸುರೇಖ
ಸಾ: ವೈ.ಶಿವಯ್ಯ
ಪ್ರ: ಬಿ.ವೀರರಾಜು, ಶ್ರೀನಿವಾಸ್, ಮೋಹನ್
ಹಾ: ೧)'ಕಣ್ಣಲ್ಲಿ ಪ್ರೀತಿ ಮನದಲ್ಲಿ ಪ್ರೀತಿ..', ೨)'ನೀ ನೀಡಿದ...
ಸೆ: ರೀಲು - ೧೪, ಉದ್ದ ೩೮೭೦, ೨೪ - ೧೨ - ೧೯೮೫
ಕ.ಸಾ: ಮಗನನ್ನು ಪ್ರೀತಿ ಆದರದಿಂದ ಕಾಣದ ತಂದೆ. ಬಾಲ್ಯದಿಂದಲೇ ಮದ್ಯವ್ಯಸನಿಯಾದ ನಾಯಕ. ಆತನ ಹಿತಚಿಂತಕನಾದ ಮನೆಕೆಲಸದ ಆಳು. ಈ ಮಧ್ಯೆ ಹುಡುಗ ಪ್ರಾಣಕ್ಕಿಂತ ಹೆಚ್ಚು ಪ್ರೀತಿಸುವ ಹುಡುಗಿ ಆಕೆ ಹಾಡುವವಳು ಎಂಬ ಕಾರಣಕ್ಕಾಗಿ ಅಪ್ಪನಿಂದ ತಿರಸ್ಕಾರ. ಹುಡುಗಿಯನ್ನು ಪಡೆಯಲು ಆತ ಮಾಡುವ ಪ್ರಯತ್ನಗಳು ಹುಡುಗಿಗಾಗಿ ನಾಯಕನೇ ಬದಲಾಗಿ ಗುಣವಂತನಾಗುತ್ತಾನೆ.

೧೦೨೨ ಹೊಸನೀರು

(೧೯೮೬ / ವರ್ಣ / ಸಾಮಾಜಿಕ)
ಲಾ: ಪಂಚಮ ಮೂವಿ ಮೇಕರ್ಸ್
ಪ್ರೊ: ಕೆ.ಎಸ್.ಸಚ್ಚಿದಾನಂದ, ಜಿ.ಪಿ.ರಾಮು, ಚಂದ್ರಕಲಾ ಶಿವಾನಂದ, ಲೀಲಾವತಿ ಚಂದ್ರಶೇಖರ್, ನಾಗರತ್ನ ಶಿವರಾಮು
ನಿ: ಕ.ವಿ.ಜಯರಾಮ್
ಸ.ನಿ: ಆನಂದ್, ನಾಗೇಶ್ ಕಂಪ್ಲಾಪುರ
ಅ: ಅನಂತ್‌ನಾಗ್, ಲೋಕನಾಥ್, ಮೋಹನ್‌ರಾಜ್, ಲೋಹಿತಾಶ್ವ, ಅಶೋಕ್ ಬಾದರದಿನ್ನಿ, ಸುಹಾಸಿನಿ, ಶಶಿಕಲ. ಪಂಢರಿಬಾಯಿ, ಶೋಭ
ಕ/ಮಾ: ಕೆ.ವಿ.ರಾಜು
ಚಿ.ಕ: ಕೆ.ವಿ.ಜಯರಾಂ
ಗೀ: ದೊಡ್ಡರಂಗೇಗೌಡ
ಗಾ: ಎಸ್.ಜಾನಕಿ, ರಾಜ್‌ಕುಮಾರ್‌ಭಾರತಿ, ವಾಣಿಜಯರಾಂ, ರಮೇಶ್, ಎಸ್.ಪಿ.ಬಾಲಸುಬ್ರಹ್ಮಣ್ಯಂ
ಸಂ: ಎಸ್.ಮನೋಹರ್
ಛಾ: ಬಿ.ಎಸ್.ಬಸವರಾಜ್
ಕಲೆ: ಮುದ್ದುಕೃಷ್ಣ
ಸ: ಜಿ.ಕೆ.ವೆಂಕಟೇಶ್
ಧ್ವ: (ಹಾ)ದಶರಥ್ (ಮಾ) ಕೋಟೇಶ್ವರರಾವ್
ನೃ: ಚಿನ್ನಿಪ್ರಕಾಶ್
ಸಾ: ವೈ.ಶಿವಯ್ಯ
ವ: ನಾಗರಾಜು, ಸಾಯಿ
ಪ್ರ: ಎಂ.ಕೆ.ರಾಮಕೃಷ್ಣ
ಹಾ: ೧) 'ನೀನೇ ನನ್ನ ಪ್ರೀತಿ ಹಕ್ಕಿ...', ೨) 'ನೀನೇ ಎಂದು ಪ್ರೇಮ ವೀಣೆ... ', ೩) ' ಕೊರೆಯುವ ಚಳಿಯಲಿ...', ೪) 'ಒಲವು ತಂದ ಬೆಸುಗೆ ಇಂದು...', ೫) 'ನಾವೆಲ್ಲ ಒಂದಾಗಿ...
ವಿ: ೧೯೮೫-೮೬ರ ರಾಜ್ಯಪ್ರಶಸ್ತಿ : ಪ್ರಥಮ ಅತ್ಯುತ್ತಮ ಚಿತ್ರ, ಅತ್ಯುತ್ತಮ ಸಂಗೀತ ನಿರ್ದೇಶಕ (ಜಿ.ಕೆ. ವೆಂಕಟೇಶ್), ಅತ್ಯುತ್ತಮ ನಟ (ಅನಂತ್‌ನಾಗ್)
ಸೆ: ರೀಲು - ೧೪ ಉದ್ದ ೪೩೦೭೪೮
ಕ.ಸಾ: ಸಂಪ್ರದಾಯಸ್ಥ ಮನೆಗೆ ಸೊಸೆಯಾಗಿ ಬರುವ ನಾಯಕಿ ಆಕೆ ಇಂಜಿನಿಯರಿಂಗ್ ಪದವೀಧರೆ. ಮಾನವಿಂದ ಕೆಲಸ ಮಾಡಲು ಆಸ್ತಿ. ಸಾಧಿಸಬೇಕೆಂಬ ಛಲದಿಂದ ನಾಯಕಿ ಮನೆ ಬಿಟ್ಟು ಹೊರಡುತ್ತಾಳೆ. ಹಿಡಿದ ಕೆಲಸ ಸಾಧಿಸಿ ಎಲ್ಲರಿಂದ ಹೊಗಳಿಸಿಕೊಳ್ಳುತ್ತಾಳೆ. ಅವಳ ಈ ಕಾರ್ಯದಲ್ಲಿ ನಾಯಕ ಅಪ್ರತ್ಯಕ್ಷವಾಗಿ ಬೆಂಗಾವಲಾಗಿ ನಿಲ್ಲುತ್ತಾನೆ.

೧೦೨೩ ಮಧುರಬಾಂಧವ್ಯ

(೧೯೮೬ / ವರ್ಣ / ಸಾಮಾಜಿಕ)
ಲಾ: ಮಯೂರ ಮೂವಿ ಮೇಕರ್ಸ್
ಪ್ರೊ: ಮಂಜುನಾಥ್
ನಿ: ಅಮೃತಂ
ಸ.ನಿ: ಕೆ.ಸೀತಾರಾಮ್
ಅ: ಅಂಬರೀಷ್, ಗೀತಾ, ತಾರಾ, ಜೈಜಗದೀಶ್, ಸುಧೀರ್, ಸರಿಗಮವಿಜಿ, ಜಯಪ್ರಕಾಶ್, ಬೇಬಿ ರೇಖ
ಕ: ಕೆ.ಎಸ್. ಸತ್ಯನಾರಾಯಣ
ಚಿ.ಕ: ಅಮೃತಂ
ಮಾ/ಗೀ:
ಕೆ.ಎಸ್.ಸತ್ಯನಾರಾಯಣ
ಗಾ: ಬೆಂಗಳೂರು ಲತಾ, ರಾಜ್ ಸೀತಾರಾಮ್
ಸಂ: ಪಿ.ವೆಂಕಟೇಶ್ವರರಾವ್
ಛಾ: ಮಾರುತಿರಾವ್
ಕಲೆ: ಟಿ.ಜಿ.ಪಳನಿ
ಸ: ಎಂ.ರಂಗರಾವ್



ಧ್ವ: (ಹಾ) ವಿಶ್ವನಾಥ್ (ಮಾ) ಪಿ.ಸಾಂಬಶಿವರಾವ್, ದಶರಥ್
ನೃ: ಉಡುಪಿ ಜಯರಾಂ, ದೇವಿ
ಸಾ: ಆಂಬೂರು ಬಾಬು
ವ: ಕೃಷ್ಣ, ನಟರಾಜ್
ಪ್ರ: ಜಿ.ಎಸ್.ವಾಸು. ಸುಬ್ರಮಣ್ಯಂ
ಸ್ಟು: ಪ್ರೀಮಿಯರ್
ಹಾ: ೧)'ಆ ಸ್ವರ್ಗ ಎಲ್ಲೋ...', ೨)'ಉಲ್ಲಾಸ ಸಂತೋಷ ..', ೩)'ಬಾರೋ ನನ್ನ ಚಿನ್ನ..', ೪)'ನನ್ನಾಟ ನೋಡಲು ಆತುರ ...'
ಕ.ಸಾ: ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸುವ ತಂಗಿ, ಚಿಕ್ಕ ವಯಸ್ಸಿನಿಂದಲೇ ಮಾನಸಿಕವಾಗಿ ಅಸ್ವಸ್ಥೆ. ಒಂದು ದಿನ ಇದಕ್ಕಿದಂತೆ ಕಾಣೆಯಾಗುತ್ತಾಳೆ. ಹುಡುಕಿ ಹುಡುಕಿ ಸುಸ್ತಾದ ಅಣ್ಣನಿಗೆ ಒಂದು ದಿನ ತಂಗಿ ಪರಿಪೂರ್ಣಳಾದ ಆರೋಗ್ಯವಂತ ಸ್ಥಿತಿಯಲ್ಲಿ ಸಿಗುತ್ತಾಳೆ. ಆಗ ಆಕೆ ವೈದ್ಯನೊಬ್ಬನ ಪತ್ನಿ. ಇದೇ ವೇಳೆಗೆ ತಂಗಿಯ ಶೀಲ ಹರಣ ಮಾಡಿದ ವ್ಯಕ್ತಿಯೊಬ್ಬ ಕಾಣಿಸಿಕೊಂಡು, ತಂಗಿಯ ಸುಖ ಸಂಸಾರ ಎಲ್ಲಿ ಹಾಳಾಗುವುದೋ ಎಂದು ಹೆದರಿದ ಅಣ್ಣ ಆ ವ್ಯಕ್ತಿಯನ್ನು ಕೊಂದು, ತಾನೂ ಸಾಯುತ್ತಾನೆ.

೧೦೨೪ ಬೆಟ್ಟದತಾಯಿ

(೧೯೮೬ / ವರ್ಣ / ಭಕ್ತಿಪ್ರಧಾನ)
ಲಾ: ರವಿಚಿತ್ರ ಫಿಲಂಸ್
ಪ್ರೊ: ವೈ.ವಿ.ರಾವ್
ನಿ: ಪೇರಾಲ
ಸ.ನಿ: ಎಸ್.ರಾಮಕೃಷ್ಣ, ಲಿಂಗರಾಜ ಕಗ್ಗಲ್
ಅ: ಶ್ರೀನಾಥ್, ವಜ್ರಮುನಿ, ದಿನೇಶ್, ಲೋಕನಾಥ್, ಬೇಬಿ ಸೀತ, ರಾಮಚಂದ್ರ, ಆರತಿ, ಲೀಲಾವತಿ, ಉಮಾಶ್ರೀ, ಶೋಭ, ಮಾಲತಿ, ಕಮಿನೀಧರನ್, ಶಶಿಕಲ, ಗಿರಿಜ,

ಕು.ನಾಗಭೂಷಣ್, ಟೊಮೆಟೊ ಸೋಮು, ಕೋಕಿಲ
ಕ/ಚಿ.ಕ: ಪೇರಾಲ
ಮಾ: ಕುಣಿಗಲ್ ನಾಗಭೂಷಣ್
ಗೀ: ಆರ್.ಎನ್.ಜಯಗೋಪಾಲ್, ವಿಜಯನಾರಸಿಂಹ
ಗಾ: ಎಸ್.ಜಾನಕಿ, ಬೆಂಗಳೂರು ಲತ, ಪಿ.ಬಿ.ಶ್ರೀನಿವಾಸ್
ಸಂ: ಟಿ.ರಾಜಗೋಪಾಲ್
ಛಾ: ಹೆಚ್.ಎಸ್.ವೇಣು
ಕಲೆ: ಎಂ.ಕೃಷ್ಣ
ಸ: ಸತ್ಯಂ
ಧ್ವ: (ಹಾ) ಪಾಂಡು, ಮುರಳಿ (ಮಾ) ಗೋವಿಂದಸ್ವಾಮಿ, ಕೋದಂಡಪಾಣಿ
ನೃ: ಶಿವಶಂಕರ್
ಸಾ: ಕೆ.ಎಸ್.ಮಾಧವನ್
ವ: ಬಿ.ನಾರಾಯಣ ರಾವ್, ಪ್ರಸಾದ್
ಪ್ರ: ಪಿ.ನಾಗೇಶ್ವರರಾವ್, ಕೃಷ್ಣ, ವೀರಾಸ್ವಾಮಿ, ರಾಜಗೋಪಾಲ್
ಸ್ಟು: ಕಂಠೀರವ, ಚಾಮುಂಡೇಶ್ವರಿ, ಕೆ.ಎಫ್.ಐ.ಡಿ.ಸಿ.
ಹಾ: ೧) 'ಅಮ್ಮೋ ಅಮ್ಮೋ.. ಹಸಿದು ನಿನ್ನಯ...'. ೨)'ಶುಭ ಪ್ರದಾಯಿನಿ...', ೩)'ಐಗಿರಿ ನಂದಿನಿ ನಂದಿತ ಮೋದಿನಿ ...
ಸೆ: ರೀಲು ೧೫
ಕ.ಸಾ: ಸಿದ್ಧಿಗಾಗಿ ಹಾಗೂ ಪುರಾತನ ಕಾಲದ ದೇವರ ಒಡವೆಗಾಗಿ ಮುಗ್ಧ ಮಕ್ಕಳ ಬಲಿ ಕೊಡುವ ದುಷ್ಟರನ್ನು ಸದೆ ಬಡಿಯಲು ಮತ್ತು ಮುಗ್ಧರನ್ನು ಪೊರೆಯುವ ಸಲುವಾಗಿ ಬೆಟ್ಟದ ತಾಯಿಯಾಗಿ ಕಾಣಿಸಿಕೊಳ್ಳುವ ಚಾಮುಂಡೇಶ್ವರಿಯ ಮಹಿಮೆಯನ್ನು ಸಾರುವ ಪವಾಡಗಳ ಕಥೆ.

೧೦೨೫. ಕಾಡಿನಲ್ಲಿ ಜಾತ್ರೆ

(೧೯೮೬ / ವರ್ಣ / ಸಾಮಾಜಿಕ)
ಲಾ: ಅಜಂತಾ ಕಂಬೈನ್ಸ್
ಪ್ರೊ: ಎಸ್. ಕುಮಾರ್, ಎ.ಆರ್.ರಾಜು ಮತ್ತು ಸಹೋದರರು
ನಿ: ಎನ್.ಎಸ್.ಧನಂಜಯ
ಸ.ನಿ: ಪಿ.ಲಿಂಗರಾಜು
ಅ: ವಿಜಯೇಂದ್ರ, ಸುದರ್ಶನ್, ರತ್ನಾಕರ್, ಅನುರಾಧ, ಪವಿತ್ರಾ, ವಿಜಿ, ಕಾಂಚನ
ಕ: ಮಲಯಾಳ ಕಥೆ
ಗೀ: ಆರ್.ಎನ್.ಜಯಗೋಪಾಲ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ವಾಣಿ ಜಯರಾಂ, ಎಸ್.ಜಾನಕಿ, ಆರ್. ಎನ್.ಜಯಗೋಪಾಲ್
ಸಂ: ವೈರಮೂರ್ತಿ
ಛಾ: ವಿ.ವಿನ್ಸೆಂಟ್
ಸ: ಶಂಕರ್ - ಗಣೇಶ್
ನೃ: ಶ್ರೀಮತಿ ಮಾಧುರಿ
ಸಾ: ಗೋಪಾಲ್ ಗುರ್ಕಾರ್
ಹಾ: ೧)'ನಂಜೇಂದ್ರೆ ನಂಜಿ ನನ್ನಪರಂಜಿ ...', ೨) 'ಶಿಲ್ಪಿ ಕನಸೋ...', ೩)'ಮಲ್ಲೆ ಅರಳಿ...
ವಿ: ಅಲಂಟಿ ವಿಲಿಯಮ್ಸ್, ಕ್ರಿಸ್ ಕಾಂಡನ್(ವಿಶೇಷ ಚಮತ್ಕಾರ ವಿರುವ 3D ಚಿತ್ರ)

೧೦೨೬. ಭಾಗ್ಯದ ಲಕ್ಷ್ಮೀ ಬಾರಮ್ಮ

(೧೯೮೬ / ವರ್ಣ / ಸಾಮಾಜಿಕ)
ಲಾ: ದಾಕ್ಷಾಯಿಣಿ ಕಂಬೈನ್ಸ್
ಪ್ರೊ: ಪಾರ್ವತಮ್ಮ ರಾಜ್‌ಕುಮಾರ್
ಕ/ಚಿ.ಕ/ನಿ: ಸಿಂಗೀತಂ ಶ್ರೀನಿವಾಸ್ ರಾವ್
ಅ: ರಾಜಕುಮಾರ್, ಮಾಧವಿ, ಅಶ್ವತ್ಥ್, ಟಿ.ಎನ್.ಬಾಲಕೃಷ್ಣ, ಪರ್ವತವಾಣಿ, ಶಿವರಾಮ್, ದೀಕ್ಷಿತ್, ಶಾಂತಮ್ಮ, ಚಂದ್ರಲೇಖ, ಗಿರಿಜಾ, ಮಹಿಮಾ, ಶ್ಯಾಮಲಾ,
: ಸಿಂಗೀತಂ ಶ್ರೀನಿವಾಸ್ ರಾವ್
ಮಾ/ಗೀ: ಚಿ.ಉದಯಶಂಕರ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ರಾಜಕುಮಾರ್, ವಾಣಿ ಜಯರಾಮ್, ಬಿ.ಆರ್.ಛಾಯ, ಪಿ.ಸುಶೀಲ
ಸಂ: ಪಿ.ಜಿ.ಮೋಹನ್
ಛಾ: ವಿ.ಕೆ.ಕಣ್ಣನ್
ಕಲೆ: ಪೇಕೇಟಿ ರಂಗ
ಸ್ಟು: ಚಾಮುಂಡೇಶ್ವರಿ, ಪ್ರಸಾದ್
ಹಾ: ೧) 'ಭಾಗ್ಯದ ಲಕ್ಷ್ಮೀ ಬಾರಮ್ಮ...', ೨)'ಹಸು ಮಾಯವ್ವೋ...', ೩)'ನೀ ಅತ್ತರೂ ಇನ್ನೂ ಚೆನ್ನ...', ೪) 'ಇನ್ನು ಹತ್ತಿರಾ ಹತ್ತಿರಾ ಬರುವೆಯಾ...', ೫)'ಯಾವ ಕವಿಯು ಬರೆಯಲಾರ...
ವಿ: ಹೈದರಾಬಾದಿನಲ್ಲಿ ಕನ್ನಡ ಚಿತ್ರಪ್ರದರ್ಶನದ ಸಮಾರಂಭದಲ್ಲಿ ಪ್ರಥಮ ಚಿತ್ರವಾಗಿ ಪ್ರದರ್ಶಿತವಾಯಿತು. ರಾಜ್ಯಪ್ರಶಸ್ತಿ ೧೯೮೫-೮೬ ಅತ್ಯುತ್ತಮ ಚಿತ್ರನಾಟಕ(ಸಿಂಗೀತಂ ಶ್ರೀನಿವಾಸರಾವ್ ಮತ್ತು ಚಿ.ಉದಯಶಂಕರ್)
ಕ.ಸಾ: ಕೆಲಸವಿಲ್ಲದ ಯುವಕ ಯುವತಿಯರು ಕೆಲಸ

ಉಳಿಸಿಕೊಳ್ಳಲು ಹಾಗೂ ಲಾಟರಿಯ ಆಸೆಗಾಗಿ ಗಂಡ ಹೆಂಡತಿಯರೆಂದು ಸುಳ್ಳು ಹೇಳುತ್ತಾರೆ. ನಂತರ ಅವರಿಬ್ಬರು ಪತಿ ಪತ್ನಿಯರೆಂದು ನಿರೂಪಿಸಲು ಮಗುವೊಂದನ್ನು ಎತ್ತಿಕೊಂಡು ಹೋಗುತ್ತಾರೆ. ಅದರ ಕಾಟ ತಾಳಲಾರದೆ ಇತ್ತ ಕೆಲಸ ಕಳೆದುಕೊಳ್ಳುವ ಭಯದಿಂದ ಒದ್ದಾಡುವ ಹಾಸ್ಯಮಯ ಕಥೆ. ಮಧ್ಯಮ ವರ್ಗದ ಅನೇಕ ಸಮಸ್ಯೆಗಳತ್ತ 'ಕ್ಷ'ಕಿರಣ ಬೀರುತ್ತದೆ.

೧೦೨೭. ತಾಯಿಯೇ ನನ್ನ ದೇವರು

(೧೯೮೬ / ವರ್ಣ / ಸಾಮಾಜಿಕ)
ಲಾ: ಎಸ್.ವಿ.ಡಿ.ಪ್ರೊಡಕ್ಷನ್ಸ್
ಪ್ರೊ: ದಮಯಂತಿ
ನಿ: ವಿಜಯ್
ಸ.ನಿ: ಪಿ.ಜಿ.ಸುಧೀರ್
ಅ: ಪ್ರಭಾಕರ್, ಶಂಕರನಾಗ್, ಚಂದ್ರು, ಎಸ್.ಎಸ್.ರಾವ್, ಮಾಚೇತನ್, ಜಯಂತಿ, ಪಲ್ಲವಿ, ಜಾನಕಿ, ಕಮಲಶ್ರೀ
ಕ: ನಾಗಶ್ರೀನಿವಾಸ್
ಮಾ: ಬಿ.ಎಲ್.ವೇಣು
ಗೀ: ಚಿ.ಉದಯಶಂಕರ್

ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್.ಜಾನಕಿ, ಪಿ.ಸುಶೀಲ
ಸಂ: ಮನೋಹರ್
ಛಾ: ಕಬೀರ್‌ಲಾಲ್
ಕಲೆ: ನಾಗಾರ್ಜುನ
ಸ: ಸತ್ಯಂ
ಧ್ವ: (ಹಾ) ಜೆಮಿನಿ ರೆಕಾರ್ಡಿಂಗ್ (ಮಾ) ಕೋಟೇಶ್ವರರಾವ್
ನೃ: ಚಿನ್ನಿ ಪ್ರಕಾಶ್
ಸಾ: ಸ್ವಾಮಿ
ವ: ಎಸ್.ಸತ್ಯಂ
ಪ್ರ: ಬಾಬು
ಸ್ಟು: ಕಂಠೀರವ
ಹಾ: ೧)'ದೇವರ ಗುಡಿಯಲಿ...', ೨)'ಭಜಗೋವಿಂದ...', ೩) 'ಅಮ್ಮಾ ಕೊರಗುವೆ ಏತಕೆ..', ೪) 'ಯಾವುದು ನ್ಯಾಯವೂ..'.
ಕ.ಸಾ: ದೇವದಾಸಿಯಾದರೂ ಉತ್ತಮ ಜೀವನ ನಡೆಸುವ ವಸಂತಳನ್ನು ಹಾಳು ಮಾಡಲು ಊರಿನ ಜಮೀನ್ದಾರ ಯತ್ನಿಸಿದಾಗ ಅದನ್ನು ಶೇಖರ್ ತಡೆಯುತ್ತಾನೆ, ಸಂಚಿನಿಂದ ಅವನ ಕೊಲೆ ಯಾಗುತ್ತದೆ, ಇದರಿಂದ ರೊಚ್ಚಿಗೆದ್ದ ಹಳ್ಳಿಯ ಜನ ತಿರುಗಿ ಬಿದ್ದಾಗ ನರಸಿಂಹನಿಂದ ಹಳ್ಳಿಗೆ ಮುಕ್ತಿ ದೊರೆಯುತ್ತದೆ.

೧೦೨೮. ನಾ ನಿನ್ನ ಪ್ರೀತಿಸುವೆ

(೧೯೮೬ / ವರ್ಣ / ಸಾಮಾಜಿಕ)
ಲಾ: ಮಿತ್ರಾಲಿಯಾ ಮೂವಿ ಮೇಕರ್ಸ್
ಪ್ರೊ: ಮಂಜುಳಾ ಶಂಕರ್ ಮತ್ತು ಮಿತ್ರರು
ನಿ: ಶಂಕರ್ ಸೋಮು
ಅ: ಅರ್ಜುನ್ ಸರ್ಜಾ, ರವಿಚಂದ್ರನ್, ಎಂ.ಪಿ.ಶಂಕರ್, ಸಿ.ಆರ್.ಸಿಂಹ, ಶ್ರೀನಾಥ್, ರಮೇಶ್‌ಭಟ್, ಎಮ್.ಎಸ್.ಕಾರಂತ್, ಭವ್ಯ, ಸರ್ವಮಂಗಳ, ಉಮಾ ಶಿವಕುಮಾರ್
ಕ/ಚಿ.ಕ/ಮಾ: ಸೋಮು

ಗೀ: ಆರ್.ಎನ್.ಜಯಗೋಪಾಲ್, ಚಿ.ಉದಯಶಂಕರ್, ದೊಡ್ಡ ರಂಗೇ ಗೌಡ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್.ಜಾನಕಿ
ಸಂ: ವಿಕ್ಟರ್ ಯಾದವ್
ಛಾ: ಡಿ.ವಿ.ರಾಜಾರಾಂ
ಸ: ಶಂಕರ್- ಗಣೇಶ್
ನೃ: ಉಡುಪಿ ಜಯರಾಂ
ಸಾ: ಸಾಹುಲ್
ಹಾ: ೧) 'ಬೆಡಗಿ ಸೊಬಗಿ ಬಳುಕೋ ಹುಡುಗಿ...', ೨) 'ಇಂಥ ಸಮಯ...', ೩)'ನನ್ನ ನೀ ಮುಚ್ಚಿದೆ...', ೪)' ಪ್ರೇಮದ ಸಂಗವೇ ಯಾತನೆ ...
ಕ.ಸಾ: ಇಬ್ಬರು ಹುಡುಗರು ಒಂದೇ ಹುಡುಗಿಯನ್ನು ಪ್ರೀತಿಸುತ್ತಾರೆ. ಆಕೆಗ ಮಾತ್ರ ಇಬ್ಬರಲ್ಲಿ ಒಬ್ಬರನ್ನು ಆಯ್ದುಕೊಳ್ಳಬೇಕಾದ ಸಂದಿಗ್ಧತೆ. ಪ್ರೇಮ, ಪ್ರೀತಿ, ತ್ಯಾಗ, ಬಲಿದಾನಗಳ ಕಥೆ.

೧೦೨೯. ಬೀಗರ ಪಂದ್ಯ

(೧೯೮೬ / ವರ್ಣ / ಸಾಮಾಜಿಕ)
ಲಾ: ಶ್ರೀ ಸಿಧಿ ಪ್ರೊಡಕ್ಷನ್ಸ್
ಪ್ರೊ: ಕೆ.ವಿ.ಗುಪ್ತ
ನಿ: ಕೆ.ಬಾಬು ರಾವ್

ಸ.ನಿ: ಸತ್ತಿಬಾಬು, ಕೃಷ್ಣಮೂರ್ತಿ
ಅ: ಶ್ರೀಧರ, ಪಲ್ಲವಿ, ಮುಖ್ಯಮಂತ್ರಿ ಚಂದ್ರು, ಸಿ.ಆರ್.ಸಿಂಹ, ಅನುರಾಧ, ಪೂರ್ಣಿಮ, ಅಶ್ವಥ್, ದಿನೇಶ್, ಶಿವಕುಮಾರ್, ಕಾಂಚನ, ಶಶಿಕಲ, ವಿಜಯವಾಣಿ, ಕಮಲಾಮೂರ್ತಿ
ಕ/ಚಿ.ಕ: ಕೆ.ಬಾಬುರಾವ್
ಮಾ/ಗೀ: ಆರ್.ಎನ್.ಜಯಗೋಪಾಲ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಪಿ.ಸುಶೀಲ, ಎಸ್.ಪಿ.ಶೈಲಜ, ಆರ್.ಎನ್.ಜಯಗೋಪಾಲ್
ಸಂ: ವಾಹಿನಿ ಜಯರಾಮ್
ಛಾ: ಎಮ್.ಸುಧಾಕರ್
ಕಲೆ: ಬಾಬಿ
ಸ: ರಮೇಶ್ ನಾಯು
ನೃ: ತಾರಾ, ರಾಜು
ಸಾ: ಜಿ. ಅಪ್ಪಾರಾವ್
ವ: ಬಾಬ್ಜಿ
ಪ್ರ: ನಾರಾಯಣ ರಾವ್
ಸ್ಟು: ಕಂಠೀರವ, ಚಾಮುಂಡೇಶ್ವರಿ. ವಾಹಿನಿ, ಎ.ವಿ.ಎಂ. ಅರಸು, ಪೀನಸ್. ಪ್ರಸಾದ್
ಹಾ: ೧)'ಪ್ರೇಮಕೆ ಒಮ್ಮೇ ಜನನ...', ೨)'ತಕ್ಕದಿಮ್ಮಿ ತಾಳ...', ೩) 'ನನ್ನೆದೆ ಮಾತು...', ೪)'ಪಲಾನ ಭೀಂ ಪಲಾನ ೫)' ಮನಸು ಹೇಳ ಬಯಸಿದೆ...'
ಕ.ಸಾ: ಹುಡುಗ ಹುಡುಗಿ ಸಹಪಾಠಿಗಳು. ಹುಡುಗನ ಅಪ್ಪ ಹಾಗೂ ಹುಡುಗಿಯ ಅಪ್ಪ ಇಬ್ಬರಿಗೂ ಸಂಬಂಧದ ಬಗ್ಗೆ ಒಲವಿರುತ್ತದೆ. ನಂತರದ ಘಟನೆಗಳಲ್ಲಿ ಇಬ್ಬರಿಗೂ ವೈಮನಸ್ಯ ಬಂದು ಒಬ್ಬರ ತಲೆಯನ್ನು ಕಂಡರೆ ಮತ್ತೊಬ್ಬರಿಗೆ ಆಗದಂತಾಗುತ್ತದೆ. ಬದಲಾದ ಸಂದರ್ಭದಲ್ಲಿ ಇಬ್ಬರೂ ತಮ್ಮ ತಮ್ಮ ಮಕ್ಕಳಿಗೆ ಬೇರೆ ಸಂಬಂಧ ಹುಡುಕಲು ಪ್ರಯತ್ನಿಸುತ್ತಾರೆ. ಆದರೆ ಹುಡುಗ, ಹುಡುಗಿ ತುಂಬಾ ಹತ್ತಿರವಾಗುತ್ತಾರೆ. ಕಡೆಗೆ ಯುವ ಜೋಡಿಗಳ ಪ್ರೇಮದ ಮುಂದೆ ಬೀಗರ ಪಂದ್ಯ ಮುರಿದು ಬೀಳುತ್ತದೆ.

೧೦೩೦. ಪ್ರೇಮ ಗಂಗೆ

(೧೯೮೬ / ವರ್ಣ / ಸಾಮಾಜಿಕ)
ಲಾ: ಕಾಮಧೇನು ಆರ್ಟ್ ಪ್ರೊಡಕ್ಷನ್ಸ್
ಪ್ರೊ: ಸಿದ್ದಲಿಂಗಯ್ಯ, ಮುರಳಿ
ನಿ: ಗುರುರಾಜ್
ಸ.ನಿ: ಮಧು, ಸುರೇಶ್
ಅ: ಮುರಳಿ, ಭವ್ಯ, ವಿಜಯಕಾಶಿ, ಮೈಸೂರು ಲೋಕೇಶ್, ದೊಡ್ಡಣ್ಣ, ಶಶಿಕಲಾ, ಜಯಮಾಲಿನಿ
ಚಿ.ಕ: ಸಿದ್ದಲಿಂಗಯ್ಯ
ಮಾ: ಬಿ.ಎಲ್.ವೇಣು

ಗೀ: ಶ್ಯಾಮ ಸುಂದರ ಕುಲಕರ್ಣಿ, ದೊಡ್ಡ ರಂಗೇ ಗೌಡ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಜಾನಕಿ
ಸಂ: ರಾಜನ್.ಆರ್
ಛಾ: ವಿ.ಕೆ.ಕಣ್ಣನ್
ಸ: ರಾಜನ್-ನಾಗೇಂದ್ರ
ಧ್ವ: (ಹಾ) ಚಾಮುಂಡೇಶ್ವರಿ (ಮಾ) ಕಣ್ಣನ್
ನೃ: ಮೂಗೂರು ಸುಂದರ್
ಸಾ: ಸುಬ್ಬಯ್ಯ
ವ: ಸುಬ್ಬರಾವ್
ಪ್ರ: ಮಂಜು
ಸ್ಟು: ಸುಜಾತ ಮೂವಿಟೋನ್
ಹಾ: ೧) 'ನಿಂತಲ್ಲಿ ಕುಂತಲ್ಲಿ..', ೨) 'ಮುದ್ದು ಮಗಳು ನೀನಾದರೆ...', ೩)'ನನ್ನ ಪ್ರೀತಿ..', ೪)'ನೋಡಿ ತಟ್ಟು ತಾಳ ...'
ಕ.ಸಾ: ಹುಡುಗಿ ನಾಟಕಕಾರನ ಮಗಳು. ಹುಡುಗ ಅನಾಥ. ಇಬ್ಬರೂ ಒಬ್ಬರನ್ನೊಬ್ಬರು ಪ್ರೀತಿಸುತ್ತಾರೆ. ಅಪ್ಪ ಹಣದಾಸೆಗೆ ಶ್ರೀಮಂತನ ಕುಂಟು ಮಗನಿಗೆ ಹುಡುಗಿಯನ್ನು ಬಲವಂತವಾಗಿ ಮದುವೆ ಮಾಡುತ್ತಾನೆ. ನೊಂದ ಹುಡುಗ, ಹುಡುಗಿಯ ಮನೋ ಇಂಗಿತವನ್ನು ತಿಳಿಯಲು ಹುಡುಗಿಯ ಮಾವನ ಮನೆಗೆ ಯಾವುದೋ ರೂಪದಲ್ಲಿ ಬಂದು ಸೇರುತ್ತಾನೆ. ಹುಡುಗಿಗೆ ಇಕ್ಕಟ್ಟಿನ ಸ್ಥಿತಿ. ಇಬ್ಬರಲ್ಲಿ ಯಾರು ಎಂಬ ಜಿಜ್ಞಾಸೆ, ಕಡೆಗೆ ಗಂಡನ ಒಳ್ಳೆಯತನಕ್ಕೆ ಮಣಿದು ಹುಡುಗನನ್ನು ನಿರಾಕರಿಸುತ್ತಾಳೆ. ಹುಡುಗನು ಕೂಡ ಅದೇ ನಿರ್ಣಯಕ್ಕೆ ಬಂದು ತನ್ನಿಂದ ಮತ್ತೆ ಮನೆ ಮನಸ್ಸು ಒಡೆಯಬಾರದೆಂದು ವಿಷ ಸೇವಿಸುತ್ತಾನೆ.

೧೦೩೧. ಲಂಚ ಲಂಚ ಲಂಚ

(೧೯೮೬ / ವರ್ಣ / ಸಾಮಾಜಿಕ)
ಲಾ: ಉಷಾ ಆರ್ಟ್ ಫಿಲಂಸ್

ಫೊ: ಎಮ್.ಕೆ.ಬಾಲಾಜಿ ಸಿಂಗ್
ನಿ: ರವೀಂದ್ರನಾಥ್
ಅ: ಲೋಕೇಶ್, ಜಯಂತಿ, ಜಿ.ಜಗದೀಶ್, ಸುಂದರ್‌ರಾಜ್, ಎನ್.ಎಸ್.ರಾವ್, ಮಹಾಲಕ್ಷ್ಮಿ, ವಿಜಯರಂಜಿನಿ, ಬ್ರಹ್ಮಾವರ್
ಕ: ಮಧುಸಿನ್ಹಾ
ಮಾ: ಕೆ.ಎಸ್.ಸತ್ಯನಾರಾಯಣ

ಗೀ: ಗೀತಪ್ರಿಯ, ಎಮ್.ಎನ್.ವ್ಯಾಸರಾವ್, ಸಿದ್ಧಲಿಂಗಯ್ಯ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಬೆಂಗಳೂರು ಲತ, ಮಂಜುಳ, ವಾಣಿ ಜಯರಾಂ
ಸಂ: ಕೆ.ಬಾಲು
ಛಾ: ಆರ್.ಮಧುಸೂದನ್
ಕಲೆ: ಜಾನ್
ಸ: ಕಲ್ಯಾಣ್ ವೆಂಕಟೇಶ್
ನೃ: ಚಿನ್ನಿಪ್ರಕಾಶ್
ಸಾ: ಹಾಸನ್‌ರಘು
ಪ್ರ: ಮಲ್ಲಿ
ಹಾ: ೧)'ಯಾವ ಘಳಿಗೆಯಲಿ ಆಯಿತೋ ಈ ನಿನ್ನ ಅವತಾರ...', ೨)'ನಿನ್ನದು ಅಲ್ಲ ಈ ಜಯಮಾಲೆ...', ೩)'ಚೆಲುವೆಯ ಜಾಡು ಹಿಡಿಯುತ ಬಂದ...', ೪) 'ಚಿತ್ರವಲ್ಲಿ ಹಸಿ ಜಾರಿದೆ ಮೊಗ್ಗಲ್ಲಿ ಬಿಸಿ ಏರಿದೆ...
ಕ.ಸಾ: ಪ್ರಾಮಾಣಿಕನಾಗದ ವ್ಯಕ್ತಿ ವ್ಯವಸ್ಥೆಯ ಅನಿವಾರ್ಯತೆಗಳಿಂದಾಗಿ ಲಂಚಗುಳಿಯಾಗಿ ಕಡೆಗೆ ಅದರ ದಾಸಾನುದಾಸನಾಗಿ ಹೊರಗೆ ಬರಲಾಗದೆ ಅದರಲ್ಲೇ ಕೊನೆಯುಸಿರೆಳೆಯುವ ಹಾಸ್ಯ ಮಿಶ್ರಿತ ವಿಡಂಬನೆ.

೧೦೩೨. ತವರುಮನೆ

(೧೯೮೬ / ವರ್ಣ / ಸಾಮಾಜಿಕ)
ಲಾ: ಮಧು ಎಂಟರ್ ಪ್ರೈಸಸ್
ಫೊ: ಎ.ಎಲ್.ಅಬ್ಬಾಯಿ ನಾಯ್ಡು
ನಿ: ವಿಜಯ್
ಸ.ನಿ: ಪಿ.ಜಿ.ಸುಧೀರ್, ಕೇಸರಿ ಹರವೂ
ಅ: ಕಲ್ಯಾಣ್ ಕುಮಾರ್, ರಾಜೇಶ್, ಚರಣ್ ರಾಜ್, ವಿನೋದ್ ಆಳ್ವ, ಚಂದ್ರು, ರವಿಶಂಕರ್, ಎ.ಎಲ್.ಅಬ್ಬಾಯಿ ನಾಯ್ಡು, ಭಾರತಿ, ಹೇಮಾ ಚೌಧುರಿ, ಭವ್ಯ, ತಾರ, ಲೀಲಮ್ಮ, ಮಂಜುಳ ಹಿರೇಮಠ

ಕ: ಎ.ಎಲ್.ಅಬ್ಬಾಯಿ ನಾಯು
ಚಿ.ಕ: ಷಣ್ಮುಗ ಸುಂದರಂ ಮತ್ತು ವಾರ
ಮಾ/ಗೀ: ಚಿ.ಉದಯಶಂಕರ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ವಾಣಿ ಜಯರಾಂ, ರಾಜ್‌ಕುಮಾರ್ ಭಾರತಿ, ಎಸ್.ಜಾನಕಿ, ರಮೇಶ್
ಸಂ: ರಾಮಯ್ಯ , ಮುರಳಿ
ಛಾ: ಚಿಟ್ಟಿಬಾಬು
ಕಲೆ: ನಾಗೇಶ್ವರ ರಾವ್
ಸ: ವಿಜಯ ಭಾಸ್ಕರ್
ನೃ: ಉಡುಪಿ ಜಯರಾಂ
ಸಾ: ವೈ.ಶಿವಯ್ಯ
ದ: ಎ.ಎಲ್.ಬಾಬು, ಮರಡಯ್ಯ
ಪ್ರ: ರಾಜಗೋಪಾಲ್
ಸ್ಟು: ಕಂಠೀರವ
ಹಾ: ೧) 'ಮಾವಿನ ಮರದಲೀ...', ೨) 'ಚಿನ್ನವಂತ ಹುಡುಗನಿಗೆ...', ೩) 'ಚಿನಕ..ಚಿನಕ...', ೪)'ಏಕಳುವೆ. ಏಕಳುವೆ...', ೫)'ತವರು ಮನೆಯ...'
ಸೆ: ರೀಲು ೧೬, ಉದ ೪೧೨೫.೨೩
ಕ.ಸಾ: ತವರುಮನೆಯ ಶ್ರೇಯೋಭಿವೃದ್ಧಿಗಾಗಿ ಹಗಲಿರುಳು ಶ್ರಮಿಸುವ ಹೆಣ್ಣು ತನ್ನ ತವರುಮನೆಯ ಕುಡಿಯಾದ ಅಣ್ಣನಿಗಾಗಿ ತನ್ನ ಪ್ರಾಣವನ್ನೇ ಬಲಿದಾನ ಮಾಡುವ ಹೃದಯಸ್ಪರ್ಶಿ ಕಥಾನಕವಿದ ಚಿತ್ರ.

೧೦೩೩. ಮಾರ್ಜಾಲ

(೧೯೮೬ / ವರ್ಣ / ಪತ್ತೇದಾರಿ)
ಲಾ: ಕಾವೇರಿ ಕಂಬೈನ್ಸ್
ಫೊ: ಎಂ.ವಿ.ಸುಬ್ರಹ್ಮಣ್ಯ, ಎಮ್.ವಿ.ಗೋವರ್ಧನ್
ನಿ: ಬಿ.ವಿಜಯ ಗುಜ್ಜಾರ್
ಸ.ನಿ: ಹ.ಸೂ.ರಾಜಶೇಖರ್
ಅ: ವಿಜಯಕಾಶಿ, ಲೋಹಿತಾಶ್ವ, ಅಭಿಜಿತ್, ಸಾಯಿಕುಮಾರ್, ಅನಿಲ್‌ಕುಮಾರ್, ಪಲ್ಲವಿ, ಪದ್ಮಾವಾಸಂತಿ, ಲಲಿತಾ
ಕ: ಎ.ಎಂ.ಸುಬ್ರಹ್ಮಣ್ಯ
ಚಿ.ಕ: ಆರ್.ಎನ್.ಜಯಗೋಪಾಲ್, ಸೋಮು



ಮಾ/ಗೀ: ಆರ್.ಎನ್.ಜಯಗೋಪಾಲ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ವಾಣಿ ಜಯರಾಂ, ಪಿ.ಸುಶೀಲ
ಸಂ: ಪಿ.ವೆಂಕಟೇಶ್ವರರಾವ್
ಛಾ: ಆರ್.ಎನ್.ಕೆ.ಪ್ರಸಾದ್
ಸ: ಕೆ.ಜಿ. ಜಾಯ್
ಧ್ವ: (ಹಾ) ರಾಜಗೋಪಾಲ್, (ಮಾ) ದಶರಥ್
ನೃ: ಚಿನ್ನಿಪ್ರಕಾಶ್, ಸುರೇಖ
ಸಾ: ಹಾರ್ಸ್ ಬಾಬು
ದ: ಪರಮಶಿವನ್
ಪ್ರ: ಶ್ರೀನಿವಾಸನ್
ಸ್ಟು: ಕಂಠೀರವ
ಹಾ: ೧)'ಸೇವಂತಿ ಹೂವು...', ೨)'ರಾಗ ನಿನಾದರ ತಾಳ ನಾನಾಗುವೆ...', ೩)'ಮೈಸೂರು ಹುಡ್ಗಿ ನೋಡು...'.
ಕ.ಸಾ: ಆಸ್ತಿಯ ಆಸೆಗಾಗಿ ತನ್ನ ಅಣ್ಣನನ್ನು ಕೊಂದು ಮಗಳ ಸಮಾನಳಾದ ಅಣ್ಣನ ಮಗಳನ್ನೂ ಕೊಲ್ಲಲು ಹೊಂಚು ಹಾಕುವ ಕ್ರೂರಿಯೊಬ್ಬನ ಮುಖವಾಡ ಕಳಚುವ ಪತ್ತೇದಾರಿ ಕಥೆ.

೧೦೩೪. ಉಷಾ

(೧೯೮೬/ವರ್ಣ/ಸಾಮಾಜಿಕ)
ಲಾ: ವಿನಾಯಕ ಚಿತ್ರ
ಫೊ: ಎಮ್.ವಿ.ಎಮ್.ಎಸ್.ಪ್ರಸಾದ್, ಕೆ.ವಿ.ಎಸ್.ಚಲಪತಿರಾವ್
ನಿ: ರಾಘವ
ಸ.ನಿ: ನಾಗಂಡ್ಲ, ಕಲಾಗಂಗೋತ್ರಿ ಮಂಜು, ರಾಜಶೇಖರ
ಅ: ಸುಹಾಸಿನಿ, ಜಯಂತಿ, ಕಲ್ಯಾಣ್‌ಕುಮಾರ್, ರಾಮಕೃಷ್ಣ, ಶರತ್‌ಬಾಬು, ಸಂಯುಕ್ತ, ರಾಜ್ಯಲಕ್ಷ್ಮಿ, ಸತೀಶ್, ಎನ್.ಎಸ್.ರಾವ್, ಶಶಿಕಲ, ಶ್ಯಾಮ್ ಸುಂದರ್



ಕ/ಚಿ.ಕ: ಕ್ರಾಂತಿ ಕುಮಾರ್
ಮಾ/ಗೀ: ಚಿ.ಉದಯಶಂಕರ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಕೆ.ಜೆ.ಜೇಸುದಾಸ್, ಎಸ್.ಜಾನಕಿ, ವಾಣಿ ಜಯರಾಂ, ಅನಿತಾ ಸುರೇಶ್
ಸಂ: ಬಿ.ಕೃಷ್ಣಂರಾಜು
ಛಾ: ಹರಿ ಅನುಮೋಲು
ಕಲೆ: ರಾಮು
ಸ: ರಾಜನ್ - ನಾಗೇಂದ್ರ
ನೃ: ಶಿವಶಂಕರ್
ಸಾ: ಸಾಹುಲ್
ವ: ಕೃಷ್ಣ
ಪ್ರ: ಜಿ.ಚಂದ್ರ
ಹಾ: ೧)'ಸಾವಿರ ತಾರೆಗಳು ಆಕಾಶದಿ... ೨)'ಕಪಿ ಕಪಿ ...', ೩)'ನಿನ್ನಂಥ ಶ್ರೀಮತಿ ...', ೪)'ಮಾತೆಲ್ಲಾ ಮುತ್ತಿನಂತೆ ...'
ಕ.ಸಾ: ಗಂಡ ಬಿಟ್ಟವಳೆಂದು ಸಮಾಜದಲ್ಲಿ ಸದಾ ನಿಂದನೆಗೆ ಒಳಗಾಗುತ್ತಿದ್ದ ತನ್ನ ಹೆತ್ತ ತಾಯಿಗೆ ಮರು ಮದುವೆ ಮಾಡುವ ಉಷಾ, ತನ್ನ ತಂದೆ ಬದುಕಿದ್ದಾನೆಂದು ತಿಳಿದಾಗ ಕೋಪಗೊಳ್ಳುತ್ತಾಳೆ. ಅವರೆ ಆತನ ದಾರುಣವಾದ ಕಥೆಯನ್ನು ತಿಳಿದು ಮರುಕಗೊಳ್ಳುತ್ತಾಳೆ. ತನ್ನ ತಂದೆಯ ಕೊನೆಗಾಲದಲ್ಲಿ ಆತನ ಕಡೆಯಾಸೆ ಪೂರೈಸುವ ತ್ಯಾಗಮಯಿ ಹೆಣ್ಣಾಗಿ ಮಿಂಚುತ್ತಾಳೆ.

೧೦೩೫. ಸತ್ಕಾರ

(೧೯೮೬ / ವರ್ಣ / ಸಾಮಾಜಿಕ)
ಲಾ: ಶ್ರೀಕಾಂತ್ ಅಂಡ್ ಶ್ರೀಕಾಂತ್
ಫೊ: ಶ್ರೀಕಾಂತ್‌ನಹತಾ
ನಿ: ರೇಣುಕಾಶರ್ಮ
ಅ: ಅಂಬರೀಷ್, ಅಂಬಿಕ, ವಜ್ರಮುನಿ, ತೂಗುದೀಪ ಶ್ರೀನಿವಾಸ್, ದಿನೇಶ್, ಮುಖ್ಯಮಂತ್ರಿ ಚಂದ್ರು, ಸುಂದರಕೃಷ್ಣ ಅರಸ್, ಶಿವರಾಮ್, ಮೈಸೂರು ಲೋಕೇಶ್, ಶ್ಯಾಮಲ, ತಾರ, ಬಬಿತ, ಡಿಸ್ಕೋ ಶಾಂತಿ, ಬ್ರಹ್ಮಾವರ್, ಸಾಗರ್, ಬಾಬ್ ಕ್ರಿಷ್ಟೀ, ಮಂಜಯ್ಯ, ಮಾ।ಸಂಜಯ್, ತಿಮ್ಮಯ್ಯ

ಕ: ಎಮ್.ಡಿ.ಸುಂದರ್
ಮಾ/ಗೀ: ಚಿ. ಉದಯಶಂಕರ್
ಗಾ: ಜೇಸುದಾಸ್, ಎಸ್.ಜಾನಕಿ, ಚಿತ್ರ, ರಮೇಶ್
ಸಂ: ಟಿ.ವೆಂಕಟರತ್ನಂ
ಛಾ: ಎಸ್.ವಿ.ಶ್ರೀಕಾಂತ್
ಕಲೆ: ಬಿ.ಸೂರ್ಯಕುಮಾರ್
ಸ: ಸತ್ಯಂ
ಧ್ವ: (ಹಾ) ಪಾಂಡುರಂಗನ್ (ಮಾ) ಗೋವಿಂದಸ್ವಾಮಿ
ನೃ: ಉಡುಪಿ ಜಯರಾಂ
ಸಾ: ಜ್ಯೂಡೋ ರತ್ನಂ
ವ: ಬಿ.ಬಾಬ್ಜಿ, ಕೃಷ್ಣ
ಪ್ರ: ಹರಿ, ಶರತ್‌ಕುಮಾರ್, (ಕೇಶ) ಕಮಲ
ಸ್ಟು: ಚಾಮುಂಡೇಶ್ವರಿ, ಪ್ರಿಮಿಯರ್
ಹಾ: ೧) 'ಹೇ ಎಂದೂ ಒಳ್ಳೇದೇ...', ೨) 'ಚೆಲುವೆಯ ಮೊಗ...', ೩) 'ಕನಸಿನಿಂದ ನಾ ಬಂದೆ...', ೪) 'ರಾತ್ರಿಯು ಬಂದಾಗ...'.
ವಿ: 'ಚಿತ್ರಾ' ಹಾಡಿರುವ ಪ್ರಥಮ ಕನ್ನಡ ಚಿತ್ರ
ಕ.ಸಾ: ಅಂಜುಬುರುಕಿಯಾದ ನಾಯಕ ನಾಯಕಿಯಿಂದ ಅಪಮಾನಗೊಂಡ ಮೇಲೆ ಸುಪ್ತವಾಗಿದ್ದ ಶೌರ್ಯವನ್ನು ಎಚ್ಚರಿಸಿ ಸಮಾಜಕ್ಕೆ ಕಂಟಕ ಪ್ರಾಯರಾಗಿದ್ದ ದುಷ್ಟರಿಗೆ ತನ್ನದೇ ಆದ ರೀತಿಯಲ್ಲಿ ಸತ್ಕಾರ ಮಾಡುವ ಕಥೆ.

೧೦೩೬. ಮದುವೆ ಮಾಡು ತಮಾಷೆ ನೋಡು

(೧೯೮೬ / ವರ್ಣ / ಸಾಮಾಜಿಕ)
ಲಾ: ದ್ವಾರಕೀಶ್ ಚಿತ್ರ
ಪ್ರೊ: ದ್ವಾರಕೀಶ್
ನಿ: ಎಸ್.ಎ. ಚಂದ್ರಶೇಖರ್
ಅ: ವಿಷ್ಣುವರ್ಧನ್, ಆರತಿ, ಮಹಾಲಕ್ಷ್ಮಿ, ದ್ವಾರಕೀಶ್, ಶಿವರಾಮ್, ಉಮಾಶಿವಕುಮಾರ್, ಸತೀಶ್, ಲೀಲಾವತಿ, ಶ್ರೀನಿವಾಸ ಮೂರ್ತಿ, ಜೈಜಗದೀಶ್, ಕಾಂಚನ, ಬಾಲಕೃಷ್ಣ, ಶಿವರಾಂ, ಶಶಿಕಲಾ, ಪ್ರಸನ್ನ, ಸುಂದರ್‌ರಾಜ್
ಗೀ: ಚಿ.ಉದಯಶಂಕರ್, ಆರ್.ಎನ್.ಜಯಗೋಪಾಲ್
ಕ: ತೆಲುಗು ಚಿತ್ರದ ಪುನರ್ ಅವತರಣಿಕೆ
ಸಂ: ಗೌತಂರಾಜ್
ಛಾ: ದೇವಿ ಪ್ರಸಾದ್
ಸಂ: ವಿಜಯಾನಂದ್
ಗಾ: ಜೇಸುದಾಸ್, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್.ಜಾನಕಿ, ಮಂಜುಳಾ
ಹಾ: ೧) 'ಮದುವೆ ಹೆಣ್ಣಿಗೆ ಸಂಗಾತಿ ಗಂಡಿಗ ...', ೨) 'ಸಂತೋಷದಾ ಸಂಗೀತವಾ ನೀ ತಂದೆ ...', ೩) 'ನಾನು ನೀನು ಗಂಡ ಹೆಂಡ್ತಿ ...'
ಕ.ಸಾ: ಮಧ್ಯಮ ವರ್ಗದವರ ಪಾಲಿಗೆ ಮದುವೆ ಎನ್ನುವುದು ಶಾಪ ಎಂದು ನಿರೂಪಿಸುವ ಹಾಸ್ಯ ಚಿತ್ರ. ಧನಪಿಶಾಚಿಯಾದ ಹೆಂಗಸಿನ ಧನದಾಹ ತೀರಿಸಲು ಹೆಣ್ಣು ಹೆತ್ತವರು ಪಡುವ ಪರದಾಟವನ್ನು ಚಿತ್ರಿಸಲಾಗಿದೆ.

೧೦೩೭. ಹೆಣ್ಣಿನ ಕೂಗು

(೧೯೮೬ / ವರ್ಣ / ಸಾಮಾಜಿಕ)
ಲಾ: ಗುರು ಮಂತ್ರಾಲಯ ಮೂವೀಸ್
ಪ್ರೊ: ದೊರ ಭಗವಾನ್, ಎನ್.ಭಕ್ತವತ್ಸಲಂ
ನಿ/ಚಿ.ಕ: ದೊರ ಭಗವಾನ್
ಅ: ಸರಿತ, ಶ್ರೀಧರ್, ವಿಶ್ವನಾಥ್, ಮುಖ್ಯಮಂತ್ರಿ ಚಂದ್ರು, ಬಾಲಕೃಷ್ಣ, ದಿನೇಶ್, ತಾರಾ
ಕ: ಗೀತಾ ನಾಗಭೂಷಣ ಅವರ 'ಹಸಿಮಾಂಸ ಹದ್ದುಗಳು' ಕಾದಂಬರಿ
ಮಾ: ಬಿ.ಎಲ್.ವೇಣು
ಗೀ: ಚಿ.ಉದಯಶಂಕರ್
ಗಾ: ಎಸ್.ಜಾನಕಿ, ಎಸ್.ಪಿ.ಬಾಲಸುಬ್ರಹ್ಮಣ್ಯಂ
ಸಂ: ಪಿ.ಭಕ್ತವತ್ಸಲಂ
ಛಾ: ಚಿಟ್ಟಿಬಾಬು

ಕಲೆ: ವಿ.ನಜೀರ್
ಸ: ಎಂ.ರಂಗರಾವ್
ನೃ: ಉಡುಪಿ ಜಯರಾಂ
ಸಾ: ವೈ.ಶಿವಯ್ಯ
ಹಾ: ೧) 'ಎಂಥ ಜಾಣ ನೋಡಮ್ಮ...', ೨) 'ಸನ್ಯಾಸಿಯಾ ಸಂಗಾತಿಯೇ... ೩) ' ಶಂಕರಾ.. ಶಶಿಧರಾ...
ಕ.ಸಾ: ಅನಾಥೆ ಹಾಗೂ ಅಸಹಾಯಕಳಾದ ಹೆಣ್ಣು ಸಮಾಜದಲ್ಲಿ ಯಾವ ರೀತಿ ಶೋಷಣೆಗೆ ಒಳಗಾಗುತ್ತಾಳೆ ಹಾಗೂ ಅವಳನ್ನು ಸಮಾಜದಲ್ಲಿ ಹೇಗೆ ನಡೆಸಿಕೊಳ್ಳಲಾಗುತ್ತದೆ ಎಂಬ ವಾಸ್ತವ ಚಿತ್ರಣ. ತನಗೆ ಹುಟ್ಟಿದ ಗಂಡು ಮಗು ಬೆಳೆದು ದೊಡ್ಡವನಾದ ಮೇಲೆ ಮತ್ತಷ್ಟು ಹೆಣ್ಣುಗಳನ್ನು ಶೋಷಿಸುತ್ತಾನೆ ಅಂಥ ಮಗು ಬದುಕುವುದೇ ಬೇಡ ಎಂಬ ನಿಲುವು ತಾಳುವ ನಾಯಕಿ. ಹೆಣ್ಣಿನ ಅಂತರಾಳದ ನೋವನ್ನು ಎಳೆ ಎಳೆಯಾಗಿ ಬಿಡಿಸುವ ಪ್ರಯತ್ನ.

೧೦೩೮. ಕಥಾನಾಯಕ

(೧೯೮೬ / ವರ್ಣ / ಸಾಮಾಜಿಕ)
ಲಾ: ಶ್ರೀ ಗಜಲಕ್ಷ್ಮಿ ಕಂಬೈನ್ಸ್
ಪ್ರೊ: ಡಿ.ವಿಮಲ ಕುಮಾರ್, ಆರ್.ವಿಜಯಲಕ್ಷ್ಮಿ
ನಿ: ವಾಸು
ಸ.ನಿ: ಎಸ್.ಆರ್.ಶಿವರಾಮ್, ಎಂ.ವಿ.ಸೆಲ್ವಂ, ವಿ.ಭಾಸ್ಕರ್
ಅ: ವಿಷ್ಣುವರ್ಧನ್, ಸುಮಲತ, ವಜ್ರಮುನಿ, ಲೀಲಾವತಿ, ಶ್ರೀನಿವಾಸಬಾಬು, ಸೋಮು, ದಿನೇಶ್, ಉಮೇಶ್, ಸುರೇಶ್, ಸುಂದರ್‌ರಾಜ್, ವಿ.ಆರ್.ಭಾಸ್ಕರ್, ಕೃಷ್ಣರಾವ್, ಕಮಲ, ವಿಜಯಭಾರತಿ, ಶ್ರೀಲಕ್ಷ್ಮಿ, ಶಕುಂತಲ
ಕ/ಚಿ.ಕ: ವಾಸು
ಮಾ: ಚಿ.ಉದಯಶಂಕರ್
ಗೀ: ಚಿ.ಉದಯಶಂಕರ್, ಆರ್.ಎನ್.ಜಯಗೋಪಾಲ್

ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ವಾಣಿ ಜಯರಾಂ, ಉಮಾರಮಣನ್
ಸಂ: ಪಿ.ವೆಂಕಟೇಶ್ವರರಾವ್
ಛಾ: ಎಂ.ಸಿ.ಶೇಖರ್
ಕಲೆ: ಸೂರ್ಯಕುಮಾರ್
ಸ: ಎಂ.ರಂಗರಾವ್
ಧ್ವ: (ಹಾ) ತರಂಗಿಣಿ, ಪ್ರಸಾದ್ ಡಿಲಕ್ಸ್ (ಮಾ) ಸುರೇಶ್ ಮಹಲ್
ನೃ: ಪ್ರಕಾಶ್
ಸಾ: ಸೂಪರ್ ಸುಬ್ಬರಾಯನ್
ವ: ಗೋಪಾಲ್, ಬಿಡಾಸಾಬ್, ಸಾಯಿ, ಕೇಶ, ಕಾಳಿ
ಪ್ರ: ಮಾಣಿಕ್ಯಂ, ಶ್ರೀನಿವಾಸ, ಗಿರಿ, ಆಗಸ್ಟಿನ್
ಸ್ಟು: ಪ್ರಸಾದ್, ಅರುಣಾಚಲಮ್, ಸತ್ಯ
ಹಾ: ೧) 'ಮರದಲ್ಲಿ ಮಾವಿನಕಾಯಿ...೨) 'ನನ್ನೆದೆ ವೀಣೆಯು ಮಿಡಿಯುವುದು...', ೩) ' ನಿನ್ನಂಥ ಮುದ್ದಾದ ಹೆಣ್ಣನ್ನು ಕಂಡಿಲ್ಲ...', ೪) 'ನೋಯುತಿದೆ ನನ್ನ ಮೈ...', ೫) 'ಮರಳಿ ಗೂಡಿಗೆ ಬಂದೆ...
ಸೆ: ರೀಲು ೧೫, ಉದ್ದ - ೩೯೪೬.೨೬, ೧೦ - ೦೧ - ೧೯೮೬
ಕ.ಸಾ: ನಾಯಕ ಪೆದ್ದ, ಮುಗ್ಧ. ಸ್ನೇಹಿತರ ಪ್ರೇರಣೆಯಿಂದ ಶ್ರೀಮಂತ ಮಾವನ ವಿದ್ಯಾವಂತ ಮಗಳನ್ನು ಪ್ರೀತಿಸುತ್ತಾನೆ ಎಂದು ಆಕೆಯಲ್ಲಿ ಹೇಳಿ ಮಾವನಿಂದ ಏಟು ತಿಂದು ಮನೆಯಿಂದ ಹೊರಹಾಕಲ್ಪಡುತ್ತಾನೆ. ದುಷ್ಟನಾದ ಮಾವನಿಂದ ಶೋಷಣೆಗೊಳಗಾದ ಹೆಣ್ಣೊಬ್ಬಳಿಂದ ಓದು ಬರಹ ಕಲಿತು ನವ ನಾಗರಿಕನಾಗಿ ಅದೇ ಮಾವನ ಮಗಳ ಹೃದಯ ಕದ್ದು, ಮಾವನಿಗೆ ಬುದ್ಧಿ ಕಲಿಸುತ್ತಾನೆ.

೧೦೩೯. ಕೇಡಿ ನಂ.೧

(೧೯೮೬ / ವರ್ಣ / ಸಾಮಾಜಿಕ)
ಲಾ: ರವಿ ಚಿತ್ರ ಫಿಲಂಸ್
ಪ್ರೊ: ವೈ.ವಿ.ರಾವ್
ನಿ: ಕೊಮ್ಮಿನೇನಿ
ಸ.ನಿ: ಎಸ್.ರಾಮಕೃಷ್ಣ, ಲಿಂಗರಾಜ್ ಕಗ್ಗಲ್

ಅ: ಪ್ರಭಾಕರ್, ಧೀರೇಂದ್ರ ಗೋಪಾಲ್, ದಿನೇಶ್, ಉಮಾಶ್ರೀ, ವಿಜಿ, ಲೀಲಾವತಿ (ದ್ವಿಪಾತ್ರ), ಶಶಿಕಲ, ಎನ್.ಎಸ್.ರಾವ್, ಸುಧೀರ್
ಕ: ದಾಸರಿ ನಾರಾಯಣರಾವ್
ಚಿ.ಕ/ಮಾ: ಕು|ನಾಗಭೂಷಣ್
ಗೀ: ಚಿ.ಉದಯಶಂಕರ್, ಆರ್.ಎನ್.ಜಯಗೋಪಾಲ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್.ಜಾನಕಿ, ಚಿತ್ರಾ
ಸಂ: ಟಿ.ರಾಜಗೋಪಾಲ್, ಮಧು
ಛಾ: ಹೆಚ್.ಎಸ್.ವೇಣು
ಕಲೆ: ಎಂ.ಕೃಷ್ಣ
ಸ: ಸತ್ಯಂ
ಧ್ವ: (ಹಾ) ಪಾಂಡು (ಮಾ) ಸೋಮಶೇಖರ್
ನೃ: ತರುಣ್
ಸಾ: ಕೆ.ಎಸ್.ಮಾಧವನ್
ವ: ಕೃಷ್ಣ, ಮಲ್ಲಿ, ಸಲೀಂ
ಪ್ರ: ಬಿ.ನಾರಾಯಣರಾವ್, ರಮಣ
ಸ್ಟು: ವಾಹಿನಿ
ಕ.ಸಾ: ಚಿಕ್ಕ ವಯಸ್ಸಿನಿಂದಲೇ ಬುದ್ಧಿ ಕಲಿಸಿ ಬೆಳೆಸದ ತಾಯಿ ಮಗ ದೊಡ್ಡವನಾಗಿ ಸಮಾಜ ಕಂಟಕನಾಗಿ ಬೆಳೆದು ಮರಣ ದಂಡನೆಗೆ ಒಳಗಾದಾಗ ಪರಿತಪಿಸುತ್ತಾಳೆ. ಸಮಾಜ ಘಾತುಕನಾದ ವ್ಯಕ್ತಿ ಕೇಡಿ ನಂ.೧ ಎಂದು ಬಿಂಬಿತನಾದರೂ ಆತನ ಹೃದಯವು ತಾಯಿ ಮಮತೆ ಪ್ರೀತಿಯ ಸೆಳೆತಕ್ಕೆ ಸ್ಪಂದಿಸುತ್ತದೆ.

೧೦೪೦. ಮೃಗಾಲಯ

(೧೯೮೬ / ವರ್ಣ / ಸಾಮಾಜಿಕ)
ಲಾ: ಭರಣಿ ಚಿತ್ರ
ಪ್ರೊ: ಎಂ.ಪಿ.ಶಂಕರ್

ನಿ/ಚಿ.ಕ: ವಿ.ಸೋಮಶೇಖರ್
ಅ: ಅಂಬರೀಷ್, ಎಂ.ಪಿ.ಶಂಕರ್, ಸುಧೀರ್, ಶಿವರಾಮ್, ಗೀತಾ, ಸುಂದರ ಕೃಷ್ಣ ಅರಸ್, ಚೇತನ್ ರಾಮರಾವ್, ರಾಜಶೇಖರ್, ಮೈಸೂರು ಲೋಕೇಶ್, ರತ್ನಾಕರ್, ಲೀಲಾವತಿ, ಸೌಮ್ಯ, ಪ್ರಮಿಳಾ ಜೋಷಾಯ್, ಚಂದ್ರಲೇಖ, ಬೇಬಿ ಪದ್ಮಿನಿ
ಕ: ಎಂ.ಪಿ.ಶಂಕರ್
ಮಾ/ಗೀ: ಚಿ.ಉದಯಶಂಕರ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್.ಜಾನಕಿ, ವಾಣಿಜಯರಾಂ
ಸಂ: ಎನ್.ಎಮ್.ವಿಕ್ಟರ್
ಛಾ: ಡಿ.ವಿ.ರಾಜಾರಾಂ
ಕಲೆ: ಎ. ನಜೀರ್
ಸ: ರಾಜನ್ ನಾಗೇಂದ್ರ
ನೃ: ಉಡುಪಿ ಜಯರಾಂ
ಸಾ: ಬಾಬು
ಸ್ಟು: ಪ್ರೀಮಿಯರ್
ಹಾ: ೧)'ಆಲಯ ಮೃಗಾಲಯ...', ೨)'ಕುದುರ ಸವಾರಿಯು...', ೩) 'ಮೆಲ್ಲ ಮೆಲ್ಲನೆ ಬಂದನೆ...', ೪)'ಮಾಗಿಯ ಕಾಲ ಈ ಸಾಯಂಕಾಲ...
ವಿ: ಎಂ.ಪಿ. ಶಂಕರ್ ಎರಡು ಪಾತ್ರಗಳಲ್ಲಿ ಅಭಿನಯಿಸಿದರು. ಮೈಸೂರು ಮೃಗಾಲಯವನ್ನು, ಪ್ರಾಣಿಗಳನ್ನು ವಿಶಿಷ್ಟವಾಗಿ ಬಳಸಿಕೊಳ್ಳಲಾಗಿತ್ತು.
ಕ.ಸಾ: ಅದೊಂದು ಮೃಗಾಲಯ. ಅದಕ್ಕೊಬ್ಬ ನಿಷ್ಠಾವಂತ ಅಧಿಕಾರಿ. ಪ್ರಾಣಿಗಳ ಹಿತ ರಕ್ಷಣೆಗಾಗಿ ಆತ ದುಷ್ಟ ಶಕ್ತಿಗಳ ಜೊತೆ ಹೋರಾಡಬೇಕಾದ ಪರಿಸ್ಥಿತಿ ಬರುತ್ತದೆ. ದುಷ್ಟ ಶಕ್ತಿಗಳ ನಿಗ್ರಹಿಸಿ ಮೃಗಾಲಯವನ್ನು ಸಂರಕ್ಷಿಸುವ ಕಥೆ.

೧೦೪೧. ಹೆಣ್ಣೇ ನಿನಗೇನು ಬಂಧನ

(೧೯೮೬ / ವರ್ಣ / ಸಾಮಾಜಿಕ)
ಲಾ: ವಿ.ಎಸ್.ಎಸ್.ಸಿನಿ ಪ್ರೊಡಕ್ಷನ್ಸ್
ಪ್ರೊ: ಬಿ.ಎನ್.ಗಂಗಾಧರ್
ನಿ: ರವೀಂದ್ರನಾಥ್
ಸ.ನಿ: ಪಿ.ನಂಜುಂಡಪ್ಪ
ಅ: ಚರಣ್‌ರಾಜ್, ತುಳಸಿ, ಮುಖ್ಯಮಂತ್ರಿಚಂದ್ರು, ಎನ್.ಎಸ್.ರಾವ್, ಉಮಾಶ್ರೀ, ಪಂಢರಿಬಾಯಿ, ದಿನೇಶ್, ಜಾನಕಿರಾಂ
ಕ: ಬಿ.ಎನ್.ಗಂಗಾಧರ್



ಚಿ.ಕ: ರವೀಂದ್ರನಾಥ್
ಮಾ/ಗೀ/ಸ: ಹಂಸಲೇಖ
ಗಾ: ವಾಣಿ ಜಯರಾಂ, ಎಸ್.ಜಾನಕಿ, ರಾಜ್‌ಕುಮಾರ್ ಭಾರತಿ
ಸಂ: ಕೆ.ಬಾಲು
ಛಾ: ಆರ್.ಮಧುಸೂದನ್
ಕಲೆ: ಕೇಶವರಾವ್
ಪ್ರ: (ಹಾ) ಜಿಮಿನಿ (ಮಾ) ಪ್ರಸಾದ್
ನೃ: ಚಿನ್ನಿಪ್ರಕಾಶ್
ಸಾ: ಸಾಮುಲ್
ವ: ರಂಗನಾಥ್
ಪ್ರ: ಕೇಶವ
ಸ್ಟು: ಚಾಮುಂಡೇಶ್ವರಿ
ಹಾ: ೧)'ಕುಹೂ ಕೋಗಿಲೆಯೇ...', ೨) 'ಅಪ್ಪ ಚಿಕ್ಕಮ್ಮಗಳು...', ೩) 'ಹೆಣ್ಣಿನ ಆರು ಗುಣ...', ೪)'ಅವಿವೇಕಿಯಾದರೆ...', ೫)'ಬಂದಿದೆ ಶಿವರಾತ್ರಿ...
ಕ.ಸಾ: ಸ್ತ್ರೀಯೊಬ್ಬಳು ವಿವಾಹ, ಸಂಸಾರ, ತಾಯ್ತನ ಎಲ್ಲವರಲ್ಲೂ ಶೋಷಣೆ, ದುಃಖಗಳಿಗೆ ಈಡಾಗುವ ಬಗೆಯನ್ನು ವಿವರಿಸಲಾಗಿದೆ. ಮಕ್ಕಟಗಳಿಗೆ ಸುಲಭವಾಗಿ ಬಲಿಯಾಗಿ ಸ್ವೇಚ್ಛೆಯಿಂದ ವರ್ತಿಸುವ ಗಂಡುಗಳ ಚಿತ್ರಣವಿದೆ.

೧೦೪೨. ಅನುರಾಗ ಅರಳಿತು

(೧೯೮೬ / ವರ್ಣ / ಸಾಮಾಜಿಕ)
ಲಾ: ಭಾರ್ಗವಿ ಆರ್ಟ್ ಮೂವೀಸ್
ಪ್ರೊ: ಎಂ.ಎಸ್.ಪುಟ್ಟಸ್ವಾಮಿ
ನಿ: ಎಂ.ಎಸ್.ರಾಜಶೇಖರ್
ಸ.ನಿ: ಜಿ.ಬಲರಾಮ್, ಬಿ.ರಾಮಮೂರ್ತಿ
ಅ: ರಾಜಕುಮಾರ್, ಮಾಧವಿ, ಗೀತ, ಪಂಢರಿಬಾಯಿ, ಕೆ. ಎಸ್ ಅಶ್ವತ್ಥ್, ಪರ್ವತವಾಣಿ, ಬ್ರಹ್ಮಾವರ್, ತೂಗುದೀಪ ಶ್ರೀನಿವಾಸ್, ಸುರೇಶ್, ಶಂಗಾರ್ ನಾಗರಾಜ್, ಜೂನಿಯರ್ ನರಸಿಂಹರಾಜು, ಪ್ರಣವಮೂರ್ತಿ, ಸೀಮ, ವಿಜಯಲಕ್ಷ್ಮಿ, ವಿಜಯ, ಸಾವಿತ್ರಿ, ಜಯಲಕ್ಷ್ಮಿ, ಶೀಲ
ಕ: ಹೆಚ್.ಜಿ.ರಾಧಾದೇವಿ ಅನುರಾಗ ಅಂತಃಪುರ ಕಾದಂಬರಿ
ಚಿ.ಕ/ಮಾ/ಗೀ: ಚಿ.ಉದಯಶಂಕರ್
ಗಾ: ರಾಜಕುಮಾರ್, ಎಸ್.ಜಾನಕಿ, ವಾಣಿ ಜಯರಾಂ
ಸಂ: ಪಿ.ಭಕ್ತವತ್ಸಲಂ
ಛಾ: ವಿ.ಕೆ.ಕಣ್ಣನ್
ಕಲೆ: ಪೇಕೇಟಿ ರಂಗ
ಸ: ಉಪೇಂದ್ರ ಕುಮಾರ್
ಪ್ರ: (ಹಾ) ಕೋದಂಡಪಾಣಿ (ಮಾ) ಗೋವಿಂದಸ್ವಾಮಿ
ನೃ: ಕೈಲಾಸಂ
ಸಾ: ಸ್ವಾಮಿ
ವ: ಪ್ರಸಾದ್, ವೀರರಾಜು, ವೆಂಕಟರಾವ್
ಪ್ರ: ದೊರಸ್ವಾಮಿ ನಾಯ್ಡು, ಮೂಗೂರ್ ಪಿ.ಗುರು, ವಿಶ್ವನಾಥ್
ಸ್ಟು: ಚಾಮುಂಡೇಶ್ವರಿ, ಕಂಠೀರವ
ಹಾ: ೧) 'ಗಂಗಾ ಯಮುನಾ ಸಂಗಮ...', ೨)'ಸಾರ್ಥಕವಾಯಿತು ಚಿನ್ನ ನಿನ್ನ...', ೩) 'ನೀ ನಡೆದರೇ ಸೊಗಸು...', ೪)'ಶ್ರೀಕಂಠಾ ವಿಷಕಂಠಾ...', ೫) 'ಬೀಸಿದರು ತಂಗಾಳಿ...
ಸೆ: ರೀಲು ೧೬, ಉದ ೪೪೧೫.೨೮, ೧೨-೦೫-೧೯೮೬
ಕ.ಸಾ: ದುಷ್ಟರಿಂದ ರಕ್ಷಿಸಿದ ಯುವಕನಿಗೆ ಶ್ರೀಮಂತರು ಕೆಲಸ ಕೊಟ್ಟರು. ಅವರ ಮಗಳು ಇದಕ್ಕೆ ವಿರೋಧಿ, ಅಹಂಕಾರಿ. ಆ ಯುವಕನ ಕಾರ್ಮಿಕರ ಪರ ನಿಲುವು. ಆಕೆಯನ್ನು ಮಣಿಸುವ ಪ್ರಯತ್ನಗಳಿಂದಾಗಿ ಸಿಟಿದ ಆಕೆ ಅವನನ್ನು ಮದುವೆಯಾಗಿ ಹಿಂಸಿಸುವ ಛಲ ತೊಟ್ಟಳು. ಆವೇಶ, ಪ್ರಣಯ ತ್ರಿಕೋನ, ಸಾಹಸ, ಪರ ವಿರೋಧ ಘಟನೆಗಳ ನಂತರ ಮನಃ ಪರಿವರ್ತನೆ. ಸುಖಾಂತ.

೧೦೪೩. ಕರ್ಣ

(೧೯೮೬ / ವರ್ಣ / ಸಾಮಾಜಿಕ)
ಲಾ: ರೋಹಿಣಿ ಪಿಕ್ಚರ್ಸ್
ಪ್ರೊ: ದುಷ್ಯಂತ್ ಸಿಂಗ್, ಅಮೃತಾ ಸಿಂಗ್, ಅನುರಾಧಾ ಸಿಂಗ್
ನಿ: ಭಾರ್ಗವ
ಸ.ನಿ: ಫಣಿ ರಾಮಚಂದ್ರ
ಅ: ವಿಷ್ಣುವರ್ಧನ್, ಸುಮಲತ, ಮಾನು, ಪ್ರಶಾಂತಿ ನಾಯಕ್, ಸುಮಿತ್ರ, ಅಶ್ವತ್ಥ್, ರಾಜೇಶ್, ಕೀರ್ತಿ, ಸಂಯುಕ್ತ
ಕ: ಹಿಂದಿ ಚಿತ್ರ 'ಸಾಹೇಬ್'
ಗೀ: ಚಿ.ಉದಯಶಂಕರ್
ಗಾ: ಜೇಸುದಾಸ್, ಎಸ್.ಪಿ.ಬಾಲಸುಬ್ರಹ್ಮಣ್ಯಂ

ಛಾ: ಡಿ.ವಿ.ರಾಜಾರಾಂ
ಕಲೆ: ರಾಮ್‌ಕುಮಾರ್
ಸ: ಎಂ.ರಂಗರಾವ್
ಪ್ರ: (ಹಾ) ಜೋಸ್ ಪ್ರಸಾದ್ (ಮಾ) ಗೋಪಾಲಕೃಷ್ಣನ್
ನೃ: ಚಿನ್ನಿ ಪ್ರಕಾಶ್
ಸಾ: ಮಾ।ಸುಬ್ಬರಾಯನ್
ವ: ನಟೇಶ್, ಬಡಾಸಾಬ್
ಪ್ರ: ಜಿ.ವೆಂಕಟೇಶ್, ಶ್ರೀನಿವಾಸ್
ಸ್ಟು: ಶಾರದ, ವಿ.ಪಿ.ಎಂ, ವಾಹಿನಿ
ಹಾ: ೧) 'ಪ್ರೀತಿಯ ನಮ್ಮನಿರೂ...', ೨) 'ಆ ಕರ್ಣನಂತೆ ನೀ ದಾನಿಯಾದೆ...', ೩) 'ಮೀಸ ಇದರು ಆಸ ಇಲ್ಲವೆ...', ೪)'ಟಿಕ್ ಪುಕ್ ಟಿಕ್ ಪುಕ್ ಬಿಡು ಕೇಶವ ...', ೫)'ಆಹಾ ನನ್ನ ಜತೆಯಲಿ ...'
ಕ.ಸಾ: ನಾಯಕ ಪದವೀಧರ. ಆದರೆ ನಿರುದ್ಯೋಗಿ. ಫುಟ್‌ಬಾಲ್‌ನಲ್ಲಿ ವಿಶೇಷ ಆಸಕ್ತಿ. ತಂದೆಗ ಮಗನಲ್ಲಿ ವಿಶ್ವಾಸವಿಲ್ಲ. ಅಣ್ಣ-ಅತ್ತಿಗೆಯರ ದೃಷ್ಟಿಯಲ್ಲಿ ಕೆಲಸಕ್ಕೆ ಬಾರದವನು. ಕಡೆಯ ತಂಗಿಯ ಮದುವೆಗೆ ಹಣಕಾಸಿನ ತೊಂದರೆಯಾದಾಗ ನಾಯಕ ತನ್ನ ಮೂತ್ರಪಿಂಡ ದಾನ ಮಾಡಿ ತಂಗಿಯ ಮದುವೆಗೆ ನೆರವಾಗಿದಲ್ಲದೇ ಎಲ್ಲರ ದೃಷ್ಟಿಯಲ್ಲಿ ದೊಡ್ಡವನಾಗುತ್ತಾನೆ. ದಾನಕ್ಕೆ ಹೆಸರಾದ ಕರ್ಣನನ್ನು ಮೀರಿಸಿದವನೆನಿಸುತ್ತಾನ.

೧೦೪೪. ದೇವತೆ

(೧೯೮೬ / ವರ್ಣ / ಸಾಮಾಜಿಕ)
ಲಾ: ಎಸ್.ಎಲ್.ಎನ್.ಸಿನಿ ಪ್ರೊಡಕ್ಷನ್ಸ್
ಪ್ರೊ: ಎಸ್.ಎನ್.ಪ್ರಕಾಶ್ ಮತ್ತು ಗೆಳೆಯರು
ನಿ: ಈರಂಕಿ ಶರ್ಮ
ಅ: ರಾಮಕೃಷ್ಣ, ರಾಜೀವ್, ಅಶ್ವತ್ಥ್, ಶಿವರಾಂ, ಅಶ್ವತ್ಥ್ ನಾರಾಯಣ, ಮಾ।ಮಂಜುನಾಥ್, ಸತ್ಯಭಾಮ, ಚೇತನ್ ರಾಮರಾವ್, ಗೀತ, ಪವಿತ್ರ, ಕೆ.ಎಸ್.ಭಾರತಿ, ಲಾವಣ್ಯ, ಮಾಲತಿ

ಕ/ಚಿ.ಕ: ಈರಂಕಿ ಶರ್ಮ
ಮಾ/ಗೀ: ಆರ್.ಎನ್.ಜಯಗೋಪಾಲ್
ಗಾ: ಎಸ್.ಪಿ. ಬಾಲಸುಬ್ರಹ್ಮಣ್ಯಂ, ಜಾನಕಿ, ವಾಣಿ ಜಯರಾಂ, ಶಶಿರೇಖ, ಆರ್.ಎನ್. ಜಯಗೋಪಾಲ್
ಸಂ: ವೆಂಕಟರತ್ನಂ
ಛಾ: ರಘುನಾಥರೆಡ್ಡಿ
ಕಲೆ: ಕೇಶವರಾವ್

ಸ: ಎಂ. ಎಸ್.ವಿಶ್ವನಾಥನ್
ಧ್ವ: (ಹಾ) ಎಸ್.ಪಿ.ರಾಮನಾಥನ್ (ಮಾ) ಕೋದಂಡಪಾಣಿ
ನೃ: ರೇಖಾ
ವ: ಕೊಂಡಯ್ಯ
ಪ: ಮಲ್ಲಿಕಾರ್ಜುನರಾವ್
ಸ್ಟು: ಕಂಠೀರವ, ಅಭಿಮಾನ್ ,
ಹಾ: ೧) 'ಅಮ್ಮ ಎಂಬ ಆ ಕರೆಯು..', ೨) 'ಮೂರು ವರ್ಷಗಳು...', ೩) 'ಎದೆಯ ಗುಟ್ಟಾದ ಮಾತು..', ೪) 'ಹಾಡಬೇಕ ನಾ ಹಾಡಬೇಕೇ...
ಕ.ಸಾ: ನಾಯಕಿ ಬಡವಿ. ನಾಯಕನ ಮನೆಯಲ್ಲಿ ಕೆಲಸ ಮಾಡುವ ಹೆಂಗಸಿನ ಮೊಮ್ಮಗಳು. ನಾಯಕ ಮೊದಲೇ ಒಂದು ಹುಡುಗಿಯನ್ನು ಪ್ರೀತಿಸಿರುತ್ತಾನೆ. ಕಾರಣಾಂತರಗಳಿಂದ ನಾಯಕ ಬಡ ಹುಡುಗಿಯನ್ನು ಮದುವೆಯಾಗುವ ಸಂದರ್ಭ ಒದಗುತ್ತದೆ. ಹುಡುಗನ ಅಪ್ಪ ಮದುವೆಯನ್ನು ಅಂಗೀಕರಿಸುವುದಿಲ್ಲ. ನಾಯಕಿಯನ್ನು ರೈಲಿನಿಂದ ನದಿಗೆ ತಳ್ಳಿ ಬಿಡುತ್ತಾನೆ. ನಾಯಕ ಬೇರೊಂದು ಮದುವೆಯಾಗುತ್ತಾನೆ. ಕಾಲಕ್ರಮೇಣ ನಾಯಕಿ, ನಾಯಕ ಭೇಟಿಯಾಗುವ ಸಂದರ್ಭ ಒದಗಿ ಬರುತ್ತದೆ. ನಾಯಕಿ ತಾನು ಯಾರಿಗೂ ತೊಂದರೆ ನೀಡಬಾರದೆಂದು ಸಾಯುತ್ತಾಳೆ.

೧೦೪೫. ಸಂಚು

(೧೯೮೯ / ವರ್ಣ / ಪತ್ತೇದಾರಿ)
ಲಾ: ಕ್ಲಾಸಿಕ್ ಆರ್ಟ್ಸ್ ಇಂಟರ್‌ನ್ಯಾಷನಲ್
ಪ್ರೊ: ಸಯ್ಯದ್ ದಾವೂದ್
ನಿ/ಚಿ.ಕ/ಮಾ: ಎಂ.ಸುರೇಶ್ ದಾವಣಗೆರ
ಅ: ಚರಣ್‌ರಾಜ್, ವೇದಪ್ರದ, ಸುಂದರ್‌ಕೃಷ್ಣಅರಸ್, ಲಲಿತ, ಸರೋಜ, ಗೋಪಾಲಕೃಷ್ಣ, ಅಮೃತರಾಜ್, ಜಿರಾಜ್, ಮಲ್ಲೇಶ್, ಆರತಿ, ಷಣ್ಮುಗಂ, ವಿಜಯಹೆಗಡೆ, ಮಾ।ಸಾಯಿಕುಮಾರ್, ಎಸ್.ಗಿರಿಧರ್, ಅರವಿಂದ್
ಕ: ಅಮೃತರಾಜ್, ಅಸ್ಗರ್

ಗೀ: ಕೆ.ಟಿ. ಗಟ್ಟಿ
ಗಾ: ರಾಜಕುಮಾರ್ ಭಾರತಿ, ಬೆಂಗಳೂರು ಲತ
ಸಂ: ಸುರೇಶ್ ಅರಸ್
ಛಾ: ಕೆ.ಜಿ. ವಾಸುದೇವ
ಸ: ಪೆಂಡ್ಯಾಲ ಶ್ರೀನಿವಾಸ
ನೃ: ಸುಬ್ರಹ್ಮಣ್ಯ ಕಾಂಚನ
ಸಾ: ಹಾಸನ್ ರಘು
ಹಾ: ೧) 'ಜೀವನ ಒಂದು ಸಂಗೀತ...', ೨) 'ನಾನೊಂದು ಭಾವ..
ಕ.ಸಾ.: ಕೊಲೆಯೊಂದರ ಹಿಂದಿನ ರಹಸ್ಯವನ್ನು ಬೇಧಿಸುವ ಕಥೆ.

೧೦೪೬. ಈ ಜೀವ ನಿನಗಾಗಿ

(೧೯೮೬ / ವರ್ಣ / ಸಾಮಾಜಿಕ)
ಲಾ: ದೇವಿ ಅಂಡ್ ದೇವಿ ಫಿಲಂಸ್
ಪ್ರೊ: ವಿಜಯಶಂಕರ ಭಟ್
ನಿ: ವಿ ಸೋಮಶೇಖರ್
ಅ: ವಿಷ್ಣುವರ್ಧನ್, ಊರ್ವಶಿ, ಕೆ.ಎಚ್ ಲೋಕನಾಥ್, ಎಂ.ಎಸ್ ಕಾರಂತ್, ಬೇಬಿ ರಾಶಿ, ಪ್ರಮಿಳಾ ಜೋಷಾಯ್, ಜಿ.ಜಗದೀಶ್, ಮಾ।ರಾಜೇಶ್, ಎಸ್.ಎಸ್.ರಾವ್, ಕೋಕಿಲ, ಬೆಂಗಳೂರು ನಾಗೇಶ್, ಸರಿಗಮವಿಜಿ, ಮೈಸೂರು ಲೋಕೇಶ್,

ಎನ್ನೇಶ್, ಎದರಾಮಯ್ಯ, ಚಂದ್ರಶೇಖರ್, ಪ್ರ.ಶಿವಯ್ಯ, ಶನಿಮಹದೇವಪ್ಪ, ಸತ್ಯನಾರಾಯಣ, ಚಿಕ್ಕಣ್ಣ, ಶ್ಯಾಮಲ, ಸುಧೀರ್, ಸತ್ಯಭಾಮ, ವಾಸುದೇವರಾವ್, ಲಲಿತಮ್ಮ, ಸೀಮ, ವಿ.ಸೋಮಶೇಖರ್
ಕ: ವಾಸು
ಮಾ/ಗೀ: ಚಿ.ಉದಯಶಂಕರ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್.ಜಾನಕಿ, ಬೇಬಿ ರಾಶಿ, ಜೇಸುದಾಸ್
ಸಂ: ವಿಕ್ಟರ್ ಯಾದವ್
ಛಾ: ಹೆಚ್.ಜಿ.ರಾಜು
ಕಲೆ: ಎ.ನಾಯಕ್
ಸ: ವಿಜಯಾನಂದ್
ಧ್ವ: (ಹಾ) ತರಂಗಿಣಿ ಆಡಿಯೋ (ಮಾ) ಪ್ರಸಾದ್ ಸ್ಟುಡಿಯೋ
ನೃ: ಚಿನ್ನಿ ಪ್ರಕಾಶ್
ಸಾ: ಪ್ರ.ಶಿವಯ್ಯ
ವ: ಸತ್ಯಂ
ಪ್ರ: ರಾಜಗೋಪಾಲ್, ಶ್ರೀನಿವಾಸನ್
ಸ್ಟು: ಕಂಠೀರವ
ಹಾ: ೧) 'ಮನ್ನಿಸು ಎಂದೂ ಪನ... ೨) 'ಪ್ರೀತಿಯಿಂದ ಏನೇ ಕೇಳು...', ೩) 'ಅಮ್ಮ ಅಮ್ಮ ಅನ್ನೋ... , ೪) 'ನನ್ನ ಮಡಿಲ...'
ಕ.ಸಾ: ತರುಣ ಅವನೊಂದಿಗೊಂದು ಮಗು, ಅದಕ್ಕೆ ತಾಯಿ ಇಲ್ಲ, ತಾಯಿ ಸ್ವರ್ಗದಲ್ಲಿದ್ದಾಳೆಂದು ಫೋನ್ ಮಾಡುತ್ತದೆ, ಎಕ್ಸ್‌ಚೇಂಜ್‌ನಲ್ಲಿನ ಕೆಲಸಗಾತಿ ಅದಕ್ಕೆ ಉತ್ತರಿಸುತ್ತಾಳೆ. ಇದು ನಿಜವಾದ ವಾತ್ಸಲ್ಯವೇ ಆಗಿಬಿಡುತ್ತದೆ. ಕಡೆಗೆ ಆ ಮಗು ತನ್ನ ಅಕ್ಕನದೆಂದು ತಿಳಿದು ಆ ತರುಣನನ್ನೇ ವಿವಾಹವಾಗಿ ಮಗುವಿಗೆ ನಿಜವಾದ ತಾಯಿಯಾಗುತ್ತಾಳೆ.

೧೦೪೭. ಅಗ್ನಿ ಪರೀಕ್ಷೆ

(೧೯೮೬ / ವರ್ಣ / ಸಾಮಾಜಿಕ)
ಲಾ: ಚಿತ್ರಪಿಣಿ ಪ್ರೊಡಕ್ಷನ್ಸ್
ಪ್ರೊ: ಜಯಮಾಲ ಪ್ರಭಾಕರ್ ಮತ್ತು ವಿಜಯ್
ನಿ: ನಾಗ ಶ್ರೀನಿವಾಸ್
ಸ.ನಿ: ಪಿ.ಜಿ.ಸುಧೀರ್, ಕೇಸರಿಹರವೂ
ಅ: ಪ್ರಭಾಕರ್, ಜಯಂತಿ, ಭವ್ಯ, ವಿಶ್ವವಿಜೇತ, ಸುಧೀರ್, ಶಂಕರನಾಗ್, ಸುಮಿತ್ರ, ರವಿಕಿರಣ, ಶ್ರೀಭಾರತಿ, ಅಭಿನಯ ಸುಂದರ ಕೃಷ್ಣ ಅರಸ್, ಉಮಾಶ್ರೀ, ಮುಖ್ಯಮಂತ್ರಿ ಚಂದ್ರು
ಕ: ' ಜಸ್ಟೀಸ್ ಜಗನ್ನಾಥ್ ' ತಮಿಳು ಮೂಲ
ಚಿ.ಕ: ನಾಗ ಶ್ರೀನಿವಾಸ್
ಮಾ: ಕುಣಿಗಲ್ ನಾಗಭೂಷಣ್



ಗೀ: ಆರ್.ಎನ್.ಜಯಗೋಪಾಲ್
ಗಾ: ಎಸ್. ಪಿ.ಬಾಲಸುಬ್ರಹ್ಮಣ್ಯಂ
ಸಂ: ಸತೀಶ್ ಕುಮಾರ್
ಛಾ: ಕಬೀರ್ ಲಾಲ್
ಕಲೆ: ಕೇಶವರಾವ್
ಸ: ವಿಜಯಾನಂದ್
ನೃ: ತರುಣ್, ಪ್ರೇಮ್
ಸಾ: ಸ್ವಾಮಿ
ವ: ರಮಣ
ಪ್ರ: ಮೈಸೂರು ಮಲ್ಲಿ
ಸ್ಟು: ಕಂಠೀರವ, ಸಂಕೇತ್
ಹಾ: ೧) ' ತಂದೆ ಇಲ್ಲಿ ನ್ಯಾಯಾಧೀಶ ಅಲ್ಲಿ...', ೨) 'ನಗುವ ಹೂವೆ ...', ೩) 'ಮಮತೆ ಎಂಬ ...', ೪) 'ಪೋಲೀಸ್ ಪೋಲೀಸ್ ...'
ಸೆ: ರೀಲು ೧೫
ಕ.ಸಾ: ಸಮಾಜದಲ್ಲಿ ಪ್ರತಿಷ್ಠಿತ ಜಸ್ಟೀಸ್ ಆದರೆ ಸ್ವಂತ ಮಗನ ದೃಷ್ಟಿಯಲ್ಲಿ ಮೋಸಗಾರನೆಂಬ ಹಣೆಪಟ್ಟಿ. ತಂದೆ ಮಗನ ನಡುವೆ ನಡೆಯುವ ಹಣಾಹಣಿ. ಕಡೆಗೆ ತಂದೆ ನಿರ್ದೋಷಿ ಎಂದು ತಿಳಿಯಲು ಮಗ ತಂದೆಯೊಡನೆ ಸೇರಿ ತಮಗೊದಗಿದ ಅಗ್ನಿಪರೀಕ್ಷೆಯಲ್ಲಿ ಗಲ್ಲುತ್ತಾನೆ.

೧೦೪೮. ಆನಂದ್

(೧೯೮೬ / ವರ್ಣ / ಸಾಮಾಜಿಕ)
ಲಾ: ದಾಕ್ಷಾಯಿಣಿ ಕಂಬೈನ್ಸ್
ಪ್ರೊ: ಪಾರ್ವತಮ್ಮ ರಾಜಕುಮಾರ್
ನಿ: ಸಿಂಗೀತಂ ಶ್ರೀನಿವಾಸರಾವ್
ಅ: ಶಿವರಾಜ್‌ಕುಮಾರ್ , ಸುಧಾರಾಣಿ, ಶಂಕರ್ ಪಾಟೀಲ್, ಚಿ.ಗುರುದತ್, ಕು.ನಯನ, ರಾಜೇಶ್, ಜಯಂತಿ, ಶ್ರೀಶೈಲನ್, ಶುಭ, ತಾರ, ತೂಗುದೀಪ ಶ್ರೀನಿವಾಸ್, ಚಿ.ಉದಯಶಂಕರ್, ಗೋ.ರಾ.ಭೀಮರಾವ್, ಚಿ.ರವಿಶಂಕರ್, ಹೊನ್ನವಳ್ಳಿ ಕೃಷ್ಣ, ಶಾರದಾತನಯ, ಪ್ರಣವಮೂರ್ತಿ
ಕ: ಸಿಂಗೀತಂ ಶ್ರೀನಿವಾಸರಾವ್
ಚಿ.ಕ: ಚಿ.ಉದಯಶಂಕರ್, ಸಿಂಗೀತಂ ಶ್ರೀನಿವಾಸ ರಾವ್
ಮಾ: ಬಿ.ಬಾಲರಾಜ್, ಭೂಪತಿ
ಗೀ: ಚಿ.ಉದಯಶಂಕರ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್.ಜಾನಕಿ, ವಾಣಿ ಜಯರಾಂ, ರಮೇಶ್
ಸಂ: ಪಿ. ಭಕ್ತವತ್ಸಲಂ
ಛಾ: ಬಿ.ಸಿ.ಗೌರಿಶಂಕರ್
ಕಲೆ: ವೇಕಟೇರಂಗ
ಸ: ಶಂಕರ್ ಗಣೇಶ್
ಧ್ವ: (ಹಾ) ಮುರಳಿ (ಮಾ) ಕೋದಂಡಪಾಣಿ
ನೃ: ಕೈಲಾಸಂ
ಸಾ: ಸ್ವಾಮಿ
ವ: ಪರಮಶಿವ
ಪ್ರ: ದೊರೆಸ್ವಾಮಿನಾಯ್ಡು, ರಾಜಗೋಪಾಲ್, ಮೂಗೂರು ಪಿ.ಗುರು
ಸ್ಟು: ಚಾಮುಂಡೇಶ್ವರಿ, ಕಂಠೀರವ
ಹಾ: ೧) 'ಟುವ್ವಿ.. ಟುವ್ವಿ..ಟುವ್ವಿ..ಎಂದು ಹಾಡುವ...', ೨) 'ಮೊಗವು ಚೆನ್ನ ನಗುವು ಚೆನ್ನ...', ೩) 'ನೀಲ ಮೇಘ ಗಾಳಿ ಬೀಸಿ...', ೪) 'ಟಿಕ್..ಟಿಕ್..ಟಿಕ್.. ಟಿಕ್..ಬರುತಿದೆ ಕಾಲಾ...', ೫) 'ತಿಮ್ಮಾ ತಿಮ್ಮಾ ...'
ವಿ: ಶಿವರಾಜ್‌ಕುಮಾರ್ ಮತ್ತು ಸುಧಾರಾಣಿ ಚಿತ್ರರಂಗ ಪ್ರವೇಶ ಮಾಡಿದರು.
ಕ.ಸಾ: ತನ್ನ ತಾಯಿಯನ್ನು ವಂಚಿಸಿ ಸಮಾಜದ ದೃಷ್ಟಿಯಲ್ಲಿ ತಲೆತಗ್ಗಿಸುವಂತೆ ಮಾಡಿ, ತನ್ನ ಹುಟ್ಟಿಗೆ ಕಾರಣನಾದ ಪ್ರತಿಷ್ಠಿತ ವ್ಯಕ್ತಿಯ ಅಹಂಕಾರವನ್ನು ಮುರಿದು ತನ್ನ ತಾಯಿಯನ್ನು ಹೆಂಡತಿ ಎಂದು ಒಪಿಕೊಳ್ಳುವಂತೆ ಮಾಡುವ ಆದರ್ಶ ತರುಣನ ಕತೆ.

೧೦೪೯. ಅಸಂಭವ

(೧೯೮೬ / ವರ್ಣ / ಸಾಮಾಜಿಕ)
ಲಾ: ಪರಿಮಳ ಆರ್ಟ್ಸ್
ಪ್ರೊ: ಹೆಚ್.ಎಸ್.ಮಾರುತಿ, ವೇಣುಗೋಪಾಲ್
ನಿ: ಡಿ.ರಾಜೇಂದ್ರ ಬಾಬು
ಸ.ನಿ: ಜಯಕುಮಾರ್
ಅ: ರವಿಚಂದ್ರನ್, ಅಂಬಿಕ, ಮುಖ್ಯಮಂತ್ರಿ ಚಂದ್ರು, ಸೀಗ್ರೂಫ್ ಜಾನಿ, ಮಂಡ್ಯ ಸುರೇಶ್, ಹೊನ್ನವಳ್ಳಿ ಕೃಷ್ಣ, ಶಾರದ, ಗೀತ



ಕ: ಹೆಚ್.ವಿ.ಸುಬ್ಬರಾವ್
ಚಿ.ಕ: ಡಿ.ರಾಜೇಂದ್ರ ಬಾಬು
ಮಾ: ಹೆಚ್.ವಿ.ಸುಬ್ಬರಾವ್
ಗೀ: ಆರ್.ಎನ್.ಜಯಗೋಪಾಲ್, ಶಿವಲಿಂಗಯ್ಯ
ಗಾ: ಎಸ್.ಜಾನಕಿ, ವಾಣಿ ಜಯರಾಂ, ರಮೇಶ್, ಜೇಸುದಾಸ್
ಛಾ: ಡಿ.ಪ್ರಸಾದ್ ಬಾಬು, ಪ್ರತಾಪ್
ಕಲೆ: ಕೇಶವರಾವ್
ಸ: ಶಂಕರ್ ಗಣೇಶ್
ಧ್ವ: (ಹಾ) ಕೋದಂಡಪಾಣಿ, (ಮಾ) ಗೋವಿಂದಸ್ವಾಮಿ
ನೃ: ಚಿನ್ನಿಪ್ರಕಾಶ್
ಸಾ: ಹಾರ್ಸ್‌ಬಾಬು
ವ: ರಾಮನಾಥ್
ಪ್ರ: ಎಂ.ಎಸ್.ಕೇಶವ
ಸ್ಟು: ಪ್ರೀಮಿಯರ್
ಹಾ: ೧) 'ಚಿನ್ನ ಚಿನ್ನ ನಿನ್ನ ...', ೨) 'ಜೀವಬಂದ ಬೊಂಬೆಯು ...', ೩) 'ಯಾರಿಗ ಬಂತು ...', ೪) 'ನಿನ್ನಂಥ ಕತೆಗಾರ...', ೫) 'ನಿನ್ನ ಹೆತ್ತವಳು...', ೬) 'ಹುಚ್ಚಿ ನೀರ...
ವಿ: ಬುವನಾಶ್ರೀ ಬಡಬಾಳವ ನಾಕಮ್ಮನ ಪಾತ್ರದ ಮೇಕಪ್‌ನಲ್ಲಿದರು. ಮುಂದ ಆಕಗ ಅದೇ ಬಗಯ ವಿಶೇಷ ಪಾತ್ರಗಳ ಪರಂಪರ ಪ್ರಾರಂಭವಾಯಿತು.
ಕ.ಸಾ: ಮದುವೆಯಿಲ್ಲದೆ ತಾಯಿಯಾದ ಹೆಣ್ಣು. ಮಗ ಅವಳಿಂದ ದೂರವಾಗಿ ಅನಾಥವಾಗಿ ಬೆಳೆಯುತ್ತಾನೆ. ಬಿರಟನಾದ ಆತ ಬೆಳೆದ ಮೇಲೆ ತನ್ನ ತಾಯಿಯನ್ನು ಸಂಧಿಸುವ ಸಂದರ್ಭ ಬರುತ್ತದೆ. ಪರಿಸ್ಥಿತಿ ಇಬ್ಬರನ್ನು ದೂರವಿರುವಂತೆ ಮಾಡುತ್ತದೆ. ಹಲವು ಘಟನೆಗಳ ನಂತರ ಎಲ್ಲವೂ ಸರಿಯಾಗುತ್ತದೆ.

೧೦೫೦. ನೆನಪಿನ ದೋಣಿ

(೧೯೮೬ / ವರ್ಣ / ಸಾಮಾಜಿಕ)
ಲಾ: ಸಂತೋಷ್ ಕಂಬೈನ್ಸ್
ಪ್ರೊ: ವಿ.ವರ್ಗೀಸ್
ನಿ: ಟಿ.ಎಸ್.ನಾಗಾಭರಣ
ಸ.ನಿ: ಪಿ. ಹೆಚ್.ವಿಶ್ವನಾಥ್
ಅ: ಅನಂತ್‌ನಾಗ್, ಗೀತಾ, ಶ್ರೀನಾಥ್, ರೂಪಾದೇವಿ, ಗಿರೀಶ್ ಕಾರ್ನಾಡ್, ಸಿ.ಆರ್.ಸಿಂಹ, ಲೋಕನಾಥ್, ಶಿವಮೊಗ್ಗ ವೆಂಕಟೇಶ್, ಮಹಿಮಾ
ಕ/ಚಿ.ಕ: ಅನಂತು
ಮಾ: ಹೇಮರಾಜು, ಬಸವರಾಜು
ಗೀ: ಎಂ.ಎನ್.ವ್ಯಾಸರಾವ್, ದೊಡ್ಡರಂಗೇಗೌಡ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಛಾಯಾ
ಸಂ: ಸುರೇಶ್ ಅರಸ್
ಛಾ: ಬಿ.ಸಿ.ಗೌರಿಶಂಕರ್
ಕಲೆ: ಮುದುಕೃಷ್ಣ
ಸ: ವಿಜಯಭಾಸ್ಕರ್
ಧ್ವ: ಸಿ.ಡಿ.ವಿಶ್ವನಾಥನ್
ನೃ: ರೇಖಾಪ್ರಕಾಶ್
ದ: ಪರಮಶಿವ
ಪ್ರ: ರಾಮಕೃಷ್ಣ
ಸ್ಟು: ಸಂಕೇತ್, ವಿ.ವಿ.ಎಂ
ಹಾ: ೧) 'ಈಜಿದೆ ಬದುಕಿನ ಕಡಲಿನಲ್ಲಿ ...', ೨) 'ಕಾಡಲ್ಲಿದ ಹಕ್ಕಿಯೊಂದು ...', ೩) 'ನಾನಿನ್ನ ಬಯಸಿದೆ ...', ೪) 'ಆನಂದ ಆನಂದ ಆನಂದ ..'
ಕ.ಸಾ: ಪ್ರೇಮಿಸಿದವರು ಬೇರೆಯಾಗಿ, ಹೆಣ್ಣಿಗ ಬೇರೆ ಮದುವೆಯಾದ ಮೇಲೆ ಹಳೇ ಪ್ರೇಮಿಯ ಪ್ರವೇಶ, ತನ್ನನ್ನು ಪ್ರೇಮಿಸಿದ ಹೆಣ್ಣಿನ ಬಾಳು ಹಾಳಾಗದಿರಲು ಆತನ ತ್ಯಾಗ.

೧೦೫೧. ಎಲ್ಲಾ ಹೆಂಗಸರಿಂದ

(೧೯೮೬ / ವರ್ಣ / ಸಾಮಾಜಿಕ)
ಲಾ: ಧನಲಕ್ಷ್ಮಿ ವಿಜಯ ಆರ್ಟ್ಸ್
ನಿ: ಬಿ.ಸುಬ್ಬಾರಾವ್
ಅ: ರಾಜೇಶ್, ಜೈಜಗದೀಶ್, ರಾಮಕೃಷ್ಣ, ವಿಜಯಕಾಶಿ,



ತಾರಾ, ಭಾರತಿ, ಮುಖ್ಯಮಂತ್ರಿ ಚಂದ್ರು, ಪದ್ಮಾ ವಾಸಂತಿ, ಶಶಿಕಲಾ, ಭವ್ಯ, ಮಾ|ಸಂಜಯ್, ಎನ್.ಎಸ್.ರಾವ್
ಕ.ಸಾ: ಗಂಡು ಪ್ರತಿಯೊಂದು ತನ್ನಿಂದ. ತನ್ನಿಂದಲೇ ಇಡೀ ಸಂಸಾರದ ಸುಖ, ಶಾಂತಿ ಎಂದು ಬೀಗುವಾಗ ಹೆಂಗಸು ಅದನ್ನು ನಿರಾಕರಿಸಿ ತಾನು ಎಷ್ಟರಮಟ್ಟಿಗ ಕಾರಣವೆಂದು ನಿರೂಪಿಸುವ ಹಾಸ್ಯ ಮಿಶ್ರಿತ ಚಿತ್ರಣ.

೧೦೫೨. ಬ್ರಹ್ಮಾಸ್ತ್ರ

(೧೯೮೬ / ವರ್ಣ / ಸಾಮಾಜಿಕ)
ಲಾ: ಶ್ರೀ ಭವಾನಿ ಶಕ್ತಿ ಪಿಕ್ಚರ್ಸ್
ಪ್ರೊ: ವಜ್ರಮುನಿ
ನಿ: ಪೇರಾಲ
ಸ.ನಿ: ನಾಗೇಶ್ ಕಂಪ್ಲಾಪುರ, ಎಸ್.ವಿ.ಅನಂತಮೂರ್ತಿ, ರಾಜ್ ಗೋಪಾಲ್
ಅ: ಅಂಬರೀಷ್, ಲಕ್ಷ್ಮಿ, ವಜ್ರಮುನಿ, ಶ್ರೀದೇವಿ, ಸುಧೀರ್, ಎನ್.ಎಸ್.ರಾವ್, ಇಂದುಶ್ರೀ, ಎಂ.ಎಸ್.ಉಮೇಶ್, ಬಾಲಕೃಷ್ಣ, ಮುಖ್ಯಮಂತ್ರಿ ಚಂದ್ರು, ಕುಣಿಗಲ್ ನಾಗಭೂಷಣ್, ಕೃಷ್ಣೇಗೌಡ, ರುದ್ರೇಶ್, ಪ್ರಸಾದ್, ರಾಜಣ್ಣ, ಉಮಾಶ್ರೀ, ಶ್ಯಾಮಲ, ಶಾಂತಮ್ಮ, ಕೋಕಿಲ, ಮಾ|ಅನಿಲ್, ಮಾ|ಸುನೀಲ್, ಬೇಬಿ ಕವಿತ
ಕ: ಎಂ.ಎಸ್. ಅನಂತ ರಾವ್ ಅವರ ಕಾದಂಬರಿ
ಚಿ.ಕ/ಮಾ: ಕ.ವಿ.ರಾಜು
ಗೀ: ಆರ್.ಎನ್.ಜಯಗೋಪಾಲ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್.ಜಾನಕಿ
ಸಂ: ರಾಮಯ್ಯ, ಮುರಳಿ
ಛಾ: ಕಬೀರ್ ಲಾಲ್
ಕಲೆ: ಕೆ.ಎಸ್.ವೇಣು



ಸ: ಸತ್ಯಂ
ಧ್ವ: (ಹಾ) ಕೋಟೇಶ್ವರ ರಾವ್ (ಮಾ) ಪಾಂಡು
ನೃ: ಉಡುಪಿ ಜಯರಾಂ, ದೇವಿ
ಸಾ: ವಿ.ಶಿವಯ್ಯ
ದ: ಕೃಷ್ಣ
ಪ್ರ: ಶ್ರೀನಿವಾಸ, ಜಿ.ಎಸ್.ವಾಸು
ಹಾ: ೧) 'ನಾಟಿಕ ಏಕೆ...', ೨) 'ಬ್ರಹ್ಮಾಸ್ತ್ರ.. ಬ್ರಹ್ಮಾಸ್ತ್ರ...', ೩) 'ಕನ್ನಡಮ್ಮನ ದೇವಾಲಯಾ...', ೪) 'ನನ್ನ ಜೀವವೇ ನಿಲ್ಲು...'
ಕ.ಸಾ: ಆತನೊಬ್ಬ ಹೆಸರಾಂತ ಪತ್ರಿಕೋದ್ಯಮಿ. ಆತನಿಗೆ ಒಬ್ಬ ಸುಂದರ ಹೆಂಡತಿ, ಎರಡು ಮಕ್ಕಳು. ಸುಖವಾದ ಸಂಸಾರದಲ್ಲಿ ವಿಕೃತ ಮನಸ್ಸಿನವನೊಬ್ಬನಿಂದ ಬಿರುಗಾಳಿ ಎದು ಹೆಂಡತಿಯ ಕೊಲೆಯಾಗಿ ಎಲ್ಲರೂ ಪತ್ರಿಕೋದ್ಯಮಿಯೇ ಕೊಲೆಗಾರನೆಂದು ನಿಂದಿಸುತ್ತಾರೆ. ಮಗ, ಕೊಲೆಯ ರಹಸ್ಯವನ್ನು ಭೇದಿಸುತ್ತಾನೆ. ನಿರಪರಾಧಿ ಅಪ ಸಾಯುತ್ತಾನೆ.

೧೦೫೩. ಸೀಳು ನಕ್ಷತ್ರ

(೧೯೮೬ / ವರ್ಣ / ಪತ್ತೇದಾರಿ)
ಲಾ: ಭವಾನಿ ಆರ್ಟ್ ಕ್ರಿಯೇಷನ್ಸ್
ಪ್ರೊ: ಶ್ರೀಮತಿ ಆರ್.ಜಯಲಕ್ಷ್ಮಮ್ಮ
ನಿ: ಎಸ್. ವೇಣುಗೋಪಾಲ್
ಸ.ನಿ: ಬಿ.ಎಸ್.ಲಕ್ಷ್ಮಣ್
ಅ: ಆರತಿ, ಲೀಲಾವತಿ, ವಿಜಯಲಕ್ಷ್ಮಿ, ಸಿಂಗ್, ಇಂದಿರಾ, ಪ್ರಭಾಕರ್, ಸುಂದರ ಕೃಷ್ಣ ಅರಸ್, ಜೈಜಗದೀಶ್, ಕೆ.ಎಸ್. ಅಶ್ವತ್, ವಜ್ರಮುನಿ, ದಿನೇಶ್, ಮೈಸೂರು ಲೋಕೇಶ್, ಕಿಶೋರ್ ಕುಮಾರ್
ಕ: ಟಿ.ಕೆ.ರಾಮರಾವ್ ಅವರ ಕಾದಂಬರಿ

ಚಿ.ಕ/ಮಾ: ಎಂ.ನರೇಂದ್ರಬಾಬು
ಗೀ: ವಿಜಯನಾರಸಿಂಹ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್ ಜಾನಕಿ, ಕುಸುಮಲತಾ
ಸಂ: ವಿಕ್ಟರ್ ಯಾದವ್
ಛಾ: ಚಿ.ವಿ.ರಾಜಾರಾಂ
ಕಲೆ: ಸುಂದರ್
ಸ: ರಾಜನ್ ನಾಗೇಂದ್ರ
ಧ್ವ: (ಹಾ) ಕೋಟೇಶ್ವರರಾವ್ (ಮಾ) ದಶರಥ್
ನ: ತಾರಾ
ಸಾ: ವಿಜಯ್, ಹಾಸನ್‌ರಘು
ದ: ರಾಜಗೋಪಾಲ್
ಪ್ರ: ಅಬುಲ್ಲಾ, ಸೂರಿ
ಸ್ಟು: ಕಂಠೀರವ

ಹಾ: ೧) 'ವೃಷಭವದಾ ಜನುಮದಿನಾ...
ಸೆ: ರೀಲು ೧೫, ಉದ ೩೮೯೩.೯೦, ೧೩ ೦೫ ೧೯೮೬
ಕ.ಸಾ: ಅವಳಿ ಮಕ್ಕಳು. ಇಬ್ಬರು ಬೇರೆ ಬೇರೆ ಹುಡುಗ ಹುಡುಗಿಯರನ್ನು ಪ್ರೀತಿಸಿದರು. ಒಂದು 'ನೀಳು ನಕ್ಷತ್ರ'ದ ಉಡುಗೊರೆ ಮತ್ತು ನಾಗ ಸುಂದರನೆಂಬ ಮಾಜಿ ಪಿಡಿ ಮನೆಯ ವಾತಾವರಣ ಕದಲು ಕಾರಣ. ಅವನ ಕೊಲೆ, ಆಕಸ್ಮಿಕಗಳು. ಮನೆಕೆಲಸದವನಂತ ಬಂದಿದ ಸಿ.ಐ.ಡಿಯಿಂದ ಎಲ್ಲ ರಹಸ್ಯವೂ ಬಯಲು.

೧೦೫೪. ಸತ್ಯಜ್ಯೋತಿ

(೧೯೮೬ / ವರ್ಣ / ಪತ್ತೇದಾರಿ)
ಲಾ: ಜುಬ್ಲಿ ಸತ್ಯಜ್ಯೋತಿ ಕಂಬೈನ್ಸ್
ಪ್ರೊ: ಜಾಯ್ ಥಾಮಸ್.ಜೆ.ತ್ಯಾಗರಾಜನ್
ನಿ: ಕೆ.ರಂಗರಾಜ್
ಸ.ನಿ: ಎ.ಆರ್.ಭಾಸ್ಕರ್
ಅ: ವಿಷ್ಣುವರ್ಧನ್, ಜೈಜಗದೀಶ್, ಬಾಲಕೃಷ್ಣ, ಲೋಕನಾಥ್, ಊರ್ವಶಿ, ಸುಮಲತಾ, ರಾಜಲಕ್ಷ್ಮಿ, ಎನ್.ಎಸ್.ರಾವ್, ಲೋಹಿತಾಶ್ವ
ಕ: ಡೆನ್ನಿಸ್ ಜೋಸೆಫ್
ಮಾ: ಚಿ.ಉದಯಶಂಕರ್
ಗೀ: ಚಿ.ಉದಯಶಂಕರ್, ಆರ್.ಎನ್.ಜಯಗೋಪಾಲ್

ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್.ಜಾನಕಿ, ಚಿತ್ರಾ
ಸಂ: ಕೆ.ಆರ್.ಕೃಷ್ಣನ್
ಛಾ: ದಿನೇಶ್‌ಬಾಬು
ಕಲೆ: ಮೋಹನ್ ರಾಜೇಂದ್ರನ್
ಸ: ಇಳಯರಾಜ
ಧ್ವ: (ಹಾ) ಕೋಟೀಶ್ವರರಾವ್, ಬಾಬು (ಮಾ) ಕೋದಂಡ ಪಾಣಿ, ಗೋವಿಂದಸ್ವಾಮಿ
ನೃ: ಮೂಗೂರು ಸುಂದರ್
ಸಾ: ರಾಜು
ವ: ಎಂ.ಜಿ.ನಾಯ್ಡು
ಪ್ರ: ಸುಂದರ ಮೂರ್ತಿ, ಶ್ರೀನಿವಾಸ್
ಸ್ಥ: ಜೆ.ಎಂ.ಸಿ
ಹಾ: ೧) 'ಕಣ್ಣು ಆಡೋ ಮಾತೆ ...', ೨) 'ನೀ ನೀಡಿದ ಪ್ರೇಮ ಸುಖ ...', ೩) 'ಪ್ರೀತಿ ನೆನಪ ಮೀಟು ...', ೪) 'ಕೃಷ್ಣನ ಕಾಣುವ ಮುಗಿಲೆ ...'
ಕ.ಸಾ: ನಾಯಕ ಪ್ರೀತಿಸಿ ಮದುವೆಯಾಗುತ್ತಾನೆ. ಸುಂದರವಾಗಿದ್ದ ಆ ಸಂಸಾರದಲ್ಲಿ ನಾಯಕಿಯ ಕೊಲೆಯಾಗುತ್ತದೆ. ನಾಯಕ ಅಪರಾಧಿ ಎಂದು ಶಿಕ್ಷೆಗೆ ಒಳಪಡುತ್ತಾನೆ. ಪತ್ರಕರ್ತೆ ಹೆಣ್ಣು ಕೊಲೆಯ ರಹಸ್ಯವನ್ನು ಭೇದಿಸುವ ಸಸ್ಪೆನ್ಸ್ ಚಿತ್ರ.

೧೦೫೫. ೨೭ ಮಾವಳ್ಳಿ ಸರ್ಕಲ್

(೧೯೮೬ / ವರ್ಣ / ಪತ್ತೇದಾರಿ)
ಲಾ: ಎಸ್.ಎನ್. ಕ್ರಿಯೇಷನ್
ಪ್ರೊ/ಕ/ಚಿ.ಕ/ಮಾ/ನಿ: ಟಿ.ಎಸ್.ನರಸಿಂಹನ್
ಅ: ಕಲ್ಪನಾ ರಷಿ, ಟಿ.ಎಸ್.ನರಸಿಂಹನ್, ಸೋಮಶೇಖರ್ ರಾವ್, ದೇವರಾಜ್, ಉಮಾಶ್ರೀ, ಅವಿನಾಶ್
ಛಾ: ಸುಂದರನಾಥ ಸುವರ್ಣ
ಸ: ದೇವನಾಥನ್

ಕಲೆ: ಎ. ಎಂ. ಪ್ರಕಾಶ್
ಕ.ಸಾ: ಕಳ್ಳರಿಬ್ಬರು ತಮ್ಮ ದುರ್ವ್ಯವಹಾರಗಳಿಗೆ ಮನೆಯೊಂದನ್ನು ಬಳಸಿಕೊಳ್ಳುತ್ತಾರೆ. ಆ ಮನೆಯಲ್ಲಿರುವ ಗಟ್ಟಿಗ ಕುರುಡ. ಉಳಿವಿಗಾಗಿ ನಡೆಯುವ ಹೋರಾಟದಲ್ಲಿ ಇಬ್ಬರು ಕಳ್ಳರು ಪ್ರಾಣ ಕಳೆದು ಕೊಳ್ಳಬೇಕಾಗುತ್ತದೆ. ಇಡೀ ಚಿತ್ರ ಮನೆಯಲ್ಲಿ ನಡೆಯುತ್ತದೆ.

೧೦೫೬. ಪ್ರೀತಿ

(೧೯೮೬ / ವರ್ಣ / ಸಾಮಾಜಿಕ)
ಲಾ: ಶಕ್ತಿ ಪ್ರೊಡಕ್ಷನ್ಸ್
ಪ್ರೊ: ಮಾಣಿಕ್ ಚಂದ್ ಆರ್.ಎಫ್ ಮತ್ತು ಮಿತ್ರರು

ನಿ: ಎ.ಟಿ.ರಘು
ಅ: ಅಂಬರೀಷ್, ಸುಂದರಕೃಷ್ಣ ಅರಸ್, ವಜ್ರಮುನಿ, ಎನ್.ಎಸ್.ರಾವ್, ಹೇಮಲತ, ಲೋಹಿತಾಶ್ವ, ಸುಧೀರ್, ಟಿ.ಎನ್.ಬಾಲಕೃಷ್ಣ, ಗಾಯಿತ್ರಿ, ಭವ್ಯ, ಬ್ರಹ್ಮಾವರ್
ಕ/ಚಿ.ಕ/ಮಾ: ಎ.ಟಿ.ರಘು
ಗೀ: ಗೀತಪ್ರಿಯ, ದೊಡ್ಡರಂಗೇಗೌಡ, ಶ್ಯಾಮ ಸುಂದರ ಕುಲಕರ್ಣಿ
ಸಂ: ಕೆ.ಬಾಲು
ಛಾ: ಎನ್.ಆರ್.ಕೆ.ಮೂರ್ತಿ
ಕಲೆ: ಆರ್.ಕೆ.ಸುಂದರಂ
ಸ: ಜಿ.ಕೆ.ವೆಂಕಟೇಶ್
ನೃ: ಉಡುಪಿ ಜಯರಾಂ
ಸ್ಟು: ಕಂಠೀರವ, ಪ್ರಸಾದ್
ಹಾ: ೧) 'ಪ್ರೀತಿ ಪ್ರೀತಿ ಕ್ಷಣ ಕ್ಷಣ...', ೨) 'ಗಜವದನ ನೀನೇ...', ೩) 'ನೀ ಹಚ್ಚಿದಾ ಈ ಕುಂಕುಮ...', ೪) ' ಕಂದ ನನ್ನ ಕಂದ...', ೫) 'ಈ ವಯಸಲೀ.. ಈ ಸೊಗಸಲೀ...
ಕ.ಸಾ: ನಾಯಕ ನಾಯಕಿ ಒಂದೇ ಕಾಲೇಜಿನಲ್ಲಿ ಓದುತ್ತಿರುತ್ತಾರೆ. ನಾಯಕಿಯ ಮೇಲೆ ಒಬ್ಬ ಕೆಟ್ಟದೃಷ್ಟಿ ಹಾಕುತ್ತಾನೆ. ನಾಯಕ ಅವನ ಹಾದಿಗೆ ಅಡ್ಡ ಬರುತ್ತಾನೆ. ನಾಯಕಿಯನ್ನು ವಿವಾಹವಾಗಿ ಸುಖಸಂಸಾರದ ಕನಸು ಕಾಣುವ ಹೊತ್ತಿನಲ್ಲೇ ಅವನ ಕೊಲೆಯಾಗಿ, ನಾಯಕಿ ಭೀತಿಯಿಂದ ಬೇರೆಡೆಗೆ ಹೋಗಿ ನೆಲೆಸುತ್ತಾಳೆ. ಅವಳಿಗೆ ಹುಟ್ಟಿದ ಮಗ ಬೆಳೆದು ದೊಡ್ಡವನಾಗಿ, ತನ್ನ ತಂದೆಯನ್ನು ಕೊಂದ ವ್ಯಕ್ತಿಯ ಮಗಳನ್ನೇ ಪ್ರೀತಿಸುತ್ತಾನೆ. ತನ್ನ ಗಂಡನ ಸಾವಿಗೆ ಕಾರಣನಾದ ವ್ಯಕ್ತಿಯ ಮಗಳೆಂದು ತಿಳಿದು ಮೊದಲು ನಿರಾಕರಿಸಿದರೂ ಅವರ ನಿಷ್ಕಳಂಕ ಪ್ರೀತಿಗೆ ಸೋಲುತ್ತಾಳೆ.

೧೦೫೭. ಸೇಡಿನ ಸಂಚು

(೧೯೮೬ / ವರ್ಣ / ಸಾಮಾಜಿಕ)
ಲಾ: ಶ್ರೀರಾಜರಾಜೇಶ್ವರಿ ಪ್ರೊಡಕ್ಷನ್ಸ್
ಪ್ರೊ: ಬಿ.ಪಾಂಡುರಂಗ ಬಾಳಿಗ, ಬಿ.ಸರ್ವೋತ್ತಮ ಬಾಳಿಗ, ಬಿ. ಮೋಹನ್‌ದಾಸ್ ಬಾಳಿಗ
ನಿ: ಟಿ.ಎಸ್. ನಾಗಾಭರಣ
ಸ.ನಿ: ಪಿ.ಹೆಚ್.ವಿಶ್ವನಾಥ್
ಅ: ರಾಮಕೃಷ್ಣಹೆಗಡೆ, ಭವ್ಯ, ರಾಜೇಶ್, ಮಾಲತಿ, ರಾಜಾನಂದ್, ಮುಖ್ಯಮಂತ್ರಿ ಚಂದ್ರು, ಚೇತನ್ ರಾಮರಾವ್, ಲಕ್ಷ್ಮಣ್, ಸತ್ಯಸಂಧ, ಶಂಕರ್ ರಾವ್,

ಮಾಚೇತನ್, ಸಿಗ್ರೋಜಾಸಿ, ಸರೋಜಿನಿಶೆಟ್ಟಿ, ನಾಗರಾಜ್, ನಟರಾಜ್, ಕಮಲ, ವಿಮಲ
ಕ: ಬಾಳಿಗಾ ಸಹೋದರರು
ಚಿ.ಕ: ಟಿ.ಎಸ್. ನಾಗಾಭರಣ
ಮಾ/ಗೀ: ಚಿ.ಉದಯಶಂಕರ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್.ಜಾನಕಿ, ರಮೇಶ್, ಬಿ.ಆರ್.ಛಾಯ
ಸಂ: ಬಾಬು ಉಮಾಶಂಕರ್
ಛಾ: ಕುಲಶೇಖರ
ಕಲೆ: ವೇಣುಗೋಪಾಲ್
ಸ: ಸಿ.ಹೆಚ್.ಸತ್ಯಂ
ಧ್ವ: (ಹಾ) ಕೋಟೀಶ್ವರ ರಾವ್, (ಮಾ) ಗೋವಿಂದಸ್ವಾಮಿ
ನೃ: ಚಿನ್ನಿ ಪ್ರಕಾಶ್
ಸಾ: ಜ್ಯೂಡೋ ರತ್ನಂ
ವ: ವೇಣು
ಪ್ರ: ಮೈಸೂರ್ ಮಲ್ಲಿ
ಹಾ: ೧) ' ಈ ಸಾಗರ ಕನ್ಯೆಯು ನಾನು...', ೨) 'ಇರಬೇಕು ಜಗಳ...', ೩) 'ಕೋಗಿಲೆ ಕಾಯುವುದು...', ೪) 'ಎಲ್ಲಿಂದ ಬಂದೆ ನೀನು..'
ಸೆ: ರೀಲು - ೧೫ ಉದ - ೩೬೬೧.೪೮
ಕ.ಸಾ: ದುಷ್ಟರ ಕಾರಣದಿಂದ ಅಪರಾಧದ ಹೊರೆ ಹೊತ್ತು ಜೈಲು ಸೇರಿದ ತಂದೆಯನ್ನು ನಿರಪರಾಧಿ ಎಂದು ಸಾಬೀತು ಮಾಡುವ ಮಗ, ಅದಕ್ಕಾಗಿ ಆತ ಎದುರಿಸಬೇಕಾದ ಕಷ್ಟಗಳ ಪರಂಪರೆ ಚಿತ್ರದ ಕಥೆ.

೧೦೫೮. ಟೈಗರ್

(೧೯೮೬ / ವರ್ಣ / ಸಾಮಾಜಿಕ)
ಲಾ: ತಾರಕೇಶ್ವರಿ ಪ್ರೊಡಕ್ಷನ್ಸ್
ಪ್ರೊ: ಕೆ.ಸದಾಶಿವ, ಡಿ.ಎಸ್.ಪ್ರಕಾಶ್, ಎ.ಪಾಂಡುರಂಗಶೆಟ್ಟಿ
ಚಿ.ಕ/ನಿ: ರವಿರಾಜ್ ಶೆಟ್ಟಿ
ಸ.ನಿ: ಕೇಶವ ಪ್ರಸಾದ್
ಅ: ಪ್ರಭಾಕರ್, ಆರತಿ, ರಾಮಕೃಷ್ಣ, ಮಹಾಲಕ್ಷ್ಮಿ, ವಜ್ರಮುನಿ, ಹೇಮಶ್ರೀ, ಚರಣ್‌ರಾಜ್, ಸಿಗ್ರೋಜಾಸಿ, ಸುಜಾತ, ಡಿಂಗ್ರಿ ನಾಗರಾಜ್, ಬೇಬಿ ವಿಜಯಶ್ರೀ, ಎನ್. ಎಸ್.ರಾವ್, ಉಮಾಶ್ರೀ, ಸಿಲ್ಕ್ ಸ್ಮಿತ, ಸುಧೀರ್
ಕ: ವಿಕ್ಟರ್ಸ್ ಪದ್ಮಜ
ಮಾ: ಕುಣಿಗಲ್ ನಾಗಭೂಷಣ್
ಗೀ: ಆರ್. ಎನ್.ಜಯಗೋಪಾಲ್, ವಿ.ಶಂಕರ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಪಿ.ಸುಶೀಲ, ಎಸ್. ಜಾನಕಿ, ವಾಣಿಜಯರಾಂ

ಸಂ: ವಳ್ಳಿಸ್ವಾಮಿ, ಕೃಷ್ಣಪ್ರಸಾದ್
ಛಾ: ಕಬೀರ್ ಲಾಲ್
ಕಲೆ: ಬಾಬು
ಸ: ಶಂಕರ್ ಗಣೇಶ್
ಧ್ವ: (ಹಾ) ಸೋಮಶೇಖರ್. (ಮಾ) ವಿಶ್ವನಾಥ್
ನೃ: ಚಿನ್ನಿ ಪ್ರಕಾಶ್
ಸಾ: ಬಾಷ
ವ: ರಮಣ
ಪ್ರ: ಮಲ್ಲಿ
ಸ್ಟು: ಎ.ವಿ.ಎಂ, ಸಂಕೇತ್, ಪ್ರೀಮಿಯರ್
ಕ.ಸಾ: ನಿಷ್ಠಾವಂತ ಪೊಲೀಸ್ ಅಧಿಕಾರಿ ಸಮಾಜ ವಿದ್ರೋಹಿಗಳ ಕಾರ್ಯಕ್ಕೆ ಅಡ್ಡಿಯಾದುದಕ್ಕೆ ಪಾಠ ಕಲಿಸಲು ಅವನ ಮಗಳ ಕೊಲೆ ಆಗುತ್ತದೆ. ಕೋಪದಿಂದ ಸಿಡಿದೇಳುವ ಅಧಿಕಾರಿ ದುಷ್ಟರನ್ನು ಸದೆಬಡಿಯುತ್ತಾನೆ.

೧೦೫೯. ನನ್ನವರು

(೧೯೮೬ / ವರ್ಣ / ಸಾಮಾಜಿಕ)
ಲಾ: ಪ್ರೀತಿ ಫಿಲ್ಮ್ ಇಂಟರ್‌ನ್ಯಾಷನಲ್
ಪ್ರೊ./ನಿ: ಕೆ.ಭಗವಾನ್ ಸಾರಂಗ್
ಸ.ನಿ: ಸಹ್ಯಾದ್ರಿ
ಅ: ಲಕ್ಷ್ಮಿ, ಶ್ರೀನಾಥ್, ರಾಜೀವ್, ರಾಮಕೃಷ್ಣ, ದಿನೇಶ್, ಬಾಲಕೃಷ್ಣ, ಉಮಾ ಶಿವಕುಮಾರ್, ಮೈಸೂರು ಲೋಕೇಶ್, ಉಮೇಶ್, ಉಮಾಶ್ರೀ, ಮಾ।ಮಂಜುನಾಥ್, ಮಾ।ವಿಜಯ, ಬೇಬಿ ಸುವೀಣ, ಬೇಬಿ ರಾಧಿಕ, ದೇವ ಪ್ರಸಾದ್, ಕಲ್ಯಾಣಿ,

ಪ್ರಹ್ಲಾದ್, ಹಂಸರಾಜ್, ತಿಮ್ಮಯ್ಯ, ಕಮಲೇಶ್ವರನ್
ಕ: ಅರುಣ ಇರಾನಿ
ಮಾ: ಬಿ.ಎಲ್.ವೇಣು
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್.ಜಾನಕಿ, ಬೆಂಗಳೂರು ಲತಾ
ಸಂ: ಹುಸೇನ್ ಬ್ರಹ್ಮಪಾಲ
ಛಾ: ಪ್ರದೀಪ್ ಪೈ
ಕಲೆ: ದಾವೂದ್ ಸಯ್ಯದ್
ಸ: ಎಂ. ರಂಗರಾವ್
ಧ್ವ: (ಹಾ) ಕೋದಂಡಪಾಣಿ (ಮಾ) ಗೋವಿಂದಸ್ವಾಮಿ
ನೃ: ಮನೋಹರನಾಯ್ಡು, ಸೂರ್ಯಕಿರಣ್, ಮಾಧವ ಕಿರಣ್
ಪ್ರ: ರಾಮಕೃಷ್ಣ ಕೇಶ: ನಾಗೇಶ್ವರರಾವ್
ಸ್ಟು: ಕಂಠೀರವ
ಹಾ: ೧) 'ಬೆಳಕನು ಚೆಲ್ಲಿ ಬಂದೇ ಬಂತು...', ೨) 'ನಿನಗಾಗಿ ನಾನು...೩) 'ಜೇಬಲ್ಲಿ ಇರಬೇಕು ರೂಪಾಯಿ...', ೪) 'ಪ ಪಮ್ಮಿ .. ಪ ನಿಮ್ಮಿ...
ಕ.ಸಾ: ತಮ್ಮ ತಂಗಿಯರಿಗಾಗಿ ತನ್ನ ಇಡೀ ಜೀವನವನ್ನು ಮುಡಿಪಾಗಿಸುವ ತ್ಯಾಗಮಯಿ ಸೋದರಿಯ ಕತೆ.

೧೦೬೦. ಪ್ರೇಮಜಾಲ

(೧೯೮೬/ವರ್ಣ/ಸಾಮಾಜಿಕ)
ಲಾ: ಮೂಕಾಂಬಿಕಾ ಮೂವೀಸ್
ಪ್ರೊ: ಆರ್.ರಾಜಣ್ಣ
ನಿ/ಚಿ.ಕ: ಜೋಸೈಮನ್
ಅ: ಅನಂತ್‌ನಾಗ್, ಶಿವರಾಂ, ಲೋಹಿತಾಶ್ವ, ರಾಜಾನಂದ್, ಚೇತನ್ ರಾಮರಾವ್, ಸೀತಾರಾಮ್, ಅನಂತರಾಮ್ ಮಚ್ಚೇರಿ, ತೂಗುದೀಪ ಶ್ರೀನಿವಾಸ್, ನೀಗ್ರೋಜಾನಿ, ಮಹಾಲಕ್ಷ್ಮಿ, ಜಾನಕಮ್ಮ, ಮನೋಚಿತ್ರ, ಶ್ರೀ ಭಾರತಿ,

ರತ್ನಾಕರ್, ಟೊಮೆಟೊ ಸೋಮು, ಶಿವಕುಮಾರ್
ಕ/ಮಾ: ಬಿ.ಎಲ್.ವೇಣು
ಗೀ: ದೊಡ್ಡರಂಗೇಗೌಡ, ವಿಜಯ ನಾರಸಿಂಹ, ಭಂಗಿರಂಗ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ವಾಣಿ ಜಯರಾಂ
ಸಂ: ಕೆ. ಬಾಲು
ಛಾ: ಎಸ್. ರಾಮಚಂದ್ರ
ಕಲೆ: ಸಿ.ಕೆ.ಜಾನ್
ಸ: ಎಸ್.ವಿ.ರಂಗರಾವ್
ಧ್ವ: (ಹಾ) ಸಂಕೇತ್
ನೃ: ಚಿನ್ನಿಪ್ರಕಾಶ್
ಹಾ: ೧) 'ಕಾಲದ ಸುಳಿಯಲ್ಲಿ...', ೨) 'ಅ.. ಆ..ಇ..ಈ..ಆರಂಭ...', ೩) 'ವಂದನೆ ಅಭಿನಂದನೆ...', ೪) 'ಈ ಬೆಂಕಿ ಜ್ವಾಲೆಯಲಿ...
ಕ.ಸಾ: ಪ್ರೇಮ ತ್ರಿಕೋನವಿರುವ ಕಥೆ. ಶಿಕ್ಷಕ ವಿದ್ಯಾರ್ಥಿನಿ ಪ್ರೀತಿಸಿದರು. ಅಗದವರ ಸಂಚು ಭಿನ್ನಾಭಿಪ್ರಾಯ ತಂದಿತು. ಆಕ ನಿಜವನ್ನು ತಿಳಿದು ಅತನನ್ನು ಸೇರುವ ಹೊತ್ತಿಗೆ ಅತ ಸನ್ಯಾಸಿ ಆಗಿಬಿಟ್ಟಿದ.

೧೦೬೧. ನಮ್ಮ ಊರ ದೇವತೆ

(೧೯೮೬ / ವರ್ಣ / ಸಾಮಾಜಿಕ)
ಲಾ: ಮಧು ಎಂಟರ್ ಪ್ರೈಸಸ್
ಪ್ರೊ: ಎ.ಎಲ್.ಅಬ್ಬಾಯಿ ನಾಯ್ಡು
ನಿ: ರೇಣುಕಾಶರ್ಮ
ಸ.ನಿ: ಕೆ.ಎನ್.ಪದ್ಮನಾಭ್, ಎನ್.ಪಿ.ಶ್ರೀಕಂಠಮೂರ್ತಿ
ಅ: ಚರಣ್‌ರಾಜ್, ಭಾರತಿ, ಭವ್ಯ, ದೊಡ್ಡಣ್ಣ, ಸುಧೀರ್, ವಿನೋದ್‌ಆಳ್ವ, ಡಿಂಗ್ರಿನಾಗರಾಜ್, ಶ್ರೀಭಾರತಿ, ಪ್ರಮಿಳಾ ಜೋಷಾಯ್, ಎ.ಎಲ್.ಅಬ್ಬಾಯಿನಾಯ್ಡು, ಉಮಾಶ್ರೀ, ಕೋಕಿಲ, ಲೀಲಮ್ಮ, ಸೀಮ, ಅನುರಾಧ, ಪೂರ್ಣೇಂದ್ರ



ಕ: ಎ.ಎಲ್.ಅಬ್ಬಾಯಿ ನಾಯ್ಡು
ಚಿ.ಕ: ಟಿ.ಕೆ. ಷಣ್ಮುಗ ಸುಂದರ್
ಮಾ: ಜಿ.ಉದಯಶಂಕರ್
ಗೀ: ಚಿ.ಉದಯಶಂಕರ್, ವಿಜಯನಾರಸಿಂಹ
ಗಾ: ಬಿ.ಆರ್.ಛಾಯ, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಮಂಜುಳಾ ಗುರುರಾಜ್, ಪಿ.ಸುಶೀಲ
ಸಂ: ಶಶಿಕುಮಾರ್.ಟಿ.
ಛಾ: ಎಸ್.ವಿ.ಶ್ರೀಕಾಂತ್
ಕಲೆ: ಕೇಶವರಾವ್
ಸ: ಸತ್ಯಂ
ಧ್ವ: (ಹಾ) ಜೆಮಿನಿ
ನೃ: ಉಡುಪಿ ಜಯರಾಂ
ಸಾ: ವೈ.ಶಿವಯ್ಯ
ವ: ಮರಡಯ್ಯ ನಾಗರಾಜ್, ಎ.ಎಲ್.ಬಾಲು.
(ಕೇಶ : ತತಾರವ್)
ಪ್ರ: ರಾಜಗೋಪಾಲ್, ಶ್ರೀನಿವಾಸ್, ವೆಂಕಟಸ್ವಾಮಿ, ಶರತ್
ಸ್ಟು: ಕಂಠೀರವ, ಪ್ರೀಮಿಯರ್, ಬಸಂತ್
ಹಾ: ೧) 'ಇನಿಯಾ ನಿನ್ನ ನಗುವೇ...', ೨) 'ಆನಂದ ಆನಂದ ನಿನ್ನನು...', ೪) 'ಅಯ್ಯಯ್ಯೋ ನನ್ನನು...', ೫) 'ಅಮ್ಮಾ ಅಮ್ಮಾ ಏಕೆ ನಿನ್ನೀ...
ಸೆ: ರೀಲು - ೧೫, ಉದ ೪೪೭೯.೩೪, ೨೯ - ೦೮ -೧೯೮೬
ಕ.ಸಾ: ಊರಿನ ಹಿತಕ್ಕಾಗಿ ದುಷ್ಟನಾದ ಪತಿಯನ್ನು ಆತನ ಪತ್ನಿಯೇ ಸಂಹಾರ ಮಾಡುವ ಕಥೆ.

೧೦೬೨. ಕೃಷ್ಣ ನೀ ಬೇಗನೆ ಬಾರೋ

(೧೯೮೬ / ವರ್ಣ / ಸಾಮಾಜಿಕ)
ಲಾ: ರೋಹಿಣಿ ಪಿಕ್ಚರ್ಸ್
ಪ್ರೊ: ದುಷ್ಯಂತ್‌ಸಿಂಗ್, ಅಮೃತಾಸಿಂಗ್, ಅನುರಾಧಾ ಸಿಂಗ್
ನಿ/ಚಿ.ಕ: ಭಾರ್ಗವ
ಸ.ನಿ: ಫಣಿ ರಾಮಚಂದ್ರ
ಅ: ವಿಷ್ಣುವರ್ಧನ್, ಭವ್ಯ, ಕಿಮ್, ವಿಶ್ವವಿಜೇತ, ಮುಖ್ಯಮಂತ್ರಿ ಚಂದ್ರು, ಅರಿಕೇಸರಿ, ಸರ್ವಮಂಗಳ, ಮೈಸೂರು ಲೋಕೇಶ್
ಕ: "ಸೌತೇನ್" ಹಿಂದಿ ಚಿತ್ರದ ಕಥೆ ಆಧಾರ
ಮಾ/ಗೀ: ಚಿ.ಉದಯಶಂಕರ್

ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್.ಜಾನಕಿ
ಸಂ: ಗೌತಮ್‌ರಾಜು
ಛಾ: ಡಿ.ವಿ.ರಾಜಾರಾಂ
ಕಲೆ: ನಜೀರ್
ಸ: ಬಪ್ಪಿಲಹರಿ
ಧ್ವ: (ಹಾ) ರಾಬಿನ್ ಚಟರ್ಜಿ (ಮಾ) ಕೋದಂಡಪಾಣಿ
ನೃ: ಚಿನ್ನಿ ಪ್ರಕಾಶ್, ಸುರೇಖ
ಸಾ: ವೈ.ಶಿವಯ್ಯ
ವ: ಕಲಿಕಾಮೂರ್ತಿ, ಬಡಾಸಾಬ್
ಪ್ರ: ಜಿ. ವೆಂಕಟೇಶ್
ಸ್ಟು: ಚಾಮುಂಡೇಶ್ವರಿ
ಹಾ: ೧) 'ಮಮ್ಮಿ ಮಮ್ಮಿ ಮಮ್ಮಿ...', ೨) 'ಈ ರಾಧೆಗೇ ಗೋಪಾಲನಾ...', ೩) 'ಗೋವಿಂದಾ.. ಗೋವಿಂದಾ...., ೪) 'ಅಲಾರೆ ಅಲಾರೆ ಮುಕುಂದ ಮುರಾರೆ.....'
ಕ.ಸಾ: ಕೃಷ್ಣನ ಅದರ್ಶಕ್ಕೆ ಮಾರುಹೋದ ರಾಧ, ಅತನ ಪತ್ನಿ ರುಕ್ಮಿಣಿಯ ಸಂಶಯ ನಿವಾರಣೆಗಾಗಿ ತನ್ನ ಬಲಿದಾನಮಾಡುವ ತ್ಯಾಗಮಯ ಕಥೆ.

೧೦೬೩. ರಸ್ತೆ ರಾಜ

(೧೯೮೬ / ವರ್ಣ / ಸಾಮಾಜಿಕ)
ಲಾ: ಟಿ.ಪಿ.ಜಿ.ಆರ್ಟ್ಸ್
ಪ್ರೊ: ತ್ಯಾಗು ಕ.
ನಿ: ಟಿ.ಜಿ.ಪಿ. ಆರ್ಟ್ಸ್
ಅ: ಶಂಕರ್‌ನಾಗ್, ಸತೀಶ್, ಗಾಯತ್ರಿ, ಜಯಂತಿ, ಕ. ವಿಜಯಾ, ಮುಸುರಿ ಕೃಷ್ಣಮೂರ್ತಿ, ಹನುಮಂತಾಚಾರ್, ಬೇಬಿ ಹೇಮಾ, ಶ್ರೀಧರ್, ಅಶ್ವತ್, ತಾರಾ, ಚಿತ್ರಾ, ದೇವಿ, ಲಲಿತ, ರಮೇಶ್
ಕ/ಚಿ.ಕ: ಎಂ. ಟಿ. ಸುಂದರ್



ಮಾ/ಗೀ: ಚಿ. ಉದಯಶಂಕರ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್. ಜಾನಕಿ
ಸ: ಸತ್ಯಂ
ಛಾ: ಕೋಟೇಶ್ವರ ರಾವ್
ಕ.ಸಾ: ರಸ್ತೆಯಲ್ಲಿ ಬೆಳೆದ ರಾಜ ಒರಟನಾದರೂ ಒಳ್ಳೆಯ ಮನಸ್ಸಿನವನು. ಸಮಾಜದಲ್ಲಿ ಪ್ರತಿಷ್ಠಿತ ಸ್ಥಾನದಲ್ಲಿದ್ದ ಹೆಣ್ಣನ್ನು ಮಣಿಸಲು ರಾಜನನ್ನು ಬಳಸಿಕೊಳ್ಳುತ್ತಾರೆ. ಸಾಕಷ್ಟು ಜಟಾಪಟಿಯ ನಂತರ ರಾಜನಿಗೆ ಆ ಹೆಣ್ಣು ತನ್ನ ತಾಯಿ ಎಂದು ತಿಳಿದು, ಅವಳಿಂದ ಅಗಲಿಸಿ ತನ್ನ ತಂದೆಯ ಸಾವಿಗೆ ಕಾರಣರಾದ ವ್ಯಕ್ತಿಗಳನ್ನು ಶಿಕ್ಷಿಸುತ್ತಾನೆ.

೧೦೬೪. ಸುಂದರ ಸ್ವಪ್ನಗಳು

(೧೯೮೬ / ವರ್ಣ / ಸಾಮಾಜಿಕ)
ಲಾ: ಕಲಾಲಯಾ ಪ್ರೊಡಕ್ಷನ್ಸ್
ಪ್ರೊ: ವಿ.ನಟರಾಜನ್
ನಿ: ಕ.ಬಾಲಚಂದರ್
ಸ.ನಿ: ಸುರೇಶ್‌ಕೃಷ್ಣ
ಅ: ರಮೇಶ್, ಶ್ರೀಧರ್, ನಿವೇದಿತಾ, ಮೈಸೂರು ಲೋಕೇಶ್, ಸೋಮಶೇಖರ ರಾವ್, ಪ್ರಣಯಮೂರ್ತಿ, ತಾರಾ, ಜಯಶ್ರೀ, ಅಶ್ವತ್
ಕ: ಮಣಿಯನ್
ಚಿ.ಕ: ಕ.ಬಾಲಚಂದರ್

ಮಾ/ಗೀ: ಆರ್.ಎನ್.ಜಯಗೋಪಾಲ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಜೇಸುದಾಸ್, ರಾಜ್‌ಕುಮಾರ್ ಭಾರತಿ, ಪಿ.ಸುಶೀಲ, ವಾಣಿಜಯರಾಂ, ಎಸ್.ಪಿ.ಶೈಲಜ
ಸಂ: ಗಣೇಶ್ ಕುಮಾರ್

ಛಾ: ಆರ್.ರಘುನಾಥರೆಡ್ಡಿ
ಕಲೆ: ಮೋಹನ್
ಸ: ವಿಜಯಭಾಸ್ಕರ್
ಧ್ವ: (ಹಾ) ಕೋದಂಡಪಾಣಿ. (ಮಾ) ಗೋವಿಂದಸ್ವಾಮಿ
ನೃ: ಕುಮಾರ್
ವ: ಎಸ್.ಕೆ.ಬಾಲನ್
ಪ್ರ: ಆರ್. ಸುಂದರಮೂರ್ತಿ
ಹಾ: ೧) 'ಹೇಗೆ ಹೇಳಲಿ ಅದ ಹೇಗೆ ಹೇಳಲಿ ...'. ೨) 'ಹೃದಯವು ಸ್ವರ ಹಾಡಿದೆ ...', ೩) 'ನಗಬೇಕು ...', ೪) 'ಕ್ಷಮಿಸಿ ನಾ ಹೇಳೊದೆಲ್ಲಾ ...'
ಕ.ಸಾ: ಪ್ರೇಮವನ್ನು ಮದುವೆಯಾದ ಅಕ್ಕ ಹಿರಿಯಕ್ಕನ ಬದುಕನ್ನು ಸರಿಪಡಿಸಲು ಕಿರಿಯ ಸೋದರಿ ತನ್ನ ಶೀಲವನ್ನೇ ಪಣವಾಗಿಡುತ್ತಾಳೆ. ವಿವಾಹ ವ್ಯವಸ್ಥೆ ಮುಖ್ಯ ಎನ್ನುವ ತತ್ವ.

೧೦೬೫. ಗುರಿ

(೧೯೮೬ / ವರ್ಣ / ಸಾಮಾಜಿಕ)
ಲಾ: ಪೂರ್ಣಿಮ ಎಂಟರ್ ಪ್ರೈಸಸ್
ಪ್ರೊ: ಪಾರ್ವತಮ್ಮ ರಾಜಕುಮಾರ್
ನಿ/ಕ/ಚಿ.ಕ.: ಪಿ.ವಾಸು
ಅ: ರಾಜಕುಮಾರ್, ಅರ್ಚನಾ, ತಾರಾ, ಬ್ರಹ್ಮಾವರ್, ಸತೀಶ್, ಪಂಢರೀಭಾಯಿ, ಲೋಕನಾಥ್, ಹೊನ್ನವಳ್ಳಿ ಕೃಷ್ಣ, ಮುಖ್ಯಮಂತ್ರಿ ಚಂದ್ರು
ಮಾ/ಗೀ: ಚಿ.ಉದಯಶಂಕರ್
ಗಾ: ರಾಜಕುಮಾರ್, ರತ್ನಮಾಲಾ ಪ್ರಕಾಶ್
ಸಂ: ಭಕ್ತವತ್ಸಲಂ
ಛಾ: ವಿ.ಕೆ. ಕಣ್ಣನ್
ಕ: ಪೇಕೇಟಿ ರಂಗ
ಸ: ರಾಜನ್ ನಾಗೇಂದ್ರ
ನೃ: ಕಲಾಸಂ
ಸಾ: ಸ್ವಾಮಿ
ಹಾ: ೧) 'ವಸಂತಕಾಲ ಬಂದಾಗ...', ೨) 'ಕಲ್ಲಿನವೀಣೆಯ ಮೀಟಿದವರೇನು...', ೩) 'ಅಲ್ಲಾ ಅಲ್ಲಾ ನೀನೆ ಎಲ್ಲಾ..', ೪) 'ತಂಗಾಳಿಯಂತೆ ಬಾಳಲ್ಲಿ ಬಂದೆ...
ಕ.ಸಾ: ನಾಯಕನದು ಸುಂದರವಾದ ಸಂಸಾರ. ಅಪ್ಪ, ತಂಗಿ ಇಬ್ಬರು ಅವನ ಕಣ್ಣುಗಳು. ದುಷ್ಟರ ಸಂಚಿನಿಂದ ನಾಯಕ ಅಪರಾಧಿಯಾಗಬೇಕಾಗುತ್ತದೆ. ತಂದೆ, ತಂಗಿ ಇಬ್ಬರು ಸಾಯುತ್ತಾರೆ. ಅವರಿಬ್ಬರ ಸಾವಿಗೆ ಪ್ರತೀಕಾರ ತೆಗೆದು ಕೊಳ್ಳುವ ನಾಯಕ ನಿಜವಾದ ಅಪರಾಧಿ ಆಗುತ್ತಾನೆ.

೧೦೬೬. ಮೌನಗೀತೆ

(೧೯೮೬ / ವರ್ಣ / ಸಾಮಾಜಿಕ)
ಲಾ: ಶ್ರೀರಾಜರಾಜೇಶ್ವರಿ ಕಂಬೈನ್ಸ್
ಪ್ರೊ: ರಾಮಮೂರ್ತಿ, ಎನ್.ವೆಂಕಟೇಶ್, ಆರ್.ಸಂಪತ್ಕುಮಾರ್, ಆಶಾವೆಂಕಟೇಶ್
ನಿ: ಗೀತಪ್ರಿಯ
ಅ: ಶ್ರೀನಾಥ್, ಸರಿತ, ಶ್ರೀಧರ್, ಎನ್.ಎಸ್.ರಾವ್, ಸಾಯಿಕುಮಾರ್, ನಾಗೇಶ್ ಕಶ್ಯಪ್, ಶ್ರೀಶೈಲನ್, ರಂಗನಾಯಕಮ್ಮ, ರಮೇಶ್, ಶಿವರಾಂ, ಸುರತ್ಕಲ್ ಛಾಯಾದೇವಿ, ಪದ್ಮಕುಮುಟಾ, ಸೀತಾರಾಂ, ಗಿರಿಜಾ, ರತ್ನಮಾಲ



ಕ: ಜಗ್ಗು ಪ್ರಿಯದರ್ಶಿನಿ
ಚಿ.ಕ/ಮಾ: ಗೀತಪ್ರಿಯ
ಗೀ: ಗೀತಪ್ರಿಯ, ಕನಕದಾಸರು
ಗಾ: ಜೇಸುದಾಸ್, ಎಸ್.ಜಾನಕಿ, ರಾಜಕುಮಾರ್ ಭಾರತಿ, ಮಂಜುಳ, ಸುರೇಂದ್ರ
ಸಂ: ಸುರೇಶ್ ಅರಸ್
ಛಾ: ಬಿ.ಎಸ್.ಹರಿದಾಸ್
ಕಲೆ: ಮುದ್ದುಕೃಷ್ಣ
ಸ: ಎಂ.ರಂಗರಾವ್
ಧ್ವ:(ಹಾ) ಪ್ರಸಾದ್ (ಮಾ) ಗೋವಿಂದ ಸ್ವಾಮಿ
ನೃ: ಶಿವಸುಬ್ರಹ್ಮಣ್ಯಂ
ವ: ಪರಮಶಿವ
ಪ್ರ: ಕೆ.ಎಂ.ಕೃಷ್ಣ
ಸ್ಟು: ಕಂಠೀರವ, ಚಾಮುಂಡೇಶ್ವರಿ, ಸಂಕೇತ್
ಹಾ: ೧) 'ತಾವರೆಕಣ್ಣವಳೆ...', ೨) 'ನಗುವ ಹೂವು ನೀನು , ೩) 'ತಲ್ಲಣಿಸದಿರು ಕಂಡ್ಯ...', ೪) 'ಹದವಾದ ಹದಿನಾರು ವಯಸು...
ಸೆ: ರೀಲು ೧೫, ಉದ್ದ ೪೦೫೦.೬೦, ೨೫ ೦೪ ೧೯೮೬
ಕ.ಸಾ: ಅತ್ತೆಗ ಹದರಿ ತಾನು ಹೆತ್ತ ಹೆಣ್ಣು ಮಗುವನ್ನು ಬದಲಾಯಿಸಿ ಗಂಡು ಮಗುವನ್ನು ತರುವ ಸೊಸೆ. ತನ್ನ ಮಗಳಿಗಾಗಿ ಒಳಗ ರೋಧಿಸುವ ನಾಯಕಿ, ಮಗಳು ದೊರೆತಾಗ ತನ್ನೊಳಗಿನ ಗುಟ್ಟನ್ನು ಹೊರಹಾಕುತ್ತಾಳೆ. ಅತ್ತೆಗೆ ತನ್ನ ತಪ್ಪಿನ ಅರಿವಾಗುತ್ತದೆ.

೧೦೬೭. ಬೆಳ್ಳಿನಾಗ

(೧೯೮೬ / ವರ್ಣ / ಸಾಮಾಜಿಕ)
ಲಾ: ಅಜಂತಾ ಕಂಬೈನ್ಸ್
ಪ್ರೊ: ಎ.ಆರ್.ಬಾಬು
ನಿ: ಎನ್.ಎಸ್.ಧನಂಜಯ
ಸ.ನಿ: ಅರಕಲಗೂಡು ನಂಜುಂಡ
ಅ: ಪ್ರಭಾಕರ್, ನಳಿನಿ, ದಿನೇಶ್, ಸುದರ್ಶನ್, ರಾಜಾನಂದ್, ಮಾ।ರೋಹಿತ್, ಮಾ।ಪ್ರಶಾಂತ್, ಆರೂರು ಸತ್ಯಭಾಮ, ಕ.ಎಸ್.ಭಾರತಿ, ಕಾಂತಮ್ಮ, ಅರ್ಚನಾ, ಲಲಿತಮ್ಮ, ಶ್ರೀನಿವಾಸ ಮೂರ್ತಿ, ಮೈಸೂರು ಲೋಕೇಶ್, ಬೇಬಿ ಗೀತಾ, ಶಕ್ತಿಪ್ರಸಾದ್, ಕುಣಿಗಲ್ ನಾಗಭೂಷಣ್
ಕ: ಎ.ಆರ್.ಬಾಬು
ಚಿ.ಕ/ಮಾ: ಹೆಚ್.ವಿ.ಸುಬ್ಬರಾವ್
ಗೀ: ಚಿ.ಉದಯಾಶಂಕರ್, ಆರ್.ಎನ್.ಜಯಗೋಪಾಲ್, ದೊಡ್ಡರಂಗೇಗೌಡ



ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್.ಜಾನಕಿ, ಮಂಜುಳ, ರಮಾ
ಸಂ: ಪಿ.ವೆಂಕಟೇಶ್ವರ ರಾವ್
ಛಾ: ವಿ.ಲಕ್ಷ್ಮಣ್
ಕಲೆ: ಜಿ.ಎಸ್.ಕೇಶವರಾವ್
ಸ: ಸತ್ಯಂ
ನೃ: ಚಿನ್ನಿಪ್ರಕಾಶ್, ರೇಖಾ
ಸಾ: ಆಂಬೂರ್ ಬಾಬು
ವ: ಕಾಶಿ
ಪ್ರ: ರಾಜಗೋಪಾಲ್
ಸ್ಟು: ಚಾಮುಂಡೇಶ್ವರಿ, ಪ್ರಸಾದ್ ಲ್ಯಾಬ್

ಹಾ: ೧) 'ಕರವನು ಮುಗಿವೆ...', ೨) 'ಓ ಬೇಟ್ರಿ...', ೩) 'ಪ್ರಣಯದಾ..'.
ಸೆ: ೮೯೮ಲು ೧೫
ಕ.ಸಾ: ನಿಧಿಯೊಂದನ್ನು ಅರಸಿ ಬರುವ ದುಷ್ಕರ ಗುಂಪನ್ನು ಎಳೆಯ ಹುಡುಗರು ಹಾವು, ನಾಯಿ, ಕೋತಿಯ ನೆರವಿನಿಂದ ಹಿಮ್ಮೆಟ್ಟಿಸುವ ಕಥೆ.

೧೦೬೮. ಅಪರಾಧಿ ನಾನಲ್ಲ

(೧೯೮೬ / ವರ್ಣ / ಸಾಮಾಜಿಕ)
ಲಾ: ಬಿ.ಎ.ಫಿಲಂಸ್
ಪ್ರೊ: ಶಿವಧರ್
ನಿ: ಪಿ.ಸೋಮಶೇಖರ್
ಸ.ನಿ: ಎ.ಬಿ.ಜಗನ್ನಾಥರಾವ್, ಚಂದ್ರದೊಡ್ಡಮನಿ
ಅ: ಬಸಂತ್ ಕುಮಾರ್ ಪಾಟೀಲ್, ಪ್ರಭಾಕರ್, ತೂಗುದೀಪ ಶ್ರೀನಿವಾಸ್, ಶಕ್ತಿಪ್ರಸಾದ್, ಚೇತನ್ ರಾಮರಾವ್, ಗಂಗಾಧರ್, ಶ್ರೀನಾಥ್, ದಿನೇಶ್, ಮುಸುರಿ, ಮಂಜುಳ, ಪದ್ಮಪ್ರಿಯ, ಜಯಂತಿ, ಹೇಮಾಚೌಧುರಿ, ರಾಜಿ, ಮಾಬಂಡಲ್ ಕುಮಾರ್
ಕ/ಚಿ.ಕ: ಎಂ.ಡಿ.ಸುಂದರ್
ಮಾ/ಗೀ: ಚಿ.ಉದಯಶಂಕರ್



ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್.ಜಾನಕಿ, ವಾಣಿ ಜಯರಾಂ
ಸಂ: ಟಿ.ವೆಂಕಟರಾಮನ್
ಛಾ: ಡಿ.ವಿ. ರಾಜಾರಾಂ
ಕಲೆ: ನಜೀರ್
ಸ: ಉಪೇಂದ್ರಕುಮಾರ್
ಧ್ವ: (ಹಾ) ಎ.ವಿ.ಎಂ. ಸೌಂಡ್ ಸರ್ವಿಸ್ (ಮಾ) ಪ್ರಸಾದ್
ನೃ: ತಾರಾ, ಚಿನ್ನಿಪ್ರಕಾಶ್
ಸಾ: ವೈ.ಶಿವಯ್ಯ
ಪ್ರ: ಮನ್ಮಥರಾವ್, ರಾಜಗೋಪಾಲ್
ಸ್ಟು: ಚಾಮುಂಡೇಶ್ವರಿ, ಪ್ರೀಮಿಯರ್
ಹಾ: ೧) 'ನಗುತಿದೆ ಈ ಮೊಗವು..'. ೨) 'ಪ ತುರುತುರುತು...', ೩) 'ನೋಡಿದ ನೀನು ನೋಡಿದೆ...', ೪) 'ಐಯ್ ಅಮ್ ಯ್ಯ..
ವಿ: ಮೊದಲು 'ಬ್ರೋಕರ್ ಪಂಕಜಾ' ಎಂಬ ಹೆಸರಿತ್ತು.
ಕ.ಸಾ: ಅವಳ ಸಹೋದರರಲ್ಲಿ ಬಿಚ್ಚಾತ ಸಖ್ಯ. ಮತ್ತೊಬ್ಬ ಅಪ್ಪ ವಾರಿಗೆ ಇಳಿಯುವನು. ಸಣ್ಣ ತಪ್ಪೊಂದು ದೊಡ್ಡ ಅನಾಹುತಕ್ಕೆ ಕಾರಣವಾಗುತ್ತದೆ. ಕಥೆಗೆ ಸಂಬಂಧವಿಲ್ಲದ ವ್ಯಕ್ತಿಯಿಂದ ಸಮಸ್ಯೆಗಳು ಪರಿಹಾರವಾಗುತ್ತವೆ.

೧೦೬೯. ಮತ್ತೊಂದು ಚರಿತ್ರೆ

(೧೯೮೬ / ವರ್ಣ / ಸಾಮಾಜಿಕ)
ಲಾ: ಅಷ್ಟಲಕ್ಷ್ಮಿ ಪ್ರೊಡಕ್ಷನ್ಸ್
ನಿ: ಬಿ.ಮಲ್ಲೇಶ್
ಸ.ನಿ: ಕ.ಎ.ಕೃಷ್ಣೋಜಿರಾವ್, ಬಿ.ವಿರೂಪಾಕ್ಷ
ಅ: ಅಂಬರೀಷ್, ಮಾಧವಿ, ದಿನೇಶ್, ತೂಗುದೀಪ ಶ್ರೀನಿವಾಸ್, ಶಿವಪ್ರಕಾಶ್, ತಾರಾ, ಲೋಹಿತಾಶ್ವ, ಡಿಂಗ್ರಿ ನಾಗರಾಜ್, ಮೈಸೂರು ಲೋಕೇಶ್, ಲಕ್ಷ್ಮೀದೇವಿ, ಭಟ್ಟಿ ಮಹದೇವಪ್ಪ, ಜಾನಕಮ್ಮ, ಮಲ್ಲೇಶ್, ಜ್ಯೋತಿಲಕ್ಷ್ಮಿ, ಸತ್ಯಭಾಮ, ವೆಂಕಟೇಶ್
ಕ: ಆರ್.ಸೆಲ್ವರಾಜ್
ಚಿ.ಕ/ಮಾ: ಬಿ.ಮಲ್ಲೇಶ್

ಗೀ: ಚಿ.ಉದಯಶಂಕರ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್.ಜಾನಕಿ
ಸಂ: ಮನೋಹರ್
ಛಾ: ಬಸವರಾಜು
ಕಲೆ: ಸುಂದರಂ
ಸ: ರಾಜನ್ ನಾಗೇಂದ್ರ
ಧ್ವ: ಕೋಟೇಶ್ವರ ರಾವ್
ನೃ: ಉಡುಪಿ ಜಯರಾಂ
ಸಾ: ಸಾಹುಲ್
ವ: ಕೃಷ್ಣ, ಮಣಿ
ಪ್ರ: ವಾಸು
ಸ್ಟು: ಪ್ರೀಮಿಯರ್
ಹಾ: ೧) ''ಐ ಲವ್ ಯು ನೀ ನಗುತಾ...', ೨) 'ನನ್ನದಯಾ ಹೊಸಾ ಆಸೆಗಳೇ...', ೩) 'ಕುಣಿಲಾರದ ಹೆಣ್ಣು...', ೪) 'ತಂದೆಯು ನೀನೇ...'
ಕ.ಸಾ: ಸ್ವಾಭಿಮಾನಿ ತರುಣನ ಬದುಕಿನ ವಿವಿಧ ಘಟ್ಟಗಳನ್ನು ಪ್ರತಿಬಿಂಬಿಸುವ ಚಿತ್ರ.

೧೦೭೦. ಅರುಣರಾಗ

(೧೯೮೬ / ವರ್ಣ / ಸಾಮಾಜಿಕ)
ಲಾ: ಜಯದುರ್ಗಾ ಫಿಲಂಸ್
ಪ್ರೊ: ಮೀನಾಕ್ಷಿ ಜಯರಾಂ, ರಾಜು
ನಿ: ಕೆ.ವಿ.ಜಯರಾಂ
ಸ.ನಿ: ಜಿ.ಕೆ.ಮುದುರಾಜ್
ಅ: ಅನಂತ್‌ನಾಗ್, ಲೋಕನಾಥ್, ಕ.ಎಸ್.ಅಶ್ವತ್ಥ್, ಡಿಂಗ್ರಿ ನಾಗರಾಜ್, ತಿಮ್ಮಯ್ಯ, ಉಮೇಶ್ ನವಲೆ, ಸುಂದರ ಕೃಷ್ಣ ಅರಸ್, ಗೀತ, ಪಂಢರಿಬಾಯಿ, ಸುಧಾ, ಶ್ಯಾಮಲ, ಪೂಜ
ಕ: ರೇಖಾ ಕಾಖಂಡಕಿ
ಚಿ.ಕ: ಕೆ.ವಿ. ಜಯರಾಂ
ಮಾ: ಸುದರ್ಶನ್ ದೇಸಾಯಿ
ಗೀ: ದೊಡ್ಡರಂಗೇಗೌಡ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್.ಜಾನಕಿ, ಜೇಸುದಾಸ್, ಚಿತ್ರ
ಸಂ: ಮನೋಹರ್



ಛಾ: ಮಾಪಾಕ್ಷಿ
ಕಲೆ: ಸುಭಾಷ್‌ಕಡಕೋಳ್
ಸ: ಎಂ.ರಂಗರಾವ್
ಧ್ವ: ಟಿ.ವಿ. ಸೋಮಸುಂದರಂ
ನೃ: ಉಡುಪಿ ಜಯರಾಂ
ವ: ಎಸ್.ರಾಮು
ಪ್ರ: ರಾಮಕೃಷ್ಣ, ಕೀರ: ಲಕ್ಷ್ಮಮ್ಮ
ಸ್ಟು: ಕಂಠೀರವ
ಹಾ: ೧) 'ನೀ ಬರದ ಒಲವಿನ ಓಲೇ...', ೨) 'ನಡೆದಾಡೋ ಕಾಮನಬಿಲ್ಲೇ...', ೩) 'ಹೂವಂತ ಹೃದಯವನು...', ೪) 'ನಾನೊಂದು ತೀರ...', ೫) 'ಹಗಲು ರಾತ್ರಿ ...
ವಿ: ೧೯೮೬-೮೭ ರಾಜ್ಯಪ್ರಶಸ್ತಿ : ಅತ್ಯುತ್ತಮ ನಟಿ (ಗೀತ)
ಸೆ: ೮೯೮ಲು ೧೫, ಉದ - ೪೫೮೮, ೨೯ ೧೦ -೧೯೮೭
ಕ.ಸಾ: ಸ್ವಾಭಿಮಾನಿ ಹೆಣ್ಣೊಬ್ಬಳು ಪತಿಯ ವಂಚನೆಯಿಂದ ಸಿಡಿದು ನಿಂತು ಸವಾಲು ಎಸೆದು ಗೆಲ್ಲುತ್ತಾಳೆ. ಪತಿಯು ನಿರ್ದೋಷಿ ಎಂದು ತಿಳಿದು ಮನ್ನಿಸುತ್ತಾಳೆ.

೧೦೭೧. ಮನೆಯೇ ಮಂತ್ರಾಲಯ

(೧೯೮೬ ವರ್ಣ ಸಾಮಾಜಿಕ)
ಲಾ: ರೋಹಿಣಿ ಪಿಕ್ಚರ್ಸ್
ನಿ/ಚಿ.ಕ: ಭಾರ್ಗವ
ಅ: ಅನಂತ್‌ನಾಗ್, ಭಾರತಿ, ಜೈ ಜಗದೀಶ್, ತಾರಾ, ನಾಗೇಶ್ ಯಾದವ್, ಕಾಷ್ಯಕೃಷ್ಣ ಮೂರ್ತಿ, ರಮೇಶ್, ಉಮಾಶ್ರೀ, ಉಮಾ ಶಿವಕುಮಾರ್, ಮುಖ್ಯಮಂತ್ರಿ ಚಂದ್ರು, ಡಿಂಗ್ರಿ ನಾಗರಾಜ್
ಮಾ/ಗೀ: ಚಿ. ಉದಯಶಂಕರ್
ಗಾ: ಜೇಸುದಾಸ್, ಎಸ್. ಜಾನಕಿ
ಸಂ: ಗೌತಮ್ ರಾಜು
ಛಾ: ಡಿ.ವಿ. ಜಯರಾಂ
ಕ: ನಜೀರ್
ಸ: ಎಂ. ರಂಗರಾವ್
ಧ್ವ: ಚಾಮುಂಡೇಶ್ವರಿ
ನೃ: ಚಿನ್ನಿ ಪ್ರಕಾಶ್
ವ: ಕಲಿಕಾ ಮೂರ್ತಿ
ಪ್ರ: ಜಿ.ವೆಂಕಟೇಶ್
ಸ್ಟು: ಕಂಠೀರವ
ಹಾ: ೧) 'ಮನೆಯೇ ಮಂತ್ರಾಲಯ...'. ೨) 'ಅಂದಾನಿನ್ನ ನೋಡಿದೆ...'.
ಕ.ಸಾ: ಅಣ್ಣ-ಅತ್ತಿಗೆಯರಿಬ್ಬರ ತ್ಯಾಗ ಬಲಿದಾನಗಳಿಂದ ಚೂರಾಗಿ ಹೋಗುತ್ತಿದ್ದ ಮನೆ ಒಂದುಗೂಡಿ ಮಂತ್ರಾಲಯವಾಗುತ್ತದೆ.

೧೦೭೨. ಮಲಯಮಾರುತ

(೧೯೮೬ / ವರ್ಣ / ಸಾಮಾಜಿಕ)
ಲಾ: ಶಾಸ್ತ್ರಿ ಮೂವೀಸ್
ಪ್ರೊ: ಸಿ.ವಿ.ಎಲ್.ಶಾಸ್ತ್ರಿ
ನಿ: ರವೀ (ಲಲಿತಾರವೀ)
ಸ.ನಿ: ಶ್ರೀ ಕೃಪಾ
ಅ: ವಿಷ್ಣುವರ್ಧನ್, ಆರ್.ಕೆ. ಸೂರ್ಯನಾರಾಯಣ, ಸರಿತ, ಮಾಧವಿ, ದಿನೇಶ್, ಉಮೇಶ್, ಗೋಂದೆ ಲಕ್ಷ್ಮಿನಾರಾಯಣ, ಶಿವರಾಮ್,
ಕ/ಚಿ.ಕ/ಮಾ: ಚಿ.ಉದಯಶಂಕರ್
ಗೀ: ಚಿ.ಉದಯಶಂಕರ್, ಕಣಗಾಲ್ ಪ್ರಭಾಕರ ಶಾಸ್ತ್ರಿ, ಪುರಂದರದಾಸರು
ಗಾ: ಜೇಸುದಾಸ್, ಎಸ್.ಪಿ. ಬಾಲಸುಬ್ರಹ್ಮಣ್ಯಂ, ವಾಣಿ ಜಯರಾಂ
ಸಂ: ವಿಕ್ಟರ್ ಯಾದವ್
ಛಾ: ಬಾಬುಲ್‌ನಾಥ್ ವಾಲ್ಕೆ
ಕಲೆ: ಕ.ನಾಗೇಶ್ವರ್ ರಾವ್
ಸ: ವಿಜಯ ಭಾಸ್ಕರ್

ಧ್ವ: ಪ್ರಸಾದ್
ಮಾ: ಕೋದಂಡಪಾಣಿ
ನೃ: ಉಡುಪಿ ಜಯರಾಂ
ಸಾ: ವೈ.ಶಿವಯ್ಯ
ವ: ಬಡಾಸಾಬ್, ನಾಗೇಶ್ವರರಾವ್
ಪ್ರ: ಜಿ.ವಂಕಟೇಶ್
ಸ್ಟು: ಚಾಮುಂಡೇಶ್ವರಿ. ಪ್ರಸಾದ್
ಹಾ: ೧) 'ಎಲ್ಲೆಲ್ಲು ಸಂಗೀತವೇ...', ೨) 'ನಟನವಿಶಾರದ ನಟಶೇಖರಾ...', ೩) 'ಶಾರದೇ ದಯೆ ತೋರಿದೇ..', ೫) 'ಎಲ್ಲಾರು ಮಾಡುವುದು ಹೊಟ್ಟೆಗಾಗಿ...', ೬) 'ಮಲಯಮಾರುತ ಗಾನ...', ೭) 'ವಂದನೆ..ಸಕಲ...', ೮) 'ಅಧರಂ ಮಧುರಂ...', ೯) 'ಈ ಸ್ನೇಹ ನಿನಗೇ...
ವಿ: ರಾಜ್ಯ ಪ್ರಶಸ್ತಿ ೧೯೮೬-೮೭ : ಅತ್ಯುತ್ತಮ ಧ್ವನಿಗ್ರಾಹಕ (ವಿ.ಪಿ. ವಿಶ್ವನಾಥನ್) ವಿಜಯ ಭಾಸ್ಕರ್ ರವರಿಗೆ 'ಸುರಸಿಂಗಾರ್' ಪ್ರಶಸ್ತಿ.
ಕ.ಸಾ: ವಿಶ್ವನಾಥನಿಗೆ ಸಂಗೀತ ಒಲಿಯಲಿಲ್ಲವಾದರೂ ಗುರುಪುತ್ರಿ ಒಲಿದಳು. ಆದರೆ ಗುರುವಿನ ಮಗಳೆಂಬ ಕಾರಣಕ್ಕೆ ಆವಳಿಂದ ದೂರ ನಡೆದ ವಿಶ್ವ ನರ್ತಕಿಯ ಕಲೆಗೆ ಮಾರುಹೋದ. ಸಂಗೀತ ವಿದ್ಯಾಲಯದ ಕನಸುಹೊತ್ತ ಗುರು, ವಿಶ್ವನಲ್ಲಿ ತನ್ನ ಸಂಗೀತವನ್ನು ತುಂಬಿದ, ಗುರುವಿನ ಗುರಿ ತಲುಪುವಲ್ಲಿ ಯಶಸ್ವಿಯಾದ ವಿಶ್ವನ ವಾಕ್ ಶಕ್ತಿಯೇ ಹೋಯಿತು. ಗುರುಪುತ್ರಿಯಿಂದ ವಾಕ್ ಶಕ್ತಿಯನ್ನು ಮರಳಿಪಡೆದ ವಿಶ್ವ ನರ್ತಕಿಯನ್ನ ಸೇರಲು ಅವಳೇ ನೆರವಾದಳು.

೧೦೭೩. ಸಂಸಾರದ ಗುಟ್ಟು

(೧೯೮೬ / ವರ್ಣ / ಸಾಮಾಜಿಕ)
ಲಾ: ವಸಂತಿಮೂವೀಸ್
ಪ್ರೊ: ವಸಂತೀರಾವ್
ನಿ: ರಾಘವ
ಸ.ನಿ: ಕಲಾ ಗಂಗೋತ್ರಿ ಮಂಜು, ಎಸ್.ರಾಮಕೃಷ್ಣ, ಪಿ.ಲಿಂಗರಾಜ್ ಕಗ್ಗಲ್
ಅ: ಶಂಕರನಾಗ್, ಮಹಾಲಕ್ಷ್ಮಿ, ತಾರಾ, ಮುಖ್ಯಮಂತ್ರಿ ಚಂದ್ರು, ಸುಂದರ್ ರಾಜ್, ಶಿವರಾಂ, ವಿಶ್ವವಿಜೇತ,



ಇಂದುಶ್ರೀ, ಉಮಾಶ್ರೀ
ಕ: ಕೋಡಿ ರಾಮಕೃಷ್ಣ
ಮಾ: ಕುನಾಗಭೂಷಣ್
ಗೀ: ಆರ್.ಎನ್.ಜಯಗೋಪಾಲ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಮಂಜುಳಾ, ರಾಮಕೃಷ್ಣ, ಜಯಚಂದ್ರನ್
ಸಂ: ಟಿ.ರಾಜಗೋಪಾಲ್, ಮಧು
ಛಾ: ಪದ್ಮಕುಮಾರ್
ಕಲೆ: ಸತ್ಯರಾಜ್
ಸ: ಸತ್ಯಂ
ಧ್ವ: (ಮಾ) ಸೋಮಶೇಖರ್
ನೃ: ಶಿವಶಂಕರ್
ಸಾ: ಕೆ.ಎನ್.ಮಾಧವನ್
ವ: ಬಿ.ನಾರಾಯಣ ರಾವ್
ಪ್ರ: ಕೃಷ್ಣ ಕಲಾ ನಿಲಯಂ
ಸ್ಟು: ಕಂಠೀರವ, ಸಂಕೇತ್
ಹಾ: ೧) 'ಕಾವೇರಿ ಓ ಕಾವೇರಿ ...', ೨) 'ಹೇ ಚೈತ್ರವೇ ..', ೩) 'ಸ್ವಯಂವರ ...', ೪) 'ಓ ದೇವತ ...', ೫) 'ತಲಕಾಡು ...'
ಕ.ಸಾ: ಸಂಸಾರದೊಳಗ ಇರಬೇಕಾದ ಗುಟ್ಟು ಭಿನ್ನಾಭಿಪ್ರಾಯಗಳಿಂದ ರಟ್ಟಾಗಲು ಏನೆಲ್ಲ ಅವಘಡಗಳು ಸಂಭವಿಸುತ್ತವ ಎಂಬುದನ್ನು ನಿರೂಪಿಸುತ್ತದೆ.

೧೦೭೪. ಬೇಟೆ

(೧೯೮೬ / ವರ್ಣ / ಸಾಮಾಜಿಕ)
ಲಾ: ವಜ್ರಗಿರಿ ಫಿಲಂಸ್
ಪ್ರೊ/ನಿ: ವಿ.ಸೋಮಶೇಖರ್
ಸ.ನಿ: ಪಿ.ರಾಜು
ಅ: ಅಂಬರೀಷ್, ಜೈಜಗದೀಶ್, ಭರತ್ ಭಾಗವತರ್, ಮೈಸೂರು ಲೋಕೇಶ್, ಬಾಲಕೃಷ್ಣ, ಮಾನು, ವಜ್ರಮುನಿ,

ಧೀರೇಂದ್ರ ಗೋಪಾಲ್, ಶ್ರೀನಾಥ್, ಅಂಬಿಕಾ, ಅನುರಾಧ, ಉಮಾಶ್ರೀ
ಕ: ಎಸ್.ಕೆ.ಕೀರ್ತಿರಾಜ್
ಚಿ.ಕ: ವಿ. ಸೋಮಶೇಖರ್, ಷಣ್ಮುಗಸುಂದರಂ, ಸೋಮು
ಗೀ: ಆರ್.ಎನ್. ಜಯಗೋಪಾಲ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್.ಜಾನಕಿ, ಶೈಲಜ, ಉಮಾ ರಮಣನ್
ಸಂ: ವಿಕ್ಟರ್‌ಯಾದವ್
ಛಾ: ಹೆಚ್.ಜಿ. ರಾಜು
ಕಲೆ: ನಜೀರ್
ಸ: ಎಸ್.ಪಿ.ಬಾಲಸುಬ್ರಹ್ಮಣ್ಯಂ
ಧ್ವ: (ಹಾ) ಪ್ರಸಾದ್ (ಮಾ) ಸಂಕೇತ್
ನೃ: ಉಡುಪಿ ಜಯರಾಂ
ಸಾ: ವೈ.ಶಿವಯ್ಯ
ವ: ಸತ್ಯಂ, ಕೃಷ್ಣ
ಪ್ರ: ಜಿ.ಎಸ್.ವಾಸು
ಸ್ಟು: ಕಂಠೀರವ, ಪ್ರೀಮಿಯರ್
ಹಾ: ೧) 'ಅಬ್ಬ ಲ್ಲಾ...
ಕ.ಸಾ: ಸಮಾಜ ವಿರೋಧಿಗಳನ್ನು, ಗೋಮುಖ ವ್ಯಾಘ್ರಗಳನ್ನು ಬಯಲಿಗೆಳೆಯಲು ಯುವಕನೊಬ್ಬ ತನ್ನ ಸಹಚರರೊಡನೆ ಹೋರಾಡುವ ಚಿತ್ರಕತೆಯಿತ್ತು.

೧೦೭೫. ರಥಸಪ್ತಮಿ

(೧೯೮೬ / ವರ್ಣ / ಸಾಮಾಜಿಕ)
ಲಾ: ಭಗವತಿ ಕಂಬೈನ್ಸ್
ಪ್ರೊ: ಎಸ್.ಎ.ಗೋವಿಂದರಾಜ್
ನಿ: ಎಂ.ಎಸ್.ರಾಜಶೇಖರ್
ಸ.ನಿ: ಹೊನ್ನವಳ್ಳಿ ಕೃಷ್ಣ, ಎಂ.ಆರ್. ಪ್ರಕಾಶ್
ಅ: ಶಿವರಾಜ್ ಕುಮಾರ್, ಆಶಾರಾಣಿ, ಪರ್ವತವಾಣಿ, ದೊಡ್ಡಣ್ಣ, ಕಾಂಚನ, ರಾಜೇಶ್ವರಿ, ಪ್ರಶಾಂತಿನಾಯಕ್, ಬ್ರಹ್ಮಾವರ್, ಸುಧಾ ನರಸಿಂಹರಾಜು, ಕುರಿಬ, ಮೈಸೂರು ಲೋಕೇಶ್, ಶ್ರೀನಾಥ್, ರೂಪಾದೇವಿ, ಅರವಿಂದ್
ಕ: ವಿದ್ಯುಲ್ಲತ ನಾಸನೂರು ಅವರ ಕಾದಂಬರಿ ಆಧಾರಿತ
ಚಿ.ಕ: ಪಿ.ವಾಸು
ಮಾ/ಗೀ: ಚಿ.ಉದಯಶಂಕರ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್.ಜಾನಕಿ
ಸಂ: ಪಿ.ಭಕ್ತವತ್ಸಲಂ
ಛಾ: ವಿ.ಕೆ.ಕಣ್ಣನ್
ಕಲೆ: ನಜೀರ್
ಸ: ಉಪೇಂದ್ರಕುಮಾರ್
ಧ್ವ: (ಹಾ) ಕೋದಂಡಪಾಣಿ, (ಮಾ) ಪಾಂಡುರಂಗನ್
ನೃ: ಕೈಲಾಸಂ
ಸಾ: ಸ್ವಾಮಿ
ವ: ಪರಮಶಿವ
ಪ್ರ: ದೊರೈಸ್ವಾಮಿ, ನಾಗರಾಜ್
ಸ್ಟು: ಚಾಮುಂಡೇಶ್ವರಿ, ಕಂಠೀರವ
ಹಾ: ೧) 'ಶಿಲೆಗಳು ಸಂಗೀತವಾ ಹಾಡಿವೆ...', ೨) 'ಆನಂದಾ ಸೇರಿ ಹಾಡಲು...', ೩) 'ಜೊತೆಯಾಗಿ ಹಿತವಾಗಿ...', ೪) 'ಧರೆಗಿಳಿದ ಅಪ್ಸರೆಯೋ...', ೫) 'ನೀ ಯಾರು ನೀ ಯಾರು...', ೬) 'ಒಲವೇ.. ಒಲವೇ...'
ಕ.ಸಾ: ನಾಯಕ ಬಡಹುಡುಗ. ನಾಯಕಿ ಶ್ರೀಮಂತೆ. ಸ್ವಪ್ರತಿಷ್ಠೆಯವಳು. ತನ್ನನ್ನು ಸೋಲಿಸಲು ಬರುವ ನಾಯಕನಿಗೆ ವಿವಿಧ ರೀತಿಯ ಸವಾಲುಗಳನ್ನು ಒಡ್ಡುವ ಆಕೆ ಈ ನಿಟ್ಟಿನಲ್ಲಿ ಆತನನ್ನು ಪ್ರೇಮಿಸುತ್ತಾಳೆ. ಇವರಿಬ್ಬರ ಪ್ರೇಮಕ್ಕೆ ಹಲವು ಅಡ್ಡಿ ಆತಂಕಗಳು. ಎಲ್ಲವನ್ನು ನಿವಾರಿಸಿಕೊಂಡು ಪ್ರೇಮಿಗಳು ಒಂದಾಗುತ್ತಾರೆ.

೧೦೭೬. ಆಫ್ರಿಕಾದಲ್ಲಿ ಶೀಲ

(೧೯೮೬/ವರ್ಣ/ಸಾಮಾಜಿಕ)
ಲಾ: ದ್ವಾರಕೀಶ್ ಚಿತ್ರ
ಪ್ರೊ/ನಿ/ಕ/ಚಿ.ಕ: ದ್ವಾರಕೀಶ್
ಸ.ನಿ: ರಾಜ್ ಭರತ್
ಅ: ಚರಣ್ ರಾಜ್, ಶಕೀಲ, ಡಿಸ್ಕೋಶಾಂತಿ, ದ್ವಾರಕೀಶ್, ಸುಧೀರ್, ತೂಗುದೀಪಶ್ರೀನಿವಾಸ್, ಬೆಂಗಳೂರು ನಾಗೇಶ್.

ಅಶ್ವತ್, ಶ್ರೀನಿವಾಸಮೂರ್ತಿ, ರಂಜಿತಾ
ಮಾ/ಗೀ: ಚಿ.ಉದಯಶಂಕರ್
ಗಾ: ನಾಜಿಯಾ ಹಸನ್, ಜೇಸುದಾಸ್
ಸಂ: ಗೌತಂರಾಜು
ಛಾ: ದೇವಿ ಪ್ರಸಾದ್
ಕಲೆ: ವೇಣು
ಸ: ಬಪ್ಪಿಲಹರಿ
ಧ್ವ: (ಹಾ) ಲಂಡನ್
ನೃ: ಸರೋಜ್ ಖಾನ್
ಸಾ: ವೈ.ಶಿವಯ್ಯ
ವ: ನಾಗರಾಜ್
ಪ್ರ: ಮನ್ಮಥರಾವ್
ಹಾ: ೧) 'ಶೀಲ ಓ ಮೈ ಶೀಲಾ..' ೨) 'ತಕ್ಕಡಿಮಿ ತಕ್ಕ.....', ೩) 'ಅದು ಆನೆ ಅದು ಜಿಂಕೆ......'.
ವಿ: ಮೊದಲಬಾರಿಗ ಲಂಡನ್‌ನಲ್ಲಿ ಆಫ್ರಿಕಾದಲ್ಲಿ ಚಿತ್ರೀಕರಣ ಮಾಡಿದ ಚಿತ್ರ.
ಕ.ಸಾ: ಶೀಲಾ ಕಾಡಿನಲ್ಲಿ ಬೆಳೆದ ಹೆಣ್ಣು. ಶ್ರೀಮಂತ ವ್ಯಕ್ತಿಯ ಮೊಮ್ಮಗಳು. ನಾಕಷ್ಟು ಸಂಕಷ್ಟಗಳ ಬಳಿಕ ತಾತನ ಬಳಿಗೆ ಬರುವ

ಹುಡುಗಿ ನಗರವಾಸಿಗಳ ಮೃಗೀಯ ವರ್ತನೆಯಿಂದ ಬೇಸತ್ತು ಮತ್ತೆ ಕಾಡಿಗೆ ಹೊರಟು ಹೋಗುತ್ತಾಳೆ.

೧೦೭೭. ವಿಶ್ವರೂಪ

(೧೯೮೬ / ವರ್ಣ / ಸಾಮಾಜಿಕ)
ಲಾ: ಜ್ಯೋತಿಕಂಬೈನ್ಸ್
ಪ್ರೊ: ವಿ.ಸೋಮಶೇಖರ್
ನಿ: ವಿಜಯ್
ಅ: ಅಂಬರೀಷ್, ಅಶ್ವಿನಿ, ಗೀತಾ, ಮುಖ್ಯಮಂತ್ರಿ ಚಂದ್ರು,



ಶಿವರಾಂ, ಪ್ರಜಮುನಿ, ಬ್ರಹ್ಮಾವರ್, ಎಸ್.ಎಸ್.ರಾವ್, ಬೇಬಿ ರೇಖಾ, ಭೂಷಣ್, ಮಾಸ್ಟರ್ ಮಾನವೀನ್, ಮಾಚೇತನ್
ಕ/ಚಿ.ಕ: ಎಂ.ಡಿ.ಸುಂದರ್
ಮಾ/ಗೀ: ಚಿ.ಉದಯಶಂಕರ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್.ಜಾನಕಿ
ಸಂ: ವಿಕ್ಟರ್ ಯಾದವ್
ಸ: ರಾಜನ್ ನಾಗೇಂದ್ರ
ನೃ: ಉಡುಪಿ ಜಯರಾಂ
ಸಾ: ಸಾಹುಲ್
ಹಾ: ೧) 'ಜಯಸಿದ ಬದುಕಲಿ ಬೆಳಕನು ...', ೨)'ಮಳೆಯಾಗಿ ನಾ ಬಂದೆ ...', ೩) 'ಎಲವಿಂದ ನೋಡು ...', ೪) 'ವೀಣಾ ವೀಣಾ ನಿಲ್ಲು ...'

೧೦೭೮. ಅಪರೂಪದ ಕಥೆ

(೧೯೮೬ / ವರ್ಣ / ಸಾಮಾಜಿಕ)
ಲಾ: ಬಿ.ಜಿ.ಕಂಬೈನ್ಸ್
ಪ್ರೊ: ಬಿ.ಗಿರಿಧರ್
ನಿ: ಪೇಮಗಲ್ ಜಗನ್ನಾಥ್‌ರಾವ್
ಸ.ನಿ: ಬಿ.ಜಿ.ರಾಮಮೂರ್ತಿ, ಪಿ.ಆರ್.ಶ್ರೀನಿವಾಸ ಮೂರ್ತಿ
ಅ: ರಾಮಕೃಷ್ಣ, ವಿಜಯಕಾಶಿ, ಬಾಲಕೃಷ್ಣ, ಸುಂದರಕೃಷ್ಣ

ಅರಸ್, ಎಸ್.ಎಸ್.ರಾವ್, ಮಾ|ಆನಂದ್, ಕೃಷ್ಣ, ರಾಜಾಕುಳ್ಳ, ಪ್ರೀತಿ, ಶ್ವೇತ, ಕೋಕಿಲ, ಉಮ
ಕ'ಚಿ.ಕ: ಪೇಮಗಲ್ ಜಗನ್ನಾಥ್‌ರಾವ್
ಮಾ/ಗೀ: ಆರ್.ಎನ್.ಜಯಗೋಪಾಲ್
ಗಾ: ರಾಜಕುಮಾರ್ ಭಾರತಿ, ಎಸ್.ಜಾನಕಿ, ಬಿ.ಆರ್.ಛಾಯಾ
ಸಂ: ಎ.ಸುಬ್ರಹ್ಮಣ್ಯಂ
ಛಾ: ವಿ.ಅಣ್ಣಯ್ಯ
ಕಲೆ: ಮುಕ್ತಯಾರ್ ಜೀ
ಸ: ಎಲ್.ವೈದ್ಯನಾಥನ್
ಧ್ವ: (ಹಾ) ಕೋಟೀಶ್ವರರಾವ್ (ಮಾ) ದಶರಥ್
ನೃ: ಪಾಲ್ ರಾಜ್
ಸಾ: ರುದ್ರೇಶ್
ವ: ವಿಠಲ್ ರಾವ್
ಸ್ಟು: ಕಂಠೀರವ
ಹಾ: ೧) 'ತನು ನಿನ್ನದು ಮನನಿನ್ನದು...', ೨)'ಮೈಯೆಲ್ಲಾ ನೋವೆಲ್ಲಾ...', ೩) 'ಕಣ್ಣುಗಳಲ್ಲಿ ಹೂನಗೆ ...

೧೦೭೯. ಶಂಖನಾದ

(೧೯೮೬ / ವರ್ಣ / ಸಾಮಾಜಿಕ)
ಲಾ: ನವರಸ ಫಿಲಂಸ್
ಪ್ರೊ: ಉಮೇಶ್ ಕುಲಕರ್ಣಿ, ಜಕ್ಕೂರು ಬೈರಪ್ಪ
ನಿ/ಚಿ.ಕ/ಸಂ: ಉಮೇಶ್ ಕುಲಕರ್ಣಿ
ಸ.ನಿ: ಸಂಜೀವಮೂರ್ತಿ
ಅ: ರಮೇಶ್ ಭಟ್, ಅರವಿಂದ್, ಅಭಿನಯ, ಮಹಿಮ, ಹೊನ್ನಯ್ಯ, ಅಂಜನಪ್ಪ, ಸತೀಶ ಬಲ್ಲಾಳ್, ಜಿ.ಕೆ.ಅರವಿಂದ್
ಕ: ಡಾ|ಪಿ.ವ.ವರ್ಟಿ
ಮಾ: ಎ.ಎಸ್.ಮೂರ್ತಿ
ಗೀ: ದೊಡ್ಡರಂಗೇಗೌಡ, ಎಂ.ಎನ್.ವ್ಯಾಸರಾವ್
ಗಾ: ರತ್ನಮಾಲ ಪ್ರಕಾಶ್, ಸಿ.ಅಶ್ವತ್
ಛಾ: ಎಂ.ಎ.ರವೀಂದ್ರ
ಕಲೆ: ಎಂ.ಬಿ.ಪಾಟೀಲ್
ಸ: ಗುಣಸಿಂಗ್, ಸಿ.ಅಶ್ವತ್ಥ್
ವ: ಮಲ್ಲೇಶ್
ಪ್ರ: ಮಲ್ಲೇಶ್‌ಹರ್ಶಿ
ಹಾ: ೧)'ಮನಸೇ ಮಲಿನವಾಗಿ...', ೨) 'ಹುತ್ತದ ಹೊಲಬ ಕಂಡ...
ವಿ: ರಾಷ್ಟ್ರಪತಿ ಪದಕ (ರಜತ) ಪಡೆದ ಚಿತ್ರ. ಅತ್ಯುತ್ತಮ ಪ್ರಾದೇಶಿಕ ಚಿತ್ರ.
ಸೆ: ರೀಲು - ೧೫, ಉದ - ೧೩೦೦೦, ೨೭ -೦೩ - ೧೯೮೬
ಕ.ಸಾ: ದಲಿತರ ಶೋಷಣೆಯ ಬಗ್ಗೆ ವಿಡಂಬನಾತ್ಮಕ ಕಥೆ.

೧೦೮೦. ತಾಯಿ

(೧೯೮೬ / ವರ್ಣ / ಸಾಮಾಜಿಕ)
ಲಾ: ಪ್ರಗತಿ ಎಂಟರ್‌ಪ್ರೈಸಸ್
ಪ್ರೊ: ಕೆ.ಸಿ.ಎನ್.ಚಂದ್ರಶೇಖರ್
ನಿ/ಚಿ.ಕ: ಪೇರಾಲ
ಸ.ನಿ: ನಾಗೇಶ್, ಕಲಾಗಂಗೋತ್ರಿ ಮಂಜು, ರಾಜಗೋಪಾಲ್

ಅ: ಅನಂತ್‌ನಾಗ್, ಗಾಯತ್ರಿ, ಶಂಕರ್‌ನಾಗ್, ದಿನೇಶ್, ಭವ್ಯ, ತಾರ, ಉಮಾಶ್ರೀ, ಇಂದುಶ್ರೀ, ಜನಾರ್ದನ್, ಮುಖ್ಯಮಂತ್ರಿ ಚಂದ್ರು, ಎಸ್.ಎಸ್.ರಾವ್, ಕುಣಿಗಲ್ ನಾಗಭೂಷಣ್, ಉಮಾ ಶಿವಕುಮಾರ್, ಸೀತಾರಾಂ, ಬೇಬಿ ಅರವಿಂದ್
ಕ: ಎಸ್.ಎಸ್.ಜ್ಯೋತಿ (ಬಂಜೆ ತೊಟ್ಟಿಲು ನಾಟಕ)
ಮಾ: ಕುಣಿಗಲ್ ನಾಗಭೂಷಣ್
ಗೀ: ಆರ್.ಎನ್.ಜಯಗೋಪಾಲ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಪಿ.ಸುಶೀಲ, ವಾಣಿ ಜಯರಾಂ
ಸಂ: ಮುರಳಿ, ರಾಮಯ್ಯ
ಛಾ: ಸುಂದರನಾಥ ಸುವರ್ಣ
ಕಲೆ: ಬಿ.ಕೇಶವರಾವ್
ಸ: ಸತ್ಯಂ
ಧ್ವ: (ಹಾ) ಸೋಮಶೇಖರ್, (ಮಾ) ಕೋದಂಡಪಾಣಿ, ಕೃಷ್ಣಮೂರ್ತಿ
ನೃ: ಶಿವಶಂಕರ್
ಸಾ: ಹಾಸನ್ ರಘು
ವ: ಸಿ. ನಾಗರಾಜ್
ಪ್ರ: ಎನ್.ಕೆ.ರಾಮಕೃಷ್ಣ, ವೆಂಕಟಸ್ವಾಮಿ ಕೇಶ: ನಾಗೇಶ್ವರರಾವ್
ಸ್ಟು: ಕಂಠೀರವ, ಚಾಮುಂಡೇಶ್ವರಿ, ಸುದರ್ಶನ್ ಸಿನಿಟೆಕ್, ಪ್ರಸಾದ್ ಕಲರ್ ಲ್ಯಾಬ್
ಸೆ: ರೀಲು - ೧೬, ಉದ ೩೬೧೭.೪೭, ೩೦ - ೧೨ -೧೯೮೬
ಕ.ಸಾ: ಅಣ್ಣ ಅತ್ತಿಗೆಯರಿಬ್ಬರ ತ್ಯಾಗ ಔದಾರ್ಯತೆಗಳ ಚಿತ್ರಣ. ತಮ್ಮನ ಬಾಳನ್ನು ಸರಿಪಡಿಸಲು ಅಣ್ಣ ತನ್ನ ಹೆಂಡತಿಯು ಜನ್ಮ ನೀಡಿದ ಮಗುವನ್ನು ನೀಡುತ್ತಾನೆ. ಆದರೆ ಅವರ ತ್ಯಾಗಕ್ಕೆ ಅರ್ಥವಿಲ್ಲವೆಂದಾಗ ಇಬ್ಬರೂ ಪ್ರಾಣತ್ಯಾಗ ಮಾಡುತ್ತಾರೆ.

೧೯೮೭

೧೦೮೧. ಆಗಂತುಕ

(೧೯೮೭ / ವರ್ಣ / ಸಾಮಾಜಿಕ)
ಲಾ: ಅನುಭವ ಫಿಲಂಸ್ (ಪ್ರೈ) ಲಿ. ಬಂಗಳೂರು.
ಪ್ರೊ: ಅನುಭವ ಫಿಲಮ್ಸ್
ನಿ: ಸುರೇಶ್‌ಹೆಬ್ಳೀಕರ್
ಸ.ನಿ: ಸುಧೀಂದ್ರ ಕಲ್ಲೋಳ್, ಸುನೀಲ್ ಕುಮಾರ್
ಅ: ಸುರೇಶ್ ಹೆಬ್ಳೀಕರ್, ವನಿತಾವಾಸು, ದೇವರಾಜ್,

ಅರವಿಂದ್, ಜಯಶ್ರೀ, ಸೀತಾರಾಮ್, ಬಸವರಾಜ್‌ಕಂಬಾರ, ನಾಗರಾಜ, ಸುಧೀಂದ್ರ, ಮಹಿಮಾ, ವಿಕ್ಟರ್, ಕೆಂಬವಿನಾಥ್, ವೀರಣ್ಣ ಕುರ್ಕಿ, ಬಿ.ಜಿ.ಕಂಬಾರ, ಸುವರ್ಣ
ಕ/ಚಿ.ಕ/ಮಾ: ಎ.ಬಾಲಕೃಷ್ಣ
ಗೀ: ಎಂ.ಎನ್.ವ್ಯಾಸರಾವ್
ಗಾ: ಪಿ. ಸುಶೀಲ, ಸುರೇಶ್ ಹೆಬ್ಳೀಕರ್
ಸಂ: ಎ.ಸುಬ್ರಹ್ಮಣ್ಯಂ
ಛಾ: ರಾಜನ್
ಕಲೆ: ಸುನೀಲ್‌ಕುಮಾರ್
ಸ: ರಾಜೀವ್ ತಾರಾನಾಥ್
ಧ್ವ: (ಹಾ) ತರಂಗಿಣಿ ಆಡಿಯೋ (ಮಾ) ದಶರಥ್
ವ: ಭೈರೇಶ್
ಪ್ರ: ಮಲ್ಲೇಶ್ ಹರ್ಶಿ
ಸ್ಟು: ಬೆಂಗಳೂರು ಸಿನಿ ಸರ್ವೀಸ್, ಪ್ರಸಾದ್ ಕಲರ್ ಲ್ಯಾಬ್
ಹಾ: ೧) 'ಸಂತೋಷದಾ ದಿನ ನಾ...', ೨) 'ನನ್ನ ಎದೆಯಲಿ...
ಸೆ: ರೀಲು - ೧೪, ಉದ - ೩೩೪೬.೧೧, ೧೨ - ೧೧ ೧೯೮೬
ಕ.ಸಾ: ನಗರ ಜೀವನವನ್ನೊಲ್ಲದ ವೈದ್ಯ ಗ್ರಾಮಕ್ಕೆ ಬಂದು ಜನರ ಪ್ರೀತಿಯನ್ನು ಸಂಪಾದಿಸುತ್ತಾನೆ. ಜಮೀನ್ದಾರನ ಮಗಳು ಮೂಗಿ, ಆಕೆಯನ್ನು ಮನೋವೈದ್ಯನಾದ ತನ್ನ ಗೆಳೆಯನಿಗೆ ತೋರಿಸಿದ, ಮಾತು ಬರುವುದು ಸುಲಭವಲ್ಲವೆಂಬ ದುಃಖ. ಈ ಮಧ್ಯೆ

ಚಂದ್ರು ಎಂಬುವನ ಪ್ರವೇಶ , ಗ್ರಾಮದಲ್ಲಿ ನಾವು ಪನೇನೋ ನಿಗೂಢಗಳು , ಜಮೀನ್ದಾರನ ಕೊಲೆ ಅದರ ಆಪಾದನೆಯು ವೈದ್ಯನ ಮೇಲೆ. ಹೀಗೆ ರಹಸ್ಯಗಳ ಪಿಟಮೇ ಇದೆ.

೧೦೮೨. ಪ್ರೇಮಲೋಕ

(೧೯೮೭ / ವರ್ಣ / ಸಾಮಾಜಿಕ)
ಲಾ: ಈಶ್ವರಿ ಪಿಕ್ಚರ್ಸ್ (ಪ್ರೊಡಕ್ಷನ್ಸ್)
ಪ್ರೊ/ಕ/ಚಿ.ಕ/ನಿ: ವಿ.ರವಿಚಂದ್ರನ್
ಸ.ನಿ: ಚಂದ್ರಹಾಸ ಆಳ್ವ
ಅ: ವಿ.ರವಿಚಂದ್ರನ್, ಜೂಹಿ ಚಾವ್ಲ, ವಿಷ್ಣುವರ್ಧನ್, ಅಂಬರೀಷ್, ಪ್ರಭಾಕರ್, ಶ್ರೀನಾಥ್, ಲೋಕೇಶ್, ಊರ್ವಶಿ, ಕೆ.ವಿಜಯ, ಲೀಲಾವತಿ
ಮಾ/ಗೀ/ಸಂ: ಹಂಸಲೇಖ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಜೇಸುದಾಸ್, ಚಿತ್ರಾ
ಸಂ: ಕೆ.ಬಾಲು
ಛಾ: ಆರ್.ಮಧುಸೂದನ್
ಕಲೆ: ನಾಗೇಶ್ವರ ರಾವ್
ನೃ: ಚಿನ್ನಿ ಪ್ರಕಾಶ್
ಸಾ: ಹಾರ್ಸಮನ್ ಬಾಬು
ಹಾ: ೧) 'ಗೆಳೆಯರೇ ನನ್ನ ಗೆಳತಿಯರೇ...', ೨)'ಪ್ರೇಮಲೋಕದಿಂದ ಬಂದಾ...', ೩) 'ಈ ನಿಂಬೆ ಹಣ್ಣಿನಂಥಾ ಹುಡುಗಿ...', ೪) 'ನೋಡಮ್ಮಾ ಹುಡುಗೀ...', ೫)' ಚೆಲುವ ಒಂದು ಕೇಳ್ತೀನಿ...', ೬)'ಯಾರಿವನೂ...', ೭) 'ಬಾಯ್ ಫ್ರೆಂಡ್ ಬರ್‍ತಾನಂತಾ...', ೮) 'ಓ ಗಂಗೂ ಈ ಜೈಕು ಕಲಿಸಿಕೊಡೊ ...', ೯) 'ಇದು ನನ್ನ ನಿನ್ನ ಪ್ರೇಮಗೀತೆ...', ೧೦) 'ಮೋಸಗಾರನಾ...
ವಿ: ಸಂಗೀತದಲ್ಲಿ ವಿಶೇಷ ಪ್ರಯೋಗಗಳಾಗಿವೆ. ಕ್ಯಾಸೆಟ್ ಮಾರಾಟ ಚಿತ್ರದ ಗಳಿಕೆಯಲ್ಲಿ ದಾಖಲೆ. ರವಿಚಂದ್ರನ್‌ಅವರ ಪ್ರಥಮ ನಿರ್ದೇಶಿತ ಚಿತ್ರ.
ಕ.ಸಾ: ಪ್ರೀತಿಸಿದ ಹುಡುಗಿ ಒಂದಾಗಲು ಬಿಡದ ಮನೆಯ ಹಿರಿಯರು, ಪ್ರೀತಿಗಾಗಿ ಎಂಥ ಸಾಹಸಕ್ಕೂ ಅಂಜದ ಪ್ರಣಯಿಗಳು, ಸಾಹಸ ಛಲ, ಸಂಗೀತ ಪ್ರಧಾನ ಚಿತ್ರ. ಕಡೆಗೂ ಪ್ರೀತಿಗೇ ಜಯ.

೧೦೮೩. ಬೆರಳ್‌ಗೆ ಕೊರಳ್

(೧೯೮೭ / ವರ್ಣ / ಸಾಮಾಜಿಕ)
ಲಾ: ಕಾಂಚನಗಂಗಾ ಫಿಲಂಸ್
ಪ್ರೊ/ಚಿ.ಕ/ನಿ: ಶ್ರೀಹರ್ಷ
ಸ.ನಿ: ರೇಸಿ
ಅ: ಮಾ|ಬಿಪಿನ್ ಚಂದ್ರಭರತ್, ಮಾನು, ಪಂಢರಿಬಾಯಿ, ರೇಸಿ. ಸುಂದರ ಕೃಷ್ಣ ಅರಸ್, ಶ್ರೀಹರ್ಷ, ಚಂದ್ರ ಕುಮಾರ್, ನಳಿನಾಮೂರ್ತಿ, ಕವಿರಾಜ್, ಸುರೇಂದ್ರ, ಗೋಪಾಲನಾಯಕ್, ಹಾಲಪ್ಪ, ರಾಧಾಕೃಷ್ಣ, ಪ್ರದೀಪ್, ಕು|ವಿಜಯಲಕ್ಷ್ಮಿ ಚೌಧುರಿ
ಕ: ಕುವೆಂಪು (ಬೆರಳ್‌ಗೆ ಕೊರಳ್ ನಾಟಕ ಆಧಾರಿತ)
ಮಾ/ಗೀ: ಕುವೆಂಪು
ಗಾ: ಬಿ.ಕೆ.ಸುಮಿತ್ರ, ರಾಮಚಂದ್ರ, ಪಂಕಜ ರಾಮಚಂದ್ರ, ಉಷಾಗಣೇಶ್, ಶ್ರೀಹರ್ಷ, ಸಿ.ಅಶ್ವತ್ಥ್, ವೈ.ಕೆ.ಮುದ್ದುಕೃಷ್ಣ, ಶಿವಮೊಗ್ಗ ಸುಬ್ಬಣ್ಣ, ಕಸ್ತೂರಿಶಂಕರ್
ಸಂ: ಜಿ.ಸ್ವಾಮಿ
ಛಾ: ಎಸ್.ರಾಮಚಂದ್ರ
ಕಲೆ: ಶ್ರೀಹರ್ಷ
ಸ: ಬಿ.ವಿ.ಶ್ರೀನಿವಾಸ್, ಹಿನ್ನಲೆ ಸಂಗೀತ ಗುಣಸಿಂಗ್
ಧ್ವ: (ಹಾ) ಕೋದಂಡಪಾಣಿ, (ಮಾ) ಗೋವಿಂದಸ್ವಾಮಿ
ನೃ: ಶಿಕಾರಿಪುರದ ಕವಾಟಿ ಹನುಮಂತಪ್ಪ ವೀರೇಶ್ವರ ಡೊಳ್ಳು ಕುಣಿತದ ತಂಡ, ಸುರಪೊನ್ನೇ ಪುಟ್ಟಪ್ಪನ ಡೊಳ್ಳು ಕುಣಿತದ ತಂಡ . ಗಿರಿಯಾಪುರ ಜಗದೀಶ ವೀರಗಾಸೆ ತಂಡ, ಸನ್ಯಾಸಿ ಕೋಡಮಗ್ಗಿ ಸಿದರಾಮಯ್ಯನವರ ವೀರಗಾಸೆ ತಂಡ.
ವ: ಇಂದ್ರಸೇನರಾಜು, ಕೇಶವ, ಸೆಲ್ವ, ರವಿ, ನಾರಾಯಣ
ಪ್ರ: ಪೊನ್ನುಸ್ವಾಮಿ, ರಾಂ, ವಿಜಯನ್
ಹಾ: ೧) 'ಕತ್ತಲೆಯ ಬಸಿರಿಂದ ..', ೨) 'ಗುರುಬ್ರಹ್ಮ ಗುರುವಿಷ್ಣು...', ೩) 'ಹೃದಯ ಪ್ರಭಾತಕ್ಕೆ..', ೪) 'ದಕ್ಷಿಣ ದಿಗಂತದ ಮೇರೆಯ...', ೫) 'ತೇನವಿನಾ...', ೬) 'ಓಂ.. ಓಂ..ಮಂಜುನಾಥ ಶ್ರೀ ಜಗನ್ನಾಥ...'. ೭)'ಓಂ..ಓಂ..ಬ್ರಹ್ಮಾನಂದಂ ಪರಮ ಸುಖವು..', ೮)'ಕಿವಿಗಿಂಪಾಗಿ ಕೇಳುತಿದೆ..', ೯) 'ವಿಕಾರಿ ನಿತ್ಯಂ ವಿಮಲಪಾಚಲಂ...', ೧೦) 'ಅಂತರ ತನು ನೀ ಗುರು .
ವಿ: ಹಳಗನ್ನಡವನ್ನು ಬಳಸಿದೆ. ೧೯೮೪ ೮೫ ರಾಜ್ಯ ಸರ್ಕಾರದ ತೀರ್ಪುಗಾರರ ಪ್ರಶಸ್ತಿ
ಕ.ಸಾ: ಏಕಲವ್ಯನ ಬಿಲ್ಲು ವಿದ್ಯೆಯ ಕಲಿಕೆ, ಗುರುದ್ರೋಣರು ಅರ್ಜುನನ ಕಾರಣದಿಂದ ಹೆಬ್ಬೆರಳನ್ನು ಕೇಳುವ ಪ್ರಸಂಗ, ಏಕಲವ್ಯನ ತಾಯಿಯ ಅಳಲು ಮಹಾಭಾರತದ ಒಂದು ಪ್ರಸಂಗವನ್ನು ಹೊಸ ನೋಟದಲ್ಲಿ ಕಂಡ ವಿಶೇಷ.

೧೦೮೪. ಬಜಾರ್ ಭೀಮ

(೧೯೮೭ / ವರ್ಣ / ಸಾಮಾಜಿಕ)
ಲಾ: ರವಿಚಿತ್ರಾ ಫಿಲಂಸ್
ಪ್ರೊ: ವೈ.ವಿ.ರಾವ್
ನಿ/ಚಿ.ಕ: ಪೇರಾಲ

ಸ.ನಿ: ಎಂ.ಡಿ.ಶ್ರೀಧರ್, ಟಿ.ಲಿಂಗರಾಜ ಕಗ್ಗಲ್
ಅ: ಅಂಬರೀಷ್, ಅಂಬಿಕ, ಗೀತ, ಅಶ್ವತ್ಥ್, ದಿನೇಶ್, ವಿಶ್ವವಿಜೇತ, ಸುಧೀರ್, ಜಯಶ್ರೀ, ಉಮಾಶ್ರೀ, ಬಾಲಕೃಷ್ಣ, ರಾಜಾರಾಂ, ಮೈಸೂರುಲೋಕೇಶ್
ಕ: ಎಂ.ಬಾಲಯ್ಯ
ಮಾ: ಕುಣಿಗಲ್ ನಾಗಭೂಷಣ್
ಗೀ: ಆರ್.ಎನ್.ಜಯಗೋಪಾಲ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಬೆಂಗಳೂರು ಲತ, ವಾಣಿ ಜಯರಾಂ
ಸಂ: ಟಿ.ರಾಜಗೋಪಾಲ್
ಛಾ: ಜಾನಿಲಾಲ್, ಕಬೀರ್ ಲಾಲ್
ಕಲೆ: ಸತ್ಯರಾಜ್
ಸ: ಸತ್ಯಂ
ಧ್ವ: (ಹಾ) ಗೋವಿಂದರಾಜು, (ಮಾ) ಕೋದಂಡಪಾಣಿ
ನೃ: ಉಡುಪಿ ಜಯರಾಂ
ಸಾ: ಸಾಹುಲ್
ವ: ನಾರಾಯಣ ರಾವ್, ಚಿತ್ರಂ
ಪ್ರ: ವಾಸು , ಕೃಷ್ಣ, ಚಂದ್ರು, ಲತ
ಸ್ಟು: ಪ್ರೀಮಿಯರ್, ಚಾಮುಂಡೇಶ್ವರಿ
ಸೆ: ರೀಲು ೧೫, ೨೦ ೦೭ ೧೯೮೭
ಕ.ಸಾ: ಒಂದೇ ರೀತಿಯ ಇಬ್ಬರು ವ್ಯಕ್ತಿಗಳು ಅವರನ್ನು ಪ್ರೀತಿಸುವ ಹುಡುಗಿಯರು. ಆಸ್ತಿಯ ಆಸೆಗಾಗಿ ನಡೆಯುವ ಮೋಸದಾಟವನ್ನು ಕೊನೆಗಾಣಿಸಲು ಅವಲು ಬದಲಾಗಿ ಮೋಸಗಾರರನ್ನು ಬಗ್ಗು ಬಡಿಯುತ್ತಾರೆ. ನಂತರ ಅವರಿಬ್ಬರು ಅವಳಿ ಸೋದರರೆಂಬ ಸತ್ಯ ತಿಳಿಯುತ್ತದೆ.

೧೦೮೫. ಸೌಭಾಗ್ಯಲಕ್ಷ್ಮಿ

(೧೯೮೭ / ವರ್ಣ / ಸಾಮಾಜಿಕ)
ಲಾ: ವಾಸು ಚಿತ್ರ
ಪ್ರೊ: ಎಸ್.ಪಿ. ರಾಜಶೇಖರ್
ನಿ/ಚಿ.ಕ: ಭಾರ್ಗವ

ಸ.ನಿ: ಫಣಿ ರಾಮಚಂದ್ರ
ಅ: ವಿಷ್ಣುವರ್ಧನ್, ರಾಧ, ಲಕ್ಷ್ಮಿ, ಅರುಣಾ, ರಮೇಶ್ ಭಟ್, ಸತ್ಯಭಾಮ
ಮಾ/ಗೀ: ಚಿ.ಉದಯಶಂಕರ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ವಾಣಿ ಜಯರಾಂ, ಎಸ್.ಜಾನಕಿ
ಸಂ: ಕೃಷ್ಣಸ್ವಾಮಿ, ಬಾಲು
ಛಾ: ಡಿ.ವಿ. ರಾಜಾರಾಂ
ಕಲೆ: ಚಲಂ
ಸ: ಎಸ್.ಪಿ.ಬಾಲಸುಬ್ರಹ್ಮಣ್ಯಂ
ಧ್ವ: (ಹಾ) ಗೋವಿಂದಸ್ವಾಮಿ (ಮಾ) ಸಿ.ಎಸ್.ಮೇನನ್
ನೃ: ಶ್ರೀನಿವಾಸ್
ಸಾ: ವೈ.ಶಿವಯ್ಯ
ವ: ನಾರಾಯಣರಾವ್
ಪ್ರ: ರಾಮಮೂರ್ತಿ
ಸ್ಟು: ಕಂಠೀರವ, ಚಾಮುಂಡೇಶ್ವರಿ
ಸೆ: ರೀಲು - ೧೪, ಉದ್ದ - ೩೮೫೧.೫೧
ಕ.ಸಾ: ಇಬ್ಬರು ಪತ್ನಿಯರು. ಒಬ್ಬಳು ಪ್ರೇಮಿಸಿದವಳಾದರೆ ಮತ್ತೊಬ್ಬಳು ಮದುವೆಯಾದವಳು. ಒಬ್ಬರಿಗೊಬ್ಬರು ಪರಿಚಯವಾಗುತ್ತದೆ. ಇಬ್ಬರ ಪತಿಯೂ ಒಬ್ಬನೇ ಎಂದಾಗ ಮದುವೆಯಾದವಳ ಒಳಿತಿಗಾಗಿ ಪ್ರೇಮಿಸಿದವಳು ತ್ಯಾಗ ಮಾಡುತ್ತಾಳೆ. ಅವಳ ಕರುಳಬಳ್ಳಿಯನ್ನು ಮತ್ತೊಬ್ಬ ಹೆಣ್ಣು ಸಾಕಿ ಸಲಹುತ್ತಾಳೆ.

೧೦೮೬. ಈ ಬಂಧ ಅನುಬಂಧ

(೧೯೮೭ / ವರ್ಣ / ಸಾಮಾಜಿಕ)
ಲಾ: ಪ್ರೇಮಾಲಯ ಫಿಲಂಸ್
ಪ್ರೊ: ಎ.ಆರ್.ರಾಜು. ಪಿ.ಎಲ್.ಶ್ರೀನಿವಾಸಮೂರ್ತಿ
ನಿ/ಛಾ: ಜಾನಕಿರಾಮ್
ಸ.ನಿ: ರಾಜ್ ನಾಗೇಶ್
ಅ: ಶಂಕರ್‌ನಾಗ್, ಮಾ|ಮಂಜುನಾಥ್, ವಿಜಯಘೋಷ್,

ಸೂರ್ಯನಾರಾಯಣ, ಕೆ.ವಿ.ಮಂಜಯ್ಯ, ವಜ್ರಮುನಿ, ಜರೀನ ವಹಾಬ್, ಜಯಶ್ರೀ, ಗುರುಕಿರಣ್, ಟೊಮೆಟೊ ಸೋಮು. ಉಮಾಶ್ರೀ, ಶ್ಯಾಮಲ, ಅರ್ಚನಾ, ದಿನೇಶ್, ವಿನಯಾ. ಹಿರೇಮಠ, ಕುಣಿಗಲ್ ನಾಗಭೂಷಣ್
ಕ: ಹಮೀದ್ ಬಾನು
ಚಿ.ಕ: ಎ.ಎಂ.ಸಮೀವುಲ್ಲಾ
ಮಾ: ಕುಣಿಗಲ್ ನಾಗಭೂಷಣ್
ಗೀ: ಗೀತಪ್ರಿಯ, ಆರ್.ಎನ್.ಜಯಗೋಪಾಲ್

ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್.ಜಾನಕಿ, ಪಲ್ಲವಿ
ಸಂ: ಸುರೇಶ್ ಅರಸ್
ಕಲೆ: ಕೇಶವರಾವ್
ಸ: ರಮೇಶ್ ನಾಯು
ಧ್ವ: (ಹಾ) ಗೋವಿಂದಸ್ವಾಮಿ, (ಮಾ) ಕೋದಂಡಪಾಣಿ
ನೃ: ಸಂಪತ್
ಸಾ: ಜ್ಯೋತಿರತ್ನಂ
ವ: ಕಲಿಕಾಮೂರ್ತಿ
ಪ್ರ: ಮಸೂರುವೆಂಕಟೇಶ್
ಸ್ಟು: ಕಂಠೀರವ, ವಸಂತ್, ಕಿರಣ್ ಮೂವೀಸ್
ಹಾ: ೧) 'ಈ ಬಂಧ ಅನುಬಂಧ...', ೨) 'ಮುದು ಕಂದಾ ಬಂದಾ..', ೩) 'ಚಿತ್ರ ಬರುವ ಕಾಲವೇ...', ೪) 'ಗೋಕುಲದಂಥ ಮಧುರೆಗೆ...

ಕಸಾ: ತನ್ನ ಇಚ್ಛೆಗೆ ವಿರುದ್ಧವಾಗಿ ಹಾಡಲು ಹೋದ ಹೆಂಡತಿಯನ್ನು ತೊರೆಯುವ ಪತಿ ಒಬ್ಬ ಡಾಕ್ಟರ್. ನ್ಯಾಯಾಲಯದ ಮೊರೆ ಹೋಗುವ ಶ್ರೀಮಂತ ಹೆಂಡತಿ ಮಗುವನ್ನು ಭವಿಷ್ಯದ ದೃಷ್ಟಿಯಿಂದ ಸಾಕುವ ಹಕ್ಕು ಪಡೆಯುತ್ತಾಳೆ. ಮಗನಿಗಾಗಿ ಡಾಕ್ಟಿಂಗ್ ಮಾಡುವ ಅಪ್ಪ ಅನಾರೋಗ್ಯದಿಂದ ಸಾಯುತ್ತಾನೆ.

೧೦೮೭. ಒಂದೇಗೂಡಿನ ಹಕ್ಕಿಗಳು

(೧೯೮೭ ವರ್ಣ ಸಾಮಾಜಿಕ)
ಲಾ: ದ್ವಾರಕ ಫಿಲಂಸ್
ಪ್ರೊ: ದ್ವಾರಕೀಶ್. ರಾಮಚಂದ್ರ.ಎಸ್
ನಿ: ರಾಮಚಂದ್ರ
ಅ: ಪ್ರಭಾಕರ್. ಲಕ್ಷ್ಮಿ. ಶುಭ, ವಿಕ್ರಂ, ಸತೀಶ್,

ವಿಜಯರಂಜಿನಿ, ಉಮಾಶ್ರೀ, ಲೋಕನಾಥ್. ಹರಿಕುಮಾರ್,
ಕ/ಚಿ.ಕ: ವಿಶು
ಮಾ/ಗೀ: ಚಿ.ಉದಯಶಂಕರ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ ಎಸ್.ಜಾನಕಿ
ಛಾ: ಬಿ.ಎಸ್.ಬಸವರಾಜ್
ಕಲೆ: ರಮೇಶ್ ಕುಮಾರ್
ಸ: ವಿಜಯಾನಂದ್
ಕ.ಸಾ: ಕುಟುಂಬದಲ್ಲಿ ಯಾರೊಬ್ಬರೂ ಹೆಚ್ಚಿಲ್ಲ, ಯಾರೊಬ್ಬರೂ ಕಡಿಮೆ ಇಲ್ಲ. ಎಲ್ಲರೂ ಪರಸ್ಪರ ನಂಬಿಕೆ. ಗೌರವ ಹೊಂದಿದರೆ ಅದು ಸುಖಸಂಸಾರವಾಗುತ್ತದೆ ಎಂಬ ನೀತಿ ಬೋಧಕ ಚಿತ್ರ.

೧೦೮೮. ಒಲವಿನ ಉಡುಗೊರೆ

(೧೯೮೭/ವರ್ಣ/ಸಾಮಾಜಿಕ)
ಲಾ: ಅಷ್ಟಲಕ್ಷ್ಮಿ ಚಿತ್ರಾಲಯ
ಪ್ರೊ: ರಾಮನ್, ಡಿ.ರಾಜೇಂದ್ರ ಬಾಬು, ಎಸ್.ಆರ್.ಶಶಿಕಲ, ಡಿ.ವಿ.ಸುಧೀಂದ್ರ, ಪದ್ಮ, ವಸಂತ, ಎಸ್.ಗುರುಮೂರ್ತಿ
ನಿ/ಕ: ಡಿ.ರಾಜೇಂದ್ರ ಬಾಬು
ಸ.ನಿ: ಎಸ್.ಉಮೇಶ್
ಅ: ಅಂಬರೀಷ್, ಸಿಡಿ ಕಡಿ ಚಂದ್ರು, ಎಸ್.ಎಸ್.ರಾವ್, ಮಂಜುಳಾ ಶರ್ಮ, ಕೃಷ್ಣೇಗೌಡ, ರಾಮಕೃಷ್ಣ, ಬಾಲಕೃಷ್ಣ, ಲೀಲಾವತಿ, ಶಾಂತಮ್ಮ, ದಿನೇಶ್. ಸೀಮ, ಅರ್ಚನ, ಸ್ವಪ್ನ, ಉಮಾಶ್ರೀ, ಕೀರ್ತಿ

ಚಿ.ಕ/ಮಾ: ಬಿ.ಎಲ್.ವೇಣು
ಗೀ: ಶ್ಯಾಮಸುಂದರ ಕುಲಕರ್ಣಿ, ಆರ್.ಎನ್.ಜಯಗೋಪಾಲ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ವಾಣಿಜಯರಾಂ, ಪಿ.ಸುಶೀಲ, ಜಯಚಂದ್ರನ್
ಸಂ: ಕೆ.ಬಾಬು
ಛಾ: ಕುಲಶೇಖರ್
ಕಲೆ: ಕೃಷ್ಣಾಚಾರ್
ಸ: ಎಂ.ರಂಗರಾವ್
ಧ್ವ: (ಹಾ) ಸೋಮಶೇಖರ್, ಸೆಲ್ವರಾಜ್, ವಿಶ್ವನಾಥ್, (ಮಾ) ಕೋದಂಡಪಾಣಿ
ನೃ: ಉಡುಪಿ ಜಯರಾಂ
ಸಾ: ಹಾರ್ಸ್ ಬಾಬು
ವ: ರಾಮನಾಥ್, ಕೃಷ್ಣ, ರವಿ, ವಾಸು
ಪ್ರ: ಶ್ರೀನಿವಾಸ್, ಮಾಧವನ್
ಸ್ಟು: ಕಂಠೀರವ, ಪ್ರಸಾದ್
ಹಾ: ೧) 'ಒಲವಿನ ಉಡುಗೊರೆ .. ', ೨) 'ನಿನ್ನಂಥ ಚೆಲುವೆಯನ್ನು...', ೩) 'ಹೃದಯಮಿಡಿತ...', ೪) 'ಒಲವಿನ ಉಡುಗೊರೆ...', ೫) 'ಕಣ್ಣಿಗೆ ಕಾಣದ...
ಸೆ: ರೀಲು - ೧೬, ಉದ ೪೧೦೦.೯೯
ಕ.ಸಾ: ಚೆಲುವೆಯೊಬ್ಬಳಿಗೆ ಚೆಲುವಿನದೇ ಅಹಂಕಾರ. ಆಕೆಯು ತನಗೆ ಒಲಿಯುವಂತೆ ಮಾಡುವವನು ನಾಯಕ. ಆ್ಯಸಿಡ್ ಚೆಲ್ಲಿ ಕುರೂಪಿಯಾದ ಹುಡುಗಿಯ ಸಂಕಟಗಳು, ಸಾವು. ಅವಳ ಹಾಗೆ ಇರುವ ಇನ್ನೊಂದು ಹುಡುಗಿಯ ಪ್ರವೇಶ, ಆಕಸ್ಮಿಕಗಳ ಸರಮಾಲೆ.



೧೦೮೯. ಅನಾಮಿಕ

೧೯೮೭ ವರ್ಣ ಸಾಮಾಜಿಕ
ಲಾ: ತರಂಗಿಣಿ ಆರ್ಟ್ಸ್
ಪ್ರೊ/ಕ/ಚಿ.ಕ/ಮಾ/ನಿ: ಕಾಶೀನಾಥ್
ಅ: ಅಭಿನಯ, ಸ್ವಾತಿ, ತರಂಗಿಣಿ, ಸುಮನ್. ಕಮಿನೀಧರನ್, ಉಮಾ ಶಿವಕುಮಾರ್, ಸರೋಜಮ್ಮ, ಬಿಂದು. ಎಂ ಗಣೇಶ್, ಅಶೋಕ್ ಸಿಟ್ಟೂರ್, ನಲ್ಲನಗೌಡ, ಶ್ರೀಧರ್, ದಿನೇಶ್, ರಾಘವೇಂದ್ರ ಚಿಕ್ಕರೂರ್
ಗೀ: ಕಾಶೀನಾಥ್, ವಿ.ಮನೋಹರ್
ಗಾ: ಬಿ.ಆರ್.ಛಾಯ, ಕಾಶಿನಾಥ್
ಸಂ: ವಿ.ಸುಬ್ರಹ್ಮಣ್ಯಂ
ಛಾ: ಸುಂದರನಾಥ್ ಸುವರ್ಣ
ಕಲೆ: ಸುಕುಮಾರ್ ಪರೋಡಿ
ಸ: ಎಲ್.ಪದ್ಮನಾಭನ್
ಧ್ವ: (ಹಾ) ದಶರಥ್ (ಮಾ) ಸಂಕೇತ್
ಸ್ಟು: ಕಂಠೀರವ
ಹಾ: ೧) 'ಹಕ್ಕಿಗಳಾಗುವ ನಾವು...', ೨) 'ಅನಾಮಿಕ ಕಾಡಿರುವೇ...
ಕ.ಸಾ: ತಮಾಷೆಗೆಂದು ಒಬ್ಬರಿಗೊಬ್ಬರು ಬರೆದ ಪ್ರೇಮ ಪತ್ರಗಳು ಗೆಳೆಯರಲ್ಲಿ ಭಿನ್ನಾಭಿಪ್ರಾಯ ತರುತ್ತವೆ, ನಿಜಕ್ಕೂ ಬಂದ ಪ್ರೇಮಪತ್ರ ವೇಶ್ಯಾವಾಟಿಕೆಯಲ್ಲಿ ನಲುಗುತ್ತಿರುವ ಸ್ತ್ರೀಯದೆಂದು ತಿಳಿದು ಆಕೆಯನ್ನು ರಕ್ಷಿಸಲು ಹೋಗಿ ವಿಫಲನಾಗುವ ನಾಯಕನ ಕಥೆ, ಹಾಸ್ಯಪ್ರಧಾನ ನಿರೂಪಣೆ.

೧೦೯೦. ಶಿವಭಕ್ತ ಮಾರ್ಕಂಡೇಯ

(೧೯೮೭/ವರ್ಣ/ಪೌರಾಣಿಕ)
ಲಾ: ವರ್ಣ ಪ್ರೊಡಕ್ಷನ್ಸ್
ಪ್ರೊ: ಬಿ.ಆರ್.ವಸಂತ್, ಸತೀಶ್ ಉಡುಪ, ಬಿ.ಎಸ್.ರಂಗಾ
ನಿ/ಕ/ಚಿ.ಕ: ಬಿ.ಎಸ್.ರಂಗಾ
ಸ.ನಿ: ಬಿ.ಮೋಹನ್
ಅ: ರಾಜೇಶ್, ರೂಪಾದೇವಿ, ಮಾನು, ಪದ್ಮಾವಾಸಂತಿ,

ಶಿವರಾಮ್, ಸುದರ್ಶನ್, ಮಾ।ಸಂಜಯ್, ಮಾ।ಪ್ರಶಾಂತ್, ದಿನೇಶ್, ಬಳ್ಳಾರಿ ರೇಣುಕ, ಪ್ರಿಯಾಂಕ, ಅಶ್ವತ್ಥನಾರಾಯಣ, ಸದಾಶಿವ ಬ್ರಹ್ಮಾವರ್, ಲಾವಣ್ಯ, ಡಾ।ರುದ್ರೇಶ್, ಆರ್. ಜಿ.ಸಿಂಬಾಳ್ಕರ್
ಮಾ/ಗೀ: ಚಿ.ಉದಯಶಂಕರ್
ಗಾ: ಬಾಲಮುರಳಿಕೃಷ್ಣ, ಬೆಂಗಳೂರು ಲತ, ರಾಜ್ ಕುಮಾರ್ ಭಾರತಿ, ವಾಣಿ ಜಯರಾಂ, ಪಿ.ಬಿ.ಶ್ರೀನಿವಾಸ್, ವಸಂತ
ಸಂ: ಟಿ.ಜಿ.ಮೋಹನ್
ಛಾ: ಆರ್.ಎಸ್.ಕೆ.ಪ್ರಸಾದ್
ಕಲೆ: ಬಿ.ಎಸ್.ಕೇಶವರಾವ್
ಸ: ಎಂ.ರಂಗರಾವ್
ಧ್ವ: (ಹಾ) ಸಂಗೀತ (ಮಾ) ದಶರಥ್, ಪಾಟೀಲ್
ವ: ಬಿ.ನಾರಾಯಣಮೂರ್ತಿ , ಸೆಲ್ವರಾಜ್,
ಪ್ರ: ಜಿ.ರಾಜಗೋಪಾಲ್ (ಕೇಶ:) ತಾತಾರಾವ್
ಸ್ಟು: ಕಂಠೀರವ
ಹಾ: ೧) 'ಏನು ಲೀಲೆಯೋ ಅರಿಯೇ...', ೨) 'ಶಿವನೊಲಿಯದೆ ನಿನಗೆ...', ೩) 'ಶಿವನು ಬಂದ...', ೪) 'ರುದ್ರಂ ಪಶುಪತಿ...', ೫) 'ಅಮ್ಮ ಏಕಳುವೇ...', ೬) 'ಶಿವನಾ ನೋಡುವೆಯಾ...', ೭) ' ಬಳ್ಳಿ ತೇಲುವಲೀಲಾ...', ೮) ' ನೀ ತಂದ ಈ ಜೀವ...
ವಿ: ಬಿ.ಎಸ್.ರಂಗಾರವರು ಹಿಂದೆ ಈ ವಸ್ತುವನ್ನೇ ಚಿತ್ರ ಮಾಡಿದರು.
ಕ.ಸಾ: ಶಿವನ ವರಪ್ರಸಾದದಿಂದ ಹುಟ್ಟಿದ ಮಗು ಅಲ್ಪಾಯು. ಯಮಧರ್ಮನೇ ಬಂದಾಗಲೂ ಶಿವನನ್ನು ಆಶ್ರಯಿಸಿದ್ದರಿಂದ ಮೃತ್ಯುವನ್ನೇ ಜಯಿಸಿ ಚಿರಂಜೀವಿಯಾಗುವ ಪೌರಾಣಿಕ ಕಥೆ.

೧೦೯೧. ಪ್ರೇಮ ಕಾದಂಬರಿ

೧೯೮೭/ವರ್ಣ/ಸಾಮಾಜಿಕ
ಲಾ/ಪ್ರೊ: ರಾಗಮಾಲಿಕಾ ಪಿಕ್ಚರ್ಸ್
ನಿ: ಬಿ.ಮಲ್ಲೇಶ್
ಸ.ನಿ: ಕೆ.ಎ.ಕೃಷ್ಣಾಜಿರಾವ್, ಬಿ.ವಿರೂಪಾಕ್ಷ

ಅ: ಅಂಬರೀಷ್, ಲಕ್ಷ್ಮಿ, ದಿನೇಶ್, ಜೀವಿತ, ಭಾರತಿ, ಶಿವಪ್ರಸಾದ್, ಅರವಿಂದ್, ಜೈಜಗದೀಶ್, ಶಿವರಾಂ, ಮೈಸೂರುಲೋಕೇಶ್, ಕೋಕಿಲ, ಮಾ|ಮಧು, ಹೊನ್ನವಳ್ಳಿ ಕೃಷ್ಣ, ವಿಜಯಶ್ರೀ, ಮಂಜುಮಾಲಿನಿ, ಶನಿಮಹದೇವಪ್ಪ, ಡಿಂಗ್ರಿ ನಾಗರಾಜ್, ಬೇಬಿ ರೇಖ, ಮಾ|ಮಂಜುನಾಥ್, ಶ್ಯಾಮಲ, ವಸುಂಧರ, ವಿಜಯಲಕ್ಷ್ಮಿ
ಕ: ಸೆಲ್ವರಾಜ್
ಚಿ.ಕ: ಬಿ.ಮಲ್ಲೇಶ್.
ಗೀ: ಚಿ.ಉದಯಶಂಕರ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್.ಜಾನಕಿ, ವಾಣಿ ಜಯರಾಂ
ಸಂ: ಎಸ್.ಮನೋಹರ್
ಛಾ: ವಿಶ್ವಂ ನಟರಾಜನ್
ಕಲೆ: ನಜೀರ್
ಸ: ಎಲ್.ವೈದ್ಯನಾಥನ್
ಧ್ವ: (ಹಾ) ಕೋದಂಡಪಾಣಿ, ಗೋವಿಂದಸ್ವಾಮಿ, (ಮಾ) ಕೋಟೀಶ್ವರರಾವ್
ನೃ: ಉಡುಪಿ ಜಯರಾಂ, ದೇವಿ
ಸಾ: ಸಾಹುಲ್
ವ: ನಾಗರಾಜ್, ಆರ್.ಕೃಷ್ಣನ್
ಪ್ರ: ಜಿ. ಎಸ್.ವಾಸು, ಶ್ರೀನಿವಾಸ್, ಷಣ್ಮುಗಂ
ಸ್ಟು: ಕಂಠೀರವ, ಪ್ರೀಮಿಯರ್, ಪ್ರಸಾದ್ ಕಲರ್ ಲ್ಯಾಬ್
ಸೆ: ರೀಲು - ೧೫
ಕ.ಸಾ: ಪ್ರೇಮಿಗಳು ಸಂದರ್ಭವೊಂದರಲ್ಲಿ ಅಗಲಬೇಕಾಗುತ್ತದೆ. ಹುಡುಗ ಕಾಲೇಜಿನ ಅಧ್ಯಾಪಕನಾದರೆ, ಹುಡುಗಿಗೆ ತಮ್ಮ ತಂಗಿಯರ ಜವಾಬ್ದಾರಿ ಹೆಗಲಿಗೆ ಬೀಳುತ್ತದೆ. ಪರಿಸ್ಥಿತಿ ತಂಗಿ ಅಧ್ಯಾಪಕನನ್ನು ಪ್ರೀತಿಸುವಂತೆ ಮಾಡುತ್ತದೆ ವಿಷಯ ತಿಳಿದ ಅಕ್ಕ ತಂಗಿಗಾಗಿ ತನ್ನ ಪ್ರೀತಿಯನ್ನು ತ್ಯಾಗ ಮಾಡುತ್ತಾಳೆ.

೧೮೯೨. ಒಂದು ಮುತ್ತಿನ ಕಥೆ

(೧೯೮೭ / ವರ್ಣ / ಸಾಮಾಜಿಕ)
ಲಾ: ಪದ್ಮಶ್ರೀ ಎಂಟರ್‌ಪ್ರೈಸಸ್
ಪ್ರೊ: ಎ.ದ್ವಾರಕನಾಥ್
ನಿ/ಚಿ.ಕ: ಶಂಕರ್‌ನಾಗ್
ಅ: ರಾಜಕುಮಾರ್, ಅರ್ಚನ, ಬಾಲಕೃಷ್ಣ, ಎಂ.ಎಲ್.ಎ.ಚಂದ್ರು, ದೊಡ್ಡಣ್ಣ, ತೂಗದೀಪ ಶ್ರೀನಿವಾಸ್, ಕಮಿನೀಧರನ್, ರಮೇಶ್ ಭಟ್, ಸುಂದರ್ ರಾಜ್, ಶೋಭ, ಶಿವರಾಂ, ಅಶೋಕ್ ಬಾದರದಿನ್ನಿ
ಕ: ಅರುಂಧತಿನಾಗ್
ಮಾ/ಗೀ: ಚಿ.ಉದಯಶಂಕರ್
ಗಾ: ರಾಜಕುಮಾರ್, ರತ್ನಮಾಲ ಪ್ರಕಾಶ್, ಸಿ.ಅಶ್ವತ್
ಸಂ: ಎ.ಭಕ್ತವತ್ಸಲಂ
ಛಾ: ಬಿ.ಸಿ.ಗೌರಿಶಂಕರ್
ಕಲೆ: ಪೇಕೇಟಿರಂಗ
ಸ: ಎಲ್.ವೈದ್ಯನಾಥನ್
ಧ್ವ: (ಹಾ) ಸಂಕೇತ್
ಸಾ: ವ್ಯ.ಶಿವಯ್ಯ
ಹಾ: ೧) 'ಮುತ್ತೊಂದ ತಂದೆ ಕಡಲಾಳದಿಂದ...', ೨) 'ಒಂದು ಎರಡು ಮೂರು ...', ೩) 'ಮಲ್ಲಿಗೆ ಹೂವಿನಂತ ಅಂದ ...', ೪) 'ಮೇಲಿಂದ ಹುಣ್ಣಿಮೆಯ ಚಂದ್ರ..'
ವಿ: ಶಂಕರ್‌ನಾಗ್ ರಾಜಕುಮಾರ್ ಚಿತ್ರ ನಿರ್ದೇಶಿಸಿದ್ದು. ಅಂಡರ್ ವಾಟರ್ ಚಿತ್ರಿಕೆಗಳ ವಿಶೇಷ.
ಕ.ಸಾ: ನಗರ ಜೀವನದಿಂದ ದೂರವಾಗಿ ದ್ವೀಪ ನಿವಾಸಿಗಳಾದ ಗಿರಿಜನರ ಸುತ್ತ ಹೆಣೆಯಲಾಗಿದೆ. ಬಹುಮೌಲ್ಯದ ಮುತ್ತೊಂದರ ಕಾರಣ. ನಗರದ ಜನರು ಮುಗ್ಧರ ಬದುಕಿನೊಳ ಹೊಕ್ಕಿದರಿಂದ ತಲ್ಲಣಗೊಳ್ಳುತ್ತಾರೆ. ಮನುಷ್ಯನ ಉತ್ತಮ ಗುಣಗಳು - ಮೌಲ್ಯಗಳು ಅವನ ದೌರ್ಬಲ್ಯಗಳನ್ನು ಮೀರಿ ನಿಲ್ಲುವ ಕ್ಷಣಗಳು ಬಂದಾವೆ ಎಂದು ಕೇಳುತ್ತದೆ.

೧೮೯೩. ಆರಂಭ

(೧೯೮೭ / ವರ್ಣ / ಸಾಮಾಜಿಕ)
ಲಾ: ಜೆ.ಯು.ಎಸ್. ಕ್ರಿಯೇಷನ್ಸ್ (ಬೆಂಗಳೂರು)
ಪ್ರೊ: ಹೆಚ್.ಜಯರಾಮ ಶೆಟ್ಟಿ, ಉದಯ್, ಸುಂದರನಾಥ ಸುವರ್ಣ
ನಿ/ಕ/ಚಿ.ಕ/ಛಾ : ಸುಂದರನಾಥ ಸುವರ್ಣ
ಸ.ನಿ: ಸುಬ್ರಹ್ಮಣ್ಯ , ಎ.ಗೌಸ್

ಅ: ಉದಯ್, ವಿಜಯಾಸೋಮಣ್ಣ, ಚಂದ್ರಲೇಖ, ಲೋಕನಾಥ್, ಕಮಿನೀಧರನ್, ಉಮಾ ಶಿವಕುಮಾರ್, ರಿಚರ್ಡ್‌ಲೂಯಿಸ್, ಎಚ್.ಎಂ.ಟಿ.ನಂದ, ಮೈಸೂರಿನ ಪತ್ರಕರ್ತ ಪದ್ಮನಾಭ್, ಬಿ.ರಾಮಮೂರ್ತಿ
ಮಾ: ಎಂ.ನರೇಂದ್ರಬಾಬು, ಎ.ಬಾಲಕೃಷ್ಣ, ಸುಂದರನಾಥ ಸುವರ್ಣ
ಗೀ: ದಲಿತಕವಿ ಸಿದ್ದಲಿಂಗಯ್ಯ, ಚಿ.ಉದಯಶಂಕರ್, ವಿ.ಮನೋಹರ್
ಗಾ: ರಾಜಕುಮಾರ್ ಭಾರತಿ, ಬಿ.ಆರ್.ಛಾಯ
ಸಂ: ಅನಿಲ್ ಮಲ್ನಾಡ್
ಸ: ಎಲ್.ವೈದ್ಯನಾಥನ್
ಧ್ವ: (ಹಾ) ಗೋವಿಂದಸ್ವಾಮಿ (ಮಾ) ದಶರಥ್
ನೃ: ಉಡುಪಿ ಜಯರಾಂ
ವ: ಎಸ್.ಎಸ್.ಲಕ್ಷ್ಮೀನಾರಾಯಣ
ಪ್ರ: ಚಂದ್ರು
ಸ್ಟು: ಚಾಮುಂಡೇಶ್ವರಿ
ಹಾ: ೧) 'ಸಂಜೆ ಗಾಳಿ ಚಿನ್ನ ...', ೨) 'ಹೇ ನಗಬೇಡ ...', 'ಒಳ್ಳೆ ಚೆಂದುಳ್ಳಿ ಹೆಣ್ಣೆ ...', ೩) 'ಇನಿಯಾ ಸಹಿಸೆ ನಾ ...'
ವಿ: ಸುಂದರನಾಥ ಸುವರ್ಣ ನಿರ್ದೇಶಕರಾದದ್ದು ಹೊಸ ಪ್ರತಿಭೆಗಳ ಪರಿಚಯ.
ಕ.ಸಾ: ಹದಿಹರೆಯದ ಪ್ರೇಮ. ಪ್ರೇಮಿಗಳಿಗೆ ಅಡ್ಡಿ. ಯುವಕ ತನಗಿಂತ ಹಿರಿಯಳಾದ ಅಧ್ಯಾಪಕಿಯಲ್ಲಿ ಆಸಕ್ತನಾಗುತ್ತಾನೆ. ಅಧ್ಯಾಪಕಿಯ ಸಮಯೋಚಿತ ವರ್ತನೆ ಎಲ್ಲವನ್ನು ಸುಗುಮಗೊಳಿಸುತ್ತದೆ. ಪ್ರೇಮಿಗಳು ಒಂದಾಗುತ್ತಾರೆ.

೧೮೯೪. ಕರುಣಾಮಯಿ

(೧೯೮೭ / ವರ್ಣ / ಸಾಮಾಜಿಕ)
ಲಾ: ಕಲಾಕೃತಿ
ಪ್ರೊ: ಭಾರ್ಗವ , ರಾಜಾರಾಂ
ನಿ: ಭಾರ್ಗವ
ಸ.ನಿ: ಫಣಿ ರಾಮಚಂದ್ರ, ಸಿ.ಹೆಚ್.ಬಾಲಾಜಿಸಿಂಗ್ , ಎಸ್.ಉಮೇಶ್

ಅ: ವಿಷ್ಣುವರ್ಧನ್. ಪಂಡರಿಬಾಯಿ, ಕೆ.ಎಸ್.ಅಶ್ವತ್, ಭವ್ಯ, ಶಿವರಾಂ, ತಾರ, ದೊಡ್ಡಣ್ಣ, ಕಾದಂಬರಿ, ಜ್ಯೋತಿ, ಶಿವಕುಮಾರ್
ಕ: ಕಾಕೋಳು ಸರೋಜಾರಾವ್ ಕಾದಂಬರಿ
ಚಿ.ಕ: ವಾಸು
ಮಾ/ಗೀ: ಚಿ.ಉದಯಶಂಕರ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರ, ರಾಜನ್
ಸಂ: ವಿಕ್ಟರ್ ಯಾದವ್
ಛಾ: ಡಿ.ವಿ.ರಾಜಾರಾಂ
ಕಲೆ: ನಜೀರ್
ಸ: ರಾಜನ್ -ನಾಗೇಂದ್ರ
ಧ್ವ: (ಹಾ) ಶ್ರೀನಿವಾಸ್, (ಮಾ) ಕೋದಂಡಪಾಣಿ
ನೃ: ಉಡುಪಿ ಜಯರಾಂ
ಸಾ: ಜ್ಯೂಡೋ ರತ್ನಂ
ವ: ಕಲಿಕಮೂರ್ತಿ
ಪ್ರ: ಶ್ರೀನಿವಾಸ್, ರಾಮಮೂರ್ತಿ
ಸ್ಟು: ಚಾಮುಂಡೇಶ್ವರಿ, ಕಂಠೀರವ
ಹಾ: ೧) 'ಕೌಸಲ್ಯೆಯು ಕಂದಾ ಎಂದು ಕರೆದಾಗ...', ೨) 'ಮನಸಲಿ ಬಯಸುವುದೇ ಒಂದು...', ೩) 'ಊರು ಹೇಗೆಂದು ಊರ ಜನರು ಹೇಗೆಂದು...'. ೪) 'ನಮ್ಮೂರಾ ಚೆಲುವಾ ಚೆಲುವಾ ...', ೫) ' ದಶರಥನು ಓ ನನ್ನ ಪ್ರಾಣವೇ ಬಾ ಎಂದಾಗ ...'
ಕ.ಸಾ: ನಾಯಕ, ತಮ್ಮಂದಿರು ಹಾಗೂ ಅವರ ಪತ್ನಿಯರಿಂದ ಮನೆ ತೊರೆಯಬೇಕಾಗುತ್ತದೆ. ಯಾರನ್ನೂ ದ್ವೇಷಿಸದ ಆತ ಸ್ವಾವಲಂಬಿಯಾಗಿ ದುಡಿದು ಎಲ್ಲರಿಗೂ ಆದರ್ಶಪ್ರಾಯವಾಗುತ್ತಾನೆ. ತಮ್ಮಂದಿರು ತಮ್ಮ ದುರಾಸೆಯ ಫಲವಾಗಿ ಬೀದಿಗೆ ಬರುತ್ತಾರೆ. ಕರುಣಾಮಯಿಯಾದ ನಾಯಕ ಅವರನ್ನು ಆದರಿಸುತ್ತಾನೆ.

೧೮೯೫. ಹುಲಿ-ಹೆಬ್ಬುಲಿ

(೧೯೮೭ / ವರ್ಣ / ಸಾಮಾಜಿಕ)
ಲಾ: ಶ್ರೀ ದುರ್ಗಾ ಆರ್ಟ್ಸ್ ಪ್ರೊಡಕ್ಷನ್ಸ್
ಪ್ರೊ: ಬಿ.ನಾಗಿರೆಡ್ಡಿ
ನಿ: ವಿಜಯ್
ಸ.ನಿ/ಮಾ: ಪಿ.ಜಿ.ಸುಧೀರ್
ಅ: ಪ್ರಭಾಕರ್, ಶಂಕರನಾಗ್, ಅನಂತ್‌ನಾಗ್, ಸುಧೀರ್, ಎಸ್.ಎಸ್.ರಾವ್, ಸುಂದರಕೃಷ್ಣ ಅರಸ್, ಮನೋಹರ್, ಬ್ಯಾಂಕ್ ಚಂದ್ರಶೇಖರ್, ತಿಮ್ಮಯ್ಯ, ತಿಪಟೂರುಸಿದ್ದರಾಮಯ್ಯ, ಸುಮಲತ, ಭವ್ಯ, ಲೀಲಾವತಿ, ಜ್ಯೋತಿ, ಡಿಸ್ಕೋಶಾಂತಿ, ಬೇಬಿಪದ್ಮಿನಿ, ಡಿಂಗ್ರಿನಾಗರಾಜ್. ಉಮೇಶ್, ಜಾಕ್‌ಪಾಟ್‌ರಾಮು, ಮನ್‌ದೀಪ್‌ರಾಯ್, ಶ್ಯಾಮಲ, ಚೇತನ್, ಮಹದೇವಪ್ಪ
ಕ/ಚಿ.ಕ: ಟಿ.ಕೆ.ಷಣ್ಮುಗ ಸುಂದರಂ
ಗೀ: ಚಿ.ಉದಯಶಂಕರ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ವಾಣಿಜಯರಾಂ, ಬಿ.ಆರ್.ಛಾಯ
ಸಂ: ಶಶಿಕುಮಾರ್
ಛಾ: ಎಸ್.ರಾಮಚಂದ್ರ
ಸ: ವಿಜಯಭಾಸ್ಕರ್
ಧ್ವ: (ಹಾ) ಸಂಕೇತ್ (ಮಾ) ಚಾಮುಂಡೇಶ್ವರಿ
ನೃ: ಚಿನ್ನಿಪ್ರಕಾಶ್

ಸಾ: ವೈ.ಶಿವಯ್ಯ
ಸ್ಟು: ಚಾಮುಂಡೇಶ್ವರಿ, ಕಂಠೀರವ
ಹಾ: ೧) 'ಸುಖವು ಬೇಕು ಸುಲಭದೀ
೨) 'ಮುತ್ತುಬೇಡಿದೆ..', ೩) 'ಓ ಹೋ ಮನಸನು.
೪) 'ಪುಟ್ಟ ಪುಟ್ಟ ಮಕ್ಕಳೇ..
ಕ.ಸಾ: ಮಾಡದ ತಪ್ಪಿಗಾಗಿ ಶಿಕ್ಷೆಗೊಳಗಾಗಿ, ನಂತರ ಅಣ್ಣನ ಬಗ್ಗೆ ತಪ್ಪು ಗ್ರಹಿಕೆಯ ತಮ್ಮ. ಅಣ್ಣ ನಿರಪರಾಧಿ ಎನ್ನುವ ಸತ್ಯ ತಿಳಿದು. ದುಷ್ಟರನ್ನು ಸದೆ ಬಡಿಯುವ ಕಥೆ.

೧೦೯೬. ಮಿ| ರಾಜಾ

(೧೯೮೭ / ವರ್ಣ / ಸಾಮಾಜಿಕ)
ಲಾ: ವಿ.ಎನ್ ಎಸ್.ಪ್ರೊಡಕ್ಷನ್ಸ್
ಪ್ರೊ: ಬಿ.ಎನ್.ಗಂಗಾಧರ್
ನಿ: ವಿ.ಸೋಮಶೇಖರ್
ಅ: ಅಂಬರೀಷ್, ಚಂದ್ರಾ, ಸುಧೀರ್, ಧೀರೇಂದ್ರ ಗೋಪಾಲ್, ಲೋಹಿತಾಶ್ವ, ಬಾಲಕೃಷ್ಣ, ಜೇಬಿರೇಖ, ಉಮಾಶ್ರೀ, ಎನ್.ಎಸ್.ರಾವ್, ಮಹಾಲಕ್ಷ್ಮಿ, ತಾರ, ಸುಮಿತ್ರ, ಡಿಸ್ಕೋ ಶಾಂತಿ
ಕ: ಎನ್.ಟಿ.ಜಯರಾಮರೆಡ್ಡಿ
ಚಿ.ಕ: ವಿ.ಸೋಮಶೇಖರ್
ಮಾ: ಹಂಸಲೇಖ

ಗೀ: ಹಂಸಲೇಖ, ಆರ್.ಎನ್.ಜಯಗೋಪಾಲ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ವಾಣಿ ಜಯರಾಂ, ಲತಾ ಹಂಸಲೇಖ, ಜಯಪಾಲ್, ಮಂಜುಳ
ಸಂ: ಕೆ.ಬಾಲು
ಛಾ: ಹೆಚ್.ಜಿ.ರಾಜು
ಕಲೆ: ಕೇಶವರಾವ್
ಸ: ಹಂಸಲೇಖ
ಧ್ವ: (ಹಾ) ಚಾಮುಂಡೇಶ್ವರಿ
ನೃ: ಉಡುಪಿ ಜಯರಾಂ
ಸಾ: ಸಾಹುಲ್
ವ: ರಾಮನಾಥ್, ಸತ್ಯಂ, ಕೃಷ್ಣ
ಪ್ರ: ಶ್ರೀನಿವಾಸ್
ಸ್ಟು: ಕಂಠೀರವ, ಅಭಿಮಾನ್
ಹಾ: ೧) 'ಮುತ್ತಿನಮೂಗುತಿ ಇಟ್ಟು..', ೨) 'ಹೇಯ್ ನನ್ನ ಮನಸಲಿ...', ೩) 'ಕಿನ್ನರಲೋಕವ ಗಿಣಿಯೇ...', ೪) 'ಹೂವು ಅರಳಿದೆ...', ೫) 'ಅರಥಮ್ಮ ರ ಧಮ ಮ.
ಸೆ: ರೀಲು ೧೪, ಉದ್ದ ४३೩೦.೧೨.
ದಿ: ೧೨ ೦೩ ೧೯೮೭
ಕ.ಸಾ: ಕಂಟ್ರ್ಯಾಕ್ಟರ್‌ನೊಬ್ಬ ನಿರ್ಮಾಣವಲ್ಲಿ ಮಾಡುತ್ತಿದ್ದ ಅವ್ಯವಹಾರಗಳನ್ನು, ದುರ್ಬಲ ಕಟ್ಟಡ ನಿರ್ಮಾಣವನ್ನು ದಾಖಲಿಸಿದ ಅಧಿಕಾರಿಯನ್ನು ಕೊಲೆಮಾಡಿಸಿ ಮುಚ್ಚಿಹಾಕಿದ್ದನ್ನು ರಾಜನಂಬಾತ ಕಂಡುಹಿಡಿದು ಅನ್ಯಾಯಮಾಡಿದವನನ್ನು ಶಿಕ್ಷೆಗೆ ಗುರಿಮಾಡುವುದು ಕಥೆ.

೧೦೯೭. ಚಾಮುಂಡೇಶ್ವರಿ ಪೂಜಾಮಹಿಮೆ

(೧೯೮೭ / ವರ್ಣ / ಭಕ್ತಿ ಪ್ರಧಾನ)
ಲಾ: ನೀಲಾವರ ಪಿಕ್ಚರ್ಸ್
ಪ್ರೊ: ಮುರಳೀಧರ.ಬಿ.ಆಚಾರ್ಯ

ನಿ: ಬಿ.ವಿ.ಶ್ರೀನಿವಾಸ್
ಸ.ನಿ: ಹೆಚ್.ಎಸ್.ಶಿವಕುಮಾರ್. ಜಿ.ಕೆ.ರವಿರಾಜ್
ಅ: ರಾಮಕೃಷ್ಣ, ರೋಹಿಣಿ, ವಜ್ರಮುನಿ. ಶಕ್ತಿಪ್ರಸಾದ್. ಜೇಬಿರೇಖ, ರಾಜಾನಂದ್, ಜಯಮಾಲಿನಿ, ಭಟ್ಟಿ ಮಹದೇವಪ್ಪ
ಕ:ಚಿ.ಕ: ಬಿ.ವಿಠಲ ಆಚಾರ್ಯ
ಮಾ: ಸೋರಟ್ ಅಶ್ವತ್
ಗೀ: ಸೋರಟ್ ಅಶ್ವತ್, ವತ್ತಲೂರಿ ರಾಮನಾಥ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ.ಎಸ್.ಜಾನಕಿ, ಪಿ.ಬಿ.ಶ್ರೀನಿವಾಸ್, ಪಿ.ಎಸ್.ಜಯಚಂದ್ರನ್, ರಮೇಶ್
ಸಂ: ಕಂದಸ್ವಾಮಿ
ಛಾ: ಡಬ್ಲ್ಯು.ಆರ್.ಚಂದ್ರನ್
ಕಲೆ: ನಾಗರಾಜರಾವ್.ಬಿ
ಸ: ವಿಜಯ ಕೃಷ್ಣಮೂರ್ತಿ
ಧ್ವ: (ಹಾ) ಪಿ.ವಿ.ಕೋಟೇಶ್ವರರಾವ್
ನೃ: ವಿ.ವಿ.ಶೇಷು
ಸಾ: ವೈ.ಶಿವಯ್ಯ
ವ: ಕಾಮೇಶ್ವರರಾವ್
ಪ್ರ: ವೆಂಕಟೇಶ್ವರರಾವ್. ಸಿಂಗ್
ಸ್ಟು: ಪ್ರಸಾದ್, ಶಾರದ, ಕರ್ಪಗಂ ಸ್ಟುಡಿಯೋ
ಕ.ಸಾ: ಚಾಮುಂಡೇಶ್ವರಿ ದೇವಿಯ ಮಹಾತ್ಮೆಯನ್ನು ಕುರಿತ ಭಕ್ತಿ ಪ್ರಧಾನ ಚಿತ್ರ.

೧೦೯೮ ಪೂರ್ಣಚಂದ್ರ

(೧೯೮೭ / ವರ್ಣ / ಸಾಮಾಜಿಕ)
ಲಾ: ರಾಜಾ ಎಂಟರ್‌ಪ್ರೈಸಸ್
ಪ್ರೊ: ಬಿ.ಎನ್.ರಾಜಣ್ಣ, ಪಂಜು ಅರುಣಾಚಲಂ, ಕೆ.ಎನ್.ಲಕ್ಷ್ಮಣನ್ (ಸಹ ನಿರ್ಮಾಪಕ)
ನಿ: ಸಿ.ವಿ.ರಾಜೇಂದ್ರನ್



ಸ.ನಿ: ಶಿವರಾಂ. ಎಂ.ಸಂತಾನಂ
ಅ: ಅಂಬರೀಷ್, ಅಂಬಿಕಾ, ಶಿವರಾಂ, ಶೇಖಾದಾಸ್, ಉಮೇಶ್. ರಮೇಶ್‌ಭಟ್. ಲೋಕನಾಥ್, ವಿಕ್ರಂ, ತಿಮ್ಮಯ್ಯ, ಕೃಷ್ಣ, ಮಾ|ಮಂಜುನಾಥ್. ಮಾ|ಚೇತನ್, ರವಿ, ಅಶ್ವತ್‌ನಾರಾಯಣ, ಕಾರಂತ್, ಎ.ಎಂ.ನಾಗರಾಜ್, ಬೇಬಿ ಬಿಂದು
ಕ/ಚಿ.ಕ: ಪಂಜು ಅರುಣಾಚಲಂ
ಮಾ/ಗೀ: ಚಿ.ಉದಯಶಂಕರ್
ಗಾ: ಎಸ್.ಪಿ ಬಾಲಸುಬ್ರಹ್ಮಣ್ಯಂ. ಎಸ್.ಜಾನಕಿ
ಸಂ: ಎನ್.ಚಂದ್ರನ್
ಛಾ: ಎಂ.ಕರ್ಣನ್
ಕಲೆ: ಬಾಬು
ಸ: ಜಿ.ಕೆ.ವೆಂಕಟೇಶ್
ಧ್ವ: (ಹಾ) ಎ.ಗೋವಿಂದಸ್ವಾಮಿ, (ಮಾ) ಕೋದಂಡಪಾಣಿ
ನೃ: ಉಡುಪಿ ಜಯರಾಂ
ಸಾ: ಹಯಾಡ್
ವ: ಆರ್.ಕೃಷ್ಣನ್
ಪ್ರ: ಜಿ.ಶ್ರೀನಿವಾಸ್, ಚಂದ್ರನ್. ಶ್ರೀನಿವಾಸನ್
ಸ್ಟು: ಚಾಮುಂಡೇಶ್ವರಿ, ಕಂಠೀರವ
ಹಾ: ೧) 'ಎಂದು ಸಂತೋಷ ...', ೨) 'ನಿನ್ನನ್ನು ನಾ ಮರೆತ ..', ೩) 'ಬಂಗಾರವಂಥಾ ಪತಿ ..', ೪) 'ಬಿಸಿಲಲ್ಲಿ ತಂಪಿಲ್ಲ ..'
ಕ.ಸಾ: ತನ್ನ ಬಿಸ್ನಿಗ ಬಿದ ತಮ್ಮ ತಂಗಿಯರ ಶ್ರೇಯೋಭಿವೃದ್ಧಿಗೆ ತನ್ನದೆಲ್ಲವನ್ನೂ ತ್ಯಾಗ ಮಾಡುವ ಸೋದರನೊಬ್ಬನ ಕತೆ.

೧೦೯೯. ಮುಖವಾಡ

ಅ: ಅಂಬರೀಷ್, ಸುಮನ್ ರಂಗನಾಥ್, ದೇವರಾಜ್, ಮುಖ್ಯಮಂತ್ರಿ ಚಂದ್ರು, ದಿನೇಶ್, ಜಯಶ್ರೀ, ಸತ್ಯಭಾಮ,

ಸಿ.ಆರ್.ಸಿಂಹ, ಸತ್ಯಜಿತ್, ಹೇಮಂತ್ ಕುಮಾರ್, ಉಮಾಶ್ರೀ, ಕೃಷ್ಣೇಗೌಡ, ಬಿಮಲ್ ಸೋಮಣ್ಣ, ಡಿಸ್ಕೋ ಶಾಂತಿ, ಬ್ರಹ್ಮಾವರ್, ಜನಾರ್ದನ್, ಶನಿ ಮಹದೇವಪ್ಪ
ಚಿ.ಕ: ಪೇರಾಲ
ಮಾ: ಕುಣಿಗಲ್ ನಾಗಭೂಷಣ್
ಗೀ: ಹಂಸಲೇಖ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಮಂಜುಳಾ ಗುರು, ನಾಗೂರ್ ಬಾಬು
ಸಂ: ಮುರಳಿ ರಾಮಯ್ಯ
ಛಾ: ಜಾನಿಲಾಲ್
ಕಲೆ: ವೇಣುಗೋಪಾಲ್
ಸ: ಹಂಸಲೇಖ
ಧ್ವ: ಕೆ.ಎಸ್.ಕೃಷ್ಣಮೂರ್ತಿ
ನೃ: ಸುರೇಖಾ ಪ್ರಕಾಶ್
ಸಾ: ಸಾಹುಲ್
ವ: ಕ.ಸೂರ್ಯರಾವ್
ಪ್ರ: ಮಣೀಂದ್ರ
ಸ್ಟು: ಪ್ರೀಮಿಯರ್
ಹಾ: ೧)'ಆಸೆಯು ಮುಂದೆ ಮುಂದೆ..', ೨)'ಓ ಗೆಳತಿ ಮನದ ಒಡತಿ..', ೩)'ಥ ತಕಥೆ ಕೋಗಿಲೆ..'
ಸೆ: ರೀಲು ೧೫, ಉದ ೪೦೫೦.೫೯, ೨೪-೦೭-೧೯೯೦
ಕ.ಸಾ: ಜಮೀನ್ದಾರನ ದೌರ್ಜನ್ಯದ ವಿರುದ್ಧ ಸಿಡಿದೇಳುವ ಕಥೆ. ಭುಜಂಗಯ್ಯನ ಮಗಳು ಸೊಕ್ಕಿರುವ ರಾಧ ಹಾರ್ಮೋನಿಯಂ ಮೇಸ್ಟ್ರು ಬೆಳೆಸಿದ ಗೋಪಿಯ ಸ್ವತಂತ್ರ ಪ್ರವೃತ್ತಿಯನ್ನು ಸೋಲಿಸಿ ಸಹಿಸದೆ ಅವನು ತನ್ನ ಮೇಲೆ ಅತ್ಯಾಚಾರಕ್ಕೆ ಪ್ರಯತ್ನಿಸಿದನೆಂದು ದೂರಿ ಹೊಡೆಸುತ್ತಾಳೆ. ಮಾಡದ ತಪ್ಪಿಗೆ ಶಿಕ್ಷೆಗೊಳಗಾದ ಗೋಪಿ ಇದರ ಪ್ರತೀಕಾರವಾಗಿ ರಾಧಾಳಿಗೆ ತಾಳಿ ಕಟ್ಟುತ್ತಾನೆ. ಅವನ ಈ ವರ್ತನೆಯಿಂದ ಆಘಾತಕ್ಕೊಳಗಾದ ರಾಧಳಿಗೆ ಅವನು ತನ್ನ ಮಾವನೆಂದು, ತಂದೆಯ ದೌರ್ಜನ್ಯದಿಂದ ಹೀಗಿರಬೇಕಾಗಿದೆ ಎಂದೂ ತಿಳಿಯುತ್ತದೆ. ಭುಜಂಗಯ್ಯ ಪೋಲೀಸ್ ಇನ್ಸ್‌ಪೆಕ್ಟರ್ ಜೊತೆ ಸೇರಿ ಕೊಲೆ ಆರೋಪದ ಮೇಲೆ ಗೋಪಿ ಜೈಲು ಸೇರುವಂತೆ ಮಾಡುತ್ತಾನೆ. ಈ ಕೊಲೆಗೆ ಸಾಕ್ಷಿಯಾದ ತಾಯಿಯನ್ನೇ ಕೊನೆಗೊಳಿಸುತ್ತಾನೆ. ಕೊನೆಯಲ್ಲಿ ಜೈಲಿನಿಂದ ತಪ್ಪಿಸಿಕೊಂಡು ಬರುವ ಗೋಪಿ ತಾನು ನಿರಪರಾಧಿ ಎಂದು ಸಾಬೀತು ಪಡಿಸುವುದರೊಂದಿಗೆ ನಿಜವಾದ ಅಪರಾಧಿಗಳನ್ನು ಬಯಲುಮಾಡುತ್ತಾನೆ.

೧೨೭೧. ರಣಭೇರಿ

(೧೯೯೦ / ವರ್ಣ / ಸಾಮಾಜಿಕ)
ಲಾ: ಶ್ರೀ ಭವಾನಿ ಶಕ್ತಿ ಪಿಕ್ಚರ್ಸ್
ಪ್ರೊ: ಲಕ್ಷ್ಮಿ ಪದ್ಮಮುನಿ
ನಿ: ವಿ.ಸೋಮಶೇಖರ್

ಅ: ಅಂಬರೀಶ್, ಟೈಗರ್ ಪ್ರಭಾಕರ್, ವಾಣಿ ವಿಶ್ವನಾಥ್, ಚಂದ್ರಿಕಾ, ದೇವರಾಜ್, ಜಗ್ಗೇಶ್, ಸುಧೀರ್, ಜೈಜಗದೀಶ್, ಲಕ್ಷ್ಮಣ್, ಮುಖ್ಯಮಂತ್ರಿ ಚಂದ್ರು, ಮಾನು, ರಾಜಾನಂದ್, ದೊಡ್ಡಣ್ಣ, ಬಾಲಕೃಷ್ಣ, ಸರಿಗಮ ವಿಜಿ, ಸುಂದರಮ್ಮ

ಕ: ಟಿ.ಎನ್.ನರಸಿಂಹನ್
ಚಿ.ಕ: ವಿ.ಸೋಮಶೇಖರ್, ನರಸಿಂಹನ್
ಮಾ: ಕೆ.ಎಸ್.ಸತ್ಯನಾರಾಯಣ
ಗೀ: ಶ್ರೀರಂಗ, ಕೆ.ಎಸ್. ಸತ್ಯನಾರಾಯಣ, ಚಿ.ಉದಯಶಂಕರ್
ಗಾ: ಎಸ್.ಪಿ. ಬಾಲಸುಬ್ರಹ್ಮಣ್ಯಂ, ಚಿತ್ರಾ, ಮಂಜುಳಾ ಗುರು, ಕುಸುಮ
ಸಂ: ವಿಕ್ಟರ್ ಯಾದವ್
ಛಾ: ಹೆಚ್.ಜಿ.ರಾಜು
ಕಲೆ: ವೇಣು
ಸ: ಉಪೇಂದ್ರ ಕುಮಾರ್
ಸಾ: ಶಿವಯ್ಯ, ರುದ್ರೇಶ್
ವ: ಸತ್ಯಂ
ಪ್ರ: ಮಾಧವನ್
ಸ್ಟು: ಕಂಠೀರವ, ಅಭಿಮಾನ
ಹಾ: ೧) 'ನಾನು ಬ್ಯಾಂಗ್ಳೂರ್ ಬ್ರೇಕ್ ಡಾನ್ಸು ರಾಜಾ...', ೨) 'ಗಂಡಾಗಿ ಹುಟ್ಟಿದಮೇಲೆ...', ೩) 'ಎಂದು ಕಾಣದ ಹರುಷವೂ...'
ಸೆ: ರೀಲು - ೧೬, ಉದ-೪೮೫೧.೦೫
ಕ.ಸಾ: ದುಷ್ಟಕೂಟವೊಂದು 'ಬ್ಲೂ ಬಾಕ್ಸ್' ಒಂದನ್ನಿಟ್ಟುಕೊಂಡು ಬ್ಲಾಕ್‌ಮೇಲ್ ಮಾಡುತ್ತಿರುತ್ತದೆ. ಅವರಿಂದಾದ ತಂದೆಯ ಸಾವಿಗೆ ಪ್ರತೀಕಾರ ಮಾಡಲು ರೌಡಿಯಾದವನೊಬ್ಬ. ಒಳ್ಳೆಯ ಗುಣದ ವ್ಯಕ್ತಿಯೊಬ್ಬ ಇನ್ಸ್‌ಪೆಕ್ಟರ್ ಆಗಿದ್ದು ಪ್ರಭಾವಶಾಲಿಗಳಿಂದಾಗಿ ಅನ್ಯಾಯಗಳನ್ನು ತಡೆ ಹಿಡಿಯಲಾಗದೆ ಹೊರಬಂದ. ಅವನನ್ನು ಸೇರಿದವ ಇನ್ನೊಬ್ಬ. ಇಬ್ಬರೂ ಕೂಡಿ ದುಷ್ಟರನ್ನು ಸದೆ ಬಡಿದರು. ಪ್ರಣಯ, ಅಪಹರಣ, ಕೊಲೆ, ಸಾಹಸ ಇತ್ಯಾದಿಗಳು ಯಥೇಚ್ಛವಾಗಿ ತುಂಬಿರುವ ಕಥೆ.

೧೨೭೨. ಪ್ರೇಮತರಂಗ

(೧೯೯೦ / ವರ್ಣ / ಸಾಮಾಜಿಕ)
ಲಾ: ಶ್ರೀ ವೀರಭದ್ರೇಶ್ವರ ಮೂವೀಸ್
ನಿ: ಬಿ.ಪಿ.ರಾಜಶೇಖರ್
ಅ: ವೀರೇಶ್, ಸೌಮ್ಯಶ್ರೀ, ವಿಶ್ವಸಾಗರ್.ಟಿ.ಎನ್.ಬಾಲಕೃಷ್ಣ
ಹಾ: ೧)'ಪ್ರಣಯಗೀತೆಯ...'. ೨)'ನೀ ಹೀಂಗ ನೋಡಬ್ಯಾಡ ನನ್ನ...', ೩)'ಬಲು ದಿನದ ಆಸೆ ಫಲವಾಗಿ...'
ಕ.ಸಾ: ಕಾಲೇಜು ವಿದ್ಯಾರ್ಥಿಗಳು. ಕಾಲೇಜ್ ಯೂನಿಯನ್, ಚುನಾವಣೆಗಳಲ್ಲಿ ಅವರ ನಡುವೆ ತಾಳುವ ಭಿನ್ನಾಭಿಪ್ರಾಯಗಳು, ದ್ವೇಷಾಸೂಯೆಗಳು ಕೇಂದ್ರವಾಗಿದೆ. ಇವರ ಪರಿಣಾಮ ವಿದ್ಯಾರ್ಥಿ ಜೀವನವನ್ನು ಅವರ ಜೀವನ ವಿಧಾನದಲ್ಲಿ ಎಂಥ ಏರುಪೇರುಗಳನ್ನು ತರುತ್ತದೆ ಎಂದು ಚಿತ್ರಿಸಲಾಗಿದೆ. (ಹೆಚ್ಚಿನ ವಿವರಗಳು ಲಭ್ಯವಿಲ್ಲ)

೧೨೭೩. ನಂಬಿದ್ರೆ ನಂಬಿ ಬಿಟ್ರೆ ಬಿಡಿ

(೧೯೯೦ / ವರ್ಣ / ಸಾಮಾಜಿಕ)
ಲಾ: ಜಮದಗ್ನಿ ಪ್ರೊಡಕ್ಷನ್ಸ್

ಪ್ರೊ: ಶ್ರೀನಿವಾಸ ಮೂರ್ತಿ
ನಿ: ಎಸ್. ಉಮೇಶ್
ಸ.ನಿ: ಚಂದ್ರು ದೊಡ್ಡಮನಿ
ಅ: ಬಾಲರಾಜ್, ಮಂಜುಳ ವಾಣಿ, ಪ್ರಿಯದರ್ಶಿನಿ, ಶ್ರೀನಿವಾಸ ಮೂರ್ತಿ, ಬಿ.ವಿ.ರಾಧ, ಸುಮತಿ, ನಾಗೇಶ್ ಕಶ್ಯಪ್, ಯೋಗಾನರಸಿಂಹ, ಮಾಲತಿ, ಬೇಬಿ ವಿಜಯಶ್ರೀ, ಶಿಮ ಯ್ಯ, ಸತ್ಯಭಾಮ, ಭರತ್
ಕ/ಚಿ.ಕ: ವೀರಪ್ಪ ಮರಳವಾಡಿ
ಮಾ: ವೀರಪ್ಪ ಮರಳವಾಡಿ, ರುದ್ರಮೂರ್ತಿ ಶಾಸ್ತ್ರಿ
ಗೀ: ಮನೋಹರ್, ಕೆ.ಎಸ್.ನರಸಿಂಹಸ್ವಾಮಿ, ವ್ಯಾಸರಾವ್, ದೊಡ್ಡರಂಗೇಗೌಡ
ಗಾ: ಎಸ್.ಪಿ. ಬಾಲಸುಬ್ರಹ್ಮಣ್ಯಂ, ಬಿ.ಆರ್.ಛಾಯಾ, ಮಂಜುಳಾ ಗುರುರಾಜ್
ಸಂ: ಎಸ್. ಉಮೇಶ್
ಛಾ: ಬಿ.ಎಸ್.ಶಾಸ್ತ್ರಿ
ಕಲೆ: ಪಿಳುಮಲೈ
ಸ: ಎಂ.ರಂಗರಾವ್
ನೃ: ಪುಷ್ಪ, ಅಶೋಕ್
ಸಾ: ರುದ್ರೇಶ್
ಸ್ಟು: ಕಂಠೀರವ
ಹಾ: ೧) 'ಸರಿಗಮ ಪದನಿಸ ಹಾಡು...', ೨) 'ನವಿಲೂರಿನೊಳಗೆಲ್ಲಾ ನೀನೇ...', ೩) 'ಬಾರಾ ಬಾರೆನ್ನ ಧೀರಾ...', ೪) 'ಆಸೆ ಕನಸು ಮೋಜಿನ ಏರಿ ಈ ಜೀವನ...'
ಸೆ: ರೀಲು ೧೪, ಉದ - ೩೫೧೭.೨೬, 'ಯು' ಸರ್ಟಿಫಿಕೇಟ್
ಕ.ಸಾ: ಜ್ಯೋತಿಷ್ಯ ಶಾಸ್ತ್ರ ಮತ್ತು ಜಾತಕಫಲ ಕುರಿತಂತೆ ಹೇಳಲು ಪ್ರಯತ್ನಿಸಿರುವ ಕತೆ. ಜಾತಕ ಜ್ಯೋತಿಷ್ಯದಲ್ಲಿ ಸತ್ಯದರ್ಶನವಾಗುತ್ತದೆ, ಹೀಗೆ ನಡೆಯುತ್ತದೆ ಎಂಬ ನಂಬಿಕೆಯನ್ನು ಪ್ರತಿಪಾದಿಸುವ ಕತೆ. ವಾದ್ಯಗೋಷ್ಠಿಯನ್ನು ನಡೆಸುವ ಯುವಕ ಟಿ.ವಿ.ಕಲಾವಿದೆಯನ್ನು ಪ್ರೀತಿಸುತ್ತಾನೆ. ಅವನ ಮನೆಯ ಮಾಲಿಕ ಜ್ಯೋತಿಷಿಗೆ ತನ್ನ ಮಗಳ ಜಾತಕದಲ್ಲಿನ ದೋಷವೇ ದೊಡ್ಡ ಸಮಸ್ಯೆಯಾಗಿದ್ದು, ಅದನ್ನು ತಿಳಿದಿದ್ದ ಆ ಯುವಕ ಅವಳನ್ನು ನಂತರ ಆ ಟಿ.ವಿ.ಕಲಾವಿದ ಬೇರಾರೂ ಆಗಿರದೆ ಜ್ಯೋತಿಷಿಯಿಂದ ಬೇರ್ಪಟ್ಟ ಮೊದಲ ಹೆಂಡತಿಯ ಮಗಳೆಂಬ ಸತ್ಯ ಹೊರಬೀಳುವುದು. ಆ ಯುವಕ ತಾನು ನಿಜವಾಗಿಯೂ ಪ್ರೀತಿಸಿದವಳನ್ನೇ ಮದುವೆಯಾಗಿ ಜ್ಯೋತಿಷಿಯ ಅಳಿಯನಾಗುವನಲ್ಲದೆ, ದೋಷ ಜಾತಕದ ಹುಡುಗಿಗೂ ಗಂಡು ಹುಡುಕಿ ಮದುವೆ ಮಾಡಿಸುವನು.

೧೨೭೪. ಅಜಯ್ ವಿಜಯ್

(೧೯೯೦ / ವರ್ಣ / ಸಾಮಾಜಿಕ)
ಲಾ: ರಘುವೀರ್ ಎಂಟರ್ ಪ್ರೈಸಸ್
ಪ್ರೊ: ಎಂ.ಮಹೇರ್‌ಕುಮಾರ್
ನಿ: ಎ.ಟಿ.ರಘು
ಸ.ನಿ: ಎಸ್.ನಾರಾಯಣ್
ಅ: ಮುರಳಿ, ರಘುವೀರ್, ಶ್ರೀನಾಥ್, ಸತ್ಯಪ್ರಿಯ, ವಿಶ್ವನಾಥ್, ಜಗ್ಗೇಶ್, ಚಿತ್ರ, ಶುಭ, ಹೇಮಾ ಚೌಧುರಿ, ರಾಜಾನಂದ್, ರಶಿಕಿರಣ್, ಶಿವಪ್ರಕಾಶ್, ಜನಕರಾಜ್, ಅನಿತಾ (ಹೊಸಪರಿಚಯ)
ಕ/ಚಿ.ಕ: ಎ.ಟಿ.ರಘು
ಮಾ: ಕುಣಿಗಲ್ ನಾಗಭೂಷಣ್
ಗೀ: ಆರ್. ಎನ್. ಜಯಗೋಪಾಲ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಮನು, ಚಿತ್ರಾ, ಕುಸುಮ
ಸಂ: ಎಸ್.ವಿ.ರಮಣರಾವ್
ಛಾ: ಪದ್ಮಕುಮಾರ್

ಕಲೆ: ಎಂ.ಕೃಷ್ಣ
ಸ: ಯುವರಾಜ್
ಧ್ವ: (ಹಾ) ಎಸ್.ಪಿ.ರಾಮನಾಥನ್ (ಮಾ) ಕೋದಂಡಪಾಣಿ
ನೃ: ಮೂಗೂರು ಸುಂದರಂ
ಸಾ: ಅಂಬೂರ್ ಬಾಬು
ವ: ಬಾಷಾ
ಪ್ರ: ಕೃಷ್ಣ, ಅರುಣಾಚಲಂ
ಹಾ: ೧) 'ಹೀರೋ ಹೀರೋ ...'
ಕ.ಸಾ: ತನ್ನ ಗಂಡನನ್ನೇ ಕೊಲೆಗೈದ ಸುಳ್ಳು ಆರೋಪ ಹೊತ್ತು ತಾಯಿ ಸೆರೆಮನೆ ಸೇರಿದಾಗ ದುಷ್ಟರ ಸಂಚಿನಿಂದ ಚಿಕ್ಕಂದಿನಿಂದಲೇ ಬೇರ್ಪಟ್ಟ ಅವಳ ಮಕ್ಕಳಾದ ಅವಳಿ ಸಹೋದರರು ಬೆಳೆದು ದೊಡ್ಡವರಾಗಿ ಪರಸ್ಪರ ದ್ವೇಷಿಸುವ, ಪ್ರತೀಕಾರ ಮಾಡುವ ಪ್ರಸಂಗ. ಅಂತಿಮವಾಗಿ ಅವರಿಬ್ಬರಿಗೆ ಸತ್ಯ ತಿಳಿದು ಒಂದಾಗಿ ದುಷ್ಟರನ್ನು ಸದೆ ಬಡಿಯುತ್ತಾರೆ.

೧೨೭೫. ಶ್ರೀ ಸತ್ಯನಾರಾಯಣ ಪೂಜಾಫಲ

(೧೯೯೦ / ವರ್ಣ / ಸಾಮಾಜಿಕ)
ಲಾ: ಅಮೃತ ಆರ್ಟ್ಸ್
ಪ್ರೊ: ಅನುರಾಧ ಸಿಂಗ್, ದುಶ್ಯಂತ್ ಸಿಂಗ್, ಅಮೃತ್ ಸಿಂಗ್
ನಿ: ಎನ್.ಎಸ್. ಧನಂಜಯ (ದತ್ತು)
ಅ: ಕಲ್ಯಾಣ್ ಕುಮಾರ್, ಪ್ರಮೀಳಾ ಜೋಷಾಯ್, ಭವ್ಯ, ರಾಜೇಶ್, ಜಯಂತಿ, ಜೈಜಗದೀಶ್, ತಾರಾ, ಭಟ್ಟಿ ಮಹದೇವಪ್ಪ, ವಿಜಯಕಾಶಿ, ಗಂಗಾಧರ್, ಅರುಣ್ ಗೋವಿಲ್, ಮುಖ್ಯಮಂತ್ರಿ ಚಂದ್ರು, ಸುಧೀರ್
ಕ/ಚಿ.ಕ/ಮಾ/ಗೀ: ಕಣಗಾಲ್ ಪ್ರಭಾಕರಶಾಸ್ತ್ರಿ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಪಿ.ಬಿ.ಶ್ರೀನಿವಾಸ್, ಬಿ.ಆರ್.ಛಾಯಾ, ಉಷಾ ಗಣೇಶ್, ರಾಣಿ, ವಾಣಿ ಜಯರಾಂ, ಎಸ್.ಪಿ. ಶೈಲಜ
ಸಂ: ವೆಂಕಟೇಶ್ವರ ರಾವ್
ಛಾ: ಕಬೀರ್ ಲಾಲ್
ಕಲೆ: ಮುದ್ದುಕೃಷ್ಣ
ಸ: ಎಂ.ರಂಗರಾವ್
ನೃ: ಚಿನ್ನಿಪ್ರಕಾಶ್
ಸಾ: ಮುಕ್ತರ್ ಭಾಷಾ
ವ: ಕಲಿಕಾ ಪ್ರಸಾದ್
ಪ್ರ: ಮೈಸೂರು ವೆಂಕಟೇಶ್, ವೆಂಕಟಸ್ವಾಮಿ, ರಾಮಸ್ವಾಮಿ
ಸ್ಟು: ಪ್ರೀಮಿಯರ್
ಹಾ: ೧) 'ಮಾಯಾತೀತ ಸತ್ಯನಾರಾಯಣ...', ೨) 'ಪ್ರಭೋ ನಾರಾಯಣ...', ೩) 'ಕಾಳೀ ವರ್ಷಕೋ...', ೪) 'ಧರ್ಮವೇ ತಂದೆ ತಾಯಿ..', ೫) 'ಸತ್ಯನಾರಾಯಣ ಸತ್ಯಂವ್ರಥ...', ೬) 'ಪ್ರೇಮಾ ಸ್ನೇಹ ಸಮಾಗಮ ...', ೭) 'ದೇವ ಸತ್ಯನಾರಾಯಣ ಯಾವಪರಾಧಕೆ ಈ ಶಿಕ್ಷೆ...'
ವಿ: ಹಿಂದಿಯ ಅರುಣ್ ಗೋವಿಲ್ ಅಭಿನಯ
ಕ.ಸಾ: ಶ್ರೀ ಸತ್ಯನಾರಾಯಣನ ವ್ರತಾಚರಣೆಯಿಂದ ಸಂಕಷ್ಟಗಳು ಪರಿಹಾರವಾಗುತ್ತವೆ ಎಂದು ಹೇಳವಲ್ಲಿ ಒಂದೆರಡು ಘಟನೆಗಳನ್ನು ಬಳಸಿಕೊಳ್ಳಲಾಗಿದೆ, ದೈವ ಪರೀಕ್ಷೆ, ಭಕ್ತಿಯ ಗೆಲುವು.

೧೨೭೬. ಆಸೆಗೊಬ್ಬ ಮೀಸೆಗೊಬ್ಬ

(೧೯೯೦ / ವರ್ಣ / ಸಾಮಾಜಿಕ)
ಲಾ: ಪೂರ್ಣಿಮ ಎಂಟರ್‌ಪ್ರೈಸಸ್
ಪ್ರೊ: ಪಾರ್ವತಮ್ಮ ರಾಜಕುಮಾರ್
ನಿ: ಎಂ.ಎಸ್.ರಾಜಶೇಖರ್
ಸ.ನಿ: ಅಣ್ಣಯ್ಯ
ಅ: ಶಿವರಾಜ್ ಕುಮಾರ್, ರಾಘವೇಂದ್ರ ರಾಜಕುಮಾರ್, ಅಂಬರೀಷ್, ಸುಧಾರಾಣಿ, ಲೋಕೇಶ್, ಶಿವರಾಂ, ವೈಶಾಲಿ ಕಾಸರವಳ್ಳಿ, ಹೊನ್ನವಳ್ಳಿ ಕೃಷ್ಣ, ಅರ್ಪಿತಾ, ಮಾಲತಿ, ಪ್ರಿಯದರ್ಶಿನಿ, ಕೆ.ಎಸ್.ಅಶ್ವತ್ಥ್
ಚಿ.ಕ/ಮಾ: ಚಿ.ಉದಯಶಂಕರ್
ಗೀ: ಚಿ.ಉದಯಶಂಕರ್, ಶ್ರೀರಂಗ
ಗಾ: ಡಾ|ರಾಜಕುಮಾರ್, ಶಿವರಾಜ್ ಕುಮಾರ್, ರಾಘವೇಂದ್ರ ರಾಜಕುಮಾರ್, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಮಂಜುಳಾ
ಸಂ: ಮನೋಹರ್
ಛಾ: ಬಿ.ಸಿ.ಗೌರಿಶಂಕರ್
ಸ: ಉಪೇಂದ್ರಕುಮಾರ್
ಧ್ವ: (ಹಾ) ಎಸ್.ಪಿ.ರಾಮನಾಥನ್ (ಮಾ) ಕೋದಂಡಪಾಣಿ
ನೃ: ವಿ.ಗೋವಿಂದ
ಸಾ: ಸ್ವಾಮಿ
ವ: ವೆಂಕಟರಾವ್
ಪ್ರ: ಮೂಗೂರು.ಪಿ.ಗುರು, ವೆಂಕಟೇಶ್
ಸ್ಟು: ಕಂಠೀರವ, ಚಾಮುಂಡೇಶ್ವರಿ
ಹಾ: ೧) 'ಎಲ್ಲಾ ಬುರುಡೆ ಇಲ್ಲಿ ಎಲ್ಲಾ ಬುರುಡೆ..', ೨) 'ತಾನನಾ ತಂದಾನಾ ಕುಣಿಸಿದೆ ಯೌವ್ವನ...', ೩) 'ಬೊಂಬಾಟೋ ಬೊಂಬಾಟೋ ...', ೪) 'ಬಾ ಕುಣಿವ ಥೈ ಥೈಥೈಥೈ...', ೫) 'ಕೆಣಕುತಿದೇ ನಿನ್ನ ಕಣ್ನೋಟ...'
ಕ.ಸಾ: ಕ್ರಿಕೆಟ್ ಪ್ರಿಯ ನಾಯಕ. ತಾನು ಕೆಲಸ ಮಾಡುವ ಕಂಪೆನಿಯ ಮಾಲೀಕನನ್ನು ಮೆಚ್ಚಿಸುವ ದಿಸೆಯಲ್ಲಿ ಸಾಕಷ್ಟು ಗೋಜಲುಗಳಿಗೆ ಸಿಲುಕಿಕೊಂಡು ಎರಡೆರಡು ರೀತಿಯ ನಾಟಕವಾಡಿ ಕಡೆಗೆ ನಿಜ ಸಂಗತಿ ಬಯಲಾಗಿ ಮಾಲೀಕನ ಅವಕೃಪೆಗೆ ಸಿಲುಕುತ್ತಾನೆ. ನಂತರ ಎಲ್ಲಾ ಗೊಂದಲಗಳು ಪರಿಹಾರವಾಗುತ್ತವೆ.

೧೨೭೭. ಕೆಂಪು ಸೂರ್ಯ

(೧೯೯೦ / ವರ್ಣ / ಸಾಮಾಜಿಕ)
ಲಾ: ಶ್ರೀ ಭರಣಿ ಕಂಬೈನ್ಸ್
ಪ್ರೊ: ಎಂ.ಪಿ.ಶಂಕರ್
ನಿ: ಎ.ಟಿ.ರಘು
ಅ: ಅಂಬರೀಷ್, ಸುಮನ್ ರಂಗನಾಥ್, ತ್ರಿವೇಣಿ, ಎಂ.ಪಿ.ಶಂಕರ್, ಸುಧೀರ್, ನೀಗ್ರೋ ಜಾನಿ, ಪದ್ಮಿನಿ, ರಾಂಶೇಷು
ಕ: ಎಂ.ಪಿ.ಶಂಕರ್
ಚಿ.ಕ: ಎ.ಟಿ.ರಘು
ಮಾ/ಗೀ: ಚಿ.ಉದಯಶಂಕರ್
ಗಾ: ಎಸ್.ಪಿ. ಬಾಲಸುಬ್ರಹ್ಮಣ್ಯಂ, ಚಿತ್ರಾ
ಸಂ: ಎನ್.ಎಂ.ವಿಕ್ಟರ್
ಛಾ: ಹೆಚ್.ಜಿ.ರಾಜು
ಕಲೆ: ಕೆ.ಎಸ್.ವೇಣುಗೋಪಾಲ್
ಸ: ರಾಜನ್ - ನಾಗೇಂದ್ರ
ನೃ: ಉಡುಪಿ ಜಯರಾಂ
ಸಾ: ಜ್ಯೂಡೋ ರತ್ನಂ
ವ: ನಾಗರಾಜ್, ಸುಬ್ಬರಾವ್
ಸ್ಟು: ಪ್ರೀಮಿಯರ್
ಹಾ: ೧) 'ಇಂಥಾ ಗಂಡೇ ಬೇಕು ಎಂದು ನೋಡಿದೆ...', ೨) 'ದೇವರು ಬರೆದ ಕಥೆಯಲ್ಲಿ...', ೩) 'ಓಹೋ ರಿಬ ರಿಬ ಓಹೋ ಹೆಜ್ಜೆ ಮೇಲೆ ಹೆಜ್ಜೆ ಹಾಕಿ...', ೪) 'ಕೆಂಪು ಸೂರ್ಯನಾ ಕಂಪು ರಂಗು ಚೆಲ್ಲಿದೆ...'
ಸೆ: ರೀಲು - ೧೪, ಉದ - ೩೩೧೬.೫೨, 'ಯು' ಸರ್ಟಿಫಿಕೇಟ್
ಕ.ಸಾ: ಅದ್ಭುತ ಶಕ್ತಿ ಇರುವ ಕೆಂಪುಮಣಿಯು ಅಡಗಿರುವ ಸ್ಥಳದ ನಕ್ಷೆಯೊಂದಕ್ಕಾಗಿ ದುಷ್ಟರು ಬೆನ್ನು ಬಿದ್ದಾಗ ತರುಣಿಯೊಬ್ಬಳು ಎದುರಿಸಿದ ಸಮಸ್ಯೆಗಳು. ತನ್ನದಲ್ಲದ ಅಪರಾಧಗಳಿಗೆ ಗುರಿಯಾಗಿ ಕಾರಣರಾದವರನ್ನು ಸದೆಬಡಿಯ ಹೊರಟ ಯುವಕ. ಇಬ್ಬರೂ ಆಕಸ್ಮಿಕಾಗಿ ಸಂಧಿಸಿದರು, ಪ್ರೀತಿಸಿದರು. ಕೊನೆಗೆ ಆ ಯುವಕ ಮಣಿಯನ್ನಿರಿಸಿದ ಸ್ಥಳವನ್ನು ಪತ್ತೆಮಾಡಿ ಅದರ ಶಕ್ತಿ ಪಡೆದು ದುಷ್ಟರನ್ನು ನಾಶ ಮಾಡಿದ.

೧೨೭೮. ಕಲಿಯುಗ ಕೃಷ್ಣ

(೧೯೯೦ / ವರ್ಣ / ಸಾಮಾಜಿಕ)
ಲಾ: ಲಿಂಗೇಶ್ವರ ಕಂಬೈನ್ಸ್
ಪ್ರೊ: ಜಿ.ರಮೇಶ್ ಲಾಲ್, ಎಂ.ಆರ್.ಕಾಶೀನಾಥ್, ಡಾ|ನಾಗಪ್ರಕಾಶ್, ಜಿ.ಮದನ್‌ಲಾಲ್
ನಿ: ಪೆರೋಟಿ
ಅ: ಕಾಶೀನಾಥ್, ಸಿಹಿಕಹಿ ಚಂದ್ರು, ಲೋಹಿತಾಶ್ವ, ಸುಧೀರ್, ದೊಡ್ಡಣ್ಣ, ಅಮೃತಾ, ತಾರಾ, ಕಮಿನೀಧರನ್, ಅರ್ಪಿತ, ಸುಜಾತ, ಪ್ರಿಯ, ಮಾಲತಿ
ಕ/ಚಿ.ಕ/ಮಾ: ಪೆರೋಟಿ
ಗೀ: ಉಪೇಂದ್ರ, ವಿ.ಮನೋಹರ್, ದೊಡ್ಡರಂಗೇ ಗೌಡ
ಗಾ: ಎಸ್.ಪಿ. ಬಾಲಸುಬ್ರಹ್ಮಣ್ಯಂ, ಮಂಜುಳಾ, ಕಾಶೀನಾಥ್
ಸಂ: ಕೆ.ಬಾಲು
ಛಾ: ವಿ.ಉಮಾಪತಿ
ಸ: ಶಂಕರ್-ಗಣೇಶ್
ನೃ: ಸತೀಶ್
ಸಾ: ರುದ್ರೇಶ್
ಹಾ: ೧) 'ಯೌವನ ರೋಮಾಂಚನ...', ೨) 'ಬಣ್ಣದ ಚಿಟ್ಟೆಯ ಹಿಂಡಿನ ಹಿಂದೇನೇ...', ೩) 'ಹಾಲು ನೀರೂ ಒಂದಾದ ಹಾಗೆ...', ೪) 'ಪೋಗಾದಿರಲೋ ರಂಗ ...'
ಸೆ: ರೀಲು - ೧೪, ಉದ್ದ - ೩೬೮೬.೮೯, 'ಯು' ಸರ್ಟಿಫಿಕೇಟ್
ಕ.ಸಾ: ಶ್ರೀಮಂತ ಯುವಕ ಪ್ರಣಯ ವಿಲಾಸ ನಡೆಸಿ ತಾನು ಬಯಸಿದ ಹುಡುಗಿಯನ್ನು ಮದುವೆಯಾಗಲು ಪ್ರೇಮ ಪರೀಕ್ಷೆಗೆ ಗುರಿಯಾಗಿ ಕೊನೆಗೆ ತನ್ನದೇ ತಂತ್ರದಿಂದ ಅವಳನ್ನು ಪಡೆಯುವ ಕಥೆ. ಇಲ್ಲಿ ಕಥಾನಾಯಕ ತಾನು ಮದುವೆಯಾಗ ಬಯಸುವ ಹುಡುಗಿಯು ಒಡ್ಡುವ ಪರೀಕ್ಷೆಗಳೆರಡರಲ್ಲೂ ಗೆದ್ದು, ಅವಳು ಒಪ್ಪಿಗೆ ಸೂಚಿಸುವ ಸಂದರ್ಭದಲ್ಲಿ ಆ ಯುವಕ ಮದುವೆಯಾಗುವುದಾಗಿ ನಂಬಿಸಿ ಪ್ರಮಾಣ ಮಾಡಿದ್ದ ಆರು ಮಂದಿ ಹುಡುಗಿಯರು ಪ್ರತ್ಯಕ್ಷರಾದಾಗ ಸಹಜವಾಗಿಯೇ ಗೊಂದಲ, ಅವುಗಳ ನಿವಾರಣೆಗೆ ಯುವಕನ ತಂತ್ರ- ಕೊನೆಗೆ ಆ ಹುಡುಗಿಯೊಂದಿಗೇ ಮದುವೆ -ಹೀಗೆ ಸಾಗುವ ಕಥೆ.

೧೨೭೯. ಸಂತ ಶಿಶುನಾಳ ಷರೀಫ

(೧೯೯೦ / ವರ್ಣ / ವ್ಯಕ್ತಿ ಚಿತ್ರ)
ಲಾ: ಯಜಮಾನ್ ಎಂಟರ್ ಪ್ರೈಸಸ್
ಪ್ರೊ: ಶ್ರೀಹರಿ ಖೋಡೆ, ಮಹಿಮಾ ಜೆ.ಪಟೇಲ್
ನಿ: ಟಿ.ಎಸ್.ನಾಗಾಭರಣ
ಸ.ನಿ: ಗಾಯತ್ರಿ
ಅ: ಗಿರೀಶ್ ಕಾರ್ನಾಡ್, ಶ್ರೀಧರ್, ಮಾ|ಜಯಂತ್, ಹೆಚ್.ಜಿ.ದತ್ತಾತ್ರೇಯ, ಹೇಮಾ ಚೌಧರಿ, ಸುಮನ್ ರಂಗನಾಥ್, ವೆಂಕಟರಾಂ, ಶಂಕರ್ ರಾವ್, ವಿಶ್ವನಾಥ್ ರಾವ್, ಸದಾಶಿವ ಬ್ರಹ್ಮಾವರ್
ಚಿ.ಕ: ಟಿ.ಎಸ್.ನಾಗಾಭರಣ, ಪಾಲ್ ಸುದರ್ಶನ್, ಸಿ.ಅಶ್ವತ್ಥ್, ಬಸವರಾಜ್
ಮಾ: ಬಸವರಾಜ್, ಪಾಲ್ ಸುದರ್ಶನ್

ಗೀ: ಶಿಶುನಾಳ ಷರೀಫ
ಗಾ: ಸಿ.ಅಶ್ವತ್, ಬಿ.ಆರ್.ಛಾಯಾ, ಶಿವಮೊಗ್ಗ ಸುಬ್ಬಣ್ಣ, ಯಶವಂತ ಹಳಬಂಡಿ
ಸಂ: ಸುರೇಶ್ ಅರಸ್
ಛಾ: ಎಸ್.ರಾಮಚಂದ್ರ
ಕಲೆ: ಶಶಿಧರ್ ಅಡಪ
ಸ: ಸಿ.ಅಶ್ವತ್
ವ: ಮಂಜು
ಪ್ರ: ಮಲ್ಲೇಶ್ ಹರ್ತಿ
ಹಾ: ೧)'ಸವಾಲೊಂದು ನಿನ್ನ ಮ್ಯಾಲೆ...', ೨)'ತರವಲ್ಲ ತಂಗೀ ನಿನ್ನ ತಂಬೂರೀ ...', ೩)'ಕೂ ಕೂ ಕೂ ಕೂ ಎನುತಿವೆ ...', ೪)'ಹಾಕಿದ ಜನಿವಾರವಾ ಸದ್ಗುರುನಾಥ...', ೫)'ಸ್ನೇಹ ಮಾಡಬೇಕಿಂಥವಳಾ...', ೬)'ಕೋಡಗಾನ ಕೋಳೀ ನುಂಗಿತ್ತಾ...', ೭)'ಮೋಹದ ಹೆಂಡತಿ ತೀರಿದಾ ಬಳಿಕಾ...', ೮)'ಅಳಬ್ಯಾಡಾ ತಂಗಿ ಅಳಬ್ಯಾಡಾ...', ೯)'ನಾನಾರೆಂಬುದು ನಾನಲ್ಲ...', ೧೦)'ಸೋರುತಿಹುದು ಮನೆ ಮಾಳಿಗಿ...'
ವಿ: ೧೯೮೯-೯೦ರ ರಾಜ್ಯ ಪ್ರಶಸ್ತಿ : ದ್ವಿತೀಯ ಅತ್ಯುತ್ತಮ ಚಿತ್ರ. ಅತ್ಯುತ್ತಮ ನಟ (ಶ್ರೀಧರ್), ಅತ್ಯುತ್ತಮ ಪೋಷಕ ನಟ (ಗಿರೀಶ್ ಕಾರ್ನಾಡ್)
ಸೆ: ಉದ್ದ ೩೫೪೯.೯೫, ೧೪ ರೀಲು
ಕ.ಸಾ: ಸಂತನೊಬ್ಬನ ತತ್ವಗಳು ಮತ್ತು ಆತನ ಬದುಕಿನ ಹಲವು ಘಟನೆಗಳು. ಸತ್ಯ ಪರೀಕ್ಷೆ ಕುರಿತು ಹೇಳುತ್ತವೆ ಆ ಸಂತನ ಹಾಡುಗಳ ಮೂಲಕವೇ ಅವನ ಕಥೆಯನ್ನು ಹೊಂದಿಸಿಕೊಂಡ ವಿಶೇಷ ತಂತ್ರ.

೧೨೮೦. ಕಾಡಿನ ವೀರ

(೧೯೯೦ / ವರ್ಣ / ಸಾಮಾಜಿಕ)
ಲಾ: ಪೂಜಾ ಫಿಲಂಸ್
ಪ್ರೊ: ಕಿಶನ್ ಚಂದ್
ನಿ: ಜಾಬೀರ್ ಮುಬೀನ್
ಸ.ನಿ: ಮುನಿರಾಜು, ನಾಗರಾಜು, ವೀರು
ಅ: ವಿನೋದ್ ಆಳ್ವ, ಪೂನಂ ಚಿಟ್ನೀಸ್, ವಜ್ರಮುನಿ, ದಿನೇಶ್, ರಾಜಾನಂದ್, ಸತ್ಯಜಿತ್, ಪ್ರಮೀಳಾ ಜೋಷಾಯ್, ಗೋವಿಂದ್, ಸರ್ವಮಂಗಳಾ, ದೇವರಾಜ್(ಹಾಸ್ಯನಟ), ಸುಧೀಂದ್ರ. ಸಿತಾರಾ, ಕವಿತ, ಶಾರದ, ವಾಸಂತಿ, ಬೇಬಿ, ನೃತ್ಯತಾರೆ: ಅನುಜ, ಶರ್ಮಿಳಾ, ಲಕ್ಷ್ಮಿ, ಕಿಷನ್ ಚಂದ್, ಮಾ|ಅಮಿತ್
ಕ: ವೈ.ವಿ.ಜಾಬೀರ್
ಚಿ.ಕ/ಮಾ: ಕೆ.ಎಸ್.ಸತ್ಯನಾರಾಯಣ
ಗೀ: ಶ್ಯಾಮ ಸುಂದರ ಕುಲಕರ್ಣಿ, ಮೊಹಮ್ಮದ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ವಾಣಿ ಜಯರಾಂ, ಮಂಜುಳಾ ಗುರುರಾಜ್, ಕುಸುಮ, ಬಿ.ಆರ್.ಛಾಯಾ
ಸಂ: ಸುಬ್ರಹ್ಮಣ್ಯಂ
ಛಾ: ಬಿ.ಸಿ.ಗೌರಿಶಂಕರ್
ಕಲೆ: ಕೇಶವ ರಾವ್, ಕೃಷ್ಣಮಾಚಾರಿ
ಸ: ಜತಿನ್ ಶ್ಯಾಂ
ಧ್ವ: ಕೋದಂಡಪಾಣಿ
ನೃ: ಉಡುಪಿ ಜಯರಾಂ, ದೇವಿ
ಸಾ: ಸ್ವಾಮಿ
ವ: ವೈ.ವಿ.ಜಾಬೀರ್, ನಾಗರಾಜ್, ಕೃಷ್ಣ
ಪ್ರ: ದೊರೈ, ಕೃಷ್ಣ, ರಾಮಸ್ವಾಮಿ, ಮಲ್ಲಿ
ಹಾ: ೧)'ಸಂತೋಷ ಹೊಮ್ಮಿದೆ ಸಂಗೀತ ಚಿಮ್ಮಿದೆ...'
ಕ.ಸಾ: ಅರಣ್ಯವನ್ನು ರಕ್ಷಿಸುವ ಪ್ರಾಮಾಣಿಕ ಅಧಿಕಾರಿ ಹಾಗೂ ಅರಣ್ಯ ಸಂಪತ್ತನ್ನು ದೋಚಲು ಹೊಂಚು ಹಾಕುವ ಮಂದಿಯ ನಡುವೆ ನಡೆಯುವ ಮಾರಾಮಾರಿ ಹೋರಾಟ, ಲೂಟಿಕೋರರಿಗೆ ದಂಡನೆ, ಪ್ರಾಮಾಣಿಕತೆಗೆ ಗೆಲುವು.

೧೨೮೧. ಶಿವಶಂಕರ್

(೧೯೯೦ / ವರ್ಣ / ಸಾಮಾಜಿಕ)
ಲಾ: ಕಲಾಕೃತಿ
ಪ್ರೊ: ಭಾರ್ಗವ . ರಾಜಾರಾಂ
ನಿ: ಭಾರ್ಗವ
ಸ.ನಿ: ಸಿ.ಹೆಚ್.ಬಾಲಾಜಿ ಸಿಂಗ್, ಕೆ.ಜಿ.ಹಿರೇಮಠ್, ಎಸ್. ಉದಯ್

ಅ: ವಿಷ್ಣುವರ್ಧನ್(ದ್ವಿಪಾತ್ರ), ಶೋಭನಾ, ರಮೇಶ್ ಭಟ್, ಮುಖ್ಯಮಂತ್ರಿ ಚಂದ್ರು, ಪ್ರಿಯಾ, ಭಟ್ಟಿ ಮಹಾದೇವಪ್ಪ, ರಮೇಶ್ ಹೆಗ್ಡೆ, ಸುಧೀರ್, ದೊಡ್ಡಣ್ಣ, ಸಿಹಿಕಹಿ ಚಂದ್ರು, ಎಂ.ಎಸ್.ಕಾರಂತ್, ಜನಾರ್ದನ್, ಸರ್ಕಸ್ ಬೋರಣ್ಣ, ಶ್ರೀಶೈಲನ್, ಮೂಗೂರು ಸುಂದರ್, ಬೆಂಗಳೂರು ನಾಗೇಶ್, ಜಿಮೆಲ್ ಸೋಮಣ್ಣ
ಕ: ಚಿ.ಉದಯಶಂಕರ್
ಚಿ.ಕ: ಭಾರ್ಗವ
ಮಾ: ಚಿ.ಉದಯಶಂಕರ್
ಗೀ: ಚಿ.ಉದಯಶಂಕರ್, ಎಂ.ಎನ್.ವ್ಯಾಸರಾವ್, ಸು.ರುದ್ರಮೂರ್ತಿ ಶಾಸ್ತ್ರಿ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ವಿಷ್ಣುವರ್ಧನ್, ಮಂಜುಳಾ, ಚಂದ್ರಿಕಾ
ಸಂ: ವಿಕ್ಟರ್ ಯಾದವ್
ಛಾ: ಡಿ.ವಿ.ರಾಜಾರಾಂ
ಕಲೆ: ನಜೀರ್
ಸ: ರಾಜನ್ - ನಾಗೇಂದ್ರ
ಧ್ವ: (ಹಾ)ಎಸ್.ಪಿ.ರಾಮನಾಥನ್ (ಮಾ)ಕೋದಂಡಪಾಣಿ
ನೃ: ಉಡುಪಿ ಜಯರಾಂ
ಸಾ: ಹಾರ್ಸ್‌ಬಾಬು
ವ: ರಾಮನಾಥನ್, ಕೇಶ: ವಿ.ಪುರುಷೋತ್ತಮ್, ಕಲಾ
ಪ್ರ: ಮೈಸೂರು ವೆಂಕಟೇಶ್, ಎಸ್.ಕೃಷ್ಣನ್ (ವಿಷ್ಣು)
ಸ್ಟು: ಕಂಠೀರವ
ಸೆ: ರೀಲು ೧೫, ಉದ್ದ ೪೫೧೪.೨೦, ೨೩ ೦೩-೧೯೯೦.
ಕ.ಸಾ: ಮನರಂಜಿಸುವ ಏಕೈಕ ಗುರಿಯೊಂದಿಗಿನ ಕಥೆ. ಶಿವ ಮತ್ತು ಶಂಕರ್ ಅವಳಿ ಸಹೋದರರು. ಶಿವ ಮಾನಸಿಕವಾಗಿ ಅಸ್ವಸ್ಥನಾಗಿದ್ದು ಅನೇಕ ಗೊಂದಲಗಳಿಗೆ ಕಾರಣನಾಗಿರುತ್ತಾನೆ. ಇವನನ್ನು ನೋಡಿಕೊಳ್ಳುವ ಶಂಕರ್‌ನ ಗೆಳೆಯ ಪೊಲೀಸ್ ಇನ್ಸ್‌ಪೆಕ್ಟರ್ ರಮೇಶನ ತಂಗಿ ಗಿರಿಜ ಪ್ರೀತಿಸುತ್ತಿರುತ್ತಾಳೆ. ಆದರೆ ಅವಳದು ಏಕಮುಖ ಪ್ರೀತಿಯಾಗಿರುತ್ತದೆ. ಕುಖ್ಯಾತ ಗುಂಪೊಂದರ ಸುತ್ತುವರಿಯಲ್ಪಡುವ ರಮೇಶನ ರಕ್ಷಣೆಗೆ ಮುಂದಾಗುವ ಶಂಕರ್ ಈ ಗುಂಪಿನ ನಾಯಕನನ್ನು ಆಕರ್ಷಿಸುತ್ತಾನೆ. ಅವನು ಶಂಕರನನ್ನು ಡ್ರಗ್ ಚಲಾವಣೆ ಬಳಸಿಕೊಳ್ಳಲು ಹವಣಿಸುತ್ತಾನೆ. ಆದರೆ ಅವರ ವಿರುದ್ಧ ತಿರುಗಿಬೀಳುವ ಶಂಕರ್ ಆ ಗುಂಪಿನ ಕೃತ್ಯಗಳನ್ನು ಕೊನೆಗಾಣಿಸುತ್ತಾನೆ.

೧೨೮೨. ಎಸ್ ಪಿ ಸಾಂಗ್ಲಿಯಾನ - ೨

(೧೯೯೦ / ವರ್ಣ / ಸಾಮಾಜಿಕ)
ಲಾ: ಸ್ವರ್ಣಗಿರಿ ಮೂವೀಸ್
ಪ್ರೊ: ಕೃಷ್ಣರಾಜು ಮತ್ತು ಗೆಳೆಯರು
ನಿ: ನಂಜುಂಡಪ್ಪ
ಸ.ನಿ: ಆನಂದ್, ದಾಮೋದರ್, ವಿಜಯ್
ಅ: ಶಂಕರ್ ನಾಗ್, ಭವ್ಯ, ಮಾ|ಮಂಜುನಾಥ್, ಶಿವರಂಜನಿ, ಮುಖ್ಯಮಂತ್ರಿ ಚಂದ್ರು, ದಿನೇಶ್, ಮೈಸೂರು ಲೋಕೇಶ್, ಬಿ.ಕೆ.ಶಂಕರ್, ಸದಾಶಿವ ಬ್ರಹ್ಮಾವರ್, ಅಶೋಕ್, ಲೋಹಿತಾಶ್ವ, ನೀಗ್ರೋ ಜಾನಿ, ವಜ್ರಮುನಿ, ಸುಧೀರ್, ದೇವರಾಜ್
ಕ: ನಂಜುಂಡಪ್ಪ
ಚಿ.ಕ: ಕೆ.ವಿ.ರಾಜು
ಮಾ: ಕುಣಿಗಲ್ ನಾಗಭೂಷಣ್
ಗೀ: ಹಂಸಲೇಖ
ಗಾ: ಮನು, ಮಂಜುಳಾ , ಜೇಸುದಾಸ್, ರತ್ನಮಾಲಾ ಪ್ರಕಾಶ್, ಲತಾ ಹಂಸಲೇಖ
ಸಂ: ಕೆ.ಬಾಲು
ಛಾ: ಮಲ್ಲಿಕಾರ್ಜುನ
ಕಲೆ: ರಾಜು
ಸ: ಹಂಸಲೇಖ
ಧ್ವ: (ಹಾ)ಕೃಷ್ಣಮೂರ್ತಿ (ಮಾ)ಕೋದಂಡಪಾಣಿ
ನೃ: ಚಿನ್ನಿಪ್ರಕಾಶ್, ಸುರೇಖಾ - ಪ್ರಕಾಶ್
ಸಾ: ಸಾಹುಲ್
ವ: ರಾಮನಾಥ್
ಪ್ರ: ಶ್ರೀನಿವಾಸ್
ಸ್ಟು: ಕಂಠೀರವ, ಅಭಿಮಾನ್
ಹಾ: ೧)'ಟುಟೂಟೂ ನಿನ್ನ ಜೊತೆ ನಾ ಟುಟೂ ...', ೨)'ಮೇರು ಗಿರಿಯಾದೆ ನೀಲಿ ಕಡಲಾದೆ...', ೩)'ಒಂದು ಮುತ್ತಿನಂಥ ಮುತ್ತು...', ೪)'ರಾಮಯ್ಯ ರಾಮಯ್ಯ ನೀ ನಂಗಯ್ಯೋ ...', ೫)'ಮೈಯಲ್ಲಾ ಕಣ್ಣಿದ್ದ ಒಬ್ಬ ಶೂರನು ...'
ಸೆ: ರೀಲು - ೧೫, ಉದ್ದ - ೩೯೬೯
ಕ.ಸಾ: ನಿಷ್ಠಾವಂತ ಪೊಲೀಸ್ ಅಧಿಕಾರಿ. ಆತನ ದಾರಿಗೆ ಕಂಟಕ ಪ್ರಾಯರಾದ ವ್ಯಕ್ತಿಗಳ ಸುತ್ತ ಹೆಣೆದ ಸಾಹಸಮಯ ಚಿತ್ರ.

೧೨೮೩. ಗೋಲ್‌ಮಾಲ್ ರಾಧಾಕೃಷ್ಣ

(೧೯೯೦ / ವರ್ಣ / ಸಾಮಾಜಿಕ)
ಲಾ: ಚಿತ್ರಾ ಕಂಬೈನ್ಸ್
ಪ್ರೊ: ಕೆ.ಚಿದಂಬರಶೆಟ್ಟಿ
ನಿ: ಸಾಯಿಪ್ರಕಾಶ್
ಸ.ನಿ: ಕಲಾಗಂಗೋತ್ರಿ ಮಂಜು
ಅ: ಅನಂತ್‌ನಾಗ್, ಚಂದ್ರಿಕಾ, ವನಿತಾ ವಾಸು, ಸತ್ಯಭಾಮ, ಎಂ.ಎಸ್.ಉಮೇಶ್, ಲೀಲಾವತಿ, ಮುಖ್ಯಮಂತ್ರಿ ಚಂದ್ರು, ಶ್ರೀಲಲಿತಾ, ಸಿಹಿಕಹಿ ಚಂದ್ರು, ಬೆಂಗಳೂರು ನಾಗೇಶ್, ದಿನೇಶ್, ಮೈಸೂರು ಲೋಕೇಶ್, ಉಮಾಶ್ರೀ
ಕ/ಚಿ.ಕ/ಮಾ: ಸಾಯಿಪ್ರಕಾಶ್
ಗೀ: ಆರ್.ಎನ್.ಜಯಗೋಪಾಲ್
ಗಾ: ನಾಗೂರ್ ಬಾಬು, ಬಿ.ಆರ್.ಛಾಯಾ, ಮಂಜುಳಾ
ಸಂ: ಕೆ.ನರಸಯ್ಯ
ಛಾ: ಜೆ.ಜಿ.ಕೃಷ್ಣ
ಕಲೆ: ಬಾಬು
ಸ: ಎಂ.ರಂಗರಾವ್
ಧ್ವ: (ಹಾ) ಎಸ್.ಪಿ.ರಾಮನಾಥನ್ (ಮಾ) ಕೋದಂಡಪಾಣಿ
ನೃ: ಶಿವಶಂಕರ್

ವ: ಎಸ್.ಜಯಚಂದ್ರ
ಪ್ರ: ಚೆಲುವರಾಜು, ಗೋಪಾಲ್, ಲಿಂಗರಾಜು
ಸ್ಥು: ಚಾಮುಂಡೇಶ್ವರಿ
ಸೆ: ರೀಲು ೧೫ ಉದ್ದ ೩೮೯೧.೨೧, 'ಯು' ಸರ್ಟಿಫಿಕೇಟ್
ಕ.ಸಾ: ನಾಯಕ ವಿವಾಹಿತ. ಆತನಿಗೊಬ್ಬಳು ಅಜ್ಜಿ. ಕೆಲಸಕ್ಕೆಂದು ಹೋಗುವ ಆತ ಅಲ್ಲಿ ವಾಲೀಕನ ವಿಚಿತ್ರ ತವಲುಗಳಿಂದ ಎಲ್ಲರ ದೃಷ್ಟಿಯಲ್ಲಿ ಅಪಹಾಸ್ಯಕ್ಕೀಡಾಗುತ್ತಾನೆ. ಅಜ್ಜಿ ತನ್ನ ಮೊಮ್ಮಗನ ಸಾಂಸಾರಿಕ ಜೀವನದಲ್ಲಿ ಆದ ಏರುಪೇರುಗಳನ್ನು ಸರಿಮಾಡುತ್ತಾಳೆ.

೧೨೮೪. ರುದ್ರತಾಂಡವ

(೧೯೯೦ / ವರ್ಣ / ಸಾಮಾಜಿಕ)
ಲಾ: ಸಪ್ತಸ್ವರ ಮೂವೀಸ್
ಪ್ರೊ: ಸಿ.ಜಯರಾಂ
ನಿ: ಬಿ.ರಾಮಮೂರ್ತಿ
ಅ: ಬಾಲರಾಜ್, ಭಾಗ್ಯಶ್ರೀ, ಶಶಿಕುಮಾರ್, ದೊಡ್ಡಣ್ಣ, ತೂಗುದೀಪ ಶ್ರೀನಿವಾಸ್, ಜೈಜಗದೀಶ್, ಅವಿನಾಶ್, ಜಿ.ಕೆ.ಗೋವಿಂದರಾವ್, ಶುಭ, ಜ್ಯೋತಿ, ಭೀಮರಾವ್,

ಗೀತಾ, ಶನಿ ಮಹದೇವಪ್ಪ, ಮಾಧವ ರಾವ್, ನಾಗೇಶ್
ಕ/ಚಿ.ಕ/ಮಾ: ವೀರಪ್ಪ ಮರಳವಾಡಿ
ಗೀ: ಚಿ.ಉದಯಶಂಕರ್, ಶ್ರೀರಂಗ
ಗಾ: ಮನು, ಮಧು, ಮಂಜುಳಾ, ಚಂದ್ರಿಕಾ, ಮುರಳಿ, ರಮಾ ಅರವಿಂದ್
ಸಂ: ಮನೋಹರ್
ಛಾ: ಶ್ರೀಕಾಂತ್
ಕಲೆ: ಏಳುಮಲೈ
ಸ: ಉಪೇಂದ್ರ ಕುಮಾರ್
ನೃ: ಜಾನ್ ಬಾಬು
ಸಾ: ನಂಜುಂಡಿ ನಾಗರಾಜ್
ಪ್ರ: ರಾಜಗೋಪಾಲ್
ಹಾ: ೧) 'ವರುಷಕ್ಕೊಮ್ಮೆ ಬರುವ ಹಬ್ಬ...'. ೨) 'ಹೆಜ್ಜೆಗಳು ಕುಣಿದಿರಲು ಗೆಜ್ಜೆಗಳು...', ೩) 'ಕಾಲೇಜು ಮೆಟ್ಟಿಲು ಮುಟ್ಟಿದಾಗ...', ೪) 'ವೇದನೆ ಏನೋ ತಿಳಿದೆ ...', ೫) 'ಕೊಳಲ ದನಿ ಎಲ್ಲಿ ನಿನ್ನವನು ಎಲ್ಲಿ...'
ಸೆ: ರೀಲು ೧೫, ಉದ್ದ ೪೩೪೪.೮೯
ಕ.ಸಾ: ಕಾಲೇಜೊಂದರ ಪ್ರತಿಭಾವಂತ ತರುಣ - ತರುಣಿ ಪರಸ್ಪರ ಪ್ರೀತಿಸಿದರು. ಕಾಲೇಜಿನ ಆಡಳಿತ ಮಂಡಳಿ ಸದಸ್ಯರಾಗಿದ್ದ ವಿವಿಧ ವಲಯಗಳ ಪ್ರಭಾವಿ ವ್ಯಕ್ತಿಗಳನ್ನು ಬ್ಲಾಕ್‌ಮೇಲ್ ಮಾಡುವ ರೌಡಿಯ ಕಣ್ಣು ಆ ತರುಣಿಯ ಮೇಲೆ. ಅನೇಕ ಸಮಸ್ಯೆಗಳು, ಅಪರಾಧಿ ಎಂಬ ಆರೋಪ ಹೊತ್ತು ಜೈಲು ಸೇರಿದ ತರುಣ, ಅಲ್ಲಿಂದ ತಪ್ಪಿಸಿಕೊಂಡು ಹೊರಬಂದು, ದುಷ್ಟರ ಸಂಹಾರ ಮಾಡುವ ಕಥೆ

೧೨೮೫. ರಾಮರಾಜ್ಯದಲ್ಲಿ ರಾಕ್ಷಸರು

(೧೯೯೦ / ವರ್ಣ / ಸಾಮಾಜಿಕ)
ಲಾ: ಪ್ರಗತಿ ಎಂಟರ್‌ಪ್ರೈಸಸ್
ಪ್ರೊ: ಕೆ.ಸಿ.ಎನ್.ಮೋಹನ್
ನಿ: ಡಿ.ರಾಜೇಂದ್ರ ಬಾಬು
ಸ.ನಿ: ಕೇಸರಿ ಹರವು

ಅ: ಅನಂತ್‌ನಾಗ್, ಶಂಕರ್‌ನಾಗ್, ಸೋನಿಕಾ ಗಿಲ್, ಪಂಢರಿಬಾಯಿ, ಗಾಯತ್ರಿ, ಅಭಿನಯ, ರೇಖಾ, ಮೈಸೂರು ಬಾಬು, ರಮೇಶ್‌ಭಟ್, ಗೀತ, ದೊಡ್ಡಣ್ಣ, ಸುಧೀರ್, ಲಕ್ಷ್ಮಣ್, ಶಶಿಕುಮಾರ್, ಅನಂತವೇಲು, ಪ್ರಕಾಶ್ ರೈ, ಕೃಷ್ಣ, ಜಾಲಿ, ಸುರೇಶ್, ಗಿರಿಜಾ ಲೋಕೇಶ್
ಕ: ಬಿ.ಎಲ್.ವೇಣು
ಚಿ.ಕ: ಡಿ.ರಾಜೇಂದ್ರ ಬಾಬು
ಮಾ: ಬಿ.ಎಲ್.ವೇಣು
ಗೀ: ಶ್ರೀರಂಗ, ಆರ್. ಎನ್.ಜಯಗೋಪಾಲ್, ಡಿ.ರಾಜೇಂದ್ರ ಬಾಬು
ಗಾ: ಮನು, ಜೇಸುದಾಸ್, ಬಿ.ಆರ್.ಛಾಯಾ, ಮಂಜುಳಾ ಗುರುರಾಜ್
ಸಂ: ಕೆ.ಬಾಲು
ಛಾ: ಬಿ.ಎಸ್. ಬಸವರಾಜ್
ಕಲೆ: ರಾಂ ಕುಮಾರ್
ಸ: ಎಂ.ರಂಗಾರಾವ್
ನೃ: ರೇಖಾಪ್ರಕಾಶ್, ಸತೀಶ್
ಸಾ: ಸಾಹುಲ್, ಹಾರ್ಸ್ ಬಾಬು
ವ: ಜಯಚಂದ್ರ
ಪ್ರ: ರಾಜಗೋಪಾಲ್
ಸ್ಥು: ಅಭಿಮಾನ್
ಹಾ: ೧) 'ವಯಸು ಮನಸು ಮರೆಸುವಾಗ...', ೨) 'ಈ ಯೌವನ ಮಧುರ ಕವನ...', ೩) 'ಯುವರ್ ಅಟೆಕ್ಷನ್ ಪ್ಲೀಸ್...', ೪) 'ನ್ಯಾಯ ನೀತಿ ಗೋಪುರವೇ...', ೫) 'ಯು ಆರ್ ಎ ಬ್ಯಾಡ್ ಕಾಪ್...'
ಸೆ: ರೀಲು - ೧೫, ಉದ್ದ - ೪೦೧೬.೨೦, 'ಯು'
ಕ.ಸಾ: ಒಬ್ಬ ಪತ್ರಕರ್ತ, ಇನ್ನೊಬ್ಬ ಪೊಲೀಸ್ ಅಧಿಕಾರಿ. ಇಬ್ಬರೂ ಸೋದರರು. ರಾಜಕೀಯ ಪ್ರಭಾವದಿಂದ ವಂಚಕರು ನಡೆಸಿದ ಅನ್ಯಾಯ ಅನಾಚಾರಗಳನ್ನು ಇಬ್ಬರೂ ಕೂಡಿ ಎದುರಿಸುತ್ತಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ದುಷ್ಟರೇ ಅಧಿಕಾರಕ್ಕೆ ಬಂದು ದೇಶದ್ರೋಹಕ್ಕೆ ಇಳಿಯುತ್ತಾರೆ. ಸಾಕ್ಷ್ಯ ಸಮೇತ ಹಿಡಿದು ಶಿಕ್ಷೆಗೆ ಗುರಿಮಾಡಿದರೂ ತಪ್ಪಿಸಿಕೊಳ್ಳುತ್ತಾರೆ. ಅವರನ್ನು ಕ್ರೂರವಾಗಿ ಕೊಂದು ಶಿಕ್ಷೆಗೆ ಗುರಿಯಾದವನ ಕಥೆ.

೧೨೮೬. ಕೆಂಪು ಗುಲಾಬಿ

(೧೯೯೦ / ವರ್ಣ / ಸಾಮಾಜಿಕ)
ಲಾ: ವಿಜಯ ಚಿತ್ರಾಲಯ
ಪ್ರೊ: ಶ್ರೀಮತಿ ಬಿ.ಸುಪ್ರಜ
ನಿ: ವಿಜಯ್
ಸ.ನಿ: ಪಿ.ಜಿ.ಸುಧೀರ್
ಅ: ಅಂಬರೀಷ್, ರಮೇಶ್, ಪಾರಿಜಾತ, ಧೀರೇಂದ್ರ ಗೋಪಾಲ್, ಸಾಯಿ ಕುಮಾರ್, ಹೇಮಾ ಚೌಧುರಿ, ಲೀಲಾವತಿ, ಜಗ್ಗೇಶ್, ವೆಂಕಟೇಶ್, ಶಂಕರ ಪಾಟೀಲ್, ಸರಿಗಮ ವಿಜಿ, ವೀರೇಶ್
ಕ: ಬಿ.ತ್ರಿನಾಥ್ ರೆಡ್ಡಿ
ಚಿ.ಕ: ದಾಸರಿ ಬ್ರಹ್ಮಾನಂದಂ, ನಾರಾಯಣರಾಜು
ಗೀ: ಹಂಸಲೇಖ
ಗಾ: ಜೇಸುದಾಸ್, ಸ್ವರ್ಣಲತಾ, ಮನು
ಸಂ: ಪಿ.ಭಕ್ತವತ್ಸಲಂ,
ಛಾ: ಕಬೀರ್ ಲಾಲ್
ಕಲೆ: ಸುಂದರಂ
ಸ: ಹಂಸಲೇಖ
ನೃ: ಸತೀಶ್
ಸಾ: ವೈ.ಶಿವಯ್ಯ
ವ: ನಾಗರಾಜ್
ಸ್ಥು: ಕಂಠೀರವ
ಹಾ: ೧) 'ಹೂವಿನ ಲೋಕ ನಮ್ಮದು...', ೨) 'ಕೆಂಪು ಗುಲಾಬಿ ಕಂಪು ಗುಲಾಬಿ...', ೩) 'ಅಬ್ಬ ಬಂದನೋ ಇಂಡಿಯನ್ ಮೈಕಲ್ ಜಾಕ್ಸನ್...', ೪) 'ನಾನು ನಿನ್ನಿಂದ ದೂರ ಆಗೋಲ್ಲ...'. ೫) 'ಕಸ್ತೂರಿಲಾಲ್ ಅಂತಾರೆ ನನ್ನ ಜನ...'
ಕ.ಸಾ: ಶ್ರೀಮಂತ ಹುಡುಗಿಯನ್ನು ಪ್ರೀತಿಸುವ ಹುಡುಗ, ಅವರಿಬ್ಬರ ಪ್ರೀತಿಗೆ ಹಿರಿಯರಿಂದ ವಿರೋಧ. ಈ ಮಧ್ಯೆ ಅನಾಮಿಕ ವ್ಯಕ್ತಿಯೊಬ್ಬ ನಡುವೆ ಪ್ರವೇಶಿಸಿ ಇಬ್ಬರು ಪ್ರೇಮಿಗಳು ಒಂದಾಗಲು ಕಾರಣವಾಗುವ ಕಥೆ.

೧೨೮೭. ಎದುರು ಮನೆ ಮೀನಾ

(೧೯೯೦ / ವರ್ಣ / ಸಾಮಾಜಿಕ)
ಲಾ: ಕನ್ನಡ ಭಾರತಿ
ಪ್ರೊ: ಎಂ.ರಾಮನ್
ನಿ: ಎ.ಬಾಲಕೃಷ್ಣ
ಸ.ನಿ: ಎ.ಗೌಸ್



ಅ: ಶಿವಕುಮಾರ್, ಅಭಿನಯ, ಉಮಾಶ್ರೀ, ನಾಗರತ್ನಮ್ಮ, ಶಾಂತಮ್ಮ, ಎ.ಎಸ್.ಮೂರ್ತಿ, ಸುಧೀಂದ್ರ, ಶಿವರಾಜ್, ರಾಜಾರಾಂ, ವೈ. ಕೆ.ಮನೋಹರ ರೆಡ್ಡಿ, ದಿನೇಶ್, ಸುರೇಶ್ ಹೆಬ್ಳೀಕರ್
ಕ/ಚಿ.ಕ/ಮಾ: ಎ.ಬಾಲಕೃಷ್ಣ
ಗೀ: ಎಂ.ಎನ್.ವ್ಯಾಸರಾವ್, ವಿ.ಮನೋಹರ್
ಗಾ: ರಾಜಕುಮಾರ್ ಭಾರತಿ. ಬಿ.ಆರ್.ಛಾಯಾ, ಕಸ್ತೂರಿ ಶಂಕರ್
ಸಂ: ಎ.ಸುಬ್ರಹ್ಮಣ್ಯಂ
ಛಾ: ಪಿ.ರಾಜನ್
ಸ: ವಿಜಯಭಾಸ್ಕರ್

ಧ್ವ: ಎಸ್.ಪಿ.ರಾಮನಾಥನ್
ನೃ: ಉಡುಪಿ ಜಯರಾಂ, ದೇವಿ
ಸಾ: ರುದ್ರೇಶ್
ವ: ಪ್ರದೀಪ್ ಕುಮಾರ್
ಪ್ರ: ನಾಣಿ
ಸ್ಟು: ಚಾಮುಂಡೇಶ್ವರಿ
ಹಾ: ೧) 'ಬೇಕೋ ಬಾಳಿಗ ಪ್ರೀತಿಯ ..', ೨) 'ಮೀನಾ ಓ ಓ ಮೀನಾ...', ೩) 'ಮಾಗೀ ತಂದ ಮೈ ಚಳಿಗೆ...', ೪) 'ಡೊಂಕು ಬಾಲದ ನಾಯಕರೇ...'
ಸೆ: ರೀಲು ೧೫, ಉದ ೩೭೨೪.೬೬, 'ಯು' ಸರ್ಟಿಫಿಕೇಟ್
ಕ.ಸಾ: ಭಾರೀ ಕಟ್ಟುನಿಟ್ಟಿನಲ್ಲಿ ಬೆಳೆದ ಹುಡುಗಿ ಮೀನಾ, ಎದುರು ಮನೆಗೆ ಬರುವ ಹುಡುಗನಿಗೆ ಒಲಿದಳು. ಆದರೆ ಆಸ್ತಿಗಾಗಿ ಹೊಂಚುಹಾಕುವವರ ಹುನ್ನಾರದಿಂದ ಆಕೆಯ ವಿವಾಹ ಅಷ್ಟು ಸುಲಭವಾಗುವುದಿಲ್ಲ. ಎಲ್ಲ ಸಮಸ್ಯೆಗಳನ್ನು ಬಿಡಿಸಿ ಕೊನೆಗೂ ಪ್ರೇಮಿಗಳು ಒಂದಾಗುವರು.

೧೨೮೮. ಪುಂಡರಗಂಡ

(೧೯೯೦ / ವರ್ಣ / ಸಾಮಾಜಿಕ)
ಲಾ: ಸೌಮ್ಯ ಪಿಕ್ಚರ್ಸ್
ಪ್ರೊ/ನಿ: ಪಿ.ರಾಜು
ಸ.ನಿ: ಸೋಮರಾಜ್
ಅ: ಪ್ರಭಾಕರ್, ಖುಷ್ಬು, ಸುಧೀರ್, ವಜ್ರಮುನಿ, ಮುಖ್ಯಮಂತ್ರಿ ಚಂದ್ರು, ರಾಜಾನಂದ್, ಸುಂದರಕೃಷ್ಣ ಅರಸ್, ಬ್ಯಾಂಕ್ ಜನಾರ್ದನ್, ಡಿಸ್ಕೋ ಶಾಂತಿ, ಮೈಸೂರು ಲೋಕೇಶ್, ಅಶೋಕ್ ಬಾದರದಿನ್ನಿ
ಕ/ಚಿ.ಕ: ಪಿ.ರಾಜು
ಮಾ/ಗೀ: ಚಿ.ಉದಯಶಂಕರ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ವಾಣಿ ಜಯರಾಂ, ಮಂಜುಳಾ ಗುರು
ಸಂ: ವಿಕ್ಟರ್ ಯಾದವ್
ಛಾ: ಸುಂದರನಾಥ್ ಸುವರ್ಣ
ಕಲೆ: ರಾಜು
ಸ: ಸತ್ಯಂ, ಉಪೇಂದ್ರ ಕುಮಾರ್
ಧ್ವ: (ಹಾ) ಎಸ್.ಪಿ.ರಾಮನಾಥನ್ (ಮಾ) ಕೋದಂಡಪಾಣಿ
ನೃ: ಉಡುಪಿ ಜಯರಾಂ
ಸಾ: ಭಾಷಾ
ವ: ನಾಗರಾಜ್
ಪ್ರ: ಮೈಸೂರು ಮಲ್ಲಿ
ಸ್ಟು: ಕಂಠೀರವ
ಕ.ಸಾ: ಬಡವರ ಕಷ್ಟ ನಿವಾರಿಸಲು ರಾಜಾ ಯಾವ ತ್ಯಾಗಕ್ಕೂ ಸಿದ್ಧನಿರುತ್ತಾನೆ. ಹಳ್ಳಿಗರ ಸುಲಿಗೆ ಮಾಡುತ್ತಿರುವವರನ್ನು ತಡೆದು ಬಾಬುಲಾಲ್ ಮತ್ತ ವನ ಗುಂಪಿನ ದ್ವೇಷಕಟ್ಟಿಕೊಳುತ್ತಾನೆ.ಬಾಬುಲಾಲ್ ಮತ್ತು ಗಿರಿಯಪ್ಪ ದೇವಸ್ಥಾನದ ಆಭರಣಗಳನ್ನು ಅಪಹರಿಸಿದಾಗ ರಾಜಾ ಹೊಡೆದಾಡಿ ಅವನ್ನು ದೇವಸ್ಥಾನಕ್ಕೆ ಹಿಂದಿರುಗಿಸುತ್ತಾನೆ. ಈ ರಾಜಾ ದೇವಸ್ಥಾನದ ಟ್ರಸ್ಟಿಯ ಮಗ ವೇಣು ಎಂಬುದು ಕೊನೆಯಲ್ಲಿ ಬೆಳಕಿಗೆ ಬರುತ್ತದೆ.

೧೨೮೯. ಸ್ವರ್ಣ ಸಂಸಾರ

(೧೯೯೦ / ವರ್ಣ / ಸಾಮಾಜಿಕ)
ಲಾ: ಶ್ರೀದೇವಿ ಪಿಕ್ಚರ್ಸ್
ಪ್ರೊ/ನಿ: ಸಾಯಿಪ್ರಕಾಶ್
ಸ.ನಿ: ಕಲಾಗಂಗೋತ್ರಿ ಮಂಜು
ಅ: ಅನಂತ್ ನಾಗ್, ಮಹಾಲಕ್ಷ್ಮಿ, ನಂಜುಂಡಪ್ಪ,

ಕಮಲಾಧರನ್, ಬೇಬಿ ಅನ್ನಪೂರ್ಣ, ಮಾ।ಸುನೀಲ್, ಮುಖ್ಯಮಂತ್ರಿ ಚಂದ್ರು, ಅವಿನಾಶ್, ಸಿಹಿಕಹಿ ಚಂದ್ರು, ವೆಂಕಟೇಶ್, ಪೂರ್ಣಿಮ, ದೊಡ್ಡಣ್ಣ, ಎಂ.ಎಸ್.ಎಲ್.ಮೂರ್ತಿ, ಸತ್ಯಭಾಮ, ಮೈಸೂರು ಲೋಕೇಶ್, ಉಮೇಶ್, ಶ್ರೀನಿವಾಸ ಮೇಸ್ತ್ರು, ಮಂಜು ಮಾಲಿನಿ
ಕ/ಚಿ.ಕ: ಸಾಯಿಪ್ರಕಾಶ್
ಮಾ: ಸೂರಿ
ಗೀ: ಆರ್.ಎನ್.ಜಯಗೋಪಾಲ್
ಗಾ: ಮಂಜುಳಾ, ಬಿ.ಆರ್.ಛಾಯಾ, ಶ್ರೀನಾಥ್, ಜೇಸುದಾಸ್
ಸಂ: ಕೆ.ನರಸಯ್ಯ
ಛಾ: ಕೃಷ್ಣ
ಕಲೆ: ಬಾಬು
ಸ: ಉಪೇಂದ್ರಕುಮಾರ್
ಧ್ವ: (ಹಾ) ಎಸ್.ಪಿ.ರಾಮನಾಥನ್ (ಮಾ) ಕೋದಂಡಪಾಣಿ
ನೃ: ಶಿವಶಂಕರ್
ವ: ಜಯಚಂದ್ರ
ಪ್ರ: ಚೆಲುವರಾಜು
ಸ್ಟು: ಕಂಠೀರವ
ಹಾ: ೧) 'ಸ್ವಯಂವರ ಇದುವೇ ಕಲಿಯುಗದ ...', ೨) 'ನಗು ನಗುತಾ ಇರಲು ಜೊತೆ...', ೩) 'ಕುಂಕುಮ ತನ್ನಿರೇ...'. ೪) 'ಮನಸು ಕಲ್ಲಾಗಿದೆ...'
ಕ.ಸಾ: ವಿವಾಹವಾದ ಗೃಹಿಣಿಗೆ ಸಂಸಾರದಲ್ಲಿ ಅವಳದೇ ಆದ ಒಂದು ಜವಾಬಾರಿ ಇರುತ್ತದೆ. ಮನೆಯ ಕೆಲಸಕ್ಕಿಂತ ಹೊರಗೆ ದುಡಿಯುವ ಕೆಲಸಕ್ಕೆ ಆದ್ಯತೆ ಕೊಡುವ ಸುಕನ್ಯಾಳ ವರ್ತನೆಯಿಂದ ಬೇಸತ್ತ ಶ್ರೀಧರ್ ಅವಳಿಗೆ ವಿಚ್ಛೇದನ ನೀಡುತ್ತಾನೆ, ಆದರೆ ಕೊನೆಗೆ ಅವರ ಮಕ್ಕಳಿಂದಲೇ ಅವರಿಬ್ಬರೂ ಒಂದಾಗುವಂತೆ ಕತೆಯನ್ನು ಹಣೆಯಲಾಗಿದೆ.

೧೨೯೦. ಟೈಗರ್ ಗಂಗು

(೧೯೯೦ / ವರ್ಣ / ಸಾಮಾಜಿಕ)
ಲಾ: ಶ್ರೀ ಬಾಬಾ ಗುರೂಜಿ ಆರ್ಟ್ಸ್ ಪ್ರೊಡಕ್ಷನ್ಸ್
ಪ್ರೊ: ಎಂ.ಎಸ್.ಕೆಂಪರಾಜ್, ಎಂ.ರಾಮಲಿಂಗಂ
ನಿ: ಕೆ. ಸುಂದರನಾಥ ಸುವರ್ಣ
ಸ.ನಿ: ಸುಬ್ರಹ್ಮಣ್ಯ, ಕೆ.ಮುದು ರಾಜ್



ಅ: ಪ್ರಭಾಕರ್, ಪವಿತ್ರಾ, ಲೀಲಾವತಿ, ಸುದರ್ಶನ್, ವಜ್ರಮುನಿ, ಜೈ ಜಗದೀಶ್, ಡಿಂಗ್ರಿ ನಾಗಾರಾಜ್, ಅಶೋಕ್ ಬಾದರದಿನ್ನಿ, ಸಂಗೀತಾ, ರಾಜೇಶ್ವರಿ
ಕ: ರಾಮಲಿಂಗಂ
ಚಿ.ಕ: ಪ್ರಭಾಕರ್
ಮಾ: ಕುಣಿಗಲ್ ನಾಗಭೂಷಣ್
ಗೀ: ವಿ.ಮನೋಹರ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಬಿ.ಆರ್.ಛಾಯಾ
ಸಂ: ವೆಂಕಟೇಶ್ವರ ರಾವ್
ಛಾ: ಕೆ.ಸುಂದರನಾಥ ಸುವರ್ಣ
ಕಲೆ: ರಾಜು
ಸ: ಶಂಕರ್-ಗಣೇಶ್
ಧ್ವ: (ಹಾ) ಎಸ್.ಪಿ.ರಾಮನಾಥನ್ (ಮಾ) ಕೋದಂಡಪಾಣಿ, ಕೃಷ್ಣಮೂರ್ತಿ
ನೃ: ಉಡುಪಿ ಜಯರಾಂ, ದೇವಿ
ಸಾ: ಸ್ವಾಮಿ
ವ: ನಾಗರಾಜ್
ಪ್ರ: ವಿ.ಎಸ್.ಎಸ್.ಮಲ್ಲಿ
ಸ್ಟು: ಕಂಠೀರವ, ಮಧು ಆರ್ಟ್, ಚಾಮುಂಡೇಶ್ವರಿ, ಸಂಕೇತ್
ಕ.ಸಾ: ಕೊಲೆ ಮತ್ತು ಅದರ ವಿರುದ್ಧ ಹಗೆ ತೀರಿಸಿಕೊಳ್ಳುವ ಕಥೆ. ಪೊಲೀಸ್ ಇನ್ಸ್‌ಪೆಕ್ಟರ್ ಮತ್ತು ಕರಿಯಣ್ಣನ ಕುತಂತ್ರದಿಂದಾಗಿ ತಂದೆ ಕೊಲೆಯಾಗಿ, ತಾಯಿ ಜೈಲು ಸೇರಿ ಇನ್ನೊಬ್ಬ ಸಹೋದರಿ ಗೌರಿ ಬೇರ್ಪಟ್ಟು ಚಿಕ್ಕವನಾದ ಗಂಗಣ್ಣ ಅನಾಥನಾಗುತ್ತಾನೆ. ಬಹು ಕಷ್ಟದಿಂದ ಬೆಳೆಯುವ ಅವನು ಧೈರ್ಯಶಾಲಿಯಾಗಲು ದುರ್ಗಾದೇವಿ ಉತ್ತೇಜನ ನೀಡುತ್ತಾಳೆ. ಗಂಗಣ್ಣನ ಶತ್ರುಗಳೇ ಅವಳ ಶತ್ರುಗಳೂ ಆಗಿರುತ್ತಾರ. ಕರಿಯಣ್ಣ ಕುಖ್ಯಾತ ಕಳ್ಳಸಾಗಣೆದಾರನಾಗಿ ಬೆಳೆದಿರುತ್ತಾನೆ. ದುರ್ಗಾಳ ಸಹಕಾರದಿಂದ ಕರಿಯಣ್ಣನ ಅನ್ಯಾಯಗಳನ್ನು ಎದುರಿಸುತ್ತಾನೆ ಗಂಗಣ್ಣ. ಗಂಗಣ್ಣನನ್ನು ನಿವಾರಿಸಿಕೊಳ್ಳಲು ಕರಿಯಣ್ಣ ಪ್ರಯತ್ನಿಸುತ್ತಾನೆ. ಅಂತ್ಯದಲ್ಲಿ ಗಂಗಣ್ಣ ಹಾಗೂ ದುರ್ಗಾ ಇಬ್ಬರೂ ತಮ್ಮ ಹಗೆ ತೀರಿಸಿಕೊಳ್ಳುವುದರಲ್ಲಿ ಯಶಸ್ವಿಯಾಗುತ್ತಾರ.

೧೨೯೧. ಅಶ್ವಮೇಧ

(೧೯೯೦ / ವರ್ಣ / ಸಾಮಾಜಿಕ)
ಲಾ: ಶ್ರೀ ರೇಣುಕಾಂಬ ಎಂಟರ್‌ಪ್ರೈಸಸ್
ಪ್ರೊ: ಶಾಂತಿಲಾಲ್ ಜೈನ್
ನಿ: ಸಿ.ಆರ್.ಸಿಂಹ

ಸ.ನಿ: ಕೀರ್ತಿ
ಅ: ಕುಮಾರ್ ಬಂಗಾರಪ್ಪ, ಗೀತಾಂಜಲಿ, ಶ್ರೀನಾಥ್, ಶ್ರೀವಿದ್ಯಾ, ಬಾಲಕೃಷ್ಣ, ಅವಿನಾಶ್, ಕೀರ್ತಿ, ರಮೇಶ್‌ಭಟ್, ಅಶೋಕ್ ಬಾದರದಿನ್ನಿ, ಡಿಸ್ಕೋ ಶಾಂತಿ, ಎಂ. ಎಸ್. ಕಾರಂತ್, ಜನಾರ್ದನ್, ವಾಸುದೇವ ಗಿರಿಮಾಜಿ
ಕ/ಚಿ.ಕ/ಮಾ: ಸಿ.ಆರ್.ಸಿಂಹ

ಗೀ: ದೊಡ್ಡರಂಗೇಗೌಡ
ಗಾ: ಡಾ|ರಾಜಕುಮಾರ್, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಮಂಜುಳಾ ಗುರು,
ಸಂ: ಎಸ್.ಮನೋಹರ್
ಛಾ: ಆರ್.ದೇವಿಪ್ರಸಾದ್
ಕಲೆ: ನಜೀರ್, ಮನೋಹರ್
ಸ: ಸಂಗೀತರಾಜ
ಧ್ವ: (ಹಾ) ಎಸ್.ಪಿ.ರಾಮನಾಥನ್, (ಮಾ) ಕೋದಂಡಪಾಣಿ
ನೃ: ರಘುರಾಮ್
ಸಾ: ರಾಮ್ ಶೆಟ್ಟಿ
ವ: ರಾಮನಾಥ್
ಪ್ರ: ಮೊರೆ
ಸ್ಟು: ಅಭಿಮಾನ್
ಸೆ: ೧) 'ಹೃದಯ ಸಮುದ್ರ ಕಲಕಿ...'
ಕ.ಸಾ: ಆಸ್ತಿಯ ಆಸೆಗಾಗಿ ಹೆಣ್ಣೊಬ್ಬಳು ತನ್ನ ಗಂಡನನ್ನು ಕೊಂದು, ಮಗನನ್ನು ಸಾಯಿಸಲು ಹೊಂಚು ಹಾಕುವಳು. ಹುಡುಗ ಅಪಾಯದಿಂದ ಪಾರಾಗಿ, ಬೆಳೆದು ನಂತರ ತನ್ನ ತಂದೆಯ ಸಾವಿಗೆ ಕಾರಣವಾದ ವ್ಯಕ್ತಿಗಳ ವಿರುದ್ಧ ಸೇಡು ತೀರಿಸಿಕೊಳ್ಳುತ್ತಾನೆ.

೧೨೯೨. ಅಗ್ನಿದಿವ್ಯ

(೧೯೯೦ / ವರ್ಣ / ಸಾಮಾಜಿಕ)
ಲಾ: ಐ.ಜಿ.ಪ್ರೊಡಕ್ಷನ್ಸ್
ಪ್ರೊ: ಎಲ್.ಕೆ.ಮುನಿಸ್ವಾಮಿ
ನಿ: ವಿ.ರಾಜನ್
ಸ.ನಿ: ಆರ್.ಎಂ.ಮಣಿ
ಅ: ಜೈಜಗದೀಶ್, ಸುಂದರಕೃಷ್ಣ ಅರಸ್, ರವಿಕಿರಣ್, ಮೈಸೂರು ಲೋಕೇಶ್, ಲಕ್ಷ್ಮಣ್, ಅರಿಕೇಸರಿ, ಶ್ರೀನಿವಾಸ ಪ್ರಭು, ಭವ್ಯ, ತಾರಾ, ವಸಂತ, ಬೇಬಿ ಅಂಜು, ಟೊಮೇಟೋ ಸೋಮು, ಸಾಯಿಕುಮಾರ್

ಕ/ಚಿ.ಕ/ಮಾ: ವಿ.ರಾಜನ್
ಗೀ: ಆರ್.ಎನ್.ಜಯಗೋಪಾಲ್, ದೊಡ್ಡರಂಗೇಗೌಡ
ಗಾ: ಎಸ್.ಜಾನಕಿ, ಪಿ.ಸುಶೀಲ , ರಾಜಕುಮಾರ್ ಭಾರತಿ
ಸಂ: ಶರವಣನ್
ಛಾ: ಹೇಮಚಂದ್ರನ್
ಕಲೆ: ಜಾನ್
ಸ: ಶಾಂ
ಧ್ವ: ದಶರಥ . ಗೋವಿಂದರಾಜ್‌ಸ್ವಾಮಿ
ನೃ: ಬಾಬು, ಪಾಲೋಸ್
ಸಾ: ಪ್ರಭು
ವ: ಆರ್.ಪಿ.ರಾಮನ್
ಪ್ರ: ಆರ್.ಸುಂದರಂ
ಕ.ಸಾ: ದಾಮಾಚಾರ, ದುಷ್ಟ ಶಕ್ತಿಗಳು ಅವುಗಳ ವಿರುದ್ಧ ದೈವಶಕ್ತಿ ನಡುವಣ ಹೋರಾಟಗಳ ಚಿತ್ರಣ.

೧೨೯೩. ಪಂಚಮವೇದ

(೧೯೯೦ ವರ್ಣ ಸಾಮಾಜಿಕ)
ಲಾ: ಶ್ರೀ ಸತ್ಯಸಾಯಿ ಕಂಬೈನ್ಸ್
ಪ್ರೊ: ಪಿ.ಆರ್. ಪ್ರಭಾಕರ್, ಡಿ.ರಾಜ್‌ಕುಮಾರ್, ಸರೋಜಮ್ಮ
ನಿ: ಪಿ.ಹೆಚ್. ವಿಶ್ವನಾಥ್
ಸ.ನಿ: ನೀರ್ನಳ್ಳಿ ರಾಜು, ನಾಗೇಂದ್ರ ಷಾ
ಅ: ರಮೇಶ್, ಸುಧಾರಾಣಿ, ರಾಮಕೃಷ್ಣ, ಕೃಷ್ಣೇಗೌಡ, ಸುಂದರಮ್ಮ, ಕಾತಿ, ಸುಜಾತಾ, ಮಲ್ಲಿಕಾರ್ಜುನ್, ಬೇಬಿ ಆರತಿ, ಸುಂದರಮ್ಮ
ಕ/ಚಿ.ಕ: ಪಿ.ಹೆಚ್. ವಿಶ್ವನಾಥ್
ಮಾ: ಟಿ.ಎನ್. ಸೀತಾರಾಂ
ಗೀ: ದೊಡ್ಡರಂಗೇಗೌಡ, ಎಂ.ಎನ್.ವ್ಯಾಸರಾವ್
ಗಾ: ಚಿತ್ರಾ, ಜೇಸುದಾಸ್, ಎಸ್.ಪಿ.ಬಾಲಸುಬ್ರಹ್ಮಣ್ಯಂ
ಸಂ: ಸುರೇಶ್ ಅರಸ್
ಛಾ: ಆರ್. ಮಂಜುನಾಥ್
ಕಲೆ: ರಮೇಶ್ ಬಾಬು
ಸ: ಸಂಗೀತರಾಜ
ಧ್ವ: (ಹಾ) ಪೀಟರ್, ಅಣ್ಣಾದೊರೈ (ಮಾ) ಕೃಷ್ಣಮೂರ್ತಿ, ದಶರಥ್
ನೃ: ಅಶೋಕ್ - ಪ್ರೊಷ್ಸಿ
ವ: ಕೆ.ಮೂರ್ತಿ
ಪ್ರ: ಶಿವ
ಸ್ಟು: ಸಂಕೇತ್
ಹಾ: ೧) ' ಆಸೆ ಹೊಳೆಯು ಉಕ್ಕಿ ಹರಿದೈತೆ...', ೨) 'ನೀ ತಂದ ಪ್ರೀತಿ ಬೆಳಕಾಗಿದೇ...', ೩) 'ಆಸೆ ಹೊಳೆಯು ಬತ್ತಿ ಹೋಗೈತೆ...'
ವಿ: ೧೯೮೯-೯೦ರ ರಾಜ್ಯ ಪ್ರಶಸ್ತಿ: ಅತ್ಯುತ್ತಮ ನಟಿ (ಸುಧಾರಾಣಿ), ಅತ್ಯುತ್ತಮ ಸಂಭಾಷಣೆ (ಟಿ.ಎನ್. ಸೀತಾರಾಂ) ಅತ್ಯುತ್ತಮ ಸಂಕಲನಕಾರ (ಸುರೇಶ್ ಅರಸ್)
ಸೆ: ರೀಲು - ೧೪, ಉದ್ದ - ೪೦೦೧.೦೯
ಕ.ಸಾ: ಪ್ರೀತಿಸಿದ ಹುಡುಗನಿಂದ ಬೇರೆ ಮಾಡಿ ಚಿಕ್ಕಂದಿನಲ್ಲೆ ಗೊತ್ತಾದ ಹುಡುಗನೊಂದಿಗೆ ಮಾಡಿದ ಮದುವೆಯನ್ನು ವಿರೋಧಿಸಿ, ಕಟ್ಟಿದ ತಾಳಿ ಕಿತ್ತು ಹಾಕಿ ಒಪ್ಪಿದ ಹುಡುಗನ ಜೊತೆ ಓಡಿ ಹೋಗಿ ಕೊನೆಗೆ ತುಂಬಿದ ಹೊಳೆಯ ಗರ್ಭ ಸೇರಿ ಸಾವಿನಲ್ಲಿ ಒಂದುಗೂಡುವರು.

೧೨೯೪. ಕಿಲಾಡಿತಾತ

(೧೯೯೦ / ವರ್ಣ / ಸಾಮಾಜಿಕ)
ಲಾ: ಶ್ರೀ ಹರಿಕೃಪಾ ಮುವೀಸ್
ಪ್ರೊ: ವಿಶ್ವವಿಜೇತ
ನಿ: ಕೆ.ಸುಂದರನಾಥ ಸುವರ್ಣ
ಸ.ನಿ: ಆರ್.ಸಿ.ರಂಗ
ಅ: ಪ್ರಭಾಕರ್ (ತ್ರಿಪಾತ್ರ), ಅಂಜನಾ, ಸಿ.ಆರ್.ಸಿಂಹ, ವಜ್ರಮುನಿ, ದಿನೇಶ್, ಮೈಸೂರು ಲೋಕೇಶ್, ಅವಿನಾಶ್, ಅಶೋಕ್ ಬಾದರದಿನ್ನಿ, ತಾರಾ, ಸಿತಾರಾ, ಡಿಸ್ಕೋ ಶಾಂತಿ, ಲಲಿತಮ್ಮ, ಹೇಮಾ ಚೌಧುರಿ, ಸರ್ವಮಂಗಳಾ, ಅಭಿನಯ, ಜಗದೀಶ್ ಮಲ್ನಾಡ್, ನೀಗ್ರೋ ಜಾನಿ, ಕೃಷ್ಣಗೌಡ, ಸೀತಾರಾಮು, ಮಾ|ಸುಚೇತ, ಟಿ.ಹೆಚ್.ಉದಯ ಶಂಕರ್
ಕ/ಚಿ.ಕ/ಮಾ: ವಿಶ್ವವಿಜೇತ
ಗೀ: ಮನೋಹರ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ರತ್ನಮಾಲಾ ಪ್ರಕಾಶ್
ಸಂ: ಜೋಸೆಫ್
ಛಾ: ಕೆ.ಸುಂದರನಾಥ ಸುವರ್ಣ
ಸ: ಶಂಕರ್ ಗಣೇಶ್
ನೃ: ತರುಣ್
ಸಾ: ಸ್ವಾಮಿ
ವ: ನಾಗರಾಜ್, ಪರಮಶಿವನ್
ಪ್ರ: ಮಲ್ಲಿಕ್
ಹಾ: ೧) 'ಚೆಲುವಯ್ಯ ಚೆಲುವೊ...', ೨) 'ಹಾರ್ಟಿಗೊಂದು ಪಾರ್ಟಿ ನೀನಮ್ಮಾ...'
ವಿ: ಪ್ರಭಾಕರ್ ತ್ರಿಪಾತ್ರದಲ್ಲಿ ಅಭಿನಯಿಸಿದ ಚಿತ್ರ. ಮುದುಕನ ಪಾತ್ರವೇ ಮುಖ್ಯ.
ಸೆ: ರೀಲು - ೧೪, ಉದ್ದ - ೪೧೧೦.೯೧, 'ಯು - ಎ' ಸರ್ಟಿಫಿಕೇಟ್ , ೦೭ ೦೬ - ೧೯೯೦
ಕ.ಸಾ: ತುಂಟ - ತರಲೆ ತಾತಾ - ಚುರುಕು ಮೊಮ್ಮಗ .. ದುಷ್ಟರು ಮಾಡಿದ ಕೊಲೆಯ ಬೆನ್ನು ಹತ್ತಿ, ಸ್ತ್ರೀಯರು ಹಾಗೂ ಪ್ರೇಮಿಗಳಿಗೆ ತೊಂದರೆ ಕೊಡುತ್ತಿದ್ದುದನ್ನು ಎದುರಿಸುತ್ತಾರೆ. ವಿಗ್ರಹಗಳನ್ನು ಕದ್ದು ಮತ್ತು ಹೆಣ್ಣುಮಕ್ಕಳನ್ನು ವಿದೇಶಗಳಿಗೆ ಮಾರಾಟ ಮಾಡುತ್ತಿದ್ದ ಖಳನಾಯಕರ ಗುಂಪನ್ನು ತಾತ ಮೊಮ್ಮಗ ಭೇದಿಸುವುದು ಚಿತ್ರದ ಒಟ್ಟು ಕತೆ.

೧೨೯೫. ಮಹೇಶ್ವರ

(೧೯೯೦ / ವರ್ಣ / ಸಾಮಾಜಿಕ)
ಲಾ: ಶ್ರೀ ದೇವಿಯಲ್ಲಮ್ಮ ಪ್ರೊಡಕ್ಷನ್ಸ್
ಪ್ರೊ: ಗೋಪಾಲಕೃಷ್ಣ, ಮಮತಾ.ಎಸ್, ಚಕ್ರವರ್ತಿ, ಸಂತೋಷ್‌ಸಿಂಧಿ
ನಿ: ದಿನೇಶ್ ಬಾಬು
ಅ: ಶಂಕರ್‌ನಾಗ್, ಶ್ರೀನಾಥ್, ಸುದರ್ಶನ್,

ಸುಂದರರಾಜ್, ಸುಮಲತಾ, ಪ್ರಮೀಳಾ ಜೋಷಾಯ್, ತಾರಾ, ಹೇಮಾ ಚೌಧುರಿ, ಬೇಬಿ ಅಶ್ವಿನಿ
ಕ/ಚಿ.ಕ: ದಿನೇಶ್ ಬಾಬು
ಮಾ: ರಾಜೇಂದ್ರ ಕುಮಾರ್, ನಾಗೇಶ್ ಕಂಪ್ಲಾಪುರ
ಗೀ: ಆರ್.ಎನ್.ಜಯಗೋಪಾಲ್
ಗಾ: ಪಿ.ಸುಶೀಲ , ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ
ಸಂ: ಸುರೇಶ್ ಅರಸ್
ಛಾ: ದಿನೇಶ್ ಬಾಬು
ಸ: ವಿಜಯ್ ಆನಂದ್
ಸಾ: ನಂಜುಂಡಿ ನಾಗರಾಜ್
ಸ್ಟು: ಕಂಠೀರವ
ಹಾ: ೧) 'ಏಕೆ ಕೋಪ ನನ್ನೊಲವೇ...', ೨) 'ಸ್ವರವೂ ಶ್ರುತಿಯೂ ಬೇರೆಯೇ ಗಾನ...', ೩) 'ಮನ್ಮಥಾ ಬರದಿರೋ ಕತೆಯಿದೇ...'
ಸೆ: ರೀಲು - ೧೩, ಉದ್ದ ೩೪೫೩.೪೦
ಕ.ಸಾ: ಮನೆಯ ಮುದ್ದು ಮಗನಿಗೇ ಸಮಸ್ತ ಆಸ್ತಿ ಸೇರುವುದನ್ನು ಸಹಿಸದ ಹತ್ತಿರದವರು ಅವನನ್ನು ಕೊಲೆ ಮಾಡುವರು. ಮುದ್ದಿನಿಂದ ಸಾಕಿದ ಪ್ರಾಣಿಯೊಂದು ಅವರನ್ನೆಲ್ಲಾ ಕೊಲ್ಲುವುದರ ಮೂಲಕ ತನ್ನ ಒಡೆಯನ ಸಾವಿನ ಸೇಡನ್ನು ತೀರಿಸಿಕೊಳ್ಳುತ್ತದೆ.

೧೨೯೬. ತ್ರಿನೇತ್ರ

(೧೯೯೦ / ವರ್ಣ / ಸಾಮಾಜಿಕ)
ಲಾ: ಶ್ರೀ ಲಕ್ಷ್ಮಿ ಪ್ರೊಡಕ್ಷನ್ಸ್
ಸೆ: ಎಸ್.ಸುನಂದ, ಎಂ.ಕೃಷ್ಣ, ಎಸ್.ಪುಟ್ಟಸ್ವಾಮಿ
ನಿ: ರಾಜ್‌ಕಿಶೋರ್
ಸ.ನಿ: ಬಿ.ಟಿ.ಶೇಷು
ಅ: ಪ್ರಭಾಕರ್, ದೇವರಾಜ್, ಶಶಿಕುಮಾರ್, ದೊಡ್ಡಣ್ಣ, ಸಾಯಿಕುಮಾರ್, ಚಂದ್ರಿಕಾ, ಸುಧಾರಾಣಿ, ವಿಜಯಲಕ್ಷ್ಮಿ, ಜಗ್ಗೇಶ್, ಶಂಕರ್ ನಾಗ್, ಅಂಬರೀಷ್, ಯೋಗೀಶ್, ಟೆನ್ನಿಸ್ ಕೃಷ್ಣ, ಶ್ರೀನಿವಾಸ ಮೂರ್ತಿ
ಕ: ಬಿ.ಎ.ಮಧು
ಚಿ.ಕ: ರಾಜ್‌ಕಿಶೋರ್
ಮಾ: ಶ್ರೀರಂಗ
ಗೀ: ಹಂಸಲೇಖ. ಆರ್. ಎನ್.ಜಯಗೋಪಾಲ್, ರಾಜಕಿಶೋರ್, ಮನೋಹರ್
ಗಾ: ಎಸ್.ಪಿ. ಬಾಲಸುಬ್ರಹ್ಮಣ್ಯಂ, ರಮೇಶ್, ಮಂಜುಳಾ ಗುರುರಾಜ್
ಸಂ: ಕೆ.ಬಾಲು
ಛಾ: ಕೃಷ್ಣ
ಸ: ಹಂಸಲೇಖ
ಧ್ವ: ಕೃಷ್ಣಮೂರ್ತಿ
ನೃ: ಚಿನ್ನಿಪ್ರಕಾಶ್, ಸುರೇಖಾ
ಸಾ: ಸಾಹುಲ್
ವ: ರಾಮನಾಥ್
ಪ್ರ: ಕೇಶವ, ದೊರೆ, ಮೈಸೂರು ಮಲ್ಲಿ
ಸ್ಥ: ಕಂಠೀರವ
ಹಾ: ೧)'ಜೋ ಜೋಡಿ ಬಂದಿದೆ...', ೨)'ಸಾರಿಯಮ್ಮ ಸಾರೀ...', ೩)'ನಾಡ ನೋಡೋ...', ೪)'ರಂಜನೀ ನನ್ನ ಶಿವರಂಜನೀ...'
ಸೆ: ರೀಲು ೧೫, ಉದ ೩೪೭೦.೩೭
ಕ.ಸಾ: ಇಬ್ಬರು ನಿಷ್ಠಾವಂತ ಪೊಲೀಸ್ ಅಧಿಕಾರಿಗಳು. ಕುತಂತ್ರಿ ಗೃಹ ಮಂತ್ರಿಯ ಅವ್ಯವಹಾರಗಳಿಂದಾಗಿ ಮುಖ್ಯಮಂತ್ರಿಗ ಒದಗುವ ಸಮಸ್ಯೆಗಳು, ಪತ್ರಕರ್ತನ ಕೊಲೆ. ಇವನ್ನೆಲ್ಲ ಮಟ್ಟ ಹಾಕಲೆತ್ನಿಸುವ ಪೊಲೀಸ್ ಅಧಿಕಾರಿಗೆ ಕರ್ತವ್ಯ ನಿರ್ವಹಿಸಲು ಅಡ್ಡಿ. ಅಪಹರಣ, ಕೊಲೆ, ಸಾಹಸ, ಪ್ರಣಯ ತ್ರಿಕೋನ, ವಿಫಲ ಪ್ರಣಯ ಇತ್ಯಾದಿಗಳು ಅಂತ್ಯದಲ್ಲಿ ರಹಸ್ಯ ಬಯಲು.

೧೨೯೭. ಪ್ರಥಮ ಉಷಾ ಕಿರಣ

(೧೯೯೦ / ವರ್ಣ / ಸಾಮಾಜಿಕ)
ಲಾ/ಪ್ರೊ: ಮಾನಸ ಆರ್ಟ್ಸ್
ನಿ: ಸುರೇಶ್ ಹೆಬ್ಳೀಕರ್
ಸ.ನಿ: ಪಿ.ಲಿಂಗರಾಜ್ ಕಗ್ಗಲ್
ಅ: ಸುರೇಶ್ ಹೆಬ್ಳೀಕರ್, ಗೀತಾ, ಎಂ.ವಿ.ನಾರಾಯಣ ರಾವ್, ಶಾಂತಮ್ಮ, ಗಿರೀಶ್ ಕಾರ್ನಾಡ್, ಬೇಬಿ ಪ್ರೀತಿ ಪೈ, ಮಾ|ಡಮರುಗೇಂದ್ರ, ಪ್ರಮೀಳಾ ಜೋಷಾಯ್, ಉಮೇಶ್, ವನಿತಾವಾಸು
ಕ: ಡಾ| ಅಶೋಕ್ ಪೈ
ಚಿ.ಕ: ಸುರೇಶ್ ಹೆಬ್ಳೀಕರ್, ನಾಗತಿಹಳ್ಳಿ ಚಂದ್ರಶೇಖರ್
ಮಾ: ನಾಗತಿಹಳ್ಳಿ ಚಂದ್ರಶೇಖರ್, ಡಾ|ಅಶೋಕ್ ಪೈ
ಗೀ: ಎಂ. ಎನ್.ವ್ಯಾಸರಾವ್, ನಾಗತಿಹಳ್ಳಿ ಚಂದ್ರಶೇಖರ್
ಗಾ: ರಾಜಕುಮಾರ್ ಭಾರತಿ
ಸಂ: ಎಂ.ಎನ್.ಸ್ವಾಮಿ
ಛಾ: ಪಿ.ರಾಜನ್
ಸ: ವಿಜಯಭಾಸ್ಕರ್
ಧ್ವ: ಎಸ್.ಪಿ.ರಾಮನಾಥನ್
ವ: ವೆಂಕಟರಾಮ್
ಪ್ರ: ವಿ.ರಾಮಸ್ವಾಮಿ
ಸ್ಥ: ಚಾಮುಂಡೇಶ್ವರಿ
ಹಾ: ೧) 'ಎತ್ತರ ಬಲು ಎತ್ತರ...', ೨) 'ಮರಳಿ ಬಾರೆನ್ನ ಕೋಗಿಲೇ...'
ವಿ: ೧೯೮೯ ೯೦ರ ರಾಜ್ಯ ಪ್ರಶಸ್ತಿ: ತೃತೀಯ ಅತ್ಯುತ್ತಮ ಚಿತ್ರ. ಅತ್ಯುತ್ತಮ ಬಾಲನಟ (ಮಾ| ಡಮರುಗೇಂದ್ರ)
ಸೆ: ರೀಲು ೧೫. ಉದ ೪೩೦೬.೫೮, 'ಯು' ಸರ್ಟಿಫಿಕೇಟ್
ಕ.ಸಾ: ಮನಃಶಾಸ್ತ್ರದ ನೆಲೆಯಲ್ಲಿ ಮಕ್ಕಳ ಮನಸ್ಥಿತಿ ಅವರ ಸುತ್ತಲಿನ ಪರಿಸರದಿಂದಾಗಿ ಹೇಗೆ ಉದಯವಾಗುತ್ತದೆ, ಅವರ ಓಂದಿರುವ ಹೆತ್ತವರ ಜವಾಬಾರಿಗಳು - ಮಕ್ಕಳೊಂದಿಗಿನ ವರ್ತನೆಗೆ ಹೇಗೆ ಕಾರಣವಾಗುತ್ತವೆ, ಯಾವುದೇ ಜೀವನ ವಿಧಾನವನ್ನು ಅವರ ಮೇಲೆ ಏಕೆ ಹೊರಿಸಬಾರದು ಎಂಬುದರ ವಿವರಣೆಯೊಳಗೊಂಡ ವಿಷಯದೊಂದಿಗೆ ವಿಭಿನ್ನ ಸಂಸ್ಕೃತಿಗಳ ಸಂಘರ್ಷ, ತಾಯ್ನೆಲದ ಬಗ್ಗೆ ಪ್ರೀತಿ - ಅಭಿಮಾನ ಮುಂತಾದವು ಚಿತ್ರದ ಕಥಾ ಹಂದರ.

೧೨೯೮. ಆವೇಶ

(೧೯೯೦ / ವರ್ಣ / ಸಾಮಾಜಿಕ)
ಲಾ: ರವಿಕೃಷ್ಣ ಫಿಲಂಸ್
ಪ್ರೊ: ರವಿಕೃಷ್ಣ
ನಿ: ಪೇರಾಲ

ಅ: ಶಂಕರ್ ನಾಗ್, ದೇವರಾಜ್, ದೊಡ್ಡಣ್ಣ, ರಾಮ್ ಕುಮಾರ್, ಸದಾಶಿವ ಬ್ರಹ್ಮಾವರ್, ಶಂಕರ್ ಪಾಟೀಲ್, ಅಶೋಕ ರಾವ್, ರಮೇಶ್ ಭಟ್, ಜನಾರ್ದನ್ , ಶಿವರಾಜ್, ಜನಕರಾಜ್, ಅಮೃತಸಾಗರ್, ಗೀತಾ, ಭವ್ಯ, ಶಿವರಂಜನಿ, ಉಮಾಶ್ರೀ
ಕ/ಚಿ.ಕ: ಪೇರಾಲ
ಮಾ: ಕುಣಿಗಲ್ ನಾಗಭೂಷಣ್
ಗೀ: ಹಂಸಲೇಖ, ವಿ.ಮನೋಹರ್, ಜಯದೇವ ಮಹಾಕವಿ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್.ಜಾನಕಿ
ಸಂ: ಡಿ.ರಾಜಗೋಪಾಲ್
ಛಾ: ಸುಂದರನಾಥ ಸುವರ್ಣ
ಕಲೆ: ಕೆ.ಎಸ್.ವೇಣು
ಸ: ಹಂಸಲೇಖ
ಧ್ವ: ಕೋದಂಡಪಾಣಿ
ನೃ: ಶಿವಶಂಕರ್
ಸಾ: ಸಾಹುಲ್
ವ: ಭಾಷಾ
ಪ್ರ: ಕೃಷ್ಣ
ಹಾ: ೧)'ಅರೇ ಹೇಳೋರಿಲ್ಲ ಇಲ್ಲಿ ...', ೨)'ಧ್ವನಿ ಧ್ವನಿ ಪ್ರತಿಧ್ವನಿ...', ೩)'ವಿರಹೆ ತವವಿರಹೆ ರಾಧಿಕಾ ಕೃಷ್ಣ ರಾಧಿಕಾ ...', ೪)'ಸಪ್ತಾಶ್ವರಥ ಮಾರೂಡಂ ಪ್ರಚಂಡಂ ...'
ಸೆ: ರೀಲು - ೧೪, ಉದ - ೩೫೮೯.೬೬, 'ಯು' ಸರ್ಟಿಫಿಕೇಟ್
ಕ.ಸಾ: ಗಂಡ - ಹೆಂಡತಿ ಮಗ - ಮಗಳ ಸಂಪ್ರದಾಯಸ್ಥ ಕುಟುಂಬದ ಸುತ್ತ ಹೆಣೆದ ಕಥೆ. ನಡುವೆ ಪೊಲೀಸರಲ್ಲಿ ಪರಸ್ಪರ ಅಭಿಪ್ರಾಯ ಭೇದದ ಚಿತ್ರಣ. ಇದನ್ನು ಬಳಸಿಕೊಂಡು ರೌಡಿಗಳು ವೇಶ್ಯೆಯರಿಂದ ಅಮಾಯಕರ ಅಪಹರಣ - ಕೊಲೆ ಇತ್ಯಾದಿಗಳು. ಸಾಹಸ - ಭಾವೋದ್ರೇಕದ ಸನ್ನಿವೇಶಗಳ ಮಿಶ್ರಣ.

೧೨೯೯. ಬಣ್ಣದ ಗೆಜ್ಜೆ

(೧೯೯೦ / ವರ್ಣ / ಸಾಮಾಜಿಕ)
ಲಾ: ರೋಹಿಣಿ ಪಿಕ್ಚರ್ಸ್ (ಮೈಸೂರು)
ಪ್ರೊ/ನಿ: ಎಸ್.ವಿ.ರಾಜೇಂದ್ರ ಸಿಂಗ್ (ಬಾಬು)

ಅ: ರವಿಚಂದ್ರನ್, ಅಮಲಾ, ಭಾರತಿ, ಸುರೇಶ್ ಹೆಬ್ಳೀಕರ್, ಅಮ್ಜದ್ ಖಾನ್, ದೇವರಾಜ್, ವಾಣಿವಿಶ್ವನಾಥ್, ಕಲ್ಯಾಣಕುಮಾರ್
ಕ/ಚಿ.ಕ: ಎಸ್.ವಿ.ರಾಜೇಂದ್ರ ಸಿಂಗ್ (ಬಾಬು)
ಮಾ: ಹೆಚ್.ವಿ.ಸುಬ್ಬಾರಾವ್
ಗೀ: ಹಂಸಲೇಖ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ. ಚಿತ್ರಾ
ಸಂ: ಗೌತಮ್ ರಾಜು
ಛಾ: ಪಿ. ಎಸ್.ಪ್ರಕಾಶ್
ಕಲೆ: ಬಿ.ಚಲಂ
ಸ: ಹಂಸಲೇಖ
ಧ್ವ: ದೀಪನ್-ಚೇತರಾಜ್
ನೃ: ಚಿನ್ನಿ ಪ್ರಕಾಶ್, ಸುರೇಖಾ, ಮೂಗೂರು ಸುಂದರ್
ಸಾ: ಪಪ್ಪುವರ್ಮ, ಹಾರ್ಸ್‌ಬಾಬು
ಸ್ಥ: ಕಂಠೀರವ, ಪ್ರಸಾದ್
ಹಾ: ೧)'ಹೇ ಎನ್ನಲೇ ಮರಿ ಕೂಸೆ...', ೨)'ಸ್ವಾತಿ ಮುತ್ತಿನ ಮಳೆ ಹನಿಯೇ...', ೩)'ಪ್ರೇಮಗೀಮ ಜಾನೇದೋ...', ೪) 'ಡ್ಯಾನ್ಸ್ ಡ್ಯಾನ್ಸ್...', ೫)'ಯೋಗಾ ಯೋಗಾ...', ೬) 'ಜೋಡಿಸ್ತೀನಯ್ಯ ...', ೭)'ಈ ಬಣ್ಣದ ಗೆಜ್ಜೆ...',
ಕ.ಸಾ: ನೃತ್ಯ. ಅದರೊಳಗೊಂದು ಹೊಸ ಆವಿಷ್ಕಾರ. ಅತ್ತ - ಇತ್ತಲ ಸಂಪ್ರದಾಯಗಳನ್ನು ಕಸಿಮಾಡಿ ನವೀನವಾದದ್ದನ್ನು ಸೃಷ್ಟಿಸುವ ಬಯಕೆಯ ತಾಯಿ. ಕಾರಣಾಂತರದಿಂದ ಒಂಟಿ. ಮಗನಲ್ಲಿ ಆ ಬಯಕೆ ಚಿಗುರಿಸಿದಳು, ಅಂಥ ಹೊಸತನದ ನೃತ್ಯ ರಂಗಕ್ಕೆ ಬರುವ ದಿನವೇ ಪರಾಕಾಷ್ಠೆ. ನಿಗೂಢಗಳು ತೆರೆದುಕೊಂಡವು. ಸಂತೋಷ - ದುಃಖ ಎಲ್ಲವನ್ನೂ ಹೊತ್ತ ಭಾವಪೂರ್ಣತೆಗೆ ಆದ್ಯತೆಯುಳ್ಳ ಕಥೆ.

೧೩೦೦. ಪೋಲೀಸನ ಹೆಂಡ್ತಿ

(೧೯೯೦ / ವರ್ಣ / ಸಾಮಾಜಿಕ)
ಲಾ: ಡೈನಾಮಿಕ್ ಫಿಲಂ ಮೇಕರ್ಸ್
ಪ್ರೊ: ಹರಿಪ್ರಸಾದ್, ರಘುಬಾಬು , ಸುಧಾಕರ್, ಎ.ಜಿ.ವಿ.ಪ್ರಸಾದ್
ನಿ: ಸಾಯಿಪ್ರಕಾಶ್
ಸ.ನಿ: ಚಂದ್ರು ದೊಡ್ಡಮನಿ

ಅ: ಶಶಿಕುಮಾರ್, ಮಾಲಾಶ್ರೀ, ದೇವರಾಜ್, ವಿನಯಾ ಪ್ರಸಾದ್, ಮುಖ್ಯಮಂತ್ರಿ ಚಂದ್ರು, ಜೈಜಗದೀಶ್, ಮೈಸೂರು ಲೋಕೇಶ್, ಉಮೇಶ್, ಬ್ಯಾಂಕ್ ಜನಾರ್ದನ್, ಅಂಜನಾ, ತಾರಾ, ಕಮಿನೀಧರನ್, ಸಿತಾರಾ, ಶ್ರೀನಿವಾಸ ಮೂರ್ತಿ
ಕ: ಓಂಕಾರ್
ಚಿ.ಕ: ಸಾಯಿಪ್ರಕಾಶ್
ಮಾ: ಕುಣಿಗಲ್ ನಾಗಭೂಷಣ್
ಗೀ: ಆರ್.ಎನ್.ಜಯಗೋಪಾಲ್
ಗಾ: ಮನು, ಮಂಜುಳಾ ಗುರುರಾಜ್, ರಾಧಿಕ
ಸಂ: ಕೆ.ನರಸಯ್ಯ
ಛಾ: ಕೃಷ್ಣ
ಕಲೆ: ಬಾಬು
ಸ: ಎಂ.ರಂಗರಾವ್
ಧ್ವ: (ಹಾ) ಎಸ್.ಪಿ.ರಾಮನಾಥನ್ (ಮಾ) ಕೋದಂಡಪಾಣಿ
ನೃ: ಶಿವಶಂಕರ್
ವ: ನಾಗರಾಜ್
ಪ್ರ: ಚೆಲುವರಾಜು, ಚಂದ್ರು, ಕೇಶವ ಚಾರಿ
ಹಾ: ೧) 'ಈ ಒಂದು ಸಾರಿ ನನ್ನ ಮನ್ನಿಸು ...', ೨) 'ಅಮ್ಮಮ್ಮ ಮೇಡಮ್ಮ ...', ೩) 'ಕಾರ್ತಿಕ ಮಾಸದಲೀ...'
ಸೆ: ರೀಲು - ೧೫
ಕ.ಸಾ: ಸಾಮಾನ್ಯ ಪೊಲೀಸ್ ಪೇದೆಯೊಬ್ಬನ ಪತ್ನಿ, ತನ್ನನ್ನು ಅವಮಾನಿಸಿದ ಪೊಲೀಸ್ ಇನ್ಸ್‌ಪೆಕ್ಟರ್‌ನ ಹೆಂಡತಿಯ ವಿರುದ್ಧ ಸಿಡಿದೇಳುತ್ತಾಳೆ. ಛಲ ಹಾಗೂ ಮನೋಬಲದಿಂದ ಪೊಲೀಸ್ ಕಮಿಷನರ್ ಆಗಿ ಬಂದು ತನ್ನನ್ನು ಅವಮಾನಿಸಿದ ಹೆಣ್ಣಿನ ವಿರುದ್ಧ ಗೆಲುವು ಸಾಧಿಸುತ್ತಾಳೆ.

೧೩೦೧. ಹೊಸ ಜೀವನ

(೧೯೯೦ / ವರ್ಣ / ಸಾಮಾಜಿಕ)
ಲಾ: ಶ್ರುತಿ ಎಂಟರ್‌ಪ್ರೈಸಸ್
ಪ್ರೊ: ಎಸ್.ಶೈಲೇಂದ್ರ ಬಾಬು
ನಿ: ಭಾರ್ಗವ
ಸ.ನಿ: ಬಾಲಾಜಿಸಿಂಗ್, ಎಸ್. ಉದಯ್
ಅ: ಶಂಕರ್ ನಾಗ್, ದೀಪಿಕಾ, ರಮೇಶ್ ಭಟ್, ಸುಧೀರ್, ಮುಖ್ಯಮಂತ್ರಿ ಚಂದ್ರು, ರಾಜಾನಂದ್, ಕುಣಿಗಲ್ ನಾಗಭೂಷಣ್, ಎಂ.ಎಸ್.ಕಾರಂತ್, ಉಮೇಶ್, ಬಿ.ಕೆ.ಶಂಕರ್, ವೈಶಾಲಿ, ಶ್ರೀಶೈಲನ್
ಕ/ಚಿ.ಕ: ಭಾರ್ಗವ
ಮಾ: ಕುಣಿಗಲ್ ನಾಗಭೂಷಣ್
ಗೀ: ಚಿ.ಉದಯಶಂಕರ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಜೇಸುದಾಸ್, ಮಂಜುಳಾ, ಚಂದ್ರಿಕಾ
ಸಂ: ವಿಕ್ಟರ್ ಯಾದವ್
ಛಾ: ಮಲ್ಲಿಕಾರ್ಜುನ
ಕಲೆ: ನಜೀರ್
ಸ: ಹಂಸಲೇಖ
ನೃ: ಉಡುಪಿ ಜಯರಾಂ
ಸಾ: ಹಾರ್ ಬಾಬು
ವ: ಎನ್ ರಾಮನಾಥ್
ಪ್ರ: ಮೈಸೂರು ವೆಂಕಟೇಶ್
ಹಾ: ೧) 'ಚಾಕು ಚೂರಿ ಚಿನ್ನ ...', ೨) 'ಬ್ಯಾಡ್ರೀ ಬ್ಯಾಡ್ರೀ ನನ್ನ ರೇಗಿಸ...', ೩) 'ಅನಾಥ ಮಗು ...', ೪) 'ಲಾಲಿ...ಲಾಲಿ ಜೋಗುಳ...'
ಕ.ಸಾ: ಬದುಕಿರುವುದೊಂದೇ ಗುರಿ ಎಂಬಂತಿರುವ ವ್ಯಕ್ತಿಕವಾಗಿ ಬಲಿಪಾಶಿಯಾದ ಯುವಕನ ಸುತ್ತ ಹೆಣೆಯಲಾದ ಕತೆ. ಹುಟ್ಟು

ರೌಡಿಯಾಗಿರುವವನನ್ನು ಒಂದು ಹೆಣ್ಣು ಆತನಿಂದ ತನ್ನ ಭವಿಷ್ಯ ಹಾಳಾಗಿದರೂ ತಾನು ಅವನೊಂದಿಗೆ ಬಾಳು ನಡೆಸುವುದಾಗಿ ತೀರ್ಮಾನಿಸಿ ಮುಂದೆ ಅವನನ್ನು ಒಳ್ಳೆ ಪ್ರಜೆಯನ್ನಾಗಿ ಮಾಡುವ ಕತೆ.

೧೩೦೨. ಮೃತ್ಯುಂಜಯ

(೧೯೯೦ / ವರ್ಣ / ಪತ್ತೇದಾರಿ / ಸಾಮಾಜಿಕ)
ಲಾ: ನಿಮಿಲೇಶ್ವರಿ ಸಿನಿ ಕಂಬೈನ್ಸ್
ಪ್ರೊ: ರಾಘವೇಂದ್ರ ರಾಜಕುಮಾರ್
ನಿ: ಟಿ.ದತ್ತುರಾಜ್
ಅ: ಶಿವರಾಜ್ ಕುಮಾರ್, ಮಾಲಾಶ್ರೀ, ಸುಂದರಕೃಷ್ಣ ಅರಸ್, ಶುಭ, ಶಶಿಕುಮಾರ್, ಉಮಾಶ್ರೀ, ಧೀರೇಂದ್ರ ಗೋಪಾಲ್, ರೇಖಾ ದಾಸ್, ಕೆ.ಎಸ್.ಅಶ್ವತ್, ಪೃಥ್ವಿರಾಜ್, ಸತೀಶ್, ಶಿವಕುಮಾರ್, ಸುಜಾತಾ
ಕ/ಚಿ.ಕ/ಮಾ: ಚಿ.ಉದಯಶಂಕರ್
ಗೀ: ಚಿ.ಉದಯಶಂಕರ್, ಶ್ರೀರಂಗ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಮಂಜುಳಾ ಗುರುರಾಜ್
ಸಂ: ಎಸ್.ಮನೋಹರ್
ಛಾ: ವಿ.ಕೆ.ಕಣ್ಣನ್
ಕಲೆ: ನಜೀರ್
ಸ: ಉಪೇಂದ್ರಕುಮಾರ್
ಸ್ಟು: ಅಭಿಮಾನ್
ಹಾ: ೧) 'ಮುತ್ತು ಮುತ್ತು ಮಾತು ಮುತ್ತು...', ೨) 'ಈ ಹರೆಯದ ಉಲ್ಲಾಸವೂ...', ೩) 'ನೀ ಕನಸಲೀ ಬರುತಿರುವೇ...', ೪) 'ಯಾರು ಏನು ಮಾಡುವರೂ...', ೫) 'ಕಂಡೋರ ಜೇಬಿಗೇ ಕತ್ತರೀ ಹಾಕಿವರೆ...'
ಸೆ: ರೀಲು - ೧೬, ಉದ್ದ ೪೫೦೦.೩೭
ಕ.ಸಾ: ಆಸ್ತಿಗಾಗಿ ಅಣ್ಣ - ತಮ್ಮಂದಿರಲ್ಲಿ ಮನಸ್ತಾಪ... ಆಸ್ತಿಗಾಗಿಯೇ ಸುತ್ತುವರಿದ ನಂತರ ವಿವಿಧ ಬಗೆಬಗೆಯ ಬಣ್ಣಗಳು... ಅಪಹರಣ - ಕೊಲೆ ಮುಂತಾದವು... ಸತ್ತವನಂತೆಯೇ ಇದ್ದವನೊಬ್ಬನನ್ನು ಹುಡುಕಿ ತಂದು ನಿಲ್ಲಿಸಿದಾಗ ಬಣ್ಣಗಳೆಲ್ಲ ಬಯಲು ... ಪತ್ತೇದಾರಿ ಕೆಲಸ ... ಅಂತಿಮವಾಗಿ ಬದಲಿಯಾಗಿ ಬಂದವನೇ ಅಸಲೀ ಎಂದು ತಿಳಿದಾಗ ಕುತಂತ್ರಿಗಳ ಆಟಗಳಿಗೆ ವಿಘ್ನ. ಅವನ ಕೊಲೆಯಾಗಿತ್ತು ಎಂದು ನಂಬಿದುದೇ ಹಗರಣಗಳ ಮೂಲವಾಗಿತ್ತು.

೧೩೦೩. ಚಾಲೆಂಜ್ ಗೋಪಾಲಕೃಷ್ಣ

(೧೯೯೦ / ವರ್ಣ / ಸಾಮಾಜಿಕ)
ಲಾ: ಚಿತ್ರ ಪ್ರೊಡಕ್ಷನ್ಸ್
ಪ್ರೊ: ಕೆ.ಚಿದಂಬರ ಶೆಟ್ಟಿ
ನಿ: ಸಾಯಿಪ್ರಕಾಶ್
ಸ.ನಿ: ಕಲಾಗಂಗೋತ್ರಿ ಮಂಜು
ಅ: ಅನಂತ್‌ನಾಗ್, ಅಶ್ವಿನಿ, ಮುಖ್ಯಮಂತ್ರಿ ಚಂದ್ರು,

ದೊಡ್ಡಣ್ಣ, ಮೈಸೂರು ಲೋಕೇಶ್, ಉಮೇಶ್, ಸಿಹಿಕಹಿ ಚಂದ್ರು, ಬೆಂಗಳೂರು ನಾಗೇಶ್, ಗಿರಿಜಾ ಲೋಕೇಶ್, ಉಮಾಶ್ರೀ, ಸಾರಿಕಾ, ಆಶಾಕಿರಣ್, ಡಿಸ್ಕೋ ಶಾಂತಿ, ಅರವಿಂದ್, ಮನ್‌ದೀಪ್‌ರಾಯ್, ನವೀನ್, ಗಿರೀಶ್, ಆರ್.ಎನ್.ಸುಧಾಕರ್, ಶಶಿಕುಮಾರ್
ಚಿ.ಕ: ಸಾಯಿಪ್ರಕಾಶ್
ಮಾ/ಗೀ: ಆರ್.ಎನ್.ಜಯಗೋಪಾಲ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಬಿ.ಆರ್.ಛಾಯಾ, ಮಂಜುಳಾ ಗುರುರಾಜ್, ಕುಸುಮ
ಸಂ: ಕೆ.ನರಸಯ್ಯ
ಛಾ: ಆರ್.ಎನ್.ಕೆ.ಪ್ರಸಾದ್
ಕಲೆ: ಬಾಬು
ಸ: ಉಪೇಂದ್ರ ಕುಮಾರ್
ಧ್ವ: (ಹಾ) ಎಸ್.ಪಿ.ರಾಮನಾಥನ್ (ಮಾ) ಕೋದಂಡಪಾಣಿ
ನೃ: ಶಿವಶಂಕರ್
ವ: ಜಯಚಂದ್ರ
ಪ್ರ: ಚೆಲುವರಾಜು
ಕ.ಸಾ: ಎಲ್ಲರಿಗೂ ಮೋಸ ಮಾಡುವ ಗೋಪಾಲಕೃಷ್ಣ ಎಂಬ ವ್ಯಕ್ತಿ, ಮೋಸ ಮಾಡುತ್ತ ಮಾಡುತ್ತ ತಾನು ಬೀಸಿದ ಜಾಲದಲ್ಲಿ ತಾನೇ ಸಿಕ್ಕಿ ಬೀಳುವ ಹಾಸ್ಯಮಯ ಚಿತ್ರಣದ ಕಥೆ.

೧೩೦೪. ಲವ್ ಲೆಟರ್

(೧೯೯೦ / ವರ್ಣ / ಸಾಮಾಜಿಕ)
ಲಾ: ಪಿಯರ್‌ಲೆಸ್ ಪಿಕ್ಚರ್ಸ್
ಪ್ರೊ: ಟಿ.ಕೆ.ಬಾಬು - ರಾಜನ್
ನಿ: ಟಿ.ಕೆ.ಸುಕುಮಾರನ್
ಸ.ನಿ: ವೇಮಗಲ್ ಜಗನ್ನಾಥ್



ಅ: ಅರುಣ್ ಗೋವಿಲ್, ಸಂಗೀತಾ ನಾಯಕ್, ಪ್ರೇಂತಾಲ್, ಸುಂದರಕೃಷ್ಣ ಅರಸ್, ಉಮೇಶ್, ಸಿತಾರಾ, ಶಾಂತಮ್ಮ, ಬಾಲಕೃಷ್ಣ
ಕ/ಚಿ.ಕ: ಟಿ.ಕೆ.ಸುಕುಮಾರನ್
ಮಾ: ವೇಮಗಲ್ ಜಗನ್ನಾಥ್
ಗೀ: ದೊಡ್ಡರಂಗೇಗೌಡ
ಗಾ: ಮೋಹನ್, ಬಿ.ಆರ್.ಛಾಯಾ
ಸಂ: ಎಂ.ಎಸ್.ಮಣಿ
ಸ: ರವಿ (ಬಾಂಬೆ)
ನೃ: ಈ. ಮಾಧವನ್
ಸಾ: ವೈ.ಶಿವಯ್ಯ
ವ: ಎಂ.ಸುಬ್ರಹ್ಮಣ್ಯ
ಪ್ರ: ಕೆ.ರಾಜ
ಸ್ಟು: ಕಂಠೀರವ, ಚಾಮುಂಡೇಶ್ವರಿ, ಪ್ರಸಾದ್
ಹಾ: ೧) 'ಭೂಮಿಗೆ ಬಾನಿನ ಬಯಕೆ..' ೨) 'ನೀನು ನಂಗ್ಯಾಕೆ ಬರೀಬಾರದು...'
ಕ.ಸಾ: ಪ್ರೇಮ ಪತ್ರ ಪ್ರೇಮವನ್ನು ಅಭಿವ್ಯಕ್ತಿಗೊಳಿಸಲು ಸಾಧನ. ಯುವ ಜನಾಂಗದ ತರುಣ ತರುಣಿಯರ ನಡುವೆ ಓಡಾಡುವ

ಪ್ರೇಮ ಪತ್ರಗಳು ಒಂದೊಂದಾ ಒಂದೊಂದು ಬಗೆಯ ಕತೆ ಹೇಳುತ್ತದೆ. ಅಂತಹ ಕತೆಗಳ ನಡುವೆಯ ಅವಾಂತರಗಳವೆಷ್ಟೋ. ಅಂತಹ ಅವಾಂತರಗಳನ್ನು ಸೃಷ್ಟಿಸಿದ ಪ್ರೇಮ ಪತ್ರದ ಕಥೆ..

೧೩೦೫. ಉದ್ಭವ

(೧೯೯೦ / ವರ್ಣ / ಸಾಮಾಜಿಕ)

ಲಾ: ಸ್ಪಂದನ ಕ್ರಿಯೇಷನ್ಸ್

ಪ್ರೊ: ಕೋಡ್ಲು ರಾಮಕೃಷ್ಣ, ಕೆ.ಸುಧಾಕರ್, ಸ್ವಾಮಿ ಶಂಕರ್, ಶ್ರೀಮೂರ್ತಿ, ಪಿ.ಎಸ್.ಮಂಜುನಾಥ್ ಮತ್ತು ಇತರರು

ನಿ: ಕೋಡ್ಲು ರಾಮಕೃಷ್ಣ

ಸ.ನಿ: ರಘು ಕುಮಾರ್

ಅ: ಅನಂತ್ ನಾಗ್, ಮಮತಾ ರಾವ್, ಮಾ.ಸೋಮಶೇಖರ್, ಸುಂದರರಾಜ್, ಮಹಾವೀರ್, ದಿನೇಶ್, ಕೆ.ಎಸ್.ಅಶ್ವತ್, ಟಿ.ಎನ್.ಬಾಲಕೃಷ್ಣ, ತ್ಯಾಗರಾಜ ಅರಸ್, ಸುಂದರಕೃಷ್ಣ ಅರಸ್, ಉದಯ್ ಹುತ್ತಿನಗದ್ದೆ, ಅರವಿಂದ್, ವರಲಕ್ಷ್ಮಿ, ಡಾ| ಶ್ರೀನಿವಾಸ್ ಮೂರ್ತಿ, ಶಿವಮೊಗ್ಗ ಗಿರೀಶ್, ಶೃಂಗೇರಿ ರಾಮಣ್ಣ, ಸುಧಾ ನರಸಿಂಹರಾಜು, ತ್ರಿವೇಣಿ

ಕ: ಬಿ.ವಿ.ವೈಕುಂಠರಾಜು ಅವರ ಕಾದಂಬರಿ

ಚಿ.ಕ/ಮಾ/ಗೀ: ನಾಗತಿಹಳ್ಳಿ ಚಂದ್ರಶೇಖರ್

ಗಾ: ಮನು

ಸಂ: ಸುರೇಶ್ ಅರಸ್

ಛಾ: ಬಿ.ಎಸ್.ಬಸವರಾಜ್

ಕಲೆ: ಭದ್ರಾವತಿ ಶಿವರಾಂ

ಸ: ಮೈಸೂರುಗೋಪಿ

ಧ್ವ: ಸೋಮಶೇಖರ್

ನೃ: ಉಡುಪಿ ಜಯರಾಂ, ದೇವಿ

ವ: ಬಾಲು

ಪ್ರ: ವಿಠಲಬಾಬು

ಸ್ಟು: ಕಂಠೀರವ

ಹಾ: ೧)'ನಮ್ಮೂರ ರಸ್ತೆ ಅಗಲ ಆಗತ್ತಂತೆ...', ೨) 'ದೇವರಲ್ಲಿ ಮನುಜನ...'

ವಿ: ೧೫೦ ದಿನ ಓಡಿದ ಚಿತ್ರ

ಸೆ: ರೀಲು ೧೪, ಉದ್ದ - ೩೯೩೬.೪೪, 'ಯು' ಸರ್ಟಿಫಿಕೇಟ್

ಕ.ಸಾ: ರಾಗಣ್ಣ ಶ್ರೀ ಸಾಮಾನ್ಯ. ಆದರೆ ಮಹಾ ಚತುರ. ಸಂದರ್ಭಗಳನ್ನು ತನಗೆ ಅಗತ್ಯವಾಗುವಂತೆ ಬಳಸಿಕೊಳ್ಳುವ ಜಾಣ್ಮೆ ಅವನದು. ಅದರಿಂದಲೇ ದೊಡ್ಡವನಾಗಬಲ್ಲ ಛಾತಿಯುಳ್ಳವ. ದಿಢೀರನೆ ಉದ್ಭವವಾಗುವ ದೇವಸ್ಥಾನಗಳು, ಅದಕ್ಕೆ ತಕ್ಕಂತೆ ಏಕಮುಖಿ ನಿಯಮಗಳು, ಅವುಗಳ ಹಿಂದಿರುವ ಹುನ್ನಾರಗಳು, ಸಮಯ ಸಾಧಕತನ - ಸಮೂಹ ಸನ್ನಿಗಳು ಇತ್ಯಾದಿಗಳನ್ನು ವಿಳೆವಿಳೆಯಾಗಿ ಬಿಡಿಸುವ ಪ್ರಯತ್ನ. ಈ ಕಥೆಯ ವಸ್ತು. ಸ್ವಾತಂತ್ರ್ಯಾನಂತರದಲ್ಲಿ ಭಾರತದಲ್ಲಿ ಕಾಣ ಬರುವ ಪ್ರಸಂಗಗಳ ಯಥಾವತ್ ಚಿತ್ರಣ.

೧೩೦೬. ಮುತ್ತಿನಹಾರ

(೧೯೯೦ / ವರ್ಣ / ಸಾಮಾಜಿಕ)

ಲಾ: ರೋಹಿಣಿ ಪಿಕ್ಚರ್ಸ್

ಪ್ರೊ/ನಿ: ಎಸ್.ವಿ.ರಾಜೇಂದ್ರಸಿಂಗ್ ಬಾಬು

ಸ.ನಿ: ರಾಮನಾಥ್ ಋಗ್ವೇದಿ

ಅ: ವಿಷ್ಣುವರ್ಧನ್, ಸುಹಾಸಿನಿ, ಅಶ್ವತ್, ಕಾವ್ಯ, ಪ್ರಭಾವತಮ್ಮ, ಆನಂದ, ರಾಮ್ ಕುಮಾರ್, ಪ್ರಕಾಶ್ ರೈ, ಕಿಶೋರಿ ಬಲ್ಲಾಳ್

ಕ: ವೆಂ.ಮು. ಜೋಶಿ

ಚಿ.ಕ: ಎಸ್.ವಿ.ರಾಜೇಂದ್ರಸಿಂಗ್ ಬಾಬು

ಮಾ: ಆರ್.ಎನ್.ಜಯಗೋಪಾಲ್

ಗೀ: ಹಂಸಲೇಖ

ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ, ಲತಾ ಹಂಸಲೇಖ, ಬಾಲಮುರಳಿ ಕೃಷ್ಣ

ಸಂ: ಗೌತಮ್‌ರಾಜ್

ಛಾ: ಡಿ.ವಿ.ರಾಜಾರಾಂ

ಕಲೆ: ನಜೀರ್

ಸ: ಹಂಸಲೇಖ

ಧ್ವ: (ಹಾ) ಕೃಷ್ಣಮೂರ್ತಿ (ಮಾ) ಸೋಮಶೇಖರ್

ನೃ: ಉಡುಪಿ ಜಯರಾಂ

ವ: ಕೆ.ಪಿ.ಜಯರಾಮ್

ಪ್ರ: ಮೈಸೂರು ವೆಂಕಟೇಶ್

ಸ್ಟು: ಪ್ರಸಾದ್

ಹಾ: ೧)'ಮಡಕೇರಿ ಸಿಪಾಯೀ...', ೨)'ಕೊಡಗಿನೋಳು ಬೆಡಗಿನೋಳು...', ೩)'ಕೊಡಗಿನ ವೀರ ಗಂಡೆದೆ ಶೂರ...', ೪)'ಸಾರೂ ಸಾರು ಮಿಲ್ಟ್ರಿ ಸಾರು...'

ಸೆ: ರೀಲು ೧೫, ಉದ - ೪೧೨೫

ಕ.ಸಾ: ದೇಶಕ್ಕಾಗಿ ಪ್ರಾಣಾರ್ಪಣೆ ಮಾಡಿದ ಯೋಧ, ದೇಶ ಸೇವೆಯಲ್ಲಿ ಅವನಷ್ಟೇ ಆಸಕ್ತಿಯ ನರ್ಸ್ ವೃತ್ತಿಯ ಆತನ ಹೆಂಡತಿಯ ಸುತ್ತ ಹೆಣೆದ ಕಥೆ. ಕೊಡಗಿನ ನಿಸರ್ಗ - ಸಂಸ್ಕೃತಿಯ ಹಿನ್ನೆಲೆಯಲ್ಲಿ ಕೌಟುಂಬಿಕ ವಿವರಗಳಾದರೆ ಭಾರತದ ಗಡಿ ಪ್ರದೇಶದಲ್ಲಿ ಯುದ್ಧ ವಿವರಗಳನ್ನು ಹೇಳುವ ಪ್ರಯತ್ನ. ಪೋಷಕರಾಗಿ, ತಂದೆ, ಮಗ, 'ಸಾಕು ಮಗ'ರನ್ನು ಅಳವಡಿಸಿಕೊಂಡು ಭಾವನಾತ್ಮಕವಾಗಿ ನಿರೂಪಿಸಲಾಗಿದೆ.

೧೩೦೭. ಸಿಡಿದೆದ್ದ ಗಂಡು

(೧೯೯೦ / ವರ್ಣ / ಸಾಮಾಜಿಕ)

ಲಾ: ಕಲಾರಾಧನ ಮೂವೀ ಮೇಕರ್ಸ್

ಪ್ರೊ: ಹೆಚ್.ಕೆ. ರಮೇಶ್, ಕೆ.ನಂಜುಂಡ, ಜಿ.ವಿ.ಲಕ್ಷ್ಮೀನಾರಾಯಣ

ನಿ: ಎಸ್. ಉಮೇಶ್

ಸ.ನಿ: ಎಂ.ಬಿ.ಶಿವಕುಮಾರ್

ಅ: ಪ್ರಭಾಕರ್, ವಾಣಿ ವಿಶ್ವನಾಥ್, ಆರ್.ಎನ್.ಸುದರ್ಶನ್,



ತಾರಾ, ಸುಮಿತ್ರ, ಸೀಗ್ರೋ ಜಾನಿ, ಸಂಗೀತಾ, ಉಮಾಶ್ರೀ, ಡಿಸ್ಕೋ ಶಾಂತಿ, ಸಿಹಿಕಹಿ ಗೀತ, ಜೈಜಗದೀಶ್, ವಿಶ್ವ ವಿಜೇತ, ಅಜಯ್, ಮುಖ್ಯಮಂತ್ರಿ ಚಂದ್ರು, ಅಶೋಕ್ ಬಾದರದಿನ್ನಿ, ಮಾನು, ಲೋಹಿತಾಶ್ವ

ಕ: ಕಲಾರಾಧನ ಮೂವೀ ಮೇಕರ್ಸ್ ಕಥಾ ವಿಭಾಗ

ಚಿ.ಕ: ಎಸ್.ಉಮೇಶ್

ಮಾ: ಕುಣಿಗಲ್ ನಾಗಭೂಷಣ್

ಗೀ: ಹಂಸಲೇಖ

ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್.ಜಾನಕಿ, ಮಂಜುಳಾ ಗುರುರಾಜ್, ಲತಾ ಹಂಸಲೇಖ, ಕಸ್ತೂರಿ ಶಂಕರ್, ಬಿ.ಕೆ.ಸುಮಿತ್ರ, ಬಿ.ಆರ್.ಛಾಯಾ, ಚಂದ್ರಿಕಾ ಗುರುರಾಜ್

ಸಂ: ಎಸ್. ಉಮೇಶ್

ಛಾ: ಡಿ.ಪ್ರಸಾದ್

ಕಲೆ: ವೆಂಕಟರಾಮ್

ಸ: ಹಂಸಲೇಖ

ಧ್ವ: (ಹಾ) ಅಣ್ಣಾದೊರೈ, ಪೀಟರ್ (ಮಾ) ಕೃಷ್ಣಮೂರ್ತಿ

ನೃ: ಅಂಜಿ

ಸಾ: ನಂಜುಂಡಿ ನಾಗರಾಜ್

ವ: ಪರಮಶಿವ

ಪ್ರ: ಮೈಸೂರು ಮಲ್ಲಿ, ಸತ್ಯ

ಸ್ಟು: ಕಂಠೀರವ

ಸೆ: ರೀಲು - ೧೫

ಕ.ಸಾ: ವಿಕೃತ ಮನಸಿನ ವ್ಯಕ್ತಿಯೊಬ್ಬ ಸಾಲು ಸಾಲು ಕೊಲೆಗಳಿಗೆ ಕಾರಣನಾಗಿರುತ್ತಾನೆ. ಅವನ ಹಿಂದೆ ದೊಡ್ಡ ಗುಂಪೇ ಇರುತ್ತದೆ. ನಿಷ್ಠಾವಂತ ಪೋಲೀಸ್ ಇನ್ಸ್‌ಪೆಕ್ಟರ್ ರಹಸ್ಯಯ ಭೇದಿಸಿ ದುಷ್ಟರನ್ನು ಶಿಕ್ಷಿಸುತ್ತಾನೆ.

೧೩೦೮. ಅಭಿಮನ್ಯು

(೧೯೯೦ / ವರ್ಣ / ಪತ್ತೇದಾರಿ/ಸಾಮಾಜಿಕ)

ಲಾ: ಸುದರ್ಶನ್ ಆರ್ಟ್ಸ್ ಪ್ರೊಡಕ್ಷನ್ಸ್

ಪ್ರೊ: ಬಾಬು

ನಿ: ರವಿರಾಜ್ ಪಿನಿಶೆಟ್ಟಿ

ಸ.ನಿ: ಕೆ.ಹನುಮಂತ ರೆಡ್ಡಿ

ಅ: ರವಿಚಂದ್ರನ್, ಸೀತಾ, ದೊಡ್ಡಣ್ಣ, ಲೋಹಿತಾಶ್ವ, ಮುಖ್ಯಮಂತ್ರಿ ಚಂದ್ರು, ಅನಂತ್‌ನಾಗ್, ಮೈಸೂರು



ಲೋಕೇಶ್, ರಾಮಿರೆಡ್ಡಿ, ಸೀಗ್ರೋ ಜಾನಿ, ನಾಗರಾಜ್, ಶ್ರೀಶೈಲನ್, ಶನಿ ಮಹದೇವಪ್ಪ, ಜಿಮೆಲ್ ಸೋಮಣ್ಣ, ಚಕ್ರವರ್ತಿ, ವೈಶಾಲಿ ಕಾಸರವಳ್ಳಿ, ವೀಣಾ, ಬುಲೆಟ್ ನಾಗರಾಜ್, ವೆಂಕಟೇಶ್, ಜನಾರ್ದನ್, ಅರುಣ್ ಕುಮಾರ್

ಕ/ಚಿ.ಕ: ರವಿರಾಜ್ ಪಿನಿಶೆಟ್ಟಿ

ಮಾ/ಗೀ: ಹಂಸಲೇಖ

ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಜೇಸುದಾಸ್, ಮಂಜುಳಾ ಗುರುರಾಜ್

ಸಂ: ವೇಮೂರಿ ರವಿ

ಛಾ: ಲೋಕ್‌ಸಿಂಗ್

ಕಲೆ: ಚಂಟಿ

ಸ: ಹಂಸಲೇಖ

ಧ್ವ: (ಹಾ) ಕೃಷ್ಣಮೂರ್ತಿ (ಮಾ)ಸೋಮಶೇಖರ್

ನೃ: ಸುಂದರಂ, ತಾರಾ

ಸಾ: ಸಾಹುಲ್

ವ: ಸಾಯಿ, ಕಾಶಿ

ಪ್ರ: ಕೇಶವ

ಸ್ಟು: ಮಧು ಸ್ಟುಡಿಯೋ, ಆನಂದ್ ಸಿನಿ ಸರ್ವೀಸ್

ಕ.ಸಾ: ಅಧಿಕಾರದ ಗದ್ದುಗೆಗಾಗಿ ಭ್ರಷ್ಟ ರಾಜಕಾರಣಿಗಳು ಭೂಗತ ರೌಡಿಗಳ ನೆರವು ಪಡೆದುಕೊಳ್ಳುವುದನ್ನು ಜನರು

ಅಸಹಾಯಕರಾಗಿ ನೋಡುವಾಗ ನಿಷ್ಠಾವಂತ ಪೋಲೀಸ್ ಅಧಿಕಾರಿಯೊಬ್ಬ ಅದನ್ನು ಎದುರಿಸುವ ಕಥೆ. ಅನಾಥನಾದವ ಬೆಳೆದು ಪೊಲೀಸ್ ಅಧಿಕಾರಿಯಾಗುವಂತೆ ಮಾಡಿದ ಶಾಲಾ ಶಿಕ್ಷಕರೊಬ್ಬರನ್ನು ರಾಜ್ಯದ ಮುಖ್ಯಮಂತ್ರಿಯನ್ನಾಗಿಸುವ ಕನಸು ಪ್ರಜೆಗಳದು. ಆ ಸ್ಥಾನದ ಮೇಲೆ ಭ್ರಷ್ಟರಾಜಕಾರಣಿ, ಕಳ್ಳ ಸಾರಾಯಿ ದಂದೆಕಾರರ ಕಣ್ಣು. ಹಾಡು ಹಗಲೇ ಮಾಸ್ತರನ ಕೊಲೆ. ಅದನ್ನು ಆತ್ಮಹತ್ಯೆಯೆಂದು ಪ್ರಕರಣವನ್ನು ಮುಚ್ಚಿಹಾಕಿದ ಮೇಲೆ, ಆ ಊರಿಗೇ ಇನ್ಸ್‌ಪೆಕ್ಟರಾಗಿ ಬರುವ ಮೇಷ್ಟ್ರ ಶಿಷ್ಯ, ಪ್ರಕರಣಕ್ಕೆ ಮರುಚಾಲನೆ ನೀಡಿ, ಅಪರಾಧಿಗಳ ಬೆನ್ನು ಹತ್ತುತ್ತಾನೆ. ಇನ್ಸ್‌ಪೆಕ್ಟರನ ಆಪ್ತಮಿತ್ರನಾದ ಪತ್ರಕರ್ತನ ಕೊಲೆ, ಮುಖ್ಯಮಂತ್ರಿಯನ್ನು ಬಾಂಬ್ ಸ್ಫೋಟಿಸಿ ಕೊಲ್ಲುವ ಸಂಚು - ಇವನ್ನೆಲ್ಲಾ ಕಂಡ ಇನ್ಸ್‌ಪೆಕ್ಟರ್ ಕಾನೂನನ್ನು ಕೈಗೆ ತೆಗೆದುಕೊಂಡು ದುಷ್ಟರನ್ನು ಸದೆ ಬಡಿಯುತ್ತಾನೆ.

೧೩೦೯. ಚಕ್ರವರ್ತಿ

(೧೯೯೦ / ವರ್ಣ / ಸಾಮಾಜಿಕ)

ಲಾ: ಶ್ರೀ ಭವಾನಿ ಕ್ರಿಯೇಷನ್ಸ್

ಪ್ರೊ: ಎನ್.ಕೆ.ನಾರಾಯಣ್, ಎಸ್.ನರಸಿಂಹಯ್ಯ

ನಿ: ಡಿ.ರಾಜೇಂದ್ರ ಬಾಬು

ಸ.ನಿ: ಕೇಸರಿ ಹರವೂ

ಅ: ಅಂಬರೀಷ್, ಕರಿಷ್ಮ, ಬಾಲಕೃಷ್ಣ, ರಿಚರ್ಡ್ ಲೂಯಿಸ್, ಉಮಾಶ್ರೀ, ನೀಗ್ರೋ ಜಾನಿ, ಸುದರ್ಶನ್, ಸುಧೀರ್, ವಜ್ರಮುನಿ, ದೇವರಾಜ್, ಲಕ್ಷ್ಮಣ್, ಲೋಕನಾಥ್, ಪಂಢರಿಬಾಯಿ, ಸದಾಶಿವ ಬ್ರಹ್ಮಾವರ್, ಕೀರ್ತಿ, ಜ್ಯೋತಿ, ಪ್ರಕಾಶ್ ರೈ, ಶೋಭಾ

ಕ: 'ಅರ್ಜುನ್' ರೀಮೇಕ್

ಚಿ.ಕ: ಡಿ.ರಾಜೇಂದ್ರ ಬಾಬು

ಮಾ: ಕೆ.ಎಸ್.ಸತ್ಯನಾರಾಯಣ

ಗೀ: ಆರ್.ಎನ್.ಜಯಗೋಪಾಲ್, ಶ್ಯಾಮಸುಂದರ ಕುಲಕರ್ಣಿ

ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ

ಸಂ: ಕೆ.ಬಾಲು

ಛಾ: ಕುಲಶೇಖರ್

ಕಲೆ: ರಾಜು

ಸ: ಶಂಕರ್ ಗಣೇಶ್

ನೃ: ಉಡುಪಿ ಜಯರಾಂ

ವ: ಜಯಚಂದ್ರ

ಪು: ಶ್ರೀನಿವಾಸ

ಸ್ಟು: ಅಭಿಮಾನ್, ಕಂಠೀರವ

ವಿ: ಮುಂಬಯಿಯಲ್ಲಿ ಚಿತ್ರೀಕರಣ

ಕ.ಸಾ: ಸಂಪ್ರದಾಯಸ್ಥ ಬ್ರಾಹ್ಮಣ ಕುಟುಂಬದಲ್ಲಿ ಹುಟ್ಟಿದ ನಾಯಕ ಹಳ್ಳಿಯ ದುಷ್ಟರ ವಂಚನೆಗೆ ಬಲಿಯಾಗಿ ಪಟ್ಟಣ ಸೇರುತ್ತಾನೆ. ಅಲ್ಲಿ ಆತ ದುಷ್ಟರ ಕೂಟ ಸೇರಿ ಸಾಕಷ್ಟು ಹಣ ಗಳಿಸುತ್ತಾನೆ. ಭೂಗತ ಜಗತ್ತಿನ ಚಕ್ರವರ್ತಿಯಾಗುತ್ತಾನೆ. ಕೊನೆಗ ಅದೆಲ್ಲಾ ಸಾಕೆಂದು ಊರಿಗೆ ಮರಳುತ್ತಾನೆ, ಆಗ ಆತನಿಗೆ ತಂದೆ, ತಾಯಿ, ತಂಗಿಯರ ಬದುಕು ಶೋಚನೀಯ ವಾಗಿರುವುದು ತಿಳಿಯುತ್ತದೆ. ಅಂತಿಮವಾಗಿ ಅದಕ್ಕೆ ಕಾರಣರಾದವರ ಮೇಲೆ ಸೇಡು ತೀರಿಸಿಕೊಳ್ಳುತ್ತಾನೆ.

೧೩೧೦. ಹಳ್ಳಿಯ ಸುರಾಸುರರು

(೧೯೯೦ / ವರ್ಣ / ಸಾಮಾಜಿಕ)

ಲಾ: ಆರ್.ಆರ್.ಚಿತ್ರಾಲಯ

ಪ್ರೊ: ಬಿ.ನಾಗರತ್ನ ಪ್ರಸಾದ್, ಹೆಚ್.ಎಸ್.ಸುಗುಣ ನಟರಾಜ್

ನಿ: ತಿಪಟೂರು ರಘು

ಸ.ನಿ: ಎ.ಎಸ್.ರತ್ನಕುಮಾರ್, ಬಿ ಆರ್.ನರಸಿಂಹ ಮೂರ್ತಿ

ಅ: ಶಂಕರ್‌ನಾಗ್, ರಾಮಕೃಷ್ಣ, ಧೀರೇಂದ್ರ ಗೋಪಾಲ್, ಟಿ.ಎನ್.ಬಾಲಕೃಷ್ಣ, ಕೆ.ಎಸ್.ಅಶ್ವತ್, ತಪಸ್ವಿ, ಸಂಜೀವ ರಾವ್, ಬಸವರಾಜ್, ಭವ್ಯ, ಪಂಢರಿಬಾಯಿ, ಸುಧಾರಾಣಿ, ಉಮಾಶ್ರೀ, ಶಿವರಾಮ್, ದೇವಿಕಾರಾಣಿ, ನಟರಾಜ್, ಉಮಾ, ಲೀಲಾವತಿ, ಫಕೀರಪ್ಪ, ಶಾಂತಮ್ಮ, ಜೂ।ಅಮಿತಾಬ್ ಬಚ್ಚನ್, ಪ್ರವೀಣ್, ವರಲಕ್ಷ್ಮಿ,

ಕ: ತಪಸ್ವಿ

ಚಿ.ಕ: ತಿಪಟೂರು ರಘು

ಮಾ: ತಪಸ್ವಿ

ಗೀ: ಶ್ರೀರಂಗ, ತಪಸ್ವಿ

ಗಾ: ವತ್, ವಿದ್ಯಾರಾಣಿ, ವಿಷ್ಣು, ಮಂಜುಳಾ

ಸಂ: ಎಸ್. ಸೌಂದರ್‌ರಾಜ್

ಛಾ: ಬಿ.ಎಸ್. ಲೋಕನಾಥ್

ಸ: ಎಂ.ರಂಗರಾವ್

ಧ್ವ: (ಹಾ) ಕೃಷ್ಣಮೂರ್ತಿ (ಮಾ) ಅಣ್ಣಾದೊರೈ

ನೃ: ಉಡುಪಿ ಜಯರಾಂ

ಸಾ: ಅಂಬೂರು ಬಾಬು

ವ: ನಾಗರಾಜ್, ವೆಂಕಟರಾಂ, ಆರ್.ಅಶ್ವತ್ಥ್

ಪು: ಚೆಲುವರಾಜು

ಹಾ: ೧)'ಹಾಲು ಜೇನಿಗಿಂತ ಮೇಲು ತಾಯಿನಾಡು...', ೨)'ನಾ ಮಧು ವಸಂತ ನೀ ಮಂದ ಮಾರುತ...'

ಸೆ: ಉದ್ದ - ೩೫೫೨.೬೫, 'ಯು' ಸರ್ಟಿಫಿಕೇಟ್

ಕ.ಸಾ: ಹಳ್ಳಿಯ ಮುಗ್ಧಜನರನ್ನು ವಂಚಿಸುತ್ತಿದ್ದ ಹಾಗೂ ಅತ್ಯಾಚಾರ, ಮೋಸಗಳನ್ನು ಮಾಡುತ್ತಿದ್ದ ಭೈರಪ್ಪನನ್ನು ಕಥಾನಾಯಕ ಶೇಖರ್ ಎದುರಿಸುತ್ತಾನೆ. ಭೈರಪ್ಪನ ಮಗಳನ್ನು ಪ್ರೇಮಿಸಿದ ತಪ್ಪಿಗೆ ಹಳ್ಳಿಯ ಬಡ ಹುಡುಗ ಕೊಲೆಯಾಗುತ್ತಾನೆ. ಭೈರಪ್ಪನ ಅನಾಚಾರಗಳನ್ನು ನಾಯಕ ಬಯಲಿಗೆಳೆದಾಗ, ಆತ ತಪ್ಪಿಸಿಕೊಳ್ಳುತ್ತಾನೆ. ಕೊನೆಗೆ ಭೈರಪ್ಪನಿಂದ ನೊಂದ ಅವನ ಮಗಳೇ ಅವನನ್ನು ಕೊಲ್ಲುತ್ತಾಳೆ.

೧೩೧೧. ಭಲೇ ಚತುರ

(೧೯೯೦ / ವರ್ಣ / ಸಾಮಾಜಿಕ)

ಲಾ: ಪ್ರಗತಿ ಎಂಟರ್ ಪ್ರೈಸಸ್

ಪ್ರೊ: ಕೆ.ಎನ್.ಸರೋಜ, ಬಿ.ಎಸ್.ಮಹಾಲಕ್ಷ್ಮಿ, ಕೆ.ಎಂ.ಪೂರ್ಣಿಮ, ಕೆ.ಎನ್.ಶೋಭ

ನಿ: ಸಾಯಿಪ್ರಕಾಶ್

ಸ.ನಿ: ಲಿಂಗರಾಜ್ ಕಗ್ಗಲ್

ಅ: ಶಂಕರ್ ನಾಗ್, ಶ್ರೀನಿವಾಸ ಮೂರ್ತಿ, ಚಂದ್ರಿಕಾ, ಸಿಬಿಕೆಪಿ ಗೀತಾ, ಬಿ.ಸರೋಜಾದೇವಿ, ಪಂಢರಿಬಾಯಿ, ಬೇಬಿ ಶಿಲ್ಪಾ, ಶಿವಕುಮಾರ್, ಕೃಷ್ಣೇಗೌಡ, ಮೈಸೂರು ಲೋಕೇಶ್, ದೊಡ್ಡಣ್ಣ, ಜೈಜಗದೀಶ್, ಸಾರಿಕಾ, ಶನಿ ಮಹದೇವಪ್ಪ

ಕ: ಎನ್.ಟಿ.ಜಯರಾಮ ರೆಡ್ಡಿ

ಚಿ.ಕ: ಸಾಯಿಪ್ರಕಾಶ್

ಮಾ: ಬಿ.ಎಲ್.ವೇಣು

ಗೀ: ಬಿ.ಎಲ್.ವೇಣು, ಆರ್.ಎನ್.ಜಯಗೋಪಾಲ್

ಗಾ: ಸರ್ವಮಂಗಳಾ, ಮಂಜುಳಾ ಗುರು, ರಮೇಶ್, ಬಿ.ಆರ್.ಛಾಯಾ

ಸಂ: ಕೆ. ನರಸಯ್ಯ

ಛಾ: ಕೃಷ್ಣ

ಕಲೆ: ಸುಂದರಂ

ಸ: ಉಪೇಂದ್ರ ಕುಮಾರ್

ನೃ: ಸತೀಶ್

ಸಾ: ವೈ.ಶಿವಯ್ಯ

ವ: ಜಯಚಂದ್ರ

ಪು: ರಾಜಗೋಪಾಲ್

ಸ್ಟು: ಕಂಠೀರವ

ಹಾ: ೧)'ಪ್ರಸನ್ನ ಪಾರಿಜಾತಾಯ...', ೨)'ಬಂದಾ ಕಣೇ ರ್‍ಯಾಂಬೋ...', ೩)'ದೋಸೆ ಇಡ್ಲಿ ಬೇಕೇನು...', ೪)'ಎಲೆ ಹಿಂದ ಕಾಯಿ ನನದು...', ೫)'ಶ್ರೀಮತಿಯವರೇ...'

ಸೆ: ರೀಲು - ೧೪, ಉದ್ದ - ೩೫೬೪.೦೦, 'ಯು' ಸರ್ಟಿಫಿಕೇಟ್

ಕ.ಸಾ: ಹಣದ ಅಮಲಿನಲ್ಲಿ ಅಹಂಕಾರದಿಂದ ಮೆರೆಯುವ ಚಾಮುಂಡೇಶ್ವರಿಯ ಮಗಳು ಕಮಲ ಅಮ್ಮನಂತೆಯೇ ಇರುತ್ತಾಳೆ, ಅಂಥ ಕಮಲಳನ್ನು ಸರಿ ದಾರಿಗೆ ತಂದು ಮದುವೆಯಾಗುತ್ತಾನೆ ಶೇಖರ. ಶ್ರೀಮಂತಿಕೆಯ ದರ್ಪದ ಅತ್ತೆಗ ಬುದ್ಧಿ ಕಲಿಸುತ್ತಾನೆ.

೧೩೧೨. ರಾಜಾ ಕೆಂಪು ರೋಜ

(೧೯೯೦ / ವರ್ಣ / ಸಾಮಾಜಿಕ)

ಲಾ: ವಿಜಯ್ ಸಿನಿ ಕ್ರಿಯೇಷನ್ಸ್

ಪ್ರೊ: ರವಿರಾಜ್

ನಿ: ಎಸ್. ಉಮೇಶ್

ಅ: ಪ್ರಭಾಕರ್, ರವಿರಾಜ್, ಮಾಲಾಶ್ರೀ, ತಾರಾ, ವಜ್ರಮುನಿ, ಸುಂದರಕೃಷ್ಣ ಅರಸ್, ಧೀರೇಂದ್ರ ಗೋಪಾಲ್, ಮುಖ್ಯಮಂತ್ರಿ ಚಂದ್ರು, ವಿಶ್ವವಿಜೇತ, ಶುಭ, ಕಮಿನೀಧರನ್, ಉಮೇಶ್, ಟೆನ್ನಿಸ್‌ಕೃಷ್ಣ, ಅಶೋಕ್ ಬಾದರದಿನ್ನಿ

ಕ/ಚಿ.ಕ: ಎಸ್. ಉಮೇಶ್

ಗೀ: ಚಿ.ಉದಯಶಂಕರ್, ಶ್ರೀರಂಗ, ದೊಡ್ಡರಂಗೇಗೌಡ, ಎಂ.ಎನ್.ವ್ಯಾಸರಾವ್

ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್.ಜಾನಕಿ, ಮಂಜುಳಾ

ಸಂ: ಎಸ್. ಉಮೇಶ್

ಛಾ: ಬಿ.ಎಸ್. ಬಸವರಾಜ್

ಕಲೆ: ನಜೀರ್

ಸ: ಉಪೇಂದ್ರ ಕುಮಾರ್

ನೃ: ಅಂಜು ಮಹೇಂದ್ರನ್

ಸಾ: ಸೂಪರ್ ಸುಬ್ಬಯನ್

ಸ್ಟು: ಕಂಠೀರವ

ಹಾ: ೧)'ಯಾರ ಕರೆದವರು...', ೨)'ಅರೇ ಗುಲಾಬಿ ರಂಗೋ ರಂಗು...', ೩)'ಬಾನು ಭೂಮಿ ಸೇರಿದಂತೆ...', ೪)'ಹಾಲು ಸೊಳ್ಳೆ ಕಚ್ಚಿದಾಗ...', ೫)'ಆತುರ ತೋರಿ ಆಡದು ಮಾತು...', ೬)'ಸವಿ ನೆನಪು ಅದೇಕೋ ...'

ಸೆ: ರೀಲು ೧೫, ಉದ್ದ ೪೨೬೧.೦೦, 'ಯು' ಸರ್ಟಿಫಿಕೇಟ್
ಕ.ಸಾ: ಚಿನ್ನದ ಪದಕ ಗಳಿಸಿ ಪಾಸು ಮಾಡಿದರೂ ಆನಂದನಿಗೆ ಲಾಯರ್ ಕೆಲಸ ಸಿಗುವುದಿಲ್ಲ. ಆಗ ಆತ ಜೈಲಿನಲ್ಲಿರುವ ನಿರಪರಾಧಿಗಳನ್ನು ಬಿಡುಗಡೆ ಮಾಡಿಸುವ ಕೆಲಸ ಹುಡುಕುತ್ತಾನೆ, ಅಲ್ಲಿ ಗೀತಾ ಎಂಬಾಕೆಯ ಪರಿಚಯವಾಗಿ ಆಕೆ ತನ್ನ ಗಂಡ ಅನ್ಯಾಯವಾಗಿ ಜೈಲಿನಲ್ಲಿರುವುದಾಗಿ ಹೇಳುತ್ತಾಳೆ. ಆನಂದ್ ಆ ಸಮಸ್ಯೆಯನ್ನು ಬಗೆಹರಿಸಿ ಆ ಪ್ರೇಮಿಗಳನ್ನು ಒಂದುಮಾಡುತ್ತಾನೆ.

೧೩೧೩. ಉತ್ತರಭೂಪ

(೧೯೯೦ / ವರ್ಣ / ಸಾಮಾಜಿಕ)
ಲಾ: ಭೂಮಿಕ ಚಿತ್ರ
ಪ್ರೊ/ನಿ: ಉಮೇಶ್ ಕುಲಕರ್ಣಿ
ಸ.ನಿ: ಸಂಜು
ಆ: ದಿನೇಶ್, ಸರ್ವಮಂಗಳಾ, ಅರವಿಂದ್, ಅಂಜನಪ್ಪ, ಪುಂಡಲೀಕ ಶೇಟ್, ಶಂಕರ ಪಾಟೀಲ್, ಲಕ್ಷ್ಮಣ್, ಮಂಜುಮಾಲಿನಿ, ಮೈಕೋ ಚಂದ್ರು, ಮಾಮಾನ್, ಎಂ.ಎಸ್.ನಟರಾಜ್, ಶ್ರೀನಿವಾಸರೆಡ್ಡಿ, ವೆಂಕಟೇಶ್, ಗಿರಿಧರ್, ವೈಜನಾಥ್ ಬಿರಾದಾರ್, ಚಂದ್ರಕಾಂತ್, ಹೊಸದುರ್ಗ ಚನ್ನಬಸಪ್ಪ, ದೊಡ್ಡಣ್ಣ, ಶ್ರೀಹರ್ಷ
ಕ: ಡಿ.ವಿ.ವಿ.ಪರ್ತಿ
ಚಿ.ಕ/ಮಾ: ಉಮೇಶ್ ಕುಲಕರ್ಣಿ
ಸಂ: ಉಮೇಶ್ ಕುಲಕರ್ಣಿ
ಛಾ: ಎಂ.ಎ.ರವೀಂದ್ರ
ಕಲೆ: ಪ್ರತಾಪ್ ಸಿಂಗ್ ಹರ್ತಿ
ಸ: ಬಿ.ಸೀತಾರಾಮರಾಜು
ಧ್ವ: ಚಾಮುಂಡೇಶ್ವರಿ
ವ: ನಾಗೇಂದ್ರ
ಪ್ರ: ಹೊನ್ನೇಶ್
ವಿ: ದಿನೇಶ್ ನಾಯಕನಾಗಿ, ಸರ್ವಮಂಗಳಾ ನಾಯಕಿಯಾಗಿ ನಟಿಸಿದ ಚಿತ್ರ.
ಸೆ: 'ಯು' ಸರ್ಟಿಫಿಕೇಟ್ - ದೆಹಲಿಯ ಟ್ರಿಬ್ಯುನಲ್ ಒಪ್ಪಿಗೆ ನೀಡಿದ ಚಿತ್ರ
ಕ.ಸಾ: ತುರ್ತು ಪರಿಸ್ಥಿತಿಯ ನಂತರ ಪೋಲೀಸ್ ಮತ್ತು ನಾಗರೀಕರ ಸಂಬಂಧಗಳ ಕುರಿತ ಚಿತ್ರ.

೧೩೧೪. ಏಕಲವ್ಯ

(೧೯೯೦ / ವರ್ಣ / ಸಾಮಾಜಿಕ)
ಲಾ: ಶ್ರೀಕಾಂತ್ ಅಂಡ್ ಶ್ರೀಕಾಂತ್ ಎಂಟರ್‌ಪ್ರೈಸಸ್
ಪ್ರೊ/ನಿ: ಶ್ರೀಕಾಂತ್ ನಹತಾ
ಸ.ನಿ: ಪ್ರಕಾಶ್ ಮುಸಿರಾಜ್
ಆ: ಅಂಬರೀಷ್, ಜಯಪ್ರದಾ, ಶ್ರೀನಾಥ್, ತೂಗುದೀಪ ಶ್ರೀನಿವಾಸ್, ಸುಂದರಕೃಷ್ಣ ಅರಸ್, ಗಂಗಾಧರ್, ಲೋಹಿತಾಶ್ವ, ಮನದೀಪ್ ರಾಯ್, ಜಿತೇಂದ್ರ, ಸತ್ಯಪ್ರಿಯ, ರಮೇಶ್ ಭಟ್, ಶಿವಪ್ರಕಾಶ್, ಕಿಮ್, ರಾಮಕೃಷ್ಣ
ಕ/ಚಿ.ಕ: ರಾಜನ್
ಮಾ: ಕೆ.ಎಸ್.ಕೃಷ್ಣಮೂರ್ತಿ
ಗೀ: ಚಿ.ಉದಯಶಂಕರ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ
ಸಂ: ವೆಂಕಟರತ್ನಂ
ಛಾ: ಡಿ.ವಿ.ರಮಣ
ಕಲೆ: ಸೂರ್ಯಕುಮಾರ್
ಸ: ಸಂಗೀತರಾಜ
ಧ್ವ: (ಹಾ) ಎಸ್.ಪಿ.ರಾಮನಾಥನ್ (ಮಾ) ಕೋದಂಡಪಾಣಿ
ನೃ: ತಾರಾ
ಸಾ: ಜ್ಯೂಡೋ ರತ್ನಂ
ವ: ಬಾಬ್ಬಿ
ಪ್ರ: ಹರಿ
ಸ್ಟು: ಕಂಠೀರವ
ಹಾ: ೧) 'ಮುತ್ತು ಮುತ್ತು ಈಗ...', ೨) 'ಮಳೆ ಬಿಲ್ಲು ಅಂದ ಇಲ್ಲ...', ೩) 'ನಿನ್ನ ಸ್ನೇಹ ಚೆನ್ನ...', ೪) 'ಸಂಸಾರವೆಂದರೇನು ಲೇಟಾಗಿ...', ೫) 'ಬಾ ಇಲ್ಲಿ ಬಾ ನನ್ನ ಅಂದ ನೋಡು ಬಾ...'
ಸೆ: ರೀಲು ೧೪, ಉದ್ದ ೩೮೧೬.೦೦, 'ಯು' ಸರ್ಟಿಫಿಕೇಟ್
ಕ.ಸಾ: ಇಷ್ಟಪಟ್ಟು ಪೋಲೀಸ್ ಕೆಲಸಕ್ಕೆ ಸೇರಿದ ಅಮರ್‌ನಾಥ್‌ಗೆ ಪೋಲೀಸ್ ಕಮೀಷನರ್ ಜನಾರ್ದನ್ ಮೂರು ಕೊಲೆಗಳನ್ನು ಮಾಡಲು ಹೇಳುತ್ತಾನೆ. ಅದರಂತೆ ಇಬ್ಬರ ಕೊಲೆಯಾಗುತ್ತದೆ. ಮೂರನೇ ಕೊಲೆಗೆ ಮುನ್ನ ಪೋಲೀಸ್ ಇಲಾಖೆ ಎಚ್ಚರ ವಹಿಸುತ್ತದೆ. ಆದರೆ ಎರಡು ಕೊಲೆಗಳನ್ನು ಅಮರ್‌ನಾಥ್ ಮಾಡದ ಜನಾರ್ದನ್ ಮಾಡಿರುತ್ತಾನೆ. ಕೊನೆಯ ಕೊಲೆ ಮಾಡಬೇಕಾದಾಗ ಖಳನೇ ಅವನನ್ನು ಸಾಯಿಸುತ್ತಾನೆ. ಆಗ ಅಮರ್‌ನಾಥ್ ತಾನೇ ಆ ಖಳನನ್ನು ಸಾಯಿಸಿ ಸೇಡು ತೀರಿಸಿಕೊಳ್ಳುತ್ತಾನೆ.

೧೩೧೫. ರಾಣಿ ಮಹಾರಾಣಿ

(೧೯೯೦ / ವರ್ಣ / ಸಾಮಾಜಿಕ)
ಲಾ: ಅರ್ಪಿತ ಆರ್ಟ್ಸ್
ಪ್ರೊ: ಜೈಜಗದೀಶ್
ನಿ: ಬಿ.ರಾಮಮೂರ್ತಿ
ಸ.ನಿ: ಗಾಯತ್ರಿ
ಆ: ಅಂಬರೀಷ್, ಮಾಲಾಶ್ರೀ (ದ್ವಿಪಾತ್ರ), ಶಶಿಕುಮಾರ್, ದೊಡ್ಡಣ್ಣ, ಉಮಾಶ್ರೀ, ಜಗ್ಗೇಶ್, ಸದಾಶಿವ ಬ್ರಹ್ಮಾವರ್, ಮೈಸೂರು ಲೋಕೇಶ್, ಟೆನ್ನಿಸ್ ಕೃಷ್ಣ
ಕ: ಜೈಜಗದೀಶ್



ಚಿ.ಕ: ಬಿ.ಆರ್.ರಾಮಮೂರ್ತಿ, ವೀರಪ್ಪ ಮರಳವಾಡಿ
ಮಾ: ವೀರಪ್ಪ ಮರಳವಾಡಿ
ಗೀ: ಹಂಸಲೇಖ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಮಂಜುಳಾ ಗುರುರಾಜ್, ರಮೇಶ್, ಜೇಸುದಾಸ್
ಸಂ: ಎಸ್.ಮನೋಹರ್
ಛಾ: ಎಸ್.ವಿ.ಶ್ರೀಕಾಂತ್
ಕಲೆ: ಕೃಷ್ಣಾಚಾರಿ
ಸ: ಹಂಸಲೇಖ
ನೃ: ರೇಖಾ ಪ್ರಕಾಶ್, ಸತೀಶ್
ಸಾ: ಸಾಹುಲ್
ವ: ನಾಗರಾಜ್
ಪ್ರ: ನಾಗರಾಜ್
ಸ್ಟು: ಕಂಠೀರವ, ಪ್ರೀಮಿಯರ್
ಹಾ: ೧) 'ಬಂದಳೋ ಬಂದಳೋ...', ೨) 'ಗುಂಡಿಗೆ ಕಲ್ ಗುಂಡಿಗೆ ಗಂಡೇ ನಾ...', ೩) 'ಕೂಗೊ ಕೋಳಿಗೆ ಖಾರ ಮಸಾಲೆ...', ೪) 'ಬಾರೇ ಬಿಂಕಮ್ಮಾ ...', ೫) 'ಎದ್ದಳೋ ಎದ್ದಳೋ ...'
ಸೆ: ರೀಲು ೧೫, ಉದ - ೪೨೪೬.೦೦
ಕ.ಸಾ: ಚಿಕ್ಕಂದಿನಲ್ಲೇ ಬೇರ್ಪಟ್ಟು ಬೆಳೆದ ಅವಳಿ ಸೋದರಿಯರು. ಒಬ್ಬಳು ಘಾಟಿ; ಕಳ್ಳಿ. ಮತ್ತೊಬ್ಬಳು ಮುಗ್ಧೆ; ಅಂಜುಬುರುಕಿ. ಮುಗ್ಧೆ ಬೃಹತ್ ಆಸ್ತಿಗೆ ವಾರಸುಧಾರಿಣಿ. ಅವಳ ಆಸ್ತಿಯನ್ನು ಲಪಟಾಯಿಸಲು ಅವಳ ಸುತ್ತಲೂ, ಸಂಚು ಹೂಡಿ ನಿಂತ ಧೂರ್ತರು. ಇಬ್ಬರೂ ಆಕಸ್ಮಾತ್ ಭೇಟಿಯಾದರು. ಅವಳ ಜಾಗದಲ್ಲಿ ಇವಳು; ಇವಳ ಸ್ಥಾನದಲ್ಲಿ ಅವಳು ಅದಲಿ ಬದಲಿಯಾದರು. ಮುಗ್ಧೆಯ ಸ್ಥಾನಕ್ಕೆ ಬಂದವಳು ಎಲ್ಲರಿಗೂ ಬುದ್ಧಿ ಕಲಿಸುವಳು - ಅವಳಿ - ಜವಳಿಗಳಿಬ್ಬರೂ ತಮ್ಮ ತಮ್ಮ ಪ್ರಿಯಕರರನ್ನು ಸೇರಿದರು.

೧೩೧೬. ಪ್ರತಾಪ್

(೧೯೯೦ / ವರ್ಣ / ಸಾಮಾಜಿಕ)
ಲಾ: ಪ್ರತಿಭಾ ಫಿಲಂಸ್
ಪ್ರೊ: ಎಸ್.ಪ್ರತಿಭಾದೇವಿ
ನಿ: ವಿ.ಸೋಮಶೇಖರ್
ಸ.ನಿ: ಸರಿಗಮ ವಿಜಿ, ಸೂರ್ಯವರ್ಧನ ಸಿಂಗ್
ಆ: ಅರ್ಜುನ್ ಸರ್ಜಾ, ದೇವರಾಜ್, ಜೈಜಗದೀಶ್, ಕೀರ್ತಿರಾಜ್, ವಜ್ರಮುನಿ, ಮುಖ್ಯಮಂತ್ರಿ ಚಂದ್ರು, ಸುಧೀರ್, ಧೀರೇಂದ್ರ ಗೋಪಾಲ್, ಲೋಹಿತಾಶ್ವ, ಮಾನು, ಜಗ್ಗೇಶ್, ಸರಿಗಮ ವಿಜಿ, ಲಕ್ಷ್ಮಣ್, ಸತ್ಯಜಿತ್, ಸುಧಾರಾಣಿ, ಮಾಲಾಶ್ರೀ, ಅಮೃತ್ ಕೋರ್
ಕ/ಚಿ.ಕ: ವಿ.ಸೋಮಶೇಖರ್
ಮಾ: ಬಿ.ಎಲ್.ವೇಣು
ಗೀ: ಹಂಸಲೇಖ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಮಂಜುಳಾ ಗುರುರಾಜ್, ಚಂದ್ರಿಕಾ
ಸಂ: ಎಸ್. ಎಂ.ವಿಕ್ಟರ್
ಛಾ: ಸುಂದರನಾಥ ಸುವರ್ಣ
ಕಲೆ: ಎ.ನಜೀರ್
ಸ: ಹಂಸಲೇಖ
ಧ್ವ: (ಹಾ) ಎಸ್.ಪಿ.ರಾಮನಾಥನ್ (ಮಾ) ಕೋದಂಡಪಾಣಿ
ನೃ: ಸತೀಶ್
ಸಾ: ಸಾಹುಲ್
ವ: ಎನ್.ಸತ್ಯ
ಪ್ರ: ರಾಜಗೋಪಾಲ್
ಸ್ಟು: ಕಂಠೀರವ
ಹಾ: ೧) 'ಧಿಂಗುಡ್ತದೆ ಧಿಂಗುಡ್ತದೆ...', ೨) 'ತಂಬೂರಯ್ಯಾ ತಂತಿ ಮೀಟಯ್ಯ...', ೩) 'ಕಾಪ್ ಕಾಳೆ ಸುಖಮೇವುದು...', ೪) 'ಈ ಜೋಗದ ಜಲಪಾತಾ...', ೫) 'ಪ್ರೇಮ ವಿರಹಾ ಕೋಟಿತರಹಾ...', ೬) 'ಹಾಯ್ ಜಂಟಲ್ ಮೆಂಟಲೀ ...'
ಕ.ಸಾ: ನಿಷ್ಠಾವಂತ ಪೋಲೀಸ್ ಅಧಿಕಾರಿಯಾದ ನಾಯಕನ ಹೆಂಡತಿ ದುಷ್ಟರಿಂದ ಕೊಲೆಯಾಗುತ್ತಾಳೆ. ಇವರ ಮೇಲೆ ಕ್ರಮ ಕೈಗೊಳ್ಳುವಾಗ ಆತ ಕಾಡುಜನರ ಕೈಲಿ ಸಿಕ್ಕಿ ಹಾಕಿಕೊಳ್ಳುತ್ತಾನೆ. ಕಾಡುಜನರ ನಡುವೆ ಅವನಿಗೆ ಮತ್ತೊಬ್ಬ ನಾಯಕಿ ಸಿಕ್ಕಿ ಅವನನ್ನು ಪ್ರೀತಿಸುತ್ತಾಳೆ. ಕೊನೆಯಲ್ಲಿ ಕಾಡಿನ ಜನರ ಸಹಾಯದಿಂದ ದುಷ್ಟರನ್ನು ಸದೆಬಡಿಯುತ್ತಾನೆ.

೧೩೧೭. ಮತ್ತೆ ಹಾಡಿತು ಕೋಗಿಲೆ

(೧೯೯೦ / ವರ್ಣ / ಸಾಮಾಜಿಕ)
ಲಾ: ಶ್ರೀ ಶಂಕರ ಪ್ರೊಡಕ್ಷನ್ಸ್

ಪ್ರೊ: ಎಸ್.ಶಂಕರ್
ನಿ: ಭಾರ್ಗವ
ಸ.ನಿ: ಸಿ.ಹೆಚ್.ಬಾಲಾಜಿ ಸಿಂಗ್
ಅ: ವಿಷ್ಣುವರ್ಧನ್, ರೂಪಿಣಿ, ಅನಂತ್ ನಾಗ್, ಅಶೋಕ ರಾವ್, ಮುಖ್ಯಮಂತ್ರಿ ಚಂದ್ರು, ದೊಡ್ಡಣ್ಣ, ಭವ್ಯ, ಸತ್ಯಶ್ರೀ, ಬೇಬಿ ಶ್ಯಾಮಿಲಿ
ಕ: ಚಿ.ಉದಯಶಂಕರ್
ಚಿ.ಕ: ಭಾರ್ಗವ
ಸಂ/ಗೀ: ಚಿ.ಉದಯಶಂಕರ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್.ಜಾನಕಿ
ಸಂ: ನಾಗೇಶ್ ಯಾದವ್
ಛಾ: ಡಿ.ವಿ.ರಾಜಾರಾಂ
ಕಲೆ: ನಜೀರ್
ಸ: ರಾಜನ್-ನಾಗೇಂದ್ರ
ಧ್ವ: ಚಾಮುಂಡೇಶ್ವರಿ
ನೃ: ಉಡುಪಿ ಜಯರಾಂ
ಸಾ: ಹಾರ್ಸ್ ಬಾಬು
ವ: ರಾಮನಾಥ್
ಪ್ರ: ಮೈಸೂರು ವೆಂಕಟೇಶ್
ಸ್ಟು: ಕಂಠೀರವ
ವಿ: ೧೯೯೦-೯೧ರ ರಾಜ್ಯ ಪ್ರಶಸ್ತಿ : ಅತ್ಯುತ್ತಮ ಬಾಲ ನಟಿ (ಬೇಬಿ ಶ್ಯಾಮಿಲಿ)
ಹಾ: ೧)'ನಿಮ್ಮನ್ನು ಕಂಡಾಗಲೇ...' ೨)'ನಾನಿಂದು ನಿನ್ನಿಂದ ...', ೩)'ಬಾ ನನ್ನ ಸಂಗೀತಾ...', ೪)'ನವ ವಸಂತದ ಗಾಳಿ ಬೀಸಲು ...' ೫)'ಹಾಡುವ ಆಸೆ ...', ೬)'ತನನನಾ ಹಾಡುವೆ ...'
ಸೆ: ರೀಲು - ೧೫, ಉದ್ದ - ೪೨೪೮.೦೦, 'ಯು' ಸರ್ಟಿಫಿಕೇಟ್
ಕ.ಸಾ: ತಾನು ಪ್ರೀತಿಸಿದ ಹುಡುಗಿ ಬೇರೆ ಮದುವೆಯಾಗಿ ತೀರಿಕೊಂಡ ಬಳಿಕ ಆಕೆಯ ಮಗುವನ್ನು ನಾಯಕ ತಂದು ಸಾಕುತ್ತಾನೆ. ನಾಯಕಿಯ ಗಂಡ ಮತ್ತೊಂದು ಮದುವೆಯಾಗಿ ಆಕೆಗೆ ಮಕ್ಕಳಾಗದಿದ್ದಾಗ ಇದೇ ಮಗುವನ್ನು ಕೇಳುತ್ತಾನೆ. ತ್ಯಾಗಿಯಾದ ನಾಯಕ ಒಲ್ಲದ ಮನಸ್ಸಿನಿಂದ ಮಗುವನ್ನು ಕೊಡುತ್ತಾನೆ. ಆದರೆ ಮಗು ಈತನನ್ನು ಬಿಟ್ಟಿರಲಾರದೆ ಕಾಯಿಲೆ ಬೀಳುತ್ತದೆ, ಕೊನೆಯಲ್ಲಿ ನಾಯಕ ಮತ್ತೆ ಮಗುವಿನ ಜೊತೆ ಸೇರುತ್ತಾನೆ.

೧೩೧೮. ಅಶೋಕ ಚಕ್ರ

(೧೯೯೦ / ವರ್ಣ / ಸಾಮಾಜಿಕ)
ಲಾ: ಶ್ರೀದೇವಿ ಫಿಲಂಸ್
ಪ್ರೊ: ಎಂ.ರಾಜೇಂದ್ರ, ಎಸ್.ಸಿ.ಶ್ರೀಕಾಂತ್ ಮೂರ್ತಿ
ನಿ: ಬಿ.ರಾಮಮೂರ್ತಿ
ಸ.ನಿ: ಕೆ.ಎನ್.ವೈದ್ಯನಾಥ್
ಅ: ಪ್ರಭಾಕರ್, ಶಶಿಕುಮಾರ್, ತ್ಯಾಗರಾಜ್, ಅಶೋಕ್, ಸುಧಾರಾಣಿ, ಸಂಗೀತ, ಮೈಸೂರು ಲೋಕೇಶ್, ಉಮಾಶ್ರೀ, ಲೋಹಿತಾಶ್ವ, ಸೋಲಂಕಿ, ಶ್ರೀನಿವಾಸ ಮೂರ್ತಿ, ದೊಡ್ಡಣ್ಣ,

ಶಾಂತಮ್ಮ, ಭಾನುಮತಿ, ಶ್ರೀಕಂಠ ಮೂರ್ತಿ, ಅಮೃತ್ ಕೌರ್, ಜನಾರ್ದನ್
ಕ/ಚಿ.ಕ: ಎಸ್.ಸಿ.ಶ್ರೀಕಾಂತ್ ಮೂರ್ತಿ
ಸಂ: ಶ್ರೀರಂಗ
ಗೀ: ರುದ್ರಮೂರ್ತಿಶಾಸ್ತ್ರಿ, ಎಂ.ಎನ್.ವ್ಯಾಸರಾವ್, ಶ್ರೀರಂಗ, ಚಿ.ಉದಯಶಂಕರ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಮಂಜುಳಾ ಗುರು
ಸಂ: ಕೆ. ನರಸಯ್ಯ
ಛ: ಮಲ್ಲಿಕಾರ್ಜುನ
ಕಲೆ: ಕೆ.ಕೃಷ್ಣಾಚಾರ್
ಸ: ಮನೋರಂಜನ್ ಪ್ರಭಾಕರ್
ನೃ: ಸತೀಶ್
ಸಾ: ಅಂಬೂರ್ ಬಾಬು
ವ: ರಾಮನಾಥ್
ಪ್ರ: ಮಲ್ಲಿ
ಸ್ಟು: ಕಂಠೀರವ
ಹಾ: ೧)'ಪ್ರೀತಿಯ ಮರೆತು ಶಾಂತಿಯ ತೊರೆದು...', ೨)'ಸಂಗಾತಿ ನಿನ್ನ ಕಂಡೆ...', ೩)'ಆಡೋಣಾ ಇಲ್ಲೇ ಕಣ್ಣಾಮುಚ್ಚಾಲೆ...', ೪)'ನ್ಯಾಯದ ಸರೆಯಲ್ಲಿ ...'
ಸೆ: ರೀಲು - ೧೪, ಉದ್ದ - ೩೨೫೦.೦೦, 'ಯು' ಸರ್ಟಿಫಿಕೇಟ್
ಕ.ಸಾ: ರಾಜಶೇಖರ್ ನಿಷ್ಠಾವಂತ ಪೋಲೀಸ್ ಅಧಿಕಾರಿ. ದಂತಚೋರರನ್ನು ಸೆರೆ ಹಿಡಿದದ್ದಕ್ಕಾಗಿ ಮುಖ್ಯಮಂತ್ರಿ ಆತನಿಗೆ ಅಶೋಕ ಚಕ್ರ ಪದಕ ನೀಡಿ ಸನ್ಮಾನಿಸುತ್ತಾರೆ. ಮುಂದೆ ಮಾದಕ ವಸ್ತುಗಳ ಮಾರಾಟ ಜಾಲವನ್ನು ಭೇದಿಸುವಾಗ ಗೃಹಮಂತ್ರಿ ಹಾಗೂ ಉನ್ನತ ಪೋಲೀಸ್ ಅಧಿಕಾರಿ ಅವರಲ್ಲಿ ಶಾಮೀಲಾಗಿರುವುದು ತಿಳಿಯುತ್ತದೆ. ಆದರೂ ಅವರ ಕೃತ್ಯಗಳನ್ನು ಬಯಲಿಗೆಳೆಯಲು ಪ್ರಯತ್ನಿಸುತ್ತಾನೆ. ಇದರಿಂದ ಅನೇಕ ತೊಂದರೆಗಳನ್ನು ಎದುರಿಸಬೇಕಾಗುತ್ತದೆ. ಕೊನೆಗೆ ನ್ಯಾಯಕ್ಕೆ ಜಯ ದೊರಕಿಸಿಕೊಡುವಲ್ಲಿ ಯಶಸ್ವಿಯಾಗುತ್ತಾನೆ.

೧೩೧೯. ಉತ್ಕರ್ಷ

(೧೯೯೦ / ವರ್ಣ / ಪತ್ತೇದಾರಿ)
ಲಾ: ರಚನಾ ಮೋಷನ್ ಪಿಕ್ಚರ್ಸ್ ಪ್ರೊಡ್ಯೂಸರ್ಸ್
ಪ್ರೊ:ನಿ: ಸುನೀಲ್ ಕುಮಾರ್ ದೇಸಾಯಿ
ಸ.ನಿ: ನೀರ್ನಳ್ಳಿ ರಾಜು
ಅ: ಅಂಬರೀಷ್, ದೇವರಾಜ್, ಅವಿನಾಶ್, ಕೆ.ವಿ.ಮಂಜಯ್ಯ, ಪ್ರವೀಣ್, ಉಮೇಶ್, ನವೀನ್, ತಿಮ್ಮಯ್ಯ, ವನಿತಾ ವಾಸು, ಅಭಿಲಾಷ, ಸಿತಾರಾ, ಅಖಿಲಾ, ಕಮಲಶ್ರೀ, ವರಲಕ್ಷ್ಮಿ, ಜಾನಕೀರಾಮ್, ಅಂಜನಪ್ಪ, ರಾಮಕೃಷ್ಣ, ರವಿ, ಅನುಪ್ರಿಯ, ಅಂಜಲಿ, ತಾರಾ, ಪದ್ಮಶ್ರೀ
ಕ/ಚಿ.ಕ/ಸಂ: ಸುನೀಲ್ ಕುಮಾರ್ ದೇಸಾಯಿ
ಸಂ: ಆರ್.ಜನಾರ್ದನ್
ಛಾ: ಪಿ.ರಾಜನ್
ಕಲೆ: ಸುದೇಶ್ ಮಹಾನ್
ಸ: ಗುಣಸಿಂಗ್
ಧ್ವ: (ಹಾ) ಎಸ್.ಪಿ.ರಾಮನಾಥನ್, (ಮಾ) ಕೋದಂಡಪಾಣಿ
ವ: ರಾಮನಾಥ್
ಪ್ರ: ರಾಮಕೃಷ್ಣ
ಸ್ಟು: ಕಂಠೀರವ
ಸೆ: ರೀಲು - ೧೫, 'ಯು' ಸರ್ಟಿಫಿಕೇಟ್
ಕ.ಸಾ: ಮಾನಸಿಕ ರೋಗಿಯಾದ ಚಿತ್ರಕಾರನೊಬ್ಬ ಮಾಡುತ್ತಿರುವ ಕೊಲೆಗಳ ರಹಸ್ಯವನ್ನು ಭೇದಿಸುವ ಹಂದರವೇ ಈ ಚಿತ್ರದ ಕತೆ. ಅವನಿಂದ ಕೊಲೆಗೀಡಾಗುತ್ತಿದ್ದವರೆಲ್ಲಾ ತರುಣಿಯರೇ. ಪೋಲೀಸ್ ಅಧಿಕಾರಿ ಈ ಸರಣಿ ಕೊಲೆಗಾರನ ಬೇಟೆಯಲ್ಲಿರುತ್ತಾನೆ. ತನ್ನನ್ನು ಮದುವೆಯಾದ ಹುಡುಗಿ ಬೇರೊಬ್ಬನೊಂದಿಗೆ ಸಂಬಂಧವಿಟ್ಟುಕೊಂಡಿದ್ದರಿಂದ ಆಘಾತಗೊಂಡ ಚಿತ್ರಕಾರ ಆಕೆಯನ್ನು ಕೊಂದು, ಮಾನಸಿಕ ಸ್ವಾಸ್ಥ್ಯ ಕಳೆದುಕೊಂಡಿದ್ದ ... ಉನ್ಮಾದಗೊಂಡಾಗ ಯಾರಾದರೊಬ್ಬ ತರುಣಿಯ ಕೊಲೆ ಮಾಡುತ್ತಿದ್ದ. ಪೋಲೀಸ್ ಅಧಿಕಾರಿ ಅಂತ್ಯದಲ್ಲಿ ಚಿತ್ರಕಾರನ ಇನ್ನೊಂದು ಮುಖವನ್ನು ಬಯಲು ಮಾಡುವನು.

೧೩೨೦. ಅನುಕೂಲಕ್ಕೊಬ್ಬ ಗಂಡ

(೧೯೯೦ / ವರ್ಣ / ಸಾಮಾಜಿಕ)
ಲಾ: ನಿರುಪಮ ಆರ್ಟ್ಸ್ ಕಂಬೈನ್ಸ್
ಪ್ರೊ: ಎಸ್.ಎ.ಗೋವಿಂದರಾಜ್
ನಿ: ಎಂ.ಎಸ್.ರಾಜಶೇಖರ್
ಅ: ರಾಘವೇಂದ್ರ ರಾಜಕುಮಾರ್, ವಿದ್ಯಾಶ್ರೀ, ಲೋಕೇಶ್, ಶ್ಯಾಂಸುಂದರ್, ಪ್ರಕಾಶ್ ರೈ, ಇಂದೂಧರ್, ಸುಧಾ ನರಸಿಂಹರಾಜು, ಹಾರ್ಸ್ ಬಾಬು, ಕುಳ್ಳ ಅನಂತು, ಶ್ರೀದೇವಿ, ಮನದೀಪ್ ರಾಯ್, ವೀಣಾ

ಚಿ.ಕ/ಸಂ/ಗೀ: ಚಿ.ಉದಯಶಂಕರ್
ಗಾ: ರಾಘವೇಂದ್ರ ರಾಜಕುಮಾರ್, ಮಂಜುಳಾ ಗುರುರಾಜ್
ಸಂ: ಎಸ್. ಮನೋಹರ್
ಛಾ: ವಿ.ಕೆ.ಕಣ್ಣನ್
ಕಲೆ: ನಜೀರ್
ಸ: ಉಪೇಂದ್ರ ಕುಮಾರ್
ನೃ: ಕೈಲಾಸಂ
ಸಾ: ನಂಜುಂಡಿ ನಾಗರಾಜ್
ಸ್ಟು: ಕಂಠೀರವ
ಹಾ: ೧)'ಓ ಕಂಡೇ ಸುರಿವ ಮಳೆಯ...', ೨)'ಅಯ್ಯೋ ಊರೆಲ್ಲಾ ನಿನ್ನ...', ೩)'ಹಿಗ್ಗಿನಾ ಸುಗ್ಗಿಯೂ ಬಂತು ಈ ದಿನಾ...', ೪) ಮಳೆಯಿಂದ ಭೂಮಿ ಬಾನು ಒಂದಾದ ಹಾಗೆ...', ೫)'ಕೆಂಪು ದೀಪ ಕಣ್ಣಲ್ಲವೇ ...'
ಕ.ಸಾ: ತಾಯಿ ತಂದೆ ಇಬ್ಬರೂ ಒಬ್ಬೊಬ್ಬ ಗಂಡನ್ನು ನೋಡಿ ತಾನು ನೋಡಿದ ಹುಡುಗನನ್ನೇ ಮದುವೆಯಾಗಬೇಕೆಂದು ಬಲವಂತ ಮಾಡಿದಾಗ ಅದರಿಂದ ಬೇಸತ್ತ ಶ್ರೀಮಂತ ತರುಣಿ ಮನೆಯಿಂದ ತಪ್ಪಿಸಿಕೊಂಡು ಬಂದು, ತಾನು ಮೊದಲೇ ಪ್ರೀತಿಸುತ್ತಿದ್ದ ಗ್ಯಾರೇಜ್ ಕೆಲಸಗಾರರನ್ನೇ ಮದುವೆಯಾಗುವಳು. ನಂತರ ತಾಯಿ - ತಂದೆ ಇಬ್ಬರೂ ಬದಲಾಗುವಂತೆ ಮಾಡುವಲ್ಲಿ ಯಶಸ್ವಿಯಾಗಿ, ಅವರಿಗೆ ಬುದ್ಧಿ ಕಲಿಸುತ್ತಾಳೆ. ಕೊನೆಯಲ್ಲಿ ತನ್ನ ತಪ್ಪನ್ನರಿತ ತಂದೆ ತನ್ನ ಆಸ್ತಿಯನ್ನೆಲ್ಲಾ ಮಗಳು - ಅಳಿಯನಿಗೆ ನೀಡುತ್ತಾನೆ.

೧೩೨೧. ಬಾರೆ ನನ್ನ ಮುದ್ದಿನ ರಾಣಿ

(೧೯೯೦ / ವರ್ಣ / ಸಾಮಾಜಿಕ)
ಲಾ: ವಿಜಯಶ್ರೀ ಪ್ರೊಡಕ್ಷನ್ಸ್
ಪ್ರೊ: ಸಿದ್ದಲಿಂಗಯ್ಯ

ನಿ: ಸಿದ್ಧಲಿಂಗಯ್ಯ
ಸ.ನಿ: ಗುರುರಾಜ್, ಜಿ.ಬಿ.ರಾಜಶೇಖರ್
ಅ: ಶಶಿಕುಮಾರ್, ಲೋಕೇಶ್, ಮೈಸೂರು ಲೋಕೇಶ್, ಕೆ.ಎಸ್. ಅಶ್ವತ್ಥ್, ಶಿವಾರ್ಜುನ್, ಸದಾಶಿವ ಬ್ರಹ್ಮಾವರ್, ರವೀಂದ್ರನಾಥ್, ಅರವಿಂದ್, ದೊಡ್ಡಣ್ಣ, ಮಹಾಲಕ್ಷ್ಮಿ, ಆಶಾಲತಾ, ಉಮಾಶ್ರೀ, ತ್ರಿವೇಣಿ, ಜಿ.ವಿ.ಶಾರದ, ರತ್ನಶ್ರೀ, ಸರೋಜ
ಕ: ರಾ. ಪ್ರಕಾಶ್ ತ್ರಿಶೂಲಿ
ಚಿ.ಕ: ಸಿದ್ದಲಿಂಗಯ್ಯ
ಮಾ: ರಾ. ಪ್ರಕಾಶ್ ತ್ರಿಶೂಲಿ
ಗೀ: ಸು. ರುದ್ರಮೂರ್ತಿ ಶಾಸ್ತ್ರಿ, ರಾ. ಪ್ರಕಾಶ್ ತ್ರಿಶೂಲಿ, ಮನೋಹರ್
ಗಾ: ಮಂಜುಳಾ ಗುರು, ಜೇಸುದಾಸ್, ಕಸ್ತೂರಿ ಶಂಕರ್
ಸಂ: ಶ್ಯಾಂ ಯಾದವ್
ಛಾ: ಕುಲಶೇಖರ್
ಸ: ರಾಜನ್ ನಾಗೇಂದ್ರ
ಧ್ವ: (ಮಾ) ಕೋದಂಡಪಾಣಿ (ಹಾ) ಎಸ್.ಪಿ. ರಾಮನಾಥನ್
ನೃ: ಜಾನ್ ಬಾಬು
ವ: ವೆಂಕಟಸ್ವಾಮಿ, ಮಂಜುನಾಥ್
ಪ್ರ: ಮಂಜುನಾಥ್
ಸ್ಟು: ಚಾಮುಂಡೇಶ್ವರಿ
ಹಾ: ೧)'ಹೆಣ್ಣು ಅಂದರೇನೇ ಮಮತೆ ರೂಪ ತಾನೆ...', ೨)'ಗಂಡನು ಪಡೆದಾ ದೇವರು ನೀವು ...', ೩)'ನೀ ಮೈಯ ಮುಟ್ಟಿದಾಗ...', ೪)'ಹೆಣ್ಣಿನಿಂದಲೇ ಎಲ್ಲಾ ಹೆಣ್ಣಿನಿಂದಲೇ...'
ಸೆ: ರೀಲು - ೧೫, ಉದ ೪೩೦೫, 'ಯು' ಸರ್ಟಿಫಿಕೇಟ್
ಕ.ಸಾ: ವರದಕ್ಷಿಣೆ ಸಮಸ್ಯೆ ಕುರಿತ ಚಿತ್ರ. ಹೆಣ್ಣೊಬ್ಬಳು ಪುರುಷ ಪ್ರಧಾನ ಸಮಾಜದ ವಿರುದ್ಧ ಸಡ್ಡು ಹೊಡೆದು ನಿಂತು ಗಲ್ಲುವ ಕಥೆಯ ಚಿತ್ರ.

೧೩೨೨. ಆಟ ಬೊಂಬಾಟ

(೧೯೯೦ / ವರ್ಣ / ಸಾಮಾಜಿಕ)
ಲಾ: ಪದ್ಮಾವತಿ ಆರ್ಟ್ಸ್ ಪ್ರೊಡಕ್ಷನ್ಸ್
ಪ್ರೊ: ಟಿ.ಕೆ.ಕೇಶವಪ್ರಸಾದ್, ಜಿ.ಮನೋಹರ್, ಎ.ನರಸಿಂಹ, ಎ.ಕೇಶವ
ನಿ: ಬಿ.ಸಿ.ಗೌರಿಶಂಕರ್
ಸ.ನಿ: ಕೆ.ಶ್ರೀಕಾಂತ್
ಅ: ಶಂಕರ್‌ನಾಗ್, ಶ್ರೀಲತಾ, ಸುಧೀರ್, ತೂಗುದೀಪ ಶ್ರೀನಿವಾಸ್, ರಮೇಶ್ ಭಟ್, ರಾಮಕೃಷ್ಣ, ಭೀಮರಾವ್, ಹೊನ್ನವಳ್ಳಿ ಕೃಷ್ಣ, ಸದಾಶಿವ ಬ್ರಹ್ಮಾವರ್, ಮೈಸೂರು ಲೋಕೇಶ್, ತ್ರಿವೇಣಿ, ಬೇಬಿ ಅಶ್ವಿನಿ, ಕಮಲಶ್ರೀ, ಟೆನ್ನಿಸ್ ಕೃಷ್ಣ
ಕ: ವೀರಪ್ಪ ಮರಳವಾಡಿ
ಚಿ.ಕ: ವೀರಪ್ಪ ಮರಳವಾಡಿ, ಬಿ.ಸಿ.ಗೌರಿಶಂಕರ್
ಮಾ: ವೀರಪ್ಪ ಮರಳವಾಡಿ, ಉಪೇಂದ್ರ
ಗೀ: ಹಂಸಲೇಖ, ಉಪೇಂದ್ರ, ರುದ್ರಮೂರ್ತಿ ಶಾಸ್ತ್ರಿ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್. ಜಾನಕಿ, ಮಂಜುಳಾ ಗುರುರಾಜ್
ಸಂ: ಪಿ.ಭಕ್ತವತ್ಸಲ
ಛಾ: ಬಿ.ಸಿ.ಗೌರಿಶಂಕರ್
ಕಲೆ: ಕಪ್ಪಣ್ಣಚಾರಿ
ಸ: ಹಂಸಲೇಖ
ಧ್ವ: (ಹಾ) ಎಸ್.ಪಿ.ರಾಮನಾಥನ್, ಕೃಷ್ಣಮೂರ್ತಿ, (ಮಾ) ಜೆ.ವಿ.ಸೋಮಶೇಖರ್
ನೃ: ಉಡುಪಿ ಜಯರಾಂ, ಅಶೋಕ್ ಪೈನ್ಸ್
ಸಾ: ನಂಜುಂಡಿ ನಾಗರಾಜ್
ವ: ವೀರರಾಜು, ಸುರೇಶ್
ಪ್ರ: ಸಿದ್ದೇಶ್, ದೊರೆರಾಜ್
ಸ್ಟು: ಕಂಠೀರವ
ಹಾ: ೧)'ಬೋಲೋ ಜನ ಜಾಗೃತಿ ನಾಟಕ ಮಂಡಳೀ ಕಿ...', ೨)'ತಂದನಾನ ತಂದನಾನ...', ೩)'ಇಟ್ಟರು ಇಟ್ಟರು ಗುರಿಯಿಟ್ಟರು...' ೪)'ಪಪ್ಪಾ ಪಪ್ಪಾ ಪಪ್ಪಾ ನೋಡು ಸೀರೆಯ ಮಾಯೆ ...', ೫)'ರಘುಪತಿ ರಾಘವ ರಾಜಾರಾಂ ...'
ಸೆ: ರೀಲು ೧೫, ಉದ ೩೮೭೨.೦೦
ಕ.ಸಾ: ಸ್ತ್ರೀ ಶೋಷಣೆ ವಿರುದ್ಧ ಹೋರಾಡುವ ಆಶಾ ಬೇಜವಾಬ್ದಾರಿತನಗಳನ್ನು ಮೈಗೂಡಿಸಿಕೊಂಡಿದ್ದ ಕೋದಂಡನನ್ನು ಮದುವೆಯಾಗುತ್ತಾಳೆ. ಅರು ಗುಣಗಳೂ ಹೆಣ್ಣೆನಲ್ಲಿರಬೇಕೆಂಬ ಅವನಿಗೆ ಬುದ್ಧಿ ಕಲಿಸಿ ಸರಿದಾರಿಗೆ ತರಲು ಯತ್ನಿಸುತ್ತಾಳೆ. ಮಧ್ಯೆ ಇಬ್ಬರ ನಡುವೆ ಉಂಟಾದ ವಿರಸ ಇಬ್ಬರನ್ನೂ ಬೇರ್ಪಡಿಸಿತು. ಕೋದಂಡನಿಗೆ ತಪ್ಪಿನ ಅರಿವಾಗಿ ಕೊನೆಯಲ್ಲಿ ಇಬ್ಬರೂ ಜೊತೆ ಸೇರುತ್ತಾರೆ.

೧೩೨೩. ಅನಂತ ಪ್ರೇಮ

(೧೯೯೦ / ವರ್ಣ / ಸಾಮಾಜಿಕ)
ಲಾ: ನೂರ್‌ಜಹಾನ್ ಫಿಲಂಸ್
ಪ್ರೊ: ನೂರ್‌ಜಹಾನ್
ನಿ: ಟಿ.ಜನಾರ್ದನ್
ಅ: ಅನಂತ್ ನಾಗ್, ವನಿತಾ ವಾಸು, ಎಂ.ಚಂದ್ರು, ಲೋಹಿತಾಶ್ವ, ಉಮಾಶ್ರೀ, ಇರ್ಫಾನ್, ಅಭಿಲಾಷಾ, ಡಿಸ್ಕೋ ಶಾಂತಿ, ಪ್ರಕಾಶ್, ಭಂಡಾರಿ
ಕ: ಅಶ್ರಫ್ ಕುಮಾರ್
ಮಾ: ಕುಣಿಗಲ್ ನಾಗಭೂಷಣ್
ಗೀ: ಹಂಸಲೇಖ

ಗಾ: ಜೇಸುದಾಸ್, ಮನು, ಮಂಜುಳಾ ಗುರು
ಸಂ: ಕೆ.ಬಾಲು
ಛಾ: ಟಿ.ಜನಾರ್ದನ್
ಸ: ಹಂಸಲೇಖ
ಸಾ: ಬೆಂಗಳೂರು ವಿಜಯನ್
ವ: ಸುಂದರ್
ಪ್ರ: ಶ್ಯಾಂ
ಸ್ಟು: ಕಂಠೀರವ
ಹಾ: ೧)'ಅಂದಿಗೆ ಕಾಲಲಿ ಬಿಂದಿಗೆ ಕೈಯಲಿ ...', ೨)'ಸತ್ಯಂ ಶಿವಂ ಪ್ರೇಮ ಸುಂದರಂ...', ೩)'ಕೊರವಂಜಿ ಕೊರವಂಜಿ ಕಣಿ ಹೇಳಲೇ...', ೪)'ಕವಲನಾಳುವ ಅಲೆಗಳೇ...', ೫)'ಪ್ರೇಮವೂ ಬೇಡ ಪ್ರೇಯಸಿಯೂ ಬೇಡ...'
ಸೆ: ಉದ ೩೬೪೦.೦೦, ರೀಲು - ೧೪.
ಕ.ಸಾ: ಶ್ರೀಮಂತ ಮನೆತನದ ಚಂದ್ರು ಜ್ಯೋತಿಯನ್ನು ಪ್ರೇಮಿಸಿ ಆಕೆಯ ಕೈಗೊಂದು ಮಗುವನ್ನು ಕೊಟ್ಟು ಕೈ ಕೊಡುತ್ತಾನೆ. ಆಕೆ ಮಗುವನ್ನು ಚಂದ್ರುವಿನ ಮನೆಯ ಮುಂದೆ ಬಿಟ್ಟು ಬಂದಾಗ ಅದು ನಾಯಕ ಸುನಿಲ್‌ನ ಕೈಗೆ ಸಿಗುತ್ತದೆ. ವಿಷಯ ಅರಿತ ಸುನೀಲ್ ಜ್ಯೋತಿಗೆ ಸಹಾಯ ಮಾಡಬೇಕೆಂದು ಚಂದ್ರುವಿನ ಬಣ್ಣವನ್ನು ಬಯಲಿಗೆಳೆದು ಕೊನೆಗೆ ಜ್ಯೋತಿಯ ಬಾಳನ್ನು ಸರಿಪಡಿಸುತ್ತಾನೆ.

೧೩೨೪. ಶಬರಿಮಲೆ ಸ್ವಾಮಿ ಅಯ್ಯಪ್ಪ

(೧೯೯೦ / ವರ್ಣ / ಭಕ್ತಿಪ್ರಧಾನ)
ಲಾ: ವಿ.ಎಸ್.ಎನ್. ಪ್ರೊಡಕ್ಷನ್ಸ್
ಪ್ರೊ: ವಿ.ಸ್ವಾಮಿನಾಥನ್
ನಿ: ರೇಣುಕಾ ಶರ್ಮ
ಸ.ನಿ: ಮಧುಕರ್ ಬೆಳಕವಾಡಿ
ಅ: ಶ್ರೀಧರ್, ಸುಧಾರಾಣಿ, ಶ್ರೀನಿವಾಸ ಮೂರ್ತಿ, ಗೀತಾ. ರಮೇಶ್ ಭಟ್, ಶನಿ ಮಹದೇವಪ್ಪ, ಜನಾರ್ದನ್, ಶಿವಕುಮಾರ್, ಶ್ರೀಲಲಿತ, ಬಾಲಕೃಷ್ಣ, ಬೆಂಗಳೂರು ನಾಗೇಶ್, ವಿಜಯಕಾಶಿ, ರಾಮಕೃಷ್ಣ, ಕಮಿನೀಧರನ್, ಅಂಜಲಿ, ಮಾ।ಸಂಜಯ್
ಕ/ಚಿ.ಕ: ರೇಣುಕಾ ಶರ್ಮ
ಮಾ/ಗೀ: ಚಿ.ಉದಯಶಂಕರ್, ವಿಜಯನಾರಸಿಂಹ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಜೇಸುದಾಸ್, ಬಿ.ಆರ್.ಛಾಯಾ, ಮಂಜುಳಾ ಗುರು
ಸಂ: ಎಸ್.ಎಂ. ವಿಕ್ಟರ್
ಛಾ: ಎಸ್.ವಿ. ಶ್ರೀಕಾಂತ್
ಕಲೆ: ಬಿ.ನಾಗರಾಜ ರಾವ್
ಸ: ಕೆ.ವಿ.ಮಹಾದೇವನ್
ಧ್ವ: (ಹಾ) ಎಸ್.ಪಿ.ರಾಮನಾಥನ್ (ಮಾ) ಕೋದಂಡಪಾಣಿ
ನೃ: ಉಡುಪಿ ಜಯರಾಂ, ದೇವಿ
ಸಾ: ಥ್ರಿಲ್ಲರ್ ಮಂಜು
ವ: ಶರವಣನ್, ರಾಜಮಾಣಿಕ್ಯಂ
ಪ್ರ: ತಂಗಪ್ಪನ್, ಪರಮಶಿವನ್
ಸ್ಟು: ಕಂಠೀರವ
ಹಾ: ೧)'ಸ್ವಾಮಿ ಅಯ್ಯಪ್ಪ ನೀನೇ ಗತಿಯಪ್ಪ...', ೨)'ಶಂಕರ ಶಶಿಧರ ಗಜ ಚರ್ಮಾಂಭರ...', ೩)'ಆನಂದ ಎಲ್ಲಿ ಸುರಪತಿಯೇ...', ೪)'ನಾರಾಯಣಂ ಮಹಾಜ್ಞೇಯಂ...', ೬)'ಲೋಕವೀರಂ ಮಹಾ ಪೂಜ್ಯಂ...', ೭)'ಶರಣಂ ಅಯ್ಯಪ್ಪ ತಂದೆ ಶರಣಂ...', ೮)'ದೇವರೆ ನೀನು ನಿಜವಪ್ಪ...', ೯)'ಪೂರ್ಣ ಚಂದಿರಾ ಬಂದ ಧರೆಗೆ...', ೧೦)'ಶ್ರೀ ಹರಿ ಅರ್ಜಿಸು...', ೧೧)'ಆನಂದ ಆನಂದ ಆನಂದ ನಂದ...', ೧೨)'ಶರಣಂ ಅಯ್ಯಪ್ಪ ಸ್ವಾಮಿ ಶರಣಂ ಅಯ್ಯಪ್ಪ...', ೧೩)'ಓಂ ಓಂ ಓಂ ಓಂ ಶಂಕರ ಶಶಿಧರ...', ೧೪)' ನೀ ನಮ್ಮ ಗುರುವಾಗಿ ಬಾ ಗಜಮುಖನೇ...'
ಕ.ಸಾ: ಹರಿಹರರ ಸಮಾಗಮದಿಂದ ಜನಿಸಿದ ಅಯ್ಯಪ್ಪ ಭೂಲೋಕದಲ್ಲಿ ಪಂದಳ ರಾಜನ ಸಾಕು ಮಗನಾಗಿರುತ್ತಾನೆ. ಆತನಿಗೆ ಪಟ್ಟಾಭಿಷೇಕ ಮಾಡಬೇಕೆನ್ನುವಾಗ ಅದನ್ನು ತಪ್ಪಿಸಲು ರಾಣಿ ನಾಟಕವಾಡುತ್ತಾಳೆ. ಆಕೆಯ ತಲೆನೋವಿಗೆ ಔಷಧವಾದ ಹುಲಿಯ ಹಾಲನ್ನು ತರಲು ಅಯ್ಯಪ್ಪ ಕಾಡಿಗೆ ಹೋಗುತ್ತಾನೆ. ಕಾಡಿನಿಂದ ಹುಲಿಯನ್ನೇ ಕರೆದುಕೊಂಡು ಬಂದ ಅಯ್ಯಪ್ಪ ತನಗೆ ರಾಜ್ಯದ ಮೋಹವಿಲ್ಲವೆಂದು ತಮ್ಮನಿಗೇ ಪಟ್ಟಾಭಿಷೇಕ ಮಾಡಿಸಿ ತಾನು ಕಾಡಿಗೆ ಹೋಗುತ್ತಾನೆ, ಅವನ ಇಚ್ಛೆಯಂತೆಯೇ ಶಬರಿಮಲೆಯಲ್ಲಿ ದೇವಸ್ಥಾನ ನಿರ್ಮಿಸಲಾಗುತ್ತದೆ.

೧೩೨೫. ಛಾಲೆಂಜ್

(೧೯೯೦ / ವರ್ಣ / ಸಾಮಾಜಿಕ)
ಲಾ: ಶ್ರೀ ಲಕ್ಷ್ಮಿ ಪ್ರೊಡಕ್ಷನ್ಸ್
ಪ್ರೊ: ಎಂ.ಸುನಂದ, ಪುಟ್ಟಸ್ವಾಮಿ, ಎಂ.ಕೃಷ್ಣ
ನಿ: ರಾಜಕಿಶೋರ್

ಅ: ಪ್ರಭಾಕರ್, ಅಶೋಕ್, ಶಶಿಕುಮಾರ್, ಶ್ರೀಧರ್, ಜಗ್ಗೇಶ್, ಟೆನ್ನಿಸ್ ಕೃಷ್ಣ, ಮುಖ್ಯಮಂತ್ರಿ ಚಂದ್ರು, ರಾಮಿರೆಡ್ಡಿ, ಪ್ರಕಾಶ್ ರೈ, ಪ್ರಸಾದ್ ರಾವ್, ದಯಾನಂದ್, ಚೇತನ್ ರಾಮರಾವ್, ಶ್ರೀಲತಾ, ತಾರಾ, ತ್ರಿವೇಣಿ, ಡಿಸ್ಕೋ ಶಾಂತಿ, ಕೃಷ್ಣೇಗೌಡ, ಎಂ.ಎಸ್. ಎಲ್.ಮೂರ್ತಿ

ಕ: ಶೇಷು ಚಕ್ರವರ್ತಿ

ಚಿ.ಕ/ಮಾ: ಶ್ರೀರಂಗ

ಗೀ: ಹಂಸಲೇಖ

ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಮಂಜುಳಾ ಗುರುರಾಜ್, ರಮೇಶ್, ಎಸ್.ಜಾನಕಿ

ಸಂ: ಕೆ.ಬಾಲು

ಛಾ: ಕೃಷ್ಣ

ಕಲೆ: ಪಿ.ವಿ.ರೆಡ್ಡಿ

ಸ: ಹಂಸಲೇಖ

ನೃ: ಸತೀಶ್

ಸಾ: ಸಾಹುಲ್

ವ: ರಾಮನಾಥ್

ಪ್ರ: ಎಂ.ಎಸ್.ಕೇಶವ

ಸ್ಟು: ಕಂಠೀರವ, ಪ್ರೀಮಿಯರ್

ಹಾ: ೧)'ಓ ರಾಮಯ್ಯ ಬಾ ಬಾರಯ್ಯ...', ೨)'ಕೆಸರು ಕೈಗೆ ಮೊಸರು ಬಾಯ್ಗೆ...', ೩)'ಆಕಾಶ ದೀಪವಾದ ಚಂದಮಾಮ...'

ಸೆ: ರೀಲು - ೧೫, ಉದ ೩೭೧೬.೦೦

ಕ.ಸಾ: ಕುಖ್ಯಾತ ಕಳ್ಳಸಾಗಣೆದಾರ ರಾಮರಾಜು ಜೈಲಿನಲ್ಲಿರುತ್ತಾನೆ. ಆತನಿಂದ ಅನ್ಯಾಯಕ್ಕೊಳಗಾದ ಪ್ರಭಾಕರ್ ಹಾಗು ನಂದಿನಿ ಆತನನ್ನು ಕೊಲ್ಲಲು ಜೈಲಿನಿಂದ ಆತನನ್ನು ಅಪಹರಿಸುತ್ತಾರೆ. ಆದರೆ ಅಪಹರಿಸಿದ ನಂತರ ಆತ ನಕಲಿ ರಾಮರಾಜು ಎಂದು ತಿಳಿಯುತ್ತದೆ. ನಂತರ ರಾಮರಾಜು ನಂದಿನಿಯನ್ನು ಅಪಹರಿಸಿ ಶೀಲಭಂಗಕ್ಕೆ ಯತ್ನಿಸುವಾಗ ಅಶೋಕ್ ಬಂದು ಕಾಪಾಡುತ್ತಾನೆ. ಕೊನೆಯಲ್ಲಿ ಪ್ರಭಾಕರ್ ರಾಮರಾಜುವನ್ನು ಕೊಂದು ತಾನೂ ಸಾಯುತ್ತಾನೆ.

೧೩೨೬. ಶೃತಿ

(೧೯೯೦ / ವರ್ಣ / ಸಾಮಾಜಿಕ)

ಲಾ: ಅಭಿಲಾಷ್ ಎಂಟರ್‌ಪ್ರೈಸಸ್

ಪ್ರೊ/ನಿ: ದ್ವಾರಕೀಶ್

ಅ: ಸುನೀಲ್, ಶೃತಿ, ಹೊನ್ನವಳ್ಳಿ ಕೃಷ್ಣ, ಇಂಧೂದರ್, ಶ್ರೀವತ್ಸ, ಮನ್‌ದೀಪ್‌ರಾಯ್, ದಿಲೀಪ್

ಕ: 'ಪುದು ವಸಂತಂ' ತಮಿಳು ಚಿತ್ರದ ಕಥೆ

ಚಿ.ಕ: ದ್ವಾರಕೀಶ್

ಮಾ/ಗೀ: ಕುಣಿಗಲ್ ವಸಂತ್

ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಮಂಜುಳಾ ಗುರುರಾಜ್, ಜೇಸುದಾಸ್, ಎಸ್.ಎ.ರಾಜಕುಮಾರ್

ಸಂ: ಗೌತಮ್ ರಾಜ್

ಛಾ: ಕರುಣಾಕರ ರಾವ್

ಸ: ಎಸ್.ಎ.ರಾಜಕುಮಾರ್

ಹಾ: ೧)'ಹಾಡೊಂದು ನಾ ಹಾಡುವೆನು ...', ೨)'ತಾಳಕ್ಕೆ ನಾವೆಲ್ಲ ಹಾಡುತಿರೇ..', ೩)'ಕನ್ನಡ ತಾಯಿಯ ಮಕ್ಕಳು ನಾವೆಲ್ಲಾ...', ೪)'ಚಿಲಿಪಿಲಿ ಎನುತಲಿ ಗಗನದ...', ೫)'ಹೆಣ್ಣಿಗೆ ತಾಳಿ ತಾಳಿ ..', ೬)'ಜನ್ಮ ಜನುಮದಲ್ಲು ನಿನ್ನೊಳವ ಬೇಡುವೇ...', ೭)'ಹಾಡೊಂದು ನಾ ಹಾಡುವೆನು...'

ಸೆ: ರೀಲು ೧೬. ಉದ ೪೪೪೩, 'ಯು' ಸರ್ಟಿಫಿಕೇಟ್

ಕ.ಸಾ: ಪ್ರಿಯಕರನನ್ನು ಹುಡುಕಿಕೊಂಡು ಬಂದ ನಾಯಕಿ ಆತನ ವಿಳಾಸ ಕಳೆದುಕೊಂಡ ಪರಿಣಾಮ ಅನಿವಾರ್ಯವಾಗಿ ನಾಲ್ಕು ಹುಡುಗರೊಂದಿಗೆ ಇರಬೇಕಾಗುತ್ತದೆ. ಹುಡುಗರ ಜೊತೆ ಇರುವುದರ ಬಗ್ಗೆ ಟೀಕೆಗಳು ಬಂದರೂ ಅವರ ನಡುವಿನ ಸ್ನೇಹ ಅಲುಗಾಡುವುದಿಲ್ಲ. ಆದರೆ ಆಕೆಯನ್ನು ಮದುವೆಯಾಗ ಬೇಕಾದವನೇ ಇವರ ಪರಿಶುದ್ಧ ಗೆಳೆತನವನ್ನು ಅವಮಾನಿಸಿದಾಗ ಆಕೆ ಮತ್ತ ಈ ಹುಡುಗರ ಜೊತೆಗೇ ಬಂದು ಸ್ನೇಹಿತೆಯಾಗಿ ಉಳಿಯಲು ನಿರ್ಧರಿಸುತ್ತಾಳೆ.

೧೩೨೭. ಗಣೇಶನ ಮದುವೆ

(೧೯೯೦ / ವರ್ಣ / ಸಾಮಾಜಿಕ)

ಲಾ: ಕಲಾ ಪ್ರಿಯ

ಪ್ರೊ: ಪದ್ಮಾ ಸುಧೀಂದ್ರ, ವಿಶ್ವಸಾಗರ್, ಪದ್ಮನಾಭ ರಾಜು, ರಾಮಮೂರ್ತಿ ಭಟ್

ನಿ: ಫಣಿ ರಾಮಚಂದ್ರ

ಸ.ನಿ: ಯೋಗೇಶ್ ಹುಣಸೂರ್, ವಿ.ಎಸ್.ಜಯರಾಮಯ್ಯ

ಅ: ಅನಂತ್ ನಾಗ್, ವಿನಯಾ ಪ್ರಸಾದ್, ಮುಖ್ಯಮಂತ್ರಿ ಚಂದ್ರು, ವೈಶಾಲಿ ಕಾಸರವಳ್ಳಿ, ಸತ್ಯಭಾಮ, ರತ್ನಾಕರ್, ಉಮೇಶ್, ರಮೇಶ್ ಭಟ್, ಅಂಜಲಿ, ಹೊನ್ನವಳ್ಳಿ ಕೃಷ್ಣ, ಶಿವರಾಂ

ಕ: ರಾಜಾ ಚೆಂಡೂರ್ (ಮೂಲ: ಮಲ್ಲಾದಿ ವೆಂಕಟ ಕೃಷ್ಣಮೂರ್ತಿ)

ಚಿ.ಕ: ಫಣಿ ರಾಮಚಂದ್ರ

ಮಾ: ಕುಣಿಗಲ್ ನಾಗಭೂಷಣ್

ಗೀ: ಗೀತಪ್ರಿಯ, ಶ್ಯಾಮ ಸುಂದರ ಕುಲಕರ್ಣಿ, ದೊಡ್ಡರಂಗೇಗೌಡ, ರುದ್ರಮೂರ್ತಿ ಶಾಸ್ತ್ರಿ, ಎಂ.ಎಸ್.ವ್ಯಾಸರಾವ್

ಗಾ: ಎಸ್.ಜಾನಕಿ, ಜಯಚಂದ್ರನ್

ಸಂ: ಸುರೇಶ್ ಅರಸ್

ಛಾ: ಆರ್.ಮಂಜುನಾಥ್

ಕಲೆ: ಸುಭಾಷ್ ಕಡಕೋಳ್

ಸ: ರಾಜನ್ - ನಾಗೇಂದ್ರ

ಧ್ವ: (ಹಾ) ಕೃಷ್ಣಮೂರ್ತಿ (ಮಾ) ಕೋದಂಡಪಾಣಿ

ನೃ: ಉಡುಪಿ ಜಯರಾಂ, ದೇವಿ

ದ: ಸತ್ಯಂ

ಪ್ರ: ಮೈಸೂರು ವೆಂಕಟೇಶ್

ಸ್ಟು: ಕಂಠೀರವ, ಅಭಿಮಾನ್

ಹಾ: ೧)'ಪ್ರೇಮದಾ ಶೃತಿ ಮೀಟಿದೇ...', ೨)'ಶ್ರೀದೇವಿ ಮಾಧವಿ ಕಣ್ಣೋಟ ಬೇಡ...', ೩)'ಸೌಂದರ್ಯ ನೋಡು ನಲ್ಲ...', ೪)' ಅನುರಾಗ ತೋಟದಲ್ಲಿ ಹೂವಂತೆ ನಾನು...'. ೫)'ಬೆಂಗಳೂರು ಸಿಟಿಯ ಒಳಗೆ...'

ವಿ: ೧೯೯೦-೯೧ ರ ರಾಜ್ಯಪ್ರಶಸ್ತಿ : ಗೀತರಚನೆಗಾಗಿ ವಿಶೇಷ ಪ್ರಶಸ್ತಿ (ದೊಡ್ಡರಂಗೇಗೌಡ)

ಸೆ: ರೀಲು ೧೪, ಉದ ೩೬೨೦.೦೦

ಕ.ಸಾ: ಒಂದೇ ವಠಾರದಲ್ಲಿರುವ ನಾಯಕ, ನಾಯಕಿ. ಪತ್ರದ ಮುಖಾಂತರ ಪರಸ್ಪರ ಪ್ರೀತಿಸುತ್ತಾರಾದರೂ ಮುಖ ಪರಿಚಯವಿರುವುದಿಲ್ಲ. ಎದುರಿಗೆ ಸಿಕ್ಕಾಗ ಸದಾ ಜಗಳವಾಡುತ್ತಿರುತ್ತಾರ. ಒಂದು ಹಂತದಲ್ಲಿ ಇವರಿಬ್ಬರ ಮದುವೆಗ ಹೆತ್ತವರ ಒತ್ತಾಯಿಸಿದಾಗ ನಿಜಾಂಶ ತಿಳಿಯದೆ ಇಬ್ಬರೂ ಮದುವೆ ತಪ್ಪಿಸಲು ಯತ್ನಿಸುತ್ತಾರೆ. ಕೊನೆಗೆ ಪತ್ರದ ಪ್ರೇಮಿಗಳು ತಾವೇ ಎಂದು ತಿಳಿದಾಗ ಮದುವೆಗೆ ಹೆತ್ತವರು ವಿರೋಧಿಸುತ್ತಾರೆ. ಇವೆಲ್ಲವನ್ನೂ ಪರಿಹರಿಸಿ ಕೊನೆಗೆ ಇಬ್ಬರೂ ಮದುವೆಯಾಗುತ್ತಾರೆ.

೧೩೨೮. ಮೌನ ಹೋರಾಟ

(೧೯೯೦ / ವರ್ಣ / ಸಾಮಾಜಿಕ)

ಲಾ: ಶ್ರೀ ಬಾಲಾಜಿ ಸಿನಿ ಕ್ರಿಯೇಷನ್ಸ್

ಪ್ರೊ: ಮಂಜುನಾಥ ಹೆಗ್ಡೆ ದೊಡ್ಡಮನಿ

ನಿ: ಹೆಚ್.ಎನ್.ಆರ್.ಪ್ರಸಾದ್

ಅ: ಸುಂದರಕೃಷ್ಣ ಅರಸ್, ಗಿರಿಜಾ ಲೋಕೇಶ್, ವಿಜಯ್, ಸತ್ಯಜಿತ್, ಸುಧೀಂದ್ರ, ಸದಾಶಿವ ಬ್ರಹ್ಮಾವರ್, ಗುರುಕಿರಣ್. ಅರ್ಪಿತಾ, ನಾಗೇಶ್ ಕಶ್ಯಪ್, ತ್ರಿವೇಣಿ, ಅನಿಲ್ ಕುಮಾರ್, ಆರ್.ಟಿ.ರಮಾ

ಕ: ವಸಂತಕುಮಾರ್ ಕೊಂಡಜ್ಜಿ, ಮಂಜುನಾಥ್ ಹೆಗ್ಡೆ

ಚಿ.ಕ: ಹೆಚ್.ಎನ್.ಆರ್.ಪ್ರಸಾದ್

ಮಾ: ಪಾಲ್ ಸುದರ್ಶನ್

ಸಂ: ಸ್ವಾಮಿ

ಛಾ: ಎಸ್.ಆರ್.ಭಟ್

ಸ: ಶಂಕರ್ - ಗಣೇಶ್

ಧ್ವ: ಸಂಕೇತ್

ಪ್ರ: ಮಹದೇವ ಗೌಡ

ಸ್ಟು: ಕಂಠೀರವ

ಸೆ: ರೀಲು - ೧೨, ಉದ್ದ - ೩೨೫೪.೫೦

ಕ.ಸಾ: ತನ್ನ ತಂದೆಯನ್ನು ಕೊಂದವರನ್ನು ಸಾಯಿಸಿ ಸೂರಿ ಸೇಡು ತೀರಿಸಿಕೊಳ್ಳುತ್ತಾನೆ. ಆದರೆ ಆ ಕೊಲೆಯ ಅಪಾದನೆ ಆತನನ್ನು ಸಾಕಿದ ಎ.ಸಿ.ಪಿ.ಗರುಡ ಅವರ ಮೇಲೆ ಬರುತ್ತದೆ. ಅವರ ಪರಿಸ್ಥಿತಿಯನ್ನು ನೋಡಲಾಗದ ಸೂರಿ ಅಪರಾಧಿ ಭಾವದಿಂದ ಬಳಲಿ ಕೊನೆಗೆ ನ್ಯಾಯಾಲಯದಲ್ಲಿ ತಾನೇ ಕೊಲೆಗಾರನೆಂದು ಒಪ್ಪಿಕೊಂಡು ಗರುಡ ಅವರ ಮೇಲಿದ್ದ ಅಪಾದನೆಯನ್ನು ದೂರ ಮಾಡುತ್ತಾನೆ.

೧೩೨೯. ಇವಳೆಂಥಾ ಹೆಂಡ್ತಿ

(೧೯೯೦ / ವರ್ಣ / ಸಾಮಾಜಿಕ)

ಲಾ: ರೋಹನ್ ಫಿಲಂ ಕಂಬೈನ್ಸ್

ಪ್ರೊ: ಶ್ಯಾಂ ಎನ್.ಶೆಟ್ಟಿ, ಸುಂದರ್.ಜಿ.ಮೆಂಡನ್

ನಿ: ಮುದ್ದುರಾಜ್

ಸ.ನಿ: ಮಂಡ್ಯ ಸುರೇಶ್

ಅ: ಅನಂತ್ ನಾಗ್, ಮುಖ್ಯಮಂತ್ರಿ ಚಂದ್ರು, ಮೈಸೂರು ಲೋಕೇಶ್, ನಂಜುಂಡಯ್ಯ, ಮಹಾಲಕ್ಷ್ಮಿ, ತಾರಾ, ಕಿಶೋರಿ ಬಲ್ಲಾಳ್, ಅರವಿಂದ್, ಡಿಂಗ್ರಿ ನಾಗರಾಜ್, ಸದಾಶಿವ ಸಾಲಿಯಾನ್, ಕೃಷ್ಣೇಗೌಡ, ಸೀತಾರಾಂ, ಶಂಕರ್ ಭಟ್, ಬಿರೇದಾರ್, ಭೀಮರಾವ್, ಮಂಜುಮಾಲಿನಿ, ಮಾ।ಸುನೀಲ್, ಮಾ।ವರದರಾಜ್

ಕ/ಚಿ.ಕ: ಮುದ್ದುರಾಜ್



ಮಾ: ಶ್ರೀವತ್ಸ ರಂಗನಾಥ್
ಗೀ: ಚಿ.ಉದಯಶಂಕರ್, ದೊಡ್ಡರಂಗೇ ಗೌಡ, ಎಂ.ಎನ್.ವ್ಯಾಸರಾವ್, ಶ್ರೀವತ್ಸ ರಂಗನಾಥ್
ಗಾ: ಮನು, ಮಂಜುಳಾ ಗುರು, ಬಿ.ಆರ್.ಛಾಯಾ
ಸಂ: ಎಸ್.ಮನೋಹರ್
ಛಾ: ಶ್ರೀರಂಗ
ಕಲೆ: ರಾಜು
ಸ: ಉಪೇಂದ್ರ ಕುಮಾರ್
ಧ್ವ: (ಹಾ) ಎಸ್.ಪಿ.ರಾಮನಾಥನ್ (ಮಾ) ಕೃಷ್ಣಮೂರ್ತಿ, ಅಣ್ಣಾದೊರೈ
ನೃ: ಉಡುಪಿ ಜಯರಾಂ
ಸಾ: ರುದ್ರೇಶ್
ವ: ಸುಂದರ್
ಪ್ರ: ಶ್ರೀನಿವಾಸ್
ಸ್ಥಿ: ಕಂಠೀರವ
ಹಾ: ೧)'ಏನೇನೋ ಕೇಳಿದೆ ಈ ವಯಸು...', ೨)'ಸಂಜೆಯಲಿ ಕೆಂಪೇರುವಾಗ...', ೩)'ಏಳೇಳು ಬಣ್ಣ ಬಣ್ಣಾ ಏರಚಿ...', ೪)'ನೀ ಯಾಕೆ ಹಾಗೆ ನನ್ನ ನೋಡ್ತೀಯ...', ೫)'ಎಂದೂ ಬರಬಾರದು ಅನುಮಾನ...'
ಕ.ಸಾ: ಹಠಮಾರಿ ಸ್ವಭಾವದ ರೇಖಾ ತನ್ನ ಕಂಪನಿಯಲ್ಲಿ ಕೆಲಸ ಮಾಡುವ ಅರುಣ್‌ನನ್ನು ಮದುವೆಯಾಗ ಬಯಸುತ್ತಾಳೆ. ಆದರ ಅರುಣ್ ಸುಗುಣಳನ್ನು ಪ್ರೀತಿಸುತ್ತಾನೆ. ಕೊನೆಗೆ ರೇಖಾಳ ತಾಯಿಯ ಬಲವಂತಕ್ಕೆ ಮಣಿದು ಅರುಣ್, ರೇಖಾಳನ್ನು ಮದುವೆಯಾಗುತ್ತಾನೆ. ಆದರೆ ರೇಖಾಳನ್ನು ಮದುವೆಯಾಗ ಬೇಕೆಂದಿದ್ದ ರಘು ಸುಗುಣ ಹಾಗು ಅರುಣ್ ಮಧ್ಯೆ ಅನೈತಿಕ ಸಂಬಂಧವಿದೆಯೆಂದು ಹೇಳಿ ಗಂಡ ಹೆಂಡತಿಯನ್ನು ಬೇರ್ಪಡಿಸುತ್ತಾನೆ. ಕೊನೆಯಲ್ಲಿ ಸತ್ಯಾಂಶ ತಿಳಿದು ರೇಖಾಳಿಗೆ ತಪ್ಪಿನ ಅರಿವಾಗಿ ಅರುಣ್ ಜೊತೆ ಸಂಸಾರ ಮಾಡಿಕೊಂಡು ಹೋಗುತ್ತಾಳೆ.

೧೩೩೦. ನಿಗೂಢ ರಹಸ್ಯ

(೧೯೯೦ / ವರ್ಣ / ಸಾಮಾಜಿಕ)
ಲಾ: ಜಿ.ಆರ್.ಕೆ.ಫಿಲಂಸ್
ಪ್ರೊ: ಜಗದೀಶ್ ಮಲ್ನಾಡ್, ಕಾಶೀನಾಥ್ ಜಿಂದುಪುರ್ಗಿ
ನಿ: ಪೇರಾಲ
ಸ.ನಿ: ಶ್ರೀಕಾಂತ್ ಕುಲಕರ್ಣಿ
ಅ: ಶಂಕರ್ ನಾಗ್, ಗೀತಾ, ವನಿತಾ ವಾಸು, ತಾರಾ, ರಮೇಶ್ ಭಟ್, ಕಮಿನಿಧರನ್, ಸುಧೀರ್, ದೊಡ್ಡಣ್ಣ, ಮೈಸೂರು ಲೋಕೇಶ್, ಸಿಹಿಕಹಿ ಚಂದ್ರು, ಉಮಾಶ್ರೀ
ಕ/ಚಿ.ಕ: ಪೇರಾಲ
ಗೀ: ಹಂಸಲೇಖ
ಸಂ: ಅನಿಲ್ ಮಲ್ನಾಡ್
ಛಾ: ಮನೋಹರ್
ಸ: ಹಂಸಲೇಖ
ನೃ: ಉಡುಪಿ ಜಯರಾಂ
ಸಾ: ಜೈಮಿನಿ, ನಾಗರಾಜ್
ವ: ಸುರೇಶ್
ಪ್ರ: ಚಂದ್ರು
ಹಾ: ೧)'ಓ ಓ ತಿಳಿಯ ನೀರ...', ೨)'ಮದನಾ ಮೋಹನಾ...', ೩)'ಬಾಳೆ ಜೋ ಜೀವನ ಜೋಕಾಲಿಯೋ. .', ೪)'ಯಾ ಯಾ ಏನಪ್ಪಾ ಯಜಮಾನ...', ೫)'ಮಾನಸ ರಾಗವಿದೂ...'
ಸೆ: ರೀಲು ೧೩, ಉದ ೩೯೬೬.೦೦
ವಿ: ಗೀತಾ ದ್ವಿಪಾತ್ರದಲ್ಲಿ ಅಭಿನಯ.

ಕ.ಸಾ: ಆ ಊರಿನಲ್ಲಿ ಪ್ರತೀ ಸಾರಿ ರಾತ್ರಿ ಕರೆಂಟ್ ಹೋದಾಗಲೆಲ್ಲ ಬಿಜ್ಬೊಬ್ಬರ ಕೊಲೆಯಾಗುತ್ತಿರುತ್ತದೆ. ಅಲ್ಲಿಗೆ ಯಾವುದೇ ಆಟೋ ಡ್ರೈವರ್ ಕತ್ತಲಾದ ಮೇಲೆ ಬರುವುದಿಲ್ಲ, ಆ ಊರಿಗೆ ಹೊಸದಾಗಿ ಬಂದ ಆರ್ಕಿಟೆಕ್ಟ್ ಮದನ್ ಮೋಹನ್ ಈ ಕತೆಯನ್ನು ಕೇಳಿ ಆಶ್ಚರ್ಯಪಡುತ್ತಾನೆ. ಅಲ್ಲದೆ ಅವನಿಗೂ ಅನೇಕ ತೊಂದರೆಗಳ ಅನುಭವವಾಗುತ್ತದೆ. ಕೊನೆಗೆ ಇದಕ್ಕೆಲ್ಲ ಕಾರಣ ಯಾರೆಂದು ಮದನ್ ಮೋಹನ್ ಕಂಡುಹಿಡಿಯುತ್ತಾನೆ.

೧೩೩೧. ಶೃತಿ ಇಲ್ಲದ ಹಾಡು

(೧೯೯೦ / ವರ್ಣ / ಸಾಮಾಜಿಕ)
ಲಾ: ಕ್ರಾಂತಿಕ್ ಕಾವ್ಯ ಫಿಲಂಸ್
ನಿ: ಎಸ್. ಸುಭಾಷ್ ಚಂದ್ರನ್ . ಎಸ್.ಕೃಷ್ಣಮೂರ್ತಿ
ಸ.ನಿ: ಎಸ್.ಶ್ರೀನಿವಾಸ್, ವಿನೋದ್
ಅ: ನೀಲ್‌ರಾಜ್, ವಿನೋದ್, ತ್ರಿವೇಣಿ, ನಂದಿನಿ, ನಿರಂಜನ್, ನವೀನ್, ಡಿಸ್ಕೋ ಗುಂಡಣ್ಣ, ಸಂಜಯ್ ಸೂರಿ, ಚಂದ್ರಕಲಾ
ಕ/ಚಿ.ಕ: ಎಸ್. ಸುಭಾಷ್ ಚಂದ್ರನ್ . ಎಸ್.ಕೃಷ್ಣಮೂರ್ತಿ
ಮಾ: ವಿನೋದ್
ಗೀ: ಮ.ನ.ಗುರುದತ್. ವಿನೋದ್
ಸಂ: ಎಂ.ಎಸ್.ಸ್ವಾಮಿ

ಛಾ: ಎಂ.ಇ.ರಾಜ್
ಸ: ರಾಜಹಂಸ
ನೃ: ಕೈಲಾಸ್
ಪ್ರ: ಸುಂದರ್, ಮಣಿ
ಹಾ: ೧)'ಒಲವಿನ ಕಾವ್ಯದ ಪಲ್ಲವಿಯೇ..', ೨)'ಈ ಮ್ಯ ಸೋಕೇ ಹೃದಯ...', ೩)'ಈ ಬದುಕ ಹಾಡ ಕೇಳ್ರೀ...'
ಸೆ: ರೀಲು ೧೪, ಉದ - ೩೫೬೫.೭೫
ಕ.ಸಾ: ಉಪಾಧ್ಯಾಯನಾಗಿ ಹಳ್ಳಿಯೊಂದಕ್ಕೆ ಬರುವ ಗೋಪಿ ಅಲ್ಲಿನ ಗೌಡರ ಮಗಳನ್ನು ಪ್ರೀತಿಸುತ್ತಾನೆ. ಆದರೆ ಗೋಪಿ ಊರಲ್ಲಿ ಇಲ್ಲದಿದ್ದಾಗ ಗೌಡರು ಮಗಳಿಗೆ ಇಷ್ಟವಿಲ್ಲದಿದ್ದರೂ ಮಗಳನ್ನು ಮಿಲಿಟರಿಯಲ್ಲಿರುವ ತಂಗಿಯ ಮಗನಿಗೆ ಕೊಟ್ಟು ಮದುವೆ ಮಾಡುತ್ತಾರೆ. ಗೋಪಿ ಬರುವಷ್ಟರಲ್ಲಿ ನಡೆದುಹೋದ ಮದುವೆಗೆ ಪಶ್ಚಾತ್ತಾಪ ಪಡುತ್ತಾನೆ.

೧೩೩೨. ಕಾಲೇಜ್ ಹೀರೋ

(೧೯೯೦ / ವರ್ಣ / ಸಾಮಾಜಿಕ)
ಲಾ: ಅಷ್ಟಲಕ್ಷ್ಮಿ ಸಿನಿ ಕಂಬೈನ್ಸ್
ಪ್ರೊ: ಎಂ.ಲೀಲಾವತಿ
ನಿ: ವಿ.ಚಂದ್ರಹಾಸ್
ಸ.ನಿ: ಎಸ್.ನಾರಾಯಣ್
ಅ: ವಿನೋದ್ ರಾಜ್, ಮಧುಶ್ರೀ, ಅಶೋಕ್ , ದೇವರಾಜ್. ಸದಾಶಿವ ಸಾಲಿಯಾನ್, ಅಭಿಜಿತ್, ಅಂಜಲಿ, ಸೋನಿಯಾ, ವಿನಯಾ ಪ್ರಸಾದ್, ರಾಮಮೂರ್ತಿ, ಶಿವರಂಜನಿ, ಲೀಲಾವತಿ, ಆಶಾಲತಾ, ಧೀರಜ್ ಮಸೇಸ್
ಕ: ಎಂ. ಲೀಲಾವತಿ

ಚಿ.ಕ: ವಿ.ಚಂದ್ರಹಾಸ್
ಮಾ: ಆರ್.ಎನ್.ಜಯಗೋಪಾಲ್
ಗೀ: ಹಂಸಲೇಖ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಲತಾ ಹಂಸಲೇಖ. ಬಿ.ಆರ್.ಛಾಯಾ
ಸಂ: ವಿ.ಶಂಕರ್
ಛಾ: ಕೃಷ್ಣ
ಕಲೆ: ವೆಂಕಟರಾಮ್
ಸ: ಹಂಸಲೇಖ
ಧ್ವ: ಸೋಮಶೇಖರ್
ನೃ: ಎಂ.ಸುಂದರಂ, ಜಾನ್ ಬಾಬು, ಸತೀಶ್
ಸಾ: ಥ್ರಿಲ್ಲರ್ ಮಂಜು
ವ: ಶಿವ, ಸುಬ್ಬರಾವ್
ಪ್ರ: ವಿಠಲ್‌ಬಾಬು, ಕೆ.ನಾಗೇಶ್ವರರಾವ್
ಸ್ಥಿ: ಪ್ರಸಾದ್
ಹಾ: ೧)'ಕಮಲಾ ಕಮಲಾ ಕಮಲಹಾಸನ್...', ೨)'ಕೆಲಸವೊಂದೇ ನಿನ್ನ ಕೆಲಸ...', ೩)'ಹೀರೋ ಕಾಲೇಜ್ ಹೀರೋ...', ೪)'ಬುಕ್ಕಮ್ಮಾ ಬುಕ್ಕಮ್ಮಾ ನಿನ್ನ ಕೈಲ್ಯಾವ ...'
ಸೆ: ರೀಲು - ೧೩, ಉದ್ದ - ೩೬೭೮.೦೦
ಕ.ಸಾ: ಮಾನಭಂಗ ಮಾಡಿದ ಅಪರಾಧಕ್ಕಾಗಿ ಮೃತ್ಯುಂಜಯನನ್ನು ಪೋಲೀಸ್ ಅಧಿಕಾರಿ ಪ್ರತಾಪ್ ಶಿಕ್ಷಿಸುತ್ತಾನೆ. ಇದರಿಂದ ಕೋಪಗೊಂಡ ಮೃತ್ಯುಂಜಯ, ಪ್ರತಾಪ್‌ನನ್ನು ಕೊಲ್ಲುತ್ತಾನೆ. ಮುಂದೆ ಇವರ ಮಕ್ಕಳು ಕಾಲೇಜ್‌ನಲ್ಲಿ ಓದುವಾಗ ದ್ವೇಷ ಸಾಧಿಸುತ್ತಾರೆ, ಪ್ರತಾಪ್‌ನ ಚಿಕ್ಕ ಮಗ ಮೃತ್ಯುಂಜಯನಿಂದ ಕೊಲ್ಲಲ್ಪಡುತ್ತಾನೆ, ಆತನ ಅಣ್ಣ ನಿಜ ವಿಷಯ ತಿಳಿದು ಅವರೆಲ್ಲರ ಮೇಲೆ ಸೇಡು ತೀರಿಸಿಕೊಳ್ಳುತ್ತಾನೆ.

೧೩೩೩. ಪೋಲಿ ಕಿಟ್ಟಿ

(೧೯೯೦ / ವರ್ಣ / ಸಾಮಾಜಿಕ)
ಲಾ: ಶ್ರೀ ಭಾಗ್ಯಲಕ್ಷ್ಮಿ ಕಂಬೈನ್ಸ್
ಪ್ರೊ: ಎಸ್.ಬಿ.ವೆಂಕಟೇಶ್ ಬಾಬು
ನಿ: ಕೆ.ವಿ.ಜಯರಾಂ
ಸ.ನಿ: ಜೆ.ಬಲರಾಂ
ಅ: ಕಾಶೀನಾಥ್, ದೇವರಾಜ್, ಸಿ.ಆರ್.ಸಿಂಹ, ಲೋಕನಾಥ್, ರಮೇಶ್ ಭಟ್, ಅವಿನಾಶ್, ದೊಡ್ಡಣ್ಣ, ಮೈಸೂರು ಲೋಕೇಶ್, ಮಂಜುಳಾ ಶರ್ಮ, ಉಮಾಶ್ರೀ, ಪದ್ಮಾ ಕುಮುಟ, ಜ್ಯೋತಿ, ಡಿಸ್ಕೋ ಶಾಂತಿ, ಸಿತಾರಾ, ಶಂಕರ್ ಪಾಟೀಲ್, ಶಂಕರ್
ಕ/ಚಿ.ಕ: ಕೆ.ವಿ.ಜಯರಾಂ
ಮಾ: ಶ್ರೀರಂಗ
ಗೀ: ದೊಡ್ಡರಂಗೇ ಗೌಡ
ಗಾ: ಸುಜಾತ, ಎಸ್.ಪಿ.ಬಾಲಸುಬ್ರಹ್ಮಣ್ಯಂ. ಚಿತ್ರಾ
ಸಂ: ಮನೋಹರ್
ಛಾ: ಆರ್.ಸಿ.ಮಾಪಾಕ್ಷಿ



ಕಲೆ: ರಾಜು
ಸ: ಸಂಗೀತರಾಜ
ಧ್ವ: (ಹಾ) ಎಸ್.ಪಿ.ರಾಮನಾಥನ್ (ಮಾ) ಶಿವರಾಜ್
ನೃ: ರಘುರಾಂ
ಸಾ: ನಂಜುಂಡಿ ನಾಗರಾಜ್
ವ: ಚನ್ನಯ್ಯ
ಪ್ರ: ಶ್ರೀನಿವಾಸ್
ಸ್ಟು: ಕಂಠೀರವ, ಪ್ರೀಮಿಯರ್
ಹಾ: ೧)'ಮುದ್ದಿನ ಗೆಳೆಯ ಬಾರೋ ಸನಿಹ...', ೨)'ಈ ರಾತ್ರಿ ಅತಿ ಮಧುರ...', ೩)'ತಂಗಾಳಿ ಬೀಸಿದಾಗ...', ೪) 'ಜೇಡನ ಬಲೆಯಂತೆ ಈ ಜೀವನ...', ೫)'ಕೃಷ್ಣಯ್ಯ ಏಮಿ ಕಾಪಾಲಯ್ಯ...', ೬)'ಸಂಗಾತಿಯೇ ಎಲ್ಲಿರುವೇ...'
ಸೆ: ರೀಲು - ೧೫, ಉದ್ದ - ೪೬೬೬.೫೦, 'ಯು' ಸರ್ಟಿಫಿಕೇಟ್
ಕ.ಸಾ: ಮದುವೆಯಾದ ಕಿಟ್ಟಿಗೆ ಹೆಂಡತಿಯನ್ನು ಸೇರಬೇಕೆಂಬ ಆಸೆ, ಆದರೆ ಅವರ ಸಂಪ್ರದಾಯಸ್ಥ ಮಾವ ಗ್ರಹಗತಿ ಸರಿಯಿಲ್ಲವೆಂದು ಪ್ರಸ್ತವನ್ನು ಮುಂದೂಡುತ್ತಾನೆ. ಇದರಿಂದ ಕೋಪಗೊಂಡ ಕಿಟ್ಟಿ ವೇಶ್ಯೆಯರ ಸಹವಾಸ ಮಾಡಲು ಹೋಗುತ್ತಾನೆ. ಅವನಂತೆಯೇ ಇರುವ ಬಾಲು ಸತ್ತಾಗ ಎಲ್ಲರೂ ಕಿಟ್ಟಿಯೇ ಸತ್ತನೆಂದು ಭಾವಿಸುತ್ತಾರೆ. ಕಿಟ್ಟಿ ಬಂದು ಬಾಲು ಸಾವಿಗೆ ತನ್ನ ಮಾವನೇ ಕಾರಣ ಎಂಬುದನ್ನು ಪತ್ತೆ ಹಚ್ಚಿದಾಗ ತಪ್ಪನ್ನು ಒಪ್ಪಿಕೊಂಡ ಮಾವ ಕೊನೆಗ ಅವರ ಪ್ರಸ್ಥಕ್ಕೆ ದಿನ ನಿಗದಿ ಮಾಡುತ್ತಾನೆ.

೧೩೩೪. ಕ್ರಮ

(೧೯೯೦ / ವರ್ಣ / ಸಾಮಾಜಿಕ)
ಲಾ: ನಿಶಾ ಮೂವೀಸ್
ಪ್ರೊ: ಮೆಹರುನ್ನೀಸಾ
ನಿ: ಅಸ್ರಾರ್ ಅಬೀದ್
ಸ.ನಿ: ಸದಾನಂದ ನಾಯಕ್, ಬಾಲಾಜಿ
ಅ: ಶ್ರೀನಾಥ್ , ವಿಜಯಕಾಶಿ, ಉದಯ್, ಕಮಲಶ್ರೀ, ಸರೋಜಾ, ಜನಾರ್ದನ್, ಗಿರಿಮಲ್ಲಿಗೆ ಗಿರಿಜಾ, ತಾರಾ, ಸುಧಾ ನರಸಿಂಹರಾಜು, ಪೃಥ್ವಿ , ಗೋಟೂರಿ, ಶ್ರೀರಕ್ಷಾ. ಶ್ರೀಶೈಲನ್, ಕಾಮಣ್ಣ, ಸದಾನಂದ ನಾಯಕ್, ವಖಾರ್ ಆಬೀದ್, ರೀಮಾ
ಕ/ಚಿ.ಕ/ಮಾ: ಅಸ್ರಾರ್ ಅಬೀದ್
ಗೀ: ದೊಡ್ಡರಂಗೇ ಗೌಡ

ಗಾ: ಮಂಜುಳಾ ಗುರು . ಜಯಪಾಲ್
ಸಂ: ಚಂದ್ರಕಾಂತ್ ಪೊದ್ದಾರ್
ಛಾ: ಬಿ.ಎಸ್.ಶಾಸ್ತ್ರಿ
ಸ: ದಾಮೋದರ್
ಧ್ವ: ಅಸದ್ ಮತ್ತು ವಜಾರ್
ವ: ಮೆಹರುನ್ನೀಸಾ
ವಿ: ೧೯೯೦-೯೧ರ ರಾಜ್ಯಪ್ರಶಸ್ತಿ : ದ್ವಿತೀಯ ಅತ್ಯುತ್ತಮ ಚಿತ್ರ. ಅತ್ಯುತ್ತಮ ನಟಿ (ತಾರಾ) ಅತ್ಯುತ್ತಮ ಚಿತ್ರಕಥೆ (ಅಸ್ರಾರ್ ಅಬಿದ್)
ಕ.ಸಾ: ವರದಕ್ಷಿಣೆ ತಾರದ ಸೊಸೆಯನ್ನು ನಿರ್ದಾಕ್ಷಿಣ್ಯವಾಗಿ ಕೊಂದ ಅತ್ತೆ, ಮಾವ, ಗಂಡನ ವಿರುದ್ಧ ಕ್ರಮ ಕೈಗೊಳ್ಳುವಂತೆ ನಾಯಕಿ ನಿಷ್ಠಾವಂತ ಪೊಲೀಸ್ ಅಧಿಕಾರಿಗೆ ಆಗ್ರಹ ಪಡಿಸಿ ಸಾಯುತ್ತಾಳೆ. ನ್ಯಾಯವಾಗಿ ಕಾನೂನು ರೀತಿಯಲ್ಲಿ ಅಪರಾಧಿಗಳನ್ನು ಶಿಕ್ಷಿಸಲಾಗದ ಪೊಲೀಸ್ ಅಧಿಕಾರಿ ಕಡೆಗೆ ಕಾನೂನನ್ನು ಕೈಗೆ ತೆಗೆದುಕೊಳ್ಳುತ್ತಾರೆ. ವರದಕ್ಷಿಣೆ ಸಮಸ್ಯೆಯನ್ನು ಕುರಿತ ಚಿತ್ರ.

೧೯೯೧

೧೩೩೫. ಲಯನ್ ಜಗಪತಿ ರಾವ್

(೧೯೯೧ / ವರ್ಣ / ಸಾಮಾಜಿಕ)
ಲಾ: ಶ್ರೀ ವಿನಾಯಕ ಕಂಬೈನ್ಸ್
ಪ್ರೊ: ಬಿ.ವಿಜಯಕುಮಾರ್, ಹೆಚ್. ರಾಮಮೂರ್ತಿ, ಎನ್. ವೆಂಕಟೇಶ್, ಎಂ.ರಾಜಗೋಪಾಲ್, ಎಸ್. ಎ.ಸತ್ಯ, ಕೆ.ವರದರಾಜ್
ನಿ: ಸಾಯಿಪ್ರಕಾಶ್
ಸ.ನಿ: ವಿ.ಆರ್.ಭಾಸ್ಕರ್
ಅ: ವಿಷ್ಣುವರ್ಧನ್(ದ್ವಿಪಾತ್ರ), ಲಕ್ಷ್ಮಿ, ಭವ್ಯ, ಎಂ.ಎಸ್.ಉಮೇಶ್, ಕೃಷ್ಣೇಗೌಡ, ರತ್ನಾಕರ್, ರಾಜಾನಂದ್, ಮುಖ್ಯಮಂತ್ರಿ ಚಂದ್ರು, ಅರವಿಂದ್, ಆಗ್ರೋ ಚಿಕ್ಕಣ್ಣ, ಸದಾಶಿವ ಸಾಲಿಯಾನ್, ಶಾಂತಮ್ಮ
ಕ: ಸಾಯಿನಾಥ್
ಚಿ.ಕ: ವಿಷ್ಣುವರ್ಧನ್, ಸಾಯಿನಾಥ್, ವಿ.ಆರ್.ಭಾಸ್ಕರ್
ಮಾ: ಬಿ.ಎಲ್.ವೇಣು, ವಿ.ಆರ್.ಭಾಸ್ಕರ್
ಗೀ: ಆರ್. ಎನ್.ಜಯಗೋಪಾಲ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್.ಜಾನಕಿ
ಸಂ: ವಿಕ್ಟರ್ ಯಾದವ್
ಛಾ: ಡಿ.ವಿ.ರಾಜಾರಾಂ
ಕಲೆ: ಬಿ.ನಾಗರಾಜ ರಾವ್
ಸ: ಉಪೇಂದ್ರ ಕುಮಾರ್
ನೃ: ಉಡುಪಿ ಜಯರಾಂ, ದೇವಿ
ಸಾ: ಹಾರ್ಸ್ ಬಾಬು
ಸ್ಟು: ಕಂಠೀರವ
ಹಾ: ೧)'ಪೋಲೀಸ್ ಹೀರೋ ವೆಲ್ ಕಂ...', ೨)'ಸ್ವಾಗತ ನಿಮಗೇ...', ೩)'ಪ್ರೇಮಕೆ ಪರ್ಮಿಟ್ ಬಂತು...', ೪)'ಕರ್ತವ್ಯವೆನಿಸುವ ಸಂಕೋಲೆ...' ೫)'ಏನಿದು ಶೋಧನೆ ...', ೬)'ಕುಮಾರ್ ... ಕುಮಾರ್ ...'
ಸೆ: ರೀಲು - ೧೫, ಉದ್ದ - ೪೬೫೧.೦೦
ವಿ: ವಿಷ್ಣುವರ್ಧನ್ ದ್ವಿಪಾತ್ರದಲ್ಲಿನ ಇದೊಂದು ಪುನರವತರಣಿಕೆ. ಕನ್ನಡದ ಜಾಯಮಾನಕ್ಕೆ ಒಗ್ಗಿಸಲು ವಿಷ್ಣುವರ್ಧನ್ ಚಿತ್ರಕಥೆಯಲ್ಲೂ ಭಾಗವಹಿಸಿದ್ದರು. ಶ್ರೇಷ್ಠ ಅಭಿನಯಕ್ಕಾಗಿ ವಿಷ್ಣುವರ್ಧನ್‌ಗೆ ೧೯೯೦-೯೧ನೇ ಸಾಲಿನ ರಾಜ್ಯ ಚಲನಚಿತ್ರ ಪ್ರಶಸ್ತಿ ಲಭಿಸಿತು.
ಕ.ಸಾ: ಜಗಪತಿರಾವ್ ಪ್ರಸಿದ್ಧ ವಕೀಲರಾದರೆ ಅವರ ಮಗ ದಕ್ಷ ಪೋಲೀಸ್ ಅಧಿಕಾರಿ. ಗಣ್ಯವ್ಯಕ್ತಿ ಎನಿಸಿಕೊಂಡ ರಾಜಕಾರಣಿಯೊಬ್ಬನ ಮುಖವಾಡ ಕಳಚುವ ಹಂತದಲ್ಲಿ ಜಗಪತಿರಾವ್ ಸಂಸಾರದಲ್ಲಿ ಬಿರುಕು ಮೂಡುತ್ತದೆ. ಅದೇ ರಾಜಕಾರಣಿಯ ಮಗಳು ಪೋಲೀಸ್ ಅಧಿಕಾರಿಯನ್ನು ಪ್ರೇಮಿಸಿ ಮದುವೆಯಾಗುತ್ತಾಳೆ. ಈ ಹಂತದಲ್ಲಿ ನ್ಯಾಯಾಧೀಶರಾದರೂ ಅವಕ್ಕೆ ರಾಜೀನಾಮೆ ನೀಡಿ ವಕೀಲರಾಗಿ ವಾದಿಸಿ ಜಗಪತಿರಾವ್ ಎಲ್ಲವನ್ನೂ ಬಗೆಹರಿಸುತ್ತಾರೆ.

೧೩೩೬. ಹತ್ಯಾಕಾಂಡ

(೧೯೯೧ / ವರ್ಣ / ಪತ್ತೇದಾರಿ)
ಲಾ: ಶ್ರೀ ಮಾರಿಕಾಂಬ ಕ್ರಿಯೇಷನ್ಸ್
ಪ್ರೊ: ಕಾಶೀನಾಥ್ ಎಸ್.ಗಾಯತೊಂಡೆ
ನಿ: ಮಹಮ್ಮದ್ ಗೌಸ್
ಅ: ದೇವರಾಜ್, ದೊಡ್ಡಣ್ಣ, ಅವಿನಾಶ್, ರಾಮಸ್ವಾಮಿ, ವಿಶ್ವವಿಜೇತ, ಅಭಿನಯ, ಜನಕರಾಜ್, ಶ್ರೀ ರಕ್ಷಾ
ಕ/ಚಿ.ಕ/ಮಾ: ಮಹಮ್ಮದ್ ಗೌಸ್
ಗೀ: ಹಂಸಲೇಖ
ಸಂ: ಎಂ.ಎಸ್.ಸ್ವಾಮಿ
ಛಾ: ವಾಸುದೇವ
ಸ: ಹಂಸಲೇಖ
ಸಾ: ರುದ್ರೇಶ್
ವ: ಜಯರಾಂ
ಪ್ರ: ವೆಂಕಟೇಶ್
ಸ್ಟು: ಕಂಠೀರವ, ಚಾಮುಂಡೇಶ್ವರಿ, ಪ್ರಸಾದ್
ಹಾ: ೧)'ಸಾಗರಕೇ ಒಂದು ಕೊನೆಯಿದೆ ಆಸೆಗೆ ಇಲ್ಲಯ್ಯ...'
ವಿ: ತಮಿಳಿನ ಹಾಸ್ಯನಟ ಜನಕರಾಜ್ ಅಭಿನಯ.
ಕ.ಸಾ: ನೆಮ್ಮದಿಯ ಸಂಸಾರದ ಗೌಡರ ಮಗನ ಸ್ನೇಹಿತ ಮಧು ಮನೆಗೆ ಬಂದ ದಿನ ಗೌಡರ ಕೊಲೆಯಾಗುತ್ತದೆ. ನಂತರ ಗೌಡರ ಮಗನ ಸ್ನೇಹಿತ ಹಾಗೂ ಮಂತ್ರಿಯ ಕೊಲೆಯಾಗುತ್ತದೆ. ಇದಕ್ಕೆಲ್ಲ ಕಾರಣ ಮಧು ಎಂದು ಜನ ಆಪಾದಿಸುತ್ತಾರೆ, ಆಗ ಸಿ.ಬಿ.ಐ. ಅಧಿಕಾರಿ ಬಂದು ತನಿಖೆ ನಡೆಸಿ ನಿಜವಾದ ಕೊಲೆಗಾರ ಯಾರೆಂದು ಪತ್ತೆ ಹಚ್ಚುತ್ತಾರೆ.

೧೩೩೭. ವರಗಳ ಬೇಟೆ

(೧೯೯೧ / ವರ್ಣ / ಸಾಮಾಜಿಕ)
ಲಾ: ವಿಜಯವಾಣಿ ಫಿಲಂಸ್
ಪ್ರೊ: ಟಿ.ಮುನಿರಾಜು
ನಿ: ರೇಣುಕಾ ಶರ್ಮ
ಸ.ನಿ: ಮಧುಕರ್ ಬೆಳಕವಾಡಿ
ಅ: ರಾಜೇಶ್, ಸಂಗೀತ, ಸಿಹಿಕಹಿ ಗೀತ, ಸುಧಾರಾಣಿ, ಮಧುಶ್ರೀ, ರಮೇಶ್, ಶ್ರೀಲಲಿತ, ಧೀರೇಂದ್ರ ಗೋಪಾಲ್, ಜಗ್ಗೇಶ್
ಕ: ವಿ.ಸೋಮಶೇಖರ್
ಚಿ.ಕ: ಟಿ.ಎಸ್.ನರಸಿಂಹನ್
ಮಾ: ಕೆ.ಎಸ್.ಸತ್ಯನಾರಾಯಣ
ಗೀ: ಶ್ಯಾಮ ಸುಂದರ ಕುಲಕರ್ಣಿ, ವಿಜಯನಾರಸಿಂಹ, ಚಿ.ಉದಯಶಂಕರ್
ಗಾ: ರಮೇಶ್, ಬಿ.ಆರ್.ಛಾಯಾ, ಮನು, ಮಂಜುಳಾ
ಸಂ: ವಿಕ್ಟರ್
ಛಾ: ವಿ.ಪ್ರಭಾಕರ್
ಕಲೆ: ರಮೇಶ್
ಸ: ಎಂ.ರಂಗರಾವ್
ನೃ: ಉಡುಪಿ ಜಯರಾಂ
ವ: ಎಸ್.ಸತ್ಯಂ

ಪ್ರ: ಕೋಟೇಶ್ವರ ರಾವ್
ಸ್ಟು: ಕಂಠೀರವ, ಚಾಮುಂಡೇಶ್ವರಿ
ಹಾ: ೧)'ನಾನೇ ತ್ರೀ ಇನ್ ವನ್...', ೨)'ಲವ್ ಮಾಡೋ ಕಾಲ ಕೂಡಿ ಬಂದಾಗ...', ೩)'ರಾಗದ ಸಂಗಮ ಭಾವದ ಸಂಭ್ರಮ...', ೪)'ಆನಂದ ಚಿಮ್ಮಿತು ಹೊಮ್ಮಿತು...', ೫)'ಎಲ್ಲಿದೇ ನೆಮ್ಮದಿ ಎಲ್ಲಿದೇ ...'
ಕ.ಸಾ: ಮೂವರು ಹೆಣ್ಣುಗಳು, ಮದುವೆ ಸಮಸ್ಯೆ. ಅಪ್ಪ ಅಮ್ಮನಿಗೆ ವರದಕ್ಷಿಣೆ ಸಮಸ್ಯೆ. ಕಡೆಗೆ ಎಲ್ಲಾ ಹೆಣ್ಣು ಮಕ್ಕಳು ಅವರವರ ಬಾಳ ಸಂಗಾತಿಯನ್ನಾಗಿ ಆರಿಸಿಕೊಳ್ಳುತ್ತಾರೆ. ವರದಕ್ಷಿಣೆ ಸಮಸ್ಯೆಗೆ ತಮ್ಮದೇ ಆದ ರೀತಿಯಲ್ಲಿ ಪರಿಹಾರ ಕಂಡುಕೊಳ್ಳುತ್ತಾರೆ.

೧೩೩೮. ಮನೇಲಿ ಇಲಿ ಬೀದೀಲಿ ಹುಲಿ

(೧೯೯೧ / ವರ್ಣ / ಸಾಮಾಜಿಕ)
ಲಾ: ಮಂತ್ರಾಲಯ ಎಂಟರ್‌ಪ್ರೈಸಸ್
ಪ್ರೊ: ಬಿ.ಹೆಚ್.ಬುಚ್ಚಿರೆಡ್ಡಿ, ದೌಲತ್.ಪಿ.ಬಾಟಿಯಾ
ನಿ: ಓಂ ಸಾಯಿಪ್ರಕಾಶ್
ಅ: ಅನಂತ್‌ನಾಗ್, ಶಶಿಕುಮಾರ್, ಮೈಸೂರು ಲೋಕೇಶ್, ಬೆಂಗಳೂರು ನಾಗೇಶ್, ಕುಣಿಗಲ್ ನಾಗಭೂಷಣ್, ಜನಾರ್ದನ್, ಮಹಾಲಕ್ಷ್ಮಿ, ತಾರಾ, ಸರ್ವಮಂಗಳಾ
ಕ: ವೆಂಕಟ್
ಚಿ.ಕ/ಮಾ: ಕುಣಿಗಲ್ ನಾಗಭೂಷಣ್
ಗೀ: ಆರ್. ಎನ್.ಜಯಗೋಪಾಲ್
ಗಾ: ಮಂಜುಳಾ ಗುರುರಾಜ್, ಮನು
ಸಂ: ಕೆ.ನರಸಯ್ಯ
ಛಾ: ಜಾನಿಲಾಲ್
ಕಲೆ: ಕೆ.ವಿ.ರಾಮಣ್ಣ
ಸ: ಶಂಕರ್ - ಗಣೇಶ್
ನೃ: ಶಿವಶಂಕರ್
ಸಾ: ಥ್ರಿಲ್ಲರ್ ಮಂಜು
ಹಾ: ೧)' ಮೊದಲರಾತ್ರಿ ಇದು ಮರೆಯದ ರಾತ್ರಿ...', ೨) 'ನಾ ಯಾರು ಗೊತ್ತೇನೋ ಮೈಕಲ್ ಜಾಕ್ಸನ್ನು...', ೩)'ರಾತ್ರಿ ತಂಪು ಹೊತ್ತಲ್ಲಿ...', ೩)'ಸ್ವಾಗತ ಸುಸ್ವಾಗತ ರಾಜ ಬಾರೋ...'
ಸೆ: ಉಪ್ರ ೪೦೩೫
ಕ.ಸಾ: ಕಂಪೆನಿಯ ಮ್ಯಾನೇಜಿಂಗ್ ಡೈರೆಕ್ಟರ್ ಪುರುಷೋತ್ತಮ ಆಫೀಸಿನಲ್ಲಿ ಹುಲಿಯಂತಿರುತ್ತಾನೆ, ಆದರೆ ಹೆಂಡತಿಯೆಂದರ ನಡುಗುತ್ತಾನೆ. ಆದರೆ ಅದೇ ಆಫೀಸಿನಲ್ಲಿ ಕೆಲಸ ಮಾಡುವ ಶಿವರಾಮನ ಹೆಂಡತಿ ಗಂಡನೆಂದರೆ ಹೆದರುತ್ತಾಳೆ. ಹೆಂಡತಿಯನ್ನು ಹದುಬಸ್ತಿನಲ್ಲಿಟ್ಟುಕೊಳ್ಳಬೇಕೆಂದು ಶಿವರಾಮ ಪುರುಷೋತ್ತಮನಿಗೆ ಸಲಹೆ ಕೊಡುತ್ತಿರುತ್ತಾನೆ. ಇದರ ಹಿನ್ನೆಲೆ ಅರಿತ ಪುರುಷೋತ್ತಮನ ಹೆಂಡತಿ ಶಿವರಾಮನ ಹೆಂಡತಿಗೆ ಗಂಡನಿಗೆ ಹೆದರಬಾರದೆಂದು ಪಾಠ ಹೇಳುತ್ತಾಳೆ, ಹೀಗೆ ಎರಡೂ ಸಂಸಾರಗಳಲ್ಲಿ ವಿರಸ ಉಂಟಾಗಿ ಕೊನೆಗೆ ಸಮರಸವೇ ಜೀವನವೆಂದು ಪಾಠ ಕಲಿಯುತ್ತಾರೆ.

೧೩೩೯. ಗಿರಿಮಲ್ಲಿಗೆ

(೧೯೯೧ / ವರ್ಣ / ಸಾಮಾಜಿಕ)
ಲಾ: ಎಂ.ಎಸ್.ಪ್ರೊಡಕ್ಷನ್ಸ್
ಪ್ರೊ/ನಿ: ಮೊಹಮ್ಮದ್ ಫಕ್ರುದ್ದೀನ್
ಸ.ನಿ: ಪಿ.ಜಿ. ಗಣೇಶ್
ಅ: ವಿನಯ್ ಕುಮಾರ್, ತ್ರಿವೇಣಿ, ಸುಂದರ ರಾಜ್, ಗಿರಿಜಾ, ಶೋಭ, ಸುಂದರಮ್ಮ, ಸುಂದರಕೃಷ್ಣ ಅರಸ್, ಹೆಚ್.ಟಿ.ಅರಸ್, ಶಿವರಾಂ, ನೀಗ್ರೋ ಜಾನಿ, ಶಾರದಮ್ಮ, ಶ್ರೀದೇವಿ, ಡಿಂಗ್ರಿ ನಾಗರಾಜ್, ಆಶಾಲತಾ, ಅನು, ಅನಿತಾ ರಾಣಿ, ರೇಖಾ ದಾಸ್

ಕ: ಸಹ್ಯಾದ್ರಿ
ಚಿ.ಕ/ಮಾ: ಎಂ.ನರೇಂದ್ರ ಬಾಬು, ಪಿ.ಜಿ.ಗಣೇಶ್
ಗೀ: ಗೀತಪ್ರಿಯ, ವಿಜಯನಾರಸಿಂಹ, ದೊಡ್ಡರಂಗೇ ಗೌಡ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ವಾಣಿ ಜಯರಾಂ, ಬಿ.ಆರ್.ಛಾಯಾ, ಬಾಲು
ಸಂ: ಸುರೇಶ್ ಅರಸ್
ಛಾ: ವೇದಪ್ರಭು
ಕಲೆ: ಮುದ್ದುಕೃಷ್ಣ
ಸ: ಎಂ.ರಂಗರಾವ್
ಧ್ವ: ಸಂಕೇತ್
ನೃ: ಉಡುಪಿ ಜಯರಾಂ
ಸಾ: ರುದ್ರೇಶ್
ವ: ಎಂ.ಎಸ್. ಮೊಹಮ್ಮದ್ ಯಾಕೂಬ್
ಪ್ರ: ಚೆಲುವರಾಜು, (ಕೇಶ: ಚಾರಿ, ಸೈಯ್ಯದ್)
ಸ್ಟು: ಪ್ರಸಾದ್, ಸಂಕೇತ್, ಪ್ರೀಮಿಯರ್
ಹಾ: ೧)'ವನಸಿರಿ ಗಿರಿಸಿರಿ ನಗುತಿದೆ...', ೨)'ನಿಲ್ಲಯ್ಯಾ ನಿಲ್ಲು ರಾಜ...', ೩)'ಮಲ್ಲಿಗೆ ಗಿರಿಮಲ್ಲಿಗ ಕಂಪನು ಚೆಲ್ಲಿದೆ...'
ಸೆ: ರೀಲು ೧೨, 'ಯು' ಸರ್ಟಿಫಿಕೇಟ್
ಕ.ಸಾ: ಹಳ್ಳಿಯ ತರುಣಿಯೊಬ್ಬಳನ್ನು ಪ್ರೀತಿಸುವ ನಗರದ ತರುಣ, ಹುಡುಗಿಯೊಂದಿಗಿನ ಮದುವೆಯನ್ನು ಒಪ್ಪದ ತಂದೆ, ಕಡೆಗೆ ಎಲ್ಲಾ ಸಂಶಯಗಳು ನಿವಾರಣೆಯಾಗಿ ಪ್ರೀತಿಸಿದ ಎರಡು ಹೃದಯಗಳು ಒಂದಾಗುತ್ತವೆ.

೧೩೪೦. ಭುಜಂಗಯ್ಯನ ದಶಾವತಾರ

(೧೯೯೧ / ವರ್ಣ / ಸಾಮಾಜಿಕ)
ಲಾ: ಬೆಳ್ಳಿ ತೆರೆ
ಪ್ರೊ: ಗಿರಿಜಾ ಲೋಕೇಶ್, ಲತಾ, ಎನ್.ಜಯಮ್ಮ
ನಿ: ಲೋಕೇಶ್
ಸ.ನಿ: ಜೈರಾಜ್
ಅ: ಲೋಕೇಶ್, ಕೃಷ್ಣೇಗೌಡ, ರಾಜಾರಾಂ, ವಾದಿರಾಜ್, ಜಯದೇವ್, ಮೈ.ನಾ.ಚಂದ್ರು, ಗಿರಿಜಾ ಲೋಕೇಶ್, ಪಲ್ಲವಿ ಜೋಷಿ, ಸದಾಶಿವ ಬ್ರಹ್ಮಾವರ್
ಕ: ಶ್ರೀಕೃಷ್ಣ ಆಲನಹಳ್ಳಿ ಅವರ ಕಾದಂಬರಿ
ಚಿ.ಕ: ಲೋಕೇಶ್
ಮಾ/ಗೀ/ಸ: ಹಂಸಲೇಖ
ಗಾ: ರವೀ, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಲತಾ ಹಂಸಲೇಖ, ಜೇಸುದಾಸ್
ಸಂ: ಸುರೇಶ್ ಅರಸ್
ಛಾ: ಎಸ್.ರಾಮಚಂದ್ರ
ನೃ: ಸತೀಶ್ ಕುಮಾರ್
ಪ್ರ: ನಾಣಿ
ಸ್ಟು: ಸಂಕೇತ್
ಹಾ: ೧)' ಮೋರೆ ತೋರಬ್ಯಾಡ ಮಾರೀ...'. ೨)' ಪಸು ಜನ್ಮವೋ ಇದು ಪಸು ಜನ್ಮವೋ...' ೩)'ಇವನ್ಯಾರಮ್ಮ ಎತ್ತರದವನು...', ೪)'ನೀನೊಲಿದರೆ ಜಗವೆಲಿವುದಯ್ಯಾ...', ೫)'ಬಾರೇ ಬಾರಮ್ಮ ಭಾಗೀರಥಿ...
ವಿ: ೧೯೯೦-೯೧ರ ರಾಜ್ಯ ಪ್ರಶಸ್ತಿ : ತೃತೀಯ ಅತ್ಯುತ್ತಮ ಚಿತ್ರ, ಅತ್ಯುತ್ತಮ ಪೋಷಕ ನಟಿ (ಗಿರಿಜಾ ಲೋಕೇಶ್) ಅತ್ಯುತ್ತಮ ಕಥೆ (ಶ್ರೀ ಕೃಷ್ಣ ಆಲನಹಳ್ಳಿ)
ಸೆ: ಉಪ ೩೮೧೯.೨೬, ೨೯ -೦೮ -೧೯೯೦
ಕ.ಸಾ: ಕೃಷಿಕನಾದ ಭುಜಂಗಯ್ಯ ಮಳೆಯಿರದ ಕಾರಣಕ್ಕೆ ಹೋಟೆಲು ವ್ಯಾಪಾರ ಮಾಡುತ್ತಾನೆ. ಅಲ್ಲಿಗೆ ಬಳೆಗಾರ ಶೆಟ್ಟಿ ಹಾಗೂ ಆತನ ಮಗಳು ಬರುತ್ತಾರೆ. ಹೆಂಡತಿ ಮುನಿಸಿಕೊಂಡು ಹೋದ ಬಳಿಕ ಬಳೆಗಾರನ ಮಗಳು ಕೈ ಹಿಡಿಯುತ್ತಾಳೆ. ಕಣ್ಣು ಕಳೆದುಕೊಳ್ಳುವ ಗಂಡನಿಗೆ ಕಣ್ಣಾಗುತ್ತಾಳೆ. ಗೌಡರ ಮಗ ಆಕೆಯನ್ನು ಕೆಡಿಸುತ್ತಾನೆ, ಆದರೆ ಭುಜಂಗಯ್ಯ ಆತನಿಗೆ ಹಾವು ಕಡಿದು ಔಷಧಿ ಇಲ್ಲದಾದಾಗ ಬಾಯಿಯಿಂದ ವಿಷ ಹೀರಿ ಆತನನ್ನು ಬದುಕಿಸಿ ತಾನು ಸಾಯುತ್ತಾನೆ. ಅತ್ತ ಆತನ ಹೆಂಡತಿ ಅವಮಾನ ಸಹಿಸಲಾರದೆ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ.

೧೩೪೧. ಪ್ರೇಮ ಪರೀಕ್ಷೆ

(೧೯೯೧ / ವರ್ಣ / ಸಾಮಾಜಿಕ)
ಲಾ: ಬೆಳ್ಳಿಚುಕ್ಕಿ ಪ್ರೊಡಕ್ಷನ್ಸ್
ಪ್ರೊ: ಎಸ್.ಎನ್.ಬಿ.ಮೂರ್ತಿ
ನಿ: ಎಸ್. ಉಮೇಶ್
ಸ.ನಿ: ಹೆಚ್.ನಾಗರಾಜ್
ಅ: ಪ್ರಭಾಕರ್, ರಾಮಕೃಷ್ಣ, ಮುಖ್ಯಮಂತ್ರಿ ಚಂದ್ರು, ಶ್ರೀ ಶೈಲನ್, ಭವ್ಯ, ಕಮಲ ಕಾಮೇಶ್, ಡಿಸ್ಕೋ ಶಾಂತಿ, ಗಿರಿಜಾ ಲೋಕೇಶ್, ಶೋಭಾ
ಕ/ಚಿ.ಕ/ಮಾ: ಎಸ್. ಉಮೇಶ್
ಗೀ: ಚಿ.ಉದಯಶಂಕರ್, ಎಂ.ಎನ್.ವ್ಯಾಸರಾವ್, ಶ್ರೀರಂಗ
ಗಾ: ಎಸ್. ಪಿ.ಬಾಲಸುಬ್ರಹ್ಮಣ್ಯಂ, ಮಂಜುಳಾ ಗುರುರಾಜ್
ಸಂ/ಛಾ: ಎಸ್. ಎನ್.ಬಿ. ಮೂರ್ತಿ
ಕಲೆ: ನಂಜುಂಡಸ್ವಾಮಿ
ಸ: ಉಪೇಂದ್ರ ಕುಮಾರ್
ಧ್ವ: (ಹಾ) ಎಸ್.ಪಿ.ರಾಮನಾಥನ್ (ಮಾ) ಆರುವಮುದನ್
ನೃ: ಅಂಜು ಮಹೇಂದ್ರನ್
ಸಾ: ಆಂಬೂರ್ ಬಾಬು
ವ: ಸುಂದರ್, ರಮಣ
ಪ್ರ: ವಿ.ಎಸ್.ಎಸ್.ಮಲ್ಲಿ, (ಕೇಶ:) ಬಾಬು
ಸ್ಟು: ಚಾಮುಂಡೇಶ್ವರಿ, ಪ್ರಸಾದ್
ಹಾ: ೧)'ಕಾಣುವುದೆಲ್ಲಾ ನಿಜವೇನು...', ೨)'ಓ ಸುಮ ನೀನೇಕೆ ...', ೩)'ಚಳಿಯಲಿ ಗುಂಡಿನ ಬಿಸಿಬಿಸಿ...', ೪)'ಬೆಳಗಾಯ್ತೇಳೋ ನಲ್ಲ...'
ಸೆ: ಉದ್ದ - ೩೭೮೬, ೨೬ - ೧೧ - ೧೯೯೦
ಕ.ಸಾ: ಬಡ ಹುಡುಗನ ಪ್ರೀತಿಯನ್ನು ಒಪ್ಪದ ಸುಮಳ ತಂದೆ ಪ್ರೇಮಿಗಳನ್ನು ಬೇರ್ಪಡಿಸಿ ಬೇರೆ ಮದುವೆ ಮಾಡಿಸುತ್ತಾನೆ. ಆತ ದುಶ್ಚಟಗಳ ದಾಸನಾಗಿರುತ್ತಾನೆ.ಆದರೆ ಸುಮಳ ಸೇವೆಯಿಂದ ಸಂಪೂರ್ಣ ಬದಲಾಗುತ್ತಾನೆ. ಆಗ ಅವನಿಗೆ ತನ್ನ ಹೆಂಡತಿ ಮೊದಲು ಒಬ್ಬನನ್ನು ಪ್ರೀತಿಸಿದ್ದು ತಿಳಿದು ಅವರಿಬ್ಬರನ್ನು ಒಂದುಗೂಡಿಸಲು ಯತ್ನಿಸುತ್ತಾನೆ, ಆದರೆ ಸಂಸ್ಕೃತಿ, ಸಂಪ್ರದಾಯವನ್ನು ಮೀರಲಾಗದೆಂದು ಹೇಳಿ ಸುಮ ಗಂಡನೊಂದಿಗೆ ಇರುವುದಾಗಿ ಹೇಳುತ್ತಾಳೆ.

೧೩೪೨. ಹೃದಯ ಹಾಡಿತು

(೧೯೯೧ / ವರ್ಣ / ಸಾಮಾಜಿಕ)
ಲಾ: ಶ್ರೀ ವಾಹಿನಿ ಆರ್ಟ್ಸ್ ಕಂಬೈನ್ಸ್
ಪ್ರೊ: ಎಸ್. ಎ.ಶ್ರೀನಿವಾಸ್, ಜಿ.ಪಿ.ಸೋಮು
ನಿ: ಎಂ.ಎಸ್.ರಾಜಶೇಖರ್

ಅ: ಅಂಬರೀಷ್, ಮಾಲಾಶ್ರೀ, ಭವ್ಯ, ಕೆ.ಎಸ್.ಅಶ್ವತ್, ಸುಂದರಕೃಷ್ಣ ಅರಸ್, ಗಿರಿಜಾ ಲೋಕೇಶ್, ಉಮೇಶ್, ಭೀಮರಾವ್
ಕ: ವಂಶಿ
ಚಿ.ಕ/ಮಾ/ಗೀ: ಚಿ.ಉದಯಶಂಕರ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಮಂಜುಳಾ ಗುರು
ಸಂ: ಎಸ್.ಮನೋಹರ್
ಛಾ: ಬಿ.ಸಿ.ಗೌರಿಶಂಕರ್
ಸ: ಉಪೇಂದ್ರ ಕುಮಾರ್
ನೃ: ಕೈಲಾಸಂ
ಸಾ: ಸ್ವಾಮಿ
ಸ್ಟು: ಪ್ರೀಮಿಯರ್, ಚಾಮುಂಡೇಶ್ವರಿ
ಹಾ: ೧) 'ತಂಪಾದ ಗಾಳಿ ಬೀಸಲಿ ...', ೨) 'ಓ ನನ್ನ ಮಲ್ಲಿಗ...', ೩) 'ಗಿರಿನವಿಲು ಎಲ್ಲೋ...', ೪) 'ಕಣ್ಣಲ್ಲಿ ಜ್ಯೋತಿ ತಂದೋನು ನೀನೇ ...', ೫) 'ನಲಿಯುತಾ ಹೃದಯ ಹಾಡನು ಹಾಡಿದೇ...'
ಸೆ: ಉದ - ೪೧೩೦ , ೨೩ - ೦೧ ೧೯೯೧
ವಿ: ೧೯೯೦-೯೧ರ ರಾಜ್ಯ ಪ್ರಶಸ್ತಿ : ಅತ್ಯುತ್ತಮ ಸಂಗೀತ ನಿರ್ದೇಶಕ (ಉಪೇಂದ್ರ ಕುಮಾರ್)
ಕ.ಸಾ: ಹಾರ್ಟ್ ಸ್ಪೆಷಲಿಷ್ಟ್ ಒಬ್ಬ ರೋಗಿಯ ಉಳಿವಿಗಾಗಿ ತನಗೆ ಮದುವೆಯಾಗಿದ್ದರೂ ಆರೋಗಿಯನ್ನು ಮದುವೆಯಾಗಬೇಕಾಗುತ್ತದೆ. ಇದಕ್ಕೆ ಡಾಕ್ಟರ್ ಆಗಿರುವ ಆತನ ಹೆಂಡತಿಯೇ ಒಪ್ಪಿಸುತ್ತಾಳೆ, ಡಾಕ್ಟರ್ ತನಗೆ ಮರುಹುಟ್ಟು ನೀಡಿದ ದೇವರೆಂದು ಭಾವಿಸಿ ಪ್ರೀತಿಸುವ ಹೃದ್ರೋಗಿ ಆತನ ಮೊದಲಿನ ಹೆಂಡತಿಯನ್ನೇ ಒಮ್ಮೆ ನಿಜಾಂಶ ತಿಳಿಯದೆ ದೂಷಿಸಿತ್ತಾಳೆ. ಕೊನೆಯಲ್ಲಿ ನಿರ್ವಾಹವಿಲ್ಲದೆ ಡಾಕ್ಟರ್ ಇಬ್ಬರು ಹೆಂಡತಿಯರ ಜೊತೆ ಬದುಕಬೇಕಾಗುತ್ತದೆ.

೧೩೪೩. ನಕ್ಕಳಾ ರಾಜಕುಮಾರಿ

(೧೯೯೧ / ವರ್ಣ / ಮಕ್ಕಳಚಿತ್ರ/ಜಾನಪದ)
ಲಾ: ಕೆ. ವಿಷನ್ ವೀಡಿಯೋ ಪ್ರೊಡಕ್ಷನ್ಸ್
ಪ್ರೊ: ಡಾ। ವಿಶ್ವನಾಥ್, ಬಿ.ನಾರಾಯಣ
ನಿ: ಪ್ರೇಮಾ ಕಾರಂತ್
ಅ: ಸಂತೋಷ್ ನಂದವನನ್, ಚಂದ್ರಶೇಖರ್, ಚೈತ್ರ, ರಾಗಿಣಿ, ಸಿ.ಆರ್.ಸಿಂಹ, ಜಿ.ವಿ.ಶಾರದ, ಶಂಕರ್‌ನಾಗ್, ಉದಯ ಜಾದೂಗಾರ್, ಜಿ.ವಿ.ಶಿವಾನಂದ್, ರಮೇಶ್ ಕಾಮತ್, ಮೀರಾ ನಾಯಕ್, ರಮೇಶ್ ಸಾಲಗುಂಡಿ
ಕ/ಚಿ.ಕ/ಮಾ: ಅಬ್ದುಲ್ ರಹಮಾನ್ ಪಾಷಾ
ಗೀ: ದುಂಡಿರಾಜ್
ಗಾ: ಬಿ.ಆರ್.ಛಾಯಾ, ಗಾಯತ್ರಿ, ಕೆ.ಕಾರಂತ್
ಛಾ: ಪಿ.ರಾಜನ್
ಕಲೆ: ಜಾನ್ ದೇವರಾಜ್
ಸ: ಬಿ.ವಿ.ಕಾರಂತ್
ಧ್ವ: ಎಸ್.ಪಿ.ರಾಮನಾಥನ್
ವ: ಪ್ರೇಮಾ ಕಾರಂತ್
ಪ್ರ: ಮಲ್ಲೇಶ್
ಸ್ಟು: ಚಾಮುಂಡೇಶ್ವರಿ
ಹಾ: ೧) 'ಓಂ ಶ್ರೀ ರಾಜಾಧಿರಾಜಾಯ ನಮಃ...', ೨) 'ಹೊರಟರು ಮೂವರು ಗೆಳೆಯರು..', ೩) 'ಬಹುಮೋಸದ ಕನಸು ಹೊತ್ತ ...', ೪) 'ನಮ್ಮದು ಈ ಮಹಾ ದೇಶ...', ೫) 'ರಾಜಕುಮಾರಿ ಓ ಹೊಯ್ಯ ಅವಸರ ಇಲ್ಲ...', ೬) 'ರಾಜಕುಮಾರಿಯ ಕಥ ಕೇಳಿದರು...'
ವಿ: ಮಕ್ಕಳಿಗಾಗಿ ತಯಾರಾದ ಚಿತ್ರ.

ಕ.ಸಾ: ಅರಮನೆಯ ಐಶ್ವರ್ಯ ಆಡಂಬರಗಳಿಷ್ಟೇ ಇದರೂ ಒಮ್ಮೆಯೂ ನಗದೇ ಇರುವ ರಾಜಕುಮಾರಿಯನ್ನು ನಗಿಸಲು ರಾಜ ಇನ್ನಿಲ್ಲದ ಪ್ರಯತ್ನ ಮಾಡುತ್ತಾನೆ. ಆದರ ಮೂವರು ಹುಡುಗರ ಮುಗ್ಧತೆಯ ಜೊತೆ ತಾನೂ ಅರಮನೆಯಿಂದಾಚೆ ಬಂದು ಜೀವಬಂದು ಬೊಂಬೆಯಂದು ಅವರನ್ನು ನಂಬಿಸಿ ತಾನು ರಾಜಕುಮಾರಿ ಎಂಬುದನ್ನು ಮರೆತು ಮನದಣಿಯೇ ನಗುತ್ತಾಳೆ, ಆಡುತ್ತಾಳೆ, ಕುಣಿಯುತ್ತಾಳೆ.

೧೩೪೪. ಅಜಗಜಾಂತರ

(೧೯೯೧ / ವರ್ಣ / ಸಾಮಾಜಿಕ)
ಲಾ: ಶ್ರೀ ಗಾಯತ್ರಿ ಆರ್ಟ್ಸ್
ಪ್ರೊ: ಸತ್ಯನಾರಾಯಣ, ಕಾಶೀನಾಥ್, ದತ್ತಾತ್ರೇಯ, ದೊಡ್ಡಯ್ಯ, ಉಮಾಪತಿ
ನಿ: ಕಾಶೀನಾಥ್
ಸ.ನಿ: ಉಪೇಂದ್ರ
ಅ: ಕಾಶೀನಾಥ್, ಜನಾರ್ದನ್, ಸುಧೀಂದ್ರ, ಸೋಮಶೇಖರ್, ಗೋಟೂರಿ, ಪ್ರಕಾಶ್, ಅಂಜನಾ, ಸತ್ಯಭಾಮ, ಶ್ರೀರಕ್ಷ, ಪ್ರತಿಭಾ
ಕ: ಗಾಯತ್ರಿ ಸಿನೆ ಕ್ರಿಯೇಷನ್ಸ್
ಚಿ.ಕ: ಕಾಶೀನಾಥ್, ಉಪೇಂದ್ರ
ಮಾ/ಗೀ: ಉಪೇಂದ್ರ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಮಂಜುಳಾ . ಚಂದ್ರಿಕಾ, ಕಾಶೀನಾಥ್, ಶಾಸ್ತ್ರಿ, ಲತಾ ಹಂಸಲೇಖ
ಸಂ: ಸುಬ್ರಹ್ಮಣ್ಯಂ
ಛಾ: ಉಮಾಪತಿ
ಸ: ಹಂಸಲೇಖ
ಧ್ವ: ಕೃಷ್ಣಮೂರ್ತಿ
ನೃ: ಮನೋಹರ್, ನಾಗರಾಜ್ ಶಿರೂರು
ವ: ವಾಣಿ
ಪ್ರ: ಮಲ್ಲೇಶ್, ಸತೀಶ್ ರಾಜ್
ಸ್ಟು: ಚಾಮುಂಡೇಶ್ವರಿ, ಪ್ರಸಾದ್
ಹಾ: ೧) 'ನೂರು ಗಂಡು ಬಂದರೇನು...', ೨) 'ಓ ಮೂರದಲ್ಲಿ ಕಾಣೋ ಚೆಟ್ಟಿವು...', ೩) 'ಜಾರಿಬಿದ್ದನೋ ನಾರಿ ಬುದಿಗೆ...', ೪) 'ತಟ್ಟೋಣಾ ತಟ್ಟೋಣಾ ಬನ್ನಿ ತಟ್ಟೋಣಾ...'
ಸೆ: ರೀಲು - ೧೬, ಉದ ೪೫೧೧.೦೦
ಕ.ಸಾ: ಕೋಟ್ಯಾಧಿಪತಿ ಗಂಡನನ್ನು ಪಡೆಯಬೇಕೆಂಬ ಧಿಮಾಕಿನ ಹೆಣ್ಣನ್ನು, ಸಾಧ್ವಿ ಹೆಣ್ಣನ್ನು ಪಡೆಯಬೇಕೆಂಬ ಗಂಡಿಗೆ ಗಂಟು ಹಾಕಿ ಬ್ರೋಕರ್ ತನ್ನ ಕೆಲಸ ಮುಗಿಸುತ್ತಾನೆ. ಮದುವೆಯ ನಂತರ ನಿಜಾಂಶ ತಿಳಿದ ಗಂಡ ಹೆಂಡಿರಲ್ಲಿ ವಿರಸ ಉಂಟಾಗುತ್ತದೆ.ಧನದಾಹಿ ಹೆಂಡತಿಗೆ ಗಂಡ ತನ್ನ ಕೈ ತಪ್ಪಿ ಹೋಗುತಿದ್ದಾನೆನ್ನುವಾಗ ತಪ್ಪಿನ ಅರಿವಾಗುತ್ತದೆ.

೧೩೪೫. ಪುಂಡ ಪ್ರಚಂಡ

(೧೯೯೧ / ವರ್ಣ / ಸಾಮಾಜಿಕ)
ಲಾ: ಚಿತ್ರಮಾಧ್ಯಮ
ನಿ: ಸುಧೀಂದ್ರ ಕಲ್ಲೋಳ
ಸ.ನಿ: ಉಮಾಶಂಕರ್
ಅ: ಶಂಕರ್‌ನಾಗ್, ರಮೇಶ್, ವನಿತಾ ವಾಸು, ಧೀರೇಂದ್ರ ಗೋಪಾಲ್, ಜೈಜಗದೀಶ್, ಶಶಿಕುಮಾರ್, ಅರವಿಂದ್, ಆರೂರು ಸತ್ಯಭಾಮ
ಕ: ಟಿ.ಎನ್. ನರಸಿಂಹನ್
ಚಿ.ಕ/ಮಾ: ಸಿಂಹ ಹೆಮ್ಮಿಗೆ
ಗೀ: ಹಂಸಲೇಖ , ಮನೋಹರ್
ಗಾ: ಜೇಸುದಾಸ್, ಮನು, ಚಿತ್ರಾ, ಲತಾ ಹಂಸಲೇಖ,
ಮಂಜುಳಾ
ಸಂ: ಸುರೇಶ್ ಅರಸ್
ಛಾ: ಬಿ.ಸಿ.ಗೌರಿಶಂಕರ್
ಕಲೆ: ನಂಜುಂಡ ಸ್ವಾಮಿ
ಸ: ಹಂಸಲೇಖ
ಧ್ವ: (ಹಾ) ಪೀಟರ್, (ಮಾ) ಕೃಷ್ಣಮೂರ್ತಿ
ನೃ: ಉಡುಪಿ ಜಯರಾಂ
ಸಾ: ಥ್ರಿಲ್ಲರ್ ಮಂಜು
ವ: ಮಣಿ
ಪ್ರ: ನಾಗರಾಜ್
ಸ್ಟು: ಸಂಕೇತ್, ಪ್ರಸಾದ್
ಹಾ: ೧) 'ಗುಡುಗು ಮಿಂಚು ಗುಡುಗು ಒಂದಾಗಿ ...', ೨) 'ಶಿವಾ ನಿನ್ನಲ್ಲಿ ನಾನು...', ೩) 'ಬೆಳದಿಂಗಳು ಮೈ ತುಂಬಿದ ಹೆಣ್ ಬಂದಳು ...', ೪) 'ಸೋಲು ಗೆಲುವು ಆಟದಲ್ಲಿ...', ೫) 'ಮಂದಾನಿಲಾ ಮೆಲ್ಲನೆ ಮೈ ಮೇಲೇರಿದೇ...'
ಸೆ: ಉದ್ದ - ೩೬೬೭ 'ಯು' ಸರ್ಟಿಫಿಕೇಟ್
ಕ.ಸಾ: ವಿದ್ಯಾಭ್ಯಾಸ ಮುಗಿಸಿದ ಮೇಲೂ ಕೆಲಸ ಸಿಗದ ಯುವಕರು ಜನರ ಸಮಸ್ಯೆಗಳನ್ನು ಪರಿಹರಿಸುವ ಉದ್ಯೋಗ ಕಂಡು ಕೊಳ್ಳುತ್ತಾರೆ. ತಮ್ಮ ಪುಂಡಾಟಿಕೆಯ ಸ್ವಭಾವದಿಂದ ಇಕ್ಕಟ್ಟಿಗೆ ಸಿಲುಕಿದರೂ ಜಾಣಾಕ್ಷತೆಯಿಂದ ಪಾರಾಗುತ್ತಾರೆ. ಮಾದಕ ವಸ್ತುಗಳನ್ನು ಪೂರೈಸುವ ಜಾಲವನ್ನು ಪತ್ತೆ ಹಚ್ಚಿ ಪೊಲೀಸರ ಪ್ರೀತಿಗೆ ಪಾತ್ರರಾಗುತ್ತಾರೆ.

೧೩೪೬. ಶಿವಯೋಗಿ ಅಕ್ಕಮಹಾದೇವಿ

(೧೯೯೧ / ವರ್ಣ / ಭಕ್ತಿಪ್ರಧಾನ/ಐತಿಹಾಸಿಕ)
ಲಾ/ಪ್ರೊ: ಸುಯೋಗ ಸಿನಿ ಕಂಬೈನ್ಸ್
ನಿ: ಚಂದ್ರಹಾಸ ಆಳ್ವ
ಸ.ನಿ: ಎಸ್.ನಾರಾಯಣ್
ಅ: ಉದಯ ಹುತ್ತಿನಗದ್ದೆ, ಉಷಾ, ದೊಡ್ಡಣ್ಣ, ರಾಜಾನಂದ್, ಅನಂತರಾಂ ಮಚ್ಚೇರಿ, ಬೇಬಿ ಆರತಿ, ಕುಮಾರಿ ಕನ್ಯಾ
ಕ: ಚಂದ್ರಹಾಸ ಆಳ್ವ
ಚಿ.ಕ/ಮಾ: ಹೆಚ್.ಎಸ್.ಜಗನ್ನಾಥ್
ಗೀ: ವಚನಾಮೃತ, ಬ್ಯ.ಕು.ಬಸವರಾಜ ರಾಜ ಋಷಿ
ಛಾ: ಕೆ.ಎಸ್.ಚಂದ್ರು
ಕಲೆ: ಸುಭಾಷ್ ಕಡಕೋಳ್
ಸ: ಮೈಸೂರು ಅನಂತಸ್ವಾಮಿ
ವ: ಕೆ.ಪಿ.ಜಯರಾಂ
ಪ್ರ: ಮಲ್ಲೇಶ್ ಹರ್ತಿ
ಹಾ: ೧) 'ನಮ್ಮ ದೇಶ ಭಾರತ...', ೨) 'ಶಿವಮಂತ್ರವೆನಗೆ...', ೩) 'ವಚನಾಮೃತಗಳು...'. ೪) 'ಚಿಲಿಪಿಲಿ ಎಂದೋಡುವ...', ೫) 'ಸಾವಿಲ್ಲದ ಕೇಡಿಲ್ಲದ...'
ವಿ: ಅತ್ಯುತ್ತಮ ಛಾಯಾಗ್ರಾಹಣಕ್ಕಾಗಿ ಕೆ. ಎಸ್. ಚಂದ್ರುಅವರಿಗೆ 'ಅಕ್ಕಮಹಾದೇವಿ'ಯ ಪಾತ್ರದಲ್ಲಿ ನೀಡಿದ ಅಭಿನಯಕ್ಕಾಗಿ ನಟಿ ಉಷಾರಿಗೆ ೧೯೮೭ ೮೮ರ ರಾಜ್ಯಸರ್ಕಾರದ ಅತ್ಯುತ್ತಮ ನಟಿ ಪ್ರಶಸ್ತಿ.
ಕ.ಸಾ: ಲೌಕಿಕ ಬಂಧನಗಳನ್ನು ಕಳಚಿಕೊಂಡು ಪರಶಿವನೇ ತನ್ನ ಪತಿಯೆಂದು ನಂಬಿ, ಜಗತ್ತಿಗೆ ಹಿತಸಂದೇಶ ಸಾರಿದ ಶಿವಶರಣೆ ಅಕ್ಕ ಮಹಾದೇವಿಯ ಕತೆಯಿದು. ಅಪ್ರತಿಮ ರೂಪವತಿಯಾದ ಮಹಾದೇವಿಯನ್ನು ಕೌಶಿಕ ಮಹಾರಾಜ ಬಯಸಿ ಮದುವೆಯಾದ. ಆದರೆ ಅವನ ಹದ್ದು ಮೀರಿದ ವರ್ತನೆಯನ್ನು ಸಹಿಸದೆ ನಿರ್ವಸ್ತ್ರಳಾಗಿ ಅರಮನೆಯಿಂದ ಹೊರಬಿದ್ದು, ಅನುಭವ ಮಂಟಪ ಸೇರಿ, ಅಲ್ಲಿ ಪರೀಕ್ಷೆಗಳಲ್ಲಿ ವಿಜಯಿಯಾಗಿ ಅತ್ಯುನ್ನತ ಮಟ್ಟಕ್ಕೇರುತ್ತಾಳೆ ಅಕ್ಕ.

೧೩೪೭. ಅರಳಿದ ಹೂಗಳು

(೧೯೯೧ / ವರ್ಣ / ಸಾಮಾಜಿಕ)
ಲಾ: ದಾಕ್ಷಾಯಿಣಿ ಸಿನಿ ಕಂಬೈನ್ಸ್
ಪ್ರೊ: ಪಾರ್ವತಮ್ಮ ರಾಜಕುಮಾರ್
ನಿ: ಚಿ.ದತ್ತರಾಜ್
ಸ.ನಿ: ಪಿ. ಅಣ್ಣಯ್ಯ
ಅ: ಶಿವರಾಜ್ ಕುಮಾರ್, ವಿದ್ಯಾಶ್ರೀ, ಶ್ರೀನಾಥ್, ಶ್ರೀಲಲಿತಾ, ಅಶೋಕ್‌ರಾವ್, ವಿಜಯ, ತೂಗುದೀಪ ಶ್ರೀನಿವಾಸ್, ಶಿವಪ್ರಕಾಶ್, ರಾಘವೇಂದ್ರ, ಅಶ್ವತ್, ಗುರುದತ್, ಸಿಹಿಕಹಿ ಚಂದ್ರು, ರೇಖಾ ದಾಸ್, ಸತ್ಯಭಾಮ, ವಿಜಯ ರಾಘವೇಂದ್ರ, ಭೀಮರಾವ್, ಎಂ.ಎಸ್.ಕಾರಂತ್



ಚಿ.ಕ/ಮಾ: ಚಿ.ಉದಯಶಂಕರ್
ಗೀ: ಚಿ.ಉದಯಶಂಕರ್, ಶ್ರೀರಂಗ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಶಿವರಾಜ್ ಕುಮಾರ್, ಮಂಜುಳಾ ಗುರುರಾಜ್
ಸಂ: ಎಸ್.ಮನೋಹರ್
ಛಾ: ವಿ.ಕೆ.ಕಣ್ಣನ್
ಕಲೆ: ನಜೀರ್
ಸ: ಉಪೇಂದ್ರ ಕುಮಾರ್
ಧ್ವ: (ಹಾ) ಎಸ್.ಪಿ.ರಾಮನಾಥನ್, (ಮಾ) ಕೋದಂಡಪಾಣಿ
ನೃ: ತಾರಾ
ಸಾ: ಸ್ವಾಮಿ
ವ: ವೀರರಾಜು, ಪ್ರಸಾದ್
ಪ್ರ: ವಿಶ್ವನಾಥ್, ನಿವೇಶ್, ರಾಚಯ್ಯ, (ಕೇ:ಶ:) ಗಣೇಶ್
ಸ್ಟು: ಚಾಮುಂಡೇಶ್ವರಿ, ಪ್ರಸಾದ್
ಹಾ: ೧)'ಎಲ್ಲಾ ಮಜ ಇಲ್ಲೇ ನಿಜ...', ೨)'ಆಕಾಶ ಮೇಲಿದೆ ಭೂಮೀ ಕಾಲ ಕೆಳಗಿದೆ...', ೩)'ಕಾಮನಾ ಬಿಲ್ಲಲೀ ಜಾರಿದಾಕ್ಷಣ...', ೪)'ನುಡಿವಾಸೆ ಬಳಿ ಬಾ ಇಲ್ಲೇ...'
ಸೆ: ಉದ್ದ ೪೦೬೮ , ೧೧ ೦೨ ೧೯೯೧
ಕ.ಸಾ: ತಂದೆ ತಾಯಿಯಿಲ್ಲದ ವಿಜಯ್ ಅಣ್ಣ ಅತ್ತಿಗೆಯ ಜೊತೆಗಿದ್ದು ಕಾಲೇಜಿಗೆ ಹೋಗುತ್ತಿರುತ್ತಾನೆ. ಅಲ್ಲಿ ಸುಧಾ ಎಂಬಾಕೆಯ ಪರಿಚಯವಾಗಿ ಇಬ್ಬರೂ ಪರಸ್ಪರ ಪ್ರೀತಿಸುತ್ತಾರೆ, ಸುಧಾಳ ತಂದೆ ಮದುವೆಗೆ ಒಪ್ಪಿ ತಂದೆ ತಾಯಿಯನ್ನು ಕರೆದುಕೊಂಡು ಬರಲು ವಿಜಯ್‌ಗೆ ಹೇಳಿದಾಗ ಬೇರೆಯವರನ್ನು ಈ ರೀತಿ ನಟಿಸುವಂತೆ ಮಾಡಿ ಸಿಕ್ಕಿಹಾಕಿಕೊಳ್ಳುತ್ತಾನೆ, ಇದರಿಂದ ವಿಜಯ್ - ಸುಧಾ ಅನೇಕ ತೊಂದರೆಗಳನ್ನು ಎದುರಿಸಬೇಕಾಗುತ್ತದೆ, ಕೊನೆಯಲ್ಲಿ ವಿಜಯ್ ಅಣ್ಣ ಹಾಗು ಅತ್ತಿಗೆ ಹಾಗೂ ಸುಧಾಳ ತಂದೆ ಇವರಿಬ್ಬರ ಮದುವೆಗೆ ಒಪ್ಪಿಗೆ ನೀಡುತ್ತಾರೆ.

೧೩೪೮. ಗೋಲ್ ಮಾಲ್ ರಾಧಾಕೃಷ್ಣ-೨

(೧೯೯೧ / ವರ್ಣ / ಸಾಮಾಜಿಕ)
ಲಾ: ಬಿ.ಆರ್. ಪ್ರೊಡಕ್ಷನ್ಸ್
ಪ್ರೊ: ಕೆ.ಎಸ್.ರಾಮನ್
ನಿ: ಸಾಯಿಪ್ರಕಾಶ್
ಅ: ಅನಂತ್ ನಾಗ್, ಮುಖ್ಯಮಂತ್ರಿ ಚಂದ್ರು, ಶಿವಕುಮಾರ್, ಸಿಹಿಕಹಿ ಚಂದ್ರು, ಉಮೇಶ್, ಚಂದ್ರಿಕಾ, ತಾರಾ, ಗಾಯತ್ರಿ ಪ್ರಭಾಕರ್, ಮಂಜುಮಾಲಿನಿ, ಉಮಾಶ್ರೀ, ವನಿತಾ ವಾಸು, ಲೀಲಾವತಿ, ಮೈಸೂರು ಲೋಕೇಶ್
ಕ/ಚಿ.ಕ: ಸಾಯಿಪ್ರಕಾಶ್
ಮಾ: ಕುಣಿಗಲ್ ನಾಗಭೂಷಣ್
ಗೀ: ಆರ್. ಎನ್.ಜಯಗೋಪಾಲ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಮಂಜುಳಾ ಗುರುರಾಜ್
ಛಾ: ಕಬೀರ್‌ಲಾಲ್
ಕಲೆ: ಸುಂದರಂ
ಸ: ಉಪೇಂದ್ರ ಕುಮಾರ್
ನೃ: ಶಿವಶಂಕರ್
ಸ್ಟು: ಚಾಮುಂಡೇಶ್ವರಿ
ಹಾ: ೧)' ಜೀವನಾ ...ಈ ಜೀವನಾ...', ೨)'ಫ್ಯಾಷನ್ ಮಾಡೆಲ್ ಆಗಲೀ...', ೩)'ಕೃಷ್ಣ ಕೃಷ್ಣ ಓ ರಾಧಾ ಕೃಷ್ಣ...', ೪)'ಅಮವಾಸ್ಯೆ ಅರ್ಧರಾತ್ರಿ ಇದು...'
ಕ.ಸಾ: ಪರಸ್ತ್ರೀ ಸಂಗದಲ್ಲಿ ಬೀಳುವ ಗಂಡಸರು, ಅವರನ್ನು ತಮ್ಮ ಬಸ್ಸಿನಲ್ಲಿ ಇಡುವ ಹೆಂಗಸರು ಇದೇ ಈ ಕತೆಯ ತಿರುಳು. ಕಂಪನಿಯಲ್ಲಿ ಮಾಲೀಕ ಶಂಕರ್ ಹಾಗೂ ಅಲ್ಲಿ ಕೆಲಸ ಮಾಡುವ ಕೃಷ್ಣ ಇಂಥ ಘಟನೆಗಳಲ್ಲಿ ಸಿಕ್ಕಿ ಫಜೀತಿ ಪಡುತ್ತಾರೆ, ಕೃಷ್ಣನ ಚಲನವಲನಗಳನ್ನು ಗಮನಿಸುವ ಅಜ್ಜಿ ಸತ್ತ ನಂತರ ಆತನ ಹೆಂಡತಿಗೆ ಆಧಾರವಿಲ್ಲದಂತಾಗುತ್ತದೆ. ಕೃಷ್ಣನೂ ಅಜ್ಜಿಯ ಮಾತಿನಂತೆ ಕೆಲಸ ಬಿಟ್ಟಿರುತ್ತಾನೆ, ಇಂಥ ಹಾಸ್ಯ ಪ್ರಸಂಗಗಳನ್ನು ಒಳಗೊಂಡ ಕತೆ ಸುಖಾಂತ್ಯವಾಗುತ್ತದೆ.

೧೩೪೯. ಪ್ರೀತಿಯೇ ನನ್ನ ದೈವ

(೧೯೯೧ / ವರ್ಣ / ಸಾಮಾಜಿಕ)
ಲಾ: ಎಂ.ಎ.ಜೆ.ಪ್ರೊಡಕ್ಷನ್ಸ್
ಪ್ರೊ: ಎಂ.ಅಬ್ದುಲ್ ಜಬ್ಬಾರ್
ನಿ: ಜೆ.ಅಹಮ್ಮದ್
ಸ.ನಿ: ಬಿ.ಆರ್.ಶ್ರೀಧರ್
ಅ: ಅಹಮ್ಮದ್, ಸುಂದರರಾಜ್, ಪ್ರಮಿಳಾ ಜೋಷಾಯ್, ಮನೋರಮ, ಕಾವ್ಯ, ನಾಗೇಶ್, ರಾಜಣ್ಣ
ಕ: ಜೆ.ಅಹಮ್ಮದ್
ಚಿ.ಕ/ಮಾ/ಗೀ: ಓಂಕಾರವಾಣಿ
ಗಾ: ವಾಣಿ ಜಯರಾಂ, ದಿನೇಶ್, ಮನು
ಸಂ: ಈ.ಅರುಣಾಚಲಂ
ಛಾ: ಕುಲಶೇಖರ್
ಸ: ಜೆ.ಅಹಮ್ಮದ್
ಧ್ವ: (ಹಾ) ಅಣ್ಣಾದೊರೈ, ಪೀಟರ್ (ಮಾ) ಕೃಷ್ಣಮೂರ್ತಿ, ಎಸ್.ಅಳಗೇಶನ್
ನೃ: ಮಸ್ತಾನ್
ಸಾ: ಹಾಸನ್ ರಘು
ವ: ಮಣಿ, ನಜೀರ್
ಪ್ರ: ಮಂಜುನಾಥ್
ಸ್ಟು: ಕಂಠೀರವ, ಪ್ರಸಾದ್, ಸಂಕೇತ್
ಹಾ: ೧) 'ಪ್ರೀತಿಯಾ ತಮ್ಮಾ ನಾನು ಸುಖವಾಗಿಹೆ...', ೨) 'ಎಲ್ಲರೂ ಈ ನಾಡ ರಾಜರುಗಳೇ...', ೩) 'ಕೋಗಿಲೇ ಬರಬಹುದೇ...', ೪) 'ಕಂಗಳು ಹಾಡುವ ರಾಗವು...', ೫) 'ತಂದೆ ತಾಯಿ ಹೇಗೆ ಎಂಬುದ...', ೬) 'ನನ್ನ ಮನವು ಬಿರಿವುದು ನೀ ಬಂದಾಗ...'
ಸೆ: ಉದ್ದ - ೩೫೦೦.೦೦, 'ಯು' ಸರ್ಟಿಫಿಕೇಟ್
ಕ.ಸಾ: ಸೈನ್ಯದಿಂದ ಹಿಂತಿರುಗಿದ ರಾಜುವಿಗೆ ತನ್ನ ಪ್ರೀತಿಯ ಅಕ್ಕ ಖಳನಾಯಕರ ಗುಂಪಿನಿಂದ ಅತ್ಯಾಚಾರಕ್ಕೊಳಗಾಗಿ ಆತ್ಮಹತ್ಯೆ ಮಾಡಿಕೊಂಡಿದ್ದನ್ನು ತಿಳಿದು ಕೃದ್ಧನಾಗುತ್ತಾನೆ. ಹೀಗಾಗಿ ಮತ್ತೆ ನೌಕರಿಗೂ ಹೋಗದೆ ಅಕ್ಕನನ್ನು ಸಾಯಿಸಿದವರ ವಿರುದ್ಧ ಹೋರಾಡಲು ಹೊಂಚು ಹಾಕುತ್ತಿರುತ್ತಾನೆ, ಕಡೆಯಲ್ಲಿ ಅವರೆಲ್ಲರನ್ನೂ ಸದೆಬಡಿದು ಅಕ್ಕನ ಆತ್ಮಕ್ಕೆ ಶಾಂತಿ ದೊರಕುವಂತೆ ಮಾಡಿ ತಾನು ಪ್ರೀತಿಸಿದ ಹುಡುಗಿಯನ್ನು ಮದುವೆಯಾಗುತ್ತಾನೆ.

೧೩೫೦. ಸುಂದರ ಕಾಂಡ

(೧೯೯೧ / ವರ್ಣ / ಸಾಮಾಜಿಕ)
ಲಾ: ಶ್ರೀ ವಿಜಯಲಕ್ಷ್ಮಿ ಸಿನೆ ಆರ್ಟ್ಸ್
ಪ್ರೊ: ಶ್ರೀದೇವಿ
ನಿ: ಕೆ.ವಿ.ರಾಜು
ಅ: ಶಂಕರ್‌ನಾಗ್, ದೇವರಾಜ್, ದೊಡ್ಡಣ್ಣ, ಸುಧೀರ್, ಲೋಹಿತಾಶ್ವ, ಅವಿನಾಶ್, ಅರವಿಂದ್, ಸದಾಶಿವ ಬ್ರಹ್ಮಾವರ್, ಜಯಂತಿ, ಶಿವರಂಜಿನಿ, ತಾರಾ, ರತ್ನಮಾಲಾ
ಕ/ಚಿ.ಕ/ಮಾ: ಕೆ.ವಿ.ರಾಜು
ಗೀ: ಶ್ರೀವತ್ಸ, ರಂಗನಾಥ್, ಕೆ.ವಿ.ರಾಜು
ಗಾ: ಮನು , ಚಿತ್ರಾ , ಮಂಜುಳಾ ಗುರು

ಸಂ: ಮುರಳಿ ರಾಮಯ್ಯ
ಛಾ: ಜೆ. ಜಿ. ಕೃಷ್ಣ
ಕಲೆ: ಸುಂದರಂ
ಸ: ಸಂಗೀತರಾಜ
ನೃ: ಉಡುಪಿ ಜಯರಾಂ
ಸಾ: ಜೈಮಿನಿ
ಸ್ಟು: ಕಂಠೀರವ, ಪ್ರಸಾದ್, ಸಂಕೇತ್
ಹಾ: ೧)'ರವಿಯ ಕಿರಣಗಳೇ...', ೨)'ಏ ಅಲ್ಲೇ ನೀ ಹುಚ್ಚಿ...', ೩)'ಮಳೆ ಇದೇನೋ ಹೊಸದಿದೆ...', ೪)'ನೀನ್ಯಾವ ಗಂಡೋ ನೀನು...', ೫)'ರವಿಯ ಕಿರಣಗಳೇ ಮುಗಿಲ ...'
ಸೆ: ಉದ್ದ ೪೮೫೭, 'ಯು' ಸರ್ಟಿಫಿಕೇಟ್
ಕ.ಸಾ: ಪತ್ರಕರ್ತ ಕುಮಾರ್ ತಮ್ಮ ವಿರುದ್ಧ ಬರೆದನೆಂದು ಎಂ.ಎಲ್.ಎ. ಭುಜಂಗಯ್ಯ ಮತ್ತು ಸಾಂಬಯ್ಯ ಆತನನ್ನು ಸಾಯಿಸುತ್ತಾರೆ. ಆ ಸಂದರ್ಭದಲ್ಲಿ ಕುಮಾರ್‌ನ ಹೆಂಡತಿ ಒಬ್ಬ ಮಗನಿಂದ ಬೇರ್ಪಡುತ್ತಾಳೆ. ತಾಯಿಯಿಂದ ಬೇರೆಯಾದ ಮಗ ಪೋಲೀಸ್ ಅಧಿಕಾರಿಯಾಗುತ್ತಾನೆ. ತಾಯಿಯೊಂದಿಗೆ ಬೆಳೆದ ಮಗ ತಂದೆ ಸಾವಿಗೆ ಕಾರಣರಾದವರ ಮೇಲೆ ಸೇಡು ತೀರಿಸಿಕೊಳ್ಳಲೆಂದು ದುಷ್ಟಕೂಟ ಸೇರಿ ರೌಡಿಯಾಗುತ್ತಾನೆ, ಇಬ್ಬರೂ ಒಂದೇ ಉದ್ದೇಶವಿಟ್ಟುಕೊಂಡು ದುಷ್ಟರನ್ನು ಸದೆಬಡಿದು ತಾಯಿ ಮಕ್ಕಳು ಒಂದಾಗುತ್ತಾರೆ.

೧೩೫೧. ಸಿ.ಬಿ.ಐ.ವಿಜಯ್

(೧೯೯೧ / ವರ್ಣ / ಪತ್ತೇದಾರಿ)
ಲಾ: ಸನ್‌ಬೀಮ್ ಫಿಲಂ ಆರ್ಟ್ಸ್
ಪ್ರೊ: ಕೆ.ವಿ.ಚಂದ್ರಿಕಾ, ಧರ್ಮಲಿಂಗಂ
ನಿ: ವಿ.ಉಮಾಶಂಕರ್

ಸ.ನಿ: ವಿರೂಪಾಕ್ಷ, ವಾಸು, ನಾಗರಾಜ್
ಅ: ಪ್ರಭಾಕರ್, ಚಂದ್ರಿಕಾ, ರಮೇಶ್, ಚೇತನ್
ರಾಮರಾವ್, ಅಭಿಲಾಷಾ, ಡಿಸ್ಕೋ ಶಾಂತಿ, ಅರವಿಂದ್.
ಜಿ.ವಿ.ಕೃಷ್ಣ, ರತ್ನಾಕರ್, ಶೋಭಾ, ಶ್ರೀದೇವಿ
ಕ: ಕೆ.ವಿ.ಮಂಜುನಾಥ್
ಚಿ.ಕ: ವಿ.ಉಮಾಶಂಕರ್
ಮಾ: ಕುಣಿಗಲ್ ನಾಗಭೂಷಣ್
ಗೀ: ಶ್ರೀವತ್ಸ ರಂಗನಾಥ್

ಗಾ: ವಿಷ್ಣುವರ್ಧನ್, ಬಿ.ಆರ್.ಛಾಯಾ
ಸಂ: ಎಸ್.ವಿ.ರಮಣರಾವ್
ಛಾ: ಜಾನಿಲಾಲ್
ಕಲೆ: ನಂಜುಂಡ ಸ್ವಾಮಿ
ಸ: ಗುಣಸಿಂಗ್ - ಸಾಮ್ರಾಟ್
ನೃ: ಸತೀಶ್
ಸಾ: ಸ್ವಾಮಿ
ವ: ಸುಂದರ್ , ರಮಣ
ಪ್ರ: ಗೋಪಾಲ್ , ಮಲ್ಲಿ
ಸ್ಟು: ಕಂಠೀರವ, ಪ್ರಸಾದ್, ಚಾಮುಂಡೇಶ್ವರಿ
ಹಾ: ೧) 'ಪ್ರೀತಿಯ ಸ್ವಾಗತ ಸ್ನೇಹದ ದುಂಬಿಗೆ...', ೨)'ಚಿರಕಾಲ ನೀ ಬಾಳು...', ೩)'ಅವಲಕ್ಕಿ ಪವಲಕ್ಕಿ ಕಾಂಚನ ಮಿಣ ಮಿಣ...', ೪)'ಮಧ್ಯರಾತ್ರಿಗುಡುಗು ಮಿಂಚು ಗಾಳಿ...'
ಸೆ: ಉದ್ದ - ೩೮೮೫, 'ಯು' ಸರ್ಟಿಫಿಕೇಟ್
ಕ.ಸಾ: ಕಾರೊಂದು ಹರಿದು ದಾರಿಯಲ್ಲಿ ಹೋಗುತ್ತಿದ್ದ ದಂಪತಿಗಳಲ್ಲಿ ಗಂಡನ ಸಾವು, ಹೆಂಡತಿ ಆಸ್ಪತ್ರೆಗೆ ದಾಖಲು; ಅದು ಆಕಸ್ಮಿಕವಲ್ಲ, ಕೊಲೆ ಎಂದು ಅನ್ಯಾಯದ ವಿರುದ್ಧ ಸತ್ಯಧ್ವನಿ ಪತ್ರಿಕೆಯ ಸಂಪಾದಕ ದನಿ ಎತ್ತಿ ಹೋರಾಡಿ, ತಾನೇ ಸಾಯುತ್ತಾನೆ. ಈ ಕೊಲೆಗಳ ಅಪರಾಧಿಗಳನ್ನು ಪತ್ತೆ ಹಚ್ಚಲು ಸಿ.ಬಿ.ಐ.ಅಧಿಕಾರಿಯ ನೇಮಕ. ಕೊಲೆಗಳ ಹಿಂದಿರುವ ವ್ಯಕ್ತಿಗಳನ್ನು ಸಿ.ಬಿ.ಐ ಅಧಿಕಾರಿ ಪತ್ತೆ ಹಚ್ಚಿ ಶಿಕ್ಷೆಗೆ ಗುರಿಪಡಿಸುವುದೇ ಕಥೆ.

೧೩೫೨. ಕದನ

(೧೯೯೧ / ವರ್ಣ / ಸಾಮಾಜಿಕ)
ಲಾ: ಪದ್ಮ ನಿಧಿ ಆರ್ಟ್ಸ್
ಪ್ರೊ: ವೇಣುಗೋಪಾಲ್
ನಿ: ಕೆ.ವಿ.ರಾಜು
ಸ.ನಿ: ರಾಜಶೇಖರ್
ಅ: ಅಂಬರೀಷ್, ರೂಪಾ ಗಂಗೂಲಿ, ದೇವರಾಜ್, ತಾರಾ, ರಾಮಕೃಷ್ಣ, ಪಂಢರಿಬಾಯಿ, ಬ್ರಹ್ಮಾವರ್, ಗೋವಿಂದರಾಜ್, ದತ್ತಾತ್ರೇಯ, ಜೈಜಗದೀಶ್
ಕ/ಚಿ.ಕ/ಮಾ/ಗೀ: ಕೆ.ವಿ.ರಾಜು
ಸಂ: ಶ್ಯಾಂ ಯಾದವ್
ಛಾ: ಕೃಷ್ಣ
ಕಲೆ: ರಾಜು
ಸ: ಸಂಗೀತರಾಜ
ನೃ: ಉಡುಪಿ ಜಯರಾಂ, ದೇವಿ
ಸಾ: ಸಾಹುಲ್
ವ: ಪಿ.ವಿ.ರಾಮನಾಥ್
ಪ್ರ: ರಾಮನಾಥ್
ಸ್ಟು: ಕಂಠೀರವ, ಸಂಕೇತ್, ಪ್ರಸಾದ್
ಹಾ: ೧)'ಭೂಮಿ ಬೆಳ್ಳಿ ಬಾನಲ್ಲಿ...', ೨)'ಹೇ ಸುಡೋ ಬಿಸಿ ಬೆಂಕಿಯಲಿ...', ೩)'ಪ್ರೇಮದೂರಲಿ ಮಾವು ತೋರಣ...', ೪)'ಹೇ ಕಲಿ ನೋಡಿಲ್ಲಿ...', ೫)'ಜನನೀ ನಿನ್ನ ಒಲವೇ ಚೆನ್ನ...'
ಕ.ಸಾ: ಸೇನೆಗೆ ಸೇರಿದ್ದ ಮೂವರು ಸ್ನೇಹಿತರು ಮದುವೆಯ ಕಾರಣಕ್ಕೆ ರಜೆ ಪಡೆದು ಊರಿಗೆ ಬರುತ್ತಾರೆ. ಆ ಊರಲ್ಲಿ ಮಿತಿಮೀರಿದ ಗೂಂಡಾಗಿರಿ ಕಂಡು ಅದರ ವಿರುದ್ಧ ಹೋರಾಡುತ್ತಾರೆ. ಈ ಹೋರಾಟದಲ್ಲಿ ಒಬ್ಬ ಸ್ನೇಹಿತ ಪ್ರಾಣ ಕಳೆದುಕೊಳ್ಳುತ್ತಾನೆ, ಆದರೆ ಉಳಿದಿಬ್ಬರು ಸಮಾಜ ದ್ರೋಹಿಗಳ ವಿರುದ್ಧ ಹೋರಾಡಿ ಊರಿನ ಜನರನ್ನು ಅವರ ಕೈಯಿಂದ ಕಾಪಾಡುತ್ತಾರೆ.

೧೩೫೩. ಕೆರಳಿದ ಕೇಸರಿ

(೧೯೯೧ / ವರ್ಣ / ಸಾಮಾಜಿಕ)
ಲಾ: ಲೋಹಿತ್ ಕಂಬೈನ್ಸ್
ನಿ: ಕೆ.ವಿ.ಜಯರಾಂ
ಅ: ಶಶಿಕುಮಾರ್, ಶಿವರಂಜಿನಿ, ಪ್ರಭಾಕರ್, ಚಂದ್ರಿಕಾ, ಸುನಂದ, ಲೋಕನಾಥ್, ಟೆನ್ನಿಸ್ ಕೃಷ್ಣ
ಕ/ಚಿ.ಕ: ಕೆ.ವಿ.ಜಯರಾಂ
ಮಾ: ಜಯಂತ್
ಗೀ: ದೊಡ್ಡರಂಗೇ ಗೌಡ
ಸಂ: ಶ್ಯಾಮ್ ಯಾದವ್
ಛಾ: ಆರ್.ಸಿ.ಮಾಪಾಕ್ಷಿ
ಕಲೆ: ಕೃಷ್ಣಾಚಾರಿ
ಸ: ಸಂಗೀತರಾಜ
ನೃ: ಎಸ್.ರಘುರಾಂ
ಸಾ: ನಂಜುಂಡಿ ನಾಗರಾಜ್
ಸ್ಟು: ಚಾಮುಂಡೇಶ್ವರಿ
ಹಾ: ೧)'ಬೇಟೆ ಆಡೋ ಬಯಕೆ...', ೨)'ಮುಚ್ಚಿಟ್ಟ ಮಾತ ಬಿಚ್ಚಿಟ್ಟು ಹೇಳಿ...', ೩)'ಎತ್ಲಾಗೋ ಗ್ಯಾನ ನೆಟ್ಟು...', ೪)'ಇಂದೇನೋ ರೋಮಾಂಚನ ನಾ ಕಂಡೆ...', ೫)'ಬದುಕೆಲ್ಲಾ ಹೀಗಾಯಿತೇಕೆ...'
ಸೆ ಉದ್ದ-೪೪೪೨.೦,'ಯು'ಸರ್ಟಿಫಿಕೇಟ್, ೧೪-೦೩-೧೯೯೧
ಕ.ಸಾ: ತನ್ನ ಅಕ್ಕನನ್ನು ನಂಬಿಸಿ ಗರ್ಭಿಣಿಯಾಗುವಂತೆ ಮಾಡಿ ಅವಳ ಸಾವಿಗೆ ಕಾರಣನಾದ ಜಯಂತನ ಮೇಲೆ ಸೇಡು ತೀರಿಸಿಕೊಳ್ಳಲು ತೇಜ ನಿರ್ಧರಿಸುತ್ತಾನೆ. ಆದಕ್ಕಾಗಿ ಜೈಲಿನಿಂದ ಹೊರಬಂದ ನಂತರ ಆತನ ಮಗಳನ್ನು ಪ್ರೀತಿಸುತ್ತಾನೆ, ಆದರೆ ತಾನು ಪ್ರೀತಿಸಿದ ಹುಡುಗಿ ತನ್ನ ಅಕ್ಕನ ಮಗಳೇ ಎಂದು, ಅಕ್ಕನ ಸಾವಿನಲ್ಲಿ ಜಯಂತನ ತಪ್ಪು ಏನೂ ಇಲ್ಲವೆಂದು ತಿಳಿಯುತ್ತದೆ, ಕೊನೆಯಲ್ಲಿ ತೇಜನಿಗೆ ಜಯಂತ ತನ್ನ ಮಗಳನ್ನು ಕೊಟ್ಟು ಮದುವೆ ಮಾಡಿಸುತ್ತಾನೆ.

೧೩೫೪. ಬಂಗಾರದಂಥಾ ಮಗ

(೧೯೯೧ / ವರ್ಣ / ಸಾಮಾಜಿಕ)
ಲಾ: ಅಜಂತಾ ಪ್ರೊಡಕ್ಷನ್ಸ್
ಪ್ರೊ: ಆರ್. ರಾಮರಾವ್
ನಿ: ವೈ.ಆರ್.ಸ್ವಾಮಿ
ಸ.ನಿ: ಸ್ವಾಮಿ ಸುರೇಶ
ಅ: ಬಾಲರಾಜು, ಶಿವಕುಮಾರ್, ಕಲ್ಯಾಣ್‌ಕುಮಾರ್, ಶುಭ, ಹೇಮಾ ಚೌಧುರಿ, ಗೀತಾರಾಜು, ದಿನೇಶ್, ಮಾ।ಅಮಿತ್, ಉಮಾಶ್ರೀ, ಸತ್ಯಭಾಮ, ಕೀರ್ತಿ, ರಾಜಾನಂದ್, ಕಾದಂಬರಿ
ಕ/ಚಿ.ಕ: ವೈ.ಆರ್.ಸ್ವಾಮಿ
ಮಾ: ಕೀರ್ತಿರಾಜ್, ಸುರೇಶ್ ಸ್ವಾಮಿ, ಗುರುಪ್ರಸಾದ್
ಗೀ: ಚಿ.ಉದಯಶಂಕರ್
ಗಾ: ಮಂಜುಳಾ ಗುರುರಾಜ್. ಮನು, ಚಿತ್ರಾ
ಸಂ: ಪಿ.ವೆಂಕಟೇಶ್ವರ ರಾವ್
ಛಾ: ಪ್ರಭಾಕರ್
ಕಲೆ: ಬಾಬು
ಸ: ಎಸ್.ವಾಸುರಾವ್
ಧ್ವ: (ಹಾ) ಸೋಮಶೇಖರ್ (ಮಾ) ಸುಶಾಂತ್
ನೃ: ಪೊನ್ನಿ , ಅಶೋಕ್
ಸಾ: ಆಂಬೂರು ಬಾಬು
ವ: ವೆಂಕಟರಾಂ
ಪ್ರ: ಚೆಲುವರಾಜು, ಕೇಶವಾಚಾರಿ
ಸ್ಟು: ಕಂಠೀರವ, ಪ್ರಸಾದ್, ಅಭಿಮಾನ್
ಹಾ: ೧)' ಓ ನನ್ನ ಕಂದಾ ರವಿ...', ೨)'ಇದು ರಾಜನ ಕತೆಯಲ್ಲ...', ೩)'ಕಾಮನಬಿಲ್ಲಿಗಿಂತ ಅಂದವ ನೋಡಿದೆ ...'
ಸೆ ಉದ್ದ-೩೯೪೨,'ಯು'ಸರ್ಟಿಫಿಕೇಟ್, ೨೨-೦೫-೧೯೯೦
ಕ.ಸಾ: ಕೊಲೆಯ ಆಪಾದನೆಗೊಳಗಾಗಿ ಪೊಲೀಸರೊಂದಿಗೆ ಹೋಗುತ್ತಿರುವ ಸೀತಾರಾಮರಾಯರು ತಪ್ಪಿಸಿಕೊಂಡು ನಾಪತ್ತೆಯಾಗುತ್ತಾರೆ. ಮೂವರು ಮಕ್ಕಳಲ್ಲಿ ಮೊದಲನೆಯ ಮಗ ಶ್ರೀಮಂತಿಕೆಯ ಆಸೆಗೆ ಬಿದ್ದು ಸಂಸಾರಕ್ಕೆ ದ್ರೋಹ ಮಾಡುತ್ತಾನೆ, ಎರಡನೇ ಮಗ ತಾಯಿಯೊಂದಿಗೆ ಕಷ್ಟಪಡುತ್ತಿರುತ್ತಾನೆ. ಈ ಸಂದರ್ಭದಲ್ಲಿ ಸೀತಾರಾಮರಾಯರಿಂದ ಚಿಕ್ಕಂದಿನಿಂದಲೂ ಸಹಾಯ ಪಡೆದು ಶ್ರೀಮಂತನಾಗಿದ್ದ ವ್ಯಕ್ತಿ ಬಂದು ಸಹಕರಿಸುತ್ತಾನೆ. ದೊಡ್ಡ ಮಗನಿಗೆ ಬುದ್ಧಿ ಕಲಿಸಿ ಎಲ್ಲರೂ ಒಂದುಗೂಡುವಂತೆ ಮಾಡುತ್ತಾನೆ. ಆಗ ನಾಪತ್ತೆಯಾಗಿದ್ದ ಸೀತಾರಾಮರಾಯರು ಸಿಗುತ್ತಾರಲ್ಲದೆ ಅವರ ಮೇಲಿನ ಅಪಾದನೆ ಕೂಡ ದೂರವಾಗುತ್ತದೆ.

೧೩೫೫. ಕಿತ್ತೂರಿನ ಹುಲಿ

(೧೯೯೧ / ವರ್ಣ / ಸಾಮಾಜಿಕ)
ಲಾ: ಶ್ರೀ ದೇವಿ ಪಿಕ್ಚರ್ಸ್
ಪ್ರೊ: ಸಾಯಿಪ್ರಕಾಶ್, ರಾಜಮ್ಮ ಸಾಯಿಪ್ರಕಾಶ್
ನಿ: ಸಾಯಿಪ್ರಕಾಶ್
ಸ.ನಿ: ದೊಡ್ಡಮನಿ ಚಂದ್ರು, ಶರಣ್ ಗದ್ವಾಲ್, ಮೋಹನ ಮಾಳಗಿ
ಅ: ಶಶಿಕುಮಾರ್, ಮಾಲಾಶ್ರೀ, ದೊಡ್ಡಣ್ಣ, ದತ್ತಾತ್ರೇಯ, ಮುಖ್ಯಮಂತ್ರಿ ಚಂದ್ರು, ಚಿ.ಗುರುದತ್, ಕೀರ್ತಿ, ಉಮಾಶ್ರೀ, ಸದಾಶಿವ ಬ್ರಹ್ಮಾವರ್, ಮನದೀಪ್ ರಾಯ್, ಸಿಹಿಕಹಿ ಗೀತ, ಸಿಹಿಕಹಿ ಚಂದ್ರು, ಮೈಸೂರು ಲೋಕೇಶ್, ಕುಣಿಗಲ್ ನಾಗಭೂಷಣ್, ಬಿ.ಕೆ.ಶಂಕರ್, ಎಂ.ಎಸ್.ಕಾರಂತ್,

ರಾಮಮೂರ್ತಿ, ಕು|ಪ್ರಮೋದಿನಿ, ನವನೀತ, ಭಾನುಮತಿ, ಅನಿತಾರಾಣಿ, ಸೀಮಾ, ಉಮಾ
ಕ/ಚಿ.ಕ: ಸಾಯಿಪ್ರಕಾಶ್
ಮಾ: ಕುಣಿಗಲ್ ನಾಗಭೂಷಣ್
ಗೀ: ಆರ್.ಎನ್.ಜಯಗೋಪಾಲ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಮಂಜುಳಾ ಗುರುರಾಜ್, ಸಂಗೀತಾ ಕಟ್ಟಿ (ಹೊಸ ಪರಿಚಯ)
ಸಂ: ಕೆ.ನರಸಯ್ಯ
ಛಾ: ಕೃಷ್ಣ
ಕಲೆ: ಬಾಬು
ಸ: ಉಪೇಂದ್ರ ಕುಮಾರ್
ಧ್ವ: (ಹಾ) ಎಸ್.ಪಿ.ರಾಮನಾಥನ್, (ಮಾ)ಎಂ.ಕೋದಂಡಪಾಣಿ
ನೃ: ಶಿವಶಂಕರ್
ಸಾ: ಥ್ರಿಲ್ಲರ್ ಮಂಜು
ವ: ಜಯಚಂದ್ರ
ಪ್ರ: ಚೆಲುವರಾಜು, ಚಂದ್ರ, (ಕೇಶ:) ಬಾಬು
ಸ್ಟು: ಕಂಠೀರವ, ಚಾಮುಂಡೇಶ್ವರಿ
ಹಾ: ೧)'ಜಗವಿದೆ ನೋಡು ನಮ್ಮ ಕೈಲಿ...', ೨)'ಅಮ್ಮಮ್ಮಾ ಫಿಗರ್ರೋ...', ೩)'ಮೋಡ ಮೋಡ ಡಿಕ್ಕಿ ಹೊಡೆಯೆ ...', ೪)'ಊರೆಲ್ಲ ಮಲಗಿಹ ಸಮಯ...', ೫)'ಅಂದು ಅನುಮಾನದ ಅಗ್ನಿಗೆ...', ೬)'ಹೆಂಡ್ತಿ ಮಾತು ಕೇಳ್ತೀಯಾ ...'
ಸೆ: ರೀಲು - ೧೫, ಉದ್ದ - ೪೪೪೯, 'ಯು' ಸರ್ಟಿಫಿಕೇಟ್, ೨೭ - ೦೩ ೧೯೯೧
ವಿ: ವಿಮರ್ಶಾ ಸ್ಪರ್ಧೆ ಏರ್ಪಡಿಸಿದ್ದರು. ಖ್ಯಾತ ಲೇಖಕಿಯರು ತೀರ್ಪುಗಾರರಾಗಿ ಇದ್ದರು
ಕ.ಸಾ: ದುಷ್ಕರ್ಮಿಗಳ ಕುತಂತ್ರದಿಂದ ತಂದೆ ಹಾಗು ಎಲ್ಲವನ್ನೂ ಕಳೆದುಕೊಳ್ಳುವ ಪ್ರಸಿದ್ಧ ಉದ್ಯಮಿಯ ಮಗಳು ಭಾರತಿ ಸಹಪಾಠಿಯಾದ ವಿಜಯನ ಜೊತೆಗೂಡಿ ಅವರ ವಿರುದ್ಧ ಸೇಡು ತೀರಿಸಿಕೊಳ್ಳಲು ನಿರ್ಧರಿಸುತ್ತಾಳೆ. ಕಿತ್ತೂರು ಚೆನ್ನಮ್ಮನ ಮೂರ್ತಿಯ ಉದ್ಘಾಟನೆಗೆ ಬರುವ ಖಳನಾಯಕನನ್ನು ತಾನೇ ಚೆನ್ನಮ್ಮನ ವೇಷಧರಿಸಿ ಕುಳಿತು ಸಾಯಿಸುತ್ತಾಳೆ. ಆದರೆ ಎರಡೂ ಗುಂಪಿನ ಗುಂಡಿನ ಚಕಮಕಿಯಲ್ಲಿ ಸಿಕ್ಕಿ ಭಾರತಿ ಸಾವನ್ನಪ್ಪುತ್ತಾಳೆ.

೧೩೫೬. ದುರ್ಗಾಷ್ಟಮಿ

(೧೯೯೧ / ವರ್ಣ / ಭಕ್ತಿಪ್ರಧಾನ)
ಲಾ: ಶ್ರೀ ಅಂಕಾಳ ಪರಮೇಶ್ವರಿ ಪ್ರೊಡಕ್ಷನ್ಸ್
ಪ್ರೊ: ಆರ್.ರಾಜು
ನಿ: ಗೀತಪ್ರಿಯ
ಸ.ನಿ: ಮಂಡ್ಯ ಸುರೇಶ್
ಅ: ಅಶೋಕ್, ಮಹಾಲಕ್ಷ್ಮಿ, ವಜ್ರಮುನಿ, ಸತ್ಯಪ್ರಿಯ, ಚೇತನ್ ರಾಜ್, ಬೇಬಿ ಗೌರಿಪ್ರಿಯ, ರಾಜಾನಂದ್, ಲಕ್ಷ್ಮಣ್, ರತ್ನಾಕರ್, ಸುಜಾತ, ಲಕ್ಷ್ಮಿಕಾಂತ್, ಬೇಬಿ ಚಿತ್ರಾ, ಜ್ಯೋತಿ, ಸರೋಜ ಶೆಟ್ಟಿ, ಉಮೇಶ್, ಡಿಂಗ್ರಿ ನಾಗರಾಜ್, ಶಶಿಕಿರಣ್
ಚಿ.ಕ: ಗೀತಪ್ರಿಯ
ಮಾ: ಆರ್.ಎನ್.ಜಯಗೋಪಾಲ್
ಗೀ: ವಿಜಯನಾರಸಿಂಹ, ಆರ್.ಎನ್. ಜಯಗೋಪಾಲ್
ಗಾ: ಮಂಜುಳಾ, ಕುಸುಮ
ಸಂ: ವಿಕ್ಟರ್ ಯಾದವ್
ಛಾ: ಎಸ್.ವಿ.ಶ್ರೀಕಾಂತ್
ಕಲೆ: ಸಿ.ಟಿ.ಮುತ್ತುಕೃಷ್ಣ
ಸ: ಶಂಕರ್ - ಗಣೇಶ್
ಧ್ವ: (ಹಾ) ಜಿ.ವಿ.ಸೋಮಶೇಖರ್, (ಮಾ) ಕೋದಂಡಪಾಣಿ

ನೃ: ಟಿ.ಕೆ.ಎಸ್. ಬಾಬು, ಕಣ್ಣನ್, ಉಡುಪಿ ಜಯರಾಂ
ಸಾ: ರುದ್ರೇಶ್
ವ: ಆರ್.ಎಸ್.ಮಣಿ
ಪ್ರ: ಗೋಪಾಲ್
ಸ್ಟು: ಅಭಿಮಾನ್, ಕಂಠೀರವ
ಕ.ಸಾ: ದೇವಿಯ ಪರಮಭಕ್ತೆಯೊಬ್ಬಳ ಮೇಲೆ ಅತ್ಯಾಚಾರ ಮಾಡಿ, ಅವಳು ತನ್ನನ್ನೇ ಮದುವೆಯಾಗುವಂತಹ ಪರಿಸ್ಥಿತಿ ನಿರ್ಮಿಸಿದ ವ್ಯಕ್ತಿ. ಆಕೆಯ ಸದ್ಗುಣಗಳನ್ನು ಸಹಿಸದೇ ಆಕೆಯನ್ನು ಕೊಲೆ ಮಾಡುತ್ತಾನೆ. ಆದರೆ ದೇವಿ ದುರ್ಗಾಮಾತೆ ಸತ್ತ ಹೆಣ್ಣಿನ ರೂಪದಲ್ಲಿ ಬಂದು ದುಷ್ಟರನ್ನು ಶಿಕ್ಷಿಸಿ ಶಿಷ್ಟ ರಕ್ಷಣ ಮಾಡುತ್ತಾಳೆ.

೧೩೫೭. ಬಾಲಕ ಅಂಬೇಡ್ಕರ್

(೧೯೯೧ / ವರ್ಣ / ಜೀವನಚಿತ್ರ)
ಲಾ: ಶ್ರೀ ಭಗವತಿ ಫಿಲಂಸ್
ಪ್ರೊ: ಎಸ್. ಸುಗುಣಾ ನಂದಕುಮಾರಿ
ನಿ: ಬಸವರಾಜ ಕೆಸ್ತೂರ್
ಸ.ನಿ: ಎಸ್. ಸ್ವತಂತ್ರ ರಾವ್
ಅ: ಎಂ.ವಿ.ವಾಸುದೇವ ರಾವ್, ಸ್ವತಂತ್ರ ರಾವ್, ರಾಮಕೃಷ್ಣ, ಸವಿತಾ, ಶಾರದ ಷಡಕಿ, ಮಾ|ಅಮಿತ್, ಮಾ|ಉಮೇಶ್, ತೀರ್ಥ ಪ್ರಸಾದ್, ಪ್ರಭು ಪಂಡಿತ್, ಬಸವಣ್ಣ, ಮಹೇಂದ್ರ, ಇಂದ್ರಾಬಾನು, ಗಂಗಾಧರ, ಆನಂದಲಕ್ಷ್ಮಿ, ಮಾ|ವಿಶ್ವನಾಥ್, ಸೋಮಣ್ಣ, ಜಿ.ಬಿ.ಮನೋಜ್,
ಕ: ಅಂಬೇಡ್ಕರ್ ಅವರ ಜೀವನ ಚರಿತ್ರೆ ಆಧರಿಸಿದ್ದು.
ಚಿ.ಕ: ಎಸ್. ಸ್ವತಂತ್ರ ರಾವ್
ಮಾ: ಎಸ್. ಸ್ವತಂತ್ರ ರಾವ್ , ಪ್ರಭು ಪಂಡಿತ್, ಜಿ.ಬಿ.ಮನೋಜ್
ಸಂ: ಹರಿ ನಾರಾಯಣಯ್ಯ
ಛಾ: ಟಿ.ಯಲ್ಲಪ್ಪ
ಕಲೆ: ಪ್ರಭು, ಭಾಷ
ಸ: ಸಾಮ್ರಾಟ್
ಧ್ವ: ದಶರಥ್ ಕೋದಂಡಪಾಣಿ
ವ: ಪುಟ್ಟಣ್ಣ ಕೊಳ್ಳೇಗಾಲ
ಪ್ರ: ಕೆ.ಶ್ಯಾಂ
ವಿ: ಅಂತರ ರಾಷ್ಟ್ರೀಯ ಪ್ರಶಸ್ತಿ ಪಡೆದ ಚಿತ್ರ, ಹಾಗೂ "ಭೀಮರತ್ನ" ಎಂಬ ನಾಮದಿಂದ ಹಿಂದಿ ಅವತರಣಿಕೆ ಆಗಿದೆ.
ಸೆ: ಉದ್ದ - ೩೩೬೩, ೨೧ - ೦೩ - ೧೯೯೧
ಕ.ಸಾ: ಭಾರತೀಯ ಸಂವಿಧನವನ್ನು ರೂಪಿಸಿದ ಬಾಬಾ ಸಾಹೆಬ್ ಅಂಬೇಡ್ಕರ್ ಬಾಲ್ಯದಿಂದಲೂ ಅನೇಕ ಹಕ್ಕುಗಳನ್ನು ಎದುರಿಸಿ ರಾಷ್ಟ್ರಮಟ್ಟದಲ್ಲಿ ದೊಡ್ಡ ಗೌರವ ಪಡೆದು, ತನ್ನ ಜನಾಂಗಕ್ಕೆ ಅರಿವು ಮೂಡಿಸಿದ.

೧೩೫೮. ನೀನು ನಕ್ಕರೆ ಹಾಲು ಸಕ್ಕರೆ

(೧೯೯೧ / ವರ್ಣ / ಸಾಮಾಜಿಕ)
ಲಾ/ಪ್ರೊ: ರಜಸ್ಸು ಫಿಲಂಸ್ (ಪ್ರೈ) ಲಿ.
ನಿ: ದೊರೆ - ಭಗವಾನ್
ಸ.ನಿ: ವಿ.ಆರ್.ಭಾಸ್ಕರ್, ಎಸ್.ಕೃಷ್ಣಮೂರ್ತಿ
ಅ: ವಿಷ್ಣುವರ್ಧನ್, ರೂಪಿಣಿ, ರಜನಿ, ಚಂದ್ರಿಕಾ, ವಿನಯಾ ಪ್ರಸಾದ್, ವಿಜಯಕಾಶಿ, ಬಾಲಕೃಷ್ಣ, ಅಂಜಲಿ, ಉಮಾಶ್ರೀ, ಉಮೇಶ್, ಚಂದ್ರು, ಶ್ರೀನಾಥ್, ರಮೇಶ್ ಭಟ್, ಉದಯ್, ಮುಖ್ಯಮಂತ್ರಿ ಚಂದ್ರು
ಕ/ಚಿ.ಕ: ದೊರೆ - ಭಗವಾನ್
ಮಾ: ಚಿ.ಉದಯಶಂಕರ್
ಗೀ: ಚಿ.ಉದಯಶಂಕರ್, ಹಂಸಲೇಖ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ, ಮಂಜುಳಾ ಗುರುರಾಜ್
ಸಂ: ಭಕ್ತವತ್ಸಲಂ
ಛಾ: ಜೆ.ಜಿ. ಕೃಷ್ಣ
ಕಲೆ: ನಜೀರ್
ಸ: ಹಂಸಲೇಖ
ಧ್ವ: (ಹಾ) ಎಸ್.ಪಿ.ರಾಮನಾಥನ್ (ಮಾ) ಕೋದಂಡಪಾಣಿ
ನೃ: ಉಡುಪಿ ಜಯರಾಂ
ಸಾ: ಹಾರ್ಸ್ ಬಾಬು
ವ: ರಾಮನಾಥನ್
ಪ್ರ: ಶ್ರೀನಿವಾಸನ್, (ಕೇಶ:) ನಾಗೇಶ್ವರ ರಾವ್
ಸ್ಟು: ಚಾಮುಂಡೇಶ್ವರಿ
ಹಾ: ೧)' ಚೆಲುವೆ ನೀನು ನಕ್ಕರೇ...', ೨)'ಬಾರೆ ಸಂತೆಗೆ ಹೋಗೋಣ ಬಾ...', ೩)'ಬಾರೋ ಗೆಳೆಯನೆ ...', ೪) 'ಬಾನಲ್ಲಿ ನಿನ್ನಿಂದ ಸೂರ್ಯೋದಯಾ...', ೫)'ಬಾರೆ ರುಕ್ಕಮ್ಮಾ ಕೈಗೆ ಸಿಕ್ಕಮ್ಮಾ...'
ಸೆ: ಉದ್ದ - ೪೩೯೦.೦೦
ಕ.ಸಾ: ಮದುವೆಯಾಗಬೇಕೆಂಬ ತಾತನ ಬಲವಂತವನ್ನು ತಾಳದೆ ನಾಯಕ ಸುಬ್ಬು ಊರು ಬಿಟ್ಟು ಹೋಗುತ್ತಾನೆ. ಅಲ್ಲಿ ತಮ್ಮ ದೊಡ್ಡ ಮನೆಯಲ್ಲಿ ಖಾಲೀ ಇರುವ ಮನೆಯನ್ನು ಮದುವೆ ವಯಸ್ಸಿಗೆ ಬಂದಿರುವ ಹೆಣ್ಣು ಮಕ್ಕಳಿರುವ ಸಂಸಾರಕ್ಕೆ ಬಾಡಿಗೆ ಕೊಟ್ಟು ಅವರ ಗುಣ ನಡತೆಗಳನ್ನು ಪರೀಕ್ಷಿಸುತ್ತಾನೆ. ಆದರೆ ಯಾರೂ ಹೊಂದಾಣಿಕೆಯಾಗುವುದಿಲ್ಲ. ಕೊನೆಗೆ ರುಕ್ಮಿಣಿ ಎಂಬ ಹುಡುಗಿ ಈತನಿಗೆ ದಕ್ಕುತ್ತಾಳೆ.

೧೩೫೯. ತವರು ಮನೆ ಉಡುಗೊರೆ

(೧೯೯೧ / ವರ್ಣ / ಸಾಮಾಜಿಕ)
ಲಾ: ಸುರೇಶ್ ಪ್ರೊಡಕ್ಷನ್ಸ್
ಪ್ರೊ: ಡಿ.ರಾಮಾ ನಾಯ್ಡು
ನಿ: ಬೋಯಿನಾ ಸುಬ್ಬಾರಾವ್
ಅ: ರಾಜೇಶ್, ಶ್ರೀನಾಥ್, ಶ್ರೀಧರ್, ಸುನಿಲ್, ಮಾಲಾಶ್ರೀ, ಜಾನಕಿ, ವೀಣಾ, ಹೇಮಾ ಚೌಧುರಿ, ವೈಶಾಲಿ, ಉಮಾಶ್ರೀ, ಅಮೂಲ್ಯ
ಮಾ/ಗೀ: ಚಿ.ಉದಯಶಂಕರ್
ಗಾ: ಮಂಜುಳಾ ಗುರುರಾಜ್, ಎಸ್.ಜಾನಕಿ, ಎಸ್.ಪಿ.ಬಾಲಸುಬ್ರಹ್ಮಣ್ಯಂ
ಸಂ: ಕೆ.ವಿ.ಕೃಷ್ಣಾ ರೆಡ್ಡಿ
ಛಾ: ವಿ.ಪ್ರತಾಪ್
ಕಲೆ: ಕೇಶವರಾವ್
ಸ: ಉಪೇಂದ್ರ ಕುಮಾರ್
ನೃ: ತಾರಾ
ಸಾ: ಜ್ಯೂಡೋ ರತ್ನಂ
ಪ್ರ: ಚೆಲುವರಾಜು
ಸ್ಟು: ಚಾಮುಂಡೇಶ್ವರಿ
ಹಾ: ೧)'ಕೈ ಬಳೆ ಘಲ್ ಘಲ್...', ೨)'ಚಿಗುರಿದೆ ಇಂದು ಹೊಸ ಲತೆ...', ೩)'ಅಮ್ಮ ಅಂತೂ ಇಲ್ಲ ಅಪ್ಪ ಇದ್ದರೂ ಇಲ್ಲ...', ೪)'ಎಲ್ಲೆಲ್ಲೂ ನಿನ್ನೇ ನಾನಿಂದು ಕಂಡೆ...', ೫)'ಕಣ್ಣೀರಲ್ಲಿ ಹುಟ್ಟಿದ ತಾವರೆ...'

ವಿ: ರಾಮಾನಾಯ್ಡು ಅಂಥ ಪ್ರಸಿದ್ಧ ರಾಜಕಾರಣಿ, ನಿರ್ಮಾಪಕರು ಕನ್ನಡ ಚಿತ್ರರಂಗದಲ್ಲಿ ಆಸಕ್ತಿ ತೋರಿದರು.

ಕ.ಸಾ: ತವರಿನವರಿಂದಲೂ, ಅತ್ತೆ ಮನೆಯವರಿಂದಲೂ ತಿರಸ್ಕಾರಕ್ಕೊಳಗಾದ ಹೆಣ್ಣು, ತಾನು ಎಷ್ಟೇ ಕಷ್ಟಪಟ್ಟರೂ ತವರಿಗೆ ಒಳ್ಳೆಯದಾಗಲೆಂದು ಹಾರೈಸುತ್ತಾಳೆ.... ಎಂಬುದನ್ನು ವಿವರಿಸುವ ಸಾಂಸಾರಿಕ ಕಥೆ.

೧೩೬೦. ಇದೇ ಪೊಲೀಸ್ ಬೆಲ್ಟ್

(೧೯೯೧ / ವರ್ಣ / ಸಾಮಾಜಿಕ)

ಲಾ: ಶ್ರೀ ಲಕ್ಷ್ಮಿ ಫಿಲಂಸ್
ಪ್ರೊ: ಎಂ. ರಾಜೇಂದ್ರ , ಕುಮಾರ್
ನಿ: ಮುದು ರಾಜು
ಅ: ದೇವರಾಜ್, ತ್ಯಾಗರಾಜ್, ಜಗ್ಗೇಶ್, ಟೆನ್ನಿಸ್ ಕೃಷ್ಣ, ಲೋಹಿತಾಶ್ವ, ಮೈಸೂರು ಲೋಕೇಶ್, ಅಭಿಜಿತ್, ನಾಗೇಶ್ ಮಯ್ಯ, ವಿನಯಾ ಪ್ರಸಾದ್, ತಾರಾ
ಕ: ಟಿ.ಎಸ್.ರಾಜು , ಪಿಂಟೋ
ಚಿ.ಕ/ಮಾ: ಕುಣಿಗಲ್ ನಾಗಭೂಷಣ್
ಗೀ: ಹಂಸಲೇಖ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಲತಾ ಹಂಸಲೇಖ
ಸಂ: ಎಸ್.ಪ್ರಸಾದ್
ಛಾ: ಪದ್ಮಕುಮಾರ್
ಸ: ಹಂಸಲೇಖ
ನೃ: ಅಂಜು ಮಹೇಂದ್ರನ್
ಸಾ: ಥ್ರಿಲ್ಲರ್ ಮಂಜು
ಸ್ಟು: ಚಾಮುಂಡೇಶ್ವರಿ, ಪ್ರಸಾದ್
ಹಾ: ೧)'ಕೋಗಿಲೆಯೇ ಮುಂದಿನ ಮೋಸಕೆ...', ೨)'ಓ ದೇವರೇ ನೀನಲ್ಲಿ ಇರುವ...', ೩)'ರಾಜರಂತೆ ನಾವು ನಮ್ಮ ಊರಿಗೆ...'
ಸೆ: ಉದ - ೪೫೭೩ 'ಯು' ಸರ್ಟಿಫಿಕೇಟ್, ೨೫-೦೪ ೧೯೯೧

ಕ.ಸಾ: ಸಮಾಜ ಕಂಟಕರಾದ ಮೂವರು. ಅವರನ್ನು ಕಾನೂನಿನ ಕೈಗೆ ಒಪ್ಪಿಸಲು ಎಸ್.ಐ.ಅಶೋಕ್ ನಿರ್ಧಾರ. ಆ ದುಷ್ಟರ ಮಕ್ಕಳು ಅಬಲೆಯೊಬ್ಬಳ ಮೇಲೆ ಅತ್ಯಾಚಾರವೆಸಗಿದಾಗ, ಅಶೋಕ್ ಅವರನ್ನು ಬಂಧಿಸಿದ. ಆದರೆ ಕಿರಿಯ ಅಧಿಕಾರಿ ತೆಗೆದುಕೊಂಡ ಕ್ರಮಕ್ಕೆ ಹಿರಿಯ ಪೊಲೀಸ್ ಅಧಿಕಾರಿ ಬೆಂಬಲಿಸಲಿಲ್ಲ. ಪರಿಣಾಮ ಅಶೋಕ್ ರಾಜೀನಾಮೆ. ಪೊಲೀಸ್ ಇಲಾಖೆಗೆ ತಲೆನೋವಾಗಿದ್ದ ಬೇರೆ ಮೂವರು ಅಶೋಕ್‌ನಿಗೆ ಸಹಕಾರ ನೀಡಿದರು. ಅಶೋಕ್ ದುಷ್ಟರನ್ನು ಸದೆ ಬಡಿಯಲು ಸಾಧ್ಯವಾಯಿತು.

೧೩೬೧. ಗಂಡನಿಗೆ ತಕ್ಕ ಹೆಂಡತಿ

(೧೯೯೧ / ವರ್ಣ / ಸಾಮಾಜಿಕ)

ಲಾ: ಕಲಾಕೃತಿ
ಪ್ರೊ: ಭಾರ್ಗವ ರಾಜಾರಾಂ
ನಿ: ಭಾರ್ಗವ
ಸ.ನಿ: ಸಿ.ಹೆಚ್.ಬಾಲಾಜಿ ಸಿಂಗ್ , ಕೆ.ಬಿ.ಹಿರೇಮಠ್, ಎಸ್.ಉದಯ್
ಅ: ಶಶಿಕುಮಾರ್, ಚಂದ್ರಿಕಾ, ಸುಧೀರ್, ದೊಡ್ಡಣ್ಣ, ಗುರುದತ್, ರಾಜಾನಂದ್, ಉಮೇಶ್, ಡಿಂಗ್ರಿ ನಾಗರಾಜ್, ಜಗ್ಗೇಶ್, ರಮೇಶ್ ಭಟ್, ಸರೋಜ, ಶ್ರೀಶೈಲನ್, ವಸಿ ಮಹದೇವಪ್ಪ, ಎಂ.ಎಸ್.ಕಾರಂತ್, ಟೆನ್ನಿಸ್ ಕೃಷ್ಣ, ಸಾಯಿಕುಮಾರ್, ತಿಮ್ಮಯ್ಯ, ಡಿಸ್ಕೋ ಶಾಂತಿ, ಸಿತಾರಾ, ಶಾಂತಮ್ಮ, ಶೀಲಾ
ಕ: ಎಸ್.ಟಿ.ಜಯರಾಮ ರಟ್ಟಿ
ಚಿ.ಕ: ಬಿ.ಎಲ್.ವೇಣು, ಭಾರ್ಗವ
ಮಾ: ಬಿ.ಎಲ್.ವೇಣು
ಗೀ: ಗೀತಪ್ರಿಯ, ದೊಡ್ಡರಂಗೇಗೌಡ, ಸು. ರುದ್ರಮೂರ್ತಿ ಶಾಸ್ತ್ರಿ, ಶ್ರೀರಂಗ, ಶ್ಯಾಮ ಸುಂದರ ಕುಲಕರ್ಣಿ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಮಂಜುಳಾ, ಚಿತ್ರಾ
ಸಂ: ಬಿ.ನಾಗೇಶ್
ಛಾ: ಡಿ.ವಿ.ರಾಜಾರಾಂ
ಕಲೆ: ನಜೀರ್

ಸ: ರಾಜನ್ - ನಾಗೇಂದ್ರ
ಧ್ವ: (ಹಾ) ಎಸ್.ಪಿ.ರಾಮನಾಥನ್, (ಮಾ) ಕೋದಂಡಪಾಣಿ
ನೃ: ಉಡುಪಿ ಜಯರಾಂ, ದೇವಿ
ಸಾ: ನಂಜುಂಡಿ ನಾಗರಾಜ್
ವ: ಎನ್.ರಾಮನಾಥ್
ಪ್ರ: ಮೈಸೂರು ವೆಂಕಟೇಶ್, (ಕೇಶ:) ಎಸ್.ಕುಮಾರ್
ಸ್ಟು: ಕಂಠೀರವ, ಚಾಮುಂಡೇಶ್ವರಿ, ಅಭಿಮಾನ
ಹಾ: ೧)' ಅದು ತಮಾಷೆ ನೋಡು...', ೨)'ಹಾಕು ಹೆಜ್ಜೆ ಓ ಡಾರ್ಲಿಂಗ್...', ೩) 'ರಾಮರಸಕ್ಕಿಂತ ರಸವಿಲ್ಲ...', ೪)'ಸಂಗೀತ ಈ ಜೀವನಾ...', ೫)'ಕುಣಿಯೋಣ ಬಾ ತಂದಾನ...'
ಸೆ: ರೀಲು - ೧೪, ಉದ ೩೬೨೬, ೧೫ - ೦೪ - ೧೯೯೧

ಕ.ಸಾ: ಜಿಲ್ಲಾಧಿಕಾರಿ ಸೂರ್ಯ ಹಾಗು ಎಸ್. ಪಿ. ಕಿರಣ್ ಮದುವೆಯಾಗ ಬೇಕಾಗಿದ್ದವರು, ಕಾರಣಾಂತರಗಳಿಂದ ಬೇರೆಯಾಗಿ ಹಲವು ವರ್ಷಗಳ ನಂತರ ಮತ್ತೆ ಭೇಟಿಯಾಗುತ್ತಾರೆ. ಆದರೆ ಇವರಿಬ್ಬರ ವಿರಸವನ್ನು ದುಷ್ಕರ್ಮಿಗಳು ಬಳಸಿಕೊಳ್ಳುತ್ತಾರೆ. ಕಿರಣಳ ಬಳಿ ಇರುವ ಮಗು ತನ್ನದೇ ಎಂದು ಸೂರ್ಯನಿಗೆ ತಿಳಿಯುತ್ತದೆ. ಮಗುವಿಗೆ ಸೂರ್ಯ ತನ್ನ ತಂದೆ ಎಂದು ತಿಳಿಯುತ್ತದೆ. ಕೊನೆಗೆ ಕಿರಣಳಿಗೆ ಸೂರ್ಯನ ಮೇಲೆ ತಪ್ಪು ಅಭಿಪ್ರಾಯ ಬರಲು ಕಾರಣವಾದ ಸತ್ಯಾಂಶ ತಿಳಿಯುತ್ತದೆ. ಕೊನೆಯಲ್ಲಿ ಇಬ್ಬರೂ ಒಂದಾಗುತ್ತಾರೆ.

೧೩೬೨. ಕೊಲ್ಲೂರ ಕಾಳ

(೧೯೯೧ / ವರ್ಣ / ಸಾಮಾಜಿಕ)

ಲಾ: ಶ್ರೀ ರಾಘವೇಂದ್ರ ಸಿನಿ ಪ್ರೊಡಕ್ಷನ್ಸ್
ಪ್ರೊ: ಎಂ.ಶೇಷನ್, ಶಿವಾಜಿರಾವ್, ಕೆ.ಮಹಮೂದ್
ನಿ: ಸಾಯಿಪ್ರಕಾಶ್
ಸ.ನಿ: ಚಂದ್ರು ದೊಡ್ಡಮನಿ, ಶರಣ್ ಗದ್ವಾಲ್
ಅ: ಶಶಿಕುಮಾರ್, ಮಾಲಾಶ್ರೀ, ದೊಡ್ಡಣ್ಣ, ವಿದ್ಯಾಶ್ರೀ, ರಾಜೀವ್, ಮುಖ್ಯಮಂತ್ರಿ ಚಂದ್ರು, ಅಶೋಕ ರಾವ್, ಸಿಹಿಕಹಿ ಚಂದ್ರು, ಮೈಸೂರು ಲೋಕೇಶ್, ಬೆಂಗಳೂರು ನಾಗೇಶ್, ಉಮೇಶ್, ಎಂ.ಎಸ್.ಎಲ್.ಮೂರ್ತಿ, ರತ್ನಾಕರ್, ಮನದೀಪ್ ರಾಯ್, ಉಮಾಶ್ರೀ, ಮಂಜುಮಾಲಿನಿ, ಬಿ. ಕೆ.ಶಂಕರ್, ಅರವಿಂದ್, ನವನೀತ, ದೇವಿಕಾ ರಾಣಿ, ಸರೋಜಮ್ಮ, ಉಮಾ, ಭಾನುಮತಿ
ಕ: ತಿರುನಾವುಕ್ಕರಸು
ಚಿ.ಕ: ಸಾಯಿಪ್ರಕಾಶ್
ಮಾ: ಕುಣಿಗಲ್ ನಾಗಭೂಷಣ್
ಗೀ: ಆರ್.ಎನ್. ಜಯಗೋಪಾಲ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ, ಮಂಜುಳಾ ಗುರು
ಸಂ: ಕೆ.ನರಸಯ್ಯ
ಛಾ: ಜಾನಿಲಾಲ್
ಕಲೆ: ಬಾಬು
ಸ: ಉಪೇಂದ್ರ ಕುಮಾರ್
ಧ್ವ: (ಹಾ) ಎಸ್.ಪಿ.ರಾಮನಾಥನ್, (ಮಾ) ಕೋದಂಡಪಾಣಿ
ನೃ: ಶಿವಶಂಕರ್
ಸಾ: ಹಯಾತ್
ವ: ಜಯಚಂದ್ರ (ಕೇಶ:) ನಾಗೇಶ್ವರ ರಾವ್, ಬಾಬು
ಪ್ರ: ಚೆಲುವರಾಜು, ಚಂದ್ರು (ಮಾಲಾಶ್ರೀ)
ಸ್ಟು: ಚಾಮುಂಡೇಶ್ವರಿ
ಹಾ: ೧)' ಚಿನ್ನ ನಿನ್ನ ಜೋಡಿ ಎಂಥ ಜೋಡಿ ...', ೨)' ಅಲೆ ಮುಟ್ಟೋಕೆ ಬಂದಾಗ ...', ೩)' ಉಸಿರೇ ಈ ಒಡಲ ತೊರೆಯುವೆಯೇನು ? ...', ೪)' ಈ ಮದೂರ ಹುಡುಗಿ ...', ೫)' ಓ ಹರಿಕಾರ ಬಾರೋ ಹರಿಕಾರ ...'



ವಿ: ಈ ಚಿತ್ರವನ್ನು ಸಾಹಸ ನಿರ್ದೇಶಕ ಹಯಾತ್ ಮಾಸ್ಟರ್‌ಗೆ ಅರ್ಪಿಸಲಾಗಿದೆ.

ಕ.ಸಾ: ಅಮಾಯಕ ಯುವಕನೊಬ್ಬ ತನ್ನ ಕುಟುಂಬ ಹಾಗೂ ಪ್ರೇಯಸಿಯ ಸಾವಿಗೆ ಕಾರಣರಾದ ವ್ಯಕ್ತಿಗಳ ವಿರುದ್ಧ ಸೇಡು ತೀರಿಸಿಕೊಳ್ಳುವ ಕಥೆ.

೧೩೬೩. ಸಿ.ಬಿ.ಐ.ಶಿವ

(೧೯೯೧ / ವರ್ಣ / ಪತ್ತೇದಾರಿ)

ಲಾ: ಪಂಚಮಿ ಚಿತ್ರ
ಪ್ರೊ: ಎಂ.ಬಿ.ಬಾಬು, ಪಿ, ಜಿ.ಪದ್ಮ, ವಿಜಯಲಕ್ಷ್ಮಿ, ಸಿ.ಎಸ್.ಮಂಜುನಾಥ್
ನಿ: ಬಿ.ರಾಮಮೂರ್ತಿ
ಸ.ನಿ: ಸುರೇಶ್ ರಾವ್
ಅ: ಪ್ರಭಾಕರ್, ರಮೇಶ್, ಸುನಿಲ್, ಜಗ್ಗೇಶ್, ಪ್ರೀತಿ, ಶ್ರೀದೇವಿ, ಮಾಧುರಿ, ಅವಿನಾಶ್, ತಾರಾ
ಕ/ಚಿ.ಕ: ಬಿ.ರಾಮಮೂರ್ತಿ
ಮಾ: ಕುಣಿಗಲ್ ನಾಗಭೂಷಣ್
ಗೀ: ಚಿ.ಉದಯಶಂಕರ್, ಶ್ರೀರಂಗ
ಗಾ: ವಿಷ್ಣು, ಶ್ರೀನಾಥ್, ಮಂಜುಳಾ ಗುರುರಾಜ್
ಸಂ: ಮನೋಹರ್
ಛಾ: ಕೃಷ್ಣ
ಕಲೆ: ಕೃಷ್ಣಾಚಾರಿ
ಸ: ಉಪೇಂದ್ರ ಕುಮಾರ್
ನೃ: ಕೈಲಾಸಂ
ಸಾ: ರುದ್ರೇಶ್
ವ: ಬಿ. ನಾಗರಾಜ್
ಪ್ರ: ನಾಗರಾಜ್
ಸ್ಟು: ಚಾಮುಂಡೇಶ್ವರಿ, ಪ್ರಸಾದ್
ಹಾ: ೧)'ಈ ನೋವಿನಲ್ಲೂ ನಾವು ನಲಿದಾಡುವಾ...', ೨)'ಹಿಡಿವ ಸೂರ್ಯನ್ನ ಹಿಡಿವ ಚಂದ್ರನ್ನ...'

ಸೆ: ಉದ್ದ ೩೬೭೩.೦೦
ಕ.ಸಾ: ಮೂವರು ನಿರುದ್ಯೋಗಿಗಳು ರಾಜಕಾರಣಿಯ ಮಗಳನ್ನು ಅಪಹರಿಸಲು ಯೋಜನೆ ಹಾಕುತ್ತಾರೆ. ಆ ರಾಜಕಾರಣಿಯ ವಿರೋಧಿಗಳು ಅವನ ಮಗಳನ್ನು ಅಪಹರಿಸಿ ಬಿಡುತ್ತಾರೆ. ಅದರೆ ಅಪವಾದ ಈ ಮೂವರ ಮೇಲೆ ಬರುತ್ತದೆ. ಈ ವಿಚಾರಣೆಗೆ ಬರುವ ಸಿ.ಬಿ.ಐ. ಶಿವನಿಗೆ ಅಸಲಿ ಅಪಹರಣಕಾರ ಸುಳಿವು ದೊರೆಯುತ್ತದೆ. ಕೊನೆಯಲ್ಲಿ ಇವರ ನಿರುದ್ಯೋಗದ ಬಗೆಗೆ ಅರಿತ ರಾಜಕಾರಣಿಯ ಮಗಳು ಅವರಿಗೆ ಕೆಲಸ ಕೊಡಿಸುವಲ್ಲಿ ಸಹಕರಿಸುತ್ತಾಳೆ.

೧೩೬೪. ರೋಲ್ ಕಾಲ್ ರಾಮಕೃಷ್ಣ

(೧೯೯೧ / ವರ್ಣ / ಸಾಮಾಜಿಕ)
ಲಾ: ಸಮೃದ್ಧಾ ಎಂಟರ್‌ಪ್ರೈಸಸ್
ಪ್ರೊ: ಎಸ್.ಆರ್. ರಾಜೇಶ್ವರಿ
ನಿ: ಬಿ.ರಾಮಮೂರ್ತಿ
ಸ.ನಿ: ಕೆ.ಎಸ್.ವೈದ್ಯನಾಥ್
ಅ: ಅನಂತ್‌ನಾಗ್, ವಿದ್ಯಾಶ್ರೀ, ತಾರಾ, ಶ್ರೀಲಲಿತಾ, ದೊಡ್ಡಣ್ಣ, ದೇವರಾಜ್, ಅರವಿಂದ್, ಅಂಜಲಿ, ಸುಧಾ ನರಸಿಂಹರಾಜು, ಜಗ್ಗೇಶ್, ಸಿಹಿಕಹಿ ಚಂದ್ರು, ಉಮಾಶ್ರೀ
ಕ/ಚಿ.ಕ: ಸಾಯಿನಾಥ್
ಮಾ: ಕುಣಿಗಲ್ ನಾಗಭೂಷಣ್
ಗೀ: ಆರ್. ಎನ್.ಜಯಗೋಪಾಲ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಮಂಜುಳಾ ಗುರುರಾಜ್, ಸಂಗೀತಾ ಕಟ್ಟಿ, ಕುಸುಮ
ಸಂ: ಕೆ.ನರಸಯ್ಯ
ಛಾ: ಕೃಷ್ಣ
ಕಲೆ: ವಾಲಿ
ಸ: ಉಪೇಂದ್ರ ಕುಮಾರ್
ನೃ: ಕೈಲಾಸಂ
ಸಾ: ಥ್ರಿಲ್ಲರ್ ಮಂಜು
ವ: ಚೆಲುವ ರಾಜ್
ಪ್ರ: ಜಯಚಂದ್ರ
ಸ್ಟು: ಚಾಮುಂಡೇಶ್ವರಿ, ಪ್ರಸಾದ್
ಹಾ: ೧) 'ಲೋ ರೋಲ್ ಕಾಲ್ ಬಾರೋ ನಂಗೆ...', ೨) 'ಬಾರೇ ನನ್ನ ಐಸ್ ಕ್ರೀಂ...', ೩) 'ಮಾಲೀಷು ಮಾಡಲೇನು ಮಾವ...', ೪) 'ನಿನಗಾಗೀ ಮುಡಿಪಾಗಿ ಈ ಜೀವ ಕಾದಿದೆ...'
ಸೆ: ಉದ - ೪೨೦೦.೦೦, ೨೭ ೦೩ - ೧೯೯೧
ಕ.ಸಾ: ನಾಯಕ ರಾಮಕೃಷ್ಣ ವೇಷ ಮರೆಸಿ ಶ್ರೀಮಂತಿಕೆಯ ದರ್ಪದಿಂದ ಮೆರೆಯುವ ಭುವನೇಶ್ವರಿಯ ಮಗಳನ್ನು ಮಾನಭಂಗ ಮಾಡಿದಂತೆ ನಂಬಿಸಿ ಆ ಮನೆ ಪ್ರವೇಶಿಸಿ ಎಲ್ಲರಿಗೂ ಬುದ್ಧಿ ಕಲಿಸುತ್ತಾನೆ. ಅಂತಿಮವಾಗಿ ರಾಮಕೃಷ್ಣನ ಅಸಲಿ ರೂಪ ಹಾಗೂ ಒಳ್ಳೆಯತನಕ್ಕೆ ಮರುಳಾಗಿ ನಾಯಕಿ ಆತನನ್ನು ವರಿಸುತ್ತಾಳೆ.

೧೩೬೫. ಗರುಡಧ್ವಜ

(೧೯೯೧ / ವರ್ಣ / ಸಾಮಾಜಿಕ)
ಲಾ: ರಾಮಾ ಮೂವೀಸ್
ನಿ: ರಾಜ್ ಭರತ್
ಸ.ನಿ: ಹೆಚ್. ಎಸ್. ಜಯಕುಮಾರ್
ಅ: ಅಂಬರೀಷ್, ಅನುಪಮಾ, ಪಾರಿಜಾತ ರಮೇಶ್, ಬಾಲಕೃಷ್ಣ, ಸದಾಶಿವ ಬ್ರಹ್ಮಾವರ್, ಶೋಭಾ, ಅಶ್ವತ್ಥ್, ಶ್ರೀಶೈಲನ್
ಕ/ಚಿ.ಕ: ರಾಜ್ ಭರತ್
ಗೀ: ಹಂಸಲೇಖ
ಗಾ: ಎಸ್.ಪಿ.ಬಾಲಸುಬ್ರಮಣ್ಯಂ, ಮಂಜುಳಾ ಗುರು
ಸಂ: ಕೆ.ಪ್ರಸಾದ್
ಛಾ: ಮಲ್ಲಿಕಾರ್ಜುನ್
ಕಲೆ: ರಾಜು
ಸ: ಹಂಸಲೇಖ

ವ: ರಾಮನಾಥ್
ಪ್ರ: ಶ್ರೀನಿವಾಸ್
ಸ್ಟು: ಕಂಠೀರವ, ಪ್ರಸಾದ್
ಹಾ: ೧) 'ಪ್ರೀತಿಸು ಯಾರಿಲ್ಲ ಪ್ರೀತಿಗೆ ಹೊತ್ತಿಲ್ಲ...', ೨) 'ಸ್ವಾತಿ ಮಳೆ ನವಮ್ಮಾ ಅಂದ ನೆನೆಪುದಮ್ಮಾ...', ೩) 'ಓ ಜೀವಾ ಬಾ ...', ೪) 'ಓ ಚೆಲುವೇ ನಗುತಾ ಇರು ನೀ...'
ಕ.ಸಾ: ಪೋಲೀಸ್ ಅಧಿಕಾರಿಗಳಿಬ್ಬರಿಗೂ ಭಿನ್ನಾಭಿಪ್ರಾಯ. ಅಂತಿಮವಾಗಿ ಅದು ಪೋಲೀಸ್ ವ್ಯವಸ್ಥೆಯಲ್ಲೇ ಇರುವ ದೋಷ ಎಂಬ ಅರಿವಾಗಿ ವ್ಯವಸ್ಥೆಯನ್ನೇ ವಿಮರ್ಶಿಸಿದರು.

೧೩೬೬. ಮೋಡದ ಮರೆಯಲ್ಲಿ

(೧೯೯೧ / ವರ್ಣ / ಸಾಮಾಜಿಕ)
ಲಾ: ಶ್ರೀ ವೈಷ್ಣವೀ ಮೂವೀಸ್
ಪ್ರೊ: ಪಾರ್ವತಮ್ಮ ರಾಜಕುಮಾರ್
ನಿ: ಎಂ.ಎಸ್. ರಾಜಶೇಖರ್
ಸ.ನಿ: ಮಂಜುನಾಥ್
ಅ: ಶಿವರಾಜಕುಮಾರ್, ಸೌಮ್ಯ, ಕೆ.ಎಸ್. ಅಶ್ವತ್ಥ್, ಶ್ರೀನಾಥ್, ದೊಡ್ಡಣ್ಣ, ಪೃಥ್ವಿರಾಜ್
ಕ: ಮಲೆಯಾಳಂ 'ಕಿರೀಟಂ' ಚಿತ್ರದ ಪುನರ್ ಅವತರಣಿಕೆ.
ಚಿ.ಕ: ಎಂ. ಎಸ್. ರಾಜಶೇಖರ್
ಮಾ/ಗೀ: ಚಿ. ಉದಯಶಂಕರ್
ಗಾ: ಎಸ್.ಪಿ. ಬಾಲಸುಬ್ರಮಣ್ಯಂ, ಮಂಜುಳಾ ಗುರುರಾಜ್, ರಾಜಕುಮಾರ್
ಸಂ: ಮನೋಹರ್
ಛಾ: ಕೆ. ಕಣ್ಣನ್
ಕ: ನಜೀರ್
ಸ: ರಾಜನ್ ನಾಗೇಂದ್ರ



ಧ್ವ: ಚಾಮುಂಡೇಶ್ವರಿ
ನೃ: ತಾರಾ
ಸಾ: ರಾಂಶೆಟ್ಟಿ
ವ: ವೀರರಾಜು
ಪ್ರ: ವಿಶ್ವನಾಥ್
ಹಾ: ೧) 'ಜೀವ ನೀನು ದೇಹ ನಾನು...', ೨) 'ಎಂಥ ಚಿನ್ನದಂಥ...', ೩) 'ಮನದಲ್ಲಿ ಆಸೆಯೇ ಚೀರೆ...', ೪) 'ಬಾಳು ಉಯ್ಯಾಲೆಯಂತೆ...'
ಕ.ಸಾ: ಪೋಲೀಸ್ ಪೇದೆಯ ಮಗ. ವಿಪರೀತ ಹುಡುಗಾಟದ ಸ್ವಭಾವದವನು. ತಂದೆಗೆ ಅವನ ಹುಡುಗಾಟ ಕಂಡರಾಗದು. ತಾನು ಮಾಡದೆ ಇರುವ ತಪ್ಪಿಗಾಗಿ ಆತ ಜೈಲು ಸೇರುತ್ತಾನೆ. ಕೊನೆಗೆ ಅವನು ನಿರಪರಾಧಿ ಎಂಬುದು ಸಾಬೀತಾಗುತ್ತದೆ. ತಂದೆ - ಮಗನ ಸಮಾಗಮ, ಸುಖಾಂತ್ಯ.

೧೩೬೭. ರೆಡಿಮೇಡ್ ಗಂಡ

(೧೯೯೧ / ವರ್ಣ / ಸಾಮಾಜಿಕ)
ಲಾ: ದೇವಿ ಮತ್ತು ದೇವಿ ಫಿಲಂಸ್
ಪ್ರೊ: ವಿಜಯಶಂಕರ್ ಭಟ್, ಟಿ.ಆರ್.ಶ್ರೀನಿವಾಸನ್
ನಿ: ಸಾಯಿಪ್ರಕಾಶ್
ಸ.ನಿ: ಎಂ.ಡಿ. ಶ್ರೀಧರ್, ಲಿಂಗರಾಜ ಕಗ್ಗಲ್
ಅ: ಶಶಿಕುಮಾರ್, ಮಾಲಾಶ್ರೀ, ಮುಖ್ಯಮಂತ್ರಿ ಚಂದ್ರು, ಹೇಮಾ ಚೌಧುರಿ, ಬ್ಯಾಂಕ್ ಜನಾರ್ದನ್, ಎಂ.ಎಸ್. ಕಾರಂತ್, ದೊಡ್ಡಣ್ಣ, ಸಿಹಿಕಹಿ ಚಂದ್ರು, ಸುಧಾ ನರಸಿಂಹರಾಜು, ಲೋಹಿತಾಶ್ವ, ವೈಶಾಲಿ, ಮನದೀಪ್ ರಾಯ್, ಉಮೇಶ್, ಅರವಿಂದ್
ಕ: ಶಂಕರ್ ಭಟ್
ಚಿ.ಕ: ಓಂ ಸಾಯಿಪ್ರಕಾಶ್
ಮಾ: ಕುಣಿಗಲ್ ನಾಗಭೂಷಣ್
ಗೀ: ಆರ್.ಎನ್.ಜಯಗೋಪಾಲ್, ಕುಣಿಗಲ್ ನಾಗಭೂಷಣ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಮಂಜುಳಾ ಗುರುರಾಜ್, ಸಂಗೀತಾ ಕಟ್ಟಿ
ಸಂ: ಕೆ.ನರಸಯ್ಯ
ಛಾ: ಜಾನೀಲಾಲ್
ಕಲೆ: ಬಾಬು
ಸ: ಉಪೇಂದ್ರ ಕುಮಾರ್
ಧ್ವ: (ಹಾ) ಎಸ್.ಪಿ.ರಾಮನಾಥನ್, (ಮಾ) ಕೋದಂಡಪಾಣಿ
ನೃ: ಶಿವಶಂಕರ್
ಸಾ: ಥ್ರಿಲ್ಲರ್ ಮಂಜು
ವ: ಜಯಚಂದ್ರ
ಪ್ರ: ಚೆಲುವರಾಜು
ಸ್ಟು: ಚಾಮುಂಡೇಶ್ವರಿ, ಪ್ರಸಾದ್
ಹಾ: ೧) 'ಮಾರ್ಕೆಟ್ ಮದುವೆ ಮಾರ್ಕೆಟ್ ಇದು ರೆಡಿಮೇಡ್ ಗಂಡ ...', ೨) 'ಚಾಮುಂಡಿ ಬೆಟ್ಟಕೆ ಹರಕೆ ...', ೩) 'ಕೋ ಕೋ ಕೋ ಅಪ್ಪಿಕೋ ನಾ ಹೇಳಿದ್ದಕ್ಕೆಲ್ಲ...', ೪) 'ಅಯ್ಯೋ ಶಿವನೇ ಮೈ ಸೋಕಿದಾಗ ...'
ಸೆ: ಉದ್ದ - ೩೯೦೪.೦೦, ೧೬ - ೦೫ - ೧೯೯೧
ಕ.ಸಾ: ಪುರುಷ ದ್ವೇಷಿ ಶ್ರೀಮಂತ ಹುಡುಗಿ. ಮದುವೆಯಾದರೆ ಮಾತ್ರ ಆಸ್ತಿ ಅವಳದಾಗುವುದೆಂಬ ಷರತ್ತಿನ ವಿಲ್. ಮದುವೆ ಯಾಗಿರುವುದಾಗಿ ಸುತ್ತಲಿನವರನ್ನು ನಂಬಿಸಲು ಅವಳ ಗಂಡನ ಹಾಗೆ ನಟಿಸಲು ಒಬ್ಬನನ್ನು ಕರೆ ತರುತ್ತಾಳೆ. ಆದರೆ ದಿನಗಳೆದಂತೆ ಆತನ ಒಳ್ಳೆಯ ಗುಣ ಅವಳ ಪುರುಷ ದ್ವೇಷವನ್ನು ಕರಗಿಸುತ್ತದೆ. ಹುಡುಗಿ ಆತನನ್ನೇ ಗಂಡನನ್ನಾಗಿ ಸ್ವೀಕರಿಸುತ್ತಾಳೆ.

೧೩೬೮. ಕಾಲಚಕ್ರ

(೧೯೯೧ / ವರ್ಣ / ಸಾಮಾಜಿಕ)
ಲಾ/ಪ್ರೊ: ಶ್ರೀ ಜ್ಞಾನಾಕ್ಷಿ ರಾಜರಾಜೇಶ್ವರಿ ಪ್ರೊಡಕ್ಷನ್ಸ್

ನಿ: ಟಿ.ರಾಜೇಂದ್ರ ಬಾಬು
ಸ.ನಿ/ಮಾ: ಕೇಸರಿ ಹರವೂ
ಅ: ಅಂಬರೀಷ್, ನವೀನ್ ಚಂದರ್, ಅಶೋಕ್ ರಾವ್, ಪ್ರಕಾಶ್ ರೈ, ವನಿತಾ ವಾಸು, ದೀಪಿಕಾ, ಮಂಜುಮಾಲಿನಿ, ಮುಖ್ಯಮಂತ್ರಿ ಚಂದ್ರು
ಕ./ಚಿ.ಕ: ಡಿ. ರಾಜೇಂದ್ರ ಬಾಬು
ಗೀ: ಆರ್. ಎನ್.ಜಯಗೋಪಾಲ್, ಶ್ಯಾಮಸುಂದರ ಕುಲಕರ್ಣಿ
ಗಾ: ಮನು, ಮಂಜುಳಾ ಗುರುರಾಜ್, ಪಿ.ಸುಶೀಲ
ಸಂ: ಕೆ.ಬಾಲು
ಛಾ: ಬಿ.ಎಸ್.ಕುಲಶೇಖರ್
ಕಲೆ: ಬಾಬು
ಸ: ಎಂ.ರಂಗರಾವ್
ನೃ: ಗಿರಿಜಾ
ಸಾ: ನಂಜುಂಡಿ ನಾಗರಾಜ್
ವ: ರಾಮನಾಥ್
ಪ್ರ: ಶ್ರೀನಿವಾಸ್
ಸ್ಟು: ಸಂಕೇತ್, ಪ್ರಸಾದ್
ಹಾ: ೧)'ನನ್ನ ನಿನ್ನಲ್ಲಿ ಇಂದು ಏನೋ ಆಸೆ..', ೨)'ಭೂತಾಯಿ ಮಲಗಾಯಿತು...', ೩)'ಪ್ರೇಮಲತೆಯು ಬಾಡಿದೆ...', ೪)'ಒಂದರ ಹಿಂದೆ ಎರಡು...', ೫)' ಮುಟ್ಟಬೇಡ ಕರಗಿ ಹೋಗುವೆ...'
ವಿ: ಕೇಸರಿ ಹರವು ಸಂಭಾಷಣೆ ಬರೆದ ಪ್ರಥಮ ಚಿತ್ರ.
ಸೆ: ಉದ್ದ - ೩೮೭೮
ಕ.ಸಾ: ತಂದೆ ತಾಯಿಯರ ಆರೈಕೆ, ಸರಿಯಾದ ಮಾರ್ಗದರ್ಶನ ಸಿಗದ ಮಕ್ಕಳು ಹೇಗೆ ದಾರಿ ತಪ್ಪುತ್ತಾರೆ ಮತ್ತು ಅವರನ್ನು ಸರಿ ದಾರಿಗೆ ತರಬೇಕಾದರೆ ಏನು ಮಾಡಬೇಕೆಂಬುದೇ ಕತೆಯ ಜೀವಾಳ. ಮೂರು ಮಕ್ಕಳಲ್ಲಿ ಎರಡು ಆಟವಾಡುತ್ತಾ ಪ್ರಾಣಕ್ಕೇ ಗಂಡಾಂತರ ತಂದು ಕೊಳ್ಳುತ್ತವೆ. ಇದರಿಂದ ತಾಯಿಗೆ ಮಾನಸಿಕ ಅಸ್ವಸ್ಥತೆ. ತಂದೆ ಉಳಿದ ಒಂದು ಮಗು ಅಕಸ್ಮಾತ್ ಸಿ.ಐ.ಡಿ.ಅಧಿಕಾರಿಯ ಕಾರಿಗೆ ಸಿಕ್ಕಿಕೊಳ್ಳುತ್ತದೆ. ಅಧಿಕಾರಿಯ ಮೇಲೆ ಕೈ ಮಾಡಿದ ತಂದೆ ಆರೋಪ ಹೊತ್ತು ಸೆರೆಮನೆ ಸೇರುತ್ತಾನೆ. ಆಸ್ಪತ್ರೆಯಿಂದ ಹೊರಬಂದ ಮಗ ಕೆಟ್ಟ ಹಾದಿ ತುಳಿಯುತ್ತಾನೆ. ಜೈಲಿನಿಂದ ಬಿಡುಗಡೆಯಾಗಿ ಬಂದ ತಂದೆ ಮಗನನ್ನು ಸರಿದಾರಿಗೆ ತರುವ ಪ್ರಯತ್ನದಲ್ಲಿ ಮಗನ ದ್ವೇಷಕ್ಕೆ ಸಿಲುಕುತ್ತಾನೆ. ಅಂತ್ಯದಲ್ಲಿ ವಿಷಯ ತಿಳಿದು ತಂದೆ - ತಾಯಿ - ಮಗ ಒಂದುಗೂಡುತ್ತಾರೆ.

೧೩೬೯. ನವತಾರೆ

(೧೯೯೧ / ವರ್ಣ / ಸಾಮಾಜಿಕ)
ಲಾ: ರಾಧಾಕೃಷ್ಣ ಪ್ರೊಡಕ್ಷನ್ಸ್
ಪ್ರೊ: ಸುರೇಶ್ ಕುಮಾರ್
ನಿ: ನಂಜುಂಡೇ ಗೌಡ
ಅ: ಕುಮಾರ್ ಬಂಗಾರಪ್ಪ, ಅನೂಷ, ಶ್ರೀನಾಥ್, ಲೋಹಿತಾಶ್ವ, ಕಲ್ಯಾಣಿ, ಸುರೇಶ್ ಶರ್ಮ, ಜಿ.ಆರ್.ವಿಶ್ವನಾಥ್, ಸಿ.ಆರ್.ಸಿಂಹ, ಅಶೋಕ್ ಬಾದರದಿನ್ನಿ, ಮಂಜುಮಾಲಿನಿ
ಕ/ಚಿ.ಕ: ಎಸ್. ಆರ್. ನಂಜುಂಡೇ ಗೌಡ
ಮಾ/ಗೀ: ಹಂಸಲೇಖ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ, ಲತಾ ಹಂಸಲೇಖ
ಸಂ: ಎಸ್.ಮನೋಹರ್
ಛಾ: ಆರ್.ದೇವಿಪ್ರಸಾದ್
ಸ: ಹಂಸಲೇಖ
ಧ್ವ: (ಮಾ) ಕೃಷ್ಣಮೂರ್ತಿ (ಹಾ) ಪೀಟರ್, ಅಣ್ಣಾದೊರೈ
ನೃ: ರಘುರಾಮ್, ಗಿರಿಜಾ
ಸಾ: ನಂಜುಂಡಿ ನಾಗರಾಜ್
ವ: ಟಿ ಸ್ವಾಮಿ

ಪ್ರ: ಕುಮಾರ್ ನೊಣವಿನ ಕೆರೆ, ದೊರೈ
ಸ್ಟು: ಸಂಕೇತ್, ಚಾಮುಂಡೇಶ್ವರಿ
ಹಾ: ೧) 'ಲೋಕ ನೋಡೋದು ಹೀಗೇನೇ...', ೨)' ಮೂಡಣದರಮನೆ ಬಾಗಿಲ ತೆರೆದನು ...', ೩)'ನೀರಿನಂತೆ ನಿರ್ಮಲಾ...', ೪) ' ಓ ಮಜನೂ ನಿನಗೇ ಶರಣು ...', ೫) 'ರೋಮಿಯೋ ರೋಮಿಯೋ ಬಂದ ರೋಡಿಗೇ...', ೬) 'ಒಂದೇ ಕ್ಷಣದಲ್ಲಿ ಪರಿಚಯವಾಯ್ತು...'
ವಿ: ಕ್ರಿಕೆಟ್ ಕಲಿ ಜಿ.ಆರ್.ವಿಶ್ವನಾಥ್ ಅಭಿನಯಿಸಿದರು.
ಸೆ: ಉದ್ದ - ೪೧೪೨.೦೦
ಕ.ಸಾ: ಓದುವುದಕ್ಕಿಂತಲೂ ಕ್ರಿಕೆಟ್ ಆಡುವುದರಲ್ಲಿ ಹೆಚ್ಚು ಆಸಕ್ತನಾದ ಕಾಲೇಜು ವಿದ್ಯಾರ್ಥಿ. ಮಗ ಓದಬೇಕೆಂದು ಬಯಸಿ ತಂದೆ ಕ್ರಿಕೆಟ್ ಆಡುವುದನ್ನು ವಿರೋಧಿಸುತ್ತಾರೆ. ಅವನಲ್ಲಿನ ಕ್ರೀಡಾಸಕ್ತಿಯನ್ನು ತಡೆಯಲು ನಾನಾ ತಂತ್ರಗಳನ್ನು ಬಳಸುತ್ತಾರೆ. ಸ್ವತಃ ಕ್ರೀಡಾಪಟುವಾಗಿದ್ದ ನಾಯಕಿ ಅವನನ್ನು ಪ್ರೋತ್ಸಾಹಿಸುತ್ತಾಳೆ. ಇದೆಲ್ಲವನ್ನೂ ಮೀರಿ ತಂದೆಯನ್ನು ಒಪ್ಪಿಸಿ ರಣಜಿಪಂದ್ಯದಲ್ಲಿ ಭಾಗವಹಿಸುವ ಮಟ್ಟಕ್ಕೆ ನಾಯಕ ಬೆಳೆಯುತ್ತಾನೆ.

೧೩೭೦. ಗೌರಿ ಗಣೇಶ

(೧೯೯೧ / ವರ್ಣ / ಸಾಮಾಜಿಕ)
ಲಾ: ಕಲಾ ಸಿಂಧು
ಪ್ರೊ: ವಿಶ್ವನಾಥ ಜಿ.ಶೆಟ್ಟಿ
ನಿ: ಫಣಿ ರಾಮಚಂದ್ರ
ಸ.ನಿ: ಯೋಗೀಶ್ ಹುಣಸೂರ್
ಅ: ಅನಂತ್ ನಾಗ್, ವಿನಯಾ ಪ್ರಸಾದ್, ಶ್ರುತಿ, ಚಂದ್ರು, ವೈಶಾಲಿ, ರಮೇಶ್ ಭಟ್, ಸಿಹಿಕಹಿ ಚಂದ್ರು, ಮಾ|ಆನಂದ್
ಕ: ಮಲ್ಲಾದಿ ವೆಂಕಟೇಶಮೂರ್ತಿ
ಚಿ.ಕ: ಫಣಿ ರಾಮಚಂದ್ರ
ಮಾ: ಕುಣಿಗಲ್ ನಾಗಭೂಷಣ್
ಗೀ: ಎಂ.ಎನ್. ವ್ಯಾಸರಾವ್, ವಿ.ಮನೋಹರ್, ಶ್ಯಾಮಸುಂದರ ಕುಲಕರ್ಣಿ
ಗಾ: ರಾಜೇಶ್ ಕೃಷ್ಣ, ಜಿ.ವಿ.ಅತ್ರಿ, ನರಸಿಂಹ ನಾಯಕ್
ಛಾ: ಆರ್.ಮಂಜುನಾಥ್
ಸ: ರಾಜನ್ - ನಾಗೇಂದ್ರ
ನೃ: ಉಡುಪಿ ಜಯರಾಂ
ಪ್ರ: ಮೈಸೂರು ವೆಂಕಟೇಶ್
ಸ್ಟು: ಕಂಠೀರವ, ಪ್ರಸಾದ್
ಹಾ: ೧) 'ಮಾತಿನಲ್ಲೇ ಗಲ್ಲಬಲ್ಲೆ ಜಗವನ್ನೇ...', ೨) 'ಒಂದು ಊರಲಿ ಒಬ್ಬ ಚೆಲುವೆ...', ೩) 'ನಿಮ್ಮ ಮಗುವೂ ನಗುತಿರುವಾ...', ೪) 'ಡ್ಯಾಡಿ ಡ್ಯಾಡಿ ನಾನು ನೀನು ಜೋಡಿ ...'
ವಿ: ೧೯೯೦-೯೧ರ ರಾಜ್ಯಪ್ರಶಸ್ತಿ : ಅತ್ಯುತ್ತಮ ಸಂಭಾಷಣೆ (ಕುಣಿಗಲ್ ನಾಗಭೂಷಣ್) ಅತ್ಯುತ್ತಮ ಬಾಲನಟ (ಮಾ| ಆನಂದ್)
ಕ.ಸಾ: ನಾಯಕ ಲಂಚೋದರ ಕೆಲಸ ಮಾಡದೆ ಜಾಣ್ಮೆಯಿಂದ ಬದುಕುವ ಕಲೆ ರೂಢಿಸಿಕೊಂಡಿರುತ್ತಾನೆ. ಸತ್ತ ಹುಡುಗಿಯೊಬ್ಬಳ ಅಣ್ಣನೆಂದು ಹೇಳಿ ಆವಳ ಧೈರ್ಯವನ್ನು ಪಡೆಯುತ್ತಾನೆ. ಅದರಲ್ಲಿ ಆಕೆಯೊಂದಿಗೆ ದೈಹಿಕ ಸಂಪರ್ಕ ಹೊಂದಿದವರೆಂದು ಭಾವಿಸಿದ ಮೂವರನ್ನು ವಂಚಿಸಿ ತನ್ನ ಅವರಿಂದ ಹಣ ಪಡೆಯುತ್ತಿರುತ್ತಾನೆ. ಅವರು ಮೂವರೂ ಒಟ್ಟಿಗೆ ಮಗುವನ್ನು ನೋಡಲು ಬಂದಾಗ ಅನಾಥಾಶ್ರಮದಿಂದ ಒಂದು ಹುಡುಗನನ್ನು ತಂದು ನಂಬಿಸುತ್ತಾನೆ. ಕೊನೆಯಲ್ಲಿ ಅವರೆಲ್ಲರಿಗೂ ನಿಜಾಂಶ ತಿಳಿದಾಗಲು ಜಾಣ್ಮೆಯಿಂದ ಅವರೆಲ್ಲರ ಬಾಯಿ ಮುಚ್ಚಿಸಿ ಅನಾಥ ಮಗುವನ್ನು ತಾನೇ ಸಾಕುತ್ತಾನೆ.

೧೩೭೧. ಎಸ್.ಪಿ.ಭಾರ್ಗವಿ

(೧೯೯೧ / ವರ್ಣ / ಸಾಮಾಜಿಕ)
ಲಾ: ರಾಘವೇಂದ್ರ ಬಯಾಸ್ಕೋಪ್
ಪ್ರೊ: ಎಸ್.ರಾಘವೇಂದ್ರ
ನಿ: ವಿ.ಸೋಮಶೇಖರ್
ಅ: ಮಾಲಾಶ್ರೀ, ದೇವರಾಜ್, ಶ್ರೀನಾಥ್, ಮನು, ಧೀರೇಂದ್ರ ಗೋಪಾಲ್, ಬೆಂಗಳೂರು ನಾಗೇಶ್, ಬಾಲಕೃಷ್ಣ, ದೊಡ್ಡಣ್ಣ, ಸಿ.ಆರ್.ಸಿಂಹ, ಸರಿಗಮ ವಿಜಿ, ಮಧು
ಕ/ಚಿ.ಕ: ವಿ.ಸೋಮಶೇಖರ್
ಮಾ: ಕುಣಿಗಲ್ ನಾಗಭೂಷಣ್
ಗೀ: ಹಂಸಲೇಖ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಮಂಜುಳಾ, ಮನು
ಸಂ: ಎಸ್. ಎಂ.ವಿಕ್ಟರ್
ಛಾ: ಹೆಚ್. ಜಿ.ರಾಜು
ಸ: ಹಂಸಲೇಖ
ನೃ: ಉಡುಪಿ ಜಯರಾಂ
ಸಾ: ವೈ.ಶಿವಯ್ಯ
ವ: ಕೇಶವ
ಪ್ರ: ಸತ್ಯಂ
ಸ್ಟು: ಕಂಠೀರವ, ಚಾಮುಂಡೇಶ್ವರಿ
ಹಾ: ೧)'ದೇಶದ ಕತೆ ಇಷ್ಟೇ ಕಣಮ್ಮೋ ಇಲ್ ಚಿಂತೆ ಮಾಡಿ ಲಾಭ ಇಲ್ಲಮ್ಮೋ...', ೨)'ಮಾಮರಕೇ ಈ ಕೋಗಿಲೆಯಾ ...', ೩)'ಕೊಡಯ್ಯಾ ಪೊಲೀಸ್ ಮಾವ..', ೪)'ಕಳ್ಳ ಕಳ್ಳಾ ಕಳ್ಳ ಕಳ್ಳ .... ಕಳ್ಳರೋ ನಾವೆಲ್ಲರೂ...', ೫)'ಬೆಂಗಳೂರು ಚಳಿ ಚಳಿ...'
ಕ.ಸಾ: ಕರ್ತವ್ಯದ ಮುಂದೆ ಬೇರೆಲ್ಲಾ ಸಂಬಂಧ ನಗಣ್ಯ ಎನ್ನುವ ಪೊಲೀಸ್ ಅಧಿಕಾರಿಣಿ ಭಾರ್ಗವಿ. ಅವಳ ಕರ್ತವ್ಯ ಪಾಲನೆಗೆ ತೊಡಕುಂಟು ಮಾಡುವ ಮಷ್ಟರು. ಆ ಮಷ್ಟರಿಂದ ತೊಂದರೆಗೊಳಗಾಗಿ ನೊಂದವನೊಬ್ಬನ ಭೇಟಿಯಾದಾಗ, ಭಾರ್ಗವಿ ಅವನ ಸಹಕಾರದಿಂದ ಮಷ್ಟರ ಜಾಲವನ್ನೇ ಭೇದಿಸಿ, ಅವರನ್ನು ಕಾನೂನಿನ ಕಕ್ಷೆಯಲ್ಲಿ ತರುವಳು.

೧೩೭೨. ಭೈರವಿ

(೧೯೯೧ / ವರ್ಣ / ಸಾಮಾಜಿಕ)
ಲಾ: ಸೂರ್ಯ ಪ್ರೊಡಕ್ಷನ್ಸ್
ಪ್ರೊ: ಸೆಲ್ವಂ
ನಿ: ರಾಮನಾರಾಯಣ್
ಸ.ನಿ: ಎಸ್.ಸುಂದರ್, ವೀರರಸು
ಅ: ಶ್ರೀಧರ್, ರೂಪಿಣಿ, ಬೇಬಿ ಶ್ಯಾಮಿಲಿ, ಸುಂದರರಾಜ್, ಗಣೇಶ್, ಚೇತನ್ ರಾಮರಾವ್, ಮೈಸೂರು ಲೋಕೇಶ್, ಎಂ.ಎಸ್.ಉಮೇಶ್, ಮನದೀಪ್ ರಾಯ್, ಸಂಗೀತಾ, ಮಂಗಳ ಗೌರಿ, ಲತಾ
ಕ/ಚಿ.ಕ: ರಾಮನಾರಾಯಣ್
ಮಾ/ಗೀ: ಚಿ.ಉದಯಶಂಕರ್
ಗಾ: ಮಂಜುಳಾ ಗುರುರಾಜ್. ಕುಸುಮ
ಸಂ: ರಾಜಕೀರ್ತಿ

ಛಾ: ಎನ್.ಕೆ.ವಿಶ್ವನಾಥನ್
ಸ: ಶಂಕರ್ ಗಣೇಶ್
ಧ್ವ: (ಹಾ) ಕೃಷ್ಣಮೂರ್ತಿ, (ಮಾ) ಕೋದಂಡಪಾಣಿ
ನೃ: ಶಿವಶಂಕರ್
ಸಾ: ಅಂಜೂರು ಬಾಬು
ವ: ರಾಜೇಂದ್ರನ್, ರಾಜಾರಾವ್
ಪ್ರ: ಕೆ.ಕಣ್ಣನ್, ನಾಗರಾಜ್

ಸ್ಟು: ಕಂಠೀರವ
ಹಾ: ೧) 'ಕನ್ನಡ ಮಣ್ಣಲಿ ಹೆಣ್ಣಿನ ಕಣ್ಣಲಿ...', ೨) 'ಐ ಲವ್ ಯು ಹಂಗಂದ್ರ...', ೩) 'ಮಳೆರಾಯ ನೀ ಬಾರಯ್ಯ...', ೪) 'ಮಾರಿಯಾ ಹಬ್ಬಕ್ಕಾಗಿ ಹೋರಿಯ ಗೆದು...', ೫) 'ಚಂದನ ಸಿರಿ ಚಂದನ ಸಿರಿ...'
ಸೆ: ರೀಲು ೧೪, ಉದ್ದ ೩೭೭೫.೦೦
ಕ.ಸಾ: ಆಸ್ತಿಗಾಗಿ ಕೊಲೆ ನಡೆಯುತ್ತದೆ. ಕೊಲೆಗೆ ಪ್ರತ್ಯಕ್ಷ ಸಾಕ್ಷಿ ಪುಟಾಣಿ ಹುಡುಗಿ. ಆ ಹುಡುಗಿಯನ್ನು ಕೊಲ್ಲಲು - ಸಾಕ್ಷ್ಯವನ್ನು ನಾಶ ಮಾಡಲು ಹಲವಾರು ಪ್ರಯತ್ನಗಳು. ಆದರೆ ಆ ಹುಡುಗಿ ದಿಟ್ಟೆ.. ದುಷ್ಟರ ಪ್ರಯತ್ನಗಳನ್ನು ನಾಯಿ, ಕೋತಿ ಹಾಗೂ ಹಾವಿನ ಸಹಾಯದಿಂದ ವ್ಯರ್ಥವಾಗಿಸುತ್ತಾಳೆ. ದುಷ್ಟರು ಶಿಕ್ಷೆಗೆ ಗುರಿಯಾಗುವಂತೆ ಮಾಡುತ್ತಾಳೆ.

೧೩೭೩. ನನಗೂ ಹೆಂಡ್ತಿ ಬೇಕು

(೧೯೯೧ / ವರ್ಣ / ಸಾಮಾಜಿಕ)
ಲಾ: ದೀಪಕ ಪಿಕ್ಚರ್ಸ್
ಪ್ರೊ/ನಿ: ಬಿ.ರಾಮಮೂರ್ತಿ
ಸ.ನಿ: ಎಸ್.ಮುರಳಿ
ಅ: ವಿನೋದ್ ರಾಜ್, ಶ್ರೀಕಾಂತ್, ದೊಡ್ಡಣ್ಣ, ಪದ್ಮ ಕುಮಟಾ, ಜಾನಕಿರಾಂ, ಅಭಿಜಿತ್, ಶಿವರಂಜನಿ, ತಾರಾ, ಶೋಭಾ, ರಾಘವೇಂದ್ರ, ಮನೋರಂಜನ್ ಪ್ರಭಾಕರ್
ಕ/ಚಿ.ಕ: ಬಿ.ರಾಮಮೂರ್ತಿ
ಮಾ: ಉಪೇಂದ್ರ
ಗೀ: ಚಿ.ಉದಯಶಂಕರ್, ಹಂಸಲೇಖ, ವ್ಯಾಸರಾವ್.
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಮಂಜುಳಾ ಗುರುರಾಜ್, ಬಿ.ಆರ್.ಛಾಯಾ, ರತ್ನಮಾಲಾ ಪ್ರಕಾಶ್
ಸಂ: ಕೆ. ನರಸಯ್ಯ
ಛಾ: ಎಸ್. ಎನ್. ಬಿ. ಮೂರ್ತಿ
ಕಲೆ: ಎನ್. ಎಂ.ಎಸ್.ಮೂರ್ತಿ
ಸ: ಮನೋರಂಜನ್ ಪ್ರಭಾಕರ್
ಧ್ವ: (ಹಾ) ಎಸ್.ಪಿ.ರಾಮನಾಥನ್ (ಮಾ) ಕೋದಂಡಪಾಣಿ
ನೃ: ಅಂಜು ಮಹೇಂದ್ರನ್
ಸಾ: ಥ್ರಿಲ್ಲರ್ ಮಂಜು
ವ: ಸುಂದರ್
ಸ್ಟು: ಚಾಮುಂಡೇಶ್ವರಿ, ಪ್ರಸಾದ್
ಹಾ: ೧) ' ರಾಜಾ ಡ್ಯಾನ್ಸ್ ರಾಜಾ...', ೨) 'ಬೇಕು ಬೇಕು ನನಗೂ ಹೆಂಡ್ತಿ ಬೇಕು...', ೩) ' ಯಾವ ಶಿಲ್ಪಿ ಕಡೆದ ಶಿಲ್ಪ...',



೪) 'ಬಾರೋ ಪತ್ರ ಬಾರೋ ಚಂದ್ರಮಾ...', ೫) 'ಸೇರು ಒದ್ದರೆ ನೀನು ಸೊಸೆ ಆಗ್ತೀಯಾ...'
ಸೆ: ಉದ್ದ - ೪೧೯೬
ಕ.ಸಾ: ತನ್ನ ತಂಗಿಯ ಮಗಳನ್ನು ಸೊಸೆ ಮಾಡಿಕೊಳ್ಳಬೇಕೆಂದು ರಾಮಣ್ಣ ತನ್ನಿಬ್ಬರು ಮಕ್ಕಳಲ್ಲಿ ಒಬ್ಬನನ್ನು ಕೇಳುತ್ತಾನೆ. ಆದರೆ ಇಬ್ಬರು ಆಗಲೇ ಬೇರೆ ಬೇರೆ ಹುಡುಗಿಯರನ್ನು ಪ್ರೀತಿಸಿರುತ್ತಾರೆ. ರಾಮಣ್ಣ ತನ್ನ ತಂಗಿಯ ಮಗಳನ್ನು ಮನೆಯಲ್ಲಿ ತಂದಿಟ್ಟುಕೊಂಡರೆ ಮಕ್ಕಳಿಬ್ಬರೂ ತಮ್ಮ ತಮ್ಮ ಪ್ರಿಯತಮೆಯರನ್ನು ಕರೆ ತರುತ್ತಾರೆ. ರಾಮಣ್ಣನ ತಂಗಿಯ ಮಗಳನ್ನು ಮತ್ತೊಬ್ಬ ಯುವಕ ಮದುವೆಯಾಗುವುದರಿಂದ ಕತೆ ಸುಖಾಂತವಾಗುತ್ತದೆ.

೧೩೭೪. ರಾಮಾಚಾರಿ

(೧೯೯೧ / ವರ್ಣ / ಸಾಮಾಜಿಕ)
ಲಾ: ಶ್ರೀ ಈಶ್ವರಿ ಪ್ರೊಡಕ್ಷನ್ಸ್
ಪ್ರೊ: ಎನ್.ವೀರಾಸ್ವಾಮಿ
ನಿ: ಡಿ.ರಾಜೇಂದ್ರ ಬಾಬು
ಸ.ನಿ: ಕೇಸರೀ ಹರವೂ
ಅ: ರವಿಚಂದ್ರನ್, ಮಾಲಾಶ್ರೀ, ಲೋಕೇಶ್, ಸುಮಿತ್ರಾ, ಮಾ।ಸುನೀಲ್, ಪ್ರಕಾಶ್ ರೈ, ಮಾ।ಮಂಜುನಾಥ್
ಕ: 'ಚಿನ್ನ ತಂಬಿ' ತಮಿಳು ಚಿತ್ರ
ಚಿ.ಕ: ಪಿ.ವಾಸು
ಮಾ/ಗೀ: ಹಂಸಲೇಖ
ಗಾ: ಮನು, ಮಂಜುಳಾ ಗುರುರಾಜ್, ಚಿತ್ರಾ, ಜೇಸುದಾಸ್, ಎಸ್. ಜಾನಕಿ
ಸಂ: ಕೆ.ಬಾಲು
ಛಾ: ಡಿ.ಪ್ರಸಾದ್ ಬಾಬು
ಕಲೆ: ಕೇಶವರಾವ್
ಸ: ಹಂಸಲೇಖ
ನೃ: ಮೂಗೂರು ಸುಂದರ್
ಸಾ: ಸುರೇಶ್
ವ: ನಾಗರಾಜ್
ಪ್ರ: ಕೇಶವ
ಹಾ: ೧) 'ರಾಮಚಾರಿ ಹಾಡುವಾ ಲಾಲಿ...', ೨) 'ಯಾರಿವಳು ಯಾರಿವಳು...', ೩) 'ಬುರುಡೇ ಬುರುಡೇ...', ೪) 'ಆಕಾಶವಾಗೆ ಯಾರೊ ಮಾಯಗಾರನು ..', ೫) 'ನಮ್ಮೂರ ಯುವರಾಣಿ ಕಲ್ಯಾಣವಂತೆ...'
ಸೆ: ರೀಲು ೧೫
ಕ.ಸಾ: ಶ್ರೀಮಂತರ ಮನೆ. ಮೂವರು ಅಣ್ಣಂದಿರು. ತಂಗಿ ಒಬ್ಬಳು. ಎಲ್ಲ ಅನುಕೂಲಗಳಿದ್ದರೂ ಸ್ವಚ್ಛಂದ ಹಕ್ಕಿಯಂತೆ ಹಾರಬೇಕೆಂಬ ತಂಗಿಯ ಆಸೆಗೆ ಅಡ್ಡಿ. ಅವರ ಮನೆ ಕೆಲಸದ ಆಳು ರಾಮಾಚಾರಿ ಅವಿದ್ಯಾವಂತ. ಅವನ ಮುಗ್ಧತೆಗೆ ಮನಸೋತಳು, ಅವನ ಕೈಯಿಂದ ಅವಳು ತಾಳಿ ಕಟ್ಟಿಸಿಕೊಂಡಳು, ಮೂವರು ಅಣ್ಣಂದಿರು ಅದನ್ನು ವಿರೋಧಿಸಿದರು. ಪ್ರೀತಿಯ ಮುಂದೆ ಅವರೂ ತಲೆ ಬಾಗಿದರು.

೧೩೭೫. ಪುಕ್ಸಟ್ಟೆ ಗಂಡ ಹೊಟ್ಟೆ ತುಂಬ ಉಂಡ

(೧೯೯೧ / ವರ್ಣ / ಸಾಮಾಜಿಕ)
ಲಾ: ಶ್ರೀ ಲಕ್ಷ್ಮಿ ಪ್ರೊಡಕ್ಷನ್ಸ್
ಪ್ರೊ: ಬಿ.ಎನ್.ಗಂಗಾಧರ್, ಎಂ.ಸುನಂದ, ಎಂ.ಕೃಷ್ಣ, ಎನ್.ಪುಟ್ಟಸ್ವಾಮಿ
ನಿ: ರಾಜ್ ಕಿಶೋರ್
ಸ.ನಿ: ಕೆ.ಗಾಯತ್ರಿ, ಯೋಗೇಶ್ ಹುಣಸೂರ್
ಅ: ಅಂಬರೀಷ್, ರಾಜಾನಂದ್, ಸತ್ಯಪ್ರಿಯ, ಆರ್. ಎನ್.ಜಯಗೋಪಾಲ್, ಸದಾಶಿವ ಸಾಲಿಯಾನ್, ವೆಂಕಟೇಶ್, ಭವ್ಯ, ವಿದ್ಯಾಶ್ರೀ, ಶಿವರಾಂ, ಸುಮ
ಕ/ಚಿ.ಕ/ಮಾ: ಶ್ರೀ ರಂಗ
ಗೀ: ಶ್ರೀರಂಗ, ಹಂಸಲೇಖ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಮಂಜುಳಾ, ಚಿತ್ರಾ, ವಿಷ್ಣು
ಸಂ: ಶ್ಯಾಂ ಯಾದವ್
ಛಾ: ಸಿ.ಮನೋಹರ್
ಕಲೆ: ಪಿ.ವಿ.ರೆಡ್ಡಿ
ಸ: ಹಂಸಲೇಖ
ನೃ: ತಾರಾ - ಪ್ರಸಾದ್
ಸಾ: ಜಯಮಣಿ
ಸ್ಟು: ಕಂಠೀರವ, ಸಂಕೇತ್, ಪ್ರಸಾದ್
ಹಾ: ೧) ' ಮೈ ಕೈ ಕುಣಿದರೆ...', ೨) 'ಕೋಗಿಲೆಯೇ ಓ...', ೩) 'ಮಾಯಾ ಕಡಲಲ್ಲಿ ...', ೪) 'ಆಕಾಶವೇ ಬೀಳಲಿ...',

೫) 'ವರುಷ ವರುಷ...'
ಕ.ಸಾ: ಒಂದೇ ರೂಪದ ಇಬ್ಬರು ; ಅವರನ್ನು ಪ್ರೀತಿಸುವ ಇಬ್ಬರು ಹುಡುಗಿಯರು. ವೈರಿಗೆ ಬೇಕಾದ ರಹಸ್ಯವನ್ನು ತಿಳಿದ ವ್ಯಕ್ತಿಗೆ ಹಿಂಸೆ. ಈ ಮಧ್ಯೆ ಇಬ್ಬರೂ ಅದಲು ಬದಲು ಬದಲಾಗಿ ಗುಟ್ಟು ಬಯಲು, ಹೊಡೆದಾಟ, ವೈರಿಗಳೆಲ್ಲ ಸೆರೆಮನೆಗೆ, ಈ ಮಧ್ಯೆ ಅವರಿಬ್ಬರೂ ಅಣ್ಣ-ತಮ್ಮರೆಂದು ತಿಳಿಯುವುದು - ಸುಖಾಂತ.

೧೩೭೬. ವೀರಪ್ಪನ್

(೧೯೯೧ / ವರ್ಣ / ಸಾಮಾಜಿಕ)
ಲಾ: ಜೈನ್ ಫಿಲಂಸ್
ಪ್ರೊ: ಜೆ. ಚಂದೂಲಾಲ್ ಜೈನ್
ನಿ: ರವೀಂದ್ರನಾಥ್
ಅ: ದೇವರಾಜ್, ಸುಂದರಕೃಷ್ಣ ಅರಸ್, ವಿಜಯ್, ಲೋಕೇಶ್, ಬಿ.ಎಂ. ವೆಂಕಟೇಶ್, ಚಂದ್ರು, ತೂಗುದೀಪ ಶ್ರೀನಿವಾಸ್, ವನಿತಾ ವಾಸು, ಸೀಮಾ, ತ್ರಿವೇಣಿ
ಕ/ಚಿ.ಕ: ಜೈನ್ ಕಂಬೈನ್ಸ್ ಕಥಾ ವಿಭಾಗ
ಮಾ/ಗೀ: ಸಿ.ಜಿ.ಕೆ.
ಗಾ: ಮಂಜುಳಾ ಗುರುರಾಜ್
ಸಂ: ಸುರೇಶ್ ಅರಸ್

ಛಾ: ಮಲ್ಲಿಕಾರ್ಜುನ
ಕಲೆ: ಅಪ್ಪಯ್ಯ
ಸ: ಗುಣಸಿಂಗ್
ಸಾ: ರುದ್ರೇಶ್
ವ: ರಾಮನಾಥ್
ಪ್ರ: ನಾಣಿ
ಸ್ಟು: ಸಂಕೇತ್
ವಿ: ೧೯೯೦-೯೧ರ ರಾಜ್ಯ ಪ್ರಶಸ್ತಿ : ಅತ್ಯುತ್ತಮ ಚಿತ್ರ, ಅತ್ಯುತ್ತಮ ನಟ (ದೇವರಾಜ್)
ಕ.ಸಾ: ದಂತ ಚೋರ ವೀರಪ್ಪನ್ ಜೀವನವನ್ನು ಆಧರಿಸಿದ ಕತೆಯಿದು. ಸಣ್ಣ ಪುಟ್ಟ ಕಳ್ಳತನಗಳಲ್ಲಿ ತೊಡಗಿದ್ದ ಹುಡುಗ ತಾಯಿಯ ಪ್ರೋತ್ಸಾಹದಿಂದ ದೊಡ್ಡ ಕಳ್ಳನಾಗುತ್ತಾನೆ.ಅರಣ್ಯ ಸಂಪತ್ತು ಆನೆಯ ದಂತಗಳನ್ನು ದೋಚಿ ಮಾರುತ್ತಾನೆ. ಅಧಿಕಾರಿಗಳನ್ನು ಕೊಲ್ಲುತ್ತಾ ಸಾಗುವ ಈತನಿಗೆ ರಾಜಕಾರಣಿಗಳ ಬೆಂಬಲವೂ ದೊರೆಯುತ್ತದೆ.ವಕ್ಷ ಅಧಿಕಾರಿಗಳ ಪಡೆ ಕಾಡಿಗೆ ನುಗ್ಗಿ ವೀರಪ್ಪನ್‌ನನ್ನು ಸಾಯಿಸಿದೆವೆಂದು ಕಾಡಿನಿಂದ ಹೊರಗೆ ಬರುತ್ತಾರೆ. ಆದರೆ ಅಸಲಿ ವೀರಪ್ಪನ್ ಸಾಯದೆ ಅಧಿಕಾರಿಗಳು ಹೊರಬರುವಾಗ ಆತ ಮತ್ತೆ ಕಾಡಿಗೆ ಹೋಗುತ್ತಾನೆ.

೧೩೭೭. ಗಂಡು ಸಿಡಿಗುಂಡು

(೧೯೯೧ / ವರ್ಣ / ಸಾಮಾಜಿಕ)
ಲಾ: ಶ್ರೀ ವಾಹಿನಿ ಸಿನಿ ಕಂಬೈನ್ಸ್
ಪ್ರೊ: ಎಸ್.ಎ.ಶ್ರೀನಿವಾಸ್
ನಿ: ಎಂ.ಎಸ್.ರಾಜಶೇಖರ್
ಅ: ಅಂಬರೀಷ್, ಮಾಲಾಶ್ರೀ, ಪೃಥ್ವಿ, ಸದಾಶಿವ ಬ್ರಹ್ಮಾವರ್, ಶಿವರಾಂ, ಕಿಶೋರಿ ಬಲ್ಲಾಳ್, ರೂಪಶ್ರೀ, ಅರವಿಂದ್
ಕ: ಎಂ.ಎಸ್.ರಾಜಶೇಖರ್
ಚಿ.ಕ/ಮಾ: ಚಿ.ಉದಯಶಂಕರ್
ಗೀ: ಚಿ.ಉದಯಶಂಕರ್, ಎಂ.ಡಿ.ಸುಂದರ್, ಶ್ರೀರಂಗ
ಗಾ: ಎಸ್. ಪಿ.ಬಾಲಸುಬ್ರಹ್ಮಣ್ಯಂ. ಮಂಜುಳಾ ಗುರುರಾಜ್
ಸಂ: ಮನೋಹರ್
ಛಾ: ಬಿ.ಸಿ.ಗೌರಿಶಂಕರ್
ಕಲೆ: ನಜೀರ್
ಸ: ಉಪೇಂದ್ರ ಕುಮಾರ್
ನೃ: ಉಡುಪಿ ಜಯರಾಂ
ಸಾ: ಜ್ಯೂಡೋ ರತ್ನಂ
ಪ್ರ: ಮೂಗೂರು ಪಿ. ಗುರು
ಹಾ: ೧) 'ಹೊಸಭಾಷೆ...', ೨) 'ಹ್ಯಾಟಿನೊಳಗೆ ಫೋಟೋ...', ೩) 'ಪತಕೆ ಯೋಚನೆ...', ೪) 'ಧನಿಕನಿಗೂ ಕಡು ಬಡವನಿಗೂ...', ೫) 'ಈ ರಾತ್ರಿ ಹೊತ್ತಲ್ಲೀ...'
ಸೆ: ಉದ - ೩೮೧೨.೭೦, 'ಯು' ಸರ್ಟಿಫಿಕೇಟ್
ಕ.ಸಾ: ಸಮಾಜ ವಿರೋಧಿ ಚಟುವಟಿಕೆಗಳನ್ನು ವಿರೋಧಿಸಿ ಅದರ ನಿಯಂತ್ರಣಕ್ಕಾಗಿ ಹೋರಾಡುವಲ್ಲಿ ನಾಯಕ, ನಾಯಕಿ ಇಬ್ಬರೂ ಒಂದಾಗಿರುತ್ತಾರೆ. ವಿರೋಧ ಪಕ್ಷದ ನಾಯಕನ ಮಗಳನ್ನು ಅಪಹರಿಸಿದ ಭ್ರಷ್ಟಾಚಾರಿ ಮಂತ್ರಿ ಹಾಗೂ ಆತನ ಅನುಚರರಾದ ಪೋಲೀಸ್ ಅಧಿಕಾರಿಗಳ ಬಣ್ಣವನ್ನು ಬಯಲು ಮಾಡಿ ಅಪರಾಧಗಳನ್ನು ಹೊರಗೆಳೆಯುವಲ್ಲಿ ಯಶಸ್ವಿಯಾಗುತ್ತಾರೆ.

೧೩೭೮. ಹೊಸಮನೆ ಅಳಿಯ

(೧೯೯೧ / ವರ್ಣ / ಸಾಮಾಜಿಕ)
ಲಾ: ಯಶಸ್ವಿ ಎಂಟರ್‌ಪ್ರೈಸಸ್
ಪ್ರೊ: ಪ್ರಭಾ. ಎಸ್. ಮೂರ್ತಿ
ನಿ: ಬಿ .ರಾಮಮೂರ್ತಿ
ಅ: ಅನಂತ್ ನಾಗ್, ಭವ್ಯ, ರಮೇಶ್ ಭಟ್, ಶ್ರೀನಿವಾಸ ಮೂರ್ತಿ, ಲೋಕೇಶ್, ಮೈಸೂರು ಲೋಕೇಶ್, ದೊಡ್ಡಣ್ಣ, ಅರವಿಂದ್, ಮುಖ್ಯಮಂತ್ರಿ ಚಂದ್ರು, ಶ್ರೀದೇವಿ, ಕಮಲಾಧರನ್, ಸತ್ಯಭಾಮ
ಕ: ಸು. ರುದ್ರಮೂರ್ತಿ ಶಾಸ್ತ್ರಿ
ಚಿ.ಕ: ಬಿ.ರಾಮಮೂರ್ತಿ
ಮಾ/ಗೀ: ಸು. ರುದ್ರಮೂರ್ತಿ ಶಾಸ್ತ್ರಿ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ
ಸಂ: ಸೌಂದರ ರಾಜನ್
ಛಾ: ಬಿ.ಎಸ್.ಶಾಸ್ತ್ರಿ
ಕಲೆ: ಪಳನಿಮಲೈ
ಸ: ಮನೋರಂಜನ್ ಪ್ರಭಾಕರ್
ಧ್ವ: (ಹಾ) ಎಸ್.ಪಿ.ರಾಮನಾಥನ್ (ಮಾ) ಕೋದಂಡಪಾಣಿ
ನೃ: ಸತೀಶ್, ಕಮಲಾ
ಸಾ: ಥ್ರಿಲ್ಲರ್ ಮಂಜು
ವ: ಬಿ.ನಾಗರಾಜರಾವ್
ಪ್ರ: ನಾಗರಾಜ್
ಸ್ಟು: ಚಾಮುಂಡೇಶ್ವರಿ
ಹಾ: ೧) ಆ ಕಾಲ ಈಗಿಲ್ಲ...', ೨) 'ಪಟ್ಟ ಹುಡುಗಿ ಬೊಂಬಾಟ್...', ೩) 'ಹೋಗ್ತಾನಂತ ರಂಗನಾಥಯ್ಯ...', ೪) 'ಬೇಡ ಸಂಸಾರದಲ್ಲಿ ರಾಜಕೀಯ...', ೫) 'ಮೂಗೂತಿ ಮುಂಬಾರ ಹೋದಂತೆ ಹಿಂಭಾರ...'
ಸೆ: ಉದ್ದ ೪೦೩೨, 'ಯು' ಸರ್ಟಿಫಿಕೇಟ್, ೧೦-೦೫ ೧೯೯೧
ಕ.ಸಾ: ಶ್ರೀಮಂತರ ಮನೆ ಅಳಿಯನಾಗಬೇಕೆಂದು ನಾಯಕ ಜಾಹಿರಾತು ನೀಡಿದಾಗ ಯಾರದೋ ಮನೆಯಲ್ಲಿದ್ದ ನಾಯಕಿ ಆತನನ್ನು ಕರೆಯಿಸಿ ಅವನಿಂದ ವಿಧವಿಧವಾದ ಕೆಲಸಗಳನ್ನು ಮಾಡಿಸಿಕೊಳ್ಳುತ್ತಾಳೆ. ಆ ಮನೆಯ ನಿಜವಾದ ಯಜಮಾನ ಬಂದಾಗ ಎಲ್ಲರ ಬಣ್ಣ ಬಯಲಾಗುತ್ತದೆ. ಕೊನೆಗೆ ನಾಯಕಿ ಆ ಯಜಮಾನನ ಮಗಳೆಂದು ತಿಳಿಯುತ್ತದೆ. ನಾಯಕ, ನಾಯಕಿ ಇಬ್ಬರೂ ಒಂದಾಗುತ್ತಾರೆ. ಪೈಗಳ್ಳ ನಾಯಕ ಮತ್ತು ಸುಳ್ಳಿ ನಾಯಕಿಯ ಕಥೆ.

೧೩೭೯. ಮನೆ

(೧೯೯೧ / ವರ್ಣ / ಸಾಮಾಜಿಕ)
ಲಾ: ಅಪೂರ್ವ ಚಿತ್ರ
ಪ್ರೊ/ನಿ: ಗಿರೀಶ್ ಕಾಸರವಳ್ಳಿ
ಸ.ನಿ: ಗಾಯತ್ರಿ, ಸಾವಂತ್
ಅ: ನಾಸಿರುದ್ದೀನ್ ಷಾ, ದೀಪ್ತಿ ನವಲ್, ರೋಹಿಣಿ ಹಟ್ಟಂಗಡಿ, ಮೈಕೋ ಚಂದ್ರು, ಬಿ.ಎಲ್.ಆಚಾರ್, ಹೆಚ್.ಜಿ. ಸೋಮಶೇಖರ ರಾವ್, ಮಂಜುಳಮ್ಮ
ಕ: ಟಿ.ಜಿ. ರಾಘವ
ಚಿ.ಕ/ಮಾ: ಗಿರೀಶ್ ಕಾಸರವಳ್ಳಿ, ಬಿ.ಸುರೇಶ್
ಸಂ: ಎಂ.ಎನ್.ಸ್ವಾಮಿ
ಛಾ: ಎಸ್.ರಾಮಚಂದ್ರ
ಕಲೆ: ಜಾನ್ ದೇವರಾಜ್
ಸ: ಎಲ್.ವೈದ್ಯನಾಥನ್
ಧ್ವ: (ಹಾ) ಎಸ್.ಪಿ.ರಾಮನಾಥನ್, (ಮಾ) ಕೋದಂಡಪಾಣಿ
ವ: ವೈಶಾಲಿ ಕಾಸರವಳ್ಳಿ
ಪ್ರ: ಕೆ.ಎಂ.ಕೃಷ್ಣ
ಸ್ಟು: ಚಾಮುಂಡೇಶ್ವರಿ, ಪ್ರಸಾದ್
ವಿ: ೧೯೮೯-೯೦ರ ರಾಜ್ಯ ಪ್ರಶಸ್ತಿ : ಅತ್ಯುತ್ತಮ ಚಿತ್ರಕಥೆ (ಗಿರಿಶ್ ಕಾಸರವಳ್ಳಿ), ಅತ್ಯುತ್ತಮ ಛಾಯಾಗ್ರಾಹಕ (ಎಸ್.ರಾಮಚಂದ್ರ) ಅತ್ಯುತ್ತಮ ಧ್ವನಿಗ್ರಾಹಕ (ಎಸ್. ರಾಮನಾಥನ್) ತೀರ್ಪುಗಾರರ ವಿಶೇಷ ಪ್ರಶಸ್ತಿ (ಗಿರೀಶ್ ಕಾಸರವಳ್ಳಿ) ಕನ್ನಡ ಹಾಗೂ ಹಿಂದಿ ಎರಡು ಭಾಷೆಗಳಲ್ಲಿ ಬಿಡುಗಡೆ.
ಕ.ಸಾ: ನಗರದಲ್ಲಿ ಬಾಡಿಗೆ ಮನೆಗೆ ಬಂದ ದಂಪತಿಗಳು ರಾತ್ರಿ ಕೆಲಸ ಮಾಡುವ ಶೆಡ್ ಒಂದನ್ನು ಖಾಲಿ ಮಾಡಿಸುವ ಪ್ರಯತ್ನ ಶೆಡ್ ಖಾಲಿಯಾದರೂ ಮತ್ತೊಂದು ತೊಂದರೆ ಎದುರಾಗುತ್ತದೆ. ಈ ನೆಪದಲ್ಲಿ ಇನ್ಸ್‌ಪೆಕ್ಟರ್ ಪದೇ ಪದೇ ಮನೆಗೆ ಬರುವುದು, ಖಾಲಿಯಾದ ಶೆಡ್‌ಗೆ ವೀಡಿಯೋ ಪಾರ್ಲರ್ ಬರುವುದು ನಡೆಯುತ್ತವೆ. ಕೊನೆಗೆ ಮನೆ ಖಾಲಿ ಮಾಡಲು ನಿರ್ಧರಿಸಿ ಮೊದಲು ಮನೆ ಕೊಡುತ್ತೇನೆಂದು ಹೇಳಿದ್ದ ಮನೆ ಮಾಲೀಕನ ಹತ್ತಿರ ಹೋದಾಗ ಆತ ಮಗುವನ್ನು ಕಳೆದುಕೊಂಡು ದುಃಖಿತನಾಗಿರುವುದನ್ನು ಕಂಡು ವಿಷಣ್ಣರಾಗ ಬೇಕಾಗುತ್ತದೆ. ಶಬ್ದಮಾಲಿನ್ಯ ಕೇಂದ್ರ ವಸ್ತು

೧೩೮೦. ಕಳ್ಳ ಮಳ್ಳ

(೧೯೯೧ / ವರ್ಣ / ಸಾಮಾಜಿಕ)
ಲಾ: ಶ್ರೀ ಲಕ್ಷ್ಮಿ ಪ್ರೊಡಕ್ಷನ್ಸ್
ಪ್ರೊ: ಜೈಜಗದೀಶ್, ವಿಜಯಲಕ್ಷ್ಮಿ ಸಿಂಗ್
ನಿ: ಸಾಯಿಪ್ರಕಾಶ್
ಸ.ನಿ: ಎಂ.ಡಿ.ಶ್ರೀಧರ್, ಜಿ.ಶರತ್ ಕುಮಾರ್, ಲಿಂಗರಾಜ ಕಗ್ಗಲ್
ಅ: ಜಗ್ಗೇಶ್, ದೊಡ್ಡಣ್ಣ, ಉಮಾಶ್ರೀ, ಶಶಿಕುಮಾರ್, ಜೈಜಗದೀಶ್, ಮಾ।ದೇವರಾಜ್, ಪ್ರಿಯಾಂಕ, ಮಧುಶ್ರೀ,

ಕೀರ್ತಿ, ಮೈಸೂರು ಲೋಕೇಶ್. ರತ್ನಾಕರ್, ಪ್ರಕಾಶ್ ರೈ, ಉಮೇಶ್, ಉಮಾಶ್ರೀ, ಪದ್ಮಕುಮಟಾ, ಸದಾಶಿವ ಬ್ರಹ್ಮಾವರ್
ಕ:/ಚಿ.ಕ: ಸಾಯಿಪ್ರಕಾಶ್
ಮಾ: ಕುಣಿಗಲ್ ನಾಗಭೂಷಣ್
ಗೀ: ಆರ್. ಎನ್.ಜಯಗೋಪಾಲ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಮಂಜುಳಾ ಗುರುರಾಜ್. ಸಂಗೀತಾ ಕಟ್ಟಿ
ಸಂ: ಕೆ.ನರಸಯ್ಯ
ಛಾ: ಜಾನೀಲಾಲ್
ಕಲೆ: ಕೃಷ್ಣಾಚಾರಿ
ಸ: ಉಪೇಂದ್ರಕುಮಾರ್
ಧ್ವ: ಪೀಟರ್ ಸಂಕೇತ್
ನೃ: ಸತೀಶ್
ಸಾ: ಥ್ರಿಲ್ಲರ್ ಮಂಜು
ವ: ನಾಗರಾಜ್
ಪ್ರ: ನಾಗರಾಜ್, ಚಾರಿ
ಕ.ಸಾ: ತನ್ನ ಸಹೋದರಿಗೆ ಮೋಸ ಮಾಡಿಅವಳ ಆಸ್ತಿಯನ್ನು ಲಪಟಾಯಿಸಿದವನೊಬ್ಬ ತನ್ನಂತೆ, ತನ್ನ ಮಗನನ್ನು ಕಳ್ಳತನದಲ್ಲಿ ಪಳಗಿಸುತ್ತಾನೆ. ಇಬ್ಬರೂ ಪಾಲುದಾರಿಕೆಯಲ್ಲಿ ಕಳ್ಳತನ ಮಾಡುತ್ತಿರುತ್ತಾರೆ. ಆತನ ಸಹೋದರಿಯ ಮಗ ಬೆಳೆದು ದೊಡ್ಡವನಾದ ನಂತರ ತನಗಾದ ಅನ್ಯಾಯವನ್ನು ಸರಿಪಡಿಸಿಕೊಳ್ಳಲು ಈ ತಂದೆ ಮಗನ ಮಧ್ಯೆ ವಿರಸವೇರ್ಪಡುವಂತ ಯೋಜಿಸುತ್ತಾನೆ. ಈ ರೀತಿಯಾಗಿ ಅವರಿಬ್ಬರಿಗೂ ಆತ ಬುದ್ಧಿ ಕಲಿಸುತ್ತಾನೆ.

೧೩೮೧. ಸೆಂಟ್ರಲ್ ರೌಡಿ

(೧೯೯೧ / ವರ್ಣ / ಸಾಮಾಜಿಕ)
ಲಾ: ಅಖಿಲೇಶ್ವರಿ ಆರ್ಟ್ ಪ್ರೊಡಕ್ಷನ್ಸ್
ಪ್ರೊ: ಆರ್.ವಿ.ಶ್ರೀನಿವಾಸುಲು, ಬಿ.ಕೆ.ಗುರುದತ್, ಕಿರಣ್ ಕುಮಾರ್
ನಿ: ಬಿ.ರಾಮಮೂರ್ತಿ
ಅ: ಪ್ರಭಾಕರ್, ಅಂಜನಾ, ಗಂಗಾಧರ್, ದೊಡ್ಡಣ್ಣ, ಮುಖ್ಯಮಂತ್ರಿ ಚಂದ್ರು, ಸುಧೀರ್, ನಾಗೇಶ್ ಕಶ್ಯಪ್, ಜಯಸಿಂಹ ಮುಸುರಿ, ರೇಖಾ ದಾಸ್
ಕ/ಚಿ.ಕ: ಬಿ.ರಾಮಮೂರ್ತಿ
ಮಾ: ಉಪೇಂದ್ರ
ಗೀ: ಆರ್.ಎನ್.ಜಯಗೋಪಾಲ್, ಶ್ರೀರಂಗ, ಗೀತಪ್ರಿಯ
ಗಾ: ಸುಂದರ್, ಮಂಜುಳಾ ಗುರು, ಜಯಸಿಂಹ ಮುಸುರಿ
ಸಂ: ನರಸಯ್ಯ
ಛಾ: ಸುಂದರನಾಥ್ ಸುವರ್ಣ
ಕಲೆ: ಕೆ.ರಾಜು
ಸ: ಶಂಕರ್ - ಗಣೇಶ್
ಧ್ವ: (ಹಾ) ಅಣ್ಣಾದೊರೈ, (ಮಾ) ಕೃಷ್ಣಮೂರ್ತಿ
ನೃ: ಸತೀಶ್
ಸಾ: ಎಸ್.ಕೆ.ಸ್ವಾಮಿ
ದ: ರಮಣ
ಪ್ರ: ಮಲ್ಲಿ
ಸ್ಟು: ಸಂಕೇತ್, ಪ್ರಸಾದ್
ಹಾ: ೧) 'ಬೀದಿಗೆ ಬಾರೇ ಚಿತ್ರಿ...', ೨) 'ಹೃದಯವನು ಇಂದು ಕದ...', ೩) 'ತುಂಬು ಹುಣ್ಣಿಮೆ ತಂಪು ತಂದಿದೆ...', ೪) 'ಸಾನಿಲ್ಲ ಟ್ವಿಂಕಲ್ ಸ್ಟಾರ್...'
ಸೆ: ಉದ್ದ - ೩೪೧೦.೦೦, ೨೮ - ೦೮- ೧೯೯೧.
ಕ.ಸಾ: ಮಿಲಿಟರಿ ರಹಸ್ಯಗಳನ್ನು ವಿದೇಶಕ್ಕೆ ಮಾರುವ ತಂಡವನ್ನು ಸೆದೆ ಬಡಿಯಲು ಬರುವ ಸಿ.ಬಿ.ಐ ಅಧಿಕಾರಿ ಪ್ರಭಾಕರ್ ರೌಡಿಯಾಗಿ ಅಭಿನಯಿಸುತ್ತಾ ರಹಸ್ಯ ತಿಳಿಯುತ್ತಾನೆ. ಮೇಜರ್ ಮಂಜುನಾಥ್‌ನನ್ನು ಅಪಹರಿಸಿ ಆತನಿಂದ ರಹಸ್ಯಗಳನ್ನು ಬಾಯಿಬಿಡಿಸುತ್ತಾನೆ. ದೇಶದ್ರೋಹಿಗಳನ್ನು ಮುಗಿಸಿ, ದೇಶದ ರಹಸ್ಯ ವಿದೇಶಕ್ಕೆ ಹೋಗದಂತೆ ತಡೆಯುತ್ತಾನೆ.

೧೩೮೨. ಬಾಂಬೆದಾದಾ

(೧೯೯೧ / ವರ್ಣ / ಸಾಮಾಜಿಕ)
ಲಾ: ಶ್ರೀ ತಾರಕಾ ಪ್ರೊಡಕ್ಷನ್ಸ್
ಪ್ರೊ: ವಿ.ಎನ್.ಎಸ್.ಮಲ್ಲಿ
ನಿ: ಟೈಗರ್ ಪ್ರಭಾಕರ್
ಸ.ನಿ: ಸರಿಗಮ ವಿಜಿ
ಅ: ಟೈಗರ್ ಪ್ರಭಾಕರ್, ಲಕ್ಷ್ಮಿ, ವಾಣಿ ವಿಶ್ವನಾಥ್, ವಜ್ರಮುನಿ, ಸುಧೀರ್, ಬಾಲಕೃಷ್ಣ, ಸರಿಗಮ ವಿಜಿ, ಮಾಧುರಿ, ದೊಡ್ಡಣ್ಣ
ಕ: ಕೆ.ಪಿ.ಭವಾನಿ ಶಂಕರ್
ಚಿ.ಕ: ಟೈಗರ್ ಪ್ರಭಾಕರ್
ಮಾ: ವಿಶ್ವವಿಜೇತ
ಗೀ: ಶ್ರೀರಂಗ, ಆರ್.ಎನ್.ಜಯಗೋಪಾಲ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್.ಜಾನಕಿ, ಪಿ.ಸುಶೀಲಾ
ಸಂ: ವಿಕ್ಟರ್
ಛಾ: ಜಾನಿಲಾಲ್
ಕಲೆ: ರಮೇಶ್ ಬಾಬು
ಸ: ಶಂಕರ್ ಗಣೇಶ್
ನೃ: ಸತೀಶ್
ಸಾ: ಸ್ವಾಮಿ
ವ: ಸತ್ಯ
ಪ್ರ: ಮಲ್ಲಿ
ಸ್ಟು: ಪ್ರಸಾದ್, ಚಾಮುಂಡೇಶ್ವರಿ, ಕಂಠೀರವ
ಹಾ: ೧) 'ಸನ್ನಾಕೆ ನಕ್ಕಾಗ ಆನಂದ ವೈಭೋಗ...', ೨) 'ನಿನ್ನ ದಾರಿಯನೇ ಕಾದೆ...', ೩) ' ಸಂಜೆಯ ರಂಗಿನಲ್ಲಿ ಸಾರಾಯಿ ಮತ್ತಿನಲ್ಲಿ ಜೊತೆ...', ೪) 'ತ್ಯಾಗವಿಲ್ಲಿ ಜೀವ ತಳೆದು ಬಂದಿದೆ...'
ಕ.ಸಾ: ಪೊಲೀಸ್ ಅಧಿಕಾರಿ ವಿಜಯಲಕ್ಷ್ಮಿಯ ತಮ್ಮ ಅನ್ಯಾಯಕ್ಕೆ ಸಿಡಿದೇಳುವ ಸ್ವಭಾವದವನಾದುದರಿಂದ ಸದಾ ಸ್ಟೇಷನ್ನಿಗೆ ಬರುತ್ತಿರುತ್ತಾನೆ. ಇದರಿಂದ ಅಕ್ಕ ತಮ್ಮನಲ್ಲಿ ವಿರಸ ಉಂಟಾಗುತ್ತದೆ. ಆದರೂ ಅಕ್ಕನನ್ನು ಪ್ರೇಮಿಸಿ ಮಗುವೊಂದನ್ನು ನೀಡಿದ ಪೊಲೀಸ್ ಅಧಿಕಾರಿ ಅಶೋಕ್‌ರಾವ್ ಪತ್ತೆ ಕಾರ್ಯದಲ್ಲಿ ತಾನೂ ಅಕ್ಕನಿಗೆ ನೆರವಾಗುತ್ತಾನೆ. ಖಳನಾಯಕನ ವಿಚಾರಣೆಗೆ ಹೋದ ಅಶೋಕ್ ಕಾಣೆಯಾಗಿರುತ್ತಾನೆ. ಕೊನೆಗೆ ಖಳನಾಯಕನನ್ನು ಸದೆಬಡಿದು ಅಕ್ಕ - ತಮ್ಮ ಒಂದಾಗುತ್ತಾರ.

೧೩೮೩. ರೌಡಿ ಮತ್ತು ಎಂ.ಎಲ್.ಎ

(೧೯೯೧ / ವರ್ಣ / ಸಾಮಾಜಿಕ)
ಲಾ: ಶ್ರೀ ರಾಜಕಾಳೀ ಅಮ್ಮನ್ ಎಂಟರ್‌ಪ್ರೈಸಸ್
ಪ್ರೊ: ಮೋಹನ್ ನಟರಾಜ್, ತರಂಗ್ಯ ಷಣ್ಮುಗಂ
ನಿ: ಸಾಯಿಪ್ರಕಾಶ್
ಸ.ನಿ: ಎಂ.ಡಿ.ಶ್ರೀಧರ್, ಜಿ.ಸರಸಕುಮಾರ್, ಲಿಂಗರಾಜ ಕಗ್ಗಲ್
ಅ: ಅಂಬರೀಷ್, ಮಾಲಾಶ್ರೀ, ಜಗ್ಗೇಶ್, ಶ್ರೀನಾಥ್, ಅನ್ನಪೂರ್ಣಮ್ಮ, ಜೈಜಗದೀಶ್, ರ್‍ಯಾಂಬೋ ರಾಜು, ಮುಖ್ಯಮಂತ್ರಿ ಚಂದ್ರು, ವಾಸುದೇವ ಗಿರಿಮಾಜಿ, ಆಗ್ರೋ ಚಿಕ್ಕಣ್ಣ, ಸಿಹಿಕಹಿ ಚಂದ್ರು, ಮೋಹನ ಪ್ರಿಯ, ಮಧು, ಪ್ರೇಮ, ಜೇಬಿ ಕೀರ್ತಿ, ಬ್ಯಾಂಕ್ ಜನಾರ್ದನ್, ಎಂ.ಎಸ್.ಕಾರಂತ್, ರಾಮಕೃಷ್ಣ, ಸಾಯಿಪ್ರಕಾಶ್
ಕ: ಪಿ.ವಾಸು
ಚಿ.ಕ: ಸಾಯಿಪ್ರಕಾಶ್
ಮಾ: ಕುಣಿಗಲ್ ನಾಗಭೂಷಣ್
ಗೀ/ಸ: ಹಂಸಲೇಖ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ, ಮಂಜುಳಾ ಗುರು
ಸಂ: ಕೆ.ನರಸಿಂಹ
ಛಾ: ಜಾನಿಲಾಲ್
ಕಲೆ: ಬಾಲು
ಧ್ವ: (ಹಾ) ಎಸ್.ಪಿ.ರಾಮನಾಥನ್, (ಮಾ) ಎಂ.ಕೋದಂಡಪಾಣಿ
ನೃ: ಸತೀಶ್
ಸಾ: ಜ್ಯೂಡೋ ರತ್ನಂ
ವ: ಜಯಚಂದ್ರ, ನಾಗರಾಜ್, ಬಾಬ್ಜಿ
ಪ್ರ: ರಾಮಕೃಷ್ಣ, ಕುಮಾರ್, ಚಂದ್ರು
ಹಾ: ೧) 'ಓ ಇಂಡಿಯಾ ಓ ಇಂಡಿಯಾ...', ೨) 'ಕೋಲು ಕೋಲು ಕೋಲೆ...', ೩) 'ರೆಬೆಲ್ ರಬೆಲ್ ರೆಬೆಲ್ ಹುಡುಗ...', ೪) 'ವಿರಹ ವಿರಹ ದಿನವೂ ಇದೇ ಹಣೆ ಬರಹ...'
ಸೆ: ರೀಲು ೧೫. ಉದ ೩೯೫೫.೦೦
ಕ.ಸಾ: ರಾಜಕೀಯ ಜಾಟಿನ ಕತೆ. ದೇಶ ವಿದ್ರೋಹಿ ವ್ಯಕ್ತಿ ರಾಜಕೀಯ ನಾಯಕ. ಆಡಳಿತದ ಎಲ್ಲ ಸೂತ್ರಗಳನ್ನು ತನ್ನ ವಿದ್ರೋಹ ಕಾರ್ಯಗಳಿಗ ಬಳಸಿಕೊಳ್ಳುವ ಧೂರ್ತ. ಅವನ ಅಕ್ರಮಗಳನ್ನು, ದಂಧೆಗಳನ್ನು ಬಯಲಿಗೆಳೆಯುವ ಇನ್ನೊಬ್ಬ ರೌಡಿ. ಇವರಿಬ್ಬರ ನಡುವಣ ಚದುರಂಗದಾಟ ಈ ಚಿತ್ರದ ಕಥೆ.

೧೩೮೪. ಸಾಗರ ಸಂಗಮ

(೧೯೯೧ / ವರ್ಣ / ಸಾಮಾಜಿಕ)
ಲಾ: ಸಂಗಂ ಫಿಲಂಸ್
ಪ್ರೊ: ಕೆ.ಎಂ.ಸಂಗನಾಥ್
ಕ/ಚಿ.ಕ/ಮಾ/ಗೀ/ನಿ: ಆರಣಿ ರುದ್ರೇಶ್
ಅ: ಆರಣಿ ರುದ್ರೇಶ್, ಸಂಗನಾಥ್, ನಂದವರ್ಮ, ಕುಳ್ಳ ಪ್ರಸನ್ನ, ಭವ್ಯಶ್ರೀ, ಭಾಗ್ಯಶ್ರೀ, ನವನೀತ, ಮಂಜುಮಾಲಿನಿ
ಸಂ: ಶ್ರೀನಿವಾಸ್ ರಾಘವ
ಛಾ: ಎಂ.ಈ.ರಾಜ್
ಸ: ಜೇಮ್ಸ್
ವ: ಗಣೇಶ್
ಪ್ರ: ಸುಂದರಂ
ಸ್ಟು: ಪ್ರಸಾದ್, ವಸಂತ್
ಕ.ಸಾ: ಸಾಗರ್ ಹಾಗೂ ಸಂಗಮ್ ಎನ್ನುವ ಸ್ನೇಹಿತರ ಕತೆಯಿದು. ರಾಗಿಣಿ, ಮಲ್ಲಿಕಾ ಇವರಿಬ್ಬರ ಪ್ರೇಮಿಗಳು. ಅನಿರೀಕ್ಷಿತವಾದ ಸಂದರ್ಭವೊಂದರಲ್ಲಿ ಸಂಗಮ್ ತನ್ನ ಸ್ನೇಹಿತನ ಗೆಳತಿ ರಾಗಿಣಿಯ ಜೊತೆ ದೈಹಿಕ ಸಂಪರ್ಕ ಬೆಳೆಸುತ್ತಾನೆ. ನಂತರ ಪಶ್ಚಾತ್ತಾಪ ಪಟ್ಟು ಅವಳನ್ನೇ ಮದುವೆಯಾಗುವ ತೀರ್ಮಾನ ಮಾಡುತ್ತಾನೆ. ಸ್ನೇಹಿತನಿಗೆ ತನ್ನ ಗೆಳತಿಯನ್ನು ಮದುವೆಯಾಗಲು ಕೇಳಿಕೊಳ್ಳುತ್ತಾನೆ. ಆದರೆ ಮಲ್ಲಿಕಾ ಇದಕ್ಕೆ ಒಪ್ಪುವುದಿಲ್ಲ. ಈ ಘರ್ಷಣೆಯಲ್ಲಿ ಮಲ್ಲಿಕಾ ಸನ್ಯಾಸ ಸ್ವೀಕರಿಸುವುದರಲ್ಲಿ ಕತೆ ಮುಗಿಯುತ್ತದೆ.

೧೩೮೫. ಶಾಂತಿ ಕ್ರಾಂತಿ

(೧೯೯೧ / ವರ್ಣ / ಸಾಮಾಜಿಕ)
ಲಾ: ಶ್ರೀ ಈಶ್ವರಿ ಪ್ರೊಡಕ್ಷನ್ಸ್
ಪ್ರೊ: ಎನ್.ವೀರಾಸ್ವಾಮಿ
ಕ/ಚಿ.ಕ/ನಿ: ವಿ.ರವಿಚಂದ್ರನ್
ಅ: ರವಿಚಂದ್ರನ್, ರಮೇಶ್, ಖುಷ್ಬು, ಜೂಹಿ ಚಾವ್ಲಾ, ಅನಂತ್ ನಾಗ್, ಚಾರು ಹಾಸನ್, ಶಿವರಾಂ, ಶಂಕರ್ ಪಾಟೀಲ್, ತೂಗುದೀಪ ಶ್ರೀನಿವಾಸ
ಮಾ/ಗೀ: ಹಂಸಲೇಖ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ
ಸಂ: ಕೆ.ಬಾಲು
ಛಾ: ಆರ್.ಮಧುಸೂದನ್
ಕಲೆ: ವಿ.ಕೆ.ರಮೇಶ್
ಸ: ಹಂಸಲೇಖ
ನೃ: ವಿ.ರವಿಚಂದ್ರನ್, ಚಿನ್ನಿ ಪ್ರಕಾಶ್
ಸಾ: ವಿ.ರವಿಚಂದ್ರನ್, ಸುರೇಶ್
ಹಾ: ೧) 'ಮಧ್ಯರಾತ್ರೀಲಿ ಹೈವೇ ರಸ್ತೇಲಿ...', ೨) 'ಹಲೋ ರವಿ ಮಾಮ...' ೩) 'ಹುಟ್ಟಿದ್ಯಾಕೋ ...', ೪) 'ಒನ್ ಟು ತ್ರಿ...', ೫) 'ಗಾಳಿಯೋ ಗಾಳಿಯೋ ಮರೀಬೇ ನನ್ನ....',
ವಿ: ೧೯೯೧-೯೨ರ ರಾಜ್ಯಪ್ರಶಸ್ತಿ : ವಿಶೇಷ ತಾಂತ್ರಜ್ಞಾನ ಮೂರು ಭಾಷೆಯಲ್ಲಿ ಚಿತ್ರಿಸಿದರು. ನಾಗಾರ್ಜುನ, ರಜನಿಕಾಂತ್ ತೆಲುಗು, ತಮಿಳಿನಲ್ಲಿ ಅಭಿನಯಿಸಿದರು. ಸಹಸ್ರಾರು ಮಕ್ಕಳನ್ನು ಚಿತ್ರೀಕರಣಕ್ಕೆ ಬಳಸಿದರು.
ಕ.ಸಾ: ಇಬ್ಬರು ನಾಯಕರು, ಒಬ್ಬ ಶಾಂತಿಯ ಪ್ರತಿಪಾದಕ; ಇನ್ನೊಬ್ಬ ಕ್ರಾಂತಿಯ ಬೆಂಬಲಿಗ. ಅನಾಥ ಮಕ್ಕಳಿಗೆ ಆಶ್ರಯ ನೀಡುವ ಮುಖವಾಡ ಹಾಕಿಕೊಂಡು, ಆ ಮಕ್ಕಳ ಅಂಗಾಂಗಗಳನ್ನು ಕಿತ್ತು ಮಾರುವ ವ್ಯಕ್ತಿಯೊಬ್ಬನನ್ನು ಬಯಲಿಗೆಳೆಯಲು ಕ್ರಾಂತಿಯ ಸೂತ್ರವನ್ನು ಹಿಡಿದ ನಾಯಕ ಹೋರಾಡುತ್ತಾನೆ. ಕಲಿಸ ಕಳಮಕೊಂಡಾಗ ಮಕ್ಕಳ ತಂಡದ ಕೋಟೆಯನ್ನು ಕಟ್ಟಿ ವೈರಿಯ ಕೋಟೆಯನ್ನು ಭೇದಿಸುತ್ತಾನೆ. ಈ ಪ್ರಯತ್ನದಲ್ಲಿ ತನ್ನ

ಪ್ರಿಯತಮೆಯನ್ನು ಕಳೆದುಕೊಳ್ಳುತ್ತಾನೆ. ಆದರೂ ತನ್ನ ಕಾರ್ಯದಲ್ಲಿ ಯಶಸ್ವಿಯಾಗುತ್ತಾನೆ.

೧೩೮೬. ಅರಣ್ಯದಲ್ಲಿ ಅಭಿಮನ್ಯು

(೧೯೯೧ / ವರ್ಣ / ಸಾಮಾಜಿಕ)
ಲಾ: ಶ್ರೀ ವಾಸು ಚಿತ್ರ
ಪ್ರೊ: ರಾಜಶೇಖರ್
ನಿ: ಭಾರ್ಗವ
ಸ.ನಿ: ಸಿ.ಹೆಚ್.ಬಾಲಾಜಿ ಸಿಂಗ್
ಅ: ಅಂಬರೀಷ್, ಪೂನಂ ದಾಸ್ ಗುಪ್ತ, ರಮೇಶ್ ಭಟ್, ಟೆನ್ನಿಸ್ ಕೃಷ್ಣ, ದೇವರಾಜ್
ಕ/ಚಿ.ಕ: ಭಾರ್ಗವ

ಮಾ: ಎಸ್.ಟಿ.ಜಯರಾಮ ರೆಡ್ಡಿ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ
ಸಂ: ವಿಕ್ಟರ್ ಯಾದವ್
ಛಾ: ಮಧುಸೂದನ್
ಕಲೆ: ರಾಮಕುಮಾರ್
ಸ: ಲಕ್ಷ್ಮೀಕಾಂತ್ - ಪ್ಯಾರೇಲಾಲ್
ನೃ: ರೇಖಾ - ಪ್ರಕಾಶ್
ಸಾ: ಜ್ಯೂಡೋ ರತ್ನಂ
ಪ್ರ: ರಾಮಕೃಷ್ಣ, ಮೈಸೂರು ವೆಂಕಟೇಶ್
ಸ್ಟು: ಕಂಠೀರವ
ವಿ: ಲಕ್ಷ್ಮೀಕಾಂತ್ ಪ್ಯಾರೆಲಾಲ್ ಪ್ರಥಮವಾಗಿ ಕನ್ನಡದಲ್ಲಿ ಸಂಗೀತ ನೀಡಿದ ಚಿತ್ರ.
ಕ.ಸಾ: ಅರಣ್ಯಾಧಿಕಾರಿಯೊಬ್ಬನನ್ನು ಇಚ್ಛಾರೂಪಿ ಸರ್ಪವೊಂದು ಪ್ರೀತಿಸುತ್ತದೆ. ಇಬ್ಬರೂ ಪರಸ್ಪರ ಪ್ರೇಮಿಸುತ್ತಾರೆ. ದುಷ್ಟರು ಅವಳನ್ನು ಕೊಲ್ಲುತ್ತಾರೆ, ನಾಯಕ ಸೇಡು ತೀರಿಸಿಕೊಳ್ಳುತ್ತಾನೆ.

೧೩೮೭. ಶ್ವೇತಾಗ್ನಿ

(೧೯೯೧ / ವರ್ಣ / ಸಾಮಾಜಿಕ)
ಲಾ: ಶ್ರುತಿ ಎಂಟರ್‌ಪ್ರೈಸಸ್
ಪ್ರೊ: ಶೈಲೇಂದ್ರ ಬಾಬು
ನಿ: ಬಿ.ರಾಮಮೂರ್ತಿ
ಸ.ನಿ: ಎಂ.ರುದ್ರೇಶ್, ಎಂ.ಪಿ.ನಾಚಪ್ಪ, ವಾಸು, ಮುರಳಿ, ಹನುಮಂತು
ಅ: ದೇವರಾಜ್, ಅಶೋಕ್, ವಿನಯಾ ಪ್ರಸಾದ್, ತಾರ, ಜೀಬಿಸ್ಮಾಮಿಲಿ, ವಿಜಯಲಕ್ಷ್ಮಿ, ಡಿಂಗ್ರಿ ನಾಗರಾಜ್, ಮೈಸೂರು ಲೋಕೇಶ್
ಕ/ಚಿ.ಕ: ಬಿ.ರಾಮಮೂರ್ತಿ
ಮಾ: ಆರ್.ಎನ್.ಜಯಗೋಪಾಲ್
ಗೀ: ಚಿ ಉದಯಶಂಕರ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಬಿ.ಆರ್. ಛಾಯಾ, ಚಂದ್ರಿಕಾ, ಚಿತ್ರಾ, ಮಂಜುಳಾ ಗುರುರಾಜ್



ಸಂ: ಬಿ.ನಾಗೇಶ್
ಛಾ: ಆರ್.ಮಧುಸೂದನ್
ಕಲೆ: ನಜೀರ್
ಸ: ಮನೋರಂಜನ್ ಪ್ರಭಾಕರ್
ನೃ: ಸತೀಶ್
ಸಾ: ಥ್ರಿಲ್ಲರ್ ಮಂಜು
ಪ್ರ: ಮೈಸೂರು ವೆಂಕಟೇಶ್
ಸ್ಟು: ಕಂಠೀರವ, ಸಂಕೇತ್, ಚಾಮುಂಡೇಶ್ವರಿ
ಹಾ: ೧) 'ಇಂದು ತಾನೆ ನನಗೆ ನಾಲ್ಕು ವರ್ಷ ತುಂಬಿದೆ...', ೨) 'ಕಣ್ಣೀರ ತಂದ ನೀ ಕಾಣೆಯಾ...', ೩) 'ಚಿನ್ನವಂಥ ಬಾಳಿನ ಬಣ್ಣವಿಂದು ಮಾಸಿದೆ...', ೪) 'ಮೆಚ್ಚಿಬಂದ ಹೆಣ್ಣು ನಾನು ಬೇಗ ಬಾ...'
ಕ.ಸಾ: ಇನ್ಸ್‌ಪೆಕ್ಟರ್ ಮುರು ಕಲಬೆರಕೆ ಔಷಧಿಯ ತನಿಖೆ ನಡೆಸುವಾಗ ಮಗುವಿನ ಪ್ರೇತಾತ್ಮವೊಂದು ಸಹಾಯ ಮಾಡುತ್ತದೆ. ಮಗುವಿನ ಪ್ರೀತಿಯ ಔಷಧ ವ್ಯಾಪಾರಿಯಾಗಿದ್ದು ಯಾರದೋ ಕುಮ್ಮಕ್ಕಿನಿಂದ ಅಪರಾಧಿಯಾಗಬೇಕಾಗುತ್ತದೆ. ತನ್ನ ತಂದೆಯನ್ನು ನಿರಪರಾಧಿ ಎಂದು ಸಾಬೀತು ಪಡಿಸಿದ ಮೇಲೆ ಮಗುವಿನ ಪ್ರೇತಾತ್ಮ ಮರೆಯಾಗಿ ಹೋಗುತ್ತದೆ.

೧೩೮೮. ಇಬ್ಬರು ಹೆಂಡಿರ ಮುದ್ದಿನ ಪೊಲೀಸ್

(೧೯೯೧ / ವರ್ಣ / ಸಾಮಾಜಿಕ)
ಲಾ: ಶ್ರೀ ಅನುಪಮಾ ಪ್ರೊಡಕ್ಷನ್ಸ್
ಪ್ರೊ: ಪಿ.ಬಲರಾಂ
ನಿ: ರೇಲಂಗಿ ನರಸಿಂಹರಾವ್
ಸ.ನಿ: ಡಿ.ಕೋಟೇಶ್ವರ ರಾವ್
ಅ: ಶಶಿಕುಮಾರ್ (ದ್ವಿಪಾತ್ರ), ತಾರಾ, ನಿರೋಷಾ, ಮುಖ್ಯಮಂತ್ರಿ ಚಂದ್ರು, ಮೈಸೂರು ಲೋಕೇಶ್, ಉಮಾಶ್ರೀ, ಉಮೇಶ್, ಜೂನಿಯರ್ ನರಸಿಂಹರಾಜು
ಕ/ಚಿ.ಕ: ರೇಲಂಗಿ ನರಸಿಂಹರಾವ್ (ತೆಲುಗು ಚಿತ್ರದ ಕನ್ನಡ ರೂಪ)
ಮಾ: ಕುಣಿಗಲ್ ನಾಗಭೂಷಣ್
ಗೀ: ಆರ್.ಎನ್.ಜಯಗೋಪಾಲ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ, ಮಂಜುಳಾ, ರಾಧಿಕಾ
ಸಂ: ಮುರಳಿ ರಾಮಯ್ಯ
ಛಾ: ಶರತ್
ಕಲೆ: ಶ್ರೀನಿವಾಸ ರಾಜು
ಸ: ರಾಜ್ - ಕೋಟಿ
ಧ್ವ: ಆರ್.ಕಣ್ಣನ್
ನೃ: ಶಿವಶಂಕರ್
ವ: ಸಾಯಿ
ಪ್ರ: ಮನ್ಮಥರಾವ್
ಹಾ: ೧) 'ಮೆಲ್ಲಗೆ ನೀ ಬಂದು ಓಗೆನ್ನ ತಬ್ಬಿಕೋ ಬೇಡ...', ೨) 'ಜಿಂಪಕ್ಕ ಜಿಂಪಕ್ಕ ಜಿಂಪಕ್ಕ ಮಾವ...', ೩) 'ಗೀತೋಪದೇಶ ಮಾಡಿದೆ ಅಂದು ನೀನು...', ೪) 'ಯಮ್ಮ ನನ್ ಸಿಪಾಯಿ ಗುಳ್ದಾ ಬದ್ನೆಕಾಯಿ...', ೫) 'ಗಂಗ ಗೌರಿ ಕಟ್ಟಿಕೊಂಡ ಶಿವಾ ಶಿವಾ...'
ಸೆ: ಬೀಲು - ೧೬
ಕ.ಸಾ: ವಿಚಿತ್ರ ಸಂದರ್ಭದಲ್ಲಿ ಸಿಲುಕಿದ ಆತ ಪೊಲೀಸ್ ಪೇದೆ ಇಬ್ಬರನ್ನು ಮದುವೆಯಾಗಬೇಕಾಗುತ್ತದೆ. ಇಬ್ಬರು ಪತ್ನಿಯರನ್ನು ಸಂಭಾಳಿಸುವಲ್ಲಿ ಅವನು ಪಡುವ ಪಾಡು, ಅವನ ಪೇಚಾಟ ಹಾಸ್ಯಮಯ ಸಂದರ್ಭಗಳಾಗುತ್ತವೆ.

೧೩೮೯. ನಗು ನಗುತಾ ನಲಿ

(೧೯೯೧ / ವರ್ಣ / ಸಾಮಾಜಿಕ)
ಲಾ: ಕಲಾಪ್ರಿಯ ಮೂವೀಸ್
ಪ್ರೊ: ಡಿ.ವಿ.ಸುಧೀಂದ್ರ, ಎಸ್.ರಾಮಮೂರ್ತಿ ಭಟ್, ನಾಗರತ್ನ ಲಕ್ಷ್ಮೀಪತಿ, ಕೃಷ್ಣಮೂರ್ತಿ, ಪದ್ಮನಾಭರಾಜು
ನಿ: ಭಾರ್ಗವ
ಸ.ನಿ: ಸಿ, ಹೆಚ್.ಬಾಲಾಜಿ ಸಿಂಗ್, ಹಿರೇಮಠ್, ಉದಯ್
ಅ: ಸುನೀಲ್, ರಮೇಶ್ ಭಟ್, ಹೆಚ್.ಕೃಷ್ಣ, ಶ್ರುತಿ, ಅಂಜಲಿ, ಶಾಂತಮ್ಮ, ಸೀಮಾ, ಶೀಲಾ, ತಾರಾ, ಸಿಹಿಕಹಿ ಚಂದ್ರು, ಶಿವರಾಂ, ಕುಣಿಗಲ್ ನಾಗಭೂಷಣ್, ಮಂಜುಮಾಲಿನಿ, ರತ್ನಾಕರ್, ಜನಾರ್ದನ್, ಎಂ.ಎಸ್.ಕಾರಂತ್, ಬೆಂಗಳೂರು ನಾಗೇಶ್
ಕ: ಕುಣಿಗಲ್ ನಾಗಭೂಷಣ್
ಚಿ.ಕ: ಭಾರ್ಗವ
ಮಾ: ಕುಣಿಗಲ್ ನಾಗಭೂಷಣ್
ಗೀ: ಗೀತಪ್ರಿಯ, ಶ್ಯಾಂ ಸುಂದರ ಕುಲಕರ್ಣಿ, ಚಿ.ಉದಯಶಂಕರ್, ಸು.ರುದ್ರಮೂರ್ತಿ ಶಾಸ್ತ್ರಿ

ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಮಂಜುಳಾ, ಜಯಚಂದ್ರನ್, ಬಿ.ಆರ್.ಛಾಯಾ, ಸಂಗೀತ ಕಟ್ಟಿ, ಚಂದ್ರಿಕಾ
ಸಂ: ಸುರೇಶ್ ಅರಸ್
ಛಾ: ಆರ್.ಮಂಜುನಾಥ್
ಕಲೆ: ಸುರೇಶ್
ಸ: ರಾಜನ್ - ನಾಗೇಂದ್ರ
ಧ್ವ: (ಹಾ) ಅಣ್ಣಾದೊರೈ (ಮಾ) ಕೃಷ್ಣಮೂರ್ತಿ
ನೃ: ಉಡುಪಿ ಜಯರಾಂ
ಸಾ: ಥ್ರಿಲ್ಲರ್ ಮಂಜು
ವ: ಸತ್ಯಂ
ಪ್ರ: ರಾಜಗೋಪಾಲ್ (ಕೇಶ: ನಾಗೇಶ್ವರ ರಾವ್)
ಸ್ಟು: ಕಂಠೀರವ
ಹಾ: ೧) 'ನಗು ನಗುತಾ ನಲಿ ನಲಿವೆಂಬ ನೌಕೆಯ...', ೨) 'ನಿನ್ನ ಕಾಣಲು ನಾ ನಿನ್ನ ಸೇರಲು...', ೩) 'ಬಂಗಾರದಂಥ ಚೆಂದುಳ್ಳಿ ಚೆಲುವ ...', ೪) 'ಹನಿಮೂನ್ ರಾತ್ರಿ ಈಗ...'
ಸೆ: ಉದ್ದ - ೩೭೩೭
ಕ.ಸಾ: ತ್ರಿಕೋಣ ಪ್ರೇಮ. ಯುವಕ - ಯುವತಿ ಎದುರು ಬದುರು ಮನೆಯವರು. ಪರಸ್ಪರರಲ್ಲಿ ಪ್ರೇಮ ಪ್ರೀತಿ.

ಅವರಿಬ್ಬರ ನಡುವೆ ಮತ್ತೊಬ್ಬಳ ಪ್ರವೇಶ. ಪ್ರೇಮಿಗಳ ಪ್ರೀತಿ ಫಲಿಸದಂತಾಗಿಸಿ ಅವರಿಬ್ಬರೂ ಬೇರ್ಪಟ್ಟು ಅಗಲುವಂತಹ ಪರಿಸ್ಥಿತಿ ನಿರ್ಮಿಸುತ್ತಾಳೆ. ಅಂತ್ಯದಲ್ಲಿ ಗೆಳೆಯರ ಪ್ರಯತ್ನದಿಂದಾಗಿ ಎಲ್ಲವೂ ಸುಮುಖವಾಗುತ್ತದೆ.

೧೩೯೦. ಹಳ್ಳಿ ರಂಭೆ ಬೆಳ್ಳಿ ಬೊಂಬೆ

(೧೯೯೧ / ವರ್ಣ / ಸಾಮಾಜಿಕ)
ಲಾ: ಭರಣಿ ಚಿತ್ರ
ಪ್ರೊ: ಎಂ.ಪಿ.ಶಂಕರ್
ನಿ: ಎಂ.ಎಸ್.ರಾಜಶೇಖರ್
ಸ.ನಿ: ಕೆ.ಗಾಯತ್ರಿ
ಅ: ಗುರುದತ್, ಮಾಲಾಶ್ರೀ, ಚಿ.ಉದಯಶಂಕರ್, ಎಂ.ಪಿ.ಶಂಕರ್, ಗಿರಿಜಾ ಲೋಕೇಶ್, ಶಿವರಾಂ, ಬಾಲಕೃಷ್ಣ, ಸುಧೀರ್, ಸಿಹಿಕಹಿ ಚಂದ್ರು, ಕಮಿನೀಧರನ್, ಹೊನ್ನವಳ್ಳಿ ಕೃಷ್ಣ, ರೇಖಾ ದಾಸ್, ಉಮಾಶ್ರೀ
ಕ: ಪಂಜು ಅರುಣಾಚಲಂ
ಚಿ.ಕ/ಮಾ/ಗೀ: ಚಿ.ಉದಯ ಶಂಕರ್
ಸಂ: ಮನೋಹರ್
ಛಾ: ವಿ.ಕೆ.ಕಣ್ಣನ್

ಕಲೆ: ಕೆ.ಎಸ್.ವೇಣು
ಸ: ಉಪೇಂದ್ರ ಕುಮಾರ್
ನೃ: ತಾರಾ ಪ್ರಸಾದ್
ಸಾ: ನಂಜುಂಡಿ ನಾಗರಾಜ್
ವ: ಸುಬ್ಬರಾವ್
ವ: ಎಂ.ಎನ್.ಕೇಶವ
ಸ್ಟು: ಕಂಠೀರವ, ಪ್ರಸಾದ್
ಹಾ: ಏಕೋ ಕಾಣೇ ನಂಗೆ ನಾಚ್ಕೆಯಾಗತ್ತೆ...', ೨)'ಹಳ್ಳಿ ರಂಭೆ ಅಂತಾರೆ...', ೩)'ಓ ಚಂದ್ರನೆ ಬಾರೋ ಬೇಗ...', ೪)'ರಾಮ ಎನ್ನಲೇನು ನಿನ್ನ...', ೫)'ಅಂದು ನಿನ್ನ ಸೇರಿದಾಗ...'
ಸೆ: ಉದ - ೪೦೭೯
ವಿ: ಚಿ. ಉದಯಶಂಕರ್ ಮಗ ಗುರುದತ್ ನಾಯಕ ನಟರಾದರು.
ಕ.ಸಾ: ಕುಮಾರ್ ನೃತ್ಯ ಕಲಾವಿದ. ಅವನ ಹಾಡು ಕುಣಿತಕ್ಕೆ ಮರುಳಾಗಿ ಆಶಾ ಅವನನ್ನೇ ಮದುವೆಯಾಗುವ ನಿರ್ಧಾರ ಮಾಡುತ್ತಾಳೆ. ಮನೆಯವರು ಒಪ್ಪದಿದ್ದಾಗ ಅವರೆಲ್ಲರ ಮನಸ್ಸನ್ನು ಪರಿವರ್ತಿಸುತ್ತಾಳೆ. ಹಾಸ್ಯದ ಹಿನ್ನೆಲೆಯಲ್ಲಿ ನಿರೂಪಿಸಲಟ್ಟ ಘಟನೆಗಳ ಮೂಲಕ ಅಂದುಕೊಂಡಿದನ್ನು ಸಾಧಿಸುವುದೇ ಈ ಕತೆಯ ತಿರುಳು.

೧೩೯೧. ಯುದ್ಧ ಪರ್ವ

(೧೯೯೦ / ವರ್ಣ / ಸಾಮಾಜಿಕ)
ಲಾ: ವಿ.ಎಸ್.ಎನ್.ಪ್ರೊಡಕ್ಷನ್ಸ್
ಪ್ರೊ: ವಿ.ಸ್ವಾಮಿನಾಥನ್
ನಿ: ಮಧುಕರ್
ಅ: ವಿನೋದ್ ರಾಜ್, ಗಾಯತ್ರಿ, ಅಶೋಕ ರಾವ್, ಸದಾಶಿವ ಸಾಲಿಯಾನ, ಶ್ರೀಧರ್
ಕ/ಚಿ.ಕ: ಮಧುಕರ್
ಮಾ: ಭವಾನಿ ಶಂಕರ್
ಗೀ: ದೊಡ್ಡರಂಗೇ ಗೌಡ, ಶ್ರೀರಂಗ, ಆರ್.ಎನ್.ಜಯಗೋಪಾಲ್, ಗೀತಪ್ರಿಯ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಮಂಜುಳಾ ಗುರು
ಸಂ: ವಿ.ಎಸ್.ಮುರಳಿ
ಛಾ: ಪ್ರಭಾಕರ್
ಸ: ರವೀಂದ್ರನ್
ಸ್ಟು: ಕಂಠೀರವ, ಚಾಮುಂಡೇಶ್ವರಿ
ಹಾ: ೧)'ಮೋಹನ ಈ ನವ ಯೌವನ...', ೨)'ಪ್ರೇಮದ ಕಂಕಣ...', ೩)'ಓ ಪ್ರೇಮವೇ ಮನ ಹಾಡುತಿದೆ...', ೪)'ಹೊಸ ಕಾವ್ಯ ಬರೆದ ಕಂಬನಿಯಿಂದ...'
(ಕ.ಸಾ. ಲಭ್ಯವಿಲ್ಲ)

೧೩೯೨. ಗೌರಿ ಕಲ್ಯಾಣ

(೧೯೯೧ / ವರ್ಣ / ಸಾಮಾಜಿಕ)
ಲಾ: ಅಭಿಲಾಷ್ ಎಂಟರ್ ಪ್ರೈಸಸ್
ಪ್ರೊ/ನಿ: ದ್ವಾರಕೀಶ್
ಸ.ನಿ: ಬಾಲಕುಮಾರ್
ಅ: ಹರ್ಷವರ್ಧನ ಮತ್ತು ನಿತ್ಯ (ಹೊಸ ಪರಿಚಯ), ಎಂ.ಪಿ.ಶಂಕರ್, ವಜ್ರಮುನಿ, ಚೇತನ್ ರಾಮರಾವ್, ಮಧುಸೂದನ್, ಹೊನ್ನವಳ್ಳಿ ಕೃಷ್ಣ, ಜೂನಿಯರ್ ನರಸಿಂಹರಾಜು, ಬಿ.ವಿ.ರಾಧಾ, ವೈಶಾಲಿ, ಎಂ.ಎನ್.ಲಕ್ಷ್ಮೀದೇವಿ, ರಾಜ್ ಬಲ್ಲಾಳ್
ಕ/ಚಿ.ಕ/ಮಾ: ಕುಣಿಗಲ್ ವಸಂತ್
ಗೀ: ಚಿ.ಉದಯಶಂಕರ್, ಆರ್.ಎನ್.ಜಯಗೋಪಾಲ್, ಎಂ.ಎನ್.ವ್ಯಾಸರಾವ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ
ಸಂ: ಗೌತಮ್ ರಾಜ್
ಛಾ: ಕರುಣಾಕರ ರಾವ್
ಕಲೆ: ಕೆ.ಎಸ್.ವೇಣು
ಸ: ಎಸ್.ಎ.ರಾಜಕುಮಾರ್
ನೃ: ಗೀತಾ
ಸಾ: ಮೊಡಕುಲಂ ರವಿ
ವ: ನಾಗರಾಜ್
ಪ: ಮನ್ಮಥರಾವ್
ಸ್ಟು: ಕಂಠೀರವ
ಸೆ: ರೀಲು ೧೪, ೨೩ - ೦೩ ೧೯೯೧
ಕ.ಸಾ: ಎರಡು ಊರಿನ ನಡುವಣ ವೈಷಮ್ಯ. ಒಲಿದ ಎರಡು ಯುವ ಹೃದಯಗಳು ಸೇರಲು ಆ ವೈಷಮ್ಯವೇ ಅಡ್ಡಿ. ನಿಸ್ವಾರ್ಥಿಯೊಬ್ಬ ಆ ಹೃದಯಗಳನ್ನು ಒಂದು ಗೂಡು ವಂತಾಗಿಸಲು ಪ್ರಯತ್ನಿಸುತ್ತಾನೆ. ಅವನ ತ್ಯಾಗದ ಫಲವಾಗಿ ಪ್ರೇಮಿಗಳ ಕಲ್ಯಾಣ - ಇಬ್ಬರೂ ಒಂದು ಗೂಡುವರು. ಆದರೆ ಅದಕ್ಕೆ ಆ ನಿಸ್ವಾರ್ಥಿಯ ಜೀವವೇ ಬಲಿಯಾಗುತ್ತದೆ.

೧೩೯೩. ವೀರಧೀರ

(೧೯೯೧ / ವರ್ಣ / ಸಾಮಾಜಿಕ)
ಲಾ: ಶ್ರೀ ಲಕ್ಷ್ಮಿ ಫಿಲಂಸ್
ಪ್ರೊ: ಎನ್.ಕುಮಾರ್
ನಿ: ಮುದ್ದುರಾಜ್
ಸ.ನಿ: ದೇವು
ಅ: ದೇವರಾಜ್, ತ್ಯಾಗರಾಜ್, ಲೋಹಿತಾಶ್ವ, ಅಶೋಕ ರಾವ್, ಶ್ರೀನಿವಾಸ ಮೂರ್ತಿ, ಪ್ರಕಾಶ್ ರೈ, ಟೆನ್ನಿಸ್ ಕೃಷ್ಣ, ಸರ್ಕಸ್ ಬೋರಣ್ಣ, ಅಂಜನಾ, ಶ್ರೀಲಲಿತಾ, ಅಂಜಲಿ
ಕ: ಟಿ.ಎಸ್.ರಾಜು
ಚಿ.ಕ: ಮುದುರಾಜ್
ಮಾ: ಕುಣಿಗಲ್ ನಾಗಭೂಷಣ್
ಗೀ: ಹಂಸಲೇಖ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ
ಸಂ: ಪ್ರಸಾದ್
ಛಾ: ಪದ್ಮಕುಮಾರ್
ಸ: ಹಂಸಲೇಖ
ನೃ: ಸತೀಶ್
ಸಾ: ಥ್ರಿಲ್ಲರ್ ಮಂಜು
ವ: ಸತ್ಯಂ
ಪ: ಗೋಪಾಲ್
ಸ್ಟು: ಕಂಠೀರವ
ಹಾ: ೧)'ಅಮ್ಮ ಕೋಪ ಬಿಡೇ ಅಮ್ಮ...', ೨)'ಕೆಮ್ಮಣ್ಣುಗುಂಡಿ ಮೇಲೆ ಕೆಂಪಾನೆ ಲಂಗದ ಬಾಲೆ...', ೩) 'ಮೂಕಾಂಬಿಕೆ, ಮುನಿಯದೆ ತಬ್ಬಲಿ ಮಕ್ಕಳ...'
ಕ.ಸಾ: ಕಳ್ಳತನ ಮಾಡಿ ಜೀವಿಸುವ ಸಂಜಯ್ ಹಾಗೂ ವಿಜಯ್ ಸ್ನೇಹಿತರು. ವೀಣಾ ಹಾಗೂ ಮೀನಾ ಎಂಬಿಬ್ಬರನ್ನು ಪ್ರೀತಿಸುತ್ತಿರುತ್ತಾರೆ. ಇವರ ಮನೆಯಲ್ಲಿ ಹೂವಾರುವ ಮೂಕಾಂಬಿಕಾ ಎನ್ನುವ ಹೆಂಗಸು ಅಮ್ಮನಾಗಿ ಇರುತ್ತಾಳೆ. ಜಿ.ಕೆ. ಹಾಗೂ ಗಂಗಾಧರ್ ಚಿನ್ನದ ಕಳ್ಳ ವ್ಯಾಪಾರದಲ್ಲಿ ತೊಡಗಿರುತ್ತಾರೆ. ಇವರಲ್ಲಿ ಗಂಗಾಧರ್ ಕೊಲೆಯಾದಾಗ ಅಪವಾದನೆ ಇವರಿಬ್ಬರ ಮೇಲೆ ಬರುತ್ತದೆ. ಆ ಸಂದರ್ಭದಲ್ಲಿ ಮೂಕಾಂಬಿಕಾ ಹಾಗೂ ವೀಣಾ ಪೋಲೀಸರೆನ್ನುವುದು ತಿಳಿಯುತ್ತದೆ. ಈ ಜಾಲದಲ್ಲಿ ಪೋಲೀಸ್ ಕಮಿಷನರ್ ಕೂಡಾ ಭಾಗಿಯಾಗಿರುತ್ತಾರೆ. ಅಂತ್ಯದಲ್ಲಿ ಸತ್ಯಾಂಶ ಹೊರಬಂದು ಸಂಜಯ್ ಹಾಗೂ ವಿಜಯ್ ನಿರಪರಾಧಿಗಳೆಂದು ಸಾಬೀತಾಗುತ್ತದೆ.

೧೩೯೪. ಅನಾಥ ರಕ್ಷಕ

(೧೯೯೧ / ವರ್ಣ / ಸಾಮಾಜಿಕ)
ಲಾ: ಆರ್.ಆರ್.ಸಿನಿ ಕಂಬೈನ್ಸ್
ಪ್ರೊ: ಜಯಪ್ರಕಾಶ್ ನಾರಾಯಣ್, ರಾಧಾ ಅಣ್ಣೇಗೌಡ, ಟಿ.ಜನಾರ್ದನ್
ನಿ: ಟಿ.ಜನಾರ್ದನ್
ಸ.ನಿ: ಎಸ್.ಪಿ.ಪ್ರಕಾಶ್
ಅ: ಶಶಿಕುಮಾರ್, ರೋಹಿಣಿ, ಡಿಸ್ಕೋ ಶಾಂತಿ, ಸದಾಶಿವ ಸಾಲಿಯಾನ್, ಮಾ।ಸುಮಂತ್, ಚೇತನ್ ರಾಮರಾವ್, ಸುನಿಲ್, ಮೈಸೂರು ಲೋಕೇಶ್, ದೊಡ್ಡಣ್ಣ, ಅಪ್ಸರಾ, ತೂಗುದೀಪ ಶ್ರೀನಿವಾಸ್, ವಿ.ಎಸ್.ಜಗನ್ನಾಥ್, ಗಿರಿಜಾ ಲೋಕೇಶ್, ರಾಗಿಣಿ, ಮೈಸೂರು ಹರೀಶ್
ಕ/ಚಿ.ಕ: ಟಿ.ಜನಾರ್ದನ್, ಪಾಲ್ ಸುದರ್ಶನ್, ಪ್ರಕಾಶ್ ತ್ರಿಶೂಲ್
ಮಾ: ಪಾಲ್ ಸುದರ್ಶನ್
ಗೀ: ಹಂಸಲೇಖ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ, ಲತಾ ಹಂಸಲೇಖ, ಪೂರ್ಣಿಮ
ಸಂ: ಸೌಂದರ ರಾಜ್
ಛಾ: ಟಿ.ಜನಾರ್ದನ್
ಕಲೆ: ಇಸ್ಮಾಯಿಲ್
ಸ: ಹಂಸಲೇಖ
ಧ್ವ: (ಹಾ) ಪೀಟರ್, (ಮಾ) ಕೃಷ್ಣಮೂರ್ತಿ
ನೃ: ಪದ್ಮಜಾ ಶಿವಶಂಕರ್
ಸಾ: ಸುರೇಶ್
ವ: ಮಂಜುನಾಥ್, ವಿಠಲ್ ರಾವ್

ಪ: ಶ್ಯಾಂ-ಸಿದ್ದೇಶ್
ಸ್ಟು: ಸಂಕೇತ್
ಕ.ಸಾ: ಸ್ವಾಮೀಜಿಯೊಬ್ಬ, ಸಮಾಜ ಘಾತುಕ ಶಕ್ತಿಯೊಂದರ ನಾಯಕನಾಗಿ ಆಶ್ರಮದ ಹೆಸರಿನಲ್ಲಿ ದೇಶದ್ರೋಹಿ ಕೆಲಸದಲ್ಲಿ ತೊಡಗಿರುತ್ತಾನೆ. ಇಂತಹ ಸಂದರ್ಭದಲ್ಲಿ ನೊಂದವರ ಬಾಳಿನ ಬೆಳಕಾಗಿ ನಾಯಕ ಬರುತ್ತಾನೆ. ಅವರೆಲ್ಲರ ಪಾಲಿನ ರಕ್ಷಕ ನಾಗುತ್ತಾನೆ. ಸ್ವಾಮೀಜಿಯ ಪಾಲಿಗೆ ಯಮಪಾಶವಾಗುತ್ತಾನೆ.

೧೩೯೫. ತೇಜಾ

(೧೯೯೧ / ವರ್ಣ / ಸಾಮಾಜಿಕ)
ಲಾ: ವಿಸಿಭಾ ಫಿಲಂಸ್
ಪ್ರೊ: ಶ್ರೀಮತಿ ಶಾರದಾ
ನಿ: ರವಿ ಕೊಟ್ಟಾರಕರ
ಅ: ಕುಮಾರ್ ಬಂಗಾರಪ್ಪ, ಸ್ನೇಹಾ, ಪ್ರದೀಪ್, ಶ್ರೀನಾಥ್, ಮಾ।ಮಂಜುನಾಥ್, ರಮೇಶ್ ಭಟ್, ಮುಖ್ಯಮಂತ್ರಿಚಂದ್ರು, ಶಿವಾರಾಮ್, ಕಾಶಿ.
ಕ/ಚಿ.ಕ: ರವಿ ಕೊಟ್ಟಾರಕರ್
ಮಾ: ವೇಮಗಲ್ ಜಗನ್ನಾಥ್‌ರಾವ್
ಗೀ: ಹಂಸಲೇಖ
ಗಾ: ಚಿತ್ರಾ, ಎಸ್.ಪಿ.ಬಾಲಸುಬ್ರಹ್ಮಣ್ಯಂ
ಸಂ: ಮನೋಹರ್
ಛಾ: ಆರ್. ದೇವಿಪ್ರಸಾದ್
ಕಲೆ: ನಜೀರ್
ಸ: ಹಂಸಲೇಖ
ನೃ: ಗಿರಿಜಾ ರಘುರಾಂ
ಸಾ: ಜ್ಯೂಡೋ ರತ್ನಂ
ವ: ಎಸ್.ರಾಮನಾಥನ್
ಪ: ರವಿ
ಸ್ಟು: ಸಂಕೇತ್
ಹಾ: ೧)'ಇಲ್ಲಿ ನೋಡು ಶಿವಾ...', ೨)'ನನಗಾಗಿ ಕಾಯೋರು ಯಾರು ...', ೩)'ಚೆಲುವಾ ಪುಂಡರ ಭಯ ನೀಗಲಾರೆಯಾ ...', ೪)'ನನಗಿರುವುದೊಂದೇ ಕೊರಗು ...', ೫)'ರನ್ನದ ರಾಣಿ ಕಿನ್ನರ ವೇಣಿ ...'
ಕ.ಸಾ: ಕಥಾ ನಾಯಕ ತೇಜ ಹೋಟಲಿನಲ್ಲಿ ಕೆಲಸ ಮಾಡಿಕೊಂಡು ಕಾಲೇಜಿನಲ್ಲಿ ಓದುತ್ತಿರುತ್ತಾನೆ. ವಿದ್ಯಾರ್ಥಿಗಳಿಗೆ ಮಾದಕ ಪದಾರ್ಥಗಳನ್ನು ಪೂರೈಸುತ್ತಿರುವ ತಂಡದ ವಿರುದ್ಧ ಹೋರಾಡುವುದು ಆತನ ಧ್ಯೇಯ. ಆತನ ಸ್ನೇಹಿತನೊಬ್ಬ ಈ ಕಾರಣದಿಂದಾಗಿಯೇ ಕೊಲೆಯಾಗುತ್ತಾನೆ. ತೇಜನ ಒಳ್ಳೆಯ ಗುಣಗಳನ್ನು ಕಂಡು ಸಹಪಾಠಿ ಪ್ರಿಯಾ ಆತನನ್ನು ಮೆಚ್ಚಿ ಕೊಳ್ಳುತ್ತಾಳೆ. ತೇಜ ಕೊನೆಯಲ್ಲಿ ಕೊಲೆಗಡುಕರನ್ನು ಹಿಡಿದು ಪೋಲೀಸರಿಗೆ ಒಪ್ಪಿಸುತ್ತಾನೆ.

೧೩೯೬. ಶಿವರಾಜ್

(೧೯೯೧ / ವರ್ಣ / ಪತ್ತೇದಾರಿ)
ಲಾ: ಸ್ವರ್ಣಗಿರಿ ಮೂವೀಸ್
ಪ್ರೊ: ಕೃಷ್ಣರಾಜು
ನಿ: ಜೋಸೈಮನ್
ಸ.ನಿ: ದಾಮೋದರ್, ಎ.ಎನ್.ಜಯರಾಮಯ್ಯ
ಅ: ಶಶಿಕುಮಾರ್, ಭವ್ಯ, ಅಶೋಕ್ ರಾವ್, ಲೋಹಿತಾಶ್ವ, ರಾಜ್ ಆಶೋಕ್, ಲತಾ, ದೊಡ್ಡಣ್ಣ , ರತ್ನಾಕರ್, ಮಂಜುಮಾಲಿನಿ, ಮೈಸೂರು ಲೋಕೇಶ್.
ಕ: ಸ್ವರ್ಣಗಿರಿ ಮೂವೀಸ್
ಚಿ.ಕ/ಮಾ: ಜೋ ಸೈಮನ್
ಗೀ: ಹಂಸಲೇಖ
ಗಾ: ಹಂಸಲೇಖ, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ, ಮಂಜುಳಾ ಗುರು
ಸಂ: ಕೆ.ಬಾಲು
ಛಾ: ಮಲ್ಲಿಕಾರ್ಜುನ
ಕಲೆ: ನಂಜುಂಡ ಸ್ವಾಮಿ
ಸ: ಹಂಸಲೇಖ
ಧ್ವ: (ಹಾ) ಅಣ್ಣಾದೊರೈ, ಪೀಟರ್ (ಮಾ) ಕೃಷ್ಣಮೂರ್ತಿ
ನೃ: ಸಾಹುಲ್
ಸಾ: ಸಾಹುಲ್
ವ: ರಾಮನಾಥ್
ಪ: ಶ್ರೀನಿವಾಸ್
ಸ್ಟು: ಕಂಠೀರವ, ಸಂಕೇತ್
ಹಾ: ೧)'ಚಿಗುರು ಮೀಸೆಯ ಹುಡುಗ...', , ೨)'ಹದಿನಾರು ದಾಟಿದಾಗ ಬಿಸಿಯೂ ಉಸಿರು...', ೩)'ಪ್ರೀತಿ ಮಾಡಬಾರದೂ ಮಾಡಿ ಸೋಲಬಾರದು..., ೪).'ಬ್ರಹ್ಮ ಬ್ರಹ್ಮಾನಂದ, ಅಂದಾ ಆತ್ಮಾನಂದ...', ೫)'ಕಿವಿಮಂದ ಇಲ್ಲ...',
ಸೆ: ಉದ್ದ - ೩೭೪೯.೦೦
ಕ.ಸಾ: ಕೊಲೆಯ ರಹಸ್ಯ ಬಿಡಿಸುವ ಕಥಾ ನಾಯಕನೇ ಶಿವರಾಜ್. ಆತನಂತೆಯೇ ರೂಪವಿರುವ ಕಾಲೇಜಿನ ಲೆಕ್ಚರರ್ ಸುಂದರ್ ಶ್ರೀಮಂತ ಅಶೋಕ್ ರಾವ್ ಮಗಳು ಪ್ರಿಯದರ್ಶಿನಿಯನ್ನು ಪ್ರೀತಿಸಿದ್ದಕ್ಕಾಗಿ ಸುಂದರ್ ಕೊಲೆಯಾಗಿರುತ್ತಾನ. ಶಿವರಾಜ್ ತನಿಖೆಯ ಸಂದರ್ಭದಲ್ಲಿ ಸುಂದರ್‌ನಂತೆಯೇ ಇರುವುದರಿಂದ ಅದರ ಲಾಭ ಪಡೆದು ಕೊಲೆಗಾರರನ್ನು ಪತ್ತೆ ಮಾಡುತ್ತಾನೆ.

೧೩೯೭. ಕಲ್ಯಾಣ ಮಂಟಪ

(೧೯೯೧ / ವರ್ಣ / ಸಾಮಾಜಿಕ)
ಲಾ: ಚಕ್ರೇಶ್ವರಿ ಕಂಬೈನ್ಸ್
ಪ್ರೊ: ಪಾರ್ವತಮ್ಮ ರಾಜಕುಮಾರ್
ನಿ: ವಿ.ಗೋವಿಂದರಾಜ್
ಅ: ರಾಘವೇಂದ್ರ ರಾಜಕುಮಾರ್, ಮೋಹಿನಿ, ಬಾಲಕೃಷ್ಣ, ಧೀರೇಂದ್ರ ಗೋಪಾಲ್, ಗಿರಿಜಾ ಲೋಕೇಶ್, ಆಶಾಲತಾ, ಉಮೇಶ್, ಸುಂದರಶ್ರೀ, ಉಮಾಶ್ರೀ
ಕ: ಟಿ.ಎನ್. ನರಸಿಂಹನ್
ಚಿ.ಕ/ಮಾ: ಚಿ. ಉದಯಶಂಕರ್
ಗೀ: ಶ್ರೀರಂಗ
ಗಾ: ಸಂಗೀತಾ ಕಟ್ಟಿ, ರಾಘವೇಂದ್ರ ರಾಜಕುಮಾರ್
ಸಂ: ಎಸ್. ಮನೋಹರ್
ಛಾ: ಬಿ.ಸಿ.ಗೌರಿಶಂಕರ್
ಕಲೆ: ನಜೀರ್
ಸ: ಉಪೇಂದ್ರ ಕುಮಾರ್
ಸ್ಟು: ಚಾಮುಂಡೇಶ್ವರಿ
ಹಾ: ೧)'ನಮ್ಮ ಆಸ್ತಿಯ ಮೇಲೆ ನಿನ್ನ ಹಕ್ಕು...', ೨)'ಬಾರೇ ಚೆಲುವೆ ನಾಳೆ ತರುವೆ...', ೩)'ಒಂಬತ್ತು ಒಂಬತ್ತು ತೋಳ ಹಳ್ಳಕ್ಕೆ ಬಿತ್ತು...', ೪)'ಈ ಭೂಮಿ ತಾಯಾಣೆ...',
ಕ.ಸಾ: ನಾಯಕ ಶಂಕರ ಬೆಂಗಳೂರಿನಲ್ಲಿರುವ ತನ್ನ ಬಂಗಲೆಯನ್ನು ಒಡೆಸಿ ಅಲ್ಲೊಂದು ಕಲ್ಯಾಣ ಮಂಟಪವನ್ನು ಕಟ್ಟಿಸಬೇಕೆಂದು ಯೋಚಿಸುತ್ತಾನೆ. ಅದರೆ ಆ ಮನೆಯಲ್ಲಿ ಬಾಡಿಗೆಗಿರುವ ನಾಯಕಿ ಮನೆಯನ್ನು ಖಾಲಿ ಮಾಡಲು ಒಪ್ಪುವುದಿಲ್ಲ. ನಾಯಕಿ ಹಾಗೂ ಅವರ ಮನೆಯವರನ್ನೆಲ್ಲ ಅಲ್ಲಿಂದ ಓಡಿಸಲು ಯತ್ನಿಸುವುದು, ನಾಯಕಿ ಅದಕ್ಕೆ ಪ್ರತೀಕಾರ ತೆಗೆದು ಕೊಳ್ಳುವುದು ಮುಂತಾದ ಅಂಶಗಳನ್ನೊಳಗೊಂಡ ಹಾಸ್ಯ ಕತೆಯಿದು. ಕೊನೆಯಲ್ಲಿ ಎಲ್ಲವೂ ಬಗೆಹರಿದು ನಾಯಕ - ನಾಯಕಿ ಒಂದಾಗುವುದ ರೊಂದಿಗೆ ಕತೆ ಮುಗಿಯುತ್ತದೆ.

೧೩೯೮. ಗೃಹಪ್ರವೇಶ

(೧೯೯೧ / ವರ್ಣ / ಸಾಮಾಜಿಕ)
ಲಾ: ಸುಕ್ಕು ಆರ್ಟ್ಸ್
ಪ್ರೊ: ಕೆ. ಸುಕುಮಾರ್
ನಿ: ಸಾಯಿಪ್ರಕಾಶ್
ಸ.ನಿ: ಕಲಾ ಗಂಗೋತ್ರಿ ಮಂಜು
ಅ: ಮಾಲಾಶ್ರೀ, ದೇವರಾಜ್, ಶ್ರೀಧರ್, ಮುಖ್ಯಮಂತ್ರಿ ಚಂದ್ರು, ಸಾಯಿಪ್ರಕಾಶ್, ಸದಾಶಿವ ಬ್ರಹ್ಮಾವರ್, ಕುಣಿಗಲ್ ನಾಗಭೂಷಣ್, ಸತ್ಯಭಾಮ, ಮೈನಾವತಿ, ಉಮಾಶ್ರೀ, ಕೀರ್ತಿ, ರಮೇಶ್ ಭಟ್, ಶ್ರೀದೇವಿ, ಆರತಿ, ಸರೋಜಾ ಶ್ರೀಶೈಲನ್, ಮಾ।ಗುರು, ಬೇಬಿ ಲೀಲಾ.
ಕ: ಎಂ.ಪ್ರಭಾಕರ ರೆಡ್ಡಿ
ಚಿ.ಕ: ಸಾಯಿ ಪ್ರಕಾಶ್
ಮಾ/ಗೀ: ಚಿ.ಉದಯಶಂಕರ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಸಂಗೀತಾ ಕಟ್ಟಿ
ಸಂ: ಪಿ. ವೆಂಕಟೇಶ್ವರ ರಾವ್
ಛಾ: ಜಾನಿಲಾಲ್
ಕಲೆ: ಕೇಶವ ರಾವ್
ಸ: ಉಪೇಂದ್ರ ಕುಮಾರ್
ಧ್ವ: (ಹಾ) ಎಸ್.ಪಿ. ರಾಮನಾಥನ್ (ಮಾ) ಎಮ್. ಕೋದಂಡಪಾಣಿ
ನೃ: ಶಿವಶಂಕರ್
ವ: ಎಸ್. ಜಯಚಂದ್ರ, ಬಾಬ್ಬಿ
ಪ: ಎಂ.ಚಂದ್ರಶೇಖರ್, ಕುಮಾರ್ ನೊಣವಿನಕೆರೆ, ಪಿ.ವಿ.ಮಾಧವನ್, (ಕೇಶ: ಬಾಬು, ನಾಗೇಶ್ವರ ರಾವ್)
ಹಾ: ೧)'ನಿನ್ನಂದ ನೋಡಿದಾಗ ಎದೆಯೊಳಗದೆ...', ೨)'ನನ್ನಾಸೆಯಾಗಿ ಬಾಳಲ್ಲಿ ಬಂದೆ...', ೩)'ನೀ ಕರುಣೆಯಲ್ಲಿ ಕರಪಿಡಿದಿರಲು...', ೪)'ಆರತಿ ಬೆಳಗೋಣ ದೇವಗೆ...', ೫)'ಬದುಕಲ್ಲಿ ಜೊಂಜಿಗಳು ನಾವು', ...
ಸೆ: ಉದ್ದ - ೩೮೪೫.೦೦, ರೀಲು - ೧೫
ಕ.ಸಾ: ತನ್ನನ್ನು ಹಾಳು ಮಾಡಿದ ವ್ಯಕ್ತಿಯ ಕೈ ಹಿಡಿದು, ಅವ್ಯವಸ್ಥೆಯ ಆಗರವಾಗಿದ್ದ ಅವನ ಮನೆಗೆ ಸೊಸೆಯಾಗಿ ಗೃಹಪ್ರವೇಶ ಮಾಡುವ ಹೆಣ್ಣು, ತನ್ನ ಜಾಣತನದಿಂದ, ಸಹನೆ - ಸಂಯಮದಿಂದ ಹಾಳಾಗಿ ಹೋಗುತ್ತಿದ್ದ ಮನೆಯನ್ನು ಉಳಿಸಿ ಬೆಳೆಸುವುದೇ ಈ ಚಿತ್ರದ ಕಥೆ.

೧೩೯೯. ಜಗದೇಕವೀರ

(೧೯೯೧ / ವರ್ಣ / ಸಾಮಾಜಿಕ)
ಲಾ: ವಿನಾಯಕ ಕಂಬೈನ್ಸ್
ಪ್ರೊ: ಜಿ.ವಿಜಯಕುಮಾರ್
ನಿ: ಭಾರ್ಗವ
ಸ.ನಿ: ಸಿ.ಹೆಚ್.ಬಾಲಾಜಿ ಸಿಂಗ್
ಅ: ವಿಷ್ಣುವರ್ಧನ್, ರೋಹಿಣಿ, ಅಶೋಕ್, ಅಶ್ವತ್ಥ್, ರಾಜಾನಂದ್, ಸುಧೀರ್, ಸಿಹಿಕಹಿ ಚಂದ್ರು, ಪ್ರಕಾಶ್ ರೈ, ರಮೇಶ್ ಭಟ್, ತ್ರಿವೇಣಿ.
ಕ: ಸಾಯಿನಾಥ್
ಚಿ.ಕ: ಭಾರ್ಗವ
ಮಾ: ಕುಣಿಗಲ್ ನಾಗಭೂಷಣ್
ಗೀ: ಶ್ರೀರಂಗ, ರುದ್ರಮೂರ್ತಿ, ಚಿ.ಉದಯಶಂಕರ್, ಗೀತಪ್ರಿಯ.
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಮಂಜುಳಾ, ಚಿತ್ರಾ.
ಸಂ: ಬಿ. ನಾಗೇಶ್.
ಛಾ: ಮಲ್ಲಿಕಾರ್ಜುನ

ಕಲೆ: ನಜೀರ್
ಸ: ರಾಜನ್ ನಾಗೇಂದ್ರ
ಧ್ವ: (ಹಾ) ಅಣ್ಣಾದೊರೈ (ಮಾ) ಕೃಷ್ಣಮೂರ್ತಿ
ಸ್ಥ: ಉಡುಪಿ ಜಯರಾಂ
ಸಾ: ಹಾರ್ಸ್ ಬಾಬು
ವ: ರಾಮನಾಥ್
ಪ್ರ: ಮೈಸೂರು ವೆಂಕಟೇಶ್
ಸ್ಟು: ಕಂಠೀರವ, ವಸಂತ್, ಸಂಕೇತ್
ಹಾ: ೧)'ನಮ್ಮಿಬ್ಬರಾ ಸಂಗಮ...', ೨)'ನಾನು ನೀನು ಕೂಡಿ ಆಡೋ ...', ೩)'ನಿನ್ನ ರೂಪ ಎಂಥ ಅಂದವೋ...', ೪)'ಸಂಸಾರ ಎಂದರೆ ಸಂತೋಷ ಸಾಗರ...', ೫)'ನನ್ನ ಪ್ರೇಮಿ ಕರುನಾಡ ಧೀರ...',
ಕ.ಸಾ: ಪೊಲೀಸ್ ಕುಟುಂಬದಲ್ಲಿ ಜನಿಸಿದ ಪ್ರತಾಪ್ ಗ್ಯಾರೇಜ್ ನಡೆಸುತ್ತಿರುತ್ತಾನೆ. ಆತನ ಅಣ್ಣ ಹಾಗೂ ತಂದೆ ಪೊಲೀಸ್ ಇಲಾಖೆಯಲ್ಲಿರುತ್ತಾರೆ. ಸಮಾಜದ ಗಣ್ಯ ವ್ಯಕ್ತಿ ಎನಿಸಿಕೊಂಡ ಪರಮೇಶಿಯ ಕಡೆಯವರು ಅವಮಾನಿಸುತ್ತಿದ್ದ ಹುಡುಗಿಯೊಬ್ಬಳನ್ನು ಅವರಿಂದ ಕಾಪಾಡಿ ತಂದು ತಂಗಿಯಂತೆ ಸಾಕುತ್ತಾನೆ. ಆಕೆಯ ತಾಯಿಯೇ ಆತನ ಹೆತ್ತ ತಾಯಿಯೆಂದು ನಂತರ ತಿಳಿಯುತ್ತದೆ. ಅದರೆ ಸೇಡಿಗಾಗಿ ಪರಮೇಶಿ ಪ್ರತಾಪ್‌ನ ತಾಯಿ, ತಂಗಿಯನ್ನು ಸಾಯಿಸುತ್ತಾನೆ. ಕೊನೆಗೆ ಪ್ರತಾಪ್‌ನನ್ನು ಪ್ರೀತಿಸುತ್ತಿರುವ ಪದ್ಮಿನಿಯನ್ನು ಅಪಹರಿಸುತ್ತಾರೆ. ನಾಯಕ ಪ್ರತಾಪ್ ಅಂತಿಮವಾಗಿ ಅವರೆಲ್ಲರನ್ನೂ ಸದೆ ಬಡಿಯುತ್ತಾನೆ.

೧೪೦೦. ರಣಚಂಡಿ

(೧೯೯೧ / ವರ್ಣ / ಸಾಮಾಜಿಕ)
ಲಾ: ಶ್ರೀ ದುರ್ಗಾಭವಾನಿ ಪ್ರೊಡಕ್ಷನ್ಸ್
ಪ್ರೊ: ಎಸ್.ವಿ. ಗಣೇಶ್
ನಿ: ಜಿ.ಕೆ ಮುದ್ದುರಾಜ್
ಸ.ನಿ: ನಾಣಿ ತುಮಕೂರ್
ಅ: ರಾಧಾ, ಮುಖ್ಯಮಂತ್ರಿ ಚಂದ್ರು, ಮೈಸೂರು ಲೋಕೇಶ್, ಶರತ್ ಬಾಬು, ಉಮಾಶ್ರೀ, ದೊಡ್ಡಣ್ಣ, ಲೋಹಿತಾಶ್ವ
ಕ: ಎಸ್.ವಿ.ಗಣೇಶ್
ಚಿ.ಕ: ಜಿ.ಕೆ.ಮುದ್ದುರಾಜ್
ಮಾ: ಭವಾನಿ ಶಂಕರ್
ಗೀ: ಎಸ್.ವಿ.ಗಣೇಶ್, ಹಂಸಲೇಖ
ಗಾ: ಮಂಜುಳಾ ಗುರು, ಚಿತ್ರಾ, ಎಸ್.ಪಿ.ಬಾಲಸುಬ್ರಹ್ಮಣ್ಯಂ
ಸಂ: ಎಸ್.ಪ್ರಸಾದ್
ಛಾ: ಮಲ್ಲಿಕಾರ್ಜುನ
ಕಲೆ: ನಜೀರ್
ಸ: ಸ್ಟ್ಯಾಕ್ಸ್ ರಾಜ
ಧ್ವ: ಪ್ರಸಾದ್ ರಿಕಾರ್ಡಿಂಗ್
ಸ್ಥ: ಸುರೇಶ್
ಸಾ: ಸಾಹುಲ್
ವ: ನಾಗರಾಜ್
ಪ್ರ: ಶ್ರೀನಿವಾಸ್
ಸ್ಟು: ಮಧು ಆರ್ಟ್ಸ್, ಕಂಠೀರವ
ಹಾ: ೧)'ಪಿಯ್ ಹಾಡೇನು...', , ೨)' ಗೀತಾ ಐ ಲವ್ ಯೂ...', ೩)'ನಾನ್ಯಾರೋ ನಿನ್ನೆ ನೀನ್ಯಾರೋ...', ೪)'ಚಿನ್ನ ನಿನ್ನ ಸಿಡುಕು ಸಿಂಗಾರಿ...',
ಸೆ: 'ಯು' ಸರ್ಟಿಫಿಕೇಟ್, ಉದ - ೪೦೬೯.೦೦
ಕ.ಸಾ: ಪೊಲೀಸ್ ಅಧಿಕಾರಿ ದುರ್ಗಾ ಕರ್ತವ್ಯನಿಷ್ಠೆಗೆ ಹೆಸರಾದವಳು. ಖಳನಾಯಕ ಸದಾಶಿವನ ಅಟ್ಟಹಾಸವನ್ನು ಮೆಟ್ಟುತ್ತಾಳೆ. ಈ ಸಂದರ್ಭದಲ್ಲಿ ಅವಳು ತನ್ನ ಗಂಡನನ್ನು, ಮಗುವನ್ನು ಕಳೆದುಕೊಳ್ಳುತ್ತಾಳೆ. ಕಾನೂನಿನ ಚೌಕಟ್ಟಿನಲ್ಲಿ ಕೆಲಸ ಮಾಡುತ್ತಿದ್ದಾಗ ಸದಾಶಿವನಿಂದ ನಗ್ನವಾಗಿ ನಿಲ್ಲುವಂಥ ಅವಮಾನ ವಾಗುತ್ತದೆ. ರಣಚಂಡಿಯಾಗಿ ದುರ್ಗಾದೇವಿಯ ಮೆರವಣಿಗೆಯ ಸಂದರ್ಭದಲ್ಲಿ ಸದಾಶಿವನನ್ನು ಸಾಯಿಸುತ್ತಾಳೆ.

೧೪೦೧. ಮಾತೃಭಾಗ್ಯ

(೧೯೯೧ / ವರ್ಣ / ಸಾಮಾಜಿಕ)
ಲಾ: ವಿ.ಎಂ.ವಿ. ಮೂವೀಸ್
ಪ್ರೊ: ನ.ಮುನಿರಾಮು, ಪುರುಷೋತ್ತಮ
ಕ/ನಿ: ಕೆ.ಎನ್. ಚಂದ್ರಶೇಖರ್ ಶರ್ಮ
ಅ: ಪ್ರಭಾಕರ್, ದೇವರಾಜ್, ಮಹಾಲಕ್ಷ್ಮಿ, ಅಶ್ವತ್ಥ್, ಸುರೇಶ್, ಚೇತನರಾಜ್, ಸದಾಶಿವ ಬ್ರಹ್ಮಾವರ, ಕಮಿನೀಧರನ್, ಡಿಸ್ಕೋ ಶಾಂತಿ, ವಜ್ರಮುನಿ
ಕೆ.ಎನ್.ಚಂದ್ರಶೇಖರ ಶರ್ಮ
ಮಾ: ಕುಣಿಗಲ್ ನಾಗಭೂಷಣ್
ಗೀ: ಚಿ.ಉದಯಶಂಕರ್. ಶ್ರೀರಂಗ, ಆರ್.ಎನ್.ಜಯಗೋಪಾಲ್, ದೊಡ್ಡರಂಗೇಗೌಡ
ಗಾ: ಮಂಜುಳಾ ಗುರು, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ
ಸಂ: ವಿಕ್ಟರ್ ಯಾದವ್
ಛಾ: ಎನ್.ಕೆ.ಸುರೇಶ್
ಕಲೆ: ವೆಂಕಟರಾಂ
ಸ: ಉಪೇಂದ್ರ ಕುಮಾರ್
ಧ್ವ: (ಹಾ) ಎಸ್.ರಾಮನಾಥನ್ (ಮಾ) ಕೃಷ್ಣಮೂರ್ತಿ
ಸ್ಥ: ಸತೀಶ್ ಕುಮಾರ್, ಕಮಲಾ
ಸಾ: ಶಿವಯ್ಯ
ವ: ಸುಂದರ್, ಪರಮೇಶ್
ಪ್ರ: ಮಲ್ಲಿ
ಸ್ಟು: ಚಾಮುಂಡೇಶ್ವರಿ, ಪ್ರಸಾದ್
ಹಾ: ೧)'ಆಡುತ್ತಾ ಹಾಡುತ್ತಾ ಎಣ್ಣೆ ಹಾಕಿದಾಗ...', ೨)'ನೀ ನಗಲು ಮನ ಹಾಡು...', ೩)'ನಗುತ ಬಾಳಲಿ ಪ್ರೀತಿಯ ಜೋಡಿ...', ೪)'ತಾಳಲಾರೆನಾ ಅಬ್ಬ ಅಬ್ಬ...'.
ಸೆ: ಉದ ೩೯೭೭, ೨೦ ೧೧ ೯೧
ಕ.ಸಾ: ಅನಾಥ ಯುವಕನೊಬ್ಬ ತನ್ನನ್ನು ಸಾಕಿದವರಿಗಾಗಿ ತ್ಯಾಗ ಮಾಡುವ ಕತೆಯಿದು. ನಾಯಕ ಪ್ರದೀಪ್ ತನ್ನ ಸಾಕು ತಂದೆಯ ಮಗಳ ಗಂಡ ಮಾಡಿದ ಕೊಲೆಯನ್ನು ತಾನೇ ಮಾಡಿದೆನೆಂದು ಒಪ್ಪಿಕೊಳ್ಳುತ್ತಾನ. ಇದೇ ತಂಗಿಯ ಗಂಡ ಅವನನ್ನು ಸಾಯಿಸಲು ಪ್ರಯತ್ನಿಸಿದಾಗ ಆತ ಪಾರಾದರೂ ಶಿವರಾಂ ಎನ್ನುವ ವ್ಯಕ್ತಿ ಸಾಯುತ್ತಾರ. ಆತ ಪ್ರದೀಪ್ ಪ್ರೀತಿಸಿದ ಹುಡುಗಿಯ ತಂದೆ ಎನ್ನುವುದು ಕ್ರಮೇಣ ತಿಳಿಯುತ್ತದೆ. ಈ ವಿಷಯ ತಿಳಿದ ಆತನ ಪ್ರೇಯಸಿ ಆತನಿಂದ ದೂರವಾಗುತ್ತಾಳೆ. ಅಂತಿಮವಾಗಿ ಈತ ಹೊತ್ತುಕೊಂಡ ಕೊಲೆ ಆರೋಪವೂ ಕಳಚಿ ಹೋಗುತ್ತದೆ. ಪ್ರೀತಿಸಿದ ಹುಡುಗಿಯೊಂದಿಗೆ ಮದುವೆಯಾಗುತ್ತಾನೆ.

೧೪೦೨. ಕಿಲಾಡಿಗಂಡು

(೧೯೯೧ / ವರ್ಣ / ಪತ್ತೇದಾರಿ)
ಲಾ: ಉದಯ ರವಿ ಆರ್ಟ್ಸ್
ಪ್ರೊ: ಗೋಕುಲ್ ರಾಜ್, ಭೀಮರಾವ್, ಬಿ.ನಾಗರತ್ನ, ಬಿ.ಸತ್ಯನಾರಾಯಣ್, ಲಲಿತಾ ಗೋವಿಂದಸ್ವಾಮಿ
ಚಿ.ಕ/ನಿ: ಬಿ.ರಾಮಮೂರ್ತಿ
ಸ.ನಿ: ಅನಂತ ಮೂರ್ತಿ
ಅ: ಪ್ರಭಾಕರ್, ರಮೇಶ್, ಸುನಿಲ್, ವಿನಯಾ ಪ್ರಸಾದ್. ತಾರಾ, ಅರವಿಂದ್, ಶಿವರಂಜನಿ, ಭೀಮರಾವ್, ಜಯಸಿಂಹ ಮುಸುರಿ, ಉಮೇಶ್, ರತ್ನಾಕರ್, ಪ್ರಕಾಶ್ ರೈ, ಕಮಲಶ್ರೀ, ಚೇತನಾ, ಮುಖ್ಯಮಂತ್ರಿ ಚಂದ್ರು, ಜೈಜಗದೀಶ್
ಕ: ಬಿ.ಸತ್ಯನಾರಾಯಣ್
ಮಾ: ಕುಣಿಗಲ್ ನಾಗಭೂಷಣ್
ಗೀ: ಎಂ.ಎನ್. ವ್ಯಾಸರಾವ್, ಚಿ.ಉದಯಶಂಕರ್, ಶ್ರೀರಂಗ, ರುದ್ರಮೂರ್ತಿ ಶಾಸ್ತ್ರಿ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಂದ್ರಿಕಾ , ಚಿತ್ರಾ, ಮಂಜುಳಾ ಗುರುರಾಜ್
ಸಂ: ನಾಗೇಶ್ ಯಾದವ್
ಛಾ: ಸಿ.ಮನೋಹರ್
ಕಲೆ: ಕೃಷ್ಣಾಚಾರ್
ಸ: ಮನೋರಂಜನ್ ಪ್ರಭಾಕರ್
ಧ್ವ: ಎಸ್.ಪಿ.ರಾಮನಾಥನ್, ಕೋದಂಡ ಪಾಣಿ
ಸ್ಥ: ಪೌಲ್ ರಾಜ್ ಸತೀಶ್
ವ: ನಾಗರಾಜ್
ಪ್ರ: ಶ್ರೀನಿವಾಸ್, ಮಲ್ಲಿಕಾರ್ಜುನ್(ಪ್ರಭಾಕರ್)
ಸ್ಟು: ಚಾಮುಂಡೇಶ್ವರಿ, ಸಂಕೇತ್
ಹಾ: ೧)'ನೀನೆ ದೋಣಿ ನನ್ನ ಪಾಲಿಗೆ...', ೨)' ಹತ್ತಿರ ಹತ್ತಿರ ಬಂದಾಗ...', ೩)'ಗುಂಡು ತಂದ ಗುಂಗಿನಲ್ಲಿ...', ೪)'ಬಂದನಮ್ಮ ಗಣಪಮ್ಮ...',
ಸೆ: ಉದ - ೩೮೭೯.೦೦, ೨೨.೧೧.೯೧
ಕ.ಸಾ: ಮುಖ್ಯಮಂತ್ರಿಯ ಮಗ ಕಂಠಿ ಕಾಲೇಜಿನಲ್ಲಿ ಓದುತ್ತಿದ್ದ ಸಹಪಾಠಿಯೊಬ್ಬನನ್ನು ಕೊಲೆ ಮಾಡಿ ಬಚಾವಾಗುತ್ತಾನೆ. ಅವರ ಸತ್ತ ಹುಡುಗನ ಪ್ರೇಯಸಿ ಸೌಮ್ಯ ಪತ್ತೇದಾರ ರಘವೀರ್‌ನಿಗೆ ತನಿಖೆ ಮಾಡಲು ಕೇಳಿಕೊಳ್ಳುತ್ತಾಳೆ. ವಿಚಾರಣೆಗೆ ಬಂದ ರಘುವೀರ್ ಪೊಲೀಸ್ ಅಧಿಕಾರಿ ರಾಕೇಶ್‌ನ ನೆರವು ಪಡೆಯುತ್ತಾನೆ. ಈ ಹಂತದಲ್ಲಿ ರಘುವೀರ್‌ಗೆ ಇಪತ್ತೈದು ವರ್ಷಗಳ ಹಿಂದೆ ದೂರವಾದ ರಾಕೇಶ್‌ನ ತಾಯಿಯ ಭೇಟಿಯಾಗುತ್ತದ. ಅಗ ರಾಕೇಶ್ ತನ್ನ ಮಗನೆಂದು ತಿಳಿಯುತ್ತದೆ. ಇತ್ತ ಮಗನನ್ನು ಉಳಿಸಲು ಮುಖ್ಯಮಂತ್ರಿ ಇನ್ನಿಲ್ಲದ ಪ್ರಯತ್ನ ಮಾಡುತ್ತಾನೆ. ಅದರೂ ರಘುವೀರ್ ಹಾಗೂ ರಾಕೇಶ್ ಅವನನ್ನು ಕಾನೂನಿಗೆ ಒಪ್ಪಿಸುವಲ್ಲಿ ಯಶಸ್ವಿಯಾಗುತ್ತಾರೆ. ಸೌಮ್ಯ ತನಗಾದ ಅನ್ಯಾಯಕ್ಕಾಗಿ ಮುಖ್ಯಮಂತ್ರಿ ಹಾಗೂ ಆತನ ಮಗನನ್ನು ಕೋರ್ಟಿನ ಎದುರಿನಲ್ಲೇ ಕಾರು ಹಾಯಿಸಿ ಸಾಯಿಸುತ್ತಾಳೆ.

೧೪೦೩. ಇದುವೆಜೀವನ

(೧೯೯೧ / ವರ್ಣ / ಸಾಮಾಜಿಕ)
ಲಾ: ನಿರ್ಮಲ್ ಕ್ರಿಯೇಷನ್ಸ್
ಪ್ರೊ: ಎಸ್.ಬಲರಾಂ
ನಿ: ಸುನಂದ್.
ಅ: ರಾಮಕೃಷ್ಣ, ಆರ್.ಎನ್. ಜಯಗೋಪಾಲ್, ಬಲರಾಂ, ಡಿಂಗ್ರಿ ನಾಗರಾಜ್ , ರಾಮಮೂರ್ತಿ, ಮಹಮ್ಮದ್‌ಹುಸೇನ್, ಬಸವರಾಜ ಮಡಿವಾಳ, ಎಂ.ಪಿ.ಪೂಣಚ್ಚ, ಶಿವರಂಜಿನಿ, ಅಭಿಲಾಷಾ.
ಕ: ಸುನಂದ್
ಮಾ/ಗೀ: ಆರ್. ಎನ್. ಜಯಗೋಪಾಲ್.
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ವಾಣಿ ಜಯರಾಂ, ಮಂಜುಳಾ ಗುರು.
ಸಂ: ಸುರೇಶ್ ಅರಸ್
ಛಾ.ಟಿ.ಎಲ್ಲಪ್ಪ

ಕಲೆ: ಜನಾರ್ದನ ರಾಜು
ಸ: ವಿಜಯ ಭಾಸ್ಕರ್
ಧ್ವ: (ಹಾ) ಎಸ್.ಪಿ.ರಾಮನಾಥನ್ (ಮಾ) ಕೋದಂಡ ಪಾಣಿ
ಸ್ಟು: ಚಾಮುಂಡೇಶ್ವರಿ, ಪ್ರಸಾದ್
ಹಾ: ೧)'ಸತ್ಯವೇ ಸುಂದರ ನಿತ್ಯವು ನಿರ್ಮಲ...', ೨)'ಅರ್ಪಣೆ ಸಮರ್ಪಣೆ...', ೩)'ಡಿಗ್ರಿ ತಗೊಂಡ ಮಾತ್ರಕ್ಕೆ...', ೪)'ಜರದಾ ಬೀಡ ಹಾಕಿದಂಗೆ...', ೫)' ನ್ಯಾಯ ನೀತಿ ಬಂಧ...',
ಸೆ: 'ಯು' ಸರ್ಟಿಫಿಕೇಟ್, ಉದ್ದ - ೪೦೦೨.೦೦, ೧೦ - ೧೦ - ೯೧.
ಕ.ಸಾ: ತಾಯಿಯಿಲ್ಲದ ಹುಡುಗಿ ತಮ್ಮ , ತಂಗಿ ಹಾಗೂ ತಂದೆಯನ್ನು ಸಾಕುತ್ತಿರುತ್ತಾಳೆ. ಶೋಭಾಳಿಗೆ ಮದುವೆ ಗೊತ್ತಾಗಿ ಮದುವೆಯ ದಿನ ವರದಕ್ಷಿಣೆ ಕೊಡಲಿಲ್ಲವೆಂದು ತಾಳಿ ಕಟ್ಟದೆ ವರ ಹೊರಟು ಹೋಗುತ್ತಾನೆ. ಆತ್ಮಹತ್ಯೆಗೆ ಪ್ರಯತ್ನಿಸುವ ಶೋಭಾಳನ್ನು ಕಾಪಾಡಿದ ರಮೇಶನೆಂಬ ಯುವಕ ಅವಳನ್ನು ಮದುವೆಯಾಗುತ್ತಾನೆ. ಇದರಿಂದ ಶ್ರೀಮಂತನಾದ ರಮೇಶ ಮನೆಯಿಂದ ಹೊರಬರಬೇಕಾಗುತ್ತದೆ. ರಮೇಶನಿಗೆ ಕೆಲಸ ದೊರತು ಎಲ್ಲವೂ ಸುಖಮಯವಾಯಿತೆನ್ನುವಾಗ ಶೋಭಳ ತಮ್ಮ ಮಾದಕವ್ಯಸನಿಯಾಗಿರುವುದು ತಿಳಿಯುತ್ತದೆ. ಇವರ ಹಿಂದೆ ದೊಡ್ಡ ಜಾಲವೇ ಇದ್ದು ರಮೇಶನ ಅಣ್ಣನೂ ಅದರಲ್ಲಿ ಪಾಲುದಾರನಾಗಿರುತ್ತಾನೆ. ಆದರೂ ಲೆಕ್ಕಿಸದೆ ರಮೇಶ ಇದರ ವಿರುದ್ಧ ಹೋರಾಡಿ ಅವರನ್ನು ಕಾನೂನಿಗೆ ಒಪ್ಪಿಸುತ್ತಾನೆ.

೧೪೦೪. ಪೊಲೀಸ್ ಮತ್ತು ದಾದಾ

(೧೯೯೧ / ವರ್ಣ / ಸಾಮಾಜಿಕ)
ಲಾ: ಕಾಮಾಕ್ಷಿ ಫಿಲಂಸ್
ಪ್ರೊ: ಆರ್.ಎಫ್. ಮಾಣಿಕ್ ಚಂದ್, ಕೆ.ನಿತ್ಯಾನಂದ್
ನಿ: ತುಳಸೀ-ಶ್ಯಾಂ
ಸ.ನಿ: ವಿ.ಆರ್, ಭಾಸ್ಕರ್
ಅ: ವಿಷ್ಣುವರ್ಧನ್, ರೂಪಾ ಗಂಗೂಲಿ, ಬೇಬಿ ಗುಡ್ಡು, ಭವ್ಯಶ್ರೀ ರೈ, ಬಾಲರಾಜ್, ಸುಧೀರ್, ಶಿವರಾಂ, ಜಮುನಾ, ವಜ್ರಮುನಿ, ಶ್ರೀನಾಥ್, ಸಂಗೀತಾ ಬಿಜಲಾನಿ, ರಮೇಶ್ ಭಟ್, ರತ್ನಾಕರ್.
ಕ: ತುಳಸೀ-ಶ್ಯಾಂ
ಚಿ.ಕ: ಪ್ರಯಾಗ್ ರಾಜ್
ಮಾ: ಚಿ.ಉದಯಶಂಕರ್
ಗೀ: ಗೀತಪ್ರಿಯ, ಚಿ.ಉದಯಶಂಕರ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್.ಜಾನಕಿ, ಚಿತ್ರಾ
ಸಂ: ವಿಕ್ಟರ್ ಯಾದವ್
ಛಾ: ಗಂಗೂರಾಮ್.
ಕಲೆ: ಜಾನ್ ದೇವರಾಜ್
ಸ: ಬಪ್ಪಿ ಲಹರಿ
ಧ್ವ: (ಹಾ) ಕಣ್ಣನ್, (ಮಾ) ಸುರೇಶ್
ನೃ: ಉಡುಪಿ ಜಯರಾಂ, ಚಿನ್ನಿ ಪ್ರಕಾಶ್.
ಸಾ: ಹಾರ್ಸ್ ಬಾಬು
ವ: ರಾಮನಾಥನ್
ಪ್ರ: ಶ್ರೀನಿವಾಸನ್, ಕೃಷ್ಣನ್, ರಾಮಸ್ವಾಮಿ
ಸ್ಟು: ಕಂಠೀರವ, ಪ್ರಸಾದ್
ಹಾ: ೧)'ನನ್ನಾಸೆ ನಿನ್ನಲಿ ನಿನ್ನಾಸೆ ನನ್ನಲಿ...', ೨)' ಹೇ ನನ್ನಲ್ಲಿ ಮಿಂಚೊಂದು'..., ೩)' ಈ ಲೋಕವೇ ಗುಂಡು...', ೪)'ನನ್ನ ಮನದಲಿ ಆತುರ...', ೫)' ಈ ಬಾಳಗೀತೆಗೆ ನೀನೇ...', ೬)' ಈ ಕಣ್ಣ ಮಿಂಚಲಿ...',
ಸೆ: ಉದ ೪೪೬೭.೦೦
ವಿ: ವಿಷ್ಣುವರ್ಧನ್ ಎಲ್ಲ ದೃಷ್ಟಿಯಿಂದ ಆಸ್ವಪಿಸಿ ನಿರ್ಮಿಸಿದ ಚಿತ್ರ
ಕ.ಸಾ: ಪೊಲೀಸ್ ಅಧಿಕಾರಿಯಾದ ಕಥಾನಾಯಕ ಧನುಷ್ ಶಿಸ್ತು, ನಿಷ್ಠೆಯಿಂದ ಕೆಲಸ ಮಾಡುವ ಅಧಿಕಾರಿ. ಇದರಿಂದ ಮಾದಕ ವಸ್ತುಗಳ ವಹಿವಾಟು ನಡೆಸುವ ಖಳನಾಯಕನೊಂದಿಗೆ ಸಂಘರ್ಷಕ್ಕೊಳಗಾಗಿ, ಅವರಿಂದ ಕೊಲೆಯಾಗುತ್ತಾನೆ. ಈತನ ಮೇಲಿನ ಅಧಿಕಾರಿಯೊಬ್ಬರು ಧನುಷ್‌ನ ಸಾವನ್ನು ಮುಚ್ಚಿಟ್ಟು ಆತನಂತೆಯೇ ಇರುವ ಖೈದಿಯನ್ನು ತಂದು ಪಳಗಿಸಿ ಧನುಷ್ ಎಂದು ಎಲ್ಲರನ್ನು ನಂಬಿಸುತ್ತಾರೆ. ವಿಷ್ಣುದಾದ ಎಂಬ ಖೈದಿ ಧನುಶ್ ಆಗಿ ಅದೇ ಖಳನಾಯನನ್ನು ಹಾಗೂ ಆತನ ಅವ್ಯವಹಾರಗಳನ್ನು ಬಯಲಿಗೆ ತರುತ್ತಾನೆ. ಕಳ್ಳ ಪೊಲೀಸ್ ಕಣ್ಣು ಮುಚ್ಚಾಲೆಯ ಈ ಕತೆಯಲ್ಲಿ ಇಬ್ಬರು ನಾಯಕರ ಸಾಂಸಾರಿಕ ಹಿನ್ನಲೆಯೂ ಇದೆ.

೧೪೦೫. ಕಲಿಯುಗ ಭೀಮ

(೧೯೯೧ / ವರ್ಣ / ಸಾಮಾಜಿಕ)
ಲಾ: ಶಿಲ್ಪಕಲಾ ಪಿಕ್ಚರ್ಸ್
ಪ್ರೊ: ಎಸ್.ರವಿಕುಮಾರ್, ರಾಮಚಂದ್ರ ಹಂದೆ
ನಿ: ಪ್ರಭಾಕರ್
ಸ.ನಿ: ಸುಬ್ರಹ್ಮಣ್ಯಂ, ವಾಸು, ಸರಿಗಮವಿಜಿ
ಅ: ಪ್ರಭಾಕರ್, ವಜ್ರಮುನಿ, ಸುಧೀರ್. ದೊಡ್ಡಣ್ಣ, ವಿಶ್ವವಿಜೇತ, ಶ್ರೀನಾಥ್, ಜೈಜಗದೀಶ್, ಧೀರೇಂದ್ರ ಗೋಪಾಲ್, ಸದಾಶಿವ ಬ್ರಹ್ಮಾವರ್, ಖುಷ್ಬು, ಸುಮಲತಾ, ಪಂಢರಿಬಾಯಿ
ಕ/ಮಾ: ಕೆ.ಎಸ್.ಸತ್ಯನಾರಾಯಣ
ಚಿ.ಕ: ಪ್ರಭಾಕರ್
ಗೀ: ಹಂಸಲೇಖ, ಆರ್. ಎನ್.ಜಯಗೋಪಾಲ್
ಗಾ: ಲತಾ ಹಂಸಲೇಖ, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಬಿ.ಆರ್.ಛಾಯಾ, ಮಂಜುಳಾ ಗುರುರಾಜ್, ಸ್ವರ್ಣಲತಾ
ಸಂ: ವಿಕ್ಟರ್ ಯಾದವ್
ಛಾ: ಸುಂದರನಾಥ ಸುವರ್ಣ
ಕಲೆ: ರಾಜು
ಸ: ಹಂಸಲೇಖ
ಧ್ವ: ಪೀಟರ್, ಕೃಷ್ಣಮೂರ್ತಿ
ನೃ: ತರುಣ್
ಸಾ: ಬಾಪಾ
ವ: ಸತ್ಯಂ
ಪ್ರ: ಮೇಕಪ್ ಮಲ್ಲಿ
ಸ್ಟು: ಕಂಠೀರವ, ಸಂಕೇತ
ಹಾ: ೧)'ಶಾರೀ ಶಾರೀ ಏನ್ನುತ್ತಾರೆ...', ೨)'ಮೈ ಬೆಂಗಳೂರು ಗಯೀ ಥಿ...', ೩)' ಈ ತಾಯಿಯ ಹಾರ್ಟು...', ೪)'ಭೂಮಿಗಿಂತ ಭಾರ ಹೆಣ್ಣಿನ ಒಳರಾಗ...',
ಸೆ: ಉದ್ದ - ೪೫೯೫.೦೦, ೧೭ - ೦೮ - ೧೯೯೧
ಕ.ಸಾ: ಅನಾಥನಾದ ರಾಜನನ್ನು ಸಾವಿತ್ರಮ್ಮ ಬೆಳೆಸುತ್ತಾಳೆ. ರಾಜನಿಂದ ರಕ್ಷಿಸಲ್ಪಡುವ ಸುಧಾಳೇ ಅವನಿಗೆ ಹೋಟೇಲ್‌ನಲ್ಲಿ ಕೆಲಸ ಕೊಡಿಸುತ್ತಾಳೆ. ಇಲ್ಲಿ ಮಾಲೀಕ ಪಿಂಟೋ, ರಾಜನ ಮುಗ್ಧತೆಯನ್ನು ಬಳಸಿಕೊಂಡು ಉಪಾಯದಿಂದ ಮೂಲಕ ಮಕ್ಕಳ ಸಾವಿಗೆ ಕಾರಣನಾಗುತ್ತಾನೆ. ಈ ನಿಜ ತಿಳಿದ ರಾಜ ಸಿಡಿದೆದ್ದು ಪೊಲೀಸರಿಗೆ ದೂರು ನೀಡುತ್ತಾನೆ. ಆದರೆ ನಂತರ ಪಿಂಟೋ ಕೊಲೆಯಾದಾಗ ಅದು ರಾಜನ ಮೇಲೆ ಬಂದು ಜೈಲು ಕಾಣುವಂತಾಗುತ್ತದೆ. ಆದರೆ ರಾಜನಿಂದ ಸಹಾಯ ಪಡೆದವರು ನೆರವಾಗಿ ಆವನ ಬಿಡುಗಡೆಯಾಗುತ್ತದೆ. ಕೊನೆಗೆ ಸುಧಾ-ರಾಜ ಒಂದಾಗುತ್ತಾರೆ.

೧೪೦೬. ನಮ್ಮೂರ ರಾಮಾಯಣ

(೧೯೯೧ / ವರ್ಣ / ಸಾಮಾಜಿಕ)
ಲಾ: ಶಿವಶಂಕರ ಸಿನಿ ಪ್ರೊಡಕ್ಷನ್ಸ್
ಪ್ರೊ/ನಿ: ವೈ.ಟಿ. ನಾಗರಾಜು
ಸ.ನಿ: ಕೆ.ಬಾಲುಮೋಹನ್
ಅ: ಜಯರಾಂ, ಜಯರಾಣಿ, ಶಿವಣ್ಣ, ಶಾರದಾ ಪವಕಿ, ರಾಮಾಚಾರಿ, ಶಿವಕುಮಾರ್, ನಾಗರತ್ನ
ಕ/ಚಿ.ಕ/ಮಾ: ವೈ.ಟಿ.ನಾಗರಾಜು
ಗೀ: ಸಂತೋಷ ಮುಖ್ಯಾಳ
ಗಾ: ಮೈಸೂರು ಅನಂತಸ್ವಾಮಿ, ಮಂಗಳಾ, ಎಂ.ಲಕ್ಷ್ಮೀಕಾಂತ
ಸಂ: ಚಂದ್ರಕಾಂತ ಪೋತದಾರ್
ಛಾ: ಕೆ.ಎಸ್.ಚಂದ್ರು
ಸ: ಎಲ್. ಎಸ್. ಗೂಚಿ
ನೃ: ತ್ರಿಭುವನ್ ವಿಜಿ
ವ: ವೆಂಕಟೇಶ್
ಪ್ರ: ಪಿ.ರಾಜು
ಹಾ: ೧)'ನಿನ್ನ ಮೋರೆ ನೋಡ್ಯಾಕೆ...', ೨)'ಕಂಡು ಕಾಣದಂಗೆ ಕದ್ದು...', ೩)'ಬಾ ಪುಟ್ನಂಜಿ ಬಾ ಬಾ ಪುಟ್ನಂಜ...', ೪)'ಚಿಕ್ಕತ್ತೆ ಮಗಳೇ ಚಿನ್ನದುಂಗುರ ...'
ಕ.ಸಾ: ಶ್ರೀಮಂತನಾದ ದೇವೇಗೌಡ ಮಗ ಈರನಿಗೆ ವಿದ್ಯೆ ಕಲಿಸದೆ ಮನೆಯಲ್ಲೇ ಬೆಳೆಸುತ್ತಾನೆ. ಹಣವಿದ್ದರೆ ಸಾಕೆಂಬುದು ಅವನ ಧೋರಣೆಯಾಗಿರುತ್ತದೆ. ಈರ ಪೆದ್ದನಾಗಿ ಬೆಳೆದಾಗ ಗೌಡನಿಗೆ ತನ್ನ ತಪ್ಪಿನ ಅರಿವಾಗುತ್ತದೆ. ಆಗ ತಿದ್ದಲು ಹೋಗಿ ಮಗನನ್ನು ಮನೆಯಿಂದ ಹೊರಹಾಕುತ್ತಾನೆ. ಈರನು ನೀರಪಾಲಾ ಗುವುದೇ ಚಿತ್ರದ ಕೊನೆಯಾಗುತ್ತದೆ.

೧೪೦೭. ಮಾಂಗಲ್ಯ

(೧೯೯೧ / ವರ್ಣ / ಸಾಮಾಜಿಕ)
ಲಾ: ಎಲ್.ವಿ.ಎಸ್.ಪ್ರೊಡಕ್ಷನ್ಸ್
ಪ್ರೊ: ವೆಂಕಟರಾಮ ರೆಡ್ಡಿ
ನಿ: ಬಿ.ಸುಬ್ಬಾರಾವ್
ಸ.ನಿ: ಎಸ್.ವಿ.ಪ್ರಸಾದ್
ಅ: ಶ್ರೀಧರ್, ಸುನಿಲ್, ಶ್ರೀನಾಥ್, ಶಿವರಾಂ, ಮನದೀಪ್ ರಾಯ್, ಅಭಿಜಿತ್, ಕೀರ್ತಿ, ವಜ್ರಮುನಿ, ಮಾಲಾಶ್ರೀ, ಶುಭಾ, ವಾಣಿ ವಿಶ್ವನಾಥ್, ಉಮಾಶ್ರೀ, ವೈಶಾಲಿ, ಹೇಮಾ ಚೌಧುರಿ
ಕ: ಯದ್ದನಪೂಡಿ ಸುಲೋಚನರಾಣಿ ಅವರ ಕಾದಂಬರಿ
ಚಿ.ಕ: ಬಿ.ಸುಬ್ಬಾರಾವ್
ಮಾ/ಗೀ: ಚಿ.ಉದಯಶಂಕರ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ, ಮಂಜುಳಾ
ಸಂ: ಕೆ.ವಿ.ಕೃಷ್ಣ ರೆಡ್ಡಿ
ಛಾ: ವಿ.ಪ್ರತಾಪ್
ಕಲೆ: ರೆಡ್ಡಿ
ಸ: ರಾಜನ್ - ನಾಗೇಂದ್ರ
ಧ್ವ: ಎಸ್.ಪಿ.ರಾಮನಾಥನ್
ನೃ: ಸಲೀಂ



ಸಾ: ಅಂಜೂರು ಬಾಬು
ವ: ಬ್ರಹ್ಮಂ
ಪ್ರ: ಚೆಲುವರಾಯ
ಸ್ಟು: ಕಂಠೀರವ, ಚಾಮುಂಡೇಶ್ವರಿ
ಹಾ: ೧) 'ನಿನಗೂ ನಾನು ...', ೨) 'ನನ್ನಾಸೆ ಏನೆಂದು ಕೇಳಬೇಡಿ...', ೩) 'ಸರ್ವಮಂಗಳೆ ಶಿವನು...', ೪) 'ಮುತ್ತಿನಂಥ ಮಾತನು...'.
ಸೆ: ಉದ್ದ - ೪೦೦೯.೦೦
ಕ.ಸಾ: ಶ್ರೀಮಂತರಾದ ವೇಣುಗೋಪಾಲರಾವ್ ಇಬ್ಬರು ಹೆಣ್ಣುಮಕ್ಕಳ ತಂದೆ. ಇವರ ಸಹೋದರಿಯ ಮಕ್ಕಳಾದ ವಿಜಯ್ ಆನಂದ್ ಒಬ್ಬರನೊಬ್ಬರು ಬಿಟ್ಟಿರದಂಥ ಸಹೋದರರು. ಆನಂದ್-ಶೋಭಾ ಎಂಬ ಹುಡುಗಿಯನ್ನು ಪ್ರೀತಿಸುವುದು ತಿಳಿದು ಇದನ್ನು ತಪ್ಪಿಸಲು ವಿಜಯ್ ಅವಳಿಗೆ ತಾಳಿ ಕಟ್ಟಿಬಿಡುತ್ತಾನೆ. ಇದರಿಂದ ಆನಂದನ್ನು ದ್ವೇಷಿಸುವ ಶೋಭಾ ಮತ್ತು ಅವಳ ತಮ್ಮ ಅಶೋಕನನ್ನು ವಿಜಯ್ ರಕ್ಷಿಸಿದಾಗ ಅವಳು ಬದಲಾಗುತ್ತಾಳೆ. ಅವರಿಬ್ಬರೂ ವೇಣುಗೋಪಾಲರಾವ್ ಮಕ್ಕಳೇ ಎಂಬುದು ಬಯಲಾಗಿ ಎಲ್ಲರೂ ಒಂದಾಗುತ್ತಾರೆ.

೧೪೦೮. ನಾಯಕ

(೧೯೯೧ / ವರ್ಣ / ಸಾಮಾಜಿಕ)
ಲಾ: ಅಷ್ಟಲಕ್ಷ್ಮಿ ಮೂವೀ ಮೇಕರ್ಸ್
ಪ್ರೊ: ಎಂ.ರಾಜೇಂದ್ರ, ಬಿ.ಎನ್.ವೆಂಕಟೇಶ್
ಕ/ಚಿ.ಕ/ಮಾ/ನಿ: ಚಂದ್ರಹಾಸ ಆಳ್ವಾ
ಸ.ನಿ: ಸೀರ್ನಳ್ಳಿ ರಾಜು, ಗಾಯಿತ್ರಿ
ಅ: ವಿನೋದ್ ರಾಜ್, ಭವ್ಯಶ್ರೀ ರೈ, ವಿನಯಾ ಪ್ರಸಾದ್, ಆರ್.ನಾಗೇಶ್, ಪದ್ಮ ಕುಮುಟಾ, ಅಭಿಜಿತ್
ಗೀ: ಹಂಸಲೇಖ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಜೇಸುದಾಸ್, ಚಿತ್ರಾ, ಲತಾ ಹಂಸಲೇಖ
ಸಂ: ಸುರೇಶ್ ಅರಸ್
ಛಾ: ಮನೋಹರ್
ಕಲೆ: ಜಿ.ಮೂರ್ತಿ
ಸ: ಹಂಸಲೇಖ
ಧ್ವ: ಸಂಕೇತ್, ಪ್ರಸಾದ್
ನೃ: ಜಾನ್‌ಬಾಬು
ಸಾ: ಥ್ರಿಲ್ಲರ್ ಮಂಜು
ವ: ಕೆ.ಪಿ.ಬಾಲನ್
ಪ್ರ: ಮಲ್ಲೇಶ್ ಹರ್ತಿ
ಕ.ಸಾ: ನಿರ್ದೇಶಕನೊಬ್ಬನ ಬದುಕು, ವ್ಯಕ್ತಿಗಳ ಸಂಘರ್ಷದ ಕಥೆ.

೧೪೦೯. ನಾಗಿಣಿ

(೧೯೯೧ / ವರ್ಣ / ಜಾನಪದ)
ಲಾ: ಶ್ರೀ ಲಕ್ಷ್ಮಿ ಪ್ರೊಡಕ್ಷನ್
ಪ್ರೊ: ಬಿ.ಎನ್.ಗಂಗಾಧರ್, ಎಂ.ಸುನಂದ, ಎಂ.ಕೃಷ್ಣ
ನಿ: ಶ್ರೀಪ್ರಿಯಾ
ಸ.ನಿ: ರತ್ನಾಕರ್, ಭವಾನಿ ಶಂಕರ್
ಅ: ಶಂಕರ್‌ನಾಗ್, ಅನಂತ್‌ನಾಗ್, ದೇವರಾಜ್, ಶ್ರೀನಿವಾಸ ಮೂರ್ತಿ, ಗೀತಾ, ರಜನಿ, ಕಮಿನೀಧರನ್, ಶ್ರೀಪ್ರಿಯಾ, ತಾರಾ, ಕಿಮಿ, ಅಪ್ಸರಾ, ರಾಧಿಕಾ
ಕ/ಚಿ.ಕ: ಶ್ರೀಪ್ರಿಯಾ
ಮಾ: ಶ್ರೀರಂಗಾ
ಗೀ: ಆರ್. ಎನ್. ಜಯಗೋಪಾಲ್, ಶ್ರೀರಂಗ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಮಂಜುಳಾ ಗುರುರಾಜ್
ಸಂ: ಶ್ಯಾಂ ಯಾದವ್
ಛಾ: ಪ್ರಸಾದ್ ಬಾಬು, ಲೋಕಿ

ಕಲೆ: ಪಿ.ಪಿ. ರೆಡ್ಡಿ
ಸ: ಶಂಕರ್-ಗಣೇಶ್
ಧ್ವ: ಪೀಟರ್, ಅಣ್ಣಾದೊರೈ
ಸಾ: ಜೈಮುನಿ
ವ: ಎಂ.ಎಸ್.ಕೇಶವ
ಪ್ರ: ರಾಮ್‌ನಾಥ್
ಸ್ಟು: ಅಭಿಮಾನ್, ಸಂಕೇತ್
ಹಾ: ೧) 'ಒಂದೇ ಜೀವ ಒಂದೇ ಭಾವ...', ೨) 'ಮೆಚ್ಚಿ ಬಂದ ಹೆಣ್ಣು ಆಂ ಮುಟ್ಟಿ ತಿನ್ನೋ ಹಣ್ಣು...', ೩) 'ಜೊತೆಯಾಗಿ ಸೇರೋಣ ಸ್ವರ್ಗವಾ...', ೪) 'ಒಂದೇ ಜೀವ ಒಂದೇ ಭಾವ...', ೫) 'ಶರಣೆಂಬೆ ಗೌರಿ...'.
ಸೆ: ಉದ್ದ - ೩೬೮೪.೦೦, ೩೧ - ೧೨ - ೯೧
ವಿ: ಶಂಕರ್ ನಾಗ್ ನಿಧನರದರು. ಚಿತ್ರದ ಕೆಲಸ ತೂಗಿಸಿದ್ದು ಅನಂತನಾಗ್. ಅದಕ್ಕಾಗಿ ಕಥೆಯಲಿ ಬದಲಾಯಿತು.
ಕ.ಸಾ: ನಾಗಿಣಿ ಎಂಬ ನಾಗಕನ್ಯೆ ತನ್ನ ಹಿಂದಿನ ಜನ್ಮದ ಇನಿಯನಾದ ಎಸ್ಟೇಟ್ ಮಾಲೀಕ ಶಂಕರನನ್ನು ಸೇರಲು ಹೋದಾಗ ನಾಗಿಣಿಯನ್ನು ಕೊಲ್ಲುವ ಗುರಿ ತಪ್ಪಿ ಶಂಕರ ಸಾಯುತ್ತಾನೆ. ತನ್ನ ಈ ಜನ್ಮಾಂತರದ ಕಥೆಯನ್ನು ನಾಗಿಣಿ ತಿಳಿದಾಗ ಆ ಜನ್ಮದಲ್ಲಿ ಅರಣ್ಯಾಧಿಕಾರಿಯಾಗಿದ್ದ ರಾಜನಿಗ ಹಿಂದಿನ ಜನ್ಮದ ಅನುಭವವಾಗುತ್ತದೆ. ಸತಿ-ಪತಿಗಳಾಗುವ ಅವರು ಹಾವುಗಳಾಗಿ ಪರಿವರ್ತಿತಗೊಂಡು ಮತ್ತೆ ಸೇರುತ್ತಾರೆ.

೧೯೯೨

೧೪೧೦. ಬೆಳ್ಳಿ ಕಾಲುಂಗುರ

(೧೯೯೨ / ವರ್ಣ / ಸಾಮಾಜಿಕ)
ಲಾ: ತನು ಚಿತ್ರ
ಪ್ರೊ: ಸಾ.ರಾ.ಗೋವಿಂದು
ಕ/ನಿ: ಕೆ.ವಿ.ರಾಜು
ಅ: ಮಾಲಾಶ್ರೀ, ಸುನಿಲ್, ಶಿವಕುಮಾರ್, ಗುರುದತ್, ಅವಿನಾಶ್, ತಾರಾ, ದೊಡ್ಡಣ್ಣ, ರಾಕ್‌ಲೈನ್ ವೆಂಕಟೇಶ್
ಚಿ.ಕ/ಮಾ: ವೀರಪ್ಪ ಮರುಳವಾಡಿ
ಗೀ: ದೊಡ್ಡರಂಗೇಗೌಡ, ಹಂಸಲೇಖ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ, ಎಸ್.ಜಾನಕಿ
ಸಂ: ವಿ.ಮನೋಹರ್
ಛಾ: ಜಿ.ಜಿ.ಕೃಷ್ಣ
ಕಲೆ: ಜೈದೇವ್
ಸ: ಹಂಸಲೇಖ
ನೃ: ಸತೀಶ್
ಸಾ: ಸುರೇಶ್
ವ: ನಾಗರಾಜ್
ಪ್ರ: ಕೃಷ್ಣ
ಸ್ಟು: ಕಂಠೀರವ, ಪ್ರಸಾದ್, ಚಾಮುಂಡೇಶ್ವರಿ
ಹಾ: ೧) 'ಕೇಳಿಸದೆ ಕಲ್ಲು ಕಲ್ಲಿನಲಿ ಕನ್ನಡ ನುಡಿ...', ೨) 'ಮಾಮ ಮಾಮ ಚಂದ ಮಾಮ ಚಂದ್ರೂಳ್ಳಿ...', ೩) 'ಒಂದು ಒಂದು ಕಣ್ಣು ನಂದು...', ೪) 'ಬೆಳ್ಳಿ ಕಾಲುಂಗುರ ಶ್ರೀಮತಿಗೆ ಸುಂದರ...', ೫) 'ಮೈ ಲಡಕಿ ಲಡಕೆ...', ೬) 'ಒಂದೇ ಒಂದು ...'
ವಿ: ಹಂಪಿಯ ಹೊರಾಂಗಣದ ಬಳಕೆ
ಕ.ಸಾ: ವಂಶ ಪಾರಂಪರ್ಯವಾಗಿ ಬಂದ ಬೆಳ್ಳಿ ಕಾಲುಂಗುರವನ್ನು ತೊಡುವ ಹೆಣ್ಣನ್ನು ಮೆಚ್ಚಿ ಕರೆತರುವ ನಾಯಕ. ಅವನ ರಕ್ತ ಸಂಬಂಧಿಗಳಿಂದಲೇ ಅದಕ್ಕೆ ಅಡ್ಡಿ. ಚಿಕ್ಕಂದಿನಿಂದಲೂ ಅವನನ್ನೇ ಮದುವೆಯಾಗ ಬಯಸುವ ಹೆಣ್ಣು. ನಾಯಕನಿಗೆ ಸತ್ವ ಪರೀಕ್ಷೆ. ಅವನು ಮೆಚ್ಚಿದ ಹೆಣ್ಣಿನ ಶೀಲದ ಬಗ್ಗೆ ಅಪಪ್ರಚಾರ. ನಾಯಕ ಸತ್ಯಾಂಶ ತಿಳಿದು ಮೆಚ್ಚಿದವಳನ್ನೆ ಮದುವೆಯಾಗುವಂತೆ ಮಾಡಲು ಎರಡು ಜೀವಗಳ ತ್ಯಾಗ...

೧೪೧೧. ಬನ್ನಿ ಒಂದ್ಸಲ ನೋಡಿ

(೧೯೯೨ / ವರ್ಣ / ಸಾಮಾಜಿಕ)
ಲಾ: ರಾಜಲಕ್ಷ್ಮಿ ಆರ್ಟ್ಸ್ ಫಿಲಂಸ್
ಪ್ರೊ/ನಿ/ಸಂ: ಎಸ್. ಉಮೇಶ್
ಸ.ನಿ: ವಿ.ವಾಸು

ಅ: ಧೀರೇಂದ್ರ ಗೋಪಾಲ್, ವಿನೋದ್ ರಾಜ್, ರಮೇಶ್ ಭಟ್, ಶ್ರುತಿ, ತ್ರಿವೇಣಿ, ದೇವಿಕಾ ರಾಣಿ, ಡಿಸ್ಕೋ ಶಾಂತಿ, ಬೆಂಡೋಡಿ ಲೀಲಾ, ತಾರಾ, ರತ್ನಾಕರ್, ಪದ್ಮಿನಿ
ಕ/ಚಿ.ಕ/ಮಾ: ಎಸ್. ಉಮೇಶ್
ಗೀ: ಎಂ.ಎನ್.ವ್ಯಾಸರಾವ್, ಎಂ.ಡಿ.ಹಾಶಂ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ವಿಷ್ಣುವರ್ಧನ್, ಸಂಗೀತಾ ಕಟ್ಟಿ, ಮಂಜುಳಾ ಗುರುರಾಜ್, ಕಸ್ತೂರಿ ಶಂಕರ್
ಛಾ: ಎಸ್.ಎಸ್.ಬಿ.ಮೂರ್ತಿ
ಸ: ಉಪೇಂದ್ರ ಕುಮಾರ್
ನೃ: ಅಂಬಿ ಮಹೇಂದ್ರನ್
ವ: ಆರ್. ಎನ್. ಸುಂದರ್
ಪ್ರ: ಗೋಪಾಲ್
ಹಾ: ೧) 'ನಾ ಬರೆದ ಗೀತೆಯು ಭಾವವೂ ನೀನೇ ...', ೨) 'ಎಲ್ಲಿ ನೋಡಲಲ್ಲಿ ನನಗೆ ನಿನ್ನ...', ೩) 'ಹಾಡೋಣ ಹೊಸ ಹಾಡನು...', ೪) 'ಪ್ರೀತಿ ನಮಗಾಗಿ ಕಾದಿರಲು...'.

ಕ.ಸಾ: ಪ್ರೀತಿಗಿಂತ ಯಾವುದೂ ದೊಡ್ಡದಲ್ಲ. ಬಡವ-ಶ್ರೀಮಂತರ ಸಂಬಂಧ ಸುಧಾರಿಸಬೇಕೆನ್ನುವ ಸಂದೇಶದೊಂದಿಗಿನ ಹಾಸ್ಯ ನಿರೂಪಣೆಯ ಚಿತ್ರ. ಮಾರವಿನ ಬಾಯಿಲ್ ಇರುವ ಚಿತ್ರ ನಿರ್ಮಾಪಕನ ಪುತ್ರಿಯರಾದ ಲಕ್ಷ್ಮಿ, ಶ್ರೀಲಕ್ಷ್ಮಿ, ವಿಜಯಲಕ್ಷ್ಮಿ ಇವರು ಗೋವಿಂದಚಂದ್ರವರ್ತಿ, ಗಂಗಾರಾಂ ಗಲಿಗಲಿ ಮತ್ತು ವೆಂಕಟರಮಣ ತಿರುಪತಿಯರನ್ನು ತಮ್ಮ ಪ್ರೀತಿಗೆ ಏನೆಲ್ಲಾ ಅಡ್ಡಿ ಬಂದರೂ ಎದುರಿಸಿ ಒಂದಾಗುತ್ತಾರೆ.

೧೪೧೨. ಬೊಂಬಾಟ್ ಹೆಂಡ್ತಿ

(೧೯೯೨ / ವರ್ಣ / ಸಾಮಾಜಿಕ)
ಲಾ: ಆರ್.ಎಸ್.ಪ್ರೊಡಕ್ಷನ್ಸ್
ಪ್ರೊ: ಆರ್.ಶ್ರೀರಾಮುಲು
ಕ/ಚಿ.ಕ/ನಿ: ಪಿ.ಎಸ್.ರಾಮಚಂದ್ರ ರಾವ್
ಸ.ನಿ: ನಾಗೇಂದ್ರ ಷಾ



ಅ: ಶ್ರೀಧರ್, ಶ್ರುತಿ, ಟೆನ್ನಿಸ್ ಕೃಷ್ಣ, ಮುಖ್ಯಮಂತ್ರಿ ಚಂದ್ರು, ರಮೇಶ್ ಭಟ್, ಅಭಿನಯ, ಸಿಹಿಕಹಿ ಚಂದ್ರು, ಮಂಜುಮಾಲಿನಿ, ಅಂಜಲಿ, ಶಾಂತಮ್ಮ, ಧೀರೇಂದ್ರ ಗೋಪಾಲ್, ವಿಜಯಕಾಶಿ, ಮೈಸೂರು ಲೋಕೇಶ್, ಡಿಂಗ್ರಿ ನಾಗರಾಜ್, ಬ್ಯಾಂಕ್ ಜನಾರ್ದನ್, ನೀಗ್ರೋ ಜಾನಿ, ಶ್ರೀಶೈಲನ್
ಮಾ: ಕುಣಿಗಲ್ ನಾಗಭೂಷಣ್
ಗೀ: ಆರ್.ಎನ್.ಜಯಗೋಪಾಲ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಮಂಜುಳಾ ಗುರುರಾಜ್, ಸಂಗೀತಾ ಕಟ್ಟಿ
ಸಂ: ಬಿ.ಶಂಕರ್, ಎಸ್.ರಮೇಶ್
ಛಾ: ಬಾಬ್ಜಿ
ಕಲೆ: ರಡ್ಡಿ
ಸ: ಉಪೇಂದ್ರ ಕುಮಾರ್
ಧ್ವ: ಕಣ್ಣನ್, ಅಣ್ಣಾದೊರೈ-ಪೀಟರ್
ನೃ: ಶಿವಶಂಕರ್
ಸಾ: ನೀಗ್ರೋ ಜಾನಿ
ವ: ವಾಗ್ಮಲೂರಿ ಸುರೇಶ್
ಪ್ರ: ವಾರದೂರಿ ಸತ್ಯಂ
ಸೆ: ಉದ - ೪೫೫೩.೦೦, ರೀಲು - ೧೫
ಕ.ಸಾ: ಕೆಲಸ ಸಿಕ್ಕಿದರೂ ಮದುವೆಯಾಗದೆ ಬಾಡಿಗೆಗೆ ಮನೆ ಸಿಗದು. ನಾಯಕ ಹೆಣ್ಣಿನ ವೇಷದಲ್ಲಿ ಗೆಳೆಯರೊಡನೆ ಮನೆಯೊಂದನ್ನು ಬಾಡಿಗೆಗೆ ಪಡೆಯುತ್ತಾನೆ. ನಂತರ ಆ ಮನೆಯ ಮಾಲೀಕನ ಮಗಳ ಪ್ರೇಮದಲ್ಲಿ ಸಿಲುಕುತ್ತಾನೆ. ಹಲವಾರು ಅವಾಂತರಗಳ ನಂತರ ನಿಜಾಂಶ ಹೊರಬರುವುದು. ತೊಂದರೆಗಳು ನಿವಾರಣೆಯಾಗುವುವು.

೧೪೧೩. ಹಠಮಾರಿ ಹೆಣ್ಣು ಕಿಲಾಡಿ ಗಂಡು

(೧೯೯೨ / ವರ್ಣ / ಸಾಮಾಜಿಕ)
ಲಾ: ಶ್ರೀ ನಿಮಿಷಾಂಬ ಪ್ರೊಡಕ್ಷನ್ಸ್
ಪ್ರೊ: ಎಂ.ಚಂದ್ರಶೇಖರ್, ಆರ್.ಎಸ್.ಪ್ರಭಾಕರ್

ನಿ: ರೇಣುಕಾ ಶರ್ಮ
ಸ.ನಿ: ಜೆ.ಬಲರಾಂ
ಅ: ಮಾಲಾಶ್ರೀ, ಶ್ರೀಧರ್, ಅಂಜನಾ, ಮುಖ್ಯಮಂತ್ರಿ ಚಂದ್ರು, ಕೀರ್ತಿ, ಜಗ್ಗೇಶ್, ಉಮಾಶ್ರೀ, ಅಭಿನಯ, ವೈಶಾಲಿ, ಬೇಬಿ ಸಿಂಧೂ, ಶಂಕರ ಭಟ್, ಮಂಜುಮಾಲಿನಿ
ಕ: ಕಲ್ಯಮಣಿ
ಚಿ.ಕ: ರೇಣುಕಾ ಶರ್ಮ
ಮಾ: ಕುಣಿಗಲ್ ನಾಗಭೂಷಣ್
ಗೀ: ಆರ್.ಎನ್.ಜಯಗೋಪಾಲ್, ಚಿ.ಉದಯಶಂಕರ್, ರುದ್ರಮೂರ್ತಿ ಶಾಸ್ತ್ರಿ, ವಿ.ಮನೋಹರ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ, ಬಿ.ಆರ್.ಛಾಯಾ, ಮಂಜುಳಾ ಗುರುರಾಜ್
ಸಂ: ಕೆ.ಬಾಲು
ಛಾ: ಎಸ್.ವಿ.ಶ್ರೀಕಾಂತ್
ಕಲೆ: ಪಿ.ವಿ.ರೆಡ್ಡಿ
ಸ: ರಾಜನ್-ನಾಗೇಂದ್ರ
ಧ್ವ: ಎಸ್.ಪಿ.ರಾಮನಾಥನ್, ಕೃಷ್ಣಮೂರ್ತಿ
ನೃ: ತಾರಾ, ಪ್ರಸಾದ್
ಸಾ: ಜ್ಯೂಡೋ ರತ್ನಂ
ವ: ರಾಮನಾಥ್, ಬಾಬ್ಜಿ
ಪ್ರ: ಜೆ.ಶ್ರೀನಿವಾಸ್, ಚಂದ್ರು, (ಕೇಶ: ಭಕ್ತ)
ಸ್ಟು: ಚಾಮುಂಡೇಶ್ವರಿ, ಸಂಕೇತ್
ಹಾ: ೧)'ರಜನಿನಾಗ ಮತ್ತಿದ ಜುಂ ಎನ್ನಲು...', ೨)'ಸೂಪರ್ ಸ್ಟಾರ್ ಹೇ ಹೇ...', ೩)'ಬರೆದೆ ನಿನ್ನ ಹೆಸರನು...', ೪)'ಸೋಕಲು ಈ ಕೈ, ಪ್ರಾಯದ ಈ ಮೈ...'.
ಕ.ಸಾ: ತನ್ನ ಗಂಡನಿಗೂ, ಕಲೆಕ್ಟರ್‌ಳಾಗಿ ಬರುವ ಹೆಣ್ಣಿಗೂ ಅನೈತಿಕ ಅಕ್ರಮ ಸಂಬಂಧವಿದೆಯೆಂದು ತಪ್ಪಾಗಿ ಭಾವಿಸುವ ಹೆಂಡತಿ, ಅವಳಿಗೆ ಬುದ್ಧಿ ಕಲಿಸಲು ಅವಳ ಮನೆಗೇ ಬಂದು ವಾಸ್ತವ್ಯ ಹೂಡುವ ಕಲೆಕ್ಟರ್ ಹೆಣ್ಣು. ಸಂಶಯ ಪಿಶಾಚಿಯಾದ ಹೆಂಡತಿಯ ದುಡುಕು ಸ್ವಭಾವದಿಂದ ಉಂಟಾದ ಕೆಡುಕನ್ನು ಅವಳಿಗೇ ತೋರಿಸಿ ಮನವರಿಕೆ ಮಾಡಿಕೊಟ್ಟು ಸರಿಯಾದ ದಾರಿಗೆ ತರಲು ಕಲೆಕ್ಟರಿಣಿಯ ಪ್ರಯತ್ನ. ದೂರಾದ ಗಂಡ ಹೆಂಡತಿಯರನ್ನು ಅಂತ್ಯದಲ್ಲಿ ಒಂದು ಗೂಡಿಸುತ್ತಾಳೆ.

೧೪೧೪. ಅಮರ ಪ್ರೇಮ

(೧೯೯೨ / ವರ್ಣ / ಸಾಮಾಜಿಕ)
ಲಾ: ಉಷಾಶ್ರೀ ಪ್ರೊಡಕ್ಷನ್ಸ್
ಪ್ರೊ: ಜೆ.ನಾರಾಯಣ ರೆಡ್ಡಿ
ನಿ: ಸಾಯಿಪ್ರಕಾಶ್
ಅ: ಕುಮಾರ್ ಬಂಗಾರಪ್ಪ, ಚಂದ್ರಿಕಾ, ಶಿವರಂಜನಿ, ಮುಖ್ಯಮಂತ್ರಿ ಚಂದ್ರು, ಜಜಗದೀಶ್, ಉಮೇಶ್, ಮನ್‌ದೀಪ್ ರಾಯ್, ಉಮಾಶ್ರೀ, ವೈಶಾಲಿ ಕಾಸರವಳ್ಳಿ
ಕ: ಸಾಯಿಪ್ರಕಾಶ್
ಚಿ.ಕ/ಮಾ: ಕುಣಿಗಲ್ ನಾಗಭೂಷಣ್
ಗೀ: ಆರ್.ಎನ್.ಜಯಗೋಪಾಲ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್.ಜಾನಕಿ, ಮಂಜುಳಾ ಗುರುರಾಜ್, ಸಂಗೀತಾ ಕಟ್ಟಿ
ಸಂ: ಕೆ. ನರಸಯ್ಯ
ಛಾ: ದೇವಿ ಪ್ರಸಾದ್
ಸ: ಉಪೇಂದ್ರ ಕುಮಾರ್
ಧ್ವ: ಎಸ.ಪಿ.ರಾಮನಾಥನ್, ಕೋದಂಡಪಾಣಿ
ನೃ: ಗಿರಿಜಾ ರಘುರಾಮ್, ಶಿವಶಂಕರ್
ಸಾ: ಜ್ಯೂಡೋ ರತ್ನಂ
ಸ್ಟು: ಚಾಮುಂಡೇಶ್ವರಿ
ಹಾ: ೧)'ನಮ್ಮೂರ ತೇರಿನಲಿ ನೋಡಯ್ಯ ರಾಜ ಅಮ್ಮೋರ ಮೆರವಣಿಗೆ...', ೨)'ಕಾಲೇಜು ಟೀನೇಜಿನ ಕನ್ಯೆಯರು...', ೩)'ಹೃದಯಗಳು ಬೆರತಾಗ...', ೪)'ಬೀರಪ್ಪ, ಮಾರಪ್ಪ, ಕಲ್ಲಪ್ಪ, ಕಾಳಪ್ಪ...', ೫)'ನಗುತಿರು ಸುಖವಾಗಿ...',
ಸೆ: ಉದ್ದ- ೩೭೯೪.೦೦, ೨೩-೧೨-೯೧
ಕ.ಸಾ: ಪ್ರೇಮ ಕಥೆಯೊಂದಿಗೆ ಮಾನಸಿಕ ಅಸ್ವಸ್ಥತೆಗೆ ಕಾರಣವನ್ನು ತಿಳಿಸುವ ಚಿತ್ರ. ಅಮರ್ ತನ್ನ ಸಹಪಾಠಿ ಪ್ರೇಮಳನ್ನು ಪ್ರೀತಿಸಿ ಮದುವೆ ನಿಶ್ಚಿತಾರ್ಥವೂ ಆಗುತ್ತದೆ. ಆದರೆ ಆ ಸಮಯದಲ್ಲಿ ಅಮರ್‌ನ ತಾತನಿಗೆ ಹುಚ್ಚಿರುವುದು ತಿಳಿದು ಪ್ರೇಮಳ ತಂದೆ ಮದುವೆಯನ್ನು ಮುರಿಯುತ್ತಾನೆ. ಇದರಿಂದ ಅಮರ್ ಹುಚ್ಚನಾಗುತ್ತಾನೆ. ಅವನಿಗೆ ಚಿಕಿತ್ಸೆ ನೀಡಲು ಬಂದ ಡಾ.ವಾಸಂತಿ ಶೀಲಭಂಗಕ್ಕೊಳಗಾಗಿ ಗರ್ಭಿಣಿಯಾಗುತ್ತಾಳೆ. ಬೇರೊಬ್ಬನೊಂದಿಗೆ ಪ್ರೇಮಳ ಮದುವೆಯಾಗುವುದನ್ನು ತಡೆಯಲು ಬಂದ ಅಮರ್‌ನ ತಲೆಗೆ ಪೆಟ್ಟುಬಿದ್ದು ಸರಿಯಾಗುತ್ತಾನೆ. ಆಗ ನಡೆಯುವ ಹೊಡೆದಾಟದಲ್ಲಿ ವಾಸಂತಿ ಸಾವನ್ನಪ್ಪುತ್ತಾಳೆ. ಕೊನೆಯಲ್ಲಿ ಪ್ರೇಮ-ಅಮರ್ ಒಂದಾಗುತ್ತಾರೆ.

೧೪೧೫. ಮಿಡಿದ ಶೃತಿ

(೧೯೯೨ / ವರ್ಣ / ಸಾಮಾಜಿಕ)
ಲಾ: ನಿರುಪಮ ಆರ್ಟ್ಸ್ ಕಂಬೈನ್ಸ್
ಪ್ರೊ: ಎಸ್.ಎ.ಗೋವಿಂದರಾಜ್



ನಿ: ಎಂ.ಎಸ್.ರಾಜಶೇಖರ್
ಅ: ಶಿವರಾಜ್, ಸುಧಾರಾಣಿ, ಅಪ್ಸರ, ಶ್ರೀನಾಥ್, ಹೇಮ ಚೌಧುರಿ, ಶಿವಮೊಗ್ಗ ವೆಂಕಟೇಶ್, ಸುಂದರಶ್ರೀ, ವಿನಯಾ ಪ್ರಸಾದ್, ರವಿಕಿರಣ್,
ಕ: ಸಾಯಿಸುತೆ ಅವರ ಕಾದಂಬರಿ
ಚಿ.ಕ/ಮಾ: ಟಿ.ಎನ್.ನರಸಿಂಹನ್
ಗೀ: ಎಂ.ಎನ್.ವ್ಯಾಸರಾವ್, ಗೀತಪ್ರಿಯ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಮಂಜುಳಾ ಗುರುರಾಜ್
ಸಂ: ಎಸ್.ಮನೋಹರ್
ಛಾ: ವಿ.ಕೆ.ಕಣ್ಣನ್

ಸ: ಉಪೇಂದ್ರ ಕುಮಾರ್
ಸಾ: ಜ್ಯೂಡೋ ರತ್ನಂ
ಸ್ಟು: ಕಂಠೀರವ, ಚಾಮುಂಡೇಶ್ವರಿ
ಹಾ: ೧) 'ಆ ಸೂರ್ಯ ಚಂದ್ರ ನಕ್ಷತ್ರ ಮಾಲೆ...', ೨)'ನನ್ನ ನಿನ್ನ ಆಸೆ...', ೩)' ಯಾವುದು ಪ್ರೀತಿ ಎಲ್ಲಿದೆ ನೀತಿ...', ೪)'ಜ್ಞಾನದ ಓಕುಳಿ ಚೆಲ್ಲಿರಲು...', ೫)'ಅಮೇರಿಕಾ ನೆನೆದೊಡನೆ ಅಮೇರಿಕಾ...',
ಸೆ: ಉದ ೪೩೦೪.೦೦, ೨೯-೦೧-೯೨
ಕ.ಸಾ: ತಂದೆಯ ಆಸೆಯಂತೆ ಭವಿಷ್ಯ ರೂಪಿಸಿಕೊಳ್ಳದೆ ತನ್ನದೇ ದಾರಿಯಲ್ಲಿ ಸಾಗಿ ಯಶಸ್ವಿಯಾಗುವ ಯುವಕ, ತಾನು ಬಯಸಿದವಳನ್ನೇ ಮದುವೆಯಾಗುವ ಕಥೆ. ಚಿತ್ರದ ನಾಯಕ ಬಾಲು ತಂದೆ-ತಾಯಿ ಬಯಸುವಂತೆ ವೈದ್ಯನಾಗದೆ ಕಲೆಯಲ್ಲಿ ಆಸಕ್ತಿವಹಿಸುತ್ತಾನೆ. ಕುಟುಂಬದವರು ಹೇಳುವಂತೆ ಶ್ರೀಮಂತನ ಮಗಳನ್ನು ಮದುವೆಯಾಗದೆ ತಾನು ಪ್ರೀತಿಸುವ ಶೈಲಜಾಳನ್ನೇ ಮದುವೆಯಾಗುತ್ತಾನೆ. ಇವರಿಬ್ಬರನ್ನು ದೂರ ಮಾಡಲು ಕುಟುಂಬದವರು ಏನೆಲ್ಲಾ ಸಂಚು ಮಾಡಿ ಸುಜಾತ ದೂರವೇ ಹೋಗುವಂತಾದರೂ ಕೊನೆಯಲ್ಲಿ ಒಂದಾಗುತ್ತಾರೆ.

೧೪೧೬. ಚೈತ್ರದ ಪ್ರೇಮಾಂಜಲಿ

(೧೯೯೨ / ವರ್ಣ / ಸಾಮಾಜಿಕ)
ಲಾ: ಎಂ.ಸಿ.ಪ್ರೊಡಕ್ಷನ್ಸ್
ಪ್ರೊ: ಎಂ.ಶಶಿಕಲಾ
ನಿ: ಎಸ್.ನಾರಾಯಣ್
ಸ.ನಿ: ಹರೀಶ್ ನಿಂಜೂರು
ಅ: ರಘುವೀರ್, ಶ್ವೇತಾ, ಶ್ರೀನಿವಾಸ ಮೂರ್ತಿ, ಲೋಕೇಶ್, ರಾಜಾನಂದ್, ಸತ್ಯಜಿತ್, ಆಶಾಲತಾ, ಎಸ್.ನಾರಾಯಣ್, ಅಭಿಜಿತ್, ಜ್ಯೋತಿ, ಸ್ವಸ್ತಿಕ್ ಶಂಕರ್
ಕ/ಚಿ.ಕ/ಮಾ: ಎಸ್.ನಾರಾಯಣ್
ಗೀ: ಹಂಸಲೇಖ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ, ಮಂಜುಳಾ ಗುರುರಾಜ್, ಚಂದ್ರಿಕ
ಸಂ: ಸುರೇಶ್ ಅರಸ್
ಛಾ: ಪಿ.ಕೆ.ಹೆಚ್.ದಾಸ್
ಸ: ಹಂಸಲೇಖ
ಧ್ವ: ಕೃಷ್ಣಮೂರ್ತಿ, ಅರವಮುದನ್
ನೃ: ವಿಜ್ಜಿ ರಾಮ್
ಸಾ: ಥ್ರಿಲ್ಲರ್ ಮಂಜು
ವ: ಎ.ಡಿ.ನಾಗರಾಜ್
ಪ್ರ: ರಾಜು
ಸ್ಟು: ಸಂಕೇತ್, ಪ್ರಸಾದ್
ಹಾ: ೧)'ಓ ಕೋಗಿಲೇ ನಾ ಹಾಡಲೇ...', ೨)'ಓ ಮಲೆನಾಡಿನ ಮೈ ಸಿರಿಯೇ...', ೩)'ಚೈತ್ರದ ಪ್ರೇಮಾಂಜಲಿಯ...', ೪)'ನನ್ನವರೇ ನನಗೆ ಕೊನೆಗೆ ಮುಳ್ಳಾದರೇ...', ೫)'ಡ್ಯಾನ್ಸ ಡ್ಯಾನ್ಸ್...', ೬)'ದಾರಿ ಬಿಡೋ ವಿಧಿಯೇ...',
ಸೆ: ಉದ ೪೩೫೦.೦೦, ೧೩ ೦೯-೯೨
ಕ.ಸಾ: ಇದೊಂದು ಪ್ರೇಮಕಥೆ. ಪ್ರೇಂ ತಂದೆ ಮತ್ತು ಮಲತಾಯಿಯ ಧೋರಣೆಗಳಿಂದ ಬೇಸತ್ತು ಒಬ್ಬನೇ ಎಸ್ಟೇಟಿನಲ್ಲಿರಲು ಬರುತ್ತಾನೆ. ಅಲ್ಲಿ ಅಂಜಲಿಯ ಪ್ರೇಮದಲ್ಲಿ ಸಿಲುಕುತ್ತಾನೆ. ಅದೇ ಊರಿನ ಶ್ರೀಮಂತ ಜಗಪತಿರಾಯನ ಮಗ ಸೂರಿ ಅಂಜಲಿಯನ್ನು ಬಯಸಿ ಅವಳೊಂದಿಗೆ ಮದುವೆ ನಿಶ್ಚಿತಾರ್ಥ ಮಾಡಿಕೊಳ್ಳುವಲ್ಲಿಯೂ ಯಶಸ್ವಿಯಾಗುತ್ತಾನೆ. ತಂದೆಯ ಮಾತಿಗ ಕಟ್ಟುಬಿದ್ದು ಇದೆಲ್ಲವನ್ನು ಸಹಿಸುವ ಅಂಜಲಿ ಕೊನೆಯಲ್ಲಿ ಪ್ರೇಂನನ್ನು ಸೇರುವಾಗ ಇಬ್ಬರೂ ಗುಂಡಿಗೆ ಬಲಿಯಾಗುತ್ತಾರೆ.

೧೪೧೭. ಕ್ರಾಂತಿಗಾಂಧಿ

(೧೯೯೨ / ವರ್ಣ / ಸಾಮಾಜಿಕ)
ಲಾ: ಬಾಲಾಜಿ ಚಿತ್ರಾಲಯ
ಪ್ರೊ/ನಿ: ಎಸ್.ಟಿ.ಜಯರಾಮ ರೆಡ್ಡಿ
ಅ: ಶ್ರೀಧರ್, ಸುಂದರಕೃಷ್ಣ ಅರಸ್, ಅಶ್ವತ್, ದೊಡ್ಡಣ್ಣ, ಮುಖ್ಯಮಂತ್ರಿ ಚಂದ್ರು, ಶಿವರಂಜಿನಿ, ಸಿತಾರಾ, ರಮೇಶ್ ಭಟ್
ಕ/ಚಿ.ಕ: ಎಸ್.ಟಿ.ಜಯರಾಮ ರೆಡ್ಡಿ
ಮಾ: ಬಿ.ಎಲ್.ವೇಣು
ಗೀ: ದೊಡ್ಡರಂಗೇ ಗೌಡ
ಗಾ: ಕಸ್ತೂರಿ ಶಂಕರ್, ಎಸ್.ಪಿ.ಬಾಲಸುಬ್ರಹ್ಮಣ್ಯಂ
ಸಂ: ಅನ್ವರ್ ತಾವರಕೆರೆ
ಛಾ: ಬಿ.ಎಸ್.ಬಸವರಾಜ್
ಸ: ಗುಣಸಿಂಗ್
ಪ್ರ: ವೆಂಕಟೇಶ್
ಸ್ಟು: ಚಾಮುಂಡೇಶ್ವರಿ, ಪ್ರಸಾದ್
ಹಾ: ೧)'ಪ್ರೀತಿಯ ಆಳ ಕಂಡೋರು ಯಾರು ?...', ೨)'ನಾಡಿನ ನಿಜ ಗೌರವವನ್ನು ಮರೆತವರೇ...', ೩)'ಬಿಕ್ನಾಡೀ ಜಗದಾ ರಂಗಿನ ಮಂದಿಗೇ...',
ಸೆ: ಉದ-೩೬೦೬.೦೦, ೨೯-೦೭-೯೧, 'ಯು' ಸರ್ಟಿಫಿಕೇಟ್
ಕ.ಸಾ: ಗಾಂಧಿ ಗಳಿಸಿಕೊಟ್ಟ ದೇಶದ ಸ್ವಾತಂತ್ರ್ಯ ಹಾಳಾಗದಂತೆ ತಡೆಯುವ ಯುವಕನ ಕಥೆ. ಸುರೇಶ್ ಗಾಂಧಿ ಭ್ರಷ್ಟ ರಾಜಕಾರಣಿಗಳು, ಪೊಲೀಸ್ ಅಧಿಕಾರಿಗಳು, ರೌಡಿಗಳ ವಿರುದ್ಧ ಯುವ ಸಂಘಟನೆ ಮಾಡಿ ತಡೆಯುತ್ತಾನೆ. ಹೆಮ್ಮರವಾಗಿ ಬೆಳೆಯುವ ಅವನು ಜನಗಳೇ ದೌರ್ಜನ್ಯದ ವಿರುದ್ಧ ತಿರುಗಿ ಬೀಳುವಂತೆ ಮಾಡುವಲ್ಲಿ ಯಶಸ್ವಿಯಾಗುತ್ತಾನೆ. ಜೊತೆಗೆ ಹಿಂದು- ಮುಸ್ಲಿಂರ ಐಕ್ಯತೆಯ ಪ್ರತೀಕವಾಗುವ ಅವನು ಕ್ರಾಂತಿ-ಗಾಂಧಿಯಾಗುತ್ತಾನೆ.

೧೪೧೮. ಹೊಸರಾಗ

(೧೯೯೨ / ವರ್ಣ / ಸಾಮಾಜಿಕ)
ಲಾ: ಐಶ್ವರ್ಯಲಕ್ಷ್ಮಿ ಫಿಲಂಸ್
ಪ್ರೊ: ಎಂ.ರಾಮನ್, ಎಸ್.ಎಸ್.ರಾಮಚಂದ್ರ, ಶ್ಯಾಮಸುಂದರ ಕುಲಕರ್ಣಿ

ನಿ: ಕೆ.ವಿ.ಜಯರಾಂ
ಸ.ನಿ: ಬಿ.ಗುರುರಾಜ್, ರತ್ನಕುಮಾರ್
ಅ: ಶಶಿಕುಮಾರ್, ಸುಧಾರಾಣಿ, ಚಂದ್ರಿಕಾ, ಪ್ರಾಣ್, ವಿಕ್ರಂ, ಕೀರ್ತಿ
ಕ: ಶ್ಯಾಮಸುಂದರ ಕುಲಕರ್ಣಿ
ಚಿ.ಕ/ಮಾ: ಜಿ.ಉದಯಶಂಕರ್
ಗೀ: ಶ್ಯಾಮಸುಂದರ ಕುಲಕರ್ಣಿ, ದೊಡ್ಡರಂಗೇ ಗೌಡ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ
ಸಂ: ಶ್ಯಾಂ ಯಾದವ್
ಛಾ: ಮುತ್ತುರಾಜ್
ಕಲೆ: ಸುಭಾಷ್ ಕಡಕೋಳ್
ಸ: ಸಂಗೀತರಾಜ
ನೃ: ರಘುರಾಮ್
ಸಾ: ನಂಜುಂಡಿ ನಾಗರಾಜ್
ವ: ರಾಮು
ಪ್ರ: ಮಾದೇಗೌಡ
ಸ್ಟು: ಕಂಠೀರವ, ಚಾಮುಂಡೇಶ್ವರಿ
ಹಾ: ೧) 'ನಡೆಯೋಕೆ ಬರುವ ಮುಂಚೆ...', ೨) 'ನೀನು ಪಂದ್ಯದಲ್ಲಿ ಗೆಲ್ಲಬೇಕು...', ೩) 'ನಿಮ್ಮ ಕಣ್ಣುಂದೆ ನಾನು...', ೪) 'ಮನಸುಗಳ ಸಂಗಮಾ'... ೫) 'ಪ್ರೇಮಿಸಿದೆ ನಾನು ನಿನ್ನ ಸಂಗ...',
ಸೆ: ಉದ-೪೩೧೬.೦೦, ೨೦-೧೧-೯೧
ಕ.ಸಾ: ತ್ರಿಕೋನ ಪ್ರೇಮ ಕಥೆ. ಕಾಲೇಜಿನಲ್ಲಿ ಒಟ್ಟಿಗೆ ಓದುತ್ತಿರುವ ಅಪೂರ್ವ ಮತ್ತು ವೈಜಯಂತ್ ಪ್ರೀತಿಸುತ್ತಾರೆ. ಇದನ್ನು ಸಹಿಸದ ವಿಕ್ರಂ ವೈಜಯಂತ್‌ನನ್ನು ಮೋಟಾರ್ ಬೈಕ್ ಸ್ಪರ್ಧೆಯಲ್ಲಿ ಸೋಲಿಸಲು ಸಂಚು ಮಾಡುತ್ತಾನೆ. ಇದನ್ನು ತಿಳಿದ ಅಪೂರ್ವ ಅವನ ಬೈಕಿನ ಬ್ರೇಕ್ ಕತ್ತರಿಸುತ್ತಾಳೆ. ಆದರೆ ಸ್ಪರ್ಧೆ ಆಗುವ ಕೊನೆಗಳಿಗೆಯಲ್ಲಿ ಅವರಿಬ್ಬರು ಬೈಕ್ ಬದಲಾಯಿಸಿಕೊಳ್ಳುತ್ತಾರೆ. ಇದರಿಂದಾಗಿ ವೈಜಯಂತ್ ಕಾಲು ಕಳೆದುಕೊಳ್ಳುತ್ತಾನೆ. ಡಾ|ಮುರುಳಿ ಶಸ್ತ್ರ ಚಿಕಿತ್ಸೆ ನಡೆಸಿ ವೈಜಯಂತ್‌ನ ಕಾಲನ್ನು ಸರಿಪಡಿಸುತ್ತಾರೆ. ಅನಂತರ ಆಕಸ್ಮಿಕವಾಗಿ ಭೇಟಿಯಾಗುವ ಡಾ|ಮುರಳಿಯವರ ಮಗಳು ಸೂಕ್ಷ್ಮ ಕೂಡ ವೈಜಯಂತ್‌ನನ್ನು ಪ್ರೀತಿಸಲಾರಂಭಿಸುತ್ತಾಳೆ. ಈ ತ್ರಿಕೋನ ಪ್ರೇಮದಲ್ಲಿ ಕೊನೆಗೆ ಅಪೂರ್ವ, ವೈಜಯಂತ್ ಒಂದಾಗುತ್ತಾರೆ.

೧೪೧೯. ಚಿತ್ರಲೇಖ

(೧೯೯೨ / ವರ್ಣ / ಸಾಮಾಜಿಕ)
ಲಾ: ರಾಘವೇಂದ್ರ ಬಯಾಸ್ಕೋಪ್
ಪ್ರೊ: ಎಸ್.ರಾಘವೇಂದ್ರ
ನಿ: ವಿ.ಸೋಮಶೇಖರ್
ಸ.ನಿ: ತಿಪಟೂರು ರಘು
ಅ: ದೇವರಾಜ್, ಶ್ರುತಿ, ಪ್ರಮಿಳಾ ಜೋಷಾಯ್, ಅವಿನಾಶ್, ದೊಡ್ಡಣ್ಣ, ಸುಧೀರ್, ಸುಂದರ್ ರಾಜ್, ಸಿಹಿಕಹಿ ಚಂದ್ರು, ಸದಾಶಿವ ಬ್ರಹ್ಮಾವರ್, ರತ್ನಾಕರ್, ರಮೇಶ್ ಭಟ್
ಕ/ಚಿ.ಕ: ಎಸ್.ಪಿ.ರಾಜ
ಮಾ: ಕುಣಿಗಲ್‌ವಸಂತ
ಗೀ: ಹಂಸಲೇಖ
ಗಾ: ಚಿತ್ರಾ, ಮಂಜುಳಾ, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಶಾಸ್ತ್ರಿ, ರಾಜೇಶ್, ಜಯಪಾಲ್



ಸಂ: ವಿಕ್ಟರ್ ಯಾದವ್
ಛಾ: ಹೆಚ್.ಜಿ.ರಾಜು
ಕಲೆ: ನಜೀರ್
ಸ: ಹಂಸಲೇಖ
ಧ್ವ: ಪೀಟರ್, ಕೃಷ್ಣಮೂರ್ತಿ
ನೃ: ಸತೀಶ್
ಸಾ: ವೈ.ಶಿವಯ್ಯ
ವ: ಸತ್ಯಂ, ಪರಮಶಿವಂ
ಪ್ರ: ಎಂ.ಎಸ್.ಕೇಶವ, ಮಾಧವಯ್ಯ
ಸ್ಟು: ಕಂಠೀರವ, ಪ್ರಸಾದ್, ಸಂಕೇತ್
ಹಾ: ೧)'ಬೆಳದಿಂಗಳೇ ಬಿಸಿಲಾಗಿದೆ...', ೨)'ರಾಮನೆನ್ನಲೇನು ನಿನ್ನ...', ೩) 'ಸಾರಾಯಿ ಬಾಯಿಗೆ ಭೂಷಣ...', ೪)'ತಾಯಾದರೇನು ಸತಿಯಾದರೇನು...',
ಕ.ಸಾ: ಭಗ್ನ ಪ್ರೇಮಿಯೊಬ್ಬ ಚಿತ್ರಲೇಖಳನ್ನು ಮದುವೆಯಾಗಲು ಬರುವ ಪ್ರತಿಯೊಂದು ಗಂಡನ್ನೂ ವಿಚಿತ್ರವಾದ ರೀತಿಯಲ್ಲಿ ಕೊಲ್ಲುತ್ತಾ ಬರುತ್ತಾನೆ. ನಾಯಕ-ನಾಯಕಿ ಚಿತ್ರಲೇಖಳ ಮೇಲೆ ಅಪವಾದ ಬರುತ್ತದೆ. ನಾಯಕ ಭಗ್ನಪ್ರೇಮಿಯೊಬ್ಬ ನಡೆಸುತ್ತಿದ್ದ ಕೊಲೆಗಳ ರಹಸ್ಯವನ್ನು ಭೇದಿಸಿ, ಚಿತ್ರಲೇಖಳ ಮೇಲಿನ ಕಳಂಕವನ್ನು ನಿವಾರಿಸುತ್ತಾನೆ.

೧೪೨೦. ಶಿವನಾಗ

(೧೯೯೨ / ವರ್ಣ / ಜಾನಪದ)
ಲಾ: ಸುಕುಮಾರ್ ಆರ್ಟ್ಸ್ ಫಿಲಂಸ್
ಪ್ರೊ: ಕೆ.ಸುಕುಮಾರ್
ನಿ: ಕೆ.ಎಸ್.ಆರ್.ದಾಸ್
ಅ: ಅರ್ಜುನ್ ಸರ್ಜಾ, ಮಾಲಾಶ್ರೀ, ಸುಂದರಕೃಷ್ಣ ಅರಸ್, ಆಶಾಲತಾ, ಉಮೇಶ್, ಉಮಾಶ್ರೀ, ಪಂಢರಿಬಾಯಿ, ಸುದರ್ಶನ್
ಕ/ಚಿ.ಕ: ಚಿ.ಉದಯಶಂಕರ್
ಸಂ: ಶ್ರೀನಿವಾಸ್, ಎಂ.ಮೂರ್ತಿ
ಛಾ: ವಿ.ಲಕ್ಷ್ಮಣ್

ಕಲೆ: ವಿ.ರಂಗರಾವ್
ಸ: ರಾಜನ್-ನಾಗೇಂದ್ರ
ನೃ: ತಾರಾ
ಸಾ: ಫೋಮಲ್ ರವಿ
ವ: ಸಾಯಿ
ಪ್ರ: ವಾಣಿಪ್ರಸಾದ್
ಕಂಠೀರವ, ಚಾಮುಂಡೇಶ್ವರಿ, ಪ್ರಸಾದ್
ಹಾ: ೧)'ಮುತ್ತುಗಳಾ ರತ್ನಗಳಾ...', ೨)'ಒಂದು ಕೊಟ್ಟರೆ ನಾ ಒಲಿಯಾಲೆ ..', ೩) 'ಮನ್ಮಥ ರತಿಯು ನಮ್ಮಲ್ಲೇ...', ೪)'ಹರನಾ ಕೊರಳಲಿ ಮೆರೆಯುತಲಿರುವಾ...', ೫)'ಬಾರೋ ನನ್ನ ಮುದ್ದು ವೇಣುಗೋಪಾಲ...',
ಕ.ಸಾ: ಅಸ್ಪೃಶ್ಯ ಅಸಗಾಗಿ ಹೊಂಚು ಹಾಕಿದ ಐದು ಮಂದಿ ಮಿತ್ರರು ಒಂದು ಮನೆ ಸೇರುತ್ತಾರೆ. ಗಂಡನಿಗೆ ಹೆಂಡತಿಯಾದ ಹೆಣ್ಣು, ಅವನ ಮಗನಿಗೆ ತಾಯಿಯಾಗುವುದಿಲ್ಲ. ಮನೆಯಿಂದ ಮಗನನ್ನು ಹೊರದಬ್ಬುವರು. ಆ ಹುಡುಗ ಹಳ್ಳಿಯ ಹುಡುಗಿಯನ್ನು ಮದುವೆಯಾಗುತ್ತಾನೆ. ದುಷ್ಟರು ಅವರ ಸುಖಕ್ಕೂ ಅಡ್ಡಿಯಾಗುವರು. ಆಗ ಎರಡು ನಾಗರಹಾವುಗಳು ಮಾನವ ರೂಪ ತಾಳಿ, ಆ ಹುಡುಗ ಹುಡುಗಿಯ ವೇಷದಲ್ಲಿ ದುಷ್ಟರಿಗೆ ಬುದ್ಧಿ ಕಲಿಸಿ, ಯುವ ಜೋಡಿಯ ಬಾಳನ್ನು ಹಸನುಗೊಳಿಸುತ್ತವೆ.

೧೪೨೧. ಪುಟ್ಟ ಹೆಂಡ್ತಿ

(೧೯೯೨ / ವರ್ಣ / ಸಾಮಾಜಿಕ)
ಲಾ: ಪಾರ್ವತಿ ಪಿಕ್ಚರ್ಸ್
ಪ್ರೊ: ಹಲಗೂರು ವೆಂಕಟೇಶ್, ಹೆಚ್.ವಿ. ಸುಬ್ಬರಾವ್
ನಿ: ಎ.ಟಿ.ರಘು
ಸ.ನಿ: ರಂಗ
ಅ: ಪ್ರಭಾಕರ್, ವಜ್ರಮುನಿ, ದೊಡ್ಡಣ್ಣ, ಭಾನುಪ್ರಕಾಶ್, ಶ್ರೀಶೈಲನ್, ಕುರೇಖಾ, ಡಿಸೋಜ್ಯ ಶಾಂತಿ, ಹೇಮಾ ಚೌಧುರಿ, ಸರೋಜಿನಿ ಶೆಟ್ಟಿ
ಕ/ಚಿ.ಕ/ಮಾ: ಹೆಚ್.ವಿ.ಸುಬ್ಬರಾವ್
ಗೀ: ಆರ್.ಎನ್.ಜಯಗೋಪಾಲ್, ಹೆಚ್.ವಿ.ಸುಬ್ಬರಾವ್
ಗಾ: ಮಂಜುಳಾ, ವಿಷ್ಣು, ಕಸ್ತೂರಿ ಶಂಕರ್
ಸಂ: ಎಸ್.ಎಂ.ವಿಕ್ಟರ್
ಛಾ: ಬಿ.ಎಸ್.ಬಸವರಾಜ್
ಕಲೆ: ಮುದ್ದುಕೃಷ್ಣ
ಸ: ವಿಜಯಭಾಸ್ಕರ್
ಧ್ವ: ಕಣ್ಣನ್, ಅರುವ ಮುದನ್
ನೃ: ಕೈಲಾಸ್
ಸಾ: ವೈ.ಶಿವಯ್ಯ
ವ: ಸಿದ್ದೇಶ್
ಪ್ರ: ಸತ್ಯಂ
ಸ್ಟು: ಕಂಠೀರವ, ಪ್ರಸಾದ್, ಚಾಮುಂಡೇಶ್ವರಿ
ಹಾ: ೧)'ನಾನು ಪುಟ್ಟ ಹೆಣ್ಣು ನನ್ನ ಕಥೆ ದೊಡ್ಡದು...', ೨)'ಕಾಡೊಳಗೊಂದು ಆಡೋ ಗಿಣಿ...', ೩)'ಗಂಡೇ ಯಾಕೇ ನಿನ್ನ ರಟ್ಟೆ ನನ್ನ ಕೆಣಕುತ್ತೈತೆ...', ೪)'ಸರಿಸಾಟಿಯೇ ಚಂದ್ರನ ಅಂದ ಚಂದ...',
ಸೆ: ಉದ್ಘ-೪೨೧೫
ಕ.ಸಾ: ಬುಡಕಟ್ಟು ಜನಾಂಗದ ಅಮಾಯಕ ವ್ಯಕ್ತಿಯನ್ನು ಪ್ರೀತಿಸಿ ಮದುವೆಯಾಗುವ ಓದಿದ ಹುಡುಗಿಯೊಬ್ಬಳು ಅವನನ್ನು ರಕ್ಷಿಸುವ ಕಥೆ. ಮಲತಾಯಿಯ ಕಾಟ ತಾಳಲಾಗದೆ ಕಾಡಿಗೆ ಬರುವ ರೂಪಿಣಿಯನ್ನು ತಮ್ಮ ಜನಾಂಗದಿಂದ ಬಹಿಷ್ಕರಿಸಲ್ಪಟ್ಟಿರುವ ಮಂಜು ಮತ್ತು ಅವನ ತಾಯಿ ಕೌಶ್ಲಿ ರಕ್ಷಿಸುತ್ತಾರೆ. ಅಲ್ಲಿಯೇ ಪದ್ಮಿನಿ ಪ್ರಾಪ್ತ ವಯಸ್ಸೇರಿದ ಮಂಜನನ್ನು ಮದುವೆಯಾಗುತ್ತಾಳೆ. ಅವಳನ್ನು ಹೊಂದಲು ಅರಣ್ಯಾಧಿಕಾರಿ ಜವರಾಯಿ ಕೊಲೆ ಆರೋಪದ ಮೇಲೆ ಮಂಜು ಜೈಲು ಸೇರುವಂತೆ ಮಾಡುತ್ತಾನೆ. ಆದರೆ ಪದ್ಮಿನಿ ತನ್ನ ತಾಳ್ಮೆಯಿಂದ ಜವರಾಯಿಯೇ ಕೊಲೆಮಾಡಿರುವುದನ್ನು ಸಾಬೀತು ಮಾಡುತ್ತಾಳೆ.

೧೪೨೨. ಹೆಂಡ್ತೀರೆ ಹುಷಾರ್

(೧೯೯೨ / ವರ್ಣ / ಸಾಮಾಜಿಕ)
ಲಾ: ಶ್ರೀದೇವಿ ಪ್ರೊಡಕ್ಷನ್ಸ್
ಪ್ರೊ: ನಿ: ಸಾಯಿಪ್ರಕಾಶ್



ಸ.ನಿ: ಚಂದ್ರು ದೊಡ್ಡಮನಿ
ಅ: ಶಶಿಕುಮಾರ್, ಸೌಮ್ಯಶ್ರೀ, ಮುಖ್ಯಮಂತ್ರಿ ಚಂದ್ರು, ಶ್ರೀಲಲಿತಾ, ಮೈಸೂರು ಲೋಕೇಶ್, ಡಾ|ರಟ್ಟಿ, ಉಮಾಶ್ರೀ, ಆರತಿ, ಸತ್ಯಭಾಮ, ಶ್ರೀದೇವಿ,
ಕ: ದಾಸರಿ ನಾರಾಯಣರಾವ್
ಚಿ.ಕ/ಮಾ: ಕುಣಿಗಲ್ ನಾಗಭೂಷಣ್
ಗೀ: ಆರ್.ಎನ್.ಜಯಗೋಪಾಲ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಸಂಗೀತಾ ಕಟ್ಟಿ, ಬಿ.ಕೆ.ಸುಮಿತ್ರಾ
ಸಂ: ಕೆ.ನರಸಯ್ಯ
ಛಾ: ಜಾನಿಲಾಲ್
ಕಲೆ: ಬಾಬು
ಸ: ಉಪೇಂದ್ರ ಕುಮಾರ್
ಧ್ವ: ಎಸ್.ಪಿ.ರಾಮನಾಥನ್, ಎಂ.ಕೋದಂಡಪಾಣಿ
ನೃ: ಶಿವಶಂಕರ್
ವ: ಜಯಚಂದ್ರ
ಪ್ರ: ಚೆಲುವರಾಜ
ಹಾ: ೧)'ಪ್ರೇಮ ಬಂದಿತು...', ೨)'ಮದುವೆ ಕರೆಯೋಲೆ...', ೩)'ಮಾವ ಓ ಮಾವ...', ೪)'ಇದು ಮನ್ಮಥ ಸಾಮ್ರಾಜ್ಯ...', ೫)'ಸೀತಾಪತಿ...',
ಸೆ: ಉದ್ಘ-೩೩೨೦.೦೦, ರೀಲು-೧೪,
ಕ.ಸಾ: 'ಹೆಂಡ್ತೀರೆ ಹುಷಾರ್!' - ಎಂಬ ಪುಸ್ತಕ ಬರೆದು ಸಮಾಜದಲ್ಲಿನ ಹೆಣ್ಣುಗಳನ್ನು ಪುರುಷರ ದಬ್ಬಾಳಿಕೆಯಿಂದ ಮುಕ್ತಗೊಳಿಸಬೇಕೆಂದು ಪ್ರಯತ್ನಿಸುವ ಹೆಣ್ಣು ಸ್ವಂತ ಮಗಳ ಬಾಳನ್ನೇ ಕಣ್ಣೀರಿನಲ್ಲಿ ಮುಳುಗಿಸುತ್ತಾಳೆ. ತಾನು ಸಬಲೆ ಎಂದುಕೊಂಡು ಗಂಡನನ್ನು ತನ್ನ ಅಂಕೆಯಲ್ಲಿ ಕುಣಿಸಿದರೂ, ಗಂಡ ಅವಳ ಹಿಂದೆ ಅವಳಿಗೆ ನಿಷ್ಠನಾಗಿಲ್ಲ ಎಂದು ತಿಳಿದಾಗ ಕುಸಿಯುತ್ತಾಳೆ. ಅಳಿಯ ಗಂಡು - ಹೆಣ್ಣು ಇಬ್ಬರೂ ಸಮನಾಗಿ ನಡೆದರೆ ಬದುಕು ಸುಗಮ ಎಂಬುದನ್ನು ನಿರೂಪಿಸುತ್ತಾನೆ.

೧೪೨೩. ಬೆಳ್ಳಿ ಮೋಡಗಳು

(೧೯೯೨ / ವರ್ಣ / ಸಾಮಾಜಿಕ)
ಲಾ: ಜಿ.ವಿ.ಕೆ ಪ್ರೊಡಕ್ಷನ್ಸ್
ಪ್ರೊ: ಜಿ.ಗೋವಿಂದ, ಟಿ.ಎಸ್.ವೆಂಕಟೇಶ್, ಜಿ.ಜಿ.ಕೃಷ್ಣ
ನಿ/ಚಿ.ಕ/ಮಾ: ಕೆ.ವಿ.ರಾಜು
ಅ: ಮಾಲಾಶ್ರೀ, ರಮೇಶ್, ದೊಡ್ಡಣ್ಣ, ಜಯಂತಿ, ರಾಮಕೃಷ್ಣ, ಜ್ಯೋತಿ, ಪದ್ಮ ಕುಮಟಾ, ಮನ್‌ದೀಪ್ ರಾಯ್
ಕ: ಎಂ.ಸಿ.ಪ್ರೊಡಕ್ಷನ್ಸ್ ಕಥಾ ವಿಭಾಗ, (ಸೀತಾರಾಮಯ್ಯಗಾರಿ ಮನವರಾಲು ತೆಲುಗು ಚಿತ್ರದ ಕನ್ನಡ ರೂಪ)
ಗೀ: ಜಿ.ಜಿ.ಕೃಷ್ಣ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ
ಸಂ: ಶ್ಯಾಮ್ ಯಾದವ್
ಛಾ: ಜಿ.ಜಿ.ಕೃಷ್ಣ

ಕಲೆ: ಸುಂದರಂ
ಸ: ಉಪೇಂದ್ರ ಕುಮಾರ್
ನೃ: ಉಡುಪಿ ಜಯರಾಂ, ದೇವಿ
ಸ್ಟು: ಕಂಠೀರವ
ಹಾ: ೧)'ಮಳೆಬಿಲ್ಲ ಸಿಂಗಾರ...', ೨)'ಹೃದಯದೆ ನಿನ್ನ ಹೆಸರಿಗೆ' ... ೩) 'ಲೋಕವನೆ ತೂಗಿರುವ...', ೪) 'ರಾಮ ಬಾಣ...', ೫)'ಮಾವಿನಲಿ ಹೊಸ ಕೋಗಿಲೆಯು...', ೬) 'ಭೂಮಿಯಲಿ ಚಂದಿರನ...',
ಕ.ಸಾ: ಬಾರದ ಮಗನಿಗಾಗಿ ಕಾಯುವ ಎರಡು ಮುದಿ ಜೀವಗಳು. ಮಗ ವಿದೇಶದಲ್ಲಿ ಅಪಘಾತವೊಂದರಲ್ಲಿ ಸತ್ತಿರುತ್ತಾನೆ. ಬರಿಗೈಲಿ ಬರುವ ಮೊಮ್ಮಗಳು ನೊಂದ ಎರಡು ಜೀವಗಳ ಬಾಳಿನಲ್ಲಿ ಬೆಳ್ಳಿ ರೇಖೆ ಯಾಗುತ್ತಾಳೆ. ತಾತನ ಮನಸ್ಸನ್ನು ಗೆದ್ದು ತಾತನೊಂದಿಗೇ ನೆಲಸುವ ನಿರ್ಧಾರ ಮಾಡುತ್ತಾಳೆ.

೧೪೨೪. ಪೃಥ್ವಿರಾಜ್

(೧೯೯೨ / ವರ್ಣ / ಸಾಮಾಜಿಕ)
ಲಾ: ಸ್ವಾತಿ ಸಿನಿ ಆರ್ಟ್ಸ್
ಪ್ರೊ: ಎಂ.ಎಸ್.ಸುರೇಶ್ ಬಾಬು, ಕಲ್ಪನಾ ಸುರೇಶ್
ಚಿ.ಕ/ನಿ: ರೇಣುಕಾ ಶರ್ಮ
ಸ.ನಿ: ಬಲರಾಂ.ಜಿ
ಅ: ದೇವರಾಜ್, ಭವ್ಯ, ಪದ್ಮಾ ಕುಮಟಾ, ಸುಂದರಕೃಷ್ಣ ಅರಸ್, ಅವಿನಾಶ್, ನಾಗೇಶ್, ಅಭಿಲಾಷಾ, ಟೆನ್ನಿಸ್ ಕೃಷ್ಣ
ಕ: ಮಧುಕರ್
ಮಾ: ವೀರಪ್ಪ ಮರಳವಾಡಿ
ಗೀ: ವಿ.ಮನೋಹರ್, ವಿಜಯನಾರಸಿಂಹ, ಹಂಸಲೇಖ, ರುದ್ರಮೂರ್ತಿ ಶಾಸ್ತ್ರಿ
ಗಾ: ಜೇಸುದಾಸ್, ಕಸ್ತೂರಿ ಶಂಕರ್, ಚಿತ್ರಾ, ಬೇಬಿ ಅರ್ಚನ
ಸಂ: ಆರ್.ಶ್ಯಾಮ್ ಯಾದವ್
ಛಾ: ಎಸ್.ವಿ.ಶ್ರೀಕಾಂತ್
ಕಲೆ: ನಂಜುಂಡ ಸ್ವಾಮಿ
ಸ: ಸ್ಟಾರ್ಕ್ಸ್ ರಾಜಾ
ಧ್ವ: ಪ್ರಸಾದ್
ನೃ: ಸತೀಶ್
ಸಾ: ಸುರೇಶ್
ವ: ನಾಗರಾಜ್
ಪ್ರ: ಶ್ರೀನಿವಾಸ್
ಸ್ಟು: ಕಂಠೀರವ, ಪ್ರಸಾದ್
ಹಾ: ೧)'ಮಾವು ಸಿಹಿಯಾದ ಮಾವು...', ೨)'ಬನ್ನಿ ಕಣ್ಣಮುಚ್ಚಾಲೆ ಆಡೋಣ...', ೩)'ಚಂದನ ನಂದನ ವನ ಸುಂದರ...',
ಸೆ: ಉದ್ದ-೪೦೨೧
ಕ.ಸಾ: ತಂದೆಯನ್ನು ಕೊಂದು ತಮ್ಮನಿಂದ ದೂರ ಮಾಡಿದವರನ್ನು ಅವಳಿ ಸಹೋದರರು ಕೊನೆಗೊಳಿಸುವ ಕಥೆ. ಪೃಥ್ವಿರಾಜ್ ತನ್ನ ಹೆಂಡತಿ ಮಕ್ಕಳೊಂದಿಗೆ ಬಂದಾಗ, ಆಕಸ್ಮಾತ್ತಾಗಿ ಸಾಯುವ ಸ್ಥಿತಿಯಲ್ಲಿದ್ದ ತನ್ನಂತೆಯೇ ಇರುವ ವ್ಯಕ್ತಿಯನ್ನು ಭೇಟಿಯಾಗುತ್ತಾನೆ. ಆ ವ್ಯಕ್ತಿ ಹಾಗೂ ಪೃಥ್ವಿರಾಜ್ ಅವಳಿ ಸಹೋದರರಾಗಿದ್ದು, ಅವರ ತಂದೆಯ ಕೊಲೆ ಮಾಡಿ, ಸೋದರರಿಬ್ಬರನ್ನೂ ಅಗಲಿಸಿರುತ್ತಾರೆ. ಆ ವ್ಯಕ್ತಿ ದುಷ್ಟರನ್ನು ನಾಶ ಮಾಡಲು ಹೋಗಿ ಅವರಿಂದ ಮರಣಾಂತಿಕವಾದ ಪೆಟ್ಟನ್ನು ತಿಂದಿರುತ್ತಾನೆ. ಆ ವಿಷಯವನ್ನೆಲ್ಲಾ ಪೃಥ್ವಿರಾಜ್‌ನಿಗೆ ತಿಳಿಸಿ, ಆ ದುಷ್ಟಕೂಟದ ಬ್ಲ್ಯಾಕ್ ಡೈರಿಯನ್ನು ಒಪ್ಪಿಸುತ್ತಾನೆ. ದುಷ್ಟರ ವಿರುದ್ಧ ಸೇಡು ತೀರಿಸಿಕೊಳ್ಳುವ ಪ್ರಮಾಣವನ್ನು ಪೃಥ್ವಿರಾಜ್‌ನಿಂದ ಪಡೆದು ಕೊನೆಯುಸಿರೆಳೆಯುತ್ತಾನೆ. ಸೋದರನಿಗಿತ್ತ ಮಾತಿನಂತೆ ದುಷ್ಟರ ಮೇಲೆ ಸೇಡು ತೀರಿಸುಕೊಳ್ಳುವಲ್ಲಿ ಪೃಥ್ವಿರಾಜ್ ಯಶಸ್ವಿಯಾಗುತ್ತಾನೆ.

೧೪೨೫. ಎಂಟೆದೆ ಭಂಟ

(೧೯೯೨ / ವರ್ಣ / ಸಾಮಾಜಿಕ)
ಲಾ: ಪರಿಮಳಾ
ಪ್ರೊ: ಹೆಚ್.ಎನ್.ಮಾರುತಿ
ಚಿ.ಕ/ನಿ: ಡಿ.ರಾಜೇಂದ್ರ ಬಾಬು
ಸ.ನಿ: ಕೇಸರಿ ಹರವೂ
ಅ: ಅಂಬರೀಷ್, ವಜ್ರಮುನಿ, ಲಕ್ಷ್ಮಣ್, ರಜನಿ, ವನಿತಾ ವಾಸು, ಗಾಯಿತ್ರಿ ಪ್ರಭಾಕರ್, ಗಿರಿಜಾ ಲೋಕೇಶ್, ಕಾಶೀನಾಥ್, ರಿಚರ್ಡ್ ಲೂಯಿಸ್
ಕ: ಸುದರ್ಶನ ದೇಸಾಯಿ ಅವರ ಕಾದಂಬರಿ
ಮಾ: ಬಿ.ಎಲ್.ವೇಣು
ಗೀ: ಹಂಸಲೇಖ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಮಂಜುಳಾ ಗುರುರಾಜ್, ಜೇಸುದಾಸ್, ಲತಾ ಹಂಸಲೇಖ

ಸಂ: ಕೆ.ಬಾಲು
ಛಾ: ಹೆಚ್.ಜಿ.ರಾಜು
ಕಲೆ: ಸುಂದರಂ
ಸ: ಹಂಸಲೇಖ
ಧ್ವ: ಸಂಕೇತ್
ನೃ: ಸತೀಶ್
ಸಾ: ಜ್ಯೂಡೋ ರತ್ನಂ
ವ: ಪರಮಶಿವ, ನಾಗರಾಜ್
ಪ್ರ: ರಾಜ್‌ಗೋಪಾಲ್
ಹಾ: ೧)'ಉಟ್ಟ ಬಟ್ಟೆಯಲ್ಲಿ ಸಂಜೆಗತ್ತಲಲ್ಲಿ...', ೨)'ಯಾರೆಂದು ನೀನು ...', ೩)'ಒಬ್ಬನಿಂದ ಏನೂ ಆಗದು...',
ಸೆ: ಉದ್ದ-೩೭೬೩.೦೦, ೦೪-೦೨-೯೨
ಕ.ಸಾ: ಜಮೀನ್ದಾರರ ದಬ್ಬಾಳಿಕೆಯ ವಿರುದ್ಧ ಸಿಡಿದೇಳುವ ಹೆಣ್ಣೊಬ್ಬಳು ಅವರ ನಾಶಕ್ಕೆ ತನ್ನ ಮಗನನ್ನೇ ಅಸ್ತ್ರವಾಗಿ ಬೆಳೆಸುವ ಕಥೆ. ಜಮೀನ್ದಾರನಾದ ದೊಡ್ಡಗೌಡ ಮತ್ತು ಅವನ ಮಗ ನಾಗೇಗೌಡನ ದಬ್ಬಾಳಿಕೆಗೆ ತನ್ನ ಸಂಸಾರ ಹಾಳಾದಾಗ, ಕುಂತವ್ವ ತನ್ನ ಮಗ ಭೀಮನನ್ನು ಬಲಿಷ್ಠ ಎಂಟೆದೆಯ ಭಂಟನಂತೆ ಬೆಳೆಸಿ ಅವನ ಮೂಲಕ ಗೌಡನ ಸಂತತಿಯ ಜೊತೆಗೆ ಶೋಷಣೆಯೂ ನಿರ್ನಾಮವಾಗುವಂತ ಮಾಡುತ್ತಾಳೆ.

೧೪೨೬. ಉಂಡೂ ಹೋದ ಕೊಂಡೂ ಹೋದ

(೧೯೯೨ / ವರ್ಣ / ಸಾಮಾಜಿಕ)
ಲಾ: ಪದ್ಮಾಂಬ ಕಂಬೈನ್ಸ್
ಪ್ರೊ: ಜಿ.ಕುಮಾರಸ್ವಾಮಿ
ಕ/ಚಿ.ಕ/ಮಾ/ನಿ: ನಾಗತಿಹಳ್ಳಿ ಚಂದ್ರಶೇಖರ್
ಸ.ನಿ: ಟಿ.ಸಿ.ಜಗನ್ನಾಥ್
ಅ: ಅನಂತ್‌ನಾಗ್, ವಿಜಯಕಾಶಿ, ಟೆನ್ನಿಸ್ ಕೃಷ್ಣ, ಉಮೇಶ್, ಡಿಂಗ್ರಿ ನಾಗರಾಜ್, ಮಾಮ, ಉದಯ್ ಹುತ್ತಿನ ಗದ್ದೆ, ತಾರಾ, ಅಂಜಲಿ, ಗಿರಿಜಾ ಲೋಕೇಶ್, ಶೋಭಾ ರಾಘವೇಂದ್ರ, ಕರಿಬಸವಯ್ಯ
ಗೀ: ನಾಗತಿಹಳ್ಳಿ ಚಂದ್ರಶೇಖರ್, ಕೆ.ಎಸ್.ನರಸಿಂಹ ಸ್ವಾಮಿ
ಗಾ: ಬಿ.ಆರ್.ಛಾಯಾ, ವಿಷ್ಣುವರ್ಧನ್, ವಾಣಿ ಜಯರಾಂ, ರಾಜಕುಮಾರ್ ಭಾರತಿ
ಸಂ: ಸುರೇಶ್ ಅರಸ್
ಛಾ: ಎಸ್.ರಾಮಚಂದ್ರ
ಕಲೆ: ಶಿವರಾಂ ಭದ್ರಾವತಿ
ಸ: ವಿಜಯಭಾಸ್ಕರ್
ಧ್ವ: ಪ್ರಕಾಶ್
ನೃ: ಪ್ರಸಾದ್ ಬಾಬು, ವೈಜಯಂತಿ
ವ: ಬಾಲನ್
ಪ್ರ: ಕೃಷ್ಣ
ಸ್ಟು: ಕಂಠೀರವ, ಚಾಮುಂಡೇಶ್ವರಿ, ಪ್ರಸಾದ್, ಪ್ರೀಮಿಯರ್
ಹಾ: ೧)'ಬಂದಾನೋ ಬಂದಾನೋ ಭಾಗ್ಯವ ತಂದಾನೋ...', ೨)'ನಕ್ಕ ಹಾಗೆ ನಟಿಸಬೇಡ ನಕ್ಕು ಬಿಡು...', ೩)'ಉಂಡೂ ಹೋದ ತಿಂದೂ ಹೋದ...',
ಸೆ: ಉದ್ದ ೩೯೪೬.೦೦, ೨೭-೧೧-೯೨
ಕ.ಸಾ: ಕೌನ್ಸ್‌ಪೆಕ್ಟರ್‌ನೆಂದು ಕಮಂಗೀಪುರಕ್ಕೆ ಬಂದ ವಂಚಕ, ಸರ್ಕಾರದ ಯೋಜನೆಯಂತೆ ಹಸುಗಳನ್ನು ಕೊಡಿಸುವುದಾಗಿ ನಂಬಿಸಿ ಹಳ್ಳಿಯ ಮುಗ್ಧರಿಂದ ಹಣ ಸುಲಿಯುತ್ತಾನೆ. ಜೊತೆಗೆ ಅರ್ಚಕರ ಮಗಳ ಹೃದಯವನ್ನು ಕದಿಯುತ್ತಾನೆ. ಸುಲಿದ ಹಣದೊಂದಿಗೆ ಪರಾರಿಯಾದ ಆತ ಸರ್ವಸ್ವವನ್ನೂ ಕಳೆದುಕೊಂಡು ಅದೇ ಹಳ್ಳಿಗೆ ಮರಳಿ ಅಮಾಯಕರ ಕ್ಷಮೆ ಕೋರುತ್ತಾನೆ. ಹಳ್ಳಿಯಲ್ಲೇ ನೆಲೆಸಿ, ಆ ಅಮಾಯಕರ ಬಾಳಿಗೆ ಬೆಳಕಾಗಿ, ಹಳ್ಳಿಯ ಉದ್ಧಾರದಲ್ಲಿ ತೊಡಗಿಕೊಳ್ಳುತ್ತಾನೆ.

೧೪೨೭. ಸೆರಗು

(೧೯೯೨ / ವರ್ಣ / ಸಾಮಾಜಿಕ)
ಲಾ: ದುರ್ಗಾ ಮೂವೀಸ್
ಪ್ರೊ: ಜಯಮ್ಮ
ನಿ: .ವಿ.ರಾಜಗೋಪಾಲ್
ಸ.ನಿ: ಕೆ.ಪ್ರದೀಪ
ಅ: ವಿಜಯ್, ಧೀರೇಂದ್ರ ಗೋಪಾಲ್, ಜಿ.ಭಾರತಿ, ಸತ್ಯಭಾಮ, ಉಮಾಶ್ರೀ, ಉಷಾ, ಶಾರದಮ್ಮ, ಟಿ.ಹುಚ್ಚಪ್ಪ
ಕ: ವಿ.ರಾಜಗೋಪಾಲ್
ಮಾ: ಜಿ.ರಾಮು



ಗೀ: ಎ.ಆರ್.ಗೋಪಾಲ್‌ನಾಯಕ್
ಗಾ: ನಳಿನಿ ಕಾಮತ್
ಸಂ: ಆರ್.ಆರ್.ರೆಡ್ಡಿ
ಛಾ: ಟಿ.ಜಿ.ಶೇಖರನ್
ಕಲೆ: ಜೇಮ್ಸ್
ಸ: ಪ್ರೇಂ ಕುಮಾರ್
ವ: ಬಾಲು
ಪ್ರ: ಸಾಯಿಬಾಬ
ಸ್ಟು: ಕಂಠೀರವ, ಚಾಮುಂಡೇಶ್ವರಿ
ಹಾ: ೧)'ಮನಸು ಮಿಡಿಯುತಿದೆ ನನ್ನ...',
ಸೆ: ಉದ-೩೬೮೯.೦೦, ೨೯-೧೦-೯೦
ಕ.ಸಾ: ಅನಾಥ ಹೆಣ್ಣೊಬ್ಬಳು ಸಮಾಜದ ದೌರ್ಜನ್ಯಕ್ಕೆ ಬಲಿಯಾಗುವ ಕಥೆ. ಅನಾಥಾಶ್ರಮದಲ್ಲಿ ಬೆಳೆದ ಯುವತಿ ಹಳ್ಳಿಯೊಂದರ ಶಾಲೆಗೆ ಶಿಕ್ಷಕಿಯಾಗಿ ಬಂದು, ಅಲ್ಲಿ ಛೇರ್ಮನ್‌ನ ದೌರ್ಜನ್ಯದಿಂದಾಗಿ ಹಳ್ಳಿಯನ್ನು ಬಿಡಬೇಕಾಗಿ ಬರುತ್ತದೆ. ಆಕೆಯನ್ನು ಗೌರವಿಸುವ ಹಳ್ಳಿಯವನ ಕೊಲೆಯಾಗುತ್ತದೆ. ಆ ಯುವತಿ ರೌಡಿಗಳಿಂದ ಅತ್ಯಾಚಾರಕ್ಕೊಳಗಾಗುತ್ತಾಳೆ. ನೊಂದ ಹೆಣ್ಣು ಆತ್ಮಹತ್ಯೆಗೆ ಯತ್ನಿಸಿದಾಗ ಅವಳನ್ನು ಕಾಪಾಡಿದವ ಅಣ್ಣನಾದ, ಆ ಹೆಣ್ಣು, ಹೆಣ್ಣು ಮಗುವಿನ ತಾಯಿಯಾಗುತ್ತಾಳೆ. ಮತ್ತ ರೌಡಿಗಳಿಂದ ಅತ್ಯಾಚಾರಕ್ಕೀಡಾಗಿಮರಣಿಸುತ್ತಾಳೆ. ಅವಳನ್ನು ತಂಗಿಯಂತೆ ಕಂಡವ ದೂರ್ತರನ್ನು ಕೊಲ್ಲುತ್ತಾನೆ. ಮಗು ತಾಯಿಯಂತೆ ಅನಾಥಾಶ್ರಮ ಸೇರುತ್ತದೆ.

೧೪೨೮. ಹಳ್ಳಿ ಮೇಷ್ಟ್ರು

(೧೯೯೨ / ವರ್ಣ / ಸಾಮಾಜಿಕ)
ಲಾ: ಈಶ್ವರಿ ಪ್ರೊಡಕ್ಷನ್ಸ್
ಪ್ರೊ: ಎನ್.ವೀರಾಸ್ವಾಮಿ
ನಿ: ಮೋಹನ್-ಮಂಜು
ಅ: ರವಿಚಂದ್ರನ್, ಬಿಂದಿಯಾ
ಕ: 'ಮುಂದಾನೈ ಮುಡಿಚ್ಚು' ತಮಿಳು ಚಿತ್ರ
ಚಿ.ಕ: ಕೆ.ಭಾಗ್ಯರಾಜ್
ಮಾ/ಗೀ/ಸ: ಹಂಸಲೇಖ
ಸಂ: ಕೆ.ಬಾಲು
ಛಾ: ಪ್ರಸಾದ್
ಕಲೆ: ನಜೀರ್
ನೃ: ಸುಂದರಂ
ಸಾ: ನೀಗ್ರೋ ಜಾನಿ
ಹಾ: ೧)' ಅಕ್ಕ ನಿನ್ನ ಗಂಡ ಹಂಗಿರಬೇಕು...',
೨)'ಹಳ್ಳಿ ಮೇಷ್ಟ್ರೆ...', ೩)'ಸಂಕ್ರಾಂತಿ ...',
೪)'ಕಾಯಿ ಕಾಯಿ ನುಗ್ಗೇ ಕಾಯಿ...',
ಸೆ: ರೀಲು - ೧೫, ಉದ್ದ ೪೯೩೪. ೨೮
ಕ.ಸಾ: ಹಳ್ಳಿಯ ಚೆಲ್ಲು ಚೆಲ್ಲಾಗಿ ಆಡುವ ಹುಡುಗಿ, ಹಳ್ಳಿಗೆ ಬಂದ ವಿಧುರ ಮೇಷ್ಟ್ರನ್ನು ಮೋಹಿಸಿ, ಅವನನ್ನು ಮದುವೆಯಾಗುವ ಉದ್ದೇಶದಿಂದ, ಆತ ತನ್ನ ಬಾಳನ್ನು ಹಾಳು ಮಾಡಿದ ಎಂದು ಸುಳ್ಳು ಆಪವಾದ ಹೊರಿಸಿ, ಹಠದಿಂದ ಅವನನ್ನು ಮದುವೆಯಾಗುತ್ತಾಳೆ. ಆದರೆ ಅವಳನ್ನು ಹೆಂಡತಿಯೆಂದು ಆತ ಸ್ವೀಕರಿಸುವುದಿಲ್ಲ. ಹಲವು ಘಟನೆಗಳ ನಂತರ ಆಕೆ ತನ್ನ ಸಹನೆ-ತಾಳ್ಮೆಯಿಂದ ಅವನನ್ನು ಗೆಲ್ಲುತ್ತಾಳೆ. ಅವನ ಹೆಂಡತಿಯಾಗಿ, ಅವನ ಮಗುವಿಗೆ ತಾಯಿಯಾಗುತ್ತಾಳೆ.

೧೪೨೯. ಕ್ಷೀರಸಾಗರ

(೧೯೯೨ / ವರ್ಣ / ಪತ್ತೇದಾರಿ)
ಲಾ: ಬಾಲವಿಘ್ನೇಶ ಕ್ರಿಯೇಶನ್ಸ್
ಪ್ರೊ: ಬಾಬು ಗಣೇಶ್
ಕ/ಚಿ.ಕ/ನಿ: ಸಿಂಗೀತಂ ಶ್ರೀನಿವಾಸರಾವ್
ಸ.ನಿ: ಪೂರ್ಣಪ್ರಜ್ಞ ರಾವ್
ಅ: ಕುಮಾರ್ ಬಂಗಾರಪ್ಪ, ಅಮಲಾ, ರಶೀದ್, ಲೋಕೇಶ್, ಅಶೋಕ್ ರಾವ್, ಮನದೀಪ್‌ರಾಯ್, ವೈಶಾಲಿ ಕಾಸರವಳ್ಳಿ, ಬಿ.ಕೆ.ಶಂಕರ್, ಸದಾಶಿವ ಬ್ರಹ್ಮಾವರ್, ಲೋಹಿತಾಶ್ವ, ಮಹಿಮಾ, ಶ್ರುತಿ
ಮಾ/ಗೀ: ಚಿ.ಉದಯಶಂಕರ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ

ಛಾ: ಕೆ.ದೇವಿಪ್ರಸಾದ್
ಕಲೆ: ಇಸ್ಮಾಯಿಲ್
ಸ: ಹಂಸಲೇಖ
ಧ್ವ: ಗೋವಿಂದಸ್ವಾಮಿ, ಕೋದಂಡಪಾಣಿ
ಸ್ಟು: ಕಂಠೀರವ, ಪ್ರಸಾದ್
ಹಾ: ೧)'ಕರಿತಾಳಿ ಕರಿತಾಳಿ ಕೇಳಿಸ್ಲಿಲ್ವಾ...', ೨)'ಕಲ್ಯಾಣಿ ರಾಗ ಕಲ್ಯಾಣಿ...', ೩)'ಪ್ರಿಯಾ ಪ್ರಿಯಾ ನಿನ್ನ ರೂಪ ಪ್ರಿಯಾ...', ೪)'ಮೈಸೂರ ಹೆಣ್ಣಿಗೆ ಕಾಡಿಗೆ ಕಣ್ಣಿಗೆ...',
ಸೆ: ಉದ್ದ-೩೮೩೯
ಕ.ಸಾ: ಆಸ್ತಿಗಾಗಿ ಚಿತ್ರತಾರೆಯೊಬ್ಬಳನ್ನು ಕೊಲೆ ಮಾಡಿ, ಹೃದಯಾಘಾತವೆಂದು ಮುಚ್ಚಲಾದ ಸಂಗತಿ ಆಕೆಯ ಜೀವನವನ್ನೇ ಚಲನಚಿತ್ರವಾಗಿಸುವಾಗ ಬಯಲಾಗುತ್ತದೆ. ಜನಪ್ರಿಯ ತಾರ ಚಿತ್ರವೊಂದರಲ್ಲಿ ನಟಿಸುವಾಗ ಚಿತ್ರದ ಸಹ ನಿರ್ದೇಶಕ ಆತ್ಮೀಯನಾಗುತ್ತಾನೆ. ಆದರೆ ಆ ತಾರೆ ಹೃದಯಾಘಾತದಿಂದ ನಿಧನಳಾದಳೆಂದು ಸುದ್ದಿಯಾಗುತ್ತದೆ. ಅವಳ ಆತ್ಮೀಯನಾಗಿದ್ದ ಸಹ ನಿರ್ದೇಶಕ ಬಂಡವಾಳಿಗನಿಂದ ಸಾಲ ಪಡೆದು ಆ ತಾರೆಯ ಬದುಕನ್ನು ಚಿತ್ರಿಸ ಹೊರಡುತ್ತಾನೆ. ಆ ಸಂದರ್ಭದಲ್ಲಿ ಬುದ್ಧಿಭ್ರಮಣೆಯಾದ ಆ ತಾರೆಯ ತಂಗಿ ಚಿತ್ರಿಸಿದ ವೀಡಿಯೋ ಟೇಪ್‌ನಿಂದಾಗಿ ಬಂಡವಳಿಗ, ವಕೀಲ ಹಾಗೂ ವೈದ್ಯ ಮೂವರು ಸೇರಿ ತಾರೆಯ ಕೊಲೆ ಮಾಡಿರುವ ಸತ್ಯ ಸಂಗತಿ ಬಯಲಾಗುತ್ತದೆ.

೧೪೩೦. ಸಿಂಧೂರ ತಿಲಕ

(೧೯೯೨ / ವರ್ಣ / ಸಾಮಾಜಿಕ)
ಲಾ: ಗೀತಾ ಕಂಬೈನ್ಸ್, ಆರ್.ಎಸ್.ಆರ್ಟ್ಸ್
ಪ್ರೊ: ಟಿ. ಸತ್ಯನಾರಾಯಣ
ನಿ: ಸಾಯಿಪ್ರಕಾಶ್
ಸ.ನಿ: ಎಂ.ವಿ.ಶ್ರೀಧರ್, ಜಿ. ಸರಸಕುಮಾರ್
ಅ: ಮಾಲಾಶ್ರೀ, ಸುನಿಲ್, ಶ್ರುತಿ, ಜಗ್ಗೇಶ್, ಚಂದ್ರು, ಜೈಜಗದೀಶ್, ಅಭಿಜಿತ್, ರತ್ನಾಕರ್, ಉಮಾಶ್ರೀ, ಪದ್ಮ ಕುಮಟಾ, ಆಶಾಲತಾ
ಕ: ತಮಿಳು ಚಿತ್ರದ ಕನ್ನಡ ರೂಪಾಂತರ
ಮಾ: ಕು.ನಾಗಭೂಷಣ್
ಗೀ: ಆರ್.ಎನ್.ಜಯಗೋಪಾಲ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಸಂಗೀತಾ ಕಟ್ಟಿ
ಸಂ: ಕೆ. ನರಸಯ್ಯ
ಛಾ: ಜಾನೀಲಾಲ್
ಸ: ಉಪೇಂದ್ರ ಕುಮಾರ್
ಧ್ವ: ಎಸ್.ಪಿ.ರಾಮಮೂರ್ತಿ, ಕೋದಂಡಪಾಣಿ
ನೃ: ಶಿವಶಂಕರ್
ಸಾ: ಥ್ರಿಲ್ಲರ್ ಮಂಜು
ವ: ಜಯಚಂದ್ರ, ಬಾಬ್ಜಿ
ಪ್ರ: ಕುಮಾರ್, ಚಂದ್ರ
ಕ.ಸಾ: ನಾಯಕ ಊರೂರು ತಿರುಗಿ ಹಾಡುವ ಗಾಯಕ. ಸದಾ ಅವನನ್ನು ಪೀಡಿಸುವ ಜಗಳಗಂಟಿ ಹುಡುಗಿ. ನಾಯಕನ ಊರಿಗೆ ಬರುವ ದೇವದಾಸಿ. ಸದ್ಗುಣಿ. ಜಗಳಗಂಟಿ ಹುಡುಗಿ ನಾಯಕನನ್ನು ಪ್ರೀತಿಸುತ್ತಾಳೆ. ಆದರೆ ದೇವದಾಸಿಯ ಸದ್ಗುಣಗಳಿಗೆ ಮಾರುಹೋದ ನಾಯಕ, ಜಗಳಗಂಟಿಯ ಪ್ರೇಮಕ್ಕೆ ಕಿವುಡನಾಗಿ, ದೇವದಾಸಿಯನ್ನೇ ಮದುವೆಯಾಗಿ, ಅಂತಹ ಹೆಣ್ಣುಮಕ್ಕಳಿಗೂ ಒಂದು ಬದುಕು ಇದೆ ಎಂಬುದನ್ನು ಸಾರುತ್ತಾನೆ.

೧೪೩೧. ವಜ್ರಾಯುಧ

(೧೯೯೨ / ವರ್ಣ / ಸಾಮಾಜಿಕ)
ಲಾ: ಸಮೃದ್ಧ ಎಂಟರ್ ಪ್ರೈಸಸ್
ಪ್ರೊ: ಎಸ್.ಆರ್.ರಾಜೇಶ್ವರಿ
ನಿ: ಬಿ.ರಾಮಮೂರ್ತಿ
ಸ.ನಿ: ಎಲ್.ವೈದ್ಯನಾಥ್
ಅ: ಅನಂತ್‌ನಾಗ್, ರಮೇಶ್, ಮಾಲಾಶ್ರೀ, ದೊಡ್ಡಣ್ಣ, ಮುಖ್ಯಮಂತ್ರಿ ಚಂದ್ರು, ತಾರಾ, ಜಯಂತಿ, ಮೈಸೂರು ಲೋಕೇಶ್, ಅರವಿಂದ್, ಲೋಹಿತಾಶ್ವ, ಬ್ಯಾಂಕ್ ಜನಾರ್ದನ್
ಗೀ/ಸ: ಹಂಸಲೇಖ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ, ಮಂಜುಳಾ, ಲತಾ ಹಂಸಲೇಖ
ಸಂ: ಕೆ. ನರಸಯ್ಯ
ಛಾ: ವಿ.ಕೆ.ಕಣ್ಣನ್
ಕಲೆ: ಕೃಷ್ಣಾಚಾರಿ
ನೃ: ತಾರಾ
ಸಾ: ಶಿವಯ್ಯ, ಥ್ರಿಲ್ಲರ್ ಮಂಜು
ವ: ಚೆಲುವರಾಜು
ಪ್ರ: ಜಯಚಂದ್ರನ್
ಸ್ಟು: ಚಾಮುಂಡೇಶ್ವರಿ, ಪ್ರಸಾದ್
ಹಾ: ೧)'ಕಾಲೇಜಿನ ಕನಸಿನ ರಾಣಿ...', ೨)'ನಾವೆಂದೂ ಮರೆಯದ ಟೂರು...', ೩)'ಮೋಹಿನಿ ನಾನು ಮಾಯಾ ಮೋಹಿನಿ...', ೪)'ಜಗ ಉರುಳುತಿದೆ ಯುಗ ಮರಳುತಿದೆ...',
ಸೆ: ಉದ್ದ-೩೯೩೫.೦೦
ಕ.ಸಾ: ಕೊಲೆ ಮಾಡಿದವರ ವಿರುದ್ಧ ಕಾನೂನು ರೀತಿಯಲ್ಲಿ ಕ್ರಮ ಜರುಗಿಸಲು ಸಾಧ್ಯವಾಗದಿದ್ದಾಗ ಬೇರೊಂದು ಮಾರ್ಗದಲ್ಲಿ ಯಶಸ್ವಿಯಾಗುವ ಕಥೆ. ಕಾನೂನು ಪದವೀಧರೆಯಾದ ಪದ್ಮಿನಿಗೆ ತನ್ನಣ್ಣ ರಾಜಾ ಶರಶ್ಚಂದ್ರ ಪ್ರಸಾದ್‌ನ ಕೊಲೆ ಮಾಡಿದ ರುದ್ರಣ್ಣ ತಂಡದವರಿಗೆ ಕೋರ್ಟ್‌ನಲ್ಲಿ ಶಿಕ್ಷೆ ಕೊಡಿಸಲು ಸಾಧ್ಯವಾಗುವುದಿಲ್ಲ. ಆಗ ಈ ತಂಡದಿಂದ ಅನ್ಯಾಯಕ್ಕೊಳಗಾದ ನಾಲ್ವರು ಹೆಣ್ಣುಗಳನ್ನು ಒಂದುಗೂಡಿಸಿ ಪದ್ಮಿನಿ ತನ್ನ ಕಾರ್ಯದಲ್ಲಿ ಗೆಲುವು ಸಾಧಿಸುತ್ತಾಳೆ.

೧೪೩೨. ರಾಜಾಧಿರಾಜ

(೧೯೯೨ / ವರ್ಣ / ಸಾಮಾಜಿಕ)

ಲಾ/ಪ್ರೊ: ಶ್ರೀ ವೈಷ್ಣವಿ ಇಂಟರ್‌ನ್ಯಾಷನಲ್
ಚಿ.ಕ/ನಿ: ಭಾರ್ಗವ
ಸ.ನಿ: ಸಿ.ಹೆಚ್.ಬಾಲಾಜಿ ಸಿಂಗ್, ಕೆ.ಬಿ.ಹಿರೇಮಠ್. ಎಸ್.ಉದಯ್
ಅ: ವಿಷ್ಣುವರ್ಧನ್, ರೂಪಿಣಿ, ಅಶ್ವತ್ಥ್, ರಾಜಾನಂದ್, ವಜ್ರಮುನಿ, ಪಂಢರೀ ಬಾಯಿ, ಇಂದುಧರ್, ಮುಖ್ಯಮಂತ್ರಿ ಚಂದ್ರು, ಭವ್ಯಶ್ರೀರೈ, ಸೌಮ್ಯಶ್ರೀ, ಸಿಹಿಕಹಿ ಚಂದ್ರು
ಕ: ಎನ್.ಟಿ.ಜಯರಾಮ್ ರೆಡ್ಡಿ
ಮಾ: ಬಿ.ಎಲ್.ವೇಣು
ಗೀ: ಎಂ.ಎನ್.ವ್ಯಾಸರಾವ್, ಚಿ.ಉದಯಶಂಕರ್, ರುದ್ರಮೂರ್ತಿ ಶಾಸ್ತ್ರಿ, ಶ್ರೀರಂಗ, ಶ್ಯಾಮಸುಂದರ ಕುಲಕರ್ಣಿ, ದೊಡ್ಡರಂಗೇಗೌಡ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ, ಮಂಜುಳಾ ಗುರುರಾಜ್
ಸಂ: ವಿಕ್ರಮ್ ಯಾದವ್
ಛಾ: ಡಿ.ವಿ.ರಾಜಾರಾಂ, ಆನಂದ್
ಕಲೆ: ನಜೀರ್
ಸ: ವಿಜಯಾನಂದ್
ಧ್ವ: ಚಾಮುಂಡೇಶ್ವರಿ
ನೃ: ಉಡುಪಿ ಜಯರಾಂ-ದೇವಿ
ಸಾ: ಜ್ಯೂಡೋ ರತ್ನಂ
ವ: ರಾಮನಾಥ್
ಪ್ರ: ಮೈಸೂರು ವೆಂಕಟೇಶ್
ಸ್ಟು: ಕಂಠೀರವ, ಅಭಿಮಾನ್, ಚಾಮುಂಡೇಶ್ವರಿ
ಹಾ: ೧)'ನಿನ್ನಲ್ಲಿರೋ ಅಂದ ನನಗಾಗಿ ಅಲ್ಲವೇನೇ...', ೨)'ಡವಡವ ಹೃದಯದ ಬೀಟು...', ೩)'ಹರಿದ ಗುಂಗಿನಲೇ ಎಂತಹ ಥ್ರಿಲ್ಲಿದೆಯೋ ...', ೪)'ಜಾ ಪ್ರಿಯ ಕಾಮಿನೀ...',
ಸೆ: ಉದ ೪೩೯.೦೦, ೧೮-೦೩-೯೨
ಕ.ಸಾ: ನಿಷ್ಠಾವಂತ ಆಟೋರಿಕ್ಷಾ ಚಾಲಕನ ಕಥೆ. ಇಂಥ ಚಾಲಕ ರಾಜಾ ಚಿತ್ರದ ನಾಯಕ. ಅನೇಕ ಚಾಲಕರಿಗೆ ಸ್ವಂತ ಆಟೋ ಹೊಂದಲು ನೆರವು, ಗರ್ಭಿಣಿ ಸ್ತ್ರೀಯರನ್ನು ಆಸ್ಪತ್ರೆಗೆ ಸಾಗಿಸಲು ಕರೆದೊಯ್ಯುವ ಉಚಿತ ಸೇವೆ ಸಲ್ಲಿಸುತ್ತಿರುತ್ತಾನೆ. ಅವನ ತಂದೆಯ ಕೊಲೆ ಮಾಡಿದವರ ವಿರುದ್ಧ ಸೇಡು ತೀರಿಸಿಕೊಳ್ಳುವಲ್ಲಿ ರಾಜ ಸಫಲನಾಗುತ್ತಾನೆ.

೧೪೩೩. ಗೂಂಡಾ ರಾಜ್ಯ

(೧೯೯೨ / ವರ್ಣ / ಸಾಮಾಜಿಕ)

ಲಾ: ಶ್ರೀ ದುರ್ಗಾ ಆರ್ಟ್ ಪ್ರೊಡಕ್ಷನ್ಸ್
ಪ್ರೊ: ಬಿ.ದಮಯಂತಿ, ಬಿ.ನಾಗಿ ರೆಡ್ಡಿ
ನಿ: ವಿಜಯ್
ಸ.ನಿ: ಎ.ಎನ್.ಜಯರಾಮಯ್ಯ
ಅ: ದೇವರಾಜ್, ವಿನಯಾ ಪ್ರಸಾದ್, ಅಶೋಕ್ ರಾವ್, ಸುದರ್ಶನ್, ವೈಶಾಲಿ, ಸದಾಶಿವ ಬ್ರಹ್ಮಾವರ್, ಆಶಾಲತಾ, ಸಿಹಿಕಹಿ ಚಂದ್ರು, ಹೇಮಲತಾ
ಕ/ಮಾ: ಸಿ.ಗಣೇಶ್
ಚಿ.ಕ: ಬಿ.ಎಲ್.ವೇಣು
ಗೀ: ಆರ್.ಎನ್.ಜಯಗೋಪಾಲ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಸಂಗೀತಾ ಕಟ್ಟಿ
ಸಂ: ಕೆ.ನರಸಯ್ಯ
ಛಾ: ಮಲ್ಲಿಕಾರ್ಜುನ್
ಕಲೆ: ಸುಂದರ್
ಸ: ಉಪೇಂದ್ರ ಕುಮಾರ್
ಧ್ವ: ಎಸ್.ಪಿ.ರಾಮನಾಥನ್, ಗೋವಿಂದಸ್ವಾಮಿ
ನೃ: ಉಡುಪಿ ಜಯರಾಂ
ಸಾ: ಥ್ರಿಲ್ಲರ್ ಮಂಜು
ವ: ರಾಜ ಗೋಪಾಲ್
ಪ್ರ: ಸತ್ಯಂ
ಸ್ಟು: ಚಾಮುಂಡೇಶ್ವರಿ, ಪ್ರಸಾದ್
ಹಾ: ೧)' ನೀ ಸಂತೋಷ ಚೆಲ್ಲಾಡಿದೇ...', ೨)'ಕಣ್ಣು ಕಂಡ ದೈವ...', ೩)'ಶಂಕರೀ ಶಾಲಿನೀ ಶಾಂಭವಿಯೇ...', ೪)'ಓ ಪ್ರಿಯಾ ನಾಕವೂ ನೀನೇ ನರಕವು ನೀನೇ...',
ಕ.ಸಾ: ಸಮಾಜ ಘಾತುಕರೂ, ಕಂಟಕರೂ ಆದ ಗೂಂಡಾಗಳು, ಅವರನ್ನು ಬೇಟೆಯಾಡಲು ಸಿದ್ಧರಾದ ಪೋಲೀಸರು. ಇವರ ನಡುವಣ ನಿರಂತರ ಹೋರಾಟದ ಚಿತ್ರಣ.

೧೪೩೪. ಪುರುಷೋತ್ತಮ

(೧೯೯೨ / ವರ್ಣ / ಸಾಮಾಜಿಕ)

ಲಾ: ರೇಣುಕಾಂಬ ಕಂಬೈನ್ಸ್
ಪ್ರೊ: ಮಧು ಬಂಗಾರಪ್ಪ
ನಿ: ಎಂ.ಎಸ್.ರಾಜಶೇಖರ್
ಸ.ನಿ: ಗಾಯತ್ರಿ
ಅ: ಶಿವರಾಜ್‌ಕುಮಾರ್, ಶಿವರಂಜಿನಿ, ಮಧುಬಾಲಾ, ಮುಖ್ಯಮಂತ್ರಿ ಚಂದ್ರು, ಶ್ರೀನಾಥ್, ವಜ್ರಮುನಿ, ಸುಧೀರ್, ಸದಾಶಿವ ಬ್ರಹ್ಮಾವರ್, ಉಮೇಶ್, ಬಾಲಕೃಷ್ಣ
ಕ/ಚಿ.ಕ: ಟಿ.ಎನ್.ನರಸಿಂಹನ್
ಮಾ: ಗೀತಪ್ರಿಯ, ಟಿ.ಎನ್.ನರಸಿಂಹನ್
ಗೀ/ಸ: ಹಂಸಲೇಖ
ಗಾ: ಶಿವರಾಜ್ ಕುಮಾರ್, ಮಂಜುಳಾ ಗುರುರಾಜ್, ಶಾಸ್ತ್ರಿ, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಡಾ।ರಾಜಕುಮಾರ್
ಸಂ: ಮನೋಹರ್
ಛಾ: ವಿ.ಕೆ.ಕಣ್ಣನ್
ಕಲೆ: ಬಾಬು

ನೃ: ಪ್ರಸಾದ್ ಬಾಬು
ಸಾ: ಜ್ಯೂಡೋ ರತ್ನಂ
ಸ್ಟು: ಚಾಮುಂಡೇಶ್ವರಿ, ಪ್ರಸಾದ್
ಹಾ: ೧)'ಕಾಂಚಣ ಕಾಂಚಣ ಮಿಣ ಮಿಣ ಕಾಂಚಣ...', ೨)'ಮಧುವಾದೆ ನೀನು ನನ್ನ ಹಾಡಿಗೆ...', ೩)' ಸದಾ ಜಯ ತೋಳಲ್ಲಿರುವ ಗಂಡು ಶಿವಾ...', ೪)'ಚೆಂದುಳ್ಳಿ ಹೆಣ್ಣೆ ಮಿಂಚುಳ್ಳಿ ಕಣ್ಣೇ. .', ೫)'ನಾನು ನಿಮ್ಮವನು ನಿಮ್ಮ ಮನೆಯವನು...', ೬)' ಸೂಪರೋ ಸೂಪರು ...'
ಸೆ: ಉದ್ದ ೪೧೯೦, ೦೮-೦೪-೯೨
ಕ.ಸಾ: ಮೂವರ ತಂಡವೊಂದು ಅನ್ಯಾಯದ ವಿರುದ್ಧ ಹೋರಾಡಿ ಜನರಿಗೆ ಒಳಿತುಮಾಡುವ ಕಥೆ. ಸಣ್ಣಪುಟ್ಟ ಕಳ್ಳತನ ಮಾಡಿ ಬದುಕುವ ಮೂವರು. ಈ ತಂಡ ಚಿಟ್‌ಫಂಡ್‌ನಲ್ಲಿ ನಡೆಯುವ ಅನ್ಯಾಯವನ್ನು ಬಯಲಿಗೆಳೆಯುತ್ತದೆ. ಅಲ್ಲದೆ ಕೊಲೆಯಾದ ಗ್ರಾನೈಟ್ ಸಂಸ್ಥೆಯೊಂದರ ಮಾಲೀಕನ ಕೊಲೆಯ ರಹಸ್ಯವನ್ನು ಕಂಡು ಹಿಡಿದು, ಕೊಲೆಯ ಆರೋಪ ಹೊತ್ತಿದ್ದ ಅದೇ ಸಂಸ್ಥೆಯ ಕಾರ್ಮಿಕ ನಾಯಕನ ನಿರಪರಾಧಿತ್ವವನ್ನು ಸಾಬೀತು ಪಡಿಸುತ್ತದೆ.

೧೪೩೫. ಮಾಲಾಶ್ರೀ ಮಾಮಾಶ್ರೀ

(೧೯೯೨ / ವರ್ಣ / ಸಾಮಾಜಿಕ)

ಲಾ: ಡೈನಾಮಿಕ್ ಫಿಲಂ ಮೇಕರ್ಸ್
ಪ್ರೊ: ಹರಿಪ್ರಸಾದ್, ಎ.ಜಿ.ವಿ.ಪ್ರಸಾದ್
ನಿ: ಸಾಯಿಪ್ರಕಾಶ್
ಸ.ನಿ: ಲಿಂಗರಾಜ್ ಕಗ್ಗಲ್
ಅ: ಮಾಲಾಶ್ರೀ, ಸುನಿಲ್, ತಾರಾ, ಬಾಲರಾಜ್, ಸುಧಾ ನರಸಿಂಹರಾಜು, ಮುಖ್ಯಮಂತ್ರಿ ಚಂದ್ರು, ಶಿವರಾಂ, ಉಮೇಶ್, ಉಮಾಶ್ರೀ, ಜನಾರ್ದನ್, ಸಾಯಿಪ್ರಕಾಶ್, ಡಿಂಗ್ರಿ ನಾಗರಾಜ್
ಕ/ಚಿ.ಕ: ರಾಂ ಪ್ರಸಾದ್



ಮಾ: ಕುಣಿಗಲ್ ನಾಗಭೂಷಣ್
ಗೀ: ಆರ್.ಎನ್.ಜಯಗೋಪಾಲ್,
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ, ಮಂಜುಳಾ ಗುರುರಾಜ್, ಚಂದ್ರಿಕಾ
ಸಂ: ನರಸಯ್ಯ
ಛಾ: ಜಾನಿಲಾಲ್
ಕಲೆ: ಬಾಬು
ಸ: ರಾಜ್-ಕೋಟಿ
ಧ್ವ: ಚಾಮುಂಡೇಶ್ವರಿ
ನೃ: ಶಿವಶಂಕರ್
ಸಾ: ಥ್ರಿಲ್ಲರ್ ಮಂಜು
ವ: ನಾಗರಾಜ್, ಬಾಬ್ಜಿ
ಪ್ರ: ಚೆಲುವರಾಜ್
ಸ್ಟು: ಪ್ರಸಾದ್, ಚಾಮುಂಡೇಶ್ವರಿ, ಪ್ರೀಮಿಯರ್
ಹಾ: ೧)'ಬಂದಾನೋ ಭೂಮಿಗೇ ಚಂದಾಮಾಮ...', ೨)'ನಿನ್ನಲಿ ನಿನ್ನಲಿ ಒಂದಾದೆ ನಾ ಒಂದಾದೆ...', ೩)'ಬಾರೋ ನನ್ನ ಪಾಳೇಗಾರ...', ೪)'ಯಾರವ ಶಿಲ್ಪಿಯೋ ಕಾಣೆ...', ೫)'ಈ ಶತಮಾನದ ಕಟ್ಟಿನ ಹೆಣ್ಣು...',
ಕ.ಸಾ: ತನ್ನ ತಂದೆಯನ್ನು ಅವಮಾನಿಸಿದವನ ಮಗನನ್ನೇ ಪ್ರೀತಿಸಿ, ಆ ಮನೆಯ ಸೊಸೆಯಾಗಿ ಬಂದ ತರುಣಿ, ತಂಗಿಯ ಜೊತೆ ಸೇರಿ ತನ್ನ ತಂದೆಗಾದ ಅಪಮಾನಕ್ಕೆ ಪ್ರತೀಕಾರ ತೆಗೆದುಕೊಳ್ಳುವ ಕಥೆ. ಅಡಿಗಡಿಗೂ ಹಾಸ್ಯ ತುಂಬಿದ ಚಿತ್ರ.

೧೪೩೬. ಮೈಸೂರು ಜಾಣ

(೧೯೯೨ / ವರ್ಣ / ಸಾಮಾಜಿಕ)

ಲಾ: ಎ.ಟಿ.ಆರ್.ಫಿಲಂಸ್
ಪ್ರೊ/ನಿ: ಎ.ಟಿ.ರಘು

ಅ: ಅಂಬರೀಷ್, ವಜ್ರಮುನಿ, ಮುಖ್ಯಮಂತ್ರಿ ಚಂದ್ರು, ದೊಡ್ಡಣ್ಣ, ಲೋಹಿತಾಶ್ವ, ಬೆಂಗಳೂರು ನಾಗೇಶ್, ನೀಗ್ರೋ ಜಾನಿ, ಸರಿಗಮವಿಜಿ, ವಿನಯಾ ಪ್ರಸಾದ್, ಅಂಜನಾ, ಕಮಿನೀಧರನ್
ಕ: ಹೆಚ್.ವಿ.ಸುಬ್ಬರಾವ್
ಚಿ.ಕ/ಮಾ: ಎ.ಟಿ.ರಘು
ಗೀ: ಆರ್. ಎನ್.ಜಯಗೋಪಾಲ್, ಶ್ಯಾಮ ಸುಂದರ ಕುಲಕರ್ಣಿ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ
ಸಂ: ವಿಕ್ಟರ್
ಛಾ: ಸುಂದರನಾಥ ಸುವರ್ಣ
ಕಲೆ: ಆರ್.ಕೆ.ಸುಂದರಂ
ಸ: ರಾಜನ್-ನಾಗೇಂದ್ರ
ನೃ: ಸತೀಶ್
ಸಾ: ಜ್ಯೂಡೋ ರತ್ನಂ
ವ: ಸತ್ಯಂ
ಪ್ರ: ಕುಮಾರ್ ನೊಣವಿನಕೆರೆ
ಸ್ಟು: ಚಾಮುಂಡೇಶ್ವರಿ, ಕಂಠೀರವ, ಪ್ರಸಾದ್
ಹಾ: ೧)'ಹೀರೋ ಹ್ಯಾಂಡ್‌ಸಂ ಹೀರೋ...', ೨)'ಸ್ನೇಹದ ಸಂಕೇತವಾಗಿ...', ೩)'ಅಲ್ಲಾವುದ್ದೀನ್ ಚಿರಾಗು ತಂದ...', ೪)'ಜಾಣ ಜಾಣ ಮೈಸೂರು ಜಾಣ...', ೫)'ಸೂರ್ಯಕಾಂತಿ ರವಿಯ ಮರೆತು...',
ಸೆ: ಉದ್ದ-೪೪೦೩.೦೦, ೨೦-೦೪-೯೨
ಕ.ಸಾ: ಚಿಕ್ಕಪ್ಪನೇ ತಂದೆಯ ಕೊಲೆ ಮಾಡಿ ಮಗನ ಮೇಲೆ ಹಾಕಿ ಜೈಲು ಸೇರುವಂತೆ ಮಾಡಿದ. ಕೊನೆಯಲ್ಲಿ ಮಗ ಸತ್ಯವನ್ನು ಬಯಲಿಗೆಳೆಯುವ ಕಥೆ. ನಿಷ್ಠಾವಂತ ಶಾಸಕ ಮತ್ತು ಸಾಧ್ವಿ ಮಡದಿ. ಮಗ ಗುಣವಂತ. ಮೈಸೂರು ಜಾಣನೆಂದೇ ಹೆಸರಾದವ. ಶಾಸಕನ ತಮ್ಮ ಅಣ್ಣನ ಕೊಲೆಗೈದು, ಮನೆಗೆ ಬೆಂಕಿ ಹಚ್ಚಿ ಆ ಅಪರಾಧ ಮೈಸೂರು ಜಾಣನ ಮೇಲೆ ಬರುವಂತೆ ಮಾಡುತ್ತಾನೆ. ಆ ಯುವಕ ತಾನು ಮಾಡದ ಅಪರಾಧಕ್ಕಾಗಿ ಜೈಲು ಸೇರುತ್ತಾನೆ. ತಮ್ಮ ತಾನೇ ಶಾಸಕನಾಗಿ ತೆರವಾದ ಅಣ್ಣನ ಸ್ಥಾನಕ್ಕೆ ಆಯ್ಕೆಯಾಗುತ್ತಾನೆ. ಜೈಲಿನಲ್ಲಿಯೇ ವಿದ್ಯಾವಂತನಾದ ಯುವಕ ಜೈಲಿನಿಂದ ಹೊರಬಂದು ತಂದೆಯ ಕೊಲೆಗೈದ ಚಿಕ್ಕಪ್ಪನ ಅಪರಾಧಗಳನ್ನು ಸಾಕ್ಷ್ಯಾಧಾರ ಸಹಿತ ಸಾಬೀತು ಮಾಡಿ, ಜೈಲಿಗಟ್ಟಿ ತಾಯಿಯನ್ನು ಸೇರುತ್ತಾನೆ.

೧೪೩೭. ಸೋಲಿಲ್ಲದ ಸರದಾರ

(೧೯೯೨ / ವರ್ಣ / ಸಾಮಾಜಿಕ)

ಲಾ: ವಿಜಯ ಫಿಲಂಸ್
ಪ್ರೊ: ಕೆ.ಪ್ರಭಾಕರ್
ನಿ: ಸಾಯಿಪ್ರಕಾಶ್
ಸ.ನಿ: ಆರ್.ಶ್ರೀನಿವಾಸ್
ಅ: ಅಂಬರೀಷ್, ಮಾಲಾಶ್ರೀ, ಭವ್ಯ, ದೊಡ್ಡಣ್ಣ, ಮುಖ್ಯಮಂತ್ರಿ ಚಂದ್ರು, ಮೈಸೂರು ಲೋಕೇಶ್, ಟೆಂಗ್ರಿ ನಾಗರಾಜ್, ಕಮಿನೀಧರನ್, ಸಿತಾರಾ, ವೆಂಕಟೇಶ್
ಕ/ಚಿ.ಕ: ಸಾಯಿಪ್ರಕಾಶ್
ಮಾ: ಕುಣಿಗಲ್ ನಾಗಭೂಷಣ್
ಗೀ: ಹಂಸಲೇಖ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಶಿವರಾಂ, ಚಿತ್ರಾ, ಮಂಜುಳಾ ಗುರುರಾಜ್
ಸಂ: ಕೆ.ನರಸಯ್ಯ
ಛಾ: ಮಲ್ಲಿಕಾರ್ಜುನ
ಕಲೆ: ಬಾಬು
ಸ: ಹಂಸಲೇಖ
ಧ್ವ: ಕೋದಂಡಪಾಣಿ, ಗೋವಿಂದಸ್ವಾಮಿ
ನೃ: ಸತೀಶ್
ಸಾ: ಜ್ಯೂಡೋ ರತ್ನಂ
ವ: ಜೈ ಚಂದ್ರ
ಪ್ರ: ಚೆಲುವರಾಜು
ಸ್ಟು: ಕಂಠೀರವ, ಚಾಮುಂಡೇಶ್ವರಿ
ಹಾ: ೧)'ಕಾವೇರಮ್ಮ ಕಾಪಾಡಮ್ಮ...',
೨)'ಜೋಗಯ್ಯ ಕೈ ನೋಡಯ್ಯ...',
೩)'ಕನ್ನಡ ರೋಮಾಂಚನಾವೀ ಕನ್ನಡ...',
೪)'ಯಾರಿಗಾಗಿ ಹೇಳೆ ನಿನ್ನ ಪ್ರೇಮ...',
೫)'ಜನರೇ ಕೇಳಿ ಜನರೇ ಒಂದು ಕಥೆಯ...',
ಕ.ಸಾ: ಇಬ್ಬರು ಗೆಳತಿಯರು ಒಬ್ಬನನ್ನೇ ಪ್ರೀತಿಸಿದಾಗ ಒಬ್ಬಳ ತ್ಯಾಗ ಮಾಡುವಂತಹ ಪರಿಸ್ಥಿತಿಯ ಸುತ್ತ ಹೆಣೆಯಲಾದ ಕಥೆ. ಊರಿನ ಅಚ್ಚುಮೆಚ್ಚಿನ ಯುವಕನಾದ ಕೃಷ್ಣನನ್ನು ಮಾವನ ಮಗಳು ರಾಧ ಗಂಡನೆಂದೇ ತಿಳಿದುಕೊಂಡಿರುತ್ತಾಳೆ. ಆದರೆ ಜಮೀನ್ದಾರನ ಮಗಳು ರುಕ್ಮಿಣಿ ಕೃಷ್ಣನಿಗೆ ಮನ ಸೋಲುತ್ತಾಳೆ. ಇವರಿಬ್ಬರು ಬಾಲ್ಯದ ಗೆಳೆಯರು. ಇದನ್ನು ತಿಳಿದಾಗ ರಾಧ ರುಕ್ಮಿಣಿಗಾಗಿ ತನ್ನ ಪ್ರೇಮವನ್ನು ಮುಚ್ಚಿಟ್ಟು ತ್ಯಾಗ ಮಾಡುತ್ತಾಳೆ. ಕೃಷ್ಣ ರುಕ್ಮಿಣಿಯ ಮದುವೆಗೆ ಜಮೀನ್ದಾರ ಅಡ್ಡಿಯಾಗುತ್ತಾನೆ. ನಂತರ ರಾಧೆಗೆ ರುಕ್ಮಿಣಿಯೇ ಕೃಷ್ಣನ ಬಾಲ್ಯ ವಿವಾಹದ ಪತ್ನಿ ಎಂದು ತಿಳಿದು ಬರುತ್ತದೆ. ನಂತರದ ಬೆಳವಣಿಗೆಯಲ್ಲಿ ಕೃಷ್ಣ ಇಬ್ಬರನ್ನೂ ವರಿಸುತ್ತಾನೆ.

೧೪೩೮. ಸಪ್ತಪದಿ

(೧೯೯೨ / ವರ್ಣ / ಸಾಮಾಜಿಕ)

ಲಾ: ವಾಹಿನಿ ಸಿನಿ ಕಂಬೈನ್ಸ್
ಪ್ರೊ: ಎಸ್.ಎ.ಶ್ರೀನಿವಾಸ್
ನಿ: ಭಾರ್ಗವ
ಸ.ನಿ: ಸಿ.ಹೆಚ್.ಬಾಲಾಜಿ ಸಿಂಗ್, ಹಿರೇಮಠ್, ಎಸ್. ಉದಯ್
ಅ: ಅಂಬರೀಷ್, ರೂಪಿಣಿ, ಸುಧಾರಾಣಿ, ಕೆ.ಎಸ್.ಅಶ್ವತ್ಥ್, ರಮೇಶ ಭಟ್, ಪೃಥ್ವಿರಾಜ್, ಸುಂದರಕೃಷ್ಣ ಅರಸ್, ಗಿರಿಜಾ ಲೋಕೇಶ್, ಅಂಜಲಿ, ಸೀಮಾ, ಶೀಲಾ, ಸಿಹಿಕಹಿ ಚಂದ್ರು, ಅಭಿಜಿತ್, ಎಂ.ಎಸ್.ಕಾರಂತ್, ಮಹದೇವಪ್ಪ, ಎಂ.ಎಸ್.ಉಮೇಶ್, ಬೆಮೆಲ್ ಸೋಮಣ್ಣ
ಕ: ಶ್ರೀಮತಿ ಸಾಯಿಸುತ ಕಾದಂಬರಿ ಆಧಾರ
ಚಿ.ಕ/ಮಾ/ಗೀ ಚಿ.ಉದಯಶಂಕರ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಮಂಜುಳಾ, ಸಂಗೀತಾ ಕಟ್ಟಿ, ಡಾ।ರಾಜ್
ಸಂ: ಮನೋಹರ್

ಛಾ: ಬಿ.ಸಿ.ಗೌರಿಶಂಕರ್
ಕಲೆ: ನಜೀರ್
ಸ: ಉಪೇಂದ್ರ ಕುಮಾರ್
ಧ್ವ: ರಾಮನಾಥನ್, ಕೋದಂಡಪಾಣಿ
ನೃ: ಉಡುಪಿ ಜಯರಾಂ, ದೇವಿ
ವ: ವೀರರಾಜ್, (ನಾಗರಾಜ್)
ಪ್ರ: ಮೂಗೂರು ಗುರು, ಕೇಶಾಲಂಕಾರ: ನಾಗೇಶ್ವರ ರಾವ್
ಸ್ಟು: ಚಾಮುಂಡೇಶ್ವರಿ
ಹಾ: ೧) 'ಸಪ್ತಪದಿ ಇದು ಸಪ್ತಪದಿ...', ೨) 'ಚಿನ್ನ ನಿನ್ನ ನಯನದಿ...', ೩) 'ಬಾಳಲಿ ವಿವಾಹದ ಅನುಬಂಧ...', ೪)'ಕೋಣೆಯಲ್ಲಿ ಮಂಚ ಕಂಡೆನು...', ೫)'ಕರುಣೆ ತೋರಮ್ಮ ತಾಯೇ ಗೌರಮ್ಮ...',
ಸೆ: ಉದ್ದ-೩೬೭೯.೦೦, ರೀಲು-೧೪, ೧೯-೦೪-೯೨
ಕ.ಸಾ: ಮದುವೆಯ ನಿಜವಾದ ಅರ್ಥವನ್ನು ಹೇಳುವಂಥ ಕಥೆ. ನಾಯಕ ಸುಧಾಕರ ಆವೇಶಕ್ಕೆ ಸಿಕ್ಕಿ ಸುಧಾಳೊಂದಿಗೆ ಸಪ್ತಪದಿ ತುಳಿದು ಮದುವೆಯಾಗುತ್ತಾನೆ. ಆದರೆ ಚಿಕ್ಕಂದಿನಿಂದಲೂ ಅವನನ್ನೇ ಗಂಡನೆಂದೇ ಭಾವಿಸಿಕೊಂಡು ಬೆಳೆದ ಸೋದರಮಾವನ ಮಗಳು ಸಹನಾಳೊಂದಿಗೆ ಹಾರ ಬದಲಾಯಿಸಿಕೊಂಡು ಮದುವೆಯಾಗುವ ಸಂದರ್ಭ ಬರುತ್ತದೆ. ಆದರೆ ಸಹನಾಳನ್ನು ಹೆಂಡತಿಯೆಂದು ಭಾವಿಸಲು ಅವನಿಂದ ಸಾಧ್ಯವಾಗುವುದಿಲ್ಲ. ಕೊನೆಯಲ್ಲಿ ಸುಧಾಕರ ಸುಧಾಳೊಂದಿಗೆ ಸಪ್ತಪದಿ ತುಳಿದಿರುವುದು ಗೊತ್ತಾಗಿ ಸಹನಾ ಅವರದೇ ನಿಜವಾದ ಮದುವೆಯೆಂದು ತಾನು ತ್ಯಾಗ ಮಾಡುತ್ತಾಳೆ.

೧೪೩೯. ಭಂಡ ನನ್ನ ಗಂಡ

(೧೯೯೨ / ವರ್ಣ / ಸಾಮಾಜಿಕ)

ಲಾ: ಸುಷ್ಮಾ ಫಿಲಂಸ್
ಪ್ರೊ: ಎಸ್.ಶ್ರೀನಿವಾಸ್
ನಿ: ರಾಜ್ ಕಿಶೋರ್
ಸ.ನಿ: ಜೆ.ಭವಾನಿ ಶಂಕರ್. ಜಯಕುಮಾರ್
ಅ: ಜಗ್ಗೇಶ್, ಪ್ರಿಯಾಂಕ, ಆಶಾಲತಾ, ಪಾಪಮ್ಮ, ಬ್ಯಾಂಕ್ ಜನಾರ್ದನ್, ಹೊನ್ನವಳ್ಳಿಕೃಷ್ಣ, ಅಂಬರೀಷ್
ಕ/ಚಿ.ಕ: ರಾಜ್‌ಕಿಶೋರ್
ಮಾ: ಕುಣಿಗಲ್ ನಾಗಭೂಷಣ್
ಗಾ: ಚಂದ್ರಿಕಾ, ಜಗ್ಗೇಶ್, ಎಲ್.ಎನ್.ಶಾಸ್ತ್ರಿ, ಮಂಜುಳಾ ಗುರುರಾಜ್
ಸಂ: ಎಸ್.ಮನೋಹರ್
ಛಾ: ಸಿ.ಮನೋಹರ್
ಕಲೆ: ಜಾಕ್‌ಪಾಟ್ ರಾಮು
ಗೀ/ಸ: ವಿ.ಮನೋಹರ್
ಧ್ವ: ಪೀಟರ್, ಅಣ್ಣಾದೊರೈ, ಕೃಷ್ಣಮೂರ್ತಿ
ನೃ: ಸತೀಶ್-ಕಮಲಾ
ಸಾ: ಥ್ರಿಲ್ಲರ್ ಮಂಜು
ವ: ಗಂಡಸಿ ನಾಗರಾಜ್, ನಾಗರಾಜ್
ಪ್ರ: ನಾಗರಾಜ್, ರಾಮಕೃಷ್ಣ. ಮಾದೇಗೌಡ
ಸ್ಟು: ಕಂಠೀರವ, ಚಾಮುಂಡೇಶ್ವರಿ, ಸಂಕೇತ್
ಹಾ: ೧)'ಅಂತಿಂಥ ಗಂಡು ನಾನಲ್ಲ...',
೨)'ಮಹಿಳಾ ಮಣಿಗಳೆ ಕೇಳಿ ಗೆದ್ದೋಳು ನಾನೆ...',
೩)' ನೀನು ಮೈಸೂರು ರಾಣಿಗೆ ಮಗಳಾ...',
೪)'ಯಾರಿಗೂ ಎಂದಿಗೂ ತಗ್ಗದೆ ಜಗ್ಗದ...',
ಸೆ: ಉದ್ದ ೩೫೯೮
ವಿ: ಜಗ್ಗೇಶ್ ನಾಯಕನಟರಾಗಿ ತೆರೆಗೆ ಬಂದ ಮೊದಲ ಚಿತ್ರ. ಜಗ್ಗೇಶ್ ಹಾಡಿದರು.
ಕ.ಸಾ: ಇಷ್ಟವಿಲ್ಲದೆ ಮದುವೆಯಾದ ಹೆಂಡತಿಯನ್ನು ಗಂಡ ತನ್ನತ್ತ ಒಲಿಸಿಕೊಳ್ಳುವ ಕಥೆ ಇದು. ಗಂಡಸರನ್ನು ದ್ವೇಷಿಸುವ ದರ್ಪದ ಶ್ರೀಮಂತ ವಿಧವೆಯ ಮಗಳು. ಅವಳನ್ನು ನೋಡಿದಾಕ್ಷಣ ಹಳ್ಳಿಯ ಮುಗ್ಧ ಯುವಕ ಅನುರಕ್ತನಾಗುತ್ತಾನೆ. ತನ್ನ ಮನೋಭಿಲಾಷೆಯನ್ನು ಶ್ರೀಮಂತೆಯ ಮಗಳಲ್ಲಿ ಹೇಳಿಕೊಂಡ ಯುವಕ ಅವಮಾನಿತನಾಗುತ್ತಾನೆ. ಕೂಡಲೆ

ದೇವರ ವಿಗ್ರಹಕ್ಕೆ ಅಲಂಕರಿಸಿದ್ದ ಹಾರವನ್ನೆತ್ತಿಕೊಂಡು ಆಕೆಯ ಕೊರಳಿಗೆ ಹಾಕುತ್ತಾನೆ. ಆ ಹಾರದಲ್ಲಿ ಮಂಗಳಸೂತ್ರವಿರುವ ವಿಷಯ ಪೂಜಾರಿಯಿಂದ ತಿಳಿದು ಬರುತ್ತದೆ. ಈ ರೀತಿ ಮದುವೆಯಾಗಿ ಮನೆ ಅಳಿಯನಾಗಿ ಶ್ರೀಮಂತೆಯ ಮನೆ ಸೇರಿದ ಯುವಕ. ಶ್ರೀಮಂತೆಯ ಮಗಳಿಂದ ಬಗೆಬಗೆಯಲ್ಲಿ ಹೀಯಾಳಿಕೆ ಅಪಮಾನಗಳನ್ನು ಅನುಭವಿಸುತ್ತಾನೆ. ಎಲ್ಲವನ್ನೂ ಸಹಿಸಿದ ಆ ಯುವಕ ಅದೆಲ್ಲವೂ ಆ ತಾಯಿ - ಮಗಳಿಗೇ ತಿರುಗು ಬಾಣವಾಗುವಂತೆ ಮಾಡಿ, ತನ್ನ ಹಳ್ಳಿಗೆ ಹೊರಡುತ್ತಾನೆ. ತನ್ನ ತಪ್ಪಿನ ಅರಿವಾದ ಶ್ರೀಮಂತೆಯ ಮಗಳು ಗಂಡನನ್ನು ಹಿಂಬಾಲಿಸುವಳು.

೧೪೪೦. ಮೈಸೂರ ಮಲ್ಲಿಗೆ

(೧೯೯೨ / ವರ್ಣ / ಸಾಮಾಜಿಕ)

ಲಾ: ಯಜಮಾನ್ ಎಂಟರ್‌ಪ್ರೈಸಸ್

ಪ್ರೊ: ಶ್ರೀ ಹರಿ ಖೋಡೆ

ನಿ: ಟಿ.ಎಸ್.ನಾಗಾಭರಣ

ಅ: ಗಿರೀಶ್ ಕಾರ್ನಾಡ್, ಸುಧಾರಾಣಿ, ಆನಂದ್, ಸುಂದರ್‌ರಾಜ್, ಮಂಜುನಾಥ ಹೆಗಡೆ, ಕಾಸರಗೋಡು ಚಿನ್ನ, ಭಾರ್ಗವಿ, ಕಿಶೋರಿ ಬಲ್ಲಾಳ್

ಕ: ಕೆ.ಎಸ್.ನರಸಿಂಹಸ್ವಾಮಿ ಅವರ ಕವನಗಳ ಆಧಾರ

ಚಿ.ಕ: ಬಸವರಾಜ್, ಸಿ. ಅಶ್ವತ್ಥ್, ಟಿ.ಎಸ್.ನಾಗಾಭರಣ

ಮಾ: ಬಸವರಾಜ್. ಎಂ.ಎಸ್.ವ್ಯಾಸರಾವ್

ಗೀ: ಕೆ.ಎಸ್.ನರಸಿಂಹಸ್ವಾಮಿ

ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್.ಜಾನಕಿ, ಬಿ.ಆರ್.ಛಾಯಾ, ರತ್ನಮಾಲಾ ಪ್ರಕಾಶ್

ಸಂ: ಸುರೇಶ್ ಅರಸ್

ಕಲೆ: ಶಶಿಧರ ಹಡಪ

ಸ: ಸಿ.ಅಶ್ವತ್ಥ್

ಧ್ವ: (ಹಾ) ಪೀಟರ್ (ಮಾ) ಕೃಷ್ಣಮೂರ್ತಿ

ನೃ: ಉಡುಪಿ ಜಯರಾಂ

ವ: ನಾಗಿಣಿ ಭರಣ

ಪ್ರ: ಮಲ್ಲೇಶ್

ಸ್ಟು: ಸಂಕೇತ್

ಹಾ: ೧)'ಕತ್ತಲೆ ತುಂಬಿದೆ ...', ೨)' ಹಕ್ಕಿಯ ಹಾಡಿಗೆ ...', ೩)' ಸಿರಿಗೆಯ ನೀರಲ್ಲಿ ...', ೪) 'ನಿನ್ನ ಪ್ರೇಮದ ಪರಿಯ ನಾನರಿಯೆ ...', ೫) ' ನವಿಲೂರ ಚೆಂದವೋ ...', ೬)' ರಾಯರು ಬಂದರು ಮಾವನ ಮನೆಗೆ ...', ೭)' ಬಳೆಗಾರ ಚೆನ್ನಯ್ಯ ಬಾಗಿಲಿಗೆ ಬಂದಿಹನು ...',

ವಿ: ಕವಿತೆಗಳ ಮೂಲಕ ಕಥೆ ಕಟ್ಟಿದ ಪ್ರಯೋಗ. ೧೯೯೧ ರ ರಾಷ್ಟ್ರ ಪ್ರಶಸ್ತಿ : ಅತ್ಯುತ್ತಮ ಕನ್ನಡ ಚಿತ್ರ, ಅತ್ಯುತ್ತಮ ಗೀತರಚನೆ (ಕೆ. ಎಸ್.ನರಸಿಂಹಸ್ವಾಮಿ), ೧೯೯೧-೯೨ ರಾಜ್ಯಪ್ರಶಸ್ತಿ : ದ್ವಿತೀಯ ಅತ್ಯುತ್ತಮ ಚಿತ್ರ. ಅತ್ಯುತ್ತಮ ನಟಿ (ಸುಧಾರಾಣಿ), ಅತ್ಯುತ್ತಮ ಛಾಯಾಗ್ರಾಹಕ (ಬಿ.ಸಿ.ಗೌರಿಶಂಕರ್) ಅತ್ಯುತ್ತಮ ಧ್ವನಿಗ್ರಾಹಕ(ಅರವಿಂದ ಕಿಗ್ಗಾಲ್ ಮತ್ತು ಕೆ. ಎಸ್. ಕೃಷ್ಣಮೂರ್ತಿ ಅತ್ಯುತ್ತಮ ಸಂಕಲನಕಾರ (ಸುರೇಶ್ ಅರಸ್)

ಕ.ಸಾ: ಖ್ಯಾತ ಕವಿ ಕೆ.ಎಸ್.ನರಸಿಂಹಸ್ವಾಮಿ ಅವರ ಪ್ರೇಮ ಕವಿತೆಗಳನ್ನು ಆಧಾರವಾಗಿಟ್ಟುಕೊಂಡು ಸ್ವಾತಂತ್ರ್ಯ ಪೂರ್ವ ಮತ್ತು ನಂತರದ ವಸ್ತುವನ್ನು ಹೆಣೆಯಲಾದ ಕಥೆ. ಶಾನುಭೋಗರ ಮಗಳು ಮಾಸ್ತರನ ಕವನಗಳಲ್ಲಿ ತನ್ನ ಬದುಕಿನ ಕನಸುಗಳನ್ನು ಕಾಣುತ್ತಾಳೆ. ಅವರಿಬ್ಬರ ಮದುವೆಯಾದಾಗ ಸ್ವಾತಂತ್ರ್ಯ ಚಳವಳಿಯ ಬಿಸಿ ಮಾವ - ಅಳಿಯನಲ್ಲಿ ವೈಮನಸ್ಯ ತರುತ್ತದೆ. ಗರ್ಭಿಣಿಯಾದ ಹುಡುಗಿ ತಂದೆಯ ಹಠದಿಂದಾಗಿ ಗಂಡನ ಹಿಂದೆ ಹೋಗಲಾಗದೆ ತವರಿನಲ್ಲೇ ಉಳಿಯುತ್ತಾಳೆ. ಚಳವಳಿಯಲ್ಲಿ ಗಂಡ ಗುಂಡಿಗೆ ಬಲಿಯಾದನೆಂಬ ವಾರ್ತೆ ಬರುತ್ತದೆ. ಜೇಲಿನಿಂದ ಹೊರಬಂದ ಗಂಡ ಹೆಂಡತಿಯನ್ನರಸುತ್ತಾ ಬಂದಾಗ ಅವಳು ಊರು ಬಿಟ್ಟಿರುವುದು ತಿಳಿಯುತ್ತದೆ. ಅಂತ್ಯದಲ್ಲಿ ವಿಚಿತ್ರ ಸಂದರ್ಭದಲ್ಲಿ ಎಲ್ಲರೂ ಒಂದುಗೂಡುತ್ತಾರೆ.

೧೪೪೧. ನಗರದಲ್ಲಿ ನಾಯಕರು

(೧೯೯೨ / ವರ್ಣ / ಸಾಮಾಜಿಕ)

ಲಾ: ನ್ಯೂ ಡೈನಾಮಿಕ್ ಮೂವೀ ಮೇಕರ್ಸ್

ಪ್ರೊ: ಎಸ್.ಎಂ.ವೆಂಕಟೇಶ್, ವೈ.ರಘುಬಾಬು

ನಿ: ಸಾಯಿಪ್ರಕಾಶ್

ಸ.ನಿ: ಚಂದ್ರು ದೊಡ್ಡಮನಿ

ಅ: ಸುನಿಲ್, ಮಾಲಾಶ್ರೀ, ಬಾಲರಾಜ್, ಗುರುದತ್, ಉಮೇಶ್, ಅರವಿಂದ್, ಸುಧಾಕರ್, ಶ್ರೀಧರ್, ರ‍್ಯಾಂಬೋ ರಾಣಿ, ಮುಖ್ಯಮಂತ್ರಿ ಚಂದ್ರು, ಜೈಜಗದೀಶ್, ತಾರಾ, ಕಮಿನೀಧರನ್, ಸತ್ಯಭಾಮ

ಕ: ಸಿದ್ದಿಕಿ ಲಾಲ್ (ತೆಲುಗು ಚಿತ್ರದ ಕನ್ನಡ ರೂಪಾಂತರ)

ಚಿ.ಕ: ಸಾಯಿಪ್ರಕಾಶ್

ಮಾ: ಕುಣಿಗಲ್ ನಾಗಭೂಷಣ್

ಗೀ: ಆರ್.ಎನ್.ಜಯಗೋಪಾಲ್



ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಮನು, ಚಿತ್ರಾ

ಸಂ: ಕೆ.ನರಸಯ್ಯ

ಛಾ: ಜಾನಿಲಾಲ್

ಕಲೆ: ಬಾಬು

ಸ: ರಾಜ್ ಕೋಟಿ

ಧ್ವ: ಕಣ್ಣನ್, ಆರ್.ಆರ್ಮುಗಂ, ಸುರೇಶ್

ನೃ: ಶಿವಶಂಕರ್

ಸಾ: ಥ್ರಿಲ್ಲರ್ ಮಂಜು

ವ: ನಾಗರಾಜ್, ಬಾಬ್ಜಿ

ಪ್ರ: ಚಂದ್ರ, ಮಣಿ, ಸೆಲ್ವರಾಜ್, (ಕೇಶ:) ನಾಗೇಶ್ವರರಾವ್

ಸ್ಟು: ಕಂಠೀರವ

ಹಾ: ೧) 'ನಿನ್ನ ಅತ್ತೇ ಮಗ ನಿನ್ನ ಅತ್ತೇ ಮಗ...', ೨) 'ಅಹಲ್ಯಾ ದ್ರೌಪದಿ ಸೀತಾ...', ೩) 'ಓ ಪ್ರಿಯೆ ಓ ಪ್ರಿಯೆ ಬಾರೆಯ...', ೪)'ಹೇ ಡಾರ್ಲಿಂಗ್ ಸ್ವೀಟಿ...',

ಕ.ಸಾ: ನಾಲ್ವರು ಯುವಕರು. ನಿರುದ್ಯೋಗಿಗಳು. ಎದುರು ಮನೆಗೆ ಬರುವ ಸುಂದರ ಹುಡುಗಿಯನ್ನು ಪ್ರೇಮಿಸಲಾರಂಭಿಸುವರು. ಆದರೆ ಆ ಹುಡುಗಿ ತನ್ನ ಅಣ್ಣನ ಕೊಲೆಯ ರಹಸ್ಯವನ್ನು ಭೇದಿಸಲು ಆ ಯುವಕರನ್ನು ಬಳಸಿಕೊಳ್ಳುತ್ತಾಳೆ. ಕಡೆಗೆ ಕೊಲೆಗಾರರನ್ನು ಕಂಡು ಹಿಡಿದು ಕೊಲ್ಲುತ್ತಾಳೆ. ನಾಯಕರ ಪ್ರೇಮ ಭಗ್ನವಾಗುತ್ತದೆ.

೧೪೪೨. ಎದುರ್ಮನೆ ಗಂಡ ಪಕ್ಕದ್ಮನೆ ಹೆಂಡ್ತಿ

(೧೯೯೨ / ವರ್ಣ / ಸಾಮಾಜಿಕ)

ಲಾ: ಶ್ರೀ ಅನುಪಮಾ ಪ್ರೊಡಕ್ಷನ್ಸ್

ಪ್ರೊ: ಪಿ.ಬಲರಾಮ್

ನಿ: ರೇಲಂಗಿ ನರಸಿಂಹರಾವ್

ಅ: ಶಶಿಕುಮಾರ್, ಶ್ರುತಿ, ಮುಖ್ಯಮಂತ್ರಿ ಚಂದ್ರು, ರೇಖಾ ದಾಸ್, ಉಮಾಶ್ರೀ, ಅನ್ನಪೂರ್ಣಮ್ಮ, ಬೆಂಗಳೂರು ನಾಗೇಶ್, ಮೈಸೂರು ಲೋಕೇಶ್, ಎಂ.ಎಸ್.ಉಮೇಶ್, ಜೂನಿಯರ್ ನರಸಿಂಹರಾಜು

ಕ: ತೆಲುಗು ಚಿತ್ರದ ಕನ್ನಡ ರೂಪಾಂತರ

ಮಾ: ಕುಣಿಗಲ್ ನಾಗಭೂಷಣ್

ಗೀ: ಆರ್.ಎನ್.ಜಯಗೋಪಾಲ್

ಛಾ: ಶರತ್

ಸ: ರಾಜ್ - ಕೋಟಿ

ಸ್ಟು: ಪ್ರೀಮಿಯರ್

ಹಾ: ೧)' ಅಮ್ಮಯ್ಯ ದಮ್ಮಯ್ಯ ...', ೨)' ಮೇಘವು ಹರಿಸ್ಯಾವೆ ...', ೩)' ಕಣ್ಣು ಬಿತ್ತು .. ಕಣ್ಣು ಬಿತ್ತು ...', ೪)' ಲಂಬಚಿಕಾ ಲಂಬಚಿಕಾ ...', ೫)' ಏಕ್ ದೋ ತೀನ್ ...'

ಕ.ಸಾ: ಗಂಡ ಮಹಾ ಜಿಪುಣ. ಹೆಂಡತಿ ಧಾರಾಳಿ. ಇಬ್ಬರಲ್ಲಿಯೂ ಭಿನ್ನಾಭಿಪ್ರಾಯ. ಅದರಿಂದಾಗಿ ಪರಸ್ಪರರ ಅಗಲಿಕೆ. ಸ್ವಲ್ಪ ಸಮಯದ ನಂತರ ಎದುರು ಬದುರು ಮನೆಗಳಲ್ಲಿ ವಾಸಿಸಬೇಕಾದ ಸಂದರ್ಭ. ಇವರಿಬ್ಬರ ಮಗ ಮಹಾ ಮಹಾ ಜಿಪುಣ. ಗಂಡನ ಜಿಪುಣತನವನ್ನು ಹೋಗಲಾಡಿಸಲು ಹೆಂಡತಿಯ ಮೇಲಧಿಕಾರಿಣಿ ಹೂಡುವ ಉಪಾಯ ಯಶಸ್ವಿಯಾಗಿ ಮತ್ತೆ ಗಂಡ ಹೆಂಡತಿ ಒಂದಾಗುವ ಕಥೆ.

೧೪೪೩. ರವಿವರ್ಮ

(೧೯೯೨ / ವರ್ಣ / ಸಾಮಾಜಿಕ)

ಲಾ: ಚಿನ್ನಿಪವನ್ ಕ್ರಿಯೇಶನ್ಸ್

ಪ್ರೊ: ಹೇಮಲತಾ ರಮೇಶ್

ಕ/ಚಿ.ಕ/ಮಾ/ನಿ: ಜೋಸ್ಸೈಮನ್

ಸ.ನಿ: ಆನಂದ್ ಪಿ.ರಾಜು, ವಿ.ಆರ್.ಭಾಸ್ಕರ್

ಅ: ವಿಷ್ಣುವರ್ಧನ್, ರೂಪಿಣಿ, ಭವ್ಯ, ಜೈಜಗದೀಶ್, ಮಲ್ಲೇಶ್, ಶ್ಯಾಮಲಾ, ಮೈಸೂರು ಲೋಕೇಶ್, ಅರಸ್, ಅಶೋಕ್ ರಾವ್, ಶಿವರಾಂ, ರಾಮಮೂರ್ತಿ, ಶಾಂತಮ್ಮ, ಬಾಬ್ ಆಂತೋಣಿ, ಸಿಹಿಕಹಿ ಚಂದ್ರು, ಸರಿಗಮ ವಿಜಿ, ಜೋಸ್ಸೈಮನ್

ಕ: (ತಮಿಳು ಚಿತ್ರದ ರೀಮೇಕ್)

ಗೀ: ಚಿ.ಉದಯಶಂಕರ್, ಶ್ಯಾಮ ಸುಂದರ ಕುಲಕರ್ಣಿ

ಗಾ: ಎಸ್.ಜಾನಕಿ, ಮನು

ಸಂ: ಸುರೇಶ್ ಅರಸ್

ಛಾ: ಡಿ.ವಿ.ರಾಜಾರಾಂ

ಕಲೆ: ನಾಗರಾಜ ರಾವ್

ಸ: ಉಪೇಂದ್ರ ಕುಮಾರ್

ಧ್ವ: ಪ್ರಸಾದ್

ನೃ: ಡಿ.ಕೆ.ಎಸ್.ಬಾಬು

ಸಾ: ಜ್ಯೂಡೋ ರತ್ನಂ

ವ: ರಾಮನಾಥ್

ಪ್ರ: ಶ್ರೀನಿವಾಸ, ಕೃಷ್ಣ, ನಾಗರಾಜ್, ಕೃಷ್ಣನ್

ಹಾ: ೧)'ನೆನಪು ನೂರು ಮನದಲಿ...', ೨)'ನಾನೇ ಬೇರ ನನ್ನ ಸ್ಟೈಲೇ ಬೇರೆ...', ೩)' ಓಡೋಡಿ ಹೋಗುವ ಆ ರೈಲು ಗಾಡಿಯ...', ೪)'ಸೊಗಸು ಕಣ್ಣು ಸೆಳೆದಿದೆ...', ೫)'ರವಿವರ್ಮ ಬರೆದಂಥ ಬೊಂಬೆ ನಾನು...',

ಕ.ಸಾ: ರವಿವರ್ಮ ಓರ್ವ ಚಿತ್ರಕಾರ. ಅವನ ಹೆಂಡತಿ ನೃತ್ಯಗಾರ್ತಿ. ಆಕೆ ಅಪಘಾತವೊಂದರಲ್ಲಿ ಸಾಯುತ್ತಾಳೆ. ಹೆಂಡತಿಯ ಅಗಲಿಕೆಯಿಂದಾಗಿ ಆತ ಮದ್ಯವ್ಯಸನಿಯಾದ. ಅವನಲ್ಲಿದ್ದ ಕಲೆಯನ್ನು ಬಳಸಿಕೊಂಡು, ಆಸ್ತಿ ಲಪಟಾಯಿಸಲು ಒಂದು ಹೆಣ್ಣಿನ ಚಿತ್ರವನ್ನು ಬರೆದುಕೊಡುವಂತೆ ದುಷ್ಟರ ಪ್ರಯತ್ನ. ರವಿವರ್ಮ ಅಪಘಾತದಲ್ಲಿ ಸತ್ತ ತನ್ನ ಹೆಂಡತಿಯ ಚಿತ್ರವನ್ನೇ ಬರೆದು ಕೊಡುತ್ತಾನೆ. ಆದರೆ ಸತ್ತಿದ್ದಾಳೆಂದು ತಿಳಿದಿದ್ದ ಅವನ ಹೆಂಡತಿ ಪವಾಡವೆಂಬಂತೆ ಬದುಕಿ ಬರುತ್ತಾಳೆ. ರವಿವರ್ಮ ದುಷ್ಟರ ಹಿಡಿತದಿಂದ ಅಮಾಯಕಳಾದ ಹುಡುಗಿಯನ್ನು ಹಾಗೂ ಬದುಕಿ ಬಂದ ತನ್ನ ಹೆಂಡತಿಯನ್ನು ಕಾಪಾಡುತ್ತಾನೆ. ಇದು ಕಥಾ ಹಂದರ.

೧೪೪೪. ಕನಸಿನ ರಾಣಿ

(೧೯೯೨ / ವರ್ಣ / ಸಾಮಾಜಿಕ)

ಲಾ: ಶ್ರೀ ಲಕ್ಷ್ಮೀ ಪ್ರೊಡಕ್ಷನ್ಸ್
ಪ್ರೊ: ಎಂ.ಸುನಂದ, ಎಂ.ಕೃಷ್ಣ
ನಿ: ಎಂ.ಎಸ್.ರಾಜಶೇಖರ್
ಸ.ನಿ: ಬಿ.ವಿರೂಪಾಕ್ಷ, ಶ್ರೀಕಾಂತ್ ಕುಲಕರ್ಣಿ
ಅ: ಶಶಿಕುಮಾರ್, ಮಾಲಾಶ್ರೀ, ಜಗ್ಗೇಶ್, ತ್ರಿವೇಣಿ
ಕ: ನಲ್ಲತಂಬಿ
ಚಿ.ಕ/ಮಾ: ಚಿ.ಉದಯಶಂಕರ್
ಗೀ: ಚಿ.ಉದಯಶಂಕರ್, ಶ್ರೀರಂಗ
ಸಂ: ಶ್ಯಾಂ ಯಾದವ್
ಛಾ: ಪ್ರಸಾದ್ ಬಾಬು, ಲೋಕೇಶ್ ಬಾಬು
ಕಲೆ: ಪಿ.ವಿ.ರೆಡ್ಡಿ
ಸ: ಉಪೇಂದ್ರ ಕುಮಾರ್
ಸಾ: ಸಾಹುಲ್
ವ: ರಾಮನಾಥ್, ಬಾಬ್ಜಿ
ಪ್ರ: ಎಂ.ಎಸ್.ಕೇಶವ, ಚಂದ್ರು
ಸ್ಟು: ಕಂಠೀರವ, ಪ್ರೀಮಿಯರ್

ಕ.ಸಾ: ತನ್ನ ಕನಸಿನ ಕುಮಾರನಿಗಾಗಿ ಹುಡುಕುತ್ತಿರುವ ಶ್ರೀಮಂತ ತರುಣಿ. ಅವಳನ್ನು ಒಲಿದು ಬರುವವ ಸಾಮಾನ್ಯ ಹೊಟೇಲ್ ಕಾರ್ಮಿಕ. ಆದರೆ ಆತ ಅವಳ ಬಳಿ ತಾನೊಬ್ಬ ಲಕ್ಷಾಧೀಶ್ವರನೆಂದು ಸುಳ್ಳು ಹೇಳಿರುತ್ತಾನೆ. ಸತ್ಯ ತಿಳಿದಾಗ ತರುಣಿ ಆವೇಶಕ್ಕೊಳಗಾಗುತ್ತಾಳೆ. ಪ್ರೀತಿಯನ್ನು ನಿರಾಕರಿಸುತ್ತಾಳೆ. ಅಂತ್ಯದಲ್ಲಿ ಆ ಹೊಟೇಲ್ ಕಾರ್ಮಿಕ ಶ್ರೀಮಂತನೊಬ್ಬನ ಮೊಮ್ಮಗನಾಗಿರುವುದು ಗೊತ್ತಾಗುತ್ತದೆ. ಸುಖಾಂತ.

೧೪೪೫. ಗಣೇಶ-ಸುಬ್ರಹ್ಮಣ್ಯ

(೧೯೯೨ / ವರ್ಣ / ಸಾಮಾಜಿಕ)

ಲಾ: ಕಲಾಪ್ರೇಮಿ
ಪ್ರೊ: ವಿಶ್ವಸಾಗರ್, ಕೆ.ಎಂ.ಸ್ವಾಮಿ, ಎಸ್.ಪಿ.ಗಣಪತಿ, ಎಸ್.ಪಿ.ಸುಬ್ಬಯ್ಯ
ನಿ: ಫಣಿ ರಾಮಚಂದ್ರ
ಸ.ನಿ: ಯೋಗೀಶ್ ಹುಣಸೂರು, ಸೀತಾರಾಮ್ ಕಾರಂತ್
ಅ: ಅನಂತ್‌ನಾಗ್, ರಮೇಶ ಭಟ್, ಮುಖ್ಯಮಂತ್ರಿ ಚಂದ್ರು, ವೈಶಾಲಿ ಕಾಸರವಳ್ಳಿ, ಹೇಮ ಚೌಧುರಿ, ಸುಧೀರ್, ಮಾನಸ, ಸುಜಾತ, ಬ್ಯಾಂಕ್ ಜನಾರ್ದನ್, ಮಂಜುಳಾ, ಡಿಂಗ್ರಿ ನಾಗರಾಜ್, ಎಂ.ಎಸ್.ಕಾರಂತ್, ಕುಣಿಗಲ್ ನಾಗಭೂಷಣ್, ರಮಾನಂದ್
ಕ: ಶ್ಯಾಮ ಸುಂದರ ಕುಲಕರ್ಣಿ
ಚಿ.ಕ: ಫಣಿ ರಾಮಚಂದ್ರ
ಮಾ: ಕುಣಿಗಲ್ ನಾಗಭೂಷಣ್
ಗೀ: ರುದ್ರಮೂರ್ತಿ ಶಾಸ್ತ್ರಿ, ಕೆ.ಎಸ್.ನರಸಿಂಹ ಸ್ವಾಮಿ, ಮನೋಹರ್, ಶ್ಯಾಮ ಸುಂದರ ಕುಲಕರ್ಣಿ
ಗಾ: ಶಾಸ್ತ್ರಿ, ನರಸಿಂಹ ನಾಯಕ್, ವಾಣಿ ಜಯರಾಂ, ಚಂದ್ರಿಕಾ
ಸಂ: ಸುರೇಶ್ ಅರಸ್
ಛಾ: ಅರ್. ಮಂಜುನಾಥ
ಕಲೆ: ಕೆ.ರಾಜು
ಸ: ಮನೋಹರ್, ಪೀಟರ್
ಧ್ವ: ಕೃಷ್ಣಮೂರ್ತಿ, ಪೀಟರ್, ಅರವ ಮುದನ್, ಸಿ.ಕೆ.ಸುರೇಶ್
ನೃ: ಉಡುಪಿ ಜಯರಾಂ, ದೇವಿ
ವ: ರಾಮನಾಥ್
ಪ್ರ: ವೆಂಕಟಸ್ವಾಮಿ
ಸ್ಟು: ಕಂಠೀರವ, ಅಭಿಮಾನ್
ಹಾ: ೧) 'ಬ್ರಹ್ಮಚಾರಿ ಎಂದರ ನೀನೆ ತಮ್ಮ...', ೨) 'ಹೆಂಡತಿಯೊಬ್ಬಳು ಮನೆಯೊಳಗಿದ್ದರೆ...', ೩)'ಓ ಕುಸುಮ ಬಾಲೆ...',
ಸೆ: ಉದ - ೪೨೧೫.೦೦, ರೀಲು ೧೫, ೧೧ - ೦೫ - ೧೯೯೨

ಕ.ಸಾ: ಕಟ್ಟುನಿಟ್ಟಾಗಿ ಬ್ರಹ್ಮಚರ್ಯೆಯನ್ನು ಪಾಲಿಸುವ ಇಬ್ಬರು ಯುವಕರು- ಗಣೇಶ ಮತ್ತು ಸುಬ್ರಹ್ಮಣ್ಯ. ಇವರ ಬ್ರಹ್ಮಚರ್ಯೆಗೆ ಪೂರ್ಣ ವಿರಾಮ ಹಾಕಲು ಬರುವ ಹಲವು ಚೆಲುವೆಯರು ವಿಫಲ ಪ್ರಯತ್ನ ನಡೆಸಿ ನಿರಾಶರಾಗಿರುತ್ತಾರೆ. ಅಂತ್ಯದಲ್ಲಿ ಇಬ್ಬರು ಯುವತಿಯರಿಂದ ಈ ಜೋಡಿಯ ಬ್ರಹ್ಮಚರ್ಯೆ ಭಗ್ನಗೊಳ್ಳುತ್ತದೆ.

೧೪೪೬. ತರ್ಲೆ ನನ್ಮಗ

(೧೯೯೨ / ವರ್ಣ / ಸಾಮಾಜಿಕ)

ಲಾ: ಪಂಚಮಿ ಚಿತ್ರ
ಪ್ರೊ: ಎಂ.ಬಿ.ಬಾಲು, ಡಿ.ಜಿ.ಪದ್ಮ, ಸಿ.ಎಸ್.ಮಂಜುನಾಥ್
ಕ/ಚಿ.ಕ/ಮಾ/ಗೀ/ನಿ: ಉಪೇಂದ್ರ
ಸ.ನಿ: ಸುರೇಶ್ ರಾಜ್, ಮುರುಳಿ
ಅ: ಜಗ್ಗೇಶ್, ನಿತ್ಯ, ಅಂಜಲಿ, ಬ್ಯಾಂಕ್ ಜನಾರ್ದನ್, ಸತ್ಯಭಾಮ, ಸುಧೀಂದ್ರ, ಉಮೇಶ್, ಹೊನ್ನವಳ್ಳಿ ಕೃಷ್ಣ, ಟೆನ್ನಿಸ್ ಕೃಷ್ಣ
ಗಾ: ಉಪೇಂದ್ರ, ಜಗ್ಗೇಶ್, ಎಲ್. ಎನ್.ಶಾಸ್ತ್ರಿ, ಮಂಜುಳಾ ಗುರುರಾಜ್, ಲತಾ ಹಂಸಲೇಖ
ಸಂ: ಜನಾರ್ಧನ
ಛಾ: ಮೂರ್ತಿ
ಕಲೆ: ಇಸ್ಮಾಯಿಲ್
ಸ: ಮನೋಹರ್
ನೃ: ಉಪೇಂದ್ರ
ಸಾ: ಥ್ರಿಲ್ಲರ್ ಮಂಜು
ವ/ಪ್ರ: ನಾಗರಾಜ್
ಸ್ಟು: ಪ್ರಸಾದ್
ಹಾ: ೧)'ಡಗಾರ್ ಡಗಾರ್ ಡಂ ಡಂ ಡಗಾರ್ ...', ೨)'ನಿನ್ನ ನಿನ್ನ ನಿನ್ನ ನಿನ್ನ ನಿನ್ನ ಚಾಡ್ಡಿ ಒದೀತಿನಿ...', ೩) 'ಓಂಗ್ಯಾಕೆ ನೀ ನೋಡುತ್ತಿ...', ೪)' ಓಹೋ ಸಂತೋಷ ಏನಪ್ಪ ವಿಷಯ...',
ಸೆ: ಉದ - ೪೨೫೫.೦೦
ವಿ: ಉಪೇಂದ್ರ, ಜಗ್ಗೇಶ್, ಮನೋಹರ್‌ಗೆ ಮೊದಲಚಿತ್ರ, ತೆರೆಗೆ ಬರಲು ತಡವಾಯಿತು.

ಕ.ಸಾ: ಅಪ್ಪ - ಅಮ್ಮನ ವಿಪರೀತ ಮುದ್ದಿನಿಂದ ತರಲೆಯಾಗಿ ಬೆಳೆದ ಯುವಕ. ಮೆಚ್ಚಿದ ಯುವತಿಯನ್ನೇ ಮದುವೆಯಾಗಿ ಮನೆಗೆ ಕರೆಯುತ್ತಾನೆ. ವರದಕ್ಷಿಣೆಯ ದುರಾಶೆ ಹಿಡಿದ ಯುವಕನ ಅಪ್ಪ ಅಮ್ಮ, ಸೊಸೆಯನ್ನು ಮಗನಿಂದ ಬೇರ್ಪಡಿಸಲು ಸಂಚು ನಡೆಸುವರು. ತರಲೆ - ಕಿಲಾಡಿ ಯುವಕ ಅಪ್ಪ-ಅಮ್ಮನ ಪ್ರಯತ್ನಗಳನ್ನೆಲ್ಲಾ ನಿಷ್ಫಲಗೊಳಿಸಿ ಮೆಚ್ಚಿದವಳೊಂದಿಗೆ ಸುಖಸಂಸಾರಿಯಾಗುವನು.

೧೪೪೭. ಗೋಪಿಕೃಷ್ಣ

(೧೯೯೨ / ವರ್ಣ / ಸಾಮಾಜಿಕ)

ಲಾ: ಈಶ್ವರಿ ಪ್ರೊಡಕ್ಷನ್ಸ್
ಪ್ರೊ: ಎನ್.ವೀರಾಸ್ವಾಮಿ
ಚಿ.ಕ/ಮಾ/ನಿ: ವಿ.ರವಿಚಂದ್ರನ್
ಸ.ನಿ: ಕೇಸರಿ ಹರವೂ
ಅ: ರವಿಚಂದ್ರನ್, ರೂಪಿಣಿ, ಜ್ಯೋತಿ, ಸುಮಿತ್ರಾ, ಅವಿನಾಶ್, ಲೋಕೇಶ್, ಬ್ಯಾಂಕ್ ಜನಾರ್ದನ್, ಗಿರಿಜಾ ಲೋಕೇಶ್
ಕ: ಪಿ.ವಾಸು (ರೀಮೇಕ್)
ಗೀ/ಸ: ಹಂಸಲೇಖ
ಗಾ: ಜೇಸುದಾಸ್, ಮನು, ಎಸ್.ವಾಣಿ, ಲತಾ ಹಂಸಲೇಖ, ಚಿತ್ರಾ
ಸಂ: ಕೆ.ಬಾಲು
ಛಾ: ಜಿ.ಎಸ್.ವಿ.ಸೀತಾರಾಂ
ಕಲೆ: ನಜೀರ್
ನೃ: ಎಸ್.ಬಸವರಾಜ್
ಸಾ: ಸುರೇಶ್



ವ: ನಾಗರಾಜ್
ಪ್ರ: ಕೇಶವ
ಹಾ: ೧) 'ಏನುಡುಗ ಇದು ಏನುಡುಗೆ...', ೨) 'ಓಹೋ ವಸಂತ...', ೩) 'ಶಾರದಮ್ಮನೋರ ಸರಸಮ್ಮನೋರ...', ೪) 'ಜಗವೆಲ್ಲಾ ಜಗವೆಲ್ಲಾ...', ೫)'ಚೋರಿ ಚೋರಿ ಚೋರಿ...', ೬)'ನಾಯಕರ ಓ ನಾಯಕ...',
ಸೆ: ಉದ್ದ ೩೯೫೮.೨೧, ರೀಲು - ೧೪, 'ಯು' ಸರ್ಟಿಫಿಕೇಟ್

ಕ.ಸಾ: ಅನಾರೋಗ್ಯ ಪೀಡಿತಳಾದ ತಾಯಿಯ ಚಿಕಿತ್ಸೆಗೆ ಹಣ ಸಂಪಾದಿಸುವ ಸಲುವಾಗಿ ಯುವಕನೊಬ್ಬ ವೇಷ ಮರೆಸಿಕೊಂಡು ಶ್ರೀಮಂತೆಯೊಬ್ಬಳ ಮನೆಗೆ ಸಂಗೀತ ಕಲಿಸಲು ಬರುತ್ತಾನೆ. ಅಲ್ಲಿ

ತರುಣಿಯೋರ್ವಳನ್ನು ಪ್ರೇಮಿಸುತ್ತಾನೆ. ಅವನ ಮೋಸದಾಟ ಬಯಲಾಗುತ್ತದೆ. ಅವನ ಈ ಹುಚ್ಚಾಟ - ನಾಟಕಗಳಿಗೆ ಕಾರಣವನ್ನರಿತ ಆ ಶ್ರೀಮಂತ ಅವನ ತಪ್ಪನ್ನು ಮನ್ನಿಸಿ, ತನ್ನ ಸೋದರ ಸೊಸೆಯೊಂದಿಗೆ ಮದುವೆ ಮಾಡುತ್ತಾಳೆ.

೧೪೪೮. ಸಾಹಸಿ

(೧೯೯೨ / ವರ್ಣ / ಸಾಮಾಜಿಕ)
ಲಾ: ಸಾಯಿ ಆರ್ಟ್ಸ್
ಪ್ರೊ: ಪಿ.ವಿದ್ಯಾಸಾಗರ್
ನಿ: ಸಾಯಿಪ್ರಕಾಶ್
ಸ.ನಿ: ಲಿಂಗರಾಜ್ ಕಗ್ಗಲ್
ಅ: ಸುನಿಲ್, ಜಗ್ಗೇಶ್, ವಜ್ರಮುನಿ, ಭರತ್ ಭಾಗವತರ್, ಉಮೇಶ್, ಶಿವರಾಂ, ಮಾಲಾಶ್ರೀ, ಕವಿತಾ, ಮಾಲತಿ, ನವನೀತಾ
ಕ: ವೈ.ಮಾಧವಯ್ಯ
ಚಿ.ಕ: ಸಾಯಿಪ್ರಕಾಶ್
ಮಾ: ಕುಣಿಗಲ್ ಪುರುಷೋತ್ತಮ್
ಗೀ/ಸ: ಹಂಸಲೇಖ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ, ಮಂಜುಳಾ ಗುರುರಾಜ್
ಸಂ: ಡಿ.ವೆಂಕಟೇಶ್ವರ ರಾವ್
ಛಾ: ಕುಲಶೇಖರ್
ಕಲೆ: ಬಾಬು
ಧ್ವ: ಕೃಷ್ಣಮೂರ್ತಿ, ಅಣ್ಣಾದೊರೈ
ನೃ: ಸತೀಶ್
ಸಾ: ಜ್ಯೂಡೋ ರತ್ನಂ
ವ: ಬಾಬುರಾವ್
ಪ್ರ: ವೆಂಕಟೇಶ್
ಸ್ಟು: ಪ್ರಸಾದ್, ಸಂಕೇತ್
ಹಾ: ೧)'ಸಾಧಿಸಿ ತೋರಿಸು ಸಾಹಸೀ...', ೨)'ಕೋಗಿಲೆ ಕೋಗಿಲೆ ಚಿತ್ರದ ಚೈತ್ರದ ಕೋಗಿಲೆ...', ೩)'ಹಸಿರು ಬಿಳಿ ಕೇಸರಿ ಝಂಡಾ...', ೪)'ಸ್ವಾತಂತ್ರ್ಯ ತಂದ ಬಳುವಳಿ ಕಂಡದಕ್ಕೆಲ್ಲಾ ಚಳುವಳಿ...',
ಸೆ: ಉದ ೩೫೭೩.೦೦, 'ಯು' ಸರ್ಟಿಫಿಕೇಟ್
ಕ.ಸಾ: ತನ್ನ ಗಂಡನ ಕೊಲೆ ಮಾಡಿದವರ ವಿರುದ್ಧ ಸೇಡುತೀರಿಸಿಕೊಳ್ಳುವ ಶಪಥ ಮಾಡುವ ಹೆಂಡತಿ, ತನ್ನ ಮಕ್ಕಳ ಮೂಲಕ ತಾನಂದುಕೊಂಡಿದ್ದನ್ನು ಸಾಧಿಸುವ ಕಥೆ. ಪೊಲೀಸ್ ಅಧಿಕಾರಿ ಭರತ್‌ನನ್ನು ರೌಡಿಗಳು ಕೊಲೆಮಾಡಿದಾಗ ಹೆಂಡತಿ ಶಾರದ ಶಪಥ ಮಾಡುತ್ತಾಳೆ. ಇವಳು ವಕೀಲ ವೃತ್ತಿ ಮಾಡುತ್ತಾಳೆ. ಮಗಳು ಗೀತಾಳನ್ನು ಎಸ್ಪಿಯಾಗಿ ಮಾಡುತ್ತಾಳೆ. ಗೀತಾ ತನ್ನ ತಂದೆಯನ್ನು ಕೊಂದ ಗುಂಪಿನ ನಾಯಕ ಮುನಿಯಪ್ಪನ ಮೇಲೆ ಅನಿವಾರ್ಯವಾಗಿ ಗುಂಡು ಹಾರಿಸಬೇಕಾಗುತ್ತದೆ. ಆಗ ಶಾರದ ತನ್ನ ಗಂಡನ ಚಿತಾಭಸ್ಮವನ್ನು ನದಿಗೆ ಬಿಡುತ್ತಾಳೆ.

೧೪೪೯. ಗಿಳಿಬೋಟೆ

(೧೯೯೨ / ವರ್ಣ / ಸಾಮಾಜಿಕ)
ಲಾ: ಸೀಬಾ ಸಿನಿ ಕ್ರಿಯೇಶನ್ಸ್
ಪ್ರೊ: ಡಿ.ಎಂ.ಅನು
ನಿ: ವೇಮಗಲ್ ಜಗನ್ನಾಥರಾವ್
ಸ.ನಿ: ನಾಗೇಂದ್ರ ಪಾವಗಡ ರೆಡ್ಡಿ
ಅ: ವಿನೋದ್ ರಾಜ್, ವೆಂಕಿ, ನಾಗೇಶ್‌ಮಯ್ಯ, ಭರತ್, ಶಿವು, ರಮೇಶ್ ಭಟ್, ಶಿವರಾಂ, ಅಶೋಕ್ ಬಾದರದಿನ್ನಿ, ತಾರಾ, ಸಾಧನಾ, ಮನ್‌ದೀಪ್ ರಾಯ್
ಕ/ಚಿ.ಕ/ಮಾ/ಗೀ: ವೇಮಗಲ್ ಜಗನ್ನಾಥ ರಾವ್
ಸಂ: ಆರ್.ಜನಾರ್ದನ್
ಛಾ: ವಿ.ಅಣ್ಣಯ್ಯ, ಮಲ್ಲಿಕ್
ಕಲೆ: ಮುಕ್ತಾರ್. ಜಿ
ಸ: ಮನೋರಂಜನ್ ಪ್ರಭಾಕರ್
ನೃ: ಪೌಲ್ ರಾಜ್
ಸಾ: ನೀಗ್ರೋ ಜಾನಿ
ವ: ವಿಠಲ ರಾವ್
ಪ್ರ: ಶ್ಯಾಂ
ಸ್ಟು: ಅಭಿಮಾನ್, ಕಂಠೀರವ
ಹಾ: ೧)'ಈ ನನ್ನ ಹಾಡು ಕನ್ನಡ ಹಾಡು...', ೨)'ಅರಿಸಿನ ಹಚ್ಚಿ ಕುಂಕುಮ ಇಟ್ಟು...', ೩)'ತಂಗಾಳಿ ಕಣ್ಣು ಮುಚ್ಚಾಲೆ...', ೪)'ಮೌನದ ಶೃಂಗಾರ ಗೀತೆ...',
ಕ.ಸಾ: ಹದಿಹರೆಯದ ಯುವಕರು ಹುಡುಗಿಯೊಬ್ಬಳನ್ನು ಮಷ್ಟರಿಂದ ರಕ್ಷಿಸಲು ಹೋಗಿ ತಾವು ಅನಗತ್ಯ ತೊಂದರೆಗಳಿಗೆ ಸಿಲುಕುತ್ತಾರೆ. ನಂತರ ಹಲವಾರು ಸಂಘರ್ಷಗಳು ಕಡಗೆ ಮಷ್ಟರಿಂದ ಪಾರಾಗುತ್ತಾರೆ.

೧೪೫೦. ಒಬ್ಬರಿಗಿಂತ ಒಬ್ಬರು

(೧೯೯೨ / ವರ್ಣ / ಸಾಮಾಜಿಕ)
ಲಾ: ಶ್ರೀ ಪ್ರೊಡಕ್ಷನ್ಸ್
ಪ್ರೊ: ಕೆ.ಜಾನಕೀರಾಂ
ನಿ: ಎ.ಎಂ.ಸಮೀಉಲ್ಲಾ
ಸ.ನಿ: ಹರೀಶ್ ನಿಂಜೂರು
ಅ: ದೊಡ್ಡಣ್ಣ, ಜೈಜಗದೀಶ್, ರಮೇಶ್ ಭಟ್, ಮುಖ್ಯಮಂತ್ರಿ ಚಂದ್ರು, ಬಿ.ಕೆ.ಶಂಕರ್, ಮೈನಾವತಿ, ಸುನಿಲ್, ಗುರುದತ್, ವನಿತಾ ವಾಸು, ವಜ್ರಮುನಿ
ಕ/ಚಿ.ಕ: ಎ.ಎಂ.ಸಮೀಉಲ್ಲಾ
ಮಾ/ಗೀ: ಚಿ.ಉದಯಶಂಕರ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಮಂಜುಳಾ ಗುರುರಾಜ್, ಎಸ್.ರಮನ್, ಬಿ.ಆರ್.ಛಾಯಾ
ಸಂ: ಸುರೇಶ್ ಅರಸ್
ಛಾ: ಕೆ.ಜಾನಕಿರಾಂ, ನರಸಿಂಹರಾವ್
ಸ: ಎಸ್.ಪಿ.ರಾಜ್‌ಕುಮಾರ್
ಧ್ವ: ಎಸ್.ಪಿ.ರಾಮನಾಥನ್, ಕೋದಂಡಪಾಣಿ
ನೃ: ಕೈಲಾಸ್, ಕೃಷ್ಣಕುಮಾರ್
ಸಾ: ಜ್ಯೂಡೋ ರತ್ನಂ
ವ: ಬಾಬು
ಪ್ರ: ಮೈಸೂರು ವೆಂಕಟೇಶ್
ಸ್ಟು: ಕಂಠೀರವ
ಹಾ: ೧)'ನಾ ಕಳ್ಳ ನೀ ಕಳ್ಳ...', ೨)'ಬಂಗಾರಿ ನನ್ನ ಆಸೆ...', ೩)'ಕಾಲ ಬಂತಪ್ಪ ಈಗ...', ೪)'ಸಲಾಂ ಹಾಕುವೆ ಗುಲಾಂ ಆಗುವೆ...', ೫)'ಲೇಡೀಸ್ ಅಂಡ್ ಜಂಟಲ್‌ಮನ್ ಹೋದ್ರೊಂದೇ ಜನರ ಪ್ರಾಣ...',
ಸೆ: ಉದ ೩೭೭೫.೦೦, ರೀಲು ೧೪
ಕ.ಸಾ: ಸಂದರ್ಭಕ್ಕೆ ಸಿಲುಕಿ ಪೊಲೀಸ್ ಅಧಿಕಾರಿಯೊಬ್ಬ ಸಮಾಜ ದ್ರೋಹಿಯೊಬ್ಬನ ಮಗಳನ್ನು ಸಾಕಬೇಕಾಗಿ ಬಂದು, ಆತ ಅವಳನ್ನು ಸತ್ಪ್ರಜೆಯನ್ನಾಗಿ ಬೆಳೆಸುವ ಕಥೆ. ಖದೀ ಶೌಕತ್ ಜೈಲಿನಿಂದ ತಪ್ಪಿಸಿಕೊಂಡು ಮತ್ತರದು ಕೊಲೆ ಮಾಡಿ ತಪ್ಪಿಸಿಕೊಳ್ಳುವ ಪ್ರಯತ್ನದಲ್ಲಿ ವಿಫಲನಾಗಿ ಇನ್‌ಸ್ಪೆಕ್ಟರ್ ಖಾನ್‌ನಿಗೆ ತನ್ನ ಹೆಣ್ಣು ಮಗುವನ್ನು ಒಪ್ಪಿಸಿ ಕಣ್ಣು ಮುಚ್ಚುವಳು. ಆತ ತನ್ನ ಮಗಳೊಂದಿಗೆ ಅವಳನ್ನೂ ಬೆಳಸಿ ಪೊಲೀಸ್ ಅಧಿಕಾರಿಯನ್ನಾಗಿಸುವನು. ಜೈಲಿನಿಂದ ಬಂದ ಶೌಕತ್ ಮತ್ತು ಸಮಾಜ ದ್ರೋಹಿ ಕಾರ್ಯಗಳಲ್ಲಿ ತೊಡಗಿದ ತಂಗಿಯನ್ನು ಅವಳು ಹಿಡಿದು ಕಾನೂನಿಗೆ ಒಪ್ಪಿಸುವಳು.

೧೪೫೧. ಒಂದು ಸಿನಿಮಾ ಕಥೆ

(೧೯೯೨ / ವರ್ಣ / ಸಾಮಾಜಿಕ)
ಲಾ: ಗಾಯತ್ರಿ ಸಿನಿ ಕ್ರಿಯೇಷನ್ಸ್
ಪ್ರೊ: ಕೃಷ್ಣ ಮಾದೇಗೌಡ
ನಿ: ಫಣಿ ರಾಮಚಂದ್ರ
ಅ: ಅನಂತ್‌ನಾಗ್, ರಮೇಶ್‌ಭಟ್, ಅಂಜನಾ, ಅಭಿಲಾಷಾ, ಮುಖ್ಯಮಂತ್ರಿ ಚಂದ್ರು, ಪೃಥ್ವಿರಾಜ್, ಎಚ್.ವಿ.ಪ್ರಕಾಶ್, ಉಮೇಶ್, ಫಣಿ ರಾಮಚಂದ್ರ, ಎಂ.ಎಸ್. ಉಮೇಶ್, ಸುಭಾಷ್ ಕಡಕೋಳ್, ಬೆಂಗಳೂರು ನಾಗೇಶ್, ಶೋಭಾ ರಾಘವೇಂದ್ರ,
ಕ/ಚಿ.ಕ: ಶ್ಯಾಮ ಸುಂದರ ಕುಲಕರ್ಣಿ
ಮಾ: ಚಿ.ಉದಯಶಂಕರ್
ಗೀ: ಶ್ಯಾಮ ಸುಂದರ ಕುಲಕರ್ಣಿ, ಸು.ರುದ್ರಮೂರ್ತಿಶಾಸ್ತ್ರಿ, ಎಂ.ಎನ್. ವ್ಯಾಸರಾವ್, ದೊಡ್ಡರಂಗೇಗೌಡ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಬಿ.ಆರ್.ಛಾಯಾ, ಮಂಜುಳಾ ಗುರುರಾಜ್, ನರಸಿಂಹ ನಾಯಕ್
ಸಂ: ಸುರೇಶ್ ಅರಸ್
ಛಾ: ಬಿ.ಎಸ್.ಸಿಂಗ್
ಕಲೆ: ಸುಭಾಷ್ ಕಡಕೋಳ್
ಸ: ರಾಜನ್-ನಾಗೇಂದ್ರ
ವ: ಮಂಜುನಾಥ್
ಪ್ರ: ಮೈಸೂರು ವೆಂಕಟೇಶ್
ಸ್ಟು: ಕಂಠೀರವ
ಹಾ: ೧) 'ಒಂದು ಮುತ್ತು ಕೊಡುವೆನು...', ೨) 'ಒಲವಿನ ಪ್ರೇಮಗಂಗೆ ಚೆಲುವಿನ ಧಾರೆಗಂಗೆ...', ೩) 'ಬೆಳ್ಳಿ ಬೆಳಕು ಮೂಡಿದೆ...', ೪) 'ಅ.ನ.ಕೃಷ್ಣರಾಯರೇ ನನಗೆ ಶ್ರೀ ರಕ್ಷೆಯಾಗಲಿ...', ೫)' ಕನ್ನಡ ಹೊನ್ನುಡಿ ...', ೬)' ಮುಟ್ಟೋಕೆ ಬಂದಾಗ ...', ೭)' ನೀ ದಯದೆ ...', ೮)' ಮದ್ದೂರ ಹುಡುಗಿ ...', ೯)'ನನ್ನ ಬಂಗಾರದಂಥ ...', ೧೦)' ನನ್ನ ನಿನ್ನ ಜೋಡಿ ...'
ಸೆ: ಉದ ೩೬೩೮.೦೦, ರೀಲು ೧೪
ವಿ: ಪತ್ರಕರ್ತ, ಕವಿ, ಶ್ಯಾಮಸುಂದರ ಕುಲಕರ್ಣಿ ಅವರ ಕಥೆ. ಈ ಕಥೆ ಮೆಚ್ಚಿ ನಿರ್ಮಾಪಕರು ತೆಲುಗಿನಲ್ಲಿ ಚಿತ್ರಿಸಿದರು.
ಕ.ಸಾ: ಸಿನಿಮಾಕ್ಕಾಗಿ ಕಥೆ ಬರಯುವ ತನ್ನ ಯತ್ನದಲ್ಲಿ ಯಶಸ್ವಿಯಾಗುವ ಚಿತ್ರದ ನಾಯಕ. ಕಥೆಯನ್ನು ನೈಜವಾಗಿಸಲು ಹೋಗಿ ಬೇರೊಂದು ತಿರುವಿನಲ್ಲಿ ಸಿಕ್ಕಿ ಹಾಕಿಕೊಳ್ಳುವ ಕಥೆ. ಹಲವು ಸಲ ಸೋತರೂ ಕತೆಗಾರ ಶ್ಯಾಮಸುಂದರ ನಿಜ ಜೀವನದ ಕಥೆ ಬರೆದು, ಅದು ಸಿನಿಮಾ ಆಗಿ ಯಶಸ್ವಿಯಾಗುತ್ತದೆ. ಕಥೆಗೆ ಸ್ಫೂರ್ತಿಯಾದ ನಾಯಕಿಯನ್ನೇ ಕತೆಗಾರ ಮದುವೆಯಾಗುತ್ತಾನೆ.

ವೇಶ್ಯೆಯರ ಬಗ್ಗೆ ನೈಜವಾಗಿ ಬರೆಯಲು ಹೊರಟು ಅನುಭವ ಪಡೆಯಲು ವೇಶ್ಯಾವಾಟಿಕೆಗೆ ಹೋದಾಗ, ಅಲ್ಲಿ ಅಮಾಯಕ ಯುವತಿ ಗಂಗಾಳ ಪರಿಚಯವಾಗುತ್ತದೆ. ಕತೆಗಾರರನ್ನು ಕಾಣಲು ಗಂಗಾ ಆತನ ಮನೆಗೆ ಬರುತ್ತಾಳೆ. ಕತೆಗಾರನ ಹೆಂಡತಿಗೆ ಅನುಮಾನ ಉಂಟಾಗುತ್ತದೆ. ಸಂಸಾರದಲ್ಲಿ ವಿರಸ ಆರಂಭ. ಈ ಹಿನ್ನಲೆಯಲ್ಲಿ ನಡೆದ ಪಂಚಾಯಿತಿಯಲ್ಲಿ ಕತೆಗಾರನ ತಮ್ಮನೇ ಗಂಗಾಳ ಮೇಲೆ ಅತ್ಯಾಚಾರವೆಸಗಿ ಅವಳ ಬಾಳನ್ನು ಹಾಳು ಮಾಡಿದ ಸತ್ಯ ಸಂಗತಿ ಹೊರ ಬೀಳುತ್ತದೆ. ಕತೆಗಾರ ದಂಪತಿಗಳು ಅವರಿಬ್ಬರಿಗೆ ಮದುವೆ ಮಾಡುತ್ತಾರೆ.

೧೪೫೨. ನನ್ನ ತಂಗಿ

(೧೯೯೨ / ವರ್ಣ / ಸಾಮಾಜಿಕ)
ಲಾ: ರವಿ ಕೃಷ್ಣ ಫಿಲಂಸ್
ಪ್ರೊ: ರವಿಕೃಷ್ಣ
ನಿ: ಪೇರಾಲ
ಸ.ನಿ: ಎಂ.ಡಿ.ಎಸ್.ಶ್ರೀಧರ್
ಅ: ದೇವರಾಜ್, ಸಂಜಯ್, ಧೀರೇಂದ್ರ ಗೋಪಾಲ್, ಅಭಿಜಿತ್, ಮುಖ್ಯಮಂತ್ರಿ ಚಂದ್ರು, ಲೋಹಿತಾಶ್ವ, ಬ್ಯಾಂಕ್ ಜನಾರ್ದನ್, ಶಂಕರ್ ಪಾಟೀಲ್, ಕಾಶಿ, ಅಂಜನಾ, ಸೌಂದರ್ಯ, ಪದ್ಮಾ ಕುಮಟ, ಉಮಾಶ್ರೀ, ಮೈನಾವತಿ, ರೇಖಾ ದಾಸ್,
ಕ/ಚಿ.ಕ: ಪೇರಾಲ
ಮಾ: ಕುಣಿಗಲ್ ನಾಗಭೂಷಣ್
ಗೀ: ಹಂಸಲೇಖ
ಗಾ: ಮಂಜುಳಾ ಗುರುರಾಜ್, ಬಿ.ಆರ್.ಛಾಯಾ, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಲತಾ ಹಂಸಲೇಖ, ಚಿತ್ರಾ, ಹಂಸಲೇಖ
ಸಂ: ಮುರಳಿ ರಾಮಯ್ಯ
ಛಾ: ಸಿ.ಮನೋಹರ್
ಕಲೆ: ಕೆ.ಎಸ್.ವೇಣು
ಸ: ಹಂಸಲೇಖ
ಧ್ವ: ಕೃಷ್ಣಮೂರ್ತಿ, ಪೀಟರ್-ಅಣ್ಣಾದೊರೈ
ನೃ: ಶಿವಶಂಕರ್
ಸಾ: ಥ್ರಿಲ್ಲರ್ ಮಂಜು
ವ: ಭಾಷಾ
ಪ್ರ: ಚಂದ್ರು, ಮಾಧವನ್, (ಕೇಶ:) ನಾಗೇಶ್ವರ ರಾವ್
ಸ್ಟು: ಕಂಠೀರವ
ಹಾ: ೧)'ಪಳೀಲು ಮೇಲೆ ಪಳಣ್ಣಾ...', ೨)'ಕೊಟ್ಟಾ ಕೊಟ್ಟಾ ತೆಗೆ ತೆಗೆದು ಕೂಟ್ಟಾ...', ೩) 'ಅಲ್ಲಿ ಇಲ್ಲಿ ಅಡಬೇಡ ಗೋವಿಂದಾ...', ೪) 'ಓ ಮಾಧುರಿ ನೀನೇ ನನ್ನ ಪ್ರೇಮದ ಕಾದಂಬರಿ...', ೫)' ಆಹಾ ನನ್ನ ಮದುವ ...', ೬)' ಹಟಮಾರಿ ಲೋಕ ಒಲವನ್ನು ...'
ಸೆ: ಉದ ೩೮೯೯.೦೦, ರೀಲು - ೧೪, 'ಯು' ಸರ್ಟಿಫಿಕೇಟ್
ಕ.ಸಾ: ತನ್ನ ತಂದೆಯನ್ನು ಕೊಲೆ ಮಾಡಿದವನ ಮೇಲೆ ಮಗ ಸೇಡು ತೀರಿಸಿಕೊಳ್ಳುವ ಕಥೆ. ಅನಾಥನಾಗಿ ಬೆಳೆದ ರಾಘವ ತನ್ನ ತಂಗಿ ಮಾಧುರಿಯನ್ನು ಪ್ರಾಣಕ್ಕಿಂತ ಮಿಗಿಲಾಗಿ ಬೆಳಸುತ್ತಾನೆ. ಆಕೆಯ ಬಾಳಿನಲ್ಲಿ ಚೆಲ್ಲಾಟವಾಡಲು ಬಂದವರನ್ನು ಸದೆ ಬಡಿಯುತ್ತಾನೆ. ತನ್ನ ತಂದೆ ತಾನು ಕೆಲಸ ಮಾಡುತ್ತಿದ್ದ ಬ್ಯಾಂಕಿನ ಕಾವಲುಗಾರನ ಕೊಲೆ ಮಾಡಿ ಬ್ಯಾಂಕನ್ನು ದೋಚಿ ಪರಾರಿಯಾಗಿದಾನೆಂಬ ಆರೋಪ ರಾಘವನನ್ನು ಕೊರೆಯುತ್ತಿರುತ್ತದೆ. ಆದರೆ ಆ ಕಾವಲುಗಾರನೇ ತನ್ನ ತಂದೆಗೆ ಎಚ್ಚರ ತಪ್ಪುವಂತೆ ಕುಡಿಸಿ, ತನ್ನ ಸಮವಸ್ತ್ರವನ್ನು ತೊಡಿಸಿ ಸೀಮೆ ಎಣ್ಣೆ ಸುರಿದು ಬೆಂಕಿ ಹಚ್ಚಿ ಕೊಲೆ ಮಾಡಿ ಬ್ಯಾಂಕನ್ನು ದೋಚಿರುವ ಸತ್ಯ ಸಂಗತಿಯನ್ನು ಕಂಡು ಹಿಡಿವ ರಾಘವ, ಊರಿನಲ್ಲಿ ಗಣ್ಯನೆನಿಸಿ ಮೆರೆಯುತ್ತಿರುವವನೇ ಆ ಧೂರ್ತ ಕಾವಲುಗಾರನೆಂಬುದನ್ನು ಪತ್ತೆ ಹಚ್ಚುತ್ತಾನೆ. ಧೂರ್ತನ ಕೊಲೆ ಮಾಡುತ್ತಾನೆ; ಕೊಲೆಗೀಡಾದ ತಂದೆಯ ಆತ್ಮಕ್ಕೆ ಶಾಂತಿಯುಂಟು ಮಾಡುತ್ತಾನೆ.

೧೪೫೩. ಹೊಸ ಕಳ್ಳ ಹಳೇ ಕುಳ್ಳ

(೧೯೯೨ / ವರ್ಣ / ಸಾಮಾಜಿಕ)
ಲಾ: ದ್ವಾರಕೀಶ್ ಚಿತ್ರ
ಪ್ರೊ/ನಿ: ದ್ವಾರಕೀಶ್
ಸ.ನಿ: ಬಾಲಕುಮಾರ್
ಅ: ದ್ವಾರಕೀಶ್, ಶಶಿಕುಮಾರ್, ಸಿಲ್ಕ್ ಸ್ಮಿತಾ, ವಜ್ರಮುನಿ, ಶ್ರೀಲಲಿತಾ, ಮಧುಮತಿ, ರಾಜಾನಂದ್, ಮಧುಸೂದನ್, ಮೈಸೂರು ಲೋಕೇಶ್, ಜೂ।ನರಸಿಂಹರಾಜು, ಚೇತನ್ ರಾಮರಾವ್,
ಕ: ಎಂ.ಡಿ.ಸುಂದರ್
ಚಿ.ಕ: ದ್ವಾರಕೀಶ್
ಮಾ: ಎಂ.ಎಸ್.ವ್ಯಾಸರಾವ್
ಗೀ: ಹಂಸಲೇಖ
ಗಾ: ಕುಮಾರ್‌ಸಾನು, ರಾಜೇಶ್, ಮಂಜುಳಾ ಗುರುರಾಜ್, ಚಂದ್ರಿಕಾ, ಮನು
ಸಂ: ಸುರೇಶ್ ಅರಸ್
ಛಾ: ಕರುಣಾಕರ ರಾವ್

ಕಲೆ: ವೇಣು
ಸ: ಹಂಸಲೇಖ
ಧ್ವ: ಎಸ್.ಪಿ.ರಾಮನಾಥನ್, ಕೋದಂಡಪಾಣಿ
ನೃ: ರಘುರಾಂ, ಜಾನ್‌ಬಾಬು
ಸಾ: ನಂಜುಂಡಿ ನಾಗರಾಜ್
ವ: ಗಣೇಶ್
ಪ್ರ: ಮನ್ಮಥರಾವ್
ಸ್ಟು: ಪ್ರೀಮಿಯರ್
ಹಾ: ೧)'ಮುತ್ತಿನಂಥ ಹುಡುಗಿ ನನ್ನ ಚಿತ್ತ ಬೆಳ್ಳಿ ಬೆಡಗಿ...', ೨) 'ಪೌನದ ರಾತ್ರಿಗೆ ಚಂದ್ರನ...', ೩)'ರಾಣಿ ಇಲ್ಲ ಗುರ್‌ರಾಣಿ...', ೪)'ಹೇ ಹೇ ಹೇ ಕುಳ್ಳ ಕುಳ್ಳ...', ೫)'ಅಮ್ಮ ನನ್ನ ನೋಡಮ್ಮ...', ೬)'ಪಸಿಮ ಪನ್ನೀರು...',
ವಿ: ಹಿಂದಿಯ ಕುಮಾರ್ ಸಾನು ಹಾಡಿರುತ್ತಾರೆ.
ಕ.ಸಾ: ಪೊಲೀಸ್ ಅಧಿಕಾರಿಯು ಮೋಹಿನ ಹಗೆಯನ್ನು ತೀರಿಸಿಕೊಳ್ಳಲು ಕಳ್ಳನೊಬ್ಬ ಆ ಅಧಿಕಾರಿಯ ಮಗನನ್ನು ಅಪಹರಿಸಿ ಒಬ್ಬ ಕುಳ್ಳನ ಬಳಿ ಬಿಡುತ್ತಾನೆ. ಕುಳ್ಳ ಆ ಹುಡುಗನನ್ನು ಬೆಳೆಸಿ ದೊಡ್ಡವನನ್ನಾಗಿ ಮಾಡುತ್ತಾನೆ. ಆದರೆ ಆ ಯುವಕ ಒಬ್ಬ ಪಿಕ್‌ಪಾಕೆಟ್ ಕಳ್ಳನಾಗಿರುತ್ತಾನೆ. ಹಲವಾರು ಘಟನೆಗಳ ನಂತರ ಆ ಯುವಕ ತನ್ನ ತಂದೆ ತಾಯಿಯನ್ನು ಸೇರುತ್ತಾನೆ.

೧೪೫೪. ಪೊಲೀಸ್ ಫೈಲ್

(೧೯೯೨ / ವರ್ಣ / ಸಾಮಾಜಿಕ)
ಲಾ: ರೋಹನ್ ಫಿಲಂಸ್
ಪ್ರೊ: ಪಿ.ಸಿದ್ದಾರೆಡ್ಡಿ, ನಾರಾಯಣ್, ಜಿ.ಕೆ.ಮುದ್ದುರಾಜ್
ನಿ: ಜಿ.ಕೆ.ಮುದ್ದುರಾಜ್
ಸ.ನಿ: ವೈ.ಯೇಸುದಾಸ್
ಅ: ದೇವರಾಜ್, ಜಗ್ಗೇಶ್, ವಿನಯಾ ಪ್ರಸಾದ್, ತಾರಾ
ಕ/ಚಿ.ಕ: ಜಿ.ಕೆ.ಮುದ್ದುರಾಜ್
ಮಾ: ಕುಣಿಗಲ್ ನಾಗಭೂಷಣ್
ಗೀ: ಹಂಸಲೇಖ , ವಿ.ಮನೋಹರ್
ಗಾ: ಮಂಜುಳಾ ಗುರುರಾಜ್, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ, ಲತಾ ಹಂಸಲೇಖ
ಸಂ: ಎಸ್.ಪ್ರಸಾದ್
ಛಾ: ಮನೋಹರ್.ಸಿ
ಕಲೆ: ಸುಂದರಂ
ಸ: ಹಂಸಲೇಖ
ನೃ: ಮಹೇಂದ್ರನ್, ಸತೀಶ್, ಅಂಜಿ
ಸಾ: ಥ್ರಿಲ್ಲರ್ ಮಂಜು
ವ: ನಾಗರಾಜ್ ಗಂಡಸಿ
ಪ್ರ: ಸೀನು, ಗೋಪಾಲ್
ಸ್ಟು: ಕಂಠೀರವ
ಹಾ: ೧) 'ಚಿರಂಜೀವಿಯಾಗಿ...', ೨) 'ನಾನು ಒಂದು...', ೩)'ರೂಪಿ ಮಿಸುಕು ಬೇಡ...', ೪)'ಕನಕ ಕನಕ ಓ ಕನಕ...',
ಕ.ಸಾ: ಕಾನೂನನ್ನು ಪಾಲಿಸುವ ಪೊಲೀಸ್ ಅಧಿಕಾರಿ. ಕಾನೂನಿನ ಕಣ್ಣಿಗೇ ಮಣ್ಣೆರಚಿ ಸಮಾಜ ದ್ರೋಹಿ ಕೆಲಸದಲ್ಲಿ ತೊಡಗಿದ ಮಂದಿ. ಇವರ ನಡುವೆ ನಡೆಯುವ ಕಣ್ಣಾ ಮುಚ್ಚಾಲೆಯಾಟ; ಸಂಘರ್ಷ. ಇವುಗಳ ಹಿನ್ನೆಲೆಯಲ್ಲಿ ರೂಪುಗೊಂಡ ಕಥೆ. ಪೊಲೀಸ್ ಫೈಲಿನಲ್ಲಿ ದಾಖಲಾಗುವ ಧೂರ್ತರು ಅಂತ್ಯದಲ್ಲಿ ಕಾನೂನಿನ ಕಕ್ಷೆಯೊಳಗೆ ಬರಲೇ ಬೇಕಾಗುತ್ತದೆ.

೧೪೫೫. ಕೆಂಪು ನಿಷಾದಿ

(೧೯೯೨ / ವರ್ಣ / ಪತ್ತೇದಾರಿ)
ಲಾ: ಶಾಂಭವಿ ಪ್ರೊಡಕ್ಷನ್ಸ್
ಪ್ರೊ: ಬಿ.ಆರ್.ನಟರಾಜ್
ನಿ: ರವಿರಾಜ್
ಸ.ನಿ: ರಜನೀಶ್ ಕುಲಕರ್ಣಿ, ಜಿ.ಕೆ.ವಿ.ಪ್ರಸಾದ್ ರಾಜ
ಅ: ಬಿ.ಆರ್.ನಾಗರಾಜ್, ದಯಾನಂದ್, ಧನಂಜಯ, ಸುಬ್ಬಣ್ಣ, ಚನ್ನಬಸಪ್ಪ, ಆಂಜನೇಯಲು, ರವಿರಾಜ, ವಿನೂರಾಥ, ನವನೀತಾ, ವಾಹಿನಿ, ಭಾಗ್ಯ, ರಘುರಾಜ, ಅರಸೀಕೆರೆ ರಾಜು, ಅರವಿಂದ್, ಬಿರಾದಾರ್
ಕ/ಚಿ.ಕ/ಮಾ: ರಜನೀಶ್ ಕುಲಕರ್ಣಿ
ಗೀ: ರವಿರಾಜ
ಗಾ: ನಟರಾಜ್, ಬಿ.ಆರ್.ಛಾಯಾ, ಮಂಜುಳಾ ಗುರುರಾಜ್
ಸಂ: ಎಂ.ಎಸ್.ಸ್ವಾಮಿ
ಛಾ: ಎಸ್.ರಂಜನ್
ಕಲೆ: ಕೃಷ್ಣಮಾಚಾರ್
ಸ: ರಾಜಶೇಖರ್
ಧ್ವ: ಆರ್.ಕಣ್ಣನ್, ಅರವ ಮುದನ್
ನೃ: ದ್ವಾರಕಾನಾಥ್
ವ: ಅಬ್ದುಲ್
ಪ್ರ: ಎಸ್.ಪಿ.ಶಿವರಾಂ
ಹಾ: ೧)'ನನ್ನಾಸೆಯ ಸಂಗಾತಿಯೆ...', ೨)'ಆಸೆ ಮನದಲಿ ಆನಂದ ರಾಗವು...', ೩)'ಕಣ್ಣು ಎಲ್ಲಿದೆ ಹೆಣ್ಣು ಕೂಗಿದೆ...',
ಕ.ಸಾ: ಡಾ॥ವಿಜಯ್ ಹೆಸರಾದ ಮನೋವೈದ್ಯ. ಪತಿಯ ಅಕೃತ್ಯಗಳನ್ನು ತಡೆಯಲು ಆಗದೆ, ಆ ಬಗ್ಗೆ ಹೇಳಿಕೊಳ್ಳಲು ಆಗದೆ, ಮನೋವೇದನೆಗೆ ತುತ್ತಾಗಿ ನೊಂದ ತರುಣಿ ಅವನಲ್ಲಿ ಚಿಕಿತ್ಸೆಗೆ ಬರುತ್ತಾಳೆ. ಆ ತರುಣಿ ಕ್ರಮೇಣ ಚೇತರಿಸಿಕೊಳ್ಳ ತೊಡಗುತ್ತಾಳೆ. ಅವರಿಬ್ಬರಲ್ಲಿ ಅನುರಾಗ ಉಂಟಾಗುತ್ತದೆ. ಆಕೆಯ ಪತಿ ಇವರ

ಬೆನ್ನು ಹತ್ತುತ್ತಾನೆ. ಕೊಲೆಯೂ ನಡೆದು ಹೋಗುತ್ತದೆ. ಕೊನೆಯಲ್ಲಿ ವೈದ್ಯ ನಿಜವಾದ ಕೊಲೆಗಾರನ ಪತ್ತೆ ಮಾಡುತ್ತಾನೆ. ದುಷ್ಕರ್ಮಿಗಳು ಶಿಕ್ಷೆಗೆ ಒಳಗಾಗುತ್ತಾರೆ.

೧೪೫೬. ಪ್ರೇಮ ಸಂಗಮ

(೧೯೯೨ / ವರ್ಣ / ಸಾಮಾಜಿಕ)
ಲಾ: ಶ್ರೀ ಪೂಜಾ ಕಂಬೈನ್ಸ್
ಪ್ರೊ: ಬಿ.ಪಿ.ಸೋಮು, ಬಿ.ಪಿ.ಮಾರುತಿ, ಬಿ.ಪಿ.ತ್ಯಾಗು
ನಿ: ಭಾರ್ಗವ
ಸ.ನಿ: ಬಾಲಾಜಿ ಸಿಂಗ್, ಹಿರೇಮಠ್, ಉದಯ್
ಅ: ಅಂಬರೀಷ್, ಮಾಲಾಶ್ರೀ, ರಮೇಶ್ ಭಟ್, ಶಿವರಾಂ, ಹೇಮಾ ಚೌಧುರಿ, ಎಚ್.ಎನ್.ಕೃಷ್ಣ, ಜೈಜಗದೀಶ್, ಮೈನಾವತಿ, ಸಾಯಿಕುಮಾರ್, ಹೊನ್ನವಳ್ಳಿ ಕೃಷ್ಣ, ತಾರಾ ಪ್ರಕಾಶ್ ರೈ.
ಕ: ಕೆ.ನಾರಾಯಣ್
ಚಿ.ಕ: ಭಾರ್ಗವ
ಮಾ: ಚಿ.ಉದಯಶಂಕರ್
ಗೀ: ಚಿ.ಉದಯಶಂಕರ್, ಶ್ರೀರಂಗ, ಸು.ರುದ್ರಮೂರ್ತಿ ಶಾಸ್ತ್ರಿ, ಶ್ಯಾಮ ಸುಂದರ ಕುಲಕರ್ಣಿ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ, ಮಂಜುಳಾ
ಸಂ: ಮನೋಹರ್
ಛಾ: ಆರ್.ಮಧುಸೂದನ್
ಕಲೆ: ನಜೀರ್
ಸ: ರಾಜನ್ ನಾಗೇಂದ್ರ
ಧ್ವ: ಚಾಮುಂಡೇಶ್ವರಿ
ನೃ: ಉಡುಪಿ ಜಯರಾಂ, ದೇವಿ
ಸಾ: ಜ್ಯೂಡೋ ರತ್ನಂ
ವ: ನಾಗರಾಜ್, ರಾಮನಾಥ್, ವೀರ್ರಾಜ್
ಪ್ರ: ಮೈಸೂರು ವೆಂಕಟೇಶ್, ಮೇಕಪ್ ರಾಮಕೃಷ್ಣ, ಕೃಷ್ಣ
ಸ್ಟು: ಕಂಠೀರವ
ಹಾ: ೧)'ಹೊನ್ನ ಕೋಗಿಲೇ...', ೨)'ಮುದ್ದಾದ ಮೊಗದಲ್ಲಿ ಮುನಿಸ್ಯಾಕೋ...', ೩)'ನನ್ನ ಜೋಡಿ ನೀನು...', ೪)'ಜಾರಿಯೇ ಒಳ್ಳೆ ಹಾರಿದೇ...', ೫)'ಪ್ರೀತಿ ಐ ಲವ್ ಯೂ...', ೬)'ಚಂದಪ್ಪ ಚಂದ, ಚಂದ ...'
ಕ.ಸಾ: ಕ್ಲಬ್‌ನಲ್ಲಿ ಹಾಡುವ ಸಾಮಾನ್ಯ ಕುಟುಂಬದ ತರುಣ. ಅವನ ವ್ಯಕ್ತಿತ್ವ ಕಂಡು ಒಲಿದು ಬಂದ ಶ್ರೀಮಂತ ಕನ್ಯೆ. ತಂದೆ ತಾಯಿಯ ಪ್ರೀತಿಯನ್ನು ಕಾಣದೆ, ಶಿಸ್ತಿನಿಂದ ಅಮೆರಿಕೆಯಲ್ಲಿ ಬೆಳೆದು ಬಿಡಿದ ತರುಣಿ. ಅವಳ ಪ್ರೇಮವನ್ನು ತರುಣ ಮೊದಲು ತಿರಸ್ಕರಿಸಿದ. ನಂತರ ಅವಳ ನಿಜವಾದ ಪ್ರೀತಿಯನ್ನು ಕಂಡುಕೊಂಡ. ಅವಳ ತಂದೆ ಹಾಕುವ ಷರತ್ತನ್ನು ಈಡೇರಿಸಿ ಆಕೆಯ ಕೈ ಹಿಡಿದ. ಅಷ್ಟು ಹೊತ್ತಿಗೆ ಅನೇಕ ಸಂಚುಗಾರರು, ದುಷ್ಟರುಗಳಿಂದ ಆ ಕುಟುಂಬವನ್ನು ಪಾರುಮಾಡಿದ.

೧೪೫೭. ನಂಜುಂಡ

(೧೯೯೨ / ವರ್ಣ / ಸಾಮಾಜಿಕ)
ಲಾ: ಅಷ್ಟಲಕ್ಷ್ಮಿ ಸಿನಿ ಕಂಬೈನ್ಸ್
ಪ್ರೊ: ಎಂ.ಲೀಲಾವತಿ
ನಿ: ಎಸ್.ನಾರಾಯಣ್
ಅ: ವಿನೋದ್ ರಾಜ್, ಬಿ.ವಿ.ಕುಮಾರ್, ಎಂ.ಲೀಲಾವತಿ, ಸುಮತಿ, ಮಾಲತಿ, ಆಶಾಲತಾ, ಪುಷ್ಪಾರಾವ್, ಉಮಾ, ಆಕಾಶ್, ಶರ್ಮಿಳ, ಎ.ಸಿ.ಪಿ.ಪ್ರಕಾಶ್
ಕ: ಎಂ.ಲೀಲಾವತಿ
ಚಿ.ಕ/ಮಾ/ಗೀ: ಎಸ್.ನಾರಾಯಣ್
ಗಾ: ಮನು, ಮಂಜುಳಾ ಗುರುರಾಜ್, ವಿನೋದ್ ರಾಜ್, ರಂಗಸ್ವಾಮಿ
ಸಂ: ಪಿ.ಮದನ್ ಮೋಹನ್
ಸ: ರಾಜ್ ಮೋಹನ್
ನೃ: ಜಾನ್ ಬಾಬು
ಸಾ: ನೀಗ್ರೋ ಜಾನಿ
ವ: ವಿಠಲ್‌ರಾವ್
ಪ್ರ: ವಿಠಲ್ ಬಾಬು
ಹಾ: ೧)'ಬರ್ತಾನ್ಷೆ ನಮ್ಮೂರ ಜಾಣ...', ೨)'ಪಿಯ್ ಮಾವಾ ಹೋಗ್ಬೇಡಾ...', ೩)'ಪ್ರೇಮ ದೈವಗಳ ವೇದಾ...', ೪)'ನಗು ತೃಪ್ತ ದೈವ ಅಲ್ಲಿ...', ೫)'ಸೂಂಟವ ಹಿಡಿಬೇಡ ಈ ನಂಟನು ಬಿಡಬೇಡ...',
ಸೆ: ಉದ ೩.೭೨೭.೦೦, ರೀಲು - ೧೪
ಕ.ಸಾ: ಮುಗ . ಆವನನ್ನು ವಿದ್ಯಾವಂತನನ್ನಾಗಿಸಲು ಬಂದ ಶಿಕ್ಷಕಿ, ಅವನನ್ನೇ ಪ್ರೇಮಿಸ ತೊಡಗುವಳು. ಒಲಿದು ಬಂದವಳನ್ನ ವಿವಾಹವಾಗದೆ, ಆ ಯುವಕ ಬೇರೆಯವಳನ್ನು ವಿವಾಹವಾಗು ವಂತೆ ಹೆತ್ತ ತಂದೆಯೇ ಮಾಡಿದ ಹುನ್ನಾರ. ಕಳ್ಳ ತಂದೆಯಿಂದಾದ ಅನೇಕ ತಪ್ಪು, ದೌರ್ಜನ್ಯಗಳಿಗೆ ಪ್ರತಿಯಾಗಿ ತಂದೆಯನ್ನೇ ಕೊಂದ ಮುಗ, ಜೈಲು ಸೇರುವ ಕಥೆ. ಸಾಹಸ, ಪ್ರಣಯ, ಪ್ರಾಣತ್ಯಾಗದಂತಹ ಅಂಶಗಳು ಸೇರಿವೆ.

೧೪೫೮. ಆತ್ಮ ಬಂಧನ

(೧೯೯೨ / ವರ್ಣ / ಸಾಮಾಜಿಕ)
ಲಾ: ಶ್ರೀ ಸರ್ವಶಕ್ತಿ ಫಿಲಂಸ್
ಪ್ರೊ: ಎಂ.ರಾಜಗೋಪಾಲ್
ನಿ: ಶ್ರೀಕಾಂತ್ ನಹತಾ
ಸ.ನಿ: ಎಂ.ಆರ್.ಪ್ರಕಾಶ್
ಅ: ಶಶಿಕುಮಾರ್, ಜಯಪ್ರದಾ, ವೈಷ್ಣವಿ, ತೂಗುದೀಪ ಶ್ರೀನಿವಾಸ್, ದೊಡ್ಡಣ್ಣ, ಮೈಸೂರು ಲೋಕೇಶ್, ಕಮನೀಧರನ್, ಶನಿ ಮಹಾದೇವಪ್ಪ, ಗೋ.ರಾ.ಭೀಮಾರಾವ್, ಜಿತೇಂದ್ರಕುಮಾರ್, ರಾಮಕೃಷ್ಣ. ವಜ್ರಮುನಿ, ಜೂ॥ಅಮಿತಾಬ್‌ಬಚ್ಚನ್
ಕ/ಚಿ.ಕ: ಶ್ರೀಕಾಂತ್ ನಹತ
ಮಾ: ಕೆ. ಎಸ್. ಕೆ.ರಾವ್

ಗೀ: ಚಿ.ಉದಯಶಂಕರ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ. ಚಿತ್ರಾ
ಸಂ: ಪಿ.ವೆಂಕಟರತ್ನಂ
ಛಾ: ಡಿ.ವಿ.ರಮಣ
ಕಲೆ: ನಜೀರ್
ಸ: ರಾಜನ್ ನಾಗೇಂದ್ರ
ಧ್ವ: ಎಸ್.ಪಿ.ರಾಮನಾಥನ್, ಕೋದಂಡಪಾಣಿ, ರಾಮಸ್ವಾಮಿ
ನೃ: ಶಿವಶಂಕರ್
ಸಾ: ನಂಜುಂಡಿ ನಾಗರಾಜ್
ವ: ಸತ್ಯಂ, ಬಾಷಿ
ಪ್ರ: ವೆಂಕಟೇಶ್, ರವಿ, ಪ್ರಸಾದ್. (ಕೇಶ: ಕಮಲಮ್ಮ)
ಸ್ಟು: ಕಂಠೀರವ
ಕ.ಸಾ: ವರದಕ್ಷಿಣೆ ಕಾರಣ ಹೆಣ್ಣನ್ನು ಮೋಸದಿಂದ ಕೊಲ್ಲುವ ಅತ್ತೆ, ಮಾವ ಹಾಗೂ ಅತ್ತೆಯ ತಮ್ಮನನ್ನು ಕೊಲೆಯಾಗಿದ್ದಾದ ಹೆಣ್ಣು ದೆವ್ವವಾಗಿ ಬಂದು ಕಾಡತೊಡಗುತ್ತಾಳೆ. ಜೊತೆಗೆ ತನ್ನ ಕೊಲೆಯಾದ ಮೇಲೆ ಎರಡನೆಯ ಮದುವೆಯಾದ ಗಂಡನನ್ನು ಕಾಡುತ್ತಾಳೆ. ದೈವ ಭಕ್ತೆಯಾದ ಎರಡನೇ ಹೆಂಡತಿ ಗಂಡನನ್ನು ಕಾಡಲು ಬಂದ ದೆವ್ವವನ್ನೇ ಓಡಿಸಿ ತನ್ನ ಪತಿಯನ್ನು ಉಳಿಸಿಕೊಳ್ಳುತ್ತಾಳೆ.

೧೪೫೯. ಜೀವನ ಚೈತ್ರ

(೧೯೯೨ / ವರ್ಣ / ಸಾಮಾಜಿಕ)
ಲಾ: ದಾಕ್ಷಾಯಿಣಿ ಸಿನಿ ಕಂಬೈನ್ಸ್
ಪ್ರೊ: ಶ್ರೀಮತಿ ಪಾರ್ವತಮ್ಮ ರಾಜಕುಮಾರ್
ನಿ: ದೊರೈ ಭಗವಾನ್
ಅ: ಡಾ॥ರಾಜಕುಮಾರ್, ಮಾಧವಿ, ಕೆ.ಎಸ್.ಅಶ್ವತ್ಥ್, ಪಂಢರೀ ಬಾಯಿ, ಗುರುದತ್, ಅಭಿಜಿತ್, ಬಾಲರಾಜ್, ಸುಧಾರಾಣಿ, ತೂಗುದೀಪ ಶ್ರೀನಿವಾಸ್
ಕ: ಶ್ರೀಮತಿ ವಿಶಾಲಕ್ಷ್ಮಿ ದಕ್ಷಿಣಾಮೂರ್ತಿಅವರ ಕಾದಂಬರಿ ಆಧಾರ
ಗೀ: ಚಿ.ಉದಯಶಂಕರ್, ಮೂಗೂರು ಮಲ್ಲಪ್ಪ
ಗಾ: ಡಾ॥ರಾಜಕುಮಾರ್, ಮಂಜುಳಾ ಗುರುರಾಜ್
ಸಂ: ಭಕ್ತವತ್ಸಲಂ
ಛಾ: ಶ್ರೀಕಾಂತ್
ಕಲೆ: ನಜೀರ್
ಸ: ಉಪೇಂದ್ರ ಕುಮಾರ್
ಸಾ: ಸ್ವಾಮಿ
ಸ್ಟು: ಕಂಠೀರವ
ಹಾ: ೧)'ನಿನ ಚೆಲುವ ವದನ ಕಮಲ ನಯನ...', ೨)'ಅರಳಿದ ತನುವಿದು ಅಂದವೂ ಅಂದ...', ೩)'ಮಾನವನಾಗಿ ಹುಟ್ಟಿದ್ಮೇಲೆ ಏನೇನ್ಕಂಡಿ...', ೪) 'ಲಕ್ಷ್ಮೀ ಬಾರಮ್ಮ ಭಾಗ್ಯಲಕ್ಷ್ಮೀ ಬಾರಮ್ಮಾ...', ೫)'ನಾದಮಯ ಲೋಕವೆಲ್ಲಾ...',
ವಿ: ಬಹುದೀರ್ಘಕಾಲದ ನಂತರ ರಾಜಕುಮಾರ್ ಅಭಿನಯಿಸಿದರು. ಚಿತ್ರ ಸಾಮಾಜಿಕವಾಗಿ ಪರಿಣಾಮ ಬೀರಿದ ಕೆಲವು ಘಟನೆಗಳು ನಡೆದವು. ೧೯೯೨-೯೩ರ ರಾಜ್ಯ ಪ್ರಶಸ್ತಿ : ಪ್ರಥಮ ಅತ್ಯುತ್ತಮ ಚಿತ್ರ, ಅತ್ಯುತ್ತಮ ನಟ, (ಡಾ. ರಾಜಕು ಮಾರ್) ಅತ್ಯುತ್ತಮ ಸಂಗೀತ ನಿರ್ದೇಶಕ (ಉಪೇಂದ್ರಕುಮಾರ್) ಅತ್ಯುತ್ತಮ ಸಂಭಾಷಣಾ ಕರ್ತೃ (ಚಿ. ಉದಯಶಂಕರ್)
ಕ.ಸಾ: ವಿಶ್ವನಾಥ ಆದರ್ಶಗಳಿರುವ ವ್ಯಕ್ತಿ. ಅಂಥದೇ ಆದರ್ಶವಿರುವ ಯುವತಿಯನ್ನು ವಿವಾಹವಾದ. ಮಕ್ಕಳಾದರು. ಮಕ್ಕಳು ಅವರ ಆದರ್ಶಕ್ಕೆ ಒಗ್ಗಲಿಲ್ಲ. ಹೆಂಡತಿಯ ಸಾವು, ತಂದೆ ಊರುಬಿಟ್ಟ. ಮಕ್ಕಳು ಕುಲನಾಶಕರಾದರು. ನಂದನವನ ವಂತಿದ ಮನೆಯನ್ನು ಆಧುನಿಕತೆಯ ಹೆಸರಿನಲ್ಲಿ ಸ್ವೇಚ್ಛಾಚಾರದ ಆಗರವನ್ನಾಗಿಸಿದರು. ಆದರೆ ಮರಳಿ ಬಂದ ತಂದೆ ಎಲ್ಲವನ್ನೂ ಸರಿಪಡಿಸಿ ಮತ್ತೆ ಚೈತನ್ಯ ತುಂಬಿದ. ಮನೆಯನ್ನು, ಹಳ್ಳಿಯನ್ನು ಜೀವನ ಚೈತ್ರವನ್ನಾಗಿಸಿದ.

೧೪೬೦. ಮೇಘ ಮಂದಾರ

(೧೯೯೨ / ವರ್ಣ / ಸಾಮಾಜಿಕ)
ಲಾ: ಜಯದುರ್ಗ ಪ್ರೊಡಕ್ಷನ್ಸ್
ಪ್ರೊ: ಮೀನಾಕ್ಷಿ ಜಯರಾಂ
ಚಿ.ಕ/ನಿ: ಕೆ.ವಿ.ಜಯರಾಂ

ಅ: ಅಂಬರೀಷ್, ಮಾಲಾಶ್ರೀ, ಕೆ.ಎಸ್. ಅಶ್ವತ್ಥ್, ಲೋಕನಾಥ್, ಅಂಜನಾ, ಜಗ್ಗೇಶ್, ಶೋಭಾ, ರೂಪಶ್ರೀ, ಭಾಸ್ಕರ್, ರೇಖಾ ದಾಸ್
ಕ: ಡಾ. ಎಚ್. ಗಿರಿಜಮ್ಮನವರ ಕಾದಂಬರಿ
ಚಿ.ಕ: ಕೆ.ವಿ.ಜಯರಾಂ
ಮಾ: ಬಿ.ಎಲ್.ಸುರೇಶ್
ಗೀ: ದೊಡ್ಡರಂಗೇಗೌಡ
ಗಾ: ಮಂಜುಳಾ ಗುರುರಾಜ್, ಚಿತ್ರಾ, ಎಸ್.ಪಿ.ಬಾಲಸುಬ್ರಹ್ಮಣ್ಯಂ
ಸಂ: ರಾಜಶೇಖರ ರೆಡ್ಡಿ
ಛಾ: ಮುತ್ತುರಾಜ್
ಸ: ಎಸ್.ಪಿ.ವೆಂಕಟೇಶ್
ನೃ: ಮನೋಹರ್ ಗಿರಿಜಾ
ಸಾ: ನಾಗರಾಜ್
ಹಾ: ೧)'ನನ್ನ ಮಂದಾರ ಹೆಣ್ಣು...',
೨)'ಡ್ಯಾಡಿ ಡ್ಯಾಡಿ ಡ್ಯಾಡಿ ಡ್ಯಾಡಿ ಪ್ರೀತಿ...',
೩)'ಮೇಘ ಮೇಘ ಪ್ರೀತಿ ಮಳೆಯ ತಂದ...',
೪)'ತಾಯಿ ಕಾಣದ ತಂದೆ ಒಲವಿರದ ಹಿರಿಯರು...',
೫)'ಮಂದಾರ ಮಂದಾರ ಹಾ ಮಂದಾರ...',
೬)'ಆಶಾ ಗೋಪುರ ಉರುಳಿ ಬೀಸರ...',
ಸೆ: ರೀಲು - ೧೬, ಉದ್ದ ೪೪೬೭.೦೦, 'ಯು'
ಕ.ಸಾ: ಒಂದು ಸಾಂಸಾರಿಕ ಕಥೆ. ಪ್ರೀತಿಸಿದವನು ಸಿಗುವುದಿಲ್ಲ ಕೈಗೆ ಸಿಕ್ಕಾಗಲೂ ಆಗದವರಿಂದ ಅಡೆ-ತಡೆಗಳು; ಅಪಘಾತಗಳು, ಗರ್ಭಿಣಿಯಾಗಿ ಹೆತ್ತ ಮಗು ದಕ್ಕದು. ದತ್ತು ತೆಗೆದುಕೊಂಡು ಬೆಳೆಸುವುದು. ಹೀಗೆ ಆಕಸ್ಮಿಕ ಭಾವನಾತ್ಮಕ ಸನ್ನಿವೇಶಗಳನ್ನು ಸೇರಿಸಿ ಸುಖಾಂತ ಗೊಳ್ಳುವ ಕಥಾ ಭಾಗ.

೧೪೬೧. ಶಕ್ತಿ-ಯುಕ್ತಿ

(೧೯೯೨ / ವರ್ಣ / ಸಾಮಾಜಿಕ)
ಲಾ: ಸಿ.ಕೆ.ಪ್ರೊಡಕ್ಷನ್
ಪ್ರೊ: ಎಲ್. ಎನ್.ಚಕ್ರವರ್ತಿ
ನಿ: ಬಿ.ರಾಮಮೂರ್ತಿ
ಸ.ನಿ: ಮೋಹನ್ ಮಾಳಗಿ, ಸುರೇಶ್ ರಾಜ್
ಅ: ಅನಂತ್‌ನಾಗ್, ವಿನಯಾ ಪ್ರಸಾದ್, ಪ್ರಮೋದ್ ಚಕ್ರವರ್ತಿ, ಭುವನ, ದೊಡ್ಡಣ್ಣ, ಮುಖ್ಯಮಂತ್ರಿ ಚಂದ್ರು, ಮನದೀಪ್ ರಾಯ್, ಟೆನ್ನಿಸ್ ಕೃಷ್ಣ, ಸುಂದರಕೃಷ್ಣ ಅರಸ್, ಶೋಭಾ ರಾಘವೇಂದ್ರ, ಜಾನಕಿರಾಮ್, ಶಾಂತಮ್ಮ, ಗಿರೀಶ್, ನವನೀತ, ಭಾಗ್ಯ
ಕ/ಚಿ.ಕ: ಬಿ.ಸಿ.ಶೇಷಕುಮಾರ್
ಮಾ: ಶ್ರೀರಂಗ
ಗೀ: ಹಿರಣ್ಣಯ್ಯ, ಎಂ.ಎನ್.ವ್ಯಾಸರಾವ್, ಶ್ರೀರಂಗ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ
ಸಂ: ಉಮಾಶಂಕರ ಬಾಬು
ಛಾ: ಬಿ.ಎಸ್.ಶಾಸ್ತ್ರಿ
ಕಲೆ: ಜನಾರ್ದನ್ ರಾಜು
ಸ: ಮನೋರಂಜನ್ ಪ್ರಭಾಕರ್
ನೃ: ಪಾಲ್ ರಾಜ್
ಸಾ: ಥ್ರಿಲ್ಲರ್ ಮಂಜು
ವ: ನಾಗರಾಜ್
ಪ್ರ: ಕುಮಾರ್ ನೊಣವಿನಕೆರ
ಸ್ಟು: ಕಂಠೀರವ
ಹಾ: ೧)'ನಲ್ಲೆ ನಿನ್ನ ಮುಡಿಗೆ ನಾ ಮತ್ತೆ...',
೨)'ಕಾಸಗಲ ಕುಂಕುಮ ಬೊಟ್ಟು...',
೩)'ಈ ಜೀವದಲಿ ಪ್ರೀತಿ ಏಕೆ ಮೂಡಿದೆ...',
೪)'ಸುಂದರಿ ನೀನು ಸುಂದರ ನಾನು...',
ಸೆ: ಉದ್ದ-೩೮೩೭.೦೦, ರೀಲು - ೧೪, 'ಯು' ಸರ್ಟಿಫಿಕೇಟ್
ಕ.ಸಾ: ಪೊಲೀಸ್ ಅಧಿಕಾರಿ ಊರಿನ ದುಷ್ಟರನ್ನು ಅಡಗಿಸಲು ಯತ್ನಿಸಿ, ಅದು ವಿಫಲವಾದಾಗ ವೈಯುಕ್ತಿಕವಾಗಿ (ಕೌಟುಂಬಿಕವಾಗಿ) ಅಪಾರ ಹಾನಿಗೆ ಒಳಗಾದ. ತನಗೇ ತಿಳಿಯದ ಹಾಗೆ ತನ್ನ ಕುಟುಂಬವನ್ನೇ ನಾಶ ಮಾಡಿದವರ ಜೊತೆ ಸೇರಿದ್ದವ ಮತ್ತೊಬ್ಬ. ಇವರಲ್ಲಿರ ನಡುವಿನ ಸಂಘರ್ಷ, ಕೊಲೆ, ಆತ್ಮಹತ್ಯೆಗಳು, ಸಾಹಸ, ಯುಕ್ತಿ ಕುಯುಕ್ತಿಗಳ ಸರಮಾಲೆ ದುಷ್ಟರನ್ನು ನಾಶ ಮಾಡಿದರೂ ಕಾನೂನಿಗೆ ಬದ್ಧನಾಗಬೇಕು ಎಂಬ ನೀತಿ.

೧೪೬೨. ಭಲೇ ಕೇಶವ

(೧೯೯೨ / ವರ್ಣ / ಸಾಮಾಜಿಕ)
ಲಾ: ನೇತ್ರ ವೃಕ್ಷ ಫಿಲಂಸ್
ಪ್ರೊ/ನಿ: ವಿಜಯ ಶೆಟ್ಟಿ
ಅ: ದೇವರಾಜ್, ಶಿವರಂಜಿನಿ, ರಮೇಶ್ ಭಟ್, ಅಂಜು, ಅಂಜಲಿ, ಸದಾಶಿವ ಬ್ರಹ್ಮಾವರ್, ಕಲ್ಯಾಣಿ ಪ್ರೇಮ್ ಕುಮಾರ್, ರಾಮದಾಸ್, ತಿಪಟೂರು ಸಿವರಾಮಯ್ಯ, ಬೇಬಿ ಶೀತಲ್
ಕ/ಚಿ.ಕ: ವಿಜಯ ಶೆಟ್ಟಿ
ಮಾ: ಶ್ರೀವತ್ಸ ರಂಗನಾಥ್
ಗೀ: ಎಂ.ಎನ್.ವ್ಯಾಸರಾವ್, ವಿ.ಮನೋಹರ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಜೇಸುದಾಸ್
ಸಂ: ಶ್ರೀನಿವಾಸ್ ಬಾಬು
ಕಲೆ: ಸುಭಾಷ್ ಕಡಕೋಳ್
ಸ: ಮನೋರಂಜನ್ ಪ್ರಭಾಕರ್

ಸಾ: ಥ್ರಿಲ್ಲರ್ ಮಂಜು
ಪ್ರ: ಮಾಧವನ್
ಹಾ: ೧)' ಅಹ ಯಾರಿವಳು ಆ ಅಪ್ಸರೆಯೋ...', ೨)'ಬೇಬಿ ಹಲೋ ಬೇಬಿ ಓ ಮೇರೇ ಪ್ಯಾರಿ...', ೩)'ನೂರು ಕಡಲ ದಾಟಿ ಬರುವೆ...', ೪)'ಹೇಳು ನೀನೆಂಥ ಸಂತೋಷ ಪ್ರೀತಿ ನೀಡಿದೆ...',
ಸೆ: ಉದ್ದ-೩೭೪೫.೦೦, ರೀಲು-೧೪
ಕ.ಸಾ: ಒಪ್ಪಿಗೆಯಿಲ್ಲದ ಮದುವೆಯಿಂದ ಮನಃಕ್ಲೇಶ. ವಿವಾಹ ವಿಚ್ಛೇದನ. ಅವರ ನಿಜವಾದ ಪ್ರೀತಿ ಯಾವುದು-ಎಲ್ಲಿದೆ ಎಂದು ಅರ್ಥವಾದಾಗ ಮರಳಿ ಬದುಕಿಗೆ ಬರುವ ದಂಪತಿಗಳ ಕಥೆ.

೧೪೬೩. ಗೃಹಲಕ್ಷ್ಮಿ

(೧೯೯೨ / ವರ್ಣ / ಸಾಮಾಜಿಕ)
ಲಾ: ಸಿ.ವಿ.ಎಸ್. ಪ್ರೊಡಕ್ಷನ್ಸ್
ಪ್ರೊ: ಎ.ವೆಂಕಟರಾಮ ರೆಡ್ಡಿ
ನಿ: ಬಿ.ಸುಬ್ಬಾರಾವ್
ಸ.ನಿ: ಎಸ್.ವಿ.ಪ್ರಸಾದ್
ಅ: ಮಾಲಾಶ್ರೀ, ದೇವರಾಜ್, ಲಕ್ಷ್ಮೀ, ಜಯಂತಿ, ಶ್ರೀಧರ್, ಪಂಡರಿಬಾಯಿ, ಶ್ರೀನಾಥ್, ಧೀರೇಂದ್ರ ಗೋಪಾಲ್, ಉಮೇಶ್, ಅಭಿಜಿತ್, ಮನ್‌ದೀಪ್ ರಾಯ್, ಗಾಯತ್ರಿ ಪ್ರಭಾಕರ್, ನಾಗೇಶ್, ರತ್ನಾಕರ್, ಹೊನ್ನವಳ್ಳಿ ಕೃಷ್ಣ, ಬ್ಯಾಂಕ್ ಜನಾರ್ದನ್, ಕನ್ನಡ ರಾಜು, ರೇಖಾ ದಾಸ್, ಶಾಂತಮ್ಮ
ಚಿ.ಕ: ಬಿ.ಸುಬ್ಬಾರಾವ್
ಮಾ/ಗೀ: ಚಿ.ಉದಯಶಂಕರ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ, ಮಂಜುಳಾ ಗುರುರಾಜ್, ಕುಸುಮ
ಸಂ: ಪಿ.ಸಾಂಬಶಿವರಾವ್
ಛಾ: ವಿ.ಪ್ರತಾಪ್

ಕಲೆ: ರೆಡ್ಡಿ
ಸ: ರಾಜ್-ಕೋಟಿ
ಧ್ವ: ಎಸ್.ಪಿ.ರಾಮನಾಥನ್, ಕೋದಂಡಪಾಣಿ
ನೃ: ಶಿವಸುಬ್ರಹ್ಮಣ್ಯಂ
ಸಾ: ಅಂಜೂರ್ ಬಾಬು
ವ: ವೆಂಕಟರಾವ್
ಪ್ರ: ಜಿ.ಎಸ್.ವಾಸು, ಕೇಶ: ಎಂ.ವೇಲು
ಕ.ಸಾ: ಮದುವೆಯಾದ ಗಂಡನೊಂದಿಗೆ ಸಂಸಾರ ಮಾಡದಿದ್ದರೂ, ಗಂಡನಿಗೆ ನಿಷ್ಠಳಾಗಿ ಇರುವ ಹೆಣ್ಣು. ತನ್ನ ಗಂಡ ತನಗಿಂತ ಮೊದಲೇ ಒಂದು ಹೆಣ್ಣನ್ನು ಮದುವೆಯಾಗಿರುವ ವಿಷಯ ತಿಳಿದು, ಆತನ ಮೊದಲ ಮದುವೆಯ ಫಲವಾದ ಮಗನನ್ನು ತನ್ನಮಗನೆಂದೇ ಭಾವಿಸಿ ಅವನ ಬಾಳನ್ನು ಬೆಳಗಲು ತಾನೇ ಪ್ರಾಣತ್ಯಾಗ ಮಾಡುವ ತ್ಯಾಗಮಯ ಕಥೆ.

೧೪೬೪. ಗುರುಬ್ರಹ್ಮ

(೧೯೯೨ / ವರ್ಣ / ಸಾಮಾಜಿಕ)
ಲಾ: ಶ್ರೀರಂಗ ಕ್ರಿಯೇಷನ್ಸ್
ಪ್ರೊ: ಕೆ.ಭಾನು
ನಿ: ವೀರಪ್ಪ ಮರಳವಾಡಿ
ಸ.ನಿ: ಸುಬ್ರಹ್ಮಣ್ಯಂ, ವಾಸು
ಅ: ರವಿಚಂದ್ರನ್ (ದ್ವಿಪಾತ್ರ), ಸುಕನ್ಯ, ರಾಮಕೃಷ್ಣ, ಲೋಕೇಶ್, ಸದಾಶಿವ ಬ್ರಹ್ಮಾವರ್, ಸುಮಿತ್ರಾ, ಆಗ್ರೋ ಚಿಕ್ಕಣ್ಣ, ಆಶಾಲತಾ, ಡಿಂಗ್ರಿ ನಾಗರಾಜ್, ಮೈಸೂರು ಲೋಕೇಶ್, ಮುಖ್ಯಮಂತ್ರಿ ಚಂದ್ರು
ಕ/ಚಿ.ಕ/ಮಾ: ವೀರಪ್ಪ ಮರಳವಾಡಿ
ಗೀ: ಹಂಸಲೇಖ, ಸು.ರುದ್ರಮೂರ್ತಿಶಾಸ್ತ್ರೀ
ಗಾ: ಜೇಸುದಾಸ್, ಚಿತ್ರಾ, ಮನು, ರಾಜೇಶ್
ಸಂ: ಕೆ.ಬಾಲು
ಛಾ: ಕಬೀರ್ ಲಾಲ್
ಸ: ಹಂಸಲೇಖ
ನೃ: ಮೂಗೂರು ಸುಂದರ್
ಸಾ: ಥ್ರಿಲ್ಲರ್ ಮಂಜು
ಸ್ಟು: ಕಂಠೀರವ
ಹಾ: ೧)'ದೀಪ ದೀಪ...', ೨)'ಓ ಪ್ರೇಮ ಪ್ರೇಮ...', ೩)'ವರುಣ ವರುಣ...', ೪)'ಹೆತ್ತು ಹೊತ್ತು...', ೫)'ಮದುವೆ ಮದುವೆ...',

ಕ.ಸಾ: ಗುರು-ಬ್ರಹ್ಮ ಅವಳಿಗಳು. ತಂದೆ ತಾಯಿಯ ಆಸೆಯನ್ನು ಪೂರೈಸಲು ಮದುವೆಯಾಗಲು ಒಪ್ಪಿ ಅವಳಿ ಸೋದರಿಯರನ್ನು ಕರೆ ತಂದಾಗ, ಆ ಮದುವೆಗೆ ತಂದೆ ಒಪ್ಪಿಗೆ ನೀಡುವುದಿಲ್ಲ. ಕಾರಣ ಆ ಅವಳಿ ಸೋದರಿಯರು ಅವಳಿ ಹುಡುಗರ ಸೋದರತ್ತೆಯ ಮಕ್ಕಳೇ ಆಗಿದ್ದುದು. ಯಾವುದೋ ಕಾರಣದಿಂದ ಎರಡು ಕುಟುಂಬಗಳೂ ದೂರವಾಗಿರುವುದು. ಗುರು-ಬ್ರಹ್ಮರು ಆ ದೂರವನ್ನು ತೊಡೆದು ಹಾಕಿ. ಎರಡೂ ಮನೆಗಳನ್ನು ಒಂದು ಗೂಡಿಸಿ, ಸುಖಾಂತ ಕಲ್ಪಿಸುವುದೇ ಕಥೆಯ ಹಂದರ.

೧೪೬೫. ಗಂಧರ್ವ

(೧೯೯೨ / ವರ್ಣ / ಸಾಮಾಜಿಕ)
ಲಾ: ಹುಸೇನ್ ಪಿಕ್ಚರ್ಸ್
ಪ್ರೊ: ಪಿ.ಎಲ್.ದಾವೂದ್ ಭಾಷಾ
ನಿ: ಹೆಚ್. ಎಸ್. ರಾಜಶೇಖರ್, ರಾಮನಾಥ್ ಋಗ್ವೇದಿ
ಅ: ಶಶಿಕುಮಾರ್, ಬೃಂದಾ, ಶ್ರೀಲಲಿತಾ, ಆಶಾಲತಾ, ಸತ್ಯಭಾಮಾ, ಸೌಂದರ್ಯ, ಪದ್ಮಿನಿ, ಸದಾಶಿವ ಸಾಲಿಯಾನ್, ರಮೇಶ್ ಭಟ್, ರಾಕ್‌ಲೈನ್ ವೆಂಕಟೇಶ್ , ಮೈಸೂರು ಲೋಕೇಶ್
ಕ/ಚಿ.ಕ/ಮಾ/ಗೀ: ಹಂಸಲೇಖ
ಗಾ: ಜೇಸುದಾಸ್, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಲತಾ ಹಂಸಲೇಖ, ಚಿತ್ರಾ, ಶಾಸ್ತ್ರಿ
ಸಂ: ಪ್ರಸಾದ್
ಛಾ: ಪಿ.ವಿ.ರಾಜಾರಾಂ
ಕಲೆ: ಸುಶೀಲ್ ಬಾಬು, ನಾರಾಯಣ ರಾವ್
ಸ: ಹಂಸಲೇಖ



ನೃ: ಉಡುಪಿ ಜಯರಾಂ, ಸತೀಶ್
ಸಾ: ಥ್ರಿಲ್ಲರ್ ಮಂಜು
ವ: ಕೆ.ಪಿ.ಜಯರಾಂ
ಪ್ರ: ಕೇಶವ್
ಸ್ಟು: ಪ್ರಸಾದ್, ಪ್ರೀಮಿಯರ್, ಸಂಕೇತ್
ಹಾ: ೧)'ಇಂಥಾವನು ಸಿಕಿದರೆ ಸಾಕು ಕಣೇ...', ೨)'ಚಂದನ ಗಂಧರ್ವನೋ ಬಾ ಎಂದನೋ ಗಂಧರ್ವನೋ ..',
ಕ.ಸಾ: ನಾಯಕ ಹಾಡುಗಾರ. ಅವನ ತಂದೆ, ತಾಯಿ ಹಾಗೂ ತಂಗಿ ವಿರೋಧಿಗಳ ಕೈವಶವಾಗಿರುತ್ತಾರ. ಗಾಯಕ ತನ್ನ ಕಡೆಯವರನ್ನು ವಿರೋಧಿಗಳಿಂದ ಬಿಡಿಸಲು, ವಿರೋಧಿಗಳಲ್ಲಿ ಒಬ್ಬ ಪ್ರಮುಖನ ಮಗನನ್ನು ಒತ್ತೆಯಾಳಾಗಿ ಹಿಡಿದಿಟ್ಟಿರುತ್ತಾನೆ. ಒಂದು ಹಂತದಲ್ಲಿ ಒತ್ತೆಯಾಳಾಗಿದ್ದ ವ್ಯಕ್ತಿಯೇ ಮನಃ ಪರಿವರ್ತನ ಹೊಂದಿ ಗಾಯಕನಿಗೆ ಸಹಾಯ ಮಾಡಿ, ಅವನ ಸಂಬಂಧಿಗಳನ್ನೆಲ್ಲ ಬಿಡಿಸುತ್ತಾನೆ. ಗಾಯಕ ಎಲ್ಲರನ್ನೂ ಸದೆ ಬಡಿದು ಹತ್ತವರನ್ನು ರಕ್ಷಿಸುತ್ತಾನೆ.

೧೪೬೬. ರೋಷಗಾರ

(೧೯೯೨ / ವರ್ಣ / ಸಾಮಾಜಿಕ)
ಲಾ: ಸ್ನೇಹ ಆರ್ಟ್ಸ್
ಪ್ರೊ: ಕೆ. ಸುಕುಮಾರ್
ನಿ: ಸಾಯಿ ಪ್ರಕಾಶ್
ಸ.ನಿ: ಕಲಾಗಂಗೋತ್ರಿ ಮಂಜು
ಅ: ದೇವರಾಜ್, ರಮೇಶ್ ಭಟ್, ಮುಖ್ಯಮಂತ್ರಿ ಚಂದ್ರು, ಸಿಹಿಕಹಿ ಚಂದ್ರು, ಕರಿಸುಬ್ಬು, ಕೃಷ್ಣೇಗೌಡ, ಟೆನ್ನಿಸ್ ಕೃಷ್ಣ, ಅಡುಗೋಡಿ ಶ್ರೀನಿವಾಸ, ಅಂಜನಾ, ತಾರಾ, ಆರತಿ
ಕ: ಸಾಯಿ ಪ್ರಕಾಶ್
ಚಿ.ಕ: ನಂಜುಂಡ
ಮಾ/ಗೀ: ಚಿ.ಉದಯಶಂಕರ್
ಗಾ: ನಾಗೂರು ಬಾಬು, ಸಂಗೀತಾ ಕಟ್ಟಿ
ಸಂ: ವೆಂಕಟೇಶ್ವರ ರಾವ್
ಛಾ: ಜಾನಿ ಲಾಲ್
ಕಲೆ: ಬಾಬು
ಸ: ಉಪೇಂದ್ರ ಕುಮಾರ್

ನೃ: ಶಿವಶಂಕರ್
ಸಾ: ರಾಜು
ಸ್ಟು: ಕಂಠೀರವ
ಹಾ: ೧)'ನನ್ನ ಮಡಿಯಾಕಿ ಸಿಹಿ ಇದೆ...', ೨)'ನಿನ್ನ ಕಂಡಾಗ ನನ್ನ ಕಣ್ಣಲ್ಲೇ ನಿಂತ...', ೩) 'ಓ ಪೋಲೀಸ್... ಮಿಸ್ಟರ್ ಪೋಲೀಸ್...', ೪)'ಈ ಬಾಳು ಏನುವುದೂ ಕಥೆಯೂ ಅಲ್ಲ...',

೧೪೬೭. ಅಗ್ನಿಪಂಜರ

(೧೯೯೨ / ವರ್ಣ / ಸಾಮಾಜಿಕ)
ಲಾ: ಸೂಪರ್ ಸಿಲ್ವರ್ ಸ್ಕ್ರೀನ್
ಪ್ರೊ: ಜಿ.ರಾಮಬ್ರಹ್ಮಂ
ನಿ: ಶ್ರೀನಿವಾಸ ರಡ್ಡಿ
ಸ.ನಿ: ಎ.ಎನ್.ಜಯರಾಮಯ್ಯ
ಅ: ದೇವರಾಜ್, ವಿನಯಾ ಪ್ರಸಾದ್, ಕೀರ್ತಿ, ಸುಧೀರ್
ಮಾ: ಕೆ.ನಂಜುಂಡ
ಸಂ: ಕೆ.ನರಸಯ್ಯ
ಛಾ: ಸುರೇಂದ್ರ ರಡ್ಡಿ
ಕಲೆ: ಆರ್.ಕೆ.ಸುಂದರಂ
ನೃ: ಅಶೋಕ್ ಪೊನ್ನಿ
ಸಾ: ಥ್ರಿಲ್ಲರ್ ಮಂಜು
ವ: ಸತ್ಯಂ
ಸ್ಟು: ಕಂಠೀರವ
ಕ.ಸಾ: ಪೊಲೀಸ್ ಅಧಿಕಾರಿಯೊಬ್ಬ ದುಷ್ಟಶಕ್ತಿಗಳ ವಿರುದ್ಧ ಏಕಾಂಗಿಯಾಗಿ ಹೋರಾಡುತ್ತಾ ಸಾವಿನ ಅಂಚನ್ನು ತಲುಪಿದವನು ಪವಾಡವೆಂಬಂತೆ ಬದುಕುಳಿಯುತ್ತಾನೆ ಅವನ ಹೆಂಡತಿಯ ದೈವಭಕ್ತಿಯೇ ಅದಕ್ಕೆ ಕಾರಣವಾಗಿರುತ್ತದೆ. ಬದುಕಿ ಉಳಿದ ಆ ಅಧಿಕಾರಿ ದುಷ್ಟಶಕ್ತಿಗಳನ್ನು ಬಗ್ಗು ಬಡಿಯುತ್ತಾನೆ.

೧೪೬೮. ಬೆಳ್ಳಿಯಪ್ಪ ಬಂಗಾರಪ್ಪ

(೧೯೯೨ / ವರ್ಣ / ಸಾಮಾಜಿಕ)
ಲಾ: ಶ್ರೀ ರೇಣುಕಾಂಬ ಕಂಬೈನ್ಸ್
ಪ್ರೊ: ಮಧು ಬಂಗಾರಪ್ಪ
ನಿ: ಪೂರ್ಣ ಪ್ರಜ್ಞ
ಸ.ನಿ: ಪಿ.ಅಣ್ಣಯ್ಯ
ಅ: ಕುಮಾರ್ ಬಂಗಾರಪ್ಪ (ದ್ವಿಪಾತ್ರ), ಅಮಲ, ಟಿ.ಎನ್.ಬಾಲಕೃಷ್ಣ, ಉಮೇಶ್, ರತ್ನಾಕರ್, ನಾಗೇಶ್ ಕಶ್ಯಪ್, ಕೆ. ಎಸ್.ಅಶ್ವತ್, ಲೋಕನಾಥ್, ಮನದೀಪ್ ರಾಯ್, ಜಾಕಿ ಶಿವು, ಎಲ್.ಎನ್.ಸಿಂಹ, ಸಿಹಿಕಹಿಚಂದ್ರು, ಶಂಕರ್ ರಾವ್, ಬ್ಯಾಂಕ್ ಜನಾರ್ದನ್, ಗಿರಿಜಾ ಲೋಕೇಶ್, ವೈಶಾಲಿ ಕಾಸರವಳ್ಳಿ, ಮಾಲಾನಂದ್, ಮೈತ್ರ್ಯಾಂ, ಮೇರಿ, ಶ್ರೀಶೈಲನ್, ಕುಣಿಗಲ್ ರಾಮನಾಥ್, ಸದಾಶಿವ ಬ್ರಹ್ಮಾವರ್
ಕ/ಚಿ.ಕ: ಸಿಂಗೀತಂ ಶ್ರೀನಿವಾಸರಾವ್
ಮಾ/ಗೀ: ಚಿ.ಉದಯಶಂಕರ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ
ಸಂ: ಎಸ್.ಮನೋಹರ್
ಛಾ: ಬಿ.ಸಿ.ಗೌರಿಶಂಕರ್
ಕಲೆ: ಬೆಂಜಮಿನ್, ಎಂ.ಮಹೇಂದ್ರ
ಸ: ಎಸ್.ಪಿ.ಬಾಲಸುಬ್ರಹ್ಮಣ್ಯಂ
ಧ್ವ: ಎಸ್.ಪಿ.ರಾಮನಾಥನ್, ಆರ್ಮುಗಂ
ನೃ: ರಘುರಾಮ್, ಗಿರಿಜಾ ರಘುರಾಂ
ಸಾ: ವಿಕ್ರಂ ಧರ್ಮ
ವ: ಸುಂದರ್
ಪ್ರ: ಜಿ.ರಾಜಗೋಪಾಲ್, ದೊರೈ
ಸ್ಟು: ಚಾಮುಂಡೇಶ್ವರಿ

ಹಾ: ೧) 'ಏನಕ್ ಏನ್ ...', ೨) 'ಜೇಡ ದೂರ...', ೩)'ನಿನ್ನನೋಟಕ...', ೪)'ಬೆಳ್ಳಿ ಮೋಡದ...', ೫)'ಸಣ್ಣಮ್ಮ ನಾನಾರು...',
ಕ.ಸಾ: ಚಲನಚಿತ್ರ ನಟ ಬಂಗಾರಪ್ಪ, ಹಳ್ಳಿಯ ಟೈಲರ್ ಬೆಳಿಯಪ್ಪ ಇಬ್ಬರೂ ಒಂದೇ ರೂಪವುಳ್ಳವರು. ಚಿತ್ರೀಕರಣ ನಡೆದಿರುವಾಗ ನಾಯಕನನ್ನು ಅಪಹರಿಸಿದ ಗೂಂಡಾಗಳು ಅಧಿಕ ಹಣ ಬೇಡಿದರು. ಚಿತ್ರ ತಂಡ ಆ ನಟನ ಹಾಗೇ ಇರುವ ಬೆಳ್ಳಿಯಪ್ಪನನ್ನು ಕರತಂದು ಶೂಟಿಂಗ್ ಮುಂದುವರಿಸುತ್ತದೆ. ನಿರ್ಮಾಪಕ ಹಣ ಕೊಡಲಿಲ್ಲ. ಗೂಂಡಾ ತಂಡಕ್ಕೆ ಗೊಂದಲವಾಗಿ ಒತ್ತೇ ಹಣಕ್ಕಾಗಿ ಒತ್ತಾಯಿಸದೆ ತಾವು ಅಪಹರಿಸಿದ ಚಿತ್ರದ ನಾಯಕನನ್ನು ಬಿಡುಗಡೆ ಮಾಡಿದರು. ತಂಡ ಸಿಕ್ಕಿ ಹಾಕಿಕೊಂಡಿತು. ಬೆಳ್ಳಿಯಪ್ಪ ಪ್ರೀತಿಸಿದ ಹುಡುಗಿಯನ್ನು ಮದುವೆಯಾದ.

೧೪೬೯. ಕುಬಿ ಮತ್ತು ಇಯಾಲ

(೧೯೯೨ / ವರ್ಣ / ಸಾಮಾಜಿಕ)
ಲಾ: ಸುವರ್ಣಗಿರಿ ಫಿಲಂಸ್
ಪ್ರೊ/ನಿ: ಸದಾನಂದ ಸುವರ್ಣ
ಅ: ಚಾರು ಹಾಸನ್, ರಘುವೀರ್ ಯಾದವ್, ಲಲಿತಾಂಜಲಿ, ಎ.ಬಿ.ಜಯರಾಂ, ವೈಶಾಲಿ ಕಾಸರವಳ್ಳಿ, ರುದ್ರಮೂರ್ತಿ, ಬಿ.ಎಸ್.ಆಚಾರ್, ಚಂದ್ರಶೇಖರ್, ಸೀತಾರಾಂ, ಸಾವಂತ್, ರಾಮಣ್ಣ, ಸೂರ್ಯ ನಾರಾಯಣ್, ಅಶ್ವತ್ಥ ನಾರಾಯಣ್,

ಗೋಪಿ
ಕ: ಪೂರ್ಣಚಂದ್ರ ತೇಜಸ್ವಿ ಅವರ ಸಣ್ಣಕಥೆ
ಚಿ.ಕ/ಮಾ: ಗಿರೀಶ್ ಕಾಸರವಳ್ಳಿ
ಸಂ: ಎಂ.ಎನ್.ಸ್ವಾಮಿ
ಛಾ: ಜಿ.ಎಸ್.ಭಾಸ್ಕರ್
ಕಲೆ: ಶ್ರೀನಿವಾಸ್, ಜಾನ್ ದೇವರಾಜ್
ಸ: ಎಲ್.ವೈದ್ಯನಾಥನ್
ಧ್ವ: ಎಸ್.ಪಿ.ರಾಮನಾಥನ್, ಕೋದಂಡಪಾಣಿ
ವ: ವೈಶಾಲಿ ಕಾಸರವಳ್ಳಿ, ಚಿದಾನಂದ ಗೌಡ
ಪ್ರ: ಕುಮಾರ್ ಜಯಚಂದ್ರ
ಸೆ: ಉದ-೩೭೯೯.೪೫, ರೀಲು-೧೩
ವಿ: ೧೯೯೯-೯೦ರ ರಾಜ್ಯ ಪ್ರಶಸ್ತಿ : ಪ್ರಥಮ ಅತ್ಯುತ್ತಮ ಚಿತ್ರ, ಅತ್ಯುತ್ತಮ ಕಥಾ ಲೇಖಕ (ಕೆ.ಪಿ.ಪೂರ್ಣಚಂದ್ರತೇಜಸ್ವಿ)
ಕ.ಸಾ: ಗ್ರಾಮೀಣರ ಬದುಕಿನಲ್ಲಿ ಅವರ ಮುಗ್ಧತೆಯನ್ನು ಬಳಸಿಕೊಂಡು ಅನೇಕ ಶಕ್ತಿಗಳು ಮೂಢನಂಬಿಕೆಯ ಹೆಸರಿನಲ್ಲಿ ಆ ಜನರನ್ನು ಹೇಗೆ ನಿಯಂತ್ರಿಸುತ್ತವೆ ಎಂಬುದನ್ನು ಹಲವು ವಿವರಗಳ ಮೂಲಕ ಹೇಳಲಾಗಿದೆ. ಮೂಢನಂಬಿಕೆ ತುಂಬಿದ ಊರಿಗೆ ಬಂದ ವೈದ್ಯ. ಜನರ ಮೂಢನಂಬಿಕೆಗಳನ್ನು ಹೋಗಲಾಡಿಸಲು ನಡೆಸಿದ ಪ್ರಯತ್ನ ಚಮತ್ಕಾರವೆನಿಸಿತು. ಅನೇಕ ಅಪಘಾತಗಳಿಗೆ ಕಾರಣವಾದ ರಸ್ತೆ ಬದಿಯ ಬಂಡೆಗಲ್ಲು ಹಳ್ಳಿಗರ ಪಾಲಿಗೆ ರಣಕೂತ ಬಂಡೆಯಾಗಿತ್ತು. ವೈದ್ಯ ಆ ಬಂಡೆಯನ್ನು ತೆಗೆಸಲು ಹೋಗಿ ಊರಿನವರ ವಿರೋಧ ಕಟ್ಟಿಕೊಳ್ಳುತ್ತಾನೆ. ಆದರೂ ಒಳ್ಳೆಯತನದಿಂದ ಜನಮನವನ್ನು ಗೆದ್ದುಕೊಳ್ಳುತ್ತಾನೆ. ಹೂವು ಮಾರುವ ಮುಗ್ಧ ಇಯಾಲಳ ನಿಗೂಢ ಕೊಲೆಯಾಗುತ್ತದೆ. ಆ ಸಾವನ್ನು ಸ್ವಾರ್ಥ ಸಾಧನೆಗೆ ಬಳಸಿಕೊಳ್ಳುತ್ತಾರೆ. ಆ ಬಂಡೆ ಒಡೆಯಲು ಹೋಗಿ ಸಾವಿನ ಸ್ಥಿತಿಗೆ ಬಂದವ, ಸಾಯುವ ಮುನ್ನ ಇಯಾಲಳನ್ನು ಮೂಢನಂಬಿಕೆಯ ಅಂಧಶ್ರದ್ಧೆಗಾಗಿ ಬಲಿ ಕೊಟ್ಟ ಸಂಗತಿ ತಿಳಿಸುತ್ತಾನೆ. ಆಗಲೂ ವೈದ್ಯನು ಸತ್ತವನನ್ನು ಬದುಕಿಸಿ, ಆ ಕೊಲೆಯ ಸತ್ಯ ಬಯಲು ಮಾಡಿದನೆಂದೇ ಜನರ ಮಾತ್ತೊಂದು ಮೂಢನಂಬಿಕೆಗೆ ಕಾರಣವಾಗುತ್ತದೆ.

೧೪೭೦. ಹಳ್ಳಿ ಕೃಷ್ಣ ಡೆಲ್ಲಿ ರಾಧಾ

(೧೯೯೨ / ವರ್ಣ / ಸಾಮಾಜಿಕ)
ಲಾ: ಶ್ರೀ ವೆಂಕಟಲಕ್ಷ್ಮಿ ಪ್ರೊಡಕ್ಷನ್ಸ್

ನಿ: ಪಿ.ವಿ.ರಾಜು
ಅ: ಸುನಿಲ್, ಮಾಲಾಶ್ರೀ, ಅವ್ವತ್, ವಜ್ರಮುನಿ, ಮೈಸೂರು ಲೋಕೇಶ್
ಕ: ತಮಿಳು ಚಿತ್ರದ ಪುನರವತರಣಿಕ
ಚಿ.ಕ: ಫಾಜಿಲ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಮಂಜುಳಾ ಗುರುರಾಜ್, ಚಿತ್ರಾ
ಹಾ: ೧)'ಬೇಕೇ ಇದು ಬೇಕ... ', ೨)'ಅಯ್ಯೋ ಅಯ್ಯೋ, ಕೃಷ್ಣಪ್ಪ ...', ೩)'ಮುತ್ತಿಂದ ಮತ್ತೇರಿತು ...', ೪)'ಪ್ರೀತಿಯಿಂದ ನೋಡು ...', ೫)'ಆಡಿದನೋ ರಂಗಾ ...'
ವಿ: ಹಳ್ಳಿಕೃಷ್ಣ ಹೆಸರಿತ್ತು ನಾಯಕಿ ಜನಪ್ರಿಯರಾದ್ದರಿಂದ ಡೆಲ್ಲಿರಾಧ ಸೇರಿಸ ಬೇಕಾಯಿತು
ಕ.ಸಾ: ಹಳ್ಳಿಯ ಮುಗನೊಬ್ಬ ಪಟ್ಟಣದ ಓದಿದ ಹುಡುಗಿಯನ್ನು ಪ್ರೇಮಿಸಿ, ಅವಳನ್ನು ಮದುವೆಯಾಗ ಬಯಸಿದ. ಆಗ ಎದುರಾದವು ಪ್ರೇಮಿಗಳಿಬ್ಬರ ಬಾಳಿನಲ್ಲಿಯೂ ಹಲವು ಸಂದಿಗ್ಧಗಳು ಸಂಕಷ್ಟಗಳು. ನಿವಾರಿಸಿಕೊಂಡು ಹಳ್ಳಿಯ ಕೃಷ್ಣ ಡೆಲ್ಲಿಯ ರಾಧೆಯನ್ನು ಸೇರುವುದೇ ಚಿತ್ರದ ಕಥೆ.

೧೪೭೧. ಬಾ ನನ್ನ ಪ್ರೀತಿಸು

(೧೯೯೨ / ವರ್ಣ / ಸಾಮಾಜಿಕ)
ಲಾ: ವಿಜಯಶ್ರೀ ಪ್ರೊಡಕ್ಷನ್
ಪ್ರೊ/ನಿ: ಸಿದ್ದಲಿಂಗಯ್ಯ
ಸ.ನಿ: ಗುರುರಾಜ್, ಜಿ.ಬಿ.ರಾಜಶೇಖರ್
ಅ: ಶಶಿಕುಮಾರ್, ಸೌಂದರ್ಯ, ಮಾಧುರಿ, ಅರವಿಂದ್, ರಾಜಾರಾಂ, ಶಿವು, ಗಿರಿಜಾ ಲೋಕೇಶ್, ಸಾರಿಕಾ ಅರಸ್, ಜಿ.ವಿ.ಶಾರದಮ್ಮ, ಬೇಬಿ ಲಕ್ಷ್ಮಿ, ಬೇಬಿ ಭವ್ಯ, ಮಾ।ಪ್ರಕಾಶ್, ಲೋಕೇಶ್
ಕ/ಮಾ: ಬಿ.ಎಲ್.ವೇಣು
ಚಿ.ಕ: ಸಿದ್ದಲಿಂಗಯ್ಯ
ಗೀ: ಸು. ರುದ್ರಮೂರ್ತಿಶಾಸ್ತ್ರೀ, ಶ್ಯಾಮಸುಂದರ ಕುಲಕರ್ಣಿ, ಶ್ರೀರಂಗ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಮಂಜುಳಾ ಗುರುರಾಜ್
ಸಂ: ಶ್ಯಾಂ ಯಾದವ್
ಛಾ: ಬಿ.ಎಸ್.ಬಸವರಾಜ್
ಸ: ರಾಜನ್-ನಾಗೇಂದ್ರ
ಧ್ವ: ಎಸ್.ಪಿ.ರಾಮನಾಥನ್, ಕೋದಂಡಪಾಣಿ
ನೃ: ಟಿ.ಎಸ್.ಕೈಲಾಸಂ
ಸಾ: ವೈ.ಶಿವಯ್ಯ
ವ: ಜಯಚಂದ್ರನ್
ಪ್ರ: ಮಂಜುನಾಥ್
ಸ್ಟು: ಚಾಮುಂಡೇಶ್ವರಿ
ಹಾ: ೧)'ಹುಯ್ಯೋ ಹುಯ್ಯೋ ಮಳೆರಾಯ...', ೨)'ಮನದಾಸೆ ನೂರು ನಾ ಹೇಳಲಾರೆ...', ೩)'ಅಂದು ನಿನ್ನ ಕಂಡಾಗಲೆ ನಿನಗೆ ಸೋತೆನು...', ೪) 'ಒಂದು ಬೇಕು ಎರಡು ಸಾಕು...', ೫)'ಕೆಂಪೇಗೌಡ್ರ ನಿಂತು ಬಿಟ್ರಲ್ಲ...',
ಸೆ: ಉದ-೩೭೨೪.೫೦, ೨೦-೫-೯೨
ಕ.ಸಾ: ಮುಗ್ಧ, ಒಳ್ಳೆಯ ಹುಡುಗನೊಬ್ಬ. ಅವನ ಸುತ್ತ ಅಣ್ಣಂದಿರು, ಅತ್ತಿಗೆಯರು ಒಳಿತು ಕೆಡುಕಗಳ ಸರಮಾಲೆ. ಅವನನ್ನು ವ್ಯವಸಾಯಕ್ಕೆ ಪ್ರೇರೇಪಿಸುವ ಗ್ರಾಮಸೇವಕಿ. ಗ್ರಾಮ ಜೀವನದ ಎಲ್ಲ ವಿದ್ಯಮಾನಗಳು, ವೈಯಕ್ತಿಕ ಸಂಬಂಧಗಳ ಚಿತ್ರಣ. ಇಬ್ಬರು ಪ್ರೀತಿಸುವ ಹುಡಗಿಯರು. ಅವರಲೊಬ್ಬಳು ಮೂಕಿ! ಇಬ್ಬರೂ ಒಮ್ಮನಸ್ಸಿನಿಂದ ಒಟ್ಟಾಗಿ ಬಾಳಲೆತ್ನಿಸುವ ಸಂಗತಿ. ದ್ವಿಪತ್ನಿತ್ವವನ್ನು ಸಮರ್ಥಿಸುತ್ತದೆ.

೧೪೭೨. ಅಡ್ಜಸ್ಟ್‌ಮೆಂಟ್

(೧೯೯೨ / ವರ್ಣ / ಸಾಮಾಜಿಕ)
ಲಾ: ಕವಿತಾ ಆರ್ಟ್ಸ್
ಪ್ರೊ: ಸರೋಜ
ನಿ: ರಾಜವರ್ಧನ, ರಾಮಣ್ಣ
ಸ.ನಿ: ಪ್ರದೀಪ್, ಟಿ.ಹೆಚ್.ಸಿ.ಗೌಡ
ಅ: ಎಂ.ರಾಮಣ್ಣ, ಜೈಜಗದೀಶ್, ಡಿಂಗ್ರಿ ನಾಗರಾಜ್, ಬಿಮಲ್ ಸೋಮಣ್ಣ, ರೇಖಾ ದಾಸ್, ಸುಂದರಕೃಷ್ಣ ಅರಸ್, ಸುಜಾತಾ ಕೃಷ್ಣನ್, ರೇಖಾ ದೇವಿ, ಆರ್.ವೆಂಕಟೇಶ್, ಸಫಾರಿ ಕೃಷ್ಣಪ್ಪ, ಕೆ.ವೆಂಕಟೇಶ್, ಕಾರ್ತಿಕ್
ಕ: ಮಧು
ಚಿ.ಕ: ರಾಜವರ್ಧನ್, ರಾಮಣ್ಣ
ಮಾ: ಮಧು
ಗೀ: ಎಂ.ಎನ್.ವ್ಯಾಸರಾವ್
ಗಾ: ವಿಷ್ಣು ಮತ್ತು ಸಂಗಡಿಗರು
ಸಂ: ಬಾಪಣ್ಣ
ಛಾ: ಶ್ರೀರಂಗ
ಸ: ಮನೋರಂಜನ್ ಪ್ರಭಾಕರ್
ವ: ಬಿ.ಟಿ.ಶಿವಣ್ಣ
ಪ್ರ: ಗೋವಿಂದ
ಹಾ: ೧)'ಲೋಕದಲ್ಲಿ ಏನೇ ಆದ್ರೂ ಅಡ್ಜೆಸ್ಟ್‌ಮೆಂಟ್...',
ಕ.ಸಾ: ಕಚೇರಿಗಳಲ್ಲಿ ಸಿಬ್ಬಂದಿ ತಪ್ಪು ದಾರಿಗಿಳಿದಾಗ ಲಂಚ ಇತ್ಯಾದಿಗಳು ಬೆಳೆಯುವುದು. ಸನ್ನಡತೆ ಎಲ್ಲವನ್ನೂ ಸರಿಪಡಿಸ ಬಲ್ಲದು ಎಂಬ ಕಥೆ. ಲಂಚ, ವರದಕ್ಷಿಣೆಯ ಉಪಟಳ, ಸ್ತ್ರೀಯರ ಸಮಸ್ಯೆಗಳು, ಜೀತಪದ್ಧತಿ, ಅಂತರ್ಜಾತೀಯ ವಿವಾಹ, ಮನುಷ್ಯ ಸಂಬಂಧಗಳಲ್ಲಿ ಮಾನವೀಯತೆ ಇತ್ಯಾದಿ ಅಂಶಗಳು ಅಡಕಗೊಂಡಿವೆ.

೧೪೭೩. ಪ್ರಣಯದ ಪಕ್ಷಿಗಳು

(೧೯೯೨ / ವರ್ಣ / ಸಾಮಾಜಿಕ)
ಲಾ: ಮಂಜು ಪ್ರಸಾದ್ ಫಿಲಂಸ್
ಪ್ರೊ: ಕೆ.ರಂಗಸ್ವಾಮಿ, ಆರ್.ಶ್ರೀನಿವಾಸ್
ನಿ: ಮಹೇಂದರ್
ಸ.ನಿ: ಕೃಷ್ಣಾಜಿರಾವ್
ಅ: ರಮೇಶ್, ಕಾವ್ಯ, ಅಂಜಲಿ, ಮಂಜುಳಾ, ಸವಿತಾ, ಮಾನಸ, ಉದಯ್, ಕಾಶಿನಾಥ್, ವೆಂಕಿ, ಕಾಂತರಾಜ್, ರವಿಪ್ರಸಾದ್, ಮಹೇಂದ್ರ ಮೋಹನ್
ಕ/ಚಿ.ಕ/ಮಾ: ಮಹೇಂದರ್
ಗೀ: ವಿಜಯನಾರಸಿಂಹ, ಎಂ.ಎನ್.ವ್ಯಾಸರಾವ್, ವಿ.ಮನೋಹರ್, ಮಹೇಂದರ್
ಗಾ: ಜೇಸುದಾಸ್, ಮಂಜುಳಾ ಗುರುರಾಜ್
ಸಂ: ಕೆ.ನರಸಯ್ಯ
ಛಾ: ಎಂ.ಮುತ್ತುರಾಜ್
ಸ: ಮನೋರಂಜನ್ ಪ್ರಭಾಕರ್
ನೃ: ಕೆ.ಎ.ಸುರೇಶ್
ಸಾ: ಥ್ರಿಲ್ಲರ್ ಮಂಜು
ಪ್ರ: ಮಲ್ಲೇಶ್ ಹರ್ತಿ
ವಿ: ಮಹೇಂದರ್ ನಿರ್ದೇಶನದ ಮೊದಲ ಚಿತ್ರ
(ಕ.ಸಾ. ಲಭ್ಯವಿಲ್ಲ)

೧೪೭೪. ಮನಗೆದ್ದ ಮಗ

(೧೯೯೨ / ವರ್ಣ / ಸಾಮಾಜಿಕ)
ಲಾ: ಆರ್.ಕೆ.ಎಸ್.ಫಿಲಂಸ್
ಪ್ರೊ: ಆರ್.ಕೆ.ಸದಾಉಲ್ಲಾಖಾನ್, ಕೆ.ಎಸ್.ಶಿವಾನಂದ್, ಕ.ಮಲ್ಲಪ್ಪ
ನಿ: ಎಲ್.ಎಂ.ರಾಜ ಕುಪ್ಪೇಲೂರ್
ಸ.ನಿ: ಲಿಂಗರಾಜ್
ಅ: ಕಲ್ಯಾಣ್‌ಕುಮಾರ್, ಮಂಜುಳಾ, ಸುಂದರ್‌ರಾಜ್, ವಿಜಯರಂಜಿನಿ, ಚರಣರಾಜ್, ಚಿತ್ರದುರ್ಗ ಚಂದ್ರಕಾಂತ್, ಅನುರಾಧ, ದಿನೇಶ್, ರಾಜಾನಂದ್, ನಾಗೇಶ್ ಕಶ್ಯಪ್, ಕಮಿನೀಧರನ್, ಮರುಳಯ್ಯ
ಕ: ಆರ್.ಕೆ.ಸದಾಉಲ್ಲಾಖಾನ್

ಚಿ.ಕ: ಎಲ್. ಎಂ. ರಾಜ ಕುಪ್ಪೇಲೂರು
ಮಾ: ಎಸ್. ಎಸ್.ರಾವ್, ಎಸ್.ವಿ.ಕೆ ರಾವ್
ಗೀ: ವಿಜಯನಾರಸಿಂಹ, ಎಸ್.ವಿ.ಕೆ.ರಾವ್
ಗಾ: ಜೇಸುದಾಸ್, ಮಂಜುಳಾ, ಜಯಚಂದ್ರನ್
ಸಂ: ಎಸ್.ಸುಬ್ರಹ್ಮಣ್ಯಂ
ಛಾ: ಎಸ್. ಆರ್.ಭಟ್
ಕಲೆ: ಮುದ್ದುಕೃಷ್ಣ
ಸ: ಎಲ್.ವೈದ್ಯನಾಥನ್
ಧ್ವ: ದಶರಥ್, ಗುರುರಾಜ್
ನೃ: ಚಿನ್ನಿ ಪ್ರಕಾಶ್, ರೇಖಾ
ಸಾ: ವಿಜಯ್
ವ: ಗುರುಸ್ವಾಮಿ
ಪ್ರ: ರಾಮಸ್ವಾಮಿ
ಸ್ಟು: ಪ್ರಸಾದ್, ಕಂಠೀರವ
ಹಾ: ೧)'ಮತ್ತು ಪರಿ ಚಿತ್ರ ಎಲ್ಲ...', ೨)'ನಿನ್ನ ಪ್ರೀತಿ ಪ್ರೇಮ ಗಾನ...', ೩) 'ಸೊಗಸಾಗಿದೆ ಇರುಳಾಗಿದೆ...', ೪) 'ತಪ್ಪು ಯಾರದೆಂಬ ತೀರ್ಪು...',
ವಿ: ಮಂಜುಳಾ ಅಭಿನಯದ ಕೊನೆಯ ಚಿತ್ರ.
ಕ.ಸಾ: ನಾಯಕ ಹಳ್ಳಿಯ ಮುಗ್ಧ. ಆದರೆ ಹೃದಯವಂತ. ಆತನ ಮುಗ್ಧತೆಯನ್ನು ತಪ್ಪಾಗಿ ತಿಳಿಯುವವರು ಹಲವರು. ಅದರ ದುರುಪಯೋಗಕ್ಕೆ ಯತ್ನಿಸುವವರೂ ಇದ್ದರು. ಆ ಮುಗ್ಧನನ್ನು ಪ್ರೀತಿಸುವ ಹುಡುಗಿ ಒಬ್ಬಳು. ಕಾರಣಾಂತರಗಳಿಂದ ಆ ಮುಗ್ಧ ಹಳ್ಳಿಯನ್ನು ಬಿಡಬೇಕಾದ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಹಲವು ಘಟನೆಗಳ ನಂತರ ಆತನ ಬಗ್ಗೆ ಇದ್ದ ತಪ್ಪುಗ್ರಹಿಕೆಗಳೆಲ್ಲಾ ದೂರವಾಗುತ್ತದೆ. ಮುಗ್ಧ ಯುವಕ ಹೆತ್ತವರಿಗೆ ಕೀರ್ತಿ ತರುತ್ತಾನೆ.

೧೪೭೫. ಸಮರಸಿಂಹ

(೧೯೯೨ / ವರ್ಣ / ಸಾಮಾಜಿಕ)
ಲಾ: ಚಿತ್ರಾಂಜಲಿ ಪ್ರೊಡಕ್ಷನ್ಸ್
ಪ್ರೊ: ಎ.ರಾಜನ್, ಜಿ.ಹೃದಯರಾಜ್
ನಿ: ಜೋ ಸ್ಟಮನ್

ಸ.ನಿ: ಎ.ಎನ್.ಜಯರಾಮಯ್ಯ, ಶಿವಮಣಿ
ಅ: ಪ್ರಭಾಕರ್, ಮಂಜುಳಾ ಶರ್ಮ, ಸಿಲ್ಕ್ ಸ್ಮಿತಾ, ದೊಡ್ಡಣ್ಣ, ಸುಧೀರ್, ಸದಾಶಿವ ಸಾಲಿಯಾನ್, ಮೈಸೂರು ಲೋಕೇಶ್, ರತ್ನಾಕರ್, ಸುಂದರಕೃಷ್ಣ ಅರಸ್, ಜೈಜಗದೀಶ್, ಸೀಗ್ರೋ ಜಾನಿ, ಶ್ರೀಶೈಲನ್, ಕಮಿನೀಧರನ್, ಅನಿತಾ ರಾಣಿ, ದೀಪಿಕಾ ರಾಣಿ, ಸರೋಜಮ್ಮ
ಕ: ಎ.ರಾಜನ್
ಚಿ.ಕ: ಜೋ ಸ್ಟಮನ್
ಮಾ: ಬಿ.ಎಲ್.ವೇಣು
ಗೀ: ಆರ್.ಎನ್.ಜಯಗೋಪಾಲ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ, ಮಂಜುಳಾ ಗುರುರಾಜ್

ಸಂ: ಜೋಸೆಫ್, ರಾಘವ
ಛಾ: ಹೇಮಚಂದ್ರ
ಕಲೆ: ರಾಜು
ಸ: ಶ್ಯಾಂ
ಧ್ವ: ಎಸ್.ಪಿ.ರಾಮನಾಥನ್, ಕೋದಂಡಪಾಣಿ
ನೃ: ಪುಲಿಯೂರು ಸರೋಜ
ಸಾ: ಸ್ವಾಮಿ
ವ: ಪರಮಶಿವಂ, ರಮಣ, ಕಣ್ಣನ್
ಪ್ರ: ವಿ.ಎಸ್.ಎಸ್.ಮಣಿ
ಸ್ಟು: ಅಭಿಮಾನ್ ಸ್ಟುಡಿಯೋ

೧೪೭೬. ಅಲ್ಲೇ ಇರೋದು ನೋಡಿ

(೧೯೯೨ / ವರ್ಣ / ಸಾಮಾಜಿಕ)
ಲಾ: ಶ್ರೀ ಸಂತೋಷ್ ಫಿಲಂಸ್
ಪ್ರೊ: ಮಹದೇವಯ್ಯ, ಕಮಲಾ ಗುರುರಾಜ್, ಕಾಂತರಾಜು
ನಿ: ಗುರುರಾಜ ಹೊಸಕೋಟೆ
ಸ.ನಿ: ವಿಜಯೇಂದ್ರರಾವ್
ಅ: ಗುರುರಾಜ ಹೊಸಕೋಟೆ, ಮಹೇಂದ್ರ, ರಾಜಶೇಖರ ನಾಯ್ಡು, ಟೊಮೆಟೊ ಸೋಮು, ಶ್ರೀರಕ್ಷಾ, ಶೀತಲ್, ಅನಂತಲಕ್ಷ್ಮಿ, ಸುಜಾತಾ, ಲತಾಶ್ರೀ
ಕ/ಚಿ.ಕ/ಮಾ/ಗೀ: ಗುರುರಾಜ ಹೊಸಕೋಟೆ
ಗಾ: ಗುರುರಾಜ ಹೊಸಕೋಟೆ, ಬೆಂಗಳೂರು ಲತಾ
ಸಂ: ಆರ್. ಆರ್. ರೆಡ್ಡಿ
ಛಾ: ಕೆ.ಮಲ್ಲಿಕ್
ಸ: ಗುರುರಾಜ ಹೊಸಕೋಟೆ
ಧ್ವ: ಅಣ್ಣಾದೊರೈ, ಪೀಟರ್, ಕೃಷ್ಣಮೂರ್ತಿ
ನೃ: ದ್ವಾರಕನಾಥ್
ಸಾ: ಬೆಂಗಳೂರು ಶಂಕರ್
ವ: ವೇಲಾಯುಧನ್
ಪ್ರ: ಚಂದ್ರು
ಸ್ಟು: ಸಂಕೇತ್
ಹಾ: ೧)'ಜನ್ನಿ ರಾಯರ ನಿಮಗೆ ಸ್ವಾಗತವು ...', ೨)'ಏ ಹುಡುಗಿ ನಿನ್ನ ಎಂದು ಕಂಡೆ...', ೩)'ಪಾರ್ಥ ಸುಭದ್ರೆಯ ಮಿಲನ...',
ಸೆ: ಉದ್ದ ೩೮೬೧.೫೧, ೦೨ - ೦೩ - ೧೯೯೨
ವಿ: ಗುರುರಾಜ ಹೊಸಕೋಟೆ ನಿರ್ದೇಶನ ಕ್ಷೇತ್ರಕ್ಕೆ ಬಂದರು.
ಕ.ಸಾ: ಶ್ರೀಮಂತ ಮನೆತನಗಳ ನಡುವೆ ಬೆಳೆದು ಬಂದ ದ್ವೇಷ, ಅಸೂಯೆಗಳು ಪೀಳಿಗೆಯಿಂದ ಪೀಳಿಗೆಗೆ ಹರಿದು ಬರುವ ರೀತಿಯನ್ನು ವಿವರವಾಗಿ ಹೇಳುತ್ತದೆ. ಪ್ರಣಯ, ಸಾಹಸ, ಮುಗ್ಧತೆ, ಮಾದಕ ಪ್ರವೃತ್ತಿ ಮತ್ತು ಸೇಡಿನ ಹಲವು ಮುಖಗಳನ್ನು ಹೆಣೆಯಲಾಗಿದೆ. ದರ್ಪ-ದೌರ್ಜನ್ಯಗಳು ಎಂದೂ ಶಾಶ್ವತವಾಗಿ ಇರಲಾರವು ಎನ್ನುತ್ತದೆ. ಹಿಂದಿನಿಂದ ಬೆಳೆದು ಬಂದ ಸೇಡಿನಿಂದಾಗಿ ರಾವ್ ಬಹದೂರ್ ಕಾಲು ಕಳೆದುಕೊಂಡರೆ, ಆತನ ಭಂಟ ವೀರಯ್ಯನಿಂದ ವಿರೋಧಿ ಬಣದ ಸರ್‌ದೇಸಾಯಿಯ ಕೊಲೆಯೇ ಆಗುತ್ತದೆ. ಇವರಿಬ್ಬರ ಮಕ್ಕಳಲ್ಲಿ ಹೆಣ್ಣಿನ ವಿಚಾರವಾಗಿ ದ್ವೇಷ ಮತ್ತೆ ಚಿಗುರಿ ಒಬ್ಬನ ಕೊಲೆಯಾಗುತ್ತದೆ. ಸರ್‌ದೇಸಾಯಿಯ ವಂಶವೇ ನಿರ್ನಾಮವಾಗುತ್ತದೆ.

೧೪೭೭. ಹರಕೆಯ ಕುರಿ

(೧೯೯೨ / ವರ್ಣ / ರಾಜಕೀಯ)
ಲಾ: ಧರ್ಮವರ್ಧಿನಿ
ಪ್ರೊ: ಲಲಿತಾ ರವೀ
ನಿ: ರವೀ
ಸ.ನಿ: ಸುರೇಶ. ಬಿ
ಅ: ವಿಷ್ಣುವರ್ಧನ್, ಪ್ರಕಾಶ್ ರೈ, ಮೈನಾ ಚಂದ್ರು, ಗೀತಾ, ಹೆಚ್.ಜಿ.ಸೋಮಶೇಖರ ರಾವ್, ಹೆಚ್.ಜಿ.ದತ್ತಾತ್ರೇಯ, ಪಂಡಿತ್, ಶ್ರೀನಾಥ್, ಸತ್ಯಭಾಮ
ಕ: ಡಾ।ಚಂದ್ರಶೇಖರ ಕಂಬಾರ
ಚಿ.ಕ/ಮಾ: ಬಿ.ಸುರೇಶ
ಗೀ: ಡಾ।ಚಂದ್ರಶೇಖರ ಕಂಬಾರ
ಗಾ: ಅನಂತ, ವೈದ್ಯನಾಥನ್
ಸಂ: ಸುರೇಶ್ ಅರಸ್
ಛಾ: ಆರ್.ಮಂಜುನಾಥ್
ಕಲೆ: ಜಾನ್ ದೇವರಾಜ್
ಸ: ವಿಜಯಭಾಸ್ಕರ್
ಧ್ವ: ಕೃಷ್ಣಮೂರ್ತಿ
ವ: ಲಕ್ಷ್ಮಣ
ಪ್ರ: ಶ್ಯಾಮಸುಂದರ್
ಸ್ಟು: ಕಂಠೀರವ, ಪ್ರಸಾದ್, ಚಾಮುಂಡೇಶ್ವರಿ
ಹಾ: ೧)'ನಿನ್ನ ಕಣ್ಣಿಂದ ಪಿನ್ನು ಚುಚ್ಚಿ...', ೨)'ಮನೆಯೊಳಗೆ ಮನೆಯೊಡತಿ...', ೩)'ಕಾಡಿನಲ್ಲಿ ಒಂದು ಹುಲಿಯ...',
ಸೆ: ಉದ್ದ-೩೭೩೬.೦೦
ವಿ: ಪ್ರಕಾಶ್ ರೈ ನಾಯಕನಟರಾದರು. ೧೯೯೨-೯೩ರ ರಾಜ್ಯಪ್ರಶಸ್ತಿ : ತೃತೀಯ ಅತ್ಯುತ್ತಮ ಚಿತ್ರ, ಅತ್ಯುತ್ತಮ ಪೋಷಕ ನಟ (ಹೆಚ್.ಜಿ.ಸೋಮಶೇಖರರಾವ್)
ಕ.ಸಾ: ಕೆಳ ಮಧ್ಯಮವರ್ಗದ ನಿತಿಗಳ ಆಸೆ, ಆಕಾಂಕ್ಷೆಗಳಿಂದಾಗಿ ರಾಜಕಾರಣಿಗಳ ಬಲೆಯಲ್ಲಿ ಸಿಕ್ಕಿ ಕೊಳ್ಳುವ ಮುಗ್ಧರು, ರಾಜಕೀಯ ಹುನ್ನಾರಗಳು, ಗೂಂಡಾ ಶಕ್ತಿಯ ಬಳಕೆ ಇತ್ಯಾದಿಗಳ ಸುತ್ತ ಹೆಣೆಯಲಾಗಿದೆ. ರಾಜಕೀಯ ಎಲ್ಲೆಲ್ಲಿ ಹೇಗೆ ನುಸುಳಿದೆ ಎಂಬ ವಿವರಗಳು ಇಲ್ಲಿವೆ. ಕೆಲಸಕ್ಕೆ ಹೋಗುವ ಮಧ್ಯಮ ವರ್ಗದ ದಂಪತಿಗಳು. ನಗರದಾಚೆಯ ಏಕಾಂಗಿ ಮನೆಯಲ್ಲಿ ಕನಸುಗಳೊಂದಿಗೆ ಅವರ ಬದುಕು. ಇವರಿಲ್ಲದಾಗ ಇವರ ಮನೆಯನ್ನು ತನ್ನ ರಾಜಕೀಯದ ಕಚೇರಿಯನ್ನಾಗಿ ಮಾಡಿಕೊಳ್ಳುವ ಧೂರ್ತ ರಾಜಕಾರಣಿ. ಗಾದಿಗಾಗಿ ಏನೂ ಮಾಡಲು ಹೇಸದವನು.

೧೪೭೮. ಸೂಪರ್ ನನ್ಮಗ

(೧೯೯೨ / ವರ್ಣ / ಸಾಮಾಜಿಕ)
ಲಾ: ಸುಷ್ಮಾ ಫಿಲಂಸ್
ಪ್ರೊ: ಎನ್.ಶ್ರೀನಿವಾಸ್
ನಿ: ಜಿ.ಕೆ.ಮುದ್ದುರಾಜ್
ಸ.ನಿ: ವೈ. ಜೇಸುದಾಸ್
ಅ: ಜಗ್ಗೇಶ್, ಸ್ವಾತಿ ಗಂಗೂಲಿ, ಬ್ಯಾಂಕ್ ಜನಾರ್ದನ್, ಸುಂದರಕೃಷ್ಣ ಅರಸ್
ಕ/ಚಿ.ಕ: ಜಗ್ಗೇಶ್
ಮಾ: ಕುಣಿಗಲ್ ನಾಗಭೂಷಣ್
ಸಂ: ಎಸ್. ಮನೋಹರ್
ಛಾ: ಸಿ.ಮನೋಹರ್
ಕಲೆ: ಜಾಕ್‌ಪಾಟ್ ಜಗದೀಶ್
ಸ: ವಿ.ಮನೋಹರ್
ನೃ: ಸಂಪತ್
ವ: ಜಿ.ನಾಗರಾಜ್
ಪ್ರ: ನಾಗರಾಜ್
ಸ್ಟು: ಕಂಠೀರವ, ಪ್ರಸಾದ್, ಸಂಕೇತ್, ಚಾಮುಂಡೇಶ್ವರಿ
ಹಾ: ೧) 'ನಿನ್ನ ತಾಯಿ ನೆಲದ ಮಡಿಯ...', ೨) 'ಬಾರಯ್ಯ ಸಂಜೆಗೆ ಕಮ್ಮಣ್ಣು ಗುಂಡಿಗೆ...', ೩) 'ತಾಳವೆಂದರೆ ಲವಂ ತಾಳ ಬಿಟ್ಟರೆ ಖತಂ...', ೪)' ಪ್ರೀಯಾಪಿ ಪ್ರಿಯಾ ...', ೫)' ಹಾಲಿವೇ

ಅಂದ್ರೆ ...'

ಸೆ: ಉದ್ದ ೩೮೨೪.೦೦, ೧೫-೧೦-೯೨

ಕ.ಸಾ: ಪೊಲೀಸ್ ಇಲಾಖೆಯಲ್ಲಿದ್ದ ತಂದೆಗೆ ಮಗನೂ ಅದೇ ಉದ್ಯೋಗ ಹಿಡಿಯಲಿ ಎಂಬ ಆಸೆ. ಮಗ ಒಲ್ಲೆನೆಂದ. ಮಗ ಪ್ರೀತಿಸಿದ ಹುಡುಗಿಯ ತಂದೆ, ತನ್ನ ಅಳಿಯನಾಗಬೇಕಾದರೆ ಮೊದ್ಲು ಸ್ಥಾನಕ್ಕೆ ಬರಬೇಕು ಎಂಬ ಷರತ್ತು ವಿಧಿಸಿದ. ಹುಡುಗ ಮನೆ ಬಿಟ್ಟು ಹೋದ. ದನದ ವ್ಯಾಪಾರಿಯಂತೆ ಬಂದ ಅವನು ಪೊಲೀಸ್ ಇನ್ಸ್‌ಪೆಕ್ಟರನೇ ಆಗಿದ.

೧೪೭೯. ಸ್ನೇಹದ ಕಡಲಲ್ಲಿ

(೧೯೯೨ / ವರ್ಣ / ಸಾಮಾಜಿಕ)

ಲಾ: ಜಿ.ವಿ.ಕೆ ಪ್ರೊಡಕ್ಷನ್
ಪ್ರೊ: ಜಿ.ಗೋವಿಂದ್, ಟಿ.ಎಂ.ವೆಂಕಟೇಶ್, ಜಿ.ಜಿ.ಕೃಷ್ಣ
ನಿ: ಜೋಸೈಮನ್
ಸ.ನಿ: ಆನಂದ್ ಪಿ.ರಾಜು
ಅ: ಅರ್ಜುನ್‌ಸರ್ಜಾ, ಸುನಿಲ್, ಮಾಲಾಶ್ರೀ, ರಾಕ್‌ಲೈನ್ ವೆಂಕಟೇಶ್, ರಾಜಾರಾಂ, ಶನಿ ಮಹದೇವಪ್ಪ, ಗಿರಿಜಾ ಲೋಕೇಶ್, ಸಿಹಿಕಹಿ ಚಂದ್ರು, ಜಿ.ಕೆ.ಗೋವಿಂದ ರಾವ್
ಕ: ಹಿಂದಿ ಚಿತ್ರ 'ಸಾಗರ್' ಆಧಾರಿತ
ಚಿ.ಕ/ಮಾ: ಜೋಸೈಮನ್
ಸಂ: ಸುರೇಶ್ ಅರಸ್
ಛಾ: ಜಿ.ಜಿ.ಕೃಷ್ಣ
ಕಲೆ: ಸುಂದರಂ

ಸ: ರಾಜ್-ಕೋಟಿ
ನೃ: ಸತೀಶ್
ಸಾ: ಸುರೇಶ್
ಪ್ರ: ಮೈಸೂರು ವೆಂಕಟೇಶ್
ಹಾ: ೧)'ಮಾತಾಯೀ ಗಂಗಾತಾಯಿ ಬಂದಳು ಮಾತಾಯೀ...',

ಕ.ಸಾ: ಬೆಸ್ತರ ಯುವತಿ. ಶ್ರೀಮಂತ ಯುವಕನನ್ನು ಪ್ರೀತಿಸುತ್ತಾಳೆ. ಆ ಯುವತಿಯನ್ನು ಚಿಕ್ಕಂದಿನಿಂದಲೂ ಪ್ರೀತಿಸುತ್ತಾನೆ, ಇನ್ನೊಬ್ಬ ಯುವಕ. ಆತ ಆಕೆಯ ಸೋದರ ಮಾವ. ತಾನು ಪ್ರೀತಿಸಿದವಳು ತನ್ನನ್ನು ಪ್ರೀತಿಸುತ್ತಿಲ್ಲ, ಅವಳ ಪ್ರೀತಿ ಬೇರೆಡೆ ಇದೆ ಎಂಬುದನ್ನರಿತ ಅವಳ ಸೋದರ ಮಾವ ತಾನೇ ನಿಂತು ಶ್ರೀಮಂತ ಯುವಕನೊಡನೆ ಅವಳ ಮದುವೆ ಮಾಡಿಸುತ್ತಾನೆ. ತನ್ನ ಪ್ರೇಮವನ್ನಷ್ಟೇ ಅಲ್ಲದೆ ತನ್ನನ್ನೇ ಬಲಿಕೊಡುತ್ತಾನೆ.

೧೪೮೦. ಮನ ಮೆಚ್ಚಿದ ಸೊಸೆ

(೧೯೯೨ / ವರ್ಣ / ಸಾಮಾಜಿಕ)

ಲಾ: ಗೋಲ್ಡನ್ ಸಿಸಿ ಕ್ರಿಯೇಷನ್
ಪ್ರೊ: ಕುಮಾರೇಶ್ ಬಾಬು, ಭದ್ರಾವತಿ ಗೋವಿಂದ್
ನಿ: ಬಿ.ರಾಮಮೂರ್ತಿ
ಸ.ನಿ: ಎಸ್.ಕೃಷ್ಣಮೂರ್ತಿ, ಮೋಹನ್ ಮಾಳಗಿ, ಎಸ್. ಎಲ್. ಕುಮಾರ್
ಅ: ಸುನಿಲ್, ಮಾಲಾಶ್ರೀ, ಅಭಿಜಿತ್, ಅಶ್ವತ್ಥ್, ಗಿರಿಜಾ ಲೋಕೇಶ್, ಧೀರೇಂದ್ರ ಗೋಪಾಲ್, ಮೈನಾವತಿ, ರವಿಶಂಕರ್, ಸರಿಗಮ ವಿಜಿ
ಕ: ಇಳವರಸನ್
ಚಿ.ಕ/ಮಾ: ಚಿ.ಉದಯಶಂಕರ್
ಗೀ: ಚಿ.ಉದಯಶಂಕರ್, ಆರ್. ಎನ್.ಜಯಗೋಪಾಲ್, ಶ್ರೀರಂಗ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಮಂಜುಳಾ ಗುರುರಾಜ್, ಸಂಗೀತಾ ಕಟ್ಟಿ
ಸಂ: ಡಿ.ವಿಜಯ ಕುಮಾರ್
ಛಾ: ಎನ್.ವೆಂಕಟರತ್ನಂ
ಕಲೆ: ಕೆ.ಕೃಷ್ಣಾಚಾರ್
ಸ: ಉಪೇಂದ್ರ ಕುಮಾರ್
ಧ್ವ: ಎಸ್.ಪಿ.ರಾಮನಾಥನ್, ಕೋದಂಡಪಾಣಿ
ನೃ: ಕೈಲಾಸಂ
ಸಾ: ನಂಜುಂಡಿ ನಾಗರಾಜ್
ವ: ಬಷೀರ್, ಬಾಬ್ಬಿ
ಪ್ರ: ಸಿದ್ದೇಶ, ಗುರು (ಕೇಶ: ನಾಗೇಶ್ವರ ರಾವ್, ಬಾಬು)
ಸ್ಥು: ಚಾಮುಂಡೇಶ್ವರಿ, ಪ್ರಸಾದ್
ಹಾ: ೧) 'ಸಿನಿಮಾನೇ ನನ್ನ ಪ್ರಾಣ...', ೨) 'ಚಂದದ ಗಿಣಿ ಚೆಲುವಿನ ಗಿಣಿ...', ೩)'ಬೇಡ ರಾಜ ಸಂಕೋಚ...', ೪)'ನಾನೇ ಹಾಡಿದೇ ಅನುಮಾನವೇಕೆ...'.
ಸೆ: ಉದ್ದ ೩೯೨೬.೦೦ 'ಯು' ಸರ್ಟಿಫಿಕೇಟ್, ೧೯-೦೪-೯೨

ಕ.ಸಾ: ಶ್ರೀಮಂತ ಅವನಿಗೆ ಇಬ್ಬರು ಮಕ್ಕಳು ಬುದ್ಧು ಬುದ್ಧುಕಯವನೊಬ್ಬನ ಭವಿಷ್ಯ ಕೇಳಿ ಹೆದರಿದ ಶ್ರೀಮಂತ ಬೇಗ ಮದುವೆಯಾಗಿ ಮಗು ಪಡೆಯಿರೆಂದು ಮಕ್ಕಳಿಗೆ ಒತ್ತಡ ತರುತ್ತಾನೆ. ಆಕಸ್ಮಿಕಗಳು ನಡೆದು, ಮನೆಗೆ ಬಂದ ಹುಡುಗಿಯರು, ಸೊಸೆಯರಂತೆ ನಾಟಕವಾಡಿದರು. ನಿಜವಾದ ಸೊಸೆ ಮಗು ಹೆರುವಳು. ಹೀಗೆ ಕಾಕತಾಳೀಯಗಳ ಸರಮಾಲೆ.

೧೪೮೧. ಚಿಕ್ಕೆಜಮಾನ್ರು

(೧೯೯೨ / ವರ್ಣ / ಸಾಮಾಜಿಕ)

ಲಾ: ಶ್ರೀ ವೆಂಕಟಕೃಷ್ಣ ಫಿಲಂಸ್
ಪ್ರೊ: ಅ.ನ.ಗೋಪಾಲಕೃಷ್ಣರೆಡ್ಡಿ
ನಿ: ಸಾಯಿಪ್ರಕಾಶ್
ಅ: ರವಿಚಂದ್ರನ್, ಗೌತಮಿ, ಜೈಜಗದೀಶ್, ಶಿವಕುಮಾರ್, ಕಮಿನೀಧರನ್, ಎಂ.ಎಸ್.ಕಾರಂತ್, ವಿಜಯ, ಮುಖ್ಯಮಂತ್ರಿ ಚಂದ್ರು, ಟೆನ್ನಿಸ್ ಕೃಷ್ಣ, ಚೇತನ್ ರಾಮರಾವ್, ಸರಿಗಮ ವಿಜಿ, ಪ್ರಭಾ, ಶ್ರೀಲಲಿತಾ, ಮಾನಪ್ಪ, ಮಾಲತಿ
ಕ/ಚಿ.ಕ: ಸಾಯಿಪ್ರಕಾಶ್ (ತಮಿಳಿನ ರೀಮೇಕ್)
ಮಾ: ಕುಣಿಗಲ್ ನಾಗಭೂಷಣ್
ಗೀ: ಹಂಸಲೇಖ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್.ಜಾನಕಿ, ಚಿತ್ರಾ

ಸಂ: ಕೆ.ನರಸಯ್ಯ
ಛಾ: ಜಾನೀಲಾಲ್
ಕಲೆ: ನಜೀರ್
ಸ: ಹಂಸಲೇಖ
ನೃ: ಮೂಗೂರು ಬಸವರಾಜ್
ಸಾ: ಥ್ರಿಲ್ಲರ್ ಮಂಜು
ವ: ಜಯಚಂದ್ರ, ಸಾಯಿಕುಮಾರ್
ಹಾ: ೧)'ಮಾರಿಕಣ್ಣು ಮದುವೆ ಕಣ್ಣು...', ೨)'ರಾಮಾ ರಾಮಾ ರಾಮಾ ಹಸಿರು ಗಿಣಿಯರಾಮ...', ೩) 'ಹೈ ಬುಗುರಿ ಬುಗುರಿ ಬುಗುರಿ...', ೪) 'ಗಂಡು ಪ್ರೇಮದ ಹೂಗಾರ...', ೫) 'ಶೋಭಾನೆ ಎನ್ನೀರಮ್ಮ...', ೬) 'ರಾಮಾ ರಾಮಾ ರಾಮಾ...',

ಕ.ಸಾ: ಕಥೆಯ ನಾಯಕ ಊರಿನ ಜನರಿಗೆಲ್ಲಾ ಆದರ್ಶಪ್ರಾಯನಾದ ವ್ಯಕ್ತಿ. ಎಲ್ಲರ ಪಾಲಿಗೂ ಚಿಕ್ಕೆಜಮಾನರೆಂದೇ ಖ್ಯಾತ. ಅವನು ಮೆಚ್ಚಿ ಮದುವೆಯಾದ ಯುವತಿ ಅವನಿಗೆ ತಕ್ಕ ಹೆಂಡತಿ. ಇವನ ಖ್ಯಾತಿ ಹಲವು ಧೂರ್ತರಿಗೆ ಕಣ್ಣುಕಿಸುರು. ಇವನ ಜನಪ್ರಿಯತೆಯನ್ನು ಸಹಿಸದ ಆ ದುರುಳರು ಇವನ ಚಾರಿತ್ರ್ಯಕ್ಕೆ ಕಳಂಕ ಲೇಪಿಸಲು ಯತ್ನಿಸುವರು. ಆ ಪ್ರಯತ್ನ ಫಲಿಸದೆ ಆ ಧೂರ್ತರು ತಾವು ತೋಡಿದ ಹಳ್ಳಕ್ಕೆ ತಾವೇ ಬೀಳುತ್ತಾರೆ. ಚಿಕ್ಕೆಜಮಾನ ಮತ್ತಷ್ಟು ಪ್ರಖರನಾಗುತ್ತಾನೆ.

೧೪೮೨. ಸಂಗ್ಯಾ ಬಾಳ್ಯಾ

(೧೯೯೨ / ವರ್ಣ / ಜಾನಪದ)

ಲಾ: ಶ್ರೀ ವಿಳುಕೋಟಿ ಫಿಲಂ ಕಾರ್ಪೊರೇಷನ್
ಪ್ರೊ: ಎಫ್. ಡಿ. ಸಾಲಿ
ನಿ: ಸುಂದರ ಕೃಷ್ಣ ಅರಸ್
ಸ.ನಿ: ಅಭಿಷೇಕ್, ಬಿ.ಕೆ.ಸಿದಲಿಂಗಯ್ಯ
ಅ: ರಾಮಕೃಷ್ಣ, ವಿಜಯಕಾಶಿ, ಭಾರತಿ ಪಾಟೀಲ್, ಮಾ।ಮಹಾವೀರ್, ಉಮಾಶ್ರೀ, ಎನ್.ಬಸವರಾಜ್, ಸುಭಾಷ್ ಕಡಕೋಳ್, ಹಾವೇರಿ ಬಾಬಣ್ಣ, ಡಿ.ಬಸವರಾಜ್, ಗುರುರಾಜ ಹೊಸಕೋಟೆ, ಉಷಾನಾಯಕ್
ಕ: ಜನಪದ ಕಥೆ ಆಧಾರಿತ
ಚಿ.ಕ: ಎಫ್.ಡಿ.ಸಾಲಿ
ಮಾ: ಗೋಪಾಲ್ ವಾಜಪೇಯಿ
ಗೀ: ಮಹಾದೇವ ಬಣಕಾರ್, ಗುರುರಾಜ ಹೊಸಕೋಟೆ ಗೋಪಾಲ್
ಗಾ: ಮಂಜುಳಾ ಗುರುರಾಜ್, ಬಿ.ಆರ್.ಛಾಯಾ, ವಿಷ್ಣು, ಯಶವಂತ ಹಳಿಬಂಡಿ, ಗುರುರಾಜ್ ಹೊಸಕೋಟೆ
ಸಂ: ಸುರೇಶ್ ಅರಸ್
ಛಾ: ಎಸ್.ಜಿ.ರಾವ್
ಕಲೆ: ಸುಭಾಷ್ ಕಡಕೋಳ್
ಸ: ವಿಜಯಭಾಸ್ಕರ್
ಧ್ವ: ಕಣ್ಣನ್, ಅರುಮುದನ್
ನೃ: ಸುಬಾಷ್, ಭಾರತಿ
ವ: ವಿಠಲ್ ಗಂಗಲ್, ಸುಭಾಷ್ ಕಡಕೋಳ್
ಪ್ರ: ಶ್ಯಾಂ ಸುಂದರ್
ವಿ: ೧೯೯೨-೯೩ರ ರಾಜ್ಯಪ್ರಶಸ್ತಿ : ಅತ್ಯುತ್ತಮ ಪೋಷಕನಟಿ (ಉಮಾಶ್ರೀ) ೧೯೯೩ರ ಪನೋರಮಾಕ್ಕೆ ಉತ್ತರ ಕರ್ನಾಟಕದಲ್ಲಿ ಈ ವಸ್ತು ಜನಪ್ರಿಯ ನಾಟಕವಾಗಿ ಚಾಲ್ತಿಯಲ್ಲಿದೆ.

ಕ.ಸಾ: ಬಡವ ಶ್ರೀಮಂತ ಜೀವದ ಗೆಳೆಯರು. ಶ್ರೀಮಂತನ ಪ್ರೀತಿಯಿಂದಾಗಿ ಒದಗುವ ತೊಂದರೆಗಳು. ಭಯ-ಬಡತನಗಳೇ ಕಾರಣವಾಗಿ, ಗೆಳೆಯನನ್ನೇ ಬಿಟ್ಟುಕೊಡುವ ಬಡವ.

೧೪೮೩. ಪೊಲೀಸ್ ಲಾಕಪ್

(೧೯೯೨ / ವರ್ಣ / ಸಾಮಾಜಿಕ)

ಲಾ: ಲಕ್ಷ್ಮೀ ಫಿಲಂಸ್
ಪ್ರೊ: ಎಸ್.ಕುಮಾರ್, ರಾಜೇಂದ್ರ
ನಿ: ಕೆ.ವಿ.ರಾಜು
ಅ: ಅರ್ಜುನ್‌ಸರ್ಜಾ, ರಾವ್ಯ, ತ್ಯಾಗರಾಜ್, ಅವಿನಾಶ್, ಟೆನ್ನಿಸ್ ಕೃಷ್ಣ
ಕ/ಚಿ.ಕ/ಮಾ: ಕೆ.ವಿ.ರಾಜು
ಗೀ: ವಿ.ಮನೋಹರ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್.ಜಾನಕಿ, ಶೀಲಾ ಕೃಷ್ಣಮೂರ್ತಿ
ಸಂ: ಪ್ರಸಾದ್
ಛಾ: ಪದ್ಮಕುಮಾರ್
ಕಲೆ: ಸುಂದರಂ
ಸ: ವಿ.ಮನೋಹರ್
ನೃ: ಸತೀಶ್
ಸಾ: ತ್ಯಾಗರಾಜನ್
ಸ್ಟು: ಸಂಕೇತ್, ಚಾಮುಂಡೇಶ್ವರಿ
ಹಾ: ೧) 'ಆಕಾಶ ಭೂಮಿಯಲ್ಲಿ ಒಂದೇ ನಮಗೀಗ ...', ೨) 'ಓಮ ಓಮ ಮಂಜಿನ ಶಾಲೆ ...', ೩) 'ಜಗ ಜಗ ಜಾಂ ಜಾಂ ...', ೪) 'ಜುಮ್ಮ ಚಕ್ಕ ಜುಮ್ಮ ಚಕ್ಕ ಜುಮ್ಮ ಕೊಡ...'.
ಕ.ಸಾ: ಗೂಂಡಾಗಳ ಉಪಟಳ. ಅದರ ವಿರುದ್ಧ ನಿಂತ ನಿಷ್ಠಾವಂತ ಪೊಲೀಸನ ಕೊಲೆ. ಸೇಡು ತೀರಿಸಿಕೊಳ್ಳಲು ಮಗುವಿನ ಅಪಹರಣ. ಅದರೊಂದಿಗಿನ ಭಾವನಾತ್ಮಕ ಸಂಬಂಧದ ಕಾರಣ ದುಷ್ಟರು ಸೆರೆಸಿಕ್ಕಿ ಜೈಲು ಸೇರಿದರು. ನ್ಯಾಯ ಉಳಿಸುವ ಪ್ರಯತ್ನ.

೧೪೮೪. ಶಾಂಭವಿ

(೧೯೯೨ / ವರ್ಣ / ಸಾಮಾಜಿಕ)

ಲಾ: ಸೂರ್ಯ ಪ್ರೊಡಕ್ಷನ್
ಪ್ರೊ: ಸೆಲ್ವಂ
ನಿ: ರಾಮನಾರಾಯಣ
ಸ.ನಿ: ಕೆ.ಸೀತಾರಾಂ
ಅ: ಬೇಬಿ ಶ್ಯಾಮಿಲಿ (ದ್ವಿಪಾತ್ರ), ಶ್ರೀನಾಥ್, ಶ್ರುತಿ, ಸುನಿಲ್, ಸಂಗೀತಾ, ಭರತ್, ರತ್ನಾಕರ್
ಕ: ಕ.ಸೀತಾರಾಂ
ಚಿ.ಕ/ಮಾ: ಚಿ|| ಉದಯಶಂಕರ್
ಛಾ: ವಿಶ್ವನಾಥ್



ಸ: ಶಂಕರ್ ಗಣೇಶ್
ಹಾ: ೧) 'ನಿನ್ನನ್ನೇ ನಂಬಿ ನಾ ಬಂದೆ...', ೨) 'ಓ ಚಿಟ್ಟೆ ಬಣ್ಣದ ಚಿಟ್ಟೆ...', ೩) 'ನನ್ನನ್ನು ಮುಟ್ಟಿಲೇ ಬೇಕು...', ೪) 'ಕಲ್ಕತ್ತದಲ್ಲಿ ಪಾನ್ ಮಸಾಲ...'.
ಕ.ಸಾ: ಎಸ್ಟೇಟ್ ಮಾಲೀಕರೊಬ್ಬರು ಅವರ ತಮ್ಮನಿಗೆ ಆಸ್ತಿಯ ಮೇಲೆ ಕಣ್ಣು. ಅಣ್ಣನಿಗೆ ಹುಚ್ಚು ಎಂದು ಹಬ್ಬಿಸಿದ. ಮಾಲೀಕರ ಮಗಳಿಗೆ ತಂದೆಯ ಮೇಲೆ ಪ್ರೀತಿ. ತಮ್ಮ ಆಳುಗಳ ಸಹಾಯದಿಂದ ತಂದೆ ಮಗಳನ್ನು ಕೊಲೆ ಮಾಡಿದ. ಆದರೆ ಮಗಳ ಆತ್ಮವು ದುಷ್ಟರ ಮೇಲಿನ ಸೇಡು ತೀರಿಸಿಕೊಂಡಿತು.

೧೪೮೫. ಸೂರಿ

(೧೯೯೨ / ವರ್ಣ / ಸಾಮಾಜಿಕ)

ಲಾ: ಕರುಣಾಲಯ ಕ್ರಿಯೇಷನ್ಸ್
ಪ್ರೊ: ಎಸ್.ಡಬ್ಲ್ಯು.ಕರುಣಾಕರನ್
ನಿ: ಎಲ್. ರಾಜ
ಸ.ನಿ: ರತ್ನಾಕರ್, ಶ್ರೀಧರ್‌ಬಾಬು
ಅ: ಶಶಿಕುಮಾರ್, ಪದ್ಮಿನಿ, ವಜ್ರಮುನಿ, ಉಮೇಶ್, ರಾಜಾನಂದ್, ಉಮಾಶ್ರೀ, ಶ್ರೀದೇವಿ, ರೇಖಾ ದಾಸ್, ಹೊನ್ನವಳ್ಳಿ ಕೃಷ್ಣ, ಚೇತನ್ ರಾಮರಾವ್, ರತ್ನಾಕರ್, ಶಿವರಾಂ, ಬೇಬಿ ಮೋನಿಷಾ, ರಾಮು(ಕೋತಿ) ಮತ್ತು ಶರತ್‌ಬಾಬು
ಕ/ಚಿ.ಕ: ಎಲ್. ರಾಜ
ಮಾ/ಗೀ: ಆರ್. ಎನ್. ಜಯಗೋಪಾಲ್

ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಮನು, ಚಿತ್ರಾ, ಮಂಜುಳಾ ಗುರುರಾಜ್, ಲಲಿತಾ ಸಾಗರಿ
ಸಂ: ಲ್ಯಾನ್ಸಿ ಮೋಹನ್
ಛಾ: ರಾಜೇಂದ್ರನ್
ಕಲೆ: ಕೆ.ಎಸ್.ವೇಣು
ಸ: ರಾಜ್ ಕೋಟಿ
ಧ್ವ: ಎಸ್.ಪಿ.ರಾಮನಾಥನ್, ಅರವಮುದನ್, ಕಣ್ಣನ್
ನೃ: ರಕ್ಷಿ
ಸಾ: ಗೋಲ್ಡನ್ ಗೋಪಾಲ್
ವ: ಆಶೀರ್ವಾದಂ, ಶ್ಯಾಂ
ಪ್ರ: ಮನ್ಮಥ ರಾವ್, ಷಣ್ಮುಗಂ. (ಕೇಶ:) ಪಾರ್ಥಸಾರಥಿ
ಸ್ಟು: ಪ್ರೀಮಿಯರ್
ಕ.ಸಾ: ಸೂರ್ಯಪ್ರಕಾಶ್ ಪೊಲೀಸ್ ಇನ್ಸ್‌ಪೆಕ್ಟರ್. ಕಳ್ಳಬಟ್ಟಿ ಸಾರಾಯಿ, ಕಳ್ಳ ಸಾಗಣೆ ತಂಡಗಳನ್ನು ಹಿಡಿದು, ತಂಡದ ಮುಖ್ಯರನ್ನು ಸದೆ ಬಡಿದ. ಪ್ರಣಯ, ಸಾಹಸ, ನೃತ್ಯ, ಭಾವನಾತ್ಮಕ ಸನ್ನಿವೇಶಗಳು ತುಂಬಿವೆ.

೧೪೮೬. ಭರ್ಜರಿ ಗಂಡು

(೧೯೯೨ / ವರ್ಣ / ಸಾಮಾಜಿಕ)

ಲಾ: ಶ್ರೀ ಭವಾನಿ ಕಂಬೈನ್ಸ್
ಪ್ರೊ: ಲಕ್ಷ್ಮಿ ಗೋವಿಂದರಾಜ್
ನಿ: ರೇಣುಕಾ ಶರ್ಮ
ಸ.ನಿ: ಬಿ.ಮಂಜುನಾಥ್
ಅ: ರಾಘವೇಂದ್ರ ರಾಜಕುಮಾರ್, ರೂಪಶ್ರೀ, ಶ್ರೀನಾಥ್, ಲೋಕೇಶ್, ಗಿರಿಜಾ ಲೋಕೇಶ್, ತೂಗುದೀಪ ಶ್ರೀನಿವಾಸ್, ದೊಡ್ಡಣ್ಣ, ಸುಧೀರ್, ಸುಂದರಕೃಷ್ಣ ಅರಸ್, ಸತೀಶ್, ಆಶಾಲತಾ, ಸುಂದರಶ್ರೀ, ಲತಾ
ಕ/ಚಿ.ಕ: ಟಿ.ಎನ್.ನರಸಿಂಹನ್

ಗೀ: ಶ್ರೀರಂಗ, ಎಂ.ಎನ್.ವ್ಯಾಸರಾವ್
ಗಾ: ರಾಘವೇಂದ್ರ ರಾಜಕುಮಾರ್, ಮಂಜುಳಾ ಗುರುರಾಜ್
ಸಂ: ಎಸ್. ಮನೋಹರ್
ಛಾ: ವಿ.ಕೆ.ಕಣ್ಣನ್
ಕಲೆ: ನಜೀರ್
ಸ: ಉಪೇಂದ್ರ ಕುಮಾರ್
ಧ್ವ: ಎಸ್.ಪಿ.ರಾಮನಾಥನ್, ಕೋದಂಡಪಾಣಿ
ನೃ: ಕೈಲಾಸಂ
ಸಾ: ಥ್ರಿಲ್ಲರ್ ಮಂಜು
ವ: ವೆಂಕಟರಾವ್, ಬಾಬು
ಪ್ರ: ವಿಶ್ವನಾಥ, ಮೂಗೂರು ಪಿ.ಗುರು, (ಕೇಶ: ನಾಗೇಶ್ವರರಾವ್)
ಸ್ಟು: ಕಂಠೀರವ, ಚಾಮುಂಡೇಶ್ವರಿ, ಪ್ರಸಾದ್
ಹಾ: ೧) 'ಬಾಟಲ್ ಹಾಕಿ ಟೈಟಾಯ್ತು...', ೨) 'ಆಕಾಶವೇ ವಂದನೆ ಹೇಳಿದೆ...', ೩) 'ದುಷ್ಟನ ಜಂಭದ ಕೋಳಿ ...', ೪) 'ಎಲ್ಲಾರೂ ನಮ್ಮೋರು ಎಲ್ಲೆಲ್ಲೂ ಕಾವೋರು ...', ೫) 'ಮ ಟಚ್ಚಾದರೆ ಬಿಸಿ ಹೆಚ್ಚಾದರೆ...'.
ಸೆ: ಉದ ೩೯೯೦.೦೦. ೨೯-೧೦-೯೨
ಕ.ಸಾ: ಪತ್ರಿಕೋದ್ಯಮಿಯೊಬ್ಬ ಕುತಂತ್ರಿಗಳ ಕಾರಣದಿಂದ ಜೈಲಿನಲ್ಲಿರುತ್ತಾನೆ. ಅವನ ಮಗ ಅವರ ಬಳಿಯೇ ಬೆಳೆದು ನಿಜಾಂಶ ತಿಳಿದಾಗ ತಂದೆಯನ್ನು ಆ ಸ್ಥಿತಿಗೆ ತಂದ ದುಷ್ಟರ ಬೇಟೆಗೆ ಹೊರಟ. ಪತ್ರಿಕೋದ್ಯಮದ ಜೊತೆಗೆ ಒಂದಷ್ಟು ಸಾಹಸ ಸೇರಿಸಿ ದುಷ್ಟರನ್ನು ಸದೆ ಬಡಿದು ನ್ಯಾಯ ಸಾಧಿಸುವ ಕಥೆ.

೧೪೮೭. ಮಣ್ಣಿನ ದೋಣಿ

(೧೯೯೨ / ವರ್ಣ / ಸಾಮಾಜಿಕ)

ಲಾ: ಸಂದೇಶ್ ಕಂಬೈನ್ಸ್
ಪ್ರೊ: ಸಂದೇಶ್ ನಾಗರಾಜ್, ನೇತ್ರಾವತಿ ನಾಗರಾಜ್, ಎಸ್.ಸತೀಶ್, ಸ್ವಾಮಿ
ನಿ: ಎಂ.ಎಸ್.ರಾಜಶೇಖರ್
ಸ.ನಿ: ಗಾಯತ್ರಿ
ಅ: ಅಂಬರೀಷ್, ಸುಧಾರಾಣಿ, ವನಿತಾ ವಾಸು, ವಜ್ರಮುನಿ, ಜೈಜಗದೀಶ್, ಮುಖ್ಯಮಂತ್ರಿ ಚಂದ್ರು, ಅಶ್ವತ್, ತೂಗುದೀಪ ಶ್ರೀನಿವಾಸ್, ಅವಿನಾಶ್, ಪಂಢರಿ ಬಾಯಿ, ಗುರುದತ್, ಉಮಾಶ್ರೀ, ಆಶಾಲತಾ, ಗಿರಿಜಾ ಲೋಕೇಶ್, ಚೈತನ್ಯ, ಬೇಬಿ
ಕ: ಟಿ.ಕೆ ರಾಮರಾವ್ ಕಾದಂಬರಿ ಆಧಾರಿತ
ಚಿ.ಕ: ಟಿ.ಎನ್.ನರಸಿಂಹನ್
ಮಾ: ಟಿ.ಎನ್.ನರಸಿಂಹನ್, ಎಂ.ಎನ್.ವ್ಯಾಸರಾವ್
ಗೀ: ಹಂಸಲೇಖ
ಗಾ: ಡಾ|| ರಾಜಕುಮಾರ್, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್.ಜಾನಕಿ, ಚಿತ್ರಾ
ಸಂ: ಮನೋಹರ್
ಛಾ: ಬಿ.ಸಿ.ಗೌರಿಶಂಕರ್
ಕಲೆ: ವೇಣು
ಸ: ಹಂಸಲೇಖ

ಧ್ವ: ಎಸ್.ಪಿ.ರಾಮನಾಥನ್, ಕೋದಂಡಪಾಣಿ
ನೃ: ಸತೀಶ್, ಬಾಬು
ಸಾ: ಜ್ಯೂಡೋ ರತ್ನಂ
ವ: ವೀರರಾಜು
ಪ್ರ: ರಾಮಕೃಷ್ಣ, ಸಿದ್ದೇಶ್, ಮೂಗೂರು ಗುರು,
(ಕೇಶ: ನಾಗೇಶ್ವರ ರಾವ್)
ಸ್ಟು: ಕಂಠೀರವ, ಚಾಮುಂಡೇಶ್ವರಿ
ಹಾ: ೧) 'ರಾಜನು ರಾಣಿ ಸೇರಿದರಮ್ಮ ...', ೨) 'ಮೇಘ ಬಂತು ಮೇಘ...', ೩) 'ನಂದೂ ನಿಂದೂ ಒಂದೇ...', ೪) 'ಮಳೆ ಮಳೆ ಮಳೆ...', ೫) 'ಕೋಗಿಲೆಯೇ ಸೌಖ್ಯವೇ...',
ಸೆ: ರೀಲು -೧೪, ಉದ-೩೯೩೯.೦೦,
'ಯು' ಸರ್ಟಿಫಿಕೇಟ್, ೨೨-೧೦-೯೨
ಕ.ಸಾ: ಕಾದಂಬರಿಕಾರನೊಬ್ಬ ಬದುಕನ್ನು ನೋಡುವ ರೀತಿಯೇ ಬೇರೆ. ಒತ್ತಾಯಕ್ಕಾಗಿ ವಿವಾಹವಾದವನು ಹೆಂಡತಿಯನ್ನು ಸ್ವತಂತ್ರವಾಗಿರಲು ಬಿಟ್ಟು ನಿಜವಾದ ಅರ್ಥದಲ್ಲಿ ಅವಳೇ ಒಲಿದು ಬಂದಾಗ ಅವಳನ್ನು ಸ್ವೀಕರಿಸಲು ತೀರ್ಮಾನಿಸಿದ. ಆಕೆ ಅವನನ್ನು ಬಿಟ್ಟ, ನಾಟಕ ಮಾಡಿದಳು. ನಿಜಕ್ಕೂ ತಾನೇ ಅಪಾಯದಲ್ಲಿ ಸಿಕ್ಕಿ ಕೊಂಡಳು. ಅವನೇ ಅವಳನ್ನು ರಕ್ಷಿಸಿದ. ಮತ್ತೆ ಒಂದಾದರು.

೧೪೮೮. ಮರಣ ಮೃದಂಗ

(೧೯೯೨ / ವರ್ಣ /ರಾಜಕೀಯ)
ಲಾ: ಶ್ರೀ ಚಿತ್ರಾ ಕ್ರಿಯೇಷನ್ಸ್
ಪ್ರೊ: ಕೆ.ಚಿದಂಬರ ಶೆಟ್ಟಿ
ನಿ: ಬಿ.ರಾಮಮೂರ್ತಿ
ಸ.ನಿ: ಕೆ.ಎಸ್.ವೈದ್ಯನಾಥ್
ಅ: ಮಾಲಾಶ್ರೀ, ರಾಮಕೃಷ್ಣ ಹೆಗಡೆ, ಸುನಿಲ್, ಅನಂತ್ ನಾಗ್, ತ್ಯಾಗರಾಜ್, ಸದಾಶಿವ ಸಾಲಿಯಾನ್, ಸುಂದರ್ ರಾಜ್, ಆಗ್ರೋ ಚಿಕ್ಕಣ್ಣ, ನಾಗೇಶ್ ಮಯ್ಯ
ಕ/ಚಿ.ಕ/ಮಾ: ಸಾಯಿನಾಥ್
ಗೀ: ಹಂಸಲೇಖ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ರಾಜೇಶ್, ಮಂಜುಳಾ ಗುರುರಾಜ್
ಸಂ: ಕೆ.ನರಸಯ್ಯ
ಛಾ: ಮಲ್ಲಿಕಾರ್ಜುನ
ಕಲೆ: ಕೃಷ್ಣಾಚಾರಿ
ಸ: ಹಂಸಲೇಖ
ಧ್ವ: ಕೋದಂಡಪಾಣಿ, ಗೋವಿಂದಸ್ವಾಮಿ
ನೃ: ಸಂಪತ್
ಸಾ: ರುದ್ರೇಶ್, ನೀಗ್ರೋ ಜಾನಿ
ವ: ಜಯಚಂದ್ರ
ಪ್ರ: ಚೆಲುವರಾಜು, ಮಣಿ
ಸ್ಟು: ಚಾಮುಂಡೇಶ್ವರಿ
ಹಾ: ೧) 'ಎಂಥಾ ದೇಶವಿದೇನಾಯ್ತು...', ೨) 'ಚೆಲುವೇ ಚೆಲ್ಲು ಚೆಲುವೇ...', ೩) 'ದಿಲ್ಲಿಯಾಗಲೀ ಹಳ್ಳಿಯಾಗಲೀ...', ೪) 'ಈ ಅಂದಾ ಈ ಚಂದಾ...', ೫) 'ಆಕಾಶ ವಧುವರರಾಗಿ...',
ಸೆ: ರೀಲು -೧೪, 'ಯು' ಸರ್ಟಿಫಿಕೇಟ್
ವಿ: ರಾಮಕೃಷ್ಣ ಹೆಗಡೆ ಚಿತ್ರವೊಂದರಲ್ಲಿ ಪ್ರಪ್ರಥಮವಾಗಿ ಪ್ರಮುಖಪಾತ್ರ ವಹಿಸಿದರು.
ಕ.ಸಾ: ನಿಷ್ಠಾವಂತ ಮುಖ್ಯಮಂತ್ರಿಯನ್ನು ಅವನ ಆಪ್ತರೇ ಕೊಲೆ ಮಾಡುತ್ತಾರೆ. ಆತನ ಮಗಳು ಅಂಥವರ ವಿರುದ್ಧ ನಿಂತಿದ್ದು ಅವರು ಮಾಡಿದ ತಪ್ಪುಗಳನ್ನು ಬಯಲಿಗೆಳೆದು ಜನತೆಯೇ ಅಂಥವರನ್ನು ಶಿಕ್ಷಿಸುವಂತೆ ಮಾಡುತ್ತಾಳೆ.

೧೪೮೯. ಅಲ್ಲಿ ರಾಮಾಚಾರಿ ಇಲ್ಲಿ ಬ್ರಹ್ಮಚಾರಿ

(೧೯೯೨ / ವರ್ಣ / ಸಾಮಾಜಿಕ)
ಲಾ: ಶ್ರೀ ಲಕ್ಷ್ಮಿ ಫಿಲಂಸ್
ಪ್ರೊ: ಎಸ್.ಕುಮಾರ್, ಎಂ.ರಾಜೇಂದ್ರ
ನಿ: ಬಿ.ರಾಮಮೂರ್ತಿ
ಸ.ನಿ: ಮೋಹನ್ ಮಾಳಗಿ, ಎಂ.ಸಿ.ನಾಚಪ್ಪ
ಅ: ಜಗ್ಗೇಶ್, ಪ್ರತಿಭಾ, ಸ್ವಾತಿ, ದೊಡ್ಡಣ್ಣ, ವಾಣಿಶ್ರೀ, ಅರವಿಂದ್, ಗೊ.ರಾ.ಭೀಮರಾವ್, ಅಭಿಜಿತ್, ಡಿಸ್ಕೋ ಶಾಂತಿ, ಶ್ರೀಶೈಲನ್, ಬ್ಯಾಂಕ್ ಜನಾರ್ದನ್, ಪಾಪಮ್ಮ, ಕಮಲಶ್ರೀ, ಕುಸುಮಾ, ನವನೀತಾ, ವಾಣಿಶ್ರೀ
ಕ/ಚಿ.ಕ: ಬಿ.ರಾಮಮೂರ್ತಿ
ಮಾ: ಕುಣಿಗಲ್ ನಾಗಭೂಷಣ್
ಗೀ: ಶ್ರೀರಂಗ, ಚಿ.ಉದಯಶಂಕರ್, ವಿ.ಮನೋಹರ್
ಗಾ: ಮಂಜುಳಾ ಗುರುರಾಜ್, ಚಂದ್ರಿಕಾ, ಎಲ್.ಎನ್. ಶಾಸ್ತ್ರಿ, ಲತಾ ಹಂಸಲೇಖ,
ಸಂ: ಎಸ್.ಪ್ರಸಾದ್
ಛಾ: ಮನೋಹರ್
ಕಲೆ: ಕೃಷ್ಣಾಚಾರಿ
ಸ: ವಿ.ಮನೋಹರ್
ನೃ: ಸತೀಶ್, ಕಮಲ್, ಅನುರಾಧಾ.
ಸಾ: ಥ್ರಿಲ್ಲರ್ ಮಂಜು
ವ: ಗಂಡಸಿ ನಾಗರಾಜ್
ಪ್ರ: ನಾಗರಾಜ್, ನಾಗರಾಜ್, ಮಾದೇಗೌಡ
ಸ್ಟು: ಕಂಠೀರವ, ಪ್ರಸಾದ್
ಹಾ: ೧) 'ಅಚ್ಚು ಮೆಚ್ಚು ನಮ್ಮ ಶೂರ...', ೨) 'ಬ್ಯೂಟಿಯಲ್ಲಿ ನಾ ಏಂಜೆಲ್ ...', ೩) 'ಬಂದ ಬಂದ ರಾಮಯ್ಯ...', ೪) 'ಎಂಥ ಸುಂದರರೀ ಗಣಿ ನೀ ...',
ಸೆ: ಉದ್ದ -೪೦೫೩.೦೦ , ೫-೧೧-೯೨
ಕ.ಸಾ: ಅವಳಿ-ಜವಳಿಗಳ ಕಥೆ. ಶ್ರೀಮಂತ, ಬಡವ. ಇಬ್ಬರೂ ಅದಲು ಬದಲಾಗುತ್ತಾರೆ. ಅವನ ಕಷ್ಟಗಳಿಗೆ ಇವನು, ಇವನ ಜವಲಿಗೆ ಅವನು. ಇವನ ಶ್ರೀಮಂತಿಕೆಯಲ್ಲಿ ಇರುವ ಅಪಾಯಗಳಿಗೆ ಅವನು ಪರಿಹಾರ ಕೊಟ್ಟುಕೊಳ್ಳುವನು. ಹಾಸ್ಯ, ಸಾಹಸ, ಕುತೂಹಲ ಇರುವ ಕಥೆ.

೧೪೯೦. ಪ್ರಜೆಗಳು ಪ್ರಭುಗಳು

(೧೯೯೨ / ವರ್ಣ / ರಾಜಕೀಯ)
ಲಾ: ಶ್ರವಣ ಕುಮಾರ್ ಮೂವೀಸ್
ಪ್ರೊ: ಶ್ರವಣ ಕುಮಾರ್
ನಿ: ಭೀಮ ನಾಗರಾಜ್, ವಿಜಯಲಕ್ಷ್ಮಿ ವಿಶುಕುಮಾರ್
ಸ.ನಿ: ನೀರ್ನಳ್ಳಿ ರಾಜು
ಅ: ದೇವರಾಜ್, ಕಮಲಶ್ರೀ, ಸುಂದರ್ ರಾಜ್, ವಿಜಯರಂಜಿನಿ, ದೊಡ್ಡಣ್ಣ, ಲೋಕನಾಥ್, ಹೆಚ್.ಜಿ.ಸೋಮಶೇಖರ ರಾವ್
ಕ: ವಿಶುಕುಮಾರ್
ಚಿ.ಕ/ಮಾ: ಭೀಮ ನಾಗರಾಜ್
ಗೀ: ಡಾ|| ಸಿದ್ದಲಿಂಗಯ್ಯ, ವಿಜಯನಾರಸಿಂಹ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ
ಸಂ: ಸುರೇಶ್ ಅರಸ್
ಛಾ: ಹೆಚ್. ಜಿ. ರಾಜು
ಕಲೆ: ಕೇಶವ ರಾವ್
ಸ: ಮನೋರಂಜನ್ ಪ್ರಭಾಕರ್
ಧ್ವ: ಪೀಟರ್, ಕೃಷ್ಣಮೂರ್ತಿ
ನೃ: ಚಿನ್ನಿ-ಪ್ರಕಾಶ್
ಸಾ: ರುದ್ರೇಶ್
ವ: ದೊರೈ
ಪ್ರ: ಶ್ಯಾಂ
ಸ್ಟು: ಕಂಠೀರವ, ಚಾಮುಂಡೇಶ್ವರಿ, ಸಂಕೇತ್
ಹಾ: ೧) 'ಪ್ರಜೆಗಳ ಹೆಸರಲಿ ಪ್ರಭುಗಳ ಅಧಿಕಾರ...', ೨) 'ಮೋಹನ ಮದನಾಂಗ ಬಾ ಮೋಹನ...',
ಸೆ: ಉದ್ದ-೪೨೧೫.೦೦, ೩೦ - ೩೧ - ೧೯೮೮
ವಿ: ತುಂಬಾ ತಡವಾಗಿ ತೆರೆಗೆ ಬಂತು, ವಿಶುಕುಮಾರ್ ಅರ್ಧದಲ್ಲಿ ನಿಧನರಾದರು. ೧೯೮೮-೮೯ರ ರಾಜ್ಯ ಪ್ರಶಸ್ತಿ : ಅತ್ಯುತ್ತಮ ಪೋಷಕ ನಟ (ಮೈಸೂರು ಲೋಕೇಶ್)
ಕ.ಸಾ: ಸಮಾಜದ ಕಟ್ಟ ಕಡೆಯ ಮನುಷ್ಯನೂ ರಾಜಕಾರಣದಲ್ಲಿ ದೊಡ್ಡವನಾಗುವುದು ಸಾಧ್ಯ. ರಾಜಕಾರಣಿಗಳು ತಮ್ಮ ಸುತ್ತ ದುಷ್ಟ ಶಕ್ತಿಗಳನ್ನು ಸೇರಿಸಿಕೊಳ್ಳುತ್ತ ಬೇಳೆ ಬೇಯಿಸಿಕೊಳ್ಳುವುದು. ಚುನಾವಣೆ, ಅಧಿಕಾರ ಲಾಲಸೆ, ಪಕ್ಷಭೇದ, ಕಾನೂನುಗಳನ್ನು ತಿರುಚಿ ಸ್ವಾರ್ಥಕ್ಕೆ ಬಳಸುವುದು. ಕೊಳಗೇರಿ ನಿರ್ಮಾಣ-ನಾಶ, ಸೇಡು, ಹಣ, ಹೆಂಡ, ಹೆಣ್ಣು, ರಕ್ಷಣಾ ಇಲಾಖೆಯ ದೌರ್ಜನ್ಯ ಹೀಗೆ ಸಮಾಜದ ಎಲ್ಲ ಅಂಶಗಳನ್ನು ಬಳಸಿ ಅರ್ಬುದ ದಂತೆ ಬೆಳೆಯುವ ರಾಜಕೀಯದ ವಿಶ್ಲೇಷಣೆ.

೧೪೯೧. ಝೇಂಕಾರ

(೧೯೯೨ / ವರ್ಣ / ಸಾಮಾಜಿಕ)
ಲಾ: ತ್ರಿಮೂರ್ತಿ ಎಂಟರ್‌ಪ್ರೈಸಸ್
ಪ್ರೊ: ದಿನೇಶ್ ಪಟೇಲ್, ಕೋದಂಡರಾಮ್, ರಘುರಾಮ್
ನಿ: ರಘುರಾಮ್
ಸ.ನಿ: ಕೆ.ಬಲರಾಮ್
ಅ: ಅನಂತ್‌ನಾಗ್, ಕುಮಾರ್ ಬಂಗಾರಪ್ಪ, ಪ್ರಿಯಾಂಕ. ಶ್ರೀನಾಥ್, ಜಯಂತಿ, ಗೀತಾ, ಶಿವರಾಂ, ಸಿ.ಆರ್.ಸಿಂಹ, ರಮೇಶ್ ಭಟ್, ಲೋಹಿತಾಶ್ವ, ಅವಿನಾಶ್, ಅಶೋಕ್ ರಾವ್
ಕ/ಚಿ.ಕ: ರಘುರಾಮ್
ಮಾ/ಗೀ: ಚಿ.ಉದಯಶಂಕರ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಸಿ. ಅಶ್ವತ್ಥ್, ಹಂಸಲೇಖ, ಚಿತ್ರಾ
ಸಂ: ಎಸ್. ಮನೋಹರ್
ಛಾ: ಜೆ. ರಾಬರ್ಟ್
ಕಲೆ: ನಂಜುಂಡಸ್ವಾಮಿ
ಸ: ಹಂಸಲೇಖ
ಧ್ವ: ಎಸ್.ಪಿ.ರಾಮನಾಥನ್, ಕೃಷ್ಣಮೂರ್ತಿ
ನೃ: ಗಿರಿಜಾ ರಘು, ಬೃಂದಾ
ಸಾ: ಜ್ಯೂಡೋ ರತ್ನಂ, ಜ್ಯೂಡೋ ರಾಮ್
ವ: ತಿಪಟೂರ್ ಸೋಮು, ಶ್ರೀನಿವಾಸ್
ಪ್ರ: ಶ್ರೀನಿವಾಸ್, ದೊರೈ
ಹಾ: ೧) 'ಕಂಡೆ ಕಂಡೆ ...', ೨) 'ತನು ಒಳಗೆ ...', ೩) 'ಯಾರು ವೈರಿ ಬಾಳಿನಲ್ಲಿ ...', ೪) 'ನಾವು ನೀವು ...', ೫) 'ನಮ್ಮ ಕಾಲೇಜಿನಲ್ಲಿ...', ೬) 'ಪ್ರೀತಿ ಮಾಡಿ...',
ಸೆ: ಉದ್ದ ೩೭೯೯.೦೦, ರೀಲು-೧೪
ಕ.ಸಾ: ದುಡುಕು ಸ್ವಭಾವದ ಸಂಶಯ ಪಡುವ ಹೆಣ್ಣು. ಗಂಡನನ್ನು ತೊರೆದಳು. ತನ್ನ ಮಗನ ಮನಸ್ಸಿನಲ್ಲಿ ಅವನ ತಂದೆಯ ಬಗ್ಗೆ ಕೆಟ್ಟ ಭಾವನೆಯನ್ನು ತುಂಬುತ್ತಾಳೆ. ತಾಯಿ ಸತ್ತರೂ ಮಗ ದ್ವೇಷ ಸಾಧಿಸುತ್ತಾನೆ. ಅಂತ್ಯದಲ್ಲಿ ನಿಜವೇನೆಂದು ತಿಳಿದು ಮಗ ತಂದೆಯ ಬಳಿಗೆ ಬರುವ ಹೊತ್ತಿಗೆ ತಂದೆಯ ಬಲಿದಾನ ವಾಗಿರುತ್ತದೆ.

೧೪೯೨. ಘರ್ಷಣೆ

(೧೯೯೨ / ವರ್ಣ / ಸಾಮಾಜಿಕ)
ಲಾ: ಆರ್.ಕೆ.ಕ್ರಿಯೇಷನ್ಸ್
ಪ್ರೊ: ಖಾನ್ ಸಹೋದರರು
ನಿ: ಸಾಯಿಪ್ರಕಾಶ್
ಸ.ನಿ: ಚಂದ್ರು ದೊಡ್ಡಮನಿ, ಶರಣ್ ಗದ್ವಾಲ್.
ಪಿ.ಚಂದ್ರಶೇಖರ್
ಅ: ಶಶಿಕುಮಾರ್, ದೇವರಾಜ್. ವನಿತಾ ವಾಸು, ಅನಿತಾ. ಮುಖ್ಯಮಂತ್ರಿ ಚಂದ್ರು, ದೊಡ್ಡಣ್ಣ, ಸಿಹಿಕಹಿ ಚಂದ್ರು, ಅವಿನಾಶ್. ಮನದೀಪ್ ರಾಯ್, ಮೈಸೂರು ಲೋಕೇಶ್, ಮಹೇಶ್, ನಾಗೇಶ್ ಮಯ್ಯ, ಅಮೃತ ಸಾಗರ್. ಸಿತಾರಾ, ಸತ್ಯಭಾಮ, ಆಶಾಲತಾ, ಸುಂದರಮ್ಮ, ಬೇಬಿ ಭಾರತಿ, ಅನಿತಾ, ಉಮಾಶ್ರೀ, ರತ್ನಶ್ರೀ. ಬ್ಯಾಂಕ್ ಜನಾರ್ದನ್, ಶ್ರೀಶೈಲನ್
ಕ/ಚಿ.ಕ: ಸಾಯಿ ಪ್ರಕಾಶ್
ಮಾ: ಬಾಬು ಕೃಷ್ಣಮೂರ್ತಿ
ಗೀ: ಆರ್. ಎನ್. ಜಯಗೋಪಾಲ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್. ಜಾನಕಿ, ಮಂಜುಳಾ ಗುರುರಾಜ್, ಸ್ವರ್ಣಲತಾ
ಸಂ: ಕೆ.ನರಸಯ್ಯ
ಛಾ: ಕುಲಶೇಖರ್
ಕಲೆ: ಬಾಬು
ಸ: ಉಪೇಂದ್ರ ಕುಮಾರ್
ಧ್ವ: ಎಸ್.ಪಿ.ರಾಮನಾಥನ್, ಆರವಮುದನ್
ನೃ: ಶಿವಶಂಕರ್
ಸಾ: ಥ್ರಿಲ್ಲರ್ ಮಂಜು
ವ: ಬಾಲನ್, ವಿಶ್ವಾಸ: ನಾಗರಾಜ್
ಪ್ರ: ಕುಮಾರ್, (ಕೇಶ:) ನಾಗೇಶ್ವರ ರಾವ್
(ಹೆಚ್ಚಿನ ವಿವರಗಳು ಲಭ್ಯವಿಲ್ಲ)

೧೪೯೩. ನನ್ನ ಶತ್ರು

(೧೯೯೨ / ವರ್ಣ / ಸಾಮಾಜಿಕ)
ಲಾ: ವಿಶ್ವ ಚಿತ್ರ ಪ್ರೊಡಕ್ಷನ್ಸ್
ಪ್ರೊ: ಜಿ.ಆರ್.ಕೆ.ರಾಜು
ನಿ: ಕೆ.ಎಸ್.ಆರ್.ದಾಸ್
ಸ.ನಿ: ವಿ.ಆರ್.ಭಾಸ್ಕರ್
ಅ. ವಿಷ್ಣುವರ್ಧನ್, ರೇಖಾ, ಶ್ರೀನಾಥ್, ಧೀರೇಂದ್ರ ಗೋಪಾಲ್, ವಿಜಯಕಾಶಿ. ಶ್ರೀಲಲಿತಾ, ಬಿ.ಕೆ.ಶಂಕರ್, ನೀಗ್ರೋ ಜಾನಿ, ಸಿಹಿಕಹಿ ಚಂದ್ರು, ಮಂಜು ಮಾಲಿನಿ
ಕ/ಚಿ.ಕ: ಕೆ.ಎಸ್. ಆರ್. ದಾಸ್
ಮಾ: ವಿ.ಆರ್.ಭಾಸ್ಕರ್
ಸಂ: ಪಿ.ಸಾಂಬಶಿವರಾವ್
ಛಾ: ಟಿ.ವಿ.ರಾಜಾರಾಂ
ಸ: ರಾಜನ್ - ನಾಗೇಂದ್ರ
ನೃ: ಶೀನು
ಸಾ: ರಾಜು
ಸೆ: ರೀಲು ೧೪, ಉದ ೪೦೭೨.೦೦, 'ಯು'
ಕ.ಸಾ: ಗಂಡ ಹೆಂಡತಿ ಇಬ್ಬರೂ ಕಾನೂನು ಪರಿಪಾಲಕರು. ವಿಚಿತ್ರ ಸನ್ನಿವೇಶಗಳು ಸಂಭವಿಸಿ ಗಂಡ ಕರ್ತವ್ಯ ವಿಮುಖನಾಗುವಂತಾಗುತ್ತದೆ. ಗಂಡ ಹೆಂಡತಿ ಪರಸ್ಪರ ವಿರೋಧಿಗಳಾಗುತ್ತಾರೆ. ತನ್ನ ಬದಲಾದ ಪರಿಸ್ಥಿತಿಗೆ ಕಾರಣರಾದ ದುಷ್ಟರನ್ನು ಸದೆ ಬಡಿಯಲು ಗಂಡ ಕಾನೂನಿನ ವಿರುದ್ಧ ನಿಲ್ಲುವನು. ಕಾನೂನನ್ನು ಗೌರವಿಸುವ ಹೆಂಡತಿ ಗಂಡನನ್ನು ಬಂಧಿಸಬೇಕಾಗುತ್ತದೆ. ಆದರೂ ಆತ ದುಷ್ಟರನ್ನು ಶಿಕ್ಷಿಸಿ ಕಾನೂನಿಗೆ ಶರಣಾಗುತ್ತಾನೆ.

೧೪೯೪. ಅತಿಮಧುರ ಅನುರಾಗ

(೧೯೯೨ / ವರ್ಣ / ಸಾಮಾಜಿಕ)
ಲಾ: ಸೂದ ಸಿನಿ ಕ್ರಿಯೇಷನ್ಸ್
ಪ್ರೊ: ಶ್ರೀನಿವಾಸ್
ನಿ: ಪಿ.ಹೆಚ್. ವಿಶ್ವನಾಥ್
ಸ.ನಿ: ನೀರ್ನಳ್ಳಿ ರಾಜು, ನಾಗೇಂದ್ರ ಷಾ
ಅ: ಕಾಶೀನಾಥ್, ಪಂಚಮಿ, ವತ್ಸಲ, ಶಂಕರ್‌ರಾವ್, ಮೈನಾ ಚಂದ್ರು, ವಾದಿರಾಜ್, ವಾಣಿ
ಕ/ಚಿ.ಕ: ಎಂ.ಎಸ್.ನರಸಿಂಹ ಮೂರ್ತಿ
ಮಾ: ಕೋಟಿಗಾನ ಹಳ್ಳಿ ರಾಮಯ್ಯ, ಪಿ.ಹೆಚ್.ವಿಶ್ವನಾಥ್
ಗೀ: ದೊಡ್ಡರಂಗೇಗೌಡ, ಎಂ.ಎನ್.ವ್ಯಾಸರಾವ್, ಹಂಸಲೇಖ , ಕೆ.ರಾಮಯ್ಯ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಲತಾ ಹಂಸಲೇಖ, ಚಿತ್ರಾ
ಸಂ: ಸುರೇಶ್ ಅರಸ್
ಛಾ: ಹೆಚ್. ಜಿ.ರಾಜು
ಕಲೆ: ರಮೇಶ್ ಬಾಬು
ಸ: ಹಂಸಲೇಖ
ನೃ: ಪಿ.ಸಿ.ಸುಬ್ರಹ್ಮಣ್ಯಂ, ಪೊನ್ನಿ-ಅಶೋಕ್
ವ: ವಿಜಿ (ವಿಜಯ್)
ಪ್ರ: ನಾಣಿ
ಹಾ: ೧)'ಪ್ಯಾಟ್ಯೋರೆಲ್ಲ ಮೊದ್ದೋರಲ್ಲಾ ...'. ೨)'ಮುಂಜಾನೆ ಸೂರ್ಯ ಹೊಂಗಿರಣ ಬೀರಿ ...', ೩) 'ನನ್ನ ಪ್ರೀತಿಯ ರಾಜಾ ಸೌಖ್ಯಾನಾ...', ೪) 'ರಾತ್ರಿ ವೇಳೆ ಆದರೆ ಏನೋ ಬೇಸರ...', ೫) 'ಕಲ್ಪ ಸಿಕ್ತು ಕೆಲ್ಸ...', ೬) 'ಜೇನು ಬೇಕೆ ಜೇನೆಂದು...'.
ಸೆ: ಉದ ೪೧೦೫.೦೦, 'ಯು' ಸರ್ಟಿಫಿಕೇಟ್
ಕ.ಸಾ: ಹಳ್ಳಿಯ ಮುಗ. ಪಟ್ಟಣದ ಹುಡುಗಿಯ ಸ್ನೇಹವನ್ನೇ ಪ್ರೀತಿಯೆಂದು ತಿಳಿದ. ಆಕೆಯನ್ನು ಹುಡುಕುತ್ತಾ ಸಿಟಿಗೆ ಬಂದ. ಪ್ರಣಯ ವಿಫಲವೆಂದು ತಿಳಿದಾಗ ಹೊರಬಂದ. ಪರಿಚಯವಾದ ಇನ್ನೊಂದು ಹುಡುಗಿ ಪ್ರೀತಿಸಿದಳು. ದುಷ್ಟರ ಕಾಟಕ್ಕೆ ಸಿಲುಕಿ ಪಾರಾದ ಶ್ರೀಮಂತ ಹುಡುಗಿಯೇ ಕೊನೆಗೆ ಮದುವೆ ಆದಳು. ಪ್ರಣಯ ತ್ರಿಕೋನ, ಸಾಹಸ ಪ್ರಧಾನ ಕತೆ.

೧೪೯೫. ಮಲ್ಲಿಗೆ ಹೂವೇ

(೧೯೯೨ / ವರ್ಣ / ಸಾಮಾಜಿಕ)
ಲಾ: ರೋಹಿಣಿ ಪಿಕ್ಚರ್ಸ್
ಪ್ರೊ: ಎಸ್. ವಿ.ರಾಜೇಂದ್ರ ಸಿಂಗ್ (ಬಾಬು), ವಿಜಯಲಕ್ಷ್ಮಿ ಸಿಂಗ್
ನಿ: ರಾಜ್‌ಕಿಶೋರ್
ಸ.ನಿ: ಬಿ.ಟಿ. ಶೇಷು
ಅ: ಅಂಬರೀಷ್, ಶಶಿಕುಮಾರ್, ಪ್ರಿಯಾಂಕ, ರೂಪಿಣಿ, ವಿಜಯಲಲಿತಾ, ಸಂಗ್ರಾಮ್ ಸಿಂಗ್, ರಾಮಕೃಷ್ಣ, ಉಮೇಶ್
ಕ: 'ಸಿಂಧೂರ ಪೂವೇ' ತಮಿಳು ಚಿತ್ರ
ಚಿ.ಕ: ರಾಜ್ ಕಿಶೋರ್
ಮಾ: ಟಿ.ಉದಯಶಂಕರ್

ಗೀ: ಹಂಸಲೇಖ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ, ರಮೇಶ್, ಮಂಜುಳಾ ಗುರುರಾಜ್, ಸ್ವರ್ಣಲತಾ
ಸಂ: ಜೋಸೆಫ್
ಛಾ: ಅಜಯ್ ವಿನ್ಸೆಂಟ್
ಕಲೆ: ಕೃಷ್ಣಾಚಾರಿ
ಸ: ಹಂಸಲೇಖ
ನೃ: ಚಿನ್ನಿ-ಪ್ರಕಾಶ್, ಸುರೇಖಾ
ಸಾ: ಜ್ಯೂಡೋ ರತ್ನಂ
ವ: ಕೆ.ಪಿ.ಜಯರಾಂ
ಪ್ರ: ಮಾಧವನ್
ಹಾ: ೧) 'ಸುವ್ವಾಲೀ ಸುವ್ವಾಲೀ ಮಲ್ಲಿಗೆ ಹರಡಿತು ಸುವ್ವಾಲೀ ...', ೨) 'ಅಂದವೋ ಅಂದವೋ ಕನ್ನಡ ನಾಡು ಅಂದವೋ ...', ೪) 'ಚುಂಚನ ಕಟ್ಟೆ ಜಾತ್ರೆ ಪ್ರಾಣ ಕೊಡ್ತೀನಿ ನಿಂಗೆ ಸೋತ್ರೆ ...',
೫) 'ಮಲೆನಾಡ ಮೇಲೆ ಮುಗಿಲ ಮಾಲೆ ...',
ಕ.ಸಾ: ಕಾಲೇಜಿನಲ್ಲಿ ಓದುವ ಹಳ್ಳಿಯ ಮುಗ್ಧೆ. ಅವಳನ್ನು ಪ್ರೀತಿಸುವ ಹುಡುಗ. ಅವರ ಪ್ರೀತಿಗೆ ಅಡ್ಡ ಬರುವ ಒಂದು ಗುಂಪು. ಸೈನ್ಯದಿಂದ ರಜೆಯ ಮೇಲೆ ಬರುವ ಸೈನಿಕನೊಬ್ಬ ಅವರಿಬ್ಬರ ನಿಷ್ಕಳಂಕ ಪ್ರೀತಿಯನ್ನು ಗುರುತಿಸುತ್ತಾನೆ. ಅವರಿಬ್ಬರನ್ನು ಒಂದುಗೂಡಿಸುತ್ತಾನೆ. ಅದೇ ಸಂದರ್ಭದಲ್ಲಿ ತನ್ನ ಹೆಂಡತಿಯ ಸಾವಿಗೆ ಕಾರಣರಾದವರ ವಿರುದ್ಧ ಸೇಡು ತೀರಿಸಿಕೊಳ್ಳುತ್ತಾನೆ.

೧೪೯೬. ಶ್ರೀರಾಮಚಂದ್ರ

(೧೯೯೨ / ವರ್ಣ / ಸಾಮಾಜಿಕ)
ಲಾ: ಶ್ರೀ ಧನಲಕ್ಷ್ಮಿ ಕ್ರಿಯೇಷನ್ಸ್
ಪ್ರೊ: ಪಿ.ಧನರಾಜ್
ನಿ: ಡಿ.ರಾಜೇಂದ್ರ ಬಾಬು
ಅ: ರವಿಚಂದ್ರನ್ (ದ್ವಿಪಾತ್ರ), ಮೋಹಿನಿ, ವಜ್ರಮುನಿ, ರಾಜಾನಂದ್, ಉಮಾಶ್ರೀ, ಸುಮಿತ್ರಾ, ಶ್ರೀನಾಥ್, ಧೀರೇಂದ್ರ ಗೋಪಾಲ್, ಮುಖ್ಯಮಂತ್ರಿ ಚಂದ್ರು
ಕ: ಪಂಜು ಅರುಣಾಚಲಂ ತಮಿಳು ಚಿತ್ರ
ಚಿ.ಕ: ಡಿ.ರಾಜೇಂದ್ರ ಬಾಬು
ಮಾ: ಆರ್. ರಾಜಶೇಖರ್
ಗೀ: ಹಂಸಲೇಖ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ರಾಜೇಶ್, ಮಂಜುಳಾ, ಚಿತ್ರಾ
ಸಂ: ಕೆ.ಬಾಲು
ಛಾ: ಕಬೀರ್ ಲಾಲ್
ಕಲೆ: ವೇಣು
ಸ: ಹಂಸಲೇಖ
ನೃ: ಮೂಗೂರು ಸುಂದರ್
ಸಾ: ಕರುಪ್ಪಯ್ಯ, ಶಶಿಧರನ್
ವ: ರಾಮನಾಥ್, ಸಾಯಿನಾಥ್
ಪ್ರ: ಕೇಶವ
ಹಾ: ೧) 'ಸುಂದರಿ ನೀನು ...', ೨) 'ಗಗನದಲಿ ಮಳೆಯ ದಿನ ...', ೩) 'ಭೂತವಿಲ್ಲ ಪಿಶಾಚಿ ಇಲ್ಲ ...', ೪) 'ಏನಾಯಿತು ನಮಗೀದಿನ ...', ೫) 'ಸುಂದರಿ ಸುಂದರಿ...',
ಸೆ: ರೀಲು-೧೫, ಉದ ೪೧೦೪.೩೨
ಕ.ಸಾ: ಕುರೂಪಿ. ಆದರೆ ಮಗುವಿನಂತಹ ಮುಗ್ಧ ಮನಸ್ಸಿನ ಪರಿಶುದ್ಧ ವ್ಯಕ್ತಿ. ಅವನಿಗೆ ವಂಶಪಾರಂಪರ್ಯವಾಗಿ ಬಂದ ಆಸ್ತಿಯನ್ನು ಹೊಡೆಯಲು ಕುತಂತ್ರಿಗಳ ಸಂಚು. ಅದರಿಂದಾಗಿ ಆ ಮುಗ್ಧನ ಕೊಲೆ. ಸತ್ತ ಅವನ ಆತ್ಮವು ಆತನ ತಮ್ಮನ

ದೇಹದೊಳಗೆ ಸೇರಿಕೊಂಡು ವೈರಿಗಳನ್ನು ನಿರ್ನಾಮ ಮಾಡುವುದೇ ಕಥೆ.

೧೪೯೭. ಮಾವನಿಗೆ ತಕ್ಕ ಅಳಿಯ

(೧೯೯೨ / ವರ್ಣ / ಸಾಮಾಜಿಕ)

ಲಾ: ಪದ್ಮೇಶ್ವರಿ ಕಂಬೈನ್ಸ್
ಪ್ರೊ: ಪಾರ್ವತಮ್ಮ ರಾಜಕುಮಾರ್
ನಿ: ವಿ.ಗೋವಿಂದರಾಜ್
ಸ.ನಿ: ಪಿ.ಅಣ್ಣಯ್ಯ, ಶಿವಯೋಗಿ ಮೈಸೂರ್‌ಮಠ್
ಅ: ಶಿವರಾಜ್ ಕುಮಾರ್, ಸೌಮ್ಯ, ಬಾಲರಾಜ್, ಲೋಕೇಶ್, ಉಮೇಶ್, ಶಂಕರ್ ರಾವ್, ಪೃಥ್ವಿರಾಜು, ಮನದೀಪ್ ರಾಯ್, ಸುಧೀರ್, ಹೊನ್ನವಳ್ಳಿ ಕೃಷ್ಣ, ಶಿವರಾಂ, ಶ್ರೀನಿವಾಸ್, ಎಂ.ಎಸ್.ಕಾರಂತ್, ಮಾಲತಿ, ಕಲಾ, ರಾಣಿ, ವಾಣಿಶ್ರೀ, ಶಂಕರ ಪಾಟೀಲ್
ಕ: ಕೆ.ಬಾಲಚಂದರ್

ಚಿ.ಕ/ಮಾ/ಗೀ: ಚಿ.ಉದಯಶಂಕರ್
ಗಾ: ಎಸ್. ಪಿ.ಬಾಲಸುಬ್ರಹ್ಮಣ್ಯಂ, ಮಂಜುಳಾ ಗುರುರಾಜ್
ಸಂ: ಎಸ್. ಮನೋಹರ್
ಛಾ: ಶ್ರೀಕಾಂತ್
ಕಲೆ: ನಜೀರ್
ಸ: ಶಂಕರ್ ಗಣೇಶ್
ಧ್ವ: ವಿ.ಜೆ.ವಿ.ಮೂರ್ತಿ, ಕೋದಂಡಪಾಣಿ, ಎ.ಜೆ.ಸ್ಟೀಫನ್
ನೃ: ತಾರಾ
ಸಾ: ಸ್ವಾಮಿ
ವ: ವೀರರಾಜು
ಪ್ರ: ದೊರೆಸ್ವಾಮಿ ನಾಯ್ಡು, ಶ್ರೀನಿವಾಸ್, (ಕೇಶ: ನಾಗೇಶ್ವರ ರಾವ್)
ಸ್ಟು: ಕಂಠೀರವ ಸ್ಟುಡಿಯೋ
ಕ.ಸಾ: ಯುವಕನೊಬ್ಬ ವ್ಯಕ್ತಿಯೋರ್ವನ ಮಗಳನ್ನು ಮದುವೆಯಾಗಿಯೇ ತೀರುವುದಾಗಿ ಛಲ ತೊಟ್ಟ. ಆದರೆ ಅದು ಅಷ್ಟು ಸುಲಭ ಸಾಧ್ಯವಾದುದೇನೂ ಆಗಿರಲಿಲ್ಲ. ನೂರೆಂಟು ಅಡ್ಡ ತಡೆಗಳು. ಎಲ್ಲ ವಿಘ್ನಗಳನ್ನೂ ನಿವಾರಿಸಿಕೊಳ್ಳಲು ಯುವಕ ಸಾಕಷ್ಟು ಪಾಡುಪಡಬೇಕಾಗಿ ಬಂದಿತು. ಆ ಹೋರಾಟಗಳ ನಡುವೆಯೂ ಛಲ ಸಾಧಿಸಿದ ಯುವಕ ಮಾವನಿಗೆ ತಕ್ಕ ಅಳಿಯನಾದ.

೧೪೯೮. ಪ್ರೇಮದ ಉಯ್ಯಾಲೆ

(೧೯೯೨ / ವರ್ಣ / ಸಾಮಾಜಿಕ)

ಲಾ: ಸತ್ಯಶ್ರೀ ಚಿತ್ರ
ಪ್ರೊ: ಮೋಹನ್ ಮುರಳಿ, ಸೌಭಾಗ, ಗೀತಾ
ನಿ: ಅನಂತು
ಸ.ನಿ: ಕೃಷ್ಣೋಜಿ ರಾವ್
ಅ: ವಿಜಯಕಾಶಿ, ರೂಪಾ ಚಕ್ರವರ್ತಿ, ಬಿ.ಆರ್ ಅಕ್ತರ್, ಮೋಹನ್, ತಾರಾ ನಾಯಕ್, ಕೃಷ್ಣಯ್ಯ ಶೆಟ್ಟಿ, ಪ್ರಕಾಶ್, ಪಾರ್ಥಸಾರಥಿ, ಪ್ರಕಾಶ್, ಕೆ.ಸತ್ಯಮೂರ್ತಿ, ರಜನಿ ಕುಮಾರ್, ನಾಗರಾಜ್
ಕ/ಚಿ.ಕ/ಮಾ: ಅನಾಮಿಕ
ಗೀ: ಅನಾಮಿಕ, ಎನ್. ಎಸ್. ಕುಮಾರ್
ಗಾ: ಬಿ.ಆರ್.ಛಾಯಾ, ಜಯಪಾಲ್, ಶ್ರೀನಿವಾಸ್, ಸುಂದರ್
ಸಂ: ಸುರೇಶ್ ಅರಸ್
ಛಾ: ಬಿ.ಎಸ್.ಶಾಸ್ತ್ರಿ
ಕಲೆ: ಕೃಷ್ಣಾಚಾರಿ
ಸ: ಕೆ.ಈಶ್ವರ್
ಧ್ವ: ನಿಶಾಂತ್, ದಶರಥ್
ನೃ: ಜೀವಾ, ಪ್ರೋಲ್ ರಾಜ್
ಸಾ: ಕರಾಟೆ ವಿಜಯ್
ವ: ನಾಗೇಂದ್ರ, ಸುಂದರ್
ಪ್ರ: ಮಾದೇಗೌಡ
ಹಾ: ೧) 'ಉಯ್ಯಾಲೆ ಆಗಿದೆ ಮನಸು ...', ೨) 'ಪ್ರಣಯದ ಕೋಗಿಲೆಯು ...', ೩) 'ನನ್ನ ಸರಿ ಸಮ ಯಾರೋ ...', ೪) 'ಅರಳಿದ ಹೂ ಮನಸು ...',
ಕ.ಸಾ: ಹದಿ ಹರಯದ ವಯಸ್ಸು. ಪ್ರೀತಿ ಪ್ರೇಮದ ಹುಚ್ಚಾಟ. ಭವಿಷ್ಯದ ಬಗ್ಗೆ ಯಾವೊಂದು ನಿರ್ದಿಷ್ಟತೆಯನ್ನು ಕಾಣದಿದ್ದರೂ ಪ್ರೀತಿ ಪ್ರೇಮವೆಂದು ದಾರಿ ತಪ್ಪುವ ಯುವ ಪೀಳಿಗೆ ತಮ್ಮ ಬದುಕನ್ನು ತಾವೇ ಕತ್ತಲೆಯ ಕೂಪಕ್ಕೆ ತಳ್ಳಿಕೊಂಡು, ತಡವಾಗಿ ಎಚ್ಚೆತ್ತು, ಪಶ್ಚಾತ್ತಾಪ ಪಡುವ ಕಥೆ.

೧೪೯೯. ಕಲಿಯುಗ ಸೀತೆ

(೧೯೯೨ / ವರ್ಣ / ಸಾಮಾಜಿಕ)

ಲಾ: ಶ್ರೀ ದುರ್ಗ ಆರ್ಟ್ಸ್ ಪ್ರೊಡಕ್ಷನ್ಸ್
ಪ್ರೊ: ಬಿ.ನಾಗರಾಜು, ದಮಯಂತಿ
ನಿ: ವಿಜಯ್
ಸ.ನಿ: ಟಿ.ರಘು
ಅ: ಸುನಿಲ್, ಮಾಲಾಶ್ರೀ, ಬಾಲಕೃಷ್ಣ, ಟೈಸ್ ಕೃಷ್ಣ, ಶಿವಕುಮಾರ್, ಸುಧೀರ್, ಭಾಗ್ಯಶ್ರೀ, ಅವಿನಾಶ್, ವಾಣಿ
ಕ/ಚಿ.ಕ: ಎಂ.ಡಿ.ಸುಂದರ್
ಮಾ/ಗೀ: ಚಿ.ಉದಯಶಂಕರ್

ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ
ಸಂ: ಕೆ.ನರಸಯ್ಯ
ಛಾ: ಮಹೇಂದ್ರ ಚಿಟ್ಟಿಬಾಬು
ಕಲೆ: ಸುಂದರಂ
ಸ: ರಾಜನ್ ನಾಗೇಂದ್ರ
ಧ್ವ: ಚಾಮುಂಡೇಶ್ವರಿ
ನೃ: ಸಂಪತ್
ಸಾ: ಥ್ರಿಲ್ಲರ್ ಮಂಜು
ವ: ಸತ್ಯಂ
ಪ್ರ: ಶ್ರೀನಿವಾಸ್
ಸ್ಟು: ಚಾಮುಂಡೇಶ್ವರಿ
ಹಾ: ೧) 'ಹೂವಮ್ಮ ಹೂವು ಮಲ್ಲಿಗೆ ಹೂವು...', ೨) 'ತಪ್ಪು ತಪ್ಪು ಬೇಗನೆ ತಪ್ಪು...', ೩) 'ದಿನವೂ ನಲಿವ ದಿನವೂ ನಗುವೆ...', ೪) 'ಅಮ್ಮಾ ನಾನು ಕಂಡಾ ನೀನು ...',
ಕ.ಸಾ: ಹೂವು ಮಾರುವ ಹುಡುಗಿ. ಪ್ರೀತಿಸಿದ ಹುಡುಗನನ್ನೇ ಮದುವೆಯಾದಳು. ಮಂತ್ರಿಯ ಮಗನಿಂದ ತಪ್ಪಿಸಿಕೊಳ್ಳಲು ಕೊಲೆ ಮಾಡಿದಳು. ಶಿಕ್ಷೆಯಾಯಿತು. ಹಿಂದಿರುಗಿದ ಮೇಲೆ ಮತ್ತೆ ಮಂತ್ರಿಯ ಕಡೆಯವರಿಂದ ಅಪಹರಿಸಲ್ಪಟ್ಟಳು. ಹುಚ್ಚಿಯಂತೆ ನಟಿಸಿದಳು. ಹಳ್ಳಿಯ ಜಾತ್ರೆಗೆ ಮುಖ್ಯ ಅತಿಥಿಯಾಗಿ ಬಂದ ಮಂತ್ರಿಯನ್ನು ಕೊಂದಳು. ಕೋರ್ಟಿಗಿಂತ ಜನರೇ ಒತ್ತಡ ತಂದು ತೀರ್ಪಿತ್ತು ಅವಳನ್ನು ಮತ್ತೆ ಗಂಡ ಮಗುವಿನೊಂದಿಗೆ ಬದುಕಲು ಅವಕಾಶ ಮಾಡಿಕೊಟ್ಟರು.

೧೯೯೩

೧೫೦೦. ಬಹದ್ದೂರ್ ಹೆಣ್ಣು

(೧೯೯೩ / ವರ್ಣ / ಸಾಮಾಜಿಕ)

ಲಾ: ಕಾವ್ಯ ಕಲಾ ಫಿಲಂಸ್
ಪ್ರೊ: ಎಸ್. ಉದಯಶಂಕರ್, ಬಿ.ಸರೋಜ ರಾಮಕೃಷ್ಣ, ಕೆ.ಸೀತಾರಾಂ
ನಿ: ಎ.ವಿ.ಶೇಷಗಿರಿರಾವ್
ಸ.ನಿ: ಎಸ್. ಸುಂದರ್
ಅ: ರೂಪಾ ಗಂಗೂಲಿ, ದೇವರಾಜ್, ಶ್ರೀಧರ್, ಕೀರ್ತಿ,

ಅಶೋಕ್ ರಾವ್, ಎ.ಆರ್.ಸಿಂಹ, ಮಾಧುರಿ, ಸುಧಾ ನರಸಿಂಹರಾಜು, ಉಮೇಶ್, ಸರಿಗಮ ವಿಜಿ, ಲಕ್ಷ್ಮಣ್, ಎಂ.ಎಸ್.ಕಾರಂತ್, ಕೆಮಿನೀಧರನ್, ಬ್ಯಾಂಕ್ ಜನಾರ್ದನ್
ಕ: ಬಿ.ಎಲ್.ನಾಗರಾಜ್
ಚಿ.ಕ: ಎ.ವಿ.ಶೇಷಗಿರಿರಾವ್
ಮಾ: ಕೆ.ಎಸ್.ಚಂದ್ರಶೇಖರ ಶರ್ಮ
ಗೀ: ಚಿ.ಉದಯಶಂಕರ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ
ಸಂ: ಎಂ.ಎಸ್.ವಿಕ್ರಮ್
ಕಲೆ: ರಾಜು
ಸ: ರಾಜನ್-ನಾಗೇಂದ್ರ
ಧ್ವ: ಚಾಮುಂಡೇಶ್ವರಿ
ಸಾ: ಸಾಹುಲ್
ವ: ಶಿವ
ಪ್ರ: ಮೈಸೂರು ವೆಂಕಟೇಶ್
ಹಾ: ೧) 'ಮುತ್ತಿನಾ ಹನಿ ಬಂದಾಗ...', ೨) 'ಹೂವಂತ ಮೊಗವು ಇಲ್ಲಿ...', ೩) 'ಸತ್ಯವು ಸತ್ತಾಗ ನ್ಯಾಯವು ಅತ್ತಾಗ...', ೪) 'ಕಣ್ಣಲ್ಲಿ ಕೊಳ್ಳಬಲ್ಲನು...',
ಸೆ: ಉದ-೩೮೭೭.೦೦, ರೀಲು-೧೪, 'ಯು' ಸರ್ಟಿಫಿಕೇಟ್
ಕ.ಸಾ: ನಾಯಕಿ ಪ್ರೇಮಿಸಿದ ಪೊಲೀಸ್ ಅಧಿಕಾರಿಯನ್ನು

ದುಷ್ಟರು ಘಾಸಿ ಗೊಳಿಸಿದರು. ಆಕೆ ಅಂಥವರ ಮೇಲಿನ ಸೇಡು ತೀರಿಸಿಕೊಳ್ಳಲು ಪೊಲೀಸ್ ಅಧಿಕಾರಿ ಆದಳು. ಹೋರಾಟದಲ್ಲಿ ಮಾದಕ ದ್ರವ್ಯ ವ್ಯಸನಿಯಾಗಿ ದುಷ್ಟರನ್ನು ಸೇರಿದ ಸೋದರನನ್ನು ಕಳೆದುಕೊಂಡಳು. ದುಷ್ಟರನ್ನು ಹಿಡಿಯಲು ನೆರವಾದ ತರುಣ ಪೊಲೀಸ್ ಅಧಿಕಾರಿಯನ್ನು ಒಲಿದಳು.

೧೫೦೧. ವಿಕ್ರಂ

(೧೯೯೩ / ವರ್ಣ /ಪತ್ತೇದಾರಿ)

ಲಾ: ಮುಸುರಿ ಪ್ರೊಡಕ್ಷನ್ಸ್

ಪ್ರೊ: ಗುರುದತ್ ಮುಸುರಿ

ನಿ: ಶ್ರೀಕಾಂತ್ ಕುಲಕರ್ಣಿ

ಸ.ನಿ: ಕೆ.ಪುರುಷೋತ್ತಮ್

ಅ: ಪ್ರಭಾಕರ್, ಚಂದ್ರಿಕಾ, ಜಯಸಿಂಹ, ಸುಧೀರ್, ಡಿಸ್ಕೋ ಶಾಂತಿ, ಗಂಗಾಧರ

ಕ: ಜಯಸಿಂಹ ಮುಸುರಿ

ಚಿ.ಕ: ಶ್ರೀಕಾಂತ್ ಕುಲಕರ್ಣಿ

ಮಾ/ಗೀ: ಉಪೇಂದ್ರ

ಗಾ: ಸುಂದರ್, ಮಂಜುಳಾ ಗುರುರಾಜ್, ಕುಸುಮ, ಜಯಸಿಂಹ ಮುಸುರಿ

ಸಂ: ಕೆ.ನರಸಯ್ಯ

ಛಾ: ಕೆ.ಸುಂದರನಾಥ ಸುವರ್ಣ

ಕಲೆ: ರಾಜು

ಸ: ಶಂಕರ್ ಗಣೇಶ್

ಧ್ವ: ಅಣ್ಣಾ ದೊರೈ, ಕೃಷ್ಣಮೂರ್ತಿ

ನೃ: ಸತೀಶ್

ಸಾ: ಸ್ವಾಮಿ

ವ: ವೆಂಕಟೇಶ್

ಪ್ರ: ಮೈಸೂರು ಮಲ್ಲಿ

ಸ್ಟು: ಸಂಕೇತ್

ಹಾ: ೧)'ಏಪ್ರಿಲ್ ಫೂಲ್...', ೨)'ಓ ಚಳಿಯ ಮೊದಲೇ...', ೩)'ಅಯ್ಯೋ ಅಯ್ಯಯ್ಯಯ್ಯೋ...', ೪)'ಮಿಂಚುತ್ತಿರೆ ಹೆಣ್ಣು...'.

ಕ.ಸಾ: ನಗರದ ಪ್ರಸಿದ್ಧ ಬಡಾವಣೆಯೊಂದರಲ್ಲಿ ನಡೆದ ಒಂದು ಕೊಲೆ. ಅದು ಕೊಲೆಯೇ ಆಗಿದ್ದರೂ ನೋಡುವವರಿಗೆ ಅದು ಅಪಘಾತವೆನಿಸುವಂತಿರುತ್ತದೆ. ಆದರೆ ಅದೇ ಸ್ಥಳದಲ್ಲಿ ಅದೇ ರೀತಿ ಮೇಲಿಂದ ಮೇಲೆ ಕೊಲೆಗಳು ನಡೆಯುತ್ತವೆ. ಆಗ ಅನುಮಾನ ಮೂಡುತ್ತದೆ. ಅದರ ಹಿನ್ನೆಲೆಯಲ್ಲಿನ ಮರ್ಮವನ್ನು ಕಂಡು ಹಿಡಿಯಲು ಸಿ.ಬಿ.ಐ.ಅಧಿಕಾರಿ ವಿಕ್ರಂ ಬರುತ್ತಾನೆ. ಕೊಲೆಗಡುಕರನ್ನು ಕಂಡು ಹಿಡಿಯುತ್ತಾನೆ.

೧೫೦೨. ಮೆಚ್ಚಿದ ಮದುಮಗ

(೧೯೯೩ / ವರ್ಣ / ಸಾಮಾಜಿಕ)

ಲಾ: ಶಶಿಕಲಾ ಪಿಕ್ಚರ್ಸ್

ಪ್ರೊ: ಸಿ.ಎ.ಹರಿಬಾಬು

ನಿ: ಸಿ.ಪಾಲ್ ರಾಜ್

ಸ.ನಿ: ರಾಮಚಂದ್ರ ಪ್ರಭು, ಪ್ರದೀಪ್

ಅ: ಸುನಿಲ್, ಶ್ರುತಿ, ಸುನೀತಾ, ಸುಂದರಕೃಷ್ಣಅರಸ್, ಡಿಂಗ್ರಿ ನಾಗರಾಜ್, ವಾಸುದೇವ ರಾವ್, ರಮೇಶ್ ಭಟ್, ರವಿಕಿರಣ್, ಹರಿಬಾಬು, ಜಿ.ವಿ.ಕೃಷ್ಣ, ಆನಂದ್, ಸರ್ವಮಂಗಳ, ಸದಾಶಿವ ಬ್ರಹ್ಮಾವರ್, ವೀಣಾ, ಮಾಟಿನ್ನು, ಡಾ।ಯಾದವ್, ಬೇಬಿ ಪದ್ಮಪ್ರಿಯ, ಬೇಬಿ ಶಶಿಕಲಾ

ಕ/ಚಿ.ಕ: ಸಿ.ಪಾಲ್ ರಾಜ್

ಮಾ: ರಾಮಚಂದ್ರ ಪ್ರಭು, ಸಿ.ಪಾಲ್ ರಾಜ್

ಗೀ: ಗೀತಪ್ರಿಯ, ಎಂ.ಎನ್.ವ್ಯಾಸರಾವ್, ವಿ.ಮನೋಹರ್, ಪ್ರಭು

ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ

ಸಂ: ಕೆ.ನರಸಯ್ಯ

ಛಾ: ಮುತ್ತುರಾಜ್, ಆರಾಧ್ಯ

ಕಲೆ: ಸಯ್ಯದ್ ಬಾಷಾ

ಸ: ಮನೋರಂಜನ್ ಪ್ರಭಾಕರ್

ಧ್ವ: ಪ್ರಸಾದ್ ರಿಕಾರ್ಡಿಂಗ್. ಚಾಮುಂಡೇಶ್ವರಿ

ವ: ನಾಗೇಂದ್ರ

ಪ್ರ: ಶ್ಯಾಂ ಸುಂದರ್

ಹಾ: ೧)'ಬಾನಿಗೇರುವ ಆಸೆ ಮೂಡಿದೆ...', ೨)'ನಾನಂತಿಂಥೋನಲ್ಲಾ...', ೩)'ಗುರು ರಾಘವೇಂದ್ರ ಕರುಣಾಂತರಂಗ...', ೪)'ಈ ಮೋಹದಾ ಸೌಂದರ್ಯಕೆ...',

ಸೆ: ಉದ-೩೫೧೨.೦೦, ರೀಲು-೧೪, ೨೭-೦೬ ೯೨

ಕ.ಸಾ: ಶ್ರೀಮಂತ ತಂದೆಯ ಒಬ್ಬಳೇ ಮಗಳು. ವಿದ್ಯಾವಂತೆ. ಕೊಂಚ ಚೆಲ್ಲು ಹುಡುಗಿ. ಮನೆಯಲ್ಲಿ ಅನಾಥನಾಗಿ ಬಂದು ಆಶ್ರಯ ಪಡೆದುಕೊಂಡಿದ್ದ ತರುಣನೊಬ್ಬ, ಆ ಹುಡುಗಿಯ ವಿವಾಹದ ಹೊತ್ತಿನಲ್ಲಿ ಹೋಗಿ ಆಕೆ ದುಷ್ಟನೊಬ್ಬನ ಮಡದಿಯಾಗುವುದನ್ನು ತಪ್ಪಿಸಿದ. ಆದರೆ ದುಷ್ಟ ಆಕೆಯನ್ನು

ಅಪಹರಿಸಿ ಬ್ಲಾಕ್ ಮೇಲ್ ಮಾಡಿದ. ತರುಣ ಎಲ್ಲವನ್ನು ಸಾಹಸದಿಂದ ಸರಿಪಡಿಸಿದ. ಹೋರಾಟದಲ್ಲಿ ತರುಣ ಪ್ರೀತಿಸಿದ ಇನ್ನೊಂದು ಹುಡುಗಿ ಸತ್ತು, ಶ್ರೀಮಂತ ಹುಡುಗಿಯನ್ನು ವಿವಾಹವಾಗುವ ಸಂದರ್ಭ ಒದಗಿತು.

೧೫೦೩. ರಾಜಕೀಯ

(೧೯೯೩ / ವರ್ಣ / ರಾಜಕೀಯ)

ಲಾ: ಶ್ರೀ ಮುತ್ಯಾಲಮ್ಮನ್ ಕ್ರಿಯೇಷನ್ಸ್

ಪ್ರೊ: ಪಿ.ಪಿ.ವರದರಾಜನ್, ಶ್ರೀಮತಿ ವಿಜಯಲಕ್ಷ್ಮಿ

ನಿ: ಶಿವಮಣಿ

ಸ.ನಿ: ಎ. ಎನ್. ಜಯರಾಮಯ್ಯ

ಅ: ದೇವರಾಜ್, ಅಶೋಕ್ ರಾವ್, ಗೀತಾ, ಅನಂತ್‌ನಾಗ್, ಅಭಿಜಿತ್, ಕಾಸ್ಟ್ಯೂಮ್ ಕೃಷ್ಣ, ಧೀರೇಂದ್ರ ಗೋಪಾಲ್, ಸುಧೀರ್, ಉಮೇಶ್, ಪ್ರಕಾಶ್ ರೈ, ಸದಾಶಿವ ಬ್ರಹ್ಮಾವರ್

ಕ/ಚಿ.ಕ: ಶಿವಮಣಿ

ಮಾ: ಬಿ.ಎಲ್. ವೇಣು

ಗೀ: ಹಂಸಲೇಖ

ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ, ಮಂಜುಳಾ ಗುರುರಾಜ್

ಸಂ: ಶ್ಯಾಂ ಯಾದವ್

ಛಾ: ಸುಂದರನಾಥ ಸುವರ್ಣ

ಕಲೆ: ರಾಜು

ಸ: ಹಂಸಲೇಖ

ಧ್ವ: ಚಾಮುಂಡೇಶ್ವರಿ

ನೃ: ಬಿ.ಸಿಲ್ವಿ

ಸಾ: ಶಶಿ, ಕರುಪಯ್ಯ

ವ: ಸಿ.ನಾಗರಾಜ್

ಪ್ರ: ಕುಮಾರ್, ಪಿ.ವಿ.ಮಾಧವನ್

ಸ್ಟು: ಚಾಮುಂಡೇಶ್ವರಿ, ಪ್ರಸಾದ್ ಲ್ಯಾಬ್, ಸುಪ್ರಾ ಮೂವೀಸ್

ವಿ: ಶಿವಮಣಿ ನಿರ್ದೇಶಕರಾದರು.

ಕ.ಸಾ: ಖ್ಯಾತ ವಕೀಲನೊಬ್ಬನ ಕೊಲೆಯಾಗುತ್ತದೆ. ಅದೊಂದು ರಾಜಕೀಯ ದುರುದ್ದೇಶದ ಕೊಲೆ. ಆ ಕೊಲೆಯ ಹಿಂದಿನ ರಹಸ್ಯವನ್ನು ಕಂಡು ಹಿಡಿಯಲು ಸಿ.ಬಿ.ಐ.ಅಧಿಕಾರಿಯೊಬ್ಬನ ಆಗಮನವಾಗುತ್ತದೆ. ಕೊಲೆಯ ಹಿಂದಿನ ಸಂಚನ್ನು ಕಂಡು ಹಿಡಿಯುವಲ್ಲಿ ಆತ ಯಶಸ್ವಿಯಾಗಲಿದ್ದಾಗ ಅವನನ್ನೇ ಕೊಲೆ ಮಾಡುವ ಪ್ರಯತ್ನವಾಗುತ್ತದೆ. ಆ ಸಂಚಿನಿಂದ ಪಾರಾಗಿ ಬದುಕಿ ಉಳಿದ ಆತ, ಕೊಲೆಯಾದ ವಕೀಲನ ಪತ್ನಿಯ ಜೊತೆಗೂಡಿ ಕೊಲೆಗಾರರನ್ನು ಕೊಂದು ಜೈಲು ಸೇರುತ್ತಾನೆ.

೧೫೦೪. ಜಗ ಮೆಚ್ಚಿದ ಹುಡುಗ

(೧೯೯೩ / ವರ್ಣ / ಸಾಮಾಜಿಕ)

ಲಾ: ಶ್ರೀಚೌಡೇಶ್ವರಿ ಆರ್ಟ್ಸ್ ಕಂಬೈನ್ಸ್

ಪ್ರೊ: ಎಸ್. ಎ. ಶ್ರೀನಿವಾಸ್

ನಿ: ಹೆಚ್. ಆರ್.ಭಾರ್ಗವ

ಸ.ನಿ: ಸಿ.ಹೆಚ್.ಬಾಲಾಜಿ ಸಿಂಗ್, ಕೆ.ಬಿ.ಹಿರೇಮಠ್, ಎಸ್.ಪಿ.ಉದಯ್

ಅ: ಶಿವರಾಜ್ ಕುಮಾರ್, ಪ್ರಭಾಕರ್, ಶ್ರೀನಾಥ್, ರಮೇಶ್ ಭಟ್, ಕೆ.ಎಸ್.ಅಶ್ವತ್ಥ್, ಎಂ.ಪಿ.ಶಂಕರ್, ಗುರುದತ್, ಲಕ್ಷ್ಮಿ, ರಾಗಿಣಿ, ಪಂಢರಿಬಾಯಿ, ಭೀಮರಾವ್, ಎಂ.ಎಸ್.ಕಾರಂತ್, ಶಿವಪ್ರಕಾಶ್, ವಿಜಯ ರಾಘವೇಂದ್ರ, ಲಲಿತಾಶ್ರೀ, ಸ್ವಾತಿ, ಪುಷ್ಪ, ಶನಿ ಮಹಾದೇವಪ್ಪ, ಕುಣಿಗಲ್ ರಾಮನಾಥ್, ಸುರೇಶ್ ಬಾಬು, ಜಗದೀಶ್

ಕ: ಸಾಯಿಸುತೆ ಅವರ 'ನಿಶಾಂತ್' ಕಾದಂಬರಿ

ಚಿ.ಕ/ಮಾ/ಗೀ: ಚಿ.ಉದಯಶಂಕರ್

ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಮಂಜುಳಾ ಗುರುರಾಜ್, ಡಾ।ರಾಜಕುಮಾರ್

ಸಂ: ಎಸ್. ಮನೋಹರ್

ಛಾ: ಡಿ.ವಿ.ರಾಜಾರಾಂ, ಆನಂದ್-ಮಹೇಂದ್ರ

ಸ: ರಾಜನ್-ನಾಗೇಂದ್ರ

ಧ್ವ: ಕೋದಂಡ ಪಾಣಿ, ಎಸ್.ಪಿ.ರಾಮನಾಥನ್

ನೃ: ತಾರಾ

ಸಾ: ಸ್ವಾಮಿ

ವ: ವೀರಾಸ್ವಾಮಿ

ಪ್ರ: ದೊರೆಸ್ವಾಮಿ, ಮೂಗೂರು ಗುರು, ಮಲ್ಲಿ, ಕಣ್ಣನ್

ಸ್ಟು: ಚಾಮುಂಡೇಶ್ವರಿ, ಕಂಠೀರವ

ಹಾ: ೧)'ಆಕಾಶವೇ ನನ್ನ ತಂದೇ...', ೨)'ಇಷ್ಟಿಂತ ಇರುವೇನು ಶಿವ...', ೩)'ಮನದಲ್ಲಿ ನೀನೆ ತಾನೆ ಆಸೆಯನ್ನು...', ೪)'ಅತ್ತೆಯ ಮಗನೆ ಮುತ್ತಿನ ಚೆಂಡೆ...', ೫)'ಎಲ್ಲೋ ಉದುರಿದ ಹೂವು...',

ಕ.ಸಾ: ಪ್ರೇಮಿಸಿದ ಹುಡುಗನಿಂದ ಹೆತ್ತ ಮಗು ಹಾಗೂ ತಾಳಿ ಕಟ್ಟಿದ ಪತ್ನಿಯನ್ನು ತ್ಯಜಿಸಿ, ಇನ್ನೊಬ್ಬನನ್ನು ವಿವಾಹವಾಗಿ ತಾಯಿಯಾದ ಹೆಣ್ಣು. ವರ್ಷಗಳ ನಂತರ ದೊಡ್ಡವನಾದ ಮಾಜಿ ಪ್ರಿಯಕರನ ಮಗನನ್ನು ಗುರುತಿಸುವುದು. ಹಾಲಿ ಮಗ ದುಷ್ಟನಾದರೂ ವಾತ್ಸಲ್ಯ ಪ್ರೇಮದಿಂದ ಅವನನ್ನು ಉಳಿಸಿಕೊಳ್ಳಲು ಹೆಣಗುವುದು. ಅದಕ್ಕಾಗಿ ಮಗನಿಗೆ ಅವನ ಜನ್ಮ ರಹಸ್ಯ ಹೇಳುವುದು, ಅವನು ಪ್ರೀತಿಸಿದ ಹುಡುಗಿಯೊಂದಿಗೆ ಊರು ಬಿಟ್ಟು ಹೋಗಲು ಸಹಕರಿಸುವುದು ಮಹಾಭಾರತದ ಕುಂತಿ, ಕರ್ಣರ ಕಥೆಯನ್ನು ನವೀಕರಿಸುತ್ತ ಆಧುನಿಕ ಜಗತ್ತಿಗೆ ಹೊಂದುವ ತಿರುವುಗಳನ್ನು ಕೊಡುವ ಪ್ರಯತ್ನ.

೧೫೦೫. ಹೆಂಡ್ತಿ ಹೇಳಿದರೆ ಕೇಳಬೇಕು

(೧೯೯೬ / ವರ್ಣ / ಸಾಮಾಜಿಕ)
ಲಾ: ಜಯಭೇರಿ ಆರ್ಟ್ ಪ್ರೊಡಕ್ಷನ್ಸ್
ಪ್ರೊ: ಮುರಳಿ ಮೋಹನ್
ನಿ: ರೇಲಂಗಿ ನರಸಿಂಹರಾವ್.
ಸ.ನಿ: ವೈದ್ಯನಾಥನ್

ಅ: ದ್ವಾರಕೀಶ್, ಉಮಾಶ್ರೀ, ಮಾಲಾಶ್ರೀ, ಹರೀಶ್, ಶ್ರೀನಾಥ್, ಬಾಲರಾಜ್, ಕೋಕಿಲಾ, ಶ್ರೀಕಾಂತ್, ಕೋವೈ ಸರಳಾ, ವಾಸು ವಿಕ್ರಮ್, ಶರ್ಮಿಳಾ, ಅನುಷಾ, ರಮೇಶ್ ಭಟ್, ಸತ್ಯಭಾಮ
ಕ: ತೆಲುಗು ಚಿತ್ರವೊಂದರ ಕನ್ನಡ ರೂಪಾಂತರ
ಮಾ/ಗೀ: ಚಿ.ಉದಯಶಂಕರ್
ಛಾ: ಕೆ.ಹರಿ
ಸ: ಚಕ್ರವರ್ತಿ
ಕ.ಸಾ: ಒಂದು ಕುಟುಂಬ. ನಾಲ್ಕು ಜೋಡಿಗಳು. ಅತ್ತೆ-ಮಾವ, ತಮ್ಮ ಮಗ ಸೊಸೆಯಂದಿರನ್ನು ಅಂಕೆಯಲ್ಲಿಟ್ಟುಕೊಳ್ಳಲು ಹೆಣಗುತ್ತಾರೆ. ಮನೆಯಲ್ಲಿ ಎಲ್ಲವೂ ಅಸ್ತವ್ಯಸ್ತ. ಕೊನೆಯ ಸೊಸೆಯಾಗಿ ಬಂದವಳು ಎಲ್ಲ ಅವ್ಯವಸ್ಥೆಗಳನ್ನೂ ಸರಿಪಡಿಸುತ್ತಾಳೆ. ಹೆಂಡತಿಯರು ಹೇಳಿದಂತೆ ಗಂಡಂದಿರು ಕೇಳುವ ಹಾಗೆ ಮಾಡುತ್ತಾಳೆ.

೧೫೦೬. ಆತಂಕ

(೧೯೯೬ / ವರ್ಣ / ಸಾಮಾಜಿಕ)
ಲಾ: ಎಸ್.ಎಸ್.ಪ್ರೊಡಕ್ಷನ್
ಪ್ರೊ: ಶಾರದಾ ಶಾಸ್ತ್ರಿ, ಎಸ್.ವಿ. ಪ್ರಸಾದ್
ನಿ: ಸಾಯಿಪ್ರಕಾಶ್
ಸ.ನಿ: ಕಲಾಗಂಗೋತ್ರಿ ಮಂಜು
ಅ: ಅನಂತ್‌ನಾಗ್, ವಿನಯಾ ಪ್ರಸಾದ್, ಅಂಜನಾ, ಸಾರಿಕ, ಮುಖ್ಯಮಂತ್ರಿ ಚಂದ್ರು, ಆರತಿ, ಲೀಲಾವತಿ, ಮನದೀಪ್ ರಾಯ್, ಕೃಷ್ಣೇಗೌಡ,
ಕ/ಚಿ.ಕ/ಮಾ: ಸೂರಿ (ಎಸ್.ಸುರೇಂದ್ರನಾಥ್)
ಗೀ: ಕೆ. ಎಸ್.ನರಸಿಂಹಸ್ವಾಮಿ, ದೊಡ್ಡರಂಗೇಗೌಡ
ಗಾ: ಎಸ್.ಜಾನಕಿ, ಚಿತ್ರಾ, ಹಂಸಲೇಖ
ಸಂ: ಕೆ.ನರಸಯ್ಯ
ಛಾ: ಜಾನಿಲಾಲ್
ಕಲೆ: ಬಾಬು
ಸ: ಹಂಸಲೇಖ
ವ್ವ: (ಹಾ) ಅಣ್ಣಾ ದೊರೈ (ಮಾ) ಕೃಷ್ಣಮೂರ್ತಿ
ವ: ಎಸ್.ಜಯಚಂದ್ರ
ಪ್ರ: ಕುಮಾರ್ ನೂಣಿವಿನಕೆರೆ, ನಾಗೇಶ್ವರ ರಾವ್
ಸ್ಥು: ಸಂಕೇತ
ಹಾ: ೧)'ಹತ್ತು ವರುಷದ ಹಿಂದೆ ಮುತ್ತೂರ ತೇರಿನಲಿ...'.
ವಿ: ೧೯೯೭ ೯೭ರ ರಾಜ್ಯಪ್ರಶಸ್ತಿ: ದ್ವಿತೀಯ ಅತ್ಯುತ್ತಮ ಚಿತ್ರ. ಅತ್ಯುತ್ತಮ ನಟಿ (ವಿನಯಾ ಪ್ರಸಾದ್.) ಅತ್ಯುತ್ತಮ ಕಥಾಲೇಖಕ: (ಎಸ್.ಸುರೇಂದ್ರನಾಥ್.) ಅತ್ಯುತ್ತಮ ಚಿತ್ರಕಥೆ: (ಎಸ್.ಸುರೇಂದ್ರನಾಥ್.) ಅತ್ಯುತ್ತಮ ಛಾಯಾಗ್ರಾಹಕ: (ಜಾನಿಲಾಲ್.) ಅತ್ಯುತ್ತಮ ಸಂಕಲನಕಾರ: (ಕೆ.ನರಸಯ್ಯ)
ಕ.ಸಾ: ಜಾಹಿರಾತು ಚಿತ್ರಗಳ ನಿರ್ಮಾಪಕನನ್ನು ಮದುವೆಯಾದ ಹುಡುಗಿಗೆ ಗಂಡ ಕೊಲೆಗಾರನೆಂಬ ಸುಳಿವು ತಿಳಿದು ಪ್ರತಿ ಕ್ಷಣವೂ ಆತಂಕವೇ. ಕಾಕತಾಳಿಯವೆಂಬಂತೆ ಕೆಲವು ಪೂರಕ ಘಟನೆಗಳು. ಮತಿಭ್ರಮಣೆಗೊಳಗಾದ ಹೆಣ್ಣಿನಿಂದ ಆದ ಇಂಥ ತಪ್ಪು ಗ್ರಹಿಕೆಗಳು ಆಕೆಯ ಸಾವಿನಿಂದ ಪರಿಹಾರಗೊಂಡು ಮತ್ತೆ ಸುಖಮಯವಾಗುತ್ತದೆ.

೧೫೦೭. ಲವ್ ಟ್ರೈನಿಂಗ್

(೧೯೯೬ / ವರ್ಣ / ಸಾಮಾಜಿಕ)
ಲಾ: ಶ್ರೀ ಲಕ್ಷ್ಮೀಶ್ವರಿ ಪಿಕ್ಚರ್ಸ್
ಪ್ರೊ: ಗೊ.ರಾ.ಭೀಮರಾವ್, ಗೋಕುಲ್ ರಾಜ್
ನಿ: ಬಿ.ರಾಮಮೂರ್ತಿ
ಸ.ನಿ: ಕ.ಎನ್.ವೈದ್ಯನಾಥ್, ಕೆ.ಪುರುಷನಾಥ್
ಅ: ಕಾಶೀನಾಥ್, ರಮೇಶ್ ಭಟ್, ಗೋ.ರಾ.ಭೀಮರಾವ್, ಶಿವರಾಮ್, ತಾರಾ, ಶ್ರೀದೇವಿ, ಅಭಿನಯ, ಮಾನಸ, ಅಂಜಲಿ.
ಕ/ಚಿ.ಕ: ಬಿ.ರಾಮಮೂರ್ತಿ
ಮಾ: ಉಪೇಂದ್ರ
ಗೀ: ಟಿ.ರಮೇಶ್ ರಾವ್, ಕಲ್ಯಾಣ್
ಗಾ: ಎಲ್. ಎನ್.ಶಾಸ್ತ್ರೀ, ಬಿ.ಆರ್.ಛಾಯಾ, ಸುಮಾಶಾಸ್ತ್ರೀ
ಸಂ: ರಾಘವ
ಛಾ: ಮಹೇಂದ್ರ, ಚಿಟ್ಟಿಬಾಬು
ಕಲೆ: ಕೆ.ಕೃಷ್ಣಾಚಾರ್
ಸ: ವಿ.ಮನೋಹರ್
ವ್ವ: ಪೀಟರ್
ನೃ: ಮದನ್
ಸಾ: ಕರಾಟೆ ವಿಜಯ್
ವ: ನಾಗರಾಜ್, ನೀಲಕಂಠ
ಪ್ರ: ಚೆಲುವ ರಾಜ್
ಸ್ಥು: ಕಂಠೀರವ, ಸಂಕೇತ್
ಹಾ: ೧)'ಟಿಗ್ರಿ ಪಡೆದೋರು ಬೀದಿ ಅಲೆದರೂ...', ೨)'ಲವ್ ಟ್ರೈನಿಂಗ್...', ೩)'ಟೀನೇಜ್ ಸ್ಟೈಲಿನಲ್ಲಿ ಸ್ಟೈಲ್ ಬೇಕಾ ಲೈಲಾ...',
ಕ.ಸಾ: ನಿರುದ್ಯೋಗಿಯೊಬ್ಬ ಪ್ರೀತಿಸಲು ತಿಳಿಯದ ಕನ್ಯೆಗೆ ಹೊಡೆಸಿಕೊಳ್ಳುತ್ತಾನೆ. ಯುವಕ-ಯುವತಿಯರಿಗಾಗಿ ಒಂದು ತರಬೇತಿ ಶಾಲೆ ತೆಗೆದ. ಸನ್ನಿವೇಶಗಳ ಹಿಂದೆ ಬಿದ್ದು ಕಾರಣ ಹುಡುಕಿ ಸರಿಪಡಿಸಲು ಹೋದರೆ ಹುಡುಗಿಯರೆಲ್ಲ ಅವನನ್ನೇ ಪ್ರೀತಿಸ ತೊಡಗಿದರು. ಹಲವು ನಾಟಕಗಳನ್ನು ಮಾಡಿದ. ನಿಜವಾದ ಪ್ರೀತಿ ಎನ್ನುವುದು ಹೃದಯಸಂಬಂಧಿಯಾದು ಎಂಬ ಸತ್ಯವನ್ನು ಹೇಳುತ್ತದೆ.

೧೫೦೮. ಸರ್ವರ್ ಸೋಮಣ್ಣ

(೧೯೯೬ / ವರ್ಣ / ಸಾಮಾಜಿಕ)
ಲಾ: ಡೈನಾಮಿಕ್ ಫಿಲಂ ಮೇಕರ್ಸ್
ಪ್ರೊ: ಹರಿಪ್ರಸಾದ್, ವಿ.ಜಿ.ವಿ.ಪ್ರಸಾದ್
ನಿ: ಕೆ.ವಾಸು
ಸ.ನಿ: ರಾಂ ಸೂರಿ, ಎಸ್.ವಿ.ಪ್ರಸಾದ್
ಅ: ಜಗ್ಗೇಶ್, ಪಂಢರಿಬಾಯಿ, ಶಿವರಾಂ, ಅಭಿಜಿತ್, ರಂಭಾ, ಸಿಹಿಕಹಿ ಚಂದ್ರು, ಉಮೇಶ್, ಮನದೀಪ್ ರಾಯ್, ದ್ವಾರಕೀಶ್, ಉದಯಶಂಕರ್
ಕ/ಚಿ.ಕ: ಕೆ.ಬಾಲಚಂದರ್ ('ಸರ್ವರ್ ಸುಂದರಂ' ತಮಿಳು ಚಿತ್ರದ ಕನ್ನಡ ರೂಪಾಂತರ)
ಮಾ: ನಂಜುಂಡ
ಗೀ: ಚಿ.ಉದಯಶಂಕರ್, ಆರ್.ಎನ್.ಜಯಗೋಪಾಲ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಮಂಜುಳಾ ಗುರುರಾಜ್, ಮಾಲ್ಗುಡಿ ಶುಭಾ
ಸಂ: ಸುರೇಶ್ ಅರಸ್
ಛಾ: ಮನೋಹರ್
ಕಲೆ: ರಂಗರಾವ್, ಮೂರ್ತಿ
ಸ: ರಾಜ್ ಕೋಟಿ
ನೃ: ತಾರಾ ಪ್ರಸಾದ್
ಪ್ರ: ಮಹದೇವ ಗೌಡ (ಕೇಶ:) ಬಾಬು
ಸ್ಥು: ಪ್ರಸಾದ್, ಸಂಕೇತ್
ಕ.ಸಾ: ಹೊಟೇಲ್‌ನಲ್ಲಿ ಸರ್ವರ್ ಆಗಿದ್ದವ ಅದೃಷ್ಟ ಬಲದಿಂದ ದೊಡ್ಡ ಸಿನಿಮಾ ನಟನಾಗುತ್ತಾನೆ. ಸರ್ವರ್ ಆಗಿದ್ದ ದಿನಗಳಿಂದಲೂ ಹುಡುಗಿಯೊಬ್ಬಳನ್ನು ಪ್ರೀತಿಸುತ್ತಿರುತ್ತಾನೆ. ಆದರೆ ಆ ಹುಡುಗಿ ಆತನ ಪ್ರಾಣ ಸ್ನೇಹಿತನನ್ನು ಪ್ರೇಮಿಸಿರುತ್ತಾಳೆ. ವಿಷಯ ತಿಳಿದ ಸರ್ವರ್ ಸೋಮಣ್ಣ ತನ್ನ ಏಕ ಮುಖ ಪ್ರೇಮವನ್ನು ತ್ಯಾಗ ಮಾಡಿ, ಅವರಿಬ್ಬರ ವಿವಾಹ ಮಾಡಿಸುತ್ತಾನೆ.

೧೫೦೯. ಲವರ್ಸ್

(೧೯೯೬ / ವರ್ಣ / ಸಾಮಾಜಿಕ)
ಲಾ: ಶ್ರೀ ಮಂಜುನಾಥೇಶ್ವರ ಪಿಕ್ಚರ್ಸ್
ಪ್ರೊ: ಎಂ.ವೇಮಣ್ಣ
ನಿ: ಟಿ.ಜನಾರ್ದನ್
ಅ: ವಿಶ್ವನಾಥ್, ನಿವೇದಿತಾ, ಮದನ್‌ಮಲ್ಲು, ನವೀನಾ, ವಿಜಯಶ್ರೀ, ಬಸವರಾಜ್, ಮುನಿರಾಜ್
ಚಿ.ಕ: ಟಿ.ಜನಾರ್ದನ್
ಮಾ: ಭವಾನಿ ಶಂಕರ್
ಸಂ: ಜನಾರ್ದನ್
ಛಾ: ಟಿ.ಜನಾರ್ದನ್
ಸ: ಮದನ್ ಮಲ್ಲು
ನೃ: ಅನುರಾಧಾ, ಮಂಜುಮಾಲಿನಿ
ಸಾ: ಆಕ್ಷನ್ ಮೂರ್ತಿ
ಹಾ: ೧)'ಕಂಡೆ, ನಿನ್ನ ಕನಸಲ್ಲಿ ನಿಂತೆ ನನ್ನ ...', ೨)'ಈ ಜೋಡಿ ಬಯಸುವ ಹಾದಿ ಬಲು ದೂರ ...', ೩)'ಮುದಿನ ಹಕ್ಕಿಯೇ ...', ೪)'ಮಧುರ ಮಧುರ ...', ೫)'ಹದಿನ ಕಣ್ಣಲ್ಲಿ ...', ೬)'ಕಂಡೆ, ನಿನ್ನ ಕಣ್ಣಲ್ಲಿ ...'

೧೫೧೦. ಮಾಂಗಲ್ಯ ಬಂಧನ

(೧೯೯೬ / ವರ್ಣ / ಸಾಮಾಜಿಕ)
ಲಾ: ಅನುಪಂ ಆರ್ಟ್ಸ್
ಪ್ರೊ/ನಿ: ಎಸ್.ಕೆ.ಭಗವಾನ್
ಸ.ನಿ: ಕೃಷ್ಣಮೂರ್ತಿ
ಅ: ಅನಂತನಾಗ್, ಮಾಲಾಶ್ರೀ, ಅಶ್ವತ್ಥ್, ಮೈನಾವತಿ, ಮಾರ್ತಾಂಡ, ಶ್ರೀದೇವಿ, ಟೆನ್ನಿಸ್ ಕೃಷ್ಣ, ದಿವ್ಯಾ ಪ್ರಸಾದ್, ಬ್ಯಾಂಕಾಕ್ ನಾರಾಯಣ್, ಮೂನ್ ಮೂನ್ ಸೇನ್, ಶನಿ ಮಹದೇವಪ್ಪ, ಥ್ರಿಲ್ಲರ್ ಮಂಜು.
ಕ: ಪಿ.ವಾಸು
ಚಿ.ಕ: ಎಸ್.ಕೆ.ಭಗವಾನ್
ಮಾ/ಗೀ: ಚಿ.ಉದಯಶಂಕರ್
ಗಾ: ಮಂಜುಳಾ, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ
ಸಂ: ಮನೋಹರ್
ಛಾ: ಜೆ.ಜಿ.ಕೃಷ್ಣ
ಸ: ಹಂಸಲೇಖ
ವ್ವ: ಚಾಮುಂಡೇಶ್ವರಿ
ಹಾ: ೧)'ಸಂಜೆಯು ಬಂದಾಯ್ತು...', ೨)'ಜೀವಾ ಜೀವಾ ನನ್ನ ಜೀವಾ ...', ೩)'ಬಿಸಿಲಾದರೇನಾ ನೆರಳಾಗುವೆ...', ೪)'ಬಾಳು

ಸೀತಲಾಗದವನು...', ೫) 'ನೋಡು ನನ್ನೊಮ್ಮೆ...',
೬)'ಗಾಂಧಾರಿಯಾಗಬೇಡ...',

ಕ.ಸಾ: ಸ್ನೇಹ-ಒಲವುಗಳನ್ನು ಅರ್ಥಮಾಡಿಕೊಳ್ಳದ ಮೂರ್ಖನಿಂದಾಗಿ ಸುಖಸಂಸಾರದಲ್ಲಿ ಬಿರುಕು. ತನ್ನ ಗಂಡನಲ್ಲಿ ನಂಬಿಕೆ ಇದ್ದ ಹೆಂಡತಿ ನಿಜವನ್ನು ನಿರೂಪಿಸಲು ಕಷ್ಟ ಪಡುವಳು. ಮುಖ್ಯವಾಗಿ ಮಾಂಗ್ಯಲದ ಪಾವಿತ್ರ್ಯ ಮಹತ್ವವನ್ನು ಸಾರುವ ಕಥೆ. ಗೀತಾ ತನ್ನ ಸಹಪಾಠಿ ಅಶೋಕನೊಂದಿಗೆ ಅತಿಯಾದ ಸ್ನೇಹದಿಂದಿರುತ್ತಾಳೆ. ಅವಳ ಸ್ನೇಹವನ್ನು ಪ್ರೀತಿ-ಪ್ರೇಮವೆಂದೇ ತಪ್ಪಾಗಿ ಗ್ರಹಿಸಿದ ಅಶೋಕ್, ಅವಳು ವಿಜಯ್‌ನನ್ನು ಮದುವೆಯಾದಾಗ ಸೇಡಿನ ಕೈಗೆ ಬುದ್ಧಿಯನ್ನು ಕೊಟ್ಟು, ಅವರಿಬ್ಬರೂ ಬೇರೆಯಾಗುವಂತೆ ಮಾಡುತ್ತಾನೆ. ಅಲ್ಲದೆ ಕೊಲೆಯ ಆರೋಪ ಹೊತ್ತು ವಿಜಯ್ ಜೈಲು ಸೇರುವಂತೆಯೂ ಮಾಡುತ್ತಾನ. ವಿಜಯ್ ಕೊಲೆ ಮಾಡಿರಲು ಸಾಧ್ಯವಿಲ್ಲವೆಂಬ ನಂಬಿಕೆ ಗೀತಾಳಿಗೆ. ತನ್ನ ಮಾಂಗಲ್ಯ ಬಲದ ಮೇಲೆ ನಂಬಿಕೆ ಇಟ್ಟು ಗಂಡನ ಬಿಡುಗಡೆಗಾಗಿ ಕಷ್ಟ ನಷ್ಟಗಳನ್ನು ಅನುಭವಿಸುವ ಗೀತಾ ತ್ಯಾಗಕನ್ಯೆ ಸಿದ್ಧಳಾಗುತ್ತಾಳೆ. ಸತ್ಯವನ್ನು ಹೊರತರುವಲ್ಲಿ ಯಶಸ್ವಿಯಾಗುತ್ತಾಳೆ.

೧೫೧೧. ಸಂಘರ್ಷ

(೧೯೯೩ / ವರ್ಣ / ಸಾಮಾಜಿಕ)

ಲಾ: ಕೆ.ಆರ್.ಕಂಬೈನ್ಸ್

ಪ್ರೊ: ಕೃಷ್ಣ ರಾಜು

ನಿ: ಸುನಿಲ್‌ಕುಮಾರ್ ದೇಸಾಯಿ

ಸ.ನಿ: ಯು.ಎ. ತಿಮ್ಮಯ್ಯ, ಸುರೇಶ್ ರಾಜ್

ಅ: ವಿಷ್ಣುವರ್ಧನ್, ಗೀತಾ, ಮಹಾರಾಹುಲ್, ತ್ಯಾಗರಾಜ್, ಸುದರ್ಶನ್, ಸುಂದರಕೃಷ್ಣ ಅರಸ್, ರಮೇಶ್ ಭಟ್, ಅವಿನಾಶ್, ಶಿವರಂಜಿನಿ, ನವನೀತಾ, ಮಂಜು, ಮಹೇಶ್



ಕುಮಾರ್, ಗಿರೀಶ್, ಸತ್ಯಜಿತ್, ರಾಮಮೂರ್ತಿ, ರವಿ, ಜಿ.ಕೆ.ಗೋವಿಂದರಾವ್, ಬಿ.ಸಿ.ಪಾಟೀಲ್, ಜಾನಕಿರಾವ್, ರಾಕ್‌ಲೈನ್ ವೆಂಕಟೇಶ್, ಶಿವಮೊಗ್ಗ ವೆಂಕಟೇಶ್.

ಕ/ಚಿ.ಕ: ಸುನಿಲ್‌ಕುಮಾರ್ ದೇಸಾಯಿ

ಗೀ: ಶ್ಯಾಮಸುಂದರ ಕುಲಕರ್ಣಿ, ದೊಡ್ಡರಂಗೇ ಗೌಡ

ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ, ಮಂಜುಳಾ

ಸಂ: ಆರ್. ಜನಾರ್ದನ್

ಛಾ: ಪಿ.ರಾಜನ್, ಶ್ರೀಕಾಂತ್

ಕಲೆ: ರಾಜೇಂದ್ರ

ಸ: ಗುಣಸಿಂಗ್

ಧ್ವ: ಕೃಷ್ಣಮೂರ್ತಿ, ಸ್ಪೆಷಲ್ ಎಫೆಕ್ಟ್, ಡಿ.ಎಸ್.ಪ್ರಕಾಶ್

ನೃ: ಅಶೋಕ್ ಪೂನ್ಸಿ

ಸಾ: ಜ್ಯುಡೋ ರತ್ನಂ

ವ: ರಾಮನಾಥ್

ಪ್ರ: ನಾಣಿ

ಸ್ಟು: ಚಾಮುಂಡೇಶ್ವರಿ, ಸಂಕೇತ

ಹಾ: ೧)'ಹೃದಯ ಗೀತೆಗೆ ಸ್ಫೂರ್ತಿಯಾಗಿ ನೀನು...', ೨)'ರೋಷ ಕುದಿಯುತಿದೆ...', ೩)' ಓ ಮೈ ಲವ್ ...', ೪)' ನಿನ್ನ ಜೀವನಾ ಒಂದು ಸಂಘರ್ಷವೂ...',

ಸೆ: ಉದ ೪೦೭೪.೦೦. ರೀಲು-೧೫

ಕ.ಸಾ: ವಿಜ್ಞಾನಿಯೊಬ್ಬನನ್ನು ದುಷ್ಟರಿಂದ ರಕ್ಷಿಸಲು ಹೋಗಿ ಇಡೀ ಕುಟುಂಬವನ್ನೇ ಕಳೆದುಕೊಂಡ ಯುವಕ. ಹಲವಾರು ಸಮಸ್ಯೆಗಳು, ಕೊಲೆಗಳು, ಅಪಹರಣಗಳನ್ನು ಕಾಣುತ್ತಾ ಅವುಗಳ ಮೂಲ ಹುಡುಕಿ ಎಲ್ಲರನ್ನೂ ಸಾಯಿಸಿದ. ಅವನು ಸತ್ತಹಾಗೆ ಕಂಡಿತು. ಆದರೆ ತಾನು ಸೈನ್ಯವನ್ನು ಸೇರಿ ದೇಶಕ್ಕಾಗಿ ದುಡಿಯುತ್ತಿರುವುದಾಗಿ ಬೇಕಾದವರಿಗೆ ತಿಳಿಸಿದ.

೧೫೧೨. ಗಡಿಬಿಡಿ ಗಂಡ

(೧೯೯೩ / ವರ್ಣ / ಸಾಮಾಜಿಕ)

ಲಾ: ಆರ್.ಕೆ.ಫಿಲಂಸ್ ಅಸೋಸಿಯೇಷನ್

ಪ್ರೊ: ಕೆ.ಕೃಷ್ಣ ಮೋಹನರಾಜ್

ನಿ: ವಿ.ಎಸ್.ರೆಡ್ಡಿ

ಸ.ನಿ: ವಿ.ಸತ್ಯ, ರವೀಂದ್ರ ಬಾಬು, ಸುಬ್ರಹ್ಮಣ್ಯ

ಅ: ರವಿಚಂದ್ರನ್, ಜಗ್ಗೇಶ್, ರೋಜ. ರಮ್ಯಕೃಷ್ಣ, ಮುಖ್ಯಮಂತ್ರಿ ಚಂದ್ರು, ದೊಡ್ಡಣ್ಣ

ಕ: ತೆಲುಗು ಚಿತ್ರದ ಕನ್ನಡ ರೂಪಾಂತರ

ಚಿ.ಕ/ಮಾ: ಚಿ.ಉದಯಶಂಕರ್

ಗೀ: ಹಂಸಲೇಖ

ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ

ಸಂ: ಕೋಟಗಿರಿ ವೆಂಕಟೇಶ್ವರ ರಾವ್

ಛಾ: ಜಯರಾಮ್

ಕಲೆ: ಅಶೋಕ್ ಕುಮಾರ್

ಸ: ಹಂಸಲೇಖ

ನೃ: ಸುಂದರಂ, ರಾಜು, ಸುಚಿತ್ರಾ

ಸಾ: ಚಂಬಲ್ ರವಿ

ಹಾ: ೧)'ಪಂಚರಂಗಿ ಪುಟ್ಟಿ ...', ೨)' ಗಡಿಬಿಡಿಗಂಡ...', ೩) 'ನೀನು ನೀನೇ...', ೪) ' ಬಿಡೆ ಬಿಡೆ ...', ೫)' ಬಮ್‌ಚಿಕಿ ಬಮ್‌ಚಿಕಿ ಬಂ ಬಂ...', ೬)'ಮುದ್ದಾದೆದಿಂದೆ ಮಲ್ಲಿಗೆ ಹೂ...',

ಸೆ: ರೀಲು ೧೫, ಉದ ೩೮೦೫.೦೦, 'ಯು' ಸರ್ಟಿಫಿಕೇಟ್

ಕ.ಸಾ: ಒಬ್ಬ ಸಂಗೀತಗಾರ. ಸಂಗೀತ ಪ್ರಿಯಳಾದ ಪಟ್ಟಣದ ಹುಡುಗಿಯ ನೆರವಿನಿಂದ ಗಾಯಕನಾಗಿ ಪ್ರಸಿದ್ಧನಾಗುತ್ತಾನೆ. ಆ ಶ್ರೀಮಂತ ಹುಡುಗಿ ಅವನನ್ನು ಪ್ರೇಮಿಸಿ ಹಠ ಹಿಡಿದು ಅವನನ್ನೇ ಮದುವೆಯಾಗುತ್ತಾಳೆ. ಆದರ ಆತ ಆ ಮೊದಲೇ ಒಂದು ಹುಡುಗಿಯನ್ನು ವಿಚಿತ್ರ ಸಂದರ್ಭವೊಂದರಲ್ಲಿ ಮದುವೆಯಾಗಿರುತ್ತಾನೆ. ಆದರ ಅವಳು ಸತ್ತು ಹೋಗಿರುವಳೆಂದು ತಿಳಿದಿರುತ್ತಾನೆ. ಒಂದು ದಿನ ಆ ಹುಡುಗಿ ಮರಳಿ ಬರುತ್ತಾಳೆ. ಬಹಳಷ್ಟು ತೊಂದರೆಗ ಸಿಲುಕಿ, ಸಾಕಷ್ಟು ಅವಾಂತರಗಳನ್ನು ಆ ಗಾಯಕ ಎದುರಿಸಬೇಕಾಗಿ ಬರುತ್ತದೆ. ಅಂತ್ಯದಲ್ಲಿ ನಿಜ ತಿಳಿದು ಇಬ್ಬರು ಹೆಂಡತಿಯರೂ ಅವನನ್ನು ಮನ್ನಿಸುತ್ತಾರೆ.

೧೫೧೩. ಅನುರಾಗದ ಅಲೆಗಳು

(೧೯೯೩ / ವರ್ಣ / ಸಾಮಾಜಿಕ)

ಲಾ: ಶ್ರೀ ವೈಷ್ಣವೀ ಕಂಬೈನ್ಸ್

ಪ್ರೊ: ಪಾರ್ವತಮ್ಮ ರಾಜಕುಮಾರ್

ನಿ: ಎಸ್.ನಾರಾಯಣ್

ಸ.ನಿ: ಕಿಟ್ಟಿ

ಅ: ರಾಘವೇಂದ್ರ ರಾಜಕುಮಾರ್, ಮಮತಾಶ್ರೀ, ಕೆ.ಎಸ್. ಅಶ್ವತ್ಥ್, ಪೃಥ್ವಿರಾಜ್, ವೈಶಾಲಿ, ತೂಗುದೀಪ ಶ್ರೀನಿವಾಸ್,

ರೇಖಾ, ಬಾಲರಾಜ್, ವೆಂಕಟೇಶ್, ಶೋಭರಾಜ್

ಕ/ಚಿ.ಕ: ಎಸ್.ನಾರಾಯಣ್

ಮಾ: ಎಂ.ಎಸ್.ವ್ಯಾಸರಾವ್

ಗೀ: ಹಂಸಲೇಖ

ಗಾ: ರಾಘವೇಂದ್ರ ರಾಜಕುಮಾರ್, ಮಂಜುಳಾ, ಡಾ। ರಾಜಕುಮಾರ್

ಸಂ: ಎಸ್.ಮನೋಹರ್

ಛಾ: ಪಿ.ಕೆ.ಹೆಚ್.ದಾಸ್

ಕಲೆ: ನಾಗರಾಜ ರಾವ್

ಸ: ಹಂಸಲೇಖ

ಧ್ವ: (ಹಾ) ಮೆನನ್ (ಮಾ) ಕೋದಂಡ ಪಾಣಿ

ಸಾ: ಥ್ರಿಲರ್ ಮಂಜು

ವ: ನಾಗರಾಜ್, ನಾಗೇಶ್ವರ ರಾವ್

ಪ್ರ: ವಿಶ್ವನಾಥ್

ಸ್ಟು: ಕಂಠೀರವ, ಚಾಮುಂಡೇಶ್ವರಿ

ಹಾ: ೧) 'ಸಾಗರವೇ ಸಾಗರವೇ ಕಂಬನಿಯಾ ಆಗರವೆ...', ೨)' ಕನ್ನಡದ ಕಂದ ಇಯ್ಯಾ ಇಯ್ಯಾ ಜೈ...', ೩)' ಜೀವ ಕೋಗಿಲೆ ಇಂಚರ...', ೪)' ಅನುರಾಗದಲೆಗಳ ಮೇಲೆ ಸಂಗೀತ ಸ್ವರಗಳ ಲೀಲೆ...', ೫) 'ನಾನು ಹಾಡೋ ಹಾಡು ಈಗ ನನದಲ್ಲ...', ೬) 'ಮಂಜುಳ ಮಂಜುಳ ಮಂಜುಳ ...', ೭) ' ಅಂಬರದ ತಾರೆ ಅಂಗ್ಯೆಯಲ್ಲಿದೆ...',

ಸೆ: ಉದ-೪೩೨೮.೦೦, ರೀಲು-೧೪, ೦೮.೦೨.೧೯೯೩.

ಕ.ಸಾ: ಗಾಯಕನೊಬ್ಬನನ್ನು ಪ್ರೀತಿಸಿದ ಶ್ರೀಮಂತ ಹುಡುಗಿ. ಪತ್ರಗಳ ಮೂಲಕ ಪರಿಚಯವಾಗಿ ಪ್ರೇಮ ಫಲಿಸುವ ಕಥೆ. ಆದರೆ ನಾಯಕ ಪ್ರಿಯದರ್ಶನ್ ತನಗೆ ಕ್ಯಾನ್ಸರ್ ಎಂದು ತಿಳಿದು ಪ್ರಿಯದರ್ಶಿನಿಯನ್ನು ದೂರ ಮಾಡಿದ. ಆದರ ವೈದ್ಯರ ವರದಿ ಅದಲು ಬದಲಾಗಿತ್ತು. ಎಲ್ಲ ನಿವಾರಿಸಿಕೊಂಡು ಏನೇ ಇರಲಿ ನಾವು ಒಂದಾಗಲೇ ಬೇಕೆಂದು ವಿವಾಹವಾಗುತ್ತಾರೆ.

೧೫೧೪. ಅಂಗೈಯಲ್ಲಿ ಅಪ್ಸರೆ

(೧೯೯೩ / ವರ್ಣ / ಜಾನಪದ)

ಲಾ: ಶ್ರೀ ರಾಘವೇಂದ್ರ ಎಂಟರ್‌ಪ್ರೈಸಸ್

ಪ್ರೊ: ಡಿ.ದೇವರಾಜ್, ಮಾಂಬಳ್ಳಿ

ನಿ: ಸಿ.ಆರ್.ಸಿಂಹ

ಸ.ನಿ: ಅಣ್ಣಯ್ಯ

ಅ: ಶ್ರೀನಾಥ್, ಲೋಕೇಶ್, ಕುಮಾರ್ ಬಂಗಾರಪ್ಪ, ಮೈಸೂರು ಶಾರದ. ಮನದೀಪ್ ರಾಯ್. ರತ್ನಾಕರ್, ಸದಾಶಿವ

ಪ್ರಹ್ಲಾದ್‌ವರ್, ಉಮಾಶ್ರೀ, ವೈಶಾಲಿ, ಬೇಬಿ ಕೀರ್ತಿ, ಬ್ಯಾಂಕ್ ಜನಾರ್ದನ್, ಸುಪ್ರಿಯ, ದಯಾನಂದ್, ಶನಿ ಮಹಾದೇವಪ್ಪ.
ಕ/ಚಿ.ಕ/ಮಾ/ಗೀ: ಟಿ.ಉದಯಶಂಕರ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ, ಚಂದ್ರಿಕಾ
ಸಂ: ಸಿ.ಮನೋಹರ್
ಛಾ: ಬಿ.ಸಿ.ಗೌರಿಶಂಕರ್
ಕಲೆ: ವಿ.ನಾಗರಾಜ ರಾವ್, ಕಲಾ ಮನೋಹರ್
ಸ: ಎಸ್.ಪಿ.ಬಾಲಸುಬ್ರಹ್ಮಣ್ಯಂ
ಧ್ವ: (ಹಾ) ಆರ್ಮುಗಂ (ಮಾ) ಕಣ್ಣನ್
ನೃ: ರಘುರಾಮ್, ಗಿರಿಜಾ ರಘುರಾಮ್
ಸಾ: ರಾಮ್ ಶೆಟ್ಟಿ
ವ: ತಿಪಟೂರು ಸೋಮಶೇಖರ್
ಪ್ರ: ರಾಜಗೋಪಾಲ್, ಮೂರ್ತಿ
ಸ್ಟು: ಪ್ರೀಮಿಯರ್
ಹಾ: ೧) 'ಅಂಗೈಯಲ್ಲಿ ಅಪ್ಸರೆ ಇರುವಾಗೇಕೆ ತೊಂದರೆ...', ೨) 'ಅಮರ ಮಧುರ ಪ್ರೇಮ...', ೩) 'ನನ್ನ ದಂತದ ಗೊಂಬೆ...', ೪) 'ಹಾಡಲು ಬೆಳ್ಳಿ ಮೋಡ...', ೫) 'ನೀ ಕಾಲನ್ನಿಟ್ಟ ಕಡೆ...',
ವಿ: ೧೯೯೨ - ೯೩ರ ರಾಜ್ಯಪ್ರಶಸ್ತಿ: ಅತ್ಯುತ್ತಮ ಧ್ವನಿಗ್ರಾಹಕ: ಆರ್.ಕಣ್ಣನ್
ಕ.ಸಾ: ಹಿಂದಿನ ಜನ್ಮದಲ್ಲಿ ಪ್ರೇಮಿಗಳಾಗಿದ್ದವರು. ಶಾಪಗ್ರಸ್ತಳಾದ ಹುಡುಗಿ ಗೊಂಬೆಯಾಗಿರುತ್ತಾಳೆ. ಗೊಂಬೆಯ ಕತ್ತಿನಲ್ಲಿರುವ ಸರ ಆಕೆ ಮಾನವ ರೂಪಿಯಾಗಲು, ಮತ್ತೆ ಗೊಂಬೆಯಾಗಲು ಕಾರಣವಾಗುತ್ತದೆ. ಪೂರ್ವಜನ್ಮದ ಗೆಳೆಯನಿಗೆ ಅವಳು ಸಿಗುತ್ತಾಳೆ. ಮಂತ್ರವಾದಿಯೊಬ್ಬ ಅವರಿಬ್ಬರನ್ನು ಒಂದಾಗಲೂ ಬಿಡದೆ ಅಡೆ-ತಡೆಗಳನ್ನೊಡ್ಡುತ್ತಾ ಈ ಜನ್ಮದಲ್ಲಿಯೂ ಅವರಿಗೆ ಮುಳ್ಳಾಗುತ್ತಾನೆ. ಹಲವು ಘಟನೆಗಳ ನಂತರ ಅವಳ ಶಾಪ ವಿಮೋಚನೆಯಾಗುತ್ತದೆ. ಪ್ರೇಮಿಗಳು ಒಂದಾಗುತ್ತಾರೆ.

೧೫೧೫. ಸೂರ್ಯೋದಯ

(೧೯೯೩ / ವರ್ಣ / ಸಾಮಾಜಿಕ)
ಲಾ: ಸಿಸಿ ವಿಷನ್
ಪ್ರೊ: ಆರ್.ಸಿ. ಅಶೋಕ್, ಎಸ್.ಕಣ್ಣನ್
ನಿ: ಎ.ಟಿ.ರಘು
ಸ.ನಿ: ಆರ್.ಸಿ.ರಂಗ
ಅ: ಅಂಬರೀಷ್, ವಿನಯಾ ಪ್ರಸಾದ್, ಶ್ರೀನಾಥ್, ಮಹೇಶ್ ಕುಮಾರ್, ಬ್ಯಾಂಕ್ ಜನಾರ್ದನ್, ಶ್ರೀಧರ್, ಅಪ್ಸರಾ, ಕೀರ್ತಿರಾಜ್, ಅರವಿಂದ, ರಾಕ್‌ಲೈನ್ ವೆಂಕಟೇಶ್, ರವಿಕಿರಣ್, ಆಗ್ರೋ ಚಿಕ್ಕಣ್ಣ, ಶನಿ ಮಹಾದೇವಪ್ಪ, ಮೈಸೂರು ಶ್ರೀಕಂಠು, ಶ್ಯಾಮಲಾ, ಡಿಸ್ಕೋ ಶಾಂತಿ, ಮಳವಳ್ಳಿ ಸುಂದರಮ್ಮ, ಗೂಡೂರು ಮಮತಾ
ಕ: ಆರ್.ಸಿ.ಅಶೋಕ್
ಚಿ.ಕ: ಎ.ಟಿ.ರಘು
ಮಾ: ಆರ್. ಎನ್.ಜಯಗೋಪಾಲ್
ಗೀ: ಆರ್.ಎನ್.ಜಯಗೋಪಾಲ್, ದೊಡ್ಡರಂಗೇ ಗೌಡ, ಶ್ಯಾಮಸುಂದರ ಕುಲಕರ್ಣಿ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ, ಉಷಾ ಗಣೇಶ್, ರಾಜೇಶ್ ಕುಮಾರ್
ಸಂ: ವಿಕ್ರಂ ಯಾದವ್
ಛಾ: ಕೆ.ಸುಂದರನಾಥ್ ಸುವರ್ಣ
ಸ: ರಾಜನ್ ನಾಗೇಂದ್ರ
ಧ್ವ: ಪೀಟರ್, ಕೃಷ್ಣಮೂರ್ತಿ
ನೃ: ಸತೀಶ್
ಸಾ: ಕರ್ಪಯ್ಯ, ಶಶಿ
ವ: ನಾಗರಾಜ್, ರಾಮು, (ಕೇಶಾಲಂಕಾರ,) ನಾಗೇಶ್ವರ್ ರಾವ್, ರಾಮಕೃಷ್ಣ
ಪ್ರ: ವೆಂಕಟೇಶ್, ಮೈ.ರಾಮಕೃಷ್ಣ
ಹಾ: ೧) 'ಇದು ಮನ್ಮಥ ರಾಜ್ಯವೋ...', ೨) 'ಮುಟ್ಟಿದ ಕತ್ತಲೆ...', ೩) 'ಕಾಲೇಜ್ ಹ್ಯಾಪಿ ಲೈಫ್...', ೪) 'ಸೂರ್ಯೋದಯ ಇಂದು...', ೫) 'ಧಮ್ಮರೆ ಧಮ್...',
ಕ.ಸಾ: ಮಧುಚಂದ್ರಕ್ಕೆಂದು ಬಂದ ದಂಪತಿಗಳು. ನಾಲ್ವರು ದುಷ್ಟರು ಆ ಜೋಡಿಯಲ್ಲಿನ ಚೆಲುವೆಯನ್ನು ಬಲಾತ್ಕರಿಸುವ ಪ್ರಯತ್ನ ನಡೆಸಿದಾಗ, ಆಕೆ ಸಾವನ್ನಪ್ಪುತ್ತಾಳೆ. ಅದೇ ದುಷ್ಟರಿಂದ ಮತ್ತೊರ್ವ ತರುಣಿಯ ಶೀಲಭಂಗ ಪ್ರಯತ್ನ ನಡೆಯುತ್ತದೆ. ಆಗ ನಾಯಕ ಅವರನ್ನು ಸದೆಬಡಿದು ತರುಣಿಯನ್ನು ರಕ್ಷಿಸುತ್ತಾನೆ. ತನ್ನ ಮಡದಿಯ ಮೇಲೆ ಬಲಾತ್ಕಾರ ಮಾಡಿ, ಅವಳ ಸಾವಿಗೆ ಕಾರಣರಾದ ದುಷ್ಟರ ಮೇಲೆ ಸೇಡು ತೀರಿಸಿಕೊಳ್ಳುತ್ತಾನೆ.

೧೫೧೬. ಬೊಂಬಾಟ್ ಹುಡ್ಗ

(೧೯೯೩ / ವರ್ಣ / ಸಾಮಾಜಿಕ)
ಲಾ: ತನುಚಿತ್ರ
ಪ್ರೊ: ಸಾ.ರಾ.ಗೋವಿಂದು
ನಿ: ಕೆ.ವಿ.ರಾಜು
ಸ.ನಿ: ಎಮ್. ಎಸ್.ರಮೇಶ್
ಅ: ಜಗ್ಗೇಶ್, ಪ್ರಿಯಾಂಕ, ದೊಡ್ಡಣ್ಣ, ಬ್ಯಾಂಕ್ ಜನಾರ್ದನ್, ಅವಿನಾಶ್, ನಾಗೇಶ್ ಬಾಬು, ಗಿರಿಜಾ ಲೋಕೇಶ್, ಭಾಗ್ಯಶ್ರೀ, ರಮೇಶ್ ರಾಜ್, ಸತ್ಯಜಿತ್, ಹೊನ್ನವಳ್ಳಿ ಕೃಷ್ಣ, ಸುರೇಶ್, ಗಂಧರ್ವ, ಹೆಚ್.ಎಂ.ಶಿವಕುಮಾರ್.
ಕ/ಚಿ.ಕ: ಕೆ.ವಿ.ರಾಜು
ಮಾ: ಎಂ.ಎಸ್.ರಮೇಶ್
ಗೀ: ಕೆ.ವಿ.ರಾಜು, ವಿ.ಮನೋಹರ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಮಂಜುಳಾ ಗುರು, ಎಲ್.ಎನ್.ಶಾಸ್ತ್ರೀ, ಸುಮಾ ಶಾಸ್ತ್ರೀ
ಸಂ: ಎಸ್. ಮನೋಹರ್
ಛಾ: ಸಿ.ಮನೋಹರ್
ಕಲೆ: ನಂಜುಂಡಸ್ವಾಮಿ
ಸ: ವಿ.ಮನೋಹರ್
ಧ್ವ: ಮೆನನ್
ನೃ: ಸತೀಶ್ ಕಮಲ, ಅನುರಾಧಾ ಸತೀಶ್
ಸಾ: ಥ್ರಿಲ್ಲರ್ ಮಂಜು
ವ: ಗಂಡಸಿ ನಾಗರಾಜು
ಪ್ರ: ಗೋಪಾಲ, (ಕೇಶ:) ನಾಗೇಶ್ವರ್ ರಾವ್
ಸ್ಟು: ಕಂಠೀರವ
ಹಾ: ೧) 'ಕನ್ನಡ ಮಣ್ಣಿನ ಕಸ್ತೂರಿ ಕಂಪಿನ...', ೨) 'ಬೊಂಬಾಟ್ ಹುಡ್ಗ ನಾನು...', ೩) 'ಓ ಬಿಂಕದ ರಾಣಿಜಾಣೆ...', ೪) 'ಬೊಂಬಾಟ್ ಹುಡ್ಗ ಏನೋ? ಏನಿನ್ನ...', ೫) 'ಮೈ ಲಡ್ಕಾ ತೂ ಲಡ್ಕಿ...', ೬) 'ಬಳೆ ಬಳೆ ಗೌರಿ ಬಳೆ...',
ಸೆ: ೮೬೮೮-೧೪, ಉದ ೩೭೫೫.೦೦, ೦೫.೦೨.೯೩

೧೫೧೭. ಒಲವಿನ ಕಾಣಿಕೆ

(೧೯೯೩ / ವರ್ಣ / ಸಾಮಾಜಿಕ)
ಲಾ: ವಾಯುಪುತ್ರ ಪ್ರೊಡಕ್ಷನ್ಸ್
ಪ್ರೊ: ಆರ್.ರಾಜರತ್ನ ಶೆಟ್ಟಿ
ನಿ: ಬೂದಾಳ್ ಕೃಷ್ಣಮೂರ್ತಿ
ಸ.ನಿ: ಕೆ.ಎನ್.ವೈದ್ಯನಾಥ್
ಅ: ಅಂಬರೀಷ್, ಸುಮಲತಾ, ಶ್ರೀನಿವಾಸ ಮೂರ್ತಿ, ಉಮಾಶ್ರೀ, ಸುಧೀರ್, ಕೀರ್ತಿ, ರಾಮ್‌ಕುಮಾರ್, ಕಾವ್ಯ,

ಜಾನಕಿರಾಮ, ಶ್ಯಾಮಲಾ, ಪ್ರಕಾಶ್ ರೈ, ಡಿಂಗ್ರಿ ನಾಗರಾಜ್, ಹೊನ್ನವಳ್ಳಿ ಕೃಷ್ಣ, ಮಾ|ಜಯಂತ್, ಮಾ|ರವೀಂದ್ರ
ಕ/ಚಿ.ಕ/ಮಾ: ಕೀರ್ತಿ
ಗೀ: ಆರ್.ಎನ್.ಜಯಗೋಪಾಲ್, ದೊಡ್ಡರಂಗೇ ಗೌಡ, ವಿ.ಮನೋಹರ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಮಂಜುಳಾ, ಸಂಗೀತಾ ಕಟ್ಟಿ
ಸಂ: ಸುರೇಶ್ ಅರಸ್
ಛಾ: ಕೆ.ವಾಸುದೇವ್
ಕಲೆ: ನಂಜುಂಡಪ್ಪ
ಸ: ಉಪೇಂದ್ರ ಕುಮಾರ್
ನೃ: ಸತೀಶ್-ಅನುರಾಧಾ ಸತೀಶ್
ಸಾ: ಜ್ಯೂಡೋ ರತ್ನಂ
ವ: ಬಾಲು-ನಾಗರಾಜ್
ಪ್ರ: ಶ್ರೀನಿವಾಸ್-ರಾಮಕೃಷ್ಣ
ಹಾ: ೧) 'ಥಪ್ಪ ಥಪ್ಪ ಎದೆಯೊಳಗೆ...', ೨) 'ಜೀವ ವೀಣೆ ಶೃತಿ ಹೀನ...', ೩) 'ನೀ ನನ್ನ ಜೀವ ನೀ ನನ್ನ ದೈವ...', ೪) 'ನಿನ್ನಿಂದ ಕಂಡ ಆನಂದ ನಾನು...', ೫) 'ನಾನೇ ರಾಧ ನೀನೆ ಶ್ಯಾಮ...',
ಸೆ: ಉದ್ದ-೩೮೧೦, ರೀಲು-೧೪
ಕ.ಸಾ: ಪ್ರೀತಿಸಿದ ಜೋಡಿ ಮನೆಯಿಂದ ಹೊರಗೆ ಬಂದಿತು. ಅವರ ನಡುವೆ ಖಳನೊಬ್ಬ ಪ್ರವೇಶಿಸಿದ. ಅವನ ಕೊಲೆಯಾಗಿ ಈ ಜೋಡಿಯ ಮೇಲೆ ತಪ್ಪು ಅಪವಾದ ಬಂದು ಬೇರೆಯಾಗಬೇಕಾಯಿತು. ಅದೇ ಖಳನಿಂದಾಗಿ ತನ್ನ ಸಂಸಾರ ನಾಶವಾಗಿದರಿಂದ ವ್ಯಕ್ತಿಯೊಬ್ಬ ಆ ಖಳನನ್ನು ಕೊಂದಿದ್ದನ್ನು ಒಪ್ಪಿಕೊಂಡ. ಈ ಜೋಡಿಗೆ ಬಂದ ಎಲ್ಲಾ ತಡೆಗಳನ್ನು ನಿವಾರಿಸಿ ಸುಖ ಜೀವನಕ್ಕೆ ದಾರಿ ಮಾಡಿದ.

೧೫೧೮. ಶೃಂಗಾರ ಕಾವ್ಯ

(೧೯೯೩ / ವರ್ಣ / ಸಾಮಾಜಿಕ)
ಲಾ: ಹೇಮಾಂಜಲಿ ಪ್ರೊಡಕ್ಷನ್ಸ್
ಪ್ರೊ: ಎಂ.ಗೋವಿಂದ ರಾಜು, ಎಂ.ಉದಯ್ ಕುಮಾರ್ ಬಾಬು
ನಿ: ಎಸ್.ಮಹೇಂದರ್
ಸ.ನಿ: ಕೃಷ್ಣೋಜಿ ರಾವ್
ಅ: ರಘುವೀರ್, ಸಿಂಧು, ಟೆನ್ನಿಸ್ ಕೃಷ್ಣ, ಮಂಜು ಮಾಲಿನಿ, ರಾಜಾನಂದ್, ಅಶೋಕ್ ರಾವ್, ಶ್ರೀಲಲಿತಾ, ಶೋಭ ರಾಜ್, ಡಾ|ವಿಜಯ್ ಕುಮಾರ್
ಕ/ಚಿ.ಕ: ಎಸ್.ಮಹೇಂದರ್
ಮಾ: ಉಪೇಂದ್ರ, ಎಸ್.ಮಹೇಂದರ್
ಗೀ: ಹಂಸಲೇಖ
ಗಾ: ಎಸ್.ಪಿ. ಬಾಲಸುಬ್ರಹ್ಮಣ್ಯಂ, ಚಿತ್ರಾ, ಲತಾ ಹಂಸಲೇಖ
ಸಂ: ಶ್ಯಾಂ ಯಾದವ್
ಛಾ: ಸುರೇಶ್ ಕಲ್ಯಾಣ
ಸ: ಹಂಸಲೇಖ
ಸಾ: ಥ್ರಿಲ್ಲರ್ ಮಂಜು
ಸ್ಟು: ಚಾಮುಂಡೇಶ್ವರಿ, ಪ್ರಸಾದ್, ಸಂಕೇತ್

ಹಾ: ೧) 'ಕನ್ನಡ ಗಂಗೆಯಲಿ ಮೀಯುವೆ...', ೨) 'ಓ ಮೇಘವೇ ಮೇಘವೇ ಹೋಗಿ ಬಾ...', ೩) 'ಜೀವನವೆಲ್ಲವೂ ನಾ ಹಾಡುವೆ...', ೪) 'ಯಾರೂ ನೋಡರು ಯಾರೂ ಕೇಳರು...', ೫) 'ಹೊಸ ಗಾಳಿ ಹೊಸ ಗಂಧ...', ೬) 'ಶೃಂಗಾರ ಕಾವ್ಯ ಬರೆದನು...',
ಸೆ: ರೀಲು-೧೫, ಉದ್ದ ೪೫೬೦.೦೦
ಕ.ಸಾ: ಹಿರಿಯರ ವಿರೋಧವನ್ನೆದುರಿಸಿ ಯುವಕ ಯುವತಿ ಪ್ರೇಮಿಸಿ ಮದುವೆಯಾಗುತ್ತಾರೆ. ಯುವತಿ ಕ್ಯಾನ್ಸರ್ ಪೀಡಿತೆ ಎಂದು ತಿಳಿದಾಗ ಹಿರಿಯರು ವಿರೋಧವನ್ನು ಮರೆತು, ಅವರಿಬ್ಬರನ್ನೂ ಮನ್ನಿಸುತ್ತಾರೆ. ಆದರಿಸುತ್ತಾರ. ಅಂತ್ಯದಲ್ಲಿ ಯುವತಿ ಸಾವನ್ನಪ್ಪುತ್ತಾಳೆ.

೧೫೧೯. ಸರ್ಕಾರಕ್ಕೆ ಸವಾಲ್

(೧೯೯೩ / ವರ್ಣ / ಸಾಮಾಜಿಕ)
ಲಾ:/ಪ್ರೊ: ಜ್ಯೂಪಿಟರ್ ಪಿಕ್ಚರ್ಸ್
ನಿ: ವಿ.ಸೋಮಶೇಖರ್
ಸ.ನಿ: ಓಂಪ್ರಕಾಶ್, ಸೋಮರಾಜ್
ಅ: ಶಶಿ ಕುಮಾರ್, ಶ್ರುತಿ, ತಾರಾ. ಸರಿಗಮ ವಿಜಿ, ಸಿಹಿಕಹಿ ಚಂದ್ರು, ಉಮೇಶ್, ಶ್ರೀನಿವಾಸ ಮೂರ್ತಿ, ಶ್ರೀಶೈಲನ್, ಜೈಜಗದೀಶ್, ಶ್ರೀರಕ್ಷ, ಜಾಕಿ ಶಿವು, ಡಿಂಗ್ರಿ ನಾಗರಾಜ್, ಡಿಸ್ಕೋ ಶಾಂತಿ, ಪದ್ಮಾ ಕುಮಟ, ಮಾನು, ಬಿ.ಕೆ.ಶಂಕರ್
ಕ: ಇಳವರಸನ್
ಚಿ.ಕ: ವಿ.ಸೋಮಶೇಖರ್
ಮಾ: ಕುಣಿಗಲ್ ವಸಂತ್
ಗೀ: ಹಂಸಲೇಖ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ, ಮಂಜುಳಾ ಗುರುರಾಜ್
ಸಂ: ವಿಕ್ಟರ್ ಯಾದವ್
ಛಾ: ಮಲ್ಲಿಕಾರ್ಜುನ
ಕಲೆ: ಇಸ್ಮಾಯಿಲ್
ಸ: ಹಂಸಲೇಖ
ಧ್ವ: (ಹಾ) ಆರ್.ಕಣ್ಣನ್, (ಮಾ) ವಿ. ಅರವಮುದನ್
ನೃ: ಸತೀಶ್
ಸಾ: ಥ್ರಿಲ್ಲರ್ ಮಂಜು
ವ: ಸತ್ಯಂ
ಪ್ರ: ರಾಜಗೋಪಾಲ್
ಹಾ: ೧) 'ನಾನೆ ಚೆಲುವ ಕಣೆ...',
ಕ.ಸಾ: ಪೊಲೀಸ್ ಅಧಿಕಾರಿಯಾದ ಚೆಲುವೆ. ಊರಗೌಡನ ದುಷ್ಟಮಗ ಅವಳ ಬಾಳನ್ನು ಹಾಳು ಮಾಡಿದ. ಆ ದುಷ್ಟನನ್ನು ಹಾಗೂ ಅವನ ಸಹಚರರನ್ನು ಸದೆ ಬಡಿಯಲು ಯುವಕನೊಬ್ಬ ಬರುತ್ತಾನೆ. ಗೌಡ ನೀತಿವಂತ. ತನ್ನ ಮಗನ ದುರ್ಬುದ್ಧಿಯನ್ನು ಕಂಡ ಗೌಡ, ತನ್ನ ಮಗನೆಂಬುದನ್ನೂ ಲಕ್ಷಿಸದೆ ತಾನೇ ಅವನನ್ನು ಶಿಕ್ಷಿಸುತ್ತಾನೆ.

೧೫೨೦. ಭವ್ಯ ಭಾರತ

(೧೯೯೩ / ವರ್ಣ / ಸಾಮಾಜಿಕ)
ಲಾ: ಅದಿತಿ ಪ್ರೊಡಕ್ಷನ್ಸ್
ಪ್ರೊ: ಶಿವರಾಮ ಗಂಗಾಟ್ಕರ್
ನಿ: ಎ. ಮಹಮ್ಮದ್ ಗೌಸ್
ಸ.ನಿ: ದಾಮೋದರ್, ಶಿವಾನಂದ, ವಿಜಯಕುಮಾರ್
ಅ: ಪ್ರಭಾಕರ್, ವಿನಯಾ ಪ್ರಸಾದ್, ತಾರಾ, ಅಂಜಲಿ, ಸಿದ್ಧಾರ್ಥ, ಕಲಾ, ಅಶೋಕ್ ರಾವ್, ಲೋಹಿತಾಶ್ವ, ಟೆನ್ನಿಸ್ ಕೃಷ್ಣ, ಸದಾಶಿವ ಬ್ರಹ್ಮಾವರ್, ಅವಿನಾಶ್, ನಾಗೇಶ್ ಮಯ್ಯ, ಮಹಾವೀರ್, ಮಾರುತಿ, ನಾಗರತ್ನ, ಈಶ್ವರಿ
ಕ: ಶಿವರಾಮ ಗಂಗಾಟ್ಕರ್
ಚಿ.ಕ/ಮಾ: ಎ.ಮಹಮ್ಮದ್ ಗೌಸ್
ಗೀ: ಹಂಸಲೇಖ, ವಿ.ಮನೋಹರ್, ಡಾ|ಸಿದ್ದಲಿಂಗಯ್ಯ
ಗಾ: ಮಂಜುಳಾ ಗುರುರಾಜ್, ಬಿ. ಆರ್.ಛಾಯಾ, ಎಲ್. ಎನ್.ಶಾಸ್ತ್ರಿ, ಟೆನ್ನಿಸ್ ಕೃಷ್ಣ
ಸಂ: ಕೆ.ಬಾಲು
ಛಾ: ಮಲ್ಲಿಕಾರ್ಜುನ್
ಸ: ವಿ.ಮನೋಹರ್
ಧ್ವ: (ಹಾ) ಅಣ್ಣಾದೊರೈ (ಮಾ) ಕೃಷ್ಣಮೂರ್ತಿ
ನೃ: ಸತೀಶ್
ಸಾ: ಸ್ವಾಮಿ
ವ: ಜಯಚಂದ್ರನ್
ಪ್ರ: ಶ್ರೀನಿವಾಸ್
ಹಾ: ೧) 'ಮುಂಜಾನೆ ಬಿಸಿಲಿನಲ್ಲಿ...', ೨) 'ಬಂಗಾರ ಕಿರಣವು ನೀ...', ೩) 'ನಡು ಹಗಲಿನ...', ೪) 'ಚಳಿ ಚಳಿ ಚಳಿಯೇ...',
ಕ.ಸಾ: ಗಾಂಧೀಜಿ ಕಂಡ ಸ್ವರಾಜ್ಯ - ಸರ್ವೋದಯ ಸಾಮ್ರಾಜ್ಯದ ಪರಿಕಲ್ಪನೆಯೇ ಇಲ್ಲದ ನವಭಾರತ. ಅದನ್ನು ತಮ್ಮ ಕಪಿಮುಷ್ಟಿಯಲ್ಲಿಟ್ಟುಕೊಂಡು ಸ್ವೇಚ್ಛಾಚಾರದಿಂದ ಆಳುತ್ತಿರುವ ದುಷ್ಟರ ಗುಂಪು. ಈ ದುರಾಡಳಿತದಿಂದ ನೊಂದು ಸಿಡಿದು ನಿಂತವನೊಬ್ಬ. ಅವನೊಂದಿಗೆ ಭವ್ಯಭಾರತದ ಕನಸು ಕಾಣುವ ಶಿಕ್ಷಕಿ. ಸ್ವತಃ ದುಷ್ಟವ್ಯಕ್ತಿಯ ಮಗನೂ ತಂದೆಗೆ ಎದುರಾಗಿ ಇವರೊಂದಿಗೆ ಸೇರಿದ. ಇವರು ದುಷ್ಟರ ದಮನ ಮಾಡಲು ಹಲವು ಪ್ರಯತ್ನಗಳನ್ನು ನಡೆಸಿ, ದುರಾಡಳಿತವನ್ನು ಕೊನೆಗೊಳಿಸಿ ಭವ್ಯಭಾರತವನ್ನು ಕಟ್ಟುವ ಕನಸನ್ನು ನನಸಾಗಿಸಿಕೊಳ್ಳಲು ಪ್ರಯತ್ನಿಸುವುದೇ ಕಥಾವಸ್ತು.

೧೫೨೧. ಖೈದಿ ನಂ ೪೦೬

(೧೯೯೩ / ವರ್ಣ / ಸಾಮಾಜಿಕ)
ಲಾ: ಶ್ರೀ ಅನ್ನಪೂರ್ಣೇಶ್ವರಿ ಪಿಕ್ಚರ್ಸ್
ಪ್ರೊ/ನಿ: ವೈ.ಕೃಷ್ಣಂರಾಜು
ಸ.ನಿ: ಹ.ಸೂ.ರಾಜಶೇಖರ್
ಅ: ವೈ.ಕೃಷ್ಣಂರಾಜು. ತಾರಾ, ರವಿಕಿರಣ್, ಶ್ವೇತಾ, ದಿನೇಶ್, ಮುಖ್ಯಮಂತ್ರಿ ಚಂದ್ರು, ಕಮಿಸಿಧರನ್.ವಿಶ್ವವಿಜೇತ, ಡಿಸ್ಕೋ ಶಾಂತಿ, ಅಪರ್ಣ, ಉಮೇಶ್, ಶಿವಪ್ರಕಾಶ್.ಬಿ.ಎಸ್.ರುದ್ರಪ್ಪ, ಮಾ|ಕೇಶವ ಮೂರ್ತಿ, ಮಾ|ಪ್ರಸಾದ್, ಮಾ|ಪ್ರಕಾಶ್,



ಮಾ|ವೆಂಕಟರಾಜು, ಬೇಬಿ ಮಹಾಲಕ್ಷ್ಮಿ, ಬೇಬಿ ಅನಿತಾ
ಕ/ಚಿ.ಕ/ಮಾ: ವೈ.ಕೃಷ್ಣಂರಾಜು
ಗೀ: ವಿಜಯನಾರಸಿಂಹ
ಗಾ: ಉಷಾ ಗಣೇಶ್. ಮೈಸೂರು ಜ್ಯೋತಿ, ಗೀತಾ, ವಿಷ್ಣು ಮಂಜುಳಾ
ಸಂ: ಸುರೇಶ್ ಅರಸ್,
ಛಾ: ವಿ.ಸಿ.ಗಣೇಶ್
ಸ: ಎಂ.ರಂಗ ರಾವ್
ನೃ: ಉಡುಪಿ ಜಯರಾಂ
ಸಾ: ರುದ್ರೇಶ್
ವ: ಆರ್.ಈಶ್ವರ್
ಪ್ರ: ಸುಂದರ್
ಹಾ: ೧) 'ಮಕ್ಕಳೇ ಚಿನ್ನದಂಥ ಮಕ್ಕಳೆ...', ೨) 'ಇದು ನಮ್ಮ ಬಾಳಿನ ಸುದಿನ...', ೩) 'ಗುಡ್ ಮಾರ್ನಿಂಗ್ ಗುಡ್ ನೈಟ್...', ೪) 'ಖೈದಿ ನಂಬರ್ ನಾನೂರ ಆರು...',
ಕ.ಸಾ: ತಂಗಿಯನ್ನು ಪ್ರಾಣಕ್ಕಿಂತ ಮಿಗಿಲಾಗಿ ಪ್ರೀತಿಸುವ ಅಣ್ಣ. ತಂಗಿಯ ಅನಿರೀಕ್ಷಿತ ಸಾವು ಅಣ್ಣನನ್ನು ಕಂಗೆಡಿಸಿತು. ತಂಗಿಯದು ಸಹಜವಾದ ಸಾವಲ್ಲ, ಕೊಲೆ ಎಂದರಿತಾಗ ತಂಗಿಯ ಸಾವಿಗೆ ಕಾರಣರಾದವರನ್ನು ಕಂಡು ಹಿಡಿದು ಶಿಕ್ಷಿಸುತ್ತಾನೆ. ಇದರಿಂದಾಗಿ ಅಣ್ಣ ಜೈಲು ಸೇರಬೇಕಾಗುತ್ತದೆ. ಸೆರೆಮನೆಯಲ್ಲಿನ ಅವನ ಸನ್ನಡತೆ ಸದ್ಗುಣಗಳೇ ಅವನ ಬಿಡುಗಡೆಗೂ ಕಾರಣವಾಗುತ್ತದೆ. ೪೦೬ನೇ ನಂಬರ್ ಖೈದಿಯ ಕಥೆ.

೧೫೨೨. ಅಣ್ಣಯ್ಯ

(೧೯೯೩ / ವರ್ಣ / ಸಾಮಾಜಿಕ)
ಲಾ: ಶ್ರೀ ನಿಮಿಷಾಂಬ ಪ್ರೊಡಕ್ಷನ್
ಪ್ರೊ: ಎಂ .ಚಂದ್ರಶೇಖರ್
ನಿ: ಡಿ.ರಾಜೇಂದ್ರ ಬಾಬು
ಅ: ರವಿಚಂದ್ರನ್, ಶ್ರೀನಾಥ್, ಸರ್ವಮಂಗಳಾ, ಅರುಣಾ ಇರಾನಿ, ಧೀರೇಂದ್ರ ಗೋಪಾಲ್, ಮಧು.
ಕ: ಕೆ.ಭಾಗ್ಯರಾಜ್. ತಮಿಳು ಚಿತ್ರದ ಕನ್ನಡ ರೂಪಾಂತರ
ಚಿ.ಕ: ಡಿ.ರಾಜೇಂದ್ರ ಬಾಬು
ಮಾ: ಚಿ.ಉದಯಶಂಕರ್
ಗೀ: ಹಂಸಲೇಖ
ಗಾ: ಎಸ್.ಜಾನಕಿ, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ
ಸಂ: ಕೆ.ಬಾಲು
ಛಾ: ಜಿ.ಎಸ್.ವಿ.ಸೀತಾರಾಂ
ಕಲೆ: ನಜೀರ್, ವೇಣು
ಸ: ಹಂಸಲೇಖ
ನೃ: ಎಂ.ಸುಂದರಂ
ಸಾ: ಸುರೇಶ್
ಹಾ: ೧) 'ಅಣ್ಣಯ್ಯ ಅಣ್ಣಯ್ಯ ಬಾರೋ...', ೨) 'ಬೊಂಬೆ ಬೊಂಬೆ...', ೩) 'ಕಮಾನ್ ಡಾರ್ಲಿಂಗ್...', ೪) 'ರಾಗಿ ಹೊಲದಾಗೆ...', ೫) 'ಅಮ್ಮಯ್ಯ ಅಮ್ಮಯ್ಯ...', ೬) 'ಆ ಹಾಗೆ ಪ್ರೇಮಿಯೋ ...'
ಸೆ: ರೀಲು-೧೫, 'ಯು' ಸರ್ಟಿಫಿಕೇಟ್, ಉದ್ದ-೩೮೯೧
ಕ.ಸಾ: ಹೆಂಡತಿಯನ್ನು ಕಳೆದುಕೊಂಡು ವಿಧುರನಾದವ ತನ್ನ ಕಿರಿಯ ಮಗ ಅಣ್ಣಯ್ಯನಿಗಾಗಿ ಮರು ಮದುವೆಯಾಗುತ್ತಾನೆ. ಮನೆಗೆ ತಾಯಿಯ ಸ್ಥಾನಕ್ಕೆ ಬಂದವಳು ಮಗನಿಗೆ ಮಲತಾಯಿಯಾದಳೇ ಹೊರತು ತಾಯಿಯಾಗಲೇ ಇಲ್ಲ. ಮಗನೋ ಮಲತಾಯಿಯನ್ನೇ ತಾಯಿಯಾಗಿ ಕಂಡವ. ಅವಳು ಹಾಕಿದ ಗೆರೆಯನ್ನು ದಾಟದವ. ಮಲತಾಯಿಯೋ ಸದಾ ತನ್ನ ಸ್ವಂತದವರ ಹಿತದ ಬಗ್ಗೆಯೇ ಚಿಂತಿಸುವವಳು. ಅಣ್ಣಯ್ಯನ ಕೈ ಹಿಡಿದು ಬಂದವಳು ಆ ಮಲತಾಯಿ ಹಾಗೂ ಅವಳ ಪರಿವಾರಕ್ಕೆ ಬುದ್ಧಿ ಕಲಿಸಲು ಹೊರಟಾಗ, ಮಲತಾಯಿ ಅಣ್ಣಯ್ಯನಿಗೆ ವಿಷವಿಕ್ಕುತ್ತಾಳೆ. ತಾನು ತಾಯಿಯಾಗಿ ಕಂಡವಳೇ ವಿಷ ನೀಡಿದರೂ ಮರು ಮಾತಾಡದೆ ಅದನ್ನು ಕುಡಿದು ಮಲತಾಯಿಯನ್ನು ಪರಿವರ್ತಿಸುತ್ತಾನೆ, ಅಣ್ಣಯ್ಯ.

೧೫೨೩. ಜನ ಮೆಚ್ಚಿದ ಮಗ

(೧೯೯೩ / ವರ್ಣ / ಸಾಮಾಜಿಕ)
ಲಾ: ಸಾಯಿ ಕ್ರಿಯೇಷನ್ಸ್
ಪ್ರೊ: ಪಿ.ರಮೇಶ್

ನಿ: ಬಿ.ಡಿ.ಶೇಷು
ಅ: ಶ್ರೀಧರ್, ಚಂದ್ರಿಕಾ, ಜಯಂತಿ, ಅಂಜಲಿ, ವಜ್ರಮುನಿ, ಡಿಸ್ಕೋ ಶಾಂತಿ, ನವನೀತಾ, ಪಿ.ರಮೇಶ್
ಕ: ಪಿ.ರಮೇಶ್
ಮಾ: ಶ್ರೀರಂಗ
ಗೀ: ಚಿ.ಉದಯಶಂಕರ್, ಎಂ.ಎನ್.ವ್ಯಾಸರಾವ್, ಶ್ರೀರಂಗ, ಶ್ಯಾಮಸುಂದರ ಕುಲಕರ್ಣಿ
ಸಂ: ಪ್ರಸಾದ್
ಛಾ: ಮನೋಹರ್
ಸ: ಮನೋರಂಜನ್ ಪ್ರಭಾಕರ್
ಧ್ವ: (ಹಾ) ಕೃಷ್ಣಮೂರ್ತಿ (ಮಾ) ಪೀಟರ್
ನೃ: ಸತೀಶ್
ಹಾ: ೧)' ಸಮ್ಮೂರ ಸಂದಿಕೋಲು ಜನಮನ ...', ೨)' ಜುಂ ಜುಂ ಹೊಸನಾದ ...', ೩)' ಸಂಗೀತ ರಂಗಾದ ಶೃಂಗಾರವೇ ...'
ಕ.ಸಾ: ಊರಿನ ಗೌಡ ಕೆಟ್ಟವನು. ಅವನ ಮಡದಿ ಸಾಧ್ವಿ. ಮನೆಯ ನಿಷ್ಠಾವಂತ ಆಳು ಅವಳಿಗೆ ಮಗನಂತಾಗಿದ್ದ. ಅವನು ಪ್ರೀತಿಸಿದ ಹುಡುಗಿ ಅವನಿಗೆ ಸಿಕ್ಕುವುದಿಲ್ಲ. ಇನ್ನೊಬ್ಬಳೊಂದಿಗೆ ಅವನ ವಿವಾಹ. ಗೌಡ ಲಂಪಟ-ಅವನ ಮೋಸದ ಬಲೆಗೆ ಆಳಿನ ಹೆಂಡತಿ ಬೀಳುತ್ತಾಳೆ. ಗೌಡ ಮತ್ತು ತನ್ನ ಹೆಂಡತಿ ಒಟ್ಟಿಗಿರುವುದನ್ನು ಕಂಡು ಸಿಟ್ಟಾದ ಆಳು ಅವರಿಬ್ಬರನ್ನೂ ಕೊಲ್ಲುತ್ತಾನೆ. ಆ ಕೊಲೆಗಳನ್ನು ಗೌಡತಿ ಸಮರ್ಥಿಸುತ್ತಾಳೆ. ಆಳು ಮಗನ ಪರವಾಗಿ ನಿಲ್ಲುತ್ತಾಳೆ. ಸೆರೆವಾಸದ ಶಿಕ್ಷೆ ಅನುಭವಿಸಿ ಬಂದ ಅವನನ್ನೇ ಗೌಡನನ್ನಾಗಿ ಮಾಡುತ್ತಾಳೆ.

೧೫೨೪. ವೈಶಾಖದ ದಿನಗಳು

ಸೆ: ಉದ-೩೨೪೩.೦೮, ರೀಲು-೧೪, ೩೦-೧೧-೯೪
ಕ.ಸಾ: ಸಮಾಜದಲ್ಲಿ ಸಚ್ಚಾರಿತ್ರ್ಯದ ಮುಖವಾಡ ಹೊತ್ತವರಲ್ಲೇ ಗೋಮುಖ ವ್ಯಾಘ್ರಗಳೂ ಇದ್ದಾರೆ ಎಂಬುದನ್ನು ಸಾಬೀತುಮಾಡಲು ಒಂದು ಪತ್ರಿಕೆಯವರು ವೇಶ್ಯಾವಾಟಿಕೆಯಿಂದ ಬಂದ ಕುರೂಪಿಯಂತೆ ನಟಿಸುವ ಹುಡುಗಿಯೊಬ್ಬಳನ್ನು ಕರೆತಂದು ಬಣ್ಣ ಬಯಲು ಮಾಡಿದಾಗ, ಆತ್ಮವಿಮರ್ಶೆ ಮಾಡಿಕೊಂಡ ಜನ ಆ ಹುಡುಗಿಯನ್ನು ಪತ್ರಿಕೆಯ ಮಾಲೀಕನ ಮಗನಿಗೆ ವಿವಾಹ ಮಾಡಿಸಿ ಸಭ್ಯ ಜೀವನಕ್ಕೆ ಅನುವು ಮಾಡಿಕೊಟ್ಟರು.

೧೬೩೭. ಕಾವೇರಿ ತೀರದಲ್ಲಿ

(೧೯೯೪ / ವರ್ಣ / ಸಾಮಾಜಿಕ)
ಲಾ: ಗುರುಮೂರ್ತಿ ಎಂಟರ್‌ಪ್ರೈಸಸ್
ಪ್ರೊ: ನಾಗೇಂದ್ರ, ಕೆ.ಎಂ.ಪದ್ಮನಾಭರಾಜು



ನಿ: ಎಸ್.ನಾರಾಯಣ್
ಸ.ನಿ: ಭವಾನಿ ಶಂಕರ್
ಅ: ರಘುವೀರ್, ಉಷಾ, ಸಂಗೀತಾ, ಕೆ.ಎಸ್.ಅಶ್ವತ್ಥ್, ರಾಜಾನಂದ್, ಅಜಯ್‌ಕುಮಾರ್, ಬಿ.ವಿ.ರಾಧಾ, ಆಕಾಶ್, ಉಮೇಶ್, ಎಸ್.ನಾರಾಯಣ್, ಡಾಲಿ
ಗೀ: ಎಸ್.ನಾರಾಯಣ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ, ಮಂಜುಳಾ ಗುರುರಾಜ್, ಶೈಲಾ ಕೃಷ್ಣಮೂರ್ತಿ, ರಾಜೇಶ್
ಸಂ: ಸೌಂದರರಾಜ್
ಛಾ: ಪಿ.ಕೆ.ಹೆಚ್.ದಾಸ್
ಸ: ವಿಜಯಾನಂದ್
ಧ್ವ: ಚಾಮುಂಡೇಶ್ವರಿ, ಸಂಕೇತ್
ನೃ: ಸಂಪತ್
ಸಾ: ಕೌರವ ವೆಂಕಟೇಶ್
ಸ್ಟು: ಪ್ರೀಮಿಯರ್
ಹಾ: ೧) 'ಕಾವೇರಿ ತೀರದಲೀ ಸಂಕ್ರಾಂತಿ ಸಂಜೆಯಲೀ...', ೨) 'ಓಹೋ ಚೈತ್ರದ ಕೋಗಿಲೆಯೇ...', ೩) 'ಕುಣಿದಾಡಿವೆ ಹಕ್ಕಿಗಳು...'. ೪)'ಆಗುಂಬೆಯಾ ಕೊಂಡೆಯ ನಿಂಜೆ...',
ಸೆ: ಉದ ೩೬೧೯.೦೦, ರೀಲು ೧೪, ೨೫ ೦೩ ೯೪
ಕ.ಸಾ: ಪ್ರೀತಿ-ವಾತ್ಸಲ್ಯಗಳು ತುಂಬಿದ ಕುಟುಂಬ. ನಗರದಲ್ಲಿ ವಿದ್ಯಾಭ್ಯಾಸ ನಡೆಸುತ್ತಿದ್ದ ಮಗ ಪಟ್ಟಣದ ಚೆಲುವೆಯೊಬ್ಬಳನ್ನು ಪ್ರೀತಿಸಿದ. ಅವಳನ್ನೇ ಮದುವೆಯಾಗಲು ನಿರ್ಧರಿಸಿ ತಂದೆ-ತಾಯಿಗಳ ಒಪ್ಪಿಗೆ ಪಡೆಯಲು ಬಂದಾಗ, ತಂದೆಯ ಸ್ನೇಹಿತನ ಮಗಳಿಗೆ ತಂದೆ ನೀಡಿದ ಮಾತನ್ನು ಉಳಿಸಲು ಈ ಹುಡುಗಿಯನ್ನು ಒಲ್ಲದ ಮನಸ್ಸಿನಿಂದ ಮದುವೆಯಾಗಬೇಕಾಗುತ್ತದೆ. ಮದುವೆಯಾದ ಮೇಲೂ ಆತ ತನ್ನ ಪ್ರೇಯಸಿಯ ನೆನಪಿನಲ್ಲೇ ಕಾಲ ಕಳೆಯುತ್ತಿರುತ್ತಾನೆ. ಇದನ್ನು ಅರಿತ ಪತ್ನಿ ತ್ಯಾಗ ಮಾಡುತ್ತಾಳೆ.

೧೬೩೮. ರಶ್ಮಿ

(೧೯೯೪ / ವರ್ಣ / ಸಾಮಾಜಿಕ)
ಲಾ: ಜಯದುರ್ಗಾ ಕಂಬೈನ್ಸ್
ಪ್ರೊ/ನಿ: ಕೆ.ವಿ.ಜಯರಾಂ

ಅ: ಅಭಿಜಿತ್, ಶ್ರುತಿ, ತಿಮ್ಮಯ್ಯ, ಭಾಗ್ಯಶ್ರೀ, ಪದ್ಮಜಾ, ಶ್ರೀನಾಥ್, ಉಷಾ, ಅಶೋಕ್ ಹೆಗಡೆ, ಗಂಗಾಧರ್, ಸುಮತಿ, ತಿಮ್ಮಯ್ಯ
ಕ: ಕೆ.ವಿ.ರಾಜೇಶ್ವರಿ - ಕೃತಿ
ಚಿ.ಕ: ಕೆ.ವಿ.ಜಯರಾಂ
ಮಾ: ಬಿ.ಎಲ.ಸುರೇಶ್
ಗೀ: ದೊಡ್ಡರಂಗೇ ಗೌಡ, ಮಹದೇವ ಬಣಕಾರ, ಎಂ.ಎನ್. ವ್ಯಾಸರಾವ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಬಿ.ಆರ್.ಛಾಯಾ, ಮಂಜುಳಾ ಗುರುರಾಜ್, ಎಲ್. ಎನ್.ಶಾಸ್ತ್ರಿ, ಚಂದ್ರಿಕಾ ಗುರುರಾಜ್
ಸಂ: ರಂಜಿತಾ ರೆಡ್ಡಿ
ಛಾ: ಶ್ರೀರಂಗಾ
ಸ: ಅಗಸ್ತ್ಯ
ನೃ: ಚಾಮುಂಡೇಶ್ವರಿ
ಸ್ಟು: ಕಂಠೀರವ
ಹಾ: ೧)'ಇಬ್ಬನಿ ತಬ್ಬಿದ ಇಳೆಯಲಿ ರವಿತೇಜ ಕಣ್ಣು ತೆರೆದು...', ೨)' ವಿಧಿ ಆಟವನು ಬಲ್ಲವರಾರು...', ೩)' ನನ್ನದೆಯಾ ತುಡಿತವೇ ನೀನಾಗಿಹೆ...',
ವಿ: ೧೯೯೪-೯೫ರ ರಾಜ್ಯಪ್ರಶಸ್ತಿ: ಅತ್ಯುತ್ತಮ ಹಿನ್ನೆಲೆ ಗಾಯಕಿ: ಬಿ.ಆರ್.ಛಾಯಾ
ಸೆ: ಉದ್ದ-೪೪೧೧.೦೦, ರೀಲು-೧೪, ೧೯ ೦೯ ೯೪
ಕ.ಸಾ: ತ್ಯಾಗವೇ ಬದುಕೆಂದು ತಿಳಿದ ಗುಣವಂತ ಹುಡುಗಿ. ಚಿಕ್ಕಂದಿನಿಂದಲೂ ಮಲತಾಯಿಯ ಹಿಂಸೆಕಾಟಗಳನ್ನು ಅನುಭವಿಸಿ ಬೆಳೆದವಳು. ಅನೇಕ ಕಷ್ಟ ನಷ್ಟಗಳು, ಜವಾಬ್ದಾರಿಗಳು. ಆದರೂ ಅಗತ್ಯವಿರುವವರಿಗೆ ಬಾಲ್ಯದಿಂದಲೂ ನೆರವಾಗುವ ಗುಣ. ಮದುವೆಯಾದ ಪುಂಡಗಂಡನ ಸಾವು. ದುಡಿದು ತಿನ್ನುವ ಸ್ಥಿತಿ. ಬಾಲ್ಯದಲ್ಲಿ ತನ್ನಿಂದ ನೆರವು ಪಡೆದ ತರುಣನೇ ಮೇಲಧಿಕಾರಿಯಾಗಿದ್ದರೂ, ಅವನಲ್ಲಿ ತನ್ನ ವಿಚಾರ ತಿಳಿಸಲಾಗದ ಸಂಕೋಚ. ಹೇಗೋ ಅವಳ ಪರಿಸ್ಥಿತಿಯನ್ನರಿತ

ಆ ತರುಣ, ಅವಳನ್ನು ಮದುವೆಯಾಗಲು ಸಮ್ಮತಿಸುತ್ತಾನೆ. ವಿಧವೆಗೂ ಬಾಳುಂಟು, ತ್ಯಾಗವೇ ಬದುಕು ಎಂದು ಹೇಳುವ ವಿವಿಧ ತಿರುವುಗಳುಳ್ಳ ಸಾಂಸಾರಿಕ ಕಥೆ.

೧೬೩೯. ಅಲೆಗ್ಸಾಂಡರ್

(೧೯೯೪ / ವರ್ಣ / ಸಾಮಾಜಿಕ)
ಲಾ: ಸೂಪರ್ ಸಿಲ್ವರ್ ಸ್ಕ್ರೀನ್
ಪ್ರೊ/ನಿ: ಶ್ರೀನಿವಾಸ ರೆಡ್ಡಿ
ಸ.ನಿ: ಎ.ಎನ್.ಜಯರಾಮಯ್ಯ
ಅ: ಶಶಿಕುಮಾರ್, ಸಿಂಧೂಜಾ, ಮುಖ್ಯಮಂತ್ರಿ ಚಂದ್ರು, ಆಶಾಲತಾ, ಉಮಾಶ್ರೀ, ಕೀರ್ತಿರಾಜ್, ವಿಜಯಕಾಶಿ, ತಾರಾ, ಪದ್ಮಿನಿ
ಕ/ಚಿ.ಕ: ಶ್ರೀನಿವಾಸ ರೆಡ್ಡಿ
ಮಾ: ಕೆ.ನಂಜುಂಡ
ಗೀ: ಆರ್.ಎನ್.ಜಯಗೋಪಾಲ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ, ಮಂಜುಳಾ ಗುರುರಾಜ್
ಸಂ: ಕೆ.ನರಸಯ್ಯ
ಛಾ: ಸುರೇಂದ್ರ ರೆಡ್ಡಿ
ಸ: ವಿಜಯಾನಂದ್
ಧ್ವ: ಚಾಮುಂಡೇಶ್ವರಿ
ನೃ: ಶಿವಶಂಕರ್
ಸಾ: ಥ್ರಿಲ್ಲರ್ ಮಂಜು
ವ: ಎನ್.ಸತ್ಯಮೂರ್ತಿ
ಸ್ಟು: ಕಂಠೀರವ
ಹಾ: ೧)' ಯಾರೂ ಮುಟ್ಟದಂಥ ಚೆಂಗುಲಾಬಿ..', ೨) 'ರೂಪಾಯಿ ಬಿಲ್ಲೆ ಇಗೋ ಇಲ್ಲಿದೆ...', ೩)' ನನ್ನ ಕಣ್ಣ ನೋಟ ಬಲು ಘಾಟು...', ೪)'ಪತಿ ಅಂದ್ರೆ ಪ್ರೀತಿ ಅಂದೇ ...'
ಕ.ಸಾ: ಒಂದೇ ರೂಪದ ಇಬ್ಬರು ವ್ಯಕ್ತಿಗಳು. ಒಬ್ಬ ಪೋಲೀಸ್ - ಇನ್ನೊಬ್ಬ ಭೂಗತ ಜಗತ್ತಿನ ದೊರೆ. ಭೂಗತ ಜಗತ್ತಿನ ದೊರೆಯನ್ನು ಸೆರೆ ಹಿಡಿದೇ ತೀರುವ ಛಲ ಹೊತ್ತು ಬರುತ್ತಾಳೆ ಪೊಲೀಸ್ ಅಧಿಕಾರಿಣಿಯೋರ್ವಳು. ಅವಳಿಗೆ ದುಷ್ಟನ ತದ್ರೂಪಿಯಾದ ಪೋಲೀಸನ ನೆರವು. ಭೂಗತ ದುಷ್ಟ ಒಡ್ಡಿದ ಜಾಲಗಳನ್ನೆಲ್ಲಾ ಭೇದಿಸಿ, ಅವನ ಸಂಚುಗಳನ್ನೆಲ್ಲಾ ವಿಫಲಗೊಳಿಸುತ್ತಾಳೆ ಆ ದಿಟ್ಟ ಪೊಲೀಸ್ ಅಧಿಕಾರಿಣಿ. ಭೂಗತ ದೊರೆ ತನ್ನ ಆಟವ್ಯಾವುದೂ ಆಕೆಯ ಎದುರು ನಡೆಯದಿದ್ದಾಗ, ಅಂತಿಮವಾಗಿ ಕಾನೂನಿಗೆ ತಲೆ ಬಾಗುತ್ತಾನೆ.

೧೬೪೦. ಅಪ್ಪ ನಂಜಪ್ಪ ಮಗ ಗುಂಜಪ್ಪ

ಲಾ: ಗಂಗಟ್ ಕಾರ್ ಕ್ರಿಯೇಷನ್ಸ್
ಪ್ರೊ/ನಿ: ಶಿವರಾಂ ಗಂಗಟ್ಕಾರ್

ಅ: ಟೆನ್ನಿಸ್ ಕೃಷ್ಣ(ದ್ವಿಪಾತ್ರ), ಅಂಜಲಿ, ಅಭಿನಯ, ಆಟೋ ಮಂಜು, ಉಮೇಶ್ ಜಿರಾದಾರ್, ನಾಗೇಶ್ ಮಯ್ಯ, ಹೇಮಾ ರಾಣಿ, ಕಲಾಶ್ರೀ, ಲಲಿತಾ ದಶರಥ ರಾವ್, ರಾಣಿ ಮೇಡಂ
ಕ/ಚಿ.ಕ/ಮಾ: ಶಿವರಾಂ ಗಂಗಟ್ಕಾರ್
ಗೀ: ವಿಜಯನಾರಸಿಂಹ, ಕಲ್ಯಾಣ್, ಶ್ರೀರಂಗ, ಮನೋಹರ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್.ಜಾನಕಿ, ಮಂಜುಳಾ ಗುರುರಾಜ್, ರಾಜೇಶ್, ಟೆನ್ನಿಸ್ ಕೃಷ್ಣ
ಸಂ: ಆರ್.ರಾಜಾನಂದ್ ರೆಡ್ಡಿ
ಛಾ: ಕೆ.ವಾಸುದೇವ್
ಸ: ಬಾಲು-ಶರ್ಮ
ಧ್ವ: ಪ್ರಸಾದ್
ನೃ: ವಿಜಯ್- ರಾಂ
ಸಾ: ನೀಗ್ರೊ ಜಾನಿ
ವ: ಜಯಚಂದ್ರ
ಪ್ರ: ಶ್ರೀನಿವಾಸ್
ಹಾ: ೧)' ದೂರದೂರಕೆ ಏಕೆ ಹೋಗುವೆ...', ೨)'ಅಯ್ಯಯ್ಯೋ ಏನಾಯ್ತೇ ?...', ೩)'ಹೂವೊಂದು ಮುಳ್ಳ ಜೊತೆ ಸೇರಿ...', ೪) ' ಬೀದೀಲಿ ಹೋಗೋ ಮಾರೀಸಾ...', ೫)'ಆ ಮೋಡ ಕರಗಿ ನೀರಾಗಿ...',
ಕ.ಸಾ: ಅಪ್ಪ-ಮಗ. ಇವರ ಸ್ವಭಾವ, ಗುಣ-ಅವಗುಣ. ಇವುಗಳ ಸುತ್ತ ಹೆಣೆಯಲಾದ ಕಥೆ. ಅಲ್ಲಲ್ಲಿ ಹಾಸ್ಯವೂ ಉಂಟು. ಅಪ್ಪ ಚಾಲೂಕಿನವ. ಮಗ ಮುಗ್ಧ. ಅಪ್ಪ - ಮಗನ ನಡುವೆ ಅಭಿಪ್ರಾಯ ಭೇದ - ವಿರಸ - ಅಪ್ಪನ ಕೊಲೆ. ಮಗ ಅಪ್ಪನ ಶವವನ್ನು ಹುದುಗಿಸಿಟ್ಟ. ಅಪ್ಪನ ಕೊಲೆಯ ರಹಸ್ಯ ಬಯಲು ಮಾಡಲು ಪೋಲೀಸ್ ಅಧಿಕಾರಿಣಿಯ ಆಗಮನ. ಮಗನನ್ನು ಪ್ರೀತಿಸುವವಳಂತೆ ನಟಿಸಿದ ಆ ಅಧಿಕಾರಿಣಿ ಜಾಣತನದಿಂದ ರಹಸ್ಯ ಭೇದಿಸುವಳು.

೧೬೪೧. ಜಾಣ

(೧೯೯೪ / ವರ್ಣ / ಸಾಮಾಜಿಕ)
ಲಾ: ಅಮೃತೇಶ್ವರಿ ಚಿತ್ರ
ಪ್ರೊ: ಗಾಯತ್ರಿ ಸಾ.ರಾ.ಗೋವಿಂದು
ನಿ: ಶಿವಮಣಿ



ಅ: ರವಿಚಂದ್ರನ್, ರಾಮಚಂದ್ರ ಪ್ರಸಾದ್, ಶಿವರಾಂ, ಜನಾರ್ದನ್, ಬಿ.ಸಿ.ಪಾಟೀಲ್, ಆನಂದ್ ರಾಜ್, ಕಸ್ತೂರಿ, ಶ್ರುತಿ, ಅಂಜನಾ, ಉಮಾಶ್ರೀ, ಬಿ.ವಿ.ರಾಧ, ಆಶಾಲತಾ, ಕಿಶೋರಿ ಬಲ್ಲಾಳ್, ಶಿವಶಂಕರ್, ಓರಣ್ಣಯ್ಯ, ಡಿಸ್ಕೋ ಶಾಂತಿ
ಕ/ಚಿ.ಕ: ಶಿವಮಣಿ
ಮಾ: ಬಿ.ಸುರೇಶ್
ಗೀ: ಹಂಸಲೇಖ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ, ಲತಾ ಹಂಸಲೇಖ
ಸಂ: ಸುರೇಶ್ ಅರಸ್
ಛಾ: ಆರ್.ಮಧುಸೂದನ್
ಕಲೆ: ನಜೀರ್
ಸ: ಹಂಸಲೇಖ
ಧ್ವ: ಪ್ರಸಾದ್ ರೆಕಾರ್ಡಿಂಗ್
ನೃ: ನಟರಾಜ್
ಸಾ: ಥ್ರಿಲ್ಲರ್ ಮಂಜು, ಸುರೇಶ್
ಹಾ: ೧)'ಒನ್ ಬೈ ಟೂ ಮುತ್ತನು ತಿನ್ನುವ ಬಾರಾ...', ೨)'ಪ್ರೇಮಲೋಕದ ಪಾರಿಜಾತವೇ...', ೩)'ಡಂ ಡಂ ಅಂತಿದೆ ಎದೆಯ ಡಂಗುರ...', ೪) 'ಪ್ರೇಮಾನೇ ನನ್ನ ಪ್ರಾಣ...', ೫)'ಏ ಹುಡುಗಿ ಯಾಕೆ ನನ್ನ ಮೆಚ್ಚಿಕೊಂಡೆ...',
ಸೆ: ಉದ ೪೪೫೪.೦೦, ರೀಲು-೧೬, ೩೧.೦೮.೯೪
ಕ.ಸಾ: ಆವನೊಬ್ಬ ಸಾಹಸಿ. ಚೆಲುವ. ಅವನು ಪ್ರೀತಿಸಿದ್ದು ಮುಖ್ಯಮಂತ್ರಿಯ ಮಗಳನ್ನು. ಉಗ್ರವಾದಿಗಳು ಆಕೆಯನ್ನು ಅಪಹರಿಸುವರು. ತನ್ನ ಬುದ್ಧಿ, ಸಾಹಸ ಉಪಯೋಗಿಸಿ ಶತ್ರುಗಳನ್ನು ಸೆರೆ ಹಿಡಿದು ಪ್ರೀತಿಸಿದವಳನ್ನು ಮದುವೆಯಾಗುತ್ತಾನೆ ಸಾಹಸಿ ಯುವಕ.

೧೬೪೨. ಕಿಲಾಡಿಗಳು

(೧೯೯೪ / ವರ್ಣ / ಸಾಮಾಜಿಕ)
ಲಾ: ಅಕ್ಷಯ ಎಂಟರ್‌ಪ್ರೈಸಸ್
ಪ್ರೊ: ಕೃಷ್ಣಮೂರ್ತಿ
ನಿ: ದ್ವಾರಕೀಶ್
ಅ: ವಿಷ್ಣುವರ್ಧನ್, ದ್ವಾರಕೀಶ್, ಸ್ವರ್ಣ, ಶ್ರೀರಕ್ಷಾ, ಅವಿನಾಶ್, ಸಂಗೀತಾ, ಬಿ.ಸಿ.ಪಾಟೀಲ್, ಸತ್ಯಜಿತ್, ಅಂಜನಾ, ಚಂದ್ರು, ರಮೇಶ್‌ಭಟ್
ಕ/ಚಿ.ಕ/ಮಾ: ದ್ವಾರಕೀಶ್
ಗೀ: ಆರ್.ಎನ್.ಜಯಗೋಪಾಲ್, ಎಂ.ಎನ್.ವ್ಯಾಸರಾವ್, ಶ್ಯಾಮಸುಂದರ ಕುಲಕರ್ಣಿ, ಶ್ರೀರಂಗ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ, ಮಂಜುಳಾ ಗುರುರಾಜ್, ಜಯಚಂದ್ರನ್, ಮನು
ಸಂ: ಸುರೇಶ್ ಅರಸ್
ಛಾ: ಡಿ.ವಿ.ರಾಜಾರಾಂ
ಕಲೆ: ವೇಣು
ಸ: ರಾಜ್-ಕೋಟಿ
ಧ್ವ: ಚಾಮುಂಡೇಶ್ವರಿ
ನೃ: ಸತೀಶ್-ಜಾನ್ ಬಾಬು
ಸಾ: ನಂಜುಂಡಿ ನಾಗರಾಜ್
ವ: ರಾಮನಾಥ್
ಪ್ರ: ರಾಮಮೂರ್ತಿ
ಹಾ: ೧)'ಸಾರಾಯಿ ತಂದ ಕಿಕ್ಕು ಬುದ್ಧಿಗೆ ಟಾನಿಕ್...', ೨)' ಕರುನಾಡ ಕುವರ ಕಣೇ...', ೩)' ಕಾಲ ಮತ್ತೊಮ್ಮೆ ನಮಗಾಗಿ ಬಂತು...',೪)'ಅಳುಕದೆ ಬಳುಕದೆ ಬನ್ನಿ ಮೇಡಂ...', ೫)' ಈ ಆಟ ಕುಣಿದಾಟ ಇದು ರಂಜಿಸೋ...'
ಸೆ: ಉದ-೪೫೯೯.೦೦, ರೀಲು-೧೫, ೦೭-೧೦-೯೪
ಕ.ಸಾ: ಕಿಟ್ಟುಪುಟ್ಟು ಸ್ನೇಹಿತರು. ಅವರ ಹಾಗೇ ಇರುವ ಇನ್ನಿಬ್ಬರು ಹರಿ-ಕೃಷ್ಣ. ಇವರೂ ಅವರಹಾಗೆ ಸಾಹಸಿಗರು. ಈ ಜೋಡಿಗಳು ಪರಸ್ಪರ ಒಬ್ಬರ ಕಷ್ಟಕ್ಕೆ ಮತ್ತೊಬ್ಬರು ಬದಲಿಯಾಗಿ ಬಂದು ಪರಿಹರಿಸುತ್ತಾರೆ. ತಮ್ಮ ಹೆತ್ತ ತಾಯಿಯನ್ನು ಕಂಡುಕೊಳ್ಳುತ್ತಾರೆ. ತಮ್ಮ ಬದುಕನ್ನು ಶ್ರೀಮಂತವಾಗಿಸಿಕೊಳ್ಳುತ್ತಾರೆ. ಸನ್ನಿವೇಶಿಕ ಹಾಸ್ಯದ ಮೂಲಕ ಅವಳಿ ಜವಳಿಗಳ ಬದುಕಿನ ವಿವರಗಳನ್ನು ಹೇಳಲಾಗಿದೆ.

೧೬೪೩. ಭೈರವ

(೧೯೯೪ / ವರ್ಣ / ಸಾಮಾಜಿಕ)
ಲಾ: ಶ್ರೀ ಲಕ್ಷ್ಮಿ ಫಿಲಂಸ್
ಪ್ರೊ: ಎನ್.ಕುಮಾರ್
ನಿ: ರಾಜಕಿಶೋರ್
ಸ.ನಿ: ರಮೇಶ್ ರಾಜ್, ಅನಂತಮೂರ್ತಿ
ಅ: ಜಗ್ಗೇಶ್, ನಂದಿನಿಸಿಂಗ್, ವಜ್ರಮುನಿ, ಹೊನ್ನವಳ್ಳಿ ಕೃಷ್ಣ, ದೊಡ್ಡಣ್ಣ, ಭಾವನಾ, ಪ್ರಮೀಳಾ ಜೋಷಾಯ್

ಕ/ಚಿ.ಕ: ರಾಜ್‌ಕಿಶೋರ್
ಮಾ: ಕುಣಿಗಲ್ ನಾಗಭೂಷಣ್
ಗೀ: ಶ್ರೀರಂಗ
ಸಂ: ಎಸ್.ಪ್ರಸಾದ್
ಛಾ: ರಮೇಶ್ ಬಾಬು
ಸ: ಎಂ.ಎಂ.ಕೀರವಾಣಿ
ನೃ: ತಾರಾ-ಪ್ರಸಾದ್
ಸಾ: ಕೆ.ಡಿ.ವೆಂಕಟೇಶ್
ಕ.ಸಾ: ಭೈರವ - ಹಳ್ಳಿಯ ಮುಗ್ಧ ತರುಣ. ಅವನ ಬಾವ ಮಹಾ ದುಷ್ಟ. ಬಾವನ ದುಷ್ಕೃತ್ಯಗಳನ್ನು ಬಯಲಿಗೆಳೆಯಲು ಹೊರಟ ಭೈರವ ಬಾವನಿಗೆ ಎದುರಾಗಿ ನಿಲ್ಲಬೇಕಾಗುತ್ತದೆ. ಅವನ ಮುಗ್ಧತೆಗೆ ಮರುಳಾದ ವೈದ್ಯೆಯೊಬ್ಬಳು ಅವನನ್ನು ಪ್ರೇಮಿಸುವಳು. ಭೈರವನನ್ನು ಬುದ್ಧಿವಂತನನ್ನಾಗಿಸುವಳು. ಭೈರವ ಬುದ್ಧಿವಂತನಾಗಿ, ದುಷ್ಟರನ್ನು ನಿರ್ಮೂಲ ಮಾಡಿ, ಹಳ್ಳಿಯ ಜನರ ಕಷ್ಟಗಳಿಗೆ ಆಸರೆಯಾಗಿ ನಿಲ್ಲುವನು.

೧೬೪೪. ಭೂತಾಯಿ ಮಕ್ಕಳು

(೧೯೯೪ / ವರ್ಣ / ಸಾಮಾಜಿಕ)
ಲಾ: ವಿಜಯಶ್ರೀ ಪ್ರೊಡಕ್ಷನ್ಸ್
ಪ್ರೊ/ನಿ: ಸಿವಲಿಂಗಯ್ಯ
ಸ.ನಿ: ಗುರುರಾಜು, ಜಿ.ಬಿ.ರಾಜಶೇಖರ್

ಅ: ಶಶಿಕುಮಾರ್, ಅಭಿಜಿತ್, ಅನಂತವೇಲು, ನಾಗೇಶ್ ಕಶ್ಯಪ್, ಕರಿಬಸವಯ್ಯ, ರಾಜಾರಾಂ, ರವಿಶಂಕರ್, ಅರವಿಂದ, ಮಾಧುರಿ, ಧನುಜಾ, ಗಿರಿಜಾ ಲೋಕೇಶ್, ಕೆ.ಎನ್.ಭಾರತಿ, ಶಿಲ್ಪಶ್ರೀ
ಕ/ಚಿ.ಕ: ಸಿವಲಿಂಗಯ್ಯ
ಮಾ: ಬಿ.ಎ.ಮಧು
ಗೀ: ಸು.ರುದ್ರಮೂರ್ತಿ ಶಾಸ್ತ್ರೀ, ಶ್ರೀರಂಗ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಮಂಜುಳಾ ಗುರುರಾಜ್, ಸಂಗೀತಾ ಕಟ್ಟಿ, ರಾಜೇಶ್
ಸಂ: ಶ್ಯಾಂ ಯಾದವ್
ಛಾ: ಬಿ.ಎಸ್.ಬಸವರಾಜ್
ಸ: ರಾಜನ್ ನಾಗೇಂದ್ರ
ಧ್ವ: ಮೆನನ್ -ಕೋದಂಡಪಾಣಿ
ನೃ: ಟಿ.ಎಸ್.ಕಲಾಸ್
ಸಾ: ಥ್ರಿಲ್ಲರ್ ಮಂಜು
ವ: ಪ್ರಭುರಾಜ್
ಪ್ರ: ಮಂಜುನಾಥ್
ಸ್ಥು: ಚಾಮುಂಡೇಶ್ವರಿ
ಹಾ: ೧) 'ಹೆಪ್ಪೆ ಮೇಲೆ ಹೆಜ್ಜೆ ಇಟ್ಟು ಯಾಕ ಬರ್‍ತಿಯಾ...', ೨) 'ಬೋಲೋ ಪ್ರಸದ ಮಂಚ ಕೇಜ...', ೩) 'ಏನ್ ಹೇಳಲೋ ಈ ರಾಮರಸದ ಮಹಿಮೆ...', ೪) 'ಎಲ್ಲರಂಗೆ ನಾವು ಭೂತಾಯಿ ಮಕ್ಕಳು...'
ಸೆ: ಯುಎ-೪೦೮೪.೦೦, ರೀಲು-೧೫, ೨೩.೦೯-೯೪

ಕ.ಸಾ: ಊರ ಗೌಡನೊಬ್ಬ ನೀಚ. ಅವನ ಹಿಂಬಾಲಕರು ಸಜ್ಜನರಿಗೆ ಬದುಕಲು ಬಿಡದೆ, ಹೆಣ್ಣುಮಕ್ಕಳ ಶೀಲಹರಣ ಮಾಡುತ್ತಾ, ಸ್ನೇಹಿತರ ಮಧ್ಯೆ ಬಿರುಕು ಹುಟ್ಟಿಸಿ ಅನ್ಯಾಯ-ಅತ್ಯಾಚಾರ-ಅನಾಚಾರಗಳು ಪರಾಕಷ್ಠೆಗೆ ಹೋದಾಗ ಶೋಷಿತರೆಲ್ಲ ಒಂದಾಗಿ ಸದೆ ಬಡಿದು ಗ್ರಾಮದಲ್ಲಿ ನೆಮ್ಮದಿ ತರುವ ಕಥೆ.

೧೬೪೫. ಕರ್ಫ್ಯೂ

(೧೯೯೪ / ವರ್ಣ / ಸಾಮಾಜಿಕ)
ಲಾ: ಸಾಯಿ ಜ್ಯೋತಿ ಕ್ರಿಯೇಷನ್ಸ್
ಪ್ರೊ: ಬಿ.ಕೆ.ರಾಮಕೃಷ್ಣ, ಎನ್.ಸಿ.ಚಿನ್ನರಾಜನ್
ನಿ: ಹೆಚ್.ಎಸ್.ರಾಜಶೇಖರ್
ಸ.ನಿ: ವೆಂಕಟೇಶ್

ಅ: ದೇವರಾಜ್, ಸುಧಾರಾಣಿ, ಬಿ.ಸಿ.ಪಾಟೀಲ್, ದೊಡ್ಡಣ್ಣ, ರಿಚರ್ಡ್ ಲೂಯಿಸ್, ದತ್ತಾತ್ರೇಯ, ಜಿ.ಕೆ.ಗೋವಿಂದರಾವ್, ಕಾಶಿ, ವೆಂಕಿ, ವಾಣಿಶ್ರೀ, ಶಾಂತಮ್ಮ
ಕ: ಎಲ್. ಆರ್. ರಂಗನಾಥರಾವ್
ಚಿ.ಕ: ಹೆಚ್.ಎಸ್.ರಾಜಶೇಖರ್
ಮಾ: ರಿಚರ್ಡ್ ಲೂಯಿಸ್
ಸಂ: ಸುರೇಶ್ ಅರಸ್
ಛಾ: ಅಶೋಕ್ ಕಶ್ಯಪ್
ಕಲೆ: ರಮೇಶ್ ಬಾಬು
ಸ: ಸಾಧು ಕೋಕಿಲ
ಧ್ವ: ಅರುವಮುದನ್, ಕಣ್ಣನ್
ಸಾ: ಸುರೇಶ್
ವ: ಗಂಡಸಿ ನಾಗರಾಜ್
ಪ್ರ: ಮೈಸೂರು ವೆಂಕಟೇಶ್
ಸ್ಥು: ಪ್ರಸಾದ್
ವಿ: ೧೯೯೪ - ೯೫ರ ರಾಜ್ಯಪ್ರಶಸ್ತಿ: ಅತ್ಯುತ್ತಮ ಚಿತ್ರಕಥೆ: ಹ.ಸೂ.ರಾಜಶೇಖರ್. ಈ ಚಿತ್ರದಿಂದ ಹ.ಸೂ. ರಾಜಶೇಖರ್ ಸ್ವತಂತ್ರ ನಿರ್ದೇಶಕರಾದರು.
ಸೆ: ರೀಲು-೧೪
ಕ.ಸಾ: ಕರ್ಫ್ಯೂ ಬಗ್ಗೆ ತಿಳುವಳಿಕೆ ನೀಡುವ, ಆ ವೇಳೆಯಲ್ಲಿ ನಡೆಯುವ ವಿದ್ಯಮಾನಗಳ ಬಗ್ಗೆ ವಿವರ ನೀಡುವ ಚಿತ್ರಕಥೆ.

೧೬೪೬. ಪ್ರಜಾಶಕ್ತಿ

(೧೯೯೪ / ವರ್ಣ / ಸಾಮಾಜಿಕ)
ಲಾ: ಚಿತ್ರಾ ಕಂಬೈನ್ಸ್
ಪ್ರೊ: ಚಿದಂಬರ ಶೆಟ್ಟಿ, ಚಿತ್ರಾ
ನಿ: ಡಿ.ರಾಜೇಂದ್ರ ಬಾಬು
ಸ.ನಿ: ಕೆ.ಎನ್.ವೈದ್ಯನಾಥ್
ಅ: ಶಶಿಕುಮಾರ್, ರಾಮಕೃಷ್ಣ ಹೆಗಡೆ, ಶ್ರೀಶಾಂತಿ, ಶ್ರೀನಿವಾಸ ಮೂರ್ತಿ, ತಾರಾ, ವಿನಯಾ ಪ್ರಸಾದ್, ದೊಡ್ಡಣ್ಣ, ಅಶೋಕ್, ಬೂದಾಳ್ ಕೃಷ್ಣಮೂರ್ತಿ, ರಿಚರ್ಡ್ ಲೂಯಿಸ್, ಸತ್ಯಜಿತ್, ಲಕ್ಷ್ಮಣ್
ಚಿ.ಕ/ಮಾ: ಡಿ.ರಾಜೇಂದ್ರ ಬಾಬು
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ, ಮಂಜುಳಾ ಗುರುರಾಜ್, ರಾಜೇಶ್
ಸಂ: ಬಾಲು
ಛಾ: ಅಶೋಕ್ ಕಶ್ಯಪ್
ಕಲೆ: ಬಾಲು
ಸ: ಜೈ - ಶೇಖರ್
ಧ್ವ: ಮೆನನ್, ಕೋದಂಡಪಾಣಿ
ನೃ: ಸಲಿಂ, ಶಿವಶಂಕರ್
ಸಾ: ಜ್ಯೂಡೋ ರತ್ನಂ
ವ: ಜಯಚಂದ್ರ
ಪ್ರ: ಕುಮಾರ್, ವೆಂಕಟೇಶ್, ಮೂರ್ತಿ, ರವಿ
ಹಾ: ೧) 'ಸಂತೆ ಬಾನಲ್ಲಿ ಬರೆವ ರಂಗೋಲಿ...', ೨) 'ಪ್ರಜಾಶಕ್ತಿ ಒಂದೇ ಎಲ್ಲದಕ್ಕೂ ಶಕ್ತಿ...', ೩) 'ಜಯ ಭಾರತಿ ಜನನಿ ಭಾರತಿ...', ೪) 'ಬೆಳ್ಳಿ ಮೋಡದ ಮೇಲೆ ಹಾರಿದೆ ಆಸೆಯ ಹಕ್ಕಿಗಳು...', ೫) 'ಈ ಉಪ್ಪಾರಪೇಟೆ ಹೆಣ್ಣಂತೆ...'
ಕ.ಸಾ: ಸ್ವಾತಂತ್ರ್ಯ ನಂತರದಲ್ಲಿ ಭಾರತದಲ್ಲಿ ರಾಜಕಾರಣ ನಡೆದು ಬಂದ ಹಾದಿಯನ್ನು ವಿವರಿಸುವ ಚಿತ್ರಕಥೆ. ರಾಜಕೀಯದಲ್ಲಿನ ಧುರೀಣರೆನಿಸಿದವರು ಅಧಿಕಾರವನ್ನು ಬಳಸಿಕೊಂಡ ಬಗೆ, ಅವರ ಅಡ್ಡ ಹಾದಿಯನ್ನು ಎದುರಿಸುವ ಏಕೈಕ ಶಕ್ತಿಯಾದ ಪ್ರಜಾಶಕ್ತಿಯೇ ಶ್ರೇಷ್ಠವೆಂದು ಸಾರುವ ಚಿತ್ರ.

೧೬೪೭. ಗಂಡುಗಲಿ

(೧೯೯೪ / ವರ್ಣ / ಸಾಮಾಜಿಕ)
ಲಾ: ಜ್ಯೋತಿ ಚಿತ್ರ
ಪ್ರೊ: ಜಿ.ಜಿ.ಕೃಷ್ಣ, ಜಿ.ಗೋವಿಂದ್, ಕೆ.ಸಿ.ಸುಬ್ರಹ್ಮಣ್ಯ ರಾಜು, ರಾಘವೇಂದ್ರ
ನಿ: ಸಿ.ಹೆಚ್.ಬಾಲಾಜಿ ಸಿಂಗ್
ಸ.ನಿ: ಶಿವಾನಂದ್
ಅ: ಶಿವರಾಜ್ ಕುಮಾರ್, ರಾಜೀವ್, ನಿರೋಷಾ, ರವಿಕಿರಣ್, ಸಿಹಿಕಹಿ ಚಂದ್ರು, ಸತ್ಯಜಿತ್, ಪಾಪಮ್ಮ, ಮೇಘನಾ, ಸರಸ್ವತಿ, ಪೃಥ್ವಿರಾಜ್, ಚಿಕ್ಕಣ್ಣ, ಬ್ಯಾಂಕ್ ಜನಾರ್ದನ್, ಕೃಷ್ಣೇಗೌಡ, ಗುರುಕಿರಣ್, ಎಂ.ಎಸ್.ಕಾರಂತ್, ಮಂಜುನಾಥ ಹೆಗಡೆ, ಡಿಸ್ಕೋ ಶಾಂತಿ, ಮಧು ಬಂಗಾರಪ್ಪ, ಬೇಬಿ ಚೈತನ್ಯ, ಮಾ।ಪಂಕಜ, ಮಾ।ಸುನಿಲ್, ಪೌರ್ಣಮಿ, ಕಿಂಗ್‌ಕಾಂಗ್ (ಕುಳ್ಳ)
ಕ: ಜಿ.ಜಿ.ಕೃಷ್ಣ.
ಚಿ.ಕ: ಸಿ.ಹೆಚ್.ಬಾಲಾಜಿ ಸಿಂಗ್
ಮಾ: ಪಾಲ್ ಸುದರ್ಶನ್
ಗೀ: ಭಂಗೀ ರಂಗ, ಎಂ.ಎನ್.ವ್ಯಾಸರಾವ್ ಸು.ರುದ್ರಮೂರ್ತಿಶಾಸ್ತ್ರೀ
ಗಾ: ರಾಜಕುಮಾರ್, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಸುರೇಶ್ ಪೀಟರ್, ಚಿತ್ರಾ
ಸಂ: ಆರ್.ಜನಾರ್ದನ್
ಛಾ: ಜಿ.ಜಿ.ಕೃಷ್ಣ
ಕಲೆ: ಸುಂದರಂ
ಸ: ಸಾಧುಕೋಕಿಲ
ಧ್ವ: ಕೋದಂಡಪಾಣಿ, ವಿ.ಬಿ.ಸಿ.ಮೆನನ್
ನೃ: ಮೂಗೂರು ಬಸವರಾಜ್, ಸಂಪತ್
ಸಾ: ನಂಜುಂಡಿ ನಾಗರಾಜ್
ವ: ತಿಪಟೂರು ಕೋಮಲಾ, ಆಂಟನಿ
ಪ್ರ: ಆರ್.ವೆಂಕಟೇಶ್
ಸ್ಥು: ಕಂಠೀರವ
ಹಾ: ೧) 'ಈ ಜೋಡಿ ಬಾಡಿ ಬಳ್ಳಿ ಹಾಗೆ ಬಾಗಿ ಬಳುಕಾಡಿ...', ೨) 'ಏಜು ಬಾಡಿ ವಾಕ್ ಪ್ಸು ಪ್ಸು ಪ್ಸು...'

ವಿ: ಸಿ.ಹೆಚ್.ಬಾಲಾಜಿ ಸಿಂಗ್ ಅವರ ಪ್ರಥಮ ನಿರ್ದೇಶನದ ಚಿತ್ರ

ಕ.ಸಾ: ತಂದೆ ಮೇಲೆ ಆದ ಅನ್ಯಾಯದ ವಿರುದ್ಧ ನಾಯಕ ಗಂಡುಗಲಿಯಾಗಿ ಸೇಡು ತೀರಿಸಿಕೊಳ್ಳುವ ಕಥೆ.

೧೬೪೮. ಹೃದಯರಾಗ

(೧೯೯೪ / ವರ್ಣ / ಸಾಮಾಜಿಕ)

ಲಾ: ಕಿರಣ್ ಮೂವೀಸ್

ಪ್ರೊ/ನಿ: ಕೆ.ವೆಂಕಟಸ್ವಾಮಿ

ಸ.ನಿ: ಅಫ್ತಾಬ್ ಖಾನ್

ಅ: ನವೀನ್ ಚಂದರ್, ಹೆಚ್.ವಿ.ಪ್ರಕಾಶ್, ಜಗನ್ನಾಥ್, ಶಂಖನಾದ ಅಂಜನಪ್ಪ, ನಂಜುಂಡಯ್ಯ, ನೂತನ್ ಮನ್ಸೂರ್, ಮಾ।ಸುಬ್ರಹ್ಮಣ್ಯ, ಮಾ।ನಾಗರಾಜ್, ಮಾಧುರಿ, ಸಾರಿಕಾ, ಮಾಲತಿ, ಬೇಬಿ ಅಶ್ವಿನಿ, ಕಾಮಣ್ಣ

ಕ: ಕೆ.ವೆಂಕಟಸ್ವಾಮಿ

ಚಿ.ಕ/ಮಾ: ಎಸ್.ಕೇಶವ ಮೂರ್ತಿ

ಗೀ: ಕೇಶವ ಮೂರ್ತಿ, ಎಸ್.ಕೆ.ಕರೀಂಖಾನ್

ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಮಂಜುಳಾ ಗುರುರಾಜ್, ಮಂಜುಳಾ ಪರಮೇಶ್ವರಿ

ಸಂ: ರಂಜಿತಾ ರೆಡ್ಡಿ

ಛಾ: ಎಂ.ಮುತ್ತುರಾಜ್

ಸ: ಹೇಮಂತ್

ನೃ: ವಿಜಯ ಕುಮಾರ್

ಸಾ: ಅರ್ಜುನ್ ಮೂರ್ತಿ

ಹಾ: ೧)'ಬಾಲ್ಯವು ಚಿನ್ನದ ತೇರು...', ೨)' ನನಸಾಯ್ತು ಕನಸು ..',೩)'ಎಲ್ಲಿ ಹೋಗುವೆ ಯಾರನರಸುವೆ...'

ಸೆ: ಉದ ೩೩೩೯.೦೦, ರೀಲು-೧೨, ೨-೧೦-೯೪

ಕ.ಸಾ: ಗ್ರಾಮ ಪರಿಸರದಲ್ಲಿ ಬಾಲ್ಯದಿಂದಲೇ ಸತಿ-ಪತಿ ಭಾವದಲ್ಲಿ ಬೆಳೆದ ಹುಡುಗರನ್ನು ಮಲತಾಯಿ, ಊರ ಮರ್ಯಾದೆಗಳ ಕಾರಣಗಳಿಂದ ಬೇರ್ಪಡಿಸಿದಳು. ಹುಡುಗಿಯ ಮೇಲೆ ಅತ್ಯಾಚಾರವಾಗಿದ್ದರಿಂದ ಆತ್ಮಹತ್ಯೆ ಮಾಡಿಕೊಂಡಳು. ಹುಡುಗನೂ ಅವಳೊಂದಿಗೆ ಸತ್ತು ಪ್ರೇಮವೇ ಅಮರ ಎಂದು ಸಾರಿದ.

೧೬೪೯. ಇಂಡಿಯನ್

(೧೯೯೪ / ವರ್ಣ / ಸಾಮಾಜಿಕ)

ಲಾ: ಕೆ.ಎಸ್. ಪ್ರೊಡಕ್ಷನ್ಸ್

ಪ್ರೊ: ಜಿ.ಆರ್.ಕೃಷ್ಣರೆಡ್ಡಿ, ಬಿ.ರಾಮನರಸಯ್ಯ, ರಾಂ ಬಾಬು, ಮಲ್ಲು

ನಿ: ಎಸ್.ಕೆ.ಕೀರ್ತಿರಾಜ್

ಸ.ನಿ: ಸೋಮರಾಜ್, ನಾಗೇಶ್



ಅ: ದೇವರಾಜ್, ಕಿನ್ನರ, ಸಿತಾರಾ, ರಾಗಿಣಿ, ಸುದರ್ಶನ್, ಸದಾಶಿವ ಸಾಲಿಯಾನ್, ಶಂಕರಭಟ್, ಕೆ. ಎಸ್. ಅಶ್ವತ್ಥ್, ಅಚ್ಯುತ್, ತೂಗುದೀಪ ಶ್ರೀನಿವಾಸ್, ಬಿ.ಸಿ ಪಾಟೀಲ್, ಟೆನ್ನಿಸ್ ಕೃಷ್ಣ, ಕಿಶೋರಿ ಬಲ್ಲಾಳ್

ಕ: ಎಸ್. ಕೆ. ಕೀರ್ತಿರಾಜ್

ಚಿ.ಕ/ಮಾ: ಜಿ.ಎಲ್.ವೇಣು

ಗೀ: ಶಿವಲಿಂಗಯ್ಯ, ಶ್ರೀರಂಗ, ಹಂಸಲೇಖ

ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್.ಜಾನಕಿ

ಸಂ: ಕೆ.ಬಾಲು

ಛಾ: ಮಲ್ಲಿಕಾರ್ಜುನ್

ಸ: ಮದನ್ ಮಲ್ಲು

ಧ್ವ: ಪ್ರಸಾದ್

ಸ್ಟು: ಪ್ರಸಾದ್

ಸಾ: ಥ್ರಿಲ್ಲರ್ ಮಂಜು

ಹಾ: ೧)'ಇಂಡಿಯನ್ ಇಂಡಿಯನ್ ನಾವು ಇಂಡಿಯನ್....', ೨)'ಮುಂಭಾರ ಬಲು ಭಾರ ಹಿಂಭಾರ ಇನ್ನು ಭಾರ...'

ಕ.ಸಾ.: ದೇಶಕ್ಕಾಗಿ ಎಂಥ ತ್ಯಾಗ ಬಲಿದಾನಕ್ಕೂ ಸಿದ್ಧನಾದ ಯುವಕನೊಬ್ಬನ ಸಾಹಸಮಯ ಬದುಕಿನ ಚಿತ್ರಣ.

೧೬೫೦. ನ್ಯಾಯಕ್ಕಾಗಿ ಸವಾಲ್

(೧೯೯೪ / ವರ್ಣ / ಸಾಮಾಜಿಕ)

ಲಾ: ರಾಜಗುರು ಫಿಲಂಸ್

ಪ್ರೊ: ಬಿ.ಎಸ್.ಮಹಾದೇವ ಗೌಡ

ನಿ: ಭೀ.ಮಾ.ನಾಗರಾಜ್

ಸ.ನಿ: ನೀರ್ನಳ್ಳಿ ರಾಜು

ಅ: ದೇವರಾಜ್, ರಘುವೀರ್, ತಾರಾ, ಪ್ರೀತಿ, ದೊಡ್ಡಣ್ಣ, ನಾಗೇಶ್, ಬ್ರಹ್ಮಾವರ್, ಮೈಸೂರು ಲೋಕೇಶ್, ಪುಂಡಲೀಕ ಶೇಠ್, ಸಿಹಿಕಹಿ ಚಂದ್ರು, ಸುಂದರ್ ರಾಜ್, ಭೀಮಾ ನಾಗರಾಜ್, ಬೇಬಿ ರೂಪಶ್ರೀ, ಸುಧಾ ನರಸಿಂಹರಾಜು, ನವನೀತಾ, ಲಲಿತಮ್ಮ, ಉಮಾ

ಕ/ಚಿ.ಕ/ಮಾ: ಭೀ.ಮಾ.ನಾಗರಾಜ್

ಗೀ: ಚಿ.ಉದಯಶಂಕರ್, ವಿಜಯನಾರಸಿಂಹ, ಗೀತಪ್ರಿಯ, ಮನೋಹರ್

ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಂದ್ರಿಕಾ, ಮಂಜುಳಾ, ಬಿ.ಆರ್.ಛಾಯಾ

ಸಂ: ಸುರೇಶ್ ಅರಸ್

ಛಾ: ಬಿ.ಎಸ್.ಸಿಂಗ್

ಕಲೆ: ರಮೇಶ್ ಬಾಬು

ಸ: ಮನೋರಂಜನ್ ಪ್ರಭಾಕರ್

ಧ್ವ: ಗಾನಲಹರಿ- ಅರುಣ ಮುದನ್

ನೃ: ರಮೇಶ್, ಪ್ರೇಮ್, ಅಶೋಕ್, ಅಂಬಿ ಮಹೇಂದ್ರನ್

ಸಾ: ಥ್ರಿಲ್ಲರ್ ಮಂಜು

ವ: ಮಂಜು

ಪ್ರ: ಗೋಪಾಲ್

ಸ್ಟು: ಮಧು ಆರ್ಟ್ಸ್ ಸ್ಟುಡಿಯೋ

ಸೆ: ರೀಲು-೧೪, ಉದ-೪೦೪೨.೦೦

ಕ.ಸಾ: ನಿರುದ್ಯೋಗಿ ಯುವಕನೊಬ್ಬ ತಲೆಹಿಡುಕರ ಕೈಲಿ ಸಿಕ್ಕಿ ತೊಳಲಾಡುವಾಗ ನಿಷ್ಠಾವಂತ ಪೋಲೀಸ್ ಅಧಿಕಾರಿ ನೆರವಿಗೆ ಬಂದು ಅನೀತಿ, ಅನಾಚಾರಗಳನ್ನು ಮೆಟ್ಟಿ ನಿಲ್ಲುವ ಕಥೆ.

೧೯೯೫

೧೬೫೧. ಅರಗಿಣಿ

(೧೯೯೫ / ವರ್ಣ / ಸಾಮಾಜಿಕ)

ಲಾ: ಹೈಟೆಕ್ ಕ್ರಿಯೇಷನ್ಸ್

ಪ್ರೊ: ಜಿ.ಎಸ್.ರವಿಕುಮಾರ್, ಆರ್.ಪ್ರಕಾಶ್

ನಿ: ಪಿ.ಹೆಚ್.ವಿಶ್ವನಾಥ್

ಸ.ನಿ: ನೀರ್ನಳ್ಳಿ ರಾಜು

ಅ: ರಮೇಶ್, ಕಾಶಿ, ಸುಧಾರಾಣಿ, ಸಿಹಿಕಹಿ ಗೀತಾ, ರಮೇಶ್‌ಭಟ್, ರಮೇಶ್ ಪಂಡಿತ್

ಕ/ಚಿ.ಕ: ಪಿ.ಹೆಚ್.ವಿಶ್ವನಾಥ್

ಮಾ: ವಿ.ನಾರಾಯಣಸ್ವಾಮಿ

ಗೀ: ದೊಡ್ಡರಂಗೇ ಗೌಡ, ನಾಗತಿಹಳ್ಳಿ ಚಂದ್ರಶೇಖರ್, ಗೀತಪ್ರಿಯ, ಎಂ. ಎನ್.ವ್ಯಾಸರಾವ್

ಗಾ: ಚಿತ್ರಾ, ಎಸ್.ಪಿ.ಬಾಲಸುಬ್ರಹ್ಮಣ್ಯಂ

ಸಂ: ಸುರೇಶ್ ಅರಸ್

ಛಾ: ಆರ್.ಮಂಜುನಾಥ್

ಕಲೆ: ಜಿ.ಮೂರ್ತಿ

ಸ: ಎಸ್.ಪಿ.ವೆಂಕಟೇಶ್

ಸಾ: ಥ್ರಿಲ್ಲರ್ ಮಂಜು

ಹಾ: ೧)' ಮರೆವ ಹರೆಯ ಬರಲು...', ೨)' ಕುಸುಮವು ನೀನು ...',೩)' ಕಣ್ಣುಮುಚ್ಚಿ ಆಡ್ಕತೋ...',೪)'ಮಿಡಿಯುತಿದೆ ಹೃದಯ...',೫)' ಅಂದು ನಾನು ಯಾರೋ...'

ವಿ: ೧೯೯೪-೯೫ರ ರಾಜ್ಯ ಚಲನಚಿತ್ರ ಪ್ರಶಸ್ತಿ: ದ್ವಿತೀಯ ಅತ್ಯುತ್ತಮ ಚಿತ್ರ, ಅತ್ಯುತ್ತಮ ಛಾಯಾಗ್ರಹಣ: (ಆರ್.ಮಂಜುನಾಥ್) ಅತ್ಯುತ್ತಮ ಧ್ವನಿಗ್ರಾಹಕ: (ವಿ.ಬಾಲಚಂದ್ರ ಮೆನನ್)

ಕ.ಸಾ: ಅಮಾನವೀಯ - ಅನಾಗರಿಕ ಪದ್ಧತಿಯೊಂದರ ವಿರುದ್ಧ ವಿದ್ಯಾವಂತ ಹೆಣ್ಣೊಬ್ಬಳು ಹೋರಾಡಿ ಗೆಲ್ಲುವ ಚಿತ್ರಣ. ದೇವರು ಮತ್ತು ಧರ್ಮದ ಭೀತಿ ಬಿತ್ತಿ ದುರ್ಬಲ ವರ್ಗದ ಹೆಣ್ಣು ಮಕ್ಕಳನ್ನು ದೇವದಾಸಿಯರನ್ನಾಗಿಸಿ ತಮ್ಮ ಕಾಮತೃಷೆ ತೀರಿಸಿಕೊಳ್ಳುವ ಸುಸಂಸ್ಕೃತರೆಂದುಕೊಳ್ಳುವ ಶ್ರೀಮಂತ ವರ್ಗಗಳವರ ಶೋಷಣೆಯ ವಿರುದ್ಧ ಹೆಣ್ಣೊಬ್ಬಳ ದಿಟ್ಟ ಹೋರಾಟವಿಲ್ಲಿದೆ. ಗಂಡು-ಹೆಣ್ಣು ಭೇದವಿಲ್ಲದೆ ಸಮಗ್ರ ಶಿಕ್ಷಣ ನೀಡುವುದೊಂದೇ ಸಾಮಾಜಿಕ ಶೋಷಣೆಯ ಅಂತ್ಯಕ್ಕೆ ದಾರಿ ಎಂಬ ಸಂದೇಶವೂ ಇದೆ. ವಿದ್ಯೆ ಕಲಿತು ಸ್ವಾವಲಂಬಿಯಾಗಿ ಬದುಕುವ ಆಸೆ ದಲಿತ ಹೆಣ್ಣು ರಾಣಿಯದು. ಆ ಆಸೆಗೆ ನೂರಾರು ಅಡ್ಡಿ. ಅವಳನ್ನು ದೇವದಾಸಿಯನ್ನಾಗಿಸಲು ಮಾವನ ಸಂಚು, ಅವಳಲ್ಲಿ ತನ್ನ ಕಾಮತೃಷೆಯನ್ನು ಹಿಂಗಿಸಿಕೊಳ್ಳಲು ಊರ ಸಾಹುಕಾರನ ಕಾತರ. ತನ್ನ ವರ್ಗದವರ ಮೌಢ್ಯವನ್ನು ತೊಡೆದು, ಮೇಲ್ವರ್ಗದವರ ದಮನದ ಸಂಚನ್ನು ಎದುರಿಸಿ ನಿಂತು, ತಾನು

ಪ್ರೀತಿಸಿದ ಹುಡುಗನೊಂದಿಗೆ ಕೂಡಿ ಹೋರಾಡಿ ಗೆಲ್ಲುವ ರಾಣಿ, ದೇವತೆಯೆಂದು ಪೂಜಿಸುವ ಹೆಣ್ಣನ್ನು ಭೋಗದ ವಸ್ತುವಾಗಿಯೂ ಕಾಣುವ ಸಮಾಜದ ದ್ವಂದ್ವ ನಿಲುವಿಗೆ ಕನ್ನಡಿ ಹಿಡಿಯುತ್ತಾಳೆ.

೧೬೫೨. ಪುಟ್ನಂಜ

(೧೯೯೫ / ವರ್ಣ / ಸಾಮಾಜಿಕ)
ಲಾ: ಶ್ರೀ ಈಶ್ವರಿ ಪ್ರೊಡಕ್ಷನ್ಸ್
ಪ್ರೊ: ಎ.ನರಸಿಂಹನ್. ವಿ. ರವಿಚಂದ್ರನ್
ನಿ: ವಿ. ರವಿಚಂದ್ರನ್
ಅ: ರವಿಚಂದ್ರನ್, ಮೀನಾ, ಉಮಾಶ್ರೀ, ಕವಿತಾ, ಲೋಕೇಶ್, ಪ್ರಾಜಾಲೋಕೇಶ್
ಕ/ಚಿ.ಕ: ರವಿಚಂದ್ರನ್
ಮಾ: ಜಿ. ಸುರೇಶ್
ಗೀ: ಹಂಸಲೇಖ
ಸಂ: ಕೆ.ಬಾಲು
ಛಾ: ಜಿ.ಎಸ್.ವಿ.ಸೀತಾರಾಂ
ಕಲೆ: ಸುಭಾಷ್ ಕಡಕೋಳ್
ಸ: ಹಂಸಲೇಖ
ನೃ: ನಟರಾಜ್, ಲೂಯಿಸ್
ಸಾ: ಥ್ರಿಲ್ಲರ್ ಮಂಜು
ಪ್ರ: ನಾಣಿ
ಹಾ: ೧) 'ನಾನು ಪುಟ್ಟನಂಜ...', ೨) 'ಪುಟ್ಟಮಲ್ಲಿ, ಪುಟ್ಟ ಮಲ್ಲಿ...', ೩) ' ಹಾಡಿರೋ ಹಾಡಿರೋ...', ೪) ' ನಾನು ಪುಟ್ಟನಂಜ ಮನೆವಾಣ ಹೊತ್ತು...', ೫) 'ನಮ್ಮಮ್ಮ ನಮ್ಮಮ್ಮ...',೬)' ರಂಗೇರೋ ಹೋಳಿ...', ೭)'ಪುಟ್ಟಮಲ್ಲಿ ಪುಟ್ಟಮಲ್ಲಿ (ವಿಷಾದ)...',೮)'ದಸರಾ ಗೊಂಬೆ...'
ಕ.ಸಾ: ಹಳ್ಳಿಯಲ್ಲೇ ಹುಟ್ಟಿ ಬೆಳೆದ ಮುಗ್ಧಜೀವಿ ಪುಟ್ನಂಜ. ಪಟ್ಟಣದಲ್ಲಿ ಹುಟ್ಟಿ ಬೆಳೆದು ನಾಗರಿಕತೆಯನ್ನು ಮೈಗೂಡಿಸಿಕೊಂಡಿದ್ದ ಅತ್ತೆಯ ಮಗಳನ್ನು ಮುಗ್ಧ ಪುಟ್ನಂಜ ಮದುವೆಯಾಗುತ್ತಾನೆ. ಪಟ್ಟಣದಲ್ಲಿ ಬೆಳೆದ ಹೆಣ್ಣು ಹಳ್ಳಿಯ ಬದುಕಿಗೆ ಒಗ್ಗೀತೆ.. ಹಳ್ಳಿಯ ಜೀವನ ಒಗ್ಗದ ಅವಳು ಪಟ್ಟಣಕ್ಕೆ ಮರಳುತ್ತಾಳೆ. ಹೆಂಡತಿಯನ್ನು ತನ್ನ ಹಳ್ಳಿಗೆ ಕರೆತರುವ ಪುಟ್ನಂಜನ ಪ್ರಯತ್ನಗಳೂ ವಿಫಲಗೊಳ್ಳುತ್ತದೆ. ಅವಳು ಮಗುವಿನ ತಾಯಿಯಾಗುತ್ತಾಳೆ. ನಂತರದಲ್ಲಿನ ಸಂದರ್ಭ-ಸನ್ನಿವೇಶಗಳು ಅವಳನ್ನು ಮಾರ್ಪಡಿಸುತ್ತವೆ.

೧೬೫೩. ಪ್ರೊಫೆಸರ್

(೧೯೯೫ / ವರ್ಣ / ಸಾಮಾಜಿಕ)
ಲಾ: ಅನ್ನಪೂರ್ಣೇಶ್ವರಿ ಮೂವೀ ಮೇಕರ್ಸ್
ಪ್ರೊ/ನಿ: ರೇಣುಕಾ ಶರ್ಮ
ಸ.ನಿ: ಮಂಜು-ನಂಜು
ಅ: ಅಂಬರೀಷ್, ಶ್ರೀಧರ್, ಶಿವಕುಮಾರ್, ವಜ್ರಮುನಿ, ಅರವಿಂದ, ಮುಖ್ಯಮಂತ್ರಿ ಚಂದ್ರು, ಸಿಹಿಕಹಿ ಚಂದ್ರು, ಪಂಢರಿಬಾಯಿ, ಶ್ರೀಶಾಂತಿ, ತಾರಾ, ಭವ್ಯಶ್ರೀ ರೈ, ಮಾಧುರಿ
ಕ: ಕಾತ್ಯಾಯಿನಿ
ಚಿ.ಕ: ರೇಣುಕಾ ಶರ್ಮ
ಮಾ: ಬಿ.ಎಲ್.ಸುರೇಶ್
ಗೀ: ಹಂಸಲೇಖ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಲತಾ ಹಂಸಲೇಖ, ಮಂಜುಳಾ ಗುರುರಾಜ್
ಸಂ: ಕೆ.ಬಾಲು
ಛಾ: ಎಸ್.ವಿ.ಶ್ರೀಕಾಂತ್
ಕಲೆ: ನಂಜುಂಡಸ್ವಾಮಿ
ಸ: ಹಂಸಲೇಖ



ದ್ವ: ಸಂಕೇತ್
ನೃ: ಸತೀಶ್
ಸಾ: ನಂಜುಂಡಿ ನಾಗರಾಜ್
ಸ್ಟು: ಕಂಠೀರವ
ಹಾ: ೧)'ರಂಗಾ ಎಸ್ ಸಾರ್ ... ರಾಮೂ ಪ್ರೆಸೆಂಟ್ ಸಾರ್...', ೨) ' ಕುಂಯ್ ಕುಂಯ್ ಕುಂಯ್ ನಾಯಿ ಮರಿ...', ೩) 'ತನುವಿಗೆ ತೋಳಿನಾಸರೆ...', ೪)'ನಮ್ಮ ಪ್ರೇಮ ಬಳ್ಳಿ...',
ಸೆ: ಉದ್ದ ೪೦೫೯.೦೦, ರೀಲು-೧೫, ೦೯-೦೧-೯೫
ಕ.ಸಾ: ವಿದ್ಯಾರ್ಥಿ ರಾಜಕೀಯದ ತಾಣವೆನಿಸಿರುವ ಕಾಲೇಜಿಗೆ ನೇಮಕವಾಗಿ ಪ್ರೊಫೆಸರ್ ರವಿ ಬರುತ್ತಾನೆ. ಭಾರಿ ಪ್ರಭಾವ ಹೊಂದಿರುವ ರಾಜಕೀಯ ವ್ಯಕ್ತಿಯ ಮಗನಿಂದಾಗಿ ವಿದ್ಯಾರ್ಥಿಗಳು ಹಾಳಾಗಿರುತ್ತಾರೆ. ಈ ಗ್ಯಾಂಗ್‌ನ ಮುಖಂಡನೊಂದಿಗೆ ತನ್ನ ವ್ಯಕ್ತಿತ್ವ ಬಿಟ್ಟುಕೊಡದೆ ರವಿ ವರ್ತಿಸುತ್ತಾರೆ. ಪ್ರತಿರೋಧವನ್ನು ಸಮರ್ಥವಾಗಿ ಎದುರಿಸುವ ರವಿ ಆ ಗ್ಯಾಂಗ್‌ಗೆ ಪಾಠ ಕಲಿಸುತ್ತಾನೆ.

೧೬೫೪. ಮುತ್ತಿನಂಥ ಹೆಂಡತಿ

(೧೯೯೫ / ವರ್ಣ / ಸಾಮಾಜಿಕ)
ಲಾ: ರಾಮು ಎಂಟರ್‌ಪ್ರೈಸಸ್
ಪ್ರೊ: ರಾಮು
ನಿ: ಪೇರಾಲ
ಸ.ನಿ: ಜಿ.ನರಸಕುಮಾರ್
ಅ: ಮಾಲಾಶ್ರೀ, ಸಾಯಿಕುಮಾರ್, ವಿನಯಾ ಪ್ರಸಾದ್, ದಿವ್ಯವಾಣಿ, ರಮೇಶ್ ಭಟ್, ಟೆನ್ನಿಸ್ ಕೃಷ್ಣ, ಉಮಾ ಶಿವಕುಮಾರ್, ಅನುಜ, ಸೋಮಯಾಜುಲು, ಅಶೋಕ್, ಶ್ರೀನಿವಾಸ ಮೂರ್ತಿ, ಕಾಶಿ, ಗುಂಡು ಕಲ್ಯಾಣ, ಮಾ।ನಿತಿನ್, ಬೇಬಿಲಕ್ಷ್ಮಿ, ಮೇರಿ, ಕೆ. ಆರ್.ವಿಜಯಾ, ದೊಡ್ಡಣ್ಣ, ಲೋಕನಾಥ್
ಕ: /ಚಿ.ಕ: ಪೇರಾಲ
ಮಾ: ಎಂ.ಎಸ್.ರಮೇಶ್
ಗೀ: ಹಂಸಲೇಖ
ಸಂ: ಜನಾರ್ದನ್
ಛಾ: ಮನೋಹರ್
ಕಲೆ: ವೇಣುಗೋಪಾಲ್, ಇಸ್ಮಾಯಿಲ್
ಸ: ಹಂಸಲೇಖ
ದ್ವ: ಆರ್.ಕಣ್ಣನ್, ಪ್ರಸಾದ್
ನೃ: ಉಡುಪಿ ಜಯರಾಂ, ಸಂಪತ್
ಸಾ: ಥ್ರಿಲ್ಲರ್ ಮಂಜು
ವ: ನಾಗರಾಜ್, ಬಾಬ್ಬಿ, ಪ್ರಕಾಶ್
ಪ್ರ: ಗುರುಮೂರ್ತಿ, ಕುಮಾರ್
ಸ್ಟು: ಕಂಠೀರವ
ಕ.ಸಾ: ಮೂಢ ನಂಬಿಕೆಯ ಹಿನ್ನೆಲೆಯಿಂದಾಗಿ ಹೆಣ್ಣೊಬ್ಬಳು ತೊಂದರೆಗೊಳಗಾಗುವ ಮತ್ತು ಶೋಷಣೆಗೊಳಗಾಗುವ ಕಥೆ. ಗೌರಿ ನಾದಸ್ವರ ವಾದಕರ ಬಡ ಕುಟುಂಬದವಳಾಗಿರುತ್ತಾಳೆ. ಕಲ್ಯಾಣಿಯನ್ನು ಪ್ರೀತಿಸುವ ವಿನೋದ್ ತನ್ನ ಕುಟುಂಬದ ಮೇಲಿನ ಅಪವಾದ ತೊಡೆಯಲು ಗೌರಿಯನ್ನು ಮದುವೆಯಾಗುತ್ತಾನೆ. ನಂತರ ಗೌರಿ, ಗಂಡ ಮತ್ತು ಅತ್ತೆ ಮಾವನಿಂದ ಕಿರುಕುಳ ಅನುಭವಿಸುವಂತಾಗುತ್ತದೆ. ಅವಳಲ್ಲಿರುವ ದೈವ ಭಕ್ತಿ ಇವೆಲ್ಲದರಿಂದ ಅವಳನ್ನು ಪಾರು ಮಾಡುತ್ತದೆ.

೧೬೫೫. ಕೋಣ ಈದೈತೆ

(೧೯೯೫ / ವರ್ಣ /ಸಾಮಾಜಿಕ)
ಲಾ: ವೆನ್ನೆಲ ಇಂಟರ್‌ನ್ಯಾಷನಲ್ ಫಿಲಂಸ್
ಪ್ರೊ: ಜಿ.ಕೆ.ಭಾರವಿ
ನಿ: ಜಯಶ್ರೀದೇವಿ
ಅ: ವಿಷ್ಣುವರ್ಧನ್, ಕುಮಾರ್ ಗೋವಿಂದ್, ವಿನಯಾ ಪ್ರಸಾದ್, ಅಂಜಲಿ, ವನಿತಾ ವಾಸು, ಸುಧಾರಾಣಿ, ದೊಡ್ಡಣ್ಣ, ಉಮಾಶ್ರೀ
ಕ: 'ಅಭಯ ಕಥಾ' ವಿಭಾಗ
ಚಿ.ಕ: ಜಿ.ಕೆ.ಭಾರವಿ
ಮಾ: ಜಿ.ಕೆ.ಭಾರವಿ, ಪ್ರೊ। ವೆಂಕಟೇಶಯ್ಯ
ಗೀ: ಹಂಸಲೇಖ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ, ಎಸ್.ಜಾನಕಿ, ರಾಜೇಶ್
ಛಾ: ಹೆಚ್.ಜಿ.ರಾಜು
ಸ: ಹಂಸಲೇಖ
ಹಾ: ೧)'ಗಟ್ಟಿ ನಿಂದು ಹಾರ್ಟ್...', ೨)'ರಿಪೀಟ್ ರಿಪೀಟ್ ...', ೩) 'ಸ್ಕೇಟ್ ಹೊಡಿ ಬಾ...', ೪) 'ಜಾಕಿ ಜಾನ್...', ೫)' ಆಹಾ ನಮ್ಮ ಕೋಣಕ್ಕೆ ಸೀಮಂತ...'
ಕ.ಸಾ: ನ್ಯಾಯಾಂಗ ವ್ಯವಸ್ಥೆಯ ಲೋಪ-ದೋಷಗಳನ್ನು ವ್ಯಂಗ್ಯ ಮಾಡುವ ಮತ್ತು ಅಸಾಧ್ಯವಾದುದನ್ನು ಕುರಿತ ಕಥೆ. ಭ್ರಷ್ಟ ಕುಲಪತಿಗಳಿಂದಾಗಿ ಅಷ್ಟೇನು ಪ್ರತಿಭಾವಂತರಲ್ಲದ ಇಬ್ಬರು ಹುಡಗಿಯರು ರ್‍ಯಾಂಕ್ ಗಳಿಸುತ್ತಾರೆ. ಇದರಿಂದಾಗಿ ಪ್ರತಿಭಾವಂತನಾಗಿರುವ ಕೃಷ್ಣ ಅನುತ್ತೀರ್ಣನಾಗಬೇಕಾಗುತ್ತದೆ. ಈ ಹುಡುಗಿಯರು ಕೃಷ್ಣನನ್ನು ಪ್ರೀತಿಸುತ್ತಿರುತ್ತಾರೆ. ಆದರೆ ಕೃಷ್ಣ ನಿರಾಕರಿಸುತ್ತಾನೆ. ಇದರಿಂದಾಗಿ ಅವನ ವಿರುದ್ಧ ಅತ್ಯಾಚಾರ ಆರೋಪ ಹೊರಿಸಲಾಗುತ್ತದೆ. ಆಗ ಬುದ್ಧಿವಂತ ಲಾಯರ್ ಯಾರು ಈ ಕೇಸ್ ಹಾಕಲು ಕಾರಣರಾಗಿರುತ್ತಾರೋ ಅವರ ವಿರುದ್ಧವೇ ಕೇಸ್ ತಿರುಗಿ ಬೀಳುವಂತೆ ಮಾಡುತ್ತಾನೆ.

೧೬೫೬. ಯಮಕಿಂಕರ

(೧೯೯೫ / ವರ್ಣ / ಫ್ಯಾಂಟಸಿ/ಕಲ್ಪನೆ)
ಲಾ: ಶ್ರೀ ನಾಗೇಂದ್ರಮಣಿ ಸಿನಿ ಕ್ರಿಯೇಷನ್ಸ್
ನಿ: ಪ್ರಭಾಕರ್
ಅ: ವಿಷ್ಣುವರ್ಧನ್, ಪ್ರಭಾಕರ್, ಡಾಲಿ, ಸೋನಾಕ್ಷಿ, ವಜ್ರಮುನಿ, ಮುಖ್ಯಮಂತ್ರಿ ಚಂದ್ರು, ಬಾಲಕೃಷ್ಣ, ಸತ್ಯಜಿತ್, ಸತ್ಯಭಾಮ, ಸರಿಗಮ ವಿಜಿ, ಬಿ.ಕೆ.ಶಂಕರ್, ಬ್ಯಾಂಕ್ ಜನಾರ್ದನ್
ಚಿ.ಕ: ಟೈಗರ್ ಪ್ರಭಾಕರ್
ಮಾ: ಸರಿಗಮ ವಿಜಿ, ವಿ.ಮನೋಹರ್
ಸಂ: ಕೆ.ನರಸಯ್ಯ
ಛಾ: ಕಬೀರ್‌ಲಾಲ್
ಸ: ರಾಜನ್ - ನಾಗೇಂದ್ರ
ಹಾ: ೧)'ಓ ಮಿಸ್ ಇಂಡಿಯಾ...'. ೨)'ಓ ಹೋ ಡಾಲಿ...', ೩) 'ಟಚ್ ಮಿ ಕಮಾನ್...', ೪) ' ಹೇಳಿ ಕೊಡು ಬಾ...', ೫)'ಧರ್ಮ ದೇವನೆ...',
ಕ.ಸಾ: ಇದು ಫ್ಯಾಂಟಸಿ ಥ್ರಿಲ್ಲರ್ ಚಿತ್ರ. ಯಮಲೋಕದ ಅಧಿಪತಿ ಯಮ ಇನ್ನೇನು ಸಾಯಬೇಕೆಂದು ನಿಶ್ಚಿತವಾಗಿರುವ ಹುಡುಗಿಯ ಆತ್ಮವನ್ನು ತರುವಂತೆ ತನ್ನ ಸಹಾಯಕನೊಬ್ಬನನ್ನು ಕಳಿಸುತ್ತಾನೆ. ಆದರೆ ಕಿಂಕರ ಅತ್ಯಂತ ಸುಂದರಳಾಗಿರುವ ಆ ಹುಡುಗಿಯ

ಪ್ರೇಮಪಾಶದಲ್ಲಿ ಸಿಲುಕಿ ಅವಳೊಂದಿಗೆ ಉಳಿದುಬಿಡುತ್ತಾನೆ. ಇವನನ್ನು ಹುಡುಕಿಕೊಂಡು ಯಮ ಭೂಲೋಕಕ್ಕೆ ಬರುತ್ತಾನೆ. ಅಲ್ಲಿ ಇಡೀ ಜಗತ್ತನ್ನೇ ನಾಶಪಡಿಸಬೇಕೆಂದು ಯೋಚಿಸುವ ವಿಧ್ವಂಸಕರ ಗುಂಪಿನ ನಡುವೆ ಸಿಕ್ಕಿ ಬೀಳುತ್ತಾನೆ. ಕೊನೆಯಲ್ಲಿ ಈ ಯೋಜನೆಯ ಹಿಂದಿರುವ ಭಯೋತ್ಪಾದಕರನ್ನು ಬಯಲಿಗೆಳೆಯಲಾಗುತ್ತದೆ.

೧೬೫೭. ಶ್ರಾವಣ ಸಂಜೆ

(೧೯೯೫ / ವರ್ಣ / ಸಾಮಾಜಿಕ)

ಲಾ: ಗುರುಕೃಪಾ ಫಿಲಂಸ್
ಪ್ರೊ: ರಾಮನಾಥ್, ಗೀತಾ ಲಿಂಗಪ್ಪ ಗೌಡ, ಎಂ.ಕೆ.ಲಲಿತಾ
ನಿ: ಎ.ಟಿ.ರಘು
ಸ.ನಿ: ಎಕ್ಕರಿ ವಾಸು
ಅ: ಚರಣ್‌ರಾಜ್, ರಾಮ್‌ಕುಮಾರ್, ಸಿತಾರಾ, ಸೂರ್ಯ, ಶ್ರೀಶೈಲನ್, ಸಿಹಿಕಹಿ ಗೀತಾ, ಆಗ್ರೋ ಚಿಕ್ಕಣ್ಣ, ಅವಿನಾಶ್, ಅಂಜನಪ್ಪ, ಜ್ಯೋತಿ, ಗಾಯತ್ರಿ ಪ್ರಭಾಕರ್, ರಾಜಾನಂದ್, ಸೋಮಶೇಖರ ರಾವ್, ವಾಸುದೇವ ರಾವ್, ಶಾಂತಮ್ಮ, ಮಾನಾಗರಾಜ್, ಶ್ರೀಧರ್, ಬೇಬಿ ಮೂರ್ತಿ, ಬೇಬಿ ಲಕ್ಷ್ಮೀ, ಬೇಬಿ ಅಶ್ವಿನಿ
ಕ: ಹೆಚ್.ವಿ.ಸುಬ್ಬರಾವ್
ಚಿ.ಕ: ಎ.ಟಿ.ರಘು
ಮಾ: ಹೆಚ್.ವಿ.ಸುಬ್ಬಾರಾವ್
ಗೀ: ಆರ್.ಎನ್.ಜಯಗೋಪಾಲ್, ದೊಡ್ಡರಂಗೇಗೌಡ
ಗಾ: ರಾಜಕುಮಾರ್, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಸಂಗೀತಾ ಕಟ್ಟಿ, ಬಿ.ಆರ್.ಛಾಯಾ, ಉಷಾ ಗಣೇಶ್, ಹೇಮಲತಾ, ಟಿಪ್ಪಾಕರ್
ಸಂ: ವಿಕ್ಟರ್ ಯಾದವ್
ಛಾ: ವಿ.ಕೆ.ಕಣ್ಣನ್
ಕಲೆ: ಆರ್.ಕೆ.ಸುಂದರಂ
ಸ: ಉಪೇಂದ್ರ ಕುಮಾರ್
ಧ್ವ: ಮೆಸರ್ಸ್ ಕೋದಂಡಪಾಣಿ
ನೃ: ಸಂಪತ್

ಸಾ: ಜ್ಯೂಡೋ ರತ್ನಂ
ವ: ಸತ್ಯಂ
ಪ್ರ: ಮೈಸೂರು ವೆಂಕಟೇಶ್, ಚಂದ್ರು

ಹಾ: ೧) 'ಆಕಾಶವೇ ಈ ಶ್ರಾವಣ ಸಂಜೆ...', ೨) 'ಹೂವೇ ನೀ ಸೇರುವ ಅಂಗಳ...', ೩) 'ತಂಪಾದ ಹೊಂಗೆ ಮರ ..', ೪) 'ಹೆಣ್ಣೆ ನೀ ಅಳಬೇಡ...', ೫) 'ಪ್ರಿಯತಮೆಯ ಮೇಘ ಸಂದೇಶ...'

ಕ.ಸಾ: ವಿಧವಾ ವಿವಾಹ ಕುರಿತ ಚಿತ್ರ. ಹಳ್ಳಿಯ ಸ್ಕೂಲ್ ಮೇಷ್ಟ್ರ ಮಗಳು ಸರಸ್ವತಿಯನ್ನು ನಗರದ ಇಂಜಿನಿಯರ್ ಪ್ರೀತಿಸಿ ಮದುವೆಯಾಗುತ್ತಾನೆ. ಸರಸ್ವತಿಯ ಮಾನಭಂಗಕ್ಕೆ ಹಳ್ಳಿಯ ಮುಖಂಡನ ಮಗ ಪ್ರಯತ್ನಿಸಿದಾಗ ಶಿವಮಲ್ಲು ಎಂಬ ಯುವಕ ಅವಳನ್ನು ರಕ್ಷಿಸಿ ಜೈಲು ಸೇರುತ್ತಾನೆ. ಸರಸ್ವತಿಯ ದೌರ್ಭಾಗ್ಯ ಅವಳ ಗಂಡ ಸತ್ತು, ಮೈದುನನೇ ಕೆಟ್ಟ ದೃಷ್ಟಿಯಿಂದ ನೋಡಲಾರಂಭಿಸುತ್ತಾನೆ. ಅವಳಿಗೆ ಜೀವನವೇ ನರಕವೆನಿಸ ತೊಡಗಿದಾಗ ಶಿವಮಲ್ಲುವಿನ ಆಶ್ರಯ ಸಿಗುತ್ತದೆ.

೧೬೫೮. ಮೋಜುಗಾರ ಸೊಗಸುಗಾರ

(೧೯೯೫ / ವರ್ಣ / ಸಾಮಾಜಿಕ)

ಲಾ: ಶ್ರೀ ಲಕ್ಷ್ಮಿ ಫಿಲಂಸ್
ಪ್ರೊ: ಎಂ.ಕುಮಾರ್
ನಿ: ವಿಜಯ್
ಸ.ನಿ: ಯೋಗೀಶ್ ಹುಣಸೂರ್
ಅ: ವಿಷ್ಣುವರ್ಧನ್, ಶ್ರುತಿ, ಸೋನಾಕ್ಷಿ, ಲೋಕೇಶ್, ದೊಡ್ಡಣ್ಣ, ಕೀರ್ತಿ, ಟೆನ್ನಿಸ್ ಕೃಷ್ಣ, ಜಯಂತಿ, ಪಂಢರಿಬಾಯಿ, ಸತ್ಯಭಾಮ, ಶಿವರಾಂ, ಸಿಹಿಕಹಿ ಚಂದ್ರು, ಡಿಂಗ್ರಿ ನಾಗರಾಜ್
ಕ/ಚಿ.ಕ: ವಿಜಯ್
ಮಾ: ಕುಣಿಗಲ್ ನಾಗಭೂಷಣ್, ಕುಣಿಗಲ್ ವಸಂತ್
ಗೀ: ಹಂಸಲೇಖ
ಗಾ: ಮನು, ಮಂಜುಳಾ ಗುರುರಾಜ್, ಲತಾ ಹಂಸಲೇಖ

ಸಂ: ಎಸ್.ಪ್ರಸಾದ್
ಛಾ: ಜಾನೀಲಾಲ್
ಸ: ಹಂಸಲೇಖ
ನೃ: ಉಡುಪಿ ಜಯರಾಂ, ದೇವಿ
ಸಾ: ನಂಜುಂಡಿ ನಾಗರಾಜ್, ಥ್ರಿಲ್ಲರ್ ಮಂಜು
ವ: ರಾಮನಾಥ್
ಪ್ರ: ರಾಮಮೂರ್ತಿ, ರವಿ
ಸ್ಟು: ಕಂಠೀರವ, ಪ್ರೀಮಿಯರ್
ಹಾ: ೧) 'ಕನ್ನಡದ ಸಿರಿ ಹಾಡೋದಕೆ ಎದೆ ...',
೨) 'ಯಾರಮ್ಮ ಇವನು ನವೆಯ ಹುಡುಗ...',
೩) 'ಚೋರರಿಗೊಂದು ಕಾಲ...',
೪) 'ಹೂವಮ್ಮ ನಿನ್ನ ಮನಸು ಹೂವಮ್ಮ...',
೫) 'ಮೋಜುಗಾರನಾ ಸೊಗಸುಗಾರನ ಹಾಡುಗಾರನಾ...'

ಕ.ಸಾ: ಬಾಲ್ಯದಲ್ಲಿಯೇ ಬೇರಾಗಿ ಯುವಕರಾದಾಗ ಮತ್ತೆ ಒಂದಾಗುವ ಅವಳಿ ಜವಳಿಗಳ ಕಥೆ. ಅವಳಿ ಜವಳಿಗಳಾದ ವಿಜಯ್ ಮತ್ತು ಅಜೇಯ್ ಬಾಲ್ಯದಲ್ಲಿಯೇ ಬೇರಾಗುತ್ತಾರೆ. ಒಬ್ಬ ಮಾರ್ಜಿನಂತೆ ಬೆಳೆಯುತ್ತಾನೆ. ಇನ್ನೊಬ್ಬ ವ್ಯವಸ್ಥಿತ ಜೀವನ ಶೈಲಿಯಲ್ಲಿ ಬೆಳೆಯುತ್ತಾನೆ.

ಅಪರಿಚಿತರು ಹೇಗೆ ಮತ್ತೆ ಎದುರಾಗುತ್ತಾರೆಂಬುದೇ ಚಿತ್ರದಲ್ಲಿ ಸ್ವಾರಸ್ಯದ ಎಳೆಯಾಗಿ ತೆಗೆದುಕೊಳ್ಳಲಾಗಿದೆ.

೧೬೫೯. ಮೃತ್ಯುಬಂಧನ

(೧೯೯೫ / ವರ್ಣ / ಪತ್ತೇದಾರಿ)

ಲಾ: ಸ್ನೇಹ ಚಿತ್ರ
ಪ್ರೊ/ನಿ: ಗುರುಪ್ರಸಾದ್
ಸ.ನಿ: ಸುಹಾಸ್ ಕುಲಕರ್ಣಿ
ಅ: ಕುಮಾರ್ ಗೋವಿಂದ್, ಸಂಗೀತಾ, ಅನಿಲ್, ರಮೇಶಭಟ್
ಕ: ಸುದರ್ಶನ್ ದೇಸಾಯಿಯವರ 'ವಿಷ ಮಂಥನ' ಕಾದಂಬರಿ
ಚಿ.ಕ/ಮಾ: ಗುರುಪ್ರಸಾದ್
ಗೀ: ಶ್ರೀಚಂದ್ರ, ಗುರುಪ್ರಸಾದ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ, ರಾಜೇಶ್, ಮಂಜುಳಾ ಗುರುರಾಜ್
ಸಂ: ಸುರೇಶ್ ಅರಸ್
ಛಾ: ಡಿ.ವಿ.ರಾಜಾರಾಮ್
ಕಲೆ: ಮುತ್ತುರಾಜ್
ಸ: ಪೀಟರ್ ಕೆಮಿಲಾನ್
ನೃ: ಉಡುಪಿ ಜಯರಾಂ, ಸತೀಶ್
ಸಾ: ಥ್ರಿಲ್ಲರ್ ಮಂಜು
ಕ.ಸಾ: ತಾನು ಮಾಡದ ಕೊಲೆಯ ಅಪರಾಧದ ಮೇಲೆ ಪೊಲೀಸರಿಂದ ಬೆನ್ನಟ್ಟಿಸಿಕೊಳ್ಳುವ ನಾಯಕ. ಒಂದು ಕಡೆ ಕೊಲೆ ಮಾಡಿದ ಕೊಲೆಗಡುಕರು ಮತ್ತೊಂದು ಕಡೆ ಪೊಲೀಸರು ಇಬ್ಬರ ನಡುವೆ ಸಿಲುಕಿ ನರಳಾಡುವ ನಾಯಕ ಸಾಹಸದಿಂದ ಹೋರಾಡಿ ರಹಸ್ಯವನ್ನು ಪತ್ತೆಹಚ್ಚುತ್ತಾನೆ.

೧೬೬೦. ತಾಯಿಯಿಲ್ಲದ ತವರು

(೧೯೯೫ / ವರ್ಣ / ಸಾಮಾಜಿಕ)

ಲಾ: ರಾಘವೇಂದ್ರ ಎಂಟರ್‌ಪ್ರೈಸಸ್
ಪ್ರೊ: ಪಿ.ದೇವರಾಜ್, ಜಗದೀಶ್
ನಿ: ಎಸ್.ಮಹೇಂದರ್
ಅ: ಶ್ರುತಿ, ರಾಮ್‌ಕುಮಾರ್, ತಾರಾ, ಬಾಲಕೃಷ್ಣ, ಟೆನ್ನಿಸ್ ಕೃಷ್ಣ, ಆಶಾಲತಾ, ಮಾ|ಆನಂದ್, ಅಜೇಯ್ ಕುಮಾರ್, ಹೊನ್ನವಳ್ಳಿ ಕೃಷ್ಣ, ದೊಡ್ಡಣ್ಣ
ಕ: ಅಜೇಯ್ ಕುಮಾರ್
ಚಿ.ಕ/ಮಾ: ಎಸ್.ಮಹೇಂದರ್
ಗಾ: ರಾಜಕುಮಾರ್
ಸಂ: ಸುಂದರ್‌ರಾಜ್

ಛಾ: ರಮೇಶ್‌ಬಾಬು
ಸ: ಹಂಸಲೇಖ
ಸ್ಟು: ಪ್ರಸಾದ್
ಹಾ: ೧) 'ಅರಿಶಿನ ಕುಂಕುಮ...', ೨) 'ಪ್ರೇಮಗಂಗ ಅಂತರಗಂಗ...', ೩) 'ತಾಯಿ ಇಲ್ಲದ ತವರು ನನ್ನದು...', ೪) 'ಕುಕ್ಕು ಕ್ಕೂ ಕೋಗಿಲೆ...', ೫) 'ಮಂದಾರ ಮಂದಾರ...'

ಕ.ಸಾ: ತಾಯಿ ಇಲ್ಲದ ಹೆಣ್ಣುಮಕ್ಕಳು ಪಡುವ ಕಷ್ಟದ ಸುತ್ತ ಹೆಣೆಯಲಾದ ಕಥೆ. ಒಳ್ಳೆಯ ಹುಡುಗಿಯಾದ ಕಾವೇರಿಯ ಮದುವೆ ಅಷ್ಟೇ ಒಳ್ಳೆಯ ಯುವಕನೊಂದಿಗೆ ಆಗುತ್ತದೆ. ಅವರ ಸಂಸಾರ ಹಾಲು ಜೇನಿನಂತಿರುತ್ತದೆ. ಆದರೆ ಅವಳ ಗಂಡ ಸತ್ತಾಗ ಅತ್ತೆ, ಮಾವ ಅವಳು ಮನೆಯಲ್ಲಿರುವುದನ್ನು ಇಷ್ಟಪಡುವುದಿಲ್ಲ. ತಾಯಿ ಇಲ್ಲದ ತವರನ್ನು ಅವಲಂಬಿಸಲು ಕಾವೇರಿಗೆ ಸಾಧ್ಯವಿರುವುದಿಲ್ಲ. ಇದೇ ಸಮಯದಲ್ಲಿ ಅವಳು ಅವಳಿ ಮಕ್ಕಳಿಗೆ ಜನ್ಮ ನೀಡುತ್ತಾಳೆ. ಈ ಭೂಮಿಯಲ್ಲಿ ಬದುಕುವುದೇ ಅವಳಿಗೆ ನರಕವೆನಿಸುತ್ತದೆ.

೧೬೬೧.ಬೊಂಬಾಟ್ ರಾಜ ಬಂಡಲ್ ರಾಣಿ

(೧೯೯೫ / ವರ್ಣ / ಸಾಮಾಜಿಕ)
ಲಾ: ರಂಜಿತ ಪ್ರೊಡಕ್ಷನ್ಸ್
ಪ್ರೊ: ಶ್ರೀಮತಿ ಗೀತಾ ಲಿಂಗರಾಜ್, ಕೆ.ರಾಜೇಂದ್ರಕುಮಾರ್
ನಿ: ಕುಣಿಗಲ್ ವಸಂತ್
ಸ.ನಿ: ಸುರೇಶ್ ರಾಜ, ಶಶಿಕಿರಣ್, ಎಸ್.ಸಿ.ಕಿಟ್ಟಿ

ಅ: ವಿನೋದ್ ರಾಜ್, ಪ್ರಿಯಾಂಕ, ಧೀರೇಂದ್ರ ಗೋಪಾಲ್, ಕು।ಗುಂಡಪ್ಪ, ಉಮಾಶ್ರೀ, ಡಿಂಗ್ರಿ ನಾಗರಾಜ್, ಬಾಲಕೃಷ್ಣ, ರತ್ನಾಕರ, ಅಮರೀಖರ್, ನೀಗ್ರೋ ಜಾನಿ, ಆನಂದರಾಜ್, ಕನ್ನಡ ರಾಜು, ಸತ್ಯಶ್ರೀ, ದಿವ್ಯಶ್ರೀ, ಕಿಷೋರಿ ಬಲ್ಲಾಳ್
ಕ: ಕೆ.ರಾಜೇಂದ್ರ ಕುಮಾರ್
ಚಿ.ಕ: ಇಳವರಸನ್
ಮಾ: ಕುಣಿಗಲ್ ವಸಂತ್
ಗೀ: ವಿಜಯನಾರಸಿಂಹ, ಶ್ರೀರಂಗ, ಕೆಂಪರಾಜ ಬಿಳಿದಾಳೆ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ, ಮಂಜುಳಾ ಗುರುರಾಜ್
ಸಂ: ರಾಘವ
ಛಾ: ಮಹೇಂದ್ರ, ಚಿಟ್ಟಿಬಾಬು
ಕಲೆ: ನಜೀರ್
ಸ: ರಾಜ್ - ಮೋಹನ್
ಧ್ವ: ಸಂಕೇತ್, ಪ್ರಸಾದ್
ನೃ: ಕಲಾ -ಜಾನ್ ಬಾಬು
ಸಾ: ಜಾಕೂರ್ ತಂಗಂ-ನೀಗ್ರೋ ಜಾನಿ
ವ: ಸತ್ಯಂ
ಪ್ರ: ಬಿ.ಶ್ರೀನಿವಾಸ್
ಸೆ: ೮೯೪-೧೪, ಉದ ೩೪೧೫.೦೦, 'ಯು' ಸರ್ಟಿಫಿಕೇಟ್
ಕ.ಸಾ: ಆಸ್ತಿಯ ಆಸೆಗಾಗಿ ಯುವಕನ ಕೊಲೆ. ನಂತರ ಕೊಲೆಯಾದವನ ತದ್ರೂಪದ ನಾಯಕನ ಪ್ರವೇಶ. ನಾಯಕ ಕೇಡಿಗರಿಗೆ ಬುದ್ಧಿ ಕಲಿಸಿ ಆಸ್ತಿ ದುಷ್ಟರ ಕೈ ಸೇರದಂತೆ ಕಾಪಾಡುತ್ತಾನೆ.

೧೬೬೨. ಕಿಲ್ಲರ್ ಡೈರಿ

(೧೯೯೫ / ವರ್ಣ / ಸಾಮಾಜಿಕ)
ಲಾ: ಶ್ರೀದುರ್ಗಾ ಕ್ರಿಯೇಷನ್ಸ್
ಪ್ರೊ: ಎಂ.ಎಸ್.ಮುರಳಿಕೃಷ್ಣ, ಕೆ.ಬಿ.ಸತೀಶ್ ಕುಮಾರ್, ವಿ.ಕೆ.ರಾಮು, ಶ್ರೀಮತಿ ಗಂಗಮ್ಮ
ನಿ: ಶ್ರೀನಿವಾಸ ರೆಡ್ಡಿ
ಸ.ನಿ: ಸೋಮರಾಜ್, ಕೋಲಾರ್ ನಾಗೇಶ್
ಅ: ದೇವರಾಜ್, ಪ್ರುತಿ, ತಾರಾ, ಉಮಾಶ್ರೀ, ಮುಖ್ಯಮಂತ್ರಿ ಚಂದ್ರು, ಸತ್ಯಜಿತ್, ಶಿವರಾಮ, ಸರಿಗಮ ವಿಜಿ, ಬ್ಯಾಂಕ್ ಜನಾರ್ದನ್, ನವನೀತ, ವತ್ಸಲ, ಮೈನಾ
ಕ: ಶ್ರೀನಿವಾಸ್ ಬಾಬು
ಚಿ.ಕ: ಶ್ರೀನಿವಾಸ ರೆಡ್ಡಿ
ಮಾ: ಸಂಸ್ಥೆಯ ಸಾಹಿತ್ಯ ವಿಭಾಗ
ಗೀ: ಆರ್.ಎನ್.ಜಯಗೋಪಾಲ್, ಮನೋಹರ್, ಶ್ಯಾಮ ಸುಂದರ ಕುಲಕರ್ಣಿ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಮಂಜುಳಾ, ರಾಜೇಶ್
ಸಂ: ಕೆ.ನರಸಯ್ಯ
ಛಾ: ಸಿ.ಡಿ.ರಾಜು, ಎಂ.ಬಾಬು
ಕಲೆ: ಇಸ್ಮಾಯಿಲ್
ಸ: ವಿಜಯಾನಂದ್
ಧ್ವ: ಪ್ರಸಾದ್
ನೃ: ಉಡುಪಿ ಜಯರಾಂ, ದೇವಿ
ಸಾ: ಥ್ರಿಲ್ಲರ್ ಮಂಜು
ವ: ಸತ್ಯಂ
ಪ: ಪುರುಷೋತ್ತಮ್
ಸ್ಥು: ಚಾಮುಂಡೇಶ್ವರಿ
ಹಾ: ೧)'ಕೇಳು ಕುಸುಮವೇ ನನ್ನ ಮುದ್ದು ಕುಸುಮವೇ...', ೨)'ಅಮ್ಮಮ್ಮ ಏನು ಮಾಡಲಿ...', ೩)'ಹಾಲು ಕೂಡು ಹಾಲು ಕೂಡು ...'. ೪)'ಭಾರತಾಂಬೆ ಇದೇ ನಿನ್ನ ಗತಿ...'
ಕ.ಸಾ: ರಹಸ್ಯವಾಗಿ ನಡೆಯುವ ಕೊಲೆಗಳು. ಅವುಗಳಿಗೆ ಸಂಬಂಧಿಸಿದಂತೆ ನಾಲ್ಕೈದು ಮಂದಿ ಸಂಶಯಕ್ಕೊಳಪಡುವುದು ಇಲ್ಲಿನ ಕಥೆ. ಸರಣಿ ಕೊಲೆಗಳ ತನಿಖೆಯನ್ನು ಇನ್ಸ್‌ಪೆಕ್ಟರ್ ಪ್ರತಾಪ್ ಕೈಗೆತ್ತಿ ಕೊಳ್ಳುತ್ತಾನೆ. ಅವನಿಗೇ ಆಶ್ಚರ್ಯವಾಗುವಂತೆ, ಕೊಲೆ ನಡೆಯುವ ಮೊದಲೇ ಅದು ಹೇಗೆ ನಡೆಯುತ್ತದೆ ಎಂದು ವಾರಪತ್ರಿಕೆಯೊಂದರಲ್ಲಿ ವಿವರವಾಗಿ ಪ್ರಕಟಿಸಲಾಗುತ್ತಿರುತ್ತದೆ. ಇನ್ಸ್‌ಪೆಕ್ಟರ್ ಪ್ರತಾಪ್ ಕೊಲೆಗಾರನ ಸುಳಿವನ್ನು ಅರಿತು ಬೆನ್ನಟ್ಟಿದಾಗ ಹೆಂಡತಿಯನ್ನು ಕಳೆದುಕೊಂಡ ಅಸಂತುಷ್ಟ ಗಂಡನೊಬ್ಬ ಕೊಲೆಗಾರನಾಗಿ ಮಾರ್ಪಟ್ಟಿರುವುದು ಬಯಲಾಗುತ್ತದೆ.

೧೬೬೩. ರವಿತೇಜ

(೧೯೯೫ / ವರ್ಣ / ಸಾಮಾಜಿಕ)
ಲಾ: ಓಂ ಸಾಯಿ ಪಿಕ್ಚರ್ಸ್
ಪ್ರೊ: ಶ್ರೀಮತಿ ಎಂ.ಎಲ್.ಎನ್.ಅನುರಾಧಾ ಸ್ವಾಮಿ
ನಿ: ಹೆಚ್.ವಾಸುದೇವ್ ರಾವ್
ಸ.ನಿ: ದೇವರಾಜ ಪಾಲನ್
ಅ: ಕುಮಾರ್ ಗೋವಿಂದ್, ಮಾಳವಿಕಾ, ವಾಸುದೇವ್, ತಾರಾ, ದೊಡ್ಡಣ್ಣ, ಗಿರಿಜಾ ಲೋಕೇಶ್, ಅನ್ನಪೂರ್ಣ, ಅವಾಲತಾ, ರಾಜಾನಂದ್, ಉಮೇಶ್, ಟೆನ್ನಿಸ್ ಕೃಷ್ಣ, ಬ್ಯಾಂಕ್ ಜನಾರ್ದನ್
ಕ/ಚಿ.ಕ: ಹೆಚ್.ವಾಸುದೇವ್
ಗೀ: ಕಲ್ಯಾಣ್
ಸಂ: ಎಸ್.ಪ್ರಸಾದ್
ಛಾ: ಎಂ.ರಾಮು

ಸ: ಸ್ಯಾಕ್ಸ್ ರಾಜಾ
ನೃ: ಉಡುಪಿ ಜಯರಾಂ, ದೇವಿ
ಸಾ: ಸುರೇಶ್
ಹಾ: ೧)'ಚೈತ್ರಾ ನೀನು ಚಿಗುರು ನಾನು...', ೨)'ಐನಾತಿ ಐಕ್ಳು ಅಯ್ಯೋ ಅಯ್ಯೋ...', ೩) 'ಪಾರಿವಾಳ ಪಾರಿವಾಳ ರೆಕ್ಕೆ ಬಿಚ್ಚಿವಾಗ...', ೪)'ಮುಟ್ಟಲು ನಾ ಹಂಚುವೆ ನಾ ಬರಲೆ ರಾಣಿ...', ೫)'ಪ್ರೀತಿ ಕೋಗಿಲೆಯಂತೆ...',
ಕ.ಸಾ: ವಿದ್ಯಾವಂತ ತರುಣ. ತಂದೆಯ ಅಣತಿಯಂತೆ ಊರ ಪಟೇಲನ ಮಗಳಿಗೆ ಇಂಗ್ಲೀಷ್ ಹೇಳಿಕೊಡಲು ಬರುತ್ತಾನೆ. ಅವರಿಬ್ಬರಲ್ಲೂ ಪ್ರೇಮಾಂಕುರವಾಗುತ್ತದೆ. ಆದರ ಅವರ ಪ್ರೇಮಕ್ಕೆ ಹಿರಿಯರ ವಿರೋಧ. ಆಸ್ತಿಗಾಗಿ ಸಂಚು ಮಾಡಿದ ದುಷ್ಟರನ್ನು ಸದೆ ಬಡಿದ ತರುಣ ಪಟೇಲನ ಮಗಳ ಕೈ ಹಿಡಿಯುತ್ತಾನೆ.

೧೬೬೪. ರೌಡಿ

(೧೯೯೫ / ವರ್ಣ / ಸಾಮಾಜಿಕ)
ಲಾ: ಸಂಧ್ಯಾ ಆರ್ಟ್ಸ್
ಪ್ರೊ: ಎಸ್.ಜಿ.ನಂದಿಹಾಳ್, ಕ.ರಾಜು

ನಿ: ಸಾಯಿ ಪ್ರಕಾಶ್
ಸ.ನಿ: ಲಿಂಗರಾಜ್ ಕಗ್ಗಲ್
ಅ: ಶಶಿಕುಮಾರ್, ಮೋಹಿನಿ, ಅಭಿಜಿತ್, ರಮೇಶ್‌ಭಟ್, ಮುಖ್ಯಮಂತ್ರಿ ಚಂದ್ರು, ಕಮಿನೀಧರನ್, ಬೆಂಗಳೂರು ನಾಗೇಶ್
ಕ: ಸಾಯಿ ಪ್ರಕಾಶ್
ಚಿ.ಕ/ಮಾ: ಕುಣಿಗಲ್ ನಾಗಭೂಷಣ್
ಸಂ: ಹಂಸಲೇಖ
ಛಾ: ಜಾನಿಲಾಲ್
ಸ: ರಾಜ್ ಕೋಟಿ
ಸಾ: ಥ್ರಿಲ್ಲರ್ ಮಂಜು
ಕ.ಸಾ: ಅನ್ಯಾಯದ ವಿರುದ್ಧ ಹೋರಾಡುವ ಪದವೀಧರ ಯುವಕನೊಬ್ಬನ ಸುತ್ತ ಹೆಣೆಯಲಾದ ಕಥೆ.
(ವಿವರಳು ಲಭ್ಯವಿಲ್ಲ)

೧೬೬೫. ಮಾಂಗಲ್ಯ ಸಾಕ್ಷಿ

(೧೯೯೫ / ವರ್ಣ / ಸಾಮಾಜಿಕ)
ಲಾ: ಶ್ರೀ ಪರಮೇಶ್ವರಿ ಮೂವೀಸ್

ಪ್ರೊ: ಶ್ರೀಮತಿ ಆರ್.ಲಲಿತ, ಉಮೇಶ್ ಬಣಕಾರ್
ನಿ: ಚಿಕ್ಕಣ್ಣ
ಅ: ಪ್ರುತಿ, ಅಭಿಜಿತ್, ಅಭಿಷೇಕ್
ಕ/ಚಿ.ಕ: ಚಿಕ್ಕಣ್ಣ
ಮಾ: ಎಸ್.ನಾರಾಯಣ್
ಗೀ: ಮಹಾದೇವ ಬಣಕಾರ್, ಎಸ್.ನಾರಾಯಣ್
ಛಾ: ಬಿ.ಎಸ್.ಬಸವರಾಜ್
ಸ: ಸಾಧುಕೋಕಿಲ
ಹಾ: ೧)'ನಾನು ನಿನ್ನನು ಮೆಚ್ಚಿದ ಗೊತ್ತಾ...'. ೨)'ಸಂಜೆ ಗಾಳಿ ಬೀಸುವಾಗ...', ೩) 'ಸಾರಾಯಿ ಶೀಷೆಯಲಿ ನನ್ನ ದೇವಿ...', ೪)'ಮಲಗು ಮಗಳೆ ಏಳವಂತೆ...'
ಕ.ಸಾ: ಮದುವೆಗೆ ಮೊದಲು ಬೇರೊಬ್ಬ ಯುವಕನನ್ನು ಪ್ರೀತಿಸುತ್ತಿದಳೆಂಬ ಕಾರಣಕ್ಕೆ ಗಂಡ ಹೆಂಡತಿಯನ್ನು ಸಂಶಯಿಸಿ ಕಟು ರೀತಿಯಲ್ಲಿ ನಡೆಸಿಕೊಳ್ಳುವುದರ ಸುತ್ತ ಹೆಣೆಯಲಾದ ಕಥೆ. ಇದರಿಂದಾಗಿ ಹೆಂಡತಿಯನ್ನು ಶೋಷಣೆ ಮಾಡುವ ಅವನು ಅವಳ ಕತ್ತಿನಲ್ಲಿರುವ ತಾಳಿಯನ್ನು ಕಿತ್ತುಕೊಳ್ಳುವ ಮಟ್ಟಕ್ಕೂ ಹೋಗುತ್ತಾನೆ. ಇದರಿಂದಾಗಿ ಅವಳು ಮನೆ ಬಿಟ್ಟು ಹೋಗಲು ನಿರ್ಧರಿಸುತ್ತಾಳೆ. ಆದರೆ ಅವಳ ಹಿಂದಿನ ಗೆಳೆಯ ಸಾಯುವ ಸಮಯದಲ್ಲಿ ಅವಳು ಪರಿಶುದ್ಧಳೆಂದೂ ತನ್ನ ಗಂಡನಿಗೇ ನಿಷ್ಠಳೆಂದು ಹೇಳಿ ಸಾಯುತ್ತಾನೆ. ಇದರಿಂದ ಮತ್ತೆ ಆತ ತನ್ನ ಹೆಂಡತಿಯನ್ನು ಸ್ವೀಕರಿಸುತ್ತಾನೆ.

೧೬೬೬. ಧೀರ್ಘ ಸುಮಂಗಲಿ

(೧೯೯೫ / ವರ್ಣ / ಸಾಮಾಜಿಕ)
ಲಾ: ಆದಿತ್ಯ ಮೂವೀ ಮೇಕರ್ಸ್
ಪ್ರೊ: ಟಿ.ಆರ್.ಉಮಾಶಂಕರ್, ಆರ್.ವೆಂಕಟರಾಜು
ನಿ: ಟಿ.ರಾಜೇಂದ್ರ ಬಾಬು
ಸ.ನಿ: ಕಲಾಗಂಗೋತ್ರಿ ಮಂಜು



ಅ: ವಿಷ್ಣುವರ್ಧನ್, ಸಿತಾರಾ, ಶ್ರೀನಿವಾಸ ಮೂರ್ತಿ, ಬಿ.ವಿ.ರಾಧಾ
ಕ: ಎಸ್.ಬಿ.ರಾಜಶೇಖರ್
ಚಿ.ಕ: ಟಿ.ರಾಜೇಂದ್ರಬಾಬು
ಮಾ: ರಚರ್ಡ್ ಲೂಯಿಸ್
ಗೀ: ಹಂಸಲೇಖ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್.ಜಾನಕಿ, ಮನು, ಚಿತ್ರಾ
ಸಂ: ಕೆ.ಬಾಲು
ಛಾ: ಅಶೋಕ್ ಕಶ್ಯಪ್
ಕಲೆ: ರಮೇಶ್ ಬಾಬು
ಸ: ಹಂಸಲೇಖ
ಧ್ವ: ಶಂಕರ್, ಕೃಷ್ಣಮೂರ್ತಿ
ನೃ: ಉಡುಪಿ ಜಯರಾಂ, ದೇವಿ
ಸಾ: ಸುರೇಶ್, ನಂಜುಂಡಿ ನಾಗರಾಜ್
ಹಾ: ೧)' ರವಿಯು ಸಮಯ...', ೨)' ನಾನು ನಿನ್ನನ್ನು ... ೩)'ತವರೊಂದು ಚಿಂತೇ...', ೪)'ಚಂದ್ರಮಂಚಕೆ...'
ಕ.ಸಾ: ನಾಯಕ ತನ್ನ ಕೈ ಕೆಳಗೆ ಕೆಲಸ ಮಾಡುವ ನಾಯಕಿಯನ್ನು ಪ್ರೇಮಿಸುತ್ತಾನೆ. ಆಕೆಯ ಬಳಿ ತಾನು ಆಕೆಯನ್ನು ಪ್ರೀತಿಸುವ ಬಗ್ಗೆ ಇಂಗಿತವನ್ನು ವ್ಯಕ್ತ ಪಡಿಸಲು ಪ್ರಯತ್ನಿಸುವನು. ಆಗ ನಾಯಕಿಗೆ ಈ ಮೊದಲೇ ಮದುವೆಯಾಗಿದ್ದು, ಗಂಡ ಹೆಂಡತಿ ವಿರಸದಿಂದಾಗಿ ದೂರಾಗಿರುವ ವಿಷಯ ತಿಳಿಯುತ್ತದೆ. ನಾಯಕ ಅವರಿಬ್ಬರಲ್ಲಿ ಸಾಮರಸ್ಯ ಮೂಡಿಸಿ ಒಂದು ಗೂಡಿಸುತ್ತಾನೆ.

೧೬೬೭. ಗಡಿಬಿಡಿ ಅಳಿಯ

(೧೯೯೫ / ವರ್ಣ / ಸಾಮಾಜಿಕ)
ಲಾ: ಕಲ್ಯಾಣಿ ಎಂಟರ್‌ಪ್ರೈಸಸ್
ಪ್ರೊ: ಕೆ.ರಾಘವರಾವ್
ನಿ: ಸಾಯಿ ಪ್ರಕಾಶ್
ಸ.ನಿ: ಲಿಂಗರಾಜ್ ಕಗ್ಗಲ್
ಅ: ಶಿವರಾಜ್ ಕುಮಾರ್, ಮಾಲಾಶ್ರೀ, ಮೋಹಿನಿ, ಜಯಮಾಲಾ, ಶ್ರೀನಾಥ್, ಎಂ.ಎನ್.ಲಕ್ಷ್ಮೀದೇವಿ, ರಾಜೇಶ್, ಜಾನಕಿ, ಬ್ಯಾಂಕ್ ಜನಾರ್ದನ್, ದೊಡ್ಡಣ್ಣ, ಟೆನ್ನಿಸ್ ಕೃಷ್ಣ, ರಮೇಶ್ ಭಟ್, ಹೊನ್ನವಳ್ಳಿ ಕೃಷ್ಣ
ಕ: ತೆಲುಗು ಚಿತ್ರದ ಆಧಾರ
ಮಾ: ಕುಣಿಗಲ್ ವಸಂತ್, ಮಧು
ಸಂ: ಕೆಂಪರಾಜ್
ಛಾ: ಜಾನಿಲಾಲ್
ಕಲೆ: ಬಾಬುಖಾನ್
ಸ: ಕೋಟಿ
ನೃ: ಗಂಗಾಧರ್
ಸಾ: ಥ್ರಿಲ್ಲರ್ ಮಂಜು
ಹಾ: ೧)'ಕನ್ನಡದ ಕುವರನು ನಾನೇ. .'.
೨)'ಲೇಡಿಗೆ ಜಂಟಲ್ ಮನ್ನು ..', ೩)'ಜಮಾ ಜಮಾ ಜಮ ಜಮ...', ೪)'ರಾಮ ರಸವೇ ಗಮ್ಮತ್ತು...',
೫)'ಹವಲಾ ಹವಾಲಾ ...',
ಕ.ಸಾ: ತನ್ನ ಮಾವನ ಆಸ್ತಿಯನ್ನು ಎತ್ತಿ ಹಾಕಿಕೊಂಡು, ತಾಯಿಯ ಸರವಾಸಕ್ಕೆ ಕಾರಣಳಾದ ಅತ್ತಗೆ ಬುದ್ಧಿ ಕಲಿಸಲು ಬರುವ ನಾಯಕ, ಈ ನಿಟ್ಟಿನಲ್ಲಿ ಅತ್ತೆಯ ಮಗಳ ಅಹಂಕಾರವನ್ನು ಮುರಿದು ಅತ್ತೆಯ ಮನ ಪರಿವರ್ತಿಸುವಲ್ಲಿ ಯಶಸ್ವಿಯಾಗುತ್ತಾನೆ.

೧೬೬೮. ಆಘಾತ

(೧೯೯೫ / ವರ್ಣ / ಸಾಮಾಜಿಕ)
ಲಾ: ಮಾನಸ ಆರ್ಟ್ಸ್
ಪ್ರೊ: ಮಾನಸ ಆರ್ಟ್ಸ್
ನಿ: ಸುರೇಶ್ ಹೆಬ್ಳೀಕರ್
ಸ.ನಿ: ಲಿಂಗರಾಜ್ ಕಗ್ಗಲ್, ಹರ್ಷವರ್ಧನ್
ಅ: ಸುರೇಶ್ ಹೆಬ್ಳೀಕರ್, ಗಿರೀಶ್ ಕಾರ್ನಾಡ್, ಶ್ರೀಕಾಂತ್, ಪ್ರೊ.ಜಿ.ವಿ.ಶಿವಾನಂದ್, ಪ್ರೊ.ಬಿ.ಕೆ.ಗೋವಿಂದರಾವ್, ರಾಧಾ ರಾಮಚಂದ್ರ, ರಾಮಕೃಷ್ಣ, ವಸಂತ ನಾಕೋಡ್, ಸುಜಾತ
ಕ: ಡಾ|ಅಶೋಕ್ ಪೈ
ಚಿ.ಕ: ಸುರೇಶ್ ಹೆಬ್ಳೀಕರ್
ಮಾ: ಎ.ಬಾಲಕೃಷ್ಣ
ಗೀ: ದ.ರಾ.ಬೇಂದ್ರೆ, ಸ.ಶಿ.ಮರುಳಯ್ಯ, ಎಂ.ಎನ್.ವ್ಯಾಸರಾವ್.
ಗಾ: ರಾಜೇಶ್, ಕುಸುಮ
ಸಂ: ಎಂ.ಎನ್.ಸ್ವಾಮಿ
ಛಾ: ಎಸ್.ಆರ್.ಭಟ್
ಸ: ವಿಜಯಭಾಸ್ಕರ್
ಧ್ವ: ಕೃಷ್ಣಮೂರ್ತಿ, ಅಣ್ಣಾದೊರೈ, ಪೀಟರ್
ವ: ವೆಂಕಟರಾಮು
ಪ್ರ: ಶ್ಯಾಂ ಸುಂದರ್
ವಿ: ೧೯೯೪ ೯೫ರ ರಾಜ್ಯಪ್ರಶಸ್ತಿ: ಅತ್ಯುತ್ತಮ ನಟಿ: ಸ್ಪ್ರುತಿ
ಕ.ಸಾ: ಪ್ರೀತಿಸಿದವನನ್ನು ಹಲವು ಸಂಘರ್ಷಗಳ ನಂತರ ಮದುವೆಯಾದ ಹುಡುಗಿ ಯಾವುದೋ ಕಾರಣದಿಂದ ಮಾನಸಿಕವಾಗಿ ನರಳುತ್ತಾಳೆ. ಮನೋವೈದ್ಯನೊಬ್ಬ ಆಕೆಗೆ ಚಿಕಿತ್ಸೆ ನೀಡುತ್ತಾನೆ. ಆತನ ನೆರವಿನಿಂದ ತನಗಾದ ಆಘಾತದಿಂದ ಬಿಡುಗಡೆಯಾಗಿ ಗುಣ ಹೊಂದುತ್ತಾಳೆ.

೧೬೬೯. ಕೊಟ್ರೇಶಿ ಕನಸು

(೧೯೯೫ / ವರ್ಣ / ಸಾಮಾಜಿಕ)
ಲಾ: ಚಿತ್ರಪ್ರಿಯ ಫಿಲಂಸ್
ಪ್ರೊ: ಜಿ.ನಂದಕುಮಾರ್
ನಿ: ನಾಗತಿಹಳ್ಳಿ ಚಂದ್ರಶೇಖರ್
ಸ.ನಿ: ಗೋಪಿ ಪೀಣ್ಯ
ಅ: ವಿಜಯ ರಾಘವೇಂದ್ರ, ಕರಿಬಸವಯ್ಯ, ಉಮಾಶ್ರೀ, ವಿಷ್ಣುವರ್ಧನ್, ಹೆಚ್.ಜಿ.ದತ್ತಾತ್ರೇಯ, ಬಿ.ಜಯಶ್ರೀ, ಸುಂದರ ರಾಜ್, ಪ್ರಮೀಳಾ ಜೋಷಾಯ್
ಕ: ಕುಂ.ವೀರಭದ್ರಪ್ಪ
ಚಿ.ಕ: ನಾಗತಿಹಳ್ಳಿ ಚಂದ್ರಶೇಖರ್, ಸಿ.ಅಶ್ವತ್
ಮಾ: ನಾಗತಿಹಳ್ಳಿ ಚಂದ್ರಶೇಖರ್
ಗಾ: ಸಿ.ಅಶ್ವತ್, ಬಿ.ಆರ್.ಛಾಯಾ, ಬಿ.ಜಯಶ್ರೀ
ಸಂ: ಸುರೇಶ್ ಅರಸ್
ಛಾ: ಸ್ಟ್ಯಾನಿ ಜೋಸೆಫ್
ಕಲೆ: ಅಪ್ಪಯ್ಯ
ಸ: ಸಿ.ಅಶ್ವತ್
ಧ್ವ: ಅರವಿಂದ್ ಸ್ಟುಡಿಯೋ, ಪ್ರಸಾದ್
ನೃ: ಮದನ್, ಹರಿಣಿ
ವ: ಎ.ಎಸ್.ಶೋಭಾ
ಪ್ರ: ಮೇಕಪ್ ರಾಮಕೃಷ್ಣ
ಸ್ಥ: ಅರವಿಂದ್, ಚಾಮುಂಡೇಶ್ವರಿ
ವಿ: ರಾಷ್ಟ್ರಪ್ರಶಸ್ತಿ, ಅತ್ಯುತ್ತಮ ಬಾಲನಟ ಪ್ರಶಸ್ತಿ: ವಿಜಯ ರಾಘವೇಂದ್ರ, ೧೯೯೪-೯೫ರ ರಾಜ್ಯ ಸರ್ಕಾರದ ಚಲನಚಿತ್ರ ಪ್ರಶಸ್ತಿ: ವಿಶೇಷ ಸಾಮಾಜಿಕ ಪರಿಣಾಮ ಬೀರುವ ಚಿತ್ರ;
ಅತ್ಯುತ್ತಮ ಪೋಷಕ ನಟ: (ಕರಿಬಸವಯ್ಯ)
ಅತ್ಯುತ್ತಮ ಪೋಷಕ ನಟಿ: (ಉಮಾಶ್ರೀ)
ಸೆ: ೧೯೯೪
ಕ.ಸಾ: ದಲಿತ ಬಾಲಕ ಕೊಟ್ರೇಶಿ ಒಳನ ಕ್ಲಾಸ್ ಪಾಸ್ ಮಾಡಿದರೂ ಸವರ್ಣೀಯರ ಅಸೂಯೆಗೆ ಗುರಿಯಾಗಿ ಬಿಡುಗಡೆಯಾಗುತ್ತದೆ. ತನ್ನ ಹೋರಾಟ, ಇಚ್ಛಾ ಶಕ್ತಿಯಿಂದ ಕೊನೆಗೆ ಹೈಸ್ಕೂಲಿಗೆ ಪ್ರವೇಶ ಪಡೆಯುತ್ತಾನೆ. ತನ್ನ ಕನಸನ್ನು ನನಸಾಗಿಸಿಕೊಳ್ಳುತ್ತಾನೆ.

೧೬೭೦. ಅಣ್ಣಾಜಿ

(೧೯೯೫ / ವರ್ಣ / ಸಾಮಾಜಿಕ)
ಲಾ: ರತ್ನಲತಾ ಮೂವೀಸ್
ನಿ: ಆರ್.ದೇವಾಡಿಗ



ಅ: ಕುಮಾರ್ ಗೋವಿಂದ್, ಲತೀಶಾ, ರೇಮಂಡ್ ಡಿಸೂಜ, ಶ್ರೀರಕ್ಷಾ, ಮಧುಶ್ರೀ, ಸಿದ್ಧಾರ್ಥ, ಶೋಭರಾಜ್, ಲೋಹಿತಾಶ್ವ, ರಾಜಾನಂದ್, ಮಿಜಾರು ಅಣ್ಣಪ್ಪ, ರಾಮಣ್ಣ ರೈ
ಕ/ಚಿ.ಕ: ಆರ್.ದೇವಾಡಿಗ
ಸಂ: ಶ್ರೀನಿವಾಸ್ ಬಾಬು
ಛಾ: ಜಿ.ವಿ.ರಮೇಶ್
ಸ: ಚಂದ್ರಕಾಂತ್
ಧ್ವ: ಚಾಮುಂಡೇಶ್ವರಿ
ಸಾ: ಥ್ರಿಲ್ಲರ್ ಮಂಜು
ಹಾ: ೧) 'ನಮ್ಮ ಮಧುರ ಮಿಲನ ಸುದಿನ...', ೨) 'ದೇಶದೊಳಿತಿಗಾಗಿ ನಿನಗೆ...', ೩) 'ಕಣ್ಣು ಮುಚ್ಚಿ ಆಡಿದರ...', ೪) 'ಮಮತೆಯಿದ ಪ್ರೀತಿಯಲಿ ಕಣ್ಣ ಕಾಂತಿಯು...', ೫) 'ಮಾಸಿಯಾಗುವಾ ಜೀವನವಾಸಗೆ...', ೬) 'ನಿನ್ನೊಲವ ಸವಿ ಸವಿಯುವ...'
ಕ.ಸಾ.: ವ್ಯಕ್ತಿಯೊಬ್ಬ ತನ್ನನ್ನು ನಂಬಿದವರ ಹಿತಕ್ಕಾಗಿ ಏನೆಲ್ಲಾ ಸಂಕಷ್ಟ ಎದುರಿಸಬೇಕಾಗಿ ಬಂದರೂ. ಅವರ ಒಳಿತಿಗಾಗಿ ತನ್ನನ್ನೇ ಮುಡಿಪಿಡುವ ಕಥೆ.

೧೬೭೧. ಬಂಗಾರದ ಕಳಸ

(೧೯೯೫ / ವರ್ಣ / ಸಾಮಾಜಿಕ)
ಲಾ: ಶ್ರೀ ಶಂಕರಿ ಪ್ರೊಡಕ್ಷನ್
ಪ್ರೊ: ಎಸ್.ಶಂಕರ್
ನಿ: ಭಾರ್ಗವ
ಸ.ನಿ: ಕೆ.ಬಿ.ಹಿರೇಮಠ್, ಎಸ್.ಪಿ.ಉದಯ, ಎಸ್.ಕ.ಮಹೇಶ್
ಅ: ವಿಷ್ಣುವರ್ಧನ್, ಸಿತಾರಾ, ಅಂಜನಾ, ರಮೇಶ್ ಭಟ್, ಧೀರೇಂದ್ರ ಗೋಪಾಲ್, ಶಿವರಾಂ, ಪೆನ್ನಿರಾಡೆ, ನಿರ್ಮಲ, ಬಿ.ವಿ.ರಾಧಾ, ಬಾಲಕೃಷ್ಣ, ಟೆನ್ನಿಸ್ ಕೃಷ್ಣ, ಸುಧೀರ್, ಶೋಭರಾಜ್, ರಾಜಾನಂದ್, ಡಿಂಗ್ರಿ ನಾಗರಾಜ್, ಬ್ಯಾಂಕ್ ಜನಾರ್ದನ್, ಎಂ.ಎನ್.ಲಕ್ಷ್ಮೀದೇವಿ
ಕ: ಎಸ್.ಟಿ.ಜಯರಾಮ ರಡಿ
ಚಿ.ಕ: ಭಾರ್ಗವ
ಮಾ: ಬಿ.ಎಲ್.ವೇಣು
ಗೀ: ಸು.ರುದ್ರಮೂರ್ತಿಶಾಸ್ತ್ರಿ, ಶ್ಯಾಮಸುಂದರ ಕುಲಕರ್ಣಿ, ಮನೋಹರ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ, ಮಂಜುಳಾ ಗುರುರಾಜ, ಸಂಗೀತಾ ಕಟ್ಟಿ
ಸಂ: ನಾಗೇಶ್ ಯಾದವ್
ಛಾ: ಟಿ.ವಿ.ರಾಜಾರಾಂ
ಸ: ರಾಜನ್ ನಾಗೇಂದ್ರ

ಧ್ವ: ಮನಸ್, ಕೋದಂಡಪಾಣಿ
ನೃ: ಉಡುಪಿ ಜಯರಾಂ
ಸಾ: ನಂಜುಂಡಿ ನಾಗರಾಜ್
ವ: ರಾಮನಾಥ್, ಕೀರ್ತಿ ವಿಷ್ಣುವರ್ಧನ್
ಪ್ರ: ಮೈ.ವೆಂಕಟೇಶ್, ರಾಮಮೂರ್ತಿ
ಹಾ: ೧) 'ಅಹಾ ಅನ್ನೋ ಕಲ್ಪ...', ೨) 'ಎಂಥಾ ಹೆಣ್ಣನ್ನು ಕಂಡ ನಾ...', ೩) 'ಸಂಸಾರವೆಂದರ ಹೀಗಿರಬೇಕು...', ೪) 'ನಮ್ಮೂರ ಕೇರಿಗಳಲ್ಲಿ...', ೫) 'ನಗು ನಗುತಾ ನಲಿಯೋ ನೀನು...', ೬) 'ಸಿಹಿ ಮುತ್ತು ಸಿಹಿ ಮುತ್ತು...'
ಕ.ಸಾ: ಅವನೊಬ್ಬ ರೌಡಿ. ಊರಿನವರೆಲ್ಲ ಅವನನ್ನು ಕಂಡರೆ ಹದರಿ ನಡಗುತ್ತಿದರು. ನಾಯಕಿ ಮೊದಲ ಬಾರಿಗೆ ರೌಡಿಗ ಎದುರು ನಿಲ್ಲುತ್ತಾಳೆ. ಅವನನ್ನು ಬದಲಾಯಿಸುತ್ತಾಳೆ. ಬಂಗಾರದ ಕಳಸ ಮಿನುಗುವಂತ ಆ ರೌಡಿಯನ್ನು ಮಾರ್ಪಡಿಸುತ್ತಾಳೆ.

೧೬೭೨. ಸವ್ಯಸಾಚಿ

(೧೯೯೫ / ವರ್ಣ / ಸಾಮಾಜಿಕ)
ಲಾ: ಶಾಶ್ವತಿ ಚಿತ್ರ
ನಿ: ಎಂ.ಎಸ್.ರಾಜಶೇಖರ್
ಸ.ನಿ: ಬಿ.ಮಂಜುನಾಥ್
ಅ: ಶಿವರಾಜ್‌ಕುಮಾರ್, ಪ್ರೇಮಾ, ಉತ್ತರಾ, ಮಾಲತಿ, ಚರಿತ್ರಾ, ಅವಿನಾಶ್, ತೂಗುದೀಪ ಶ್ರೀನಿವಾಸ್, ಶಂಕರ್‌ಭಟ್, ಹಿಂದಿನಟ ತೇಜ್ ಸಪ್ರು
ಕ: ವಿಜಯಸಾಸನೂರ್ ಅವರ ಕಾದಂಬರಿ ಆಧಾರ
ಚಿ.ಕ/ಮಾ: ಟಿ.ಎನ್.ನರಸಿಂಹನ್
ಸಂ: ಪಿ.ಭಕ್ತವತ್ಸಲಂ
ಛಾ: ಮಲ್ಲಿಕಾರ್ಜುನ
ಕಲೆ: ವೇಣು
ಸ: ಸಾಧುಕೋಕಿಲ



ನೃ: ತಾರಾ-ಪ್ರಸಾದ್
ಸಾ: ಥ್ರಿಲ್ಲರ್ ಮಂಜು
ಸ್ಟು: ಚಾಮುಂಡೇಶ್ವರಿ
ಹಾ: ೧) 'ನಾಗರಹಾವೇ...', ೨) 'ಈ ಹೃದಯದ ಹಾಡು...', ೩) 'ನಮ್ಮ ಮಧುಚಂದ್ರ...', ೪) 'ಚೆಂಗುಲಾಬಿ ತೋಟದಲ್ಲಿ...', ೫) 'ರಾಜ ರಾಣಿ ನಾವೀ ಲೋಕಕೆ...',
ವಿ: ನಟಿ ಪ್ರೇಮಾ ಅಭಿನಯದ ಪ್ರಥಮ ಚಿತ್ರ

ಕ.ಸಾ: ದೇಶವನ್ನು ಅಸ್ಥಿರತೆಯ ಮಡಿಲಿಗೆ ತಳ್ಳುವುದನ್ನೇ ಗುರಿಯಾಗಿಸಿಕೊಂಡ ದೇಶದ್ರೋಹಿಗಳ ಒಂದು ಗುಂಪು. ಅವರ ಕುಟಿಲತೆಯ ರಹಸ್ಯವನ್ನು ಭೇದಿಸಲು ಭಾರತ ಸರ್ಕಾರದಿಂದ ನಿಯೋಜಿತನಾದ ನಾಯಕ. ಆ ಯುವಕ ಸವ್ಯಸಾಚಿಯಂತೆ ಗೆದು ದೇಶದ ಹಿತ ಕಾಪಾಡುತ್ತಾನೆ.

೧೬೭೩. ಲೇಡಿ ಪೊಲೀಸ್

(೧೯೯೫ / ವರ್ಣ / ಸಾಮಾಜಿಕ)
ಲಾ: ಶ್ರೀ ರಾಘವೇಂದ್ರ ಪ್ರೊಡಕ್ಷನ್
ಪ್ರೊ: ಕ.ಸಿ.ರವಿಚಂದ್ರನ್
ನಿ: ನಾಗಣ್ಣ
ಸ.ನಿ: ನೀರ್ನಳ್ಳಿ ರಾಜು
ಅ: ಮಾಲಾಶ್ರೀ, ರಮೇಶ್ ಭಟ್, ಗೀತಾ, ಆಗ್ರೋ ಚಿಕ್ಕಣ್ಣ, ಹರೀಶ್, ವಿನಯಾ ಪ್ರಸಾದ್, ಬಿ.ವಿ.ರಾಧಾ, ರಾಜಾನಂದ್, ಸುಧೀರ್, ಭರತ್ ಭಾಗವತರ್, ಅರ್ಜುನ್
ಕ: ನಾಗಣ್ಣ
ಚಿ.ಕ: ಶ್ರೀನಿವಾಸ್ ಬಾಬು
ಮಾ: ರವಿ ಶ್ರೀವತ್ಸ
ಗೀ: ದೊಡ್ಡರಂಗೇ ಗೌಡ, ಶ್ಯಾಮಸುಂದರ ಕುಲಕರ್ಣಿ, ರಮೇಶ್ ರಾವ್
ಗಾ: ರಾಜಕುಮಾರ್, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಉದಿತ್ ನಾರಾಯಣ್, ಸುನೀತಾ ರಾವ್, ಶ್ರೀರಂಗ, ಸ್ವರ್ಣಲತಾ, ಸಂಗೀತಾ ಕಟ್ಟಿ
ಸಂ: ಸುರೇಶ್ ಅರಸ್
ಛಾ: ಜೆ.ಜಿ.ಕೃಷ್ಣ



ಕಲೆ: ಕೃಷ್ಣಾಚಾರ್
ಸ: ರಾಜೇಶ್ ರಾಮನಾಥ್
ಧ್ವ: ಕಣ್ಣನ್, ಎಂ.ಸಿ. ನರೇಂದ್ರ
ನೃ: ದೇವಾ ಸಂಪತ್, ಉಡುಪಿ ಜಯರಾಂ, ದೇವಿ
ಸಾ: ಥ್ರಿಲ್ಲರ್ ಮಂಜು
ವ: ನಾಗರಾಜ್, ಬಾಬ್ಜಿ
ಪ್ರ: ಮೈಸೂರು ವೆಂಕಟೇಶ್
ಸ್ಟು: ಕಂಠೀರವ
ಹಾ: ೧) 'ಮಂಜುಳ ಮಂಜುಳ...', ೨) 'ಊರು ಊರಿನಲಿ...', ೩) 'ಲೇಡಿ ಪೋಲೀಸ್...', ೪) 'ಹಾಯ್ ಮಾಮ...', ೫) 'ನೋವು ನಲಿವೇ ಬದುಕು...'
ವಿ: ೧) ಉದಿತ್ ನಾರಾಯಣ್ ಹಾಡಿದ ಪ್ರಥಮ ಕನ್ನಡ ಚಿತ್ರ ೨) ರಾಜೇಶ್ ರಾಮನಾಥ್ ಸಂಗೀತ ನೀಡಿದ ಪ್ರಥಮ ಚಿತ್ರ ೩) ಜೈಲಿನಲ್ಲೇ ಖೈದಿಗಳು ಪರೀಕ್ಷೆ ಬರೆಯುವ ದೃಶ್ಯ ಅಳವಡಿಸಿದೆ.
ಕ.ಸಾ: ಒಬ್ಬ ಲೇಡಿ ಪೋಲೀಸ್ ಬ್ಲ್ಯೂ ಫಿಲಂ ವಿರುದ್ಧ ಸಮರ ನಡೆಸಿ ಅಪರಾಧಿಗಳಿಗೆ ಶಿಕ್ಷೆ ಕೊಡುವ ಕತ. ಜೈಲಿನಲ್ಲೇ ಶಿಕ್ಷಣ ಪಡೆದು ಪೋಲೀಸ್ ಅಧಿಕಾರಿಯಾಗುವ ಒಬ್ಬ ಹೆಣ್ಣಿನ ಸುತ್ತ ಹೆಣೆದ ಚಿತ್ರಕತೆ ಇದೆ.

೧೬೭೪. ಗೌರಿಶಂಕರ

(೧೯೯೫ / ವರ್ಣ / ಸಾಮಾಜಿಕ)
ಲಾ: ಓಂ ಶಿವಶಕ್ತಿ ಫಿಲಂಸ್
ಪ್ರೊ: ಮಲ್ಲಿಕಾರ್ಜುನಯ್ಯ (ಆರ್.ಟಿ.ಪಿ.ರೇವಣ್ಣ)
ನಿ: ಅಶೋಕ್ ಬಾದರದಿನ್ನಿ
ಸ.ನಿ: ಪಿ.ಶೇಷಾದ್ರಿ

ಅ: ಮಾಧುರಿ, ದತ್ತಾತ್ರೇಯ, ಮಂಜುನಾಥ್ ಹೆಗಡೆ, ನಾಗಾಭರಣ, ಅಶೋಕ್ ಬಾದರದಿನ್ನಿ, ರಿಚರ್ಡ್ ಲೂಯಿಸ್, ಮಂಜುಳ
ಕ: ಅಶೋಕ್ ಬಾದರದಿನ್ನಿ
ಚಿ.ಕ/ಮಾ: ಪಿ.ಶೇಷಾದ್ರಿ
ಗೀ: ವಚನಗಳು
ಗಾ: ಲತಾ ಹಂಸಲೇಖ, ಹಂಸಲೇಖ
ಸಂ: ಸುರೇಶ್ ಅರಸ್,
ಛಾ: ವಸಂತ್ ಕುಮಾರ್
ಸ: ಹಂಸಲೇಖ
ಧ್ವ: ಚಾಮುಂಡೇಶ್ವರಿ
ಸಾ: ಮೂರ್ತಿ
ಕ.ಸಾ: ಸಿದ್ಧಿ, ಸಿಕ್ಕೇಪದ ಆಸೆಗಾಗಿ ಊರೊಂದರ ಗೌಡ ಹೆಣ್ಣುಮಕ್ಕಳನ್ನು ಬಲಿ ಕೊಡುತ್ತಾ ಸಾಗುತ್ತಾನೆ. ತನ್ನ ಮೊಮ್ಮಗಳನ್ನೇ ಬಲಿ ಕೊಡಬೇಕಾಗಿ ಬಂದಾಗ ಗೌಡನ ಮಗಳೇ ಸಿಡಿದು ತಂದೆಯನ್ನೇ ಕೊಂದು ಕಥೆಗೆ ಇತಿಶ್ರೀ ಹಾಡುತ್ತಾಳೆ.

೧೬೭೫. ತುಂಬಿದ ಮನೆ

(೧೯೯೫ / ವರ್ಣ / ಸಾಮಾಜಿಕ)
ಲಾ: ವಿಜಯಾ ಫಿಲಂಸ್
ಪ್ರೊ: ಕೆ.ಪ್ರಭಾಕರ್
ನಿ: ಎಸ್.ಉಮೇಶ್
ಅ: ವಿಷ್ಣುವರ್ಧನ್, ಶಶಿಕುಮಾರ್, ಅಭಿಜಿತ್, ಅಶೋಕ್, ಶಿವಕುಮಾರ್, ಲೋಕನಾಥ್, ಧೀರೇಂದ್ರಗೋಪಾಲ್, ಕೀರ್ತಿ, ಸಿ.ಆರ್.ಸಿಂಹ, ಲೋಹಿತಾಶ್ವ, ಡಿಂಗ್ರಿ ನಾಗರಾಜ್, ಬ್ಯಾಂಕ್ ಜನಾರ್ದನ್, ಕೆ.ವಿ.ಮಂಜಯ್ಯ, ವಿನಯಾ ಪ್ರಸಾದ್, ಶ್ರುತಿ, ತಾರಾ, ಅಂಜಲಿ, ಪ್ರಮಿಳಾ ಜೋಷಾಯ್, ಉಮಾಶ್ರೀ, ಗಿರಿಜಾ ಲೋಕೇಶ್, ಆಶಾಲತಾ, ಶೋಭಾ ರಾಘವೇಂದ್ರ
ಕ: ಕೆ.ಪ್ರಭಾಕರ್
ಚಿ.ಕ/ಮಾ/ಗೀ: ಎಂ.ಡಿ.ಹಾಷಂ (ಬಿಡಗ)
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಸಂಗೀತಾ ಕಟ್ಟಿ, ಮಂಜುಳಾ ಗುರುರಾಜ್
ಸಂ: ಎಸ್.ಉಮೇಶ್
ಛಾ: ಹೆಚ್.ಜಿ.ರಾಜು
ಕಲೆ: ಜನಾರ್ದನ್
ಸ: ಉಪೇಂದ್ರ ಕುಮಾರ್
ಧ್ವ: ಎಸ್.ಪಿ.ರಾಮನಾಥನ್
ನೃ: ಸತೀಶ್, ಕಮಲ್, ಉಡುಪಿ ಜಯರಾಂ, ಶಿವಶಂಕರ್
ಸಾ: ನಂಜುಂಡಿ ನಾಗರಾಜ್
ಸ್ಟು: ಪ್ರಸಾದ್, ಚಾಮುಂಡೇಶ್ವರಿ
ಹಾ: ೧)'ಕಾ..ವೇ..ರಿ.. ಸಿರಿಗನ್ನಡ ನಾಡವು...', ೨)'ಹತ್ತಿರ ಹತ್ತಿರ ಬಂದಾಗೆಲ್ಲ...', ೩)'ಜೀವಕ್ಕೆ ಜೀವ ಕೊಡುವ...', ೪)'ಶ್ರೀ ರಾಮಚಂದ್ರನ ಅವತಾರ ನೀನು..', ೫)'ಫಲಿಸಿತು ಪ್ರೇಮದ ಆರಾಧನೆ...'
ಕ.ಸಾ: ಹೊರಗಿನವರ ಪ್ರವೇಶದಿಂದಾಗಿ ಅವಿಭಕ್ತ ಕುಟುಂಬವೊಂದು ನಾನಾ ಸಂಕಷ್ಟಗಳನ್ನು ಎದುರಿಸಬೇಕಾಗುವ ಕಥೆ. ಕುಟುಂಬದ ಮುಖ್ಯಸ್ಥನಾದ ರಾಮಣ್ಣನ ಮಾತೇ ಎಲ್ಲದಕ್ಕೂ ಕೊನೆಯಾಗಿರುತ್ತದೆ. ಇದನ್ನು ಪ್ರಶ್ನಿಸಲು ಯಾರಿಗೂ ಧೈರ್ಯವಿರುವುದಿಲ್ಲ. ಕುಟುಂಬದ ಈ ಒಗ್ಗಟ್ಟು ಕೆಲವರ ಹೊಟ್ಟೆ ಉರಿಗೆ ಕಾರಣವಾಗುತ್ತದೆ. ಇದರಿಂದ ಆ ಕುಟುಂಬದ ಯುವಜನರ ಮನ ಕೆಡಿಸುತ್ತಾರೆ. ಹೀಗಾಗಿ ಅನೇಕ ಸಂಕಷ್ಟಗಳನ್ನು ಅನುಭವಿಸಬೇಕಾಗುವ ಕುಟುಂಬ ಅಂತ್ಯದಲ್ಲಿ ಮತ್ತೆ ಒಂದಾಗುತ್ತದೆ.

೧೬೭೬. ಗಣೇಶನ ಗಲಾಟೆ

(೧೯೯೫ / ವರ್ಣ / ಸಾಮಾಜಿಕ)
ಲಾ/ಪ್ರೊ: ಲಹರಿ ರೆಕಾರ್ಡಿಂಗ್ ಕಂಪನಿ
ನಿ: ಫಣಿ ರಾಮಚಂದ್ರ
ಅ: ಶಶಿಕುಮಾರ್, ಸಿತಾರಾ, ಅಂಜನಾ, ರಮೇಶ್ ಭಟ್, ಮಿಸ್ಟ್ರೀ ಶಾಂತಿ, ಸಿಲ್ಕ್ ಸ್ಮಿತಾ, ಸಿಹಿಕಹಿ ಚಂದ್ರು, ವೈಶಾಲಿ ಕಾಸರವಳ್ಳಿ, ಮಾ|ಆನಂದ್, ಮಾ|ಅರುಣ್, ಎಂ.ಎನ್.ಲಕ್ಷ್ಮೀದೇವಿ
ಕ: ಮುರಳಿ
ಚಿ.ಕ/ಮಾ: ಫಣಿರಾಮಚಂದ್ರ, ಹಾ.ಸ.ಕೃ
ಗೀ: ಎಂ.ಎನ್.ವ್ಯಾಸರಾವ್, ಶ್ಯಾಂಸುಂದರ ಕುಲಕರ್ಣಿ, ಗೀತಪ್ರಿಯ, ಸು.ರುದ್ರಮೂರ್ತಿ ಶಾಸ್ತ್ರಿ, ದೊಡ್ಡರಂಗೇಗೌಡ, ವಿ.ಮನೋಹರ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ರಾಜೇಶ್ ಕೃಷ್ಣನ್, ಚಿತ್ರಾ
ಸಂ: ಸುರೇಶ್ ಅರಸ್
ಛಾ: ಆರ್.ಮಂಜುನಾಥ
ಸ: ರಾಜನ್ ನಾಗೇಂದ್ರ
ಧ್ವ: ಚಾಮುಂಡೇಶ್ವರಿ
ನೃ: ಸತೀಶ್
ಸ್ಟು: ಚಾಮುಂಡೇಶ್ವರಿ
ಹಾ: ೧)'ಭಾಗ್ಯದ ಲಕ್ಷ್ಮಿ ಬಂದಾಯ್ತು ...', ೨)'ಡೋಂಟ್ ವರಿ ಚಿನ್ನಾ ...', ೩)'ಗಂಡ.. ಹೆಂಡತಿ ಎಂದರ ...', ೪)'ಕಮ್ ಕಮ್ ಡಾರ್ಲಿಂಗ್ ...', ೫)'ಪ್ರೀತಿಯ ಸಳತ ...', ೬)'ಕಿಲ್ಲರ್ ನಾನೇ ಕಿಲ್ಲರ್ ...'
ಕ.ಸಾ: ಹಾಸ್ಯ ಪ್ರಧಾನ ಚಿತ್ರ. ಮತ್ತೆ ಮತ್ತೆ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸುವ ನಾಯಕ ಪ್ರತಿ ಬಾರಿಯೂ ಸೋಲುತ್ತಿರುತ್ತಾನೆ. ಅದೂ ಅಲ್ಲದೆ ಇನ್ಶೂರೆನ್ಸ್ ಪಾಲಿಸಿಯ ಏಜೆಂಟ್ ಕೂಡ ಇದರಲ್ಲಿ ಭಾಗಿಯಾಗಿರುತ್ತಾನೆ. ಕೊನೆಯಲ್ಲಿ ತನ್ನ ಗುರಿಯನ್ನು ಸಾಧಿಸಲು ನಾಯಕ ಬಾಡಿಗೆ ಕೊಲೆಗಾರರನ್ನು ಗೊತ್ತು ಮಾಡುತ್ತಾನೆ.

೧೬೭೭. ಓಂ

(೧೯೯೫ / ವರ್ಣ / ಸಾಮಾಜಿಕ)
ಲಾ: ಪೂರ್ಣಿಮಾ ಎಂಟರ್‌ಪ್ರೈಸಸ್
ಪ್ರೊ: ಶ್ರೀಮತಿ ಪಾರ್ವತಮ್ಮ ರಾಜಕುಮಾರ್
ನಿ: ಉಪೇಂದ್ರ
ಸ.ನಿ: ಮುರಳಿ ಮೋಹನ್, ಲೋಕನಾಥ್
ಅ: ಶಿವರಾಜ್ ಕುಮಾರ್, ಪ್ರೇಮ, ಶ್ರೀಶಾಂತಿ, ಜಿ.ವಿ.ಶಿವಾನಂದ್, ಸೀತಾರಾಂ, ಹೊನ್ನವಳ್ಳಿ ಕೃಷ್ಣ, ಹರೀಶ್ ರಾಯ್, ಸಾಧು ಕೋಕಿಲ, ಅರವಿಂದ್, ಜ್ಯೋತಿ, ವಾಣಿಶ್ರೀ
ಕ/ಚಿ.ಕ/ಮಾ: ಉಪೇಂದ್ರ
ಗೀ: ಹಂಸಲೇಖ
ಗಾ: ರಾಜಕುಮಾರ್, ಮನು
ಸಂ: ಶಶಿಕುಮಾರ್
ಛಾ: ಬಿ.ಸಿ.ಗೌರಿಶಂಕರ್
ಸ: ಹಂಸಲೇಖ
ಸಾ: ಥ್ರಿಲ್ಲರ್ ಮಂಜು
ಹಾ: ೧)'ಓಂ ಬ್ರಹ್ಮಾನಂದ ಓಂಕಾರ..', ೨)'ಕೋಮ ಕೋಮ ಕಾಲೇಜು ಕುಮಾರ್...', ೩)'ಮೆಹಬೂಬಾ ಮೆಹಬೂಬಾ...', ೪)'ಓ ಗುಲಾಬಿಯೇ ಓಹೋ ಗುಲಾಬಿಯೇ...'.
ವಿ: ನಿಜ ಜೀವನದಲ್ಲಿಯೂ ರೌಡಿಗಳಾದವರನ್ನು ತಾರಾಗಣದಲ್ಲಿ ಬಳಸಿಕೊಂಡ ಚಿತ್ರ. ೧೯೯೫-೯೬ರ ರಾಜ್ಯ ಪ್ರಶಸ್ತಿ ಚಲನಚಿತ್ರ ಪ್ರಶಸ್ತಿ: ಅತ್ಯುತ್ತಮ ನಟ: (ಶಿವರಾಜಕುಮಾರ್), ಅತ್ಯುತ್ತಮ ನಟಿ: (ಪ್ರೇಮಾ), ಅತ್ಯುತ್ತಮ ಚಿತ್ರನಾಟಕ ಕರ್ತೃ: (ಉಪೇಂದ್ರ)
ಕ.ಸಾ: ಹುಡುಗಿಯೊಬ್ಬಳು ಪ್ರತೀಕಾರ ತೀರಿಸಿಕೊಳ್ಳುವ ಸಲುವಾಗಿ ಅಪರಾಧದ ಪ್ರಪಂಚಕ್ಕೆ ತಳ್ಳಲ್ಪಡುವ ಯುವಕನೊಬ್ಬ ಭೂಗತದ ದೊರೆಯಂತಾಗಿ ಅದರಿಂದ ಹೊರಬಂದು ಮತ್ತೆ ಹಿಂದಿನ ಬದುಕನ್ನು ತನ್ನದಾಗಿಸಿಕೊಳ್ಳಲು ಪ್ರಯತ್ನಿಸುವ ಕಥೆ. ಆ ಹುಡುಗಿಗೆ ತಾನು ಅವನನ್ನು ತಪ್ಪು ದಾರಿಗೆಳೆದ ನಂಬಿ ಅರಿವಾಗುವ ವೇಳೆಗಾಗಲೇ ಅವನು ರೌಡಿಗಳ ಗುಂಪಿಗೇ ನಾಯಕನಂತಾಗಿ ಸಾಲು ಕೊಲೆಗಳನ್ನೇ ಮಾಡಿರುತ್ತಾನೆ. ಯಾವ ರೀತಿಯಲ್ಲಿ ಅವನು ಈ ಸುಳಿಯಿಂದ ಹಿಂದಿನ ಬದುಕಿಗೆ ಬರುತ್ತಾನೆಂಬುದು ಚಿತ್ರದ ಕೊನೆಯ ಭಾಗವಾಗಿದೆ.

೧೬೭೮. ಸತ್ಯಜ್ವಾಲೆ

(೧೯೯೫ / ವರ್ಣ / ಸಾಮಾಜಿಕ)
ಲಾ: ಅಪೋಲೋ ಆರ್ಟ್ ಪಿಕ್ಚರ್ಸ್
ಪ್ರೊ: ಶ್ರೀಮತಿ ಲಕ್ಷ್ಮೀ, ಜಮಾಲ್ ಮಿರಾನ್
ನಿ: ಶಿವಚಂದ್ರನ್
ಸ.ನಿ: ಅಶೋಕ್ ಪಾಂಡ್ಯನ್, ಕೃಷ್ಣ
ಅ: ಶ್ರುತಿ, ಸುಧಾರಾಣಿ, ಲಕ್ಷ್ಮೀ, ರಾಮ್‌ಕುಮಾರ್, ಅಭಿಜಿತ್, ಜೆ ಜಗದೀಶ್, ಅಶೋಕ ರಾವ್, ಬ್ಯಾಂಕ್ ಜನಾರ್ದನ್, ಪದ್ಮಾ ವಾಸಂತಿ, ಶಂಕರ್ ಅಶ್ವತ್ಥ್
ಕ/ಚಿ.ಕ: ಶಿವಚಂದ್ರನ್
ಮಾ: ಕಣಗಾಲ್ ಪುರುಷೋತ್ತಮ್
ಗೀ: ದೊಡ್ಡರಂಗೇಗೌಡ, ಕಣಗಾಲ್ ಪುರುಷೋತ್ತಮ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ, ಎಸ್.ಜಾನಕಿ
ಸಂ: ಸ್ವಾಮಿ
ಛಾ: ಪ್ರತಾಪ್
ಕಲೆ: ಸುಂದರಂ
ಸ: ಹಂಸಲೇಖ
ಧ್ವ: ಮಹೇಂದ್ರನ್, ಕೋದಂಡಪಾಣಿ
ವ: ಶಿವಲಿಂಗಸ್ವಾಮಿ
ಪ್ರ: ಬಾಬು
ಸ್ಟು: ಪ್ರಸಾದ್
ವಿ: ನಟಿ ಲಕ್ಷ್ಮೀ ನಿರ್ಮಿಸಿ, ಆಕೆಯ ಪತಿ ನಿರ್ದೇಶಿಸಿದ ಚಿತ್ರ.
ಕ.ಸಾ: ರಾಜಕೀಯ ಶಕ್ತಿ ಮತ್ತು ಭ್ರಷ್ಟಾಚಾರದ ವಿರುದ್ಧ ಪ್ರಾಮಾಣಿಕ ಮಹಿಳೆಯೊಬ್ಬಳು ಹೋರಾಡುವ ಕಥೆ. ಶಿಕ್ಷಕಿಯಾದ ಸಾವಿತ್ರಮ್ಮ ಮಗಳು ಮತ್ತು ಇಬ್ಬರು ಗಂಡು ಮಕ್ಕಳ ಕುಟುಂಬದೊಂದಿಗೆ ಸಂತೋಷವಾಗಿರುತ್ತಾಳೆ. ಅವಳ ಮಗಳು ರಾಜಕೀಯ ವ್ಯಕ್ತಿಯ ಮಗನ ಪ್ರೇಮದಲ್ಲಿ ಸಿಲುಕುತ್ತಾಳೆ. ಇದು

ಸಾವಿತ್ರಮ್ಮ ನನ್ನು ಶೋಷಣೆ ಮತ್ತು ಮಾನಸಿಕ ಕ್ಷೋಭೆಗಳಿಗೆ ಈಡು ಮಾಡುತ್ತವೆ. ಆವಳು ಯಾವ ರೀತಿ ಇವನ್ನು ತಾಳಿಸುತ್ತಾಳೆಂಬುದೇ ಚಿತ್ರದ ಕೊನೆಯ ಭಾಗವಾಗಿದೆ.

೧೬೭೯. ಹೆಂಡತಿ ಎಂದರೆ ಹೀಗಿರಬೇಕು

(೧೯೯೫ / ವರ್ಣ / ಸಾಮಾಜಿಕ)
ಲಾ: ಶ್ರೀ ಗಾಯತ್ರಿ ಪ್ರೊಡಕ್ಷನ್
ಪ್ರೊ/ನಿ: ಕಾಶೀನಾಥ್
ಅ: ಕಾಶೀನಾಥ್, ಸುಂದರ್ ರಾಜ್, ಶೇಷಮೂರ್ತಿ, ರಮಾನಂದ್, ದಯಾನಂದ್, ಅಕ್ಷತ, ಸತ್ಯಭಾಮ, ಆರ್.ಟಿ.ರಮಾ, ಗಿರಿಜಾ ಲೋಕೇಶ್, ಎಂ.ಎನ್.ಲಕ್ಷ್ಮೀದೇವಿ
ಕ: ಎಂ.ಕೆ.ಇಂದಿರಾ ಅವರ 'ಕೂಟುಭಟ್ಟ' ಕಾದಂಬರಿ ಆಧಾರ
ಚಿ.ಕ/ಮಾ: ಉಮಾಪತಿ
ಗೀ: ಕಾಶೀನಾಥ್
ಗಾ: ಕಾಶೀನಾಥ್, ಬಿ.ಆರ್.ಛಾಯಾ, ರಮಾ ಅರವಿಂದ್, ಅತ್ರಿ, ರಾಜೇಶ್, ಸಂಗೀತಾ ಕಟ್ಟಿ, ಎಲ್.ಎನ್.ಶಾಸ್ತ್ರೀ, ಆರ್.ಶ್ರೀನಾಥ್
ಸಂ: ಸುಬ್ರಹ್ಮಣ್ಯ
ಛಾ: ಉಮಾಪತಿ
ಸ: ಕಾಶೀನಾಥ್
ಧ್ವ: ಕೃಷ್ಣಮೂರ್ತಿ
ನೃ: ಮದನ್
ಪ್ರ: ಮೂರ್ತಿ ಬೆಂಗಳೂರ್‌ಕರ್
ಸ್ಟು: ಕಂಠೀರವ
ಹಾ: ೧) 'ಮಾಡ್ತೀನಿ ಮಾಡ್ತೀನಿ ಮದ್ವೆ ಮಾಡ್ತೀನಿ...',

೨) 'ಬಾರೋ ರಂಭೆ ಬಳಿಗೆ ಸೇರೋ...', ೩) 'ನಾನೇ ಸೀತೆ ನೀನೇ ರಾಮ...', ೪) 'ಹೆಂಡತಿ ಎಂದರೆ ಹೀಗಿರಬೇಕು...'
ಕ.ಸಾ: ಮಹಾ ಕವಿಗಳ ಶೃಂಗಾರ ಕಾವ್ಯಗಳಲ್ಲಿನ ವರ್ಣನೆಗಳನ್ನು ಓದಿ ತನ್ನ ಹೆಂಡತಿಯಾಗುವವಳಲ್ಲಿ ಆ ಹತ್ತು ಹಲವು ಲಕ್ಷಣಗಳಿರಬೇಕೆಂದು ಬಯಸುವ ನಾಯಕ. ಸೋದರ ಮಾವನ ಮಗಳನ್ನೇ ತಂದು ಕೊಳ್ಳಲು ಮನೆಯ ಹಿರಿಯರ ನಿರ್ಧಾರ. ಆ ಹೆಣ್ಣು ಇವನನ್ನೇ ಪತಿ ಎಂದುಕೊಂಡರೂ ಇವನು ಮಾತ್ರ ಅವಳಿಂದ ದೂರ. ನಾಯಕ ತನ್ನ ಕಾವ್ಯ ಕನ್ಯೆಯನ್ನು ಹಲವು ತರುಣಿಯರಲ್ಲಿ ಕಾಣಲೆತ್ನಿಸಿ ವಿಫಲನಾಗುತ್ತಾನೆ. ಮಾವನ ಮಗಳಿಗೆ ಬೇರೆ ವರ ಗೊತ್ತಾಗುತ್ತದೆ. ಗೆಳೆಯ ಮನೋವಿಜ್ಞಾನಿಯ ಮೂಲಕ ನಾಯಕನ ಕಾವ್ಯ ಕನ್ಯೆಯ ಹುಚ್ಚು ಬಿಡಿಸುತ್ತಾನೆ. ಮಾವನ ಮಗಳಿಗೆ ಗೊತ್ತಾದ ವರ ವಂಚಕನೆಂಬುದನ್ನು ಪೊಲೀಸರ ಸಹಾಯದಿಂದ ಸಾಧಿಸಿ, ಕೊನೆಗೆ ಅವಳನ್ನೇ ಮದುವೆಯಾಗುತ್ತಾನೆ.

೧೬೮೦. ಓಹೋ

(೧೯೯೫ / ವರ್ಣ / ಸಾಮಾಜಿಕ)
ಲಾ: ಎಂ.ಎಂ.ಕೆ.ಕ್ರಿಯೇಷನ್ಸ್
ಪ್ರೊ: ಎಂ.ಸಾಂಬಶಿವರಾವ್
ನಿ: ಹೆಚ್.ಎಸ್.ಶಂಕರ್



ಸ.ನಿ: ಕೆ.ವಿ.ಕೃಷ್ಣೋಜಿರಾವ್, ವಸಂತ್ ಕೊಂಡಜ್ಜಿ
ಅ: ಎಸ್.ನಾರಾಯಣ್, ಶ್ರೀವಾಣಿ, ಬಿ.ಮಲ್ಲೇಶ್, ಬಿ.ಜಯಾ, ಬೆಂಗಳೂರು ನಾಗೇಶ್, ಶ್ರೀವಾಮನ್, ಪಾಪಮ್ಮ, ಮಂಜುಳ, ಉಮಾ ದೀಕ್ಷಿತ್, ಬಿರಾದಾರ್
ಕ: ಎಂ.ಸಾಂಬಶಿವರಾವ್
ಚಿ.ಕ: ಹೆಚ್.ಎಸ್.ಶಂಕರ್
ಮಾ: ಬಿ.ಮಲ್ಲೇಶ್
ಸಂ: ಕಟ್ಟಾ ಶ್ರೀಕರ್ ಪ್ರಸಾದ್
ಛಾ: ಎಂ.ಮುತ್ತುರಾಜ್
ಸ: ಸಾಧುಕೋಕಿಲ
ವ: ವಿಠಲ್ ಕುಮಾರ್
ಪ್ರ: ವಿಠಲ್ ಬಾಬು
ಸೆ: ರೀಲು-೧೫
(ಹೆಚ್ಚಿನ ವಿವರಗಳು ಲಭ್ಯವಿಲ್ಲ)

೧೬೮೧. ಮದರ್ ಇಂಡಿಯಾ

(೧೯೯೫ / ವರ್ಣ / ಸಾಮಾಜಿಕ)
ಲಾ: ಆದಿಲಕ್ಷ್ಮೀ ಫಿಲಂಸ್
ಪ್ರೊ: ಎಂ.ರಾಜೇಂದ್ರ
ನಿ: ಶಿವಮಣಿ
ಸ.ನಿ: ವಿ.ಎಸ್.ತಿಮ್ಮಯ್ಯ
ಅ: ದೇವರಾಜ್, ನಿರೋಷ, ಚೇತನ್ ರಾಮರಾವ್, ಶ್ರೀನಿವಾಸಮೂರ್ತಿ, ಮೇಕಪ್ ಕೃಷ್ಣ
ಕ: ಆಡೂರು ಗೋಪಾಲಕೃಷ್ಣನ್
ಚಿ.ಕ: ಶಿವಮಣಿ
ಮಾ: ರಿಚರ್ಡ್ ಲೂಯಿಸ್
ಗೀ: ಹೆಚ್.ಎಸ್.ವೆಂಕಟೇಶ ಮೂರ್ತಿ
ಗಾ: ಮಂಜುಳಾ ಗುರುರಾಜ್
ಸಂ: ಸುರೇಶ್ ಅರಸ್
ಛಾ: ವಿ.ವಿ.ಕೃಷ್ಣಕುಮಾರ್
ಸ: ಸಾಧು ಕೋಕಿಲ
ಸಾ: ಥ್ರಿಲ್ಲರ್ ಮಂಜು

ಹಾ: 'ಆಹಾ ಮುಗಿಲೇ ದೂರ ನಿಲ್ಲದೇ...'
ಕ.ಸಾ.: ಉಗ್ರಗಾಮಿಯೊಬ್ಬನನ್ನು ಮದುವೆಯೆಂಬ ಬಂಧನದಲ್ಲಿ ಸಿಲುಕಿಸಿ, ಅವನ ಮೂಲಕವೇ ಆ ಗುಂಪಿನ ಮೂಲವನ್ನು ಬೇರು ಸಹಿತ ಕೀಳಲು ಹೊರಟ ಸಾಹಸಿ ಪೊಲೀಸ್ ಅಧಿಕಾರಿಯೊಬ್ಬಳ ಸಾಹಸಮಯ ಜಮಕಿನ ಚಿತ್ರಣ. ಅಂತ್ಯದಲ್ಲಿ ಉಗ್ರಗಾಮಿಗಳು ಸೆರೆಸಿಕ್ಕಿ ಸುಖಾಂತವಾಗುತ್ತದೆ.

೧೬೮೨. ಈಶ್ವರ್

(೧೯೯೫ / ವರ್ಣ / ಸಾಮಾಜಿಕ)
ಲಾ: ಸರಸ್ವತಿ ಪ್ರೊಡಕ್ಷನ್ಸ್
ಪ್ರೊ: ವಿ.ಗೋಪಿ
ನಿ: ಆರ್.ಸಿ.ರಂಗಾ (ಸಿರಾ)
ಸ.ನಿ: ಹುಣಸೂರು ರಾಜಶೇಖರ್
ಅ: ಅಂಬರೀಷ್, ಜಗ್ಗೇಶ್, ಚಾಂದಿನಿ, ಜಯಂತಿ, ಸಿಂಧೂರಾವ್, ಶ್ಯಾಮಲಾ, ತಾರಾ, ಜ್ಯೋತಿ, ಶನಿ ಮಹಾದೇವಪ್ಪ, ಬ್ಯಾಂಕ್ ಜನಾರ್ದನ್, ಎಂ.ಎಸ್.ಕಾರಂತ್, ಜೂನಿಯರ್ ನರಸಿಂಹರಾಜು, ಕೃಷ್ಣೇಗೌಡ, ಶ್ರೀಶೈಲನ್, ಶಿವರಂಜನಿ
ಕ/ಚಿ.ಕ: ಆರ್.ಸಿ.ರಂಗಾ (ಸಿರಾ)
ಮಾ: ಕುಣಿಗಲ್ ನಾಗಭೂಷಣ್
ಗೀ: ಹಂಸಲೇಖ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ, ಲತಾ ಹಂಸಲೇಖ
ಸಂ: ಸುರೇಶ್ ಅರಸ್
ಛಾ: ಪಿ.ಎಸ್.ಪ್ರಕಾಶ್
ಕಲೆ: ಸುಂದರಂ
ಸ: ಹಂಸಲೇಖ
ಧ್ವ: ಕೋದಂಡಪಾಣಿ
ನೃ: ಸತೀಶ್
ಸಾ: ನಂಜುಂಡಿ ನಾಗರಾಜ್
ವ: ಗಂಡಸಿ ನಾಗರಾಜ್
ಪ್ರ: ಗೌಡ ಗುರು
ಹಾ: ೧) 'ಓ ಮಂಜಿನ ಸೀಮೆಯಲಿ...', ೨) 'ಚಂಚಲ ಚಂಚಲ...', ೩) 'ನಾನು ಮೆಚ್ಚಿದ ಗಂಡು...', ೪) 'ಚಿನ್ನದಂಥ ಕೈ ಇದು...', ೫) 'ಮೈ ನೇಮ್ ಈಸ್ ಈಶ್ವರ್...'
ಕ.ಸಾ: ಒಂದೇ ರೂಪಿನ ಒಂಬತ್ತು ಮಂದಿ. ನವರಸ ಪ್ರವೀಣರು. ಅವರಲ್ಲಿ ಒಬ್ಬನನ್ನು ನಾಯಕಿ ಪ್ರೀತಿಸುತ್ತಾಳೆ. ಆದರೆ ಮದುವೆಗೆ ತಾಯಿಯೇ ಅಡ್ಡಿ. ಇದರಿಂದ ಮನೆ ಬಿಟ್ಟು ಬಂದ ನಾಯಕಿಗೆ ಒಬ್ಬರಾದ ಮೇಲೆ ಒಬ್ಬರು ಆಶ್ರಯ ನೀಡಿ ಕಾಪಾಡುತ್ತಾರೆ. ಘಟನೆಗಳ ನಂತರ ತಾಯಿಯ ಮನ ಪರಿವರ್ತನೆ, ಮೆಚ್ಚಿದವನೊಂದಿಗೆ ನಾಯಕಿಯ ಮದುವೆ.

೧೬೮೩. ಕಲ್ಯಾಣೋತ್ಸವ

(೧೯೯೫ / ವರ್ಣ / ಸಾಮಾಜಿಕ)
ಲಾ: ವೈಭವಲಕ್ಷ್ಮಿ ಪ್ರೊಡಕ್ಷನ್
ಪ್ರೊ: ಜೈಜಗದೀಶ್, ಆರ್.ದುಷ್ಯಂತ್ ಸಿಂಗ್
ನಿ: ಎಸ್.ವಿ.ರಾಜೇಂದ್ರಸಿಂಗ್ ಬಾಬು
ಅ: ಅಂಬರೀಷ್, ಎಸ್.ಪಿ.ಬಾಲಸುಬ್ರಹ್ಮಣ್ಯಂ, ವಿನಯಾ ಪ್ರಸಾದ್, ಶ್ರುತಿ, ಮಾ।ಹಿರಣ್ಣಯ್ಯ, ಲೋಕನಾಥ್, ಸಿದ್ಧಾರ್ಥ, ಮಾಳವಿಕ, ವಸಂತರಾವ್ ನಾಕೋಡ್, ಕಿಶೋರಿ ಬಲ್ಲಾಳ್
ಕ/ಚಿ.ಕ/ಮಾ: ಎಸ್.ವಿ.ರಾಜೇಂದ್ರಸಿಂಗ್ ಬಾಬು
ಗೀ: ಹಂಸಲೇಖ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ, ಮಂಜುಳಾ ಗುರುರಾಜ್
ಸಂ: ಸುರೇಶ್ ಅರಸ್
ಛಾ: ಅಶೋಕ್ ಕಶ್ಯಪ್
ಸ: ಹಂಸಲೇಖ
ಧ್ವ: ಕಣ್ಣನ್, ಶಂಕರ್

ನೃ: ಸತೀಶ್
ಸಾ: ಮಂಜು
ವ: ನಾಗರಾಜ್, ವಿಜಯಲಕ್ಷ್ಮಿ ಸಿಂಗ್
ಪ್ರ: ನಾಗರಾಜ್
ಸ್ಟು: ಪ್ರಸಾದ್
ಹಾ: ೧)'ಆಹಾ ಬಿರಿಯಾನಿ, ಚಾಯಲ್ ಸುರಿಯಾನಿ...', ೨)



'ಬಿಳಿಯ ಬಣ್ಣದ ಮಯೂರಿ...', ೩)'ಬಣ್ಣದ ಚಿಟ್ಟೆಯ ಹಿಂದಿಂದೆ ಹೋಗ್ತಾರೆ...', ೪) 'ಪ್ರೀತಿ ಮಾಡೋ ಹುಡುಗರಾ...', ೫)'ಇತ್ತು ಒಂದು ಕಾಲ ಕಾಸಿಗೇ ಹಣ್ಣನು ಮಾರುತ್ತಿದ್ದ ಕಾಲ...'
ಕ.ಸಾ: ಸೈನ್ಯದಲ್ಲಿದ್ದು ನಿವೃತ್ತನಾದ ಮೇಲೆ ಖಾಸಗಿ ಪತ್ತೇದಾರನಾಗಿದ್ದ ವ್ಯಕ್ತಿ. ಹೆಂಡತಿ ಮತ್ತು ಮಗಳ ಚಿಕ್ಕ ಸಂಸಾರ. ರೊಟ್ಟಿ ಅಂಗಡಿ ಮಾಲೀಕನೊಬ್ಬನು ಅವನ ಬಾಲ್ಯ ಸ್ನೇಹಿತ. ಪತ್ತೇದಾರಿ ಕೆಲಸದಲ್ಲಿ ಇವನದೂ ನೆರವು. ಮಗಳು ಪಿಟೀಲು ಕಲಿಯಲು ಸಂಗೀತ ಶಾಲೆಗೆ ಹೋಗುತ್ತಿದ್ದು, ಅಲ್ಲಿ ಶ್ರೀಮಂತನೊಬ್ಬನ ಮಗನನ್ನು ಮಾಡಿಕೊಡಬೇಕೆಂಬ ಪರತ್ತು ಹಾಕಿದ. ನಿಶ್ಚಿತಾರ್ಥ ಮುಗಿದ ಮೇಲೆ ಶ್ರೀಮಂತನಿತ್ತ ಖರ್ಚಿನ ಪಟ್ಟಿ ತೂಗಿಸಲು ಪತ್ತೇದಾರ ಮನೆ ಮಾರಿದ, ಸಾಲ ಮಾಡಿದ. ಗೆಳೆಯ ಅಂಗಡಿ ಮಾರಿ ನೆರವಾದ. ಅದರೂ ಸಾಲದೆ ಶ್ರೀಮಂತ ಕಿರುಕುಳ ನೀಡ ತೊಡಗಿದ. ಗೆಳೆಯ ಶ್ರೀಮಂತನ ಮಗನನ್ನು ಅಪಹರಿಸಿ ಪ್ರೇಮಿಸಿದವರ ಮದುವೆ ಮಾಡಿದ. ಡಂಭಾಚಾರಕ್ಕಾಗಿ ವೃಥಾ ಖರ್ಚು ಮಾಡುವ ಬದಲು ಸರಳವಾಗಿ ವಿವಾಹ ಮುಗಿಸಿ, ಉಳಿದ ಹಣವನ್ನು ದಂಪತಿಗಳಿಗೆ ಕೊಟ್ಟರೆ ಅವರ ಬದುಕು ಹಸನಾಗುವುದೆಂದು ಸಾರುವುದೇ 'ಕಲ್ಯಾಣೋತ್ಸವ'ದ ಕಥಾ ತಿರುಳು.

೧೬೮೪. ತುಂಗಭದ್ರ

(೧೯೯೫ / ವರ್ಣ / ಸಾಮಾಜಿಕ)
ಲಾ: ಭುಜಬಲಿ ಪ್ರೊಡಕ್ಷನ್
ಪ್ರೊ: ಹೆಚ್.ಎನ್.ಪ್ರಕಾಶ್
ನಿ: ಹೆಚ್.ಎನ್.ಶಂಕರ್
ಸ.ನಿ: ಕೃಷ್ಣೋಜಿರಾವ್, ಕೆ.ರಮೇಶ್
ಅ: ರಘುವೀರ್, ಸಿಂಧೂ, ಎಂ.ಪಿ.ಶಂಕರ್, ಪೃಥ್ವಿ, ಶ್ರೀರಕ್ಷಾ, ಶಿವರಾಂ, ಶ್ರೀಲಲಿತಾ, ಗಿರಿಜಾ ಲೋಕೇಶ್, ಅರವಿಂದ್, ಸುಮತಿ, ರವಿ, ಲೋಕೇಶ್, ರಮೇಶ್, ಬೆಂಗಳೂರು ನಾಗೇಶ್, ಎಂ.ಎಸ್.ಕಾರಂತ್, ಕೃಷ್ಣೇಗೌಡ
ಕ/ಚಿ.ಕ/ಮಾ: ಹೆಚ್.ಎನ್.ಶಂಕರ್
ಗೀ: ಹಂಸಲೇಖ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಲತಾ ಹಂಸಲೇಖ, ಚಿತ್ರಾ
ಸಂ: ವಿಕ್ಟರ್ ಯಾದವ್
ಛಾ: ಜಿ.ಎಸ್.ಬಸವರಾಜ್
ಸ: ಹಂಸಲೇಖ
ದ್ವ: ಕಣ್ಣನ್, ಕೃಷ್ಣಮೂರ್ತಿ
ನೃ: ಸಂಪತ್ ಕುಮಾರ್
ಸಾ: ಥ್ರಿಲ್ಲರ್ ಮಂಜು
ವ: ವಿಠಲ್ ರಾವ್

ಪ್ರ: ರಾಜಗೋಪಾಲ್
ಹಾ: ೧)'ಯಂ ಯಂ ಎಂದುನನ್ನ...', ೨) 'ಸಾಗರಿಯೋ ಹೋಗಲಿಯೋ...', ೩) 'ಓ ಮಾವ ಓ ಮಾವಾ...', ೪)'ಬೆಳ್ಳಿಬೆಟ್ಟದಲ್ಲಿ...', ೫) 'ಚಾಕಾಚಾ ಲೂಬಾ ಲೂಬಾ ...'
ಕ.ಸಾ: ಪರಿಸ್ಥಿತಿಗಳು ಒಬ್ಬ ಅಮಾಯಕನನ್ನು ಯಾವ ರೀತಿ ಕೊಲೆಗಾರನನ್ನಾಗಿ ಮಾಡುತ್ತದೆ ಎಂಬುದರ ಚಿತ್ರಣ. ಕೊಲೆಯಾಗಿ ಹೋದನೆಂಬ ವ್ಯಕ್ತಿ ಪವಾಡ ಸದೃಶ ರೀತಿಯಲ್ಲಿ ಬದುಕಿ ಬಂದು ತನ್ನವರ ಮೇಲಾದ ದೌರ್ಜನ್ಯಕ್ಕೆ ಪ್ರತೀಕಾರ ತಗದುಕೊಳ್ಳುವ ಕಥೆ.

೧೬೮೫. ಮಧುರ ಮೈತ್ರಿ

(೧೯೯೫ / ವರ್ಣ / ಸಾಮಾಜಿಕ)
ಲಾ: ಸ್ವಾತಿ ಮೂವೀಸ್
ನಿ: ವಿಜಯ್ ಕುಮಾರ್
ಅ: ಸುನಾದ್ ರಾಜ್, ಸುಚಿತ್ರ, ಧನುಶ್ರೀ, ಲೋಕೇಶ್, ರಾಜೇಶ್, ಶ್ರೀನಾಥ್, ಮಾಂಬಳ್ಳಿ ಪಾಪೇಗೌಡರು, ಜಯಂತಿ, ಪ್ರಮೀಳಾ ಜೋಷಾಯ್, ಆಶಾಲತಾ
ಕ/ಚಿ.ಕ: ವಿಜಯ ಕುಮಾರ್
ಗೀ: ಹಂಸಲೇಖ
ಗಾ: ರಾಜಕುಮಾರ್, ಜೇಸುದಾಸ್, ಚಿತ್ರಾ, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಲ್.ಎನ್.ಶಾಸ್ತ್ರೀ
ಸಂ: ಕೆಂಪರಾಜ್



ಛಾ: ಅಬ್ದುಲ್ ರೆಹಮಾನ್
ಸ: ಹಂಸಲೇಖ
ದ್ವ: ಕಣ್ಣನ್
ಹಾ: ೧)'ನನ್ನ ನಿನ್ನ ಈ ಮಧುರ ಮೈತ್ರಿ..', ೨)' ಅಣ್ಣಾ ನಿನ್ ಕಂತ ಸಿರಿಕಂಠ...', ೩) 'ಗೌರಿಯ ರೂಪ ನೀನಮ್ಮ ...', ೪) 'ಮದು ಮಗಳ ಮೇಲಿನ ..', ೫) 'ಸಾವಿರ ಸಾವಿರ ಮಲ್ಲಿಗೆ...', ೬)'ನಾದವಿದು ಪ್ರೇಮನಾದ...'.
ಕ.ಸಾ: ಹಳೆಯ ಜಮೀನ್ದಾರ ಮಕ್ಕಳಿಲ್ಲದ ಅನಾಥ ಮಗಳನ್ನು ತಂದು ಸಾಕಿಕೊಂಡಿದ್ದ. ಮಹಾಕುಡುಕನ ಮಗ ಅವಳನ್ನು ಪ್ರೀತಿಸಿದ. ಕುಡುಕನಿಗೆ ಬಿಟ್ಟಿ ಕುಡಿಯಲು ಕೊಟ್ಟು ಅವನ ಮಗಳನ್ನು ಕಾಣಿಕದ ಸಾರಾಯಿ ಅಂಗಡಿಯವ ಅವಳ್ನಿಂದ ಏದ ತಿಂದ ಇವರಿಂದ ತಂದ ಮಗನಲ್ಲಿ ವಿರಸ. ಕುಡುಕ ತಂದೆ. ಪ್ರೇಯಸಿ ತನಗಿತ್ತ ನನಪಿನ ಕಾಣಿಕೆಯನ್ನು ಕೊಟ್ಟು ಸಾರಾಯಿ ಕುಡಿದಾಗ ತಂದೆಯ ಬಗ್ಗೆ ಜಿಗುಪ್ಸೆ. ಪ್ರೇಮಿಗಳ ಒಡನಾಟ ಜಮೀನ್ದಾರನ ಕಣ್ಣಿಗೆ ಬಿದ್ದು ಅಡ್ಡಿ. ಅಂತ್ಯದಲ್ಲಿ ಬದಲಾದ ತಂದೆ ಹಾಗೂ ತಾಯಿಯಿಂದಾಗಿ ಪ್ರೇಮಿಗಳು ಒಂದಾಗಿ 'ಮಧುರ ಮೈತ್ರಿ'ಗೆ ಒಲವಿನ ಸಿಂಚನ.

೧೬೮೬. ಪ್ರಿಯ ಓ ಪ್ರಿಯ

(೧೯೯೫ / ವರ್ಣ / ಸಾಮಾಜಿಕ)
ಲಾ: ತುಳಸಿ ಫಿಲಂಸ್
ಪ್ರೊ: ಜಿ.ರಮೇಶ್ ಜೈನ್
ನಿ: ಆರ್.ರಾಜಾನಂದ್ ರೆಡ್ಡಿ
ಅ: ಕುಮಾರ್ ಗೋವಿಂದ್, ನವೀನ್ ಚಂದರ್, ಪ್ರಿಯಾಂಕ, ಹೇಮಾರಾಣಿ, ಸೋಮಣ್ಣ, ರಮೇಶ್ ಭಟ್, ಎಂ.ಎಸ್.ಉಮೇಶ್, ಕಮಲಮ್ಮ, ನಾಗೇಶ್ ಯಾದವ್, ಮಿಸ್ ಸ್ವಲ್ಪಾ, ಬಿ.ಟಿ.ಲಲಿತಾ ನಾಯಕ್, ಶಿವಮೊಗ್ಗ ಪರಮೇಶ್, ಕುಣಿಗಲ್ ವಸಂತ್, ತಿಮ್ಮಯ್ಯ
ಕ/ಚಿ.ಕ/ಮಾ/ಗೀ: ಶ್ರೀರಂಗ
ಗಾ: ಮಂಜುಳಾ ಗುರುರಾಜ್, ಎಸ್.ಪಿ.ಬಾಲಸುಬ್ರಹ್ಮಣ್ಯಂ
ಸಂ: ಆರ್. ರಾಜಾನಂದ್ ರೆಡ್ಡಿ
ಛಾ: ಬಿ.ಸತ್ಯನಾರಾಯಣ ಸಿಂಗ್
ಕಲೆ: ಮುದುಕೃಷ್ಣ
ಸ: ಸಾಧುಕೋಕಿಲ
ದ್ವ: ಚಾಮುಂಡೇಶ್ವರಿ
ನೃ: ಉಡುಪಿ ಜಯರಾಂ
ಸಾ: ಥ್ರಿಲ್ಲರ್ ಮಂಜು
ವ: ಮಂಜು
ಪ್ರ: ಬೊಮ್ಮಸ್ವಾಮಿ
ಸ್ಟು: ಕಂಠೀರವ

ಹಾ: ೧)'ನಮೋ ಮಂಜುನಾಥ, ನಮೋಗಾಂಧಿ ತಾತಾ...', ೨)'ಪ್ರಿಯಾ ಬಾರೋ ಪ್ರಿಯಾ...'
ಕ.ಸಾ: ನಿರುದ್ಯೋಗಿ ಪದವೀಧರ ಅಶೋಕ್ ನಾಟಕ ಕಂಪನಿಯಲ್ಲಿ ನಟನಾದ. ಎಸ್ಟೇಟ್ ಮಾಲೀಕನ ಮಗಳು ಗಾಯತ್ರಿಯ ಪರಿಚಯವಾಗಿ ಅವರ ಎಸ್ಟೇಟ್ ಮ್ಯಾನೇಜರ್ ಆದ. ಅರವಿಂದನೆಂಬುದವನನ್ನು ಪ್ರೀತಿಸಿದ ಗಾಯತ್ರಿ ಅವನನ್ನು ಮದುವೆಯಾಗಲಿದ್ದಾಗ ಅಪಘಾತವೊಂದರಲ್ಲಿ ಅತ ಸತ್ತು, ತಂದೆ ದೃಷ್ಟಿಹೀನನಾಗಿ ಮಗಳು ಮಾನಸಿಕ ರೋಗಿಯಾಗಿದ್ದಳು. ಅಶೋಕ್ ತನ್ನ ಬುದ್ಧಿ ಬಲದಿಂದ ಅವಳ ಮನೋರೋಗವನ್ನು ವಾಸಿ ಮಾಡಿ ಅವಳ ಒಲವನ್ನು ಗಳಿಸಿದ. ನರ್ಸ್ ಒಬ್ಬಳು ಸತ್ತು ಹೋದನೆಂದು ತಿಳಿದಿದ್ದ ಅರವಿಂದ್ ಸತ್ತಿಲ್ಲವೆಂದು ಒಬ್ಬನನ್ನು ಕರೆತಂದಳು. ಬಂದವ ಹಳೆಯ ಘಟನೆಗಳನ್ನೆಲ್ಲ ವಿವರಿಸಿ ತಾನೇ ಅರವಿಂದನೆಂದು ನಂಬಿಸಲು ಯತ್ನಿಸಿದ. ಅತ್ತಿಗೆ ಹೆಂಗಸು ಮತ್ತು ಲೀಗಲ್ ಅಡ್ವೈಸರ್ ಇಬ್ಬರೂ ಅವನೇ ಅರವಿಂದನೆಂದು ಸಾಧಿಸಿದರೂ ಗಾಯತ್ರಿಯ ಮನಸ್ಸು ಒಪ್ಪಲಿಲ್ಲ. ಅಶೋಕ್ ಬಂದವನು ಅರವಿಂದನಲ್ಲವೆಂದೂ, ಆಸ್ತಿ ಕಬಳಿಸಲು ಆಟಿಗ ಹೆಂಗಸು ಮತ್ತು ಲೀಗಲ್ ಅಡ್ವೈಸರ್ ಆ ವಂಚಕನನ್ನು ಬಳಸಿ

ಮಾಡಿದ ಕುತಂತ್ರವನ್ನು ಬಯಲಿಗೆಳೆದು ಗಾಯತ್ರಿಯ ಕೈ ಹಿಡಿಯುತ್ತಾನೆ

೧೬೮೭. ಬಲ್ ನನ್ಮಗ

(೧೯೯೫ / ವರ್ಣ / ಸಾಮಾಜಿಕ)
ಲಾ: ಶ್ರೀ ಪೂರ್ಣಾ ಫಿಲಂಸ್
ಪ್ರೊ: ಕೆ.ವಿ.ನಾಗೇಶ ಕುಮಾರ್, ಹೆಚ್.ರಾಮಮೂರ್ತಿ, ಎಸ್.ಆರ್.ರಾಮಮೂರ್ತಿ ಶೆಟ್ಟಿ, ಡಿ.ಅಶೋಕ್ ಕಾಮತ್
ನಿ: ಸಿ.ಹೆಚ್.ಬಾಲಾಜಿ ಸಿಂಗ್
ಸ.ನಿ: ಶಿವಾನಂದ್
ಅ: ಜಗ್ಗೇಶ್, ಮೋಹಿನಿ, ಬಿ.ವಿ.ರಾಧಾ, ಉಮಾಶ್ರೀ, ವಾಣಿಶ್ರೀ, ರವಿಕಿರಣ್, ದೊಡ್ಡಣ್ಣ, ಕೆ.ವಿ.ನಾಗೇಶ ಕುಮಾರ್, ಸಿಹಿಕಹಿ ಚಂದ್ರು, ಎಂ.ಎಸ್.ಕಾರಂತ್, ಟೆಗ್ರೀ ಚಿಕ್ಕಣ್ಣ, ಶ್ರೀರಂಗ, ಎಂ.ಡಿ.ಪ್ರಕಾಶ್
ಕ: ಹೆಚ್.ರಾಮಮೂರ್ತಿ, ಕೆ.ವಿ.ನಾಗೇಶ ಕುಮಾರ್
ಚಿ.ಕ: ಸಿ.ಹೆಚ್.ಬಾಲಾಜಿ ಸಿಂಗ್
ಮಾ: ಕುಣಿಗಲ್ ನಾಗಭೂಷಣ್
ಗೀ: ಶ್ರೀರಂಗ, ವ್ಯಾಸರಾವ್, ವಿ.ಮನೋಹರ್, ರಮೇಶ್ ರಾವ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ರಾಜೇಶ್, ಚಿತ್ರ, ಮಂಜುಳಾ ಗುರುರಾಜ್
ಸಂ: ವಿಸ್.ಮನೋಹರ್
ಛಾ: ರಮೇಶ್ ಬಾಬು
ಕಲೆ: ನಜೀರ್
ಸ: ಸಾಧು ಕೋಕಿಲ
ಧ್ವ: ಕೃಷ್ಣಮೂರ್ತಿ - ಪೀಟರ್, ಅಣ್ಣಾದೊರೈ
ನೃ: ಸತೀಶ್

ಸಾ: ಕೆ.ಡಿ.ವೆಂಕಟೇಶ್
ವ: ರಾಮನಾಥ್, ಮುತ್ತು
ಪ್ರ: ಮಾದೇಗೌಡ
ಸ್ಟು: ಅಭಿಮಾನ್
ಹಾ: ೧)'ಮಾಮೂಲ್ ಪೇಟೆ ಮಂಡಿ ಪೇಟೆ...', ೨)'ಒಲವೇ.. ಕಂಡಾಗ ನಿನ್ನ ಒಲವೆ...', ೩) 'ಬಾರೋ ನೀ ಹೀರೋ ವಯಸಿಗೆ...', ೪)'ಬಾ ನನ್ನ ರಾಜ ನೀ ನನ್ನ...', ೫)'ವಿಲ ವಿಲ ವಿಲ್ಲೋ, ನನಗೆ ನೀ ವಾವು...', ೬)'ಲಕ್ಕ ಲಕ್ಕ ಮಚ್ಚೆ ಇದು...',
ಕ.ಸಾ: ನಿರುದ್ಯೋಗಿ, ಸೋಮಾರಿ ಯುವಕನನ್ನು ಶ್ರೀಮಂತ ಯುವತಿ ಪ್ರೀತಿಸಿದಾಗ ಯುವಕ ಎದುರಿಸುವ ಬದುಕಿನ ಸವಾಲುಗಳ ಕಥೆ. ಇಂಥವನನ್ನು ಪ್ರೀತಿಸುವ ನಾಯಕಿಯ ಅಪ್ಪನಿಗೆ ಕಷ್ಟಪಟ್ಟು ದುಡಿಯುವವನು ಅಳಿಯನಾಗಬೇಕು ಎಂದಿರುತ್ತದೆ. ಇದಕ್ಕಾಗಿ ವಧುದಕ್ಷಿಣೆ ಕೇಳುತ್ತಾನೆ. ಇದನ್ನು ಹೊಂದಿಸಲು ಯುವಕ ಅಡ್ಡದಾರಿಗಿಳಿಯಲು ಹೋದಾಗ ಕೈಗೂಡದೆ ಕಷ್ಟಪಟ್ಟು ದುಡಿಯಲು ನಿರ್ಧರಿಸುತ್ತಾನೆ.

೧೬೮೮. ಬೆಳದಿಂಗಳ ಬಾಲೆ

(೧೯೯೫ / ವರ್ಣ / ಸಾಮಾಜಿಕ)
ಲಾ: ಸಹನಾ ಫಿಲಂಸ್
ಪ್ರೊ: ಬಿ.ಎಸ್.ಮುರಳಿ, ಸುನಿಲ್‌ಕುಮಾರ್ ದೇಸಾಯಿ
ನಿ: ಸುನಿಲ್‌ಕುಮಾರ್ ದೇಸಾಯಿ
ಅ: ಅನಂತ್‌ನಾಗ್, ಸುಮನ್ ನಗರ್‌ಕರ್, ರಮೇಶ ಭಟ್, ವನಿತಾ ವಾಸು, ಅವಿನಾಶ್, ಲೋಕನಾಥ್, ಶಿವರಾಮ್, ಕಿಶೋರಿ ಬಲ್ಲಾಳ್, ಶಿವರಂಜಿನಿ
ಕ: ಯಂಡಮೂರಿ ವೀರೇಂದ್ರನಾಥ್
ಚಿ.ಕ: ಸುನಿಲ್ ಕುಮಾರ್ ದೇಸಾಯಿ
ಮಾ: ಸುನಿಲ್‌ಕುಮಾರ್ ದೇಸಾಯಿ, ವಂಶಿ
ಗೀ: ದೊಡ್ಡರಂಗೇ ಗೌಡ, ಶ್ಯಾಮಸುಂದರ ಕುಲಕರ್ಣಿ, ಎಸ್.ಎಂ.ಪಾಟೀಲ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಸುಶೀಲ, ಚಂದ್ರಿಕಾ ಗುರುರಾಜ್
ಸಂ: ಆರ್.ಜನಾರ್ದನ್
ಛಾ: ಪಿ.ರಾಜನ್
ಕಲೆ: ರಾಜು
ಸ: ಗುಣಸಿಂಗ್
ಧ್ವ: ಶಂಕರ್ (ಪ್ರಸಾದ್)
ನೃ: ಉಡುಪಿ ಜಯರಾಂ
ಪ್ರ: ನಾಗಿಣಿ
ಹಾ: ೧)'ನೀ ಯಾರೋ ನಾ ಅರಿಯೆನು...', ೨)'ನೆನಪುಗಳ ಅಂಗಳದೀ...', ೩)'ಗೋಪಾಲ ಕೇಳು ನಾನ್ಯಾರು ಹೇಳು...'
ವಿ: ೧೯೯೫-೯೬ರ ರಾಜ್ಯ ಪ್ರಶಸ್ತಿ: ತೃತೀಯ ಅತ್ಯುತ್ತಮ ಚಿತ್ರ, ಅತ್ಯುತ್ತಮ ಸಂಭಾಷಣಾ ಕರ್ತೃ: (ಸುನಿಲ್‌ಕುಮಾರ್ ದೇಸಾಯಿ ವಂಶಿ), ಧ್ವನಿಗಾಗಿ ವಿಶೇಷ ಬಹುಮಾನ: ಮಂಜುಳಾ ಗುರುರಾಜ್
ಕ.ಸಾ: ವಿಭಿನ್ನವಾದ ಪ್ರೇಮಕಥೆ. ಅಂತರರಾಷ್ಟ್ರೀಯ ಚೆಸ್ ಕ್ರೀಡಾಪಟು ರೇವಂತ್‌ಗೆ ದೂರವಾಣಿ ಕರೆ ಮೂಲಕವೇ ಪರಿಚಯ ಮಾಡಿಕೊಳ್ಳುವ ಯುವತಿಯನ್ನೇ ಪ್ರೀತಿಸಲಾರಂಭಿಸುತ್ತಾನೆ. ಅವಳು ಅವನಿಗೆ ತನ್ನನ್ನು ತಲುಪಲು ಅನೇಕ ಜಾಣ್ಮೆಯ ಸವಾಲುಗಳನ್ನು ಹಾಕುತ್ತಾಳೆ. ಅವುಗಳನ್ನು ಬಿಡಿಸಿ ರೇವಂತ್ ಅವಳನ್ನು ತಲುಪುವ ವೇಳೆಗೆ ಅವಳ ಇಹದ ಯಾತ್ರೆ ಮುಗಿದಿರುತ್ತದೆ. ಕೇವಲ ಆ ಮಧುರ ಧ್ವನಿಯ ಮೂಲಕವೇ ಅವನಲ್ಲಿ ಆತ್ಮವಿಶ್ವಾಸ ತುಂಬಿ ಯಶಸ್ಸಿಗೆ ಕಾರಣಗಳಾಗಿ ಪ್ರೇಮ ಚಿಗುರಿಸಿದ ಅವಳ ಮುಖ ನೋಡದೆ ಹಿಂದಿರುಗಿದ ರೇವಂತ್ ಅವಳನ್ನು ಬೆಳದಿಂಗಳ ಬಾಲೆಯಾಗಿಯೇ ತನ್ನಲ್ಲಿ ಉಳಿಸಿಕೊಳ್ಳುತ್ತಾನೆ.

೧೬೮೯. ತವರು ಬೀಗರು

(೧೯೯೫ / ವರ್ಣ / ಸಾಮಾಜಿಕ)
ಲಾ: ಶ್ರೀ ಕೃಷ್ಣ ಪ್ರೊಡಕ್ಷನ್ಸ್
ಪ್ರೊ: ಕೆ.ಆರ್.ಪ್ರಭು
ನಿ: ಎ.ಸುಬ್ರಹ್ಮಣ್ಯಂ
ಸ.ನಿ: ಜಿ.ಸರಸಕುಮಾರ್, ಎಂ.ಡಿ.ಶ್ರೀಧರ್
ಅ: ಸಾಯಿಕುಮಾರ್, ವಿನಯಾ ಪ್ರಸಾದ್, ಲತಾಶ್ರೀ, ಶಶಿಕಿರಣ್, ಬೇಬಿ ಸಿಂಧೂ, ಶ್ರೀಲಲಿತಾ, ಜಾನಕಮ್ಮ, ಶೋಭಾ ರಾಘವೇಂದ್ರ, ಭರತ್ ಭಾಗವತಾರ್, ಉಮೇಶ್
ಕ: ಶ್ರೀ ಕೃಷ್ಣ ಪ್ರೊಡಕ್ಷನ್ ಸಾಹಿತ್ಯ ವಿಭಾಗ
ಚಿ.ಕ: ಡಿ.ಎಸ್.ಬಾಲಕನ್
ಮಾ: ಎಂ.ಡಿ.ಶ್ರೀಧರ್, ಶಶಿಕಿರಣ್
ಗೀ: ಆರ್.ಎನ್.ಜಯಗೋಪಾಲ್, ದೊಡ್ಡರಂಗೇಗೌಡ, ವಿ.ಮನೋಹರ್, ಸು. ರುದ್ರಮೂರ್ತಿ ಶಾಸ್ತ್ರಿ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ, ಚಂದ್ರಿಕಾ ಗುರುರಾಜ್, ರಾಜೇಶ್ ಸುಜಾತ
ಸಂ: ಎ.ಸುಬ್ರಹ್ಮಣ್ಯ
ಛಾ: ಅಶೋಕ್ ಕಶ್ಯಪ್
ಕಲೆ: ರಮೇಶ್ ಬಾಬು
ಸ: ಸಾಧುಕೋಕಿಲ
ಧ್ವ: ಕೋದಂಡಪಾಣಿ
ನೃ: ಉಡುಪಿ ಜಯರಾಂ, ದೇವಿ, ದೇವಾಸಂಪತ್
ವ: ಸುರೇಶ್ (ಕೇಶ:) ನಾಗೇಶ್ವರರಾವ್ ಮೂರ್ತಿ

ಪ್ರ: ಕುಮಾರ್
ಕ.ಸಾ: ಮನೆ ಅಳಿಯನ ಕಥೆ. ಶ್ರೀಮಂತರಾದ ಶ್ಯಾಮರಾಯರು ತಮ್ಮ ಒಬ್ಬಳೇ ಮಗಳು ಲಕ್ಷ್ಮೀಗೆ ಕೃಷ್ಣನೊಂದಿಗೆ ಮದುವೆ ಮಾಡಿ ಅವನನ್ನು ಮನೆ ಅಳಿಯನನ್ನಾಗಿ ಮಾಡಿಕೊಳ್ಳುತ್ತಾರೆ. ಇವರಿಗೆ ಮಗಳು ಹುಟ್ಟಿದಾಗ ಕೃಷ್ಣನ ತಾಯಿ ಕಮಲಮ್ಮ ಮತ್ತು ಅಕ್ಕ ವಿಮಲ ಮಗುವಿಗೆ ಕಮಲಮ್ಮ ಎಂದು ಹೆಸರಿಡಬೇಕು ಎಂಬ ವಿಚಾರಕ್ಕೆ ಜಗಳವಾಡಿ ಲಕ್ಷ್ಮೀಯ ಮೇಲೆ ದ್ವೇಷವಿಟ್ಟುಕೊಂಡು ಹಿಂದಿರುಗುತ್ತಾರೆ. ಕೃಷ್ಣ ಬೇರೊಂದು ಹೆಣ್ಣಿನಿಂದ ಆಕರ್ಷಿತನಾದಾಗ ಇದನ್ನು ತಡೆಯಲು ಹೋದ ಲಕ್ಷ್ಮೀಯನ್ನೇ ತೊರೆದು ಕೃಷ್ಣ ತನ್ನ ಮನೆಗೆ ಹೋಗುತ್ತಾನೆ. ಲಕ್ಷ್ಮೀಯು ತವರು ಮನೆ ತೊರೆದು ಗಂಡನ ಮನೆಗೆ ಬರುತ್ತಾಳೆ.

೧೬೯೦. ಬೇಟೆಗಾರ

(೧೯೯೫ / ವರ್ಣ / ಸಾಮಾಜಿಕ)
ಲಾ: ಎ.ಟಿ.ಆರ್.ಫಿಲಂಸ್
ಪ್ರೊ/ನಿ: ಎ.ಟಿ.ರಘು
ಸ.ನಿ: ಹೆಚ್.ಎಂ.ನಾಗಭೂಷಣ್
ಅ: ಅಂಬರೀಷ್, ಮುಖ್ಯಮಂತ್ರಿ ಚಂದ್ರು, ಲಕ್ಷ್ಮಣ್, ಶಂಕರ್, ಪದ್ಮನಾಭರಾವ್, ಸಿತಾರಾ, ವಾಸುದೇವರಾವ್, ಮಲ್ಲೇಶ್, ಅಶ್ವತ್, ಸರಿಗಮ ವಿಜಿ, ಸೀತಾರಾಂ, ರೇಖಾ ದಾಸ್, ನೀಗ್ರೋ ಜಾನಿ, ಉಮೇಶ್, ಆಶಾಕಿರಣ್, ಸಿಹಿಕಹಿ ಗೀತಾ, ಬ್ಯಾಂಕ್ ಜನಾರ್ದನ್, ವೇಣುಗೋಪಾಲ್, ಶಶಿಕಿರಣ್, ಆಗ್ರೋ ಚಿಕ್ಕಣ್ಣ, ಡಿಸ್ಕೋ ಶಾಂತಿ, ಗಾಯತ್ರಿ ಪ್ರಭಾಕರ್
ಕ/ಚಿ.ಕ: ಹೆಚ್.ವಿ.ಸುಬ್ಬರಾವ್
ಮಾ: ಎ.ಟಿ.ರಘು
ಗೀ: ಆರ್.ಎನ್.ಜಯಗೋಪಾಲ್, ರಮೇಶ್ ರಾವ್
ಗಾ: ಮನು, ರಾಜೇಶ್, ಮಂಜುಳಾ ಗುರುರಾಜ್, ಉಷಾ ಗಣೇಶ್
ಸಂ: ವಿಕ್ಟರ್ ಯಾದವ್
ಛಾ: ವಿ.ಕೆ.ಕಣ್ಣನ್
ಕಲೆ: ಆರ್.ಕೆ. ಸುಂದರಂ
ಸ: ಸಾಧುಕೋಕಿಲ
ಧ್ವ: ಮಿನರ್-ಮಹೇಂದ್ರನ್, ಕೋದಂಡಪಾಣಿ
ನೃ: ಸಂಪತ್ ಕುಮಾರ್
ಸಾ: ಜ್ಯೂಡೊ ರಾಮು
ವ: ಗುರು. ಗಣೇಶ್
ಪ್ರ: ಶಿವಕುಮಾರ್, ಎನ್.ಕೆ.ರಾಮಕೃಷ್ಣ
ಸ್ಟು: ಅಭಿಮಾನ್, ಚಾಮುಂಡೇಶ್ವರಿ, ಪ್ರಸಾದ್ ಲ್ಯಾಬ್

ಹಾ: ೧)'ಮಿಡಿದಿರಲು ಸವಿಗನಸುಗಳ...', ೨)'ನೀಲಿ ಕೊಡೆಯ ಕಳಗೆ...', ೩)'ರಂಭಾ ಅತಿ ಲೋಕ ಸ್ವರ್ಗ...', ೪)'ಇದು ಸರ್ಪಯುಗ...', ೫)'ಕೊಂಡ ಮಾಮುಡು...'

ಕ.ಸಾ: ನಿಷ್ಠಾವಂತ ಅರಣ್ಯಾಧಿಕಾರಿ ಹುಚ್ಚನಂತೆ ನಟಿಸುತ್ತಾ ತನ್ನ ಸೇಡನ್ನು ತೀರಿಸಿಕೊಳ್ಳುವ ಕಥೆ. ಅರಣ್ಯಾಧಿಕಾರಿ ಭರತ್ ತನ್ನ ಹೆಂಡತಿಯನ್ನು ಕೊಂದ ಕೊಲೆಗಡುಕರು ಕಾನೂನನ್ನೇ ತಿರುಚುವ ಸಾಮರ್ಥ್ಯವಿರುವವರೆಂದು ಗೊತ್ತಾಗುತ್ತದೆ. ಇದರಿಂದಾಗಿ ಹುಚ್ಚನಂತೆ ನಟಿಸುತ್ತಾ ತಾನೇ ಆ ಕೊಲೆಗಡುಕರನ್ನು ಬೇಟೆಯಾಡುತ್ತಾನೆ.

೧೬೯೧. ಮಹಾಚತುರ

(೧೯೯೫ ವರ್ಣ ಪತ್ತೇದಾರಿ)

ಲಾ: ವೈಡೂರ್ಯ ಫಿಲಂಸ್

ಪ್ರೊ: ಶ್ರೀಮತಿ ರೇಖಾ ಮಲ್ಲು

ನಿ: ಮದನ್ ಮಲ್ಲು

ಸ.ನಿ: ಸಿ.ವೇದಮೂರ್ತಿ

ಅ: ಮ್ಯೂಸಿಕ್ ಮಲ್ಲು, ಬಿ.ಸಿ.ಪಾಟೀಲ್, ಟೆನ್ನಿಸ್ ಕೃಷ್ಣ, ಸುಶ್ಮಿತಾ, ಅಂಜಲಿ, ಗೀತಾಂಜಲಿ, ಅವಿನಾಶ್, ಶಿವರಾಂ, ಆಗ್ರೋ ಚಿಕ್ಕಣ್ಣ, ಮುಮು ಕೃಷ್ಣ, ಮಾ।ಮಯೂರ್, ಅಂಜನಪ್ಪ, ಶಾಂತಮ್ಮ, ಸ್ಮಿತಾ, ಅನು, ಪ್ರಮಿಳಾ ಜೋಷಾಯ್, ಮದೂರ್ ಮಂಜುಳಾ

ಕ/ಚಿ.ಕ: ಮದನ್ ಮಲ್ಲು

ಮಾ: ಕೇಶವ ಮೂರ್ತಿ

ಗೀ: ಮದನ್ ಮಲ್ಲು

ಗಾ: ಮ್ಯೂಸಿಕ್ ಮಲ್ಲು, ರಾಜೇಶ್, ಶಾಸ್ತ್ರಿ, ಸಂಗೀತಾ ಕಟ್ಟಿ, ಚಂದ್ರಿಕಾ ಗುರುರಾಜ್

ಸಂ: ಎ.ಸುಬ್ರಹ್ಮಣ್ಯಂ

ಛಾ: ಬಿ.ಎಸ್.ಶಾಸ್ತ್ರಿ

ಸ: ಮದನ್ ಮಲ್ಲು

ಧ್ವ: ಪ್ರಸಾದ್, ಚಾಮುಂಡೇಶ್ವರಿ

ನೃ: ಸಂಪತ್

ಸಾ: ಆ್ಯಕ್ಷನ್ ಮೂರ್ತಿ, ಕರಾಟೆ ವಿಜಿ

ವ: ತಿಪಟೂರು ಸೋಮು

ಪ್ರ: ಕನಕರಾಜ್, ಕೇಶ: ಚಾರಿ

ಕ.ಸಾ: ಭಗ್ನ ಪ್ರೇಮಿಯೊಬ್ಬ ಹೆಣ್ಣುಗಳೆಂದರೇನೇ ದ್ವೇಷಿಸಲಾರಂಭಿಸುವುದರ ಜೊತೆಗೆ ಸೇಡನ್ನು ತೀರಿಸಿಕೊಳ್ಳಲು ಸಾಲು ಕೊಲೆಗಳನ್ನೇ ಮಾಡುತ್ತಾ ಹೋಗುವುದರೊಂದಿಗೆ ಸಸ್ಪೆನ್ಸ್ ಎನಿಸಿಕೊಳ್ಳುವ ಚಿತ್ರ. ಭಗ್ನ ಪ್ರೇಮಿ ತನ್ನನ್ನು ನಿರಾಕರಿಸಿದ ಹೆಣ್ಣಿನ ಮೇಲೆ ಸೇಡು ತೀರಿಸಿಕೊಳ್ಳಲು ಅವಳನ್ನು ಹುಡುಕುತ್ತ ಹೋದಂತಲ್ಲಾ ಕೊಲೆಗಳು ನಡೆಯುತ್ತವೆ. ಆ ಕೊಲೆಗಾರನನ್ನು ಪತ್ತೆ ಮಾಡುವುದೇ ಚಿತ್ರದ ಉಳಿದ ಭಾಗದ ಕಥೆಯಾಗಿದೆ.

೧೬೯೨. ಶುಭಲಗ್ನ

(೧೯೯೫ / ವರ್ಣ / ಸಾಮಾಜಿಕ)

ಲಾ: ಶ್ರೀ ಚಿತ್ರಾ ಕ್ರಿಯೇಷನ್ಸ್

ಪ್ರೊ: ಕೆ.ಚಿದಂಬರ ಶೆಟ್ಟಿ

ನಿ: ಬೂದಾಳ್ ಕೃಷ್ಣಮೂರ್ತಿ

ಸ.ನಿ: ಕಲಾಗಂಗೋತ್ರಿ ಮಂಜು

ಅ: ಶಶಿಕುಮಾರ್, ಶ್ರುತಿ, ನಂದಿನಿ ಸಿಂಗ್, ತಾರಾ, ಪ್ರಮೀಳಾ ಜೋಷಾಯ್, ಸಿಹಿಕಹಿ ಗೀತಾ, ಸಿಹಿಕಹಿ ಚಂದ್ರು, ಮಾ।ಆನಂದ್, ಲಕ್ಷ್ಮಣ್

ಕ: ವಿಠ್ಠಲ ಶೆಟ್ಟಿ, ಸಾಯಿ

ಚಿ.ಕ: ಬೂದಾಳ್ ಕೃಷ್ಣಮೂರ್ತಿ, ರಾಜಾ ಚಂಡೂರ್

ಮಾ: ಕುಣಿಗಲ್ ನಾಗಭೂಷಣ್

ಗೀ: ವಿ.ಮನೋಹರ್, ಆರ್.ಎನ್.ಜಯಗೋಪಾಲ್

ಗಾ: ರಾಜಕುಮಾರ್, ಎಸ್.ಪಿ.ಬಾಲಸುಬ್ರಹ್ಮಣ್ಯಂ, ರಾಜೇಶ್, ಮಂಜುಳಾ ಗುರುರಾಜ್

ಸಂ: ಕೆ.ನರಸಯ್ಯ

ಛಾ: ಮಲ್ಲಿಕಾರ್ಜುನ

ಕಲೆ: ನಂಜುಂಡಸ್ವಾಮಿ

ಸ: ರಾಜೇಶ್ ರಾಮನಾಥನ್

ಧ್ವ: ಸಂಕೇತ್ ಪ್ರಸಾದ್

ನೃ: ಶಿವಶಂಕರ್

ಸಾ: ನಂಜುಂಡಿ ನಾಗರಾಜ್

ವ: ಜಯಚಂದ್ರ, ವೆಂಕಟರಾವ್

ಪ್ರ: ಬಸವರಾಜ್

ಸ್ಟು: ಪ್ರಸಾದ್, ಕಂಠೀರವ

ಹಾ: ೧)'ಮದುವೆಯ ಪದವೇ ಮಧುರ...', ೨)'ಟಿಕ್ಕಿ ಟಿಕ್ಕಿ ಹೂಡೆದು...', ೩)'ಆಹ ಏನು ಚೆಂದ ನನ್ನ ಕವನ...', ೪)'ಮನ ಹಾಡಿತೀಗ ಬಿಳಿಮುಂಬ ರಾಗ...', ೫)'ಹಲೋ ದಂಪತಿ ಏನೇನು ಸಂಗತಿ....'

ಕ.ಸಾ: ಪದವೀಧರ ನಿರುದ್ಯೋಗಿಯನ್ನು ಹೆಣ್ಣುಗಳು ಶೋಷಣೆ ಮಾಡುವಂತಹ ಕಥೆ. ಮನೆಗೆಲಸ ಮಾಡುವ ಕುಮುದಳನ್ನು ಮೋಹನ್ ಪ್ರೀತಿಸುತ್ತಾನೆ. ಮದುವೆಯಾದ ಹೆಣ್ಣು ಏಕಪತ್ನೀವ್ರತ ನೀಡಲೆಂದೇ ರಾಧಳ ಗಂಡನಂತೆ ತೋರಿಸಿಕೊಳ್ಳಲು ಒಪ್ಪಿಕೊಳ್ಳುತ್ತಾನೆ. ಅಲ್ಲದೆ ಇನ್ನೊಂದು ಹುಡುಗಿಯ ಬಾಯ್ ಫ್ರೆಂಡ್ ಆಗಿಯೂ ನಟಿಸುತ್ತಿರುತ್ತಾನೆ. ಕುಮುದ ಭಾರೀ ಶ್ರೀಮಂತನ ಮಗಳೆಂದು ಗೊತ್ತಾಗುತ್ತದೆ. ಆಗ ಅವನು ಯಾವ ರೀತಿ ಕುಮುದಳನ್ನು ಮದುವೆಯಾಗುತ್ತಾನೆಂಬುದೇ ಚಿತ್ರದ ಅಂತ್ಯವಾಗಿದೆ.

೧೬೯೩. ಶ್ರೀಗಂಧ

(೧೯೯೫ / ವರ್ಣ / ಸಾಮಾಜಿಕ)

ಲಾ: ಶ್ರೀ ವರಾಹ ಕ್ರಿಯೇಷನ್ಸ್

ಪ್ರೊ: ಸಂಪತ್ ಕುಮಾರ್

ನಿ: ಪಿ.ಹೆಚ್.ವಿಶ್ವನಾಥ್

ಅ: ರಮೇಶ್, ಸುಧಾರಾಣಿ, ಕಾಶಿ, ಬಿ.ವಿ.ರಾಧಾ, ನಾಗೇಂದ್ರ ಶಾ, ಶ್ರೀನಾಥ್, ಸುಷ್ಮಾ, ನಾಗರಾಜ್ ಮೂರ್ತಿ

ಕ: ಪಿ.ಹೆಚ್.ವಿಶ್ವನಾಥ್, ಸೀನ್ನಳ್ಳಿ ರಾಜು

ಚಿ.ಕ: ಪಿ.ಹೆಚ್.ವಿಶ್ವನಾಥ್

ಮಾ: ಕೋಟಿಗಾನಹಳ್ಳಿ ರಾಮಯ್ಯ

ಗೀ: ಹಂಸಲೇಖ

ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಪಿ.ಬಿ.ಶ್ರೀನಿವಾಸ್, ಮನು, ಮಂಜುಳಾ ಗುರುರಾಜ್, ಬಿ.ಆರ್.ಛಾಯಾ, ಲತಾ ಹಂಸಲೇಖ, ವಿಜಯಲಕ್ಷ್ಮಿ

ಸಂ: ಸುರೇಶ್ ಅರಸ್

ಛಾ: ಬಿ.ಎನ್.ಹರಿದಾಸ್

ಕಲೆ: ರಮೇಶ್ ಬಾಬು

ಸ: ಹಂಸಲೇಖ

ಧ್ವ: ಪ್ರಸಾದ್, ಕೃಷ್ಣಮೂರ್ತಿ

ನೃ: ಮದ್ರಾಸ್ ಹರಿಣಿ

ವ: ವಿಜಯ

ಪ್ರ: ಮೈಸೂರು ವೆಂಕಟೇಶ್, ಸಿದ್ದೇಶಿ

ಹಾ: ೧)'ಒಂದು ಅನುರಾಗದ ಕಾವ್ಯ... ', ೨)'ಕೋಗಿಲೆಪದ ಜಾನಪದ...', ೩)'ಕಾಯಿಸುವ ಹುಡುಗಿಯರ...', ೪)'ಹೋ ಅಂಧರಮ್ಮ ಅಂಧರು...', ೫)'ಸಿಸ್ಟರ್ ಸಿಸ್ಟರ್ ಬಿ ಬ್ಯೂಟಿಫುಲ್...',

ಕ.ಸಾ: ದುರಂತ ಪ್ರೇಮಕಥೆ. ಅದೂ ವ್ಯಕ್ತಿಗಳನ್ನು ತಪ್ಪಾಗಿ ಗುರುತಿಸುವುದರಿಂದಾಗುವ ದುರಂತ. ವಿವೇಕ್ ಅರುಂಧತಿಯನ್ನು ಪ್ರೀತಿಸುತ್ತಾನೆ. ಇಬ್ಬರೂ ಮದುವೆಯಾಗಲು ನಿರ್ಧರಿಸುತ್ತಾರೆ. ಆದರೆ ವಿವೇಕನ ತಂದೆ ಅರುಂಧತಿ ವೇಶ್ಯೆಯ ಮಗಳೆಂದು ತಪ್ಪಾಗಿ ತಿಳಿದು ಅವರ ಮದುವೆಯನ್ನು ವಿರೋಧಿಸುತ್ತಾರೆ. ಇದರಿಂದಾಗಿ ಆ ಜಾಗವನ್ನೇ ಬಿಡುವ ಅರುಂಧತಿ ಕೆಲಸ ಮಾಡತೊಡಗುತ್ತಾಳೆ. ಅವಳು ತನ್ನ ತಂದೆಯ ಮನೆಯಲ್ಲಿರಬಹುದಾಗಿದ್ದರೂ ಅವರೇ ತನ್ನ ತಾಯಿಯನ್ನು ಹೊರಹಾಕಿದವರೆಂದು ಭಾವಿಸಿ ದೂರ ಉಳಿಯುತ್ತಾರೆ. ಆದರೆ ಅನಂತರ ತಿಳಿಯುತ್ತದೆ ತಂದೆ ಅಮಾಯಕರೆಂದು.

೧೬೯೪. ಆಟ ಹುಡುಗಾಟ

(೧೯೯೫ / ವರ್ಣ ಪತ್ತೇದಾರಿ)

ಲಾ: ಶ್ರೀ ರಾಜರಾಜೇಶ್ವರಿ ಫಿಲಂಸ್

ಪ್ರೊ: ವಿ.ಸತ್ಯನಾರಾಯಣ

ನಿ: ಬಿ.ರಾಮಮೂರ್ತಿ

ಸ.ನಿ: ಮೋಹನ್ ತುಳಸಿ

ಅ: ರಾಘವೇಂದ್ರ ರಾಜಕುಮಾರ್, ಪ್ರೇಮ, ಶಿವರಂಜನ್, ಸ್ವಾತಿ, ಗಂಗಾಧರ್, ಶಿವರಾಂ, ಬ್ಯಾಂಕ್ ಜನಾರ್ದನ್, ಸರೋಜಮ್ಮ, ಅನಿಲ್ ರಾಜ್, ಮೈತ್ರೇ, ಅನಿಲ್ ಕುಮಾರ್, ಶಿಲ್ಪಾ, ವಿದ್ಯಾ

ಕ: ಹಿಂದಿಯ ''ಕಿಲಾಡಿ' ಚಿತ್ರದ ಕನ್ನಡ ರೂಪಾಂತರ

ಚಿ.ಕ: ಬಿ.ರಾಮಮೂರ್ತಿ, ರಾಜೇಂದ್ರಕುಮಾರ್ ಆರ್ಯ

ಮಾ: ಬಿ.ರಾಮಮೂರ್ತಿ, ಸವಿತ್ರು ಶರ್ಮ

ಗಾ: ರಾಘವೇಂದ್ರ ರಾಜಕುಮಾರ್, ಚಿತ್ರಾ, ರಾಜೇಶ್

ಸಂ: ರಾಘವ

ಛಾ: ಮಹೇಂದ್ರ, ಚಿಟ್ಟಿಬಾಬು

ಕಲೆ: ರಾಜು

ಸ: ಸಾಧುಕೋಕಿಲ

ಧ್ವ: ಚಾಮುಂಡೇಶ್ವರಿ, ಸಂಕೇತ್

ನೃ: ಪ್ರಸಾದ್

ಸಾ: ನಂಜುಂಡಿ ನಾಗರಾಜ್

ವ: ನೀಲಕಂಠನ್

ಪ್ರ: ವಿಶ್ವನಾಥ್

ಸ್ಟು: ಕಂಠೀರವ, ಚಾಮುಂಡೇಶ್ವರಿ

ಹಾ: ೧)'ಉಲ್ಲಾಸದಾ ಈ ಸಂಜೆಗೆ...', ೨)'ಮುತ್ತು ಒಂದು ಮುತ್ತು...', ೩)'ರುಕ್ಕು ರುಕ್ಕು ರುಕ್ಕು ಮಿಣಿ ನಮ್ಮ ಕಾಲೇಜಿಗ ಕಣ್ಮಣಿ...',

೪)'ಓ ಪ್ರೇಮವೇ ನೀ ಸಂಜೀವಿಯೇ...',
೫)'ಬೆಳ್ಳಿ ಚುಕ್ಕಿ ಕಮ ಕಮ...'
ಕ.ಸಾ: ನಾಲ್ವರು ಪ್ರೇಮಿಗಳಲ್ಲಿ ಒಬ್ಬರ ಕೊಲೆ ನಡೆದು ಇವರ ನಿಗೂಢ ಬಿಡಿಸುವ ಕಥೆ. ಒಟ್ಟಿಗೆ ಕಾಲೇಜಿನಲ್ಲಿ ಓದುತ್ತಿರುವ ರಾಜ್ ಮತ್ತು ಪ್ರೇಮ ಹಾಗೂ ವಿಕ್ಕಿ ಮತ್ತು ಅನುರಾಧ ಪ್ರೇಮಿಸುತ್ತಾರೆ. ಅನುರಾಧಳ ತಂದೆ ಅವಳಿಗೆ ಬೇರೆಡೆ ಮದುವೆ ನಿಶ್ಚಿತಾರ್ಥ ಮಾಡಲು ದೇಶಿಸಿದ ದಿನವೇ ಈ ನಾಲ್ವರು ಮನೆಯಿಂದ ತಪ್ಪಿಸಿಕೊಂಡು ಬಂದು ಪ್ರವಾಸಿ ಮಂದಿರದಲ್ಲಿ ಉಳಿಯುತ್ತಾರೆ. ಅಲ್ಲಿ ಅನುರಾಧಳ ಕೊಲೆಯಾಗುತ್ತದೆ. ಅವಳ ಶವವನ್ನು ಎಲ್ಲೋ ಹಾಕಿಬಂದರೂ ಉಳಿದ ಮೂವರ ಕಾರಿನಲ್ಲೇ ಕಾಣಿಸಿಕೊಳ್ಳುತ್ತದೆ. ಕೊನೆಗೆ ಈ ಕೊಲೆಯ ನಿಗೂಢ ಬಯಲಾಗುತ್ತದೆ.

೧೬೯೫. ಸ್ಟೇಟ್ ರೌಡಿ

(೧೯೯೫ / ವರ್ಣ / ಸಾಮಾಜಿಕ)
ಲಾ: ನಾಗೇಂದ್ರಮಣಿ ಎಂಟರ್‌ಪ್ರೈಸಸ್
ಪ್ರೊ: ಕೆ.ನಾಗೇಂದ್ರಮಣಿ
ನಿ: ಕೆ.ಎಸ್.ಆರ್.ದಾಸ್
ಅ: ದೇವರಾಜ್, ಡಾಲಿ, ರಾಮಕುಮಾರ್, ಭವ್ಯಶ್ರೀ ರೈ, ಮಾಧುರಿ, ರಾಮಿರೆಡ್ಡಿ, ರೂಪಶ್ರೀ, ಸಿಲ್ಕ್ ಸ್ಮಿತಾ, ಸದಾಶಿವ ಬ್ರಹ್ಮಾವರ್, ಬೇಬಿ ಸಿಂಧೂ, ಮಹೇಶ್ ಕುಮಾರ್(ಮುಂಬೈ), ಬೇಬಿ ಪ್ರಿಯ, ಶ್ರೀ ಶೈಲನ್, ಎಂ.ಎಸ್.ಎಲ್.ಮೂರ್ತಿ
ಕ/ಚಿ.ಕ: ಕೆ.ಎಸ್.ಆರ್.ದಾಸ್
ಮಾ: ಕೆ.ನಂಜುಂಡ
ಗೀ: ವಿ.ಮನೋಹರ್
ಸಂ: ಶಿವು
ಛಾ: ಲಕ್ಷ್ಮಣ್
ಸ: ರಾಜನ್ ನಾಗೇಂದ್ರ
ನೃ: ದುರ್ಗಾ ಪ್ರಸಾದ್
ಸಾ: ನಂಜುಂಡಿ ನಾಗರಾಜ್
ಕ.ಸಾ: ಸಮಾಜದ ಪ್ರತಿಕೂಲ ಪರಿಸ್ಥಿತಿಗಳಿಂದಾಗಿ ರೌಡಿಯಾಗಿ ಮಾರ್ಪಟ್ಟ ಪದವೀಧರ ಶಿವು ದುಷ್ಟ ಶಿಕ್ಷಕ ಶಿಷ್ಟ ರಕ್ಷಕನಾಗಿರುತ್ತಾನೆ. ಕಾಲೇಜಿನ ದಿನಗಳಲ್ಲಿ ಭಾರತಿದೇವಿಯನ್ನು ಪ್ರೀತಿಸಿದರೂ, ಸೌಮ್ಯಳನ್ನು ಮದುವೆಯಾಗಿ ಹೆಣ್ಣು ಮಗುವಿನ ತಂದೆಯಾಗಿದ. ಹಲವು ವರ್ಷಗಳ ನಂತರ ಆತ

ಭಾರತಿದೇವಿಯನ್ನು ಭೇಟಿಯಾದಾಗ ಆಕೆ ಕಮೀಷನರ್ ಆಗಿರುತ್ತಾಳೆ. ಶಿವುವಿನ ತಂಗಿ ಸ್ವಪ್ನಾ ಮತ್ತು ಸುಂದರ್ ಪ್ರೀತಿಸಿರುತ್ತಾರೆ. ಆದರೆ ಸುಂದರ್‌ನನ್ನು ಪ್ರೀತಿಸಿದ ರೇಖಾ, ತಂದೆಯ ಮೂಲಕ ಅವನನ್ನು ತನ್ನವನನ್ನಾಗಿಸಿಕೊಳ್ಳಲು ಪ್ರಯತ್ನಿಸಿ ವಿಫಲಳಾದಳು. ಇದರಿಂದ ರೇಖಾಳ ತಂದೆ ಮತ್ತು ಶಿವು ನಡುವೆ ದ್ವೇಷ. ರೇಖಾಳ ತಂದೆ ಸ್ವಪ್ನಳ ಕೊಲೆಗೆತ್ನಿಸುತ್ತಾನೆ. ಅತ್ಯಾಚಾರದ ಸುಳ್ಳು ಆರೋಪ ಹೊರಿಸಿ ಸುಂದರ್ ಜೈಲು ಸೇರುವಂತಾಗಿಸುವನು. ಹೀಗೆ ಘಟನೆಗಳ ಸರಮಾಲೆಯ ಈ ಚಿತ್ರದಲ್ಲಿ ಸಾಹಸವೇ ಪ್ರಧಾನ.

೧೬೯೬. ಮನಮಿಡಿಯಿತು

(೧೯೯೫ / ವರ್ಣ / ಸಾಮಾಜಿಕ)
ಲಾ: ವೈಭವ ಲಕ್ಷ್ಮೀ ಕಂಬೈನ್ಸ್
ಪ್ರೊ: ರಾಣಿ ರಾಜಶೇಖರ್, ಸೌಭಾಗ್ಯಮ್ಮ ರಮೇಶ್
ನಿ: ಎಂ.ಎಸ್ ರಾಜಶೇಖರ್
ಸ.ನಿ: ಬಿ.ಮಂಜುನಾಥ್
ಅ: ಶಿವರಾಜ್‌ಕುಮಾರ್, ಪ್ರಿಯಾ ರಾಮನ್, ಶ್ರೀನಾಥ್, ರಾಮಕೃಷ್ಣ, ಜೈಜಗದೀಶ್, ಬಾಲರಾಜ್, ಜಯಂತಿ, ತಾರಾ, ಶನಿ ಮಹಾದೇವಪ್ಪ, ದತ್ತಾತ್ರೇಯ, ವಸಂತ ನಾಕೋಡ್, ಉಮೇಶ್, ಹೊನ್ನವಳ್ಳಿ ಕೃಷ್ಣ, ಶ್ರೀಶೈಲನ್
ಕ: ಅಶ್ವಿನಿಯವರ ಕಾದಂಬರಿ ಆಧಾರಿತ
ಚಿ.ಕ/ಮಾ: ಟಿ.ಎನ್.ನರಸಿಂಹನ್, ಎಂ.ಎಸ್.ವ್ಯಾಸರಾವ್
ಗೀ: ಹಂಸಲೇಖ, ಗೀತಪ್ರಿಯ, ಎಂ.ಎಸ್.ವ್ಯಾಸರಾವ್, ಶ್ರೀರಂಗ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಸಂಗೀತಾ ಕಟ್ಟಿ, ಮಂಜುಳಾ ಗುರುರಾಜ್
ಸಂ: ಎಸ್.ಮನೋಹರ್
ಛಾ: ಮಲ್ಲಿಕಾರ್ಜುನ
ಕಲೆ: ವೇಣು-ಇಸ್ಮಾಯಿಲ್
ಸ: ಉಪೇಂದ್ರಕುಮಾರ್
ಧ್ವ: ವಿ.ಬಿ.ಸಿ.ಮೆನನ್, ಎಂ.ಕೋದಂಡಪಾಣಿ
ನೃ: ಪ್ರಸಾದ್
ಸಾ: ನಂಜುಂಡಿ ನಾಗರಾಜ್
ವ: ವೀರರಾಜು, ಅಂಜನಿ, ಪರಮಶಿವ
ಪ್ರ: ವಿಶ್ವನಾಥ್, ಮೋರ, ರಾಜು

ಸ್ಥ: ಅಭಿಮಾನ್, ಕಂಠೀರವ
ಹಾ: ೧)'ಒಲವಿನ ಬೆಳಕನು ನೋಡಿದ...', ೨)'ಎಲ್ಲೆಲ್ಲೂ ನೀನೇ ಜಾಣ...', ೩)'ಬಲು ಜಾಲಿ ಜೋಡಿ ನಾವಿಬ್ಬರು...', ೪)'ಈ ಪ್ರೇಮದ ಮತ್ತಿಗ...', ೫)'ಹಗಲೊಂದು ಉಂಟು...'
ಕ.ಸಾ: ನಿದ್ರೆಯಲ್ಲಿ ಓಡಾಡುವ ರೋಗವಿರುವ ಹುಡುಗಿಯ ಸುತ್ತ ಹೆಣೆಯಲಾದ ಕಥೆ. ಹೀಗೆ ನಡೆಯುತ್ತಿದ್ದಾಗ ಅಪಘಾತವಾಗಿ ನೀರಜಾ ತನ್ನ ನೆನಪಿನ ಶಕ್ತಿಯನ್ನೇ ಕಳೆದುಕೊಂಡಿರುತ್ತಾಳೆ. ಅಪರಿಚಿತರ ಮಧ್ಯೆ ಇರಬೇಕಾಗುವ ಅವಳನ್ನು ಡಾ|ಆನಂದ್ ಪ್ರೇಮಿಸಲಾರಂಭಿಸುತ್ತಾನೆ. ಆದರ ಡಾ|ಶಾಂತಲ ಆನಂದ್‌ನನ್ನು ಪ್ರೇಮಿಸುತ್ತಿರುತ್ತಾಳೆ. ಹೀಗಾಗಿ ಅವಳಿಗೆ ನೀರಜಾಳನ್ನು ಕಂಡರಾಗದಾಗುತ್ತದೆ. ನೀರಜಾಳ ಜ್ಞಾಪಕ ಶಕ್ತಿ ಮರಳಿ ಬರಲು ಆನಂದ್ ತನ್ನಿಂದಾಗುವ ಪ್ರಯತ್ನವನ್ನೆಲ್ಲಾ ಮಾಡುತ್ತಾನೆ. ದುರಂತದಲ್ಲಿ ಸಾವಿಗೀಡಾದ ಅವನ ದೊಡ್ಡಣ್ಣ ಗಜಾನನ. ಹೆಂಡತಿಯೇ ನೀರಜಾ ತಿಳಿದಾಗ ಅವನಿಗೆ ಆಘಾತ ಮಾಡಂತೆನಿಸುತ್ತದ.

೧೬೯೭. ನಿಲುಕದ ನಕ್ಷತ್ರ

(೧೯೯೫ / ವರ್ಣ / ಸಾಮಾಜಿಕ)
ಲಾ: ಮುಕ್ತಾ ಮೂವೀಸ್
ಪ್ರೊ: ಎಸ್.ನಾಗರಾಜ್
ನಿ: ಕೋಡ್ಲು ರಾಮಕೃಷ್ಣ
ಸ.ನಿ: ಅನಂತಮೂರ್ತಿ, ರಘಾಕುಮಾರ್
ಅ: ಅನಂತ್‌ನಾಗ್, ಭವ್ಯ, ತಾರಾ, ಬೇಬಿ ಶೀತಲ್, ಬಾಲಕೃಷ್ಣ, ವಿಜಯಕಾಶಿ, ಶ್ರೀದೇವಿ, ಶ್ರೀರಕ್ಷಾ, ಇಂದೂ ಚಕ್ರವರ್ತಿ, ಎನ್.ಆರ್.ನಾಟಿಗ್, ಮಹಾವೀರ್, ನೃಪತುಂಗ,
ಕ: ಅಶ್ವಿನಿಯವರ ಕಾದಂಬರಿ ಆಧಾರಿತ
ಚಿ.ಕ: ಕೋಡ್ಲು ರಾಮಕೃಷ್ಣ, ನಾಗತಿಹಳ್ಳಿ ಚಂದ್ರಶೇಖರ್
ಮಾ: ನಾಗತಿಹಳ್ಳಿ ಚಂದ್ರಶೇಖರ್
ಗೀ: ಕೆ.ಎಸ್.ನರಸಿಂಹಸ್ವಾಮಿ, ಗೀತಪ್ರಿಯ, ದೊಡ್ಡರಂಗೇಗೌಡ, ವಿಜಯನಾರಸಿಂಹ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ
ಸಂ: ಸುರೇಶ್ ಅರಸ್
ಛಾ: ಎಸ್.ರಾಮಚಂದ್ರ



ಕಲೆ: ಸುಭಾಷ್ ಕದಕೋಳ್
ಸ: ಸಂಗೀತರಾಜ
ಧ್ವ: ಸೋಮಶೇಖರ್, ಅರುಣಮುದನ್, ಸುರೇಶ್
ನೃ: ಉಡುಪಿ ಜಯರಾಂ, ದೇವಿ
ವ: ಬಾಲನ್
ಪ್ರ: ಶ್ರೀನಿವಾಸ್, ವೆಂಕಟಸ್ವಾಮಿ, ರಾಮು
ಹಾ: ೧)'ಈ ನನ್ನ ಬಾಷ್ಪಾಂಜಲಿ...' ೨)'ವರುಷ ಕನ್ಯಮ್ಮ...'
ಕ.ಸಾ: ಪ್ರೀತಿಯಲ್ಲುಂಟಾಗುವ ತಪ್ಪು ತಿಳಿವಳಿಕೆಯನ್ನೇ ಪ್ರಧಾನವಾಗಿಟ್ಟುಕೊಂಡು ಹೆಣೆಯಲಾದ ಕಥೆ. ತಾನು ಪ್ರೀತಿಸುವ ರಾಜನ ಬಗ್ಗೆ ತಪ್ಪು ಭಾವಿಸಿ ಆತನಿಂದ ದೂರಾಗುವ ಡಾ| ಸರಳಾ ಒಂಟಿಯಾಗಿಯೇ ಉಳಿದಿರುತ್ತಾಳೆ. ಅಪಘಾತದಲ್ಲಿ ಗಾಯಗೊಂಡು ಆಸ್ಪತ್ರೆಗೆ ಸೇರುವ ಸುಮಿತ್ರಳಿಗೆ ಚಿಕಿತ್ಸೆ ನೀಡುವ ಸರಳಾ ಅವಳಿಗೆ ಉತ್ತಮ ಸ್ನೇಹಿತೆಯೂ ಆಗುತ್ತಾಳೆ. ಸರಳಾ ಪ್ರೀತಿಸುತ್ತಿರುವ ರಾಜನೇ ತನ್ನ ಪತಿ ಎಂದು ತಿಳಿದಾಗ ಸುಮಿತ್ರ ಅವರಿಬ್ಬರನ್ನೂ ಒಂದುಗೂಡಿಸಲು ಪ್ರಯತ್ನಿಸುತ್ತಾಳೆ. ಆದರೆ ಸರಳಾ ರಾಜ ತನಗೆಂದೆಂದೂ ನಿಲುಕದ ನಕ್ಷತ್ರವೇ ಎಂದು ದೂರಾಗುತ್ತಾಳೆ.

೧೬೯೮. ಸಮರ

(೧೯೯೫ / ವರ್ಣ / ಸಾಮಾಜಿಕ)
ಲಾ: ವಿ.ವಿ.ಕಂಬೈನ್ಸ್
ಪ್ರೊ: ಪ್ರವೀಣ್, ವಿ.ಗುರ್ಜಾರ್, ವರುಣ್, ಅನಿಲ್ ಪಗಡಿ
ನಿ: ಚಿ.ಗುರುದತ್
ಸ.ನಿ: ಪಿ.ಶೇಷಾದ್ರಿ
ಅ: ಶಿವರಾಜಕುಮಾರ್, ದೇವರಾಜ್, ಸುಧಾರಾಣಿ, ಶ್ರೀನಿವಾಸಮೂರ್ತಿ, ಸತೀಶ್, ಹರೀಶ್, ಭರತ್, ನಂದಿನಿಸಿಂಗ್, ಅಶೋಕ್ ರಾವ್
ಕ/ಚಿ.ಕ: ಜಿ.ದಾಮೋದರ್
ಮಾ: ಚಿ.ದತ್ತುರಾಜ್
ಗೀ: ವಿ.ಮನೋಹರ್, ಎಂ.ಎನ್.ವ್ಯಾಸರಾವ್
ಗಾ: ರಾಜಕುಮಾರ್, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ, ಮಂಜುಳಾ ಗುರುರಾಜ್,

ಸಂ: ಪಿ.ಭಕ್ತವತ್ಸಲಂ
ಛಾ: ಆರ್.ಮಧುಸೂಧನ್
ಸ: ಕೌಸ್ತುಭ
ಧ್ವ: ಎಸ್.ಪಿ.ರಾಮನಾಥನ್, ಕೋದಂಡಪಾಣಿ
ಸ್ಥ: ತಾರಾ ಪ್ರಸಾದ್
ಸಾ: ಥ್ರಿಲ್ಲರ್ ಮಂಜು
ವ: ಜಯಚಂದ್ರ
ಪ್ರ: ಕೇಶವ
ಹಾ: ೧)'ಕನ್ನಡಿಗರ ಮನಸ್ಸು. .'.೨)'ಕನಸಿನಲ್ಲೂ ನೀನೇ. ೩)'ಪ್ರ ಮರೆತು ನಿನ್ನನು...'. ೪) 'ಎಂದೆಂದಿಗೂ ನಿನ್ನ...'. ೫)'ಕನ್ನಡಿಗರ ಮನಸ್ಸು...'.೬)'ಅ.ಆ.ಇ.ಈ ಎಂಬ...'
ವಿ: ಶಿವರಾಜ್ ದೇವರಾಜ್ ಮೊದಲ ಬಾರಿ ಒಟ್ಟಿಗೆ ಅಭಿನಯಿಸಿರುವುದು. ಟಿ.ಉದಯಶಂಕರ್ ಮಗ ಗುರುದತ್ ಮೊದಲ ಬಾರಿ ನಿರ್ದೇಶಕರಾಗಿದ್ದು, ಬಹು ಭಾಗ ಸಿಂಗಾಪುರದಲ್ಲಿ ಚಿತ್ರಿತಗೊಂಡಿದೆ.
ಕ.ಸಾ: ಸಾಹಸವೇ ಪ್ರಧಾನ. ಸಮಾಜಘಾತುಕ, ಕೊಲೆಗಡುಕ ದುರ್ಜನರನ್ನು ನಾಯಕ ಪಾತ್ರ ಸದೆ ಬಡಿಯುತ್ತದೆ. ಮಾನವೀಯತೆ. ಶಿಸ್ತು ಇನ್ನೂ ಪೋಲೀಸ್ ಇಲಾಖೆಯಲ್ಲಿ ಉಳಿದುಕೊಂಡಿದೆ ಎಂದು ಹೇಳುವ ಪ್ರಯತ್ನ.

೧೧೯೯. ನಿಘಾತ

(೧೯೯೫ / ವರ್ಣ / ಪತ್ತೇದಾರಿ)
ಲಾ: ಪಿ.ಎಸ್.ವಿ.ಪಿಕ್ಚರ್ಸ್
ಪ್ರೊ/ನಿ: ಎಸ್.ನಾರಾಯಣ್
ಸ.ನಿ: ಮಲ್ಲಿಕಾರ್ಜುನ

ಅ: ಶಶಿಕುಮಾರ್, ಚರಣ್‌ರಾಜ್, ಲೋಕನಾಥ್, ಮಾಧುರಿ, ವೈಶಾಲಿ ಕಾಸರವಳ್ಳಿ, ಎಸ್.ನಾರಾಯಣ್, ಡಾ। ಸುರೇಶ್ ಶರ್ಮಾ
ಕ/ಚಿ.ಕ/ಮಾ: ಎಸ್.ನಾರಾಯಣ್
ಸಂ: ಪಿ.ಆರ್. ಸೌಂದರ್ ರಾಜನ್
ಛಾ: ಆರ್.ಗಿರಿ
ಕಲೆ: ಸುಭಾಷ್ ಕಡಕೋಳ್
ಸ: ಸಾಧುಕೋಕಿಲ
ಧ್ವ: ಕೃಷ್ಣಮೂರ್ತಿ(ಸಂಕೇತ್)
ಸಾ: ವಿಕ್ರಂ ವೆಂಕಿ
ವ: ವಿಠಲ ರಾವ್
ಪ್ರ: ವಿಠಲ ಬಾಬು
ಕ.ಸಾ: ಹಗ ತೀರಿಸಿಕೊಳ್ಳುವ ಕಥೆ. ಇದಕ್ಕಾಗಿ ಕೊಲೆಗಳೇ ನಡೆದು ಹೋಗುತ್ತವೆ. ಕಗ್ಗೊಲೆ ನಡೆದಾಗ ಉಳಿದವರು ಹಗೆ ತೀರಿಸಿಕೊಳ್ಳುವ ಛಲದಲ್ಲಿಯೇ ಬೆಳೆದು ಕಗ್ಗೊಲೆ ಮಾಡಿದವರನ್ನೆಲ್ಲಾ ಕೊಲ್ಲುತ್ತಾರೆ.

೧೨೦೦. ಗಾನಯೋಗಿ ಪಂಚಾಕ್ಷರಿ ಗವಾಯಿ

(೧೯೯೫ / ವರ್ಣ / ಜೀವನ ಚಿತ್ರ/ ಸಂಗೀತ ಪ್ರಧಾನ)
ಲಾ: ಶಂಕರ ಲೀಲಾ ಪಿಕ್ಚರ್ಸ್
ಪ್ರೊ: ಶ್ರೀಮತಿ ಚಿಂದೋಡಿ ಲೀಲಾ, ಸಿ.ಎಲ್.ಚಂದ್ರಧರ
ನಿ: ಚಿಂದೋಡಿ ಬಂಗಾರೇಶ್
ಅ: ಗಿರೀಶ್ ಕಾರ್ನಾಡ್, ಲೋಕೇಶ್, ಕಲ್ಯಾಣ್‌ಕುಮಾರ್, ಧೀರೇಂದ್ರಗೋಪಾಲ್, ವಿಜಯ ರಾಘವೇಂದ್ರ, ಮಾಧುರಿ, ಬಿ.ವಿ.ಸಾವಿತ್ರಿ, ಧರೇಸಮ್ಮ, ಚಿಂದೋಡಿ ಬಂಗಾರೇಶ್, ಏಣಗಿ ಬಾಳಪ್ಪ, ಎನ್.ಬಸವರಾಜ್, ಅಪ್ಪುರಾಜ್ ಮುಧೋಳ್, ಹೆಚ್.ಎನ್.ಹೂಗಾರ, ಶಿವಶಂಕರ ಬ್ಯಾಳಿ
ಕ/ಚಿ.ಕ/ಮಾ: ಚಿಂದೋಡಿ ಬಂಗಾರೇಶ್
ಗೀ: ಬಸವೇಶ್ವರ, ಸರ್ವಭೂಷಣ ಶಿವಯೋಗಿ, ತಾನಸೇನ್, ಶಿಶುನಾಳಷರೀಫ, ಹಂಸಲೇಖ, ತ್ಯಾಗರಾಜರು, ಪುರಂದರ ದಾಸರು, ನಿಜಗುಣ ಶಿವಯೋಗಿ
ಗಾ: ರಾಜಕುಮಾರ್, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಜೇಸುದಾಸ್, ಪರಮೇಶ್ವರ ಹೆಗಡೆ, ನಾಗರಾಜ ಶಾಸ್ತ್ರಿ, ಚಿತ್ರಾ, ಸೌಮ್ಯ, ಮನು
ಸಂ: ಸುರೇಶ್ ಅರಸ್
ಛಾ: ಬಿ.ಎನ್.ಹರಿದಾಸ್
ಕಲೆ: ವೆಂಕಟರಾಮಯ್ಯ
ಸ: ಹಂಸಲೇಖ
ಧ್ವ: ಕೃಷ್ಣಮೂರ್ತಿ
ವ: ವೀರರಾಜು, ನಾಗರಾಜ್
ಪ್ರ: ವೆಂಕಟಸ್ವಾಮಿ
ಹಾ: ೧) 'ಓಂ ನಮ ಪ್ರಣವಾರ್ಥತಯ ಶುದ್ಧ ಜ್ಞಾನೈಕ...', ೨)'ನೀಡು ಶಿವ ನೀಡದಿರು ಶಿವ...', ೩)'ಹಂಬಲಾ ಹಾಸುವಾ ಹಂಬಲ...', ೪) 'ಮಹಾಗಣಪತೇಂ ಮನಸಾ...', ೫) 'ನಾದ ತನುಮನುಷಂ ಶಂಕರಂ...', ೬)'ಓಂಕಾರದ ಉದ್ಘೋಷಿತಾಗ...', ೭) 'ಮಣ್ಣಿಂದ ಕಾಯ ಮಣ್ಣಿಂದ...', ೮)' ನೋಡಲಾಗದೇ ತಾಳಲಾರನೇ ದೇವ...',೯)'ಮನ ಮೋಹನ ಮುರಳಿ ಬಾಲ...', ೧೦)'ಗಾನ ವಿದ್ಯ ಬಡಿ ಕಠಿಣ...', ೧೧)'ಎಂದು ಇಲ್ಲದೆ ಇಂದೆ ನನ್ನ ಆಸಗ ...', ೧೨) 'ಅತ್ತ ಇತ್ತ ಹೋಗದಂತೆ ಹೆಳವನ ಮಾಡಯ್ಯ... ', ೧೩) ' ಗುರು ಜಿನ ಕ್ಕ ಸ ಗಾನಗಾಪೇ...', ೧೪) 'ಪರಮಾರ್ಥ ತತ್ವ ಸಾರಸುಖವ...', ೧೫) ' ನಾನಾ ಎಂಬುದು ನಾನಲ್ಲ...', ೧೬)'ಉಮಂಥು ಗುಮುಂಡು...',
ವಿ: ೧೯೯೫ ರ ರಾಜ್ಯ ಪ್ರಶಸ್ತಿ: ಶ್ರೇಷ್ಠ ಸಂಗೀತನಿರ್ದೇಶಕ (ಹಂಸಲೇಖ) ಶ್ರೇಷ್ಠ ಹಿನ್ನೆಲೆ ಗಾಯಕ (ಎಸ್.ಪಿ. ಬಾಲಸುಬ್ರಮಣ್ಯಂ)
ಕ.ಸಾ: ಗುರುಕಟಾಕ್ಷದಿಂದಾಗಿ ಸಂಗೀತಗಾರರಾಗಿ ರೂಪುಗೊಳ್ಳುವ ಹುಟ್ಟು ಕುರುಡರಾದ ಮಹಾನ್ ಮಾನವತಾವಾದಿ ಮತ್ತು ಅದ್ಭುತ ಸಂಗೀತಗಾರ ಪಂಚಾಕ್ಷರಿ ಗವಾಯಿ ಅವರ ಜೀವನ ಚಿತ್ರಣ. ಸಂಗೀತಗಾರರಾಗುವ ಅವರು ಅಂಗವಿಕಲರು ಮತ್ತು ಕುರುಡರಾಗಿಯೇ ಸಂಗೀತ ಪಾಠ ಶಾಲೆ ಸ್ಥಾಪಿಸುತ್ತಾರೆ. ಇದು ಪ್ರಮುಖ ಕೇಂದ್ರವಾಗಿ ಬೆಳೆದು, ಕುರುಡು ಮತ್ತು ಅಂಗವಿಕಲರಿಗೆ ಆಶ್ರಯ ನೀಡುತ್ತದೆ.

೧೨೦೧. ತಾಳಿಯ ಸೌಭಾಗ್ಯ

(೧೯೯೫ / ವರ್ಣ / ಸಾಮಾಜಿಕ)
ಲಾ: ಜಯಲಕ್ಷ್ಮಿ ಆರ್ಟ್ ಪ್ರೊಡಕ್ಷನ್ಸ್
ಪ್ರೊ: ಜಯಲಕ್ಷ್ಮಿ, ಜೆ.ವಿ.ರಾಮಚಂದ್ರ
ನಿ: ಓಂ ಸಾಯಿಪ್ರಕಾಶ್
ಸ.ನಿ: ಚಂದ್ರಮೌಳಿ ಮುನಿ
ಅ: ರಾಮ್ ಕುಮಾರ್, ಸಾಯಿಕುಮಾರ್, ಶ್ರುತಿ, ದ್ವಾರಕೀಶ್, ದೊಡ್ಡಣ್ಣ, ಮುಖ್ಯಮಂತ್ರಿ ಚಂದ್ರು, ಲಕ್ಷ್ಮಣ್, ಟೆನ್ನಿಸ್ ಕೃಷ್ಣ, ಮಾನದೀಪ್ ರಾಯ್, ಉಮಾಶ್ರೀ, ಗಿರಿಜಾ ಲೋಕೇಶ್, ಎಂ.ಎನ್.ಲಕ್ಷ್ಮೀದೇವಿ, ಜ್ಯೋತಿ, ಉಷಾ ದೇವಿ, ಬಿ.ವಿ.ರಾಧಾ, ಮಮತಾ ಜಯಶ್ರೀ, ಬೇಬಿ ಅಮೃತಾ, ಸುಧೀರ್
ಕ/ಚಿ.ಕ: ಸಾಯಿಪ್ರಕಾಶ್
ಮಾ: ಕುಣಿಗಲ್ ವಸಂತ್
ಗೀ: ಆರ್.ಎನ್.ಜಯಗೋಪಾಲ್
ಸಂ: ಕೆ.ನರಸಯ್ಯ

ಛಾ: ಜಾನೀಲಾಲ್
ಕಲೆ: ಬಾಬು ಖಾನ್
ಸ: ರಾಜ್ (ರಾಜ್‌ಕೋಟಿ)
ಧ್ವ: ಪೀಟರ್, ಕೃಷ್ಣಮೂರ್ತಿ
ಸ್ಥ: ಶಿವಶಂಕರ್
ವ: ಜಯಚಂದ್ರ
ಪ್ರ: ಕುಮಾರ್
ಸ್ಟು: ಸಂಕೇತ್
ಕ.ಸಾ.: ಹೆಣ್ಣಿಗೆ ತಾಳಿ ಎಂಬುದು ಎಷ್ಟು ಮಹತ್ವವುಳ್ಳದ್ದು, ಅದನ್ನು ಉಳಿಸಿಕೊಳ್ಳಲು ಅವಳು ಏನೆಲ್ಲಾ ಮಾಡುತ್ತಾಳೆ ಎಂಬುದರ ಚಿತ್ರಣ.

೧೨೦೨. ಬಾಳೊಂದು ಚದುರಂಗ

(೧೯೯೫ / ವರ್ಣ / ಸಾಮಾಜಿಕ)
ಲಾ: ವಿಜಯೇಶ್ವರಿ ಆರ್ಟ್ ಕಂಬೈನ್ಸ್
ಪ್ರೊ: ಎಸ್.ಎ.ಚಿನ್ನೇಗೌಡ, ಎಸ್.ಎ.ಶ್ರೀನಿವಾಸ್
ನಿ: ದೊರೆ ಭಗವಾನ್
ಸ.ನಿ: ಎಸ್.ಮೋಹನ್, ಪಿ.ರಘುನಂದನ್
ಅ: ಅಂಬರೀಷ್, ರಮೇಶ್, ಸಾಯಿಕುಮಾರ್, ಎಸ್.ಪಿ.ಬಾಲಸುಬ್ರಮಣ್ಯಂ, ಲಕ್ಷ್ಮೀ, ನಿರೋಷಾ, ಶ್ರೀಶಾಂತಿ, ಸುಧಾರಾಣಿ, ಅವಿನಾಶ್, ಜ್ಯೋತಿ, ದೊಡ್ಡಣ್ಣ, ಸತ್ಯಭಾಮ, ಪೃಥ್ವಿರಾಜ್, ಉಮೇಶ್, ಶನಿ ಮಹಾದೇವಪ್ಪ, ರಾಧಾ ರಾಮಚಂದ್ರ, ಟೆನ್ನಿಸ್ ಕೃಷ್ಣ, ಗೊ.ರಾ.ಭೀಮರಾವ್
ಕ: ಸಾಯಿಸುತೆ ('ಅರುಣಕಿರಣ', ಕಾದಂಬರಿ)
ಚಿ.ಕ: ದೊರೆ ಭಗವಾನ್
ಮಾ: ಕುಣಿಗಲ್ ನಾಗಭೂಷಣ್
ಗೀ: ಆರ್.ಎನ್.ಜಯಗೋಪಾಲ್, ಶ್ಯಾಂಸುಂದರ ಕುಲಕರ್ಣಿ



ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ, ಮಂಜುಳಾ ಗುರುರಾಜ್, ರಾಜೇಶ್
ಸಂ: ಸುರೇಶ್ ಅರಸ್
ಛಾ: ಜೆ.ಜಿ.ಕೃಷ್ಣ
ಸ: ಸೀನು
ದೃ: ಮಹೇಂದರ್, ಕೋದಂಡಪಾಣಿ
ನೃ: ತಾರಾ, ಪ್ರಸಾದ್
ಸಾ: ನಂಜುಂಡಿ ನಾಗರಾಜ್
ವ: ವೀರರಾಜು, ನಾಗರಾಜು, ಶ್ರೀಮತಿ ಅನಿತಾಶ್ರೀನಿವಾಸ್
ಪ್ರ: ಕೇಶವ, ರಾಮಕೃಷ್ಣ, ಕೇಶಾಲಂಕಾರ: ನಾಗೇಶ್ವರ ರಾವ್
ಸ್ಟು: ಕಂಠೀರವ, ಪ್ರಸಾದ್ ಕಲರ್ ಲ್ಯಾಬ್, ವೀನಸ್ ಔಟ್ ಡೋರ್
ಹಾ: ೧)'ಆನಂದ ಹೋಮ ಮಹದಾನಂದ ಹೋಮ...', ೨) 'ಮೊಹಬತ್ ಬಂದಾಗ ಮೋಹನಾಂಗಿ...', ೩)'ಸವಿ ಜೇನಿನಂತೆ ನೊರೆ ಹಾಲಿನಂತೆ...', ೪)'ಮನ್ಮಥನಾ ಸಿಂಹಾಸನ...', ೫)'ಬಾಳ ಜ್ಯೋತಿಯಾಗಿಬಂದೆ ನೀನು...'
ಕ.ಸಾ: ಸ್ವಂತ ಮಕ್ಕಳಿಂದಲೇ ಕೆಳತಳ್ಳಲ್ಪಡುವ ವೃದ್ಧ ದಂಪತಿಗಳ ಕಥೆ. ಜೀವನದ ಮುಸ್ಸಂಜೆಯಲ್ಲಿರುವವರು ತಾವು ಹೆತ್ತ ಮಕ್ಕಳಿಂದ ರಕ್ಷಣೆ-ಸಂರಕ್ಷಣೆ ಬಯಸುವುದು ಸಹಜ. ಆದರೆ ಮಕ್ಕಳು, ತಾವು ತಮ್ಮ ಸಂಸಾರ ಮಾತ್ರವೇ ತಮ್ಮ ಪ್ರಪಂಚವಾಗಿಸಿಕೊಳ್ಳುತ್ತಾರೆ. ಇದರಿಂದಾಗಿ ವೃದ್ಧ ದಂಪತಿಗಳ ಪಾಡಂತೂ ಹೇಳತೀರದಾಗುತ್ತದೆ.

೧೨೦೩. ಪುಟ್ಮಲ್ಲಿ

(೧೯೯೫ / ವರ್ಣ / ಸಾಮಾಜಿಕ)
ಲಾ: ಜ್ಯೋತಿ ಪಿಕ್ಚರ್ಸ್
ಪ್ರೊ: ಜೆ.ಜಿ.ಕೃಷ್ಣ, ಹೆಚ್.ವಿ.ಮಂಜುನಾಥ್
ನಿ: ಪಿಕ್ಚರಿ ವಾಸು
ಸ.ನಿ: ಕೋಲಾರ್ ನಾಗೇಶ್, ನಾಗಪ್ಪ ಮಾರಡಗಿ
ಅ: ಮಾಲಾಶ್ರೀ, ಸಾಯಿಕುಮಾರ್, ಕಲ್ಯಾಣ್‌ಕುಮಾರ್, ವಾಣಿಶ್ರೀ, ವಿದ್ಯಾಪತಿ ಸಾಗರ್, ಬಿ.ಸರೋಜಾ ದೇವಿ, ಲೋಕೇಶ್, ರಾಜೀವ್, ಕೆ.ಕೆ.ಜಗದೀಶ್, ಸಿಲ್ಕ್ ಸ್ಮಿತಾ, ಡಿಸ್ಕೋ ಶಾಂತಿ, ಭರತ್ ಭಾಗವತರ್, ಜ್ಯೋತಿ, ಭಾಗ್ಯಶ್ರೀ, ಹೆಚ್.ಎಂ.ಟಿ.ನಂದಾ, ಬಬಿತಾ, ಬ್ಯಾಂಕ್ ಜನಾರ್ದನ್, ಡಿಂಗ್ರಿ ನಾಗರಾಜ್, ಸರಿಗಮ ವಿಜಿ, ಆಗ್ರೋ ಚಿಕ್ಕಣ್ಣ, ಶನಿ ಮಹಾದೇವಪ್ಪ
ಕ/ಚಿ.ಕ: ಪಿಕ್ಚರಿ ವಾಸು



ಮಾ: ರವಿ ಶ್ರೀವತ್ಸ
ಗೀ: ವಿ.ಮನೋಹರ್, ಹಂಸಲೇಖ, ರಮೇಶ್ ರಾವ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ, ಮಂಗಳಾ ಅಂಚನ್, ಸೀನು
ಸಂ: ಆರ್.ಜನಾರ್ದನ್
ಛಾ: ಜೆ.ಜಿ.ಕೃಷ್ಣ
ಸ: ಸೀನು
ದೃ: ಚಾಮುಂಡೇಶ್ವರಿ.
ನೃ: ದೇವಾ-ಸಂಪತ್
ಸಾ: ನಂಜುಂಡಿ ನಾಗರಾಜ್
ವ: ತಿಪಟೂರು ಸೋಮು
ಪ್ರ: ಮೈಸೂರು ವೆಂಕಟೇಶ್
ಸ್ಟು: ಕಂಠೀರವ
ಕ.ಸಾ: ದೂರಾದ ಎರಡು ಕುಟುಂಬಗಳನ್ನು ಒಂದು ಮಾಡಲು, ಸೌಹಾರ್ದತೆ ಪ್ರೀತಿ-ಅಭಿಮಾನ ಮೂಡಿಸಲು ಪುಟ್ಮಲ್ಲಿ ಎಂಬ ಹೆಣ್ಣು ಮಗಳು ಮುಂದಾಗಿ ಆ ನಿಟ್ಟಿನಲ್ಲಿ ಯಶಸ್ವಿಯಾಗುವ ಕೌಟುಂಬಿಕ ಕಥೆ.

೧೨೦೪. ಗಿಡ್ಡದಾದಾ

(೧೯೯೫ / ವರ್ಣ / ಸಾಮಾಜಿಕ)
ಲಾ: ಭರಣಿ ಚಿತ್ರ
ಪ್ರೊ: ಎಂ.ಪಿ.ಶಂಕರ್
ನಿ: ದ್ವಾರಕೀಶ್
ಸ.ನಿ: ಬಾಲ ಕುಮಾರ್
ಅ: ಎಂ.ಪಿ.ಶಂಕರ್, ದ್ವಾರಕೀಶ್, ರಾಮ್‌ಕುಮಾರ್, ಮಾಲಾಶ್ರೀ, ಅಶೋಕ್‌ರಾವ್, ಲಕ್ಷ್ಮೀ ಭಟ್, ಬ್ರಹ್ಮಾವರ್
ಕ/ಚಿ.ಕ: ದ್ವಾರಕೀಶ್
ಮಾ: ಎಂ.ಎನ್.ನರಸಿಂಹಮೂರ್ತಿ
ಗೀ: ಶ್ಯಾಮಸುಂದರ ಕುಲಕರ್ಣಿ, ಎಂ.ಎನ್.ವ್ಯಾಸರಾವ್, ವಿ.ಮನೋಹರ್, ಸು.ರುದ್ರಮೂರ್ತಿ ಶಾಸ್ತ್ರೀ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ
ಸಂ: ವಿಕ್ಟರ್ ಯಾದವ್
ಛಾ: ಬಿ.ಎಸ್.ಶಾಸ್ತ್ರಿ
ಸ: ರಾಜನ್-ನಾಗೇಂದ್ರ
ನೃ: ಉಡುಪಿ ಜಯರಾಂ
ಕ.ಸಾ: ವಜ್ರದ ಕಳುವಿನ ಸುತ್ತ ಹೆಣೆಯಲಾದ ಹಾಸ್ಯ ಪ್ರಧಾನ ರೋಚಕ ಕಥೆ. ಮ್ಯೂಸಿಯಂನಲ್ಲಿರುವ ಅತ್ಯಮೂಲ್ಯವಾದ ವಜ್ರವನ್ನು ಕದಿಯುವಲ್ಲಿ ದರೋಡೆಕೋರರ ಗುಂಪೊಂದು ಸಫಲವಾಗುತ್ತದೆ. ಆದರೆ ಆಗ ಆಗುವ ಗದ್ದಲದಲ್ಲಿ ಕದ್ದ ಈ ವಜ್ರವನ್ನು ಉಳಿಸಿಕೊಳ್ಳಲಾಗದೆ ಎಲ್ಲೋ ಬಿದ್ದು ಹೋಗುತ್ತದೆ. ಇದು ಎಲ್ಲಿ ಬಿದ್ದಿದೆ ಎಂಬುದು ಇಬ್ಬರು ಕಳ್ಳರಿಗೆ ಮಾತ್ರ ಗೊತ್ತಿರುತ್ತದೆ. ಆ ತಂಡ ಮತ್ತು ಕಳ್ಳರ ನಡುವೆ ವಜ್ರಕ್ಕಾಗಿ ನಡೆಯುವ ಕಣ್ಣಾಮುಚ್ಚಾಲೆಯೇ ಚಿತ್ರದ ಕಥೆಯಾಗಿದೆ.

೧೨೦೫. ಪೊಲೀಸ್ ಪವರ್

೧೯೯೫ / ವರ್ಣ / ಸಾಮಾಜಿಕ
ಲಾ: ಧನಲಕ್ಷ್ಮೀ ಕ್ರಿಯೇಷನ್ಸ್
ಪ್ರೊ: ಎನ್.ಕುಮಾರ್
ನಿ: ಯೋಗೀಶ್ ಹುಣಸೂರು
ಅ: ದೇವರಾಜ್, ಪ್ರೇಮ, ಲೋಹಿತಾಶ್ವ, ರಮೇಶ್ ಭಟ್, ಕವಿತಾ, ಪ್ರಮಿಳಾ ಜೋಷಾಯ್, ಸುಧೀರ್, ಮಾಲತಿ ಸುಧೀರ್
ಕ: ಯೋಗೀಶ್ ಹುಣಸೂರು
ಚಿ.ಕ: ಕ.ವಿ.ರಾಜು
ಮಾ: ಕ.ನಂಜುಂಡ
ಗೀ: ಹಂಸಲೇಖ
ಗಾ: ಮನು, ಚಿತ್ರಾ, ಎಸ್.ಜಾನಕಿ
ಸಂ: ಎಸ್.ಪ್ರಸಾದ್
ಛಾ: ಬಿ.ಸಿ.ಗೌರಿಶಂಕರ್
ಕಲೆ: ರಾಜು
ಸ: ಹಂಸಲೇಖ
ದೃ: ಕಣ್ಣನ್, ಶಂಕರ್
ನೃ: ಸತೀಶ್
ಸಾ: ಡೈನಾಮಿಕ್ ಸುರೇಶ್, ಥ್ರಿಲ್ಲರ್ ಮಂಜು
ವ: ನಾಗರಾಜ್
ಪ್ರ: ಗೋಪಾಲ್
ಸ್ಟು: ಪ್ರಸಾದ್
ಕ.ಸಾ: ಭ್ರಷ್ಟ ಮುಖ್ಯಮಂತ್ರಿ ಮತ್ತು ದಕ್ಷ ಪೊಲೀಸ್ ಅಧಿಕಾರಿಯ ನಡುವಿನ ಸಮರದ ಕಥೆ. ಮುಖ್ಯಮಂತ್ರಿಯಾದವಳು ಆ ದಕ್ಷ ಅಧಿಕಾರಿಯನ್ನು ಇಲ್ಲದಂತೆಯೇ ಮಾಡಲು ತನ್ನ ಅಧಿಕಾರವನ್ನೆಲ್ಲಾ ಬಳಸುತ್ತಾಳೆ. ಆದರೆ ಪತ್ರಕರ್ತೆಯಾದ ಅವಳ ತಂಗಿಯೇ ಇದನ್ನು ಧ್ವಂಸಗೊಳಿಸುತ್ತಾಳೆ. ಭ್ರಷ್ಟಾಚಾರ ಹೊಡೆದೋಡಿಸಲು ಪೊಲೀಸ್ ಅಧಿಕಾರಿ ವಹಿಸುವ ಪಾತ್ರದ ಬಗ್ಗೆಯೇ ಹೆಚ್ಚಿನ ಒತ್ತು ನೀಡಲಾಗಿದೆ.

೧೨೦೬. ಕರುಳಿನ ಕುಡಿ

(೧೯೯೫ / ವರ್ಣ / ಸಾಮಾಜಿಕ)
ಲಾ: ಶ್ರೀ ಧನಲಕ್ಷ್ಮಿ ಕ್ರಿಯೇಷನ್ಸ್
ಪ್ರೊ: ಪಿ.ಧನರಾಜ್
ನಿ: ವಿ.ಪಿ.ಸಾರಥಿ
ಸ.ನಿ: ವಿ.ಆರ್.ಭಾಸ್ಕರ್
ಅ: ವಿಷ್ಣುವರ್ಧನ್, ಅಂಬರೀಷ್, ಸಿತಾರಾ, ಬೇಬಿ ಶ್ಯಾಮಿಲಿ
ಕ/ಚಿ.ಕ: ವಿ.ಪಿ.ಸಾರಥಿ
ಮಾ: ಬಿ.ಸುರೇಶ್, ರಾಜಾನಂದ್
ಗೀ: ಶ್ಯಾಮಸುಂದರ ಕುಲಕರ್ಣಿ, ಸು.ರುದ್ರಮೂರ್ತಿ ಶಾಸ್ತ್ರಿ, ವಿ.ಮನೋಹರ್
ಗಾ:ರಾಜಕುಮಾರ್, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್.ಜಾನಕಿ
ಸಂ: ಶ್ಯಾಂ
ಛಾ: ಪಿ.ಎಸ್.ಸುಂದರಂ
ಸ: ರಾಜನ್-ನಾಗೇಂದ್ರ
ನೃ: ಉಡುಪಿ ಜಯರಾಂ
ಸಾ: ಥ್ರಿಲ್ಲರ್ ಮಂಜು
ವ: ನಾಗರಾಜ್, ರಾಮು, ರಾಮಮೂರ್ತಿ
ಪ್ರ: ಸಿದ್ದೇಶ್, ಕೃಷ್ಣ
ಹಾ: ೧)'ಓ ಮಲ್ಲೇ ಹೂವೇ ನಿನಗೆಲ್ಲಾ ನೋವೆ...', ೨)'ನಿನಗಾಗಿ ನಾನು ನನಗಾಗಿ ನೀನು...', ೩)'ಕೃಷ್ಣ ಕೃಷ್ಣ ಎಲ್ಲಿಗೆ ಹೋದೆ...', ೪) 'ಅಮ್ಮಾ ಅಮ್ಮಾ ಎಲ್ಲಿಗೆ ಹೋದೆ...', ೫) 'ರತ್ನೊ ರತ್ನೊ ರಾಯನ ಮಗಳೇ...', ೬)'ಪಕ್ಷಿಗಳೇ ಕೇಳಿ ನನ್ನಯ ಕಥೆಯ...',
ಕ.ಸಾ: ನಾಯಕಿ ಪ್ರಧಾನ ಕಥೆ. ಮಗು ಹುಟ್ಟಿದಾಕ್ಷಣ ತಾಯಿಯಿಂದ ಬೇರಾಗುತ್ತದೆ. ತಾಯಿ ಹುಚ್ಚಾಸ್ಪತ್ರೆ ಸೇರುತ್ತಾಳೆ. ತಾಯಿ ಮಗಳು ಈ ಆಸ್ಪತ್ರೆಯಲ್ಲಿ ಭೇಟಿಯಾದರೂ ಅಪರಿಚಿತರು ಕೊನೆಯಲ್ಲಿ ತಾಯಿಗೆ ಮನೆಯಲ್ಲಿ ಇರುವವಳು ತನ್ನ ಮಗಳೇ ಎಂದು ಗೊತ್ತಾದಾಗ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಮತ್ತ ತಾಯಿ-ಮಗಳನ್ನು ಬೇರಡಿಸಲು ದುಷ್ಟಶಕ್ತಿಗಳ ಸಂಚು ಶುರುವಾಗುತ್ತದೆ.

೧೨೦೭. ಚಿರಂಜೀವಿ ರಾಜೇಗೌಡ

(೧೯೯೫ / ವರ್ಣ / ಸಾಮಾಜಿಕ)
ಲಾ: ಪ್ರಿಯಾ ಪಿಕ್ಚರ್ಸ್
ಪ್ರೊ: ಮಲಕಲ್ ಎಸ್.ಜಯರಾಮ್, ಪಿ.ರಾಜು
ನಿ: ಜೋಸೈಮನ್
ಅ: ಪ್ರಭಾಕರ್, ಡಾಲಿ, ವಿದ್ಯಾಶ್ರೀ, ದೊಡ್ಡಣ್ಣ, ಧೀರೇಂದ್ರ ಗೋಪಾಲ್, ಬ್ಯಾಂಕ್ ಜನಾರ್ದನ್, ಉಮೇಶ್, ಜೈಜಗದೀಶ್, ಸುಂದರರಾಜ್, ಮಂಜು, ಎಂ.ಎಸ್.ಕಾರಂತ್, ಜೋಸೈಮನ್

ಕ: ಉಮಾಶಂಕರ್ ಪಿಕ್ಚರ್ಸ್ ಕಥಾ ವಿಭಾಗ
ಚಿ.ಕ/ಮಾ: ಜೋಸೈಮನ್
ಗೀ: ಹಂಸಲೇಖ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ.ಚಿತ್ರಾ
ಛಾ: ಕಬೀರ್ ಲಾಲ್
ಕಲೆ: ಸುಂದರಂ
ಸ: ಹಂಸಲೇಖ

ಧ್ವ: ಕಣ್ಣನ್, ಕೋದಂಡಪಾಣಿ
ನೃ: ಪುಲಿಯಾರ್ ಸರೋಜ. ಸತೀಶ್, ದುರ್ಗಾಪ್ರಸಾದ್
ಸಾ: ಸ್ವಾಮಿ
ಸ್ಟು: ಅಭಿಮಾನ್, ಕಂಠೀರವ
ಕ.ಸಾ: ಎಂತಹ ಪರಿಸ್ಥಿತಿಯಾದರೂ ಸರಿಯೇ ತನ್ನ ಮಾತಿನ ಮೇಲೆ ನಿಲ್ಲುವ ತ್ಯಾಗಜೀವಿಯ ಕಥೆ. ತಾನು ಕೊಟ್ಟ ಮಾತನ್ನು ಉಳಿಸಿಕೊಳ್ಳಲು ಸತ್ತ ವ್ಯಕ್ತಿ ಮತ್ತ ಜೀವಂತವಾಗಿ ಬರುವಂತಹ ಕಥೆ.

೧೨೦೮. ನಿಶ್ಚಿತಾರ್ಥ

(೧೯೯೫ / ವರ್ಣ / ಸಾಮಾಜಿಕ)
ಲಾ: ಶ್ರೀ ಸಾಯಿ ಕ್ರಿಯೇಷನ್ಸ್
ಪ್ರೊ: ಟಿ.ಕೆ.ರಾಮಕೃಷ್ಣ, ಎನ್.ಚಿನ್ನರಾಜನ್
ನಿ: ಹ.ಸೂ. ರಾಜಶೇಖರ್
ಸ.ನಿ: ಟಿ.ಎನ್.ನಾಗೇಶ್
ಅ: ರಾಘವೇಂದ್ರ ರಾಜಕುಮಾರ್, ಪ್ರೇಮಾ, ಪ್ರಮೀಳಾ ಜೋಷಾಯ್, ಪೂಜಾ, ಸಿ.ಆರ್.ಸಿಂಹ, ದೊಡ್ಡಣ್ಣ, ಬ್ಯಾಂಕ್ ಜನಾರ್ದನ್, ಶ್ರೀನಿವಾಸ ಮೂರ್ತಿ, ಅಜಯ್ ಗುಂಡೂರಾವ್, ಉಮೇಶ್, ಎಂ.ಟಿ.ಕೌಶಿಕ್, ಬಿ.ಕೆ.ಶಂಕರ್, ಸುಂದರರಾಜ್, ಪದ್ಮಾ ವಾಸಂತಿ, ಶ್ರೀಲಲಿತಾ, ಉಮಾ ಶಿವಕುಮಾರ್, ಭಾಗ್ಯಶ್ರೀ, ಪಂಕಜ
ಕ: ಸಾಯಿ ಜ್ಯೋತಿ ಕ್ರಿಯೇಷನ್ಸ್
ಚಿ.ಕ: ಹುಣಸೂರು ಕೃಷ್ಣಮೂರ್ತಿ
ಮಾ: ಕೃಷ್ಣಮೂರ್ತಿ ನಾಟಿಗ್
ಗೀ: ಆರ್.ಎನ್.ಜಯಗೋಪಾಲ್, ವಿಜಯನಾರಸಿಂಹ, ವಿ.ಮನೋಹರ್, ದೊಡ್ಡರಂಗೇಗೌಡ
ಗಾ: ರಾಜಕುಮಾರ್, ಎಸ್.ಪಿ.ಬಾಲಸುಬ್ರಹ್ಮಣ್ಯಂ, ರಾಘವೇಂದ್ರ ರಾಜಕುಮಾರ್, ಚಿತ್ರಾ, ಮನು, ರಾಜೇಶ್
ಸಂ: ಬಿ.ಎಸ್.ಕೆಂಪರಾಜ್
ಛಾ: ಸುಂದರನಾಥ ಸುವರ್ಣ
ಕಲೆ: ರಾಜು
ಸ: ಸಾಧು ಕೋಕಿಲ
ಧ್ವ: ಮೆನನ್, ಮಹೇಂದರ್
ನೃ: ಪ್ರಸಾದ್
ಸಾ: ನಂಜುಂಡಿ ನಾಗರಾಜ್
ವ: ಗಂಡಸಿ ನಾಗರಾಜ್

ಪ: ವಿಶ್ವನಾಥ್
ಸ್ಟು: ಕಂಠೀರವ
ಹಾ: ೧)'ಈ ಸಂಭ್ರಮ. ', ೨)'ನಗೆ ಮಲ್ಲಿಗೇ...', ೩)'ಕಣ್ಣಿಟಿ ಮೇಲೆ...', ೪)'ದೇವರ ಕಲೆಯಲ್ಲಿ...'
ಸೆ: ರೀಲು ೧೬, ಉದ ೪೪೦೭.೦೦
ಕ.ಸಾ: ಕೌಟುಂಬಿಕ ಕಥಾವಸ್ತು. ಹಾಸ್ಯಕ್ಕೆ ಪ್ರಾಧಾನ್ಯತೆ ನೀಡಲಾಗಿದೆ. ಎರಡು ಕುಟುಂಬಗಳ ನಡುವೆ ಉಂಟಾಗುವ ಅಸಮಾಧಾನ, ದ್ವೇಷ, ಎಲ್ಲವನ್ನೂ ಮೀರಿ ನಡೆಯಬೇಕಾಗಿದ್ದ ಶುಭ ಸಮಾರಂಭ ಜರುಗುತ್ತದೆ.

೧೨೦೯. ಊರ್ವಶಿ

(೧೯೯೫ / ವರ್ಣ / ಸಾಮಾಜಿಕ)
ಲಾ: ನಿಸರ್ಗ
ಪ್ರೊ: ಲಲಿತಮ್ಮ ಲಿಂಗಯ್ಯ
ನಿ: ಅಮರದೇವ
ಅ: ನಿಖಿಲ್, ದತ್ತಾತ್ರೇಯ, ಕೌಶಿಕ್, ರಮೇಶ್ ಭಟ್, ಶಂಕರ್ ಅಶ್ವತ್, ವಾಸುದೇವರಾವ್, ಪ್ರೀತಿ, ಅಂಜಲಿ, ಸುನಂದಾ, ನಳಿನಾ ಮೂರ್ತಿ, ಶಾಂತಾ, ಗೀತಾ ಸುರತ್ಕಲ್
ಕ: ಡಾ|ಗೊರೂರು ರಾಮಸ್ವಾಮಿ ಅಯ್ಯಂಗಾರ್ ಕೃತಿ ಆಧಾರಿತ
ಚಿ.ಕ: ನಾಗತಿಹಳ್ಳಿ ಚಂದ್ರಶೇಖರ್
ಮಾ: ಹೆಚ್ .ಎಸ್.ವೆಂಕಟೇಶ್ ಮೂರ್ತಿ
ಗೀ: ಪುರಂದರದಾಸರು, ಕೆ.ರಾಮಯ್ಯ, ವಿ.ಮನೋಹರ್, ನಾಗತಿಹಳ್ಳಿ ಚಂದ್ರಶೇಖರ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಬಿ.ಆರ್.ಛಾಯಾ, ಚಂದ್ರಿಕಾ ಗುರುರಾಜ್

ಛಾ: ಸಂತೋಷ್ ಕುಮಾರ್
ಕಲೆ: ಜಿ.ಮೂರ್ತಿ
ಸ: ವಿ.ಮನೋಹರ್
ನೃ: ಉಡುಪಿ ಜಯರಾಂ
ಸಾ: ನಂಜುಂಡಿ ನಾಗರಾಜ್
ಹಾ: ೧) 'ಜಲಲ ಜಲಲ ಜಲಲಧಾರೆ ...', ೨) 'ಮಂಜು ಮಂಜು...', ೩) 'ಸರಿಗ ಸರಿಗ ಸರಿಗ ಪಾಪಗರಿಸ...', ೪) 'ಓ ಪ್ರಿಯತಮಾ ಮರಳಲಿ ಆ ಸಂಗಮ...',
ಪ್ರ: ೧೯೯೫-೯೬ರ ರಾಜ್ಯಪ್ರಶಸ್ತಿ : ವಿಶೇಷ ಸಾಮಾಜಿಕ ಪರಿಣಾಮ ಬೀರುವ ಚಿತ್ರ. ಅತ್ಯುತ್ತಮ ಕಥಾ ಲೇಖಕ (ಗೊರೂರು ರಾಮಸ್ವಾಮಿ ಅಯ್ಯಂಗಾರ್), ಅತ್ಯುತ್ತಮ ಹಿನ್ನೆಲೆ ಗಾಯಕಿ (ಚಂದ್ರಿಕಾ ಗುರುರಾಜ್)
ಕ.ಸಾ: ಹೆಣ್ಣಿನ ಬದುಕಿನಲ್ಲಿ ಬರುವ ಅನಿರೀಕ್ಷಿತ ತಿರುವುಗಳ ಕಥೆ. ನಾಯಕಿ ಅಕ್ಕನ ಗಂಡನಿಂದ ಅತ್ಯಾಚಾರಕ್ಕೊಳಗಾಗಿ, ಗಂಡನಿಂದ ತಿರಸ್ಕೃತಗೊಳ್ಳುತ್ತಾಳೆ. ಸಮಾಜವೂ ಕುಟುಕುತ್ತದೆ. ಇದೆಲ್ಲವನ್ನೂ ಎದುರಿಸಿ ಸ್ವಾವಲಂಬನೆ ಸಾಧಿಸುವ ಅವಳು ಕೊನೆಗೆ ಗಂಡನನ್ನು ಉಳಿಸಲು ಹೋರಾಟ ನಡೆಸುತ್ತಾಳೆ.

೧೨೧೦. ಕಾವ್ಯ

(೧೯೯೫ / ವರ್ಣ / ಸಾಮಾಜಿಕ)

ಲಾ: ಸ್ಪಂದನ ಫಿಲಂಸ್
ಪ್ರೊ: ವೈದೇಹಿ ವೆಂಕಟರಾವ್, ಕೋದ್ಲು ರಾಮಕೃಷ್ಣ, ಮಂಗಳಗೌರಿ
ನಿ: ಕೋಡ್ಲು ರಾಮಕೃಷ್ಣ
ಸ.ನಿ: ಎಸ್.ವಿ.ಉದಯ
ಅ: ಕಲ್ಯಾಣ್‌ಕುಮಾರ್, ಸುಧಾರಾಣಿ, ರಾಮಕುಮಾರ್, ಸಿತಾರಾ, ಗಿರಿಜಾ ಲೋಕೇಶ್, ಶೀಲಾ, ಶ್ರೀಶೈಲನ್, ಬಿ.ಸಿ.ಚಂದ್ರಶೇಖರ್
ಕ/ಚಿ.ಕ: ಕೋಡ್ಲು ರಾಮಕೃಷ್ಣ
ಮಾ: ವಿ.ಆರ್.ಭಾಸ್ಕರ್, ಜಿ.ಆರ್.ಸತ್ಯ
ಗೀ: ಕುವೆಂಪು, ಗೀತಪ್ರಿಯ, ದೊಡ್ಡರಂಗೇಗೌಡ, ದ್ಯಾವಪ್ಪ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ
ಸಂ: ಬಿ.ಎಸ್.ಕೆಂಪರಾಜ್
ಛಾ: ಬಿ.ಎಸ್.ಬಸವರಾಜ್
ಕಲೆ: ಸುಭಾಷ್ ಕಡಕೋಳ್
ಸ: ಸಾಧುಕೋಕಿಲ
ಧ್ವ: ಚಾಮುಂಡೇಶ್ವರಿ, ಸಂಕೇತ್
ನೃ: ಉಡುಪಿ ಜಯರಾಂ, ದೇವಿ
ಸಾ: ಪ್ರಕಾಶ್
ವ: ಸತ್ಯಂ
ಪ: ಮಲ್ಲಿಕಾರ್ಜುನ (ಮೈಸೂರು)
ಹಾ: ೧)'ವಂದನೇ ವಂದನೇ ಸಾವಿರ ವಂದನೆ...', ೨)'ಎತ್ತ ತಿರುಗಲಿ ಕಣ್ಣು...', ೩)'ಒಲುಮೆಯ ಕಾವ್ಯ ನೀನು...', ೪)'ನೀ ಮಿಡಿದ ಮಧುರ ಸ್ವರವಲ್ಲಿ...', ೫) 'ಆಸೆಗಳ ಲೋಕದಲ್ಲಿ ಕಥೆಗಳ ಬರೆದಂತಾ...'
ಪ್ರ: ೧೯೯೫-೯೬ರ ರಾಜ್ಯ ಪ್ರಶಸ್ತಿ : ಅತ್ಯುತ್ತಮ ಗೀತರಚನೆಕಾರ (ದೊಡ್ಡರಂಗೇಗೌಡ)
ಕ.ಸಾ: ಯುವ ಕ್ರೀಡಾ ಪಟು ಪ್ರಸಾದ್, ಕಾಲೇಜು ಸ್ಪರ್ಧೆಯಲ್ಲಿ ಗೆದ್ದ ತನ್ನನ್ನು ಅಭಿನಂದಿಸುವಾಗ ಮೆಡಿಕಲ್ ವಿದ್ಯಾರ್ಥಿನಿ ಕಾವ್ಯ ಆತನ ಬಗೆಗಿದ್ದ ತನ್ನ ಆರಾಧನೆಯನ್ನು ಪ್ರೇಮವಾಗಿ ಮಾರ್ಪಡಿಸಿಕೊಂಡಳು. ಆದರೆ ತನ್ನ ಚಿಕ್ಕಮ್ಮನ ಮಗಳು ಕಲ್ಪನಾ ಮತ್ತು ಪ್ರಸಾದ್‌ರ ಮದುವೆಯ ಪ್ರಸ್ತಾಪ ಬಂದಾಗ, ಕಲ್ಪನಾಳೇ ಅವನಿಗೆ ತಕ್ಕ ಜೋಡಿ ಎಂದು ಸಲಹೆ ಮಾಡುತ್ತಾಳೆ ಕಾವ್ಯ. ಮದುವೆಯ ಹಂತದವರೆಗೂ ಪರನಾರೆಂಬುದನ್ನು ಗೋಪ್ಯವಾಗಿಡುತ್ತಾಳೆ. ಕಾವ್ಯ ಕಷ್ಟದಲ್ಲಿ ಸಿಲುಕಿದಾಗ ಪ್ರಸಾದ್ ಮತ್ತು ಕಲ್ಪನಾರಿಗೆ ತಿಳಿಯದೇ ಹೋಗುತ್ತದೆ.

೧೨೧೧. ಹಲೋ ಸಿಸ್ಟರ್

(೧೯೯೫ / ವರ್ಣ / ಸಾಮಾಜಿಕ)
ಲಾ: ರಾಮು ಎಂಟರ್‌ಪ್ರೈಸಸ್
ಪ್ರೊ: ರಾಮು
ನಿ: ಸಾಯಿಪ್ರಕಾಶ್
ಸ.ನಿ: ಲಿಂಗರಾಜ್ ಕಗ್ಗಲ್
ಅ: ಶಶಿಕುಮಾರ್, ಮಾಲಾಶ್ರೀ (೭ ವಿಭಿನ್ನ ಪಾತ್ರ), ಧೀರೇಂದ್ರ ಗೋಪಾಲ್, ಮುಖ್ಯಮಂತ್ರಿ ಚಂದ್ರು, ಸುಧೀರ್, ದ್ವಾರಕೀಶ್, ದೊಡ್ಡಣ್ಣ, ಶಿವರಾಂ, ಟೆನ್ನಿಸ್ ಕೃಷ್ಣ, ಹೊನ್ನವಳ್ಳಿ ಕೃಷ್ಣ, ವಜ್ರಮುನಿ, ತಾರಾ, ಶಿವಕುಮಾರ್, ಕೃಷ್ಣೇಗೌಡ, ರಮೇಶ್, ಎಂ.ಎಸ್.ಕಾರಂತ್, ಬೆಂಗಳೂರು ನಾಗೇಶ್.
ಕ/ಚಿ.ಕ: ಸಾಯಿ ಪ್ರಕಾಶ್
ಮಾ: ಕುಣಿಗಲ್ ವಸಂತ್
ಗೀ: ಆರ್.ಎನ್.ಜಯಗೋಪಾಲ್, ಹಂಸಲೇಖ, ಶ್ರೀರಂಗ, ಎಂ.ಎಸ್.ಉಮೇಶ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ರಾಜಕುಮಾರ್, ಚಿತ್ರಾ, ಮಂಜುಳಾ ಗುರುರಾಜ್, ರಾಜೇಶ್, ಸಾಧುಕೋಕಿಲ

ಸಂ: ಕೆ.ನರಸಯ್ಯ
ಛಾ: ಜಾನೀಲಾಲ್
ಕಲೆ: ಬಾಬುಖಾನ್
ಸ: ಕೋಟಿ
ಧ್ವ: ಚಾಮುಂಡೇಶ್ವರಿ, ಕೋದಂಡಪಾಣಿ
ನೃ: ಶಿವಶಂಕರ್, ತಾರಾ, ಪ್ರಸಾದ್
ಸಾ: ಜ್ಯೂಡೋ ರತ್ನಂ, ಥ್ರಿಲ್ಲರ್ ಮಂಜು
ವ: ನಾಗರಾಜ್
ಪ್ರ: ಮೇಕಪ್ ಮಲ್ಲಿ
ಸ್ಥ: ಕಂಠೀರವ
ಹಾ: ೧)'ನಮೋ ನಮೋ ಗಣನಾಥ...', ೨)'ಹಲೋ ಸಿಸ್ಟರ್...', ೩)'ಕಳ್ಳ ಕಳ್ಳಿ...', ೪)'ಮೊದಲ ರಾತ್ರಿ ಮುತ್ತು...'
ವಿ: ಏಳು ವಿಭಿನ್ನ ಪಾತ್ರದಲ್ಲಿ ಮಾಲಾಶ್ರೀ ಅಭಿನಯವಿದೆ
ಕಸಾ: ಏಳು ವಿವಿಧ ಪಾತ್ರಗಳಲ್ಲಿ ಮಾಲಾಶ್ರೀ ಕಾಣಿಸಿಕೊಳ್ಳುವುದೇ ಚಿತ್ರದ ಮುಖ್ಯಾಂಶವೆನಿಸಿದೆ. ಯಾರಿಗೋ ಬದಲಾಗಿ ಮಾಲಾಶ್ರೀಯ ಪ್ರಾಣ ಹೋಗುವಂತೆ ಯಮ ಕಿಂಕರರು ಮಾಡುತ್ತಾರೆ. ಈ ಪ್ರಮಾದವನ್ನು ಸರಿಪಡಿಸಲು ಯಮದೇವ ಮಾಲಾಶ್ರೀಯೊಂದಿಗೆ ಭೂಮಿಗೆ ಬಂದು ಸಾವು ನಿಶ್ಚಯವಾದವರ ಪ್ರಾಣ ಹೋಗುತ್ತಿದ್ದಂತೆ ಅಲ್ಲಿ ಮಾಲಾಶ್ರೀಯ ಆತ್ಮ ಅವರ ದೇಹದಲ್ಲಿ ಸೇರಿಕೊಳ್ಳುವಂತೆ ಮಾಡುತ್ತಾನೆ. ಈ ತರಹ ಅವತಾರಗಳನ್ನು ಮಾಲಾಶ್ರೀಗೆ ನೀಡಲಾಗುತ್ತದೆ. ಹಾಸ್ಯ ಪ್ರಧಾನವಾಗಿರುವ ಚಿತ್ರ.

೧೨೧೨. ದೊರೆ

(೧೯೯೫ / ವರ್ಣ / ಸಾಮಾಜಿಕ)
ಲಾ: ಶ್ರೀ ನಿಮಿಷಾಂಬಾ ಪ್ರೊಡಕ್ಷನ್ಸ್
ಪ್ರೊ: ಎಂ.ಚಂದ್ರಶೇಖರ್, ಬಿ.ಎಸ್.ಪ್ರಭಾಕರ್
ನಿ: ಶಿವಮಣಿ
ಸ.ನಿ: ಸತೀಶ್‌ಚಂದ್ರ ನಾಪದಗಿ
ಅ: ಶಿವರಾಜಕುಮಾರ್, ಹೇಮಾ, ಸುಧೀರ್, ಭಾರತಿ, ಶ್ರೀನಿವಾಸ ಮೂರ್ತಿ, ಪೊನ್ನಂಬಲಂ, ಗಿರಿಜಾ ಲೋಕೇಶ್
ಕ: ಕುಂ.ವೀರಭದ್ರಪ್ಪ ಅವರ 'ಬೇಲಿಯ ಹೂಗಳು' ಕಾದಂಬರಿ
ಚಿ.ಕ: ಶಿವಮಣಿ
ಮಾ: ರಿಚರ್ಡ್ ಲೂಯೀಸ್, ರಾಜಾನಂದ್
ಗೀ: ಹಂಸಲೇಖ
ಗಾ: ರಾಜಕುಮಾರ್ ಎಸ್.ಪಿ.ಬಾಲಸುಬ್ರಹ್ಮಣ್ಯಂ. ಚಿತ್ರಾ, ಜೇಸುದಾಸ್, ಮನು, ಎಸ್.ಜಾನಕಿ
ಸಂ: ಕೆ.ಬಾಲು
ಛಾ: ಕೃಷ್ಣ ಕುಮಾರ್
ಸ: ಹಂಸಲೇಖ
ನೃ: ತಾರಾ
ಸಾ: ಥ್ರಿಲ್ಲರ್ ಮಂಜು
ಹಾ: ೧)'ರೈತ ರೈತ ರೈತ...', ೨)' ಹಳ್ಳಿ ಹಾಡು ತಂದಾನಾನ...', ೩)' ಬಾಳಿಯ ತುಂಬ ನೂರಾರು ಕನಸಿದೆ...', ೪)'ರಾಮಣ್ಣ...', ೫) 'ಆಗೋ ಬಂದನು...', ೬) 'ಸುಮ್ಮಿ ಸುಮ್ಮೀ...', ೭) 'ಹುಣ್ಣಿಮೆಯ ದೀಪವಿದ...', ೮)'ಥ ಥ ಥ ಬಿಂಕದ ಸಿಂಗಾರಿ...',
ಕ.ಸಾ: ಜಮೀನ್ದಾರನೊಬ್ಬ ದಣಿಯ ಮಗಳನ್ನು ಪ್ರೀತಿಸುವ ಕ್ರಾಂತಿಕಾರಿ ಕಥೆ. ಪ್ರೇಮದ ಶೀಘ್ರತೆ, ಬಂಡಾಯದ ಆಕ್ರೋಶ, ವರ್ಗ ಸಂಘರ್ಷದ ಬಿಸಿ ಈ ಕಥೆಯಲ್ಲಿ ಅಡಕವಾಗಿದೆ. ಜಮೀನ್ದಾರನ ಮಗ ಕರಿಯ ದೊರೆಯ ಜಲಗ ಬಂಟ. ತನ್ನ ದಣಿಯ ಮಗಳನ್ನೇ ಪ್ರೀತಿಸುವ. ಇದರಿಂದ ದೊರೆ ನಿಟ್ಟಿಗೇಳುತ್ತಾನೆ. ಪ್ರೇಮದ ಶೀಘ್ರತೆ ಕರಿಯನಲ್ಲಿ ಬಂಡಾಯದ ಆಕ್ರೋಶವನ್ನು ಕಾಕುತ್ತದೆ ಜಮೀನ್ದಾರ ಆಳುಗಳನ್ನು ಸಂಘಟಿಸಿ ದೊರೆಯ ವಿರುದ್ಧ ಬಂಡೇಳುವಂತೆ ಮಾಡುತ್ತಾನೆ. ವರ್ಗ ಸಂಘರ್ಷ ಭುಗಿಲೇಳುತ್ತದೆ

೧೨೧೩. ಆಪರೇಷನ್ ಅಂತ

(೧೯೯೫ / ವರ್ಣ / ಸಾಮಾಜಿಕ)
ಲಾ: ಸ್ವಾತಿ ಎಂಟರ್‌ಪ್ರೈಸಸ್
ಪ್ರೊ: ಹರ್ಷ ವರ್ಬಾರ್, ರಾಮಕೃಷ್ಣ
ನಿ: ಉಪೇಂದ್ರ
ಸ.ನಿ: ಎನ್.ಲೋಕನಾಥ್, ರಘು
ಅ: ಅಂಬರೀಷ್(ದ್ವಿ.ಪಾತ್ರ), ಹರ್ಷ ವರ್ಬಾರ್, ಎಸ್.ಪಿ.ರಾಜೇಂದ್ರಸಿಂಗ್ ಬಾಬು, ಮಾಸ್ಟರ್ ಹಿರಣ್ಣಯ್ಯ, ರಮೇಶ್ ಕಾಮತ್, ತಾರಾ, ಸಾಧುಕೋಕಿಲ, ಮಿಮಿಕ್ರಿ ದಯಾನಂದ್, ರಮೇಶ್ ರಾವ್, ಸಂಗೀತಾ, ಹರೀಶ್ ರಾಯ್, ಲಕ್ಷ್ಮಣ್, ಬ್ಯಾಂಕ್ ಜನಾರ್ದನ್, ನಾಗೇಶ್ ಮಯ್ಯ
ಕ/ಚಿ.ಕ/ಮಾ: ಉಪೇಂದ್ರ
ಗೀ: ವಿ.ಮನೋಹರ್, ಉಪೇಂದ್ರ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ
ಸಂ: ಆರ್.ಜನಾರ್ದನ್
ಛಾ: ಸುಂದರನಾಥ ಸುವರ್ಣ
ಸ: ವಿ.ಮನೋಹರ್
ಧ್ವ: ಕೃಷ್ಣಮೂರ್ತಿ
ಸಾ: ಥ್ರಿಲ್ಲರ್ ಮಂಜು
ಹಾ: ೧)'ಕಚಪಾ ಕಂತ್ರಿ ಲೋಫರ್...', ೨)'ಓ ಪುಸ್ಸಿ ಕ್ಯಾಟ್...', ೩)'ಖಾದಿ ಟೋಪಿ ಒಟಕೊಂಡ ಶೀಂ ಶೀಂ ಶೀಂ...',
ಕ.ಸಾ: ೧೯೮೭ರಲ್ಲಿ ತೆರೆಕಂಡ 'ಅಂತ' ಚಿತ್ರದ ಮುಂದುವರಿದ ಭಾಗ ಇದೆನ್ನಲಾಗಿದೆ. ಸಮಾಜ ವಿದ್ರೋಹಕ ಕೃತ್ಯದಲ್ಲಿ ಭಾಗಿಯಾಗಿರುವ ತನ್ನ ಮೇಲಿನ ಅಧಿಕಾರಿಗಳ ವಿರುದ್ಧವೇ ಸಿಡಿದೇಳುವ ಪೊಲೀಸ್ ಅಧಿಕಾರಿಯೇ ಹೀರೋ ಎಂದು ಮೂಲತಃ ಇದರೂ ಅಕ್ರಮ ಕೃತ್ಯಗಳಲ್ಲಿ ತೊಡಗಿದವರನ್ನು ಸಾರ್ವಜನಿಕರೇ ನೇರವಾಗಿ ಶಿಕ್ಷೆಗೊಳಪಡಿಸಬೇಕೆಂದು ಚಿತ್ರಿಸಲಾಗಿದೆ.

೧೨೧೪. ಜೀವನಮೈತ್ರಿ

(೧೯೯೫ / ವರ್ಣ / ಸಾಮಾಜಿಕ)
ಲಾ: ಶ್ರೀ ಶರಣು ಕ್ರಿಯೇಷನ್ಸ್
ಪ್ರೊ: ಶ್ರೀಮತಿ ಉಷಾ, ಆರ್. ಜಿ. ಸಾಲಿ
ನಿ: ಆರ್.ಜಿ.ಸಾಲಿ
ಅ: ಶ್ರೀಧರ್, ಸುಧಾರಾಣಿ, ಶ್ರೀರಕ್ಷಾ, ಕಿಶೋರ್‌ಕುಮಾರ್, ರಾಜಹಂಸ, ರಮೇಶ್ ಭಟ್, ಪ್ರಮೀಳಾ ಜೋಷಾಯ್, ರವಿಕಿರಣ್, ಶಾಂತಮ್ಮ
ಕ/ಚಿ.ಕ: ಆರ್.ಜಿ.ಸಾಲಿ
ಮಾ: ಗೀತಪ್ರಿಯ
ಗೀ: ದ.ರಾ.ಬೇಂದ್ರೆ, ಗೀತಪ್ರಿಯಾ, ಆರ್.ಜಿ.ಸಾಲಿ
ಗಾ: ಮಂಜುಳಾ ಗುರುರಾಜ್, ಚಿತ್ರಾ
ಸಂ: ಶಶಿಕುಮಾರ್
ಛಾ: ಮಲ್ಲಿಕಾರ್ಜುನ
ಸ: ರಾಜಹಂಸ

ಧ್ವ: ಎಸ್.ಮಹೇಂದ್ರನ್
ನೃ: ಉಡುಪಿ ಜಯರಾಂ
ಹಾ: ೧)'ಇನಿಯಾ ಮನದಲಿ ಇಣುಕಿ..., ೨)'ಹುಣ್ಣಿಮೆಯ ಚಂದ್ರನೋ ಚಂದಿರನ ಕಾಯೋ...', ೩) 'ಎಲ್ಲಿ ನಿನ್ನ ಲಲ್ಲೆ ಮಾತು...', ೪) 'ಹೃದಯಾ ಹೃದಯಾ ಒಲಿದು ಬೆಸೆದಿರುವಾಗ...'
ಕ.ಸಾ: ಆದರ್ಶವಾದಿ ಕಾಲೇಜು ಉಪನ್ಯಾಸಕ ರಘು ಮದುವೆಯಾಗಲು ಆಶಾಳನ್ನು ನೋಡಲು ಹೋದಾಗ ಬೇರೊಬ್ಬನನ್ನು ಪ್ರೀತಿಸುತ್ತಿದ್ದ ಅವಳು ವಧು ಪರೀಕ್ಷೆಗೆ ನಿರಾಕರಿಸುವಳು. ಇದರಿಂದ ರಘು ಅವಳ ತಂಗಿ ವೈದೇಹಿಯನ್ನು ಮದುವೆಯಾಗಬೇಕಾಗುತ್ತದೆ. ಅವಳೊಂದಿಗೆ ಸರಸಕ್ಕೆ ಬಿತ್ತಿಸಿದ ರಘುವಿಗೆ, ಅವಳಿಗೆ ನರ ದೌರ್ಬಲ್ಯದ ಕಾಯಿಲೆ ಇದ್ದು, ಅವಳೊಂದಿಗಿನ ದೈಹಿಕ ಸಂಪರ್ಕ ಅವಳ ಪ್ರಾಣಕ್ಕೇ ಕುತ್ತೆಂಬುದು ತಿಳಿದು, ಆಘಾತವೊಂದರಲ್ಲಿ ತನ್ನ ಹೃದಯಕ್ಕೆ ಏಟು ಬಿದ್ದಿರುವುದೆಂಬ ಕಾರಣ ಮುಂದೆ ಮಾಡಿ ವೈದೇಹಿಯಿಂದ ದೂರವಿರುತ್ತಾನೆ. ಅವಳ ಸೋದರತ್ತೆಯ ಮಗ ಮೋಹನ ವೈದೇಹಿಯ ಮೇಲೆ ಕಣ್ಣು ಹಾಕಿರುತ್ತಾನೆ. ಆಶಾ ವಿಧವೆಯಾದಾಗ ರಘು ಅವಳಿಗೆ ಉದ್ಯೋಗ ಕೊಡಿಸಲು ಪ್ರಯತ್ನಿಸುತ್ತಾನೆ. ಈ ಬಗ್ಗೆ ಕತೆ ಕಟ್ಟಿ ಹೇಳಿದ ಮೋಹನ, ವೈದೇಹಿಯ ಮನಸ್ಸು ಕೆಡಿಸುತ್ತಾನೆ. ಮೋಹನ ಅವಳನ್ನು ಬಲಾತ್ಕರಿಸಲೆತ್ನಿಸಿದಾಗ ಅವಳ ರೋಗ ಮರುಕಳಿಸಿ ಉಲ್ಬಣಗೊಳ್ಳುತ್ತದೆ. ಆಗ ಅವಳಿಗೆ ತನ್ನ ಕಾಯಿಲೆಯ ಬಗ್ಗೆ ತಿಳಿದು ರಘುವಿನಿಂದ ವಿಚ್ಛೇದನ ಪಡೆಯಲು ಮುಂದಾಗುತ್ತಾಳೆ. ಕೂಡಿ ಬಂದ ಸಂಬಂಧ ಮುರಿಯಲಾಗದೆ ಜೀವನ ಮೈತ್ರಿ ಎಂದು ರಘು ಜೀವಮಾನ ಪೂರ್ತ ಅವಳೊಂದಿಗೇ ಇರುವ ನಿರ್ಧಾರ ತಳೆಯುತ್ತಾನೆ. ದೇಹಗಳ ಮಿಲನಕ್ಕಿಂತ ಮನಸ್ಸುಗಳ ಕೂಡುವಿಕೆ ಮುಖ್ಯ ಎಂಬ ಸತ್ಯ ಸಾರುವ ಕಥೆ.

೧೨೧೫. ಭವಾನಿ

(೧೯೯೫ / ವರ್ಣ / ಸಾಂಸಾರಿಕ)
ಲಾ: ಚಿನ್ನಿ ಫಿಲಂಸ್
ಪ್ರೊ/ನಿ: ಜಯಶ್ರೀದೇವಿ
ಸ.ನಿ: ಜಿ.ಎಲ್. ಮಂಜುನಾಥ್



ಅ: ಶಶಿಕುಮಾರ್, ಸಿತಾರಾ, ಸಿಂಧೂ. ಉಮಾಶ್ರೀ, ಭಾರವಿ, ಶಿವಕುಮಾರ್. ಟೆನ್ನಿಸ್ ಕೃಷ್ಣ, ತಾರಾ, ಮಾ|ಆನಂದ್, ಮಾ|ಅರುಣ್, ಬೇಬಿ, ಆಶಾಲತಾ, ಸಿಟಿಕಟಿ ಚಂದ್ರು. ಅರವಿಂದ್, ನರೇಂದ್ರ, ಬೆಂಗಳೂರು ನಾಗೇಶ್
ಕ/ಚಿ.ಕ: ಜಯಶ್ರೀ ದೇವಿ
ಮಾ: ಕುಣಿಗಲ್ ನಾಗಭೂಷಣ್
ಗೀ: ವಿಜಯನಾರಸಿಂಹ, ಕಲ್ಯಾಣ್, ಎಂ.ಎನ್.ವ್ಯಾಸರಾವ್, ಮನೋಹರ್, ಶ್ರೀರಂಗ, ರಮೇಶ್ ರಾವ್
ಗಾ: ರಾಜಕುಮಾರ್, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಉಮಾಶ್ರೀ, ರಮೇಶ್
ಸಂ: ಆರ್.ಜನಾರ್ದನ್

ಛಾ: ವಿಪಿನ್ ದಾಸ್
ಕಲೆ: ಜನಾರ್ದನ್
ಸ: ವಿ.ಮನೋಹರ್
ನೃ: ಉಡುಪಿ ಜಯರಾಂ
ಸಾ: ಥ್ರಿಲ್ಲರ್ ಮಂಜು
ಹಾ: ೧)'ಕನ್ನಡ ನಾಡಿನ...', ೨)'ಕಣ್ಣಿನಿಯೇ ಕಣ್ಮಣಿಯೇ...', ೩)'ಊರಿಗೂರೇ ದಂಗ...', ೪)'ಹೆಣ್ಣೆಂದರೇನು ಒಂದು...', ೫)'ಗುಂಡು ಹಾಕಿಕೋ...', ೬)'ಇದೇನಾಯಿತು...',
ಕ.ಸಾ: ಮದ್ಯಪಾನ ನಿಷೇಧ ಕುರಿತ ಚಿತ್ರ. ಕೊರಗುಗಳಿಂದಾಗಿ ಉತ್ತಮ ಸ್ಮಾರ್ತ ಬ್ರಾಹ್ಮಣ ಮದ್ಯಪಾನ ಮಾಡಲಾರಂಭಿಸುತ್ತಾನೆ. ಇದರಿಂದ ಅವನ ಸಂಸಾರವೇ ಹಾಳಾಗುತ್ತದೆ. ಮತ್ತು ಅವನ ಹೆಂಡತಿ ಹಲವು ಸಂಕಷ್ಟಗಳಿಗೆ ಈಡಾಗಿ ಕೊನೆಗೆ ಮದ್ಯಪಾನದ ವಿರುದ್ಧ ಸಿಡಿದೇಳುತ್ತಾಳೆ. ಮದ್ಯಪಾನ ನಿಷೇಧವನ್ನು ತರಲು ಅವಳು ಚಳುವಳಿಯನ್ನೇ ಆರಂಭಿಸುತ್ತಾಳೆ.

೧೨೧೬. ಎದ್ದಿದೆ ಗದ್ದಲ

(೧೯೯೫ / ವರ್ಣ / ಸಾಮಾಜಿಕ)
ಲಾ: ಎಸ್.ಆರ್.ಕೆ.ಪಿಕ್ಚರ್ಸ್
ಪ್ರೊ: ಸಯ್ಯದ್ ಜಲೀಲ್, ಎಸ್.ವಿಜಯ
ನಿ: ಶ್ರೀದರ್ಶನ್
ಅ: ಶ್ರೀಧರ್, ಶ್ರೀನಾಥ್, ಶ್ರೀದರ್ಶನ್, ರಾಮಕೃಷ್ಣ, ಮಧುಶ್ರೀ, ದಿನೇಶ್, ಸುಚಿತ್ರಾ, ಟೆನ್ನಿಸ್ ಕೃಷ್ಣ, ಉಮೇಶ್, ಶಿವರಾಂ, ಉಮಾಶ್ರೀ, ಅಭಿನಯ, ಶಿವರಾಮ ಹೆಗಡೆ, ಡೇವಿಡ್ ಪ್ರಸನ್ನಕುಮಾರ್
ಕ: ಶ್ರೀದರ್ಶನ್, ಪುರುಷೋತ್ತಮ್ ಕಣಗಾಲ್
ಚಿ.ಕ: ಶ್ರೀದರ್ಶನ್
ಮಾ: ಪುರುಷೋತ್ತಮ್ ಕಣಗಾಲ್
ಗೀ: ಎ.ವಿ.ಶಿವಶಂಕರ್, ಶ್ರೀದರ್ಶನ್
ಗಾ: ಎಸ್.ಜಾನಕಿ, ಎಸ್.ಪಿ.ಬಾಲಸುಬ್ರಹ್ಮಣ್ಯಂ



ಸಂ: ಸುರೇಶ್ ಅರಸ್
ಛಾ: ಕೆ.ಮಲ್ಲಿಕ್
ಕಲೆ: ರಮೇಶ್
ಸ: ಬಾಲುಶರ್ಮ
ಧ್ವ: ಮಹೇಂದ್ರ
ನೃ: ಮದನ್ ಹರಿಣಿ
ಸಾ: ಬಿ.ಶಂಕರ್
ವ: ಸುಂದರ್
ಪ: ಶ್ಯಾಂ
ಸ್ಟು: ವಸಂತ್ ಕಲರ್ ಲ್ಯಾಬ್, ಅರುಣ್ ಸ್ಟುಡಿಯೋ
ಹಾ: ೧)'ಹೊಸದೊಂದು ರೂಪ ಬಾನಿಗ...', ೨)'ಮಣ್ಣಿನ ಮಕ್ಕಳೆ ಜನ್ಮ...', ೩)'ಆಸೆ ಹಕ್ಕಿ ಕರೆ ನೀಡಿದ...', ೪)'ಎದ್ದಿದೆ ಗದ್ದಲ...'
ಕ.ಸಾ: ಸಮಸ್ಯೆ ಮನುಷ್ಯನ ಅವಿಭಾಜ್ಯ ಅಂಗ. ಇದು ವ್ಯಕ್ತಿಗತವಾಗಿರಬಹುದು, ಸಮೂಹಕ್ಕೆ, ರಾಜ್ಯಕ್ಕೆ, ರಾಷ್ಟ್ರಕ್ಕೆ ಅಥವಾ ಇಡೀ ಜಗತ್ತಿಗೇ ಅನ್ವಯಿಸಬಹುದು. ಸಮಸ್ಯೆಯ ಗರ್ಭದಲ್ಲೇ ಪರಿಹಾರದ ಬೀಜವೂ ಅಡಗಿದೆ. ಸಮಸ್ಯೆಗಳ ಕೇಂದ್ರ ಬಿಂದು ಅಜ್ಞಾನ. ಮನುಷ್ಯ ಪೂರ್ಣ ತಿಳುವಳಿಕೆ ಸಂಪಾದಿಸಿದಾಗ ಸಮಸ್ಯೆಗಳೇ ಇಲ್ಲವಾಗುತ್ತವೆ. ವ್ಯವಸ್ಥೆಯ ನ್ಯೂನತೆಗಳ ವಿರುದ್ಧ ಸಿಡಿದೇಳುವ ಯುವ ಜನತೆ, ಅವ್ಯವಸ್ಥೆಗಳನ್ನು ಸರಿಪಡಿಸಲು ತಮ್ಮದೇ ಆದ ಮಾರ್ಗ ಹಿಡಿಯುವ ಕಥೆ.

೧೨೧೭. ಮಿಸ್ಟರ್ ಅಭಿಷೇಕ್

(೧೯೯೫ / ವರ್ಣ / ಸಾಮಾಜಿಕ)
ಲಾ: ಬಾಲಾಜಿ ಚಿತ್ರ
ಪ್ರೊ/ನಿ: ಎನ್.ಟಿ.ಜಯರಾಮ ರೆಡ್ಡಿ
ಸ.ನಿ: ಕಿಟ್ಟಿ ರಂಗಮಂಚ
ಅ: ಅಂಬರೀಷ್, ಸುಧಾರಾಣಿ, ಸಂತೋಷ್, ಟಿ.ಉದಯ ಶಂಕರ್, ತಾರಾ, ಅಭಿಜಿತ್, ಡಾ।ಸುರೇಶ್ ಶರ್ಮ, ಚಂದ್ರು, ಕೃಷ್ಣೇಗೌಡ, ಬಿ.ಕೆ.ಶಂಕರ್, ಆಶಾಲತಾ, ಸತ್ಯಭಾಮ, ರೇಖಾದಾಸ್, ಸೀಮಾ, ಟೆನ್ನಿಸ್ ಕೃಷ್ಣ, ಬ್ಯಾಂಕ್ ಜನಾರ್ದನ್, ಶ್ರೀಶೈಲನ್, ಮಾ.ಸಾವಂತ್, ಪವಿತ್ರ ಲೋಕೇಶ್
ಕ/ಚಿ.ಕ: ಎನ್.ಟಿ.ಜಯರಾಮ ರೆಡ್ಡಿ
ಮಾ: ಬಿ.ಎಲ್.ವೇಣು
ಗೀ: ಹಂಸಲೇಖ
ಸಂ: ಅನ್ವರ್ ತಾವರಕರ



ಛಾ: ಅಭಿಷೇಕ್ ರಾಮಚಂದ್ರ
ಕಲೆ: ಮುತ್ತು
ಸ: ಹಂಸಲೇಖ
ಧ್ವ: ಚಾಮುಂಡೇಶ್ವರಿ, ಸಂಕೇತ್
ಸಾ: ಗಂಡಸಿ ನಾಗರಾಜ್
ದ: ಮೈಸೂರು ವೆಂಕಟೇಶ್
ಹಾ: ೧)'ನೀನು ಇಂಥಾ ಹುಡುಗಿ ಅಂಥ...', ೨)'ಸತಿ ಎಂದರೆ ಪತಿಯಲ್ಲವೆ...', ೩) 'ಮಾನವ ಜನ್ಮ ದೊಡ್ಡದು...', ೪) 'ಲೋಕ ತಿಳಿಯದಾಗ...', ೫) 'ಅಮ್ಮವ್ವಾ ಮೋಡಮ್ಮ ಎಂ.ಜಿ.ರೋಡಿನ ಮೇಡಮ್ಮ...'
ಕ.ಸಾ: ತನ್ನ ತಂದೆಗೆ ಅನ್ಯಾಯ ಮಾಡಿದರೆಂಬ ತಪ್ಪು ಗ್ರಹಿಕೆಯ ನಾಯಕಿ, ನಾಯಕ ಅಭಿಷೇಕ್‌ನನ್ನು ಮದುವೆಯಾಗಿ ಆತನ ಸಂಸಾರವನ್ನು ಗೋಳು ಹುಯ್ದುಕೊಳ್ಳುತ್ತಾಳೆ. ಸತ್ಯಾಂಶ ತಿಳಿದಾಗ ತಾನು ಮಾಡಿದ ತಪ್ಪಿಗಾಗಿ ಕ್ಷಮೆ ಯಾಚಿಸುತ್ತಾಳೆ.

೧೨೧೮. ರಿವೇಂಜ್

(೧೯೯೫ / ವರ್ಣ / ಸಾಮಾಜಿಕ)
ಲಾ: ವಿಜಯದುರ್ಗ ಕಂಬೈನ್ಸ್
ಪ್ರೊ: ನೆಲ್ಲೂರು ಬಿ.ಎಸ್.ಶಾಂತಾರಾಮ್
ನಿ: ಸಾಯಿಪ್ರಕಾಶ್
ಸ.ನಿ: ಚಂದ್ರು ದೊಡ್ಡಮನಿ
ಅ: ದೇವರಾಜ್, ಶಶಿಕುಮಾರ್, ಭವ್ಯ, ವಿನಯಾ ಪ್ರಸಾದ್, ರವಿರಾಜ್, ವಜ್ರಮುನಿ, ದೊಡ್ಡಣ್ಣ, ಟೆನ್ನಿಸ್ ಕೃಷ್ಣ, ಅರವಿಂದ್, ಮುಖ್ಯಮಂತ್ರಿ ಚಂದ್ರು, ಕೀರ್ತಿ, ಶಿವರಾಂ, ಮಾ।ಆನಂದ್, ಬಿ.ಕೆ.ಶಂಕರ್, ಮಹೇಂದ್ರಕರ್, ಪ್ರತಿಭಾ, ಬೇಬಿ ಲಕ್ಷ್ಮೀ
ಕ/ಚಿ.ಕ: ಸಾಯಿಪ್ರಕಾಶ್
ಮಾ: ಕುಣಿಗಲ್ ನಾಗಭೂಷಣ್
ಗೀ: ಚಿ.ಉದಯಶಂಕರ್, ಆರ್.ಎನ್.ಜಯಗೋಪಾಲ್, ಸು.ರುದ್ರಮೂರ್ತಿಶಾಸ್ತ್ರೀ
ಗಾ: ರಾಜಕುಮಾರ್, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ, ಮಂಜುಳಾ ಗುರುರಾಜ್
ಸಂ: ಕೆ.ನರಸಯ್ಯ
ಛಾ: ಜಾನೀಲಾಲ್
ಕಲೆ: ಬಾಬುಖಾನ್
ಸ: ರಾಜ್ ಕೋಟಿ
ಧ್ವ: ಮಹೇಂದ್ರನ್, ಕೋದಂಡಪಾಣಿ
ನೃ: ಶಿವಶಂಕರ್, ಅನುರಾಧಾ - ಸತೀಶ್
ಸಾ: ಥ್ರಿಲ್ಲರ್ ಮಂಜು, ಜ್ಯೂಡೋ ರತ್ನಂ
ದ: ಜಯಚಂದ್ರ
ಪ: ಕುಮಾರ್, ಶ್ಯಾಮಣ್ಣ, ಮಾಧವನ್, ಕೇಶವ ನಾಗೇಶ್ವರರಾವ್
ಸ್ಟು: ಅಭಿಮಾನ್, ಕಂಠೀರವ
ಹಾ: ೧)'ಬಂತು ಬಂತು ಪ್ರೀತಿ...', ೨)'ಜಮ್ಮು ಲಕಡಿ...', ೩)'ಎಂತಹ ಈ ಬಂಧನ...', ೪)'ಗುಂಡು ಹಾಕೋ ಗುಂಡು...', ೫)'ಆಟೀಸು ರಾಣಿ ನೀನು...', ೬)'ಹಣ ಹಣ ವಿಸ್ಮಿತ...',
ಸೆ: ರೀಲು ೧೪, ಉದ್ದ ೩೬೮೪.೦೦
ಕ.ಸಾ: ಅನ್ಯಾಯ ಮಾಡಿದವರ ವಿರುದ್ಧ ಅನ್ಯಾಯಕ್ಕೊಳಗಾದವರು ಸೇಡು ತೀರಿಸಿಕೊಳ್ಳುವ ಕಥೆ.

೧೨೧೯. ಹಿಮಪಾತ

(೧೯೯೫ / ವರ್ಣ / ಸಾಮಾಜಿಕ)
ಲಾ: ಲಕ್ಷ್ಮೀ ಆರ್ಟ್ಸ್
ಪ್ರೊ: ರಾಕ್‌ಲೈನ್ ವೆಂಕಟೇಶ್
ನಿ: ಎಸ್.ವಿ.ರಾಜೇಂದ್ರಸಿಂಗ್ ಬಾಬು
ಸ.ನಿ: ಕಿಟ್ಟಿ ರಂಗಮಂಚ, ರಾಮನಾಥ್ ಋಗ್ವೇದಿ
ಅ: ವಿಷ್ಣುವರ್ಧನ್, ಸುಹಾಸಿನಿ, ಜಯಪ್ರದಾ, ಜೈಜಗದೀಶ್, ಜಯಂತಿ, ಮಾಲತಿ
ಕ: ಟಿ.ಕೆ.ರಾಮರಾವ್ ಅವರ ಕಾದಂಬರಿ
ಚಿ.ಕ: ಎಸ್.ವಿ.ರಾಜೇಂದ್ರಸಿಂಗ್ ಬಾಬು
ಮಾ: ಯೋಗಾನರಸಿಂಹ
ಗೀ: ಹಂಸಲೇಖ
ಸಂ: ಸುರೇಶ್ ಅರಸ್
ಛಾ: ಡಿ.ವಿ.ರಾಜರಾಮ್
ಕಲೆ: ಸುಭಾಷ್ ಕಡಕೋಳ್
ಸ: ಹಂಸಲೇಖ
ನೃ: ಸುಚಿತ್ರ, ಶಂಕರ್
ಸಾ: ನಂಜುಂಡಿ ನಾಗರಾಜ್, ಕೆ.ಡಿ.ವೆಂಕಟೇಶ್, ಬಾಗದಾರ್ ತಂಗಂ
ಕ.ಸಾ: ಸ್ಮೃತಿ ನಾಶವಾಗಿ ಬಳಲುತ್ತಿರುವ ನಾಯಕ ಪ್ರಣಯದಲ್ಲಿ ಸಿಲುಕುವ ಕಥೆ. ಅನಂತರ ಅವನಿಗೆ ಸ್ಮೃತಿ ಮರಳುತ್ತದೆ. ಖ್ಯಾತ ಛಾಯಾಚಿತ್ರಗ್ರಾಹಕನಾದ ಅರವಿಂದ್ ಸುಮಿತ್ರಳ ಪ್ರೇಮದಲ್ಲಿ ಸಿಲುಕುತ್ತಾನೆ. ಆದರೆ ಅವರಿಬ್ಬರ ಮದುವೆಗೆ ಸುಮಿತ್ರಳ ತಾಯಿಯೇ ಅಡ್ಡಿಯಾಗುತ್ತಾಳೆ. ಹಿಮಾಲಯದ ಚಿತ್ರ ತೆಗೆಯುವ ಕೆಲಸ ಒಪ್ಪಿಕೊಂಡು ಅಲ್ಲಿಗೆ ತೆರಳುವ ಅವನು ಅಲ್ಲಿ ಎತ್ತರದಿಂದ ಜಾರಿ ಬೀಳುತ್ತಾನೆ. ಅವನ ಸ್ಮೃತಿ ನಾಶವಾಗುತ್ತದೆ. ಈ ಸಂದರ್ಭದಲ್ಲಿ ನಯನ ಅವನನ್ನು ರಕ್ಷಿಸುತ್ತಾಳೆ. ಅರವಿಂದ ನಯನಳನ್ನು ಪ್ರೀತಿಸಲಾರಂಭಿಸುತ್ತಾನೆ. ಅವನನ್ನು ಹುಡುಕಿಕೊಂಡು ಸುಮಿತ್ರ ಬರುತ್ತಾಳೆ. ಆದರೆ ಗೌತಂ

ಎಂದಾಗಿರುವ ಅರವಿಂದ್ ಅವಳನ್ನು ಗುರುತಿಸದೆ ಹೋಗುತ್ತಾನೆ. ಈ ತ್ರಿಕೋನ ಪ್ರೇಮ ಯಾವ ರೀತಿಯಲ್ಲಿ ಕೊನೆ ಕಾಣುತ್ತದೆನ್ನುವುದೇ ಚಿತ್ರದ ಉತ್ಕರ್ಷವಾಗಿದೆ.

೧೭೨೦. ಅನುರಾಗ ಸಂಗಮ

(೧೯೯೫ / ವರ್ಣ / ಸಾಮಾಜಿಕ)

ಲಾ: ಎಸ್.ಕೆ.ಫಿಲಂಸ್ ಸಿಂಡಿಕೇಟ್
ಪ್ರೊ: ಕುಮಾರ್ ಗೋವಿಂದ್
ನಿ: ವಿ.ಉಮಾಕಾಂತ್
ಅ: ಕುಮಾರ್ ಗೋವಿಂದ್, ರಮೇಶ್, ಲೋಹಿತಾಶ್ವ, ವಿ.ಮನೋಹರ್, ಟೆನ್ನಿಸ್ ಕೃಷ್ಣ, ಬ್ಯಾಂಕ್ ಜನಾರ್ದನ್, ಕೃಷ್ಣೇಗೌಡ, ಆಶಾಲತಾ, ಸುಧಾರಾಣಿ, ಬಿ. ಸರೋಜಾದೇವಿ, ಭಾಗ್ಯಶ್ರೀ
ಕ/ಚಿ.ಕ: ವಿ. ಉಮಾಕಾಂತ್
ಮಾ: ಆರ್.ಎನ್.ಜಯಗೋಪಾಲ್
ಗೀ: ವಿ.ಮನೋಹರ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ರಾಜೇಶ್, ರಮೇಶ್ ಚಂದ್ರ, ಸುಧಾರಾಣಿ, ಚಂದ್ರಿಕಾ ಗುರುರಾಜ್
ಸಂ: ಪ್ರಸಾದ್
ಛಾ: ಸುಂದರನಾಥ ಸುವರ್ಣ
ಕಲೆ: ಸೂರ್ಯನಾರಾಯಣ ರಾವ್
ಸ: ವಿ.ಮನೋಹರ್
ನೃ: ಉಡುಪಿ ಜಯರಾಂ, ಚಿಂದ್ರು
ಸಾ: ಕೆ.ಡಿ.ವೆಂಕಟೇಶ್
ಹಾ: ೧) 'ಓಹೋ ಓಹೋ ಮೊನಾಲಿಸಾ...', ೨) 'ತಾವರೆ ಓ ತಾವರೆ...', ೩) 'ಓ ಮಲ್ಲಿಗೆ...', ೪) 'ದಿಯಾ ದಿಯಾ ದೂ...', ೫) 'ಸಂಗಮ ಸಂಗಮ...', ೬) 'ಓ ಮಲ್ಲಿಗೆ...', ೭) 'ಕೇಳು ಪುಟಾಣಿ...'
ವಿ: ೧೯೯೫-೯೬ರ ರಾಜ್ಯಪ್ರಶಸ್ತಿ : ಅತ್ಯುತ್ತಮ ಹಿನ್ನಲೆ ಗಾಯಕ (ರಮೇಶ್ ಚಂದ್ರ)
ಕ.ಸಾ: ಅನಾಥನೊಬ್ಬ ಕುರುಡಿಯೊಬ್ಬಳಲ್ಲಿ ಅನುರಕ್ತನಾಗುತ್ತಾನೆ. ಅವಳಿಗಾಗಿ ತಾನು ಮಾಡದ ಕಳ್ಳತನ ಆರೋಪ ಹೊತ್ತು ಜೈಲು ಸೇರುತ್ತಾನೆ. ಕುರುಡಿಗೆ ಕಣ್ಣು ಬರುತ್ತದೆ. ಅವಳ ಕಣ್ಣುಗಳ ಆಪರೇಷನ್ ಮಾಡಿದ ವೈದ್ಯ ಅವಳನ್ನು ದತ್ತು ತೆಗೆದುಕೊಳ್ಳುತ್ತಾನೆ. ಶ್ರೀಮಂತ ಹುಡುಗನೊಂದಿಗೆ ಅವಳ ಮದುವೆಯೂ ನಿಶ್ಚಯವಾಗುತ್ತದೆ. ಜೈಲಿನಿಂದ ಬಂದ ಅನಾಥ, ಅವಳ ಭವಿಷ್ಯದ ದೃಷ್ಟಿಯಿಂದ ತನ್ನ ಪ್ರೇಮವನ್ನು ತ್ಯಾಗ ಮಾಡಲು ನಿರ್ಧರಿಸುತ್ತಾನೆ. ಆದರೆ ಇವರಿಬ್ಬರ ಪ್ರೇಮದ ಬಗ್ಗೆ ತಿಳಿದ ಶ್ರೀಮಂತ ಹುಡುಗ ತಾನೇ ಮುಂದೆ ನಿಂತು ಇವರಿಬ್ಬರ ಮದುವೆ ಮಾಡಿಸುತ್ತಾನೆ.

೧೭೨೧. ಶಿವ

(೧೯೯೫ / ವರ್ಣ / ಸಾಮಾಜಿಕ)

ಲಾ: ಚಿತ್ರಾ ಕ್ರಿಯೇಷನ್ಸ್
ಪ್ರೊ: ಕೆ.ಚಿದಂಬರ ಶೆಟ್ಟಿ
ನಿ: ಬಿ.ರಾಮಮೂರ್ತಿ
ಸ.ನಿ: ಕೆ.ಬಿ.ಹಿರೇಮಠ
ಅ: ಶಶಿಕುಮಾರ್, ಬಿಂದಿಯಾ, ವಿನಯಾ ಪ್ರಸಾದ್, ಕಲ್ಯಾಣ್ ಕುಮಾರ್, ಹೊನ್ನವಳ್ಳಿ ಕೃಷ್ಣ, ಪದ್ಮಾವಾಸಂತಿ, ಆಶಾಲತಾ, ಸುಧಾ ನರಸಿಂಹರಾಜು, ರೇಖಾ ದಾಸ್, ನವನೀತಾ, ನಯನ
ಕ/ಚಿ.ಕ. ಪರಚೂರಿ ಬ್ರದರ್ಸ್
ಮಾ: ಬಿ.ರಾಮಮೂರ್ತಿ
ಗೀ: ಆರ್.ಎನ್.ಜಯಗೋಪಾಲ್, ವಿ.ಮನೋಹರ್, ರಮೇಶ್ ರಾವ್, ಕಲ್ಯಾಣ್

ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ರಾಜೇಶ್, ಮಂಜುಳಾ, ಸುಜಾತಾ, ಪ್ರತಿಮಾ
ಸಂ: ಕೆ.ನರಸಯ್ಯ
ಛಾ: ಮಲ್ಲಿಕಾರ್ಜುನ
ಕಲೆ: ನಂಜುಂಡಸ್ವಾಮಿ
ಸ: ಸಾಧುಕೋಕಿಲ
ಧ್ವ: ಮಹೇಂದ್ರನ್, ಕೋದಂಡಪಾಣಿ
ನೃ: ಸತೀಶ್
ಸಾ: ಸುರೇಶ್, ಥ್ರಿಲ್ಲರ್ ಮಂಜು, ಆ್ಯಕ್ಷನ್ ಮೂರ್ತಿ
ವ: ಜಯಚಂದ್ರ, ಕೊಂಡಲರಾವ್
ಪ್ರ: ಕುಮಾರ್ ನೊಣವಿನಕೆರೆ, ಕೇಶ: ನಾಗೇಶ್
ಕ.ಸಾ: ಊರಿನಲ್ಲಿನ ಎಲ್ಲ ಅಕ್ರಮ ವ್ಯವಹಾರಗಳು ಹಾಗೂ ಅನಾಚಾರಗಳಿಗೆ ಕಾರಣರಾದ ಇಬ್ಬರು ವ್ಯಕ್ತಿಗಳನ್ನು ಮಟ್ಟ ಹಾಕಲು ಬರುವ ಶಿಕ್ಷಕಿ ಮತ್ತು ಅವಳ ತಂಗಿಯನ್ನು ಇಲ್ಲವಾಗಿಸುವ ಪ್ರಯತ್ನ ನಡೆದಾಗ, ಶಿವ ಎಂಬ ತರುಣ ಅದನ್ನು ವಿಫಲಗೊಳಿಸುತ್ತಾನೆ. ಶಿಕ್ಷಕಿಯ ತಂಗಿಯನ್ನು ಪ್ರೇಮಿಸಿ ಮದುವೆಯಾಗುತ್ತಾನೆ. ಊರಿನ ಹಿತ ಕಾಪಾಡುತ್ತಾನೆ.

೧೭೨೨. ಎಮರ್‌ಜೆನ್ಸಿ

(೧೯೯೫ / ವರ್ಣ / ಸಾಮಾಜಿಕ)

ಲಾ: ಶ್ರೀ ಭುವನೇಶ್ವರಿ ಆರ್ಟ್ಸ್
ಪ್ರೊ: ಟಿ.ಕುಮರೇಶ್ ಬಾಬು
ನಿ: ಓಂ ಪ್ರಕಾಶ್
ಅ: ದೇವರಾಜ್, ನಿರೋಷ, ಕಲ್ಯಾಣ್‌ಕುಮಾರ್, ಟೆನ್ನಿಸ್ ಕೃಷ್ಣ, ಟೇನೂ ಆನಂದ್, ಬಾಕಿಶಿವು, ಜ್ಯೋತಿ, ಶೋಭರಾಜ್, ಬಿ.ಸರೋಜಾದೇವಿ, ಸಾಯಿಕುಮಾರ್, ದೊಡ್ಡಣ್ಣ, ಡಿಂಗ್ರಿ ನಾಗರಾಜ್, ಲೋಹಿತಾಶ್ವ, ಸಿ.ಆರ್.ಸಿಂಹ, ಸರಿಗಮವಿಜಿ
ಕ/ಚಿ.ಕ: ಓಂ ಪ್ರಕಾಶ್

ಮಾ: ಕಂವರಾಜ್ ಬಿಳಿದಾಳೆ
ಸಂ: ಜನಾರ್ದನ್
ಛಾ: ಸುಂದರನಾಥ್ ಸುವರ್ಣ
ಕಲೆ: ಇಸ್ಮಾಯಿಲ್
ಸ: ಸಾಧುಕೋಕಿಲ
ನೃ: ಸಂಪತ್
ಸಾ: ಥ್ರಿಲ್ಲರ್ ಮಂಜು, ನಂಜುಂಡಿ ನಾಗರಾಜ್
ಹಾ: ೧) 'ನಾ ಜವಾನ್ಮ ನೀನಾದ..', ೨) 'ಓ ಪ್ರಿಯಾ ನೀ ಕೇಳೆಯಾ...', ೩) 'ನನ್ನ ಹೆಸರು ಮನಾ ಮನಾ...', ೪) 'ಆನಂದ ತುಂಬಿದ ನಮ್ಮ ಸಂಸಾರ...'
ಕ.ಸಾ: ಪತ್ರಕರ್ತನ ಕುಟುಂಬದವರ ಕೊಲೆಯಲ್ಲಿ ಭಾಗಿಯಾಗಿರುವ ಮುಖ್ಯಮಂತ್ರಿಗಳನ್ನೇ ಬಯಲಿಗೆಳೆಯಲು ಅಂಜದ ಪೊಲೀಸ್ ಅಧಿಕಾರಿ ಸೂರ್ಯನ ಸುತ್ತ ಹೆಣೆಯಲಾದ ಕಥೆ. ಮುಖ್ಯಮಂತ್ರಿಗಳ ಬಂಧನದಿಂದ ಆಗಬಹುದಾದ ಅನಾಹುತಗಳನ್ನು ತಡೆಯಲು ಎಮರ್ಜೆನ್ಸಿ ವಿಧಿಸಲಾಗುತ್ತದೆ. ಮುಖ್ಯಮಂತ್ರಿ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಸೂರ್ಯ ರಾಜಕೀಯ ವ್ಯಕ್ತಿಗಳ ಹಿಂದಿರುವ ವಿದೇಶಿ ಏಜೆಂಟನ್ನು ಬಂಧಿಸಲು ಸಫಲನಾಗುತ್ತಾನೆ.

೧೭೨೩ ಕಿಡ್ನ್ಯಾಪ್

(೧೯೯೫ / ವರ್ಣ / ಸಾಮಾಜಿಕ)

ಲಾ: ದ್ವಾರಕೀಶ್ ಚಿತ್ರ
ಪ್ರೊ/ನಿ: ದ್ವಾರಕೀಶ್
ಅ: ದೇವರಾಜ್, ದ್ವಾರಕೀಶ್, ನಂದಿನಿ ಸಿಂಗ್, ವಿಜಯ್, ಅಭಿನಾಶ್, ರಮೇಶ್, ನಾಗೇಶ್ ಬಾಬು, ಜೋಸೈಮನ್, ಸಿಹಿಕಹಿ ಚಂದ್ರು, ಜ್ಯೂನರಸಿಂಹರಾಜು, ಶ್ರೀಶೈಲನ್, ಸಿಹಿಕಹಿ ಗೀತಾ
ಕ/ಚಿ.ಕ/ಮಾ: ದ್ವಾರಕೀಶ್
ಗೀ: ಎಂ.ಎನ್.ವ್ಯಾಸರಾವ್, ಶ್ಯಾಮಸುಂದರ ಕುಲಕರ್ಣಿ
ಗಾ: ಮನು, ಚಿತ್ರಾ, ಮಂಜುಳಾ ಗುರುರಾಜ್, ವಿಷ್ಣು
ಸಂ: ಗೌತಂ ರಾಜು
ಛಾ: ಕರುಣಾಕರ ರಾವ್

ಕಲೆ: ಕೆ.ಎಸ್.ವೇಣು
ಸ: ರಾಜ್ ಕೋಟಿ
ಧ್ವ: ಪೀಟರ್, ಕೃಷ್ಣಮೂರ್ತಿ
ನೃ: ಸತೀಶ್, ಕಲಾ
ಸಾ: ಸ್ವಾಮಿ, ನಂಜುಂಡಿ ನಾಗರಾಜ್
ವ: ಶ್ರೀ ಗಣೇಶ್
ಪ್ರ: ವೆಂಕಟೇಶ್, ಕೇಶ: ಚಾರಿ
ಸ್ಟು: ಸಂಕೇತ್, ಕಂಠೀರವ
ಹಾ: ೧) 'ಕಿಡ್ನ್ಯಾಪ್ ಕಿಡ್ನ್ಯಾಪ್ ಎಲ್ಲೆಲ್ಲೂ ಕಿಕಿಡ್ನ್ಯಾಪ್...', ೨) 'ಕಲೆಯಿಂದ ಸಂಗೀತಾ ಶಿಲೆಯಿಂದಾ ಸಂಕೇತಾ...', ೩) 'ಉದಯ ಸೂರ್ಯನೇ ನಿನಗೆ ವಂದನೆ...', ೪) 'ನಾನೊಂದು ಹುಡುಗಾಟದ ಹುಡುಗಿ...'
ಸೆ: 'ಯು' ಸರ್ಟಿಫಿಕೇಟ್, ಉದ ೩೮೪೯.೦೦, ೨೯.೦೭.೯೫
ಕ.ಸಾ: ಅಕಸ್ಮಾತ್ ಸಿಕ್ಕಿದ ನಿಧಿಯಿಂದ ಇದ್ದಿ ಮಾರುತ್ತಿದ್ದ ಅಣ್ಣ ತಮ್ಮ ದಿಢೀರ್ ಶ್ರೀಮಂತರಾಗಿ ತಾರಾ ಹೋಟೆಲಿನ ಮಾಲೀಕರಾದರು. ಅಣ್ಣನ ಮಗಳು ಓದುತ್ತಿದ್ದ ಶಾಲೆಯನ್ನು ಸ್ಫೋಟಿಸುವ ಕುತಂತ್ರದಿಂದ ಬಾಂಬ್ ಅಡಗಿಸಿಟ್ಟ ಬೊಂಬೆಯೊಂದನ್ನು ಆ ಹುಡುಗಿಯ ಕೈಗೆ ದೂರ್ತರು ಕೊಡುವರು. ಸಿ.ಬಿ.ಐ.ಅಧಿಕಾರಿ ಉಪಾಯದಿಂದ ಶಾಲೆ ಹಾಗೂ

ಮಗುವನ್ನು ರಕ್ಷಿಸುವನು. ಇದಕ್ಕಿದ್ದ ಹಾಗೆ ಆ ಹುಡುಗಿ ಕಾಣೆಯಾಗುತ್ತಾಳೆ. ಇವರಿಗೆ ಸಿಧಿ ಸಿಗಲು ಕಾರಣನಾದವ ಜೈಲಿನಿಂದ ಬಂದವನು ಈ ಸೋದರರನ್ನು ಬ್ಲಾಕ್ ಮೇಲ್ ಮಾಡಲೆತ್ನಿಸುವನು. ತಮ್ಮನ ಸಾವು, ಸಿ.ಬಿ.ಐ.ಅಧಿಕಾರಿಗೆ ಕೆಟ್ಟ ಹೆಸರು ತರಲು ಅವನ ಸಹಪಾಠಿಯಾಗಿದ್ದವನ ಪ್ರಯತ್ನ. ಹೀಗೆ ಘಟನೆಗಳ ಸರಮಾಲೆಯೇ ಚಿತ್ರದ ಕಥಾವಸ್ತು.

೧೭೨೪. ಮಿಸ್ಟರ್ ವಾಸು

(೧೯೯೫ / ವರ್ಣ / ಸಾಮಾಜಿಕ)
ಲಾ: ವೆಂಕಟೇಶ್ವರ ಸಿನಿ ಪ್ರೊಡಕ್ಷನ್
ಪ್ರೊ: ಕೆ.ಎಸ್.ರಾಮನ್, ಕೆ.ಬಾಲಕಷ್ಣ
ನಿ: ಜೋಸೈಮನ್
ಅ: ಪ್ರಭಾಕರ್, ಡಾ.ಲೋಕನಾಥ್, ಸಿಲ್ಕ್‌ಸ್ಮಿತಾ, ಅಶೋಕ್ ರಾವ್, ರಮೇಶ್ ಭಟ್, ಗಜರ್‌ಖಾನ್, ಬಿಟಿಕಿಟಿ ಚಂದ್ರು
ಕ/ಚಿ.ಕ/ಮಾ: ಜೋಸೈಮನ್
ಗೀ: ಹಂಸಲೇಖ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ರಾಜೇಶ್
ಸಂ: ಕೆ. ನರಸಯ್ಯ
ಛಾ: ಸುಂದರನಾಥ ಸುವರ್ಣ
ಕಲೆ: ಸುಂದರಂ
ಸ: ಹಂಸಲೇಖ

ಕ.ಸಾ: ಎಲ್ಲಾ ಬಗೆಯ ಗಲಾಟೆಯಲ್ಲಿಯೂ ಸಿಕ್ಕಿ ಹಾಕಿಕೊಳ್ಳುವ ನಿರುದ್ಯೋಗಿ ಯುವಕನ ಕಥೆ. ಇದರಿಂದಾಗಿ ಅವನ ತಂದೆ ಅವನನ್ನು ಮನೆಯಿಂದ ಹೊರಹಾಕುತ್ತಾನೆ. ಇಂಥವನು ಸಿ.ಐ.ಡಿ. ಅಧಿಕಾರಿಯಾಗಿ ಕುಟುಂಬದ ಗೌರವವನ್ನು ಕಾಪಾಡುತ್ತಾನೆ.

೧೭೨೫. ನವಿಲೂರನೈದಿಲೆ

(೧೯೯೫ / ವರ್ಣ / ಸಾಮಾಜಿಕ)
ಲಾ: ಅಕ್ಷಯ ಸಿನಿ ಕ್ರಿಯೇಷನ್ಸ್
ಪ್ರೊ: ಕಿರಣ್ ಕುಮಾರ್, ಲಕ್ಷ್ಮಣ್.ಪಿ.ಕೆಂಗಾರ್, ಬಸವರಾಜ ಹಿರೇಮಠ್
ನಿ: ಪಿ.ಚಂದ್ರಶೇಖರ್
ಸ.ನಿ: ಸಕ್ರೆಪಟ್ನ ಶ್ರೀನಿವಾಸ್
ಅ: ರಘುವೀರ್, ಸಿಂಧು, ತೇಜಸ್ವಿನಿ, ಮೈಸೂರು ಪ್ರಕಾಶ್, ಕಂಪರಾಜ್, ರಾಜಾನಂದ್, ರಮ್ಯ, ಲೀಲಾ
ಕ/ಚಿ.ಕ/ಮಾ: ಪಿ.ಚಂದ್ರಶೇಖರ್
ಗೀ: ಹಂಸಲೇಖ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ರಮೇಶ್, ಗಂಗೋತ್ರಿ, ಚಿತ್ರಾ, ಲತಾ ಹಂಸಲೇಖ, ವಾಣಿ ಜಯರಾಂ
ಸಂ: ವಿ.ಎಸ್.ಮುರಳಿ
ಛಾ: ರಾಮು
ಕಲೆ: ಜಗದೀಶ್
ಸ: ಹಂಸಲೇಖ
ಧ್ವ: ಕಣ್ಣನ್, ಕೃಷ್ಣಮೂರ್ತಿ

ನೃ: ಮದನ್ ಹರಿಣಿ
ಸಾ: ಥ್ರಿಲ್ಲರ್ ಮೂರ್ತಿ
ವ: ಗೋಪಾಲ್
ಪ್ರ: ದೇವರಾಜ್
ಸ್ಥ: ಸಂಕೇತ್
ಕ.ಸಾ: ಒಂದು ಪ್ರೇಮ ಕಥೆ.

೧೯೯೬

೧೭೨೬. ಅಪ್ಪಾಜಿ

(೧೯೯೬ / ವರ್ಣ / ಸಾಮಾಜಿಕ)
ಲಾ: ಸೂರ್ಯ ಇಂಟರ್‌ನ್ಯಾಷನಲ್
ಪ್ರೊ: ಹೆಚ್.ಎಸ್.ಜಾನಕಿ ರಾಮ್, ಸಿ.ಎಸ್.ಮಂಜು
ನಿ: ಡಿ.ರಾಜೇಂದ್ರ ಬಾಬು
ಸ.ನಿ: ಮಂಜು
ಅ: ವಿಷ್ಣುವರ್ಧನ್ (ದ್ವಿಪಾತ್ರ), ಲಕ್ಷ್ಮಣ್, ಕೃಷ್ಣೇಗೌಡ, ಆಮನಿ, ಪುನೀತ್ ಇಸ್ಸಾರ್, ಪಂಕಜ್‌ಧೀರ್, ಶರಣ್ಯ
ಕ: ವಿಜಯೇಂದ್ರ ಪ್ರಸಾದ್
ಚಿ.ಕ: ಡಿ.ರಾಜೇಂದ್ರ ಬಾಬು
ಮಾ: ರಿಚರ್ಡ್ ಲೂಯಿಸ್
ಗೀ: ಆರ್.ಎನ್.ಜಯಗೋಪಾಲ್, ಶ್ರೀರಂಗ, ಶ್ಯಾಂಸುಂದರ ಕುಲಕರ್ಣಿ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ, ಮನು, ಮಾಲ್ಗುಡಿ ಶುಭಾ, ಎಂ.ಎಂ.ಕೀರವಾಣಿ
ಸಂ: ಕೆ.ಬಾಲು
ಛಾ: ಪ್ರಸಾದ್ ಬಾಬು
ಕಲೆ: ನಜೀರ್
ಸ: ಎಂ.ಎಂ.ಕೀರವಾಣಿ
ಧ್ವ: ಸಂಕೇತ್
ನೃ: ಸುಚಿತ್ರಾ
ವ: ರಾಮನಾಥ್
ಪ್ರ: ಕುಮಾರ್ ಸೋಮಿನಕರೆ, ಕೇಶ: ನಾಗೇಶ್ವರ ರಾವ್
ಹಾ: ೧) 'ಏನೀ ಕನ್ನಡತಿ...', ೨) 'ಯಾವ ದೇವ ಶಿಲ್ಪಿ ಕಡೆದನೋ ನಿನ್ನ...', ೩) 'ಪಾಪಾ ಡಿಜ...', ೪) 'ಜಲರಂಭದ...', ೫) 'ಘರ್ಷಣ ಘರ್ಷಣೆ...', ೬) 'ಬಾನು ಎಲ್ಲೋ ಕಾಣೆಯು...',
ಕ.ಸಾ: ಸೇಡು ತೀರಿಸಿಕೊಳ್ಳುವ ಕಥೆ. ಶಕ್ತಿಯನ್ನು, ಬಡವರಿಗ ನೆರವಾಗುವ ಗುಣವಿರುವ ಅವನ ಅಣ್ಣ ಅಪ್ಪಾಜಿ ಬೆಳೆಸಿರುತ್ತಾನೆ. ಅಪ್ಪಾಜಿಯನ್ನು ಆತನ ಶತ್ರು ದೇಸಾಯ್ ಪೋಲೀಸ್ ಅಧಿಕಾರಿ ಅಶೋಕ್‌ಕುಮಾರ್ ನೆರವಿನಿಂದ ಕೊಲೆಮಾಡುತ್ತಾನೆ. ಇದಕ್ಕೆ ಸಾಕ್ಷಿಯಾಗುವ ಶಕ್ತಿ ಕೊಲೆ ಮಾಡಿದವರ ಮೇಲೆ ಸೇಡು ತೀರಿಸಿ ಕೊಳ್ಳುತ್ತಾನೆ. ಚಿತ್ರ ಸಾಮೂಹಿಕ ಕೊಲೆಯಲ್ಲಿ ಕೊನೆಗಾಣುತ್ತದೆ.

೧೭೨೭. ಇಬ್ಬರ ನಡುವೆ ಮುದ್ದಿನ ಆಟ

(೧೯೯೬ / ವರ್ಣ / ಸಾಮಾಜಿಕ)
ಲಾ: ಎಸ್.ವಿ.ಪ್ರೊಡಕ್ಷನ್ಸ್
ಪ್ರೊ: ಟಿ.ಎಂ.ವೆಂಕಟಸ್ವಾಮಿ (ಆಡುಗೋಡಿ)
ನಿ: ರೇಲಂಗಿ ನರಸಿಂಹರಾವ್
ಸ.ನಿ: ಕೆ.ಎನ್.ವೈದ್ಯನಾಥ್
ಅ: ಶಿವರಾಜ್ ಕುಮಾರ್ (ಗೌರವ ಪಾತ್ರ), ರಾಘವೇಂದ್ರ ರಾಜಕುಮಾರ್, ಕಸ್ತೂರಿ, ಸ್ವರ್ಣ, ಶ್ರೀನಿವಾಸ ಮೂರ್ತಿ, ಮುಖ್ಯಮಂತ್ರಿ ಚಂದ್ರು, ಉಮಾಶ್ರೀ, ಬಿ.ವಿ.ರಾಧಾ, ಗಿರಿಜಾ ಲೋಕೇಶ್, ತಾರಾ, ಶ್ರೀಶೈಲನ್, ಉಮೇಶ್, ಕುಣಿಗಲ್ ನಾಗಭೂಷಣ್
ಕ: ತೆಲುಗು ಚಿತ್ರದ ಕನ್ನಡ ರೂಪಾಂತರ
ಚಿ.ಕ: ರೇಲಂಗಿ ನರಸಿಂಹರಾವ್
ಮಾ: ಕುಣಿಗಲ್ ನಾಗಭೂಷಣ್
ಗೀ: ಆರ್.ಎನ್.ಜಯಗೋಪಾಲ್, ವಿ.ಮನೋಹರ್
ಗಾ: ಮನು, ರಾಘವೇಂದ್ರ ರಾಜಕುಮಾರ್, ಚಿತ್ರಾ, ಮಂಜುಳಾ, ಸೌಮ್ಯ, ಸಾಧುಕೋಕಿಲ
ಸಂ: ಶಶಿಕುಮಾರ್
ಛಾ: ನಾಗೇಂದ್ರ ಕುಮಾರ್
ಕಲೆ: ರಮೇಶ್ ಬಾಬು
ಸ: ಸಾಧು ಕೋಕಿಲ
ಧ್ವ: ಎಸ್.ಪಿ.ರಾಮನಾಥನ್, ಕೋದಂಡಪಾಣಿ
ನೃ: ತಾರಾ, ಪ್ರಸಾದ್
ಸಾ: ನಂಜುಂಡಿ ನಾಗರಾಜ್
ವ: ನಾಗರಾಜ್
ಪ್ರ: ಮೈಸೂರ್ ವೆಂಕಟೇಶ್
ಸ್ಥ: ಕಂಠೀರವ, ಚಾಮುಂಡೇಶ್ವರಿ
ಹಾ: ೧) 'ಮಿಂಚಿನಂಥ ಕಣ್ಣವನು...'. ೨) 'ಕಟ್ಟಿರುವೆ ಕಚ್ಚಿತೋ...', ೩) 'ಓ ಮಾಮ...', ೪) 'ಆವೋ ಪ್ಯಾರ್ ಕರೇ...', ೫) 'ಚಂದ್ರಲೇಖ ನೀ ಬಾರೆ...'
ಕ.ಸಾ: ಒಬ್ಬ ನಾಯಕ ಇಬ್ಬರು ನಾಯಕಿಯರ ನಡುವಿನ ತ್ರಿಕೋನ ಪ್ರೇಮ, ಸಂಘರ್ಷ ಇತ್ಯಾದಿ. ಕಳೆದು ಹೋದ ಸಂಬಂಧಗಳು ಬೆಳಕಿಗೆ ಬಂದಾಗ ದೂರವಾದವರು ಹತ್ತಿರವಾಗಿ ಒಂದಾಗುತ್ತಾರೆ.

೧೭೨೮. ವೀರಭದ್ರ

(೧೯೯೬ / ವರ್ಣ / ಸಾಮಾಜಿಕ)
ಲಾ: ಶಾಂತಾ ಪಿಕ್ಚರ್ಸ್
ಪ್ರೊ: ಎನ್.ರವಿಕುಮಾರ್
ನಿ: ಎನ್.ಆರ್. ನಂಜುಂಡೇಗೌಡ
ಸ.ನಿ: ಕಿಟ್ಟಿ ರಂಗಮಂಚ
ಅ: ದೇವರಾಜ್, ಅಂಜನಾ, ತಾರಾ, ಲೋಕನಾಥ್, ದೊಡ್ಡಣ್ಣ, ನಾಜರ್
ಕ/ಚಿ.ಕ/ಮಾ/ಗೀ: ಹಂಸಲೇಖ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ
ಸಂ: ಸುರೇಶ್ ಅರಸ್
ಛಾ: ಮಲ್ಲಿಕಾರ್ಜುನ
ಕಲೆ: ಸುಂದರ್
ಸ: ಹಂಸಲೇಖ
ಧ್ವ: ಪ್ರಸಾದ್
ನೃ: ಸಂಪತ್
ಸಾ: ಥ್ರಿಲ್ಲರ್ ಮಂಜು
ವ: ನಾಗರಾಜ್

ಪ್ರ: ಮೈಸೂರು ವೆಂಕಟೇಶ್
ಸ್ಟು: ಕಂಠೀರವ
ಕ.ಸಾ: ಹಳ್ಳಿಯಲ್ಲಿ ಒಬ್ಬ ಮುಖ್ಯಸ್ಥ. ಸರಕಾರದ, ಪೊಲೀಸರ ನೆರವಿಲ್ಲದೆಯೇ ಹಳ್ಳಿಯ ನ್ಯಾಯ ತೀರ್ಮಾನ ಇತ್ಯಾದಿಗಳನ್ನು ನಡೆಸಿಕೊಂಡು ಜನಪ್ರಿಯನಾದ ಒಬ್ಬ ವ್ಯಕ್ತಿಯ ಸುತ್ತ ಹೆಣೆದ ಚಿತ್ರಕಥೆ.

೧೭೨೯. ಹೆತ್ತವರು

(೧೯೯೬ / ವರ್ಣ / ಸಾಮಾಜಿಕ)
ಲಾ: ಶ್ರೀ ರಾಘವೇಂದ್ರ ಎಂಟರ್‌ಪ್ರೈಸಸ್
ಪ್ರೊ: ಪಿ.ದೇವರಾಜ್
ನಿ: ಎಸ್.ಮಹೇಂದರ್
ಸ.ನಿ: ಎಸ್. ಸಿದ್ಧಾರ್ಥನ್
ಅ: ಲಕ್ಷ್ಮಿ, ಕಲ್ಯಾಣ್ ಕುಮಾರ್, ಅಭಿಜಿತ್, ಶ್ವೇತಾ, ಸಾಯಿಕುಮಾರ್, ದೊಡ್ಡಣ್ಣ, ಟೆನ್ನಿಸ್ ಕೃಷ್ಣ, ರಾಜಾನಂದ್, ಆಶಾಲತಾ, ಶ್ರೀಶಾಂತಿ, ಪೌರ್ಣಮಿ, ಅಜಯ್ ಕುಮಾರ್
ಕ: ಅಜಯ್ ಕುಮಾರ್
ಚಿ.ಕ/ಮಾ: ಎಸ್.ಮಹೇಂದರ್
ಗೀ: ಹಂಸಲೇಖ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ, ಎಸ್.ಜಾನಕಿ
ಛಾ: ರಮೇಶ್ ಬಾಬು

ಕಲೆ: ಇಸ್ಮಾಯಿಲ್
ಸ: ಹಂಸಲೇಖ
ನೃ: ಸಂಪತ್ ಕುಮಾರ್
ಸಾ: ನಂಜುಂಡಿ ನಾಗರಾಜ್
ವ: ಸೋಮು
ಪ್ರ: ಗುರುಮೂರ್ತಿ
ಕ.ಸಾ: ಸ್ವಾರ್ಥಿ ಗಂಡು ಮಕ್ಕಳಿಂದ ತಂದೆ ತಾಯಿ ಅನುಭವಿಸುವ ಬವಣೆಯ ಕಥೆ. ಶಿವಪ್ಪ ಮತ್ತು ಗೌರಿ ಇಡೀ ಹಳ್ಳಿಯಲ್ಲೇ ಗೌರವಾನ್ವಿತ ದಂಪತಿಗಳೆನಿಸಿರುತ್ತಾರೆ. ಅವರಿಗೆ ಇಬ್ಬರು ಗಂಡು ಮಕ್ಕಳಾಗುತ್ತಾರೆ. ಜೊತೆಗೆ ದೇವಸ್ಥಾನದಲ್ಲಿ ಸಿಕ್ಕ ಅನಾಥ ಹೆಣ್ಣು ಮಗುವನ್ನು ದತ್ತು ತೆಗೆದುಕೊಳ್ಳುತ್ತಾರೆ. ಬೆಳೆದ ಮೇಲೆ ಸ್ವಾರ್ಥಿಗಳಾದ ಗಂಡು ಮಕ್ಕಳಿಬ್ಬರೂ ತಂದೆ - ತಾಯಿಯನ್ನೇ ಮನೆಯಿಂದ ಹೊರಗಟ್ಟುತ್ತಾರೆ. ಈ ದಂಪತಿಗಳು ಆತ್ಮಗೌರವ ಕಳೆದುಕೊಳ್ಳಬೇಕಾದಂಥ ಪರಿಸ್ಥಿತಿ ಬಂದದಕ್ಕೆ ನೊಂದುಕೊಳ್ಳುತ್ತಾರೆ. ಗಂಡು ಮಕ್ಕಳೇ ತಂದೆಯ ಸಾವಿಗೂ ಕಾರಣಕರ್ತರಾಗುತ್ತಾರೆ.

೧೭೩೦. ಗಾಜನೂರು ಗಂಡು

(೧೯೯೬ / ವರ್ಣ / ಸಾಮಾಜಿಕ)
ಲಾ: ಶ್ರೀ ಲಕ್ಷ್ಮಿ [illegible] ಪ್ರೊಡಕ್ಷನ್ಸ್
ಪ್ರೊ: ಜಿ.ಆರ್.ಕ[illegible]ರಾಜ

ನಿ: ಆನಂದ್ ಪಿ.ರಾಜು
ಸ.ನಿ: ಸೋಮರಾಜ್, ಪಿ.ಶಿವಶಂಕರ್
ಅ: ಶಿವರಾಜ್ ಕುಮಾರ್, ಜಯಂತಿ, ಲೋಹಿತಾಶ್ವ, ಆಶಾಲತಾ, ಟೆನ್ನಿಸ್ ಕೃಷ್ಣ, ಕೀರ್ತಿ, ಅವಿನಾಶ್, ಶನಿ ಮಹಾದೇವಪ್ಪ, ಥ್ರಿಲ್ಲರ್ ಮಂಜು, ಹೊನ್ನವಳ್ಳಿ ಕೃಷ್ಣ, ಅರವಿಂದ್, ಸದಾಶಿವ ಸಾಲಿಯಾನ್, ಕೃಷ್ಣೇಗೌಡ, ಶಿವಕುಮಾರ್
ಕ: ಕೆ.ಪಿ.ಭಗವಾನ್ ಶರ್ಮ
ಚಿ.ಕ: ಆನಂದ್ ಪಿ.ರಾಜು
ಮಾ: ರಿಚರ್ಡ್ ಲೂಯಿಸ್
ಗೀ: ದೊಡ್ಡರಂಗೇಗೌಡ, ಶ್ರೀರಂಗ, ಮನೋಹರ್, ರಮೇಶ್ ರಾವ್
ಗಾ: ರಾಜಕುಮಾರ್, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಸಾಧುಕೋಕಿಲ, ಮಂಗಳಾ, ಸುಜಾತಾದತ್, ಚಿತ್ರಾ
ಸಂ: ಆರ್. ಜನಾರ್ದನ್
ಛಾ: ಮಲ್ಲಿಕಾರ್ಜುನ
ಕಲೆ: ಆರ್.ಕೆ.ಸುಂದರಂ
ಸ: ಸಾಧುಕೋಕಿಲ
ದ್ವ: ಮಹೇಂದ್ರ, ಕೋದಂಡಪಾಣಿ
ನೃ: ತಾರಾ-ಪ್ರಸಾದ್
ಸಾ: ಥ್ರಿಲ್ಲರ್ ಮಂಜು
ವ: ಸತ್ಯಂ
ಪ್ರ: ವಿ.ಎಸ್.ಎಸ್.ಮಲ್ಲಿ
ಹಾ: ೧)'ಕಾಲೇಜ್ ಟೀಮಿನಲ್ಲಿ...', ೨)'ಮುತ್ತು ರತ್ನಗಳ...', ೩)'ಸಿಂಧೂರ ಭಾಗ್ಯವ ತಂದವ...', ೪)'ಯುಗ ಯುಗ ಸಾಗಿ ಹೋಗಿ...', ೫)'ಹೆಣ್ಣೇ ಲೈಫೇ ಮಿಸ್ಟರಿ...'
ಕ.ಸಾ: ಭ್ರಷ್ಟಶಕ್ತಿಯ ವಿರುದ್ಧ ಹೋರಾಟ ನಡೆಸಿ ಗೆಲ್ಲುವ ಧೈರ್ಯವಂತ ಹುಡುಗನ ಕಥೆ. ಕಾನೂನಿನ ಪದವೀಧರನಾದ ಶಿವು ಜೀವನದಲ್ಲಿ ನೆಲೆ ಕಂಡುಕೊಳ್ಳಲು ಪ್ರಯತ್ನಿಸುತ್ತಿರುತ್ತಾನೆ. ಒತ್ತಡಕ್ಕೆ ಸಿಕ್ಕಿಬಿದ್ದ ಅವನು ತನ್ನ ಸಹಪಾಠಿ ರೇಖಳ ವಿರುದ್ಧ ಸಾಕ್ಷಿ ಹೇಳಬೇಕಾಗುತ್ತದೆ. ತನ್ನ ಈ ತಪ್ಪನ್ನು ಅರ್ಥಮಾಡಿಕೊಳ್ಳುವ ಶಿವು ಆ ಸಂಚಿನ ಹಿಂದಿರುವ ಪಾತಕಿಗಳನ್ನು ಬಯಲಿಗೆಳೆಯುತ್ತಾನೆ.

೧೭೩೧. ಹಲೋ ಡ್ಯಾಡಿ

(೧೯೯೬ / ವರ್ಣ / ಸಾಮಾಜಿಕ)
ಲಾ: ಶ್ರೀ ಲಲಿತಾ ಕಮರ್ಷಿಯಲ್ಸ್
ಪ್ರೊ: ರಾಜು
ನಿ: ನಾಗಣ್ಣ
ಸ.ನಿ: ಸೀರ್ನಳ್ಳಿ ರಾಜು
ಅ: ವಿಷ್ಣುವರ್ಧನ್, ಸೋನಾಕ್ಷಿ, ಸುರಭಿ, ವಿಮಲಾ, ಸುಧೀರ್, ಜಗದೀಶ್, ಲೋಹಿತಾಶ್ವ, ಶನಿ ಮಹಾದೇವಪ್ಪ, ಮನದೀಪ್ ರಾಯ್, ಅರ್ಜುನ್, ವೈಶಾಲಿ ಕಾಸರವಳ್ಳಿ, ಮಾ.ನಿತಿನ್, ಮಂಜುಮಾಲಿನಿ
ಕ: ಶ್ರೀನಿವಾಸ ಬಾಬು
ಚಿ.ಕ: ನಾಗಣ್ಣ

ಮಾ: ರವಿ ಶ್ರೀವತ್ಸ, ಶ್ರೀನಿವಾಸಬಾಬು
ಗೀ: ಹಂಸಲೇಖ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ
ಸಂ: ಸುರೇಶ್ ಅರಸ್
ಛಾ: ಜೆ.ಜಿ.ಕೃಷ್ಣ
ಕಲೆ: ಜಾನ್ ದೇವರಾಜ್, ಮುದ್ದುಕೃಷ್ಣ
ಸ: ಹಂಸಲೇಖ
ದ್ವ: ಪ್ರಸಾದ್
ನೃ: ಉಡುಪಿ ಜಯರಾಂ, ದೇವಿ
ಸಾ: ಥ್ರಿಲ್ಲರ್ ಮಂಜು
ವ: ನಾಗರಾಜ್
ಪ್ರ: ಮೈಸೂರು ವೆಂಕಟೇಶ್
ಸ್ಟು: ಕಂಠೀರವ, ಪ್ರಸಾದ್
ಹಾ: ೧)'ನಾಳೆಗೆ ಈ ದಿನ ರಜಾ...'
ಸೆ: ರೀಲು ೧೫, 'ಯು' ಸರ್ಟಿಫಿಕೇಟ್, ಉದ್ದ ೩೮೯೪.೯೧
ಕ.ಸಾ: ಪ್ರಾಮಾಣಿಕ ಅಧಿಕಾರಿಯನ್ನು ಶೋಷಣೆಗೊಳಪಡಿಸುವ ಸುತ್ತ ಹೆಣೆಯಲಾದ ಕಥೆ. ನಗರದ ಕಮೀಷನರಾಗಿ ಪ್ರಕಾಶ್‌ನ ನೇಮಕ ಮಾಡಲಾಗುತ್ತದೆ. 'ಶುಭ್ರ ನಗರ'ದ ಬಗ್ಗೆಯೇ ಪ್ರಚಾರ ಆರಂಭಿಸುವ ಜೊತೆಗೆ ಅನಧಿಕೃತ ಕಟ್ಟಡಗಳ ನಿರ್ಮೂಲನಕ್ಕೆ ಆದೇಶಿಸುತ್ತಾನೆ. ಇದು ಅಕ್ರಮವಾಗಿ ಭೂಮಿಯನ್ನು ವಶಕ್ಕೆ ತೆಗೆದುಕೊಳ್ಳುತ್ತಿದ್ದ ಸುಲ್ತಾನ್ ಎದುರಾಗುವಂತೆ ಮಾಡುತ್ತದೆ. ಪ್ರಕಾಶನನ್ನು ರಾಜಕೀಯ ಶಕ್ತಿಯಿಂದ ಬಗ್ಗುಬಡಿಯುವಲ್ಲಿ ಸುಲ್ತಾನ್ ಸೋಲುತ್ತಾನೆ. ಕೊನೆಗೆ ಮಾಟಮಂತ್ರಕ್ಕೆ ಮೊರೆಹೋಗುವ ಅವನು ಪ್ರಕಾಶನ ಆತ್ಮ ತನ್ನ ಮಗನಲ್ಲಿ ಮತ್ತು ಅವನ ಮಗನ ಆತ್ಮ ಪ್ರಕಾಶನಲ್ಲಿ ಸೇರಿ ಹೋಗುವಂತೆ ಮಾಡುತ್ತಾನೆ. ಕೊನೆಯಲ್ಲಿ ಪ್ರಕಾಶ್ ತನ್ನ ಆತ್ಮ ತನ್ನ ದೇಹದಲ್ಲಿಯೇ ಸೇರಿಕೊಳ್ಳುವಂತೆ ಮಾಡುವಲ್ಲಿ ಯಶಸ್ವಿಯಾಗುತ್ತಾನೆ.

೧೭೩೨. ಸಿಪಾಯಿ

(೧೯೯೬ / ವರ್ಣ / ಸಾಮಾಜಿಕ)
ಲಾ: ಶ್ರೀ ಈಶ್ವರಿ ಪ್ರೊಡಕ್ಷನ್ಸ್ ಮನೋರಂಜನ್
ಪ್ರೊ/ನಿ: ವಿ.ರವಿಚಂದ್ರನ್
ಸ.ನಿ: ಸುಬ್ರಹ್ಮಣ್ಯ
ಅ: ರವಿಚಂದ್ರನ್, ಚಿರಂಜೀವಿ, ಸೌಂದರ್ಯ, ಮುಖ್ಯಮಂತ್ರಿ ಚಂದ್ರು, ಉಮಾಶ್ರೀ, ರಮೇಶ್ ಭಟ್, ಬಾಲರಾಜ್, ರಾಮಕೃಷ್ಣ, ಶ್ರೀನಿವಾಸ ಮೂರ್ತಿ, ಆಶಾಲತಾ, ಶ್ರೀನಾಥ್, ಶಿವರಾಂ, ಲೋಕನಾಥ್, ಲೋಹಿತಾಶ್ವ, ಕೀರ್ತನ, ವಿಜಯಲಕ್ಷ್ಮಿ, ಗಿರಿಜಾ ಲೋಕೇಶ್, ದೊಡ್ಡಣ್ಣ, ಬ್ಯಾಂಕ್ ಜನಾರ್ದನ್, ಸಂಕೇತ್ ಕಾಶಿ, ವಿನಯಾ ಪ್ರಸಾದ್, ತಾರಾ, ಗುರು ಬಚ್ಚನ್
ಕ/ಚಿ.ಕ: ವಿ.ರವಿಚಂದ್ರನ್
ಮಾ: ಬಿ.ಸುರೇಶ್
ಗೀ: ಹಂಸಲೇಖ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ, ಎಲ್. ಎನ್.ಶಾಸ್ತ್ರಿ, ಮನು, ಎಸ್.ಜಾನಕಿ, ಜೇಸುದಾಸ್
ಸಂ: ಕೆ.ಬಾಲು
ಛಾ: ಜಿ.ಎಸ್.ವಿ.ಸೀತಾರಾಮ್
ಕಲೆ: ನಜೀರ್, ಇಸ್ಮಾಯಿಲ್
ಸ: ಹಂಸಲೇಖ
ನೃ: ನಟರಾಜ(ರಾಜ ಸುಂದರನ್)
ಸಾ: ನಂಜುಂಡಿ ನಾಗರಾಜ್
ಹಾ: ೧) 'ಹೇ ರುಕ್ಕಮ್ಮ ...', ೨) 'ಬಂಗಾರದ ಬೊಂಬೆ.. ', ೩) 'ಮಾರಿಗ ಬೇಕು ಈ ಲೋಕ...', ೪) 'ಮೇಘರಾಜ...', ೫) '[illegible] ಕಿರಣ...', ೬) 'ಯಾರಲೇ ನಿನ್ನ ಮೆಚ್ಚಿದವರು.. ',

೭) 'ಕೂಕೂ ಕೋಳಿಯ...', ೮) 'ಚುಕ್ಕಿಗಳೇ...', ೯) 'ಓಡೋ ಚಂದಿರ...', ೧೦) 'ಕರಗೋ ಚಂದಿರ...', ೧೧) 'ಸ್ನೇಹಕ್ಕೆ ಸ್ನೇಹ...'
ವಿ: ೧೯೯೫-೯೬ರ ರಾಜ್ಯ ಪ್ರಶಸ್ತಿ : ಅತ್ಯುತ್ತಮ ಛಾಯಾಗ್ರಾಹಕ (ಮಹೇಂದರ್), ಅತ್ಯುತ್ತಮ ಸಂಕಲನಕಾರ (ಕೆ. ಬಾಬು), ಅತ್ಯುತ್ತಮ ಕಲಾ ನಿರ್ದೇಶಕ (ನಜೀರ್ ಇಸ್ಮಾಯಿಲ್)
ಕ.ಸಾ: ತನ್ನ ಗ್ರಾಮದ ಪಕ್ಕದ ಹಳ್ಳಿಯ ಹುಡುಗಿಯನ್ನು ಪ್ರೀತಿಸುವ ಸಿಪಾಯಿಯ ಪ್ರಣಯದ ಕಥೆ. ತಕ್ಷಣವೇ ಕೋಪಗೊಳ್ಳುವ ಸ್ವಭಾವದ ಸಿಪಾಯಿಯಾದ ಶಿವು, ಶಾಂತಿಯನ್ನು ಪ್ರೀತಿಸುತ್ತಿರುತ್ತಾನೆ. ಶಾಂತಿಯ ತಂದೆ ಜೂಜು ಕೋರನಾಗಿರುತ್ತಾನೆ. ಏನ್ನರ ಮಟ್ಟಿಗೆಂದರೆ ತನ್ನ ಮಗಳು ಶಾಂತಿಯನ್ನೇ ಪಣಕ್ಕಿಟ್ಟು ಸೋತು ಬಿಡುತ್ತಾನೆ. ಆಗ ಶಿವು ಗಳಿಯ ಆ ಸಮಯದಲ್ಲಿ ಬಂದು ಹೋರಾಟ ನಡೆಸಿ ಶಿವು ಮತ್ತು ಶಾಂತಿಯ ಪ್ರೀತಿಯನ್ನು ದುರಂತದಲ್ಲಿ ಕೊನೆಗೊಳ್ಳದಂತೆ ಉಳಿಸುತ್ತಾನೆ.

೧೨೩೩. ಗಳಿಗೆ

(೧೯೯೬ / ವರ್ಣ / ಸಾಮಾಜಿಕ)
ಲಾ: ಎಸ್.ಎಫ್.ಟಿ.ಸಿ ಟಿ.ಟಿ.ಕೋ ಆಪರೇಷನ್
ಪ್ರೊ.ನಿ: ಎಂ.ಎಸ್.ಸತ್ಯು
ಸ.ನಿ: ಸುಷ್ಮಾ ವೀರಪ್ಪ ಮೊಯಿಲಿ, ಸತೀಶ್ ಸಹಗಲ್
ಅ: ತಲಜಾ, ಅಮಿತ್ ರೆ, ದಾಂಥೋಪ್, ಸೇಂಗ್ ಪ್ಪಾ, ಜಿ.ಎಸ್.ಸದರ್ ಜೋಶಿ, ಮಂಜುಳಾರಾವ್, ಎಂ.ಪಿ.ವೆಂಕಟರಾವ್, ವ್ಯಾಂ ಅರೋರಾ, ಪೋಟಿನ ಪ್ಯಾಥರ್, ಕೀರ್ತಿ, ಆನಂದ್, ರಾಜೀವ್ ತಿವಾರಿ, ಜಗದೀಶ್ ಮಲ್ನಾಡ್, ಮಹೇಂದ್ರ ಗುಪ್ತಾಲ್
ಕ: ಎಂ.ಎಸ್.ಸತ್ಯು
ಚಿ.ಕ: ಎಂ.ಎಸ್.ಸತ್ಯು, ಸುಷ್ಮಾ ವೀರಪ್ಪ, ಶಮಾಜೈದಿ
ಮಾ: ಎಸ್.ರಾಮಸ್ವಾಮಿ
ಗೀ: ರಾಜರತ್ನ, ಅಮರ್ ಅಹ್ಮದ್, ಬುಲ್ಲೇಶ್
ಗಾ: ಅನಂತಸ್ವಾಮಿ, ಜಯಶ್ರೀ, ಮಂಜುಳಾ ಗುರುರಾಜ್, ಅನಂತು, ಹರಿಕೃಷ್ಣ
ಸಂ: ಸುಧಾಂಶು ಚಕ್ರವರ್ತಿ
ಛಾ: ಜಿ.ಎಸ್.ಭಾಸ್ಕರ್
ಕಲೆ: ಕೆ.ಎಸ್.ಮಂಜುನಾಥ್
ಸ: ಮೈಸೂರು ಅನಂತಸ್ವಾಮಿ, ರಾಜೀವ್ ತಾರಾನಾಥ್
ಧ್ವ: ಸತೀಶ್ ಸಾವಂತ್
ವ: ಜಯಂತಿ ಮರುಳಸಿದ್ದಪ್ಪ
ಪ್ರ: ಮಲ್ಲೇಶ್ ಹರ್ತಿ
ಹಾ: ೧) 'ರತ್ನನ ಪದ ...'
ವಿ: ತುಳು ಭಾಷೆಗಳನ್ನು ಬಳಸಿಕೊಂಡಿದ್ದಾರೆ.
ಕ.ಸಾ: ಅನಾಥ ಹುಡುಗಿ, ಪ್ರೀತಿಸಿದ ಹುಡುಗ ಪಂಜಾಬಿನ ಉಗ್ರಗಾಮಿ. ಆ ವಿಷಯ ತಿಳಿದಾಗ ಆಕೆ ಗರ್ಭಿಣಿ. ಪೊಲೀಸರಿಗೆ ಶರಣಾಗುವುದು ಉಚಿತ ಎಂದು ಆತನಿಗೆ ತಿಳಿ ಹೇಳುತ್ತಾಳೆ. ಯುವ ಜನಾಂಗ ಬದಲಾಗುತ್ತಿರುವ ವೇಗ, ವಿಭಜನೆಯ ಮನಸ್ಥಿತಿ, ಹಿಂಸೆ, ಎಲ್ಲದರ ನಡುವೆ ನಿಲ್ಲುವುದು ಒಂದೇ ಮಾನವತೆ, ಮಾನವ ಸಂಬಂಧ, ಪ್ರೀತಿ ಎನ್ನುತ್ತದೆ.

೧೨೩೪. ಸೌಭಾಗ್ಯದೇವತೆ

(೧೯೯೬ / ವರ್ಣ / ಸಾಮಾಜಿಕ)
ಲಾ: ಅಜಂತಾ ಎಸಿ ಕಂಬೈನ್ಸ್
ಪ್ರೊ: ವಿ. ರಾಧಾ ಕೃಷ್ಣರಾಜು
ನಿ: ಸಾಯಿಪ್ರಕಾಶ್
ಸ.ನಿ: ಲಿಂಗರಾಜ್ ಕಗ್ಗಲ್
ಅ: ಶ್ರೀಧರ್, ಪ್ರೀತಿ, ಸಾಯಿಕುಮಾರ್, ರಾಜೇಶ್, ವಿನಯಾ ಪ್ರಸಾದ್, ಜಿ.ಜಗದೀಶ್, ಮುಖ್ಯಮಂತ್ರಿ ಚಂದ್ರು, ಕೀರ್ತಿ, ಸತ್ಯಭಾಮ, ವಡಾಲ್ ಶ್ರೀನಿವಾಸ, ಶಾಂತಮ್ಮ, ಟೆನ್ನಿಸ್ ಕೃಷ್ಣ, ನಾಗೇಶ್ ಕಶ್ಯಪ್, ಜ್ಯೂನಿಯರ್ ನರಸಿಂಹರಾಜು, ಮಂಡ್ಯ ರಮೇಶ್, ಮಾ.ಆನಂದ್, ಬೇಬಿ ಮಹಾಲಕ್ಷ್ಮಿ
ಕ: ವಿಮಲಾ ಗಣೇಶ್
ಚಿ.ಕ: ಸಾಯಿಪ್ರಕಾಶ್
ಮಾ: ಗೋಟೂರಿ
ಗೀ: ಆರ್.ಎನ್.ಜಯಗೋಪಾಲ್, ದೊಡ್ಡರಂಗೇಗೌಡ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ರಾಜೇಶ್, ಚಿತ್ರಾ
ಸಂ: ಕೆ.ನರಸಯ್ಯ
ಛಾ: ಜಾನಿಲಾಲ್
ಕಲೆ: ಬಾಬು ಖಾನ್
ಸ: ಶ್ರೀಲೇಖ
ಧ್ವ: ಸಂಕೇತ್
ನೃ: ಶಿವಶಂಕರ್
ಸಾ: ಅಂಜೂರ್ ಬಾಬು
ವ: ಜಯಚಂದ್ರ
ಪ್ರ: ನಾಗರಾಜ್
ಸ್ಟು: ಕಂಠೀರವ
ಕ.ಸಾ: ತನ್ನವರ ಒಳಿತನ್ನು ಸಾಧಿಸಲು ಹಾಗೂ ತನ್ನ ಬಾಳಿನ ಜೊತೆ ಆಟವಾಡಲು ಪ್ರಯತ್ನಿಸಿದವನಿಗೆ ಬುದ್ಧಿ ಕಲಿಸಲು, ತನ್ನ ತಂದೆಯ ವಯಸ್ಸಿನವನನ್ನು ಮದುವೆಯಾದ ಯುವತಿ, ಆ ಮನೆಯಲ್ಲಿ ತುಂಬಿ ತುಳುಕುತ್ತಿದ್ದ ಅವ್ಯವಸ್ಥೆಯನ್ನು ಸರಿಪಡಿಸಿ, ತನ್ನ ಬದುಕಿನಲ್ಲಿ ಚೆಲ್ಲಾಟವಾಡಲೆತ್ನಿಸಿದ ಖಳನಿಗೆ ಬುದ್ಧಿ ಕಲಿಸಿ ತಾನು ಹೊಕ್ಕ ಮನೆಯ ಸೌಭಾಗ್ಯ ದೇವತೆಯಾಗುವುದೇ ಚಿತ್ರದ ಕಥಾವಸ್ತು.

೧೨೩೫. ಸೂರ್ಯಪುತ್ರ

(೧೯೯೬ / ವರ್ಣ / ಪೌರಾಣಿಕ)
ಲಾ: ಎಸ್ ಅಂಡ್ ಎಸ್ ಸಿನಿಮಾ
ಪ್ರೊ: ಶ್ರೀಮತಿ ಸುಧಾ ಶ್ರೀನಿವಾಸನ್
ನಿ: ಗುರುಪ್ರಿಯಾ
ಸ.ನಿ: ಎಂ.ಆರ್ ಕೆ.ವಿಶ್ವನಾಥ್
ಅ: ರಾಜೇಶ್, ಗುಲ್ಷನ್‌ಕುಮಾರ್, ರಾಜ್‌ಕುಮಾರ್, ಸಂಗೀತಾ, ಸಂಜಯ್, ರಮೇಶ್ ಭಟ್, ಗಾಯತ್ರಿ ಪ್ರಭಾಕರ್, ತಾರಾ, ಮಾಧುರಿ, ಸೀತಾರಾಂ, ಶನಿ ಮಹಾದೇವಪ್ಪ
ಕ/ಚಿ.ಕ: ಗುರುಪ್ರಿಯ
ಮಾ: ಎಂ.ನರೇಂದ್ರಬಾಬು, ಸು.ರುದ್ರಮೂರ್ತಿಶಾಸ್ತ್ರಿ
ಗೀ: ವಿಜಯನಾರಸಿಂಹ, ಗೀತಪ್ರಿಯ, ನರೇಂದ್ರಬಾಬು
ಗಾ: ರಾಜೇಶ, ಚಿತ್ರಾ, ಮಂಜುಳಾ ಗುರುರಾಜ್, ಸಂಗೀತಾ ಕಟ್ಟಿ
ಸಂ: ಶಿವು ಕಂಪ್ಲು
ಛಾ: ಬಿ.ಎನ್.ಹರಿದಾಸ್, ಕೆ.ವಾಸುದೇವ್
ಕಲೆ: ವೆಂಕಟರಾಮ್
ಸ: ರಾಜನ್ ನಾಗೇಂದ್ರ

ಧ್ವ: ಸಂಕೇತ್
ನೃ: ಹರಿಣಿ ಮದನ್
ವ: ಪ್ರಭಾತ್
ಪ್ರ: ವೆಂಕಟಸ್ವಾಮಿ
ಸ್ಟು: ಚಾಮುಂಡೇಶ್ವರಿ, ಕಂಠೀರವ
ಹಾ: ೧) 'ಜೈ ಶನಿದೇವ...', ೨) 'ಶರಣು ಶನೇಶ್ವರ...', ೩) 'ಇದು ಶನೇಶ್ವರನ ಕಥೆಯಮ್ಮ...', ೪) 'ನೀ ಕಣ್ಣಲ್ಲೇ ಕರದೆ...', ೫) 'ಕ್ಷಮಿಸು ಸ್ವಾಮಿಯೇ...', ೬) 'ಶರಣು ಶನೇಶ್ವರ...'
ಕ.ಸಾ: ಸೂರ್ಯ ಪುತ್ರನಾದ ಶನಿದೇವರ ಕಥೆ. ಶನಿಯ ಆಗ್ರಹದಿಂದ ಒದಗುವ ಕಷ್ಟ-ನಷ್ಟಗಳ ಪರಿಚಯ, ಶನಿ ಮಹಾತ್ಮೆ ಒಲಿವಿನಿಂದುಂಟಾಗುವ ಒಳಿತುಗಳ ಕಥೆ.

೧೨೩೬. ಮೌನರಾಗ

(೧೯೯೬ / ವರ್ಣ / ಸಾಮಾಜಿಕ)
ಲಾ: ಶ್ರೀ ಸಂದೇಶ್ ಕಂಬೈನ್ಸ್
ಪ್ರೊ: ಸಂದೇಶ್ ನಾಗರಾಜ್
ನಿ: ಎಸ್.ಮಹೇಂದರ್
ಅ: ಅಂಬರೀಷ್, ವಿನಯಾ ಪ್ರಸಾದ್, ಶ್ರೀಶಾಂತಿ, ತಾರಾ, ಬಿ.ವಿ.ರಾಧಾ, ವಜ್ರಮುನಿ, ದೊಡ್ಡಣ್ಣ, ಶಾಂತಮ್ಮ, ಬ್ಯಾಂಕ್ ಜನಾರ್ದನ್, ರಮೇಶ್ ಭಟ್, ರಾಜಾನಂದ್, ಬಾಲರಾಜ್, ಕುಕೀರ್ತಿ, ಬೇಬಿ ಸಿಂಧೂ
ಕ: ವಂಶಿ (ಅನುವಾದ)
ಚಿ.ಕ/ಮಾ: ಹೆಚ್.ವಿ.ಸುಬ್ಬರಾವ್
ಗೀ: ಹಂಸಲೇಖ
ಗಾ: ರಾಜಕುಮಾರ್, ಮನು, ಚಿತ್ರಾ

ಸಂ: ಸೌಂದರರಾಜ್
ಛಾ: ಕೃಷ್ಣ ಕುಮಾರ್
ಕಲೆ: ಇಸ್ಮಾಯಿಲ್
ಸ: ಹಂಸಲೇಖ
ಧ್ವ: ಕೋದಂಡಪಾಣಿ
ನೃ: ಸಂಪತ್
ವ: ವೀರರಾಜು, ಎನ್.ಬೃಂದಾ
ವಿ: ೧೯೯೫-೯೬ರ ರಾಜ್ಯಪ್ರಶಸ್ತಿ : ಅತ್ಯುತ್ತಮ ಬಾಲನಟಿ (ಬೇಬಿ ಸಿಂಧು)
ಕ.ಸಾ: ತಾನೇ ನಡೆಸುವ ಸಂಶೋಧನೆಗೆ ಅಪರಾಧಿಯಾಗುವ ಪ್ರೊಫೆಸರ್ ಕಥೆ. ವಂಶಾವಳಿ ವಿಷಯಕ್ಕೆ ಸಂಬಂಧಿಸಿದಂತೆ ವಿಶ್ವನಾಥ್ ಪ್ರೊಫೆಸರ್ ಆಗಿರುತ್ತಾನೆ. ತಾಯಿಯ ಒತ್ತಾಯಕ್ಕೆ ಕಟ್ಟು ಬೀಳುವ ಅವನಲ್ಲಿ ಇಷ್ಟವಿಲ್ಲದಿದ್ದರೂ ಸಂಬಂಧಿಕಳನ್ನು ಮದುವೆಯಾಗಬೇಕಾಗುತ್ತದೆ. ಇದನ್ನೇ ಸರಿ ಎಂದು ಹೇಳುವ ಅವನು ಪ್ರೀತಿಸುತ್ತಿದ್ದ ಕಲಿನ ದೂರವಾಗುತ್ತಾಳೆ. ನಂತರ ಅವನಿಗೆ ಕಣ್ಣಿಲ್ಲದ ಹೆಣ್ಣುಮಗು ಹುಟ್ಟುತ್ತದೆ. ಮಕ್ಕಳನ್ನು ಕೊಂದವನೆಂದು ಆರೋಪದ ಮೇಲೆ ವಿಶ್ವನಾಥ್‌ಗೆ ಮರಣದಂಡನೆ ವಿಧಿಸಲಾಗುತ್ತದೆ. ಬದುಕಿನ ಬಗ್ಗೆ ತನ್ನಲ್ಲಿದ್ದ ಆಸಕ್ತಿಯನ್ನು

ಕಳೆದುಕೊಳ್ಳುವ ವಿಶ್ವನಾಥ್ ಜೈಲಿನಲ್ಲಿ ಕೊನೆಯುಸಿರು ಎಳೆಯುತ್ತಾನೆ.

೧೭೩೭. ಗೆಲುವಿನ ಸರದಾರ

(೧೯೯೬ / ವರ್ಣ / ಸಾಮಾಜಿಕ)
ಲಾ: ಪೂರ್ಣಿಮ ಎಂಟರ್‌ಪ್ರೈಸಸ್
ಪ್ರೊ: ಪಾರ್ವತಮ್ಮ ರಾಜಕುಮಾರ್
ನಿ: ರೇಲಂಗಿ ನರಸಿಂಹರಾವ್
ಸ.ನಿ: ಕೆ.ಎಸ್.ವಿಶ್ವನಾಥ್, ರಘುನಂದನ್, ನಾಗಪ್ಪ ಮಾರಡಗಿ
ಅ: ರಾಘವೇಂದ್ರ ರಾಜಕುಮಾರ್, ಸ್ರುತಿ, ಶ್ರೀನಾಥ್, ಜಯಮಾಲಾ, ಶಿವರಾಂ, ವಾಣಿಶ್ರೀ, ಬ್ಯಾಂಕ್ ಜನಾರ್ದನ್, ಟಿ.ಪಿ. ಮಹಾದೇವಪ್ಪ, ಅಶ್ವತ್ಥ ನಾರಾಯಣ, ಉಮೇಶ್
ಕ/ಚಿ.ಕ: ರೇಲಂಗಿ ನರಸಿಂಹರಾವ್
ಮಾ: ಕುಣಿಗಲ್ ನಾಗಭೂಷಣ್
ಗೀ: ಹಂಸಲೇಖ
ಗಾ: ರಾಘವೇಂದ್ರ ರಾಜಕುಮಾರ್, ಮನು, ರಾಜಕುಮಾರ್, ಮಂಜುಳಾ



ಸಂ: ಶಶಿಕುಮಾರ್
ಛಾ: ನಾಗೇಂದ್ರ ಕುಮಾರ್
ಸ: ಹಂಸಲೇಖ
ದೃ: ಮಹೇಂದ್ರನ್, ಕೋದಂಡಪಾಣಿ
ನೃ: ಪ್ರಸಾದ್
ಸಾ: ನಂಜುಂಡಿ ನಾಗರಾಜ್
ವ: ನಾಗರಾಜ್
ಪ್ರ: ವಿಶ್ವನಾಥ್, ಸಿ.ವಿ.ದಿನೇಶ್, ರಾಮು, ಸುಧಾಕರ್
ಹಾ: ೧) 'ಗೆಲುವಿನ ಸರದಾರ ನಾನೇ...'
ಕ.ಸಾ: ಪ್ರತಿಯೊಂದಕ್ಕೂ ಬೆಟ್ಸ್ ಕಟ್ಟಿ ಗೆದ್ದು ಹಣ ಗಳಿಸುವ ಯುವಕನ ಕುರಿತ ಹಾಸ್ಯಭರಿತ ಕಥೆ. ಇದೇ ರೀತಿ ಅವನನ್ನೇ ಬೆಟ್ಸ್‌ನಲ್ಲಿ ಸೋಲಿಸುವ ಹುಡುಗಿಯೊಬ್ಬಳನ್ನು ಅವನು ಭೇಟಿಯಾಗುತ್ತಾನೆ. ಇಬ್ಬರೂ ಪ್ರೀತಿಯಲ್ಲಿ ಸಿಲುಕುತ್ತಾರೆ. ಅವರ ಮದುವೆಯಾಗಲು ದೊಡ್ಡ ಹೋರಾಟವನ್ನೇ ನಡೆಸಬೇಕಾಗುತ್ತದೆ.

೧೭೩೮. ಕರ್ನಾಟಕ ಸುಪುತ್ರ

(೧೯೯೬ / ವರ್ಣ / ಸಾಮಾಜಿಕ)
ಲಾ: ಶ್ರೀ ವೈಷ್ಣೋದೇವಿ ಪ್ರೊಡಕ್ಷನ್ಸ್
ಪ್ರೊ/ನಿ: ವಿಜಯ್
ಸ.ನಿ: ಸೋಮರಾಜ್
ಅ: ವಿಷ್ಣುವರ್ಧನ್, ರೀತುಪರ್ಣ, ರಾಜೇಶ್, ವಜ್ರಮುನಿ, ಉಷಾದೇವಿ, ರವಿಕಿರಣ್, ಎ.ಆರ್.ಸಿಂಹ, ರಾಜಾನಂದ್, ಮಹೇಶ್ ಕುಮಾರ್, ಶಿವರಾಂ, ವಸಂತ್ ಕುಣಿಗಲ್, ಸಿಲ್ಕ್ ಸ್ಮಿತಾ, ರೇಖಾದಾಸ್, ಡಿಂಗ್ರಿ ನಾಗರಾಜ್, ಚೇತನ್ ರಾಮರಾವ್, ಮಾಸ್ಟರ್ ಆನಂದ್, ರಾಮ್ ಲಕ್ಷ್ಮಣ್, ಶಂಕರ್ ಭಟ್, ಕೀರ್ತಿ
ಕ/ಚಿ.ಕ: ವಿಜಯ್



ಮಾ: ರವಿ ಶ್ರೀವತ್ಸ
ಗೀ: ದೊಡ್ಡರಂಗೇಗೌಡ, ಗೀತಪ್ರಿಯ, ಶ್ರೀರಂಗ, ವಿ.ಮನೋಹರ್, ಎಸ್.ನಾರಾಯಣ್.
ಗಾ: ರಾಜಕುಮಾರ್, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಂ.ಎಂ.ಕೀರವಾಣಿ, ವಿಷ್ಣುವರ್ಧನ್, ಚಿತ್ರಾ, ಮಾಲ್ಗುಡಿ ಶುಭ
ಸಂ: ಕೆ.ನರಸಯ್ಯ
ಛಾ: ಎಸ್.ರಾಜು
ಕಲೆ: ವೇಣುಗೋಪಾಲ್
ಸ: ಎಂ.ಎಂ.ಕೀರವಾಣಿ
ದೃ: ಮಹೇಂದ್ರ, ಕೋದಂಡಪಾಣಿ
ನೃ: ಉಡುಪಿ ಜಯರಾಂ ದೇವಿ
ಸಾ: ನಂಜುಂಡಿ ನಾಗರಾಜ್
ವ: ಸತ್ಯಂ, ರಾಮನಾಥ್
ಪ್ರ: ವೆಂಕಟೇಶ್, ಜಿ. ಎಸ್.ವಾಸು
ಸ್ಟು: ಚಾಮುಂಡೇಶ್ವರಿ
ಹಾ: ೧) 'ಮದುವೆ ಎಂಬ ಬಾಳಬಂಧ...', ೨) 'ಹೂಬನದ ಸಿಹಿಜೇನು...', ೩) 'ನಗುತ ನೋವನು ಮರಸುತ...', ೪) 'ಉದಯವಾಯಿತು ಪ್ರೇಮಕವನ...', ೫) 'ಆ ವಿಧಿ ತಂದ ಸಂಬಂಧ...', ೬) 'ಪಂಚರಂಗೀ ಪಂಚರಂಗೀ...', ೭) 'ಕನ್ನಡದ ಸುಪುತ್ರದ ಧೀರ ...', ೮) 'ಕನ್ನಡವ ಮರೆಯದಿರು ....'
ಕ.ಸಾ: ಯುವಕನೊಬ್ಬನ ತ್ಯಾಗದ ಸುತ್ತ ಹೆಣೆಯಲಾದ ಕಥೆ. ಹಾಳಾಗುತ್ತಿದ್ದ ತನ್ನ ತಂಗಿಯ ಸಂಸಾರ ಉಳಿಸುವ ವಿಷ್ಣುಪ್ರತಾಪ್ ಆತ್ಮಹತ್ಯೆ ಮಾಡಿಕೊಳ್ಳಲು ಯತ್ನಿಸುವ ಶಾಂತಿಯ ಮದುವೆ ಮಾಡುತ್ತಾನೆ. ಇದು ಅವನ ಮತ್ತು ಅವನು ಪ್ರೀತಿಸುತ್ತಿರುವ ಹುಡುಗಿ ಸೋನಳ ನಡುವೆ ತಪ್ಪುತಿಳುವಳಿಕೆಗ ಕಾರಣವಾಗುತ್ತದೆ. ತನ್ನ ಪ್ರಾಣವನ್ನೇ ಪಣವಾಗಿಟ್ಟು ಮುಖ್ಯಮಂತ್ರಿಗಳ ಜೀವವನ್ನು ರಕ್ಷಿಸುವ ವಿಷ್ಣುಪ್ರತಾಪ್‌ಗೆ ಶೌರ್ಯ ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆ.

೧೭೩೯. ಸತ್ಯ-ಸಂಘರ್ಷ

(೧೯೯೬ / ವರ್ಣ / ಸಾಮಾಜಿಕ)
ಲಾ: ಶಿವಮೊಗ್ಗ ಸಿನಿ ಕ್ರಿಯೇಷನ್ಸ್
ನಿ: ಉ.ಮಾ.ಶಿವರಾಜು
ಅ: ವಿನಯಾ ಪ್ರಸಾದ್, ವಾಸುದೇವರಾವ್, ಸತ್ಯಜಿತ್
(ಹೆಚ್ಚಿನ ವಿವರ ಲಭ್ಯವಿಲ್ಲ.)

೧೭೪೦. ಸರ್ಕಲ್ ಇನ್ಸ್‌ಪೆಕ್ಟರ್

(೧೯೯೬ / ವರ್ಣ / ಸಾಮಾಜಿಕ)
ಲಾ: ರಾಮು ಎಂಟರ್‌ಪ್ರೈಸಸ್
ಪ್ರೊ: ರಾಮು
ನಿ: ಎ. ಮೋಹನ್ ಗಾಂಧಿ
ಸ.ನಿ: ಎಂ.ಎಸ್.ರಮೇಶ್
ಅ: ದೇವರಾಜ್, ಮಾಲಾಶ್ರೀ, ಉಮಾಶ್ರೀ, ಪದ್ಮಾವಾಸಂತಿ, ಆಶಾಲತಾ, ವಜ್ರಮುನಿ, ಸಾಯಿಕುಮಾರ್, ಸುರೇಶ್ ಹೆಬ್ಳೀಕರ್, ದೊಡ್ಡಣ್ಣ, ಲೋಕನಾಥ್, ರಘುವರನ್, ಪುಂಡಲೀಕಾಚಾರ್ಯ, ಬಾಬು ಮೋಹನ್, ಪೃಥ್ವಿರಾಜ್, ಮೋಹನ್ ರಾಜ್, ರ‍್ಯಾಂಬೋ ರಾಕೀ
ಕ: ಎಂ.ಎಸ್.ರಮೇಶ್
ಚಿ.ಕ: ಎ.ಮೋಹನ್ ಗಾಂಧಿ, ಎಲ್.ರಘುನಾಥ ರಾವ್
ಮಾ: ಎಂ.ಎಸ್.ರಮೇಶ್
ಗೀ: ಹಂಸಲೇಖ
ಗಾ: ರಾಜಕುಮಾರ್, ಎಸ್.ಪಿ.ಬಾಲುಸುಬ್ರಹ್ಮಣ್ಯಂ, ಮನು, ನಾಸ್ತಿ, ಲತಾ ಹಂಸಲೇಖ, ಮಾಲ್ಗುಡಿ ಶುಭ, ಮಂಜುಳಾ ಗುರುರಾಜ್
ಸಂ: ಆರ್.ಜನಾರ್ದನ್
ಛಾ: ಪ್ರಸಾದ್ ಬಾಬು
ಕಲೆ: ನಂಜುಂಡಸ್ವಾಮಿ
ಸ: ಹಂಸಲೇಖ
ದೃ: ಮಹೇಂದರ್, ಕೋದಂಡಪಾಣಿ
ನೃ: ಮೂಗೂರು ಬಸವರಾಜ್, ಶಿವಸುಬ್ರಹ್ಮಣ್ಯಂ, ರಘುರಾಮ್
ಸಾ: ಥ್ರಿಲ್ಲರ್ ಮಂಜು
ವ: ನಾಗರಾಜ್, ಸ್ಪೆಷಲ್ ಎಫೆಕ್ಟ್: ಪ್ರಕಾಶ್
ಪ್ರ: ಮಲ್ಲಿ
ಸ್ಟು: ಕಂಠೀರವ
ಹಾ: ೧) 'ಊರ್‌ಮಿಳ ಊರ್‌ಮಿಳಾ ...', ೨) 'ಹೆಣ್ಣಿನ ಸವಿ ಮಾತು...', ೩) 'ಪುಟ್ಟನರಸ ಪುಟ್ಟನರಸ...', ೪) 'ಮಂಗೋಜ ಬಾ...', ೫) 'ಹೇ ಯೋಧ...'
ಕ.ಸಾ: ರಾಜಕೀಯ ವ್ಯಕ್ತಿಗಳಿಗೆ ಮಣಿಯದೆ ದಕ್ಷವಾಗಿ ತನ್ನ ಕರ್ತವ್ಯ ನಿರ್ವಹಿಸುವ ಪೊಲೀಸ್ ಅಧಿಕಾರಿಗಳ ಕಥೆ. ನಿಜ ಜೀವನದಲ್ಲಿ ಘಟಿಸಿರುವ ಕೆಲ ಘಟನೆಗಳನ್ನೇ ಆಧರಿಸಿ ಚಿತ್ರಿಸಲಾಗಿದೆ. ಶೌರ್ಯಕ್ಕಾಗಿಯೇ ಹೆಸರಾದ ನಾಯಕ ಪೊಲೀಸ್ ಅಧಿಕಾರಿಯಾಗಿದ್ದ ಹೆಂಡತಿಯನ್ನೇ ಕಳೆದುಕೊಳ್ಳುತ್ತಾನೆ. ಇದಕ್ಕೆ ಪ್ರಭಾವಯುತ ರಾಜಕಾರಣಿಗಳು ಕಾರಣರಾಗಿರುತ್ತಾರೆ. ರಾಜ್ಯದ ಮುಖ್ಯಮಂತ್ರಿಗಳನ್ನೇ ಮುಗಿಸುವ ಸಂಚು ನಡೆದು ಕಾರ್ಯಗತಗೊಳಿಸಬೇಕೆನ್ನುವಾಗ ತನ್ನ ಪ್ರಾಣವನ್ನು ಪಣಕ್ಕೊಡ್ಡಿ ನಾಯಕ, ಮುಖ್ಯಮಂತ್ರಿಗಳನ್ನು ಉಳಿಸುತ್ತಾನೆ.

೧೭೪೧. ಮಾನಸ ವೀಣೆ

(೧೯೯೬ / ವರ್ಣ / ಸಾಮಾಜಿಕ)
ಲಾ: ಕೈಲಾಸ್ ಮೂವೀಸ್
ಪ್ರೊ: ಪಿ.ರಾಮಮೂರ್ತಿ
ನಿ: ಗೀತಪ್ರಿಯ
ಸ.ನಿ: ಕುಮಾರ್
ಅ: ಶ್ರೀಧರ್, ಶ್ರೀನಾಥ್, ಸರಿತಾ, ಎನ್.ಎಸ್.ರಾವ್, ಸದಾಶಿವ ಬ್ರಹ್ಮಾವರ್, ಲೋಕನಾಥ್, ಕುಮಾರ್, ತ್ಯಾಗರಾಜ ಅರಸ್, ಸಾಯಿ, ದಯಾನಂದ್, ಶಿವಾನಂದ್ ಸುರತ್ಕಲ್, ಪೃಥ್ವಿಸಾಗರ್, ಹಾಸನ್ ರಘು, ಸಂತೋಷ್ ರಾವಳ್ಳಿ, ಸೋಮಶೇಖರ್, ಕವಿಸೀಧರನ್, ಬಳ್ಳಾರಿ ರೇಣುಕಾ, ರತ್ನಮಾಲಾ, ಕೆ.ಎಸ್.ಭಾರತಿ, ಶಾರದ, ಸಿತಾರಾ



ಕ: ಬಿ.ಎಸ್.ಹರಿದಾಸ್
ಚಿ.ಕ/ಮಾ: ಗೀತಪ್ರಿಯಾ
ಗೀ: ಗೀತಪ್ರಿಯ, ರಾಮಮೂರ್ತಿ
ಗಾ: ಕೆ.ಜೆ.ಜೇಸುದಾಸ್, ವಾಣಿ ಜಯರಾಂ, ಬೆಂಗಳೂರು ಲತಾ, ಸುರೇಂದ್ರ, ರಾಜಕುಮಾರ್ ಭಾರತಿ
ಸಂ: ಉಮಾಶಂಕರ್ ಬಾಬು
ಛಾ: ಬಿ.ಎಸ್.ಹರಿದಾಸ್
ಸ: ಎಂ.ರಂಗರಾವ್
ಧ್ವ: ಸಂಕೇತ್
ನೃ: ಪಿ.ಪಿ.ಶೇಷು
ಸಾ: ಹಾಸನ್ ರಘು, ಮುದು ಕೃಷ್ಣ
ವ: ಪರಮಶಿವ, ಸೂರಿ
ಪ್ರ: ಕೆ.ಎಂ.ಕೃಷ್ಣ
ಸ್ಟು: ಕಂಠೀರವ
ಹಾ: ೧) 'ವೀಣೆ.. ನನ್ನ ಮಾನಸ ವೀಣೆ ...', ೨) 'ತಾ ಹುಟ್ಟಿದ ಕಣ್ಣಿನಲೀ ...', ೩) 'ಈ ಗೆಲುವೇ ನಿನಗೆಂದಿಗೂ ...', ೪) 'ನಾ ನಗುತಿರುವೆ ...'
ಕ.ಸಾ: ತ್ಯಾಗದ ಹಿನ್ನೆಲೆಯಲ್ಲಿ ಹೆಣೆಯಲಾದ ಒಂದು ಪ್ರೇಮ ತ್ರಿಕೋನ ಕಥೆ. ವಿದ್ಯಾವಂತ ಯುವಕ ಹಳ್ಳಿಯ ಮುಗ್ಧೆಯೊಬ್ಬಳನ್ನು ಪ್ರೀತಿಸುತ್ತಾನೆ. ಇಬ್ಬರೂ ಪರಸ್ಪರ ಅನುರಕ್ತರಾಗಿದ್ದಾಗ ಆ ಯುವಕ ವಿದೇಶಕ್ಕೆ ತೆರಳಬೇಕಾಗುತ್ತದೆ. ಅಪಘಾತವೊಂದರ ಕಾರಣದಿಂದಾಗಿ ಆ ಮುಗ್ಧೆ ತನ್ನ ನೆನಪಿನ ಶಕ್ತಿಯನ್ನು ಕಳೆದುಕೊಳ್ಳುತ್ತಾಳೆ. ಆವಳಿಗೆ ಚಿಕಿತ್ಸೆ ಶುಶ್ರೂಷೆ ಒದಗಿಸಿದ ವೈದ್ಯ ಆ ಮುಗ್ಧೆಯಲ್ಲಿ ಅನುರಕ್ತನಾಗುತ್ತಾನೆ. ವಿದೇಶದಿಂದ ಹಿಂದಿರುಗಿದ ಯುವಕ ತನ್ನ ಪ್ರಿಯತಮೆಯನ್ನು ಇನ್ನೊಬ್ಬ ಪ್ರೀತಿಸುತ್ತಿರುವುದನ್ನು ಕಂಡು ತಾನು ತನ್ನ ಪ್ರೇಮವನ್ನು ತ್ಯಾಗ ಮಾಡುತ್ತಾನೆ. ವೈದ್ಯನ ಚಿಕಿತ್ಸೆ ಫಲಿಸಿ ಆ ಮುಗ್ಧೆ ತನ್ನ ಕಳೆದುಹೋದ ನೆನಪುಗಳನ್ನು ಮರಳಿ ಪಡೆದಾಗ ತನ್ನ ಪ್ರಿಯಕರನ ಬಗ್ಗೆ ಉದ್ವಿಗ್ನಳಾಗುತ್ತಾಳೆ. ಇವನ್ನರಿತ ವೈದ್ಯ ಒಲಿದ ಹೃದಯಗಳು ಒಂದುಗೂಡಲು ಅನುವು ಮಾಡಿಕೊಡುತ್ತಾನೆ.

೧೭೪೨. ಪ್ರೇಮ ಸೇತುವೆ

(೧೯೯೬ / ವರ್ಣ / ಸಾಮಾಜಿಕ)
ಲಾ: ಎಂ.ಆರ್.ಪಿಕ್ಚರ್ಸ್
ಪ್ರೊ: ಎಂ.ಮಾರುತಿ, ನಾರಾಯಣ ಮೂರ್ತಿ
ನಿ: ಟಿ.ಪಿ.ಪಂಚಾಕ್ಷರಿ
ಅ: ಬ್ಯಾಂಕ್ ಜನಾರ್ದನ್, ರಮೇಶ್ ಭಟ್, ಸುಮನ್ ನಗರ್‌ಕರ್
ಕ/ಚಿ.ಕ: ಟಿ.ಪಿ.ಪಂಚಾಕ್ಷರಿ
ಛಾ: ಎಸ್.ಎನ್.ಬಿ.ಮೂರ್ತಿ
ಸ: ವಿ.ಮನೋಹರ್
ನೃ: ವಿಶಾಲ್‌ರಾಜ್
ಸಾ: ವಿಜಯ್

೧೭೪೩. ಸಾಕಿದ ಗಿಣಿ

(೧೯೯೬ / ವರ್ಣ / ಸಾಮಾಜಿಕ)
ಲಾ: ಶ್ರೀ ಬಿಸಿಲಮ್ಮ ಎಂಟರ್‌ಪ್ರೈಸಸ್
ಪ್ರೊ: ರಾಜ ಸೂರ
ನಿ: ಜೈ ಕುಮಾರ್
ಸ.ನಿ: ರಾಜ್, ಹರೀಶ್
ಅ: ಸಾಯಿಕುಮಾರ್, ರವಿಕಿರಣ್, ಮಾಧುರಿ, ಕಿಶೋರಿ ಬಲ್ಲಾಳ್, ಬಿ.ಟಿ.ಎಸ್. ಮೂರ್ತಿ, ವಿಜಯಮ್ಮ, ಮಂಜುಮಾಲಿನಿ, ರಾಜ, ಚಂದ್ರಣ್ಣ, ನಂದಕುಮಾರ್
ಕ: ರಾಜ ಸೂರ
ಚಿ.ಕ/ಮಾ: ಜೈ ಕುಮಾರ್
ಗೀ: ಶ್ರೀರಂಗ, ಎಂ.ಎನ್.ವ್ಯಾಸರಾವ್, ದೊಡ್ಡರಂಗೇಗೌಡ
ಗಾ: ರಾಜೇಶ್, ವಿಷ್ಣು, ಎಲ್.ಎನ್.ಶಾಸ್ತ್ರಿ, ಮಂಜುಳಾ ಗುರುರಾಜ್

ಸಂ: ರಂಜಿತ್ ರೆಡ್ಡಿ
ಛಾ: ಶ್ರೀರಂಗ
ಕಲೆ: ಸುರೇಶ್, ವೀರಣ್ಣ
ಸ: ಆರ್.ಗೋವರ್ಧನ್, ಸದ್ಗುಣ
ಧ್ವ: ಪೀಟರ್, ಕೃಷ್ಣಮೂರ್ತಿ
ನೃ: ಸತ್ಯ
ಸಾ: ಕೊಲ್ಲೂರ್ ಬಾಲು
ವ: ಮಂಜು
ಪ್ರ: ಶ್ರೀನಿವಾಸ್
ಸ್ಟು: ಆದರ್ಶ ಫಿಲಂ ಇನ್‌ಸ್ಟಿಟ್ಯೂಟ್, ಪ್ರೀಮಿಯರ್
ಹಾ: ೧) 'ಎಲ್ಲರಿಗೂ ಬೇಕಾದ ಹಣ್ಣು...', ೨) 'ಹಣವಿರೆ ಜಗವು...', ೩) 'ನನ್ನ ನಿನ್ನ...', ೪) 'ಕನ್ನಡ ತಾಯಿ ಭುವನೇಶ್ವರಿ...', ೫) 'ಸಂತೋಷದ ಸಿರಿ ಸಂಗಾತಿಯೇ...'

೧೭೪೪. ಶ್ರೀಮತಿ ಕಲ್ಯಾಣ

(೧೯೯೬ / ವರ್ಣ / ಸಾಮಾಜಿಕ)
ಲಾ: ಲಲಿತಾ ಫಿಲಂಸ್
ಪ್ರೊ: ಬಿ.ಪಿ.ತ್ಯಾಗರಾಜ್, ಎಂ.ಟಿ.ಬಿ.ನಾಗರಾಜ್
ನಿ: ಸಿ.ಹೆಚ್.ಬಾಲಾಜಿಸಿಂಗ್ ಬಾಬು
ಸ.ನಿ: ಹಿರೇಮಠ್, ಶಿವಾನಂದ್
ಅ: ರಾಘವೇಂದ್ರ ರಾಜಕುಮಾರ್, ಶುಭಶ್ರೀ, ಪೌರ್ಣಮಿ, ಸುರಭಿ, ಬಿ.ಪಿ.ತ್ಯಾಗರಾಜ್, ಉಮೇಶ್, ಪೃಥ್ವಿರಾಜ್, ಸಾಧುಕೋಕಿಲ, ಕುಣಿಗಲ್ ನಾಗಭೂಷಣ್, ಮನದೀಪ್ ರಾಯ್, ಬಿ.ವಿ.ರಾಧಾ, ಪದ್ಮಾವಾಸಂತಿ, ಸುಂದರಶ್ರೀ, ಮೈಕೋ ಚಂದ್ರು, ಸರಿಗಮ ವಿಜಿ
ಚಿ.ಕ: ಸಿ.ಹೆಚ್.ಬಾಲಾಜಿಸಿಂಗ್ ಬಾಬು
ಮಾ: ಕುಣಿಗಲ್ ನಾಗಭೂಷಣ್
ಗೀ: ಶ್ರೀರಂಗ, ವಿ.ಮನೋಹರ್, ರಮೇಶ್ ರಾವ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ, ರಾಘವೇಂದ್ರ ರಾಜಕುಮಾರ್
ಸಂ: ಶಶಿಕುಮಾರ್
ಛಾ: ರಮೇಶ್ ಬಾಬು
ಕಲೆ: ನಜೀರ್
ಸ: ಸಾಧು ಕೋಕಿಲ
ಧ್ವ: ಚಾಮುಂಡೇಶ್ವರಿ
ನೃ: ತಾರಾ, ಪ್ರಸಾದ್
ಸಾ: ನಂಜುಂಡಿ ನಾಗರಾಜ್
ವ: ಸತ್ಯಂ
ಪ್ರ: ಮೈಸೂರು ವೆಂಕಟೇಶ್
ಕ.ಸಾ: ಮೂವರು ನಾಯಕಿಯರ ಮಧ್ಯೆ ನಾಯಕನ ಸಂಕಷ್ಟಗಳನ್ನು ಹೇಳುವ ಸಾಹಸ. ಪ್ರಣಯಗಳಿಂದ ಕೂಡಿದ ಕಥಾಹಂದರವಿದೆ. ಹಾಸ್ಯ ಪ್ರಧಾನ ಚಿತ್ರ.

೧೭೪೫. ತವರಿನ ತೊಟ್ಟಿಲು

(೧೯೯೬ / ವರ್ಣ / ಸಾಮಾಜಿಕ)
ಲಾ: ಶಮಂತಕಾ ಪಿಕ್ಚರ್ಸ್
ಪ್ರೊ: ಶ್ರೀಮತಿ ಭಾಗ್ಯವತಿ
ನಿ: ಎಸ್.ನಾರಾಯಣ್
ಸ.ನಿ: ಸೀತಾರಾಮ ಕಾರಂತ್
ಅ: ಚರಣ್‌ರಾಜ್, ಶ್ರುತಿ, ರಾಮ್ ಕುಮಾರ್, ದೊಡ್ಡಣ್ಣ, ಜಯ, ಡಾ।ಶರ್ಮ, ಕವನ
ಕ: ಅಜಯ್ ಕುಮಾರ್
ಚಿ.ಕ/ಮಾ/ಗೀ: ಎಸ್.ನಾರಾಯಣ್
ಗಾ: ರಾಜೇಶ್, ಚಿತ್ರಾ, ಗುರುರಾಜ ಹೊಸಕೋಟೆ, ಎಸ್.ಪಿ.ಬಾಲಸುಬ್ರಮಣ್ಯಂ
ಸಂ: ಸೌಂದರ ರಾಜ್
ಛಾ: ಆರ್.ಗಿರಿ

ಕಲೆ: ಜಿ.ನ.ಸು.ಮೂರ್ತಿ
ಸ: ರಾಜೇಶ್ ರಾಮನಾಥ್
ಧ್ವ: ಪೀಟರ್, ಕೃಷ್ಣಮೂರ್ತಿ
ನೃ: ದೇವ, ಸಂಪತ್ತು
ಸಾ: ಡೈನಾಮಿಕ್ ಸುರೇಶ್
ವ: ವಿಠಲ್ ರಾವ್
ಪ್ರ: ವಿಠಲ್ ಬಾಬು
ಸ್ಟು: ಚಾಮುಂಡೇಶ್ವರಿ, ಸಂಕೇತ್
ಹಾ: ೧) 'ಓ ಕುಸುಮವೇ ಕುಸುಮದಾ...', ೨) 'ಅರಿಸಿನವಾ ಕಟ್ಟಿರವ್ವಾ...', ೩) 'ಮಲೆನಾಡಿನ ಮಿಂಚಿನ ಬಳ್ಳಿ...', ೪) 'ಓ ಜೊಂಬೆಯೇ ದಾಳಿಂಬೆಯೇ...', ೫) 'ಬ್ರಹ್ಮ ಬರೆವ ಹಾಳೆಯಲ್ಲಿ ಅಂತ್ಯವೆನಿದೆ...', ೬) 'ಬಾರದೂ ಹೇ ಹೇ ಬರಬಾರದೂ...'
ಕ.ಸಾ: ಅಣ್ಣ ತಂಗಿಯ ಪ್ರೀತಿಯನ್ನು ಕೇಂದ್ರವಾಗಿಟ್ಟುಕೊಂಡು ತವರಿನ ಮಹತ್ವವನ್ನು ಹೇಳುವ ಚಿತ್ರ. ಸ್ತ್ರೀಯೊಬ್ಬಳು ತನ್ನ ಬದುಕಿನ ಸಂಕಷ್ಟಗಳ ನಡುವೆ ತನ್ನ ತವರಿನ ಬಗ್ಗೆ ಹೊಂದುವ ಪ್ರೀತಿ, ಅದಕ್ಕೆ ಸ್ಪಂದಿಸುವ ಅಣ್ಣನ ಸುತ್ತ ಹೆಣೆಯಲಾದ ಅತಿ ಭಾವುಕತೆ, ಕಣ್ಣೀರುಗಳೆಲ್ಲವನ್ನು ತುಂಬಿಕೊಂಡ ಕಥೆ.

೧೭೪೬. ಶಿವಸೈನ್ಯ

(೧೯೯೬ / ವರ್ಣ / ಸಾಮಾಜಿಕ)
ಲಾ: ಯಾಶಿ ಎಂಟರ್‌ಪ್ರೈಸಸ್
ಪ್ರೊ: ವೈ.ಎಸ್.ರಮೇಶ್
ನಿ: ಶಿವಮಣಿ
ಸ.ನಿ: ಶ್ರೀಕಾಂತ್ ಕುಲಕರ್ಣಿ
ಅ: ಶಿವರಾಜ್ ಕುಮಾರ್, ನಿವೇದಿತಾ ಜೈನ್, ಎ.ಟಿ.ರಘು, ಮನದೀಪ್ ರಾಯ್, ದೊಡ್ಡಣ್ಣ, ಮಾ ಆನಂದ್, ಪಂಕಿ, ಲೋಕನಾಥ್

ಕ: ಶಿವಮಣಿ
ಚಿ.ಕ/ಮಾ: ಜೆ.ಎಂ.ಪ್ರಹ್ಲಾದ್
ಗೀ: ಇಳಯರಾಜಾ, ಮನೋಹರ್, ದೊಡ್ಡರಂಗೇ ಗೌಡ, ಶ್ರೀರಂಗ, ಶ್ಯಾಮಸುಂದರ ಕುಲಕರ್ಣಿ
ಗಾ: ಇಳಯರಾಜಾ, ಮನು, ಚಿತ್ರಾ
ಸಂ: ಕೆ. ಬಾಲು
ಛಾ: ವಿ.ವಿ.ಕೃಷ್ಣ ಕುಮಾರ್



ಕಲೆ: ಕೃಷ್ಣಮಾಚಾರ್
ಸ: ಇಳಯರಾಜಾ
ಧ್ವ: ಪ್ರಸಾದ್
ನೃ: ಪ್ರಸಾದ್
ಸಾ: ಎಸ್.ಜಾಲಿ ಬ್ಯಾಸ್ಟಿಯನ್
ಹಾ: ೧) 'ಚಿಕ್ಕ ಮಗಳೂರ ಚಿಕ್ಕ ಮಲ್ಲಿಗ...', ೨) 'ಜೈಲಲಿ ಹುಟ್ಟಿ ...', ೩) 'ಓಂ ಶಾಂತಿ ಓಂ ಶಾಂತಿ...', ೪) 'ರಾಜ ನಮ್ಮ ರಾಜ್ಯಕೆ...', ೫) 'ಯುವ ಕ್ರಾಂತಿಯು...', ೬) 'ಅರ ಲೈಲಾ ಓ ಲೈಲಾ...'
ಕ.ಸಾ: ಯುವ ಶಕ್ತಿಗೆ ಯಾವುದೂ ಅಸಾಧ್ಯವಲ್ಲ. ದೌರ್ಜನ್ಯವನ್ನು ಮೆಟ್ಟಿನಿಂತು ರಾಜಕೀಯವಾಗಿ ಬೆಳೆದು, ಉನ್ನತ ಸ್ಥಾನಕ್ಕೇರುವ ಕಥೆ. ಚಿತ್ರದ ನಾಯಕ ಶಿವು, ಸಿದ್ದೇಶ್, ವೆಂಕಟೇಶ್, ಆನಂದ್ ಮತ್ತು ಪ್ರಭು ನಿರುದ್ಯೋಗಿ ಪದವೀಧರರು. ಇವರೂ ಒಟ್ಟಿಗೆ ಸೇರುತ್ತಿದ್ದ ಮಂಟಪದ ಬಳಿ ಶಿವು ಕಲ್ಲೊಂದನ್ನು ಎಡವುತ್ತಾನೆ. ನೋಡಿದರೆ ಅದು ಗಣೇಶನ ಮೂರ್ತಿಯಾಗಿರುತ್ತದೆ. ಇದನ್ನು ಶಿವು ಮಂಟಪದ ಮಧ್ಯೆ ಪ್ರತಿಷ್ಠಾಪಿಸುತ್ತಾನೆ. ಇದು ಸಾಕಷ್ಟು ಜನಪ್ರಿಯಗೊಂಡು ರಾಜಕೀಯ ವ್ಯಕ್ತಿಗಳೂ ತಮ್ಮ ಸ್ವಾರ್ಥಕ್ಕಾಗಿ ಇಲ್ಲಿಗೆ ಬರುವಂತಾಗುತ್ತದೆ. ಈ ರೀತಿ ಶಿವು ಮತ್ತು ಅವನ ಗೆಳೆಯರ ತಂಡದ ನೆರವು ಪಡೆದು ಧರ್ಮ ಪಾರ್ಟಿಯ ರಾಮಚಂದ್ರರಾವ್ ಗೆದ್ದು ಮುಖ್ಯಮಂತ್ರಿಯಾಗುತ್ತಾನೆ. ಅವರ ಮಾತಿಗೆ ತಪ್ಪುವ ಅವನು ಈ ತಂಡ ಜೈಲು ಕಾಣುವಂತೆ ಮಾಡುತ್ತಾನೆ. ಆಗ ಇವರು ಶಿವಸ್ವಸ್ಥವಾಗಿ ತಿರುಗಿಬಿದ್ದು ಶಿವು ಮುಖ್ಯಮಂತ್ರಿಯಾಗುತ್ತಾನೆ.

೧೭೪೭. ಅನುರಾಗ ದೇವತೆ

(೧೯೯೬ / ವರ್ಣ / ಸಾಮಾಜಿಕ)
ಲಾ: ತಲಕಾವೇರಿ ಕಂಬೈನ್ಸ್
ಪ್ರೊ: ಕೆ.ಎಂ.ವಾಸುದೇವರಾವ್, ಬಿ.ಟಿ. ಸಂಜಪ್ಪ
ನಿ: ಭಾಸ್ಕರ್
ಸ.ನಿ: ಶರಣ್ ಕುಮಾರ್, ನಾಗರಾಜ ಗೊಟ್ಟಿಗೆರೆ, ಜಿ.ಆರ್.ಸತ್ಯಲಿಂಗರಾಜು
ಅ: ಶಶಿಕುಮಾರ್, ಸಿತಾರ, ನೀನಾ, ಸತ್ಯಪ್ರಿಯಾ, ರಾಮಮೂರ್ತಿ, ಜಾನಕಮ್ಮ, ಗಾಯತ್ರಿ ಪ್ರಭಾಕರ್, ಎಂ.ಎಸ್.ಕಾರಂತ್, ಬ್ಯಾಂಕ್ ಜನಾರ್ದನ್, ಜೇಬಿ ಸಿಂಹ, ಸರೋಜಾ, ಶ್ರೀಶೈಲನ್, ಸುಲೋಚನಾ
ಕ: ವಿಪಿನ್ ದಾಸ್
ಚಿ.ಕ/ಮಾ: ಭಾಸ್ಕರ್

ಗೀ: ಸು.ರುದ್ರಮೂರ್ತಿಶಾಸ್ತ್ರೀ, ಶ್ಯಾಮಸುಂದರ ಕುಲಕರ್ಣಿ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಮಂಜುಳಾ ಗುರುರಾಜ್
ಸಂ: ರಾಘವ
ಛಾ: ಕೆ.ಸೋಮಶೇಖರ್
ಕಲೆ: ಕುಮಾರ್ ಕ್ರಿಯೇಟಿವ್ಸ್
ಸ: ಶಂಕರ್
ಧ್ವ: ಸಂಕೇತ್ ಕೃಷ್ಣಮೂರ್ತಿ
ನೃ: ಉಡುಪಿ ಜಯರಾಂ
ಸಾ: ಸಿ.ರಾಮು
ವ: ರಾಮು
ಹಾ: ೧) 'ಸೂರ್ಯನಾಣೆ ಚಂದ್ರನಾಣೆ ಬಾಳು ಭೂಮಿಯಾಣೆ...', ೨) 'ಚೈತ್ರದ ಮಾವು ಚಿಗುರಿದೆ...', ೩) 'ಪ್ರೀತಿದೀಪ ನೀನಾದ...', ೪) 'ಪ್ರೀತಿಯ ಸುಮವ ಬಾಡಿಸಿ...'
ಸೆ: ರೀಲು ೧೬, ಉದ - ೩೯೯೧.೨೮, 'ಯು' ಸರ್ಟಿಫಿಕೇಟ್
ಕ.ಸಾ: ಪ್ರೀತಿಸಿದ ಯುವಕ - ಯುವತಿ ಮದುವೆಯಾಗಲು ಇಲ್ಲದ ಅಡಚಣೆ. ಯೌವ್ವನದ ಅಮಲಿನಲ್ಲಿ ಎಡವಿದ ಕಾರಣ ಯುವತಿ ಮದುವೆಗೆ ಮೊದಲೇ ತಾಯಿಯಾಗುತ್ತಾಳೆ. ಯುವತಿ ಸತ್ತಳು ಎಂಬ ಸುದ್ದಿ. ಅದನ್ನು ಯುವಕ ನಂಬುವುದಿಲ್ಲ. ಆ ಸುದ್ದಿ ಸುಳ್ಳೆಂದೇ ಅವನ ದೃಢವಾದ ನಂಬಿಕೆ. ಅವನ ನಿರೀಕ್ಷೆ ಹುಸಿಯಾಗಲಿಲ್ಲ. ಮತ್ತೆ ಅವರಿಬ್ಬರ ಭೇಟಿಯಾಯಿತು. ಇಬ್ಬರೂ ಎಲ್ಲ ಅಡೆ-ತಡೆಗಳನ್ನು ದಾಟಿ ಅಂತ್ಯದಲ್ಲಿ ಒಂದಾಗುವ ಕಥೆ.

೧೭೪೮. ರ್‍ಯಾಂಬೋ ರಾಜ ರಿವಾಲ್ವರ್ ರಾಣಿ

(೧೯೯೬ / ವರ್ಣ / ಸಾಮಾಜಿಕ)
ಲಾ: ಎ.ಟಿ.ಆರ್.ಫಿಲಂಸ್
ಪ್ರೊ/ನಿ: ಎ.ಟಿ.ರಘು
ಸ.ನಿ: ಕೆ.ಪಿ.ವೆಂಕಟೇಶ್
ಅ: ಚರಣ್‌ರಾಜ್, ಡಾಲಿ, ಶ್ರೀಶಾಂತಿ, ಸುಧೀರ್, ಲೋಹಿತಾಶ್ವ, ಅಶೋಕರಾವ್, ಮೈತ್ರೀ, ಉಮೇಶ್ ನವಲೆ, ಪಾಂಡುರಂಗ, ಚಿಕ್ಕಣ್ಣ, ಮಹೇಶ್ ಕುಮಾರ್, ಪಂಕಜ, ಸೀಮ, ಸೌಭಾಗ್ಯ
ಕ/ಚಿ.ಕ: ಎ.ಟಿ.ರಘು
ಮಾ/ಗೀ: ಆರ್.ಎನ್.ಜಯಗೋಪಾಲ್
ಗಾ: ಮನು, ಉಷಾ ಗಣೇಶ್, ಮಂಜುಳಾ ಗುರುರಾಜ್, ಸಂಗೀತಾ ಕಟ್ಟಿ



ಸಂ: ವಿಕ್ಟರ್ ಯಾದವ್
ಛಾ: ವಿ.ಕೆ.ಕಣ್ಣನ್
ಕಲೆ: ಆರ್.ಕೆ.ಸುಂದರಂ
ಸ: ಉಪೇಂದ್ರ ಕುಮಾರ್
ಧ್ವ: ಮಹೇಂದ್ರ, ಕೋದಂಡಪಾಣಿ
ನೃ: ಉಡುಪಿ ಜಯರಾಂ-ದೇವಿ
ಸಾ: ಜ್ಯೂಡೋ ರತ್ನಂ
ವ: ಎಸ್.ಗುರು, ಮರಿಯಪ್ಪ
ಪ್ರ: ಜಿ.ಎಸ್.ವಾಸು, ಕೋಟೇಶ್ವರ ರಾವ್
ಸ್ಥು: ಅಭಿಮಾನ್
ಹಾ: ೧) 'ದಿಲ್ ದಾರಾ ಬಾ ಬಾರ...', ೨) 'ತಂಪಾದ ಯೌವ್ವನ...', ೩) 'ದೇಕೋರೆ ಜರ್ದಾ ಬೀಡಾ...', ೪) 'ರಾಜ ರಾಜ ರಾಜ...'
ಕ.ಸಾ: ಮಕ್ಕಳ ಮರುಳತನದ ಸಂಚನ್ನು ಅರಿತ ಯುವಕ ಮತ್ತು ಯುವತಿಯ ಜೋಡಿ ಅವರ ಸಂಚುಗಳನ್ನು ವಿಫಲಗೊಳಿಸಿ, ಅವರನ್ನು ಶಿಕ್ಷೆಗ ಒಳಪಡಿಸಲು ಒಂದಾಗಿ ನಿಂತು ಹೋರಾಟ ನಡೆಸುತ್ತಾರೆ. ಎಷ್ಟೇ ಕಷ್ಟನಷ್ಟಗಳನ್ನು ಎದುರಿಸಬೇಕಾಗಿ ಬಂದರೂ ದಿಟ್ಟತನದಿಂದ ಸೆಣಸಿ ಯಶಸ್ಸು ಸಾಧಿಸುತ್ತಾರೆ. ಸಾಹಸಮಯ ಘಟನೆಗಳೊಂದಿಗೆ ಪ್ರೇಮ - ಪ್ರಣಯಗಳ ಪಲ್ಲವವೂ ತುಂಬಿರುವ ಚಿತ್ರ.

೧೭೪೯. ಹಾಲಿಯಾ

(೧೯೯೬ / ವರ್ಣ / ಸಾಮಾಜಿಕ)
ಲಾ: ಶ್ರೀ ರಾಘವೇಂದ್ರ ಫಿಲಂಸ್
ಪ್ರೊ: ಗೋವಿಂದ್, ಕಡೂರು ಉಮೇಶ್
ನಿ: ಕೆ.ವಿ.ರಾಜು
ಅ: ದೇವರಾಜ್, ಅರ್ಚನಾ, ಅವಿನಾಶ್, ಶಿವಕುಮಾರ್, ವೆಂಕಟೇಶ್, ಶ್ರೀನಿವಾಸಮೂರ್ತಿ, ಶ್ರೀಧರ್, ಸಿಂಧೂ, ಸಂತೋಷ್, ಲೋಹಿತಾಶ್ವ, ಅರವಿಂದ್, ಬ್ಯಾಂಕ್ ಜನಾರ್ದನ್, ಕಾಶಿ, ಪೂಜಾ ಲೋಕೇಶ್
ಕ/ಚಿ.ಕ/ಮಾ: ಕೆ.ವಿ.ರಾಜು
ಗೀ: ಕೆ.ಎನ್.ರಾಜು, ವಿ.ಮನೋಹರ್
ಗಾ: ಮನು, ಮನೋಹರ್, ಸಾಧು, ರಾಜೇಶ್, ಮಂಜುಳಾ ಗುರುರಾಜ್, ಸಿ.ಅಶ್ವತ್ಥ್
ಸಂ: ಶ್ಯಾಂ ಯಾದವ್
ಛಾ: ಮಲ್ಲಿಕಾರ್ಜುನ
ಸ: ಸಾಧುಕೋಕಿಲ
ಸಾ: ಕೆ.ಡಿ.ವೆಂಕಟೇಶ್
ಪ್ರ: ಮೈಸೂರು ವೆಂಕಟೇಶ್
ಹಾ: ೧) 'ಬಣ್ಣ ಬಣ್ಣದರಮನೆ ಅಲ್ಲೂ ಇಲ್ಲೂ ...', ೨) 'ಮ್ಯಾಗೆ ಕುಂತೋರ್ ಪಸಿ ಜ್ವಾಕೆ ಕಣಪ್ಪ...', ೩) 'ಬ್ರಹ್ಮದೇವನೆ ನೀನು ಬರೆದಂಥ...', ೪) 'ಮನ್ಸ ಮನ್ಸಂಗೆ ಆಯ್ತಾನ...'
ವಿ: ೧೯೯೫-೯೬ರ ರಾಜ್ಯಪ್ರಶಸ್ತಿ : ಅತ್ಯುತ್ತಮ ಪೋಷಕ ನಟಿ (ಪೂಜಾ)
ಕ.ಸಾ: ಬರ ಪೀಡಿತ ಹಳ್ಳಿಯ ಜನರ ಸಂಕಷ್ಟಗಳನ್ನು ಹೇಳುವ ಕಥೆ. ಗ್ರಾಮೀಣರಲ್ಲಿ ಇನ್ನೂ ಉಳಿದಿರುವ ಫ್ಯೂಡಲ್ ಸಿಸ್ಟಮ್, ಪಟ್ಟಣದಲ್ಲೂ ಅದೇ ಹೊಸ ವಿನ್ಯಾಸದಲ್ಲಿ ಹರಡಿಕೊಂಡಿದೆ. ಮುಗ್ಧಜನರ ಬದುಕು ಮೂರಾಬಟ್ಟೆಯಾಗುವುದನ್ನು ಹೇಳುವ ಪ್ರಯತ್ನ. ಭ್ರಷ್ಟ ವ್ಯವಸ್ಥೆ, ಪೋಲೀಸರು, ನ್ಯಾಯಾಂಗ, ಶಾಸಕಾಂಗ, ರಾಜಕಾರಣ ಮಿಗಿಲಾಗಿ ಮಕ್ಕಳನ್ನೂ ಸ್ವಾರ್ಥ - ಹಣಗಳಿಕೆಗೆ ಬಳಸುವ ದುಷ್ಟರು ಹೀಗೆ ಎಲ್ಲವನ್ನೂ ಎಳೆ ಎಳೆಯಾಗಿ ಬಿಡಿಸಿಡುವ ಪ್ರಯತ್ನ.

೧೭೫೦. ಹೆತ್ತವಳ ಕೂಗು

(೧೯೯೬ / ವರ್ಣ / ಸಾಮಾಜಿಕ)
ಲಾ: ಶ್ರೀದೇವಿ ಎಂಟರ್‌ಪ್ರೈಸಸ್

ಪ್ರೊ: ಕೆ.ವಿ.ಜಾಜಿ, ಕೆ.ವಿ.ಶೈಲಾ
ನಿ: ವಿ.ಉಮಾಶಂಕರ್
ಸ.ನಿ: ನಾಗರಾಜ್
ಅ: ಅಭಿಜಿತ್, ಸಿತಾರಾ, ರಾಜೇಶ್, ಬ್ಯಾಂಕ್ ಜನಾರ್ದನ್, ಪ್ರಮಿಳಾ ಜೋಷಾಯ್
ಕ/ಚಿ.ಕ: ವಿ.ಉಮಾಶಂಕರ್
ಮಾ: ಕುಣಿಗಲ್ ನಾಗಭೂಷಣ್
ಗೀ: ವಿಜಯನಾರಸಿಂಹ
ಗಾ: ರಾಜೇಶ್, ವಾಣಿ ಜಯರಾಂ
ಸಂ: ರಾಘವ
ಛಾ: ಆರ್.ಆರಾಧ್ಯ
ಕಲೆ: ಸಂಜುಂಡ ಸ್ವಾಮಿ
ಸ: ವಿಜಯಭಾಸ್ಕರ್
ಧ್ವ: (ಹಾ) ಅರುಣ್, (ಮಾ) ಸಂಕೇತ್

ಸ್ತ: ಸಂಪತ್
ವ: ಗಂಡಸಿ ನಾಗರಾಜ್
ಪ್ರ: ರಾಮು
ಸ್ಟು: ಔಟ್‌ಡೋರ್
ಹಾ: ೧) 'ರಾಘವೇಂದ್ರ ನಿನ್ನ ನಂಬಿದ...', ೨) 'ಎಂಥಾ ವಿಶ್ವಾಸಘಾತ...'
ಕ.ಸಾ: ನಾಸ್ತಿಕನಲ್ಲಿ ನಂಬಿಕೆ ಮೂಡಿಸುವ ಕಥಾವಸ್ತುವುಳ್ಳ ಚಿತ್ರ. ರಾಜಾರಾಮರ ಏಕೈಕ ಪುತ್ರ ಗುರುರಾಜ. ತನ್ನ ತಾಯಿ ಸಾವಿಗೀಡಾದ ದುರ್ಘಟನೆಯಿಂದಾಗಿ ದೇವರಲ್ಲಿ ನಂಬಿಕೆಯನ್ನು ಕಳೆದುಕೊಂಡು ನಾಸ್ತಿಕನಾಗಿ ಬೆಳೆಯುತ್ತಾನೆ. ಆದರೆ ಅವನು ಮದುವೆಯಾಗುವ ತುಳಸಿ ದೈವಭಕ್ತೆ. ತುಳಸಿಯಲ್ಲಿನ ದೈವಭಕ್ತಿಯನ್ನು ಬುಡ ಸಹಿತ ಕಿತ್ತು ಹಾಕಲು ಗುರು ಪ್ರಯತ್ನಿಸಿ ವಿಫಲನಾಗುತ್ತಾನೆ. ತುಳಸಿ ಗರ್ಭಿಣಿಯಾಗಿ ಹುಟ್ಟಿದ ಮಗು ಹುಟ್ಟುವಾಗಲೇ ಸತ್ತಿದೆ ಎಂದು ವೈದ್ಯರು ಹೇಳುತ್ತಾರೆ. ಆದರೆ ತುಳಸಿಯ ದೈವಭಕ್ತಿ ಆ ಮಾತನ್ನು ನಂಬಲಿಲ್ಲ. ತುಳಸಿ ದೇವರ ಮೊರೆ ಹೊಕ್ಕಳು. ಸತ್ತಿದೆ ಎಂದು ವೈದ್ಯರು ಹೇಳಿದ ಅದೇ ಮಗು ತಾಯಿಯ ದೈವಭಕ್ತಿಯಿಂದಾಗಿ ಜೀವಂತವಾಗುವುದು. ಈ ದೈವ ಚಮತ್ಕಾರ ಗುರುವಿನಲ್ಲಿನ ನಾಸ್ತಿಕ ಭಾವವನ್ನು ಸಂಪೂರ್ಣವಾಗಿ ತೊಡೆದು ಹಾಕಿ ಅವನು ದೇವರಿಗೆ ತಲೆ ಬಾಗುವಂತೆ ಮಾಡುತ್ತದೆ.

೧೭೫೧. ಧಣಿ

(೧೯೯೬ / ವರ್ಣ / ಸಾಮಾಜಿಕ)
ಲಾ: ಜಿ.ಜಿ.ಇಂಟರ್‌ನ್ಯಾಷನಲ್
ಪ್ರೊ: ಚನ್ನಬಸಪ್ಪ, ವಿಜಯ್, ಗೌಸ್ ಪೀರ್, ಮಂಜುನಾಥ್, ಓಂಕಾರಪ್ಪ
ನಿ: ಸಿ.ಹೆಚ್.ಬಾಲಾಜಿಸಿಂಗ್
ಸ.ನಿ: ಶಿವಾನಂದ್, ಶಿವು ಘೋರ್ಪಡೆ
ಅ: ವಿಷ್ಣುವರ್ಧನ್, ವಿನಿತಾ, ಧೀರೇಂದ್ರ ಗೋಪಾಲ್, ಉಮಾಶ್ರೀ, ಜೀವಾ, ರಾಮಕೃಷ್ಣ, ಸುಧಾಕರ್, ಲೋಕನಾಥ್, ರಾಜಾನಂದ್, ರತ್ನಾಕರ್, ಶನಿ ಮಹಾದೇವಪ್ಪ, ಉಮೇಶ್, ಟೆನ್ನಿಸ್ ಕೃಷ್ಣ, ಕುವಸಂತ್, ಮನದೀಪ್ ರಾಯ್, ಬೇಬಿ ಸಿಂಧೂ
ಕ: 'ತವರಿನ ನೆನಪು' ಕಾದಂಬರಿ ಆಧಾರ (ಮಹೇಶ್ವರಪ್ಪ)
ಚಿ.ಕ: ಸಿ.ಹೆಚ್.ಬಾಲಾಜಿಸಿಂಗ್
ಮಾ: ಎಂ.ಡಿ.ಹಾಷಂ
ಗೀ: ಗೀತಪ್ರಿಯ, ದೊಡ್ಡರಂಗೇ ಗೌಡ, ವಿ.ಮನೋಹರ್, ಕಲ್ಯಾಣ್
ಗಾ: ರಾಜಕುಮಾರ್, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ
ಸಂ: ಜನಾರ್ದನ್

ಛಾ: ರಮೇಶ್ ಬಾಬು
ಕಲೆ: ನಜೀರ್
ಸ: ಸಾಧು ಕೋಕಿಲ
ಧ್ವ: ಚಾಮುಂಡೇಶ್ವರಿ
ಸ್ತ: ಸತೀಶ್
ಸಾ: ಶಕ್ತಿವರ್ಮ
ವ: ಎಸ್.ವೀರರಾಜ್, ರಾಮನಾಥ್, ಶಿವು
ಪ್ರ: ಮೈಸೂರು ವೆಂಕಟೇಶ್
ಸ್ಟು: ಕಂಠೀರವ
ಹಾ: ೧) 'ರಾಜ ಯುವರಾಜ...', ೨) 'ಜಗವೆಲ್ಲ ನಮ್ಮದೇ...', ೩) 'ನೀ ಕಂಡ ಆ ಲೋಕ...', ೪) 'ಆಟವೇ ನೋಡಿ...', ೫) 'ಯಪ್ಪ ಯಪ್ಪ ಚೆಲುವೆ...', ೬) 'ನೀ ಕಂಡ ಆ ಲೋಕ...',
ಕ.ಸಾ: ಚಿತ್ರದ ನಾಯಕನನ್ನು ವೈಭವೀಕರಿಸುವ ಕಥೆಯ ಚಿತ್ರ. ಗ್ರಾಮದ ನಿರಂಕುಶ ದೊರೆಗಳಂತೆ ಅಟ್ಟಹಾಸದಿಂದ ಮೆರೆಯುತ್ತಾ, ಅನಾಚಾರದಲ್ಲಿ ತೊಡಗುವ ಉಳ್ಳವರ ದೌರ್ಜನ್ಯವನ್ನು ಬಗ್ಗುಬಡಿಯುವುದಕ್ಕಾಗಿಯೇ ನಿಯೋಜಿತಗೊಂಡವನಂತೆ ಬರುತ್ತಾನೆ ನಾಯಕ. ಜಮೀನ್ದಾರನ ಮಗನಂತೆ ಹಳ್ಳಿಗೆ ಬಂದ ನಾಯಕ ಉಳ್ಳವರ ಅಟ್ಟಹಾಸಗಳನ್ನು ಮೆಟ್ಟಿ ನಿಂತು, ಅನಾಚಾರಗಳಿಗೆ ಇತಿಶ್ರೀ ಹಾಡಿ, ದುಷ್ಟರು ಸರೆಮನೆಯ ಕಂಬಿಗಳನ್ನು ಎಣಿಸುವಂತೆ ಮಾಡುತ್ತಾನೆ. ಗ್ರಾಮದ ಜನತೆಯ ಅಪಾರ ಪ್ರೀತಿಗೆ ಪಾತ್ರನಾಗಿ ಧಣಿ ಎನಿಸುತ್ತಾನೆ.

೧೭೫೨. ಸಿಂಹಾದ್ರಿ

(೧೯೯೬ / ವರ್ಣ / ಸಾಮಾಜಿಕ)
ಲಾ/ಪ್ರೊ: ಕೆ.ಪಿ.ಎಸ್. ಮೂವೀಸ್
ನಿ: ರಾಜ್‌ಕಿಶೋರ್
ಸ.ನಿ: ರಮೇಶ್ ರಾಜ್, ಕಿಟ್ಟಿ
ಅ: ದೇವರಾಜ್, ಸುಧಾರಾಣಿ, ಕಲ್ಯಾಣ್ ಕುಮಾರ್, ಸುಪ್ರಿಯಾ, ಅವಿನಾಶ್, ಸುದರ್ಶನ್, ಸತ್ಯಭಾಮ, ಸಿಹಿಕಹಿ ಗೀತಾ, ಸತ್ಯಜಿತ್, ಶಂಕರ್ ಅಶ್ವತ್, ವೆಂಕಟೇಶ್, ಟಿ.ಕೃಷ್ಣ, ಕಿಶೋರಿ ಬಲ್ಲಾಳ್, ಹಾಕಿಶಿವು, ಎಂ.ಎಸ್.ಉಮೇಶ್
ಕ/ಚಿ.ಕ/ಮಾ: ರಾಜ್‌ಕಿಶೋರ್
ಗೀ: ಮಹೇಂದರ್, ರಾಜ್‌ಕಿಶೋರ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ, ರಾಜೇಶ್
ಸಂ: ಪ್ರಸಾದ್
ಛಾ: ಆರ್.ದೇವಿಪ್ರಸಾದ್
ಕಲೆ: ಕೃಷ್ಣಾಚಾರಿ, ಗಾಡಿ ಕೃಷ್ಣ, ಸದಾನಂದ
ಸ: ಸಾಧುಕೋಕಿಲ
ಧ್ವ: ಕೃಷ್ಣಮೂರ್ತಿ
ಸ್ತ: ಸತೀಶ್
ಸಾ: ಥ್ರಿಲ್ಲರ್ ಮಂಜು
ವ: ವೀರರಾಜು
ಪ್ರ: ಮಲ್ಲಿ, ಮಾಧವನ್, ಕೇಶವ ರಾಜೀವ
ಸ್ಟು: ಸಂಕೇತ್, ಕಂಠೀರವ
ಕ.ಸಾ: ಸಿಂಹಾದ್ರಿಯ ಆಸ್ತಿ ಕಬಳಿಸಲು ಹೊಂಚು ಹಾಕಿದ ದುಷ್ಟ. ಆತನ ಹೆಂಡತಿಯನ್ನು ಕೊಲೆ ಮಾಡಿರುತ್ತಾನೆ. ಆಸ್ತಿಯ ವಾರಸು ಹಕ್ಕಿಗಾಗಿ ಸಿಂಹಾದ್ರಿಯು ಸರ್ರೋಗೇಟ್ ಮದರ್ ಒಬ್ಬಳ ಆಶ್ರಯ ಪಡೆಯುತ್ತಾನೆ. ಆ ಮಗುವನ್ನು ಹೆತ್ತುಕೊಡಲು ಆಕೆಗೆ ಹಣ ನೀಡಿರುತ್ತಾನೆ. ಆಕೆ ತನ್ನ ಪತಿಯ ಚಿಕಿತ್ಸೆಗಾಗಿ ಹಣದ ಅಗತ್ಯವಿದ್ದುದರಿಂದ ಮಗುವನ್ನು ಹೆತ್ತುಕೊಡಲು ಒಪ್ಪಿ ಹಣ ಪಡೆದಿರುತ್ತಾಳೆ. ಮಗುವಾದ ಮೇಲೆ ಮಗುವನ್ನು ಕೊಡಲು ಆಕೆ ಒಪ್ಪುವುದಿಲ್ಲ. ಮಗುವನ್ನು ಕೊಲ್ಲಲು ಬರುವ ದುಷ್ಟನಿಂದ ಮಗುವನ್ನು ಕಾಪಾಡುವ ಪ್ರಯತ್ನದಲ್ಲಿ ಸಿಂಹಾದ್ರಿ ಸಾಯುವನು.

೧೭೫೩. ಅಣ್ಣಾವ್ರ ಮಕ್ಕಳು

(೧೯೯೬ ವರ್ಣ / ಸಾಮಾಜಿಕ)
ಲಾ: ಶಿವಶಕ್ತಿ ಪ್ರೊಡಕ್ಷನ್ಸ್
ಪ್ರೊ: ವಿ.ಆರ್.ಚಿರಾಜ್
ನಿ: ಫಣಿ ರಾಮಚಂದ್ರ
ಸ.ನಿ: ಡಿ.ಕೆ.ಶಿವರಾಜ್, ಎಸ್.ಕೆ.ಮಹೇಶ್
ಅ: ಶಿವರಾಜ್ ಕುಮಾರ್ (ತ್ರಿಪಾತ್ರ), ಶ್ರೀನಾಥ್, ಚರಣ್‌ರಾಜ್, ಪ್ರಮೀಳಾ ಜೋಷಾಯ್, ಪದ್ಮಾ ವಾಸಂತಿ, ಮಹೇಶ್ವರಿ, ರೇಮಂಡ್ ಸಿಂಗ್, ಸುನೀಹ, ವೈಜಗದೀಶ್, ಶಂಕರ್ ಅಶ್ವತ್, ಅನಿಲ್ ಕುಮಾರ್, ಎಂ.ಎನ್.ಲಕ್ಷ್ಮೀದೇವಿ, ಹೊನ್ನವಳ್ಳಿ ಕೃಷ್ಣ, ಡಿಂಗ್ರಿ ನಾಗರಾಜ್, ಕುಣಿಗಲ್ ವಸಂತ್, ವಿಜಯಸಾರಥಿ, ಸುಂದರ್ ರಾಜ್, ಮಾ|ಆನಂದ್, ಮಾ|ದೀಪಕ್, ಮಾ|ಉದಯ್ ಕುಮಾರ್
ಕ: ಶಿವಶಕ್ತಿ ಪ್ರೊಡಕ್ಷನ್ ಕಥಾ ವಿಭಾಗ
ಚಿ.ಕ/ಮಾ: ಹೆಚ್.ಎಸ್.ಫಣಿ ರಾಮಚಂದ್ರ
ಗೀ: ಎಂ.ಎನ್.ವ್ಯಾಸರಾವ್, ವಿಜಯನಾರಸಿಂಹ, ಶ್ಯಾಮಸುಂದರ ಕುಲಕರ್ಣಿ, ವಿ.ಮನೋಹರ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ರಾಜೇಶ್, ಸ್ವರ್ಣಲತಾ, ಮಂಜುಳಾ ಗುರುರಾಜ್, ಚಂದ್ರಿಕಾ ಗುರುರಾಜ್
ಸಂ: ಮನೋಹರ್
ಛಾ: ಬಿ.ಎಸ್.ಬಸವರಾಜ್
ಕಲೆ: ನಜೀರ್
ಸ: ರಾಜೇಶ್ ರಾಮನಾಥ್
ಧ್ವ: ಕಣ್ಣನ್, ಕೃಷ್ಣಮೂರ್ತಿ
ಸ್ತ: ಸತೀಶ್, ಶಂಕರ್
ಸಾ: ಥ್ರಿಲ್ಲರ್ ಮಂಜು
ವ: ರಾಮನಾಥ್
ಪ್ರ: ಎಂ.ಎಸ್.ಕೇಶವ, ಕೇಶವಾಚಾರಿ, ದೊರೆ
ಸ್ಟು: ಅಭಿಮಾನ್, ಕಂಠೀರವ
ಹಾ: ೧) 'ಬಾರೋ ಬಾರೋ...', ೨) 'ಅಣ್ಣಾವ್ರ ಮಕ್ಕಳು...', ೩) 'ಹೋಗಬೇಡ ಹುಡುಗಿ...', ೪) 'ಅಣ್ಣಾವ್ರ ಮಕ್ಕಳು...'
ಕ.ಸಾ: ಇದು ಹಾಸ್ಯದೊಂದಿಗಿನ ಥ್ರಿಲ್ಲರ್. ಲಾಕರ್‌ನ ರಹಸ್ಯವಾದ ಕೋಡ್ ಉಳಿಸುವ ಸಲುವಾಗಿ ಪೊಲೀಸ್ ಆಫೀಸರ್ ತನ್ನ ಪ್ರಾಣವನ್ನೇ ಬಲಿಕೊಡುತ್ತಾನೆ. ಸಾಯುವ ಮುನ್ನ ಅದೇ ತಾನೇ ಹುಟ್ಟಿದ ತ್ರಿವಳಿ ಗಂಡುಮಕ್ಕಳ ಬೆನ್ನಲ್ಲಿ ಆ ಕೋಡ್‌ನ ದಾಖಲಿಸಿರುತ್ತಾನೆ. ಆ ಕೋಡಿನ ಹಿಂದೆ ಬಿದ್ದಿರುವ ತಂಡ

ಆಫೀಸರ್‌ನ ಹೆಂಡತಿಯನ್ನು ಪ್ರತಿಬಂಧಿಸುತ್ತಾರೆ. ಆಗ ಮೂರು ಮಕ್ಕಳು ಬೇರೆ ಬೇರೆಯಾಗಿ ಬೆಳೆಯುತ್ತಾರೆ. ಆ ತಂಡದ ನಾಯಕನ ಮೂವರು ಹೆಣ್ಣು ಮಕ್ಕಳು ಆಕಸ್ಮಿಕವಾಗಿ ಅದೇ ಮೂವರು ಹುಡುಗರನ್ನು ಪ್ರೀತಿಸುತ್ತಾರೆ. ಈ ಮೂವರಿಗೆ ತಾವು ಸಹೋದರರು ಎಂಬುದು ಹೇಗೆ ಗೊತ್ತಾಗುತ್ತದೆ ಮತ್ತು ಆ ತಂಡದಿಂದ ಹೇಗೆ ತಪ್ಪಿಸಿಕೊಳ್ಳುತ್ತಾರೆಂಬುದೇ ಚಿತ್ರದ ಕ್ಲೈಮಾಕ್ಸ್.

೧೭೫೪. ಸ್ಟಂಟ್ ಮಾಸ್ಟರ್

(೧೯೯೬ / ವರ್ಣ / ಸಾಮಾಜಿಕ)
ಲಾ: ತುಂಗಭದ್ರ ಫಿಲಂಸ್
ಪ್ರೊ: ಶೇಖರ್, ಸದಾಶಿವ ಸಾಲಿಯಾನ್
ನಿ: ಚಂದ್ರಹಾಸ್
ಸ.ನಿ: ಶ್ಯಾಮರಾಜ್, ಪ್ರೇಂ ರಾಜ್
ಅ: ಸಿದ್ಧಾರ್ಥ್, ಸುಧಾರಾಣಿ, ಸದಾಶಿವ ಸಾಲಿಯಾನ್, ಅಶೋಕ್ ರಾವ್, ಜಯಂತಿ, ಪದ್ಮಾವಾಸಂತಿ, ಡಿಸ್ಕೋ ಶಾಂತಿ, ಗುರುರಾಜ ಹೊಸಕೋಟೆ, ಓಂ ಪ್ರಕಾಶ್

ಕ: ಶ್ರೀನಿವಾಸ್, ಬಾಬು
ಚಿ.ಕ: ವಿ.ಚಂದ್ರಹಾಸ್
ಮಾ: ವಿ.ಆರ್.ಭಾಸ್ಕರ್
ಗೀ: ಹಂಸಲೇಖ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ, ಮಾಲ್ಗುಡಿ ಶುಭ
ಸಂ: ಸುರೇಶ್ ಅರಸ್
ಛಾ: ಮಹೇಂದ್ರ
ಸ: ಹಂಸಲೇಖ
ಹಾ: ೧)'ಕೊಡಗೀನ ಬೆಳ್ಳಿ ಬೆಡಗಿ...', ೨)'ಹಾದರ ಹಾದರ...', ೩) 'ಸ್ವರ್ಗವಿದೇ...', ೪) 'ಓ ಮದ್ನ ಓ ಮದ್ನ...', ೫)'ಕನ್ನಡಾಂಬೇ ನಾಡಿನಲ್ಲಿ...',
ಕ.ಸಾ: ಪ್ರೀತಿಸಿದ ಹುಡುಗಿಯನ್ನು ದಕ್ಕಿಸಿಕೊಳ್ಳಲು ಪ್ರಿಯಕರನಾದ ಯುವಕ ಏನೆಲ್ಲಾ ಕಷ್ಟಗಳನ್ನು ಸಹಿಸ ಬೇಕಾಗುತ್ತದೆ ಎಂಬುದರ ಚಿತ್ರಣ.

೧೭೫೫. ಬಂಗಾರದ ಮನೆ

(೧೯೯೭ / ವರ್ಣ / ಸಾಮಾಜಿಕ)
ಲಾ: ಚಿನ್ನಿ ಚಿತ್ರ
ಪ್ರೊ: ಜಯಶ್ರೀದೇವಿ
ನಿ: ಭಾರ್ಗವ
ಸ.ನಿ: ಕೆ.ಟಿ.ಹಿರೇಮಠ್, ಉದಯ್
ಅ: ದೇವರಾಜ್, ಸಿತಾರಾ, ಕೌಶಿಕ್, ಹೇಮಾ, ಪದ್ಮಾವಾಸಂತಿ, ಆಶಾಲತಾ, ಧೀರೇಂದ್ರ ಗೋಪಾಲ್, ಶಿವಕುಮಾರ್, ಕಾಶೀನಾಥ್
ಕ: ಸಾಯಿಪ್ರಕಾಶ್
ಚಿ.ಕ: ಭಾರ್ಗವ
ಮಾ: ಕುಣಿಗಲ್ ನಾಗಾಭೂಷಣ್
ಗೀ: ಸು.ರುದ್ರಮೂರ್ತಿಶಾಸ್ತ್ರಿ, ದೊಡ್ಡರಂಗೇಗೌಡ, ಶ್ಯಾಮಸುಂದರ ಕುಲಕರ್ಣಿ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ, ಮಂಜುಳಾ ಗುರುರಾಜ್
ಸಂ: ನಾಗೇಶ್ ಯಾದವ್
ಛಾ: ಡಿ.ವಿ.ರಾಜಾರಾಂ
ಕಲೆ: ರಮೇಶ್
ಸ: ರಾಜನ್ - ನಾಗೇಂದ್ರ
ಧ್ವ: ಪ್ರಸಾದ್
ನೃ: ಸಂಪತ್
ಸಾ: ನಂಜುಂಡಿ ನಾಗರಾಜ್
ಸ್ಟು: ಪ್ರಸಾದ್
ಹಾ: ೧) 'ಕನಸಲ್ಲು ನೀನೆ ಮನದಲ್ಲು ನೀನೇ ....', ೨) 'ನೀ ಪ್ರೇಮ ಜ್ಯೋತಿ ...'
ಕ.ಸಾ: ಮನೆಯಲ್ಲಿನ ಎಲ್ಲ ಸದಸ್ಯರು ಪರಸ್ಪರ ಹೊಂದಿಕೊಂಡು ನಡೆದರೆ ಬಂಗಾರದ ಮನೆಯಾಗುತ್ತದೆ ಎಂಬುದನ್ನು ನಿರೂಪಿಸುವ ಸಾಂಸಾರಿಕ ಕಥೆಯ ಚಿತ್ರ.

೧೭೫೬. ಯಾರು ?

(೧೯೯೬ / ವರ್ಣ / ಪತ್ತೇದಾರಿ)
ಲಾ: ಜಯಚಂದ್ರ ಪ್ರೊಡಕ್ಷನ್
ಪ್ರೊ: ಕೇಶವ.ಬಿ.ಆರ್
ನಿ: ಕೇಶವ.ಬಿ.ಆರ್
ಸ.ನಿ: ಮೋಹನ ಜುನೇಜ, ವೆಂಕಟೇಶ್ ಪಂಚಾಂಗ್
ಅ: ಭಾಗ್ಯಪ್ರಕಾಶ್, ನಾಗೇಶ್ ಮಯ್ಯ, ಆನಂದ್, ಪ್ರಸಾದ್, ಅಂಜಲಿ, ಜಯಸಿಂಹ ಮುಸುರಿ, ಬಿ.ಆರ್.ಕೇಶವ, ಗುರುದತ್ ಮುಸುರಿ
ಕ/ಚಿ.ಕ: ಕೇಶವ.ಬಿ.ಆರ್
ಮಾ: ಮೋಹನ ಜುನೇಜ
ಸಂ: ರಾಜಶೇಖರ್ ರೆಡ್ಡಿ
ಛಾ: ವೈ.ಎ.ಸೀನು
ಕಲೆ: ಮೋಹನ್
ಸ: ಸದ್ಗುಣ ರಾಜ್
ಧ್ವ: ಆದರ್ಶ ಫಿಲಂ ಇನ್‌ಸ್ಟಿಟ್ಯೂಟ್
ವ: ವಿಜಯ್
ಪ್ರ: ಚಂದ್ರು
ಕ.ಸಾ: ಒಂದು ಹೆಣ್ಣಿಗೆ ಮೂರು ಜನ ಪ್ರಿಯಕರರು. ಈ ಸಂದರ್ಭದಲ್ಲಿ ನಡೆಯುವ ಹೆಣ್ಣಿನ ಕೊಲೆಯ ಸುತ್ತ ಹೆಣೆದ ಕಥೆ. ಕೊನೆಗೆ ನಿಜವಾದ ಅಪರಾಧಿಯ ಪತ್ತೆ.

೧೭೫೭. ಜನನಿ

(೧೯೯೬ / ವರ್ಣ / ಸಾಮಾಜಿಕ)
ಲಾ: ಭಾರತ್ ಮೂವೀ ಮೇಕರ್ಸ್
ಪ್ರೊ: ಎಸ್.ಎ.ಭಾಷಾ
ನಿ: ಶ್ರೀವತ್ಸ ರಂಗನಾಥ್
ಸ.ನಿ: ಆಫ್ತಾಬ್ ಅಹಮದ್ ಖಾನ್
ಅ: ಸೋಹಿನಿ, ನವೀನ್, ರಾಕ್‌ಲೈನ್ ವೆಂಕಟೇಶ್, ಶ್ರೀನಿವಾಸ್ ಪ್ರಭು, ರಾಮದಾಸ್, ಯದುಪ್ರಕಾಶ್, ವಿದ್ಯಾಶ್ರೀ, ಡಾ|ಭಾರತ್, ಸರೋಜಮ್ಮ, ಶಾಂತಮ್ಮ, ಚೆನ್ನಬಸಪ್ಪ, ಮೋಹನ್, ರಂಜನಿ ಪ್ರಭು, ಸುಭಾಷ್ ಕಡಕೋಳ್
ಕ/ಚಿ.ಕ/ಮಾ: ಶ್ರೀವತ್ಸ ರಂಗನಾಥ್
ಸಂ: ಸುರೇಶ್ ಅರಸ್
ಛಾ: ಎಸ್.ರಾಮಚಂದ್ರ
ಕಲೆ: ಸುಭಾಷ್ ಕಡಕೋಳ್
ಸ: ಹಿತೇಶ್ ಮೆಹ್ತಾ
ಧ್ವ: ಎಸ್.ಮದನ್
ವ: ವಿಜಿ
ಪ್ರ: ಶ್ಯಾಮ್
ಸೆ: ಉದ - ೩೭೯೬.೦೦, ರೀಲು - ೧೩, ೩೧.೦೧.೯೫
ಕ.ಸಾ: ಗಂಗಪ್ಪನನ್ನು ಮದುವೆಯಾದ ಶಿವನಂಜೇಗೌಡ. ಪುಢಾರಿ ಶಂಕರಪ್ಪನ ಭೋದನೆಯಿಂದಾಗಿ ಹೆಂಡತಿಯನ್ನು ನಿಯಂತ್ರಣದಲ್ಲಿಟ್ಟುಕೊಳ್ಳಲು ಅವಳ ಮೇಲೆ ಕ್ರೌರ್ಯ ತೋರಿಸುತ್ತಾನೆ. ಜವಳಿ ವ್ಯಾಪಾರಿ ಖಾಸಿಂಗೌಡನ ಮಾವಿನತೋಪನ್ನು ಗುತ್ತಿಗೆಗೆ ಪಡೆಯುತ್ತಾನೆ. ಗರ್ಭಿಣಿಯಾದ ಗಂಗಪ್ಪ ಗಂಡನಿಗೆ ತಿಳಿಯದಂತೆ ತೋಪಿನಿಂದ ಮಾವಿನ ಕಾಯಿ ತರಿಸಿಕೊಳ್ಳುತ್ತಾಳೆ. ಖಾಸಿಂ, ಮಾನವೀಯ ದೃಷ್ಟಿಯಿಂದ ಗರ್ಭಿಣಿಗೆ ಸೀರೆ ಕಳಿಸುತ್ತಾನೆ. ಗೌಡ ಪಂಚಾಯಿತಿ ಕರೆದು ಹೆಂಡತಿಯನ್ನು ತ್ಯಜಿಸುತ್ತಾನೆ. ಖಾಸಿಂ ಎಲ್ಲರ ವಿರೋಧವನ್ನೆದುರಿಸಿ ಆವಳಿಗೆ ಆಶ್ರಯ ಕಲ್ಪಿಸುತ್ತಾನೆ. ಅವಳಿಗೆ ಹುಟ್ಟಿದ ಮಗುವನ್ನು ಕೊಂಡೊಯ್ದು ಗೌಡ ಪಟ್ಟಣದಲ್ಲಿ ಓದಿಸುತ್ತಾನೆ. ಜನರ ಮಾತಿಗೆ ಬೇಸತ್ತ ಗಂಗಪ್ಪ ಮತ್ತು ಖಾಸಿಂ ದಂಪತಿಗಳಾಗುತ್ತಾರೆ. ಅವರಿಬ್ಬರ ಮಗ ಸಲೀಂ ಬೆಳದು ಎಳನೀರು ವ್ಯಾಪಾರಿಯಾಗುವನು. ಸಂದರ್ಭ ತಾಯಿ - ಮಕ್ಕಳನ್ನು ಒಂದುಗೂಡಿಸುತ್ತದೆ. ಪುಢಾರಿ ಜಾತಿ ಕಲಹದ ವಿಷಬೀಜ ಬಿತ್ತಿ ಊರನ್ನು ಒಡೆಯುತ್ತಾನೆ. ಕೋಮು ಸಂಘರ್ಷದಲ್ಲಿ ಗೌಡ ಹಾಗೂ ಗಂಗಮ್ಮನ ಇಬ್ಬರು ಮಕ್ಕಳು ಬಲಿಯಾಗುತ್ತಾರೆ. ಹೆಣ್ಣಿನ ಶೋಷಣೆ, ಸಮಾಜದ ಶಾಂತಿ ಕದಡುವ ಧೂರ್ತರು, ರಾಷ್ಟ್ರೀಯ ಭಾವೈಕ್ಯತೆಗೆ ಬೀಳುತ್ತಿರುವ ಪೆಟ್ಟು, ಮಾನವೀಯ ಮೌಲ್ಯ ಇವೆಲ್ಲವನ್ನೂ ಒಳಗೊಂಡ ಕಥೆ.

೧೭೫೮. ಕರ್ಪೂರದ ಗೊಂಬೆ

(೧೯೯೬ / ವರ್ಣ / ಸಾಮಾಜಿಕ)
ಲಾ: ನಿಮಿಷಾಂಬಾ ಪ್ರೊಡಕ್ಷನ್ಸ್
ಪ್ರೊ: ಎಂ.ಚಂದ್ರಶೇಖರ್
ನಿ: ಎಸ್.ಮಹೇಂದರ್
ಸ.ನಿ: ಜಿ.ಸರಸಕುಮಾರ್, ಎಂ. ಶ್ರೀಧರ್
ಅ: ರಮೇಶ್, ಶ್ರುತಿ, ಶರಣ್, ಶ್ವೇತ, ಲೋಕೇಶ್, ಆಶಾಲತಾ, ಶ್ರೀನಿವಾಸಮೂರ್ತಿ, ದೊಡ್ಡಣ್ಣ, ಚಿಕ್ಕಣ್ಣ, ರೇಖಾದಾಸ್, ವಾಣಿಶ್ರೀ, ತಿಪ್ಪೇಸ್ವಾಮಿ, ಪ್ರಕಾಶ್, ಸೋಮಣ್ಣ, ಬೇಬಿಲಕ್ಷ್ಮಿ, ಮಾ|ಆನಂದ್, ಬಿರಾದಾರ್, ವಿಜಯ್
ಕ/ಚಿ.ಕ: ಎಸ್.ಮಹೇಂದರ್
ಮಾ: ಬಿ.ಎ.ಮಧು
ಗೀ: ಹಂಸಲೇಖ
ಗಾ: ಮನು, ಚಿತ್ರ
ಸಂ: ಪಿ.ಆರ್.ಸೌಂದರ ರಾಜ್
ಛಾ: ಕೃಷ್ಣ ಕುಮಾರ್
ಕಲೆ: ವೇಣು
ಸ: ಹಂಸಲೇಖ
ಧ್ವ: ಶಂಕರ್, ಕೃಷ್ಣಮೂರ್ತಿ, ಪೀಟರ್
ನೃ: ದೇವಾ, ಸಂಪತ್
ಸಾ: ಸೂರ್ಯಪ್ರಕಾಶ್
ವ: ರಾಮನಾಥ್
ಪ್ರ: ಗುರುಮೂರ್ತಿ, ಕೇಶ: ಚಾರಿ
ಹಾ: ೧) 'ಕರ್ಪೂರದಾ ಗೊಂಬೆಯಲಿ ಪ್ರೀತಿ ಕಂಡೆ...', ೨) 'ಬಂಧು ಬಂಧು ಓ ಪ್ರೇಮದ ಸಿಂಧು...', ೩) 'ತಬ್ಬಲಿಗೆ ಈ ತಬ್ಬಲಿಯಾ ತವರಿದೆ...', ೪) 'ಹೋ ಮಳೆ ಬಿಲ್ಲೆ...', ೫) 'ಓ ಮಲ್ಲಿಗೆಯೇ ಹರಸಿ ಹಾಡುವೆ...', ೬) 'ತಬ್ಬಲಿಗೆ ಈ ತಬ್ಬಲಿಯಾ...'
ಕ.ಸಾ: ತಂಗಿಯ ಹಿತಕ್ಕಾಗಿ ತನ್ನ ಸರ್ವಸ್ವವನ್ನು ತ್ಯಾಗ ಮಾಡುವ ಅಕ್ಕ, ಅಕ್ಕನಿಗಾಗಿ ಎಂಥ ತ್ಯಾಗಕ್ಕಾದರೂ ಸಿದ್ಧಳಾಗುವ ತಂಗಿ - ಇಬ್ಬರಿಬ್ಬರ ನಡುವಣ ಅನ್ಯೋನ್ಯ ಬಾಂಧವ್ಯದ ಚಿತ್ರಣ.

೧೭೫೯. ಸಮಯಕ್ಕೊಂದು ಸುಳ್ಳು

(೧೯೯೬ / ವರ್ಣ / ಸಾಮಾಜಿಕ)
ಲಾ: ಬಿ.ಆರ್.ಪ್ರೊಡಕ್ಷನ್ಸ್
ಪ್ರೊ: ಕೆ.ಎಸ್.ರಾಮನ್. ಕೆ.ಬಾಲಕೃಷ್ಣ
ನಿ: ಸಾಯಿಪ್ರಕಾಶ್
ಸ.ನಿ: ಕಲಾಗಂಗೋತ್ರಿ ಮಂಜು
ಅ: ಅನಂತ್‌ನಾಗ್, ಶರಣ್ಯ, ಸಿಲ್ಕ್ ಸ್ಮಿತಾ, ಡಿಸ್ಕೋ ಶಾಂತಿ, ಉಮಾಶ್ರೀ, ಸತ್ಯಭಾಮಾ, ಮುಖ್ಯಮಂತ್ರಿ ಚಂದ್ರು, ಸಿಹಿಕಹಿ ಚಂದ್ರು, ಕಮಿನೀಧರನ್, ಉಮೇಶ್, ಶಿವಕುಮಾರ್, ಬೆಂಗಳೂರು ನಾಗೇಶ್, ಶ್ರೀರಕ್ಷಾ, ನವನೀತ, ತಾರಾ, ವನಿತಾ ವಾಸು
ಕ/ಚಿ.ಕ: ಸಾಯಿಪ್ರಕಾಶ್
ಮಾ: ಕುಣಿಗಲ್ ನಾಗಭೂಷಣ್
ಗೀ: ಆರ್.ಎನ್.ಜಯಗೋಪಾಲ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ
ಸಂ: ಕೆ.ನರಸಯ್ಯ
ಛಾ: ಬಾಷಾಲಾಲ್
ಕಲೆ: ಬಾಬು
ಸ: ಉಪೇಂದ್ರ ಕುಮಾರ್
ಧ್ವ: ಮೆನನ್, ಕೋದಂಡಪಾಣಿ
ನೃ: ಶಿವಶಂಕರ್
ವ: ಜಯಚಂದ್ರ
ಪ್ರ: ಕುಮಾರ್ ಸೊಣವಿನಕೆರೆ
ಕ.ಸಾ: ಪಟಿಂಗನಾದ ಕೃಷ್ಣ ಒತ್ತಡದಿಂದ ಹೊರಬರಲು ಸುಮ್ಮನೆ ಸುಳ್ಳು ಹೇಳುತ್ತಿರುತ್ತಾನೆ. ಅವನ ಹೆಂಡತಿ ರುಕ್ಮಿಣಿ ಗಂಡನ ಮೇಲೆ ಅತಿಯಾದ ನಂಬಿಕೆ ಇರಿಸಿಕೊಂಡಿರುತ್ತಾಳೆ. ಕೃಷ್ಣನ ಗೆಳೆಯ ವಿನಯ್. ಕೃಷ್ಣ ಸುಳ್ಳು ಹೇಳುವುದನ್ನು ಬಿಡಿಸಲು ಏನೋ ಪ್ರಯತ್ನ ಮಾಡುತ್ತಾನೆ. ಸಾಧ್ಯವಾಗುವುದಿಲ್ಲ. ಮದುವೆಯಾದ ರಾಧಳನ್ನು ಕೃಷ್ಣ ಭಾವನಾತ್ಮಕವಾಗಿ ಅತಿಯಾಗಿ ಹಚ್ಚಿಕೊಳ್ಳುತ್ತಾನೆ. ಇದು ರುಕ್ಮಿಣಿಗೆ ತಿಳಿಯುತ್ತದೆ. ಅದೇ ಸಮಯದಲ್ಲಿ ಕೃಷ್ಣನಿಗ ರುಕ್ಮಿಣಿಯ ಮೇಲೆ ಸಂಶಯ ಹುಟ್ಟಿಕೊಂಡು ವಿಚ್ಛೇದನದ ಮಟ್ಟಿಕ್ಕೂ ಹೋಗುತ್ತದೆ. ಅವರ ಅದು ತನ್ನ ತಪ್ಪು ಗ್ರಹಿಕೆ ಎಂದು ಕೃಷ್ಣನಿಗೆ ಗೊತ್ತಾಗಿ ಪಶ್ಚಾತ್ತಾಪ ಪಡುತ್ತಾನೆ.

೧೭೬೦. ವಸಂತಕಾವ್ಯ

(೧೯೯೭ / ವರ್ಣ / ಸಾಮಾಜಿಕ)
ಲಾ: ಐ.ಎ.ಎಂಟರ್‌ಪ್ರೈಸಸ್
ಪ್ರೊ: ಎಂ.ವಿಶ್ವನಾಥ್, ಹೆಚ್.ಚಂದ್ರಶೇಖರ್
ನಿ: ಎಸ್.ನಾರಾಯಣ್
ಸ.ನಿ: ರಮೇಶ್ ಬಾಬು, ಸಿದರಾಮಯ್ಯ
ಅ: ಕೆ.ಶಿವರಾಮು, ಸುಧಾರಾಣಿ, ಪ್ರಕಾಶ್ ರೈ, ಲೀಲಾವತಿ, ರಾಜಾನಂದ್, ಸಿದ ರಾಮಯ್ಯ, ಜಾಕಿ ಶಿವು, ಟೆನ್ನಿಸ್ ಕೃಷ್ಣ, ಹೊನ್ನವಳ್ಳಿ ಕೃಷ್ಣ, ಸುರೇಶ್ ಶರ್ಮ
ಕ: ಮೈಸೂರು ಹರೀಶ್
ಚಿ.ಕ/ಮಾ: ಎಸ್.ನಾರಾಯಣ್
ಗೀ: ಎಸ್.ನಾರಾಯಣ್, ಎಂ.ಎನ್.ವ್ಯಾಸರಾವ್, ವಿ.ಮನೋಹರ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ, ಲೀಲಾವತಿ, ರಾಜೇಶ್, ಬೇಬಿ ಶ್ರೀಸೂಕ್ತ ಅರವಿಂದ್
ಸಂ: ಪಿ.ಆರ್.ಸೌಂದರ ರಾಜ್
ಛಾ: ಪಿ.ಕೆ.ಎಚ್.ದಾಸ್
ಕಲೆ: ಚಿ.ನಾ.ಸು.ಮೂರ್ತಿ
ಸ: ರಾಜೇಶ್ ರಾಮನಾಥ್



ಧ್ವ: ಕಣ್ಣನ್, ಕೃಷ್ಣಮೂರ್ತಿ, ಪೀಟರ್
ನೃ: ದೇವಾ, ಸಂಪತ್
ಸಾ: ಡೈನಾಮಿಕ್ ಸುರೇಶ್, ನಂಜುಂಡಿ ನಾಗರಾಜ್
ವ: ವಿಠಲ್ ರಾವ್
ಪ್ರ: ವಿಠಲ್ ಬಾಬು
ಸ್ಟು: ಪ್ರೀಮಿಯರ್, ಪ್ರಸಾದ್ ಕಲರ್ ಲ್ಯಾಬ್
ಕ.ಸಾ: ಹಣದಿಂದಲೇ ಎಲ್ಲವನ್ನೂ ಗೆಲ್ಲಬಹುದು ಎಂಬ ಮನೋಭಾವದ ನಾಯಕಿ. ಸ್ವಾಭಿಮಾನಿ ನಾಯಕ. ಇವರಿಬ್ಬರೂ ಜಟಾಪಟಿ. ಅಪಘಾತವೊಂದರಲ್ಲಿ ನಾಯಕಿ ತನ್ನ ನೆನಪಿನ ಶಕ್ತಿಯನ್ನು ಕಳೆದುಕೊಳ್ಳುತ್ತಾಳೆ. ಸಂದರ್ಭವೊಂದರಲ್ಲಿ ಆಕೆ ನಾಯಕನನ್ನೇ ಮದುವೆಯಾಗಿ ಗರ್ಭಿಣಿಯಾಗುತ್ತಾಳೆ. ಮರಳಿ ತನ್ನ ನೆನಪಿನ ಶಕ್ತಿಯನ್ನು ಪಡೆದ ನಾಯಕಿ, ನಾಯಕನನ್ನು ತಿರಸ್ಕರಿಸುತ್ತಾಳೆ. ಸಂದರ್ಭ ಅವರಿಬ್ಬರ ನಡುವಿನ ವಿರಸವನ್ನು ಮರೆಸಿ ಮತ್ತೆ ಅವರಿಬ್ಬರೂ ಒಂದಾಗುವಂತೆ ಮಾಡುತ್ತದೆ.

೧೭೬೧. ಪೂಜಾ

(೧೯೯೬ / ವರ್ಣ / ಸಾಮಾಜಿಕ)
ಲಾ: ಶ್ರೀ ಗುರು ಸಾರ್ವಭೌಮ ಪಿಕ್ಚರ್ಸ್
ಪ್ರೊ: ನೀಲಕಂಠ ಪಾಟೀಲ್, ಟಿ.ಎಂ.ನರೇಂದ್ರಸಿಂಗ್
ನಿ: ಭಾರತೀ ಶಂಕರ್
ಸ.ನಿ: ಶರಶ್ಚಂದ್ರ, ನಾಗೇಶ್, ನಾಗರಾಜ್
ಅ: ರಾಮಕುಮಾರ್, ಪೂಜಾ, ನವೀನ್ ಚಂದರ್, ಮಧುಕರ್, ದೊಡ್ಡಣ್ಣ, ಸಿಂಧೂ ರಾವ್, ಕರಿಬಸವಯ್ಯ, ಮೈನಾ
ಕ: ಹೇಮರಾಜ್
ಚಿ.ಕ: ಭಾರತೀ ಶಂಕರ್
ಮಾ: ಕೃಷ್ಣಮೂರ್ತಿ ನಾಡಿಗ್
ಗೀ: ಹಂಸಲೇಖ, ಹರೀಶ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ
ಸಂ: ಸುರೇಶ್ ಅರಸ್
ಛಾ: ಎಸ್.ರಾಮಚಂದ್ರ
ಸ: ಹಂಸಲೇಖ
ಧ್ವ: ಪೀಟರ್, ಕೃಷ್ಣಮೂರ್ತಿ
ನೃ: ರಾಜಶೇಖರ್

ಸಾ: ಥ್ರಿಲ್ಲರ್ ಮಂಜು
ವ: ವಿಜಯ ಕುಮಾರ್
ಪ್ರ: ವೆಂಕಟಸ್ವಾಮಿ
ಸ್ಟು: ಸಂಕೇತ್, ಕಂಠೀರವ
ಹಾ: ೧) 'ದೇವತೆ ಓ ನನ್ನ ದೇವತೆ...', ೨) 'ಅನುರಾಗ ಚೆಲ್ಲಿದಳು...', ೩) 'ಹುಲ್ಲೇ ಹುಲ್ಲೇ ಹುಲ್ಲೇ...', ೪) 'ನನ್ನ ಕವನವ...', ೫) 'ನೂರಾರು ಹುಡುಗಿಯರಲ್ಲಿ...'
ಕ.ಸಾ: ಪೂಜಾ ಚೆಲುವೆ. ಇಬ್ಬರು ಯುವಕರು ಅವಳನ್ನು ಮನಸಾರೆ ಪ್ರೀತಿಸಿದರು. ಆದರೆ ಪೂಜಾ ಇವರಿಬ್ಬರಿಗೂ ಸಿಗದೆ ಮೂರನೆಯವನ ಪಾಲಾಗುವುದೇ ಕಥೆ. ತ್ರಿಕೋಣ ಪ್ರೇಮ - ಆಸೆ ನಿರಾಸೆಗಳೆಲ್ಲ ತುಂಬಿದೆ.

೧೭೬೨. ಸೋಮ

(೧೯೯೬ / ವರ್ಣ / ಸಾಮಾಜಿಕ)
ಲಾ: ಆರ್.ಕೆ.ಫಿಲಂ ಕ್ರಿಯೇಷನ್ಸ್
ಪ್ರೊ: ಹೆಚ್.ರಾಮಮೂರ್ತಿ
ನಿ: ವೈ.ಯೇಸುದಾಸ್
ಸ.ನಿ: ಮಂಜುನಾಥ್
ಅ: ಜಗ್ಗೇಶ್, ಶುಭಶ್ರೀ, ಶ್ರೀನಾಥ್, ಸುಂದರ ರಾಜ್, ಗುರುದತ್, ಸತ್ಯಮೂರ್ತಿ, ಬಿ.ವಿ.ರಾಧಾ, ಶೋಭರಾಜ್, ಎಂ.ಎಸ್.ಕಾರಂತ್
ಕ/ಚಿ.ಕ: ವೈ.ಯೇಸುದಾಸ್
ಮಾ: ಸಾಯಿನಾಥ್
ಗೀ: ಕಲ್ಯಾಣ್
ಗಾ: ಮನು, ಮಂಜುಳಾ ಗುರುರಾಜ್
ಛಾ: ರಮೇಶ್ ಬಾಬು
ಸ: ಕಲ್ಯಾಣ್
ನೃ: ಸತೀಶ್, ಶಿವಶಂಕರ್
ಸಾ: ಕೆ.ಡಿ.ವೆಂಕಟೇಶ್

ಹಾ: ೧) 'ಲಲೂಗೂ ಲಲೂಗು...', ೨) 'ತಾರೆಗಳ ತಾರೆ...', ೩) 'ಹಾಡಲೂ ನೋಡಲೂ...', ೪) 'ಈ ಕನ್ನಡ ಮಣ್ಣಿನ ಮಕ್ಕಳು ನಾವಮ್ಮ...',
ಕ.ಸಾ.: ಮನಪರಿವರ್ತನೆಯಾದ ರೌಡಿಯೊಬ್ಬ ಸಮಾಜದಲ್ಲಿ ಒಳ್ಳೆಯ ರೀತಿಯಲ್ಲಿ ಬದುಕಲು ಪ್ರಯತ್ನಿಸುವ ಚಿತ್ರಣ.

೧೭೬೩. ಅರಿಶಿನ ಕುಂಕುಮ

(೧೯೯೬ / ವರ್ಣ / ಸಾಮಾಜಿಕ)
ಲಾ: ರಾಮ್ ಬಾಬು ಫಿಲಂಸ್
ಪ್ರೊ: ಪದ್ಮಾ ಆರ್.ಎಸ್.ಗೌಡ, ಎಂ.ಬಿ.ಬಾಬು
ನಿ: ಜಿ.ಕೆ.ಮುದುರಾಜ್
ಸ.ನಿ: ಮೋಹನ್ ಮಾಳಗಿ
ಅ: ಮಾಲಾಶ್ರೀ, ಶ್ರೀಧರ್, ಗಿರಿಜಾ ಲೋಕೇಶ್, ದಿಲೀಪ್, ಲೋಕನಾಥ್, ಸುಧಾ ನರಸಿಂಹರಾಜು, ಕೃಷ್ಣೇಗೌಡ, ಹೊನ್ನವಳ್ಳಿ ಕೃಷ್ಣ, ಪುಷ್ಪ ಸ್ವಾಮಿ, ಭರತ್ ಭಾಗವತರ್, ಬ್ಯಾಂಕ್ ಜನಾರ್ದನ್, ಬಿರಾದಾರ್, ಬೂದಾಳ್ ಕೃಷ್ಣಮೂರ್ತಿ, ಶಂಕರ್ ಭಟ್, ಶ್ರೀಶೈಲನ್, ಬಿ.ಜಯಾ, ಸರೋಜಾ ಶ್ರೀಶೈಲನ್, ಮಾಚೇತನ್,

ಬೇಬಿ ಕೀರ್ತನಾ, ಆರ್.ಎಸ್.ಗೌಡ
ಕ: ಶ್ರೀಮತಿ ಪದ್ಮ, ಆರ್.ಎಸ್.ಗೌಡ, ಎಂ.ಬಿ.ಬಾಬು
ಚಿ.ಕ: ಜಿ.ಕೆ.ಮುದುರಾಜ್
ಮಾ: ಕುಣಿಗಲ್ ನಾಗಭೂಷಣ್
ಗೀ: ದೊಡ್ಡರಂಗೇಗೌಡ, ಶಾಮಸುಂದರ ಕುಲಕರ್ಣಿ, ಪಿ.ಹಿಲೇಶ್ವರ



ಗಾ: ಸಿ.ಅಶ್ವತ್ಥ್, ಬಿ.ವಿ.ಅತ್ರಿ, ಮಂಜುಳಾ ಗುರುರಾಜ್, ರಾಜಕುಮಾರ್, ಮಾ|ರಾಕೇಶ್, ಮಾ|ಚೇತನ್, ಎಲ್.ಎನ್.ಶಾಸ್ತ್ರಿ
ಸಂ: ಪ್ರಸಾದ್
ಛಾ: ಮನೋಹರ್
ಸ: ವಿ.ಮನೋಹರ್
ಧ್ವ: ಸಂಕೇತ್
ನೃ: ಅಂಬಿ, ಮಹೇಂದ್ರನ್
ಸಾ: ಕೆ.ಡಿ.ವೆಂಕಟೇಶ್
ವ: ನಾಗರಾಜ್
ಪ್ರ: ಮೋಹನ್
ಹಾ: ೧) 'ಅಂಜದಿರು ಹೆಣ್ಣೆ...', ೨) 'ಮದುವೆ ಅನ್ನೋದು ಒಂದು...', ೩) 'ಅರಿಶಿನ ಕುಂಕುಮ...', ೪) 'ನಮ್ಮ ಸಂಸಾರ ಆನಂದ...'
ಸೆ: ರೀಲು - ೧೪
ಕ.ಸಾ: ತುಂಬಿದ ಮನೆ. ಆನಂದ ಸಾಗರದಂತಿದ್ದ ಸಂಸಾರ. ಮನೆಗಾಗಿ ದುಡಿಯುವ ಮಗ ಖಾಯಿಲೆಯಿಂದ ಸಾಯುತ್ತಾನೆ. ತಾನು ನಿರ್ವಹಿಸಬೇಕಾಗಿದ್ದ, ಉಳಿದು ಹೋದ ಜವಾಬ್ದಾರಿಗಳನ್ನು ಸಾಯುವ ಮುನ್ನ ಹೆಂಡತಿಯ ಮೇಲೆ ಹೊರಿಸಿದ ಆತ, ಆ ಎಲ್ಲ ಜವಾಬ್ದಾರಿಗಳೂ ತೀರುವ ತನಕ ಅವಳು ಅರಿಶಿನ-ಕುಂಕುಮ ತೆಗೆಯಬಾರದೆಂದು ಭಾಷೆ ತೆಗೆದುಕೊಳ್ಳುತ್ತಾನೆ. ಆಕೆ ಪತಿಯ ಆಸೆಯಂತೆ ನಡೆದು ಎಲ್ಲ ಜವಾಬ್ದಾರಿಗಳನ್ನೂ ನಿರ್ವಹಿಸಿ, ಎಲ್ಲರ ಮನಸ್ಸನ್ನೂ ಗೆಲ್ಲುತ್ತಾಳೆ.

೧೭೬೪. ನಾದಸುರಭಿ

(೧೯೯೬ / ವರ್ಣ / ಸಾಮಾಜಿಕ)
ಲಾ/ಪ್ರೊ: ಕ್ಲಾಸ್ ಒನ್ ಪ್ರೊಡಕ್ಷನ್
ನಿ: ಆರೂರ್ ಪಟ್ಟಾಭಿ
ಅ: ಸುನೀಲ್, ಸೋಹಿನಿ, ವಾಸು, ರತ್ನಾಕರ್, ಸದಾಶಿವ ಸಾಲಿಯಾನ್, ಉತ್ತರ, ಶ್ರೀದೇವಿ, ಶೈಲೇಶ್ ಮಲ್ನಾಡ್, ಮಾ|ದ್ಯಾವಿಕ್, ಬೇಬಿ ಶುಭಾ, ಪುಂಡಲೀಕ ಸೇಟ್
ಕ: ಡೊನಾಲ್ಡ್ ಸ್ನೇಹಿತರು
ಚಿ.ಕ/ಮಾ: ಸೋರಟ್ ಅಶ್ವತ್
ಗೀ: ಸೋರಟ್ ಅಶ್ವತ್, ಪುರಂದರ ದಾಸರು
ಗಾ: ನರಸಿಂಹನಾಯಕ್, ಬಿ.ಆರ್. ಛಾಯಾ
ಸಂ: ಆರ್.ಆರ್.ರೆಡ್ಡಿ
ಛಾ: ಶ್ರೀರಂಗ
ಸ: ರಾಜಮಣಿ ಸಾಹೇಬ್

ಧ್ವ: ಗಾನಲಹರಿ, ಪ್ರಸಾದ್ ರೆಕಾರ್ಡಿಂಗ್
ನೃ: ಉಡುಪಿ ಜಯರಾಂ
ಹಾ: ೧) 'ಗೆಳೆಯಾ ಬಾ ಸನಿಹ...', ೨) 'ಓಂಕಾರ ನಾದ...', ೩) 'ಕೃಷ್ಣಾ ನಿನ್ನ ಪಾದದಲ್ಲಿ...', ೪) 'ಲಾಲಿ ಲಾಲಿ...', ೫) 'ಗೆಳೆಯ ಬಾ ಸನಿಹ...', ೬) 'ಸುಖ ಸವಿ...'
ಸೆ: ಉದ್ದ - ೩೩೨೯.೪೧, ರೀಲು ೧೩, ೩೧ - ೦೮ ೯೦
ಕ.ಸಾ: ಸಂಗೀತ - ನೃತ್ಯ ಎರಡರ ಅವಿನಾಭಾವದಂತೆ ಎರಡು ಕಲಾವಿದ ಮನಸ್ಸುಗಳ ಪ್ರೇಮ - ವಿರಹ - ನಿರ್ಧಾರಗಳ ಸುತ್ತ ಹೆಣೆದ ಕಥೆ. ಮುರಳಿ ಸಂಗೀತ ವಿದ್ವಾಂಸರ ಮಗ. ಕಂಡ ಕಂಡ ದೇವರ ಮೊರೆ ಹೋದ ಮೇಲೆ ಬಹುಕಾಲದ ನಂತರ ಹುಟ್ಟಿದ ಸುಪುತ್ರ. ತಾಯಿಯಲ್ಲದೆ, ತಂದೆಯ ಪ್ರೀತಿಯಲ್ಲಿ ಬೆಳೆದವಳು ಸುಧಾ. ಮುರಳಿಯನ್ನು ಕಾಡಿದ ಜ್ವರ ಅವನ ಮಾತಿನ ಶಕ್ತಿಯನ್ನು ಕಿತ್ತುಕೊಂಡಿತು. ಮಗನ ಮೇಲೆ ತಂದೆ ದ್ವೇಷ. ತಂದೆ ಸಂಗೀತವನ್ನೇ ದೂರ ಮಾಡಿದ. ಜಿಗುಪ್ಸೆಗೊಂಡ ಮುರಳಿ ಸಾವನ್ನರಸಿ ನಡೆದಾಗ ಸನ್ಯಾಸಿಯೊಬ್ಬನ ಆದೇಶದಿಂದಾಗಿ ಶಿಳ್ಳೆ ಹಾಕುವ ಮೂಲಕ ಸಂಗೀತವನ್ನು ದುಡಿಸಿಕೊಂಡ. ಸುಧಾಳ ತಂದೆಗೆ ಮಗಳು ಮುರಳಿಯನ್ನು ಮದುವೆಯಾಗುವುದು ಇಷ್ಟವಿಲ್ಲದೆ ಬೇರೆ ಸಂಬಂಧ ನೋಡಿದ. ದಿಕ್ಕುಗಾಣದೆ ಸುಧಾ ಹಾವಿನ ಹುತ್ತದಲ್ಲಿ ಕೈಯಿರಿಸಿ ಸಾವನ್ನಪ್ಪುವಳು. ವಿಷಯ ತಿಳಿದ ಮುರಳಿ ತನ್ನ ಶಿಳ್ಳೆ ಸಂಗೀತದಿಂದ ಹುತ್ತದಿಂದ ಹಾವನ್ನು ಬರುವಂತೆ ಮಾಡಿ, ವಿಷವನ್ನು ಹೀರುವಂತೆ ಮಾಡುತ್ತಾನೆ. ಸುಧಾ - ಮುರಳಿ ಒಂದಾಗುತ್ತಾರೆ. ಸಹಜ - ಅಸಹಜಗಳ ಮಿಶ್ರಣ.

೧೭೬೫. ಮನೆ ಮನೆ ರಾಮಾಯಣ

(೧೯೯೬ / ವರ್ಣ / ಸಾಮಾಜಿಕ)
ಲಾ: ಶ್ರೀದೇವಿ ಚಿತ್ರ
ಪ್ರೊ: ಕೆ.ಎಂ.ವಾಸುದೇವ ರಾವ್, ಎನ್. ನಂಜಪ್ಪ
ನಿ: ಭಾಸ್ಕರ್
ಸ.ನಿ: ಜಿ.ಆರ್.ಸತ್ಯ
ಅ: ಅಭಿಜಿತ್, ಸಿತಾರಾ, ರಾಜೇಶ್, ಸಾಯಿಕುಮಾರ್, ಟೆನ್ನಿಸ್ ಕೃಷ್ಣ, ರೇಖಾ ದಾಸ್, ಜಯಂತಿ, ಶ್ಯಾಮಲಾ, ಕೀರ್ತನ
ಚಿ.ಕ/ಮಾ: ಭಾಸ್ಕರ್
ಸಂ: ರಾಘವ
ಛಾ: ವಿಪಿನ್ ದಾಸ್, ಕೆ.ಸೋಮಶೇಖರ್
ಸ: ಸದ್ಗುಣ ರಾಜ್
ಧ್ವ: ಪ್ರಸಾದ್
ನೃ: ಸಂಪತ್ ಕುಮಾರ್
ವ: ಗಂಡಸಿ ನಾಗರಾಜ್
ಪ್ರ: ಸಿ.ರಾಮು
ಕ.ಸಾ: ಗಂಡ - ಹೆಂಡತಿ ನಡುವೆ ಯಾವುದೋ ಕಾರಣದಿಂದಾಗಿ ಮೂಡಿದ ವಿರಸ, ವಿಚ್ಛೇದನದವರೆಗೂ ಹೋಗುತ್ತದೆ. ಹಿರಿಯರ ಮಧ್ಯಸ್ಥಿಕೆಯಿಂದಾಗಿ ಮುರಿದು ಹೋಗಲಿದ್ದ ಮನೆ - ಮನಸ್ಸು - ದಾಂಪತ್ಯ ಸರಿಯಾಗುತ್ತದೆ.

೧೭೬೬. ತಾಳಿಪೂಜೆ

(೧೯೯೬ / ವರ್ಣ / ಸಾಮಾಜಿಕ)
ಲಾ: ವಿಷ್ಣು ಪ್ರೊಡಕ್ಷನ್
ಪ್ರೊ: ಎಸ್.ಎಸ್.ಹೆಗಡೆ, ವಿ.ಚಂದ್ರಹಾಸ್
ನಿ: ವಿ.ಚಂದ್ರಹಾಸ್
ಅ: ಅನಂತ್‌ನಾಗ್, ವಿನಯಾ ಪ್ರಸಾದ್, ರಮೇಶ್ ಭಟ್, ಅಂಜನಾ, ಕಿಶೋರಿ ಬಲ್ಲಾಳ್
ಗೀ: ಹಂಸಲೇಖ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ, ಲತಾ ಹಂಸಲೇಖ, ರಾಜೇಶ್
ಛಾ: ಸಿ.ಡಿ.ರಾಜು
ಸ: ಹಂಸಲೇಖ
ಹಾ: ೧) 'ಬಾನು ಎಲ್ಲೋ ಕಾಣೆನು...', ೨) 'ಗಂಡ ಹೆಂಡತಿ ನಡುವೆ...', ೩) 'ಶೋಭಾನೆ ಎನ್ನೀರೆ...', ೪) 'ಗಂಡ ಹೆಂಡತಿ ನಡುವೆ...', ೫) 'ಬಣ್ಣದ ಬಣ್ಣದ ಲೋಕದಲ್ಲಿ...'
ಕ.ಸಾ: ಸಂಶಯದ ಸುಳಿಯಲ್ಲಿ ಸಿಲುಕಿದ ದಂಪತಿಗಳ ಸುತ್ತ

ಹೆಣೆಯಲಾದ ಕಥೆ. ಜಗದೀಶ್ ಮತ್ತು ಅನುರಾಧ ಮದುವೆಯಾಗಿ ಸಂತೋಷವಾಗಿರುತ್ತಾರೆ. ಆದರೆ ಜಗದೀಶನನ್ನು ಅವನ ಹಿಂದಿನ ಬದುಕು ಕಾಡಲಾರಂಭಿಸುತ್ತದೆ. ಅವನು ಹಿಂದೆ ಪ್ರೇಮಿಸಿತ್ತಿದ್ದ ಪುಣ್ಯ ಮತ್ತೆ ಅವನ ಬದುಕಿನಲ್ಲಿ ಪ್ರವೇಶಿಸುತ್ತಾಳೆ. ಗಂಡನ ಮೇಲೆ ಸಂಶಯಿಸುವ ಅನುರಾಧ ಮನೆ ಬಿಟ್ಟು ಹೋಗುತ್ತಾಳೆ. ಇದೇ ರೀತಿ ಮತ್ತೊಂದು ಬಾರಿಯೂ ಪುಣ್ಯಳಿಂದಾಗಿ ಅವರ ಸಂಸಾರಕ್ಕೆ ದಕ್ಕೆಯಾಗುತ್ತದೆ. ಅನುರಾಧ ವಿವಾಹ ವಿಚ್ಛೇಧನಕ್ಕೆ ಮುಂದಾದಾಗ ಪುಣ್ಯಳೇ ಅವರಿಬ್ಬರನ್ನು ಒಂದುಗೂಡಿಸುತ್ತಾಳೆ.

೧೭೬೭. ಬಾಸ್

(೧೯೯೬ / ವರ್ಣ / ಸಾಮಾಜಿಕ)
ಲಾ: ರೋಸ್ ಪ್ರೊಡಕ್ಷನ್ಸ್
ಪ್ರೊ: ಪೀಟರ್ ಜೋಸೆಫ್
ನಿ: ಕೆ.ಪಿ.ಭವಾನಿಶಂಕರ್
ಸ.ನಿ: ಶಿವಕುಮಾರ್
ಅ: ಪ್ರಭಾಕರ್, ಶರಣ್ಯ, ರಮೇಶ್, ಡಿಸ್ಕೋ ಶಾಂತಿ
ಕ/ಚಿ.ಕ/ಮಾ: ಕೆ.ಪಿ.ಭವಾನಿ ಶಂಕರ್
ಗೀ: ವಿ.ಮನೋಹರ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ
ಸಂ: ಎಸ್.ಪ್ರಸಾದ್
ಛಾ: ಕುಲಶೇಖರ್
ಕಲೆ: ಆರ್.ಸಿ.ಸುಂದರ್
ಸ: ಸಾಧುಕೋಕಿಲ
ಧ್ವ: ಪ್ರಸಾದ್ ರೆಕಾರ್ಡಿಂಗ್
ನೃ: ಸಂಪತ್
ಸಾ: ಎನ್.ಕೆ.ಸ್ವಾಮಿ

ವ: ನಾಗರಾಜ್
ಪ್ರ: ಮಲ್ಲಿ, ವೆಂಕಟೇಶ್
ಹಾ: ೧)'ಓ ನನ್ನ ದೇಹ ಆರಳಿದೆಯಾ...', ೨)' ಈ ಸಂತೋಷ ಹಂಚಿಕೊಂಡು...', ೩) 'ಯಾವ ಊರಿಂದ ಬಂದ ಗ್ಯಾಂಗ್ ಇದೋ...', ೪) 'ಬಾಸ್, ಬಾಸ್, ಯುದ ಗೆದ್ದವ...', ೬)' ಐ ಲವ್ ಯೂ, ಯೂ ಲವ್ ಮಿ...'
ಕ.ಸಾ: ರೌಡಿಯಿಸಂನ್ನು ರೌಡಿಯಿಂದಲೇ ನಿರ್ನಾಮಗೊಳಿಸುವ ಪ್ರಯತ್ನದ ಸುತ್ತ ಹೆಣೆದ ಕಥೆ.

೧೭೬೮. ಗಾಡ್ ಫಾದರ್

(೧೯೯೬ / ವರ್ಣ / ಸಾಮಾಜಿಕ)
ಲಾ: ಸ್ಟಾರ್ ಮೂವೀಸ್
ಪ್ರೊ: ಎಂ.ರಾಜನ್, ಕೆ.ಕೃಷ್ಣಮ್ ರಾಜ್, ವಿ.ಪಾರ್ಥಸಾರಥಿ
ನಿ: ಜಿ.ಕೆ.ಮುದುರಾಜ್
ಸ.ನಿ: ದೇವರಾಜ್‌ಪಾಲನ್
ಅ: ಚರಣ್‌ರಾಜ್, ತ್ಯಾಗರಾಜ್, ಅಶೋಕ್‌ರಾವ್, ಪ್ರೀತಿ, ಉಮಾಶ್ರೀ, ವಿನಯಾ ಪ್ರಸಾದ್, ಸುಧೀರ್, ಮೇಕಪ್ ಕೃಷ್ಣ
ಕ: ವಿ.ರಾಜನ್
ಚಿ.ಕ: ಜಿ.ಕೆ.ಮುದುರಾಜ್
ಮಾ: ರಿಚರ್ಡ್ ಲೂಯಿಸ್
ಗೀ: ಶರ್ಮ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ, ಮಂಜುಳಾ ಗುರುರಾಜ್
ಸಂ: ಎಸ್.ಪ್ರಸಾದ್
ಛಾ: ಮನೋಹರ್
ಸ: ಶ್ಯಾಂ
ನೃ: ಸಂಪತ್
ಸಾ: ಜ್ಯೂಡೋ ರಾಮು
ಸ್ಟು: ಕಂಠೀರವ
ಹಾ: ೧)'ಏಳು ಕೋಗಿಲೆ...', ೨)'ರಂಗಾದ್ರು ರಂಗಾದ್ರು...', ೩)' ಅಮ್ಮ ಅಮ್ಮ ಅಂತಾರೆ...', ೪)'ಹೊರಡು ಬಾ ಹೊರಡು...'
ಕ.ಸಾ: ಜೀವನದಲ್ಲಿ ತುಳಿತಕ್ಕೆ ಒಳಗಾದ ಶೋಷಿತ ವರ್ಗದವರ ನೋವಿಗೆ ಧ್ವನಿಯಾಗಿ ನಿಲ್ಲುವ ವ್ಯಕ್ತಿ ಗಾಡ್‌ಫಾದರ್ ಆಗುತ್ತಾನೆ. ಜನಗಳನ್ನು ಸಂಕಷ್ಟದಿಂದ ಪಾರು ಮಾಡುತ್ತಾನೆ.

೧೭೬೯. ನನ್ನಾಸೆಯ ನಂದಿನಿ

(೧೯೯೬ / ವರ್ಣ / ಸಾಮಾಜಿಕ)
ಲಾ/ಪ್ರೊ: ಮೂವೀ ಟೆಕ್ನಿಕ್ ಪ್ರೊಡಕ್ಷನ್ಸ್
ನಿ: ಎಸ್.ಉಮೇಶ್
ಅ: ವೈಜಯಂತ್, ಅಶೋಕ್, ನಂದಿನಿ, ತಾರಾ, ಟೆನ್ನಿಸ್ ಕೃಷ್ಣ, ಸಿತಾರಾ
ಕ/ಚಿ.ಕ/ಮಾ/ಗೀ: ರವಿ ಭಾರತಿ
ಛಾ: ಡಿ.ಪ್ರಸಾದ್
ಸ: ಎಸ್.ಭಾರತಿ
ಹಾ: ೧)' ಕಸ್ತೂರಿ ಜಿಂಕೆಯೇ ...'

೧೭೭೦. ನಮ್ಮೂರ ಮಂದಾರ ಹೂವೆ

(೧೯೯೬ / ವರ್ಣ / ಸಾಮಾಜಿಕ)
ಲಾ: ಚಿನ್ನಿ ಫಿಲಂಸ್
ಪ್ರೊ: ಜಯಶ್ರೀದೇವಿ
ನಿ: ಸುನಿಲ್ ಕುಮಾರ್ ದೇಸಾಯಿ
ಸ.ನಿ: ಸೀತಾರಾಮ ಕಾರಂತ್, ಶಶಿಧರ್ ಭಟ್
ಅ: ಶಿವರಾಜ್ ಕುಮಾರ್, ಪ್ರೇಮ, ರಮೇಶ್, ಸುಮನ್ ನಗರ್‌ಕರ್, ಭರತ್ ಭಾಗವತರ್, ಕಾಶಿ, ಕಿಶೋರ್ ಜಿಲ್ಲಾಳಿ, ಶ್ರೀಪತಿ ಬಲ್ಲಾಳ್
ಕ/ಚಿ.ಕ/ಮಾ: ಸುನಿಲ್ ಕುಮಾರ್ ದೇಸಾಯಿ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ, ಇಳಯರಾಜಾ, ಮಂಜುಳಾ ಗುರುರಾಜ್
ಸಂ: ಆರ್.ಜನಾರ್ದನ್
ಛಾ: ಸುಂದರನಾಥ ಸುವರ್ಣ
ಸ: ಇಳಯರಾಜಾ
ಹಾ: ೧)'ಹಳ್ಳಿ ಲಾವಣಿಯಲ್ಲಿ...', ೨)'ಮುತ್ತು ಮುತ್ತು ನೀರ ಹನಿಯ...', ೩) 'ಓಂಕಾರದಿ ಕಂಡೆ...', ೪) 'ಮನದಾಸೆ ಹಕ್ಕಿಯಾಗಿ...', ೫)'ಓಂಕಾರದಿ ಕಂಡೆ...', ೬)'ದಿಂ ತಕ್ಕಿತ ದಿಂ ತಕ್ಕಿತ...'
ವಿ: ೧೯೯೬-೯೭ರ ರಾಜ್ಯಪ್ರಶಸ್ತಿ : ಅತ್ಯುತ್ತಮ ಹಿನ್ನೆಲೆ ಗಾಯಕಿ (ಚಿತ್ರಾ)
ಕ.ಸಾ: ನಾಯಕಿ ಚೆಲುವೆಯಷ್ಟೇ ಅಲ್ಲ, ಉತ್ತಮ ಹಾಡುಗಾರ್ತಿ ಕೂಡ. ಸಿನಿಮಾ ನಿರ್ದೇಶಕನಾದ ನಾಯಕ ಅವಳ ಗಾಯನಕ್ಕೆ ಮಾರು ಹೋಗುತ್ತಾನೆ. ಅವನ ಗೆಳೆಯ ಅದೇ ಊರಿನವನು. ಆ ಗೆಳೆಯ ಹಾಡು ಹಕ್ಕಿಯಾದ ನಾಯಕಿಯನ್ನು ಮನದಲ್ಲೇ ಮೆಚ್ಚಿರುತ್ತಾನೆ. ನಾಯಕನಿಗೆ ಈ ವಿಷಯ ತಿಳಿದು ನಾಯಕಿಯ ಒಲವನ್ನು ಗೆಳೆಯನಿಗೆ ಬಿಟ್ಟುಕೊಡಲು, ಅವಳಲ್ಲಿ ತನ್ನ ಬಗ್ಗೆ ಕೆಟ್ಟ ಅಭಿಪ್ರಾಯ ಮೂಡುವಂತೆ ಮಾಡಲು ಅವಳೆದುರಿನಲ್ಲಿ ಕೆಟ್ಟದಾಗಿ ನಡೆದು ಕೊಳ್ಳುತ್ತಾನೆ. ಆದರೆ ಹಳ್ಳಿಯ ಆ ಗೆಳೆಯ ತನ್ನ ಸ್ನೇಹಿತನಿಗಾಗಿ ತಾನೇ ತ್ಯಾಗಕ್ಕೇ ಮುಂದಾಗುತ್ತಾನೆ. ಪ್ರೀತಿಗಿಂತ ಸ್ನೇಹ ದೊಡ್ಡದು ಎಂದು ನಿರೂಪಿಸುವ ಪ್ರಯತ್ನ.

೧೭೭೧. ಸೂತ್ರಧಾರ

(೧೯೯೬ / ವರ್ಣ / ಸಾಮಾಜಿಕ)
ಲಾ: ಆರ್.ಪಿ.ಕ್ರಿಯೇಷನ್ಸ್
ಪ್ರೊ: ಪುನೀತ್ ರಾಜಕುಮಾರ್
ನಿ: ಎಂ.ಎಸ್.ರಾಜಶೇಖರ್
ಸ.ನಿ: ಲಕ್ಷ್ಮಿಕಾಂತ್
ಅ: ರಾಘವೇಂದ್ರ ರಾಜಕುಮಾರ್, ನಿವೇದಿತಾ ಜೈನ್, ಪಂಚಮಿ, ರವೀಂದ್ರಮಾನ್, ರಾಜೇಶ್, ಅಶೋಕ್, ಮುಖ್ಯಮಂತ್ರಿ ಚಂದ್ರು, ಧೀರೇಂದ್ರ ಗೋಪಾಲ್, ಶಿವಕುಮಾರ್, ಉಮೇಶ್, ಪದ್ಮಾವಾಸಂತಿ, ಶೀಲಾ ರಾವ್, ಜಯಶ್ರೀ, ಕಾಜಲ್, ಸಂಧ್ಯ, ಮಾ।ವಿನಾಯಕ ಜೋಷಿ
ಕ: ಟಿ.ಎಸ್.ನಾಗಾಭರಣ
ಚಿ.ಕ/ಮಾ: ಪಾಲ್ ಸುದರ್ಶನ್
ಗೀ: ಹಂಸಲೇಖ
ಗಾ: ರಾಜೇಶ್, ಮಂಜುಳಾ ಗುರುರಾಜ್, ರಾಘವೇಂದ್ರ ರಾಜಕುಮಾರ್, ಎಲ್. ಎನ್.ಶಾಸ್ತ್ರಿ, ಹೆಗಡೆ
ಸಂ: ಶಶಿಕುಮಾರ್
ಛಾ: ಬಿ.ಸಿ.ಗೌರಿಶಂಕರ್
ಕಲೆ: ಇಸ್ಮಾಯಿಲ್
ಸ: ಹಂಸಲೇಖ
ನೃ: ತಾರಾ
ಸಾ: ಥ್ರಿಲ್ಲರ್ ಮಂಜು
ವ: ನಾಗರಾಜ
ಹಾ: ೧) 'ನೂರಾರು ನೆನಪಿನ...', ೨) 'ಅಂತು ಇಂತು ಸುಯೋಗ...', ೩) 'ಏನು ಸುಖ ಏನು ಸುಖ...', ೪) 'ಅತಿ

ಮಧುರ ಈ ನಿನ್ನ ಅಧರ...', ೫)'ನೂರಾರು ನೆನಪಿನ ...'
ಕ.ಸಾ: ಶ್ರೀಮಂತ ಹುಡುಗಿಯನ್ನು ಪ್ರೀತಿಸುವ ಬಡ ಯುವಕ. ಅವಳನ್ನು ಪಡೆದುಕೊಳ್ಳಲು ತಾನು ಶ್ರೀಮಂತನಂತೆ ನಟಿಸುವಾಗ ಅನೇಕ ತಿರುವುಗಳನ್ನು ಪಡೆದುಕೊಳ್ಳುವ ಕಥೆ. ರಂಗಭೂಮಿ ಕಲಾವಿದ ರವಿ ತನಗೆ ಗೊತ್ತಿಲ್ಲದಂತೆಯೇ ಶ್ರೀಮಂತ ಹುಡುಗಿಯ ಪ್ರೇಮದಲ್ಲಿ ಸೆರೆಯಾಗುತ್ತಾನೆ. ಶ್ರೀಮಂತ ವ್ಯಕ್ತಿಯೊಬ್ಬರ ಮೊಮ್ಮಗನಂತೆ ನಾಟಕವಾಡುತ್ತಾನೆ. ಆದರೆ ಅವನು ಆ ಮುದುಕರ ನಿಜವಾದ ಮೊಮ್ಮಗನೇ ಆಗಿರುತ್ತಾನೆ! ಕೊನೆಯಲ್ಲಿ ತಾನು ಪ್ರೀತಿಸುವ ಹುಡುಗಿಯ ಕೈ ಹಿಡಿಯುತ್ತಾನೆ.

೧೭೭೨. ಪೋಲಿಸ್ ಸ್ಟೋರಿ

(೧೯೯೬ / ವರ್ಣ / ಸಾಮಾಜಿಕ)
ಲಾ: ಶ್ರೀ ಗುರುರಾಯ ಫಿಲಂ ಮೇಕರ್ಸ್
ಪ್ರೊ: ಜಿ.ಹೆಚ್.ಗುರುಮೂರ್ತಿ, ಎನ್.ನರಸಿಂಹಮೂರ್ತಿ
ನಿ: ಥ್ರಿಲ್ಲರ್ ಮಂಜು
ಸ.ನಿ: ದಾಮೋದರ್
ಅ: ಸಾಯಿಕುಮಾರ್, ಶೋಭರಾಜ್, ಅವಿನಾಶ್, ಸುಧೀರ್, ಲೋಕನಾಥ್, ರಾಕ್‌ಲೈನ್ ವೆಂಕಟೇಶ್, ಜಾಕಿ ಶಿವು, ಕರಿಬಸವಯ್ಯ, ಶರತ್, ರೇಮಂಡ್ ಡಿಸೋಜ, ಸತ್ಯ, ಸತ್ಯಜಿತ್, ಶನಿ ಮಹಾದೇವಪ್ಪ, ದಂಪ್ರಭಾಕರ್, ಪ್ರದೀಪ್, ಜಯರಾಮ ರೆಡ್ಡಿ, ಡೇವಿಡ್, ವೆಂಕಟಾಚಲ, ಕೃಷ್ಣೇಗೌಡ, ಚಿಕಣ್ಣ, ಎಂ.ಎಸ್. ಕಾರಂತ್, ಗಿರಿಜಾ ಲೋಕೇಶ್, ನಳಿನಿ, ಕಮಲಶ್ರೀ
ಕ: ಎಸ್.ಎಸ್.ಡೇವಿಡ್
ಚಿ.ಕ: ಥ್ರಿಲ್ಲರ್ ಮಂಜು
ಮಾ: ಎಸ್.ಎಸ್.ಡೇವಿಡ್
ಸಂ: ಆರ್.ಜನಾರ್ದನ್
ಛಾ: ಜೆ.ಜಿ.ಕೃಷ್ಣ
ಕಲೆ: ಸುಂದರಂ
ಸ: ಸಾಧು ಕೋಕಿಲ
ಧ್ವ: ಮಹೇಂದ್ರ, ಕೋದಂಡಪಾಣಿ
ಸಾ: ಥ್ರಿಲ್ಲರ್ ಮಂಜು
ವ: ಸೋಮು
ಪ್ರ: ಗೋಪಾಲ್
ಸ್ಟು: ಚಾಮುಂಡೇಶ್ವರಿ
ಸೆ: 'ಎ' ಸರ್ಟಿಫಿಕೇಟ್
ಕ.ಸಾ: ಅಪರಾಧ ಜಗತ್ತಿನ ಚಟುವಟಿಕೆಗಳು, ಅದನ್ನು ಹತ್ತಿಕ್ಕಲು ಪೋಲೀಸರ ಪ್ರಯತ್ನ, ಎದುರಾಗುವ ಹಲವು ಅಪಘಾತಗಳು. ಇವುಗಳ ಸುತ್ತ ಸಾಹಸ - ಪ್ರಣಯ ಸೇರಿಸಿ ಹೆಣೆದ ಕಥೆ. ಕೆಲವೊಂದು ಸಂದರ್ಭ - ಸನ್ನಿವೇಶಗಳಲ್ಲಿ ಕ್ರೌರ್ಯದ ತಾಂಡವ. ಇದರಿಂದಾಗಿ ಚಿತ್ರ 'ವಯಸ್ಕರಿಗೆ ಮಾತ್ರ' ಎನಿಸಿತು.

೧೭೭೩. ನಿರ್ಬಂಧ

(೧೯೯೬ / ವರ್ಣ / ಸಾಮಾಜಿಕ)

ಲಾ: ಸೃಷ್ಟಿ ಕಂಬೈನ್ಸ್
ಪ್ರೊ: ದೊಡ್ಡಗೌಡ ಪಾಟೀಲ್, ಚೆನ್ನಬಸವನ ಗೌಡ ಪಾಟೀಲ್
ನಿ: ಹ.ಸೂ. ರಾಜಶೇಖರ್
ಸ.ನಿ: ಟಿ.ಎಸ್.ನಾಗೇಶ್
ಅ: ಅನಂತ್‌ನಾಗ್, ಶಶಿಕುಮಾರ್, ಕುಮಾರ್ ಬಂಗಾರಪ್ಪ, ಬಿ.ಸಿ.ಪಾಟೀಲ್, ಮಾ।ಸಂಜೀವ್, ಜಯಮಾಲಾ, ರೇಣುಕಾ, ವಿಜಯ್, ಶಂಕರ್ ಅಶ್ವತ್ಥ್, ಮಾ।ನವನೀತ್ ಹೆಬ್ಬಾರ್, ಬ್ಯಾಂಕ್ ಜನಾರ್ದನ್, ಮುಖ್ಯಮಂತ್ರಿ ಚಂದ್ರು, ಶ್ರೀನಿವಾಸ ಮೂರ್ತಿ
ಕ/ಚಿ.ಕ/ಮಾ: ರಿಚರ್ಡ್ ಲೂಯಿಸ್
ಗೀ: ಆರ್.ಎನ್.ಜಯಗೋಪಾಲ್, ಶ್ರೀರಂಗ, ಎಂ.ಎನ್.ವ್ಯಾಸರಾವ್, ಕಲ್ಯಾಣ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ರತ್ನಮಾಲಾ ಪ್ರಕಾಶ್, ರಾಜೇಶ್, ಮಂಜುಳಾ ಗುರುರಾಜ್, ಚಂದ್ರಿಕಾ ಗುರುರಾಜ್
ಸಂ: ಆರ್.ಜನಾರ್ದನ್
ಛಾ: ಸುಂದರನಾಥ ಸುವರ್ಣ
ಕಲೆ: ಪ್ರಭು
ಸ: ರಾಜೇಶ್ ರಾಮನಾಥ್
ಧ್ವ: ಚಾಮುಂಡೇಶ್ವರಿ
ನೃ: ನದೀಮ್ ಖಾನ್, ಪ್ರಸಾದ್
ಸಾ: ಹರೀಶ್ ಶೆಟ್ಟಿ, ಸುರೇಶ್ ರಾವ್, ಸಂಜುಂಡಿ ನಾಗರಾಜ್
ವ: ನಾಗರಾಜ್
ಪ್ರ: ಬಹುರೂಪಿ ನಾಣಿ
ಸ್ಟು: ಚಾಮುಂಡೇಶ್ವರಿ
ಹಾ: ೧) 'ಕಣ್ಣಂಚಲಿ ಕುಡಿ ಮಿಂಚಿದೆ...', ೨) 'ದಸರಾ ನಾಡ ಸಿರಿಯೇ...', ೩) 'ಪೋಲೀಸ್ ನ ಹೆಂಡ್ತಿ...', ೪) 'ಗ್ಯಾರೇಜು ಗ್ಯಾರೇಜು...', ೫) 'ನನ್ನ ನಿನ್ನ ಪ್ರೇಮ...'
ಕ.ಸಾ: ರಾಜ್ಯದ ಮುಖ್ಯಮಂತ್ರಿಯನ್ನು ಬಾಂಬ್ ಸ್ಫೋಟಿಸಿ ಕೊಲೆ ಮಾಡಬೇಕೆಂಬ ಮತ್ಸರ ಕೂಟದ ಷಡ್ಯಂತ್ರ - ಸಂಚನ್ನು ಇಬ್ಬರು ಸಾಹಸಿ ಯುವಕರು ವಿಫಲಗೊಳಿಸಿ ಮುಖ್ಯಮಂತ್ರಿಯನ್ನು ಕಾಪಾಡುವಲ್ಲಿ ಯಶಸ್ವಿಯಾಗುವ ಕಥೆ.

೧೭೭೪. ಮುದ್ದಿನ ಸೊಸೆ

(೧೯೯೬ / ವರ್ಣ / ಸಾಮಾಜಿಕ)

ಲಾ: ಪೂಜಾ ಪ್ರೊಡಕ್ಷನ್ಸ್
ಪ್ರೊ: ಎಂ.ಮನೋಹರ್ ಬಾಬು
ನಿ: ಸಾಯಿಪ್ರಕಾಶ್
ಸ.ನಿ: ಎಸ್.ಪಿ.ರವಿಕುಮಾರ್
ಅ: ಶಶಿಕುಮಾರ್, ಅಭಿಜಿತ್, ಸಿತಾರಾ, ಧೀರೇಂದ್ರ ಗೋಪಾಲ್, ರಾಜೇಶ್, ಬಿ.ವಿ.ರಾಧ, ಸೋಮಶೇಖರ್, ಬಾಲರಾಜ್, ಟೆನ್ನಿಸ್ ಕೃಷ್ಣ, ಬ್ಯಾಂಕ್ ಜನಾರ್ದನ್, ಪದ್ಮಾವಾಸಂತಿ, ಅಂಜಲಿ, ಆಶಾಲತಾ, ಸತ್ಯಭಾಮ, ಶಾಂತಮ್ಮ, ಶೋಭಾ ರಾಘವೇಂದ್ರ, ಕಮಲಮ್ಮ, ಬೆಂಗಳೂರು ನಾಗೇಶ್, ಎಂ.ಎಸ್.ಕಾರಂತ್
ಕ/ಚಿ.ಕ: ಸಾಯಿಪ್ರಕಾಶ್
ಮಾ: ವಿಜುಲಾಗಣೇಶ್-ಗೋಟೂರಿ
ಗೀ: ಆರ್.ಎನ್.ಜಯಗೋಪಾಲ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ರಾಜೇಶ್, ಬಿ.ಆರ್.ಛಾಯಾ, ಮಂಜುಳಾ ಗುರುರಾಜ್, ಸಂಗೀತಾ ಕಟ್ಟಿ
ಸಂ: ಕೆ.ಈಶ್ವರ್
ಛಾ: ಎಂ ರಾಮು
ಕಲೆ: ಬಾಬುಖಾನ್
ಸ: ಉಪೇಂದ್ರ ಕುಮಾರ್



ಧ್ವ: ಮಹೇಂದ್ರನ್, ಕೋದಂಡಪಾಣಿ
ನೃ: ಶಿವಶಂಕರ್
ವ: ಜಯಚಂದ್ರ
ಪ್ರ: ಕುಮಾರ್, ಕೇಶ: ನಾಗೇಶ್ವರರಾವ್
ಹಾ: ೧) 'ಹೇಳೇ ಮುದ್ದುಗೌರಿ...', ೨) 'ನೀ ಬಂದೆ...', ೩) 'ರಸಿಕರ ರಾಜ...', ೪) 'ಈ ಬಾಳಿನ ಸಾಗರದಲ್ಲಿ...',
ಕ.ಸಾ.: ಸೊಸೆಯಾಗಿ ಬಂದ ಹೆಣ್ಣೊಬ್ಬಳು ತನ್ನಬುದ್ಧಿವಂತಿಕೆಯಿಂದ ಒಡೆದು ಹೋಗುವಂತಿದ್ದ ಮನೆಯನ್ನು ಸರಿಪಡಿಸುತ್ತಾಳೆ.

೧೭೭೫. ಪಾಳೇಗಾರ

(೧೯೯೬ / ವರ್ಣ / ಸಾಮಾಜಿಕ)

ಲಾ: ಶ್ರೀ ಸಾಯಿ ಸುಭದ್ರಾ ಫಿಲಂಸ್
ಪ್ರೊ: ಎಸ್.ಎಸ್.ಚಿನ್ನಿ, ಎಂ.ಕೆ.ಪ್ರಕಾಶ್
ನಿ: ಓಂ ಪ್ರಕಾಶ್
ಸ.ನಿ: ಶಶಿದರ್, ಗಿರೀಶ್
ಅ: ಅಂಬರೀಷ್, ಆನಂದರಾಜ್, ವಜ್ರಮುನಿ, ಧೀರೇಂದ್ರ ಗೋಪಾಲ್, ಸದಾಶಿವ ಬ್ರಹ್ಮಾವರ್, ರಾಜಾನಂದ್, ಮನು, ಮಧುಕರ್, ಕಲಾಭೈರವ ಗಂಗಾಧರ್, ಶೋಭರಾಜ್, ಶನಿ ಮಹಾದೇವಪ್ಪ, ವೆಂಕಿ, ಸರಿಗಮ ವಿಜಿ, ಟೆನ್ನಿಸ್ ಕೃಷ್ಣ, ಖುಷ್ಬೂ, ನಿರೋಷ, ಶ್ರೀಕನ್ಯಾ, ಪೂಜಿತ, ಅನುಜ, ವಾಣಿಶ್ರೀ, ಬಿ.ವಿ.ರಾಧಾ, ಕಮಲಶ್ರೀ
ಕ/ಚಿ.ಕ: ಓಂ ಪ್ರಕಾಶ್
ಮಾ: ಬಿ.ಎಲ್.ವೇಣು
ಗೀ: ಹಂಸಲೇಖ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್.ಜಾನಕಿ, ಮನು,

ಸುಮಾ ಶಾಸ್ತ್ರಿ
ಸಂ: ಆರ್.ಜನಾರ್ದನ್
ಛಾ: ಸುಂದರನಾಥ ಸುವರ್ಣ
ಕಲೆ: ಇಸ್ಮಾಯಿಲ್
ಸ: ಹಂಸಲೇಖ
ಧ್ವ: ಪ್ರಸಾದ್, ಚಾಮುಂಡೇಶ್ವರಿ
ನೃ: ಶಿವಸುಬ್ರಹ್ಮಣ್ಯಂ
ಸಾ: ಥ್ರಿಲ್ಲರ್ ಮಂಜು
ವ: ಲಕ್ಷ್ಮಣ್
ಪ್ರ: ಗುರುಮೂರ್ತಿ, ರಾಮಕೃಷ್ಣ
ಸ್ಟು: ಕಂಠೀರವ, ಚಾಮುಂಡೇಶ್ವರಿ
ಹಾ: ೧) 'ಇದು ನಮ್ಮೂರು ಎಲ್ಲಾರು ನನ್ನೋರು...', ೨) 'ಅಂಜು ಮಲ್ಲಿಗೆ ಅರಳೆಲೆ ಮೆಲ್ಲಗೆ...', ೩) 'ಕಾಮಣ್ಣ ಮಕ್ಕಳು...', ೪) 'ಒಂದು ಹುಡುಗಿ ಬಂದಳು ಜೇನು ತಂದಳು...', ೫) 'ರೋಮ ತುಂಬ ಪ್ರೇಮ ನಾಮ...'
ಕ.ಸಾ: ಶಾಂತಿಗ್ರಾಮ ವ್ಯವಸಾಯ ಮಾಡುತ್ತ ಬದುಕುವ ಪ್ರಾಮಾಣಿಕ ಜನರಿರುವ ಗ್ರಾಮ. ಪಾಳೇಗಾರನ ವಂಶಸ್ಥರದೇ ಯಜಮಾನ್ಯ. ಆನೇ ತಲೆಮಾರಿನ ವೆಂಕಟೇಶ ನಾಯಕ. ಅವನಿಗೆ ಇಬ್ಬರು ಹೆಂಡತಿಯರು, ಒಬ್ಬಳು ಸತ್ತಿರುತ್ತಾಳೆ. ಎರಡನೆಯ ಹೆಂಡತಿಯ ಮಗ ಉಗ್ರಪ್ಪ. ಮೊದಲ ಹೆಂಡತಿ ಮಗ ಅಣ್ಣಪ್ಪ ತಂದೆಯ ನಂತರ ಆಳುತ್ತಾನೆ, ಧರ್ಮರಾಯನಂತೆ . ಆದರೆ ಯಜಮಾನಿಕೆಗಾಗಿ ಅಣ್ಣ ತಮ್ಮಂದಿರಲ್ಲಿ ಮತ್ಸರ. ಇದರಿಂದಾಗಿ ಕುರುಕ್ಷೇತ್ರ.

೧೭೭೬. ಗಾಯ

(೧೯೯೬ / ವರ್ಣ / ಸಾಮಾಜಿಕ)

ಲಾ: ಗಿರಿಧರ್ ಮೂವೀಸ್
ಪ್ರೊ: ಪಿ.ತುಳಸಿ ಗೋಪಾಲ್
ನಿ: ವೇಮಗಲ್ ಜಗನ್ನಾಥರಾವ್
ಸ.ನಿ: ಆಚಾರ್ಯ, ಶ್ರೀರಾಮರೆಡ್ಡಿ
ಅ: ರಾಮಕುಮಾರ್, ಅಪೂರ್ವ, ಶರತ್ ಬಾಬು, ಗೀತಾ, ನಂದಕುಮಾರ್, ಕೆ.ಗುಂಡೂರಾವ್, ರಮೇಶ್ ಭಟ್, ಸಿಹಿಕಹಿ ಚಂದ್ರು, ದೊಡ್ಡಣ್ಣ, ಶಿವರಾಂ, ಸದಾಶಿವ ಬ್ರಹ್ಮಾವರ್, ಶ್ರೀಶೈಲನ್, ರಾಮಕೃಷ್ಣ, ಶಾಂತಮ್ಮ, ಸರೋಜ ಶ್ರೀಶೈಲನ್, ಡಿಸ್ಕೋ ಶಾಂತಿ.
ಕ/ಚಿ.ಕ/ಮಾ: ವೇಮಗಲ್ ಜಗನ್ನಾಥರಾವ್
ಗೀ: ಎಂ.ಎನ್.ವ್ಯಾಸರಾವ್, ದೊಡ್ಡರಂಗೇಗೌಡ, ಶ್ರೀರಂಗ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ, ಮಂಜುಳಾ

ಗುರುರಾಜ್, ಬಿ.ಆರ್.ಛಾಯಾ, ಮಾಲ್ಗುಡಿ ಶುಭಾ, ಎಂ.ಎಂ.ಕೀರವಾಣಿ, ರಾಜೇಶ್, ಸಂಗೀತಾ ಕಟ್ಟಿ
ಸಂ: ಆರ್.ಜನಾರ್ದನ್
ಛಾ: ಪಿ.ರಾಜನ್
ಕಲೆ: ಮುತ್ತು
ಸ: ಎಂ.ಎಂ.ಕೀರವಾಣಿ
ಧ್ವ: ಕೋದಂಡಪಾಣಿ
ನೃ: ದಿಲೀಪ್‌ಕಾರ್
ಸಾ: ಸಂಜುಂಡಿ ನಾಗರಾಜ್
ವ: ಧರಿಯಾ
ಪ್ರ: ವೆಂಕಟಸ್ವಾಮಿ
ಹಾ: ೧) 'ಚಳಿ ಚಳಿ ಚಳಿ...', ೨) 'ಉದಯ ಇಂದು ಪ್ರೇಮ ಉದಯ...', ೩) 'ಯಾವುದೋ ಊರಿನಲ್ಲಿ...', ೪) 'ಮಾಡೋಣ ಲಕ್ ಟೆಕ್ ಲವ್...', ೫) 'ಹೃದಯ ನೋಜ ಮೀಟುತ...', ೬) 'ಮುಟ್ಟಿದರೆ ಮೈಯಿಲ್ಲ ಶಾಕ್...',

ಕ.ಸಾ.: ಸಮಾಜ ವಿರೋಧಿಗಳನ್ನು ಎದುರು ಹಾಕಿಕೊಳ್ಳುವ ನಾಯಕ, ಆದಕ್ಕಾಗಿ ಆವನು ಅಣ್ಣನ ಕೊಲೆ ನಂತರ ಸಂದರ್ಭಗಳಲ್ಲಿ ನಾಯಕನನ್ನು ಅಪರಾಧಿ ಮಾಡಲು, ಆತ ತನ್ನ ಬುದ್ಧಿವಂತಿಕೆಯಿಂದ ಆಪತ್ತನ್ನು ಪರಿಹರಿಸಿಕೊಳ್ಳಲು ಶ್ರಮಿಸುತ್ತಾನೆ. ಈ ನಿಟ್ಟಿನಲ್ಲಿ ಆತನ ಅತ್ತಿಗೆ ಆತನಿಗೆ ನೆರವಾಗುತ್ತಾಳೆ.

೧೨೭೭. ನಿರ್ಣಯ

(೧೯೯೬ / ವರ್ಣ / ಸಾಮಾಜಿಕ)
ಲಾ: ಉಷಾ ಪ್ರೊಡಕ್ಷನ್ಸ್
ಪ್ರೊ: ಶ್ರೀಮತಿ ಉಷಾ
ನಿ: ಹುಣಸೂರು ರಾಜಶೇಖರ್
ಸ.ನಿ: ಆರ್.ಬಸವರಾಜ್
ಅ: ಸಂಜಯ್, ಅರ್ಚನಾ, ಮಾಲಾಶ್ರೀ, ಆಶಾಲತಾ, ಲೋಹಿತಾಶ್ವ, ತಾರಾ
ಕ/ಚಿ.ಕ: ಸಾಯಿನಾಥ್
ಮಾ/ಗೀ: ಆರ್.ಎನ್.ಜಯಗೋಪಾಲ್
ಗಾ: ರಾಜೇಶ್, ಎಲ್.ಎನ್.ಶಾಸ್ತ್ರಿ, ಸುಜಾತಾ ದತ್, ಸುನೀತಾ ಪ್ರಕಾಶ್, ಸೌಮ್ಯ
ಸಂ: ಕೆ.ನರಸಯ್ಯ
ಛಾ: ಜೆ.ಜಿ.ಕೃಷ್ಣ
ಕಲೆ: ನಂಜುಂಡಸ್ವಾಮಿ
ಸ: ರಾಜೇಶ್ ರಾಮನಾಥ್
ಧ್ವ: ಮಹೇಂದ್ರ, ಕೋದಂಡಪಾಣಿ
ನೃ: ಸತೀಶ್, ನಟೀಮ್, ಬಾಬು
ಸಾ: ಥ್ರಿಲ್ಲರ್ ಮಂಜು

ವ: ಮಂಜು
ಪ್ರ: ವಿ.ಎಸ್.ಎಸ್.ಮಲ್ಲಿ, ಕೇಶ: ರಾಜೀವ್
ಸ್ಟು: ಚಾಮುಂಡೇಶ್ವರಿ
ಕ.ಸಾ: ಒಲಿದ ಹೃದಯಗಳನ್ನು ಬೇರೆ ಮಾಡಲು ಪ್ರಯತ್ನಿಸುವ ಕೇಡುಗರ ತಂಡ. ಆ ಪ್ರೇಮಿಗಳನ್ನು ಒಂದಾಗಿರಿಸಲು ಕಂಕಣ ಬದ್ಧಳಾದ ಪೋಲೀಸ್ ಅಧಿಕಾರಿಣಿ. ಇವರ ನಡುವೆ ನಡೆಯುವ ಘರ್ಷಣೆ - ಸೆಣಸಾಟ - ಅಂತ್ಯದಲ್ಲಿ ಪೋಲೀಸ್ ಅಧಿಕಾರಿಣಿಯದೇ ಮೇಲುಗೈ. ಪ್ರೇಮಿಗಳಿಗೆ ಜಯ - ಇದು ಕಥಾ ಹಂದರ.

೧೨೭೮. ಜೀವನದಿ

(೧೯೯೬ / ವರ್ಣ / ಸಾಮಾಜಿಕ)
ಲಾ: ಧನಲಕ್ಷ್ಮಿ ಕ್ರಿಯೇಷನ್ಸ್
ಪ್ರೊ: ಪಿ.ಧನರಾಜ್
ನಿ: ಡಿ.ರಾಜೇಂದ್ರ ಬಾಬು
ಅ: ವಿಷ್ಣುವರ್ಧನ್, ಅನಂತ್‌ನಾಗ್, ಖುಷ್ಬು, ಊರ್ವಶಿ, ಶ್ರೀನಿವಾಸ ಮೂರ್ತಿ, ಉಮಾಶ್ರೀ, ತಾರಾ, ದೊಡ್ಡಣ್ಣ, ಕಿಶೋರಿ ಬಲ್ಲಾಳ್, ಆರ್.ಎನ್.ಜಯಗೋಪಾಲ್
ಕ/ಚಿ.ಕ: ಡಿ.ರಾಜೇಂದ್ರ ಬಾಬು
ಮಾ/ಗೀ: ಆರ್.ಎನ್.ಜಯಗೋಪಾಲ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ರಾಜೇಶ್, ಮಂಜುಳಾ ಗುರುರಾಜ್, ಸೋನು ನಿಗಮ್, ಅನುರಾಧ ಪಾಡ್ವಾಲ್
ಛಾ: ಪ್ರಸಾದ್ ಬಾಬು
ಕಲೆ: ಸುಂದರಂ
ಸ: ಕೋಟಿ
ಸ್ಟು: ಚಾಮುಂಡೇಶ್ವರಿ
ಹಾ: ೧) 'ಗಂಗೆಯ ತುಂಗೆಯ ಪ್ರೀತಿಯ...', ೨) 'ದೈವದ ಕರುಣೆಯೋ ನನಗೆ...', ೩) 'ಈ ಅಂದದ ಚೆಂದದ ಮುದ್ದಿನ...', ೪) 'ಎಲ್ಲೋ ಯಾರೋ ಹೇಗೋ...', ೫) 'ಶೇಷಾದ್ರಿವಾಸ ಶ್ರೀ ತಿರುಮಲೇಶ...', ೬) 'ಗಂಗೆಯ ತುಂಗೆಯ ಪ್ರೀತಿಯ...', ೭) 'ನವಮಾಸ ನಿನ್ನನು ಹೊರಲಿಲ್ಲ...'
ಕ.ಸಾ: ಮಕ್ಕಳಿಲ್ಲದ ದಂಪತಿಗಳಿಗೆ ಹಲವು ವರ್ಷಗಳ ಮೇಲೆ ಒಂದು ಮಗುವಾಗುತ್ತದೆ. ಆದರೆ ಆದರ ಆ ಸಂತಸ ಬಹಳ ಕಾಲ ಉಳಿಯುವುದಿಲ್ಲ, ಮಗು ಸಮುದ್ರದ ಅಲೆಗೆ ಸಿಕ್ಕಿ ಕೊಚ್ಚಿ ಹೋಗುತ್ತದೆ. ಪವಾಡ ಸದೃಶ ರೀತಿಯಲ್ಲಿ ಮಗು ಬದುಕುಳಿದು ಮತ್ತೊಬ್ಬ ಮಕ್ಕಳಿಲ್ಲದ ದಂಪತಿಗಳಿಗೆ ಸಿಕ್ಕುತ್ತದೆ. ಇತ್ತ ಮಗುವಿನ ಅಗಲಿಕೆಯಿಂದ ಕಂಗೆಟ್ಟ ತಾಯಿ, ಅತ್ತ ಮೊತ್ತೊಬ್ಬ ತಾಯಿಗೆ ಬೆಳಕಾದ ಮಗು ಯಾರಿಗೆ ಸೇರಬೇಕು ಎನ್ನುವ ಜಿಜ್ಞಾಸೆಯಲ್ಲಿ ಮಗ ಅಂತ್ಯದಲ್ಲಿ ಹೆತ್ತವಳನ್ನು ಸೇರುತ್ತದೆ.

೧೨೭೯. ಆಯುಧ

(೧೯೯೬ / ವರ್ಣ / ಸಾಮಾಜಿಕ)
ಲಾ: ರಾಕ್‌ಲೈನ್ ಪ್ರೊಡಕ್ಷನ್ಸ್
ಪ್ರೊ: ರಾಕ್‌ಲೈನ್ ವೆಂಕಟೇಶ್
ನಿ: ಅಯ್ಯಪ್ಪ.ಪಿ.ಶರ್ಮ
ಸ.ನಿ: ಸೋಮರಾಜ್, ಆರ್.ಶಿವಶಂಕರ್
ಅ: ವಿಜಯಶಾಂತಿ, ಸಾಯಿಕುಮಾರ್, ಅರುಣ್ ಪಾಂಡ್ಯನ್, ಸಿತಾರಾ, ರಘುವರನ್
ಕ: ಅಯ್ಯಪ್ಪ.ಪಿ.ಶರ್ಮ
ಚಿ.ಕ: ಎಸ್.ಎಸ್.ಡೇವಿಡ್
ಮಾ: ಎಂ.ಎಸ್.ರಮೇಶ್
ಗೀ: ಎಸ್.ಕೇಶವ ಮೂರ್ತಿ
ಗಾ: ಮನು, ಚಿತ್ರಾ
ಸಂ: ಆರ್.ಜನಾರ್ದನ್
ಛಾ: ಬಾಬ್ಜಿ
ಕಲೆ: ಆರ್.ಕೆ.ಸುಂದರಂ
ಸ: ರಾಮ್ ಚಕ್ರವರ್ತಿ

ನೃ: ಜಾನ್ ಬಾಬು, ರಾಜಶೇಖರ್
ಸಾ: ಥ್ರಿಲ್ಲರ್ ಮಂಜು
ಹಾ: ೧) 'ಧರೆಯಲಿ ಇಂದು...', ೨) 'ಮಿಲ್ ಜ ಮಿಲ್ ಜ...', ೩) 'ಓಡುತ್ತಿರುವ ಜಿಂಕೆಯಂತೇ...', ೪) 'ಜಡಿ ಜಡಿ...', ೫) 'ಬೆಳದಿಂಗಳ ಬಾಲೆ...'
ಕ.ಸಾ: ಇಂಜಿನಿಯರ್ ಒಬ್ಬ. ಆವನದು ಸುಖೀ ಸಂಸಾರ. ಆವನ ನೆಮ್ಮದಿಯ ಬದುಕಿನಲ್ಲಿ ಗೆಳೆಯನೊಬ್ಬನ ಪ್ರವೇಶ. ಇಂಜಿನಿಯರ್‌ನ ಹೆಂಡತಿಯಲ್ಲಿ ಆ ಗೆಳೆಯನಿಗೆ ಸತ್ತ ತನ್ನ ತಾಯಿಯ ಛಾಯೆ. ಅವನ ಸದಭಿಪ್ರಾಯದ ನೋಟವನ್ನು ಆಕೆ ಅಪಾರ್ಥ ಮಾಡಿಕೊಳ್ಳುವಳು. ಇಂಜಿನಿಯರ್‌ಗೆ ಹಲವು ಶತ್ರುಗಳು. ಇಂಜಿನಿಯರ್‌ನನ್ನು ಕೊಲ್ಲಲು ಆ ವೈರಿಗಳ ಪ್ರಯತ್ನ. ಆದನ್ನು ತಡೆಯಲು ಹೋದ ಗೆಳೆಯ ಈ ನಿಟ್ಟಿನಲ್ಲಿ ಸಾವನ್ನಪ್ಪುತ್ತಾನೆ. ಪೋಲೀಸ್ ಅಧಿಕಾರಿಣಿಯೊಬ್ಬಳು ದುಷ್ಟರನ್ನು ನಿಗ್ರಹಿಸಿ ಸುಖಾಂತಕ್ಕೆ ಕಾರಣಳಾಗುತ್ತಾಳೆ.

೧೨೮೦. ಪಟ್ಟಣಕ್ಕೆ ಬಂದ ಪುಟ್ಟ

(೧೯೯೬ / ವರ್ಣ / ಸಾಮಾಜಿಕ)
ಲಾ: ಶಿವಶಕ್ತಿ ಮೂವೀಸ್
ಪ್ರೊ: ಹೆಚ್.ಕೆ.ಶ್ರೀನಿವಾಸ್
ನಿ: ಜೆ.ಬಲರಾಮ್
ಸ.ನಿ: ದಾಮೋದರ್
ಅ: ಜಗ್ಗೇಶ್, ರಾಜೇಶ್, ಮಾ।ಆನಂದ್, ಶುಭಶ್ರೀ, ಶ್ರೀನಾಥ್, ವಾಣಿಶ್ರೀ, ಎಂ.ಡಿ.ಕೌಶಿಕ್, ಅಭಿನಯ
ಕ/ಮಾ: ಬಿ.ಎ.ಮಧು
ಚಿ.ಕ: ಜೆ.ಬಲರಾಮ್
ಗೀ: ಶ್ಯಾಮಸುಂದರ ಕುಲಕರ್ಣಿ, ದೊಡ್ಡರಂಗೇ ಗೌಡ, ಕೆ.ಕಲ್ಯಾಣ್, ಸುರೇಶ್ ಪೈ, ವಿ.ಮನೋಹರ್

ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಮಂಜುಳಾ ಗುರುರಾಜ್, ರಾಜೇಶ್, ಮಾ।ಭರತ್
ಸಂ: ಎಸ್.ಮನೋಹರ್
ಛಾ: ವಿ.ರಮೇಶ್ ಬಾಬು
ಕಲೆ: ಬಾಬು ಖಾನ್
ಸ: ವಿ.ಮನೋಹರ್
ಧ್ವ: ಕೋದಂಡಪಾಣಿ, ಚಾಮುಂಡೇಶ್ವರಿ
ನೃ: ಸತೀಶ್
ಸಾ: ಕೆ.ಡಿ.ವೆಂಕಟೇಶ್
ವ: ಸತ್ಯಂ
ಪ್ರ: ಕೆ.ಮಾದೇಗೌಡ
ಹಾ: ೧) 'ಪ್ಯಾಟೆ ನೋಡೇಕೆ ಚೆಂದ...', ೨) 'ಹಾಲಮ್ಮ ಹಾಲಮ್ಮ...', ೩) 'ಈ ಪುಟ್ಟ ಪುಟವಿಟ್ಟ ಚಿನ್ನ...', ೪) 'ಕಣ್ಣ ಮುಚ್ಚಾಲೆ...', ೫) 'ಪುಟ್ಟನಾ ಕಟ್ಟಿಕೊಳ್ಳಿ...'
ಕ.ಸಾ: ಹಳ್ಳಿಯ ಮುಗ್ಧ ತರುಣ. ಹಣ ಸಂಪಾದನೆಗಾಗಿ ಪಟ್ಟಣಕ್ಕೆ ಬಂದ. ಪಟ್ಟಣದಲ್ಲಿ ವಂಚಕರ ಜಾಲದಲ್ಲಿ ಸಿಲುಕಿ ಪಡಬಾರದ ಕಷ್ಟ ಪಡುತ್ತಾನೆ. ಕಷ್ಟ - ತೊಂದರೆ ಎಲ್ಲವೂ ಪಟ್ಟಣದಲ್ಲಿನ ಬದುಕು ಹಾಗೂ ವ್ಯವಹಾರಗಳನ್ನು ಕಲಿಯುವಂತೆ ಮಾಡಿದವು. ಹಳ್ಳಿಯ ಮುಗ್ಧ ಪುಟ್ಟ ಬುದ್ಧಿವಂತನಾಗಿ ವಂಚಕರ ಮೋಸದ ಜಾಲಗಳನ್ನು ಭೇದಿಸಿ ಮೋಸಗಾರರಿಗೆ ಸರಿಯಾಗಿ ಬುದ್ಧಿ ಕಲಿಸುತ್ತಾನೆ.

೧೨೮೧. ಆದಿತ್ಯ

(೧೯೯೬ / ವರ್ಣ / ಸಾಮಾಜಿಕ)
ಲಾ: ಕ್ರಿಯೇಟಿವ್ ಮೀಡಿಯ ಪ್ರೊಡಕ್ಷನ್ಸ್

ಪ್ರೊ: ಎಂ.ಪಿ.ರವಿ, ವಿನಯ್ ಕುಮಾರ್
ನಿ: ಕೆ.ಎಸ್. ಲೋಕಚಂದರ್
ಸ.ನಿ: ಎ.ಗಂಗಾಧರ್, ಎಂ.ಎಸ್.ಶಶಿಚಂದ್ರ, ಎ.ರವಿ
ಅ: ಶಿವರಾಜ್ ಕುಮಾರ್, ಮಧು ಬಂಗಾರಪ್ಪ, ರುಷೆನಾ, ಸೀಲಮ್, ಅರ್ಚನಾ, ಭರತ್, ಭಗವಾನ್, ದೊಡ್ಡಣ್ಣ, ಜಾಕಿ ಶಿವು, ಸತ್ಯಜಿತ್, ಹೊಸ್ನವಳ್ಳಿ ಕೃಷ್ಣ, ಪೃಥ್ವಿರಾಜ್, ದಯಾನಂದ್, ಉಮಾಶ್ರೀ, ತಾರಾ, ಜ್ಯೋತಿ, ಪಂಕಜ, ರೇಖಾ ದಾಸ್, ಕವಿತಾಶ್ರೀ
ಕ/ಚಿ.ಕ: ಕೆ.ಎಸ್.ಲೋಕಚಂದರ್
ಮಾ: ಕೆಂಪರಾಜ್ ಬಿಳಿದಾಳೆ
ಗೀ: ಶ್ರೀರಂಗ, ಎಂ.ಎನ್. ವ್ಯಾಸರಾವ್, ವಿ.ಮನೋಹರ್, ಶ್ಯಾಮಸುಂದರ ಕುಲಕರ್ಣಿ, ರಾಜೇಶ್ ರಾಮನಾಥ್
ಗಾ: ರಾಜಕುಮಾರ್, ಮನು, ಚಿತ್ರಾ, ಬಿ.ಜಯಶ್ರೀ, ಸುರೇಶ್ ಪೀಟರ್, ರಾಜೇಶ್
ಸಂ: ಎಸ್.ಮನೋಹರ್
ಛಾ: ವಿಜಯಗೋಪಾಲ್
ಕಲೆ: ವೇಣು, ಕಲಾ ಮನೋಹರ್
ಸ: ರಾಜೇಶ್ ರಾಮನಾಥ್
ಧ್ವ: ಕೆ.ಕಣ್ಣನ್, ಕೋದಂಡಪಾಣಿ
ನೃ: ಶಿವಶಂಕರ್, ಪ್ರಸಾದ್, ಶಂಕರ್
ಸಾ: ನಂಜುಂಡಿ ನಾಗರಾಜ್, ಜಾಲಿ ಬಾಸ್ಟಿನ್
ವ: ತಿಪಟೂರು ಸೋಮು
ಪ್ರ: ಮೂಗೂರು ಪಿ.ಗುರು, ಕೇಶ: ನಾಗೇಶ್ವರರಾವ್

ಸ್ಥು: ಅಭಿಮಾನ್, ಕಂಠೀರವ
ಹಾ: ೧)'ಬ್ಯೂಟಿ ಎಂಥ ಬ್ಯೂಟಿಯು...', ೨)'ರಂಭೆ ವೈಯ್ಯಾರದ ರಂಭೆ...', ೩)'ಕಾವ್ಯದ ಹೊಸ ಕಾವ್ಯವು...', ೪)'ಯಪ್ಪ ಯಪ್ಪ ಹಪ್ಪ ಹಪ್ಪ...', ೫)'ಪ್ರೀತಿ ಎಂಬುವ ಮಾತನು...'
ಕ.ಸಾ: ಕಾನೂನಿನ ವಿದ್ಯಾರ್ಥಿಯೊಬ್ಬ ಅನ್ಯಾಯದ ವಿರುದ್ಧ ಹೋರಾಡಲು ತೊಡಗಿದಾಗ ತನ್ನವರೆಲ್ಲರನ್ನೂ ಕಳೆದುಕೊಳ್ಳುತ್ತಾನೆ. ನಂತರ ತನ್ನನ್ನು ಸಂಪೂರ್ಣವಾಗಿ ಬದಲಾಯಿಸಿಕೊಂಡು ದುಷ್ಟರ ವಿರುದ್ಧ ಹೋರಾಡಿ ಗೆಲ್ಲುತ್ತಾನೆ.

೧೭೮೨. ಶಿವಲೀಲೆ

(೧೯೯೬ / ವರ್ಣ / ಭಕ್ತಿಪ್ರಧಾನ)
ಲಾ: ವಿ.ಎಸ್.ಎಸ್.ಪ್ರೊಡಕ್ಷನ್ಸ್
ಪ್ರೊ/ನಿ: ವಿ.ಸ್ವಾಮಿನಾಥನ್
ಸ.ನಿ: ಎಸ್.ಮುತ್ತು
ಅ: ಸಿತಾರಾ, ಕಲ್ಯಾಣ್‌ಕುಮಾರ್, ಸಂಜಯ್, ಲೋಕೇಶ್, ಶ್ರೀಧರನ್, ಅಶ್ವತ್ಥ ನಾರಾಯಣ್, ಶ್ರೀನಿವಾಸ ಮೂರ್ತಿ, ಸುದರ್ಶನ್, ಶಿವರಾಂ, ಎಂ.ಡಿ. ಕೌಶಿಕ್, ಮೈನಾವತಿ, ಭರತ್ ಭಾಗವತರ್, ಉಮೇಶ್, ಮಹೇಶ್, ಪದ್ಮಾವಾಸಂತಿ, ಸವಿತಾ, ಪ್ರದೀಪ್, ಉಷಾ ನಂದಿನಿ
ಕ/ಚಿ.ಕ: ವಿ.ಸ್ವಾಮಿನಾಥನ್
ಮಾ: ಪಿ.ಎಸ್ ಎಸ್. ನಾಣಿ
ಗೀ: ವಿಜಯನಾರಸಿಂಹ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ರಾಜೇಶ್, ಶಶಿಧರ್ ಕೋಟೆ, ನರಸಿಂಹ ನಾಯಕ್, ಮಂಜುಳಾ ಗುರುರಾಜ್, ಬಿ.ಆರ್.ಛಾಯಾ
ಸಂ: ಕೃಷ್ಣ
ಛಾ: ಎಸ್.ವಿ.ಶ್ರೀಕಾಂತ್
ಕಲೆ: ಬಿ.ನಾಗರಾಜರಾವ್
ಸ: ಟಿ.ಜಿ.ಲಿಂಗಪ್ಪ
ಧ್ವ: ಮಹೇಂದ್ರನ್, ಕೋದಂಡಪಾಣಿ



ನೃ: ಸುನಂದಾ ದೇವಿ, ಮದನ್ ಹರಿಣಿ, ಸಂಜಯ್
ವ: ರಾಜಮಾಣಿಕ್ಯಂ
ಪ್ರ: ತಂಗಪ್ಪನ್
ಸ್ಥು: ಕಂಠೀರವ, ಚಾಮುಂಡೇಶ್ವರಿ
ಕ.ಸಾ: ಪರಶಿವನು ತನ್ನನ್ನು ನಂಬಿದ ಭಕ್ತರನ್ನು ಯಾವ ರೀತಿ ಕಾಪಾಡುತ್ತಾನೆ ಎಂಬುದರ ಚಿತ್ರಣ. ಭಕ್ತಿಗೆ ಆದ್ಯತ ಇರುವ ಕಥೆ.

೧೭೮೩. ಕೆಂಪು ಮುಗಿಲು

(೧೯೯೬ / ವರ್ಣ / ಸಾಮಾಜಿಕ)
ಲಾ: ಪಾಂಚಜನ್ಯ ಕ್ರಿಯೇಷನ್ಸ್
ಪ್ರೊ: ಮಹದೇವ್ ಪ್ರಕಾಶ್, ಮಲ್ಲಿಕಾರ್ಜುನ, ಟನೇಶ್, ಶಿವರಾಂ ರೆಡ್ಡಿ, ಶ್ರೀಮತಿ ಗೌರಿ ಮರಿಯಪ್ಪ
ನಿ: ಯೋಗೀಶ್ ಹುಣಸೂರು
ಸ.ನಿ: ಕೆ.ವಿಜಯಕುಮಾರ್, ಮಹೇಶ್ ಬಾಬು, ದೇವೇಂದ್ರ
ಅ: ದೇವರಾಜ್, ಸುಪ್ರಿಯಾ, ಉಜ್ವಲಾ, ರಾಜ್‌ಕಮಲ್, ಶರತ್ ಲೋಹಿತಾಶ್ವ, ಕೃಷ್ಣೇಗೌಡ
ಕ/ಚಿ.ಕ: ಕೆ.ವಿ.ರಾಜು
ಮಾ: ಕುಣಿಗಲ್ ನಾಗಭೂಷಣ್
ಗೀ: ದೊಡ್ಡರಂಗೇ ಗೌಡ, ವಿ.ಮನೋಹರ್



ಛಾ: ಮಲ್ಲಿಕಾರ್ಜುನ
ಕಲೆ: ಪ್ರಭು
ಸ: ಸಾಧುಕೋಕಿಲ
ಧ್ವ: ಪ್ರಸಾದ್ ಸ್ಟುಡಿಯೋ
ನೃ: ದೇವಿ, ಪ್ರಸಾದ್
ಸಾ: ಕೆ.ಡಿ.ವೆಂಕಟೇಶ್
ಸ್ಥು: ಅಭಿಮಾನ್
ಹಾ: ೧)'ಸುಂದರ.. ಸುಂದರ.. ಪ್ರೀತಿ.. ಆಡೋರಲ್ಲಾ ಪ್ರೀತಿ ಹಾಡು...'
ಕ.ಸಾ: ಪ್ರೀತಿ ಪ್ರೇಮ, ಭಿನ್ನಾಭಿಪ್ರಾಯ, ಸಸ್ಪೆನ್ಸ್‌ಗಳಿಂದ ಕೂಡಿದ ಚಿತ್ರ.

೧೭೮೪. ಕ್ರೌಂ

(೧೯೯೬ / ವರ್ಣ / ಪತ್ತೇದಾರಿ)
ಲಾ: ಶ್ರೀ ವೆಂಕಟೇಶ್ವರ ಫಿಲಂಸ್
ಪ್ರೊ: ಚೂಡಾಮಣಿ ಪಾಂಡುರಂಗನ್, ಮಂಜುಳಾದೇವಿ ರಂಗರಾಜ್
ನಿ: ಎಸ್.ಆರ್.ಬಿ
ಸ.ನಿ: ಹೆಚ್.ಕೆ.ನಾಗರಾಜ್
ಅ: ಶೋಭರಾಜ್, ಶಂಕರ್ ಅಶ್ವತ್ಥ್, ಅಂಜಲಿ, ಶ್ರೀರಾಮ್, ವಜ್ರಮುನಿ, ಶಿವರಾಂ, ಜೋಸ್ಸೈಮನ್, ವಾಣಿಶ್ರೀ, ನಾಗರತ್ನ, ಬ್ಯಾಂಕ್ ಜನಾರ್ದನ್, ಎಂ.ಎಸ್.ಉಮೇಶ್
ಕ/ಚಿ.ಕ: ಎಸ್.ಆರ್.ಬಿ
ಮಾ: ಕಣಗಾಲ್ ಪುರುಷೋತ್ತಮ್
ಛಾ: ಎಂ.ಎನ್.ಸ್ವಾಮಿ
ಕಲೆ: ಕೆ.ಆನಂದ್
ಸ: ಗುಣಸಿಂಗ್
ಧ್ವ: ಕೃಷ್ಣಮೂರ್ತಿ, ಪೀಟರ್
ಸಾ: ವಿಕ್ರಮ್
ವ: ಸಂತೋಷ್ ಕುಮಾರ್
ಪ್ರ: ಮೇಕಪ್ ನಾಣಿ

ಸ್ಥು: ಮಧು ಆರ್ಟ್ಸ್
ಕ.ಸಾ: ಕೊಲೆಗಳ ಮೇಲೆ ಕೊಲೆಗಳಾಗುತ್ತಾ ಹೋಗುವ ಕಥೆ. ಎಸ್ಟೇಟಿನ ಮ್ಯಾನೇಜರನ ಕೊಲೆ ರಹಸ್ಯವಾಗಿ ನಡೆದು ಹೋಗುತ್ತದೆ. ಇನ್ಸ್‌ಪೆಕ್ಟರ್ ಅರುಣ್ ಇವರ ಪತ್ತೆಕಾರ್ಯ ಆರಂಭಿಸಿದ ಮೇಲೂ ಇನ್ನೆರಡು ಕೊಲೆಗಳು ಆಗುತ್ತವೆ. ಆದರೂ ಕೊನೆಯಲ್ಲಿ ಅರುಣ್ ಕೋರ್ಟಿನಲ್ಲಿಯೇ ಅಪರಾಧಿ ಬೆಳಕಿಗೆ ಬರುವಂತೆ ಮಾಡುತ್ತಾನೆ.

೧೭೮೫. ರೇಂಜರ್

(೧೯೯೬ / ವರ್ಣ / ಸಾಮಾಜಿಕ)
ಲಾ: ಗೋಕುಲ್ ಗೌತಮ್ ಪ್ರೊಡಕ್ಷನ್ಸ್
ಪ್ರೊ/ನಿ: ಕೆ.ಎಸ್.ಗೋಪಾಲಕೃಷ್ಣ
ಸ.ನಿ: ಜಿ.ಕೆ.ರವಿರಾಜ್
ಅ: ಪ್ರಭಾಕರ್, ದೇವರ್, ಅಂಜು, ಶಾರದಾಪ್ರಿಯ, ಅರ್ಜುನ್, ಸಚ್ಚಿನ್, ಸೌಂದರ್ಯ ಕುಮಾರ್, ರಾಜ, ಉದಯ್, ಕಮಲ್ ರಾಜ್, ನೀಗ್ರೋ ಜಾನಿ, ಸತ್ಯಜಿತ್
ಕ/ಚಿ.ಕ: ಕೆ.ಎಸ್.ಗೋಪಾಲಕೃಷ್ಣ
ಮಾ: ಜಿ.ಕೆ.ರವಿರಾಜ್
ಗೀ: ವಿಜಯನಾರಸಿಂಹ, ಕೆ.ರವಿರಾಜ್
ಸಂ: ಕೆ. ಸುಗುಣ್ಣ
ಛಾ: ಎಂ.ಜಿ.ಬೆಂಜಮಿನ್, ವಿಜಯಕುಮಾರ್, ರಘು
ಕಲೆ: ಪಿ.ಸುಶೀಲ್ ಕುಮಾರ್

ಸ: .ರಾಜವರ್ಮ
ಧ್ವ: ವಿ.ಜನಾರ್ದನ್
ನೃ: ಅಂಜು. ಮಹೇಂದ್ರ
ಸಾ: ಮಾಫಿಯಾ ಶಶಿ
ವ: ನಟರಾಜನ್. ಲಕ್ಷ್ಮಿ
ಪ್ರ: ಮಣಿ ಭರಣಿ
ಕ.ಸಾ: ಕಾಲೇಜು ವಿದ್ಯಾರ್ಥಿಗಳ ತಂಡ ಸಸ್ಯಶಾಸ್ತ್ರ ಅಧ್ಯಯನ ಪ್ರವಾಸಕ್ಕಾಗಿ ಅರಣ್ಯಕ್ಕೆ ಬರುತ್ತದೆ. ಅಲ್ಲಿ ಕಾಡುಗಳ್ಳರಿದ್ದಾರೆಂದು ರೇಂಜರ್ ವಿದ್ಯಾರ್ಥಿಗಳಿಗೆ ಎಚ್ಚರಿಸುತ್ತಾರೆ. ವಿದ್ಯಾರ್ಥಿಗಳ ನಡುವಣ ಪ್ರೀತಿ ಪ್ರಣಯದೊಂದಿಗೆ ಕಥೆ ಸಾಗುತ್ತದೆ. ಅವರಲ್ಲಿ ವಿದ್ಯಾರ್ಥಿನಿಯೊಬ್ಬಳು ನಾಪತ್ತೆಯಾಗಿರುತ್ತಾಳೆ. ಇದು ವಿದ್ಯಾರ್ಥಿಗಳ ನಡುವೆ ಸಂಘರ್ಷಕ್ಕೆ ಕಾರಣವಾಗುತ್ತದೆ.

೧೭೮೬. ಸ್ತ್ರೀ

(೧೯೯೬ / ವರ್ಣ / ಸಾಮಾಜಿಕ)
ಲಾ: ಶ್ರೀ ಲಕ್ಷ್ಮೀ ಪ್ರೊಡಕ್ಷನ್
ಪ್ರೊ: ಎಂ.ಸುನಂದ, ಎಂ.ಕೃಷ್ಣ, ಬಿ.ಎಸ್.ಗಂಗಾಧರ್
ನಿ: ಎಸ್.ಮಹೇಂದರ್

ಅ: ಪ್ರೀತಿ, ಶಶಿಕುಮಾರ್, ಸಿತಾರಾ, ಲೋಕೇಶ್, ಸುಮಿತ್ರಾ, ಟೆನ್ನಿಸ್ ಕೃಷ್ಣ, ಆಶಾಲತಾ, ಪದ್ಮಾ ಕುಮುಟ, ಜೈ ಜಗದೀಶ್, ಶ್ರೀನಿವಾಸ ಮೂರ್ತಿ
ಕ/ಚಿ.ಕ/ಮಾ: ಆರ್.ಪ್ರಕಾಶ್ ತ್ರಿಶೂಲಿ, ಎಸ್.ಮಹೇಂದರ್
ಗೀ: ಹಂಸಲೇಖ
ಸಂ: ಶ್ಯಾಂ
ಛಾ: ಕೃಷ್ಣಕುಮಾರ್
ಸ: ಹಂಸಲೇಖ
ಧ್ವ: (ಮಾ) ಕೃಷ್ಣಮೂರ್ತಿ (ಹಾ) ಪೀಟರ್, ಅಣ್ಣಾ ದೊರೈ
ನೃ: ದೇವ, ಸಂಪತ್
ಸ್ಥಿ: ಸಂಕೇತ್
ಕ.ಸಾ: ಜನ್ಮ ನೀಡಿ ಸಾಕಿ ಸಲಹುವ ಹೆಣ್ಣು ಅಬಲೆಯಲ್ಲ; ಜಗತ್ತನ್ನೇ ಪೊರೆಯುವ ಜಗನ್ಮಾತೆ ಎಂದು ಚಿತ್ರಿಸಲಾಗಿದೆ. ಹೆಣ್ಣು ಗಂಡಿನ ಸರಿಸಮಾನಳು. ಅವಳು ರಕ್ಷಿಸಲೂ ಬಲ್ಲಳು; ಶಿಕ್ಷಿಸಲೂ ಬಲ್ಲಳು ಎಂಬುದನ್ನು ಸಾರುವ ಕಥೆ.

೧೭೮೭. ಜನುಮದ ಜೋಡಿ

(೧೯೯೬ / ವರ್ಣ / ಸಾಮಾಜಿಕ)
ಲಾ: ವೈಷ್ಣವೀ ಕಂಬೈನ್ಸ್
ಪ್ರೊ: ಶ್ರೀಮತಿ ಪಾರ್ವತಮ್ಮ ರಾಜಕುಮಾರ್
ನಿ: ಟಿ.ಎಸ್.ನಾಗಾಭರಣ
ಅ: ಶಿವರಾಜ್ ಕುಮಾರ್, ಶಿಲ್ಪ, ಮಂಡ್ಯ ರಮೇಶ್, ಪವಿತ್ರಾ ಲೋಕೇಶ್, ಕರಿಬಸವಯ್ಯ, ರಾಜೀವ್, ಅಮುಲ್ಯಾ, ಅಶೋಕ್, ಪಿಂಗಿ ಬಾಳಪ್ಪ, ಶೋಭಾ ರಾಘವೇಂದ್ರ
ಕ: ಪನ್ನಾಲಾಲ್ ಪಟೇಲ್
ಚಿ.ಕ: ಟಿ.ಎಸ್.ನಾಗಾಭರಣ
ಮಾ: ಬರಗೂರು ರಾಮಚಂದ್ರಪ್ಪ
ಗೀ: ವಿ.ಮನೋಹರ್, ಬರಗೂರು ರಾಮಚಂದ್ರಪ್ಪ, ಶ್ರೀರಂಗ, ದೊಡ್ಡರಂಗೇಗೌಡ
ಗಾ: ರಾಜಕುಮಾರ್, ಶಿವರಾಜ್ ಕುಮಾರ್, ಮಂಜುಳಾ ಗುರುರಾಜ್, ಸಂಗೀತಾ ಕಟ್ಟಿ, ರಾಜೇಶ್, ಎಲ್.ಎನ್.ಶಾಸ್ತ್ರಿ
ಸಂ: ಶಶಿಕುಮಾರ್
ಛಾ: ಬಿ.ಸಿ.ಗೌರಿಶಂಕರ್
ಸ: ವಿ.ಮನೋಹರ್
ಹಾ: ೧)'ಮಣಿ ಮಣಿ ಮಣಿ ಮಣಿ...', ೨)'ಜನುಮದ ಜೋಡಿ ನೀನು...', ೩) 'ಕೀರ ಕೀರ ಕೀರ...', ೪) 'ಆರತಿ ಅಣ್ಣಮ್ಮಂಗೇ...', ೫) 'ಜನುಮ ಜೋಡಿ ಆದರೂ...', ೬) 'ಇವನ್ಯಾರ ಮಗನೋ...', ೭) 'ಓ ಊರ ವ್ಯಾಪರಿ...', ೮) 'ಕೋಲುಮಂಡೆ ಜಂಗಮಯ್ಯ...', ೯) 'ದೇಹವೆಂಬರೆ ಓ ಮನುಜಾ ...'
ಪಿ: ೧೯೯೬-೯೭ರ ರಾಜ್ಯಪ್ರಶಸ್ತಿ : ಅತ್ಯುತ್ತಮ ನಟಿ (ಶಿಲ್ಪಾ), ಅತ್ಯುತ್ತಮ ಗೀತರಚನೆಕಾರ (ದೊಡ್ಡರಂಗೇಗೌಡ), ಅತ್ಯುತ್ತಮ ಹಿನ್ನೆಲೆ ಗಾಯಕ (ಎಲ್.ಎನ್.ಶಾಸ್ತ್ರಿ), ವಿಶೇಷ ಸಾಮಾಜಿಕ ಪರಿಣಾಮ ಬೀರುವ ಚಿತ್ರ.
ಕ.ಸಾ: ಮೊದಲ ನೋಟದಲ್ಲೇ ಹುಟ್ಟುವ ಪ್ರೇಮದ ಕಥೆ. ಕೃಷ್ಣ ಮತ್ತು ಕನಕ ಒಬ್ಬರನ್ನೊಬ್ಬರು ಪ್ರೀತಿಸಲಾರಂಭಿಸುತ್ತಾರೆ. ಆದರೆ ಅವರ ಜಾತಿಗಳು ಮದುವೆಗೆ ಅಡ್ಡಿಯಾಗುತ್ತದೆ. ಕೃಷ್ಣನನ್ನು ಕಂಡರೆ ಆಗದಿರುವ ಸಿಂಗಾರಿ ಕನಕಳ ಮದುವೆ ಬೇರೊಬ್ಬನೊಂದಿಗೆ ಆಗುವಂತೆ ಮಾಡಿಯೂ ಬಿಡುತ್ತಾನೆ. ಬದುಕಿನಲ್ಲಿ ಏನೆಲ್ಲಾ ಆಗು-ಹೋಗುಗಳು ಸಂಭವಿಸಿ ಯಾವುದೋ ಒಂದು ಸಂದರ್ಭದಲ್ಲಿ ಜನುಮದ ಜೋಡಿಗಳಾದ ಈ ಪ್ರೇಮಿಗಳಿಬ್ಬರೂ ಮತ್ತೆ ಸಂಧಿಸುತ್ತಾರೆ.

೧೭೮೮. ಗುಲಾಬಿ

(೧೯೯೬ / ವರ್ಣ / ಸಾಮಾಜಿಕ)
ಲಾ: ಶಾಂತಲಾ ಪಿಕ್ಚರ್ಸ್
ಪ್ರೊ: ಶ್ರೀಮತಿ ಭಾಗ್ಯವತಿ
ನಿ: ಎಸ್.ನಾರಾಯಣ್
ಸ.ನಿ: ಗಿರೀಶ್ ಕಂಪ್ಲಾಪುರ್
ಅ: ರಾಮಕುಮಾರ್, ದೊಡ್ಡಣ್ಣ, ಶ್ರೀನಿವಾಸ ಮೂರ್ತಿ, ಶ್ರೀಲಲಿತಾ, ಹರೀಶ್ ರಾಯ್, ರೋಶಿನಿ, ಎಸ್.ನಾರಾಯಣ್, ಡಾ|ಸುರೇಶ್, ಸುಧಾ, ಪದ್ಮಾ ವಾಸಂತಿ, ವಿದ್ಯಾಶ್ರೀ, ಜೇಬಿ ಸಿಂದೂ, ಸತ್ಯಜಿತ್, ಮಾ|ಸುಖೇಶ್,
ಕ: ಅಜಯ್ ಕುಮಾರ್
ಚಿ.ಕ/ಮಾ/ಗೀ: ಎಸ್.ನಾರಾಯಣ್
ಗಾ: ಇಳಯರಾಜಾ, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ, ನೆಪೋಲಿಯನ್, ಸೌಮ್ಯ
ಸಂ: ಪಿ.ಆರ್.ಸೌಂದರ ರಾಜ್
ಛಾ: ಆರ್.ಗಿರಿ
ಕಲೆ: ಬಿ.ನ.ಸು.ಮೂರ್ತಿ
ಸ: ಇಳಯರಾಜಾ

ಧ್ವ: ಪೀಟರ್, ಕೃಷ್ಣಮೂರ್ತಿ
ನೃ: ಜಾನ್ ಬಾಬು
ಸಾ: ಡೈನಾಮಿಕ್ ಸುರೇಶ್
ಪ: ವಿಠಲ್ ರಾವ್, ಇಳಂಗೋವನ್
ಪ್ರ: ವಿಠಲ್
ಹಾ: ೧)'ಹೃದಯರಾಗ ಹಾಡಿದೆ ...', ೨)'ಈ ಚೆಲುವೆ ನಾಚಿದರೆ ಮುತ್ತು ...', ೩)'ಬೀಸೋ ತಂಗಾಳಿ ಕೇಳು ...', ೪)'ಕೇಳಿಸದೆ ಪ್ರೇಮವೇದ ...'
ಕ.ಸಾ: ದುರಂತ ಪ್ರೇಮಕಥೆ. ರಾಜು ಮತ್ತು ರಂಜಿತ ಬಾಲ್ಯ ಸ್ನೇಹಿತರು. ಆದರೆ ಅವರಿಬ್ಬರ ತಂದೆ ತಾಯಿಗಳ ನಡುವೆ ಇರುವ ಅಹಂ ಮತ್ತು ದ್ವೇಷ ಮದುವೆಗೆ ಅಡ್ಡಿಯಾಗುತ್ತದೆ. ಇದರಿಂದಾಗಿ ಅವರಿಬ್ಬರ ಪ್ರೇಮ ದುರಂತದಲ್ಲಿಯೇ ಕೊನೆಗೊಳ್ಳುತ್ತದೆ.

೧೭೮೯. ಬಾಳಿನ ಜ್ಯೋತಿ

(೧೯೯೬ / ವರ್ಣ / ಸಾಮಾಜಿಕ)
ಲಾ: ಟಿ.ವಿ.ಎಸ್.ಮೂವೀಸ್
ಪ್ರೊ: ಬಿ.ವಿ.ಸೀತಾರಾಮರಾಜು
ನಿ: ಟಿ.ಕ್ರಾಂತಿಕುಮಾರ್
ಸ.ನಿ: ಕಲಾಗಂಗೋತ್ರಿ ಮಂಜು
ಅ: ವಿಷ್ಣುವರ್ಧನ್, ಆಮನಿ, ಮಾ|ಅರುಣ್, ದ್ವಾರಕೀಶ್, ರೇಖಾ ದಾಸ್, ಆರ್.ನಾಗೇಶ, ಕನ್ನಡ ರಾಜು, ಶ್ರೀನಿವಾಸ ಮೂರ್ತಿ, ವಿನಯಾ ಪ್ರಸಾದ್, ರಾಜಾನಂದ್, ಕುಮಾರ್ ಸೊಣವಿನಕರ, ಕಿಶೋರಿ ಬಲ್ಲಾಳ್, ಕೃಷ್ಣೇಗೌಡ, ಆಶಾಲತಾ, ವಸಂತರಾವ್ ನಾಕೋಡ್, ಸರೋಜಾ, ಶ್ರೀಶೈಲನ್
ಕ: ಟಿ.ವಿ.ಎಸ್.ಪ್ರೊಡಕ್ಷನ್ ಕಥಾ ವಿಭಾಗ
ಚಿ.ಕ: ಟಿ.ಕ್ರಾಂತಿಕುಮಾರ್
ಮಾ: ರಾಜಾನಂದ್
ಗೀ: ಆರ್.ಎನ್.ಜಯಗೋಪಾಲ್, ಮಂಜು ಕಲಾಗಂಗೋತ್ರಿ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ, ಬಿ.ಆರ್.ಛಾಯಾ, ಕುಸುಮಾ, ರಾಜೇಶ್‌ಕೃಷ್ಣ
ಸಂ: ಶ್ಯಾಂ ಯಾದವ್
ಛಾ: ಹರಿ ಅನ್‌ಮೋಲ್
ಕಲೆ: ರಮೇಶ್ ಬಾಬು
ಸ: ರಾಜನ್ ನಾಗೇಂದ್ರ
ಧ್ವ: ಸಂಕೇತ್, ಪ್ರಸಾದ್
ನೃ: ಸುಜಾತ, ಬಾಬು
ವ: ರಾಮನಾಥ್
ಪ್ರ: ಕುಮಾರ್ ಸೊಣವಿನಕರೆ, ಕೇಶ: ನಾಗೇಶ್
ಕ.ಸಾ: ಮಗುವಿನ ಸಾವಿನಿಂದಾಗಿ ಹೆಂಡತಿಯಾದವಳು ಮಾನಸಿಕ ಸ್ವಾಸ್ಥ್ಯವನ್ನು ಕಳೆದುಕೊಳ್ಳುವ ಕಥೆ. ಜ್ಯೋತಿ, ಜಾನಕಿಯ ಮಗುವನ್ನು ತುಂಬಾ ಹಚ್ಚಿಕೊಂಡಿರುತ್ತಾಳೆ. ಆ ಮಗು ರಥದ ಚಕ್ರಕ್ಕೆ ಸಿಕ್ಕಿ ಸತ್ತಾಗ ಜಾನಕಿ ಜ್ಯೋತಿಯನ್ನು ದೋಷಿಯಾಗಿ ಮಾಡುತ್ತಾಳೆ. ಇದರಿಂದಾಗಿ ಗರ್ಭಿಣಿಯಾದ ಜ್ಯೋತಿ ಮಾನಸಿಕವಾಗಿ ಅಸ್ವಸ್ಥಳಾಗುತ್ತಾಳೆ. ಆ ಅವಸ್ಥೆಯಲ್ಲೇ ಅವಳಿಗೆ ಹುಟ್ಟುವ ಹೆಣ್ಣುಮಗುವನ್ನು ಜಾನಕಿ ದತ್ತು ತೆಗೆದುಕೊಳ್ಳುತ್ತಾಳೆ. ಈ ಕಥೆ ಆ ಹುಡುಗಿಗೇ ಗೊತ್ತೇ ಇರುವುದಿಲ್ಲ. ಅವಳು ತನ್ನ ಮಗುವಿನೊಂದಿಗೆ ಅಮೆರಿಕಕ್ಕೆ ಹೊರಟಾಗ ವಿಷಯ ಗೊತ್ತಾಗುತ್ತದೆ. ಅವಳು ತಾಯಿಗಾಗಿ ಅಲ್ಲಿಯೇ ಉಳಿಯಲು ನಿರ್ಧರಿಸುತ್ತಾಳೆ.

೧೭೯೦. ಹೃದಯ ಕಳ್ಳರು

(೧೯೯೬ / ವರ್ಣ / ಸಾಮಾಜಿಕ)
ಲಾ: ದ್ವಾರಕೀಶ್ ಚಿತ್ರ
ಪ್ರೊ/ನಿ: ದ್ವಾರಕೀಶ್

ಸ.ನಿ: ಬಾಲಕುಮಾರ್, ಸುರೇಶ್ ರಾಜ್
ಅ: ಗುರು ದ್ವಾರಕೀಶ್, ಅಭಿ ದ್ವಾರಕೀಶ್, ದ್ವಾರಕೀಶ್, ಎಸ್.ಪಿ.ಬಾಲಸುಬ್ರಹ್ಮಣ್ಯಂ, ವಿನಯಾ ಪ್ರಸಾದ್, ಉಮಾಶ್ರೀ, ಅಮೂಲ್ಯ
ಕ/ಚಿ.ಕ: ದ್ವಾರಕೀಶ್
ಮಾ: ಎಸ್.ದಾಮೋದರ್
ಗೀ: ಸು. ರುದ್ರಮೂರ್ತಿ ಶಾಸ್ತ್ರೀ, ಎಂ.ಎಸ್.ವ್ಯಾಸರಾವ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ
ಸಂ: ಗೌತಮ್ ರಾಜ್
ಛಾ: ಕರುಣಾಕರ ರಾವ್
ಕಲೆ: ವೇಣು
ಸ: ರಮಣಿ ಭಾರದ್ವಾಜ್
ಧ್ವ: ಪೀಟರ್, ಕೃಷ್ಣಮೂರ್ತಿ
ನೃ: ಗಿರಿಜಾ, ರಘುರಾಮ್
ಸಾ: ಸ್ವಾಮಿ
ವ: ಗಣೇಶ್
ಪ್ರ: ಪುರುಷೋತ್ತಮ್
ಸ್ಟು: ಸಂಕೇತ್, ಅಭಿಮಾನ್
ಕ.ಸಾ: ಪ್ರೇಮ ಕಥಾನಕ. ಶ್ರೀಮಂತ ಹುಡುಗಿಯರ ತಾಯಿ, ಹುಡುಗರ ತಂದೆ ಪ್ರೇಮಕ್ಕೆ ಅಡ್ಡ. ಕಡೆಗೆ ಯುವ ಜೋಡಿಗಳು ಅವರ ಮನಪರಿವರ್ತನೆ ಮಾಡುತ್ತಾರೆ.

೧೭೯೧. ಮುದ್ದಿನ ಅಳಿಯ

(೧೯೯೬ / ವರ್ಣ / ಸಾಮಾಜಿಕ)
ಲಾ: ಶ್ರೀ ರಾಘವೇಂದ್ರ ಫಿಲಂಸ್
ಪ್ರೊ: ಜಿ.ಗೋವಿಂದು, ಕಡೂರು ಉಮೇಶ್
ನಿ: ಹೆಚ್.ವಾಸು
ಸ.ನಿ: ಕೆ.ಮಾದೇಶ್, ವಿಜಯಕುಮಾರ್
ಅ: ಶಶಿಕುಮಾರ್, ಸಿತಾರಾ, ಶ್ವೇತಾ, ಧೀರೇಂದ್ರ ಗೋಪಾಲ್, ಕಲ್ಯಾಣ್ ಕುಮಾರ್, ಬ್ಯಾಂಕ್ ಜನಾರ್ದನ್, ಬೇಬಿ ಕೀರ್ತನಾ, ಶಿವಕುಮಾರ್
ಮಾ: ಎಂ.ಎಸ್.ರಮೇಶ್
ಸಂ: ಶ್ಯಾಂ
ಛಾ: ಜೆ.ಜಿ.ಕೃಷ್ಣ
ಕಲೆ: ನಂಜುಂಡಸ್ವಾಮಿ
ಸ: ವಿ.ಮನೋಹರ್
ಸಾ: ನಂಜುಂಡಿ ನಾಗರಾಜ್
ಸ್ಟು: ಕಂಠೀರವ
ಹಾ: ೧)'ಕೋಗಿಲೆ ಓ ಕೋಗಿಲೆ... ಜಗವಿಡೀ ಮಿಲನೋತ್ಸವ...'
ಕ.ಸಾ: ಭಾರಿ ಮನೆತನದ ಅಳಿಯನ ಸುತ್ತ ಹೆಣೆಯಲಾದ ಕಥೆ. ಉದಯೋನ್ಮುಖ ಕೃಷಿಕ ರಾಮಣ್ಣ ಧರ್ಮಯ್ಯನ ಮಗಳು ಕಸ್ತೂರಿಯನ್ನು ಮದುವೆಯಾಗುತ್ತಾನೆ. ಧರ್ಮಯ್ಯನ ಮಗ ರಾಜನನ್ನು ಆಸ್ತಿಯ ಆಸೆಗಾಗಿ ನಗರದವಳಾದ ಶೀಲ ಮದುವೆಯಾಗುತ್ತಾಳೆ. ಶೀಲಳ ಮಗಳು ಕಾವೇರಿಯನ್ನು ರಾಮಣ್ಣ ಮತ್ತು ಕಸ್ತೂರಿ ತುಂಬಾ ಹಚ್ಚಿಕೊಂಡಿರುತ್ತಾರೆ. ಕಸ್ತೂರಿ ಆಕಸ್ಮಿಕವಾಗಿ ದುರಂತದಲ್ಲಿ ಸಾವಿಗೀಡಾಗುತ್ತಾಳೆ. ಧರ್ಮಯ್ಯ ಅಳಿಯನಿಗ ಅಮೃತಳನ್ನು ಮದುವೆಯಾಗುವಂತೆ ಕೇಳಿಕೊಳ್ಳುತ್ತಾನೆ. ರಾಮಣ್ಣ ಅಮೃತಳಿಂದ ದೂರವೇ ಉಳಿಯುತ್ತಾ ಹೋಗುತ್ತಾನೆ. ಕೊನೆಗೆ ಕಾವೇರಿ ಅವಳನ್ನು ಅಮ್ಮನೆಂದು ಒಪ್ಪಿಕೊಂಡಾಗ ಅವನೂ ಒಪ್ಪಿಕೊಳ್ಳುತ್ತಾನೆ.

೧೭೯೨. ರಂಗೋಲಿ

(೧೯೯೬ / ವರ್ಣ / ಸಾಮಾಜಿಕ)
ಲಾ: ಶ್ರುತಿ ಎಂಟರ್‌ಪ್ರೈಸಸ್
ಪ್ರೊ: ಎಸ್.ಶೈಲೇಂದ್ರ ಬಾಬು
ನಿ: ಪಿ.ಹೆಚ್.ವಿಶ್ವನಾಥ್
ಸ.ನಿ: ನಾಗರಾಜ್
ಅ: ಸುಮಂತ್, ರುಚಿತಾ ಪ್ರಸಾದ್, ರಮೇಶ್ ಭಟ್, ಕಾಶಿ, ವಂಕಿ, ಬ್ಯಾಂಕ್ ಜನಾರ್ದನ್, ಮುಕ್ಕೋ ಚಂದ್ರು, ಗುರುಕಿರಣ್, ರೇಖಾ ದಾಸ್, ಮೈನಾ ಚಂದ್ರು, ತೇಜ್ ಸಪ್ರು, ಅಪೂರ್ವ
ಕ/ಚಿ.ಕ: ಪಿ.ಹೆಚ್.ವಿಶ್ವನಾಥ್
ಮಾ: ಕೋಟಿಗಾನಹಳ್ಳಿ ರಾಮಯ್ಯ
ಗೀ: ಮನೋಹರ್, ಕಲ್ಯಾಣ್, ಶ್ರೀರಂಗ

ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ, ರಾಜೇಶ್, ಎಲ್.ಎನ್.ಶಾಸ್ತ್ರಿ, ಸೌಮ್ಯ. ಸುಚಿತಾ ದತ್
ಸಂ: ಬಿ.ಎಸ್.ಕೆಂಪರಾಜ್
ಛಾ: ಕೆ.ಹೆಚ್.ದಾಸ್
ಕಲೆ: ರಮೇಶ್ ಬಾಬು
ಸ: ವಿ.ಮನೋಹರ್, ಸ್ಯಾಕ್ಸ್ ರಾಜಾ
ಧ್ವ: ಶಂಕರ್
ಸಾ: ನಂಜುಂಡಿ ನಾಗರಾಜ್
ಹಾ: ೧) 'ಜೀವ ಜೀವ ಸೇರಿಸು...', ೨) 'ಹೇ ಗುಲಾಬಿ...', ೩)'ಚಂಪಾಕಲಿ ಚಂಪಾಕಲಿ...', ೪)'ರಂಗೋಲಿ ರಂಗೋಲಿ...', ೫)'ಜೀವಕ್ಕೆ ಜೀವ ಸೇರಿಸು...', ೬)'ಭಕ್ಕಮ್ಮ ಭಕ್ಕಮ್ಮ...', ೭)'ದಾದಿಯಾ ದಾದಿಯಾ...', ೮)'ಶಾಲು ಬಾಲು ನೀಲು...', ೯)'ಚುಕ್ಕಿ ಚುಕ್ಕಿ ತಾರೆ...', ೧೦)'ಮುಗಿಲೇ ಮುಗಿಲೇ...'
ಕ.ಸಾ: ಹುಡುಗ ಹುಡುಗಿಯ ಪ್ರೇಮಕ್ಕೆ ಜಾತಿ, ಅಂತಸ್ತು ಅಡ್ಡ ಬರುತ್ತದೆ. ಆದರೆ ಪ್ರೇಮ ಅದೆಲ್ಲವನ್ನೂ ಮೀರಿ ನಿಲ್ಲುವಂತಹುದು - ಯಾವ ಮಿತಿಗೂ ಅದು ಸಿಲುಕುವುದಿಲ್ಲ ಎಂಬುದರ ನಿರೂಪಣೆ.

೧೭೯೩. ಮಿನುಗುತಾರೆ

(೧೯೯೬ / ವರ್ಣ / ಸಾಮಾಜಿಕ)
ಲಾ: ಸಾಯಿ ವಿನಾಯಕ ಫಿಲಂಸ್
ಪ್ರೊ: ಶಿವಮಣಿ, ಎಂ.ರಮೇಶ್
ನಿ: ಶಿವಮಣಿ
ಅ: ಶ್ರುತಿ, ಶ್ವೇತಾ, ಕುಮಾರ್ ಗೋವಿಂದ್, ಗಜರ್‌ಖಾನ್, ಕೃಷ್ಣೇಗೌಡ, ಅಶೋಕ್‌ರಾವ್
ಕ: ಶ್ರೀಮತಿ ತುಳಸಿ ಶಿವಮಣಿ
ಚಿ.ಕ/ಮಾ: ಜೆ.ಎಂ.ಪ್ರಹ್ಲಾದ್
ಗೀ: ಕೆ.ಕಲ್ಯಾಣ್
ಗಾ: ಮಂಜುಳಾ ಗುರುರಾಜ್, ಚಿತ್ರಾ, ರಾಜಕುಮಾರ್, ರಾಜೇಶ್, ಸೌಮ್ಯ
ಸ: ರಾಜೇಶ್ ರಾಮನಾಥ್
ಹಾ: ೧)'ಸೊಗಸು ಸೊಗಸಾದ ಸ್ನೇಹ...', ೨)'ಬಾಳು ಹೆಣ್ಣೆ ನಿನ್ನ ಬಾಳು...', ೩)' ಮಲೆನಾಡ ಸೀಮೆಯಲಿ...', ೪)'ಕಲ್ಪನಾ ಕಲ್ಪನಾ...'
ಕ.ಸಾ: ಸ್ನೇಹ ಮತ್ತು ತ್ಯಾಗದ ಸುತ್ತ ಸುತ್ತುವ ಕಥೆ. ಕಲ್ಪನಾ ಮತ್ತು ಭಾವನಾ ಇಬ್ಬರು ಜೀವದ ಗೆಳತಿಯರು. ಒಬ್ಬಳು ಶ್ರೀಮಂತೆ, ಒಬ್ಬಳು ಬಡವಿ. ಕಲ್ಪನಾ ಭಾವನಾಳಿಗಾಗಿ ತನ್ನ ಕನಸುಗಳನ್ನೆಲ್ಲಾ ತ್ಯಾಗ ಮಾಡುತ್ತಾಳೆ. ಆದರೆ ಇದು ಸರಿಯಾಗಿ ವ್ಯಕ್ತವಾಗದೆ ತಪ್ಪು ತಿಳುವಳಿಕೆಯಿಂದಾಗಿ ಸ್ನೇಹದಲ್ಲಿ ಬಿರುಕುಂಟಾಗುತ್ತದೆ. ಇದರಿಂದ ತನ್ನ ಹೆಸರಿಗಂಟಿದ ಕಳಂಕವನ್ನು ತೊಳೆದುಕೊಳ್ಳಲು ಕಲ್ಪನಾ ತನ್ನ ಜೀವವನ್ನೇ ತೊರೆಯುತ್ತಾಳೆ.

೧೭೯೪. ರಂಭಾ ರಾಜ್ಯದಲ್ಲಿ ರೌಡಿ

(೧೯೯೬ / ವರ್ಣ / ಸಾಮಾಜಿಕ)
ಲಾ: ಮುದ್ದು ಗಂಗಾ ಮೂವೀಸ್
ಪ್ರೊ: ರುದ್ರಾಣಿ ರಾಜ್
ನಿ: ಬಿ.ಎಸ್.ಲಕ್ಷ್ಮಣ್
ಅ: ವಿನೋದ್ ರಾಜ್, ನಿಷಾ, ಅಭಿಜಿತ್, ಶ್ರುತಿ, ಚಂದ್ರಶೇಖರ್ ಚೌದರಿ, ರುದ್ರಾಣಿ ರಾಜ್, ಶ್ರೀನಾಥ್, ಪದ್ಮವಾಸಂತಿ, ಅವಿನಾಶ್, ಡಿಸ್ಕೋ ಶಾಂತಿ, ರಮೇಶ್ ಭಟ್, ಶ್ರೀಲಲಿತಾ
ಕ: ಬಿ.ಎಸ್.ಲಕ್ಷ್ಮಣ್
ಚಿ.ಕ/ಮಾ/ಗೀ: ರುದ್ರಾಣಿ ರಾಜ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಮಂಜುಳಾ ಗುರುರಾಜ್, ಸಂಗೀತಾ ಕಟ್ಟಿ, ಬಿ.ಆರ್.ಛಾಯಾ
ಸಂ: ಬಾಪಣ್ಣ

ಛಾ: ಸಿ.ವಸಂತ್ ಕುಮಾರ್
ಕಲೆ: ವೆಂಕಟರಾಮಯ್ಯ
ಸ: ಉಪೇಂದ್ರ ಕುಮಾರ್, ಸದ್ಗುಣರಾಜ್
ನೃ: ಸಂಪತ್ ಕುಮಾರ್
ಸಾ: ನೀಗ್ರೋ ಜಾನಿ
ದ: ಗಂಡಸಿ ನಾಗರಾಜ್
ಪ್ರ: ಮಾಧವನ್
ಸ್ಟು: ಚಾಮುಂಡೇಶ್ವರಿ
ಕ.ಸಾ: ರಾಜಕೀಯ ಭ್ರಷ್ಟಾಚಾರದ ಕಥೆ. ಮಹತ್ವಾಕಾಂಕ್ಷೆಯ ರಂಭಾದೇವಿ ರಾಜಕೀಯ ಪ್ರವೇಶಿಸಿ ಆಡಳಿತಾರೂಢ ಪಕ್ಷದ ನಾಯಕಿಯಾಗುತ್ತಾಳೆ. ತನ್ನ ಈ ಸ್ಥಾನವನ್ನು ಅಪಾರ ಆಸ್ತಿ ಮಾಡಲು ಬಳಸುತ್ತಾಳೆ. ಆದರೆ ಇದಕ್ಕೆ ವಿರೋಧವಾಗಿರುವ ಅವಳ ಮಗಳೇ ಸಾಮಾನ್ಯ ವ್ಯಕ್ತಿಯನ್ನು ಮದುವೆಯಾಗುತ್ತಾಳೆ. ಈ ಪ್ರೇಮಿಗಳಿಬ್ಬರನ್ನು ಅಗಲಿಸಲು ರಂಭಾ ತನ್ನೆಲ್ಲಾ ಸಾಮರ್ಥ್ಯವನ್ನು ಪ್ರಯೋಗಿಸಿಯೂ ವಿಫಲಳಾಗುತ್ತಾಳೆ. ಕೊನೆಗೆ ರಾಜಕೀಯ ಶಕ್ತಿಯ ಬಲಿಪಶುವಾಗುತ್ತಾಳ.

೧೯೯೭

೧೭೯೫. ತಾಯಿ ಕೊಟ್ಟ ಸೀರೆ

(೧೯೯೭ / ವರ್ಣ / ಸಾಮಾಜಿಕ)
ಲಾ: ಹೆಚ್.ಆರ್.ಪಿ. ಅಸೋಸಿಯೇಟ್ಸ್
ಪ್ರೊ: ಯಶೋದಾ ಶಿವನಂಜಯ್ಯ
ನಿ: ಎಸ್.ನಾರಾಯಣ್
ಸ.ನಿ: ಗಿರೀಶ್ ಕಂಪ್ಲಾಪುರ್
ಅ: ಕುಮಾರ್ ಗೋವಿಂದ್, ಶ್ರುತಿ, ಎಸ್.ನಾರಾಯಣ್, ದಿಲೀಪ್, ಶ್ರೀನಿವಾಸ ಮೂರ್ತಿ, ದೊಡ್ಡಣ್ಣ, ಗೌತಮ್,

ಶೋಭರಾಜ್, ಹೇಮಾ ಚೌಧುರಿ, ಸುಧಾ, ಜ್ಯೋತಿ, ಆಶಾ, ಡೈನಾಮಿಕ್ ಸುರೇಶ್
ಕ: ಅಜಯ್ ಕುಮಾರ್
ಚಿ.ಕ/ಮಾ: ಎಸ್.ನಾರಾಯಣ್
ಗೀ: ಎಸ್.ನಾರಾಯಣ್, ಕೆ.ಕಲ್ಯಾಣ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಸ್.ಜಾನಕಿ, ಮಂಜುಳಾ ಗುರುರಾಜ್, ರಾಜೇಶ್, ಎಲ್.ಎನ್. ಶಾಸ್ತ್ರಿ
ಸಂ: ಪಿ.ಆರ್.ಸೌಂದರ ರಾಜನ್
ಛಾ: ಆರ್.ಗಿರಿ
ಸ: ಕೆ.ಕಲ್ಯಾಣ್
ಧ್ವ: ಕೃಷ್ಣಮೂರ್ತಿ, ಪೀಟರ್
ನೃ: ಜಾನ್ ಬಾಬು
ಸಾ: ಡೈನಾಮಿಕ್ ಸುರೇಶ್
ವ: ಆರ್.ಇಳಂಗೋವನ್, ವಿಠ್ಠಲ್ ರಾವ್
ಪ್ರ: ಬಿ.ವಿಠಲ ಬಾಬು

ಸ್ಟು: ಕಂಠೀರವ
ಹಾ: ೧) 'ಕೋಗಿಲೇ ಕೋಗಿಲೇ ...', ೨) 'ಮಲ್ಲಿ ಮಲ್ಲಿ ಮಲ್ಲಿಗೇ...', ೩) 'ತಾಯಿ ಕೊಟ್ಟ ಸೀರೆ...', ೪) 'ಓ ಗಿಳಿಗಳೇ ಗಿಳಿಗಳೇ...', ೫) 'ಅರರೇ ಈ ಪ್ರೀತಿಯ ಪಂಜರ...', ೬) 'ಸಂಪಿಗೇ ಸಂಪಿಗೇ...'
ಕ.ಸಾ: ಹಣಕ್ಕಾಗಿ ವಧುವನ್ನೇ ದಹಿಸುವ ಕಥೆ. ಚಿನ್ನದಂಥ ಹೃದಯದ ಛಾಯಾಗ್ರಾಹಕ ಗಣೇಶ ಹಳ್ಳಿ ಹುಡುಗಿ ಗಿರಿಜಾಳನ್ನು ಪ್ರೀತಿಸಲಾರಂಭಿಸುತ್ತಾನೆ. ಆದರೆ ಗಿರಿಜಾಳಲ್ಲಿ ತನ್ನ ಪ್ರೀತಿಯನ್ನು ಹೇಳಲಾಗದಷ್ಟು ಸಂಕೋಚವಿರುತ್ತದೆ. ಅಷ್ಟರಲ್ಲಿ ಗಿರಿಜಾಳ ತಂದೆ ಹಣ ದಾಹವುಳ್ಳ ಕುಟುಂಬದ ಜೊತೆ ಸಂಬಂಧ ಬೆಳೆಸುತ್ತಾರೆ. ಗಿರಿಜಾಳ ಅತ್ತೆ ಚಿತ್ರಹಿಂಸೆ ಕೊಡುವುದರ ಜೊತೆಗೆ ಕೊನೆಗೆ ಸೀಮೆಎಣ್ಣೆ ಸುರಿದು ಗಿರಿಜಾಳನ್ನು ಜೀವಂತವಾಗಿ ದಹಿಸಿಯೇ ಬಿಡುತ್ತಾಳೆ.

೧೭೯೬. ಕಲಾವಿದ

(೧೯೯೭ / ವರ್ಣ / ಸಾಮಾಜಿಕ)
ಲಾ: ಶ್ರೀ ಈಶ್ವರಿ ಪ್ರೊಡಕ್ಷನ್ಸ್
ಪ್ರೊ/ನಿ: ವಿ.ರವಿಚಂದ್ರನ್
ಸ.ನಿ: ಸುಬ್ರಹ್ಮಣ್ಯಂ, ಬಿ.ಸುರೇಶ್
ಅ: ರವಿಚಂದ್ರನ್, ರೋಜಾ, ಹೀರಾ, ಉಮಾಶ್ರೀ, ಗುರುದತ್, ರಮೇಶ್ ಭಟ್, ಲೋಹಿತಾಶ್ವ, ಮಾಬಿಶ್ವಾಸ್, ಬೇಬಿ ಸಿಂಧೂ
ಕ/ಚಿ.ಕ: ವಿ.ರವಿಚಂದ್ರನ್
ಮಾ: ಬಿ.ಸುರೇಶ್
ಗೀ: ಹಂಸಲೇಖ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಹರಿಹರನ್, ಚಿತ್ರಾ, ಎಸ್.ಜಾನಕಿ, ಸ್ವರ್ಣಲತಾ
ಸಂ: ಸುರೇಶ್ ಅರಸ್
ಅ: ಕುಮಾರ್ ಗೋವಿಂದ್, ಶಿಲ್ಪಾ, ಶೋಭರಾಜ್, ಕೃಷ್ಣೇಗೌಡ, ಜಯಾಕುಮಾರ, ಹುಳಿಮಾವು ರಾಮಚಂದ್ರ, ಗುರು ಮಂಗಳೂರು, ಶ್ರೀನಿವಾಸ್, ರಾಧಾ ರಾಮಚಂದ್ರ, ಮೂಗೂರು ಗುರು, ಎಸ್ಮಾರ್ಟ್ ಶ್ರೀನಿವಾಸ್
ಕ: ನಾಗರಾಜ್
ಚಿ.ಕ/ಮಾ: ವಿ.ಉಮಾಕಾಂತ್
ಗೀ: ವಿ.ಮನೋಹರ್
ಗಾ: ಮಂಜುಳಾ ಗುರುರಾಜ್, ಲತಾ ಹಂಸಲೇಖ. ರಮೇಶಚಂದ್ರ, ಎಲ್.ಎನ್.ಶಾಸ್ತ್ರಿ, ಶಂಕರ್ ಶ್ಯಾನುಭಾಗ್
ಸಂ: ಎಸ್.ಪ್ರಸಾದ್
ಛಾ: ಬಿ.ಸಿ.ಗೌರಿಶಂಕರ್
ಕಲೆ: ಬಾಷಾ, ಗಣಪತಿ, ಯತಿರಾಜ್
ಸ: ವಿ.ಮನೋಹರ್
ಧ್ವ: ಕೋದಂಡಪಾಣಿ, ಮಹೇಂದ್ರ
ನೃ: ಪ್ರಸಾದ್
ವ: ವೆಂಕಟರಾವ್, ಗಣೇಶ್, ನಾಗೇಶ್, ವಸ್ತ್ರವಿನ್ಯಾಸ: ಅನಿತಾ ಶ್ರೀನಿವಾಸ್
ಪ್ರ: ಮೂಗೂರು ಗುರು
ಸು: ಚಾಮುಂಡೇಶ್ವರಿ, ಪ್ರಸಾದ್, ವೀನಸ್
ಹಾ: ೧) 'ಚುಕ್ಕಿ ಚುಕ್ಕಿ ಚಿತ್ತಾರ ಬರೆವ...', ೨) 'ಚಂದಿರ ಬಂದಾನು ಹುಣ್ಣಿಮೆ ತಂದಾನು...', ೩) 'ನವಿಲೂರ ಮಣಿ ಆಹಾ ನೋಡವ ಗಿಣಿ...', ೪) 'ಚಂದ್ರಭಾಗಿ ಚಂದ್ರಸಖಿ ಚಂದ್ರಸಿಂಗಾರಿ...', ೫) 'ಶರಣು ಶರಣು ಸಿದ್ಧ ಸ್ವಾಮಿಗೆ ಶರಣು...'
ಕ.ಸಾ: ಮುಗ್ಧ ಯುವಕನ ಒಳ್ಳೆಯತನವನ್ನು ಬಳಸಿಕೊಳ್ಳುವ ಜನ, ಕಷ್ಟಕಾಲದಲ್ಲಿ ನೆರವಿಗೆ ಬಾರದ ಜನ, ದುಷ್ಟರ ಸಂಚುಗಳ ಮೂಲಕ ಮುಗ್ಧತೆಯೊಂದೇ ಸಾಲದು ಬದುಕಿಗೆ ಎಂದು ಹೇಳುವ ಪ್ರಯತ್ನ. ಗ್ರಾಮೀಣ ಜೀವನದ ಹಾಡು, ಕುಣಿತ, ಜಾತ್ರೆ, ಹೋರಿಪಂದ್ಯ ಇತ್ಯಾದಿ ಅನೇಕ ಅಂಶಗಳನ್ನು ಬಳಸಿ ಹೇಳಲಾಗಿದೆ.

೧೮೫೨. ತಾಯವ್ವ

(೧೯೯೭ / ವರ್ಣ /ಸಾಮಾಜಿಕ)
ಲಾ: ಮಧು ಆರ್ಟ್ಸ್ ಫಿಲಂಸ್
ಪ್ರೊ: ಎ.ಎಲ್.ಅಬ್ಬಾಯಿ ನಾಯ್ಡು
ನಿ: ವಿ.ಉಮಾಕಾಂತ್
ಸ.ನಿ: ಶಿವಯೋಗಿ ಮೈಸೂರುಮಠ



ಅ: ಚರಣ್‌ರಾಜ್, ಸುದೀಪ್ ಸಂಜೀವ್, ಸಿಂಧೂ, ಪ್ರಮೀಳಾ ಜೋಷಾಯ್, ಉಮಾಶ್ರೀ, ಅವಿನಾಶ್, ರಮೇಶಭಟ್, ಹರೀಶ್ ರಾಯ್, ಟೆನ್ನಿಸ್ ಕೃಷ್ಣ, ಬ್ಯಾಂಕ್ ಜನಾರ್ದನ್, ಎ.ಎಲ್. ಅಬ್ಬಾಯಿ ನಾಯ್ಡು
ಕ: ಎ.ಎಲ್. ಅಬ್ಬಾಯಿ ನಾಯ್ಡು
ಚಿ.ಕ: ಷಣ್ಮುಖ ಸುಂದರಂ
ಮಾ: ಬಿ.ಸುರೇಶ್
ಗೀ: ವಿ.ಮನೋಹರ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಬಿ.ಆರ್.ಛಾಯಾ, ರಮೇಶ್ ಚಂದ್ರ, ಎಲ್.ಎನ್.ಶಾಸ್ತ್ರಿ
ಸಂ: ಎಸ್.ಪ್ರಸಾದ್
ಛಾ: ಸುಂದರನಾಥ ಸುವರ್ಣ
ಕಲೆ: ಬಿ.ಚಲಂ
ಸ: ವಿ.ಮನೋಹರ್
ನೃ: ಪ್ರಸಾದ್, ಉಡುಪಿ ಜಯರಾಂ
ಸಾ: ಕೆ.ಡಿ.ವೆಂಕಟೇಶ್
ಹಾ: ೧) 'ಒಲವ ಮಯೂರಿ...', ೨) 'ಓ ಬಸಂತಿ ನೀ ಕಾಮನ ಬಿಲ್ಲೇ...', ೩) 'ಪ್ರೇಮಿಗಳೇ ಓ ಪ್ರೇಮಿಗಳೇ...', ೪) 'ಆಲಿಪತ್ರಿ ನೀಲಿ...', ೫) 'ಜುಲಿಮ್ಮಾ ಜುಲಿಮ್ಮಾ...', ೬) 'ಪ್ರೀತಿ ದೇವ ತಾಯವ್ವ...', ೭) 'ಓ ಬಸಂತಿ ನೀ ಕಾಮನ ಬಿಲ್ಲೇ...'.
ವಿ: ಈ ಚಿತ್ರದ ಮೂಲಕ ಸುದೀಪ್ ಸಂಜೀವ್ ಪರಿಚಯ.
ಕ.ಸಾ: ಮಗ ಸೊಸೆ ಹಾಗೂ ಮೊಮ್ಮಗನಿಗಾಗಿ ಹೆಣ್ಣೊಬ್ಬಳ ತ್ಯಾಗಮಯ ಜೀವನದ ಚಿತ್ರಣ.

೧೮೫೩. ಲಾಲಿ

(೧೯೯೭ / ವರ್ಣ / ಸಾಮಾಜಿಕ)
ಲಾ: ರಾಕ್‌ಲೈನ್ ಪ್ರೊಡಕ್ಷನ್ಸ್
ಪ್ರೊ: ರಾಕ್‌ಲೈನ್ ವೆಂಕಟೇಶ್
ನಿ: ದಿನೇಶ್ ಬಾಬು
ಸ.ನಿ: ಎಸ್.ವಿ.ಪ್ರಸಾದ್, ಸುರೇಶ್ ರಾಜ್
ಅ: ವಿಷ್ಣುವರ್ಧನ್, ಮೋಹಿನಿ, ಹರೀಶ್, ರಾಮಕೃಷ್ಣ, ಜ್ಯೋತಿ, ಕಮಲಾಶ್ರೀ, ಸಿ.ಆರ್.ಸಿಂಹ, ಕುನಾಲ್ ಬಾಬು, ಅಗ್ರೋ ಚಿಕ್ಕಣ್ಣ, ಶಿವರಾಮ್, ಅರುಣ್ ಗೌಡ, ಮಾ।ವಿನಾಯಕ ಜೋಷಿ, ವಿನಯಾ ಪ್ರಸಾದ್, ಶಾಂತಿಕೃಷ್ಣ (ಹೊಸ ಪರಿಚಯ)
ಕ/ಚಿ.ಕ/ಮಾ: ದಿನೇಶ್ ಬಾಬು
ಗೀ: ಕೆ.ಕಲ್ಯಾಣ್
ಗಾ: ರಾಜೇಶ್, ಚಿತ್ರಾ, ಕುಸುಮ, ಸುಮ, ಕಮಲಾಶ್ರೀ, ಸೀಮಾ, ವಿಜಯಲಕ್ಷ್ಮಿ
ಸಂ: ಸುರೇಶ್ ಅರಸ್
ಛಾ: ಪಿ.ಕೆ.ಹೆಚ್. ದಾಸ್
ಕಲೆ: ರಮೇಶ್ ಬಾಬು
ಸ: ವಿ.ಮನೋಹರ್
ಧ್ವ: ಮುರಳಿ, ಕೋದಂಡಪಾಣಿ
ನೃ: ಸುಜಾತಾ ಬಾಬು
ಹಾ: ೧) 'ಚಂದನ ಕಂಪ ಲಾಲಿ...', ೨) 'ಈ ಮಳೆ ಈ ಮಳೆ...', ೩) 'ಬಾಗಿಲೇ ಇಲ್ಲದೆ ಹೋಗಿ ಬರುವ...', ೪) 'ಮಾಯ ಮಾಯ...', ೫) 'ಸುಪ್ರಿ ಸುಪ್ರಿ ಸವಿಯಾದ...',
ವಿ: ೧೯೯೭-೯೮ರ ರಾಜ್ಯ ಪ್ರಶಸ್ತಿ : ದ್ವಿತೀಯ ಅತ್ಯುತ್ತಮ ಚಿತ್ರ, ಅತ್ಯುತ್ತಮ ನಟ, (ವಿಷ್ಣುವರ್ಧನ್)
ಕ.ಸಾ: ತಂದೆ ಮಗಳ ನಡುವಿನ ವಾತ್ಸಲ್ಯ ಪ್ರೀತಿ-ಅನುರಾಗಗಳ ಕಥಾ ಹಂದರ.

೧೮೫೪. ರಂಗಣ್ಣ

(೧೯೯೭ / ವರ್ಣ / ಸಾಮಾಜಿಕ)
ಲಾ: ತನು ಚಿತ್ರ
ಪ್ರೊ: ಸಾ.ರಾ.ಗೋವಿಂದು
ನಿ: ಹೆಚ್.ವಾಸು
ಅ: ಜಗ್ಗೇಶ್, ವಿಜಯಲಕ್ಷ್ಮಿ, ಶ್ರೀನಾಥ್, ಕವಿತಾ, ಲೋಕನಾಥ್, ಎಂ.ಎಸ್.ಲಕ್ಷ್ಮೀದೇವಿ, ಹರೀಶ್ ರಾಯ್, ಧೀರೇಂದ್ರ ಗೋಪಾಲ್, ಬ್ಯಾಂಕ್ ಜನಾರ್ದನ್, ಎಂ.ಎಸ್.ಕಾರಂತ್
ಕ/ಚಿ.ಕ: ಹೆಚ್.ವಾಸು
ಮಾ: ಜೆ.ಎಂ.ಪ್ರಹ್ಲಾದ್
ಗೀ: ಶ್ಯಾಮಸುಂದರ ಕುಲಕರ್ಣಿ, ಶ್ರೀರಂಗ, ದೊಡ್ಡರಂಗೇಗೌಡ, ಕೆ.ಕಲ್ಯಾಣ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ರಾಜೇಶ್, ಚಿತ್ರಾ
ಸಂ: ಶ್ಯಾಂ ಯಾದವ್
ಛಾ: ಜೆ.ಜಿ.ಕೃಷ್ಣ
ಕಲೆ: ಕೃಷ್ಣಾಚಾರಿ, ನಂಜುಂಡಪ್ಪ
ಸ: ರಾಜೇಶ್ ರಾಮನಾಥ್
ನೃ: ಪ್ರಸಾದ್
ಸಾ: ಕೆ.ಡಿ.ವೆಂಕಟೇಶ್
ವ: ನಾಗರಾಜ್
ಪ್ರ: ಗೌಡ
ಹಾ: ೧) 'ಆಟೋ ಆಟೋ ನಮ್ಮ ಬಾಳ...', ೨) 'ಬಂದ್ಲು ಬಂದ್ಲು ಹೆಣ್ಣು ಬಂದ್ಲು...', ೩) 'ಬಾರೋ ಬಾರೋ ರಂಗನ ರಂಗ...', ೪) 'ಮಂಗೋಲಿ ಮಂಗೋಲಿ ಗೋಲು...', ೫) 'ಆಜಾರ ಆಜಾ ನಮ್ಮೂರ ರಾಜಾ...'
ಕ.ಸಾ: ಒಬ್ಬ ಪ್ರಾಮಾಣಿಕ ಆಟೋ ಡ್ರೈವರ್ ಅನ್ಯಾಯದ ವಿರುದ್ಧ ಹೋರಾಡುವ ಕಥಾವಸ್ತು.

೧೮೫೫. ಏನೊಂದ್ರೆ

(೧೯೯೭ / ವರ್ಣ / ಸಾಮಾಜಿಕ)
ಲಾ: ಅಮಲಾ ಆಲೋಕ್ ಪ್ರೊಡಕ್ಷನ್ಸ್



ಪ್ರೊ: ಅನಿಲ್
ನಿ: ರೇಲಂಗಿ ನರಸಿಂಹರಾವ್
ಸ.ನಿ: ದೊಡ್ಡಮನಿ ಚಂದ್ರು
ಅ: ಅನಿಲ್, ಭವ್ಯ, ಅಂಜನಾ, ಧೀರೇಂದ್ರ ಗೋಪಾಲ್, ದ್ವಾರಕೀಶ್, ದೊಡ್ಡಣ್ಣ, ಟೆನ್ನಿಸ್ ಕೃಷ್ಣ, ಸಿಹಿಕಹಿ ಚಂದ್ರು, ಮನದೀಪ್ ರಾಯ್, ಸರಿಗಮ ವಿಜಿ, ಉಮೇಶ್, ರಾಜಾನಂದ್, ಲಕ್ಷ್ಮಣ್, ಬ್ಯಾಂಕ್ ಜನಾರ್ದನ್, ರತ್ನಾಕರ್, ಗಿರಿಜಾ ಲೋಕೇಶ್, ಮಂಜುಮಾಲಿನಿ
ಕ: ಅನಿಲ್
ಚಿ.ಕ: ಅನಿಲ್, ದೊಡಮನಿ ಚಂದ್ರು
ಮಾ/ಗೀ: ಎಸ್.ರುದ್ರಮೂರ್ತಿ ಶಾಸ್ತ್ರಿ
ಗಾ: ರಾಜಕುಮಾರ್, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ
ಸಂ: ಸುರೇಶ್ ಅರಸ್
ಛಾ: ಮಲ್ಲಿಕಾರ್ಜುನ್
ಕಲೆ: ಬಾಬುಖಾನ್
ಸ: ಕೋಟಿ
ಧ್ವ: ಸಂಕೇತ್
ನೃ: ಉಡುಪಿ ಜಯರಾಂ
ಸಾ: ಥ್ರಿಲ್ಲರ್ ಮಂಜು
ವ: ರಾಮನಾಥ್
ಪ್ರ: ರಾಮಸ್ವಾಮಿ
ಹಾ: ೧) 'ಭಲೆ ನಿನ್ನ ಆಟವು ತಾಳಿ ತಾಳಿ...', ೨) 'ಮುತ್ತನು ಕೊಂಡೆನು...', ೩) 'ಏನೋಂದ್ರೆ ಬುಸ್ಸಿ ಬೇಗ...', ೪) 'ಹಾಯ್ ರುಕ್ಕು ಹಾಯ್ ರುಕ್ಕು...', ೫) 'ಘಂಟೆ ಆಯಿತು ಘಂಟೆ...',
ಕ.ಸಾ: ಹಾಸ್ಯಕ್ಕೆ ಒತ್ತು ನೀಡಿರುವ ಕಥೆ. ತನ್ನ ಹೆಂಡತಿಯ ಖಾಯಿಲೆಗಾಗಿ ಆಫೀಸಿನ ಹಣವನ್ನು ಉಪಯೋಗಿಸಿಕೊಂಡ ಯುವಕ, ಬಳಸಿದ ಹಣ ತುಂಬಲು ಶ್ರೀಮಂತನ ಮಗಳಿಗೆ ರೆಡಿಮೇಡ್ ಗಂಡನಾದ. ಕೊನೆಗೆ ಚಾಕಚಕ್ಯತೆಯಿಂದ ಎದುರಾದ ಸಂದಿಗ್ಧ, ವಿಪತ್ತುಗಳಿಂದ ಪಾರಾಗುವ ಕಥಾ ವಸ್ತು.

೧೮೫೬. ಮೊಮ್ಮಗ

(೧೯೯೭ / ವರ್ಣ / ಸಾಮಾಜಿಕ)
ಲಾ: ಸಂದೇಶ್ ಕಂಬೈನ್ಸ್
ಪ್ರೊ: ಸಂದೇಶ್ ನಾಗರಾಜ್
ನಿ: ವಿ.ರವಿಚಂದ್ರನ್
ಸ.ನಿ: ಸುಬ್ರಹ್ಮಣ್ಯಂ

ಅ: ರವಿಚಂದ್ರನ್, ಪ್ರಕಾಶ್ ರೈ, ಮೀನಾ, ಪ್ರಮೀಳಾ ಜೋಷಾಯ್, ಆಶಾಲತಾ, ಮಾಲತಿನಂದ್, ಆಗ್ರೋ ಚಿಕ್ಕಣ್ಣ, ಉಮಾಶ್ರೀ, ಬೆಂಗಳೂರು ನಾಗೇಶ್, ವಾಸುದೇವರಾವ್
ಕ: ಆರ್. ಸೆಲ್ವ ರಾಜ್
ಚಿ.ಕ: ವಿ.ರವಿಚಂದ್ರನ್
ಮಾ: ಬಿ. ಸುರೇಶ್
ಗೀ: ಹಂಸಲೇಖ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ, ಎಲ್.ಎನ್.ಶಾಸ್ತ್ರಿ
ಸಂ: ಶ್ಯಾಂ ಯಾದವ್
ಛಾ: ಜಿ.ಎಸ್.ವಿ. ಸೀತಾರಾಂ
ಕಲೆ: ಇಸ್ಮಾಯಿಲ್
ಸ: ಹಂಸಲೇಖ
ನೃ: ನಟರಾಜ್
ಸಾ: ಜಾಲಿ ಬ್ಯಾಸ್ಟಿನ್
ಹಾ: ೧) 'ಡೋಲು ಡೋಲು...', ೨) 'ಮಹಾರಾಜ ರಾಜಶ್ರೀ...', ೩) 'ಕೆರ ಪರಿ ಮ್ಯಾಲೇ...', ೪) 'ಬಾರೋ ಅಣ್ಣ ಬಾರೋ ತಮ್ಮ...', ೫) 'ಶ್ರೀ ರಂಗನು ರಂಗನು ಕಣ್ಣುಚ್ಚಿ...', ೬) 'ಏ ಹೂಗಳೇ...', ೭) 'ಹುಟ್ಟುತ್ತಾ ಎರಡು ಕೊಂಬು...', ೮) 'ಅಕ್ಕ ತಂಗಿ ಇಬ್ಬರು...', ೯) 'ಗುಮ್ಮಾ ಲಕ್ಕಡಿ...'
ಕ.ಸಾ: ತಂದೆ ತಾಯಿಯಿಲ್ಲದ ತಬ್ಬಲಿಯೊಬ್ಬ ಇಬ್ಬರು ಅಜ್ಜಿಯರ ಆಶ್ರಯದಲ್ಲಿ ಬೆಳೆಯುತ್ತಾನೆ. ಅಜ್ಜನ ಆಸ್ತಿಯನ್ನು ಪಡೆಯಲು ತಬ್ಬಲಿಯ ಮಲತಾಯಿಯ ಮಗನ ಸಂಚು. ಅದಕ್ಕಾಗಿ ಮೊಮ್ಮಗನ ಕೊಲೆಗೆ ಪ್ರಯತ್ನ. ತಬ್ಬಲಿಯು ವಿದ್ಯಾವಂತನಾಗಿ, ನ್ಯಾಯವಾದಿಯಾಗಿ ಮಲ ಸೋದರನ ಸಂಚುಗಳನ್ನು ವಿಫಲಗೊಳಿಸಿ ತನ್ನ ಅಜ್ಜನ ಪ್ರಾಣ ಹಾಗೂ ಆಸ್ತಿಯನ್ನು ಸಂರಕ್ಷಿಸಿಕೊಳ್ಳುವುದೇ ಕಥೆಯ ತಿರುಳು.

೧೮೫೭. ವಿಮೋಚನೆ

(೧೯೯೭ / ವರ್ಣ / ಸಾಮಾಜಿಕ)
ಲಾ: ಸೂರ್ಯ ಕ್ರಿಯೇಟರ್ಸ್
ಪ್ರೊ: ವಿ.ವರ್ಗೀಸ್
ನಿ: ಟಿ.ಎಸ್.ನಾಗಾಭರಣ
ಸ.ನಿ: ನಟರಾಜ್, ಪಣಗಿ
ಅ: ಜಯಂತಿ, ಗೀತಾ, ಶಿಲ್ಪಾ, ತಾರಾ, ಮಾಧುರಿ, ಸುಂದರ ರಾಜ್, ಶ್ರೀರಂಗ, ಶ್ರೀಪತಿ ಬಲ್ಲಾಳ್, ಮಂಡ್ಯ ರಮೇಶ್, ಹೆಚ್.ಜಿ.ಸೋಮಶೇಖರ ರಾವ್
ಕ/ಚಿ.ಕ: ಟಿ.ಎಸ್.ನಾಗಾಭರಣ
ಮಾ: ಬಿ.ಎಸ್. ವಿಶ್ವೇಶ್ವರ
ಗೀ: ಪುರಂದರ ದಾಸರು, ದೊಡ್ಡರಂಗೇ ಗೌಡ, ಜಯಶ್ರೀ ಅರವಿಂದ್
ಗಾ: ಮಂಜುಳಾ ಗುರುರಾಜ್, ಎಂ.ಎಸ್.ಶೀಲಾ, ಕಲಾವತಿ
ಸಂ: ಸುರೇಶ್ ಅರಸ್
ಛಾ: ಬಿ.ಸಿ.ಗೌರಿಶಂಕರ್
ಕಲೆ: ದಿನೇಶ್ ಮಂಗಳೂರು, ಶಶಿಧರ್ ಅಡಪ
ಸ: ಎಲ್. ವೈದ್ಯನಾಥನ್
ಧ್ವ: ಎಂ.ಶಂಕರ್, ಅರವಿಂದ್ ಕಿಗ್ಗಾಲ್
ಸಾ: ಡೈನಾಮಿಕ್ ಸುರೇಶ್
ವ: ನಾಗಾಭರಣ
ಪ್ರ: ಮುರಳಿ
ಸ್ಟು: ಕಂಠೀರವ
ಹಾ: ೧) 'ಶ್ರೀಮಾನ್ ಮಹಾಬಲ...', ೨) 'ಯಾರ ಜಮಕು ಹೇಗೋ...', ೩) 'ಗಗರಿರಿ ಗಗ ಮಪ...', ೪) 'ಮಾರಿ ಮಾರಿ...', ೫) 'ಶಾರದೆ ವಂದನೆ...', ೬) 'ಮಾನವ ಜಾತಿಯು ...', ೭) 'ಗಿರಿಜಾಸುತನು ...', ೮) 'ಶ್ರೀ ಗಣನಾಥ ...'
ಕ.ಸಾ: ಅಸಹಾಯಕ ಸಂಗೀತಗಾರ್ತಿಯೊಬ್ಬಳ ಪುರಾತನ ಆಸ್ತಿಯನ್ನು ಕಬಳಿಸಲು ಸ್ವಾರ್ಥಪರ ವ್ಯಕ್ತಿಗಳು ಹೊಂಚು ಹಾಕುತ್ತಾರೆ. ತಮ್ಮ ಸಂಚಿನಿಂದ ಆಕೆಗೆ ಹುಚ್ಚು ಹಿಡಿದಿದೆ ಎಂದು ಸುಳ್ಳು ಸಾಬೀತು ಮಾಡುತ್ತಾರೆ. ಆಕೆಯ ಮಗಳು, ಪತ್ರಕರ್ತೆ, ಲಾಯರ್ ಮೂವರ ಹೋರಾಟದ ಫಲವಾಗಿ ಬಿಟ್ಟುಹೋದ ಆಸ್ತಿ ಕೈ ಸೇರಿ ಸ್ವಾರ್ಥಿಗಳಿಗೆ ಪರಾಜಯವಾಗುತ್ತದೆ.

೧೮೫೮. ಅಣ್ಣ ಅಂದ್ರೆ ನಮ್ಮಣ್ಣ

(೧೯೯೭ / ವರ್ಣ / ಸಾಮಾಜಿಕ)
ಲಾ: ಶ್ರೀ ಲಕ್ಷ್ಮಿ ಪ್ರೊಡಕ್ಷನ್ಸ್
ಪ್ರೊ: ಬಿ.ಎನ್.ಗಂಗಾಧರ್
ನಿ: ಜೆ.ಬಲರಾಮ್

ಸ.ನಿ: ಎ.ಗಂಗಾಧರ್
ಅ: ಜಗ್ಗೇಶ್, ಉಷಾ, ರಾಕ್‌ಲೈನ್ ವೆಂಕಟೇಶ್, ಹೊನ್ನವಳ್ಳಿ ಕೃಷ್ಣ
ಕ/ಚಿ.ಕ: ಜೆ. ಬಲರಾಮ್
ಮಾ: ಜೆ.ಎಂ.ಪ್ರಹ್ಲಾದ್
ಗೀ: ದೊಡ್ಡರಂಗೇ ಗೌಡ, ಶ್ಯಾಮಸುಂದರ ಕುಲಕರ್ಣಿ, ಕೆ.ಕಲ್ಯಾಣ್, ಗೋಪಾಲ್
ಗಾ: ರಾಜೇಶ್, ರಮೇಶ್ ಚಂದ್ರ, ಮಂಜುಳಾ ಗುರುರಾಜ್
ಸಂ: ಶ್ಯಾಂ ಯಾದವ್
ಛಾ: ರಮೇಶ್ ಯಾದವ್
ಸ: ವಿ.ಮನೋಹರ್
ಧ್ವ: ಪ್ರಸಾದ್
ನೃ: ಪ್ರಸಾದ್
ಸಾ: ಕೆ.ಡಿ.ವೆಂಕಟೇಶ್
ವ: ಸತ್ಯಂ
ಪ್ರ: ಮಾದೇಗೌಡ
ಸ್ಟು: ಕಂಠೀರವ
ಕ.ಸಾ: ಅಣ್ಣ - ತಂಗಿಯರಿಬ್ಬರ ಮಧುರ ಬಾಂಧವ್ಯದಲ್ಲಿ, ವಾದದ ತಪ್ಪಿಗಾಗಿ ಅಣ್ಣ ಅಪರಾಧಿಯಾಗಬೇಕಾಗುತ್ತದೆ. ತಂಗಿಯ ಗಂಡ ಪೊಲೀಸ್ ಇನ್ಸ್‌ಪೆಕ್ಟರ್, ಅಣ್ಣ - ತಂಗಿಯರ ಸಮ್ಮಿಲನಕ್ಕೆ ಅಡ್ಡಿಯಾದ. ಅಣ್ಣನ ಮೇಲಿನ ಮಿಥ್ಯಾರೋಪ ದೂರವಾಗಿ ಅಣ್ಣ - ತಂಗಿಯರು ಒಂದಾಗುತ್ತಾರೆ.

೧೮೫೯. ಪ್ರೇಮಗೀತೆ

(೧೯೯೭ / ವರ್ಣ / ಸಾಮಾಜಿಕ)
ಲಾ: ಶ್ರೀಕಾಂತ್ ಶ್ರೀಕಾಂತ್ ಎಂಟರ್‌ಪ್ರೈಸಸ್
ಪ್ರೊ/ನಿ: ಶ್ರೀಕಾಂತ್ ನಹಾತಾ
ಸ.ನಿ: ಎಂ.ಆರ್.ಪ್ರಕಾಶ್
ಅ: ಅಂಬರೀಷ್, ಜಯಪ್ರದಾ, ಯಮುನ, ಅಶ್ವತ್ಥ್, ಜೈಜಗದೀಶ್, ಮೈಸೂರು ಲೋಕೇಶ್, ಶಾಂತಮ್ಮ, ಶ್ರೀನಾಥ್, ಸೀಮಾ, ವಜ್ರಮುನಿ, ಉಮಾ, ಶನಿ ಮಹಾದೇವಪ್ಪ, ರಾಮಕೃಷ್ಣ, ನಾಗರಾಜ್, ಅರುಣ್, ಶ್ಯಾಂಸಿಂಗ್, ಮನದೀಪ್ ರಾಯ್

ಕ/ಚಿ.ಕ: ಎಂ.ಡಿ.ಸುಂದರ್
ಮಾ: ಕೆ.ಎಸ್.ಕೆ.ರಾವ್
ಗೀ: ಹಂಸಲೇಖ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ
ಸಂ: ಡಿ.ವೆಂಕಟರತ್ನಂ
ಛಾ: ಡಿ.ವಿ.ರಮಣ
ಕಲೆ: ಸೂರ್ಯಕುಮಾರ್
ಸ: ಹಂಸಲೇಖ
ದ್ವ: ಆರ್ಮುಗಂ, ಕೃಷ್ಣಮೂರ್ತಿ
ನೃ: ಶಿವಶಂಕರ್, ಸುಂದರ್, ಸತೀಶ್
ಸಾ: ಹರಿ
ವ: ಬಾಬ್ಜಿ
ಪ್ರ: ಮೋಹನ್, ರಾಮಕೃಷ್ಣ
ಸ್ಟು: ಸಂಕೇತ್
ಕ.ಸಾ: ಗಾಯಕಿಯೊಬ್ಬಳು ನಾಯಕನನ್ನು ಪ್ರೀತಿಸುತ್ತಾಳೆ. ಆದರೆ ನಾಯಕ ತನ್ನ ಸೋದರ ಮಾವನ ಮಗಳೊಂದಿಗೆ ಮದುವೆಯಾಗುತ್ತಾನೆ. ಅಪಘಾತವೊಂದರಲ್ಲಿ ನಾಯಕಿ ಸತ್ತು ಹೋದಳೆಂದು ಭಾವಿಸಿ ನಾಯಕ ನಿರಾಶನಾದಾಗ ಗಾಯಕಿಯ ಮರು ಪ್ರವೇಶವಾಗುತ್ತದೆ. ಇನ್ನೇನು ಗಾಯಕಿಯನ್ನು ಮದುವೆಯಾಗುವ ಹೊತ್ತಿಗೆ ಸತ್ತು ಹೋದಳೆಂದು ತಿಳಿದ ಹೆಂಡತಿ ಬರುತ್ತಾಳೆ. ಗಾಯಕಿ ಕಡೆಗೆ ನಾಯಕನನ್ನು ತ್ಯಾಗ ಮಾಡುತ್ತಾಳೆ.

೧೮೬೦. ಪ್ರೇಮರಾಗ ಹಾಡು ಗೆಳತಿ

(೧೯೯೭ / ವರ್ಣ / ಸಾಮಾಜಿಕ)
ಲಾ: ಚಿನ್ನಿ ಫಿಲಂಸ್
ಪ್ರೊ: ಜಯಶ್ರೀದೇವಿ
ನಿ: ಸುನಿಲ್ ಕುಮಾರ್ ದೇಸಾಯಿ
ಸ.ನಿ: ಸೀತಾರಾಮ ಕಾರಂತ್
ಅ: ಶಿವರಾಜ್ ಕುಮಾರ್, ರಮೇಶ್, ನಿವೇದಿತಾ ಜೈನ್, ಲೋಕೇಶ್, ಶ್ರೀನಾಥ್, ವೈಶಾಲಿ ಕಾಸರವಳ್ಳಿ, ಶಿವರಾಂ
ಕ: ಯಂಡಮೂರಿ ವೀರೇಂದ್ರನಾಥ್ ಕಾದಂಬರಿ
ಚಿ.ಕ/ಮಾ: ಸುನಿಲ್ ಕುಮಾರ್ ದೇಸಾಯಿ
ಗೀ: ಕೆ.ಕಲ್ಯಾಣ್, ಎಸ್.ಎಂ.ಪಾಟೀಲ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ, ಇಳಯರಾಜಾ, ಗಂಗಾಧರ್, ಚಂದ್ರಿಕಾ ಗುರುರಾಜ್, ಮಂಜುಳಾ ಗುರುರಾಜ್
ಸಂ: ಆರ್.ಜನಾರ್ದನ್
ಛಾ: ವಿ.ವಿ.ಕೃಷ್ಣಕುಮಾರ್
ಕಲೆ: ಕೆ.ರಾಜು
ಸ: ಇಳಯರಾಜಾ
ನೃ: ಗುಂಜ್ ರಘುರಾಂ, ನಟರಾಜ್
ಹಾ: ೧) 'ಬಾ ಬಾರೋ ಓ ಗೆಳತಿ...', ೨) 'ಅಲಿಸಾಮಣಿ ಓಲಿಸಾಮಣಿ...', ೩) 'ಓ ಬಾಲೆ ಬಾಲೆ...', ೪) 'ಮಲ್ಲಿ ಹೂ [illegible]...', ೫) 'ನಾವ್ ಅಂದ ಹಾಂಗ್ ಪ್ರೀತಿ...', ೬) 'ಆರತಿ ಎತ್ತಿರೇ...', ೭) 'ಮ್ಯೂಸಿಕ್ ಬೀಟ್...'

ಕ.ಸಾ: ನಾಯಕಿಯನ್ನು ಪ್ರೀತಿಸುವ ಇಬ್ಬರು ಯುವ ನಾಯಕರು. ಒಬ್ಬನಿಗೆ ಪ್ರೀತಿಯನ್ನು ವ್ಯಕ್ತಪಡಿಸಲಾಗದ ಸಂಕಟ. ಮತ್ತೊಬ್ಬನಿಗೆ ಪ್ರೀತಿ ಮತ್ತು ಹೆಣ್ಣುಗಳ ಬಗ್ಗೆ ಆಸಕ್ತಿ ಇಲ್ಲದಿದ್ದರೂ, ನಾಯಕಿಯು ಅವನನ್ನು ಆಕರ್ಷಿಸುವಲ್ಲಿ ಸಫಲಳಾದ ಕಾರಣ ಅವಳಲ್ಲಿ ಪ್ರೀತಿ. ಆದರೆ ನಾಯಕಿ ಮಾತುಬಾರದ ಮೂಕಿ. ಕೊನೆಗೆ ಆ ಮತ್ತೊಬ್ಬನೇ ಮೂಕಿಯನ್ನು ಮದುವೆಯಾಗುತ್ತಾನೆ.

೧೮೬೧. ನೀ ಮುಡಿದ ಮಲ್ಲಿಗೆ

(೧೯೯೭ / ವರ್ಣ / ಸಾಮಾಜಿಕ)
ಲಾ: ಶ್ರೀ ಕವಿಶೈಲ ಮೂವೀಸ್
ಪ್ರೊ: ವೈದೇಹಿ ವೆಂಕಟರಾವ್, ಸೀತಾ ರಾಮಕೃಷ್ಣ, ಎಸ್.ಕೆ.ದಯಾನಂದ್
ನಿ: ಕೋಡ್ಲು ರಾಮಕೃಷ್ಣ
ಸ.ನಿ: ಎಸ್.ವಿ.ಉದಯ್
ಅ: ಕುಮಾರ್ ಗೋವಿಂದ್, ರಾಮ್ ಕುಮಾರ್, ಕಲ್ಯಾಣ್ ಕುಮಾರ್, ಪ್ರಕಾಶ್, ಶೈಲೇಶ್, ಸಾಧುಕೋಕಿಲ, ನಿವೇದಿತಾ ಜೈನ್, ಭಾವನಾ, ಪದ್ಮಾವಾಸಂತಿ, ಪ್ರಮೀಳಾ ಜೋಷಾಯ್, ಮಾಲತಿ, ಸರೋಜ, ಮಂಜುಮಾಲಿನಿ
ಕ: ಕೋಡ್ಲು ರಾಮಕೃಷ್ಣ
ಚಿ.ಕ: ಕೋಡ್ಲು ರಾಮಕೃಷ್ಣ, ಕೆ.ನಂಜುಂಡಿ
ಮಾ: ಪುರುಷೋತ್ತಮ್ ಕಣಗಾಲ್
ಗೀ: ಕುವೆಂಪು, ಗೀತಪ್ರಿಯ, ದೊಡ್ಡರಂಗೇಗೌಡ, ಕೆ. ಕಲ್ಯಾಣ್
ಗಾ: ರಾಜೇಶ್, ಸೌಮ್ಯ, ಸಂಧ್ಯಾ, ಮಂಜುಳಾ ಗುರುರಾಜ್
ಸಂ: ಕೆಂಪರಾಜ್
ಛಾ: ವಿ.ಎಸ್.ಬಸವರಾಜ್
ಕಲೆ: ರಾಜು
ಸ: ಸಾಧುಕೋಕಿಲ
ಧ್ವ: ಸಂಕೇತ್
ನೃ: ಉಡುಪಿ ಜಯರಾಂ, ದೇವಿ, ಮದನ್, ಹರಿಣಿ
ಸಾ: ಸೂರ್ಯಪ್ರಕಾಶ್
ವ: ಪ್ರಭುರಾಜ್
ಪ್ರ: ವೆಂಕಟಸ್ವಾಮಿ
ಹಾ: ೧) 'ಚಂದನದ ಮೈಯೋಳೆ...', ೨) 'ಚಂದ್ರ ಮಂಚಕೆ ಬಾ ಚಕೋರಿ...', ೩) 'ಪ್ರೇಮಗೀತೆಯ ಪಲ್ಲವಿ...', ೪) 'ನಾವು ಹೋದಲೆಲ್ಲಾ ಗಲ್ ಗಲ್...'.
ವಿ: ೧೯೯೭-೯೮ ರಾಜ್ಯ ಪ್ರಶಸ್ತಿ : ಅತ್ಯುತ್ತಮ ಪೋಷಕನಟಿ : (ಭಾವನಾ)
ಕ.ಸಾ: ಇಬ್ಬರು ಗೆಳತಿಯರ ನಡುವಿನ ಗೆಳೆತನ, ಆತ್ಮೀಯತೆ, ಅನ್ಯೋನ್ಯತೆಯ ಚಿತ್ರಣ. ಗೆಳತಿಯರಲ್ಲಿ ಒಬ್ಬರಿಗಾಗಿ ಇನ್ನೊಬ್ಬರು ಮಾಡಲೆಳಸುವ ತ್ಯಾಗದ ಸುತ್ತ ಹೆಣೆದ ಕಥೆ. ಉದ್ಯಮಿಯ ಮಗಳು ರಂಜನಿ, ಅವಳ ಸಹಪಾಠಿ ಮೇಘ ಇಬ್ಬರೂ ಅಕ್ಕ ತಂಗಿಯರಿಗೂ ಮಿಗಿಲಾದ ಗೆಳತಿಯರು. ರಂಜನಿಯ ಸಂಸ್ಥೆಯಲ್ಲಿ ಉದ್ಯೋಗಕ್ಕೆ ಬಂದ ಆಕಾಶ್ ಮತ್ತು ಮೇಘ ಪರಸ್ಪರ ಪ್ರೀತಿಸಿದರು. ಅವರಿಬ್ಬರ ವಿವಾಹಕ್ಕೆ ರಂಜನಿಯೇ ಸೂತ್ರಧಾರಳಾದಳು. ಮೊದಲ ರಾತ್ರಿಯ ಸವಿಗರದ ಸಂದರ್ಭದಲ್ಲಿ ಮೇಘಳ ರೋಗ ಅವಸ್ಥೆ ಹಾಜಿತು. ಮೇಘಳ ಕಾಯಿಲೆ ವೈದ್ಯ ಜಗತ್ತಿಗೇ ವಿಸ್ಮಯವೆನಿಸಿತು. ರಂಜನಿ ಗೆಳತಿ ರೋಗ ನಿವಾರಣೆಗೆ ಎಲ್ಲ ಪ್ರಯತ್ನ ನಡೆಸಿದಾಗ, ಆಕಸ್ಮಾತ್ ರಂಜನಿ ಆಕಾಶ್‌ರ ನಡುವೆ ದೈಹಿಕ ಸಂಪರ್ಕವಾಯಿತು. ರಂಜನಿಯ ಪ್ರಯತ್ನದಿಂದಾಗಿ ಅಮೆರಿಕದ ವೈದ್ಯ ಮೇಘಳ ಪ್ರಾಣದಾತನಾದ. ವೈದ್ಯ ಸ್ವರೂಪ್ ಮತ್ತು ರಂಜನಿಯ ವಿವಾಹಕ್ಕಾಗಿ ಮೇಘ ತುಡಿದಳು. ಆದರೆ ರಂಜನಿ ಒಪ್ಪಲಾರದ ಅನಿವಾರ್ಯತೆಗೆ ಸಿಲುಕಿದಳು. ಸ್ನೇಹ ಪ್ರೇಮಗಳ ಸಂಘರ್ಷದಲ್ಲಿ ತ್ಯಾಗದ ಹಿರಿಮೆಯ ಚಿತ್ರಣ.

೧೮೬೨. ಅಕ್ಕ

(೧೯೯೭ / ವರ್ಣ / ಸಾಮಾಜಿಕ)
ಲಾ: ಸಾಯಿಶ್ರೀ ಪ್ರೊಡಕ್ಷನ್ಸ್
ಪ್ರೊ: ಶೇಷು ಚಕ್ರವರ್ತಿ
ನಿ: ರಾಜ್ ಕಿಶೋರ್
ಸ.ನಿ: ಗಿರೀಶ್ ಕಂಪ್ಲಾಪುರ

ಅ: ಮಾಲಾಶ್ರೀ, ಅರುಣ್ ಪಾಂಡ್ಯನ್, ಕೀರ್ತಿರಾಜ್, ಪ್ರಮೀಳಾ ಜೋಷಾಯ್, ಪ್ರಮೋದ್ ಚಕ್ರವರ್ತಿ, ಕಲ್ಪನಾ
ಕ: ಅಜಯ ಕುಮಾರ್
ಮಾ/ಗೀ: ಎಸ್.ಮುರಳಿ ಮೋಹನ್
ಸಂ: ಪಿ.ಆರ್.ಸೌಂದರ ರಾಜನ್
ಛಾ: ಆರ್. ಗಿರಿ
ಕಲೆ: ಬಾಬು ಖಾನ್
ಸ: ಗೀತ - ಮನೋಹರ್, ಹಿನ್ನೆಲೆ ಸಾಧುಕೋಕಿಲ
ಧ್ವ: ಅಣ್ಣಾದೊರೈ, ಕೃಷ್ಣಮೂರ್ತಿ - ಪೀಟರ್
ನೃ: ಸತೀಶ್, ಮದನ್ ಹರಿಣಿ
ಸಾ: ಡೈನಾಮಿಕ್ ಸುರೇಶ್, ದಳಪತಿ ದಿನೇಶ್
ವ: ಎಸ್.ನಾಗರಾಜ್
ಪ್ರ: ನಾಗರಾಜ್
ಸ್ಟು: ಪ್ರಸಾದ್ ಲ್ಯಾಬ್
ಹಾ: ೧) 'ಬಾಳಿಗೆ ಬೆಳಕು ತಂದ...', ೨) 'ಶಿವಪ್ಪ ಕಾಯೋ ತಂದೆ...', ೩) 'ರಾತ್ರಿಯಾದರೆ ಬಲು ಬಾಧೆ...', ೪) 'ಚಿಕನ್ ಚಿಕನ್ ತಂದೂರಿ...', ೫) 'ಅಕ್ಕ ಕೇಳೇ ಅಕ್ಕ...'.
ಕ.ಸಾ: ತಮ್ಮನ ಬಾಳಿನ ಅಭ್ಯುದಯಕ್ಕಾಗಿ ಒಬ್ಬ ಅಕ್ಕ, ತನ್ನ ಸರ್ವಸ್ವವನ್ನು ತ್ಯಾಗ ಮಾಡುವ ಕಥೆ.

೧೮೬೩ ಚೆಲುವ

(೧೯೯೭ / ವರ್ಣ / ಸಾಮಾಜಿಕ)
ಲಾ: ಮಹಾಲಕ್ಷ್ಮಿ ಪಿಕ್ಚರ್ಸ್
ಪ್ರೊ: ಎಸ್.ರಮೇಶ್

ನಿ: ವಿ.ರವಿಚಂದ್ರನ್
ಅ: ರವಿಚಂದ್ರನ್ (ದ್ವಿಪಾತ್ರ), ಪ್ರಭಾಕರ್, ಮೀನಾ, ಗೌತಮಿ, ಪದ್ಮಾವಾಸಂತಿ, ಶ್ರೀನಿವಾಸ ಮೂರ್ತಿ, ಸುಮಿತ್ರಾ, ಸುಂದರರಾಜ್, ಮುಖ್ಯಮಂತ್ರಿ ಚಂದ್ರು, ಶಿವಕುಮಾರ್

ಕ/ಚಿ.ಕ: ಇ.ವಿ.ವಿ.ಸತ್ಯನಾರಾಯಣ
ಮಾ: ಬಿ.ಸುರೇಶ್
ಗೀ: ಹಂಸಲೇಖ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಮನು, ಚಿತ್ರಾ, ಮಂಜುಳಾ ಗುರುರಾಜ್, ಎಲ್.ಎನ್. ಶಾಸ್ತ್ರಿ, ಲತಾ ಹಂಸಲೇಖ, ಎಲ್.ಎಸ್.ವಿಜಯಲಕ್ಷ್ಮಿ
ಸಂ: ಸುರೇಶ್ ಅರಸ್
ಛಾ: ಜಿ.ಎಸ್.ವಿ.ಸೀತಾರಾಮ್
ಕಲೆ: ಇಸ್ಮಾಯಿಲ್
ಸ: ಹಂಸಲೇಖ
ನೃ: ನಟರಾಜ್, ಲೂಯಿಸ್
ಸಾ: ರಾಮ ಶೆಟ್ಟಿ, ಜಾಲಿ ಬಾಸ್ಟಿನ್
ಹಾ: ೧)', ಪರಪಂಚ ಈ ಪರಪಂಚ...', ೨) 'ಚೆಲುವಯ್ಯ ಚಲುವಯ್ಯ...', ೩) ' ಹಾಂಗ್ ನೋಡಬ್ಯಾಡ್ವೇ ಹೆಣ್ಣೇ...', ೪) ' ತತ್ತಾರೋ ತತ್ತಾ...', ೫) ' ಪ್ರಾಣಸಖಿ...', ೬)'ಓಯ ಓಯ...',೭)'ದಂತದ ಗೊಂಬೆ...'
ಕ.ಸಾ: ಒಂದೇ ರೂಪದ ಇಬ್ಬರು ಅವಳಿ ಜವಳಿ ಸೋದರರು. ಅವರನ್ನು ಪ್ರೀತಿಸುವ ಇಬ್ಬರು ಹುಡುಗಿಯರು. ಅದಲು ಬದಲಾಗಿ ಗೊಂದಲಗಳು, ಪರದಾಟ. ನಂತರ ತಂದೆ ತಾಯಿಗಳ ಜೊತೆ ಮಿಲನ.

೧೮೬೪ ಜಿಂದಾಬಾದ್

(೧೯೯೭ / ವರ್ಣ / ಸಾಮಾಜಿಕ)
ಲಾ: ವಸಂತಮ್ಮ ಎಂಟರ್‌ಪ್ರೈಸಸ್
ಪ್ರೊ: ಎಸ್.ರಮೇಶ್, ಶ್ರೀನಿವಾಸ್
ನಿ: ಆನಂದ್ .ಪಿ.ರಾಜು
ಸ.ನಿ: ದಿನೇಶ್, ಕುಮಾರ್ ಕಾರ್ಯಪ್ಪ, ನಾಗರಾಜ್

ಅ: ಸುಮನ್, ಮಾಲಾಶ್ರೀ, ಗೀತಾ, ಸುಧೀರ್, ಅವಿನಾಶ್, ಶೋಭರಾಜ್, ನಿಳಲ್ಗಳ್ ರವಿ, ಅಜೇಯ ರತ್ನಂ, ರಮೇಶ್ ಭಟ್, ಕಾಶಿ, ಚಿಕ್ಕಣ್ಣ, ಅರವಿಂದ್, ಹರೀಶ್ ರಾಯ್, ರಣಧೀರ ವೆಂಕಟೇಶ್, ಕೋಟೆ ಪ್ರಭಾಕರ್, ಮಂದಾರ, ವನಜಶ್ರೀ, ಪಂಕಜ, ಬೇಬಿ ವರ್ಷಿಣಿ, ಮಾ|ಅರುಣ್
ಕ/ಚಿ.ಕ: ಎಸ್.ಎಸ್.ಡೇವಿಡ್
ಮಾ: ರವಿ ಶ್ರೀವತ್ಸ
ಗೀ: ವಿ.ಮನೋಹರ್
ಗಾ: ರಾಜೇಶ್, ಶಂಕರ್ ಶಾನುಭಾಗ್, ಚಿತ್ರಾ, ಮಂಜುಳಾ ಗುರುರಾಜ್
ಸಂ: ಎಸ್.ಪ್ರಸಾದ್
ಛಾ: ಜಿ.ಜಿ.ಕೃಷ್ಣ
ಕಲೆ: ನಂಜುಂಡಸ್ವಾಮಿ
ಸ: ವಿ.ಮನೋಹರ್
ಧ್ವ: ಪೀಟರ್, ಜಿ.ಅಲ್ವಾರ್ಡೋರ್ಕ್ಸ್
ನೃ: ಕೂಲ್ ಜಯಂತ್
ಸಾ: ದಳಪತಿ ದಿನೇಶ್
ವ: ತಿಪಟೂರು ಸೋಮ
ಪ್ರ: ಶ್ರೀನಿವಾಸ್
ಹಾ: ೧)'ಜನ್ಮಭೂಮಿ ಇದು...',೨)'ತಾರೆ ತಾರೆ ಮುದ್ದಾದ...', ೩)' ಎಚ್ಚರ ಎಚ್ಚರ ಇರಲಿ...', ೪)' ಜಿಸಿ ಜಿಸಿ ಪಡೆ...', ೫) 'ಬಾಳಿಗೆ ಬೆಳಕು ತಂದ..'
ಕ.ಸಾ: ಲಾಯರ್ ಆದ ಅಕ್ಕ, ಆಕೆಯ ಪತಿಯನ್ನು ಕೊಂದ ದುಷ್ಟ ವ್ಯಕ್ತಿಗಳ ಗುಂಪನ್ನು ತನ್ನಂತ ಶೋಷಣೆಗೆ ಒಳಗಾದ ಪೊಲೀಸ್ ಅಧಿಕಾರಿಯೊಬ್ಬನ ಸಹಾಯದಿಂದ ಸದೆಬಡಿಯುವ ಸಾಹಸಿ ಹೆಣ್ಣುಮಗಳ ಕಥೆ.

೧೮೬೫ ನೋಡು ಬಾ ನಮ್ಮೂರ

(೧೯೯೭ / ವರ್ಣ / ಸಾಮಾಜಿಕ)
ಲಾ: ಬಂಗಾರ್ ಮೂವೀಸ್
ಪ್ರೊ: ಇ.ಎಸ್.ಚಂದ್ರಶೇಖರ್
ನಿ: ಎಸ್.ಆರ್.ನಂಜುಂಡೇಗೌಡ
ಸ.ನಿ: ಎಸ್.ವಿ.ಉದಯ್

ಅ: ಕುಮಾರ್ ಗೋವಿಂದ್, ಶ್ವೇತಾ, ದೊಡ್ಡಣ್ಣ, ಮುಖ್ಯಮಂತ್ರಿ ಚಂದ್ರು, ಜನಾರ್ದನ್, ಶೋಭಾ ರಾಘವೇಂದ್ರ, ಪುಷ್ಪಸ್ವಾಮಿ
ಕ: ಎಸ್.ಆರ್.ನಂಜುಂಡೇಗೌಡ
ಚಿ.ಕ/ಮಾ: ಜಿ.ಎಂ.ಪ್ರಹ್ಲಾದ್
ಗೀ: ವಿ.ಮನೋಹರ್, ಜಿ.ಎಂ.ಪ್ರಹ್ಲಾದ್, ರಾಮಚಂದ್ರಗೌಡ
ಗಾ: ರಾಜೇಶ್, ಮಂಜುಳಾ ಗುರುರಾಜ್, ಶಂಕರ್ ಶಾನ್‌ಭಾಗ್, ಕುಸುಮ, ಜನಾರ್ದನ್, ಎಲ್.ಎನ್. ಶಾಸ್ತ್ರಿ
ಸಂ: ಬಿ.ಎಸ್.ಕೆಂಪರಾಜ್
ಛಾ: ಅಶೋಕ್ ನಾಯ್ಡು
ಕಲೆ: ಸುಭಾಷ್ ಕಡಕೋಳ್
ಸ: ವಿ.ಮನೋಹರ್
ಸಾ: ಸೂರ್ಯಪ್ರಕಾಶ್, ಆ್ಯಕ್ಷನ್ ಮೂರ್ತಿ
ಹಾ: ೧)'ಫಳ ಫಳ ಹೊಳೆಯುವ ನಕ್ಷತ್ರ...',೨)' ಎಲೆ ಸಂಪಿಗೆ ನೀ ಕ್ಷೇಮವೇ...', ೩) 'ನಾಳೆ ನಮದೇ, ನಾವ ನಮಗೆ...', ೪) 'ಜಾಣೆ ಜಾಣೆ ಈ ಸುಂದರ ಭೂಮಿ...', ೫) 'ಹೇ ಏಟಿಬ್ಯಾಡಿರಯ್ಯ...',೬)' ಏಳು ಎದೇಳಣ್ಣಾ ಚಿಂತೆಯ...',
ವಿ: ೧೯೯೭-೯೮ರ ರಾಜ್ಯ ಪ್ರಶಸ್ತಿ : ತೃತೀಯ ಅತ್ಯುತ್ತಮ ಚಿತ್ರ, ಅತ್ಯುತ್ತಮ ಗೀತ ರಚನಕಾರ (ಜಿ.ಎಂ.ಪ್ರಾಹ್ಲಾದ್), ವಿಶೇಷ ಪ್ರಶಸ್ತಿ ಗಾಯಕ (ಜನಾರ್ದನ್)
ಕ.ಸಾ: ಹಳ್ಳಿಯಲ್ಲಿ ನಡೆಯುವ ಪ್ರಗತಿಪರ ಬದಲಾವಣೆಗೆ ಸ್ಪಂದಿಸುವ ಹಾಗೂ ಸಂದಿಸದ ಮನಗಳ ನಡುವಣ ಸಂಘರ್ಷದ ಚಿತ್ರಣ.

೧೮೬೬. ನಾಗರಿಕ

ಲಾ: ನಾಗ್ ಎಂಟರ್‌ಪ್ರೈಸಸ್
ಪ್ರೊ: ಶ್ರೀಮತಿ ಸರಸ್ವತಿ ಗೋಪಾಲ ಜೋಯಿಸ್
ನಿ: ವೈ.ನಂಜುಂಡಪ್ಪ
ಅ: ಕೃಷ್ಣೇಗೌಡ, ಎಂ.ಎಸ್.ಎಲ್.ಮೂರ್ತಿ, ಜಿ.ವಿ.ಶಾರದಾ, ಶಂಕರ್‌ಭಟ್, ಮಾ|ಅನಂದ್, ಮಾ|ಮುಕುಂದ್, ಕುಮಾರಿ ದಿವ್ಯ
ಕ/ಚಿ.ಕ: ವೈ.ನಂಜುಂಡಪ್ಪ
ಮಾ: ಬಿ.ಎಲ್.ಸುರೇಶ್
ಸಂ: ರಾಜಶೇಖರ ರೆಡ್ಡಿ
ಛಾ: ಆರ್.ಆರಾಧ್ಯ
ಸ: ಸದ್ಗುಣರಾಜ್
ಧ್ವ: ಪ್ರಸಾದ್ ರಿಕಾರ್ಡಿಂಗ್
ವ: ವೆಂಕಟೇಶ್
ಪ್ರ: ಶ್ರೀನಿವಾಸ್
ಸ್ಟು: ರಾಘವೇಂದ್ರ ಔಟ್‌ಡೋರ್ ಯೂನಿಟ್ (ಹೊರಾಂಗಣ)
ವಿ: ೧೯೯೬ರ ತೃತೀಯ ಅತ್ಯುತ್ತಮ ಚಿತ್ರ - ರಾಜ್ಯ ಪ್ರಶಸ್ತಿ
ಕ.ಸಾ: ಸರ್ಕಾರದ ಮೀಸಲಾತಿಯ ಬಗ್ಗೆ ಹೆಣೆದ ಕಥೆ. ಸರ್ಕಾರ ಈಗಿನ ಮೀಸಲಾತಿಯ ಕಾನೂನಿನಲ್ಲಿ ಒಂದಂಶ ಸೇರಿಸಿ, ವೇತನದ ಕಾಲು ಭಾಗವನ್ನು ಕುಟುಂಬದ ಆಶ್ರಯಿತ ಸದಸ್ಯರಿಗೆ ವೇತನದಿಂದಲೇ ಕಡಿತ ಮಾಡಿ ಕಳುಹಿಸಿ ಕೊಟ್ಟರೆ ಒಳ್ಳೆಯದು ಎಂಬ ಪ್ರತಿಪಾದನೆಯುಳ್ಳ ಕಥೆ.

೧೯೯೮

೧೮೬೭. ನಮ್ಮೂರ ಹುಡ್ಗ

(೧೯೯೮ / ವರ್ಣ / ಸಾಮಾಜಿಕ)
ಲಾ: ವಿಜಯ ನರಸಿಂಹ ಚಿತ್ರ
ಪ್ರೊ: ಅಶೋಕ್
ನಿ: ರವೀಂದ್ರನಾಥ್
ಸ.ನಿ: ಎಸ್.ಸಾವಂತ್
ಅ: ಶಿವರಾಜ್ ಕುಮಾರ್, ಶ್ರುತಿ, ಜಯಂತಿ, ರಾಜೇಶ್, ಸಿಹಿಕಹಿ ಚಂದ್ರು, ಭವ್ಯಶ್ರೀ, ಕೃಷ್ಣೇಗೌಡ, ಪ್ರತಾಪ್, ಪಾರ್ವತಿ ಲೋಕೇಶ್, ಮಂಜುಮಾಲಿನಿ
ಕ/ಚಿ.ಕ: ರವೀಂದ್ರನಾಥ್
ಮಾ: ಬರಗೂರು ರಾಮಚಂದ್ರಪ್ಪ
ಗೀ: ದೊಡ್ಡರಂಗೇಗೌಡ, ವಿ.ಮನೋಹರ್
ಗಾ: ರಾಜೇಶ್, ವಿಷ್ಣು, ಶಂಕರ್ ಶ್ಯಾನಭಾಗ್, ಬಿ.ಆರ್.ಛಾಯಾ, ಮಂಜುಳಾ ಗುರುರಾಜ್
ಸಂ: ಶ್ಯಾಂ
ಛಾ: ಆರ್.ಮಧುಸೂದನ್
ಕಲೆ: ಅರುಣ್ ಕುಮಾರ್
ಸ: ವಿ.ಮನೋಹರ್
ಧ್ವ: ಚಾಮುಂಡೇಶ್ವರಿ
ನೃ: ತಾರಾ, ಕಲಾ
ಸಾ: ಜಾಲಿ ಬಾಸ್ಟಿನ್, ಕಣಾಲ್ ಕಣ್ಣನ್
ವ: ವೆಂಕಟರಾವ್, ಆಂಜನೇಯ, ನಾಗರಾಜ್
ಪ್ರ: ವಿಶ್ವನಾಥ್, ದೊರೆರಾಜ್, ಪ್ರಭಾಕರ್
ಕ.ಸಾ: ಪಟ್ಟಣದಲ್ಲಿ ಓದಿದರೂ ಅನಾಗರಿಕಳೇ ಆದ ಹುಡುಗಿ, ಹಳ್ಳಿಯಲ್ಲಿ ಹುಟ್ಟಿ ಅಲ್ಲಿಯೇ ಬೆಳೆದಿದರೂ ಸುಸಂಸ್ಕೃತನಾದ ಹುಡುಗ. ಇವರಿಬ್ಬರ ನಡುವೆ ಅನೇಕ ಸಂಘರ್ಷ, ಹುಡುಗನ ಸದ್ಗುಣಗಳಿಗೆ ಮಾರು ಹೋಗುವ ಹುಡುಗಿ. ಅವಳ ಪ್ರೇಮಕ್ಕೆ ಅಣ್ಣನಿಂದ ವಿರೋಧ. ಪ್ರೇಮಕ್ಕಾಗಿ ಹಾಗೂ ಅಸ್ತಿತ್ವಕ್ಕಾಗಿ ನಡೆಯುವ ಹೋರಾಟದಲ್ಲಿ ಹುಡುಗನಿಗೆ ಗೆಲುವು.

೧೮೬೮. ಅಂತರ್ಗಾಮಿ

(೧೯೯೮ / ವರ್ಣ / ಸಾಮಾಜಿಕ)
ಲಾ: ಚಂದನ್ ಫಿಲಂಸ್
ಪ್ರೊ: ಶಕುಂತಲಾ ಬಾಲಕೃಷ್ಣ

ನಿ: ಎ.ಬಾಲಕೃಷ್ಣ
ಸ.ನಿ: ಟಿ.ಎಸ್.ನಾಗೇಶ್
ಅ: ರಮೇಶ್, ಚಾರುಲತಾ, ಶೋಭರಾಜ್, ಸಿದ್ದಾರ್ಥ, ಟೆನ್ನಿಸ್ ಕೃಷ್ಣ, ಅನುಭವ ಅರವಿಂದ್, ತಾರಾ, ಭವ್ಯಶ್ರೀ ರೈ, ಕಿಶೋರಿ ಬಲ್ಲಾಳ್, ಸುಷ್ಮಾರಾವ್, ಎಂ.ಎಸ್.ಲಕ್ಷ್ಮೀದೇವಿ, ಸದಾಶಿವ ಬ್ರಹ್ಮಾವರ್, ಜಿ.ಕೆ.ಗೋವಿಂದರಾವ್, ಲೋಹಿತಾಶ್ವ
ಕ/ಚಿ.ಕ: ಎ.ಬಾಲಕೃಷ್ಣ
ಮಾ: ಕೃಷ್ಣಮೂರ್ತಿ ನಾಡಿಗ್
ಗೀ: ಶ್ರೀರಂಗ, ಮನೋಹರ್, ಶ್ಯಾಮಸುಂದರ ಕುಲಕರ್ಣಿ, ಬಾಲಕೃಷ್ಣ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಮಂಜುಳಾ ಗುರುರಾಜ್, ರಾಜೇಶ್, ಸಿ.ಅಶ್ವತ್, ರಮೇಶ್ ಚಂದ್ರ, ಓಹಿಲೇಶ್ವರ
ಸಂ: ಬಿ.ಎಸ್.ಕೆಂಪರಾಜ್
ಛಾ: ಸುಂದರನಾಥ ಸುವರ್ಣ
ಕಲೆ: ಜಿ.ಮೂರ್ತಿ
ಸ: ರಾಜೇಶ್ ರಾಮನಾಥ್
ಧ್ವ: ಸಂಕೇತ್, ಕೃಷ್ಣಮೂರ್ತಿ, ಪೀಟರ್, ಅಣ್ಣಾ ದೊರೈ
ನೃ: ತಾರಾ, ಪ್ರಸಾದ್
ಸಾ: ಸೂರ್ಯಪ್ರಕಾಶ್
ವ: ಗಂಡಸಿ ನಾಗರಾಜ್, ವಿನ್ಯಾಸ: ನಾಗೇಂದ್ರ
ಪ್ರ: ಮುರಳಿ
ಸ್ಟು: ಸುಪ್ರಾ ಮೂವೀಸ್
ಹಾ: ೧) 'ಬಯಕೆಯ ಲತೆ ಇದು...', ೨) ' ನೀಲಿ ನೀಲಿ ಸಾಗರವೆ...', ೩) ' ಯಪ್ಪ ಯಪ್ಪ ಏನ್ ಚಂದವ್ವೊ...', ೪) ' ಕನಸಿನ ಚೆಲುವೆಯು...', ೫) 'ಜೋ ಕುಮಾರನೇ ಬರ್ತಿಯಾ...',
ಕ.ಸಾ: ಮಾನಸಿಕ ಸಿರತೆ ಇಲ್ಲದ ಗಂಡು ಹೆಣ್ಣುಗಳ ಮಾನಸಿಕ ತುಮುಲಗಳ ನಡುವಣ ಚಿತ್ರಣ. ಮನೋವೈದ್ಯೆಯೊಬ್ಬಳ ನೆರವಿನಿಂದ ಮಾನಸಿಕ ಸಮತೋಲನ ಕಂಡುಕೊಳ್ಳುವುದರೊಂದಿಗೆ ಸುಖಾಂತ.

೧೮೬೯. ಮಾತಿನ ಮಲ್ಲ

(೧೯೯೮ / ವರ್ಣ / ಸಾಮಾಜಿಕ)
ಲಾ: ಶ್ರೀ ರಾಜರಾಜೇಶ್ವರಿ ಕ್ರಿಯೇಷನ್ಸ್
ಪ್ರೊ: ಸತ್ಯಮೂರ್ತಿ ಕೋಟಿಲರಾಜು (ಯು.ಎಸ್.ಎ)
ನಿ: ಯೋಗೀಶ್ ಹುಣಸೂರು
ಸ.ನಿ: ಅಶ್ವಿನ್ ಕುಮಾರ್



ಅ: ಜಗ್ಗೇಶ್, ಚಾರುಲತಾ, ವಿಜಯಲಕ್ಷ್ಮಿ, ಸ್ವರ್ಣ, ಮಾಣಶ್ರೀ, ಭುವನಶ್ರೀ, ಬ್ಯಾಂಕ್ ಜನಾರ್ದನ್, ಉಮೇಶ್, ಎಂ.ಎಸ್ ಲಕ್ಷ್ಮೀದೇವಿ, ಕ್ರಿಕೆಟ್ ಪ್ರಾ ೩
ಕ: ಯೋಗೀಶ್ ಹುಣಸೂರು
ಚಿ.ಕ: ಕೆ.ನಂಜುಂಡ
ಮಾ: ಅಶ್ವಿನ್ ಕುಮಾರ್
ಗೀ: ವಿ.ಮನೋಹರ್
ಗಾ: ಚಿತ್ರಾ, ರಾಜೇಶ್, ಸೌಮ್ಯ
ಸಂ: ಬಸವರಾಜ್ ಅರಸ್
ಛಾ: ರಮೇಶ್ ಬಾಬು
ಕಲೆ: ವೆಂಕಟರಡ್ಡಿ
ಸ: ವಿ.ಮನೋಹರ್
ಧ್ವ: ಸಂಕೇತ್, ಪ್ರಸಾದ್
ನೃ: ಸತೀಶ್
ಸಾ: ಕೆ.ಡಿ.ವೆಂಕಟೇಶ್
ವ: ಸತ್ಯಂ
ಪ್ರ: ಮಾದೇಗೌಡ
ಹಾ: ೧) ' ಮುತ್ತು ಸರವ...', ೨) ' ಬದುಕೋದು ಕಲಿತುಕೋ...', ೩) ' ಪ್ರೇಮ ರಾಗ...', ೪) 'ಮೆಲ್ಲ ಮೆಲ್ಲನೆ ಬಂದನೆ...', ೫) ' ಜಾಲಿ ಟೈಂ ಪಾಸ್...',
ಕ.ಸಾ: ಮಾತು ಬಲ್ಲವ ಪ್ರಪಂಚದಲ್ಲಿ ತನಗೆದುರಾಗುವ ಎಂತಹ ವಿಪತ್ತುಗಳನ್ನಾದರೂ ಎದುರಿಸಬಲ್ಲ; ನಿವಾರಿಸಿಕೊಳ್ಳಲೂ ಬಲ್ಲ ಎಂಬುದನ್ನು ಸಾರುವ ಕಥಾವಸ್ತು.

೧೮೭೦. ಎ

(೧೯೯೮ / ವರ್ಣ / ಸಾಮಾಜಿಕ)
ಲಾ: ಉಪ್ಪಿ ಎಂಟರ್‌ಪ್ರೈಸಸ್
ಪ್ರೊ: ಬಿ.ಜಿ.ಮಂಜುನಾಥ್, ವಿ.ಜಗನ್ನಾಥ್
ನಿ: ಉಪೇಂದ್ರ
ಸ.ನಿ: ಅಗ್ನಿದಿವ್ಯ, ರಘುನಾಥ್, ರಾಜಾರಾಂ
ಅ: ಉಪೇಂದ್ರ, ಚಾಂದಿನಿ, ಅರ್ಚನಾ, ಮರೀನಾ, ಕೋಟೆ ಪ್ರಭಾಕರ್, ಅಯ್ಯಪ್ಪ, ಓಂ ಮಂಜು, ಬೇಬಿ ಕೀರ್ತನಾ, ಮೈಕಲ್ ಮಧು, ಸರೋಜಾ ಶ್ರೀಶೈಲನ್, ಹುಲಿವಾನ ಗಂಗಾಧರಯ್ಯ
ಕ/ಚಿ.ಕ: ಉಪೇಂದ್ರ
ಮಾ: ಅಗ್ನಿದಿವ್ಯ
ಗೀ: ಉಪೇಂದ್ರ, ಜಿ.ಪಿ. ರಾಜರತ್ನಂ
ಗಾ: ಉಪೇಂದ್ರ, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಗುರುಕಿರಣ್, ರಾಜೇಶ್, ಪ್ರತಿಮಾರಾವ್, ಎಲ್.ಎನ್.ಶಾಸ್ತ್ರಿ
ಸಂ: ಟಿ.ಶಶಿಕುಮಾರ್
ಛಾ: ಹೆಚ್.ಎಲ್.ವೇಣು
ಕಲೆ: ಬಾಲು
ಸ: ಗುರುಕಿರಣ್
ಧ್ವ: ಆಕಾಶ್
ನೃ: ಚಂದ್ರ, ವೇಣು
ಸಾ: ವಿಕ್ರಂ
ವ: ನಾಗರಾಜ್
ಪ್ರ: ಸಿದ್ದೇಶ್
ಹಾ: ೧)'ಸುಮ್ ಸುಮ್ನೆ ನಗ್ತಾಳೆ...', ೨)'ಚಾಂದಿನಿ ಚಲೇಗಯಾ ಚಾಂದಿನಿ...', ೩)'ಹೇಳ್ಕೊಳ್ಳಾಕ್ ಒಂದೂರು...', ೪)' ಇದು ಒನ್ ಡೇ ಮ್ಯಾಚ್ ಕಣೋ...', ೫) 'ಮಾರಿ ಕಣ್ಣು ಹೋರಿ ಮ್ಯಾಲೆ...'
ವಿ: ೧೯೯೭-೯೮ರ ರಾಜ್ಯಪ್ರಶಸ್ತಿ : ಅತ್ಯುತ್ತಮ ಶಬ್ದಗ್ರಾಹಕ (ಮುರಳಿ), ಅತ್ಯುತ್ತಮ ಸಂಕಲನಕಾರ (ಶಶಿಕುಮಾರ್)
ಸೆ: 'ಯು' ಸರ್ಟಿಫಿಕೇಟ್
ಕ.ಸಾ: ಪ್ರೀತಿಯೆಂಬುದರ ಮೇಲೆ ಮೂರ ಸಿಡಿಯುವ ನಾಯಕ ಒಬ್ಬ ಚಿತ್ರ ನಿರ್ದೇಶಕ. ಅವನಲ್ಲಿ ಪ್ರೀತಿಯನ್ನು ಹುಟ್ಟಿಸುವ ಸಾಹಸ ಮಾಡುವ ನಾಯಕಿ. ಈ ಸಿಟ್ಟಿನಲ್ಲಿ ಯಶಸ್ವಿಯಾಗುತ್ತಾಳೆ. ನಂತರ ದುಷ್ಟ ಶಕ್ತಿಗಳ ಒತ್ತಡಕ್ಕೆ ಸಿಲುಕಿ ನಾಯಕನನ್ನು ತಿರಸ್ಕರಿಸುತ್ತಾಳೆ. ನಾಯಕ ಹತಾಶನಾಗುತ್ತಾನೆ. ತನ್ನ ಭವಿಷ್ಯದಲ್ಲಿ ಅಧೋಗತಿಗೆ ಪತನಕ್ಕೆ ಇಳಿಯುವ ನಾಯಕನಲ್ಲಿ ಆಕೆಯ ಬಗ್ಗೆ ತಿರಸ್ಕಾರ ಮೂಡಿ, ಕಡಗೆ ನಾಯಕ ಮತ್ತೆ ಮೇಲೆದ್ದು ಆಕೆಯ ವಿರುದ್ಧ ಸಮರವನ್ನೇ ಸಾರುತ್ತಾನೆ. ಕಡೆಗೆ ನಾಯಕಿ ನಿರ್ದೋಷಿ ಎಂದು ತಿಳಿದು ನಾಯಕ ದುಷ್ಟರನ್ನು ಶಿಕ್ಷಿಸುತ್ತಾನೆ.

೧೮೭೧. ಜಗದೀಶ್ವರಿ

(೧೯೯೮ / ವರ್ಣ / ಸಾಮಾಜಿಕ)
ಲಾ: ಶ್ರೀ ಭಾರ್ಗವಿ ಫಿಲಂಸ್
ಪ್ರೊ: ಶ್ರೀಮತಿ ಸಿ.ಕೃಷ್ಣವೇಣಿ
ನಿ: ರಾಮ್ ನಾರಾಯಣ್



ಅ: ಸಾಯಿಕುಮಾರ್, ಶೃತಿ, ಅರ್ಚನಾ, ದೊಡ್ಡಣ್ಣ, ಬೇಬಿ ಶ್ಯಾಮಿಲಿ, ವಾಸುಕಿ, ಲಂಬೂ ನಾಗೇಶ್, ಭರತ್ ಭಾಗವತರ್, ಶ್ರೀಕಾಂತ್, ಶ್ರೀನಾಥ್, ವಿವೇಕ್
ಕ/ಚಿ.ಕ: ಕೆ.ಸೀತಾರಾಂ
ಮಾ/ಗೀ: ಮಾಗಪ್ಪ ಅಮ್ಮಿರಾಜು
ಗಾ: ಮನು, ಸ್ವರ್ಣಲತಾ, ಲಲಿತಾ ಸಾಗರಿ, ಮಂಜುಳಾ ಗುರುರಾಜ್, ಕುಸುಮ, ವಿಷ್ಣು
ಸಂ: ಮಧು
ಛಾ: ಬೇಬಿ ಫಿಲಿಪ್ಸ್
ಸ: ಶಂಕರ್-ಗಣೇಶ್
ಧ್ವ: ಜೆಮಿನಿ
ನೃ: ಶಿವಶಂಕರ್
ಸಾ: ಅಂಬೂರು ಬಾಬು
ಹಾ: ೧)' ಪಾಹಿ ಪರಾತ್ಪರಿ ಪಾಹಿ ಶುಭಂಕರಿ...', ೨)'ಬರ್ತಾನೆ ನನಗೊಬ್ಬ ಭಾವ...', ೩) 'ಹಾಲಾಭಿಷೇಕ ಮಾಡುವ ದೈವಕೇ...',
ವಿ: 'ಕೋತಿ ನಾಯಿ'ಯ ವಿಶೇಷ ಅಭಿನಯ ಚಮತ್ಕಾರವಿದೆ.
ಕ.ಸಾ: ಬಾಲಕಿಯೊಬ್ಬಳು ದುಷ್ಟರನ್ನು ನಾಯಿ ಕೋತಿಗಳ ಸಹಾಯದಿಂದ ಮಟ್ಟಹಾಕುವ ಕಥೆ.

೧೮೭೨. ಮೇಘ ಬಂತು ಮೇಘ

(೧೯೯೮ / ವರ್ಣ / ಸಾಮಾಜಿಕ)
ಲಾ: ಸಂದೇಶ್ ಕಂಬೈನ್ಸ್



ಪ್ರೊ: ಸಂದೇಶ್ ನಾಗರಾಜ್, ಸ್ವಾಮಿ, ನೇತ್ರಾವತಿ ಸಂದೇಶ್
ನಿ: ಎಸ್. ಮಹೇಂದರ್
ಸ.ನಿ: ಜಿ.ಎಸ್.ಸರಸಕುಮಾರ್
ಅ: ರಮೇಶ್, ಶಿಲ್ಪಾ, ಅರ್ಚನಾ, ದೊಡ್ಡಣ್ಣ, ರತ್ನಾಕರ್,

ಆಶಾಲತಾ, ಪ್ರಮೋದಿನಿ, ಬೇಬಿ ಕೀರ್ತನಾ, ಶ್ರೀನಿವಾಸ ಮೂರ್ತಿ, ಉಷಾ, ತುಳಸಿ, ಮೈಸೂರು ರಮೇಶ್, ಪದ್ಮನಾಭ, ಪಲ್ಲವಿ
ಕ/ಚಿ.ಕ: ಎಸ್.ಮಹೇಂದರ್
ಮಾ: ಬಿ.ಎ.ಮಧು
ಗೀ: ವಿ.ಮನೋಹರ್
ಗಾ: ಚಿತ್ರಾ, ರಾಜೇಶ್, ಮಂಜುಳಾ ಗುರುರಾಜ್, ಶಂಕರ್ ಶಾನ್‌ಭಾಗ್, ರಮೇಶಚಂದ್ರ, ಚಂದ್ರಿಕಾ ಗುರುರಾಜ್, ಮಂಗಳಾ
ಸಂ: ಪಿ.ಆರ್.ಸೌಂದರ ರಾಜನ್
ಛಾ: ಕೃಷ್ಣಕುಮಾರ್
ಕಲೆ: ಇಸ್ಮಾಯಿಲ್, ಹೊಸಮನೆ ಮೂರ್ತಿ
ಸ: ವಿ.ಮನೋಹರ್
ಧ್ವ: ಕೃಷ್ಣಮೂರ್ತಿ, ಕೋದಂಡಪಾಣಿ
ನೃ: ದೇವಾ, ಸಂಪತ್
ವ: ವೀರರಾಜ್
ಪ್ರ: ಗುರುಮೂರ್ತಿ
ಹಾ: ೧) 'ಹೂವೇ ಹೂವೇ ಹೂವೇ...', ೨) 'ಮೇಘ ಬಂತು ಮೇಘ...', ೩) 'ಜಾಮೂನು ಹುಡುಗೀಗೊಬ್ಬ...', ೪) 'ಸಿದಪ್ಪ ಸ್ವಾಮಿ ಬನ್ನಿ...', ೫) 'ಬಾನಾಡಿ ಹಾಡಲಿ...', ೬) 'ಹಾಯ್ ರಾಮ್ ...', ೭) 'ಸೋ ಎನ್ನಿರೇ ...'
ಕ.ಸಾ: ಮದುವೆಯಿಲ್ಲದೆ ನಿಂತ ಹೆಣ್ಣು. ಅವಳ ಬಾಳಿನಲ್ಲಿ ಗಂಡೊಂದು ಪ್ರವೇಶಿಸುತ್ತಾನೆ. ಆದರೆ ಆತ ವಿಧುರ. ಅವನ ಮಗುವಿಗೆ ತಾಯಿಯಾಗಲು ಅವಳು ಸಿದ್ಧಳಾಗುತ್ತಾಳೆ. ಪರಿಸ್ಥಿತಿಯ ಪರಿಣಾಮವಾಗಿ ಆತ ಇನ್ನೊಬ್ಬಳ ಕೈ ಹಿಡಿಯಬೇಕಾಗುತ್ತದೆ ಈ ಹೆಣ್ಣಿನ ಪಾಲಿಗ ಕ್ಷಣ ಕಾಲ ಕಾಣಿಸಿಕೊಂಡು ಮುಂದೆ ಮುಂದೆ ಓಡುವ ಮೇಘವಾಗುತ್ತಾನೆ.

೧೮೭೩. ಕುರುಬನ ರಾಣಿ

(೧೯೯೮ / ವರ್ಣ / ಸಾಮಾಜಿಕ)
ಲಾ: ರಾಕ್‌ಲೈನ್ ಪ್ರೊಡಕ್ಷನ್ಸ್
ಪ್ರೊ: ರಾಕ್‌ಲೈನ್ ವೆಂಕಟೇಶ್
ನಿ: ಡಿ.ರಾಜೇಂದ್ರಬಾಬು
ಸ.ನಿ.: ಮೋಹನ್ ಎಸ್.ಮಾಳಗಿ, ರಾಜ್
ಅ: ಶಿವರಾಜ್ ಕುಮಾರ್, ನಗ್ಮಾ, ಸುಮಿತ್ರಾ, ಹೇಮಾ ಚೌಧುರಿ, ಸಿ.ಆರ್.ಸಿಂಹ, ಜ್ಯೋತಿ, ಸಿಹಿಕಹಿ ಚಂದ್ರು, ಪವಿತ್ರಾ ಲೋಕೇಶ್, ಶಂಕರ್ ರಾವ್, ಮಂಜುನಾಥ ಹೆಗ್ಗಡೆ, ಜ್ಯೋತಿ, ದಿನೇಶ್, ಚಿಕ್ಕ ಸುರೇಶ್
ಚಿ.ಕ: ವಿಜಯೇಂದ್ರ ಪ್ರಸಾದ್
ಮಾ: ಬರಗೂರು ರಾಮಚಂದ್ರಪ್ಪ
ಗಾ: ಡಾ| ರಾಜಕುಮಾರ್, ರಾಜೇಶ್, ಚಿತ್ರಾ, ಪ್ರೀತಿ ಸಿಂಗ್
ಸಂ: ಶಶಿಕುಮಾರ್
ಛಾ: ಅಶೋಕ್ ಕಶ್ಯಪ್
ಸ: ವಿ.ಮನೋಹರ್
ನೃ: ಸುಜಾತಾ ಬಾಬು
ಸಾ: ದಳಪತಿ ದಿನೇಶ್
ಹಾ: ೧) 'ತಾಳಿ ತಾಳಿ ತಾಳಿ...', ೨) 'ಪ್ಯಾರ ಪ್ಯಾರ...', ೩) 'ಮಾಂಗಲ್ಯ ಮಾಂಗಲ್ಯ...', ೪) 'ಯುವಿಲ್ಲಿ ಯಾರದ್ದು...', ೫) 'ಬಣ್ಣ ಬಣ್ಣದ...', ೬) 'ಕಷ್ಟ ಚಿಪ್ಪ...'
ಕ.ಸಾ: ಕುರುಬನೊಬ್ಬ ಸಿನಿಮಾ ತಾರೆಯನ್ನು ಪ್ರೇಮಿಸುವನು. ಆದರೆ ಅವಳಿಗೆ ಅವನ ಪ್ರೇಮ ಇಷ್ಟವಿರಲಿಲ್ಲ. ಹಾಗಿದ್ದರೂ ಅವನನ್ನೇ ಮದುವೆಯಾಗಬೇಕಾದ ಸಂದರ್ಭ. ನಂತರ ಆ ಹುಡುಗನನ್ನು ಮನೆಯಿಂದ ಹೊರಹಾಕುತ್ತಾರೆ. ನಂತರವಲ್ಲಿ ಅವಳ ಆಸ್ತಿಯನ್ನು ಕಬಳಿಸಲು ಹೊಂಚು ಹಾಕುವ ಸಂದರ್ಭಗಳು ಎದುರಾಗುತ್ತವೆ. ಅವುಗಳಿಂದಾಗಿ ಅವಳ ಕಣ್ಣು ತೆರೆಯುತ್ತದೆ. ಮುಗ್ಧ ಹುಡುಗನ ಬಳಿಗೆ ಕುರುಬನ ರಾಣಿಯಾಗಿ ಅವಳು ಮರಳುವುದೇ ಕಥೆ.

೧೮೭೪. ಹೈ ಕಮಾಂಡ್

(೧೯೯೮ / ವರ್ಣ / ಸಾಮಾಜಿಕ)
ಲಾ: ಎಂ.ಎಂ.ಆರ್.ಮೂವೀಸ್
ಪ್ರೊ: ಮಂಜುನಾಥ ಸಾಗರ್
ನಿ: ಭಾರ್ಗವ
ಸ.ನಿ: ಓರಮರ್, ಮಹೇಶ್

ಅ: ದೇವರಾಜ್, ಅಭಿಜಿತ್, ಚೈತಾಲಿ, ಅರ್ಚನ, ತಾರಾ, ಕೀರ್ತಿ, ಸುಧೀರ್, ಎಂ.ಎಸ್.ಕಾರಂತ್, ಶಿವಪ್ರಕಾಶ್, ಅರುಣ್ ಕುಮಾರ್
ಕ: ಕುಮಾರ್
ಚಿ.ಕ: ಭಾರ್ಗವ
ಮಾ: ಜಿ.ಎಂ.ಪ್ರಹ್ಲಾದ್
ಸಂ: ನಾಗೇಶ್ ಜಿ.ಯಾದವ್
ಛಾ: ಮಲ್ಲಿಕಾರ್ಜುನ
ಸ: ಸಾಧುಕೋಕಿಲ
ಧ್ವ: ಪ್ರಸಾದ್
ಸಾ: ಸೂರ್ಯಪ್ರಕಾಶ್
ಕ.ಸಾ: ನಿರಪರಾಧಿ ಹೆಣ್ಣು ಕಾನೂನಿನ ದೃಷ್ಟಿಯಲ್ಲಿ ಅಪರಾಧಿನಿಯಾಗಿ ನಿಲ್ಲುವಂಥ ಸಂದರ್ಭ. ಅವಳನ್ನು ನಿರ್ದೋಷಿಯೆಂದು ಬಿಡುಗಡೆಗೊಳಿಸಲು ಕೇಂದ್ರದಿಂದ ಬರುವ ದಕ್ಷ ಪೋಲೀಸ್ ಅಧಿಕಾರಿ 'ಹೈ ಕಮಾಂಡ್' ಎಂಬ ಕಾರ್ಯಾಚರಣೆಯನ್ನು ಮಾಡಿ ಆಕೆಯನ್ನು ದೋಷ ಮುಕ್ತಗೊಳಿಸುವ ಸಾಹಸಮಯ ಚಿತ್ರಣ.

೧೮೭೫. ಜೈ ಹಿಂದ್

(೧೯೯೮ / ವರ್ಣ / ಸಾಮಾಜಿಕ)
ಲಾ: ಸೌಮ್ಯ ಫಿಲಂಸ್
ಪ್ರೊ: ಚೆನ್ನಬಸವನಗೌಡ ಪಾಟೀಲ್
ನಿ: ಎಸ್.ಎಸ್.ಡೇವಿಡ್
ಸ.ನಿ: ಕೆ.ಪಿ.ವೆಂಕಟೇಶ್, ಗೋವರ್ಧನ್, ಲಕ್ಷ್ಮಣ್ ರೆಡ್ಡಿ, ತಿಮ್ಮಯ್ಯ
ಅ: ದೇವರಾಜ್, ಕೆ. ಎಸ್. ಅಶ್ವತ್, ರಘುವರನ್,

ಲೋಕನಾಥ್, ಹರೀಶ್ ರಾಯ್, ಬಿ.ಸಿ.ಪಾಟೀಲ್, ನಿವೇದಿತಾ ಜೈನ್, ಕಾಸ್ಟ್ಯೂಮ್ ಕೃಷ್ಣ, ಶೋಭರಾಜ್, ಪಾಶಾ, ಶೀಲಾ, ಹೊನ್ನಯ್ಯ

ಕ/ಚಿ.ಕ/ಮಾ: ಎಸ್.ಎಸ್.ಡೇವಿಡ್
ಗೀ: ವಿಜಯ ನಾಸನೂರು, ವಿ.ಮನೋಹರ್, ಸು. ರುದ್ರಮೂರ್ತಿ ಶಾಸ್ತ್ರಿ
ಗಾ: ಚಿತ್ರಾ, ರಾಜೇಶ್, ಶಂಕರ್ ಶಾನ್‌ಭಾಗ್
ಸಂ: ಆರ್.ಜನಾರ್ದನ್
ಛಾ: ಕೆ.ಸುರೇಶ್ ಕುಮಾರ್
ಕಲೆ: ಸುಭಾಷ್ ಕಡಕೋಳ್
ಸ: ವಿ.ಮನೋಹರ್
ಧ್ವ: ಕೃಷ್ಣಮೂರ್ತಿ, ಕೋದಂಡಪಾಣಿ
ನೃ: ಸುಜಾತಾ, ಬಾಬು, ಪ್ರಸಾದ್
ಸಾ: ಕೆ.ಡಿ.ವೆಂಕಟೇಶ್
ವ: ನಾಗರಾಜ್
ಪ್ರ: ಗೋಪಾಲ್
ಸ್ಟು: ಸಂಕೇತ್
ಹಾ: ೧) 'ವಿರಾಜಿಸು ಸಿಂಗಾರಧಾ ಆರಾಧಕ ..', ೨) 'ಪಳು ಧೀರನೆ, ಧರ್ಮವೀರನೆ ...', ೩) 'ಬಂದೆ ನಾ.. ಬಂದೆ ನಾ ..., ೪) 'ಕಿಲಕಿಲ ಮಂಜುಳ ಧಾರಾ ...'

೧೮೭೬. ಲೇಡಿ ಟೈಗರ್

(೧೯೯೮ / ವರ್ಣ / ಸಾಮಾಜಿಕ)
ಲಾ: ಆರ್.ಟಿ.ಫಿಲಂಸ್
ಪ್ರೊ: ಬಿ.ಪಿ.ತ್ಯಾಗರಾಜ್, ರೆಹಮಾನ್
ನಿ: ಜಿ.ಕೆ.ಮುದ್ದುರಾಜ್
ಅ: ಮಾಲಾಶ್ರೀ, ಅರುಣ್ ಪಾಂಡ್ಯನ್, ಸತ್ಯಪ್ರಕಾಶ್, ಅವಿನಾಶ್, ಶೋಭರಾಜ್, ಸತ್ಯಜಿತ್, ಕಾಸ್ಟ್ಯೂಮ್ ಕೃಷ್ಣ, ರೀನಾ, ಅಲಾನ್ಸೋ, ಬೆಂಗಳೂರು ನಾಗೇಶ್



ಕ/ಚಿ.ಕ: ಜಿ.ಕೆ.ಮುದ್ದುರಾಜ್
ಮಾ: ಜಿ.ಕೆ.ಮುದ್ದುರಾಜ್, ಭವಾನಿಶಂಕರ್
ಗಾ: ಮಂಜುಳಾ ಗುರುರಾಜ್
ಸಂ: ಕೆ.ಎಂ.ಶಂಕರ್
ಛಾ: ರಮೇಶ್ ಬಾಬು
ಸ: ಸಾಧುಕೋಕಿಲ
ನೃ: ಮಸ್ತಾನ್
ಸಾ: ಸೂಪರ್ ಸುಬ್ಬರಾಯನ್
ಪ್ರ: ಮೈಸೂರು ವೆಂಕಟೇಶ್
ಸ್ಟು: ಮಧು ಆರ್ಟ್ಸ್
ಸೆ: ರೀಲು ೧೪
ಕ.ಸಾ: ದುಷ್ಟ ಶಕ್ತಿಗಳ ವಿರುದ್ಧ ಏಕಾಂಗಿಯಾಗಿ ಹೋರಾಡುವ ಸಾಹಸಿ ಮಹಿಳಾ ಪೋಲೀಸ್ ಅಧಿಕಾರಿ ಯೊಬ್ಬಳ ಸಾಹಸಮಯ ಚಿತ್ರಣ.

೧೮೭೭. ಒನ್ ಮ್ಯಾನ್ ಆರ್ಮಿ

(೧೯೯೮ / ವರ್ಣ / ಸಾಮಾಜಿಕ)
ಲಾ: ಜೆ.ಬಿ.ಫಿಲಂ ಕಾರ್ಪೋರೇಷನ್

ಪ್ರೊ: ಪಿ.ಜನಾರ್ದನ್, ಆರ್.ಕೆ.ಭಗವಾನ್
ನಿ: ಥ್ರಿಲ್ಲರ್ ಮಂಜು
ಸ.ನಿ: ಶಿವಯೋಗಿ, ಎಸ್.ಆರ್.ರಾಮಚಂದ್ರ
ಅ: ಸುಮನ್, ಅವಿನಾಶ್, ಅಭಿಜಿತ್, ಸತ್ಯಪ್ರಕಾಶ್, ಕಸ್ತೂರಿ, ರಕ್ಷಾ, ಗುಲ್ಷನ್ ಗ್ರೋವರ್, ಉಷಾ, ವಿಜಯಕುಮಾರ್, ದಿನೇಶ್, ಎಂ.ಡಿ.ಪ್ರಕಾಶ್ ಗೌಡ, ಲೋಹಿತಾಶ್ವ, ರಾಜಾನಂದ್, ಅಗ್ರೋ ಚಿಕ್ಕಣ್ಣ, ಶನಿ ಮಹದೇವಪ್ಪ
ಕ/ಚಿ.ಕ/ಮಾ: ಥ್ರಿಲ್ಲರ್ ಮಂಜು
ಛಾ: ಪ್ರಸಾದ್ ಬಾಬು
ಕಲೆ: ಸುಂದರಂ
ಸ: ಶ್ಯಾಂ
ನೃ: ಚಿನ್ನಿ-ಪ್ರಕಾಶ್
ಸಾ: ಥ್ರಿಲ್ಲರ್ ಮಂಜು
ಪ್ರ: ಕುಮಾರ್
ಕ.ಸಾ: ದೇಶದ್ರೋಹಿಗಳ ವಿದ್ರೋಹ ಕಾರ್ಯವನ್ನು ದಮನ ಮಾಡಲು, ವಿದ್ರೋಹಿಗಳನ್ನು ಸದೆಬಡಿಯಲು ತಾನೊಬ್ಬನೇ ಏಕ ವ್ಯಕ್ತಿಯ ಸೈನ್ಯವಾದ ನಾಯಕನ ಕಥೆ.

೧೮೭೮. ಸಾರಿ

(೧೯೯೮ / ವರ್ಣ / ಸಾಮಾಜಿಕ)
ಲಾ: ಧನಲಕ್ಷ್ಮಿ ಎಂಟರ್‌ಪ್ರೈಸಸ್
ಪ್ರೊ: ಕನ್ನಡ ಸೋಮು
ನಿ: ಸೀ.ಸುದರ್ಶನ್
ಸ.ನಿ: ಅನಂತಮೂರ್ತಿ
ಅ: ರಘುವರನ್, ಕೌಸಲ್ಯ, ಮಧುಕರ್, ಉಮಾಶ್ರೀ, ಶೋಭರಾಜ್, ಹರೀಶ್ ರಾಯ್, ಲೋಹಿತಾಶ್ವ, ನಂಜುಂಡಯ್ಯ, ಜಿ.ಕೆ.ಗೋವಿಂದರಾವ್, ಜಾನಕಮ್ಮ, ವಿಜಯಲಕ್ಷ್ಮಿ, ಗಾಯತ್ರಿ
ಕ: ಸೀ. ಸುದರ್ಶನ್
ಚಿ.ಕ: ರವಿ ಬೆಳಗೆರೆ, ಸೀ.ಸುದರ್ಶನ್
ಮಾ: ರವಿ ಬೆಳಗೆರೆ
ಸಂ: ಟಿ. ಶಶಿಕುಮಾರ್
ಛಾ: ಪಿ.ಕೆ.ಹೆಚ್.ದಾಸ್
ಕಲೆ: ಮಹೇಶ್ ಬಾಬು
ಸ: ಸಾಧುಕೋಕಿಲ
ಧ್ವ: ಅಣ್ಣಾದೊರೆ, ಪೀಟರ್
ನೃ: ಮದನ್ -ಹರಿಣಿ
ಸಾ: ಕೆ.ಡಿ.ವೆಂಕಟೇಶ್
ವ: ಗಂಡಸಿ ನಾಗರಾಜ್
ಪ್ರ: ಎಡ್ವರ್ಡ್ ಕೇಶ ಲಿಂಗರಾಜ್
ಕ.ಸಾ: ಹುಡುಗಿಯೊಬ್ಬಳನ್ನು ಪ್ರೀತಿಸುವ ತರುಣ. ಆದರ ಆಕೆ ಮತ್ತೊಬ್ಬನನ್ನು ಪ್ರೇಮಿಸುತ್ತಾಳೆ. ತನ್ನ ಮನದಾಸೆಯನ್ನು ಆವಳಿಗೆ ತಿಳಿಸಲು ಪರಿಪರಿಯಾಗಿ ಪ್ರಯತ್ನಿಸುವ ತರುಣ, ಈ ನಿಟ್ಟಿನಲ್ಲಿ ಅವಳ ಸಾವಿಗೆ ಕಾರಣನಾಗುತ್ತಾನೆ. ಕೊಲೆ ಅವನ ಉದ್ದೇಶವಾಗಿರಲಿಲ್ಲವಾದರೂ ಕೊಲೆಯಿಂದ ಮುಕ್ತಿ ಪಡೆಯಲು ಹೆಣಗುತ್ತಾನೆ. ಕಡೆಗೆ ಸಿಕ್ಕಿ ಬೀಳುತ್ತಾನೆ. ಇದು ಕಥೆಯ ಹಂದರ.

೧೮೭೯. ನಿಶ್ಯಬ್ದ

(೧೯೯೮ / ವರ್ಣ / ಪತ್ತೇದಾರಿ)
ಲಾ: ಚಿನ್ನಿ ಫಿಲಂಸ್
ಪ್ರೊ: ಜಯಶ್ರೀದೇವಿ
ನಿ: ದಿನೇಶ್ ಬಾಬು
ಸ.ನಿ: ಸುರೇಶ್ ರಾಜ್
ಅ: ವಿಷ್ಣುವರ್ಧನ್, ರೇವತಿ, ಮೋಹಿನಿ, ಸುಮಂತ್, ನಿಳಲ್‌ಗಳ್ ರವಿ, ಮಾಲತಿ, ಮಾಳವಿಕ, ರಾಮಕೃಷ್ಣ, ಭರತ್, ಆಶಾ, ಪ್ರೇಮಾ, ವೀರೇಂದ್ರಗೌಡ, ಕಾಶಿ, ಸುನಿಲ್ ಪುರಾಣಿಕ್, ಜಿ.ಕೆ.ಭಾರವಿ, ಜಿ.ಕೆ.ಗೋವಿಂದರಾವ್.
ಕ/ಚಿ.ಕ: ದಿನೇಶ್ ಬಾಬು
ಮಾ: ಜಿ.ಕೆ.ಭಾರವಿ
ಗಾ: ಸುಮಾ ಶಾಸ್ತ್ರಿ, ಮಂಗಳಾ, ಶೈಲಜಾ
ಸಂ: ಬಿ.ಎಸ್.ಕೆಂಪರಾಜ್
ಛಾ: ದಿನೇಶ್ ಬಾಬು
ಕಲೆ: ರಮೇಶ್ ಬಾಬು
ಸ: ಸ್ಟೀಫನ್ ಧರ್ಮ
ಧ್ವ: ಕೋದಂಡಪಾಣಿ, ಎಸ್.ಮಹೇಂದ್ರನ್
ಸಾ: ಕಿಂಗ್ ಪಳನಿರಾಜ್
ವ: ಗಂಡಸಿ ನಾಗರಾಜ್
ಪ್ರ: ಕೃಷ್ಣಮೂರ್ತಿ
ಸ್ಟು: ಚಾಮುಂಡೇಶ್ವರಿ, ಪ್ರಸಾದ್
ಕ.ಸಾ: ಮಾದಕ ವಸ್ತುಗಳ ಜಾಲದಲ್ಲಿ ಸಿಲುಕಿಕೊಂಡ ಸೋದರನ ಕೊಲೆಯ ಹಿಂದಿನ ರಹಸ್ಯವನ್ನು ನಿವೃತ್ತ ಮೇಜರ್ ಭೇದಿಸಿ ದುಷ್ಟರನ್ನು ಸಂಹರಿಸುವ ಸಾಹಸಮಯ ಚಿತ್ರ. ನಿವೃತ್ತ ಮೇಜರ್ ಒಬ್ಬ ತನ್ನ ತಮ್ಮ ವಿಜಯ್ ಹಾಗೂ ತಾನು ಸಾಕಿದ ಇಪ್ಪತ್ತು ನಾಯಿಗಳಿಗಾಗಿ ಬದುಕುತ್ತಿರುವವನು. ಪಶುವೈದ್ಯೆ ವಿನೀತಾ ವಿಧವೆ; ನಾಲ್ಕು ವರ್ಷದ ಮಗನ ತಾಯಿ. ಇವನ ಮನೆಯ ಸಮೀಪವಾಸಿ ವಿಜಯ್‌ನ ಕೊಲೆಯಾಗುವುದು. ಮೇಜರ್ ರಹಸ್ಯ ಭೇದಿಸ ಹೊರಟಾಗ ಗೌಡನ ತಮ್ಮನ ಕೊಲೆಯಿಂದ ತನ್ನ ಸೇಡು ತೀರಿಸಿಕೊಳ್ಳುವನು. ಗೌಡ, ತಮ್ಮನ ಕೊಲೆಯ ಹಗೆ ತೀರಿಸಿಕೊಳ್ಳಲು ಏನೆಲ್ಲ ಸಂಕಷ್ಟಗಳನ್ನೊಡ್ಡಿದರೂ ತಾನು ಸಾಕಿದ ನಾಯಿಗಳಿಂದ ಮೇಜರ್ ಗೆಲುವು ಸಾಧಿಸುವನು.

೧೮೮೦. ಅಮರ್ ಅಕ್ಬರ್ ಅಂತೋಣಿ

(೧೯೯೮ / ವರ್ಣ / ಸಾಮಾಜಿಕ)
ಲಾ: ಸಾಯಿಲಕ್ಷ್ಮಿ ಕ್ರಿಯೇಷನ್ಸ್
ಪ್ರೊ: ಎಸ್.ಜಿ.ಆರ್.ಪ್ರಸಾದ್
ನಿ: ಸಾಗರ್
ಸ.ನಿ: ಮಾಧವ್. ಬಿ.ಪಾಲನ್
ಅ: ಥ್ರಿಲ್ಲರ್ ಮಂಜು, ವಿನೋದ್ ಆಳ್ವ, ರಕ್ಷಾ, ಅರುಣ್ ಪಾಂಡ್ಯನ್, ಶಂಕರ್ ಅಶ್ವತ್, ಚಿತ್ರಾಲಿ, ಅಶೋಕರಾವ್
ಕ/ಚಿ.ಕ: ಸಾಗರ್
ಮಾ: ರವಿ ಶ್ರೀವತ್ಸ
ಗಾ: ಸುಜಾತಾ ದತ್, ಸೌಮ್ಯ, ರಾಜೇಶ್
ಸಂ: ಎಸ್.ಪ್ರಸಾದ್
ಛಾ: ಮನೋಹರ್
ಸ: ರಾಜೇಶ್ ರಾಮನಾಥ್
ಧ್ವ: ಅರುಮುದನ್, ಮಹೇಂದ್ರನ್
ನೃ: ಡಿ.ಕೆ.ಎಸ್.ಬಾಬು, ಕೂಲ್ ಜಯಂತ್
ಸಾ: ಥ್ರಿಲ್ಲರ್ ಮಂಜು, ಕೆ.ಡಿ.ವೆಂಕಟೇಶ್, ದಿನೇಶ್
ಹಾ: ೧) 'ಗಂಡು ಗಂಡು...', ೨) 'ಹತ್ತಿರ ಹತ್ತಿರ...', ೩) 'ಕಣ್ಣಿನಲಿ ಕೋಕೋ ಕೋಲಾ...',

೧೮೮೧. ತುತ್ತಾ ಮುತ್ತಾ

(೧೯೯೮ / ವರ್ಣ / ಸಾಮಾಜಿಕ)
ಲಾ: ಶ್ರೀ ರಾಮ್ ಫಿಲಂಸ್ ಇಂಟರ್‌ನ್ಯಾಷನಲ್
ಪ್ರೊ: ಅರ್ಜುನ್ ಸರ್ಜಾ
ನಿ: ಕಿಶೋರ್ ಸರ್ಜಾ
ಸ.ನಿ: ಎಂ.ಎಸ್.ರಮೇಶ್, ಮಹೇಶ್ ಬಾಬು
ಅ: ರಮೇಶ್, ಪ್ರೇಮ, ಕಸ್ತೂರಿ, ಸುಜಾತಾ, ದೊಡ್ಡಣ್ಣ, ಕೃಷ್ಣೇಗೌಡ, ಬಿ.ವಿ.ರಾಧಾ, ಟೆನ್ನಿಸ್ ಕೃಷ್ಣ, ಕೆ.ಎಸ್.ಭಾರತಿ, ಗಿರಿಜಾ ಲೋಕೇಶ್, ನಾಗೇಂದ್ರ ಷಾ, ರಾಜಗೋಪಾಲ್, ಶ್ರೀನಾಥ್
ಕ: ರಿಚರ್ಡ್ ಲೂಯಿಸ್
ಚಿ.ಕ: ಕಿಶೋರ್ ಸರ್ಜಾ
ಮಾ: ರಿಚರ್ಡ್ ಲೂಯೀಸ್
ಗೀ: ಹಂಸಲೇಖ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ, ಸಿ.ಅಶ್ವತ್ಥ್, ಉನ್ನಿಕೃಷ್ಣನ್
ಸಂ: ಕೆ.ಬಾಲು
ಛಾ: ರಮೇಶ್ ಬಾಬು
ಕಲೆ: ನಂಜುಂಡಸ್ವಾಮಿ
ಸ: ಹಂಸಲೇಖ
ಧ್ವ: ಕೋದಂಡಪಾಣಿ
ನೃ: ತಾರಾ, ಸತೀಶ್, ರಾಜಶೇಖರ್, ಕೃಷ್ಣ ರೆಡ್ಡಿ
ವ: ನಾಗರಾಜ್
ಪ್ರ: ಸೆಲ್ವರಾಜ್
ಹಾ: ೧) 'ಬಾಳಿಗೊಬ್ಬ ಬಂಧು...', ೨) 'ಮದನ ಕಾಮರಾಜ...', ೩) 'ತುಸು ಮೆಲ್ಲ ನೀನು...', ೪) 'ಅಂಗ ಅಂಗ ಸೇರಿ...', ೫) 'ಮುತ್ತು ಕೊಡೋಳು...',
ಕ.ಸಾ: ಹೆತ್ತು - ಹೊತ್ತು ಸಾಕಿದ ತಾಯಿ ಹಾಗೂ ಮದುವೆಯಾಗಿ ಮನೆ ತುಂಬಿದ ಮಡದಿ, ಇಬ್ಬರಲ್ಲಿ ಯಾರು ಮೇಲು? - ಎಂಬ ಸಂಘರ್ಷವೇ ಕಥೆಯ ಮೂಲ. ಮೂರನೆಯ ಹೆಣ್ಣಿನಿಂದ ಇವರಿಬ್ಬರ ಹೋರಾಟಕ್ಕೆ ಪೂರ್ಣ ವಿರಾಮ; ಅರಿತು ಬಾಳಿದರೆ ಬದುಕು ಅಮೃತ ಎಂಬ ಸಂದೇಶದೊಂದಿಗೆ ಸುಖಾಂತ.

೧೮೮೨. ಜೈದೇವ್

(೧೯೯೮ / ವರ್ಣ / ಸಾಮಾಜಿಕ)
ಲಾ: ತನು ಚಿತ್ರ



ಪ್ರೊ: ಸಾ.ರಾ.ಗೋವಿಂದು
ನಿ: ಹೆಚ್.ವಾಸು
ಸ.ನಿ: ವೀರೇಶ್, ಗಂಗಾಧರ್
ಅ: ಜಗ್ಗೇಶ್, ಚಾರುಲತಾ, ದೊಡ್ಡಣ್ಣ, ಗುರುದತ್, ಸುಮಿತ್ರಾ, ಶ್ರೀನಾಥ್, ಪ್ರಮೋದಿನಿ, ಪ್ರಮೀಳಾ ಜೋಷಾಯ್, ಹರೀಶ್ ರಾಯ್, ಬಿರಾದಾರ್, ಹೊನ್ನವಳ್ಳಿ ಕೃಷ್ಣ
ಕ: ಹೆಚ್.ಡಿ.ಹಾಷಂ
ಚಿ.ಕ: ಹೆಚ್.ವಾಸು

ಮಾ: ಎಂ.ಡಿ.ಹಾಷಂ
ಗೀ: ಶ್ರೀಚಂದ್ರು, ಶ್ರೀರಂಗ, ಸು. ರುದ್ರಮೂರ್ತಿ ಶಾಸ್ತ್ರಿ. ಶ್ಯಾಮಸುಂದರ ಕುಲಕರ್ಣಿ, ದೊಡ್ಡರಂಗೇಗೌಡ
ಗಾ: ಎಲ್.ಎನ್.ಶಾಸ್ತ್ರಿ, ರಾಜೇಶ್, ಸುರೇಖಾ, ಸೌಮ್ಯ, ಸುಜಾತಾ ದತ್
ಸಂ: ಶ್ಯಾಂ ಯಾದವ್
ಛಾ: ಜಿ.ಜಿ.ಕೃಷ್ಣ
ಕಲೆ: ಸುಂದರಂ
ಸ: ರಾಜೇಶ್ ರಾಮನಾಥ್
ಧ್ವ: ಪ್ರಸಾದ್
ನೃ: ಪ್ರಸಾದ್
ಸಾ: ಕೆ.ಡಿ.ವೆಂಕಟೇಶ್
ವ: ರಮಾನಾಥ್
ಪ್ರ: ಮಾದೇಗೌಡ
ಹಾ: ೧)'ಮಾತು ಕನ್ನಡ ನೀತಿ ಕನ್ನಡ...', ೨)'ಮಿಂಚು ಮಿಂಚು ಜುಂ ಹಾರ್ಟಲಿ..', ೩)'ಅಮ್ಮ ಅಮ್ಮ ನೀನೇ ನನ್ನ ದೇವರು...', ೪)'ಹಲೋ ಹಲೋ ಅಂತು ಲವ್ಲಲಾ...', ೫)'ಬ್ಯೂಟಿ ಬ್ಯೂಟಿ ಬುಲ್ಲಾಕು...'

೧೮೮೩. ತಾಯಿಸಾಹೇಬ

(೧೯೯೮ / ವರ್ಣ / ಸಾಮಾಜಿಕ)
ಲಾ: ಶ್ರೀ ಸೌಂದರ್ಯ ಆರ್ಟ್ಸ್
ಪ್ರೊ: ಜಯಮಾಲಾ ರಾಮಚಂದ್ರ
ನಿ: ಗಿರೀಶ್ ಕಾಸರವಳ್ಳಿ
ಸ.ನಿ: ಪ್ರಕಾಶ್ ರಾಜ್
ಅ: ಜಯಮಾಲಾ, ಸುರೇಶ್ ಹೆಬ್ಳೀಕರ್, ಶಿವರಾಂ, ಹರೀಶ್ ರಾಜು, ಸುಧಾ ಬೆಳವಾಡಿ, ರೇಣುಕಮ್ಮ ಮುರಗೋಡ್
ಕ: ಆರ್.ಎಸ್.ಲೋಕಾಪುರ ಕೃತಿ ಆಧಾರ
ಚಿ.ಕ: ಗಿರೀಶ್ ಕಾಸರವಳ್ಳಿ
ಮಾ: ಗೋಪಾಲ ವಾಗ್ಳೆಕರ್, ಗಿರೀಶ್ ಕಾಸರವಳ್ಳಿ
ಸಂ: ಎಂ.ಎನ್.ಸ್ವಾಮಿ
ಛಾ: ಹೆಚ್.ಎಂ.ರಾಮಚಂದ್ರ ಹಾಲ್ಕೆರೆ
ಕಲೆ: ರಮೇಶ್ ದೇಸಾಯಿ
ಸ: ಐಸಾಕ್ ಥಾಮಸ್ ಕೊಟ್ಟುಕಪಳ್ಳಿ
ಧ್ವ: ಪ್ರಸಾದ್
ವ: ವೈಶಾಲಿ ಕಾಸರವಳ್ಳಿ
ಪ್ರ: ಮಲ್ಲೇಶ್ ಹರ್ತಿ
ವಿ: ೧೯೯೭-೯೮ರ ರಾಜ್ಯ ಪ್ರಶಸ್ತಿ : ಪ್ರಥಮ ಅತ್ಯುತ್ತಮ ಚಿತ್ರ. ಅತ್ಯುತ್ತಮ ನಟಿ (ಜಯಮಾಲಾ), ಅತ್ಯುತ್ತಮ ಪೋಷಕ ನಟ (ಶಿವರಾಂ), ಅತ್ಯುತ್ತಮ ಕಥೆ (ರಂ.ಶಾ), ಅತ್ಯುತ್ತಮ ಛಾಯಾಗ್ರಾಹಕ (ಹೆಚ್. ಎಂ. ರಾಮಚಂದ್ರ), ಅತ್ಯುತ್ತಮ ಕಲಾ ನಿರ್ದೇಶನ (ರಮೇಶ್ ದೇಸಾಯಿ). ೧೯೯೭ರ ಅತ್ಯುತ್ತಮ ಚಿತ್ರಕ್ಕಾಗಿ ಇರುವ 'ಸ್ವರ್ಣ ಕಮಲ' ರಾಷ್ಟ್ರ ಪ್ರಶಸ್ತಿ, ಅತ್ಯುತ್ತಮ ಕಲಾ ನಿರ್ದೇಶಕ (ರಮೇಶ್ ದೇಸಾಯಿ), ಅತ್ಯುತ್ತಮ ವಸ್ತ್ರ ವಿನ್ಯಾಸಕಿ (ವೈಶಾಲಿ ಕಾಸರವಳ್ಳಿ), ನಟನೆಗಾಗಿ ತೀರ್ಪುಗಾರರ ವಿಶೇಷ ಪ್ರಶಸ್ತಿ (ಜಯಮಾಲಾ)
ಕ.ಸಾ: ಸ್ವಾತಂತ್ರ್ಯ ಬಂದ ತರುಣದಲ್ಲಿನ ಸಾಮಾಜಿಕ ಬದಲಾವಣೆಗಳು ತಾಯಿಸಾಹೇಬಳ ವೈಯಕ್ತಿಕ ಪ್ರಪಂಚದಲ್ಲಿ ಮಾಡುವ ಪರಿಣಾಮಗಳ ಚಿತ್ರಣ. ಸಾಮಾಜಿಕವಾಗಿ ಸ್ವಾತಂತ್ರ್ಯ ಹೋರಾಟಗಾರರಾದರೂ ವೈಯಕ್ತಿಕವಾಗಿ ಜಮೀನ್ದಾರಿ ನಿಲುವುಳ್ಳವರು. ಮೊದಲ ಹೆಂಡತಿ ವಿರಕ್ತ. ತಾಯಿಸಾಹೇಬ ಎರಡನೇ ಹೆಂಡತಿ. ಚಂದ್ರಿ 'ಇಟ್ಟುಕೊಂಡ' ಹೆಂಡತಿ. ತಾಯಿಸಾಹೇಬಳ ಬಂಜೆತನ ನೀಗಲು ಸೋದರ ಸಂಬಂಧಿಯ ಮಗನನ್ನು ದತ್ತು ತೆಗೆದುಕೊಳ್ಳುತ್ತಾರ. ತಾಯಿಸಾಹೇಬ ಪ್ರೀತಿಯಿಂದ ಸಾಕುತ್ತಾಳೆ. ಸೋದರ ಸಂಬಂಧ ಮನೆಯ ವ್ಯವಹಾರದಲ್ಲಿ ಮೂಗು ತೂರಿಸತೊಡಗಿದಾಗ ತಾಯಿಸಾಹೇಬ ಮತ್ತು ಚಂದ್ರಿ ಒಂದಾಗುತ್ತಾರ. ಬೆಳೆದ ದತ್ತು ಮಗ ಚಂದ್ರಿಯ ಮಗಳನ್ನೇ ಮದುವೆಯಾಗುವ ನಿರ್ಧಾರ ಮಾಡಿದಾಗ ತಾಯಿಸಾಹೇಬ ದತ್ತಕವನ್ನು ರದು ಮಾಡುತ್ತಾಳೆ. ಸೋದರ ಸಂಬಂಧಿಯಿಂದ ತನಗೆ ತೊಂದರೆಯಾಗಬಹುದೆಂಬ ಅರಿವಿನ ನಲೆಯಲ್ಲಿ ಪೋಲೀಸರಿಗಾಗಿ ಕಾಯುತ್ತಾ ಕೂರುತ್ತಾಳೆ. ಉದಾತ್ತ ಗುಣದ ತ್ಯಾಗಜೀವಿ ಹೆಣ್ಣಿನ ಸುತ್ತ ಹೆಣೆದ ಕಥೆ.

೧೮೮೪. ಅಂಡಮಾನ್

(೧೯೯೮ / ವರ್ಣ / ಸಾಮಾಜಿಕ)
ಲಾ: ಜ್ವಾಲಾಮಾಲಿನಿ ಪ್ರೊಡಕ್ಷನ್ಸ್

ಪ್ರೊ: ಶ್ರೀಮತಿ ಜಿ.ಪದ್ಮಲತಾ
ನಿ: ಪಿ.ಹೆಚ್.ವಿಶ್ವನಾಥ್
ಸ.ನಿ: ಟಿ.ಎನ್.ನಾಗೇಶ್
ಅ: ಶಿವರಾಜ್ ಕುಮಾರ್, ಬೇಬಿ ನಿವೇದಿತ. ಸೋನಿ, ಸುಮಂತ್, ವಿನಯಾ ಪ್ರಸಾದ್, ದತ್ತಾತ್ರೇಯ, ರಮೇಶ್ ಪಂಡಿತ್, ಮಾ|ರಾಮಕೃಷ್ಣ, ಮಲ್ಲಿಕಾರ್ಜುನಯ್ಯ, ಮಾ|ಅಕ್ಷಯ್, ಜಾಲಿ ಬಾಸ್ಟಿನ್, ಎಂ.ಎಸ್.ಎಲ್.ಮೂರ್ತಿ, ಲಿಂಗರಾಜು
ಕ/ಚಿ.ಕ: ಪಿ.ಹೆಚ್.ವಿಶ್ವನಾಥ್
ಮಾ: ವಿ.ನಾರಾಯಣಸ್ವಾಮಿ
ಗೀ: ಹಂಸಲೇಖ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಶಿವರಾಜ್ ಕುಮಾರ್, ಚಿತ್ರಾ, ರಾಜೇಶ್
ಸಂ: ಬಿ. ಎಸ್.ಕಂಪರಾಜ್
ಛಾ: ಪಿ.ರಾಜನ್
ಕಲೆ: ಜಿ.ಮೂರ್ತಿ
ಸ: ಹಂಸಲೇಖ
ಧ್ವ: ಮುರಳಿ, ರಾಯುಸಂ
ನೃ: ಪ್ರಸಾದ್, ಜಯಂತ್, ಮದನ್ ಹರಿಣಿ
ಸಾ: ಜಾಲಿ ಬಾಸ್ಟಿನ್
ವ: ನಿದೇಶ್, ದೊರ
ಪ್ರ: ಸತ್ಯಂ, ಅಂಜಿ, ಕೇಶವ ನಾಗೇಶ
ಸ್ಟ: ಕಂಠೀರವ, ಮಧು ಆರ್ಟ್ಸ್
ಹಾ: ೧)'ಕಾಲಿ ಮೀರಿ ಯಾಕ ಬಂತು...', ೨)'ನಾದ ನಾದ ಪ್ರೇಮನಾದ...', ೩)'ದೂರ ದೂರ...', ೪)'ಅಂಡಮಾನ್ ಅಂಡಮಾನ್...', ೫)'ಓಮಗು ನೀ ನಗು...', ೬)'ನೆನಪು ನೆನಪು...'
ವಿ: ೧೯೯೭-೯೮ರ ರಾಜ್ಯಪ್ರಶಸ್ತಿ, ಅತ್ಯುತ್ತಮ ಬಾಲನಟಿ : (ಬೇಬಿ ನಿವೇದಿತಾ ಶಿವರಾಜಕುಮಾರ್)
ಕ.ಸಾ: ಪ್ರೇಮಿಸಿ ಮದುವೆಯಾದ ಜೋಡಿಯನ್ನು ತನ್ನ ಸ್ವಾರ್ಥಕ್ಕಾಗಿ ದೂರ ಮಾಡುವ ಭಗ್ನಪ್ರೇಮಿ. ದೂರಾದ ಗಂಡ ಹೆಂಡತಿಯನ್ನು ಒಂದು ಮಾಡುವ ಮಂದದ ಕುಡಿ.

೧೮೮೫. ಅಗ್ನಿಸಾಕ್ಷಿ

(೧೯೯೮ / ವರ್ಣ / ಸಾಮಾಜಿಕ)
ಲಾ: ಸಾಯಿ ವಿನಾಯಕ ಫಿಲಂಸ್
ಪ್ರೊ: ಶಿವಮಣಿ, ಎಂ.ಎಸ್.ರಮೇಶ್
ನಿ: ಶಿವಮಣಿ
ಸ.ನಿ: ಸತೀಶ್‌ಚಂದ್ರ

ಅ: ದೇವರಾಜ್, ಮಾಲಾಶ್ರೀ, ಶ್ವೇತಾ, ಎ.ಟಿ.ರಘು, ದೊಡ್ಡಣ್ಣ, ಟೆನ್ನಿಸ್ ಕೃಷ್ಣ, ಪವಿತ್ರಾ ಲೋಕೇಶ್, ರಮೇಶ್ ಭಟ್, ಸರಿಗಮ ವಿಜಿ
ಕ/ಚಿ.ಕ: ಶಿವಮಣಿ
ಮಾ: ಬಿ.ಎ.ಮಧು
ಸಂ: ಸುರೇಶ್ ಅರಸ್
ಛಾ: ಕೃಷ್ಣ ಕುಮಾರ್
ಕಲೆ: ಸುಭಾಷ್ ಕಡಕೋಳ್
ಸ: ಸಾಧುಕೋಕಿಲ
ಧ್ವ: ಕೃಷ್ಣಮೂರ್ತಿ
ಸಾ: ನಂಜುಂಡಿ ನಾಗರಾಜ್
ವ: ನಾಗರಾಜ್
ಪ್ರ: ಮುರಳಿ
ಕ.ಸಾ: ತನ್ನನ್ನು ವಂಚಿಸಿದ ಹೆಂಡತಿಯನ್ನು ಕೊಲ್ಲುವ ಉದ್ದೇಶವಿಲ್ಲದಿದ್ದರೂ ಆಕಸ್ಮಿಕವಾಗಿ ಕೊಲ್ಲುವ ಗಂಡ, ಕೊಲೆಯನ್ನು ಮುಚ್ಚಿಡಲು ಪ್ರಯತ್ನಿಸಿತ್ತಾನೆ. ಅವನ ನಾಟಕಕ್ಕೆ ಪ್ರತಿ ನಾಟಕವನ್ನಾಡಿ ಪೋಲೀಸ್ ಅಧಿಕಾರಿಗಳು ಕೊಲೆಯ ರಹಸ್ಯವನ್ನು ಬಯಲು ಮಾಡುತ್ತಾರ.

೧೮೮೬. ಅರ್ಜುನ್ ಅಭಿಮನ್ಯು

(೧೯೯೮ / ವರ್ಣ / ಸಾಮಾಜಿಕ)
ಲಾ: ಧನಲಕ್ಷ್ಮೀ ಪ್ರೊಡಕ್ಷನ್ಸ್
ಪ್ರೊ: ಎನ್.ಕುಮಾರ್

ನಿ: ಪ್ರಭಾಕರ್
ಅ: ಜಗ್ಗೇಶ್. ಪ್ರಭಾಕರ್, ಪಾಯಲ್ ಮಲ್ಹೋತ್ರಾ, ಶ್ರೀಕನ್ಯಾ. ಅವಿನಾಶ್, ಸತ್ಯಜಿತ್, ಸರಿಗಮ ವಿಜಿ
ಕ/ಚಿ.ಕ: ಪ್ರಭಾಕರ್
ಮಾ: ಜೋ ಸೈಮನ್
ಗಾ: ಮನು, ಬಿ.ಆರ್.ಛಾಯಾ, ಮಂಜುಳಾ ಗುರುರಾಜ್

ಛಾ: ರಮೇಶ್ ಬಾಬು
ಸ: ರಾಜನ್ - ನಾಗೇಂದ್ರ
ಹಾ: ೧)'ಆ, ಆಹಾ, ಈ ರೂಪ...', ೨)'ಸತ್ಯಕ್ಕೆ ಸಾವಿಲ್ಲ...', ೩)'ಒಲವಿನ ಗುಡಿಯಲಿ...', ೪)'ಕಾರು ಮೇಲೆ ಕಾರುಬಾರು...', ೫)'ಒಲವಿನ ಗುಡಿಯಲಿ...'.

೧೮೮೭. ಯಾರೇ ನೀನು ಚೆಲುವೆ

(೧೯೯೮ / ವರ್ಣ / ಸಾಮಾಜಿಕ)
ಲಾ: ರಾಕ್‌ಲೈನ್ ಪ್ರೊಡಕ್ಷನ್ಸ್
ಪ್ರೊ: ರಾಕ್‌ಲೈನ್ ವೆಂಕಟೇಶ್
ನಿ: ಡಿ.ರಾಜೇಂದ್ರಬಾಬು
ಸ.ನಿ: ಕಿಟ್ಟಿ ರಂಗಮಂಚ, ಸೋಮ್‌ರಾಜ್
ಅ: ರವಿಚಂದ್ರನ್, ಸಂಗೀತಾ, ವಿಷ್ಣುವರ್ಧನ್, ರಮೇಶ್, ಜಗ್ಗೇಶ್, ಪ್ರಕಾಶ್ ರೈ, ಹೀರಾ, ತಾರಾ, ದೊಡ್ಡಣ್ಣ, ರೂಪಾ ಅಯ್ಯರ್, ಸಾಧುಕೋಕಿಲ, ಜ್ಯೋತಿ
ಕ/ಚಿ.ಕ/ಮಾ: ಡಿ.ರಾಜೇಂದ್ರಬಾಬು
ಗೀ: ಹಂಸಲೇಖ
ಗಾ: ಚಿತ್ರಾ, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಬಿ.ಜಯಶ್ರೀ, ಪೀಟರ್ ಸುರೇಶ್, ಅನುರಾಧಾ ಶ್ರೀರಾಮ್, ಶ್ರೀನಿವಾಸನ್, ಶಂಕರ್ ಶಾನುಭಾಗ್
ಸಂ: ಶಶಿಕುಮಾರ್
ಛಾ: ಡಿ.ವಿ.ರಾಜಾರಾಂ
ಕಲೆ: ಇಸ್ಮಾಯಿಲ್, ಸುಂದರಂ
ಸ: ಹಂಸಲೇಖ
ಧ್ವ: ಪ್ರಸಾದ್
ನೃ: ಸಂಪತ್ ರಾಜ್
ಸಾ: ಕನಲ್ ಕಣ್ಣನ್
ಹಾ: ೧)'ಚಕ್ಕೋತ ಚಕ್ಕೋತ...', ೨)'ಪ್ರಿಯಾ ಪ್ಲೀಸ್ ಲವ್ ಮಿ ಪ್ರಿಯಾ...', ೩)'ಚಿಂತೆಯಾಕೆ ಮಾಡುತಿಯೋ ಗೆಳೆಯ...', ೪)'ಕುಶಲವೇ, ಕ್ಷೇಮವೇ, ಸೌಖ್ಯವೇ...', ೫)'ದಯಾನಾ ನಾನೇ ದಯಾನಾ...', ೬)'ಬುಲ್‌ಬುಲ್ ಕಿ ಗಿಲ್‌ಗಿಲ್ ಕಿ...',
ಕ.ಸಾ: ಪರಸ್ಪರ ಒಬ್ಬರನ್ನೊಬ್ಬರು ನೋಡದಿದ್ದರೂ ಪತ್ರ ಮುಖೇನ ಪ್ರೀತಿಸುವ ಎರಡು ಹೃದಯಗಳು. ಒಬ್ಬರನ್ನೊಬ್ಬರು ಸಂಧಿಸಲು ಎಷ್ಟು ಬಾರಿ ಪ್ರಯತ್ನಿಸಿದರೂ ಸಂದರ್ಭಗಳು ಅನುಕೂಲಕರವಾಗಿರುವುದಿಲ್ಲ. ನಾಕಷ್ಟು ಹೃದಯಂಗಮ ಘಟನೆಗಳ ನಂತರ ಯಾರೇ ನೀನು ಚೆಲುವೆ ಎಂದು ಕೇಳುತ್ತಲಿದ್ದ ನಾಯಕನೊಂದಿಗೆ ನಾಯಕಿಯ ಭೇಟಿಯಾಗಿ, ಇಬ್ಬರೂ ಪರಸ್ಪರ ಒಂದಾಗುತ್ತಾರೆ.

೧೮೮೮. ಅವಳ ಚರಿತ್ರೆ

(೧೯೯೮ / ವರ್ಣ / ಸಾಮಾಜಿಕ)
ಲಾ: ವಾಸುಕಿ ಫಿಲಂಸ್



ಪ್ರೊ: ಸುಭಾಷ್ ಉಪೇಂದ್ರ ರೇವಣಕರ್
ನಿ: ವೇಮಗಲ್ ಜಗನ್ನಾಥರಾವ್
ಸ.ನಿ: ಬಿ.ಜಿ.ರಾಮಮೂರ್ತಿ, ಲಿಂಗರಾಜ್
ಅ: ರಾಜಾಶಂಕರ್, ಅಭಿನಯ, ರಮೇಶ್, ಶ್ಯಾಂ ಸುಂದರ್, ನಾಗೇಶ್ ಕಶ್ಯಪ್, ಎನ್.ಎಸ್.ರಾವ್, ಡಿಂಗ್ರಿ ನಾಗರಾಜ್, ಉಮೇಶ್, ನಾಗೇಂದ್ರ ಪ್ರಸಾದ್, ಮಾ|ಭರತ್ ರಾಜ್, ಮಂಜುಮಾಲಿನಿ
ಕ/ಚಿ.ಕ: ವೇಮಗಲ್ ಜಗನ್ನಾಥರಾವ್
ಮಾ: ಎನ್.ಎಸ್.ರಾವ್
ಗೀ: ದೊಡ್ಡರಂಗೇಗೌಡ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಜೇಸುದಾಸ್, ವಾಣಿ ಜಯರಾಂ
ಸಂ: ಬಿ.ಎಸ್.ಮಣಿ
ಛಾ: ವಿ.ಅಣ್ಣಯ್ಯ
ಕಲೆ: ಮುಕ್ತಿಯಾರ್ ಜೀ
ಸ: ವಿಜಯ ಭಾಸ್ಕರ್
ಧ್ವ: ಪ್ರಸಾದ್, ದಶರಥ್
ನೃ: ಜೀವ ಪೌಲ್‌ರಾಜ್
ಸಾ: ರುದ್ರೇಶ್
ವ: ವಿಠಲ್ ರಾವ್
ಪ್ರ: ಕೆ.ಶ್ಯಾಂ
ಸ್ಟು: ಕಂಠೀರವ, ಪ್ರಸಾದ್
ಸೆ: ರೀಲು - ೧೪. 'ಯು' ಸರ್ಟಿಫಿಕೇಟ್, ಉದ - ೩೯೨೮.೩೧
ಕ.ಸಾ: ಹೆಣ್ಣೊಬ್ಬಳನ್ನು ಪ್ರೀತಿಸುವ ಮೂವರು ಯುವಕರು. ಆದರೆ ಆಕೆ ಪ್ರೀತಿಸುವುದು ಒಬ್ಬನನ್ನು. ಕಾರಣಾಂತರದಿಂದ ಆಕೆಗೆ ಯಾವ ಯುವಕನ ಪ್ರೀತಿಯೂ ದೊರೆಯುವುದಿಲ್ಲ. ವಿಚಿತ್ರ ಸಂದರ್ಭಗಳು ಆಕೆಯ ಮಾನಸಿಕ ಸ್ಥಿತಿಯನ್ನು ಕದಡುತ್ತವೆ.

೧೮೮೯. ಇನ್ನೊಂದು ಮುಖ

(೧೯೯೮ / ವರ್ಣ / ಮಕ್ಕಳ ಚಿತ್ರ)
ಲಾ: ಎಸ್.ಸಿ.ವೈ.ವಿ. ಪ್ರೊಡಕ್ಷನ್ಸ್
ಪ್ರೊ: ಟಿ.ಎಸ್.ನರಸಿಂಹನ್
ನಿ: ವಾದಿರಾಜ್
ಅ: ಪವಿತ್ರಾ ಲೋಕೇಶ್, ಪ್ರಶಾಂತ ಹಿರೇಮಠ, ಮಾ|ವಿಶ್ವಾಸ್, ಮಾ|ಸುಖೇಶ್, ಕು|ಸುಚೇತಾ, ಪದ್ಮಾ ಕುಮುಟಾ, ಮೈಕೋ ಚಂದ್ರು
ಕ: ಡಾ| ಹೆಚ್.ಎಸ್.ವೆಂಕಟೇಶ ಮೂರ್ತಿ ಅವರ 'ಯಾರಿವಳು ?' ನಾಟಕ
ಚಿ.ಕ: ವಾದಿರಾಜ್
ಮಾ/ಗೀ: ಹೆಚ್.ಎಸ್.ವೆಂಕಟೇಶ ಮೂರ್ತಿ
ಸಂ: ಸುರೇಶ್ ಅರಸ್
ಛಾ: ಎಸ್.ರಾಮಚಂದ್ರ
ಸ: ವಿಜಯಭಾಸ್ಕರ್
ಕ.ಸಾ: ಒಂದು ಅಪರಾಧದ ಸುತ್ತ ಹೆಣೆದ ಕಥೆ. ಒಬ್ಬ ಬಾಲಕನ ಮೂಲಕ ಕುತೂಹಲ ಕೆರಳಿಸುತ್ತಾ ಬಿಡಿಸಿಕೊಳ್ಳುತ್ತಾ ಹೋಗುವುದು.

೧೮೯೦. ಸ್ವಸ್ತಿಕ್

(೧೯೯೮ / ವರ್ಣ / ಸಾಮಾಜಿಕ)
ಲಾ: ಪೂರ್ಣಿಮಾ ಎಂಟರ್‌ಪ್ರೈಸಸ್
ಪ್ರೊ: ಪಾರ್ವತಮ್ಮ ರಾಜಕುಮಾರ್
ನಿ: ಉಪೇಂದ್ರ
ಸ.ನಿ: ರಾಜಾರಾಂ, ಶ್ರೀರಾಜ್, ನಾಗಪ್ಪ ಜೋಷಿ
ಅ: ರಾಘವೇಂದ್ರ ರಾಜಕುಮಾರ್, ವಿಜಯಲಕ್ಷ್ಮಿ, ಹೊನ್ನವಳ್ಳಿ ಕೃಷ್ಣ, ಶ್ರೀನಾಥ್, ವಾಣಿಶ್ರೀ, ಶ್ರೀದುರ್ಗಾ, ಪಾಪಮ್ಮ, ದಿಲೀಪ್, ಹುಲಿವಾನ್ ಗಂಗಾಧರಯ್ಯ, ರಾಧಾ ರಾಮಚಂದ್ರ, ರಾಮಮೂರ್ತಿ, ನೀಗ್ರೋ ಜಾನಿ, ಅಶ್ವತ್ಥ ನಾರಾಯಣ
ಕ/ಚಿ.ಕ: ಉಪೇಂದ್ರ
ಮಾ: ದಿಲೀಪ್
ಗೀ: ವಿ.ಮನೋಹರ್, ಉಪೇಂದ್ರ, ನಂದಕುಮಾರ್
ಗಾ: ರಾಜಕುಮಾರ್, ರಾಘವೇಂದ್ರ ರಾಜಕುಮಾರ್, ಚಿತ್ರಾ, ರಾಜೇಶ್ ಕೃಷ್ಣ, ಸುಮಾ ಶಾಸ್ತ್ರಿ, ಉಪೇಂದ್ರ, ಶಂಕರ್ ಶಾನುಭಾಗ್
ಸಂ: ಶಶಿಕುಮಾರ್
ಛಾ: ಬಿ.ಸಿ.ಗೌರಿಶಂಕರ್
ಕಲೆ: ಇಸ್ಮಾಯಿಲ್
ಸ: ವಿ.ಮನೋಹರ್
ಧ್ವ: ಚಾಮುಂಡೇಶ್ವರಿ,
ನೃ: ಪ್ರಸಾದ್
ಸಾ: ನೀಗ್ರೋ ಜಾನಿ
ಸ್ಟು: ಚಾಮುಂಡೇಶ್ವರಿ
ಹಾ: ೧)'ಎದೇಳೋ ಹುಡುಗಾ ಯುದ್ಧಕೆ ನೀನಿಗ ...', ೨)'ಗೋಲ್ಡ್ ಕಲರ್ ಚಿಟ್ಟೆಗಳೆಲ್ಲಾ...', ೩)'ಮಿಂಚು ಹುಳ ಮಿಂಚುಬಿಡು...', ೪)'ಇದು ಪಳೇಳು ಜನುಮದ ಲವ್...', ೫)'ಜೇ ಜೇ ಕ್ಯಾ ಜೇ ಕಣ್ಣ ನೋಟ ಸೂಜಿ ಸೈಕಾಲಜಿ...',
ಕ.ಸಾ: ಮುಗ್ಧನೊಬ್ಬ ತನಗೆ ಗೊತ್ತಿಲ್ಲದಂತೆ ಭಯೋತ್ಪಾದಕರ ಜಾಲಕ್ಕೆ ಸಿಲುಕಿಕೊಂಡು ಕೆಲವು ಉಗ್ರಗಾಮಿ ಚಟುವಟಿಕೆಗಳಲ್ಲಿ ಪಾಲುದಾರನಾಗಿರುತ್ತಾನೆ. ಅವನ ಪ್ರೇಯಸಿಯೇ ಉಗ್ರಗಾಮಿಗಳಿಗೆ ಬಲಿಯಾದಾಗ ಆತನಿಗೆ ಜ್ಞಾನೋದಯವಾಗಿ ಅವರ ಹಿಡಿತದಿಂದ ಹೊರಬರುತ್ತಾನೆ. ಅವರೆಲ್ಲರೂ ಕಾನೂನಿನ ಕಕ್ಷೆಯೊಳಗೆ ಬರುವಂತೆ ಮಾಡುತ್ತಾನೆ.

೧೮೯೧. ಓ ಗಂಡಸರೇ ನೀವೆಷ್ಟು ಒಳ್ಳೆಯವರು ?

(೧೯೯೮ / ವರ್ಣ / ಸಾಮಾಜಿಕ)
ಲಾ: ಜನಪ್ರಿಯ ಮೂವೀ ಮೇಕರ್ಸ್
ಪ್ರೊ: ಹೆಚ್.ಬಿ.ಧರ್ಮರಾಜ್, ಎಂ.ಶೇಷನ್, ಕೆ.ಮಹಮೂದ್, ಕಿಷನ್ ಚಂದ್
ನಿ: ಕೆ.ವಿ.ರಾಜು
ಸ.ನಿ: ಎಂ.ಎಸ್.ರಮೇಶ್, ಎಂ.ರುದ್ರೇಶ್
ಅ: ರಮೇಶ್, ಸುಮನ್ ರಂಗನಾಥ್, ಕುಮಾರ್ ಗೋವಿಂದ್, ಅವಿನಾಶ್, ತಾರಾ
ಕ/ಚಿ.ಕ/ಮಾ: ಕೆ.ವಿ.ರಾಜು
ಸಂ: ಶ್ಯಾಂ
ಛಾ: ಮಲ್ಲಿಕಾರ್ಜುನ
ಕಲೆ: ಸುಂದರಂ
ಸ: ವಿ.ಮನೋಹರ್
ನೃ: ಸತೀಶ್, ಕಮಲ
ಸಾ: ಗೋವಿಂದ
ಹಾ: ೧)'ಕುಹೂ ಕುಹೂ ರಾಗದಲ್ಲಿ...', ೨)'ಐ ಲವ್ ಯು, ಯೂ ಲವ್ ಮೀ...', ೩)'ಓ ಗಂಡಸರೇ...', ೪)'ನುಡಿಗಳು ಬರೆದಿಹ...', ೫)'ಗಿಣಿಯ ಹಸುರಿನ ಗೆಳತಿ...',

ಕ.ಸಾ: ಸ್ವೇಚ್ಛಾಚಾರವೇ ಆಧುನಿಕ ಜೀವನ ಎಂದು ತಿಳಿದ ಯುವತಿ. ಈ ದಿಶೆಯಲ್ಲಿ ಗಂಡೊಬ್ಬನಿಂದ ಮೋಸಕ್ಕೊಳಗಾಗುತ್ತಾಳೆ. ಆದರೆ ಗಂಡನಾದ ವ್ಯಕ್ತಿ ಆಕೆಯನ್ನು ಕೈ ಬಿಡುವುದಿಲ್ಲ. ಪ್ರಪಂಚದಲ್ಲಿ ಒಳ್ಳೆಯದು ಹಾಗೂ ಕೆಟ್ಟದು ಎರಡೂ ಒಂದೇ ನಾಣ್ಯದ ಎರಡು ಮುಖವಂತಿರುತ್ತವೆ, ಎಂಬುದನ್ನು ಚಿತ್ರಿಸಲಾಗಿದೆ.

೧೮೯೨. ಮೈಡಿಯರ್ ಟೈಗರ್

(೧೯೯೮ / ವರ್ಣ / ಸಾಮಾಜಿಕ)
ಲಾ: ಶ್ರೀ ಸೌಂದರ್ಯ ಆರ್ಟ್ಸ್
ಪ್ರೊ/ನಿ: ಪ್ರಭಾಕರ್
ಸ.ನಿ: ಶ್ರೀಕಾಂತ್ ಕುಲಕರ್ಣಿ



ಅ: ಪ್ರಭಾಕರ್, ಶ್ರೀನಾಥ್, ಸತ್ಯಪ್ರಿಯಾ, ಪ್ರಮೋದ್ ಚಕ್ರವರ್ತಿ, ಸತ್ಯಜಿತ್, ರಾಮಕೃಷ್ಣ, ಸುಂದರರಾಜ್, ಪ್ರಮೀಳಾ ಜೋಷಾಯ್, ಜೋ ಸೈಮನ್, ಪ್ರಿಯಾ, ಅಪೂರ್ವ
ಕ/ಚಿ.ಕ: ಪ್ರಭಾಕರ್
ಮಾ: ಜೋ ಸೈಮನ್
ಗೀ: ಗೀತಪ್ರಿಯ, ಕಲ್ಯಾಣ್, ಜೋ ಸೈಮನ್
ಗಾ: ಚಂದ್ರಿಕಾ ಗುರುರಾಜ್, ಎಲ್.ಎನ್.ಶಾಸ್ತ್ರಿ, ವಾಣಿ ಹರೀಶ್, ಮಂಜುಳಾ ಗುರುರಾಜ್, ಬಿ.ಆರ್.ಛಾಯಾ
ಸಂ: ವಿಕ್ಟರ್ ಯಾದವ್
ಛಾ: ಮಲ್ಲಿಕಾರ್ಜುನ
ಸ: ಪ್ರಭಾಕರ್
ಧ್ವ: ಪ್ರಸಾದ್
ನೃ: ಸತೀಶ್
ಸಾ: ಟೈಗರ್ ಮಧು, ಟೈಗರ್ ಆನಂದ್
ವ: ಮುತ್ತು
ಪ್ರ: ರಾಮಸ್ವಾಮಿ
ಹಾ: ೧) 'ಮರೆಯದಿರು ಈ ಹೃದಯ...', ೨) 'ಮೊದಲನೆ ರಾತ್ರಿಯಲೂ, ದಿನ ನೀನು...', ೩) 'ಓ ಮನವೇ ಬೆಳಗಿತು...', ೪) 'ಓ ಪ್ಯಾರಿ ಲೈಲಾ...', ೫) 'ಲೋಕಾನ ನೆಚ್ಚಿಕೊಂಡ...'
ಕ.ಸಾ: ಸಮಾಜದಲ್ಲಿನ ಗೋಮುಖ ವ್ಯಾಘ್ರಗಳಿಂದ ಶೋಷಣೆಗೊಳಗಾದ ಹೆಣ್ಣು ತನ್ನದೇ ಆದ ರೀತಿಯಲ್ಲಿ ಮೇಲೆ ಬರುತ್ತಾಳೆ, ಗಣ್ಯಳೆನಿಸುತ್ತಾಳೆ. ಅವಳಿಂದ ದೂರವಾದ ಮಗ ಅವಳೆದುರಿಗೆ ಇದರೂ ಮಗನೆಂದು ಆದರಿಸಲಾಗುವುದಿಲ್ಲ. ತಾಯಿ - ಮಗ ಹಲವಾರು ಬಾರಿ ಮುಖಾಮುಖಿಯಾಗುವ ಸಂದರ್ಭ.. ಕಡೆಗೂ ತಾಯಿ ಮಗ ಒಂದಾಗುತ್ತಾರೆ.

೧೮೯೩. ರಾಜೀವಪ್ಪ

(೧೯೯೮ / ವರ್ಣ / ಸಾಮಾಜಿಕ)
ಲಾ: ಲಕ್ಷ್ಮೀ ನರಸಿಂಹ ಕ್ರಿಯೇಷನ್ಸ್
ಪ್ರೊ: ಜಯಸಿಂಹ ಮುಸುರಿ, ಗುರುದತ್ ಮುಸುರಿ
ನಿ: ಜಯಸಿಂಹ ಮುಸುರಿ
ಅ: ಗುರುದತ್, ವಿನಾಯಿ, ಕಮಲಾಶ್ರೀ, ಆಗ್ರೋ ಚಿಕ್ಕಣ್ಣ, ನಾಗೇಶ್

ಮಯ್ಯ, ಅಂಜಲಿ, ಕೆ.ಎನ್.ಭಾರತಿ, ದಯಾನಂದ, ಜಯಸಿಂಹ ಮುಸುರಿ
ಕ: ಬಿ.ಎಲ್.ಸುರೇಶ್
ಚಿ.ಕ: ಜಯಸಿಂಹ ಮುಸುರಿ, ಬಿ.ಎಲ್.ಸುರೇಶ್
ಮಾ: ಬಿ.ಎಲ್.ಸುರೇಶ್
ಗೀ: ಕಲ್ಯಾಣ್, ಎಂ.ಎನ್.ವ್ಯಾಸರಾವ್, ಶಾ.ಮ.ಸುಂದರ ಕುಲಕರ್ಣಿ
ಸಂ: ಕೆ.ನರಸಯ್ಯ
ಛಾ: ಮನೋಹರ್
ಸ: ಮೈಸೂರು ಗೋಪಿ
ನೃ: ಡ್ಯಾನ್ಸ್ ಕಿಟ್ಟಿ
ಪ್ರ: ನಾಗರಾಜ್
ಸ್ಥಿ: ಪ್ರಸಾದ್
ಕ.ಸಾ: ಹಳ್ಳಿಯ ಗೌಡನ ದ್ವಿತೀಯ ಪುತ್ರ ರಾಜೀವಪ ವೈದ್ಯನೋ - ಇಂಜಿನಿಯರೋ ಆಗಬೇಕು ಎಂಬುದು ತಂದೆಯ ಇಚ್ಛೆ. ಆದರೆ ಗ್ರಾಮೀಣ ಬದುಕಿನತ್ತ ಒಲವಿದ ರಾಜೀವಪ್ಪ ಹಳ್ಳಿಗೆ ಮರಳಿದ. ಗ್ರಾಮೀಣರು ತನ್ನ ತಂದೆಯಿಂದ ವಿಪರೀತ ಬಡ್ಡಿಗೆ ಸಾಲ ಪಡೆಯುವುದನ್ನು ತಪ್ಪಿಸಿ ಬ್ಯಾಂಕಿನಿಂದ ಸಾಲ ಕೊಡಿಸಿದ. ಅಣ್ಣನ ರೇಷನ್ ಅಂಗಡಿಯ ಮಾಲು ಹಳ್ಳಿಗರಿಗೆ ಸಿಕ್ಕುವಂತಾಗಿಸಿದ. ವಿರೋಧಿಯ ಮಗಳನ್ನು ಮದುವೆಯಾದ. ತಂದೆ ಆ ಮಗನನ್ನು ಮನೆಯಿಂದ ಹೊರಗಟ್ಟಿದ. ರಾಜೀವಪ್ಪನ ಪ್ರಗತಿ ತಡೆಯಲು ಸಾಧ್ಯವಾಗಲಿಲ್ಲ. ರಾಜೀವಪ್ಪ ತಂದೆಯಾಗುವುದನ್ನರಿತ ಅಣ್ಣ ಅತ್ತಿಗೆ ತಮಗೆ ಮಕ್ಕಳಿಲ್ಲದ್ದರಿಂದ ಆಸ್ತಿ ತಮ್ಮನಿಗೆ ಹೋಗುವುದೆಂದು ತಮ್ಮನ ಹೆಂಡತಿಯನ್ನು ಕೊಲೆಗೆತ್ನಿಸಿದಾಗ, ಅಣ್ಣನೇ ನೀರಿನಲ್ಲಿ ಕೊಚ್ಚಿ ಹೋಗುವಂತಾಗಿ ತಮ್ಮನೇ ಉಳಿಸಿದ. ಮಗು ಹುಟ್ಟಿದಾಗ ಒಡೆದ ಮನಸ್ಸುಗಳು ಒಂದಾದವು.

೧೮೯೪. ಸಿಂಹದ ಗುರಿ

(೧೯೯೮ / ವರ್ಣ / ಸಾಮಾಜಿಕ)
ಲಾ: ಕಲ್ಯಾಣಿ ಎಂಟರ್‌ಪ್ರೈಸಸ್
ಪ್ರೊ: ಕೆ.ರಾಘವ ರಾವ್
ನಿ: ಯು.ನಾರಾಯಣ ರಾವ್
ಸ.ನಿ: ಪಿ.ಲಿಂಗರಾಜ ಕಗ್ಗಾಲ್
ಅ: ವಿಷ್ಣುವರ್ಧನ್, ಚಾರುಲತಾ, ಚಕ್ರವರ್ತಿ, ಸಿಳಲ್‌ಗಳ್ ರವಿ, ಲಕ್ಷ್ಮಣ್, ಶೋಭರಾಜ್, ಟೆನ್ನಿಸ್ ಕೃಷ್ಣ, ಅಜಿಲ್, ನಾಗಮಂಗಲ ಕಿಟ್ಟಿ, ಕರಿಬಸವಯ್ಯ, ಸತ್ಯಜಿತ್, ಬ್ಯಾಂಕ್ ಜನಾರ್ದನ್, ಎಂ.ಎಸ್.ಕಾರಂತ್, ಕೃಷ್ಣೇಗೌಡ, ಎಂ.ಎನ್.ಲಕ್ಷ್ಮೀ ದೇವಿ, ವಾಸುದೇವರಾವ್, ಶಶಿಕಿರಣ್, ಅಂಜನಪ್ಪ, ಜ್ಯೋತಿ, ರಾಧಾ ರಾಮಚಂದ್ರ, ಮಾ।ಸಂತೋಷ್
ಕ/ಚಿ.ಕ: ಯು. ನಾರಾಯಣ್ ರಾವ್
ಮಾ: ರವಿ ಶ್ರೀವತ್ಸ
ಗೀ: ಆರ್.ಎನ್.ಜಯಗೋಪಾಲ್, ಕೆ.ಕಲ್ಯಾಣ್
ಗಾ: ಮಂಜುಳಾ ಗುರುರಾಜ್, ರಾಜೇಶ್, ಸುನೀತಾ, ಸೌಮ್ಯ
ಸಂ: ಕೆ.ನರಸಯ್ಯ
ಛಾ: ರಾಜೇಂದ್ರ ಪ್ರಸಾದ್
ಸ: ಶಿವಾ
ನೃ: ಲಾರೆನ್ಸ್, ಜಯಂತ್
ಸಾ: ದಿನೇಶ್
ಹಾ: ೧) 'ಹಾಲಂತ ಸ್ನೇಹ...', ೨) 'ಬಂತೋ ಕಾಮನಬಿಲ್ಲು...'. ೩) 'ಚೆಂದುಳ್ಳಿ ಮ್ಯಾನಾ ಹಾಕು ಹೆಜ್ಜೆನಾ...', ೪) 'ನನ್ನದೆ ಗೂಡಿನ ಮೈನಾ...'. ೫) 'ನನ್ನ ಸೊಗಸಿಗೆ ಹಾಕು ಓಟು...',
ಕ.ಸಾ: ಸಮಾಜ ವಿರೋಧಿಗಳಿಂದ ಹತ್ಯೆಗೀಡಾದ ಗೆಳೆಯನ ಸಾವಿಗೆ ಪ್ರತಿ ಸೇಡನ್ನು ತೀರಿಸಿಕೊಳ್ಳುವ ದಕ್ಷ ಪೋಲೀಸ್ ಅಧಿಕಾರಿಯೊಬ್ಬನ ಸುತ್ತ ಹೆಣೆದ ಕಥೆ.

೧೮೯೫. ದೋಣಿ ಸಾಗಲಿ

(೧೯೯೮ / ವರ್ಣ / ಸಾಮಾಜಿಕ)
ಲಾ: ಅಂಜನ್ ಆರ್ಟ್ಸ್
ಪ್ರೊ: ಹೆಚ್.ಎನ್.ಮಾರುತಿ, ಎನ್.ಎಂ. ಮಧುಸೂದನ ಗೌಡ
ನಿ: ಎಸ್.ವಿ.ರಾಜೇಂದ್ರಸಿಂಗ್ ಬಾಬು
ಸ.ನಿ: ಕಿಟ್ಟಿ ರಂಗಮಂಚ
ಅ: ಗಿರೀಶ್ ಶೆಟ್ಟಿ, ಶಶಿಕುಮಾರ್, ಶಂಕರ್ ಅಶ್ವತ್, ಪ್ರಸಾದ್, ಟಿ.ಕೃಷ್ಣ, ರಾಜನ್, ಸೌಂದರ್ಯ, ಸುಮನ್ ನಗರಕರ್, ಸುನಂದಾ, ಶಾಂತಮ್ಮ, ಗಾಯತ್ರಿ ಪ್ರಭಾಕರ್
ಕ: ಸಿ.ಎನ್.ಮುಕ್ತಾ 'ವಿಮುಕ್ತೆ' ಕಾದಂಬರಿ ಆಧಾರ
ಚಿ.ಕ: ಎಸ್.ವಿ.ರಾಜೇಂದ್ರಸಿಂಗ್ ಬಾಬು
ಮಾ: ಸುರೇಂದ್ರನಾಥ್
ಗೀ: ವಿ.ಮನೋಹರ್
ಗಾ: ಚಿತ್ರಾ, ಎಸ್.ಪಿ.ಬಾಲಸುಬ್ರಹ್ಮಣ್ಯಂ, ರಾಜೇಶ್, ರಮೇಶ್ ಚಂದ್ರ
ಸಂ: ಬಸವರಾಜ್ ಅರಸ್ (ಶಿವು)
ಛಾ: ಡಿ.ವಿ.ರಾಜಾರಾಮ್
ಸ: ವಿ.ಮನೋಹರ್
ನೃ: ಪ್ರಸಾದ್
ಹಾ: ೧) 'ನಕ್ಷತ್ರವೇ ನಕ್ಷತ್ರವೇ...', ೨) 'ಓಹೋ ಚಿಗುರಿತು...', ೩) 'ಆ ನಿವಿರದೆ...', ೪) 'ಸ್ವರದ ಸಂಗಮ...', ೫) 'ಗುಲ್ ಮೋಹರ್...',
ವಿ: ೧೯೯೭-೯೮ರ ರಾಜ್ಯ ಪ್ರಶಸ್ತಿ : ತೃತೀಯ ಅತ್ಯುತ್ತಮ ಚಿತ್ರ. ಅತ್ಯುತ್ತಮ ನಟಿ (ಸೌಂದರ್ಯ) ಅತ್ಯುತ್ತಮ ಛಾಯಾಗ್ರಾಹಕ (ಡಿ.ವಿ.ರಾಜಾರಾಂ)
ಕ.ಸಾ: ಪ್ರೇಮಿಸಿ ಮದುವೆಯಾದ ಜೋಡಿಗಳು. ಗಂಡನಿಗೆ ನೌಕರಿಯಿಲ್ಲವಾಗ ಹೆಂಡತಿ ಕೆಲಸಕ್ಕೆ ಹೋಗಬೇಕಾದ ಅನಿವಾರ್ಯತೆ. ಬಾಸ್ ಆಕೆಯನ್ನು ಮನಸ್ಸಿನಲ್ಲೇ ಆರಾಧಿಸುವ ವ್ಯಕ್ತಿ. ಗಂಡನಿಗೆ ಅವರಿಬ್ಬರ ಸಂಬಂಧದ ಬಗ್ಗೆ ಸಂಶಯ. ಮಗುವಿಗಾಗಿ ಹಂಬಲಿಸುವ ಹೆಂಡತಿ. ಗಂಡ ಮೊದಲೇ ವಿವಾಹಿತ ಎಂದು ತಿಳಿದಾಗ ಕ್ಷೋಭೆಗೊಳ್ಳುತ್ತಾಳೆ. ಎಲ್ಲವನ್ನೂ ತ್ಯಜಿಸಿ ಸಾಯಬೇಕೆಂದು ನಿರ್ಧರಿಸಿದಾಗ ಭಿಕ್ಷುಕಿಯೊಬ್ಬಳ ಮಗು ಅವಳ ಬಾಳಿಗೆ ಹೊಸ ಅರ್ಥ ನೀಡುತ್ತದೆ.

೧೮೯೬. ದಾಯಾದಿ

(೧೯೯೮ / ವರ್ಣ / ಸಾಮಾಜಿಕ)
ಲಾ: ಶ್ರೀ ರಾಘವೇಂದ್ರ ಎಂಟರ್‌ಪ್ರೈಸಸ್
ಪ್ರೊ: ಪಿ.ದೇವರಾಜ್
ನಿ: ಎಸ್.ಉಮೇಶ್
ಸ.ನಿ: ದೊರೆಸ್ವಾಮಿ ಕೆಸ್ತೂರು
ಅ: ದೇವರಾಜ್, ಚರಣ್‌ರಾಜ್, ಕಲ್ಯಾಣ್‌ಕುಮಾರ್, ವಜ್ರಮುನಿ, ಆಶಾಲತಾ, ದೊಡ್ಡಣ್ಣ, ವಿನಯಾ ಪ್ರಸಾದ್, ಬಿ.ವಿ.ರಾಧಾ, ಕಲಾ, ಸ್ವರ್ಣ, ಗುರುದಾಸ್, ಎಸ್.ವಿಜಯೇಂದ್ರ, ಸುಮಂತ್, ರಾಜಾನಂದ್, ಬ್ಯಾಂಕ್ ಜನಾರ್ದನ್

ಕ: ಅಜಯ್ ಕುಮಾರ್
ಚಿ.ಕ/ಮಾ: ಎಂ.ಡಿ.ಹಾಷಂ
ಗೀ: ಹಂಸಲೇಖ
ಗಾ: ರಾಜಕುಮಾರ್ ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ, ಮಂಜುಳಾ ಗುರುರಾಜ್, ರಾಜೇಶ್, ಎಲ್.ಎನ್. ಶಾಸ್ತ್ರಿ
ಸಂ: ಎಸ್.ಉಮೇಶ್
ಛಾ: ರಮೇಶ್ ಬಾಬು
ಸ: ಹಂಸಲೇಖ
ದೃ: ಅರುಮುಗಂ, ಕೋದಂಡಪಾಣಿ, ಮಹೇಂದ್ರನ್
ನೃ: ಸಂಪತ್
ಸಾ: ನಂಜುಂಡಿ ನಾಗರಾಜ್
ವ: ಶಿವಪಟ್ಟೂರು ಸೋಮು, ಶಿವಾಜಿ
ಪ್ರ: ಪಿ.ಗುರುಮೂರ್ತಿ, ಕೇಶ: ರಾಜೀವ್
ಸ್ಥ: ಪ್ರಸಾದ್, ಚಾಮುಂಡೇಶ್ವರಿ
ಕ.ಸಾ: ಎರಡು ಅವಿಭಕ್ತ ಕುಟುಂಬಗಳು. ರಕ್ತ ಸಂಬಂಧಿಗಳೇ ಆಗಿದ್ದರೂ ಕ್ಷುಲ್ಲಕ ವಿಷಯದಿಂದ ಬೇರೆಯಾಗುತ್ತಾರೆ. ಒಂದು ಕುಟುಂಬದ ಹಿರಿಯ ಶಾಂತ ಸ್ವಭಾವದವನಾದರೆ, ಮತ್ತೊಬ್ಬ ಸಿಡುಕು ಸ್ವಭಾವದವನು. ಇವರಿಬ್ಬರ ಕುಟುಂಬಗಳ ಮುಂದಿನ ಪೀಳಿಗೆಯು ದ್ವೇಷದ ನೆರಳಿನಲ್ಲಿಯೇ ಬೆಳೆದವರಂತೆ ಬದುಕುತ್ತಿರುತ್ತಾರೆ. ಹಲವು ಘಟನೆಗಳು - ಸಂಘರ್ಷಗಳ ನಂತರ ತಮ್ಮ ತಮ್ಮ ತಪ್ಪಿನ ಅರಿವಾಗಿ ಎಲ್ಲರೂ ಒಂದಾಗುವ ಹೊತ್ತಿಗೆ ಹಲವರು ಶವವಾಗಿರುತ್ತಾರೆ.

೧೮೯೭. ಜಗತ್ ಕಿಲಾಡಿ

(೧೯೯೮ / ವರ್ಣ / ಸಾಮಾಜಿಕ)
ಲಾ: ಎಸ್ ಅಂಡ್ ಎಸ್ ಸಿನಿಮಾ
ಪ್ರೊ: ಸುಧಾ ಶ್ರೀನಿವಾಸನ್



ನಿ: ಚಿಕ್ಕಣ್ಣ
ಸ.ನಿ: ಬಸವರಾಜ್, ಶಿವರಾಜು, ಸರಿಗಮ ವಿಜಿ
ಅ: ಜಗ್ಗೇಶ್, ಚಾರುಲತಾ, ಪವಿತ್ರಾ ಲೋಕೇಶ್, ಜಿ.ಕೆ.ಗೋವಿಂದರಾವ್, ಬಿ.ವಿ.ರಾಧಾ, ಲೋಕನಾಥ್, ಎಂ.ಎನ್.ಲಕ್ಷ್ಮೀದೇವಿ, ಮಂಡ್ಯ ರಮೇಶ್, ಸರಿಗಮ ವಿಜಿ, ಮಾ|ಸಂತೋಷ್, ಸುಧೀರ್, ವಿನೋದ್, ಮಾ| ಶಿವಲಿಂಗೇಶ್ವರ
ಕ: 'ಗೋಪಿ ಕಿಷನ್' ಹಿಂದಿ ಚಿತ್ರದ ಕನ್ನಡ ರೂಪಾಂತರ
ಚಿ.ಕ: ಚಿಕ್ಕಣ್ಣ

ಮಾ: ಸರಿಗಮ ವಿಜಿ
ಗೀ: ನರೇಂದ್ರ ಬಾಬು, ಗೀತಪ್ರಿಯ, ಟಿ.ಎಂ.ಪ್ರಹ್ಲಾದ್, ಶ್ಯಾಮಸುಂದರ ಕುಲಕರ್ಣಿ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಅನುರಾಧಾ ಶ್ರೀರಾಮ್, ನಂದಿತಾ, ಜಗ್ಗೇಶ್
ಸಂ: ಬಿ.ಎಸ್.ಕೆಂಪರಾಜ್
ಛಾ: ರಮೇಶ್ ಬಾಬು
ಕಲೆ: ರಾಜು
ಸ: ರಾಜನ್ ನಾಗೇಂದ್ರ
ದೃ: ಸಂಕೇತ್
ನೃ: ಸಂಪತ್
ಸಾ: ಕೆ.ಡಿ.ವೆಂಕಟೇಶ್
ವ: ಪ್ರಭುರಾಜ್, ರಾಮನಾಥ್
ಪ್ರ: ವೆಂಕಟಸ್ವಾಮಿ, ಮಾದೇಗೌಡ
ಹಾ: ೧)'ಸುಂದರಾಂಗಿ ಚಂದದ ಚೆಲುವೆ...', ೨)' ಮುಸುಕೆತ್ತ ಬೇಡ...', ೩) 'ಜೋ ಕುಮಾರ...', ೪) ' ಐ ಲವ್ ಫಾರ್ ಯು...', ೫)'ಸುಂದರಾಂಗಿ...'
ಕ.ಸಾ: ಒಂದೇ ರೂಪದ ಇಬ್ಬರು ವ್ಯಕ್ತಿಗಳು. ಒಬ್ಬ ಪೊಲೀಸ್ ಪೇದೆ. ಪುಕ್ಕಲು ಸ್ವಭಾವದವನು. ಮತ್ತೊಬ್ಬ ಒರಟು. ಇಬ್ಬರೂ ಒಂದೇ ಊರಿನಲ್ಲಿ ಇರುತ್ತಾರೆ. ಹಲವು ವೇಳೆ ಅವರಿಬ್ಬರನ್ನೂ ಜನ ತಪ್ಪು ಗ್ರಹಿಕೆಯಿಂದ ನೋಡಿರುತ್ತಾರೆ. ಸಂದರ್ಭ ಪೂರಕವಾಗಿ ಅವರಿಬ್ಬರೂ ಒಂದೇ ತಾಯಿಯ ಮಕ್ಕಳೆಂದು ತಿಳಿದು ಬರುತ್ತದೆ. ಅವರಿಬ್ಬರ ತಂದೆಯನ್ನು ಮೋಸದಿಂದ ಕೊಲೆ ಮಾಡಲಾಗಿರುತ್ತದೆ. ವಿಷಯ ತಿಳಿದ ಇಬ್ಬರೂ ತಂದೆಯ ಕೊಲೆಯ ವಿರುದ್ಧ ಸೇಡು ತೀರಿಸಿಕೊಳ್ಳುತ್ತಾರೆ.

೧೮೯೮. ಭಾಮ ಸತ್ಯಭಾಮ

(೧೯೯೮ / ವರ್ಣ / ಸಾಮಾಜಿಕ)
ಲಾ: ಶಾಂತಲಾ ಪಿಕ್ಚರ್ಸ್
ಪ್ರೊ: ಶ್ರೀಮತಿ ಭಾಗ್ಯವತಿ
ನಿ: ಎಸ್.ನಾರಾಯಣ್
ಸ.ನಿ: ಸೀತಾರಾಮ ಕಾರಂತ, ಗಿರೀಶ್ ಕಂಪ್ಲಾಪುರ
ಅ: ಎಸ್.ನಾರಾಯಣ್, ಶ್ರುತಿ, ಶ್ರೀನಿವಾಸ ಮೂರ್ತಿ, ಧೀರೇಂದ್ರ ಗೋಪಾಲ್, ಡಾ|ಶರ್ಮ, ಉಮೇಶ್, ಹೊನ್ನವಳ್ಳಿ ಕೃಷ್ಣ, ಬ್ಯಾಂಕ್ ಜನಾರ್ದನ್, ಆಶಾಲತಾ, ಪದ್ಮಾ ವಾಸಂತಿ, ಬಿ.ಜಯ, ಜ್ಯೋತಿ, ಜಯಬಾಲು
ಕ/ಚಿ.ಕ/ಮಾ/ಗೀ: ಎಸ್.ನಾರಾಯಣ್
ಗಾ: ಚಿತ್ರಾ, ರಾಜೇಶ್, ಸಾಧುಕೋಕಿಲ, ಶಂಕರ್ ಶಾನ್‌ಭಾಗ್, ಎಸ್.ನಾರಾಯಣ್
ಸಂ: ಪಿ.ಆರ್.ಸೌಂದರ ರಾಜನ್
ಛಾ: ಆರ್.ಗಿರಿ(ಎಂ.ರಾಜೇಂದ್ರ)
ಕಲೆ: ಸೂರ್ಯನಾರಾಯಣ ಮೂರ್ತಿ, ಚಿ.ನ.ಸೂ.ಮೂರ್ತಿ
ಸ: ರಾಜೇಶ್ ರಾಮನಾಥ್
ದೃ: ಮಹೇಂದ್ರನ್, ಕೋದಂಡಪಾಣಿ

ನೃ: ಸಂಪತ್
ಸಾ: ಶಿವು
ವ: ವಿಠಲ್ ರಾವ್
ಪ್ರ: ವಿಠಲ್ ಬಾಬು
ಸ್ಥ: ಮಧು ಆರ್ಟ್
ಹಾ: ೧)' ಎಂಥಾ ಸುಂದರ ಲೋಕವಿದು ...', ೨)'ಥಳುಕು ಥಳುಕು ಬೆಳಕಿನಲ್ಲಿ ...'
ಕ.ಸಾ: ಹೆಂಡತಿ ಕಿವುಡಿ; ಗಂಡ ಮುಗ್ಧ ಸ್ವಭಾವದವ. ಇವರಿಬ್ಬರ ಸಂಸಾರದ ಸ್ವಾರಸ್ಯಕ್ಕೆ ಹೆಂಡತಿಯ ಕಿವುಡು ಮುಳ್ಳಾಗುತ್ತದೆ. ದೂರವಾದ ಎರಡು ಜೀವಗಳು ಹಿರಿಯರ ಬುದ್ಧಿವಾದದಿಂದ ಒಂದಾಗುತ್ತವೆ. ಹಾಸ್ಯ ಪ್ರಧಾನ ಕಥೆ.

೧೮೯೯. ಬಾರೋ ನನ್ನ ಮುದ್ದಿನ ಕೃಷ್ಣ

(೧೯೯೮ / ವರ್ಣ / ಸಾಮಾಜಿಕ)
ಲಾ: ಲಕ್ಷ್ಮೀ ಪ್ರೊಡಕ್ಷನ್ಸ್
ಪ್ರೊ: ಬಿ.ಎನ್.ಗಂಗಾಧರ್
ನಿ: ಪ್ರಕಾಶ್
ಸ.ನಿ: ವಿಶ್ವನಾಥ್, ಸನತ್ ಪ್ರಕಾಶ್



ಅ: ಶಶಿಕುಮಾರ್, ಅನುಷಾ, ದೊಡ್ಡಣ್ಣ, ಉಮಾಶ್ರೀ, ಬಿ.ವಿ.ರಾಧಾ, ಮುಖ್ಯಮಂತ್ರಿ ಚಂದ್ರು, ಉಮೇಶ್, ಪಂಢರಿ ಬಾಯಿ
ಕ/ಚಿ.ಕ: ಪ್ರಕಾಶ್
ಮಾ: ಬಿ.ಸಿ.ಮಧು
ಗೀ: ರಾಮ ಪ್ರಕಾಶ್ ತ್ರಿಶೂಲಿ, ಹಂಸಲೇಖ
ಗಾ: ರಾಜಕುಮಾರ್, ರಾಜೇಶ್, ಸೌಮ್ಯ, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಬಿ.ಆರ್.ಛಾಯಾ
ಸಂ: ಶ್ಯಾಂ
ಛಾ: ಮಲ್ಲಿಕಾರ್ಜುನ
ಸ: ರಾಜೇಶ್ ರಾಮನಾಥ್
ಸಾ: ಸೂರ್ಯ ಪ್ರಕಾಶ್
ಹಾ: ೧) 'ದೇವರಿಗೇನೋ ಕೋಪಬಂದು ...', ೨)' ಮಾಟಗಾತಿಯೋ, ಛೂ ಮಂತ್ರ ಹಾಕಬಲ್ಲೇ...', ೩)'ಲಂಚ ಲಂಚ...', ೪)' ಹುಡುಗಿ ಹುಡುಗಿ ನನ್ನ ಬೆಡಗಿ...', ೫)' ಬರ್‍ತಾ ಬರ್‍ತಾ ಯಾಕೋ ಮನಸು...',
ಕ.ಸಾ: ಲಂಚ ತೆಗೆದುಕೊಳ್ಳುವ ಪೊಲೀಸ್ ಪೇದೆಯನ್ನು ಪ್ರೀತಿಸುವ ನಾಯಕಿ, ಆಕೆ ಆತನಿರುವ ಪೊಲೀಸ್ ಠಾಣೆಗೆ ಪೊಲೀಸ್ ಅಧಿಕಾರಿಯಾಗಿ ಬರುತ್ತಾಳೆ. ನಾಯಕನನ್ನು ಖಂಡಿಸುತ್ತಾಳೆ. ಕೆಲಕಾಲ ದೂರಾದರೂ ನಂತರ ಹಿರಿಯರ, ಸಂದರ್ಭಗಳ ಒತ್ತಡ. ಮನಃಪರಿವರ್ತನೆಯಿಂದ ಒಂದಾಗುತ್ತಾರೆ.

೧೯೦೦. ಗೂಂಡಾ ಮತ್ತು ಪೋಲೀಸ್

(೧೯೯೮ / ವರ್ಣ / ಸಾಮಾಜಿಕ)
ಲಾ: ಗುಡ್‌ಲಕ್ ಫಿಲಂಸ್

ಪ್ರೊ: ರಾಜಶೇಖರ್ ಆರಾಧ್ಯ, ಉಮೇಶ್. ಆರ್.ಎಸ್.ಗೌಡ, ಎಂ.ಜಿ.ಬಾಬು
ನಿ: ವಿಕ್ಟರಿ ವಾಸು
ಸ.ನಿ: ಮೋಹನ್ ಎಸ್.ಮಾಳಗಿ

ಅ: ಮಾಲಾಶ್ರೀ, ಭಾನುಚಂದರ್, ಸುಧೀರ್, ನಿಳಲ್‌ಗಳ್ ರವಿ, ದೊಡ್ಡಣ್ಣ, ಸಾಧುಕೋಕಿಲ, ಅವಿನಾಶ್
ಕ: ರಾಮ್‌ಬಾಬು
ಚಿ.ಕ: ಭವಾನಿ ಶಂಕರ್
ಮಾ: ಕುಣಿಗಲ್ ನಾಗಭೂಷಣ್
ಸಂ: ಪ್ರಸಾದ್
ಛಾ: ಮನೋಹರ್
ಕಲೆ: ರಾಜ
ಸ: ಸಾಧುಕೋಕಿಲ
ಧ್ವ: ಸಂಕೇತ್
ನೃ: ಪ್ರಸಾದ್
ಸಾ: ದಳಪತಿ ದಿನೇಶ್
ವ: ನಾಗರಾಜು
ಪ್ರ: ಬಸವರಾಜ ಸಂಶಿ
ಕ.ಸಾ: ಪತ್ರಕರ್ತೆ ಹಾಗೂ ಪೋಲೀಸ್ ಸಂಬಂಧವ ಕುರಿತ ಚಿತ್ರ. ಎರಡು ಶಕ್ತಿಗಳು ಒಗ್ಗಟ್ಟಿನಿಂದ ದುಡಿದರ. ಸಮಾಜ ಘಾತುಕ ಶಕ್ತಿಗಳು ಮಣಿಯಲೇ ಬೇಕೆಂಬ ಚಿತ್ರಣ.

೧೯೦೧. ಮಾರ್ತಾಂಡ

(೧೯೯೮ / ವರ್ಣ / ಸಾಮಾಜಿಕ)
ಲಾ: ಸೋಮಶಕ್ತಿ ಕ್ರಿಯೇಷನ್ಸ್
ಪ್ರೊ: ಚಲಪತಿ
ನಿ: ಚಿಕ್ಕಣ್ಣ

ಅ: ಪ್ರಭಾಕರ್, ಶ್ರುತಿ, ಸರಿಗಮ ವಿಜಿ, ಪಾಪಮ್ಮ
ಚಿ.ಕ: ಚಿಕ್ಕಣ್ಣ
ಮಾ: ಸರಿಗಮ ವಿಜಿ
ಗೀ: ಕೆ.ಕಲ್ಯಾಣ್
ಸಂ: ವಿಜಯಕುಮಾರ್
ಛಾ: ಪಿ.ಕೆ.ಹೆಚ್.ದಾಸ್
ಸ: ಸಾಧುಕೋಕಿಲ
ಧ್ವ: ಮಹೇಂದ್ರನ್, ಕೋದಂಡಪಾಣಿ
ನೃ: ಸಂಪತ್. ತ್ರಿಭುವನ್
ಸಾ: ನಂಜುಂಡಿ ನಾಗರಾಜ್
ವ: ಲಕ್ಷ್ಮಣ
ಸ್ಟು: ಚಾಮುಂಡೇಶ್ವರಿ
ಕ.ಸಾ: ಹಳ್ಳಿಯೊಂದರ ಮಹಾನ್ ಜಮೀನ್ದಾರ ಪಕ್ಕದ ಹಳ್ಳಿಯವನೊಬ್ಬನಿಗೆ ಪಾಠ ಕಲಿಸಲು ಅವನ ಮಗಳನ್ನು ಕರವೊಯ್ಯಲು ತಂದೆಗೆ ವಿರೋಧವಾಗಿ ಮಗಳು ಜಮೀನ್ದಾರನನ್ನೇ ಮದುವೆಯಾಗಲು ನಿರ್ಧರಿಸಿದಳು. ಜೂಜಿನಲ್ಲಿ ಎಲ್ಲವನ್ನೂ ಕಳೆದುಕೊಂಡ ಅವನನ್ನು ಪರಿವರ್ತಿಸಿ, ಸರಿದಾರಿಗೆ ಕರೆದೊಯ್ಯಲು ಆ ಹೆಣ್ಣುಮಗಳು ಅವನ ಬಗ್ಗೆ ಕೂಪವಿದ್ದ ಇನ್ನೊಬ್ಬ ಈ ಹೆಣ್ಣುಮಗಳನ್ನು ಕೊಂದ ಜಮೀನ್ದಾರನಾಗಿದ್ದಾತ ಆ ಕೊಲೆಪಾತಕನನ್ನು ಕೊಲೆಮಾಡಿ ಜೈಲಿಗೆ ಹೋದ.

೧೯೦೨. ವಜ್ರ

(೧೯೯೮ / ವರ್ಣ / ಸಾಮಾಜಿಕ)
ಲಾ: ಶ್ರೀ ಮಾ ಸಿಸಿ ಕಂಬೈನ್ಸ್
ಪ್ರೊ: ಎ.ಗೋಪಾಲ್
ನಿ: ವಿ.ಪ್ರಭಾಕರ್
ಸ.ನಿ: ದೇವರಾಜ್. ಜಿ.ಬಾಲನ್
ಅ: ರಾಮ್ ಕುಮಾರ್, ರಶ್ಮಿ, ರಸಿಕಾ, ದೊಡ್ಡಣ್ಣ, ಬ್ಯಾಂಕ್ ಜನಾರ್ದನ್, ಉಮೇಶ್, ಸಿಟಿಕಪಿ ಚಂದ್ರು, ಶೋಭರಾಜ್, ಟೆನ್ನಿಸ್ ಕೃಷ್ಣ, ಡಿಂಗ್ರಿ ನಾಗರಾಜ್, ಅರವಿಂದ್, ವೆಂಕಟೇಶ್, ಗಾಯತ್ರಿ ಪ್ರಭಾಕರ್, ಭಾಗ್ಯಶ್ರೀ, ಜಯಂತಿ, ಚಿದಂಬರಂ ಅಯ್ಯಪ್ಪ
ಕ: ವಿ.ವೀರಪ್ಪನ್
ಚಿ.ಕ: ವಿ.ಪ್ರಭಾಕರ್
ಮಾ/ಗೀ: ಆರ್.ಎನ್. ಜಯಗೋಪಾಲ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಮಂಜುಳಾ ಗುರುರಾಜ್, ಟೆನ್ನಿಸ್ ಕೃಷ್ಣ, ಸಂಗೀತಾ ಕಟ್ಟಿ, ವಿಷ್ಣು
ಸಂ: ಜಿ.ರಂಗರಾಜನ್, ಎಸ್. ಕೃಷ್ಣ, ಮೋಹನ್ ಬಾಬು
ಛಾ: ವಿ ಪ್ರಭಾಕರ್
ಕಲೆ: ಸೂರ್ಯನಾರಾಯಣ ಬಾಬು, ಬಾಬುಖಾನ್
ಸ: ಉಪೇಂದ್ರ ಕುಮಾರ್
ನೃ: ಸೀನು, ಮುಸ್ತಾಫ್
ಸಾ: ವಿಕ್ರಂ, ಕೆ.ಡಿ.ವೆಂಕಟೇಶ್
ವ: ತಿಪಟೂರು ಸೋಮು
ಪ್ರ: ಮುರುಳಿ
ಸ್ಟು: ಪ್ರಸಾದ್, ಕಂಠೀರವ, ಅಭಿಮಾನ್
ಕ.ಸಾ: ಅಮೂಲ್ಯ ವಜ್ರಕ್ಕಾಗಿ ನಡೆಯುವ ಸಂಘರ್ಷದಲ್ಲಿ ಯುವಕನೊಬ್ಬ ತನ್ನ ಚಾಣಾಕ್ಷತನದಿಂದ ಎಲ್ಲರಿಗೂ ಮಣ್ಣುಮುಕ್ಕಿಸಿ ವಜ್ರವನ್ನು ವಶಪಡಿಸಿಕೊಳ್ಳುತ್ತಾನ.

೧೯೦೩. ಹೃದಯಾಂಜಲಿ

(೧೯೯೮ / ವರ್ಣ / ಸಾಮಾಜಿಕ)
ಲಾ: ನಮ್ರತ ಕ್ರಿಯೇಷನ್
ಪ್ರೊ: ಶ್ರೀಮತಿ ದಮಯಂತಿ
ನಿ: ಭಾಸ್ಕರ್
ಸ.ನಿ: ಜಿ.ಆರ್.ಸತ್ಯ
ಅ: ರಾಜ್‌ಕಮಲ್, ಚಾರುಲತಾ, ಸಿದ್ಧಾರ್ಥ, ಲೋಕನಾಥ್, ಉಮಾಶ್ರೀ, ಕರಿಬಸವಯ್ಯ, ಪದ್ಮಾವಾಸಂತಿ, ಕೀರ್ತಿ, ಪೊನ್ನವಳ್ಳಿ ಕೃಷ್ಣ, ಮಂಡ್ಯ ರಮೇಶ್
ಕ/ಚಿ.ಕ: ಭಾಸ್ಕರ್
ಮಾ: ಜಿ.ಆರ್.ಸತ್ಯ, ದಾಸರಿ ಆನಂದೇಶ್ವರ ರಾವ್
ಸಂ: ವಿಕ್ರಮ್ ಯಾದವ್

ಛಾ: ಆರ್ ಗಿರಿ
ಕಲೆ: ಮೂರ್ತಿ
ಸ: ರಾಜನ್ ನಾಗೇಂದ್ರ
ನೃ: ಸಂಪತ್
ಸಾ: ಕೆ.ಡಿ.ವೆಂಕಟೇಶ್
ಹಾ: ೧)'ಓಂಕಾರ ನಾದಮಯ ನೀನೇ...', ೨)'ಶೃಂಗೆ ಲಯವು ಸೇರಿದರ...', ೩)'ದೇವಿ ಎನುತಲಿ ಮಾತೆ ಎನುತಲಿ...', ೪)'ನಿಜ ಹೇಳಲೇನು...', ೫)'ಶೃತಿಗೆ ಲಯವು ಸೇರಿದಂತೆ...',
ವಿ: ೧೯೯೮-೯೯ರ ರಾಜ್ಯ ಪ್ರಶಸ್ತಿ : ಅತ್ಯುತ್ತಮ ಹಿನ್ನೆಲೆ ಗಾಯಕಿ (ಅನುರಾಧ ಶ್ರೀರಾಂ)
ಕ.ಸಾ: ಹೆಣ್ಣಿನ ಭಾವನಾತ್ಮಕ ತುಮುಲಗಳನ್ನು ಪ್ರತಿಬಿಂಬಿಸುವ ಕಥಾ ವಸ್ತು.

೧೯೦೪. ಹೂಮಳೆ

(೧೯೯೮ / ವರ್ಣ / ಸಾಮಾಜಿಕ)
ಲಾ: ಮೈತ್ರಿ ಸಿಂಡಿಕೇಟ್ (ಪರಿವರ್ತನ ತಂಡ)
ಪ್ರೊ: ಕೆ.ಎಸ್. ಉಷಾ ರಾವ್
ನಿ: ನಾಗತಿಹಳ್ಳಿ ಚಂದ್ರಶೇಖರ್
ಸ.ನಿ: ಅನಂತಮೂರ್ತಿ, ಗೋಪಿ ಪೀಣ್ಯ
ಅ: ರಮೇಶ್, ಸುಮನ್ ನಗರಕರ್, ಸೋರಟ್ ಅಶ್ವತ್, ಬಿ.ವಿ.ರಾಧ, ನಾಗೇಶ್, ವಾಣಿಶ್ರೀ, ರೇಣುಕಮ್ಮ ಮುರುಗೋಡು, ಹೆಚ್.ಜಿ.ದತ್ತಾತ್ರೇಯ, ಹೆಚ್.ಜಿ.ಸೋಮಶೇಖರ್ ರಾವ್, ಸಂಧ್ಯಾ, ಸುನೇತ್ರಾ, ಮಂಡ್ಯ ರಮೇಶ್, ಭಾಗೀರಥಿ, ಬಮರುಲ್ಲಾ, ಬೇಬಿ ಹೇಮಾ, ವಿನಯಾ ಪ್ರಸಾದ್, ಹೇಮಾ, ಭಾವನಾ, ಸಿದ್ಧಾರ್ಥ ಮುಖರ್ಜಿ, ಎನ್.ಬಿ.ಜಯಪ್ರಕಾಶ್
ಕ: ಜಿ.ರಮೇಶ್ ಅರವಿಂದ್ (ನಾಯಕ ನಟ)
ಚಿ.ಕ: ನಾಗತಿಹಳ್ಳಿ ಚಂದ್ರಶೇಖರ್, ಜಿ. ರಮೇಶ್
ಮಾ: ನಾಗತಿಹಳ್ಳಿ ಚಂದ್ರಶೇಖರ್
ಗೀ: ನಾಗತಿಹಳ್ಳಿ ಚಂದ್ರಶೇಖರ್, ಜ.ಎಂ.ಪ್ರಹ್ಲಾದ್, ಡಾ|ಹೆಚ್.ಎಸ್. ವೆಂಕಟೇಶ್ ಮೂರ್ತಿ
ಗಾ: ಡಾ| ರಾಜಕುಮಾರ್, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಮಂಜುಳಾ ಗುರುರಾಜ್, ಚಂದ್ರಿಕಾ, ಬಿ.ಜಯಶ್ರೀ, ರಾಜು ಅನಂತಸ್ವಾಮಿ, ಡಾ|ಇಳಯರಾಜಾ, ರಮೇಶ್ ಚಂದ್ರ
ಸಂ: ಬಿ.ಎಸ್.ಕೆಂಪರಾಜ್
ಛಾ: ಜಿ.ಎಸ್.ಭಾಸ್ಕರ್
ಕಲೆ: ಶಂಧರ್ ಅಡಪ
ಸ: ಇಳಯರಾಜಾ
ಧ್ವ: ಮಹೇಂದ್ರನ್, ಪ್ರಸಾದ್
ನೃ: ಮದನ್ ಹರಿಣಿ
ವ: ಸಿ.ಎಸ್.ಶೋಭಾ
ಪ: ಸಿದ್ದೇಶ್
ಸ್ಟು: ಕಂಠೀರವ, ಚಾಮುಂಡೇಶ್ವರಿ
ಹಾ: ೧)'ಹೂ ಮಳೆ ಹೂ ಮಳೆ...', ೨)'ರಘುಂ ರಘುಂ ರಘೋಂಕಾರದ...', ೩)'ಓ ಮಹನೀಯರೇ ಓ ಮಹಿಳೆಯರೇ...', ೪)'ಪ್ರೀತಿಯ ಗಲ್ಲಲು ವೀರಾಧಿವೀರರು...', ೫)'ನನ್ನ ಮುದ್ದು ರಂಭೆ...', ೬)'ಹೆಣ್ಣಿಗೊಂದು ಗಂಡು ಬೇಕು...',

ವಿ: ಅಮೇರಿಕಾದಲ್ಲಿ ಹಲವು ಕಡೆ ಪ್ರದರ್ಶಿತವಾಗಿ, ಉತ್ತಮ ಚಿತ್ರವೆಂಬ ಪ್ರಶಂಸೆ ಗಳಿಸಿತು. ೧೯೯೮-೯೯ರ ರಾಜ್ಯಪ್ರಶಸ್ತಿ ದ್ವಿತೀಯ ಅತ್ಯುತ್ತಮ ಚಿತ್ರ. ಅತ್ಯುತ್ತಮ ನಟ (ರಮೇಶ್), ಅತ್ಯುತ್ತಮ ಬಾಲನಟಿ (ಬೇಬಿ ಹಿಮಾ) ೧೯೯೮ರ ಅತ್ಯುತ್ತಮ ಪ್ರಾದೇಶಿಕ ಚಿತ್ರ : ರಾಷ್ಟ್ರಪ್ರಶಸ್ತಿ.

ಬಿ: ೩೧ ಜುಲೈ ೧೯೯೮

ಕ.ಸಾ: ನಾಯಕ ಸಂತೋಷ್ ತನ್ನ ಕಲ್ಪನೆಗೆ ಹೊಂದುವ ಜೀವನ ಸಂಗಾತಿಯನ್ನು ಟಿ.ವಿ.ಟಾಪ್ ಶೋ ಒಂದರಲ್ಲಿ ಅರಿಸಿ, ಅವಳನ್ನರಸಿ ಅಸ್ಸಾಂಗ ಹೋಗುತ್ತಾನೆ. ಉಗ್ರಗಾಮಿ ಚಟುವಟಿಕೆಗಳಿಗೆ ಬಲಿಯಾದ ಪತಿ ಸಂಜಯ್‌ನನ್ನು ಕಳೆದುಕೊಂಡು ಮಗುವಿನೊಂದಿಗೆ ಜೀವಿಸುತ್ತಿದ್ದ ವಿಧವೆ ಸುಭಾಷಿಣಿಯನ್ನು ನೋಡುತ್ತಾನೆ. ಅವಳನ್ನು ಅಲ್ಲಿನ ವಿಷಮ ಪರಿಸ್ಥಿತಿಯಿಂದ ಪಾರುಮಾಡಿ ಹೊಸ ಜೀವನ ಕಲ್ಪಿಸಿಕೊಟ್ಟು ತನ್ನ ತುಂಬಿದ ಸಂಸಾರಕ್ಕೆ ಸೇರಿಸಿಕೊಳ್ಳುವ ಸುಖಾಂತ್ಯ ಕಾಣುವ ವಿಧವಾ ವಿವಾಹದ ಕಥೆ.

೧೯೦೫. ಹಲೋ ಯಮ

(೧೯೯೮ ವರ್ಣ ಹಾಸ್ಯಪ್ರಧಾನ ಸಾಮಾಜಿಕ)

ಲಾ: ಆರ್.ಆರ್.ಎಂಟರ್‌ಪ್ರೈಸಸ್

ಪ್ರೊ: ಬಾಲರಾಜ್, ರಘು

ನಿ: ಎ.ಆರ್.ಬಾಬು

ಸ.ನಿ: ಪ್ರೇಂಕುಮಾರ್, ಶರಣ್ ಕುಮಾರ್

ಅ: ಕಾಶೀನಾಥ್, ದೊಡ್ಡಣ್ಣ, ಸಾಧುಕೋಕಿಲ, ರಮ್ಯ, ಹರೀಶ್ ರಾಯ್, ಪ್ರಮೋದ್ ಚಕ್ರವರ್ತಿ, ಟೆನ್ನಿಸ್ ಕೃಷ್ಣ, ರಮ್ಯ, ಭವ್ಯಶ್ರೀ ರೈ, ಎಂ.ಎಸ್.ಉಮೇಶ್, ಯಮುನಾ, ಪೊನ್ನುಸ್ವಾಮಿ

ಕ: ಎಸ್.ರಮೇಶ್

ಚಿ.ಕ/ಮಾ: ಎ.ಆರ್.ಬಾಬು

ಗೀ: ಶ್ರೀಚಂದ್ರು, ಶ್ರೀರಂಗ, ಎ.ಆರ್.ಬಾಬು

ಗಾ: ರಾಜೇಶ್, ಸಾಧುಕೋಕಿಲ, ದೊಡ್ಡಣ್ಣ, ಮಂಗಳಾ, ಸುಮಾ ಶಾಸ್ತ್ರಿ, ಸೌಮ್ಯ

ಸಂ: ಕೆ.ಎಂ.ಶಂಕರ್

ಛಾ: ನಾಗರಾಜ್

ಕಲೆ: ನಂಜುಂಡಸ್ವಾಮಿ

ಸ: ಸಾಧುಕೋಕಿಲ

ನೃ: ತ್ರಿಭುವನ್

ವ: ತಿಪಟೂರು ಸೋಮು

ಪ್ರ: ರಾಮು

ವಿ: ನಾಮಬಲ್ಲ ಸರಿಯಿಲ್ಲವೆಂದು ಎ. ಅಹಮ್ಮದ್ ಗೌಸ್, ಎ. ಆರ್. ಬಾಬು ಆದರು.

ಕ.ಸಾ: ಆಯುಷ್ಯ ತುಂಬಿದ ವ್ಯಕ್ತಿಯ ಜೀವವನ್ನು ಕೊಂಡೊಯ್ಯುವ ಯಮಕಿಂಕರರು. ತಪ್ಪಿನ ಅರಿವಾಗಿ ತಪ್ಪನ್ನು ಸರಿಪಡಿಸಲು ಭೂಮಿಗೆ ಬಂದ ಯಮ ನೂರಾರು ಬಗೆಯ ಪರಿಪಾಟಲು ಪಡುವ ಹಾಸ್ಯ ಪ್ರಧಾನ ಕಥೆ.

೧೯೦೬. ಮಿಸ್ಟರ್ ಪುಟ್ಸ್ವಾಮಿ

(೧೯೯೮ / ವರ್ಣ / ಸಾಮಾಜಿಕ)

ಪ್ರೊ: ಶ್ರೀನಿವಾಸ್, ರಮೇಶ್

ನಿ: ವಿ.ಉಮಾಕಾಂತ್

ಸ.ನಿ: ಗೋವಿಂದಸ್ವಾಮಿ



ಅ: ಶಿವರಾಜ್ ಕುಮಾರ್, ಲಾಲಿ, ಶೋಭರಾಜ್, ಅವಿನಾಶ್, ಸುಮನ್, ಸಂಕೇತ್ ಕಾಶಿ, ಸುನೀತಾ, ಆಗ್ರೋ ಚಿಕ್ಕಣ್ಣ, ಬಿರಾದಾರ್, ಶ್ರೀನಾಥ್, ಮಾ।ಸಂತೋಷ್

ಕ/ಚಿ.ಕ/ಮಾ: ಕೃಷ್ಣಮೂರ್ತಿ ನಾಡಿಗ್

ಗೀ: ವಿ.ಮನೋಹರ್

ಗಾ: ಚಿತ್ರಾ, ರಾಜೇಶ್ ಕೃಷ್ಣ, ಶಂಕರ್ ಶ್ಯಾನುಭಾಗ್, ಗುರುಕಿರಣ್, ಪ್ರವೀಣ್, ಸಂಗೀತಾ ಕಟ್ಟಿ

ಛಾ: ಪಿ.ಕೆ.ಹೆಚ್.ದಾಸ್

ಕಲೆ: ನಜೀರ್

ಸ: ವಿ.ಮನೋಹರ್

ಧ್ವ: ಚಾಮುಂಡೇಶ್ವರಿ

ನೃ: ಪ್ರಸಾದ್

ಸಾ: ದಳಪತಿ ದಿನೇಶ್

ಸ್ಟು: ಕಂಠೀರವ, ಚಾಮುಂಡೇಶ್ವರಿ

ಹಾ: ೧) 'ಟೀನ್ ಟೀನ್ ಟೀನ್...', ೨) 'ಓ ಮೊರ ಮೊರ...', ೩) 'ಜಯಹೇ ಭವಾನಿ ಭವತಾರಿಣಿ...', ೪) 'ಬಂದಾ ಬಂದಾ ಮಿ।ಪುಟ್ಸ್ವಾಮಿ...'. ೫) 'ಕಣ್ಮಣಿಯೆ ಕಣ್ಮಣಿಯೆ...', ೬) 'ಕೆಂದಾವರೆ ನೀಲಾಂಬರಿ...'.

ವಿ: ಮಲೇಶ್ಯಾದಲ್ಲಿ ಚಿತ್ರದ ಗ್ರಾಫಿಕ್ ಕಾರ್ಯ ನಡೆಯಿತು.

ಕ.ಸಾ: ಮುನ್ನೂರು ವರುಷಗಳ ಹಿಂದೆ ಸತ್ತು ಹೋಗಿದ್ದ, ಕೃಷ್ಣದೇವರಾಯನ ಕಾಲದಲ್ಲಿ ಸೇನಾಧಿಪತಿಯಾಗಿದ್ದ ಪುಟ್ಸ್ವಾಮಿಯ ಆತ್ಮ ಒಂದು ವಿಗ್ರಹ ರೂಪದಲ್ಲಿದ್ದು, ಮುನ್ನೂರು ವರುಷಗಳ ನಂತರ ಅದಕ್ಕೆ ಜೀವ ಬಂದು ಆತ ಹೇಗೆ ಪರಿವರ್ತನೆಯಾದ ಎಂಬುದೇ ಚಿತ್ರದ ವಸ್ತು. ಹೆಚ್ಚಿನ ಗ್ರಾಫಿಕ್ ಚಮತ್ಕಾರಗಳು ಚಿತ್ರದಲ್ಲಿದೆ.

೧೯೦೭. ಮಾಂಗಲ್ಯಂ ತಂತು ನಾನೇನ

(೧೯೯೮ / ವರ್ಣ / ಸಾಮಾಜಿಕ)

ಲಾ: ಗೀತ ಆರ್ಟ್ಸ್

ಪ್ರೊ: ಸಿ.ನಾಗರಾಜು

ನಿ: ಎ.ಎಸ್.ರೆಡ್ಡಿ

ಸ.ನಿ: ಸುಬ್ರಹ್ಮಣ್ಯಂ

ಅ: ರವಿಚಂದ್ರನ್, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಸುಮಿತ್ರಾ, ಮಂಡ್ಯ ರಮೇಶ್, ರಮ್ಯಕೃಷ್ಣ, ಬೆಂಗಳೂರು ನಾಗೇಶ್.

ಕ: ಭೂಪತಿ ರಾಜು (ತೆಲುಗು ಚಿತ್ರದ ಕನ್ನಡ ರೂಪಾಂತರ)

ಮಾ: ಕೆ.ನಂಜುಂಡ

ಗೀ: ಕೆ.ಕಲ್ಯಾಣ್

ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ, ಕುಸುಮ, ರಾಜೇಶ್

ಸಂ: ಪ್ರಸಾದ್

ಛಾ: ಜಿ.ವಿ.ಎಸ್. ಸೀತಾರಾಮ್

ಕಲೆ: ಇಸ್ಮಾಯಿಲ್

ಸ: ವಿ.ಮನೋಹರ್

ನೃ: ಬೃಂದಾ

ಸಾ: ಕೆ.ಡಿ.ವೆಂಕಟೇಶ್

ಹಾ: ೧) 'ಧಿರ್ ಧಿರ್ ತಿಲ್ಲಾನ ನಾಧಿರ್ ದಿರ್ ದಿರ್ ತೋಂ...', ೨) 'ಯಾರಿವನು ಡ್ರೀಮ್ ಬಾಯ್...', ೩) 'ಎಬಿಸಿಡಿ ಕಲಿಯುವ ಬಾರ...', ೪) 'ಡ್ಯಾಡಿ ಡ್ಯಾಡಿ...', ೫) 'ಪದ ಪದ ಸೇರಿ...', ೬) 'ಸಿಂಜಿ ಸಿಂಜಿ...'.

ಕ.ಸಾ: ಮದುವೆ - ಬಂಧನ ಇವೆಲ್ಲದರಲ್ಲಿ ನಂಬಿಕೆ ಇರದ ಯುವಕ, ತಂದೆಯ ಬಲವಂತಕ್ಕಾಗಿ ಒಂದು ಹೆಣ್ಣನ್ನು ಒಪ್ಪಂದದ ಮೇರೆಗೆ ಒಂದು ವರ್ಷಕ್ಕಾಗಿ ಮದುವೆಯಾಗುತ್ತಾನೆ. ವರ್ಷ ಮುಗಿದ ಮೇಲೆ ಇಬ್ಬರೂ ಬೇರೆ ಆದಾಗ ಮದುವೆಯ ಮಹತ್ವ ಅರಿವಾಗುತ್ತದೆ. ಅಂತ್ಯದಲ್ಲಿ ಸುಖಾಂತ.

೧೯೦೮. ಚೋರ ಗುರು ಚಂಡಾಲ ಶಿಷ್ಯ

(೧೯೯೮ / ವರ್ಣ / ಸಾಮಾಜಿಕ)

ಲಾ: ವಿ.ಆರ್. ಎಂಟರ್‌ಪ್ರೈಸಸ್

ಪ್ರೊ: ವಿ.ರಾಮು, ಬಿ.ವಿ.ಪಾಂಡುರಂಗನ್

ನಿ: ಎ.ಆರ್.ಬಾಬು

ಸ.ನಿ: ಬಿ.ಎ.ಪುರುಷೋತ್ತಮ್

ಅ: ಕಾಶೀನಾಥ್, ಟೆನ್ನಿಸ್ ಕೃಷ್ಣ, ಧೀರೇಂದ್ರ ಗೋಪಾಲ್, ಚರಣ್‌ರಾಜ್, ಸತ್ಯಭಾಮಾ, ಪಾಂಡುರಂಗಯ್ಯ, ಬಾಂಬೆಶ್ರೀ

ಕ/ಚಿ.ಕ/ಮಾ: ಎ.ಮಹಮ್ಮದ್ ಗೌಸ್

ಸಂ: ರಂಜಿತಾರೆಡ್ಡಿ

ಛಾ: ಮುತ್ತುರಾಜ್

ಸ: ಸಾಧುಕೋಕಿಲ

ಧ್ವ: ಪ್ರಸಾದ್

ಸಾ: ನೀಗ್ರೋ ಜಾನಿ

ಕ.ಸಾ: ಮುಗ್ಧರಾದ ಇಬ್ಬರು ನಿರುದ್ಯೋಗಿ ಯುವಕರು ಕಲವರಿಂದಿಯಿಂದ ಮೋಸಕ್ಕೊಳಗಾಗುತ್ತಾರೆ. ನಂತರ ಬದುಕುವುದಕ್ಕಾಗಿ ಅವರು ಅದೇ ಮೋಸದ ವೃತ್ತಿಗೆ ವೃತ್ತಿಗೆ ಶರಣುಹೋಗಿ, ನಂತರ ಅದು ತಪ್ಪೆಂದು ಸರಿದಾರಿಗೆ ಬರುವ ಹಾಸ್ಯಮಯ ಕಥೆ.

೧೯೦೯. ಸುವ್ವಿ ಸುವ್ವಲಾಲಿ

(೧೯೯೮ / ವರ್ಣ / ಸಾಮಾಜಿಕ)

ಲಾ: ಚಿನ್ನಿ ಚಿತ್ರ

ಪ್ರೊ: ಭಾರತೀದೇವಿ

ನಿ: ಎಸ್. ಮಹೇಂದರ್

ಸ.ನಿ: ಉಮೇಶ್

ಅ: ರಮೇಶ್, ಶಿಲ್ಪ, ಚಾರುಲತಾ, ಸಿ.ಆರ್.ಸಿಂಹ, ಆಶಾಲತಾ, ಮುಖ್ಯಮಂತ್ರಿ ಚಂದ್ರು, ರೇಖಾ ದಾಸ್, ಗಂಡಸಿ ನಾಗರಾಜ್,

ಟೆನ್ನಿಸ್ ಕೃಷ್ಣ, ಅವಿನಾಶ್, ಶ್ರೀಶೈಲನ್, ಎಬಿಸಿಡಿ ಶಾಂತ
ಕ: ಜಿ.ಕೆ.ಭಾರವಿ
ಚಿ.ಕ: ಎಸ್.ಮಹೇಂದರ್
ಮಾ: ಬಿ.ವಿ.ಮಧು
ಗೀ: ಹಂಸಲೇಖ
ಗಾ: ಚಿತ್ರ, ರಾಜೇಶ್, ಮಂಜುಳಾ ಗುರುರಾಜ್, ರಮೇಶ್ ಚಂದ್ರ, ಎಲ್.ಎನ್. ಶಾಸ್ತ್ರಿ, ಸುಮಾ ಶಾಸ್ತ್ರಿ, ಗಂಗಾಧರ್
ಸಂ: ಸೌಂದರರಾಜ್
ಛಾ: ಕೃಷ್ಣಕುಮಾರ್
ಕಲೆ: ಇಸ್ಮಾಯಿಲ್
ಸ: ಹಂಸಲೇಖ
ನೃ: ಸಂಪತ್ ಕುಮಾರ್
ಹಾ: ೧)'ಮನಸೇ ಮಲ್ಲಿಗೆ ...', ೨)' ಮೌನವೇ ಮೌನವೇ...', ೩)' ಎಂಗೇಜ್‌ಮೆಂಟ್‌ಫ್ಲೋ...', ೪)' ಅಯ್ಯಾ ಅಯ್ಯಾ ಭಾವಯ್ಯ...', ೫)' ಹೋಗುದೆ ಅಂದಿತು...', ೬)' ಆ ದೇವರು ಕಟ್ಟಿದ...'.
ಕ.ಸಾ: ನಾಯಕನನ್ನು ಪ್ರೀತಿಸುವ ಅಕ್ಕ ತಂಗಿಯರು. ನಾಯಕ ಅಕ್ಕನ ಮದುವೆಯಾದ. ಮೂಢನಂಬಿಕೆಗೆ ಬಲಿಯಾಗಿ ಅಕ್ಕ ನೆನೆಯು ಹಾಗೂ ತಾಯ್ತನವನ್ನು ಕಳೆದುಕೊಳ್ಳುತ್ತಾಳೆ. ಹಿರಿಯರ ಒತ್ತಾಯಕ್ಕೇ ನಾಯಕ ನಾದಿನಿಯ ಕೈ ಹಿಡಿಯುತ್ತಾನೆ. ಅಕ್ಕನಿಗೆ ಜ್ಞಾಪಕಶಕ್ತಿ ಬಂದಾಗ ನಾಯಕ ಅವಳ ತಂಗಿಯನ್ನು ಮದುವೆಯಾಗಿರುವ ವಿಚಾರ ಮುಚ್ಚಿಡುವ ಯತ್ನ. ಅಂತ್ಯದಲ್ಲಿ ಸಮಸ್ಯೆಗಳಿಗೆಲ್ಲಾ ಪರಿಹಾರ.

೧೯೧೦. ಮಾರಿ ಕಣ್ಣು ಹೋರಿ ಮ್ಯಾಗೆ

(೧೯೯೮ / ವರ್ಣ / ಸಾಮಾಜಿಕ)
ಲಾ: ಬೆಸ್ಟ್ ಫಿಲಂಸ್
ಪ್ರೊ: ಕೆ.ಪಿ.ನಾಗಮಣಿ, ಎ. ಕೇಶವ. ಎ. ನರಸಿಂಹ, ಕೇಶವ ಪ್ರಸಾದ್, ಯಶೋದಾ ಪ್ರಸಾದ್
ನಿ: ಕುಮಾರ್
ಸ.ನಿ: ಎನ್.ಆರ್.ಕೆ.ವಿಶ್ವನಾಥ್

ಅ: ಜಗ್ಗೇಶ್, ಉತ್ತರಾ, ಅರ್ಚನಾ, ಟೆನ್ನಿಸ್ ಕೃಷ್ಣ, ಧೀರೇಂದ್ರ ಗೋಪಾಲ್, ಶಾಂತಮ್ಮ, ಅನುರಾಧಾ, ಹೊನ್ನವಳ್ಳಿ ಕೃಷ್ಣ, ಉಮೇಶ್, ಬ್ಯಾಂಕ್ ಜನಾರ್ದನ್, ಸಿಂಧೂ, ಮಾ।ತೇಜಸ್ವಿ
ಕ: ಚಿ.ಕ: ಎಸ್.ಕುಮಾರ್
ಮಾ: ರಾ. ಪ್ರಕಾಶ್ ತ್ರಿಶೂಲಿ
ಗೀ: ರಾ. ಪ್ರಕಾಶ್ ತ್ರಿಶೂಲಿ, ಭಂಗೀರಂಗ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಬಿ.ಜಯಶ್ರೀ, ಸೌಮ್ಯ, ರಾಜೇಶ್ ಕೃಷ್ಣನ್, ಗುರು ಕಿರಣ್
ಸಂ: ಟಿ. ಶಶಿಕುಮಾರ್
ಛಾ: ಸುಂದರನಾಥ ಸುವರ್ಣ
ಕಲೆ: ಸುಂದರಂ
ಸ: ರಾಜೇಶ್ ರಾಮನಾಥ್
ನೃ: ವೆಂಕಟೇಶ್ ಪ್ರಸಾದ್
ಸಾ: ಕೆ.ಡಿ.ವೆಂಕಟೇಶ್
ಹಾ: ೧)' ಬ್ರಹ್ಮಂಗೇ ತಲೆ ಕಟ್ಬು...', ೨)' ಲವ್ ಮಾಡುತೇನಂತ...', ೩)' ಪೂದೆಯಲಿ ...', ೪)' ಶಿಶಿರದಿಂಚರ ಈ ಪ್ರೇಮ...'. ೫)' ಹೆಂಡ ಸಾರಾಯಿ ತಸ್ನಿ...'
ವಿ: ರಾಜೇಶ್ ರಾಮನಾಥ್ ಸಂಗೀತದ ೨೫ನೇ ಚಿತ್ರ.
ಸೆ: ಉದ ೪೧೨೩.೯೪, ರೀಲು - ೧೫
ಕ.ಸಾ: ತಂಗಿಯ ಪಾಲಿಗೆ ಪ್ರೀತಿಯ ಕಾವಲುಗಾರ, ತಂದೆಯ ಪಾಲಿಗೆ ಶುದ್ಧ ದಂಡಪಿಂಡ, ಅಜ್ಜಿಯ ಪಾಲಿಗೆ ಉಂಡಾಡಿಗುಂಡ, ಗೆಳೆಯರಪಾಲಿಗೆ ಕಣ್ಮಣಿ, ಸಮಾಜದಪಾಲಿಗೆ ಪರೋಪಕಾರಿ, ಗೆಳತಿಯರಪಾಲಿಗೆ ಕರಿ ಹುಡುಗನಾದ ನಾಯಕ ಚೆಲುವೆಯೊಬ್ಬಳ ಅನುರಾಗ ಗಳಿಸುವಲ್ಲಿ ಯಶಸ್ವಿಯಾದ. ಆದರ ವರದಕ್ಷಿಣೆಯ ದುರಾಸೆಯ ತಂದೆ ಅವನಿಗೆ ಬೇರೊಂದು ಹುಡುಗಿಯನ್ನು ಗೊತ್ತುಮಾಡುವ ಪ್ರಯತ್ನದಲ್ಲಿದ್ದಾಗ, ಅವನೊಡನೆ ತನ್ನ ಮದುವೆಯಾಗಿರುವುದಾಗಿ ನಾಟಕಮಾಡಲು ಇನ್ನೊಂದು ಹುಡುಗಿ ಮುಂದೆ ಬಂದಳು. ಇದು ನಾಯಕನಿಗೊಲಿದ ಚೆಲುವೆಯ ಮನಸ್ಸು ಒಡೆಯಿತು. ನಾಟಕವಾಡಿದ ಹುಡುಗಿ ತನ್ನಣ್ಣನ ಅಪಘಾತಕ್ಕೆ ಕಾರಣನೆಂಬ ತಪ್ಪುಗ್ರಹಿಕೆಯಿಂದ ನಾಯಕನ ಮೇಲೆ ಸೇಡು ತೀರಿಸಿಕೊಳ್ಳಲು ತಾನು ನಾಟಕವಾಡಿದುದಾಗಿ ಚೆಲುವೆಯಲ್ಲಿ ತಪ್ಪೊಪ್ಪಿಕೊಂಡಳು. ಪ್ರೇಮಿಗಳು ಒಂದಾದರು.

೧೯೧೧. ಭೂಮಿತಾಯಿ ಚೊಚ್ಚಲ ಮಗ

(೧೯೯೮ / ವರ್ಣ / ಸಾಮಾಜಿಕ)
ಲಾ: ವೈಭವಲಕ್ಷ್ಮೀ ಪ್ರೊಡಕ್ಷನ್ಸ್
ಪ್ರೊ: ಜೈಜಗದೀಶ್, ಆರ್.ದುಶ್ಯಂತ್ ಸಿಂಗ್
ನಿ: ಎಸ್.ವಿ.ರಾಜೇಂದ್ರಸಿಂಗ್ ಬಾಬು
ಸ.ನಿ: ಕಿಟ್ಟಿ, ರಂಗಮಂಚ
ಅ: ಶಿವರಾಜ್ ಕುಮಾರ್, ರಮೇಶ್, ಶಿಲ್ಪಾ, ವಿಜಯ ಲಕ್ಷ್ಮಿ, ವನಿತಾ, ಲೋಕೇಶ್. ಜಿ.ಕೆ.ಗೋವಿಂದರಾವ್, ವಾಸುದೇವ ರಾವ್, ಗಿರಿಜಾ ಲೋಕೇಶ್, ತಂಗಮ್ಮ, ಶಂಕರ್ ಅಶ್ವತ್ಥ್, ಹೊನ್ನವಳ್ಳಿ ಕೃಷ್ಣ, ಕರಿಬಸವಯ್ಯ, ಶ್ರೀಶೈಲನ್
ಕ: /ಚಿ.ಕ: ಎಸ್.ವಿ.ರಾಜೇಂದ್ರಸಿಂಗ್ ಬಾಬು
ಮಾ: ಸುರೇಂದ್ರನಾಥ್ (ಸೂರಿ)
ಗೀ: ವಾಮನ ಬೇಂದ್ರೆ, ವಿ.ಮನೋಹರ್
ಗಾ: ಚಿತ್ರಾ, ರಾಜೇಶ್, ರಮೇಶ್ ಚಂದ್ರ, ಸೌಮ್ಯ, ಡಾ। ರಾಜಕುಮಾರ್
ಸಂ: ಸುರೇಶ್ ಅರಸ್
ಛಾ: ಬಿ.ಸಿ.ಗೌರಿಶಂಕರ್
ಕಲೆ: ಕೃಷ್ಣಾಚಾರ್
ಸ: ವಿ.ಮನೋಹರ್
ನೃ: ಸಂಪತ್ ರಾಜ್, ಉಡುಪಿ ಜಯರಾಂ ದೇವಿ
ಸಾ: ಜ್ಯೂಡೋ ರತ್ನಂ
ವ: ಮುತ್ತು, ಅಂಜನ, ವಿಜಯಲಕ್ಷ್ಮಿಸಿಂಗ್
ಪ್ರ: ನಾಗರಾಜ್
ಹಾ: ೧)'ನೇಸರ ನೇಸರ ...', ೨)'ಲೀಲಿ ಗಾಗಾ... ', ೩)' ಸಾ...ಪಾ...ನಿ...ಸಾ......', ೪)'ನಾ ಪ್ರೀತಿಯ ಹುಡುಗ...', ೫) 'ಜುಮಕಾ ಜುಮಕಾ...', ೬)'ಭೂಮಿ ತಾಯಿಯ ಚೊಚ್ಚಲ ಮಗ...'
ವಿ: ರಾಜ್ಯಪ್ರಶಸ್ತಿ ೧೯೯೭-೯೮ ಅತ್ಯುತ್ತಮ ಕಥಾ ಲೇಖಕ (ಎಸ್. ವಿ. ರಾಜೇಂದ್ರಸಿಂಗ್ ಬಾಬು), ಅತ್ಯುತ್ತಮ ಸಂಭಾಷಣೆ (ಎಸ್. ಸುರೇಂದ್ರನಾಥ್), ವಿಶೇಷ ಸಮಾಜಿಕ ಪರಿಣಾಮ ಬೀರುವ ಚಿತ್ರ.
ಕ.ಸಾ: ಒಬ್ಬ ಭೂಮಿ ತಾಯಿಯ ಸೇವಕ; ಇನ್ನೊಬ್ಬ ಕಮೀಷನರ್. ಇಬ್ಬರೂ ಪ್ರಾಣ ಸ್ನೇಹಿತರು. ಭೂತಾಯಿಯ ಸೇವಕ ರೈತರ ಪರ ಯುವಕ. ಸಂದರ್ಭಗಳು ಪ್ರಾಣ ಸ್ನೇಹಿತರನ್ನು ಮುಖಾ ಮುಖಿ ಯನ್ನಾಗಿಸಿತು. ರೈತರ ಸಮಸ್ಯೆ ಸಂಕಷ್ಟಗಳಿಗೆ ಸರ್ಕಾರದ ಬೆಂಬಲ ಪಡೆಯಲು ನಡೆಯುವ ಹೋರಾಟದಲ್ಲಿ ಯುವಕ ಸಾಯುತ್ತಾನೆ. ಅಂತಿಮವಾಗಿ ಆತನ ಆದರ್ಶಗಳಿಗೆ ಜಯ.

೧೯೧೨. ವೀರಣ್ಣ

(೧೯೯೮ / ವರ್ಣ / ಸಾಮಾಜಿಕ)
ಲಾ: ತನು ಚಿತ್ರ
ಪ್ರೊ: ಸಾ.ರಾ.ಗೋವಿಂದು
ನಿ: ಹೆಚ್.ವಾಸು
ಸ.ನಿ: ಬಿ.ದೇವರಾಜ್ ಪಾಲನ್, ವೀರೇಶ್, ಅಕ್ಷಯ್
ಅ: ಜಗ್ಗೇಶ್, ರವಳಿ, ಶ್ರೀನಾಥ್, ಧೀರೇಂದ್ರ ಗೋಪಾಲ್, ಟೆನ್ನಿಸ್ ಕೃಷ್ಣ, ಹೊನ್ನವಳ್ಳಿ ಕೃಷ್ಣ, ವೆಂಕಟೇಶ್, ಲೋಕನಾಥ್, ಜ್ಯೋತಿ, ಪಾರ್ವತಿ ಲೋಕೇಶ್
ಕ/ಚಿ.ಕ: ಹೆಚ್.ವಾಸು
ಮಾ: ಹೆಚ್.ವಾಸು, ರಾ. ಪ್ರಕಾಶ್ ತ್ರಿಶೂಲಿ
ಗೀ: ರಾ. ಪ್ರಕಾಶ್ ತ್ರಿಶೂಲಿ, ಕಲ್ಯಾಣ್, ದೊಡ್ಡರಂಗೇಗೌಡ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಅನುರಾಧಾ ಶ್ರೀರಾಂ, ರಾಜೇಶ್, ಸೌಮ್ಯ
ಸಂ: ಆರ್.ಶ್ಯಾಂ ಯಾದವ್
ಛಾ: ಜೆ.ಜಿ.ಕೃಷ್ಣ
ಕಲೆ: ಆರ್.ಕೆ.ಸುಂದರಂ
ಸ: ಎಸ್.ರಾಜಾ
ಧ್ವ: ಪ್ರಸಾದ್
ನೃ: ಪ್ರಸಾದ್
ಸಾ: ಕೆ.ಡಿ.ವೆಂಕಟೇಶ್
ವ: ನಾಗರಾಜ್
ಪ್ರ: ಮಾದೇಗೌಡ
ಹಾ: ೧)'ಮುದು ಮುದ್ದಾದ ...', ೨)'ಬುಕು ಬುಕು ರೈಲು ಗಾಡಿಯ...', ೩)'ವ ಬಾಲೆ ಹೇಳೆ, ರಾಗಿ ಮುದ್ದೆ...', ೪)'ಓ ಪ್ರೇಮದ ತುತ್ತೂರಿ...', ೫)'ಮುಂಗಾರು ನವಿಲು ನೀನು...'
ಕ.ಸಾ: ಹಳ್ಳಿಯ ಎರಡು ಕುಟುಂಬಗಳ ನಡುವೆ ದ್ವೇಷ. ಗೌಡನ ಮಗನ ಆಟಾಟೋಪವನ್ನು ಬಗ್ಗುಬಡಿದ ಹಳ್ಳಿ ಮುಗ್ಧ ಗೌಡನ ದ್ವೇಷಕ್ಕೆ ಸಿಕ್ಕಿ, ಮೂರು ತಿಂಗಳೊಳಗೆ ಗೌಡನ ಸಾಲ ತೀರಿಸುವ ಛಲ ಹೊತ್ತು ಪಟ್ಟಣಕ್ಕೆ ಬರುತ್ತಾನೆ. ಪಟ್ಟಣದಲ್ಲಿ ದುರಹಂಕಾರಿ ನಾಯಕಿಯ ಭೇಟಿ. ಹಲವು ರೀತಿಯಲ್ಲಿ ವಂಚನೆಗೆ ಸಿಲುಕಿದ ನಾಯಕನನ್ನು ಅಪ್ಪ ಬರೆದ ವಿಲ್‌ಗಾಗಿ ನಾಯಕಿ ಮದುವೆಯಾಗುವ ನಾಟಕವಾಡುತ್ತಾಳೆ. ವಿಲ್‌ನಂತೆ ಆಸ್ತಿ ಪಡೆಯಲು ನಾಯಕಿ ಇನ್ನಿಲ್ಲದ ಸಂಚು ಮಾಡುತ್ತಾಳೆ. ಗೌಡನ ತಂಗಿಯ ಮಗಳಿಗೆ ನಾಯಕನಲ್ಲಿ ಪ್ರೀತಿ. ಗೌಡನ ಮಗನಿಗೆ ಸೋದರತ್ತೆಯ ಮಗಳ ಮೇಲೆ ಮೋಹ. ಪಟ್ಟಣದ ಹುಡುಗಿಯ ನರವಿನಿಂದ ಗೌಡನ ಮಗ ಅವಳ ಮಾನಭಂಗ ಮಾಡಿ ಅವಳು ಬಸುರಾಗುತ್ತಾಳೆ. ಅಪವಾದ ನಾಯಕನ ತಲೆಗೆ. ಪಟ್ಟಣದ ಹುಡುಗಿಗೆ ಜ್ಞಾನೋದಯ. ಅಂತ್ಯದಲ್ಲಿ ಎಲ್ಲರೂ ಒಂದಾಗುವರು.

೧೯೧೩. ಹೆಂಡ್ತಿಗೇಳ್ತೀನಿ

(೧೯೯೮ / ವರ್ಣ / ಸಾಮಾಜಿಕ)
ಲಾ: ಜಿ.ಎಂ.ಜಿ. ಕ್ರಿಯೇಷನ್ಸ್
ಪ್ರೊ: ಪಿ.ಎಸ್. ಜ್ಞಾನೇಶ್ವರ್, ಎ.ಎಸ್. ಮಣಿ, ಎ. ಗೋಪಿ
ನಿ: ದಿನೇಶ್ ಬಾಬು

ಸ.ನಿ: ಸುರೇಶ್ ರಾಜ್
ಅ: ವಿಷ್ಣುವರ್ಧನ್, ಸುಹಾಸಿನಿ, ವಾಣಿಶ್ರೀ, ಪವಿತ್ರಾ ಲೋಕೇಶ್, ಸಿಹಿಕಹಿ ಚಂದ್ರು, ಜ್ಯೋತಿ, ಬುಲೆಟ್ ಪ್ರಕಾಶ್, ಸವಿತಾ ಪುರಾಣಿಕ್, ರಾಜೇಂದ್ರ ಕಟ್ಟಿ
ಕ/ಚಿ.ಕ/ಮಾ: ದಿನೇಶ್ ಬಾಬು
ಗೀ: ಕೆ. ಕಲ್ಯಾಣ್
ಗಾ: ರಾಜೇಶ್, ಚಿತ್ರಾ, ರಮೇಶ್ ಚಂದ್ರ, ಶಂಕರ್ ಶ್ಯಾನ್‌ಭಾಗ್
ಸಂ: ಬಿ.ಎಸ್. ಕೆಂಪರಾಜ್
ಕಲೆ: ರಮೇಶ್‌ಬಾಬು
ಸ: ವಿ.ಮನೋಹರ್
ಧ್ವ: ಚಾಮುಂಡೇಶ್ವರಿ
ಸ್ಟು: ಚಾಮುಂಡೇಶ್ವರಿ
ಹಾ: ೧)'ಸುವ್ವಾಲೆ ಸುವ್ವಾಲೆ...', ೨)' ಚಿನ್ನಾರಿ ಚಿನ್ನಾರಿ...', ೩)' ಚೆಲುವು ಚೆಲುವೇ...', ೪)'ಹಾಸ್ಯಗೀತೆ...', ೫)'ಅಪ್ಸರ ಅಪ್ಸರ...'
ಕ.ಸಾ: ಹಳದಿ ಬಟ್ಟೆ ಹೆಂಗಸರನ್ನು ಕಂಡರೆ ಅವರತ್ತ ವಾಲುವ ಗಂಡ. ಅನ್ಯೋನ್ಯವಾಗಿ ಪ್ರೀತಿಸಿದರೂ ಅನುಮಾನಿಸುವ ಹೆಂಡತಿ. ಅವಳ ಅನುಮಾನ ತೊಡೆಯಲು ಸುಳ್ಳುಹೇಳುವ ಪತಿರಾಯ. ಮನೆ ಕೆಲಸದವಳು, ಹೆಂಡತಿಯ ತಮ್ಮ, ಅವನ ಹೆಂಡತಿ ಇವರ ಸುತ್ತ ಹರಿಯುವ ಕಥೆ. ನಂತರದಲ್ಲಿ ಮಕ್ಕಳಿಲ್ಲದ ದಂಪತಿಗಳಿಗೆ ಮಗುವಿನ ಬಯಕೆ. ಗಂಡ ಅನಾಥಾಲಯದಿಂದ ಮಗುವೊಂದನ್ನು ತಂದು. ಅದು ತನ್ನ ಗೆಳೆಯನದೆಂದು ಸುಳ್ಳು ಹೇಳುವಷ್ಟರಲ್ಲಿ ಅಂತಹುದೇ ಕಥೆಯುಳ್ಳ ಒಂದು ಮಗು ಮನೆಯಲ್ಲಿ. ಹೀಗೆ ಹಾಸ್ಯ, ಮಾನಸಿಕ ತುಮುಲಭರಿತ ಕಥೆ.

೧೯೧೪. ಥ್ರಿಲ್ಲರ್ ಕಿಲ್ಲರ್

(೧೯೯೮ / ವರ್ಣ / ಸಾಮಾಜಿಕ)
ಲಾ: ರಜತ ಫಿಲಂ ಇಂಟರ್‌ನ್ಯಾಷನಲ್
ಪ್ರೊ: ಶ್ರೀಮತಿ ಗೀತಾ, ಶ್ರೀಮತಿ ಆರ್. ಈಶ್ವರಿ
ನಿ: ಥ್ರಿಲ್ಲರ್ ಮಂಜು
ಅ: ಥ್ರಿಲ್ಲರ್ ಮಂಜು, ಅಖಿಲಾ, ರೇಮಂಡ್ ಡಿಸೋಜಾ, ರವಿ
ಕ: ಥ್ರಿಲ್ಲರ್ ಮಂಜು
ಚಿ.ಕ/ಮಾ: ಕೀರ್ತಿರಾಜ್
ಗೀ: ಕೆ.ಕಲ್ಯಾಣ್
ಸಂ: ಆರ್.ಜನಾರ್ದನ್
ಛಾ: ಜನಾರ್ದನ್. ಬಾಬು
ಸ: 'ಶ್ರೀ'
ಧ್ವ: ಪ್ರಸಾದ್ ಸ್ಟುಡಿಯೋ
ಸ್ಟು: ಅಬ್ಬಾಯಿ ನಾಯ್ಡು ಸ್ಟುಡಿಯೋ
ಹಾ: ೧)' ರೋಜ ಓ ಮೈ ರೋಜ...', ೨)' ಬೆಳ್ಳಿಚುಕ್ಕಿ ಬೆಳ್ಳಿ ಚುಕ್ಕಿ...', ೩)' ಪ್ರೇಮವೆಂದರ ಎರಡು...', ೪)' ತಾವರೆ ಕೆಂದಾವರೆ ನೀ ಹೆಜ್ಜೆ...'
ಕ.ಸಾ: ಪ್ರೇಮ ವಿರೋಧಿ ನಾಯಕನ ಪ್ರೀತಿ ಗಳಿಸಲು ನಾಯಕಿ, ಇಬ್ಬರ ಕೈಗೂ ಚಾಕುವಿನಿಂದ ಗೀರಿ ರಕ್ತ ಮಿಲನ ಮಾಡಿಸುತ್ತಾಳೆ. ಅದಕ್ಕೆ ಕಾರಣ ನಾಯಕನಿರುವ ಗ್ಯಾಂಗ್ ತನ್ನ ಕುಟುಂಬವನ್ನೇ ನಾಶಮಾಡಿದುದಕ್ಕೇ ತೀರಿಸಿಕೊಳ್ಳ ಬಯಸಿದ ಸೇಡು. ಪ್ರೀತಿಯ ನಾಟಕವಾಡಿ ಗ್ಯಾಂಗ್ ನವರನೆಲ್ಲಾ ಕೊಲ್ಲುವ ನಾಯಕಿಯ ಮನ ಒಲಿಸಲು ನಾಯಕ ಪ್ರಯತ್ನಿಸುತ್ತಾನೆ. ಅವಳ ಪ್ರೇಮ ಗಳಿಸುವಲ್ಲಿ ಯಶಸ್ವಿಯೂ ಆಗುತ್ತಾನೆ. ಹೊಡೆದಾಟ-ಬಡಿದಾಟಗಳೊಂದಿಗೆ, ಚಿರತೆ, ಹೆಬ್ಬಾವು ಮತ್ತಿತರ ಕಾಡುಪ್ರಾಣಿಗಳ ಸಾಹಸವೂ ಕಥೆಯಲ್ಲಿದೆ.

೧೯೧೫. ತವರಿನ ಕಾಣಿಕೆ

(೧೯೯೮ / ವರ್ಣ / ಸಾಮಾಜಿಕ)
ಲಾ: ಶ್ರೀ ಲಕ್ಷ್ಮಿ ವೆಂಕಟೇಶ್ವರ ಪಿಕ್ಚರ್ಸ್
ಪ್ರೊ/ನಿ: ಬಿ.ಗುರುರಾಜ್
ಸ.ನಿ: ಕಲ್ಪತರು ಕೃಷ್ಣ ಕುಮಾರ್
ಅ: ಶ್ರೀನಿವಾಸ ಮೂರ್ತಿ, ಗಿರಿಜಾ ಲೋಕೇಶ್, ರಾಮ್ ಕುಮಾರ್, ಶ್ರೀವತ್ಸ, ವಾಣಿಶ್ರೀ, ರೇಖಾ ದಾಸ್, ಮುಖ್ಯಮಂತ್ರಿ ಚಂದ್ರು, ಪ್ರಕಾಶ್, ಅರವಿಂದ್, ರತ್ನಾಕರ್, ಸುರೇಶ್
ಕ: ಬಿ.ಗುರುರಾಜ್
ಚಿ.ಕ/ಮಾ: ಬಿ.ಎ.ಮಧು
ಗೀ: ಶ್ರೀರಂಗ, ಸು. ರುದ್ರಮೂರ್ತಿಶಾಸ್ತ್ರಿ, ವಿ.ಮನೋಹರ್, ಬಿ. ಗುರುರಾಜ್
ಗಾ: ಚಿತ್ರಾ, ರಾಜೇಶ್, ಮಂಜುಳಾ ಗುರುರಾಜ್
ಸಂ: ಆರ್.ರಾಜಶೇಖರ್ ರೆಡ್ಡಿ
ಛಾ: ಮಲ್ಲಿಕಾರ್ಜುನ
ಸ: ವಿ.ಮನೋಹರ್
ಧ್ವ: ಆಕಾಶ್
ನೃ: ಪ್ರಸಾದ್ ರೇಖಾ
ಸಾ: ಸೂರ್ಯ ಪ್ರಕಾಶ್
ವ: ಸೋಮು
ಹಾ: ೧)'ಅಪರಂಜಿ ಈ ಜೋಡಿಗಳಿಗೆ...', ೨)'ಎಂತಹ ಜಾಮ ಇದು...', ೩)'ಚಂದ್ರಮುಖಿ ಚಂದ್ರಮಂಚ...', ೪)' ಚೆಲುವ ಚೆಲುವ...', ೫)' ಮಮಮಗನೆ ಹಲೋ...',
ಕ.ಸಾ: ರಾಮಣ್ಣ ಒಬ್ಬ ಗುಮಾಸ್ತ. ಒಬ್ಬ ಮಗ ಎರಡು ಹೆಣ್ಣು ಮಕ್ಕಳು ಆತನಿಗೆ. ಪದವೀಧರ ರವಿ ಉದ್ಯೋಗಕ್ಕಾಗಿ ಅಲೆಯುತ್ತಿದ್ದ. ಶ್ರೀಮಂತ ಕನ್ಯೆಯೊಬ್ಬಳು ಅವನನ್ನೇ ಮದುವೆಯಾಗುವ ಹಠ ಹಿಡಿದಳು. ರಾಮಣ್ಣನ ಹಿರಿಯ ಮಗಳು ರಾಧಾಳನ್ನು ನೋಡಲು ಬಂದ ವರ ಒಪ್ಪಿಕೊಳ್ಳುವ ವೇಳೆಗೆ ಕಿರಿಯ ಮಗಳು ರುಕ್ಮಿಣಿ ಮದುವೆಗೆ ಮುಂಚೆಯೇ ಗರ್ಭಿಣಿಯಾದಳು. ಇದರಿಂದ ರಾಧಾಳ ಮದುವೆ ತಪ್ಪಿಹೋಯಿತು. ರುಕ್ಮಿಣಿಯ ಸ್ಥಿತಿಗೆ ಕಾರಣನಾದವ ಕೇಳಿದ ಮೊತ್ತ ನೀಡಲು ರಾಮಣ್ಣ ನಿವೃತ್ತಿ ಪಡೆದು ತಂದ ಹಣವನ್ನು ತಂಗಿ ಭಾವ ಕದ್ದರು. ಅವಮಾನ ತಾಳಲಾಗದೆ ರಾಮಣ್ಣ ಆತ್ಮಹತ್ಯೆ ಮಾಡಿಕೊಂಡ. ಅವನ ಸಂಸಾರದ ಗತಿ ದುರ್ಭರವಾಯಿತು. ಮಗ ಕೂಲಿಗಿಳಿದ. ಅವನನ್ನು ಪ್ರೀತಿಸಿದ ಹುಡುಗಿಗೆ ಬೇರೆ ಮದುವೆ ಏರ್ಪಾಟಾದಾಗ ಆವಳನ್ನು ಪಾರು ಮಾಡಿ ಮದುವೆಯಾದ. ತಾಯಿಯೂ ಮರಣಿಸಿದಳು. ಹಿಂದೊಮ್ಮೆ ರವಿಯಿಂದ ಉಪಕೃತನಾದ ಶ್ರೀಮಂತರ ನೆರವಿನಿಂದ ರವಿ ಉದ್ಧಾರವಾದ. ಮಾವನ ಕಿತಾಪತಿ, ಗಳಿಸಿದ ಆಸ್ತಿಯಲ್ಲವನ್ನು ರವಿ ತಂಗಿಯರಿಗೆ ನೀಡಿದ. ಕೈ ಹಿಡಿದವಳು ಮಿದುಳು ಜ್ವರದಿಂದ ಅಸುನೀಗಿದಳು. ಸರ್ವಸ್ವವನ್ನು ತೊರೆದ ರವಿ ಏಕಾಂಗಿಯಾಗಿ ನಡೆದ.

೧೯೧೬. ಗಡಿಬಿಡಿಕೃಷ್ಣ

(೧೯೯೮ / ವರ್ಣ / ಸಾಮಾಜಿಕ)
ಲಾ: ಚಿನ್ನಿ ಚಿತ್ರ
ಪ್ರೊ: ಎಸ್.ಆರ್.ಭಾರತೀದೇವಿ
ನಿ: ಸಾಯಿಪ್ರಕಾಶ್

ಸ.ನಿ: ಎಸ್.ವಿ.ರವಿಕುಮಾರ್, ಆರ್.ವಿ.ಗಿರೀಶ್ ಕುಮಾರ್, ಹರ್ಷ, ಲಿಂಗರಾಜ್ ಕಗ್ಗಲ್
ಅ: ಶಿವರಾಜ್ ಕುಮಾರ್ (ದ್ವಿಪಾತ್ರ), ಇಂದ್ರಜ, ರವಳಿ, ಸಿ.ಆರ್.ಸಿಂಹ, ಮುಖ್ಯಮಂತ್ರಿ ಚಂದ್ರು, ಬಿ.ವಿ.ರಾಧಾ, ಅವಿನಾಶ್, ಉಮೇಶ್, ಚಾರುಲತಾ, ರಮೇಶ್ ಭಟ್, ಸಿಹಿಕಹಿ ಚಂದ್ರು, ತಾರಾ, ವಾಣಿಶ್ರೀ,
ಕ: ಚಿನ್ನಿ ಚಿತ್ರ ಕಥಾ ವಿಭಾಗ
ಚಿ.ಕ: ಜಿ.ಕೆ.ಭಾರವಿ
ಮಾ: ಕುಣಿಗಲ್ ನಾಗಭೂಷಣ್
ಗೀ: ಹಂಸಲೇಖ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಸೌಮ್ಯ, ಲತಾ ಹಂಸಲೇಖ, ರತ್ನಮಾಲಾ ಪ್ರಕಾಶ್, ರಾಜಕುಮಾರ್, ರಾಜೇಶ್
ಸಂ: ಕೆ.ನರಸಯ್ಯ
ಛಾ: ವಿಜಯ ಕುಮಾರ್
ಕಲೆ: ಇಸ್ಮಾಯಿಲ್, ಸೂರ್ಯನಾರಾಯಣ
ಸ: ಹಂಸಲೇಖ
ನೃ: ತಾರಾ
ಸಾ: ಕಿಂಗ್ ಪಳನಿರಾಜ್
ಹಾ: ೧)'ಟಕ ಟಕ ಟಕಾಯ್ಸು ಲಗ ಲಗಾ ಲಗಾಯ್ಸು...', ೨) 'ಏನೇ ಇದು ಮುಖದಲ್ಲೆಲ್ಲ ರಾಕು...', ೩)' ಬಾರೇ ಬಾರೆ ನಡೆವರೆ ಅಂಕು ಡೊಂಕಮ್ಮ...', ೪)' ಹೇ ಕನಸಿನ ಟೀವೀಲಿ ದಿನಾ ಬರ್ತಾನಪ್ಪ...', ೫) 'ರಾಧ ರಾಧ ಗಿಲ್‌ಕಿ ಹೋ ಗಿಲ್‌ಕಿ ಹೋ...', ೬)'ತಮ್ಮ ತಮ್ಮ ಕೇಳೋ ಲೇ ತಮ್ಮ ತಮ್ಮ...',
ಕ.ಸಾ: ಬಾಲ್ಯದಲ್ಲಿಯೇ ಬೇರ್ಪಟ್ಟ ಅವಳಿಗಳು ವಿಭಿನ್ನ ತರದಲ್ಲಿ ಬೆಳೆದವು. ಒಬ್ಬ ಮೇಲೆ ಬೀಳುವ ತೀವ್ರಗಾಮಿ ಇನ್ನೊಬ್ಬ ಮೃದು ಸ್ವಭಾವದ ವೈದ್ಯ. ವೈದ್ಯ ತನ್ನಂತಯೇ ಇರುವುದನ್ನು ಕಂಡ ತೀವ್ರಗಾಮಿ, ತದ್ರೂಪವನ್ನು ಹಣಗಳಿಸುವ ಮೂಲವನ್ನಾಗಿಸಿಕೊಂಡ ವೈದ್ಯ ಹಳ್ಳಿಯೊಂದರಲ್ಲಿ ತಾಯಿಯ ಮಮತೆ, ಪ್ರೇಯಸಿಯ ಒಲವು ಗಳಿಸಿದ. ತದ್ರೂಪದ ಲಾಭ ಪಡೆಯಲು ಗ್ಯಾಂಗ್ ಇಬ್ಬರನ್ನೂ ಅಪಹರಿಸಿದಾಗ ಇಬ್ಬರೂ ಅವಳಿಗಳೆಂಬ ಸತ್ಯ ಹೊರಬಿತ್ತು.

೧೯೧೭. ಕಿಂಗ್

(೧೯೯೮ / ವರ್ಣ / ಸಾಮಾಜಿಕ)
ಲಾ: ಎಸ್.ಪಿ.ಮೂವೀಸ್
ಪ್ರೊ: ಹೆಚ್.ವಿ.ಸದಾನಂದ, ಎನ್.ರವಿಕುಮಾರ್
ನಿ: ಶ್ರೀಕಾಂತ ಕುಲಕರ್ಣಿ
ಸ.ನಿ: ಸರಿಗಮ ವಿಜಿ

ಅ: ಪ್ರಭಾಕರ್ (ದ್ವಿಪಾತ್ರ), ಅರುಣ್ ಪಾಂಡ್ಯನ್, ಮನದೀಪ್ ರಾಯ್, ಅಂಜು, ಜ್ಯೋತಿ, ಸುಂದರರಾಜ್, ವಿಜಯಕಾಶಿ, ರಾಜಾನಂದ್, ಧೀರೇಂದ್ರ ಗೋಪಾಲ್, ಪೃಥ್ವಿರಾಜ್, ವಿಶ್ವಪ್ರಿಯ

ಕ/ಚಿ.ಕ: ಪ್ರಭಾಕರ್

ಮಾ: ಸರಿಗಮ ವಿಜಿ

ಗೀ: ಗೀತಪ್ರಿಯ, ಕೆ.ಕಲ್ಯಾಣ್, ನಾಗೇಂದ್ರ ಮಾಗಡಿ, ದೊಡ್ಡರಂಗೇಗೌಡ

ಗಾ: ಎಲ್.ಎನ್.ಶಾಸ್ತ್ರೀ, ಮಂಜುಳಾ ಗುರುರಾಜ್, ಬಿ.ಆರ್.ಛಾಯಾ, ರಾಜೇಶ್, ಶಂಕರ್ ಶ್ಯಾನ್‌ಭಾಗ್, ವಾಣಿ

ಸಂ: ಕೆ.ನರಸಯ್ಯ

ಛಾ: ಮಲ್ಲಿಕಾರ್ಜುನ್

ಸ: ದೇವಾ

ಧ್ವ: ಪೀಟರ್

ನೃ: ಸಂಪತ್

ಸಾ: ನಂಜುಂಡಿ ನಾಗರಾಜ್

ವ: ವಿಜಿ

ಪ್ರ: ಗೋಪಾಲ್, ಕೇಶ: ನಾಗೇಶ್ವರರಾವ್

ಸ್ಟು: ಚಾಮುಂಡೇಶ್ವರಿ

ಕ.ಸಾ: ಅವಳಿ ಜವಳಿ ಮಕ್ಕಳು. ಸಿಂಹಾಸನವನ್ನೇರಲು ಇತರರ ಸಂಚು. ಇಬ್ಬರಲ್ಲಿ ಒಬ್ಬ ಹೆಣ್ಣು ಮತ್ತು ಹಂಡದ ವ್ಯಸನಿ. ಎಲ್ಲಾ ಸರಿಹೋಗುವಷ್ಟರಲ್ಲಿ ಮತ್ತೊಬ್ಬನ ಪ್ರವೇಶದಿಂದ ನಿಜವಾದ ವಾರಸುದಾರನ ನಿಶ್ಚಯ

೧೯೧೮. ಪ್ರೀತ್ಸೋದ್ ತಪ್ಪಾ

(೧೯೯೮ / ವರ್ಣ / ಸಾಮಾಜಿಕ)

ಲಾ: ರಾಕ್‌ಲೈನ್ ಪ್ರೊಡಕ್ಷನ್

ಪ್ರೊ: ರಾಕ್‌ಲೈನ್ ವೆಂಕಟೇಶ್

ನಿ: ವಿ.ರವಿಚಂದ್ರನ್

ಸ.ನಿ: ಸೋಮರಾಜ್, ಬಿ.ವಿ.ಅರುಣ್ ಕುಮಾರ್

ಅ: ರವಿಚಂದ್ರನ್, ಶಿಲ್ಪಾ ಶೆಟ್ಟಿ, ಪ್ರಕಾಶ್ ರೈ, ವಿನಯಾ ಪ್ರಸಾದ್, ಲಕ್ಷ್ಮಣ್, ಲೋಕೇಶ್, ಶ್ರೀನಿವಾಸ ಮೂರ್ತಿ, ಸತ್ಯಜಿತ್, ಲಕ್ಷ್ಮಿ, ಪಿ.ವಿಜಯ, ಉಮಾಶ್ರೀ, ಟೆನ್ನಿಸ್ ಕೃಷ್ಣ, ಪ್ರಸನ್ನ, ರಮೇಶ್ ಭಟ್, ಬೇಬಿ ಅಪರ್ಣ, ಅಪರ್ಣ, ಸುಚಿತ್ರಾ,

ಕ: 'ಪಿನ್ನೀ ಪೆಳ್ಳಾಡ್ತಾ' ತೆಲುಗು ಚಿತ್ರದ ಕನ್ನಡ ರೂಪಾಂತರ

ಚಿ.ಕ/ಮಾ: ವಿ.ರವಿಚಂದ್ರನ್

ಗೀ: ಹಂಸಲೇಖ

ಗಾ: ರಾಜೇಶ್, ಚಿತ್ರಾ, ಸುಜಾತಾ, ಜೇಸುದಾಸ್, ಅನುರಾಧಾ ಶ್ರೀರಾಮ್, ಎಲ್.ಎನ್.ಶಾಸ್ತ್ರಿ

ಸಂ: ಶ್ಯಾಂ

ಛಾ: ಜಿ.ವಿ.ಎಸ್. ಸೀತಾರಾಂ

ಕಲೆ: ಅರುಣ್ ಕುಮಾರ್

ಸ: ಹಂಸಲೇಖ

ಧ್ವ: ಆಕಾಶ್ ಆಡಿಯೋ

ನೃ: ಬೃಂದಾ

ಸಾ: ಪಾಲಿ

ಹಾ: ೧) 'ಚೋರಿಯಾಗಿದೆ ನನ್ನ ದಿಲ್...', ೨) ' ಒಂದು ಮೋಡ ಒಂದು ಹನಿಯ ಚಳಿ...', ೩) ' ಏನಿದು ಮಾಯೆ ಮನಸಿನ ಮುಗಿಲಲಿ...', ೪) ' ಬಂಗಾರದಿಂದ ಬಣ್ಣನ ತಂದ...', ೫) ' ಚುಕ್ಕು ಬುಕ್ಕು ಹಾಂ ಸಿಕ್ಕಿಬಿತ್ತು ಕಳ್ಳ ಬೇಕು...', ೬) ' ರಾಜ ರಾಜ, ಹಂಗಿರಬೇಕು ಗೊತ್ತಾ ನನ್ನ ರಾಜಾ...'

ವಿ: ಹಿಂದಿಯ ಶಿಲ್ಪಾಶೆಟ್ಟಿ ಅಭಿನಯ.

ಕ.ಸಾ: ದೂರಾದ ಎರಡು ಕುಟುಂಬಗಳು. ರಕ್ತ ಸಂಬಂಧಿಗಳು. ಎರಡು ಮನೆಗಳ ಮುರಿದು ಹೋದ ಮನಸ್ಸನ್ನು ಒಂದು ಮಾಡುವ ಇಬ್ಬರು ಯುವ ಪ್ರೇಮಿಗಳು.

೧೯೧೯. ನಂಬರ್ ಒನ್

(೧೯೯೮ / ವರ್ಣ / ಸಾಮಾಜಿಕ)

ಲಾ: ಸುರಾಗ್ ಫಿಲಂಸ್

ಪ್ರೊ: ಶ್ರೀಮತಿ ಮೇರಿ ಸರೀನಾ

ನಿ: ಕೆ.ವಿ.ರಾಜು

ಸ.ನಿ: ಎಂ.ರುದ್ರೇಶ್

ಅ: ರಾಜ್ ಕುಮಾರ್, ವಿಜಯಲಕ್ಷ್ಮಿ, ಸಾಧುಕೋಕಿಲ, ಭಾವನಾ, ಹರ್ಷ ವರ್ಧನ್, ಅವಿನಾಶ್, ಮಂಡ್ಯ ರಮೇಶ್

ಕ/ಚಿ.ಕ/ಮಾ: ಕೆ.ವಿ.ರಾಜು

ಗೀ: ಕೆ.ವಿ.ರಾಜು, ಶ್ರೀರಂಗ, ಕೆ.ಕಲ್ಯಾಣ್

ಸಂ: ಶಿವು ಅರಸ್, ಕೆಂಪರಾಜ್

ಛಾ: ಪಿ.ಡಿ.ರಾಜು

ಸ: ಸಾಧುಕೋಕಿಲ

ಧ್ವ: ಸಂಕೇತ್

ನೃ: ಪ್ರಸಾದ್

ಸಾ: ಕೆ.ಡಿ.ವೆಂಕಟೇಶ್

ವ: ರಾಮನಾಥ್

ಪ್ರ: ಮುರಳಿ

ಕ.ಸಾ: ತಾನು ಸೃಷ್ಟಿಸುವ ಪಾತ್ರಗಳಿಗೆ ನಿಜ ಜೀವನದ ಸ್ಫೂರ್ತಿ ಪಡೆಯ ಬಯಸುವ ಲೇಖಕಿಯೊಬ್ಬಳು ಪಾತ್ರಗಳ ವಿಶ್ಲೇಷಣೆಗೆಂದು ಗಿರಿಧಾಮವೊಂದಕ್ಕೆ ಬಂದಾಗ, ಗೈಡ್ ಆಕೆಯ ಮೆಚ್ಚುಗೆಗೆ ಪಾತ್ರನಾದ. ವಿಕ್ಷಿಪ್ತ ಮನಸ್ಸಿನವನೊಬ್ಬ ಮಾಡಿದ ಕೊಲೆಯ ಸುಳಿಯಲ್ಲಿ ಅವಳು ಸಿಲುಕಿಕೊಂಡಳು. ಗೈಡ್ ಅವಳನ್ನು ಆ ಸುಳಿಯಿಂದ ಬಚಾವು ಮಾಡಿದ. ಇದೊಂದು ಪ್ರೇಮ ಕೌತುಕತೆಯ ಸಮ್ಮಿಲನ.

೧೯೨೦. ಗೌರ್ನಮೆಂಟ್

(೧೯೯೮ / ವರ್ಣ / ಸಾಮಾಜಿಕ)

ಲಾ: ಶ್ರೀ ಅನ್ನಪೂರ್ಣೇಶ್ವರಿ ಪ್ರೊಡಕ್ಷನ್ಸ್

ಪ್ರೊ: ಎಸ್.ಕುಮಾರ್, ಎಸ್.ವಿ. ಕೃಷ್ಣ, ಪ್ರವೀಣ್, ಆರ್. ಗಂಗಾಧರ್

ನಿ: ಓಂ ಪ್ರಕಾಶ್

ಸ.ನಿ: ಆರ್.ಸಿ.ರಂಗಾ



ಅ: ವಿನೋದ್ ಆಳ್ವ, ನೆಪೋಲಿಯನ್, ರಘುವರನ್, ರಂಜಿತಾ, ಅವಿನಾಶ್, ಕಾಸ್ಟ್ಯೂಮ್ ಕೃಷ್ಣ, ಮುಖ್ಯಮಂತ್ರಿ ಚಂದ್ರು, ದೊಡ್ಡಣ್ಣ, ಭರತ್, ಮಲ್ಲೇಶ್, ಎಂ.ಎಸ್.ಕಾರಂತ್, ಚಾಯಲತಾ

ಕ:/ಚಿ.ಕ: ಓಂ ಪ್ರಕಾಶ್

ಮಾ: ಎಂ.ಎಸ್.ರಮೇಶ್

ಸಂ: ಗೌತಮ್‌ರಾಜ್

ಛಾ: ಟಿ.ಜನಾರ್ದನ್

ಕಲೆ: ಸುಭಾಷ್ ಕಡಕೋಳ್

ಸ: ಗುಣಸಿಂಗ್

ಧ್ವ: ಪ್ರಸಾದ್, ಚಾಮುಂಡೇಶ್ವರಿ

ಸಾ: ಪಳನಿರಾಜ್

ವ: ಗಂಡಸಿ ನಾಗರಾಜ್

ಪ್ರ: ಕೃಷ್ಣಮೂರ್ತಿ

ಸ್ಟು: ಚಾಮುಂಡೇಶ್ವರಿ

ಕ.ಸಾ: ಪ್ರಾಮಾಣಿಕ ಮುಖ್ಯಮಂತ್ರಿಯೊಬ್ಬ ರಾಜಕಾರಣಿಗಳು ಅನೈತಿಕವಾಗಿ ಗಳಿಸಿದ ಆಸ್ತಿಪಾಸ್ತಿಗಳ ತನಿಖೆಗೆ ಆದೇಶಿಸುತ್ತಾನೆ. ತನಿಖಾಧಿಕಾರಿಯ ಕೊಲೆಯಾಗುತ್ತದೆ. ಈ ಅಪರಾಧಗಳ ತನಿಖೆ ನಡೆಸಲು ವಿಶೇಷ ಪೋಲೀಸ್ ಅಧಿಕಾರಿಯೊಬ್ಬನ ನೇಮಕವಾಗುವುದು. ಅತ್ಯಂತ ಪ್ರಯಾಸ - ಸಾಹಸದಿಂದ ಕೊಲೆಗಡುಕರನ್ನು ಗೋದಾಮಿನಲ್ಲಿ ಬಂಧಿಸುವ ಅಧಿಕಾರಿ, ತನ್ನದೇ ಇಲಾಖೆಯ ವರಿಷ್ಠ ಅಧಿಕಾರಿ ಸಂಶಯದ ಸುಳಿಯಲ್ಲಿ ಸಿಲುಕಿದಾಗ ಆತನನ್ನೂ ಕಂಬಿ ಎಣಿಸುವಂತೆ ಮಾಡುತ್ತಾನೆ. ಮುಖ್ಯಮಂತ್ರಿ ವಹಿಸಿದ ಜವಾಬ್ದಾರಿಯನ್ನು ನಿರ್ವಂಚನೆಯಿಂದ ನಿರ್ವಹಿಸುವುದೇ ಕಥೆಯ ತಿರುಳು.

೧೯೨೧. ಶಾಂತಿ ಶಾಂತಿ ಶಾಂತಿ

(೧೯೯೮ / ವರ್ಣ / ಸಾಮಾಜಿಕ)

ಲಾ: ಗೀತಾಂಜಲಿ ಮೂವೀಸ್

ಪ್ರೊ: ಸಂಜಯ್ ದೇಸಾಯಿ

ನಿ: ಟಿ.ಬಿ.ಶ್ರೀನಿವಾಸ್

ಸ.ನಿ: ಕಲಾಗಂಗೋತ್ರಿ ಮಂಜು, ಸತೀಶ್ ಆಚಾರ್, ಆಕಾಶ್ ಹೆಗಡೆ

ಅ: ಅಬ್ಬಾಸ್, ಮಾಧವನ್, ಅವನಿ, ಪ್ರೇಮಾ, ಪ್ರಕಾಶ್ ರೈ, ಸತೀಶ್ ಷಾ, ಸಿಹಿಕಹಿ ಚಂದ್ರು, ಕೆ.ಎಸ್.ಶ್ರೀಧರ್, ಸುಮಿತ್ರಾ, ವೆಂಕಟರಾವ್, ಸುಮಲತಾ

ಕ/ಚಿ.ಕ/ಮಾ: ಟಿ.ಎ.ಶ್ರೀನಿವಾಸ್
ಗೀ: ಕೆ.ಕಲ್ಯಾಣ್
ಸಂ: ಸುರೇಶ್ ಅರಸ್
ಛಾ: ಪಿ.ಸಿ.ಶ್ರೀರಾಮ್
ಕಲೆ: ಅರುಣ್ ಕುಮಾರ್
ಸ: ಸಂದೀಪ್ ಚೌಟ
ನೃ: ಬೃಂದಾ, ತ್ರಿಭುವನ್
ಸಾ: ಕೆ.ಡಿ.ವೆಂಕಟೇಶ್
ಕ.ಸಾ: ಅನಾಥ ಯುವಕನೊಬ್ಬ ಶ್ರೀಮಂತನ ಮನೆ ಸೇರಿ ಆತನ ಮಕ್ಕಳಿಗ ಬದುಕನ್ನು ಸವಿಯುವ ಬಗ್ಗೆ ತಿಳಿಸಿಕೊಡುತ್ತಾನೆ. ಮಕ್ಕಳೆಲ್ಲರ ಅಪಹರಣ. ಐವತ್ತು ಲಕ್ಷ ಒತ್ತೆ ಹಣ. ಅಪಹರಣಕಾರರಲ್ಲಿ ಇಬ್ಬರು ಮನಸ್ಸು ಬದಲಾಯಿಸಿ ಹುಡುಗರನ್ನು ಬಿಟ್ಟು ಬಿಡುವ ಯೋಚನೆ ಮಾಡಿದರೂ, ಒತ್ತೆ ಹಣದ ಮೇಲೆ ಕಣ್ಣಿಟ್ಟ ಕ್ರೂರಿ ಬಾಸ್ ಒಪ್ಪುವುದಿಲ್ಲ. ನಾಯಕ ಮಿಕ್ಕ ಹುಡುಗರೊಂದಿಗೆ ಸೇರಿ ಉಪಾಯಾಂತರದಿಂದ ಅಪಹರಣಕಾರರಿಂದ ಪಾರಾಗುವುದೇ ಕಥೆ.

೧೯೨೨. ಕೌರವ

(೧೯೯೮ / ವರ್ಣ / ಸಾಮಾಜಿಕ)
ಲಾ: ಸೌಮ್ಯ ಫಿಲಂಸ್
ಪ್ರೊ: ಚನ್ನಬಸವನಗೌಡ ಪಾಟೀಲ್, ಶ್ರೀಮತಿ ವನಜಾ ಪಾಟೀಲ್
ನಿ: ಎಸ್.ಮಹೇಂದರ್
ಸ.ನಿ: ಬಿ.ಹೆಚ್.ಉಮೇಶ್
ಅ: ಬಿ.ಸಿ.ಪಾಟೀಲ್, ಪ್ರೇಮಾ, ಟೆನ್ನಿಸ್ ಕೃಷ್ಣ, ಶಿವರಾಂ, ಬ್ಯಾಂಕ್ ಜನಾರ್ದನ್, ಹೊನ್ನಯ್ಯ, ಅರುಣ್, ಮೈಸೂರು ಶಿವು, ಬಿ.ಜಯಶ್ರೀ
ಕ/ಚಿ.ಕ: ಎಸ್.ಮಹೇಂದರ್
ಮಾ: ಬಿ.ಎ.ಮಧು
ಗೀ: ಹಂಸಲೇಖ
ಗಾ: ಬಿ.ಜಯಶ್ರೀ, ಚಿತ್ರಾ, ರಾಜೇಶ್, ಎಲ್.ಎನ್.ಶಾಸ್ತ್ರಿ, ಲತಾ ಹಂಸಲೇಖ, ರಮೇಶ್ ಚಂದ್ರ, ಕುಸುಮ
ಸಂ: ಪಿ.ಆರ್.ಸೌಂದರರಾಜನ್
ಛಾ: ಕೃಷ್ಣಕುಮಾರ್
ಕಲೆ: ಇಸ್ಮಾಯಿಲ್, ಹೊಸಮನೆ ಮೂರ್ತಿ
ಸ: ಹಂಸಲೇಖ
ಧ್ವ: ಪ್ರಸಾದ್
ನೃ: ಸಂಪತ್
ಸಾ: ಕೌರವ ವೆಂಕಟೇಶ್
ಹಾ: ೧) 'ಕುಕ್ಕು ಕ್ಕೂ ಪ್ರೀತಿ ಮಾಡೋಣ ಅಂತು..', ೨)'ಅವಳ್ಯಾವಳೋ ನಕ್ಕು ವನವಾಸ...', ೩)' ಹಲೋ ಹಲೋ ಕೌರವೇಶ...', ೪) ' ಹುಡಗೀರಂದ್ರೆ ಡೇಂಜರಪ್ಪೋ...', ೫) 'ಎಷ್ಟೆತ್ತೋ ಅಂತರಾಳದಾಗೆ...', ೬) 'ಇಳಕ್ಕಲ್ ಸೀರೆ ಉಟ್ಕೊಂಡು...', ೭) 'ಉಘೇ ಎನ್ನಿರೋ ಏಳುಮಲೇ ಮಾದಪ್ಪನಿಗ...'
ಕ.ಸಾ: ಕೌರವನ ಪ್ರತಿರೂಪ ಸೂರ್ಯ. ಒರಟ ಹಾಗೂ ಸಿರಂಕುಶ ವ್ಯಕ್ತಿತ್ವದವ. ರಂಗಭೂಮಿಯ ಮೇಲೂ ಅವನು ವಹಿಸುವುದು ಕೌರವೇಶ್ವರನ ಪಾತ್ರವನ್ನೇ. ಅವನ ಮಾತೇ ಕಾನೂನು. ಅವನನ್ನು ಉಲ್ಲಂಘಿಸುವ ಧೈರ್ಯ ಯಾರಿಗೂ ಇಲ್ಲ. ಅಂಥವನನ್ನು ಎದುರಿಸಿ ನಿಂತವಳು ಶಾಲೆಯ ಶಿಕ್ಷಕಿ. ಅವಳಿಂದ ಆಕರ್ಷಿತನಾದ ಸೂರ್ಯ. ಅವನನ್ನು ಪರಿವರ್ತಿಸಲು ಅವಳು ಪ್ರಯತ್ನಿಸಿದಾಗ. ಅವನು ಅವಳನ್ನು ಪ್ರೇಮಿಸತೊಡಗಿದ. ಅವಳು ಪ್ರೀತಿ ತೋರಿಸಲಿಲ್ಲ. ತಾನು ಅವಳಿಗೆ ತಕ್ಕವನಲ್ಲ ಎಂಬುದನ್ನು ಮನಗಂಡ ಅವನು. ಅವಳನ್ನವನು ಧೂರ್ತರಿಂದ ರಕ್ಷಿಸಿದಾಗ ಅವಳು ಅವನನ್ನು ತಪ್ಪು ತಿಳಿದಳು. ಅವನು ಮರಣ ಶಯ್ಯೆಯಲ್ಲಿದ್ದಾಗ ಧಾವಿಸಿಬಂದ ಅವಳು ಅವನನ್ನು ಸಂತೈಸಿದಳು.

೧೯೨೩. ಯಮಲೋಕದಲ್ಲಿ ವೀರಪ್ಪನ್

(೧೯೯೮ / ವರ್ಣ / ಸಾಮಾಜಿಕ)
ಲಾ: ಬಿಂದುಶ್ರೀ ಫಿಲಂಸ್
ಪ್ರೊ: ಕೆ.ಮಂಜು
ನಿ: ಹೆಚ್.ಪಿ.ಪ್ರಕಾಶ್
ಸ.ನಿ: ಜಿ.ಪಿ.ನರೋತ್ತಮ್ ಶರ್ಮ



ಅ: ಸತ್ಯಪ್ರಕಾಶ್, ಅಖಿಲಾ, ಧೀರೇಂದ್ರ ಗೋಪಾಲ್, ಸಾಧುಕೋಕಿಲ
ಕ: ಹೆಚ್.ಎ.ರೆಹಮಾನ್
ಚಿ.ಕ: ಹೆಚ್.ಪಿ.ಪ್ರಕಾಶ್
ಮಾ: ಎಂ.ಎಸ್.ನರಸಿಂಹಮೂರ್ತಿ, ರಾಮಪ್ರಕಾಶ್ ತ್ರಿಶೂಲಿ
ಗೀ: ಶ್ರೀಚಂದ್ರ, ರಮೇಶ್ ರಾವ್
ಗಾ: ರಾಜೇಶ್, ಸೌಮ್ಯ, ಮಂಗಳ, ಕುಸುಮ, ಸಾಧುಕೋಕಿಲ
ಸಂ: ಶಿವರಾಜ್ ಅಥಣಿ
ಛಾ: ಮನೋಹರ್
ಕಲೆ: ನಂಜುಂಡಸ್ವಾಮಿ
ಸ: ಸಾಧುಕೋಕಿಲ
ನೃ: ಪ್ರಸಾದ್, ಮಸ್ತಾನ್
ಕ.ಸಾ: ವೀರಪ್ಪನ್‌ನನ್ನು ಕರೆದೊಯ್ಯಲು ಬಂದ ಯಮ ಕಿಂಕರರು ವಿಫಲರಾದಾಗ ಸ್ವತಃ ಯಮನೇ ಬಂದು ಅವನನ್ನು ನರಕಕ್ಕೆ ಕರೆದೊಯ್ಯ. ಅಲ್ಲಿ ವೀರಪ್ಪನ್ ಹಾವಳಿಯೋ ಹಾವಳಿ. ನರ್ತಕಿಯು ತನಗೇ ಸೇರಬೇಕೆಂದು ವೀರಪ್ಪನ್ ಮತ್ತು ಯಮರ ನಡುವೆ ಸ್ಪರ್ಧೆ. ಅಲ್ಲಿಯೂ ವೀರಪ್ಪನ್ ತನ್ನ ತುಪಾಕಿಗೆ ಕೆಲಸಕೊಡುತ್ತಾನೆ. ತಾನೇ ಯಮನಾಗಲು ಸಂಚನ್ನೂ ಮಾಡುತ್ತಾನೆ. ಕೊನೆಗೆ ವೀರಪ್ಪನ್‌ನ ಕಾಟ ತಡೆಯಲಾರದ ಯಮಧರ್ಮ ಅವನನ್ನು ಮರಳಿ ಭೂಲೋಕಕ್ಕೆ ಕಳಿಸುವುದೇ ಕಥೆ.

೧೯೨೪. ಬಯಲು ದೀಪ

(೧೯೯೮ / ವರ್ಣ / ಸಾಮಾಜಿಕ)
ಲಾ: ಶ್ರೀ ಚಿದಂಬರೇಶ್ವರ ಕಂಬೈನ್ಸ್
ಪ್ರೊ: ಡಿ.ಕೆ.ಗೋಪಾಲ್ ರಾವ್

ನಿ: ಡಿ.ಎ.ಉಪಾಧ್ಯಾಯ
ಸ.ನಿ.: ರುದ್ರೇಶ್, ರಘು, ಎಸ್. ರಾಜ್
ಅ: ಶ್ರೀಧರ್, ಸಿತಾರಾ, ರಾಜಾನಂದ್, ರತ್ನಾಕರ್, ಲೋಹಿತಾಶ್ವ, ಬ್ಯಾಂಕ್ ಜನಾರ್ದನ್, ಸತ್ಯಭಾಮ, ಹೊನ್ನವಳ್ಳಿ ಕೃಷ್ಣ, ರಮಾನಂದ, ಬಿರಾದಾರ್, ಜೂ।ನರಸಿಂಹರಾಜು, ಮಿಮಿಕ್ರಿ ರಾಜಗೋಪಾಲ್, ಡಿ.ಕೆ.ಗೋಪಾಲ್ ರಾವ್, ಗಾಯತ್ರಿ, ಲಿಂಗೇಶ್ ಬಾಬು, ಶ್ರೀಕಂಠಸ್ವಾಮಿ, ಕೆಂಚಪ್ಪ, ಗೌಡ್ರು ಜಯಣ್ಣ, ಮುರುಗೇಶ್
ಕ/ಚಿ.ಕ/ಮಾ/ಗೀ: ಡಿ.ಎ.ಉಪಾಧ್ಯಾಯ
ಸಂ: ಆರ್. ರಾಜಾನಂದ ರೆಡ್ಡಿ
ಛಾ: ಕೆ.ಮಲ್ಲಿಕ್
ಸ: ರಾಜನ್ ನಾಗೇಂದ್ರ
ನೃ: ಮದನ್ - ಹರಿಣಿ
ಹಾ: ೧)' ಶಿವನ ಐದು ಮುಖ...', ೨)' ಬೆಲ್ಲದ ಗೊಂಬೆ...', ೩)' ನೀಡುವೆ ಅಪರೂಪದ ಕೊಡುಗೆ...', ೪)' ಅರಿತು ಒಲವಿನ ನಂದಾದೀಪ...', ೫) ' ಹೃದಯೇ ಗುರು...', ೬) ' ಚೆಲುವು ಬರುತಿದೆ ನನ್ನೊಳಗಿನ...',
ಕ.ಸಾ: ಅನಾಥಾಶ್ರಮದಲ್ಲಿ ಬೆಳೆದು ಸಂಗೀತ ಶಾರದೆಯನ್ನು ಒಲಿಸಿಕೊಂಡ ನಾಯಕ. ನಾಯಕಿ ಶ್ರೀಮಂತ ಪುತ್ರಿ ತಂದೆಯ ಇಷ್ಟಕ್ಕೆ ವಿರುದ್ಧವಾಗಿ ಅವನನ್ನು ಪ್ರೀತಿಸಿದಳು. ಉತ್ತಮ ಗಾಯಕನಾದ ನಾಯಕ ನಾಯಕಿಯ ಪ್ರೇಮದ ಕರೆಗೆ ಓಗೊಡಲಿದ್ದಾಗ ಅವನನ್ನು ಬೆಳೆಸಿದ ಸ್ವಾಮೀಜಿ ಅವನನ್ನು ಸನ್ಯಾಸಿಯಾಗೆಂದರು. ಶ್ರೀಮಂತ ತನ್ನ ಮಗಳನ್ನು ಮರೆತು ಬಿಡು ಎಂದ. ಒಂದೆಡೆ ಪ್ರೇಮದ ಸೆಳೆತ - ಇನ್ನೊಂದೆಡೆ ಸ್ವಾಮಿಯ ಆದೇಶ, ಇವುಗಳ ನಡುವೆ ಸಿಲುಕಿದ ನಾಯಕನ ಕಥೆ.

೧೯೨೫. ಕರ್ನಾಟಕ ಪೊಲೀಸ್

(೧೯೯೮ / ವರ್ಣ / ಸಾಮಾಜಿಕ)
ಲಾ: ಶ್ರೀ ದೇವಮ್ಮ ಪ್ರೊಡಕ್ಷನ್ಸ್
ಪ್ರೊ: ಡಿ.ಕೆ.ರಾಮಕೃಷ್ಣ

ನಿ: ಜೆ.ಜಿ.ಕೃಷ್ಣ
ಸ.ನಿ: ಶಿವಶಂಕರ್, ಕೆ.ಪಿ.ವೆಂಕಟೇಶ್
ಅ: ದೇವರಾಜ್, ಭಾನುಚಂದರ್, ಯಾಮಿನಿ, ಭವ್ಯಶ್ರೀ ರೈ, ಜಿ.ನಾರಾಯಣ, ಶೋಭರಾಜ್, ಅವಿನಾಶ್, ಹರೀಶ್ ರೈ, ಬ್ಯಾಂಕ್ ಜನಾರ್ದನ್, ಭರತ್, ಶಿವರಾಂ, ಶನಿ ಮಹಾದೇವಪ್ಪ
ಕ/ಚಿ.ಕ: ಶ್ರೀ ದೇವಮ್ಮ ಪ್ರೊಡಕ್ಷನ್ಸ್ ಕಥಾ ವಿಭಾಗ
ಮಾ/ಗೀ: ಶ್ರೀರಂಗ
ಗಾ: ರಾಜೇಶ್, ಎಲ್. ಎನ್.ಶಾಸ್ತ್ರಿ, ಸುಜಾತಾ ದತ್
ಸಂ: ಎಸ್.ಪ್ರಸಾದ್
ಛಾ: ಜೆ.ಜಿ.ಕೃಷ್ಣ
ಕಲೆ: ನಂಜುಂಡಸ್ವಾಮಿ
ಸ: ಸಾಧುಕೋಕಿಲ
ಧ್ವ: ಆಕಾಶ್, ಚಾಮುಂಡೇಶ್ವರಿ
ನೃ: ಪ್ರಸಾದ್
ಸಾ: ಕೆ.ಡಿ.ವೆಂಕಟೇಶ್

ವ: ಗಂವಸಿ ನಾಗರಾಜ್
ಪ್ರ: ಸಿದೇಶ್
ಸ್ಟು: ಕಂಠೀರವ, ಅಭಿಮಾನ್
ಹಾ: ೧) 'ಕಾಟೇರಿ ಮೋಟೇರಿ...', ೨) ' ಹರೇ ರಾಮ ಹರೇ ರಾಮ...', ೩) ' ಜಗು ಜಗು ಜಮ್ಮಂತು...', ೪) 'ಈ ಪ್ರೀತಿಗೆ ಒಂದೇ ಲೆಕ್ಕ...',
ವಿ: ಛಾಯಾಗ್ರಾಹಕ ಜಿ.ಜಿ.ಕೃಷ್ಣ ಅವರ ಪ್ರಥಮ ನಿರ್ದೇಶನದ ಚಿತ್ರ
ಸೆ: ರೀಲು ೧೪
ಕ.ಸಾ: ರಾಜ್ಯದ ಸರ್ಕಾರವನ್ನು ಉರುಳಿಸಲು ಭಯೋತ್ಪಾದಕರು ನಡೆಸಿದ ಸಂಚನ್ನು ಪ್ರಾಮಾಣಿಕ ಹಾಗೂ ದಿಟ್ಟ ಪೋಲೀಸ್ ಅಧಿಕಾರಿಗಳು ವಿಫಲಗೊಳಿಸಿದರು. ಗೃಹ ಖಾತೆಯ ಮಂತ್ರಿಯ ಕೊಲೆಗೆ ಭಯೋತ್ಪಾದಕರು ನಡೆಸಿದ ಪ್ರಯತ್ನವನ್ನು ವಿಫಲಗೊಳಿಸುವಲ್ಲಿ ಪೋಲೀಸ್ ಅಧಿಕಾರಿಗಳು ವಿಫಲರಾದರು. ಭಯೋತ್ಪಾದಕರ ತಂಡವನ್ನು ಸದೆಬಡಿಯುವಲ್ಲಿ ಕರ್ನಾಟಕ ಪೋಲೀಸರು ನಡೆಸಿದ ಹೋರಾಟದ ಚಿತ್ರಣವಿರುವ ಕಥೆ.

೧೯೨೬. ಕನಸಲೂ ನೀನೆ ಮನಸಲೂ ನೀನೆ

(೧೯೯೮ / ವರ್ಣ / ಸಾಮಾಜಿಕ)
ಲಾ: ಶ್ರೀ ಸಿದ್ಧಿವಿನಾಯಕ ಆರ್ಟ್ಸ್
ಪ್ರೊ: ಪಲ್ಲವಿ ಪ್ರಕಾಶ್, ಶೈಲೇಶ್ ವೈಭವ್
ನಿ: ಕೆ.ಸಂಜುಂಡ
ಸ.ನಿ: ಮಧುಕರ್ ಬೆಳಕವಾಡಿ
ಅ: ಪ್ರಕಾಶ್ ರೈ, ವಿನೀತ್, ಆಯೇಷಾ ಜುಲ್ಕ, ವಿ.ಆರ್.ಗೋವಿಂದಸ್ವಾಮಿ, ಸ್ವರ್ಣ, ದತ್ತಾತ್ರೇಯ, ಎಸ್.ಪಿ.ಬಾಲು, ರಮೇಶ್ ರಾವ್, ಕು।ಸಿಂಧೂ, ಮೈಕಲ್ ಮಧು, ಬೇಬಿ ರೂಪಾ, ಬೇಬಿ ಬೃಂದಾ, ಗುರುದತ್, ಆಶಾಲತಾ, ಬಿರಾದಾರ್, ಕ್ರಿಕೆಟ್ ಪಣ್ಣಗಂ, ರವಿಚಂದ್ರನ್, ರಮೇಶ್,
ಕ/ಚಿ.ಕ/ಮಾ: ಕೆ.ಸಂಜುಂಡ
ಗೀ: ಹಂಸಲೇಖ, ವಿ.ಮನೋಹರ್, ಕೆ.ಕಲ್ಯಾಣ್, ರಮೇಶ್ ರಾವ್
ಗಾ: ರಮೇಶ್ ಚಂದ್ರ, ಸುಮಾ ಶಾಸ್ತ್ರಿ, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಎಲ್.ಎನ್. ಶಾಸ್ತ್ರಿ, ರಾಜೇಶ್, ಮಂಜುಳಾ ಗುರುರಾಜ್
ಸಂ: ಪ್ರಸಾದ್
ಛಾ: ಪಿ.ರಾಜನ್
ಕಲೆ: ರಮೇಶ್ ಬಾಬು
ಸ: ಚೈತನ್ಯ
ಧ್ವ: ಚಾಮುಂಡೇಶ್ವರಿ
ನೃ: ತ್ರಿಭುವನ್ ನಾಗರಾಜ್
ಸಾ: ಜಾಲಿ ಬಾಸ್ಟಿನ್
ವ: ವೀರರಾಜು
ಪ್ರ: ಪುರುಷೋತ್ತಮ್
ಸ್ಟು: ಕಂಠೀರವ, ಅಭಿಮಾನ್
ಹಾ: ೧) ' ಪ್ರೇಮ ದೇವಿ ಭೂಮಿಗೆಲ್ಲಾ ನೀನು...', ೨) ' ತಮ್ ತನನ ತಾನ ಓ ನನ್ನ ನಲ್ಲೇ...', ೩) ' ದಿಲ್ ರೂಬಾ ಜಿಗದದಾಂಜಿಗ...', ೪) ' ಅನುರಾಗವಾ ಈ ಲೋಕ...', ೫) ' ಹಾಡು ಎಂದ ಕೂಡಲೇ ಹಾಡಮ...', ೬) ' ಅನುರಾಗದ ಅಲೆ ಮೇಲೆ...', ೭) ' ಚಂದನ ಸಿರಿಚಂದನ ಚಂದನ...', ೮) ' ಯಾವ್ಪೂರ್ ಸುಬ್ಬಿ ಯಾವೂರ್ ಸುಬ್ಬಿ...'
ಕ.ಸಾ: ಕಾಲೇಜಿನ ಸಹಪಾಠಿಗಳು ನಾಯಕ ಮತ್ತು ನಾಯಕಿ. ನಾಯಕಿಯನ್ನು ಮನಸಾರ ಪ್ರೀತಿಸುತ್ತಿದರೂ, ತನ್ನ ಪ್ರೇಮವನ್ನು ಅವಳಲ್ಲಿ ಹೇಳಿಕೊಳ್ಳಲಾಗದೆ ಒದ್ದಾಡುವ ನಾಯಕ. ಅವನನ್ನು ಪ್ರೀತಿಸಿ ಬಂದ ಇನ್ನೊಂದು ಹೆಣ್ಣನ್ನು ಬುದ್ಧಿ ಹೇಳಿ ಕಳಿಸಿದ ನಾಯಕನನ್ನು ಮನದಲ್ಲೇ ಪ್ರೀತಿಸಿದ್ದರೂ ಮೂವರು ಸೋದರಿಯರ ಹೊಣೆ ಹೊತ್ತ ಜವಾಬ್ದಾರಿಯ ನಾಯಕಿ, ನಾಯಕ ವೃಥಾಪವಾದಕ್ಕೆ ಸಿಲುಕಿದಾಗ ಪಾರು ಮಾಡುತ್ತಾಳೆ. ನಾಯಕಿಯ ಮೇಲೆ ಹೆಣ್ಣುಬಾಕ ಶ್ರೀಮಂತನ ಕಣ್ಣು. ನಾಯಕಿಯ ಅಪಹರಣ. ಅವನನ್ನು ಬದಲಾಯಿಸುವ ನಾಯಕಿ, ಸಾವಿನ ದವಡೆಯಿಂದಲೂ ಅವನನ್ನು ಪಾರು ಮಾಡುತ್ತಾಳೆ. ಒಲಿದವರು ಒಂದಾಗ ಬೇಕೆಂದಾಗ ಗೂಂಡಾಗಳ ಹಾವಳಿ. ಬದಲಾದ ಶ್ರೀಮಂತನಿಂದ ರಕ್ಷಣೆ. ಹೀಗೆ ಪ್ರೇಮದ ಗೆಲುವಿನ ಕಥೆ.

೧೯೨೭. ತಾಯಿಯ ಋಣ

(೧೯೯೮ / ವರ್ಣ / ಸಾಮಾಜಿಕ)
ಲಾ: ಅಹಲ್ಯಾ ಫಿಲಂಸ್
ಪ್ರೊ/ನಿ: ಮಂಡ್ಯ ನಾಗರಾಜ್
ಸ.ನಿ: ವಿ.ಶಿವಕುಮಾರ್, ಎನ್.ಮನು, ಕೆ.ವಿ.ವೇಣುಗೋಪಾಲ್, ವೆಂಕಟೇಶ್
ಅ: ಲೋಕೇಶ್, ಜಯಂತಿ, ಅಭಿಜಿತ್, ಅರವಿಂದ್, ಅಭಿನೇತ್ರಿ, ಬುಲೆಟ್ ರಾಜ, ಸುಮನ್ ನಗರಕರ್, ರಾಜಾನಂದ್, ಸುಜಾತಾ, ರಾಮಚಂದ್ರ, ಬ್ಯಾಂಕ್ ಜನಾರ್ದನ್, ಪೋಲೀಸ್ ಮಂಜು, ರೇಖಾ ದಾಸ್, ಡಿಂಗ್ರಿ ನಾಗರಾಜ್, ಬಿರಾದಾರ, ಹೊನ್ನವಳ್ಳಿ ಕೃಷ್ಣ, ಕೆ.ಬಿ. ಪ್ರಕಾಶ್, ಸುಂದರ್, ಪ್ರಿಯಾಂಕ, ರಾಜಶ್ರೀ, ಶಾಂತ ಶೆಟ್ಟಿ, ಮಾ।ಅಜಯ್ ಕುಮಾರ್, ಮಾ।ರಘು, ಬೇಬಿ ವರಲಕ್ಷ್ಮಿ, ಬೇಬಿ ರಂಜಿತಾ
ಕ/ಚಿ.ಕ/ಮಾ: ಮಂಡ್ಯ ನಾಗರಾಜ್
ಗೀ: ದೊಡ್ಡರಂಗೇಗೌಡ, ಎಂ.ಟಿ. ಹಾಷಾಂ, ಮಂಡ್ಯ ನಾಗರಾಜ್
ಗಾ: ರಾಜೇಶ್, ಸಂಗೀತಾ ಕಟ್ಟಿ, ರಮೇಶ್ ಚಂದ್ರ, ಎಲ್.ಎನ್.ಶಾಸ್ತ್ರಿ, ಸುಮಾ ಶಾಸ್ತ್ರಿ
ಸಂ: ರಾಜಶೇಖರ ಕಿಟ್ಟಿ
ಛಾ: ಆರ್.ಆರಾಧ್ಯ
ಸ: ರಾಗರಾಜ್
ಧ್ವ: ಪೀಟರ್, ಅಣ್ಣಾದೊರೈ, ಮಹೇಂದರ್
ನೃ: ಶ್ರವಣಕುಮಾರ್
ಸಾ: ಸೂರ್ಯಪ್ರಕಾಶ್
ವ: ಎನ್.ಎಸ್.ನಾಗರಾಜ್
ಪ್ರ: ಶ್ಯಾಂ ಸುಂದರ್
ಸ್ಟು: ಪ್ರಸಾದ್
ಕ.ಸಾ: ಮೆಟ್ಟಿದ ಮನೆಯ ಒಳಿತಿಗಾಗಿ ಸರ್ವವನ್ನೂ ತ್ಯಾಗ ಮಾಡುವ ತಾಯಿಯೊಬ್ಬಳ ಕಥೆ. ವಿಧುರನೊಬ್ಬ ಇತರರ ಬಲವಂತಕ್ಕೆ ಮರು ಮದುವೆಯಾದ. ಮಲತಾಯಿಯಾಗಿ ಬಂದವಳು ಆತನ ಮಕ್ಕಳಿಬ್ಬರ ಪಾಲಿಗೆ ಸ್ವಂತ ತಾಯಿಯೇ ಆದಳು. ಪಟ್ಟಣದಲ್ಲಿ ಓದುತ್ತಿದ್ದ ಹಿರಿಯವನು ನರ್ತಕಿಯೊಬ್ಬಳನ್ನು ಮೋಹಿಸಿ ವ್ಯಾಸಂಗವನ್ನು ಅಲಕ್ಷಿಸಿದ. ಕಿರಿಯವ ಗುತ್ತಿಗೆದಾರನನ್ನೇ ವಂಚಿಸಿದ. ವಿಧಿಯಾಟದಿಂದ ಮನೆ - ಮಠ ಭೂಮಿ ಎಲ್ಲವನ್ನೂ ಕಳೆದುಕೊಂಡ ತಾಯಿ ಮಗಳು ನಿರ್ಗತಿಕರಾದರು. ಅಣ್ಣ - ತಮ್ಮ ಇಬ್ಬರಿಗೂ ಜ್ಞಾನೋದಯವಾಗಿ ಹಳ್ಳಿಗೆ ಮರಳುವ ವೇಳೆಗೆ ಆ ತಾಯಿಯೇ ಇನ್ನಿಲ್ಲವಾಗಿದಳು. ತಾಯಿಯ ಋಣ ಸೋದರರ ಹೆಗಲೇರಿತ್ತು.

೧೯೨೮. ಸಿಂಧೂ

(೧೯೯೮ / ವರ್ಣ / ಸಾಮಾಜಿಕ)
ಲಾ: ಶ್ರೀ ಸುಷ್ಮಾ ಎಂಟರ್‌ಪ್ರೈಸಸ್
ಪ್ರೊ/ನಿ: ಕೆ.ವೆಂಕಟಸ್ವಾಮಿ
ಸ.ನಿ: ಅನಿಲ್ ನಾಯಕ್
ಅ: ಸಂಜಯ್, ವಾಣಿಶ್ರೀ, ಶ್ರೀನಿವಾಸ ಮೂರ್ತಿ, ಮುಖ್ಯಮಂತ್ರಿ ಚಂದ್ರು. ಭವ್ಯಶ್ರೀ ರೈ, ಸಾರಿಕಾರಾಜ್ ಅರಸ್. ಲೋಹಿತಾಶ್ವ, ಶಂಖನಾದ ಅಂಜನಪ್ಪ, ಭಾಗ್ಯಶ್ರೀ, ಕಲ್ಯಾಣಿ ಪ್ರೇಮಕುಮಾರ್, ರೂಪಾ, ಬೇಬಿ ಕೀರ್ತನಾ, ಬೇಬಿ ರಾಜೇಶ್ವರಿ, ಬೇಬಿ ಸುಷ್ಮಾ, ಶ್ರೀಧರ್, ನಂಜುಂಡಯ್ಯ, ಧರಣೇಶ್
ಕ: ಶ್ರೀಮತಿ ಎಸ್.ರೇಣುಕಾ ವೆಂಕಟಸ್ವಾಮಿ
ಚಿ.ಕ: ಕೆ.ವೆಂಕಟಸ್ವಾಮಿ
ಮಾ: ಎಸ್.ಕೇಶವಮೂರ್ತಿ
ಗೀ: ಎಸ್.ಕೇಶವಮೂರ್ತಿ, ಈರಣ್ಣಯ್ಯ
ಗಾ: ರಾಜೇಶ್, ಚಂದ್ರಿಕಾ ಗುರುರಾಜ್
ಸಂ: ರಾಜಶೇಖರ್ ರೆಡ್ಡಿ
ಛಾ: ಎಂ.ಮುತ್ತುರಾಜ್
ಕಲೆ: ಗಂಗಾಧರ್
ಸ: ಸದ್ಗುಣ ರಾಜ್
ಧ್ವ: ಪ್ರಭು, ಜನಾರ್ದನ್
ನೃ: ಸಂಪತ್
ಸಾ: ಆ್ಯಕ್ಷನ್ ಮೂರ್ತಿ
ವ: ವಿಠಲ್ ರಾವ್
ಕ.ಸಾ: ರಜೆ ಕಳೆಯಲೆಂದು ಅಕ್ಕನ ಊರಿಗೆ ಬಂದ ಯುವಕ ಅದೇ ಊರಿನ ಯುವತಿಯನ್ನು ಪ್ರೀತಿಸುತ್ತಾನಾದರೂ ಕಾರಣಾಂತರಗಳಿಂದ ತನ್ನ ಮೇಲಾಧಿಕಾರಿಯ ಮಗಳನ್ನು ಮದುವೆಯಾಗಬೇಕಾಗುತ್ತದೆ. ಅವನ ಈ ವರ್ತನೆಯ ಹಿಂದಿನ ಸತ್ಯ ತಿಳಿದ ನಾಯಕಿ ತ್ಯಾಗಕ್ಕೆ ಮುಂದಾಗುತ್ತಾಳೆ.

೧೯೨೯. ಶ್ರೀ ಸಿದ್ಧಾರೂಢ ಮಹಾತ್ಮೆ

(೧೯೯೮ / ವರ್ಣ / ಜಾನಪದ / ಭಕ್ತಿ ಪ್ರಧಾನ)
ಲಾ: ರೇಣುಕಾ ಎಂಟರ್‌ಪ್ರೈಸಸ್
ಪ್ರೊ: ಸಹದೇವ ಬಂಡಿ
ನಿ: ಭೀಮಸೇನ್
ಸ.ನಿ: ಶೇಖರ್ ಕವಲೂರು
ಅ: ಮಾ।ಗುರುರಾಜ್ ಕವಲೂರು, ತಾರಾ, ಸದಾಶಿವ ಬ್ರಹ್ಮಾವರ್, ಶಂಕರ್ ಕವಲೂರು, ರಾಜಣ್ಣ ಹೂಗಾರ, ಬಿ.ವಿ.ರಾಧಾ, ವಿಜಯ ದೀಕ್ಷಿತ್, ಜಯಶ್ರೀ, ಶೇಖರ್ ಕವಲೂರು
ಚಿ.ಕ/ಮಾ/ಗೀ: ಭೀಮಸೇನ್
ಗಾ: ರಾಜೇಶ್, ಮಂಜುಳಾ, ರಮೇಶ್ ಚಂದ್ರ, ನರಸಿಂಹ ನಾಯಕ್, ಅರ್ಚನಾ ಉಡುಪ, ನಂದಿತಾ
ಸಂ: ಆರ್. ರಾಜಾನಂದ ರೆಡ್ಡಿ
ಛಾ: ಜೆ. ಶಂಕರ್
ಸ: ಜೆ.ಕೆ
ಧ್ವ: ಕೃಷ್ಣಮೂರ್ತಿ, ಅಣ್ಣಾದೊರೈ
ನೃ: ರಮೇಶ್ ರೆಡ್ಡಿ
ಪ್ರ: ಶ್ಯಾಂ ಸುಂದರ್
ಸ್ಟು: ಪ್ರಸಾದ್
ಕ.ಸಾ: ಭಕ್ತಿ ಪಂಥದಲ್ಲಿ ಶ್ರೀ ಸಿದ್ಧಾರೂಢರ ಸಾಧನೆ. ಆ ಸಾಧನೆಯಲ್ಲಿ ಅವರ ಪವಾಡ ಹಾಗೂ ಮಹಾತ್ಮೆಗಳ ಬಣ್ಣನೆ ತುಂಬಿದ ಕಥೆ. ದಯೆ - ಧರ್ಮ - ಜೀವನ ಕುರಿತಂತೆ ಸಿದ್ಧಾರೂಢರ ಕಥೆಯಲ್ಲಿ ಹೇರಳ ಸಾಮಾಗ್ರಿಗಳಿದ್ದು, ಅವುಗಳಲ್ಲಿ ಹಲವನ್ನಿಲ್ಲಿ ಬಳಸಿಕೊಳ್ಳಲಾಗಿದೆ.

೧೯೯೯

೧೯೩೦. ವೀರಪ್ಪನಾಯ್ಕ

(೧೯೯೯ / ವರ್ಣ / ಸಾಮಾಜಿಕ)
ಲಾ: ಕಲಾಧರ ಆರ್ಟ್ ಪಿಕ್ಚರ್ಸ್
ಪ್ರೊ/ನಿ: ಎಸ್.ನಾರಾಯಣ್

ಅ: ವಿಷ್ಣುವರ್ಧನ್, ಪ್ರೀತಿ. ಸುಧೀರ್, ಶೋಭರಾಜ್, ಕೋಟೆ ಪ್ರಭಾಕರ್, ರೇಣುಕಾ ಪ್ರಸಾದ್, ಆಗ್ರೋ ಚಿಕ್ಕಣ್ಣ, ಸೌರವ್, ಭವ್ಯಶ್ರೀ ರೈ, ಹೇಮಾ ಚೌಧುರಿ, ಆಶಾಲತಾ
ಕ/ಚಿ.ಕ: ಎಸ್ ನಾರಾಯಣ್
ಮಾ: ಬಿ.ಎಲ್. ವೇಣು
ಗೀ: ಎಸ್.ನಾರಾಯಣ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ, ರಾಜೇಶ್
ಸಂ: ಪಿ.ಆರ್.ಸೌಂದರ ರಾಜನ್
ಛಾ: ಆರ್.ಗಿರಿ
ಕಲೆ: ಬಿ.ಮೂರ್ತಿ
ಸ: ರಾಜೇಶ್ ರಾಮನಾಥ್
ನೃ: ದೇವ-ಸಂಪತ್
ಸಾ: ಶಿವು
ವ: ಮೈಸೂರು ರಾಮಚಂದ್ರ
ಪ: ವಿಠಲ್ ಬಾಬು
ಹಾ: ೧)' ಈ ಮಣ್ಣಿನ ಹೆಮ್ಮೆಯ ಮಗ...', ೨)' ಭಾರತಾಂಬೆ ನಿನ್ನ ಜನ್ಮ ದಿನ...', ೩)' ಆರೆ ಜಿಂಗು ಜಿಂಗಾಲೆ...', ೪)'ಮಲ್ಲೇ ನಿನ್ನ ಮಾತು ಕೇಳದೆ ...', ೫)' ಒಂದೇ ಒಂದು ಮಾತು...', ೬)' ಜೀವ ಜ್ಯೋತಿಯೇ...',
ಪ್ರ: ೧೯೯೮-೯೯ರ ರಾಜ್ಯ ಪ್ರಶಸ್ತಿ: ಶ್ರೇಷ್ಠನಟ (ವಿಷ್ಣುವರ್ಧನ್). ವಿಶೇಷ ಬಹುಮಾನ. ವಿಷ್ಣುವರ್ಧನ್ ಪ್ರಶಸ್ತಿಯನ್ನು ಹಂಚಿಕೊಳ್ಳಲು ನಿರಾಕರಿಸಿದರು.
ಕ.ಸಾ: ದೇಶ ಪ್ರೇಮಿಯೊಬ್ಬನ ಕಥೆ. ಸ್ವಾತಂತ್ರ್ಯ ಹೋರಾಟಗಾರರ ವಂಶದಲ್ಲಿ ಬೆಳೆದ ವೀರಪ್ಪನಾಯ್ಕನ ಕುಟುಂಬ ಇಡೀ ಹದಿನಾರು ಹಳ್ಳಿಗೆ ಆದರ್ಶ ಪ್ರಾಯ. ಅವನು ಹಳ್ಳಿಗೇ ನ್ಯಾಯ ಹೇಳುವವನು ಕೂಡ. ಭಾರತವನ್ನು ದ್ವೇಷಿಸುವವರಿಗೆ ಶಿಕ್ಷೆ ನೀಡುತ್ತಾನೆ. ಆದರೆ ಅಂಥವನ ಕುಟುಂಬದಲ್ಲೇ ಘಟನೆಯೊಂದು ನಡೆಯುತ್ತದೆ. ನಾಯ್ಕ ತನ್ನ ಹೆಂಡತಿಯೊಂದಿಗೆ ಮಾತು ನಿಲ್ಲಿಸುತ್ತಾನೆ. ಅವನ ವಂಶದ ಕುಡಿಯೇ ಮರೆಯಲಾಗದ ಅನ್ಯಾಯವೆಸಗುತ್ತಾನೆ. ಆಗ ನಾಯ್ಕ ತೆಗೆದು ಕೊಳ್ಳುವ ನಿರ್ಧಾರವೇ ಕಥೆಯ ಮುಖ್ಯ ಅಂಶ.

೧೯೩೧. ಕುಬೇರ

(೧೯೯೯ / ವರ್ಣ / ಸಾಮಾಜಿಕ)
ಲಾ: ಎಸ್.ಆರ್.ಪಿಕ್ಚರ್ಸ್

ಪ್ರೊ: ಶಿವಮಣಿ, ಎಂ.ರಮೇಶ್
ನಿ: ಶಿವಮಣಿ
ಸ.ನಿ: ಶರಣ್ ಗಬ್ಬಾಲ್
ಅ: ಜಗ್ಗೇಶ್, ರವಳಿ, ಕಾಶಿ, ದೊಡ್ಡಣ್ಣ, ಸಿಗ್ರೋ ಜಾನಿ, ಹೇಮಾ ಚೌಧುರಿ, ಹೊನ್ನವಳ್ಳಿ ಕೃಷ್ಣ, ಬ್ಯಾಂಕ್ ಜನಾರ್ದನ್, ಗಿರಿಜಾ ಲೋಕೇಶ್, ಸಿಹಿಕಹಿ ಚಂದ್ರು
ಕ: ಶಿವಮಣಿ
ಚಿ.ಕ/ಮಾ: ಬಿ.ಎ.ಮಧು
ಗೀ: ಕ.ಕಲ್ಯಾಣ್
ಸಂ: ಸುರೇಶ್ ಅರಸ್
ಛಾ: ಕೃಷ್ಣಕುಮಾರ್
ಕಲೆ: ಇಸ್ಮಾಯಿಲ್
ಸ: ರಾಜೇಶ್ ರಾಮನಾಥ್
ನೃ: ಪ್ರಸಾದ್
ಸಾ: ಕೆ.ಡಿ.ವೆಂಕಟೇಶ್
ಕ.ಸಾ: ಶ್ರೀಮಂತ ಅತ್ತೆ. ಆಕೆಯ ಅಹಂಕಾರಿಯಾದ ಗರ್ವಿಷ್ಠೆ ಮಗಳು. ಸೋದರ ಮಾವನ ಆಹ್ವಾನದಂತೆ ಹಳ್ಳಿಯಿಂದ ಬಂದ ಅಳಿಯ ಇನ್ನೊಂದು ವರ್ಷದಲ್ಲಿ ಕೋಟಿ ರೂ. ಸಂಪಾದಿಸಿ ನಿನ್ನ ಮಗಳ ಕೈ ಹಿಡಿಯುತ್ತೇನೆ ಎಂದು ಅತ್ತೆಗೆ ಸವಾಲೆಸೆದು, ಅತ್ತೆಯ ಮಗಳನ್ನು ಪಳಗಿಸಿ, ತಂತ್ರಗಳಿಗೆಲ್ಲ ಪ್ರತಿತಂತ್ರ ಹೂಡುವ ನಾಯಕನ ಹಾಸ್ಯ ಭರಿತ ಕಥೆ.

೧೯೩೨. ಜಯಸೂರ್ಯ

(೧೯೯೯ / ವರ್ಣ / ಸಾಮಾಜಿಕ)
ಲಾ: ಶ್ರೀ ಶೇಣಾಂಡಾಳ್ ಮೂವೀಸ್
ಪ್ರೊ/ನಿ: ರಾಮ್ ನಾರಾಯಣ್
ಸ.ನಿ: ಎಸ್.ಸುಂದರ್, ಕೆ.ಸೀತಾರಾಂ
ಅ: ನೆಪೋಲಿಯನ್. ಶ್ರುತಿ. ನಗ್ಮಾ, ರಾಜಶೇಖರ್, ಎಸ್.ಪಿ.ಬಾಲಸುಬ್ರಹ್ಮಣ್ಯಂ, ರಾಮಿ ರೆಡ್ಡಿ, ಟೆನ್ನಿಸ್ ಕೃಷ್ಣ, ಬ್ಯಾಂಕ್ ಜನಾರ್ದನ್, ವಡಿವುಕ್ಕರಸಿ, ಅನುಜಾ, ಸದಾಶಿವ ಬ್ರಹ್ಮಾವರ್, ಶ್ರೀಶೈಲನ್, ಬೇಬಿ ಶೀಲಾ, ಶ್ರೀಧರ್
ಕ: /ಚಿ.ಕ: ರಾಮ ನಾರಾಯಣ್
ಮಾ: ಕೆ.ಸೀತಾರಾಂ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ರಾಜೇಶ್, ಎಲ್.ಎನ್. ಶಾಸ್ತ್ರಿ, ಮಂಜುಳಾ ಗುರುರಾಜ್, ಕುಸುಮ
ಸಂ: ರಾಜಕೀರ್ತಿ
ಛಾ: ವಿನ್ಸೆಂಟ್, ಡಬ್ಲ್ಯು.ಆರ್.ಚಂದ್ರನ್
ಕಲೆ: ಪದ್ಮನಾಭನ್
ಸ: ಆರ್.ಆರ್.ಜಿ
ಧ್ವ: ಮಹೇಂದರ್, ಕೋದಂಡಪಾಣಿ
ನೃ: ಕಲಾ, ಅಂಬಿ
ಸಾ: ಅಂಬೂರು ಆರ್.ಎಸ್. ಬಾಬು
ವ: ರಾಜೇಂದ್ರನ್, ವೆಂಕಟೇಶ್, ಪ್ರಸಾದ್
ಪ: ಸೀತಾರಾಮ್, ಜಯರಾಮ್
ಸ್ಟು: ಚಾಮುಂಡೇಶ್ವರಿ
ಕ.ಸಾ: ಗಂಡ, ಹೆಂಡತಿ ಮತ್ತು ಮಗ, ಈ ಮೂವರ ಸುಖ ಸಂಸಾರದಲ್ಲಿ ಮೂರು ದುಷ್ಟ ಶಕ್ತಿಗಳ ಪ್ರವೇಶ. ಆ ಕುಟುಂಬದ ಮಗನನ್ನು ಕೊಂದು ಗುರಿ ಸಾಧಿಸುವ ಯತ್ನ ಆ ದುಷ್ಟಶಕ್ತಿಗಳದು. ಅವರಲ್ಲೊಬ್ಬ ಹೆಂಡತಿಯ ಸಂಬಂಧಿ, ಎರಡನೆಯವಳು ಮಾಟಗಾತಿ, ಮೂರನೆಯವ ಬೊಂಬೆಗಳನ್ನು ಮಾರುವಾತ. ಬೊಂಬೆಮಾರುವಾತ ಮಾರಲು ಬಂದ ಸಾಯಿಬಾಬ ಬೊಂಬೆಯನ್ನು ಗಂಡ ತಿರಸ್ಕರಿಸಿದ. ಹೆಂಡತಿ ಕೊಂಡಳು. ಮೂವರು ಹುಡುಗನ ಕೊಲೆಗೆ ನಡೆಸಿದ ಪ್ರಯತ್ನಗಳೆಲ್ಲಾ ಆ ಬೊಂಬೆಯಿಂದಲೇ ವಿಫಲ. ಬದಲಾಗಿ ಮೂರೂ ದುಷ್ಟಶಕ್ತಿಗಳ ನಿರ್ನಾಮ. ಸಂಬಂಧಿಯ ವ್ಯೂಹದಿಂದ ಗಂಡನ ಬಿಡುಗಡೆ. ಕೊನೆಗೆ ಸುಖಾಂತ.

೧೯೩೩. ಜನುಮದಾತ

(೧೯೯೯ / ವರ್ಣ / ಸಾಮಾಜಿಕ)
ಲಾ: ಬಾಬಾ ಪ್ರೊಡಕ್ಷನ್ಸ್
ಪ್ರೊ: ಕೆ.ಮುಸ್ತಾಫಾ, ಕೆ.ಪಿ.ರವಿಕುಮಾರ್
ನಿ: ಟಿ.ಎಸ್.ನಾಗಾಭರಣ
ಸ: ರಘುನಂದನ್, ನಾಗವ
ಅ: ಶಿವರಾಜ್ ಕುಮಾರ್, ಗಿರೀಶ್ ಕಾರ್ನಾಡ್, ಶರತ್ ಬಾಬು, ಲೋಕನಾಥ್. ಶಬೀರ್ ಶೇಖ್, ಅಂಜಿಕಾ, ಮಂಡ್ಯ ರಮೇಶ್, ಅಂಜು ಅರವಿಂದ್, ಡಿ.ಜಿ.ಹೆಗಡೆ
ಕ: ದೊಡ್ಡ ಹುಲ್ಲೂರು ರುಕ್ಕೋಜಿ

ಚಿ.ಕ: ಟಿ.ಎಸ್.ನಾಗಾಭರಣ
ಮಾ: ದೊಡ್ಡ ಹುಲ್ಲೂರು ರುಕ್ಕೋಜಿ
ಗೀ: ದೊಡ್ಡರಂಗೇ ಗೌಡ, ಬಿ.ಆರ್.ಲಕ್ಷ್ಮಣ ರಾವ್, ವಿ.ಮನೋಹರ್, ಪ್ರತಿಭಾ ನಂದಕುಮಾರ್
ಸಂ: ಶಶಿಕುಮಾರ್
ಛಾ: ಬಿ.ಸಿ.ಗೌರಿಶಂಕರ್
ಕಲೆ: ದಿನೇಶ್ ಮಂಗಳೂರು
ಸ: ವಿ.ಮನೋಹರ್
ನೃ: ತ್ರಿಭುವನ್
ಸಾ: ದಿನೇಶ್ ದಳಪತಿ
ವ: ವೆಂಕಟೇಶ್
ಹಾ: ೧)' ಬಾಂಬು ಹಾಕೋ ದೇಶ...', ೨)' ಆ ವಿದಾತನ ವರವಿದೆ...', ೩)' ಸಾಗರತೀರದಿ ಉರುಳೋ...', ೪)' ಕೋಲುಮಂಡೆ ಜಂಗಮ...', ೫)' ಚಂದಿರ ಚಂದಿರ...', ೬)' ರಂಗನ ತಿಟ್ಟು ಗಿರಿ...', ೭)' ಡೆನ್ನನ ಡನ್ನಾನ...'
ಕ.ಸಾ: ಮದುವೆಯಾಗದೆ ತಾಯಿಯಾದ ಹೆಣ್ಣು. ಪ್ರಪಂಚದಲ್ಲಿ ಎದುರಿಸಬೇಕಾಗುವ ವಿಷಮ ಪರೀಕ್ಷೆಗಳು. ಆಕೆಯ ಮಗ ತನ್ನ ತಾಯಿ ಅನುಭವಿಸಿದ ಅವಮಾನಕ್ಕೆ ಪ್ರತೀಕಾರ ತೆಗೆದುಕೊಳ್ಳುವ ಪಣ ತೊಡುತ್ತಾನೆ. ತನ್ನ ಹುಟ್ಟಿನ ಹಿಂದಿನ ರಹಸ್ಯವನ್ನು ಭೇದಿಸುತ್ತಾನೆ.

೧೯೩೪. ತರಿಕೆರೆ ಏರಿಮೇಲೆ

(೧೯೯೯ / ವರ್ಣ / ಸಾಮಾಜಿಕ)
ಲಾ: ಐಶ್ವರ್ಯ ಕಂಬೈನ್ಸ್
ಪ್ರೊ: ಕೆ.ಪಿ.ನಂಜುಂಡಿ (ಮಾವಳ್ಳಿ)
ನಿ: ರಾಜ್‌ಕಿಶೋರ್

ಸ ನಿ: ಗಿರೀಶ್ ಕಂಪ್ಲಾಪುರ್
ಅ: ಸಾಧುಕೋಕಿಲಾ, ಅರ್ಚನಾ, ಕುಮಾರ್ ಗೋವಿಂದ್, ಥ್ರಿಲ್ಲರ್ ಮಂಜು, ಎಸ್.ನಾರಾಯಣ್, ಉಮೇಶ್, ಮನ್‌ದೀಪ್ ರಾಯ್. ವೆಂಕಟೇಶ್
ಕ/ಚಿ.ಕ: ರಾಜ್‌ಕಿಶೋರ್

ಮಾ: ಎಂ.ಡಿ.ಹಾಪಂ
ಸಂ: ಜನಾರ್ದನ್
ಛಾ: ಮನೋಹರ್
ಕಲೆ: ವಿಜಯಾನಂದ್
ಸ: ಕೆ.ಪ್ರಭಾಕರ್
ಧ್ವ: ಚಾಮುಂಡೇಶ್ವರಿ
ಸಾ: ಥ್ರಿಲ್ಲರ್ ಮಂಜು
ವ: ವೀರರಾಜು
ಪ್ರ: ಗೋಪಾಲ್, ಕೇಶ ರಾಜೀವ್
ಕ.ಸಾ: ಸಂಪೂರ್ಣ ಹಾಸ್ಯ. ಹಾಸ್ಯದಲ್ಲಿ ಪ್ರೇಮ ಕಥೆ. ಪ್ರೇಮದಲ್ಲಿ ಮಾನವೀಯತೆಯ ಹೊನಲು... ಐದು ಮಂದಿ ನಾಯಕರು ಹಾಸ್ಯ ಪ್ರೇಮ ಮಾನವೀಯತೆಗಳ ನಡುವೆ ಸಾಗುವ ಕಥೆ.

೧೯೩೫. ಶಿವ ಇದು ಯಾರ ಆಸ್ತಿ

(೧೯೯೯ / ವರ್ಣ / ಸಾಮಾಜಿಕ)
ಲಾ: ತಾತಾ ಫಿಲಂಸ್
ಪ್ರೊ: ವಿ.ಕೃಷ್ಣವೇಣಿ
ನಿ: ಡಾ||ಎಸ್.ಕೊಡ್ಲೆಯರಸನ್
ಅ: ವಾಸುದೇವರಾಜ್, ಶ್ರೀಶೈಲನ್, ಕೊಡ್ಲೆಯರಸನ್, ಸುಜಾತಾ, ಭವ್ಯಶ್ರೀ ರೈ, ಸತ್ಯಜಿತ್, ರನ್ ಮಹದೇವಪ್ಪ, ಎಂ.ಎಸ್.ಕಾರಂತ್, ಶಾಂತಮ್ಮ, ಬ್ಯಾಂಕ್ ಜನಾರ್ದನ್, ಅಗ್ರೋ ಚಿಕ್ಕಣ್ಣ, ಜಂಗ್ಲಿ ಪ್ರಸನ್ನ
ಕ/ಚಿ.ಕ/ಮಾ: ಎಸ್.ಕೊಡ್ಲೆಯರಸನ್
ಗೀ: ದೊಡ್ಡರಂಗೇಗೌಡ, ಶ್ರೀಚಂದ್ರು
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ರಮೇಶ್‌ಚಂದ್ರ, ಮಂಜುಳಾ ಗುರುರಾಜ್, ಬಿ.ಆರ್.ಛಾಯಾ
ಸಂ: ಮೈಸೂರು ಚಿನ್ನಪ
ಛಾ: ಜೆ.ಇ.ಶಂಕರ್
ಸ: ಆರ್.ದಾಮೋದರ್
ಸಾ: ಬಾಬು
ಹಾ: ೧)'ಈ ಭೂಮಿಯೆಲ್ಲ ಆ ಬಾನೆಲ್ಲ...', ೨)'ಪ್ರೀತಿಯ ಹಕ್ಕಿ ಕೂಗಿ...', ೩)'ನಸು ನಾಚಿಕೆಯೋ ತುಸು...', ೪)'ಶಿವನೇ ಹರನೇ ನೀ ಶಿಲೆಯಾಗಿ...'

೧೯೩೬. ಚಂದ್ರೋದಯ

(೧೯೯೯ / ವರ್ಣ / ಸಾಮಾಜಿಕ)
ಲಾ: ಸಂದೇಶ್ ಎಂಟರ್‌ಪ್ರೈಸಸ್
ಪ್ರೊ: ಸತೀಶ್ ಸ್ವಾಮಿ

ನಿ: ಎಸ್.ಮಹೇಂದರ್
ಸ.ನಿ: ಎಂ.ಎ. ತಿಮ್ಮಯ್ಯ
ಅ: ಶಿವರಾಜ್‌ಕುಮಾರ್, ರಮೇಶ್, ಪ್ರೇಮಾ, ವಿನಯಾ ಪ್ರಸಾದ್, ದೊಡ್ಡಣ್ಣ, ತಾರಾ, ಶಿವರಾಂ, ಅವಿನಾಶ್
ಕ/ಚಿ.ಕ: ಎಸ್. ಮಹೇಂದರ್
ಮಾ: ಬಿ.ಎ.ಮಧು
ಗೀ: ಹಂಸಲೇಖ
ಗಾ: ಶಿವರಾಜ್‌ಕುಮಾರ್, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ, ರಮೇಶ್ ಚಂದ್ರ
ಸಂ: ಪಿ.ಆರ್.ಸೌಂದರ ರಾಜ್
ಛಾ: ಕೃಷ್ಣ ಕುಮಾರ್
ಕಲೆ: ಇಸ್ಮಾಯಿಲ್
ಸ: ಹಂಸಲೇಖ
ನೃ: ಸಂಪತ್
ಹಾ: ೧) 'ರಾಜ ನಾನೇ ಶಿವರಾಜ್ ...', ೨) ' ಓಹೋ ಚಂದ್ರಮ...', ೩)'ಬಾರೋ ಗೆಳೆಯ...', ೪)'ಆಡು ಕ್ರಿಕೆಟ್...', ೫) 'ಹೂವಿಗೆ ತಂಗಾಳಿ...', ೬) 'ಇಂಚರ ಇಂಚರ...', ೭) ' ಬುಲ್ ಬುಲಾ...'
ಕ.ಸಾ: ಹುಡುಗಾಟದ ಹುಡುಗಿ ತಾನು ಬಯಸಿದವನು ಸಾವನ್ನಪ್ಪಿದ ನಂತರ ಮತ್ತೊಬ್ಬನೊಂದಿಗೆ ವಿವಾಹವಾದರೂ ತನ್ನ ತನುಮನವನ್ನು ಹಂಚಿಕೊಳ್ಳಲಾಗದೆ ಒದ್ದಾಡುತ್ತಾಳೆ. ಕಡೆಗೆ ಗಂಡನ ತಾಳ್ಮೆ ಹಾಗೂ ಒಳ್ಳೆಯ ಗುಣಗಳಿಗೆ ಕರಗುತ್ತಾಳೆ. ಅದು ಅವಳ ಬಾಳಿನ ಚಂದ್ರೋದಯವಾಗುತ್ತದೆ.

೧೯೩೭. 'Z'

(೧೯೯೯ / ವರ್ಣ / ಸಾಮಾಜಿಕ)
ಲಾ: ಪ್ರೇಮರತ್ನ ಕ್ರಿಯೇಷನ್ಸ್
ಪ್ರೊ: ಹೆಚ್.ಪಿ.ಅಮರನಾಥ್
ನಿ: ಕೆ.ಪ್ರವೀಣ್ ನಾಯಕ್
ಸ.ನಿ: ಗಿರೀಶ್ ಕಂಚಿಪುರ
ಅ: ಪ್ರಕಾಶ್ ರೈ, ಪ್ರೇಮಾ, ಟೆನ್ನಿಸ್ ಕೃಷ್ಣ, ನಾಗೇಶ್ ಮಯ್ಯ, ಅಗ್ರೋ ಚಿಕ್ಕಣ್ಣ, ಸುನಿತಾ, ಸಂದೀಪ್ ಮುಲಾನಿ, ರೀತು ಶಿವಪುರಿ, ಹರ್ಷ ದರ್ಬಾರ್, ಕೋಟೆ ಪ್ರಭಾಕರ್
ಕ/ಚಿ.ಕ/ಮಾ: ಕೆ.ಪ್ರವೀಣ್ ನಾಯಕ್
ಗೀ: ಪ್ರವೀಣ್ ಕುಮಾರ್, ಮುರಳಿ ಮೋಹನ್, ಹೆಚ್.ಎಸ್. ಅಚ್ಯುತ್, ವಿ.ಮನೋಹರ್
ಗಾ: ರಾಜೇಶ್, ಸೌಮ್ಯ, ಎಲ್.ಎನ್.ಶಾಸ್ತ್ರಿ, ಮಂಗಳಾ
ಸಂ: ಸುರೇಶ್ ಅರಸ್
ಛಾ: ಆರ್.ಗಿರಿ
ಕಲೆ: ದಿನೇಶ್
ಸ: ಮನೋಹರ್, ರಾಜೇಶ್ ರಾಮನಾಥ್, ಸಾಧುಕೋಕಿಲ, ಮುರಳಿ, ಪ್ರವೀಣ್ ಡಿ.ರಾವ್
ಸಾ: ಶಿವು
ಹಾ: ೧)'ಪ್ರೇಮಾ ಪ್ರೇಮಾ...', ೨)'ರೀಲೋ ರೀಲೋ...', ೩)'ಜೋಲಿ ಆಟ...', ೪)'ತುಟಿಯಲ್ಲಿ ತುಟಿಯ...', ೫)'ಕೇಳೆ ಕಿಶೋರಿ...', ೬)'ನೀ ರತಿಯು ನಾ ರತನು...'
ವಿ: ಐದು ಮಂದಿ ಸಂಗೀತ ನಿರ್ದೇಶಕರು ಸಂಗೀತ ನೀಡಿದ ಚಿತ್ರ
ಕ.ಸಾ: ಪ್ರತಿಭಾವಂತ ನಿರ್ದೇಶಕನೊಬ್ಬ ನವನಟಿಯನ್ನು ತೆರೆಗೆ ಪರಿಚಯಿಸಿ ಬೆಳೆಸುತ್ತಾನೆ. ಆಕೆ ಅತ್ಯಂತ ಯಶಸ್ವೀ ಹಾಗೂ ಬೇಡಿಕೆಯ ನಟಿಯಾಗುತ್ತಾಳೆ. ನಂತರ ನಿರ್ದೇಶಕನ ಚಿತ್ರವೊಂದು ಸೋತು ಆತ ನಿರುದ್ಯೋಗಿಯಾದಾಗ ಆಕೆ ಆತನಿಗೆ ಆತ್ಮವಿಶ್ವಾಸ ಮೂಡಿಸಿ ಚಿತ್ರ ತಯಾರಿಸಲು ಪ್ರೇರಣೆ ನೀಡುತ್ತಾಳೆ. ನಿರ್ದೇಶಕ ಆಕೆಯನ್ನು ಮದುವೆಯಾಗುವಂತೆ ಬೇಡಿಕೊಳ್ಳಲು ಆಕೆ ಒಪ್ಪುತ್ತಾಳೆ. ನಿರ್ದೇಶಕ ತನ್ನ ಚಿತ್ರಕ್ಕೆ ಬೇರೊಬ್ಬ ನಾಯಕಿಯನ್ನು ಕರೆತರಲು ನಾಯಕಿ ಹತಾಶಳಾಗುತ್ತಾಳೆ. ನಿರ್ದೇಶಕ ತಾನು ಮಾಡಿದ ತಪ್ಪಿಗೆ ತಾನೇ ಪರಿತಪಿಸುತ್ತಾನೆ.

೧೯೩೮. ಟುವ್ವಿ ಟುವ್ವಿ ಟುವ್ವಿ

(೧೯೯೯ / ವರ್ಣ / ಸಾಮಾಜಿಕ)



ಲಾ: ದಾಕ್ಷಾಯಿಣಿ ಸಿನಿ ಕಂಬೈನ್ಸ್
ಪ್ರೊ: ಪಾರ್ವತಮ್ಮ ರಾಜಕುಮಾರ್
ನಿ: ಸಿಂಗೀತಂ ಶ್ರೀನಿವಾಸರಾವ್
ಸ.ನಿ: ಪೂರ್ಣಪ್ರಜ್ಞಾ ರಾವ್, ಪ್ರಕಾಶ್ ರಾಜ್
ಅ: ರಾಘವೇಂದ್ರ ರಾಜಕುಮಾರ್, ಚಾರುಲತಾ, ಅರುಣ್, ಬಹದ್ದೂರ್, ದೊಡ್ಡಣ್ಣ, ಸಿ.ಆರ್.ಸಿಂಹ, ಎಂ.ಎಸ್.ಉಮೇಶ್, ಮಂಡ್ಯ ರಮೇಶ್, ರಿಚರ್ಡ್ ಲೂಯಿಸ್, ನೀಗ್ರೋ ಜಾನಿ, ಜಯಂತಿ, ವಿನಯಾ ಪ್ರಸಾದ್
ಕ: ರಿಚರ್ಡ್ ಲೂಯಿಸ್
ಚಿ.ಕ: ಸಿಂಗೀತಂ ಶ್ರೀನಿವಾಸರಾವ್
ಮಾ: ರಿಚರ್ಡ್ ಲೂಯಿಸ್
ಗೀ: ಹಂಸಲೇಖ
ಗಾ: ರಾಜಕುಮಾರ್, ರಾಘವೇಂದ್ರ ರಾಜಕುಮಾರ್, ಮಂಜುಳಾ ಗುರುರಾಜ್, ಸಂಗೀತಾ ಕಟ್ಟಿ, ರಮೇಶ್ ಚಂದ್ರ, ರಾಜೇಶ್
ಸಂ: ಎಸ್.ಮನೋಹರ್
ಛಾ: ಬಿ.ಸಿ.ಗೌರಿಶಂಕರ್
ಕಲೆ: ಇಸ್ಮಾಯಿಲ್
ಸ: ಹಂಸಲೇಖ
ನೃ: ತಾರಾ
ಸಾ: ಥ್ರಿಲ್ಲರ್ ಮಂಜು, ನಂಜುಂಡಿ ನಾಗರಾಜ್
ವ: ವೆಂಕಟರಾಮ್, ಕಲಾವಿದ ಮಂಜು
ಪ್ರ: ಸಿ.ವಿ.ದಿನೇಶ್, ರಾಜು
ಹಾ: ೧) 'ಟುವ್ವಿ ಟುವ್ವಿ...', ೨) ' ಬಂದೇ ನಾನು ನಿನ್ನ...', ೩)' ಮಾರಿಯಾ ಓ ಮಾರಿಯಾ...', ೪)' ಬಂದೇ ನಾನು ನಿನ್ನ...', ೫)' ಬಿಲ್ಲಿ ಬಿಲ್ಲಿ ಬಿಲ್ಲಿ...', ೬)' ಒಲವೆಂದರ ಸಂಗೀತ...',
ವಿ: ೧೯೯೮-೯೯ರ ರಾಜ್ಯಪ್ರಶಸ್ತಿ ಅತ್ಯುತ್ತಮ ಪೋಷಕ ನಟಿ: ಜಯಂತಿ, ಅತ್ಯುತ್ತಮ ಪೋಷಕ ನಟ: ದೊಡ್ಡಣ್ಣ
ಕ.ಸಾ: ಹಡಗೊಂದರಲ್ಲಿ ಕ್ಯಾಪ್ಟನ್ ಹಾಗೂ ಆತನ ಗೆಳೆಯರು,

ಪ್ರಯಾಣಿಕರು. ಕ್ಯಾಪ್ಟನ್‌ನನ್ನು ಪ್ರೀತಿಸುವ ಹುಡುಗಿ, ಆಕೆಯ ತಂದೆ ತಾಯಿ, ಮತ್ತೊಂದು ಮಗುವಿನ ಸುತ್ತ ಹೆಣೆದ ಹಾಸ್ಯಮಯ ಚಿತ್ರಣ.

೧೯೩೯. ರಂಭೆ ನೀ ವೈಯ್ಯಾರದ ಗೊಂಬೆ

(೧೯೯೯ / ವರ್ಣ / ಸಾಮಾಜಿಕ)

ಲಾ: ರಷ್ಮಿ ಕ್ರಿಯೇಷನ್ಸ್
ಪ್ರೊ: ಎಸ್.ರಾಜರೆಡ್ಡಿ, ಎಂ.ಡಿ.ಕೌಶಿಕ್
ನಿ: ಎಂ.ಡಿ.ಕೌಶಿಕ್
ಸ.ನಿ: ಬಸವರಾಜ್
ಅ: ಎಂ.ಡಿ.ಕೌಶಿಕ್, ಇಂದೂವರ್, ಶ್ರೀರಾಂ, ಅಬಿಲಾ, ಸಿ.ಆರ್.ಸಿಂಹ, ಶಿವರಾಂ
ಕ/ಚಿ.ಕ/ಮಾ: ಎಂ.ಡಿ.ಕೌಶಿಕ್
ಗಾ: ರಾಜೇಶ್ ಕೃಷ್ಣನ್
ಸಂ: ರಾಜಶೇಖರ ರೆಡ್ಡಿ
ಛಾ: ಆರ್.ಸಿ.ಮಾಪಾಕ್ಷಿ
ಕಲೆ: ಸೇತುರಾಮ್
ಸ: ವಿಜಯಾನಂದ್
ಧ್ವ: ಅರುಣ್ ಡಿಜಿಟಲ್ ಸ್ಟುಡಿಯೋ
ಸಾ: ಕೌರವ ವೆಂಕಟೇಶ್
ವ: ವೆಂಕಟರಾಂ
ಪ್ರ: ರಾಮು
ಸ್ಟು: ಕಂಠೀರವ
ವಿ: ಅಮೇರಿಕಾದ ರೂಪಾಯನ್ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಪ್ರದರ್ಶಿತವಾಯಿತು.
ಕ.ಸಾ: ಹಣಕ್ಕಾಗಿ ಹೆಣ್ಣು ಏನೆಲ್ಲಾ ವೇಶ ಹಾಕುತ್ತಾಳೆ ಎಂಬುದರ ಚಿತ್ರಣ.

೧೯೪೦. ರಂಭೆ ಊರ್ವಶಿ ಮೇನಕೆ

(೧೯೯೯ / ವರ್ಣ / ಸಾಮಾಜಿಕ)
ಲಾ: ರಾಮ್‌ಬಾಬು ಪ್ರೊಡಕ್ಷನ್ಸ್
ಪ್ರೊ: ಪದ್ಮ ಆರ್.ಎಸ್.ಗೌಡ, ಎಂ.ಬಿ.ಬಾಬು
ನಿ: ಅರ್ಜುನ್
ಸ.ನಿ: ಮೋಹನ್ ಎಸ್.ಮಾಳಗಿ
ಅ: ಕಾಶೀನಾಥ್, ಉತ್ತರಾ, ಬ್ಯಾಂಕ್ ಜನಾರ್ದನ್, ಆಶಾಲತಾ, ಅಬಿಲಾ, ಸಿನಾ, ಕುಣಿಗಲ್ ನಾಗಭೂಷಣ್, ಹೊನ್ನವಳ್ಳಿ ಕೃಷ್ಣ
ಕ/ಚಿ.ಕ/ಮಾ/ಗೀ: ಅರ್ಜುನ್
ಸಂ: ಪ್ರಸಾದ್
ಛಾ: ಸುರೇಂದ್ರನಾಥ್ ಬೇಗೂರು
ಕಲೆ: ರಾಜು
ಸ: ಹಂಸಲೇಖ
ಧ್ವ: ಸಂಕೇತ್
ನೃ: ಸಂಪತ್
ವ: ನಾಗರಾಜ್
ಪ್ರ: ಬಸವರಾಜ ಸಂಶಿ
ಸ್ಟು: ಕಂಠೀರವ
ಕ.ಸಾ: ನಾಯಕ ಚಿತ್ರದ ನಿರ್ದೇಶಕ. ಅವನನ್ನು ಬಯಸಿ ಮದುವೆಯಾಗುವ ಅಕ್ಕನ ಮಗಳು. ಕಾರಣಾಂತರದಿಂದ ಅವಳಿಂದ ದೂರವಿರುವ ನಾಯಕ. ಅದಕ್ಕಾಗಿ ರಂಭೆ, ಊರ್ವಶಿ, ಮೇನಕೆಯರೆಂಬ ತನ್ನ ಚಿತ್ರದ ನಾಯಕಿಯರನ್ನು ಪ್ರೀತಿಸುವ ನಾಟಕವಾಡುತ್ತಾನೆ. ಅವರ ನಾಟಕದಲ್ಲಿ ನಾಟಕವೊಂದು ನಡೆದು ಆತ ಪರದಾಡುವ ಹಾಸ್ಯಮಯ ಚಿತ್ರ.

೧೯೪೧. ಪ್ರತಿಭಟನೆ

(೧೯೯೯ / ವರ್ಣ / ಸಾಮಾಜಿಕ)
ಲಾ: ಶಿವಾಲಯ ಫಿಲಂಸ್
ಪ್ರೊ: ಎಂ.ರವಿ
ನಿ: ಎಂ.ರಾಜೇಂದ್ರಕುಮಾರ್ ಆರ್ಯ
ಸ.ನಿ: ಜಿ.ಬಿ.ಕುಮಾರ್
ಅ: ಕೆ.ಶಿವರಾಮು, ಕೀರ್ತಿ ರಾಜ್, ಹೊನ್ನವಳ್ಳಿ ಕೃಷ್ಣ, ಶನಿ ಮಹಾದೇವಪ್ಪ, ಕರಿಬಸವಯ್ಯ, ಸುಬ್ರಹ್ಮಣ್ಯಂ, ವಿಜಯಲಕ್ಷ್ಮಿ, ಶ್ರೀದೇವಿ, ಕಾಂಚನ, ರಮ್ಯ, ಬಿರಾದಾರ್
ಕ: ಕೆ.ಶಿವರಾಮು
ಚಿ.ಕ/ಮಾ: ಎಂ.ರಾಜೇಂದ್ರಕುಮಾರ್ ಆರ್ಯ
ಗೀ: ಮನೋಹರ್, ಡಾ|ಸಿದ್ದಲಿಂಗಯ್ಯ
ಗಾ: ರಾಜೇಶ್
ಸಂ: ರ್‍ಯಾಂ
ಛಾ: ಆರ್.ಸಿ.ಮಾಪಾಕ್ಷಿ
ಕಲೆ: ಮುತ್ತುರಾಜ್
ಸ: ವಿ.ಮನೋಹರ್
ಧ್ವ: ಮುರಳಿ, ಶಂಕರ್
ನೃ: ಪ್ರಸಾದ್
ಸಾ: ಮಧು
ವ: ರಾಮಚಂದ್ರ
ಪ್ರ: ಮುರಳಿ
ಸ್ಟು: ಆಕಾಶ್, ಪ್ರಸಾದ್
ವಿ: ೧೯೯೮-೯೯ರ ರಾಜ್ಯ ಪ್ರಶಸ್ತಿ : ಅತ್ಯುತ್ತಮ ಗೀತರಚನೆಕಾರ (ಡಾ|ಸಿದ್ದಲಿಂಗಯ್ಯ)
ಸೆ: ರೀಲು - ೧೪
ಕ.ಸಾ: ಪಂಚಾಯಿತಿ ಛೇರ್ಮನ್ ಕಾಲಿಗೆ ಚಪ್ಪಲಿ ತೊಡಿಸುತ್ತಿದ್ದ ನಾಯಕ ಹಿಂದುಳಿದ ಜಾತಿಯವನು. ಮೀಸಲಾತಿ ನಿಯಮದನ್ವಯ ನಾಯಕ ಛೇರ್ಮನ್ ಆಗುತ್ತಾನೆ. ಯಾರ ಕೈಗೊಂಬೆಯೂ ಆಗದೆ ಊರಿನ ಹಿತಚಿಂತಕನಾಗಿ ಬಾಳಲು ಪ್ರಯತ್ನಿಸಿ ಭ್ರಷ್ಟಾಚಾರ ನಿರ್ಮೂಲನೆಗೆ ಹೋರಾಡುತ್ತಾನೆ. ಅಂತಿಮವಾಗಿ ಆತ ಗೆಲ್ಲುತ್ತಾನೆ.

೧೯೪೨. ಆಹಾ

(೧೯೯೯ / ವರ್ಣ / ಸಾಮಾಜಿಕ)
ಲಾ: ಬಿ.ಆರ್.ಫಿಲಂಸ್
ಪ್ರೊ: ಬಾಲರಾಜ್, ಎಸ್.ರಮೇಶ್
ನಿ: ಆನಂದ್ .ಪಿ.ರಾಜು

ಅ: ರಾಮ್‌ಕುಮಾರ್, ಚಂದನ, ಸಿ.ಆರ್.ಸಿಂಹ, ದೊಡ್ಡಣ್ಣ, ಸಾಧುಕೋಕಿಲ, ಎಂ.ಎಸ್.ಉಮೇಶ್, ಟೆನ್ನಿಸ್ ಕೃಷ್ಣ, ಹರೀಶ್ ರಾಯ್, ಬ್ಯಾಂಕ್ ಜನಾರ್ದನ್, ಹೊನ್ನವಳ್ಳಿ ಕೃಷ್ಣ, ಅಗ್ರೋ ಚಿಕ್ಕಣ್ಣ
ಕ: ಮೈಸೂರು ಹರೀಶ್, ಆನಂದ್ ಪಿ.ರಾಜು
ಚಿ.ಕ: ಆನಂದ್ ಪಿ.ರಾಜು
ಗೀ: ಕೆ.ಕಲ್ಯಾಣ್
ಗಾ: ರಾಜೇಶ್, ನಂದಿತಾ, ಎಲ್.ಎನ್.ಶಾಸ್ತ್ರಿ, ಸಿ.ಅಶ್ವತ್ಥ್
ಸಂ: ಪ್ರಸಾದ್
ಛಾ: ಜಯದೇವ್
ಕಲೆ: ನಂಜುಂಡಸ್ವಾಮಿ
ಸ: ರಾಜೇಶ್ ರಾಮನಾಥ್, ಸಾಧುಕೋಕಿಲ
ಧ್ವ: ಚಾಮುಂಡೇಶ್ವರಿ
ನೃ: ತಾರಾ, ಪ್ರಸಾದ್
ಸ್ಟು: ಕಂಠೀರವ, ಪ್ರಸಾದ್
ಹಾ: ೧)'ಗೋಲಿ ಮಾರೋ ಗೋಲಿ ಮಾರೋ ಏನ್ ಬಂದ್ರೂ...', ೨)'ಚಿಂದಿ ಚಿಂದಿ ಚಿಂದುಳ್ಳಿ...', ೩)'ನಾಲ್ಕೊಂದ್ಲ ನಾಲ್ಕು...', ೪) 'ಚಪಲ ಚಪಲ ಉಪಯೋಗವಿಲ್ಲದ ಚಪಲ...', ೫)'ಪ್ರೀತಿಯೊಂದು ಸಾಗರ...'
ಕ.ಸಾ: ಕರವೆಣ್ಣೊಬ್ಬಳ ಕೊಲೆಯ ರಹಸ್ಯದ ಸುತ್ತ ಹೆಣೆಯಲಾದ ಹಾಸ್ಯ ಭರಿತ ಕಥೆ. ಮಧ್ಯವಯಸ್ಸಿನ ಚಪಲ ಚನ್ನಿಗರಿಬ್ಬರು ಒಬ್ಬರಿನ್ನೊಬ್ಬರಿಗೆ ತಿಳಿಯದಂತೆ ಕರವೆಣ್ಣೊಂದನ್ನು ಅಥಿತಿಗೃಹಕ್ಕೆ ಬರಹೇಳಿದರು. ಅದೇ ಅತಿಥಿಗೃಹದಲ್ಲಿ ಹಿರಿಯರ ಬಲವಂತ ವಿವಾಹದಿಂದ ಪಾರಾಗಲು ಮನೆಯಿಂದ ಓಡಿಬಂದಿದ್ದ ಯುವ ಜೋಡಿಯೂ ಇತ್ತು. ಅಥಿತಿಗೃಹಕ್ಕೆ ಬಂದ ಕರವೆಣ್ಣಿನ ಕೊಲೆ. ಹೆದರಿದ ನಾಲ್ವರೂ ಅಲ್ಲಿಂದ ಪರಾರಿ. ಕಾಡುಮೇಡುಗಳಲ್ಲಿ ಅಲೆತ. ಪೋಲೀಸರು ಕೊಲೆಪಾತಕನನ್ನು ಹಿಡಿದಾಗ ನೆಮ್ಮದಿ. ಯುವಜೋಡಿ ವಿವಾಹವಾಗಲು ಹಿರಿಯರ ಒಪ್ಪಿಗೆ.

೧೯೪೩. ಮಿಸ್ಟರ್ ಎಕ್ಸ್

(೧೯೯೯ / ವರ್ಣ / ಸಾಮಾಜಿಕ)
ಲಾ: ಸ್ಟಾರ್‌ವಿನ್ ಫಿಲಂಸ್
ಪ್ರೊ: ಇಕ್ಬಾಲ್ ರಾಜ್
ನಿ: ಹ.ಸೂ.ರಾಜಶೇಖರ್

ಸ.ನಿ: ಬಿ.ಎ.ಲಕ್ಷ್ಮಿಕಾಂತ್
ಅ: ದೇವರಾಜ್, ಸಹನಾ, ಇಕ್ಬಾಲ್ ರಾಜ್, ಚಾರುಲತಾ, ಸ್ವರ್ಣ, ಬೇಬಿರತ್ನಾ, ಸಾಧುಕೋಕಿಲ, ಸತ್ಯಜಿತ್, ಶೋಭರಾಜ್, ಕೋಟೆ ಪ್ರಭಾಕರ್, ಬ್ಯಾಂಕ್ ಜನಾರ್ದನ್, ಮನು, ಬಿರಾದರ್, ಅಗ್ರೋ ಚಿಕ್ಕಣ್ಣ, ನಯಾಜ್ ಖಾನ್, ಎಂ.ಎಸ್.ಕಾರಂತ್, ಶಾಂತಮ್ಮ, ರಮ್ಯ, ವಿಜಯಲಕ್ಷ್ಮಿ, ಪ್ರೀತಿ
ಕ/ಚಿ.ಕ: ಇಕ್ಬಾಲ್ ರಾಜ್
ಮಾ: ರವಿ ಶ್ರೀವತ್ಸ
ಗೀ: ಶ್ರೀರಂಗ, ಕಲ್ಯಾಣ್
ಗಾ: ರಾಜೇಶ್ ಕೃಷ್ಣ, ಸುನೀತಾ ಪ್ರಕಾಶ್, ಮಂಗಳಾ, ರಮೇಶ್ ಚಂದ್ರ
ಸಂ: ಬಿ.ಎಸ್.ಕೆಂಪರಾಜ್
ಛಾ: ರಮೇಶ್ ಬಾಬು
ಕಲೆ: ಇಸ್ಮಾಯಿಲ್
ಸ: ಸಾಧುಕೋಕಿಲ
ಧ್ವ: ಮಹೇಂದ್ರನ್, ಅರುವಮುದನ್, ಶಂಕರ್
ಸಾ: ವಿಕ್ರಂ ಸಿಂಗ್, ಜಾಲಿ ಬಾಸ್ಟಿನ್
ವ: ಶ್ರೀನಿವಾಸ್
ಪ್ರ: ಮಲ್ಲಿ
ಸ್ಟು: ಚಾಮುಂಡೇಶ್ವರಿ, ಪ್ರಸಾದ್
ಕ.ಸಾ: ದೇಶವನ್ನೇ ತಲ್ಲಣಗೊಳಿಸಲು ಬಗೆಬಗೆಯ ಚಟುವಟಿಕೆಗಳನ್ನು ನಡೆಸುವ ದುಷ್ಟಶಕ್ತಿಗಳ ವಿರುದ್ಧ ಹೋರಾಟ. ಅವರನ್ನು ಸದೆಬಡಿಯಲು ಬರುವ ಮಿಸ್ಟರ್ ಎಕ್ಸ್ ತನ್ನ ಕಾರ್ಯದಲ್ಲಿ ಜಯಶಾಲಿಯಾಗುವ ವೇಳೆಗೆ ಸಂಭವಿಸುವ

ಘಟನೆಗಳು ತಿರುವುಗಳೇ ಚಿತ್ರದ ಕಥೆ. 'ಮಿ॥ಎಕ್ಸ್' ಯಾರೆಂಬುದೇ ಚಿತ್ರದ ಸಸ್ಪೆನ್ಸ್.

೧೯೪೪. ರವಿಮಾಮ

(೧೯೯೯ / ವರ್ಣ / ಸಾಮಾಜಿಕ)

ಲಾ: ಶ್ರೀ ರಾಜರಾಜೇಶ್ವರಿ ಕ್ರಿಯೇಷನ್ಸ್
ಪ್ರೊ: ಕೊಟ್ಟಂ ರಾಜು, ಸತ್ಯಮೂರ್ತಿ
ನಿ: ಎಸ್.ನಾರಾಯಣ್
ಅ: ರವಿಚಂದ್ರನ್, ನಗ್ಮಾ, ಡಾ. ಚಂದನ್, ವೇಣು, ಗೌತಮ್, ಎಂ.ಎನ್.ಲಕ್ಷ್ಮೀದೇವಿ, ಹೇಮಾ ಪಂಚಮುಖಿ
ಕ/ಚಿ.ಕ/ಮಾ/ಗೀ: ಎಸ್.ನಾರಾಯಣ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ, ಸುಮಾ ಶಾಸ್ತ್ರಿ, ರಾಜೇಶ್, ಎಲ್.ಎನ್.ಶಾಸ್ತ್ರಿ
ಸಂ: ಪಿ.ಆರ್.ಸೌಂದರರಾಜ್
ಛಾ: ಜಿ.ಎಸ್.ಎಸ್. ಸೀತಾರಾಮ್
ಸ: ಎಲ್.ಎನ್.ಶಾಸ್ತ್ರಿ
ನೃ: ರಾಜಕುಮಾರ್
ಸಾ: ಕ್ರೇಜಿ ವೆಂಕಟೇಶ್
ಹಾ: ೧)'ಪ್ರಿಯ ಪ್ರಿಯ ಪ್ರೀತಿಯ...', ೨)' ಅಲೆಯೋ ಅಲೆ...', ೩) 'ನನ್ನಾಸೆ ಮಲ್ಲಿಗೇ...', ೪) ' ಆ ಕಿರಣಗಳಿಗೆ...', ೫)'ಅ.ಆ.ಕಲಿಯಬೇಕು...'
ಕ.ಸಾ: ತಾನು ಅವಿದ್ಯಾವಂತನಾಗಿದರೂ, ತಂಗಿಯನ್ನು ವಿದ್ಯಾವಂತಳನ್ನಾಗಿಸುವ ಅಣ್ಣ. ಓದಿಬಂದ ತಂಗಿ, ಶ್ರೀಮಂತನ ಯೋಜನೆಗಳ ವಿರೋಧಿ. ಶ್ರೀಮಂತನ ಮಗ ಅವಳ ಪ್ರೇಮಿ. ಅವನು ಅಕ್ಷರ ಕಲಿತವರನ್ನು ನಾಶ ಪಡಿಸುವ ಖಳನಾಯಕ. ತಾಯಿಯಾಗಲಿದ್ದ ತಂಗಿಯ ಕೊಲೆ. ಕೊಲೆಗಾರನನ್ನು ಕೊಲೆಮಾಡಿ ಜೈಲು ಸೇರಿದ ಅಣ್ಣ ಮರಳಿಬಂದು ಶ್ರೀಮಂತನನ್ನು ಕೊಂದು ಊರವರಿಗೆ ಉಪಕಾರಿಯಾಗುವುದೇ ಕಥೆ.

೧೯೪೫. ಸಂಭ್ರಮ

(೧೯೯೯ / ವರ್ಣ / ಸಾಮಾಜಿಕ)

ಲಾ: ಶ್ರೀನಿವಾಸ ಕಂಬೈನ್ಸ್
ಪ್ರೊ: ಎ. ಗೋಪಾಲ ಕೃಷ್ಣ, ಕೆ.ವಿ.ನಾರಾಯಣ, ಡಾ. ಸಂಜೀವಮೂರ್ತಿ, ಶ್ರೀಪಾಲ್ ಜೈನ್
ಕ/ಚಿ.ಕ/ನಿ: ಮಹೇಶ್ ಸುಖಧರೆ

ಅ: ರಮೇಶ್, ಕಾವೇರಿ, ಹೇಮಾ ಪಂಚಮುಖಿ, ವಾಣಿಶ್ರೀ ಅರವಿಂದ್, ಕಲ್ಯಾಣ್‌ಕುಮಾರ್, ಬಿ.ವಿ.ರಾಧ
ಮಾ: ಕೋಟಿಗಾನಹಳ್ಳಿ ರಾಮಯ್ಯ
ಗೀ: ಹಂಸಲೇಖ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ, ಪಂಪ, ನಂದಿತಾ, ರಮೇಶ್ ಚಂದ್ರ, ಅನುರಾಧಾ ಶ್ರೀರಾಮ್
ಸಂ: ನಾಗೇಶ್ ಯಾದವ್
ಛಾ: ಮಹೇಂದ್ರನ್
ಸ: ಹಂಸಲೇಖ
ಪ್ರ: ವೆಂಕಟೇಶ್
ಹಾ: ೧) 'ವಾಟ್ ಎ ಸ್ಮೈಲ್...', ೨) 'ಓ ಭೂರಮೆ...', ೩)' ಯಾರು ಭೂಮಿಗೆ...', ೪)'ಈ ರಾಗ ಅನುರಾಗವು...', ೫) 'ನಮಸ್ಕಾರ ನಿನಗೆ...', ೬) 'ಪ್ರೇಮ ಸಂಭ್ರಮ...', ೭)'ತುಂಟಿ ಹುಡುಗಿ...'
ಕ.ಸಾ: ಮದುವೆಯಾಗದ ಮೂವರು ಹೆಣ್ಣು ಮಕ್ಕಳು. ನಾಯಕನ ಪ್ರವೇಶದಿಂದ ತಮ್ಮ ಬದುಕಿನಲ್ಲಿ ಸಂಭ್ರಮ ಕಾಣುತ್ತಾರೆ. ನಾಯಕನ ಆಸಕ್ತಿಯಿಂದಾಗಿ ಇಬ್ಬರ ಹೆಣ್ಣು ಮಕ್ಕಳ ಬದುಕಿಗೆ ದಾರಿಯಾಗುತ್ತದೆ. ಮತ್ತೊಬ್ಬಳನ್ನು ತಾನೇ ಮೆಚ್ಚಿಕೊಂಡ ನಾಯಕ ಅವಳನ್ನು ಮದುವೆಯಾಗುತ್ತಾನೆ.

೧೯೪೬. ಕಿಲ್ಲರ್

(೧೯೯೯ / ವರ್ಣ / ಸಾಮಾಜಿಕ)

ಲಾ: ಓಂ ಶಿವಸಾಯಿ ಪ್ರೊಡಕ್ಷನ್ಸ್
ಪ್ರೊ/ನಿ: ಆನಂದ್ .ಪಿ.ರಾಜು
ಸ.ನಿ: ರಾಜ್, ದಿನೇಶ್
ಅ: ಸುಮನ್, ಪ್ರಕಾಶ್ ರೈ, ಅರುಣ್ ಪಾಂಡ್ಯನ್, ಇಂದ್ರಜಾ.

ಶೋಭರಾಜ್, ಸುಂದರ ರಾಜ್, ಕಾಸ್ಟ್ಯೂಮ್ ಕೃಷ್ಣ, ಸತ್ಯಪ್ರಕಾಶ್, ಕೃಷ್ಣೇಗೌಡ, ಜೋಸೆ ಮನ್, ಜಯಸಿಂಹ ಮುಸುರಿ, ಸಾಧುಕೋಕಿಲ, ಎಂ.ಎಸ್.ಕಾರಂತ್, ವನಶ್ರೀ, ಮಾಲತಿ ರಾವ್, ಕಲ್ಯಾಣ್, ಎಂ.ಎನ್.ಲಕ್ಷ್ಮೀದೇವಿ
ಕ: ಶ್ರೀನಿವಾಸ ಬಾಬು
ಚಿ.ಕ: ಆನಂದ್ .ಪಿ.ರಾಜು
ಮಾ: ರವಿ ಶ್ರೀವತ್ಸ
ಗಾ: ಸಾಧುಕೋಕಿಲ, ಮಂಜುಳಾ ಗುರುರಾಜ್, ಮಂಗಳಾ
ಸಂ: ಆರ್.ಜನಾರ್ದನ್
ಛಾ: ಜೆ.ಜಿ.ಕೃಷ್ಣ
ಸ: ಸಾಧುಕೋಕಿಲ
ನೃ: ಪ್ರಸಾದ್
ಸಾ: ಹರೀಶ್ ಶೆಟ್ಟಿ (ಬಾಂಬೆ)
ಹಾ: ೧)'ಲವ್ ಲವ್ ಎಂದು...', ೨)'ಜುಮ್ಮ ಲಕ ಜಮುನ...'
(ಹೆಚ್ಚಿನ ವಿವರಗಳು ಲಭ್ಯವಿಲ್ಲ)

೧೯೪೭. ಅವಳೇ ನನ್ನ ಹುಡುಗಿ

(೧೯೯೯ / ವರ್ಣ / ಸಾಮಾಜಿಕ)

ಲಾ: ಸಿ.ಎಲ್.ಎಸ್. ಪ್ರೊಡಕ್ಷನ್ಸ್
ಪ್ರೊ/ನಿ: ಎಸ್.ಉಮೇಶ್
ಅ: ಸಾಧುಕೋಕಿಲ, ಚಾರುಲತಾ, ಹರ್ಷ ವರ್ಮಾರ್, ಸೋಮು, ಮಧುರಾ, ಎಂ.ಎಸ್.ರಮೇಶ್, ಕೃಷ್ಣೇಗೌಡ, ಬ್ಯಾಂಕ್ ಜನಾರ್ದನ್, ಶ್ರೀಶೈಲನ್, ವಿ.ಎಸ್.ಮೂರ್ತಿ, ಬಿ.ವಿ.ರಾಧಾ, ಎಂ.ಎನ್.ಲಕ್ಷ್ಮೀ ದೇವಿ
ಕ: ಎಸ್. ಉಮೇಶ್
ಚಿ.ಕ/ಮಾ/ಗೀ: ಎಂ.ಡಿ. ಹಾಸಂ
ಗಾ: ರಾಜೇಶ್ ಕೃಷ್ಣ, ರಮೇಶ್ ಚಂದ್ರ, ಬಿ.ಜಯಶ್ರೀ, ಸುರೇಖಾ, ನಾಗಚಂದ್ರಿಕಾ
ಸಂ: ಎಸ್.ಉಮೇಶ್
ಛಾ: ಸುರೇಂದ್ರನಾಥ್ ಬೇಗೂರು
ಸ: ಗುರುದೇವ
ದೃ: ರಾಜನ್
ಸಾ: ತಿಪಟೂರು ಸೋಮು
ವ: ಮಲ್ಲಿ
ಹಾ: ೧)' ಅವಳೇ ನನ್ನ ಹುಡುಗಿ...', ೨)' ನಿಜ ಹೇಳುವೆ ಕೇಳು...', ೩)' ಮುಂಜಾನೆ ಮಂಜು...', ೪)' ಈ ಸರ್ಗ...',
ಕ.ಸಾ: ತನ್ನ ಮನೆಯ ನೆರೆಯಲ್ಲಿ ನಡೆಯುತ್ತಿರುವ ವ್ಯಭಿಚಾರ ವ್ಯವಹಾರವನ್ನು ವಿರೋಧಿಸಿದ್ದಕ್ಕೆ ಹೆಂಡತಿ ಮಗಳನ್ನು ಕಳೆದುಕೊಂಡ ವಿಮಾ ಏಜೆಂಟ್, ಆ ಕೊಲೆ ಆರೋಪ ಹೊತ್ತು ಜೈಲು ಸೇರಿ ಮರಳಿ ಬಂದಮೇಲೆ ಆ ಕೊಲೆಗೆ ಕಾರಣರಾದ ಗುಂಪು ಪೋಲೀಸರ ಕೈಗೆ ಸಿಕ್ಕಿಬೀಳುವಂತೆ ಮಾಡಿದ.

೧೯೪೮. ರಾಜಣ್ಣ

(೧೯೯೯ / ವರ್ಣ / ಸಾಮಾಜಿಕ)

ಲಾ: ಆರ್.ಎಸ್.ಎಸ್.ಸಿನಿ ಕ್ರಿಯೇಷನ್ಸ್
ಪ್ರೊ: ಬಿ.ಶ್ರೀನಿವಾಸ್

ನಿ: ಎಸ್.ವಿಜಯ ಕುಮಾರ್
ಸ.ನಿ: ಕೆ.ರಾಮು, ಪ್ರಸನ್ನ ಕುಮಾರ್ ನಾಯು
ಅ: ವಿನೋದ್ ರಾಜ್, ಇಂದ್ರಜ, ಸುಚಿತ್ರಾ, ಮಧುಶ್ರೀ, ಲೀಲಾವತಿ, ಶ್ರೀನಿವಾಸ ಮೂರ್ತಿ, ಲೋಹಿತಾಶ್ವ, ಶಂಕರ್ ಅಶ್ವತ್, ರಾಧಾಕೃಷ್ಣ, ವಿಜಯ್, ಮಹೇಶ್, ಶೀಲಾ ರಾವ್, ಮಂಜುಳಾ
ಕ: ಬಿ.ಶ್ರೀನಿವಾಸ್
ಚಿ.ಕ: ಎಸ್.ವಿಜಯಕುಮಾರ್
ಮಾ/ಗೀ: ಗೋಟೂರಿ, ರಮೇಶ್ ರಾವ್
ಗಾ: ಮನು, ವಿನೋದ್ ರಾಜ್, ಮಂಜುಳಾ ಗುರುರಾಜ್, ಗಂಗೋತ್ರಿ, ಬಿ.ಜಯಶ್ರೀ
ಸಂ: ಬಿ.ಎಸ್.ಕೆಂಪರಾಜ್
ಛಾ: ಅಬುಲ್ ರಹಮಾನ್
ಕಲೆ: ಶ್ರೀನಿವಾಸ್
ಸ: ಮೈಸೂರು ಮೋಹನ್
ದೃ: ಪ್ರಸಾದ್
ನೃ: ನದೀಮ್ ಖಾನ್(ಬಾಂಬೆ)
ಸಾ: ಡೈನಾಮಿಕ್ ಸುರೇಶ್, ಜಾಗ್ವಾರ್ ತಂಗಂ
ವ: ಶಬ್ಬೀರ್
ಪ್ರ: ಕುಮಾರ್, ವಿಠಲ್ ಬಾಬು
ಕ.ಸಾ: ಕಷ್ಟದ ಬೆಳೆ, ಸಾಲಗಾರರ ಕಾಟ ರೈತ ದಂಪತಿಗಳ ಆತ್ಮಹತ್ಯೆಗೆ ಕಾರಣ. ತಬ್ಬಲಿಯಾದ ರಾಜ ಸೋದರ ಮಾವನ ನೆರವಿನಿಂದ ಬೆಳೆದು ಓದಿದ. ಮಾವನ ಮಗಳನ್ನು ಒಲಿದ. ಹಸುಮಣೆ ಏರುವ ಮೊದಲೇ ಮೂರುತಿಂಗಳ ಬಸುರಿ ಅಕ್ಕ. ಆರೋಪ ತಬ್ಬಲಿಯ ಮೇಲೆ. ಆದರೆ ನಿಜವಾದ ಆರೋಪಿ

ವಕೀಲನ ಪುತ್ರ ಅವಳನ್ನು ವಂಚಿಸಿರುತ್ತಾನೆ. ತಬ್ಬಲಿಯ ರೊಚ್ಚಿಗೆ ಆ ಆರೋಪಿ ಬಲಿಯಾಗುವಲ್ಲಿಗೆ ಕಥೆಯ ಅಂತ್ಯ.

೧೯೪೯. ಹಬ್ಬ

(೧೯೯೯ / ವರ್ಣ / ಸಾಮಾಜಿಕ)
ಲಾ: ಚಿನ್ನಿ ಚಿತ್ರ
ಪ್ರೊ: ಜಯಶ್ರೀದೇವಿ
ನಿ: ಡಿ.ರಾಜೇಂದ್ರಬಾಬು
ಸ.ನಿ: ಎಸ್.ಎ.ಪ್ರಕಾಶ್, ಕಲಾಗಂಗೋತ್ರಿ ಮಂಜು
ಅ: ವಿಷ್ಣುವರ್ಧನ್, ಅಂಬರೀಷ್, ದೇವರಾಜ್, ಶಶಿಕುಮಾರ್, ಲೀಲಾವತಿ, ರಾಮ್‌ಕುಮಾರ್, ಜಯಪ್ರದಾ, ಕಸ್ತೂರಿ, ವಿಜಯಲಕ್ಷ್ಮಿ, ಚಾರುಲತಾ, ಊರ್ವಶಿ
ಕ: ಜಿ.ಕೆ.ಭಾರವಿ
ಚಿ.ಕ: ಡಿ.ರಾಜೇಂದ್ರಬಾಬು
ಮಾ: ಬಿ.ಎ.ಮಧು
ಗೀ: ಹಂಸಲೇಖ
ಗಾ: ಚಿತ್ರಾ, ರಾಜೇಶ್, ನಂದಿತಾ, ಎಸ್.ಪಿ.ಬಾಲಸುಬ್ರಹ್ಮಣ್ಯಂ, ರಮೇಶ್ ಚಂದ್ರ
ಸಂ: ಶಶಿಕುಮಾರ್
ಛಾ: ಪಿ.ಕೆ.ಹೆಚ್.ದಾಸ್
ಕಲೆ: ರಮೇಶ್ ಬಾಬು
ಸ: ಹಂಸಲೇಖ
ನೃ: ರಘುರಾಮ್
ಸಾ: ಹರ್ಷ ಬಾಬು
ಪ್ರ: ವೆಂಕಟೇಶ್
ಹಾ: ೧) 'ಒಂದೇ ಉಸಿರಂತೆ...', ೨) 'ಜೇನು ಗೂಡು ನಾವೆಲ್ಲಾ...', ೩) 'ಯಾಲೇ ಯಾಲೇ...', ೪) 'ಮೈ ತೊಳೆಯೋ ಶಾಸ್ತ್ರ...', ೫) 'ಆರತಿ ಎತ್ತೀರೇ...', ೬) 'ಕೋಟಿ ಕೋಟಿ ದೇವರು...', ೭) 'ಧಿಂ ತಟ ತಕಿತ...', ೮) 'ಹಬ್ಬ ಹಬ್ಬ...', ೯) 'ಚನ್ನಪ್ಪ ಚನ್ನೇಗೌಡ...'
ವಿ: ಐವರು ನಾಯಕರು, ಐವರು ನಾಯಕಿಯರು, ಐವರು ಖಳರು ಅಭಿನಯಿಸಿದ ಚಿತ್ರ.
ಕ.ಸಾ: ಐದು ಮಂದಿ ಸಹೋದರರು. ಅವರ ಹೆಂಡತಿಯರು. ಮಕ್ಕಳೊಂದಿಗೆ ಒಟ್ಟಾಗಿ ಕೂಡಿ ಬಾಳುವ ಮನೆ. ಒಬ್ಬರನ್ನೊಬ್ಬರು ಅರ್ಥ ಮಾಡಿಕೊಂಡು ಬಾಳಿದರೆ ಈ ಜೀವನ ಸುಖಸಂಸಾರ ಮಾತ್ರವಲ್ಲ, ಪ್ರತಿದಿನವೂ ಹಬ್ಬದ ದಿನ ಎಂಬ ಸಂದೇಶ ಸಾರುವ ಕಥೆ. ವಿರಾಟಪರ್ವದ ಸಮೀಕರಣ.

೧೯೫೦. ದ್ರೋಣ

(೧೯೯೯ / ವರ್ಣ / ಸಾಮಾಜಿಕ)
ಲಾ: ರಾಯಲ್ ಫಿಲಂಸ್
ಪ್ರೊ: ಸುರೇಶ್, ಪರಿಮಳಾ ಜಗ್ಗೇಶ್, ಜಿ.ಜಿ.ಕೃಷ್ಣ, ಎಂ.ರಮೇಶ್
ನಿ: ಹೆಚ್.ವಾಸು
ಸ.ನಿ: ಪ್ರಕಾಶ್, ವೇದಮೂರ್ತಿ, ರುದ್ರೇಶ್



ಅ: ಜಗ್ಗೇಶ್, ಮೋನಿಕಾ ಬೇಡಿ, ರೇಶ್ಮಾ, ಸುಧೀರ್, ಅವಿನಾಶ್, ಶೋಭರಾಜ್, ಹರೀಶ್ ರಾಯ್, ಬ್ಯಾಂಕ್ ಜನಾರ್ದನ್
ಕ/ಚಿ.ಕ: ಹೆಚ್. ವಾಸು
ಮಾ: ಜಿ.ಎಂ.ಪ್ರಹ್ಲಾದ್
ಗೀ: ಹಂಸಲೇಖ
ಗಾ: ಮನು, ಚಿತ್ರಾ, ಜಗ್ಗೇಶ್, ಸೌಮ್ಯ, ರಾಜೇಶ್, ಬಿ.ಜಯಶ್ರೀ
ಸಂ: ಶ್ಯಾಂ
ಛಾ: ಜಿ.ಜಿ.ಕೃಷ್ಣ
ಕಲೆ: ಸುಂದರಂ
ಸ: ಹಂಸಲೇಖ
ನೃ: ಪ್ರಸಾದ್
ಸಾ: ಕೆ.ಡಿ.ವೆಂಕಟೇಶ್
ಹಾ: ೧) 'ಜೈ ಅಂದ್ರೆ ಜನತೆಗೆ ಜೈ...', ೨) 'ಪೈ ಗುಲೇಬ ಕಾವಲಿ...', ೩) 'ಲವ್ ಆದ್ರೂ...', ೪) 'ಯಾರಿಂದ ಹೂವೊಂದು...', ೬) 'ಎಲೆ ರಂಗ...'
ಕ.ಸಾ: ಕೊಳಚೆ ಪ್ರದೇಶದಲ್ಲಿ ಬೆಳೆದ ಅನಾಥ. ಉಳ್ಳವರನ್ನು ಸುಲಿಗೆ ಮಾಡಿ ಇಲ್ಲದವರಿಗೆ ಹಂಚುವವ. ಅವನೇ ಕಾನೂನು ಪಾಲಕ ಪೋಲೀಸ್ ಅಧಿಕಾರಿಯಾದ. ಭೂಗತ ಜಗತ್ತಿನ ದೊರೆಗಳ ಬೇಟೆಯಾಡಿದ. ತನ್ನ ತಂದೆಯ ಸಾವಿಗೆ ಕಾರಣನಾದ ಶ್ರೀಮಂತನ ಮೇಲೆ ಕಾನೂನು ಕ್ರಮ ಕೈಗೊಳ್ಳುವ ನಿರ್ಧಾರ ಹೊತ್ತು ಕಾರ್ಯೋನ್ಮುಖನಾದ, ಜಯಶಾಲಿಯೂ ಆದ ಕಥೆ.

೧೯೫೧. ನಾನು ನನ್ನ ಹೆಂಡ್ತೀರು

(೧೯೯೯ / ವರ್ಣ / ಸಾಮಾಜಿಕ)
ಲಾ: ರಾಕ್‌ಲೈನ್ ಪ್ರೊಡಕ್ಷನ್ಸ್

ಪ್ರೊ: ರಾಕ್‌ಲೈನ್ ವೆಂಕಟೇಶ್
ನಿ: ವಿ.ಎಸ್. ರೆಡ್ಡಿ
ಸ.ನಿ: ಸುಬ್ರಹ್ಮಣ್ಯಂ, ಸೋಮರಾಜ್
ಅ: ರವಿಚಂದ್ರನ್, ಪ್ರೇಮ, ಸೌಂದರ್ಯ, ದೊಡ್ಡಣ್ಣ, ಕಾಶಿ, ಮಂಡ್ಯ ರಮೇಶ್, ಸಿಹಿಕಹಿ ಚಂದ್ರು
ಚಿ.ಕ: ವಿ.ಎಸ್. ರೆಡ್ಡಿ
ಮಾ: ಕೆ.ನಂಜುಂಡ
ಗೀ: ಕೆ.ಕಲ್ಯಾಣ್
ಗಾ: ಎಸ್.ಪಿ. ಬಾಲಸುಬ್ರಹ್ಮಣ್ಯಂ, ಎಲ್.ಎನ್. ಶಾಸ್ತ್ರಿ, ಚಿತ್ರಾ, ಗುರುಕಿರಣ್, ಸುಮಾ ಶಾಸ್ತ್ರಿ
ಸಂ: ಶ್ಯಾಂ
ಛಾ: ಜಿ.ಎಸ್.ವಿ. ಸೀತಾರಾಂ
ಕಲೆ: ಅರುಣ್ ಕುಮಾರ್
ಸ: ವಿ.ರವಿಚಂದ್ರನ್
ಧ್ವ: ಬಾಬು, ಮುರಳಿ, ಪಿ. ಧರ್ಮೇಂದ್ರ, ಬಲರಾಂ
ನೃ: ನಟರಾಜ್
ಸಾ: ಕೆ.ಡಿ.ವೆಂಕಟೇಶ್
ಹಾ: ೧) 'ಈ ಜಗವೇ...', ೨) 'ನನ್ನವಳು ನಕ್ಕರೆ...', ೩) 'ರಟಿ ೧....೨.....೩....', ೪) 'ಬಾರೇ ಚಿನ್ನ...', ೫) 'ಈ ಭೂಮಿಗ..', ೬) 'ನಾನು ನನ್ನ ಹೆಂಡ್ತೀರು...'
ಕ.ಸಾ: ನಾಯಕ ವಿವಾಹಿತ. ಒಮ್ಮೆ ಕಾರ್ಯಾರ್ಥ ಬೇರೆ ದೇಶಕ್ಕೆ ಹೋದಾಗ ವಿಚಿತ್ರ ಸಂದರ್ಭಕ್ಕೆ ಸಿಲುಕಿ ಅಲ್ಲಿನ ಆದಿವಾಸಿ ಜನಾಂಗದ ಹುಡುಗಿಯನ್ನು ಮದುವೆಯಾಗಬೇಕಾಗುತ್ತದೆ. ನಂತರ ಮೊದಲ ಹೆಂಡತಿಗೆ ಸತ್ಯಾಂಶ ತಿಳಿಸಲಾರದ, ಎರಡನೆಯವಳನ್ನು ಬಿಡಲೂ ಆಗದ ಸಂಕಟಕ್ಕೆ ಸಿಲುಕುತ್ತಾನೆ. ಕೊನೆಗೊಮ್ಮೆ ನಿಜಾಂಶ ಹೊರಬೀಳಲೇಬೇಕಾಗುವುದು. ಆ ಸಂದರ್ಭದಲ್ಲಿ ಮೊದಲನೆ ಹೆಂಡತಿ ವಿಶಾಲ ಹೃದಯಿಯಾಗಿ ಎರಡನೆಯವಳನ್ನು ತಂಗಿಯಂತೆಯೇ ಸ್ವೀಕರಿಸುತ್ತಾಳೆ.

೧೯೫೨. ಪ್ರತ್ಯರ್ಥ

(೧೯೯೯ / ವರ್ಣ / ಸಾಮಾಜಿಕ)
ಲಾ: ಸಂಯುಕ್ತ ಕ್ರಿಯೇಷನ್ಸ್
ಪ್ರೊ: ಜಿ.ವಿ.ಶ್ರೀನಿವಾಸ್, ಬಿ.ಜಿ.ಮಂಜುನಾಥ್
ನಿ: ಸುನಿಲ್ ಕುಮಾರ್ ದೇಸಾಯಿ
ಸ.ನಿ: ಸೀತಾರಾಮ ಕಾರಂತ್, ಶಶಿಧರ್ ಭಟ್

ಅ: ರಮೇಶ್, ರಘುವರನ್, ಶಿವರಾಮ್, ಕಾಶಿ, ಸುದೀಪ್ ಸಂಜೀವ್, ಅನಂತು, ಅವಿನಾಶ್, ಮಾ।ವಿನಾಯಕ ಜೋಶಿ, ಗಿರೀಶ್ ಕಾರ್ನಾಡ್
ಕ/ಚಿ.ಕ/ಮಾ: ಸುನಿಲ್ ಕುಮಾರ್ ದೇಸಾಯಿ
ಸಂ: ಆರ್. ಜನಾರ್ದನ್
ಛಾ: ಹೆಚ್.ಸಿ. ವೇಣು
ಕಲೆ: ರೇವಣ್ಣ
ಸ: ಇಳಯರಾಜಾ
ಸಾ: ಕೆ.ಡಿ. ವೆಂಕಟೇಶ್
ಕ.ಸಾ: ಮಂತ್ರಿಯ ಕೊಲೆಯ ಸುತ್ತ ಹೆಣೆದ ಕಥೆ. ರಕ್ಷಣಾ ಸಿಬ್ಬಂದಿಯ ತಂತ್ರ, ನಾಯಕನ ಪ್ರತಿತಂತ್ರ, ಜೊತೆಗೆ ಅದೃಶ್ಯ ವ್ಯಕ್ತಿಯಾಗಿ ಕಾರ್ಯಾಚರಣೆ ಇತ್ಯಾದಿ. ಸರ್ಕಾರವನ್ನು ಕೆಡವಿ, ರಾಜ್ಯದಲ್ಲಿ ಅಭದ್ರತೆ, ಅಶಾಂತಿಗಳನ್ನುಂಟು ಮಾಡಲು ಯತ್ನಿಸುವ ಬಂದುಕೋರರು ಮುಖ್ಯಮಂತ್ರಿಯ ಕೊಲೆಯ ಸಂಚು ನಡೆಸುವರು. ನಿಷ್ಠಾವಂತ, ಚಾಣಾಕ್ಷ ಸಿ.ಬಿ.ಐ. ಅಧಿಕಾರಿ ಸಂಚನ್ನು ಬಯಲಿಗೆಳೆದು, ನಡೆಯಲಿದ್ದ ಕೊಲೆಯನ್ನು ತಪ್ಪಿಸಿ, ಶಾಂತಿಪಾಲನೆಗೆ ಕಾರಣನಾಗುವನು.

೧೯೫೩. ಕೂಲಿರಾಜ

(೧೯೯೯ / ವರ್ಣ / ಸಾಮಾಜಿಕ)
ಲಾ: ಶ್ರೀ ರಾಜರಾಜೇಶ್ವರಿ ಚಿತ್ರಾಲಯ
ಪ್ರೊ: ಶ್ರೀಮತಿ ರಾಜೇಶ್ವರಿ
ಚಿ.ಕ/ಮಾ/ನಿ: ಎ.ಆರ್.ಬಾಬು
ಅ: ಶಶಿಕುಮಾರ್, ಇಂದ್ರಜಾ, ಧೀರೇಂದ್ರ ಗೋಪಾಲ್, ಲೋಕೇಶ್, ಉಮೇಶ್, ನಾರಾಯಣಪ್ಪ, ಸುಶೀಲಮ್ಮ, ಸಾಧುಕೋಕಿಲ
ಗೀ: ಶ್ರೀ ಚಂದ್ರು, ಹಂಸಲೇಖ
ಗಾ: ರಾಜೇಶ್, ಸುನೇತ್ರ, ಚಿತ್ರಾ, ಲತಾ ಹಂಸಲೇಖ
ಸಂ: ಕೆ. ನರಸಯ್ಯ
ಛಾ: ಅಣ್ಣಾಜಿ ನಾಗರಾಜ್

ಕಲೆ: ಇಸ್ಮಾಯಿಲ್
ಸ: ಹಂಸಲೇಖ
ಧ್ವ: ಪ್ರಸಾದ್
ಸ್ಥಿ: ತ್ರಿಭುವನ್ ಪ್ರಸಾದ್
ಸಾ: ಶಿವು
ವ: ಮೇಕಪ್ ಮಲ್ಲಿ
ಪ್ರ: ನಾಗರಾಜ್
ಸ್ಟು: ಕಂಠೀರವ
ಹಾ: ೧)'ನಾನು ಕೂಲಿ ನೀನು ಕೂಲಿ ...', ೨)' ಲಕ್ಕಮ್ಮ ಕುಕ್ಕ ಜೇಡಮ್ಮ...', ೩) 'ಮೈಸೂರು ಮಲ್ಲಿ ನೀನು ಕರಗ ...', ೪)' ಮನಸಿನ ಗೂಡಲಿ ಜೇನಿದೆ...', ೫) ' ಯಾರಿವನ್ಯಾರಿವನು, ಸುಂದರ ಪುರುಷ ...'
ಕ.ಸಾ: ದುರಾಸೆಯ ಶ್ರೀಮಂತನಿಗೆ ಬುದ್ಧಿ ಕಲಿಸಲು ಬಸ್‌ಸ್ಟ್ಯಾಂಡ್ ಕೂಲಿಯೊಬ್ಬನನ್ನು ಅಮೆರಿಕದ ಕೋಟ್ಯಾಧೀಶ ನೆಂಬಂತೆ ಶ್ರೀಮಂತನ ಮುಂದೆ ತಂದು, ಆತ ಕೋಟ್ಯಾಧೀಶನಿಗೆ ತನ್ನ ಮಗಳನ್ನು ಮದುವೆ ಮಾಡಿಕೊಡುವಂತೆ ಸೋದರಳಿಯ ಕೈಗೊಳ್ಳುವ ತಂತ್ರಗಳ ಸುತ್ತ ಹೆಣೆದ ಕಥೆ.

೧೯೫೪. ಚನ್ನಪ್ಪ ಚನ್ನೇಗೌಡ

(೧೯೯೯ / ವರ್ಣ / ಸಾಮಾಜಿಕ)
ಲಾ: ಶ್ರೀ ಕರುಮಾರಿಯಮ್ಮ ಪಿಕ್ಚರ್ಸ್
ಪ್ರೊ: ಪ್ರವೀಣ್ ಕುಮಾರ್, ಎಸ್.ಪ್ರಸಾದ್, ಆನಂದ್ ಪಿ.ರಾಜು, ಎನ್.ಪಿ.ಮಂಜುನಾಥ್
ಚಿ.ಕ/ನಿ: ಆನಂದ್.ಪಿ. ರಾಜು
ಸ.ನಿ: ಕೆ.ಮಹೇಶ, ಪ್ರಭಾಕರ್, ರಾಜೇಶ್
ಅ: ಬಿ.ಸಿ.ಪಾಟೀಲ್, ರುಚಿತಾ ಪ್ರಸಾದ್, ಕೃಷ್ಣೇಗೌಡ, ಬ್ಯಾಂಕ್ ಜನಾರ್ದನ್, ಬಿರಾದಾರ್, ಸುಂದರ ರಾಜ್
ಕ: ತಮಿಳು 'ಸುಂದರ ಪುರುಷನ್' ಚಿತ್ರ.
ಮಾ: ಮೈಸೂರು ಹರೀಶ್
ಗೀ: ಹಂಸಲೇಖ
ಗಾ: ಸುರೇಶ್ ಪೀಟರ್, ಚಿತ್ರಾ, ಲತಾ ಹಂಸಲೇಖ, ರಾಜೇಶ್
ಸಂ: ಎಸ್.ಪ್ರಸಾದ್
ಛಾ: ಜಯದೇವ
ಕಲೆ: ಹೊಸಮನೆ ಮೂರ್ತಿ
ಸ: ಹಂಸಲೇಖ
ಧ್ವ: ಸಂಕೇತ್
ಸ್ಥಿ: ಸತೀಶ್
ಸಾ: ಕೌರವ ವೆಂಕಟೇಶ್
ವ: ಗಂಡಸಿ ನಾಗರಾಜ್
ಪ್ರ: ಗೋಪಾಲ್
ಸ್ಟು: ಪ್ರೀಮಿಯರ್
ಹಾ: ೧)' ಗೋವಿಂದನಾದ ಚನ್ನಪ್ಪ...', ೨)' ಬೆಂಗಳೂರು ಪೇಟೆ...', ೩)'ಮಾಮ ಮಾಮ...', ೪)'ಈ ಚನ್ನಪ್ಪ ಗೌಡ...', ೫)'ಜಲಿ ಜಲಿ ಜಲಿ...'
ರೀ: ರೀಲು ೧೪

ಕ.ಸಾ: ಗೆಳೆಯನೆಂದರೆ ಪ್ರಾಣ ಕೊಡಲೂ ತಯಾರಾಗುವ ವ್ಯಕ್ತಿ. ಹುಡುಗಿಯೊಬ್ಬಳನ್ನು ಕಂಡು, ಪ್ರೀತಿಸಲು ಆರಂಭಿಸುತ್ತಾನೆ. ಆದರೆ ಆ ಹುಡುಗಿ ಅವನ ಗೆಳೆಯನನ್ನು ಪ್ರೀತಿಸುತ್ತಾಳೆ. ನಿಜಾಂಶ ತಿಳಿದಾಗ ಆ ವ್ಯಕ್ತಿ ತಾನೇ ಮುಂದೆ ನಿಂತು ಗೆಳೆಯನೊಂದಿಗೆ ಅವಳ ಮದುವೆ ಮಾಡಿಸುತ್ತಾನೆ.

೧೯೫೫. ಸೂರ್ಯವಂಶ

(೧೯೯೯ / ವರ್ಣ / ಸಾಮಾಜಿಕ)
ಲಾ: ಚೆನ್ನಾಂಬಿಕಾ ಫಿಲಂಸ್
ಪ್ರೊ: ಅನಿತಾ ಕುಮಾರಸ್ವಾಮಿ
ನಿ: ಎಸ್.ನಾರಾಯಣ್
ಅ: ವಿಷ್ಣುವರ್ಧನ್(ದ್ವಿಪಾತ್ರ), ಇಷಾ ಕೊಪ್ಪಿಕರ್, ವಿಜಯಲಕ್ಷ್ಮಿ, ಲಕ್ಷ್ಮೀ, ದೊಡ್ಡಣ್ಣ, ಮುಖ್ಯಮಂತ್ರಿ ಚಂದ್ರು, ಎಸ್. ನಾರಾಯಣ್, ರಮೇಶ್‌ಭಟ್
ಕ: ತಮಿಳಿನ 'ಸೂರ್ಯವಂಶ' ಚಿತ್ರ.
ಗಾ: ಎಸ್.ಪಿ. ಬಾಲಸುಬ್ರಹ್ಮಣ್ಯಂ, ರಾಜೇಶ್ ಕೃಷ್ಣನ್, ಚಿತ್ರಾ, ನಂದಿತಾ
ಸಂ: ಪಿ.ಆರ್. ಸೌಂದರರಾಜ್
ಛಾ: ಎಂ. ರಾಜೇಂದ್ರ
ಸ: ವಿ.ಮನೋಹರ್
ಹಾ: ೧)' ಸೇವಂತಿಯೇ ಸೇವಂತಿಯೇ ...', ೨)' ಮೇಘಗಳ ಬಾಗಿಲಲ್ಲಿ ...', ೩)' ಸೂರ್ಯನೆ ಸೂರ್ಯನೆ ...', ೪)' ಪಂಚರಂಗಿ ಪಂಚರಂಗಿ
ಕ.ಸಾ: ಮುಗ್ಧ ಯುವಕ. ಎಲ್ಲರಿಂದಲೂ ಕೆಲಸಕ್ಕೆ ಬಾರದವನೆಂದೇ ಮೂದಲಿಕೆಗೆ ಒಳಗಾಗಿರುತ್ತಾನೆ. ಹೆಣ್ಣೊಬ್ಬಳು ಅವನ ಜೀವನದಲ್ಲಿ ಪ್ರವೇಶಿಸಿ, ಅವನನ್ನು ಸಮಾಜದಲ್ಲಿನ ಗಣ್ಯ ವ್ಯಕ್ತಿಯನ್ನಾಗಿ ಮಾಡುತ್ತಾಳೆ. ಅದಕ್ಕೆ ಪ್ರತಿಯಾಗಿ ಅವನು, ಅವಳು ಕಮೀಷನರ್ ಆಗಲು ಸಹಕರಿಸುತ್ತಾನೆ. ದೂರವಾಗಿದ್ದ ಎರಡು ಸಂಸಾರಗಳು ಒಂದಾಗಲು ಹತ್ತಿರವಾದ ಎರಡು ಮನಸ್ಸುಗಳು ಕಾರಣವಾಗುತ್ತವೆ.

೧೯೫೬. AK- 47

(೧೯೯೯ / ವರ್ಣ / ಸಾಮಾಜಿಕ)
ಲಾ: ರಾಮು ಎಂಟರ್‌ಪ್ರೈಸಸ್
ಪ್ರೊ: ರಾಮು
ನಿ: ಓಂ ಪ್ರಕಾಶ್ ರಾವ್
ಅ: ಶಿವರಾಜ್ ಕುಮಾರ್, ಚಾಂದಿನಿ, ಗಿರೀಶ್ ಕಾರ್ನಾಡ್, ಆಶಿಶ್ ವಿದ್ಯಾರ್ಥಿ, ಓಂ ಪುರಿ, ಶ್ರೀವಿದ್ಯಾ, ಕೋಟೆ ಪ್ರಭಾಕರ್, ಶಂಕರ್‌ರಾವ್, ಸಾಧುಕೋಕಿಲ
ಕ: ಎನ್.ಆರ್. ಬ್ರದರ್ಸ್
ಚಿ.ಕ: ಓಂ ಪ್ರಕಾಶ್‌ರಾವ್
ಮಾ: ಎಂ.ಎಸ್. ರಮೇಶ್. ಆರ್. ರಾಜಶೇಖರ್
ಗೀ/ಸ: ಹಂಸಲೇಖ
ಗಾ: ಜೇಸುದಾಸ್, ರಾಜೇಶ್, ಚಿತ್ರಾ, ಹರಿಹರನ್, ಎಸ್.ಪಿ. ಬಾಲಸುಬ್ರಹ್ಮಣ್ಯಂ
ಸಂ: ಮನೋಹರ್
ಛಾ: ಪಿ. ರಾಜನ್
ಸಾ: ರಾಂ ಶೆಟ್ಟಿ
ಪ್ರ: ವೆಂಕಟೇಶ್
ಹಾ: ೧)' ಅಮ್ಮಾ ನಾನು ಕನ್ನಡದ ಕಂದ...', ೨) 'ಯಾರೀ ಅಂಜುಬುರುಕಿ ಯಾರೀ ಚೆಂಗುಲಾಬಿ...', ೩)' ಕಡಲೋ ಕಡಲೋ ಕಣ್ ಕಡಲೋ...', ೪)' ಅಮ್ಮನ ಆಸೆಯ ಆರತಿಯಾಗು...', ೫)'ಹೇ ರಾಮ್ ದಿಸ್ ಈಸ್ ಇಂಡಿಯಾ ...',
ಪ್ರ: ೧೯೯೯ ೨೦೦೦ರ ರಾಜ್ಯ ಪ್ರಶಸ್ತಿ : ಅತ್ಯುತ್ತಮ ಸಂಕಲನಕಾರ (ಎಸ್. ಮಹೇಂದರ್) ವಿಶೇಷ ತಂತ್ರ ಅಳವಡಿಕೆಗೆ ವಿಶೇಷ ಬಹುಮಾನ. ನೇರವಾಗಿ ದಾವೂದ್ ಇಬ್ರಾಹಿಂ ಪ್ರಸ್ತಾಪ DTS.ತಂತ್ರ ಬಳಸಿದ ಮೊದಲ ಚಿತ್ರ
ಕ.ಸಾ: ಮುಗ್ಧ ತರುಣನೊಬ್ಬ ತನಗರಿವಿಲ್ಲದಯೇ ಮುಂಬೈನ ಮಾಫಿಯಾ ಜಾಲವೊಂದರ ಕಪಿಮುಷ್ಟಿಯಲ್ಲಿ ಸಿಕ್ಕಿ ನರಳುತ್ತಾನೆ. ಎಲ್ಲರಿಂದ ದೂರವಾದ ಆತ ತನ್ನ ದುಸ್ಥಿತಿಗೆ ಕಾರಣವಾದ ದುಷ್ಟಶಕ್ತಿಗಳ ವಿರುದ್ಧ ಏಕಾಂಗಿಯಾಗಿ ಹೋರಾಡುತ್ತಾನೆ.

೧೯೫೭. ಇದು ಎಂಥಾ ಪ್ರೇಮವಯ್ಯ

(೧೯೯೯ / ವರ್ಣ / ಸಾಮಾಜಿಕ)
ಲಾ: ವೈಭವ ಲಕ್ಷ್ಮೀ ಪಿಕ್ಚರ್ಸ್
ಪ್ರೊ: ಬಸವರಾಜ್ ಸೊಗಲದ್, ಸಂಗಯ್ಯ ಪಂಚಕಟಿಮಠ, ಆನಂದ್ ಸೊಗಲದ್
ನಿ: ಕೋಡ್ಲು ರಾಮಕೃಷ್ಣ
ಅ: ರಮೇಶ್, ಚಾರುಲತಾ, ಶಿಲ್ಪಾ, ಅವಿನಾಶ್, ಭಾವನಾ, ತಾರಾ, ರಾಜೇಶ್, ಜೈ ಜಗದೀಶ್, ಪದ್ಮಾ ವಾಸಂತಿ
ಚಿ.ಕ: ಜೋ ಸೈಮನ್
ಗೀ: ವಿ. ಮನೋಹರ್, ದೊಡ್ಡರಂಗೇಗೌಡ, ಡಿ. ಭರತ್, ಕೋಡ್ಲು ರಾಮಕೃಷ್ಣ
ಗಾ: ಎಸ್. ಪಿ. ಬಾಲಸುಬ್ರಮಣ್ಯಂ, ಚಿತ್ರಾ, ಉನ್ನಿಕೃಷ್ಣನ್, ರಾಜೇಶ್‌ಕೃಷ್ಣನ್, ಅನುರಾಧಾ ಶ್ರೀರಾಂ
ಸ್ಥಿ: ಸಂಪತ್ ಮದನ್-ಹರಿಣಿ
ವ: ಪ್ರಭುರಾಜ್
ಪ್ರ: ವೆಂಕಟಸ್ವಾಮಿ
ಮಾ: ಕಣಗಾಲ್ ಪುರುಷೋತ್ತಮ್
ಸಂ: ಶಿವು
ಛಾ: ಬಿ.ಎಸ್. ಬಸವರಾಜ್
ಕಲೆ: ಸುಭಾಷ್ ಕಡಕೋಳ್
ಸ: ಗುರುಕಿರಣ್
ಹಾ: ೧)'ಏನೇನೋ ಕನಸು ಕಂಡಳು...', ೨)'ಬಂದಾಳೋ ಬಂದಾಳೋ...', ೩)'ಸೋನಿಯಾ ಓ ಸೋನಿಯಾ...', ೪)'ನಿನ್ನ ಆಸೆಗಳೇ ನನ್ನ...', ೫)' ಅಂದದ ಚಂದ್ರ ಮಂಚ...', ೬)'ಡಾಕ್ಟರು ಅಮ್ರಾನೂ ಮೇಷ್ಟ್ರು...',
ಕ.ಸಾ: ಉಂಡಾಡಿಗುಂಡನಂತಿರುವ ಗಂಡನನ್ನು ಕಟ್ಟಿಕೊಂಡು ಏಗಬೇಕಾದ ಪತ್ನಿ. ಬೇರೊಬ್ಬರ ಮಡದಿ, ಮಡದಿಯೊಂದಿಗೆ ಮೋಜು ಮಾಡುವ ಸ್ವಭಾವದ ಮನುಷ್ಯ ಗಂಡ. ಆ ಗಂಡನಿಗೆ ಜವಾಬ್ದಾರಿ ಕಲಿಸಿಕೊಡುವ ಹೊಣೆ ಹೆಂಡತಿಯದು. ಇವುಗಳ ಸುತ್ತ ಹೆಣೆದ ಕಥೆ.

೧೯೫೮. ಪ್ರೇಮ ಪ್ರೇಮ ಪ್ರೇಮ

(೧೯೯೯ / ವರ್ಣ / ಸಾಮಾಜಿಕ)
ಲಾ: ವಿಜಯಶ್ರೀ ಪ್ರೊಡಕ್ಷನ್ಸ್
ಪ್ರೊ/ಕ/ಚಿ.ಕ/ನಿ: ಶಿವಲಿಂಗಯ್ಯ
ಸ.ನಿ: ಗುರುರಾಜ್, ಸುರೇಶ್
ಅ: ಸುರೇಶ್ ರಾಜ್, ರಮ್ಯ, ಸಿಂಧೂ, ಕಾಶಿ, ಅರವಿಂದ್,

ಧೀರೇಂದ್ರ ಗೋಪಾಲ್, ಅನಿಲ್ ಕುಮಾರ್, ದತ್ತಾತ್ರೇಯ, ಶೈಲಜ, ಗೀತಾಸುರತ್ಕಲ್, ರವಿಕಿರೋಣ್
ಕ: ಬಿರಮನೆ ರಾಮದಾಸ್ 'ತಲಮಾರು' ಕತಿ
ಚಿ.ಕ: ಸಿದ್ದಲಿಂಗಯ್ಯ
ಮಾ: ಬಿ.ಎ.ಮಧು
ಗೀ: ಹಂಸಲೇಖ
ಗಾ: ಎಸ್.ಪಿ. ಬಾಲಸುಬ್ರಹ್ಮಣ್ಯಂ, ಅನುರಾಧಾ ಶ್ರೀರಾಂ, ಸಂಗೀತಾ ಕಟ್ಟಿ, ಜಿ.ವಿ. ಅತ್ರಿ
ಸಂ: ಶ್ಯಾಂ
ಛಾ: ಮಲ್ಲಿಕಾರ್ಜುನ
ಸ: ರಾಜನ್ ನಾಗೇಂದ್ರ
ದೃ: ಮಹೇಂದರ್
ಸಾ: ಸ್ವಾಮಿ
ವ: ಪ್ರಭು
ಪ್ರ: ಮಂಜು
ಹಾ: ೧)'ಮದುವೆಯೆಂಬ ಮೂರಕ್ಷರದಲಿ ಏಂಥ ಬಲವಿದೆ...', ೨) ' ಏ ಹುಡುಗಿ ಏ ಬೆಡಗಿ ಹೇಳು ಏನಾಯ್ತು...', ೩)'ಹಿರಿಯರು ಎಂದರೆ ಹೀಗಿರಬೇಕು...', ೪)'ನಮ್ಮಮ್ಮ ಈ ಭೂಮಿಯಾಣೆ'....೫)'ನನಗೆ ನಿನ್ನ ಆಸರ ನಿನಗೆ ನನ್ನ ಆಸರ...',
ಕ.ಸಾ: ಎರಡು ಕುಟುಂಬಗಳ ನಡುವೆ ಬಹಳ ಹಿಂದಿನಿಂದಲೂ ಬೆಳೆದು ಬಂದ ದ್ವೇಷ ಎರಡೂ ಮನೆಗಳ ಯುವ ಪೀಳಿಗೆ ಪರಸ್ಪರ ಪ್ರೇಮಿಸುವ ಮೂಲಕ ಎರಡು ಮನೆಗಳನ್ನೂ ಒಂದಾಗಿಸಲು ಯತ್ನಿಸುತ್ತಾರೆ.

೧೯೫೯. ನನ್ನಾಸೆಯ ಹೂವೆ

(೧೯೯೯ / ವರ್ಣ / ಸಾಮಾಜಿಕ)
ಲಾ: ವೆಂಕಟೇಶ್ವರ ಚಿತ್ರಾಲಯ
ಪ್ರೊ: ಡಿ.ಕೃಷ್ಣಕುಮಾರ್
ನಿ: ಇ.ಚನ್ನಗಂಗಪ್ಪ
ಸ.ನಿ: ಪ್ರಕಾಶ್, ವೇದಮೂರ್ತಿ, ರುದ್ರೇಶ್, ರುದ್ರಮುನಿ
ಅ: ಜಗ್ಗೇಶ್, ಮೋನಿಕಾ ಬೇಡಿ,ಜಯಂತಿ, ದೊಡ್ಡಣ್ಣ, ಸಿ.ಆರ್.ಸಿಂಹ,ಟೆನ್ನಿಸ್ ಕೃಷ್ಣ, ಅವಿನಾಶ್, ಕಿಲ್ಲರ್ ವೆಂಕಟೇಶ್, ಬ್ಯಾಂಕ್ ಜನಾರ್ದನ್, ಎಂ.ಎಸ್.ಕಾರಂತ್
ಕ/ಚಿ.ಕ: ಇ.ಚನ್ನಗಂಗಪ್ಪ
ಮಾ: ಜೆ.ಎಂ.ಪ್ರಹ್ಲಾದ್
ಗೀ: ಹಂಸಲೇಖ
ಗಾ: ರಾಜೇಶ್, ಚಿತ್ರಾ
ಛಾ: ಜೆ.ಜಿ. ಕೃಷ್ಣ
ಕಲೆ: ಸುಂದರಂ
ಸ: ಹಂಸಲೇಖ
ನೃ: ಪ್ರಸಾದ್
ಸಾ: ಕೆ.ಡಿ.ವೆಂಕಟೇಶ್
ಹಾ: ೧) 'ಹೊಂಬಾಳೆ ಹೊಂಬಾಳೆ...', ೨) 'ನೇಸರ...', ೩) 'ಜಾಕಾಯಿ ಜಾಪತ್ರೆ...', ೪) 'ಏನಾಗೋಯ್ತಮ್ಮ...', ೫)'ಹೆಣ್ಣು ಚೆಂದ ಹಣ್ಣು ಚೆಂದ...', ೬)'ಲಚ್ಚೀ ಲಚ್ಚೀ...'
ಕ.ಸಾ: ಪ್ರೀತಿಯು ಮುಂದೆ ಬೇರಾವುದೂ ನಿಲ್ಲುವುದಿಲ್ಲ. ಸಂಪ್ರದಾಯಕ್ಕೆ ಹಿರಿಯರ ಮನ ಒಲಿಸಿ ಪ್ರೇಮಿಗಳು ಒಂದಾಗುವ ಕಥೆ.

೧೯೬೦. ಗರುಡ

(೧೯೯೯ / ವರ್ಣ / ಸಾಮಾಜಿಕ)
ಲಾ. ಮಾತಾಶ್ರೀ ಪಿಕ್ಚರ್ಸ್
ಪ್ರೊ: ಲೀಲಾ ಅಮರ್‌ಚಂದ್ ಜೈನ್
ಚಿ.ಕ/ನಿ: ಹ ಸೂ. ರಾಜಶೇಖರ್

ಸ.ನಿ: ವೆಂಕಟೇಶ್ ಬಾಬು
ಅ: ದೇವರಾಜ್, ಮಧುರಾ, ಮದನ್ ಮಲ್ಲು, ಅವಿನಾಶ್, ಶೋಭರಾಜ್, ಚಾರುಲತಾ
ಕ: ಅಮರ್ ಚಂದ್ ಜೈನ್
ಮಾ: ರವಿ ಶ್ರೀವತ್ಸ
ಸಂ: ಕೆಂಪರಾಜ್
ಛಾ: ಮನೋಹರ್
ಕಲೆ: ನಂಜುಂಡ ಸ್ವಾಮಿ
ಸ: ಸಾಧುಕೋಕಿಲ
ದೃ: ಪ್ರಸಾದ್
ಸಾ: ಕೆ.ಡಿ.ವೆಂಕಟೇಶ್
ವ: ವಲ್ಲಿ
ಪ್ರ: ಶೀನು
ಕ.ಸಾ: ಬುಟ್ಟಿಗಿಂತ ಬಲದ ಮೇಲೆ ನಂಬಿಕೆಯಿಟ್ಟ ಪೋಲೀಸ್ ಅಧಿಕಾರಿ. ಅಸಾಧ್ಯವೆಲ್ಲವನ್ನೂ ಸಾಧ್ಯವಾಗಿಸಬಲ್ಲ, ಆಳುವವರ ಕ್ರೂರ ಹಿನ್ನೆಲೆ, ಖೋಟಾ ನೋಟಿನ ಜಾಲ ಎಲ್ಲವನ್ನೂ ತೆರೆದಿಡಬಲ್ಲ. ಅಧಿಕಾರಿಯ ಕಥೆ.

೧೯೬೧. ಅಂಡರ್ ವರ್ಲ್ಡ್

(೧೯೯೯ / ವರ್ಣ / ಸಾಮಾಜಿಕ)
ಲಾ: ಬಿಂದುಶ್ರೀ ಫಿಲಂಸ್
ಪ್ರೊ: ಕೆ.ಮಂಜು
ನಿ: ಕೆ.ಮಧು
ಸ.ನಿ: ರವಿ, ಶರಣ್ ಗದ್ವಾಲ್, ಚಂದ್ರು ದೊಡ್ಡಮನಿ
ಅ: ಸಾಯಿಕುಮಾರ್, ಚಾರುಲತಾ, ಉಮಾಶ್ರೀ, ಹೇಮಾ

ಚೌಧುರಿ, ಅಲ್ತಾಸ್, ಸುಧೀರ್, ಅಭಿಜಿತ್, ಸತ್ಯಪ್ರಕಾಶ್, ಶೋಭರಾಜ್, ನಾಜರ್, ಕೀರ್ತಿ, ಅವಿನಾಶ್, ಜೋಸೈಮನ್, ಸರಿಗಮ ವಿಜಿ
ಕ/ಚಿ.ಕ: ಚಿನ್ನಿ ಕೃಷ್ಣ
ಮಾ: ರವಿ ಶ್ರೀವತ್ಸ
ಗೀ: ವಿ.ಮನೋಹರ್
ಸಂ: ಕೆ.ಶಂಕರ್
ಛಾ: ಆರ್.ಗಿರಿ
ಕಲೆ: ನಂಜುಂಡಸ್ವಾಮಿ
ಸ: ವಿ.ಮನೋಹರ್
ದೃ: ಪೀಟರ್, ಕೃಷ್ಣಮೂರ್ತಿ
ನೃ: ಸತೀಶ್, ಪ್ರದೀಪ್
ಸಾ: ಆರ್. ಪಳನಿರಾಜ್
ವ: ಸೋಮು, ಜಯಚಂದ್ರ
ಪ್ರ: ನಾಗರಾಜ್, ಕುಮಾರ್
ಸ್ಟಿ: ಕಂಠೀರವ, ಅಭಿಮಾನ್, ಸಂಕೇತ್
ಕ.ಸಾ: ಭೂಗತ ಜಗತ್ತಿನ ವಿವಿಧ ಚಟುವಟಿಕೆಗಳು. ಕಾನೂನು ಬಾಹಿರ, ದೇಶದ್ರೋಹಿ ಕಾರ್ಯಗಳು. ಇವುಗಳನ್ನು ಮಟ್ಟಹಾಕಿ ಆ ಕತ್ತಲು ಜಗತ್ತಿನ ಧೂರ್ತರನ್ನು ಸರೆ ಹಿಡಿದು ಕಾನೂನಿನ ವ್ಯಾಪ್ತಿಗೊಳಪಡಿಸಲು ಪೋಲೀಸ್ ಅಧಿಕಾರಿಯ ಪ್ರಯತ್ನ.

೧೯೬೨. ಚಂದ್ರಮುಖಿ ಪ್ರಾಣಸಖಿ

(೧೯೯೯ / ವರ್ಣ / ಸಾಮಾಜಿಕ)
ಲಾ: ಶ್ರೀ ಮಾತಾ ಪಿಕ್ಚರ್ಸ್
ಪ್ರೊ: ಎಸ್.ಕೆ.ಪ್ರಕಾಶ್ ಬಾಬು
ನಿ: ಸೀತಾರಾಮ್ ಕಾರಂತ್
ಸ.ನಿ: ಪ್ರಕಾಶ್
ಅ: ಪ್ರೇಮ, ರಮೇಶ್, ಭಾವನಾ, ಅಖಿಲಾ, ಶಿವರಾಂ, ಬಿ.ವಿ.ರಾಧಾ, ವೈಶಾಲಿ ಕಾಸರವಳ್ಳಿ
ಕ/ಚಿ.ಕ: ಸೀತಾರಾಮ್ ಕಾರಂತ್
ಮಾ: ಶಶಿಧರ್ ಭಟ್
ಗೀ: ಕೆ.ಕಲ್ಯಾಣ್
ಗಾ: ಎಸ್. ಪಿ. ಬಾಲಸುಬ್ರಮಣ್ಯಂ, ಚಿತ್ರಾ, ಬದರಿಪ್ರಸಾದ್
ಸಂ: ಪಿ. ಸೌಂದರ ರಾಜನ್
ಛಾ: ಆರ್. ಗಿರಿ
ಕಲೆ: ದಿನೇಶ್ ಮಂಗಳೂರು
ಸ: ಕೆ.ಕಲ್ಯಾಣ್
ನೃ: ದೇವಾ, ಸಂಪತ್
ಹಾ: ೧)'ಮನಸೇ ಓ ಮನಸೇ..', ೨) 'ಅರಳೋ ಹುಣ್ಣಿಮೆ...', ೩)'ನೆನಪುಗಳ ಮಾತು....'. ೪)'ಪಳ್ ಪಳ್ ಮಲ್ಲಿಗೆ...'
ಪ: ೧೯೯೯-೨೦೦೦ರ ರಾಜ್ಯಪ್ರಶಸ್ತಿ : ತೃತೀಯ ಅತ್ಯುತ್ತಮ ಚಿತ್ರ, ಅತ್ಯುತ್ತಮ ಸಂಗೀತ ನಿರ್ದೇಶಕ (ಕೆ. ಕಲ್ಯಾಣ್)
ಕ.ಸಾ: ಯುವಕನೊಬ್ಬ ಪ್ರಸಿದ ಗಾಯಕಿಯಲ್ಲಿ ಅನುರಕ್ತ. ಆತನ ಪತ್ರಗಳಿಗೆ ಉತ್ತರಿಸುವ ಮೂಲಕ ತಮಾಷೆಗೆಂದು ಪ್ರಾರಂಭವಾದ ತಂಗಿಯ ಹುಡುಗಾಟ ಗಂಭೀರವಾಗುತ್ತಾ ಆಕೆ ಆತನಲ್ಲಿ ಅನುರಕ್ತಳಾಗುತ್ತಾಳೆ. ಸತ್ಯ ತಿಳಿದಾಗ ತರುಣನಿಗೆ ಕೋಪ. ಅಂತಿಮವಾಗಿ ನಿಜಕ್ಕೂ ತನ್ನನ್ನು ಪ್ರೇಮಿಸಿದ ಹುಡುಗಿಯನ್ನೇ ಆಯ್ಕೆ ಮಾಡಿಕೊಳ್ಳುವ ಜಾಣ ತೀರ್ಮಾನ.

೧೯೬೩. ಪ್ರೇಮಾಚಾರಿ

(೧೯೯೯ / ವರ್ಣ / ಸಾಮಾಜಿಕ)
ಲಾ: ಸೌಮ್ಯ ಫಿಲಂಸ್
ಕ.ಸಾ: ಶರತ್ ಒಬ್ಬ ಇಂಜಿನಿಯರ್, ಸಮಾಜ ಘಾತುಕ ಶಕ್ತಿಗಳು ಒಬ್ಬ ಯುವಕನನ್ನು ಹೇಗೆ ತಮ್ಮ ಸ್ವಾರ್ಥದ ಬಳಕೆಗಾಗಿ ಉಪಯೋಗಿಸುವರು ಎಂಬುದನ್ನು ಕುರಿತ ಚಿತ್ರಕಥೆ. ಕೊನೆಗೆ ಜನರೇ ಸಮಾಜಘಾತುಕ ಶಕ್ತಿಗಳ ವಿರುದ್ಧ ತಿರುಗಿ ಬೀಳುವಂತೆ ಮಾಡುತ್ತಾನೆ.

೨೦೨೨. ಸ್ಪರ್ಶ

(೨೦೦೦ / ವರ್ಣ / ಸಾಮಾಜಿಕ)
ಲಾ: ಸರೋವರ ಪ್ರೊಡಕ್ಷನ್ಸ್
ಪ್ರೊ: ಎಂ.ಸಂಜೀವ್
ನಿ: ಸುನಿಲ್ ಕುಮಾರ್ ದೇಸಾಯಿ
ಸ.ನಿ: ನೀರ್ನಳ್ಳಿ ರಾಜು
ಅ: ಸುದೀಪ್ ಸಂಜೀವ್, ರೇಖಾ, ಸುಧಾರಾಣಿ, ಸಿಹಿಕಹಿ ಚಂದ್ರು, ಎ.ಬಿ.ಜಯರಾಮ್, ವಿದ್ಯಾಮೂರ್ತಿ, ರೇಖಾಮೃತ, ನವೀನ್ ಮಯೂರ್, ಉಮಾಶ್ರೀ
ಕ/ಚಿ.ಕ/ಮಾ: ಸುನಿಲ್ ಕುಮಾರ್ ದೇಸಾಯಿ
ಗೀ: ಶ್ಯಾಮಸುಂದರ ಕುಲಕರ್ಣಿ, ಎಂ.ಎನ್.ವ್ಯಾಸರಾವ್, ದೊಡ್ಡರಂಗೇಗೌಡ, ಕೆ. ಕಲ್ಯಾಣ್, ಆರ್.ಎನ್. ಜಯಗೋಪಾಲ್, ಇಟಗಿ ಈರಣ್ಣ
ಗಾ: ಪಂಕಜ್ ಉದಾಸ್, ಹರಿಹರನ್, ಕವಿತಾ ಕೃಷ್ಣಮೂರ್ತಿ, ಸಿ.ಅಶ್ವತ್, ಚಿತ್ರಾ, ಸೋನು ನಿಗಮ್, ರಾಜೇಶ್, ಅರ್ಚನಾ ಉಡುಪ, ಬಿ.ಜಯಶ್ರೀ
ಸಂ: ಆರ್.ಜನಾರ್ದನ್
ಛಾ: ಎಚ್.ಸಿ.ವೇಣು
ಕಲೆ: ಇಸ್ಮಾಯಿಲ್
ಸ: ಹಂಸಲೇಖ
ಧ್ವ: ಅರುಮುದನ್, ಶಂಕರ್
ನೃ: ತಾರಾ, ಸಂಪತರಾಜ್, ರಾಜ್ ಸುಂದರ್
ವ: ಗಂಡಸಿ ನಾಗರಾಜ್
ಪ್ರ: ನಾಗಣ್ಣ
ಹಾ: ೧) 'ಓಹೋ ಓಹೋ ಚಿನ್ನ ಚಿನ್ನ'.... ೨) 'ಕನಸಲಿ ಕಾಡುವ ಹುಡುಗ ಬಾರೆ...', ೩) 'ಸಂಗಾತಿ ಹೀಗೇಕೆ ನೀ ದೂರ...', ೪) 'ಚಂದಕ್ಕಿಂತ ಚಂದ ನೀನೇ ಸುಂದರ...', ೫) 'ಮನಗಳ ಸಂಗಮ ಪ್ರೇಮ...', ೬) 'ಪಡುವಣ ದಿಕ್ಕಿನಾಗೆ...', ೭) 'ಬರೆಯದ ಮೌನದ ಕವಿತೆ...', ೮) 'ಇವಳೇ ಅವಳು, ಕನಸಲಿ...'
ಕ.ಸಾ: ರೈಲಿನಲ್ಲಿ ಕಂಡ ಸುಂದರಿಯನ್ನು ಬೆನ್ನಟ್ಟಿ, ಆಕೆಯನ್ನು ಪ್ರೀತಿಸಿ, ನಂತರ ತನ್ನಿಂದಾದ ತಪ್ಪಿಗೆ ಬೇರೊಬ್ಬ ಹೆಣ್ಣಿನ ಬಾಳು ಬೆಳಗಲು ಮುಂದಾಗುವ ಯುವಕನ ಕಥೆ.

೨೦೨೩. ಭಾರತನಾರಿ

(೨೦೦೦ / ವರ್ಣ / ಸಾಮಾಜಿಕ)
ಲಾ: ಶ್ರೀ ಸಾಯಿ ರಾಘವೇಂದ್ರ ಆರ್ಟ್ ಪ್ರೊಡಕ್ಷನ್ಸ್
ಪ್ರೊ: ಜಿ.ಭಕ್ತವತ್ಸಲಂ (ಬಾಬು)
ನಿ: ಟಿ. ಜನಾರ್ದನ್
ಸ.ನಿ: ಬಿ.ಎಲ್. ಸುರೇಶ್
ಅ: ಪ್ರಕಾಶ್ ರೈ, ರೋಜಾ, ಸುಮಂತ್, ಶರತ್‌ಬಾಬು, ಬ್ಯಾಂಕ್ ಜನಾರ್ದನ್, ಕವಿತಾ, ಮಧು, ಅಯ್ಯಪ್ಪ

ಕ: ಎಸ್.ಎಸ್.ಆರ್.ಎ.ಪಿ. ಕಥಾ ವಿಭಾಗ
ಮಾ: ಗಿರೀಶ್, ಎಂ.ಎಸ್. ರಮೇಶ್, ಬಿ.ಎಲ್. ಸುರೇಶ್
ಗೀ: ಹಂಸಲೇಖ
ಗಾ: ರಾಜೇಶ್, ಚಿತ್ರಾ
ಸಂ: ಎಸ್. ಪ್ರಸಾದ್
ಛಾ: ಟಿ. ಜನಾರ್ದನ್
ಸ: ಹಂಸಲೇಖ
ಧ್ವ: ಪ್ರಸಾದ್
ನೃ: ವಿರೂಪಾಕ್ಷ, ತ್ರಿಭುವನ್
ಸಾ: ಸಾಹುಲ್, ಜಾಲಿ ಬಾಸ್ಟಿನ್
ಹಾ: ೧) ' ತುಂಬಿ ತುಂಬಿಕೊಂಡು ಬಂದ ...', ೨) ' ಸ್ವೀಕರಿಸು .. ಸ್ವೀಕರಿಸು ಒಲವಿನಾ ಸ್ವಾಗತಾ ...'
ಕ.ಸಾ: ನಾಯಕಿ ತುಂಬಾ ಬಡವಳು. ವಿದ್ಯಾವಂತೆ. ಆದರೆ ಎಲ್ಲೂ ಕೆಲಸ ಸಿಗದೆ ಕೊನೆಗೆ ಒಬ್ಬ ಗೋಮುಖ ವ್ಯಾಘ್ರ ಶ್ರೀಮಂತನಲ್ಲಿ ಕೆಲಸ ದೊರೆಯುತ್ತದೆ. ಅವನಿಂದ ಆಕೆಯ ಶೋಷಣೆ. ನಾಯಕ ಅದೇ ವ್ಯಕ್ತಿಯಿಂದ ಮೋಸ ಹೋಗಿರುವ ವ್ಯಕ್ತಿ. ಇಬ್ಬರೂ ಸೇರಿ ಆ ಗೋಮುಖ ವ್ಯಾಘ್ರನನ್ನು ಮುಗಿಸುತ್ತಾರೆ. ಕೋರ್ಟಿನಲ್ಲಿ ಇವರ ತಪ್ಪಿಗೆ ಸಾದಾ ಶಿಕ್ಷೆ ದೊರೆಯುವಲ್ಲಿ ಕಥೆ ಮುಕ್ತಾಯ.

೨೦೨೪. ದುರ್ಗದಹುಲಿ

(೨೦೦೦ / ವರ್ಣ / ಸಾಮಾಜಿಕ)
ಲಾ: ಮೇಘ ಫಿಲಂಸ್
ಪ್ರೊ: ರೂಪಾ ತ್ಯಾಗರಾಜ್
ನಿ: ಅಯ್ಯಪ್ಪ.ಪಿ. ಶರ್ಮ
ಸ.ನಿ: ನಾಗಪ್ಪ
ಅ: ಸಾಯಿಕುಮಾರ್, ವಿಜಯಲಕ್ಷ್ಮಿ, ಹೇಮಾ ಚೌಧರಿ, ಶೋಭರಾಜ್, ವಿನಿತಾ, ಮಧುರಾ
ಕ: ನಲ್ಲಂ
ಚಿ.ಕ: ಅಯ್ಯಪ.ಪಿ. ಶರ್ಮ
ಮಾ/ಗೀ: ರವಿ ಶ್ರೀವತ್ಸ
ಸಂ: ಆರ್. ಜನಾರ್ದನ್
ಛಾ: ಸಿ.ಡಿ. ರಾಜು
ಸ: ಶ್ರೀ
ಕ: ಬಾಬುಖಾನ್
ಧ್ವ: ಚಾಮುಂಡೇಶ್ವರಿ
ನೃ: ಕಿಶೋರ್
ಸಾ: ಕೌರವ ವೆಂಕಟೇಶ್
ಹಾ: ೧) ' ಕುಲು ಕುಲುಕಿನ ತಳಕು ಬಳಕಿಗೆ ...', ೨) ' ವೀರ ಮಣ್ಣು ಈ ದುರ್ಗ ...', ೩) ' ಅಂಬರವ ನೋಡಣ್ಣಾ ಚಂದಿರ ...'
ಕ.ಸಾ: ನಿಧಿಯ ಹುಡುಕಾಟದ ಸುತ್ತಲಿನ ಕಥೆ. ನಾಯಕ, ಖಳನಾಯಕ ಮತ್ತು ಆತನಿಗೆ ಸಂಬಂಧ ಪಟ್ಟವರನ್ನು ಸಾಯಿಸಿ, ಸರಕಾರಕ್ಕೆ ಸೇರಬೇಕಾದ ನಿಧಿಯನ್ನು ಅರ್ಪಿಸಿ, ಕೊಲೆಯ ಆಪಾದನೆಯಿಂದ ಮುಕ್ತಗೊಳ್ಳುತ್ತಾನೆ. ಸರ್ಕಾರವೇ ಈ ಸಾಹಸಕ್ಕೆ 'ದುರ್ಗದ ಹುಲಿ' ಎಂಬ ಬಿರುದು ನೀಡುತ್ತದೆ.

೨೦೨೫. ಭೂಮಿ

(೨೦೦೦ / ವರ್ಣ / ಸಾಮಾಜಿಕ)
ಲಾ: ಭೂಮಿ ಕ್ರಿಯೇಷನ್ಸ್
ಪ್ರೊ: ಪುಷ್ಕರ ಪ್ರಸಾದ್, ಈಶ್ವರ್ ಚಂದ್
ನಿ: ಗಂಧರ್ವ
ಸ.ನಿ: ಕೆ.ಪಿ.ವೆಂಕಟೇಶ್
ಅ: ದೇವರಾಜ್, ಚಾರುಲತಾ, ಲೋಕನಾಥ್, ಶಂಕರ್ ಅಶ್ವತ್, ಕರಿಬಸವಯ್ಯ
ಕ/ಚಿ.ಕ: ಗಂಧರ್ವ
ಮಾ: ಮಹಾದೇವ ಭರಣಿ
ಗೀ: ಗಂಧರ್ವ
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ರಾಜೇಶ್, ಚಿತ್ರಾ
ಸಂ: ವಿಕ್ಟರ್ ಯಾದವ್
ಛಾ: ವಿ.ಕೆ.ಕಣ್ಣನ್



ಸ: ಗಂಧರ್ವ
ಧ್ವ: ಕೋದಂಡಪಾಣಿ, ಮಹೇಂದ್ರ
ನೃ: ಸಂಪತ್
ಸಾ: ಕೌರವ ವೆಂಕಟೇಶ್
ಪ್ರ: ತುಮಕೂರು ಮಹಾದೇವ್
ಕ.ಸಾ: ಬ್ರಾಹ್ಮಣರು ಹಾಗೂ ದಲಿತರ ನಡುವಿನ ಸಾಮಾಜಿಕ ಸಂಘರ್ಷವನ್ನು ಪ್ರೇಮ ಕಥೆಯೊಂದರ ಮೂಲಕ ಹೊಸಬಗೆಯಲ್ಲಿ ಹೇಳುವ ಪ್ರಯತ್ನ.

೨೦೨೬. ಬಿಲ್ಲಾ ರಂಗ

(೨೦೦೦ / ವರ್ಣ / ಸಾಮಾಜಿಕ)
ಲಾ: ಪಿ.ಎನ್.ಆರ್.ಪಿಕ್ಚರ್ಸ್
ಪ್ರೊ: ಪಿಂಜರಿ ನಾಗೇಶ್ವರ ರಾವ್
ನಿ: ಕೆ.ಎಸ್.ಆರ್.ದಾಸ್
ಸ.ನಿ: ಶಾಹು ರಾಜೆ ಶಿಂಧೆ, ಶಿವಲಿಂಗ
ಅ: ಸುಮನ್, ನೆಪೋಲಿಯನ್, ರವಳಿ, ಆಶಾಲತಾ, ಅವಿನಾಶ್, ಮಾಸ್ಟರ್ ಮೋಹನ್ ರಾಜ್, ರಕ್ಷಾ, ದೇವರಾಜ್

ಕ/ಚಿ.ಕ: ಕೆ. ಎಸ್.ಆರ್.ದಾಸ್
ಮಾ: ಕೆ. ನಂಜುಂಡ
ಗೀ: ಶ್ರೀರಂಗ
ಸಂ: ಶ್ಯಾಂ
ಛಾ: ರವೀಂದ್ರನ್
ಕಲೆ: ರಾಜು
ಸ: ಕೋಟಿ
ಧ್ವ: ಚಾಮುಂಡೇಶ್ವರಿ
ಸಾ: ವಳಪತಿ ದಿನೇಶ್
ಹಾ: ೧)'ಚೆನ್ನಿಗನೇ .. ನನ್ನದೆಯಾ ...'
ಕ.ಸಾ: ಬಿಲ್ಲಾ ಮತ್ತು ರಂಗ ಎಂಬ ಇಬ್ಬರ ಸಾಹಸಮಯ ಬದುಕಿನ ಚಿತ್ರಣ.

೨೦೨೭. ಬಣ್ಣದ ಹೆಜ್ಜೆ

(೨೦೦೦ / ವರ್ಣ / ಸಾಮಾಜಿಕ)
ಲಾ: ಸಪ್ತಗಿರಿ ಕ್ರಿಯೇಷನ್ಸ್
ಪ್ರೊ/ನಿ: ಕೃಷ್ಣೇಗೌಡ
ಸ.ನಿ: ಟಿ. ಎಂ. ನಾಗೇಶ್
ಅ: ದೇವರಾಜ್, ವಿನಯಾ ಪ್ರಸಾದ್, ಬಾಲರಾಜ್, ಮುಖ್ಯಮಂತ್ರಿ ಚಂದ್ರು, ರಮೇಶ್‌ಭಟ್, ಕೃಷ್ಣೇಗೌಡ, ಕರಿಬಸವಯ್ಯ, ಜಯಶ್ರೀ, ಭವ್ಯಶ್ರೀ ರೈ
ಕ: ರಾಜೇಂದ್ರಕಾರಂತರ 'ನಟ' ನಾಟಕ
ಚಿ.ಕ: ಹ.ಸೂ. ರಾಜಶೇಖರ್
ಗಾ: ರಾಜೇಶ್ ಕೃಷ್ಣನ್, ನಂದಿತಾ
ಸಂ: ಹಂಸರಾಜ್
ಮಾ/ಗೀ: ಹಂಸಲೇಖ
ಛಾ: ಸುರೇಂದ್ರನಾಥ ಬೇಗೂರು

ಕಲೆ: ಹೊಸಮನೆ ಮೂರ್ತಿ
ಧ್ವ: ಚಾಮುಂಡೇಶ್ವರಿ
ನೃ: ಪ್ರಸಾದ್
ಹಾ: ೧) 'ಜೇಬು ಬಿಸಿರಾಗಿದ್ದರೆ ನೀನು ಚೆಲ್ಲ...', ೨) 'ಆಕ್ಷಿ ಗೆಜ್ಜೆಯಲ್ಲಿ ...', ೩) 'ನಗು ಬಂದರೂ ಅಳು ಬಂದರೂ...', ೪)'ಮೀನು ಈಜಿ ದಣಿವುದೇ...'
ಪ್ರ: ೧೯೯೯ ೨೦೦೦ನೇ ಸಾಲಿನ ರಾಜ್ಯಪ್ರಶಸ್ತಿ : ಅತ್ಯುತ್ತಮ ಪೋಷಕ ನಟಿ (ವಿನಯಾಪ್ರಸಾದ್), ಅತ್ಯುತ್ತಮ ಹಿನ್ನೆಲೆ ಗಾಯಕ (ರಾಜೇಶ್ ಕೃಷ್ಣನ್)
ಕ.ಸಾ: ಕಲೆಯೇ ಉಸಿರೆಂದು ತಿಳಿದು ಬದುಕಿದ ಕಲಾವಿದನೊಬ್ಬನ ಜೀವನದ ಏಳು-ಬೀಳಿನ ಚಿತ್ರಣ.

೨೦೨೮. ಕಿಲಾಡಿ

(೨೦೦೦ / ವರ್ಣ / ಸಾಮಾಜಿಕ)
ಲಾ: ಸುಷ್ಮಾ ಫಿಲಂಸ್
ಪ್ರೊ: ಎನ್. ಶ್ರೀನಿವಾಸ್
ನಿ: ಸಾಯಿಪ್ರಕಾಶ್
ಸ.ನಿ: ವೀರೇಶ್, ಅಕ್ಷಯ್
ಅ: ಜಗ್ಗೇಶ್, ಅರ್ಚನಾ, ಮಣಿಚಂದನ, ಬ್ಯಾಂಕ್ ಜನಾರ್ದನ್, ಟೆನ್ನಿಸ್ ಕೃಷ್ಣ, ಸತ್ಯಭಾಮ, ಸಾಯಿಪ್ರಕಾಶ್, ವೆಂಕಟೇಶ್, ಜಯರಾಂ, ರೇಖಾದಾಸ್
ಕ: ಸುಷ್ಮಾ ಫಿಲಂಸ್ ಕಥಾ ವಿಭಾಗ
ಚಿ.ಕ: ಸಾಯಿಪ್ರಕಾಶ್
ಮಾ: ಶ್ರೀರಂಗ, ಎಸ್.ವಿ.ಗಣೇಶ್
ಸಂ: ಎಸ್.ಮನೋಹರ್
ಛಾ: ಸೀನು
ಕಲೆ: ಅರುಣ್
ಸ: ಸಾಧುಕೋಕಿಲ
ಸಾ: ಕೆ.ಡಿ.ವೆಂಕಟೇಶ್
ಹಾ: ೧)'ಹಬ್ಬವ ಮಾಡೋಣ ಬನ್ನೀರೀ...', ೨) 'ಜಂತರ್ ಮಂತರ್...', ೩)'ಮೋನಿಕಾ ಐ ಲವ...', ೪)'ಹನ್ ತನ...', ೫)'ಕನ್ನಿಕೇರಿ ಹುಡುಗಿ...',
ಕ.ಸಾ: ದುರಹಂಕಾರಿ ನಾಯಕಿ ಹಾಗೂ ಆಕೆಯ ತಂದೆ ತಾಯಿಗಳಿಗೆ ಬುದ್ಧಿ ಕಲಿಸುವ ನಾಯಕನ ಕಿಲಾಡಿತನದ ಚಿತ್ರಣ

೨೦೨೯. ಗಲಾಟೆ ಅಳಿಯಂದ್ರು

(೨೦೦೦ / ವರ್ಣ / ಸಾಮಾಜಿಕ)
ಲಾ: ಚೆನ್ನಾಂಬಿಕಾ ಫಿಲಂಸ್
ಪ್ರೊ: ಅನಿತಾ ಕುಮಾರಸ್ವಾಮಿ
ನಿ: ಎಸ್.ನಾರಾಯಣ್
ಸ.ನಿ: ಶಿವಕುಮಾರ್
ಅ: ಶಿವರಾಜ್ ಕುಮಾರ್, ಎಸ್.ನಾರಾಯಣ್, ಸಾಕ್ಷಿ ಶಿವಾನಂದ್, ದೊಡ್ಡಣ್ಣ, ಮುಖ್ಯಮಂತ್ರಿ ಚಂದ್ರು, ಕರಿಬಸವಯ್ಯ, ತಾರಾ
ಕ/ಚಿ.ಕ/ಮಾ/ಗೀ: ಎಸ್.ನಾರಾಯಣ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಶಿವರಾಜ್ ಕುಮಾರ್, ನಾರಾಯಣ್, ಚಿತ್ರಾ, ರಾಜೇಶ್
ಸಂ: ಪಿ.ಆರ್. ಸೌಂದರರಾಜನ್
ಛಾ: ಆರ್. ಗಿರಿ
ಕಲೆ: ಮೂರ್ತಿ
ಸ: ದೇವ
ಧ್ವ: ಕೋದಂಡಪಾಣಿ, ಮಹೇಂದ್ರ
ನೃ: ನದೀಂ ಖಾನ್
ಸಾ: ಕೌರವ ವೆಂಕಟೇಶ್
ವ: ದೇವ
ಪ್ರ: ಬಾಬು

ಸ್ಟು: ಮಧು ಆರ್ಟ್ಸ್
ಹಾ: ೧)'ಕುಂದಾಪುರದ ಮೀನಮ್ಮ'.... ೨)'ತಿಲ್ಲಾನ ತಿಲ್ಲಾನ ಟೀನೇಜ್ ಹುಡುಗರು...', ೩)'ಸಾಗರಿಯೇ ಸಾಗರಿಯೇ...'.
ಕ.ಸಾ: ಮಾವ, ಆತನ ಇಬ್ಬರು ಅಳಿಯಂದಿರು ಹಾಗೂ ಆತನ ಸುಂದರವಾದ ಮಗಳು ಇವರ ನಡುವಣ ಹಾಸ್ಯಮಯ ಚಿತ್ರಣ.

೨೦೩೦. ಇಂಡಿಪೆಂಡೆನ್ಸ್ ಡೇ

(೨೦೦೦ / ವರ್ಣ / ಸಾಮಾಜಿಕ)
ಲಾ: ಸರಸ್ವತಿ ಫಿಲಂ ಡಿವಿಜನ್
ಪ್ರೊ: ಮಧುಸೂದನ ಶೆಟ್ಟಿ
ನಿ: ಎ.ಆರ್. ರಮೇಶ್
ಸ.ನಿ: ಸೋಮರಾಜ್, ಶಾಹೂಜಿ ಶಿಂಧೆ, ಅರುಣ್ ಕುಮಾರ್
ಅ: ಸಾಯಿಕುಮಾರ್, ಅರುಣ್ ಪಾಂಡ್ಯನ್, ಆನಂದ್‌ರಾಜ್,

ರೋಜಾ, ರಂಜಿತಾ, ವಿನಯಾ ಪ್ರಸಾದ್, ಮುಖ್ಯಮಂತ್ರಿ ಚಂದ್ರು, ರಾಕ್‌ಲೈನ್ ವೆಂಕಟೇಶ್, ಆಲ್‌ಫೋನ್ಸ್
ಕ/ಚಿ.ಕ/ಮಾ: ಎಸ್.ಎಸ್.ಡೇವಿಡ್
ಗೀ: ಎಸ್.ಕೇಶವಮೂರ್ತಿ, ಆರ್.ಎನ್. ಜಯಗೋಪಾಲ್
ಸಂ: ಸಾಯಿಕುಮಾರ್
ಛಾ: ರಮೇಶ್
ಕಲೆ: ಜಿ.ಕ
ಸ: ದೇವಾ
ನೃ: ಸುಚಿತ್ರಾ
ಸ್ಟು: ಪ್ರಸಾದ್ ಡಿಜಿಟಲ್ ಥಿಯೇಟರ್ (ಚೆನ್ನೈ)

ಸ್ಟು: ಸ್ವಾತಂತ್ರ ದಿನಾಚರಣೆಯ ಸಂದರ್ಭದಲ್ಲಿ ದುಷ್ಕರ್ಮಿಗಳು ನಡೆಸುವ ಸಂಚೊಂದು ಇಡೀ ದೇಶಕ್ಕೆ ಮುಳುವಾಗುವ ವಿಷಯ ತಿಳಿದ ನಾಯಕ, ಆ ಕಾರ್ಯಾಚರಣೆಯನ್ನು ವಿಫಲಗೊಳಿಸುವ ಕಥೆ.

೨೦೩೧. ಭಗವಾನ್ ದಾದಾ

(೨೦೦೦ / ವರ್ಣ / ಸಾಮಾಜಿಕ)
ಲಾ: ಮಾತಾಶ್ರೀ ಪಿಕ್ಚರ್ಸ್
ಪ್ರೊ: ಲೀಲಾ ಅಮರ್‌ಚಂದ್ ಜೈನ್
ನಿ: ದಾಸ್
ಸ.ನಿ: ಸುದರ್ಶನ್
ಅ: ಶೋಭರಾಜ್, ರುಚಿತಾ ಪ್ರಸಾದ್, ಉಮಾಶ್ರೀ, ಅವಿನಾಶ್, ಬ್ಯಾಂಕ್ ಜನಾರ್ದನ್, ಎಸ್.ಎಸ್. ಡೇವಿಡ್
ಕ: ಮಾತಾಶ್ರೀ ಪಿಕ್ಚರ್ಸ್ ಕಥಾ ವಿಭಾಗ
ಚಿ.ಕ: ದಾಸ್
ಮಾ: ಎಸ್.ಎಸ್.ಡೇವಿಡ್
ಗೀ: ಕೆ.ಕಲ್ಯಾಣ್
ಗಾ: ನಂದಿತಾ, ರಾಜೇಶ್
ಸಂ: ಕೆ. ಎಂ. ಶಂಕರ್
ಛಾ: ಜಯದೇವ
ಕಲೆ: ನಂಜುಂಡಸ್ವಾಮಿ
ಸ: ರಾಜೇಶ್ ರಾಮನಾಥ್
ನೃ: ತ್ರಿಭುವನ್, ಸಂಪತ್
ಸಾ: ಕೌರವ ವೆಂಕಟೇಶ್
ವ: ಬಾಲು
ಪ್ರ: ನಾಗರಾಜ್
ಸ್ಟು: ಕಂಠೀರವ
ಕ.ಸಾ: ಮುಗ್ಧನೊಬ್ಬ ಭೂಗತ ಜಗತ್ತಿನ ಸಂಪರ್ಕಕ್ಕೆ ಬಂದಾಗ, ಅವನಲ್ಲಿನ ಮಾರ್ಪಾಡು, ಭೂಗತ ಜಗತ್ತಿನ ಪ್ರಮುಖನಾಗಿ ಅವನ ನಡೆ, ಪ್ರಣಯ, ವಿವಾಹ, ಕೊಲೆ, ಪ್ರತೀಕಾರ ಮುಂತಾದ ಅಂಶಗಳನ್ನು ಒಳಗೊಂಡ ಚಿತ್ರಣ.

೨೦೩೨. ನನ್ನವಳು ನನ್ನವಳು

(೨೦೦೦ / ವರ್ಣ / ಸಾಮಾಜಿಕ)
ಲಾ: ಕಲಾಧರೆ ಆರ್ಟ್ ಪಿಕ್ಚರ್ಸ್
ಪ್ರೊ: ಶ್ರೀಮತಿ ಭಾಗ್ಯವತಿ
ನಿ: ಎಸ್.ನಾರಾಯಣ್
ಸ.ನಿ: ಮಧುಕರ್
ಅ: ಎಸ್.ನಾರಾಯಣ್, ಪ್ರೇಮಾ, ದೊಡ್ಡಣ್ಣ, ಧೀರೇಂದ್ರ ಗೋಪಾಲ್, ಕೃಷ್ಣೇಗೌಡ, ಎಂ.ಎನ್.ಸುರೇಶ್, ಆಶಾಲತಾ, ರೇಣುಕೇಶ್, ಡಾಲಿ
ಕ/ಚಿ.ಕ/ಮಾ: ಎಸ್.ನಾರಾಯಣ್
ಗೀ: ಕೆ. ಕಲ್ಯಾಣ್, ಎಸ್. ನಾರಾಯಣ್
ಗಾ: ಚಿತ್ರಾ, ರಾಜೇಶ್, ಎಸ್.ನಾರಾಯಣ್, ಎಲ್.ಎನ್. ಶಾಸ್ತ್ರಿ, ಸಂಗೀತ ಗುರುರಾಜ್, ಅರ್ಚನಾ ಉಡುಪ, ಎಸ್.ಪಿ. ಬಾಲಸುಬ್ರಹ್ಮಣ್ಯಂ
ಸಂ: ಪಿ.ಆರ್. ಸೌಂದರರಾಜನ್
ಛಾ: ಆರ್.ಗಿರಿ
ಕಲೆ: ಜಿ.ಮೂರ್ತಿ
ಸ: ಪ್ರಶಾಂತ್‌ರಾಜ್
ದೃ: ಮಹೇಂದ್ರ, ಕೋದಂಡಪಾಣಿ
ನೃ: ಸಂಪತ್, ನಟರಾಜ್
ಸಾ: ಕೌರವ ವೆಂಕಟೇಶ
ವ: ಮೈಸೂರು ರಾಮಚಂದ್ರ
ಪ್ರ: ವಿಠಲ್ ಬಾಬು
ಸ್ಟು: ಮಧು ಆರ್ಟ್
ಹಾ: ೧) 'ನನ್ನವಳು ನನ್ನವಳು...', ೨) 'ಮೈನಾ ಮೈನಾ...', ೩) 'ಹೂವೆನ್ನಲೆ...', ೪) 'ಎಳ್ಳೆದೆಲೆ ಆಟಿಕ...', ೫) 'ರಂಗೀಲಾ ರಂಗೀಲ...', ೬) 'ಹೂವೆನ್ನಲೆ...'
ಕ.ಸಾ: ಮಡದಿದರೆ ಏನಾದರೂ ಸಾಧಿಸಬಹುದೆಂಬ ಹಂಬಲದಲ್ಲಿರುವ ನಾಯಕಿಗೆ ಮದುವೆ ಪ್ರಧಾನವಲ್ಲ ಎಂದು ನಿರೂಪಿಸುವುದರಲ್ಲಿ ನಾಯಕ ಯಶಸ್ವಿಯಾಗುವುದೇ ಕಥೆಯ ಹಂದರ.

೨೦೩೩. ನನ್ನ ಹೆಂಡ್ತಿ ಚೆನ್ನಾಗಿದ್ದಾಳೆ

(೨೦೦೦ / ವರ್ಣ / ಸಾಮಾಜಿಕ)
ಲಾ: ಭವಾನಿ ಚಿತ್ರ
ಪ್ರೊ/ನಿ: ದಿನೇಶ್ ಬಾಬು
ಸ.ನಿ: ಜಯಶೀಲನ್, ವತ್ಸಲಾ
ಅ: ಅನಂತ್‌ನಾಗ್, ರಮೇಶ್, ಕಾಶಿ, ಅಂಜಲಿ ಠಕ್ಕರ್, ಪದ್ಮಾಕುಮಟಾ, ರಮೇಶ್ ಭಟ್, ಚಿತ್ರಾ ಶೆಣೈ, ಮುಖ್ಯಮಂತ್ರಿ ಚಂದ್ರು, ಉಮಾಶ್ರೀ, ದೊಡ್ಡಣ್ಣ
ಕ/ಚಿ.ಕ/ಮಾ: ದಿನೇಶ್ ಬಾಬು
ಗೀ: ಕೆ.ಕಲ್ಯಾಣ್
ಸಂ: ಬಿ.ಎಸ್.ಕೆಂಪರಾಜ್
ಛಾ: ಪಿ.ಕೆ.ಹೆಚ್. ದಾಸ್
ಕಲೆ: ರೋಸ್ ರಾಜು
ಸ: ರಾಜೇಶ್ ರಾಮನಾಥ್
ನೃ: ಸುಜಾತಾ ಬಾಬು
ವ: ಗಂಡಸಿ ನಾಗರಾಜ್
ಪ್ರ: ಕೃಷ್ಣಮೂರ್ತಿ
ಹಾ: ೧) 'ನನ್ನ ಹೆಂಡ್ತಿ ನನ್ನ ಹೆಂಡ್ತಿ ...', ೨) 'ಶ್ರೀ ರಾಗದಿಂದ ಶ್ರೀ ಕೃಷ್ಣ ಬಂದ ...', ೩) 'ಹುಂಜಾ ಕಣ್ಣು ಕುಕ್ಕೋ ಹುಂಜ ...'
ಕ.ಸಾ: ಹೆಂಡತಿಯ ಸೌಂದರ್ಯವನ್ನು ತಪ್ಪಾಗಿ ತಿಳಿಯುವ ಯುವಕ ಜೀವನದಲ್ಲಿ ನೊಂದು ಕೊನೆಗೆ ಬಾಹ್ಯ ಸೌಂದರ್ಯಕ್ಕಿಂತ ಅಂತರಂಗದ ಸೌಂದರ್ಯವೇ ಮೇಲು ಎಂಬ ಸತ್ಯವನ್ನು ಅರಿಯುವುದೇ ಕಥೆಯ ತಿರುಳು.

೨೦೩೪. ಲವ್ ಇನ್ ನೇಪಾಳ್

(೨೦೦೦ / ವರ್ಣ / ಸಾಮಾಜಿಕ)
ಲಾ: ಓಂಸ್ ಪ್ರೊಡಕ್ಷನ್ಸ್
ಪ್ರೊ: ಕೆ.ಎ. ರವಿಕುಮಾರ್
ನಿ: ಬಿ.ಆರ್.ಕೇಶವ
ಸ.ನಿ: ಮೋಹನ್ ಜುನೇಜಾ
ಅ: ನಾಗೇಶ್ ಮಯ್ಯ, ಅರ್ಚನಾ, ರವಿಕುಮಾರ್, ಗಾಯತ್ರಿ ಪ್ರಭಾಕರ್

ಕ/ಚಿ.ಕ: ಬಿ.ಆರ್. ಕೇಶವ
ಮಾ: ಮೋಹನ್ ಜುನೇಜಾ
ಗೀ: ಕೆ. ಕಲ್ಯಾಣ್
ಗಾ: ನಂದಿತಾ, ಬದ್ರಿ ಪ್ರಸಾದ್, ರಮೇಶ್‌ಚಂದ್ರ, ಸುಂದರ್, ಸುನೀತಾ
ಸಂ: ರಾಜಶೇಖರ್ ರೆಡ್ಡಿ
ಛಾ: ಮನೋಹರ್
ಕಲೆ: ಮೋಹನ್
ಸ: ಮಾರುತಿ ಮೀರಜ್‌ಕರ್
ದೃ: ಜಗ್ಗಿ (ಪ್ರಭಾತ್), ಪಳನಿ (ಅರುಣ್)
ನೃ: ಚಾಮರಾಜ್
ಸಾ: ಕೌರವ ವೆಂಕಟೇಶ್
ವ: ನಾರಾಯಣ
ಪ್ರ: ಗೋವಿಂದ
ಹಾ: ೧) 'ಮುಂಜಾನೆ ಕರಗ್ಯಾವ್ರೋ ಮುಸ್ಸಂಜೆ ಮಿನುಗ್ಯಾವ್ರೋ...', ೨) 'ಈ ಪ್ರೀತಿ ಈ ಪ್ರೇಮ ವೀರಹದ ಕೈ ಒಳಗೆ...', ೩) 'ಲವ್ ಇನ್ ನೇಪಾಳ್...', ೪) 'ಗೆಳತಿ ಓ ಗೆಳತಿ ಕನಸುಗಳ ಒಡತಿ...', ೫) 'ಚಂದವಿದೆ ಚಂದನವಿದೆ ನಮ್ಮಯ ಸ್ನೇಹದಲಿ...'
ವಿ: ಹೆಚ್ಚು ಭಾಗ ನೇಪಾಳದಲ್ಲಿ ಚಿತ್ರಿತವಾಗಿದೆ.
ಕ.ಸಾ: ನೇಪಾಳಕ್ಕೆ ಪ್ರವಾಸಹೋಗಿದ್ದ ನಾಯಕ ಅಲ್ಲಿನ ಹುಡುಗಿಯೊಬ್ಬಳನ್ನು ಪ್ರೀತಿಸುತ್ತಾನೆ. ಆಕೆಯ ಅಣ್ಣನ ವಿರೋಧದೊಂದಿಗೆ ತನ್ನ ಪ್ರೇಯಸಿಯನ್ನು ಕರೆತರುವಾಗ ನಡೆಯುವ ಮಾರಾಮಾರಿ ಸಸ್ಪೆನ್ಸ್ ಮುಂತಾದ ಚಿತ್ರಣ.

೨೦೩೫. ಖಡ್ಗ

(೨೦೦೦ / ವರ್ಣ / ಸಾಮಾಜಿಕ)
ಲಾ: ಸಪ್ತಮುಖಿ ನಾಗೇಶ್ವರಿ ಪ್ರೊಡಕ್ಷನ್
ಪ್ರೊ: ಶ್ರೀಮತಿ ಹೆಚ್.ವಿ.ಹರಿಣಿ, ಬೇಬಿ ನಮ್ರತಾ
ನಿ: ಆನಂದ್.ಪಿ.ರಾಜು
ಸ.ನಿ: ಪಿ. ರಾಜೇಶ್, ಕೆ. ಮಾದೇಶ್
ಅ: ಸಾಯಿಕುಮಾರ್, ಇಂದ್ರಜಾ, ಶಿಲ್ಪಾ, ಶೋಭರಾಜ್, ಅವಿನಾಶ್, ದತ್ತಾತ್ರೇಯ, ಬೇಬಿ ರೇಖಾ, ಸಿದ ರಾಜ್ ಕಲ್ಯಾಣ್‌ಕರ್, ಹರೀಶ್ ರಾಯ್
ಕ: ಎಸ್.ಎಸ್.ಡೇವಿಡ್
ಚಿ.ಕ: ಕೆ.ವಿ.ರಾಜು
ಮಾ: ಎಂ.ಎಸ್.ರಮೇಶ್, ರಾಜಶೇಖರ್
ಸಂ: ಎಸ್. ಮನೋಹರ್
ಛಾ: ಸಿ.ಡಿ. ರಾಜು
ಕಲೆ: ಮಂಗಳೂರು ದಿನೇಶ್
ಸ: ಸಾಧುಕೋಕಿಲ
ಸಾ: ಕೆ.ಡಿ.ವೆಂಕಟೇಶ್
ವ: ಬಾಬು
ಪ್ರ: ರಾಮಕೃಷ್ಣ
ಕ.ಸಾ: 'ಖಡ್ಗ' ಒಂದು ಪತ್ರಿಕೆಯ ಹೆಸರು. ನಾಯಕಿ ಅದೇ ಪತ್ರಿಕೆಯ ರಿಪೋರ್ಟರ್. ಒಂದು ಹಿಂದೂ - ಮುಸ್ಲಿಂ ಗಲಭೆಯ ಹಿನ್ನೆಲೆಯಲ್ಲಿ ನಡೆಯುವ ವಿದ್ಯಮಾನಗಳ ಬಗೆಗಿನ ಚಿತ್ರಕಥೆ. ಕೊನೆಗೆ ಸಿ.ಬಿ.ಐ. ತನಿಖೆಯಿಂದ ನಡೆಯುತ್ತಿರುವ ಕೋಮು ಕೊಲೆಗಳ ಪತ್ತೆ.

೨೦೩೬. ಓ ನನ್ನ ನಲ್ಲೆ

(೨೦೦೦ / ವರ್ಣ / ಸಾಮಾಜಿಕ)
ಲಾ: ಸೂಪರ್ ಗುಡ್ ಕಂಬೈನ್ಸ್
ಪ್ರೊ: ಆರ್.ಬಿ.ಚೌಧರಿ
ನಿ: ವಿ. ರವಿಚಂದ್ರನ್
ಸ.ನಿ: ಮೂರ್ತಿ, ಭರತ್
ಅ: ರವಿಚಂದ್ರನ್, ಇಷಾ ಕೊಪ್ಪಿಕರ್, ಮನದೀಪ್ ರಾಯ್,

ಶ್ರೀನಿವಾಸ ಮೂರ್ತಿ, ಕಿಶೋರಿ ಬಲ್ಲಾಳ್, ಚಿತ್ರಾ ಶೆಣೈ, ಕಾಶಿ, ಬುಲೆಟ್ ಪ್ರಕಾಶ್, ಉದಯ್ ಜಾದೂಗಾರ್
ಕ: ಯಳಿಲ್
ಚಿ.ಕ/ಮಾ/ಗೀ: ವಿ.ರವಿಚಂದ್ರನ್
ಗಾ: ಎಸ್.ಪಿ.ಬಾಲಸುಬ್ರಹ್ಮಣ್ಯಂ, ಚಿತ್ರಾ, ಎಲ್.ಎನ್.ಶಾಸ್ತ್ರಿ, ಸುಮಾ ಶಾಸ್ತ್ರಿ
ಸಂ: ಹಂಸಲೇಖ
ಛಾ: ಜಿ.ಎಸ್.ವಿ. ಸೀತಾರಾಂ
ಕಲೆ: ಅರುಣ್
ಸ: ವಿ. ರವಿಚಂದ್ರನ್
ಧ್ವ: ಬಾಬು, ಭಾರ್ಗವ
ನೃ: ಚಿನ್ನಿಪ್ರಕಾಶ್, ಲಾರೆನ್ಸ್, ತ್ರಿಭುವನ್
ಸಾ: ಕೆ.ಡಿ.ವೆಂಕಟೇಶ್
ವ: ಸಾಯಿ
ಪ್ರ: ಕೇಶವ
ಸ್ಟು: ಮಧು ಆರ್ಟ್
ಹಾ: ೧)' ಈ ಪ್ರೀತಿಗೆ ಕಣ್ಣು ಇಲ್ಲ'.... ೨)'ಕನಸುಗಾರನಾ...', ೩)'ಮತ್ತೇ ಮೊದ್ಲಪ್ಪಾ ಅಂತಾರಲ್ಲಪ್ಪ...', ೪)'ರಂಗು ರಂಗೇನ...', ೫)'ಓ ನನ್ನ ನಲ್ಲೇ...'
ವಿ: ೨೫ಲಕ್ಷದಲ್ಲಿ ಬೀದಿಯ ಸೆಟ್ಟನ್ನು ಮಹಾರಾಜ ಮಿಲ್ಸ್ ಆವರಣದಲ್ಲಿ ಹಾಕಲಾಗಿತ್ತು.
ಕ.ಸಾ: ನಾಯಕನಿಗೆ ಗಾಯಕನಾಗುವ ಹಂಬಲ. ಅವರ ಅವಕಾಶದಿಂದ ವಂಚಿತ. ಇವರ ನಡುವೆ ನಾಯಕನ ಹಾಡಿನಿಂದ ಆಕರ್ಷಿತಳಾಗಿ ನಾಯಕಿ ಆತನನ್ನು ಭೇಟಿ ಮಾಡಲು ಪ್ರಯತ್ನಿಸಿದಾಗಲೆಲ್ಲಾ ನಾಯಕನ ಏನಾದರೊಂದು ಅನಾಹುತದ ದೃಶ್ಯಗಳನ್ನು ನೋಡಿ ಮನಸಿನಲ್ಲಿ ಒಳ್ಳೆಯವನನ್ನಾಗಿ ಕಲ್ಪಿಸಿಕೊಂಡು, ನೇರವಾಗಿ ನೋಡಿದಾಗ ದುಷ್ಟನೆಂದು ಪರಿಗಣಿಸುತ್ತಿರುತ್ತಾಳೆ. ಹೀಗಿರುವಾಗ ಒಂದು ಸಂದರ್ಭದಲ್ಲಿ, ನಾಯಕನ ಅಚಾತುರ್ಯದಿಂದ ನಾಯಕಿಗೆ ಕಣ್ಣುಗಳು ಹೋಗುತ್ತವೆ. ಇದರಿಂದ ಮನನೊಂದ ನಾಯಕ, ನಾಯಕಿಗೆ ಸಹಾಯ ಮಾಡಿ ತನ್ನ ಒಂದು ಮೂತ್ರಪಿಂಡವನ್ನು ದಾನ ಮಾಡಿ ಆ ಹಣದಿಂದ ನಾಯಕಿಗೆ ಕಣ್ಣಿನ ಶಸ್ತ್ರಕ್ರಿಯೆ ಮಾಡಿಸಿ ದೃಷ್ಟಿಕೊಡಿಸುತ್ತಾನೆ. ಕೊನೆಯಲ್ಲಿ ಅವನೇ ನಿಜವಾದ ತನ್ನ ಕಲ್ಪನೆಯ ನಾಯಕನೆಂದು ನಾಯಕಿಗೆ ತಿಳಿಯುತ್ತದ.

೨೦೩೭. ಮುನ್ನುಡಿ

(೨೦೦೦ / ವರ್ಣ / ಸಾಮಾಜಿಕ)
ಲಾ: ನವ ಚಿತ್ರ
ಪ್ರೊ/ನಿ: ಪಿ.ಶೇಷಾದ್ರಿ
ಸ.ನಿ: ಎಂ.ಎನ್.ಜಯಂತ್, ಎ.ಎಸ್.ಎ.ಖಾನ್
ಅ: ದತ್ತಾತ್ರೇಯ, ತಾರಾ, ಶಿವಮೊಗ್ಗ ವೆಂಕಟೇಶ್, ಎಂ.ಪಿ.ವೆಂಕಟರಾವ್, ಸಿ.ಆರ್.ಶಶಿಕುಮಾರ್, ಎಂ.ಎನ್.ಸುರೇಶ್, ಮಹಮ್ಮದ್ ಕುಳಾಯಿ, ಶ್ರೀವತ್ಸ, ಛಾಯಾ ಸಿಂಗ್, ನಂದಿತಾ, ಸುಧೀ ರಾಜ್, ವಿದ್ಯಾಧರ್
ಕ: ಬೊಳುವಾರ್ ಮಹಮದ್ ಕುಂಞ
ಚಿ.ಕ: ಶೇಷಾದ್ರಿ, ಬೊಳುವಾರ್ ಮಹಮದ್ ಕುಂಞ
ಮಾ:/ಗೀ: ಬೊಳೂವಾರ್ ಮಹಮದ್ ಕುಂಞ
ಗಾ: ರಮೇಶ್ ಚಂದ್ರ, ಷರೀಫ್ ನಿರ್ಮುಂಜೆ, ನಂದಿತಾ
ಸಂ: ವಿ.ಎಸ್.ಕೆಂಪರಾಜ್
ಛಾ: ಬಿ.ಎಸ್.ಶಾಸ್ತ್ರಿ
ಕಲೆ: ಶ್ರೀವತ್ಸ
ಸ: ವಿ.ಮನೋಹರ್
ಧ್ವ: ಚಾಮುಂಡೇಶ್ವರಿ
ವ: ಜುಬೇದಾ, ಅನುಪಮ
ಪ್ರ: ಕುಮಾರ್
ಹಾ: ೧) 'ಕಡಲ ತೆರೆಗಳು ಮರಳ ಹಲಗೆಯ ಮೇಲೆ...', ೨) 'ಸ್ವಾಗತ ಕೋರುವ...', ೩) 'ಅರಬಿಯ ಕಡಲಲಿ ಬಂದವರು...', ೪)'ಬಾಂಗ್...',
ಸೆ: ಉದ ೧೧೩೦.೦೦, ೩೧ - ೦೮ - ೨೦೦೦
ವಿ: ೨೦೦೦ನೇ ಸಾಲಿನ ರಾಷ್ಟ್ರ ಪ್ರಶಸ್ತಿ : ಅತ್ಯುತ್ತಮ ಸಾಮಾಜಿಕ ಪರಿಣಾಮ ಬೀರುವ ಚಿತ್ರ, ಅತ್ಯುತ್ತಮ ಪೋಷಕ ನಟ (ಹೆಚ್.ಜಿ.ದತ್ತಾತ್ರೇಯ)
೨೦೦೦ ೨೦೦೧ನೇ ಸಾಲಿನ ರಾಜ್ಯಪ್ರಶಸ್ತಿ : ಶ್ರೇಷ್ಠ ನಟ (ದತ್ತಾತ್ರೇಯ), ಅತ್ಯುತ್ತಮ ಹಿನ್ನೆಲೆ ಗಾಯಕ (ರಮೇಶ್ ಚಂದ್ರ) ಅತ್ಯುತ್ತಮ ಶಬ್ದ ಗ್ರಾಹಕ (ಎಸ್. ಮಹೇಂದ್ರನ್) ಅತ್ಯುತ್ತಮ ವಸ್ತ್ರ ವಿನ್ಯಾಸ (ಅನುಪಮಾ ಮತ್ತು ಜುಬೇದಾ) ಅತ್ಯುತ್ತಮ ಚಿತ್ರಕಥೆ (ಬೊಳುವಾರು ಮಹಮ್ಮದ್ ಕುಂಞ) ವಿಶೇಷ ಸಾಮಾಜಿಕ ಕಳಕಳಿಯ ಚಿತ್ರ.
ಕ.ಸಾ: ಎಲ್ಲಾ ಧರ್ಮಶಾಸ್ತ್ರಗಳ ದೃಷ್ಟಿಯಲ್ಲಿಯೂ, ಗಂಡು ಹೆಣ್ಣು ಸಮ. ಆದರೆ ಗಂಡು, ಧರ್ಮದ ವಿಧಿವಿಧಾನಗಳನ್ನು ತನಗೆ ಬೇಕೆನಿಸಿದಂತೆ ಅರ್ಥೈಸುತ್ತಾ ಹೆಣ್ಣನ್ನು ಕೇವಲ ಭೋಗವಸ್ತುವಾಗಿಸಿಕೊಂಡಿದ್ದಾನೆ. ಇಸ್ಲಾಂನಲ್ಲಿ ವ್ಯಭಿಚಾರ ಕ್ರೂರ ಶಿಕ್ಷಾರ್ಹ ಮಹಾಪರಾಧ. 'ನಿಖಾಹ್' ಮತ್ತು 'ತಲಾಖ್'ಗಳನ್ನು ತನಗನುಕೂಲವಾಗುವಂತೆ ಅರ್ಥೈಸುವ ಗಂಡು, ಹೆಣ್ಣನ್ನು ಭೋಗದ ವಸ್ತುವನ್ನಾಗಿ ಬಳಸಿಕೊಳ್ಳುವುದರ ವಿರುದ್ಧ ಬಂಡಾಯ ಏಳುವ ಹೆಣ್ಣೊಬ್ಬಳ ಕಥೆ. ಮುತ್ತುಚೇರ ಗ್ರಾಮದಲ್ಲಿ ವ್ಯಾಪಾರಕ್ಕಾಗಿ ಬರುವ ಅರಬರಿಗೆ ಹಳ್ಳಿಯ ಹೆಣ್ಣುಗಳನ್ನು ನಿಖಾಹ್ ಮಾಡಿಕೊಡುವುದು. ನಿಖಾಹ್ ಮಾಡಿಕೊಂಡ ಅರಬರು ಕೆಲವೆರಡು ತಿಂಗಳು ಆ ಹೆಣ್ಣುಗಳಿಂದ ಸುಖಪಡೆದು ತಲಾಖ್ ನೀಡಿ ಅವರನ್ನು ಹಳ್ಳಿಗೆ ವಾಪಾಸು ಕಳಿಸುವುದು ಹಲವು ಶತಮಾನಗಳಿಂದ ನಡೆದುಬಂದ ಪದ್ಧತಿ. ಹಾಗೆ ನಿಖಾಹ್ ಆದ ಹೆಣ್ಣೊಬ್ಬಳನ್ನು ಗಂಡು ಪ್ರೀತಿಸಿ ತಲಾಕ್ ನೀಡದೆ ಮರಳಿ ಬರುವುದಾಗಿ ಹೇಳಿ ಹೋದವನ ತಿರುಗಿ ಬಾರದಿದ್ದಾಗ ಆ ಹೆಣ್ಣು ಆ ಸಂಪ್ರದಾಯದ ವಿರುದ ತಿರುಗಿಬಿದ್ದು, ಪ್ರತಿಭಟಿಸಿ, ಗೆಲ್ಲುತ್ತಾಳೆ.

೨೦೩೮. ಕಡ್ಡಿಮಟ್ಟಿ ಸ್ಟೇಷನ್ ಮಾಸ್ಟರ್

(೨೦೦೦ / ವರ್ಣ / ಸಾಮಾಜಿಕ)
ಲಾ: ಪ್ರಭ ಸಂಗಮ ಪಿಕ್ಚರ್ಸ್
ಪ್ರೊ/ನಿ: ಶಂಕರಲಿಂಗ ಸುಗ್ನಳ್ಳಿ
ಸ.ನಿ: ಹೆಚ್.ವಿ.ಶಿವಶರಣ
ಅ: ಅಭಿಜಿತ್, ಪ್ರೀತಿ, ಚರಣ್‌ರಾಜ್, ಸುನಾದ್ ರಾಜ್, ತಾರಾ, ಮಾಧುರಿ, ಶಂಕರಲಿಂಗ ಸುಗ್ನಳ್ಳಿ, ಎಂ.ಎನ್. ಲಕ್ಷ್ಮೀದೇವಿ, ಬಿ.ಜಯಾ
ಕ: ವಿಶ್ವನಾಥ ಇರಕಲ್
ಚಿ.ಕ: ಶಂಕರಲಿಂಗ ಸುಗ್ನಳ್ಳಿ
ಮಾ: ಎಸ್. ಕೇಶವಮೂರ್ತಿ
ಗೀ: ಅಮರಪ್ರಿಯ, ಶಂಕರಲಿಂಗ ಸುಗ್ನಳ್ಳಿ, ಎಸ್. ಕೇಶವಮೂರ್ತಿ
ಗಾ: ಸುರೇಶ ಚಂದ್ರ, ರಾಜೇಶ್, ಮಂಜುಳಾ ಗುರುರಾಜ್, ಚಂದ್ರಿಕಾ ಗುರುರಾಜ್, ಸುರೇಖಾ, ಬಿ.ಆರ್.ಛಾಯಾ, ಶಾಂತ ಹೊಂಬಾಳೆ
ಸಂ: ಸುರೇಶ್ ಅರಸ್
ಛಾ: ಆರ್.ಆರಾಧ್ಯ
ಸ: ಅಮರ ಪ್ರಿಯ
ಧ್ವ: ಸಂಕೇತ್
ಸಾ: ಮೂರ್ತಿ
ವ: ವಿಜಯಕುಮಾರ್
ಪ್ರ: ಬಸವರಾಜ್

೨೦೩೯. ಯಜಮಾನ

(೨೦೦೦ / ವರ್ಣ / ಸಾಮಾಜಿಕ)
ಲಾ: ಆಸ್ಕರ್ ಫಿಲಂಸ್
ಪ್ರೊ: ಶ್ರೀಮತಿ ಕ. ಮೆಹರುನ್ನೀಸಾ ರೆಹಮಾನ್, ಕೆ.ಮುಸ್ತಾಫ
ನಿ: ಆರ್.ಶೇಷಾದ್ರಿ, ರಾಧಾಭಾರತಿ
ಅ: ವಿಷ್ಣುವರ್ಧನ್(ದ್ವಿಪಾತ್ರ), ಅರ್ಚನಾ, ಪ್ರೇಮಾ, ಶಶಿಕುಮಾರ್, ಅಭಿಜಿತ್, ಎಂ.ಎನ್.ಲಕ್ಷ್ಮೀದೇವಿ, ಪವಿತ್ರ ಲೋಕೇಶ್, ಶೋಭರಾಜ್, ಸ್ವಾತಿ
ಕ: ವಿಕ್ರಮನ್ (ತಮಿಳು ಚಿತ್ರ 'ವಾನತ್ತೈ ಪೋಲಾ')
ಚಿ.ಕ/ಮಾ: ರವಿ ಶ್ರೀವತ್ಸ
ಗೀ: ಕೆ.ಕಲ್ಯಾಣ್
ಗಾ: ರಾಜೇಶ್, ಚಿತ್ರಾ, ಎಸ್.ಪಿ. ಬಾಲಸುಬ್ರಹ್ಮಣ್ಯಂ, ದೇವನ್, ನಂದಿತಾ
ಸಂ: ಪಿ.ಆರ್. ಸೌಂದರರಾಜನ್
ಛಾ: ರಮೇಶ್‌ಬಾಬು
ಕಲೆ: ಇಸ್ಮಾಯಿಲ್
ಸ: ರಾಜೇಶ್ ರಾಮನಾಥ್
ಧ್ವ: ಪ್ರಸಾದ್
ನೃ: ದೇವಾ ಸಂಪತ್, ಮಸ್ತಾನ್
ಸಾ: ರಾಮು ಶೆಟ್ಟಿ
ಪ್ರ: ಮೈಸೂರು ವೆಂಕಟೇಶ್
ಹಾ: ೧)'ಪ್ರೇಮ ಚಂದ್ರಮ...', ೨)'ನಮ್ಮ ಮನೆಯಲಿ ದಿನವೂ ಚೈತ್ರ ಮೇಳವೇ...', ೩) 'ಮೈಸೂರು ಮಲ್ಲಿಗೆ...', ೪) 'ಶ್ರೀ ಗಂಧದಾ ಗೊಂಬೇ...', ೫) 'ಬಾನ ಚಂದ್ರಮ...', ೬)'ನವಿಲೇ ಪಂಚರಂಗೀ ನವಿಲೇ...', ೭) ಮೈನಾ ಮೈನಾ...'
ಕ.ಸಾ.: ತನ್ನ ತಮ್ಮಂದಿರ ಒಳಿತಿಗಾಗಿ ತಾನು ಪ್ರೀತಿಸಿದ ಹುಡುಗಿಯನ್ನು ತ್ಯಾಗಮಾಡಿ, ತಮ್ಮ ಹಾಗೂ ಅವನ ಹೆಂಡತಿಯನ್ನು ತಮ್ಮ ಮಕ್ಕಳಂತೆ ಸಲಹುವ ತ್ಯಾಗಮಯಿ ವ್ಯಕ್ತಿಯನ್ನು ಕುರಿತ ಕಥೆ.

೨೦೪೦. ಭಕ್ತ ಅಯ್ಯಪ್ಪ

(೨೦೦೦ / ವರ್ಣ / ಭಕ್ತಿ ಪ್ರಧಾನ)
ಲಾ: ವಿ.ಎಸ್.ಎನ್. ಪ್ರೊಡಕ್ಷನ್ಸ್
ಪ್ರೊ/ನಿ: ವಿ. ಸ್ವಾಮಿನಾಥನ್
ಸ.ನಿ: ಎಂ.ಎಂ. ಕೃಷ್ಣ
ಅ: ಪ್ರವೀಣ್, ರಾಜೇಶ್, ಮಾಲತಿ ಸುಧೀರ್, ಸಂಜಯ, ಆದರ್ಶ, ಕೌಶಿಕ, ಹಿಮಾ, ರಜನಿ, ಸವಿತಾ
ಕ/ಚಿ.ಕ/ಮಾ: ವಿ. ಸ್ವಾಮಿನಾಥನ್
ಗೀ: ವಿಜಯನಾರಸಿಂಹ, ಗಂಧರ್ವ, ನಾಗೇಂದ್ರ ಪ್ರಸಾದ್
ಗಾ: ಜೇಸುದಾಸ್
ಸಂ: ವಿಕ್ಟರ್ ಯಾದವ್
ಛಾ: ಪಿ. ಮಣಿ
ಕಲೆ: ಮುತ್ತುರಾಜ್
ಸ: ಗಂಧರ್ವ
ಧ್ವ: ಚಾಮುಂಡೇಶ್ವರಿ
ನೃ: ಮದನ್ - ಹರಿಣಿ
ಸ್ಟು: ಚಾಮುಂಡೇಶ್ವರಿ
ಹಾ: ೧)'ಓಂ ಕಾರ ಪ್ರಣವನಾದ...', ೨)'ಎಲ್ಲಿರುವೆ ಮಣಿಕಂಠನೇ...', ೩) 'ಇದು ಮಲೆ ವಾಸನೇ...', ೪) 'ಯಾತ್ರೆಗೆ ಹೋಗೋಣ...', ೫) 'ಅಕ್ಕರೆ ತೋರು...', ೬) 'ಅಯ್ಯನೇ ಅಪ್ಪನೇ...', ೭)'ಹರಿವರಾಸನಂ...',
ಕ.ಸಾ: ಅಯ್ಯಪ್ಪ ಸ್ವಾಮಿಯ ಮಹಿಮೆಯನ್ನು ಇಡೀ ಪ್ರಪಂಚಕ್ಕೆ ಪ್ರಚಾರ ಮಾಡಲು ಹೊರಡುವ ತಂದೆ ಮಕ್ಕಳ ಪ್ರಯತ್ನದ ಕಥೆ.

೨೦೪೧. ಸ್ವಲ್ಪ ಅಡ್ಜಸ್ಟ್ ಮಾಡ್ಕೊಳ್ಳಿ
(೨೦೦೦ / ವರ್ಣ / ಸಾಮಾಜಿಕ)
ಲಾ: ಶ್ರೀ ಮಂಜುನಾಥ ಎಂಟರ್‌ಪ್ರೈಸಸ್
ಪ್ರೊ: ಕೆ.ಟಿ. ವೀರೇಶ್‌ಗೌಡ
ನಿ: ಕೋಡ್ಲು ರಾಮಕೃಷ್ಣ
ಅ: ಅನಂತ್‌ನಾಗ್, ದತ್ತಾತ್ರೇಯ, ರಾಮಕೃಷ್ಣ, ತಾರಾ, ರಾಂಕುಮಾರ್, ಮಾಮಿಸಿ, ಗುರುಕಿರಣ್, ಚಿತ್ರಾಲಿ, ಕರಿಬಸವಯ್ಯ, ಸುಹಾಸಿನಿ
ಕ/ಚಿ.ಕ: ಕೋಡ್ಲು ರಾಮಕೃಷ್ಣ

ಮಾ: ಕುಣಿಗಲ್ ನಾಗಭೂಷಣ್
ಗೀ: ಶ್ರೀ ಚಂದ್ರು
ಗಾ: ರಾಜೇಶ್, ಚಿತ್ರಾ, ನಂದಿತಾ
ಸಂ: ಬಿ.ಎಸ್. ಕೆಂಪರಾಜ್
ಛಾ: ಕೆ. ಸುಂದರನಾಥ ಸುವರ್ಣ
ಸ: ಸಾಧುಕೋಕಿಲ
ನೃ: ಮದನ್ ಹರಿಣಿ, ರಘು
ಹಾ: ೧) 'ಬದುಕು ಒಲವಿನ ಗೂಡು...', ೨) 'ಐಸಾ ಐಸಾ ಇದು ಮೊಸಳೆಸಾ...', ೩) 'ಚಳಿ ಚಳೀ ಏಕ ಹೀಗ...', ೪) 'ವೈಯಾರಬೇಡ ಮರಯಬೇಡ...', ೫) 'ಚಂದವಳ್ಳಿ ಸಿಸ್ಸ...',
ಕ.ಸಾ: ಆಸಮಂಜ ಹುಟ್ಟಿಗೆ ಬಿದ ಒಂದು ಸಂಸಾರದಲ್ಲಿನ ಮೂವರು ಸೊಸೆಯರು ಪಡುವ ಬವಣೆಯ ಸುತ್ತ ಹಣೆದ ಕಥೆ. ಕೊನೆಗೆ ವಾಸುದೇವರಾಯರೆಂಬ ವ್ಯಕ್ತಿಯ ಆಗಮನವಾದ ನಂತರ ಮುಖಾಂತ್ಯಗೊಳ್ಳುತ್ತಿದ. ಸಂಸಾರ ಸುಖಾಂತ್ಯ.

೨೦೪೨. ಪ್ರೇಮಿ.
(೨೦೦೦ / ವರ್ಣ / ಸಾಮಾಜಿಕ)
ಲಾ: ಶ್ರೀ ಮರ್ಗ ಫಿಲಂಸ್
ಪ್ರೊ: ರಮೇಶ್ ಜೈನ್
ನಿ: ಅನಂತು
ಸ.ನಿ: ಕೆ. ಪುರುಷೋತ್ತಮ
ಅ: ರಾಮ್‌ಕುಮಾರ್, ಮುಖ್ಯಮಂತ್ರಿ ಚಂದ್ರು, ವೈಶಾಲಿ ಕಾಸರವಳ್ಳಿ, ಹೆಚ್.ಜಿ. ದತ್ತಾತ್ರೇಯ, ಗಿರಿಜಾ ಲೋಕೇಶ್, ಭರತ್ ಭಾಗವತರ್, ಬ್ಯಾಂಕ್ ಜನಾರ್ದನ್, ಉಮೇಶ್
ಕ: ಕೃಷ್ಣ

ಚಿ.ಕ/ಮಾ: ಅನಾಮಿಕ
ಗಾ: ಎಸ್.ಪಿ. ಬಾಲಸುಬ್ರಹ್ಮಣ್ಯಂ, ಮಂಜುಳಾ ಗುರುರಾಜ್, ಚಂದ್ರಿಕಾ ಗುರುರಾಜ್, ರಾಜೇಶ್
ಸಂ: ಆರ್.ಡಿ. ರವಿ
ಛಾ: ಎ.ಡಿ. ರಾಜು
ಸ: ಆರ್. ಗೋವರ್ಧನ್
ಸಾ: ಥ್ರಿಲ್ಲರ್ ಮಂಜು, ವಿಜಯರಾಜ್
ಹಾ: ೧) 'ಲೈಲಾ ನನ್ನ ಲೈಲಾ...', ೨) 'ಯಾರ ನಲುಮೆ ಚೆಲುವೆ...', ೩) 'ಒಂದು ಎರಡು ಮುಖ.. ', ೪) 'ಎಲ್ಲಿಂದ ಹೇಗ ಬಂದಳು...', ೫) 'ಚಳಿ ಚಳಿ ಬಾ ಬಳಿ...', ೬) 'ರೋಜಾ ತಾಜಾ ರೋಜಾ...'
ಕ.ಸಾ: ಇದೊಂದು ಪ್ರೇಮ ಕಥೆ

೨೦೪೩. ನಕ್ಸಲೈಟ್
(೨೦೦೦ / ವರ್ಣ / ಸಾಮಾಜಿಕ)
ಲಾ: ಪೂಜಿತಾ ಫಿಲಂಸ್
ಪ್ರೊ: ಬಿ.ವಿ.ಚಕ್ರಪಾಣಿ, ಎಸ್.ರವಿಕುಮಾರ್
ನಿ: ಶಿವಮಣಿ
ಸ.ನಿ: ಶರಣಪ ಗದ್ವಾಲ್
ಅ: ದೇವರಾಜ್, ಥ್ರಿಲ್ಲರ್ ಮಂಜು, ವಿಜಯಲಕ್ಷ್ಮಿ, ಅಶ್ವತ್, ಶೋಭರಾಜ್, ವಾಣಿಮುತ್ತು, ಸರೋಜಮ್ಮ, ಅರವಿಂದ್, ಕಿಶೋರಿ ಬಲ್ಲಾಳ್, ಬಿ.ಸುರೇಶ್
ಕ: ಬಿ.ವಿ.ಚಕ್ರಪಾಣಿ
ಚಿ.ಕ: ಶಿವಮಣಿ
ಮಾ: ರವಿ ಶ್ರೀವತ್ಸ
ಗೀ: ಹಂಸಲೇಖ
ಗಾ: ರಾಜೇಶ್
ಸಂ: ಎಸ್.ಪ್ರಸಾದ್
ಛಾ: ಮಹೇಂದರ್
ಕಲೆ: ದಿನೇಶ್ ಮಂಗ್ಳೂರ್
ಸ: ಹಂಸಲೇಖ
ಧ್ವ: ಆಕಾಶ್, ಚಾಮುಂಡೇಶ್ವರಿ
ಸಾ: ಥ್ರಿಲ್ಲರ್ ಮಂಜು
ವ: ನಾಗರಾಜ್
ಪ್ರ: ಮುರಳಿ
ಸ್ಟು: ಚಾಮುಂಡೇಶ್ವರಿ
ಸೆ: ರೀಲು ೧೪
ಕ.ಸಾ: ಸಮಾಜದ ನಿರುದ್ಯೋಗಿ ಯುವಕರು, ಅನಿವಾರ್ಯವಾಗಿ ತಮ್ಮ ಉದರ ನಿಮಿತ್ತವಾಗಿ, ಸಾಮಾಜ ಘಾತುಕ ಕಾರ್ಯಗಳನ್ನು ಎಸಗಿ, ಕೊನೆಗ ಪಶ್ಚಾತ್ತಾಪ ಪಟ್ಟು, ಉತ್ತಮ ಪ್ರಜೆಗಳಾಗಿ ಮಾರ್ಪಡುವ ಚಿತ್ರಕಥೆ.

೨೦೪೪. ನೀ ನನ್ನ ಜೀವ
(೨೦೦೦ / ವರ್ಣ / ಸಾಮಾಜಿಕ)
ಲಾ: ಎ.ವಿ. ಕ್ರಿಯೇಷನ್ಸ್
ಪ್ರೊ: ಸಯ್ಯದ್ ಅಹಮದ್, ಯೂಸುಫ್ ಖಾನ್
ನಿ: ಸತ್ಯಜಿತ್
ಅ: ಚರಣ್‌ರಾಜ್, ಚಾರುಲತಾ, ಸತ್ಯಜಿತ್, ಜ್ಯೋತಿ, ವೆಂಕಟೇಶ್ ಪ್ರಸಾದ್, ಬ್ಯಾಂಕ್ ಜನಾರ್ದನ್, ಅಖಿಲಾ, ಭರತ್
ಕ/ಚಿ.ಕ/ಮಾ: ಸತ್ಯಜಿತ್
ಗೀ: ಶ್ರೀಚಂದ್ರು, ದೊಡ್ಡರಂಗೇ ಗೌಡ
ಗಾ: ಸುಜಾತಾ ದತ್, ಎಲ್.ಎನ್. ಶಾಸ್ತ್ರಿ, ನಂದಿತ, ರಾಜೇಶ್
ಸಂ: ಶ್ಯಾಂ
ಛಾ: ಸುರೇಂದ್ರನಾಥ್ ಬೇಗೂರು
ಸ: ಗುಣಸಿಂಗ್
ನೃ: ಲೂಯಿಸ್
ಸಾ: ಸೂರ್ಯಪ್ರಕಾಶ್
ವ: ಲಕ್ಷ್ಮಣ
ಪ್ರ: ಶ್ರೀನಿವಾಸ್
ಹಾ: ೧) 'ಹುಟ್ಟಿ ಹಬ್ಬ ಈ ಗೊಂಬೆಗೆ...' ೨) 'ಲವ್ವಿ ಟೀನೇಜಲ್ಲಿ.. ', ೩) 'ಸಪ್ತಪದಿಯ ತುಳಿದು ಬಂದ...', ೪) 'ಬಾಳು ನಂದಾಗಿ ಹಾಳಾಯ್ತು...', ೫) 'ಸ್ನೇಹ ಸಂತೋಷ...'
ಕ.ಸಾ: ಒಂದು ಸಂತಪ್ತ ಕುಟುಂಬದಲ್ಲಿ ಗೂಂಡಾ ವ್ಯಕ್ತಿಗಳ ಪ್ರವೇಶದಿಂದಾಗಿ ಸಂಸಾರದಲ್ಲಿನ ಏರುಪೇರುಗಳು. ಕೊನೆಗ ನಾಯಕ ಗೂಂಡಾ ಅಲ್ಲ ಎಂಬ ಸತ್ಯದೊಂದಿಗ ಕಥೆಯ ಮುಕ್ತಾಯ.

೨೦೪೫. ಕೃಷ್ಣಾರ್ಜುನ
(೨೦೦೦ / ವರ್ಣ / ಸಾಮಾಜಿಕ)
ಲಾ: ಪೂರ್ಣಿಮಾ ಕ್ರಿಯೇಷನ್ಸ್
ಪ್ರೊ: ಜೋ ಸೈಮನ್, ಏಕನಾಥ್
ನಿ: ಜೋ ಸೈಮನ್
ಸ.ನಿ: ಆರ್.ಸಿ. ರಂಗಾ
ಅ: ಬಿ.ಸಿ. ಪಾಟೀಲ್, ರಾಗಸುಧಾ, ಪದ್ಮಾವಾಸಂತಿ, ಲೋಕೇಶ್, ಗಿರಿಜಾ ಲೋಕೇಶ್, ಬ್ಯಾಂಕ್ ಜನಾರ್ದನ್, ಶನಿ ಮಹಾದೇವಪ್ಪ, ಹೊನ್ನವಳ್ಳಿ ಕೃಷ್ಣ, ಸಿಗ್ರೇ ಬಾಬಿ
ಕ/ಚಿ.ಕ/ಮಾ: ಜೋಸಮನ್
ಗೀ: ಗುರುರಾಜ್

ಗಾ: ಜ್ಯೋತಿ ರವಿಪ್ರಕಾಶ್, ರವಿಶಂಕರ, ರಾಜೇಶ್
ಸಂ: ಎಸ್. ಪ್ರಸಾದ್
ಛಾ: ಪಿ.ಡಿ. ರಾಜು
ಕಲೆ: ಸುಂದರ್
ಸ: ಗುರುರಾಜ್, ಸಾಧುಕೋಕಿಲ
ಧ್ವ: ಪ್ರಸಾದ್
ನೃ: ಪ್ರಸಾದ್
ಸಾ: ಕೌರವ ವೆಂಕಟೇಶ್
ದ: ಸುರೇಶ್
ಪ್ರ: ವಿ.ಎಸ್.ಎಸ್. ಮಲ್ಲಿ
ಸ್ಟು: ಪ್ರಸಾದ್, ಚಾಮುಂಡೇಶ್ವರಿ
ಹಾ: ೧) 'ಕಟ್ಕೊಂಡ ಗಂಡ ಕೈ ಕೊಟ್ಟು ...', ೨) 'ಹೆಣ್ಣಿಗೂ ಮೀರಿದ ಅಂದ ...', ೩) 'ನನಗ ಪ್ರೀತಿತೋರೋ ಗಂಡು ...'
ಕ.ಸಾ: ಪೋಲೀಸ್ ಇನ್ಸ್‌ಪೆಕ್ಟರ್‌ಗಳಾದ ಕೃಷ್ಣ ಅರ್ಜುನ್, ಪೋಲೀಸ್ ಇಲಾಖೆಗೆ ಗೌರವ ತರುವಂತಹ ವ್ಯಕ್ತಿಗಳು. ಇವರಲ್ಲಿ ಒಬ್ಬ ಹಳ್ಳಿಗೆ ವರ್ಗವಾದಾಗ ಅಲ್ಲಿನ ರಾಜಕೀಯಕ್ಕೆ ಬಲಿಯಾಗಿ ಕೆಲಸ ಕಳೆದುಕೊಳ್ಳಬೇಕಾಗುತ್ತದೆ. ಮುಂದೆ ಅದೇ ಅರ್ಜುನ್ ರಾಜಕೀಯಕ್ಕಿಳಿದು ಅಲ್ಲಿನ ಹಳೆಯ ಪುಡಾರಿಗಳ ಬಣ್ಣ ಬಯಲಿಗೆಳೆಯುತ್ತಾನೆ. ಅಣ್ಣ ಕೃಷ್ಣ ತಮ್ಮನ ಬಂಧನಕ್ಕೆ ಹಳ್ಳಿಗೆ ಬಂದಾಗ ನಿಜಾಂಶ ಗೊತ್ತಾಗುತ್ತದೆ. ತಮ್ಮ ಅಣ್ಣನಿಗೆ ಶರಣಾಗುತ್ತಾನೆ.

ತಡವಾಗಿ ಬಂದ ಮಾಹಿತಿಗಳನ್ನು ಆಧರಿಸಿ ಸಿದ್ಧಪಡಿಸಿದ 'ಪ್ರತಿಭಾ ಸಂಪದ'

ಅಶೋಕ್ ಕಶ್ಯಪ್

ಎಸ್.ಜೆ ಪಾಲಿಟೆಕ್ನಿಕ್‌ನಲ್ಲಿ ಛಾಯಾಗ್ರಹಣದಲ್ಲಿ ಡಿಪ್ಲೊಮಾ ಪಡೆದಿರುವ

ಎಂ. ಎ ಪದವೀಧರರಾದ ಅಶೋಕ್ ಕಶ್ಯಪ್ ಸಾಕ್ಷ್ಯ ಚಿತ್ರ, ಜಾಹಿರಾತು ಚಿತ್ರಗಳಿಗೆ ಛಾಯಾಗ್ರಾಹಕರಾಗಿ ೧೯೮೫ ರಿಂದ ಕೆಲಸ ಮಾಡುತ್ತಿದ್ದಾರೆ. 'ಕರುಳಿನ ಕೂಗು', 'ಹಾಲುಂಡ ತವರು', 'ಓ ಮಲ್ಲಿಗೆ', 'ಬಾಳಿದ ಮನೆ', 'ದೀರ್ಘಸುಮಂಗಲಿ', 'ಉಲ್ಟಾಪಲ್ಟಾ', 'ಕುರುಬನರಾಣಿ' ಹೀಗೆ ಹದಿನೇಳಕ್ಕೂ ಹೆಚ್ಚು ಚಲನಚಿತ್ರಗಳ ಛಾಯಾಗ್ರಾಹಕರಾಗಿ ದುಡಿದಿರುವ ಅಶೋಕ್ ಕಶ್ಯಪ್ ಸ್ನೇಹಿತರೊಂದಿಗೆ ಯಶಸ್ವಿ 'ಉಲ್ಟಾಪಲ್ಟಾ' ಚಿತ್ರವನ್ನು ನಿರ್ಮಿಸಿದರು. ಬೆಳಕು-ನೆರಳುಗಳ ಸಾಧ್ಯತೆಗಳನ್ನು ಸದಾ ಚಿಂತಿಸುವ ಇವರು 'ಶಾಪ' ಚಿತ್ರದ ಛಾಯಾಗ್ರಹಣಕ್ಕಾಗಿ ರಾಜ್ಯ ಸರ್ಕಾರದ ಅತ್ಯುತ್ತಮ ಛಾಯಾಗ್ರಾಹಕ ಪ್ರಶಸ್ತಿಗೆ ಪಾತ್ರರಾಗಿದ್ದಾರೆ. ಕಿರುತೆರೆಯ ಹಲವು ಧಾರಾವಾಹಿಗಳನ್ನು ನಿರ್ದೇಶಿಸಿದ್ದಾರೆ.

ಅಶೋಕ್ ಬಾದರದಿನ್ನಿ

ಹವ್ಯಾಸಿ ರಂಗಭೂಮಿಯಿಂದ ಚಿತ್ರರಂಗ ಪ್ರವೇಶಿಸಿದವರು ಅಶೋಕ್ ಬಾದರದಿನ್ನಿ.

ಎನ್. ಎಸ್. ಡಿ ಯಲ್ಲಿ ತರಬೇತಿ ಪಡೆದವರು. ಉತ್ತರ ಕರ್ನಾಟಕದವರು. ೧೯೭೭ ರಲ್ಲಿ ಬಿ. ವಿ. ಕಾರಂತ ಅವರ 'ಗೀಜಗನ ಗೂಡು' ಚಿತ್ರದ ಒಂದು ಪುಟ್ಟ ಪಾತ್ರದ ಮೂಲಕ ಬೆಳ್ಳಿತೆರೆಗೆ ಪ್ರವೇಶ ಪಡೆದರು. 'ಸಾವಿತ್ರಿ', 'ಕಂಡವಮಳೆ', 'ಕೂಗು', 'ಒಂದು ಮುತ್ತಿನ ಕಥೆ', 'ಆಸ್ಫೋಟ', 'ಹಳೆ ಮುತ್ತಿನ ಕೋಟೆ', 'ಸೂತ್ರಧಾರಿ' ಮುಂತಾದ ನವಭಿರುಚಿಯ ಚಿತ್ರಗಳಲ್ಲಿ ಅಭಿನಯಿಸಿದ್ದಾರೆ. 'ಹೊಸನೀರು', 'ಮನಮೆಚ್ಚಿದ ಹುಡುಗಿ', 'ಅಂಜದ ಗಂಡು', 'ವಿಜಯ ಖಡ್ಗ', 'ಸಂಭವಾಮಿ ಯುಗೇ ಯುಗೇ' ಮೊದಲಾದವು ಇವರ ಅಭಿನಯದ ಕಮರ್ಷಿಯಲ್ ಚಿತ್ರಗಳು. ೧೯೮೫ ರಲ್ಲಿ 'ಗೌರಿಶಂಕರ' ಚಿತ್ರವನ್ನು ನಿರ್ದೇಶಿಸಿ ಉತ್ತಮ ವಿಮರ್ಶೆಯನ್ನು ಗಳಿಸಿದರು.

ಅಶೋಕ್ .ಬಿ.ಪಿ

ಪ್ರದರ್ಶಕರಲ್ಲಿ ಒಬ್ಬರಾದ ಬಿ.ಪಿ.ಅಶೋಕ್ ೧೯೫೪ರಲ್ಲಿ ಭದ್ರಾವತಿಯಲ್ಲಿ ಜನಿಸಿದರು. ಬಿ.ಕಾಂ

ಹಾಗೂ ಎಲ್‌ಎಲ್.ಬಿ ಪದವೀಧರರು. ಬೆಂಗಳೂರಿನ ಅಭಿನಯ್ ಥಿಯೇಟರ್‌ನ ಪಾಲುದಾರರಲ್ಲಿ ಒಬ್ಬರು. ಚಲನಚಿತ್ರ ವಾಣಿಜ್ಯ ಮಂಡಳಿಯಲ್ಲಿ ಸಕ್ರಿಯವಾಗಿ ಒಂದಲ್ಲ ಒಂದು ಸ್ಥಾನದಲ್ಲಿ ಕಾರ್ಯ ನಿರ್ವಹಿಸುತ್ತ ಬಂದವರು. ಗೌರವ ಖಜಾಂಚಿಯಾಗಿ ಎರಡು ಅವಧಿಗೆ ಆಯ್ಕೆಯಾಗಿದ್ದರು. ಕಾರ್ಯಕಾರಿ ಸಮಿತಿ ಸದಸ್ಯರಾಗಿಯೂ ಕಾರ್ಯ ನಿರ್ವಹಿಸಿದ್ದಾರೆ. ಸಾಮಾಜಿಕ ಹಿತಾಸಕ್ತಿಯುಳ್ಳವರಾಗಿ ಹಲವಾರು ಸಂಘ ಸಂಸ್ಥೆಗಳ, ಶಿಕ್ಷಣ ಸಂಸ್ಥೆಗಳ ನಂಟನ್ನು ಹೊಂದಿದ್ದಾರೆ. ಸ್ಟೇಟ್ಸ್ ಚಿತ್ರಮಂದಿರದ ನಿರ್ವಹಣೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ.

ಅಸ್ರಾರ್ ಅಬಿದ್

ಬಹುಮುಖ ಪ್ರತಿಭೆಯ ಅಸ್ರಾರ್ ಅಬಿದ್ ಶಿಕ್ಷಣ ಕ್ಷೇತ್ರದಿಂದ ಚಲನಚಿತ್ರ ರಂಗಕ್ಕೆ ಬಂದವರು. ಕರ್ನಾಟಕ

ವಿಶ್ವವಿದ್ಯಾನಿಲಯದಿಂದ ಎಂ. ಎ ಪದವಿ ಪಡೆದರು. ಮುಳಬಾಗಿಲಿನ ಎಂ. ಇ. ಎಸ್ ಕಾಲೇಜಿನಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸಿದವರು. 'ಶಂಭ ನಿಶುಂಭ' ಕನ್ನಡ ಚಿತ್ರದ ಮೂಲಕ ಲೇಖಕ, ನಿರ್ಮಾಪಕ, ನಿರ್ದೇಶಕರಾಗಿ ಚಿತ್ರರಂಗಕ್ಕೆ ಬಂದ ಅಸ್ರಾರ್ ಅಬಿದ್ ಅವರು 'ಮಾನಸಿಕಾ' ಎಂಬ ಒರಿಯಾ ಭಾಷೆಯ ಚಿತ್ರವನ್ನು ನಿರ್ದೇಶಿಸಿದರು. 'ಕ್ರಮ' ಚಿತ್ರಕ್ಕಾಗಿ ೧೯೯೦-೯೧ ರಲ್ಲಿ ದ್ವಿತೀಯ ಅತ್ಯುತ್ತಮ ನಿರ್ದೇಶಕ ಹಾಗೂ ಅತ್ಯುತ್ತಮ ಚಿತ್ರನಾಟಕ ಕರ್ತೃ ಪ್ರಶಸ್ತಿಯನ್ನು ಪಡೆದಿದ್ದರು. ಅನೇಕ ಉರ್ದು ಕಾದಂಬರಿ, ಸಣ್ಣಕತೆ, ಕವಿತೆ, ನಾಟಕಗಳು ಹಾಗೂ ಇಂಗ್ಲಿಷ್ ನಲ್ಲಿ ಕಥಾ ಸಂಕಲನವನ್ನು ಹೊರತಂದಿದರು. ಅಕಾಲ ಮರಣಕ್ಕೆ ಈಡಾದರು.

ಅಶೋಕ್ ಶಿಂಧೆ

ಹಿರಿಯ ಪ್ರದರ್ಶಕರು ಹಾಗೂ ಚಿತ್ರ ವಿತರಕರಲ್ಲಿ ಒಬ್ಬರಾದ ಅಶೋಕ್ ಶಿಂಧೆ ಜನಿಸಿದ್ದು ಪುಣೆಯಲ್ಲಿ. ಅಬ್ಕಾರಿ ಕಂಟ್ರಾಕ್ಟರ್ ಆಗಿ ಖ್ಯಾತರಾದ ಇವರು ತಮ್ಮ ಸಹೋದರರಾದ ಬಸಪ್ಪ ಶಿಂಧೆ, ಮಲ್ಲಪ್ಪ ಶಿಂಧೆ ಹಾಗೂ ಯಮನಪ್ಪ ಶಿಂಧೆ ಅವರೊಡಗೂಡಿ ಕರ್ನಾಟಕ ಹಾಗೂ ಹೈದರಾಬಾದ್ ಕರ್ನಾಟಕ ವಲಯದ ಪ್ರಭಾವಿ ಪ್ರದರ್ಶಕರು ಹಾಗೂ ವಿತರಕರು ಆಗಿ ಹೆಸರಾದವರು. ಸಹೋದರರೊಂದಿಗೆ

ಬೆಂಗಳೂರಿನ 'ನರ್ತಕಿ-ಸಪ್ನ', ಹೈದರಾಬಾದಿನ 'ಸಂತೋಷ್ ಸಪ್ನ' ಹಾಗೂ ಸಿಕಂದರಾಬಾದಿನ 'ನಟರಾಜ್' ಚಿತ್ರಮಂದಿರಗಳನ್ನು ನಡೆಸಿದವರು. ಧಾರ್ಮಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಆಸಕ್ತಿ ಹೊಂದಿದ್ದರು. ೧೯೮೦ರ ಸೆಪ್ಟೆಂಬರ್‌ನಲ್ಲಿ ನಿಧನರಾದವರು.

ಅರ್ಮುಗಂ .ಎ

ಶಬ್ದಗ್ರಾಹಕರು. ಮದ್ರಾಸಿನಲ್ಲಿ ೧೯೪೩ ರಲ್ಲಿ ಜನಿಸಿದರು. ೧೯೫೫ ರಲ್ಲಿ ಪ್ರೀಮಿಯರ್ ಸ್ಟುಡಿಯೋದಲ್ಲಿ ಪೇವರ್ ಪ್ರೊಲ್ಲರ್ ಆಗಿ ಚಿತ್ರರಂಗ ಪ್ರವೇಶಿಸಿದರು. ನಂತರ ಕೆ.ಆರ್. ಸೀತಾರಾಂ ಅವರ ಬಳಿ ಸೌಂಡ್ ಅಸಿಸ್ಟೆಂಟ್ ಆಗಿ ಕೆಲವು ವರ್ಷಗಳ

ಕಾಲ ಸೇವೆ ಸಲ್ಲಿಸಿದರು. ನಂತರ ಸೌಂಡ್ ಇಂಜಿನಿಯರ್ ಆದರು. ಸಹಕಾರಿ ತತ್ವದಡಿ 'ಲೀಡರ್ ವಿಶ್ವನಾಥ್', 'ಬೆಂಕಿ ಚೆಂಡು', 'ಸ್ವರ್ಗದಲ್ಲಿ ಮದುವೆ' ಚಿತ್ರಗಳನ್ನು ನಿರ್ಮಿಸಿದರು. ತಮ್ಮದೇ ಆದ ಸ್ವಂತ ಹೊರಾಂಗಣ ಚಿತ್ರೀಕರಣ ಘಟಕವನ್ನು ಆರಂಭಿಸಿದರು.

ಕುಂಟೆ ಎಸ್. ಕೆ

ಹುಬ್ಬಳ್ಳಿಯ ಹಳೆ ತಲೆಮಾರಿನ ಚಲನ ಚಿತ್ರ ಹಂಚಿಕದಾರರು. ೧೯೬೦ರಲ್ಲಿ 'ಶ್ರೀದುರ್ಗಾ ಪಿಕ್ಚರ್ಸ್' ಎಂಬ ಚಿತ್ರ ವಿತರಣಾ ಸಂಸ್ಥೆಯನ್ನು ಸ್ಥಾಪಿಸಿ ನಾಲ್ಕು ದಶಕಗಳಿಗೂ ಹೆಚ್ಚು ಕಾಲದಿಂದ ಮುಂಬೈ ಪ್ರಾಂತ್ಯದಲ್ಲಿ ಹಲವು ಚಿತ್ರಗಳನ್ನು ವಿತರಿಸಿ ಹಲವು

ಚಿತ್ರಗಳ ನಿರ್ಮಾಣಕ್ಕೆ ಧನ ಸಹಾಯವನ್ನು ಮಾಡಿದ್ದಾರೆ.ಕನ್ನಡದ ಕೆಲವು ಚಿತ್ರಗಳು ಇವರ ಬಳಿ ಇವೆ. ಶಿಸ್ತಿಗೆ ಹೆಸರಾದ ಇವರು ಸಮರ್ಥ ಕಾರ್ಯ ದಕ್ಷತೆಗೆ ಹೆಸರಾದವರು.

ಕುಮಾರ್ .ಎಸ್

ಚಿತ್ರರಂಗದಲ್ಲಿ ಕೆ.ಸಿ.ಎನ್. ಕುಮಾರ್ ಎಂದೇ ಖ್ಯಾತರಾದ ಎಸ್. ಕುಮಾರ್ ಪ್ರಾರಂಭದಲ್ಲಿ ಕೆ.ಸಿ.ಎನ್ ಸಂಸ್ಥೆಗಳಲ್ಲಿ ಸಕ್ರಿಯವಾಗಿ ಕಾರ್ಯ ನಿರ್ವಹಿಸಿದವರು. ಇದೇ ಅನುಭವದಿಂದ 'ಶ್ರೀ ಧನಲಕ್ಷ್ಮಿ ಪ್ರೊಡಕ್ಷನ್ಸ್' ಚಿತ್ರ ನಿರ್ಮಾಣ ಸಂಸ್ಥೆಯನ್ನು ಸ್ಥಾಪಿಸಿದರು.

'ಪೋಲೀಸ್ ಪವರ್', 'ಪೋಲೀಸ್ ಲಾಕಪ್', 'ವೀರ ಧೀರ', 'ಅರ್ಜುನ್ ಅಭಿಮನ್ಯು', 'ಮಹಾತ್ಮ' ಚಿತ್ರಗಳನ್ನು ನಿರ್ಮಿಸಿದ್ದಾರೆ.

ಕೃಷ್ಣ ಮಾಸಡಿ

ಸೃಜನಾತ್ಮಕ ಲೇಖಕ, ಪ್ರತಿಭಾವಂತ ನಿರ್ದೇಶಕರಾದ ಕೃಷ್ಣಮಾಸಡಿ ಶಿವಮೊಗ್ಗ

ಜಿಲ್ಲೆಯ ಹೊನ್ನಾಳಿ ತಾಲ್ಲೂಕಿನ ಮಾಸಡಿಯಲ್ಲಿ ಜನಿಸಿದರು. ಶಿವಮೊಗ್ಗ, ಮೈಸೂರಿನಲ್ಲಿ ಶಿಕ್ಷಣ ಪಡೆದರು. ಹೊಸ ಅಲೆ

ಚಿತ್ರಗಳ ನಿರ್ದೇಶಕರಾದ ಪಟ್ಟಾಭಿರಾಮರೆಡ್ಡಿ, ಲಂಕೇಶ್ ಮುಂತಾದವರ ಜೊತೆ ಅನೇಕ ಚಿತ್ರಗಳಿಗೆ ಸಹ ನಿರ್ದೇಶಕರಾಗಿ ದುಡಿದು ಚಿತ್ರರಂಗದಲ್ಲಿ ಅನುಭವ ಪಡೆದಿದ್ದಾರೆ. ೧೯೮೭ ರಲ್ಲಿ ಇವರು ಸ್ವತಂತ್ರವಾಗಿ ನಿರ್ದೇಶಿಸಿದ 'ಆವಸ' ಚಿತ್ರ ೧೯೮೭-೮೮ರ ಸಾಲಿನ ದ್ವಿತೀಯ ಅತ್ಯುತ್ತಮ ಚಿತ್ರವೆಂಬ ಪ್ರಶಸ್ತಿ ಪಡೆಯಿತು. ಅದೇ ಚಿತ್ರದ ಸಂಭಾಷಣೆಗಾಗಿ 'ಅತ್ಯುತ್ತಮ ಸಂಭಾಷಣಾ ಕರ್ತೃ' ಪ್ರಶಸ್ತಿಯನ್ನು ಯು. ಆರ್. ಅನಂತಮೂರ್ತಿಯವರ ಜೊತೆಗೆ ಹಂಚಿಕೊಂಡಿದ್ದಾರೆ.

ಕೃಷ್ಣಮೂರ್ತಿ ನಾಡಿಗ್

ಸಹಾಯಕ ನಿರ್ದೇಶಕರಾಗಿ, ಪ್ರಚಾರಕರ್ತರಾಗಿ, ನಿರ್ಮಾಣ-ನಿರ್ವಾಹಕರಾಗಿ, ಸಂಭಾಷಣಾಕಾರರಾಗಿ ಮೂರು ದಶಕಗಳಿಂದ ಚಿತ್ರರಂಗದಲ್ಲಿ ಸೇವೆ ಸಲ್ಲಿಸುತ್ತಿರುವ



ಕೃಷ್ಣಮೂರ್ತಿ ನಾಡಿಗ್, ಚಿಕ್ಕಮಗಳೂರಿನಲ್ಲಿ ೧೯೫೩ರಲ್ಲಿ ಜನಿಸಿದರು. ನಂತರ ಸಹನಿರ್ದೇಶಕರಾಗಿ ವೈ.ಆರ್. ರಾಜಶೇಖರ್, ಉಮಾಕಾಂತ್ ಅವರ ಬಳಿ ಕಾರ್ಯ ನಿರ್ವಹಿಸಿದರು. ಸಂಭಾಷಣಾಕಾರರಾಗಿ 'ಪೂಜಾ', 'ನಿಶ್ಚಿತಾರ್ಥ', 'ರಂಗೇನ ಹಳ್ಳಿಯಾಗೆ ರಂಗಾದ ರಂಗೇಗೌಡ', 'ಅಂತರ್ಯಾಮಿ', 'ಮಿಸ್ಟರ್ ಪುಟ್ಟಸ್ವಾಮಿ' ಮುಂತಾದ ಚಿತ್ರಗಳಲ್ಲಿ ಕಾರ್ಯ ನಿರ್ವಹಿಸಿದ್ದಾರೆ.

ಕೃಷ್ಣಮೂರ್ತಿ ಬೂದಾಳ್

ಸಹಾಯಕ ನಿರ್ದೇಶಕರಾಗಿದ್ದು ನಂತರ ನಿರ್ದೇಶಕರಾಗಿ, ನಟರಾಗಿ ಖ್ಯಾತರಾಗಿರುವವರು ಬೂದಾಳ್ ಕೃಷ್ಣಮೂರ್ತಿ. ಚಿತ್ರದುರ್ಗದಲ್ಲಿ ೧೯೪೯ ರಲ್ಲಿ ಜನಿಸಿದರು. ೧೯೭೩ರಲ್ಲಿ ಸಿದ್ದಲಿಂಗಯ್ಯ ಅವರ 'ಬೂತಯ್ಯನ ಮಗ ಅಯ್ಯು' ಚಿತ್ರದ ಸಹಾಯಕ ನಿರ್ದೇಶಕರಾಗಿ ಪರಿಚಿತರಾದರು. 'ಎರಡು ದಂಡೆಯ ಮೇಲೆ', 'ಒಲವಿನ ಕಾಣಿಕೆ', 'ಸೀತಾಂಜನೇಯ', 'ಶುಭಲಗ್ನ' ಚಿತ್ರಗಳನ್ನು ಸ್ವತಂತ್ರವಾಗಿ ನಿರ್ದೇಶಿಸಿದ್ದಾರೆ. ನಟರಾಗಿ ಸುಮಾರು ಒಂಬತ್ತು ಹತ್ತು ಚಿತ್ರಗಳಲ್ಲಿ ಅಭಿನಯಿಸಿದ್ದಾರೆ. 'ಪ್ರೊಫೆಸರ್', 'ಶ್ರೀಗಂಧ',

'ಅರಿಶಿನ ಕುಂಕುಮ', 'ಜಲ್ ಸನ್ನಗ', 'ಪ್ರಜಾಶಕ್ತಿ', 'ನಿರ್ಣಯ', 'ಆರ್ಯಭಟ' ಮೊದಲಾದವು ಅವರ ಅಭಿನಯದ ಚಿತ್ರಗಳು.

ಗೋಟೂರಿ

ಚಿತ್ರಸಾಹಿತಿ ಹಾಗೂ ಕಲಾವಿದರಾದ ಗೋಟೂರಿ ಮೂಲತಃ ತಮಿಳುನಾಡಿನವರು. ವಿವಿಧ ಭಾರತಿಯಲ್ಲಿ ಚಿತ್ರಗಳ ಬಗ್ಗೆ ವಿವರಣೆ ನೀಡಿದ್ದಾರೆ. ಹಲವು ಧ್ವನಿಸುರುಳಿಗಳಿಗೆ ಸಾಹಿತ್ಯ ರಚಿಸಿದ್ದಾರೆ. ಚಿತ್ರರಂಗದಲ್ಲಿ ನಟನಾಗಿ ಹಾಗೂ ಗೀತರಚನೆಕಾರರಾಗಿ ಕಾರ್ಯ ನಿರ್ವಹಿಸಿದ್ದಾರೆ. 'ಮಹಾಯುದ್ಧ', 'ಸೌಭಾಗ್ಯ ದೇವತೆ', 'ಮುದಿನ ಸೊಸೆ', 'ರಾಜಣ್ಣ' ಮೊದಲಾದ ಚಿತ್ರಗಳಲ್ಲಿ ಕಾರ್ಯ ನಿರ್ವಹಿಸಿದ್ದಾರೆ. ಕಿರುತೆರೆಯ ಹಲವು ಧಾರಾವಾಹಿಗಳಲ್ಲಿ ಅಭಿನಯಿಸಿದ್ದಾರೆ.

ಚಂದ್ರಶೇಖರ ಕುಕ್ಕಿಕಟ್ಟೆ

ಸಹನಿರ್ದೇಶಕ, ಸಂಭಾಷಣಾಕಾರರಾಗಿ ನಂತರ ನಿರ್ದೇಶಕರಾಗಿ ಬೆಳಕಿಗೆ ಬಂದವರು ಚಂದ್ರಶೇಖರ ಕುಕ್ಕಿಕಟ್ಟೆ. ೧೯೪೭ರಲ್ಲಿ ಉಡುಪಿಯ ಕಾರ್ಕಳದಲ್ಲಿ ಜನಿಸಿದರು. ಎಸ್.ಎಸ್.ಎಲ್.ಸಿ ವರೆಗೆ ವಿದ್ಯಾಭ್ಯಾಸ. ೧೯೭೭ರಲ್ಲಿ ಸಹಾಯಕ ನಿರ್ದೇಶಕನಾಗಿ ಚಿತ್ರರಂಗ ಪ್ರವೇಶಿಸಿದರು. 'ಬಾಂಧವ್ಯ', 'ಧರ್ಮಪತ್ನಿ', 'ನಾ ಮೆಚ್ಚಿದ ಹುಡುಗಿ',

'ಸೀತೆಯಲ್ಲ ಸಾವಿತ್ರಿ', 'ಮುಗಿಯದ ಕಥೆ', 'ಉಪಾಸನೆ' ಮೊದಲಾದ ಕನ್ನಡ, 'ದಾರೆದ ಬುಡೆದಿ', 'ಏರ್ ಮಲ್ತಿನ ತಪ್ಪು', 'ಪಗೆತ ಪುಗೆ' ಚಿತ್ರಗಳಲ್ಲಿ ಸಹಾಯಕ, ಸಹನಿರ್ದೇಶಕ, ಸಂಭಾಷಣಾಕಾರರಾಗಿ ಕೆಲಸ ಮಾಡಿದ್ದಾರೆ. 'ನ್ಯಾಯೊಗಾದ್ ಎನ್ನ ಬದುಕ್' ಎಂಬ ತುಳು ಚಿತ್ರ ಹಾಗೂ 'ರಕ್ತಸ ರಕ್ತ' ಎಂಬ ಕನ್ನಡ ಚಿತ್ರವನ್ನು ನಿರ್ದೇಶಿಸಿದ್ದಾರೆ. ಸಂಪಾದಕರಾಗಿ ಹಾಗೂ ಮಾಲೀಕರಾಗಿ ೧೯೮೫ರಿಂದ ಮೈಸೂರಿನಲ್ಲಿ 'ಸಂಕ್ರಾಂತಿ' ಎಂಬ ಸಂಜೆ ದಿನಪತ್ರಿಕೆಯನ್ನು ನಡೆಸಿಕೊಂಡು ಬರುತ್ತಿದ್ದಾರೆ.

ಚಿಕ್ಕಣ್ಣ ಆಗ್ರೋ

ಆಗ್ರೋ ಸಂಸ್ಥೆಯಲ್ಲಿ ಕೆಲಸಮಾಡುತ್ತಿರುವ ಪೋಷಕ ನಟ. ಆಗ್ರೋ ಚಿಕ್ಕಣ್ಣ ಬೆಂಗಳೂರಿನಲ್ಲಿ ಜನಿಸಿದರು. ಎಸ್. ಎಸ್. ಎಲ್. ಸಿ ವರೆಗೆ ಶಿಕ್ಷಣ. ರಾಜಶೇಖರ್ ನಿರ್ದೇಶನದ 'ಹೆಬ್ಬುಲಿ' ಚಿತ್ರದಲ್ಲಿ ಅಭಿನಯಿಸುವ ಮೂಲಕ

ಚಿತ್ರರಂಗ ಪ್ರವೇಶಿಸಿದರು. ಸುಮಾರು ೨೦೦ ಚಿತ್ರಗಳಲ್ಲಿ ಅಭಿನಯಿಸಿದ್ದಾರೆ. 'ಕಾಲೇಜು ಹೀರೋ', 'ದೇವತಾ ಮನುಷ್ಯ', 'ಪರಶುರಾಮ', 'ಮಿಂಚಿನ ಗಂಡು', 'ವೀರಪ್ಪ ನಾಯಕ' ಮೊದಲಾದ ಚಿತ್ರಗಳಲ್ಲಿ ಅಭಿನಯಿಸಿದ್ದಾರೆ.

ಚಿನ್ನಾ ಕಾಸರಗೋಡು

ರಂಗಭೂಮಿ ಹಿನ್ನೆಲೆಯ ಚಿನ್ನಾ ಮೂಲತಃ ಕಾಸರಗೋಡಿನವರು. ವ್ಯಾಪಾರಸ

ಕುಟುಂಬದವರು. ಚಿಕ್ಕ ವಯಸ್ಸಿನಲ್ಲಿಯೇ ನಾಟಕದ ಗೀಳು ಹಚ್ಚಿಕೊಂಡು ಮಿತ್ರರೊಂದಿಗೆ ಹಲವು ನಾಟಕಗಳನ್ನು ಪ್ರದರ್ಶಿಸಿದರು. ಅಭ್ಯಾಸನಾಟಕದಿಂದ ಕ್ರಮೇಣ ಗಂಭೀರ ನಾಟಕಗಳಿಗೆ ಹೊರಳಿ, 'ಲಾರಿ ನಾಟಕ ಅಭಿಯಾನ' ಆರಂಭಿಸಿ ಕರ್ನಾಟಕದಾದ್ಯಂತ ಸುತ್ತಿದರು. ಅಭಿನಯ, ನಿರ್ದೇಶನ ಎರಡು ಕ್ಷೇತ್ರದಲ್ಲೂ ನಿಪುಣತೆಯನ್ನು ಸಾಧಿಸಿದ ಚಿನ್ನಾ ಬೆಳ್ಳಿತೆರೆಯಿಂದ ಆಕರ್ಷಿತರಾದರು. ಪ್ರೇಮಾಕಾರಂತರ 'ಫಣಿಯಮ್ಮ', ಗೌರಿಶಂಕರ್ ಅವರ 'ಕಂಡದ ಮಳೆ', ದ್ವಾರಕೀಶ್ ಅವರ 'ರಾವಣ ರಾಜ್ಯ' ಮುಂತಾದ ಚಿತ್ರಗಳಲ್ಲಿ ಗಮನಾರ್ಹ ಪಾತ್ರಗಳಲ್ಲಿ ಕಾಣಿಸಿಕೊಂಡರು. ನಾಗಾಭರಣರ 'ಆಸ್ಫೋಟ', 'ಮೈಸೂರ ಮಲ್ಲಿಗೆ' ಮುಂತಾದ ಚಿತ್ರಗಳಲ್ಲಿ ಅಭಿನಯಿಸಿದ್ದಾರೆ.

ಚೌಟಿ .ವಿ .ಜಿ

ಹುಬ್ಬಳ್ಳಿಯ ಪ್ರತಿಷ್ಠಿತ ಚಿತ್ರಮಂದಿರವಾದ 'ಸುದರ್ಶನ್'



ಚಿತ್ರಮಂದಿರದ ಪಾಲುದಾರರು. ಅಪ್ಪಟ ಕಾಂಗ್ರೆಸ್ ವಾದಿ. ಉದ್ಯಮದ ಎಲ್ಲರ ಗೌರವಾದರಗಳಿಗೆ ಪಾತ್ರರಾದವರು. ಶಿಸ್ತಿಗೆ ಹೆಸರಾದವರು. ಯಾವುದೇ ಕೆಲಸವನ್ನು ಬಹಳ ಅಚ್ಚುಕಟ್ಟಾಗಿ ನಿರ್ವಹಿಸುವ ಇವರು ೧೯೭೮-೭೯ರಲ್ಲಿ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯಲ್ಲಿ ಮೊಟ್ಟ ಮೊದಲ ಮುಂಬೈ ಕರ್ನಾಟಕ ವಿಭಾಗದಿಂದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು.

ಜಯರಾಂ .ಬಿ .ಆರ್

ರಂಗಭೂಮಿಯಿಂದ ಚಿತ್ರರಂಗಕ್ಕೆ

ಪ್ರವೇಶ ಪಡೆದವರು ಬಿ. ಆರ್. ಜಯರಾಂ. ಹಲವಾರು ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಇವರ ತಂದೆ ಕೈಲಾಸಂ ಅವರ ನಿಕಟವರ್ತಿ. ಬೆಂಗಳೂರು ಟೆಲಿಫೋನ್ ಕಾರ್ಖಾನೆಯಲ್ಲಿ

ಅಸಿಸ್ಟೆಂಟ್ ಇಂಜನಿಯರ್‌ಆಗಿದ ಇವರು 'ಸಂಸ್ಕಾರ' ಚಿತ್ರದಿಂದ ಚಿತ್ರರಂಗ ಪ್ರವೇಶಿಸಿದರು. ನಂತರ 'ಆಟೋಮೂರಿನ ಪೋಸ್ಟ್ ಆಫೀಸು', 'ಶುಭಮಂಗಳ', 'ಕಾಲೇಜು ರಂಗ' ಮುಂತಾದ ಚಿತ್ರಗಳಲ್ಲಿ ಅಭಿನಯಿಸಿದ್ದಾರೆ. 'ಸಂಸ್ಕಾರ' ಚಿತ್ರದಲ್ಲಿನ ಇವರ ಅಭಿನಯಕ್ಕಾಗಿ ೧೯೭೦-೭೧ರ ಸಾಲಿನ ಅತ್ಯುತ್ತಮ ಪೋಷಕ ನಟ ರಾಜ್ಯಪ್ರಶಸ್ತಿ ಪಡೆದಿದ್ದಾರೆ.

ದಶರಥ್ .ಸಿ

ಹಿರಿಯ ಶಬ್ದಗ್ರಾಹಕರು. ೧೯೩೩ರಲ್ಲಿ ಜನಿಸಿದರು. ಎಸ್. ಎಸ್. ಎಲ್. ಸಿ ವರೆಗೆ ವಿದ್ಯಾಭ್ಯಾಸ. ೧೯೫೫ರಲ್ಲಿ ಗುಬ್ಬಿ ಕಂಪನಿಗೆ ಸೇರಿದರು. ೧೯೫೭ರಲ್ಲಿ 'ಭಾಗ್ಯಚಕ್ರ' ಚಿತ್ರದ

ಸಹನಿರ್ದೇಶಕರಾಗಿ ಚಿತ್ರರಂಗಕ್ಕೆ ಪರಿಚಿತರಾದರು. ೧೯೫೭ರಲ್ಲಿ ವಾಹಿನಿ ಸ್ಟುಡಿಯೋದಲ್ಲಿ ಸೌಂಡ್ ಅಸಿಸ್ಟೆಂಟ್ ಆಗಿ ಸೇರಿದರು. ಖ್ಯಾತ ಶಬ್ದಗ್ರಾಹಕರಾದ ಎ. ಕೃಷ್ಣನ್, ಪಿ. ಶಿವರಾಂ, ಕೆ. ವಿಶ್ವನಾಥ್ ಅವರ ಬಳಿ ಸಹಾಯಕರಾಗಿ ಕಾರ್ಯ ನಿರ್ವಹಿಸಿದರು. ೧೯೭೪ರಲ್ಲಿ ಸ್ವತಂತ್ರ ಶಬ್ದಗ್ರಾಹಕರಾದರು. 'ಕನ್ಯಾರತ್ನ', 'ವೀರಕೇಸರಿ', 'ನಮ್ಮಮ್ಮನ ಸೊಸೆ', 'ಮುಗ್ಧ ಮಾನವ', 'ಶ್ರೀದೇವಿ' ಮುಂತಾದ ಚಿತ್ರಗಳಿಗೆ ಶಬ್ದಗ್ರಹಣ ಮಾಡಿದ್ದಾರೆ. ೧೯೮೦ರಲ್ಲಿ ಬೆಂಗಳೂರಿನ ಬಿ.ಸಿ.ಆರ್.ಸಿ ಸಂಸ್ಥೆ, ೧೯೮೬ರಲ್ಲಿ ಫಿಲಂ ಸೌಂಡ್ ಸರ್ವಿಸ್ ಸಂಸ್ಥೆಗಳಲ್ಲಿ ಕೆಲಸ ಮಾಡಿದರು. ಸುಮಾರು ೧೫೦ಕ್ಕೂ ಹೆಚ್ಚು ಚಿತ್ರಗಳಿಗೆ ಶಬ್ದಗ್ರಹಣ ಮಾಡಿದ ಇವರು ೧೯೯೦ರಲ್ಲಿ ತಮ್ಮದೇ ಆದ ವಿಜಯಾ ಸಿನಿ ರೆಕಾರ್ಡಿಂಗ್ ಮತ್ತು ಟ್ರಾನ್ಸ್ ಪ್ರೋಸಿಂಗ್ ಯೂನಿಟ್ ಸ್ಥಾಪಿಸಿದರು. ದಕ್ಷಿಣ ಭಾರತದ ಎಲ್ಲಾ ಭಾಷೆಗಳ ಚಿತ್ರಗಳಲ್ಲಿ, ಹಲವು ಸಂಗೀತ ನಿರ್ದೇಶಕರ ಬಳಿ ಕಾರ್ಯ ನಿರ್ವಹಿಸಿದ್ದಾರೆ.

ದಾಸ್ ಪಿ. ಕೆ. ಹೆಚ್

ಕನ್ನಡ ಚಿತ್ರರಂಗದಲ್ಲಿ 'ದಾಸ್' ಎಂದೇ ಪರಿಚಿತರಾದ ಪಿ. ಕೆ. ಹೆಚ್. ದಾಸ್

ಮೂಲತಃ ಚೆನ್ನೈನವರು. ಹೈಸ್ಕೂಲ್ ಶಿಕ್ಷಣ ಮುಗಿಸಿದ ಇವರು ಹಲವು ತಮಿಳು ಚಿತ್ರಗಳಿಗೆ ಸಹಾಯಕ ನಿರ್ದೇಶಕರಾಗಿ ಕೆಲಸ ನಿರ್ವಹಿಸಿದರು. ನಿರ್ದೇಶಕ ದಿನೇಶ್ ಬಾಬು ಅವರ ಬಳಿ ಸಹಾಯಕ ಛಾಯಾಗ್ರಾಹಕರಾಗಿ ಕಾರ್ಯ ನಿರ್ವಹಿಸಿದರು. ನಟ ರಘುವೀರ್ ಅವರ ನಿರ್ಮಾಣದ 'ಚೈತ್ರದ ಪ್ರೇಮಾಂಜಲಿ' ಚಿತ್ರಕ್ಕೆ ಸ್ವತಂತ್ರ ಛಾಯಾಗ್ರಾಹಕರಾದರು. 'ನಂಜುಂಡ', 'ಕ್ಯಾಪ್ಟನ್', 'ಕಾವೇರಿ ತೀರದಲ್ಲಿ', 'ಅನುರಾಗದ ಅಲೆಗಳು', 'ಮೇಘಮಾಲೆ', 'ಸ್ವಾತಿ', 'ಸ್ನೇಹ' ಮುಂತಾದ ಚಿತ್ರಗಳಿಗೆ ಛಾಯಾಗ್ರಾಹಕರಾಗಿ ದುಡಿದಿದ್ದಾರೆ.

ನಾಗರತ್ನಮ್ಮ .ಆರ್

ಹಿರಿಯ ರಂಗ ಕಲಾವಿದೆ ಆರ್. ನಾಗರತ್ನಮ್ಮ ರಂಗಭೂಮಿಯಲ್ಲಿ ಪುರುಷ ಪಾತ್ರಗಳಿಗೆ ಹೆಸರಾದವರು. ಬಾಲ್ಯದಿಂದಲೇ ನಾಟಕಗಳತ್ತ ಆಕರ್ಷಿತರಾದ ಇವರು ಮೊದಲು 'ಕಲಾಸೇವಾ ಮಂಡಳಿ'ಸೇರಿದರು.

ನಂತರ ಚಾಮುಂಡೇಶ್ವರಿ ನಾಟಕ ಕಂಪನಿ. ಹಿರಣ್ಣಯ್ಯ ಮಿತ್ರಮಂಡಳಿ, ಎಂ.ವಿ. ಸುಬ್ಬಯ್ಯನಾಯ್ಡು ಅವರ ಕಂಪನಿ, ಹೀಗೆ ಹಲವು ವೃತ್ತಿ ರಂಗಭೂಮಿ ಕಂಪನಿಗಳಲ್ಲಿ ಸೇವೆ ಸಲ್ಲಿಸಿರುತ್ತಾರೆ. ಪುರುಷ ಪಾತ್ರಧಾರಿಗಳಿಗಿಂತ ಗಡುಸಾದ ತಮ್ಮ ಧ್ವನಿಯಿಂದಲೂ, ಮಾತನ್ನು ತೂಗಿ ಆಡುವ ರೀತಿಯಿಂದಲೂ ಪೌರಾಣಿಕ ಪಾತ್ರಗಳಿಗೆ ಕಳೆ ತಂದವರು. ೧೯೪೩ರಲ್ಲಿ 'ಶ್ರೀ ವಿಜಯಾ ಫಿಲಂಸ್' ಲಾಂಛನದಡಿಯಲ್ಲಿ ತಯಾರಾದ 'ರಾಧಾರಮಣ' ಚಿತ್ರದ ಮೂಲಕ ಚಿತ್ರರಂಗ ಪ್ರವೇಶಿಸಿದರು. 'ಸ್ತ್ರೀರತ್ನ'. 'ಪ್ರಭುಲಿಂಗ ಲೀಲೆ', 'ಕಾಮನ ಬಿಲ್ಲು', 'ಪರಸಂಗದ ಗೆಂಡೆತಿಮ್ಮ' ಮೊದಲಾದವು ನಾಗರತ್ನಮ್ಮ ಅಭಿನಯದ ಕೆಲವು ಚಿತ್ರಗಳು.

ನಾಗರಾಜ್ ಬಿ. ಎಸ್.

ಬಿ.ಎಸ್. ನಾಗರಾಜ್ ೧೯೬೯ರಲ್ಲಿ ಬೆಂಗಳೂರಿನಲ್ಲಿ ಜನಿಸಿದರು. ದ್ವಿತೀಯ ಪಿಯುಸಿ ವರೆಗೆ ಶಿಕ್ಷಣ. ೧೯೫೭ರಲ್ಲಿ ಚಿತ್ರದ ಪ್ರತಿನಿಧಿಯಾಗಿ ಚಿತ್ರರಂಗ ಪ್ರವೇಶಿಸಿದರು. ಮಿತ್ರರಾದ ಕೆ.ಎಸ್. ಜಗನ್ನಾಥ್ ಅವರೊಂದಿಗೆ. ಮಿಸ್. ಲೀಲಾವತಿ ಚಿತ್ರದ ನಿರ್ಮಾಣ ಹಾಗೂ ವಿತರಣಾ ಕಾರ್ಯಗಳಲ್ಲಿ ಸಕ್ರಿಯವಾಗಿ ಕಾರ್ಯ ನಿರ್ವಹಿಸಿದಾರೆ. ನಂತರ ಸಣ್ಣ ಪ್ರಮಾಣದಲ್ಲಿ ಚಿತ್ರ ಹಂಚಿಕಾ ವ್ಯಾಪಾರ ಮತ್ತು ಚಿತ್ರಮಂದಿರಗಳನ್ನು ಗುತ್ತಿಗೆ ಆಧಾರದ ಮೇಲೆ ಪಡೆದು ಚಟುವಟಿಕೆಗಳನ್ನು ಮುಂದುವರೆಸಿದರು. ಕರ್ನಾಟಕ ಚಲನಚಿತ್ರ ವಾಣಿಜ್ಯ



ಮಂಡಳಿಯಲ್ಲಿ ವಿತರಕ ವಲಯದ ಸಮಿತಿಯಲ್ಲಿ ಸದಸ್ಯರಾಗಿದ್ದರು. ಮೂರು ಅವಧಿಗೆ ಗೌರವ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಿದ್ದಾರೆ.

ನಾಗೇಶ್ ಬೆಂಗಳೂರು

ಅರುವತ್ತರ ದಶಕದಲ್ಲಿ ಬೆಳ್ಳಿತೆರೆಗೆ ಪರಿಚಿತರಾದ ಬೆಂಗಳೂರು ನಾಗೇಶ್ 'ಎಸ್.ಜೆ ಪಾಲಿಟೆಕ್ನಿಕ್ ನಲ್ಲಿ ತರಬೇತಿ ಪಡೆದವರು. 'ಗೌರಿ ಗಂಡ', 'ಮೈಸೂರು ಟಾಂಗಾ', 'ಜೀವನ ಜೋಕಾಲಿ', 'ಮುಕ್ತಿ', 'ಭಲೇ ಹುಚ್ಚ', 'ದೂರದ ಬೆಟ್ಟ', 'ಸ್ವಯಂವರ', 'ಮನೆ ಬೆಳಕು' ಮುಂತಾದ ಚಿತ್ರಗಳಲ್ಲಿ ಪೋಷಕ ನಟರಾಗಿ ಅಭಿನಯಿಸಿದರು. ಸಹಾಯಕ ನಿರ್ದೇಶಕ, ಸಹ ನಿರ್ದೇಶಕರಾದವರು. ೧೯೮೦ರಲ್ಲಿ ತೆರೆಕಂಡ ಶ್ರೀನಾಥ್-ಮಂಜುಳಾ ತಾರಾಗಣದ 'ಮಂಜಿನತೆರೆ' ಚಿತ್ರವನ್ನು ನಿರ್ದೇಶಿಸುವ ಮೂಲಕ ನಿರ್ದೇಶಕರಾದವರು. ನಂತರದ ದಿನಗಳಲ್ಲಿ ಸಹ ನಿರ್ದೇಶನ ಹಾಗೂ ಹಾಸ್ಯನಟರಾಗಿಯೇ ಹೆಚ್ಚು ಗಮನ ಸೆಳೆದರು. ಎಂಬತ್ತರ ದಶಕದಲ್ಲಿ ಅತ್ಯಂತ

ಯಶಸ್ವಿಯಾದ 'ಗುರುಶಿಷ್ಯರು' ಇವರ ಅಭಿನಯದ ಅತ್ಯಂತ ಜನಪ್ರಿಯ ಚಿತ್ರ. ೯೦ರ ದಶಕದಲ್ಲಿ ಸಾಯಿಪ್ರಕಾಶ್ ಹಾಗೂ ದಿನೇಶ್ ಬಾಬು ನಿರ್ದೇಶನದ ಹಲವು ಚಿತ್ರಗಳಲ್ಲಿ ಅಭಿನಯಿಸಿದಾರೆ. 'ಗೋಲ್ ಮಾಲ್ ರಾಧಾಕೃಷ್ಣ', 'ಸಮಯಕ್ಕೊಂದು ಸುಳ್ಳು', 'ಮಂತ್ರಿಗೇಳ್ತೀಟ', 'ಮನೇಲಿ ಇಲಿ ಬೀದೀಲಿ ಹುಲಿ'. 'ಎದುರುಮನೇಲಿ ಗಂಡ ಪಕ್ಕದ್ಮನೇಲಿ ಹೆಂಡ್ತಿ' ಮೊದಲಾದ ಚಿತ್ರಗಳಲ್ಲಿ ಅಭಿನಯಿಸಿದಾರೆ. ಕಿರುತೆರೆಯ ಹಲವು ಧಾರಾವಾಹಿಗಳಲ್ಲಿ ಕೂಡ ಅಭಿನಯಿಸಿದಾರೆ.

ನಾಗೇಶ್ .ಕೆ

'ಹರಕೆ' ನಾಗೇಶ್ ಎಂದೇ ಪರಿಚಿತರಾದ ನಾಗೇಶ್, ನಿರ್ದೇಶಕ ಗೀತಪ್ರಿಯ ಅವರ ಬಳಿ ಹಲವು ವರ್ಷಗಳ ಕಾಲ ಸಹಾಯಕರಾಗಿ ದುಡಿದವರು. ೧೯೭೭ರಲ್ಲಿ ದೇವದಾಸಿ ಪದ್ಧತಿ ಕುರಿತ 'ಹರಕೆ' ಚಿತ್ರವನ್ನು ದಿಗ್ದರ್ಶಿಸುವ ಮೂಲಕ ನಿರ್ದೇಶಕರಾದರು. ೧೯೮೦ರಲ್ಲಿ 'ಕಪ್ಪುಕೊಳ', ೧೯೮೩ರಲ್ಲಿ 'ಸಂಚಾರಿ' ಚಿತ್ರವನ್ನು ನಿರ್ದೇಶಿಸಿದರು. ಇವರ ಸಾವು ಅನಿರೀಕ್ಷಿತ ಹಾಗೂ

ನಿಗೂಢವಾಗಿಯೇ ಉಳಿದಿದೆ.

ನಾಗೇಶ್ ಮಯ್ಯ

ಕನ್ನಡ ಚಿತ್ರರಂಗದ ಪೋಷಕ ನಟರಾದ ನಾಗೇಶ್ ಮಯ್ಯ ಕುಂದಾಪುರದಲ್ಲಿ ೧೯೬೯ರಲ್ಲಿ ಜನಿಸಿದರು. ಬಿ.ಕಾಂ ಪದವೀಧರರು. ಸುಧೀಂದ್ರ ಕಲ್ಲೋಳ ನಿರ್ದೇಶನದ 'ಪುಂಡ ಪ್ರಚಂಡ' ಚಿತ್ರದಲ್ಲಿ ಅಭಿನಯಿಸುವ ಮೂಲಕ ಚಿತ್ರರಂಗ ಪ್ರವೇಶಿಸಿದರು. 'ಪೋಲೀಸ್ ಬೆಲ್ಟ್',

'ವಜ್ರಾಯುಧ', 'ಗಿಳಿಬೇಟೆ', 'ನಿಷ್ಕರ್ಷ', 'ಕಂಡಲ್ಲಿ ಗುಂಡು', 'ಲವ್ ಇನ್ ನೇಪಾಳ್' ಮುಂತಾದ ೩೦ಕ್ಕೂ ಹೆಚ್ಚು ಚಿತ್ರಗಳಲ್ಲಿ ಅಭಿನಯಿಸಿದ್ದಾರೆ.

ಪಂಚಾಕ್ಷರಿ .ಟಿ .ವಿ

ಸಹನಿರ್ದೇಶಕರಾಗಿ ತೆರೆಗೆ ಪರಿಚಿತರಾಗಿ, ಕಥೆ, ಚಿತ್ರಕಥೆ, ಸಂಭಾಷಣೆ ಹೀಗೆ ವಿವಿಧ ವಿಭಾಗಗಳಲ್ಲಿ ಕಾರ್ಯ ನಿರ್ವಹಿಸಿರುವ ಟಿ. ವಿ. ಪಂಚಾಕ್ಷರಿ, ೧೯೪೭ರಲ್ಲಿ ತುಮಕೂರಿನಲ್ಲಿ ಜನಿಸಿದರು. ಪಿ.ಯು.ಸಿ ವರೆಗೆ ಶಿಕ್ಷಣ. ೧೯೬೪ರಲ್ಲಿ ತೆರೆಗೆ

ಪರಿಚಿತರಾದ ಇವರು ಕನ್ನಡ, ತಮಿಳು, ತೆಲುಗು, ಮಲೆಯಾಳಂ ಚಿತ್ರಗಳಲ್ಲಿ ಸಹ

ನಿರ್ದೇಶಕರಾಗಿ ಕಾರ್ಯ ನಿರ್ವಹಿಸಿದ್ದಾರೆ. ಕನ್ನಡದಲ್ಲಿ 'ಎಲ್ಲೆಲ್ಲೂ ನಾನೇ', 'ಜಯ ವಿಜಯ', 'ಕೆಸರಿನ ಕಮಲ', 'ಶ್ರೀಮಂತನ ಮಗಳು', 'ವಸಂತ ಲಕ್ಷ್ಮಿ', 'ಬದುಕು ಬಂಗಾರವಾಯಿತು', 'ಮೂಗನ ಸೇಡು', 'ಸೊಸೆ ತಂದ ಸೌಭಾಗ್ಯ' ಮುಂತಾದ ಚಿತ್ರಗಳಲ್ಲಿ ಸಹ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದಾರೆ. ಸ್ವತಂತ್ರ ನಿರ್ದೇಶಕರಾಗಿ 'ಹೆಣ್ಣಿನ ಸೇಡು', 'ಪ್ರೇಮ ಸೇತುವೆ' ಚಿತ್ರಗಳನ್ನು ನಿರ್ದೇಶಿಸಿದ್ದಾರೆ.

ಪ್ರವೀಣ್ ನಾಯಕ್

ಸ್ಥಿರ ಛಾಯಾಚಿತ್ರಗ್ರಾಹಕರಾಗಿದ್ದು ನಿರ್ದೇಶಕರಾಗಿ ಬೆಳಕಿಗೆ ಬಂದವರು ಪ್ರವೀಣ್ ನಾಯಕ್. ಮಂಗಳೂರಿನ ಸೇಂಟ್ ಅಲೋಶಿಯಸ್ ಕಾಲೇಜಿನ ಪದವೀಧರರು. ಬಾಲ್ಯದಿಂದಲೂ ಸಿನಿಮಾ ನಂಟನ್ನು ಹೊಂದಿದವರು. ಫೋಟೋ ಜರ್ನಲಿಸ್ಟ್ ಆಗಿ ಕಾರ್ಯ ನಿರ್ವಹಿಸಿದ್ದಾರೆ. ಬೆಂಗಳೂರಿನ ಹನುಮಂತ ನಗರದಲ್ಲಿ ತಮ್ಮದೇ ಆದ ಸ್ಟುಡಿಯೋ ಸ್ಥಾಪಿಸಿದರು. ೧೯೯೩ರಲ್ಲಿ ತೆರೆಕಂಡ 'ಶ್' ಚಿತ್ರದಲ್ಲಿ ಅಭಿನಯಿಸುವ

ಮೂಲಕ ಚಿತ್ರರಂಗ ಪ್ರವೇಶಿಸಿದರು. 'ಜೆಡ್' ಚಿತ್ರವನ್ನು ನಿರ್ದೇಶಿಸುವ ಮೂಲಕ ನಿರ್ದೇಶಕರಾದರು. 'ಹೂಂ ಅಂತೀಯಾ ಊಹೂಂ ಅಂತೀಯಾ' ಇವರು ನಿರ್ದೇಶಿಸಿದ ಮತ್ತೊಂದು ಚಿತ್ರ.

ಪ್ರಹ್ಲಾದ್ .ಜೆ .ಎಂ

ಹೊಸ ತಲೆಮಾರಿನ ಸಿನಿಮಾ ಸಾಹಿತಿಗಳಲ್ಲಿ ಒಬ್ಬರು ಜೆ. ಎಂ. ಪ್ರಹ್ಲಾದ್. ಬಿ. ಎಸ್ಸಿ ಪದವೀಧರರು. ಮೂಲತಃ ಚಿತ್ರ ಕಲಾವಿದ (ಪೈಂಟಿಂಗ್) ವಿವಿಧ ಪತ್ರಿಕೆಗಳಲ್ಲಿ ಪತ್ರಕರ್ತರಾಗಿ ಸುಮಾರು ಹತ್ತು ವರ್ಷಗಳು ಸೇವೆ ಸಲ್ಲಿಸಿದ್ದಾರೆ. 'ಸಿಪಾಯಿ' ಚಿತ್ರದ



ಕಥೆಯ ರಚನೆಗೆ ನೆರವಾಗುವುದರ ಮೂಲಕ ಚಿತ್ರರಂಗಕ್ಕೆ ಪರಿಚಿತರಾದರು. ಸುಮಾರು ೧೫೦ಕ್ಕೂ ಹೆಚ್ಚು ಚಿತ್ರಗಳ ಚಿತ್ರಕಥೆ, ಸಂಭಾಷಣೆ ಮತ್ತು ಗೀತರಚನೆಗಳಲ್ಲಿ ಕಾರ್ಯ ನಿರ್ವಹಿಸಿದ್ದಾರೆ. 'ಸಿಪಾಯಿ', 'ಭೂಬಾಣ' ಚಿತ್ರಗಳ ಕತೆ, 'ಶಿವಸೈನ್ಯ', 'ರಂಗಣ್ಣ', 'ನೋಡು ಬಾ ನಮ್ಮೂರ', 'ಮಿನುಗುತಾರೆ' ಮೊದಲಾದ ಚಿತ್ರಗಳ ಚಿತ್ರಕತೆ, ಮಾತು, ಗೀತೆ ಹೀಗೆ ವಿವಿಧ ವಿಭಾಗಗಳಲ್ಲಿ ಕಾರ್ಯ ನಿರ್ವಹಿಸಿದ್ದಾರೆ. ೧೯೯೭-೯೮ ರ ಸಾಲಿಗೆ 'ನೋಡು ಬಾ ನಮ್ಮೂರ' ಚಿತ್ರದ ಗೀತರಚನೆಗಾಗಿ ಅತ್ಯುತ್ತಮ ಗೀತರಚನೆಕಾರ ರಾಜ್ಯ ಪ್ರಶಸ್ತಿಯನ್ನು ಪಡೆದಿದ್ದಾರೆ.

ಪಾಟೀಲ್ ಎಸ್. ಎಸ್

ಗುಲ್ಬರ್ಗದ ಹಿರಿಯ ಕೈಗಾರಿಕೋದ್ಯಮಿ. ಗುಲ್ಬರ್ಗದ 'ಸಂಗಮ್', 'ತ್ರಿವೇಣಿ' ಚಿತ್ರಮಂದಿರಗಳ ಮಾಲೀಕರು. ಮೂಲತಃ ವ್ಯಾಪಾರಸ್ಥರು. ಇವರ ಕಾರ್ಯವ್ಯಾಪ್ತಿ ಇಡೀ ಭಾರತದಲ್ಲಿ ಇದೆ. ಸ್ಪನ್ ಪೈಪುಗಳನ್ನು ತಯಾರಿಸುವ ಕಾರ್ಖಾನೆಯನ್ನು ಸ್ಥಾಪಿಸಿದ್ದಾರೆ. ಪಾಟೀಲ್ ಗ್ರೂಪ್ ಆಫ್ ಇಂಡಸ್ಟ್ರಿಯ ಮುಖ್ಯಸ್ಥರು ಆಗಿರುತ್ತಾರೆ.

ಪೃಥ್ವಿರಾಜ್

ಕನ್ನಡ ಚಿತ್ರರಂಗದ ಪೋಷಕ ನಟರಾದ ಪೃಥ್ವಿರಾಜ್, ೧೯೫೮ರಲ್ಲಿ ಬೆಂಗಳೂರಿನಲ್ಲಿ ಜನಿಸಿದರು. ಬಿ.ಎಸ್ಸಿ ಪದವೀಧರರು. ಬೆಂಗಳೂರಿನ ದೂರವಾಣಿ ಕಾರ್ಖಾನೆಯಲ್ಲಿ ಉದ್ಯೋಗದಲ್ಲಿದ್ದರು. ಹವ್ಯಾಸಿ ರಂಗಭೂಮಿ ನಟರು. ಲೇಖಕ, ರಂಗಸಂಘಟಕ, ಸೂತ್ರಧಾರ ಹಾಗೂ ತಮ್ಮದೇ ಆದ ಪೃಥ್ವಿ ಥಿಯೇಟರ್ಸ್ ಮೊದಲಾದ ತಂಡಗಳಲ್ಲಿಯೂ ಹಲವು ರಂಗ ಪ್ರಯೋಗಗಳಲ್ಲಿ ಪಾಲ್ಗೊಂಡಿದ್ದಾರೆ. ವಿಜಯಕುಮಾರ್ ನಿರ್ದೇಶನದ ಕೆಲವು ನಾಟಕಗಳಲ್ಲಿ ಅಭಿನಯಿಸಿದ್ದಾರೆ. ೧೯೮೬ರಲ್ಲಿ ಶಂಕರ್ ನಾಗ್ ನಿರ್ದೇಶನದ



'ಆಕ್ಸಿಡೆಂಟ್' ಚಿತ್ರದ ಮೂಲಕ ಚಿತ್ರರಂಗ ಪ್ರವೇಶಿಸಿದರು. ಸುಮಾರು ೨೫೦ಕ್ಕೂ ಹೆಚ್ಚು ಚಿತ್ರಗಳಲ್ಲಿ ಅಭಿನಯಿಸಿದ್ದಾರೆ. 'ಪರಶುರಾಮ್', 'ಸಪ್ತಪದಿ', 'ಕ್ರಮ', 'ಅನುರಾಗದ ಅಲೆಗಳು', 'ಒಡಹುಟ್ಟಿದವರು', 'ಜೀವನ ಚೈತ್ರ', 'ಮಿಡಿದ ಶೃತಿ' ಮುಂತಾದವು ಇವರ ಅಭಿನಯದ ಜನಪ್ರಿಯ ಚಿತ್ರಗಳು. ಕಿರುತೆರೆಯ ಹಲವು ಧಾರಾವಾಹಿಗಳಲ್ಲಿ ಅಭಿನಯಿಸಿರುತ್ತಾರೆ.

ಭಂಗೀರಂಗ

ಕನ್ನಡ ಚಿತ್ರರಂಗದ ಚಿತ್ರಸಾಹಿತ್ಯದಲ್ಲಿ ವಿಶಿಷ್ಟ ಸ್ಥಾನ ಪಡೆದವರು ಭಂಗೀರಂಗ. ಮೊದಲಿನಿಂದಲೂ ಅಮೆಚೂರ್ ನಾಟಕಗಳಿಗೆ ಸ್ಫೂರ್ತಿಯಾದವರು. ವೃತ್ತಿ ರಂಗಭೂಮಿ ಹಾಗೂ ಹವ್ಯಾಸಿ ರಂಗಭೂಮಿ ಎರಡರ ನಡುವಿನ ಮಧ್ಯಮ ಮಾರ್ಗದ ಹವ್ಯಾಸಿ ರಂಗಭೂಮಿಯನ್ನು ಹುಟ್ಟುಹಾಕಿದರು. ಹಾಸ್ಯನಟ ಹಾಗೂ ಚಿತ್ರಸಾಹಿತಿ ಎನ್. ಎಸ್. ರಾವ್ ಅವರ ಬಹುತೇಕ ಬರವಣಿಗೆಯ ಹಿಂದಿನ ಪ್ರೇರಕ ಶಕ್ತಿ ಇವರದೇ ಆಗಿತ್ತು. 'ರಣಧೀರ ಕಂಠೀರವ', 'ದಿವ್ಯ ದರ್ಶನ', 'ರೊಟ್ಟಿ ಋಣ' ಮುಂತಾದ ನಾಟಕಗಳ ಮೂಲ ಪರಿಕಲ್ಪನೆ ಇವರದೇ ಆಗಿದೆ. 'ವಾಮ ವಿದ್ಯೆಯಲ್ಲಿ' ಆಸಕ್ತರು. ವೈರಾಗಿ ರೀತಿಯ ಜೀವನ ಶೈಲಿಯ ಇವರು ಶಾಸ್ತ್ರ ಹಾಗೂ ಜ್ಯೋತಿಷ್ಯದಲ್ಲಿ ಪರಿಣಿತರು. ವಿಶಿಷ್ಟವಾದ ಪ್ರಾಸ ಸಮುಚ್ಚಯಗಳಿಂದ ಕೂಡಿದ ಗೀತ ರಚನೆಗಳನ್ನು ಮಾಡಿದ್ದಾರೆ. ಚಿತ್ರರಂಗದಲ್ಲಿ ಗೀತರಚನೆಕಾರರಾಗಿ, ಸಂಭಾಷಣಾಕಾರರಾಗಿ ಹಲವು ಚಿತ್ರಗಳಲ್ಲಿ ಕಾರ್ಯ ನಿರ್ವಹಿಸಿದ್ದಾರೆ. 'ಬಿಸಿಲು ಬೆಳದಿಂಗಳು', 'ಮನಮೆಚ್ಚಿದ ಸೊಸೆ', 'ಅಶೋಕ ಚಕ್ರ', 'ತಾಯಿಗೊಬ್ಬ ತರ್ಲೆ ಮಗ', 'ಕಿಂದರಿ ಜೋಗಿ', 'ಪ್ರೇಮ ಪರೀಕ್ಷೆ' ಮುಂತಾದ ಚಿತ್ರಗಳ ಗೀತೆ, ಸಂಭಾಷಣೆ, ಚಿತ್ರಕತೆ ಹೀಗೆ ಒಂದಲ್ಲ ಒಂದು ವಿಭಾಗದಲ್ಲಿ ದುಡಿದಿದ್ದಾರೆ. ವಿಶಿಷ್ಟವೆನಿಸುವಂತಹ ಹಲವು ಕುಡಿತದ ಹಾಡುಗಳನ್ನು ರಚಿಸಿದ್ದಾರೆ.

ಮದನ ಗೋಪಾಲ್

ನಟ, ನಿರ್ಮಾಪಕ ಮದನ ಗೋಪಾಲ್ ಚಿತ್ರರಂಗದಲ್ಲಿ ಇಂದ್ರಜಿತ್ ಎಂದೇ ಪರಿಚಿತರು. ಬಳ್ಳಾರಿಯಲ್ಲಿ ಜನಿಸಿದ ಇವರು ೧೯೪೫ರಲ್ಲಿ ಬೆಂಗಳೂರಿಗೆ ವಲಸೆ ಬಂದು ವ್ಯಾಪಾರಸ್ಥರಾಗಿ, ಅಬಕಾರಿ ಕಂಟ್ರಾಕ್ಟರ್ ಆಗಿದ್ದರು. ನಾಟಕದ ಗೀಳು ಬೆನ್ನಿಗಂಟಿದ ಇವರು ಬಿ. ಎಂ. ವೆಂಕಟೇಶ್ ಅವರ ಮೂಲಕ ಚಿತ್ರರಂಗವನ್ನು ಪ್ರವೇಶಿಸಿದರು. ನಿರ್ಮಾಪಕನಾಗಿ 'ಫೀನಿಕ್ಸ್', 'ಗುಣಸೋತಿ ಹೆಣ್ಣು ಕೊಡು', 'ಕಣ್ಣು ತೆರೆಸಿದ ಹೆಣ್ಣು', 'ಸಂಗಾತಿ' ಮುಂತಾದ ಚಿತ್ರಗಳನ್ನು ನಿರ್ಮಿಸಿ, ಆ ಚಿತ್ರಗಳಲ್ಲಿ ಮುಖ್ಯ ಪಾತ್ರಗಳಲ್ಲಿ ಅಭಿನಯಿಸಿದರು. ನಿರ್ಮಾಣದಲ್ಲಿ ಅಂಥ ಯಶಸ್ಸನ್ನು ಕಾಣದ ಇವರು ಸಿಂಗಾಪುರ್ ನಲ್ಲಿ ನೆಲೆಸಿರುವ ವಾಣಿಜ್ಯೋದ್ಯಮಿ, ವಿತರಕ ಪೀಟರ್ ಜೆ. ಕಮಿಲಾಸ್ ಅವರೊಟ್ಟಿಗೆ 'ಹಾಂಕಾಂಗ್‌ನಲ್ಲಿ ಏಜೆಂಟ್ ಅಮರ್' ಚಿತ್ರವನ್ನು

ನಿರ್ಮಿಸಿದರು. ಇವರಿಗೆ ಶಾಂತಿಗಾಗಿ ಪಾದಯಾತ್ರೆ ಮಾಡುವ ಹವ್ಯಾಸ.

ಮಧು ಬಿ. ಎ.

ಚಲನಚಿತ್ರ ಸಂಭಾಷಣಾಕಾರರಾಗಿ ಹೆಸರಾದ ಇವರು ಮೈಸೂರಿನವರು. ೧೯೯೫ರಲ್ಲಿ ತೆರೆಕಂಡ 'ಅಗ್ನಿಸಾಕ್ಷಿ' ಚಿತ್ರದ ಸಂಭಾಷಣೆಕಾರರಾಗಿ ಚಿತ್ರರಂಗ ಪ್ರವೇಶಿಸಿದ ಇವರು ಹಲವು ಜನಪ್ರಿಯ ಚಿತ್ರಗಳಿಗೆ ಸಂಭಾಷಣೆ ಒದಗಿಸಿದ್ದಾರೆ. 'ಬಾರೋ ನನ್ನ ಮುದ್ದಿನ ಕೃಷ್ಣ', 'ಕೌರವ', 'ಚಂದ್ರೋದಯ', 'ಹಬ್ಬ', 'ಸೂರಪ್ಪ', 'ಪ್ರೇಮಾಚಾರಿ', 'ಸ್ನೇಹಲೋಕ' ಮುಂತಾದ ಚಿತ್ರಗಳಿಗೆ ಸಂಭಾಷಣಾಕಾರರಾಗಿ ಕಾರ್ಯ ನಿರ್ವಹಿಸಿದ್ದಾರೆ.

ಮಲ್ಲೇಶ್ ಹರ್ತಿ

ಪ್ರಾರಂಭದಿಂದಲೂ ಸೃಜನಾತ್ಮಕ ಚಿತ್ರಗಳ ನಿರ್ದೇಶಕರ ಜತೆಯಲ್ಲಿ ಕೆಲಸ ಮಾಡುತ್ತಾ ಬಂದವರು ಮಲ್ಲೇಶ್ ಹರ್ತಿ. ಧಾರವಾಡದಲ್ಲಿ ಜನಿಸಿದರು. ಪ್ರಸಾಧನ ಕಲಾವಿದರಾಗಿ ನಾಟಕರಂಗವನ್ನು ಪ್ರವೇಶಿಸಿದರು. ಚಂದ್ರಶೇಖರ ಕಂಬಾರರ

'ಕಾಡು ಕುದುರೆ' ಚಿತ್ರದ ಮೂಲಕ ಚಿತ್ರರಂಗ ಪ್ರವೇಶಿಸಿದರು. 'ಎಲ್ಲಿಂದಲೋ ಬಂದವರು', 'ದಂಗೆಯೆದ್ದ ಮಕ್ಕಳು', 'ಬ್ಯಾಂಕರ್ ಮಾರ್ಗಯ್ಯ', 'ತುಳಸೀ ದಳ', 'ಮೈಸೂರ ಮಲ್ಲಿಗೆ', 'ಪ್ರಣಯದ ಪಕ್ಷಿಗಳು', 'ನಾಗಮಂಡಲ', 'ಉಲ್ಟಾ ಪಲ್ಟಾ' ಮುಂತಾದ ಅನೇಕ ಚಿತ್ರಗಳ ಪ್ರಸಾಧನ ಕಲಾವಿದರಾಗಿ ಕಾರ್ಯ ನಿರ್ವಹಿಸಿದರು. 'ತುಳಸೀ ದಳ' ಚಿತ್ರದ ಪ್ರಸಾಧನಕ್ಕಾಗಿ ೧೯೮೫-೮೬ರ ಸಾಲಿನ ರಾಜ್ಯಸರ್ಕಾರದ ವಿಶೇಷ ಪ್ರಶಸ್ತಿಯನ್ನು ಪಡೆದಿದ್ದಾರೆ. ಇವರು ಅಕಾಲ ಮೃತ್ಯುವಿಗೀಡಾದರು.

ಮಸ್ತಾನ್

ಪ್ರಚಾರ ವಿನ್ಯಾಸಕರಾದ ಮಸ್ತಾನ್ ೧೯೬೦ರಲ್ಲಿ ಆಂಧ್ರ ಪ್ರದೇಶದಲ್ಲಿ ಹುಟ್ಟಿದವರು. ಬಾಲ್ಯದಿಂದಲೇ ಕುಂಚಹಿಡಿದ ಇವರು ಪ್ರಸಿದ್ಧ ಪ್ರಚಾರ ಕಲಾವಿದ ಗಂಗಾಧರ್ ಅವರ ಬಳಿ ೧೯೭೯ರಿಂದ ೧೯೮೪ರ ವರೆಗೂ ಸಹಾಯಕರಾಗಿ ಕೆಲಸ ಮಾಡಿದರು. ದ್ವಾರಕೀಶ್ ಅವರು ತಮ್ಮ 'ನೀ ಬರೆದ ಕಾದಂಬರಿ' ಚಿತ್ರದ ಪ್ರಚಾರ ಕಲಾವಿದರಾಗಿ ಅವಕಾಶ ನೀಡಿದರು.



ಅಲ್ಲಿಂದ ಮುಂದೆ ಕನ್ನಡ ಚಿತ್ರರಂಗದಲ್ಲಿ ತಮ್ಮದೇ ಆದ ವಿಶೇಷ ಪ್ರಚಾರ ವಿನ್ಯಾಸದಿಂದ ಗಮನ ಸೆಳೆದರು. ರವಿಚಂದ್ರನ್ ಅವರ ಬಹುತೇಕ ಚಿತ್ರಗಳ ವಿನ್ಯಾಸಕಾರರಾಗಿ ಕಾರ್ಯ ನಿರ್ವಹಿಸಿದ್ದಾರೆ. 'ಶಾಂತಿ ಕ್ರಾಂತಿ', 'ಕಲಾವಿದ', ಮುಂತಾದ ಚಿತ್ರಗಳ ವಿನ್ಯಾಸಕಾರರಾಗಿ ಇವರು ಕೆಲಸ ಮಾಡಿದ್ದಾರೆ.

ಯೋಗೀಶ್ ಹುಣಸೂರು

ಸಹಾಯಕ ನಿರ್ದೇಶಕರಾಗಿ ಚಿತ್ರರಂಗ ಪ್ರವೇಶಿಸಿ ನಂತರ ನಿರ್ದೇಶಕರಾದರು. ೧೯೫೫ರಲ್ಲಿ ಹುಣಸೂರಿನಲ್ಲಿ ಜನಿಸಿದರು. ೧೯೮೧ರಲ್ಲಿ ಹುಣಸೂರು ಕೃಷ್ಣಮೂರ್ತಿ ಅವರು ನಿರ್ದೇಶಿಸಿದ 'ಶಿವನೊಲಿದ

ಶಿವಭಕ್ತ' ಚಿತ್ರದ ಸಹಾಯಕ ನಿರ್ದೇಶಕರಾಗಿ ಚಿತ್ರರಂಗ ಪ್ರವೇಶಿಸಿದರು. ೧೯೯೫ರಲ್ಲಿ 'ಪೊಲೀಸ್ ಪವರ್' ಚಿತ್ರವನ್ನು ನಿರ್ದೇಶಿಸುವ ಮೂಲಕ ಸ್ವತಂತ್ರ ನಿರ್ದೇಶಕರಾದರು. 'ಕೆಂಪು ಮುಗಿಲು', 'ಲಕ್ಷ್ಮಿ ಮಹಾಲಕ್ಷ್ಮಿ', 'ಮಾತಿನ ಮಲ್ಲ' ಚಿತ್ರಗಳು ಇವರು ನಿರ್ದೇಶಿಸಿದ ಇತರ ಚಿತ್ರಗಳು.

ರಾಜಗೋಪಾಲ್ .ವಿ (ಮಿಮಿಕ್ರಿ)

ತನ್ನ ವಿಶಿಷ್ಟ ಕಂಠದಿಂದ ಹೆಸರುವಾಸಿಯಾದವರು ವಿ. ರಾಜಗೋಪಾಲ್. ಚಿತ್ರೋದ್ಯಮಕ್ಕೆ ಮಿಮಿಕ್ರಿ ರಾಜಗೋಪಾಲ್ ಎಂದೇ ಖ್ಯಾತರು. ಮೈಸೂರಿನಲ್ಲಿ ೧೯೫೫ರಲ್ಲಿ ಜನಿಸಿದರು. ವೈ. ವಿ. ರಾವ್ ನಿರ್ಮಾಣದ 'ಚಿಟ್ಟಿದ ತಾಯಿ' ಚಿತ್ರದಿಂದ ತೆರೆಗೆ ಪರಿಚಿತರಾದರು.



ಸುಮಾರು ೭೦ಕ್ಕೂ ಹೆಚ್ಚು ಚಿತ್ರಗಳಲ್ಲಿ ಅಭಿನಯಿಸಿದ್ದಾರೆ. ಸುಮಾರು ೨೦೦೦ಕ್ಕೂ ಹೆಚ್ಚು ಕಾರ್ಯಕ್ರಮಗಳನ್ನು ನೀಡಿರುತ್ತಾರೆ.

ರಾಜಶೇಖರ್ ಎಂ.

ರಜಸ್ತು ಸುಬ್ಬರಾಜು ಹಾಗೂ ಅವರ ಸಹೋದರರೊಂದಿಗೆ ರಜಸ್ತು ವಿತರಣಾ ಸಂಸ್ಥೆಯನ್ನು ೭೦-೮೦ರ ದಶಕದಲ್ಲಿ ಸ್ಥಾಪಿಸಿದರು. ಪ್ರಭಾವಿ ಕನ್ನಡ ಚಲನಚಿತ್ರ ವಿತರಕರು ಪ್ರದರ್ಶಕರೂ ಆಗಿ, ರಜಸ್ತು ಸಂಸ್ಥೆಯ ಮುಖ್ಯ

ರೂವಾರಿಯಾಗಿದ್ದವರು. ಇವರು ರಜಸ್ತು ಸಂಸ್ಥೆಯಲ್ಲಿದ್ದಾಗ ನೂರಾರು ಹಳೆಯ ಕನ್ನಡ ಚಿತ್ರಗಳ ನೆಗೆಟೀವ್ ಹಕ್ಕುಗಳನ್ನು ಪಡೆದು ತಮ್ಮಲ್ಲೇ ವಿಶಿಷ್ಟ ಎನಿಸುವಂಥ ಕನ್ನಡ ಚಿತ್ರಗಳ ಭಂಡಾರ ನಿರ್ಮಾಣಕ್ಕೆ ಕಾರಣರಾದವರು. ಯುದ್ಧದ ಹಿನ್ನೆಲೆಯುಳ್ಳ ಆಗಿನ ದಿನಗಳಲ್ಲಿ ಅತ್ಯಂತ ಅದ್ದೂರಿ ಎನಿಸುವಂಥ 'ಮುತ್ತಿನ ಹಾರ', ಚಿತ್ರದ ನಿರ್ಮಾಣದಲ್ಲಿ ಪ್ರಮುಖಪಾತ್ರ ವಹಿಸಿದವರು. 'ರಜಸ್ತು' ಸಂಸ್ಥೆಯಿಂದ ಹೊರಬಂದು 'ಶ್ರೀಮಾತಾ ಫಿಲಂಸ್' ಎಂಬ ನಿರ್ಮಾಣ ಸಂಸ್ಥೆಯನ್ನು ಸ್ಥಾಪಿಸಿ ವಿಷ್ಣುವರ್ಧನ್ ನಾಯಕತ್ವದ 'ಸಾಮ್ರಾಟ್' ಚಿತ್ರವನ್ನು ನಿರ್ಮಿಸಿದರು. ಇದೇ ಚಿತ್ರದ ಮೂಲಕ ನಾಗಣ್ಣ ನಿರ್ದೇಶಕರಾಗಿ ಪರಿಚಿತರಾದರು.

ರಾಜು .ಎಸ್.ವಿ

ಕಲಾ ನಿರ್ದೇಶನದ ಮೌಲ್ಡಿಂಗ್ ವಿಭಾಗದಲ್ಲಿ ಕೆಲಸ ಮಾಡಿದ ಎಸ್. ವಿ.ರಾಜು ೧೯೨೦ರಲ್ಲಿ ಜನಿಸಿದರು. ಮೂರನೇ ತರಗತಿಯವರೆಗೆ ವಿದ್ಯಾಭ್ಯಾಸ. ೧೯೩೫ರಲ್ಲಿ ತಮಿಳು ಚಿತ್ರದ ಮೂಲಕ ಚಿತ್ರರಂಗ ಪ್ರವೇಶಿಸಿದರು. ನವಜ್ಯೋತಿ ಸ್ಟುಡಿಯೋದ ಬಹುತೇಕ ನಿರ್ಮಾಣಗಳಲ್ಲಿ ಶಿಲ್ಪ ಕಲಾ ವಿಭಾಗದಲ್ಲಿ ಕಾರ್ಯ

ನಿರ್ವಹಿಸಿದ್ದಾರೆ. ಸುಮಾರು ೩೦೦ಕ್ಕೂ ಹೆಚ್ಚು ಚಿತ್ರಗಳಲ್ಲಿ ಕೆಲಸ ಮಾಡಿದ್ದಾರೆ.

ರಾಧಾ ರಾಮಚಂದ್ರ

ಕನ್ನಡ ಚಿತ್ರರಂಗದ ಪೋಷಕ ನಟಿಯಾಗಿ ಪರಿಚಿತರಾಗಿರುವ ರಾಧಾ ರಾಮಚಂದ್ರ ೧೯೪೨ರಲ್ಲಿ ತುಮಕೂರಿನಲ್ಲಿ ಜನಿಸಿದರು. ಪಿ. ಯು. ಸಿ ವರೆಗೆ ಶಿಕ್ಷಣ. ರಂಗಭೂಮಿ ನಂಟಿನ ಇವರು ಕೂಡಳ್ಳಿ ಶಿವರಾಂ ನಿರ್ದೇಶನದ 'ಚಳಿ ಚಳಕು' ಚಿತ್ರದ ಮೂಲಕ ಚಿತ್ರರಂಗ ಪ್ರವೇಶಿಸಿದರು. 'ಆಘಾತ', 'ಜೀವನ ಮೈತ್ರಿ', 'ಚಿನ್ನಾರಿ ಮುತ್ತ', 'ಕೊಟ್ರೇಶಿ ಕನಸು', 'ಜನುಮದ ಜೋಡಿ', 'ಕರಡೀಪುರ', 'ನಾವಿದ್ದೇವೆ ಎಚ್ಚರಿಕೆ', 'ಹಗಲು ವೇಷ', 'ಸ್ಪರ್ಶ' ಮುಂತಾದ ಪ್ರಶಸ್ತಿ ವಿಜೇತ ಚಿತ್ರಗಳಲ್ಲಿ ಅಭಿನಯಿಸಿದ್ದಾರೆ. ಕಂಠದಾನ ಕಲಾವಿದೆಯಾಗಿ ಹಲವು ಚಿತ್ರಗಳಲ್ಲಿ ಕಾರ್ಯ ನಿರ್ವಹಿಸಿದ್ದಾರೆ. ಕಿರುತೆರೆಯ ಹಲವು ಧಾರಾವಾಹಿಗಳಲ್ಲಿ ಅಭಿನಯಿಸಿದ್ದಾರೆ.

ರಾಮ್ ಪ್ರಕಾಶ್ ತ್ರಿಶೂಲಿ

ಚಿತ್ರರಂಗದಲ್ಲಿ ರಾ. ಪ್ರಕಾಶ್ ತ್ರಿಶೂಲಿ ಎಂದೇ ಖ್ಯಾತರಾದ ಇವರು ಗೀತ ರಚನಾಕಾರ ಹಾಗೂ ಸಂಭಾಷಣಾಕಾರರಾಗಿ ಹೆಸರಾಗಿದ್ದಾರೆ. ಹೆಚ್ಚಾಗಿ ಜಗ್ಗೇಶ್ ಅವರ ಚಿತ್ರಗಳಿಗೆ ಕೆಲಸ ಮಾಡಿದ್ದಾರೆ. 'ವೀರಣ್ಣ', 'ಮಾರಿ ಕಣ್ಣು ಹೋರಿಮ್ಯಾಗೆ', 'ಯಮಲೋಕದಲ್ಲಿ ವೀರಪ್ಪನ್', 'ಪಟೇಲ', 'ಸುಲ್ತಾನ್' ಮೊದಲಾದವು ಇವರು ಸಂಭಾಷಣೆಕಾರರಾಗಿ ಕಾರ್ಯ ನಿರ್ವಹಿಸಿದ ಚಿತ್ರಗಳು. ಹಲವು ಚಿತ್ರಗಳ ಕತೆಗಾರರು.

ರಾಮಕೃಷ್ಣ

ಚಿತ್ರ ಪ್ರಚಾರಕರ್ತರಾದ ರಾಮಕೃಷ್ಣ ೧೯೬೭ರಲ್ಲಿ ಬೆಂಗಳೂರಿನಲ್ಲಿ ಜನಿಸಿದರು. ಪಿ.ಯು.ಸಿ ವರೆಗೆ ವಿದ್ಯಾಭ್ಯಾಸ. ಚಿಕ್ಕಂದಿನಿಂದಲೂ ಚಿತ್ರರಂಗದಲ್ಲಿ ನಟರಾಗಿ ಹೆಸರು ಮಾಡಬೇಕೆಂಬ ಹಂಬಲವಿತ್ತು. ನಿರ್ದೇಶಕ ಮಾರುತಿ ಶಿವರಾಂ ಅವರ

'ಅನುರಕ್ತ' ಚಿತ್ರದ ಪ್ರಚಾರಕರ್ತರಾಗಿ ಚಿತ್ರರಂಗ ಪ್ರವೇಶಿಸಿದರು. ಸುಮಾರು ೨೮೦ ಚಿತ್ರಗಳ ಪ್ರಚಾರಕರ್ತರಾಗಿ ಕಾರ್ಯ ನಿರ್ವಹಿಸಿದ್ದಾರೆ. 'ಶಬರಿಮಲೈ ಅಯ್ಯಪ್ಪ ಸ್ವಾಮಿ', 'ಗೆಲುವು ನನ್ನದೇ', 'ನಿಷ್ಕರ್ಷ', 'ಸರ್ಕಾರಕ್ಕೆ ಸವಾಲ್', 'ಇಬ್ಬರ ನಡುವೆ ಮುದ್ದಿನ ಆಟ', 'ಗಂಧರ್ವ' ಮುಂತಾದ ಚಿತ್ರಗಳು ಇವರು ಪ್ರಚಾರಕರ್ತರಾಗಿ ಕೆಲಸ ಮಾಡಿದ ಚಿತ್ರಗಳು. ನಟರಾಗಿ ಸುಮಾರು ೪೦ಕ್ಕೂ ಹೆಚ್ಚು ಚಿತ್ರಗಳಲ್ಲಿ ಅಭಿನಯಿಸಿದ್ದಾರೆ. 'ರಾಜಕೀಯ', 'ಲೂಟಿ ಗ್ಯಾಂಗ್', 'ತುಂಬಿದ ಮನೆ', 'ಕರ್ಫ್ಯೂ' ಚಿತ್ರಗಳು ಇವರು ಅಭಿನಯಿಸಿದ ಕೆಲವು ಚಿತ್ರಗಳು. 'ನ್ಯಾಯದ ಕಣ್ಣು' ಎಂಬ ಚಿತ್ರಕ್ಕೆ ಕತೆ ಬರೆದಿದ್ದಾರೆ.

ರಾಯ್ಕರ್

ಹಳೆಯ ಮುಂಬೈ ಕರ್ನಾಟಕದ ಚಲನಚಿತ್ರ ಪ್ರದರ್ಶಕರು ಹಾಗೂ ಹಂಚಿಕೆದಾರರು. ರಾಯ್ಕರ್ ಅವರ ತಂದೆ ಹುಬ್ಬಳ್ಳಿಯಲ್ಲಿ ಚಲನಚಿತ್ರ ವಿತರಕರಾಗಿ ಖ್ಯಾತರಾದವರು. ಇವರು ಹುಬ್ಬಳ್ಳಿಯಲ್ಲಿ 'ಅಪ್ಸರ', 'ಸುಧಾ', ಬೆಳಗಾಂನಲ್ಲಿ 'ಚಿತ್ರಾ', ಶಿರಸಿಯಲ್ಲಿ 'ನಟರಾಜ್', ದಾಂಡೇಲಿಯಲ್ಲಿ 'ಅಶೋಕ್', 'ಶ್ರೀಹರಿ ಸಿನಿಮಾ' ಮತ್ತು ಅಂಕೋಲಾದಲ್ಲಿ 'ಸಾಮ್ರಾಟ್' ಚಿತ್ರಮಂದಿರಗಳ ಮಾಲೀಕರಾಗಿದ್ದಾರೆ. ಇದಲ್ಲದೇ ಗುತ್ತಿಗೆ ಮೇಲೆ ಧಾರವಾಡದಲ್ಲಿ 'ಸಂಗಮ್', ಬೆಳಗಾಂನಲ್ಲಿ 'ಚಂದನ್ ಸಿನಿಮಾ' ನಡೆಸಿಕೊಂಡು ಬರುತ್ತಿದ್ದಾರೆ. ಇವರು ಹಲವಾರು ಹಿಂದಿ ಚಿತ್ರಗಳನ್ನು ವಿತರಿಸಿದ್ದಾರೆ.

ಲಕ್ಷ್ಮಣ್

ಎಂಬತ್ತರ ದಶಕದಲ್ಲಿ ಚಿತ್ರರಂಗ ಪ್ರವೇಶಿಸಿದ ಲಕ್ಷ್ಮಣ್ ಪೋಷಕ ಪಾತ್ರಗಳಲ್ಲಿ ಅಭಿನಯಿಸಿ ಖ್ಯಾತರಾದವರು. ೧೯೫೦ರಲ್ಲಿ ಬೆಂಗಳೂರಿನಲ್ಲಿ ಜನಿಸಿದರು. ಎಸ್. ಎಸ್. ಎಲ್. ಸಿ ವರೆಗೆ ವಿದ್ಯಾಭ್ಯಾಸ. ಬಿ.ಇ.ಎಲ್ ನ ಕನ್ನಡ ಸಂಸ್ಥೆಯ ಮೂಲಕ ಹಲವಾರು



ನಾಟಕಗಳಲ್ಲಿ ಅಭಿನಯಿಸಿದರು. 'ರಂಗಸಂಪದ' ಎಂಬ ಹವ್ಯಾಸಿ ರಂಗಭೂಮಿಯ ನಂಟಿನಿಂದ ಚಿತ್ರರಂಗಕ್ಕೆ ಬಂದವರು. ಸಿ. ವಿ. ರಾಜೇಂದ್ರನ್ ನಿರ್ದೇಶನದ 'ಉಪಾಸ್ವಯಂವರ' ಚಿತ್ರದ ಮೂವರು ನಾಯಕರಲ್ಲಿ ಒಬ್ಬರಾಗಿ ತೆರೆಗೆ ಬಂದರು. 'ಅಂತ', 'ಇಂದ್ರಜಿತ್', 'ಎಂಟೆದೆ ಭಂಟ', 'ಒಂದೇ ರಕ್ತ', 'ಅಪ್ಪಾಜಿ' 'ಒಲವಿನ ಉಡುಗೊರೆ', 'ಅರ್ಜುನ್', 'ನ್ಯಾಯ ನೀತಿ ಧರ್ಮ', 'ಹಾಲುಂಡ ತವರು', 'ಸೂರ್ಯವಂಶ', 'ಯಜಮಾನ' ಮುಂತಾದವು ಇವರ ಅಭಿನಯದ ಜನಪ್ರಿಯ ಚಿತ್ರಗಳು. ನಿರ್ದೇಶಕರಾದ ಡಿ. ರಾಜೇಂದ್ರ ಬಾಬು, ಎ. ಟಿ. ರಘು, ಕೆ. ಎಸ್. ಆರ್. ದಾಸ್ ಅವರ ಹಲವು ಚಿತ್ರಗಳಲ್ಲಿ ಅಭಿನಯಿಸಿದ್ದಾರೆ. ಸುಮಾರು ೧೫೦ ಚಿತ್ರಗಳಲ್ಲಿ ಅಭಿನಯಿಸಿದ್ದಾರೆ.

ವಸಂತ್ ಕುಣಿಗಲ್

ಸಂಭಾಷಣಾಕಾರರಾಗಿ, ಸಹನಿರ್ದೇಶಕರಾಗಿ ಚಿತ್ರರಂಗದಲ್ಲಿ ಪರಿಚಿತರಾಗಿದ್ದ ವಸಂತ್ ಕುಣಿಗಲ್ ನಲ್ಲಿ ಜನಿಸಿದರು. ಪಿ.ಯು.ಸಿ ವರೆಗೆ ವಿದ್ಯಾಭ್ಯಾಸ. ಬಾಲ್ಯದಿಂದಲೂ ಚಿತ್ರರಂಗದ ಕಡೆಗೆ ಆಸಕ್ತರಾಗಿದ್ದ ಇವರು ೧೯೭೭ರಲ್ಲಿ 'ಬಾಳು ಜೇನು' ಚಿತ್ರದ ಮೂಲಕ ಸಹನಿರ್ದೇಶಕರಾಗಿ ಪರಿಚಿತರಾದರು. ಹಲವು ಚಿತ್ರಗಳಲ್ಲಿ ಪೋಷಕ ನಟರಾಗಿ

ಅಭಿನಯಿಸಿದ್ದಾರೆ. ಸಂಭಾಷಣಾಕಾರರಾಗಿ 'ಚಿತ್ರಲೇಖ', 'ಸರ್ಕಾರಕ್ಕೆ ಸವಾಲ್', 'ಗೋಲಿಬಾರ್', 'ಮೋಜುಗಾರ ಸೊಗಸುಗಾರ', 'ಹಲೋ ಸಿಸ್ಟರ್' ಮುಂತಾದ ಚಿತ್ರಗಳಲ್ಲಿ ಕಾರ್ಯ ನಿರ್ವಹಿಸಿದ್ದಾರೆ. ನಿರ್ದೇಶಕರಾಗಿ 'ಬೊಂಬಾಟ್ ರಾಜಾ ಬಂಡಲ್ ರಾಣಿ', 'ತೂಗುವೆ ಕೃಷ್ಣನಾ' ಚಿತ್ರಗಳನ್ನು ನಿರ್ದೇಶಿಸಿದ್ದಾರೆ. ೧೯೯೭ರಲ್ಲಿ ಕ್ಯಾನ್ಸರ್ ಖಾಯಿಲೆಯಿಂದ ನಿಧನರಾದರು.

ವಿಜಯ ಕುಮಾರ್ .ಆರ್

ಪತ್ರಿಕಾ ಪ್ರಚಾರಕರ್ತರಾದ ಆರ್. ವಿಜಯ ಕುಮಾರ್ ೧೯೫೭ರಲ್ಲಿ ಜನಿಸಿದರು. ಪಿ.ಯು.ಸಿವರೆಗೆ ವಿದ್ಯಾಭ್ಯಾಸ. ೧೯೭೮ರಲ್ಲಿ ಎಸ್. ಜಯಸಿಂಹ ಅವರಿಂದ ಲಾವಣ್ಯ ಬಳಗಕ್ಕೆ ಸದಸ್ಯರಾಗಿ ಪತ್ರಿಕಾ ರಂಗ ಹಾಗೂ ಚಿತ್ರರಂಗದಲ್ಲಿ ಪ್ರವೇಶ ಪಡೆದರು.

'ಅನಂತ ಪ್ರೇಮ' ಚಿತ್ರದ ಮೂಲಕ ಪತ್ರಿಕಾ ಸಂಪರ್ಕ ಅಧಿಕಾರಿಯಾಗಿ ಪರಿಚಿತರಾದರು. 'ಅಣ್ಣಯ್ಯ', 'ರಸಿಕ', 'ಮಿಂಚಿನ ಓಟ', 'ತವರಿನ ತೊಟ್ಟಿಲು', 'ಮಹಾಭಾರತ', 'ಕರ್ಪೂರದ ಗೊಂಬೆ', 'ಕಿಲಾಡಿಗಳು', 'ಟೈಂಬಾಂಬ್' ಮೊದಲಾದ ೧೦೦ಕ್ಕೂ ಹೆಚ್ಚು ಚಿತ್ರಗಳಲ್ಲಿ ಕೆಲಸ ಮಾಡಿದ್ದಾರೆ.

ವೆಂಕಟ ರಾಮನ್ .ಜಿ

ಹಿರಿಯ ನಟರಾದ ವೆಂಕಟರಾಮನ್ ೧೯೩೩ರಲ್ಲಿ ತಮಿಳುನಾಡಿನಲ್ಲಿ ಜನಿಸಿದರು. ಇಂಟರ್ ಮೀಡಿಯಟ್ ವರೆಗೆ ವಿದ್ಯಾಭ್ಯಾಸ.

೧೯೫೧ರಲ್ಲಿ ಟಿ. ಶಂಕರ್ ಸಿಂಗ್ ನಿರ್ದೇಶನದ 'ಚಂಚಲ ಕುಮಾರಿ' ಚಿತ್ರದಲ್ಲಿ ಅಭಿನಯಿಸುವ ಮೂಲಕ ಚಿತ್ರರಂಗ ಪ್ರವೇಶಿಸಿದರು. 'ಚಿಂತಾಮಣಿ', 'ಪ್ರಭುಲಿಂಗ ಲೀಲೆ', 'ನವಜೀವನ', 'ನಾಂದಿ', 'ನಮ್ಮ ಮಕ್ಕಳು', 'ಸೀತಾ', 'ತುಳಸಿ', 'ಒಂದು ಪ್ರೇಮದ ಕಥೆ', 'ಅಮೃತ ಘಳಿಗೆ', 'ಅದೇ ಕಣ್ಣು' ಮೊದಲಾದ ಸುಮಾರು ೫೦ ಚಿತ್ರಗಳಲ್ಲಿ ಅಭಿನಯಿಸಿದ್ದಾರೆ. ಇವರು ಸಂಕಲನಕಾರರೂ ಕೂಡ.

ವೀರಪ್ಪ ಮರಳವಾಡಿ

ಚಿತ್ರಸಾಹಿತಿ, ಸಹನಿರ್ದೇಶಕ, ನಿರ್ದೇಶಕರಾದ ವೀರಪ್ಪ ಮರಳವಾಡಿ ಬಾಲ್ಯದಿಂದಲೂ ನಾಟಕಗಳಲ್ಲಿ

ಆಸಕ್ತರಾದವರು. 'ರಂಗ ಸಂಪದ', 'ಬಿಂಬ', 'ಭೂಮಿಕಾ', 'ಸೂತ್ರಧಾರ' ಮೊದಲಾದ ರಂಗ ತಂಡಗಳಲ್ಲಿದ್ದವರು. ಬಿ.ಸಿ.ಗೌರಿಶಂಕರ್ ಅವರ 'ಕಂಡವ ಮಳೆ' ಚಿತ್ರದ ಮೂಲಕ ಚಿತ್ರರಂಗ ಪ್ರವೇಶಿಸಿದರು. 'ಏಳು ಸುತ್ತಿನ ಕೋಟೆ', 'ಸುರಸುಂದರಾಂಗ' ಚಿತ್ರಗಳ ಸಹ ನಿರ್ದೇಶಕರಾಗಿ ಕಾರ್ಯ ನಿರ್ವಹಿಸಿದರು. 'ರುದ್ರ ತಾಂಡವ', 'ರಾಣಿ ಮಹರಾಣಿ', 'ಆಟ ಹುಡುಗಾಟ', 'ಸಂಬಿದ್ರೆ ನಂಬಿ ಬಿಟ್ರೆ ಬಿಡಿ', 'ಬೆಳ್ಳಿ ಕಾಲುಂಗರ' ಮುಂತಾದ ಚಿತ್ರಗಳ ಕಥೆ, ಚಿತ್ರಕಥೆ, ಸಂಭಾಷಣೆ ರಚಿಸಿದ್ದಾರೆ. ರವಿಚಂದ್ರನ್ ನಾಯಕರಾಗಿದ್ದ 'ಗುರು-ಬ್ರಹ್ಮ' ಚಿತ್ರವನ್ನು ನಿರ್ದೇಶಿಸುವ ಮೂಲಕ ನಿರ್ದೇಶಕರಾದರು.

ವೆಂಕಟಾಚಲಂ ಎಂ. ವಿ

ಸುದರ್ಶನ್ ಲಾಂಛನದಲ್ಲಿ ಹಲವು ಚಿತ್ರಗಳನ್ನು ನಿರ್ಮಿಸಿದ ಎಂ. ವಿ.



ವೆಂಕಟಾಚಲಂ ಅವರು ಗಾಂಧಿನಗರದ ಕರ್ನಾಟಕ ಫಿಲಂಸ್ ಸಂಸ್ಥೆಯಲ್ಲಿ ಉದ್ಯೋಗಿಯಾಗಿದ್ದವರು. ಚಿತ್ರ ಪ್ರಚಾರಕ ಅಲೆಕ್ಸಾಂಡರ್ ಜೊತೆಗೂಡಿ ಅವರು ತಯಾರಿಸಿದ 'ಮಣ್ಣಿನ ಮಗ' ಹಲವೊಂದು ಪ್ರಥಮಗಳನ್ನು ಕಂಡ ಚಿತ್ರ. ಸಿನಿಮಾ ಚಿತ್ರಮಂದಿರವಾಗಿದ್ದು ನಂತರ ೩೫ ಎಂ. ಎಂ ಚಿತ್ರಗಳ ಪ್ರದರ್ಶನಕ್ಕೆ ಅನುವು ಮಾಡಿಕೊಟ್ಟ ಬೃಹತ್ ಚಿತ್ರಮಂದಿರ 'ಕಪಾಲಿ' ಯಲ್ಲಿ ಪ್ರದರ್ಶನದ ಶತದಿನೋತ್ಸವ ಕಂಡ ಪ್ರಥಮ ಕನ್ನಡ ಚಿತ್ರ. ಇವರ ದ್ವಿತೀಯ ನಿರ್ಮಾಣ 'ಯಾವ ಜನ್ಮದ ಮೈತ್ರಿ' ಕಾದಂಬರಿ ಆಧಾರಿತ ಚಿತ್ರ. ಈ ಚಿತ್ರ ೧೯೭೧-೭೨ರ ರಾಜ್ಯ ಸರ್ಕಾರದ ತೃತೀಯ ಅತ್ಯುತ್ತಮ ಚಿತ್ರ ಪ್ರಶಸ್ತಿ ಹಾಗೂ ಅತ್ಯುತ್ತಮ ಸಂಗೀತ ನಿರ್ದೇಶನ ಪ್ರಶಸ್ತಿ ಪಡೆಯಿತು. ಈ ಚಿತ್ರ ತಮಿಳು, ತೆಲುಗು, ಹಿಂದಿ ಭಾಷೆಗಳಲ್ಲಿ ಪುನರ್ನಿರ್ಮಾಣಗೊಂಡಿತು. 'ಮಾಯಾ ಮನುಷ್ಯ' ಇವರು ನಿರ್ಮಿಸಿದ ಮತ್ತೊಂದು ಚಿತ್ರ.

ವೈದ್ಯನಾಥ್ .ಕೆ .ಎಸ್

ಚಿತ್ರರಂಗದಲ್ಲಿ 'ವೈದಿ' ಎಂದೇ ಖ್ಯಾತರಾದ ಕೆ.ಎಸ್. ವೈದ್ಯನಾಥ್ ಅವರು ಸಹಾಯಕ ನಿರ್ದೇಶಕರಾಗಿ, ನಿರ್ದೇಶಕರಾಗಿ, ಹಂಚಿಕೆದಾರರಾಗಿ ಪರಿಚಿತರು. ೧೯೫೩ರಲ್ಲಿ ಬೂದಿಗುಪ್ಪೆಯಲ್ಲಿ ಜನಿಸಿದರು. ಬಿ.ಕಾಂ ಪದವೀಧರರು. ೧೯೭೧ರಲ್ಲಿ 'ಜಗತ್ ಪಿಕ್ಚರ್ಸ್' ಕಛೇರಿಯಲ್ಲಿ ಟೈಪಿಸ್ಟ್ ಮತ್ತು ಲೆಕ್ಕಾಧಿಕಾರಿಯಾಗಿ ಕೆಲಸಕ್ಕೆ ಸೇರಿದರು. ಕೆಲವು ಕಾಲ ಹಂಚಿಕೆದಾರರ ಪ್ರತಿನಿಧಿಯಾಗಿ ಕಾರ್ಯ ನಿರ್ವಹಿಸಿದರು. ೧೯೭೭ರಲ್ಲಿ ಸಿದ್ದಲಿಂಗಯ್ಯ ನಿರ್ದೇಶನದ 'ಬಿಳಿಗಿರಿಯ ಬನದಲ್ಲಿ' ಚಿತ್ರದ ಸಹಾಯಕ ನಿರ್ದೇಶಕರಾಗಿ ಚಿತ್ರರಂಗ ಪ್ರವೇಶಿಸಿದರು. ಹಲವು ಚಿತ್ರಗಳಲ್ಲಿ ಸಹ



ನಿರ್ದೇಶಕರಾಗಿ ಕಾರ್ಯ ನಿರ್ವಹಿಸಿದ ಇವರು 'ದಂಡ ನಾಯಕ' ಎಂಬ ಚಿತ್ರವನ್ನು ನಿರ್ದೇಶಿಸಿರುತ್ತಾರೆ. ದೂರದರ್ಶನ ಹಾಗೂ ವಾರ್ತಾ ಮತ್ತು ಪ್ರಚಾರ ಇಲಾಖೆಗಾಗಿ ಹಲವು ಸಾಕ್ಷ್ಯ ಚಿತ್ರಗಳನ್ನು ನಿರ್ದೇಶಿಸಿರುತ್ತಾರೆ.

ಶಂಕರ್ .ಬಿ .ಕೆ

ಉತ್ತರ ಕರ್ನಾಟಕದ ರಂಗಭೂಮಿಯಿಂದ ಚಲನಚಿತ್ರ ರಂಗವನ್ನು ಪ್ರವೇಶಿಸಿದ ನಟ ಬಿ. ಕೆ. ಶಂಕರ್. ೧೯೭೪ರಲ್ಲಿ 'ಅತ್ತಿಗೆ ತಕ್ಕ ಸೊಸೆ' ಚಿತ್ರದಿಂದ

ತೆರೆಗೆ ಪರಿಚಿತರಾದರು. ಸುಮಾರು ಮೂರು ದಶಕಗಳ ಕಾಲ ಚಿತ್ರರಂಗದಲ್ಲಿ ಸೇವೆ ಸಲ್ಲಿಸಿರುವ ಇವರು 'ರಂಗ ನಾಯಕಿ', 'ಮಾನಸ ಸರೋವರ', 'ಅಮೃತ ಘಳಿಗೆ', 'ಬೆಂಕಿ', 'ಅನುಪಮಾ', 'ರಾಮಾಚಾರಿ', 'ಕಲಿಯುಗ ಸೀತೆ', 'ಭಾಗ್ಯದ ಬೆಳಕು' ಮುಂತಾದ ಸುಮಾರು ೨೦೦ ಚಿತ್ರಗಳಲ್ಲಿ ಅಭಿನಯಿಸಿದ್ದಾರೆ.

ಶಂಕರ್ .ಹೆಚ್ .ಎಸ್

ನಿರ್ದೇಶಕ ಸಿದ್ದಲಿಂಗಯ್ಯ ಅವರ ಸಹಾಯಕರಾಗಿ ಚಿತ್ರರಂಗ ಪ್ರವೇಶಿಸಿದ ಹೆಚ್. ಎಸ್. ಶಂಕರ್, ತಮ್ಮ

ಸಂಬಂಧಿಕರಾದ ನಿರ್ಮಾಪಕ, ನಟ ಎಂ. ಪಿ. ಶಂಕರ್ ಅವರ ಹಲವು ಚಿತ್ರಗಳ ನಿರ್ಮಾಣದ ಉಸ್ತುವಾರಿ ಕಾರ್ಯವನ್ನು ನಿರ್ವಹಿಸಿದರು. ೧೯೮೫ರಲ್ಲಿ ತೆರೆಕಂಡ 'ಮಾತೃ ವಾತ್ಸಲ್ಯ' ಚಿತ್ರದಿಂದ ಸ್ವತಂತ್ರ ನಿರ್ದೇಶಕರಾದರು. 'ಕೆರಳಿದ ಸರ್ಪ', 'ಓಹೋ', 'ತುಂಗಭದ್ರ', 'ಢವ ಢವ' ಮುಂತಾದ ಚಿತ್ರಗಳನ್ನು ನಿರ್ದೇಶಿಸಿರುತ್ತಾರೆ.

ಶಶಿಕಲಾ .ಎಸ್

ಕನ್ನಡ ಚಿತ್ರರಂಗದ ಕಂಠದಾನ ಕಲಾವಿದೆಯಾಗಿ ಸುಮಾರು ಎರಡು ದಶಕಗಳಿಗೂ ಮೀರಿ ಸೇವೆ ಸಲ್ಲಿಸಿದ್ದಾರೆ. ೧೯೬೩ರಲ್ಲಿ ಕುಶಾಲ ನಗರದಲ್ಲಿ ಜನಿಸಿದ ಇವರು ಹಿರಿಯ ನಟ

ಶನಿಮಹದೇವಪ್ಪನವರಿಂದ ಚಿತ್ರರಂಗಕ್ಕೆ ಪರಿಚಿತರಾದರು. ಇವರು ಕಂಠದಾನ ನೀಡಿದ ಪ್ರಥಮ ಚಿತ್ರ 'ಮಂಕು ತಿಮ್ಮ'. ಸುಮಾರು ೧೦೦೦ಚಿತ್ರಗಳಿಗೆ ಕಂಠದಾನ ಕಲಾವಿದೆಯಾಗಿ ಹಲವು ಹಿಂದಿ ಚಿತ್ರರಂಗದ ನಾಯಕಿಯರಿಗೆ ತಮ್ಮ ಕಂಠಸಿರಿಯಿಂದ ವಿಶೇಷ ಮೆರುಗನ್ನು ತಂದವರು ಪ್ರತಿಭಾವಂತ ಸಹನಿರ್ದೇಶಕ ಪಿ.ಜಿ.ಸುಧೀರ್ ಅವರ ಪತ್ನಿ. ಸುಧೀರ್ ನಿಧನದ ನಂತರ ಕುಟುಂಬದ ಜವಾಬ್ದಾರಿಯನ್ನೆಲ್ಲ ಹೊತ್ತು ಕಂಠದಾನದಿಂದಲೇ ನಿಭಾಯಿಸ

ಬೇಕಾಯಿತು. ರವಿಚಂದ್ರನ್ ನಿರ್ದೇಶನದ 'ಪ್ರೇಮಲೋಕ' ಚಿತ್ರದಿಂದ ನಾಯಕಿಯರಿಗೆ ಕಂಠದಾನ ನೀಡಲು ಆರಂಭಿಸಿ ರವಿಚಂದ್ರನ್ ಅವರ ಬಹುತೇಕ ಎಲ್ಲಾ ಚಿತ್ರಗಳ ನಾಯಕಿಯರಿಗೆ ಧ್ವನಿ ನೀಡಿರುವ ಶಶಿಕಲಾ ಕಂಠದಾನ ಕಲಾವಿದೆಯಾಗಿ ಹೆಮ್ಮೆ ಪಡುವಂಥ ಪ್ರತಿಭೆಯುಳ್ಳವರು. ನಾಯಕಿಯರಿಗೆ ಧ್ವನಿ ನೀಡುವ ಮೂಲಕ ಆ ಪಾತ್ರಕ್ಕೆ ಜೀವ ತುಂಬುವಲ್ಲಿ ಶಶಿಕಲಾ ಯಶಸ್ವಿಯಾಗಿದ್ದಾರೆ. ದೂರದರ್ಶನದ ಹಲವಾರು ಧಾರಾವಾಹಿಗಳಲ್ಲಿ ಅಭಿನಯಿಸಿದ್ದಾರೆ.

ಶ್ಯಾಮ್ ವಿ. ಆರ್ (ಇಂದಿರಾತನಯ)

ಐವತ್ತರ ದಶಕದಲ್ಲಿ ಕನ್ನಡ ಬೆಳ್ಳಿತೆರೆಯಲ್ಲಿ ಚಲನಚಿತ್ರ ಸಾಹಿತಿಯಾಗಿ

ಪರಿಚಿತರಾದ ಇಂದಿರಾತನಯ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಕತೆಗಾರರಾಗಿ, ಕಾದಂಬರಿಕಾರರಾಗಿ ಹೆಸರಾದವರು. ವಾಮಾಚಾರ ಕುರಿತಂತೆ ರೋಮಾಂಚನಕಾರಿಯಾಗಿ ಮೂರುಭಾಗಗಳಲ್ಲಿ ಪ್ರಕಟವಾದ 'ಮಂತ್ರಶಕ್ತಿ', 'ಶಕ್ತಿಪೂಜೆ' ಮತ್ತು 'ಸೇಡಿನಕಿಡಿ', ಕಾದಂಬರಿಗಳು ಅತ್ಯಂತ ಜನಪ್ರಿಯತೆಗಳಿಸಿದ್ದು ಸಾಹಿತ್ಯ ಕ್ಷೇತ್ರದಲ್ಲಿ ಇವರ ಹೆಸರನ್ನು ಗಟ್ಟಿಮಾಡಿದವು. ನಿಜ ನಾಮಧೇಯ- ವಿ.ಆರ್. ಶ್ಯಾಮ್. ೧೯೫೫ರಲ್ಲಿ ಬಿಡುಗಡೆಯಾದ ಬಿ. ವಿಠಲಾಚಾರ್ಯರ 'ಮನೆ ತುಂಬಿದ ಹೆಣ್ಣು' ಹಾಗೂ ನಟಿ ರೇವತಿ ಕಲ್ಯಾಣ್ ಕುಮಾರ್ ಅವರ 'ಮನೆಗೆ ಬಂದ ಮಹಾಲಕ್ಷ್ಮಿ' ಚಿತ್ರಗಳಿಗೆ ಇಂದಿರಾತನಯ ಸಾಹಿತ್ಯ ನೀಡಿದರು. ಅರವತ್ತರ ದಶಕದಲ್ಲಿ 'ತಾಯಿನಾಡು' ಪತ್ರಿಕೆಯ ಸಂಪಾದಕೀಯ ಬಳಗ ಸೇರಿದ ಪತ್ರಕರ್ತ ಶ್ಯಾಮ್, ನಂತರ 'ಪ್ರಜಾವಾಣಿ' ಸಂಪಾದಕೀಯ ಬಳಗ ಸೇರಿದರು. ತೊಂಭತ್ತರ ದಶಕದ ಮಧ್ಯ ಭಾಗದಲ್ಲಿ ನಿಧನರಾದ ಶ್ಯಾಮ್ ಸಾಹಿತ್ಯ ಪತ್ರಿಕೋದ್ಯಮ ಹಾಗೂ ಚಲನಚಿತ್ರರಂಗ, ಈ ಮೂರೂ ಕ್ಷೇತ್ರಗಳಲ್ಲಿ ಪರಿಚಿತರು. ತುಸು ನಾಚಿಕೆಯ ಸ್ವಭಾವದ ಮೃದು ಹೃದಯಿ. ಸರಳ ಸಜ್ಜನ ವ್ಯಕ್ತಿತ್ವ ಇಂದಿರಾತನಯರದು. ಎಲೆ ಮರೆಯ ಕಾಯಿಯಂತಿದ್ದವರು.

ಶಿವಾನಂದ ಜಿ. ವಿ

ರಂಗಭೂಮಿಯಿಂದ ಚಲನಚಿತ್ರ ರಂಗಕ್ಕೆ ಬಂದ ಜಿ. ವಿ. ಶಿವಾನಂದ ಗುಬ್ಬಿ ವೀರಣ್ಣನವರ ಪುತ್ರರು. ೧೯[illegible]ರಲ್ಲಿ ಏಶಿಯನ್ ಥಿಯೇಟರ್ ಇನ್‌ಸ್ಟಿಟ್ಯೂಟ್‌ನಲ್ಲಿ ಚಿಲ್ಡ್ರನ್ ಥಿಯೇಟರ್ ನಲ್ಲಿ ಡಿಪ್ಲೊಮಾ

ಪಡೆದರು. ದೆಹಲಿಯ ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾದಲ್ಲಿ ತರಬೇತಿ ಪಡೆದರು. ಬೆಂಗಳೂರಿನಲ್ಲಿ 'ಕಲಾಕುಂಜ' ಸಂಸ್ಥೆ ಸ್ಥಾಪಿಸಿ ಅನೇಕ ನಾಟಕಗಳನ್ನು ನಿರ್ದೇಶಿಸಿದರು. ಬೆಂಗಳೂರು ವಿಶ್ವವಿದ್ಯಾಲಯ ನಾಟಕ ವಿಭಾಗದಲ್ಲಿ, ಮದ್ರಾಸಿನ ಫಿಲಂ ಛೇಂಬರ್ ನಡೆಸುವ ಅಭಿನಯ ತರಬೇತಿ ಸಂಸ್ಥೆಯ ಪ್ರಾಧ್ಯಾಪಕರಾಗಿ, ಬೆಂಗಳೂರಿನ ಆದರ್ಶ ಫಿಲಂ ಇನ್‌ಸ್ಟಿಟ್ಯೂಟ್‌ನಲ್ಲಿ ಡೀನ್ ಆಗಿ ಹಲವು ಕಲಾವಿದರನ್ನು ತರಬೇತಿಗೊಳಿಸಿದ್ದಾರೆ. ಎಂ. ವಿ. ಕೃಷ್ಣಸ್ವಾಮಿ ನಿರ್ಮಿಸಿ, ನಿರ್ದೇಶಿಸಿದ 'ಸುಬ್ಬಾಶಾಸ್ತ್ರಿ' ಚಿತ್ರದಿಂದ ಬೆಳಕಿಗೆ ಬಂದ ಇವರು 'ಮಾಡಿ ಮಡಿದವರು', 'ಕೋಕಿಲ', 'ಯಾರಸಾಕ್ಷಿ', 'ಕಾಡು', 'ಆಸ್ಫೋಟ', 'ಮಾನಸ ಸರೋವರ', 'ನಂಜುಂಡಿ ಕಲ್ಯಾಣ', 'ಅನ್ವೇಷಣೆ', 'ಆಘಾತ' ಮುಂತಾದ ಚಿತ್ರಗಳಲ್ಲಿ ಅಭಿನಯಿಸಿದ್ದಾರೆ. 'ಯಾರಸಾಕ್ಷಿ' ಚಿತ್ರದ ಸಂಭಾಷಣೆ ಇವರದೇ ಆಗಿತ್ತು. ಬಾಲುಮಹೇಂದ್ರ ಅವರ 'ಕೋಕಿಲ' ಚಿತ್ರದ ಸಂಭಾಷಣೆ ರಚಿಸಿ, ಸಹನಿರ್ದೇಶನವನ್ನೂ ಮಾಡಿರುತ್ತಾರೆ. ಬಾಲು ಮಹೇಂದ್ರ ಹಾಗೂ ಜಿ. ವಿ. ಅಯ್ಯರ್ ಅವರ ಹಲವು ಚಿತ್ರಗಳ ಸಹನಿರ್ದೇಶನ ಹಾಗೂ ಇನ್ನಿತರ ವಿಭಾಗಗಳಲ್ಲಿ ಸಕ್ರಿಯರಾಗಿ ಕಾರ್ಯ ನಿರ್ವಹಿಸಿರುತ್ತಾರೆ.

ಶ್ರೀನಿವಾಸ್ ಹೆಚ್. ಸಿ

ನಿರ್ಮಾಪಕರು. ವಿತರಕರು. ೧೯೬೦ರಲ್ಲಿ ಜನನ. ಗೆಳೆಯರೊಂದಿಗೆ 'ಪ್ರಜಾ

ಪ್ರಭುತ್ವ' ಚಿತ್ರವನ್ನು ನಿರ್ಮಿಸುವುದರೊಂದಿಗೆ ಚಿತ್ರರಂಗ ಪ್ರವೇಶಿಸಿದರು. ೧೯೯೯ರಲ್ಲಿ ಕನ್ನಡದಲ್ಲಿ ಅತೀ ವಿಶಿಷ್ಟ ಹಾಗೂ ಅತ್ಯಂತ ಚರ್ಚೆ,ವಿವಾದಗಳಿಗೆ ಒಳಗಾದ 'ಉಪೇಂದ್ರ' ಚಿತ್ರವನ್ನು 'ಶ್ರೀ ಶ್ರೀನಿವಾಸ ಪ್ರೊಡಕ್ಷನ್' ಲಾಂಛನದಡಿಯಲ್ಲಿ ನಿರ್ಮಿಸಿದರು. ಶಿಲ್ಪಾ ಶ್ರೀನಿವಾಸ್ ಎಂದೇ ಪರಿಚಿತರು.

ಶ್ರೀನಿವಾಸ್ ಅಯ್ಯಂಗಾರ್ (ಶರಪಂಜರ)

